ಶ್ರೀ ಶಿವಯೋಗಾಶ್ರಮ, ಶಿಕಾರಿಪುರ.

ಶ್ರೀ ಬಸವೇಶ್ವರ ಜಯಂತ್ಯುತ್ಸವಗಳು.

ನರಗುಂದ.

ರಾಣಿಬೆನ್ನೂರು.

ಲಕ್ಷ್ಮೇಶ್ವರ.

ದಾವಣಗೆರೆ.

ಭಗವಾನ್ ಶ್ರೀ ಬಸವಣ್ಣನವರಬೋಧೆ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

೧೯೨೨ನೆಯ ಇಸವಿ ಮೇ ತಾ|| ೭ರಿಂದ ೧೯೨೨ನೆಯ ಮೇ ತಾ|| ೧೩ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ವೈಶಾಖಶುದ್ಧ ಏಕಾದಶಿಯಿಂದ ವೈಶಾಖ ಬಹುಳ ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾ
7	ಭಾನು	ಏಕ	33-25	ಉತ್ತ	52-23	25
8	[1] ಸೋಮ	ದ್ವಾದ	27-28	ಹಸ್ತ	48-26	26
9	[2] ಮಂಗಳ	ತ್ರಯೋ	21-49	ಚಿತ್ತ	44-51	27
10	ಬುಧ	ಚತು	16-44	ಸ್ವಾತಿ	41-56	28
11	ಗುರು	ಪೌರ್ಣ	12-22	ವಿಶಾ	39-52	29
12	ಶುಕ್ರ	ಪಾಡ್ಯ	8-53	ಅನೂ	38-41	30
13	[3] ಶನಿ	ಬಿದಿ	6-28	ಜ್ಯೇಷ್ಠ	38-40	31

(1) ಪ್ರದೋಷ, ಮಳೂರು ಅಪ್ರಮೇಯಸ್ವಾಮಿ ರಥ, ಕಂಚಿ ವರದರಾಜಸ್ವಾಮಿ ರಥ. (2) ಬಿಳಿಗಿರಿರಂಗಸ್ವಾಮಿ ರಥ. (3) ವೃಷಭಸಂಕ್ರಮಣಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸ್ ೧೯—೨ ನೆಯ ಇಸವಿ ಮೇ ತಾರೀಖು ೧೪ ನೆಯ ಭಾನುವಾರ (ಸಂಚಿಕೆ ೨೦

REGISTERED NO. M. 124.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಿಷ್ಕರಿಸಿದವರಿಗೆ ...

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ...

ವಿಳಾಸ — ... ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ,

ಮೈಸೂರು.

ಸತ್ಯಮೇವಜಯತೇ.

ಮನೋದ್ವೇಗಗಳಿಗೆ.

(ಗುಣವಾಗದಿದ್ದರೆ ಹಣ ವಾಪಸ.)

ನಪುಂಸಕತ್ವಾರಿ ತೈಲವು.

ವಿಳಾಸ — ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ, ಪೋಸ್ಟ್ ಬನವಾಸಿ, ಉತ್ತರಕನ್ನಡ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾಸ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ಚಿತ್ರಗಳಲ್ಲಿ ಅನೇ ...

ಮ್ಯಾನೇಜರ್, ಸ್ಟಾರಾಫೀಸ್, ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ವಿಳಾಸ: — ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು, ಪಾರತಾಬಾದ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇಮಿಟೇಷನ್ ವಜ್ರದ ಬೆಂಡೋಲೆ.



ವಿಳಾಸ — ಎಸ್. ಆರ್. ಕೃಷ್ಣ ಅಂಡ್ ಕಂಪೆನಿ, ನಂ. 1 ತಂಬುನಾಯಕನ ವೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಮೇ ತಾ|| ೧೪ ನೆಯ ಭಾನುವಾರ.

ಚನ್ನಪಟ್ಟಣದಲ್ಲಿ ಸಹಾಯನಿರಾಕರಣ.

ಮ|| ಕೆ. ಸಿದ್ಧರಾಮಪ್ಪನವರು ಚನ್ನಪಟ್ಟಣ ತಾಲ್ಲೂಕು ಅಮಲ್ದಾರರಾಗಿ ಬಂದು ಕಂದಾಯವು ರೆವಿನ್ಯೂ ರೂಲ್ಸು ಪ್ರಕಾರ ಎತ್ತಲ್ಪಡಬೇಕೆಂದು ನಿರ್ಬಂಧಪಡಿಸಿದಾರಭ್ಯ ಗೊತ್ತುಗುರಿಯಿಲ್ಲದೆ ಅನುಭವಿಸಿಕೊಂಡು ಬರುತ್ತಿದ್ದ ಆದಾಯಕ್ಕೆ ಭಂಗಬಂದಿತೆಂಬ ಆಕ್ರೋಶದಿಂದ ಆ ತಾಲ್ಲೋಕಿನ ಶಾನುಭೋಗರುಗಳು ವಿಶೇಷಗೊಂದಲವನ್ನು ಹಚ್ಚಿ ಅಮಲ್ದಾರರ ಮೇಲೆ ಅಭಿಯೋಗನಡಿಸಿರುವರು. ರೂಲ್ಸಿನಪ್ರಕಾರ ಕಂದಾಯವು ಪಟೇಲರುಗಳಿಂದಲೇ ಎತ್ತಲ್ಪಡುವಂತಾದರೆ, ಶಾನುಭೋಗರು ರೈತರ ಹಣವನ್ನು ಅಪಹರಿಸುವುದಕ್ಕೂ ಲೆಖ್ಖಗಳನ್ನು ತಮ್ಮನುಕೂಲಕ್ಕೆ ತಕ್ಕಂತೆ ಬದಲಾಯಿಸುವುದಕ್ಕೂ ಅವಕಾಶ ತಪ್ಪುವುದಲ್ಲದೆ, ಇದರಿಂದ ಹುಟ್ಟುವ ಕ್ರಿಮಿನಲ್ ಮತ್ತು ಸಿವಿಲ್ ವ್ಯಾಜ್ಯಗಳು ಬಹಳಮಟ್ಟಿಗೆ ಕಡಿಮೆಯಾಗುವುವು. ಶಾನುಭೋಗರುಗಳಿಗೆ ಈ ವಸೂಲಿಯಾಧಿಕಾರವು ತಪ್ಪುವುದರಿಂದ ಅವರಾದಾಯದ ಮುಖ್ಯ ಮಾರ್ಗವೇ ತಪ್ಪಿ ಹೋಗುವುದಲ್ಲದೆ ಅವರ ನ್ಯಾಯವಾದ ಗ್ರಾಮಕರ್ಣೀಕ ವೃತ್ತಿಗಿಳಿಯಬೇಕಾಗುವುದು. ಆದುಕಾರಣ ಅವರುಗಳು ರೆವಿನ್ಯೂ ರೂಲ್ಸಿನಪ್ರಕಾರ ನಡಿಯಲು ಸಮ್ಮತಿಸದಿದ್ದುದರಲ್ಲೇನೂ ಆಶ್ಚರ್ಯವಿಲ್ಲವು. ಅಮಲ್ದಾರರು ಮಾತ್ರ ತಮ್ಮ ಅಧಿಕಾರದ ಉತ್ತರವಾದಿತ್ವದಮೇಲೆ ಲಕ್ಷ್ಯವಿಟ್ಟು ತಾವು ಮಾಡಬೇಕಾದ ಕೆಲಸವನ್ನು ಮಾಡಿದುದು ಶ್ಲಾಘ್ಯವೇ ಸರಿ.

ಈ ಶಾನುಭೋಗರುಗಳು ತಾವು ಬಹುಕಾಲದಿಂದ ಅನುಭವಿಸಿಕೊಂಡು ಬಂದ ಮಾರ್ಗವನ್ನೇ ಅನುಸರಿಸಿಕೊಂಡುಹೋಗಲು ಬಹಳ ಸಾಹಸಪಟ್ಟುದಲ್ಲದೆ ಗುಂಪುಕಟ್ಟಿಕೊಂಡು ಹಿಂದಿನ ದಿವಾನರಲ್ಲಿಗೆ ಹೋಗಿ ದೂರನ್ನು ಹೇಳಿಕೊಂಡರಾದರೂ ಏನೂ ಪ್ರಯೋಜನವಾಗಲಿಲ್ಲವು. ಇದರ ಮೇಲೆ ಅವರುಗಳೆಲ್ಲರೂ ಕಂದಾಯದ ವಸೂಲಿಯ ಕೆಲಸದಲ್ಲಿ ಸಹಾಯನಿರಾಕರಣ ಮಾಡ ಉಪಕ್ರಮಿಸಿರುತ್ತಾರೆಂದು ತಿಳಿದುಬರುತ್ತದೆ. ಕಂದಾಯದ ವಸೂಲಿಗೆ ಅವಶ್ಯವಾಗಿ ಬೇಕಾಗಿರುವ ಹಿಸ್ಸೆಪಟ್ಟಿ, ಬಾಕಿಪಟ್ಟಿ ಮೊದಲಾದ ಲೆಖ್ಖದ ಪುಸ್ತಕಗಳನ್ನು ಪಟೇಲರ ವಶಕ್ಕೆ ಕೊಡದೆ ಇರುವುದಲ್ಲದೆ ಪಟೇಲರ ಕೂಡ ಹೋಗಿ ಹಣಸಂದ ರಸೀತಿಗೆ ತಮ್ಮ ರುಜುವನ್ನು ಮಾಡಿಯೇ ತೀರಬೇಕಾಗಿದ್ದರೂ ಅವರ ಸಂಗಡ ವಸೂಲಿಗೆ ಹೋಗಲು ತಿರಸ್ಕರಿಸುತ್ತಿರುವರು. ಈ ಪರಿಸ್ಥಿತಿಯು ಬಹಳ ಅಪಾಯಕರವಾದುದು ಮತ್ತು ಸಹಾಯನಿರಾಕರಣ ಪ್ರಯತ್ನವು ಕೂಡಲೆ ಅಣಗಿಸಲ್ಪಡದಿದ್ದಲ್ಲಿ ಇದರ ಸೋಂಕು ಸಂಸ್ಥಾನದಲ್ಲೆಲ್ಲಾ ಹರಡಿ ಸಮಾಧಾನಕರವಾಗಿ ನಡಿಯುತ್ತಿರುವ ಸರ್ಕಾರಿಯಾಡಳಿತಕ್ಕೆ ಅಪಾಯವನ್ನುಂಟುಮಾಡುವ ಸಂಭವವಿದೆ. ಇಷ್ಟರಮಟ್ಟಿಗೆ ಸರ್ಕಾರಿಯ ನಿಯಮಗಳ ಮತ್ತು ಅಪ್ಪಣೆಗಳ ಉಲ್ಲಂಘನೆಯು ಮೊದಲು ಉದ್ಯೋಗಸ್ಥರುಗಳಿಂದಲೂ ಅನಂತರ ಸರ್ಕಾರದವರಿಂದಲೂ ಅಲಕ್ಷಿಸಲ್ಪಟ್ಟಿರುವುದು ಬಹಳ ಶೋಚನೀಯವು. ಈ ರೀತಿಯಾಗಿ ಸರ್ಕಾರದವರು ರೈತರ ಕ್ಷೇಮಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಔದಾಸೀನ್ಯವನ್ನು ತೋರಿಸುವುದು ಅನ್ಯಾಯವು ಮತ್ತು ಇದರಿಂದ ಸರ್ಕಾರಿಯಾಡಳಿತದ ಬಿಗಿಯು ತಪ್ಪುವುದಲ್ಲದೆ ದರ್ಪವು ಕಡಿಮೆಯಾಗುವುದೆಂದು ಹೇಳಬೇಕಾಗಿಲ್ಲವು. ತಪ್ಪಿಸ್ಥರಾದ ಗ್ರಾಮಾಧಿಕಾರಿಗಳಿಗೆ ಸಡಿಲ ಕೊಟ್ಟ ಹಾಗೆಲ್ಲಾ ರೈತರಿಗೆ ತೊಂದರೆಗಳು ಹೆಚ್ಚುವುವು. ಈ ವಿಚಾರವಾಗಿ ನಾವು ಬರೆಯುವುದು ಇದೇ ಮೊದಲಲ್ಲವು, ಮತ್ತು ಚನ್ನಪಟ್ಟಣದ ತಾಲ್ಲೂಕಿನ ನಿವಾಸಿಗಳು ಕೂಡ ಸರ್ಕಾರದವರಲ್ಲಿ ಬಿನ್ನೈಸಿಕೊಂಡಿರುವರು. ಆದರೂ ಈ ತೊಂದರೆಗಳನ್ನು ತಪ್ಪಿಸಲು ಸರ್ಕಾರದವರು ಈ ವರೆಗೂ ಯಾವ ಪ್ರಯತ್ನವನ್ನೂ ಮಾಡಿರುವಂತೆ ತೋರುವುದಿಲ್ಲವು. ದುಷ್ಕೃತ್ಯಗಳು ನಿರೋಧಿಸಲ್ಪಡದೆ ಸ್ವೇಚ್ಛೆಯಾಗಿ ಬಿಡಲ್ಪಟ್ಟ ಸ್ಥಳಗಳಲ್ಲೆಲ್ಲಾ ಆಗತಕ್ಕ ದುಷ್ಪರಿಣಾಮಗಳೆಲ್ಲವೂ ಈ ಚನ್ನಪಟ್ಟಣ ತಾಲ್ಲೂಕಿನಲ್ಲಿ ನಡೆದೂ ನಡಿಯುತ್ತಲೂ ಇವೆ. ಈ ಉತ್ಕ್ರಮ ಅನ್ಯಾಯಗಳನ್ನೆಲ್ಲಾ ಸರಿಪಡಿಸಲು ಮ|| ಸಿದ್ಧರಾಮಪ್ಪನವರು ರೂಲ್ಸನ್ನನುಸರಿಸಿ ಮಾಡಿದ ಪ್ರಯತ್ನಗಳನ್ನು ಅವರ ಮೇಲ್ಪಟ್ಟ ಅಧಿಕಾರಿಗಳೊಪ್ಪದೆ ತಮ್ಮವರಾದ ಶಾನುಭೋಗರ ಮೇಲಣ ಅಭಿಮಾನದಿಂದ ಪ್ರಜಾನುರಾಗಿಯಾದ ಮ|| ಸಿದ್ಧರಾಮಪ್ಪನವರನ್ನು ಆ ತಾಲ್ಲೂಕಿನಿಂದ ವರ್ಗಾಯಿಸಲು ತಮ್ಮ ಕೈಲಾದ ಸಾಹಸವನ್ನೆಲ್ಲಾ ಮಾಡಿದರು. ಇವರನ್ನು ವರ್ಗಾಯಿಸಕೂಡದೆಂದು ಆ ತಾಲ್ಲೂಕಿನ ಪ್ರಜೆಗಳು ಎಷ್ಟು ವಿಧವಾಗಿ ಪ್ರಾರ್ಥಿಸಿ ಪ್ರಯತ್ನಪಟ್ಟಾಗ್ಯೂ ಸರ್ಕಾರದವರು ಲಕ್ಷಿಸದೆ ಅಧಿಕಾರಿಗಳ ತಂತ್ರಕ್ಕೆ ವಶವಾದಂತೆ ತೋರುತ್ತದೆ. ಅಧಿಕಾರಿಗಳು ತಮ್ಮ ಕೆಳಗಿನವರು ಮಾಡುವ ತಪ್ಪುಗಳ ಕಡೆಗೆ ಕಣ್ಣನ್ನು ಮಿಟಕಿಸುತ್ತಾ ಯಾರಿಗೂ ಅಸಮಾಧಾನವಾಗದಂತೆ ತಮ್ಮ ಮೇಲ್ಪಟ್ಟವರ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದರೆ ಮಾತ್ರ ಸರ್ಕಾರಿಯುದ್ಯೋಗದಲ್ಲಿ ಉತ್ತೀರ್ಣರಾಗಬಲ್ಲರಲ್ಲದೆ ಪ್ರಜೆಗಳ ಕ್ಷೇಮವನ್ನು ಕೋರಿ ಕೆಲಸಮಾಡುವುದರಿಂದಲ್ಲವೆಂಬುದು ಈ ಸಂದರ್ಭದಲ್ಲಿ ವ್ಯಕ್ತವಾಗುತ್ತದೆ. ಇದರಿಂದ ಸರ್ಕಾರದವರು ಬಹಳ ತಪ್ಪುಮಾಡಿದರೆಂದೂ ಅಪರಾಧಿಗಳ ಕೂಡ ಪ್ರಜೆಗಳೇ ಸಮಾಧಾನದಿಂದ ವರ್ತಿಸುವ ಸ್ಥಿತಿಗೆ ತಂದಿಟ್ಟರೆಂದೂ ಹೇಳಬೇಕಾಗಿದೆ. ಈಗಣ ಸರ್ಕಾರಿಯಾಡಳಿತಕ್ರಮದಲ್ಲಿ ಅಧಿಕಾರಿಯು ಪ್ರಜೆಗಳ ಕೂಡ ಸಮ್ಮಿಳಿತನಾಗಿರಲು ಎಷ್ಟರಮಟ್ಟಿಗೆ ಅವಕಾಶವಿಲ್ಲವೆಂಬುದಕ್ಕೂ ಜವಾಬ್ದಾರಿಯನ್ನು ವಹಿಸದಿರುವ ಅಧಿಕಾರಿಗಳು ದಯಾಶೂನ್ಯರಾದ ಕೈಕೆಳಗಿನ ಕೆಲಸಗಾರರ ಪ್ರೇರಣೆಯಿಂದ ಪ್ರಜೆಗಳ ಅಭಿಪ್ರಾಯಕ್ಕೂ ಅನುಕೂಲಕ್ಕೂ ವಿರುದ್ಧವಾಗಿ ನಡಿಯಲು ಅವಕಾಶವು ಎಷ್ಟರಮಟ್ಟಿಗೆ ಹೆಚ್ಚಾಗಿರುತ್ತದೆಂಬುದಕ್ಕೂ ಈ ಚೆನ್ನಪಟ್ಟಣದ ಮೇಲ್ಕಂಡ ವಿದ್ಯಮಾನವು ಒಳ್ಳೆಯ ನಿದರ್ಶನವಾಗಿದೆ.

ಮೈಸೂರು ರಿಟ್ರೆಂಚ್‌ಮೆಂಟ್ ಕಮಿಟಿ.

೧೯೨೨-೨೩ರಲ್ಲಿ ನಮ್ಮ ಸಂಸ್ಥಾನದ ಆದಾಯವು ವ್ಯಯಕ್ಕಿಂತ ೫೩ ಲಕ್ಷ ರೂಪಾಯಿ ಕಡಿಮೆಯಾಗುವುದೆಂದು ನಿರೀಕ್ಷಿತ ಲೆಖ್ಖದಿಂದ ಗೊತ್ತಾಗುವಪ್ರಯುಕ್ತ ಆಯಕ್ಕೆ ತಕ್ಕಂತೆ ವ್ಯಯವನ್ನು ಕಡಿಮೆ ಮಾಡುವುದಕ್ಕೆ ತಕ್ಕುಪಾಯಗಳನ್ನು ಕಂಡುಹಿಡಿಯಲಿಕ್ಕಾಗಿ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ.ಐ.ಇ., ಯವರ ಅಧ್ಯಕ್ಷತೆಯಲ್ಲಿ ಸರ್ಕಾರದವರಿಂದೇರ್ಪಡಿಸಲ್ಪಟ್ಟಿರುವ ರಿಟ್ರೆಂಚ್‌ಮೆಂಟ್ ಕಮಿಟಿಯವರು ಪ್ರತಿಯೊಂದು ಶಾಖೆಯ ಆಯವ್ಯಯದ ಭಾಗಗಳನ್ನು ಆ ಆ ಶಾಖೆಗಳ ಮುಖ್ಯಾಧಿಕಾರಿಗಳಿಂದ ಕೂಲಂಕಷವಾಗಿ ತಿಳಿದು ಅಗತ್ಯವಾಗಿ ನಡಿಯಬೇಕಾದ ಕೆಲಸಗಳಿಗೆ ಕುಂದಿಲ್ಲದಂತೆ ಅನಾವಶ್ಯಕವೂ ದುಬಾರಿಯೂ ಆದ ಖರ್ಚುಬಾಬುಗಳನ್ನು ಕಡಿಮೆಮಾಡಿಯೇ ತೀರಬೇಕೆಂದು ಅಭಿಪ್ರಾಯಪಟ್ಟಿರುವುದರಲ್ಲಿ ಮುಖ್ಯವಾಗಿ ಇಂಜನಿಯರಿಂಗು, ಫಾರೆಸ್ಟು, ಪೊಲೀಸು, ಎಕ್ಸೈಸು, ವಿದ್ಯಾಭ್ಯಾಸ ಮತ್ತು ಅಮೃತಮಹಲ್ ಶಾಖೆಗಳ ವೆಚ್ಚವು ಬಹಳಮಟ್ಟಿಗೆ ಅಂದರೆ ೧೫-೨೦ ಲಕ್ಷ ರೂ. ವರೆಗೂ ಕಡಿಮೆಯಾಗುವ ಸಂಭವವಿರುವುದಾಗಿಯೂ, ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರುಗಳು ಪೂರ್ವದಂತೆ ಇಬ್ಬರು ಮಾತ್ರವಿದ್ದು ದಿವಾನರಿಗೆ ೪೦೦೦ ಮತ್ತು ಪ್ರತಿಯೊಬ್ಬ ಕೌನ್ಸಿಲರಿಗೆ ೧೫೦೦ ರೂಪಾಯಿಗಳ ಸಂಬಳವು ಸಲ್ಲತಕ್ಕುದೆಂದು ಸೂಚಿಸಲ್ಪಟ್ಟಿರುವುದಾಗಿಯೂ ತಿಳಿಯಬರುತ್ತದೆ.

ಮುಂದಲಾಲೋಚನೆಯಿಲ್ಲದೆ ಕೋಟಿ ರೂ. ವರೆಗೂ ವೆಚ್ಚಮಾಡಿ ಆರಂಭಿಸಲ್ಪಟ್ಟಿರುವ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯನ್ನು ಇನ್ನೂ ಲಕ್ಷಾಂತರ ರೂ. ವರೆಗೆ ವೆಚ್ಚವಾದರೂ ಪೂರೈಸುವಂತಿಲ್ಲವಾದ ಪ್ರಯುಕ್ತ ಇದು ಸರ್ಕಾರದಿಂದ ನಡಿಸಲ್ಪಡದೆ ಟಾಟಾ ಕಂಪೆನಿಯವರಿಗಾಗಲೀ ಅಥವಾ ಮತ್ತಾವ ಕಂಪೆನಿಗಾಗಲಿ ವಹಿಸಲ್ಪಡಬೇಕಾಗಿಯೂ, ಕನ್ನಂಬಾಡಿ ಜಲಾಶಯದ ಎರಡನೆಯ ಪರ್ಯಾಯವು ಪೂರೈಸಲ್ಪಟ್ಟ ವಿನಾ ಮೊದಲನೆಯ ಪರ್ಯಾಯದ ಕಟ್ಟಡಕ್ಕೆ ಭದ್ರತೆ ಕಡಿಮೆಯೆಂದು ಇದರ ಸಾಧ್ಯಾಸಾಧ್ಯವನ್ನು ತಿಳಿಯಲು ನಿಯಮಿಸಲ್ಪಟ್ಟಿದ್ದ ಕಮಿಟಿಯವರು ಅಭಿಪ್ರಾಯಪಟ್ಟಿರುವ ಪ್ರಯುಕ್ತ ಈ ಪರ್ಯಾಯವನ್ನು ಕೊನೆಮುಟ್ಟಿಸಲು ಇನ್ನೂ ೫೦-೬೦ ಲಕ್ಷ ರೂ. ಗಳ ವೆಚ್ಚವಾಗಬೇಕಾಗಿರುವುದಾದರೂ ಈ ಕಾರ್ಯವನ್ನು ಕೈಕೊಳ್ಳಬೇಕೆಂದೂ ಆದರೆ ದ್ರವ್ಯಾಭಾವವು ನಿವಾರಣೆಯಾಗುವವರೆಗೂ ಹೊಸದಾಗಿ ಕಾಲುವೆಗಳನ್ನು ಮಾತ್ರ ತೆಗೆಯಕೂಡದೆಂದೂ ರಿಟ್ರೆಂಚ್‌ಮೆಂಟ್ ಕಮಿಟಿಯವರು ಸೂಚಿಸಿರುವುದಾಗಿ ಕೇಳುತ್ತೇವೆ. ಇದು ಯುಕ್ತವಾದ ಸೂಚನೆಯೆಂಬುದರಲ್ಲಿ ಸಂದೇಹವಿಲ್ಲವು. ಮೇಲ್ಕಂಡವುಗಳಲ್ಲದೆ ಮತ್ತಾವ ವಿಧದಲ್ಲಿ ವೆಚ್ಚವನ್ನು ಕಡಿಮೆ ಮಾಡಬಹುದೆಂಬುದನ್ನು ತಿಳಿಯುವ ಬಗೆಗೆ ಸರ್ಕಾರದವರು ಗೊತ್ತುಪಡಿಸಿರುವ ಸರ್ಕಾರಿಯುದ್ಯೋಗಸ್ಥರಲ್ಲದ ಮತ್ತು ಅನುಭವಸ್ಥರಾದ ಕೆಲದೊಡ್ಡಮನುಷ್ಯರುಗಳ ಹೇಳಿಕೆಯನ್ನು ತೆಗೆದುಕೊಂಡು ಅದರಮೇಲೆ ತಮ್ಮ ಸೂಚನೆಯನ್ನು ಕೊಡುವವರಾಗಿರುವರು.

ಕೈಕೊಂಡ ಕಾರ್ಯವನ್ನು ನಿರ್ದಾಕ್ಷಿಣ್ಯದಿಂದಲೂ ನಿಸ್ಪೃಹತೆಯಿಂದಲೂ ನೆರವೇರಿಸುವವರೆಂದು ಖ್ಯಾತಿಗೊಂಡಿರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಐ. ಇ., ಯವರು ಈ ಸಂಸ್ಥಾನಕ್ಕೆ ಪ್ರಾಪ್ತವಾಗಿರುವ ಹಣದ ತೊಂದರೆಯ ನಿವಾರಣೋಪಾಯವನ್ನು ಕಂಡುಹಿಡಿಯುವುದರಲ್ಲಿ ಪ್ರಜೆಗಳಿಗೆ ಸಾಧ್ಯವಾದ ಮಟ್ಟಿಗೂ ತೊಂದರೆಯಾಗದಂತೆ ಮಾಡುವುದಕ್ಕಾಗಿ ಬಹಳ ಸಾಹಸಪಡುತ್ತಿರುವರೆಂದು ಕೇಳಿ ಸಂತೋಷಿಸುತ್ತೇವೆ. ಮತ್ತು ಪೂರ್ಣವಿಶ್ರಾಂತಿಯನ್ನು ಅನುಭವಿಸುವ ಕಾಲದಲ್ಲೂ ಸ್ವದೇಶಾಭಿಮಾನದಿಂದ ಸ್ವಸುಖದಮೇಲೆ ಲಕ್ಷ್ಯವಿಡದೆ ದೇಶಸೇವಾಕಾರ್ಯಗಳಲ್ಲಿ ದಿ|| ಬ|| ಸೆಟ್ಟರು ಮುಂದುವರಿಯುತ್ತಿರುವುದಕ್ಕಾಗಿ ನಾವು ಅವರನ್ನು ವಂದಿಸುತ್ತೇವಲ್ಲದೆ ದೀರ್ಘಾಯುರಾರೋಗ್ಯವುಳ್ಳವರಾಗಿ ಇತೋಪ್ಯತಿಶಯವಾದ ದೇಶಸೇವೆಯನ್ನು ಮಾಡಿ ಶ್ರೀಮನ್‌ಮಹಾರಾಜರವರ ಮತ್ತು ಪ್ರಜೆಗಳ ವಿಶ್ವಾಸಸನ್ಮಾನಗಳಿಗೆ ಪಾತ್ರರಾಗಲೆಂದು ಹಾರೈಸುತ್ತೇವೆ.

NON-CO-OPERATION IN CHENNAPATNA.

Ever since the advent of Mr. K. Siddaramappa as Amildar to Chennapatna, and his insistence on the adherence to the revenue rules regarding the collection of assessment the Shanbhogs of the Taluk to whose licentious privileges in the matter of collections there was no limit or restraint, were carrying on a busy agitation against the popular Amildar. Doubtless the restoration of the practice of the Patels collecting the revenue would cut at the very root of the Shanbhogs' opportunities to swindle the ryots, and further, their chances of manipulating the accounts, which is at the bottom of most of the civil and criminal litigation would be considerably minimised. Divested of those powers they would lose one of their principal sources of profit and be reduced to the rightful position of village *accountants*. Little wonder then, if they resented the application of the revenue rules by the Amildar, who, be it said to his credit, realised the responsibility of his office and did his duty.

The Shanbhogs at first did all they could to uphold their untenable position and a good number of them even went in a procession to the Ex-Dewan, the result of which was evidently disappointing to them. It is now stated that they have begun to non-co-operate in the collection work. They refuse to give the Hissepatti, the Bakipatti and other accounts which are necessary for collection to the Patels, and many of them absolutely refuse to accompany the Patels and sign the receipts as they are bound to. This is indeed a serious situations and this spirit of non-co-operation if not checked in time is likely to become a contagion which might spread all over the State and gravely affect the peaceful working of the administration. It is regrettable how the many and various breaches of standing rules and orders are winked at by the officials in the first place and the Government again. It is needless to say such an indifference or overlooking on the part of the Government especially where a matter so intimately connected with the welfare of the vast agriculturists are concerned is almost criminal and will neither conduce to the efficiency of the administration nor to the enhancement of their prestige, while the troubles and hardships of the ryots will be increasing in proportion to the latitude given to the defaulting village officers. This is not the first time we have written on the subject, and the matter also has been brought to the notice of the Government by the people of Chennapatna Taluk themselves more than once, but no action has been forthcoming as yet to redress their grievances. This unfortunately has had and is having a most undesirable effect on the situation in Chennapatna, as it would anywhere where evil forces are allowed to have a free play unchecked. The strong and just handling of the situation by Mr. Siddaramappa was also not welcome to the officers above him, who very naturally sympathised with their kinsmen, the Shanbhogs and they did their best to get the popular Amildar transferred. The Government seems to have succumbed to their machinations in spite of the protests by the ryots of Chennapatna. This is the reward for honest and efficient work. It looks as though the best thing for officials to do to get on in service is not to conscientiously strive for the good of the people entrusted to their care, but to wink at faults and defects, displease nobody and please the superior officers. We can only say that the Government have committed a colossal blunder and have betrayed the people to placate the offenders. This is one more evidence of the fact how little under the present system of administration the executive will be in touch with the people, and how great are the opportunities for an irresponsible beuracracy led by unsympathetic intermediaries to ride rough against popular wishes and popular feelings.

ELECTED PRESIDENT.

It is more than twenty days since the Mysore Municipal Council passed by a large majority a resolution at a special meeting requesting the Government to confer on the Council the privilege of electing their own President from next June when the term of the present nominated President expires, but no reply as yet is vouchsafed to the Council though the time before them is not long. It is unnecessary we think, at this stage to advance any grounds in favour of throwing open that office for election. That the corporation of the metropolis of this Model State should yet be far from being in a position to chose its own president redounds little to the credit of the city as well as to the State, while the fact is that the citizens of Mysore are far more advanced than those of many other places where the privilege is exercised. Nor do we think the Mysere City Municipal Councillors can swallow the plea whether express or implied that they are not yet in a position to exercise their judgment in the choice of a president. It is too palpably absurd to think of it, as though those who have the ability to carry on the civic duties of this important city have not the capacity to place at the head of the Council one who can be worthy of it. There is some rumour that the present President is likely to be continued in the office. It is not our business here to discuss whether he has proved a success or failure. But we would ask whether the Government thinks that in the ordering of Providence the present president is indispensable to the Mysore City Municipality—so indispensable that they cannot risk an election in the Council? We are afraid that progress would be impossible at this rate; but it is hoped our fears are ungrounded and that the Government taking into account the sentiments of the Councillors and consistent with its own progressive policy will grant the privilege to the City of Mysore without unnecessary delay.

MALICIOUS STUFF.

The *Justice* of Madras comments as follows on what the *Mysore Chronicle* publishes in its issue of May 7, 1922 as an extract from Mr. Hosakoppa Krishna Rao's article in *Hindu* :—

"The following Anti-Non-Brahmin stuff finds publicity in a brahmin-edited journal of Mysore :- "Mr. Banerji has got back his opportunity, which was about to be lost. The hand of God is almost visible in the change that has been brought about, etc." The reference here, of course, is to the retirement, necessitated by ill-health, of Sir Kantaraj Urs, the non-brahmin ex-Dewan of Mysore, who, by trying to do his duty by the masses of the State, has provoked the ire of the monopolists. It is this sort of base, malicious stuff that is largely responsible for the existing strained relations between the brahmins and the non-brahmins in Mysore. As for Mr. Banerji, he has been long enough in South India to know the ways of the South Indian brahmin, and he may therefore be expected to do his duty by the people and treat the attempt to lick his feet with the contempt which it deserves.

Mr. E. Purushothama Anandagiri, Municipal, Councillor, Mysore, is going to move the following proposition in the next Ordinary Meeting of the Mysore City Municipal Council, under section 26, clause 3 of the Municipal Regulation :—

(1) From accounts, it is seen that the President has received Rs. 5000 on 16th April 1920 and paid back in 3 instalments viz., Rs. 1050 on 13th December 1920, Rs. 300 on 26th July 1921 and Rs. 3650 on 15th October 1921; why was money kept in this private and unbusiness like manner though the President issues cheques for small sums such as 10 or 15?

(2) Will the President be good enough to explain the loss of about Rs. 512 in the shape of interest at 9 p. c. per annum on the above sum?

(3) The above item is one of the unadjusted advances at the end of June 1921 viz., Rs. 31098-5-4. Vide Audit Report dated 11th March 1922 (Para 4). Please place before the Council a complete list of such unadjusted amounts with reason for unadjustment since very long.

(4) The Executive have spent in 21-22 a lac or more in excess of the sanctioned Budgetted amount of 21-22 under expenditure headings A-General Administration, B-Public Safety, D-D. P.W., H-Miscellaneous, I-Public debt (vide 22-23 Draft Budget). This procedure is against Government Order and Municipal Account Manual Section 22 and Section 169 of Municipal Regulation.

(5) Will the President be good enough to state the exact amount spent in excess or alterations in sanctioned Budget of 21-22 and for how much sanction has been obtained from the Government as well as from the Council under Rule 22 and 23 on pages 10 and 11 of the Muncipal Manual and under Section 169 of the Municipal Regulation on page 134?

(6) Will the President be good enough to explain and circulate the Government Auditor's report of 20-21 which was not done as per Rule 14 of Muncipal Account Manual on page 5.

ಒಳದೇಶದ ವೃತ್ತಾಂತಗಳು.

ಈ ತಿಂಗಳು ತಾ|| ೨೫ ರಿಂದ ಮೈಸೂರು ರೈಲ್ವೆ ಮೇಲ್ ಬಂಡಿಯ ಛಾರ್ಜು ಮೈಲಿಯೊಂದಕ್ಕೆ ಮೊದಲನೆಯ ತರಗತಿಗೆ ೨|| ಆಣೆ, ಎರಡನೆ ತರಗತಿಗೆ ೧| ಆಣೆ ಮತ್ತು ಮೂರನೆತರಗತಿಗೆ ೫ ಕಾಸಿನಂತೆಯೂ ಇತರ ಬಂಡಿಗಳಲ್ಲಿ ೩ ನೆಯ ತರಗತಿಗೆ ೪ ಕಾಸಿನಂತೆಯೂ ತೆಗೆದುಕೊಳ್ಳಲ್ಪಡುವುದು.

ರಾಜಧಾನಿಯಲ್ಲಿ ಆಚೆ ಶನಿವಾರ ೧||| ಅಂಗುಲವೂ ಅಲ್ಲಿಂದೀಚೆಗೆ ೩-೪ ದಿನಗಳಲ್ಲಿ ತಕ್ಕಮಟ್ಟಿಗೆ ಮಳೆಯಾಗಿ ಕೆರೆಗಳಿಗೆ ಕೊಂಚ ನೀರು ಬಂದಿರುತ್ತದೆ. ಇದರಂತೆ ಇತರ ಕಡೆಗಳಲ್ಲೂ ಮಳೆ ಬಂದು ಕೆರೆ ಕುಂಟೆಗಳಿಗೆ ನೀರು ಬಂದಿರುವುದಾಗಿಯೂ ಜೋಳದ ಪೈರು ಚೆನ್ನಾಗಿರುವುದಾಗಿಯೂ ತಿಳಿದು ಬರುತ್ತದೆ.

ಬೆಂಗಳೂರಿನ ಪ್ರಸಿದ್ಧ ವರ್ತಕರಾದ ಮ|| ಆರ್. ಪಾಪಣ್ಣನವರ ಜ್ಯೇಷ್ಠ ಕುಮಾರರೂ ಮ್ಯುನಿಸಿಪಲ್ ಕೌನ್ಸಿಲರೂ ಆದ ಮ|| ಪಿ. ಮುನಿಬಸಪ್ಪನವರ ದ್ವಿತೀಯ ವಿವಾಹವು ಕಳೆದ ತಾ|| ೩೦ ನೆಯ ಭಾನುವಾರ ಬೆಂಗಳೂರಿನಲ್ಲಿರುವ ಅವರ ಆತ್ಮವಿಲಾಸ ಬಂಗಲೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆದಿತು. ಸ್ಥಳ ಪರಸ್ಥಳದ ಬಂಧುಗಳೂ ಮಿತ್ರರೂ ವಿಶೇಷವಾಗಿ ಸೇರಿದ್ದರು. ಈ ಸಮಾರಂಭದ ಜ್ಞಾಪನಾರ್ಥವಾಗಿ ವೀರಶೈವ ವಿದ್ಯಾವರ್ಧಕ ಫಂಡಿಗೆ ೨೦ ರೂಪಾಯಿಗಳು ಕಾಣಿಕೆಯಾಗಿ ಕೊಡಲ್ಪಟ್ಟುವು.

ರಾಜಧಾನಿಯಲ್ಲಿ ಬಹಳಕಾಲ ವಾಸವಾಗಿದ್ದು ಧಾತು ಈಶ್ವರ ಸಂವತ್ಸರದಲ್ಲಿ ಪ್ರಾಪ್ತವಾಗಿದ್ದ ಕ್ಷಾಮಕಾಲದಲ್ಲಿ ವೀರಶೈವರಿಗೂ ಇತರ ಬಡವರಿಗೂ ಅನ್ನದಾನವನ್ನು ಮಾಡಿ ಮತ್ತು ದೇವಾಲಯಗಳ ಜೀರ್ಣೋದ್ಧಾರ ಮೊದಲಾದ ಧರ್ಮಕಾರ್ಯಗಳನ್ನು ಮಾಡಿ ಕೀರ್ತಿಶೇಷರಾಗಿರುವ ಅಪ್ಪಾಜಿ ರುದ್ರಪ್ಪನವರ ಎರಡನೆಯ ಕುಮಾರ ಗಂಗಪ್ಪನವರು ಕೆಲಕಾಲದಿಂದ ಕ್ಷಯರೋಗಗ್ರಸ್ತರಾಗಿದ್ದು ಕಳೆದ ತಾ|| ೧೪ರಲ್ಲಿ ಶಿವೈಕ್ಯರಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರು ತಂದೆಯಂತೆಯೇ ಧರ್ಮಬುದ್ಧಿಯುಳ್ಳವರಾಗಿದ್ದು ತಮ್ಮಾಸ್ತಿಯೆಲ್ಲವೂ ವೀರಶೈವ ವಿದ್ಯಾವರ್ಧಕ ಫಂಡಿಗೆ ಸೇರಬೇಕೆಂದು ಮರಣಶಾಸನ ಬರೆದಿರುವುದಾಗಿ ಕೇಳಿ ಸಂತೋಷಿಸುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರಾದ ದಿ|| ಬ|| ಶ್ರೀಕಂಠೇಶ್ವರಯರ್‌ರವರ ಉದ್ಯೋಗದವಧಿಯು ಜೂನ್ ತಿಂಗಳ್ಲಿ ಪೂರೈಸುವುದರಿಂದ ಅಲ್ಲಿಂದ ಮುಂದಕ್ಕೆ ಕೌನ್ಸಿಲರುಗಳಲ್ಲೊಬ್ಬರನ್ನು ಪ್ರೆಸಿಡೆಂಟರನ್ನಾಗಿ ಆರಿಸಿಕೊಳ್ಳಲು ಅವಕಾಶವನ್ನು ಕೊಡಬೇಕೆಂದು ಕೌನ್ಸಿಲಿನಲ್ಲಿ ನಿರ್ಧಾರ ಮಾಡಲ್ಪಟ್ಟು ಸರ್ಕಾರದವರ ಅನುಮತಿಯ ಬಗೆಗೆ ಕಳುಹಲ್ಪಟ್ಟಿದೆ. ಈಮಧ್ಯೆ ಮ|| ಅಯ್ಯರ್‌ರವರು ಇನ್ನೂ ೨|| ವರ್ಷ ಕಾಲ ಪ್ರೆಸಿಡೆಂಟರಾಗಿರುವಂತೆ ಸರ್ಕಾರಿಯಪ್ಪಣೆಯಾಗಿದೆಯೆಂದು ಹುಟ್ಟಿರುವ ಸುದ್ದಿಯು ನಿರಾಧಾರವಾದುದು. ಬ್ರಿಟಿಷ್ ಸರ್ಕಾರದಲ್ಲಿರುವಂತೆ ಮ್ಯುನಿಸಿಪಲ್‌ಕೌನ್ಸಿಲಿನ ನಿರ್ಧಾರಗಳನ್ನು ಅನುಷ್ಠಾನಕ್ಕೆ ತಂದು ಕೌನ್ಸಿಲಿನ ಆಡಳಿತವನ್ನು ನಡಿಸುವುದಕ್ಕಾಗಿ ಒಬ್ಬ ಸರ್ಕಾರಿಯಧಿಕಾರಿಯನ್ನು ಕಮಿಷನರನ್ನಾಗಿ ನಿಯಮಿಸಲನುಕೂಲಿಸುವಂತೆ ಮ್ಯುನಿಸಿಪಲ್ ರೂಲ್ಸು ಬದಲಾವಣೆ ಮಾಡಲ್ಪಡುತ್ತಿದೆಯೆಂದೂ, ಅದು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿತವಾಗಿ ಮಹಾರಾಜರ ಸಮ್ಮತಿಯನ್ನು ಪಡೆಯುವವರೆಗೂ ಅಂದರೆ ಇನ್ನು ೬ ತಿಂಗಳವರೆಗೂ ಮ|| ಅಯ್ಯರ್‌ರವರೇ ಪ್ರೆಸಿಡೆಂಟರಾಗಿರಲ್ಪಡಬಹುದೆಂದೂ ಕೇಳುತ್ತೇವೆ.

ಮಿ|| ಬಾನರ್ಜಿಯವರಿಗೆ ಮೈಸೂರು ಸಂಸ್ಥಾನದ ಮಂತ್ರಿ ಪದವಿಯು ಲಭಿಸಿದುದರಿಂದ ಈ ದೇಶೀಯರಿಗುಂಟಾಗಿರುವ ಸಂತೋಷವನ್ನು ಅಭಿನಂದನ ಪತ್ರಿಕೆಯನ್ನೊಪ್ಪಿಸುವುದರ ಮೂಲಕ ಪ್ರದರ್ಶಿಸಲು ತಮ್ಮ ಸಮ್ಮತಿಯನ್ನು ದಯವಿಟ್ಟು ಕೊಡಬೇಕೆಂದು ಪ್ರಜಾಮಿತ್ರಮಂಡಲಿಯ ಅಧ್ಯಕ್ಷರಾದ ರಾವ್ ಸಾಹೇಬ್ ಎಚ್. ಚೆನ್ನಯ್ಯನವರು, ವೈಸ್ ಪ್ರೆಸಿಡೆಂಟ್ ಮಿ|| ಮಹಮದ್ ಅಬ್ಬಾಸ್‌ಖಾನ್‌ರವರು, ಮೈಸೂರಿನ ಮಿ|| ಎ. ಮಹಮದ್ ಸೇಟರು, ಧರ್ಮಪ್ರವರ್ತ ಸಾ|| ಬಸುಮಯ್ಯನವರು, ನಂಜನಗೂಡಿನ ಸಾ|| ಬಂಡಯ್ಯನವರು, ಮಾದಪ್ಪನವರು, ಬೆಂಗಳೂರಿನ ಮ|| ಎಂ. ಸುಬ್ಬಯ್ಯನವರು, ಮ|| ಪಿ. ಎಂ. ಬಸಪ್ಪನವರು, ಮಂಡಲಿಯ ಸೆಕ್ರೆಟರಿಗಳಾದ ಬ್ಯಾರಿಸ್ಟರ್ ಮ|| ಬಿ ಎಲ್. ವಿಜಯದೇವರವರು ಮತ್ತು ಅಡ್ವೋಕೇಟ್ ಮ|| ಜಿ. ಪರಮಶಿವಯ್ಯನವರು ಕಳೆದ ತಾ|| ೯ ರ ಬೆಳಿಗೆ ಮಿ|| ಬಾನರ್ಜಿಯವರನ್ನು ಕಂಡು ಪ್ರಾರ್ಥಿಸಿಕೊಂಡುದರ ಮೇಲೆ ಅವರು ಅಭಿನಂದನಪತ್ರಿಕೆಯನ್ನು ಸ್ವೀಕರಿಸಲೊಪ್ಪಿರುವುದಾಗಿ ತಿಳಿಯುತ್ತೇವೆ.

ರಾಜಧಾನಿಯಲ್ಲಿ ವೀರಶೈವ ವಿದ್ಯಾರ್ಥಿ ನಿಲಯವನ್ನು ೩೦-೪೦ ಸಾವಿರ ರೂಪಾಯಿಗಳ ವೆಚ್ಚದಿಂದ ಕಟ್ಟಿಸಿಕೊಡುವುದಾಗಿ ವಾಗ್ದಾನಮಾಡಿ ಇದಕ್ಕಾಗಿ ೧೫ ಸಾವಿರ ರೂಪಾಯಿಗಳನ್ನು ಸರ್ಕಾರದವರಲ್ಲಿ ಡಿಪಾಜಿಟ್ಟು ಮಡಗಿರುವ ಗುಂಡ್ಲುಪೇಟೆ ತಾ|| ಕಬ್ಬಹಳ್ಳಿಯ ಶ್ರೀಮಂತ ಕೆ. ಚೆನ್ನಬಸಪ್ಪನವರು ಕಟ್ಟಡಕ್ಕಾಗಿ ಆರೋಗ್ಯವಾದ ಸ್ಥಳದಲ್ಲಿ ವಿಶಾಲವಾದ ಜಾಗವನ್ನು ಕೊಡಿಸಿಕೊಡಬೇಕೆಂದು ಸರ್ಕಾರದವರನ್ನು ಎಷ್ಟು ವಿಧವಾಗಿ ಪ್ರಾರ್ಥಿಸಿಕೊಂಡಾಗ್ಯೂ ಯೋಗ್ಯವಾದ ಸ್ಥಳವು ದೊರೆಯದೆ ಹೋದುದರಮೇಲೆ ರೈಲ್ವೆ ಸ್ಟೇಷನ್ ಬಳಿ ಸವಾಯಿ ಹೋಟಲು ಇಡಲ್ಪಟ್ಟಿರುವ ಬಂಗಲೆಯನ್ನು ಕ್ರಯಕ್ಕೆ ಕೊಂಡುಕೊಳ್ಳಲು ಬೊಂಬಾಯಿಯಲ್ಲಿರುವ ಅದರ ಹಕ್ಕುದಾರರಲ್ಲಿಗೆ ಹೋಗಿ ಒಪ್ಪಂದಮಾಡಿಕೊಂಡು ಬಂದಿರುವುದಾಗಿಯೂ, ಬರುವ ಜೂನ್ ತಿಂಗಳಲ್ಲಿ ನಡಿಯುವ ಶ್ರೀಮನ್ ಮಹಾರಾಜರವರ ವರ್ಧಂತಿಯ ಮಹೋತ್ಸವ ಕಾಲದಲ್ಲಿ ವಿದ್ಯಾರ್ಥಿ ನಿಲಯದ ಆರಂಭೋತ್ಸವವನ್ನು ನಡಿಸುವುದಾಗಿಯೂ ಕೇಳಿ ಅವರನ್ನು ವಂದಿಸುತ್ತೇವಲ್ಲದೆ ಶಾಶ್ವತವೂ ಮಹೋಪಕಾರವೂ ಆದ ಈ ಧರ್ಮಕಾರ್ಯವು ನಿರ್ವಿಘ್ನವಾಗಿ ನಡೆದು ಚೆನ್ನಬಸಪ್ಪನವರಿಗೆ ಆಚಂದ್ರಾರ್ಕಸ್ಥಾಯಿಯಾದ ಕೀರ್ತಿಯು ಲಭಿಸಲೆಂದು ನಾವು ಹಾರೈಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಬಿಜಾಪುರದಲ್ಲಿ ಎಕ್ಸಿಕ್ಯೂಟಿವ್ ಇಂಜನಿಯರಾಗಿದ್ದ ಲಲಿತಮೋಹನ ಬೋಸ್‌ರವರು ಕಳೆದ ಶನಿವಾರ ಬಿಸಿಲಿನ ತಾಪವನ್ನು ಸಹಿಸಲಾರದೆ ಮರಣವನ್ನು ಹೊಂದಿದರು.

ಬೊಂಬಾಯಿನಲ್ಲಿ ಬೊಂಬಾಯಿ ಬರೋಡಾ ಮತ್ತು ಸೆಂಟ್ರಲ್ ಇಂಡ್ಯಾ ರೈಲ್ವೆ ಕಂಪೆನಿಯ ಕಟ್ಟಡದಾವರಣದಲ್ಲಿ ಬೆಂಕಿ ಹೊತ್ತುಕೊಂಡು ೬೦೦೦ ರೂ.ವರೆಗೆ ನಷ್ಟವಾಯಿತು.

ಭರತಖಂಡಕ್ಕೆ ಇತರದೇಶಗಳಿಂದ ಹಿಂದಿರುಗಿ ಬಂದಿರುವ ಭಾರತೀಯರಲ್ಲಿ ೧೬೦ ಜನರು ಬ್ರಿಟಿಷ್ ಗಯಾನಾಕ್ಕೆ ವಲಸೆ ಹೋಗಲಪ್ಪಣೆ ಮಾಡಿರುವ ವಿಚಾರವು ಸುಳ್ಳೆಂದು ಪ್ರಕಟವಾಗಿದೆ.

ಪಂಜಾಬಾಧಿಪತ್ಯದಲ್ಲಿ ಯಾವ ವರ್ತಮಾನವೂ ಸರ್ಕಾರದ ತಿಳಿವಿಕೆಗೆಬಾರದೆ ಪ್ರಕಟವಾಗಕೂಡದೆಂದು ಸರ್ಕಾರದವರು ನಿರ್ಬಂಧಪಡಿಸಿರುವುದಾಗಿ ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗಿರುವುದು ನಿರಾಧಾರವಾದುದೆಂದು ಸರ್ಕಾರದವರು ತಿಳಿಸಿರುತ್ತಾರೆ.

ಭರತಖಂಡದ ವೈಸ್‌ರಾಯರ ಪದವಿಯನ್ನು ಲಾರ್ಡ್ ರೀಡಿಂಗ್‌ರವರು ಬಿಟ್ಟುಬಿಟ್ಟರೆಂದು ಲಂಡನ್ನಿನಲ್ಲಿ ಹೊರಡುವ ಸಂಡೆಇಲಸ್ಟ್ರೇಟೆಡ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು. ಈ ಸುದ್ದಿಯು ನಿರಾಧಾರವಾದುದೆಂದೂ ರೀಡಿಂಗ್ ಪ್ರಭುಗಳು ಉದ್ಯೋಗವನ್ನು ಬಿಟ್ಟಿಲ್ಲ ಮತ್ತು ಬಿಡುವ ಸಂಭವವಿಲ್ಲವೆಂದೂ ಪ್ರಕಟವಾಗಿದೆ.

ಅಹಮದಾಬಾದಿನ ಮ್ಯುನಿಸಿಪಲ್ ಕೌನ್ಸಿಲರುಗಳು ವಿದ್ಯಾಭ್ಯಾಸದ ವಿಚಾರದಲ್ಲಿ ಸಹಾಯಮಾಡಕೂಡದೆಂದು ನಿರ್ಧಾರಮಾಡಿದ್ದುದಕ್ಕಾಗಿ ಸರ್ಕಾರದವರು ಕೌನ್ಸಿಲರುಗಳನ್ನು ತೆಗೆದುಬಿಟ್ಟು ಮ್ಯುನಿಸಿಪಲ್ ಆಡಳಿತವನ್ನು ನಡಿಸುವುದಕ್ಕಾಗಿ ಒಂದು ಕಮಿಟಿಯನ್ನು ಹೊಸದಾಗಿ ನಿಯಮಿಸಿರುವರು. ಈ ಕಮಿಟಿಯವರು ವಿಧಿಸಿರುವ ತೆರಿಗೆಯನ್ನು ಜನರು ಕೊಡಕೂಡದೆಂದು ಸ್ಥಳದ ಮುಖಂಡ ಜನರು ಒಂದು ಸಭೆಯನ್ನು ಸೇರಿಸಿ ಭಾಷಣಗಳನ್ನು ಮಾಡಿ ನಿರ್ಧರಿಸಿರುವರು.

ಎರೋಡಾ ಕಾರಾಗೃಹದಲ್ಲಿರುವ ಮ|| ಗಾಂಧಿಯವರ ದರ್ಶನವನ್ನು ತೆಗೆದುಕೊಳ್ಳಲು ಅವರ ಪತ್ನಿಯಾದ ಕಸ್ತೂರಿಬಾಯಿಯವರು ಕಾರಾಗೃಹದ ಸೂಪರಿಂಟೆಂಡೆಂಟರ ಅಪ್ಪಣೆಯನ್ನು ಕೇಳಿರುವಲ್ಲಿ ಸೂಪರಿಂಟೆಂಡೆಂಟರು ಅಪ್ಪಣೆಯನ್ನು ಕೊಡದೆ ನಿಮ್ಮ ಕಾಗದವನ್ನು ಕಾರಾಗೃಹಗಳ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ ಮತ್ತು ಹೋಂ ಮೆಂಬರಿಗೂ ಕಳುಹಿಸಿಕೊಟ್ಟಿದೆ ಎಂದು ಬರೆದು ತಿಳಿಸಿರುವುದಾಗಿ ಅಹಮದಾಬಾದಿನ ಪ್ರಜಾಬಂಧು ಎಂಬ ಸಾಪ್ತಾಹಿಕ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಕಲಕತ್ತಾದಲ್ಲಿ ಹಾರಿಸನ್ ಮಾರ್ಗವೂ ಕಾಲೇಜ್ ಮಾರ್ಗವೂ ಅಡ್ಡಹಾಯುವ ಸ್ಥಳದಲ್ಲಿ ಕಾದುಕೊಂಡಿದ್ದ ಒಬ್ಬ ಪೊಲೀಸು ಹೆಡ್‌ಕಾನ್‌ಸ್ಟೆಬಲು ಮತ್ತಿಬ್ಬರು ಕಾನ್‌ಸ್ಟೆಬಲುಗಳು ಒಂದು ಅಂಗಡಿಯ ಮುಂಭಾಗದಲ್ಲಿ ಯಾರೋ ಮೂವರು ನಿಂತಿರುವುದನ್ನೂ ಅವರಲ್ಲೊಬ್ಬನು ಹೆಗಲಿನ ಮೇಲೆ ಗೋಣಿಚೀಲವನ್ನು ಹಾಕಿಕೊಂಡಿರುವುದನ್ನೂ ನೋಡಿ ಹೆಡ್‌ಕಾನ್‌ಸ್ಟೆಬಲು ಅವರು ಕನ್ನಗಳ್ಳರೆಂದೂಹಿಸಿ ಅವರ ಬೆನ್ನಹತ್ತಿ ಓಡಿಹೋಗಿ ಚೀಲವನ್ನು ಹೊತ್ತುಕೊಂಡಿದ್ದವನನ್ನು ಹಿಡಿದುಕೊಂಡನು. ಅಷ್ಟರಲ್ಲಿ ಉಳಿದಿಬ್ಬರು ಕಳ್ಳರಲ್ಲೊಬ್ಬನು ಜಮೇದಾರನ ಮೇಲೆ ಗುಂಡುಹಾರಿಸಿ ಅವನ ಕಾಲಿಗೆ ಇಜವನ್ನು ಮಾಡಿದರು. ತತ್‌ಕ್ಷಣವೇ ಜಮಾದಾರನು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಲ್ಪಟ್ಟುದರ ಮೇಲೆ ಗುಣಹೊಂದುತ್ತಿರುವನು.

ರೈಲ್ವೆಬಂಡಿಯ ಛಾರ್ಜು ಹೆಚ್ಚಿಸಲ್ಪಡುವುದನ್ನು ನಿರೋಧಿಸುವುದಕ್ಕಾಗಿಯೂ, ಮೂರನೆ ತರಗತಿಯ ಪ್ರಯಾಣಿಕರಿಗಿರುವ ತೊಂದರೆಗಳನ್ನು ತಪ್ಪಿಸುವುದಕ್ಕಾಗಿಯೂ ಕಳೆದ ಸೋಮವಾರ ಬೊಂಬಾಯಿನಲ್ಲಿ ಒಂದು ಪ್ರಚಂಡಸಭೆಯು ಸೇರಿ

ಲಂಡನ್ ಪಟ್ಟಣದಲ್ಲಿ ರೀಜನ್ಟ್‌ಪಾರ್ಕ್ ಎಂಬ ಉದ್ಯಾನದಲ್ಲಿರುವ ಪ್ರಾಣಿಪ್ರದರ್ಶನಾಲಯಕ್ಕೆ ಡೆನ್ಮಾರ್ಕಿನಿಂದ ಪರಮಾಶ್ಚರ್ಯಕರವಾದ ಮೀನುಗಳು ತರಿಸಲ್ಪಟ್ಟಿರುತ್ತವೆ. ಈ ಮೀನಿನ ಚರ್ಯೆಯಿಂದ ಮಳೆಬರುವಿಕೆಯು ಸೂಚಿತವಾಗುವ ಪ್ರಯುಕ್ತ ಈ ಪ್ರಾಣಿಯು ಗುಡುಗುಮೀನೆಂದು ಕರೆಯಲ್ಪಡುವುದು. ಇದು ಸ್ವಭಾವವಾಗಿ ಕಾಲುವೆ ಸರೋವರಗಳಲ್ಲಿಯ ಕೆಸರಿನೊಳಗಡೆ ಅಡಗಿಕೊಂಡಿರುವುದು. ಮಳೆಯು ಬರುವುದಕ್ಕೆ ೨೪ ಗಂಟೆಗಳ ಮುಂಚೆಯೇ ಈ ಮೀನು ನೀರಿನಮೇಲುಗಡೆಗೆ ಬಂದು ಬಹಳ ಲವಲವಿಕೆಯಿಂದ ಚಲಿಸುವುದು. ಈ ಮೀನುಗಳಲ್ಲಿ ಇಂತಹ ಅಪೂರ್ವವಾದ ವಾಯುಕಾಲಜ್ಞಾನ ಗುಣವಿರುವುದರಿಂದ ವಾಯುಮಾಪಕಗಳಾಗಿ ಗಾಜಿನಕೊಳವೆಗಳಲ್ಲಿಡಲ್ಪಡುವುವು.

ದ್ದಿತು. ಈ ವಿಚಾರವಾಗಿ ಭಾಷಣಮಾಡಿದವರಲ್ಲೊಬ್ಬರಾದ ಆನರಬಲ್ ಮ|| ಲ್ಲಲ್ಲೂಭಾಯಿಶಾಮಲದಾಸ್‌ರವರು ಪ್ರಯಾಣಿಕರಿಗಿರತಕ್ಕ ತೊಂದರೆಭಾಗಗಳನ್ನು ತಪ್ಪಿಸಿ ಅವರಿಗೆ ಸೌಲಭ್ಯವನ್ನುಂಟುಮಾಡಿಕೊಡಬೇಕೆಂದು ಸ್ಟೇಟ್‌ಕೌನ್ಸಿಲ್ ಸಭೆಯಲ್ಲಿ ಚರ್ಚಿಸುವಾಗ್ಗೆ ನಮ್ಮ ದೇಶೀಯರೇ ಈ ವಿಚಾರದಲ್ಲಿ ಪ್ರತಿಭಟಿಸಿ ಮಾತನಾಡುವುದು ಪರಮಾಶ್ಚರ್ಯಕರವಾಗಿದೆ ಎಂದೂ, ಈ ವಿಚಾರದಲ್ಲಿ ನ್ಯಾಯಮಾರ್ಗವನ್ನು ಬಿಡದೆ ಒಂದೇ ಸಮನಾಗಿ ಹೋರಾಡಬೇಕಲ್ಲದೆ ನ್ಯಾಯವಿಧಾಯಕಸಭೆಯಲ್ಲೂ ಚರ್ಚಿಸಿದಲ್ಲಿ ಛಾರ್ಜು ಇಳಿಸಲ್ಪಡುವ ಸಂಭವವುಂಟೆಂದೂ ಹೇಳಿದರು.

ಬೊಂಬಾಯಿನ ತಾತಾ ವಿದ್ಯುಚ್ಛಕ್ತಿಯುತ್ಪಾದಕ ಕಂಪೆನಿಯವರು ಮುಲ್ಸಿಪೇಟೆಯಲ್ಲಿ ಕಟ್ಟುತ್ತಿರುವ ಆಣೆಯ ಕೆಲಸಕ್ಕೆ ಭಂಗಮಾಡಕೂಡದೆಂದು ಮ್ಯಾಜಿಸ್ಟ್ರೇಟರು ಸತ್ಯಾಗ್ರಹಿಗಳಿಗೆ ಕಟ್ಟಪ್ಪಣೆ ಮಾಡಿದ್ದಾಗ್ಯೂ ಅವರುಗಳು ಲಕ್ಷ್ಯಸದೆ ಅಡಚಣೆ ಮಾಡಿದುದರ ಮೇಲೆ ಮ್ಯಾಜಿಸ್ಟ್ರೇಟರು ಪ್ರಮುಖ ಸತ್ಯಾಗ್ರಹಿಗಳಾದ ಪ್ರೊಫೆಸರ್ ಪರಾಂಜಪೆ, ಡಾಕ್ಟರ್ ಘಟಕ್ ಮತ್ತು ಮ|| ದಮನೆ ಈ ಮೂವರಿಗೆ ತಲಾ ೬ ತಿಂಗಳ ಕಠಿನ ಕಾರಾಗೃಹವಾಸ ಶಿಕ್ಷೆಯನ್ನೂ, ೭೫ ವರ್ಷ ವಯಸ್ಸಿನ ವೃದ್ಧನಾದ ವಾಸುದೇವಜೋಷಿ ಎಂಬಾತನಿಗೆ ೧೫ ದಿನಗಳ ಸಾದಾ ಕಾರಾಗೃಹವಾಸ ಶಿಕ್ಷೆಯನ್ನೂ ಮತ್ತು ೫೦ ರೂಪಾಯಿ ದಂಡವನ್ನೂ, ಮತ್ತೊಬ್ಬನಿಗೆ ೪ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನೂ ವಿಧಿಸಿದರು. ಇವರಲ್ಲದೆ ಆಣೆ ಕಟ್ಟಲ್ಪಡುವ ಸ್ಥಳದ ವಾಸಸ್ಥರಾದ ೧೬ ಜನ ಮಾವಳರಿಗೆ ತಲಾ ೧ ತಿಂಗಳ ಕಠಿನ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಸ್ಟ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಬಸವಜಯಂತ್ಯುತ್ಸವಗಳು.

ತುಮಕೂರು ಡಿಸ್ಟ್ರಿಕ್ಟ್ ಮದ್ದಗಿರಿ.

ಈ ಊರಿನ ಎಲ್ಲಾ ವೀರಶೈವ ಮಹನೀಯರು ಪರಮ ಪೂಜ್ಯನೂ, ಅವತಾರಮೂರ್ತಿಯೂ, ವೀರಶೈವ ಮತರಕ್ಷಕನೂ ಆದ ಶ್ರೀ ಬಸವೇಶ್ವರನ ಜಯಂತ್ಯುತ್ಸವವನ್ನು ವೈಶಾಖ ೩ ರಿಂದ ಅಷ್ಟವಿ ಪೂರ್ತಿಯಾಗಿ ಬಹು ವಿಜೃಂಭಣೆಯಿಂದ ಪ್ರೇಕ್ಷಕರಿಗೆ ಆನಂದವು ದ್ವಿಗುಣತ್ರಿಗುಣವಾಗುವಂತೆ ನಡಿಸಿದರು. ಇದು ಇತರರಿಗೆ ಮೇಲ್ಪಂಗ್ತಿಯಾಗಿರುವುದು. ಈ ಮಧ್ಯ ದಿನಗಳಲ್ಲಿ ತುಂಕೂರು ಮ|| ರಾ|| ಜವಳಿಅಂಗಡಿ ಸಾಹುಕಾರ್ ವೀರಣ್ಣನವರಿಂದಲೂ, ಮತ್ತು ಅದೇ ಊರಿನ ಹುಲ್ಕುಂಟೆ ಬಿ. ಕುಪ್ಪಯ್ಯನೆಂಬುವರಿಂದಲೂ, ಶ್ವೇತೋಪಾಖ್ಯಾನ ಸಾನಂದಚರಿತ್ರೆ, ಶಿವಲೀಲಾಮೃತ, ಪೇಮನಾರಾಧ್ಯಚರಿತ ಎಂಬ ಶಿವಕಥೆಗಳು ಭಕ್ತಿ ಜ್ಞಾನ, ವೈರಾಗ್ಯಗಳಿಂದ ಕೂಡಿ ಕೇಳುವವರಿಗೆ ಹೃದಯಂಗಮವಾಗುವಂತೆ ಪರಮ ಪರಶಿವನ ಮಹಿಮೆಯು ದೊಡ್ಡದೆಂಬುದನ್ನು ನಿರ್ಧರಿಸುವಂತೆ ನಡಿಸಲ್ಪಟ್ಟವು. ಓರ್ವಪ್ರೇಕ್ಷಕ.

ವಿಜಾಪುರಜಿಲ್ಲೆ ಅಮರಾವತಿ.

ತಾ|| ೨೯-೪-೨೨ ನೇ ದಿವಸ ನಮ್ಮ ಗ್ರಾಮದಲ್ಲಿ ಬಸವಜಯಂತಿ ಮಹೋತ್ಸವವು ಒಳ್ಳೇ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಸದರಿ ಉತ್ಸವದ ದಿವಸ ಊರು ತಳಿರು, ತೋರಣ ಮುಂತಾದುವುಗಳಿಂದ ಸುಶೋಭಿತವಾಗಿತ್ತು. ಊರೊಳಗಿನ ಜನರು ಆನಂದೋಲ್ಲಾಸಗಳಿಂದ ಕೂಡಿದವರಾಗಿದ್ದರು. ಮಂಗಳವಾದ್ಯಗಳ ಧ್ವನಿಯು ಕಿವಿಗಳನ್ನು ಗಡಚಿಕ್ಕುತ್ತಿತ್ತು. ಶ್ರೀ ಬಸವೇಶ್ವರ ಮಹಾರಾಜರ ಮೆರವಣಿಗೆಗೆ ಸಾವಿರಾರು ಜನರು ಕೂಡಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ಸುಮಂಗಲೆಯರು ಮಂಗಲಾರತಿಗಳನ್ನು ಎತ್ತಿ ಇಂಪಾದ ಧ್ವನಿಗೈಯುತ್ತಿದ್ದರು. ಅವರ ಮುಂದೆ ಶಿವಭಜನೆಯನ್ನು ಮಾಡತಕ್ಕ ಜನರು ರುದ್ರಾಕ್ಷಿ, ಭಸ್ಮಾದಿಗಳ ಧರಿಸುವಿಕೆಯಿಂದ ಶಿವಶರಣರ ಹಾಗೆ ಒಪ್ಪುತ್ತಿದ್ದರು. ಮೆರವಣಿಗೆಯು ಮುಗಿದನಂತರ ಊರ ಹೊರಗೆ ಬೈಲಬಸಪ್ಪನ ದೇವಾಲಯದಲ್ಲಿ ಪ್ರಚಂಡಸಭೆಯು ಕೂಡಿತ್ತು. ಸದರಿ ಸಭೆಯಲ್ಲಿ ಅಯ್ಯಪ್ಪರದ್ದೇರ ಇವರು "ಶ್ರೀ ಬಸವೇಶ್ವರಮಹಾರಾಜ" ಎಂಬ ವಿಷಯದ ಮೇಲೆ ಸುಶ್ರಾವ್ಯವ್ಯಾಖ್ಯಾನ ಹೇಳಿದರು. ಇಷ್ಟಾದ ಮೇಲೆ ಜಯಘೋಷಗಳೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವಪ್ರೇಕ್ಷಕ.

ಗಜೇಂದ್ರಗಡ.

ಇಲ್ಲಿಯ ಚವಕಿ ವಿರಕ್ತಮಠದಲ್ಲಿರುವ ಶ್ರೀ ಮಹಾಂತ ಶಿವಯೋಗಿ ವಾಚನಾಲಯದಲ್ಲಿ ತಾ|| ೩೦-೪-೨೨ ರವಿವಾರ ದಿವಸ ಶ್ರೀ ಬಸವೇಶ್ವರರ ಜಯಂತಿಯ ಬಗ್ಗೆ ಸಭೆಮಾಡುವದು ಗೊತ್ತಾಗಿದ್ದ ಕಾರಣ ಮಠವೂ ಮಠದ ಮುಂದಿನ ಜಗತೀ ಹಜಾರದ ಪ್ರತಿಯೊಂದು ಮಗ್ಗಲೂ ತಳಿರು ತೋರಣಾದಿಗಳಿಂದ ಅಲಂಕರಿಸಲ್ಪಟ್ಟಿತ್ತು. ಸಭೆಯು ಸಾಯಂಕಾಲದ ೩ ಗಂಟೆಗೆ ಪ್ರಾರಂಭಿಸಲ್ಪಟ್ಟಿತು. ಅಧ್ಯಕ್ಷಸ್ಥಾನವನ್ನು ಶ್ರೀಮದ್ಬಸವ ಲಿಂಗ ಚಕ್ರವರ್ತಿ ಬೆಳ್ಳುಬ್ಬಿ ಪಟ್ಟಾಧ್ಯಕ್ಷ ಮಹಾಶ್ರೀಗಳಾದ ಮಳಿಸ್ವಾಮಿಗಳವರು ಅಲಂಕರಿಸಿದ್ದರು. ಸಭೆಗೆ ಯಲಬುರ್ಗಿಯ ಮುರಡೀಮಠದ ಶ್ರೀ ಚರಮೂರ್ತಿಗಳವರು ದಯಮಾಡಿಸಿದ್ದರು. ಸಭೆಯಲ್ಲಿ ವಿದ್ಯಾರ್ಥಿಗಳ ಹಾಗೂ ಬೇರೆ ಜನರ ಮತ್ತು ಅಧ್ಯಕ್ಷರ ಸಮಯೋಚಿತ ಭಾಷಣಗಳಾದ ಬಳಿಕ ಎಲ್ಲರಿಗೂ ಹಾರ ತುರಾಯಿಗಳು ಹಂಚಲ್ಪಟ್ಟು ಶ್ರೀ ಬಸವೇಶ್ವರವರ ಜಯಘೋಷದೊಂದಿಗೆ ಸಭಾ ವಿಸರ್ಜನವಾಯಿತು. ಶ್ರೀ ಪಟ್ಟದ ಚರಮೂರ್ತಿಗಳೂ ಎಲ್ಲ ಸದ್ಭಕ್ತರೂ ಒಟ್ಟುಗೂಡಿ ಯಾವ ಭೇದಭಾವವೂ ಇಲ್ಲದೆ ವಮ್ಮನಸ್ಸಿನಿಂದ ಶ್ರೀ ಬಸವೇಶ್ವರರ ಜಯಂತಿಯ ಸಭೆ ವಿರಕ್ತಮಠದಲ್ಲಿಯೇ ಅತಿಪೂಜ್ಯಬುದ್ಧಿಯಿಂದ ಮಾಡಿದ್ದು ಸರ್ವರಿಗೂ ಅನುಕರಣೀಯವಾದ ಸಂಗತಿಯಾಗಿದೆ. ಓರ್ವ ಪ್ರತ್ಯಕ್ಷದರ್ಶಿ.

ಬೃಹಸ್ಪತಿ ನಾಮಾಂಕಿತನ ಪ್ರಲಾಪ.

ಅಯ್ಯಾ ಸ್ಟಾರ್ ಪತ್ರಕರ್ತರೆ,

ದಯವಿಟ್ಟು ತಮ್ಮ ನಿಷ್ಪಕ್ಷಪಾತವಾದ ಪತ್ರಿಕೆಯಲ್ಲಿ ಕೊಂಚ ಸ್ಥಳವನ್ನು ಕೊಡಬೇಕೆಂದು ಬೇಡುತ್ತೇನೆ.

ಕಳೆದ ವಾರ ತಮ್ಮ ಪತ್ರಿಕೆಯಲ್ಲಿ ಅಪ್ರಾರ್ಥಿತವಾದ ಪಕ್ಷಪಕ್ಷ ಇದೇ ತಾನೆ ಎಂಬ ಹೆಡ್ಡಿಂಗಿನಿಂದ ನಾನು ಬರೆದಿದ್ದ ಬಾತ್ಮಿಗೆ ಬೃಹಸ್ಪತಿ ಎಂಬ ನಾಮಾಂಕಿತನೊಬ್ಬನು ಕಳೆದ ತಾ|| ೧೨ರ ಸಂಪದಭ್ಯುದಯ ಪತ್ರಿಕೆಯಲ್ಲಿ ಉತ್ತರವನ್ನು ಬರೆದಿರುವನು. ಈತನು ಬೃಹಸ್ಪತಿ ಟೈಟಲನ್ನು ವೆಂಕಟಕೃಷ್ಣಯ್ಯ ಅಂಡ್ ಕೊ ವಿದ್ಯಾವಿಚಾರದಿಂದ ಪಡೆದಿರುವುದರಿಂದ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಸುಳ್ಳನ್ನು ಸಾಧಿಸಲು ಹೊರಟು ಕಳ್ಳ ಹಣಕ್ಕೆ ದೊಡ್ಡ ಮುದ್ರೆ ಎಂಬ ಗಾದೆಗೆ ಸರಿಯಾಗಿ ೩-೪ ಶ್ಲೋಕಗಳನ್ನು ಉದಹರಿಸಿ ತನ್ನ ಅಭಿಮಾನ ದೇವತೆಯಾದ ವೆಂಕಟಕೃಷ್ಣಯ್ಯನವರ ಕಾಪಟ್ಯವನ್ನು ಮುಚ್ಚುವ ಪ್ರಯತ್ನದಲ್ಲಿ ತಾನಾಡಿರುವ ಮಾತು ತನಗೇ ಅನ್ವಯಿಸುತ್ತದೆಯೆಂಬ ಪರಿಜ್ಞಾನವಿಲ್ಲದೆ ಮನಸ್ಸಿಗೆ ಬೊಗಳಿಕೊಂಡಿರುವನು. ಮ|| ವೆಂಕಟಕೃಷ್ಣಯ್ಯನವರು ಇನ್ನೂ ಪ್ರತ್ಯಕ್ಷರಾಗಿರುವುದರಿಂದ ಅವರು ತನ್ನ ಹೆಸರನ್ನು ಕೊಟ್ಟು ಪಕ್ಷಪಕ್ಷ ವಿಚಾರದಲ್ಲಿ ಶ್ರೀಮನ್ಮಹಾರಾಜರನ್ನು ಬೇಡಿಕೊಂಡಿಲ್ಲವೆಂದು ಬರೆದಲ್ಲಿ ನಾನು ಸರಿಯಾದುತ್ತರವನ್ನು ಕೊಟ್ಟು ಸಾಧಿಸಲು ಸಿದ್ಧನಾಗಿದ್ದೇನೆ. ಹಾಗಲ್ಲದೆ ಯಾವನೊ ದಾರಿಹೋಕನು ವಿಚಾರಶೂನ್ಯನಾಗಿ ಹುಚ್ಚಿಯಂತೆ ಗುರುಗುಟ್ಟಿಕೊಂಡು ಬರೆದಿರುವ ಹೇಸಿಗೆಯ ಬರವಣಿಗೆಗೆ ವೃಥಾ ಶ್ರಮಪಟ್ಟು ಉತ್ತರವನ್ನು ಬರೆದು ತನ್ಮೂಲಕ ತಮ್ಮ ಪವಿತ್ರವಾದ ಪತ್ರಿಕೆಯ ಸ್ಥಳವನ್ನು ವ್ಯರ್ಥಗೊಳಿಸುವುದು ಯುಕ್ತವಾಗಿ ತೋರುವುದಿಲ್ಲ. ವೆಂಕಟಕೃಷ್ಣಯ್ಯನವರು ತಮ್ಮ ಪತ್ರಿಕೆಯಲ್ಲಿ ತಮಗೆ ಸಂಬಂಧಪಟ್ಟ ವಿಚಾರವು ಮರೆಮಾಜಿ ಬರೆಯಲ್ಪಡುವ ಲೇಖನಗಳಿಗೆ ಸ್ಥಳವನ್ನು ಕೊಡಲು ಅವರ ಮನೋದೇವತೆಯು ಹೇಗೊಪ್ಪಿದಳು? ಈ ಬೃಹಸ್ಪತಿ ನಾಮಾಂಕಿತನ ಹಾಗೂ ಅವನ ಕುಲದವರ ಮೆದುಳು ಕೆಟ್ಟು ವಿಚಾರಶೂನ್ಯರಾಗಿ ಮನಸ್ಸಿಗೆ ಬಂದಂತೆ ಬೊಗಳಲುಪಕ್ರಮಿಸಿರುವುದರಿಂದ ಬೀಜದ ಬಸವನ ಸಹಾಯವನ್ನೊದಗಿಸಿಕೊಟ್ಟರೇನಾದರೂ ಪರಿವರ್ತನವಾಗಬಹುದೆಂದು ತೋರುತ್ತದೆ.

ಪರನಿಂದಾಸಹಿಷ್ಣು.

"ದನಗಳ ಪ್ರದರ್ಶನ"

ಅರಸೀಕೆರೆ ತಾಲ್ಲೂಕು ಕಣಕಟ್ಟೆ ಹೋಬಳಿ ಹೊಲಲಕೆರೆಯಲ್ಲಿ ಇದೇ ಮಾಹೆ 7 ನೆಯ ಶುಕ್ರವಾರ ದನಗಳ ಪ್ರದರ್ಶನವು ತಾಲ್ಲೂಕು ಅಮಲ್ದಾರ್ ಮಿ|| ಕೆ. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಸೆಕ್ರಟರಿಗಳಾದ ಮಿ|| ಹೆಚ್. ಕೃಷ್ಣಮೂರ್ತಿಗಳೂ ಮಿ|| ಎಂ. ಹೆಚ್. ಹರಿಯಣ್ಣನವರೂ ಶ್ಲಾಘನೀಯವಾದ ಏರ್ಪಾಡುಗಳನ್ನು ಮಾಡಿದ್ದರು. ಇದಕ್ಕಾಗಿ ತಾಲ್ಲೂಕಿನಿಂದ ಸರ್ಕಾರಿ ನೌಕರಿಗಳು ಮತ್ತು ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಅಧ್ಯಕ್ಷರ ಚುನಾವಣೆಯಾದಕೂಡಲೆ ಸೆಕ್ರಟರಿಗಳು ರಿಪೋರ್ಟನ್ನು ಓದಿಹೇಳಿದರು. ನಂತರ ವೆಟರ್‌ನರಿ ಇನ್‌ಸ್ಪೆಕ್ಟರವರೂ, ಹಲ್ಕಾರ್ ಸಬ್. ಅ. ಸರ್ಜನ್‌ರವರೂ ಸ್ಯಾನಿಟರಿ ಇನ್‌ಸ್ಪೆಕ್ಟರವರೂ, ಹೆಚ್. ಕೃಷ್ಣಮೂರ್ತಿಗಳೂ, ಎಂ. ಹೆಚ್. ಹರಿಯಣ್ಣನವರೂ ಒಂದೊಂದು ವಿಚಾರವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸಗಳನ್ನು ಮಾಡಿದರು. ಅಧ್ಯಕ್ಷರು ಈ ಪ್ರದರ್ಶನಕ್ಕೆ ಪ್ರೋತ್ಸಾಹವನ್ನು ಕೊಟ್ಟ ಹಿಂದಿನ ಅಮಲ್‌ದಾರ್ ಮಿ|| ಎ. ಜೆ. ಡಾರ್ಕ್ ಸಾಹೇಬರಿಗೆ ಸಭೆಯವರು ವಂದನೆಗಳನ್ನು ಒಪ್ಪಿಸಿ ಅದನ್ನು ರಿಕಾರ್ಡುಮಾಡಿ ಅವರ ಎಕಸ್ಟ್ರಾಕ್ಟನ್ನು ಅವರಿಗೆ ಕಳುಹಿಸಬೇಕೆಂತ ತಿಳಿಸಿದ್ದನ್ನು ಸರ್ವರೂ ಒಪ್ಪಿದರು. ತರುವಾಯ ಹುಡುಗರಿಗೆ ಆಟಗಳನ್ನು ಏರ್ಪಡಿಸಿದ್ದ ಮೇಲೆ, ಟಗ್ ಆಫ್‌ವಾರ್, ನೀಡಲ್ ರೇಸ್, ರನ್ನಿಂಗ್ ರೇಸ್, ಮುಂತಾದುವುಗಳು ನಡೆಯಿತು. ಪಂಚಮರಿಗೋಸ್ಕರ ಒಂದು ಆಟವು ನಡೆಸಲ್ಪಟ್ಟಿತು. ಕಮಿಟಿಯವರು ಚುನಾಯಿಸಿ ಉತ್ತಮತರವಾದ ರಾಸುಗಳಿಗೆ ಸರ್ಟಿಫಿಕೇಟ್‌ಸಮೇತ ಬಹುಮಾನವೂ ಆಟಪಾಟಗಳಲ್ಲಿ ಗೆದ್ದ ಬಾಲಕ ಬಾಲಕಿಯರುಗಳಿಗೆ ಪಾರಿತೋಷಕವೂ ಅಧ್ಯಕ್ಷರಿಂದ ಹಂಚಲ್ಪಟ್ಟಿತು. ಅಧ್ಯಕ್ಷರು ಎದ್ದು ನಿಂತು ಸಭಿಕರಿಗೆ ನಾನಾವಿಧವಾದ ತಿಳಿವಳಿಕೆಯನ್ನು ಬೋಧಿಸಿದರು. ಸೆಕ್ರಟರಿಗಳು, ಅಧ್ಯಕ್ಷರವರು ಸಹಸ್ರಕೆಲಸವಿದ್ದಾಗ್ಯೂ ಪ್ರಜಾಸೇವೆಯೇ ದೇವರ ಸೇವೆಯೆಂತ ಭಾವಿಸಿ ಇಲ್ಲಿಗೆ ದಯಮಾಡಿಸಿ ಹಿತೋಪದೇಶಗಳನ್ನು ಮಾಡಿದ್ದಕ್ಕೆ ವಂದನೆಯನ್ನು ಅರ್ಪಿಸಿದರು. ಹಾರಾ, ತುರಾಯಿ ಅರ್ಪಿಸಿ ಸಭಿಕರಿಗೆಲ್ಲಾ ಪಾನ್‌ಸುಪಾರಿ, ಗಂಧಪುಷ್ಪ ವಿನಿಯೋಗವಾಡಿ ಶ್ರೀಮನ್ಮಹಾರಾಜಸಾಹೇಬ್ ಬಹದ್ದೂರವರಿಗೆ ಶ್ರೀರಾಮೇಶ್ವರನು ಆಯುರಾರೋಗ್ಯಗಳನ್ನು ಕೊಡಲೆಂಬ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಪ್ರತ್ಯಕ್ಷದರ್ಶಿ.

ಒಂದು ವಿವಾಹಮಹೋತ್ಸವ.

ಚಿಕ್ಕಮಗಳೂರು ಟವರ್ನಿನಲ್ಲಿ ಸುಪ್ರಸಿದ್ಧರೂ, ಸದ್ಗುರುಭಕ್ತರೂ, ಭೂತದಯಾಪರರೂ, ಆದ ಶ್ರೀಯುತ ಕಾಫೀಪ್ಲಾಂಟರ್ ತಳಲೂರು ಚೆನ್ನಬಸಪ್ಪಶೆಟ್ರು ತಮ್ಮ ಪುತ್ರಿ ಚಿ|| ||ಸೌ ಪಾರ್ವತಮ್ಮನನ್ನು ಲೇಟ್ ಅಸಿಸ್ಟೆಂಟ್ ಎಂಜಿನಿಯರಾದ ಚಿಕ್ಕಮಗಳೂರು ಮ|| ರಾ|| ಹಲಿಗೇಗೌಡ್ರ ಜೇಷ್ಠಪುತ್ರ ವೀರಶೆಟ್ಟೀಗೌಡರೆಂಬವರಿಗೆ ಕೊಟ್ಟು 30-4-22 ರಲ್ಲಿ ಬಹಳ ವಿಜೃಂಭಣೆಯಿಂದ ತಮ್ಮ ಬಂಗ್ಲೆಯಲ್ಲಿ ವಿವಾಹಮಹೋತ್ಸವವನ್ನು ಬೆಳಸಿದರು. ನೂತನ ದಂಪತಿಗಳಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯಾಗಲೆಂದು ಶ್ರೀಮನ್ ಮಹಾರಾಜನಿರಂಜನ ಜಗದ್ಗುರುಗಳವರು ಮತ್ತು ಅನಂತಪುರದ ಲಿಂಗಸ್ವಾಮಿಗಳೇ ಮೊದಲಾದ ಪೂಜ್ಯಪಾದರೂ ಆಶೀರ್ವಾದ ನಿರೂಪವನ್ನು ದಯಪಾಲಿಸಿದರು. ಗುರುವರ್ಗದವರೂ ವೇ|| ಮೈಸೂರ್ ಶಿವಕಥಾ ಶಿವಯ್ಯಶಾಸ್ತ್ರಿಗಳವರು ಮತ್ತು ಹುಣಸಗಟ್ಟಮಠದ ವೇ|| ನಂಜುಂಡಾರಾಧ್ಯರೇ ಮೊದಲಾದ ಶಾಸ್ತ್ರಿವರ್ಗದವರೂ ಶ್ರೀರಂಗಪಟ್ಟಣದ ಮ|| ಸಿದ್ಧಲಿಂಗದೇವರೇ ಮೊದಲಾದ ವಕ್ತೃತ್ವಶಾಲಿಗಳೂ ಈ ಟವರ್ನಲ್ಲಿ ಮುನಸೀಫರಾಗಿದ್ದ ಮ|| ಯಂ. ಯನ್. ಸುಬ್ಬಣ್ಣನವರೇ ಮೊದಲಾದ ಅಧಿಕಾರಿವರ್ಗದವರೂ ಬೀರೂರ್ ಮ|| ಗಳಾದ ಪತ್ರೆ ಚನ್ನವೀರಪ್ಪನವರು ಮತ್ತು ವೈಸ್‌ಪ್ರೆಸಿಡೆಂಟ್ ಉಬ್ರಾಣಿ ಮಠದ ಶಿವಲಿಂಗಪ್ಪಯ್ಯನವರೇ ಮೊದಲಾದ ಧನವಂತರೂ ಇನ್ನೂ ಸ್ಥಳಪರಸ್ಥಳದವರೂ ಮತಪರಮತದ ಮಹನೀಯರೂ, ವಿವಾಹಮಂಟಪವನ್ನು ಅಲಂಕರಿಸಿದ್ದರು. ವೇ|| ಶಿವಯ್ಯಶಾಸ್ತ್ರಿಗಳು ಶಿವಕಥಾಶ್ರವಣವನ್ನು ಮಾಡಿಸಿದರು. ಬಳಿಕ ಮ|| ರಾ|| ಶೆಟ್ರು ತಮ್ಮ ಶಕ್ತ್ಯನುಸಾರವಾಗಿ ಸಭಾಸದರನ್ನು ಫಲತಾಂಬೂಲ ಭೂರಿದಕ್ಷಿಣೆ ಮೊದಲಾದುವುಗಳಿಂದ ಸತ್ಕರಿಸಿದರು. ಈ ಮಹೋತ್ಸವದಲ್ಲಿ ಮ|| ರಾ|| ಶೆಟ್ರು ವೇಶಾಂಗನೆಯರೇ ಮೊದಲಾದ ಬಾಹ್ಯಾಡಂಬರಗಳಿಗೆ ಅವಕಾಶವನ್ನು ಕೊಡದೆ ಶಿವಕಥಾಶ್ರವಣ ವೀರಶೈವ ತತ್ವಪ್ರಕಾಶವೊದಲಾದುವುಗಳನ್ನು ನೆರವೇರಿಸಿದ್ದು ಎಲ್ಲರಿಗೂ ಮೇಲ್ಪಂಗ್ತಿಯಾಗಿರುವುದಲ್ಲದೆ ಚಿರಸ್ಮರಣೀಯವಾಗಿರುತ್ತದೆ. ತಾ|| 7-5-22 ನೇ ಭಾನುವಾರ ತಮ್ಮ ಒಡನಾಡಿಗಳಾದ ಪರೀಕ್ಷಾಶಾಖೆಯಿನ್ಸ್ಪೆಕ್ಟರುಗಳನ್ನೂ ಸರ್ಕಾರಿ ನೌಕರರನ್ನೂ ಔತಣಮಾಡಿಕೊಂಡು ಸತ್ಕರಿಸುವವರಾಗಿದ್ದಾರೆ. ಅಲ್ಲಿಯ ವರವಿಗೆ ಪ್ರತಿದಿವಸವೂ ಮೇಲ್ಕಂಡ ಶಿವಯ್ಯಶಾಸ್ತ್ರಿಗಳು ಮತ್ತು ನಂಜುಂಡಾರಾಧ್ಯರಿಂದ ಶಿವಕಥಾಮೊದಲಾದುವುಗಳು ನೆರವೇರುವಂತೆ ಏರ್ಪಡಿಸಿರುತ್ತಾರೆ. ಈ ಮಹೋತ್ಸವದ ಜ್ಞಾಪಕಾರ್ಥವಾಗಿ ಮೇಲ್ಕಂಡ ಬ್ರಹ್ಮಸಮುದ್ರದ ಪಟ್ಟಾಧ್ಯಕ್ಷರ ಅಪ್ಪಣೆಮೇರೆ ಬೆಂಗಳೂರು ವಿದ್ಯಾಭಿವೃದ್ಧಿ ಫಂಡಿಗೂ ತಿಪಟೂರು ವೀರಶೈವಾನಂದಾಶ್ರಮಕ್ಕೂ, ಶಿವಯೋಗಮಂದಿರದ ಜೀರ್ಣೋದ್ಧಾರಕ್ಕೂ ಐದೈದು ರೂಪಾಯಿಗಳಂತೆ ೨೦ ರೂಪಾಯಿಗಳನ್ನು ಕಳ್ಸಿಕೊಟ್ಟರಲ್ಲದೆ ಕೈ. ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ೨ ರೂಪಾಯಿಗಳನ್ನು ಕಳಿಸಿರುತ್ತಾರೆ. ಪ್ರೇಕ್ಷಕ.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯೂ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ವಂಧ್ಯಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿನಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನುದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ, ಆಶ್ಚರ, ಅದ್ಭೂತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟ, ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

15 ಬಳ್ಳಾರಿ.

೧೯೨೨ನೆಯ ಇಸವಿ ಮೇ ತಾ|| ೧೪ರಿಂದ ೧೯೨೨ನೆಯ ಮೇ ತಾ|| ೨೦ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ನೆಯ ದುಂದುಭಿ ನಾಮಸಂವತ್ಸರದ ವೈಶಾಖಬಹುಳ ತದಿಗೆಯಿಂದ ವೈಶಾಖ ಬಹುಳ ನವಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭವಾ
14	ಭಾನು	ತದಿ	5-13	ಮೂಲ	39-47	1
15	ಸೋಮ	ಚೌತಿ	5-11	ಪೂಷಾ	42-12	2
16	ಮಂಗಳ	ಪಂಚ	6-28	ಉಷಾ	45-51	3
17	ಬುಧ	ಷಷ್ಠಿ	8-56	ಶ್ರವ	50-34	4
18	ಗುರು	ಸಪ್ತ	12-34	ಧನಿ	6-20	5
19	ಶುಕ್ರ	ಅಷ್ಟ	16-57	ಶತ	60	6
20	ಶನಿ	ನವ	21-58	ಶತ	3-2	7

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮುಂಚೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೨ ನೆಯ ಇಸವಿ ಮೇ ತಾರೀಖು ೨೧ ನೆಯ ಭಾನುವಾರ (ಸಂಚಿಕೆ ೨೧

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಣಹುಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮಜಯಂ.

ಇಂದೇ ಶಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ವೈಶ್ವಾನರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಮನ ವೈದ್ಯಶಾಲಾ,
19 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 47

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರದಾಸಿ	೦— ೮—೦
ವ್ರತಪಂಚಕ	೦— ೯—೦

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನುಪಯೋಗಿಸಿ ಶ್ಲೀಘ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಬಿಳಿ ಗ್ಲೇಸ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೨—೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಆಣೆಯಂತೆಯೂ ಕಳುಹಬೇಕು. ಶ್ಲೀಘ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
20 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಗೆಜ್ಜೆ ಕೆಟ್ಟದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 10

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಆ ಒಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ದ್ದಿತು. ಈ ವಿಚಾರವಾಗಿ ಭಾಷಣಮಾಡಿದವರಲ್ಲೊಬ್ಬರಾದ ಆನರಬಲ್ ಮ|| ಲಲ್ಲೂಭಾಯಿಶಾಮಲದಾಸ್‌ರವರು ಪ್ರಯಾಣಿಕರಿಗಿರತಕ್ಕ ತೊಂದರೆಭಾಗಗಳನ್ನು ತಪ್ಪಿಸಿ ಅವರಿಗೆ ಸೌಲಭ್ಯವನ್ನುಂಟುಮಾಡಿಕೊಡಬೇಕೆಂದು ಸ್ಟೇಟ್‌ಕೌನ್ಸಿಲ್ ಸಭೆಯಲ್ಲಿ ಚರ್ಚಿಸುವಾಗ್ಗೆ ನಮ್ಮ ದೇಶೀಯರೇ ಈ ವಿಚಾರದಲ್ಲಿ ಪ್ರತಿಭಟಿಸಿ ಮಾತನಾಡುವುದು ಪರಮಾಶ್ಚರ್ಯಕರವಾಗಿದೆ ಎಂದೂ, ಈ ವಿಚಾರದಲ್ಲಿ ನ್ಯಾಯಮಾರ್ಗವನ್ನು ಬಿಡದೆ ಒಂದೇ ಸಮನಾಗಿ ಹೋರಾಡಬೇಕಲ್ಲದೆ ನ್ಯಾಯವಿಧಾಯಕಸಭೆಯಲ್ಲೂ ಚರ್ಚಿಸಿದಲ್ಲಿ ಛಾರ್ಜು ಇಳಿಸಲ್ಪಡುವ ಸಂಭವವುಂಟೆಂದೂ ಹೇಳಿದರು.

ಬೊಂಬಾಯಿನ ತಾತಾ ವಿದ್ಯುಚ್ಛಕ್ತಿಯುತ್ಪಾದಕ ಕಂಪೆನಿಯವರು ಮುಳ್ಸಿಪೇಟೆಯಲ್ಲಿ ಕಟ್ಟುತ್ತಿರುವ ಆಣೆಯ ಕೆಲಸಕ್ಕೆ ಭಂಗಮಾಡಕೂಡದೆಂದು ಮ್ಯಾಜಿಸ್ಟ್ರೇಟರು ಸತ್ಯಾಗ್ರಹಿಗಳಿಗೆ ಕಟ್ಟಪ್ಪಣೆ ಮಾಡಿದ್ದಾಗ್ಯೂ ಅವರುಗಳು ಲಕ್ಷಿಸದೆ ಅಡಚಣೆ ಮಾಡಿದುದರ ಮೇಲೆ ಮ್ಯಾಜಿಸ್ಟ್ರೇಟರು ಪ್ರಮುಖ ಸತ್ಯಾಗ್ರಹಿಗಳಾದ ಪ್ರೊಫೆಸರ್ ಪರಾಂಜಪೆ, ಡಾಕ್ಟರ್ ಫಟಕ್ ಮತ್ತು ಮ|| ದಮನೆ ಈ ಮೂವರಿಗೆ ತಲಾ ೬ ತಿಂಗಳ ಕಠಿನ ಕಾರಾಗೃಹವಾಸ ಶಿಕ್ಷೆಯನ್ನೂ, ೬೫ ವರ್ಷ ವಯಸ್ಸಿನ ವೃದ್ಧನಾದ ವಾಸುದೇವಜೋಶಿ ಎಂಬಾತನಿಗೆ ೧೫ ದಿನಗಳ ಸಾದಾ ಕಾರಾಗೃಹವಾಸ ಶಿಕ್ಷೆಯನ್ನೂ ಮತ್ತು ೫೦ ರೂಪಾಯಿ ದಂಡವನ್ನೂ, ಮತ್ತೊಬ್ಬನಿಗೆ ೪ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನೂ ವಿಧಿಸಿದರು. ಇವರಲ್ಲದೆ ಆಣೆ ಕಟ್ಟಲ್ಪಡುವ ಸ್ಥಳದ ವಾಸಸ್ಥರಾದ ೧೭ ಜನ ಮಾವಳರಿಗೆ ತಲಾ ೧ ತಿಂಗಳ ಕಠಿನ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಸ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಬಸವಜಯಂತ್ಯುತ್ಸವಗಳು.

ತುಮಕೂರು ಡಿಸ್ಟ್ರಿಕ್ಟ್ ಮಧುಗಿರಿ.

ಈ ಊರಿನ ಎಲ್ಲಾ ವೀರಶೈವ ಮಹನೀಯರು ಪರಮ ಪೂಜ್ಯನೂ, ಅವತಾರಮೂರ್ತಿಯೂ, ವೀರಶೈವ ಮತರಕ್ಷಕನೂ ಆದ ಶ್ರೀ ಬಸವೇಶ್ವರನ ಜಯಂತ್ಯುತ್ಸವವನ್ನು ವೈಶಾಖ ೩ ರಿಂದ ಅಷ್ಟಮಿ ಪೂರ್ತಿಯಾಗಿ ಬಹು ವಿಜೃಂಭಣೆಯಿಂದ ಪ್ರೇಕ್ಷಕರಿಗೆ ಆನಂದವು ದ್ವಿಗುಣತ್ರಿಗುಣವಾಗುವಂತೆ ನಡಿಸಿದರು. ಇದು ಇತರರಿಗೆ ಮೇಲ್ಪಂಕ್ತಿಯಾಗಿರುವುದು. ಈ ಮಧ್ಯ ದಿನಗಳಲ್ಲಿ ತುಂಕೂರು ಮ|| ರಾ|| ಜವಳಿಅಂಗಡಿ ಸಾಹುಕಾರ್ ವೀರಣ್ಣನವರಿಂದಲೂ, ಮತ್ತು ಅದೇ ಊರಿನ ಹುಲ್ಕುಂಟೆ ಬಿ. ಕುಪ್ಪಯ್ಯನೆಂಬುವರಿಂದಲೂ, ಕ್ಷೀರೋಪಾಖ್ಯಾನ ಸಾನಂದಚರಿತ್ರೆ, ಶಿವಲೀಲಾಮೃತ, ಪಂಡಿತಾರಾಧ್ಯಚರಿತ ಎಂಬ ಶಿವಕಥೆಗಳು ಭಕ್ತಿ ಜ್ಞಾನ, ವೈರಾಗ್ಯಗಳಿಂದ ಕೂಡಿ ಕೇಳುವವರಿಗೆ ಹೃದಯಂಗಮವಾಗುವಂತೆ ಪರಮ ಪರಶಿವನ ಮಹಿಮೆಯು ದೊಡ್ಡದೆಂಬುದನ್ನು ನಿರ್ಧರಿಸುವಂತೆ ನಡಿಸಲ್ಪಟ್ಟವು. ಓರ್ವಪ್ರೇಕ್ಷಕ.

ವಿಜಾಪುರಜಿಲ್ಲೆ ಅಮರಾವತಿ.

ತಾ|| ೨೮-೪-೨೨ ನೇ ದಿವಸ ನಮ್ಮ ಗ್ರಾಮದಲ್ಲಿ ಬಸವಜಯಂತಿ ಮಹೋತ್ಸವವು ಒಳ್ಳೇ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಆದಿ ಉತ್ಸವದ ದಿವಸ ಊರು ತಳಿರು, ತೋರಣ ಮುಂತಾದುವುಗಳಿಂದ ಸುಶೋಭಿತವಾಗಿತ್ತು. ಊರೊಳಗಿನ ಜನರು ಆನಂದೋಲ್ಲಾಸಗಳಿಂದ ಕೂಡಿದವರಾಗಿದ್ದರು. ಮಂಗಳವಾದ್ಯಗಳ ಧ್ವನಿಯು ಕಿವಿಗಳನ್ನು ಗಡಚಿಕ್ಕುತ್ತಿತ್ತು. ಶ್ರೀ ಬಸವೇಶ್ವರ ಮಹಾರಾಜರ ಮೆರವಣಿಗೆಗೆ ಸಾವಿರಾರು ಜನರು ಕೂಡಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ಸುಮಂಗಲಿಯರು ಮಂಗಲಾರತಿಗಳನ್ನು ಎತ್ತಿ ಇಂಪಾದ ಧ್ವನಿಗೈಯುತ್ತಿದ್ದರು. ಅವರ ಮುಂದೆ ಶಿವಭಜನೆಯನ್ನು ಮಾಡತಕ್ಕ ಜನರು ರುದ್ರಾಕ್ಷಿ, ಭಸ್ಮಾದಿಗಳ ಧರಿಸುವಿಕೆಯಿಂದ ಶಿವಶರಣರ ಹಾಗೆ ಒಪ್ಪುತ್ತಿದ್ದರು. ಮೆರವಣಿಗೆಯು ಮುಗಿದನಂತರ ಊರ ಹೊರಗೆ ಬೈಲಬಸಪ್ಪನ ದೇವಾಲಯದಲ್ಲಿ ಪ್ರಚಂಡಸಭೆಯು ಕೂಡಿತು. ಸದರಿ ಸಭೆಯಲ್ಲಿ ಅಯ್ಯಪ್ಪರದ್ದೇರ ಇವರು “ಶ್ರೀ ಬಸವೇಶ್ವರಮಹಾರಾಜ” ಎಂಬ ವಿಷಯದ ಮೇಲೆ ಸುಶ್ರಾವ್ಯವ್ಯಾಖ್ಯಾನ ಹೇಳಿದರು. ಇಷ್ಟಾದ ಮೇಲೆ ಜಯಘೋಷಗಳೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.
ಓರ್ವಪ್ರೇಕ್ಷಕ.

ಗಜೇಂದ್ರಗಡ.

ಇಲ್ಲಿಯ ಚವಕಿ ವಿರಕ್ತಮಠದಲ್ಲಿರುವ ಶ್ರೀ ಮಹಾಂತ ಶಿವಯೋಗಿ ವಾಚನಾಲಯದಲ್ಲಿ ತಾ|| ೩೦-೪-೨೨ ರವಿವಾರ ದಿವಸ ಶ್ರೀ ಬಸವೇಶ್ವರರ ಜಯಂತಿಯ ಬಗ್ಗೆ ಸಭೆನಾಡುವದು ಗೊತ್ತಾಗಿದ್ದ ಕಾರಣ ಮಠವೂ ಮಠದ ಮುಂದಿನ ಜಗತೀ ಹಜಾರದ ಪ್ರತಿಯೊಂದು ಮಗ್ಗಲೂ ತಳಿರು ತೋರಣಾದಿಗಳಿಂದ ಅಲಂಕರಿಸಲ್ಪಟ್ಟಿತ್ತು. ಸಭೆಯು ಸಾಯಂಕಾಲದ ೩ ಗಂಟೆಗೆ ಪ್ರಾರಂಭಿಸಲ್ಪಟ್ಟಿತು. ಅಧ್ಯಕ್ಷಸ್ಥಾನವನ್ನು ಶ್ರೀಮದ್ವೀನ ಲಿಂಗ ಚಕ್ರವರ್ತಿ ಬೆಳ್ಳುಬ್ಬಿ ಪಟ್ಟಾಧ್ಯಕ್ಷ ಮಹಾಸ್ವಾಮಿಗಳಾದ ಮಳಿಸ್ವಾಮಿಗಳವರು ಅಲಂಕರಿಸಿದ್ದರು. ಸಭೆಗೆ ಯಲಬುರ್ಗಿಯ ಮುರಡೀಮಠದ ಶ್ರೀ ಚರಮೂರ್ತಿಗಳವರು ದಯಮಾಡಿಸಿದ್ದರು. ಸಭೆಯಲ್ಲಿ ವಿದ್ಯಾರ್ಥಿಗಳ ಹಾಗೂ ಬೇರೆ ಜನರ ಮತ್ತು ಅಧ್ಯಕ್ಷರ ಸಮಯೋಚಿತ ಭಾಷಣಗಳಾದ ಬಳಿಕ ಎಲ್ಲರಿಗೂ ಹಾರ ತುರಾಯಿಗಳು ಹಂಚಲ್ಪಟ್ಟು ಶ್ರೀ ಬಸವೇಶ್ವರರ ಜಯಘೋಷದೊಂದಿಗೆ ಸಭಾ ವಿಸರ್ಜನವಾಯಿತು. ಶ್ರೀ ಪಟ್ಟದ ಚರಮೂರ್ತಿಗಳೂ ಎಲ್ಲ ಸದ್ಭಕ್ತರೂ ಒಟ್ಟುಗೂಡಿ ಯಾವ ಭೇದಭಾವವೂ ಇಲ್ಲದೆ ಪವಿತ್ರಮನಸ್ಸಿನಿಂದ ಶ್ರೀ ಬಸವೇಶ್ವರರ ಜಯಂತಿಯ ಸಭೆ ವಿರಕ್ತಮಠದಲ್ಲಿಯೇ ಅತಿಪೂಜ್ಯಬುದ್ಧಿಯಿಂದ ಮಾಡಿದ್ದು ಸರ್ವರಿಗೂ ಅನುಕರಣೀಯವಾದ ಸಂಗತಿಯಾಗಿದೆ. ಓರ್ವ ಪ್ರತ್ಯಕ್ಷದರ್ಶಿ.

ಬೃಹಸ್ಪತಿ ನಾಮಾಂಕಿತನ ಪ್ರಲಾಪ.

ಅಯ್ಯಾ ಸ್ಟಾರ್ ಪತ್ರಕರ್ತರೆ,

ದಯವಿಟ್ಟು ತಮ್ಮ ನಿಷ್ಪಕ್ಷಪಾತವಾದ ಪತ್ರಿಕೆಯಲ್ಲಿ ಕೊಂಚ ಸ್ಥಳವನ್ನು ಕೊಡಬೇಕೆಂದು ಬೇಡುತ್ತೇನೆ.

ಕಳೆದ ವಾರ ತಮ್ಮ ಪತ್ರಿಕೆಯಲ್ಲಿ ಅಪ್ರಾರ್ಥಿತವಾದ ಪೆಕ್ಷಪೆಕ್ಷ ಇದೇ ತಾನೆ ಎಂಬ ಹೆಡ್ಡಿಂಗಿನಿಂದ ನಾನು ಬರೆದಿದ್ದ ಬಾತ್ಮಿಗೆ ಬೃಹಸ್ಪತಿ ಎಂಬ ನಾಮಾಂಕಿತನೊಬ್ಬನು ಕಳೆದ ತಾ|| ೧೨ರ ಸಂಪದಭ್ಯುದಯ ಪತ್ರಿಕೆಯಲ್ಲಿ ಉತ್ತರವನ್ನು ಬರೆದಿರುವನು. ಈತನು ಬೃಹಸ್ಪತಿ ಟೈಟಲನ್ನು ವೆಂಕಟಕೃಷ್ಣಯ್ಯ ಅಂಡ್ ಕೊ ವಿದ್ಯಾವಿಶಾರದರಿಂದ ಪಡೆದಿರುವುದರಿಂದ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಸುಳ್ಳನ್ನು ಸಾಧಿಸಲು ಹೊರಟು ಕಳ್ಳಹಣಕ್ಕೆ ದೊಡ್ಡ ಮುದ್ರೆ ಎಂಬ ಗಾದೆಗೆ ಸರಿಯಾಗಿ ೩-೪ ಶ್ಲೋಕಗಳನ್ನು ಉದಹರಿಸಿ ತನ್ನ ಅಭಿಮಾನ ದೇವತೆಯಾದ ವೆಂಕಟಕೃಷ್ಣಯ್ಯನವರ ಕಾಪಟ್ಯವನ್ನು ಮುಚ್ಚುವ ಪ್ರಯತ್ನದಲ್ಲಿ ತಾನಾಡಿರುವ ಮಾತು ತನಗೇ ಅನ್ವಯಿಸುತ್ತದೆಯೆಂಬ ಪರಿಜ್ಞಾನವಿಲ್ಲದೆ ಮನಸ್ಸೀ ಬೊಗಳಿಕೊಂಡಿರುವನು. ಮ|| ವೆಂಕಟಕೃಷ್ಣಯ್ಯನವರು ಇನ್ನೂ ಪ್ರತ್ಯಕ್ಷರಾಗಿರುವುದರಿಂದ ಅವರು ತಮ್ಮ ಹೆಸರನ್ನು ಕೊಟ್ಟು ಪೆಕ್ಷಪೆಕ್ಷ ವಿಚಾರದಲ್ಲಿ ಶ್ರೀಮನ್ಮಹಾರಾಜರನ್ನು ಬೇಡಿಕೊಂಡಿಲ್ಲವೆಂದು ಬರೆದಲ್ಲಿ ನಾನು ಸರಿಯಾದುತ್ತರವನ್ನು ಕೊಟ್ಟು ಸಾಧಿಸಲು ಸಿದ್ಧವಾಗಿದ್ದೇನೆ. ಹಾಗಲ್ಲದೆ ಯಾವನೋ ದ್ರಾಹಿ ಲೋಕನು ವಿಚಾರಶೂನ್ಯನಾಗಿ ಹುಚ್ಚಿಯಂತೆ ಗುರುಗುಟ್ಟಿಕೊಂಡು ಬರೆದಿರುವ ಹೇಸಿಗೆಯ ಬರವಣಿಗೆಗೆ ವ್ಯರ್ಥ ಶ್ರಮಪಟ್ಟು ಉತ್ತರವನ್ನು ಬರೆದು ತನ್ಮೂಲಕ ತಮ್ಮ ಪವಿತ್ರವಾದ ಪತ್ರಿಕೆಯ ಸ್ಥಳವನ್ನು ವ್ಯರ್ಥಗೊಳಿಸುವುದು ಯುಕ್ತವಾಗಿ ತೋರುವುದಿಲ್ಲ. ವೆಂಕಟಕೃಷ್ಣಯ್ಯನವರು ತಮ್ಮ ಪತ್ರಿಕೆಯಲ್ಲಿ ತಮಗೆ ಸಂಬಂಧಪಟ್ಟ ವಿಚಾರವು ಮರೆಮಾಜಿ ಬರೆಯಲ್ಪಡುವ ಲೇಖನಗಳಿಗೆ ಸ್ಥಳವನ್ನು ಕೊಡಲು ಅವರ ಮನೋದೇವತೆಯು ಹೇಗೊಪ್ಪಿದಳು? ಈ ಬೃಹಸ್ಪತಿ ನಾಮಾಂಕಿತನ ಹಾಗೂ ಅವನ ಕುಲದವರ ಮೆದುಳು ಕೆಟ್ಟು ವಿಚಾರಶೂನ್ಯರಾಗಿ ಮನಸ್ಸಿಗೆ ಬಂದಂತೆ ಬೊಗಳಲುಪಕ್ರಮಿಸಿರುವುದರಿಂದ ಬೀಜದ ಬಸವನ ಸಹಾಯವನ್ನೊದಗಿಸಿಕೊಟ್ಟರೇನಾದರೂ ಪರಿವರ್ತನವಾಗಬಹುದೆಂದು ತೋರುತ್ತದೆ.

ಪರನಿಂದಾಸಹಿಷ್ಣು.

“ದನಗಳ ಪ್ರದರ್ಶನ”

ಅರಸೀಕೆರೆ ತಾಲ್ಲೂಕು ಕಣಕಟ್ಟೆ ಹೋಬಳಿ ಹೊಳಲಕೆರೆಯಲ್ಲಿ ಇದೇ ಮಾಹೆ 7 ನೆಯ ಶುಕ್ರವಾರ ದನಗಳ ಪ್ರದರ್ಶನವು ತಾಲ್ಲೂಕು ಅಮಲ್ದಾರ್ ಮಿ|| ಕೆ. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಸೆಕ್ರಟರಿಗಳಾದ ಮಿ|| ಹೆಚ್. ಕೃಷ್ಣಮೂರ್ತಿಗಳೂ ಮಿ|| ಎಂ. ಹೆಚ್. ಹರಿಯಣ್ಣನವರೂ ಶ್ಲಾಘನೀಯವಾದ ಏರ್ಪಾಡುಗಳನ್ನು ಮಾಡಿದ್ದರು. ಇದಕ್ಕಾಗಿ ತಾಲ್ಲೂಕಿನಿಂದ ಸರ್ಕಾರಿ ನೌಕರಗಳು ಮತ್ತು ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಅಧ್ಯಕ್ಷರ ಚುನಾವಣೆಯಾದಕೂಡಲೆ ಸೆಕ್ರೆಟರಿಗಳು ರಿಪೋರ್ಟನ್ನು ಓದಿಹೇಳಿದರು. ನಂತರ ವೆಟರ್‌ನರಿ ಇನ್‌ಸ್ಪೆಕ್ಟರವರೂ, ಹಲ್ಕಾರ್ ಸಬ್. ಅ. ಸರ್ಜನ್‌ರವರೂ ಸ್ಯಾನಿಟರಿ ಇನ್‌ಸ್ಪೆಕ್ಟರವರೂ, ಹೆಚ್. ಕೃಷ್ಣಮೂರ್ತಿಗಳೂ, ಎಂ. ಹೆಚ್. ಹರಿಯಣ್ಣನವರೂ ಒಂದೊಂದು ವಿಚಾರವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸಗಳನ್ನು ಮಾಡಿದರು. ಅಧ್ಯಕ್ಷರು ಈ ಪ್ರದರ್ಶನಕ್ಕೆ ಪ್ರೋತ್ಸಾಹವನ್ನು ಕೊಟ್ಟು ಹಿಂದಿನ ಅಮಲ್‌ದಾರ್ ಮಿ|| ಎ. ಜಿ. ಡಾಕ್‌ಸಾಹೇಬರಿಗೆ ಸಭೆಯವರು ವಂದನೆಗಳನ್ನು ಒಪ್ಪಿಸಿ ಅದನ್ನು ರಿಕಾರ್ಡುಮಾಡಿ ಅವರ ಎಕಸ್ಟ್ರಾಕ್ಟನ್ನು ಅವರಿಗೆ ಕಳುಹಿಸಬೇಕೆಂತ ತಿಳಿಸಿದ್ದನ್ನು ಸರ್ವರೂ ಒಪ್ಪಿದರು. ತರುವಾಯ ಹುಡುಗರಿಗೆ ಆಟಗಳನ್ನು ಏರ್ಪಡಿಸಿದ್ದ ಮೇರೆ, ಟಗ್ ಆಫ್‌ವಾರ್, ನೀಡಲ್ ರೇಸ್, ರನ್ನಿಂಗ್ ರೇಸ್, ಮುಂತಾದುವುಗಳು ನಡೆಯಿತು. ಪಂಚಮರಿಗೋಸ್ಕರ ಒಂದು ಆಟವು ನಡೆಸಲ್ಪಟ್ಟಿತು. ಕಮಿಟಿಯವರು ಚುನಾಯಿಸಿ ಉತ್ತಮೋತ್ತಮವಾದ ರಾಸುಗಳಿಗೆ ಸರ್ಟಿಫಿಕೇಟ್‌ಸಮೇತ ಬಹುಮಾನವೂ ಆಟಪಾಟಗಳಲ್ಲಿ ಗೆದ್ದ ಬಾಲಕ ಬಾಲಕೀಯರುಗಳಿಗೆ ಪಾರಿತೋಷಕವೂ ಅಧ್ಯಕ್ಷರಿಂದ ಹಂಚಲ್ಪಟ್ಟಿತು. ಅಧ್ಯಕ್ಷರು ಎದ್ದು ನಿಂತು ಸಭಿಕರಿಗೆ ನಾನಾವಿಧವಾದ ತಿಳಿವಳಿಕೆಯನ್ನು ಬೋಧಿಸಿದರು. ಸೆಕ್ರೆಟರಿಗಳು, ಅಧ್ಯಕ್ಷರವರು ಸಹಸ್ರಕೆಲಸವಿದ್ದಾಗ್ಯೂ ಪ್ರಜಾಸೇವೆಯೇ ದೇವರ ಸೇವೆಯೆಂತ ಭಾವಿಸಿ ಇಲ್ಲಿಗೆ ದಯಮಾಡಿಸಿ ಸಿಕೋಪದೇಶಗಳನ್ನು ಮಾಡಿದ್ದಕ್ಕೆ ವಂದನೆಯನ್ನು ಅರ್ಪಿಸಿದರು. ಹಾರಾ, ತುರಾಯಿ ಅರ್ಪಿಸಿ ಸಭಿಕರಿಗೆಲ್ಲಾ ಪಾನ್‌ಸುಪಾರಿ, ಗಂಧಪುಷ್ಪ ವಿನಿಯೋಗಮಾಡಿ ಶ್ರೀಮನ್ಮಹಾರಾಜಸಾಹೇಬ್ ಬಹದ್ದೂರವರಿಗೆ ಶ್ರೀರಾಮೇಶ್ವರನು ಆಯುರಾರೋಗ್ಯಗಳನ್ನು ಕೊಡಲೆಂಬ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಪ್ರತ್ಯಕ್ಷದರ್ಶಿ.

ಒಂದು ವಿವಾಹಮಹೋತ್ಸವ.

ಚಿಕ್ಕಮಗಳೂರು ಟೌನ್ನಿನಲ್ಲಿ ಸುಪ್ರಸಿದ್ಧರೂ, ಸದ್ಗುರುಭಕ್ತರೂ, ಭೂತದಯಾಪರರೂ, ಆದ ಶ್ರೀಯುತ ಕಾಫೀಪ್ಲಾಂಟರ್ ತಳಲೂರು ಚನ್ನಬಸಪ್ಪಶೆಟ್ರು ತಮ್ಮ ಪುತ್ರಿ ಚಿ|| ಸೌ ಪಾರ್ವತಮ್ಮನನ್ನು ಲೇಟ್ ಅಸಿಸ್ಟೆಂಟ್ ಎಂಜಿನಿಯರಾದ ಚಿಕ್ಕಮಗಳೂರು ಮ|| ರಾ|| ಹಲಿಗೇಗೌಡ್ರ ಜೇಷ್ಠ ಪುತ್ರ ವೀರಶೆಟ್ಟಿಗೌಡರೆಂಬವರಿಗೆ ಕೊಟ್ಟು 30-4-22 ರಲ್ಲಿ ಬಹಳ ವಿಜೃಂಭಣೆಯಿಂದ ತಮ್ಮ ಬಂಗ್ಲೆಯಲ್ಲಿ ವಿವಾಹಮಹೋತ್ಸವವನ್ನು ಬೆಳಸಿದರು. ನೂತನ ದಂಪತಿಗಳಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯಾಗಲೆಂದು ಶ್ರೀಮನ್ಮಹಾರಾಜನಿರಂಜನ ಜಗದ್ಗುರುಗಳವರು ಮತ್ತು ಅನಂತಪುರದ ಲಿಂಗಸ್ವಾಮಿಗಳೇ ಮೊದಲಾದ ಪೂಜ್ಯಪಾದರೂ ಆಶೀರ್ವಾದ ನಿರೂಪವನ್ನು ದಯಪಾಲಿಸಿದರು. ಗುರುವರ್ಗದವರೂ ವೇ|| ಮೈಸೂರ್ ಶಿವಕಥಾ ಶಿವಯ್ಯಶಾಸ್ತ್ರಿಗಳವರು ಮತ್ತು ಹುಣಸಗಟ್ಟಮಠದ ವೇ|| ನಂಜುಂಡಾರಾಧ್ಯರೇ ಮೊದಲಾದ ಶಾಸ್ತ್ರಿವರ್ಗದವರೂ ಶ್ರೀರಂಗಪಟ್ಟಣದ ಮ|| ಸಿದ್ಧಲಿಂಗದೇವರೇ ಮೊದಲಾದ ವಕ್ತೃತ್ವಶಾಲಿಗಳೂ ಈ ಟೌನ್ನಲ್ಲಿ ಮುನಿಸೀಫರಾಗಿದ್ದ ಮ|| ಯಂ. ಯನ್. ಸುಬ್ಬಣ್ಣನವರೇ ಮೊದಲಾದ ಅಧಿಕಾರಿವರ್ಗದವರೂ ಬೀರೂರ್ ಮ|| ಗಳಾದ ಪತ್ರೆ ಚನ್ನವೀರಪ್ಪನವರು ಮತ್ತು ವೈಸ್‌ಪ್ರೆಸಿಡೆಂಟ್ ಉಬ್ರಾಣಿ ಮಠದ ಶಿವಲಿಂಗಪ್ಪಯ್ಯನವರೇ ಮೊದಲಾದ ಧನವಂತರೂ ಇನ್ನೂ ಸ್ಥಳಪರಸ್ಥಳದಸ್ವಮತಪರಮತದ ಮಹನೀಯರೂ, ವಿವಾಹಮಂಟಪವನ್ನು ಅಲಂಕರಿಸಿದ್ದರು. ವೇ|| ಶಿವಯ್ಯಶಾಸ್ತ್ರಿಗಳು ಶಿವಕಥಾಶ್ರವಣವನ್ನು ಮಾಡಿಸಿದರು. ಬಳಿಕ ಮ|| ರಾ|| ಶೆಟ್ರು ತಮ್ಮ ಶಕ್ತ್ಯನುಸಾರವಾಗಿ ಸಭಾಸದರನ್ನು ಫಲತಾಂಬೂಲ ಭೂರಿದಕ್ಷಿಣೆ ಮೊದಲಾದುವುಗಳಿಂದ ಸತ್ಕರಿಸಿದರು. ಈ ಮಹೋತ್ಸವದಲ್ಲಿ ಮ|| ರಾ|| ಶೆಟ್ರು ವೇಶ್ಯಾಂಗನೆಯರೇ ಮೊದಲಾದ ಬಾಹ್ಯಾಡಂಬರಗಳಿಗೆ ಅವಕಾಶವನ್ನು ಕೊಡದೆ ಶಿವಕಥಾಶ್ರವಣ ವೀರಶೈವ ತತ್ವಪ್ರಕಾಶವೇ ಮೊದಲಾದುವುಗಳನ್ನು ನೆರವೇರಿಸಿದ್ದು ಎಲ್ಲರಿಗೂ ಮೇಲ್ಪಂಕ್ತಿಯಾಗಿರುವುದಲ್ಲದೆ ಚಿರಸ್ಮರಣೀಯವಾಗಿರುತ್ತೆ. ತಾ|| 7-5-22 ನೇ ಭಾನುವಾರ ತಮ್ಮ ಒಡನಾಡಿಗಳಾದ ಪರೋಪಕಾಫೀಪ್ಲಾಂಟರುಗಳನ್ನೂ ಸರ್ಕಾರಿ ನೌಕರರನ್ನೂ ಬರಮಾಡಿಕೊಂಡು ಸತ್ಕರಿಸುವವರಾಗಿದ್ದಾರೆ. ಅಲ್ಲಿಯ ವರವಿಗೆ ಪ್ರತಿದಿವಸವೂ ಮೇಲ್ಕಂಡ ಶಿವಯ್ಯಶಾಸ್ತ್ರಿಗಳು ಮತ್ತು ನಂಜುಂಡಾರಾಧ್ಯರಿಂದ ಶಿವಕಥಾಮೊದಲಾದುವುಗಳು ನೆರವೇರುವಂತೆ ಏರ್ಪಡಿಸಿರುತ್ತಾರೆ. ಈ ಮಹೋತ್ಸವದ ಜ್ಞಾಪಕಾರ್ಥವಾಗಿ ಮೇಲ್ಕಂಡ ಬ್ರಹ್ಮಸಮುದ್ರದ ಪಟ್ಟಾಧ್ಯಕ್ಷರ ಅಪ್ಪಣೆಮೇರೆ ಬೆಂಗಳೂರು ವಿದ್ಯಾಭಿವೃದ್ಧಿ ಫಂಡಿಗೂ ತಿಪಟೂರು ವೀರಶೈವಾನಂದಾಶ್ರಮಕ್ಕೂ, ಶಿವಯೋಗಮಂದಿರದ ಜೀರ್ಣೋದ್ಧಾರಕ್ಕೂ ಐದೈದು ರೂಪಾಯಿಗಳಂತೆ ೨೦ ರೂಪಾಯಿಗಳನ್ನು ಕಳ್ಸಿಕೊಟ್ಟರಲ್ಲದೆ ಕೈ. ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ೨ ರೂಪಾಯಿಗಳನ್ನು ಕಳಿಸಿರುತ್ತಾರೆ. ಪ್ರೇಕ್ಷಕ.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇವರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ವಂಧ್ಯಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ, ಆಶ್ಚರ್ಯ, ಅದ್ಭೂತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ಪ್ರಭುಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
15 ಬಳ್ಳಾರಿ.

೧೯೨೨ನೆಯ ಇಸವಿ ಮೇ ತಾ|| ೧೪ರಿಂದ ೧೯೨೨ನೆಯ ಮೇ ತಾ|| ೨೦ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ವೈಶಾಖಬಹುಳ ತದಿಗೆಯಿಂದ ವೈಶಾಖ ಬಹುಳ ನವಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭಮಾ
14	ಭಾನು	ತದಿ	5-13	ಮೂಲ	39-47	1
15	ಸೋಮ	ಚೌತಿ	5-11	ಪೂಷಾ	42-12	2
16	ಮಂಗಳ	ಪಂಚ	6-28	ಉಷಾ	45-51	3
17	ಬುಧ	ಷಷ್ಠಿ	8-56	ಶ್ರವ	50-34	4
18	ಗುರು	ಸಪ್ತ	12-34	ಧನಿ	6-20	5
19	ಶುಕ್ರ	ಅಷ್ಟ	16-57	ಶತ	60	6
20	ಶನಿ	ನವ	21-58	ಶತ	3-2	7

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀತಾಂಶೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪) ಮೈಸೂರ್ ಸ್ಟಾರ್ ಸನ್ ೧೯೨೨ ನೆಯ ಇಸವಿ ಮೇ ತಾರೀಖು ೨೧ ನೆಯ ಭಾನುವಾರ (ಸಂಚಿಕೆ ೨೧

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಹಿತವಾಗಿದೆ. ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಸ್ವಾವರಣ, ಕತಿಪಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ, ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತುರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೇಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇಸ್‌ಫ್ಲೂಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ವಾಳ್ಕದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಮನ ವೈದ್ಯಶಾಲಾ,
19 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ,** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತಿರುಚುಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 47

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿಗೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹಂದಾಸಿ	೦— ೮—೦
ವ್ರತಪಂಚಕ	೦— ೯—೦

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನುಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಆನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಆನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಆನಂತರ ಪ್ರತಿ ೧೦೦ ಕ್ಕೂ ೧—೪—೦; ಬಿಳಿ ಗ್ಲೇಸ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೨—೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಆನಂತರ ಪ್ರತಿ ನೂರಕ್ಕೂ —೧೦—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಆನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ ವಧೂವರರ ಸಾಲೂವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
20 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಗೆಜ್ಜೆ ಕೆಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 10

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಮೇ ತಾ|| ೨೧ ನೆಯ ಭಾನುವಾರ.

ಲಂಚದ ಹಾವಳಿಯನ್ನು ಅಣಗಿಸುವುದು.

ಪಂಜಾಬಿನಲ್ಲಿ ಸರ್ಕಾರಿ ಕೆಲಸಗಾರರು ಲಂಚತೆಗೆದುಕೊಳ್ಳುವುದನ್ನು ಕಂಡುಹಿಡಿದು ಅದನ್ನು ಅಣಗಿಸಲುಪಾಯವನ್ನು ತಿಳಿಸುವುದಕ್ಕಾಗಿ ಏರ್ಪಟ್ಟಿದ್ದ ಕಮಿಟಿಯವರ ವರದಿಯು ಮತ್ತು ಅದರಮೇಲಣ ಸರ್ಕಾರಿಯ ನಿರ್ಧಾರವು ಪಂಜಾಬು ಗೆಜೆಟ್ಟಿನಲ್ಲಿ ಪ್ರಕಟವಾಗಿರುತ್ತವೆ. ಸರ್ ಮಿಚೇಲ್ ಒಡಾಯರು ಗೌರ್ನರಾಗಿದ್ದಾಗಲೇ ಈ ಲಂಚದ ಹಾವಳಿಯನ್ನು ತಪ್ಪಿಸಲು ಗಮನವಿತ್ತು ಸರ್ಕಾರಿಯ ಕೆಲಸಗಾರರಾರೂ ಲಂಚವನ್ನು ತೆಗೆದುಕೊಳ್ಳಕೂಡದೆಂದು ೧೯೧೭ ರಲ್ಲು ಮತ್ತು ಪುನಃ ೧೯೧೮ ರಲ್ಲು ಕಟ್ಟಪ್ಪಣೆ ಮಾಡಿದ್ದರು ಎಂದು ಅವರದಿಯಲ್ಲಿ ಹೇಳಲ್ಪಟ್ಟಿದೆ. ಈ ಕಮಿಟಿಯವರು ೧೯೨೧ ರಲ್ಲಿ ಸಭೆಸೇರಿ ಅನೇಕ ಜನರ ಬಾಯಿಮಾತಿನ ಮತ್ತು ಲಿಖಿತಮೂಲಕವಾದ ಹೇಳಿಕೆಯನ್ನು ತೆಗೆದುಕೊಂಡುದಲ್ಲದೆ ಸ್ಥಳೀಯ ಲಾಯರವರ ಸಂಘಗಳಿಂದಲೂ ಅಭಿಪ್ರಾಯವನ್ನು ಬರಮಾಡಿಕೊಂಡರು. ಪಂಜಾಬುಪ್ರಾಂತದ ಎಲ್ಲಾಕಡೆಯಿಂದಲೂ ಬಂದ ನಿದರ್ಶನಗಳಿಂದ ಸರ್ಕಾರಿಯ ಕೆಲಸಗಾರರು ತತ್ರಾಪಿ ಅಲ್ಪಸಂಬಳಗಾರರು ಹೆಚ್ಚುಕಡಿಮೆಯಾಗಿ ಲಂಚವನ್ನು ತೆಗೆದುಕೊಳ್ಳುವರೆಂದು ಸಾಮಾನ್ಯವಾಗಿ ಜನರೆಲ್ಲರೂ ತಿಳಿದಿರುತ್ತಾರೆಂಬುದು ವ್ಯಕ್ತವಾಗುತ್ತದೆ. ಸರ್ಕಾರದವರು ಪ್ರತಿಯೊಂದು ಶಾಖೆಯಲ್ಲೂ ಈ ಲಂಚದ ಹಾವಳಿಯು ಹಬ್ಬಿಕೊಂಡಿರುತ್ತದೆಂಬುದನ್ನು ಒಪ್ಪಿಕೊಳ್ಳುತ್ತಾರಾದರೂ ಸರ್ಕಾರಿಯುದ್ಯೋಗವಲ್ಲದ ವ್ಯಾಪಾರ, ವಕೀಲಿ ಮೊದಲಾದ ಸ್ವತಂತ್ರ ವೃತ್ತಿಯಲ್ಲೂ ಈ ಲಂಚದ ಹಾವಳಿಯು ಇರುತ್ತದೆಂದು ಸೂಚಿಸಿರುತ್ತಾರೆ.

ಅನರ್ಥಕಾರಿಯಾದ ಈ ಲಂಚದ ಹಾವಳಿಯನ್ನು ಅಣಗಿಸುವ ವಿಚಾರದಲ್ಲಿ ಪ್ರಜೆಗಳು ಸರ್ಕಾರದವರಿಗೆ ಸಹಾಯ ಮಾಡುವರೆಂಬ ತಮ್ಮ ನಿರೀಕ್ಷಣೆಯನ್ನು ಸಭಾಯುಕ್ತರಾದ ಗೌರ್ನರು ತಿಳಿಸಿರುತ್ತಾರೆ. ಮ|| ಗಳಾದ ಡಿ. ಸೌಂಧಸಿಂಗ್, ಸೇವಕರಾಂ ಮತ್ತು ಚೋಟುರಾಂ ಎಂಬ ಮೂರುಜನ ಭಾರತೀಯ ಮೆಂಬರುಗಳು "ಪಂಜಾಬು ಪ್ರಾಂತದ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಹೋಗಿ ಸಂಬುಗಸ್ಥರಾದ ಜನರ ಸಾಕ್ಷ್ಯಗಳನ್ನು ತೆಗೆದುಕೊಂಡು ಲಂಚಕುಳಿಗಳಾದ ಅಧಿಕಾರಿಗಳ ಹೆಸರಿನ ಪಟ್ಟಿಯನ್ನು ಬರೆದುಕೊಳ್ಳುವುದಕ್ಕಾಗಿ ಒಬ್ಬದೊಡ್ಡ ಅಧಿಕಾರಿಯು ಮತ್ತು ಗಟ್ಟಿಗರಾದ ಮೂವರು ಲಾಯರುಗಳು ಅಥವಾ ಗಣ್ಯರಾದ ದೊಡ್ಡಮನುಷ್ಯರುಗಳು ಇವರಿಂದ ಕೂಡಿದ ಒಂದು ಕಮಿಟಿಯು ಏರ್ಪಡಿಸಲ್ಪಡಬೇಕು. ಇದರಿಂದ ದೊಡ್ಡದೊಡ್ಡ ಲಂಚಕುಳಿಗಳನ್ನು ಕೆಲಸದಿಂದ ನಿವೃತ್ತಿಮಾಡುವುದು ಅಥವಾ ವಿಚಾರಣೆಗೆ ಗುರಿಮಾಡುವುದು, ಸಾಮಾನ್ಯರನ್ನು ಕೆಳದರ್ಜೆಗೆ ಹಾಕುವುದು ಅಥವಾ ಅವರ ಅಭಿವೃದ್ಧಿಯನ್ನು ತಿಳಿಸುವುದು ಈ ಪ್ರಕಾರವಾಗಿ ಅವರವರ ಉದ್ಯೋಗದ ಅಂತಸ್ತಿಗೂ ಅಪರಾಧಕ್ಕೂ ಅನುಗುಣವಾದ ಶಿಕ್ಷೆಯನ್ನು ವಿಧಿಸಲು ಅವಕಾಶವಾಗುತ್ತದೆ ಎಂದು ಸೂಚಿಸಿರುವುದಲ್ಲದೆ ಈ ಪ್ರಕಾರವಾದ ಏರ್ಪಾಟನ್ನು ಮಾಡಿದವಿನಾ ಲಂಚದ ಹಾವಳಿಯನ್ನು ತಡಿಯುವುದಕ್ಕಾಗುವುದಿಲ್ಲ" ಎಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಮೆಂಬರುಗಳಭಿಪ್ರಾಯದಂತೆ ಪಂಜಾಬು ಸರ್ಕಾರದವರು ಕಮಿಟಿಯನ್ನೇರ್ಪಡಿಸಿ ತನ್ಮೂಲಕ ಲಂಚಕುಳಿಗಳನ್ನು ಕಂಡುಹಿಡಿದು ಶಿಕ್ಷಿಸುತ್ತಬಂದಲ್ಲಿ ಸ್ವಲ್ಪಕಾಲದಲ್ಲಿಯೇ ಲಂಚದ ಹಾವಳಿಯು ಅಣಗಿಹೋಗಿ ಪ್ರಜೆಗಳಿಗೆ ನೆಮ್ಮದಿಯುಂಟಾಗುವುದರಲ್ಲಿ ಸಂದೇಹವಿಲ್ಲವು.

ನಮ್ಮ ಮೈಸೂರು ಸರ್ಕಾರದ ರಿಜಿಸ್ಟ್ರೇಷನ್, ಪೊಲೀಸು, ರೈಲ್ವೆ ಮೊದಲಾದ ಶಾಖೆಗಳಲ್ಲಿ ಲಂಚದ ಹಾವಳಿಯು ಮಿತಿಮೀರಿ ಹೆಚ್ಚಿ ತನ್ಮೂಲಕ ಜನರಿಗೆ ಉಂಟಾಗಿರುವ ಕಷ್ಟನಷ್ಟಗಳನ್ನು ಕುರಿತು ಈ ಸ್ಟಾರ್ ಪತ್ರಿಕೆಯಲ್ಲಿ ನಾವು ಅನೇಕವೇಳೆ ಪ್ರಸ್ತಾಪಿಸಿರುತ್ತೇವಲ್ಲದೆ ಸರ್ಕಾರದವರು ಇದರ ನಿವಾರಣೋಪಾಯವನ್ನು ಖಂಡಿತವಾಗಿ ಮಾಡಬೇಕೆಂದು ಸೂಚಿಸಿರುತ್ತೇವೆ. ಆದರೂ ಈ ವಿಚಾರವು ಅವರ ಗಮನಕ್ಕೆ ತರಲ್ಪಟ್ಟು ಈವರೆಗೆ ಏನೊಂದು ಕ್ರಮವೂ ಜರುಗಿಸಲ್ಪಡದಿರುವುದು ಖೇದಕರವಾಗಿದೆ. ನಮ್ಮ ಸರ್ಕಾರದವರು ಪಂಜಾಬು ಸರ್ಕಾರದವರ ಮೇಲುಪಂಗ್ತಿಯನ್ನನುಸರಿಸಿಯಾದರೂ ರಾ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರಂತಹ ಪ್ರಜಾಕ್ಷೇಮಾಭಿಲಾಷಿಗಳೂ ಕಾರ್ಯದಕ್ಷರೂ ಸರ್ಕಾರಿಯುದ್ಯೋಗಾನುಭವಿಗಳೂ ಆದಂತಹ ಕೆಲದೊಡ್ಡಮನುಷ್ಯರುಗಳಿಂದ ಕೂಡಿದ ಒಂದು ಕಮಿಟಿಯನ್ನೇರ್ಪಡಿಸಿ ಗೊತ್ತುಗುರಿಯಿಲ್ಲದೆ ನಡಿಯುತ್ತಿರುವ ಲಂಚದ ಹಾವಳಿಯನ್ನು ಅಣಗಿಸುವ ಉಪಾಯಗಳನ್ನು ಗೊತ್ತುಮಾಡಿಸಿ ತಪ್ಪಿತಸ್ಥರನ್ನು ನಿದಾಕ್ಷಿಣ್ಯದಿಂದಲೂ ದರ್ಪದಿಂದಲೂ ಶಿಕ್ಷಿಸುತ್ತ ಬಂದಲ್ಲಿ ಲಂಚದ ಹುಟ್ಟೇ ಅಡಗಿಹೋಗುವುದಲ್ಲದೆ ಲಂಚಕುಳಿಗಳ ಗಾಣಕ್ಕೆ ಸಿಲುಕಿ ಪೇಚಾಡುತ್ತಿರುವ ಜನರಿಗೆ ಮಹೋಪಕಾರವಾಗುವುದರಲ್ಲಿ ಸಂದೇಹವಿಲ್ಲವು.

RETRENCHMENTS.

The Special Finance Committee must be coming to the close of their labours, and would have to precent its report in a few days to enable the Government to place it before the ensuing Birthday Session of the Representative Assembly. We have no doubt that the Chairman and the members have striven hard and courageously to effect all possible savings in all possible ways. But the confidential nature of their proceedings, for which there was not much justification has handicapped to a great extent the public in offering their criticism on this important question and they doubt whether taking the Representative Assembly suddenly with only a few days' or hours' notice would be a fair and right procedure.

The question of hewing down the various departments to their proper proportions consistant with their actual requirements, of doing away with some of the superfluous departments, and of amalgamating some of the minor departments with the major ones must have received the greatest and closest scrutiny of the Committee. But it is rather questionable whether that one line of retrenchment would either solve the financial problem or even admit of wholesale immediate application in practice. For sometime past the question of the reduction of the Districts from eight to five or six has been in the air. We would strongly urge that that would be one of the very best means to effect retrenchment without impairing efficiency. Kadur may well go with Hassan, Chitaldrug with Tumkur and Kolar with Bangalore, with of course reallignment of some taluks with the other Districts. This would be no mere experiment, as the arrangement was in existence in years gone by. And when the means of communication have been so greatly improved it surely would be easier in these days to manage the extended districts. The Committee cannot be unaware of the size and population of the neighbouring districts of the Madras and Bombay Presidencies, which are very much larger than any we have in our Province. At present some of the Deputy Commissioners and their offices have precious little work to do.

The reduction of the Sub-Divisions is another means of effecting substantial retrenchment. Where there is no separation of the Executive from the magisterial powers and where the sub-Divisional officers are also magistrates there would be some justification for smaller divisions. But there are many where the sub-Division consists no more than two taluks and the officer is not burdened with magisterial work and such Divisions could profitably be done away with.

We do not know whether the University of Mysore comes within the province of the Finance Committee. If it does, there is one department which is in the nature of a costly but unprofitable luxury, and that is the College of Engineering, which has both sections, civil and mechanical. A University if it is to justify its existence must essentially serve a purpose and we would like to know what purpose the Engineering College serves, beyond providing handsome salaries to professors. For one thing, the passed candidates have no place in Mysore as the Engineering department is already too full up and with the heavy shearing it is likely undergo in the near future, even some of the temporary hands may have to be dispensed with. For another, they are not recognised outside the State. When such is the case is not the University, whatever the genuiness of its ambition may be rendering in effect a disservice? Further, the efficiency of the instruction in the College has always been questioned. The Mechanical portion of the College is the more costly and the less useful and efficient and it should be done away with first. The Mechanical Engineering School is serving a much more practical purpose and supplies a real need both in and outside the State. The training in the latter school is what is in demand all over and not the big graduates in mechanical engineering. It is a pity that Dr. Mylvagnum's resolution at the last Senate meeting for the abolition of the College was not accepted by the Senate.

There is one department in which we hope the Committee will be wary in recommending retrenchments and, that is, the Military. It may be very easy to talk of the reduction of military expenditure, for that is the chorus all over the world, but we would wish that the matter may be looked at from a more farsighted and broad view in our State. After all the proportion of military expenditure to the total expenditure is the smallest in our State when we see what it is all over the world, and it is not even half of the proportion in British India. Then, in these days of rapid degeneration militia is one of the best means of preserving a country's manhood and a neglect of that would spell the greatest misfortune to our country. Needless to recount the valiant deeds of our men in the Great War. They form a pride to our historic State. Above all, this is the one department where intellect as such is not given all the importance, and where the masses find an employment in public service; and themselves, their children and childrens' children feel a pride. It is therefore that we say in all seriousness and with emphasis that in touching the Military Department all hasty conclusions may be avoided, and the national injury be prevented.

We hope the Special Finance Committee will take these matters into their consideration in the presentation of their report.

MYSORE MUNICIPAL COUNCIL SPECIAL MEETING.

In a Special Meeting of the Mysore City Municipal Council held yesterday morning, resolutions to the effect that its hearty congratulations be conveyed to A. R. Banerji Esq., M.A., C.I.E., I.C.S., on his being appointed as the Dewan of Mysore, and that a deputation consisting of 10 members viz. Messrs. B. Basavaradhya, B.A., B.L., P. S. Anantarao, Dharmaprakasha D. Banumayya, A. Mahomed Sait, E. P. Gosai, Dr. T. S. Siddappa, K. Dhanakotichetty, B. Munivenkatappa, Tiruvengada Moodliyar and Y. Virupakshiah, should wait upon the Dewan Sahib to request him to favourably consider the Resolution of the Council praying for the grant of the privilege to elect their own President were unanimously passed.

ಒಳದೇಶದ ವೃತ್ತಾಂತಗಳು.

ಕಳೆದವಾರ ಸಿಮ್ಲಾಪಟ್ಟಣದಲ್ಲಿ ನಮ್ಮ ಶ್ರೀಮನ್ ಮಹಾರಾಜರವರಿಗೂ ವೈಸ್ರಾಯ್ ಪ್ರಭುಗಳಿಗೂ ದರ್ಶನ ಭಾಷಣಗಳು ನಡೆದುದಾಗಿ ತಿಳಿಯಬರುತ್ತದೆ.

ಮೈಸೂರು ಸಂಪದಭಿವೃದ್ಧಿ ಸಮಾಜದ ಅಧಿವೇಶನವು ಈ ಮೇ ತಾ|| ೩೧ ರ ಪ್ರಾತಃಕಾಲದಲ್ಲೂ ಮತ್ತು ಪ್ರಜಾಪ್ರತಿನಿಧಿ ಸಭೆಯು ಬರುವ ಜೂನ್ ತಾ|| ೭ರಲ್ಲೂ ಆರಂಭವಾಗುವುದಾಗಿ ಗೊತ್ತಾಗಿರುವುದು.

ಅಸಿಸ್ಟೆಂಟ್ ಕಮಿಷನರುಗಳಾದ ಮ|| ಬಾಳರಾಜ ಅರಸಿನವರು ಮೈಸೂರು ಸಬ್ ಡಿವಿಜನ್ನಿಗೂ, ಮಿ|| ಅಬ್ದುಲ್ ವಾಜಿದ್ ರವರು ಮೈಸೂರಿನಿಂದ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ನಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರು ಪ್ರಜಾಮಿತ್ರಮಂಡಲಿಯವರು ದಿವಾನ್ ಮಿ|| ಬ್ಯಾನರ್ಜಿಯವನ್ನು ಈ ತಾ|| ೨೪ ನೆಯ ಬುಧವಾರ ಬೆಂಗಳೂರು ಲಾಲ್ ಬಾಗಿನಲ್ಲಿರುವ ಗ್ಲಾಸ್ ಹೌಸಿಗೆ ಬರಮಾಡಿಕೊಂಡು ಮೈಸೂರು ದೇಶೀಯರ ಪರವಾಗಿ ಒಂದು ಅಭಿನಂದನ ಪತ್ರಿಕೆಯನ್ನೊಪ್ಪಿಸುವವರಾಗಿರುವರು.

ಮೊನ್ನೆದಿನ ಸಾಯಂಕಾಲ ರಾಜಧಾನಿಯಲ್ಲಿ ಮೋಡ, ಮಿಂಚು ಗುಡುಗುಗಳಾವುವೂ ಇಲ್ಲದೆ ಒಂದು ಸಿಡಿಲು ಬಹಳ ಭೀಕರವಾಗಿ ಆರ್ಭಟಿಸಿಕೊಂಡು ಪೂರ್ವದಿಕ್ಕಿನಿಂದ ಪಶ್ಚಿಮದಿಕ್ಕಿಗೆ ಹಾದುಹೋಯಿತು. ಇದರ ಆರ್ಭಟಕ್ಕೂ ಹೊಳಪಿಗೂ ಜನರು ನಿಂತು ಕುಳಿತಿದ್ದಲ್ಲೇ ಸ್ತಂಭಿಭೀತರಾದರು.

ರಾಜಧಾನಿಯಲ್ಲಿ ಕಳೆದವಾರ ೩-೪ ವೇಳೆ ಮಳೆಯಾಯಿತು. ಮತ್ತು ಇನ್ನೂ ಬರುವ ಚಿನ್ಹೆಯಿದೆ. ಸಂಸ್ಥಾನದ ಕೆಲಕಡೆ ವಿಪರೀತ ಮಳೆಯಾಗಿ ಕೆರೆಕಟ್ಟೆಗಳೆಲ್ಲವೂ ತುಂಬಿತುಳುಕುತ್ತಿರುವುದಾಗಿಯೂ, ಮತ್ತೆ ಕೆಲಕಡೆ ಬಿತ್ತನೆಗೆ ಹದವಾಗಿಯೂ, ಬೇರೆ ಕೆಲಕಡೆ ಬಿತ್ತನೆಗೂ ಅನುಕೂಲವಿಲ್ಲದಂತೆ ಅಲ್ಪಸ್ವಲ್ಪವಾಗಿ ಆಗಿರುವುದಾಗಿಯೂ ತಿಳಿಯಬರುತ್ತದೆ.

ಕರ್ನಾಟಕ ಸಾಹಿತ್ಯಪರಿಷತ್ತಿನ ೮ ನೆಯ ಅಧಿವೇಶನವು ಕಳೆದ ತಾ|| ೧೨-೧೩ರಲ್ಲಿ ಮ|| ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ದಾವಣಗೆರೆಯಲ್ಲಿ ನಡೆದಿತು. ಈ ಸಮ್ಮೇಳನಕ್ಕೆ ಬಹಳಜನ ಪ್ರತಿನಿಧಿಗಳೂ ಪ್ರೇಕ್ಷಕರೂ ಬಂದಿದ್ದರೆಂದು ಕೆಲಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆದರೆ ಈ ಪತ್ರಿಕೆಯ ಮತ್ತೊಂದು ಕಡೆ ಪ್ರಕಟವಾಗಿರುವ ಪತ್ರವ್ಯವಹಾರದಿಂದ ೨೦ ಜನರವರೆಗೆ ಪ್ರತಿನಿಧಿಗಳು ಬಂದಿದ್ದುದಾಗಿಯೂ ಸ್ಥಳದ ಬಹುಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಸಮ್ಮೇಳನವು ನಡಿಸಲ್ಪಟ್ಟುದರಿಂದ ಸ್ಥಳದ ಕೆಲವರ ವಿನಾ ಮತ್ತಾರೂ ಸಭೆಗೆ ಬಂದಿರಲಿಲ್ಲವಾಗಿಯೂ ಗೊತ್ತಾಗುತ್ತದೆ. ಈ ಸಮ್ಮೇಳನದ ಚಾಲಕರು ಸ್ಥಳದ ಬಹುಜನರ ಅಭಿಪ್ರಾಯವನ್ನೂ ಸಾಹಾಯ್ಯವನ್ನೂ ಪಡೆದು ನಡಿಸಿದ್ದಲ್ಲಿ ಭಾಷಾಭಿವೃದ್ಧಿ ಕಾರ್ಯಕ್ಕೆ ವಿಶೇಷ ಪ್ರಯೋಜನವಾಗುತ್ತಿದ್ದಿತೆಂದು ಹೇಳಬೇಕಾದಾವಶ್ಯಕತೆಯಿಲ್ಲವು.

ನೆನ್ನೆಯದಿನ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಸ್ಪೆಷಲ್ ಮೀಟಿಂಗು ನಡೆದು ಮಿ|| ಎ. ಆರ್. ಬ್ಯಾನಾರ್ಜಿಯವರಿಗೆ ಮೈಸೂರು ಸಂಸ್ಥಾನದ ಮಂತ್ರಿಪದವಿಯು ದೊರೆತುದಕ್ಕಾಗಿ ಕೌನ್ಸಿಲಿನಿಂದ ಅಭಿನಂದನವನ್ನು ಕಳುಹಿಸಿಕೊಡಬೇಕೆಂಬ ನಿರ್ಧಾರವೂ, ಕೌನ್ಸಿಲರುಗಳೇ ಪ್ರೆಸಿಡೆಂಟರನ್ನು ಆರಿಸಿಕೊಳ್ಳುವ ಅಧಿಕಾರವನ್ನು ಪಡೆದುಕೊಳ್ಳಬೇಕೆಂದು ಮಾಡಿರುವ ನಿರ್ಧಾರವನ್ನು ಪರ್ಯಾಲೋಚಿಸಿ ನೆರವೇರಿಸಿಕೊಡುವಂತೆ ಪ್ರಾರ್ಥಿಸಿಕೊಳ್ಳುವ ಬಗೆಗೆ ಮ|| ಗಳಾದ ಬಿ. ಬಸವಾರಾಧ್ಯರು, ಪಿ. ಎಸ್. ಅನಂತರಾಯರು, ಧರ್ಮಪ್ರಕಾಶ ಡಿ. ಬನುಮಯ್ಯನವರು, ಎಂ. ಮಹಮದ್ ಸೇಟರು, ಕೆ. ಧನಕೋಟಿಸೆಟ್ಟರು, ತಿರುವೆಂಗಡ ಮೊದಲಿಯಾರರು, ಬಿ. ಮುನಿವೆಂಕಟಪ್ಪನವರು, ಡಾ|| ಸಿದ್ದಪ್ಪನವರು, ಇ. ಪಿ. ಗೋಸ್ವಾಮಿಯವರು ಮತ್ತು ವೈ. ವಿರೂಪಾಕ್ಷಯ್ಯನವರು ಈ ಹತ್ತುಜನ ಕೌನ್ಸಿಲರುಗಳು ಡೆಪ್ಯುಟೇಷನ್ ಹೋಗತಕ್ಕುದಾಗಿ ಮತ್ತೊಂದು ನಿರ್ಧಾರವೂ ಮಾಡಲ್ಪಟ್ಟುವು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

KANNADA SAHITYA PARISHAD—BEFORE AND AFTER.

The continued struggle between the citizens on the one hand and the local officials on the other on the question of the constitutionality of convening the Parishad and electing its President even without the formal consultation of the public assumed on acute crisis culminating in the complete and open rupture of the Brahmins and the non-Brahmins owing to the obstinacy of the former in not yielding even to the smallest extent to effect a compromise between the two parties. That the Parishad was invited months ago by the Deputy Commissioner who with the hope of getting another President elect imposed on an unwilling public represented by about five gentlemen a reception committee which was reluctantly accepted under protest was a matter of serious consideration for all self-respecting and intelligent citizens. But this objection too, out of deference to the word of Deputy Commissioner and at the earnest request of our Brahmin friends was overruled by the public at a meeting held on the 5th inst. The non-Brahmins further expressed in clear and emphatic language that they could not take part in the proceedings of the Parishad if they were not empowered to elect the President. The question was hotly debated. The Assistant Commissioner and his lawyer friends after a good deal of persuation came to know the public disliked the President-elect. The Chairman then said that he would write to the Parishad authorities on the point in question. It was afterwards thought that such a great agitation would effect a change in respect of the President and they would have an opportunity of co-operating with the Brahmin friends and thus be able to serve their mother-tongue to their leve l best. But as ill-luck would have it, it was not to be.

After four days of anxious expectation the public was once again shocked to hear the verdict by the Munsiff of the place that the matter had been once for all settled and that there could be no change in the previous programme. Thus the members had either to lose their individuality and self respect as an important community or to non-co-operate with the Brahmins who did not in any way try to conciliate them. There was therefore no alternative but to follow the latter course and thus save themselves and their town from bad name.

All the young men some of whom had before consented to become volunteers non-co-operated with the organisers. Those who had thought of helping the Parishad in the shape of money and other things withheld their gifts; the two theatres where the Parishad was to have been held could not be had in spite of the Police Inspector and the Assist. Commissioner.

At a meeting of leading citizens specially held to consider the situation created by the utter flouting of public opinion it was settled that all should non-violently non-co-operate with them and thus boy cott all the functions of the Parishad. But there was a good deal of discussion on whether the promise of Messrs. Devendrappa and Siddramanna given to the Deputy Commissioner to feed the delegates of the Parishad for two days should be kept or not in the now altered circumstances when he had resigned the chairmanship of the reception committee. The sanctity of their spoken word and their sense of self respect as important citizens of the place were put to hard test at one and the same moment. They could not see the second important town in the State slighted and lowered in the estimation of the outside public nor could they break their promise to feed the delegates. So the matter was refered to a committee of seven persons including the donors for decision. The committee sat for nearly eleven hours and arrived at the final conclusion that unity and prestige of the town should be maintained and that the promise could not be kept in the now altered circumstances as it was conditional. The Municipal Councillors who had also at the instance of the Deputy Commissioner consented to feed the delegates for a day agreed to follow the decision of the committee. It redounds to the great credit of Davangere public that they kept the prestige and honour of the city despite so many influences.

The High School and A. V. School buildings now under the management of the Brahmin officials were used for boarding and lodging some twenty Brahmin delegates. Only one Lingayet delegate arrived here on the 11th instant who on being informed of the real situation abandoned the idea of attending the conference.

The President elect Mr. M. Venkatakrishnaiya, arrived here on the morning of the 12th instant with about five Brahmin delegetes and was accorded a grand reception by about twelve Brahmins prominent among whom were the Assistant Commissioner, the Police Inspector and the A. V. School Head master. It was unfortunate that the organisers should not have thought of having a band or music to welcome the old man of Mysore! It is still more unfortunate that Mr. Venkatakrishnaiya, weary and worn out as he was with the supreme self sacrifice and immense service to the cause of Kannada literature, should have been made to walk on foot to his far off lodging in the Munsiff Court without even a conveyance. The gloomy picture the reception presented to sight seers was one more feature discriptive of the real situation created by the unconstitutional methods of the Parishad authorities. There was neither the Munsiff nor the new chairman of the reception committee, Mr. B. Venkatasamanna to welcome the President. The leading Brahmins of the place could scarcely be seen actively taking part in the Parishad.

Arrangements had been made to hold the conference in the Sree Chamarajendra town Hall. But the arrival of as many as thirty delegates had a great effect on the advisibility of not holding the conference there. Our wise men of Parishad therefore thought of holding the conference in the High School Hall which could agreeably accomodate both the delegates and the visitors if any. The conference was to have begun at three o'clock in the afternoon. But Messrs Kadapakar and other gentlemen from Dharwar began to open negotiations with the citizens through Mr. Hardekar. A meeting of the leading citizens and Dharwar gentlemen was held to consider the situation. Both the parties fully discussed on the situation and let it be said to the credit of the Dharwar gentlemen that they readily fell in with the views of the citizens. It was settled that the Parishad authorities should apologise for the mistakes committed in respect of the election of the president and other points. But by the time the dicision was arrived at, it was nearly five o'clock and information reached that the Parishad began its sessions without even caring and waiting for the ultimate results of the negotiations. Messrs Karpakar and others were asked whether it was just on the part of the Parishad to have begun the sessions when negotiations were going on. They in turn asked the citizens to go to the conference with them and that the Parishad authorities would surely apologise in the way already settled. They also assured the citizens that they would pack off bag and baggage if the apology from the Parishad authorities was not forthcoming. The other party replied that they would go to the Conference only when they were certain of the acceptance of the terms by the Parishad. So the negotiations were postponed for the next day while the Parishad continued its deliberations thus giving a foretaste of what was in store.

The new Chairman, Mr. B. Venktashamanna was not allowed to read his welcome address who, it appears had prepared it fully dealing with the atmosphere in which the Parishad was born and conducted in this place. It is reported that he along with his friends left the meeting and the election of the President was then proceeded forthwith. In proposing Mr. Venkatakrishniya to the chair, Mr. V.B. Aluc is reported to have said, "Mr. Venkatakrishnaiya has been the Guru of two generations of Mysoreans not only as a school master but also as a patriot." Facts are more eloquent than words and the presence of less than forty delegates only to pay their tribute to the Guru of themselves and their fathers amply justifies the remarks of the proposer. Mr. K. Sreenivasa Rao who has made the President a tool in his hands throughout the proceedings was the seconder.

The Chairman began his address orally in his usual Sadvi-Sampadubyudaya style now dwelling on the growth of Japan and then dealing with the improvement of various other countries and how they attained their present status in the world. It would have been better had the address been printed. As it was, the address never dwelt on the origin, growth, development and the means and methods to be adopted to improve Kannada. After the usual ceremonies the Parishad was adjourned for the next day. The commencement of the Parishad on the 12th inst. before the decision of the negotiations had filled the minds of the citizens with suspicion and disgust. But the question was again taken up by Dharwar gentlemen. The Parishad authorities through Messrs. Kadapakar and others informed the citizens that they had not committed any mistakes and if the citizens were under the impression that the Parishad authorities had committed any mistakes they would apologise for them and request the citizens to whole-heartedly co-operate in the work of Parishad. The citizens proposed that the Parishad authorities should confess that they had committed mistakes in respect of the election of the President and other points and they should apologise for them. This was not accepted and negotiations failed in spite of the utmost efforts of Mr. Hardekar. The President in his concluding remarks is reported to have observed that the Conference was a great success in as much as they were able to raise the prize money from Rs. 250 to 2000. In another way the Conference might be said to have achieved a greater success–in widening the gulf between the Brahmins and the non-Brahmins, and giving the latter an opportunity to realise the situation and try to help themselves.

Davangere, 17-5-22. } CITIZEN.

ಲಾಹೋರಿನ ಸಿಟಿ ಮ್ಯಾಜಿಸ್ಟ್ರೇಟರಲ್ಲಿ ಆಯ[illegible]ವಿಧಿಯಲ್ಲಿ ಕಂಡ ಅಪರಾಧಕ್ಕಾಗಿ ವಿಚಾರಣೆಯನ್ನು ಹೊಂದುತ್ತಿರುವ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರುದ್ಯೋಗದಿಂದ ನಿವೃತ್ತರಾಗಿರುವ ಸರದಾರ್ ಖಾರ್ಜ್ ಸಿಂಗ್ ರೆಂಬುವರು ಸೇಲ್ ಕೋಟೆಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸುಳ್ಳುಸಾಕ್ಷ್ಯವನ್ನು ನುಡಿದುದಕ್ಕಾಗಿ ಅವರ ಮೇಲೆ ವಿವಾದವನ್ನು ನಡಿಸಲು ಅಪ್ಪಣೆಕೊಡಬೇಕೆಂದು ಮ್ಯಾಜಿಸ್ಟ್ರೇಟರನ್ನು ಪ್ರಾರ್ಥಿಸಿಕೊಂಡಿರುತ್ತಾರೆ.

ಕನ್ನಡ ಸಾಹಿತ್ಯಪರಿಷತ್ತಿನ ಪೂರ್ವಾಪರಗಳು.

ಸಾಹಿತ್ಯಪರಿಷತ್ತಿನ ಅಧ್ಯಕ್ಷರ ವಿಷಯದಲ್ಲಿ ನೀರಿನ ಕೊಣದ ಹತ್ತಿರ ನಡೆದ ಎರಡು ಚಿಕ್ಕ ಸಭೆಗಳಲ್ಲಿಯೂ ಪುರಪ್ರಮುಖರು ಅಧ್ಯಕ್ಷರ ಆರಿಸುವ ಅಧಿಕಾರವು ತಮಗಿದ್ದರೇನೆಯೇ ತಾವು ಈ ಪರಿಷತ್ತಿನ ಕಾರ್ಯಗಳಲ್ಲಿ ಕೈಹಾಕುವವರೆಂದು ಕಂಠೋಕ್ತವಾಗಿ ಹೇಳಿದಾಗ್ಯೂ ಪರಿಷತ್ತಿನ ಅಧಿಕಾರಿಗಳೂ, ಚಾಲಕರೂ ಇದನ್ನು ಲಕ್ಷಿಸದೆ ಸಹಾಯಸಂಪತ್ತುಗಳನ್ನು ಮಾತ್ರ ಮಾಡಬೇಕೆಂದು ಜನರನ್ನು ಕೇಳಲು ಯತ್ನಿಸಿದರು. ಇದರಿಂದ ಸರ್ವರೂ ಖೇದಪಟ್ಟು ಪರಿಷತ್ತನ್ನು ಬಹಿಷ್ಕರಿಸಿ ಪರಿಷತ್ತಿನ ದಿನಗಳಲ್ಲಿ ತಮ್ಮ ತಮ್ಮ ಮನೆಗಳಲ್ಲಿರಬೇಕೆಂದು ಇದಕ್ಕಾಗಿ ಸೇರಿದ ಪ್ರಮುಖರ ಸಭೆಯಲ್ಲಿ ತೀರ್ಮಾನಿಸಲ್ಪಟ್ಟಿತು. ಆದರೆ ಮ|| ರಾ|| ದೇವೇಂದ್ರಪ್ಪನವರು ಮತ್ತು ಸಿದ್ರಾಮಣ್ಣನವರು ತಾವು ಪರಿಷತ್ತಿನ ಪ್ರತಿನಿಧಿಗಳಿಗೆ ಎರಡುದಿನಗಳವರೆಗೆ ಊಟಬಡಿಸುತ್ತೇವೆಂದು ಡೆಪ್ಯುಟಿಕಮಿಷನರಿಗೆ ಕೊಟ್ಟ ಮಾತಿನ ವಿಷಯವಾಗಿ ಬಹು ಚರ್ಚೆ ನಡೆದು ದೀರ್ಘಾಲೋಚನೆಯಾದನಂತರ ಸ್ಥಳದ ಅಭಿಮಾನ್ಯೈಕ್ಯತೆಗಳನ್ನು ಕಾಪಾಡಬೇಕಾಗಿರುವುದರಿಂದಲೂ ಡೆಪ್ಯುಟಿಕಮಿಷನ್ನರು ಸ್ವಾಗತಸಂಘಾಧ್ಯಕ್ಷರ ಕೆಲಸವನ್ನು ಬಿಟ್ಟಿರುವುದರಿಂದಲೂ ಯಾರೂ ಯಾವ ವಿಧವಾಗಿಯೂ ಸಹಾಯ ಮಾಡಲಾಗದೆಂದೂ ತೀರ್ಮಾನವಾಯಿತು. ಮುನಿಸಿಪಲ್ ಮೆಂಬರುಗಳು ತಾವೂ ಒಂದು ದಿನ ಊಟಬಡಿಸಲು ಡೆಪ್ಯುಟಿಕಮಿಷನ್ನರಿಗೆ ಹೇಳಿದಂತೆ ಸ್ಥಿತ್ಯಾಂತರದಿಂದ ಬಿಟ್ಟುಬಿಟ್ಟರು.

ಅಧ್ಯಕ್ಷರಾದ ಮ|| ರಾ|| ವೆಂಕಟಕೃಷ್ಣಯ್ಯನವರು ೧೨ನೇ ಬೆಳಿಗ್ಗೆ ದಯಮಾಡಿಸಿದಾಗ ಸ್ವಾಗತಸಂಘದ ಹೊಸ ಅಧ್ಯಕ್ಷರಾದ ಮ|| ರಾ|| ವೆಂಕಟರಾಮಣ್ಣನವರಾಗಲಿ ಸ್ಥಳೀಯರಾದ ಮ|| ರಾ|| ಹೊಸೂರು ಸುಬ್ಬರಾಯರಾಗಲಿ ಕಳೆದ ರಾತ್ರಿ ಬಂದ ಇಪ್ಪತ್ತುಜನ ಬ್ರಾಹ್ಮಣ ಪ್ರತಿನಿಧಿಗಳಾಗಲಿ ಸುಖಾಗಮನ ಬಯಸಲು ನಿಲ್ದಾಣಕ್ಕೆ ಬಂದಿದ್ದಿಲ್ಲ. ನಿಲ್ದಾಣದಲ್ಲಿ ನಿತ್ಯವೂ ಇರುತ್ತಿದ್ದಂತೆ ನೂರಾರು ಜನರಿರದೆ ಸುಮಾರು ಮೂವತ್ತುಜನರು ಮಾತ್ರ ಇದ್ದರು. ಮೈಸೂರಿನ ವೃದ್ಧಪಿತಾಮಹರೆನಿಸಿಕೊಂಡಿರುವ ಮ|| ರಾ|| ವೆಂಕಟಕೃಷ್ಣಯ್ಯನವರನ್ನು ಕರೆದುಕೊಂಡುಹೋಗಲು ದೇಶಿ-ಪರದೇಶಿ ವಾದ್ಯಗಳಾಗಲಿ, ಮೋಟಾರ್-ಟಾಂಗಾಗಳಾಗಲಿ ಇರದಿದ್ದುದು ಬಹಳ ವಿಷಾದಕರವು. ಇಲ್ಲಿರುವ ಫೇಟರುಗಳು ಅಸಿಸ್ಟೆಂಟ್ ಕಮಿಷನರ್ ಮತ್ತು ಪೊಲೀಸ್ ಇನ್ಸ್ಪೆಕ್ಟರ್ ಇವರುಗಳ ಪ್ರಯತ್ನಗಳಿಂದಲೂ ಪರಿಷತ್ತಿನ ಕಾರ್ಯಕ್ಕೆ ಸಿಕ್ಕದಿದ್ದುದರಿಂದ ಶ್ರೀ ಚಾಮರಾಜೇಂದ್ರ ಟವನ್ ಹಾಲಿನಲ್ಲಿ ಪರಿಷತ್ತನ್ನು ಸೇರಿಸಬೇಕೆಂದು ಮೊದಲು ಏರ್ಪಾಡಾಗಿತ್ತು, ಮತ್ತು ಅದಕ್ಕಾಗಿ ತಯಾರಿಯೂ ನಡೆದಿತ್ತು. ಆದರೆ ಬಹು ಸ್ವಲ್ಪ ಪ್ರತಿನಿಧಿಗಳು ಬಂದದ್ದರಿಂದ ಸುಮಾರು ಇನ್ನೂರು ಜನರನ್ನು ಹಿಡಿಸುವ ಟವನ್ ಹಾಲಿನಲ್ಲಿ ಪರಿಷತ್ತನ್ನು ಸೇರಿಸುವುದು ಅಭಾಸವಾಗುವುದೆಂದು ತಿಳಿದೋ ಏನೋ ಪರಿಷತ್ತನ್ನು ಅರವತ್ತು ಜನರನ್ನು ಹಿಡಿಸುವ ಹೈಸ್ಕೂಲ್ ಹಾಲಿನಲ್ಲಿ ಸೇರಿಸಲು ಏರ್ಪಾಡಾಯಿತು.

ಮಧ್ಯಾಹ್ನ ಮೂರು ಗಂಟೆಗೆ ಸಭೆಸೇರಬೇಕೆಂದು ನಿರ್ಧಾರವಾಗಿತ್ತು. ಆದರೆ ೧೧ ನೇ ರಾತ್ರಿ ಧಾರ್ವಾಡದ ಪ್ರತಿನಿಧಿಗಳ ಜೊತೆಗೆ ಬಂದ ಮ|| ರಾ|| ಮಂಜಪ್ಪನವರು ಮತ್ತು ಕೆಲವರು ಸಮಾಧಾನವನ್ನು ಮಾಡಲು ಯತ್ನಿಸಿದರು. ಧಾರವಾಡದ ಮ|| ರಾ|| ಕಡಪ ಮತ್ತು ಕೆಲವರೂ ಪುರಪ್ರಮುಖರೂ ಸಭೆಸೇರಿ ಎಲ್ಲವನ್ನು ಆಮೂಲಾಗ್ರವಾಗಿ ಚರ್ಚಿಸಿ ಪರಿಷತ್ತಿನವರು ಅಧ್ಯಕ್ಷರನ್ನು ಆರಿಸುವುದರಲ್ಲಿ ತಾವು ತಪ್ಪುಮಾಡಿದೆವೆಂದು ಒಪ್ಪಿಕೊಂಡು ಕ್ಷಮಾಪಣೆ ಕೇಳಿಕೊಳ್ಳಬೇಕೆಂದು ನಿರ್ಧಾರವಾಯಿತು ಇಷ್ಟುಹೊತ್ತಿಗೆ ೫ ಘಂಟೆಯಾಯಿತು. ಪರಿಷತ್ತಿನವರು ಸಮಾಧಾನದ ಫಲಿತಾಂಶವನ್ನು ತಿಳಿದುಕೊಳ್ಳದೆ ಕಾರ್ಯಾರಂಭ ಮಾಡಿದ್ದರು. ಇದರಿಂದ ಪ್ರಮುಖರು ಬಹು ಖೇದಪಟ್ಟರು. ಧಾರವಾಡದ ಕಡೆಯ ಮ|| ರಾ|| ಕಡಪ ಮೊದಲಾದವರು "ಸಭೆ ಆರಂಭಿಸಿದ್ದರೂ ಚಿಂತೆಯಿಲ್ಲ ನಮ್ಮೊಡನೆ ನೀವೀಗ ಸಭೆಗೆ ಬನ್ನಿರಿ ತೀರ್ಮಾನವಾದಂತೆ ಪರಿಷತ್ತಿನವರು ಕ್ಷಮಾಪಣೆ ಕೇಳಿಕೊಳ್ಳುವರು ಇಲ್ಲದಿದ್ದರೆ ನಾವೂ ನೀವೂ ಸಭೆಬಿಟ್ಟು ಹೊರಗೆ ಬಂದುಬಿಡೋಣ" ಎಂದು ಪ್ರಮುಖರಿಗೆ ಹೇಳಿದರು. ಆದರೂ ಇವರು ಹೋಗದೆ ಪರಿಷತ್ತಿನವರು ತಮ್ಮ ಕರಾರನ್ನು ಒಪ್ಪುವುದು ನಿಶ್ಚಯವಾದರೆ ನಾವು ನಾಳೆ ಬರುತ್ತೇವೆಂದು ಹೇಳಿದರು.

ಇತ್ತ ಸಭೆಯಲ್ಲಿ ಸ್ವಾಗತಸಂಘದ ಹೊಸ ಅಧ್ಯಕ್ಷರಾದ ಮ|| ರಾ|| ವೆಂಕಟರಾಮಣ್ಣನವರು ಇಲ್ಲಿ ಪರಿಷತ್ತಿನಿಂದುಂಟಾದ ಸ್ಥಿತಿಯನ್ನು ಕುರಿತು ಬರೆದ ಉಪನ್ಯಾಸವನ್ನು ಓದಗೊಡಿಸದೆ ಹೋದುದರಿಂದ ಅವರೂ ಅವರ ಸ್ನೇಹಿತರನೇಕರೂ ಸಭೆಯನ್ನು ಬಿಟ್ಟುಹೋದರು. ಅಧ್ಯಕ್ಷರು ತಮ್ಮ ಸಾಧ್ವೀ-ಸಂಪದಭ್ಯುದಯ ಪತ್ರಿಕೆಗಳಲ್ಲಿ ಬರೆಯುವಂತೆ ವಿಷಯದಿಂದ ವಿಷಯಕ್ಕೆ ಹಾರುತ್ತ ಅಪ್ರಾಸಂಗೀಕ ಸಂಗತಿಗಳನ್ನು ಕುರಿತು ಆರಂಭಭಾಷಣ ಮಾಡಿದರು. ಪತ್ರಿಕೆಗಳಲ್ಲಿ ನಿಧಾನವಾಗಿ ಯೋಚನೆಮಾಡಿ ಬರೆಯೋಣವೆಂದೊ ಏನೋ ತಮ್ಮ ಭಾಷಣವನ್ನು ಮುದ್ರಿಸಿದ್ದಿಲ್ಲ. ೧೩ ನೇ ಮಧ್ಯಾಹ್ನ ಪುನಃ ಸಮಾಧಾನದ ವಿಚಾರವು ಪ್ರಾರಂಭವಾಯಿತು. ಪುನಃ ಆ ಮೂಲಾಗ್ರವಾಗಿ ಚರ್ಚೆನಡೆದ ಮೇಲೆ ಧಾರವಾಡದ ಪ್ರತಿನಿಧಿಗಳ ಮೂಲಕ ಪರಿಷತ್ತಿನವರು ತಾವು ತಪ್ಪುಮಾಡಿಲ್ಲವೆಂದೂ ಪುರಜನರು ತಾವು (ಪರಿಷತ್ತಿನವರು) ತಪ್ಪುಮಾಡಿದೆವೆಂದು ತಿಳಿದಿದ್ದರೆ ಅದಕ್ಕೆ ಕ್ಷಮಾಪಣೆ ಕೇಳಿಕೊಳ್ಳುತ್ತೇವೆಂದು ಹೇಳಿದರು. ಇವನ್ನು ಒಪ್ಪದೆ ಪುರಜನರು ಹಿಂದಣ ದಿನದ ಕರಾರನ್ನೇ ತಿಳಿಸಿದರು. ಇದನ್ನು ಪರಿಷತ್ತಿನವರು ಒಪ್ಪದಿದ್ದುದರಿಂದ ಸಮಾಧಾನವು ಮುರಿದುಹೋಯಿತು. ಮ|| ರಾ|| ಮಂಜಪ್ಪ ಮತ್ತು ಕೆಲವರ ವಿಶ್ವಪ್ರಯತ್ನವು ಫಲಕೊಡದೆ ಹೋದುದು ಬಹು ವಿಷಾದಕರವು. ಸ್ಥಳೀಯ ಅಧಿಕಾರಿಗಳಿಗೂ ನಿವಾಸಿಗಳೆಲ್ಲರಿಗೂ ಆಮಂತ್ರಣ ಪತ್ರಿಕೆ

ಳನ್ನು ಕೊಟ್ಟದ್ದರೂ ಯಾರೂ ಹೋಗಲಿಲ್ಲ. ಇದು ಆ ಮಂತ್ರಿಸಲ್ಪಟ್ಟ ಅನೇಕ ಬಡಜನರಿಗೆ ಒಳ್ಳೆಯದೆಂದೇ ಹೇಳಬೇಕು. ಏಕೆಂದರೆ ಮುನ್ಸಿಫ್ ಮತ್ತು ಅಮಲ್ದಾರ್ ಇವರೇ ಮೊದಲಾದ ಅಧಿಕಾರಿಗಳನ್ನು ಪ್ರತಿನಿಧಿಗಳನ್ನು ಕೊಡಬೇಕೆಂದು ಕೇಳುವರು. ಅಮಲ್ದಾರರಿಂದಂತೂ ದುಡ್ಡನ್ನು ತೆಗೆದುಕೊಂಡೇ ಬಿಟ್ಟಿರುವರು. ಈಗಣ ದುಡ್ಡಿಲ್ಲದ ಕಾಲದಲ್ಲಿ ಇಂಥ ಹೊಸಪದ್ಧತಿಯನ್ನು ಸಭಾಚಾಲಕರೆಲ್ಲರೂ ಅನುಸರಿಸುವುದು ಬಹಳ ಒಳ್ಳೆಯದೆಂದೇ ಹೇಳಬೇಕು. ಅಧ್ಯಕ್ಷರು ಪುಸ್ತಕಗಳ ಬಹುಮಾನ ಹಣವನ್ನು ೨೫೦ ರೂ. ಗಳಿಂದ ೨೦೦೦ ರೂ. ಗಳವರೆಗೆ ಹೆಚ್ಚಿಸಿರುವುದು ಸಭೆಯ ಮಹತ್ಕಾರ್ಯಗಳಲ್ಲೊಂದೆಂದು ತಮ್ಮ ಉಪಸಂಹಾರಭಾಷಣದಲ್ಲಿ ಹೇಳಿರುವರು. ಬ್ರಾಹ್ಮಣ ಬ್ರಾಹ್ಮಣೇತರ ಮನಸ್ತಾಪವನ್ನು ಹೆಚ್ಚಿಸಿ ಬ್ರಾಹ್ಮಣೇತರರು ಸ್ವಾವಲಂಬಿಗಳಾಗಲೇಬೇಕೆಂದು ಮನಗಾಣಿಸಿದ ಸಭೆಯ ಮಹತ್ಕಾರ್ಯವೊಂದನ್ನು ಅಧ್ಯಕ್ಷರು ಮುಪ್ಪಿನಿಂದಲೋ ಆತುರದಿಂದಲೋ ಮರೆತಿರುವಂತೆ ಕಾಣುತ್ತದೆ.

ದಾವಣಗೆರೆ, ತಾ|| 18-5-1922. } ನಿವಾಸಿ.

ಶ್ಯಾನುಭೋಗರುಗಳಿಂದ ಚನ್ನಪಟ್ಟಣದ ತಾಲ್ಲೋಕಿನಲ್ಲಿ ರೈತರಿಗೆ ಉಂಟಾಗಿರುವ ತೊಂದರೆಗಳ ವಿಚಾರ.

ಈ ಚನ್ನಪಟ್ಟಣದ ತಾಲ್ಲೋಕಿನಲ್ಲಿ ಮಾಮೂಲ್ ಪ್ರಕಾರ ತಾಲ್ಲೋಕ್ ಜಮಾಬಂದಿನಡೆದ ಕಾಲದಲ್ಲಿ ತಾಲ್ಲೋಕಾಮುಳೆ ಶ್ಯಾನುಭೋಗರುಗಳ ಪೈಕಿ ಅನೇಕರು ಗ್ರಾಮಾಂತರಗಳಲ್ಲಿ ಇರಸಾಲ್ ಬಗ್ಗೆ ರೈತರಿಂದ ಕಿಸ್ತುವಾರು ಪ್ರಕಾರ ವಸೂಲುಮಾಡಿದ್ದ ಕಂದಾಯದ ಹಣವನ್ನು ಖಜಾನೆಗೆ ಇರಸಾಲ್ ಮಾಡದೆ ತಾವೇ ತಮ್ಮ ತಮ್ಮ ಸ್ವಂತ ಖರ್ಚಿಗೋಸ್ಕರ ದುರುಪಯೋಗಪಡಿಸಿಕೊಂಡಿರುವುದೂ ನಂತರ ಡಿಟೋನಸೂಲಿ ಹಣವನ್ನು ಖಾತೆಕಿರ್ದಿಗಳಿಗೆ ಜಮಾಕಟ್ಟದೆ ಖಾತೆಗಳಲ್ಲಿ ವಿಶೇಷವಾಗಿ ಬಾಕಿ ನಿಲ್ಲಿಸಿರುವ ಸಂಗತಿಗಳೆಲ್ಲವೂ ನಿದರ್ಶನವಾಗಿ ಕಂಡುಬಂದದ್ದರಿಂದ ಮೂಢರಾಗಿರುವ ಬಡರೈತರುಗಳು ತಮ್ಮಗಳ ಮೇಲೆ ಬಾಕಿನಿಲ್ಲಿಸಿರುವ ಕಂದಾಯದ ಹಣದ ಒಟ್ಟು ಮೊಬಲಗನ್ನು ಕೇಳಿದ ಕೂಡಲೇ ಗಾಬರಿಯಾಗಿ ಅಯ್ಯೋ ದೇವರೇ ಇದೇನನ್ಯಾಯ! ನಾವು ಹೊಟ್ಟೆಗಿಲ್ಲದ ಈ ಕ್ಷಾಮಕಾಲದಲ್ಲಿ ಸರ್ಕಾರಕ್ಕೆ ಕೊಡಬೇಕಾದ ನಮ್ಮಗಳ ಬಾಬ್ತು ಕಂದಾಯದ ಹಣವನ್ನು ಬಾಕಿ ಇಲ್ಲದಂತೆ ಪಾವತಿ ಮಾಡಿದ್ದರೂ ಕೂಡ ಪುನಃ ಕೊಡಬೇಕೆಂದು ಹೇಳುತ್ತಾರಲ್ಲಾ ಇನ್ನೇನು ಗತಿ! ಇಷ್ಟು ಹಣ ನಾವು ಎಲ್ಲಿಂದ ತಂದುಕೊಡಬೇಕು? ಶ್ಯಾನುಭೋಗರುಗಳನ್ನು ತಂದೆ ತಾಯಿ ಎಂದು ನಾವು ನಂಬಿಕೊಂಡು ಇವರ ಇಷ್ಟದಂತೆ ಇವರು ಕೇಳಿದ್ದಕ್ಕೆಲ್ಲಾ ದುಡ್ಡು ಕೊಡುತ್ತಾ ಇದ್ದರೂ ಕೂಡ ನಮ್ಮಗಳಿಗೆ ಇಂಥಾ ಮೋಸವನ್ನು ಮಾಡಿರುವುದು ಯಾವ ನ್ಯಾಯ? ಹಿಂದೆ ಇದ್ದ ತಾಲ್ಲೋಕ್ ಅಮಲ್ದಾರರುಗಳು ಜಮಾಬಂದಿಕಾಲದಲ್ಲಿ ಈ ಶಾನುಭೋಗರುಗಳ ಲೆಕ್ಕವನ್ನು ತನಿಖೆಮಾಡಿ ರೈತರುಗಳ ಅಹವಾಲನ್ನು ಕೇಳಿ ತಿಳಿದುಕೊಂಡು ಕ್ರಮವರಿತು ಕೆಲಸಮಾಡಿಕೊಂಡು ಬಂದಿದ್ದಪಕ್ಷದಲ್ಲಿ ಶ್ಯಾನುಭೋಗರುಗಳು ಕಂದಾಯದ ಹಣವನ್ನು ದಸ್ತುಮಾಡುವುದಕ್ಕೂ ಈಗ ರೈತರಿಗೆ ಬಂದಿರುವ ಗೋಳಾಟಕ್ಕೂ ಸಹ ಅವಕಾಶವಾಗುತ್ತಿರಲಿಲ್ಲ. ಗ್ರಾಮಾಂತರಗಳ ರೈತರುಗಳೆಲ್ಲರೂ ಕಂದಾಯದ ಬಾಕಿ ವಿಚಾರದಲ್ಲಿ ತಮ್ಮ ಮೇಲೆ ಯಾವವಿಧವಾದ ತೊಂದರೆ ಬರುವುದೋ ಎಂಬ ಭಯದಿಂದ ತಮ್ಮಲ್ಲಿದ್ದ ಅಂದರೆ ಶಾನುಭೋಗರಿಗೆ ಕಂದಾಯ ಪಾವತಿಮಾಡಿ ದಾಖಲೆಗೋಸ್ಕರ ಪಡೆದು ಇಟ್ಟುಕೊಂಡಿದ್ದ ರಶೀತಿ ಪಟ್ಟಿಗಳೆಲ್ಲವನ್ನೂ ಶ್ಯಾನುಭೋಗರ ವಿಚಾರಣೆ ಮಾಡತಕ್ಕಬಗ್ಗೆ ತಾಲ್ಲೋಕ್ ಅಮಲ್ದಾರರವರ ವಶಕ್ಕೆ ಒಪ್ಪಿಸುತ್ತಾರೆ. ಅನೇಕಜನ ರೈತರು ಹುಜೂರು ಜಮಾಬಂದಿ ಕಾಲದಲ್ಲಿ ಡೆಪ್ಯುಟಿಕಮೀಷನರ್ ಸಾಹೇಬರಿಗೆ ಈ ಶ್ಯಾನುಭೋಗರುಗಳು ಮಾಡಿರುವ ಮೋಸಕೃತ್ಯವನ್ನು ಹೇಳಿಕೊಂಡು ತಮ್ಮ ತೊಂದರೆಗಳನ್ನು ತಪ್ಪಿಸಿಕೊಳ್ಳುವ ನಿಮಿತ್ತ ಹುಜೂರು ಜಮಾಬಂದಿಯನ್ನೇ ಎದುರು ನೋಡುತ್ತಿದ್ದರು. ಅಷ್ಟರಲ್ಲಿಯೇ ಹುಜೂರು ಜಮಾಬಂದಿಗೆ ಶುರುವಾಯಿತು. ಈ ತಾಲ್ಲೋಕಿಗೆಲ್ಲಾ ಡೆಪ್ಯುಟಿಕಮೀಷನರ್ ಸಾಹೇಬರವರು ಎರಡೇ ಕ್ಯಾಂಪುಗಳನ್ನು ಗೊತ್ತುಮಾಡಿದ್ದರು. ಮೊದಲು ದಿವಸದ ಸಂತೆಮೊಗ್ಗೆ ಮೊಕ್ಕಾಂಗೆ ಗ್ರಾಮಾಂತರಗಳ ರೈತರುಗಳು ತಮ್ಮ ತಮ್ಮ ಅಹವಾಲ್‌ಗಳನ್ನು ಹೇಳಿಕೊಳ್ಳುವುದಕ್ಕೋಸ್ಕರ ಬಹಳದೂರ ಪಾಸಲೆಯಿಂದ ಅನ್ನಾನೀರಿಲ್ಲದೆ ಕಷ್ಟಪಟ್ಟು ಅರ್ಜಿಗಳನ್ನು ತೆಗೆದುಕೊಂಡುಬಂದಿದ್ದರು. ಸಾಯಂಕಾಲ ಮೂರುಘಂಟೆ ಮೇಲೆ ಜಮಾಬಂದಿಗೆ ಶುರುವಾಯಿತು. ಆರುಘಂಟೆಸಮಯದಲ್ಲಿ ರೈತರುಗಳಿಂದ ಅರ್ಜಿಗಳನ್ನು ತೆಗೆದುಕೊಂಡರು. ಆ ಪೈಕಿ ಕೆಲವು ಅರ್ಜಿಗಳನ್ನು ಮಾತ್ರ ಓದಿಸಿ ಕೇಳಿ ಫೈಸಲ್ ಮಾಡಿಕೊಡುತ್ತೇವೆಂಬ ಜವಾಬ್ ಹುಕುಂಮಾತ್ರ ಅಪ್ಪಣೆ ಕೊಡಿಸಿದರು. ಬಾಕಿ ಅನೇಕ ಅರ್ಜಿಗಳನ್ನು ಓದಿ ಕೇಳಲೇ ಇಲ್ಲ. ಆ ದಿವಸ ಜಮಾಬಂದಿ ಪೂರ್ತಿಯಾಯಿತು. ಮಾರನೇ ದಿನ ಕಾರಣಾಂತರದಿಂದ ಜಮಾಬಂದಿಯನ್ನು ನಿಲ್ಲಿಸಿದ್ದು ಮಳೂರು ಪಟ್ಟಣದ ಮೊಕ್ಕಾಂನಲ್ಲಿ ಪುನಃ ಶುರೂಮಾಡಿದರು. ಅಲ್ಲಿಗೂ ಸಹ ನೂರಾರು ಜನ ರೈತರು ಬಂದು ಕಾದಿದ್ದರು. ಮೂರುದಿವಸ ಜಮಾಬಂದಿ ನಡೆಯಿತು. ಅಲ್ಲಿಯೂ ಸಾಯಂಕಾಲ ಆರುಘಂಟೆಯಲ್ಲಿ ಅರ್ಜಿಗಳನ್ನು ತೆಗೆದುಕೊಂಡು ಮೊದಲುದಿವಸದ ತೀರ್ಮಾನದಂತೆಯೇ ಕೆಲವು ಅರ್ಜಿಗಳಿಗೆ ಆಗಲಿ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಹೋಗಿ ಎಂದು ಅಪ್ಪಣೆ ಕೊಡಿಸಿದರು. ಕೆಲವು ಅರ್ಜಿಗಳನ್ನು ಸುಮ್ಮನೆ ಇಟ್ಟುಕೊಂಡರು. ವಸೂಲಿ ದಾಖಲೆಗೆ ಬರೆದುಕೊಟ್ಟು ಸದರಿ ವಸೂಲಿ ಹಣ ದಸ್ತುಮಾಡಿದ್ದ ಬಾಬ್ತು ಅನೇಕ ರಶೀತಿಪಟ್ಟಿಗಳು ಇದ್ದಾಗ್ಯೂ ಕೂಡ ಒಂದು ರಶೀತಿಯನ್ನಾದರೂ ನೋಡಲೇ ಇಲ್ಲ.—ಇದರಿಂದ ರೈತರುಗಳು ತಮ್ಮ ಅಹವಾಲನ್ನು ಸಾಹೇಬರಲ್ಲಿ ಹೇಳಿಕೊಂಡು ಸರಿಯಾದ ಹುಕುಂಪಡೆಯುವುದಕ್ಕೆ ಅವಕಾಶವಿಲ್ಲದೇ ಹೋದ್ದರಿಂದ ರೈತರೆಲ್ಲರೂ ಆಶಾಭಂಗರಾಗಿ ಹೊರಟುಹೋದರು. ಡೆಪ್ಯುಟಿಕಮಿಷನರ್ ಸಾಹೇಬರವರು ಗ್ರಾಮಾಂತರಗಳಿಂದ ಕಷ್ಟಪಟ್ಟು ಬಂದು ಕಾದಿದ್ದ ಬಡರೈತರುಗಳ ಅಹವಾಲನ್ನು ಕೇಳಿ ಅವರಿಗೆ ಸರಿಯಾದ ಉತ್ತರವನ್ನು ದಯಪಾಲಿಸಿದ್ದಲ್ಲಿ ರೈತರಿಗೆಲ್ಲಾ ಎಷ್ಟೋ ತೃಪ್ತಿಯಾಗುತ್ತಿತ್ತು. ನಮ್ಮ ಸಾಹೇಬರವರಿಗೆ ಆರೀತಿ ಮನಸ್ಸು ಬಾರದೇ ಇರುವುದು ನೋಡಿದರೆ ಸರ್ಕಾರಕ್ಕೆ ಎದಿಲ್ಲ ರೈತರಿಗೆ ಏಕ್ಕಿಲ್ಲವೆಂದು ಹೇಳುವುದೇ ಉದಾಹರಣೆಯಾಗಿರುತ್ತೆ. ಹುಜೂರು ಜಮಾಬಂದಿಯಲ್ಲಿ ರೈತರುಗಳು ಕೊಟ್ಟಿದ್ದ ನೂರಾರು ಅರ್ಜಿಗಳಿಗೆ ಈ ತಹಲ್‌ವರೆಗೂ ಜವಾಬ್ ಹುಕುಂ ಇಲ್ಲದ್ದರಿಂದ ಅರ್ಜಿಗಳು ಏನಾಗಿವೆಯೊ ತಿಳಿಯದು. ತಾಲ್ಲೋಕ್ ಅಮಲ್ದಾರ್‌ರವರ ವಶಕ್ಕೆ ರೈತರು ಕೊಟ್ಟಿದ್ದ ರಶೀತಿ ಪಟ್ಟಿಗಳು ಏನಾಗಿವೆಯೋ ಅದೂ ಸಹ ಗೊತ್ತಾಗುವುದಿಲ್ಲ. ಶ್ಯಾನುಭೋಗರುಗಳು ಮಾಡಿರುವ ತಪ್ಪನ್ನು ಪಟೇಲರುಗಳು ಕಂಡು ಹಿಡಿದು ಸಬ್‌ಡಿವಿಜನ್ ಸಾಹೇಬರವರಿಗೆ ಹೇಳಿಕೊಂಡರೆ ಅವರು ರೇಗಿ ಪಟೇಲರನ್ನೇ ಮನಸ್ಸೀ ಮಾತನಾಡುತ್ತಾರೆ. ಶ್ಯಾನುಭೋಗರುಗಳು ಸರ್ಕಾರದ ಹಣವನ್ನು ದಸ್ತುಮಾಡಿರುವ ವಿಚಾರದಲ್ಲಿ ತಮಗೆ ಶಿಕ್ಷೆಯಾಗುವುದೆಂದು ತಿಳಿದು ಸಬ್‌ಡಿವಿಜನ್ ಸಾಹೇಬರವರೇ ಮೊದಲಾದ ದೊಡ್ಡ ಅಧಿಕಾರಿಗಳ ಮರೆಹೊಕ್ಕಿರುವಂತೆಯೂ ಆ ಬ್ರಾಹ್ಮಣಾಧಿಕಾರಿಗಳು ಸ್ವಜಾತಿ ಅಭಿಮಾನದಿಂದ ಅಯ್ಯೋ ಪಾಪ ಬಡಬ್ರಾಹ್ಮಣ! ಎಂದು ಕನಿಕರಪಟ್ಟು ಈ ಶ್ಯಾನುಭೋಗರುಗಳಿಗೆ ಸಹಾಯಮಾಡುವ ಉದ್ದೇಶದಿಂದ ಇಂಥಾ ರಾಜದ್ರೋಹ ಕೆಲಸಮಾಡಿದ್ದರೂ ಕೂಡ ಇವರ ಸಂಬಂಧವಾದ ರಿಕಾರ್ಡುಗಳನ್ನೆಲ್ಲಾ ಮುಚ್ಚಿಟ್ಟುಕೊಂಡು ಇರುವಂತೆ ತಿಳಿದು ಬರುತ್ತೆ. ಈ ಶ್ಯಾನುಭೋಗರುಗಳ ಮೇಲಿನ ಅಭಿಮಾನದಿಂದಲೇ ನ್ಯಾಯವಾಗಿ ಕೆಲಸಮಾಡುತ್ತಾ ಇರುವ ತಾಲ್ಲೋಕ್ ಅಮಲ್ದಾರ್‌ರವರನ್ನು ನಿಷ್ಕಾರಣವಾಗಿ ವರ್ಗಮಾಡಬೇಕೆಂದು ಮೇಲ್ಪಟ್ಟ ಅಧಿಕಾರಿಗಳಿಗೆ ಶಿಫಾರಸ್ ಬರೆದಿರುವಂತೆ ವರ್ತಮಾನ ತಿಳಿದುಬರುತ್ತೆ. ಇದು ತುಂಬಾ ಅನ್ಯಾಯಕೆಲಸವಾಗಿರುತ್ತೆ. ಈ ಶ್ಯಾನುಭೋಗರುಗಳು ಪಟೇಲರ ಜೊತೆಯಲ್ಲಿ ಗ್ರಾಮಗಳಿಗೆ ಕಂದಾಯದ ವಸೂಲಿಗೆ ಹೋಗುವುದೇ ಇಲ್ಲ. ಇದಕ್ಕಾಗಿ ಅನೇಕ ಅರ್ಜಿಗಳನ್ನು ಡೆಪ್ಯುಟಿಕಮೀಷನರ್ ಸಾಹೇಬರವರಿಗೆ ಬರೆದುಕೊಂಡಾಗ್ಯೂ ಶ್ಯಾನುಭೋಗರ ಮೇಲಿನ ಅಭಿಮಾನದಿಂದ ಜವಾಬೇ ಇಲ್ಲ. ಈ ಶ್ಯಾನುಭೋಗರುಗಳು ಗ್ರಾಮಗಳಲ್ಲಿ ರೈತರ ಸಂಗಡ ಸರ್ಕಾರದ ನೌಕರಿಯಲ್ಲಿ ಬ್ರಾಹ್ಮಣರೇ ಅಧಿಕಾರಿಗಳಾಗಿರುವುದರಿಂದ ನೀವು ಅಮಲ್ದಾರ್‌ರವರ ವಶಕ್ಕೆ ಕೊಟ್ಟಿರುವ ಕಂದಾಯದ ಪಾವತಿ ರಶೀತಿಗಳಿಂದ ಏನೂ ಆಗಲಾರದು, ಅಮಲ್ದಾರ್‌ರವರನ್ನು ಮೊದಲು ವರ್ಗಮಾಡಿಸಿ ಬಿಡುತ್ತೇವೆ, ನಂತರ ನಿಮ್ಮ ಪಾಡು ನೋಡಿಕೊಳ್ಳಿ ಎಂದು ಹೇಳುತ್ತಾರೆ. ಇದನ್ನು ನೋಡಿದರೆ ರೈತರು ಉತ್ತಮಸ್ಥಿತಿಗೆ ಬರಬೇಕೆಂಬುದು ಯಾವ ಆಫೀಸರ ಮನಸ್ಸಿನಲ್ಲಿಯೂ ಇರುವುದಿಲ್ಲ. ವರ್ಗಪಟ್ಟ ಅಮಲ್ದಾರ್‌ರವರು ಬಹಳ ಮುತವರ್ಜಿಯಿಂದ ಸರ್ಕಾರಿ ಕೆಲಸವನ್ನು ಮಾಡುತ್ತಾ ಪದೇಪದೇ ಗ್ರಾಮಾಂತರಗಳಿಗೆ ಹೋಗಿ ಪ್ರಜೆಗಳಿಗಿರುವ ಕಷ್ಟಸುಖಗಳನ್ನು ವಿಚಾರಣೆ ಮಾಡುತ್ತಾ ಪ್ರಜಾನುರಾಗಿಗಳಾಗಿದ್ದರು. ಇವರು ಈ ತಾಲ್ಲೋಕಿಗೆ ದಯಮಾಡಿಸಿದ ಮೇಲೆ ಇಲ್ಲಿ ನಡೆಯುತ್ತಾ ಇದ್ದ ಖೂನಿ ದರೋಡೆ ಮಾರಾಮಾರಿ ಹೊಡೆದಾಟ ಮೊದಲಾದ ದುಷ್ಕೃತ್ಯಗಳೆಲ್ಲವೂ ವಿಶೇಷವಾಗಿ ನಿಂತುಹೋಗಿ ಪ್ರಜೆಗಳೆಲ್ಲರೂ ಸೌಖ್ಯವಾಗಿರುತ್ತಾರೆ. ಈ ರೀತಿ ಪ್ರಜಾನೆಮ್ಮದಿಯು ಯಾವ ಅಮಲ್ದಾರ್‌ರವರ ಕಾಲದಲ್ಲಿಯೂ ಇರಲಿಲ್ಲವೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಇದೇ ತಾಲ್ಲೋಕಿಗೆ ಸೇರಿದ ಮಳೂರುನಲ್ಲಿ ಶ್ರೀ ಅಪ್ರಮೇಯ ಸ್ವಾಮಿಯವರ ರಥೋತ್ಸವವು ಇದೇ ಮಾಹೆ 8ನೇ ತಾರೀಖಿನಲ್ಲಿ ನಡೆಯಿತು. ಹೋದವರುಷ ಈ ರಥೋತ್ಸವವು ಹಿಂದಿನ ಅಮಲ್ದಾರ್‌ರವರ ಅಶ್ರದ್ಧೆಯಿಂದ ಮಧ್ಯೆ ನಿಂತುಹೋಗಿ ಬಹಳ ಅನಾನುಕೂಲಕ್ಕೆ ಕಾರಣವಾಗಿ ರಾತ್ರೆ ಸುಮಾರು ಹನ್ನೆರಡು ಘಂಟೆವರಿವಿಗೂ ರಥೋತ್ಸವವನ್ನು ನಡೆಸಿದರು. ಈ ಕಾರಣದಿಂದ ದೂರಪಾಸಲೆಯಿಂದ ಬಂದಿದ್ದ ಪರ್ವಜನರಿಗೆಲ್ಲಾ ತುಂಬಾತೊಂದರೆಯಾಯಿತು. ಈವರುಷ ನಮ್ಮ ಅಮಲ್‌ದಾರ್‌ರವರು ಬಹಳ ಮುತುವರ್ಜಿಯನ್ನು ವಹಿಸಿ ಕೆಲಸಮಾಡಿದ್ದರಿಂದ ಸಾಯಂಕಾಲ ನಾಲ್ಕು ಘಂಟೆಗೆ ರಥೋತ್ಸವವು ಪೂರ್ತಿಯಾಗಿ ದೇವರ ದರ್ಶನಕ್ಕೆ ಬಂದಿದ್ದವರಿಗೆಲ್ಲಾ ಕಾಲಕ್ಕೆ ಸರಿಯಾಗಿ ಪೂಜೆ ವಗೈರೆಕೆಲಸಗಳು ಕ್ರಮವಾಗಿ ನಡೆದು ಪರ್ವಜನರೆಲ್ಲರೂ ಸಾಯಂಕಾಲಕ್ಕೆ ಸರಿಯಾಗಿ ತಮ್ಮ ತಮ್ಮ ಮನೆಗಳಿಗೆ ಹೋಗಿ ಸೇರಿಕೊಂಡರು. ಈ ವರುಷ ರಥೋತ್ಸವವು ಬಹಳ ವಿಜೃಂಭಣೆಯಿಂದ ಆದದ್ದಕ್ಕೋಸ್ಕರವಾಗಿ ಜನಗಳೆಲ್ಲರೂ ಆನಂದಭರಿತರಾಗಿರುತ್ತಾರೆ. ಈ ಶ್ಯಾನುಭೋಗರುಗಳು ರೈತರಿಗೆ ಮೋಸಮಾಡಿ ಕಂದಾಯದ ಹಣವನ್ನು ದಸ್ತುಮಾಡಿರುವ ವಿಚಾರದಲ್ಲಿ ಕಳೆದ ಏಪ್ರೇಲ್ ಮಾಹೆಯಲ್ಲಿ ಚನ್ನಪಟ್ಟಣದ ಶಿಲ್ಕು ಫಾರಂಗೆ ದಯಮಾಡಿಸಿದ್ದ ನಮ್ಮ ಹಜರತ್ ದಿವಾನ್‌ಸಾಹೇಬ್ ಬಹದ್ದೂರರವರಲ್ಲಿ ಈ ತಾಲ್ಲೋಕಿನ ಕೆಲವು ಜನ ರೈತರು ಹೋಗಿ ಹೇಳಿಕೊಂಡು ಅರ್ಜಿಹಾಜರ್ ಮಾಡಿರುತ್ತಾರೆ. ಮಹಾಮಹಿಮರಾದ ನಮ್ಮ ದಿವಾನ್‌ಸಾಹೇಬರವರು ಪ್ರಜೆಗಳ ಅಹವಾಲನ್ನು ಘನವಾದ ಚಿತ್ತದಲ್ಲಿ ತಂದು ತಾವೇ ಖುದ್ದು ವಿಚಾರಣೆಮಾಡಿ ಶ್ಯಾನುಭೋಗರ ಹಾವಳಿಯನ್ನು ತಪ್ಪಿಸಿ ತಪ್ಪು ಮಾಡಿರುವ ಶ್ಯಾನುಭೋಗರುಗಳಿಗೆ ಸರಿಯಾದ ಬಂದೋಬಸ್ತು ಮಾಡಿಸಿ ರೈತರಿಗೆ ಅನುಕೂಲವಾಗಿ ಲೆಖ್ಖಗಳು ದೊರೆಯುವಂತೆ ಮಾಡಿಕೊಟ್ಟು ಕಾಪಾಡಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಂಡಿರುತ್ತೇನೆ. ಪ್ರಜೆಗಳ ಕ್ಷೇಮಚಿಂತನೆಯಲ್ಲೇ ಮಗ್ನರಾಗಿ ನಿಸ್ಪೃಹತೆಯಿಂದ ಕೆಲಸಮಾಡುತ್ತಿದ್ದ ಮ|| ಸಿದ್ದರಾಮಪ್ಪನವರು ಮಳವಳ್ಳಿಗೆ ವರ್ಗಾಯಿಸಲ್ಪಟ್ಟಿರುವುದು ಈ ತಾಲ್ಲೂಕಿನವರ ದುರ್ದೈವವೆಂದೇ ಹೇಳಬೇಕಾಗಿದೆ.

ರೈತಾಭಿಮಾನಿ.

ಸಂಸ್ಥಾನ ಸೊಂಡೂರು.

ಈ ಪಟ್ಟಣಕ್ಕೆ ಶ್ರೀ ಜಗದ್ಗುರು ಕೇದಾರಸಂಸ್ಥಾನದ ಮಹಾಸ್ವಾಮಿಗಳವರ ಸವಾರಿಯು ಇಲ್ಲಿಯ ಶ್ರೀಮಂತ ವೆಂಕಟರಾವ್ ಸಿಂಧೂರಾವ್ ಮಾಮಲಿಕತ್ ಮದರ್ ಸೇನಾಪತಿ ರಾಜಾಸಾಹೇಬ ಘೋರ್ಪಡೆ ಇವರ ಬಿನ್ನಹಪತ್ರಿಕೆಯ ಪ್ರಕಾರ ತಾ|| ೭-೪-೨೨ ನೇ ದಿವಸ ಉದಯ ೮ ಘಂಟೆಗೆ ದಯಮಾಡಿಸಲು ಪಟ್ಟಣದ ಬಹಿರ್ದ್ವಾರದಲ್ಲಿ ಮಹಾರಾಜರು ಪತ್ನೀಸಮೇತರಾಗಿ ಸಪರಿವಾರದೊಂದಿಗೆ ಕಾದಿದ್ದು ಜಗದ್ಗುರುಗಳ ಸವಾರಿಯು ದಯಮಾಡಿಸುತ್ತಲೇ ರಾಜಾಸಾಹೇಬರು ಅತಿಭಕ್ತಿಯಿಂದ ನಮಸ್ಕರಿಸಿ ಪುಷ್ಪಹಾರವನ್ನರ್ಪಿಸಿ ಪುರಪ್ರವೇಶಮಾಡಲು ಪ್ರಾರ್ಥಿಸಲು ಸರ್ವರೀತಿಯಿಂದ ಸುವ್ಯವಸ್ಥೆಗೊಳಿಸಲ್ಪಟ್ಟ ರಾಜಮರ್ಯಾದೆಯೊಡನೆ ರಜತಸುವರ್ಣನಿರ್ಮಿತವಾದ ಪಲ್ಲಕ್ಕಿಯಲ್ಲಿ ಪಂಚಕಲಶಸಮೇತವಾದ ಸಮಸ್ತ ಬಿರುದಾವಳಿಗಳಿಂದ ಉತ್ಸವವು ಅತ್ಯಂತ ವೈಭವದೊಡನೆ ತಳಿರುತೋರಣಗಳಿಂದಲಂಕರಿಸಲ್ಪಟ್ಟ ಪಟ್ಟಣದ ಮುಖ್ಯಮುಖ್ಯ ಬೀದಿಗಳಲ್ಲಿ ಹಾಯ್ದು ಮೊದಲೇ ಸಿದ್ಧಗೊಳಿಸಲ್ಪಟ್ಟ ಬಿಡಾರಕ್ಕೆ ಸುಮಾರು ೧೨ ಘಂಟೆಗೆ ಮಹಾಸವಾರಿಯು ದಯಮಾಡಿಸಿತು. ತಾ|| ೨೦-೪-೨೨ ದಿವಸ ಮಹಾರಾಜರು ಕೇವಲ ಭಕ್ತಿಪುರಸ್ಸರವಾಗಿ ಸಮಸ್ತ ರಾಜಮರ್ಯಾದೆಯೊಡನೆ ಶ್ರೀ ಜಗದ್ಗುರುಗಳನ್ನು ತಮ್ಮ ರಾಜವಾಡಿಗೆ ಬಿನ್ನೈಸಿ ಕರತಂದು ರಜತಪೀಠದಲ್ಲಿ ಮೂರ್ತಗೊಳಿಸಿ ಮಹಾಪಾದಕ್ಕೆ ಮಂಗಲವನ್ನು ಮಾಡಿ ಅಭಿನಂದಿಸಲು ಜಗದ್ಗುರುಗಳು ಮಹಾರಾಜರಲ್ಲಿರತಕ್ಕ ಅಚಲವಾದ ಭಕ್ತಿಯನ್ನು ನೋಡಿ ಆನಂದಭರಿತರಾಗಿ ತಮ್ಮ ಅಮೃತವಾಣಿಯಿಂದ ಮಹಾರಾಜರಿಗೆ ಅನಂತ ಶುಭಾಶೀರ್ವಾದಗಳನ್ನು ಮಾಡಿ ಸ್ವಸ್ಥಾನಕ್ಕೆ ಗಮಿಸುವ ಸಮಾರಂಭವು ಅತ್ಯಂತ ಪ್ರೇಕ್ಷಣೀಯವಾದದ್ದು ಮತ್ತು ಪ್ರತಿಯೊಬ್ಬರ ಹೃದಯದಲ್ಲಿ ಭಕ್ತಿರಸವನ್ನುಂಟುಮಾಡುವಂಥಾದ್ದು ಆಗಿತ್ತು. ತಾ|| ೨೧ ನೇ ದಿವಸ ಮಹಾಸ್ವಾಮಿಗಳವರು ಇಲ್ಲಿಯ (ಶ್ರೀ ಕುಮಾರಸ್ವಾಮಿ) ಕಾರ್ತಿಕೇಯ ಮಹಾಸ್ವಾಮಿಯ (ಲೋಹಾದ್ರಿ) ಬೆಟ್ಟಕ್ಕೆ ದಯಮಾಡಿಸಿದರು. ಅಲ್ಲಿಯ ಮನೋಹರವಾದ ಸೃಷ್ಟಿಸೌಂದರ್ಯಯುಕ್ತವಾದ ಸ್ಥಲದಲ್ಲಿ ಶಿವಪೂಜಾಲೋಲರಾಗಿರಲು ಅಲ್ಲಿಗೆ ಔಂಧಸಂಸ್ಥಾನದ ಪ್ರತಿನಿಧಿ ರಾಜರು ಮಹಾಸನ್ನಿಧಿಯ ದರ್ಶನಕ್ಕಾಗಿ ಆಗಮಿಸಲು ಮಹಾಸ್ವಾಮಿಗಳು ಸಮಯೋಚಿತ ಸಂಭಾಷಣೆಯನ್ನು ಮಾಡಿ ಅವರಿಗೆ ಫಲಾಶೀರ್ವಾದಗಳನ್ನು ಮಾಡಿದರು. ತಾ|| ೨೫ ನೇ ದಿವಸ ಇಲ್ಲಿಯ ಮಹಾರಾಜರು ಅತ್ಯಂತ ವೈಭವದೊಡನೆ ಜಗದ್ಗುರುಗಳ ಸನ್ನಿಧಿಗೆ ಬಂದು ಒಂದುದಿವಸದ ಶಿವಪೂಜೆಯ ಖರ್ಚನ್ನು ರಾಜಮರ್ಯಾದೆಗನುಸರಿಸಿ ಅಂಚೀರಗಳನ್ನರ್ಪಿಸಿ ಆಶೀರ್ವಾದವನ್ನು ಪಡೆದು ತೆರಳಿದರು. ತಾ|| ೨೬ ನೇ ಬುಧವಾರದ ದಿವಸ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮಂತ ರಾಜಾಸಾಹೇಬರ ಅಧ್ಯಕ್ಷತೆಯ ಕೆಳಗೆ ಸಾರ್ವಜನಿಕ ಸಭೆಯು ಕೂಡಿತ್ತು. ಸಭೆಯಲ್ಲಿ ಸಂಸ್ಥಾನದ ಕೋಶಾಧ್ಯಕ್ಷ ಕೆ. ಎಂ. ಶರಣಪ್ಪಶಾಸ್ತ್ರಿಗಳು ಹಾಗೂ ದಾವಣಗೇರಿ ಶಾಂತವೀರಾರ್ಯ ಸಿತಾರೀ ಮಠ ಇನ್ನೂ ಮುಂತಾದವರ ವ್ಯಾಖ್ಯಾನಗಳಾದವು. ತರುವಾಯ ಶ್ರೀ ಜಗದ್ಗುರುಗಳ ಹೆಸರಿನಿಂದಲೂ ಮಹಾರಾಜರ ಹಸ್ತದಿಂದಲೂ ರಾ|| ಶಾಂತಪ್ಪ ವೀರಭದ್ರಪ್ಪ ಹಮ್ಮಿಗಿ ಕುಬಸದ ಇವರಿಗೆ ಗುರುಭಕ್ತಕೇಸರಿಯೆಂಬುವ ಸುವರ್ಣದ ಪದಕವನ್ನು ಕೊಟ್ಟನಂತರ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ತಾ|| ೨೮ ನೇ ದಿವಸ ಮಹಾರಾಜರಿಗೂ ಸಮಸ್ತಭಕ್ತಾದಿಗಳಿಗೂ ಅನಂತಶುಭಾಶೀರ್ವಾದಗಳನ್ನು ಮಾಡಿ ಶ್ರೀ ಜಗದ್ಗುರುಗಳವರು ಸಂತೋಷಭಕ್ತಿಯಿಂದ ರಾಜಧಾನಿಯನ್ನು ಬಿಟ್ಟು ಕಾಕಬಾಳಿಗೆ ದಯಮಾಡಿಸಿದರು.

ಓರ್ವಪ್ರತ್ಯಕ್ಷದರ್ಶಿ.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿನಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ, ಆಶ್ಚರ್ಯ, ಅದ್ಭೂತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ಪ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

16

೧೯೨೨ನೆಯ ಇಸವಿ ಮೇ ತಾ|| ೨೧ರಿಂದ ೧೯೨೨ನೆಯ ಮೇ ತಾ|| ೨೭ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ವೈಶಾಖಬಹುಳ ದಶಮಿಯಿಂದ ಜ್ಯೇಷ್ಠ ಶುದ್ಧ ಪಾಡ್ಯ ದಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭಮಾ
21	ಭಾನು	ದಶ	27-5	ಪೂಭಾ	9-40	8
22	[1] ಸೋಮ	ಏಕಾ	32-16	ಉಭಾ	16-4	9
23	ಮಂಗಳ	ದ್ವಾದ	36-4	ರೇವ	21-44	10
24	[2] ಬುಧ	ತ್ರಯೋ	30-17	ಅಶ್ವಿ	26-49	11
25	ಗುರು	ಚತು	41-18	ಭರ	30-42	12
26	[3] ಶುಕ್ರ	ಅಮಾ	41-57	ಕೃತ್ತಿ	32-58	13
27	[4] ಶನಿ	ಪಾಡ್ಯ	41-20	ರೋಹಿ	34-39	14

(1) ಸರ್ವತ್ರೈಕಾದಶಿ, ಯುವರಾಜರವರ ವರ್ಧಂತಿ. (2) ಪ್ರದೋಷ. (3) ಸರ್ವತ್ರಾಮಾವಾಸ್ಯೆ. (4) ಪುನ್ನಾಗಗೌರೀವ್ರತಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ಸ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪ | ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಮೇ ತಾರೀಖು ೨೮ ನೆಯ ಭಾನುವಾರ (ಸಂಚಿಕೆ ೨೨

REGISTERED NO. M. 124.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮಹಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತಿಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿ ಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಅಷ್ಟಾವರಣ, ಕತಿಪಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು, ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

20

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ## ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಚಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 48

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಭಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ, ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹಂಡಾಸಿ	೦— ೮—೦
ವ್ರತಪಂಚಕ	೦— ೯—೦

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನುಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಖರ್ಚಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಬಿಳಿ ಗ್ಲೇಸ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೨—೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೮ ಆಣೆಯಂತೆಯೂ ತಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್, ಸ್ಟಾರಾಫೀಸ್, ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು, ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

21

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ.

ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 11

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲಿಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು.

ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ, ನಂ. 1 ತಂಬುನಾಯಕನ ಬೀದಿ, ಮದರಾಸು.

ಳನ್ನು ಕೊಟ್ಟಿದ್ದರೂ ಯಾರೂ ಹೋಗಲಿಲ್ಲ. ಇದು ಆ ಮಂತ್ರಿಸಲ್ಪಟ್ಟ ಅನೇಕ ಬಡವನಿಗೆ ಒಳ್ಳೆಯದೆಂದೇ ಹೇಳಬೇಕು. ಏಕೆಂದರೆ ಮುನ್ಸಿಫ್ ಮತ್ತು ಅಮಲ್ದಾರ್ ಇವರೇ ಮೊದಲಾದ ಅಧಿಕಾರಿಗಳನ್ನು ಪ್ರತಿನಿಧಿ ಫೀಜನ್ನು ಕೊಡಬೇಕೆಂದು ಕೇಳುವರು. ಅಮಲ್ದಾರರಿಂದಂತೂ ದುಡ್ಡನ್ನು ತೆಗೆದುಕೊಂಡೇ ಬಿಟ್ಟಿರುವರು. ಈಗಣ ದುಡ್ಡಿಲ್ಲದ ಕಾಲದಲ್ಲಿ ಇಂಥ ಹೊಸಪದ್ಧತಿಯನ್ನು ಸಭಾಚಾಲಕರೆಲ್ಲರೂ ಅನುಸರಿಸುವುದು ಬಹಳ ಒಳ್ಳೆಯದೆಂದೇ ಹೇಳಬೇಕು. ಅಧ್ಯಕ್ಷರು ಪುಸ್ತಕಗಳ ಬಹುಮಾನ ಹಣವನ್ನು ೨೫೦ ರೂ. ಗಳಿಂದ ೨೦೦೦ ರೂ. ಗಳವರೆಗೆ ಹೆಚ್ಚಿಸಿರುವುದು ಸಭೆಯ ಮಹತ್ಕಾರ್ಯಗಳಲೊಂದೆಂದು ತಮ್ಮ ಉಪಸಂಹಾರಭಾಷಣದಲ್ಲಿ ಹೇಳಿರುವರು. ಬ್ರಾಹ್ಮಣ ಬ್ರಾಹ್ಮಣೇತರ ಮನಸ್ತಾಪವನ್ನು ಹೆಚ್ಚಿಸಿ ಬ್ರಾಹ್ಮಣೇತರರು ಸ್ವಾವಲಂಬಿಗಳಾಗಲೇಬೇಕೆಂದು ಮನಗಾಣಿಸಿದ ಸಭೆಯ ಮಹತ್ಕಾರ್ಯವೊಂದನ್ನು ಅಧ್ಯಕ್ಷರು ಮುಪ್ಪಿನಿಂದಲೋ ಆತುರದಿಂದಲೋ ಮರೆತಿರುವಂತೆ ಕಾಣುತ್ತದೆ.

ದಾವಣಗೆರೆ, ತಾ|| 18-5-1922. } ನಿವಾಸಿ.

ಶ್ಯಾನುಭೋಗರುಗಳಿಂದ ಚನ್ನಪಟ್ಟಣದ ತಾಲ್ಲೋಕಿನಲ್ಲಿ ರೈತರಿಗೆ ಉಂಟಾಗಿರುವ ತೊಂದರೆಗಳ ವಿಚಾರ.

ಈ ಚನ್ನಪಟ್ಟಣದ ತಾಲ್ಲೋಕಿನಲ್ಲಿ ಮಾಮೂಲ್ ಪ್ರಕಾರ ತಾಲ್ಲೋಕ್ ಜಮಾಬಂದಿನಡೆದ ಕಾಲದಲ್ಲಿ ತಾಲ್ಲೋಕಾಮಲಿ ಶ್ಯಾನುಭೋಗರುಗಳ ಪೈಕಿ ಅನೇಕರು ಗ್ರಾಮಾಂತರಗಳಲ್ಲಿ ಇರಸಾಲ್ ಬಗ್ಗೆ ರೈತರಿಂದ ಕಿಸ್ತುವಾರು ಪ್ರಕಾರ ವಸೂಲುಮಾಡಿದ್ದ ಕಂದಾಯದ ಹಣವನ್ನು ಖಜಾನೆಗೆ ಇರಸಾಲ್ ಮಾಡದೆ ತಾವೇ ತಮ್ಮತಮ್ಮ ಸ್ವಂತ ಖರ್ಚಿಗೋಸ್ಕರ ದುರುಪಯೋಗಪಡಿಸಿಕೊಂಡಿರುವುದೂ ನಂತರ ಡಿಟೋಪಸೂಲಿ ಹಣವನ್ನು ಖಾತೆಕಿರ್ದಿಗಳಿಗೆ ಜಮಾಕಟ್ಟದೆ ಖಾತೆಗಳಲ್ಲಿ ವಿಶೇಷವಾಗಿ ಬಾಕಿ ನಿಲ್ಲಿಸಿರುವ ಸಂಗತಿಗಳೆಲ್ಲವೂ ನಿದರ್ಶನವಾಗಿ ಕಂಡುಬಂದ್ದದ್ದರಿಂದ ಮೂಢರಾಗಿರುವ ಬಡರೈತರುಗಳು ತಮ್ಮಗಳ ಮೇಲೆ ಬಾಕಿನಿಲ್ಲಿಸಿರುವ ಕಂದಾಯದ ಹಣದ ಒಟ್ಟು ಮೊಬಲಗನ್ನು ಕೇಳಿದ ಕೂಡಲೇ ಗಾಬರಿಯಾಗಿ ಅಯ್ಯೋದೇವರೇ ಇದೇನನ್ಯಾಯ! ನಾವು ಹೊಟ್ಟೆಗಿಲ್ಲದ ಈ ಕ್ಷಾಮಕಾಲದಲ್ಲಿ ಸರ್ಕಾರಕ್ಕೆ ಕೊಡಬೇಕಾದ ನಮ್ಮಗಳ ಬಾಬ್ತು ಕಂದಾಯದ ಹಣವನ್ನು ಬಾಕಿ ಇಲ್ಲದಂತೆ ಪಾವತಿಮಾಡಿದ್ದರೂ ಕೂಡ ಪುನಃ ಕೊಡಬೇಕೆಂದು ಹೇಳುತ್ತಾರಲ್ಲಾ ಇನ್ನೇನು ಗತಿ! ಇಷ್ಟು ಹಣ ನಾವು ಎಲ್ಲಿಂದ ತಂದುಕೊಡಬೇಕು? ಶ್ಯಾನುಭೋಗರುಗಳನ್ನು ತಂದೆ ತಾಯಿ ಎಂದು ನಾವು ನಂಬಿಕೊಂಡು ಇವರ ಇಷ್ಟದಂತೆ ಇವರು ಕೇಳಿದ್ದಕ್ಕೆಲ್ಲಾ ದುಡ್ಡು ಕೊಡುತ್ತಾ ಇದ್ದರೂ ಕೂಡ ನಮ್ಮಗಳಿಗೆ ಇಂಥಾ ಮೋಸವನ್ನು ಮಾಡಿರುವುದು ಯಾವ ನ್ಯಾಯ? ಹಿಂದೆ ಇದ್ದ ತಾಲ್ಲೋಕ್ ಅಮಲ್ದಾರರುಗಳು ಜಮಾಬಂದಿಕಾಲದಲ್ಲಿ ಈ ಶಾನುಭೋಗರುಗಳ ಲೆಕ್ಕವನ್ನು ತನಿಖೆಮಾಡಿ ರೈತರುಗಳ ಅಹವಾಲನ್ನು ಕೇಳಿ ತಿಳಿದುಕೊಂಡು ಕ್ರಮವರಿತು ಕೆಲಸಮಾಡಿಕೊಂಡು ಬಂದಿದ್ದ ಪಕ್ಷದಲ್ಲಿ ಶ್ಯಾನುಭೋಗರುಗಳು ಕಂದಾಯದ ಹಣವನ್ನು ದಸ್ತುಮಾಡುವುದಕ್ಕೂ ಈಗರೈತರಿಗೆ ಬಂದಿರುವ ಗೋಳಾಟಕ್ಕೂ ಸಹ ಅವಕಾಶವಾಗುತ್ತಿರಲಿಲ್ಲ. ಗ್ರಾಮಾಂತರಗಳ ರೈತರುಗಳೆಲ್ಲರೂ ಕಂದಾಯದ ಬಾಕಿ ವಿಚಾರದಲ್ಲಿ ತಮ್ಮಮೇಲೆ ಯಾವವಿಧವಾದ ತೊಂದರೆಬರುವುದೋ ಎಂಬಭಯದಿಂದ ತಮ್ಮಲ್ಲಿದ್ದ ಅಂದರೆ ಶಾನುಭೋಗರಿಗೆ ಕಂದಾಯಪಾವತಿಮಾಡಿ ದಾಖಲೆಗೋಸ್ಕರ ಪಡೆದು ಇಟ್ಟುಕೊಂಡಿದ್ದ ರಶೀತಿ ಪಟ್ಟಿಗಳೆಲ್ಲವನ್ನೂ ಶ್ಯಾನುಭೋಗರ ವಿಚಾರಣೆ ಮಾಡತಕ್ಕಬಗ್ಗೆ ತಾಲ್ಲೋಕ್ ಅಮಲ್ದಾರರವರ ವಶಕ್ಕೆ ಒಪ್ಪಿಸುತ್ತಾರೆ. ಅನೇಕಜನ ರೈತರು ಹುಜೂರು ಜಮಾಬಂದಿ ಕಾಲದಲ್ಲಿ ಡೆಪ್ಯುಟಿಕಮೀಷನರ್ ಸಾಹೇಬರಿಗೆ ಈ ಶ್ಯಾನುಭೋಗರುಗಳು ಮಾಡಿರುವ ಮೋಸಕೃತ್ಯವನ್ನು ಹೇಳಿಕೊಂಡು ತಮ್ಮ ತೊಂದರೆಗಳನ್ನು ತಪ್ಪಿಸಿಕೊಳ್ಳುವ ನಿಮಿತ್ತ ಹುಜೂರು ಜಮಾಬಂದಿಯನ್ನೇ ಎದುರು ನೋಡುತ್ತಿದ್ದರು. ಅಷ್ಟರಲ್ಲಿಯೇ ಹುಜೂರು ಜಮಾಬಂದಿಗೆ ಶುರುವಾಯಿತು. ಈ ತಾಲ್ಲೋಕಿಗೆಲ್ಲಾ ಡೆಪ್ಯುಟಿಕಮೀಷನರ್ ಸಾಹೇಬರವರು ಎರಡೇ ಕ್ಯಾಂಪುಗಳನ್ನು ಗೊತ್ತುಮಾಡಿದ್ದರು. ಮೊದಲು ದಿವಸದ ಸಂತೆಮೊಗಳ್ಳಿ ಮೊಕ್ಕಾಂಗೆ ಗ್ರಾಮಾಂತರಗಳ ರೈತರುಗಳು ತಮ್ಮ ತಮ್ಮ ಅಹವಾಲ್‌ಗಳನ್ನು ಹೇಳಿಕೊಳ್ಳುವುದಕ್ಕೋಸ್ಕರ ಬಹಳದೂರ ಪಾಸಲೆಯಿಂದ ಅನ್ನಾನೀರಿಲ್ಲದೆ ಕಷ್ಟಪಟ್ಟು ಅರ್ಜಿಗಳನ್ನು ತೆಗೆದುಕೊಂಡುಬಂದಿದ್ದರು. ಸಾಯಂಕಾಲ ಮೂರುಘಂಟೆ ಮೇಲೆ ಜಮಾಬಂದಿಗೆ ಶುರುವಾಯಿತು. ಆರುಘಂಟೆಸಮಯದಲ್ಲಿ ರೈತರುಗಳಿಂದ ಅರ್ಜಿಗಳನ್ನು ತೆಗೆದುಕೊಂಡರು. ಆ ಪೈಕಿ ಕೆಲವು ಅರ್ಜಿಗಳನ್ನು ಮಾತ್ರ ಓದಿಸಿ ಕೇಳಿ ಫೈಸಲ್ ಮಾಡಿಕೊಡುತ್ತೇವೆಂಬ ಜವಾಬ್ ಹುಕುಂಮಾತ್ರ ಅಪ್ಪಣೆ ಕೊಡಿಸಿದರು. ಬಾಕಿ ಅನೇಕ ಅರ್ಜಿಗಳನ್ನು ಓದಿ ಕೇಳಲೇ ಇಲ್ಲ. ಆ ದಿವಸ ಜಮಾಬಂದಿ ಪೂರ್ತಿಯಾಯಿತು. ಮಾರನೇ ದಿನ ಕಾರಣಾಂತರದಿಂದ ಜಮಾಬಂದಿಯನ್ನು ನಿಲ್ಲಿಸಿದ್ದು ಮಳೂರು ಪಟ್ಟಣದ ಮೊಕ್ಕಾಂನಲ್ಲಿ ಪುನಃ ಶುರೂಮಾಡಿದರು. ಅಲ್ಲಿಗೂಸಹ ನೂರಾರು ಜನ ರೈತರು ಬಂದು ಕಾದಿದ್ದರು. ಮೂರುದಿವಸ ಜಮಾಬಂದಿ ನಡೆಯಿತು. ಅಲ್ಲಿಯೂ ಸಾಯಂಕಾಲ ಆರುಘಂಟೆಯಲ್ಲಿ ಅರ್ಜಿಗಳನ್ನು ತೆಗೆದುಕೊಂಡು ಮೊದಲುದಿವಸದ ತೀರ್ಮಾನದಂತೆಯೇ ಕೆಲವು ಅರ್ಜಿಗಳಿಗೆ ಆಗಲಿ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಹೋಗಿ ಎಂದು ಅಪ್ಪಣೆ ಕೊಡಿಸಿದರು. ಕೆಲವು ಅರ್ಜಿಗಳನ್ನು ಸುಮ್ಮನೆ ಇಟ್ಟುಕೊಂಡರು. ವಸೂಲಿ ದಾಖಲೆಗೆ ಬರೆದುಕೊಟ್ಟು ಸದರಿ ವಸೂಲಿ ಹಣ ದಸ್ತುಮಾಡಿದ್ದ ಬಾಬ್ತು ಅನೇಕ ರಶೀತಿಪಟ್ಟಿಗಳು ಇದ್ದಾಗ್ಯೂ ಕೂಡ ಒಂದು ರಶೀತಿಯನ್ನಾದರೂ ನೋಡಲೇ ಇಲ್ಲ.—ಇದರಿಂದ ರೈತರುಗಳು ತಮ್ಮ ಅಹವಾಲನ್ನು ಸಾಹೇಬರಲ್ಲಿ ಹೇಳಿಕೊಂಡು ಸರಿಯಾದ ಹುಕುಂಪಡೆಯುವುದಕ್ಕೆ ಅವಕಾಶವಿಲ್ಲದೇ ಹೋದ್ದರಿಂದ ರೈತರೆಲ್ಲರೂ ಆಶಾಭಂಗರಾಗಿ ಹೊರಟುಹೋದರು. ಡೆಪ್ಯುಟಿಕಮಿಷನರ್ ಸಾಹೇಬರವರು ಗ್ರಾಮಾಂತರಗಳಿಂದ ಕಷ್ಟಪಟ್ಟು ಬಂದು ಕಾದಿದ್ದ ಬಡರೈತರುಗಳ ಅಹವಾಲನ್ನು ಕೇಳಿ ಅವರಿಗೆ ಸರಿಯಾದ ಉತ್ತರವನ್ನು ದಯಪಾಲಿಸಿದ್ದಲ್ಲಿ ರೈತರಿಗೆಲ್ಲಾ ಎಷ್ಟೋ ತೃಪ್ತಿಯಾಗುತ್ತಿತ್ತು. ನಮ್ಮ ಸಾಹೇಬರವರಿಗೆ ಆರೀತಿ ಮನಸ್ಸು ಬಾರದೇ ಇರುವುದು ನೋಡಿದರೆ ಸರ್ಕಾರಕ್ಕೆ ಎವಿಲ್ಲ ರೈತರಿಗೆ ದಿಕ್ಕಿಲ್ಲವೆಂದು ಹೇಳುವುದೇ ಉದಾಹರಣೆಯಾಗಿರುತ್ತೆ. ಹುಜೂರು ಜಮಾಬಂದಿಯಲ್ಲಿ ರೈತರುಗಳು ಕೊಟ್ಟಿದ್ದ ನೂರಾರು ಅರ್ಜಿಗಳಿಗೆ ಈ ತಹಲ್‌ವರೆಗೂ ಜವಾಬ್ ಹುಕುಂ ಇಲ್ಲದ್ದರಿಂದ ಅರ್ಜಿಗಳು ಏನಾಗಿವೆಯೊ ತಿಳಿಯದು. ತಾಲ್ಲೋಕ್ ಅಮಲ್ದಾರ್ರವರ ವಶಕ್ಕೆ ರೈತರು ಕೊಟ್ಟಿದ್ದ ರಶೀತಿ ಪಟ್ಟಿಗಳು ಏನಾಗಿವೆಯೋ ಅದೂ ಸಹ ಗೊತ್ತಾಗುವುದಿಲ್ಲ. ಶ್ಯಾನುಭೋಗರುಗಳು ಮಾಡಿರುವ ತಪ್ಪನ್ನು ಪಟೇಲರುಗಳು ಕಂಡು ಹಿಡಿದು ಸಬ್‌ಡಿವಿಜನ್ ಸಾಹೇಬರವರಿಗೆ ಹೇಳಿಕೊಂಡರೆ ಅವರು ರೇಗಿ ಪಟೇಲರನ್ನೇ ಮನಸ್ಸಿಗೆ ಮಾತನಾಡುತ್ತಾರೆ. ಶ್ಯಾನುಭೋಗರುಗಳು ಸರ್ಕಾರದ ಹಣವನ್ನು ದಸ್ತುಮಾಡಿರುವ ವಿಚಾರದಲ್ಲಿ ತಮಗೆ ಶಿಕ್ಷೆಯಾಗುವುದೆಂದು ತಿಳಿದು ಸಬ್‌ಡಿವಿಜನ್ ಸಾಹೇಬರವರೇ ಮೊದಲಾದ ದೊಡ್ಡ ಅಧಿಕಾರಿಗಳ ಮರೆಯೊಕ್ಕಿರುವಂತೆಯೂ ಆ ಬ್ರಾಹ್ಮಣಾಧಿಕಾರಿಗಳು ಸ್ವಜಾತಿ ಅಭಿಮಾನದಿಂದ ಅಯ್ಯೋ ಪಾಪ ಬಡಬ್ರಾಹ್ಮಣ! ಎಂದು ಕನಿಕರಪಟ್ಟು ಈ ಶ್ಯಾನುಭೋಗರುಗಳಿಗೆ ಸಹಾಯಮಾಡುವ ಉದ್ದೇಶದಿಂದ ಇಂಥಾ ರಾಜದ್ರೋಹ ಕೆಲಸಮಾಡಿದ್ದರೂ ಕೂಡ ಇವರ ಸಂಬಂಧವಾದ ರಿಕಾರ್ಡುಗಳನ್ನೆಲ್ಲಾ ಮುಚ್ಚಿಟ್ಟುಕೊಂಡು ಇರುವಂತೆ ತಿಳಿದು ಬರುತ್ತೆ, ಈ ಶ್ಯಾನುಭೋಗರುಗಳ ಮೇಲಿನ ಅಭಿಮಾನದಿಂದಲೇ ನ್ಯಾಯವಾಗಿ ಕೆಲಸಮಾಡುತ್ತಾ ಇರುವ ತಾಲ್ಲೋಕ್ ಅಮಲ್ದಾರ್ರವರನ್ನು ನಿಷ್ಕಾರಣವಾಗಿ ವರ್ಗಮಾಡಬೇಕೆಂದು ಮೇಲ್ಪಟ್ಟ ಅಧಿಕಾರಿಗಳಿಗೆ ಶಿಫಾರಸ್ ಬರೆದಿರುವಂತೆ ವರ್ತಮಾನ ತಿಳಿದುಬರುತ್ತೆ. ಇದು ತುಂಬಾ ಅನ್ಯಾಯಕೆಲಸವಾಗಿರುತ್ತೆ. ಈ ಶ್ಯಾನುಭೋಗರುಗಳು ಪಟೇಲರ ಜೊತೆಯಲ್ಲಿ ಗ್ರಾಮಗಳಿಗೆ ಕಂದಾಯದ ವಸೂಲಿಗೆ ಹೋಗುವುದೇ ಇಲ್ಲ. ಇದಕ್ಕಾಗಿ ಅನೇಕ ಅರ್ಜಿಗಳನ್ನು ಡೆಪ್ಯುಟಿಕಮೀಷನರ್ ಸಾಹೇಬರವರಿಗೆ ಬರೆದುಕೊಂಡಾಗ್ಯೂ ಶ್ಯಾನುಭೋಗರ ಮೇಲಿನ ಅಭಿಮಾನದಿಂದ ಜವಾಬೇ ಇಲ್ಲ. ಈ ಶ್ಯಾನುಭೋಗರುಗಳು ಗ್ರಾಮಗಳಲ್ಲಿ ರೈತರ ಸಂಗಡ ಸರ್ಕಾರದ ನೌಕರಿಯಲ್ಲಿ ಬ್ರಾಹ್ಮಣರೇ ಅಧಿಕಾರಿಗಳಾಗಿರುವುದರಿಂದ ನೀವು ಅಮಲ್ದಾರ್ರವರ ವಶಕ್ಕೆ ಕೊಟ್ಟಿರುವ ಕಂದಾಯದ ಪಾವತಿ ರಶೀತಿಗಳಿಂದ ಏನೂ ಆಗಲಾರದು, ಅಮಲ್ದಾರ್ರವರನ್ನು ಮೊದಲು ವರ್ಗಮಾಡಿಸಿ ಬಿಡುತ್ತೇವೆ, ನಂತರ ನಿಮ್ಮ ಪಾಡು ನೋಡಿಕೊಳ್ಳಿ ಎಂದು ಹೇಳುತ್ತಾರೆ. ಇದನ್ನು ನೋಡಿದರೆ ರೈತರು ಉತ್ತಮಸ್ಥಿತಿಗೆ ಬರಬೇಕೆಂಬುದು ಯಾವ ಆಫೀಸರ ಮನಸ್ಸಿನಲ್ಲಿಯೂ ಇರುವುದಿಲ್ಲ. ವರ್ಗಪಟ್ಟ ಅಮಲ್ದಾರ್ರವರು ಬಹಳ ಮುತವರ್ಜಿಯಿಂದ ಸರ್ಕಾರಿ ಕೆಲಸವನ್ನು ಮಾಡುತ್ತಾ ಪದೇಪದೇ ಗ್ರಾಮಾಂತರಗಳಿಗೆ ಹೋಗಿ ಪ್ರಜೆಗಳಿಗಿರುವ ಕಷ್ಟಸುಖಗಳನ್ನು ವಿಚಾರಣೆ ಮಾಡುತ್ತಾ ಪ್ರಜಾನುರಾಗಿಗಳಾಗಿದ್ದರು. ಇವರು ಈ ತಾಲ್ಲೋಕಿಗೆ ದಯಮಾಡಿಸಿದ ಮೇಲೆ ಇಲ್ಲಿ ನಡೆಯುತ್ತಾ ಇದ್ದ ಖೂನಿ ದರೋಡೆ ಮಾರಾಮಾರಿ ಹೊಡೆದಾಟ ಮೊದಲಾದ ದುಷ್ಕೃತ್ಯಗಳೆಲ್ಲವೂ ವಿಶೇಷವಾಗಿ ನಿಂತುಹೋಗಿ ಪ್ರಜೆಗಳೆಲ್ಲರೂ ಸೌಖ್ಯವಾಗಿರುತ್ತಾರೆ. ಈ ರೀತಿ ಪ್ರಜಾನೆಮ್ಮದಿಯು ಯಾವ ಅಮಲ್ದಾರ್ರವರ ಕಾಲದಲ್ಲಿಯೂ ಇರಲಿಲ್ಲವೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಇದೇ ತಾಲ್ಲೋಕಿಗೆ ಸೇರಿದ ಮಳೂರುನಲ್ಲಿ ಶ್ರೀ ಅಪ್ರಮೇಯ ಸ್ವಾಮಿಯವರ ರಥೋತ್ಸವವು ಇದೇ ಮಾಹೆ 8ನೇ ತಾರೀಖಿನಲ್ಲಿ ನಡೆಯಿತು. ಹೋದವರುಷ ಈ ರಥೋತ್ಸವವು ಹಿಂದಿನ ಅಮಲ್ದಾರ್ರವರ ಅಶ್ರದ್ಧೆಯಿಂದ ಮಧ್ಯೆ ನಿಂತುಹೋಗಿ ಬಹಳ ಅನಾನುಕೂಲಕ್ಕೆ ಕಾರಣವಾಗಿ ರಾತ್ರಿ ಸುಮಾರು ಹನ್ನೆರಡು ಘಂಟೆವರಿವಿಗೂ ರಥೋತ್ಸವವನ್ನು ನಡೆಸಿದರು. ಈ ಕಾರಣದಿಂದ ದೂರಪಾಸಲೆಯಿಂದ ಬಂದಿದ್ದ ಸರ್ವ ಜನರಿಗೆಲ್ಲಾ ತುಂಬಾತೊಂದರೆಯಾಯಿತು. ಈವರುಷ ನಮ್ಮ ಅಮಲ್‌ದಾರ್ರವರು ಬಹಳ ಮುತುವರ್ಜಿಯನ್ನು ವಹಿಸಿ ಕೆಲಸಮಾಡಿದ್ದರಿಂದ ಸಾಯಂಕಾಲ ನಾಲ್ಕು ಘಂಟೆಗೆ ರಥೋತ್ಸವವು ಪೂರ್ತಿಯಾಗಿ ದೇವರ ದರ್ಶನಕ್ಕೆ ಬಂದಿದ್ದವರಿಗೆಲ್ಲಾ ಕಾಲಕ್ಕೆ ಸರಿಯಾಗಿ ಪೂಜೆ ವಗೈರೆಕೆಲಸಗಳು ಕ್ರಮವಾಗಿ ನಡೆದು ಸರ್ವಜನರೆಲ್ಲರೂ ಸಾಯಂಕಾಲಕ್ಕೆ ಸರಿಯಾಗಿ ತಮ್ಮತಮ್ಮ ಮನೆಗಳಿಗೆ ಹೋಗಿ ಸೇರಿಕೊಂಡರು. ಈ ವರುಷ ರಥೋತ್ಸವವು ಬಹಳ ವಿಜೃಂಭಣೆಯಿಂದ ಆದದ್ದಕ್ಕೋಸ್ಕರವಾಗಿ ಜನಗಳೆಲ್ಲರೂ ಆನಂದಭರಿತರಾಗಿರುತ್ತಾರೆ. ಈ ಶ್ಯಾನುಭೋಗರುಗಳು ರೈತರಿಗೆ ಮೋಸಮಾಡಿ ಕಂದಾಯದ ಹಣವನ್ನು ದಸ್ತುಮಾಡಿರುವ ವಿಚಾರದಲ್ಲಿ ಕಳೆದ ಏಪ್ರೇಲ್ ಮಾಹೆಯಲ್ಲಿ ಚನ್ನಪಟ್ಟಣದ ಶಿಲ್ಕು ಛಾರಂಗೆ ದಯಮಾಡಿಸಿದ್ದ ನಮ್ಮ ಹಜರತ್ ದಿವಾನ್‌ಸಾಹೇಬ್ ಬಹದ್ದೂರವರಲ್ಲಿ ಈ ತಾಲ್ಲೋಕಿನ ಕೆಲವು ಜನ ರೈತರು ಹೋಗಿ ಹೇಳಿಕೊಂಡು ಅರ್ಜಿಹಾಜರ್ ಮಾಡಿರುತ್ತಾರೆ. ಮಹಾಮಹಿಮರಾದ ನಮ್ಮ ದಿವಾನ್‌ಸಾಹೇಬರವರು ಪ್ರಜೆಗಳ ಅಹವಾಲನ್ನು ಘನವಾದ ಚಿತ್ತದಲ್ಲಿ ತಂದು ತಾವೇ ಖುದ್ದು ವಿಚಾರಣೆಮಾಡಿ ಶ್ಯಾನುಭೋಗರ ಹಾವಳಿಯನ್ನು ತಪ್ಪಿಸಿ ತಪ್ಪುಮಾಡಿರುವ ಶ್ಯಾನುಭೋಗರುಗಳಿಗೆ ಸರಿಯಾದ ಬಂದೋಬಸ್ತುಮಾಡಿಸಿ ರೈತರಿಗೆ ಅನುಕೂಲವಾಗಿ ಲಿಖಿಗಳು ದೊರೆಯುವಂತೆ ಮಾಡಿಕೊಟ್ಟು ಕಾಪಾಡಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಂಡಿರುತ್ತೇನೆ. ಪ್ರಜೆಗಳ ಕ್ಷೇಮಚಿಂತನೆಯಲ್ಲೇ ಮಗ್ನರಾಗಿ ನಿಸ್ಪೃಹತೆಯಿಂದ ಕೆಲಸಮಾಡುತ್ತಿದ್ದ ಮ|| ಸಿದ್ಧರಾಮಪ್ಪನವರು ಮಳವಳ್ಳಿಗೆ ವರ್ಗಾಯಿಸಲ್ಪಟ್ಟಿರುವುದು ಈ ತಾಲ್ಲೂಕಿನವರ ದುರ್ದೈವವೆಂದೇ ಹೇಳಬೇಕಾಗಿದೆ.

ರೈತಾಭಿಮಾನಿ.

ಸಂಸ್ಥಾನ ಸೊಂಡೂರು.

ಈ ಪಟ್ಟಣಕ್ಕೆ ಶ್ರೀ ಜಗದ್ಗುರು ಕೇದಾರಸಂಸ್ಥಾನದ ಮಹಾಸ್ವಾಮಿಗಳವರ ಸವಾರಿಯು ಇಲ್ಲಿಯ ಶ್ರೀಮಂತ ವೆಂಕಟರಾವ್ ಸಿಂದೋರಾವ್ ಮಾಮಲಿಕತ್ ಮದರ್ ಸೇನಾಪತಿ ರಾಜಾಸಾಹೇಬ ಘೋರ್ಪಡೆ ಇವರ ಬಿನ್ನಹಪತ್ರಿಕೆಯ ಪ್ರಕಾರ ತಾ|| ೬-೪-೨೨ ನೇ ದಿವಸ ಉದಯ ೮ ಘಂಟೆಗೆ ದಯಮಾಡಿಸಲು ಪಟ್ಟಣದ ಬಹಿರ್ದ್ವಾರದಲ್ಲಿ ಮಹಾರಾಜರು ಪತ್ನೀಸಮೇತರಾಗಿ ಸಪರಿವಾರದೊಂದಿಗೆ ಕಾದಿದ್ದು ಜಗದ್ಗುರುಗಳ ಸವಾರಿಯು ದಯಮಾಡಿಸುತ್ತಲೇ ರಾಜಾಸಾಹೇಬರು ಅತಿಭಕ್ತಿಯಿಂದ ನಮಸ್ಕರಿಸಿ ಪುಷ್ಪಹಾರವನ್ನರ್ಪಿಸಿ ಪುರಪ್ರವೇಶಮಾಡಲು ಪ್ರಾರ್ಥಿಸಲು ಸರ್ವರೀತಿಯಿಂದ ಸುಮ್ಮನಸ್ಸಿಗೊಳಿಸಲ್ಪಟ್ಟ ರಾಜಮರ್ಯಾದೆಯೊಡನೆ ರಜತಸುವರ್ಣನಿರ್ಮಿತವಾದ ಪಲ್ಲಕ್ಕಿಯಲ್ಲಿ ಪಂಚಕಲಶಸಮೇತವಾದ ಸಮಸ್ತ ಬಿರುದಾವಳಿಗಳಿಂದ ಉತ್ಸವವು ಅತ್ಯಂತ ವೈಭವದೊಡನೆ ತಳಿರುತೋರಣಗಳಿಂದಲಂಕರಿಸಲ್ಪಟ್ಟ ಪಟ್ಟಣದ ಮುಖ್ಯಮುಖ್ಯ ಬೀದಿಗಳಲ್ಲಿ ಹಾಯ್ದು ಮೊದಲೇ ಸಿದ್ಧಗೊಳಿಸಲ್ಪಟ್ಟ ಬಿಡಾರಕ್ಕೆ ಸುಮಾರು ೧೨ ಘಂಟೆಗೆ ಮಹಾಸವಾರಿಯು ದಯಮಾಡಿಸಿತು. ತಾ|| ೧೦-೪-೨೨ ದಿವಸ ಮಹಾರಾಜರು ಕೇವಲ ಭಕ್ತಿಪುರಸ್ಸರವಾಗಿ ಸಮಸ್ತ ರಾಜಮರ್ಯಾದೆಯೊಡನೆ ಶ್ರೀ ಜಗದ್ಗುರುಗಳನ್ನು ತಮ್ಮ ರಾಜವಾಡಿಗೆ ಬಿನ್ನೈಸಿ ಕರತಂದು ರಜತಪೀಠದಲ್ಲಿ ಮೂರ್ತಗೊಳಿಸಿ ಮಹಾಪಾದಕ್ಕೆ ಮಂಗಲವನ್ನು ಮಾಡಿ ಅಭಿನಂದಿಸಲು ಜಗದ್ಗುರುಗಳು ಮಹಾರಾಜರಲ್ಲಿರತಕ್ಕ ಅಚಲವಾದ ಭಕ್ತಿಯನ್ನು ನೋಡಿ ಆನಂದಭರಿತರಾಗಿ ತಮ್ಮ ಅಮೃತವಾಣಿಯಿಂದ ಮಹಾರಾಜರಿಗೆ ಅನಂತ ಶುಭಾಶೀರ್ವಾದಗಳನ್ನು ಮಾಡಿ ಸ್ವಸ್ಥಾನಕ್ಕೆ ಗಮಿಸುವ ಸಮಾರಂಭವು ಅತ್ಯಂತ ಪ್ರೇಕ್ಷಣೀಯವಾದದ್ದು ಮತ್ತು ಪ್ರತಿಯೊಬ್ಬರ ಹೃದಯದಲ್ಲಿ ಭಕ್ತಿರಸವನ್ನುಂಟುಮಾಡುವಂಥಾದ್ದು ಆಗಿತ್ತು. ತಾ|| ೨೧ ನೇ ದಿವಸ ಮಹಾಸ್ವಾಮಿಗಳವರು ಇಲ್ಲಿಯ (ಶ್ರೀ ಕುಮಾರಸ್ವಾಮಿ) ಕಾರ್ತಿಕೇಯ ಮಹಾಸ್ವಾಮಿಯ (ಲೋಹಾದ್ರಿ) ಬೆಟ್ಟಕ್ಕೆ ದಯಮಾಡಿಸಿದರು. ಅಲ್ಲಿಯ ಮನೋಹರವಾದ ಸೃಷ್ಟಿಸೌಂದರ್ಯಯುಕ್ತವಾದ ಸ್ಥಳದಲ್ಲಿ ಶಿವಪೂಜಾಲೋಲರಾಗಿರಲು ಅಲ್ಲಿಗೆ ಔಂಧಸಂಸ್ಥಾನದ ಪ್ರತಿನಿಧಿ ರಾಜರು ಮಹಾಸನ್ನಿಧಿಯ ದರ್ಶನಕ್ಕಾಗಿ ಆಗಮಿಸಲು ಮಹಾಸ್ವಾಮಿಗಳು ಸಮಯೋಚಿತ ಸಂಭಾಷಣೆಯನ್ನು ಮಾಡಿ ಅವರಿಗೆ ಫಲಾಶೀರ್ವಾದಗಳನ್ನು ಮಾಡಿದರು. ತಾ|| ೨೫ ನೇ ದಿವಸ ಇಲ್ಲಿಯ ಮಹಾರಾಜರು ಅತ್ಯಂತ ವೈಭವದೊಡನೆ ಜಗದ್ಗುರುಗಳ ಸನ್ನಿಧಿಗೆ ಬಂದು ಒಂದುದಿವಸದ ಶಿವಪೂಜೆಯ ಖರ್ಚನ್ನು ರಾಜಮರ್ಯಾದೆಗನುಸರಿಸಿ ಅಂಗೀರಗಳನ್ನರ್ಪಿಸಿ ಆಶೀರ್ವಾದವನ್ನು ಪಡೆದು ತೆರಳಿದರು. ತಾ|| ೨೬ ನೇ ಬುಧವಾರದ ದಿವಸ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮಂತ ರಾಜಾಸಾಹೇಬರ ಅಧ್ಯಕ್ಷತೆಯ ಕೆಳಗೆ ಸಾರ್ವಜನಿಕ ಸಭೆಯು ಕೂಡಿತ್ತು. ಸಭೆಯಲ್ಲಿ ಸಂಸ್ಥಾನದ ಕೋಶಾಧ್ಯಕ್ಷ ಕೆ. ಎಂ. ಶರಣಪ್ಪಶಾಸ್ತ್ರಿಗಳು ಹಾಗೂ ದಾವಣಗೇರಿ ಶಾಂತವೀರಾರ್ಯ ನಿವಾಸಿ ಮಠ ಇನ್ನೂ ಮುಂತಾದವರ ವ್ಯಾಖ್ಯಾನಗಳಾದವು. ತರುವಾಯ ಶ್ರೀ ಜಗದ್ಗುರುಗಳ ಹೆಸರಿನಿಂದಲೂ ಮಹಾರಾಜರ ಹಸ್ತದಿಂದಲೂ ರಾ|| ಶಾಂತವೀರಭದ್ರಪ್ಪ ಹಮ್ಮಿಗಿ ಕುಬಸದ ಇವರಿಗೆ ಗುರುಭಕ್ತಕೇಸರಿಯೆಂಬುವ ಸುವರ್ಣದ ಪದಕವನ್ನು ಕೊಟ್ಟನಂತರ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ತಾ|| ೨೮ ನೇ ದಿವಸ ಮಹಾರಾಜರಿಗೂ ಸಮಸ್ತಭಕ್ತಾದಿಗಳಿಗೂ ಅನಂತಶುಭಾಶೀರ್ವಾದಗಳನ್ನು ಮಾಡಿ ಶ್ರೀ ಜಗದ್ಗುರುಗಳವರು ಸಂತೋಷಭಕ್ತಿಯಿಂದ ರಾಜಧಾನಿಯನ್ನು ಬಿಟ್ಟು ಕಾಕಬಾಳಿಗೆ ದಯಮಾಡಿಸಿದರು.

ಓರ್ವಪ್ರತ್ಯಕ್ಷದರ್ಶಿ.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿನಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆಕೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

16

೧೯೨೨ನೆಯ ಇಸವಿ ಮೇ ತಾ|| ೨೧ರಿಂದ ೧೯೨೨ನೆಯ ಮೇ ತಾ|| ೨೭ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ವೈಶಾಖಬಹುಳ ದಶಮಿಯಿಂದ ಜ್ಯೇಷ್ಠ ಶುದ್ಧ ಪಾಡ್ಯ ದಿನವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭಮಾ
21	ಭಾನು	ದಶ	27-5	ಪೂಭಾ	9-40	8
22	[1] ಸೋಮ	ಏಕಾ	32-16	ಉಭಾ	16-4	9
23	ಮಂಗಳ	ದ್ವಾದ	36-4	ರೇವ	21-44	10
24	[2] ಬುಧ	ತ್ರಯೋ	30-17	ಅಶ್ವಿ	26-49	11
25	ಗುರು	ಚತು	41-18	ಭರ	30-42	12
26	[3] ಶುಕ್ರ	ಅಮಾ	41-57	ಕೃತ್ತಿ	32-58	13
27	[4] ಶನಿ	ಪಾಡ್ಯ	41-20	ರೋಹಿ	34-39	14

(1) ಸರ್ವತ್ರೈಕಾದಶಿ, ಯುವರಾಜರವರ ವರ್ಧಂತಿ. (2) ಪ್ರದೋಷ. (3) ಸರ್ವತ್ರಾಮಾವಾಸ್ಯ. (4) ಪುನ್ನಾಗಗೌರೀವ್ರತಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪ | ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಮೇ ತಾರೀಖು ೨೮ ನೆಯ ಭಾನುವಾರ (ಸಂಚಿಕೆ ೨೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತನಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿ ಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಖ್ಯಾನ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೧ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪುರ್ಸತ್ತು ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿಗಳು, ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು. 20

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ### ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತಿಸುಮಿಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 48

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ, ಪೋಸ್ಟ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ।	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹಂದಾಸಿ	೦—೮—೦
ವ್ರತಪಂಚಕ	೦—೯—೦

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನುಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಬಿಳಿ ಗ್ಲೇಸ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೨—೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್, ಸ್ಟಾರಾಫೀಸ್, ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು, ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ. 21

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 11

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲಿಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ, ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರು ಸ್ಟಾರ್

೧೯೨೨ ನೆಯ ಇಸವಿಯ ಮೇ ತಾ|| ೨೮ ನೆಯ ಭಾನುವಾರ.

ENTERTAINMENT TO THE DEWAN—DEWAN'S NOTABLE SPEECH.

It was a grand gathering that met in the Picturesque Glass House, at Lalbagh, Bangalore, under the auspices of the *Mysore Prajamitra Mandali* to welcome and congratulate A. R. Banerji, Esq., M.A., C.I.E., C.S.I., on his appointment as Dewan of Mysore. The *Prajamitra Mandali*, the premier political organisation in the State had got up the entertainment in a manner befitting both the occasion and its own vast stake, and importance. The gathering was not only composed of the *elite* of Bangalore City and C. & M. Station of all classes and creeds but also of representatives from Mysore, Chennapatna, Kolar, Tarikere, Davangere, Chitaldrug, Tumkur and other distant places, who had come in answer to the *Mandali's* invitation. The address of the *Prajamitra Mandali*, which was read by its President, Rao Sahib H. Chennaya, expressed on behalf of the people of the State their gratitude to His Highness and conveyed their congratulations to Mr. Banerji on his appointment as Dewan of Mysore. It set forth the democratic policy of the *Mandali* and expressed the hope that under Mr. Banerji's *regime* the two beneficent measures of Sir M. Kantaraj Urs, the Orders on the Educational Memorandum and the Miller Committee Report would be sympathatically worked, that the grave financial difficulties would be overcome, and the needs of the essential services that contribute to the material prosperity of the people would be adequately served, and assured him of the co-operation of the people. Other addresses were presented by the various important communal organisations as the Vokkaligara Sangha, the Lingayet Education Fund Association, the Central Mahamaden Association, the Indian Christian Association, the Balija Sangham, the Kurubar Sangha, the Adi Dravida Abivruddhi Sangham on the same occasion.

Mr. Banerji's speech in reply to the addresses which was necessarily general, was pitched in a high tone. Fully conscious of the responsibilities of the high office, which as he said had been filled by illustrious men in the past, and alive to the peculiar financial troubles we are passing through at present he welcomed the good will and co-operation of all classes, so amply in indication at the meeting. It may be stated that the Mysore people are sufficiently enlightened to form a fairly true barometer to guage accurately the work of the Government, and they are more than generous in their appreciation provided they are convinced of the goodness and utility of the actions of the Government. It is no doubt a decided advantage for Mr. Banerji to have been in the closest touch with the Mysore administration for six years, and he is confident when he says that he can claim some knowledge of the aims and aspirations of His Highness and the guiding principles of his benevolent and enlightened rule. His recognition of His Highness as the permanent factor that counts above all things in the State and his determination to preserve that continuity of His Highness' policy which, as he correctly says, has given to Mysore the name of a model State does augur well for the success of his *regime*, and his aims to interpret to the subjects His Highness' aims and ambition as truly and effectively as possible and to translate them into action is most welcome. We have only to add that His Highness is a truly constitutional ruler in every sense, and that the opportunity for the Dewan for independant initiative is vast and extensive—so much so that each Dewan has ample scope to leave his own particular impress on the administration and carry the responsibility for his actions with himself. We are thankful to Mr. Banerji for indicating the general programme of his work with which all must agree—first, to encourage freedom of discussion; secondly, to improve the district administration on which depends the welfare of the bulk of the rural population; thirdly, to instil a quicker sense of official responsibility, hasten the despatch of public business and maintain and enhance the purity and impartiality of the public service; fourthly, to further the cause and extend the principles of every progressive measure that has been graciously initiated by His Highness during the *regime* of his previous illustrious Dewans for the good of the people; and fifthly, to solve the grave financial problem, which will be taken on hand first. This indeed is an ideal, the successfnl achievement of which will give his administration one of the foremost places in the history of Mysore. We heartily endorse his appeal for solidarity, union and toleration, and wish that the necessary basis on which this is possible, namely, the giving up of selfishness, the love to elevate mankind, sympathy with the aspirations of an awakened people, the wholesome policy of give and take, will be found in an ample degree in Mr. Banerji's time, to speed the happy consummation so devoutly wished by him. We are glad to note his great faith in the value of the communal organisations, and his assurance that their various interests are safe in the hands of Government. It is also pleasing to find a definite unequivocal pronouncement that he will not allow any retrograde step to be taken and that they must go forward and not stand still, and that their financial difficulties which they must boldly face could not at all times be put forward as an excuse for remaining stationary or going backwards. This is a notable utterance. We are conscious that many in like situations do begin with notable utterances, whose sincerety and genuiness cannot be questioned, but whose achievement, for reasons within or without their control, fall short of the promises held out at the beginning. It is our very sincere wish and earnest prayer that Mr. A. R. Banerji, whose noble determination to work for the good of the State we most cordially acknowledge, will be able to substantially fulfil his promise and win for himself an abiding place in the hearts of the people of Mysore.

ದಿವಾನ್ ಮ|| ಬಾನರ್ಜಿಯವರಿಗೆ ಪ್ರಜಾಮಿತ್ರ ಮಂಡಲಿಯವರು ಮಾಡಿದ ಸತ್ಕಾರವು.

ಶ್ರೀಮಾನ್ ಆಲ್ಬಿಯನ್ ರಾಜಕುಮಾರ ಬಾನರ್ಜಿ, ಎಂ.ಎ., ಸಿ.ಎಸ್.ಐ., ಸಿ.ಐ.ಇ., ಯವರಿಗೆ ಈ ಮೈಸೂರು ಸಂಸ್ಥಾನದ ಮಂತ್ರಿಪದವಿಯು ಪ್ರಾಪ್ತವಾದುದರಿಂದ ಈ ದೇಶೀಯರಿಗುಂಟಾದ ಸಂತೋಷವನ್ನು ಪ್ರದರ್ಶಿಸುವ ಸಮಾರಂಭೋತ್ಸವವನ್ನು ಪ್ರಜಾಮಿತ್ರಮಂಡಲಿಯವರು ಕಳೆದ ತಾ|| ೨೪ನೆಯ ಬುಧವಾರ ಬೆಂಗಳೂರು ಲಾಲ್‌ಬಾಗಿನಲ್ಲಿರುವ ಗಾಜಿನ ಭವನದಲ್ಲಿ ವಿಶೇಷ ವೈಭವದಿಂದ ನಡೆಯಿಸಿದರು. ಈ ಸಮಾರಂಭಕ್ಕಾಗಿ ಆ ಗಾಜಿನ ಭವನವು ವಿಧವಿಧವಾದ ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟು ಭವನದೊಳಗಡೆ ಕುರ್ಚಿಗಳೂ ಬೆಂಚುಗಳೂ ಸಾಲುಸಾಲಾಗಿ ಇರಿಸಲ್ಪಟ್ಟು ಮಧ್ಯಭಾಗದಲ್ಲಿ ಅತಿಥಿಗಳಿಗಾಗಿ ಎತ್ತರವಾದ ಜಗತಿಯ ಮೇಲೆ ರತ್ನಗಂಬಳಿಗಳು ಹಾಸಲ್ಪಟ್ಟು ಉಚಿತಾಸನಗಳು ಏರ್ಪಡಿಸಲ್ಪಟ್ಟಿದ್ದುವು. ಆಹೂತರಾಗಿದ್ದ ಕೌನ್ಸಿಲರುಗಳು, ಎಕ್ಸೈಜ್ ಕಮಿಷನರು, ವಿದ್ಯಾಭ್ಯಾಸದ ಇ|| ಜನರಲ್‌ರವರು, ಡಿಸ್ಟ್ರಿಕ್ಟ್ ಜಡ್ಜರವರು, ಚೀಫ್ ಸೆಕ್ರೆಟರಿಯವರು ಮೊದಲಾಗಿ ದೊಡ್ಡದೊಡ್ಡ ಅಧಿಕಾರಿಗಳೂ, ವಕೀಲರುಗಳೂ, ಮ್ಯು|| ಕೌನ್ಸಿಲರುಗಳೂ, ವರ್ತಕರುಗಳೂ ಕಿಕ್ಕಿರಿದು ನೆರದಿದ್ದರಲ್ಲದೆ ಮೈಸೂರು, ತುಮಕೂರು, ಕೋಲಾರ, ತರಿಕೆರೆ, ದಾವಣಗೆರೆ, ಚಿತ್ರದುರ್ಗ ಮೊದಲಾದ ಪರಸ್ಥಳಗಳಿಂದ ಕೆಲ ದೊಡ್ಡಮನುಷ್ಯರುಗಳೂ ಬಂದಿದ್ದರು. ಹಿಂದು ಮತ್ತು ಕ್ರೈಸ್ತನಾರಿಮಣಿಗಳ ಸಂಖ್ಯೆಯು ಹೆಚ್ಚಾಗಿ ಸೇರಿದ್ದುದು ಒಂದು ವಿಶೇಷವಾಗಿದ್ದಿತು. ಮ|| ಬಾನರ್ಜಿ ದಂಪತಿಗಳು ಮೋಟಾರುಬಂಡಿಯಲ್ಲಿ ಸಾಯಂಕಾಲ ೫|| ಗಂಟೆಗೆ ಸರಿಯಾಗಿ ಭವನದ ಬಳಿಗೆ ದಯಮಾಡಿಸಿದ ಕೂಡಲೆ ಇಂಗ್ಲಿಷ್ ಬ್ಯಾಂಡಿನವರು ರಾಷ್ಟ್ರಗೀತವನ್ನು ನುಡಿಸಿದರು. ಮಂಡಲಿಯ ಅಧ್ಯಕ್ಷರಾದ ರಾವ್‌ಸಾಹೇಬ್ ಚನ್ನಯ್ಯನವರು, ಮೆಂಬರುಗಳಾದ ಮ|| ಪಿ. ಎಂ. ಮುನಿಬಸಪ್ಪನವರು, ಮಿ|| ಅಬ್ಬಾಸ್‌ಖಾನ್‌ರವರು, ಮ|| ಎಂ. ಸುಬ್ಬಯ್ಯನವರು, ಸೆಕ್ರೆಟರಿಗಳಾದ ಮ|| ಜೆ. ಪರಮಶಿವಯ್ಯನವರು, ಮ|| ವಿಜಯದೇವರವರು, ಮ|| ಟಿ. ನಂಜಪ್ಪನವರು ದ್ವಾರದಲ್ಲಿ ಇದಿರ್ಗೊಂಡು ಕರೆದುಕೊಂಡುಬಂದರು. ಸಭಿಕರೆಲ್ಲರೂ ಕರತಾಡನವನ್ನು ಮಾಡಿ ಸ್ವಾಗತಿಸಿದರು. ಮ|| ಬಾನರ್ಜಿ ದಂಪತಿಗಳು ಉಚಿತಾಸನಾಸೀನರಾದಮೇಲೆ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ.ಐ.ಇ., ಯವರು ಬಾನರ್ಜಿಯವರ ಪತ್ನಿಯವರ ಎಡಗಡೆಗೆ ಹಾಕಿದ್ದಾಸನದಲ್ಲಿ ಕುಳಿತುಕೊಂಡರು. ಮೈಸೂರು ಶಿವಕಥಾಪಂಡಿತ ವೇ|| ಶಿವಯ್ಯಶಾಸ್ತ್ರಿಗಳು ಬಾನರ್ಜಿ ದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಕೋರಿ ರಚಿಸಿದ್ದ ಪದ್ಯಗಳನ್ನು ಸುಸ್ವರದಿಂದ ಹಾಡಿದರು. ಇದನ್ನು ಸಭಿಕರು ಕೇಳಿ ಆನಂದಭರಿತರಾಗಿ ತಲೆಯನ್ನು ತೂಗುತ್ತಿದ್ದರು. ಕೊಂಚಕಾಲ ಕೊಳಲು ನುಡಿಸಲ್ಪಟ್ಟಿತು. ಅನಂತರ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರು ಎದ್ದು ಮ|| ಬಾನರ್ಜಿ ದಂಪತಿಗಳ ಗುಣಕಥನವನ್ನು ಮಾಡಿ ಪ್ರಜಾಮಿತ್ರಮಂಡಲಿಯು ಈ ಸಭೆಯನ್ನು ಸೇರಿಸಿದ ಉದ್ದೇಶವನ್ನು ಸಂಕ್ಷೇಪವಾಗಿ ತಿಳಿಸಿ ಅಭಿನಂದನ ಪತ್ರಿಕೆಯನ್ನೋದಲು ಬಾನರ್ಜಿಯವರ ಅಪ್ಪಣೆಯನ್ನು ಕೇಳಿದರು. ಆಮೇಲೆ ರಾವ್‌ಸಾಹೇಬ್ ಚನ್ನಯ್ಯನವರು ಅಭಿನಂದನಪತ್ರಿಕೆಯನ್ನು ಇಂಗ್ಲೀಷಿನಲ್ಲಿ ಗಂಭೀರವಾಗಿಯೂ ಹೃದ್ಧ್ವನಿಯಿಂದಲೂ ಓದಿ ಒಪ್ಪಿಸಿದರು (ಇದರ ಕನ್ನಡತಾತ್ಪರ್ಯವು ಈ ಪತ್ರಿಕೆಯ ಬೇರೊಂದುಕಡೆ ಮುದ್ರಿತವಾಗಿರುವುದು). ಅದನ್ನು ಮ|| ಬಾನರ್ಜಿಯವರು ಅಭ್ಯುತ್ಥಾನಪೂರ್ವಕವಾಗಿ ಸ್ವೀಕರಿಸಿದರು. ತರುವಾಯ ಮ|| ಚನ್ನಯ್ಯನವರು ಮ|| ಬಾನರ್ಜಿಯವರಿಗೆ ಪುಷ್ಪಹಾರ ಗುಚ್ಛಗಳನ್ನೂ ಮ|| ಪಿ. ಎಂ. ಬಸಪ್ಪನವರು ಬಾನರ್ಜಿಯವರ ಪತ್ನಿಯವರಿಗೆ ಪುಷ್ಪಗುಚ್ಛವನ್ನೂ ಒಪ್ಪಿಸಿದರು. ಮತ್ತು ದಂತದಿಂದ ಶ್ಲಾಘ್ಯತರವಾಗಿ ಚಿತ್ರಕೆಲಸ ಮಾಡಲ್ಪಟ್ಟ ಬಹುಸುಂದರವಾಗಿದ್ದ ಗಂಧದಮರದ ಪೆಟ್ಟಿಗೆಯೂ ಒಪ್ಪಿಸಲ್ಪಟ್ಟಿತು. ಅದನ್ನು ಮ|| ಬಾನರ್ಜಿಯವರು ಬಹಳ ಸಂತೋಷದಿಂದ ಸ್ವೀಕರಿಸಿ ತಮ್ಮ ವಂದನೆಯನ್ನು ತಿಳಿಸಿದರು. ತರುವಾಯ ಒಕ್ಕಲಿಗರಸಂಘದ ಪರವಾಗಿ ಮ|| ಎಂ. ಸುಬ್ಬಯ್ಯನವರು, ವೀರಶೈವ ವಿದ್ಯಾವರ್ಧಕಸಂಘದ (ಪತ್ರಿಕೆಯ ತಾತ್ಪರ್ಯವು ಕನ್ನಡದಲ್ಲಿ ಮತ್ತೊಂದು ಕಡೆ ಮುದ್ರಿತವಾಗಿದೆ) ಪರವಾಗಿ ಮ|| ಜೆ. ಪರಮಶಿವಯ್ಯನವರು, ಸೆಂಟ್ರಲ್ ಮಹಮ್ಮದೀಯ ಸಂಘದ ಪರವಾಗಿ ಮಿ|| ಅಬ್ಬಾಸ್‌ಖಾನ್‌ರವರು, ಬಲಿಜ ಸಂಘದ ಪರವಾಗಿ ಮ|| ರಾಮಸ್ವಾಮಿಸೆಟ್ಟರು, ಕ್ರೈಸ್ತ ಸಂಘದ ಪರವಾಗಿ ಮಿ|| ಇಸಾಕ್‌ರವರು, ಕುರುಬರ ಸಂಘದವರ ಪರವಾಗಿ ಮ|| ಮುನಿಯಪ್ಪನವರು, ಆದಿದ್ರಾವಿಡ ಸಂಘದವರ ಪರವಾಗಿ ಮ|| ಮುರುಗೇಶಂಪಿಳ್ಳೆಯವರು ಪ್ರತ್ಯೇಕಪ್ರತ್ಯೇಕವಾಗಿ ವಿಜ್ಞಾಪನ ಪತ್ರಿಕೆಗಳನ್ನೋದಿ ಒಪ್ಪಿಸಿದರು. ಇವುಗಳಲ್ಲಿ ಅವರುಗಳ ಸಂತೋಷವು ವ್ಯಕ್ತಪಡಿಸಲ್ಪಟ್ಟಿದ್ದುದಲ್ಲದೆ ಉಚಿತವಾದ ಕೆಲಪ್ರಾರ್ಥನೆಗಳೂ ಮಾಡಲ್ಪಟ್ಟಿದ್ದುವು. ಮ|| ಬಾನರ್ಜಿಯವರು ಅವುಗಳನ್ನೆಲ್ಲಾ ಪರಿಗ್ರಹಿಸಿ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಯನ್ನು ಅರ್ಪಿಸಿದುದಲ್ಲದೆ ಅವುಗಳೆಲ್ಲಕ್ಕೂ ಉಚಿತವಾದ ಉತ್ತರವನ್ನು ದಯಪಾಲಿಸಿದರು (ಇದು ಮುಂದಣ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುದು). ಅನಂತರ ಸಭಿಕರಿಗೆ ಪುಷ್ಪಗುಚ್ಛಗಳು ಒಪ್ಪಿಸಲ್ಪಡುತ್ತಿರುವಾಗ್ಗೆ ಕೊಳಲು ನುಡಿಸಲ್ಪಡುತ್ತಿದ್ದಿತಲ್ಲದೆ ಹೊರಗಡೆ ಮದ್ದಿನ ವಿನೋದವೂ ನಡಿಸಲ್ಪಡುತ್ತಿದ್ದಿತು. ಇವಾದ ಮೇಲೆ ದಿ|| ಬ|| ಪುಟ್ಟಣ್ಣಸೆಟ್ಟರ ಸೂಚನೆಯ ಮೇರೆಗೆ ಶ್ರೀಮನ್ ಮಹಾರಾಜ ಸಹೋದರರಿಗೂ ಅತಿಥಿಗಳಾದ ಬಾನರ್ಜಿ ದಂಪತಿಗಳಿಗೂ ತ್ರಿವಾರ ಜಯಘೋಷವು ಮಾಡಲ್ಪಟ್ಟಿತು. ಮ|| ಬಾನರ್ಜಿ ದಂಪತಿಗಳು ತಮ್ಮ ಪ್ರೈವೆಟ್ ಸೆಕ್ರೆಟರಿ ಮ|| ಅನಂತರಾಮನ್‌ರವರ ಕೂಡ ಮೋಟಾರುಬಂಡಿಯಲ್ಲಿ ಕುಳಿತು ತಮ್ಮ ಪ್ರಾಸಾದಕ್ಕೆ ತೆರಳಿದರು. ಪ್ರಜಾಮಿತ್ರಮಂಡಲಿಯು ವಿಶೇಷ ಶ್ರಮವನ್ನೂ ಶ್ರದ್ಧೆಯನ್ನೂ ವಹಿಸಿ ಆ ದಿವಸದ ಸಮಾರಂಭವನ್ನು ಸರ್ವಸಮರ್ಪಕವಾಗಿಯೂ ಶ್ಲಾಘ್ಯವಾಗಿಯೂ ನಡಿಸಿ ಪ್ರಜೆಗಳ ಶ್ರೇಯಃಪ್ರಾರ್ಥನೆಯೇ ತಮ್ಮ ಮುಖ್ಯ ಧ್ಯೇಯವೆಂಬುದನ್ನು ನಿದರ್ಶನಮಾಡಿಕೊಟ್ಟುದಕ್ಕಾಗಿ ಅವರನ್ನು ವಂದಿಸುತ್ತೇವೆ.

ಒಳದೇಶದ ವೃತ್ತಾಂತಗಳು

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರ ಉದ್ಯೋಗದವಧಿಯು ೧೯೨೩ನೆಯ ಜೂನ್ ತಿಂಗಳ ಕಡೆಯವರೆಗೂ ಹೆಚ್ಚಿಸಲ್ಪಟ್ಟಿರುತ್ತದೆ.

ರಾಜಧಾನಿಯ ಚಾಮುಂಡೇಶ್ವರಿ ಬೆಟ್ಟದ ಮೇಲೆ ದೊಡ್ಡಬಸವೇಶ್ವರನ ಬಳಿ ಒಂದು ಮರಕ್ಕೆ ಒಬ್ಬ ಬೈರಾಗಿಯು ಹೋದವಾರ ನೇಣುಹಾಕಿಕೊಂಡು ಆತ್ಮಹತ್ಯೆಯನ್ನು ಮಾಡಿಕೊಂಡನು.

ಪೌರಸಾಮಾಜಿಕಸಭೆಯ ಅಧಿವೇಶನವು ಜೂನ್ ತಾ|| ೩ ರ ಬೆಳಿಗ್ಗೆ ರಾಜಧಾನಿಯಲ್ಲಿ ಮದ್ರಾಸಿನ ನಿಯಮನಿರ್ಮಾಣ ಸಭೆಯ ಮೆಂಬರರಾದ ಮ|| ಸಿ. ಪಿ. ರಾಮಸ್ವಾಮಯ್ಯರ್‌ರವರ ಅಧ್ಯಕ್ಷತೆಯಲ್ಲಿ ಜರುಗುವುದು.

ಮೈಸೂರು ಸಂಪದಭ್ಯುದಯ ಸಮಾಜದ ಅಧಿವೇಶನವು ಮೇ ತಾ|| ೩೧ ರ ಬದಲು ಜೂನ್ ತಾ|| ೭ ರಲ್ಲೂ ಪ್ರಜಾಪ್ರತಿನಿಧಿಸಭೆಯು ಜೂನ್ ತಾ|| ೭ ರ ಬದಲು ೮ ರಲ್ಲೂ ಪ್ರಾರಂಭವಾಗುವುದಾಗಿ ಈಚೆಗೆ ಪ್ರಕಟವಾಗಿದೆ.

ರಾಜಧಾನಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ|| ಡಿ. ಕೆ. ರಾಮರಾಯರು ೩|| ತಿಂಗಳ ರಜವನ್ನು ತೆಗೆದುಕೊಂಡಿರುವುದರಿಂದ ಚಿಕ್ಕಬಳ್ಳಾಪುರದ ಸಬ್‌ಡಿವಿಜನ್ ಆಫೀಸರಾದ ಮ|| ಎಂ. ಕೃಷ್ಣಸ್ವಾಮಯ್ಯಂಗಾರರು ಅಕ್ಟಿಂಗ್ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ಮೈಸೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಶ್ರೀಮನ್ಮಹಾರಾಜರವರು ಪರಿವಾರದೊಡನೆ ಕಳೆದ ತಾ|| ೨೦ ರಲ್ಲಿ ಸಿಮ್ಲಾ ಪಟ್ಟಣವನ್ನು ಬಿಟ್ಟು ಮಧ್ಯದಾರಿಯಲ್ಲಿರುವ ಹರಿದ್ವಾರದಲ್ಲಿ ಒಂದುದಿನ ತಂಗಿದ್ದು ಅಲ್ಲಿಂದ ಹೊರಟು ಈ ದಿವಸ ರಾಜಧಾನಿಯನ್ನು ತಲುಪುವವರಾಗಿರುವರು. ಏಡಿಕಾಂಗರು ಮತ್ತೆ ಕೆಲರು ೨-೩ ದಿನಗಳು ಮುಂಚಿತವಾಗಿಯೇ ಬಂದರು.

ದರ್ಬಾರು ಭಕ್ಷಿಯವರಾದ ಮ|| ಎಚ್. ಲಿಂಗರಾಜ ಅರಸಿನವರ ದ್ವಿತೀಯಕುಮಾರಿ ಸೌ|| ದೊಡ್ಡಮ್ಮಣ್ಣಿಯವರು ಮ|| ಎಂ. ದೇವರಾಜ ಅರಸಿನವರ ಕುಮಾರ ಮ|| ಎಂ. ಡಿ. ವೆಂಕಟೇ ಅರಸ್, ಬಿ.ಎ, ಯವರಿಗೆ ಕೊಡಲ್ಪಟ್ಟು ವಿವಾಹ ಮಹೋತ್ಸವವು ಈ ತಾ|| ೩೧ನೆಯ ಬುಧವಾರ ಮಧ್ಯಾಹ್ನ ೧ ಘಂಟೆಗೆ ಮೈಸೂರು ಚಾಮರಾಜಪುರದ ಸೀತಾವಿಳಾಸ ತೋಪಿನಲ್ಲಿರುವ ಮ|| ಭಕ್ಷಿಯವರ ಸ್ವಗೃಹದಲ್ಲಿ ನಡೆಯಿಸಲ್ಪಡುವುದು.

ಶ್ರೀಮದ್ಯುವರಾಜರ ವರ್ಧಂತಿಯು ಕಳೆದ ಸೋಮವಾರದ ದಿವಸ ಉದಕಮಂಡಲದಲ್ಲಿರುವ ಫರ್ನ್‌ಹಿಲ್ ಅರಮನೆಯಲ್ಲಿ ನೆರವೇರಿಸಲ್ಪಟ್ಟಿತು. ಇದರ ಸಂತೋಷಾರ್ಥವಾಗಿ ಆ ದಿವಸ ಐರೋಪ್ಯ ಮತ್ತು ಭಾರತೀಯ ದೊಡ್ಡಮನುಷ್ಯರುಗಳಿಗೆ ಔತಣವು ಮಾಡಿಸಲ್ಪಟ್ಟಿತು. ಮಹೋತ್ಸವದ ಸಂತೋಷಾರ್ಥವಾಗಿ ರಾಜಧಾನಿಯ ಎಲ್ಲ ಕೋರ್ಟು ಕಚೇರಿಗಳು ಮುಚ್ಚಲ್ಪಟ್ಟಿದ್ದುವು; ದೇವಾಲಯಗಳಲ್ಲಿ ಶ್ರೀಯವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟಿತು; ಸಾಯಂಕಾಲ ಸಿಷದ್‌ಬಾಗಿನಲ್ಲಿ ಅರಮನೆಯ ಬ್ಯಾಂಡಾಯಿತು. ಶ್ರೀಮದ್ಯುವರಾಜರವರ ಸ್ವಾರಿಯು ಬರುವ ಬುಧವಾರ ರಾಜಧಾನಿಗೆ ಚಿತ್ತೈಸುವುದು.

ರಾಜಧಾನಿಯಲ್ಲಿ ಪ್ರಸಿದ್ಧ ಅಕ್ಕಿ ವ್ಯಾಪಾರಸ್ಥರಾದ ಸಾಹುಕಾರ್ ಚಿಕ್ಕಣ್ಣನವರ ಮಕ್ಕಳು ದೊಡ್ಡಜವರಪ್ಪನವರು ತಮ್ಮ ಪ್ರಥಮಕುಮಾರಿ ಸೌ|| ಪುಟ್ಟಮ್ಮನನ್ನು ಅಕ್ಕಿಮಂಡಿ ಸಾಹುಕಾರ್ ಮ|| ಪುಟ್ಟವೀರಯ್ಯನವರ ಜ್ಯೇಷ್ಠಕುಮಾರ ಚಿಕ್ಕವೀರಯ್ಯನವರಿಗೆ ಕೊಟ್ಟು ಕಳೆದ ತಾ|| ೨೧ರಲ್ಲಿ ವಿವಾಹಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ಜರುಗಿಸಿದುದಲ್ಲದೆ ತಾ|| ೨೪ರಲ್ಲಿ ವಧೂವರರ ಆರ್ತ್ಯಕ್ಷತೆಯ ಸಮಾರಂಭಕ್ಕೆ ದೊಡ್ಡಮನುಷ್ಯರುಗಳನ್ನೂ ಮಿತ್ರಮಂಡಲಿಯನ್ನೂ ಬರಮಾಡಿಕೊಂಡು ಸಂಗೀತಶ್ರವಣಾದಿಗಳಿಂದ ಸತ್ಕರಿಸಿದರು. ಮ|| ದೊಡ್ಡಜವರಪ್ಪನವರು ಈ ಉತ್ಸವದ ಜ್ಞಾಪನಾರ್ಥವಾಗಿ ಕುರುಡ ಕುಂಟ ಮೊದಲಾದ ಬಡಜನರಿಗೆ ಮೃಷ್ಟಾನ್ನ ಭೋಜನ ಮಾಡಿಸಿದುದು ಶ್ಲಾಘ್ಯವೇ ಸರಿ.

ಶ್ರೀಮನ್ಮಹಾರಾಜರವರ ೩೮ ನೆಯ ವರ್ಷದ ವರ್ಧಂತ್ಯುತ್ಸವವು ಬರುವ ಜೂನ್ ತಾ|| ೫ ನೆಯ ಸೋಮವಾರ ನಡಿಯುವುದು. ಆ ದಿವಸ ಬೆಳಿಗ್ಗೆ ೯ ಘಂಟೆಗೆ ಶ್ರೀಮನ್ಮಹಾರಾಜರವರು ಭದ್ರಾಸನಾಸೀನರಾಗಿ ದರ್ಬಾರನ್ನು ನಡಿಸಿ ಸಾಯಂಕಾಲ ದಿವ್ಯವಸ್ತ್ರಾಭರಣಭೂಷಿತರಾಗಿ ಸಾಲಂಕೃತವಾದ ಅಶ್ವಾರೋಹಣಮಾಡಿ ತಮ್ಮಂತೆ ಅಲಂಕೃತರಾಗಿ ಅಶ್ವಾರೂಢರಾದ ಶ್ರೀಮದ್ಯುವರಾಜರಸಮೇತ ಚತುರಂಗಸೇನೆಯಿಂದಲೂ, ಬಾಲ್ಯಬಿರುದಾವಳಿಗಳಿಂದಲೂ, ವಾದ್ಯವೈಭವದಿಂದಲೂ ಉತ್ಸವಹೊರಟು ಗೌರ್ನಮೆಂಟ್‌ಹೌಸ್ ಎಂಬ ಪ್ರಾಸಾದಕ್ಕೆ ದಯಮಾಡಿ ಅಲ್ಲಿ ಸೇನೆಯ ಮರ್ಯಾದೆಯನ್ನು ಕೈಕೊಂಡು ರಾತ್ರಿ ೯ ಘಂಟೆಯ ಸಮಯಕ್ಕೆ ಹಿಂದಿರುಗಿ ಉತ್ಸವಗೊಂಡು ಅರಮನೆಗೆ ಚಿತ್ತೈಸುವರು. ಮಂಗಳವಾರ ಮತ್ತು ಬುಧವಾರ ರಾತ್ರೆ ದರ್ಬಾರು ನಡಿಯುವುದು.

ಮೈಸೂರು ಸಂಸ್ಥಾನದ ದಿವಾನರಾದ ಶ್ರೀಮಾನ್ ಆಲ್ಬಿಯನ್ ರಾಜಕುಮಾರ ಬಾನರ್ಜಿ, ಎಂ.ಎ., ಸಿ.ಎಸ್.ಐ., ಸಿ.ಐ.ಇ., ರವರಿಗೆ ಪ್ರಜಾಮಿತ್ರಮಂಡಲಿಯವರೊಪ್ಪಿಸಿದ ಅಭಿನಂದನ ಪತ್ರಿಕೆಯ ಮುಖ್ಯಾಂಶವು.

ಮಹಾಶಯರೆ,

ನಮ್ಮ ಸಂಸ್ಥಾನದ ಮಹಾ ಮಂತ್ರಿಪದವಿಗೆ ತಾವು ನಿಯಮಿಸಲ್ಪಟ್ಟುದರಿಂದ ಮೈಸೂರು ದೇಶೀಯರ ಪರವಾಗಿ ಪ್ರಜಾಮಿತ್ರಮಂಡಲಿಯ ಮೆಂಬರುಗಳಾದ ನಾವು ತಮ್ಮನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಮತ್ತು ರಾಜ್ಯಭಾರದ ಮುಖ್ಯಾಧಿಕಾರಸ್ಥಾನಕ್ಕೆ ತಮ್ಮನ್ನು ನಿಯಮಿಸಿಕೊಂಡುದುದಕ್ಕಾಗಿ ಶ್ರೀಮನ್ ಮಹಾರಾಜರವರಿಗೆ ನಮ್ಮ ಕೃತಜ್ಞತೆಯನ್ನು ವಂದನಾಪುರಸ್ಸರವಾಗಿ ನಮ್ರತೆಯಿಂದ ಅರ್ಪಿಸುತ್ತೇವೆ. ತಾವು ಕೊಚಿನ್ ಸಂಸ್ಥಾನದ ಮಂತ್ರಿಗಳಾಗಿದ್ದು ಅಲ್ಲಿಯ ರಾಜ್ಯಾಡಳಿತವು ಚುರುಕಿನಿಂದಲೂ ಸಮರ್ಥತೆಯಿಂದಲೂ ನಡಿಯುವಂತೆಯೂ ಮತ್ತು ಅದರ ಸಂಪತ್ತು ಅಭಿವೃದ್ಧಿಯಾಗುವಂತೆಯೂ ಮಾಡಿದಿರೆಂಬುದು ಸುಪ್ರಸಿದ್ಧವಾಗಿದೆ. ತಮ್ಮ ಘನತರವಾದ ವಿದ್ಯಾನೈಪುಣ್ಯವೂ, ನಾನಾಮುಖವಾದ ಅನುಭವವೂ, ಕಾರ್ಯದಕ್ಷತೆಯೂ ತಾವು ಈ ಉನ್ನತಪದವಿಯನ್ನು ಹೊಂದಲು ಸಾಧಕಗಳಾಗಿರುವವು. ನಮ್ಮ ಸಂಸ್ಥಾನದ ಮೇಲ್ಮೆಗಾಗಿ ತಮ್ಮ ಯೋಗ್ಯತಾಸಾಮರ್ಥ್ಯವನ್ನು ಪ್ರದರ್ಶಿಸುವ ಸುಸಮಯವು ಈಗ ತಮಗೆ ಪ್ರಾಪ್ತವಾದುದಕ್ಕಾಗಿ ನಾವು ಹರ್ಷಿತರಾಗಿರುತ್ತೇವೆ. ಜನಸಂಖ್ಯಾನುಗುಣವಾಗಿಯೂ, ಕಂದಾಯವನ್ನು ತೆರತಕ್ಕ ಚೈತನ್ಯಕ್ಕೆ ತಕ್ಕಂತೆಯೂ ಪೌರಕಾರ್ಯ, ವಿದ್ಯೆ, ಸಂಪತ್ತು, ರಾಜ್ಯಾಡಳಿತ ವಿಚಾರಗಳಲ್ಲಿ ಈಗ ಹೊಂದಿರುವ ಸ್ಥಾನಕ್ಕಿಂತಲೂ ಉನ್ನತಸ್ಥಾನವನ್ನು ಹೊಂದಬೇಕಾಗಿರುವ ಮೈಸೂರು ದೇಶದ ಪ್ರಜೆಗಳ ಕ್ಷೇಮಚಿಂತನೆಯನ್ನು ಈ ಪ್ರಜಾಮಿತ್ರಮಂಡಲಿಯು ಕೋರುತಕ್ಕುದಾಗಿದೆಯೆಂಬುದು ತಮಗೆ ವೇದ್ಯವೇ ಇದೆ. ಈ ಮಂಡಲಿಯು ಅವರ ಪ್ರಕೃತಸ್ಥಿತಿಯನ್ನುತ್ತಮಗೊಳಿಸಲು ಪಾಟುಪಡುತ್ತಿರುವುದು. ಇವರ ಪುರೋಭಿವೃದ್ಧಿಯ ವಿಚಾರದಲ್ಲಿ ನಮ್ಮ ಪ್ರಿಯ ಶ್ರೀಮನ್ ಮಹಾರಾಜರವರಿಗೆ ವಿಶೇಷ ಆಸಕ್ತಿಯಿರುವುದೆಂಬುದರ ನಿದರ್ಶನಾರ್ಥವಾಗಿ ಅವರ ಸರ್ಕಾರದವರು ಸರ್ಕಾರಿಯಾಡಳಿತದಲ್ಲೂ ಸಭೆಗಳಲ್ಲೂ ಅವರ ಪ್ರಾತಿನಿಧ್ಯವು ತಕ್ಕಷ್ಟು ಇರಬೇಕೆಂಬ ಕೋರಿಕೆಯು ನ್ಯಾಯವಾದುದೆಂದು ಪರಿಗಣಿಸಿ ವಿದ್ಯಾಭ್ಯಾಸದ ಮೆಮೊರಾಂಡಂ ಮತ್ತು ಮಿಲ್ಲರ್ ಕಮಿಟಿ ರಿಪೋರ್ಟುಗಳ ಮೇಲೆ ಆರ್ಡರುಗಳನ್ನು ದಯವಿಟ್ಟು ಮಾಡಿರುತ್ತಾರೆ. ಆದರೆ ಅವುಗಳ ಪೂರ್ಣ ಫಲಾನುಭವಕ್ಕೆ ಇನ್ನೂ ಬಹಳ ವ್ಯವಸಾಯವಾಗಬೇಕಾಗಿರುವುದು. ಅದು ತಮ್ಮ ಕಾಲದಲ್ಲಿ ನೆರವೇರುವುದೆಂದು ನಿರೀಕ್ಷಿಸುತ್ತೇವೆ.

ಈಗ ನಮ್ಮ ಸರ್ಕಾರಕ್ಕೆ ಪ್ರಾಪ್ತವಾಗಿರುವ ಆರ್ಥಿಕ ದುಸ್ಥಿತಿಯು ತಮ್ಮ ಸೂಕ್ಷ್ಮವಾದ ವಿಮರ್ಶನಾಶಕ್ತಿಯಿಂದ ಕೂಡಲೆ ನಿವಾರಿತವಾಗಿ ಜನರಿಗೆ ಹೆಚ್ಚು ಪ್ರಯೋಜನವುಂಟಾಗಲು ಅವಕಾಶ ಕಲ್ಪಿಸಲ್ಪಡುವುದೆಂದೂ ಸರ್ಕಾರಿಯುದ್ಯೋಗಗಳಲ್ಲಿ ಹಿಂದುಳಿದ ಜನಾಂಗದವರ ಪ್ರತಿನಿಧಿಗಳು ಸಾಕಷ್ಟಿರಬೇಕಾದ ಆವಶ್ಯಕತೆಯು ಪೂರ್ಣವಾಗಿ ಗಮನಿಸಲ್ಪಡುವುದೆಂದೂ ನಾವು ನಂಬಿರುತ್ತೇವೆ. ಈಗಿರತಕ್ಕ ಉತ್ಪತ್ತಿಯ ಸಾಧನಗಳೆಲ್ಲವೂ ಸಂಗ್ರಹಿಸಲ್ಪಡಲು ತಮ್ಮ ಆಡಳಿತದಲ್ಲಿ ಸಾಧ್ಯವಾದ ಪ್ರಯತ್ನವೆಲ್ಲವೂ ಮಾಡಲ್ಪಟ್ಟು ಜನಸಾಮಾನ್ಯದ ವಿದ್ಯೆಯ ಜತೆಗೆ ಕೈಗಾರಿಕೆಯ ವಿದ್ಯೆಯನ್ನು ಹರಡಲು ಅನುಕೂಲ್ಯಗಳನ್ನು ಕಲ್ಪಿಸಿಕೊಡುವುದಕ್ಕಾಗಿಯೂ, ವೈದ್ಯ ಮತ್ತು ಆರೋಗ್ಯಾಭಿವೃದ್ಧಿ ಕಾರ್ಯಗಳಿಗಾಗಿಯೂ, ಗ್ರಾಮಾಭಿವೃದ್ಧಿಗಾಗಿಯೂ, ಬೇಸಾಯ ಮತ್ತು ಕೈಗಾರಿಕೆಯಭಿವೃದ್ಧಿಗಾಗಿಯೂ, ಸಂಸ್ಥಾನದಲ್ಲಿ ನಾನಾಮುಖವಾಗಿ ಅಭಿವೃದ್ಧಿಯಾಗುವ ಕಾರ್ಯಗಳಿಗಾಗಿಯೂ ವಿನಿಯೋಗಿಸಲ್ಪಡುವುದೆಂದು ನಿರೀಕ್ಷಿಸುತ್ತೇವೆ. ಈಗಿನ ಪರಿಸ್ಥಿತಿಯು ಬಹಳ ಕ್ಲಿಷ್ಟವಾಗಿಯೂ ತೊಡಕಾಗಿಯೂ ಇರುವುದಾದರೂ ಅದನ್ನು ತಾವು ತಕ್ಕ ಧೈರ್ಯದಿಂದಲೂ ಸಲಕರಣೆಗಳಿಂದಲೂ ನಿಗ್ರಹಿಸಬಲ್ಲರೆಂದು ನಾವು ಸಂಪೂರ್ಣವಾಗಿ ನಂಬಿರುತ್ತೇವೆ. ಪ್ರಯಾಸವಾದ ಕಾರ್ಯನಿರ್ವಾಹದಲ್ಲಿ ಜನರ ಸಹಕಾರವನ್ನು ನೀವು ವಾಸ್ತವ್ಯವಾಗಿ ಅಪೇಕ್ಷಿಸಿರುತ್ತೀರೆಂದು ನಾವು ಒಪ್ಪಿಕೊಳ್ಳುತ್ತೇವಲ್ಲದೆ ತಾವು ನಮ್ಮಲ್ಲಿಟ್ಟಿರುವ ಭರವಸೆಯನ್ನು ಸಾರ್ಥಕಗೊಳಿಸದೆ ಇರುವುದಿಲ್ಲವೆಂದು ದೃಢವಾಗಿ ಹೇಳುತ್ತೇವೆ. ಅಲ್ಲದೆ ಜನರ ನೆಮ್ಮದಿಗೆ ಭಂಗಕರವಾದ ವಿಷಯಗಳು ಹಿಂದಿನಂತೆಯೇ ತಮ್ಮಿಂದ ಸಾನುಭೂತಿಪೂರ್ವಕವಾಗಿ ಪರ್ಯಾಲೋಚಿಸಲ್ಪಡುವುವೆಂದು ಮತ್ತು ಅವರುಗಳಿಗೆ ಪ್ರಾಪ್ತವಾಗಿರುವ ದೌರ್ಬಲ್ಯ ಮತ್ತು ಪ್ರತಿಕೂಲತೆಗಳು ಹೋಗಲಾಡಿಸಲ್ಪಟ್ಟು ಅವರ ಸ್ಥಿತಿಯು ಉತ್ತಮಗೊಳಿಸಲ್ಪಡುವಲ್ಲಿ ಸರ್ವಪ್ರಯತ್ನ ಮಾಡಲ್ಪಡುವುದೆಂದು ನಿರೀಕ್ಷಿಸುತ್ತೇವೆ.

ಸ್ತ್ರೀಯರ ಕ್ಷೇಮಾಭಿವೃದ್ಧಿ ಕಾರ್ಯದಲ್ಲಿ ಪ್ರಾಮುಖ್ಯತೆಯನ್ನು ವಹಿಸಿರುವ ಮ|| ಬಾನರ್ಜಿಯವರ ಪತ್ನಿಯವರು ಈ ಸಮಾರಂಭಕ್ಕೆ ದಯಮಾಡಿಸಿರುವುದು ನಮ್ಮೆಲ್ಲರಿಗೂ ಸಂತೋಷಪ್ರದವಾಗಿದೆ. ಮತ್ತು ಅವರು ಇಷ್ಟರಲ್ಲೇ ಯೂರೋಪು ದೇಶಸಂಚಾರ ಹೊರಡುವವರಾಗಿರುವುದರಿಂದ ಅವರ ಪ್ರವಾಸವು ಆನಂದಕರವಾಗಿಯೂ ಕ್ಷೇಮಕರವಾಗಿಯೂ ಇದ್ದು ಅವರು ಆರೋಗ್ಯದೃಢಕಾಯರಾಗಿ ಕ್ಷಿಪ್ರದಲ್ಲಿಯೇ ಹಿಂತಿರುಗಿ ಬರುವವರಾಗಲೆಂದು ಅಪೇಕ್ಷಿಸುತ್ತೇವೆ.

ತಮಗೂ ತಮ್ಮ ಕುಟುಂಬಕ್ಕೂ ದೇವರು ದೀರ್ಘಾಯುರಾರೋಗ್ಯವನ್ನೀಯಲೆಂದೂ, ತಮ್ಮಧಿಕಾರದ ಅವಧಿಯಲ್ಲಿ ತಮ್ಮ ಸಂರಕ್ಷಣೆಗೊಳಪಟ್ಟ ಪ್ರಜೆಗಳಿಗೆ ಶಾಶ್ವತವಾದ ಪ್ರಯೋಜನವೂ, ಪ್ರಿಯ ಶ್ರೀಮನ್ ಮಹಾರಾಜರವರಿಗೆ ನಿರಂತರವಾದ ಕೀರ್ತಿಯೂ ಲಭ್ಯವಾಗಿ ನಮ್ಮ ಸಂಸ್ಥಾನದ ಖ್ಯಾತಿಯು ಉಳಿಯುವಂತಾಗಬೇಕೆಂದೂ ನಾವು ಪ್ರಾರ್ಥಿಸುತ್ತೇವೆ.

ಮೈಸೂರು ವೀರಶೈವ ವಿದ್ಯಾವರ್ಧಕ ಫಂಡ್ ಸಂಘದವರು ಒಪ್ಪಿಸಿದ ವಿಜ್ಞಾಪನ ಪತ್ರಿಕೆಯು.

ಮಹನೀಯರೆ,

ತಮಗೆ ಮೈಸೂರು ಸಂಸ್ಥಾನದ ಮಂತ್ರಿ ಪದವಿಯು ಲಭಿಸುದುದಕ್ಕಾಗಿ ಈ ಸಂಸ್ಥಾನದ ವೀರಶೈವ ಜನಾಂಗದ ಮತ್ತು ಅದರ ವಿದ್ಯಾವರ್ಧಕ ಸಂಘದ ಪರವಾಗಿ ನಾವುಗಳು ತಮ್ಮನ್ನು ಅಭಿನಂದಿಸುತ್ತೇವೆ. ನಮ್ಮ ಸಂಸ್ಥಾನಕ್ಕೆ ಹಿಂದೆ ಯಾವಾಗಲೂ ಸಂಭವಿಸದೆ ಇದ್ದ ಈಗಿನಂತಹ ವಿಷಮ ಸಮಯದಲ್ಲಿ ಶ್ರೀಮನ್ ಮಹಾರಾಜರವರು ಕೃಪೆಯಿಟ್ಟು ತಮ್ಮನ್ನು ಈ ಮಹೋನ್ನತ ಪದವಿಗೆ ನಿಯಮಿಸಿದುದಕ್ಕಾಗಿ ಮಹಾಪ್ರಭುಗಳಿಗೆ ನಮ್ಮ ಮನಃಪೂರ್ವಕವಾದ ವಂದನೆಗಳನ್ನು ಈ ಸಂದರ್ಭದಲ್ಲಿ ವಿನಯಭಕ್ತಿಪೂರ್ವಕವಾಗಿ ಅರ್ಪಿಸುತ್ತೇವೆ. ವಿಷಯಗಳನ್ನು ಕೂಡಲೆ ಗ್ರಹಿಸತಕ್ಕ ಮತ್ತು ವಿಮರ್ಶಿಸತಕ್ಕ ಅಪಾರವಾದ ಶಕ್ತಿಯು ಅನುಗ್ರಹಿಸಲ್ಪಟ್ಟಿರುವ ಮತ್ತು ರಾಜ್ಯಾಡಳಿತದಲ್ಲಿ ಪೂರ್ಣಾನುಭವವನ್ನು ಹೊಂದಿರುವ ತಮ್ಮಂತಹವರ ವಿನಾ ಮತ್ತಾರೂ ಪ್ರಕೃತಸ್ಥಿತಿಯಲ್ಲಿ ರಾಜ್ಯಾಡಳಿತವನ್ನು ನಿಗ್ರಹಿಸಿ ಕೃತಾರ್ಥರಾಗಲಾರರು.

ನಮ್ಮ ಜನಾಂಗವು ಸಂಖ್ಯೆಯಲ್ಲಿ ಪ್ರಬಲವಾಗಿರುವುದಲ್ಲದೆ ವಿಶಿಷ್ಟವಾಗಿರುವುದರ ಮೂಲಕ ಸರ್ಕಾರದವರ ಸಾನುಭೂತಿಗೆ ಆಕರವಾಗಿದೆ. ನಮ್ಮ ಜನರು ಮುಖ್ಯವಾಗಿ ವ್ಯವಸಾಯ ಮತ್ತು ವ್ಯಾಪಾರಗಳಲ್ಲಿ ಉದ್ಯುಕ್ತರಾಗಿರುವರಲ್ಲದೆ ವಿಶೇಷ ರಾಜಭಕ್ತಿಯುತರೂ ನ್ಯಾಯಬದ್ಧರೂ ಆಗಿರುವರು. ನಮ್ಮಲ್ಲಿ ಘಟಿಗರೂ ಪ್ರಖ್ಯಾತರೂ ಆದ ಸಂಸ್ಕೃತ ಮತ್ತು ಕನ್ನಡ ಪಂಡಿತರುಗಳೂ ಕವಿಗಳೂ ಇರುವುದು ಪ್ರತಿಷ್ಠಾದಾಯಕವಾಗಿದೆ. ಆದರೂ ಈಗ ಪ್ರೋತ್ಸಾಹವಿಲ್ಲದಿರುವುದರಿಂದಲೂ ಇತರ ಕಾರಣಗಳಿಂದಲೂ ಮೇಧಾವಿತೆಯಲ್ಲು ಮತ್ತು ಸಾಮಾಜಿಕ ವಿಚಾರದಲ್ಲು ನಮ್ಮ ಮುಂದಾಳುತನವನ್ನೇ ಕಳೆದುಕೊಂಡಿರುವೆವು.

ವಿದ್ಯೆಯಲ್ಲಿ ಹಿಂದುಳಿದ ನಮ್ಮವರನ್ನುದ್ಧರಿಸಲು ಸರ್ಕಾರದವರಿಂದ ಸಾಕಾದಷ್ಟು ಸಹಾಯವು ಕೊಡಲ್ಪಡದಿರುವಪ್ರಯುಕ್ತ ನಮ್ಮ ಜನರ ವಿದ್ಯಾಭಿವೃದ್ಧಿಗಾಗಿ ಈ ನಮ್ಮ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘವು ನಮ್ಮ ಸೀಮೆಯಲ್ಲಿ ಇಂತಹ ಸಂಘವಾವುದೂ ಇಲ್ಲದಿರುವ ವೇಳೆಯಲ್ಲಿ ಅಂದರೆ ೧೯೦೫ ರಲ್ಲಿ ಮಾರ್ಗದರ್ಶಕವಾಗಿ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಈ ನಮ್ಮ ಸಂಘದಭಿವೃದ್ಧಿಗಾಗಿ ಪಾಟುಪಡುತ್ತಿರುವೆವಲ್ಲದೆ ಹೈಸ್ಕೂಲು ಮತ್ತು ಕಾಲೇಜು ತರಗತಿಗಳಲ್ಲಿ ವ್ಯಾಸಂಗಮಾಡುವ ನಮ್ಮ ತರುಣ ವಿದ್ಯಾರ್ಥಿಗಳಿಗೆ ಕ್ಲುಪ್ತವಾಗಿ ದ್ರವ್ಯಸಹಾಯವನ್ನು ಮಾಡುತ್ತಿದ್ದೇವೆ.

ಹಿಂದುಳಿದ ಜನಾಂಗದವರ ಪುರೋಭಿವೃದ್ಧಿಗೆ ಮಾರ್ಗದರ್ಶಕಗಳಂತಿರುವ ವಿದ್ಯಾಭ್ಯಾಸದ ಮೆಮೋರಾಂಡಂ ಮತ್ತು ಮಿಲ್ಲರ್‌ಕಮಿಟಿ ರಿಪೋರ್ಟುಗಳ ಮೇಲೆ ಸರ್ಕಾರಿ ಆರ್ಡರುಗಳನ್ನು ಮಾಡಿಸಿದುದಕ್ಕಾಗಿ ಸರ್ ಎಂ. ಕಾಂತರಾಜ ಅರಸಿನವರಿಗೂ ಅವರಿಗೆ ಸಹಾಯಕರಾಗಿದ್ದ ತಮಗೂ ನಾವು ಕೃತಜ್ಞರಾಗಿರುತ್ತೇವೆ. ಈ ಎರಡು ಆರ್ಡರುಗಳನ್ನು ಕಾರ್ಯರೂಪಕ್ಕೆ ತರುವ ಭಾರವು ಈಗ ತಮ್ಮಮೇಲೆ ಬಿದ್ದಿರುತ್ತದೆ. ಸಾನುಭೂತಿಪೂರ್ವಕವಾದ ತಮ್ಮ ಆಡಳಿತದಲ್ಲಿ ಈ ಸೌಲಭ್ಯಗಳ ಪ್ರಯೋಜನವನ್ನು ನಾವು ಸಂಪೂರ್ಣವಾಗಿ ಹೊಂದುವೆವೆಂಬ ವಿಶೇಷ ಭರವಸೆಯುಳ್ಳವರಾಗಿರುವೆವು.

ಪ್ರಜೆಗಳು ಕೊಡುವ ಹಣದಿಂ (ಪಬ್ಲಿಕ್ ಫಂಡಿನಿಂ) ದ ಪೋಷಿಸಲ್ಪಡುತ್ತಿರುವ ಸಂಸ್ಥಾನದ ಸಂಸ್ಕೃತ ಪಾಠಶಾಲೆಗಳಿಗೂ ಪ್ರೌಢವಿದ್ಯಾಲಯಗಳಿಗೂ ನಮ್ಮ ವಿದ್ಯಾರ್ಥಿಗಳು ಸೇರಿಸಲ್ಪಡಬೇಕೆಂಬ ನಮ್ಮ ನ್ಯಾಯವಾದ ಕೋರಿಕೆಯು ಒಂದೇಸಮನಾಗಿ ಪ್ರಾರ್ಥಿಸಲ್ಪಡುತ್ತಿದ್ದಾಗ್ಗೂ ಫಲಕಾರಿಯಾಗದಿರುವುದು ನಮ್ಮ ಕೊರತೆಗಳಲ್ಲೊಂದಾಗಿದೆ. ತಮ್ಮುದಾರವಾದ ಆಡಳಿತದಲ್ಲಿ ಬಹುಕಾಲದ ನಮ್ಮಿ ಕೊರತೆಯು ನಿವಾರಿಸಲ್ಪಡುವುದೆಂದು ಇದಿರುನೋಡುತ್ತಿದ್ದೇವೆ. ಸಂಸ್ಥಾನದ ಸರ್ಕಾರಿಯುದ್ಯೋಗಗಳಲ್ಲೂ, ಪ್ರತಿನಿಧಿತ್ವದ ಸಂಸ್ಥೆಗಳಲ್ಲೂ ನಮ್ಮ ಜನಾಂಗದವರು ವಿಶೇಷವಾಗಿ ಸೇರಿಸಲ್ಪಡಬೇಕೆಂದು ಒತ್ತಿ ಕೇಳಿಕೊಳ್ಳುತ್ತಿದ್ದೇವೆ. ತಮ್ಮ ಆಡಳಿತದಲ್ಲಾದರೂ ನಮ್ಮಿ ಪ್ರಾರ್ಥನೆಯು ಸರಿಯಾಗಿ ಪರ್ಯಾಲೋಚಿಸಲ್ಪಟ್ಟು ಆ ಸೌಲಭ್ಯವು ಕಲ್ಪಿಸಿಕೊಡಲ್ಪಡುವುದೆಂದು ಅತ್ಯಾಸಕ್ತಿಯಿಂದ ನಿರೀಕ್ಷಿಸುತ್ತೇವೆ.

ಸ್ವಾಮಿ, ಸರ್ವಶಕ್ತನಾದ ಆ ಪರಮೇಶ್ವರನು ತಮಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸಲೆಂದೂ, ಈಗ ತಾವು ವಹಿಸಿಕೊಂಡಿರುವ ಮಹೋನ್ನತಪದವಿಯಲ್ಲಿ ಬಹುಕಾಲದವರೆಗೂ ಇದ್ದು ಈ ಮೈಸೂರು ದೇಶೀಯರು ಮುಖ್ಯವಾಗಿ ನಮ್ಮ ಜನಾಂಗದವರು ತಮ್ಮ ಹೆಸರನ್ನು ಸರ್ವದಾ ಹಾಡಿ ಹರಸುವಂತೆ ಕೀರ್ತಿಯನ್ನು ಸಂಪಾದಿಸುವವರಾಗಬೇಕೆಂದೂ ಪ್ರಾರ್ಥಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಭರತಖಂಡದಲ್ಲಿ ಭಂಗಾರದ ಆವಶ್ಯಕತೆಯು ಹೆಚ್ಚಾಗಿರುವುದರಿಂದ ೧,೨೦,೦೦,೦೦೦ ರೂ. ಬೆಲೆಯ ಭಂಗಾರವು ಭರತಖಂಡಕ್ಕೆ ಕಳುಹಲ್ಪಟ್ಟಿದೆ.

ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳು ಆಸ್ಟ್ರೇಲಿಯಾಕ್ಕೆ ಹೋಗಲು ಕಳೆದ ತಾ|| ೧೯ ರಲ್ಲಿ ಮದರಾಸಿನಿಂದ ಕೊಲಂಬೊಕ್ಕೆ ಪ್ರಯಾಣಮಾಡಿದರು.

ಫರಿದಪುರದ ಮ್ಯುನಿಸಿಪಲ್ ಕಮಿಷನರುಗಳು ತಮ್ಮ ಮ್ಯುನಿಸಿಪಲ್ ಎಲ್ಲೆಯೊಳಗೆ ಗೋವಧೆ ಮಾಡಲ್ಪಡಕೂಡದೆಂದು ನಿರ್ಧಾರವನ್ನು ಮಾಡಿರುವರು. ಇದರಂತೆ ದೇಶೀಯ ಸಂಸ್ಥಾನಗಳಲ್ಲೂ ಆಚರಿಸಲ್ಪಡುವುದು ಅತ್ಯಾವಶ್ಯಕವಲ್ಲವೆ ?

ಕಲಕತ್ತಾದಲ್ಲಿ ಸಿಮಿಂಗ್‌ಟನ್ ಕಾಕ್ಸ್ ಕಂಪೆನಿಯ ಮ್ಯಾನೇಜರಾಗಿದ್ದ ಹರ್‌ಬರ್ಟ್ ಎಂಬುವವನು ಕಂಪೆನಿಯ ಹಣದಲ್ಲಿ 1054 ರೂಪಾಯಿಗಳನ್ನು ದುರುಪಯೋಗಪಡಿಸಿದ ಅಪರಾಧಕ್ಕಾಗಿ ಕಲಕತ್ತಾಪ್ರೆಸಿಡೆನ್ಸಿ ಮಾಜಿಸ್ಟ್ರೇಟರಿಂದ 1 ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟನು.

ಸೇಲ್ಕೋಟೆಯ ಪೋಲೀಸು ಆಳುಗಳಲ್ಲಿ ೨೦ ಜನರು ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿರುವುದಕ್ಕಾಗಿ, ಪೋಲೀಸ್ ಆಕ್ಟು ಪ್ರಕಾರ ಸೆರೆಹಿಡಿಯಲ್ಪಟ್ಟು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದುದರ ಮೇಲೆ ಪ್ರತಿಯೊಬ್ಬನೂ 3 ತಿಂಗಳ ಕಾರಾಗ್ರಹವಾಸಶಿಕ್ಷೆಯನ್ನು ವಿಧಿಸಲ್ಪಟ್ಟನು.

ಮೇ ತಾ|| ೧ ರಿಂದ ಬೆಳ್ಳಿಯ ಬೆಲೆಯು ಏರಲುಪಕ್ರಮಿಸಿದೆ. ಇದಕ್ಕೆ ಭರತಖಂಡದ ವರ್ತಕರು ಬೆಳ್ಳಿಯ ಬೆಲೆ ಇಳಿಯುತ್ತದೆಂಬ ನಿರೀಕ್ಷಣೆಯ ಮೇಲೆ ತರಿಸಿಕೊಳ್ಳದೆ ತಟಸ್ಥರಾಗಿದ್ದವರು ಈಗ ವಿಶೇಷವಾಗಿ ತರಿಸಿಕೊಳ್ಳಲೆತ್ನಿಸಿರುವುದರಿಂದ ಈ ರೀತಿ ಬೆಲೆಯೇರಲು ಕಾರಣವಾಯಿತೆಂದು ಪ್ರಕಟವಾಗಿದೆ.

ಲಾರ್ಡ್ ರೀಡಿಂಗ್ ವೈಸರಾಯಿ ದಂಪತಿಗಳು ಕಳೆದ ತಾ|| ೧೬ ರಲ್ಲಿ ತಮ್ಮ ಪ್ರಾಸಾದಕ್ಕೆ ಲೆಫ್ಟನಂಟ್ ಗೌರ್ನರು, ಕಮಾಂಡರ್‌ಇನ್‌ಚೀಫರು, ಪಾಟಿಯಾಲ ಮಹಾರಾಜರವರು ಮೊದಲಾಗಿ ೮೦೦-೯೦೦ ವರೆಗೆ ಐರೋಪ್ಯ ಮತ್ತೂ ಭಾರತೀಯ ಅತಿಥಿಗಳನ್ನು ಬರಮಾಡಿಕೊಂಡು ಆಟಪಾಟಗಳಿಂದಲೂ ಅಲ್ಪಾಹಾರದಿಂದಲೂ ಸತ್ಕರಿಸಿದರು.

ಲಾಹೋರಿನಲ್ಲಿ ಒಬ್ಬ ಅರ್ಕಸಾಲೆಯು ತನ್ನ ಮಗಳು ಎಲ್ಲಿಯೋ ಅಗೋಚರವಾಗಿದ್ದಾಳೆಂದು ಪೋಲೀಸಿನವರಿಗೆ ತಿಳಿಸಿದುದರ ಮೇಲೆ ಪೋಲೀಸು ಇನ್‌ಸ್ಪೆಕ್ಟರು ಕೆಲ ಆಳುಗಳೊಡನೆ ಹಜರತ್‌ಗಂಜಿನಲ್ಲಿ ಒಂದು ಮನೆಯನ್ನು ಅನುಮಾನದಮೇಲೆ ಶೋಧಿಸುವಲ್ಲಿ ಒಬ್ಬ ಹುಡುಗಿಯೂ ಪರೀಘರಿನ ಒಬ್ಬ ಬ್ರಾಹ್ಮಣಯುವಕಳೂ ದೊರೆತರು. ಅದರ ಮೇಲೆ ಆ ಮನೆಯ ವಾಸಸ್ಥರಾದ ದಂಪತಿಗಳಿಬ್ಬರನ್ನೂ ಬೇರೆ ಮೂವರನ್ನೂ ಅನುಮಾನದಮೇಲೆ ಸೆರೆಹಿಡಿದುಹಾಕಿರುವರು. ಒಳ್ಳೆಯ ಪ್ರಾಯದ ಸ್ತ್ರೀಯರು ಪಂಜಾಬಿಗೆ ಸಾಗಿಸಲ್ಪಟ್ಟು ವ್ಯಭಿಚಾರವೃತ್ತಿಯಲ್ಲಿ ನಿಯೋಜಿಸಲ್ಪಡುತ್ತಿರುವುದಾಗಿ ಗೊತ್ತಾಗುವುದು.

ಕಲಕತ್ತಾ ಕಾರಾಗೃಹದಲ್ಲಿ ಕೆಲ ಬಂದಿಗಳು ತಮಗೆ ಕಾಂಗ್ರೆಸ್ ಮತ್ತು ಕಿಲಾಪತ್ತು ಸಂಬಂಧದಲ್ಲಿ ರಾಜದ್ರೋಹವನ್ನು ಮಾಡಿ ಬಂದಿಗಳಾಗಿರುವವರಿಗೆ ಕೊಡಲ್ಪಡುತ್ತಿರುವಂತಹ ಉತ್ತಮವಾದ ತಿಂಡಿಯೂ ಬಟ್ಟೆಯೂ ಕೊಡಲ್ಪಡುವುದಿಲ್ಲವೆಂಬುದರ ಮೇಲೆ ಕ್ಷುಬ್ಧರಾಗಿ ಕಾವಲುಗಾರರನ್ನು ಹೊಡೆದು ಗೊಂದಲಮಾಡಿದ ಅಪರಾಧಕ್ಕಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು. ಅಲ್ಲಿಯ ಸೀನಿಯರ್ ಅ|| ಜೈಲರು ವಿಚಾರಣೆಯ ಕಾಲದಲ್ಲಿ ಸರ್ಕಾರಿಯಪ್ಪಣೆಯ ಮೇರೆಗೆ ಕಾಂಗ್ರೆಸ್ ಮತ್ತು ಕಿಲಾಪತ್ ಬಂದಿಗಳುಪಯೋಗಕ್ಕಾಗಿ ಉತ್ತಮವಾದ ಆಹಾರಪದಾರ್ಥಗಳು ಕೊಂಡುಕೊಳ್ಳಲ್ಪಟ್ಟುವು, ಆದರೆ ಇತರ ಬಂದಿಗಳಿಗೆ ಕನಿಷ್ಠ ಆಹಾರವು ಕೊಡಲ್ಪಡುತ್ತಿದೆಂಬುದು ನಿಜವಲ್ಲವೆಂದು ಸಾಕ್ಷ್ಯವನ್ನು ಹೇಳಿದನು.

ಭರತಖಂಡದ ರಾಜ್ಯಾಡಳಿತದಲ್ಲಿ ವೆಚ್ಚವನ್ನು ಕಡಿಮೆ ಮಾಡಲುಪಾಯವನ್ನು ಕಂಡುಹಿಡಿಯುವುದಕ್ಕಾಗಿ ಸೂಚಿತವಾಗಿರುವ ರಿಟ್ರೆಂಚ್‌ಮೆಂಟ್ ಕಮಿಟಿಗೆ ಇಂಡ್ಯಾ ಸರ್ಕಾರದವರು ಬಹಳ ಜಾಗರೂಕತೆಯಿಂದ ಕೆಲ ರಾಜಕಾರ್ಯ ಧುರೀಣರನ್ನು ಮೆಂಬರನ್ನಾಗಿ ನಿಯಮಿಸಬೇಕೆಂದು ಕಲಕತ್ತಾದ ಬಂಗಾಳಿ ಪತ್ರಿಕೆಯು ಸೂಚಿಸಿರುವುದಲ್ಲದೆ, ಸರ್ ಇಬ್ರಾಹಿಂ ರಹಿಮುತಲ್ಲ, ಸರ್ ಶಿವಸ್ವಾಮಿಅಯ್ಯರ್, ಸರ್ ವಿಶ್ವೇಶ್ವರಯ್ಯ ಮಿ|| ದಲಾಲ್ ಮತ್ತು ಮಿ|| ಭೂಪೇಂದ್ರನಾಥ ಬಾಸು ಇವರುಗಳ ಹೆಸರುಗಳನ್ನು ಕೊಟ್ಟಿರುತ್ತದೆ. ದುಡ್ಡನ್ನು ಮಿಗಿಸುವ ಮತ್ತು ವೆಚ್ಚಮಾಡುವ ವಿಧಾನದಲ್ಲಿ ಮಿ|| ಬಾಸುಯವರಿಗೆ ವಿಶೇಷವಾಗಿ ಅನುಭವವಿರುವುದರಿಂದ ಅವರನ್ನು ನಿಯಮಿಸುವುದು ಅತ್ಯಾವಶ್ಯಕವೆಂದು ಒತ್ತಿಹೇಳಿರುತ್ತದೆ.

ಖಾನ್ಪೂರಿನ ಮೌಲಾನಾ ಮಹಮದ್‌ಯಾಕೂಬ್ ಎಂಬುವವನು ಧಾರವಾಡ ಡಿಸ್ಟ್ರಿಕ್ಟಿನಲ್ಲಿ ರಾಜದ್ರೋಹಕರವಾದ ಭಾಷ

ಣವನ್ನು ಮಾಡಿದನೆಂಬ ಅಪರಾಧಕ್ಕಾಗಿ ಬೊಂಬಾಯಿನಲ್ಲಿ ನಡೆಯುತ್ತಿದ್ದ ವಿಚಾರಣೆಯು ಮುಗಿದಿತು. ಈ ಅಪರಾಧಿಯು ತನ್ನ ವಿಚಾರಣೆಯಲ್ಲಿ ಪೊಲೀಸು ಸಬ್ ಇನ್ಸ್‌ಪೆಕ್ಟರು ರುಜುವಾತಿಗಾಗಿ ಕೊಟ್ಟಿರುವ ಭಾಷಣದ ಕಾಪಿಯಲ್ಲಿ ಕಂಡಂತವು ತಾನು ಮಾಡಿದ ಭಾಷಣವಾಗಿಲ್ಲವು ಮತ್ತು ಸಾಕ್ಷ್ಯವನ್ನು ನುಡಿದ ನಾಲ್ವರಲ್ಲಿ ಇಬ್ಬರು ಮೀಟಿಂಗಿಗೆ ಬಂದಿರಲಿಲ್ಲವು, ಅಲ್ಲದೆ ಬಂದಿದ್ದವರೂ ಕೂಡ ಉರ್ದುಭಾಷೆಯನ್ನು ಅರಿಯದಿದ್ದವರಾಗಿದ್ದರು ಎಂದು ಹೇಳಿದುದರಮೇಲೆ 1000 ರೂಪಾಯಿಗಳಿಗೆ ಹೊಣೆಯನ್ನು ಕೊಟ್ಟಲ್ಲಿ ಬಿಟ್ಟುಬಿಡುವುದಾಗಿ ಮ್ಯಾಜಿಸ್ಟ್ರೇಟರು ಹೇಳಿದರಾದರೂ ಅಪರಾಧಿಯು ಹೊಣೆಯನ್ನು ಕೊಡಲು ಸಮ್ಮತಿಸಲಿಲ್ಲವಾಗಿ ಒಂದು ವರ್ಷಕಠಿಣಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟನು.

ಲಾಹೋರಿನ ಮ್ಯುನಿಸಿಪಾಲಿಟಿಯವರು ತಮ್ಮ ಅನುಮತಿಯಿಲ್ಲದೆ ಷಾಯಿಗೇಟಿನ ಹೊರಗಣೆ ಮ್ಯುನಿಸಿಪಾಲಿಟಿಗೆ ಸೇರಿದ ಸ್ಥಳದಲ್ಲಿ ಕಟ್ಟಲ್ಪಡುತ್ತಿರುವ ಮಸೀದಿಯ ಕೆಲಸವನ್ನು 48 ಘಂಟೆಯೊಳಗೆ ನಿಲ್ಲಿಸಬೇಕೆಂದು ನೋಟೀಸನ್ನು ಕೊಟ್ಟಿದ್ದಾಗ್ಯೂ ಮಹಮದೀಯರು ನಿಲ್ಲಿಸಲಿಲ್ಲವಾಗಿ ಪೊಲೀಸು ಮತ್ತು ಸೈನಿಕರ ಬೆಂಗಾವಲಿನಿಂದ ಮಸೀತಿ ಕಟ್ಟಡವನ್ನು ಕೆಡವಿಸಿಬಿಟ್ಟರು. ಈ ಸಂದರ್ಭದಲ್ಲಿ ಮಹಮದೀಯರು ಕೆಲಸಗಾರರಮೇಲೆ ಬಿದ್ದು ಕಲಹವನ್ನು ಮಾಡಲುದ್ಯುಕ್ತರಾಗಲು ಪೊಲೀಸರು ಮತ್ತು ಸೈನಿಕರು ಮಹಮದೀಯರನ್ನು ತಡೆದು ಗೊಂದಲವನ್ನು ನಿಲ್ಲಿಸಿದುದಲ್ಲದೆ ಸ್ಥಳಬಿಟ್ಟುಹೋಗುವುದಿಲ್ಲವೆಂದು ಹಟಮಾಡಿದ ೬ ಜನರನ್ನು ಸೆರೆಹಿಡಿದುಹಾಕಿರುವರು. ಇದೇರೀತಿಯಾಗಿ ಮ್ಯುನಿಸಿಪಾಲಿಟಿಯ ಅಪ್ಪಣೆಯಿಲ್ಲದೆ ಮಂದಿರವನ್ನು ಕಟ್ಟುತ್ತಿದ್ದ ಹಿಂದುಗಳು ಮ್ಯುನಿಸಿಪಾಲಿಟಿಯಿಂದ ನೋಟೀಸುಬಂದಕೂಡಲೆ ತಾವಾಗಿ ಕಟ್ಟಡವನ್ನು ಕೆಡವಿಬಿಟ್ಟರು.

ಡೇರಾಡನ್ನಿನ ರಾಜಕೀಯ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದ ಜಗದ್ಗುರು ಶಂಕರಾಚಾರ್ಯರು ಬೀದಿಯಲ್ಲಿ ಉತ್ಸವಗೊಂಡು ಹೋಗುತ್ತಿರುವಾಗ್ಗೆ ಅವರಿಗೆ ಪ್ರಾಣಾಪಾಯವನ್ನುಂಟುಮಾಡುವ ಪ್ರಯತ್ನವು ನಡಿಸಲ್ಪಟ್ಟಿದ್ದಿತೆಂದು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿದ್ದುದರ ಮೇಲೆ ಪಬ್ಲಿಸಿಟಿ ಕಮಿಷನರು ವಾರ್ತಾದಾಯಕ ಸಂಘದವರಿಗೆ ತಿಳಿಸಿರುವುದೇನಂದರೆ- ಈ ಉತ್ಸವವು ಚಾಂಧರಿಸಿಂಹಸಿಂಗ್‌ರವರ ಮನೆಯ ಮುಂದೆ ಹೋಗುವಾಗ್ಗೆ, ಉತ್ಸವಭಾಗಿಗಳಾಗಿದ್ದವರು ಮಹಡಿಯ ಮೇಲೆ ನಿಂತಿದ್ದ ಚಾಂಧರಿಸಿಂಹಸಿಂಗನನ್ನು ಕೆಳಗಿಳಿಯಬೇಕೆಂದು ಹೇಳಿದುದರ ಮೇಲೆ ಅವರಿಗೂ ಆ ಸಿಂಗನಿಗೂ ವಾಕ್ಕಲಹಗಳಾಗಿ ಸಿಂಗನು ಒಂದು ಜೋಡನ್ನು ಕೆಳಕ್ಕೆ ಬಿಸಾಡಿದನು. ಅದು ಶಂಕರಾಚಾರ್ಯರ ಮೇಲೆ ಹಿಡಿಯಲ್ಪಟ್ಟಿದ್ದ ಛತ್ರಿಗೆ ತಗಲಲು ಗುಂಪಿನಲ್ಲಿದ್ದ ಜನರು ರೇಗಿ ಸಿಂಗನನ್ನು ಹೊಡಿಯಲೆತ್ನಿಸಿದರು. ಆಗ ಸಿಂಗನು ಅವರನ್ನು ಬೆದರಿಸಲು ಅಂತರಿಕ್ಷಕ್ಕೆ ಗುಂಡನ್ನು ಹಾರಿಸಿದನು. ಇದರಮೇಲೆ ಆ ಸಿಂಗನಿಗೆ ಕೊಡಲ್ಪಟ್ಟಿದ್ದ ಆಯುಧದ ಲೈಸೆನ್ಸು ಕಿತ್ತುಕೊಳ್ಳಲ್ಪಟ್ಟಿದ್ದಿತು, ಎಂಬ ಸಂಗತಿಯು ಸ್ಥಳೀಯಾಧಿಕಾರಿಗಳ ವರದಿಯಿಂದ ತಿಳಿಯಬರುತ್ತದೆ.

ಡೇರಾಡನ್ನಿನಲ್ಲಿ ವಾಲ್ಟರ್ ಜಾರ್ಜ್ ಮ್ಯಾಡ್ಜ್ ಎಂಬ ೧೯ ವರ್ಷ ವಯಸ್ಸಿನ ಐರೋಪ್ಯನು "ಮಹಾತ್ಮ ಗಾಂಧಿಕಿ ಜೈ" ಎಂದು ಕೂಗಿಕೊಂಡು ಮಾರ್ಗದಲ್ಲಿ ಬರುತ್ತಿದ್ದ ಕೆಲ ವಿದ್ಯಾರ್ಥಿಗಳನ್ನು ನೋಡಿ ಅವರಲ್ಲೊಬ್ಬ ಬಾಲಕನ ತಲೆಯ ಮೇಲಿದ್ದ ಗಾಂಧಿ ಟೊಪ್ಪಿಗೆಯನ್ನು ಕಿತ್ತುಕೊಂಡು ನೆಲದ ಮೇಲೆ ಹಾಕಿ ಕಾಲಿನಿಂದ ವಸಗಿದನು ಆಗ ಗುಂಪಿನಲ್ಲಿದ್ದ ಅಕ್ಬರ್ ಹುಸೇನ್ ಎಂಬುವನು ಐರೋಪ್ಯನ ಅಕೃತ್ಯವನ್ನು ನಿಂದಿಸಿ ಆ ಹುಡುಗನನ್ನು ಬಿಡಿಸಿಕೊಳ್ಳುವಾಗ್ಗೆ ಐರೋಪ್ಯನು ನಿನಗೆ ತಕ್ಕಶಿಕ್ಷೆಯನ್ನು ಮಾಡುತ್ತೇನೆಂದು ಮಚ್ಚರಿಸಿಕೊಂಡು ಹೋಗಿ ಸ್ವಲ್ಪಹೊತ್ತಿನಲ್ಲೇ ತುಪಾಕಿಯನ್ನು ತಂದು ಅಕ್ಬರ್ ಹುಸೇನಿನಮೇಲೆ ಬಿದ್ದು ಕಲಹಮಾಡಿ ಕಡೆಯಲ್ಲಿ ಗುರೀಕಟ್ಟಿ ಪಿಸ್ತೋಲನ್ನು ಹಾರಿಸಿದನು. ಅಕ್ಬರ್‌ಹುಸೇನು ಗುಂಡಿನೇಟನ್ನು ತಿಂದು ಕೆಳಗೆಬಿದ್ದು ಕೊಂಚಹೊತ್ತಿನಲ್ಲಿ ಚೇತರಿಸಿಕೊಂಡು ಹೋಗಿ ಪೊಲೀಸಿಗೆ ದೂರುಹೇಳಿಕೊಂಡನು. ಪೊಲೀಸರು ಆ ಐರೋಪ್ಯನನ್ನು ಶಹರಾನ್‌ಪುರದ ಸೆಷನ್ಸ್ ಜಡ್ಜರಲ್ಲಿ ವಿಚಾರಣೆಗೆ ಗುರಿಮಾಡಿರುವಲ್ಲಿ ೧೫ ತಿಂಗಳ ಕಠಿಣಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟಿತು. ಅದರಮೇಲೆ ಐರೋಪ್ಯನು ಅಲಹಾಬಾದಿನ ಹೈಕೊರ್ಟಿಗೆ ಅಪೀಲುಮಾಡಿಕೊಂಡಿರಲು ಕೆಳಕೋರ್ಟಿನ ಶಿಕ್ಷೆಯು ಸ್ಥಿರಗೊಳಿಸಲ್ಪಟ್ಟಿತು.

ಬಂಗಾಳಾ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾಗಿದ್ದ ನವಾಬ್ ಸರ್ ಸಯದ್ ಷಾಮ್ಸ್ ಉಲ್ ಹುಲಾಯವರು ಅನಾರೋಗ್ಯ ದೆಶೆಯಿಂದ ಉದ್ಯೋಗವನ್ನು ಬಿಡುವ ಪ್ರಯುಕ್ತ ಮಿ|| ಎಚ್. ಇ. ಎ. ಕಾಟನ್‌ರವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಲೊಪ್ಪಿರುತ್ತಾರೆ. ಇವರು ಪೂರ್ವದಲ್ಲಿ ತಂಜಾವೂರಿನ ಕಲೆಕ್ಟರಾಗಿಯೂ ಅನಂತರ ಈಸ್ಟ್ ಇಂಡ್ಯಾ ಕಂಪೆನಿಯ ಚೇರ್ಮನ್ನರಾಗಿಯೂ ಇದ್ದ ಜಾನ್ ಕಾಟನ್‌ರವರ ಮೊಮ್ಮಕ್ಕಳು ಮತ್ತು ಅಸ್ಸಾಮಿನ ಚೀಫ್ ಕಮಿಷನರಾಗಿದ್ದ ಸರ್ ಹೆನ್ರಿಕಾಟನ್‌ರವರ ಮಕ್ಕಳು. ಈ ಮಿ|| ಎಚ್. ಇ. ಎ. ಕಾಟನ್‌ರವರು ೧೩ ವರ್ಷಕಾಲ ಕಲಕತ್ತಾ ಹೈಕೋರ್ಟಿನ ಅಡ್ವೊಕೇಟರಾಗಿದ್ದರಲ್ಲದೆ ಭರತಖಂಡದ ಸಾರ್ವಜನಿಕ ಮಹಾಸಭೆಯ ಮೆಂಬರಾಗಿದ್ದು ಭಾರತೀಯರ ಅಭಿವೃದ್ಧಿಯನ್ನು ಕೋರಿ ಕೆಲಸಮಾಡುತ್ತಿದ್ದರು. ಇವರು ತಮ್ಮ ತಂದೆಯವರು ಗತಿಸಿದ ಮೇಲೆ ಸೀಮೆಗೆ ಹೋಗಿ ಸಾರ್ವಜನಿಕ ಮಹಾಸಭೆಯವರ ವತಿಯಿಂದ ಹೊರಡುವ ಇಂಡ್ಯಾ ಎಂಬ ವಾರ್ತಾಪತ್ರಿಕೆಯ ಸಂಪಾದಕತ್ವವನ್ನು ವಹಿಸಿ ಭರತಖಂಡದ ಸೇವೆಯನ್ನು ಮಾಡುತ್ತಿದ್ದರು. ಭರತಖಂಡದ ಸ್ಥಿತಿಗತಿಯನ್ನು ಬಲ್ಲಂತಹ ಮಿ|| ಎಚ್. ಇ. ಎ. ಕಾಟನ್‌ರವರನ್ನು ನ್ಯಾಯವಿಧಾಯಕ ಸಭೆಯ ಅಧ್ಯಕ್ಷರನ್ನಾಗಿ ಬಂಗಾಳಾ ಲೆ|| ಗೌರ್ನರಾದ ಲಾರ್ಡ್ ಲಿಟನ್‌ರವರು ನಿಯಮಿಸಿದುದಕ್ಕೋಸ್ಕರ ಭಾರತೀಯರೆಲ್ಲರೂ ಬಹಳ ಸಂತುಷ್ಟರಾಗಿ ಲಿಟನ್ ಪ್ರಭುಗಳನ್ನು ವಂದಿಸುತ್ತಿರುವರು.

ವಿದೇಶದ ವೃತ್ತಾಂತಗಳು

ಅಮೇರಿಕಾ ದೇಶಸ್ಥನಾದ ಮೊಂಟೆನ್ ಎಂಬುವನು ಭೂಪ್ರದಕ್ಷಿಣವನ್ನು ಪಾದಚಾರಿಯಾಗಿ ಮಾಡಿಕೊಂಡು ಬರಲು ಸಂಕಲ್ಪಿಸಿ ಕಲಕತ್ತಾಕ್ಕೆ ಬಂದಿರುವನು. ಈತನು ತನ್ನ ಸಾಮಾನುಗಳ ಸಹಿತ ಈ ವರೆಗೆ ೧೨,೦೦೦ ಮೈಲಿ ನಡೆದುಕೊಂಡು ಬಂದಿರುವನು.

ಲಂಡನ್ ಪಟ್ಟಣದಿಂದ ಟಪಾಲನ್ನು ತೆಗೆದುಕೊಂಡು ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಬೊಂಬಾಯಿಗೆ ಬರುತ್ತಿದ್ದ ಈಜಿಪ್ಟ್ ಎಂಬ ಹಡಗು ಕಳೆದ ಭಾನುವಾರ ಮಂಜಿನ ಆಧಿಕ್ಯದಿಂದ ಇದಿರಿಗೆ ಬರುತ್ತಿದ್ದ ಸೀನ್ ಎಂಬ ಮತ್ತೊಂದು ಹಡಗನ್ನು ಕಾಣದೆ ಅದಕ್ಕೆ ತಾಕುಬಡಿದು ಮುಳುಗಿಹೋಯಿತು. ಅದರೊಳಗಿದ್ದ ಪ್ರಯಾಣಿಕರಲ್ಲಿ ೮೦ ಜನರವರೆಗೆ ಮಾಯವಾಗಿರುವರೆಂದೂ ಉಳಿದವರು ದೋಣಿಗಳ ಮತ್ತು ತಾಕುಬಡಿದ ಸೀನ್ ಹಡಗಿನ ಸಹಾಯದಿಂದ ಸಂರಕ್ಷಿಸಲ್ಪಟ್ಟರೆಂದೂ ತಿಳಿಯಬಂದಿದೆ.

19 ವರ್ಷವಯಸ್ಸಿನ ಮಿಸ್ ಇವಿಹಾಕ್ ಎಂಬ ಪಾಶ್ಚಾತ್ಯಯುವತಿಯು ಥೇಮ್ಸ್‌ನದಿಯಲ್ಲೀಜುವಸ್ಪರ್ಧೆಯಲ್ಲಿ 1918, 1919 ಮತ್ತು 1920 ರಲ್ಲಿ ಬಹಳದೂರ ಈಜಾಡಿ ಬಹುಮಾನಗಳನ್ನು ಪಡೆದಿರುತ್ತಾಳೆ. ಮತ್ತು 1916 ರಲ್ಲಿ ಲೀನ್‌ಲೀ ಎಂಬಾಕೆಯು ಟೆಡ್ಡಿಂಗ್‌ಟನ್‌ನಿಂದ ವಾಪಿಂಗ್‌ಟನ್ ವರೆಗೆ 36½ ಮೈಲಿ ದೂರ 10 ಘಂಟೆ 17 ಮಿನಿಟುಗಳಲ್ಲಿ ಈಜಿದ್ದಂತೆ ತಾನೂ ಕಳೆದವರ್ಷ ಸೆಪ್ಟಂಬರ್ ತಾ|| 10 ರಲ್ಲಿ ಟೆಡ್ಡಿಂಗ್‌ಟನ್ನಿನಿಂದ ವಂಡ್ಸ್‌ವರ್ತ್‌ವರೆಗೆ ಈಜಿಕೊಂಡು ಹೋಗಲು ಪ್ರಯತ್ನಿಸಿ ಮಧ್ಯೆ ದ್ವಾರವು ಮುಚ್ಚಲ್ಪಟ್ಟಿದ್ದುದರಿಂದ ಮರಳಿ ಟೆಡ್ಡಿಂಗ್‌ಟನ್ನಿಗೆ ಈಜಿಕೊಂಡು ಬಂದಳು. ಈ ಪ್ರಯತ್ನದಲ್ಲಿ 12½ ಘಂಟೆ ಕಾಲದಲ್ಲಿ ೨೫ ಮೈಲಿ ದೂರ ಈಜಿಕೊಂಡು ಹೋಗಿರುವಳು.

ರೋಂ ಪಟ್ಟಣದಲ್ಲಿ ಅಸಿವಾರಣೀಯ ರೋಗಪೀಡಿತರ ಉಪಯೋಗಕ್ಕಾಗಿ ೮೦೦ ಜನರಿರುವಷ್ಟು ವಿಶಾಲವಾದ ಆಸ್ಪತ್ರೆಯೊಂದಿದೆ. ಇದು ಬಹಳ ಪುರಾತನವೂ ಪ್ರಖ್ಯಾತವೂ ಆಗಿರುವುದು. ಈ ಆಸ್ಪತ್ರೆಯಲ್ಲಿ ಒಟ್ಟಿಯನ್ನೊಗಿಯುವ ಕೊಠಡಿಯಲ್ಲಿ ಹೇಗೋ ಬೆಂಕಿಯು ಹೊತ್ತಿಕೊಂಡು ಜ್ವಾಲೆಯು ಕಿಟಿಕಿ ಮತ್ತು ಬಾಗಿಲುಗಳ ಮುಖಾಂತರ ಹೊರಹೊರಟಾಗ ಜನರಿಗೆ ಗೋಚರವಾಯಿತು. ಬೆಂಕಿಯ ಜ್ವಾಲೆಯಿಂದ ವೈದ್ಯುತದೀಪಗಳ ತಂತಿಯು ಸುಟ್ಟುಹೋಗಿ ಆಸ್ಪತ್ರೆಯಲ್ಲಿ ಬೆಳಕಿಲ್ಲದೆ ಕತ್ತಲೆಯಾದುದರಿಂದ ಸಹಾಯಕ್ಕೆ ಬಂದ ಜನರು ಸಂಬುಗಳನ್ನುಪಯೋಗಿಸಬೇಕಾಯಿತು. ದೀರ್ಘಕಾಲದಿಂದ ನರಳುತ್ತಿದ್ದ ರೋಗಿಗಳ ಕೊಠಡಿಯಲ್ಲಿ ಬಹಳಜನರು ಸತ್ತುಹೋದರು. ಅದರಲ್ಲಿದ್ದ ರೋಗಿಗಳು ತಂತಮ್ಮ ಹಾಸಿಗೆಗಳನ್ನು ಬಿಟ್ಟು ಮೂಲೆಗೆ ಬಂದು ಸೇರಿಕೊಂಡ ಕೂಡಲೆ ಮೇಗಲ ತಾರಸಿಯು ಬಿದ್ದು ಮರದ ಸಾಮಾನೂ, ಹಾಸಿಗೆಗಳೂ ಹೊತ್ತಿಕೊಂಡು ಉರಿಯಲಾರಂಭಿಸಿದುವು. ಇದರಲ್ಲಿ ೨೦ ಜನರು ಸಿಕ್ಕಿ ಹತರಾದರು. ಮಹಡಿಯ ಮೇಲಿಂದ ಇಳಿಯುವ ಹಂತವು ಬಹಳ ಅಪಾಯವಾಗಿದ್ದುದರಿಂದ ಅನೇಕ ರೋಗಿಗಳು ಕಿಟಿಕಿಗಳ ಮೂಲಕ ಹೊರಗಡೆಗೆ ಸಾಗಿಸಲ್ಪಟ್ಟರು. ೨೫ ಸೀರಿನ ಯಂತ್ರಗಳ ಸಹಾಯದಿಂದ ಜ್ವಾಲೆಯು ಬೆಳಗಿನ ಹತ್ತು ಗಂಟೆಯ ಹೊತ್ತಿಗೆ ಆರಿಸಲ್ಪಟ್ಟಿತು. ಈ ಅಗ್ನಿದೇವತೆಗೆ ಆಹುತಿಯಾದವರೆಲ್ಲರೂ ೫೦ ರಿಂದ ೭೦ ವಯಸ್ಸಿನವರಾಗಿದ್ದರು.

ಲಗ್ನದ ಫಂಡು.

1. ಮುಡಿಗುಂಡದಲ್ಲಿರುವ ಗುರುಕಾರ್ ಮ|| ರಾ|| ಮಲ್ಲೇದೇವರು ಪುತ್ರಸ್ವೀಕಾರಮಹೋತ್ಸವಕಾಲದಲ್ಲಿ ತೆಗೆದು ಮ|| ರಾ|| ಜಿ. ಪಿ. ಮಲ್ಲಪ್ಪನವರ ಮೂಲಕ ಕಳುಹಿಸಿದ್ದು. 5-0-0.

2. ದೊಡ್ಡಬಳ್ಳಾಪುರದ ಸ್ಕೂಲ್ ಮಾಸ್ಟರಾಗಿದ್ದ ಮ|| ರಾ|| ಶಾಂತವೀರಪ್ಪನವರ ಮಗಳು ಚಿ|| ಸೌ|| ಪಾರ್ವತಮ್ಮನವರ ನಿಷೇಕಪ್ರಸ್ತದಲ್ಲಿ ತೆಗೆದು ಮ|| ರಾ|| ಡಿ. ಎಸ್. ರುದ್ರಪ್ಪ, II Year B. A. ಇವರ ಮೂಲಕ ಕಳುಹಿಸಿದ್ದು. 1-0-0.

3. ದೊಡ್ಡಬಳ್ಳಾಪುರದ ಹೋಟಲ್ ಮ|| ರಾ|| ಕೆಂಪಣ್ಣನವರ ಪುತ್ರಿಯವರ ಲಗ್ನದಲ್ಲಿ ಫಂಡಿಗಾಗಿ ಮ|| ರಾ|| ಜವಳಿ ಅಂಗಡಿ ಮರಿಬಸಪ್ಪನವರ ಮೂಲಕ ಕಳುಹಿಸಿದ್ದು. 0-8-0.

4. ಬೆಂಗಳೂರು ಸಿಟಿ ಗಂಧಿಗೆ ಅಂಗಡಿ ಮ|| ರಾ|| ಪಿ. ಎಂ. ಬಸಪ್ಪನವರ ಲಗ್ನದಲ್ಲಿ ಫಂಡಿಗಾಗಿ ತೆಗೆದದ್ದು ಮ|| ರಾ|| ವಿವಾಹ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಮೂಲಕ 20-0-0.

5. ಹಾಸನ ಡಿ|| ಆಲೂರು ಸಾಹುಕಾರ್ ಶೀಳಿನ ಮ|| ರಾ|| ಉರಿಬಸಪ್ಪನವರ ಕುಮಾರ ಮ|| ರಾ|| ಎ. ಎಸ್. ಮಲ್ಲಿಕಾರ್ಜುನಪ್ಪನವರಿಗೆ ಹಾಸನದ ಸಾಹುಕಾರ್ ಮ|| ರಾ|| ಕೇಣಿಮಹದೇವಪ್ಪನವರ ಕುಮಾರಿ ಪಾರ್ವತಮ್ಮನವರನ್ನು ಕೊಟ್ಟು ನಡಸಿದ ಲಗ್ನದಲ್ಲಿ, ಮ|| ರಾ|| ಟಿ. ರಾಚಪ್ಪನವರ ಮೂಲಕ ವರನಕಡೆಯಿಂದ ರೂ 15-0-0, ವಧುವಿನ ಕಡೆಯಿಂದ ರೂ. 10. ಒಟ್ಟು 25-0-0.

6. ತಿಪಟೂರು ಮ|| ರಾ|| ಸಾಪು ಸಿದ್ಧಪ್ಪನವರ ಮಗಳನ್ನು ಬೆಂಗಳೂರು ಮ|| ರಾ|| ಪಿ. ಎನ್. ಚನ್ನಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಮ|| ರಾ|| ಡಿ|| ಎಸ್. ಮಲ್ಲಪ್ಪನವರ ಮೂಲಕ. 4-0-0.

7. ಚಿಕ್ಕಮಗಳೂರು ಕಾಫಿಪ್ಲಾಂಟರ್ ಮ|| ರಾ|| ಟಿ. ಚನ್ನಬಸಪ್ಪಶೆಟ್ಟರ ಮಗಳ ಲಗ್ನದಲ್ಲಿ ಫಂಡಿಗಾಗಿ ಜಮಾ 5-0-0.

8. ದೊಡ್ಡಬಳ್ಳಾಪುರದ ಹೊಸ ಅಂಗಡಿ ಮ|| ರಾ|| ಚಿಕ್ಕರುದ್ರಪ್ಪನವರ ಮಗಳು ಚಿ|| ಸೌ|| ಬಸಮ್ಮನವರ ಲಗ್ನದಲ್ಲಿ ವಧೂವರರ ಕಡೆಯಿಂದ ಫಂಡಿಗಾಗಿ ಮ|| ರಾ|| ಡಿ. ಎಸ್. ರುದ್ರಪ್ಪನವರ ಮೂಲಕ 2-0-0.

ಜುಮ್ಲಾ ರೂ. ಗಳು. 62-8-0

ಈ ಮೇಲ್ಕಂಡ ಮೊಬಲಗನ್ನು ವಂದನಪೂರ್ವಕವಾಗಿ ಸ್ವೀಕರಿಸಿರುತ್ತೆ.

ಬೆಂಗಳೂರು. ತಾ|| 8-5-23 } ಜಿ. ಪರಮಶಿವಯ್ಯ ಬಿ.ಎ. ಎಲ್.ಎಲ್.ಬಿ. ಅಡ್ವೊಕೇಟ್ ಮತ್ತು ಸೆಕ್ರಿಟೆರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ, ಬೆಂಗಳೂರು.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಳನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮುಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

17 ಬಳ್ಳಾರಿ.

೧೯೨೩ನೆಯ ಇಸವಿ ಮೇ ತಾ|| ೨೮ ರಿಂದ ೧೯೨೩ ನೆಯ ಜೂನ್ ತಾ|| ೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ದುಂದುಭಿನಾಮಸಂವತ್ಸರದ ಜ್ಯೇಷ್ಠ ಶುದ್ಧ ಬಿದಿಗೆಯಿಂದ ಜ್ಯೇಷ್ಠ ಶುದ್ಧ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭಮಾ
28	ಭಾನು	ಬಿದಿ	39-30	ಮೃಗ	34-45	15
29	ಸೋಮ	ತದಿ	36-28	ಆದ್ರಾ	34-8	16
30	ಮಂಗಳ	ಚೌತಿ	32-30	ಪುನ	31-37	17
31	ಬುಧ	ಪಂಚ	27-41	ಪುಷ್ಯ	28-55	18
1	ಗುರು	ಷಷ್ಠಿ	22-13	ಆಶ್ಲೇ	26-57	19
2	ಶುಕ್ರ	ಸಪ್ತ	16-23	ಮಖಾ	21-30	20
3	ಶನಿ	ಅಷ್ಟ	10-12	ಪುಬ್ಬ	17-23	21

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸನ್ ೧೯೨೩ ನೆಯ ಇಸವಿ ಜೂನ್ ತಾರೀಖು ೪ ನೆಯ ಭಾನುವಾರ (ಸಂಚಿಕೆ ೨೩

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶರ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಟದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು, ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯನ್ಜ ರೋಗಿಗಳು ಆರೋಗ್ಯ ಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ,

21 ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ವಾಪಸ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತುಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 49

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ, ಪೋಸ್ಟ್ ಬನವಾಸಿ, ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ।	೦—೧೪—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನುಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೪—೦; ಬಿಳಿಗ್ಲೇಸ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೨ ೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್, ಸ್ಟಾರಾಫೀಸ್, ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

22 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ

ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 12

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿ



ಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ, ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಜೂನ್ ತಾ|| ೪ ನೆಯ ಭಾನುವಾರ.

MAHARAJA'S BIRTHDAY.

To-morrow is the Birthday of His Highness Sri Krishnarajendra Wodeyar Bahadur, G.C.S.I., G.B.E., the Maharaja of Mysore, which is the day of universal rejoicing in the Mysore State, and we join in the chorus of reverential prayer to the Almighty to grant His Highness the return of many a more of such Birthday. It is the unique privilege and good fortune of the people of Mysore to have so noble, so high-souled, so patriotic and so wise a Prince as its Ruler. There have been mighty potentates who have been feared by their subjects and many also who have been popular, but we cannot think of a Ruler who is equally beloved of his people. The welfare of his subjects is his sole care, the enhancement of the reputation of Mysore his only ambition and the remodelling of Mysore into a land fairer far than any that our history shows us his highest ideal. His Highness' life which is a shining example of purity and grace is an inspiration to his people.

Great as has been India's past in some respects its history has been the most chequered of all, and the disinterested critic whose object in the study of the past is not pride but profit cannot disguise the fact that India has provided a stage on which every kind of iniquity has been enacted—whatever name or form it might have taken—and that the fate that has overtaken the land is but a *nemisis* of its own previous *karma*. Happy it is indeed to see the first streaks of the dawn breaking after a long and protracted night, and we in Mysore see them as clearly as our brothren of the rest of India. Social justice—which is indespensable for a nation's true freedom, unity and strength and the greatest need of India, and from which all else would flow is sought to be introduced in a systematic manner for the first time in Mysore. The measures inaugurated during the *regime* of Sir M. Kantharaj Urs, as Dewan of Mysore, which stands unique from this point of view has won for His Highness the Maharaja the undying eternal gratitude of his subjects, and we could do no better than wish the continuance and the consummation of the work during the *regime* of Mr. A. R. Banerji whose reputation as a Liberal is unquestioned.

LONG LIVE HIS HIGHNESS THE MAHARAJA.

MR. IYER—THE INDESPENSABLE.

The Government have once again given an extension to Dewan Bahadur C. Srikanteswara Iyer, B.A., B.L., by one year as the President of the Mysore City Municipal Council, and this as a reply to the almost unanimous resolution passed at a special meeting of the Municipal Council some months ago requesting the Government to give the Council the power of electing its own President, and to the unanimous resolution passed some time later for waiting in a deputation on the Dewan Saheb to press the above resolution. Knowing as we do the working of the ways we cannot say this comes to us entirely as a surprise. What we fail to understand is how the Government thinks that Mr. Iyer's Presidentship is so absolutely indespensable as not to be risked in open election. We have said enough on this matter and do not wish to tread over past ground. The reason supposed to be given for not accepting the resolution of the Council—which is the voice of the ratepayers—is that the Government have under contemplation a revision of the constitution of the City Municipal Councils themselves to bring them more or less in conformity with the corporations of British India. What earthly connection there is between the evolving of a new constitution and the witholding of the privilege demanded we fail to see, unless it be that in the new scheme the right of election will be taken away altogether from the Councils which is too absurd to think of. Further, Mr. Iyer has put in a term long enough in the Council to have created an impression there. The question is whether he has gained the confidence of the body or not. If he has, why not be trusted to the election of his colleagues in the Council? If he has not after all these years, what justification is there for the Government to foist him on an unwilling Council? Would it conduce to the smooth and harmonious working of the Council, so essential to the well-being of the citizens? Both principle and policy would have dictated a different course, and if what is done cannot be undone we earnestly hope that the Government would at least concede the privilege to this major municipality at the earliest opportunity.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರು.

ರಾಜಧಾನಿಯ ಮ್ಯುನಿಸಿಪಲ್ ಆನರರಿ ಪ್ರೆಸಿಡೆಂಟರಾದ ದಿ|| ಬ|| ಸಿ. ಶ್ರೀಕಂಠೇಶ್ವರ ಅಯ್ಯರ್‌ರವರ ಅಧಿಕಾರದವಧಿಯು ಈ ಜೂನ್ ತಿಂಗಳ ಕಡೆಯಲ್ಲಿ ಮುಗಿಯುವುದರಿಂದ, ಕೌನ್ಸಿಲರುಗಳು ತಮ್ಮಲ್ಲಿ ಅರ್ಹರಾದವರೊಬ್ಬರನ್ನು ಪ್ರೆಸಿಡೆಂಟರನ್ನಾಗಿ ಮಾಡಿಕೊಳ್ಳಲು ಅಧಿಕಾರವನ್ನು ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿದ್ದರಾದರೂ ಸರ್ಕಾರದವರು ಬ್ರಿಟಿಷ್ ರಾಜ್ಯದ ಮ್ಯುನಿಸಿಪಾಲಿಟಿಗಳಲ್ಲಿರುವಂತೆ ಕಮಿಷನರುಗಳನ್ನು ನಿಯಮಿಸಬೇಕೆಂಬ ಅಭಿಪ್ರಾಯದಿಂದ ಅವರ ಪ್ರಾರ್ಥನೆಯನ್ನು ಅಂಗೀಕರಿಸದೆ ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರೇ ೧೯೨೩ ನೆ ಇಸವಿಯ ಜೂನ್ ತಿಂಗಳ ಕಡೆಯವರೆಗೂ ಪ್ರೆಸಿಡೆಂಟರಾಗಿರತಕ್ಕದೆಂದು ಅಪ್ಪಣೆಮಾಡಿರುತ್ತಾರೆ.

ಬ್ರಿಟಿಷ್ ರಾಜ್ಯದ ಮ್ಯುನಿಸಿಪಾಲಿಟಿಗಳಲ್ಲಿ ಕೌನ್ಸಿಲರುಗಳು ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟ ವಿಷಯಗಳನ್ನು ಪರ್ಯಾಲೋಚಿಸಿ ಅದರ ಮೇಲೆ ಮಾಡುವ ರೆಜ್ಯುಲೇಷನ್ನುಗಳಿಗನುಸಾರವಾಗಿ ಕಾರ್ಯಾಡಳಿತವನ್ನು ನಡಿಸುವುದಕ್ಕೋಸ್ಕರ ಕಮಿಷನರುಗಳು ನಿಯಮಿಸಲ್ಪಟ್ಟಿರುವುದರಿಂದ ಅಲ್ಲಿಯ ಕೌನ್ಸಿಲರುಗಳಿಗೆ ಮೀಟಿಂಗಿನಲ್ಲಿ ವಿಷಯವಿಮರ್ಶೆ ಮಾಡುವುದರ ವಿನಾ ಕಾರ್ಯಾಡಳಿತದಲ್ಲಿ ಯಾವ ವಿಧವಾದ ಸಂಬಂಧವೂ ಇಲ್ಲವು. ಆದರೆ ನಮ್ಮ ಮ್ಯುನಿಸಿಪಾಲಿಟಿಗಳಲ್ಲಿ ಹಾಗಿರದೆ, ಕೌನ್ಸಿಲರುಗಳೇ ತಾವು ಮಾಡಿದ ರೆಜ್ಯುಲೇಷನ್ನುಗಳನ್ನನುಸರಿಸಿ ಕಾರ್ಯವನ್ನು ನಡಿಸತಕ್ಕವರಾಗಿರುವರು. ಆದುಕಾರಣ ನಮ್ಮ ಸರ್ಕಾರದವರು ಬ್ರಿಟಿಷ್ ರಾಜ್ಯದ ಮ್ಯುನಿಸಿಪಾಲಿಟಿಗಳ ಪದ್ಧತಿಯನ್ನನುಸರಿಸಿ ತಮ್ಮಲ್ಲಿಯ ದೊಡ್ಡ ದೊಡ್ಡ ಮ್ಯುನ್ಸಿಪಾಲಿಟಿಗಳಿಗೆ ಕಮಿಷನರುಗಳನ್ನು ನಿಯಮಿಸಿಕೊಳ್ಳಲವಕಾಶವಾಗುವಂತೆ ಮ್ಯುನ್ಸಿಪಲ್ ವಿಧಿಗಳಲ್ಲಿ ತಿದ್ದುಪಡಿ ಮಾಡುತ್ತಿರುವುದಾಗಿ ಕೇಳುತ್ತೇವೆ.

ಹಾಗೆ ಕಮಿಷನರು ನಿಯಮಿಸಲ್ಪಟ್ಟಾಗ್ಗೂ ಬ್ರಿಟಿಷ್ ಮ್ಯುನಿಸಿಪಾಲಿಟಿಗಳಲ್ಲಿ ಪ್ರಜಾನಿಯುಕ್ತ ಪ್ರೆಸಿಡೆಂಟರಿರುವಂತೆ ನಮ್ಮ ಮ್ಯುನಿಸಿಪಾಲಿಟಿಗಳಲ್ಲೂ ಪ್ರೆಸಿಡೆಂಟರು ಇದ್ದೇ ತೀರಬೇಕಾಗಿದೆ. ಅಂತಹದರಲ್ಲಿ ನಮ್ಮ ಸರ್ಕಾರದವರು ತುಮಕೂರು ಚಿಕ್ಕಮಗಳೂರು ಮೊದಲಾದ ಸಣ್ಣ ಸ್ಥಳಗಳ ಮ್ಯುನಿಸಿಪಾಲಿಗಳಿಗೆ ಪ್ರೆಸಿಡೆಂಟರನ್ನು ನಿಯಮಿಸಿಕೊಳ್ಳುವ ಅಧಿಕಾರವನ್ನು ಕೊಟ್ಟು ರಾಜಧಾನಿಯ ಮ್ಯುನ್ಸಿಪಾಲಿಟಿಗೆ ಮಾತ್ರ ಕೊಡದಿರುವುದು ಸಖೇದಾಶ್ಚರ್ಯದಾಗಿದೆ. ಮತ್ತೂ ದಿ|| ಬ|| ಶ್ರೀಕಂಠೇಶ್ವರ ಅಯ್ಯರ್‌ರವರಂತಹ ಕಾರ್ಯನಿರ್ವಾಹಶಕ್ತರು ಮತ್ತೊಬ್ಬರು ದೊರೆಯುವುದಿಲ್ಲವೆಂದು ಸರ್ಕಾರದವರು ಭಾವಿಸಿರುವುದಾಗಿ ಊಹಿಸಬೇಕಾಗಿದೆ. ಸರ್ಕಾರದವರು ವಾಸ್ತವ್ಯವಾಗಿ ಹಾಗೆ ತಿಳಿದಿದ್ದರೆ ಅದು ಶುದ್ಧ ತಪ್ಪು. ಏತಕ್ಕೆಂದರೆ, ರಾಜಧಾನಿಯ ಮ್ಯುನ್ಸಿಪಾಲಿಟಿಗಿಂತಲೂ ಎಷ್ಟೋ ದೊಡ್ಡದಾದ ಬೆಂಗಳೂರು ಮ್ಯುನಿಸಿಪಾಲಿಟಿಯ ಆನರರಿ ಪ್ರೆಸಿಡೆಂಟರ ಉದ್ಯೋಗವನ್ನು ವಹಿಸಿಕೊಂಡು ೫-೬ ವರ್ಷಗಳ ಕಾಲಕ್ಕೆ ಮೇಲ್ಪಟ್ಟು ಬಹಳ ವಿಚಕ್ಷಣೆಯಿಂದಲೂ ದರ್ಪದಿಂದಲೂ ಜನೋಪಯುಕ್ತವಾದ ಕೆಲಸಗಳನ್ನು ಮಾಡಿ ೬-೭ ಲಕ್ಷ ರೂಪಾಯಿಗಳವರೆಗೆ ಗಳಿಸಿಟ್ಟು ಸರ್ಕಾರದವರ ಮೆಚ್ಚಿಗೆಗೂ, ಪ್ರಜೆಗಳ ಅನುರಾಗಕ್ಕೂ ಪಾತ್ರರಾಗಿದ್ದ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣಸೆಟ್ಟಿ, ಸಿ. ಐ. ಇ., ಯವರ ಬದಲು ಪ್ರೆಸಿಡೆಂಟರಾಗಿ ಕೌನ್ಸಿಲರುಗಳಿಂದಲೇ ನಿಯಮಿಸಲ್ಪಟ್ಟ ಮ|| ಗರುಡಾಚಾರರು ಮೂರು ವರುಷಕಾಲ ಮ್ಯುನಿಸಿಪಲ್ ಆಡಳಿತವನ್ನು ನಿರ್ವಹಿಸಿರುವುದರಿಂದ ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರುದ್ಯೋಗವನ್ನು ನಿರ್ವಹಿಸುವವರು ಮ|| ಅಯ್ಯರ್‌ರವರ ವಿನಾ ಕೌನ್ಸಿಲಿನಲ್ಲಿ ಮತ್ತಾರೂ ಇಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಆದುಕಾರಣ ಸರ್ಕಾರದವರು ಬೆಂಗಳೂರು ಮ್ಯುನಿಸಿಪಾಲಿಟಿಗೆ ಪ್ರೆಸಿಡೆಂಟರನ್ನಾರಿಸಿಕೊಳ್ಳುವ ಅಧಿಕಾರವನ್ನು ಅಪ್ರಾರ್ಥಿತವಾಗಿ ಕೊಟ್ಟಂತೆ ರಾಜಧಾನಿಯ ಮ್ಯುನಿಸಿಪಾಲಿಟಿಗೂ ಕೌನ್ಸಿಲರ ಪ್ರಾರ್ಥನೆಯಂತೆ ಕೊಟ್ಟಲ್ಲಿ ಪ್ರೆಸಿಡೆಂಟರ ಉದ್ಯೋಗವನ್ನು ನಿರ್ವಹಿಸಬಲ್ಲ ಸಮರ್ಥರು ಕೌನ್ಸಿಲರುಗಳಲ್ಲಿರುವರೆಂಬುದು ತಾನಾಗಿಯೇ ವ್ಯಕ್ತವಾಗುತ್ತದೆ.

ಒಂದುವೇಳೆ ಅಂತಹ ಸಮರ್ಥರಾದವರು ಕೌನ್ಸಿಲರುಗಳಲ್ಲಿ ದೊರಕುವುದಿಲ್ಲವೆಂದಿಟ್ಟುಕೊಂಡರೂ ಮ|| ಅಯ್ಯರ್‌ರವರೇ ಯಾವಾಗಲೂ ಪ್ರೆಸಿಡೆಂಟರಾಗಿರಲು ಅವರೇನೂ ಚಿರಜೀವಿಗಳಲ್ಲ. ಮ|| ಅಯ್ಯರ್‌ರವರು ಬಹಳ ಮೇಧಾವಿಗಳು ಮತ್ತು ಕಾರ್ಯದಕ್ಷರು ಆಗಿದ್ದರೂ, ವಯೋಧರ್ಮದಿಂದ ಹೆಚ್ಚು ಶ್ರಮಪಟ್ಟು ಕೆಲಸವನ್ನು ಮಾಡಲಿಕ್ಕೆ ಆಗದಿರುವುದರಿಂದ, ತಮ್ಮ ಕೈಕೆಳಗಣ ಅಧಿಕಾರಿಗಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾರೆ. ಇದರಿಂದ ಮ್ಯುನ್ಸಿಪಲ್ ಆಡಳಿತವು ಸರ್ಕಾರದವರ ನಿರೀಕ್ಷಣೆಯಂತೆ ಸಮರ್ಪಕವಾಗಿ ನಡಿಯದೆ ಇರುವುದರಿಂದಲೂ ಇವರು ತಮ್ಮ ಹಟವನ್ನೇ ಸಾಧಿಸತಕ್ಕವರಾಗಿರುವುದರಿಂದಲೂ ಕೌನ್ಸಿಲರುಗಳಿಗೂ ಕಂದಾಯವನ್ನು ಕೊಡತಕ್ಕ ಜನರಿಗೂ ಬಹಳ ಅಸಮಾಧಾನವುಂಟಾಗಿದೆ, ಮತ್ತು ಪ್ರೆಸಿಡೆಂಟರನ್ನು ಆರಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕೆಂಬ ತಮ್ಮ ಪ್ರಾರ್ಥನೆಯನ್ನು ಸರ್ಕಾರದವರು ನಡೆಯಿಸಿಕೊಡಲಿಲ್ಲವೆಂದು ಕೌನ್ಸಿಲರುಗಳು ಖಿನ್ನಮನಸ್ಕರಾಗಿದ್ದಾರೆ. ಆದುಕಾರಣ ಸರ್ಕಾರದವರು ಇನ್ನೊಂದು ವರ್ಷದವರೆಗೆ ಪ್ರೆಸಿಡೆಂಟರುದ್ಯೋಗದ ಬದಲಾವಣೆಯನ್ನು ಮಾಡಲಿಕ್ಕಾಗುವುದಿಲ್ಲವಾದರೂ ಮ|| ಅಯ್ಯರ್‌ರವರ ಉದ್ಯೋಗದವಧಿಯು ಪೂರೈಸಿದ ಮೇಲಾದರೂ ಕೌನ್ಸಿಲರುಗಳಲ್ಲೊಬ್ಬರನ್ನು ನಿಯಮಿಸಿಕೊಳ್ಳುವ ಅಧಿಕಾರವನ್ನು ಕೂಡಲೆ ಕೊಟ್ಟು ಕೌನ್ಸಿಲರುಗಳ ಮನಸ್ಸನ್ನು ಸಮಾಧಾನಪಡಿಸುವವರಾಗಬೇಕೆಂದು ಸೂಚಿಸುತ್ತೇವೆ. ಮ|| ಶ್ರೀಕಂಠೇಶ್ವರಯ್ಯರ್‌ರವರು ಇನ್ನುಮೇಲಾದರೂ ಕೌನ್ಸಿಲರುಗಳ ಕೂಡ ಸೌಹಾರ್ದದಿಂದ ನಡೆದುಕೊಂಡು ಆಫೀಸಿನ ಕೆಲಸವು ನಿಸ್ಪೃಹತೆಯಿಂದಲೂ, ಚಟುವಟಿಕೆಯಿಂದಲೂ ನಡೆಯಲು ತಕ್ಕೇರ್ಪಾಟನ್ನು ಮಾಡಿ ಕೌನ್ಸಿಲರುಗಳ ಮತ್ತು ಜನರ ಪ್ರೀತಿವಿಶ್ವಾಸಕ್ಕೆ ಪಾತ್ರರಾದಲ್ಲಿ ಮುಂದೆ ಕೌನ್ಸಿಲರುಗಳಿಂದಲೇ ಪ್ರೆಸಿಡೆಂಟರಾಗಿ ಆರಿಸಲ್ಪಡುವುದರಲ್ಲಿ ಅಭ್ಯಂತರವಿಲ್ಲವೆಂದು ತೋರುತ್ತದೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಪರಿವಾರದೊಡನೆ ಕಳೆದ ಭಾನುವಾರ ಸುರಕ್ಷಿತವಾಗಿ ರಾಜಧಾನಿಯನ್ನು ತಲುಪಿದರು.

ರಾಜಧಾನಿಯಲ್ಲಿ ಕಳೆದ ೩-೪ ದಿನಗಳಿಂದಲೂ ಪ್ರತಿನಿತ್ಯ ಸಾಯಂಕಾಲದಲ್ಲಿ ತಕ್ಕಮಟ್ಟಿಗೆ ಮಳೆಯಾಗುವುದರಿಂದ ವಾಯುಗುಣವು ತಂಪಾಗಿರುವುದು. ರೋಗಾದಿ ಉಪದ್ರವಗಳೇನೂ ಇಲ್ಲವು.

೪ ವಾರಗಳ ರಜಾದ ಮೇಲೆ ಹೋಗಿದ್ದ ಸೀನಿಯರ್ ಸರ್ಜನ್ ಡಾ|| ಮೈಲ್ವಾನ್‌ರವರು ಉದ್ಯೋಗದ ಮೇಲೆ ಬಂದುದರಿಂದ ಅವರ ಬದಲಿನೋಡುತ್ತಿದ್ದ ಡಾ|| ಉಸ್ಮಾನ್‌ರವರು ತಮ್ಮ ಮೊದಲಿನ ಕೆಲಸದಮೇಲೆ ಬಂದುಬಿಟ್ಟರು.

ನಿನ್ನೆಯ ದಿನ ಶ್ರೀಮದಿಂಡಿಯಾ ಚಕ್ರವರ್ತಿಯವರ ಜನ್ಮದಿನವಾದುದರಿಂದ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ ಪಾಠಶಾಲೆಗಳಿಗೂ ರಜವು ಕೊಡಲ್ಪಟ್ಟಿದ್ದಿತು, ಮತ್ತು ರಾಜಧಾನಿಯಲ್ಲಿ ೩೧ ಗುಂಡುಗಳು ಹಾರಿಸಲ್ಪಟ್ಟುವು.

ದಿವಾನರು ತಮ್ಮ ಸತ್ಕಾರಸಮಾರಂಭ ಸಮಯದಲ್ಲಿ ಮಾಡಿದ ಭಾಷಣವು ಬರೇ ಆಶಾಜನಕವಾಗಿರದೆ ಸ್ವಾರಸ್ಯವಾಗಿಯೂ ಭಾವಗರ್ಭಿತವಾಗಿಯೂ ಇದ್ದು ಗಮನೀಯವಾಗಿರುವುದರಿಂದ, ಸಾಧ್ಯವಾದಮಟ್ಟಿಗೆ ಕನ್ನಡಕ್ಕೆ ಪರಿವರ್ತಿಸಲ್ಪಟ್ಟು ಬೇರೊಂದು ಕಡೆ ಮುದ್ರಿಸಲ್ಪಟ್ಟಿದೆ.

ತಾ|| ೩೦ ರಲ್ಲಿ ರಾಜಧಾನಿಯ ಸಯ್ಯಾಜಿರಾವ್‌ರೋಡಿನಲ್ಲಿರುವ ಮಿಷನ್ ಬಾಲಿಕಾಪಾಠಶಾಲೆಯ ಶಿಖರಕ್ಕೆ ಸಿಡಿಲು ಬಡಿದು ಒಳಗಡೆಯಿಂದ ಹಾದುಹೋಯಿತು. ಇದರಿಂದ ಕೆಲ ಹಂಚುಗಳು ಚೂರಾಗಿ ಬಾಗಿಲು ಕೊಂಚ ಸೀಳುಬಿಟ್ಟಿರುವುದು ವಿನಾ ಮತ್ತೇನೂ ಅಪಾಯವಾಗಲಿಲ್ಲವು.

ವಿದ್ಯಾಭ್ಯಾಸದ ಇ|| ಜನರಲ್‌ರವರಾದ ಮ|| ಬಾಲಸುಂದರಂ ಅಯ್ಯರ್‌ರವರು ಈ ತಾ|| ೨ ರಿಂದ ೨೦ ದಿನಗಳ ಪ್ರಿವಿಲೇಜ್‌ರಜವನ್ನು ಪಡೆದುಕೊಂಡಿರುವುದರಿಂದ ಡಿಪ್ಯುಟಿ ಇ|| ಜ|| ರವರಾದ ಮ|| ಡಿ. ವೆಂಕಟರಾಮಯ್ಯನವರು ತಮ್ಮುದ್ಯೋಗದೊಡನೆ ಇ|| ಜ|| ರವರ ಆಫೀಸಿಯೇಟಿಂಗ್-ಛಾರ್ಜಿನಲ್ಲಿರತಕ್ಕದೆಂದು ಅಪ್ಪಣೆಯಾಗಿದೆ.

ದಿವಾನರು ಕಳೆದ ಭಾನುವಾರ ರಾಜಧಾನಿಗೆ ಬಂದು ಶ್ರೀಮನ್ ಮಹಾರಾಜರವರ ದರ್ಶನವನ್ನು ತೆಗೆದುಕೊಂಡು ಅದೇರಾತ್ರಿ ಬೆಂಗಳೂರಿಗೆ ಹೋಗಿ ಪತ್ನಿಯವರನ್ನು ಸೀಮೆಗೆ ಪ್ರಯಾಣಮಾಡಿಸಲು ಸೋಮವಾರ ಅವರೊಡನೆ ಬೊಂಬಾಯಿಗೆ ಪ್ರಯಾಣಮಾಡಿದರು. ಅಲ್ಲಿಂದ ಅರಸೀಕೆರೆಮಾರ್ಗವಾಗಿ ಹೊರಟು ಈ ದಿವಸ ರಾಜಧಾನಿಯನ್ನು ತಲುಪುವವರಾಗಿರುವರು.

ಕಳೆದ ಸೋಮವಾರ ಮೈಸೂರಿನಿಂದ ಅರಸೀಕೆರೆಗೆ ಹೊರಟ ಪ್ರಯಾಣಿಕರ ರೈಲುಬಂಡಿಯನ್ನು ನಡಿಸುತ್ತಿದ್ದ ೩೮ ವರ್ಷ ವಯಸ್ಸಿನ ಎಲ್ಲಿಯಟ್ ಎಂಬಾತನು ಪಕ್ಷಿ ಮೃಗಾದಿಗಳನ್ನು ಹೊಡೆಯಲಿಕ್ಕಾಗಿ ಮದ್ದುಗುಂಡನ್ನು ಹಾಕಿದ್ದ ಬಂದೂಕನ್ನು ಇಂಜನ್ನಿನ ಕಲ್ಲಿದ್ದಲ ರಾಶಿಯ ಮೇಲಿಟ್ಟುಕೊಂಡಿದ್ದನು. ಮಾವಿನಕೆರೆ ಬಳಿ ಆಕಸ್ಮಾತ್ತಾಗಿ ಗುಂಡು ಹಾರಿ ಇದಿರಿಗೆ ನಿಂತಿದ್ದ ಎಲ್ಲಿಯಟ್ಟಿಗೆ ತಗುಲಿದುದರಿಂದ ಆತನು ಕೊಂಚ ಹೊತ್ತಿನಲ್ಲಿ ಮೃತನಾದನು.

ಮೈಸೂರು ಸೇನೆಯ ಚೀಫ್ ಕಮಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಸರದಾರ್ ಬಹದ್ದೂರ್ ಬಿ. ಚಾಮರಾಜ ಅರಸಿನವರು ತಮ್ಮ ಕುಮಾರರಾದ ಮ|| ಬಿ. ಎ. ವಿ. ಸುಬ್ರಹ್ಮಣ್ಯರಾಜ ಅರಸಿನವರಿಗೆ ಮ|| ಕೆ. ಮಲ್ಲರಾಜ ಅರಸಿನವರ ಪುತ್ರಿ ಸೌ|| ದೇವೀರಮ್ಮಣ್ಣಿಯವರನ್ನು ತಂದು ವಿವಾಹಮಹೋತ್ಸವವನ್ನು ಈ ದಿನ ಬೆಳಿಗ್ಗೆ ೯ ಗಂಟೆಗೆ ರಾಜಧಾನಿಯ ಲಕ್ಷ್ಮೀಪುರದಲ್ಲಿರುವ ತಮ್ಮ ಬಂಗಲೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸುವವರಾಗಿರುವರು.

ಶ್ರೀಮನ್ಮಹಾರಾಜರವರ ೩೯ನೆಯ ವರ್ಷದ ವರ್ಧಂತ್ಯುತ್ಸವವು ನಾಳೆಯ ದಿನ ನಡಿಯುವುದಷ್ಟೆ. ಈ ಮಹೋತ್ಸವಕ್ಕೆ ಐರೋಪ್ಯ ಮತ್ತು ಭಾರತೀಯ ಮಿತ್ರರುಗಳು ಅತಿಥಿಗಳಾಗಿ ಬಂದಿರುವರು. ಪ್ರತಿವರ್ಷವೂ ಈ ಮಹೋತ್ಸವಕಾಲದಲ್ಲಿ ನಡಿಯುವ ಕುದುರೆಯ ಪಂದ್ಯಗಳು ಈ ತಾ|| ೬, ೮ ಮತ್ತು ೧೦ ರಲ್ಲಿ ನಡಿಯುವುವು. ಇವನ್ನು ನೋಡುವುದಕ್ಕಾಗಿ ಮದ್ರಾಸ್ ಗೌರ್‍ನರು ಈ ತಾ|| ೬ ಕ್ಕೆ ಉದಕಮಂಡಲದಿಂದ ರಾಜಧಾನಿಗೆ ಮೋಟಾರುಬಂಡಿಯಲ್ಲಿ ಬಂದು ಶ್ರೀಮನ್ಮಹಾರಾಜರವರ ಅತಿಥಿಗಳಾಗಿರುವರು. ಈ ಪಂದ್ಯಕ್ಕಾಗಿ ಬೆಂಗಳೂರು, ಮದ್ರಾಸು, ಹೈದರಾಬಾದು, ಬೊಂಬಾಯಿ ಮೊದಲಾದ ಪಟ್ಟಣಗಳಿಂದ ಐರೋಪ್ಯ, ಮಹಮ್ಮದೀಯ ಮೊದಲಾದ ಪಂದ್ಯಗಾರರು ವಿಶೇಷವಾಗಿ ಬಂದಿರುವರು. ಇವರುಗಳ ಬಿಡಾರಕ್ಕಾಗಿ ಕಾರಂಜಿಕೆರೆಯ ಮೇಲ್ಭಾಗದಲ್ಲಿ ಡೇರಾಗಳು ಹಾಕಲ್ಪಟ್ಟಿರುವುವು.

ದಿವಾನರು ತಮ್ಮ ಸತ್ಕಾರಸಮಯದಲ್ಲಿ ಮಾಡಿದ ಭಾಷಣ.

ಪ್ರಮುಖ ಪ್ರಜಾಸಂಘಗಳ ಪ್ರತಿನಿಧಿಗಳಾದ ನೀವುಗಳು ಮೈಸೂರು ಸಂಸ್ಥಾನದ ಮಂತ್ರಿಪದವಿಯು ನನಗೆ ಲಭ್ಯವಾದುದರಿಂದ ನಿಮ್ಮ ಸಂತೋಷವನ್ನು ಪ್ರದರ್ಶಿಸಿ ಅಭಿನಂದಿಸಲು ಈ ದಿವಸ ಈ ಸಮಾರಂಭವನ್ನು ನಡೆಯಿಸಿ ನನಗೆ ವಿಶೇಷ ಮರ್ಯಾದೆಯನ್ನು ಮಾಡಿದುದಕ್ಕಾಗಿ ನಾನು ನನ್ನ ಮನಃಪೂರ್ವಕವಾಗಿ ನಿಮ್ಮಗಳನ್ನು ವಂದಿಸುತ್ತೇನೆ. ಈ ಮಂತ್ರಿಪದವಿಯು ಸುಪ್ರಖ್ಯಾತರಾದ ರಾಜಕಾರ್ಯಧುರೀಣರಿಂದಲೇ ಈವರೆಗೂ ಅನುಕ್ರಮವಾಗಿ ನಿರ್ವಹಿಸಲ್ಪಟ್ಟಿರುವುದಾಗಿದೆ. ಅವರುಗಳ ಮಾರ್ಗವನ್ನನುಸರಿಸುವುದರಲ್ಲಿಯೂ, ಮತ್ತು ಶ್ರೀಮನ್ಮಹಾರಾಜರ ಪ್ರಜೆಗಳ ಹಾಗೂ ಸಂಸ್ಥಾನದ ಪುರೋಭಿವೃದ್ಧಿಯನ್ನು ಕೋರಿ ಭಕ್ತಿಯಿಂದಲೂ, ಪ್ರಾಮಾಣಿಕತೆಯಿಂದಲೂ ಸೇವೆಮಾಡುವುದರಲ್ಲಿಯೂ ನನ್ನ ಸಾಮರ್ಥ್ಯವನ್ನೆಲ್ಲಾ ಪ್ರಯೋಗಿಸಿರುವೆನೆಂದು ಉದ್ಯೋಗದಿಂದ ನಿವೃತ್ತನಾದ ಮೇಲೆ ನನ್ನ ಮನಸ್ಸಿಗೆ ಸಮಾಧಾನವನ್ನೂ, ಜನರ ಸದಭಿಪ್ರಾಯವನ್ನೂ ಪಡೆಯತಕ್ಕುದಾಗಿದೆ. ಬಹಳ ಕನಿಕರವುಳ್ಳವರೂ, ಸ್ವದೇಶಾಭಿಮಾನಿಗಳೂ ಎಂದು ಪ್ರಖ್ಯಾತರಾಗಿರುವ ಮೈಸೂರು ದೇಶದ ಪ್ರಜೆಗಳು ಕಳೆದ ಆರು ವರ್ಷಗಳಿಂದಲೂ ನನ್ನನ್ನು ತಮ್ಮವನನ್ನಾಗಿಯೇ ಪರಿಗಣಿಸಿರುವರು ಮತ್ತು ನಾನೂ ಅವರ ಉಪಕಾರಸ್ಮರಣೆಯನ್ನು ಮಾಡದೆ ಬಿಟ್ಟಿಲ್ಲವು. ವಿಶೇಷ ಜವಾಬ್ದಾರಿಯನ್ನು ವಹಿಸಿರುವ ನಾನು ಈವರೆಗೆ ಮಾಡಿರುವ ಕೆಲಸಗಳನ್ನು ನೀವು ಶ್ಲಾಘಿಸಿರುವುದರಿಂದಲೂ, ಮುಂದೆಯೂ ನನ್ನಿಂದ ಉಪಕಾರವಾಗುವುದೆಂದು ನಿರೀಕ್ಷಿಸುವುದರಿಂದಲೂ (ನಿಮ್ಮಾ ನಿರೀಕ್ಷಣೆಯನ್ನು ತಕ್ಕಮಟ್ಟಿಗಾದರೂ ಸಾರ್ಥಕಗೊಳಿಸಲೆಂದು ದೇವರನ್ನು ಪ್ರಾರ್ಥಿಸುತ್ತೇನೆ) ಬಹಳಮಟ್ಟಿಗೆ ಉತ್ತೇಜನಗೊಳಿಸಲ್ಪಟ್ಟವನಾಗಿರುತ್ತೇನೆ. ನೀವು ನಿರೀಕ್ಷಿಸುವಂತೆಯೇ ನಡೆದುಕೊಳ್ಳಲು ನಾನು ಪ್ರಯತ್ನಿಸುತ್ತೇನೆ ಮತ್ತು ಶ್ರೀಮನ್ಮಹಾರಾಜರವರ ಎಲ್ಲಾ ಪ್ರಜೆಗಳ ಅಭಿಮಾನಸಾಕಾರಗಳು ನನ್ನ ವಿಚಾರದಲ್ಲಿ ಸಂಪೂರ್ಣವಾಗಿರುವುವೆಂದೂ ಇವುಗಳ ಸಹಾಯದಿಂದ ನನ್ನ ಕಷ್ಟಕರವಾದ ಕೆಲಸವು ಬಹುಮಟ್ಟಿಗೆ ಹಗುರವಾಗಿ ನಾನು ಉತ್ತೀರ್ಣನಾಗುತ್ತೇನೆಂದೂ ಭಾವಿಸಿರುತ್ತೇನೆ. ನಿಮ್ಮ ವಿಜ್ಞಾಪನಪತ್ರಿಕೆಗಳು ಅನೇಕ ವಿಷಯಗಳನ್ನೊಳಕೊಂಡಿರುವುದಾದರೂ ಅವುಗಳ ಆಶಯವೆಲ್ಲವೂ ಒಂದೇಯಾಗಿರುವುದರಿಂದ ಅವೆಲ್ಲಕ್ಕೂ ಒಟ್ಟಿಗೆ ಉತ್ತರವನ್ನು ಕೊಡುವಲ್ಲಿ ನಿಮ್ಮಭ್ಯಂತರವಿಲ್ಲವೆಂದು ತಿಳಿಯುತ್ತೇನೆ.

ಮೈಸೂರು ಸಂಸ್ಥಾನದ ದಿವಾನಗಿರಿಯಂತಹ ಉತ್ತರವಾದಿತ್ವವುಳ್ಳ ದೊಡ್ಡಪದವಿಗೆ ಬರುವ ಸಾಧಾರಣ ಜಾಣತನವನ್ನುಳ್ಳವನು ಸಹ ಪ್ರತಿಯೊಂದು ಪಂಗಡದವರಿಗೂ ಬೇರೆ ಬೇರೆಯಾಗಿ ವಾಗ್ದಾನಮಾಡುವುದಕ್ಕಾಗಲಿ, ಅಥವಾ ಮುಂದೆ ತಾನು ಅಪೂರ್ವಲಕ್ಷಣದಿಂದ ಕೂಡಿದ ಕಾರ್ಯಭಾರವನ್ನು ಮಾಡುತ್ತೇನೆಂದು ನಿರ್ಧರಿಸಿಹೇಳುವುದಕ್ಕಾಗಲಿ ಇದು ಸಮಯವಲ್ಲವೆಂಬುದು ನನ್ನಭಿಪ್ರಾಯವಾಗಿರುವುದರಿಂದ, ನಿಮ್ಮಗಳ ವಿಜ್ಞಾಪನಪತ್ರಿಕೆಗಳಲ್ಲಿ ಕಂಡ ಎಲ್ಲಾ ವಿಷಯಗಳ ಗೋಜಿಗೂ ಹೋಗದೆ ಬಹಳ ಪ್ರಾಮುಖ್ಯವಾದ ವಿಷಯಗಳನ್ನು ಮಾತ್ರ ಕುರಿತು ಪ್ರಸ್ತಾಪಿಸುವುದಕ್ಕಾಗಿ ಕ್ಷಮಿಸುವವರಾಗಬೇಕು. ಮೈಸೂರು ರಾಜ್ಯಭಾರದವರು ಯಾವಾಗಲೂ ಬಹಳ ದಕ್ಷತೆಯಿಂದ ಕಾರ್ಯನಿರ್ವಾಹ ಮಾಡಿಕೊಂಡು ಬರುತ್ತಿರುವರು, ಮತ್ತು ಅವರ ಉದ್ದೇಶಗಳಾದರೂ ಘನವಾಗಿಯೇ ಇರುವುವು. ಪ್ರಜೆಗಳ ನೈತಿಕ ಮತ್ತು ಸಾಂಪತ್ತಿಕಾಭಿವೃದ್ಧಿಗಾಗಿ ಧೈರ್ಯಯುಕ್ತವಾದ ಕಾರ್ಯಗಳು ಪ್ರಾರಂಭಿಸಲ್ಪಟ್ಟಿವೆ. ಶ್ರೀಮನ್ಮಹಾರಾಜರವರ ಸರ್ಕಾರದಲ್ಲಿ ನಾನು ಕಳೆದ ಆರು ವರುಷಗಳಿಂದಲೂ ಕೆಲಸ ಮಾಡುತ್ತಿರುವುದರಿಂದ ಶ್ರೀಮನ್ ಮಹಾರಾಜರವರ ಉದ್ದೇಶ ಮತ್ತು ಆಶಯಗಳನ್ನೂ; ಅವರು ಧರ್ಮದಿಂದಲೂ, ವಿವೇಕದಿಂದಲೂ ರಾಜ್ಯಪರಿಪಾಲನೆ ಮಾಡುವ ಕ್ರಮವನ್ನೂ ತಕ್ಕಮಟ್ಟಿಗೆ ಅರಿತವನಾಗಿರುತ್ತೇನೆ. ಸಂಸ್ಥಾನದ ಎಲ್ಲ ವಿಚಾರದಲ್ಲೂ ಶ್ರೀಮನ್ ಮಹಾರಾಜರವರೇ ಯಾವಾಗಲೂ ಪ್ರಧಾನರಾಗಿರುತ್ತಾರೆ. ಮೈಸೂರಿಗೆ "ಮಾದರಿಸಂಸ್ಥಾನವು" ಎಂಬ ಖ್ಯಾತಿಯನ್ನುಂಟುಮಾಡಿಕೊಟ್ಟಿರುವ ಶ್ರೀಮನ್ ಮಹಾರಾಜರವರ ನೀತಿಯನ್ನೇ ಅನುಸರಿಸಿಕೊಂಡು ಬರಬೇಕೆಂಬುದು ನನ್ನ ಸಂಕಲ್ಪವಾಗಿದೆ. ಸಂದರ್ಭಾನುಸಾರ ಆವಶ್ಯಕವಾದ ತಿದ್ದುಪಾಟುಗಳನ್ನು ಮಾಡುವ ಬಗೆಗೆ ತಕ್ಕ ಸಲಹೆಗಳನ್ನು ಕೊಡಲು ನಾನು ಸಶಕ್ತನಾಗಲಿಚ್ಛಿಸುತ್ತೇನೆ. ಆದರೆ ಉದ್ಯೋಗನಿರ್ವಾಹಶಕ್ತಿಯನ್ನು ಕ್ರಮಗೊಳಿಸುವ ಮತ್ತು ಶ್ರೀಮನ್ ಮಹಾರಾಜರವರು ಹಿಂದೆ ಹಾಕಿಕೊಟ್ಟಿರುವ ಸುಧಾರಣಾಕ್ರಮವನ್ನನುಸರಿಸಿ ಅತಿಶಯವಾಗಿ ಅಭಿವೃದ್ಧಿಗೊಳಿಸುವ ನನ್ನ ಎಲ್ಲಾ ಪ್ರಯತ್ನಗಳಲ್ಲೂ ಶ್ರೀಮನ್ ಮಹಾರಾಜರವರ ಉದ್ದೇಶ ಮತ್ತು ಆಶಯಗಳನ್ನು ಸಾಧ್ಯವಾದಮಟ್ಟಿಗೆ ನಿಜವಾಗಿಯೂ ಪರಿಣಾಮಕಾರಕವಾಗಿಯೂ ಅವರ ಪ್ರಜೆಗಳಿಗೆ ತಿಳಿಯಪಡಿಸಿ ಕಾರ್ಯರೂಪಕ್ಕೆ ತರುವುದು ನನ್ನ ಮುಖ್ಯ ಗುರಿಯಾಗಿದೆ.

ಪ್ರಜೆಗಳು ರಾಜ್ಯಾಡಳಿತದ ವಿಚಾರವನ್ನು ಧಾರಾಳವಾಗಿ ಚರ್ಚಿಸಿ ತಮ್ಮಭಿಪ್ರಾಯವನ್ನು ತಿಳಿಸುವ ಸ್ವಾತಂತ್ರ್ಯವನ್ನು ಪಡೆಯುವ ವಿಚಾರದಲ್ಲಿ ನನ್ನ ಕೈಲಾದ ಸಾಹಾಯ್ಯವನ್ನೆಲ್ಲಾ ಮಾಡುವೆನು. ಗ್ರಾಮವಾಸಿಗಳ ಯೋಗಕ್ಷೇಮಕ್ಕೆ ಮುಖ್ಯಸಾಧಕವಾದ ಡಿಸ್ಟ್ರಿಕ್ಟಿನ ಆಡಳಿತವನ್ನು ಅದರ ಒಳಹೊಕ್ಕು ಚೆನ್ನಾಗಿ ತಿಳಿದುಕೊಂಡು ಉತ್ತಮ ಪಡಿಸುವುದು ಅತ್ಯಾವಶ್ಯಕವಾಗಿದೆ. ಸರ್ಕಾರಿಯುದ್ಯೋಗಸ್ಥರು ತಮ್ಮ ಜವಾಬ್ದಾರಿಯನ್ನು ಅರಿತು ಸರ್ಕಾರಿಯ ಕೆಲಸಗಳನ್ನು ಚುರುಕಾಗಿಯೂ ನಿಸ್ಪೃಹತೆ ಮತ್ತು ನಿಷ್ಪಕ್ಷಪಾತತೆಗಳಿಂದಲೂ ನಿರ್ವಹಿಸಬೇಕೆಂಬ ಅವರ ಕುತೂಹಲವನ್ನು ಹೆಚ್ಚಿಸಬೇಕಾಗಿದೆ. ಶ್ರೀಮನ್ ಮಹಾರಾಜರವರು ತಮ್ಮ ಪ್ರಜೆಗಳ ಹಾಗೂ ಸಂಸ್ಥಾನದ ಸಂಪದಭಿವೃದ್ಧಿಗಾಗಿ ಹಿಂದಣ ಪ್ರಖ್ಯಾತರಾದ ದಿವಾನರುಗಳ ಕಾಲದಲ್ಲಿ ಆರಂಭಿಸಿದ ಪ್ರತಿಯೊಂದು ಅಭಿವೃದ್ಧಿ ಕಾರ್ಯವನ್ನು ಮುಂದಣ ಅಭಿವೃದ್ಧಿಗೆ ಆತಂಕವಾಗಿ ಪರಿಣಮಿಸಿರುವ ಈಗಿನ ಹಣದ ಮುಗ್ಗಟ್ಟನ್ನು ಸಾಧ್ಯವಾದ ಮಟ್ಟಿಗೂ ಪರಿಹರಿಸಿಕೊಂಡನಂತರ ನಡಿಸಿಕೊಂಡು ಬರಲು ನಾನು ಸಾಹಸಪಡುವೆನು. ನಾನು ಯಾವುದಾದರೊಂದು ನಿರ್ದಿಷ್ಟವಾದ ಅಥವಾ ಹೊಸದಾದ ಕೆಲಸವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸಲಿಲ್ಲವಾಗಿ ನೀವು ನಿರಾಶರಾಗುವುದಿಲ್ಲವೆಂದು ತಿಳಿಯುತ್ತೇನೆ. ಸದ್ಯದಲ್ಲಿ ಯಾವುದಾದರೊಂದು ಗೊತ್ತಾದ ವಿಚಾರವನ್ನು ಅಭಿವೃದ್ಧಿಗೊಳಿಸಲು ನೂತನವಾಗಿ ಯಾವ ಸಾಹಸ ಕಾರ್ಯವೂ ಮಾಡಲ್ಪಡದಿದ್ದಾಗ್ಗೂ ನಿಮ್ಮನಿಮ್ಮ ಜನಾಂಗದವರ ಕ್ಷೇಮಾಭಿವೃದ್ಧಿ ಕಾರ್ಯಗಳಿಗೆ ತೊಂದರೆಯುಂಟಾಗದಂತೆ ಸರ್ಕಾರದವರು ನೋಡಿಕೊಳ್ಳುವರೆಂದು ನಾನು ದೃಢವಾಗಿ ಹೇಳುತ್ತೇನೆ. ಈಗ ರಾಜ್ಯಾಡಳಿತದಲ್ಲುಂಟಾಗಿರುವ ತೊಂದರೆಯ ಭಾಗವನ್ನು ನೀವು ಚೆನ್ನಾಗಿ ಅರಿತವರಾಗಿದ್ದೀರೆಂಬುದು ನಿಮ್ಮ ವಿಜ್ಞಾಪನ ಪತ್ರಿಕೆಗಳಿಂದ ವ್ಯಕ್ತವಾಗುತ್ತದೆ. ನೀವು ನಿಮ್ಮ ಸಂಘಗಳ ಪರವಾಗಿಯೂ, ಜನಾಂಗಗಳ ಪರವಾಗಿಯೂ ಸರ್ಕಾರದವರೊಡನೆ ಸಹಕಾರಿಗಳಾಗಿದ್ದುಕೊಂಡು ಕೆಲಸ ಮಾಡುತ್ತೀರೆಂಬುದರಲ್ಲೂ, ಯಾವುದಾದರೊಂದು ಜನಾಂಗದವರನ್ನು ಅಭಿವೃದ್ಧಿಗೊಳಿಸುವುದಕ್ಕೆ ಅಥವಾ ಅವರ ದೌರ್ಬಲ್ಯವನ್ನು ಹೋಗಲಾಡಿಸುವುದಕ್ಕೆ ಆವಶ್ಯಕವಾಗಿ ಮಾಡಬೇಕಾದ ಕಾರ್ಯವನ್ನು ಸಂಕುಚಿತಗೊಳಿಸದೆ, ಈಗ ನಮಗೆ ಪ್ರಾಪ್ತವಾಗಿರುವ ಕಷ್ಟಕಾಲದಲ್ಲಿ ಎಲ್ಲರೂ ಪರಸ್ಪರ ಸೌಹಾರ್ದದಿಂದಲೂ ಸಹಕಾರದಿಂದಲೂ ತಾಳ್ಮೆಯಿಂದಲೂ ನಡೆದುಕೊಳ್ಳುವಂತೆ ಮಾಡುವುದರ ಆವಶ್ಯಕತೆಗೆ ಪೂರ್ಣ ಗಮನಕೊಡುವಿರೆಂಬುದರಲ್ಲೂ ಸಂದೇಹವಿಲ್ಲವು. ನಿಮ್ಮನಿಮ್ಮ ಜನಾಂಗದವರ ನೈತಿಕ ಮತ್ತು ಸಾಂಪತ್ತಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವ ನಿಮ್ಮಗಳ ಪ್ರಯತ್ನದಲ್ಲಿ ಅಲ್ಪ ವಿಷಯಗಳಿಗಾಗಿ ನೆರೆಹೊರೆಯವರ ಅನುರಾಗ ಸಾನುಭೂತಿಗಳನ್ನು ಕಳೆದುಕೊಂಡು ಪೃಥಕ್ಕಾಗಿ ನಿಲ್ಲದೆ ಸಂಸ್ಥಾನಾಭಿವೃದ್ಧಿಗಾಗಿ ಎಲ್ಲರೂ ಒಕ್ಕಟ್ಟಿನಿಂದ ಪ್ರಯತ್ನಪಡತಕ್ಕುದು ಮುಖ್ಯ ರಾಜಕೀಯ ಧ್ಯೇಯವಾಗಿದೆ ಎಂಬುದನ್ನು ನೀವು ಮೊದಲಿಗಿಂತಲೂ ಈಗ ಚೆನ್ನಾಗಿ ತಿಳಿದಿರುವಿರೆಂಬುದರಲ್ಲಿ ಸಂದೇಹವಿಲ್ಲವು.

ತಂತಮ್ಮ ಜನಾಂಗದವರ ಇಷ್ಟಾರ್ಥಸಿದ್ಧಿಗಾಗಿ ಎಲ್ಲರೂ ಒಕ್ಕಟ್ಟಿನಿಂದ ಸಂಘಗಳನ್ನೇರ್ಪಡಿಸಿಕೊಂಡು ಪ್ರಯತ್ನಪಡುವುದರಲ್ಲಿ ಬಹಳಪ್ರಯೋಜನವಿದೆಯೆಂಬುದರಲ್ಲಿ ನನಗೆ ನಂಬುಗೆಯುಂಟು. ನಿಮ್ಮ ಎಲ್ಲಾ ಆಶೆಯ ಮತ್ತು ಪ್ರಯತ್ನಗಳಲ್ಲಿ ನನಗೆ ಸಂಪೂರ್ಣಾಭಿಮಾನವಿರುವುದು. ಸರ್ಕಾರದವರಿಗೂ ಸಹ ವಿಶೇಷ ಆಸಕ್ತಿಯಿರುವ ಜನಸಾಮಾನ್ಯಾಭಿವೃದ್ಧಿ ಕಾರ್ಯದಲ್ಲಿ ನೀವು ಮಾಡುವ ಪ್ರಯತ್ನಕ್ಕೆ ಜಯವುಂಟಾಗಲೆಂದು ಆಶಿಸುತ್ತೇನೆ. ಪ್ರಜಾಮಿತ್ರಮಂಡಲಿಯವರ ವಿಜ್ಞಾಪನಪತ್ರಿಕೆಯಲ್ಲಿ ಪ್ರಕೃತ ಆರ್ಥಿಕದುಸ್ಥಿತಿಯನ್ನು ಕುರಿತು ಮುಖ್ಯವಾಗಿ ಪ್ರಸ್ತಾಪಿಸಲ್ಪಟ್ಟಿದೆ. ಬಗೆಹರಿಸಲ್ಪಡಲಿಕ್ಕಿರುವ ಅನೇಕ ಬಿಕ್ಕಟ್ಟಾದ ವಿಚಾರಗಳಲ್ಲಿ ಈಮಂಡಳಿಯ ಮೆಂಬರುಗಳು ವಿಶೇಷ ಅಭಿಮಾನವನ್ನು ತೋರಿಸುತ್ತಿರುವುದಕ್ಕಾಗಿ ನಾನು ಸಂತೋಷಿಸುತ್ತೇನಲ್ಲದೆ ಸಹಕರಿಸಲು ವಾಗ್ದಾನಮಾಡಿರುವುದಕ್ಕಾಗಿ ಅವರನ್ನು ವಂದಿಸುತ್ತೇನೆ.

ಒಕ್ಕಲಿಗರ ಸಂಘದವರು, ವೀರಶೈವ ವಿದ್ಯಾವರ್ಧಕ ಫಂಡ್ ಸಂಘದವರು, ಬಲಿಜ ಸಂಘದವರು, ಹಿಂದೂ ಕ್ರೈಸ್ತ ಸಂಘದವರು ಮತ್ತು ಆದಿದ್ರಾವಿಡ ಅಭಿವೃದ್ಧಿ ಸಂಘದವರು ತಂತಮ್ಮ ಜನಾಂಗದವರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ಬಹಳ ಆಸಕ್ತಿಯುಳ್ಳವರಾಗಿರುವರೆಂಬುದನ್ನು ನಾನು ಬಲ್ಲೆನು. ಅವರುಗಳ ಈ ಪ್ರಯತ್ನ ವಿಶೇಷದಿಂದ ವಿದ್ಯಾವಂತರಾದವರು ತಂತಮ್ಮ ಜನಾಂಗದವರಲ್ಲಿ ಪ್ರಾಮುಖ್ಯತೆಯನ್ನು ಹೊಂದುವುದಲ್ಲದೆ ಸಂಸ್ಥಾನದ ನೈತಿಕ ಮತ್ತು ಸಾಂಪತ್ತಿಕಾಭಿವೃದ್ಧಿಯ ವಿಚಾರದಲ್ಲೂ ಪ್ರಾಮುಖ್ಯತೆಯನ್ನು ಹೊಂದುವರೆಂದು ನಿರೀಕ್ಷಿಸುತ್ತೇನೆ. ಇದಕ್ಕೆ ಯಾವವಿಧವಾದ ವಿಘ್ನವೂ ಉಂಟಾಗದಂತೆ ನೋಡಿಕೊಳ್ಳುವೆನು. ನಾವು ಮುಂದುವರಿಯಬೇಕಲ್ಲದೆ ಇದ್ದಲ್ಲಿಯೇ ಇರಬಾರದು ಮತ್ತು ಇದ್ದ ಸ್ಥಿತಿಯಲ್ಲೇ ಇರುವುದಕ್ಕಾಗಲಿ ಅಥವಾ ಹಿಂದಕ್ಕೆ ಹೋಗುವುದಕ್ಕಾಗಲಿ ನಮ್ಮ ಹಣದ ಕೊರತೆಯನ್ನೇ ಯಾವಾಗಲೂ ನೆಪವನ್ನಾಗಿಟ್ಟುಕೊಳ್ಳಬಾರದು.

ನಾನು ಈ ದಿವಸ ತಮ್ಮಗಳನ್ನು ಇಲ್ಲಿ ಸಂದರ್ಶಿಸಿ ತಮ್ಮ ಅಭಿನಂದನ ವಚನಗಳಿಂದ ಪ್ರೋತ್ಸಾಹಿಸಲ್ಪಟ್ಟುದಕ್ಕಾಗಿ ಬಹಳ ಸಂತುಷ್ಟನಾಗಿದ್ದೇನೆ. ನಿಮ್ಮ ಜನಾಂಗದವರ ಏಳಿಗೆಗಾಗಿ ಪ್ರಯತ್ನಪಡಲು ಸಂಘಗಳನ್ನೇರ್ಪಡಿಸಿಕೊಂಡಿರುವಿರಿ. ನಿಮ್ಮ ಉದ್ದೇಶ ಮತ್ತು ಆಶಯಗಳಲ್ಲಿ ಸರ್ಕಾರದವರು ವಿಶೇಷ ಸಾನುಭೂತಿಯುಳ್ಳವರಾಗಿರುವರು, ಮತ್ತು ಪ್ರಜೆಗಳು ಸಂಘಗಳನ್ನು ಏರ್ಪಡಿಸಿಕೊಂಡು ತನ್ಮೂಲಕ ತಮ್ಮಭಿವೃದ್ಧಿಗಾಗಿ ತಾವೇ ಸ್ವತಃ ಆರಂಭಿಸುವ ಕೆಲಸಗಳಲ್ಲಿ ಸರ್ಕಾರದ ಪರವಾಗಿ ಸಹಾಯಮಾಡಲು ಮತ್ತು ನ್ಯಾಯವಾದ ನಿಮ್ಮಾ ಕಾಂಕ್ಷೆಯನ್ನು ನೆರವೇರಿಸಿಕೊಡಲು ನಾನು ಯಾವಾಗಲೂ ಸಿದ್ಧನಾಗಿರುವೆನೆಂದು ಭರವಸೆಕೊಡಬಲ್ಲೆನು. ನೀವೆಲ್ಲರೂ ನನ್ನನ್ನು ವಿಶ್ವಾಸಪೂರ್ವಕವಾಗಿ ಅಭಿನಂದಿಸಿದುದರಿಂದ ನಿಮ್ಮೆಲ್ಲರನ್ನೂ ಪ್ರಜಾಮಿತ್ರಮಂಡಲಿಯವರು ಮತ್ತು ಕ್ರೈಸ್ತಸಂಘದವರು ವಿಜ್ಞಾಪನಪತ್ರಿಕೆಗಳನ್ನು ಸುಂದರವಾದ ಪೆಟ್ಟಿಗೆಗಳಲ್ಲಿಟ್ಟುಕೊಟ್ಟುದಕ್ಕಾಗಿ ಅವರುಗಳನ್ನೂ ನನ್ನಮನಃಪೂರ್ವಕವಾಗಿ ವಂದಿಸುತ್ತೇನೆ. ಶ್ರೀಮನ್ಮಹಾರಾಜರವರು ನನ್ನಲ್ಲಿಟ್ಟಿರುವ ಭರವಸೆಯಿಂದಲೂ, ಈ ದಿವಸ ನೀವುಗಳು ನನಗೆ ಕೊಟ್ಟಿರುವ ಪ್ರೋತ್ಸಾಹದಿಂದಲೂ ನಾನು ಮುಂದೆ ನನ್ನ ಉದ್ಯೋಗವನ್ನು ಧೈರ್ಯದಿಂದ ನಿರ್ವಹಿಸಬಲ್ಲೆನೆಂದು ನಿರೀಕ್ಷಿಸುತ್ತೇನೆ. ನಿಮ್ಮಗಳಿಗೆ ನನ್ನಲ್ಲಿರುವ ನಂಬುಗೆಯನ್ನೂ ನಿರೀಕ್ಷಣೆಯನ್ನೂ ನನ್ನ ಅಧಿಕಾರದವಧಿಯಲ್ಲಿ ಸಾರ್ಥಕಗೊಳಿಸಿದುದಾದರೆ ನನಗೆ ಸಂಪೂರ್ಣವಾದ ಸನ್ಮಾನವಾದಂತೆ ತಿಳಿಯುವೆನು.

ಭರತಖಂಡದ ವೃತ್ತಾಂತಗಳು.

ಅಹಮದಾಬಾದಿನಲ್ಲಿ ಉವೇದಳು ಎಂಬ ಹೆಸರಿನ ಒಬ್ಬ ಮಹಮ್ಮದೀಯ ಸ್ತ್ರೀಯು ತನ್ನ ಮತವನ್ನು ತ್ಯಜಿಸಿ ಹಿಂದೂ ಮತವನ್ನವಲಂಬಿಸಿದಾಳೆ. ಈಕೆಯು ಶ್ರೀ ಕೃಷ್ಣನಲ್ಲಿ ಭಕ್ತಿಪರವಶಳಾಗಿ ಹಿಂದೂ ಮತವನ್ನು ಅಂಗೀಕರಿಸಿದ್ದೇನೆಂದು ವರ್ತಮಾನ ಪತ್ರಿಕೆಗಳಿಗೆ ಬರೆದು ತಿಳಿಸಿರುತ್ತಾಳೆ.

ತಿರುವನಂತಪುರದ ಟ್ರೇನಿಂಗ್ ಕಾಲೇಜಿನ ವೈಸ್‌ಪ್ರಿನ್ಸಿಪಾಲರಾಗಿದ್ದ ರಾಮವರ್ಮಕುಂಪನ್ ಎಂಬುವವರ ಕುಮಾರ್ತಿ ಲಕ್ಷ್ಮೀಕುಟ್ಟಿಅಮ್ಮ ಎಂಬಾಕೆಯು ಈ ಸಲದ ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ದೇಶದ ನಾಯರ್ ಸ್ತ್ರೀಯರಲ್ಲಿ ಯಾರೂ ಈವರೆಗೆ ಎಂ. ಎ. ಪರೀಕ್ಷೆ ಕೊಟ್ಟಿರಲಿಲ್ಲವು.

ಘರ್ವಾಲದಲ್ಲಿ ಕಳೆದ ಮಾರ್ಚಿ ತಿಂಗಳಲ್ಲಿ ಮಳೆಯಾಗಲಿಲ್ಲವಾಗಿ ಆಹಾರಪದಾರ್ಥಗಳು ಸರಿಯಾಗಿ ದೊರಕದೆ ಬಹಳ ಕಷ್ಟಪ್ರಾಪ್ತವಾಗಿರುವ ಪ್ರಯುಕ್ತ ಬದ್ರಿನಾಥಕ್ಕೆ ಯಾತ್ರಾರ್ಥಿಗಳಾರೂ ಸದ್ಯದಲ್ಲಿ ಹೋಗಬಾರದೆಂದೂ ಒಂದುವೇಳೆ ಹೋದಲ್ಲಿ ಆಹಾರ ದೊರಕದೆ ಕಷ್ಟಪಡಬೇಕಾಗುತ್ತದೆಂದೂ ಅದಕ್ಕಾಗಿ ಹಾಗೆ ಹೋದವರನ್ನು ಲಕ್ಷ್ಮಣಜೂಲಾದಲ್ಲೇ ತಡೆದು ನಿಲ್ಲಿಸಲ್ಪಡಬೇಕಾಗುತ್ತದೆಂದೂ ಸಂಯುಕ್ತಪ್ರಾಂತದ ಸರ್ಕಾರದವರು ಪ್ರಕಟಿಸಿರುತ್ತಾರೆ.

ವೇಲ್ಸ್ ಯುವರಾಜರು ಪ್ರಯಾಣಮಾಡುತ್ತಿದ್ದ ರಿನೌನು ಹಡಗು ಪೆನಾಂಗಿನಿಂದ ಟ್ರಿಂಕಾಮಲಿಗೆ ಬರುತ್ತಿರುವಾಗ್ಗೆ ಸಮುದ್ರವು ಅಲ್ಲೋಲಕಲ್ಲೋಲವಾಗಿದ್ದುದರಿಂದ ಗಮ್ಯಸ್ಥಾನವನ್ನು ಸೇರಲು ಸಾವಕಾಶವಾಯಿತು. ಯುವರಾಜರು ಟ್ರಿಂಕಾಮಲಿಯಲ್ಲಿ ಒಂದುರಾತ್ರಿ ತಂಗಿದ್ದು ಮಾರನೆಯ ದಿನ ರೈಲುಬಂಡಿಯನ್ನು ಹತ್ತಿ ಕೊಲಂಬೊವನ್ನು ಆ ಮಾರಣೆಯದಿನ ಸಾಯಂಕಾಲ ತಲುಪಿದರು. ಯುವರಾಜರು ಆರೋಗ್ಯವಾಗಿದ್ದರಲ್ಲದೆ ಅಲ್ಲಿ ಟೆನಿಸ್ ಎಂಬ ಚಂಡಾಟವನ್ನಾಡಿದರು.

ಸಂಯುಕ್ತಪ್ರಾಂತದ ಮೊದಲನೆಯ ಗೌರ್ನರಾದ ಸರ್ ಹಾರ್‌ಕೋರ್ಟ್ ಬಟ್ಲರ್‌ರವರ ರಾಜ್ಯಾಡಳಿತದ ಸ್ಮಾರಕವಾಗಿ ಅವರ ಪ್ರತಿಮೆಯನ್ನು ಮಾಡಿಸಿ ಪ್ರತಿಷ್ಠಾಪಿಸಲು ೧,೫೫,೦೦೦ ರೂಪಾಯಿಗಳ ಚಂದಾ ಹಣವು ಕೂಡಿಸಲ್ಪಟ್ಟಿರುತ್ತದೆ. ಇದಕ್ಕೆ ಕಪರ್ಥಲಾ ಮಹಾರಾಜರು ೧೫,೦೦೦ ರೂ. ಗತಿಸಿದ ಮಹಾರಾಜ ಭಾಗವಲಿಪ್ರಸಾದ್‌ಸಿಂಗರವರು ೫೦೦೦ ರೂ. ಮಹಮುದಾಬಾದಿನ ರಾಜರವರು ೫೦೦೦ ರೂ. ಮತ್ತು ಮುನ್ಷಿ ವಿಷ್ಣುನಾರಾಯಣ ಭಾರ್ಗವರು ೧೦,೦೦೦ ರೂ. ಈ ಪ್ರಕಾರ ಕೊಟ್ಟಿರುತ್ತಾರೆ.

ಕಲಕತ್ತಾಪಟ್ಟಣಕ್ಕೆ ೭ ಮೈಲಿ ದೂರದಲ್ಲಿರುವ ರಘುನಾಥಪುರವೆಂಬ ಗ್ರಾಮದಲ್ಲಿ ಒಂದು ಮನೆಗೆ ೧೨ ಜನ ಕಳ್ಳರು ಆಯುಧಪಾಣಿಗಳಾಗಿ ನುಗ್ಗಿ ಒಳಗಿದ್ದ ಜನರನ್ನು ಹಿಂಸಿಸಿ ನಗನಾಣ್ಯಗಳನ್ನು ದೋಚಿಕೊಳ್ಳುತ್ತಿರುವಾಗ್ಗೆ ಮನೆಯ

ಗತಿಸಿದ ಕೂಚ್ ಬಿಹಾರ ಮಹಾರಾಜರ ಕುಮಾರಿ ಪ್ರತೀವಸುಂದರಿಯವರು ಲಿಯೋನಲ್ ಮ್ಯಾಂಡಲ್ ಎಂಬ ಐರೋಪ್ಯನನ್ನು ಲಗ್ನಮಾಡಿಕೊಂಡಿದ್ದರು. ಪರಸ್ಪರ ಮನಸ್ತಾಪದಿಂದ ಗಂಡನು ಪತ್ನಿಯನ್ನು ಪರಿತ್ಯಜಿಸಲು ಕೋರ್ಟಿನಲ್ಲಿ ವ್ಯಾಜ್ಯ ಹೂಡಿದ್ದುದರಮೇಲೆ ಆಕೆಯನ್ನು ಬಿಟ್ಟುಬಿಡಲು ಕೋರ್ಟಿನ ಅಪ್ಪಣೆಯು ದೊರೆದಿರುವುದು.

ವರ ಆರ್ತಧ್ವನಿಯನ್ನು ಗ್ರಾಮಸ್ಥರೂ ಗ್ರಾಮ ಕಾವಲಿನವರೂ ಕೇಳಿ ದೊಣ್ಣೆ ಮಚ್ಚು ಕೊಡಲಿ ಕತ್ತಿ ಬಂದೂಕಗಳನ್ನು ತೆಗೆದುಕೊಂಡು ಬಂದು ಮನೆಯನ್ನು ಸುತ್ತುಕಟ್ಟಿ ನಿಂತುಕೊಂಡರು. ಆಗ ಕಳ್ಳರಿಗೂ ಗ್ರಾಮಸ್ಥರಿಗೂ ಬಡಿದಾಟವಾಗಿ ಮೂವರು ಕಳ್ಳರು ಸೆರೆಹಿಡಿಯಲ್ಪಟ್ಟರು, ಮತ್ತು ಒಬ್ಬ ಗ್ರಾಮಸ್ಥನಿಗೆ ಪ್ರಾಣಾಪಾಯವಾಯ್ತು. ಉಳಿದ ಕಳ್ಳರು ಕೈಗೆ ಸಿಕ್ಕಿದುದನ್ನು ಎತ್ತಿಕೊಂಡು ಫಲಾಯನವಾಗಿದ್ದು ಈಗ ಪೋಲೀಸರಿಂದ ಹಿಡಿಯಲ್ಪಟ್ಟಿರುವರು.

ಸಿಂದ್ ಹೈದರಾಬಾದಿಗೆ ಕಾಬೂಲಿನಿಂದ ಕೆಲ ಅಫ್ಘನ್ ಪಠಾಣರು ಕೊಂಚಕಾಲಕ್ಕೆ ಹಿಂದೆ ಬಂದು ರೇಶ್ಮೆ ಮತ್ತು ಉಣ್ಣೆ ಬಟ್ಟೆಗಳ ವ್ಯಾಪಾರಮಾಡುತ್ತಿದ್ದರು. ಹೈದರಾಬಾದಿಗೆ ೪೦ ಮೈಲಿ ದೂರದಲ್ಲಿರುವ ಒಂದು ಗ್ರಾಮದ ಇಬ್ಬರು ಮಹಮ್ಮದೀಯರು ಈ ವರ್ತಕರಲ್ಲಿ ನಾಲ್ವರ ಪರಿಚಯಮಾಡಿಕೊಂಡು, ವ್ಯಾಪಾರಕ್ಕಾಗಿ ತಮ್ಮ ಗ್ರಾಮಕ್ಕೆ ಅವರನ್ನು ಬರಮಾಡಿಕೊಂಡು ಒಂದುದಿವಸ ರಾತ್ರಿಯಲ್ಲಿ ಅವರನ್ನು ಕೊಂದು ಅವರ ವಶದಲ್ಲಿದ್ದ ಹಣ ಮತ್ತು ಬಟ್ಟೆಗಳನ್ನು ಅಪಹರಿಸಿಕೊಂಡು ಶವಗಳನ್ನು ಗ್ರಾಮದ ಹೊರಗಡೆ ಮಳಲುಭೂಮಿಯಲ್ಲಿ ಹೂತುಬಿಟ್ಟಿದ್ದರು. ಜತೆಯ ಪಠಾಣರು ಅವರನ್ನು ಹುಡುಕಿಕೊಂಡು ಬಂದು ಅವರೆಲ್ಲೂ ಸಿಕ್ಕದೆಹೋದುದರ ಮೇಲೆ ಪೋಲೀಸರಿಗೆ ತಿಳಿಸಿದರು. ಪೋಲೀಸರು ಸತ್ತುಹೋದವರು ಇಳಿದಿದ್ದ ಮನೆಯವರನ್ನು ಅನುಮಾನದ ಮೇಲೆ ಹಿಡಿದು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವಲ್ಲಿ ಪಠಾಣರನ್ನು ಕೊಲೆಮಾಡಿದುದುಂಟೆಂದು ಒಪ್ಪಿಕೊಂಡುದರ ಮೇಲೆ ಅವರಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು.

ಲಾಹೋರು ಡಿಸ್ಟ್ರಿಕ್ಟಿಗೆ ಸೇರಿದ ಹಲ್ಲಾ ಎಂಬ ಗ್ರಾಮದಲ್ಲಿ ಒಬ್ಬ ಶ್ರೀಮಂತನ ಮನೆಗೆ ಕೆಲ ಆಯುಧಪಾಣಿಗಳಾದ ಕಳ್ಳರು ಕಳೆದ ತಾ|| ೨೧ ರಲ್ಲಿ ನುಗ್ಗಿ ನಾಲ್ವರನ್ನು ಕೊಂದು ೫೦೦೦ ರೂ. ವರೆಗೆ ನಗನಾಣ್ಯ ಮತ್ತು ಪದಾರ್ಥಗಳನ್ನು ದೋಚಿಕೊಂಡು ಹೋದರು. ಈ ಕಳ್ಳರ ಗುಂಪಿನಲ್ಲಿ ಒಬ್ಬನು ೩೦೩ನೆಯ ನಂ. ಬಂದೂಕಿನಿಂದ ೮ ಗುಂಡುಗಳನ್ನು ಹೊಡೆದನು. ಮತ್ತೊಬ್ಬನು ೧೨ ಗುಂಡುಗಳನ್ನಾರಿಸುವ ಬಂದೂಕವನ್ನಿಟ್ಟುಕೊಂಡಿದ್ದರೂ ಅದನ್ನುಪಯೋಗಿಸಲಿಲ್ಲವು. ಒಬ್ಬ ಮುದುಕಿಯು ಗುಂಡಿನ ಶಬ್ದವನ್ನು ಕೇಳಿ ಓಡಿಬಂದು ಮತ್ತೊಂದು ಗುಂಡಿನೇಟನ್ನು ತಿಂದು ಸತ್ತಳು. ಈ ಶಬ್ದದಿಂದ ಮತ್ತೊಬ್ಬ ಮುದುಕನು ಎಚ್ಚರಗೊಂಡು ಕಳ್ಳರ ಕಡೆಗೆ ಓಡಿಬರುವಾಗ್ಗೆ ಗುಂಡಿನೇಟನ್ನು ತಿಂದು ಕೂಡಲೆ ಮೃತನಾದನು. ಆಮೇಲೆ ಕಳ್ಳನು ಮನೆಯವರಲ್ಲೊಬ್ಬನ ಕಾಲನ್ನು ಕತ್ತಿಯಿಂದ ಕತ್ತರಿಸಿ ತಿವಿಯಲು ಅವನು ರಕ್ತವನ್ನು ಕಾರಿ ಸತ್ತನು. ತರುವಾಯ ಕಳ್ಳರು ಪೆಟ್ಟಿಗೆಯ ಬೀಗದಕೈಯನ್ನು ಕೊಡಲು ತಿರಸ್ಕರಿಸಿದ ಹೆಂಗುಸನ್ನು ದೊಣ್ಣೆಯಿಂದ ಹೊಡೆದು ಸಾಯಿಸಿದರು. ೨ ಎತ್ತುಗಳಿಗೂ ೧ ಎಮ್ಮೆಗೂ ಗುಂಡಿನೇಟು ತಗಲಿ ಗಾಯವಾಯಿತು. ಕಳ್ಳರು ಮನೆಯಲ್ಲಿದ್ದುದನ್ನೆಲ್ಲಾ ದೋಚಿಕೊಂಡು ಎಲ್ಲಿಯೋ ಕಾಡಿಗೆ ಹೋಗಿ ಸೇರಿಕೊಂಡು ಪೋಲೀಸರು ಎಷ್ಟು ತಡಕಿದಾಗ್ಗೂ ವಶವಾಗದೆ ಇರುತ್ತಾರೆ.

ಅಸ್ಪೃಶ್ಯತ್ವವೇ ಇರಕೂಡದೆಂದು ಸಹಾಯನಿರಾಕರಣವಾದಿಗಳು ಬೋಧಿಸುವುದನ್ನು ಕೇಳಿಕೊಂಡು ಅಸ್ಸಾಂಪ್ರಾಂತಕ್ಕೆ ಸೇರಿದ ಗೋಹತಿಯ ನಾಮಶೂದ್ರರು ಕಾಮರೂಪದಲ್ಲಿರುವ ಹಿಂದೂ ದೇವಾಲಯವನ್ನು ಪ್ರವೇಶಿಸಲು ಪ್ರಯತ್ನಿಸಿದಾಗ ದೇವಸ್ಥಾನದ ಅಧಿಕಾರಿಗಳು ಅವರನ್ನು ದೇವಸ್ಥಾನದೊಳಕ್ಕೆ ಬರಗೊಡದೆ ಒಂದು ದೊಡ್ಡ ಸಭೆಯನ್ನು ಸೇರಿಸಿ ಅದಕ್ಕೆ ನಾಮಶೂದ್ರರ ಪ್ರಮುಖರನ್ನು ಬರಮಾಡಿಕೊಂಡು ದೇವಸ್ಥಾನವನ್ನು ಪ್ರವೇಶಿಸಿದರೆ ಅಪವಿತ್ರವಾಗುತ್ತದೆಂದು ಎಷ್ಟು ವಿಧವಾಗಿ ಸಮಾಧಾನವನ್ನು ಹೇಳಿದರೂ ಆ ನಾಮಶೂದ್ರರು ಪ್ರವೇಶಿಸಲೇಬೇಕೆಂದು ಹಟಹಿಡಿದರು. ಅದರಮೇಲೆ ಆ ದೇವಸ್ಥಾನದ ಅಧಿಕಾರಿಗಳು ಪೋಲೀಸರ ಸಹಾಯವನ್ನು ಹೊಂದಿ ಗುಂಪನ್ನು ಚದರಿಸಬೇಕಾಯಿತು. ಜನವರಿ ತಾ|| ೧೧ ರಲ್ಲಿ ೩೦೦ ಜನ ನಾಮಶೂದ್ರ ವಾಲಂಟೀಯರುಗಳು ಬಲವಂತದಿಂದ ದೇವಸ್ಥಾನವನ್ನು ಪ್ರವೇಶಿಸಲೆತ್ನಿಸಿ ಪೋಲೀಸರಿಂದ ತಡೆಯಲ್ಪಟ್ಟವರಾದರೂ ಪುನಃ ಅದೇದಿನ ಸಾಯಂಕಾಲ ಗುಂಪನ್ನು ಕಟ್ಟಿಕೊಂಡು ಬಂದು ನುಗ್ಗಲು ಪ್ರಯತ್ನಪಟ್ಟರು. ಆಗಲೂ ಪೋಲೀಸರು ಅವರನ್ನು ತಡೆದು ೨೬ ಜನ ಪ್ರಮುಖ ನಾಮಶೂದ್ರರನ್ನು ವಿಚಾರಣೆಗೆ ಗುರಿಮಾಡಿದರು. ಅವರಲ್ಲಿ ೧೯ ಜನರು ನ್ಯಾಯಕ್ಕೆ ವಿರೋಧವಾಗಿ ಗುಂಪುಸೇರಿದ್ದರೆಂಬ ಅಪರಾಧದ ಮೇಲೆ ೬ ವಾರಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟರು. ಇದರಮೇಲೆ ಹೈಕೋರ್ಟಿಗೆ ಅಪೀಲನ್ನು ಮಾಡಿಕೊಂಡಿರುವಲ್ಲಿ, ದೇವಾಲಯವನ್ನು ಪ್ರವೇಶಿಸಲು ತಮಗೆ ಭಾಧ್ಯತೆಯಿದೆಯೆಂದು ಭಾವಿಸಿ ಪೋಲೀಸರು ತಡೆದಾಗ್ಗೂ ಬಲವಂತದಿಂದ ನುಗ್ಗಲೆತ್ನಿಸಿದುದು ತಪ್ಪೆಂದು ಅಭಿಪ್ರಾಯಪಟ್ಟರಾದರೂ ಶಿಕ್ಷೆಯನ್ನು ತಪ್ಪಿಸಿದರು.

ವಿದೇಶದ ವೃತ್ತಾಂತಗಳು.

ಮೇಜರ್ ಬ್ಲೇಕ್‌ರವರು ಆಕಾಶವಿಮಾನದ ಮೂಲಕ ಪ್ರಪಂಚವನ್ನೆಲ್ಲಾ ಸುತ್ತಿಬರಲು ಸಂಕಲ್ಪಿಸಿ ಪ್ರಯಾಣ ಹೊರಟು ಮಾರ್ಸಲೀಸಿಗೆ ಬಂದು ಸೇರಿರುತ್ತಾರೆ.

ಪ್ಯಾರಿಸ್ ಪಟ್ಟಣದಲ್ಲಿರುವ ಅಮೇರಿಕೆಯ ರಾಯಭಾರಿಗಳು ಪರ್ಷ್ಯಾಡ ಸಾರವನಿಗೆ ಹೋದ ಶನಿವಾರ ರಾಜೌತಣವನ್ನು ಮಾಡಿಸಿದರು.

ಮುಳಿಗಿಹೋದ ಈಜಿಪ್ಟು ಹಡಗಿನಿಂದ ಸಂರಕ್ಷಿಸಲ್ಪಟ್ಟ ೧೫೭ ಭಾರತೀಯ ನಾಕೋದ್ಯೋಗಿಗಳು ಮೆಸಡೋನಿಯಾ ಹಡಗನ್ನು ಹತ್ತಿ ಬೊಂಬಾಯಿಗೆ ಪ್ರಯಾಣಮಾಡಿರುವರು.

ಫ್ರಾನ್ಸ್‌ದೇಶದ ಇಬ್ಬರು ಶಾಸ್ತ್ರಶೋಧಕರು ನಿಜವಾದ ಮುತ್ತಿಗೂ ಕೃತ್ರಿಮವಾದ ಮುತ್ತಿಗೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳುವ ಉಪಾಯವನ್ನು ಕಂಡುಹಿಡಿದಿರುತ್ತಾರೆ.

ಈ ವರ್ಷದ ಮಾರ್ಚಿ ತಾ|| ೨೮ರ ರಾತ್ರಿಯಲ್ಲಿ ಇಂಗ್ಲೆಂಡು ಮತ್ತು ವೇಲ್ಸ್ ರಾಜ್ಯಗಳಲ್ಲಿ ೮೩೦೫ ದಿವಾಳಿ ಜನರಿದ್ದರು, ಮತ್ತು ೧೯೧೪ನೆಯ ಜುಲೈ ತಾ|| ೩೧ ರಲ್ಲಿ ೭೪೦೦ ಜನರಿದ್ದರು.

ವೇಲ್ಸ್ ಯುವರಾಜರು ಈ ತಾ|| ೧೦ರಲ್ಲಿ ಕೈರೋ ಪಟ್ಟಣವನ್ನು ತಲುಪಿ ಈಜಿಪ್ಟ್ ದೊರೆಯ ಕೂಡ ಅಲ್ಪಾಹಾರವನ್ನು ತೆಗೆದುಕೊಂಡು ವೈಕೌಂಟ್ ಅಲನ್‌ಬಿಯವರ ಜತೆಗೆ ಊಟವನ್ನು ಮಾಡಿ ಪೋಲೋಪಂದ್ಯವನ್ನೂ ಸೈನಿಕರ ಮುಸ್ತಾಮುಷ್ಟಿಯ ಕಾಳಗವನ್ನೂ ಪರಾಮರಿಸಿಕೊಂಡು ಈ ತಾ|| ೧೧ ರಲ್ಲಿ ಮುಂದಕ್ಕೆ ಪ್ರಯಾಣಮಾಡುವರು.

ರಷ್ಯಾರಾಜ್ಯದಲ್ಲಿ ವೀರಕ್ಷಾಮವು ಪ್ರಾಪ್ತವಾಗಿರುವುದರಿಂದ ಜನರು ತಿನ್ನುವುದಕ್ಕೆ ಪದಾರ್ಥಸಿಕ್ಕದೆ ಕ್ಷುದ್ಬಾಧೆಯನ್ನು ತಡೆಯಲಾರದೆ ಮನುಷ್ಯರನ್ನೇ ಕೊಂದು ಅವರ ಮಾಂಸವನ್ನು ತಿನ್ನುತ್ತಿರುವರು, ಮತ್ತು ಅಂಗಡಿಗಳಲ್ಲೂ ನರಮಾಂಸವು ಮಾರಲ್ಪಡುತ್ತಿರುವದು. ಈ ಅಮಾನುಷಕೃತ್ಯವನ್ನು ತಪ್ಪಿಸಲು ಸರ್ಕಾರದವರು ಮಾಡಿದ ಪ್ರಯತ್ನವೆಲ್ಲವೂ ನಿರರ್ಥಕವಾಗಿರುವುದು.

ಅಪ್ಪರ್ ಸಿಲ್ಲಿಯಾದಲ್ಲಿರುವ ಡರ್ಹಾಂಲೈಟ್ ಇನ್‌ಫೆಂಟ್ರಿ ಎಂಬ ಕಾಲ್ಬಲದ ಸೇನೆಯ ಅಧಿಕಾರಿಯು ಲುಬಿನಿಟ್ಜ್ ಎಂಬ ಸ್ಥಳದಿಂದ ೧೩೦ ಮೈಲಿ ದೂರದಲ್ಲಿರುವ ರಾಟಿಬಾರ್ ಎಂಬ ಸ್ಥಳಕ್ಕೆ ೫೬ ಗಂಟೆಯ ಕಾಲದಲ್ಲಿ ಹೋಗಿ ಬಂದಲ್ಲಿ ೭೫ ರೂಪಾಯಿಗಳ ಬಹುಮಾನವನ್ನು ಕೊಡಬೇಕೆಂದು ಗೊತ್ತುಮಾಡಿಕೊಂಡು ೪೬ ಗಂಟೆ ಮತ್ತು ೫೫ ನಿಮಿಷಗಳಲ್ಲಿ ೧೩೦ ಮೈಲಿದೂರ ನಡೆದುಕೊಂಡು ಹೋಗಿಬಂದನು. ಮಧ್ಯದಾರಿಯಲ್ಲಿ ಊಟ ಉಪಚಾರಗಳಿಗೇರ್ಪಾಟೇನೂ ಇಲ್ಲದೆ ಪ್ರಯಾಣ ಹೊರಟ ಮಾರನೆ ದಿನ ಬೆಳಗ್ಗೆ ಮಾತ್ರ ಒಂದು ಲೋಟ ದ್ರಾಕ್ಷಾರಸ ಮತ್ತು ಮೂರು ಬೇಯಿಸಿದ ಕೋಳಿ ಮೊಟ್ಟೆಗಳನ್ನು ತೆಗೆದುಕೊಂಡನು.

ಮೊನಾಸ್ಟರದಲ್ಲಿ ಮದ್ದುಗುಂಡು ಸಾಮಗ್ರಿಗಳು ತುಂಬಲ್ಪಟ್ಟಿದ್ದ ಮನೆಗೆ ಬೆಂಕಿಯು ಬಿದ್ದು ಹೊತ್ತಿಕೊಂಡು ವಿಶೇಷ ಶಬ್ದದಿಂದ ಮೇಲಕ್ಕೆ ಹಾರಿ ಜನರಗರ್ಭ ನಡುಗಿಸಿತು. ಈ ಬೆಂಕಿಯ ಜ್ವಾಲೆಯು ಊರನ್ನೆಲ್ಲಾ ವ್ಯಾಪಿಸಿಕೊಂಡು ಬರಲು ೪೦೦೦೦ ಮನೆಗಳ ಜನರು ಊರನ್ನು ಬಿಟ್ಟು ಕಾಡುಗಳಿಗೆ ಹೋಗಿ ಸೇರಿಕೊಂಡರು. ಈ ಅಗ್ನಿಪ್ರಳಯಕ್ಕೆ ಸಿಕ್ಕಿ ಒಟ್ಟು ಎಷ್ಟುಜನರು ಹತರಾದರೆಂಬುದು ಇನ್ನೂ ಗೊತ್ತಾಗಿಲ್ಲವಾದರೂ ೧೮೦೦ ಜನರಿಗೆ ಕಡಿಮೆಯಿಲ್ಲದೆ ಸತ್ತಿರುವರೆಂದೂ ಕೆಲ ಕೋಟಿ ರೂಪಾಯಿಗಳ ಆಸ್ತಿಯು ನಷ್ಟವಾಗಿರುವುದೆಂದೂಹಿಸಲ್ಪಟ್ಟಿದೆ ಮತ್ತೂ ಈ ಪ್ರಳಯಾಗ್ನಿಯನ್ನು ಆರಿಸಲು ಕಾಲುವೆಗಳನ್ನು ಹೊಸದಾಗಿ ತೋಡಿ ಹೊಳೆಗಳಿಂದ ನೀರನ್ನು ಹಾಯಿಸಿರುವುದಾಗಿ ತಿಳಿಯಬಂದಿದೆ.

ಸ್ವೀಕಾರ.

(1) ಡೆಂಕಣಕೋಟೆ ಡಿ. ಎನ್. ನೀಲಕಂಠಪ್ಪನವರಿಂದ ಅವರ ಪುತ್ರಿಯ ಮತ್ತು ಅವರ ತಮ್ಮನ ಪುತ್ರಿಯ ಲಗ್ನಗಳಲ್ಲಿ 3 ರೂ. (2) ಬೆಂಗಳೂರು ಮ|| ಪಿ. ಎಂ. ಬಸಪ್ಪನವರಿಂದ ಅವರ ಲಗ್ನದಲ್ಲಿ 1 ರೂ. (3) ಹುಣಸೂರು ತಾ|| ರಾವಂದೂರು ಮ|| ಶಿವಪ್ಪನವರ ಚೆನ್ನಪ್ಪನವರ ಮಗಳ ಲಗ್ನದಲ್ಲಿ ಯಡಕೊರೆ ಮ|| ಶೆಟ್ಟಿಗಾರ್ ಪುಟ್ಟಣ್ಣಶೆಟ್ಟರ ಮೂಲಕ 1 ರೂ. (4) ಶಿಕಾರಿಪುರ ತಾ|| ಸಾಲೂರು ಹಿರೇಮಠದ ಪಟ್ಟಾಧಿಕಾರ ಮಹೋತ್ಸವದಲ್ಲಿ ಹಿರೇಮಠದ ಚನ್ನವೀರಪ್ಪನವರ ಮೂಲಕ 1 ರೂ. (5) ಚಿಕ್ಕಮಗಳೂರು ತಾ|| ಅರಿಶಿನಗುಪ್ಪೆ ಗ್ರಾಮದ ಪಟೇಲ್ ಮ|| ದೇವಿಗೌಡರ ಪುತ್ರಿಯ ಲಗ್ನದಲ್ಲಿ ಮ|| ಡಿ. ನಂಜಪ್ಪನವರ ಮೂಲಕ 1 ರೂ. ಈ ಪ್ರಕಾರವಾಗಿ ಕೈ|| ವೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ಕಳುಹಿಸಿಕೊಟ್ಟಿರುವುದನ್ನು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುತ್ತೇವೆ.— ಪ.ಪ್ರ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಶ್ರೀಕ್ಷೇತ್ರಕಾಶೀ ಜಂಗಮವಾಡೀ ಮಹಾಸಂಸ್ಥಾನದ ವಿದ್ವನ್ಮಂಡಲಿಯವರ ಪ್ರವಾಸವು.

ಪ್ರತಿ ವರ್ಷದಂತೆ ಈ ವರ್ಷವಾದರೂ ಬೇಸಿಗೆಯ ಸೂಟಿಯ ಕಾಲಕ್ಕೆ ಮಹಾ ಸಂಸ್ಥಾನದ ವಿದ್ವನ್ಮಂಡಳಿಯವರು ಪಾಟನಾ, ಗಯಾ, ವರ್ಧಮಾನ, ಕಲಕತ್ತಾ, ಜಗನ್ನಾಥಪುರೀ ಮೊದಲಾದ ಕ್ಷೇತ್ರಗಳ ಪ್ರವಾಸವನ್ನು ಕೆಲವು ಕಾರಣಗಳ ಮೂಲಕ ನಿಲ್ಲಿಸಿ, ಅಯೋಧ್ಯಾ, ಪ್ರಯಾಗ, ಲಖನೌ, ಖಾನಪೂರ, ಆಗ್ರಾ, ದಿಲ್ಲೀ, ಹರದ್ವಾರ ಋಷೀಕೇಶ ಮೊದಲಾದ ಕ್ಷೇತ್ರಗಳ ದರ್ಶನಾರ್ಥವಾಗಿ ತಾ|| ೨೨-೫-೨೨ ದಿವಸ ಅಯೋಧ್ಯಾ ಮಾರ್ಗವಾಗಿ ಪ್ರಯಾಣವನ್ನು ಬೆಳೆಸಿರುವರು.

ಶ್ರೀಮಲ್ಲಿಕಾರ್ಜುನಶಿವಾಚಾರ್ಯ-ಚಿಮ್ಮಲಗಿ.

ದಾವಣಗೆರೆ ವೀರಶೈವ ವಿದ್ಯಾವರ್ಧಕ ಸಂಘ.

ಮೈಸೂರು ಸೀಮೆಯ ವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ:—

೧. ದಾವಣಗೆರೆ ಹೈಸ್ಕೂಲಿನಲ್ಲಿ ಅಭ್ಯಾಸಮಾಡತಕ್ಕ ಪರಸ್ಥಳದ ಬಡವಿದ್ಯಾರ್ಥಿಗಳಿಗೆ ಈ ಫಂಡಿನಿಂದ ಬೋರ್ಡಿಂಗ್ ಸೀಟ್ ಕೊಡಲ್ಪಡುವುದು. ಸಂಘದ ರೂಲಿಗೆ ಒಳಪಟ್ಟು ನಡೆಯತಕ್ಕವರು ಈ ಸಂಘದ ಪ್ರಿಂಟೆಡ್ ಫಾರಂನಲ್ಲಿ ಈ ಜೂನ್ ತಾ|| ೮ ರೊಳಗಾಗಿ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು ಮತ್ತು ಜೂನ್ ತಾ|| ೧೨ ನೇ ಸೋಮವಾರದ ದಿವಃ ಅಪ್ಲಿಕೇಷನ್‌ಗಳ ವಿಮರ್ಶೆಮಾಡಲ್ಪಡುವುದು. ಅಪ್ಲಿಕೇಷನ್ ಬರಕೊಂಡ ವಿದ್ಯಾರ್ಥಿಗಳು ತಪ್ಪದೆ ಆದಿನ ಹಾಜರಾಗಬೇಕು. ನಂತರ ಬರುವ ವಿದ್ಯಾರ್ಥಿಗಳಿಗೆ ಸ್ಥಳ ದೊರಿಯಲಾರದು.

೨. ಅನುಕೂಲಸ್ಥರಾದ ವಿದ್ಯಾರ್ಥಿಗಳು ಸಂಘದ ರೂಲಿಗೆ ಒಳಪಟ್ಟು ಬೋರ್ಡಿಂಗಿಗೆ ಸೇರಲು ಅಪೇಕ್ಷೆಯುಳ್ಳವರು ಮಾಹೆಯಾನ ಆಗುವ ಖರ್ಚುಹಣದಲ್ಲಿ ಹಾಲಿಯಂತೆ ಕೊಟ್ಟು ಸೇರಲು ಅವಕಾಶಕೊಡಲ್ಪಟ್ಟಿದೆ. ಇಷ್ಟವುಳ್ಳವರು ಈ ಜೂನ್ ತಾ|| ೮ ರೊಳಗಾಗಿ (೧೦) ರೂಪಾಯಿಗಳನ್ನು ಅಡ್ವಾನ್ಸಾಗಿ ಕಳುಹಿಸಿ ಅರ್ಜಿ ಬರೆದುಕೊಳ್ಳಬಹುದು.

ಸೆಕ್ರೆಟರಿ.

ಶಿಕಾರಿಪುರದ ತಾಲೂಕು ಸಾಲೂರು.

ಇದೇ ವೈಶಾಖ ಶು|| ೩ ಭಾನುವಾರ ದಿನ ಪ್ರಾತಃಕಾಲ ವೃಷಭಲಗ್ನದಲ್ಲಿ ಇದೇ ಸಾಲೂರು ಹಿರೇಮಠದ ಪಟ್ಟಾಧ್ಯಕ್ಷ ಶಿವೈಕ ರಾದ ಪಂಚಾಕ್ಷರಿಸ್ವಾಮಿ ಗುರು ಚನವೀರಸ್ವಾಮಿಯವರ ಸ್ಥಾನದಲ್ಲಿ ಚನವೀರಸ್ವಾಮಿ ಗುರು ಪಂಚಾಕ್ಷರಿಸ್ವಾಮಿಯೆಂಬವರರಿಗೆ ಪಟ್ಟಾಭಿಷೇಕ ಮಾಡಿ ಗುರುಸ್ಥಾನದ ಅಧಿಕಾರವನ್ನು ಕೊಡುವುದಕ್ಕೋಸ್ಕರ ತೋಗರಿಸಿ ಬೃಹನ್ಮಠದ ಪಟ್ಟಾಧ್ಯಕ್ಷ ಶ್ರೀ ಚನವೀರ ಶಿವಾಚಾರ್ಯಸ್ವಾಮಿಗಳು ಈ ಮೊದಲೇ ಆ ಮಂತ್ರಣವನ್ನು ಸ್ವೀಕರಿಸಿ ಕರ್ತೃಗಳಾಗುವಂತೆ ಅಪ್ಪಣೆ ಕೊಡಿಸಿದ ಮೇರೆಗೆ ಸಕಾಲಕ್ಕೆ ದಯಮಾಡಿಸಿ ಈ ಸಮಾರಂಭಕ್ಕೆ ದಯಮಾಡಿಸಿದ್ದ ಇತರ ಮುಖ್ಯಮಠಗಳ ಚರಪಟ್ಟಾಧ್ಯಕ್ಷರುಗಳೊಂದಿಗೆ ಈ ಕಾರ್ಯವನ್ನು ವೇದೋಕ್ತವಾಗಿ ಶಿಕಾರಿಪುರದ ಕೊಟ್ಟೂರು ಬಸವಶಾಸ್ತ್ರಿಗಳು ನಡಿಸಿದರು. ಈಗ ಅಧಿಕಾರವನ್ನು ವಹಿಸಿರುವ ಶ್ರೀ ಚನವೀರಸ್ವಾಮಿಗಳವರು ವಿಜಾಪುರದ ಜಿಲ್ಲಾ ಶಿವಯೋಗಮಂದಿರದಲ್ಲಿ ವೀರಶೈವಾಚಾರ ಧರ್ಮವನ್ನು ತಿಳಿದು ಸಂಸ್ಕೃತವಿದ್ಯಾಭ್ಯಾಸವನ್ನು ಮಾಡಿ ಈ ಸ್ಥಾನಕ್ಕೆ ತಕ್ಕವರಾಗಿರುತ್ತಾರೆ. ಈ ಸುಸಮಯದಲ್ಲಿ ಪಟ್ಟಾಧಿಕಾರ ಮೊದಲಾದ ಧರ್ಮೋಪನ್ಯಾಸಗಳಾದವು. ಈ ದಿನ ಮಧ್ಯಾಹ್ನ ನಾಲ್ಕುಘಂಟೆ ಸಮಯಕ್ಕೆ ಸಭೆಸೇರಿ ಶ್ರೀ ಚನವೀರಶಿವಾಚಾರ್ಯ ಸ್ವಾಮಿಗಳು ಶಿಷ್ಯ ಮಂಡಲಿಗೆ ದರ್ಶನವನ್ನು ಕೊಟ್ಟು ಅವರಿಂದ ಸಮರ್ಪಿಸಲ್ಪಟ್ಟ ಕಾಣಿಕೆಯನ್ನು ಸ್ವೀಕರಿಸಿ ಅವರಿಗೆ ಆಚಾರಧರ್ಮಗಳನ್ನು ಬೋಧಿಸಿ ಋತ್ವಿಜರ ಮಂತ್ರಘೋಷದೊಡನೆ ಮಂಗಲಾಶೀರ್ವಾದ ಮಾಡಿ ಸಭೆಯನ್ನು ಉಪಸಂಹರಿಸಿದರು. ಓರ್ವಭಕ್ತ.

ಕೂಡಲ ಸಂಗಮಕ್ಷೇತ್ರ.

ಪರಮಪೂಜ್ಯರೂ, ಸಮಾಜಹಿತಕ್ಕಾಗಿ ಹಗಲಿರುಳು ಪಾಟಪಡುವವರೂ ಆದ ದಾವಣಗೆರೆ ಶ್ರೀಮನ್ನಿರಂಜನ ಮೃತ್ಯುಂಜಯ ಮಹಾಸ್ವಾಮಿಗಳವರು ತಮ್ಮ ಧಾರವಾಡ ಬೋರ್ಡಿಂಗಿನ ೨೫ ಜನ ವಿದ್ಯಾರ್ಥಿಗಳೊಡನೆ ಕಲ್ಲಾಪುರದಿಂದ ಕೂಡಲ ಸಂಗಮಕ್ಷೇತ್ರಕ್ಕೆ ದಯಮಾಡಿಸಿ ಮೂರುದಿವಸ ಸಂಗಮಭಾಗದ ವೀರಶೈವ ಮಠೀಯರಿಗೆಲ್ಲ ಸಭೆಮೂಲಕ ಆಚಾರ, ವಿಚಾರ, ಸಮಾಜಸುಧಾರಣೆ, ಬಸವೇಶ್ವರರತತ್ವ ಮೊದಲಾದ ವಿಷಯಗಳ ಮೇಲೆ ಸದುಪದೇಶಮಾಡಿ ಬಸವೇಶ್ವರೈಕ್ಯಸ್ಥಾನವಾದ ಈ ಸಂಗಮಕ್ಷೇತ್ರದಲ್ಲಿ ಸ್ಥಾಪಿತವಾಗಿರುವ ಜಗದ್ಗುರು ಪ್ರಭುಬೋರ್ಡಿಂಗಿಗೆ ಉತ್ತೇಜನ ಕೊಡುವದಲ್ಲದೆ ಸ್ವತಃ ೧೦೧ ರೂಪಾಯಿಗಳನ್ನು ಕೊಡಲೊಪ್ಪಿದ ಬಗ್ಗೆ ಆಶೀರ್ವಾದವನ್ನು ಮಾಡಿದರು. ಶ್ರೀಗಳವರ ಸಂಗಡ ಬಂದ ವಿದ್ಯಾರ್ಥಿಗಳು ತಾವು ಬಡವರಿದ್ದಾಗ್ಯೂ ಸಮಾಜೋನ್ನತಿಯ ಕಡೆಗೆ ಲಕ್ಷ್ಯಗೊಟ್ಟು ೫ ರೂಪಾಯಿಗಳನ್ನು ಕೊಟ್ಟುಬಿಟ್ಟರು. ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರು ಬಡವಿದ್ಯಾರ್ಥಿಗಳ ಊಟದ ವ್ಯವಸ್ಥೆಯಬಗ್ಗೆ ಹೆಚ್ಚಿಗೆ ಜನರಿಗೆ ಪ್ರೋತ್ಸಾಹಕೊಟ್ಟು ಬಡವಿದ್ಯಾರ್ಥಿಗಳ ಊಟವು ಸುಸೂತ್ರ ನಡೆಯುವಂತೆ ಮಾಡಿದರು. ಆ ಕಾಲಕ್ಕೆ ಇಲ್ಲಿಯ "ವೀರಶೈವ ವಿದ್ಯಾವರ್ಧಕ" ಸಂಸ್ಥೆಯ ಉತ್ಪಾದಕರಾದ ಶ್ರೀಮನ್ನಿರಂಜನ ಮಹಾಂತಸ್ವಾಮಿಗಳವರು ಹಾಜರಿದ್ದರು. ಈ ಉಭಯ ಶ್ರೀಗಳವರಂತೆ ಇನ್ನುಳಿದ ನಿರಾಭಾರಿ ಶ್ರೀಗಳವರು ಸಮಾಜೋದ್ಧಾರದ ಕಡೆಗೆ ಲಕ್ಷ್ಯಕೊಟ್ಟರೆ ವೀರಶೈವ ಸಮಾಜವು ಶೀಘ್ರದಲ್ಲಿಯೇ ಸೂರ್ಯನ ತೇಜಸ್ಸಿನಂತೆ ಪ್ರಕಾಶಿಸುವದರಲ್ಲಿ ಸಂದೇಹವೇನು? ಓರ್ವ ಪ್ರತ್ಯಕ್ಷದರ್ಶಿ.

ನೂತನ ಗೃಹಪ್ರವೇಶ.

ರಾಯಚೂರಿನಲ್ಲಿ ಸುಪ್ರಸಿದ್ಧ ವರ್ತಕರಾದ ಮ|| ರಸ್ತಾಪೂರ ಮುನಿಯಪ್ಪನವರೆಂಬುವರು ರಾಯಚೂರಿನಲ್ಲಿ ಒಂದು ದಿವ್ಯವಾದ ಭವನವನ್ನು ಕಟ್ಟಿಸಿರುವರು. ಇದರ ಪ್ರವೇಶ ಮಹೋತ್ಸವದ ಸಮಾರಂಭವು ಕಳೆದ ತಿಂಗಳು ೧೨ ನೆ ತಾರೀಕಿನ ದಿವಸ ಅತ್ಯಂತ ಸಂಭ್ರಮದಿಂದ ನಡೆಯಿತು. ಈ ಪ್ರವೇಶೋತ್ಸವಕ್ಕಾಗಿ ಶಿವಾದ್ವೈತ ವಿದ್ಯಾವಿಭೂಷಣ ಸಿರಸಿ ಗುರುಶಾಂತಶಾಸ್ತ್ರಿ, ವೇ|| ವಿಶ್ವೇಶ್ವರಶಾಸ್ತ್ರಿ, ರುದ್ರಪ್ಪಶಾಸ್ತ್ರಿ, ಬಸವಲಿಂಗಶಾಸ್ತ್ರಿ, ಬಸವರಾಜಶಾಸ್ತ್ರಿ ಮತ್ತಲಿಸಾಲಿ ಬಸವಲಿಂಗಪ್ಪನವರು ಮೊದಲಾದ ಅನೇಕ ವೈದಿಕ ಮಂಡಲಿಯು ಬರಮಾಡಲ್ಪಟ್ಟಿತ್ತು. ಆ ದಿವಸ ಮುಹೂರ್ತಕ್ಕೆ ಸರಿಯಾಗಿ ಅನಂತಮಹೇಶ್ವರ ಪಂಕ್ತಿಯೊಡನೆ ಪ್ರವೇಶಗೊಳಲ್ಪಟ್ಟು ನೂತನ ಗೃಹದಲ್ಲಿ ನಡೆಯಬೇಕಾದ ಪುಣ್ಯಾಹ ವಾಸ್ತುಹೋಮ ಮೃತ್ಯುಂಜಯ ಜಪ ಮೊದಲಾದ ಪ್ರವೇಶಾಂಗವಾದ ಕಾರ್ಯಗಳೆಲ್ಲವೂ ವಿಧ್ಯುಕ್ತಪ್ರಕಾರ ನಡೆದವು. ಮಾರನೆ ದಿವಸ ಏಕಾದಶ ರುದ್ರಾಭಿಷೇಕ ಜಂಗಮಾರಾಧನೆಯು ಸಾಂಗವಾಗಿ ನಡೆಯಿತು. ಎಷ್ಟೋ ಗಾವುದ ದೂರದಿಂದ ಮಹೇಶ್ವರರು ಪತ್ನೀ ಪುತ್ರ ಸಹಿತರಾಗಿ ತಂಡತಂಡವಾಗಿ ಬಂದಿದ್ದರು. ಅವರಿಗೆಲ್ಲಾ ಭೂರಿದಕ್ಷಿಣೆ ಭೂರಿಭೋಜನ ವಸ್ತ್ರಾದಿಗಳು ಮೂರು ದಿವಸಗಳ ವರಿವಿಗೂ ಅವಿಚ್ಛಿನ್ನವಾಗಿ ಕೊಡಲ್ಪಟ್ಟವು. ಪ್ರತಿ ದಿವಸ ಸಾಯಂಕಾಲ ಶಾಸ್ತ್ರಿಮಂಡಲಿಯವರಿಂದ ಮತ ವಿಷಯಕವಾದ ಉಪನ್ಯಾಸಗಳು ನಡಿಸಲ್ಪಡುತ್ತಿದ್ದವು. ಕೊನೆ ದಿವಸ ಪ್ರತಿಯೊಬ್ಬ ಶಾಸ್ತ್ರಿಗಳಿಗೂ ವಿರಕ್ತಸ್ವಾಮಿಗಳಿಗೂ ಸ್ಥಳೀಕ ವೀರ ಮಹೇಶ್ವರರಿಗೂ ಯಥೋಚಿತ ಮರ್ಯಾದೆಗಳು ಕೊಡಲ್ಪಟ್ಟವು. ಭಕ್ತಿಯು ಶೈಥಿಲ್ಯವನ್ನು ಹೊಂದುತ್ತಿರುವ ಈ ಕಾಲದಲ್ಲಿ ಇಷ್ಟರ ಮಟ್ಟಿಗೆ ದಾನ ಧರ್ಮಗಳೂ ವೈದಿಕ ಮಹಾಜನಗಳಿಗೆ ಪ್ರೋತ್ಸಾಹವೂ ನಡೆಯುತ್ತಿರುವದು ವಿರಳವೆಂದೇ ಹೇಳಬೇಕು. ರಸ್ತಾಪೂರ ಮುನಿಯಪ್ಪನವರು ವಯಸ್ಸಿನಲ್ಲಿ ಚಿಕ್ಕವರಾದಾಗ್ಯೂ ಇವರ ಪಾರಮಾರ್ಥಿಕವಾದ ಬುದ್ಧಿಯೂ ಸ್ವಮತನಿಷ್ಠೆಯೂ ಸದಾಚಾರತೆಯೂ ಸದ್ಭಕ್ತಿಯೂ ಅತ್ಯಂತ ಶ್ಲಾಘನೀಯವಾದದ್ದಾಗಿದೆ. ಸಾಧಾರಣ ನೂತನ ಗೃಹಪ್ರವೇಶಾರಂಭದಲ್ಲಿ ಈ ಮಹಾಶಯರು ಮಾಡಿದ ದಾನ ಧರ್ಮಗಳನ್ನು ನೋಡಿದರೆ ಹಿಂದಣ ಶಿವಶರಣರ ಚರಿತ್ರೆಯು ಸ್ಮೃತಿಪಥವನ್ನು ಹೊಂದುವದು. ಪ್ರಾಯಶಃ ಲಕ್ಷ್ಮೀ ಕಳೆಯುಳ್ಳಿರುವವರಿಗೆ ಶಿವಪ್ರಸಾದ ಹೇತುವಾದ ಶಿವಭಕ್ತಿಯು ಶಿವಧರ್ಮವು ಅಂಕುರಿಸುವದು ಅತಿವಿರಳವು. ಇವರಲ್ಲಿರುವ ನೈಸರ್ಗಿಕವಾದ ಈ ಸುಸಂಸ್ಕಾರವನ್ನು ನೋಡಿ ಪ್ರತಿಯೊಬ್ಬನೂ ಆತ್ಮಾನಂದವನ್ನು ಪಡೆಯದೆ ಇರಲಾರನು. ಓರ್ವ ಪ್ರತ್ಯಕ್ಷದರ್ಶಿ.

ಅಣ್ಣಿಗೇರಿಯ ರಾಜನಿಷ್ಠೆಯ ಸಭೆ.

ತಾ|| ೨೪-೫-೨೨ ನೇ ದಿವಸ ಈ ಊರ ನಾಗರಿಕರು ಪ್ರಚಂಡ ರಾಜನಿಷ್ಠೆಯ ಸಭೆಯನ್ನು ಕರೆದಿದ್ದರು. ಊರ ಸುತ್ತುಮುತ್ತಲಿನ ಹಳ್ಳಿಯ ಜನರಿಗೂ, ನವಲಗುಂದ, ಗದಗ, ಹುಬ್ಬಳ್ಳಿ, ಧಾರವಾಡಗಳ ಪ್ರಮುಖಜನರಿಗೂ, ಪದವಿಧರರಿಗೂ ಆಮಂತ್ರಣಗಳು ಕಳುಹಿಸಲ್ಪಟ್ಟಿದ್ದುವು. ಸಭೆಗೆ ಬಂದ ಬ್ರಾಹ್ಮಣರ ಸತ್ಕಾರವನ್ನು ಲೋ|| ಬೋ|| ಧರ್ಮಶಾಲೆಯಲ್ಲಿಯೂ, ಉಳಿದವರ ಉಪಚಾರವನ್ನು ಶ್ರೀಮಂತ ಶಂಕರಪ್ಪಗೌಡಾ ಶಿಕ್ಕೇದೇಸಾಯಿ, ಶ್ರೀಮಂತ ಭೀಮಪ್ಪಯ್ಯ ದೇಶಪಾಂಡೆ, ಮಿ|| ಪೀರಾ ಕಾಮಲಾಪುರ ಇವರಲ್ಲಿ ಉತ್ತಮವಾಗಿ ಮಾಡಿಸಿತ್ತು. ಸಭೆಗೆ ಈ ಜಿಲ್ಲೆಯ ಕಲೆಕ್ಟರ ಮಿ|| ಕ್ಯಾಂಬೆಲ್, ಅ|| ಜಡ್ಜ್ ಸಾಲಡಾನಾ, ಡಿ. ಡಿ. ಕಲೆಕ್ಟರ ನಾಯಿಕ ಬಾರ್-ಅಟ್‌ಲಾ, ನವಲಗುಂದ, ಗದಗಗಳ ಮಾಮಲೇದಾರರು, ನವಲಗುಂದದ ಸ. ಇ. ಹಾಗೂ ಅಣ್ಣಿಗೇರಿ ಸಬ್‌ಇನ್ಸ್‌ಪೆಕ್ಟರರು, ಈ ಸಭೆಯು ಯಶಸ್ವಿಯಾಗುವಂತೆ ಯತ್ನಿಸಿದವರೂ ಆದ ಮಿ|| ಕೋಟನ ಇವರೇ ಮೊದಲಾದ ಅಧಿಕಾರಿಗಳೂ, ಮಿ|| ಮೌಲವಿ ಕರ್ನಾಟಕ ಕಾಲೇಜದ ಪರ್ಶಿಯನ್ ಪ್ರೊಫೆಸರ, ಮಿ|| ಹುಲಿಕೋಟಿ ಬಿ.ಎ.,ಎಲ್‌ಎಲ್.ಬಿ.,ಎಂ.ಎಲ್.ಸಿ., ಮಿ|| ಗುಂಜಳ, ಸೂರ್ಯವಂಶಿ ನವಲಿ, ಮೊದಲಾದ ಧಾರವಾಡದ ಪ್ಲೀಡರರೂ, ರಾ. ಬಾ. ರೊಡ್ಡ, ರಾ. ಸಾ. ವೀರಪ್ಪಮಾನವಿ, (ಗದಗ) ಲಿಂಗನಗೌಡಾ ಹುಲಕೋಟಿ ಮೊದಲಾದ ಪ್ರಮುಖರೂ, ಸೆಟ್ಟಿ ಸಾಹುಕಾರರೂ ಬಂದಿದ್ದರು. ಮಧ್ಯಾಹ್ನದ ನಾಲ್ಕುಘಂಟೆಯ ಸುಮಾರಿಗೆ ಅರಸು ಅರಸಿಯರ ಭಾವಪಟವನ್ನು ಮೆರವಣಿಗೆಯೊಂದಿಗೆ ಊರ ಅಗಸೆಯಿಂದ ಮಂಗಳಕರ ವಾದ್ಯಗಳ ರವದಿಂದಲೂ, ಜಯಘೋಷದಿಂದಲೂ ಕೂಡಿದ ನಾಗರಿಕರು ಸಭಾಸ್ಥಳಕ್ಕೆ ತಂದು ಉತ್ತಮಾಸನದಲ್ಲಿ ಸ್ಥಾಪಿಸಿದರು. ಸಭಾಗತರ ಸ್ವಾಗತವಾದನಂತರ ಶ್ರೀಮಂತ ಶಂಕರಪ್ಪಗೌಡಾ ಶಿಕ್ಕೇದೇಸಾಯಿ ಇವರು ಅಧ್ಯಕ್ಷರಾಗಬೇಕೆಂದು ಮೆ. ಕಲೆಕ್ಟರ ಸಾ. ಬ. ರು ಸೂಚಿಸಲು ಸಭಾಗತರ ಅನುಮೋದಾರ್ಥಕ ಕರತಾಡನದೊಡನೆ ಶ್ರೀಮಂತರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಆಮೇಲೆ ಪ್ರೊಫೆಸರ ಮೌಲವಿ ಮಿ|| ಗುಂಜಳ ಇವರು ರಾಜನಿಷ್ಠೆಯ ಮೇಲೆ ಸುಶ್ರಾವ್ಯವಾಗಿ ಭಾಷಣ ಮಾಡಿದರು. ನಂತರ ಮೆ|| ಕಲೆಕ್ಟರ ಸಾ. ಬ. ರು "ಮೇಲೊಬ್ಬ ದೇವರು, ಕೆಳಗೊಬ್ಬ ದೇವರು ಎಂದು ನಂಬಿರಿ. ಅಸಹಕಾರಿಗಳ ಸಹವಾಸ ಮಾಡಬೇಡಿರಿ. ಒಳಗೊಂದು ಹೊರಗೊಂದು, ಕೈಯಿಂದೊಂದು ಬಾಯಿಯೊಂದು ಮಾಡಬೇಡಿರಿ" ಎಂದು ರಾಜಭಕ್ತಿಯ ಮೇಲೆ ಸರಸಾಗಿ ಕನ್ನಡದಲ್ಲಿ ಭಾಷಣವನ್ನು ಮಾಡಿದರು. ಆಮೇಲೆ ಹಾರತುರಾಯಿ ಪರಿಮಳದ್ರವ್ಯ ತಾಂಬೂಲಾದಿಗಳಿಂದ ಸಭಿಕರು ಸತ್ಕರಿಸಲ್ಪಟ್ಟರು. ಶಾಲೆಯ ವಿದ್ಯಾರ್ಥಿಗಳು ರಾಷ್ಟ್ರಿಯ ಗೀತವನ್ನು ಇಂಪಾಗಿ ಹಾಡಿದನಂತರ ಚಕ್ರವರ್ತಿಗಳ ತ್ರಿವಾರ ಜಯಘೋಷದೊಡನೆ ಸಭಾವಿಸರ್ಜನೆಯಾಯಿತು. ಓರ್ವಪ್ರತ್ಯಕ್ಷದರ್ಶಿ.

ವಿತರಣೆಯಿಂದ ನಡೆದ ವಿವಾಹ ಮಹೋತ್ಸವವು.

ಇದೇ ವೈಶಾಖ|| ಬ|| ೧ (ತಾ|| 12-5-22) ನೆಯ ಶುಕ್ರವಾರ ಅಭಿಜನ್ಮುಹೂರ್ತದಲ್ಲಿ ಚೆನ್ನಗಿರಿ ತಾ|| ಹೋದಿಗೆರೆ ಗ್ರಾಮನಿವಾಸಿಗಳಾಗಿಯೂ ಶ್ರೀಮಂತರಾಗಿಯೂ ದಾನೌದಾರ್ಯಸೌಜನ್ಯಾದಿ ಸದ್ಗುಣ ಭೂಷಿತರಾಗಿಯೂ ರಾರಾಜಿಸುವ ಲಕ್ಷ್ಮೀಶ್ವರದ ಮುರಘೇಂದ್ರಪ್ಪಶೆಟ್ಟರ ತನುಜರಾದ ಮ|| ರಾ|| ಅಡವಪ್ಪಶೆಟ್ಟರವರು ತಮ್ಮ ಸುಪುತ್ರರಾದ ಆಯುಷ್ಮಂತ ಮಲ್ಲಪ್ಪನವರಿಗೆ ಅನುರೂಪವಾದ ಶ್ರೀಯುತ ದಾವಣಗೆರೆ ಕೊಟ್ರಿಗಿ ಬಸೆಟ್ಟೆಪ್ಪನವರ ಸುಪುತ್ರಿ ಸೌಮಂಗಲ್ಯಶಾಲಿನಿಯಾದ ವೀರಮ್ಮನೆಂಬ ಕನ್ಯಾರತ್ನವನ್ನು ತಂದು ತಮ್ಮ ಮನೋಹರವಾದಮಂದಿರದಲ್ಲಿಯೇ ವಿಧಿವಿಹಿತವಾಗಿ ವಿವಾಹ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು ಈ ಶುಭಸಮಯಕ್ಕೆ ಹಾವೇರಿ ಶ್ರೀ ರುದ್ರಸ್ವಾಮಿಗಳವರು ಕರಡೀಗುಡ್ಡದ ಮಠದ ಪಟ್ಟಾಧ್ಯಕ್ಷರು ಹೊಟ್ಯಾಪುರ ಚನ್ನಗಿರಿ ಹಲ್ಕೂರು ಗದಗ್ ಮುಂತಾದ ಸ್ಥಳದ ಪಟ್ಟದ ಶ್ರೀಗಳವರು ಮತ್ತು ವೇ|| ಅಜ್ಜಂಪುರದ ಮಠದ ಉಮಾಪತಿಶಾಸ್ತ್ರಿಗಳವರು ತಿಪಟೂರಿನಲ್ಲಿರುವ ಬಾನಾಪುರದ ಮಠದ ವಿರೂಪಾಕ್ಷಶಾಸ್ತ್ರಿಗಳವರು ಹೊಳೇಬಸವಶಾಸ್ತ್ರಿಗಳವರು ದಾವಣಗೆರೆ ಹಿ|| ಮ|| ರುದ್ರಶಾಸ್ತ್ರಿಗಳವರು ಹರಿಹರದ ಮಹೇಶ್ವರಶಾಸ್ತ್ರಿಗಳವರು ಗುಬ್ಬೀ ಶಿವಕಥಾ ಶಿವರುದ್ರಶಾಸ್ತ್ರಿಗಳವರು ಶ್ರೀಮಾನ್ ತಿ|| ಮ|| ಷಡಕ್ಷರಪ್ಪಯ್ಯನವರು ವೈ|| ಮ|| ಚನ್ನವೀರಪ್ಪನವರು ಚನ್ನಗಿರಿ ವೈಸ್‌ಪ್ರಸಿಡೆಂಟರವರಾದ|| ಶ್ರೀಮಾನ್ ನಂಜುಂಡಪ್ಪಯ್ಯನವರು ಶ್ರೀಮಾನ್ ಅಮಲ್ದಾರ್ ಜಿ. ಮುರಡಯ್ಯನವರು ಹೊಳೇಹೊನ್ನೂರು ಹೊಳಲ್ಕೆರೆ ಚಿತ್ರದುರ್ಗ ಶಿವಮೊಗ್ಗಾ ಚೀಲೂರು ಮೊದಲಾದ ಸ್ಥಳದ ಬಂಧುವರ್ಗದವರು ಮತ್ತು ಸ್ಥಳ ಪರಸ್ಥಳದ ಇಷ್ಟಮಿತ್ರಪ್ರಮುಖ ಮಹಾಶಯರು ಸಹ ದಯಮಾಡಿಸಿ ಸಭೆಯನ್ನು ಅಲಂಕರಿಸಿದ್ದರು. ನಿರ್ದಿಷ್ಟ ಮುಹೂರ್ತದಲ್ಲಿ ಪಾಣಿಗ್ರಹಣವು ಸಾಂಗೋಪಾಂಗವಾಗಿ ನೆರವೇರಿದ ಬಳಿಕ ಪೂಜ್ಯರಾದ ಗದಗಿನ ಶ್ರೀ ಪಟ್ಟಾಧ್ಯಕ್ಷರು, ವೇ|| ರುದ್ರಶಾಸ್ತ್ರಿಗಳವರು ಸಹ ವಿದ್ಯಾಭ್ಯಾಸದ ಪ್ರೋತ್ಸಾಹ ವಿಷಯದಲ್ಲಿಯೂ ವಿವಾಹಾದಿ ಶುಭಕಾರ್ಯಗಳ ವಿತರಣೆಯ ವಿಷಯದಲ್ಲಿಯೂ ಸುಶ್ರಾವ್ಯವಾಗಿ ಉಪನ್ಯಾಸ ಮಾಡಿದರು. ಅನಂತರ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಮಹಾಸನ್ನಿಧಾನದಿಂದ ನೂತನ ವಧೂವರರ ಶ್ರೀಯೋಭಿವೃದ್ಧಿಯನ್ನು ಕೋರಿ ಅನುಗ್ರಹಿಸಲ್ಪಟ್ಟ ಶ್ರೀಮುಖವನ್ನು ವೇ|| ಉಮಾಪತಿಶಾಸ್ತ್ರಿಗಳವರು ಓದಿ ತದನುಗ್ರಹಸೂಚಕವಾದ ದಿವ್ಯ ವಸ್ತ್ರಸಂಭಾವನಾಪೂರ್ವಕ ಫಲಮಂತ್ರಾಕ್ಷತೆಗಳನ್ನಿತ್ತರು. ಸದರಿ ಯಜಮಾನರಾದ ಶ್ರೀಯುತ ಅಡವಪ್ಪಶೆಟ್ಟರವರು ಮೈಸೂರು ವೀರಶೈವ ವಿದ್ಯಾಭ್ಯಾಸದ ಫಂಡಿಗೆ ಐವತ್ತು ರೂಪಾಯಿಗಳನ್ನೂ ಮೈಸೂರು ಕೈ|| ವೈ|| ವೀರಸಂಗಪ್ಪನವರ ಸ್ಮಾರಕವಾಗಿ ಇಪ್ಪತ್ತೈದು ರೂಪಾಯಿಗಳನ್ನೂ ಮತ್ತು ಕನ್ಯಾಜನಕರಾದ ಮ|| ರಾ|| ಬಸೆಟ್ಟೆಪ್ಪನವರು ಸದರಿ ವಿದ್ಯಾಫಂಡಿಗೆ ಹತ್ತು ರೂಪಾಯಿಗಳನ್ನೂ ಸಹ ಚೆಂ|| ವೈಸ್‌ಪ್ರಸಿಡೆಂಟರಾದ ನಂಜುಂಡಪ್ಪಯ್ಯನವರ ವಶಕ್ಕೆ ಕೊಟ್ಟು ಭಕ್ತಮಹಾಶಯರ ಮನಸ್ಸಿಗೆ ನಿತಾಂತಸಂತೋಷವನ್ನುಂಟುಮಾಡಿದರಲ್ಲದೆ ಸರ್ವರನ್ನೂ ಮೃಷ್ಟಾನ್ನಪಾನದಿಂದಲೂ ಫಲತಾಂಬೂಲ ದಕ್ಷಿಣೆ ಮುಂತಾದ ಸಂಭಾವನಾವಿಶೇಷದಿಂದಲೂ ಸಂತೃಪ್ತಿಗೊಳಿಸಿದರು. ಮರುದಿನ ಸಾಯಂಕಾಲ ಸಾಂದ್ರವಾದ ಸಭೆಯಲ್ಲಿ ವೇ|| ಗುಬ್ಬೀ ಶಿವಕಥಾ ಶಿವರುದ್ರಶಾಸ್ತ್ರಿಗಳವರು ಗಿರಿಜಾಕಲ್ಯಾಣವೆಂಬ ಶಿವಕಥೆಯನ್ನೂ ಮತ್ತೊಂದುದಿವಸ ಅಂಶುಮತಿಕಲ್ಯಾಣವೆಂಬ ಸತ್ಕಥೆಯನ್ನೂ ಸಂಕೀರ್ತನೆ ಮಾಡಿದ್ದಲ್ಲದೆ ವೇ|| ಅ|| ಮ|| ಉಮಾಪತಿ ಶಾಸ್ತ್ರಿಗಳವರಿಂದ ವಿರಚಿತವಾದ ಶ್ರೀಯುತ ಅಡವಪ್ಪಶೆಟ್ಟರವರ ಗುಣರತ್ನಪ್ರಭಾ ಎಂಬ ಶ್ರೀಯಃಪ್ರಾರ್ಥನಾರೂಪವಾದ ಮಂಗಳಶ್ಲೋಕವನ್ನು ಶ್ರೋತೃಪ್ರಿಯಯೂಷೋಪಮಾನವಾಗಿ ಗಂಭೀರವಾಣಿಯಿಂದೋದಿ ಸಭಿಕರನ್ನ ಸಂತೋಷಗೊಳಿಸಿದರು. (ತಾ|| 17-5-22)ನೇ ಬುಧವಾರ ಸಾಯಂಕಾಲ ೬ ಘಂಟೆಯಾಗಿಯಿತು ೧೦ ಘಂಟೆವರಿವಿಗೆ ಶ್ರೀ ಮಜ್ಜಗದ್ಗುರು ಮಹಾಸನ್ನಿಧಾನದವರು ಕೃಪೆಯಿಂದ ಕಳುಹಿಸೋಣವಾದ ಗಜಾಶ್ವರಥಗಳಿಂದಲೂ ವಿಧವಿಧವಾದ ವಾದ್ಯ ಘೋಷಗಳಿಂದಲೂ ಕಣ್ಮನಂಗಳಂಸೆಳೆಯುತ್ತಿರುವ ಮದ್ದುಗಳಿಂದಲೂ ಮೆರವಣಿಗೆಯು ಮಹೋತ್ಸವವೈಭವವು ಅತ್ಯಂತವಿಜೃಂಭಣೆಯಿಂದ ನೆರವೇರಿತು. ಈ ವಿಧವಾಗಿ ನೆರವೇರಿಸಲ್ಪಟ್ಟ ವಿವಾಹದಲ್ಲಿ ಆರಂಭದಿಂದ ಕೊನೆಯವರೆಗೂ ತುಂಬಾಶ್ರದ್ಧೆಯನ್ನು ವಹಿಸಿದ ಶ್ರೀಮಾನ್ ಚನ್ನಗಿರಿ ವೈಸ್‌ಪ್ರಸಿಡೆಂಟರವರಾದ ನಂಜುಂಡಪ್ಪಯ್ಯನವರೇ ಮುಂತಾದವರು ಶ್ರೀ ಸದಾಶಿವನಕಟಾಕ್ಷಕ್ಕೂ ನೆರದಿದ್ದ ಮಹಾಜನರ ಅವಿಚ್ಛಿನ್ನ ವಿಶ್ವಾಸಕ್ಕೂ ಶ್ರೀಮಂತರಪೂರ್ಣಾಭಿಮಾನಕ್ಕೂ ಪಾತ್ರರಾಗಿರೋಣದರಿಂದ ತುಂಬಾ ಸಂತೋಷಪಡುತ್ತೇನಲ್ಲದೆ ಯಜಮಾನರಾದ ಅಡಿವಪ್ಪಶೆಟ್ಟರಿಗೂ ಇವರ ಕುಟುಂಬದವರೇ ಮೊದಲಾದ ಸರ್ವರಿಗೂ ಧೀರ್ಘಾಯುರಾರೋಗ್ಯೈಶ್ವರ್ಯಾದಿಗಳಂ ದಯಪಾಲಿಸಲೆಂದು ಪರಮೇಶ್ವರನನ್ನು ಪ್ರಾರ್ಥಿಸುವ,

ಎಲ್. ಎಂ. ಪ್ರಭುಮಯ್ಯ, ಸ್ಕೂಲ್ ಮಾಸ್ಟರ್ ಹೋದಿಗೆರೆ.

[ಈ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಪ. ಪ್ರ.]

ಪರದೇಶ ಪರ್ಯಟನ ಪರ್ಯಾಲೋಚನೆ.

ಯಾವಿಲೇಖದ ವಿಷಯವು ಸಾವಿರಾರು ವರ್ಷಗಳಿಂದ ಪ್ರತಿಬಂಧಕವಾಗಿತ್ತೋ ಅಂಥಾ ವಿಷಯಕ್ಕೆ ಈಗ ಪ್ರತಿಬಂಧರಹಿತಪ್ರಸಂಗವು ಬಂದಿರುವುದನ್ನು ಕೇಳಿ ಯಾವ ಭಾರತೀಯನಿಗೆ ತಾನೇ ಸಂತೋಷವಾಗಲಿಕ್ಕಿಲ್ಲ? ಸಮುದ್ರಯಾನವು ಸರ್ವಸಾಮಾನ್ಯ ಮನುಷ್ಯರಿಗೂ ಸಹ ನಿಷಿದ್ಧವೆಂದು ಸಂಕುಚಿತ ವಿಚಾರವುಳ್ಳ ಕೆಲವು ಪೌರಾಣಿಕರು ವಾದಿಸುತ್ತಿರುವುದನ್ನು ಸರ್ವರೂ ಬಲ್ಲರಷ್ಟೆ? ಆದರೆ ದೇಶ ಕಾಲ ಪರಿಸ್ಥಿತಿ ವಿಚಾರಮಾಡಿ ಇಂಥಾ ದುರ್ವಿಚಾರ ದೂರಮಾಡುವುದು ಸಮರ್ಥರಾದವರ ಕರ್ತವ್ಯವೇ ಸರಿ ಎಂದು ಹೇಳಬಹುದು. ಆದರೆ ಅದರಲ್ಲಿಯೂ ಲಿಂಗಾಯತರು ಸಮುದ್ರಪರ್ಯಟನ ಮಾಡುವರೆಂಬುವದೂ ಹಾಗೂ ಅವರಲ್ಲಿಯೇ ಆಚಾರ್ಯರೆನಿಸಿ (ಗುರುಗಳಾ)ದವರು ಹೋಗುವುದು ಈಗಿನ ಸಮಯದಲ್ಲಿ ವಿಶೇಷ ಮಹತ್ವದ ಸಂಗತಿಯೇ ಎಂಬುದು ನಿರ್ವಿವಾದದ ಮಾತಾಗಿರುವದು. ಲಿಂಗಾಯತರಲ್ಲಿ ಪೂರ್ವಾಚಾರ್ಯರೆನಿಸಿದ ರೇಣುಕರು ಸಮುದ್ರಮಧ್ಯದಲ್ಲಿರುವ ಲಂಕಾಕ್ಕೆ ಹೋಗಿ ವಿಭೀಷಣನ ಪ್ರಾರ್ಥನಾನುಸಾರ ಮೂರುಕೋಟಿ ಲಿಂಗಗಳನ್ನು ಸ್ಥಾಪಿಸಿದರೆಂದು ಶಾಸ್ತ್ರದಲ್ಲಿ ಬರೆದಿರುವದು. ಆದರೆ ಆ ಮಹನೀಯರು ಹಾಕಿಕೊಟ್ಟ ಉದಾಹರಣೆಯು ಇವತ್ತಿನವರೆಗೂ ಶಾಸ್ತ್ರದಲ್ಲಿಯೇ ಉಳಿದು ಹೋಗಿದ್ದು ಅದನ್ನು ಕೃತಿಯಲ್ಲಿ ತಂದು ತೋರಿಸಲಿಕ್ಕೆ ಸಿದ್ಧರಾದ ಸ್ವಾಮಿ ವಿರೂಪಾಕ್ಷ ಒಡೆಯರವರಿಗೆ ಯಾರುತಾನೇ ಧನ್ಯವಾದಗಳನ್ನು ಕೊಡಲಿಕ್ಕಿಲ್ಲ? ಸ್ವಾಮಿ ವಿರೂಪಾಕ್ಷ ಒಡೆಯರವರು ೧೮೯೨ ನೇ ಇಸವಿಯಲ್ಲಿ ಜನ್ಮವಂ ತಾಳಿ ಹನ್ನೆರಡು ವರುಷ ಬಾಲ್ಯದೊಳಗಾಗಿಯೇ ಕನ್ನಡ, ಮರಾಠಿಗಳನ್ನು ಸಂಪೂರ್ಣ ಕಲಿತು ಮುಂದೆ ಹುಬ್ಬಳ್ಳಿ, ಮುಂಬಯಿ ಸ್ಥಳಗಳಲ್ಲಿ ಸಂಸ್ಕೃತ ಅಭ್ಯಾಸ ಮಾಡಿ ಹತ್ತೊಂಭತ್ತನೇ ವಯಸ್ಸಿನೊಳಗಾಗಿ ಧರ್ಮ, ವ್ಯಾಕರಣ, ಸಾಹಿತ್ಯ, ಪುರಾಣಾದಿಗಳಲ್ಲಿ ಬಡೋಡಾ ರಾಜಧಾನಿಯಲ್ಲಿ ಪರೀಕ್ಷಾ ಕೊಟ್ಟು ಅಲ್ಲಿಯ ಮಹಾರಾಜರಿಂದ "ಧರ್ಮಭೂಷಣ"ರೆಂಬ ಬಹುಮಾನ ಪದವಿಯನ್ನೂ ಹಾಗೂ ವರ್ಷಾಶನವನ್ನೂ ಪಡೆದರು. ಹಾಗೆಯೇ ಮುಂದೆ ಕಲ್ಕತ್ತಾ ಗವರ್ನಮೆಂಟ ಸಂಸ್ಕೃತ ಕಾಲೇಜದಲ್ಲಿ ಅಭ್ಯಾಸ ಮಾಡಲಿಕ್ಕೆ ಹೋಗಿ ಅಲ್ಲಿ ಮೂರು ವರ್ಷ ನಿಂತು ಷಡ್‌ದರ್ಶನ ವೇದಾಂತ, ವೇದಭಾಷ್ಯಗಳನ್ನು ಚನ್ನಾಗಿ ಕಲಿತು ೧೯೧೨ ನೇ ಇಸವಿಯಲ್ಲಿ ವೇದತೀರ್ಥ ಪರೀಕ್ಷೆಕೊಟ್ಟು ಭಂಗಾರದ ಮೆಡಲಿನೊಡನೆ ವೇದತೀರ್ಥ ಪದವಿಯನ್ನು ಪಡೆದುಕೊಂಡರು.

ಲಿಂಗಾಯತರಲ್ಲಿ ಅಥವಾ ಕರ್ನಾಟಕದಲ್ಲಿ ಇವರೇ ಮೊದಲನೇ ತೀರ್ಥಪರೀಕ್ಷೆಯಾದವರು. ಇವರು ಹಾಕಿಕೊಟ್ಟ ಉದಾಹರಣೆಯನ್ನನುಸರಿಸಿಯೇ ೩-೪ ವರ್ಷಗಳಿಂದಿತ್ತಲಾಗಿ ಕೆಲವರು ತೀರ್ಥರಾಗಲು ಆರಂಭಿಸಿರುವರು. ಇದು ಆನಂದ ಸಂಗತಿಯೇ ಸರಿ. ಇವರಿಗೆ ರತ್ಲಾಂ ಮಹಾರಾಜರವರು ಬಹು ಗೌರವದಿಂದ ಈವತ್ತಿನವರೆಗೂ ಮನ್ನಿಸುತ್ತಾ ಇವರಿಗೆ ಪಂಡಿತಾಗ್ರಣಿಗಳೆಂಬ ಪದವಿಯನ್ನು ಕೊಟ್ಟಿರುವರು. ಶ್ರೀ ಸ್ವಾಮಿಗಳು ಮುಂದೆ ಅಲ್ಲಿಯೇ ಕಾಲೇಜದಲ್ಲಿ ಒಂದು ವರ್ಷ ಹೆಚ್ಚಿಗೆ ನಿಂತು ಕಾಲೇಜದ ದೊಡ್ಡ ಲಾಯಬ್ರರಿಯಲ್ಲಿರುವ ಸಮಸ್ತ ವಿಷಯಗಳ ಸಹಸ್ರಾವಧಿ ಪುಸ್ತಕಗಳನ್ನು ಪರಿಶೀಲಿಸಿದರು. ಆಗ್ಗೆ ಆ ಕಾಲೇಜ ಪ್ರಿನ್ಸಿಪಾಲರಾದ ಮಹಾಮಹೋಪಾಧ್ಯಾಯ ಡಾ|| ಸತೀಶಚಂದ್ರ ವಿದ್ಯಾಭೂಷಣ, ಎಂ. ಎ. ಪಿಎಚ್.ಡಿ., ಯವರು ಸ್ವಾಮಿಗಳಲ್ಲಿ ಬಹು ಪ್ರೇಮಿಗಳಾಗಿದ್ದು ಇವರಿಗೆ ಲಾಯಬ್ರರಿ ಪುಸ್ತಕಗಳ ಮೇಲೆಯಿಂದ ಸ್ಪೆಷಲ್ ಪರವಾನಿಗಿ ಕೊಟ್ಟಿದ್ದರು. ಇದಲ್ಲದೆ ಸರ್ ಅಶುತೋಷಮುಕರ್ಜಿಗಳು ಇವರ ಬಾಲ್ಯದ ಅಧ್ಯಯನವನ್ನು ನೋಡಿ ಬಹು ಆದರದಿಂದ ಇವರನ್ನು ಕೊಂಡಾಡುತ್ತಿದ್ದರು. ಈ ರೀತಿ ಮೂರುವರ್ಷ ಕಾಲವನ್ನು ಕಲಕತ್ತೆಯ ವಿದ್ವಜ್ಜನಸಂಘದಲ್ಲಿ ಕಳೆದು ೧೯೧೩ ನೇ ಇಸವಿಯಲ್ಲಿ ಸ್ವದೇಶಕ್ಕೆ ತಿರಿಗಿ ಬರುವಾಗ ಸರ್ವಶಾಸ್ತ್ರಗಳಲ್ಲಿರುವ ಇವರ ಅತ್ಯುತ್ತಮ ಪಾಂಡಿತ್ಯವನ್ನು ನೋಡಿ ಕಲಕತ್ತೆಯ "ಸಾರಸ್ವತ ಅಸೋಸಿಯೇಶನ" ದವರು "ವಿದ್ಯಾನಿಧಿ" ಎಂಬ ಪದವಿಯಿಂದಿವರನ್ನು ಗೌರವಿಸಿದರು. ಅಲ್ಲಿಂದ ಸ್ವದೇಶಕ್ಕೆ ಬರುವ ಮಧ್ಯಮಾರ್ಗದಲ್ಲಿ ಇವರ ಮತ್ತು ದೇವಾಸ ಸಂಸ್ಥಾನದ ಮಹಾರಾಜರಾದ ಮಲ್ಹಾರರಾವ ಪವಾರ ಕೆ.ಸಿ.ಎಸ್.ಆಯ್., ಎಂಬವರ ಪರಸ್ಪರ ಭೆಟ್ಟಿಯಾಗಲು ಮಹಾರಾಜರು ಸದ್ಗುಣಿಗಳೂ ಉದಾರಹೃದಯರೂ ವಿದ್ಯಾಪ್ರೇಮಿಗಳೂ ಆದ್ದರಿಂದ ಸ್ವಾಮಿಗಳಿಗೆ ಸದರೀ ದೇವಾಸ ಭೂಪತಿಗಳು ತಮಗೆ ವೇದ, ವೇದಾಂತ, ಧರ್ಮಶಾಸ್ತ್ರ ಮೊದಲಾದ ವಿಷಯಗಳ ಮಾಹಿತಿಯನ್ನು ಕೊಡುವುದಲ್ಲದೆ ಅವುಗಳಲ್ಲಿ ಆಗಿನ ಕಾಲದ ರಾಜ್ಯಪದ್ಧತಿ, ಜಾತಿ, ಧರ್ಮಗಳ ಪದ್ಧತಿಗಳು ಯಾವ ರೀತಿ ವಿವೇಚನ ಮಾಡಲ್ಪಟ್ಟಿರುವವೆಂಬುವದನ್ನು ಬೋಧಿಸಬೇಕೆಂದು ಆಗ್ರಹಿಸಿ ತಮ್ಮ ವಿದ್ಯಾಗುರುಗಳನ್ನಾಗಿ ಮಾಡಿ ಎರಡೂವರೆ ವರ್ಷಗಳವರೆಗೆ ಬಹು ಗೌರವದಿಂದ ತಮ್ಮಲ್ಲಿರಿಸಿಕೊಂಡರು. ಮುಂದೆ ೧೯೧೬ ನೇ ಜೂನ ತಿಂಗಳಲ್ಲಿ ಇಂದೂರ ಮಹಾರಾಜರ ನೂತನ ಸಂಸ್ಕೃತ ಕಾಲೇಜದಲ್ಲಿ ವೇದಭಾಷ್ಯಗಳ ಮುಖ್ಯ ಪ್ರೊಫೇಸರರಾಗಿ ದೇವಾಸ ಮಹಾರಾಜರ ಸಲಹೆಯಿಂದ ನಿಯಮಿಸಲ್ಪಟ್ಟರು. ಮುಂದೆ ಕೆಲವು ಕಾಲ ವೇದಾಂತವಿಷಯವು ಇವರ ಕಡಿಗೇನೆ ಕೊಡಲ್ಪಟ್ಟಿತು. ಆದರೆ ಇವರು ಪವಿತ್ರ ವೇದಭಾಷ್ಯಗಳನ್ನು ಕಲಿಸಲು ಮುಖ್ಯ ಪ್ರೊಫೇಸರರಾದದ್ದನ್ನು ನೋಡಿ ಇವರು ಲಿಂಗಾಯತರೆಂಬ ಜಾತಿದ್ವೇಷಭಾವನೆಯಿಂದ ಪ್ರೇರಿತರಾಗಿ ಬ್ರಾಹ್ಮಣರು ಅಧಿಕಾರ ಅನಧಿಕಾರ ಇವುಗಳ ಭಯಂಕರ ಕೋಲಾಹಲವನ್ನು ನಡಿಸಿ ಸಮಸ್ತ ಬ್ರಾಹ್ಮಣರೊಡನೆ ಅನೇಕ ವೇಳೆ ಇಂದೂರ ದರ್ಬಾರ ಹುಕುಮಿನಿಂದ ಶಾಸ್ತ್ರಾರ್ಥಗಳು ಮಾಡಲ್ಪಟ್ಟು ಅದರಲ್ಲಿ ತಮ್ಮ ಜಯಭೇರಿಯನ್ನು ಹೊಡಿಸಿ ಇವರು ತೋರಿಸಿದ ತಮ್ಮ ವಿದ್ವದ್ಭರಿತವಾದ ಶಾಸ್ತ್ರಾರ್ಥವನ್ನು ನೋಡಿ ದರ್ಬಾರ ಕೌನ್ಸಿಲರುಗಳ ಸಮ್ಮತಿಪೂರ್ವಕ ಶ್ರೀಮನ್ಮಹಾರಾಜರವರು ಇವರನ್ನು ಸಂಸ್ಕೃತ ಕಾಲೇಜದಲ್ಲಿ ಪವಿತ್ರ ವೇದ ಭಾಷ್ಯಗಳನ್ನೇ ಕಲಿಸಲು ಸ್ಥಿರಗೊಳಿಸಿದರು. ವಿರುದ್ಧ ಪಕ್ಷದವರು ಮುಖಭಂಗಿತರಾಗಿ ಇನ್ನೂ ಮಧ್ಯಮಧ್ಯದಲ್ಲಿ ಸಮಯಸಾಧಿಸಿ ತಮ್ಮ ಕುಚೇಷ್ಟೆಯನ್ನೇ ಹೊರಗೆಡವುತ್ತಿರುವರು. ಆದರೂ ಸ್ವಾಮಿಗಳು ಈವತ್ತಿನವರಿಗೂ ಧೈರ್ಯದಿಂದ ತಮ್ಮ ಕೆಲಸ ಸಾಧಿಸುತ್ತ ಬಂದಿರುವರು. ಡಾ|| ಸರ್ ಆರ್. ಜಿ. ಭಾಂಡಾರಕರ ಇವರು ಸ್ವಾಮಿಗಳನ್ನು ಎಂ. ಎ. ಪರೀಕ್ಷಕರನ್ನಾಗಿ ಮಾಡಬೇಕೆಂದು ಶಿಫಾರಸ ಮಾಡಿರುವರು. ಇದಲ್ಲದೆ ಸರ್ ನಾರಾಯಣರಾವ ಚಂದಾವರಕರರು, ಹಾಗೂ ರಾ. ಬ. ಭಾಂಡಾರೆಯವರು ಬಹು ಪ್ರೇಮಪೂರ್ವಕವಾಗಿ ಇವರನ್ನು ರಾಯಲ್ ಏಶಿಯಾಟಿಕ್ ಸೊಸಾಯಟಿ ಮೆಂಬರರನ್ನಾಗಿ ಮಾಡಿರುವರು. ಶ್ರೀ ಸ್ವಾಮಿಗಳು ಕನ್ನಡ, ಮರಾಠಿ, ಹಿಂದಿ, ಗುಜರಾತಿ, ಪಾಲಿ, ಸಂಸ್ಕೃತ, ಇಂಗ್ಲಿಷ ಹೀಗೆ ಏಳು ಭಾಷೆಗಳನ್ನು ಬಲ್ಲವರಾಗಿರುವರು. ಸ್ವಾಮಿಗಳು ಯಾವ ದೇವಾಸ ಮಹಾರಾಜರಿಗೆ ವಿದ್ಯಾಗುರುಗಳಾಗಿದ್ದರೋ ಅದೇ ದೇವಾಸ ಮಹಾರಾಜರವರು ತಮ್ಮಲ್ಲಿರುವ ಇವರ ವಿಷಯಕವಾದ ಆದರವನ್ನು ವ್ಯಕ್ತಮಾಡಲು ಇವರನ್ನು ತಂತಿವರ್ತಮಾನ ಮೂಲಕ ರಾಜಧಾನಿಗೆ ಕರಿಸಿಕೊಂಡು ನೀವು ಅಮೇರಿಕಾಕ್ಕೆ ಹೋಗಿ ಬರಬೇಕೆಂದು ಬಹುರೀತಿ ಪ್ರೋತ್ಸಾಹಿಸಿ ಅವರು ಎರಡು ವರ್ಷ ಅಮೇರಿಕಾದಲ್ಲಿರಬೇಕೆಂತಲೂ ಅದಕ್ಕಾಗಿ ಹಿಡಿದ ಖರ್ಚನ್ನು ತಾವು ಕೊಡುವೆವೆಂತಲೂ ಸ್ವತಃ ಹೇಳಿ ಅದರಂತೆ ಲೇಖೀ ಮೂಲಕ ಬರೆದುಕೊಟ್ಟಿರುವರು. ಆದರೆ ಈ ರೀತಿ ದೇವಾಸ ಮಹಾರಾಜರು ಸ್ವಾಮಿಗಳ ವಿಷಯದಲ್ಲಿ ತೋರಿಸಿದ ಆದರವು ಸಮಸ್ತ ಲಿಂಗಾಯತರಿಗೂ ಬಹು ಗೌರವಾಸ್ಪದವೆಂದು ನಿಸ್ಸಂದೇಹವಾಗಿ ಹೇಳುವೆವು. ಇದಲ್ಲದೆ ಮಹಾರಾಜರಿಗೆ ಅನಂತ ಧನ್ಯವಾದಗಳನ್ನೂ ಅರ್ಪಿಸುವೆವಲ್ಲದೆ ಈಶ್ವರನು ಅವರಿಗೂ ಅವರ ಕುಟುಂಬಕ್ಕೂ ಚಿರಾಯುವನ್ನು ಕೊಡಲೆಂದು ಪ್ರಾರ್ಥಿಸುವೆವು. ಶ್ರೀ ಸ್ವಾಮಿಗಳು ಲಿಂಗಾಯತರ ಪೀಠಾಚಾರ್ಯರಾದ್ದರಿಂದ ಧಾರ್ಮಿಕ ವಿಷಯದ ಆಲೋಚನೆಗಾಗಿ ಒಂದು ವರ್ಷದವಧಿಯನ್ನಿಟ್ಟು ತದನಂತರ ಹೋಗುವೆವೆಂಬ ಆಲೋಚನೆಯನ್ನು ತೋರಿಸಿರುವರು. ಇದೆಲ್ಲಾ ಮೇಲೆ ತೋರಿಸಿದ ವೃತ್ತಾಂತವನ್ನು ನಾನು ಪ್ರತ್ಯಕ್ಷ ಶ್ರೀಗಳವರ ದರ್ಶನ ಮಾಡಿಕೊಂಡು ಅರಿತುಕೊಂಡಿರುವೆನು. ಆದರೆ ಮೇಲೆ ತೋರಿಸಿದ ಶ್ರೀಗಳ ಅಮೇರಿಕಾ ದೇಶಕ್ಕೆ ಪ್ರಯಾಣ ಮಾಡುವ ಬಗ್ಗೆ ಯಾವ ವೀರಶೈವರಾಗಲೀ ಅಥವಾ ಯಾವ ವೀರಶೈವೇತರರಾಗಲೀ ಧಾರ್ಮಿಕ ವಿಧಿನಿಷೇಧಗಳ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ತೋರಿಸುವದಿದ್ದಲ್ಲಿ ಅವಶ್ಯ ಕೆಳಗಿನ ಪತ್ತೆಕ್ಕಾಗಲಿ ಅಥವಾ ವರ್ತಮಾನ ಪತ್ರಿಕೆಗಳಲ್ಲಿಯಾಗಲಿ ತೋರಿಸುವರೆಂದು ಅಪೇಕ್ಷಿಸುವೆನು,

ತಮ್ಮ

ವೀರಯ್ಯಾ ಚರಂತಿಮಠದ ಸಾಕೀನ ಕನವಳ್ಳಿ, ತಾಲೂಕ ಹಾವೇರಿ.

ನೈಜಾಂ ಇಲಾಖಾ ಇಟ್ಟಗಿಯಲ್ಲಿ ಜರುಗಿದ ೨ ನೆಯ ಶ್ರೀಮದ್ವೀರಶೈವ ಧರ್ಮೋದ್ಧಾರಿಣೀಸಭಾ.

ಈ ಸಭೆಯು ಮೊದಲು ಠರಾವಾದಂತೆ ವೈಶಾಖ ಶುಕ್ಲ ತೃತೀಯಾ ತಿಥಿಯಲ್ಲಿ ಶ್ರೀ ಚನ್ನಮಲ್ಲೇಶ್ವರ ಸಂಸ್ಥಾನ ಮಠದ ಬೈಲಲ್ಲಿ ಸುಂದರವಾಗಿ ಹಾಕಲ್ಪಟ್ಟಿದ್ದ ಮಂಟಪದಲ್ಲಿ ಶ್ರೀಮಾನ್ ಬಾಪೂರಾವ ಹೈಕೋರ್ಟು ವಕೀಲರ ಅಧ್ಯಕ್ಷತೆಯಲ್ಲಿ ಜರುಗಿತು. ಸಭಾಧ್ಯಕ್ಷರಾದ ಶ್ರೀಮಾನ್ ಬಾಪೂರಾವ್ ಹೈಕೋರ್ಟು ವಕೀಲರೂ, ದಾವಣಗೆರೆಯ ಶ್ರೀ ಮೃತ್ಯುಂಜಯ ಸ್ವಾಮಿಗಳವರೂ, ಹರ್ಡೇಕರ ಮಂಜಪ್ಪನವರೂ ಮುಂತಾದ ಕೆಲವು ಜನ ಮುಖ್ಯರು ಸಭೆಯ ಮುಂಚಿನದಿವಸ ಬಾರದ್ದರಿಂದ ಬಹುಜನರು ಅವರ ಆಗಮನವನ್ನೇ ಎದುರುನೋಡುತ್ತಿದ್ದರು. ಸಭೆಯ ದಿವಸ ಮುಂಜಾನೆ ೮ ಘಂಟೆಯ ಸಮಯಕ್ಕೆ ಸಮೀಪದಲ್ಲಿಯೇ ಹೊರಟಿರುತ್ತಾರೆಂಬ ವಾರ್ತೆಯು ಕುದುರೆಸ್ವಾರರ ಮುಖಾಂತರ ತಿಳಿದಕೂಡಲೇ ಸ್ವಾಗತಸಂಭಾಧ್ಯಕ್ಷರಾದ ಶ್ರೀಮಾನ್ ಕಾಶೀರಾವ್ ದೇಶಮುಖರೂ, ಮಠದ ಆಸ್ಥಾನಪಂಡಿತರಾದ ಮಲ್ಲಿನಾಥ ಬಸವಣ್ಣಶಾಸ್ತ್ರಿಗಳೂ, ಸ್ವಯಂಸೇವಕ ಮಂಡಳಿಯೂ, ಪ್ರೇಕ್ಷಕ ಸಮೂಹವೂ ಬ್ಯಾಂಡ್ ವಾದ್ಯದೊಡನೆ ಕರೆತರುವದಕ್ಕಾಗಿ ಎದುರಿಗೆ ಮಠದಿಂದ ೧ ಮೈಲು ದೂರದವರೆಗೂ ಹೋಗಿ ಶ್ರೀಗಳವರಿಗೂ ಅಧ್ಯಕ್ಷರಿಗೂ ಫಲಪುಷ್ಪಗಳನ್ನು ಸಮರ್ಪಿಸಿ ಮರ್ಯಾದಾಪುರಸ್ಸರ ಒಳ್ಳೇ ವಿಜೃಂಭಣೆಯಿಂದ ಬರಮಾಡಿಕೊಂಡು ಅವರವರಿಗಾಗಿ ನೇಮಿಸಿದ ಬಿಡಾರಗಳಲ್ಲಿ ಇಳಿಸೋಣವಾಯಿತು. ಸಭಾಧ್ಯಕ್ಷರ ಸಭಾಚಾಲಕರ ಉಪಾಹಾರಗಳು ಮುಗಿದನಂತರ ಸಬ್ಜೆಕ್ಟ್ ಕಮಿಟಿಯು ನೇಮಿಸಿ ಸ್ವಾಗತಸಂಭಾಧ್ಯಕ್ಷರಹಾಗೂ ಅಧ್ಯಕ್ಷರ ಭಾಷಣಗಳು ನಡೆದವು. ಆದಿವಸ ಬಸವೇಶ್ವರ ಜಯಂತಿಯಾದ್ದರಿಂದ ಶ್ರೀ|| ವೇ|| ಕೀರ್ತನಕಲಾನಿಪುಣರಾದ ಆನಂಪಲ್ಲಿ ಶಾಂತಮೂರ್ತಿಗಳವರ ಕೀರ್ತನವೂ, ಬಸವೇಶ್ವರತತ್ವ ಎಂಬ ವಿಷಯದ ಮೇಲೆ ದಾವಣಗೆರೆಯ ಹರ್ಡೇಕರ ಮಂಜಪ್ಪನವರ ಭಾಷಣವೂ ಒಳ್ಳೇ ಸ್ವಾರಸ್ಯವಾಗಿ ನಡೆದವು. ನೇಮಿಸಿದ ಪ್ರಕಾರ ಚತುರ್ಥೀ ಸೋಮವಾರ ಮುಂಜಾನೆ ೬ ಘಂಟೆಗೆ ಸಭೆಯು ಕಿಕ್ಕಿರಿಯುವಂತೆ ೭-೮ ಸಹಸ್ರ ಜನರು ಬಂದು ಕೂಡಿದ್ದರು. ಅದೇ ಸಮಯದಲ್ಲಿ ಶ್ರೀ ಮೃತ್ಯುಂಜಯಸ್ವಾಮಿಗಳೂ, ಶ್ರೀ ಶಾಂತವೀರಸ್ವಾಮಿಗಳೂ, ಮುಧೋಳ ಚರಮೂರ್ತಿ ಶ್ರೀ ಶಿವಲಿಂಗಸ್ವಾಮಿಗಳೂ, ಅಧ್ಯಕ್ಷರೂ ಬರಲು ಸಭಿಕರೆಲ್ಲಾ ಆನಂದೋದ್ರೇಕದಿಂದ ಕರತಾಡನವನ್ನು ಮಾಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಎಲ್ಲರನ್ನೂ ಉಚಿತಾಸನದಲ್ಲಿ ಕುಳ್ಳಿರಿಸಿದನಂತರ ವಕ್ತೃಗಳ ವ್ಯಾಖ್ಯಾನಕ್ಕಾರಂಭವಾಗಿ ವೀರಶೈವರಲ್ಲಿ ರಾಜಕೀಯ, ವೈದಿಕ, ವಿದ್ಯಾಪ್ರಸಾರದ ಬಗ್ಗೆ ಶ್ರೀಮಾನ್ ರುದ್ರಪ್ಪಾ ಹೈಕೋರ್ಟು ವಕೀಲ, ಶ್ರೀಮಾನ್ ಶಂಭುಲಿಂಗನಗೌಡ ವಕೀಲ, ಶ್ರೀಮಾನ್ ಹಣಮಂತರಾವ್ ವಕೀಲ, ವೇ|| ಬಸವಣ್ಣಪ್ಪಶಾಸ್ತ್ರಿ ಎಲೇರಿ ಇವರೇ ಮೊದಲಾದವರ ಭಾಷಣವೂ, ಅನಂತರ ಶ್ರೀ ಶಿಕ್ಷಣದಮೇಲೆ ಮಹಾಗಾಂವ್ ಕನ್ನಡ ಕವಿತಿಲಕ ಗುರುಲಿಂಗಸಿದ್ಧ ಕವಿಗಳೂ, ಹುಮನಾಬಾದಿ ಪಾ|| ಮಡಿವಾಳಪ್ಪನವರೂ, ಮಹಾಗಾಂವ್ ಗೌಡರಪುತ್ರಿ ವೈನಾಬಾಯಿಯವರೂ, ಕಮಲಾಪುರ ಗೌಡರಪುತ್ರಿ ಗಂಗಾಬಾಯಿಯವರೂ, ಮಹಾಗಾಂವ್ ಶಾಸ್ತ್ರಿಗಳಪತ್ನಿ ಪಾರ್ವತಿದೇವಿಯವರೂ ಉಪನ್ಯಾಸವಂ ಮಾಡಿದರು. ಅನಂತರ ಮುಖ್ಯಮುಖ್ಯ ಮಠಗಳಿಗೆ ವಿದ್ಯಾವಂತರಾದ ಪಟುಗಳನ್ನು ನೇಮಿಸುವ ವಿಷಯದ ಬಗ್ಗೆ ಮಸ್ಕಿಗ್ರಾಮದ ಶಾಲಾಮಾಸ್ತರಿಯ ವೇ|| ಬಸವರಾಜಶಾಸ್ತ್ರಿಗಳೂ, ಮಹಾಗಾಂವ್ ಪಾಠಶಾಲಾಧ್ಯಾಪಕ ಬ್ರ|| ಶ್ರೀ|| ಸಿದ್ಧಾಂತಿ ರುದ್ರಾರಾಧ್ಯಶಾಸ್ತ್ರಿಗಳೂ ಚನ್ನಾಗಿ ಹೇಳಿದರು. ಆಮೇಲೆ ವೀರಶೈವಧರ್ಮ ಈ ವಿಷಯವಾಗಿ ನೀರಡಗುಂಭದ ಆಸ್ಥಾನಪಂಡಿತ ವೇ|| ವಯ್ಯಾಕರಣಿ ಸಿದ್ಧಲಿಂಗಶಾಸ್ತ್ರಿಗಳು ಹೇಳಿದ ತರುವಾಯ ಅದೇ ವೀರಶೈವಧರ್ಮ ವಿಷಯವಾಗಿ ಹೈದರಾಬಾದಿಯಲ್ಲಿ ಉರ್ದು ಕಲಿಯುವ ಹಳಿಖೇಡದ ವಿದ್ಯಾರ್ಥಿಯು ಉರ್ದುಭಾಷೆಯಲ್ಲಿ ಸರಸವಾಗಿ ಹೇಳಿದ್ದರಿಂದ ಶ್ರೀ ಮೃತ್ಯುಂಜಯಸ್ವಾಮಿಗಳು ೫ ರೂಪಾಯಿಗಳನ್ನೂ, ಅಧ್ಯಕ್ಷರು ೨೫ ರೂಪಾಯಿಗಳಿಗಿಂತ ಹೆಚ್ಚು ಬೆಲೆಬಾಳುವ ಗಡಿಯಾರವನ್ನೂ ಇನಾಮಾಗಿ ಕೊಟ್ಟರು. ಅಷ್ಟಕ್ಕೆ ಭೋಜನದ ವ್ಯಾಳ್ಯವಾದ್ದರಿಂದ ಸಭಾ ಬರಖಾಸ್ತುಮಾಡಿ ಅಧ್ಯಕ್ಷರ ಬಿಡಾರದಲ್ಲಿಯೇ ವಿಷಯನಿಯಾಮಕ ಕಮಿಟಿಯನ್ನು ಮಾಡಿ ಪುನಃ ೨ ಘಂಟೆಯಿಂದ ರಾತ್ರಿ ೭ ಘಂಟೆಯವರೆಗೂ ಇಂತಿಂಥ ವಿಷಯಗಳು ಚರ್ಚಿಸತಕ್ಕದ್ದೆಂದು ನಿರ್ಧರಿಸಿದ ಪ್ರಕಾರ ಪುನಃ ೨ ಘಂಟೆಗೆ ಸಭಾಪ್ರಾರಂಭವಾಗಿ ಈ ಸಭೆಯಿಂದ ಸಮಾಜಹಿತವಾಗಲು ಏನನ್ನು ಮಾಡಬೇಕೆಂಬ ವಿಷಯ ಹೊರಟು ಮೊದಲು ೧ ನೇ ಧರ್ಮೋದ್ಧಾರಿಣೀ ಸಭೆಯಲ್ಲಿ ಅಂಕುರರೂಪವಾದ ಶಾಂತವೀರ ವಿದ್ಯಾವರ್ಧಕ ಫಂಡನ್ನೇ ವೃದ್ಧಿ ಮಾಡಬೇಕೆಂದು ಸರ್ವಾನುಮತದಿಂದ ಒಪ್ಪಿಗೆಯಾದ್ದರಿಂದ ವರ್ಗಣೀಕಾರ್ಯವು ನಡೆದು ೧೨೦೦ ರೂಪಾಯಿಗಳ ವಾಗ್ದಾನವಾಗಿ ಸಭೆಯಲ್ಲಿಯೇ ಕೆಲವು ರೂಪಾಯಿಗಳು ವಸೂಲಾದವು. ಆ ದಿವಸ ಶ್ರೀ ಮೃತ್ಯುಂಜಯಸ್ವಾಮಿಗಳು ಸಮಾಜಸೇವಾ ವಿಷಯವಾಗಿ

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
18 ಬಳ್ಳಾರಿ.

೧೯೨೨ನೆಯ ಇಸವಿ ಜೂನ್ ತಾ|| ೪ ರಿಂದ ೧೯೨೨ನೆಯ ಜೂನ್ ತಾ|| ೧೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ಜ್ಯೇಷ್ಠ ಶುದ್ಧ ನವಮಿಯಿಂದ ಜ್ಯೇಷ್ಠ ಬಹುಳ ಪಾಢ್ಯ ದಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭಮಾ
4	ಭಾನು	ನ-ಉ	4-0 53-47	ಉತ್ತ	13-9	22
5	[1] ಸೋಮ	ಏಕಾ	52-3	ಹಸ್ತ	9-10	23
6	ಮಂಗಳ	ದ್ವಾದ	46-49	ಚಿತ್ತ	5-38	24
7	[2] ಬುಧ	ತ್ರಯೋ	42-20	ಸ್ವಾತಿ	2-33	25
8	ಗುರು	ಚತು	38-51	ವಿಶಾ	0-18	26
9	ಶುಕ್ರ	ಪೌರ್ಣ	36-17	ಜ್ಯೇಷ್ಠ	58-4	27
10	ಶನಿ	ಪಾಢ್ಯ	34-50	ಮೂಲ	58-53	28

(1) ಸ್ಮಾರ್ತಾನಾಂ ನಿರ್ಜಲೈಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ. (2) ಪ್ರದೋಷ, ಕಂಚಿಯಲ್ಲಿ ಗರುಡೋತ್ಸವ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರ ತಿ ಭಾ ನು ವಾ ರ ಪ್ರ ಕ ಟ ಸ ಲ್ಪ ಡು ವು ದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾನತಾರಾ ಪಶ್ಯಜ್ಞ ನಹ್ಯತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಂಸದಾಪುರೀಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫ | ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಜೂನ್ ತಾರೀಖು ೧೧ ನೆಯ ಭಾನುವಾರ | ಸಂಚಿಕೆ ೨೪

REGISTERED NO. M. 124.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಸರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦.

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾನುಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ಶಾಂಬಸಿಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ಹಿಡಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೃಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೧೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬಣ್ಣ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೬—೦ ; ಅನಂತರ ಪ್ರತಿ ೧೦೦ ಕ್ಕೂ ೧—೨—೦ ; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೮—೦ ; ಅನಂತರ ಪ್ರತಿ ೧೦೦ ಕ್ಕೂ ೧—೪—೦ ; ಬಿಳಿ ಗ್ಲೇಸ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೨—೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ —೧೦—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,

ಸ್ಟಾರಾಫೀಸ್, ಮೈಸೂರು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದ ...



ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಜೂನ್ ತಾ|| ೧೧ನೆಯ ಭಾನುವಾರ.

OUR FINANCES.

The address of the Dewan-President given on the opening of the Birthday Session—which is also the budget Session-of the Mysore Representative Assembly on the 8th June 1922 is a unique and memorable one. From the point of view of its comprehensive nature and of the comparative method pursued—which is the only way of getting a clear grasp of the financial situation and of coming at the right conclusion—the Dewan's Address presented to the House, is, we may say, the first of its kind. Though a substantial portion of the address is taken up in a review of the budget estimates of the past twenty years, still we feel it was justified in the circumstances in order to indicate the general policies which were followed in handling our finances and to diagnose the present situation correctly. We cannot deny that Mr. Banerji has brought to bear upon this task a great deal of attention and labour. For this very reason Mr. Banerji is entitled to our gratitude. The retrospect as well as the forecast is an able, studied, analytical and lucid presentation.

The Dewan has rendered a great service by a correct and courageous estimation of the reasons that have brought about the financial crisis in the State. It may be that we in Mysore have also suffered to some effect from the general disturbances all over the world but in a State like ours where the stability of our finances was our boast for many years, where debt was foreign and where continued surpluses every year was a normal factor—it would have been easy to tide over these difficulties great as they were provided moderation was brought to bear upon the administration of State Funds, and Mr. Banerji hits the mark wonderfully well when in his diagnosis he says that in the zeal and eagerness to finance the schemes and projects, no provision could be made for reserves and the uncertain items of revenue as well as revenues from capital works and investments have been made use of to meet the additional heavy liabilities undertaken under recurring expenditure. The heavy and onerous programme of capital works—which in some cases were also fanciful-swallowed up all accumulated surpluses, and provision for any reserves was made impossible. At another place Mr. Banerji refers to the gradual organic growth of the administration for a series of years, during which expansion and development in various departments of the administration took place, and large schemes involving heavy capital outlay without immediate prospect of return were undertaken with the aid of accumulated surpluses of previous years as well as public loans. There was some steady growth in the administration up to Sir M. Visveswaraya's time, but when he came in it was a headlong race. In Sir P. N. Krishnamurti's first year, 1901-02, the service expenditure was 174 lakhs and in Sir M. Visvesvaraya's first year, i-e, in 1912-13 it was 194 lakhs—which shows a gradual increase of 20 lakhs in 12 years, but in Sir M. Visvesvaraya's last year, i.e. in 1918-19 within about six years it rose to 285 lakhs, which is 90 lakhs in five years. The Special Finance Committee has arrived at the same conclusions, chief among which are want of due appreciation as between stable and unstable sources of revenue, utilisation of the entire receipts from Mining Royalty as an item of normal revenue, starting of new services and expansion of old service departments, raising the standard of service expenditure disproportionate to the average level of ordinary revenue, undertaking of a number of large capital works without reference to the resources available and incurring heavy expenditure from loan funds on projects which have proved wholly unproductive or which yield only a small fraction of the expected return. Further, we are told by the Dewan that the attempt to differentiate between stable and unstable sources of revenue and to adjust expenditure accordingly was made so long ago as 1905 by Mr. Basu. How so excellent a suggestion has not been acted up in previous years and how Sir M. Visvesvaraya set at naught this principle altogether surprises us. We have made a special mention of this aspect of our financial position in order to show clearly how and by whom it was brought about and how difficult it is now to extricate ourselves from it, for, there has been a persistent cry in some quarters to make Sir M. Kantaraj Urs responsible for the situation, and absolve Sir M. Visvesvaraya of his responsibility for the crisis.

We are thankful to the Dewan for letting us know the terms of reference to the Special Finance Committee, which the Committee have omitted—for reasons which we fail to understand—to state in their *ad interim* report, for, the terms help us better to understand the scope and extent of the Committee's functions. The Dewan's critical and comprehensive survey of the situation however as also his constructive programme for future with most of which we are in entire agreement, we believe, will take the wind off the sails of the Special Committee, who might not have been prepared for so definite and so complete a statement by the Dewan before they had submitted their full report.

During the current year the anticipations of the budget which showed a welcome balance after the deficit years—having a total revenue of Rs. 306¼ lakhs and a total expenditure of Rs. 305½ lakhs-could not come to pass for, while the revenue could on the whole be realised the expenditure exceeded the estimate by 17½ lakhs, due mainly to the additional one crore of loan raised for completing the capital works involving a larger expenditure under interest charges and to the expenses connected with the visit of H. R. H. the Prince of Wales. The budget estimates for the coming year anticipate a total revenue of about Rs. 310½ lakhs and a total expenditure of about Rs. 331¼ lakhs resulting in a deficit of nearly Rs. 21 lakhs. It is pleasing to see that as a result of the negotiations with the Government of India, they expect to get a sum of Rs. 10 lakhs almost immediately on account of the arrears of Rs. 35 lakhs due from the surplus revenue of the Assigned Tracts. We are sure His Highness' recent visit to Simla will be fruitful of the realisations of all arrears and claims due to the State. We can however say that the total of further reductions in expenditure for three years to come ought to be more than Rs. 7 lakhs—judging from the recommendations already made by the Special Committee, and we are confident such reductions would in no way impair efficiency. As we have already stated once before, it looks as though the Dewan is reluctant to affect retrenchments in establishments and is on the other hand prone to impose fresh taxation. It is the business of the Government first to make every possible retrenchment and then to seek additional taxation. We do hope that the recommendations of the Committee will be accepted and worked out vigorously without fear or favour. It augurs well for the future of our finances to see that the Dewan is determined to separate them under definite groups: (1) the ordinary revenue for normal service expenditure (2) uncertain revenue to be used either for some nonrecurring charges of administration or for capital expenditure and (3) revenue from productive works to meet Interest and Sinking Fund charges for loans contracted on their behalf and to make allowance for renewals and expansion. On the whole it is an illuminating address and if the Dewan strongly and unwaveringly adheres to his programme there is little doubt that in the very near future the clouds that now have gathered over Mysore skies will vanish making way for an era of bright progress and prosperity. We need only say this that there is an intimate association between the purity, the impartiality and the efficiency of administration and the willingness to contribute to the State revenues and the people who are now perforce to divert their earnings in so many illegal channels, if these channels are blocked, may not hesitate to co-operate with the Government more readily than before in relieving the trying situation in which the State finds itself.

ಪ್ರಜಾಪ್ರತಿನಿಧಿಸಭೆಯಲ್ಲಿ ದಿವಾನರು ಮಾಡಿದ ಭಾಷಣ.

ವರ್ಧಂತ್ಯುತ್ಸವಕಾಲದಲ್ಲಿ ಜರುಗುವ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ಕಳೆದ ತಾ|| ೮ ರಲ್ಲಿ ರಾಜಧಾನಿಯ, ಪಬ್ಲಿಕ್ ಆಫೀಸು ಕಟ್ಟಡದಲ್ಲಿ ದಿವಾನ್ ಮ|| ಎ. ಆರ್. ಬಾನರ್ಜಿಯವರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ನಡೆಯುತ್ತಿರುವುದು. ಪ್ರಜಾಪ್ರತಿನಿಧಿಗಳಲ್ಲಿ ಮುಕ್ಕಾಲು ಭಾಗದಷ್ಟು ಮಂದಿಗಳು ಬಂದಿರುವರು. ಕೌನ್ಸಿಲರುಗಳು, ಚೀಫ್ ಕೋರ್ಟಿನ ಚೀಫ್ ಜಡ್ಜರು ಮತ್ತು ಎರಡನೆಯ ಜಡ್ಜರು, ಶಾಖಾಧಿಕಾರಿಗಳು, ಚೀಫ್ ಸೆಕ್ರೆಟರಿ, ಜನರಲ್ ಸೆಕ್ರೆಟರಿ ಮತ್ತು ರೆವಿನ್ಯು ಸೆಕ್ರೆಟರಿಗಳು, ರೈಲ್ವೆ ಏಜಂಟರು ಮತ್ತು ದಿವಾನ್‌ಬಹದ್ದೂರ್ ಮ|| ಕೆ. ಪಿ. ಪುಟ್ಟಣ್ಣಸೆಟ್ಟರು ಮತ್ತೆ ಕೆಲ ಉದ್ಯೋಗದಿಂದ ನಿವೃತ್ತರಾದ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಆದರೆ ಡಿ| ಕಮಿಷನರುಗಳು ಮಾತ್ರ ಸರ್ಕಾರಿಯ ಪ್ಪಣೆಮೇರಿಗೆ ವರ್ಧಂತ್ಯುತ್ಸವವನ್ನು ಪೂರೈಸಿಕೊಂಡು ಸಭೆಗಾಗಿ ನಿಲ್ಲದೆ ಹೊರಟುಹೋಗಿದ್ದರು. ಸಭೆಯು ೧೨ ಗಂಟೆಗೆ ಆರಂಭವಾಯ್ತು. ಅಧ್ಯಕ್ಷರು ತಮ್ಮ ಭಾಷಣವನ್ನು ಆಂಗ್ಲ ಭಾಷೆಯಲ್ಲಿ ಸ್ಫುಟವಾಗಿಯೂ ಗಂಭೀರವಾಗಿಯೂ ಉಚ್ಛ ಸ್ವರದಿಂದಲೂ ಓದಿದರು. ಈ ಭಾಷಣವು ಪೂರೈಸಲು ೧|| ಗಂಟೆಕಾಲ ಹಿಡಿದುದರಿಂದ ಕನ್ನಡದ ಭಾಷಾಂತರವು ಓದಲ್ಪಟ್ಟುದಾಗಿ ಭಾವಿಸಲ್ಪಟ್ಟು ಅಲ್ಪಾಹಾರಕ್ಕಾಗಿ ಅರ್ಧಗಂಟೆಯ ಕಾಲ ವಿರಾಮ ಕೊಡಲ್ಪಟ್ಟಿದ್ದನಂತರ ವಿಷಯಗಳ ಚರ್ಚೆಗುಪಕ್ರಮವಾಗಿ ಸಾಯಂಕಾಲ ೬|| ಗಂಟೆಯವರೆಗೂ ನಡೆದಿತು. ದಿವಾನರ ಭಾಷಣವು ಈ ಪತ್ರಿಕೆಯ ಬೇರೆಕಡೆಯಲ್ಲಿ ಮುದ್ರಿಸಲ್ಪಟ್ಟಿದೆ.

ಈ ವರೆಗೂ ದಿವಾನರ ಭಾಷಣಗಳಲ್ಲಿ ಆಯಾಯ ಸಂವತ್ಸರದ ಆಯವ್ಯಯದ ಸ್ಥಿತಿಯು ಮಾತ್ರ ತಿಳುಹಲ್ಪಡುತ್ತಿದ್ದಿತು. ಆದರೆ ಈ ಸಲದ ಭಾಷಣದಲ್ಲಿ ಮಾತ್ರ ಮುಂದಣ ಸಂವತ್ಸರದ ಆರ್ಥಿಕಸ್ಥಿತಿಯ ವಿವರಣೆಯ ಜತೆಗೆ ಕಳೆದ ೨೦ ವರ್ಷಗಳಿಂದ ಈ ವರೆಗಿರುವ ಆರ್ಥಿಕಸ್ಥಿತಿಯೂ ಪರಸ್ಪರ ಇರತಕ್ಕ ವ್ಯತ್ಯಾಸಕ್ಕೆ ಕಾರಣವೂ ಸ್ಪಷ್ಟವಾಗಿ ತಿಳುಹಲ್ಪಟ್ಟಿರುವುದರಿಂದ ಈ ಭಾಷಣವು ಅಸಮಾನವೂ ಸ್ಮರಣೀಯವೂ ಆಗಿರುವುದು. ಸಂಸ್ಥಾನದ ಪ್ರಕೃತ ಆರ್ಥಿಕಸ್ಥಿತಿಯು ಬಹಳ ಭಯಂಕರವಾಗಿರುವುದಕ್ಕೆ ಕಾಲಸ್ಥಿತಿಯು ಪ್ರತಿಕೂಲವಾಗಿ ಜೀವನದ ವೆಚ್ಚವು ಹೆಚ್ಚಿರುವುದರಿಂದ ತದನುಗುಣವಾಗಿ ಸರ್ಕಾರಿಯ ಕೆಲಸಗಾರರ ವೇತನವನ್ನು ಹೆಚ್ಚಿಸಬೇಕಾಗಿ ಬಂದುದು, ಎಕ್ಸ್‌ಚೇಂಜ್ ದರವು ಕಡಿಮೆ ಬಿದ್ದುದು, ಮುಂದಾಲೋಚನೆಯಿಲ್ಲದೆ ಕೈಕೊಳ್ಳಲ್ಪಟ್ಟ ದೊಡ್ಡದೊಡ್ಡ ಕೆಲಸಗಳನ್ನು ನಿರ್ವಹಿಸಲು ಸಾಲಮಾಡಲ್ಪಟ್ಟಿರುವ ಭಾರಿ ಮೊಬಲಗಿಗೆ ಹೆಚ್ಚು ಬಡ್ಡಿಯನ್ನು ತೆರಬೇಕಾಗಿರುವುದು ಮುಖ್ಯ ಕಾರಣಗಳಾಗಿರುವುವೆಂದು ಹೇಳಲ್ಪಟ್ಟಿದೆ. ಮತ್ತು ಆಯಕ್ಕೆ ತಕ್ಕಂತೆ ವ್ಯಯ ಮಾಡಬೇಕೆಂಬ ವಿಚಾರದಲ್ಲಿ ಮ|| ಗಳಾದ ದತ್ತರು, ಬಾಸುಯವರು ಮೊದಲಾದ ಅರ್ಥಶಾಸ್ತ್ರನಿಪುಣರು ಕೊಟ್ಟಿರುವ ಸೂಚನೆಗಳು ತಿಳುಹಲ್ಪಟ್ಟಿವೆ. ಪ್ರಸಕ್ತ ವರ್ಷದಲ್ಲಿ 306¼ ಲಕ್ಷ ರೂ. ಆದಾಯವೂ 305½ ಲಕ್ಷ ರೂ. ವೆಚ್ಚವೂ ಆಗುವುದೆಂದು ನಿರೀಕ್ಷಿಸಟ್ಟಿದ್ದುದಕ್ಕೆ ವೆಚ್ಚದಲ್ಲಿ 17½ ಲಕ್ಷ ರೂ. ಹೆಚ್ಚಿತು. ಇದಕ್ಕೆ ಈಚೆಗೆ ಕೂಡಿದ 1 ಕೋಟಿ ರೂಪಾಯಿ ಸಾಲವೂ ಯುವರಾಜ ಚಕ್ರವರ್ತಿಯವರ ಸ್ವಾಗತಕ್ಕಾಗಿ ಮಾಡಿದ ವೆಚ್ಚವೂ ಮುಖ್ಯ ಕಾರಣವೆಂದು ತಿಳುಹಲ್ಪಟ್ಟಿದೆ. ಬರುವ ವರ್ಷದಲ್ಲಿ 310½ ಲಕ್ಷ ರೂ. ಆಯವೂ 331¼ ಲಕ್ಷ ರೂ. ವ್ಯಯವೂ ಆಗಿ 21 ಲಕ್ಷ ರೂ. ಕಾಲಬೆ ಬರುವುದೆಂದು ನಿರೀಕ್ಷಿಸಲ್ಪಟ್ಟಿದೆ. ಬೆಂಗಳೂರು ದಂಡಿನ ಆಡಳಿತದಲ್ಲಿ ಮಿಕ್ಕಿರುವ 35 ಲಕ್ಷ ರೂ.ಗಳನ್ನು ಬರಮಾಡಿಕೊಳ್ಳಲು ಇಂಡ್ಯಾ ಸರ್ಕಾರದವರೊಂದಿಗೆ ಪತ್ರವ್ಯವಹಾರವು ನಡಿಸಲ್ಪಡುತ್ತಿರುವುದಾಗಿಯೂ ಈಗ ಸದ್ಯಕ್ಕೆ 10 ಲಕ್ಷ ರೂ. ಬರುವುದೆಂದು ನಿರೀಕ್ಷಿಸಲ್ಪಟ್ಟಿರುವುದಾಗಿಯೂ ವ್ಯಕ್ತವಾಗುತ್ತದೆ. ಮ|| ಬಾನರ್ಜಿಯವರು ಫೈನಾನ್ಸ್ ಕಮಿಟಿಯವರ ಸೂಚನೆಯನ್ನು ಬಹಳ ಮಟ್ಟಿಗೆ ಅನುಸರಿಸಿ ರಾಜ್ಯಾಡಳಿತವು ದಕ್ಷತೆಯಿಂದ ನಡಿಯಲು ಕುಂದುಬಾರದಂತೆ ಮಿತಿಮೀರಿರುವ ವೆಚ್ಚವನ್ನು ಸಾಧ್ಯವಾದ ಮಟ್ಟಿಗೂ ತಗ್ಗಿಸಿ ತಮ್ಮ ಅಧಿಕಾರಾವಧಿಯಲ್ಲಿ ಸಂಸ್ಥಾನವು ಋಣಮುಕ್ತವಾಗುವಂತೆ ಮಾಡುರೆವಂದೂ, ಲಂಚದ ವಿಷಯವು ಚರ್ಚಿತವಾಗುವ ವೇಳೆಯಲ್ಲಿ ಲಂಚಕುಳಿಯು ಯಾರೇ ಆಗಲಿ ಉದ್ಯೋಗದಿಂದ ಖಂಡಿತವಾಗಿಯೂ ನಿವೃತ್ತಿಗೊಳಿಸಲ್ಪಡುವನೆಂದು ಅಭಯವಚನವಿತ್ತಂತೆ ಕಾರ್ಯತಃ ಲಂಚಕುಳಿಗಳಾದ ರಾಕ್ಷಸರನ್ನು ನಿಗ್ರಹಿಸಿ ಅವರ ಬಾಯಿಗೆ ತುತ್ತಾಗಿರುವ ಪ್ರಜೆಗಳನ್ನು ಕಾಪಾಡಿ ಕೀರ್ತಿವಂತರಾಗುವರೆಂದೂ ನಿರೀಕ್ಷಿಸುತ್ತೇವೆ.

ಸಂಸ್ಥಾನದ ಇಂತಹ ಶೋಚನೀಯ ಸ್ಥಿತಿಗೆ ದಿವಾನರಾಗಿದ್ದ ಸರದಾರ್ ಕಾಂತರಾಜ ಅರಸಿನವರು ಕಾರಣರೆಂದು ಸ್ವಾರ್ಥಪರಾಯಣರಾದ ಕೆಲ ಅಸೂಯಾಳುಗಳು ದೂರುತ್ತಿರುವರು. ಆದರೆ ಆರ್ಥಿಕಸ್ಥಿತಿಯು ಯಾವ್ಯಾವ ದಿವಾನರ ಕಾಲದಲ್ಲಿ ಎಷ್ಟೆಷ್ಟರಮಟ್ಟಿಗಿದ್ದಿತೆಂಬ ಭಾಗವನ್ನು ನಿರ್ಮಾತ್ಸರ್ಯಬುದ್ಧಿಯಿಂದ ಓದಿನೋಡಿದುದಾದರೆ, ಆ ಅಸೂಯಾಂಧರು ಹೇಳುವ ಪ್ರಕಾರ ಕಾಂತರಾಜ ಅರಸಿನವರು ಕಾರಣಭೂತರೇ ಅಥವಾ ನಮ್ಮ ಯಾವ ದೇಶವೇಯಾಗಲಿ ಪಾಶ್ಚಾತ್ಯದೇಶಗಳಂತೆ ಜನರಿಂದ ಹಣವನ್ನು ಸಾಲವನ್ನಾಗಿ ತೆಗೆದುಕೊಂಡು ದೊಡ್ಡದೊಡ್ಡ ಕಾರ್ಯಗಳನ್ನು ನಡೆಸಿದಹೊರತು ಅಭಿವೃದ್ಧಿಯಾಗುವುದಿಲ್ಲ ಮತ್ತು ನಾಗರಿಕವೆನಿಸಿಕೊಳ್ಳುವದಿಲ್ಲವೆಂದು ಹೇಳುತ್ತ ಕೂಡಿಟ್ಟಿದ್ದ ಹಣವನ್ನೆಲ್ಲಾ ವೆಚ್ಚಮಾಡಿದ ಮಂತ್ರಿಗಳು ಸಂಸ್ಥಾನದ ಪ್ರಸಕ್ತ ಭಯಂಕರ ಸ್ಥಿತಿಗೆ ಕಾರಣಭೂತರೇ ಎಂಬುದು ಎಂತಹ ಮೂಢನಿಗಾದರೂ ತಾನಾಗಿ ಗೊತ್ತಾಗುವುದು.

ಬೊಂಬಾಯಿ ಪ್ರಾಂತದ ರಡ್ಡಿಜನರ ಮಹಾಸಭೆಯು ಗದಗು ತಾ|| ಹುಲುಕೋಟಿ ಗ್ರಾಮದಲ್ಲಿ ಇದೇ ಜೂನ್ ತಾ|| ೧೭ ಮತ್ತು ೧೮ ರಲ್ಲಿ ಮನಗಾಲ ಸಂಸ್ಥಾನದ ರಾಜಶ್ರೀ. ವೆಂಕಟರಂಗರಾವರಡ್ಡಿಯವರ ಅಧ್ಯಕ್ಷತೆಯಲ್ಲಿ ನಡಿಯುವುದು. ಈ ಮಹಾಸಭೆಗೆ ಮ|| ಗಳಾದ ರಾಮಲಿಂಗರಡ್ಡಿಯವರು, ಕೆ. ಎಚ್. ರಾಮಯನವರು ಮೊದಲಾದ ಪದವೀಧರರು ದಯಮಾಡಿಸಿ ವಿದ್ಯೆ, ಸಾಮಾಜಿಕ, ನೈತಿಕ, ಔದ್ಯೋಗ, ಧಾರ್ಮಿಕ ಮತ್ತು ರಾಜಕೀಯ ವಿಚಾರಗಳಮೇಲೆ ಭಾಷಣಗಳನ್ನು ಮಾಡುವರು. ಮತ್ತು ತಾ|| ೧೮ ರಲ್ಲಿ ಮಹಿಳಾಪರಿಷತ್ತು ಕೆ. ಎಚ್. ರಾಮಯ್ಯನವರ ಪತ್ನಿ ಸೌ|| ರೇವಮ್ಮನವರ ಅಧ್ಯಕ್ಷತೆಯಲ್ಲಿ ಜರಗುವುದು,

ಪ್ರಜಾಪ್ರತಿನಿಧಿಗಳನ್ನು ಆರಿಸುವಿಕೆಯು.

ಪದ್ಧತಿಯಪ್ರಕಾರ ಮೂರು ವರ್ಷಗಳಿಗೊಂದುಸಲ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಆರಿಸುವಿಕೆಯು ಈ ತಿಂಗಳಿಂದ ಆರಂಭಗೊಂಡಿದೆ. ಮೆಂಬರಾಗಲು ಮತ್ತು ಅವರುಗಳಿಗೆ ಓಟನ್ನು ಕೊಡಲು ಅರ್ಹರಾದವರ ಹೆಸರುಗಳು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಿರುತ್ತದೆ. ಆದರಲ್ಲಿ ಅರ್ಹರಾದವರ ಹೆಸರುಗಳು ಬಿಟ್ಟುಹೋಗಿದ್ದಲ್ಲಿ ಅವರು ಕೂಡಲೆ ಸ್ಥಳೀಯ ಅಧಿಕಾರಿಗಳ ಮೂಲಕ ಸರ್ಕಾರದವರಿಗೆ ತಿಳಿಸಬೇಕೆಂದು ಪ್ರಜಾಮಿತ್ರಮಂಡಲಿಯ ಸೆಕ್ರೆಟರಿಯವರು ಈ ಸ್ಟಾರ್ ಪತ್ರಿಕೆಯ ೧-೨ ಸಂಚಿಕೆಗಳಲ್ಲಿ ಸೂಚಿಸಿದ್ದರು. ಅವರುಗಳು ಆದೇ ಪ್ರಕಾರ ಮಾಡಿರಬಹುದೆಂದೂಹಿಸುತ್ತೇವೆ. ಓಟನ್ನು ಕೊಡತಕ್ಕವರು ಸ್ಥಳೀಯಾಧಿಕಾರಿಗಳ ಅಥವಾ ಪ್ರಬಲಸ್ಥರ ದಾಕ್ಷಿಣ್ಯಕ್ಕೆ ಒಳಗಾಗಿ ಸ್ವಾರ್ಥವನ್ನು ಸಾಧಿಸುವವರಿಗೆ ಓಟನ್ನು ಕೊಟ್ಟು ಅವರುಗಳನ್ನು ಮೆಂಬರುಗಳನ್ನಾಗಿ ಕಳುಹಿಸಿ ಕಡೆಯಲ್ಲಿ ಪೇಚಾಡುವುದಲ್ಲದೆ ತಮ್ಮ ಹಗ್ಗವನ್ನು ಅವರ ಕೈಗೆ ಕೊಟ್ಟು ನೇಣು ಹಾಕಿಸಿಕೊಳ್ಳದೆ, ಹಿಂದುಳಿದ ತಮ್ಮ ವರ್ಗದವರ ಕಷ್ಟಸುಖಗಳನ್ನು ಚೆನ್ನಾಗಿ ಅರಿತು ಪ್ರಜಾಸೇವೆಯೇ ದೇವರ ಸೇವೆಯೆಂದು ನಿಜವಾಗಿ ಭಾವಿಸಿ ನಡಿಯುವವರಾಗಿಯೂ, ವಿವೇಕದಿಂದಲೂ, ಧೈರ್ಯದಿಂದಲೂ, ನಿರ್ದಾಕ್ಷಿಣ್ಯದಿಂದಲೂ, ಸಮರ್ಥತೆಯಿಂದಲೂ ಪ್ರಜೆಗಳ ಕುಂದುಕೊರತೆಗಳನ್ನು ಮೀಟಿಂಗಿನಲ್ಲಿ ಪ್ರಭುತ್ವದವರಿಗೆ ನಿವೇದಿಸಿ ವಾದಿಸಬಲ್ಲವರಾಗಿಯೂ ಇರುವಂಥವರಿಗೇ ಓಟನ್ನು ಕೊಟ್ಟು ಕೃತಕೃತ್ಯರಾಗಬೇಕಲ್ಲದೆ ಬರೇ ತಮ್ಮವರೆಂಬ ಅಭಿಮಾನದಿಂದ ಯೋಗ್ಯತೆಯಿಲ್ಲದವರಿಗೆ ಓಟನ್ನು ಕೊಟ್ಟು ತಮ್ಮ ಕಾಲಿನ ಮೇಲೆ ತಾನೇ ಕಲ್ಲನ್ನೆತ್ತಿಹಾಕಿಕೊಂಡು ಪೇಚಾಡಬಾರದು.

ಹಿಂದುಳಿದವರ ಹಿತಚಿಂಕರೆಂದು ಮೇಲೆ ಮೇಲೆ ನಟಿಸುತ ಅಂತಹ ಅವರ ಅಹಿತವನ್ನೇ ಕೋರುತ್ತಿರುವವರಿಗೆ ಬೆಳ್ಳಗಿರುವುದನ್ನೆಲ್ಲಾ ಹಾಲೆಂದು ಸುಲಭವಾಗಿ ಭಾವಿಸುವವರಾದ ಮತ್ತು ದಾಕ್ಷಿಣ್ಯಪರರಾದ ನಮ್ಮ ಹಿಂದುಳಿದ ಸಹೋದರರು ಓಟನ್ನು ಕೊಟ್ಟು ತಮ್ಮ ಭಾಗಕ್ಕೆ ಕಾಮಧೇನುವಿನಂತಿರುವ ಮಿಲ್ಲರ್ ಕಮಿಟಿರಿಪೋರ್ಟಿನಮೇಲೆ ಪ್ರಭುತ್ವದವರು ಮಾಡಿರುವ ಆರ್ಡರನ್ನು ರದ್ದುಪಡಿಸಲು ಎಷ್ಟು ಸಾಹಸದಿಂದಲೂ ಧೈರ್ಯದಿಂದಲೂ ಒಕ್ಕಟ್ಟಿನಿಂದಲೂ ಅಭಿಯೋಗ ನಡಿಸಲು ಅವಕಾಶವನ್ನುಂಟುಮಾಡಿಕೊಟ್ಟುದನ್ನೂ, ಹಿಂದುಳಿದ ಜನರುದ್ಧಾರದಲ್ಲಿ ಬದ್ಧಕಂಕಣರಾಗಿರುವ ಸರ್ ಎಂ. ಕಾಂತರಾಜ ಅರಸಿನವರು ಅಸೂಯಾಳುಗಳ ವಾಕ್ಪ್ರಹರಗಳಿಗೆ ಹೆದರಿ ಆರ್ಡರನ್ನು ರದ್ದು ಮಾಡಿದ್ದಲ್ಲಿ ತಮ್ಮಾ ಕಾಮಧೇನು ಗೊಡ್ಡಾಕಳಾಗುತ್ತಿದ್ದಿತೆಂಬುದನ್ನೂ ಈಗಲಾದರು ತಿಳಿದು ಎಚ್ಚೆತ್ತು ಯಾರದಾಕ್ಷಿಣ್ಯಕ್ಕೂ ಒಳಗಾಗದೆ ಮತ್ತು ಅಧಿಕಾರದರ್ಪಕ್ಕೆ ಅಂಜದೆ ಮೇಲೆಹೇಳಿದ ಯೋಗ್ಯತೆಯನ್ನುಳ್ಳ ತಮ್ಮ ಹಿತೈಷಿಗಳಿಗೇನೇ ಓಟನ್ನು ಕೊಟ್ಟು ತಂತಮ್ಮ ಜನಾಂಗದವರ ಪುರೋಭಿವೃದ್ಧಿಗೆ ಅವಕಾಶವನ್ನುಂಟುಮಾಡಿಕೊಳ್ಳುವವರಾಗಬೇಕು. ಇದಲ್ಲದೆ ಕೆಲರು ಅವರ ಮಾತನ್ನು ಕೇಳಿದರೆ ಇವರಿಗೆ ಕೋಪ ಇವರ ಮಾತನ್ನು ಕೇಳಿದರೆ ಅವರಿಗೆ ಕೋಪ ಅದುಕಾರಣ ಯಾರ ನಿಷ್ಠೂರವೂ ಬೇಡವೆಂದು ಮೌನವಾಗಿರುವುದೂ, ಹಿಂದುಳಿದ ತಮ್ಮ ತಮ್ಮಲ್ಲಿಯೇ ಒಬ್ಬರ ಮೇಲೊಬ್ಬರು ಪೈಪೋಟಿಗೆ ನಿಂತು ತಮ್ಮಲ್ಲಾರಿಗೂ ಓಟುಬಾರದಂತೆ ಮಾಡಿಕೊಂಡು ತಮ್ಮ ಅಹಿತಕಾಂಕ್ಷಿಗಳಿಗೆ ನಿರಾಯಾಸವಾಗಿ ಓಟು ದೊರೆಯಲವಕಾಶವನ್ನುಂಟುಮಾಡಿಕೊಡುವುದೂ ಆತ್ಮಘಾತುಕವೂ ಸ್ವಜನದ್ರೋಹವೂ ಆಗುವುದೆಂಬುದನ್ನು ಚೆನ್ನಾಗಿ ಪರ್ಯಾಲೋಚಿಸಿ ತಿಳಿದು ಯಾವಕೆಲಸವಿದ್ದಾಗ್ಯೂ ಬಿಟ್ಟು ಓಟುಕೊಡುವ ದಿವಸ ಗೊತ್ತಾದ ತಾಲ್ಲೋಕು ಕಚೇರಿಗೊ ಮತ್ತಾವಸ್ಥಳಕ್ಕೊ ಬಂದು ತಮ್ಮ ಹಿತಚಿಂತಕರಿಗೆ ಓಟನ್ನು ಕೊಡಬೇಕೆಂದೂ, ವಿಘ್ನಸಂತೋಷಿಗಳ ಕಪಟ ಹಿತೋಕ್ತಿಗೆ ಕಿವಿಗೊಟ್ಟು ತಂತಮ್ಮವರಮೇಲೆ ಪೈಪೋಟಿಗೆ ನಿಲ್ಲದೆ ಯೋಗ್ಯರಾದವರನ್ನು ಪ್ರೋತ್ಸಾಹಿಸಿ ನಿಲ್ಲಿಸಿ ಅವರಿಗೆ ಪ್ರತಿಯೊಬ್ಬರೂ ಓಟನ್ನು ಕೊಡುವಂತೆ ಪ್ರಯತ್ನಿಸಬೇಕೆಂದೂ ಒತ್ತಿಹೇಳುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ತಾ|| ೬ ಮತ್ತು ೭ರಲ್ಲಿ ಸಂಪದಭಿವೃದ್ಧಿ ಸಮಾಜದ ಅಧಿವೇಶನವು ದಿವಾನರ ಅಧ್ಯಕ್ಷತೆಯಲ್ಲಿ ಜರುಗಿ ಭಾಷಣಗಳೂ ವಿಷಯ ವಿಮರ್ಶೆಗಳೂ ನಡೆದು ಕೆಲ ನಿರ್ಧಾರಗಳಾದುವು.

ರಾಜಧಾನಿಗೆ ಕುದುರೆಯ ಪಂದ್ಯವನ್ನು ಪರಾಮರ್ಶಿಸಲು ಬಂದಿದ್ದ ಮದ್ರಾಸ್ ಗೌರ್ನರ್ ದಂಪತಿಗಳು ತಾ|| ೯ರಲ್ಲಿ ಉದಕಮಂಡಲಕ್ಕೆ ಮೋಟಾರುಬಂಡಿಯಲ್ಲಿ ಪ್ರಯಾಣ ಮಾಡಿದರು.

ಶ್ರೀಮನ್ಮಹಾರಾಜರವರ ೩೯ ನೆಯ ವರ್ಷದ ವರ್ಧಂತ್ಯುತ್ಸವವು ಕಳೆದ ಸೋಮವಾರ ವೈಭವದಿಂದ ಜರುಗಿತು. ಆದಿನ ಸಾಯಂಕಾಲ ಮಹಾರಾಜ ಸಹೋದರರುಗಳು ಅಶ್ವಾರೂಢರಾಗಿ ಹೊರಟು ಗೌರ್ನಮೆಂಟ್ ಹೌಸ್ ಮೈದಾನದಲ್ಲಿ ಸೇನೆಯ ಮರ್‍ಯಾದೆಯನ್ನು ಕೈಕೊಂಡು ಹಿಂದಿರುಗಿ ಅರಮನೆಗೆ ಚಿತ್ತೈಸುವಾಗ್ಗೆ ಅತ್ಯಂತಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ವಿದ್ಯುಚ್ಛಕ್ತಿಯಿಂದ ನಡಿಯುವ ಮೋಟಾರುಬಂಡಿಯಲ್ಲಿ ಉತ್ಸವ ಹೊರಟಿದ್ದುದ್ದು ಅಭೂತಪೂರ್ವವಾಗಿದ್ದಿತಲ್ಲದೆ ಪ್ರೇಕ್ಷಕಜನರ ಕಣ್ಮನಗಳನ್ನು ಸೆಳದು ಪರಮಾಶ್ಚರ್ಯವನ್ನುಂಟುಮಾಡತಕ್ಕುದಾಗಿದ್ದಿತು.

ರಾಜಧಾನಿಯಿಂದ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಆರಿಸುವಿಕೆಯು ೧೯೨೨ ನೆಯ ಜೂನ್ ತಾ|| ೨೨ ರ ಮಧ್ಯಾಹ್ನ ೧ ಘಂಟೆಗೆ ಮೈಸೂರು ತಾಲ್ಲೂಕಾಫೀಸಿನಲ್ಲಿ ನಡಿಯಲು ಗೊತ್ತಾಗಿದೆ. ರಾಜಧಾನಿಯ ಮ್ಯುನಿಸಿಪಲ್ ಕಮಿಷನರುಗಳಾದ ಮಿ|| ಎ. ಮಹಮದ್‌ಸೇಟರು ಮತ್ತು ಪುರುಷೋತ್ತಮಾನಂದಗಿರಿ ಬಾವಾಜಿಯವರು ಉಮೇದುವಾರರುಗಳಾಗಿ ನಿಂತಿರುತ್ತಾರಾದುದರಿಂದ ಓಟನ್ನು ಕೊಡಲು ಅರ್ಹರಾದ ದೊಡ್ಡಮನುಷ್ಯರುಗಳು ಮೇಲ್ಕಂಡ ಕಾಲಕ್ಕೆ ತಾಲ್ಲೂಕು ಕಚೇರಿಗೆ ದಯವಿಟ್ಟು ತಪ್ಪದೆ ಬಂದು ಹಿಂದುಳಿದ ಜನರ ಪುರೋಭಿವೃದ್ಧಿ ಕಾರ್ಯದಲ್ಲಿ ಮುಂದಾಳುಗಳಾಗಿ ನಿಂತಿರುವ ಈ ಉಭಯ ದೊಡ್ಡಮನುಷ್ಯರುಗಳಿಗೆ ತಮ್ಮ ಓಟನ್ನು ಕೊಟ್ಟು ಪ್ರಜಾಸೇವೆಯಲ್ಲಿ ಹೆಚ್ಚು ಶ್ರದ್ಧೆಯನ್ನು ವಹಿಸುವಂತೆ ಅವರುಗಳನ್ನು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ.

ಮೈಸೂರು ಸರ್ಕಾರದಿಂದ ಗ್ರಾಂಟನ್ನು ಪಡೆಯುತ್ತಿರುವ ರಾಜಧಾನಿಯ ಮಹಾರಾಜ ಸಂಸ್ಕೃತ ಕಾಲೇಜು ಬೆಂಗಳೂರು ಸರ್ಕಾರಿ ಸಂಸ್ಕೃತಕಾಲೇಜು ಮೊದಲಾದ ಸಂಸ್ಕೃತ ಪಾಠಶಾಲೆಗಳಿಗೆ ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು ಸೇರಿಸುವ ವಿಚಾರದಲ್ಲಿ ಸರ್ಕಾರದವರಿಂದ ಏರ್ಪಟ್ಟಿದ್ದ ಕಮಿಟಿಯವರ ವರದಿಯು ಈ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ, ಮತ್ತು ಇದರ ಮೇಲೆ ಜನರ ಆಕ್ಷೇಪವೇನಾದರೂ ಇದ್ದಲ್ಲಿ ಬರುವ ಜುಲೈ ತಾ|| ೩೧ ರೊಳಗೆ ಸರ್ಕಾರಕ್ಕೆ ತಿಳಿಸಬೇಕೆಂದು ಸೂಚಿಸಲ್ಪಟ್ಟಿದೆ. ಈ ಕಮಿಟಿಯವರ ವರದಿಯು ಸ್ಟಾರ್ ಪತ್ರಿಕೆಯ ಮುಂದಣ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುದು. ಈ ಕಮಿಟಿಯವರ ಅಭಿಪ್ರಾಯವು, ಬಹುಕಾಲದಿಂದಲೂ ಮಹಾರಾಜಸಂಸ್ಕೃತಕಾಲೇಜಿಗೆ ವೀರಶೈವ ವಿದ್ಯಾರ್ಥಿಗಳನ್ನು ಸೇರಿಸಬೇಕೆಂದು ಪ್ರಜಾಪ್ರತಿನಿಧಿಸಭೆಯ ಮೂಲಕವೂ ವಿಜ್ಞಾಪನಾಪತ್ರಿಕೆಗಳಮೂಲಕವೂ ಪ್ರಾರ್ಥಿಸಿಕೊಳ್ಳುತ್ತಿರುವ ವೀರಶೈವರ ನಿರೀಕ್ಷಣೆಯಂತಿಲ್ಲವಾದುದರಿಂದ ಅದನ್ನು ಸರಿಪಡಿಸುವಂತೆ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಲು ಸಂಸ್ಥಾನದ ವೀರಶೈವರೆಲ್ಲರೂ ಪ್ರಬಲವಾದ ಪ್ರಯತ್ನವನ್ನು ನಡೆಯಿಸಬೇಕಾಗಿ ಸೂಚಿಸುತ್ತೇವೆ.

ಬೆಂಗಳೂರು 1ನೆ ಮುನಸೀಫ್ ಕೋರ್ಟಿನಲ್ಲಿ

1921-22 ನೆ ಇಸವಿ ಅಸಲು ನಂಬರು 731.

ವಾದಿಗಳು.—1. ಯಜಮಾನ್ ಮಂದಿವೆಂಕಟಪ್ಪ ಮತ್ತು ಇನ್ನು 33 ಜನರು.

Versus.

ಪ್ರತಿವಾದಿಗಳು.—1. ಪುಟ್ಟಲಿಂಗಡಪ್ಪಾ, 2. ನಾಗದಾಸಪ್ಪ ಮತ್ತು ಇನ್ನು 12 ಜನರು.

ಮೇಲ್ಕಂಡ ಮೊಕದ್ದಮೆಯಲ್ಲಿ ಬೆಂಗಳೂರು ಸಿಟಿ ಜ್ಯೋತಿನಗರದ ವೈಶ್ಯಮಂಡಲಿ ಪೇಟೆಯಲ್ಲಿರುವ ಜ್ಯೋತಿನಗರದ ವೈಶ್ಯಮಂಡಲಿಗೆ ಸೇರಿದ ಕಾಮ ಮತ್ತು ರತಿ ದೇವರುಗಳ ಸಾಮಾನುಗಳನ್ನು 1-2 ನೇ ಪ್ರತಿವಾದಿಗಳಿಂದ ಬರಮಾಡಿಕೊಳ್ಳುವುದಕ್ಕೋಸ್ಕರವೂ, ಇತರ ಪರಿಹಾರಗಳಿಗೋಸ್ಕರವೂ ಸದರಿ ವೈಶ್ಯಮಂಡಲಿಗೆ ಸೇರಿದ ವಾದಿಗಳು ಜ್ಯೋತಿನಗರದ ವೈಶ್ಯಮಂಡಲಿ ಕುಲಸ್ತರೆಲ್ಲರಿಗೋಸ್ಕರ ಮೇಲ್ಕಂಡ ದಾವೆಯನ್ನು ದಾಖಲ್ಮಾಡಿರುತ್ತಾರೆ. ಈ ಮೊಕದ್ದಮೆಯು ತಾರೀಖು 20-6-1922 ಕ್ಕೆ ವಿಚಾರಣೆ ಬಗ್ಗೆ ಹೀರಿಂಗು ಇಡಲ್ಪಟ್ಟಿರುತ್ತೆ. ಈ ಮೊಕದ್ದಮೆಯಲ್ಲಿ ವಾದಿಯಾಗಿ ಅಥವಾ ಪ್ರತಿವಾದಿಯಾಗಿಯೇ ಆಗಲಿ ಸೇರಬೇಕೆಂಬ ಅಪೇಕ್ಷೆಯುಳ್ಳವರು ಕೋರ್ಟಿಗೆ ತಾ|| 20-6-1922 ರ ದಿವಿ 11 ಘಂಟೆಗೆ ಕೋರ್ಟಿನಲ್ಲಿ ಹಾಜರಾಗಿ ತಿಳಿಸಬಹುದು.

(Sd). D. KRISHNA IYENGAR,
3-6-22. Advocate for Plaintiffs.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ವರ್ಧಂತ್ಯುತ್ಸವದ ಅಧಿವೇಶನದಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

8 ನೆಯ ಜೂನ್ 1922.

ಮಹಾಶಯರೇ,

ಘನವನ್ನೈದಿದ ಶ್ರೀಮನ್ಮಹಾರಾಜಾ ಸಾಹೇಬ್ಬಹದುರರವರ ಆಜ್ಞಾನುಸಾರ ಪ್ರಜಾಪ್ರತಿನಿಧಿ ಸಭೆಯ ಈ ದ್ವಿತೀಯ ಅಧಿವೇಶನಕ್ಕೆ ತಮ್ಮಗಳನ್ನು ಆದರಪೂರ್ವಕವಾಗಿ ಬರಮಾಡಿಕೊಳ್ಳಲು ತುಂಬಾ ಸಂತೋಷಿಸುತ್ತೇವೆ. ಸಂಸ್ಥಾನದ ಆಯವ್ಯಯಗಳನ್ನು ಕುರಿತು ಚರ್ಚಿಸುವ ಬಗ್ಗೆ ವರ್ಷದಲ್ಲಿ ಎರಡನೆಯ ಸಲ ಸಭೆ ಸೇರುವ ಹಕ್ಕನ್ನು ಶ್ರೀಮನ್ಮಹಾರಾಜಾ ಸಾಹೇಬರವರು ತಮ್ಮಗಳಿಗೆ ದಯೆಪಾಲಿಸಿ ಇಂದಿಗೆ ಆರುವರ್ಷಗಳಾದುವು.

ಆಯವ್ಯಯದ ಸಾಮಾನ್ಯಸ್ಥಿತಿಯನ್ನೂ, ಮುಂದಣ ಸರ್ಕಾರಿ ವರ್ಷದ ಬಡ್ಜೆಟ್ ವಿಷಯಕವಾದ ಸಲಹೆಗಳನ್ನೂ ವಿವರಿಸಿ ನಮ್ಮ ಭಾಷಣವನ್ನುಪಕ್ರಮಿಸುವುದಕ್ಕೆ ಮೊದಲು ಮೈಸೂರು ಸಂಸ್ಥಾನದ ದಿವಾನ್ ಪದವಿಯನ್ನು ಪಡೆದು ಪ್ರಥಮತಃ ಈ ಸಭೆಯ ಮೆಂಬರುಗಳ ಸುಬಾಗಮನವನ್ನು ಪಡೆಯುವ ಈ ಸಮಯದಲ್ಲಿ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅದರ ಸಮಾಲೋಚನೆಗಳಲ್ಲಿ ಭಾಗಿಯಾಗುವ ಗೌರವವನ್ನು ನಾವು ಎಷ್ಟು ಅತಿಶಯವಾದುದನ್ನಾಗಿ ಭಾವಿಸುತ್ತೇವೆಂಬುದನ್ನು ತಮಗೆ ಸೂಚಿಸಲಪೇಕ್ಷಿಸುತ್ತೇವೆ. ಕಳೆದ ಮೂರು ವರ್ಷಗಳ ಕಾಲ ಕೇವಲ ವಿಚಕ್ಷಣೆಯಿಂದ ರಾಜ್ಯಾಡಳಿತವನ್ನು ನೆರವೇರಿಸಿ ಪ್ರಖ್ಯಾತರಾದ ರಾಜಸೇವಾಧುರೀಣ ಸರ್ ಎಂ. ಕಾಂತರಾಜ ಅರಸರವರು ಅಸ್ವಸ್ಥರಾಗಿದ್ದ ಕಾಲದಲ್ಲಿ ನಾವು ದಿವಾನ್ ಪದವಿಯನ್ನು ಹಂಗಾಮಿಯಾಗಿ ವಹಿಸಿದ್ದಾಗ ಇದೇ ಗೌರವವು 1919 ನೆಯ ಇಸವಿಯಲ್ಲಿ ನಮಗೆ ಲಭಿಸಿತ್ತು. ನಾವು ಶ್ರೀಮನ್ಮಹಾರಾಜಾ ಸಾಹೇಬ್ಬಹದುರರವರ ಸರ್ಕಾರದ ಸಂಬಂಧವನ್ನು ಪಡೆದಾಗಿನಿಂದಲೂ ಈ ಸಭೆಯ ಅಭ್ಯುದಯದಲ್ಲಿಯೂ, ಪುರೋವೃದ್ಧಿಯಲ್ಲಿಯೂ ವಿಶೇಷ ಆಸಕ್ತಿಯನ್ನು ವಹಿಸಿರುತ್ತೇವೆಂಬ ಅಂಶವೂ, ಈ ಸಭೆಯು ದಿನೇ ದಿನೇ ವೃದ್ಧಿಗೆ ಬರುತ್ತಿರುವುದನ್ನು ನೋಡಿ ಸಂತೋಷಿಸುತ್ತಿರುವೆವೆಂಬ ಅಂಶವೂ ಸಹ ತಮಗೆ ವೇದ್ಯವೇ ಇದೆ. ಆದಕಾರಣ ಪ್ರಖ್ಯಾತರೆನಿಸಿದ್ದ ಹಿಂದಿನ ದಿವಾನ್‌ರುಗಳನಂತರ ನಾವು ಆ ಪದವಿಗೆ ಬಂದು ಈ ದಿವಸ ತಮ್ಮನ್ನು ಈ ಅಧಿವೇಶನಕ್ಕೆ ಆದರಪೂರ್ವಕವಾಗಿ ಬರಮಾಡಿಕೊಳ್ಳುವ ಸಂತೋಷಕಾರ್ಯವನ್ನು ಅಪರಿಮಿತ ಗೌರವವಾಗಿ ಭಾವಿಸುತ್ತೇವೆ. ಈ ಅಧಿವೇಶನವಾದರೋ ನಾನಾ ರೀತಿಯಲ್ಲಿ ಗಣ್ಯವಾದುದಾಗಿರುವುದೆಂದು ನಮಗೆ ತೋರಿಬರುತ್ತದೆ. ಏತಕ್ಕೆಂದರೆ, ತಾವುಗಳು ಪರ್ಯಾಲೋಚಿಸಿ ತೀರ್ಮಾನ ಮಾಡುವ ಬಗ್ಗೆ ವಹಿಸಲ್ಪಡುವ ವಿಷಯಗಳು ಕೇವಲ ಮಹತ್ವವುಳ್ಳವುಗಳಾಗಿರುತ್ತವೆ. ಹಾಗಿರುವುದು ತಮ್ಮ ಪರ್ಯಾಲೋಚನೆಗಾಗಿ ಆದಾಯ ವೆಚ್ಚದ ಪಟ್ಟಿಗಳನ್ನು ಕೊಟ್ಟಿರುವ ಮುಂದಿನ ವರ್ಷಕ್ಕೆ ಮಾತ್ರವೇ ಅಲ್ಲ. ಸಂಸ್ಥಾನದ ಆಯವ್ಯಯಗಳು ಸಮತೂಕ ಹೊಂದಿ ಸ್ಥಾಯಿಯಾಗಿ ನಿಲ್ಲುವ ಬಗ್ಗೆ ವಿಚಕ್ಷಣೆಯಿಂದಲೂ ಏಕಪ್ರಕಾರವಾಗಿಯೂ ಆದಾಯ ವೆಚ್ಚಗಳನ್ನು ನಡಿಸುವ ಏರ್ಪಾಡನ್ನು ಜಾರಿಗೆ ತರುವುದು ಆವಶ್ಯಕವಾಗಿರುವ ಇನ್ನೂ ಅನೇಕ ವರ್ಷಗಳವರೆಗೂ ಕೂಡ ಸದರೀ ವಿಷಯಗಳು ಕೇವಲ ಮಹತ್ವವುಳ್ಳವುಗಳಾಗಿರುವುವು. ಈ ಕ್ಲಿಷ್ಟವಿಷಯಗಳಿಗೆ ಸಂಬಂಧಪಡುವ ಸಮಸ್ತ ಅಂಶಗಳನ್ನೂ ಮುಚ್ಚುಮರೆ ಇಲ್ಲದೆ ತಮಗೆ ವಿವರಿಸಲು ಪ್ರಯತ್ನಿಸುತ್ತೇವೆ. ಇವುಗಳನ್ನು ತಾವುಗಳು ಎಂದಿನಂತೆ ಯುಕ್ತಾಯುಕ್ತವಿವೇಚನೆಯಿಂದಲೂ, ಮರ್ಯಾದಾತಿಕ್ರಮಣವಿಲ್ಲದಂತೆಯೂ ಪರ್ಯಾಲೋಚಿಸುವವರಾಗಿ ತೃಪ್ತಿಕರವಾದ ತೀರ್ಮಾನಕ್ಕೆ ಬರುವ ವಿಷಯದಲ್ಲಿ ಸರ್ಕಾರದವರಿಗೆ ಬಹುಮಟ್ಟಿಗೆ ಸಹಾಯ ಮಾಡುವಿರೆಂತ ನಾವು ದೃಢವಾಗಿ ನಂಬಿರುತ್ತೇವೆ.

ಆಯವ್ಯಯಗಳು ಸಮತೂಕವಾಗುವಂತೆ ಬಡ್ಜೆಟ್ಟುಗಳನ್ನು ತಯಾರು ಮಾಡುವುದು.

ರಾಜ್ಯಭಾರಕ್ಕೆ ಸಂಬಂಧಪಟ್ಟ ಸಾಮಾನ್ಯ ವಿಷಯಗಳನ್ನು ಎಂದಿನಂತೆ ದಸರಾ ಅಧಿವೇಶನದಲ್ಲಿ ಪ್ರಸ್ತಾಪಿಸಲಾಗುವುದಾದಕಾರಣ ಇವುಗಳನ್ನು ಕುರಿತು ಈ ಭಾಷಣದಲ್ಲಿ ವಿಚಾರ ಮಾಡಬೇಕೆಂದು ತಾವು ನಿರೀಕ್ಷಿಸಲಾರಿರಿ. ದೇಶವಿದೇಶ ನಾಣ್ಯಗಳ ಎಕ್ಸ್‌ಚೇಂಜ್ ದರವೂ, ವ್ಯಾಪಾರ ವಾಣಿಜ್ಯಗಳ ಸ್ಥಿತಿಯೂ ಎಲ್ಲೆಲ್ಲಿಯೂ ಕೇವಲ ವಿಪರ್ಯಾಸ ಹೊಂದಿ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಕೂಲಿಯವರ ತೊಂದರೆಗಳೂ, ಅವರ ಮುಷ್ಕರಗಳೂ ಸಂಭವಿಸಿ ಕೈಗಾರಿಕೆಗಳ ಸ್ಥಿತಿಯು ಸ್ಥಿಮಿತವಿಲ್ಲದಿರುವ ಈ ಕಾಲದಲ್ಲಿ ಸರ್ಕಾರದ ಆದಾಯ ವೆಚ್ಚದ ವಿಷಯವು ಇತರ ಎಲ್ಲ ವಿಷಯಗಳಿಗಿಂತ ಅತಿ ಪ್ರಮುಖವಾದುದಾಗಿರುತ್ತದೆ. ಮೈಸೂರು ಸಂಸ್ಥಾನದಲ್ಲಿಯೂ ಸಹ ಇಂಡಿಯಾ ದೇಶದ ಇತರ ಭಾಗಗಳಂತೆ ಈ ಎಲ್ಲ ತೊಂದರೆಗಳ ಹೊಡೆತವೂ ಪ್ರಾಪ್ತವಾಗಿರುವುದು ಮಾತ್ರವೇ ಅಲ್ಲದೆ ಸಂಸ್ಥಾನದ ಆಯವ್ಯಯ ಸ್ಥಿತಿಯನ್ನು ಅವ್ಯವಸ್ಥೆಗೆ ತರಲು ಸಾಧಕವಾದ ಮುಂದೆ ವಿವರಿಸಲ್ಪಡುವ ಬೇರೆ ಕೆಲವು ಸ್ಥಳೀಯ ಸಂದರ್ಭಗಳೂ ಸಹ ಒದಗಿರುತ್ತವೆ. ಇತರ ಕಡೆಗಳಂತೆಯೇ ಇಲ್ಲಿಯೂ ಆದಾಯವೆಚ್ಚಗಳು ಸಮತೂಕವಾಗುವಂತೆ ಬಡ್ಜೆಟ್ಟನ್ನು ಕ್ರಮಪಡಿಸುವುದೇ ಕಷ್ಟತರವಾದ ಕಾರ್ಯವಾಗಿರುತ್ತದೆ. ಪ್ರಾಯಶಃ ಪ್ರಪಂಚದ ಎಲ್ಲ ದೇಶಗಳಲ್ಲಿಯೂ, ಬ್ರಿಟಿಷ್ ಇಂಡಿಯದ ಎಲ್ಲ ಸಂಸ್ಥಾನಗಳಲ್ಲಿಯೂ ಆದಾಯಕ್ಕಿಂತ ಖರ್ಚು ಹೆಚ್ಚಾಗಿ ತೊಂದರೆಗೆ ಆಕರವಾಗಿರುತ್ತದೆ. ಇದೆಲ್ಲವೂ ಬಹುಮಟ್ಟಿಗೆ ಯುದ್ಧಾನಂತರ ಸಂಭವಿಸುವುದು ಸಹಜವೇ ಆಗಿರುತ್ತದೆ. ಯುದ್ಧದ ಮೂಲಕ ಸಂಭವಿಸಿದ ಕಷ್ಟನಷ್ಟಗಳನ್ನು ಕ್ರಮಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಿರುವ ಕಳೆದ ಕೆಲವು ವರ್ಷಗಳಲ್ಲಿ ಈ ತೊಂದರೆಯು ಮತ್ತಷ್ಟು ಹೆಚ್ಚಿರುತ್ತದೆ. ಈ ರೀತಿ ಪರಿಣಮಿಸಿರುವುದು ಒಂದು ಕಾರಣದಿಂದಲ್ಲ; ನಾನಾ ಕಾರಣಗಳು ಸೇರಿದ್ದರಿಂದುಂಟಾದುದಾಗಿರುತ್ತದೆ. ಇವುಗಳ ಪೈಕಿ ದುಬಾರಿ ಧಾರಣೆವಾಸಿಗಳು, ಜೀವನದ ಖರ್ಚು ಹೆಚ್ಚಿದ್ದು, ಎಕ್ಸ್‌ಚೇಂಜ್ ದರವು ಸ್ಥಿಮಿತವಾಗಿಲ್ಲದಿರುವುದು, ನಾಣ್ಯವಾಸಿಗಳ ದರವನ್ನು ಹೆಚ್ಚಿಸಿದ್ದು; ಕೆಲವು ಭಾಗಗಳಲ್ಲಿ ವರಮಾನವು ತಗ್ಗಿದ್ದು ಇವುಗಳನ್ನು ಮುಖ್ಯವಾದುವುಗಳನ್ನಾಗಿ ಸೂಚಿಸಬಹುದು. ಪ್ರಪಂಚದ ದ್ರವ್ಯೋಪಪತ್ತಿಸ್ಥಿತಿಯ ಸಾಮಾನ್ಯವಾದ ಅಸ್ಥಿರತೆಯು ಪ್ರತಿಯೊಂದು ದೇಶದ ರಾಜ್ಯಭಾರಕ್ಕೂ ವಿಶೇಷಮಟ್ಟಿಗೆ ಅನ್ವಯಿಸುತ್ತಾ ಬಂದಿರುವ ಪ್ರಯುಕ್ತ ಆದಾಯಕ್ಕೂ ವೆಚ್ಚಕ್ಕೂ ಸಮತೂಕ ಹೊಂದಿಸುವಂತೆ ಬಡ್ಜೆಟ್ಟುಗಳನ್ನು ಏರ್ಪಡಿಸಬೇಕೆಂಬ ಮುಖ್ಯ ತತ್ವವನ್ನು ಯೂರೋಪ್ ಖಂಡದ ಬೇರೆಬೇರೆ ಜನಾಂಗಗಳ ರಾಷ್ಟ್ರೀಯ ಸಭೆಗಳವರು ಪದೇಪದೇ ಬೋಧಿಸುತ್ತಿರುತ್ತಾರೆ. 1920 ನೆಯ ವರ್ಷದಲ್ಲಿ ಜನಾಂಗಗಳ ಸಮ್ಮೇಳನದ ಆಶ್ರಯದಲ್ಲಿ ಬ್ರಸೆಲ್ಸ್ ನಗರದಲ್ಲಿ ನೆರೆದಿದ್ದ ಅರ್ಥಶಾಸ್ತ್ರನಿಪುಣರ ಸಂಘದವರು "ಅತ್ಯಾವಶ್ಯಕ ಕರ್ತವ್ಯಗಳು" ಎಂಬ ಅಭಿಧಾನದಿಂದ ಇದರಡಿ ಕಂಡಂತೆ ತೀರ್ಮಾನ ಮಾಡಿರುತ್ತಾರೆ. ಅದು ಹೇಗೆಂದರೆ:—

"ಹುಟ್ಟುವಳಿಗಿಂತ ಖರ್ಚು ಜಾಸ್ತಿ ಇರುವಂಥ ಬಡ್ಜೆಟ್ ತಯಾರು ಮಾಡುವ ನಿಯಮವನ್ನು ಅನುಸರಿಸತಕ್ಕ ದೇಶವು ಸಂಪೂರ್ಣ ನಾಶಕ್ಕೆ

ಎಳೆದುಕೊಂಡುಹೋಗುವ ಜಾರಿಕೆಯಾದ ದಾರಿಯನ್ನು ಹಿಡಿಯುತ್ತದೆ. ಆ ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಅನುಕೂಲಗಳನ್ನು ಎಷ್ಟರಮಟ್ಟಿಗೆ ತ್ಯಜಿಸಿಬಿಟ್ಟರೂ ಅಲ್ಪವೇ ಆಗಿರುತ್ತದೆ. ಆದ್ದರಿಂದ ಇತರ ಸುಧಾರಣೆಗಳಿಗೆ ಅವಲಂಬನೆಯಾದ ಮೊದಲನೆಯ ಸಾರ್ವಜನಿಕ ಮತ್ತು ಆಯವ್ಯಯದ ಸುಧಾರಣೆಯಾಗಿ ಪತ್ರಿಕರ್ತರವೂ,

ಸಾಲ ತೀರಿಸುವುದಕ್ಕೆ ಬೇಕಾದ ಹಣವೂ ಸೇರಿ ತನ್ನ ಸಾಧಾರಣ

ಸಿಂಕಿಂಗ್ ಫಂಡು ಮತ್ತು ಬಡ್ಡಿಯ ಬಗ್ಗೆ ಹಣವನ್ನು ಹೆಚ್ಚಾಗಿ ಒದಗಿಸಬೇಕಾಗಿಬಂದದ್ದು. 1919ನೆಯ ಡಿಸೆಂಬರಿನಲ್ಲಿ ಘನವೆತ್ತ ಮೈಸೂರು ಮಹಾರಾಜರವರೂ, 1922ನೆಯ ಜನವರಿಯಲ್ಲಿ ಮಹಾನುಭಾವರಾದ ಪ್ರಿನ್ಸ್ ಆಫ್ ವೇಲ್ಸ್‌ರವರೂ ಬಿಜಯಮಾಡಿಸಿದ ಸಂಬಂಧದಲ್ಲಿ ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿನಲ್ಲಿಯೂ ಕೂಡ ಖರ್ಚು ವಿಶೇಷ ಹೆಚ್ಚಿತು. ಯಾವ ಕಾರಣಗಳಿಂದ ಈ ವ್ಯತ್ಯಾಸಗಳು ಉಂಟಾದುವೆಂಬುದನ್ನು ಪ್ರತಿವರ್ಷದ ಎರಡನೆಯ ಅಧಿವೇಶನದಲ್ಲಿಯೂ ಒಪ್ಪಿಸಿದ ತಃಖ್ತೆಗಳಲ್ಲಿ ಸವಿಸ್ತಾರವಾಗಿ

ಹಣ ಖರ್ಚು ಮಾಡಬೇಕೆಂತ ವಿವೇಚನೆಯಿಂದ ತಕ್ಕ ಏರ್ಪಾಡು ಮಾಡುವ ಫೈನಾನ್ಷಿಯಲ್ ಸೆಟಲ್‌ಮೆಂಟನ್ನು ಜಾರಿಗೆ ತರುವುದು ಅವಶ್ಯಕವೆಂಬುವುದು ವ್ಯಕ್ತಪಟ್ಟಿತು. ಇಂಥ ಸೆಟಲ್‌ಮೆಂಟನ್ನು ಯಾವರೀತಿ ತಯಾರುಮಾಡಬೇಕೆಂಬ ವಿವರಗಳನ್ನು ರಾಯ್‌ಬಹದೂರ್ ಎ.. ಬಾಸುಯವರು ಮೈಸೂರು ದೇಶದ ಆದಾಯವೆಚ್ಚದ ಮೇಲೆ 1905 ನೆಯ ಆಗಸ್ಟಿನಲ್ಲಿ ಕೊಟ್ಟ ತಮ್ಮ ರಿಪೋರ್ಟಿನಲ್ಲಿ ಮೊದಲು ಪರಿಷ್ಕಾರಗೊಳಿಸಿದರು. "ಮ್ಯುನಿಸಿಪಾಲಿಟಿಗಳ ಅಭಿವೃದ್ಧಿ" ಗೆ ಸುಮಾರು 5 ಲಕ್ಷ ರೂ

ಫೈನಾನ್ಸ್ 1861-5-5 ನೆಯ ನಂಬರು ಹುಕುಂನಾಮೆಯಲ್ಲಿ ಸಾಧಾರಣವಾಗಿ ಪ್ರತಿವರ್ಷದಲ್ಲಿಯೂ 70 ಲಕ್ಷ ರೂಪಾಯಿಯಷ್ಟು ಬಂಡವಾಳದ ಖರ್ಚನ್ನು ಮುಟ್ಟಿಸುವಂತೆಯೂ, ಆ ಪೈಕಿ 40 ಲಕ್ಷ ರೂಪಾಯಿಯನ್ನು ರಿಜರ್ವ್ ಫಂಡುಗಳ ಲೆಕ್ಕದಲ್ಲಿ ಶಿಲ್ಕು ನಂತ ಮೊಬಲಗಿಗೆ ಖರ್ಚು ಹಾಕತಕ್ಕದ್ದೆಂತಲೂ, 30 ಲಕ್ಷ ರೂಪಾಯಿಯನ್ನು ಸಾಲದಿಂದ ಮುಟ್ಟಿಸತಕ್ಕದ್ದೆಂತಲೂ ನಿಶ್ಚಯಿಸಿದರು.

ಖರ್ಚಿಗೆ ಹಣ ಸಾಲದೆ ಹೋದ ವರ್ಷಗಳು.

1918-19ನೆಯ ವರ್ಷದಿಂದ ಸಂಸ್ಥಾನದ ಆದಾಯ ವೆಚ್ಚವು ಹೀನಸ್ಥಿತಿಗೆ ಬರಲು ಪ್ರಾರಂಭವಾಯಿತು. ಹುಟ್ಟುವಳಿಯು 315 ಲಕ್ಷದಿಂದ 305 ಲಕ್ಷ ರೂಪಾಯಿಗೆ ಇಳಿಯಿತು. ಇಲಾಖೆಗಳ ಲೆಕ್ಕಕ್ಕೆ ಜಮೆಯಾಗಿ ಬಿಟ್ಟುಕೊಡಿದ್ದ ಅವ್ಯಕ್ತಿಯಿಲ್ಲದ ಶಿಲ್ಕುಗಳಿಗೆ ಪ್ರತಿಯಾಗಿ ಮತ್ತು ಫೈನಾನ್ಷಿಯಲ್ ಸೆಟ್ಲ್‌ಮೆಂಟಿನಲ್ಲಿ ಗೊತ್ತುಮಾಡಿದ್ದ ದರಕ್ಕಿಂತ ಹೆಚ್ಚಾಗಿ ಅನ್ಯತ್ರ ಖರ್ಚನ್ನು ವೆಚ್ಚಮಾಡುತ್ತಾ ಹೋಗಿ ಸದರಿ ಸೆಟಲ್ಮೆಂಟಿನ ಏರ್ಪಾಡನ್ನು ಜಾರಿಗೆ ತರುವುದರಲ್ಲಿ ಕ್ರಮತಪ್ಪಿದ್ದರಿಂದ ಹುಟ್ಟುವಳಿಗೆ ತಕ್ಕಂತೆ ಖರ್ಚನ್ನು ಮಿತಪಡಿಸುವುದು ಅಸಾಧ್ಯವಾಗಿ ಪರಿಣಮಿಸಿತು. ಆರು ವರ್ಷಗಳಿಗೆ ಹಿಂದೆ ಬರುತ್ತಿದ್ದ ಹುಟ್ಟುವಳಿಗಿಂತಲೂ ಮೇಲ್ಕಂಡ ವರ್ಷದ ಹುಟ್ಟುವಳಿಯು 65 ಲಕ್ಷ ರೂಪಾಯಿನಷ್ಟು ಜಾಸ್ತಿಯಾಗಿದ್ದರೂ ಕೂಡ ಆ ವರ್ಷ ಖರ್ಚಿಗೆ 3 ಲಕ್ಷ ರೂಪಾಯಿ ಸಾಲದೇ ಹೋಯಿತು.

ಡುವುದಕ್ಕಾಗಲಿ, ಕ್ಷಾಮನಿವಾರಣೆಯ ಫಂಡು ಮುಂತಾದ ಬಾಬುಗಳಿಗೆ ಬೇಕಾದ ರಿಜರ್ವಗಾಗಲಿ ಹಣ ಒದಗಿಸುವುದು ಸಾಧ್ಯವಾಗದೆಹೋಯಿತು. ಹಿಂದಿನ ದಿವಾನ್‌ಗಿರಿಯಲ್ಲಿ 1919-20 ರಲ್ಲಿ ಖರ್ಚಿಗೆ ಹಣ ಕಮ್ಮಿಬೀಳೋಣವು 11 ಲಕ್ಷವಿದ್ದು 1921-22 ರಲ್ಲಿ 31 ಲಕ್ಷ ರೂಪಾಯಿಯಾಯಿತು. ಇದನ್ನು ಸ್ವಲ್ಪಮಟ್ಟಿಗೆ ಇಲಾಖೆಯ ಶಿಲ್ಕಿನ ಮೊಬಲಗಿನಿಂದಲೂ, ಸ್ವಲ್ಪಮಟ್ಟಿಗೆ ಸಾಲ ತೆಗೆದ ಹಣದಿಂದಲೂ ಕೊಡಬೇಕಾಗಿ ಬಂತು. ಕಳೆದ ದಿವಾನ್‌ಗಿರಿಯಲ್ಲಿ ಹೊಸದಾಗಿ ಸಾಲ ತೆಗೆದದ್ದು ಒಟ್ಟು 335 ಲಕ್ಷ ರೂಪಾಯಿ. ಇದರಲ್ಲಿ ಹಿಂದಿನ ಸಾಲಗಳನ್ನು ನವೀಕರಿಸಿದ್ದು ಸೇರಿರುವುದಿಲ್ಲ. 1922 ನೆಯ ಜುಲೈ 1 ನೆಯ ತಾರೀಖಿನಲ್ಲಿ ಸಂಸ್ಥಾನದ ಏನ್ ಲೇಣಿ ದೇಣಿಗಳು ಈ ಕೆಳಗೆ ಕಂಡಂತೆ ಇರುತ್ತವೆ.—

ಲೇಣಿ	1,505	ಲಕ್ಷ ರೂಪಾಯಿ
ದೇಣಿ	933	,, ,,

ಸ್ಪೆಷಲ್ ಫೈನಾನ್ಸ್ ಕಮಿಟಿಯವರ ನೇಮಕ.

ಸಂಸ್ಥಾನದ ಆಯವ್ಯಯದ ಸ್ಥಿತಿಯು ಮತ್ತಷ್ಟು ದುರವಸ್ಥೆಗೆ ಬರದಂತೆ ನೋಡಿಕೊಳ್ಳಬೇಕಾದರೆ ತಕ್ಷಣ ಕೆಲವು ನಿವಾರಣೋಪಾಯಗಳು ಅವಶ್ಯಕವಾಗಿರುವುವೆಂಬ ವಿಷಯವು ನಾವು ಹಿಂದೆ ಸೂಚಿಸಿರುವ ಅಂಶಗಳಿಂದ ವ್ಯಕ್ತವಾಗುತ್ತದೆ. ಶ್ರೀಮನ್ ಮಹಾರಾಜರವರ ಸರ್ಕಾರದವರು

ಮಾಡುವ ವಿಷಯವೊಂದಕ್ಕೇ ಅಲ್ಲದೆ, ಪ್ರತಿಯೊಂದು ಸರ್ಕಾರೀ ಏರ್ಪಾಡಿನ ಯುಕ್ತಾಯುಕ್ತತೆಯ ವಿಚಾರಕ್ಕೂ ಸಹ ಗಮನ ಕೊಡುತ್ತಿದ್ದಾರೆ. ಗ್ರೇಟ್‌ಬ್ರಿಟನ್ನಿನ ಸರ್ಕಾರೀ ಖರ್ಚುಗಳ ವಿಚಾರಕ್ಕಾಗಿ ಏರ್ಪಟ್ಟ ಗೆಡ್ಡೇಸ್ ಕಮಿಟಿಯವರಿಗೆ ಈ ಎರಡನೆಯ ಅಂಶದ ಪರಿಶೀಲನೆಯನ್ನು ಉದ್ದೇಶಪೂರ್ವಕವಾಗಿಯೇ ವಹಿಸದೆ ಬಿಟ್ಟಿದ್ದರು. ಇಂಡಿಯಾ ಸರ್ಕಾರದವರಿಂದ ಈಚೆಗೆ ನೇಮಿಸಲ್ಪಟ್ಟ ಇಂಚ್‌ಕೇಪ್ ಕಮಿಟಿಯವರಿಗೂ ಸಹ ಸರ್ಕಾರೀ

1921-22 ನೆಯ ವರ್ಷದ ತಿದ್ದುಪಾಟಾದ ಅಂದಾಜುಗಳು.

ಕಳೆದ ವರ್ಷ ಸರ್ ಎಂ. ಕಾಂತರಾಜ ಅರಸರವರು ಚಾಲ್ತಿ ವರ್ಷದ ಬಡ್ಜೆಟ್ಟನ್ನು ಕನ್ನುಗಳಿಗೆ ವಿವರಿಸಿಹೇಳಿ ಭಾಷಣ ಮಾಡುವಾಗ ಸುಮಾರು ಅರ್ಧ ಲಕ್ಷದಷ್ಟು ಸರ್ಪ್ಲಸ್ ಹುಟ್ಟುವಳಿ ಹಣದಿಂದ ಬಡ್ಜೆಟ್ಟು ಸಮತೂಕಕ್ಕೆ ಬಂದಿರುವುದಾಗಿ ಹೇಳಿದರು. ಹಿಂದಣ ಸಾಲದ ಮೇಲೂ ಹೊಸದಾಗಿ ಉದ್ದೇಶಿಸಿದ ಸಾಲದ ಮೇಲೂ ಕೊಡಬೇಕಾದ ಬಡ್ಡಿಯ

ಎಳೆದುಕೊಂಡುಹೋಗುವ ಜಾರಿಕೆಯಾದ ದಾರಿಯನ್ನು ಹಿಡಿಯುತ್ತದೆ. ಆ ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಅನುಕೂಲಗಳನ್ನು ಎಷ್ಟರಮಟ್ಟಿಗೆ ಕಲ್ಪಿಸಿಬಿಟ್ಟರೂ ಅಲ್ಪವೇ ಆಗಿರುತ್ತದೆ. ಆದ್ದರಿಂದ ಇತರ ಸುಧಾರಣೆಗಳಿಗೆ ಅವಲಂಬನೆಯಾದ ಮೊದಲನೆಯ ಸಾರ್ವಜನಿಕ ಮತ್ತು ಆಯವ್ಯಯದ ಸುಧಾರಣೆಯಾಗಿ ಪತ್ರಿಸರ್ಕಾರವು,

ಸಾಲ ತೀರಿಸುವುದಕ್ಕೆ ಬೇಕಾದ ಹಣವೂ ಸೇರಿ ತನ್ನ ಸಾಧಾರಣ ಖರ್ಚನ್ನು ತನ್ನ ಸಾಧಾರಣ ಹುಟ್ಟುವಳಿಯಿಂದ ಒದಗಿಸಲಾಗುವಂಥ ಮೊತ್ತಕ್ಕೆ ಮಿತಪಡಿಸಿಕೊಳ್ಳಬೇಕು ;

ಲಾಭಕರವಲ್ಲದ ಅಸಾಧಾರಣವಾದ ಯಾವುದೊಂದು ಖರ್ಚನ್ನೂ ಮಾಡದಂತೆ ಬಿಟ್ಟುಬಿಡಬೇಕು ;

ಲಾಭಕರವಾದ ಅಸಾಧಾರಣವಾದ ಖರ್ಚನ್ನೂ ಸಹ ಸಾಧ್ಯವಿರುವಷ್ಟು ಕನಿಷ್ಠ ಮೊಬಲಗಿಗೆ ಮಾತ್ರವೇ ನಿಲ್ಲಿಸಿಕೊಳ್ಳಬೇಕು" ಎಂಬದಾಗಿ ಹೇಳಿರುತ್ತಾರೆ.

ಆಯವ್ಯಯದ ಸ್ಥಿತಿಯು ಬಹಳ ವ್ಯತ್ಯಸ್ತವಾಗಿರುವ ಸರ್ಕಾರಗಳು ತಕ್ಷಣವೇ ತಮ್ಮ ಬಜೆಟ್ಟುಗಳನ್ನು ಆದಾಯವೂ ವೆಚ್ಚವೂ ಸಮತೂಕವಾಗುವಂತೆ ಸರಿಪಡಿಸಬೇಕೆಂದೂ, ರಾಜ್ಯಾಡಳಿತದ ಸಾಮಾನ್ಯ ಬಾಬುಗಳಿಗೆ ಹಣಸಾಲದೆ ಹೋಗುವಂತೆ ಮಾಡುವುದು ಸರ್ವಾತ್ಮನಾ ನ್ಯಾಯವಲ್ಲವಾದ ಪ್ರಯುಕ್ತ ಚಾಲ್ತಿ ಬಾಬುಗಳ ಖರ್ಚನ್ನು ಒದಗಿಸುವುದಕ್ಕೆ ಸಾಲ ತೆಗೆದ ಹಣವನ್ನು ಉಪಯೋಗಿಸಲು ಅವಕಾಶ ಕೊಡಕೂಡದೆಂದೂ ಅವರು ಹೇಳಿರುತ್ತಾರೆ.

ಈಚೆಗೆ ಸರ್ ರಾಬರ್ಟ್ ಹಾರ್ನ್‌ರವರ ಅಧ್ಯಕ್ಷತೆಯಲ್ಲಿ ನಡೆದ ಜಿನೋವಾ ಕಾನ್ಫರೆನ್ಸಿನ ಫೈನಾನ್ಸ್ ಕಮಿಷನಿನ ತೀರ್ಮಾನಗಳ ಪೈಕಿ ಒಂದರಲ್ಲಿ, "ನಂಬಿಕೆಯಮೇಲೆ ಬ್ಯಾಂಕಿನಿಂದ ಹಣ ಪಡೆಯುವುದರ ಮೂಲಕ ಸಂಸ್ಥಾನದ ವರ್ಷಗಟ್ಟಲೆಯ ಬಜೆಟ್ಟಿನಲ್ಲಿ ಕಡಮೆ ಬಿದ್ದಿರುವುದನ್ನು ಭರ್ತಿಮಾಡುತ್ತಿರುವವರೆಗೂ ಯಾವ ಚಲಾವಣೆಯ ಸುಧಾರಣೆಯೂ ಸಾಧ್ಯವಿಲ್ಲ. ಮತ್ತು ನಾಣ್ಯ ಚಲಾವಣೆಗೆ ಭಂಗಾರವನ್ನು ಆಧಾರವಾಗಿಟ್ಟುಕೊಳ್ಳುವ ಏರ್ಪಾಡನ್ನು ಜಾರಿಗೆ ತರಲಾಗುವುದಿಲ್ಲ. ಆದ್ದರಿಂದ ಹೊಸ ಆಸ್ತಿಗಳು ಆಧಾರವಾಗಿಲ್ಲದ ಹೊಸ ಸಾಲಗಳನ್ನು ಮಾಡದೆ ಸಂಸ್ಥಾನದ ವರ್ಷಗಟ್ಟಲೆಯ ಖರ್ಚನ್ನು ಸರಿಪಡಿಸತಕ್ಕದ್ದೇ ಎಲ್ಲಕ್ಕಿಂತಲೂ ಅತ್ಯಂತ ಮುಖ್ಯವಾದ ಸುಧಾರಣೆಯಾಗಿದೆ" ಎಂತ ಹೇಳಿರುತ್ತದೆ.

1919ನೆಯ ವರ್ಷದ ಆಯವ್ಯಯದ ವಿಮರ್ಶೆ ಮತ್ತು ಅಂದಾಜು.

1919ರಲ್ಲಿ ನಾವು ಈ ಸಭೆಯಲ್ಲಿ ಭಾಷಣ ಮಾಡಿದಾಗ 1908-09ರಿಂದ ಮೊದಲಾಗುವ ಹತ್ತು ವರ್ಷಗಳ ಆದಾಯ ವೆಚ್ಚಗಳ ಅಭಿವೃದ್ಧಿಯನ್ನು ಸೂಕ್ಷ್ಮವಾಗಿ ವಿವರಿಸಿ ಆಗತಾನೇ ಹೊರಟುಹೋಗಿದ್ದ ಸ್ಪೆಷಲ್‌ಫೈನಾನ್ಷಿಯಲ್ ಅಡ್ವೈಜರಾದ ಮಿ॥ ದತ್ತರವರ ಅಭಿಪ್ರಾಯವನ್ನು ಎತ್ತಿ ಹೇಳಿದಮೇಲೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಲ್ಲದೆ ಹಿಂದಿನ ಹತ್ತು ವರ್ಷಗಳ ಆಯವ್ಯಯದ ಸ್ಥಿತಿಯ ವಿಮರ್ಶೆಯನ್ನೂ ಮುಂದಿನ ಐದುವರ್ಷಗಳ ಆದಾಯವೆಚ್ಚದ ಸ್ಥಿತಿಯ ಸಾಮಾನ್ಯ ಅಂದಾಜನ್ನೂ ಕೊಡುವುದಾಗಿ ನಾವು ಹೇಳಿದ್ದೆವು. ನಮ್ಮ ಆಯವ್ಯಯವು ಅಭಿವೃದ್ಧಿಸ್ಥಿತಿಯಲ್ಲಿದ್ದಾಗ್ಯೂ ನಮ್ಮ ದ್ರವ್ಯೋತ್ಪತ್ತಿಗಳಿಗೆ ಲಕ್ಷ್ಯಗೊಡಬೇಕೆಂತಲೂ, ರೆವಿನ್ಯೂ ಬಾಬಿನಿಂದ ಇನ್ನೂ ಹೆಚ್ಚುವರಿ ಖರ್ಚು ಮಾಡುವ ಬಾಬನ್ನು ಗಮನಕೊಟ್ಟು ಪರೀಕ್ಷಿಸಬೇಕೆಂತಲೂ ಆಕಾಲದಲ್ಲಿ ನಾವು ಸೂಚಿಸಿದೆವು. ಆಗ ಕೊಟ್ಟ ವಾಗ್ದಾನಕ್ಕನುಸಾರವಾಗಿ ಆಯವ್ಯಯದ ಸ್ಥಿತಿಯ ದಶವಾರ್ಷಿಕವಿಮರ್ಶೆಯೊಂದನ್ನೂ ಪಂಚವಾರ್ಷಿಕ ಅಂದಾಜೊಂದನ್ನೂ 1919ನೆಯ ಸೆಪ್ಟಂಬರು 5ರಲ್ಲಿ ಪ್ರಕಟಿಸಿದ್ದು ತಮಗೆ ವೇದ್ಯವೇ ಇದೆ. ಈ ವಿಮರ್ಶೆಯಿಂದ ಸಂಸ್ಥಾನದ ಹುಟ್ಟುವಳಿಯಲ್ಲಿ ವರ್ಷೇ ವರ್ಷೇ $15\frac{3}{4}$ ಲಕ್ಷ ರೂಪಾಯಿ ಕಡಮೆ ಬೀಳುವುದೆಂಬ ಅಂಶವು ವಿಶದವಾಗುವುದಲ್ಲದೆ ಲಾಭಕರವಾದ ಬಂಡವಾಳದ ಕಾಂಗಾರಿಗಳಿಗೆ ಧಾರಾಳವಾಗಿ ಸಾಲ ತೆಗೆಯುವುದು ಆವಶ್ಯಕವೆಂಬುವುದೂ ಸಹ ವ್ಯಕ್ತವಾಗುತ್ತದೆ. ಸದರೀ ವಿಮರ್ಶೆಯಲ್ಲಿ ಸಂಸ್ಥಾನದ ಹುಟ್ಟುವಳಿಯನ್ನು ಕೂಡಲೆ ಹೆಚ್ಚಿಸಬೇಕೆಂತಲೂ, ಖರ್ಚು ತಗ್ಗಿಸುವ ಏರ್ಪಾಡುಗಳನ್ನು ಮಾಡಬೇಕಂತಲೂ ಸೂಚಿಸಿತ್ತು.

ಕಳೆದ ಮೂರು ವರ್ಷಗಳ ಬಜೆಟ್ಟುಗಳು.

ಮೇಲ್ಕಂಡ ಅಂದಾಜಿನಲ್ಲಿ ಬಡ್ಡಿ ಮತ್ತು ಸಿಂಕಿಂಗ್ ಫಂಡುಗಳಿಗಾಗಿ ಸರಾಸರಿ 21.83 ಲಕ್ಷ ರೂಪಾಯಿ ಮಾತ್ರ ಒದಗಿಸಬೇಕೆಂತ ಗೊತ್ತುಮಾಡಿತ್ತು; ಅಲ್ಲದೆ ಕ್ಷಾಮನಿವಾರಣಾರ್ಥದ ಫಂಡಿಗಾಗಿ ಪ್ರತಿವರ್ಷವೂ 5 ಲಕ್ಷ ರೂಪಾಯಿಯನ್ನೂ, ನೀರಾವರಿ ಕಾಂಗಾರಿಗಳ ಮೂಲಧನದ ರಿಜರ್ವಿಗೋಸ್ಕರ 5 ಲಕ್ಷ ರೂಪಾಯಿಯನ್ನೂ, ಪ್ರತಿವರ್ಷವೂ ಆವರ್ತಿಯಾಗದಿರುವ ಖರ್ಚುಬಾಬಿಗೂ ಕೈಗಾರಿಕೆಗಳ ಅಭಿವೃದ್ಧಿಯ ಫಂಡಿಗೂ ಬೇಕಾಗುವ ರಿಜರ್ವಿಗಾಗಿ ಬೇರೆ 5 ಲಕ್ಷ ರೂಪಾಯಿಯನ್ನೂ ಸಹ ಒದಗಿಸಿದೆ; ಮೈನಿಂಗ್ ರೆವಿನ್ಯೂ ಕ್ಯಾಪಿಟಲೈಜೇಷನ್ ಫಂಡಿನ ಕಂಟ್ರಿಬ್ಯೂಷನ್ 10 ಲಕ್ಷ ಜಾತಾ ಈ ರಿಜರ್ವುಗಳು 27.33 ಲಕ್ಷ ರೂಪಾಯಿಯನ್ನು ಮೀರತಕ್ಕದ್ದಲ್ಲವೆಂದು ನಿಷ್ಕರ್ಷೆಮಾಡಲಾಯಿತು. 1919-20ನೆಯ ವರ್ಷದ ಬಜೆಟ್ಟಿನ ಮೇರೆಗೆ ಆ ವರ್ಷದ ಭಾಷಣದಲ್ಲಿ ವಿವರಿಸಲ್ಪಟ್ಟ ಮಿ॥ ದತ್ತರವರ ಫೈನಾನ್ಷಲ್ ಸೆಟ್ಲ್‌ಮೆಂಟಿಗೆ ಅನುಸಾರವಾಗಿ ರಿಜರ್ವುಗಳಿಗೆ ಹಣವನ್ನೊದಗಿಸಿದ ತರುವಾಯ, ವರಮಾನವು ಖರ್ಚಿಗೆ 1,10,000 ರೂಪಾಯಿಯಷ್ಟು ಸಾಲದೆ ಹೋಯಿತು. ಮೈಸೂರು ಸಂಸ್ಥಾನದ ಬಜೆಟ್ ಅಂದಾಜುಗಳಲ್ಲಿ ಈ ರೀತಿ ಹುಟ್ಟುವಳಿಯು ಖರ್ಚಿಗೆ ಸಾಲದೆ ಹೋದದ್ದು ಅನೇಕ ವರ್ಷಗಳಿಂದೀಚೆಗೆ ಅದೇ ಮೊದಲನೆಯ ವರ್ಷವಾಗಿತ್ತು. ಬಜೆಟ್ಟನ್ನು ಜಾರಿಗೆ ತಂದದ್ದರಲ್ಲಿ 1.10 ಲಕ್ಷ ರೂಪಾಯಿಯು ಕಮ್ಮಿ ಬೀಳಬಹುದೆಂದು ಅಂದಾಜು ಮಾಡಿದ್ದದ್ದು ಸಿಂಕಿಂಗ್ ಫಂಡು ಮತ್ತು ಕ್ಷಾಮನಿವಾರಣೆಯ ಫಂಡು ಇವುಗಳಿಗೆ ಹೊರತು ಬೇರೆ ಯಾವ ರಿಜರ್ವ್‌ಬಾಬುಗಳಿಗೂ ಹಣ ಒದಗಿಸದೆ ಇದ್ದರೂ 8.58 ಲಕ್ಷ ರೂಪಾಯಿ ಕಮ್ಮಿ ಬೀಳುವ ಹಾಗಾಯಿತು. ಈ ಸಭೆಗೆ 1920ನೆಯ ಮೇ ತಿಂಗಳಲ್ಲಿ ಒಪ್ಪಿಸಲ್ಪಟ್ಟ 1920-21ನೆಯ ವರ್ಷದ ಬಜೆಟ್ಟಿನ ಮೇರಗೆ ಸದರಿ ವರ್ಷದಲ್ಲಿ ಸಂಸ್ಥಾನದ ಹುಟ್ಟುವಳಿಗೆ ವರಮಾನದ ತೆರಿಗೆಯಬಾಬು ಸೇರಿದಾಗ್ಯೂ 9.36 ಲಕ್ಷ ರೂಪಾಯಿ ಕಮ್ಮಿ ಬೀಳುವುದೆಂದು ನಿರೀಕ್ಷಿಸಲ್ಪಟ್ಟಿತ್ತು. ಆದರೆ ಸದರೀ ವರ್ಷದಲ್ಲಿ ಈ ಅಂದಾಜಿಗಿಂತ ಬಹಳ ಜಾಸ್ತಿಯಾಗಿ ಎಂದರೆ 14.72 ಲಕ್ಷ ರೂಪಾಯಿಯಷ್ಟು ಕಡಮೆ ಬಿತ್ತು. ಈ ಸಭೆಯಮುಂದೆ ಇರಿಸಲ್ಪಟ್ಟಿರುವ ಪ್ರಸಕ್ತ ವರ್ಷದ ಬಜೆಟ್ ಅಂದಾಜುಗಳನ್ನು ಸುಮಾರು ಅರ್ಧಲಕ್ಷರೂಪಾಯಿ ಮಿಗತಾಯವಾಗುವಂತೆ ಸರಿಪಡಿಸಿತ್ತು, ಆದರೆ ತಿದ್ದುಪಾಟಾದ ಬಜೆಟ್ಟಿನಮೇರೆಗೆ ವರ್ಷದ ಆಖೈರಿನಲ್ಲಿ ವರಮಾನವು ಖರ್ಚಿಗೆ ಸುಮಾರು $16\frac{1}{2}$ ಲಕ್ಷ ರೂಪಾಯಿ ಕಮ್ಮಿ ಬೀಳುವುದೆಂತ ನಿರೀಕ್ಷಿಸಲಾಗಿದೆ. ಇಷ್ಟು ವಿಶೇಷವಾದ ವ್ಯತ್ಯಾಸಗಳಿಗೆ ನಾನಾಕಾರಣಗಳಿವೆ. ಅವು ಯಾವುವೆಂದರೆ, ಪೌಂಡುಗಳಲ್ಲಿ ವಸೂಲಾಗತಕ್ಕ ವರಮಾನವು ಎಕ್ಸ್‌ಚೇಂಜು ದರಗಳಿಂದ ಕಮ್ಮಿಬಿದ್ದದ್ದು; ಕೆಳದರ್ಜೆಯ ನೌಕರರಿಗೆ ಧಾರಣೆವಾಸಿ ತೆಜ್ಜಾದ ಪ್ರಯುಕ್ತ ಅಲೋಯನ್ಸ್‌ಗಳನ್ನು ಕೊಟ್ಟಿದ್ದು ; ಬೆಂಗಳೂರು ದಂಡಿನಿಂದ ಬರುತ್ತಿದ್ದ ಸರ್‌ಪ್ಲಸ್ ಹುಟ್ಟುವಳಿಯು ಬಾರದೆಹೋದದ್ದು ; ಗಂಧದೆಣ್ಣೆಯ ಕಾರ್ಖಾನೆಗಳ ವರಮಾನವು ಕಡಿಮೆಯಾದದ್ದು ; ಮತ್ತು ಸರ್ಕಾರೀ ಸಾಲಗಳ ಸಿಂಕಿಂಗ್ ಫಂಡು ಮತ್ತು ಬಡ್ಡಿಯ ಬಗ್ಗೆ ಹಣವನ್ನು ಹೆಚ್ಚಾಗಿ ಒದಗಿಸಬೇಕಾಗಿಬಂದದ್ದು. 1919ನೆಯ ಡಿಸೆಂಬರಿನಲ್ಲಿ ಘನವೆತ್ತ ವೈಸ್ರಾಯಿಯವರೂ, 1922ನೆಯ ಜನವರಿಯಲ್ಲಿ ಮಹಾನುಹಿಮರಾದ ಪ್ರಿನ್ಸ್ ಆಫ್ ವೇಲ್ಸ್‌ರವರೂ ಬಿಜಯಮಾಡಿಸಿದ ಸಂಬಂಧದಲ್ಲಿ ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿನಲ್ಲಿಯೂ ಕೂಡ ಖರ್ಚು ವಿಶೇಷ ಹೆಚ್ಚಿತು. ಯಾವ ಕಾರಣಗಳಿಂದ ಈ ವ್ಯತ್ಯಾಸಗಳು ಉಂಟಾದುವೆಂಬುದನ್ನು ಪ್ರತಿವರ್ಷದ ಎರಡನೆಯ ಅಧಿವೇಶನದಲ್ಲಿಯೂ ಒಪ್ಪಿಸಿದ ತಃಖ್ತೆಗಳಲ್ಲಿ ಸವಿಸ್ತಾರವಾಗಿ ವಿವರಿಸಲಾಗಿತ್ತು. ಆದರೂ ಪ್ರಕೃತದಲ್ಲಿ ಬಹು ತೊಡಕಾಗಿರುವ ಸಂಸ್ಥಾನದ ಆರ್ಥಿಕಸ್ಥಿತಿಯನ್ನು ಸರಿಯಾಗಿ ತಮ್ಮ ಅವಗಾಹನೆಗೆ ತರುವ ಉದ್ದೇಶದಿಂದ ಅವುಗಳನ್ನು ಪುನಃ ಸರ್ವಸಾಮಾನ್ಯವಾಗಿ ಸೂಚಿಸುತ್ತೇವೆ. ವರ್ಷಂಪ್ರತಿವರ್ಷದ ಲೆಕ್ಕಗಳನ್ನು ಮಾತ್ರ ಹೋಲಿಸಿ ನೋಡುವುದರಿಂದ ಸದರಿ ತೊಡಕಾದ ಆರ್ಥಿಕಸ್ಥಿತಿಯು ಮನಸ್ಸಿಗೆ ಚೆನ್ನಾಗಿ ಹಿಡಿಯಲಾರದು. ಹಾಗೆ ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಅವಿಚ್ಛಿನ್ನವಾಗಿ ಕೆಲವು ವರ್ಷಗಳು ರಾಜ್ಯಾಡಳಿತವು ದಿನೇದಿನೇ ವೃದ್ಧಿಯಾಗುತ್ತಾ ಬಂದದ್ದನ್ನೂ, ಸದರೀ ವರ್ಷಗಳಲ್ಲಿ ಸಂಸ್ಥಾನದ ನಾನಾ ಇಲಾಖೆಗಳಲ್ಲಿ ಬಡಾವಣೆಯೂ, ಅಭಿವೃದ್ಧಿಯೂ ಉಂಟಾದದ್ದನ್ನೂ, ಜಾಗ್ರತೆ ಲಾಭಬರುವ ನಿರೀಕ್ಷಣೆಯಿಲ್ಲದಂಥ ಭಾರಿ ಭಾರಿ ಕಾಂಗಾರಿಗಳನ್ನು ಕೈಗೊಂಡದ್ದನ್ನೂ, ಇವುಗಳಿಗಾಗಿ ಅನೇಕ ವರ್ಷಗಳಿಂದ ಕೂಡಿಟ್ಟದ್ದ ಶಿಲ್ಕು ಹಣವನ್ನೂ ಸಾಲವಾಗಿ ತೆಗೆದ ಹಣವನ್ನೂ ಉಪಯೋಗಿಸಿದ್ದನ್ನೂ ಪರಿಶೀಲಿಸಿ ನೋಡಿಕೊಳ್ಳಬೇಕಾಗಿರುತ್ತದೆ.

ಇಪ್ಪತ್ತು ವರ್ಷಗಳ ಆಡಳಿತದ ವಿವರ.

ಖರ್ಚಿಗೆ ಹಣಸಾಲದೆ ಕಷ್ಟ ಪ್ರಾಪ್ತವಾಗಿರುವ ಈಗಿನ ದುಃಸ್ಥಿತಿಗೆ ಕಾರಣವಾದ ನಾನಾ ವಿದ್ಯಮಾನಗಳನ್ನು ವ್ಯಕ್ತಪಡಿಸುವ ವಿಷಯದಲ್ಲಿ ನಾವು ಸ್ವಲ್ಪಮಟ್ಟಿಗೆ ಶ್ರಮ ವಹಿಸಿರುತ್ತೇವೆ. ನಮಗೆ ಈಗ ಪ್ರಾಪ್ತವಾಗಿರುವ ಕಷ್ಟಗಳ ಮೂಲಕಾರಣವನ್ನು ತಿಳಿದುಕೊಳ್ಳುವುದಕ್ಕೆ ತಕ್ಕ ವಿವರಗಳು ತಮಗೆ ಸುಲಭವಾಗಿ ದೊರೆಯುವಂತೆ ನಾವು ಪರಿಶೀಲನೆ ಮಾಡಿದ್ದರಲ್ಲಿ ಕಂಡುಬಂದ ವಿದ್ಯಮಾನಗಳನ್ನು ತಮಗೆ ಶ್ರುತಪಡಿಸಲಪೇಕ್ಷಿಸುತ್ತೇವೆ. ಅದರಂತೆ 1901-02ರಿಂದ 1921-22ರವರೆಗೆ ಎಂದರೆ 20 ವರ್ಷಗಳ ಕಾಲ ನಮ್ಮ ಹಿಂದಿನ ದಿವಾನರುಗಳ ಆಡಳಿತದಲ್ಲಿ ಸಂಸ್ಥಾನದ ಆಯವ್ಯಯಸ್ಥಿತಿಯು ಯಾವ ರೀತಿಯಲ್ಲಿತ್ತೆಂಬುದನ್ನು ಸೂಕ್ಷ್ಮವಾಗಿ ತಮಗೆ ವಿವರಿಸುತ್ತೇವೆ.

ಕಳೆದ ಇಪ್ಪತ್ತು ವರ್ಷಗಳ ಆಯವ್ಯಯದ ಸಾಮಾನ್ಯಸ್ಥಿತಿಯನ್ನು ಕೆಲವು ಮಾತುಗಳಲ್ಲಿ ವಿವರಿಸಬೇಕೆಂದು ಅಪೇಕ್ಷಿಸುತ್ತೇವೆ. 1901ನೆಯ ವರ್ಷದ ಅಖಭಾಗದಲ್ಲಿ ಸರ್. ಶೇಷಾದ್ರಿ ಅಯ್ಯರವರು ದಿವಾನ್ ಪದವಿಯಿಂದ ನಿವೃತ್ತರಾದಾಗ ಸಂಸ್ಥಾನದ ಒಟ್ಟು ಆಸ್ತಿಯು 468 ಲಕ್ಷ ರೂಪಾಯಿಯಾಗಿತ್ತು. ಆ ಪೈಕಿ 218 ಲಕ್ಷ ರೂಪಾಯಿಯು ನಗದು ಮತ್ತು ಬಡ್ಡಿಗೆಕೊಟ್ಟದ್ದ ಹಣದ ರೂಪದಲ್ಲಿಯೂ, 250 ಲಕ್ಷ ರೂಪಾಯಿಯು ಬಂಡವಾಳದ ಕಾಂಗಾರಿಗಳ ರೂಪದಲ್ಲಿಯೂ ಇತ್ತು. ಈ ಪೈಕಿ 229 ಲಕ್ಷ ರೂಪಾಯಿಯು ಮೈಸೂರು ದೇಶದ ರೈಲುಗಳಿಗಾಗಿ ವೆಚ್ಚ ಮಾಡಿದ್ದ ಹಣವಾಗಿತ್ತು. ಸಂಸ್ಥಾನದ ಒಟ್ಟು ದೇಣಿಯು 259 ಲಕ್ಷ ರೂಪಾಯಿ ಆಗಿತ್ತು. ಆ ಪೈಕಿ ಇಂಗ್ಲೆಂಡಿನಲ್ಲಿ ತೆಗೆದ 161 ಲಕ್ಷ ರೂಪಾಯಿ ಸ್ಟರ್ಲಿಂಗ್ ಸಾಲವೂ, 20 ಲಕ್ಷ ರೂಪಾಯಿ ರೈಲ್ವೆ ಸಾಲವೂ ಮಾತ್ರ ಗಮನಕ್ಕೆ ತೆಗೆದುಕೊಳ್ಳತಕ್ಕವುಗಳಾಗಿವೆ. ಈ ರೂಪಾಯಿ ರೈಲ್ವೆಸಾಲವೂ, 1936ರಲ್ಲಿ ವಾಪಸು ಕೊಡಬೇಕೆಂದು ತೀರ್ಮಾನವಾದಪಕ್ಷ ಸ್ಟರ್ಲಿಂಗ್ ಸಾಲವೂ ತಾವಾಗಿಯೇ ತೀರುವುದಕ್ಕೆ ಬೇಕಾಗುವ ಏರ್ಪಾಡುಗಳನ್ನು ಸದರಿ ದಿವಾನರವರು ಹಿಂದೆಯೇ ಮಾಡಿದ್ದರು. 1901ರಲ್ಲಿ ಖರ್ಚು ಜಾತಾ ಹುಟ್ಟುವಳಿಯು 209 ಲಕ್ಷ ರೂಪಾಯಿ ಆಗಿತ್ತು.

ಖರ್ಚು ಕಳೆದು ಶಿಲ್ಕು ಉಳಿಯುತ್ತಿದ್ದ ಕಾಲ.

ಸರ್ ಪಿ. ಎನ್. ಕೃಷ್ಣಮೂರ್ತಿಗಳ ದಿವಾನಗಿರಿಯಲ್ಲಿ ಸಂಸ್ಥಾನದ ವರ್ಷಗಟ್ಟಲೆ ಹುಟ್ಟುವಳಿಯು 1901-02ರಲ್ಲಿ 186 ಲಕ್ಷ ರೂಪಾಯಿ ಇದ್ದದ್ದು 1905-06ರಲ್ಲಿ 215 ಲಕ್ಷ ರೂಪಾಯಿಗೂ ಹುಟ್ಟುವಳಿಯಿಂದ ಒದಗಿಸುವ ಖರ್ಚು 178 ಲಕ್ಷ ರೂಪಾಯಿ ಇದ್ದದ್ದು 200ಲಕ್ಷ ರೂಪಾಯಿಗೂ ಹೆಚ್ಚಿತು. ಈ ದಿವಾನಗಿರಿಯಲ್ಲಿ ಸಂಸ್ಥಾನಕ್ಕೆ ಉಳಿದ ಶಿಲ್ಕು ಮೊಬಲಗು 53 ಲಕ್ಷ ರೂಪಾಯಿಯೂ, ಬಂಡವಾಳದ ಕಾಂಗಾರಿಗಳ ಒಟ್ಟು ಖರ್ಚು 68 ಲಕ್ಷ ರೂಪಾಯಿಯೂ ಆಗಿದ್ದುವು. ಈ ಪೈಕಿ ಸುಮಾರು 50 ಲಕ್ಷ ರೂಪಾಯಿಯು ಮುಖ್ಯವಾಗಿ ಕಾವೇರೀ ವಿದ್ಯುಚ್ಛಕ್ತಿಯ ಕೆಲಸಗಳ 2ನೆಯ ಸ್ಥಾಪನೆಗೂ, ಸುಮಾರು 12 ಲಕ್ಷ ರೂಪಾಯಿಯು ಚಿನ್ನದ ಗಣಿಗಳ ನೀರು ಸರಬರಾಯಿಗೂ ಖರ್ಚಾಯಿತು. ಸದರಿ ದಿವಾನರವರು ಕೆಲಸದಿಂದ ನಿವೃತ್ತರಾದಾಗ ಸಂಸ್ಥಾನದ ಒಟ್ಟು ಲೇಣಿಯು 570 ಲಕ್ಷ ರೂಪಾಯಿಗೆ ಏರಿದ್ದಿತು. ಮತ್ತು ದೇಣಿ ಜಾತಾ ಲೇಣಿಯು 265 ಲಕ್ಷ ರೂಪಾಯಿಯಾಗಿತ್ತು. 1882ನೆಯ ವರ್ಷದ ರೈಲ್ವೆ ಸಾಲವು ಈ ದಿವಾನಗಿರಿಯಲ್ಲಿ ತೀರಿಹೋಯಿತು.

ಮಿ॥ ಮಾಧವರಾಯರವರ ದಿವಾನಗಿರಿಯ ಮೊದಲೆರಡು ವರ್ಷಗಳಲ್ಲಿ ಹಿಂದಿನ ದಿವಾನಗಿರಿಯಲ್ಲಿದ್ದ ಅಭಿವೃದ್ಧಿಸ್ಥಿತಿಯೇ ನಡೆದುಬಂದು 1907-08ರಲ್ಲಿ ಅದುವರೆಗೆ ಹುಟ್ಟುವಳಿಯಾಗಿದ್ದುದರಲ್ಲಿ ಅತ್ಯಧಿಕವಾದ 225 ಲಕ್ಷ ರೂಪಾಯಿಯು ಉತ್ಪತ್ತಿಯಾಯಿತು. ಆದರೆ 1908-09ರಲ್ಲಿ ಮಹತ್ತಾದ ದುರ್ಭಿಕ್ಷವು ಪ್ರಾಪ್ತವಾದ ಕಾರಣ ಜಮೀನ್ ಕಂದಾಯದ ಹುಟ್ಟುವಳಿಯು 102 ಲಕ್ಷದಿಂದ 87 ಲಕ್ಷ ರೂಪಾಯಿಗೆ ಇಳಿಯಿತಲ್ಲದೆ ಫಾರೆಸ್ಟು ಹುಟ್ಟುವಳಿಯಲ್ಲಿಯೂ ಸಹ 4 ಲಕ್ಷ ರೂಪಾಯಿ ಕಡಮೆಯಾಯಿತು. ಸದರಿ ವರ್ಷದ ಒಟ್ಟು ಹುಟ್ಟುವಳಿಯು 197 ಲಕ್ಷ ರೂಪಾಯಿಗೆ ಇಳಿಯಿತ್ತು. ಇದು ಹಿಂದಿನ ವರ್ಷಕ್ಕಿಂತ 28 ಲಕ್ಷ ರೂಪಾಯಿ ಕಡಮೆಯಾದಂತಾಯಿತು. ಆದರೆ ಈ ಕಾಲದಲ್ಲಿ ಯಾವಾಗಲೂ ಒಟ್ಟು ಖರ್ಚು ಹುಟ್ಟುವಳಿಗಿಂತ ಜಾಸ್ತಿಯಾಗಿಲ್ಲ. 1908-09ರಲ್ಲಿಯೂ ಸಹ ಖರ್ಚು ಜಾತಾ 3 ಲಕ್ಷ ರೂಪಾಯಿಯಷ್ಟು ಹಣವು ಉಳಿಕೆಯಾಯಿತು. 1907-08ರಲ್ಲಿ ಸುಮಾರಿ ಹಾಲತ್‌ವಜಾ ಮಾಡಿದ ಪ್ರಯುಕ್ತ ಹುಟ್ಟುವಳಿಯಲ್ಲಿ $3\frac{1}{2}$ ಲಕ್ಷ ರೂಪಾಯಿ ಕಡಮೆ ಆಯಿತು. ಸೇವಿಂಗ್ಸ್ ಬ್ಯಾಂಕಿನ ಶಿಲ್ಕುಗಳನ್ನು ಕಾಲಾವಧಿಸಾಲವನ್ನಾಗಿ ಮಾರ್ಪಡಿಸಿದ್ದರಿಂದ ಏರ್ಪಟ್ಟ ಶೇಕಡಾ 4ರಂತೆ ಬಡ್ಡಿಯುಳ್ಳ ಒಂದು ಸಾಲದ ಮೂಲಕ ಕಾವೇರೀ ವಿದ್ಯುಚ್ಛಕ್ತಿಯ ಕೆಲಸಗಳ 3ನೆಯ ಸ್ಥಾಪನೆಗೆ ಹಣ ಒದಗಿಸಲಾಯಿತು. ಸದರಿ ಸಾಲವನ್ನು ತೀರಿಸುವುದಕ್ಕೆ ಸಿಂಕಿಂಗ್ ಫಂಡು ಒಂದನ್ನು ಸಹ ಏರ್ಪಡಿಸಲು ಅವಕಾಶ ಮಾಡಲಾಯಿತು. ಸರ್ಕಾರದವರು 1907ನೆಯ ಫೆಬ್ರವರಿ 16ರಲ್ಲಿ ಸಾದರ್ ಮಾಡಿದ ತಮ್ಮ ಹುಕುಮಿನಲ್ಲಿ ಕ್ಷಾಮನಿವಾರಣೆಯ ಫಂಡನ್ನು ಏರ್ಪಡಿಸಿ ಅದಕ್ಕೆ ವರ್ಷವೊಂದಕ್ಕೆ 2 ಲಕ್ಷ ರೂಪಾಯಿನಂತೆ ಜಮಮಾಡುತ್ತಾ ಹೋಗಬೇಕೆಂದು ಹುಕುಂ ಮಾಡಿದ್ದು ಅನುಕೂಲವಾಯಿತೆಂಬ ಅಂಶವು ಆ ಕಾಲದಲ್ಲಿ ಪ್ರಾಪ್ತವಾಗಿದ್ದ ದುರ್ಭಿಕ್ಷದಿಂದ ವ್ಯಕ್ತವಾಯಿತು. ಮಿ॥ ಮಾಧವರಾಯರು ಕೆಲಸದಿಂದ ನಿವೃತ್ತರಾದಾಗ ದೇಣಿ ಜಾತಾ ಲೇಣಿಯು 336 ಲಕ್ಷ ರೂಪಾಯಿಯಾಗಿತ್ತು.

1908-09ನೆಯ ವರ್ಷದಲ್ಲಿ ಹುಟ್ಟುವಳಿಯು ಕಡಮೆಯಾದ್ದರಿಂದ ದುರ್ಭಿಕ್ಷವು ಪ್ರಾಪ್ತವಾದ ವರ್ಷಗಳಲ್ಲಿ ಖರ್ಚಿಗೆ ಹಣವು ಸಾಲದೆ ಬೀಳುವ ಸಂಭವವು ಒದಗದಂತೆ ಮಾಡಬೇಕಾದರೆ ಇಂಥಿಂಥ ಬಾಬುಗಳಿಗೆ ಇಷ್ಟಿಷ್ಟೇ ಹಣ ಖರ್ಚು ಮಾಡಬೇಕೆಂತ ವಿವೇಚನೆಯಿಂದ ತಕ್ಕ ಏರ್ಪಾಡು ಮಾಡುವ ಫೈನಾನ್ಷಿಯಲ್ ಸೆಟಲ್‌ಮೆಂಟನ್ನು ಜಾರಿಗೆ ತರುವುದು ಅವಶ್ಯಕವೆಂಬುವುದು ವ್ಯಕ್ತಪಟ್ಟಿತು. ಇಂಥ ಸೆಟಲ್‌ಮೆಂಟನ್ನು ಯಾವಂಗ ತಯಾರುಮಾಡಬೇಕೆಂಬ ವಿವರಗಳನ್ನು ರಾಯ್‌ಬಹದೂರ್ ಎಚ್. ಜಿ. ಬಾಸುಯವರು ಮೈಸೂರು ದೇಶದ ಆದಾಯವೆಚ್ಚದ ಮೇಲೆ 1905 ನೆಯ ಆಗಸ್ಟಿನಲ್ಲಿ ಕೊಟ್ಟ ತಮ್ಮ ರಿಪೋರ್ಟಿನಲ್ಲಿ ಮೊದಲು ಪರಿಷ್ಕಾರಗೊಳಿಸಿದರು. "ಮ್ಯುನಿಸಿಪಾಲಿಟಿಗಳ ಅಭಿವೃದ್ಧಿ" ಗೆ ಸುಮಾರು 5 ಲಕ್ಷ ರೂಪಾಯಿಗಳನ್ನು ಒದಗಿಸುವುದಲ್ಲದೆ ಮಾಮೂಲು ಹುಟ್ಟುವಳಿಯ ಪೈಕಿ ಶೇಕಡ 55ರಷ್ಟಕ್ಕೆ ರಾಜ್ಯಾಡಳಿತದ ಖರ್ಚನ್ನು ಮಿತಪಡಿಸಬೇಕೆಂದು ಮಿ॥ ಬಾಸುಯವರು ಸೂಚಿಸಿದ್ದರು. ಬಂಗಾರದ ಗಣಿಗಳ ರಾಜಾಯದ ಹುಟ್ಟುವಳಿಯ ಪೈಕಿ ಸುಮಾರು 21 ಲಕ್ಷ ರೂಪಾಯಿಗಳ ಮೊತ್ತವಾಗುವಷ್ಟು ಬೇರೆ ಬೇರೆ ರಿಜರ್ವ್‌ಫಂಡುಗಳನ್ನು ಏರ್ಪಡಿಸಬೇಕೆಂದೂ ಸಹ ಅವರು ಹೇಳಿದ್ದರಲ್ಲದೆ ಕಾವೇರೀ ವಿದ್ಯುಚ್ಛಕ್ತಿಯ ಕೆಲಸಗಳ ಉತ್ಪತ್ತಿಯನ್ನು ಖರ್ಚಾದ ನಗದು ಶಿಲ್ಕು ಹಣವನ್ನು ಭರ್ತಿ ಹಾಕುವುದಕ್ಕೆ ಉಪಯೋಗಿಸತಕ್ಕದ್ದೆಂದು ಸಹ ಸೂಚಿಸಿದ್ದರು. 1908-09 ರಲ್ಲಿ ಮಿ॥ ಚಕ್ರವರ್ತಿಯವರು ಆದಾಯವೆಚ್ಚದ ಸ್ಥಿತಿಯನ್ನು ತನಿಖೆಯಾಗಿ ಪರಿಶೀಲಿಸಿ, ಕಾವೇರೀ ವಿದ್ಯುಚ್ಛಕ್ತಿಯ ಕೆಲಸಗಳ ಸಂಬಂಧದಲ್ಲಿ ಆವಶ್ಯಕವಾದ ಡಿಪ್ರಿಸಿಯೇಷನ್ ಫಂಡನ್ನು ಬಿಟ್ಟು 11 ಲಕ್ಷ ರೂಪಾಯಿಯಾಗುವುದೆಂದು ಅಂದಾಜು ಮಾಡಲ್ಪಟ್ಟಿರುವ ಅವಶ್ಯಕವಾದ ರಿಜರ್ವ್ ಫಂಡುಗಳೆಲ್ಲಕ್ಕೂ ಹಣ ಒದಗಿಸಿದ್ದೇ ಆದರೆ ವರ್ಷ ಒಂದಕ್ಕೆ ಸುಮಾರು 5 ಲಕ್ಷ ರೂಪಾಯಿಯು ಕಡಮೆ ಬೀಳುವುದು ಗೊತ್ತಾಗುವುದೆಂದು ವಾದಿಸಿದರು. ವಸ್ತುತಃ ಇದ್ದ ಸ್ಥಿತಿಯು ಅದಕ್ಕಿಂತಲೂ ಉತ್ತಮವಾಗಿತ್ತು; ಆದಾಗ್ಯೂ 1908-09 ರಲ್ಲಿ ಹುಟ್ಟುವಳಿಯು ಕಡಮೆಯಾದದ್ದು ಹಂಗಾಮಿ ಮಾತ್ರವಾಗಿದ್ದು ಅದರ ಮುಂದಿನ ವರ್ಷಗಳಲ್ಲಿ ಬೇಕಾದಷ್ಟು ಶಿಲ್ಕು ಮಿಗುತ್ತಾ ಬಂದದ್ದರಿಂದ ಆಗ ಕೊಟ್ಟ ಎಚ್ಚರಿಕೆಯನ್ನು ಮುಂದಿನ ವರ್ಷಗಳಲ್ಲಿ ಮರೆತುಬಿಟ್ಟಂತೆ ತೋರುತ್ತದೆ.

ಮಿ॥ ಟಿ. ಆನಂದರಾಯರವರ ದಿವಾನಗಿರಿಯಲ್ಲಿ ಒಟ್ಟು ಹುಟ್ಟುವಳಿಯು 1909-10 ರಲ್ಲಿ 220 ಲಕ್ಷ ಇದ್ದದ್ದು 1911-12 ರಲ್ಲಿ 230 ಲಕ್ಷ ರೂಪಾಯಿಗೆ ಹೆಚ್ಚಿ ಖರ್ಚು 194 ಲಕ್ಷದಿಂದ 202 ಲಕ್ಷ ರೂಪಾಯಿಗೆ ಏರಿತು. ಆ ಮೂರು ವರ್ಷಗಳಲ್ಲಿ ಹುಟ್ಟುವಳಿಯ ಶಿಲ್ಕು ಮೊಬಲಗು 83 ಲಕ್ಷ ರೂಪಾಯಿಯಾಗಿತ್ತು. ಬಂಡವಾಳದ ಕಾಂಗಾರಿಗಳಿಗೆ ಒಟ್ಟು 18 ಲಕ್ಷ ರೂಪಾಯಿಯು ಖರ್ಚಾಯಿತು. ಈ ಪೈಕಿ, ಸದರಿ ದಿವಾನಗಿರಿಯ ಕೊನೆಯವರ್ಷದಲ್ಲಿ ಪ್ರಾರಂಭವಾದ ಕೃಷ್ಣರಾಜಸಾಗರದ ಕಾಂಗಾರಿಗೆ 7 ಲಕ್ಷ ರೂಪಾಯಿ ಖರ್ಚು ಮಾಡಲಾಯಿತು.

ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನಗಿರಿಗೆ ಬಂದಾಗ ಸಂಸ್ಥಾನದ ಲೇಣಿಯು 795 ಲಕ್ಷ ರೂಪಾಯಿಯೂ, ದೇಣಿಯು 362 ಲಕ್ಷ ರೂಪಾಯಿಯೂ ಆಗಿತ್ತು ; ಅವರ ಆರು ವರ್ಷಗಳ ದಿವಾನಗಿರಿಯಲ್ಲಿ ಹುಟ್ಟುವಳಿಯು 255 ಲಕ್ಷ ರೂಪಾಯಿಯಿಂದ 315 ಲಕ್ಷ ರೂಪಾಯಿಯವರೆಗೆ ಇರುತ್ತಿತ್ತು. ಎಕ್ಸೈಜು ಬಾಬಿನ ಹುಟ್ಟುವಳಿಯು 1912-13ನೆಯ ವರ್ಷದಲ್ಲಿ 47 ಲಕ್ಷ ರೂಪಾಯಿ ಇದ್ದದ್ದು ವರ್ಷೇವರ್ಷೇ ಹೆಚ್ಚುತ್ತಾ ಬಂದು 1918-19ರಲ್ಲಿ 67 ಲಕ್ಷ ರೂಪಾಯಿಗೆ ಹೆಚ್ಚಿತು. ಫಾರೆಸ್ಟು ಹುಟುವಳಿಯು ಕ್ರಮವಾಗಿ ಹೆಚ್ಚುತ್ತಾ ಬಾರದಿದ್ದರೂ ಗಂಧದ ಮರಕ್ಕೆ ಹೆಚ್ಚುಬೆಲೆ ದೊರೆತದ್ದರಿಂದಲೂ, ಅನಂತರ ಗಂಧದೆಣ್ಣೆಯ ಕಾರ್ಖಾನೆಯನ್ನು ಸ್ಥಾಪಿಸಿದ್ದರಿಂದಲೂ ಸದರೀ ಹುಟ್ಟುವಳಿಯು ಹಿಂದಿನ ಕೆಲವು ವರ್ಷಗಳಲ್ಲಿದ್ದ ದಾಮಾಷಾಯಿಗಿಂತ ಬಹಳಮಟ್ಟಿಗೆ ಹೆಚ್ಚಿತ್ತು. 1912-13 ನೆಯ ವರ್ಷದಲ್ಲಿ ಹುಟ್ಟುವಳಿಯು 33 ಲಕ್ಷ ರೂಪಾಯಿ ಇದ್ದದ್ದು 1914-15ರಲ್ಲಿ 23 ಲಕ್ಷಕ್ಕೆ ಇಳಿಯಿತು. ಆ ತರುವಾಯ 1916-17ರಲ್ಲಿ 45 ಲಕ್ಷ ರೂಪಾಯಿಗೆ ಹೆಚ್ಚಿ 1918-19ರಲ್ಲಿ 32 ಲಕ್ಷಕ್ಕೆ ಇಳಿಯಿತು. ಪ್ರಯಾಣಿಕರ ಮತ್ತು ಸರಕುಗಳ ಆಮದುರಫ್ತು ಜಾಸ್ತಿಯಾದ್ದರಿಂದಲೂ, ದುರಸ್ತು ಮತ್ತು ನವೀಕರಣದ ಬಾಬುಗಳ ಖರ್ಚು ಕಮ್ಮಿಯಾದ್ದರಿಂದಲೂ ರೈಲ್ವೆಬಾಬಿನ ಹುಟ್ಟುವಳಿಯು 9 ಲಕ್ಷದಿಂದ 15 ಲಕ್ಷ ರೂಪಾಯಿಗೆ ಹೆಚ್ಚಿತು. ಈ ದಿವಾನಗಿರಿಯಲ್ಲಿ ಬ್ರಿಟಿಷ್ ಸರ್ಕಾರದವರಿಂದ ಬೆಂಗಳೂರು ದಂಡಿನ ಹುಟ್ಟುವಳಿಯ ಬಾಬಿನಲ್ಲಿ ಒಟ್ಟು 58 ಲಕ್ಷ ರೂಪಾಯಿಯು ಜಮೆ ಆಯಿತು.

ಸಂಸ್ಥಾನದ ಖರ್ಚು 1912-13ರಲ್ಲಿ 202 ಲಕ್ಷವಿದ್ದದ್ದು 1918-19ರಲ್ಲಿ 298 ಲಕ್ಷ ರೂಪಾಯಿಗೆ ಕ್ರಮವಾಗಿ ಹೆಚ್ಚಿತು. ಈ ರೀತಿ ಖರ್ಚು ಬಹಳವಾಗಿ ಹೆಚ್ಚಿದರೂ 1917-18ರ ಕೊನೆಯವರೆಗೆ ಪ್ರತಿ ವರ್ಷವೂ ಹೆಚ್ಚು ಹೆಚ್ಚಾಗಿ ಶಿಲ್ಕು ಉಳಿಯುತ್ತಿತ್ತು. ಈ ವಿಧವಾಗಿ ಉಳಿದ ಶಿಲ್ಕುಗಳ ಪೈಕಿ 1913-14ರಲ್ಲಿ ಬಂದ 82 ಲಕ್ಷ ರೂಪಾಯಿಯೇ ಬಹಳ ಜಾಸ್ತಿಯಾದದ್ದು. ಆ ಪೈಕಿ 30 ಲಕ್ಷ ರೂಪಾಯಿಯು ಬೆಂಗಳೂರು ದಂಡಿನ ಹುಟ್ಟುವಳಿಯ ಹಿಂದಿನ ಬಾಕಿಯ ಬಗ್ಗೆ ವಸೂಲಾಯಿತು. ಈ ದಿವಾನಗಿರಿಯಲ್ಲಿ ಮಿಗತಾಯವಾದ ಹುಟ್ಟುವಳಿಯ ಒಟ್ಟು ಶಿಲ್ಕು 321 ಲಕ್ಷ ರೂಪಾಯಿಯಾಗಿತ್ತು. ಹುಟ್ಟುವಳಿಯಿಂದ ತಗಲಿದ ವಿಶೇಷವಾದ ಖರ್ಚಿನ ಜತೆಗೆ ಹುಟ್ಟುವಳಿಯ ಲೆಕ್ಕಕ್ಕೆ ಸೇರದೆ ಯುದ್ಧಕ್ಕೋಸ್ಕರ ಸಂಸ್ಥಾನದ ಕಂಟ್ರಿಬ್ಯೂಷನ್ ಬಗ್ಗೆ 72 ಲಕ್ಷದಷ್ಟು ಭಾರೀ ಹಣವನ್ನು ಕೊಡಬೇಕಾಯಿತಲ್ಲದೆ ಬಂಡವಾಳದ ಕಾಂಗಾರಿಗಳಿಗೆ ಹಣ ಒದಗಿಸುವ ಬಗ್ಗೆ ಸೆಕ್ಯೂರಿಟಿ ಪತ್ರಗಳನ್ನು ಮಾರಿದ್ದರಿಂದ ಸುಮಾರು 48 ಲಕ್ಷ ರೂಪಾಯಿಯಷ್ಟು ಭಾರಿ ನಷ್ಟವೂ ಸಂಭವಿಸಿತು.

ಈ ಕಾಲದಲ್ಲಿ ಬಂಡವಾಳದ ಕಾಂಗಾರಿಗಳಿಗಾಗಿ ಖರ್ಚಾದ ಮೊಬಲಗು ಒಟ್ಟು 328 ಲಕ್ಷ ರೂಪಾಯಿಯಾಗಿತ್ತು.

ಸಂಸ್ಥಾನದ ಆದಾಯವೆಚ್ಚದ ವಿಷಯದಲ್ಲಿ ಸರ್ಕಾರದವರಿಗೆ ಸಲಹೆ ಕೊಡುವ ಬಗ್ಗೆ ಕರೆಯಿಸಲ್ಪಟ್ಟಿದ್ದ ಮಿ॥ ದತ್ತರವರು 1917 ರಲ್ಲಿ ಒಂದು ಫೈನಾನ್ಷಿಯಲ್ ಸೆಟಲ್‌ಮೆಂಟನ್ನು ತಯಾರುಮಾಡಿ ಕೊಟ್ಟರು. ಸಂಸ್ಥಾನದ ಸಾಧಾರಣ ವರ್ಷಗಟ್ಲೆ ಶಿಲ್ಕು 50 ಲಕ್ಷ ರೂಪಾಯಿಯಾಗಬಹುದೆಂದು ಅವರು ಅಂದಾಜು ಮಾಡಿದ್ದರಲ್ಲದೆ ರಿಜರ್ವ್‌ಗಳನ್ನು ಏರ್ಪಡಿಸಿ ಪ್ರಜೆಗಳ ಭಾಗ್ಯಾಭಿವೃದ್ಧಿಗೂ ವಿದ್ಯಾಭಿವೃದ್ಧಿಗೂ ಮತ್ತು ಬೇರೆಬೇರೆ ಇಲಾಖೆಗಳ ಕೆಳದರ್ಜೆಯ ನೌಕರರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೂ ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕೋಸ್ಕರ ನಿರ್ಧಯವಾಗಿ ಹಣ ಖರ್ಚು ಮಾಡಬಹುದೆಂತ ಶಿಫಾರಸು ಮಾಡಿದರು. ಅಲ್ಲದೆ ಪ್ರತಿ ಇಲಾಖೆಗೂ ಒದಗಿಸಬೇಕಾದ ನಿಷ್ಕೃಷ್ಟವಾದ ಮೊಬಲಗನ್ನು ಗೊತ್ತುಮಾಡಿದ್ದಲ್ಲದೆ ಅದರ ಜೊತೆಗೆ ಆಯಾ ಇಲಾಖೆಯಲ್ಲಿ ಹೆಚ್ಚು ಹುಟ್ಟುವಳಿ ಬಂದದ್ದರ ಪೈಕಿ ಒಂದು ಗೊತ್ತಾದ ಭಾಗವನ್ನು ಸಹ ಸದರೀ ಇಲಾಖೆಗೇನೇ ಕೊಡತಕ್ಕದ್ದೆಂತ ಒಂದು ತರಹೆಯ ಏರ್ಪಾಡನ್ನು ಗೊತ್ತುಮಾಡಿ ಕೊಟ್ಟರು. ಆದರೂ ಮಿ॥ ದತ್ತರವರು ಹುಟ್ಟುವಳಿಗೆ ಬೀಳುವ ಖರ್ಚು ವಿಪರೀತವಾಗಿ ಹೆಚ್ಚುತ್ತಿರುವುದನ್ನು ತೋರಿಸಿಕೊಟ್ಟರು. ಅವರು ಮಾಡಿಕೊಟ್ಟ ಫೈನಾನ್ಷಿಯಲ್ ಸೆಟಲ್‌ಮೆಂಟನ್ನು ಸರ್ಕಾರದವರು ಒಪ್ಪಿಕೊಂಡು ಅದನ್ನು 1917-18 ನೆಯ ವರ್ಷದಲ್ಲಿ ಜಾರಿಗೆ ತಂದರು. ಮತ್ತು ರಿಜರ್ವ್‌ಗಳಿಗೆ ಹಣ ಒದಗಿಸುವ ಕ್ರಮವು 1916-17 ನೆಯ ವರ್ಷದಿಂದ ಜಾರಿಗೆ ಬಂತು.

ಬಂಡವಾಳದ ಖರ್ಚಿನ ವಿಷಯದಲ್ಲಿ ಸರ್ಕಾರದವರು 1918 ನೆಯ ಅಕ್ಟೋಬರು 24ನೆಯ ಮರ್ಕ್ಯುಂ ಫೈನಾನ್ಷಿಯಲ್ 21503-ಜನರಲ್

ಫೈನಾನ್ಸ್ 1861-5-5 ನೆಯ ನಂಬರು ಹುಕುಂನಾಮೆಯಲ್ಲಿ ಸಾಧಾರಣವಾಗಿ ಪ್ರತಿವರ್ಷದಲ್ಲಿಯೂ 70 ಲಕ್ಷ ರೂಪಾಯಿಯಷ್ಟು ಬಂಡವಾಳದ ಖರ್ಚನ್ನು ಮುಟ್ಟಿಸುವಂತೆಯೂ, ಆ ಪೈಕಿ 40 ಲಕ್ಷ ರೂಪಾಯಿಯನ್ನು ರಿಜರ್ವ್ ಫಂಡುಗಳ ಲೆಕ್ಕದಲ್ಲಿ ಶಿಲ್ಕು ನಿಂತ ಮೊಬಲಗಿಗೆ ಖರ್ಚು ಹಾಕತಕ್ಕದ್ದೆಂತಲೂ, 30 ಲಕ್ಷ ರೂಪಾಯಿಯನ್ನು ಸಾಲದಿಂದ ಮುಟ್ಟಿಸತಕ್ಕದ್ದೆಂತಲೂ ನಿಶ್ಚಯಿಸಿದರು.

ಖರ್ಚಿಗೆ ಹಣ ಸಾಲದೆ ಹೋದ ವರ್ಷಗಳು.

1918-19 ನೆಯ ವರ್ಷದಿಂದ ಸಂಸ್ಥಾನದ ಆದಾಯ ವೆಚ್ಚವು ಹೀನಸ್ಥಿತಿಗೆ ಬರಲು ಪ್ರಾರಂಭವಾಯಿತು. ಹುಟ್ಟುವಳಿಯು 315 ಲಕ್ಷದಿಂದ 295 ಲಕ್ಷ ರೂಪಾಯಿಗೆ ಇಳಿಯಿತು. ಇಲಾಖೆಗಳ ಲೆಕ್ಕಕ್ಕೆ ಜಮೆಯಾಗಿ ಒಟ್ಟುಕೂಡಿದ್ದ ಆವೃತ್ತಿಯಿಲ್ಲದ ಶಿಲ್ಕುಗಳಿಗೆ ಪ್ರತಿಯಾಗಿ ಮತ್ತು ಫೈನಾನ್ಷಲ್ ಸೆಟ್ಲ್‌ಮೆಂಟಿನಲ್ಲಿ ಗೊತ್ತುಮಾಡಿದ್ದ ದರಕ್ಕಿಂತ ಹೆಚ್ಚಾಗಿ ಆವೃತ್ತ ಖರ್ಚನ್ನು ವೆಚ್ಚಮಾಡುತ್ತಾ ಹೋಗಿ ಸದರಿ ಸೆಟಲ್ಮೆಂಟಿನ ಏರ್ಪಾಡನ್ನು ಜಾರಿಗೆ ತರುವುದರಲ್ಲಿ ಕ್ರಮತಪ್ಪಿದ್ದರಿಂದ ಹುಟ್ಟುವಳಿಗೆ ತಕ್ಕಂತೆ ಖರ್ಚನ್ನು ಮಿತಪಡಿಸುವುದು ಅಸಾಧ್ಯವಾಗಿ ಪರಿಣಮಿಸಿತು. ಆರು ವರ್ಷಗಳಿಗೆ ಹಿಂದೆ ಬರುತ್ತಿದ್ದ ಹುಟ್ಟುವಳಿಗಿಂತಲೂ ಮೇಲ್ಕಂಡ ವರ್ಷದ ಹುಟ್ಟುವಳಿಯು 65 ಲಕ್ಷ ರೂಪಾಯಿನಷ್ಟು ಜಾಸ್ತಿಯಾಗಿದ್ದರೂ ಕೂಡ ಆ ವರ್ಷ ಖರ್ಚಿಗೆ 3 ಲಕ್ಷ ರೂಪಾಯಿ ಸಾಲದೇ ಹೋಯಿತು.

ಆ ತರುವಾಯ ದಿವಾನಗಿರಿಗೆ ಬಂದ ಸರ್ ಎಂ. ಕಾಂತರಾಜ ಅರಸರವರ ಕಾಲದಲ್ಲಿ ಎಕ್ಸ್‌ಚೇಂಜ್ ದರಗಳು ಏರಿದ್ದರಿಂದ ಮತ್ತು ಗಂಧದೆಣ್ಣೆಗೆ ಗಿರಾಕಿ ಕಡಮೆಯಾದ್ದರಿಂದ ಉತ್ಪತ್ತಿ ಕಮ್ಮಿಯಾದ ಪ್ರಯುಕ್ತವೂ, ಧಾರಣೆವಾಸಿ ಹೆಚ್ಚಿದ್ದಕ್ಕಾಗಿ ಕೆಳದರ್ಜೆಯ ನೌಕರರಿಗೆ ಅಲೋಯನ್ಸುಗಳನ್ನು ಕೊಟ್ಟದ್ದರಿಂದ ಮತ್ತು ಸಾಮಾನ್ಯವಾಗಿ ರಾಜ್ಯಾಡಳಿತದ ಖರ್ಚು ಹೆಚ್ಚುತ್ತಾ ಬಂದುದರಿಂದ ಖರ್ಚು ಜಾಸ್ತಿಯಾದ ಪ್ರಯುಕ್ತವೂ ಹಣ ಸಾಲದೇ ಬೀಳೋಣವು ಇನ್ನೂ ಹೆಚ್ಚುತ್ತ ಬಂತು. ಈ ಮೊದಲೇ ಪ್ರಾರಂಭಿಸಿದ್ದ ಬಂಡವಾಳದ ಕಾಂಗಾರಿಗಳಿಗೆ ಹಣವೊದಗಿಸುವುದಕ್ಕಾಗಿ ಈ ದಿವಾನಗಿರಿಯಲ್ಲಿ ತೆಗೆದ ಎರಡು ಸಾಲಗಳ ಮೇಲೆ ಕೊಡಬೇಕಾದ ಬಡ್ಡಿಯು ಹೆಚ್ಚಿದ್ದೇ ಈ ರೀತಿ ಖರ್ಚು ಹೆಚ್ಚಿದುದಕ್ಕೆ ಮತ್ತೊಂದು ಪ್ರಬಲವಾದ ಕಾರಣವಾಗಿದೆ. ಬಂಡವಾಳದ ಕಾಂಗಾರಿಗಳಿಗೆ ಹಣ ಒದಗಿಸುವುದಕ್ಕಾಗಿ ತೆಗೆಯುವ ಸಾಲದ ಮೇಲೆ ಕೊಡಬೇಕಾದ ಬಡ್ಡಿಯು ಯಾವುದೊಂದು ವರ್ಷದಲ್ಲಿಯೂ 13.20 ಲಕ್ಷ ರೂಪಾಯಿಗೆ ಮೀರಲಾರದೆಂತಲೂ, ಐದು ವರ್ಷಗಳ ಕಾಲದಲ್ಲಿ ಒಟ್ಟು 46 ಲಕ್ಷ ರೂಪಾಯಿಗಿಂತ ಜಾಸ್ತಿಯಾಗಲಾರದೆಂತಲೂ ಮಿ॥ ದತ್ತರವರು ಅಂದಾಜು ಮಾಡಿದ್ದರು. ಬಂಡವಾಳದ ಕಾಂಗಾರಿಗಳಿಂದ ತಕ್ಕಷ್ಟು ಲಾಭ ಹುಟ್ಟಲು ಉಪಕ್ರಮವಾಗುವುದಕ್ಕೆ ಮೊದಲು ಬಂಡವಾಳದ ಖರ್ಚಿನ ಮೇಲೆ ಬಡ್ಡಿ ಕೊಡುವ ಬಗ್ಗೆ ವರ್ಷಕ್ಕೆ 9 ಲಕ್ಷ ರೂಪಾಯಿಯ ರಿಜರ್ವನ್ನು ತಮ್ಮ ಏರ್ಪಾಡಿನಲ್ಲಿ ಒದಗಿಸಿದ್ದರು. ಆದರೆ ದುರಾದೃಷ್ಟವಶಾತ್ ಕಳೆದ ಮೂರು ವರ್ಷಗಳಲ್ಲಿ ಸ್ಥಿತಿಗತಿಗಳು ಬದಲಾವಣೆ ಹೊಂದಿ ಈ ಉದ್ದೇಶಕ್ಕೆ ಗ್ರಾಂಟು ಕೊಡುವುದಕ್ಕಾಗಲಿ, ಕ್ಷಾಮನಿವಾರಣೆಯ ಫಂಡು ಮುಂತಾದ ಬಾಬುಗಳಿಗೆ ಬೇಕಾದ ರಿಜರ್ವಿಗಾಗಲಿ ಹಣ ಒದಗಿಸುವುದು ಸಾಧ್ಯವಾಗದೆಹೋಯಿತು. ಹಿಂದಿನ ದಿವಾನಗಿರಿಯಲ್ಲಿ 1919-20 ರಲ್ಲಿ ಖರ್ಚಿಗೆ ಹಣ ಕಮ್ಮಿಬೀಳೋಣವು 11 ಲಕ್ಷವಿದ್ದು 1921-22 ರಲ್ಲಿ 31 ಲಕ್ಷ ರೂಪಾಯಿಯಾಯಿತು. ಇದನ್ನು ಸ್ವಲ್ಪಮಟ್ಟಿಗೆ ಇಲಾಖೆಯ ಶಿಲ್ಕಿನ ಮೊಬಲಗಿನಿಂದಲೂ, ಸ್ವಲ್ಪಮಟ್ಟಿಗೆ ಸಾಲ ತೆಗೆದ ಹಣದಿಂದಲೂ ಕೊಡಬೇಕಾಗಿ ಬಂತು. ಕಳೆದ ದಿವಾನಗಿರಿಯಲ್ಲಿ ಹೊಸದಾಗಿ ಸಾಲ ತೆಗೆದದ್ದು ಒಟ್ಟು 335 ಲಕ್ಷ ರೂಪಾಯಿ. ಇದರಲ್ಲಿ ಹಿಂದಿನ ಸಾಲಗಳನ್ನು ನವೀಕರಿಸಿದ್ದು ಸೇರಿರುವುದಿಲ್ಲ. 1922 ನೆಯ ಜುಲೈ 1 ನೆಯ ತಾರೀಖಿನಲ್ಲಿ ಸಂಸ್ಥಾನದ ಲೇಣೆ ದೇಣೆಗಳು ಈ ಕೆಳಗೆ ಕಂಡಂತೆ ಇರುತ್ತವೆ.—

ಲೇಣಿ	1,505 ಲಕ್ಷ ರೂಪಾಯಿ
ದೇಣಿ	933 ,, ,,

ಸ್ಪೆಷಲ್ ಫೈನಾನ್ಸ್ ಕಮಿಟಿಯವರ ನೇಮಕ.

ಸಂಸ್ಥಾನದ ಆಯವ್ಯಯದ ಸ್ಥಿತಿಯು ಮತ್ತಷ್ಟು ದುರವಸ್ಥೆಗೆ ಬರದಂತೆ ನೋಡಿಕೊಳ್ಳಬೇಕಾದರೆ ಕೂಡಲೆ ಕೆಲವು ನಿವಾರಣೋಪಾಯಗಳು ಆವಶ್ಯಕವಾಗಿರುವುವೆಂಬ ವಿಷಯವು ನಾವು ಹಿಂದೆ ಸೂಚಿಸಿರುವ ಅಂಶಗಳಿಂದ ವ್ಯಕ್ತವಾಗುತ್ತದೆ. ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ಅಪಾಯ ಸ್ಥಿತಿಯನ್ನು ಸಂಪೂರ್ಣವಾಗಿ ಗ್ರಹಿಸಿದವರಾಗಿ ಕಳೆದ ಜನವರಿ ತಿಂಗಳಿನಲ್ಲಿ ರಾಜಸಭಾಭೂಷಣ ದಿವಾನ್ ಬಹದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ.ಐ.ಇ. ಯವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಉದ್ಯೋಗಸ್ಥರಲ್ಲದ ನಾಲ್ವರು ದೊಡ್ಡಮನುಷ್ಯರೂ ಇಬ್ಬರು ಆಫೀಸರುಗಳೂ ಸೇರಿದ ಒಂದು ಬಲವಾದ ಕಮಿಟಿಯನ್ನು ನೇಮಿಸಿದರು. ಅವರು ನಿರ್ವಹಿಸಬೇಕೆಂದು ನೇಮಕ ಮಾಡಿದ ಕಾರ್ಯಕ್ರಮಗಳಾವುವೆಂದರೆ.—

ಯಾವ ಕಾರಣಗಳ ದೆಸೆಯಿಂದ ಖರ್ಚು ವರಮಾನಕ್ಕಿಂತಲೂ ಅಧಿಕವಾಗಿರುವುದೆಂಬ ಅಂಶವನ್ನು ನಿರ್ಧರಿಸುವ ಉದ್ದೇಶದಿಂದ ಸಂಸ್ಥಾನದಲ್ಲಿನ ಕಳೆದ ಐದು ವರ್ಷಗಳ ಆಯವ್ಯಯಗಳನ್ನು ಪರಿಶೀಲಿಸುವುದು ;

ಮುಖ್ಯವಾದ ಇಲಾಖೆಗಳ ದಕ್ಷತೆಗೆ ಲೋಪ ಬಾರದಂತೆ ಖರ್ಚನ್ನು ತಗ್ಗಿಸುವ ಮತ್ತು ಮಿತವ್ಯಯವನ್ನು ರೂಢಿಗೆ ತರುವ ಮೂಲಕವೂ,

ವಿಧಿಯಿಲ್ಲದೆ ಹೋದಲ್ಲಿ ತೆರಿಗೆಗಳನ್ನು ಹೆಚ್ಚಿಸಿಯೂ ಹೊಸತೆರಿಗೆಗಳನ್ನು ಹಾಕಿಯೂ ವರಮಾನದ ಬಾಬುಗಳನ್ನು ಮೇಲ್ಪಡಿಸುವ ಮೂಲಕವೂ

ಖರ್ಚಿಗೆ ಸಾಲದೇ ಬಿದ್ದಿರುವುದನ್ನು ಭರ್ತಿ ಮಾಡುವುದಕ್ಕೂ ಆದಾಯವೆಚ್ಚಗಳು ಸಮತೂಕಕ್ಕೆ ಬರುವಂತೆ ಮಾಡುವುದಕ್ಕೂ ತಕ್ಕ ಸಲಹೆಗಳನ್ನು ಕೊಡುವುದು ;

ಕ್ಷಾಮನಿವಾರಣೆಯ ಫಂಡು, ಸಾಲಗಳ ಸಿಂಕಿಂಗ್ ಫಂಡು, ಸಂಸ್ಥಾನದ ರೈಲ್ವೆಗಳ ದುರಸ್ತು ಮತ್ತು ನವೀಕರಣದ ಕೆಲಸಗಳು ಇವೇ ಮೊದಲಾದ ಆವಶ್ಯಕವಾದ ರಿಜರ್ವ್‌ಗಳಿಗೆ ಹಣವನ್ನೊದಗಿಸಿದಮೇಲೆಯೂ ಆಯವ್ಯಯಗಳು ಸಮತೂಕ ಹೊಂದುವಂತೆ ಮುಂದಿನ ಮೂರು ವರ್ಷಗಳ ಹುಟ್ಟುವಳಿ ಮತ್ತು ಖರ್ಚುಗಳ ಅಂದಾಜುಗಳನ್ನು ತಯಾರಿಸುವುದು ;

ನಿರೀಕ್ಷಿಸಬಹುದಾಗಿರುವ (ಸಾಲಗಳ ಸಮೇತ) ಸಂಸ್ಥಾನದ ಸಾಧನಸಂಪತ್ತುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಮುಂದಿನ ಮೂರು ವರ್ಷಗಳಲ್ಲಿ ಎಲ್ಲಾ ಬಾಬುಗಳಲ್ಲಿಯೂ ಆವಶ್ಯಕವಾಗುವ ಮೂಲಧನದ ಖರ್ಚುಗಳ ಅಂದಾಜನ್ನು ತಯಾರಿಸುವುದು ;

ಸರ್ಕಾರಿ ಸಾಲ, ಲಾಭಬರುವಂತೆ ಹಣ ವಿನಿಯೋಗಿಸುವುದು, ಮತ್ತು ರಿಜರ್ವ್ ಮತ್ತು ಡಿಪ್ರಿಸಿಯೇಷನ್ ಫಂಡುಗಳ ವಿನಿಯೋಗವೇ ಮೊದಲಾಗಿ ಯಾವ ರೀತಿಗಳಿಂದ ಖರ್ಚುಬಾಬುಗಳಿಗೆ ಹಣವನ್ನು ಒದಗಿಸಕೊಳ್ಳಬೇಕೆಂಬುದು, ಈ ವಿಷಯಗಳಲ್ಲಿ ಹಿಂದೆ ಅನುಸರಿಸುತ್ತಿದ್ದ ಕ್ರಮವನ್ನು ಪರೀಕ್ಷಿಸಿ ನೋಡಿ ಅವಶ್ಯಕವೆಂದು ತೋರಿದಲ್ಲಿ ಬದಲಾವಣೆಗಳನ್ನು ಸಲಹೆ ಮಾಡುವುದು.

ಮೇಲ್ಕಂಡ ಸ್ಪೆಷಲ್ ಫೈನಾನ್ಸ್ ಕಮಿಟಿಯವರ ಹಂಗಾಮಿ ರಿಪೋರ್ಟು ಈ ದಿನ ತಮ್ಮ ಹಸ್ತಗತವಾಗಿರುವುದು. ಸದರಿ ಕಮಿಟಿಯವರು ವಿಶೇಷ ಪರಿಶ್ರಮದಿಂದ ಸಂಸ್ಥಾನದ ವಿಶಿಷ್ಟ ರಾಜ್ಯಭಾರ ಕ್ರಮವನ್ನೂ ಕೂಲಂಕಷವಾಗಿ ಪರಿಶೋಧಿಸುತ್ತಿರುವರು. ಅವರು ಖರ್ಚನ್ನು ಕಡಮೆ ಮಾಡುವ ವಿಷಯವೊಂದಕ್ಕೇ ಅಲ್ಲದೆ, ಪ್ರತಿಯೊಂದು ಸರ್ಕಾರೀ ಏರ್ಪಾಡಿನ ಯುಕ್ತಾಯುಕ್ತತೆಯ ವಿಚಾರಕ್ಕೂ ಸಹ ಗಮನ ಕೊಡುತ್ತಿದ್ದಾರೆ. ಗ್ರೇಟ್‌ಬ್ರಿಟನ್ನಿನ ಸರ್ಕಾರೀ ಖರ್ಚುಗಳ ವಿಚಾರಕ್ಕಾಗಿ ಏರ್ಪಟ್ಟಗೆಡ್ಡೀಸ್ ಕಮಿಟಿಯವರಿಗೆ ಈ ಎರಡನೆಯ ಅಂಶದ ಪರಿಶೀಲನೆಯನ್ನು ಉದ್ದೇಶಪೂರ್ವಕವಾಗಿಯೇ ವಹಿಸದೆ ಬಿಟ್ಟಿದ್ದರು. ಇಂಡಿಯಾ ಸರ್ಕಾರದವರಿಂದ ಈಚೆಗೆ ನೇಮಿಸಲ್ಪಟ್ಟ ಇಂಚ್‌ಕೇಪ್ ಕಮಿಟಿಯವರಿಗೂ ಸಹ ಸರ್ಕಾರೀ ಏರ್ಪಾಡುಗಳ ಯುಕ್ತಾಯುಕ್ತತೆಗೆ ಸಂಬಂಧಪಟ್ಟ ವಿಚಾರಗಳನ್ನು ನಿರ್ಧರಿಸುವ ವಿಷಯವು ವಹಿಸಲ್ಪಡಲಿಲ್ಲ. ಏತಕ್ಕೆಂದರೆ, ಅಂಥ ವಿಷಯಗಳನ್ನು ಸರ್ಕಾರದವರು ಮಾತ್ರವೇ ನಿರ್ಧರಿಸತಕ್ಕದ್ದೆಂದು ಭಾವಿಸಲಾಗಿತ್ತು.

ಸ್ಪೆಷಲ್ ಫೈನಾನ್ಸ್ ಕಮಿಟಿಯವರ ತೀರ್ಮಾನಗಳು.

ನಮ್ಮ ಕಮಿಟಿಯವರು ಮೇಲ್ಕಂಡ ಐದು ವರ್ಷಗಳ ಆಯವ್ಯಯಗಳನ್ನು ಪರಿಶೀಲಿಸಿ, ಸಂಸ್ಥಾನದ ಆಯವ್ಯಯದ ಸ್ಥಿತಿಯು ಮುಗ್ಗಟ್ಟಿಗೆ ಬಂದಿರುವುದಕ್ಕೆ ಕಾರಣಗಳು ಯಾವುವೆಂಬುದನ್ನು ಕುರಿತು ಕೆಲವು ತೀರ್ಮಾನಗಳನ್ನು ಪ್ರಕಟಿಸಿರುತ್ತಾರೆ. ಆ ತೀರ್ಮಾನಗಳ ಸಾರಾಂಶವೇನೆಂದರೆ:—

(i) ಜಮೀನ್ ಕಂದಾಯ, ಸ್ಟಾಂಪು ವಗೈರೆ ಕಾಯಂ ಹುಟ್ಟುವಳಿಯ ಕೆಲವು ಬಾಬುಗಳನ್ನು ಹೆಚ್ಚಿಸುವ ವಿಷಯದಲ್ಲಿ ಸಾಕಾದಷ್ಟು ಗಮನವನ್ನು ಕೊಡದೆ ಇದ್ದದ್ದು ;

(ii) ಕಾಯಂ ಅಥವಾ ಆವೃತ್ತಿಯ ಖರ್ಚುಗಳಿಗೆ ವಿನಿಯೋಗಿಸುವ ವಿಚಾರದಲ್ಲಿ ಯಾವ ಹುಟ್ಟುವಳಿಯ ಬಾಬುಗಳು ಭರವಸೆ ಯಾದವುಗಳು, ಯಾವುವು ಅಲ್ಲ ಎಂಬ ತಾರತಮ್ಯವನ್ನು ಸರಿಯಾಗಿ ಗ್ರಹಿಸದೆ ಇದ್ದದ್ದು ;

(iii) ಚಿನ್ನದ ಗಣಿಗಳ ಹುಟ್ಟುವಳಿ ಎಲ್ಲವನ್ನೂ ಮಾಮೂಲ್ ಹುಟ್ಟುವಳಿಯಂತೆ ಉಪಯೋಗಿಸಿಕೊಂಡದ್ದು ;

(iv) ಸರಾಸರಿ ಸಾಮಾನ್ಯ ಹುಟ್ಟುವಳಿಯ ಅಂತಸ್ತಿಗೆ ಮೀರುವಂತೆ ಇಲಾಖೆಗಳ ಖರ್ಚನ್ನು ಹೆಚ್ಚಿಸಿದ್ದು ;

(v) ಏಕಕಾಲದಲ್ಲಿ ಭಾರಿಯಾಗಿ ಹೊಸಇಲಾಖೆಗಳನ್ನು ಸ್ಥಾಪಿಸಿದ್ದರ ಜತೆಗೆ ಹಳೇ ಇಲಾಖೆಗಳ ಕಾರ್ಯಗಳನ್ನು ವಿಶೇಷವಾಗಿ ಹೆಚ್ಚಿಸಿದ್ದು ;

(vi) ಪೂರೈಸುವುದಕ್ಕೆ ಸಾಕಾದಷ್ಟು ಹಣವೊದಗುವುದೇ ಇಲ್ಲವೇ ಎಂಬದನ್ನು ವಿಚಾರ ಮಾಡದೆ ಅನೇಕ ಭಾರೀ ಕಟ್ಟಡಗಳನ್ನೂ ಕಾಂಗಾರಿಗಳನ್ನೂ ಕೈಗೊಂಡದ್ದು ;

(vii) ಸಾಕಾದಷ್ಟು ದ್ರವ್ಯವನ್ನೊದಗಿಸುವುದರ ಸಾಧ್ಯತೆಯನ್ನು ವಿಚಾರಕ್ಕೆ ತೆಗೆದುಕೊಳ್ಳದೆ ಏಕಕಾಲದಲ್ಲಿ ಮೂಲಧನದ ಖರ್ಚನ್ನೊಳಗೊಂಡು ಅನೇಕ ಭಾರೀ ಕಾಂಗಾರಿಗಳನ್ನು ವಹಿಸಿದ್ದು ;

(viii) ಸ್ವಲ್ಪವೂ ಲಾಭವಿಲ್ಲದಂತೆ ಅಥವಾ ನಿರೀಕ್ಷಿಸಿದ ಲಾಭದ ಬಹು ಸ್ವಲ್ಪ ಭಾಗವನ್ನು ಮಾತ್ರ ಕೊಡುವಂತೆ ಕಂಡುಬಂದ ಪ್ರಾಜೆಕ್ಟುಗಳಿಗೆ ಸಾಲಾ ತೆಗೆದ ಹಣದಿಂದ ವಿಶೇಷವಾಗಿ ಖರ್ಚುಮಾಡಿದ್ದರಿಂದ ಬಡ್ಡಿಯ ವರಮಾನವು ನಷ್ಟವಾಗಿ ಲಾಭಕರವಲ್ಲದ ಸಾಲವು ಹುಟ್ಟಿಕೊಂಡು ಅದನ್ನು ಸಾಮಾನ್ಯ ಹುಟುವಳಿಯಿಂದ ತೀರಿಸಬೇಕಾಗಿ ಬಂದದ್ದು.

ಒಟ್ಟುಹುಟ್ಟುವಳಿಯಿಂದ ಅನಿವಾರ್ಯವಾದ ಖರ್ಚು ಬಾಬುಗಳಿಗೆಲ್ಲಾ ಹಣ ಒದಗಿಸಿದನಂತರ ನಿಲ್ಲುವ ಭಾಗದಿಂದ ನಾನಾ ಇಲಾಖೆಗಳಿಗೆ ತತ್ಕಾಲದಲ್ಲಿ ಬೇಕಾಗುವಷ್ಟು ಹಣವನ್ನು ಒದಗಿಸುವುದು ಸಾಧ್ಯವಲ್ಲವೆಂದು ತೋರಿಸುವ ಮತ್ತು ಬಜೆಟ್ಟುಗಳಲ್ಲಿ ಪ್ರತಿವರ್ಷವೂ ಹಣ ಕಡಮೆ ಬೀಳುತ್ತಲೇ ಹೋಗುವ ಸ್ಥಿತಿಯನ್ನು ತೋರಿಸುವ ಒಂದು ಪಟ್ಟಿಯನ್ನು ಸದರಿ ಕಮಿಟಿಯವರು ತಯಾರು ಮಾಡಿರುತ್ತಾರೆ ; ಅಲ್ಲದೆ ಬಜೆಟ್ಟನ್ನು ಸಮತೂಕಕ್ಕೆ ತರುವಂತೆ ಖರ್ಚು ಕಡಮೆಮಾಡುವುದರ ಮೂಲಕವೂ, ಆದಾಯ ಹೆಚ್ಚಿಸುವುದರ ಮೂಲಕವೂ 50 ಲಕ್ಷ ರೂಪಾಯಿಯ ಮಟ್ಟಿಗೆ ಹಣ ಒದಗಿಸಲು ತಕ್ಕ ಪ್ರಯತ್ನಗಳನ್ನು ನಡಿಸಬೇಕೆಂಬ ಸಾಮಾನ್ಯ ತೀರ್ಮಾನಕ್ಕೆ ಬಂದಿರುತ್ತಾರೆ.

ಪ್ರಕೃತ ಸ್ಥಿತಿಯ ಪರೀಕ್ಷೆ.

ಸಂಸ್ಥಾನದಲ್ಲಿ ಸಾಮಾನ್ಯವಾದ ಅಭಿವೃದ್ಧಿಸ್ಥಿತಿಯು ಕಂಡುಬಂದದ್ದರಿಂದಲೂ ಹುಟ್ಟುವಳಿಯು ಕ್ರಮವಾಗಿ ಹೆಚ್ಚುತ್ತಬಂದದ್ದರಿಂದಲೂ ಸರ್ಕಾರದ ಕಾರ್ಯಕಲಾಪಗಳನ್ನು ಹೆಚ್ಚಿಸಿ, ಜನರ ವಿದ್ಯಾಭಿವೃದ್ಧಿಗೂ ಭಾಗ್ಯಾಭಿವೃದ್ಧಿಗೂ ಸಂಬಂಧಪಟ್ಟ ಏರ್ಪಾಡುಗಳಿಗೆ ಖರ್ಚನ್ನು ಹೆಚ್ಚುಮಾಡಿ ಸಂಸ್ಥಾನದ ಐಶ್ವರ‍್ಯವನ್ನೂ, ಪ್ರಜೆಗಳ ಸಂಪದಭಿವೃದ್ಧಿಯನ್ನೂ ಹೆಚ್ಚಿಸಬೇಕೆಂಬ ಉದ್ದೇಶದಿಂದ ಭಾರಿಯಾದ ಮತ್ತು ವಿಶೇಷ ಬಂಡವಾಳ ತಗಲುವ ಏರ್ಪಾಟುಗಳನ್ನೂ ಜನೋಪಯೋಗವಾದ ಕಾಂಗಾರಿಗಳನ್ನೂ ಒಂದಾಗುತಲೊಂದರಂತೆ ಪ್ರಾರಂಭಿಸಬೇಕೆಂಬ ಆಕಾಂಕ್ಷೆಯು ಹುಟ್ಟುತ್ತಾ ಬಂದದ್ದೇ ಪ್ರಕೃತ ಸ್ಥಿತಿಗೆ ನಿಜವಾದ ಕಾರಣವಾಗಿದೆ. ಈ ಏರ್ಪಾಟು ಮತ್ತು ಉದ್ದೇಶಗಳಿಗೆ ಹಣವನ್ನೊದಗಿಸಬೇಕೆಂಬ ಉತ್ಸಾಹ ಮತ್ತು ಆತುರದಲ್ಲಿ ರಿಜರ್ವ್‌ಗಳಿಗೆ ಹಣವನ್ನೊದಗಿಸಲಾಗಲಿಲ್ಲ. ಮತ್ತು ಅನಿಶ್ಚಿತವಾದ ಬಾಬುಗಳ ಹುಟ್ಟುವಳಿಯನ್ನೂ, ಬಂಡವಾಳದ ಕಾಂಗಾರಿಗಳಿಂದಲೂ ಬಡ್ಡಿಗೆ ಹಾಕಿದ ಹಣದಿಂದಲೂ ಬಂದ ಹುಟ್ಟುವಳಿಗಳನ್ನೂ, ಪದೇಪದೇ ಬೀಳುವ ಖರ್ಚುಬಾಬಿನಲ್ಲಿ ಕೈಗೊಂಡ ಹೆಚ್ಚಾದ ಭಾರಿ ಜವಾಬ್ದಾರಿ ಕಾರ‍್ಯಗಳಿಗೆ ಹಣವನ್ನೊದಗಿಸಲು ವಿನಿಯೋಗಪಡಿಸಲಾಗಿದೆ. ಹೀಗೆ ಮಾಡದೆ ಇದ್ದರೆ ವಿಧಿ ಇರಲಿಲ್ಲವೆಂತ ಕಾಣುತ್ತದೆ. ಏತಕ್ಕೆಂದರೆ, ಸಂಸ್ಥಾನದಲ್ಲಿ ಭಾರಿಯಾದ ಮತ್ತು ಜವಾಬ್ದಾರಿಯ ಬಂಡವಾಳದ ಕಾಂಗಾರಿಗಳನ್ನು ನಡೆಯಿಸುವುದಾಗಿ ಒಪ್ಪಿಕೊಂಡು ಅವುಗಳನ್ನು ಬಿಟ್ಟುಬಿಡುವುದು ಸಾಧ್ಯವಿರಲಿಲ್ಲ. ಆದಾಗ್ಯೂ ಈಚಿನ ವರ್ಷಗಳಲ್ಲಿ ಅಧಿಕವಾದ ಅಂಕಿಗಳ ಮೂಲಕ ಸೂಚಿತವಾದ ಪ್ರಕಾರ ಹೆಚ್ಚಿದ ಖರ್ಚುಬಾಬಿನಿಂದ ಸಂಸ್ಥಾನದ ಆಡಳಿತದಲ್ಲಿ ಬಡಾವಣೆ ಎಷ್ಟರಮಟ್ಟಿಗೆ ಆಗಿದೆ ಎಂಬುವುದು ವಾಸ್ತವವಾಗಿಯೂ ಯಥಾವತ್ತಾಗಿಯೂ ವ್ಯಕ್ತವಾಗುವುದಿಲ್ಲ. ಏಕೆಂದರೆ ಜೀವನದ ಖರ್ಚು ಹೆಚ್ಚಿದುದರಿಂದ ವರ್ಷಕ್ಕೆ ಸುಮಾರು 20 ಲಕ್ಷ ರೂಪಾಯಿಯಷ್ಟು ಹೆಚ್ಚು ಖರ್ಚಿನ ಮಟ್ಟಿಗೆ ಕೆಳದರ್ಜೆಯ ನೌಕರರಿಗೆ ಸಹಾಯ ಮಾಡಬೇಕಾದ ಆವಶ್ಯಕತೆಯುಂಟಾಯಿತು; ಸೈನ್ಯವನ್ನು ಕಾಪಾಡುವ ಖರ್ಚೂ, ವಿವಿಧ ಸರ್ವಿಸ್ ಇಲಾಖೆಗಳಿಗೆ ಬೇಕಾದ ಸಾಮಾನುಗಳ ಮತ್ತು ಇತರ ಸಾಮಗ್ರಿಗಳ ಖರ್ಚು ವಿಪರೀತವಾಗಿ ಹೆಚ್ಚಿದೆ; ಮತ್ತು ಕಾಂಗಾರಿಗಳಿಗೆ ಬೇಕಾದ ಸಾಮಾನುಗಳ ಬೆಲೆಯೂ, ಕೂಲಿಯೂ ಸಹ ವಸ್ತುತಃ ಹೆಚ್ಚಿವೆ. ಈಚಿನ ವರ್ಷಗಳಲ್ಲಿ ಇಲಾಖೆಗಳ ಬಡಾವಣೆಯ ಖರ್ಚು ಎಷ್ಟು ಹೆಚ್ಚಾಯಿತೆಂದು ಕಂಡುಹಿಡಿಯಬೇಕಾದರೆ ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡಿರಬೇಕಾಗಿದೆ. ಆದರೆ, ಉತ್ಪತ್ತಿಯು ಖರ್ಚಿಗೆ ಸಾಲದೆಹೋಗುವ ಕಷ್ಟವು ವರ್ಷೇವರ್ಷೇ ಪ್ರಾಪ್ತವಾಗುತ್ತಲೇ ಇದೆ. ಆದ್ದರಿಂದ ಇಂಥಾ ಕಷ್ಟವು ತಪ್ಪಿ ಖರ್ಚಿಗೆ ಹಣ ಸಾಲದೆ ಬರೋಣವು ಕ್ರಮೇಣ ಕಡಿಮೆಯಾಗಿ ಖರ್ಚು ಜಾತಾ ಶಿಲ್ಕು ಉಳಿಸುತ್ತಿದ್ದ ಪೂರ್ವಸ್ಥಿತಿಗೆ ನಾವು ಬರುವುದಕ್ಕೆ ಅನುಕೂಲಿಸುವಂಥಾ ನಿರ್ದುಷ್ಟವಾದ ಆಯವ್ಯಯದ ಕ್ರಮವನ್ನು ಏರ್ಪಡಿಸಿ ಅದನ್ನು ಮೂರು ಅಥವಾ ಐದು ವರ್ಷಗಳವರೆಗೆ ಅನುಸರಿಸುವಂತೆ ಮಾಡುವುದು ಆವಶ್ಯಕವಾಗಿದೆ. ಇಂಥ ಆಯವ್ಯಯ ಕ್ರಮದ ಏರ್ಪಾಟನ್ನು ಸ್ವಲ್ಪಮಟ್ಟಿಗೆ ವಿವರವಾಗಿ ತಿಳಿಸಬೇಕಾದರೆ ಚಾಲ್ತಿ ವರ್ಷದ ತಿದ್ದುಪಾಟಾದ ಅಂಕೆಗಳಲ್ಲಿಯೂ ಮುಂದಿನ ವರ್ಷದ ಬಜೆಟ್ಟಿನಲ್ಲಿಯೂ ವ್ಯಕ್ತವಾದ ಸ್ಥಿತಿಯನ್ನು ತಮ್ಮಗಳಿಗೆ ಪ್ರಕೃತ ಸಂದರ್ಭದಲ್ಲಿ ವಿವರಿಸಿ ಹೇಳುವುದು ಅವಶ್ಯಕವಾಗಿದೆ.

1921-22 ನೆಯ ವರ್ಷದ ತಿದ್ದುಪಾಟಾದ ಅಂದಾಜುಗಳು.

ಕಳೆದ ವರ್ಷ ಸರ್ ಎಂ. ಕಾಂತರಾಜ ಅರಸರವರು ಚಾಲ್ತಿ ವರ್ಷದ ಬಜೆಟ್ಟನ್ನು ತಮ್ಮಗಳಿಗೆ ವಿವರಿಸಿಹೇಳಿ ಭಾಷಣ ಮಾಡುವಾಗ ಸುಮಾರು ಅರ್ಧ ಲಕ್ಷದಷ್ಟು ಸರ್‌ಪ್ಲಸ್ ಹುಟ್ಟುವಳಿ ಹಣದಿಂದ ಬಜೆಟ್ಟು ಸಮತೂಕಕ್ಕೆ ಬಂದಿರುವುದಾಗಿ ಹೇಳಿದರು. ಹಿಂದಣ ಸಾಲದ ಮೇಲೂ ಹೊಸದಾಗಿ ಉದ್ದೇಶಿಸಿದ ಸಾಲದ ಮೇಲೂ ಕೊಡಬೇಕಾದ ಬಡ್ಡಿಯ ದೆಸೆಯಿಂದ ಆದ ಖರ್ಚುಗಳಿಗೆ ಹಣವನ್ನೊದಗಿಸಿದ ತರುವಾಯ ಈ ಫಲಿತಾಂಶವುಂಟಾಯಿತೆಂದೂ ಹೇಳಿದರು. ಸಾಲಗಳ ಸಿಂಕಿಂಗ್ ಫಂಡಿಗಾಗಿ ಬೇಕಾದ ಹಣವನ್ನು ಅದಕ್ಕಾಗಿ ಕೂಡಿಸಿದ ಶಿಲ್ಕಿನಿಂದ ಒದಗಿಸಬೇಕಾಗಿತ್ತು. ಕ್ಷಾಮನಿವಾರಣೆಯ ಫಂಡಿಗೆ ಕಂಟ್ರಿಬ್ಯೂಷನ್ ಕೊಡಲೇಬೇಕಾಗಿದ್ದರೂ ಅದಕ್ಕಾಗಿ ಬಜೆಟ್ಟಿನಲ್ಲಿ ಹಣ ಒದಗಿಸಿರಲಿಲ್ಲ. ಬೆಂಗಳೂರು ದಂಡಿನ ಸರ್‌ಪ್ಲಸ್ ಹುಟ್ಟುವಳಿಯನ್ನು ನಮಗೆ ಒಪ್ಪಿಸುವುದರಿಂದಲೂ, ಗಂಧದೆಣ್ಣೆಯ ಕಾರ್ಖಾನೆಗಳಿಂದ ಬರಬಹುದೆಂದು ನಿರೀಕ್ಷಿಸಿದ್ದ ಹೆಚ್ಚಿಗೆ ವರಮಾನದಿಂದ ಚಾಲ್ತಿಯಾದ ಮತ್ತು ಬಾಕಿ ನಿಂತಿರುವ ಕಂಟ್ರಿಬ್ಯೂಷನ್‌ಗಳೆರಡನ್ನೂ ಸಂದಾಯ ಮಾಡುವುದು ಸಾಧ್ಯವೆಂದು ಈ ವಿಷಯದಲ್ಲಿ ಅವರಿಗೆ ನಂಬುಗೆ ಇತ್ತು. ಖರ್ಚುಬಾಬು ಹುಟುವಳಿಯೊಳಗೆ ಇರುವಂತೆ ಮಿತಪಡುವ ಉದ್ದೇಶದಿಂದ ಬಜೆಟ್ಟು ತಯಾರುಮಾಡಲ್ಪಟ್ಟು, $306\frac{1}{4}$ ಲಕ್ಷ ರೂಪಾಯಿಯಷ್ಟು ಒಟ್ಟು ಹುಟ್ಟುವಳಿಯೂ $305\frac{1}{2}$ ಲಕ್ಷ ರೂಪಾಯಿಯಷ್ಟು ಒಟ್ಟು ಖರ್ಚೂ ನಿರೀಕ್ಷಿಸಲ್ಪಟ್ಟಿತ್ತು. ನಿರೀಕ್ಷಣೆ ಮಾಡಿದಷ್ಟು ಹುಟ್ಟುವಳಿಯು ಒಟ್ಟಿನಲ್ಲಿ ಸಂಪೂರ್ಣವಾಗಿ ಬರಬಹುದಾಗಿದ್ದರೂ ಹುಟ್ಟುವಳಿಗೆ ಹಾಕತಕ್ಕ ಖರ್ಚು ಬಜೆಟ್ಟಿನಲ್ಲಿ ವ್ಯಕ್ತವಾದ ನಿರೀಕ್ಷಣೆಗಳಿಗೆ ಸುಮಾರು $17\frac{1}{2}$ ಲಕ್ಷ ರೂಪಾಯಿಯಷ್ಟು ಹೆಚ್ಚುವುದೆಂಬುದು ತಿದ್ದುಪಾಟಾದ ಅಂದಾಜಿನಲ್ಲಿ ವ್ಯಕ್ತವಾಗುತ್ತದೆ. ಹುಟ್ಟುವಳಿಯ ಮತ್ತು ಖರ್ಚಿನ ವಿವಿಧಬಾಬುಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಬಜೆಟ್ಟು ಅಂದಾಜುಗಳಿಗೆ ಅನುಬಂಧವಾಗಿರುವ ಮೆಮೊರಾಂಡಮಿನಲ್ಲಿ ವಿವರಿಸಿದೆ. ಸುಮಾರು $16\frac{1}{2}$ ಲಕ್ಷ ರೂಪಾಯಿಯಷ್ಟು ಹಣ ಸಾಲದೇಹೋದದಕ್ಕೆ ಆಕರವಾದ ಕಾರಣಗಳನ್ನು ಮಾತ್ರ ನಾವು ಇಲ್ಲಿ ಸೂಚಿಸುವೆವು.

ಬಂಡವಾಳದ ಕಾಂಗಾರಿಗಳ ಬಜೆಟ್ಟಿನ ಕಾರ್ಯಕ್ರಮದ ಮೇರೆಗೆ ಸುಮಾರು 108 ಲಕ್ಷ ರೂಪಾಯಿಯಷ್ಟು ಖರ್ಚಾಗುವುದೆಂದು ಅಂದಾಜಾಗಿತ್ತು ಮತ್ತು ಈ ಬಾಬನ್ನು ನಿರ್ವಹಿಸುವ ಬಗ್ಗೆ ಒಂದು ಕೋಟಿ ರೂಪಾಯಿಯ ಸಾಲವನ್ನೆತ್ತಲು ಉದ್ದೇಶಿಸಿತ್ತು. ಆದರೆ ಈ ಕಾಂಗಾರಿಗಳಿಗೆ ಬೇಕಾದ ಹಣವನ್ನು ಕೂಡಿದಷ್ಟು ಜಾಗ್ರತೆಯಲ್ಲಿ ವರಮಾನವನ್ನು ಸಂಪಾದಿಸುವಂತೆ ಮಾಡುವುದಕ್ಕಾಗಿ ಈ ಕಾಂಗಾರಿಗಳನ್ನು ಸಾಧ್ಯವಾದಷ್ಟು ತ್ವರೆಯಲ್ಲಿ ಪೂರೈಸುವುದರ ಯುಕ್ತತೆಯನ್ನು ಪರಿಭಾವಿಸಿ ಆ ಸಾಲವನ್ನು ಎರಡು ಕೋಟಿ ರೂಪಾಯಿಗಳಿಗೆ ಹೆಚ್ಚಿಸತಕ್ಕದೆಂದು ಆ ತರುವಾಯ ನಿಶ್ಚಯಿಸಿದ್ದಾಯಿತು. ಇದರಿಂದ ಬಡ್ಡಿಗಾಗಿ ಬಜೆಟ್ಟು ಅಂದಾಜಿನಲ್ಲಿ ಒದಗಿಸಿದ್ದುದಕಿಂತಲೂ ಹೆಚ್ಚಾಗಿ ಬಡ್ಡಿಯ ಖರ್ಚನ್ನು ತರಬೇಕಾಗಿಬಂದಿತು. ಮಹಾಮಹಿಮರಾದ ಪ್ರಿನ್ಸ್‌ಆಫ್ ವೇಲ್ಸ್‌ರವರ ಸವಾರಿಯ ಬಗ್ಗೆ ಬಜೆಟ್ಟಿನಲ್ಲಿ ಏನೂ ಹಣ ಒದಗಿಸಿರಲಿಲ್ಲ. ಖರ್ಚು ಹೆಚ್ಚಿದುದಕ್ಕೆ ಇವೆರಡೇ ಮುಖ್ಯವಾದ ಕಾರಣಗಳಾಗಿರುವುವು. ಇದಲ್ಲದೆ ಸಣ್ಣ ಹೆಚ್ಚಿಗೆಗಳು ಎಂದರೆ ಸೈನ್ಯ, ಸ್ಟೇಷನರಿ ಮತ್ತು ಛಾಪಾಖಾನ, ಪೆನ್‌ಷನ್ ಮತ್ತು ಭತ್ಯಗಳು, ವ್ಯವಸಾಯ ಮತ್ತು ಮೆಮೊರಾಂಡಮಿನಲ್ಲಿ ತಪಶೀಲಾಗಿ ವಿವರಿಸಿರುವ ಇತರ ಬಾಬುಗಳು ಒದಗಿದವು. ಈ ರೀತಿಯಲ್ಲಿ ತಿದ್ದುಪಡಿಯಾದ ಅಂದಾಜಿನಲ್ಲಿ ಹುಟ್ಟುವಳಿಗೆ ಲೆಕ್ಕಹಾಕುವ ಖರ್ಚು ಬಜೆಟ್ಟಿನಲ್ಲಿ ಹಂಚಿಗೆಹಾಕಿದ 305.61 ಲಕ್ಷ ರೂಪಾಯಿಗಳಿಗೆ ಬದಲಾಗಿ 3,23 ಲಕ್ಷ ರೂಪಾಯಿಗಳಾಗುತ್ತದೆ.

1922-23ನೆಯ ವರ್ಷದ ಬಜೆಟ್ ಅಂದಾಜುಗಳು.

ಮುಂದಿನ ವರ್ಷದ ಬಜೆಟ್ ಅಂದಾಜುಗಳ ಮೇರೆಗೆ ಒಟ್ಟು ಹುಟ್ಟುವಳಿಯು ಸುಮಾರು $310\frac{1}{2}$ ಲಕ್ಷ ರೂಪಾಯಿಯೂ ಒಟ್ಟು ಖರ್ಚು ಸುಮಾರು $331\frac{1}{4}$ ಲಕ್ಷ ರೂಪಾಯಿಯೂ ಆಗಿ ಸ್ವಲ್ಪ ಹೆಚ್ಚು ಕಡಮೆ 21 ಲಕ್ಷ ರೂಪಾಯಿ ಖರ್ಚಿಗೆ ಸಾಲದೆ ಬೀಳುವುದೆಂದು ನಿರೀಕ್ಷಿಸಿದೆ. ಹೀಗೆ ಸಾಲದೆ ಬರುವುದನ್ನು ಸರಿಪಡಿಸಿ ಆಡಳಿತವನ್ನು ಮೇಲ್ಪಡಿಸುವ ಬಗ್ಗೆ ಸಾಕಾದಷ್ಟು ಹಣವನ್ನು ಉಳಿಸಿಕೊಳ್ಳಲು ಅನುಸರಿಸಬೇಕಾದ ಕ್ರಮವನ್ನು ಪರ್ಯಾಲೋಚಿಸುವುದಕ್ಕೆ ಮೊದಲು ಆದಾಯವೆಚ್ಚದ ಅಂದಾಜುಗಳ ಮುಖ್ಯಾಂಶಗಳನ್ನು ವಿವರಿಸುವೆವು. ಮುಖ್ಯ ಹುಟ್ಟುವಳಿಯ ಬಾಬುಗಳ ಪೈಕಿ ಫಾರೆಸ್ಟು ಬಾಬಿನಲ್ಲಿ 6 ಲಕ್ಷ ರೂಪಾಯಿಯ ಅಧಿಕ್ಯವೂ, ಎಕ್ಸೈಜು ಬಾಬಿನಲ್ಲಿ $4\frac{1}{2}$ ಲಕ್ಷ ರೂಪಾಯಿಯ ಕೊರತೆಯೂ ಕಂಡುಬರುತ್ತದೆ. ಗಂಧದ ಎಣ್ಣೆಗೆ ಗಿರಾಕಿ ಕಮ್ಮಿಯಾಗಿರುವುದರಿಂದ ಚಾಲ್ತಿ ವರ್ಷದಲ್ಲಿ ಗಂಧದಮರದ ಹುಟ್ಟುವಳಿಯು ಎಂದಿಗಿಂತಲೂ ಕಮ್ಮಿಯಾಗಿತ್ತು. ಎಣ್ಣೆಗೆ ಗಿರಾಕಿಯು ಪುನಃ ಹೆಚ್ಚುವ ಚಿನ್ಹೆಗಳು ಕಳೆದ ಕೆಲವು ತಿಂಗಳಿನಿಂದಲೂ ಕಂಡುಬಂದಿವೆಯಾಗಿ, ಚಾಲ್ತಿ ವರ್ಷದ $7\frac{3}{4}$ ಲಕ್ಷಕ್ಕೆ ಪ್ರತಿಯಾಗಿ ಮುಂದಿನ ವರ್ಷದಲ್ಲಿ ಗಂಧದೆಣ್ಣೆಯ ಕಾರ್ಖಾನೆಗಳಿಂದ 10 ಲಕ್ಷ ರೂಪಾಯಿ ಹುಟ್ಟುವಳಿಯಾಗಬಹುದೆಂದು ನಿರೀಕ್ಷಿಸಿದೆ. ಫಾರೆಸ್ಟು ಇಲಾಖೆಯ ಹುಟ್ಟುವಳಿಯನ್ನು ಹೆಚ್ಚಿಸಲು ನಮ್ಮ ಜಂಗಲುಗಳ ಚೌಬೀನ ಮರವನ್ನು ಈಗ್ಗಿಂತಲೂ ಚುರುಕಾಗಿ ಉಪಯೋಗಿಸಬೇಕೆಂದು ಉದ್ದೇಶಿಸಿದೆ. ಸಾರಾಯಿಯ ಖರ್ಚು ಕಡಮೆಯಾದುದರಿಂದಲೂ ಈಚೆಗೆ ನಡೆದ ಹರಾಜುಗಳಲ್ಲಿ ದುಕಾನುಗಳಿಗೆ ಸರಿಯಾದ ಸವಾಲುಗಳು ಬಾರದಿದ್ದುದರಿಂದಲೂ ಎಕ್ಸೈಜು ಹುಟ್ಟುವಳಿಯು ತಗ್ಗುವ ಚಿನ್ಹೆಗಳು ಈಚೆಗೆ ಕಂಡುಬಂದಿರುವುವು. ಆದಕಾರಣ ಬಜೆಟ್ಟಿನಲ್ಲಿ ಈ ಬಾಬಿನ ಅಂದಾಜನ್ನು ಸ್ವಲ್ಪಮಟ್ಟಿಗೆ ಕಮ್ಮಿಯಾಗಿ ತೋರಿಸಿರುತ್ತದೆ. ಚಿನ್ನದ ಬೆಲೆ ಕಮ್ಮಿಯಾಗುತ್ತಿದೆ ; ಆದಕಾರಣ ಮುಂದಿನ ವರ್ಷಕ್ಕೆ ಚಿನ್ನದ ರಾಜಾಯದ ಬಾಬಿನ ಅಂದಾಜು ಹುಟ್ಟುವಳಿಯು ಚಾಲ್ತಿ ವರ್ಷದಲ್ಲಿ ಉತ್ಪನ್ನವಾಗುವಂತೆ ನಿರೀಕ್ಷಿಸಿರುವ ಮೊಬಲಗಿಗಿಂತಲೂ ಕಡಮೆಯಾಗಿದೆ. ರೈಲ್ವೆಯ ದರಗಳನ್ನು ಹೆಚ್ಚಿಸಿರುವ ಪ್ರಯುಕ್ತವೂ ಹೆಚ್ಚು ಇಂಜನುಗಳು, ಗಾಡಿಗಳು ವಗೈರೆಗಳನ್ನು ಒದಗಿಸುವುದರ ಮೂಲಕ ಟ್ರಾಫಿಕ್ ಹುಟ್ಟುವಳಿಯು ಸಾಮಾನ್ಯವಾಗಿ ಮೇಲ್ಪಡುವದೆಂದು ನಿರೀಕ್ಷಿಸಿರುವುದರಿಂದಲೂ ರೈಲ್ವೆಗಳ ನಿವ್ವಳ ಆದಾಯವು ತಿದ್ದುಪಾಡಾದ ಅಂದಾಜಿಗಿಂತಲೂ ಸುಮಾರು $1\frac{1}{2}$ ಲಕ್ಷ ರೂಪಾಯಿ ಅಧಿಕವಾಗುವಂತಿದೆ. ಕೃಷ್ಣರಾಜಸಾಗರ ಮತ್ತು ವಿದ್ಯುಚ್ಛಕ್ತಿಯ ಕಾಂಗಾರಿಗಳಿಂದ ಹುಟ್ಟುವಳಿಯು ಚಾಲ್ತಿ ವರ್ಷದ ಹುಟ್ಟುವಳಿಗಿಂತಲೂ $3\frac{1}{4}$ ಲಕ್ಷ ರೂಪಾಯಿ ಜಾಸ್ತಿಯಾಗಬಹುದೆಂದು ತೆಗೆದುಕೊಂಡಿದೆ ; ಏಕೆಂದರೆ, ಕಳೆದ ತಿಂಗಳು ಆರನೆಯ ಸ್ಥಾಪನೆಯ ಏರ್ಪಾಡು ಜಾರಿಗೆ ಬಂದುದರಿಂದ ಗಣಿಗಳವರೂ ಇತರರೂ ಹೆಚ್ಚು ಶಕ್ತಿಯನ್ನು ಉಪಯೋಗಿಸುವರೆಂದು ನಿರೀಕ್ಷಿಸಿದೆ.

ಖರ್ಚು ಬಾಬಿನಲ್ಲಾದರೋ ಸಾಧ್ಯವಾದಲ್ಲೆಲ್ಲಾ ಖರ್ಚನ್ನು ತಗ್ಗಿಸುವುದಕ್ಕೆ ಪ್ರಯತ್ನಗಳನ್ನು ಮಾಡಿದೆ. ಮುಂದಿನ ವರ್ಷದ ಬಜೆಟ್ ಅಂದಾಜುಗಳನ್ನು ಚಾಲ್ತಿ ವರ್ಷದ ತಿದ್ದುಪಾಡಾದ ಅಂದಾಜುಗಳೊಂದಿಗೆ ಹೋಲಿಸಿ ನೋಡಿದಲ್ಲಿ ಎಕ್ಸೈಜು, ಸಾಮಾನ್ಯ ಆಡಳಿತ, ಶಾಸ್ತ್ರೀಯ ಮತ್ತು ಚಿಲ್ಲರೆ ಇಲಾಖೆಗಳು, ಸ್ಟೇಷನರಿ ಮತ್ತು ಛಾಪಾಖಾನೆ, ಮಿಸಲೇನಿಯಸ್, ಲಾ ಕೋರ್ಟುಗಳು, ಪೋಲೀಸು, ಪಬ್ಲಿಕ್ ವರ್ಕ್ಸ್, ಎಕನಾಮಿಕ್ ಕಾನ್

ಫರೆಸ್ಟ್, ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆಗಳು ಮತ್ತು ವಾಣಿಜ್ಯ, ಜನೋಪಯುಕ್ತವಾದ ಅಭಿವೃದ್ಧಿಗಳಿಗಾಗಿ ಗ್ರ್ಯಾಂಟು, ಮತ್ತು ಸೈನ್ಯ, ಈ ಬಾಬುಗಳಲ್ಲೆಲ್ಲಾ ಖರ್ಚನ್ನು ತಗ್ಗಿಸುವುದು ವ್ಯಕ್ತಪಡುವುದು. ಚಾಲ್ತಿ ವರ್ಷದ ಖರ್ಚುಗಳನ್ನೂ ಮುಂದಿನ ವರ್ಷದ ಖರ್ಚುಗಳನ್ನೂ, ಅವುಗಳಿಂದ ಇಲಾಖೆಗಳ ಮತ್ತು ರಿಜರ್ವ್‌ಫಂಡುಗಳ ಜಮಾ ಕಲಮಿನ ಶಿಲ್ಕುಗಳಿಂದ ವಹಿಸಿದ ಖರ್ಚುಗಳನ್ನು ವಜಾಮಾಡದೆ ಹೋಲಿಸಿ ನೋಡಿದಲ್ಲಿ, ಸಿಬ್ಬಂದಿಯಲ್ಲಿಯೂ ಇತರ ವಿಧಗಳಲ್ಲಿಯೂ ಖರ್ಚು ಕಡಮೆಮಾಡಿ ಮಿತವ್ಯಯವನ್ನು ಜಾರಿಗೆ ತಂದಿರುವುದು ವ್ಯಕ್ತವಾಗುತ್ತದೆ. ಬಡ್ಡಿ ಮತ್ತು ಸಿಂಕಿಂಗ್ ಫಂಡಿನ ಬಗ್ಗೆ ತಗಲುವ 22 ಲಕ್ಷ ರೂಪಾಯಿಯೂ ಸೇರಿ ಚಾಲ್ತಿ ವರ್ಷದ ಒಟ್ಟು ಖರ್ಚು 337½ ಲಕ್ಷ ರೂಪಾಯಿ ಆಗುವುದು. ಆದರೆ ಅದೇ ಬಾಬಿಗೆ 43 ಲಕ್ಷ ರೂಪಾಯಿಯೂ ಸೇರಿ ಮುಂದಿನ ವರ್ಷದ ಒಟ್ಟು ಖರ್ಚು 332½ ಲಕ್ಷ ರೂಪಾಯಿಗೆ ಬರುವುದು. ಆದುದರಿಂದ ಖರ್ಚು ವಾಸ್ತವವಾಗಿ 16½ ಲಕ್ಷ ರೂಪಾಯಿಯಷ್ಟು ಕಡಮೆ ಮಾಡಲ್ಪಟ್ಟಿರುತ್ತದೆ.

ಪ್ರಸಕ್ತ ವರ್ಷದ ಬಜೆಟ್ ಅಂದಾಜುಗಳ viii ನೆಯ ಪುಟದಲ್ಲಿ ಅಸಾಧಾರಣವಾದ ಹುಟ್ಟುವಳಿಯ ಬಾಬಿನಲ್ಲಿ 16½ ಲಕ್ಷ ರೂಪಾಯಿ ನಮೂದಿಸಿರುವುದನ್ನು ಈ ಸಂಬಂಧದಲ್ಲಿ ವಿವರಿಸುವುದು ಆವಶ್ಯಕವಾಗಿರುತ್ತದೆ. ಬೆಂಗಳೂರು ದಂಡಿನ ಸರ್‌ಪ್ಲಸ್ ಹುಟ್ಟುವಳಿಯು ಸಂಸ್ಥಾನಕ್ಕೆ ಸಂದಾಯವಾಗತಕ್ಕದ್ದೆಂದು 1912 ರಲ್ಲಿ ವ್ಯವಸ್ಥೆಯಾಯಿತು. ಆ ತರುವಾಯ ಕ್ರಮವಾದ ತಪಶೀಲ್ವಾರು ಲೆಕ್ಕಗಳ ಮೇರೆಗೆ ಅದು ಪ್ರತಿವರ್ಷವೂ ಪಾವತಿಯಾಗುತ್ತಿದ್ದುದು, ಸ್ಟೇಟ್ ಸೆಕ್ರೆಟರಿಗಳವರ ಹುಕುಂ ಪ್ರಕಾರ 1918—19, 1919—20 ಮತ್ತು 1920—21 ಈ ಮೂರು ವರ್ಷಗಳಿಗೂ ಪಾವತಿಯಾಗದೆ ನಿಂತಿರುತ್ತದೆ. ಎಂದರೆ, ಆ ರೀತಿ ಹುಕುಂ ಆಗದೇ ಇದ್ದ ಪಕ್ಷದಲ್ಲಿ ಸಂಸ್ಥಾನಕ್ಕೆ ಇದುವರೆಗೆ ಸುಮಾರು 35 ಲಕ್ಷ ರೂಪಾಯಿ ಜಮೆಯಾಗುತ್ತಿತ್ತು. ಈ ವಿಷಯದಲ್ಲಿ ನಡೆಯುತ್ತಿರುವ ತಜವೀಜುಗಳ ಫಲಿತಾಂಶವಾಗಿ ಸಾಮಾನ್ಯ ವಿಷಯದ ಫೈಸಲಾತಿಗೆ ಬಾಧಕವಿಲ್ಲದೆ ಕೇವಲ ಕ್ಷಿಪ್ರದಲ್ಲಿಯೇ ಹಿಂದಿನ ಬಾಕಿಯ ಬಗ್ಗೆ 10 ಲಕ್ಷ ರೂಪಾಯಿ ನಮಗೆ ಬರುವುದೆಂದು ನಿರೀಕ್ಷಿಸುತ್ತೇವೆ. ಈ ವಿಷಯದಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಇಂಡಿಯಾ ಸರ್ಕಾರದವರೊಂದಿಗೆ ವ್ಯವಹರಿಸುತ್ತಿರುವರು. ಅವರು ನ್ಯಾಯಕ್ಕೂ ಧರ್ಮಕ್ಕೂ ಅನುಸಾರವಾಗಿ ಕ್ಷಿಪ್ರದಲ್ಲಿಯೇ ತೀರ್ಮಾನವನ್ನು ಕೊಡುವರೆಂತ ನಂಬಿದ್ದೇವೆ. ಈ ವಿಷಯದಲ್ಲಿ ಉಳಿದ 6½ ಲಕ್ಷ ರೂಪಾಯಿಯು ಈಗಿರುವ ಏರ್ಪಾಡಿನಂತೆ ಬಜೆಟ್ಟು ವರ್ಷದಲ್ಲಿ ಪಾವತಿಯಾಗಬೇಕಾಗಿರುವ 1921—22ನೆಯ ವರ್ಷದ ಸರ್‌ಪ್ಲಸ್ ಹುಟ್ಟುವಳಿಯ ಅಂದಾಜಾಗಿದೆ. ಬೆಂಗಳೂರು ದಂಡಿನ ಸರ್‌ಪ್ಲಸ್ ಹುಟ್ಟುವಳಿಗಾಗಿ, 1913-14 ರಲ್ಲಿ 30 ಲಕ್ಷವೂ, 1914-15 ರಲ್ಲಿ 9 ಲಕ್ಷವೂ 1916-17 ರಲ್ಲಿ 10 ಲಕ್ಷವೂ 1918-19ರಲ್ಲಿ 9 ಲಕ್ಷ ರೂಪಾಯಿಯೂ ವಸೂಲು ಬಂದಿರುತ್ತದೆ. ಆ ಈಚೆಗೆ ಏನೂ ವಸೂಲು ಬಂದಿಲ್ಲ. ಈ ಬಾಬಿನ ಹುಟ್ಟುವಳಿಯು ಒಂದೇಸಮನಾಗಿಲ್ಲ, ಮತ್ತು ಹೆಚ್ಚುಕಡಮೆಯಾಗುತ್ತಿದೆ; ಹಾಗಿದ್ದರೂ ಸಾಮಾನ್ಯ ಖರ್ಚುಗಳ ಬಗ್ಗೆ ಅದನ್ನು ಬಜೆಟ್ಟಿನಲ್ಲಿ ಗಣನೆಗೆ ತೆಗೆದುಕೊಂಡಿದೆ. ಈ ಬಾಬಿನ ಬಾಕಿಯು ಪ್ರತಿವರ್ಷವೂ ಬರುತ್ತಿರುವುದಲ್ಲವಾದ್ದರಿಂದ ಅದನ್ನು ವಿಶೇಷ ಖರ್ಚುಗಳ ಬಗ್ಗೆ ರಿಜರ್ವ್ ಮಾಡಬೇಕಾಗಿದೆ. ಆದರೆ ಪ್ರಕೃತದಲ್ಲಿ ಸಾಲದ ಸಿಂಕಿಂಗ್ ಫಂಡಿಗೂ ಬಡ್ಡಿಗೂ ನಾವು ವಿಶೇಷ ಹಣವನ್ನು ಒದಗಿಸಬೇಕಾಗಿರುವುದರಿಂದಲೂ, ಸಂಸ್ಥಾನದ ಮಾಮೂಲ್ ಹುಟ್ಟುವಳಿಯಿಂದಲೇ ಆ ಮೊಬಲಗನ್ನೆಲ್ಲಾ ಒದಗಿಸುವುದು ಅಸಾಧ್ಯವಾಗಿರುವುದರಿಂದಲೂ ಈ ಬಾಬಿನ ಹುಟ್ಟುವಳಿಯನ್ನು ಮುಂದಿನವರ್ಷ ಸಿಂಕಿಂಗ್ ಫಂಡಿಗಾಗಿ ವಿನಿಯೋಗಿಸಿ, ವಾಸ್ತವವಾಗಿ ಖರ್ಚಿಗೆ ಸಾಲದೆ ಬರುವುದನ್ನು ಸುಮಾರು 4½ ಲಕ್ಷಕ್ಕೆ ಇಳಿಸಬೇಕೆಂದಿರುವೆವು.

ಪ್ರಕೃತಸ್ಥಿತಿ.

ಆದರೂ ಮೇಜರ್ ಹೆಡ್ಡುಗಳ ಹುಟ್ಟುವಳಿಯನ್ನು ತಕ್ಕಷ್ಟು ಧಾರಾಳವಾಗಿ ಅಂದಾಜು ಮಾಡಿಕೊಂಡಿರುವುದರ ಜತೆಗೆ ಆಡಳಿತದ ನಾನಾ ಇಲಾಖೆಗಳ ಖರ್ಚನ್ನು ಕೇವಲ ಮಿತವಾಗಿ ತೆಗೆದುಕೊಂಡಿರುವೆವಾದ್ದರಿಂದ, ಬಜೆಟ್ಟಿನಲ್ಲಿ ತೋರಿಸುವ ಸುಮಾರು 21 ಲಕ್ಷ ರೂಪಾಯಿಯ ಡಿಫಿಸಿಟ್ಟು ನಿಜವಾದ ಸ್ಥಿತಿಯನ್ನೇ ತಿಳಿಯಪಡಿಸುತ್ತೆಂದು ಒತ್ತಿ ಹೇಳಬೇಕಾಗಿದೆ. ಉದಾಹರಣೆಗಾಗಿ, ಪಬ್ಲಿಕ್‌ವರ್ಕ್ಸ್ ಇಲಾಖೆಯ ಸಾಮಾನ್ಯ ಸರಾಸರಿ ಖರ್ಚು, ಕಳೆದ ಕೆಲವು ವರ್ಷಗಳಿಂದ ಹುಟ್ಟುವಳಿಗೆ ಖರ್ಚು ಬೀಳತಕ್ಕ ಸೀರಾವರಿ ಖರ್ಚು ಸೇರಿ 30 ಲಕ್ಷಕ್ಕೆ ಮೇಲ್ಪಟ್ಟಿರುತ್ತದೆ; ಅಲ್ಲದೆ 1919ನೆಯ ಸೆಪ್ಟಂಬರಿನಲ್ಲಿ ಪ್ರಕಟಿಸಲ್ಪಟ್ಟ ಅಂದಾಜಿನಲ್ಲಿ ಈ ಖರ್ಚು 32ಲಕ್ಷ ರೂಪಾಯಿಗೆ ಏರಬಹುದೆಂದು ನಿಷ್ಕರ್ಷೆ ಮಾಡಲಾಯಿತು. ಆದಕಾರಣ ಈ ಎರಡು ಬಾಬುಗಳಿಗೂ ಸೇರಿ ಒಟ್ಟು 24½ ಲಕ್ಷವನ್ನು ಬಜೆಟ್ಟಿನಲ್ಲಿ ಒದಗಿಸಿರುವುದು ಸಂಸ್ಥಾನದ ಆವಶ್ಯಕತೆಗಳಿಗೆ ಸುತರಾಂ ಸಾಲದೆಂದು ಭಾವಿಸಬಹುದಾಗಿದೆ. ಸಿವಿಲ್ ಆಡಳಿತದ ಬಾಬಿನಲ್ಲಿ 1920-21ನೆಯ ವರ್ಷದ ಲೆಕ್ಕಗಳೊಂದಿಗೂ ಚಾಲ್ತಿ ವರ್ಷದ ತಿದ್ದುಪಾಟಿದ ಅಂದಾಜಿನೊಂದಿಗೆ ಹೋಲಿಸಿ, ನೋಡಿದಲ್ಲಿ ಸುಮಾರು 6½ ಲಕ್ಷದಷ್ಟು ಕಡಮೆಯಾಗುತ್ತದೆ. ವಿದ್ಯಾಭಿವೃದ್ಧಿ ಮತ್ತು ಭಾಗ್ಯಾಭಿವೃದ್ಧಿಯ ಬಾಬಿನಲ್ಲಾದರೋ, 1920-21ನೆಯ ವರ್ಷದ ಲೆಕ್ಕಗಳೊಂದಿಗೆ ಹೋಲಿಸಿದಲ್ಲಿ 11½ ಲಕ್ಷವೂ ಚಾಲ್ತಿ ವರ್ಷದ ತಿದ್ದುಪಾಟಿದ ಅಂದಾಜಿನೊಂದಿಗೆ ಹೋಲಿಸಿದಲ್ಲಿ 3½ ಲಕ್ಷವೂ ಕಡಮೆಯಾಗುತ್ತದೆ. ಜನೋಪಯುಕ್ತವಾದ ಅಭಿವೃದ್ಧಿಯ ಕಾರ್ಯಗಳಿಗಾಗಿ ಕೊಟ್ಟ ಗ್ರ್ಯಾಂಟುಗಳೂ ಸಹ ವಿಶೇಷವಾಗಿ ಕಡಮೆಮಾಡಲ್ಪಟ್ಟಿವೆ. ಮುಂದಿನ ವರ್ಷದ ಬಜೆಟ್‌ಅಂದಾಜುಗಳಲ್ಲಿ ಒದಗಿಸಿರುವ ಖರ್ಚುಬಾಬಿನ ಪ್ರಮಾಣವು ರಾಜ್ಯಾಡಳಿತವನ್ನು ಅದರ ಈಗಿನ ಅಂತಸ್ತಿಗೆ ಸರಿಯಾಗಲು ಆವಶ್ಯಕವಾದ ದಕ್ಷತೆಯ ಪ್ರಮಾಣಕ್ಕೆ ಅನೇಕ ಭಾಗಗಳಲ್ಲಿ ಹಿಂದುಳಿದಿದೆ. ಸ್ಪೆಷಲ್ ಫೈನಾನ್ಸ್ ಕಮಿಟಿಯವರು ಸಂಸ್ಥಾನದ ನಾನಾ ಇಲಾಖೆಗಳಲ್ಲಿ ಖರ್ಚನ್ನು ಒಟ್ಟು ಸುಮಾರು 30 ಲಕ್ಷ ರೂಪಾಯಿಯವರೆಗೂ ತಗ್ಗಿಸತಕ್ಕದೆಂದು ಸಿಫಾರಸುಮಾಡಿರುವ ಅಂಶವು ಅವರ ಹಂಗಾಮಿ ರಿಪೋರ್ಟಿನಿಂದ ತಮಗೆ ವೇದ್ಯವಾಗಿರಬಹುದು. ಅಸಾಧಾರಣ ಬಾಬುಗಳಲ್ಲಿ ಯಾವ ಖರ್ಚು ಬೀಳದಿದ್ದ 1920-21ನೆಯ ವರ್ಷದಲ್ಲಿ ಖರ್ಚಾದ 344 ಲಕ್ಷ ರೂಪಾಯಿಯನ್ನು ಸಂಸ್ಥಾನದ ಒಟ್ಟು ಖರ್ಚೆನಂತೆ ಗಣನೆಮಾಡಿ, ಅದನ್ನು ಮುಂದಿನ ವರ್ಷದ ಬಜೆಟ್ಟಿನ ಖರ್ಚುಬಾಬಿನಲ್ಲಿ ಒದಗಿಸಿದ 332 ಲಕ್ಷದೊಡನೆ ಹೋಲಿಸಿದಲ್ಲಿ 1920-21ರಲ್ಲಿ 10 ಲಕ್ಷದಷ್ಟನ್ನೂ 1922-23 ರಲ್ಲಿ 43 ಲಕ್ಷದಷ್ಟನ್ನೂ ಸಿಂಕಿಂಗ್ ಫಂಡ್ ಮತ್ತು ಬಡ್ಡಿಯ ಬಗ್ಗೆ ಒದಗಿಸಿ ಸುಮಾರು 45 ಲಕ್ಷದವರೆಗೆ ಆಗಲೇ ಖರ್ಚು ಕಡಮೆ ಮಾಡಿದೆ ಎನ್ನುವುದು ಕಂಡು ಬರುವುದು. ಈ ಪೈಕಿ 28½ ಲಕ್ಷ ರೂಪಾಯಿ 1921-22ನೆಯ ವರ್ಷದಲ್ಲಿ ಕಡಮೆ ಮಾಡಿದ ಮೊಬಲಗಾಗಿರುತ್ತದೆ. ಎಷ್ಟರಮಟ್ಟಿಗೆ ಇನ್ನೂ ಖರ್ಚುಕಡಮೆ ಮಾಡುವುದು ಸಾಧ್ಯವೆಂದು ಹೇಳುವುದು ಕಷ್ಟವಾದ ವಿಷಯವಾಗಿದೆ. ಆದರೆ ಸರ್ಕಾರದವರು ಕಮಿಟಿಯವರ ನಾನಾ ಸಲಹೆಗಳನ್ನು ಈಗ ಪರ್ಯಾಲೋಚಿಸುತ್ತಿರುವರು. ಈ ವಿಷಯದಲ್ಲಿ ಸರ್ಕಾರದವರು ಯಾವರೀತಿ ತೀರ್ಮಾನ ಮಾಡುವರೆಂಬುದನ್ನು ಹೇಳಲಾಗುವುದಿಲ್ಲವಾದರೂ ಸುಮಾರು ಇನ್ನೂ 7 ಲಕ್ಷದ ಮಟ್ಟಿಗೆ ಖರ್ಚುಕಡಮೆಮಾಡಿದ ಪಕ್ಷಕ್ಕೆ ಈ ಭಾಗದಲ್ಲಿ ಸಾಧ್ಯವಾದ ಮಟ್ಟಿಗೆಲ್ಲಾ ಖರ್ಚು ಕಡಮೆಮಾಡಿದಂತಾಗುವುದೆಂದು ದೃಢವಾಗಿ ಹೇಳಬಹುದಾಗಿದೆ. ಆದರೆ ದಕ್ಷತೆಗೆ ಕುಂದುಕವನ್ನುಂಟುಮಾಡಿದ ಹೊರತು ಇನ್ನೂ ಹೆಚ್ಚಾಗಿ ಖರ್ಚು ಕಡಮೆ ಮಾಡುವುದು ಸಾಧ್ಯವಿಲ್ಲ.

ಆದರೆ ಈಗಿನ ನಮ್ಮ ಆಯವ್ಯಯದ ಸ್ಥಿತಿಯನು ನೋಡಿದರೆ ಹಾಗೆ ದಕ್ಷತೆಯನ್ನು ಕಡಮೆ ಮಾಡಿಯಾದರೂ ಖರ್ಚು ತಗ್ಗಿಸಲೇ ಬೇಕಾಗುವುದು. ಖರ್ಚು ಕಡಮೆಮಾಡುವ ಮಾತ್ರದಿಂದಲೇ ನಮ್ಮ ಆಯವ್ಯಯದ ಸ್ಥಿತಿಯನ್ನು ಬಹುಮಟ್ಟಿಗೆ ಉತ್ತಮಪಡಿಸಬಹುದೆಂದು ನಾವು ನಿರೀಕ್ಷಿಸದೇ ಇರುವುದು ಅವಶ್ಯಕವಾಗಿದೆ. ಮಾಮೂಲು ದ್ರವ್ಯೋತ್ಪತ್ತಿಗಳನ್ನೂ ಸಹ ನಾವು ಉತ್ತಮ ಪಡಿಸಬೇಕಾಗಿದೆ. ಇದೂ ಅಲ್ಲದೆ ದುರ್ಭಿಕ್ಷ ಕಾಲಗಳಿಗೂ ಹೆಚ್ಚುಗಟ್ಟಲೆ ಖರ್ಚುಗಳಿಗೂ ಹಣ ಒದಗಿಸುವಂತೆ ನಮ್ಮ ಹುಟ್ಟುವಳಿಯನ್ನು ಹಿತವಾದ ರೀತಿಯಲ್ಲಿ ಹಂಚುವ ಕ್ರಮವನ್ನು ಆಚರಣೆಗೆ ತರಬೇಕಾಗಿದೆ. ಇನ್ನು ಕೊನೆಯಾಗಿ ಮತ್ತು ಮುಖ್ಯವಾಗಿ, ಇದುವರೆಗೂ ಒಟ್ಟಾಗಿ ಕೇಳಿಸುತ್ತಿದ್ದ ಆಯಾ ವರ್ಷದ ಸಂದರ್ಭಗಳಿಗೂ ಆವಶ್ಯಕತೆಗಳಿಗೂ ಅನುಗುಣವಾಗಿ ಹಿಂದೆ ಧಾರಾಳವಾಗಿ ಹಣವನ್ನು ಉಪಯೋಗಿಸಿಕೊಳ್ಳುತ್ತಿದ್ದ ನಮ್ಮ ದ್ರವ್ಯೋತ್ಪತ್ತಿಗಳನ್ನು ಪ್ರತ್ಯೇಕಿಸಿ ಬೇರೆ ಬೇರೆ ತರಗತಿಗಳಾಗಿ ವಿಂಗಡಿಸಬೇಕಾಗಿದೆ.

ಆವಶ್ಯಕವಾದ ಅಭಿವೃದ್ಧಿ.

ಆದ್ದರಿಂದ ಬಜೆಟ್ ಅಂದಾಜುಗಳಲ್ಲಿ ತೋರಿಸಿರುವಂತೆ 21 ಲಕ್ಷ ರೂಪಾಯಿನಷ್ಟು ಕಮ್ಮಿ ಬೀಳೋಣವು, ದೃಢವಾಗಿ ಅಂಗೀಕರಿಸಲ್ಪಟ್ಟ ಕೆಲವು ರಿಜರ್ವ್‌ಗಳನ್ನು ಗಣನೆಗೆ ತೆಗೆದುಕೊಳ್ಳದೆ, ನಮ್ಮ ಆಯವ್ಯಯದ ಸ್ಥಿತಿಯನ್ನು ಕರಾರುವಾಕ್ಕಾಗಿ ತಿಳಿಸುವುದಾದರೆ ಮತ್ತು ಮುಂದಿನ ವರ್ಷಗಳಲ್ಲಿ ಅವುಗಳಿಗೆ ಕ್ರಮವಾಗಿ ಹಣವೊದಗಿಸಬೇಕಾದರೆ ಈ ಪಕ್ಷದಲ್ಲಿ ವ್ಯೆನಿಂಗ್ ಕ್ಯಾಪಿಟಲ್ ರೂ. ತೋರಿಸಿರುವಂತೆ ಸದರಿ 21

ಜೇಸರ್ ಫಂಡು	11 ಲಕ್ಷ	ಲಕ್ಷಕ್ಕೆ ಇನ್ನೂ 35 ಲಕ್ಷವನ್ನು
ಕ್ಷಾಮನಿವಾರಣೆ	5 ,,	ಸೇರಿಸಬೇಕಾಗುತ್ತದೆ; ಎಂದರೆ
ಸೀರಾವರಿ ಬಂಡವಾಳದ		ಸಂಸ್ಥಾನದ ಆಯವ್ಯಯದಲ್ಲಿ
ರಿಜರ್ವ್	13½ ,,	ವರ್ಷಕ್ಕೆ 56 ಲಕ್ಷದಷ್ಟು ಹೆಚ್ಚು
ಕೈಗಾರಿಕೆ ಅಭಿವೃದ್ಧಿ		ಹಣ ಒದಗಿಸಬೇಕಾಗುತ್ತದೆ. ಈ
ಫಂಡು	1½ ,,	ಉದ್ದೇಶವನ್ನು ನೆರವೇರಿಸ ಬೇಕಾ
ಅನ್ವತ್ತಿಯಿಲ್ಲದ ಖರ್ಚಿನ		ದರೆ ಯಾವರೀತಿಯಲ್ಲಿ ಪ್ರಯತ್ನ
ಬಗ್ಗೆ ಸ್ಪೆಷಲ್ ರಿಜರ್ವ್	3½ ,,	ಪಡಬಹುದೆಂಬುದನ್ನು ನಾವು
ಹೆಚ್ಚು ಖರ್ಚಿಗೆ ಅವಕಾಶ	½ ,,	ಸ್ವಲ್ಪ ತಪಶೀಲಾಗಿ ವಿವರಿಸುತ್ತೇವೆ.

ದ್ರವ್ಯೋತ್ಪತ್ತಿ ಮತ್ತು ಖರ್ಚುಗಳ ವಿಭಾಗ.

ನಮ್ಮ ಆದಾಯವೆಚ್ಚದ ನಿಜವಾದ ಸ್ಥಿತಿಯನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ನಾನಾತರದ ದ್ರವ್ಯೋತ್ಪತ್ತಿಗಳನ್ನು ತರಗತಿ ವಿಂಗಡಿಸಿ ಅವುಗಳ ಪೈಕಿ ಪ್ರತಿಯೊಂದರಿಂದಲೂ ನ್ಯಾಯವಾದ ಎಲ್ಲಾ ಖರ್ಚುಗಳಿಗೂ ಹಣ ಒದಗಿಸುವುದು ಆವಶ್ಯಕವಾಗಿದೆ. ನಮ್ಮ ಆದಾಯವೆಚ್ಚವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಮೊದಲನೆಯ ಭಾಗದಲ್ಲಿ ಸಾಧಾರಣ ಹುಟ್ಟುವಳಿಯ ಬಾಬುಗಳನ್ನೂ ಮಾಮೂಲು ಖರ್ಚಿನ ಎಲ್ಲಾ ಬಾಬುಗಳನ್ನೂ ಸೇರಿಸಬಹುದು. ಮಾಮೂಲು ಹಣಕಾಸಿನ ಆಡಳಿತವನ್ನು ಸ್ಥಿರಪಡಿಸುವುದಕ್ಕೆ ಬೇಕಾದಂಥಾ ರಿಜರ್ವ್ ಫಂಡುಗಳಿಗೆ ವರ್ಷಗಟ್ಟಲೆ ಕೊಡುವ ಹಣಗಳು ನ್ಯಾಯವಾಗಿ ಈ ಭಾಗದ ದ್ರವ್ಯೋತ್ಪತ್ತಿಗಳಿಂದ ಕೊಡತಕ್ಕವುಗಳಾಗಿವೆ. ಆಗಿಂದಾಗ್ಗೆ ಮಾತ್ರ ಬರುವ ಅಥವಾ ಸಂಸ್ಥಾನದ ಲೇಣೆಗಳ ಬೆಲೆಯನ್ನು ತೋರಿಸುವ ಹುಟ್ಟುವಳಿಯ ಬಾಬುಗಳನ್ನು ಬೇರೊಂದು ಭಾಗವನ್ನಾಗಿ ಮಾಡಬೇಕಲ್ಲದೆ ಸಂಸ್ಥಾನದ ಮಾಮೂಲು ಹುಟ್ಟುವಳಿಯೊಡನೆ ಒಟ್ಟುಗೂಡಿಸಕೂಡದು. ಅನಿರೀಕ್ಷಿತವಾಗಿ ಬಂದ ಆದಾಯವನ್ನು ರಾಜ್ಯಭಾರದ ಖರ್ಚಿನ ಪೈಕಿ ಆವೃತ್ತಿಯಾಗದ ಖರ್ಚಿನ ಬಾಬಿಗಾಗಲೀ ಬಂಡವಾಳದ ಖರ್ಚಿಗಾಗಲೀ ಉಪಯೋಗಿಸಿಕೊಳ್ಳುವುದೇ ನ್ಯಾಯವಾಗಿರುತ್ತದೆ. ಕೋಲಾರದ ಚಿನ್ನದಗಣಿಗಳಿಂದ ತೆಗೆಯುವ ಭಂಗಾರದ ಮೇಲೆ ಬರುವ ರಾಜಾಯದಂಥಾ ಪರಭಾರೆಮಾಡಿದ ಆಸ್ತಿಯ ಬೆಲೆಯ ರೂಪವಾಗಿ ಬರುವ ವರಮಾನವನ್ನು ಆದಾಯಬರುವ ಬೇರೊಂದು ಆಸ್ತಿಯನ್ನು ಏರ್ಪಡಿಸುವುದಕ್ಕೆ ಮಾತ್ರ ಉಪಯೋಗಿಸಬಹುದು. ಹೀಗೆ ಮಾಡುವುದು ಯುಕ್ತವೆಂಬ ಅಂಶವನ್ನು ಅನೇಕ ವರ್ಷಗಳ ಹಿಂದೆ ಮಿ|| ಬಾಸುಯವರು ಹೇಳಿದ್ದರು. ಇದೇ ವಿಷಯವು 1916-17ರಲ್ಲಿ ಮಿ|| ದತ್ತರವರು ಫೈನಾನ್ಷಿಯಲ್ ಸೆಟಲ್ಮೆಂಟಿನ ಮೇರೆಗೆ ಗಣಿ ಹುಟ್ಟುವಳಿಯ ಮೂಲಧನವನ್ನೇರ್ಪಡಿಸುವುದಕ್ಕೆ ರಿಜರ್ವ್ ಫಂಡನ್ನು ಪ್ರಾರಂಭಿಸಿದಾಗ ಪುಷ್ಟೀಕರಿಸಲ್ಪಟ್ಟಿರುವುದರಿಂದ ಇದೇನೂ ಹೊಸ ನಿಯಮವಲ್ಲ. ಇವು ಎರಡನೆಯ ಭಾಗದಲ್ಲಿ ಸೇರತಕ್ಕವುಗಳು. ಲಾಭಕರವಾದ ಕಾಂಗಾರಿಗಳ ಹುಟ್ಟುವಳಿ ಬಾಬುಗಳನ್ನು ಬೇರೊಂದು ತರಗತಿಯಾಗಿ ವಿಂಗಡಿಸತಕ್ಕದ್ದಲ್ಲದೆ ಸಾಧಾರಣ ಆಡಳಿತದ ಬಾಬುಗಳೊಡನೆ ಸೇರಿಸತಕ್ಕದ್ದಲ್ಲ. ಏತಕ್ಕೆಂದರೆ ಈ ಕಾಂಗಾರಿಗಳ ಬಗ್ಗೆ ತೆಗೆದುಕೊಂಡಿರುವ ಸಾಲಗಳ ಬಡ್ಡಿಗೂ ಮತ್ತು ಸಿಂಕಿಂಗ್ ಫಂಡಿಗೂ ಮಾತ್ರವೇ ಅಲ್ಲದೆ ನವೀಕರಣ, ಬಡಾವಣೆ ಮತ್ತು ಅಭಿವೃದ್ಧಿಗಳ ಸಲುವಾಗಿ ಮುಂದೆ ಬರುವ ಖರ್ಚುಗಳನ್ನು ಸಹ ತಮ್ಮ ಹುಟ್ಟುವಳಿಯಿಂದ ಒದಗಿಸುವಂಥ ರೀತಿಯಲ್ಲಿ ಈ ಕಾಂಗಾರಿಗಳ ಕಾರ್ಯಕ್ರಮವನ್ನು ಅನುಸರಿಸಬೇಕೆಂಬುದೇ ಸರ್ಕಾರದವರ ಉದ್ದೇಶವಾಗಿರುತ್ತದೆ. ಇವುಗಳನ್ನೂ, ಬಡ್ಡಿಗೆ ಹಾಕಿದ ಹಣದ ಮೇಲಿನ ಬಡ್ಡಿಯನ್ನೂ, 3ನೆಯ ಭಾಗದಲ್ಲಿ ಸೇರಿಸಬೇಕು. ಹಿಂದೆ ಎಲ್ಲಾ ಹುಟ್ಟುವಳಿಯ ಬಾಬುಗಳನ್ನೂ ಒಟ್ಟಿಗೆ ಸೇರಿಸಿ ಅಸ್ಥಿರವಾದ ವರಮಾನವನ್ನೂ ಸಂಸ್ಥಾನದಲ್ಲಿ ನಡಿಸಿದ ಲಾಭಕರವಾದ ಕಾಂಗಾರಿಗಳಿಂದ ಬಂದ ವಿಶೇಷವಾದ ಆದಾಯವನ್ನೂ ಇಲಾಖಾ ಖರ್ಚು ಬಾಬುಗಳಿಗೆ ಉಪಯೋಗಿಸುತ್ತಾ ಬಂದುದರಿಂದ ನಮ್ಮ ಆದಾಯವೆಚ್ಚದ ಸ್ಥಿತಿಯು ಸ್ಥಾಯಿಯಾಗಿರುವುದಿಲ್ಲ. ಅಂಥಾ ಖರ್ಚು, ಸಾಮಾನ್ಯ ಹುಟ್ಟುವಳಿಯು ಹೆಚ್ಚುತ್ತಾ ಬರುವ ದರಕ್ಕಿಂತಲೂ ಹೆಚ್ಚಾದ ದರದಲ್ಲಿ ಏರುತ್ತಾ ಹೋಗಿರುತ್ತದೆ. ಈ ಏರ್ಪಾಡನ್ನು ಅನುಸರಿಸಿದವುಗಳಲ್ಲಿ ಮೈಸೂರು ಸರ್ಕಾರವು ಒಂದೇ ಅಲ್ಲ. ಇಂಡಿಯಾ ಸರ್ಕಾರದವರೂ ಸಹ ರೈಲ್ವೆ ಆಡಳಿತಕ್ಕೆ ಸಂಬಂಧಪಟ್ಟ ಬಾಬುಗಳನ್ನೆಲ್ಲ ಪ್ರಧಾನ ಸರ್ಕಾರದ ಇತರ ಆದಾಯ ವೆಚ್ಚಗಳೊಡನೆ ಸೇರಿಸುತ್ತಾ ಬಂದಿರುತ್ತಾರೆ. ಇಂಡಿಯಾ ದೇಶದ ರೈಲ್ವೆಗಳು ಯಾವ ರೀತಿಯಲ್ಲಿ ಕೆಲಸ ನಡಿಸುತ್ತಿರುವವೆಂಬುದನ್ನು ವಿಚಾರ ಮಾಡುವ ಬಗ್ಗೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ನೇಮಕಮಾಡಿದ ಆಕ್‌ವರ್ತ್ ಕಮಿಟಿಯವರು ರೈಲ್ವೆ ಬಾಬುಗಳನ್ನು ಸಾಧಾರಣವಾದ ಆದಾಯವೆಚ್ಚದ ಲೆಕ್ಕದಿಂದ ಪ್ರತ್ಯೇಕಪಡಿಸತಕ್ಕದ್ದೆಂದು ಸಿಫಾರಸು ಮಾಡಿದರು. ಪರಂತು ರೈಲ್ವೆ ಫೈನಾನ್ಸ್ ಕಮಿಟಿಯವರು ಈ ಪ್ರಕಾರ ಪ್ರತ್ಯೇಕಿಸುವ ಏರ್ಪಾಡನ್ನು ಕೂಡಲೇ ಜಾರಿಗೆ ತಂದಪಕ್ಷದಲ್ಲಿ ರೈಲ್ವೆಗಳಿಂದ ತಮಗೆ ಬರುತ್ತಿರುವ ನಿವ್ವಳ ನಫೆಯನ್ನು ಇಂಡಿಯಾ ಸರ್ಕಾರದವರು ಬಿಟ್ಟುಕೊಡಬೇಕಾಗಿ ಬರುವುದರಿಂದ ತೊಂದರೆಯುಂಟಾದೀತೆಂತ ಅಭಿಪ್ರಾಯಪಟ್ಟರು. ಲಾಭಕರವಾದ ಕಾಂಗಾರಿಗಳ ವಿಷಯದಲ್ಲಿ ನಮ್ಮ ಸ್ಥಿತಿಯು ಇಂಡಿಯಾ ಸರ್ಕಾರದವರ ಸ್ಥಿತಿಗಿಂತಲೂ ಬಹಳ ತೊಡಕಾಗಿರುವುದು. ಹೇಗೆಂದರೆ ನಮಗೆ ರೈಲ್ವೆಗಳು ಮಾತ್ರವಲ್ಲದೆ ಇತರಬಗೆಯ ಲಾಭಕರವಾದ ಆಸ್ತಿಗಳೂ, ಜಲಪಾತದ ವಿದ್ಯುಚ್ಛಕ್ತಿ ಕಾಂಗಾರಿಗಳೂ, ಭದ್ರಾವತಿ ಕಬ್ಬಿಣ ಕಾರ್ಖಾನೆಯೂ, ಇತರ ಕೈಗಾರಿಕೆಯ ಕಾರ್ಖಾನೆಗಳಂಥ ವ್ಯಾಪಾರದ ಕೆಲಸಗಳೂ ಸಹ ಇರುವುವು. ಹಿಂದಿನ ನಮ್ಮ ಅನುಭವದಿಂದಲೂ ಈಗಿನ ನಮ್ಮ ಆದಾಯವೆಚ್ಚದ ಸ್ಥಿತಿಯಿಂದಲೂ ಲಾಭಕರವಾದ ಕಾಂಗಾರಿಗಳ ಆದಾಯವೆಚ್ಚಗಳನ್ನು ಸಾಧಾರಣದ ಹುಟ್ಟುವಳಿಯ ಲೆಕ್ಕದಿಂದ ಪ್ರತ್ಯೇಕಪಡಿಸಲೇಬೇಕೆಂಬುದು ಸಿದ್ಧಾಂತವಾಗುತ್ತದೆ. ಈ ಪ್ರಕಾರ ಪ್ರತ್ಯೇಕಪಡಿಸುವುದನ್ನು ಎಷ್ಟು ಶೀಘ್ರದಲ್ಲಿ ಜಾರಿಗೆತಂದರೆ ಅಷ್ಟುಮಟ್ಟಿಗೆ ಮೈಸೂರು ಸರ್ಕಾರದ ಆದಾಯವೆಚ್ಚವು ಸ್ಥಾಯಿಯಾಗಿ ನಿಲ್ಲುವಂತೆ ಮಾಡುವುದೆಂದು ನಮ್ಮ ಅಭಿಪ್ರಾಯವಾಗಿದೆ. (ಸಶೇಷ.)

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಆಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಕರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
19 ಬಳ್ಳಾರಿ.

೧೯೨೨ನೆಯ ಇಸವಿ ಜೂನ್ ತಾ|| ೧೧ ರಿಂದ ೧೯೨೨ನೆಯ ಜೂನ್ ತಾ|| ೧೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ಜ್ಯೇಷ್ಠ ಬಹುಳ ಬಿದಿಗೆಯಿಂದ ಜ್ಯೇಷ್ಠ ಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೈ ಮಿ ಮಾಸ
11	ಭಾನು	ಬಿದಿಗೆ	34-48	ಪೂಷಾ	60	29
12	ಸೋಮ	ತದಿಗೆ	35-49	ಪೂಷಾ	1-43	30
13	ಮಂಗಳ	ಚೌತಿ	38-9	ಉಷಾ	5-7	31
14	ಬುಧ	ಪಂಚ	41-38	ಶ್ರವ	9-40	1
15	ಗುರು	ಷಷ್ಠಿ	46-1	ಧನಿ	15-8	2
16	ಶುಕ್ರ	ಸಪ್ತ	50-58	ಶತ	21-21	3
17	ಶನಿ	ಅಷ್ಟ	56-15	ಪೂಭಾ	27-58	4

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾನತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಿಯೆಯಂಸದಾಪೂರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಜೂನ್ ತಾರೀಖು ೧೮ ನೆಯ ಭಾನುವಾರ (ಸಂಚಿಕೆ ೨೫

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.
(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹಳಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕ್ಷಿತಿ ಬಹುಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮಜಯಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾನುಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ ಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
23 ಮೈಸೂರು.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಆಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಕರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

20 ಬಳ್ಳಾರಿ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 14

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಶ್ರೀ ದುಂದುಭಿನಾಮ ಸಂವತ್ಸರದ ಅತ್ಯುತ್ತಮ ಪಂಚಾಂಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನ ವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
24 ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಜೂನ್ ತಾ|| ೧೮ನೆಯ ಭಾನುವಾರ.

REPRESENTATIVE ASSEMBLY.

The Birthday Session of the Representative Assembly which came to a close on the 13th June after six days' sitting was interesting in every way. The members are evincing a keener interest in public affairs than before and we do not find the difference between the front rows and back benches which was so common in the earlier sessions. Ever since Sir M. Kantaraj Urs became the Dewan the practice of a few people monopolising all the discussions for themselves has happily disappeared, and to-day almost every member plays his part in the discussions and brings to bear upon the different subjects his practical experience and knowledge, and the Assembly is all the richer for it. Another noteworthy feature is that the attitude of "bated breath and whispering humbleness" has altogether disappeared and the members do not hesitate to speak plain and straight, and in this respect the House composed of the representatives of all parts and of all the interests in the State is, even as it is without real powers, a fairly good corrective to gubernatorial and official vagaries and omissions and commissions. It is high time that the Government thought of conceding some real privileges to the Assembly in the matter of moving resolutions, of introducing bills and of controlling the purse. We are anxiously looking forward to the promised constitutional reforms which are to be announced at the next Dasara Sessions of the Assembly, and meantime we can only hope that they will be conceived in a bold and generous spirit. The best thing would be for the Government to appoint a strong committee comprising both officials and non-officials, if need be with an official majority, to go into this question fully and report.

It should be said to the credit of Mr. A. R. Banerji that he conducted the Session with commendable tact, patience and good humour. His assurance about the steps he would take to prevent corruption in service wherever it was found would have a most salutary effect on the whole service. In his closing address he assured the members that the most urgent needs–as pressed by the members would be looked to and funds provided for them wherever possible. We are thankful to the Dewan for appointing a special officer to work out schemes for the amelioration of the Panchamas–an indication that the liberal policy with regard to their uplift will be pursued as vigourously as before. The Session has shown that the members realise the serious financial situation in Mysore and are on their part prepared to co-operate with the Government in all reasonable measures for establishing the stability of our finances. The mutual confidence between the Government and the representatives which characterised the discussions in the Assembly augurs well for the successful solution of the difficult problems ahead.

MUNICIPAL DEPUTATION TO THE DEWAN.

The deputation of the Mysore City Municipal Councillors who were chosen to wait on the Dewan to request him to grant the Mysore Municipal Council the privilege of electing its President, more than a month ago was received only on the morning of the 15th June 1922. The Government's immediate reply was the extension of the term of Mr. Srikanteswara Iyer by another year–about the propriety or justification of which we have said enough already. But we would like to know where came the necessity for granting this belated interview to the deputation when the very purpose of it had disappeared. If the object of it was to offer an explanation for the action of the Government–as it could be for nothing else–we would venture to say it failed. To say that the councillors have all the powers in their hands and the President is merely to carry out their wishes may sound good theory but is opposed to facts as so eloquently in evidence in this city. We would ask further whether a sight where continuously the councillors–continuously pull one way and the President the other way is at all a pleasing or agreeable sight–and whether it would in the least conduce to the welfare of the citizens. Would it not stand to commonsense to think why the Municipal Council should unanimously ask for the privilege unless it was essential both from the point of view of the prestige of the Council and the people's well being? However, the deputation were told that there would be some changes in the constitution of the Municipalities of Bangalore and Mysore and then their request would be favourably considered. We hope it will not be long before the changes are introduced and when they do come no fresh considerations would crop up for refusing the privilege. Mysore is a city of gardens, and in the development of which His Highness the Maharaja takes a keen interest and it is essential that conditions favourable to the smooth and efficient working of the Municipality should be provided as early as possible.

ಸಂಸ್ಕೃತ ಕಾಲೇಜುಗಳು ಮತ್ತು ಬ್ರಾಹ್ಮಣೇತರ ವಿದ್ಯಾರ್ಥಿಗಳು.

ರಾಜಧಾನಿಯಲ್ಲಿರುವ ಮಹಾರಾಜರ ಸಂಸ್ಕೃತ ಕಾಲೇಜಿಗೂ ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಸಂಸ್ಕೃತ ಕಾಲೇಜಿಗೂ ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು ಸೇರಿಸುವ ವಿಚಾರ [illegible]

ಮ್ಯುನಿಸಿಪಲ್ ಡೆಪ್ಯುಟೇಷನ್.

[illegible]

ಒಳದೇಶದ ವೃತ್ತಾಂತಗಳು.

[illegible]

[illegible]

ಒಬ್ಬಟ್ಟಿನಮೇಲೆ ಚರ್ಚೆ.

[illegible]

ಬರುತ್ತಿರುವುದರಿಂದ ಹೆಚ್ಚು ಖರ್ಚುಮಾಡಲ್ಪಡುತ್ತಿದೆ) ಸರ್ಕಾರಿ ಯುದ್ಯೋಗಸ್ಥರಿಗೆ ಕಾಯಿಲೆ ಇರುವಾಗಲೂ ಪೂರ್ತಿ ಸಂಬಳಬರುತ್ತದೆ. ಆದರೆ ಖಾಸಗಿ ಜನರಿಗೆ ಕಾಯಿಲೆಯಲ್ಲಿ ಸಂಪಾದನೆಯೇಯಿಲ್ಲವಾಗುತ್ತದೆ. ಮುನ್ಸಿಪಾಲಿಟಿಗಳ ಅಭಿವೃದ್ಧಿಗೆಷ್ಟು ಹಣವೆಚ್ಚಮಾಡಿದರೂ ಜನಸಂಖ್ಯೆಯು ಬರಬರುತ್ತ ಕಡಿಮೆಯಾಗುತ್ತಿರುವುದರಿಂದ ಅದಕ್ಕೆ ಅಷ್ಟೊಂದು ಹಣವನ್ನು ಖರ್ಚುಮಾಡದೆ ಗ್ರಾಮಾಭಿವೃದ್ಧಿಗಾಗಿ ಆ ಹಣವನ್ನುಪಯೋಗಿಸುವುದು ಉತ್ತಮವು.

ಮ|| ಸೂರ್ಯನಾರಾಯಣರಾಯರು—ಸರ್ಕಾರಿಯುದ್ಯೋಗಸ್ಥರ ಸಂಬಳ ಗೊತ್ತುಗುರಿಯಿಲ್ಲದೆ ಏರುತ್ತಿರುವುದರಿಂದ ಅವರ ಸಂಬಳವನ್ನು ಲೆಜಿಸ್ಲೇಷನ್ ಮೂಲಕ ನಿರಕುಮಾಡಿದಲ್ಲಿ ಬಹಳ ಹಣ ಉಳಿಯುತ್ತದೆ. ವ್ಯವಸಾಯಶಾಖೆಗೆ ಸಂಬಂಧಪಟ್ಟ ಡಿಸ್ಟ್ರಿಕ್ಟ್ ಎಸ್ಟಾಬ್ಲಿಷ್‌ಮೆಂಟು ಹೆಚ್ಚಾಗಿರುವುದನ್ನು ಕಡಿಮೆ ಮಾಡಿದಲ್ಲಿ 25 ಸಾವಿರ ರೂ. ವರೆಗೆ ಮಿಗುತ್ತದೆ. ಸೀಮೆಗೆ ಹೋಗಿ ವಿದ್ಯಾಭ್ಯಾಸಮಾಡುವವರಿಗೆ ಲೋನ್ ವೇತನವನ್ನು ಈ ವರ್ಷದಲ್ಲೇ ದಯವಿಟ್ಟು ಕೊಡಿಸಬೇಕು. ಮೆಡಿಕಲ್ ಛಾರ್ಜನ್ನು ತಪ್ಪಿಸಲು ಸಾಧ್ಯವಿಲ್ಲದಿದ್ದಲ್ಲಿ ಹೆಚ್ಚಿಸಬಾರದು. ವಿದ್ಯಾಭ್ಯಾಸದ ತೆರಿಗೆಯನ್ನು ಡಿ|| ಬೋರ್ಡಿನವರೊಪ್ಪಿದಲ್ಲಿ ವಿಧಿಸಬೇಕೆಂದು ನಿರ್ಧರವಾಗಿದ್ದರೂ ಅಧಿಕಾರಿಗಳು ತೆರಿಗೆಯನ್ನು ಹಾಕಲು ಪ್ರೋತ್ಸಾಹಿಸುತ್ತಿದ್ದಾರೆ. ನಮ್ಮ ಹಾಸನ ಡಿ|| ಬೋರ್ಡಿನವರೊಪ್ಪಿಲ್ಲವಾದುದರಿಂದ ಈ ತೆರಿಗೆಯನ್ನು ನಮ್ಮ ಡಿ||ನಲ್ಲಿ ಖಂಡಿತವಾಗಿಯೂ ವಿಧಿಸಬಾರದು.

ಮಿ|| ಉಸ್ಮಾನ್ ಖಾನ್ ರವರು—ನೇಗೆಯ ಕೈಗಾರಿಕೆಯಭಿವೃದ್ಧಿಗಾಗಿ ಸ್ಯಾಂಕ್ಷನ್ ಆಗಿರುವ ಹಣವು ಈ ಕಾರ್ಯಕ್ಕಾಗಿ ಸಾಲುವುದಿಲ್ಲವು. ಇಂತಹದರಲ್ಲಿ ಹೆಚ್ಚು ಸಿಬ್ಬಂದಿಯನ್ನಿಟ್ಟುಕೊಳ್ಳುವುದು ಹೇಗೆ ಯುಕ್ತವೋ ತಿಳಿಯದು. ಲಕ್ಷಾಂತರ ರೂ. ಗಳನ್ನು ಕೊಟ್ಟು ತರಿಸಿರುವ ಯಂತ್ರಸಾಮಗ್ರಿಗಳನ್ನು ಸುಮ್ಮನೆ ಇಟ್ಟುಕೊಳ್ಳುವುದಕ್ಕಿಂತ ಜನರಿಗೆ ಬಂಡವಾಳವನ್ನು ಕೊಟ್ಟು ಅಭಿವೃದ್ಧಿಗೊಳಿಸಲು ಪ್ರೋತ್ಸಾಹಿಸಬೇಕು. ಡಿಮಾನಸ್ಟ್ರೇಷನ್ನಿಗಾಗಿ ಈಗ ಕೊಟ್ಟಿರುವ 1000 ರೂ. ಸಾಲುವುದಿಲ್ಲವಾಗಿ 5000 ರೂ. ಗಳನ್ನಾದರೂ ಬಡ್ಜೆಟ್ಟಿನಲ್ಲಿ ಸೇರಿಸಬೇಕು. (ಉತ್ತರ—ನೇಗೆಯ ಪ್ರೋತ್ಸಾಹಕ್ಕಾಗಿ ಹಣ ಕಡಿಮೆಮಾಡಿಲ್ಲವು.) ವಿದ್ಯಾಭ್ಯಾಸದ ಸೆಸ್ಸನ್ನು ಪ್ರತಿ ಡಿಸ್ಟ್ರಿಕ್ಟಿನಲ್ಲೂ ಕಡ್ಡಾಯವಾಗಿ ವಿಧಿಸಲೇಬೇಕು. ಹಾಗೆ ಮಾಡದಿದ್ದಲ್ಲಿ ಈಗ ಕೊಡಲೊಪ್ಪಿರುವವರೂ ಕೂಡ ತಿರಸ್ಕರಿಸಲು ಅವಕಾಶವಾಗುತ್ತದೆ.

ಮ|| ಮುರುಗೇಶಂಪಿಳ್ಳೆಯವರು—ಬಹಳ ಸ್ವಲ್ಪಕೆಲಸ ಮಾಡುತ್ತಿರುವ ಪಟೇಲ ಶಾನುಭೋಗರುಗಳಿಗೆ ಮಿರಾಸೆಯು ಹೆಚ್ಚಾಗಿ ಸಲ್ಲುತ್ತ ವಿಶೇಷ ಕಷ್ಟಪಟ್ಟು ದುಡಿಯುವ ತೋಟಿತಳವಾರಿಗಳಿಗೆ ಬಹಳಕಡಿಮೆ ಮಿರಾಸೆ ಬರುತ್ತಿರುವುದರಿಂದ ಹೆಚ್ಚಿಸಿಕೊಡಬೇಕು, ಸರ್ಕಾರದವರು ದಯಮಾಡಿ ಪಂಚಮರ ವಿದ್ಯಾಭಿವೃದ್ಧಿಗೆ ತಕ್ಕಮಟ್ಟಿಗೆ ಸಹಾಯಮಾಡುತ್ತಿರುವುದರಿಂದ ಕೆಲ ಪಂಚಮ ವಿದ್ಯಾರ್ಥಿಗಳು ವ್ಯಾಸಂಗಮಾಡಿ ಪ್ಯಾಸಾಗಲನುಕೂಲವಾಯಿತು ಮತ್ತು ಈಗ ಹೆಚ್ಚು ಜನರು ಓದಲು ಆಸಕ್ತರಾಗಿರುವುದರಿಂದ ಈಗ ಕೊಡುತ್ತಿರುವ ಹಣವು ಸಾಲದು; ಅದನ್ನು ಹೆಚ್ಚಿಸಿಕೊಡಬೇಕು. (ಉತ್ತರ—ಕಳೆದ ವರ್ಷಕ್ಕಿನ್ನ ಈ ವರ್ಷದಲ್ಲಿ ಹೆಚ್ಚಿಸಿದೆ.) ಮಹಮ್ಮದೀಯರು ಮತ್ತು ಪಂಚಮರು ಸ್ಪೆಷಲ್ ಕಮ್ಯುನಿಟಿಗಳಾಗಿ ಪರಿಗಣಿಸಲ್ಪಟ್ಟಿರುವುದರಿಂದ ಇವರ ಸಂಖ್ಯಾನುಗುಣವಾಗಿ ಸಹಾಯಮಾಡಿದಲ್ಲಿ ಕೊರತೆಯಿಲ್ಲವು.

ಮ|| ತೊಬಗೆರೆ ನಂಜಪ್ಪನವರು—ರೈಲ್ವೆ ಛಾರ್ಜು ಹೆಚ್ಚಿಸಲ್ಪಟ್ಟಿರುವಂತೆ ಪ್ರಯಾಣಿಕರಿಗೆ ಸೌಕರ್ಯವು ಹೆಚ್ಚಿಸಲ್ಪಡದಿರುವುದರಿಂದ ಇದರುತ್ತನ್ನವು ಹೆಚ್ಚಲು ಮಾರ್ಗವಿಲ್ಲವಾಗಿದೆ. ಸರ್ಕಾರಿಯಾಧಿಕಾರಿಗಳ ಸಂಬಳವನ್ನು ಕಡಿಮೆಮಾಡುವುದಲ್ಲದೆ ಮಿತಿಮಿಾರಿ ಸಲ್ಲುತ್ತಿರುವ ಅಲೋಯನ್ಸನ್ನು ಖಂಡಿತವಾಗಿ ನಿಲ್ಲಿಸಬೇಕು. ರೆವಿನ್ಯೂ ಕಮಿಷನರುದ್ಯೋಗವನ್ನೂ ಜಿಯಲಾಜಿಕಲ್ ಸೂಪರಿಂಟೆಂಡರುದ್ಯೋಗವನ್ನು ತೆಗೆದು ಹಾಕಿದಲ್ಲಿ ಬಹಳ ಹಣ ಮಿಗುತ್ತದೆ. ಆಸ್ಪತ್ರೆಗಳ ವಾರ್ಡು ಛಾರ್ಜನ್ನೂ ಫೀಯನ್ನೂ ಹೆಚ್ಚಿಸಬಾರದು. ಬೆಂಗಳೂರಿನಲ್ಲಿ ಸಿವಿಲ್ ಮೊಖದ್ದಮೆಗಳು ಹೆಚ್ಚಾಗಿ ಜಾಗ್ರತೆ ವಿಲೆಯಾಗಲು ಅವಕಾಶವಿಲ್ಲವಾದುದರಿಂದ ಕೆಲಸ ಕಡಿಮೆಯಾಗಿರುವ ಡಿಸ್ಟ್ರಿಕ್ಟ್ ಕೋರ್ಟನ್ನು ತಪ್ಪಿಸಿ ಅದಕ್ಕಾಗುವ ಖರ್ಚಿನಿಂದ ಮುನಸೀಫ್ ಕೋರ್ಟುಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಡಿ|| ಕೋರ್ಟಿನ ಕೆಲಸ ಪೂರ್ವದಂತೆ ಚೀಫ್ ಕೋರ್ಟಿನ ಜಡ್ಜರಲ್ಲೊಬ್ಬರಿಗೆ ವಹಿಸಲ್ಪಡಬಹುದು. ಎಜ್ಯುಕೇಷನ್ ಸೆಸ್ಸನ್ನು ಸರ್ವತ್ರ ವಿಧಿಸದೆ ಹೊರತು ವಿದ್ಯಾಭಿವೃದ್ಧಿಯಾಗಲು ಅನಕಾಶವಿಲ್ಲವು. ಎಲೆಕ್ಟ್ರಿಕ್ ಶಾಖೆಯಲ್ಲಿ ದಸ್ತಾದ 1 ಲಕ್ಷ ಚಿಲ್ಲರೆ ಹಣವು ಲೆಖ್ಖದಲ್ಲಿ ಯಾವರೀತಿ ಗಣಿಸಲ್ಪಟ್ಟಿದೆ? (ಉತ್ತರ—ಸಾಧ್ಯವಿದ್ದಷ್ಟು ಲೆಖ್ಖದಿಂದ ವಜಾಮಾಡಲ್ಪಟ್ಟಿದೆ) ಮತ್ತು ತಪ್ಪಿತಸ್ಥರಿಂದ ಹಣವನ್ನು ಬರತಾಡಿಕೊಳ್ಳದೆ ಬಿಡುವುದರಿಂದ ಪ್ರಜೆಗಳಿಗೆ ಭಾರವು ಹೆಚ್ಚಾಗುತ್ತದೆ. ಅದುಕಾರಣ ದಸ್ತುಮಾಡಿದವರಿಂದ ಹಣವನ್ನು ನಿರ್ದಾಕ್ಷಿಣ್ಯದಿಂದ ಬರಮಾಡಿಕೊಂಡು ಅವರನ್ನು ಶಿಕ್ಷೆಗೆ ಗುರಿಮಾಡಬೇಕು.

ಸ್ವೀಕಾರ.

ಶ್ರೀ|| ವೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ಕೊಳ್ಳೆಗಾಲದ ತಾ|| ಬೋರ್ಡು ಪ್ರೆಸಿಡೆಂಟ್ ಮ|| ಜ. ಪಿ. ಮಲ್ಲಪ್ಪನವರ ಕುಮಾರಿ ಸೌ|| ನಿರ್ಮಲಾಂಬೆಯ ಲಗ್ನದಲ್ಲಿ ಮ|| ಪಿ. ಬಸವರಾಜಪ್ಪನವರ ಮೂಲಕ ೨ ರೂ. ದಾವಣಗೆರೆ ಮ|| ಉಪ್ಪಿನ ಚಂದ್ರಶೇಖರಪ್ಪನವರ ಲಗ್ನದಲ್ಲಿ ಮೈಸೂರು ಮಠದ ಚನ್ನವೀರಪ್ಪಯ್ಯನವರ ಮೂಲಕ ೨ ರೂ. ಕಳುಹಿಸಲ್ಪಟ್ಟಿರುವುದನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ವಿವಾಹಮಹೋತ್ಸವಗಳು.

ಸೊರಬ ತಾ|| ಶಾವರೆಹಳ್ಳಿಯಲ್ಲಿರುವ ವೀರಶೈವ ಕ್ಷತ್ರಿಯ ವಂಶಜರಾದ ಪಟೇಲ್ ದೇವಪ್ಪಗೌಡರು ತಮ್ಮ ಮಗಳ ಹಾಗೂ ತಮ್ಮ ಮೊಮ್ಮಗಳ ಲಗ್ನಗಳನ್ನು ಕಳೆದ ಜೂನ್ ತಾ|| ೧೭ ರಲ್ಲಿ ನಡೆಯಿಸಿ ತಮ್ಮ ಜನರಲ್ಲಿ ಬಹುಕಾಲದಿಂದ ನಡೆದುಬಂದಿದ್ದ ತೆರವೆಂಬ ದುಷ್ಟಪದ್ಧತಿಯನ್ನು ತಪ್ಪಿಸಿ ವರದಕ್ಷಿಣೆಯನ್ನು ಕೊಟ್ಟು ಎಲ್ಲರಿಗೂ ಮೇಲುಪಙ್ತಿಯನ್ನು ಹಾಕಿಕೊಟ್ಟುದು ಶ್ಲಾಘ್ಯವಾಗಿರುತ್ತದೆ. ನಮ್ಮ ಜನರೆಲ್ಲರೂ ಈ ಮಹನೀಯರ ಮೇಲುಪಙ್ತಿಯನ್ನನುಸರಿಸುವರೆಂದು ನಿರೀಕ್ಷಿಸುವ,

ವೀರಶೈವಕ್ಷತ್ರಿಯವಂಶಜ.

ನೈಜಾಂ ಇಲಾಖೆ ರಾಯಚೂರಲ್ಲಿ ಗತ ವೈಶಾಖ ಬ|| ೩ ಆದಿತವಾರ ಶ್ರೀಯುತ ಉಪ್ಪಾರ ಜಂಬಯ್ಯನವರು ತಮ್ಮ ಅಣ್ಣನವರಾದ ಗಂಗಪ್ಪನವರ ಪುತ್ರನ ವಿವಾಹವನ್ನು ಅತ್ಯಂತ ವೈಭವದೊಡನೆ ಜರುಗಿಸಿದರು. ಆ ಕಾಲಕ್ಕೆ ಶ್ರೀ|| ಪ್ರ|| ಚಿಕ್ಕಸೂಗೂರು ಮಹಾಸ್ವಾಮಿಗಳವರನ್ನೂ ಪ್ರಮುಖಗೌಡರನ್ನೂ ಬರಮಾಡಿಕೊಂಡುದಲ್ಲದೆ, ರಾಯಚೂರು ಪುರಪ್ರಮುಖರೂ ಪ್ರಸಿದ್ಧನ್ಯಾಯವಾದಿಗಳಾದ ಶ್ರೀ|| ಮ|| ಕಿಷನ್ ರಾಯರೂ ಗುರುವರ್ದದವರೂ ಸಭೆಯನ್ನಲಂಕರಿಸಿದ್ದರು. ವಿವಾಹವು ಪುರೋಹಿತರಿಂದ ವಿಧ್ಯುಕ್ತವಾಗಿ ಸಾಂಗವಾದ ಬಳಿಕ, ಶ್ರೀ|| ವೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ಸಭೆಯಲ್ಲಿ ೨ ರೂ. ಗಳು ತೆಗೆಯಲ್ಪಟ್ಟು ಸಭಿಕರಿಗೆ ಗಂಧಪುಷ್ಪಗಳು ಕೊಡಲ್ಪಟ್ಟವು. 3-4 ದಿವಸಗಳು ಯಥೇಚ್ಛವಾಗಿ ಮಾಹೇಶ್ವರರಿಗೆ ಸಂತರ್ಪಣೆಯು ಜರುಗಿ ೧ ರೂ. ಯಂತೆ ಸರ್ವರಿಗೂ ದಕ್ಷಿಣೆಯು ಕೊಡಲ್ಪಟ್ಟಿತು. ಇವರು ವೀರಶೈವೇತರರಾದರೂ, ಅಚುಂಬಿತವೂ ನಿಸರ್ಗವೂ ಆದ ಇವರ ಜಂಗಮ ಭಕ್ತಿಯೂ, ಅತಿಥಿಸತ್ಕಾರವೂ ಅನ್ಯರಿಗೆ ಗುಣಪಾಠವಾಗಿ ಪರಿಣಮಿಸಿತು.

ಅವರ ಹಿತೈಷಿ ಬಸವಲಿಂಗಪ್ಪ, ಮುಕ್ತಲ್.

[೨ ರೂ. ಯನ್ನು ಸ್ವೀಕರಿಸಿದೆ ಪ. ಪ್ರ.]

ನೈಜಾಂ ಇಲಾಖಾ ಯಾದ್ಗಿರಿ ತಾ|| ಯಲೇರಿಗ್ರಾಮದ ಮ|| ಶಿವರಾಯ ಚನ್ನಬಸಪ್ಪನವರು ತಮ್ಮ ಪುತ್ರಿಯನ್ನು ಮ|| ಗುಂಟರಾಳ ಪೊಲೀಸು ಗೌಡ ಬಸವಂತರಾವ್ ಇವರ ಪುತ್ರನಿಗೆ ಕೊಟ್ಟು ವೈಶಾಖ ಬ|| ೧೧ ರಲ್ಲಿ ವಿವಾಹಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡೆಯಿಸಿದರು. ಈ ಮಹೋತ್ಸವಕ್ಕೆ ಸಾವಿರಾರು ಜನರು ಸೇರಿದ್ದುದರಿಂದ ಒಂದು ಸಭೆಯು ಮ|| ಶಿವರಾಯ ಸಿದ್ಧರಾಮಪ್ಪಗೌಡರ ಅಧ್ಯಕ್ಷತೆಯಲ್ಲಿ ಕೂಡಿಸಲ್ಪಟ್ಟು ಸುಲೇಗಾಂ ಪಾಠಶಾಲಾಧ್ಯಾಪಕ ವೇ|| ಬಸವಣ್ಣಶಾಸ್ತ್ರಿಗಳು ಗುರು ಮತ್ತು ಭಕ್ತಿ ವಿಚಾರವಾಗಿಯೂ, ವೇ|| ಕೊಟ್ರಯ್ಯಶಾಸ್ತ್ರಿಗಳು ಪಾಣಿಗ್ರಹಣದ ವಿಚಾರವಾಗಿಯೂ ಸಭಿಕರ ಮನೋಲ್ಲಾಸವಾಗುವಂತೆ ಭಾಷಣಗಳನ್ನು ಮಾಡಿದರು. ಶ್ರೀ|| ವೀರಸಂಗಪ್ಪನವರು ವೀರಶೈವಮತಕ್ಕೆ ಅನೇಕ ಪ್ರಕಾರವಾಗಿ ಉಪಕಾರವನ್ನು ಮಾಡಿರುವುದರಿಂದ ಅವರ ಸ್ಮರಣಾರ್ಥವಾಗಿ ಅಗ್ರತಾಂಬೂಲವನ್ನು ತೆಗೆಯಬೇಕೆಂದು ಬಿದರಕೋಟಿ ಪಾಠಶಾಲಾಧ್ಯಾಪಕರು ಸೂಚಿಸಿದ ಮೇರೆಗೆ ಮನೆ ಯಜಮಾನರಿಂದ ೨ ರೂ. ತೆಗೆಯಲ್ಪಟ್ಟಿತು. ಬಂದಿದ್ದ ಸಾವಿರಾರು ಜನರು ದಕ್ಷಿಣೆ ಮೃಷ್ಟಾನ್ನಭೋಜನದಿಂದ ತೃಪ್ತಿಗೊಳಿಸಲ್ಪಟ್ಟರು. ಮ|| ಶಿವರಾಯ ಚೆನ್ನಬಸವಪ್ಪನವರು ವೇಶ್ಯಾಂಗನೆಯರ ನರ್ತನ ಮೊದಲಾದ ದುಂದುವೆಚ್ಚವನ್ನು ಮಾಡದೆ ಬಹಳ ವಿಚಕ್ಷಣೆಯಿಂದ ವಿವಾಹಮಹೋತ್ಸವವನ್ನು ಜರುಗಿಸಿ ಇತರರಿಗೆ ಮೇಲುಪಂಙ್ತಿಯನ್ನು ಹಾಕಿಕೊಟ್ಟುದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ.

ಓರ್ವ ಉತ್ಸವಭಾಗಿ.

[೨ ರೂ. ಯನ್ನು ನಾವು ವಿನಯಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಪ. ಪ್ರ.]

ನೈಜಾಂ ಇಲಾಖಾ ಗುಲ್ಬರ್ಗಾ ತಾ|| ಹೊಳಕುಂದಿ ಗ್ರಾಮಾಧಿಕಾರಿ ಶ್ರೀಮಂತ ಸರ ಮೊಕಾದಂ ಬಸವರಾಯಗೌಡರು ತಮ್ಮ ಪುತ್ರಿಯನ್ನು ನಿಡಗುಂದಿ ಗ್ರಾಮದ ದೇಶಮುಖಿ ಶಿವಾಂಬರರಾಯರಿಗೆ ಕೊಟ್ಟು ಮಹಗಾಂವ ಪಾಠಶಾಲಾಧ್ಯಾಪಕರಾದ ವೇ|| ರುದ್ರಾರಾಧ್ಯ ಶಾಸ್ತ್ರಿಗಳ ಪೌರೋಹಿತ್ಯದಿಂದ ವಿಧ್ಯುಕ್ತವಾಗಿಯೂ ವೈಭವದಿಂದಲೂ ವಿವಾಹಮಹೋತ್ಸವವನ್ನು ಜರುಗಿಸಿದರು. ಮತ್ತು ವರನಿಗೆ ೨೦೦೦ ರೂ. ದಕ್ಷಿಣೆಯನ್ನೂ ದಿವ್ಯಾಶ್ವವನ್ನೂ ವಸ್ತ್ರಾಭರಣಗಳನ್ನೂ ಕೊಟ್ಟರು. ಬಂದಿದ್ದ ದೊಡ್ಡಮನುಷ್ಯರುಗಳಿಗೂ ಇತರ ಸಾವಿರಾರು ಜನ ಬಡಬಗ್ಗರಿಗೂ ಮೃಷ್ಟಾನ್ನಭೋಜನ ಮಾಡಿಸಿದರು. ಮಹಾಗಾಂವ್ ಪಾಠಶಾಲೆಯು ಸ್ಥಿರವಾಗಿ ನಡೆಯಲು ಪ್ರತಿವರ್ಷ ೨೫ ರೂ. ಗಳನ್ನು ಕೊಡುತ್ತೇನೆಂದು ವಾಗ್ದಾನ ಮಾಡಿದುದಲ್ಲದೆ ಮಡಿವಾಳಪ್ಪಗೌಡ ಮೊಕಾದಂ ಪಾ|| ೧೦ ರೂ. ಮಲ್ಲಪ್ಪಾ ಚಕ್ಕಿ ೧೦ ರೂ. ಶಿವಶರಣಪ್ಪಾ ಪಾ|| ೮ ರೂ. ಶಿವಲಿಂಗಪ್ಪಾ ಬಿರಾದಾರ ೮ ರೂ. ಬಸವಂತಪ್ಪಾ ಬಿರಾದಾರ ೮ ರೂ. ಸಂಗನಬಸಪ್ಪಾ ಬಿರಾದಾರ ೬ ರೂ. ಶರಣಪ್ಪಾ ಹುಡಗಿ ೬ ರೂ. ರೇವಪ್ಪಾ ಮುನ್ನಳ್ಳಿ ೬ ರೂ. ದೇವರಾಯ ಮಡಿವಾಳಪ್ಪಾ ೫ ರೂ. ಶರಣಪ್ಪಾ ಶೇರಿ ೫ ರೂ. ಶರಣಪ್ಪಾ ಕಮಠಾಣ ೨ ರೂ. ಅಣೆಪ್ಪಾ ದಬರಾಬಾದಿ ೨ ರೂ. ವೀರಬಸಪ್ಪಾ ಬಿರಾದಾರ ೨ ರೂ. ಗುಂಡಪ್ಪಾ ಗಾಣಿಗೆರ ೨ ರೂ. ಮಡೆಪ್ಪಾ ಹೂಗಾರ ೨ ರೂ. ಭದ್ರಪ್ಪಾ ಕೋಮಟಿ ೨ ರೂ. ಮಹಮ್ಮದಾಲಿಸಾಹೇಬ ಜಮಾದಾರ ೨ ರೂ. ನಾಗಪ್ಪಾ ಬಡಿಗೇರ ೧ ರೂ. ಮಾರುತಿಅಕ್ಕಾಲ ೧ ರೂ. ಈ ಪ್ರಕಾರ ವಾರ್ಷಿಕ ವರ್ಗಣಿಯನ್ನು ಕರಾವು ಮಾಡಿಸಿದರು. ಸಮಾಜಸೇವೆಯನ್ನು ಮಾಡುವ ಸ್ಟಾರ್‌ಪತ್ರಿಕೆಯ ಪ್ರೋತ್ಸಾಹಕ್ಕಾಗಿ ೨ ರೂ. ಕಳುಹಲ್ಪಟ್ಟಿತು.

ಉತ್ಸಾಹಭಾಗಿ.

[೨ ರೂ. ಯನ್ನು ವಿಶ್ವಾಸದಿಂದ ಸ್ವೀಕರಿಸಿದೆವು.—ಪ. ಪ್ರ.]

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ವರ್ಧಂತ್ಯುತ್ಸವದ ಅಧಿವೇಶನದಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

(ಕಳೆದವಾರದ ಶೇಷ).

ಲಾಭಕರವಾದ ಅನೇಕ ಕಾಂಗಾರಿಗಳಿಗಾಗಿ ಕೊಡುವ ಹಣವನ್ನೆಲ್ಲಾ ಒಂದಾಗಿ ಸೇರಿಸಿ ಅದನ್ನು ಅವುಗಳಪೈಕಿ ಯಾವುದಕ್ಕೆ ಬೇಕಾದರೂ ಉಪಯೋಗಿಸುವಂತೆ ಸ್ವಾತಂತ್ರ್ಯವನ್ನು ಕೊಡಬೇಕಾದದ್ದೂ, ಸಂಸ್ಥಾನದ ಸಾಮಾನ ಹುಟ್ಟುವಳಿಯನ್ನು ರಾಜ್ಯಭಾರದ ಸಾಮಾನ್ಯಖರ್ಚಿಗೆ ವಿನಿಯೋಗಿಸಬೇಕಾದದ್ದೂ ಅವಶ್ಯಕವೆಂತ ನಾವು ಅಭಿಪ್ರಾಯಪಡುತ್ತೇವೆ. ಈಗ ಜಾರಿಯಲ್ಲಿರುವ ಏರ್ಪಾಡಿನ ಪ್ರಕಾರ ರಾಜ್ಯಭಾರದ ಸಾಧಾರಣ ಆದಾಯವೆಚ್ಚಗಳನ್ನೂ ಲಾಭಕರವಾದ ಕಾಂಗಾರಿಗಳ ಆದಾಯವೆಚ್ಚಗಳನ್ನೂ ಒಟ್ಟಿಗೆ ಸೇರಿಸಿರುವುದರಿಂದ ನಮ್ಮ ಈಗಿನ ಆರ್ಥಿಕಸ್ಥಿತಿಯು ಅತವಸ್ಥೆಗೆ ಬರಲು ಬಹಳಮಟ್ಟಿಗೆ ಕಾರಣವಾಗಿರುತ್ತದೆ. ಲಾಭಕರವಾದ ಕಾಂಗಾರಿಗಳ ನಿವ್ವಳ ವರಮಾನದ ಪೈಕಿ ಹೆಚ್ಚುಭಾಗವನ್ನು ಅಂಥಾ ಕಾಂಗಾರಿಗಳ ಮೂಲಧನವನ್ನು ಸರಿಯಾದ ಸ್ಥಿತಿಯಲ್ಲಿ ಕಾಪಾಡುವುದಕ್ಕಾಗಲಿ ಅಥವಾ ಅವುಗಳ ಬಡಾವಣೆ ಅಥವಾ ಅಭಿವೃದ್ಧಿ ಕಾಂಗಾರಿಗಳಿಗಾಗಲೀ ಬಳಸಬೇಕಾದುದಕ್ಕೆ ಬದಲಾಗಿ ಹಿಂದೆ ಇಲಾಖೆಗಳ ಖರ್ಚಿಗೆ ಉಪಯೋಗಿಸುತ್ತಾ ಬಂದಿರುತ್ತಾರೆ. ಇಂಥಾ ಕಾಂಗಾರಿಗಳ ಹುಟ್ಟುವಳಿಯು ಕಡಮೆಯಾದದ್ದೇ ಆದರೆ ಸರ್ಕಾರದ ಆಡಳಿತವನ್ನು ನಡಿಸುವುದು ತುಂಬಾ ಕಷ್ಟವಾಗಿ ಪರಿಣಮಿಸುತ್ತದೆ. ಆದರೆ, ಅಂಥಾ ಕಾಂಗಾರಿಗಳ ನಿವ್ವಳ ಹುಟ್ಟುವಳಿಯಲ್ಲಿ, ಅವುಗಳಿಗೋಸ್ಕರ ತೆಗೆದ ಸಾಲದ ಸಿಂಕಿಂಗ್ ಫಂಡನ್ನೂ ಅದರ ಮೇಲಿನ ಬಡ್ಡಿಯನ್ನೂ ಕೊಟ್ಟ ತರುವಾಯ ಸಾಮಾನ್ಯ ರಾಜ್ಯಾಡಳಿತದ ಕೆಲಸಕ್ಕೆ ಹಣವೇನಾದರೂ ಉಳಿಯುವ ಪಕ್ಷಕ್ಕೆ ಅಂಥಾ ತೆರಿಗೆಯ ರೂಪವಲ್ಲದ ಹಣವನ್ನು ತೆರಿಗೆಯ ಭಾರವನ್ನು ಕಡಮೆಮಾಡುವುದಕ್ಕಾಗಿ ಉಪಯೋಗಿಸುವುದರಲ್ಲಿ ಸಂದೇಹವೇನೂ ಇಲ್ಲ.

1922-23ನೆಯ ವರ್ಷದ ಬಡ್ಜೆಟ್ಟನ್ನು ನೋಡಲಾಗಿ ಸಾಧಾರಣವಾದ ರಾಜ್ಯಭಾರಕ್ಕೆ ಸಂಬಂಧಪಟ್ಟ 1ನೆಯ ಭಾಗದಲ್ಲಿ ರಿಜರ್ವುಗಳಿಗೆ ಯಾವುದಕ್ಕೂ ಹಣ ಒದಗಿಸದೆಯೆ ಹುಟ್ಟುವಳಿಯಲ್ಲಿ 23 ಲಕ್ಷ ರೂಪಾಯಿ ಕಮ್ಮಿ ಇರುವುದು ಗೊತ್ತಾಗುತ್ತದೆ. ಸದರಿ ರಿಜರ್ವುಗಳಿಗೆ ಹಣ ಒದಗಿಸುವ ಭಾರವು ಈ ಭಾಗದ ಹಣಕ್ಕೆ ಸೇರಿದ್ದಾಗಿರುತ್ತೆ. ಮೂರನೆಯ ಭಾಗದಲ್ಲಿಯೂ ಸಹ 9 ಲಕ್ಷ ರೂಪಾಯಿಯಷ್ಟು ಹುಟ್ಟುವಳಿ ಕಡಮೆ ಇರುವುದು ಕಂಡು ಬಂದಿದೆ. ಎಂದರೆ ಲಾಭಕರವಾದ ಕಾಂಗಾರಿಗಳ ಹುಟ್ಟುವಳಿಯ ಲೆಕ್ಕವನ್ನು ನೋಡಲಾಗಿ ಅದು ತನ್ನ ಖರ್ಚನ್ನು ಹುಟ್ಟಿಸಿಕೊಳ್ಳುವುದಕ್ಕೆ ಬದಲಾಗಿ ಅಥವಾ ಸಾಮಾನ್ಯ ರಾಜ್ಯಾಡಳಿತಕ್ಕೆ ಸಹಾಯಕರವಾಗಿರುವುದಕ್ಕೆ ಬದಲಾಗಿ 1 ಅಥವಾ 2ನೆಯ ಭಾಗಗಳಿಂದ ಸಮಯಬಿದ್ದರೆ ಎರಡರಿಂದಲೂ, ಅವುಗಳಲ್ಲಿ ಏನಾದರೂ ಉಳಿತವಿದ್ದರೆ ಸಹಾಯಹೊಂದುವ ಸ್ಥಿತಿಯಲ್ಲಿರುತ್ತೆ. 2ನೆಯ ಭಾಗದಲ್ಲಿ ಖರ್ಚು ಜಾತಾ 11 ಲಕ್ಷ ರೂಪಾಯಿ ಉಳಿಯುವುದು. ಪರಂತು ಈ ಮೊಬಲಗು ಬಂಡವಾಳದ ಕಾಂಗಾರಿಗಳಿಗೆ ಹಣ ಒದಗಿಸಲು ಉಪಯೋಗವಾಗಿರುವುದಕ್ಕೆ ಬದಲಾಗಿ ಇತರ ಎರಡು ಭಾಗಗಳಲ್ಲಿ ಉಂಟಾಗಿರುವ 32 ಲಕ್ಷ ರೂಪಾಯಿಯಷ್ಟು ಕಮ್ಮಿ ಹುಟ್ಟುವಳಿಯನ್ನು ಕೊಂಚಮಟ್ಟಿಗೆ ಸಂಪಡಿಸುವುದಕ್ಕೆ ಬೇಕಾಗಿರುತ್ತದೆ.

ಸಾಧ್ಯವಾದಷ್ಟು ಮಟ್ಟಿಗೆ ಸ್ಪಷ್ಟವಾಗಿಯೂ ಮತ್ತು ವಿಂಗಡವಾಗಿಯೂ ನಮ್ಮ ಸಂಸ್ಥಾನದ ಒಟ್ಟು ಆಯವ್ಯಯದ ಸ್ಥಿತಿಯನ್ನು ಸುತರಾಂ ಭದ್ರಪಡಿಸುವುದಕ್ಕೆ ಅಂಥಾ ಹಣಕಾಸಿನ ಆಡಳಿತದ ಪ್ರತಿಯೊಂದು ಭಾಗದಲ್ಲೂ ಯಾವ ವಿಧವಾದ ಮೇಲ್ಪಾಟು ಅವಶ್ಯಕವಾಗಿರುವುದೆಂಬುದು ವ್ಯಕ್ತವಾಗುವುದು. 1ನೆಯ ಭಾಗದ ಸ್ಥಿತಿಯನ್ನು ಹುಟ್ಟುವಳಿ ಬಾಬುಗಳನ್ನು ಹೆಚ್ಚಿಸುವುದು ಮತ್ತು ಅವುಗಳಿಂದ ಪಾವತಿಯಾಗಬೇಕಾದ ಖರ್ಚುಗಳನ್ನು ಕಡಮೆಮಾಡುವುದು ಎಂಬ ಎರಡು ಪ್ರಕಾರದ ಕ್ರಮಗಳನ್ನು ಅನುಸರಿಸುವುದರಿಂದ ಮೇಲ್ಪಡಿಸಬಹುದು. ಈ ಮೇಲ್ಪಾಟಿನ ಫಲಿತಾಂಶವೇನೆಂದರೆ ಹಾಲೀ ಇರುವ 23 ಲಕ್ಷ ರೂಪಾಯಿ ಕಮ್ಮಿ ಹುಟ್ಟುವಳಿಯನ್ನು ಭರ್ತಿ ಹಾಕುವುದಕ್ಕೆ ಅದು ಸಾಕಾಗಬಹುದಲ್ಲದೆ ಕ್ಷಾಮನಿವಾರಣಾರ್ಥದ ಫಂಡಿಗೂ ಆನ್ಯತ್ತ ಇಲ್ಲದ ಖರ್ಚುಗಳ ಸ್ಪೆಷಲ್ ರಿಜರ್ವ್ ಫಂಡಿಗೂ ಪ್ರತಿವರ್ಷವೂ ಹಣ ಒದಗಿಸುವುದಕ್ಕೆ ಸಾಕಾಗಬಹುದು. ಈ ಎರಡು ಬಾಬುಗಳಿಗೂ ಒಟ್ಟು ಖರ್ಚು ವರ್ಷ ಒಂದಕ್ಕೆ $8\frac{1}{2}$ ಲಕ್ಷ ರೂಪಾಯಿಗಳಿಗೆ ಕಡಮೆಯಿಲ್ಲದೆ ಬೇಕಾಗುವುದು. 3ನೆಯ ಭಾಗವನ್ನು ಅದರ ಸ್ವಂತ ಹುಟ್ಟುವಳಿಯಿಂದಲೇ ಎಲ್ಲಾ ಖರ್ಚುಗಳನ್ನೂ ಒದಗಿಸಿಕೊಳ್ಳುವುದಕ್ಕೆ ಸಮರ್ಥವನ್ನಾಗಿ ಮಾಡಬೇಕಲ್ಲದೆ 1ನೆಯ ಭಾಗದಲ್ಲಿ ಸೇರಿರುವ ಸಾಮಾನ್ಯ ರಾಜ್ಯಾಡಳಿತಕ್ಕೆ ಸಾಧ್ಯವಾದಷ್ಟು ಹಣ ಸಹಾಯ ಮಾಡುವಂತೆ ಮಾಡಬೇಕು. 3 ನೆಯ ಭಾಗದ ಹುಟ್ಟುವಳಿಯು, ಸಾಲಗಳ ಮೇಲಣ ಬಡ್ಡಿ ಮತ್ತು ಸಿಂಕಿಂಗ್ ಫಂಡು ಇವುಗಳ ಒಟ್ಟು ದೇಣಿಗಳಿಗೆ ಮಾತ್ರವೇ ಅಲ್ಲದೆ ಕೈಗಾರಿಕೆ ಅಭಿವೃದ್ಧಿ ಕಾರ್ಯಗಳಿಗೂ ಮೈಸೂರು ದೇಶದಲ್ಲಿ ಬಹಳ ಮುಖ್ಯವಾದ ನೀರಾವರಿ ಬಂಡವಾಳದ ಕಾಂಗಾರಿಗಳಿಗೂ ಸಹ ಹಣ ಒದಗಿಸಬೇಕು. ನಮ್ಮಲ್ಲಿ ಅನೇಕ ಮೇಜರ್ ಮತ್ತು ಮೈನರ್ ಕೆರೆಗಳಿವೆ. ಸಂಸ್ಥಾನದ ವ್ಯವಸಾಯಾಭಿವೃದ್ಧಿಯು ಇವುಗಳಿಂದಲೇ ಆಗಬೇಕಾಗಿರುತ್ತದೆಯಾದಕಾರಣ ಇವುಗಳ ಆಬಾದನ್ನೂ ದುರಸ್ತನ್ನೂ ಮಾಡಿಸಬೇಕಾದದ್ದು ಅವಶ್ಯಕ. ಇದಲ್ಲದೆ ಕೃಷ್ಣರಾಜಸಾಗರಕ್ಕೆ ಸೇರಿದ ಹೈಲೆವಲ್ ನಾಲೆ ಬೇರೆ ಇದೆ. ಇದನ್ನು ಅಭಿವೃದ್ಧಿಗೆ ತರುವುದು ಆವಶ್ಯಕ.

ಮೇಲೆ ವಿವರಿಸಿದ ಕ್ರಮವನ್ನು ಅನುಸರಿಸಿ ಈ ಎಲ್ಲಾ ಮೂರು ಭಾಗಗಳ ಆಯವ್ಯಯದ ಸ್ಥಿತಿಯನ್ನು ಒಂದು ಕ್ರಮಕ್ಕೆ ತರಲು ಬೇಕಾದ ಮೇಲ್ಪಾಟುಗಳನ್ನು ಜಾರಿಗೆ ತರಬೇಕಾದರೆ ನಮ್ಮ ಒಟ್ಟು ಆಯವ್ಯಯವನ್ನು ವರ್ಷವೊಂದಕ್ಕೆ ಸುಮಾರು 50 ಲಕ್ಷ ರೂಪಾಯಿಯಷ್ಟರ ಮಟಿನ ಉತ್ತಮ ಸ್ಥಿತಿಗೆ ತರುವುದು ಅವಶ್ಯಕವಾಗಿದೆ. ದೃಢಪ್ರಯತ್ನಗಳನ್ನು ಮಾಡಿ ಈ ಕೆಳಗೆ ವಿವರಿಸಲ್ಪಡುವ ತರಹೆಯ ಆದಾಯ ವೆಚ್ಚದ ಏರ್ಪಾಟನ್ನು ಅನುಸಂಸುವುದಾದರೆ ಮುಂದಿನ ಮೂರು ವರ್ಷಗಳ ಕಾಲದಲ್ಲಿ ಇದನ್ನು ಸಾಧಿಸಬಹುದೆಂದು ನಮಗೆ ತೋರುತ್ತದೆ.

ಮುಂದಿನ ಮೂರು ವರ್ಷಗಳಲ್ಲಿ ನಡೆಯಿಸಬೇಕಾದ ಕಾರ್ಯಕ್ರಮ.

ಮೇಲೆ ಸಲಹೆ ಮಾಡಿದಂತೆ ತರಗತಿ ವಿಂಗಡಿಸಿರುವ ಫೈನಾನ್ಸಲ್ ಪಟ್ಟಿಯ ಒಂದನೆಯ ಭಾಗವನ್ನು ವಿಚಾರ ಮಾಡಿದರೆ, ಮುಂದಿನ ಮೂರು ವರ್ಷಗಳಲ್ಲಿ ಜಾರಿಗೆ ತರಬೇಕಾಗಿರುವ ಅಭಿವೃದ್ಧಿಯ ಕ್ರಮವನ್ನು ತೋರಿಸುವ ಬಗ್ಗೆ ನಾವು ತಯಾರಿಸಿ ಹಿಂದೆ ಕೊಟ್ಟಿರುವ ಪಟ್ಟಿಯಿಂದ 1922-23ನೆಯ ವರ್ಷದ ಬಡ್ಜೆಟ್ ಅಂದಾಜಾಗಿ ಈ ತರಗತಿಯಲ್ಲಿ ಒದಗಿಸಿರುವ 252 ಲಕ್ಷದ ಜತೆಗೆ ಸುಮಾರು 25 ಲಕ್ಷ ರೂಪಾಯಿಯನ್ನು ಈ ಅವಧಿಯ ಅಖೈರಿನೊಳಗಾಗಿ ಒದಗಿಸಿಕೊಳ್ಳುವುದಕ್ಕೆ ನಾವು ಪ್ರಯತ್ನಪಡಬೇಕಾಗಿರುವುದೆಂಬುದು ವ್ಯಕ್ತವಾಗುವುದು. 23 ತಾಲ್ಲೂಕುಗಳಲ್ಲಿ ಬಹು ಕಾಲದಿಂದ ಜಾರಿಗೆ ಬರದೆ ನಿಂತಿರುವ ರೀಸೆಟಲ್ಮೆಂಟನ್ನು ಜಾರಿಗೆ ಕೊಡುವುದರ ಮೂಲಕವೂ, ದರಖಾಸ್ತುಗಳ ವಿಲೇವಾರಿಯನ್ನು ಇನ್ನೂ ತ್ವರೆಪಡಿಸುವುದರ ಮೂಲಕವೂ, ಅಮೃತಮಹಲ್ ಕಾವಲುಗಳಿಂದಲೂ ಈಚಲು ವನಗಳಿಂದಲೂ ಬಿಟ್ಟು ಕೊಟ್ಟಿರುವ ಭಾರೀ ವಿಸ್ತೀರ್ಣದ ಜಮೀನುಗಳನ್ನು ಸಾಗುವಳಿಗೆ ಕೊಡುವುದರ ಮೂಲಕವೂ ಜಮೀನ್ ಕಂದಾಯದ ಬಾಬಿನಲ್ಲಿ ಹುಟ್ಟುವಳಿಯು 10 ಲಕ್ಷ ರೂಪಾಯಿಯಷ್ಟು ಹೆಚ್ಚುವುದೆಂದು ನಿರೀಕ್ಷಿಸುತ್ತೇವೆ. ಈಗ ಸರ್ಕಾರದವರು ಗೊತ್ತುಮಾಡಿರುವ ಕಾರ್ಯಕ್ರಮದ ಮೇರೆಗೆ, ಜಾರಿಗೆ ಬರದೆ ನಿಂತಿರುವ ಎಲ್ಲಾ ತಾಲ್ಲೂಕುಗಳಲ್ಲಿಯೂ ರೀಸೆಟಲ್ಮೆಂಟುಗಳು 1926-27ನೆಯ ವರ್ಷದೊಳಗಾಗಿ ಪೂರೈಸುವುವೆಂತಲೂ, ಮುತವರ್ಜಿ ವಹಿಸಿದ್ದೇ ಆದರೆ $2\frac{1}{2}$ ಲಕ್ಷ ಎಕರೆಯಷ್ಟು ಜಮೀನನ್ನು ಸಹ ಸಾಗುವಳಿಗೆ ಕೊಡಲಾಗುವುದೆಂತಲೂ ನಿರೀಕ್ಷಿಸಲಾಗಿದೆ. ಈ ಅಂಶಗಳಿಂದಲೂ, ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಸೇರಿ ಸುಮಾರು 96,000 ಎಕರೆಯಷ್ಟು ಜಮೀನಿನ ಬಗ್ಗೆ ಬಂದು ವಿಲೆಯಾಗದೆ ನಿಂತಿರುವ 9,000ಕ್ಕೆ ಮೇಲ್ಪಟ್ಟ ದರಖಾಸ್ತುಗಳನ್ನು ತ್ವರೆಯಾಗಿ ಇತ್ಯರ್ಥಪಡಿಸುವುದರಿಂದಲೂ ಹೆಚ್ಚಿನ ಕಂದಾಯದ ವಿಷಯದಲ್ಲಿ ನ್ಯಾಯವಾದ ಅಂದಾಜು ಮಾಡಿದಾಗ್ಯೂ, ಒಟ್ಟು ಜಮೀನ್ ಕಂದಾಯವನ್ನು, ನೀರಾವರಿ ಹುಟ್ಟುವಳಿ ಮತ್ತು ಲ್ಯಾಂಡ್‌ರೆವಿನ್ಯೂ ಇಲಾಖೆಯ ಹಕೋಟಿಯಲ್ಲಿರುವ ಇತರ ಚಿಲ್ಲರೆ ಬಾಬುಗಳ ಸಮೇತವಾಗಿ, 123 ಲಕ್ಷ ರೂಪಾಯಿಗೆ ಹೆಚ್ಚಿಸಲಾಗಬಹುದು. ಫಾರೆಸ್ಟ್ ಇಲಾಖೆಯಲ್ಲಿ ಮೂರು ವರ್ಷಗಳಲ್ಲಿ ಸುಮಾರು 3 ಲಕ್ಷ ರೂಪಾಯಿಯಷ್ಟು ಹೆಚ್ಚುವರಿಯುಂಟಾಗಿ ಒಟ್ಟು 33 ಲಕ್ಷ ರೂಪಾಯಿಯ ಹುಟ್ಟುವಳಿಯಾಗುವುದೆಂದು ಅಂದಾಜು ಮಾಡಿರುತ್ತೇವೆ; ಇದರಲ್ಲಿ ಗಂಧದ ಮರದ ಉತ್ಪತ್ತಿಯನ್ನು ಮಿತವಾಗಿ ಹತ್ತು ಲಕ್ಷ ರೂಪಾಯಿಯಂತೆ ತೆಗೆದುಕೊಂಡಿದೆ. ಎಕ್ಸೈಜು ಬಾಬಿನಲ್ಲಿ ಹುಟ್ಟುವಳಿ ಹೆಚ್ಚುವುದೆಂದು ಅಂದಾಜು ಮಾಡಿರುವುದಿಲ್ಲ; ಅದು ಈಗಿರುವ

ಕ್ಕಿಂತಲೂ ಕಡಮೆಯಾಗದೆ ಪ್ರಕೃತಸ್ಥಿತಿಯಲ್ಲಿರುವುದೇ ಅತಧಿಕವೆಂದು ಎಣಿಸಬೇಕಾಗಿದೆ. ವರಮಾನದ ಮತ್ತು ಇತರ ಚಿಲ್ಲರೆ ಬಾಬಿನ ತೆರಿಗೆಗಳ ಹುಟ್ಟುವಳಿಯು ಮೂರು ವರ್ಷಗಳಲ್ಲಿ 3 ಲಕ್ಷ ರೂಪಾಯಿಯಷ್ಟು ಹೆಚ್ಚಬಹುದೆಂತಲೂ, ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಬಾಬಿನಲ್ಲಿ 6 ಲಕ್ಷ ಹೆಚ್ಚಬಹುದೆಂತಲೂ, ಅಂದಾಜು ಮಾಡಿರುತ್ತೇವೆ; ಅಲ್ಲದೆ ಇತರ ಎಲ್ಲಾ ಬಾಬುಗಳಲ್ಲಿಯೂ ಉತ್ತಮರೀತಿಯ ಆಡಳಿತದಿಂದ ಸರ್ವತ್ರ ಅಭಿವೃದ್ಧಿಯುಂಟಾಗಿ ನಮ್ಮ ವರಮಾನವು 3 ಲಕ್ಷ ರೂಪಾಯಿಯಷ್ಟು ಹೆಚ್ಚುವುದೆಂದು ಭಾವಿಸಿರುತ್ತೇವೆ. ಇವುಗಳೆಲ್ಲವೂ ಸೇರಿ ಸಾಮಾನ್ಯವಾಗಿ 1922-23ನೆಯ ವರ್ಷದ ಬಡ್ಜೆಟ್ ಅಂದಾಜುಗಳಿಗಿಂತಲೂ 25 ಲಕ್ಷ ರೂಪಾಯಿಯ ಹೆಚ್ಚುವರಿಯನ್ನು ತೋರಿಸುತ್ತವೆ. ಹಿಂದಣವರ್ಷಗಳಲ್ಲಿ ಹುಟ್ಟುವಳಿಯು ಎಷ್ಟರಮಟ್ಟಿಗೆ ಹೆಚ್ಚುತ್ತಿತ್ತೆಂಬ ಅಂಶವನ್ನು, ನಮ್ಮ ಆಯವ್ಯಯದ ಸ್ಥಿತಿಯನ್ನು ಮೇಲ್ಪಡಿಸುವ ಬಗ್ಗೆ ವರಮಾನವನ್ನು ತರತಕ್ಕ ಇಲಾಖೆಗಳಲ್ಲೆಲ್ಲಾ ಈಗ ವಿಶೇಷ ಪ್ರಯತ್ನಗಳನ್ನು ಮಾಡಬೇಕಾಗಿರುವುದನ್ನೂ ಗಣನೆಗೆ ತೆಗೆದುಕೊಂಡಲ್ಲಿ ಮೂರು ವರ್ಷಗಳಲ್ಲಿ ಹುಟ್ಟುವಳಿಯು 25 ಲಕ್ಷ ರೂಪಾಯಿಯಷ್ಟು ಹೆಚ್ಚುವುದು ಸಾಧ್ಯವೆಂದು ಭಾವಿಸುತ್ತೇವೆ. 1916-17ನೆಯ ವರ್ಷದ ವಾಸ್ತವವಾದ ಅಂಕಿಗಳನ್ನೂ, 1922-23ನೆಯ ವರ್ಷದ ಬಡ್ಜೆಟ್ ಅಂದಾಜನ್ನೂ ಹೋಲಿಸಿ ನೋಡುವಲ್ಲಿ ಆರು ವರ್ಷಗಳ ಕಾಲದೊಳಗೆ 32 ಲಕ್ಷ ರೂಪಾಯಿ ಹುಟ್ಟುವಳಿ ಹೆಚ್ಚಿದೆ. ಈ ಪೈಕಿ 11 ಲಕ್ಷದಷ್ಟು ಭಾರಿ ಮೊತ್ತವು ಎಕ್ಸೈಜು ಬಾಬಿನಿಂದ ಬಂದಿದೆ. ರೀಸೆಟಲ್ಮೆಂಟಿನ ಏರ್ಪಾಟು ಸಕಾಲದಲ್ಲಿ ಜಾರಿಗೆ ತರಲ್ಪಟ್ಟಿದ್ದ ಪಕ್ಷದಲ್ಲಿ ಉಂಟಾಗಬಹುದಾಗಿದ್ದ ಹೆಚ್ಚುವರಿಯು ಜಮೀನು ಕಂದಾಯದ ಬಾಬಿನಲ್ಲಿ ಕಂಡುಬರಲಿಲ್ಲ. IIನೆಯ ಭಾಗದಲ್ಲಿ ಗಣಿ ಹುಟ್ಟುವಳಿಯೊಂದನ್ನು ಮಾತ್ರ ತೆಗೆದುಕೊಂಡು ಆ ಬಾಬಿಗೆ 13 ಲಕ್ಷ ರೂಪಾಯಿಯನ್ನು ಇಟ್ಟುಕೊಂಡಿದ್ದೇವೆ.

IIIನೆಯ ಭಾಗದಲ್ಲಿ, ಎಂದರೆ ಹಣವನ್ನು ಬಡ್ಡಿಗೆ ಹಾಕಿದುದರಿಂದಲೂ ಲಾಭಕರವಾದ ಕೆಲಸಗಳಿಂದಲೂ ಬರುವ ಹುಟ್ಟುವಳಿಯ ಬಾಬುಗಳಲ್ಲಿ—ರೈಲ್ವೆಗಳ ಬಾಬಿನಿಂದ ಏನು ಹುಟ್ಟುವಳಿಯಲ್ಲಿ 3 ಲಕ್ಷ, ಕೃಷ್ಣರಾಜಸಾಗರ ಮತ್ತು ವಿದ್ಯುಚ್ಛಕ್ತಿಯ ಕೆಲಸಗಳಿಂದ 6 ಲಕ್ಷ, ಗಂಧದೆಣ್ಣೆಯ ಕಾರ್ಖಾನೆಗಳಿಂದ 1 ಲಕ್ಷ, ಈ ರೀತಿ ಹೆಚ್ಚುವರಿಯನ್ನು ತೋರಿಸಿ, ಕಬ್ಬಿಣದ ಕಾರ್ಖಾನೆಯಿಂದ 3 ಲಕ್ಷ ರೂಪಾಯಿಯನ್ನು ಸೇರಿಸಿದ್ದೇವೆ. ಇದು ಮುಂದಿನ ವರ್ಷದ ಬಡ್ಜೆಟ್ ಅಂದಾಜುಗಳಿಗೆ ಹೋಲಿಸಲ್ಪಟ್ಟಲ್ಲಿ ನಿವ್ವಳ 13 ಲಕ್ಷ ರೂಪಾಯಿಯಷ್ಟು ಹೆಚ್ಚುವರಿಯಾಗಿದೆ. ಬೆಂಗಳೂರು ದಂಡಿನ ಸರ್‌ಪ್ಲಸ್ ಹುಟ್ಟುವಳಿಯನ್ನು ಪರ್ಯಾಲೋಚನೆಗೆ ತೆಗೆದುಕೊಂಡಿಲ್ಲ; ಅದನ್ನು ಬಂಡವಾಳದ ಖರ್ಚಿನ ಬಗ್ಗೆ ಪ್ರತ್ಯೇಕ ರಿಜರ್ವ್ ಆಗಿ ಉಪಯೋಗಿಸದೆ ಇಡಬೇಕು.

ಖರ್ಚುಬಾಬನ್ನು ತೆಗೆದುಕೊಂಡಲ್ಲಿ, ಮುಂದಣ ಮೂರು ವರ್ಷಗಳ ಕಾಲದಲ್ಲಿ 7 ಲಕ್ಷ ರೂಪಾಯಿಯಷ್ಟು ಖರ್ಚು ಕಡಿಮೆಮಾಡಬೇಕೆಂದು ಲೆಕ್ಕದ ಮೊದಲನೆಯ ಭಾಗದಲ್ಲಿ ಸೂಚಿಸಿದ್ದೇವೆ, ಮತ್ತು ಕ್ಷಾಮ ನಿವಾರಣೆಯ ಫಂಡಿಗಾಗಿ 5 ಲಕ್ಷ ರೂಪಾಯಿಯನ್ನೂ, ಆನ್ಯತ್ತ ಇಲ್ಲದ ಖರ್ಚಿನಬಗ್ಗೆ ಸ್ಪೆಷಲ್ ರಿಜರ್ವ್‌ಗಾಗಿ ಮತ್ತೆ $3\frac{1}{2}$ ಲಕ್ಷ ರೂಪಾಯಿಯನ್ನೂ ಒದಗಿಸಿದ್ದೇವೆ. Iನೆಯ ಭಾಗದಲ್ಲಿ ಕೊಟ್ಟಿರುವ ಲೆಕ್ಕದಲ್ಲಿ $\frac{1}{2}$ ಲಕ್ಷ ರೂಪಾಯಿ ಸರ್‌ಪ್ಲಸ್ ಕಂಡು ಬರುತ್ತದೆ. ಮತ್ತು IIನೆಯ ಭಾಗದಲ್ಲಿ ಗಣಿಗಳ ಹುಟ್ಟುವಳಿಗೆ ಬೀಳುವ ಖರ್ಚನ್ನು ಕಳದರೆ 11 ಲಕ್ಷ ರೂಪಾಯಿಯಷ್ಟು ಸಿಲ್ಕು ಕಂಡುಬರುತ್ತದೆ. ಇದನ್ನು ಕ್ಯಾಪಿಟಲೈಜೇಷನ್ ಫಂಡಿನ ಬಗ್ಗೆ ತೆಗೆದಿಟ್ಟಿದೆ; ಇನ್ನು IIIನೆಯ ಭಾಗವನ್ನು ಪರ್ಯಾಲೋಚಿಸಿದಲ್ಲಿ, ಎಲ್ಲಾ ಬಗೆಯ ಸಾಲಗಳ ಮೇಲಿನ ಬಡ್ಡಿಗೂ ಸಿಂಕಿಂಗ್ ಫಂಡಿಗೂ 54 ಲಕ್ಷ ರೂಪಾಯಿಯವರೆಗೆ ಹಣ ಒದಗಿಸಬೇಕಾಗಿದೆ ಎಂಬುದು ತಮಗೆ ವೇದ್ಯವಾಗುವುದು. ಇದಲ್ಲದೆ, ಕೈಗಾರಿಕೆಯ ಅಭಿವೃದ್ಧಿಗಾಗಿ $1\frac{1}{2}$ ಲಕ್ಷ ರೂಪಾಯಿಯಷ್ಟು ರಿಜರ್ವನ್ನೂ $13\frac{1}{2}$ ಲಕ್ಷ ರೂಪಾಯಿಯಷ್ಟು ನೀರಾವರಿಯ ಬಂಡವಾಳವನ್ನೂ ಸಹ ಒದಗಿಸುವುದು ಆವಶ್ಯಕವಾಗಿದೆ. ಲಾಭಕರವಾದ ಕಾಂಗಾರಿಗಳು, ಸಿಂಕಿಂಗ್ ಫಂಡ್, ಬಡ್ಡಿಯ ಖರ್ಚು ಮತ್ತು ಆಯವ್ಯಯವನ್ನು ಸ್ಥಿರವಾದ ಸ್ಥಿತಿಗೆ ತರುವುದಕ್ಕೂ ಮುಂದಣ ಜರೂರಾತಿ ಕಾರ್ಯಗಳಿಗೆ ಹಣವನ್ನೊದಗಿಸುವುದಕ್ಕೂ ಆವಶ್ಯಕವಾದ ರಿಜರ್ವ್‌ಗಳು—ಇವುಗಳ ಪ್ರಯುಕ್ತ ಮುಂದೆ ಒದಗುವ ದೇಣಿಗಳಿಗೆ ಹಣವನ್ನೊದಗಿಸಿದಲ್ಲಿ ಮೂರು ವರ್ಷಗಳ ಕಾಲದಲ್ಲಿ ಒಟ್ಟು ಖರ್ಚು, ರಿಜರ್ವ್‌ಗಳ ಬಗ್ಗೆ ಹಣವನ್ನೊದಗಿಸದಿರುವ ಬಡ್ಜೆಟ್ ಅಂದಾಜಿನ 54 ಲಕ್ಷಕ್ಕೆ ಪ್ರತಿಯಾಗಿ 69 ಲಕ್ಷ ರೂಪಾಯಿಗೆ ಬರುವುದೆಂಬುದು ತಮಗೆ ವೇದ್ಯವಾಗುವುದು. ಈ 69 ಲಕ್ಷ ರೂಪಾಯಿಗೆ ಪ್ರತಿಯಾಗಿ ರೈಲ್ವೆ ಸ್ಟರ್‌ಲಿಂಗ್ ಸಾಲದ ಸಿಂಕಿಂಗ್ ಫಂಡಿನಿಂದ ಕಂಟ್ರಿಬ್ಯೂಷನ್ ರೂಪದಲ್ಲಿ 11 ಲಕ್ಷ ರೂಪಾಯಿಯನ್ನು ನಾವು ಗಣನೆಗೆ ತೆಗೆದುಕೊಂಡು ಇರುವೆವು. ಹಾಜರಿರುವ ಈ ಹಣವನ್ನು ಕೂಡಿದ ಮಟ್ಟಿಗೆ ಸಾರ್ಥಕವಾದ ರೀತಿಯಲ್ಲಿ ವಿನಿಯೋಗಿಸಬೇಕೆಂಬುದು ಯುಕ್ತವಾಗಿರುತ್ತದೆ. ಸರ್ಕಾರದವರು ಇಷ್ಟಪಟ್ಟದ್ದೇ ಆದರೆ ಈ ಸಾಲವು 1936ನೆಯ ವರ್ಷಕ್ಕೆ ಮುಗಿದುಹೋಗುತ್ತದೆ. ಈ ಸಿಂಕಿಂಗ್ ಫಂಡಿಗಾಗಿ ಜಮಾಯಿಸಿರುವ ಮೊತ್ತವನ್ನು ಅದಕ್ಕೆ ಮೊದಲೇ ಅಲ್ಪಕಾಲದಲ್ಲಿ ಹಿಂತಿರುಗಿಸಬೇಕಾದ ಮತ್ತು ಹೆಚ್ಚು ಬಡ್ಡಿಯ ದರವುಳ್ಳ ಸಾಲಗಳಿಗಾಗಿ ಬಳಸುವುದು ಯುಕ್ತವಾಗಿ ಕಾಣುತ್ತದೆ. ಈ ಫಂಡಿನ ಸಹಾಯವಿಲ್ಲದೆ IIIನೆಯ ಭಾಗದ ಆದಾಯವೆಚ್ಚವನ್ನು ಸಮತೂಕಕ್ಕೆ ತರುವುದು ಸಾಧ್ಯವಾಗಿ ತೋರುವುದಿಲ್ಲ. ಈ ರೀತಿ ಆಗಲೇ ಸೂಚಿಸಿರುವಂತೆ ಮೂರು ವರ್ಷಗಳ ಕಾಲದಲ್ಲಿ ನಮ್ಮ ಆಯವ್ಯಯದ ಸ್ಥಿತಿಯನ್ನು 56 ಲಕ್ಷ ರೂಪಾಯಿಯಷ್ಟು ಹೆಚ್ಚಿಸಲು ಪ್ರಯತ್ನಪಡಬೇಕಾಗಿದೆ. ತಪಶೀಲುಗಳನ್ನು ಈ ಕೆಳಗೆ ಕೊಟ್ಟಿದೆ:—

ಹುಟ್ಟುವಳಿಯನ್ನು ಹೆಚ್ಚಿಸುವುದು	....	38 ಲಕ್ಷ ರೂ.
ಖರ್ಚನ್ನು ತಗ್ಗಿಸುವುದು	....	7 ಲಕ್ಷ ,,
ಸಿಂಕಿಂಗ್ ಫಂಡಿಗೆ ಕೊಡುವ ಕಂಟ್ರಿಬ್ಯೂಷನ್ ಕಡಿಮೆ ಮಾಡುವುದು	....	11 ಲಕ್ಷ ,,
ಜುಮ್ಲಾ		56 ಲಕ್ಷ ,,

ಲಾಭಕರವಾದ ಕಾಂಗಾರಿಗಳ ಆದಾಯವೆಚ್ಚವನ್ನು ಸಾಮಾನ್ಯ ಆದಾಯವೆಚ್ಚದಿಂದ ಪ್ರತ್ಯೇಕಿಸುವ ಮೇಲ್ಕಂಡ ಏರ್ಪಾಡಿನಲ್ಲಿ ರೈಲ್ವೆಗಳ ಡಿಪ್ರೀಸಿಯೇಷನ್ ಬಗ್ಗೆ ಹಣವನ್ನು ಒದಗಿಸಿರುವುದಿಲ್ಲ. ಆದರೆ ಮುಂದಿನ ವರ್ಷದ ಬಡ್ಜೆಟ್ ಅಂದಾಜುಗಳಲ್ಲಿ ದುರಸ್ತು ಮತ್ತು ನವೀಕರಣಗಳಿಗಾಗಿ ಸುಮಾರು 4 ಲಕ್ಷ ರೂಪಾಯಿ ಒದಗಿಸಿದೆ; ಸಧ್ಯದಲ್ಲಿ ಆ ಮೊಬಲಗನ್ನೇ ರೈಲ್ವೆ ಡಿಪ್ರೀಸಿಯೇಷನ್ ಫಂಡು ಕಂಟ್ರಿಬ್ಯೂಷನ್ನೆಂದು ಭಾವಿಸಬಹುದು.

ಮಾಮೂಲು ಸರ್ವಿಸ್ ಬಾಬುಗಳ ಖರ್ಚಿನ ಪ್ರಮಾಣವನ್ನು ಗೊತ್ತುಮಾಡುವಲ್ಲಿ ಅವುಗಳ ಅಭಿವೃದ್ಧಿಗಾಗಿ ಏನನ್ನೂ ಒದಗಿಸಿಲ್ಲ. ಈ ರೀತಿಮಾಡಿರುವುದು ಸ್ವಲ್ಪವೂ ಪ್ರೋತ್ಸಾಹಕರವಾಗಿಲ್ಲದಿರಬಹುದು. ಏಕೆಂದರೆ ಖರ್ಚುಕಡಮೆ ಮಾಡಿದ್ದರಿಂದ ಸುಮಾರು ಎಲ್ಲಾ ಇಲಾಖೆಗಳಲ್ಲಿಯೂ ಕಮ್ಮಿ ಗ್ರಾಂಟುಗಳಿಂದಲೇ ಕೆಲಸ ನಿರ್ವಹಿಸಬೇಕಾಗಿಬಂದಿರುವಾಗ್ಗೆ ಸದರಿ ಇಲಾಖೆಗಳ ಅಭಿವೃದ್ಧಿಗೆ ಸ್ವಲ್ಪಮಟ್ಟಿಗಾದರೂ ಅವಕಾಶ ಕಲ್ಪಿಸದೇ ಹೋದಲ್ಲಿ ಯಾವ ರಾಜ್ಯಾಡಳಿತದ ದಕ್ಷತೆಯನ್ನಾಗಲೀ ಕಾಪಾಡುವುದು ಕಷ್ಟವಾಗಿರುವುದು.

ಯಾವ ಏರ್ಪಾಡನ್ನು ಅವಲಂಬಿಸುವುದರಿಂದ ಆದಾಯ ವೆಚ್ಚವನ್ನು ಸಮತೂಕಕ್ಕೆ ತರಬಹುದೋ ಅಂಥ ಒಂದು ಏರ್ಪಾಡನ್ನು ಕೇವಲ ಗೋಷ್ವಾರೆಯಾಗಿ ತೋರಿಸಲು ಮೇಲಿನ ಪ್ಯಾರಾಗಳಲ್ಲಿ ಪ್ರಯತ್ನಿಸಿದ್ದೇವೆ. ಬಡ್ಜೆಟ್ ಅಂದಾಜುಗಳನ್ನು ತಾವು ಚರ್ಚಿಸುವ ಕಾಲದಲ್ಲಿ, ಮೇಲಿನ ಏರ್ಪಾಡನ್ನು ಜಾಗರೂಕತೆಯಿಂದ ಪರಿಶೀಲಿಸಿ ಸರ್ಕಾರದವರಿಗೆ ಸಲಹೆಗಳನ್ನು ಕೊಟ್ಟು ಸಹಾಯ ಮಾಡಿದಲ್ಲಿ ನಾವು ಸಂತೋಷಿಸುತ್ತೇವೆ. ಒಂದು ಅಂಶದ ವಿಷಯವಾಗೇನೋ ಸ್ವಲ್ಪವೂ ಸಂದೇಹಪಡಬೇಕಾದುದಿಲ್ಲ; ಅದು ಯಾವುದೆಂದರೆ, ಕೇವಲ ಕ್ಷಿಪ್ರದಲ್ಲಿಯೇ ಮಾಮೂಲ್ ಹುಟ್ಟುವಳಿಯನ್ನು ಅನಿಶ್ಚಿತವಾದ ಹುಟ್ಟುವಳಿಯಿಂದಲೂ, ಹಣವನ್ನು ಬಡ್ಡಿಗೆ ಹಾಕುವುದು ಮತ್ತು ಲಾಭಕರವಾದ ಕಾಂಗಾರಿಗಳು ಇವುಗಳಿಂದ ಬರುವ ಹುಟ್ಟುವಳಿಯಿಂದಲೂ, ಇಲಾಖೆಗಳ ಖರ್ಚನ್ನು ನ್ಯಾಯವಾಗಿ ಇತರ ತರಗತಿಗಳಿಗೆ ಖರ್ಚು ಹಾಕಬೇಕಾಗಿರುವ ಇತರ ಹೆಚ್ಚುಗಟ್ಟಲೆ ಖರ್ಚಿನಿಂದಲೂ ಪ್ರತ್ಯೇಕಿಸದಿದ್ದಲ್ಲಿ ವಿಧಿಯೇ ಇಲ್ಲ. ಆಯಾ ಬಾಬುಗಳ ಹುಟ್ಟುವಳಿಗಳನ್ನು ಆಯಾ ಬಾಬುಗಳ ಉದ್ದೇಶಕ್ಕಾಗಿಯೇ ಇಟ್ಟಿರಬೇಕೆಂಬ ಆಕ್ವರ್ತ್ ಕಮಿಟಿಯವರ ಸಿಫಾರಸುಗಳನ್ನು ಆಧಾರವನ್ನಾಗುಳ್ಳ ಈ ನಿಯಮವನ್ನು ಅವಲಂಬಿಸಿದರೆ ಮಾತ್ರ ಆಯಾ ತರಗತಿಗಳ ಖರ್ಚನ್ನು ಆಯಾ ತರಗತಿಗಳ ಆದಾಯದಿಂದ ಒದಗಿಸಲಾಗುವುದು. ಸ್ಥಿತಿಗತಿಗಳು ಮೇಲ್ಪಟ್ಟಾಗ ಖರ್ಚಿಗಿಂತ ಜಾಸ್ತಿಯಾಗಿ ಹುಟ್ಟಿದ ವರಮಾನವು ರಾಜ್ಯಾಡಳಿತವನ್ನು ಉತ್ತಮಪಡಿಸುವುದಕ್ಕೆ ಸಾಧಕವಾಗುವುದು. ಈ ಫಲಿತಾಂಶಗಳನ್ನು ಪಡೆಯಲು ಹೆಚ್ಚಾಗಿ ಕಷ್ಟಪಡಬೇಕಾಗುವುದು. ಆಗಲೂ ಸಹ ನಮ್ಮ ಬಂಡವಾಳದ ಕಾಂಗಾರಿಗಳು, ಎಂದರೆ ರೈಲ್ವೆಗಳು, ವಿದ್ಯುಚ್ಛಕ್ತಿಯ ಕಾಂಗಾರಿಗಳು—ಇವುಗಳಿಗಾಗಿಯೂ ಮತ್ತು ಹೆಚ್ಚು ಬಡ್ಡಿಯ ಖರ್ಚುಗಳಿಗಾಗಿಯೂ ವಿಶೇಷ ಹಣ ಬೇಕಾಗುವುದರಿಂದ ಮುಂದೆ ಅನೇಕ ವರ್ಷಗಳು ನಾವು ನಿಶ್ಚಿಂತರಾಗಿರುವುದಕ್ಕಾಗುವುದಿಲ್ಲ.

ನಮ್ಮ ರೈಲ್ವೆಗಳ ವಿಷಯದಲ್ಲಿಯೂ ಲಾಭಕರವಾದ ಕಾಂಗಾರಿಗಳ ಮತ್ತು ಕೈಗಾರಿಕೆಯ ಕೆಲಸಗಳ ರೂಪದಲ್ಲಿನ ಸಂಸ್ಥಾನದ ಇತರ ಸ್ಥಿರವಾದ ಆಸ್ತಿಗಳ ವಿಷಯದಲ್ಲಿಯೂ ಇರುವ ಸರಿಯಾದ ಪರಿಸ್ಥಿತಿಯನ್ನು ತಾವುಗಳು ಗ್ರಹಿಸಿಕೊಳ್ಳಲು ಅನುಕೂಲಿ ಬೆಂದು (1) ರೈಲ್ವೆ ಆದಾಯ ವೆಚ್ಚ, (2) ಕೃಷ್ಣರಾಜಸಾಗರ ಮತ್ತು ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಟು, (3) ಭದ್ರಾವತಿ ಕಬ್ಬಿಣದ ಕಾರ್ಖಾನೆ, (4) ಗಂಧದೆಣ್ಣೆಯ ಕಾರ್ಖಾನೆ, (5) ಇತರ ಕೈಗಾರಿಕೆಯ ಕೆಲಸಗಳು—ಇವುಗಳಿಗೆ ಸಂಬಂಧಪಟ್ಟ ಅಂಕಿಗಳನ್ನು ತಮ್ಮಗಳಿಗೆ ಸೂಕ್ಷ್ಮವಾಗಿ ತಿಳಿಯಪಡಿಸಲು ಉದ್ದೇಶಿಸಿರುತ್ತೇವೆ.

ರೈಲ್ವೆಯ ಆದಾಯ ವೆಚ್ಚ.

1918 ನೆಯ ವರ್ಷದಲ್ಲಿ, ಎಂದರೆ ಸರ್ ಎಂ. ವಿಶ್ವೇಶ್ವರಯ್ಯನವರ ದಿವಾನ್‌ಗಿರಿಯ ಅಂತ್ಯದಲ್ಲಿ ಕಬ್ಬಿಣದ ಕಾರ್ಖಾನೆಗೆ ಸಂಬಂಧಪಟ್ಟ ಟ್ರಾಂವೆಗಳೂ ಸೇರಿ ಮೈಸೂರು ಸ್ಟೇಟ್ ರೈಲ್ವೆಗಳ ಮೇಲೆ ಹಾಕಿರುವ ಒಟ್ಟು ಹಣವು 400 ಲಕ್ಷ ರೂಪಾಯಿಗೆ ಬಂದಿತ್ತು. ನಮ್ಮ ಹಿಂದಿನ ದಿವಾನ್‌ರವರ ಕಾಲದಲ್ಲಿ ಇನ್ನು 119 ಲಕ್ಷವನ್ನು ಖರ್ಚುಮಾಡಿತು. ಈ ಪೈಕಿ ಹೆಚ್ಚು ಭಾಗವು ಮೈಸೂರು—ಅರಸೀಕೆರೆ ರೈಲ್ವೆ ಮತ್ತು ಕಬ್ಬಿಣದ ಕಾರ್ಖಾನೆಗೆ ಸಂಬಂಧಪಟ್ಟ ಟ್ರಾಂವೆಗಳಿಗೂ ಮತ್ತು ಇಂಜನ್ ಗಾಡಿಗಳನ್ನೊದಗಿಸುವ ಬಗ್ಗೂ ವಿನಿಯೋಗವಾಯಿತು. ಭಾರಿಯಾದ ಇತರ ಏರ್ಪಾಟುಗಳಿಗೆ ಜರೂರಾಗಿ ಹಣವು ಬೇಕಾದುದರಿಂದ ನಂಜನಗೂಡು—ಚಾಮರಾಜನಗರದ ರೈಲ್ವೆ ಮತ್ತು ಶಿವಮೊಗ್ಗಾ—ಅರಸಾಳು ರೈಲ್ವೆ—ಇವುಗಳ ಕಾಂಗಾರಿಯನ್ನು ನಿಲ್ಲಿಸುವುದು ಈಚೆಗೆ ಅವಶ್ಯಕವಾಗಿ ಕಂಡುಬಂದಿದೆ. ರೈಲ್ವೆಗಳಿಗಾಗಿ ಇದುವರೆಗೆ ವೆಚ್ಚಮಾಡಿರುವ ಒಟ್ಟು ಹಣವು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಮತ್ತು ಕೋಲಾರದ ಡಿಸ್ಟ್ರಿಕ್ಟು ರೈಲ್ವೆಗಳಿಂದ ಬಂದ 17 ಲಕ್ಷವೂ ಸೇರಿ 519 ಲಕ್ಷವಾಗುತ್ತದೆಂಬುದನ್ನು ಕೇಳಲು ತಾವುಗಳು ಕುತೂಹಲರಾಗಿರಬಹುದು. ಮದರಾಸು ಮತ್ತು ದಕ್ಷಿಣಮಹಾರಾಷ್ಟ್ರ ರೈಲ್ವೆಯವರಿಂದ ನಡೆಸಲ್ಪಡುತ್ತಿರುವ ನಮ್ಮ ಲೈನುಗಳ ನಿವ್ವಳ ಉತ್ಪತ್ತಿಯು ವಸ್ತುತಃ ಶೇಕಡ 4 ರಂತೆ ಬಡ್ಡಿಯನ್ನು ದುಡಿದಿದೆ. ಇದೇನೂ ಅಲ್ಪ ಫಲವಲ್ಲ. ಇತರ ರೈಲ್ವೆಗಳು ತಮ್ಮ ಖರ್ಚನ್ನು ಪೂರ್ತಿಯಾಗಿ ಇನ್ನೂ ದುಡಿಯುತ್ತಿಲ್ಲ. ಆದರೆ ಮೊದಮೊದಲು ಯಾವ ಹೊಸ ಲೈನೂ ಲಾಭಕರವಾಗುತ್ತದೆಂದು ಹೇಳಲಾಗುವುದಿಲ್ಲ. ಹಣವನ್ನು ರಿಜರ್ವ್‌ಗಳಿಂದ ಒದಗಿಸಬಹುದೆಂಬ ನಿರೀಕ್ಷಣೆಯ ಮೇಲೆ 1918ಕ್ಕೆ ಮುಂದಿನ ಐದು ವರ್ಷಗಳ ಕಾಲದಲ್ಲಿ ರೈಲುಗಳನ್ನು ಹಾಕುವುದಕ್ಕಾಗಿ ವರ್ಷ ಒಂದಕ್ಕೆ 20 ಲಕ್ಷ ರೂಪಾಯನ್ನು ಖರ್ಚುಮಾಡಬೇಕೆಂದು, ಆ ವರ್ಷದಲ್ಲಿ ಸರ್ಕಾರದವರು ತೀರ್ಮಾನಮಾಡಿದರು. ರಿಜರ್ವ್‌ಗಳು ಮತ್ತು ಸೆಕ್ಯೂರಿಟಿಗಳು, ಇವೆರಡರೊಳಗಿನ ಎಲ್ಲ ಸಿಲ್ಕುಗಳೂ ಮುಗಿದುಹೋದುದರಿಂದ ಮಂಜೂರಾಗಿದ್ದ ರೈಲ್ವೆ ಬಡಾವಣೆ ಕಾರ್ಯಕ್ರಮವನ್ನು ಭಾರೀ ಸಾಲಗಳನ್ನು ತೆಗೆಯದೆ ನಡೆಸಲಾಗಲಿಲ್ಲ; ಅದೂ ಅಲ್ಲದೆ ಕಬ್ಬಿಣದ ಕಾರ್ಖಾನೆಗೆ ಸಂಬಂಧಪಟ್ಟ ಟ್ರಾಂವೆಗಳಖರ್ಚು ಸದರಿ ರೈಲ್ವೆ ಲೈನುಗಳನ್ನು ಹಾಕುವುದಕ್ಕೆ ಉಪಯೋಗಿಸಬಹುದಾಗಿದ್ದ ಗೃಹೋಪಯೋಗಿ ಸಂಪತ್ತಿಗಳನ್ನು ಮತ್ತಷ್ಟು ಹೀನಸ್ಥಿತಿಗೆ ತಂದಿತು. ಇದರ ಫಲಿತಾಂಶವಾಗಿ ಸದರಿ ಏರ್ಪಾಡುಗಳನ್ನು ಮುಂದಕ್ಕೆ ಒತ್ತಿ ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಬೇಕಾದ ಸೌದೆ ಸರಬರಾಯಿಗೆ ಅವಶ್ಯಕವಾದ ಫಾರೆಸ್ಟು ಟ್ರಾಂವೆಗಳನ್ನು ಮುಗಿಸುವುದಕ್ಕೆ ಭಾರಿ ಸಾಲಗಳನ್ನು ಮಾಡಬೇಕಾಯಿತು. ಎಲ್ಲ ರೈಲ್ವೆಗಳಿಂದಲೂ ಸೇರಿ ಆಗುವ ಒಟ್ಟು ಹುಟ್ಟುವಳಿಯ ಬಡ್ಜೆಟ್ ಅಂದಾಜುಗಳು ಸ್ವಲ್ಪ ಹೆಚ್ಚು ಕಡಿಮೆ 76 ಲಕ್ಷ ರೂಪಾಯಿಯೂ, ನಿವ್ವಳ ಹುಟ್ಟುವಳಿಯು $17\frac{1}{2}$ ಲಕ್ಷ ರೂಪಾಯಿ ಮಾತ್ರವೂ ಆಗುತ್ತದೆ. ಈ ಪೈಕಿ ಕೆಲಸ ನಡೆಸುವುದಕ್ಕಾಗಿ ಆಗುವ $58\frac{1}{2}$ ಲಕ್ಷ ರೂಪಾಯಿಯ ಖರ್ಚು, ಮದ್ರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರು ನಡೆಸುವ ಲೈನುಗಳ ವಿಷಯದಲ್ಲಿ ಒಟ್ಟು ಹುಟ್ಟುವಳಿಯ ಶೇಕಡ 74 ರಷ್ಟೂ ಸರ್ಕಾರದವರೇ ನಡೆಸುತ್ತಿರುವ ಲೈನುಗಳ ವಿಷಯದಲ್ಲಿ ಶೇಕಡ 80 ರಷ್ಟೂ ಆಗುತ್ತದೆ.

ನಮ್ಮ ರೈಲ್ವೆ ಆಯವ್ಯಯದ ಮೇಲ್ಕಂಡ ತಪಶೀಲುಗಳಿಂದ ನಾವು ಭಯಭ್ರಾಂತರೂ ಯೋಚನಾಪರರೂ ಆಗಬೇಕಾದ ಅವಶ್ಯಕವಿಲ್ಲ. ಮದ್ರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರು ತಮ್ಮ ಪರವಾಗಿ ಕೆಲಸ ನಡಿಸುತ್ತಿರುವ $275\frac{1}{2}$ ಮೈಲಿಗಳ ಜೊತೆಗೆ ತಾವೇ ಕೆಲಸ ನಡೆಸುತ್ತಿರುವ ತಮ್ಮ ಓಪನ್ ಲೈನುಗಳಲ್ಲಿ 400 ಮೈಲಿಗಳಿಗಿಂತಲೂ ಹೆಚ್ಚಾಗಿ ಸರ್ಕಾರದವರಿಗೆ ಸೇರಿದೆ. ಇದು ಅಮೌಲ್ಯವಾದ ಆಸ್ತಿ. ಇದರಿಂದ ಸುಮಾರು 5 ಕೋಟಿಯಷ್ಟು ಹಣವಿದ್ದಂತಾಯಿತು. ದುರದೃಷ್ಟ ದೆಶೆಯಿಂದ ಯುದ್ಧದ ಪ್ರಯುಕ್ತ ದುರಸ್ತು ಮತ್ತು ನವೀಕರಣದ ಕೆಲಸಗಳನ್ನು ತಡೆದು ನಿಲ್ಲಿಸಬೇಕಾಗಿ ಬಂದು ನಿವ್ವಳ ಹುಟ್ಟುವಳಿಯು ಕಡಿಮೆ ಬೀಳುವಂತೆ ಮುಂದಿನ ಕೆಲವು ವರ್ಷಗಳವರೆಗೂ ಬಹಳ ದುಬಾರಿ ಖರ್ಚನ್ನು ಇಡಬೇಕಾಗಿದೆ. ಪ್ರಯಾಣಿಕರ ಮತ್ತು ಮುಖ್ಯವಾಗಿ ಸಾಮಾನುಗಳ ಆಮದುರಫ್ತಿನ ವಿಷಯದಲ್ಲಿ ರೈಲ್ವೆ ಇಲಾಖೆಯವರ ಆಡಳಿತವು ಶುದ್ಧಾಂಗವಾಗಿ ತೃಪ್ತಿಕರವಾಗಿಲ್ಲವೆಂದು ಜನಗಳಲ್ಲಿ ಅಸಮಾಧಾನವು ನೆಲೆಗೊಂಡಿದೆಯೆಂಬ ಅಂಶವು ನಮ್ಮ ಗೋಚರಕ್ಕೆ ಬಂದಿದೆ. ದಿನೇದಿನೇ ಹೆಚ್ಚುತ್ತಿರುವ ಜನಗಳ ಮತ್ತು ಸಾಮಾನುಗಳ ಆಮದುರಫ್ತಿಗೆ ತಕ್ಕಂತೆ ಗಾಡಿಗಳೂ ಇಂಜನ್ನುಗಳೂ ಇಲ್ಲದೆ ನಮ್ಮ ರೈಲ್ವೆಯವರಿಗೆ ಬಹಳ ಮಟ್ಟಿಗೆ ತೊಂದರೆಯುಂಟಾಗಿದೆಯಲ್ಲದೆ ರೈಲು ರಸ್ತೆಗೂ ಸಹ, ಮುಖ್ಯವಾಗಿ ಬೆಂಗಳೂರು-ಮೈಸೂರು ಸೆಕ್ಷನ್ನಲ್ಲಿ, ಕೆಲವು ವರ್ಷಗಳ ವರೆಗೆ ಭಾರಿ ಬಂಡವಾಳದ ಕಾಂಗಾರಿ ಖರ್ಚನ್ನೊಳಗೊಳ್ಳುವ ನವೀಕರಣಗಳು ಜರೂರಾಗಿ ಬೇಕಾಗಿವೆ. ಆದಪ್ರಯುಕ್ತ ಹೊಸ ರೈಲು ರಸ್ತೆಗಳನ್ನು ಹಾಕದೇ ಹೋದರೂ ಹಾಲೀ ಇರುವ ರೈಲುರಸ್ತೆಗಳನ್ನು ಒಳ್ಳೆಯ ದುರಸ್ತು ಸ್ಥಿತಿಯಲ್ಲಿಡುವುದಕ್ಕಾಗಿ ಪ್ರತಿವರ್ಷವೂ ಕನಿಷ್ಠಪಕ್ಷ 15 ಲಕ್ಷ ರೂಪಾಯಿಗಳ ಮೇರೆಗೆ ರೈಲ್ವೆ ಬಾಬಿನಲ್ಲಿ ಬಂಡವಾಳದ ಖರ್ಚಿಗೆ ಹಣ ಒದಗಿಸಬೇಕಾಗುತ್ತದೆ. ಆದುದರಿಂದ ಕೆಲಸ ನಡೆಸುವ ಖರ್ಚನ್ನು ಕಡಮೆ ಮಾಡಿದಲ್ಲದೇ ನಿವ್ವಳ ಹುಟ್ಟುವಳಿಯಿಂದ, ಮೇಲೆ ಮೇಲೆ ಆಗಬೇಕಾದ ಅಭಿವೃದ್ಧಿ ಮತ್ತು ಬಡಾವಣೆ ಕೆಲಸಗಳಿಗಾಗಿ ವಿಶೇಷ ಹೆಚ್ಚಿನ ಮೊಬಲಗನ್ನು ಹಂಚಿಡಲು ಸಾಧ್ಯವಲ್ಲ—ಏತಕೆಂದರೆ ಆ ಬಗ್ಗೆ ತಗಲುವ ಲಾಗವಡನ್ನು ಸುಧಾರಿಸುವುದಕ್ಕಾಗಿ ಬಳಸಲು ಕೈಯಲ್ಲಿ ಯಾವ ವಿಧದ ರಿಜರ್ವ್ ಹಣವೂ ಇರುವುದಿಲ್ಲ. ಈ ಕಾರಣದಿಂದ ನಮ್ಮ ರೆಲ್ವೆಗಳಿಗೆ ಬೇಕಾದ ಹಣವನ್ನು ಯಾವ ಬಗೆಯಿಂದ ಒದಗಿಸುವದೆಂಬ ವಿಚಾರವನ್ನು ವ್ಯವಸ್ಥೆ ಮಾಡುವುದಕ್ಕೆ ಬಹು ಕಷ್ಟಗಳಿರುವುವು. ಈಚೆಗೆ ರೋಪನ್‌ಪಟ್ಟಣದಲ್ಲಿ ಸಂಸ್ಥಾನೀಕರ ಮಹಾಸಭೆಯೊಂದು ನಡೆದು ಅದರಲ್ಲಿ ಸಾಧಾರಣವಾಗಿ ರೈಲ್ವೆ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳು ಚರ್ಚಿಸಲ್ಪಟ್ಟವು. ಪ್ರಪಂಚದಲ್ಲೆಲ್ಲ ಕಡೆಯೂ ಜನರು ಅನುಭವಿಸುತ್ತಿರುವ ರೈಲ್ವೆಗಳ ಕೆಲಸ ನಡೆಸುವದರಲ್ಲಿ ತಗಲುವ ಹೆಚ್ಚು ಖರ್ಚನ್ನು ಕೊಡುವುದಕ್ಕೆ ಇರುವ ಕಷ್ಟಗಳು ಅಲ್ಲಿ ತಪಶೀಲಾಗಿ ಪರಿಶೀಲನೆ ಮಾಡಲ್ಪಟ್ಟು ಸಾಧ್ಯವಾದಕಡೆಯಲ್ಲೆಲ್ಲ ದುಬಾರಿ ಖರ್ಚನ್ನು ಕಡಮೆಮಾಡುವ ಬಗ್ಗೆ ಕೆಲವು ತೀರ್ಮಾನಗಳನ್ನು ಮಾಡಿರುವರು. ನಮ್ಮ ರೈಲ್ವೆ ಸಿಬ್ಬಂದಿಯು ಕೇವಲ ದುಬಾರಿಯಾಗಿರುತ್ತೆಂಬುದೇ ಜನರ ಸಾಮಾನ್ಯಾಭಿಪ್ರಾಯವಾಗಿರುವುದರಿಂದ ಇದನ್ನು ಜಾಗರೂಕತೆಯೊಡನೆ ಪರಿಶೀಲನೆ ಮಾಡಬೇಕಾಗಿದೆ. ಪರಂತು ಹೊಸದಾಗಿ ಹಾಕಿದ ರೈಲ್ವೆಗಳ ವಿಷಯದಲ್ಲಿ ಪ್ರಾರಂಭದಲ್ಲಿ ಅದನ್ನು ನಡೆಸುವ ಖರ್ಚು ಎಲ್ಲಿಯೂ ಹೆಚ್ಚಾಗಿಯೇ ಇರುವುದು. ಕ್ರಮಕ್ರಮವಾಗಿ ರೈಲ್ವೆಗಳು ರೂಢಿಗೆ ಬಂದು ಅವರ ಉಪಯೋಗವು ಹೆಚ್ಚುತ್ತ ಬಂದಹಾಗೆಲ್ಲ ಈ ಬಾಬಿನ ಖರ್ಚುಕಡಮೆ ಬೀಳುವುದು. ಅದು ಹಾಗಾದರೂ ಇರಲಿ. ರೆಲ್ವೆಯ ಆದಾಯವೆಚ್ಚದ ಯಾವತ್ತು ವಿಚಾರಗಳನ್ನು ನಾವು ತೂಲಂಕಷವಾಗಿ ಪರಿಶೀಲನೆ ಮಾಡಿ ರೈಲುಗಳನ್ನು ನಡೆಸುವ ಖರ್ಚನ್ನು ತಗ್ಗಿಸುವ ಪ್ರಯತ್ನಮಾಡುತ್ತೇವೆಂದು ತಾವುಗಳು ದೃಢವಾಗಿ ನಂಬಬಹುದು. ನಾವು ಕೊಟ್ಟಿರುವ ಆದಾಯವೆಚ್ಚದ ಅಂದಾಜಿನ ಮೇರೆಗೆ ಮುಂದಿನ ಮೂರು ವರ್ಷಗಳ ಕಾಲದಲ್ಲಿ ನಿವ್ವಳ ಹುಟ್ಟುವಳಿಯು 3 ಲಕ್ಷ ರೂಪಾಯಿಯಷ್ಟು ಹೆಚ್ಚುವುದೆಂದು ಹೇಳುವುದರಿಂದ ರೈಲ್ವೆಗಳ ಉಪಯೋಗವನ್ನೂ ಅವುಗಳ ವರಮಾನವನ್ನೂ ಮೇಲುಪಡಿಸುವ ವಿಷಯದಲ್ಲಿ ನಮ್ಮ ಕೈಲಾದ ಮಟ್ಟಿಗೆ ಯತ್ನಿಸುವೆವೆಂದು ನೀವು ಭರವಸೆಯಿಂದಿರಬಹುದು.

ಕೃಷ್ಣರಾಜಸಾಗರ ಮತ್ತು ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡು.

ಈ ಎರಡು ಏರ್ಪಾಡುಗಳಿಗಾಗಿ 1920-21ನೆಯ ವರ್ಷದ ಅಖೈರಿನ ವರೆಗೆ 308 ಲಕ್ಷ ರೂಪಾಯಿ ಖರ್ಚುಮಾಡಿದ್ದೇವೆ. ಅವುಗಳ ಆದಾಯ ವೆಚ್ಚದ ಫಲಿತಾಂಶಗಳನ್ನು ಈ ಕೆಳಗೆ ನಮೂದಿಸಿ ಇದೆ:—

1920-21ರ ಅಖೈರ್ ವರೆಗೆ ಬಂಡವಾಳದ ಖರ್ಚು.

ರಿಜರ್ವಾಯರಿಗೂ ಅದರಿಂದ ನಾಲೆಗಳನ್ನು ತೆಗೆದದ್ದಕ್ಕೂ	165·09 ಲಕ್ಷ
ಕಾವೇರಿ ವಿದ್ಯುಚ್ಛಕ್ತಿಯ ಕಾಮಗಾರಿಗಳಿಗೆ	142·75 ಲಕ್ಷ
ಜುಮ್ಲಾ	307·84 ಲಕ್ಷ

1920-21ರಲ್ಲಿ ಒಟ್ಟು ಹುಟ್ಟುವಳಿ.

ಸಾಗುವಳಿಗೆ ನೀರು ಸರಬರಾಯಿ ಮಾಡಿದ್ದರಿಂದ	·18 ಲಕ್ಷ
ವಿದ್ಯುಚ್ಛಕ್ತಿಯಿಂದ	30·22 ಲಕ್ಷ
ಜುಮ್ಲಾ	30·40 ಲಕ್ಷ

ಹುಟ್ಟುವಳಿಯ ಖರ್ಚು.

ರಿಜರ್ವಾಯರು ದೇಖಿಲು ನೀರುಸರಬರಾಯಿಗೆ	·42 ಲಕ್ಷ
ವಿದ್ಯುಚ್ಛಕ್ತಿಯ ಕಾಮಗಾರಿಗಳಿಗೆ	12·54 ಲಕ್ಷ
ಜುಮ್ಲಾ	12·96 ಲಕ್ಷ
ನಿವ್ವಳ ಹುಟ್ಟುವಳಿ	17·44 ಲಕ್ಷ

"ಕೃಷ್ಣರಾಜಸಾಗರದ ಮೊದಲನೆಯ ಅಂತಸ್ತಿನಲ್ಲಿ ನೀರಾವರಿ ಏರ್ಪಾಡು ಮತ್ತು ವಿದ್ಯುಚ್ಛಕ್ತಿ ಏರ್ಪಾಡು ಇವೆರಡರಲ್ಲಿ ಯಾವುದು ಹೆಚ್ಚು ಲಾಭಕರವಾಗಿರುತ್ತದೆ? ಮೇಲ್ಕಂಡ ಏರ್ಪಾಡಿನ ಮೊದಲನೆಯ ಅಂತಸ್ತಿನ ಪೂರಾ ಖರ್ಚನ್ನು ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡಿಗೆ ಹಾಕುವುದು ನ್ಯಾಯವೇ?" ಎಂಬ ಅಂಶಗಳನ್ನು ಪರಿಶೀಲಿಸಿ ತಿಳಿಸಬೇಕೆಂದು, ಮೇಲ್ಕಂಡ ಎರಡು ಏರ್ಪಾಡುಗಳನ್ನೂ ಮುಂದೆ ಯಾವರೀತಿ ನಡೆಸಬೇಕೆಂಬುದನ್ನು ಪರ್ಯಾಲೋಚಿಸುವುದಕ್ಕೆ ಕಳೆದವರ್ಷ ಸರ್ಕಾರದವರಿಂದ ಏರ್ಪಟ್ಟ ಕಮಿಟಿಯವರಿಗೆ ವಹಿಸಿತ್ತು.

ಕಮಿಟಿಯವರು ಅವರ ರಿಪೋರ್ಟನ್ನು ಕಳುಹಿಸಿರುತ್ತಾರೆ. ಅದು ಈಗ ಪರ್ಯಾಲೋಚನೆಯಲ್ಲಿದೆ. ಪರಂತು ಕೃಷ್ಣರಾಜಸಾಗರದ ಕ್ಷೇಮಕ್ಕೆ ಮಾತ್ರವೇ ಅಲ್ಲದೆ, ಅದನ್ನು ಕಟ್ಟಿಸಿದ ಮುಖ್ಯ ಉದ್ದೇಶಕ್ಕೂ ಕೂಡ ಸದರಿ ಕಾಮಗಾರಿಗಳನ್ನು ಯಾವ ಅಂತಸ್ತಿಗೆಬರುವತನಕ ಕಟ್ಟಿ ಪೂರೈಸುವುದು ನಮ್ಮ ಜವಾಬ್ದಾರಿಯಾಗಿದೆಯೋ ಆ ಅಂತಸ್ತಿನ ವರೆಗೆ ಕಟ್ಟಿಸಿ ಪೂರೈಸಬೇಕೆಂಬ ವಿಷಯದಲ್ಲಿ ಸಂದೇಹವಿಲ್ಲ. ಸದರಿ ಅಂತಸ್ತಿಗೆ ಬರಬೇಕಾದರೆ, ಕಮಿಟಿಯವರ ಅಂದಾಜಿನ ಮೇರೆಗೆ ಇನ್ನೂ 37 ಲಕ್ಷ ರೂಪಾಯಿ ಬೇಕಾಗುತ್ತದೆ. ಈ ಕೆಲಸವನ್ನು ಇನ್ನು ನಾಲ್ಕು ವರ್ಷಗಳೊಳಗಾಗಿ ಮಾಡಬೇಕೆಂತ ಅವರು ಸೂಚಿಸಿರುತ್ತಾರೆ. ಆ ರೀತಿ ಮಾಡಬೇಕಾದರೆ ವರ್ಷಒಂದಕ್ಕೆ ಸುಮಾರು 10 ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ಈಗಿನ ಸಂದರ್ಭದಲ್ಲಿ ಅಷ್ಟು ಹಣವನ್ನು ಕೊಡುವುದು ಸಂಸ್ಥಾನಕ್ಕೆ ಸಾಧ್ಯವಾಗಲಾರದು. ಆದಕಾರಣ ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡನ್ನೂ, ಕೃಷ್ಣರಾಜಸಾಗರದ ಏರ್ಪಾಡನ್ನೂ ಒಂದಾಗಿ ಸೇರಿಸಕೂಡದೇ? ಮತ್ತು ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡಿನ ಹುಟ್ಟುವಳಿ ಮತ್ತು ನಫೆಯ ಪೈಕಿ ಕನಿಷ್ಠಪಕ್ಷ ಒಂದು ಭಾಗವನ್ನಾದರೂ, ಹಣಸಾಲದೇ ಬಂದ ವರ್ಷಗಳಲ್ಲಿ, ಕೃಷ್ಣರಾಜಸಾಗರದ ಕಾಮಗಾರಿಗಳ ಅಖೈರು ಅಂತಸ್ತುಪೂರೈಸುವ ತನಕ ಅವುಗಳ ಖರ್ಚಿಗಾಗಿ ಉಪಯೋಗಿಸಕೂಡದೇ? ಎಂಬುವುದು ಪರ್ಯಾಲೋಚಿಸತಕ್ಕ ಭಾಗವಾಗಿದೆ. ಆರನೆಯ ಸ್ಥಾಪನೆಯ ಎರಡನೆಯ ಅಂತಸ್ತು ಪೂರೈಸಿದಾಗ, ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡಿನಿಂದ ವರ್ಷ ಒಂದಕ್ಕೆ ಒಟ್ಟು 53 ಲಕ್ಷರೂಪಾಯಿಯ ವರೆಗೆ ಭಾರೀ ಹುಟ್ಟುವಳಿಯು ಬರುವುದೆಂದೆಂತ ನಿರೀಕ್ಷಿಸಿದೆ. ನಾವು ಮಾಡಿರುವ ಮುಂದಿನ ವರ್ಷಗಳ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಈ ಎರಡನ್ನೂ ಒಟ್ಟು ಗೂಡಿಸಿದ ಏರ್ಪಾಡಿನಿಂದ ನಿವ್ವಳ ಹುಟ್ಟುವಳಿ ಬಾಬಿನಲ್ಲಿ ಮುಂದಿನ ಮೂರು ವರ್ಷಗಳಲ್ಲಿ 6 ಲಕ್ಷ ರೂಪಾಯಿ ಹೆಚ್ಚಾಗಿ ಬರುವುದೆಂತ ತೋರಿ

ಸಿರುತ್ತೇವೆ. ಈ ಎರಡು ಕಾರುಗಾರಿಗಳ ಹುಟ್ಟುವಳಿಯನ್ನೂ ಸಾಧ್ಯವಾದಷ್ಟು ಹೆಚ್ಚು ಪ್ರಯೋಜನವಾಗುವಂತೆ ಉಪಯೋಗ ಮಾಡುವವಿಷಯವನ್ನೂ ಇನ್ನು ಮುಂದೆ ಅಭಿವೃದ್ಧಿಗೋಸ್ಕರ ಒಂದು ನಿಷ್ಕೃಷ್ಟವಾದ ಕ್ರಮವನ್ನು ಅನುಸರಿಸುವ ವಿಷಯವನ್ನೂ ಸಹ ಕಾಲವಿಳಂಬ ಮಾಡದೆ ಕೂಡಲೇ ನಿರ್ಧರಿಸಬೇಕಾಗಿದೆ. ಈ ವಿಷಯಗಳನ್ನು ಸರ್ಕಾರದವರು ಸಾವಧಾನವಾಗಿ ಪರ್ಯಾಲೋಚಿಸುತ್ತಿದ್ದಾರೆ. ಕಮಿಟಿಯವರು ಮಾಡಿರುವ ರಿಪೋರ್ಟನ್ನೂ ಸರ್ಕಾರದವರ ತೀರ್ಮಾನವನ್ನೂ ಸಮಸ್ತ ಜನಗಳ ತಿಳಿವಳಿಕೆಯ ಬಗ್ಗೆ ಕ್ಷಿಪ್ರದಲ್ಲಿಯೇ ಪ್ರಕಟಿಸಬೇಕೆಂದಿದ್ದೇವೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆಗೆ ಸಂಸ್ಥಾನದ ವರಮಾನದ ಪೈಕಿ ಅಪಾರವಾದ ಹಣವು ಖರ್ಚಾಗುತ್ತದೆ ಎಂತಲೂ ಅದರಿಂದ ಲಾಭ ಹುಟ್ಟುವ ಸಂಭವವಿಲ್ಲವೆಂತಲೂ ಜನರೆಲ್ಲರೂ ವಿಶೇಷವಾಗಿ ಆಡಿಕೊಂಡು ಗಾಬರಿ ಪಡುತ್ತಿದ್ದಾರೆಂಬುವುದನ್ನು ನಾವು ಬಲ್ಲೆವು. ಈ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕಾಗಿ ಕಾಮಗಾರಿಗಳನ್ನು ಪ್ರಾರಂಭಿಸಿ ಈಗ ನಾಲ್ಕು ವರ್ಷವಾಗುತ್ತಾ ಬಂತು. ಕಬ್ಬಿಣದ ತಯಾರಿಯನ್ನೂ ಮರದ ಭಟ್ಟಿ ಇಳಿಸುವುದರಿಂದ ಉಂಟಾಗುವ ಇತರ ಪದಾರ್ಥಗಳ ತಯಾರಿಯನ್ನೂ ಹೋದ ವರ್ಷ ಮಾರ್ಚಿ ತಿಂಗಳಲ್ಲಿ ಪ್ರಾರಂಭಿಸಬಹುದೆಂತ ಯೋಚಿಸಿದ್ದದ್ದನ್ನು ಅನಿರೀಕ್ಷಿತವಾದ ಅನೇಕ ಕಾರಣಗಳಿಂದ ಇನ್ನೂ ಮುಂದಕ್ಕೆ ಹಾಕಬೇಕಾಯಿತು. ಈ ಏರ್ಪಾಟಿನ ನಾನಾ ಭಾಗಗಳಿಗೆ ಮೊದಲು ಅಂದಾಜು ಮಾಡಿದ್ದ ಖರ್ಚು, ಮುಖ್ಯವಾಗಿ ಯಂತ್ರಗಳ ಬೆಲೆ ಹೆಚ್ಚಿದ್ದರಿಂದಲೂ, ಮೊದಲು ಸೇರಿಸದೇ ಇದ್ದ ಕೆಲವು ಮುಖ್ಯ ಬಾಬುಗಳನ್ನು ಹೊಸದಾಗಿ ಸೇರಿಸಿದ್ದರಿಂದಲೂ ಮೂರರಷ್ಟಕ್ಕಿಂತಲೂ ಹೆಚ್ಚಾಗಿರುತ್ತದೆ. ಮರದ ಭಟ್ಟಿ ಇಳಿಸುವುದು, ಗಾರೇ ಕುಲುಮೆಗಳ ಯಂತ್ರ, ಅದುರು ಮತ್ತು ಸುಣ್ಣದ ದ್ರವ್ಯ, ಫಾರೆಸ್ಟ್ ಟ್ರಾಂವೆಗಳನ್ನು ಹಾಕುವುದು, ಏಜಂಟುಗಳ ದಳ್ಳಾಳಿ —ಇವೇ ಮುಂತಾದ ನಾನಾ ಬಾಬುಗಳ ಖರ್ಚಿಗಾಗಿ ಸರ್ಕಾರದವರು ಈಚೆಗೆ ಸುಮಾರು 211 ಲಕ್ಷ ರೂಪಾಯಿಯನ್ನು ಮಂಜೂರ್ಮಾಡಿರುವರಲ್ಲದೆ ಮುಂದಿನ ನವೆಂಬರ್ ತಿಂಗಳಲ್ಲಿ ಕೆಲಸವನ್ನು ಪ್ರಾರಂಭಿಸುವುದಕ್ಕೆ ಅನುಕೂಲಿಸುವಂತೆ ಒಂದು ನಿಷ್ಕೃಷ್ಟವಾದ ಕಾರ್ಯಕ್ರಮವನ್ನು ಗೊತ್ತುಮಾಡಿರುತ್ತಾರೆ. ಈ ಏರ್ಪಾಟಿಗಾಗಿ 1922ನೆಯ ಮಾರ್ಚಿ ಆಖೈರುವರೆಗೆ 158¾ ಲಕ್ಷ ರೂಪಾಯಿ ಖರ್ಚಾಗಿರುತ್ತದೆ. ಚಾಲ್ತಿ ವರ್ಷದ ಆಖೈರು ವರೆಗೆ ಇನ್ನೂ 15½ ಲಕ್ಷ ರೂಪಾಯಿಯನ್ನು ಖರ್ಚು ಮಾಡಬೇಕೆಂತ ಉದ್ದೇಶಿಸಿರುತ್ತದೆ. ಅಷ್ಟು ಹಣವನ್ನು ಖರ್ಚುಮಾಡಿದರೆ ಈ ಏರ್ಪಾಟಿನ ಮುಖ್ಯ ಭಾಗಗಳೆಲ್ಲವೂ ಪೂರೈಸುವವೆಂತಲೂ, ಕನಿಷ್ಠ ಪಕ್ಷ ಇನ್ನೂ ಮೂರುವರ್ಷಗಳ ವರೆಗೆ ಕಾಂಗಾರಿಗಳನ್ನು ನಡೆಸಿಕೊಂಡು ಬರುವುದಕ್ಕೆ ತುರ್ತು ಅವಶ್ಯಕವಾದ ಭಾಗಗಳನ್ನು ಪೂರೈಸುವುದಕ್ಕೆ ಇನ್ನು ಸುಮಾರು 9½ ಲಕ್ಷ ರೂಪಾಯಿ ಮಾತ್ರ ಬೇಕಾಗುವುದೆಂತಲೂ ನಿರೀಕ್ಷಿಸಿದೆ. ಈ ವರ್ಷಕ್ಕೆ ಈ ಕಾರ್ಖಾನೆಯ ಖರ್ಚಿಗೋಸ್ಕರ 80 ಲಕ್ಷ ರೂಪಾಯಿ ಮಂಜೂರ್ಮಾಡಿತ್ತು. ಆದರೆ 1922ನೆಯ ಜುಲೈವರೆಗೆ ಖರ್ಚನ್ನು 63 ಲಕ್ಷ ರೂಪಾಯಿಗೂ, ಮುಂದಿನ ವರ್ಷದ ಖರ್ಚನ್ನು 9½ ಲಕ್ಷ ರೂಪಾಯಿಗೂ ಮೀರದಂತೆ ಮಿತಪಡಿಸಬೇಕೆಂತ ಈಚೆಗೆ ಹುಕುಂ ಸಾದರ್ಮಾಡಿರುತ್ತೆ. ಇದೂ ಅಲ್ಲದೆ ಈ ಏರ್ಪಾಡಿಗೆ ಸುಮಾರು 20 ಲಕ್ಷ ರೂಪಾಯಿಯಷ್ಟು ಬಂಡವಾಳವು ಕೆಲಸ ನಡೆಸುವಬಗ್ಗೆ ಬೇಕಾಗುತ್ತದೆ. ಸದರಿ ಹಣವನ್ನು ಒದಗಿಸುವ ಮಾರ್ಗಗಳನ್ನು ಸರ್ಕಾರದವರು ಮ್ಯಾನೇಜಿಗ್ ಏಜಂಟರಾದ ಟಾಟಾ ಐರನ್ ಮತ್ತು ಸ್ಟೀಲ್ ಕಂಪೆನಿಯವರೊಡನೆ ಈಗ ಪರ್ಯಾಲೋಚಿಸುತ್ತಿದ್ದಾರೆ.

ಈ ಕಾರ್ಖಾನೆಯ ಲಾಭನಷ್ಟಗಳನ್ನು ಕುರಿತು ಮ್ಯಾನೇಜಿಂಗ್ ಏಜಂಟುಗಳ ಕಡೆಯ ಪ್ರವೀಣರುಗಳು ಒಂದು ತಪಶೀಲು ರಿಪೋರ್ಟನ್ನು ಕಳುಹಿಸಿರುತ್ತಾರೆ. ಮುಖ್ಯವಾಗಿ ಒರಟು ಕಬ್ಬಿಣದ ಖರೀದಿ ಕಡಮೆಯಾಗಿರುವುದು, ಕಲ್ಲಿದ್ದಲಿನ ಸಹಾಯದಿಂದ ತಯಾರುಮಾಡಿದ ಕಬ್ಬಿಣಕ್ಕೆ ಇಂಡಿಯಾದಲ್ಲಿಯೂ ಪೂರ್ವದೇಶಗಳಲ್ಲಿಯೂ ಬೆಲೆ ದೊರೆಯುವುದು ಅನಿಶ್ಚಿತವಾಗಿರುವುದು, ಈ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ಇತರ ಚಿಲ್ಲರೆ ಪದಾರ್ಥಗಳಿಗೆ ಇಂಡಿಯಾದಲ್ಲಿ ಗಿರಾಕಿಯಿಲ್ಲದೆ ಯೂರೋಪುಖಂಡಕ್ಕೆ ಸಾಗಿಸಬೇಕಾಗುವುದು, ಆಲ್ಕೋಹಾಲ್, ಲೈಮ್ ಅಸಿಟೇಟ್ ವಗೈರೆ ಉಪ ಉತ್ಪತ್ತಿಗಳಿಗೆ ಇಂಡಿಯಾದಲ್ಲಿ ಗಿರಾಕಿ ಇಲ್ಲವಾಗಿ ಯೂರೋಪಿಗೆ ರಫ್ತುಮಾಡಬೇಕಾಗುವುದು, ಇವೇ ಮುಂತಾದ ಮುಖ್ಯ ಕಾರಣಗಳಿಂದ ಈ ಕಬ್ಬಿಣದ ಕಾರ್ಖಾನೆಯಿಂದ ಮೊದಲು ಅಂದಾಜು ಮಾಡಿದಷ್ಟು ಫಾಯಿದೆ ಬರಲಾರದೆಂಬ ಅಂಶವು ಸದರಿ ರಿಪೋರ್ಟಿನಿಂದ ವ್ಯಕ್ತವಾಗುತ್ತದೆ. ಮುಖ್ಯವಾಗಿ ಅದುರು ಮುಂತಾದ ಕಚ್ಚಾ ಪದಾರ್ಥಗಳ ಬೆಲೆಯೂ ಸರಕುಗಳನ್ನು ಸಾಗಿಸುವ ಖರ್ಚೂ ಸಹ ಹೆಚ್ಚಿರುವುದರಿಂದ, ಕೆಲಸ ನಡೆಯಿಸುವುದರ ಖರ್ಚನ್ನು ಅನೇಕಬಾಬುಗಳಲ್ಲಿ ಮೊದಲು ಅಂದಾಜು ಮಾಡಿದ್ದಕ್ಕಿಂತಲೂ ಹೆಚ್ಚಿಸಬೇಕಾಗಿದೆ ಎಂಬುವುದೂ ವ್ಯಕ್ತಪಟ್ಟಿರುತ್ತದೆ. ಈ ಹೊಸತರವಾದ ಯಂತ್ರವು ಕೆಲಸಕ್ಕೆ ಸಿದ್ಧವಾಗಿರುವ ಸಮಯದಲ್ಲಿಯೇ ಒರಟು ಕಬ್ಬಿಣಕ್ಕೂ ಇತರ ಪದಾರ್ಥಗಳಿಗೂ ಧಾರಣೆ ಇಳಿದು ಅನುಕೂಲವಾಗದೇ ಹೋಗಿರುವುದು ಕೇವಲ ಆಶಾಭಂಗವನ್ನುಂಟುಮಾಡಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಪ್ರಕೃತ ಸ್ಥಿತಿಯು ಬಹಳ ಯೋಚನೆಗೆ ಕಾರಣವಾಗಿದ್ದರೂ, ಸಾಧ್ಯವಾದಲ್ಲಿ ನಷ್ಟವಾಗುವುದನ್ನು ತಪ್ಪಿಸಿ ಲಾಭಹುಟ್ಟುವಂತೆ ಮಾಡಬೇಕೆಂಬ ಉದ್ದೇಶದಿಂದ ಈ ವಿಷಯವನ್ನು ಜಾಗರೂಕತೆಯಿಂದ ಪರಿಶೀಲನೆ ಮಾಡುತ್ತಾ ಇದೆಯೆಂದು ತಮಗೆ ದೃಢವಾಗಿ ಹೇಳುತ್ತೇವೆ. ಕೆಲಸವು ಇಷ್ಟರ ಮಟ್ಟಿಗೆ ನಡೆದು ಪೂರೈಸುತ್ತಾ ಬಂದಿರುವಾಗ ಅದನ್ನು ನಿಲ್ಲಿಸಿಬಿಟ್ಟು ಧಾರಣೆವಾಸಿಗಳು ಮುಂದೆ ಅನುಕೂಲತೆಗೆ ಬಂದಾಗ ಪುನಃ ಕೆಲಸ ಶುರುಮಾಡುವುದಕ್ಕೋಸ್ಕರ ಯಂತ್ರವನ್ನು ಈಗ್ಗೆ ಮೋತ್‌ಫ್ ಮಾಡುವುದು ಬಹಳ ಅನುಚಿತ; ಏಕೆಂದರೆ, ಈ ಏರ್ಪಾಟಿಗೆ ಸರ್ಕಾರದವರು ಇದುವರೆಗೆ ಹಾಕಿರುವ ಹಣದಮೇಲೆ ಬಡ್ಡಿಯನ್ನು ಹ್ಯಾಗಾದರೂ ಕೊಡಲೇಬೇಕು. ಇದರಿಂದ ಸರ್ಕಾರಕ್ಕೆ ಭಾರಜಾಸ್ತಿಯಾಗುತ್ತದೆ. ಆದಕಾರಣ ಯಂತ್ರವನ್ನು ನಡಿಸಿದರೆ ಕೆಲಸದ ಖರ್ಚನ್ನೆಲ್ಲಾ ಕೊಟ್ಟು ನಿವ್ವಳ ಉತ್ಪತ್ತಿಯನ್ನು ಪಡೆಯುವ ಸಂಭವವಿರುವ ಪಕ್ಷದಲ್ಲಿ, ನಿರ್ಭಯವಾಗಿ ಕೆಲಸವನ್ನು ಕೈಗೊಳ್ಳಲೇಬೇಕೆಂಬುವುದರಲ್ಲಿ ಭಿನ್ನಾಭಿಪ್ರಾಯವಿರಲಾರದು. ಆದಕಾರಣ ಕೆಲಸವನ್ನು ನವಂಬರ್ ತಿಂಗಳಲ್ಲಿ ಪ್ರಾರಂಭಿಸಬೇಕೆಂತ ತೀರ್ಮಾನಿಸಿದೆ. ಯಂತ್ರವನ್ನು ಸುಮಾರು 18 ತಿಂಗಳು ನಡಿಸಿ ನೋಡಿದ ಹೊರತು, ಫಲಿತಾಂಶಗಳವಿಷಯವಾಗಿ ನಿರ್ಧರವಾದ ಅಂದಾಜನ್ನು ಮಾಡಲಾಗುವುದಿಲ್ಲ. ಆದರೂ ಮೂರು ವರ್ಷಗಳ ಕಾಲದಲ್ಲಿ ಕೆಲಸವು ಲಾಭಕರವಾದ ಸ್ಥಿತಿಗೆ ಬರುವುದೆಂದು ನಂಬುತ್ತೇವೆ. ಈ ಭಾವನೆಯ ಮೇಲೆ ಮೂರನೆಯ ವರ್ಷದಲ್ಲಿ 3 ಲಕ್ಷ ರೂಪಾಯಿಯನಿವ್ವಳ ಆದಾಯ ಬರುವುದೆಂದು ಮಿತವಾದ ಅಂದಾಜನ್ನು ತೆಗೆದುಕೊಂಡಿರುತ್ತೇವೆ, ಆದರೆ ಸಾಮಾನ್ಯವಾಗಿ ಒಳ್ಳೆಯ ಧಾರಣೆ ಬಂದಲ್ಲಿ ಈ ಆದಾಯವು ಇನ್ನೂ ಹೆಚ್ಚಲೀಹೆಚ್ಚುವುದು.

ಗಂಧದ ಎಣ್ಣೆಯ ಕಾರ್ಖಾನೆ.

1916ನೆಯ ವರ್ಷಕ್ಕೆ ಮೊದಲು ಫಾರೆಸ್ಟು ಇಲಾಖೆಯವರು ಗಂಧದ ಮರವನ್ನು ಬಹಿರಂಗವಾದ ಹರಾಜಿನಲ್ಲಿ ವಿಕರಿ ಮಾಡುತ್ತಿದ್ದರು ಇದರಿಂದ ಸಂಸ್ಥಾನಕ್ಕೆ ಹುಟ್ಟುವಳಿಯು ತಕ್ಕಷ್ಟು ಚೆನ್ನಾಗಿಯೇ ಇತ್ತು. ಯುದ್ಧ ಪ್ರಾರಂಭವಾದ ಕೂಡಲೆ 1914ನೆಯ ನವಂಬರು ಮತ್ತು ಡಿಸಂಬರು ತಿಂಗಳುಗಳಲ್ಲಿ ನಡೆದ ಗಂಧದ ಮರದ ಹರಾಜುಗಳಲ್ಲಿ ಸರಿಯಾದ ಸವಾಲುಗಳು ಬರಲಿಲ್ಲ. ಆಗ ಸರ್ ಆಲ್ಫ್ರೆಡ್ ಛಾಟರ್ಟನ್‌ರವರ ಶಿಫಾರಸಿನ ಮೇಲೆ ಗಂಧದ ಮರದಿಂದ ಎಣ್ಣೆಯನ್ನು ತೆಗೆದು ಆ ಎಣ್ಣೆಯನ್ನು ವಿಕರಿ ಮಾಡುವ ವಿಷಯವನ್ನು ಸರ್ಕಾರದವರು ಆಸಕ್ತಿಯಿಂದ ಪರ್ಯಾಲೋಚಿಸಿ, ಬೆಂಗಳೂರಿನಲ್ಲಿ ಗಂಧದ ಮರದಿಂದ ಭಟ್ಟಿ ಇಳಿಸುವ ಒಂದು ಸಣ್ಣ ಕಾರ್ಖಾನೆಯನ್ನು ಸ್ಥಾಪಿಸಿದರು. ಈ ಕಾರ್ಖಾನೆಯು 1916ನೆಯ ಮೇ ತಿಂಗಳಿನಲ್ಲಿ ಕೆಲಸವನ್ನು ಉಪಕ್ರಮಿಸಿತು. ಈ ಪ್ರಯತ್ನವು ಫಲವಾಗಿ ಕಂಡುಬರಲು ಇದಕ್ಕಿಂತಲೂ ಸ್ವಲ್ಪ ಭಾರಿಯಾಗಿ ಮೈಸೂರಿನಲ್ಲಿ ಒಂದು ಕಾರ್ಖಾನೆಯು ಸ್ಥಾಪಿತವಾಗಿ ಆಗಸ್ಟು 1917ರಲ್ಲಿ ಕೆಲಸವು ಪ್ರಾರಂಭವಾಯಿತು.

1921ನೆಯ ಡಿಸೆಂಬರು ಆಖೈರಿನವರೆಗೆ ಈ ಕಾರ್ಖಾನೆಗಳ ಬಗ್ಗೆ ಖಾಯಂ ಬಂಡವಾಳಕ್ಕಾಗಿ ಒಟ್ಟು 676 ಲಕ್ಷ ರೂಪಾಯಿ ಹಾಕಲ್ಪಟ್ಟಿತು. ಈ ಕಾರ್ಖಾನೆಗಳಲ್ಲಿ ಕೆಲಸ ನಡೆಯುತ್ತಿದ್ದ 5½ ವರ್ಷಗಳಲ್ಲಿ ಫಾರೆಸ್ಟು ಇಲಾಖೆಯಿಂದ 97.70 ಲಕ್ಷ ರೂಪಾಯಿಯ ಕಿಮ್ಮತ್ತಿನ 6,249 ಟನ್ನು ಗಂಧದ ಮರವನ್ನು ಕೊಳ್ಳಲಾಯಿತು. ಈ ಮೊಬಲಗನ್ನು "ಫಾರೆಸ್ಟು" ಬಾಬಿಗೆ ಜಮೆ ಕಟ್ಟಿರುತ್ತದೆ.

ಯಂತ್ರ, ಕಟ್ಟಡ ಮೊದಲಾದುವುಗಳ ಡಿಪ್ರಿಸಿಯೇಷನಗಾಗಿ 2.22 ಲಕ್ಷ ರೂಪಾಯಿಯನ್ನು ವಜಾ ಹಾಕಿಕೊಂಡಾಗ್ಯೂ, ಕಳೆದ 5½ ವರ್ಷಗಳಲ್ಲಿ ಎಣ್ಣೆಯ ವಿಕರಿಯಿಂದ ಈ ಕಾರ್ಖಾನೆಗಳಲ್ಲಿ 23.17 ಲಕ್ಷ ರೂಪಾಯಿಯ ನಿವ್ವಳ ಆದಾಯ ಕೇಲರುತ್ತೆಂದು 1921ನೆಯ ಡಿಸಂಬರು ಆಖೈರಿನವರೆಗೆ ತಯಾರಿಸಿರುವ ಲಾಭ ನಷ್ಟದ ಲೆಕ್ಕಗಳಿಂದ ಕಂಡುಬರುವುದು. ಖಾಯಂ ಮತ್ತು ಚಾಲ್ತಿ ಬಂಡವಾಳಗಳ ಬಡ್ಡಿಯ ಬಗ್ಗೆ 7.92 ಲಕ್ಷ ರೂಪಾಯಿಯನ್ನು ವಜಾಮಾಡಿದರೂ ಕಂಡ ಈ ಕಾಲದಲ್ಲಿ ಬಹುಮಟ್ಟಿಗೆ ಎಣ್ಣೆಗೆ ಹೆಚ್ಚು ಬೆಲೆ ದೊರೆಯುತ್ತಿದ್ದುದರಿಂದ 15.24 ಲಕ್ಷ ರೂಪಾಯಿಯ ನಿವ್ವಳ ಆದಾಯವುಂಟಾಯಿತು. ಈ ಕಾರ್ಖಾನೆಯನ್ನು ಉಪಕ್ರಮಿಸುವುದಕ್ಕೆ ಹಿಂದಣ ಐದು ವರ್ಷಗಳಲ್ಲಿ ಒಟ್ಟು 11,741 ಟನ್ನು ಮರದ ಹರಾಜಿನಿಂದ ಫಾರೆಸ್ಟು ಇಲಾಖೆಗೆ 88.89 ಲಕ್ಷ ರೂಪಾಯಿ ಹುಟ್ಟುವಳಿಯಾಗಿರುವಲ್ಲಿ, ಮೇಲ್ಕಂಡ ಐದೂವರೆ ವರ್ಷಗಳಲ್ಲಿ ನಮ್ಮ ಕಾರ್ಖಾನೆಗಳಿಗೆ ಸರಬರಾಯಿ ಮಾಡಿದ 6,249 ಟನ್ನುಗಳಿಗೆ 97.70 ಲಕ್ಷ ರೂಪಾಯಿ ವಸೂಲಾಗಿರುವುದೆಂದು ಕೇಳಿ ತಮಗೆಲ್ಲಾ ಸಂತೋಷವಾಗಬಹುದು.

ಆದರೂ ಕಳೆದ ಒಂದೂವರೆ ವರ್ಷದಲ್ಲಿ ಯೂರೋಪು ಖಂಡದ ದೇಶಗಳಲ್ಲಿ ವ್ಯಾಪಾರವು ಅವ್ಯವಸ್ಥೆಗೆ ಬಂದು ಬೆಲೆಯು ಗಣನೀಯವಾಗಿ ತಗ್ಗಬೇಕಾಗಿ ಬಂದರೂಕೂಡ ಗಂಧದೆಣ್ಣೆಗೆ ಗಿರಾಕಿ ಚುರುಕಾಗಿಲ್ಲವಾಗಿ, ಸ್ವಲ್ಪ ಕಾಲದವರೆ ಮೈಸೂರು ಕಾರ್ಖಾನೆಯನ್ನು ನಿಲ್ಲಿಸುವುದು ಯುಕ್ತವೆಂದು ಕಂಡುಬಂದಿತು. ಪ್ರಕೃತದಲ್ಲಿ ಬೆಂಗಳೂರಿನ ಕಾರ್ಖಾನೆಯೊಂದರಲ್ಲಿಯೇ ಕೆಲಸ ನಡೆಯುತ್ತಿರುವುದು. ಆದರೆ ಎಲ್ಲಾ ಅಂಶಗಳನ್ನೂ ಪರ್ಯಾಲೋಚಿಸಿದಲ್ಲಿ ಲಾಭ ಹೆಚ್ಚಾಗಿ ಬರಬೇಕಾದರೆ ಗಂಧದ ಮರದಿಂದ ಎಣ್ಣೆಯನ್ನು ತೆಗೆಯುವುದು ಅವಶ್ಯಕವೆಂದು ಅನುಭವದಿಂದ ತಿಳಿದು ಬಂದಿರುತ್ತದೆ. ಆದ್ದರಿಂದ ಹಾಲಿ ಇರುವ ಏರ್ಪಾಡನ್ನೇ ನಡಿಸಿಕೊಂಡು ಬರತಕ್ಕದೆಂದು ಸರ್ಕಾರದವರು ಉದ್ದೇಶಿಸಿರುತ್ತಾರೆ.

ಎಣ್ಣೆಗೆ ಪುನಃ ಗಿರಾಕಿಯುಂಟಾಗುವುದೆಂಬ ಚಿಹ್ನೆಗಳು ಕಳೆದ ಕೆಲವು ತಿಂಗಳುಗಳಿಂದಲೂ ಕಂಡುಬರುತ್ತಿವೆಯಾಗಿ, ಮುಂದಿನ ವರ್ಷ ತಯಾರಾಗುವ ಎಣ್ಣೆಯೇ ಅಲ್ಲದೆ ಸಿಲ್ಕು ನಿಂತಿರುವ ಎಣ್ಣೆಯೂ ಸಹ ಬಹುಮಟ್ಟಿಗೆ ವಿಕರಿಯಾಗುವುದೆಂದು ನಿರೀಕ್ಷಿಸಿದೆ. ಹಿಂದೆ ಸರಬರಾಯಿ ಆದ ಗಂಧದ ಮರಕ್ಕಾಗಿ ಕಾರ್ಖಾನೆಯು ಫಾರೆಸ್ಟು ಇಲಾಖೆಗೆ ಕೊಟ್ಟ ದರವು ಎಣ್ಣೆಯ ಬೆಲೆಯಿಂದ ಹುಟ್ಟುವಳಿಯಾಗುವುದಕ್ಕಿಂತಲೂ ಹೆಚ್ಚಾಗಿರುವಂತೆ ಕಂಡುಬಂದಿದೆ. ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ 90,000 ರೂಪಾಯಿ ಕಮ್ಮಿ ಬದ್ಧಂತೆ ತೋರಿಸಿರುವುದಕ್ಕೆ ಇದೇ ಕಾರಣ.

ಇತರ ಕೈಗಾರಿಕೆಯ ಕೆಲಸ.

ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯ ಹುಕೋಟಿಯಲ್ಲಿರುವ ಕೈಗಾರಿಕೆಯ ಕಾರ್ಖಾನೆಗಳು ಯಾವುವೆಂದರೆ:—

(1) ಸಾಬೂನು ಕಾರ್ಖಾನೆ,
(2) ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪು,
(3) ಮೆಟಲ್‌ಫ್ಯಾಕ್ಟರಿ,
(4) ಆರ್ಟ್‌ವರ್ಕ್‌ಷಾಪು,
(5) ನೆಯಿಗೆಯ ಕಾರ್ಖಾನೆ ಮತ್ತು
(6) ಆರ್ಟ್ ಮತ್ತು ಕ್ರಾಫ್ಟ್ ಡಿಪೋ.

ಇವುಗಳ ಪೈಕಿ ಕೆಲವು ಇತರರಿಗೆ ದಾರಿ ತೋರಿಸುವ ಬಗ್ಗೆ ಪ್ರಾರಂಭಿಸಲ್ಪಟ್ಟವು. ಮತ್ತು ಕೆಲವು ಕೊಂಚಮಟ್ಟಿಗೆ ಶಿಕ್ಷಣವನ್ನು ಕೊಡುವುದಕ್ಕೂ ನಿದರ್ಶನದ ಬಗ್ಗೂ, ಇನ್ನೂ ಕೊಂಚಮಟ್ಟಿಗೆ ಲಾಭಕೋರಿಸುವ ದೃಷ್ಟಿಯಿಂದಲೂ ಪ್ರಾರಂಭಿಸಿದವಾಗಿರುವುವು. ಮೇಲೆ ನಮೂದಿಸಿದವುಗಳಲ್ಲಿ ಮೆಟಲ್‌ಫ್ಯಾಕ್ಟರಿಯನ್ನು ಈಚೆಗೆ ಒಂದು ಖಾಸಗೀ ಕಂಪೆನಿಗೆ ವಿಕರಿ ಮಾಡಲಾಗಿದೆ. ಇದರಿಂದ ಅದಕ್ಕಾಗಿ ಖರ್ಚುಮಾಡಿದ್ದ 1,56,500 ರೂಪಾಯಿ ಬಂಡವಾಳವೆಲ್ಲ ಬಂದಿರುತ್ತದೆ. ಈ ಕಾರ್ಖಾನೆಯು ಇಲಾಖೆಯವರಿಂದ ನಡೆಸಲ್ಪಡುತ್ತಿದ್ದ ಕಾಲದಲ್ಲಿ ಯುದ್ಧದ ಪ್ರಯುಕ್ತ ಸ್ಥಿತಿಗಳು ಸರಿಯಾಗಿಲ್ಲದಿದ್ದ ಕಾರಣ ಬೆಲೆ ಬಹಳವಾಗಿ ತಗ್ಗಿದ್ದುದರ ನಿಮಿತ್ತ ಇದನ್ನು ನಡೆಸುವುದರಲ್ಲಿ ನಷ್ಟವುಂಟಾಗಿತ್ತು. ಆದರೆ ಅದನ್ನು ವಿಕರಿ ಮಾಡುವುದಾಗಿ ಪ್ರಕಟಿಸಿದ ಕೂಡಲೇ ಖಾಸಗೀ ಬಂಡವಾಳಸ್ಥರು ಅದನ್ನು ಕೊಂಡುಕೊಳ್ಳುವುದಕ್ಕೆ ಮುಂದಾಳುಗಳಾಗಿ ಬಂದುದನ್ನು ನೋಡಿದರೆ ಇದನ್ನು ಲಾಭಬರುವ ರೀತಿಯಲ್ಲಿ ನಡೆಸುವುದು ಸಾಧ್ಯವೆಂತ ಸಿದ್ಧಾಂತವಾಗುತ್ತದೆ.

ಸಾಬೂನು ಕಾರ್ಖಾನೆಯ ಮೇಲಿನ ಬಂಡವಾಳದ ಖರ್ಚು 71,000 ರೂಪಾಯಿಗಳಾಗಿರುತ್ತದೆ. ಮತ್ತು ಒಟ್ಟಿನಲ್ಲಿ ಅದರಿಂದ ಫಾಯಿದೆಯೇ ಆಗಿರುತ್ತದೆ. ಈ ಕಾರ್ಖಾನೆಯನ್ನೂ ಸಹ ಖಾಸಗೀ ಜನರಿಗೆ ಕೊಟ್ಟುಬಿಡುವ ಉದ್ದೇಶವಿದೆ.

ಇತರ ಕಾರ್ಖಾನೆಗಳಿಗಾಗಿ ಮುಟ್ಟಿರುವ ಬಂಡವಾಳದ ಲಾಗವಡು ಈ ಕೆಳಗೆ ಕಂಡಂತಿರುವುದು:—

ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪು	2,93,000	ರೂ.
ಆರ್ಟ್ ವರ್ಕ್‌ಷಾಪು	29,000	,,
ನೇಯಿಗೆ ಕಾರ್ಖಾನೆ	36,000	,,
ಆರ್ಟ್ ಮತ್ತು ಕ್ರಾಫ್ಟ್ಸ್ ಡಿಪೊ	2,500	,,

ಇವುಗಳನ್ನು ನಡೆಸುವುದರಲ್ಲಿ ಸುಮಾರು 2 ಲಕ್ಷ ರೂಪಾಯಿ ನಷ್ಟವುಂಟಾಗಿದೆ. ಅದನ್ನು ಈ ವರುಷದ ಲೆಕ್ಕದಲ್ಲಿ ವಜಾಮಾಡಲಾಗುತ್ತದೆ. ಈ ಕಾರ್ಖಾನೆಗಳ ಪ್ರಕೃತ ಬೆಲೆಯನ್ನು ನಿಶ್ಚಯಿಸುವ ಬಗ್ಗೆ ಅವುಗಳಿಗೆ ಬೆಲೆ ಕಟ್ಟಿಸಬೇಕೆಂದು ಉದ್ದೇಶಿಸಿದೆ. ಇದರಿಂದ ಮುಂದೆ ಇವುಗಳಿಂದ ಲಾಭ ಕಾಣುವ ರೀತಿಯಲ್ಲಿ ನಡೆಸುವುದಕ್ಕೆ ಅವಕಾಶವನ್ನು ಕೊಟ್ಟಂತಾಗುವುದು. ಕೆಲಸಗಳನ್ನು ಉತ್ತಮ ರೀತಿಯಲ್ಲಿ ನಡೆಸುವುದನ್ನು ಜನರಿಗೆ ನಿದರ್ಶನ ಪಡಿಸಿಕೊಟ್ಟು ಅವರನ್ನು ತರಬೇತು ಮಾಡುವ ವಿಷಯದಲ್ಲಿ ಈ ಕಾರ್ಖಾನೆಗಳಲ್ಲಿ ಬಹುಮಟ್ಟಿನ ಪ್ರಯೋಜನಕರವಾದ ಕೆಲ ಗಳು ನಡೆದಿರುವುದನ್ನು ಪರ್ಯಾಲೋಚಿಸುವಲ್ಲಿ, ಮುಂದೆ ಹೆಚ್ಚಾಗಿ ದಕ್ಷತೆಯಿಂದ ಲಾಭ ನಷ್ಟಗಳಿಗೆ ಗಮನ ಕೊಡುವ ರೀತಿಯಿಂದ ಅವುಗಳನ್ನು ನಡಿಸಿಕೊಂಡು ಬರಬೇಕಾದುದು ಅವಶ್ಯಕವೆಂದು ತೋರುತ್ತದೆ.

ಉಪಸಂಹಾರ.

ಹುಟ್ಟುವಳಿಯನ್ನು ಹೆಚ್ಚಿಸುವುದರ ಮೂಲಕವೂ, ಖರ್ಚನ್ನು ಹೆಚ್ಚಿಸುವುದರ ಮೂಲಕವೂ ಪ್ರಕೃತ ಸ್ಥಿತಿಯನ್ನು ಎಷ್ಟೇ ಉತ್ತಮಪಡಿಸಿದಾಗ್ಯೂ, ಸಹ, ಹೆಚ್ಚು ಖರ್ಚು ಬೇಕಾಗುವ ರಾಜ್ಯಾಡಳಿತದ ಯಾವ ಏರ್ಪಾಟಿಗೇ ಆಗಲಿ, ಅದು ಎಷ್ಟೇ ಮುಖ್ಯವಾಗಿದ್ದಾದರೂ, ಎಷ್ಟೇ ತುರ್ತಾಗಿ ನಡೆಯಬೇಕಾದ್ದಾದರೂ, ಅದನ್ನು ನಡೆಸುವುದಕ್ಕೆ ಹಣ ದೊರೆಯುವುದು ಕೇವಲ ದುರ್ಲಭವೆಂತ ತಮಗೆ ವೇದ್ಯವಾಗುವುದು. ಇಂತಹ ಸ್ಥಿತಿಯು ಪ್ರಾಪ್ತವಾದದ್ದು ತುಂಬಾ ಶೋಚನೀಯವಾಗಿರುತ್ತದೆ. ಇದರಿಂದ ಸಾಧ್ಯವಾದಷ್ಟು ಜಾಗ್ರತೆಯಾಗಿ ಪಾರಾಗುವುದಕ್ಕೆ ನಾವು ಸಕಲ ಪ್ರಯತ್ನಗಳನ್ನೂ ಮಾಡಬೇಕಾದ್ದು ಅವಶ್ಯಕ. ವಿದ್ಯಾಭ್ಯಾಸಕ್ಕಾಗಿ ಯಾವಯಾವ ರೀತಿಯಲ್ಲಿ ಹಣವನ್ನು ಒದಗಿಸಬೇಕೆಂಬ ವಿಷಯದಲ್ಲಿ ಎಜ್ಯುಕೇಷನ್ ಮೆಮೋರಾಂಡಮ್‌ನಲ್ಲಿ ಸರ್ಕಾರದವರು ಮಾಡಿರುವ ಹುಕುಮಿನಂತೆ ಹಣ ಒದಗಿಸುವುದರಲ್ಲಿ ಈಚೆಗೆ ಒದಗಿದ ತೊಂದರೆಗಳು ಪ್ರಾಪ್ತವಾದ ಪ್ರಯುಕ್ತ ಸದರಿ ಹಣ ಒದಗಿಸುವ ರೀತಿಯನ್ನು ಕ್ಷಿಪ್ರದಲ್ಲಿಯೇ ಜಾಗರೂಕತೆಯಿಂದ ಪುನರಾಲೋಚಿಸಲಾಗುವುದು. ಸದರಿ ಹುಕುಮಿನಲ್ಲಿ ಸೂಚಿಸಿರುವ ಹೆಚ್ಚಿಗೆ ಹಣದ ಬಾಬುಗಳು ಸುಲಭವಾಗಿ ದೊರೆಯದೆಹೋದ ಪಕ್ಷದಲ್ಲಿ, ಇನ್ನುಮುಂದೆ ಕಾಲವಿಳಂಬವಾಗದಂತೆ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಸುಧಾರಣೆಗಳನ್ನು ಜಾರಿಗೆ ತರಲು ಸಾಧ್ಯವಾಗುವಂತೆ ಬೇರೆ ಬೇರೆ ಇಲಾಖೆಗಳ ಖರ್ಚನ್ನು ಬದಲಾಯಿಸಬೇಕಾಗುವುದು. ವಿದ್ಯಾಭ್ಯಾಸದ ತರಿಗೆಯಿಂದ ಬರುವ ಹುಟ್ಟುವಳಿಯಿಂದಲೂ, ಮೊಹತರ್ಫಾ ಮತ್ತು ಲೋಕಲ್ ಫಂಡ್ ಜನರಲ್ ಬಾಬುಗಳಿಂದ ಅಥವಾ ಅವುಗಳ ಪೈಕಿ ಎಷ್ಟನ್ನು ಸರ್ಕಾರಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಬಹುದೋ ಅಷ್ಟರಿಂದ ಬರುವ ಹುಟ್ಟುವಳಿಯಿಂದಲೂ ಇದುವರೆಗೆ ನಿರ್ಧರಿಸಿರುವ ಕಾರ್ಯಕ್ರಮದ ಮೇರೆಗೆ, ನಾವು ಸೂಚಿಸಿರುವ ಆದಾಯ ವೆಚ್ಚದ ಅಂದಾಜಿನ ಅವಧಿಯೊಳಗಾಗಿ ಕೆಲಸಗಳನ್ನು ಜಾರಿಗೆ ತರಲು ಸಾಧ್ಯವಾದೀತೆಂತ ನಮಗೆ ಸಂಪೂರ್ಣ ಭರವಸೆ ಇರುತ್ತದೆ. ಆದರೂ ನಮ್ಮ ಪ್ರಕೃತಸ್ಥಿತಿಯಲ್ಲಿ ಬಹುಮಟ್ಟಿನ ಕಷ್ಟಗಳು ಒದಗಿರುತ್ತವೆಂಬುದನ್ನು ತಾವುಗಳು ಗ್ರಹಿಸಿರುತ್ತೀರೆಂತ ನಂಬಿದ್ದೇವೆ. ಈ ಸಂಸ್ಥಾನದಿಂದ ಇಂಡಿಯಾ ಸರ್ಕಾರಕ್ಕಾಗಿ ಸೈನ್ಯವನ್ನು ಇಟ್ಟುಕೊಂಡಿರಬೇಕಾದ ವಿಷಯವನ್ನೂ, ಮೈಸೂರು ದೇಶದ ಪ್ರಜೆಗಳು ತರಿಸಿಕೊಳ್ಳುವ ಪದಾರ್ಥಗಳ ಮೇಲೆ ಕೊಟ್ಟ ಸುಂಕವು ಇಂಡಿಯಾ ಸರ್ಕಾರದವರಿಗೆ ಸೇರುವ ವಿಷಯವನ್ನೂ ಪರ್ಯಾಲೋಚಿಸಬೇಕಾಗಿದೆ. ಈ ವಿಷಯಗಳಿಗೂ ಇದೇ ತರಹೆಯ ಇತರ ವಿಷಯಗಳಿಗೂ ಸರ್ಕಾರದವರು ಈಗಲೂ ಇನ್ನುಮುಂದೆಯೂ ಪೂರ್ಣವಾದ ಗಮನವನ್ನು ಕೊಡುತ್ತ ಬರುವರೆಂದು ತಾವು ಭರವಸೆಯಿಂದಿರಬಹುದು. ನಾವು ಈ ವಿಷಯದಲ್ಲಿ ಇಂಡಿಯಾ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುವುದನ್ನು ಅವರು ನ್ಯಾಯಕ್ಕೂ ಧರ್ಮಕ್ಕೂ ಅನುಸಾರವಾಗಿ ಪರ್ಯಾಲೋಚಿಸುವರೆಂತ ನಾವು ದೃಢವಾಗಿ ನಂಬಿರುತ್ತೇವೆ. ಈ ಅಧಿವೇಶನವನ್ನು ಪೂರೈಸಿ ಹೊರಡುವುದಕ್ಕೆ ಮುಂಚೆ ಸಂಸ್ಥಾನದ ಆದಾಯ ವೆಚ್ಚದ ವಿಷಯವನ್ನು ವಿಶದವಾಗಿ ಗ್ರಹಿಸಿಕೊಂಡು ಆದಾಯವೂ ವೆಚ್ಚವೂ ಸಮತೂಕವಾಗುವಂತೆ ಮಾಡಲು ನಮ್ಮಿಂದ ಸಾಧ್ಯವಾಗುವ ಸಮಸ್ತ ಪ್ರಯತ್ನಗಳನ್ನೂ ಮಾಡುವೆನೆಂಬ ದೃಢಪ್ರತಿಜ್ಞೆಯಿಂದ ಹೊರಡುವೆವೆಂತ ನಾವು ನಿರೀಕ್ಷಿಸಬಹುದಲ್ಲವೇ? ನಾವು ಈ ಭಾಷಣದಲ್ಲಿ ಹೇಳಿರುವ ಯಾವುದೊಂದು ಅಂಶದಿಂದಲೂ ಜನಗಳಲ್ಲಿ ಗಾಬರಿ ಹುಟ್ಟಲಾರದೆಂತಲೂ ಅಥವಾ ಪ್ರಕೃತಸ್ಥಿತಿಯು ನಿರಪಾಯವಾದದ್ದೆಂಬ ಭ್ರಾಂತಿಯಿಂದ ಅವರು ಪ್ರಯತ್ನಶೂನ್ಯರಾಗಲಾರರೆಂತಲೂ ನಂಬುತ್ತೇವೆ. ಈ ರೀತಿ ಗಾಬರಿ ಪಡುವುದಾಗಲಿ ಪ್ರಯತ್ನಶೂನ್ಯರಾಗುವುದಾಗಲಿ ಸರಿಯಲ್ಲ. ಪ್ರಕೃತದಲ್ಲಿ ರಾಜ್ಯಾಡಳಿತಕ್ಕೆ ಪ್ರತಿಬಂಧಕವಾಗಿ ಧೈರ್ಯಗುಂದಿಸುವಂಥಾ ಸ್ಥಿತಿಗತಿಗಳಿದ್ದಾಗ್ಯೂ, ನಾವೇನೋ ಮುಂದೆ ಅನುಕೂಲಸ್ಥಿತಿಯು ಬಂದೇಬರುವುದೆಂಬ ಉತ್ಸಾಹದಿಂದ ಕಾರ್ಯಗಳನ್ನು ನಡೆಯಿಸುತ್ತಾ ಬಂದ ಈ ಸಂಸ್ಥಾನವನ್ನು ಪುರೋಭಿವೃದ್ಧಿಗೂ ಉಚ್ಛ್ರಾಯಸ್ಥಿತಿಗೂ ತರಲು ಪ್ರಯತ್ನಿಸುತ್ತೇವೆ.

ಮಹಾಶಯರೇ, ತಮ್ಮನ್ನು ಇನ್ನು ದೀರ್ಘಕಾಲ ನಿಲ್ಲಿಸಿಕೊಳ್ಳದೆ ಈ ಅಧಿವೇಶನದ ಕಾರ್ಯವನ್ನು ಉಪಕ್ರಮಿಸುತ್ತೇವೆ.

ಎ. ಆರ್. ಬಾನರ್ಜಿ,
ಮೈಸೂರು ಸಂಸ್ಥಾನದ ದಿವಾನ್‌ರವರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಪರಿದಾಸಿ	೦— ೮—೦
ವ್ರತಪಂಚಕ	೦— ೯—೦

೧೯೨೨ನೆಯ ಇಸವಿ ಜೂನ್ ತಾ|| ೧೮ ರಿಂದ ೧೯೨೨ನೆಯ ಜೂನ್ ತಾ|| ೨೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ಜ್ಯೇಷ್ಠ ಬಹುಳ ನವಮಿಯಿಂದ ಜ್ಯೇಷ್ಠ ಬಹುಳ ಚತುರ್ದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನಮಾ
18	ಭಾನು	ನವ	60	ಉಭಾ	34.30	5
19	ಸೋಮ	ನವ	0.54	ರೇವ	40.31	6
20	ಮಂಗಳ	ದಶ	5.2	ಅಶ್ವಿ	45.45	7
21	[1]ಬುಧ	ಏಕಾ	8.9	ಭರ	50.0	8
22	[2]ಗುರು	ದ್ವಾದ	10.10	ಕೃತ್ತಿ	52.54	9
23	ಶುಕ್ರ	ತ್ರಯೋ	10.51	ರೋಹಿ	54.33	10
24	[3]ಶನಿ	ಅಮಾ	10.18	ಮೃಗ	50.56	11

(1) ಸರ್ವತ್ರಸಾರ್ವೈಕಾದಶಿ. (2) ಪ್ರದೋಷ. (3) ಸರ್ವತ್ರಾಮಾವಾಸ್ಯ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರಾನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಳಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೨ ನೇಯ ಇಸವಿ ಜೂನ್ ತಾರೀಖು ೧೧ ನೇಯ ಭಾನುವಾರ (ಸಂಚಿಕೆ ೨೬

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಪಯಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಪಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
24 ಮೈಸೂರು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಸದರಿ ಮ್ಯುನಿಸಿಪಾಲಿಟಿಯೊಳಕ್ಕೆ ಬರುವ ವಾಹನಗಳು ಮತ್ತು ಪ್ರಾಣಿಗಳ ಮೇಲೆ ಹಾಲಿ ಹಾಕಿರುವ ಟೋಲ್ ದರವನ್ನು ಈ ಕೆಳಗೆ ಕಂಡ ಮೇರೆ ಹೆಚ್ಚುಮಾಡಲು ಉದ್ದೇಶಿಸಿರುತ್ತಾರೆ. ಈ ರೀತಿ ಹೆಚ್ಚುಮಾಡಲು ಆಕ್ಷೇಪಿಸತಕ್ಕವರು ತಮ್ಮ ಆಕ್ಷೇಪಣೆಯನ್ನು ಲಿಖಿತಮೂಲಕ ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಗೆ ಈ ನೋಟೀಸು ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಆದ ಒಂದು ತಿಂಗಳ ಒಳಗೆ ಕಳಿಸಿಕೊಡಬೇಕು.

ವಾಹನ ಅಥವಾ ಪ್ರಾಣಿಯ ಹೆಸರು.	ಹಾಲಿ ಇರುವ ದರ	ಮುಂದೆ ಹಾಕಬೇಕೆಂದಿರುವ ದರ
1. ಸ್ಪ್ರಿಂಗ್ ಇರತಕ್ಕ ಪ್ರತಿಒಂದು ನಾಲ್ಕು ಚಕ್ರದ ಕ್ಯಾರೇಜಿಗೆ	0-4-0	0-6-0
2. ಡಿಟೋ ಎರಡುಚಕ್ರದ ಕ್ಯಾರೇಜಿಗೆ	0-2-0	0-3-0
3. ಮನುಷ್ಯರು, ಅಥವಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು, ಅಥವಾ ಕತ್ತೆಗಳಿಂದ ಎಳೆಯಲ್ಪಟ್ಟ ಭರ್ತಿ ಗಾಡಿ ಅಥವಾ ಹಾಕ್ನಿಗಾಡಿ ಒಂದಕ್ಕೆ	0-2-0	0-3-0
4. ಡಿಟೋ ಖಾಲಿಗಾಡಿ ಒಂದಕ್ಕೆ	0-1-0	0-1-6
5. ಹೇರುಸಹಿತ ಬರತಕ್ಕ ಕೋಣ ಯಾ ಎತ್ತು ಒಂದಕ್ಕೆ	0-0-6	0-0-9
6. ಸವಾರಿ ಯಾ ಹೇರು ಸಹಿತ ಬರುವ 13 ಹಿಡಿಗಳಿಗೆ ಮೀರಿದ ಕುದುರೆ ಒಂದಕ್ಕೆ	0-1-0	0-1-6
7. ಹೇರು ಇಲ್ಲದೆ ಅಥವಾ ಸವಾರಿಯಿಲ್ಲದೆ ಬರತಕ್ಕ 13 ಹಿಡಿಗೆ ಮೀರಿದ ಕುದುರೆ	0-0-6	0-0-9
8. 13 ಹಿಡಿ ಅಥವಾ ಅದಕ್ಕೆ ಕಮ್ಮಿಯಾದ ಸವಾರಿ ಅಥವಾ ಹೇರುಸಹಿತವಾದ ಕುದುರೆ	....	0-0-9
9. ಡಿಟೋ ಸವಾರಿ ಅಥವಾ ಹೇರು ಇಲ್ಲದ ಕುದುರೆ	....	0-0-6
10. ಆನೆ	0-8-0	0-12-0
11. ಒಂಟೆ	0-1-0	0-1-6
12. ಬೈಸಿಕಲ್ ಅಥವಾ ಟ್ರೈಸಿಕಲ್	0-1-0	0-1-6
13. ಮೋಟಾರ್‌ಗಾಡಿ	0-4-0	0-6-0
14. ಮೋಟಾರ್ ಸೈಕಲ್	0-2-0	0-3-0
15 ರಿಕ್ಷಾ	0-2-0	0-3-0

8-6-1922.

(Sd.) MUHOMED PEER,
For President.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಸದರಿ ಮ್ಯುನಿಸಿಪಾಲಿಟಿಯಲ್ಲಿರುವ ವಾಹನಗಳು ಮತ್ತು ಪ್ರಾಣಿಗಳ ಮೇಲೆ ಹಾಲಿಹಾಕಿರುವ ತೆರಿಗೆಯ ದರವನ್ನು ಈ ಕೆಳಗೆ ಕಂಡ ಮೇರೆ ಹೆಚ್ಚುಮಾಡಲು ಉದ್ದೇಶಿಸಿರುತ್ತಾರೆ. ಈರೀತಿ ಹೆಚ್ಚು ಮಾಡಲು ಆಕ್ಷೇಪಿಸತಕ್ಕವರು ತಮ್ಮ ಆಕ್ಷೇಪಣೆಯನ್ನು ಲಿಖಿತಮೂಲಕ ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಗೆ ಈ ನೋಟೀಸು ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಆದ ಒಂದು ತಿಂಗಳ ಒಳಗೆ ಕಳಿಸಿಕೊಡಬೇಕು.

ವಾಹನ ಅಥವಾ ಪ್ರಾಣಿಯ ಹೆಸರು.	ಹಾಲಿಯಿರುವ ದರ ಛಮಾಹಿಗೆ	ಮುಂದೆ ಹಾಕಬೇಕೆಂದಿರುವ ದರ ಛಮಾಹಿಗೆ
1. ಎರಡು ಅಥವಾ ಹೆಚ್ಚು ಕುದುರೆಗಳಿಂದ ಎಳೆಯಲ್ಪಟ್ಟ 4 ಚಕ್ರದ ಸ್ಪ್ರಿಂಗ್ ಗಾಡಿ	2-0-0	5-0-0
2. 13 ಹಿಡಿಗೆ ಕಮ್ಮಿಯಾದ ಒಂದು ಅಥವಾ ಒಂದು ಜೊತೆ ಕುದುರೆಗಳಿಂದ ಅಥವಾ ಎತ್ತುಗಳಿಂದ ಎಳೆಯಲ್ಪಟ್ಟ 4 ಚಕ್ರದ ಸ್ಪ್ರಿಂಗ್ ಗಾಡಿ	2-0-0	3-0-0
3. ಒಂದು ಅಥವಾ ಹೆಚ್ಚು ಕುದುರೆಗಳು, ಹೇಸರಕತ್ತೆಗಳು, ಎತ್ತುಗಳಿಂದ ಎಳೆಯಲ್ಪಟ್ಟ 2 ಚಕ್ರದ ಸ್ಪ್ರಿಂಗ್ ಗಾಡಿ	1-0-0	2-8-0
4. ಬೈಸಿಕಲ್ ಅಥವಾ ಟ್ರೈಸಿಕಲ್	1-8-0	1-8-0
5. ಮೋಟಾರ್ ಗಾಡಿ	15-0-0	15-0-0
6. ಮೋಟಾರ್ ಸೈಕಲ್	7-8-0	7-8-0
7. ಜೋಡೆತ್ತಿನ ಗಾಡಿ	1-0-0	1-8-0
8. ಒಂಟೆತ್ತಿನ ಗಾಡಿ	0-8-0	1-0-0
9. ಒಂದು ಎರಡು ಅಥವಾ ಮೂರು ಚಕ್ರಗಳಿಂದ ತಳ್ಳಲ್ಪಡುವ ಸ್ಪ್ರಿಂಗ್‌ಯಿಲ್ಲದ ಕೈಗಾಡಿ	....	0-8-0
10. 13 ಹಿಡಿಗೆ ಮೇಲ್ಪಟ್ಟ ಕುದುರೆ	2-0-0	3-0-0
11. 13 ಹಿಡಿ ಅಥವಾ ಅದಕ್ಕೆ ಕಮ್ಮಿಯಾದ ಕುದುರೆ ಅಥವಾ ಹೇಸರಕತ್ತೆ	1-0-0	1-8-0
12. ಆನೆ	6-0-0	12-0-0
13. ಒಂಟೆ	3-0-0	6-0-0
14. ಎತ್ತು ಅಥವಾ ಹೋರಿ	0-8-0	0-8-0
15. ಕೋಣ	....	0-8-0
16. ಕತ್ತೆ	....	0-2-0
17 ನಾಯಿ	....	0-8-0

8-6-1922.

(Sd.) MUHOMED PEER,
For President.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಸದರಿ ಮ್ಯುನಿಸಿಪಾಲಿಟಿಯಲ್ಲಿರುವ ಖಾಲಿಜಾಗಗಳ ಮೇಲೆ ಹಾಲಿ ಹಾಕಿರುವ ತೆರಿಗೆಯ ದರವನ್ನು ಈ ಕೆಳಗೆ ಕಂಡ ಮೇರೆಗೆ ಹೆಚ್ಚುಮಾಡಲು ಉದ್ದೇಶಿಸಿರುತ್ತಾರೆ. ಈ ರೀತಿ ಹೆಚ್ಚುಮಾಡಲು ಆಕ್ಷೇಪಿಸತಕ್ಕವರು ತಮ್ಮ ಆಕ್ಷೇಪಣೆಯನ್ನು ಲಿಖಿತ ಮೂಲಕ ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಗೆ ಈ ನೋಟೀಸು ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಆದ ಒಂದು ತಿಂಗಳ ಒಳಗೆ ಕಳಿಸಿಕೊಡಬೇಕು.

ಹಾಲಿ ಇರುವ ದರ	ಮುಂದೆ ಹಾಕಬೇಕೆಂದಿರುವ ದರ
ಪ್ರತಿ 80 ಚದರಗಜಕ್ಕೆ 0-2-0.	ಪ್ರತಿ 100 ಗಜಕ್ಕೆ 0-4-0.

8-6-1922.

(Sd.) MUHOMED PEER,
For President.

ಸಿರುತ್ತೇವೆ. ಈ ಎರಡು ಕಾರುಗಾರಿಗಳ ಹುಟ್ಟುವಳಿಯನ್ನೂ ಸಾಧ್ಯವಾದಷ್ಟು ಹೆಚ್ಚು ಪ್ರಯೋಜನಕರವಾಗುವಂತೆ ಉಪಯೋಗ ಮಾಡುವವಿಷಯವನ್ನೂ ಇನ್ನು ಮುಂದೆ ಅಭಿವೃದ್ಧಿಗೋಸ್ಕರ ಒಂದು ನಿಷ್ಕೃಷ್ಟವಾದ ಕ್ರಮವನ್ನು ಅನುಸರಿಸುವ ವಿಷಯವನ್ನೂ ಸಹ ಕಾಲವಿಳಂಬ ಮಾಡದೆ ಕೂಡಲೇ ನಿರ್ಧರಿಸಬೇಕಾಗಿದೆ. ಈ ವಿಷಯಗಳನ್ನು ಸರ್ಕಾರದವರು ಸಾವಧಾನವಾಗಿ ಪರ್ಯಾಲೋಚಿಸುತ್ತಿದ್ದಾರೆ. ಕಮಿಟಿಯವರು ಮಾಡಿರುವ ರಿಪೋರ್ಟನ್ನೂ, ಸರ್ಕಾರದವರ ತೀರ್ಮಾನವನ್ನೂ ಸಮಸ್ತ ಜನಗಳ ತಿಳುವಳಿಕೆಯ ಬಗ್ಗೆ ಕ್ಷಿಪ್ರದಲ್ಲಿಯೇ ಪ್ರಕಟಿಸಬೇಕೆಂದಿದ್ದೇವೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆಗೆ ಸಂಸ್ಥಾನದ ವರಮಾನದ ಪೈಕಿ ಅಪಾರವಾದ ಹಣವು ಖರ್ಚಾಗುತ್ತದೆ ಎಂತಲೂ ಅದರಿಂದ ಲಾಭ ಹುಟ್ಟುವ ಸಂಭವವಿಲ್ಲವೆಂತಲೂ ಜನರೆಲ್ಲರೂ ವಿಶೇಷವಾಗಿ ಆಡಿಕೊಂಡು ಗಾಬರಿ ಪಡುತ್ತಿದ್ದಾರೆಂಬುವುದನ್ನು ನಾವು ಬಲ್ಲೆವು. ಈ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕಾಗಿ ಕಾಮಗಾರಿಗಳನ್ನು ಪ್ರಾರಂಭಿಸಿ ಈಗ ನಾಲ್ಕು ವರ್ಷವಾಗುತಾ ಬಂತು. ಕಬ್ಬಿಣದ ತಯಾರಿಯನ್ನೂ ಮರದ ಭಟ್ಟಿ ಇಳಿಸುವುದರಿಂದ ಉಂಟಾಗುವ ಇತರ ಪದಾರ್ಥಗಳ ತಯಾರಿಯನ್ನೂ ಹೋದ ವರ್ಷ ಮಾರ್ಚಿ ತಿಂಗಳಲ್ಲಿ ಪ್ರಾರಂಭಿಸಬಹುದೆಂತ ಯೋಚಿಸಿದ್ದದ್ದನ್ನು ಅನಿರೀಕ್ಷಿತವಾದ ಅನೇಕ ಕಾರಣಗಳಿಂದ ಇನ್ನೂ ಮುಂದಕ್ಕೆ ಹಾಕಬೇಕಾಯಿತು. ಈ ಏರ್ಪಾಟಿನ ನಾನಾ ಭಾಗಗಳಿಗೆ ಮೊದಲು ಅಂದಾಜು ಮಾಡಿದ್ದ ಖರ್ಚು, ಮುಖ್ಯವಾಗಿ ಯಂತ್ರಗಳ ಬೆಲೆ ಹೆಚ್ಚಿದ್ದರಿಂದಲೂ, ಮೊದಲು ಸೇರಿಸದೇ ಇದ್ದ ಕೆಲವು ಮುಖ್ಯ ಬಾಬುಗಳನ್ನು ಹೊಸದಾಗಿ ಸೇರಿಸಿದ್ದರಿಂದಲೂ ಮೂರರಷ್ಟಕ್ಕಿಂತಲೂ ಹೆಚ್ಚಾಗಿರುತ್ತದೆ. ಮರದ ಭಟ್ಟಿ ಇಳಿಸುವುದು, ಗಾಡೀ ಕುಲುಮೆಗಳ ಯಂತ್ರ, ಅದುರು ಮತ್ತು ಸುಣ್ಣಕಲ್ಲು ಇದ್ದ್ರವ್ಯ, ಫಾರೆಸ್ಟ್ ಟ್ರಾಂವೆಗಳನ್ನು ಹಾಕುವುದು, ಏಜಂಟುಗಳ ದಳ್ಳಾಳಿ —ಇವೇ ಮುಂತಾದ ನಾನಾ ಬಾಬುಗಳ ಖರ್ಚಿಗಾಗಿ ಸರ್ಕಾರದವರು ಈಚೆಗೆ ಸುಮಾರು 211 ಲಕ್ಷ ರೂಪಾಯಿಯನ್ನು ಮಂಜೂರು ಮಾಡಿರುವರಲ್ಲದೆ ಮುಂದಿನ ನವಂಬರ್ ತಿಂಗಳಲ್ಲಿ ಕೆಲಸವನ್ನು ಪ್ರಾರಂಭಿಸುವುದಕ್ಕೆ ಅನುಕೂಲಿಸುವಂತೆ ಒಂದು ನಿಷ್ಕೃಷ್ಟವಾದ ಕಾರ್ಯಕ್ರಮವನ್ನು ಗೊತ್ತು ಮಾಡಿರುತ್ತಾರೆ. ಈ ಏರ್ಪಾಟಿಗಾಗಿ 1922ನೆಯ ಮಾರ್ಚಿ ಆಖೈರುವರೆಗೆ 158¾ ಲಕ್ಷ ರೂಪಾಯಿ ಖರ್ಚಾಗಿರುತ್ತದೆ. ಚಾಲ್ತಿ ವರ್ಷದ ಆಖೈರು ವರೆಗೆ ಇನ್ನೂ 15½ ಲಕ್ಷ ರೂಪಾಯಿಯನ್ನು ಖರ್ಚು ಮಾಡಬೇಕೆಂತ ಉದ್ದೇಶಿಸಿರುತ್ತದೆ. ಅಷ್ಟು ಹಣವನ್ನು ಖರ್ಚುಮಾಡಿದರೆ ಈ ಏರ್ಪಾಟಿನ ಮುಖ್ಯ ಭಾಗಗಳೆಲ್ಲವೂ ಪೂರೈಸುವವೆಂತಲೂ, ಕನಿಷ್ಠ ಪಕ್ಷ ಇನ್ನೂ ಮೂರುವರ್ಷಗಳ ವರೆಗೆ ಕಾಮಗಾರಿಗಳನ್ನು ನಡೆಸಿಕೊಂಡು ಬರುವುದಕ್ಕೆ ತುರ್ತು ಅವಶ್ಯಕವಾದ ಭಾಗಗಳನ್ನು ಪೂರೈಸುವುದಕ್ಕೆ ಇನ್ನು ಸುಮಾರು 9½ ಲಕ್ಷ ರೂಪಾಯಿ ಮಾತ್ರ ಬೇಕಾಗುವುದೆಂತಲೂ ನಿರೀಕ್ಷಿಸಿದೆ. ಈ ವರ್ಷಕ್ಕೆ ಈ ಕಾರ್ಖಾನೆಯ ಖರ್ಚಿಗೋಸ್ಕರ 80 ಲಕ್ಷ ರೂಪಾಯಿ ಮಂಜೂರಾಗಿದ್ದಿತ್ತು. ಆದರೆ 1922ನೆಯ ಜೂನ್ ವರೆಗೆ ಖರ್ಚನ್ನು 63 ಲಕ್ಷ ರೂಪಾಯಿಗೂ, ಮುಂದಿನ ವರ್ಷದ ಖರ್ಚನ್ನು 9½ ಲಕ್ಷ ರೂಪಾಯಿಗೂ ಮೀರದಂತೆ ಮಿತಪಡಿಸಬೇಕೆಂತ ಈಚೆಗೆ ಹುಕುಂ ಮಾಡಲ್ಪಟ್ಟಿರುತ್ತೆ. ಇದೂ ಅಲ್ಲದೆ ಈ ಏರ್ಪಾಡಿಗೆ ಸುಮಾರು 20 ಲಕ್ಷ ರೂಪಾಯಿಯಷ್ಟು ಬಂಡವಾಳವು ಕೆಲಸ ನಡೆಸುವಬಗ್ಗೆ ಬೇಕಾಗುತ್ತದೆ. ಸದರಿ ಹಣವನ್ನು ಒದಗಿಸುವ ಮಾರ್ಗಗಳನ್ನು ಸರ್ಕಾರದವರು ಮ್ಯಾನೇಜಿಂಗ್ ಏಜಂಟರಾದ ಟಾಟಾ ಐರನ್ ಮತ್ತು ಸ್ಟೀಲ್ ಕಂಪೆನಿಯವರೊಡನೆ ಈಗ ಪರ್ಯಾಲೋಚಿಸುತ್ತಿದ್ದಾರೆ.

ಈ ಕಾರ್ಖಾನೆಯ ಲಾಭನಷ್ಟಗಳನ್ನು ಕುರಿತು ಮ್ಯಾನೇಜಿಂಗ್ ಏಜಂಟುಗಳ ಕಡೆಯ ಪ್ರವೀಣರುಗಳು ಒಂದು ತಪಶೀಲು ರಿಪೋರ್ಟನ್ನು ಕಳುಹಿಸಿರುತ್ತಾರೆ. ಮುಖ್ಯವಾಗಿ ಒರಟು ಕಬ್ಬಿಣದ ಖರೀದಿ ಕಡಮೆಯಾಗಿರುವುದು, ಕಲ್ಲಿದ್ದಲಿನ ಸಹಾಯದಿಂದ ತಯಾರುಮಾಡಿದ ಕಬ್ಬಿಣಕ್ಕೆ ಇಂಡಿಯಾದಲ್ಲಿಯೂ ಪೂರ್ವದೇಶಗಳಲ್ಲಿಯೂ ಬೆಲೆ ದೊರೆಯುವುದು ಅನಿಶ್ಚಿತವಾಗಿರುವುದು, ಈ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ಇತರ ಚಿಲ್ಲರೆ ಪದಾರ್ಥಗಳಿಗೆ ಇಂಡಿಯಾದಲ್ಲಿ ಗಿರಾಕಿಯಿಲ್ಲದೆ ಯೂರೋಪಿಯಂಡಕ್ಕೆ ಸಾಗಿಸಬೇಕಾಗುವುದು, ಆಲ್ಕೊಹಾಲ್, ಲೈಮ್ ಅಸಿಟೇಟ್ ವಗೈರೆ ಉಪ ಉತ್ಪತ್ತಿಗಳಿಗೆ ಇಂಡಿಯಾದಲ್ಲಿ ಗಿರಾಕಿ ಇಲ್ಲವಾಗಿ ಯೂರೋಪಿಗೆ ರಫ್ತು ಮಾಡಬೇಕಾಗುವುದು, ಇವೇ ಮುಂತಾದ ಮುಖ್ಯ ಕಾರಣಗಳಿಂದ ಈ ಕಬ್ಬಿಣದ ಕಾರ್ಖಾನೆಯಿಂದ ಮೊದಲು ಅಂದಾಜು ಮಾಡಿದಷ್ಟು ಫಾಯಿದೆ ಬರಲಾರದೆಂಬ ಅಂಶವು ಸದರಿ ರಿಪೋರ್ಟಿನಿಂದ ವ್ಯಕ್ತವಾಗುತ್ತದೆ. ಮುಖ್ಯವಾಗಿ ಅದುರು ಮುಂತಾದ ಕಚ್ಚಾ ಪದಾರ್ಥಗಳ ಬೆಲೆಯೂ ಸರಕುಗಳನ್ನು ಸಾಗಿಸುವ ಖರ್ಚೂ ಸಹ ಹೆಚ್ಚಿರುವುದರಿಂದ, ಕೆಲಸ ನಡೆಯಿಸುವುದರ ಖರ್ಚನ್ನು ಅನೇಕಬಾಬುಗಳಲ್ಲಿ ಮೊದಲು ಅಂದಾಜು ಮಾಡಿದ್ದಕ್ಕಿಂತಲೂ ಹೆಚ್ಚಿಸಬೇಕಾಗಿದೆ ಎಂಬುವುದೂ ವ್ಯಕ್ತಪಟ್ಟಿರುತ್ತದೆ. ಈ ಘನತರವಾದ ಯಂತ್ರವು ಕೆಲಸಕ್ಕೆ ಸಿದ್ಧವಾಗಿರುವ ಸಮಯದಲ್ಲಿಯೇ ಒರಟು ಕಬ್ಬಿಣಕ್ಕೂ ಇತರ ಪದಾರ್ಥಗಳಿಗೂ ಧಾರಣೆ ಇಳಿದು ಅನುಕೂಲವಾಗದೇ ಹೋಗಿರುವುದು ಕೇವಲ ಆಶಾಭಂಗವನ್ನುಂಟುಮಾಡಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಪ್ರಕೃತ ಸ್ಥಿತಿಯು ಬಹಳ ಯೋಚನೆಗೆ ಕಾರಣವಾಗಿದ್ದರೂ, ಸಾಧ್ಯವಾದಲ್ಲಿ ನಷ್ಟವಾಗುವುದನ್ನು ತಪ್ಪಿಸಿ ಲಾಭಹುಟ್ಟುವಂತೆ ಮಾಡಬೇಕೆಂಬ ಉದ್ದೇಶದಿಂದ ಈ ವಿಷಯವನ್ನು ಜಾಗರೂಕತೆಯಿಂದ ಪರಿಶೀಲನೆ ಮಾಡುತ್ತಾ ಇವೆಯೆಂದು ತಮಗೆ ದೃಢವಾಗಿ ಹೇಳುತ್ತೇವೆ. ಕೆಲಸವು ಇಷ್ಟರ ಮಟ್ಟಿಗೆ ನಡೆದು ಪೂರೈಸುತ್ತಾ ಬಂದಿರುವಾಗ ಅದನ್ನು ನಿಲ್ಲಿಸಿಬಿಟ್ಟು ಧಾರಣೆಮಾಸಿಗಳು ಮುಂದೆ ಅನುಕೂಲತೆಗೆ ಬಂದಾಗ ಪುನಃ ಕೆಲಸ ಶುರುಮಾಡುವುದಕ್ಕೋಸ್ಕರ ಯಂತ್ರವನ್ನು ಈಗ್ಯೆ ಷೋಕ್ ಮಾಡುವುದು ಬಹಳ ಅನುಚಿತ; ಏಕೆಂದರೆ, ಈ ಏರ್ಪಾಟಿಗೆ ಸರ್ಕಾರದವರು ಇದುವರೆಗೆ ಹಾಕಿರುವ ಹಣದಮೇಲೆ ಬಡ್ಡಿಯನ್ನು ಹ್ಯಾಗಾದರೂ ಕೊಡಲೇಬೇಕು. ಇದರಿಂದ ಸರ್ಕಾರಕ್ಕೆ ಭಾರಜಾಸ್ತಿಯಾಗುತ್ತದೆ. ಆದಕಾರಣ ಯಂತ್ರವನ್ನು ನಡಿಸಿದರೆ ಕೆಲಸದ ಖರ್ಚನ್ನೆಲ್ಲಾ ಕೊಟ್ಟು ನಿವ್ವಳ ಉತ್ಪತ್ತಿಯನ್ನು ಪಡೆಯುವ ಸಂಭವವಿರುವ ಪಕ್ಷದಲ್ಲಿ, ನಿರ್ಭಯವಾಗಿ ಕೆಲಸವನ್ನು ಕೈಗೊಳ್ಳಲೇಬೇಕೆಂಬುವುದರಲ್ಲಿ ಭಿನ್ನಾಭಿಪ್ರಾಯವಿರಲಾರದು. ಆದಕಾರಣ ಕೆಲಸವನ್ನು ನವಂಬರ್ ತಿಂಗಳಲ್ಲಿ ಪ್ರಾರಂಭಿಸಬೇಕೆಂತ ತೀರ್ಮಾನಿಸಿದೆ. ಯಂತ್ರವನ್ನು ಸುಮಾರು 18 ತಿಂಗಳು ನಡಿಸಿ ನೋಡಿದ ಹೊರತು, ಫಲಿತಾಂಶಗಳವಿಷಯವಾಗಿ ನಿರ್ಧರವಾದ ಅಂದಾಜನ್ನು ಮಾಡಲಾಗುವುದಿಲ್ಲ. ಆದರೂ ಮೂರು ವರ್ಷಗಳ ಕಾಲದಲ್ಲಿ ಕೆಲಸವು ಲಾಭಕರವಾದ ಸ್ಥಿತಿಗೆ ಬರುವುದೆಂದು ನಂಬುತ್ತೇವೆ. ಈ ಭಾವನೆಯ ಮೇಲೆ ಮೂರನೆಯ ವರ್ಷದಲ್ಲಿ 3 ಲಕ್ಷ ರೂಪಾಯಿಯನಿವ್ವಳ ಆದಾಯ ಬರುವುದೆಂದು ಮಿತವಾದ ಅಂದಾಜನ್ನು ತೆಗೆದುಕೊಂಡಿರುತ್ತೇವೆ, ಆದರೆ ಸಾಮಾನ್ಯವಾಗಿ ಒಳ್ಳೆಯ ಧಾರಣೆ ಬಂದಲ್ಲಿ ಈ ಆದಾಯವು ಇನ್ನೂ ಹೆಚ್ಚಲೇಹೆಚ್ಚುವುದು.

ಗಂಧದ ಎಣ್ಣೆಯ ಕಾರ್ಖಾನೆ.

1916ನೆಯ ವರ್ಷಕ್ಕೆ ಮೊದಲು ಫಾರೆಸ್ಟು ಇಲಾಖೆಯವರು ಗಂಧದ ಮರವನ್ನು ಬಹಿರಂಗವಾದ ಹರಾಜಿನಲ್ಲಿ ಬಿಕರಿ ಮಾಡುತ್ತಿದ್ದರು ಇದರಿಂದ ಸಂಸ್ಥಾನಕ್ಕೆ ಹುಟ್ಟುವಳಿಯು ತಕ್ಕಷ್ಟು ಚೆನ್ನಾಗಿಯೇ ಇತ್ತು. ಯುದ್ಧ ಪ್ರಾರಂಭವಾದ ಕೂಡಲೆ 1914ನೆಯ ನವಂಬರು ಮತ್ತು ಡಿಸಂಬರು ತಿಂಗಳುಗಳಲ್ಲಿ ನಡೆದ ಗಂಧದ ಮರದ ಹರಾಜುಗಳಲ್ಲಿ ಸರಿಯಾದ ಸವಾಲುಗಳು ಬರಲಿಲ್ಲ. ಆಗ ಸರ್ ಅಲ್ಫ್ರೆಡ್ ಛಾಟರ್ಟನ್‌ರವರ ಶಿಫಾರಸಿನ ಮೇಲೆ ಗಂಧದ ಮರದಿಂದ ಎಣ್ಣೆಯನ್ನು ತೆಗೆದು ಆ ಎಣ್ಣೆಯನ್ನು ಬಿಕರಿ ಮಾಡುವ ವಿಷಯವನ್ನು ಸರ್ಕಾರದವರು ಆಸಕ್ತಿಯಿಂದ ಪರ್ಯಾಲೋಚಿಸಿ, ಬೆಂಗಳೂರಿನಲ್ಲಿ ಗಂಧದ ಮರದಿಂದ ಭಟ್ಟಿ ಇಳಿಸುವ ಒಂದು ಸಣ್ಣ ಕಾರ್ಖಾನೆಯನ್ನು ಸ್ಥಾಪಿಸಿದರು. ಈ ಕಾರ್ಖಾನೆಯು 1916ನೆಯ ಮೇ ತಿಂಗಳಿನಲ್ಲಿ ಕೆಲಸವನ್ನು ಉಪಕ್ರಮಿಸಿತು. ಈ ಪ್ರಯತ್ನವು ಫಲವಾಗಿ ಕಂಡುಬರಲು ಇದಕ್ಕಿಂತಲೂ ಸ್ವಲ್ಪ ಭಾರಿಯಾಗಿ ಮೈಸೂರಿನಲ್ಲಿ ಒಂದು ಕಾರ್ಖಾನೆಯು ಸ್ಥಾಪಿತವಾಗಿ ಆಗಸ್ಟ್ 1917ರಲ್ಲಿ ಕೆಲಸವು ಪ್ರಾರಂಭವಾಯಿತು.

1921ನೆಯ ಡಿಸೆಂಬರು ಆಖೈರಿನವರೆಗೆ ಈ ಕಾರ್ಖಾನೆಗಳ ಬಗ್ಗೆ ಖಾಯಂ ಬಂಡವಾಳಕ್ಕಾಗಿ ಒಟ್ಟು 676 ಲಕ್ಷ ರೂಪಾಯಿ ಹಾಕಲ್ಪಟ್ಟಿತು. ಈ ಕಾರ್ಖಾನೆಗಳಲ್ಲಿ ಕೆಲಸ ನಡೆಯುತ್ತಿದ್ದ 5½ ವರ್ಷಗಳಲ್ಲಿ ಫಾರೆಸ್ಟು ಇಲಾಖೆಯಿಂದ 97·70 ಲಕ್ಷ ರೂಪಾಯಿಯ ಕಿಮ್ಮತ್ತಿನ 6,249 ಟನ್ನು ಗಂಧದ ಮರವನ್ನು ಕೊಳ್ಳಲಾಯಿತು. ಈ ಮೊಬಲಗನ್ನು "ಫಾರೆಸ್ಟು" ಬಾಬಿಗೆ ಜಮೆ ಕಟ್ಟಿರುತ್ತದೆ.

ಯಂತ್ರ, ಕಟ್ಟಡ ಮೊದಲಾದುವುಗಳ ಡಿಪ್ರೀಸಿಯೇಷನಿಗಾಗಿ 2.22 ಲಕ್ಷ ರೂಪಾಯಿಯನ್ನು ವಜಾ ಹಾಕಿಕೊಂಡಾಗ್ಯೂ, ಕಳೆದ 5½ ವರ್ಷಗಳಲ್ಲಿ ಎಣ್ಣೆಯ ಬಿಕರಿಯಿಂದ ಈ ಕಾರ್ಖಾನೆಗಳಲ್ಲಿ 23.17 ಲಕ್ಷ ರೂಪಾಯಿಯ ನಿವ್ವಳ ಆದಾಯ ಕೇಳಿರುತ್ತೆಂಬು 1921ನೆಯ ಡಿಸಂಬರು ಆಖೈರಿನವರೆಗೆ ತಯಾರಿಸಿರುವ ಲಾಭ ನಷ್ಟದ ಲೆಕ್ಕಗಳಿಂದ ಕಂಡುಬರುವುದು. ಖಾಯಂ ಮತ್ತು ಚಾಲ್ತಿ ಬಂಡವಾಳಗಳ ಬಡ್ಡಿಯ ಬಗ್ಗೆ 7.92 ಲಕ್ಷ ರೂಪಾಯಿಯನ್ನು ವಜಾಮಾಡಿದರೂ ಕೂಡ ಈ ಕಾಲದಲ್ಲಿ ಬಹುಮಟ್ಟಿಗೆ ಎಣ್ಣೆಗೆ ಹೆಚ್ಚು ಬೆಲೆ ದೊರೆಯುತ್ತಿದ್ದುದರಿಂದ 15·24 ಲಕ್ಷ ರೂಪಾಯಿಯ ನಿವ್ವಳ ಆದಾಯವುಂಟಾಯಿತು. ಈ ಕಾರ್ಖಾನೆಯನ್ನು ಉಪಕ್ರಮಿಸುವುದಕ್ಕೆ ಹಿಂದಣ ಐದು ವರ್ಷಗಳಲ್ಲಿ ಒಟ್ಟು 11,741 ಟನ್ನು ಮರದ ಹರಾಜಿನಿಂದ ಫಾರೆಸ್ಟು ಇಲಾಖೆಗೆ 88·89 ಲಕ್ಷ ರೂಪಾಯಿ ಹುಟ್ಟುವಳಿಯಾಗಿರುವಲ್ಲಿ, ಮೇಲ್ಕಂಡ ಐದೂವರೆ ವರ್ಷಗಳಲ್ಲಿ ನಮ್ಮ ಕಾರ್ಖಾನೆಗಳಿಗೆ ಸರಬರಾಯಿ ಮಾಡಿದ 6,249 ಟನ್ನುಗಳಿಗೆ 97·70 ಲಕ್ಷ ರೂಪಾಯಿ ವಸೂಲಾಗಿರುವುದೆಂದು ಕೇಳಿ ತಮಗೆಲ್ಲಾ ಸಂತೋಷವಾಗಬಹುದು.

ಆದರೂ ಕಳೆದ ಒಂದೂವರೆ ವರ್ಷದಲ್ಲಿ ಯೂರೋಪು ಖಂಡದ ದೇಶಗಳಲ್ಲಿ ವ್ಯಾಪಾರವು ಅವ್ಯವಸ್ಥೆಗೆ ಬಂದು ಬೆಲೆಯು ಗಣನೀಯವಾಗಿ ತಗ್ಗಬೇಕಾಗಿ ಬಂದರೂ ಕೂಡ ಗಂಧದೆಣ್ಣೆಗೆ ಗಿರಾಕಿ ಚುರುಕಾಗಿಲ್ಲವಾಗಿ, ಸ್ವಲ್ಪ ಕಾಲದವರೆ ಮೈಸೂರು ಕಾರ್ಖಾನೆಯನ್ನು ನಿಲ್ಲಿಸುವುದು ಯುಕ್ತವೆಂದು ಕಂಡುಬಂದಿತು. ಪ್ರಕೃತದಲ್ಲಿ ಬೆಂಗಳೂರಿನ ಕಾರ್ಖಾನೆಯೊಂದರಲ್ಲಿಯೇ ಕೆಲಸ ನಡೆಯುತ್ತಿರುವುದು. ಆದರೆ ಎಲ್ಲಾ ಅಂಶಗಳನ್ನೂ ಪರ್ಯಾಲೋಚಿಸಿದಲ್ಲಿ ಲಾಭ ಹೆಚ್ಚಾಗಿ ಬರಬೇಕಾದರೆ ಗಂಧದ ಮರದಿಂದ ಎಣ್ಣೆಯನ್ನು ತೆಗೆಯುವುದು ಅವಶ್ಯಕವೆಂದು ಅನುಭವದಿಂದ ತಿಳಿದು ಬಂದಿರುತ್ತದೆ. ಆದ್ದರಿಂದ ಹಾಲಿ ಇರುವ ಏರ್ಪಾಡನ್ನೇ ನಡಿಸಿಕೊಂಡು ಬರತಕ್ಕದೆಂದು ಸರ್ಕಾರದವರು ಉದ್ದೇಶಿಸಿರುತ್ತಾರೆ.

ಎಣ್ಣೆಗೆ ಪುನಃ ಗಿರಾಕಿಯುಂಟಾಗುವುದೆಂಬ ಚಿಹ್ನೆಗಳು ಕಳೆದ ಕೆಲವು ತಿಂಗಳುಗಳಿಂದಲೂ ಕಂಡುಬರುತ್ತಿವೆಯಾಗಿ, ಮುಂದಿನ ವರ್ಷ ತಯಾರಾಗುವ ಎಣ್ಣೆಯೇ ಅಲ್ಲದೆ ಸಿಲ್ಕು ನಿಂತಿರುವ ಎಣ್ಣೆಯೂ ಸಹ ಬಹುಮಟ್ಟಿಗೆ ಬಿಕರಿಯಾಗುವುದೆಂದು ನಿರೀಕ್ಷಿಸಿದೆ. ಹಿಂದೆ ಸರಬರಾಯಿ ಆದ ಗಂಧದ ಮರಕ್ಕಾಗಿ ಕಾರ್ಖಾನೆಯು ಫಾರೆಸ್ಟು ಇಲಾಖೆಗೆ ಕೊಟ್ಟ ದರವು ಎಣ್ಣೆಯ ಬೆಲೆಯಿಂದ ಹುಟ್ಟುವಳಿಯಾಗುವುದಕ್ಕಿಂತಲೂ ಹೆಚ್ಚಾಗಿರುವಂತೆ ಕಂಡುಬಂದಿದೆ. ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ 90,000 ರೂಪಾಯಿ ಕಡಿಮೆ ಬಿದ್ದಂತೆ ತೋರಿಸಿರುವುದಕ್ಕೆ ಇದೇ ಕಾರಣ.

ಇತರ ಕೈಗಾರಿಕೆಯ ಕೆಲಸ.

ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯ ಹತೋಟಿಯಲ್ಲಿರುವ ಕೈಗಾರಿಕೆಯ ಕಾರ್ಖಾನೆಗಳು ಯಾವುವೆಂದರೆ:—

(1) ಸಾಬೂನು ಕಾರ್ಖಾನೆ,
(2) ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪು,
(3) ಮೆಟಲ್‌ಫ್ಯಾಕ್ಟರಿ,
(4) ಆರ್ಟ್‌ವರ್ಕ್‌ಷಾಪು,
(5) ನೇಯಿಗೆಯ ಕಾರ್ಖಾನೆ ಮತ್ತು
(6) ಆರ್ಟ್ ಮತ್ತು ಕ್ರಾಫ್ಟ್‌ಡಿಪೋ.

ಇವುಗಳ ಪೈಕಿ ಕೆಲವು ಇತರರಿಗೆ ದಾರಿ ತೋರಿಸುವ ಬಗ್ಗೆ ಪ್ರಾರಂಭಿಸಲ್ಪಟ್ಟವು. ಮತ್ತು ಕೆಲವು ಕೊಂಚಮಟ್ಟಿಗೆ ಶಿಕ್ಷಣವನ್ನು ಕೊಡುವುದಕ್ಕೂ ನಿದರ್ಶನದ ಬಗ್ಗೂ, ಇನ್ನೂ ಕೊಂಚಮಟ್ಟಿಗೆ ಲಾಭಕೋರಿಸುವ ದೃಷ್ಟಿಯಿಂದಲೂ ಪ್ರಾರಂಭಿಸಿದವಾಗಿರುವುವು. ಮೇಲೆ ನಮೂದಿಸಿದವುಗಳಲ್ಲಿ ಮೆಟಲ್‌ಫ್ಯಾಕ್ಟರಿಯನ್ನು ಈಚೆಗೆ ಒಂದು ಖಾಸಗೀ ಕಂಪೆನಿಗೆ ಬಿಕರಿ ಮಾಡಲಾಗಿದೆ. ಇದರಿಂದ ಅದಕ್ಕಾಗಿ ಖರ್ಚುಮಾಡಿದ್ದ 1,56,500 ರೂಪಾಯಿ ಬಂಡವಾಳವೆಲ್ಲ ಬಂದಿರುತ್ತದೆ. ಈ ಕಾರ್ಖಾನೆಯು ಇಲಾಖೆಯವರಿಂದ ನಡೆಸಲ್ಪಡುತ್ತಿದ್ದ ಕಾಲದಲ್ಲಿ ಯುದ್ಧದ ಪ್ರಯುಕ್ತ ಸ್ಥಿತಿಗಳು ಸರಿಯಾಗಿಲ್ಲದಿದ್ದ ಕಾರಣ ಬೆಲೆ ಬಹಳವಾಗಿ ತಗ್ಗಿದ್ದುದರ ನಿಮಿತ್ತ ಇದನ್ನು ನಡೆಸುವುದರಲ್ಲಿ ನಷ್ಟವುಂಟಾಗಿತ್ತು. ಆದರೆ ಅದನ್ನು ಬಿಕರಿ ಮಾಡುವುದಾಗಿ ಪ್ರಕಟಿಸಿದ ಕೂಡಲೇ ಖಾಸಗೀ ಬಂಡವಾಳಸ್ಥರು ಅದನ್ನು ಕೊಂಡುಕೊಳ್ಳುವುದಕ್ಕೆ ಮುಂದಾಳುಗಳಾಗಿ ಬಂದುದನ್ನು ನೋಡಿದರೆ ಇದನ್ನು ಲಾಭಬರುವ ರೀತಿಯಲ್ಲಿ ನಡೆಸುವುದು ಸಾಧ್ಯವೆಂತ ಸಿದ್ಧಾಂತವಾಗುತ್ತದೆ.

ಸಾಬೂನು ಕಾರ್ಖಾನೆಯ ಮೇಲಿನ ಬಂಡವಾಳದ ಖರ್ಚು 71,000 ರೂಪಾಯಿಗಳಾಗಿರುತ್ತದೆ. ಮತ್ತು ಒಟ್ಟಿನಲ್ಲಿ ಅದರಿಂದ ಫಾಯಿದೆಯೇ ಆಗಿರುತ್ತದೆ. ಈ ಕಾರ್ಖಾನೆಯನ್ನೂ ಸಹ ಖಾಸಗೀ ಜನರಿಗೆ ಕೊಟ್ಟುಬಿಡುವ ಉದ್ದೇಶವಿದೆ.

ಇತರ ಕಾರ್ಖಾನೆಗಳಿಗಾಗಿ ಮುಟ್ಟಿರುವ ಬಂಡವಾಳದ ಲಾಗವಡು ಈ ಕೆಳಗೆ ಕಂಡಂತಿರುವುದು:—

ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪು	2,93,000 ರೂ.
ಆರ್ಟ್ ವರ್ಕ್‌ಷಾಪು	29,000 ,,
ನೇಯಿಗೆ ಕಾರ್ಖಾನೆ	36,000 ,,
ಆರ್ಟ್ ಮತ್ತು ಕ್ರಾಫ್ಟ್ಸ್ ಡಿಪೋ	2,500 ,,

ಇವುಗಳನ್ನು ನಡೆಸುವುದರಲ್ಲಿ ಸುಮಾರು 2 ಲಕ್ಷ ರೂಪಾಯಿ ನಷ್ಟವುಂಟಾಗಿದೆ. ಅದನ್ನು ಈ ವರುಷದ ಲೆಕ್ಕದಲ್ಲಿ ವಜಾಮಾಡಲಾಗುತ್ತದೆ. ಈ ಕಾರ್ಖಾನೆಗಳ ಪ್ರಕೃತ ಬೆಲೆಯನ್ನು ನಿಶ್ಚಯಿಸುವ ಬಗ್ಗೆ ಅವುಗಳಿಗೆ ಬೆಲೆ ಕಟ್ಟಿಸಬೇಕೆಂದು ಉದ್ದೇಶಿಸಿದೆ. ಇದರಿಂದ ಮುಂದೆ ಇವುಗಳಿಂದ ಲಾಭ ಕಾಣುವ ರೀತಿಯಲ್ಲಿ ನಡೆಸುವುದಕ್ಕೆ ಅವಕಾಶವನ್ನು ಕೊಟ್ಟಂತಾಗುವುದು. ಕೆಲಸಗಳನ್ನು ಉತ್ತಮ ರೀತಿಯಲ್ಲಿ ನಡೆಸುವುದನ್ನು ಜನರಿಗೆ ನಿದರ್ಶನ ನಡಿಸಿಕೊಟ್ಟು ಅವರನ್ನು ತರಬೇತು ಮಾಡುವ ವಿಷಯದಲ್ಲಿ ಈ ಕಾರ್ಖಾನೆಗಳಲ್ಲಿ ಬಹುಮಟ್ಟಿನ ಪ್ರಯೋಜನಕರವಾದ ಕೆಲಸಗಳು ನಡೆದಿರುವುದನ್ನು ಪರ್ಯಾಲೋಚಿಸುವಲ್ಲಿ, ಮುಂದೆ ಹೆಚ್ಚಾಗಿ ದಕ್ಷತೆಯಿಂದ ಲಾಭ ನಷ್ಟಗಳಿಗೆ ಗಮನ ಕೊಡುವ ರೀತಿಯಿಂದ ಅವುಗಳನ್ನು ನಡಿಸಿಕೊಂಡು ಬರಬೇಕಾದುದು ಅವಶ್ಯಕವೆಂದು ತೋರುತ್ತದೆ.

ಉಪಸಂಹಾರ.

ಹುಟ್ಟುವಳಿಯನ್ನು ಹೆಚ್ಚಿಸುವುದರ ಮೂಲಕವೂ, ಖರ್ಚನ್ನು ಹೆಚ್ಚಿಸುವುದರ ಮೂಲಕವೂ ಪ್ರಕೃತ ಸ್ಥಿತಿಯನ್ನು ಎಷ್ಟೇ ಉತ್ತಮಪಡಿಸಿದಾಗ್ಯೂ ಸಹ, ಹೆಚ್ಚು ಖರ್ಚು ಬೇಕಾಗುವ ರಾಜ್ಯಾಡಳಿತದ ಯಾವ ಏರ್ಪಾಟಿಗೇ ಆಗಲಿ, ಅದು ಎಷ್ಟೇ ಮುಖ್ಯವಾಗಿದ್ದಾದರೂ, ಎಷ್ಟೇ ತುರ್ತಾಗಿ ನಡೆಯಬೇಕಾದ್ದಾದರೂ, ಅದನ್ನು ನಡೆಸುವುದಕ್ಕೆ ಹಣ ದೊರೆಯುವುದು ಕೇವಲ ದುರ್ಲಭವೆಂತ ತಮಗೆ ವೇದ್ಯವಾಗುವುದು. ಇಂತಹ ಸ್ಥಿತಿಯು ಪ್ರಾಪ್ತವಾದದ್ದು ತುಂಬಾ ಶೋಚನೀಯವಾಗಿರುತ್ತದೆ. ಇದರಿಂದ ಸಾಧ್ಯವಾದಷ್ಟು ಜಾಗ್ರತೆಯಾಗಿ ಪಾರಾಗುವುದಕ್ಕೆ ನಾವು ಸಕಲ ಪ್ರಯತ್ನಗಳನ್ನೂ ಮಾಡಬೇಕಾದ್ದು ಅವಶ್ಯಕ. ವಿದ್ಯಾಭ್ಯಾಸಕ್ಕಾಗಿ ಯಾವಯಾವ ರೀತಿಯಲ್ಲಿ ಹಣವನ್ನು ಒದಗಿಸಬೇಕೆಂಬ ವಿಷಯದಲ್ಲಿ ಎಡ್ಯುಕೇಷನ್ ಮೆಮೋರಾಂಡಂನಲ್ಲಿ ಸರ್ಕಾರದವರು ಮಾಡಿರುವ ಹುಕುಮಿನಂತೆ ಹಣ ಒದಗಿಸುವುದರಲ್ಲಿ ಈಚೆಗೆ ಒದಗಿದ ತೊಂದರೆಗಳು ಪ್ರಾಪ್ತವಾದ ಪ್ರಯುಕ್ತ ಸದರಿ ಹಣ ಒದಗಿಸುವ ರೀತಿಯನ್ನು ಕ್ಷಿಪ್ರದಲ್ಲಿಯೇ ಜಾಗರೂಕತೆಯಿಂದ ಪುನರಾಲೋಚಿಸಲಾಗುವುದು. ಸದರಿ ಹುಕುಮಿನಲ್ಲಿ ಸೂಚಿಸಿರುವ ಹೆಚ್ಚಿಗೆ ಹಣದ ಬಾಬುಗಳು ಸುಲಭವಾಗಿ ದೊರೆಯದೆಹೋದ ಪಕ್ಷದಲ್ಲಿ, ಇನ್ನುಮುಂದೆ ಕಾಲವಿಳಂಬವಾಗದಂತೆ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಸುಧಾರಣೆಗಳನ್ನು ಜಾರಿಗೆ ತರಲು ಸಾಧ್ಯವಾಗುವಂತೆ ಬೇರೆ ಬೇರೆ ಇಲಾಖೆಗಳ ಖರ್ಚನ್ನು ಬದಲಾಯಿಸಬೇಕಾಗುವುದು. ವಿದ್ಯಾಭ್ಯಾಸದ ತೆರಿಗೆಯಿಂದ ಬರುವ ಹುಟ್ಟುವಳಿಯಿಂದಲೂ, ಮೊಹತರ್ಫಾ ಮತ್ತು ಲೋಕಲ್ ಫಂಡ್ ಜನರಲ್ ಬಾಬುಗಳಿಂದ ಅಥವಾ ಅವುಗಳ ಪೈಕಿ ಎಷ್ಟನ್ನು ಸರ್ಕಾರಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಬಹುದೋ ಅಷ್ಟರಿಂದ ಬರುವ ಹುಟ್ಟುವಳಿಯಿಂದಲೂ ಇದುವರೆಗೆ ನಿರ್ಧರಿಸಿರುವ ಕಾರ್ಯಕ್ರಮದ ಮೇರೆಗೆ, ನಾವು ಸೂಚಿಸಿರುವ ಆದಾಯ ವೆಚ್ಚದ ಅಂದಾಜಿನ ಅವಧಿಯೊಳಗಾಗಿ ಕೆಲಸಗಳನ್ನು ಜಾರಿಗೆ ತರಲು ಸಾಧ್ಯವಾದೀತೆಂತ ನಮಗೆ ಸಂಪೂರ್ಣ ಭರವಸೆ ಇರುತ್ತದೆ. ಆದರೂ ನಮ್ಮ ಪ್ರಕೃತಸ್ಥಿತಿಯಲ್ಲಿ ಬಹುಮಟ್ಟಿನ ಕಷ್ಟಗಳು ಒದಗಿರುತ್ತವೆಂಬುದನ್ನು ತಾವುಗಳು ಗ್ರಹಿಸಿರುತ್ತೀರೆಂತ ನಂಬಿದ್ದೇವೆ. ಈ ಸಂಸ್ಥಾನದಿಂದ ಇಂಡಿಯಾ ಸರ್ಕಾರಕ್ಕಾಗಿ ಸೈನ್ಯವನ್ನು ಇಟ್ಟುಕೊಂಡಿರಬೇಕಾದ ವಿಷಯವನ್ನೂ, ಮೈಸೂರು ದೇಶದ ಪ್ರಜೆಗಳು ತರಿಸಿಕೊಳ್ಳುವ ಪದಾರ್ಥಗಳ ಮೇಲೆ ಕೊಟ್ಟ ಸುಂಕವು ಇಂಡಿಯಾ ಸರ್ಕಾರದವರಿಗೆ ಸೇರುವ ವಿಷಯವನ್ನೂ ಪರ್ಯಾಲೋಚಿಸಬೇಕಾಗಿದೆ. ಈ ವಿಷಯಗಳಿಗೂ ಇದೇ ತರಹೆಯ ಇತರ ವಿಷಯಗಳಿಗೂ ಸರ್ಕಾರದವರು ಈಗಲೂ ಇನ್ನುಮುಂದೆಯೂ ಪೂರ್ಣವಾದ ಗಮನವನ್ನು ಕೊಡುತ್ತ ಬರುವರೆಂದು ತಾವು ಭರವಸೆಯಿಂದಿರಬಹುದು. ನಾವು ಈ ವಿಷಯದಲ್ಲಿ ಇಂಡಿಯಾ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುವುದನ್ನು ಅವರು ನ್ಯಾಯಕ್ಕೂ ಧರ್ಮಕ್ಕೂ ಅನುಸಾರವಾಗಿ ಪರ್ಯಾಲೋಚಿಸುವರೆಂತ ನಾವು ದೃಢವಾಗಿ ನಂಬಿರುತ್ತೇವೆ. ಈ ಅಧಿವೇಶನವನ್ನು ಪೂರೈಸಿ ಹೊರಡುವುದಕ್ಕೆ ಮುಂಚೆ ಸಂಸ್ಥಾನದ ಆದಾಯ ವೆಚ್ಚದ ವಿಷಯವನ್ನು ವಿಶದವಾಗಿ ಗ್ರಹಿಸಿಕೊಂಡು ಆದಾಯವೂ ವೆಚ್ಚವೂ ಸಮತೂಕವಾಗುವಂತೆ ಮಾಡಲು ನಿಮ್ಮಿಂದ ಸಾಧ್ಯವಾಗುವ ಸಮಸ್ತ ಪ್ರಯತ್ನಗಳನ್ನೂ ಮಾಡುವೆವೆಂಬ ದೃಢಪ್ರತಿಜ್ಞೆಯಿಂದ ಹೊರಡುವಿರೆಂತ ನಾವು ನಿರೀಕ್ಷಿಸಬಹುದಲ್ಲವೇ? ನಾವು ಈ ಭಾಷಣದಲ್ಲಿ ಹೇಳಿರುವ ಯಾವುದೊಂದು ಅಂಶದಿಂದಲೂ ಜನಗಳಲ್ಲಿ ಗಾಬರಿ ಹುಟ್ಟಲಾರದೆಂತಲೂ ಅಥವಾ ಪ್ರಕೃತಸ್ಥಿತಿಯು ನಿರುಪಾಯವಾದದ್ದೆಂಬ ಭ್ರಾಂತಿಯಿಂದ ಅವರು ಪ್ರಯತ್ನಶೂನ್ಯರಾಗಲಾರರೆಂತಲೂ ನಂಬುತ್ತೇವೆ. ಈ ರೀತಿ ಗಾಬರಿ ಪಡುವುದಾಗಲಿ ಪ್ರಯತ್ನಶೂನ್ಯರಾಗುವುದಾಗಲಿ ಸರಿಯಲ್ಲ. ಪ್ರಕೃತದಲ್ಲಿ ರಾಜ್ಯಾಡಳಿತಕ್ಕೆ ಪ್ರತಿಬಂಧಕವಾಗಿ ಧೈರ್ಯಗುಂದಿಸುವಂಥಾ ಸ್ಥಿತಿಗತಿಗಳಿದ್ದಾಗ್ಯೂ, ನಾವೇನೋ ಮುಂದೆ ಅನುಕೂಲಸ್ಥಿತಿಯು ಬಂದೇಬರುವುದೆಂಬ ಉತ್ಸಾಹದಿಂದ ಕಾರ್ಯಗಳನ್ನು ನಡೆಯಿಸುತ್ತಾ ಬಂದ ಈ ಸಂಸ್ಥಾನವನ್ನು ಪುರೋಭಿವೃದ್ಧಿಗೂ ಉಚ್ಛ್ರಾಯಸ್ಥಿತಿಗೂ ತರಲು ಪ್ರಯತ್ನಿಸುತ್ತೇವೆ.

ಮಹಾಶಯರೇ, ತಮ್ಮನ್ನು ಇನ್ನು ದೀರ್ಘಕಾಲ ನಿಲ್ಲಿಸಿಕೊಳ್ಳದೆ ಈ ಅಧಿವೇಶನದ ಕಾರ್ಯವನ್ನು ಉಪಕ್ರಮಿಸುತ್ತೇವೆ.

ಎ. ಆರ್. ಬಾನರ್ಜಿ,
ಮೈಸೂರು ಸಂಸ್ಥಾನದ ದಿವಾನ್‌ರವರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಪರಿದಾಸಿ	೦— ೮—೦
ವ್ರತಸಂಚಿಕೆ	೦— ೯—೦

೧೯೨೨ನೆಯ ಇಸವಿ ಜೂನ್ ತಾ|| ೧೮ ರಿಂದ ೧೯೨೨ನೆಯ ಜೂನ್ ತಾ|| ೨೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ಜ್ಯೇಷ್ಠ ಬಹುಳ ನವಮಿಯಿಂದ ಜ್ಯೇಷ್ಠ ಬಹುಳ ಚತುರ್ದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನಮಾ
18	ಭಾನು	ನವ	60	ಉಭಾ	34.30	5
19	ಸೋಮ	ನವ	0.54	ರೇವ	40.31	6
20	ಮಂಗಳ	ದಶ	5.2	ಅಶ್ವಿ	45.45	7
21	[1] ಬುಧ	ಏಕಾ	8.9	ಭರ	50.0	8
22	[2] ಗುರು	ದ್ವಾದ	10.10	ಕೃತ್ತಿ	52.54	9
23	ಶುಕ್ರ	ತ್ರಯೋ	10.51	ರೋಹಿ	54.33	10
24	[3] ಶನಿ	ಅಮಾ	10.18	ಮೃಗ	50.56	11

(1) ಸರ್ವತ್ರಸ್ಮಾರ್ತೈಕಾದಶಿ. (2) ಪ್ರದೋಷಃ. (3) ಸರ್ವತ್ರಾಮಾವಾಸ್ಯ.

ಮೈಸೂರು: ಮೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಂಸದಾಪೂರೆಗೆ ಗೌರೀತಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಜೂನ್ ತಾರೀಖು ೧೮ ನೆಯ ಭಾನುವಾರ (ಸಂಚಿಕೆ ೨೬

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿ ಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
24 ಮೈಸೂರು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಸದರಿ ಮ್ಯುನಿಸಿಪಾಲಿಟಿಯೊಳಕ್ಕೆ ಬರುವ ವಾಹನಗಳು ಮತ್ತು ಪ್ರಾಣಿಗಳ ಮೇಲೆ ಹಾಲಿ ಹಾಕಿರುವ ಟೋಲ್ ದರವನ್ನು ಈ ಕೆಳಗೆ ಕಂಡ ಮೇರೆ ಹೆಚ್ಚುಮಾಡಲು ಉದ್ದೇಶಿಸಿರುತ್ತಾರೆ. ಈ ರೀತಿ ಹೆಚ್ಚುಮಾಡಲು ಆಕ್ಷೇಪಿಸತಕ್ಕವರು ತಮ್ಮ ಆಕ್ಷೇಪಣೆಯನ್ನು ಲಿಖಿತಮೂಲಕ ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಗೆ ಈ ನೋಟೀಸು ಮೈಸೂರು ಗೆಜೆಟ್ಟಿನಲ್ಲಿ ಛಾಯಿಪ್ ಆದ ಒಂದು ತಿಂಗಳ ಒಳಗೆ ಕಳಿಸಿಕೊಡಬೇಕು.

ವಾಹನ ಅಥವಾ ಪ್ರಾಣಿಯ ಹೆಸರು.	ಹಾಲಿ ಇರುವ ದರ	ಮುಂದೆ ಹಾಕಬೇಕೆಂದಿರುವ ದರ
1. ಸ್ಪ್ರಿಂಗ್ ಇರತಕ್ಕ ಪ್ರತಿಒಂದು ನಾಲ್ಕು ಚಕ್ರದ ಕ್ಯಾರೇಜಿಗೆ	0-4-0	0-6-0
2. ಡಿಟೋ ಎರಡುಚಕ್ರದ ಕ್ಯಾರೇಜಿಗೆ	0-2-0	0-3-0
3. ಮನುಷ್ಯರು, ಅಥವಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು, ಅಥವಾ ಕತ್ತೆಗಳಿಂದ ಎಳೆಯಲ್ಪಟ್ಟ ಭರ್ತಿ ಗಾಡಿ ಅಥವಾ ಹಾಕ್ನಿಗಾಡಿ ಒಂದಕ್ಕೆ	0-2-0	0-3-0
4. ಡಿಟೋ ಖಾಲಿಗಾಡಿ ಒಂದಕ್ಕೆ	0-1-0	0-1-6
5. ಹೇರುಸಹಿತ ಬರತಕ್ಕ ಕೋಣ ಯಾ ಎತ್ತು ಒಂದಕ್ಕೆ	0-0-6	0-0-9
6. ಸವಾರಿ ಯಾ ಹೇರು ಸಹಿತ ಬರುವ 13 ಹಿಡಿಗಳಿಗೆ ಮೀರಿದ ಕುದುರೆ ಒಂದಕ್ಕೆ	0-1-0	0-1-6
7. ಹೇರು ಇಲ್ಲದೆ ಅಥವಾ ಸವಾರಿಯಿಲ್ಲದೆ ಬರತಕ್ಕ 13 ಹಿಡಿಗೆ ಮೀರಿದ ಕುದುರೆ	0-0-6	0-0-9
8. 13 ಹಿಡಿ ಅಥವಾ ಅದಕ್ಕೆ ಕಮ್ಮಿಯಾದ ಸವಾರಿ ಅಥವಾ ಹೇರುಸಹಿತವಾದ ಕುದುರೆ	....	0-0-9
9. ಡಿಟೋ ಸವಾರಿ ಅಥವಾ ಹೇರು ಇಲ್ಲದ ಕುದುರೆ	....	0-0-6
10. ಆನೆ	0-8-0	0-12-0
11. ಒಂಟೆ	0-1-0	0-1-6
12. ಬೈಸಿಕಲ್ ಅಥವಾ ಟ್ರೈಸಿಕಲ್	0-1-0	0-1-6
13. ಮೋಟಾರ್‌ಗಾಡಿ	0-4-0	0-6-0
14. ಮೋಟಾರ್ ಸೈಕಲ್	0-2-0	0-3-0
15 ರಿಕ್ಷಾ	0-2-0	0-3-0

(Sd.) MUHOMED PEER,
8-6-1922. For President.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಸದರಿ ಮ್ಯುನಿಸಿಪಾಲಿಟಿಯಲ್ಲಿರುವ ವಾಹನಗಳು ಮತ್ತು ಪ್ರಾಣಿಗಳ ಮೇಲೆ ಹಾಲಿಹಾಕಿರುವ ತೆರಿಗೆಯ ದರವನ್ನು ಈ ಕೆಳಗೆ ಕಂಡ ಮೇರೆ ಹೆಚ್ಚುಮಾಡಲು ಉದ್ದೇಶಿಸಿರುತ್ತಾರೆ. ಈರೀತಿ ಹೆಚ್ಚುಮಾಡಲು ಆಕ್ಷೇಪಿಸತಕ್ಕವರು ತಮ್ಮ ಆಕ್ಷೇಪಣೆಯನ್ನು ಲಿಖಿತಮೂಲಕ ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಗೆ ಈ ನೋಟೀಸು ಮೈಸೂರು ಗೆಜೆಟ್ಟಿನಲ್ಲಿ ಛಾಯಿಪ್ ಆದ ಒಂದು ತಿಂಗಳ ಒಳಗೆ ಕಳಿಸಿಕೊಡಬೇಕು.

ವಾಹನ ಅಥವಾ ಪ್ರಾಣಿಯ ಹೆಸರು.	ಹಾಲಿಯಿರುವ ದರ ಛಮಾಹಿಗೆ	ಮುಂದೆ ಹಾಕಬೇಕೆಂದಿರುವ ದರ ಛಮಾಹಿಗೆ
1. ಎರಡು ಅಥವಾ ಹೆಚ್ಚು ಕುದುರೆಗಳಿಂದ ಎಳೆಯಲ್ಪಟ್ಟ 4 ಚಕ್ರದ ಸ್ಪ್ರಿಂಗ್ ಗಾಡಿ	2-0-0	5-0-0
2. 13 ಹಿಡಿಗೆ ಕಮ್ಮಿಯಾದ ಒಂದು ಅಥವಾ ಒಂದು ಜೊತೆ ಕುದುರೆಗಳಿಂದ ಅಥವಾ ಎತ್ತುಗಳಿಂದ ಎಳೆಯಲ್ಪಟ್ಟ 4 ಚಕ್ರದ ಸ್ಪ್ರಿಂಗ್ ಗಾಡಿ	2-0-0	3-0-0
3. ಒಂದು ಅಥವಾ ಹೆಚ್ಚು ಕುದುರೆಗಳು, ಹೇಸರಕತ್ತೆಗಳು, ಎತ್ತುಗಳಿಂದ ಎಳೆಯಲ್ಪಟ್ಟ 2 ಚಕ್ರದ ಸ್ಪ್ರಿಂಗ್ ಗಾಡಿ	1-0-0	2-8-0
4. ಬೈಸಿಕಲ್ ಅಥವಾ ಟ್ರೈಸಿಕಲ್	1-8-0	1-8-0
5. ಮೋಟಾರ್ ಗಾಡಿ	15-0-0	15-0-0
6. ಮೋಟಾರ್ ಸೈಕಲ್	7-8-0	7-8-0
7. ಜೋಡೆತ್ತಿನ ಗಾಡಿ	1-0-0	1-8-0
8. ಒಂಟೆತ್ತಿನ ಗಾಡಿ	0-8-0	1-0-0
9. ಒಂದು ಎರಡು ಅಥವಾ ಮೂರು ಚಕ್ರಗಳಿಂದ ತಳ್ಳಲ್ಪಡುವ ಸ್ಪ್ರಿಂಗ್‌ಯಿಲ್ಲದ ಕೈಗಾಡಿ	....	0-8-0
10. 13 ಹಿಡಿಗೆ ಮೇಲ್ಪಟ್ಟ ಕುದುರೆ	2-0-0	3-0-0
11. 13 ಹಿಡಿ ಅಥವಾ ಅದಕ್ಕೆ ಕಮ್ಮಿಯಾದ ಕುದುರೆ ಅಥವಾ ಹೇಸರಕತ್ತೆ	1-0-0	1-8-0
12. ಆನೆ	6-0-0	12-0-0
13. ಒಂಟೆ	3-0-0	6-0-0
14. ಎತ್ತು ಅಥವಾ ಹೋರಿ	0-8-0	0-8-0
15. ಕೋಣ	....	0-8-0
16. ಕತ್ತೆ	....	0-2-0
17 ನಾಯಿ	....	0-8-0

(Sd.) MUHOMED PEER,
8-6-1922. For President.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಸದರಿ ಮ್ಯುನಿಸಿಪಾಲಿಟಿಯಲ್ಲಿರುವ ಖಾಲಿಜಾಗಗಳ ಮೇಲೆ ಹಾಲಿ ಹಾಕಿರುವ ತೆರಿಗೆಯ ದರವನ್ನು ಈ ಕೆಳಗೆ ಕಂಡ ಮೇರೆಗೆ ಹೆಚ್ಚುಮಾಡಲು ಉದ್ದೇಶಿಸಿರುತ್ತಾರೆ. ಈ ರೀತಿ ಹೆಚ್ಚುಮಾಡಲು ಆಕ್ಷೇಪಿಸತಕ್ಕವರು ತಮ್ಮ ಆಕ್ಷೇಪಣೆಯನ್ನು ಲಿಖಿತ ಮೂಲಕ ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಗೆ ಈ ನೋಟೀಸು ಮೈಸೂರು ಗೆಜೆಟ್ಟಿನಲ್ಲಿ ಛಾಯಿಪ್ ಆದ ಒಂದು ತಿಂಗಳ ಒಳಗೆ ಕಳಿಸಿಕೊಡಬೇಕು.

ಹಾಲಿ ಇರುವ ದರ	ಮುಂದೆ ಹಾಕಬೇಕೆಂದಿರುವ ದರ
ಪ್ರತಿ 80 ಚದರಗಜಕ್ಕೆ 0-2-0.	ಪ್ರತಿ 100 ಗಜಕ್ಕೆ 0-4-0.

(Sd.) MUHOMED PEER,
8-6-1922. For President.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಜೂನ್ ತಾ|| ೨೫ನೆಯ ಭಾನುವಾರ.

ವೀರಶೈವರು ಮತ್ತು ಸಂಸ್ಕೃತ ಮಹಾ ಪಾಠಶಾಲೆಗಳು.

ಮೈಸೂರು ಬೆಂಗಳೂರುಗಳಲ್ಲಿರುವ ಸರ್ಕಾರಿ ಸಂಸ್ಕೃತ ಮಹಾಪಾಠಶಾಲೆಗಳಿಗೆ ತ್ರಿಮತಸ್ಥ ಬ್ರಾಹ್ಮಣರಿಗೆ ಭಿನ್ನರಾದ ಉತ್ತಮ ಹಿಂದೂಗಳ ವಿದ್ಯಾರ್ಥಿಗಳನ್ನು ವಿದ್ಯಾಭ್ಯಾಸಕ್ಕೆ ಸೇರಿಸುವ ವಿಷಯದಲ್ಲಿ ಅಭಿಪ್ರಾಯವನ್ನು ತಿಳಿಯಿಸುವುದಕ್ಕಾಗಿ ಪ್ರಭುತ್ವದವರಿಂದ ನಿಯುಕ್ತರಾಗಿದ್ದ ಸಂಘದವರು ಕೊಟ್ಟಿರುವ ವರದಿಯ ಮುಖ್ಯಾಭಿಪ್ರಾಯವನ್ನು ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟಿಸಿರುವೆವಷ್ಟೆ. ಅಷ್ಟು ಸಂಕುಚಿತವಾದ ಅಭಿಪ್ರಾಯವನ್ನು ಸಂಘದವರು ಕೊಟ್ಟಿರುವುದನ್ನು ನೋಡಿದರೆ ಈಗಣ ನಾಗರಿಕ ಕಾಲದ ಪ್ರತಿಯೊಬ್ಬ ಪ್ರಜೆಯೂ ಆಶ್ಚರ್ಯ ವಿಷಾದಗಳನ್ನು ಪಡದೆ ಇರಲಾರನು. ಬೆಂಗಳೂರು ಪಾಠಶಾಲೆಯೊಂದಕ್ಕೆ ಮಾತ್ರ ಇತರರನ್ನು ಸೇರಿಸಲು ಅವಕಾಶ ಕೊಡಬಹುದೆಂದು ಹೇಳಿ ಅಲ್ಲೂ ಬೋಧಕರ ಇಷ್ಟಾನುವರ್ತಿತ್ವದಿಂದ ಸೇರುವುದೋ ಬಿಡುವುದೋ ಆಗಬಹುದೆಂದು ಹೇಳಿರುವ ಅಭಿಪ್ರಾಯವು ಎಷ್ಟು ಅನುದಾರಚಿತ್ತದಿಂದ ಹೊರಟಿರಬೇಕೆಂಬುದನ್ನು ಯುಕ್ತಾಯುಕ್ತ ವಿಮರ್ಶನ ಧುರೀಣರು ಪರ್ಯಾಲೋಚಿಸಬೇಕು. ಮುಖ್ಯವಾಗಿ ಸಂಘದವರು ಇಂಥ ಅಭಿಪ್ರಾಯಪಟ್ಟಿರುವುದಕ್ಕೆ ಅಷ್ಟೇನೂ ಆಶ್ಚರ್ಯಪಡಬೇಕಾಗಿ ನಮಗೆ ತೋರುವುದಿಲ್ಲ. ಏಕೆಂದರೆ ಸಂಘಸಭಿಕರ ನಿಯೋಜನೆಯಂಥ ಮೂಲತತ್ವದಲ್ಲೇ ದೋಷವಿದೆ. ಭಿನ್ನಭಿನ್ನ ವರ್ಗದ ಸಭಿಕರನ್ನು ಕೆಲರನ್ನು ಆ ಸಂಘದಲ್ಲಿ ಸೇರಿಸಬೇಕಾಗಿದ್ದಿತು. ಅವಶ್ಯಕವಾಗಿ ತೋರಿದರೆ ಇತರರನ್ನೂ ಮೆಂಬರರನ್ನಾಗಿ ಸಂಘಕ್ಕೆ ಸೇರಿಸಿಕೊಳ್ಳುತ್ತೀವೆಂದು ಸಂಘರಚನೆಯ ಆರಂಭಕಾಲದಲ್ಲಿ ಸರ್ಕಾರದವರು ಅಪ್ಪಣೆ ಕೊಡಿಸಿದ್ದರು. ಆ ಅವಶ್ಯಕತೆಯು ಅವರಿಗೆ ಯಾಕೆ ಹುಟ್ಟಲಿಲ್ಲವೋ ಗೊತ್ತಾಗಲಿಲ್ಲ. ಅಂತು ವರದಿಯೇನೋ ಸಿದ್ಧವಾಯಿತು. ಪ್ರಭುತ್ವದವರೂ ಇದೇ ಅಭಿಪ್ರಾಯವನ್ನು ಪುರಸ್ಕರಿಸಿ ಅಪ್ಪಣೆ ಮಾಡುವುದಾದಲ್ಲಿ ಪ್ರಜೆಗಳ ದೌರ್ಭಾಗ್ಯಕ್ಕೆ ಎಣೆಯಿಲ್ಲವೆಂದು ಹೇಳಬೇಕಾಗುವುದು; ಅವರ ಮನಸ್ಸೂ ಶಾಂತವಾಗಲಾರದು.

ಈ ಸಂಸ್ಕೃತ ವಿದ್ಯಾಭ್ಯಾಸದ ಸಮಸ್ಯೆಯ ಪ್ರಶ್ನೆಯು ನಿನ್ನೆ ಮೊನ್ನೆಗೆ ಉಪಸ್ಥಿತವಾದುದಲ್ಲ. ೨೫ ವರ್ಷಗಳಿಂದಲೂ ಚರ್ಚಿಸಲ್ಪಡುತ್ತಿದೆ. ಸರ್ ಕೆ. ಶೇಷಾದ್ರಿ ಅಯ್ಯರ್ರವರ ಕಾಲದಿಂದಲೂ ಪ್ರಜಾಪ್ರತಿನಿಧಿಸಭೆಯಲ್ಲಿ ಅರಿಕೆ ಮಾಡಿಕೊಳ್ಳಲ್ಪಡುತ್ತಾ ಬಂದಿದೆ. ಇದನ್ನು ಮೊಟ್ಟಮೊದಲು ಎತ್ತಿದವರು ವೀರಶೈವರು. ಈಚೀಚೆಗೆ ಸಂಸ್ಕೃತ ವಿದ್ಯೆಯ ಮಹತ್ವವನ್ನರಿತು ಇತರರೂ ಇದನ್ನಪೇಕ್ಷಿಸಲು ಸಭೆಯಲ್ಲಿ ಪ್ರಾರಂಭಿಸಿದರು. ವೀರಶೈವರಿಗೆ ಕನ್ನಡವು ಹೇಗೋ ಹಾಗೆ ಸಂಸ್ಕೃತ ಭಾಷೆಯೂ ಅತ್ಯವಶ್ಯಕವಾಗಿ ಪ್ರಾಚೀನ ಕಾಲದಿಂದಲೂ ಬಂದಿದೆ. ಅವರ ಸಿದ್ಧಾಂತ ಗ್ರಂಥಗಳೆಲ್ಲಾ ಗೀರ್ವಾಣ ಭಾಷಾಮಯವಾಗಿವೆ. ವೇದಾಗಮ ಸಂಮತವಾದ ಆ ಮತವು ದ್ವೈತಾದಿ ಮತಗಳಂತೆ ಬ್ರಹ್ಮಸೂತ್ರ ಭಾಷ್ಯಾವಲಂಬನೆಯುಳ್ಳದಾಗಿದೆ. ಮತ್ತು ಈ ಮತಪರವಾಗಿ ಪ್ರಸ್ಥಾನತ್ರಯ ಭಾಷ್ಯವೂ ಉಂಟು. ಅವೆಲ್ಲಾ ವೇದಾಗಮಶಾಸ್ತ್ರವಚನ ಜಟಿಲಗಳಾದುವೆಂಬುದನ್ನು ಹೇಳಬೇಕಾಗಿಲ್ಲ. ಅವುಗಳ ಅಭ್ಯಾಸಕ್ಕೆ ಗೀರ್ವಾಣ ಭಾಷಾಜ್ಞಾನವೇ ಮುಖ್ಯವಾದುದು. ಅಷ್ಟೇ ಅಲ್ಲದೆ ವೇದಶಾಸ್ತ್ರಗಳ ಪರಿಜ್ಞಾನವೂ ಬೇಕೇಬೇಕು. ಪ್ರಾಚೀನಕಾಲದಿಂದಲೂ ಈ ಮತದಲ್ಲಿ ಉಭಯ ಭಾಷಾಪಾಂಡಿತ್ಯವುಳ್ಳ ವಿದ್ವಾಂಸರುಗಳು ಇರುತ್ತ ಅನೇಕಾನೇಕ ಸಿದ್ಧಾಂತ ಗ್ರಂಥಗಳನ್ನು ರಚಿಸಿರುವರು. ವೀರಶೈವ ಕವಿಗಳ ಸಂಖ್ಯೆಯನ್ನಂತೂ ಹೇಳಬೇಕಾಗಿಯೇ ಇಲ್ಲ. ಕವಿಚರಿತೆಯು ಪ್ರತ್ಯಕ್ಷ ನಿದರ್ಶನವಾಗಿದೆ. ಈಗಲೂ ಕೂಡ ಉಪನಿಷತ್ತಿಗೆ ಭಾಷ್ಯವನ್ನು ಬರೆದಿರುವ ವೇ|| ಉಮಚಗಿ ಶಂಕರಶಾಸ್ತ್ರಿಗಳಂಥ ಪಂಡಿತವರ್ಯರೂ ಭಾಷಾರತ್ನವೆಂಬ ಬಿರುದಾಂಕನವನ್ನು ಪಡೆದ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳಂಥ ಮಹಾ ವಿದ್ವಾಂಸರೂ ಅಲ್ಲಲ್ಲಿಗೆ ಇರುತ್ತಾರೆ. ಚೌಡದಾನಪುರದ ವೇ|| ವಿರೂಪಾಕ್ಷ ಒಡೆಯರಂಥ ವೇದಶಾಸ್ತ್ರಾಭಿಜ್ಞರು ಇಂದೂರು ಮಹಾರಾಜ ಸಂಸ್ಕೃತ ಕಲಾಶಾಲೆಯಂಥವುಗಳಲ್ಲಿ ವೇದಶಾಸ್ತ್ರ ಪಾಠಬೋಧಕರಾಗಿರುತ್ತಾರೆ. ಕೈ|| ಬಸವಪ್ಪಶಾಸ್ತ್ರಿಗಳಂಥ ಮಹಾಕವಿವರ್ಯರು ಕೂಡ ಈಗಣ ಕಾಲದಲ್ಲಿ ಈ ಮತದೊಳಗೆ ಗೋಚರಿಸಿ ಹೋಗಿರುವರು. ಇಂಥ ಮಹಾ ವ್ಯಕ್ತಿಗಳಿಗೆಲ್ಲಾ ಸಂಸ್ಕೃತ ವಿದ್ಯಾಭ್ಯಾಸದ ಸೌಕರ್ಯವಿಲ್ಲದೆ ಹೋದರೆ ಅವುಗಳ ಧೀಪ್ರಕಾಶಕ್ಕೆ ಅವಕಾಶವೆಲ್ಲಿರುತ್ತಿದ್ದಿತು? ಸಂಸ್ಕಾರ ವಿಶೇಷವುಳ್ಳ ವ್ಯಕ್ತಿಗಳಿಗೆ ಅವುಗಳ ವಿಕಾಸಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡುವುದು ಪ್ರಭುತ್ವದವರಿಗೆ ಮುಖ್ಯ ಧರ್ಮವಲ್ಲವೆ? ಅಂಥ ವ್ಯಕ್ತಿಗಳೊಂದೊಂದರಿಂದ ದೇಶಕ್ಕೆ ಆಗುವ ಲಾಭವು ಸಾಮಾನ್ಯವಾಗಿದ್ದೀತೆ? ಕೈ|| ಬಸವಪ್ಪಶಾಸ್ತ್ರಿಗಳ ಧೀಶಕ್ತಿಯು ದೇಶಕ್ಕೆ ಎಷ್ಟು ಉಪಕಾರವನ್ನು ಮಾಡಿತು? ವೇ|| ಕರಿಬಸವಶಾಸ್ತ್ರಿಗಳ ಶಿಷ್ಯತ್ವದಿಂದ ಎಷ್ಟು ಜನರು ಭಾಷಾಪಾಂಡಿತ್ಯವನ್ನು ಸಂಪಾದಿಸಲಿಲ್ಲ? ಕೈ|| ಚಿಟಕಿ ಸಿದ್ಧಲಿಂಗಶಾಸ್ತ್ರಿಗಳೇ ಮೊದಲಾದ ೨-೩ ವೀರಶೈವಪಂಡಿತ ವ್ಯಕ್ತಿಗಳ ಸಹಾಯವಿಲ್ಲದಿದ್ದರೆ, ದೇಶದಲ್ಲಿ ಈಗಣಷ್ಟು ದೇಶಭಾಷಾವಿಕಾಸಕ್ಕೆ ಅವಕಾಶವೆಲ್ಲಿರುತ್ತಿದ್ದಿತು? ಇಂಥ ವ್ಯಕ್ತಿಗಳ ಅಭ್ಯುದಯಕ್ಕೆ ಅವಶ್ಯಕವಾದ ಸಾಹಾಯ್ಯ ಸೌಕರ್ಯಗಳನ್ನು ಕೂಡ ಒದಗಿಸದೆ ಅಡ್ಡಿಮಾಡಿ ಬಿಡುವುದೆಂದರೆ ಏಳುತ್ತಿದ್ದ ಸಸಿಯ ದಸಿಯ ಮೇಲೆ ಕೆಂಡವನ್ನು ಸುರಿದು ನಷ್ಟಪಡಿಸಿಕೊಂಡಷ್ಟು ದೋಷವು ದೇಶಕ್ಕೆ ಪ್ರಭುತ್ವದವರಿಂದ ಉಂಟುಮಾಡಿಕೊಡಲ್ಪಟ್ಟಂತಾಗುವುದಿಲ್ಲವೆ?

ವೀರಶೈವರ ಗೀರ್ವಾಣ ಭಾಷಾಭ್ಯಾಸಕ್ಕೆ ಪ್ರಭುತ್ವದವರ ಸಾಹಾಯ್ಯವೇನೂ ಇದುವರೆಗೂ ಆಗದಿದ್ದರೂ ಅದರ ಆವಶ್ಯಕತೆಯನ್ನು ಅವರು ಮರೆತಿಲ್ಲ. ಧರ್ಮಾತ್ಮರಾದ ಶ್ರೀಮಂತರುಗಳು ಧನಸಹಾಯಮಾಡಿ ಅಲ್ಲಿಗಲ್ಲಿಗೆ ಸಂಸ್ಕೃತ ಪಾಠಶಾಲೆಗಳನ್ನೇರ್ಪಡಿಸಿ ಗೀರ್ವಾಣ ಭಾಷಾಕಾಂಕ್ಷಿಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿರುವರು. ಎಷ್ಟೋ ಮಂದಿ ವಿದ್ಯಾರ್ಥಿಗಳು ದೇಶಕೋಶಗಳನ್ನು ಬಿಟ್ಟು ಕಾಶೀಪಟ್ಟಣದಂಥ ದೂರ ಸ್ಥಳಗಳಿಗೆ ಹೋಗಿ ಕದನ್ನವನ್ನು ತಿಂದುಕೊಂಡು ಪ್ರೌಢಶಾಸ್ತ್ರ ವಿದ್ಯಾಭ್ಯಾಸಗಳನ್ನು ಮಾಡಿಕೊಂಡು ಬರುತ್ತಿರುವರು. ಪ್ರಭುತ್ವದ ಸಂಸ್ಕೃತ ಮಹಾಪಾಠಶಾಲೆಯ ಅಭ್ಯಾಸ ಸೌಕರ್ಯವು ಸ್ವದೇಶದಲ್ಲೇ ಇರುತ್ತಿದ್ದರೆ ಆ ವಿದ್ಯಾರ್ಥಿಗಳಿಗೆ ಅನೊಂದು ತಾಪತ್ರಯವೂ ಇಲ್ಲದೆ ಇರುತ್ತಿದ್ದುದಲ್ಲದೆ ಗೀರ್ವಾಣ ಭಾಷಾಪಂಡಿತರು ಒಂದಕ್ಕೆ ನಾಲ್ಕರಷ್ಟು ಈ ಸಮಾಜದಲ್ಲಿ ಹೆಚ್ಚುತ್ತಿದ್ದರು. ಪ್ರಭುತ್ವದವರು ತೋರಿಸುತ್ತ ಬಂದ ಅಶ್ರದ್ಧೆಯಿಂದ ಅದಕ್ಕೆಲ್ಲಾ ಇದುವರೆಗೆ ಉಂಟಾದ ಭಂಗವು ಸಾಮಾನ್ಯವಾಗಿಲ್ಲ. ಇನ್ನಾದರೂ ಪ್ರಭುತ್ವದವರು ವೀರಶೈವರ ವಿಷಯದಲ್ಲಿ ಪ್ರತ್ಯೇಕವಾಗಿ ಗಮನಿಸಿ ಮೈಸೂರು ಬೆಂಗಳೂರು ಮಹಾಪಾಠಶಾಲೆಗಳೆರಡರಲ್ಲೂ ಕೇವಲ ಸಾಹಿತ್ಯ ವಿದ್ಯೆಯ ಅಭ್ಯಾಸಕ್ಕೆ ಮಾತ್ರವೇ ಅಲ್ಲದೆ ವೇದಶಾಸ್ತ್ರಾದಿಗಳ ಅಭ್ಯಾಸಕ್ಕೆ ಅನುಕೂಲ್ಯವನ್ನು ಕಲ್ಪಿಸಿಕೊಡುವುದು ಧರ್ಮವಾಗಿರುತ್ತದೆ. ರಾಜಧಾನಿಯಲ್ಲಿ ಇಷ್ಟರಲ್ಲೇ ವೀರಶೈವ ವಿದ್ಯಾರ್ಥಿನಿಲಯವು ಮ|| ಶ್ರೀಮಂತ ಕಬ್ಬಳ್ಳಿ ಚೆನ್ನಬಸಪ್ಪನವರ ಧರ್ಮಬುದ್ಧಿಯಿಂದಲೂ ಪ್ರಭುತ್ವದವರ ಕೃಪೆಯಿಂದಲೂ ಏರ್ಪಡುವುದಾಗಿದೆ. ಹಾಗೆಯೇ ಒಬ್ಬ ಮಹನೀಯರ ಕೃಪಾವಲಂಬನೆಯಿಂದ ಬಡವಿದ್ಯಾರ್ಥಿಗಳ ಅಶನಕ್ಕೂ ಅನುಕೂಲ್ಯವು ಕಲ್ಪಿಸಲ್ಪಡುವ ಸ್ಥಿತಿಯಿದೆ. ಇಂಥ ಸಂದರ್ಭದಲ್ಲಿ ಪ್ರೌಢಶಾಸ್ತ್ರಾದಿಗಳ ಅಭ್ಯಾಸಕ್ಕೆ ಸೌಕರ್ಯವು ರಾಜಧಾನಿಯಲ್ಲಿ ಒದಗುವುದಾದರೆ ವೀರಶೈವ ಸಮಾಜಕ್ಕೆ ಎಷ್ಟೋ ಪರಮೋಪಕಾರವನ್ನು ಪ್ರಭುತ್ವದವರು ಮಾಡಿಕೊಟ್ಟಂತಾಗುವುದು. ಶ್ರೀಮನ್ಮಹಾರಾಜರೂ, ಅವರ ಘನ ಸರ್ಕಾರದವರೂ ಈ ವಿಷಯವನ್ನು ಕೃಪಾರ್ದ್ರಚಿತ್ತದಿಂದ ಸಂಪೂರ್ಣವಾಗಿ ಗಮನಿಸಬೇಕೆಂದು ಪ್ರಾರ್ಥಿಸುವುದಲ್ಲದೆ ತ್ರಿಮತದ ವೈದಿಕಪಂಡಿತರುಗಳೂ, ಪಾಠಶಾಲಾ ಬೋಧಕರುಗಳೂ, ದೇಶದ ಆಗುಹೋಗುಗಳನ್ನು ಪರ್ಯಾಲೋಚಿಸಬಲ್ಲ ಲೌಕಿಕ ಮಹಾಶಯರಾದ ದೇಶಾಭಿಮಾನಿಗಳೂ ವೀರಶೈವ ಸಮಾಜದ ವಿಷಯದಲ್ಲಿ ಉದಾರಭಾವವನ್ನು ತಳೆದು ಬಹು ದಿನದಿಂದ ಅವರ ಮನಸ್ಸಿಗೆ ನೋವನ್ನುಂಟುಮಾಡಿರುವ ಈ ಅತ್ಯವಶ್ಯಕವಾದ ಸಮಸ್ಯೆಯನ್ನು ಸಮಾಧಾನಕರವಾಗುವಂತೆ ಪರಿಸಮಾಪ್ತಿಗೊಳಿಸಿದರೆ ಉಭಯತ್ರ ಅತಿನಿಕಟವಾದ ಸೌಹಾರ್ದವೂ ದೇಶಾಭ್ಯುದಯ ಕಾರ್ಯಗಳಿಗೆ ಪರಸ್ಪರ ನೆರವೂ ಉಂಟಾಗಿ ದೇಶಕ್ಕೆ ಇದೊಂದು ಶುಭೋದಯದ ನವಯುಗವನ್ನುಂಟುಮಾಡಿಟ್ಟಂತಾಗುವುದು. ಸಹೋದರ ವಾತ್ಸಲ್ಯದಿಂದ ಇದನ್ನು ಬಗೆಹರಿಸುವ ವಿಷಯದಲ್ಲಿ ಅವರುಗಳು ದೊಡ್ಡ ಮನಸ್ಸನ್ನು ಮಾಡದಿರಲಾರರೆಂದೂ, ಪ್ರಭುತ್ವದವರು ಕೂಡ ಅದಕ್ಕೆ ಸಕಲ ವಿಧದ ಸೌಕರ್ಯಗಳನ್ನು ಉಂಟುಮಾಡಿಕೊಡದೆ ಇರಲಾರರೆಂದೂ ನಂಬಿ ನಿರೀಕ್ಷಿಸುತ್ತೇವೆ. ಆದರೆ ಗೌರ್ನಮೆಂಟಿನವರು ಮಾಡಬೇಕಾದುದನ್ನು ಅವರೇ ಮಾಡುವರೆಂದು ವೀರಶೈವ ಸಮಾಜವು ತಟಸ್ಥವಾಗಿ ಕುಳಿತರೆ ಪ್ರಯೋಜನವಾಗಲಾರದು. ವರದಿಯ ಮೇಲೆ ತಮ್ಮ ಅಭಿಪ್ರಾಯವನ್ನು ತಿಳಿಯಿಸಿಕೊಳ್ಳುವುದಕ್ಕೆ ಬರುವ ಜುಲೈ ತಾ|| ೧೫ ರ ವರೆಗೆ ಸರ್ಕಾರದವರು ಅವಕಾಶಕೊಟ್ಟಿರುತ್ತಾರೆ. ಅಷ್ಟರೊಳಗೆ ದೇಶದ ಎಲ್ಲ ಮುಖ್ಯಸ್ಥಳಗಳಲ್ಲೂ ವೀರಶೈವ ಮಹಾಜನರು ಸಭೆಗಳನ್ನು ಮಾಡಿ ಈ ವಿಷಯದಲ್ಲಿ ತಮಗೆ ಇರತಕ್ಕ ಕೊರತೆಯನ್ನು ಪರಿಹರಿಸಿಕೊಟ್ಟು ಬೆಂಗಳೂರು ಮೈಸೂರು ಸಂಸ್ಕೃತ ಕಾಲೇಜುಗಳೆರಡರಲ್ಲೂ ವೀರಶೈವ ವಿದ್ಯಾರ್ಥಿಗಳಿಗೆ ಸ್ಪೆಷಲ್ಲಾಗಿ ಶಾಸ್ತ್ರಾದಿ ಅಭ್ಯಾಸಗಳಿಗೆಲ್ಲಾ ಅವಕಾಶವನ್ನು ಕಲ್ಪಿಸಿಕೊಡುವ ಕೃಪೆಮಾಡಬೇಕಾಗಿ ನಿರ್ಧಾರಗಳನ್ನು ಮಾಡಿ ಗೌರ್ನಮೆಂಟ್ ಚೀಫ್ ಸೆಕ್ರೆಟರಿಯವರಲ್ಲಿಗೆ ಪ್ರೊಸಿಡಿಂಗ್ಸುಗಳನ್ನು ರಿಜಿಸ್ಟರ್ಡ್ ಅಂಚೆಯಮೂಲಕ ಕಳುಹಿಸಿಕೊಡುವುದು ಅತ್ಯವಶ್ಯಕವು. ಏಕೆಂದರೆ ಸರ್ಕಾರದ ಕಿವಿಯು ಮಂದವಾದುದು. ಗಟ್ಟಿಯಾದ ದುಂದುಭಿಧ್ವನಿಯಾದರೇ ಅದಕ್ಕೆ ಕೇಳಿಸುವುದು. ಅದುಕಾರಣ ಮಾಡಬೇಕಾದ ಪ್ರಯತ್ನವನ್ನು ಪ್ರಬಲವಾಗಿ ಮಾಡುವಲ್ಲಿ ವೀರಶೈವ ಸಮಾಜವು ಅಲಕ್ಷೀಕರಿಸಲಾರದೆಂದು ನಂಬುತ್ತೇವೆ.

BIGOTRY CONCENTRATED.

The report of the Special Committee appointed to submit proposals for the improvement of Sanskrit Education in the State is published in the Mysore Gazette of June 8th and the public are invited to communicate their opinions on the proposals of the Committee before the 15th July 1922. To those who are conscious of living in the 20th Century and have some sense of reason about them it would be trying to view the proposals with any degree of calmness patience or equanimity. The report is a monument of unadulterated bigotry–both ancient and modern combined. In truth, it could not be expected to be anything else, having regard to the composition of the Committee–which contains such redoubtable champions of class exclusiveness and privileges and staunch foes liberalism and progress as Mr. Karpur Sreenivasa Rao, Mr. M. Shama Rao, and all those who have consistently stood for years against liberalising Sanskrit Education. To expect these very men over again to consider a question such as the admission of non-Brahmins into the Sanskrit Colleges–which was the main issue before the Committee–is to expect the leapord to change its spots. Not a single non-Brahmin is on the Committee–and judgment has been delivered without the slightest effort being made to understand the true position of the non-Brahmins. To give our frank opinion, the whole report has to be thrown out as not deserving of consideration and a fresh and representative Committee be appointed to report in the matter.

There are, however some proposals in the report which merit some consideration as giving an idea of the mentality and the outlook of the orthodox community in the State whose representatives sat on the Committee. They recommend that the Mysore Sanskrit College is to be a seat of Ancient and Orthodox Learning open only to Brahmins as heretofore, and in the Bangalore Sanskrit College only the Sanskrit Kavya and Sahitya classes are to be thrown open to non-Brahmins and not the Vedic and Prayoga classes which should be held in a separate place for Brahmins. The reasons for preserving the sanctity of the Mysore College from the polluting touch of the non-Brahmins is firstly, that the latter were not admitted into it hitherto which is a curious one, for otherwise, there was no need for the reference at all; secondly, that it is strictly a seat of Orthodox learning in which all Vedas and Shastras are taught–which are the very subjects which the non-Brahmin boys desire most to study; and thirdly, that His Highness the Ex-Raja of Cochin also recommends the maintenance of this monopoly, and that old orthodox Pandits should not be compelled to teach non-Brahmin students. The old Raja whose name has been dragged in very conveniently to serve the purpose of the Committee, for, surely there were other worthies as well, if not more competent to give their opinion on this subject but who have not been consulted–says in his note that the Pandits will not willingly teach other caste boys and the Brahmin students true to their Gurus will not like the company of other caste boys–a theory which is readily accepted by the Committee–but which is a most dangerous one to initiate. If this theory is only to invade other educational institutions–as surely it is likely to when countenanced in one department–what a veritable chaos there will be? If they want it to be a seat of Orthodox Learning they could by all means have it but let them not seek the aid of State Revenues. There could be nothing more unjust and unreasonable than that those who are already having many times over their due should get this privilege all for themselves at the cost of others. It is simply absurd to say that because the non-Brahmins were not admitted hitherto into the College the injustice should be continued for all time. For a matter of that, all knowledge was more or less a forbidden fruit to the other classes, and had not there been a wholesome improvement and intermingling of professions as a result of throwing open the doors of modern knowledge to all people alike? Could there be a more iniquitous and inhuman system than that which forbids a man from the study of his own Scriptures, from obtaining a knowledge of his own religion? Imagine a Christian not being allowed to study the Bible, a Mohammadan forbidden to study *Quoran*, a Parsee to study his *Zenda Vesta*, a Buddhist his *Tripitakas*. Nay more, it is an obligation in other religions on every member to knew his scriptures, and further, men of other faiths could have free access to them. In any other clime they would have revolted against such a system and would have seen its termination long ago. And all this is done in our land in the name of religion. One would like to

know what is that Divinity which would not intend its being known and understood by its own devotees?

They have consulted three similar institutions, of Benares where the Adhyapakas or Pandits select their own pupils, of Jaipur where Dwijas of three Varnas only are admitted for all subjects except Vedas and of Calcutta where all Hindu students can study all subjects including Vedas. For the Mysore College they have followed the example of the antiquated school of Benares, and for the Bangalore College the insignificant Jaipur institution and have given a clean go-bye to the more rational and modern institution of Calcutta. This is how the Committee has done its work in the interest of this model and progressive State. There are other matters in the Report which may be considered in a later issue if necessary. But here we would only say that the report is an insult to the self-respect of non-Brahmins. The suggestion to throw open the Bangalore College partially, as though that would not pollute the Pandits or their privileged pupils, and the principle of which cannot be extended to Mysore is apart from being a self-contradiction–adding insult to injury. There is another point besides all this. It is the Brahmins who were most loud-mouthed in saying that no difference should be made between Brahmins and non-Brahmins when the question of appointments and the backward class scholarships came. We would ask who makes the difference and where comes the differential treatment from? When self interest is touched the inner nature stands revealed in all its true and ugly colours. Through all the ages runs one never ending stream of selfishness and monopoly. When we are making our headway in all the various lines of progress, when knowledge–scientific, philosophical and cultural–is becoming more and more universal, when Westerners of a different race creed and climate are coming to our country, drinking from the fountains of our Vedas and philosophy and enriching themselves and their countrymen we, the children of the soil, the followers of a common religion, the inheritors of an old culture, to be denied–denied by statute and by law–the study of our own Scriptures would not only be unjust and iniquitous from the point of view of Government, but would spell a national disaster. Exclusiveness has played enough mischief already in the land and let no further enunciation and play of the baneful principle be tolerated by the non-Brahmins.

SIR M. KANTARAJ URS.

We hasten to welcome Sir M. Kantaraj Urs to Mysore City, after his sojourn in Ooty and are particularly pleased to see that he has returned after complete recovery from his illness and with renewed health and vigour. It is not often that a retired Dewan spends his days of retirement in the State in which he has served, but it is our good fortune that Sir M. Kantaraj Urs is going to be with us, and we earnestly hope that after having his full rest, he will be able to give the benefit of his vast experience and knowledge to the people of the State, as we have no doubt the public life in Mysore will be all the richer by his guidance.

MYSORE CIVIL COURTS.

We hear of much discontent in the Mysore Civil Courts in the matter of appointments and promotions. It looks as though new men are appointed to places which should rightly be given to those who are already in service by promotion, and as though men of lower appointments are given higher places in supercession of senior men who have a right for them. It appears even the recommendations of the respective judges are overlooked to in favour of particular candidates. This is surely not a desirable state of affairs, least of all in the judicial department where justice not preference should play the part, and we hope no room for complaint will be given hereafter.

Stethoscope found:—Mr. Husainali, Sayar Daroga of Mysore City writes that he has found a stethoscope lying on the Nazarbad Road and the owner may obtain it from him.

ಒಳದೇಶದ ವೃತ್ತಾಂತಗಳು.

ಲೋಕಲ್‌ಸರ್ವಿಸ್ ಮತ್ತು ಪ್ಲೀಡರ್ ಪರೀಕ್ಷೆಗಳು 1922ನೆಯ ಡಿಸೆಂಬರ್ ತಿಂಗಳಲ್ಲಿ ಎರಡನೆಯ ವೇಳೆ ನಡಿಸಲ್ಪಡತಕ್ಕುದೆಂದು ಸರ್ಕಾರದಪ್ಪಣೆಯಾಗಿದೆ.

ರೆವಿನ್ಯೂ ಸೆಕ್ರೆಟರಿ ಮಿ|| ಸಿ. ವೆಂಕಟರಾಯರಿಗೆ ಕೊಡಲ್ಪಟ್ಟಿದ್ದ ಪ್ರಿವಿಲೆಜ್ ರಜವು ಇನ್ನೂ ೬೦ ದಿನಗಳಿಗೆ ಹೆಚ್ಚಿಸಲ್ಪಟ್ಟುದಲ್ಲದೆ ೮ ತಿಂಗಳ ಫರ್ಲೋ ರಜ ಕೊಡಲ್ಪಟ್ಟಿದೆ.

ಕಳೆದ ಮಂಗಳವಾರ ರಾಜಧಾನಿಯಲ್ಲಿ ಒಂದು ಹದ ಮಳೆಯಾಗಿ ವಾಯುಗುಣದಲ್ಲಿ ತಂಪುಂಟಾಗಿದೆ. ಈ ಮಳೆಯು ಸರ್ವತ್ರ ಬಿದ್ದು ಒಣಗುತ್ತಿದ್ದ ಜೋಳದ ಪೈರಿಗೆ ಬಹು ಸಹಾಯಕವಾಯಿತು.

ಈ ವರ್ಷ ಎಲ್.ಎಲ್.ಬಿ., ಪರೀಕ್ಷೆಯಲ್ಲಿ ಉತ್ತೀರ್ಣರಾದ ಚಿಕ್ಕಬಳ್ಳಾಪುರದ ಮ|| ಜಿ. ರುದ್ರಪ್ಪ, ಎಂ.ಎ., ಯವರು ಅಡ್ವೋಕೇಟರಾಗಿರಲು ಚೀಫ್ ಕೋರ್ಟಿನವರಪ್ಪಣೆಯನ್ನು ಕೇಳಿರುತ್ತಾರೆ.

ಮೈಸೂರು ಕುರುಬರ ಸಂಘದಿಂದ ಒಬ್ಬ ಮೆಂಬರು ಮತ್ತು ಇನಾಂದಾರರ ಸಂಘದಿಂದ ಒಬ್ಬ ಮೆಂಬರು ಪ್ರಜಾಪ್ರತಿನಿಧಿಸಭೆಗೆ ಕಳುಹಲ್ಪಡಬಹುದೆಂದು ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ.

ಬೆಂಗಳೂರು ವಿಶ್ವೇಶರಪುರದಲ್ಲಿ ೧೧ ವರ್ಷದ ಹುಡುಗಿಯು ಏರಿಯ ಮಣ್ಣನ್ನು ತೆಗೆಯುತ್ತಿರುವಾಗ್ಗೆ ಮಣ್ಣು ಕುಸಿದು ಅವಳ ಮೇಲೆ ಬಿದ್ದು ಅವಳು ಅದರೊಳಗೆ ಸಿಕ್ಕಿಕೊಂಡು ಉಸಿರಾಡಲಿಕ್ಕಿಲ್ಲದೆ ಕೂಡಲೆ ಸತ್ತುಹೋದಳು.

ಚನ್ನಪಟ್ಟಣ ತಾ|| ಅಕ್ಕೂರು ಗುಂಡಪ್ಪನ ಕೊಲೆಯನ್ನು ಮಾಡಿ ಮರಣದಂಡನೆಗೆ ಗುರಿಯಾದ ಕೊಂಡಾಪುರದ ಸಿದ್ದೇಗೌಡನು ತನ್ನ ಮರಣದಂಡನೆಯನ್ನು ತಪ್ಪಿಸಿಕೊಡಬೇಕೆಂದು ಪ್ರಾರ್ಥಿಸಿ ಶ್ರೀಮನ್ ಮಹಾರಾಜರವರಿಗೆ ಬರೆದುಕೊಂಡಿದ್ದ ಅರ್ಜಿಯು ತಿರಸ್ಕೃತವಾಯಿತು.

ಶ್ರೀಮನ್ಮಹಾರಾಜರವರು ಹಾಸನ ಡಿ|| ನಲ್ಲಿ ಸಕಲೇಶಪುರ, ಶುಕ್ರವಾರಸಂತೆ ಮತ್ತೆ ಕೆಲ ನೆರೆಯಸ್ಥಳಗಳಲ್ಲಿ ಸಂಚರಿಸಿಕೊಂಡು ಬರಲು ಕಳೆದ ತಾ|| ೨೧ ರಲ್ಲಿ ತಮ್ಮ ಪ್ರೈವೆಟ್ ಸೆಕ್ರೆಟರಿ ಮಿ|| ಮಿರ್ಜಾಸಾಹೇಬರು ಮತ್ತಿಬ್ಬರು ಸರದಾರರೊಡನೆ ಮೋಟಾರುಬಂಡಿಯಲ್ಲಿ ಪ್ರಯಾಣಮಾಡಿದರು.

ಹಾಸನದಿಂದ ಮಂಗಳೂರಿಗೆ ರೈಲ್ವೆ ಹಾಕುವ ವಿಚಾರದಲ್ಲಿ ತತ್ಸಂಬಂಧವಾದ ಎಲ್ಲ ವಿಷಯಗಳನ್ನು ಪ್ರತ್ಯಕ್ಷವಾಗಿ ಚರ್ಚಿಸಿ ತಿಳಿದುಕೊಳ್ಳುವುದಕ್ಕಾಗಿ ಮಂಗಳೂರಿಗೆ ಬರಬೇಕೆಂದು ದಿವಾನರನ್ನು ಮಂಗಳೂರಿನ ಡಿಸ್ಟ್ರಿಕ್ಟ್ ಬೋರ್ಡಿನವರು ಪ್ರಾರ್ಥಿಸಿಕೊಂಡಿರುವುದಾಗಿ ವರ್ತಮಾನವಿದೆ. ನಮ್ಮ ಸಂಸ್ಥಾನಕ್ಕೆ ಈಗ ಪ್ರಾಪ್ತವಾಗಿರುವ ದುಡ್ಡಿನ ಮುಗ್ಗಟ್ಟಿನಲ್ಲಿ ಈ ಕಾರ್ಯಗಳನ್ನು ಕೈಕೊಳ್ಳುವುದು ತಾನೆ ಅಸಾಧ್ಯವು.

ರಾಜಧಾನಿಯ ಕರೋಹಟ್ಟಿಯ ಬೀದಿಯಲ್ಲಿ ಸ್ಥಾಪಿತವಾಗಿರುವ ವೀರಮ್ಮಯ್ಯನವರ ಅನಾಥಾಲಯದಲ್ಲಿ ಮೂವರು ವೀರಶೈವ ಬಡವಿದ್ಯಾರ್ಥಿಗಳಿಗೆ ಒಂದು ವರ್ಷದವರೆಗೆ ಉಚಿತವಾಗಿ ಭೋಜನಮಾಡಿಸಲು ಏರ್ಪಾಟು ಮಾಡಿರುವುದರಿಂದ ಅರ್ಹರಾದವರು ವಾಣೀವಿಲಾಸ ರೋಡಿನಲ್ಲಿರುವ ಈ ಅನಾಥಾಲಯದ ಪ್ರೆಸಿಡೆಂಟರಾದ ಡಾ|| ಸಿದ್ದಪ್ಪನವರಿಗೆ ಜುಲೈ ತಾ|| ೧೦ ರೊಳಗೆ ಬರೆದುಕೊಳ್ಳಬೇಕಾಗಿ ಅಪೇಕ್ಷಿಸಲ್ಪಟ್ಟಿರುತ್ತಾರೆ.

ಮಾಗಡಿಯಲ್ಲಿ ಪ್ರಸಿದ್ಧ ಪಾಳಯಗಾರರಾದ ಕೆಂಪೇಗೌಡರಿಂದ ಕಟ್ಟಿಸಲ್ಪಟ್ಟಿದ್ದ ಶ್ರೀ ಸೋಮೇಶ್ವರ ದೇವಾಲಯವು ಬಹಳ ಶಿಥಿಲವಾಗಿರುವುದರಿಂದ ಅದು ಸರಿಪಡಿಸಲ್ಪಟ್ಟು ಪೂಜೆಯೂ ರಥೋತ್ಸವವೂ ಕ್ರಮವಾಗಿ ನಡೆಯಲು ಮ|| ಕರಣೀಕ ಕೃಷ್ಣಮೂರ್ತಿರಾಯರು ಮುಂದಾಗಿನಿಂತು ಭಕ್ತಾದಿಗಳಿಂದ ಚಂದಾಹಣವನ್ನೆತ್ತುತ್ತಿರುವರೆಂದೂ ಈವರೆಗೆ ಈ ಜೀರ್ಣೋದ್ಧಾರಕಾರ್ಯಕ್ಕಾಗಿ ೧೧೦೦ ರೂಪಾಯಿ ಚಂದಾ ಬಂದಿರುವುದಾಗಿಯೂ ತಿಳಿಯಬರುತ್ತದೆ.

ಕೃಷ್ಣರಾಜಸಾಗರ ಕಟ್ಟೆಯ ಎರಡನೆಯ ಪರ್ಯಾಯವನ್ನು ಕಟ್ಟುವ ವಿಚಾರವನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳಲು ಮದ್ರಾಸ್ ಗೌರ್ನರ್ ಕೌನ್ಸಿಲ್ ಮೆಂಬರಾದ ಆನರಬಲ್ ಕೆ. ಶ್ರೀನಿವಾಸಯ್ಯಂಗಾರರು ಕಳೆದ ಸೋಮವಾರ ರಾಜಧಾನಿಗೆ ಬಂದಿದ್ದುದರಿಂದ ನಮ್ಮ ದಿವಾನರು, ಎಕ್ಸಿಕ್ಯುಟಿವ್ ಇಂಜನಿಯರು ಮತ್ತು ರೆವಿನ್ಯೂ ಕಮೀಷನರು ಬೆಂಗಳೂರಿಂದ ಬಂದಿದ್ದರು. ಆ|| ಶ್ರೀನಿವಾಸಯ್ಯಂಗಾರರು ದಿವಾನರು ಮೊದಲಾದ ಅಧಿಕಾರಿಗಳ ಕೂಡ ಕಟ್ಟೆಗೆ ಹೋಗಿ ನೋಡಿಕೊಂಡು ಬಂದು ಎಲ್ಲ ವಿಷಯವನ್ನು ಚರ್ಚಿಸಿ ತಿಳಿದುಕೊಂಡು ಉದಕಮಂಡಲಕ್ಕೆ ಹಿಂದಿರುಗಿ ಪ್ರಯಾಣಮಾಡಿದರು. ದಿವಾನರೂ ಮಾರನೆಯದಿನ ಬೆಂಗಳೂರಿಗೆ ದಯಮಾಡಿಸಿದರು.

ಮ್ಯುನಿಸಿಪಲ್ ಕೌನ್ಸಿಲರೂ, ಡಿಸ್ಟ್ರಿಕ್ಟ್ ಬೋರ್ಡು, ಪ್ರಜಾಪ್ರತಿನಿಧಿಸಭೆ ಲೆಜಿಸ್ಲೇಟಿವ್ ಕೌನ್ಸಿಲ್ ಇವುಗಳ ಮೆಂಬರೂ ಆಗಿದ್ದ ಶ್ರೀರಂಗಪಟ್ಟಣದ ಮ|| ಎಸ್. ಎ. ಜವರಯ್ಯನವರು ೫-೬ ದಿನಗಳವರೆಗೆ ನ್ಯುಮೋನಿಯ ಜ್ವರಪೀಡಿತರಾಗಿದ್ದು ಕಳೆದ ತಾ|| ೨೧ರಲ್ಲಿ ವಿಧಿವಶರಾದರೆಂದು ತಿಳುಹಲು ಅತ್ಯಂತ ವ್ಯಸನವಾಗುತ್ತದೆ. ಇವರು ತಮ್ಮಿಬ್ಬರ ಹೆಣ್ಣುಮಕ್ಕಳ ವಿವಾಹವನ್ನು ೨೦ ದಿನಗಳ ಹಿಂದೆ ಬಹಳ ವಿಜೃಂಭಣೆಯಿಂದ ನಡಿಸಿದ್ದರು. ಇವರು ಬಹಳ ಧೈರ್ಯಶಾಲಿಯೂ, ಉತ್ಸಾಹಶೀಲರೂ, ಸ್ನೇಹಪರರೂ, ಹಿಡಿದ ಕಾರ್ಯವನ್ನು ಸಾಧಿಸುವವರೂ ಆಗಿದ್ದರು. ಇವರ ಅಕಾಲಮರಣದಿಂದ ಇವರ ಕುಟುಂಬಕ್ಕೂ ಅಪಾರವಾದ ಮಿತ್ರಮಂಡಲಿಗೂ ವಿಶೇಷ ಖೇದವುಂಟಾಗಿದೆ.

ಮ|| ವಾಮನರಾವ್ ಮಾಸ್ಟರ್‌ರವರ ವಿಶ್ವಗುಣಾದರ್ಶ ಸಂಗೀತ ನಾಟಕಮಂಡಳಿಯವರು ರಾಜಧಾನಿಗೆ ಬಂದು ಕಳೆದ ೧|| ತಿಂಗಳಿಂದಲೂ ಪುಂಡರೀಕ, ಸತ್ವಪರೀಕ್ಷೆ ಮೊದಲಾದ ಧರ್ಮಬೋಧೆಯ ನಾಟಕಗಳನ್ನು ಅಭಿನಯಿಸಿ ಪ್ರೇಕ್ಷಕರ ಮನಸ್ಸಿನಲ್ಲಿ ಭಕ್ತಿಭಾವವನ್ನು ವೃದ್ಧಿಗೊಳಿಸುತ್ತಿರುವರು. ಈ ಮಂಡಲಿಯವರು ತಮ್ಮ ಧರ್ಮಬೋಧಕಗಳಾದ ಪುಂಡರೀಕ ಮತ್ತು ಸತ್ವಪರೀಕ್ಷೆ ಎಂಬ ನಾಟಕಗಳನ್ನು ಕಳೆದ ತಾ|| ೧೭ ಮತ್ತು ೨೦ರಲ್ಲಿ ಶ್ರೀಮನ್ಮಹಾರಾಜರವರಪ್ಪಣೆಯಂತೆ ಜಗನ್ಮೋಹನ ಪ್ರಾಸಾದದಲ್ಲಿ ಅಭಿನಯಿಸಿ ಮಹಾರಾಜರವರ ಮನಸ್ಸಿಗಾನಂದವನ್ನುಂಟುಮಾಡಿ ೧೫೦೦ ರೂ. ಗಳನ್ನೂ ಎರಡು ಶಾಲುಜೋಡಿಗಳನ್ನೂ ಬಹುಮಾನಿಸಲ್ಪಟ್ಟಿರುತ್ತಾರೆ.

ಸೇನೆಯ ಚೀಫ್ ಕಮ್ಯಾಂಡೆಂಟರಾದ ಸರದಾರ್ ಬಹದ್ದೂರ್ ಲೆಫ್ಟನೆಂಟ್ ಕರ್ನಲ್ ಮ|| ಬಿ. ಚಾಮರಾಜ ಅರಸಿನವರು ತಮ್ಮ ಕುಮಾರರ ವಿವಾಹವನ್ನು ಮಾಡಿದುದರ ಸಂತೋಷಾರ್ಥವಾಗಿ ಕಳೆದ ಸೋಮವಾರ ಶ್ರೀಮನ್ಮಹಾರಾಜರವರನ್ನೂ ಶ್ರೀಮದ್ಯುವರಾಜರನ್ನೂ ತಮ್ಮ ಬಂಗಲೆಗೆ ಬಿಜಮಾಡಿಸಿಕೊಂಡು ಬಂದು ಶ್ರೀಮನ್ಮಹಾರಾಜರವರ ಪಾದಪೂಜೆಯನ್ನು ಮಾಡಿ ಮಹಾರಾಜ ಸಹೋದರರುಗಳನ್ನೂ ಇತರ ರಾಜಬಂಧುಗಳನ್ನೂ ಮೃಷ್ಟಾನ್ನ ಭೋಜನದಿಂದ ಸತ್ಕರಿಸಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು. ಮತ್ತು ತಾ|| ೨೨ರಲ್ಲಿ ರಾಣಿವಾಸದವರನ್ನು ಬಿಜಮಾಡಿಸಿಕೊಂಡು ಬಂದು ದಿವ್ಯವಾದ ಔತಣದಿಂದ ಸತ್ಕರಿಸಿದರು. ಮಹಾರಾಜ ಮಹಾರಾಣಿಯವರುಗಳ ಸತ್ಕಾರಕ್ಕಾಗಿ ಮ|| ಅರಸಿನವರು ವಿಶೇಷವಾದೇರ್ಪಾಟನ್ನು ಮಾಡಿದ್ದರು.

ಮೈಸೂರು-ಬೆಂಗಳೂರು ಮಧ್ಯೆ ತಿರುಗಾಡುವ ೩ ರೈಲು ಬಂಡಿಗಳಲ್ಲಿ ಮೈಸೂರಿನಿಂದ ಬೆಳಿಗ್ಗೆ ೮-೨೦ಕ್ಕೆ ಹೊರಡುವ ಬಂಡಿಯು ಜುಲೈ ತಾ|| ೧ರಿಂದ ಬೆಳಿಗ್ಗೆ ೭-೪೦ಕ್ಕೆ ಹೊರಟು ಬೆಂಗಳೂರನ್ನು ತಲುಪುವುದು. ಇದೇ ಜುಲೈ ತಾ|| ೧ರ ಆರಭ್ಯ ಮೈಸೂರಿನಿಂದ ಬೆಳಿಗ್ಗೆ ೬-೪೫ಕ್ಕೆ ಹೊರಡುವ ಬಂಡಿಯು ಮಧ್ಯಾನ್ಹ ೧-೧೫ಕ್ಕೂ ೧-೫೦ಕ್ಕೆ ಹೊರಡುವ ಬಂಡಿಯು ರಾತ್ರಿ ೧೧-೧೫ಕ್ಕೂ ಅರಶೀಕೆರೆಯನ್ನು ತಲುಪುವುವು. ಮತ್ತು ಅರಶೀಕೆರೆಯಿಂದ ಮಧ್ಯಾನ್ಹ ೨-೨೦ಕ್ಕೆ ಹೊರಡುವ ಬಂಡಿಯು ರಾತ್ರಿ ೮-೪೫ಕ್ಕೂ ಪ್ರಾತಃಕಾಲ ೪ ಗಂಟೆಗೆ ಹೊರಡುವ ಬಂಡಿಯು ಮಧ್ಯಾನ್ಹ ೧೨-೪೫ಕ್ಕೂ ಮೈಸೂರನ್ನು ಸೇರುವುವು. ಮೈಸೂರಿನಿಂದ ಮಧ್ಯಾನ್ಹ ೧೨|| ಗೊಂದೂ, ೧-೨೦ಕ್ಕೆ ಮತ್ತೊಂದೂ ಬಂಡಿಗಳು ಚಾಮರಾಜಪುರಂ ಸ್ಟೇಷನ್ನಿಗೆ ಹೋಗಿ ೧೨-೫೦ಕ್ಕೂ ಮತ್ತು ೧-೪೦ಕ್ಕೂ ಹಿಂದಿರುಗಿ ಬರುವುವು.

ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವವು ಕಳೆದ ತಾ|| ೫ರಲ್ಲಿ ದಾವಣಗೆರೆ ತಾ|| ಕಕ್ಕರಗೊಳ್ಳ, ಕಡೂರು ತಾ|| ಮಲಿದೇವಿಹಳ್ಳಿ, ಚಿಕ್ಕನಾಯಕನಹಳ್ಳಿ ತಾ|| ಶೆಟ್ಟಿಕೆರೆ, ಬೌರಿಂಗ್‌ಪೇಟೆ ತಾ|| ಸೂಲಿಕುಂಟೆ ಮಾದಮುರಗಲ, ತುಮಕೂರು ತಾಲ್ಲೂಕು ಕ್ಯಾತಸಂದ್ರ, ಹೆಗ್ಗಡದೇವನಕೋಟೆ ತಾ|| ಸರಗೂರು, ನಂಜನಗೂಡು ತಾ|| ನೇರಳೆ ಮೊದಲಾದ ಅನೇಕ ಸ್ಥಳಗಳಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿಸಲ್ಪಟ್ಟು ಬಾಲಕ ಬಾಲಿಕೆಯರುಗಳು ಆಟಪಾಟಗಳಿಂದಲೂ ಸಕ್ಕರೆ ಹಣ್ಣು ಹಂಪಲುಗಳ ವಿನಿಯೋಗದಿಂದಲೂ ಸಂತೋಷಗೊಳಿಸಲ್ಪಟ್ಟರು. ರಾಜಭಕ್ತಿವಿಶ್ವಾಸ ವಿದ್ಯೆಯಿಂದಾಗತಕ್ಕ ಪ್ರಯೋಜನ ಮೊದಲಾದ ವಿಷಯಗಳ ಮೇಲೆ ಬೋಧಪರವಾದ ಭಾಷಣಗಳು ಮಾಡಲ್ಪಟ್ಟವು. ಈ ಮಹೋತ್ಸವದ ಸಂಬಂಧವಾದ ಲೇಖನಗಳನ್ನು ಸ್ಥಳಸಂಕೋಚದಿಂದ ಸಮಗ್ರವಾಗಿ ಪ್ರಕಟಿಸಲು ಅವಕಾಶವಾಗಲಿಲ್ಲವಾಗಿ ವಿಷಾದಿಸುತ್ತೇವೆ.

ಸರ್ಕಾರದವರು ಫೈನಾನ್ಸ್ ಕಮಿಟಿಯವರ ಸೂಚನೆಯನ್ನನುಸರಿಸಿ ರೆವಿನ್ಯೂಶಾಖೆಯಲ್ಲಿ ವೆಚ್ಚವನ್ನು ಈ ಪ್ರಕಾರ ಕಡಿಮೆಮಾಡಿರುತ್ತಾರೆ.—ರೆವಿನ್ಯೂ ಕಮಿಷನರ ಅಸಿಸ್ಟೆಂಟರುಗಳಲ್ಲಿ ಒಬ್ಬರು ಕಡಿಮೆಮಾಡಲ್ಪಟ್ಟಿರುವರು. ಪ್ರಯಾಣದ ಭತ್ಯ ಮತ್ತು ಚಿಲ್ಲರೆ ಖರ್ಚುಗಳು ಮುಂದಣವರ್ಷದ ಬಜೆಟ್ಟಿನಲ್ಲಿ ಕಡಿಮೆಹಾಕಲ್ಪಟ್ಟಿರುತ್ತವೆ. ಮುಂದೆಬರುವ ರೆವಿನ್ಯೂ ಕಮಿಷನರಿಗೆ ಡ್ಯೂಟಿ ಅಲೋಯನ್ಸು ತಪ್ಪಿಸಲ್ಪಟ್ಟಿರುವುದು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಚಿಂತಾಮಣಿ ಸಬ್‌ಡಿವಿಜನ್ನು ಜುಲೈ ತಾ|| 1 ರಲ್ಲೂ, ಗುಡಿಬಂಡೆ ಸಬ್‌ತಾಲ್ಲೂಕೂ, ಮೈಸೂರು ಡಿ|| ನಲ್ಲಿ ಫ್ರೆಂಚ್‌ರಾಕ್ಸ್ ಸಬ್‌ತಾಲ್ಲೂಕೂ ಬರುವ ಸೆಪ್ಟೆಂಬರ್ ತಾ|| 1 ರಲ್ಲೂ ತೆಗೆದುಹಾಕಲ್ಪಡುವುವು. ಅಮಲ್ದಾರರು ಮತ್ತು ಡೆಪ್ಯುಟಿ ಅಮಲ್ದಾರರು ತಮ್ಮ ತಾಲ್ಲೂಕು ಎಲ್ಲೆಯೊಳಗೆ ಸಂಚರಿಸುವಾಗ್ಗೆ ಮೊದಲನೆಯವರಿಗೆ ದಿನ 1ಕ್ಕೆ 2 ರೂ. ನಂತೆಯೂ, ಎರಡನೆಯವರಿಗೆ ದಿನ 1ಕ್ಕೆ 1½ ರೂ. ನಂತೆಯೂ ಭತ್ಯವೂ ತಮ್ಮ ಎಲ್ಲೆಬಿಟ್ಟು ಹೊರಗೆ ಹೋದ ವೇಳೆಯಲ್ಲಿ ಎಲ್ಲರಂತೆ ಪ್ರಯಾಣದ ಭತ್ಯವೂ ಸಲ್ಲತಕ್ಕುದು. ಶಿವನುಗ್ಗಾ ಡಿ|| ನಲ್ಲಿ ತಕ್ಕೇರ್ಪಾಟನ್ನು ಮಾಡಿ ಕುಂಸಿ ಸಬ್‌ತಾಲ್ಲೂಕನ್ನು ತೆಗೆಯಲು ಸಾಧ್ಯವೆಂಬುದನ್ನು ರೆವಿನ್ಯೂ ಕಮಿಷನರು ಚೆನ್ನಾಗಿ ಪರ್ಯಾಲೋಚಿಸಿ ತಿಳಿಸತಕ್ಕುದು.

ಕೈಗಾರಿಕೆಯ ಡೈರೆಕ್ಟರಾಗಿದ್ದ ಮ|| ಎ. ರಂಗಸ್ವಾಮಯ್ಯಂಗಾರರು ಟ್ರೂತ್‌ಪತ್ರಿಕೆಯಲ್ಲಿ ತಮ್ಮ ಮೇಲೆ ಅಪಮಾನಕರವಾದ ಲೇಖನವು ಪ್ರಕಟಿಸಲ್ಪಟ್ಟಿದ್ದಿತೆಂದು ಅದರ ಸಂಪಾದಕರಾದ ಮ|| ನಾರಾಯಣಸ್ವಾಮಯ್ಯರ್‌ರವರ ಮೇಲೆ ಎರಡು ತಪ್ಪುಗಳನ್ನಾಪಾದಿಸಿ ಬೆಂಗಳೂರುಸಿಟಿ ಮ್ಯಾಜಿಸ್ಟ್ರೇಟರ

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಜೂನ್ ತಾ|| ೨೫ನೆಯ ಭಾನುವಾರ.

ವೀರಶೈವರು ಮತ್ತು ಸಂಸ್ಕೃತ ಮಹಾ ಪಾಠಶಾಲೆಗಳು.

ಮೈಸೂರು ಬೆಂಗಳೂರುಗಳಲ್ಲಿರುವ ಸರ್ಕಾರಿ ಸಂಸ್ಕೃತ ಮಹಾಪಾಠಶಾಲೆಗಳಿಗೆ ತ್ರಿಮತಸ್ಥ ಬ್ರಾಹ್ಮಣರಿಗೆ ಭಿನ್ನರಾದ ಉತ್ತಮ ಹಿಂದೂಗಳ ವಿದ್ಯಾರ್ಥಿಗಳನ್ನು ವಿದ್ಯಾಭ್ಯಾಸಕ್ಕೆ ಸೇರಿಸುವ ವಿಷಯದಲ್ಲಿ ಅಭಿಪ್ರಾಯವನ್ನು ತಿಳಿಯಿಸುವುದಕ್ಕಾಗಿ ಪ್ರಭುತ್ವದವರಿಂದ ನಿಯುಕ್ತರಾಗಿದ್ದ ಸಂಘದವರು ಕೊಟ್ಟಿರುವ ವರದಿಯ ಮುಖ್ಯಾಭಿಪ್ರಾಯವನ್ನು ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟಿಸಿರುವೆವಷ್ಟೆ. ಅಷ್ಟು ಸಂಕುಚಿತವಾದ ಅಭಿಪ್ರಾಯವನ್ನು ಸಂಘದವರು ಕೊಟ್ಟಿರುವುದನ್ನು ನೋಡಿದರೆ ಈಗಣ ನಾಗರಿಕ ಕಾಲದ ಪ್ರತಿಯೊಬ್ಬ ಪ್ರಜೆಯೂ ಆಶ್ಚರ್ಯ ವಿಷಾದಗಳನ್ನು ಪಡದೆ ಇರಲಾರನು. ಬೆಂಗಳೂರು ಪಾಠಶಾಲೆಯೊಂದಕ್ಕೆ ಮಾತ್ರ ಇತರರನ್ನು ಸೇರಿಸಲು ಅವಕಾಶ ಕೊಡಬಹುದೆಂದು ಹೇಳಿ ಅಲ್ಲೂ ಬೋಧಕರ ಇಷ್ಟಾನುವರ್ತಿತ್ವದಿಂದ ಸೇರುವುದೋ ಬಿಡುವುದೋ ಆಗಬಹುದೆಂದು ಹೇಳಿರುವ ಅಭಿಪ್ರಾಯವು ಎಷ್ಟು ಅನುದಾರಚಿತ್ತದಿಂದ ಹೊರಟಿರಬೇಕೆಂಬುದನ್ನು ಯುಕ್ತಾಯುಕ್ತ ವಿಮರ್ಶನ ಧುರೀಣರು ಪರ್ಯಾಲೋಚಿಸಬೇಕು. ಮುಖ್ಯವಾಗಿ ಸಂಘದವರು ಇಂಥ ಅಭಿಪ್ರಾಯಪಟ್ಟಿರುವುದಕ್ಕೆ ಅಷ್ಟೇನೂ ಆಶ್ಚರ್ಯಪಡಬೇಕಾಗಿ ನಮಗೆ ತೋರುವುದಿಲ್ಲ. ಏಕೆಂದರೆ ಸಂಘಸಭಿಕರ ನಿಯೋಜನೆಯಂಥ ಮೂಲತತ್ವದಲ್ಲೇ ದೋಷವಿದೆ. ಭಿನ್ನಭಿನ್ನ ವರ್ಗದ ಸಭಿಕರನ್ನು ಕೆಲರನ್ನು ಆ ಸಂಘದಲ್ಲಿ ಸೇರಿಸಬೇಕಾಗಿದ್ದಿತು. ಅವಶ್ಯಕವಾಗಿ ತೋರಿದರೆ ಇತರರನ್ನೂ ಮೆಂಬರರನ್ನಾಗಿ ಸಂಘಕ್ಕೆ ಸೇರಿಸಿಕೊಳ್ಳುತ್ತೇವೆಂದು ಸಂಘರಚನೆಯ ಆರಂಭಕಾಲದಲ್ಲಿ ಸರ್ಕಾರದವರು ಅಪ್ಪಣೆ ಕೊಡಿಸಿದ್ದರು. ಆ ಅವಶ್ಯಕತೆಯು ಅವರಿಗೆ ಯಾಕೆ ಹುಟ್ಟಲಿಲ್ಲವೋ ಗೊತ್ತಾಗಲಿಲ್ಲ. ಅಂತು ವರದಿಯೇನೋ ಸಿದ್ಧವಾಯಿತು. ಪ್ರಭುತ್ವದವರೂ ಇದೇ ಅಭಿಪ್ರಾಯವನ್ನು ಪರಿಪೋಷಿಸಿ ಅಪ್ಪಣೆ ಮಾಡುವುದಾದಲ್ಲಿ ಪ್ರಜೆಗಳ ದೌರ್ಭಾಗ್ಯಕ್ಕೆ ಎಣೆಯಿಲ್ಲವೆಂದು ಹೇಳಬೇಕಾಗುವುದು ; ಅವರ ಮನಸ್ಸೂ ಶಾಂತವಾಗಲಾರದು.

ಈ ಸಂಸ್ಕೃತ ವಿದ್ಯಾಭ್ಯಾಸದ ಸಮಸ್ಯೆಯ ಪ್ರಶ್ನೆಯು ನಿನ್ನೆ ಮೊನ್ನೆಗೆ ಉಪಸ್ಥಿತವಾದುದಲ್ಲ. ೨೫ ವರ್ಷಗಳಿಂದಲೂ ಚರ್ಚಿಸಲ್ಪಡುತ್ತಿದೆ. ಸರ್ ಕೆ. ಶೇಷಾದ್ರಿ ಅಯ್ಯರ್ರವರ ಕಾಲದಿಂದಲೂ ಪ್ರಜಾಪ್ರತಿನಿಧಿಸಭೆಯಲ್ಲಿ ಅರಿಕೆ ಮಾಡಿಕೊಳ್ಳಲ್ಪಡುತ್ತಾಬಂದಿದೆ. ಇದನ್ನು ಮೊಟ್ಟಮೊದಲು ಎತ್ತಿದವರು ವೀರಶೈವರು. ಈಚೀಚೆಗೆ ಸಂಸ್ಕೃತ ವಿದ್ಯೆಯ ಮಹತ್ವವನ್ನರಿತು ಇತರರೂ ಇದನ್ನಪೇಕ್ಷಿಸಲು ಸಭೆಯಲ್ಲಿ ಪ್ರಾರಂಭಿಸಿದರು. ವೀರಶೈವರಿಗೆ ಕನ್ನಡವು ಹೇಗೋ ಹಾಗೆ ಸಂಸ್ಕೃತ ಭಾಷೆಯೂ ಅತ್ಯವಶ್ಯಕವಾಗಿ ಪ್ರಾಚೀನ ಕಾಲದಿಂದಲೂ ಬಂದಿದೆ. ಅವರ ಸಿದ್ಧಾಂತ ಗ್ರಂಥಗಳೆಲ್ಲಾ ಗೀರ್ವಾಣ ಭಾಷಾಮಯವಾಗಿವೆ. ವೇದಾಗಮ ಸಂಮತವಾದ ಆ ಮತವು ದ್ವೈತಾದಿ ಮತಗಳಂತೆ ಬ್ರಹ್ಮಸೂತ್ರ ಭಾಷ್ಯಾವಲಂಬನೆಯುಳ್ಳದಾಗಿದೆ. ಮತ್ತು ಈ ಮತಪರವಾಗಿ ಪ್ರಸ್ಥಾನತ್ರಯ ಭಾಷ್ಯವೂ ಉಂಟು. ಅವೆಲ್ಲಾ ವೇದಾಗಮಶಾಸ್ತ್ರವಚನ ಜಟಿಲಗಳಾದುವೆಂಬುದನ್ನು ಹೇಳಬೇಕಾಗಿಲ್ಲ. ಅವುಗಳ ಅಭ್ಯಾಸಕ್ಕೆ ಗೀರ್ವಾಣ ಭಾಷಾಜ್ಞಾನವೇ ಮುಖ್ಯವಾದುದು. ಅಷ್ಟೇ ಅಲ್ಲದೆ ವೇದಶಾಸ್ತ್ರಗಳ ಪರಿಜ್ಞಾನವೂ ಬೇಕೇಬೇಕು. ಪ್ರಾಚೀನಕಾಲದಿಂದಲೂ ಈ ಮತದಲ್ಲಿ ಉಭಯ ಭಾಷಾಪಾಂಡಿತ್ಯವುಳ್ಳ ವಿದ್ವಾಂಸರುಗಳು ಇರುತ್ತ ಅನೇಕಾನೇಕ ಸಿದ್ಧಾಂತ ಗ್ರಂಥಗಳನ್ನು ರಚಿಸಿರುವರು. ವೀರಶೈವ ಕವಿಗಳ ಸಂಖ್ಯೆಯನ್ನಂತೂ ಹೇಳಬೇಕಾಗಿಯೇ ಇಲ್ಲ. ಕವಿಚರಿತೆಯು ಪ್ರತ್ಯಕ್ಷ ನಿದರ್ಶನವಾಗಿದೆ. ಈಗಲೂ ಕೂಡ ಉಪನಿಷತ್ತಿಗೆ ಭಾಷ್ಯವನ್ನು ಬರೆದಿರುವ ವೇ|| ಉಮಚಗಿ ಶಂಕರಶಾಸ್ತ್ರಿಗಳಂಥ ಪಂಡಿತವರ್ಯರೂ ಭಾಷಾರತ್ನವೆಂಬ ಬಿರುದಾಂಕನವನ್ನು ಪಡೆದ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳಂಥ ಮಹಾ ವಿದ್ವಾಂಸರೂ ಅಲ್ಲಲ್ಲಿಗೆ ಇರುತ್ತಾರೆ. ಚೌಡದಾನಪುರದ ವೇ|| ವಿರೂಪಾಕ್ಷ ಒಡೆಯರಂಥ ವೇದಶಾಸ್ತ್ರಾಭಿಜ್ಞರು ಇಂದೂರು ಮಹಾರಾಜ ಸಂಸ್ಕೃತ ಕಲಾಶಾಲೆಯಂಥವುಗಳಲ್ಲಿ ವೇದಶಾಸ್ತ್ರ ಪಾಠಬೋಧಕರಾಗಿರುತ್ತಾರೆ. ಕೈ|| ಬಸವಪ್ಪಶಾಸ್ತ್ರಿಗಳಂಥ ಮಹಾಕವಿವರ್ಯರು ಕೂಡ ಈಗಣ ಕಾಲದಲ್ಲಿ ಈ ಮತದೊಳಗೆ ಗೋಚರಿಸಿ ಹೋಗಿರುವರು. ಇಂಥ ಮಹಾ ವ್ಯಕ್ತಿಗಳಿಗೆಲ್ಲಾ ಸಂಸ್ಕೃತ ವಿದ್ಯಾಭ್ಯಾಸದ ಸೌಕರ್ಯವಿಲ್ಲದೆ ಹೋದರೆ ಅವುಗಳ ಧೀಪ್ರಕಾಶಕ್ಕೆ ಅವಕಾಶವೆಲ್ಲಿರುತ್ತಿದ್ದಿತು ? ಸಂಸ್ಕಾರ ವಿಶೇಷವುಳ್ಳ ವ್ಯಕ್ತಿಗಳಿಗೆ ಅವುಗಳ ವಿಕಾಸಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡುವುದು ಪ್ರಭುತ್ವದವರಿಗೆ ಮುಖ್ಯ ಧರ್ಮವಲ್ಲವೆ ? ಅಂಥ ವ್ಯಕ್ತಿಗಳೊಂದೊಂದರಿಂದ ದೇಶಕ್ಕೆ ಆಗುವ ಲಾಭವು ಸಾಮಾನ್ಯವಾಗಿದ್ದೀತೆ? ಕೈ|| ಬಸವಪ್ಪಶಾಸ್ತ್ರಿಗಳ ಧೀಶಕ್ತಿಯು ದೇಶಕ್ಕೆ ಎಷ್ಟು ಉಪಕಾರವನ್ನು ಮಾಡಿತು ? ವೇ|| ಕರಿಬಸವಶಾಸ್ತ್ರಿಗಳ ಶಿಷ್ಯತ್ವದಿಂದ ಎಷ್ಟು ಜನರು ಭಾಷಾಪಾಂಡಿತ್ಯವನ್ನು ಸಂಪಾದಿಸಲಿಲ್ಲ ? ಕೈ|| ಚಟಕಿ ಸಿದ್ಧಲಿಂಗಶಾಸ್ತ್ರಿಗಳೇ ಮೊದಲಾದ ೨-೩ ವೀರಶೈವಪಂಡಿತ ವ್ಯಕ್ತಿಗಳ ಸಹಾಯವಿಲ್ಲದಿದ್ದರೆ, ದೇಶದಲ್ಲಿ ಈಗಣಷ್ಟು ದೇಶಭಾಷಾವಿಕಾಸಕ್ಕೆ ಅವಕಾಶವೆಲ್ಲಿರುತ್ತಿದ್ದಿತು ? ಇಂಥ ವ್ಯಕ್ತಿಗಳ ಅಭ್ಯುದಯಕ್ಕೆ ಅವಶ್ಯಕವಾದ ಸಾಹಾಯ್ಯ ಸೌಕರ್ಯಗಳನ್ನು ಕೂಡ ಒದಗಿಸದೆ ಅಡ್ಡಿಮಾಡಿ ಬಿಡುವುದೆಂದರೆ ಏಳುತ್ತಿದ್ದ ಸಸಿಯ ದಸಿಯ ಮೇಲೆ ಕೆಂಡವನ್ನು ಸುರಿದು ನಷ್ಟಪಡಿಸಿಕೊಂಡಷ್ಟು ದೋಷವು ದೇಶಕ್ಕೆ ಪ್ರಭುತ್ವದವರಿಂದ ಉಂಟುಮಾಡಿಕೊಡಲ್ಪಟ್ಟಂತಾಗುವುದಿಲ್ಲವೆ ?

ವೀರಶೈವರ ಗೀರ್ವಾಣ ಭಾಷಾಭ್ಯಾಸಕ್ಕೆ ಪ್ರಭುತ್ವದವರ ಸಾಹಾಯ್ಯವೇನೂ ಇದುವರೆಗೂ ಆಗದಿದ್ದರೂ ಅದರ ಅವಶ್ಯಕತೆಯನ್ನು ಅವರು ಮರೆತಿಲ್ಲ. ಧರ್ಮಾತ್ಮರಾದ ಶ್ರೀಮಂತರುಗಳು ಧನಸಹಾಯಮಾಡಿ ಅಲ್ಲಿಗಲ್ಲಿಗೆ ಸಂಸ್ಕೃತ ಪಾಠಶಾಲೆಗಳನ್ನೇರ್ಪಡಿಸಿ ಗೀರ್ವಾಣ ಭಾಷಾಕಾಂಕ್ಷಿಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿರುವರು. ಎಷ್ಟೋ ಮಂದಿ ವಿದ್ಯಾರ್ಥಿಗಳು ದೇಶಕೋಶಗಳನ್ನು ಬಿಟ್ಟು ಕಾಶೀಪಟ್ಟಣದಂಥ ದೂರ ಸ್ಥಳಗಳಿಗೆ ಹೋಗಿ ಕದನ್ನವನ್ನು ತಿಂದುಕೊಂಡು ಪ್ರೌಢಶಾಸ್ತ್ರ ವಿದ್ಯಾಭ್ಯಾಸಗಳನ್ನು ಮಾಡಿಕೊಂಡು ಬರುತ್ತಿರುವರು. ಪ್ರಭುತ್ವದ ಸಂಸ್ಕೃತ ಮಹಾಪಾಠಶಾಲೆಯ ಅಭ್ಯಾಸ ಸೌಕರ್ಯವು ಸ್ವದೇಶದಲ್ಲೇ ಇರುತ್ತಿದ್ದರೆ ಆ ವಿದ್ಯಾರ್ಥಿಗಳಿಗೆ ಆವೊಂದು ತಾಪತ್ರಯವೂ ಇಲ್ಲದೆ ಇರುತ್ತಿದ್ದುದಲ್ಲದೆ ಗೀರ್ವಾಣ ಭಾಷಾಪಂಡಿತರು ಒಂದಕ್ಕೆ ನಾಲ್ಕರಷ್ಟು ಈ ಸಮಾಜದಲ್ಲಿ ಹೆಚ್ಚುತ್ತಿದ್ದರು. ಪ್ರಭುತ್ವದವರು ತೋರಿಸುತ್ತ ಬಂದ ಅಶ್ರದ್ಧೆಯಿಂದ ಅದಕ್ಕೆಲ್ಲಾ ಇದುವರೆಗೆ ಉಂಟಾದ ಭಂಗವು ಸಾಮಾನ್ಯವಾಗಿಲ್ಲ. ಇನ್ನಾದರೂ ಪ್ರಭುತ್ವದವರು ವೀರಶೈವರ ವಿಷಯದಲ್ಲಿ ಪ್ರತ್ಯೇಕವಾಗಿ ಗಮನಿಸಿ ಮೈಸೂರು ಬೆಂಗಳೂರು ಮಹಾಪಾಠಶಾಲೆಗಳೆರಡರಲ್ಲೂ ಕೇವಲ ಸಾಹಿತ್ಯ ವಿದ್ಯೆಯ ಅಭ್ಯಾಸಕ್ಕೆ ಮಾತ್ರವೇ ಅಲ್ಲದೆ ವೇದಶಾಸ್ತ್ರಾದಿಗಳ ಅಭ್ಯಾಸಕ್ಕೆ ಅನುಕೂಲ್ಯವನ್ನು ಕಲ್ಪಿಸಿಕೊಡುವುದು ಧರ್ಮವಾಗಿರುತ್ತದೆ. ರಾಜಧಾನಿಯಲ್ಲಿ ಇಷ್ಟರಲ್ಲೇ ವೀರಶೈವ ವಿದ್ಯಾರ್ಥಿನಿಲಯವು ಮ|| ಶ್ರೀಮಂತ ಕಬ್ಬಳ್ಳಿ ಚೆನ್ನಬಸಪ್ಪನವರ ಧರ್ಮಬುದ್ಧಿಯಿಂದಲೂ ಪ್ರಭುತ್ವದವರ ಕೃಪೆಯಿಂದಲೂ ಏರ್ಪಡುವುದಾಗಿದೆ. ಹಾಗೆಯೇ ಒಬ್ಬ ಮಹನೀಯರ ಕೃಪಾವಲಂಬನೆಯಿಂದ ಬಡವಿದ್ಯಾರ್ಥಿಗಳ ಅಶನಕ್ಕೂ ಅನುಕೂಲ್ಯವು ಕಲ್ಪಿಸಲ್ಪಡುವ ಸ್ಥಿತಿಯಿದೆ. ಇಂಥ ಸಂದರ್ಭದಲ್ಲಿ ಪ್ರೌಢಶಾಸ್ತ್ರಾದಿಗಳ ಅಭ್ಯಾಸಕ್ಕೆ ಸೌಕರ್ಯವು ರಾಜಧಾನಿಯಲ್ಲಿ ಒದಗುವುದಾದರೆ ವೀರಶೈವ ಸಮಾಜಕ್ಕೆ ಎಷ್ಟೋ ಪರಮೋಪಕಾರವನ್ನು ಪ್ರಭುತ್ವದವರು ಮಾಡಿಕೊಟ್ಟಂತಾಗುವುದು. ಶ್ರೀಮನ್ಮಹಾರಾಜರೂ, ಅವರ ಘನ ಸರ್ಕಾರದವರೂ ಈ ವಿಷಯವನ್ನು ಕೃಪಾರ್ದ್ರ ಚಿತ್ತದಿಂದ ಸಂಪೂರ್ಣವಾಗಿ ಗಮನಿಸಬೇಕೆಂದು ಪ್ರಾರ್ಥಿಸುವುದಲ್ಲದೆ ತ್ರಿಮತದ ವೈದಿಕಪಂಡಿತರುಗಳೂ, ಪಾಠಶಾಲಾ ಬೋಧಕರುಗಳೂ, ದೇಶದ ಆಗುಹೋಗುಗಳನ್ನು ಪರ್ಯಾಲೋಚಿಸಬಲ್ಲ ಲೌಕಿಕ ಮಹಾಶಯರಾದ ದೇಶಾಭಿಮಾನಿಗಳೂ ವೀರಶೈವ ಸಮಾಜದ ವಿಷಯದಲ್ಲಿ ಉದಾರಭಾವವನ್ನು ತಳೆದು ಬಹು ದಿನದಿಂದ ಅವರ ಮನಸ್ಸಿಗೆ ನೋವನ್ನುಂಟುಮಾಡಿರುವ ಈ ಅತ್ಯವಶ್ಯಕವಾದ ಸಮಸ್ಯೆಯನ್ನು ಸಮಾಧಾನಕರವಾಗುವಂತೆ ಪರಿಸಮಾಪ್ತಿಗೊಳಿಸಿದರೆ ಉಭಯತ್ರ ಅತಿನಿಕಟವಾದ ಸೌಹಾರ್ದವೂ ದೇಶಾಭ್ಯುದಯ ಕಾರ್ಯಗಳಿಗೆ ಪರಸ್ಪರ ನೆರವೂ ಉಂಟಾಗಿ ದೇಶಕ್ಕೆ ಇದೊಂದು ಶುಭೋದಯದ ನವಯುಗವನ್ನುಂಟುಮಾಡಿಟ್ಟಂತಾಗುವುದು. ಸಹೋದರ ವಾತ್ಸಲ್ಯದಿಂದ ಇದನ್ನು ಬಗೆಹರಿಸುವ ವಿಷಯದಲ್ಲಿ ಅವರುಗಳು ದೊಡ್ಡ ಮನಸ್ಸನ್ನು ಮಾಡದಿರಲಾರರೆಂದೂ, ಪ್ರಭುತ್ವದವರು ಕೂಡ ಅದಕ್ಕೆ ಸಕಲ ವಿಧದ ಸೌಕರ್ಯಗಳನ್ನು ಉಂಟುಮಾಡಿಕೊಡದೆ ಇರಲಾರರೆಂದೂ ನಂಬಿ ನಿರೀಕ್ಷಿಸುತ್ತೇವೆ. ಆದರೆ ಗೌರ್ನಮೆಂಟಿನವರು ಮಾಡಬೇಕಾದುದನ್ನು ಅವರೇ ಮಾಡುವರೆಂದು ವೀರಶೈವ ಸಮಾಜವು ತಟಸ್ಥವಾಗಿ ಕುಳಿತರೆ ಪ್ರಯೋಜನವಾಗಲಾರದು. ವರದಿಯ ಮೇಲೆ ತಮ್ಮ ಅಭಿಪ್ರಾಯವನ್ನು ತಿಳಿಯಿಸಿಕೊಳ್ಳುವುದಕ್ಕೆ ಬರುವ ಜುಲೈ ತಾ|| ೧೫ ರ ವರೆಗೆ ಸರ್ಕಾರದವರು ಅವಕಾಶಕೊಟ್ಟಿರುತ್ತಾರೆ. ಅಷ್ಟರೊಳಗೆ ದೇಶದ ಎಲ್ಲ ಮುಖ್ಯಸ್ಥಳಗಳಲ್ಲೂ ವೀರಶೈವ ಮಹಾಜನರು ಸಭೆಗಳನ್ನು ಮಾಡಿ ಈ ವಿಷಯದಲ್ಲಿ ತಮಗೆ ಇರತಕ್ಕ ಕೊರತೆಯನ್ನು ಪರಿಹರಿಸಿಕೊಟ್ಟು ಬೆಂಗಳೂರು ಮೈಸೂರು ಸಂಸ್ಕೃತ ಕಾಲೇಜುಗಳೆರಡರಲ್ಲೂ ವೀರಶೈವ ವಿದ್ಯಾರ್ಥಿಗಳಿಗೆ ಸ್ಪೆಷಲ್ಲಾಗಿ ಶಾಸ್ತ್ರಾದಿ ಅಭ್ಯಾಸಗಳಿಗೆಲ್ಲಾ ಅವಕಾಶವನ್ನು ಕಲ್ಪಿಸಿಕೊಡುವ ಕೃಪೆಮಾಡಬೇಕಾಗಿ ನಿರ್ಧಾರಗಳನ್ನು ಮಾಡಿ ಗೌರ್ನಮೆಂಟ್ ಚೀಫ್ ಸೆಕ್ರೆಟರಿಯವರಲ್ಲಿಗೆ ಪ್ರೊಸಿಡಿಂಗ್ಸುಗಳನ್ನು ರಿಜಿಸ್ಟರ್ಡ್ ಅಂಚೆಯಮೂಲಕ ಕಳುಹಿಸಿಕೊಡುವುದು ಅತ್ಯವಶ್ಯಕವು. ಏಕೆಂದರೆ ಸರ್ಕಾರದ ಕಿವಿಯು ಮಂದವಾದುದು. ಗಟ್ಟಿಯಾದ ದುಂದುಭಿಧ್ವನಿಯಾದರೇ ಅದಕ್ಕೆ ಕೇಳಿಸುವುದು. ಅದುಕಾರಣ ಮಾಡಬೇಕಾದ ಪ್ರಯತ್ನವನ್ನು ಪ್ರಬಲವಾಗಿ ಮಾಡುವಲ್ಲಿ ವೀರಶೈವ ಸಮಾಜವು ಅಲಕ್ಷ್ಯೀಕರಿಸಲಾರದೆಂದು ನಂಬುತ್ತೇವೆ.

BIGOTRY CONCENTRATED.

The report of the Special Committee appointed to submit proposals for the improvement of Sanskrit Education in the State is published in the Mysore Gazette of June 8th and the public are invited to communicate their opinions on the proposals of the Committee before the 15th July 1922. To those who are conscious of living in the 20th Century and have some sense of reason about them it would be trying to view the proposals with any degree of calmness patience or equanimity. The report is a monument of unadulterated bigotry–both ancient and modern combined. In truth, it could not be expected to be anything else, having regard to the composition of the Committee–which contains such redoubtable champions of class exclusiveness and privileges and staunch foes liberalism and progress as Mr. Karpur Sreenivasa Rao, Mr. M. Shama Rao, and all those who have consistently stood for years against liberalising Sanskrit Education. To expect these very men over again to consider a question such as the admission of non-Brahmins into the Sanskrit Colleges–which was the main issue before the Committee–is to expect the leapord to change its spots. Not a single non-Brahmin is on the Committee–and judgment has been delivered without the slightest effort being made to understand the true position of the non-Brahmins. To give our frank opinion, the whole report has to be thrown out as not deserving of consideration and a fresh and representative Committee be appointed to report in the matter.

There are, however some proposals in the report which merit some consideration as giving an idea of the mentality and the outlook of the orthodox community in the State whose representatives sat on the Committee. They recommend that the Mysore Sanskrit College is to be a seat of Ancient and Orthodox Learning open only to Brahmins as heretofore, and in the Bangalore Sanskrit College only the Sanskrit Kavya and Sahitya classes are to be thrown open to non-Brahmins and not the Vedic and Prayoga classes which should be held in a separate place for Brahmins. The reasons for preserving the sanctity of the Mysore College from the polluting touch of the non-Brahmins is firstly, that the latter were not admitted into it hitherto which is a curious one, for otherwise, there was no need for the reference at all; secondly, that it is strictly a seat of Orthodox learning in which all Vedas and Shastras are taught–which are the very subjects which the non-Brahmin boys desire most to study; and thirdly, that His Highness the Ex-Raja of Cochin also recommends the maintenance of this monopoly, and that old orthodox Pandits should not be compelled to teach non-Brahmin students. The old Raja whose name has been dragged in very conveniently to serve the purpose of the Committee, for, surely there were other worthies as well, if not more competent to give their opinion on this subject but who have not been consulted–says in his note that the Pandits will not willingly teach other caste boys and the Brahmin students true to their Gurus will not like the company of other caste boys–a theory which is readily accepted by the Committee–but which is a most dangerous one to initiate. If this theory is only to invade other educational institutions–as surely it is likely to when countenanced in one department–what a veritable chaos there will be? If they want it to be a seat of Orthodox Learning they could by all means have it but let them not seek the aid of State Revenues. There could be nothing more unjust and unreasonable than that those who are already having many times over their due should get this privilege all for themselves at the cost of others. It is simply absurd to say that because the non-Brahmins were not admitted hitherto into the College the injustice should be continued for all time. For a matter of that, all knowledge was more or less a forbidden fruit to the other classes, and had not there been a wholesome improvement and intermingling of professions as a result of throwing open the doors of modern knowledge to all people alike? Could there be a more iniquitous and inhuman system than that which forbids a man from the study of his own Scriptures, from obtaining a knowledge of his own religion? Imagine a Christian not being allowed to study the Bible, a Mohammadan forbidden to study *Quoran*, a Parsee to study his *Zenda Vesta*, a Buddhist his *Tripitakas*. Nay more, it is an obligation in other religions on every member to knew his scriptures, and further, men of other faiths could have free access to them. In any other clime they would have revolted against such a system and would have seen its termination long ago. And all this is done in our land in the name of religion. One would like --

know what is that Divinity which would not intend its being known and understood by its own devotees?

They have consulted three similar institutions, of Benares where the Adhyapakas or Pandits select their own pupils, of Jaipur where Dwijas of three Varnas only are admitted for all subjects except Vedas and of Calcutta where all Hindu students can study all subjects including Vedas. For the Mysore College they have followed the example of the antiquated school of Benares, and for the Bangalore College the insignificant Jaipur institution and have given a clean go-bye to the more rational and modern institution of Calcutta. This is how the Committee has done its work in the interest of this model and progressive State. There are other matters in the Report which may be considered in a later issue if necessary. But here we would only say that the report is an insult to the self-respect of non-Brahmins. The suggestion to throw open the Bangalore College partially, as though that would not pollute the Pandits or their privileged pupils, and the principle of which cannot be extended to Mysore is apart from being a self-contradiction–adding insult to injury. There is another point besides all this. It is the Brahmins who were most loud-mouthed in saying that no difference should be made between Brahmins and non-Brahmins when the question of appointments and the backward class scholarships came. We would ask who makes the difference and where comes the differential treatment from? When self interest is touched the inner nature stands revealed in all its true and ugly colours. Through all the ages runs one never ending stream of selfishness and monopoly. When we are making our headway in all the various lines of progress, when knowledge–scientific, philosophical and cultural–is becoming more and more universal, when Westerners of a different race creed and climate are coming to our country, drinking from the fountains of our Vedas and philosophy and enriching themselves and their countrymen we, the children of the soil, the followers of a common religion, the inheritors of an old culture, to be denied–denied by statute and by law–the study of our own Scriptures would not only be unjust and iniquitous from the point of view of Government, but would spell a national disaster. Exclusiveness has played enough mischief already in the land and let no further enunciation and play of the baneful principle be tolerated by the non-Brahmins.

SIR M. KANTARAJ URS.

We hasten to welcome Sir M. Kantaraj Urs to Mysore City, after his sojourn in Ooty and are particularly pleased to see that he has returned after complete recovery from his illness and with renewed health and vigour. It is not often that a retired Dewan spends his days of retirement in the State in which he has served, but it is our good fortune that Sir M. Kantaraj Urs is going to be with us, and we earnestly hope that after having his full rest, he will be able to give the benefit of his vast experience and knowledge to the people of the State, as we have no doubt the public life in Mysore will be all the richer by his guidance.

MYSORE CIVIL COURTS.

We hear of much discontent in the Mysore Civil Courts in the matter of appointments and promotions. It looks as though new men are appointed to places which should rightly be given to those who are already in service by promotion, and as though men of lower appointments are given higher places in supercession of senior men who have a right for them. It appears even the recommendations of the respective judges are overlooked to in favour of particular candidates. This is surely not a desirable state of affairs, least of all in the judicial department where justice not preference should play the part, and we hope no room for complaint will be given hereafter.

Stethoscope found:—Mr. Husainali, Sayar Daroga of Mysore City writes that he has found a stethoscope lying on the Nazarbad Road and the owner may obtain it from him.

ಒಳದೇಶದ ವೃತ್ತಾಂತಗಳು.

ಲೋಕಲ್‌ಸರ್ವಿಸ್ ಮತ್ತು ಪ್ಲೀಡರ್ ಪರೀಕ್ಷೆಗಳು 1922ನೆಯ ಡಿಸೆಂಬರ್ ತಿಂಗಳಲ್ಲಿ ಎರಡನೆಯ ವೇಳೆ ನಡಿಸಲ್ಪಡತಕ್ಕುದೆಂದು ಸರ್ಕಾರದಪ್ಪಣೆಯಾಗಿದೆ.

ರೆವಿನ್ಯೂ ಸೆಕ್ರೆಟರಿ ಮಿ|| ಸಿ. ವೆಂಕಟರಾಯರಿಗೆ ಕೊಡಲ್ಪಟ್ಟಿದ್ದ ಪ್ರಿವಿಲೇಜ್ ರಜವು ಇನ್ನೂ ೩೦ ದಿನಗಳಿಗೆ ಹೆಚ್ಚಿಸಲ್ಪಟ್ಟುದಲ್ಲದೆ ೮ ತಿಂಗಳ ಫರ್ಲೋ ರಜ ಕೊಡಲ್ಪಟ್ಟಿದೆ.

ಕಳೆದ ಮಂಗಳವಾರ ರಾಜಧಾನಿಯಲ್ಲಿ ಒಂದು ಹದ ಮಳೆಯಾಗಿ ವಾಯುಗುಣದಲ್ಲಿ ತಂಪುಂಟಾಗಿದೆ. ಈ ಮಳೆಯು ಸರ್ವತ್ರ ಬಿದ್ದು ಒಣಗುತ್ತಿದ್ದ ಜೋಳದ ಪೈರಿಗೆ ಬಹು ಸಹಾಯಕವಾಯಿತು.

ಈ ವರ್ಷ ಎಲ್.ಎಲ್.ಬಿ., ಪರೀಕ್ಷೆಯಲ್ಲಿ ಉತ್ತೀರ್ಣರಾದ ಚಿಕ್ಕಬಳ್ಳಾಪುರದ ಮ|| ಜಿ. ರುದ್ರಪ್ಪ, ಎಂ.ಎ., ಯವರು ಅಡ್ವೋಕೇಟರಾಗಿರಲು ಚೀಫ್ ಕೋರ್ಟಿನವರಪ್ಪಣೆಯನ್ನು ಕೇಳಿರುತ್ತಾರೆ.

ಮೈಸೂರು ಕುರುಬರ ಸಂಘದಿಂದ ಒಬ್ಬ ಮೆಂಬರು ಮತ್ತು ಇನಾಂದಾರರ ಸಂಘದಿಂದ ಒಬ್ಬ ಮೆಂಬರು ಪ್ರಜಾಪ್ರತಿನಿಧಿಸಭೆಗೆ ಕಳುಹಲ್ಪಡಬಹುದೆಂದು ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ.

ಬೆಂಗಳೂರು ವಿಶ್ವೇಶರಪುರದಲ್ಲಿ ೧೧ ವರ್ಷದ ಹುಡುಗಿಯು ಏರಿಯ ಮಣ್ಣನ್ನು ತೆಗೆಯುತ್ತಿರುವಾಗ್ಗೆ ಮಣ್ಣು ಕುಸಿದು ಅವಳ ಮೇಲೆ ಬಿದ್ದು ಅವಳು ಅದರೊಳಗೆ ಸಿಕ್ಕಿಕೊಂಡು ಉಸಿರಾಡಲಿಕ್ಕಿಲ್ಲದೆ ಕೂಡಲೆ ಸತ್ತುಹೋದಳು.

ಚನ್ನಪಟ್ಟಣ ತಾ|| ಅಕ್ಕೂರು ಗುಂಡಪ್ಪನ ಕೊಲೆಯನ್ನು ಮಾಡಿ ಮರಣದಂಡನೆಗೆ ಗುರಿಯಾದ ಕೊಂಡಾಪುರದ ಸಿದ್ದೇಗೌಡನು ತನ್ನ ಮರಣದಂಡನೆಯನ್ನು ತಪ್ಪಿಸಿಕೊಡಬೇಕೆಂದು ಪ್ರಾರ್ಥಿಸಿ ಶ್ರೀಮನ್ ಮಹಾರಾಜರವರಿಗೆ ಬರೆದುಕೊಂಡಿದ್ದ ಅರ್ಜಿಯು ತಿರಸ್ಕೃತವಾಯಿತು.

ಶ್ರೀಮನ್ಮಹಾರಾಜರವರು ಹಾಸನ ಡಿ|| ನಲ್ಲಿ ಸಕಲೇಶಪುರ, ಶುಕ್ರವಾರಸಂತೆ ಮತ್ತೆ ಕೆಲ ನೆರೆಯಸ್ಥಳಗಳಲ್ಲಿ ಸಂಚರಿಸಿಕೊಂಡು ಬರಲು ಕಳೆದ ತಾ|| ೨೧ ರಲ್ಲಿ ತಮ್ಮ ಪ್ರೈವೆಟ್ ಸೆಕ್ರೆಟರಿ ಮಿ|| ಮಿರ್ಜಾಸಾಹೇಬರು ಮತ್ತಿಬ್ಬರು ಸರದಾರರೊಡನೆ ಮೋಟಾರುಬಂಡಿಯಲ್ಲಿ ಪ್ರಯಾಣಮಾಡಿದರು.

ಹಾಸನದಿಂದ ಮಂಗಳೂರಿಗೆ ರೈಲ್ವೆ ಹಾಕುವ ವಿಚಾರದಲ್ಲಿ ತತ್ಸಂಬಂಧವಾದ ಎಲ್ಲ ವಿಷಯಗಳನ್ನು ಪ್ರತ್ಯಕ್ಷವಾಗಿ ಚರ್ಚಿಸಿ ತಿಳಿದುಕೊಳ್ಳುವುದಕ್ಕಾಗಿ ಮಂಗಳೂರಿಗೆ ಬರಬೇಕೆಂದು ದಿವಾನರನ್ನು ಮಂಗಳೂರಿನ ಡಿಸ್ಟ್ರಿಕ್ಟು ಬೋರ್ಡಿನವರು ಪ್ರಾರ್ಥಿಸಿಕೊಂಡಿರುವುದಾಗಿ ವರ್ತಮಾನವಿದೆ. ನಮ್ಮ ಸಂಸ್ಥಾನಕ್ಕೆ ಈಗ ಪ್ರಾಪ್ತವಾಗಿರುವ ದುಡ್ಡಿನ ಮುಗ್ಗಟ್ಟಿನಲ್ಲಿ ಈ ಕಾರ್ಯಗಳನ್ನು ಕೈಕೊಳ್ಳುವುದು ತಾನೆ ಅಸಾಧ್ಯವು.

ರಾಜಧಾನಿಯ ಕರೋಹಟ್ಟಿಯ ಬೀದಿಯಲ್ಲಿ ಸ್ಥಾಪಿತವಾಗಿರುವ ವೀರಮ್ಮಯ್ಯನವರ ಅನಾಥಾಲಯದಲ್ಲಿ ಮೂವರು ವೀರಶೈವ ಬಡವಿದ್ಯಾರ್ಥಿಗಳಿಗೆ ಒಂದು ವರ್ಷದವರೆಗೆ ಉಚಿತವಾಗಿ ಭೋಜನಮಾಡಿಸಲು ಏರ್ಪಾಟು ಮಾಡಿರುವುದರಿಂದ ಅರ್ಹರಾದವರು ವಾಣೀವಿಲಾಸ ರೋಡಿನಲ್ಲಿರುವ ಈ ಅನಾಥಾಲಯದ ಪ್ರೆಸಿಡೆಂಟರಾದ ಡಾ|| ಸಿದ್ದಪ್ಪನವರಿಗೆ ಜುಲೈ ತಾ|| ೧೦ ರೊಳಗೆ ಬರೆದುಕೊಳ್ಳಬೇಕಾಗಿ ಅಪೇಕ್ಷಿಸಲ್ಪಟ್ಟಿರುತ್ತಾರೆ.

ಮಾಗಡಿಯಲ್ಲಿ ಪ್ರಸಿದ್ಧ ಪಾಳಯಗಾರರಾದ ಕೆಂಪೇಗೌಡರಿಂದ ಕಟ್ಟಿಸಲ್ಪಟ್ಟಿದ್ದ ಶ್ರೀ ಸೋಮೇಶ್ವರ ದೇವಾಲಯವು ಬಹಳ ಶಿಥಿಲವಾಗಿರುವುದರಿಂದ ಅದು ಸರಿಪಡಿಸಲ್ಪಟ್ಟು ಪೂಜೆಯೂ ರಥೋತ್ಸವವೂ ಕ್ರಮವಾಗಿ ನಡೆಯಲು ಮ|| ಕರಣೀಕ ಕೃಷ್ಣಮೂರ್ತಿರಾಯರು ಮುಂದಾಗಿನಿಂತು ಭಕ್ತಾದಿಗಳಿಂದ ಚಂದಾಹಣವನ್ನೆತ್ತುತ್ತಿರುವರೆಂದೂ ಈವರೆಗೆ ಈ ಜೀರ್ಣೋದ್ಧಾರಕಾರ್ಯಕ್ಕಾಗಿ ೧೧೦೦ ರೂಪಾಯಿ ಚಂದಾ ಬಂದಿರುವುದಾಗಿಯೂ ತಿಳಿಯಬರುತ್ತದೆ.

ಕೃಷ್ಣರಾಜಸಾಗರ ಕಟ್ಟೆಯ ಎರಡನೆಯ ಪರ್ಯಾಯವನ್ನು ಕಟ್ಟುವ ವಿಚಾರವನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳಲು ಮದ್ರಾಸ್ ಗೌರ್ನರ್ ಕೌನ್ಸಿಲ್ ಮೆಂಬರಾದ ಆನರಬಲ್ ಕೆ. ಶ್ರೀನಿವಾಸಯ್ಯಂಗಾರರು ಕಳೆದ ಸೋಮವಾರ ರಾಜಧಾನಿಗೆ ಬಂದಿದ್ದುದರಿಂದ ನಮ್ಮ ದಿವಾನರು, ಎಕ್ಸಿಕ್ಯುಟಿವ್ ಇಂಜನಿಯರು ಮತ್ತು ರೆವಿನ್ಯೂ ಕಮಿಷನರು ಬೆಂಗಳೂರಿಂದ ಬಂದಿದ್ದರು. ಆ|| ಶ್ರೀನಿವಾಸಯ್ಯಂಗಾರರು ದಿವಾನರು ಮೊದಲಾದ ಅಧಿಕಾರಿಗಳ ಕೂಡ ಕಟ್ಟೆಗೆ ಹೋಗಿ ನೋಡಿಕೊಂಡು ಬಂದು ಎಲ್ಲ ವಿಷಯವನ್ನು ಚರ್ಚಿಸಿ ತಿಳಿದುಕೊಂಡು ಉದಕಮಂಡಲಕ್ಕೆ ಹಿಂದಿರುಗಿ ಪ್ರಯಾಣಮಾಡಿದರು. ದಿವಾನರೂ ಮಾರನೆಯದಿನ ಬೆಂಗಳೂರಿಗೆ ದಯಮಾಡಿಸಿದರು.

ಮ್ಯುನಿಸಿಪಲ್ ಕೌನ್ಸಿಲರೂ, ಡಿಸ್ಟ್ರಿಕ್ಟ್ ಬೋರ್ಡು, ಪ್ರಜಾಪ್ರತಿನಿಧಿಸಭೆ ಲೆಜಿಸ್ಲೇಟಿವ್ ಕೌನ್ಸಿಲ್ ಇವುಗಳ ಮೆಂಬರೂ ಆಗಿದ್ದ ಶ್ರೀರಂಗಪಟ್ಟಣದ ಮ|| ಎಸ್. ಎ. ಜವರಯ್ಯನವರು ೫-೬ ದಿನಗಳವರೆಗೆ ನ್ಯುಮೋನಿಯ ಜ್ವರಪೀಡಿತರಾಗಿದ್ದು ಕಳೆದ ತಾ|| ೨೧ರಲ್ಲಿ ವಿಧಿವಶರಾದರೆಂದು ತಿಳುಹಲು ಅತ್ಯಂತ ವ್ಯಸನವಾಗುತ್ತದೆ. ಇವರು ತಮ್ಮಿಬ್ಬರ ಹೆಣ್ಣುಮಕ್ಕಳ ವಿವಾಹವನ್ನು ೨೦ ದಿನಗಳ ಹಿಂದೆ ಬಹಳ ವಿಜೃಂಭಣೆಯಿಂದ ನಡಿಸಿದ್ದರು. ಇವರು ಬಹಳ ಧೈರ್ಯಶಾಲಿಯೂ, ಉತ್ಸಾಹಶೀಲರೂ, ಸ್ನೇಹಪರರೂ, ಹಿಡಿದ ಕಾರ್ಯವನ್ನು ಸಾಧಿಸುವವರೂ ಆಗಿದ್ದರು. ಇವರ ಅಕಾಲಮರಣದಿಂದ ಇವರ ಕುಟುಂಬಕ್ಕೂ ಅಪಾರವಾದ ಮಿತ್ರಮಂಡಲಿಗೂ ವಿಶೇಷ ಖೇದವುಂಟಾಗಿದೆ.

ಮ|| ವಾಮನರಾವ್ ಮಾಸ್ಟರ್‌ರವರ ವಿಶ್ವಗುಣಾದರ್ಶ ಸಂಗೀತ ನಾಟಕಮಂಡಳಿಯವರು ರಾಜಧಾನಿಗೆ ಬಂದು ಕಳೆದ ೧|| ತಿಂಗಳಿಂದಲೂ ಪುಂಡರೀಕ, ಸತ್ವಪರೀಕ್ಷೆ ಮೊದಲಾದ ಧರ್ಮಬೋಧೆಯ ನಾಟಕಗಳನ್ನು ಅಭಿನಯಿಸಿ ಪ್ರೇಕ್ಷಕರ ಮನಸ್ಸಿನಲ್ಲಿ ಭಕ್ತಿಭಾವವನ್ನು ವೃದ್ಧಿಗೊಳಿಸುತ್ತಿರುವರು. ಈ ಮಂಡಲಿಯವರು ತಮ್ಮ ಧರ್ಮಬೋಧಕಗಳಾದ ಪುಂಡರೀಕ ಮತ್ತು ಸತ್ವಪರೀಕ್ಷೆ ಎಂಬ ನಾಟಕಗಳನ್ನು ಕಳೆದ ತಾ|| ೧೭ ಮತ್ತು ೨೦ರಲ್ಲಿ ಶ್ರೀಮನ್ಮಹಾರಾಜರವರಪ್ಪಣೆಯಂತೆ ಜಗನ್ಮೋಹನ ಪ್ರಾಸಾದದಲ್ಲಿ ಅಭಿನಯಿಸಿ ಮಹಾರಾಜರವರ ಮನಸ್ಸಿಗಾನಂದವನ್ನುಂಟುಮಾಡಿ ೧೫೦೦ ರೂ. ಗಳನ್ನೂ ಎರಡು ಶಾಲುಜೋಡಿಗಳನ್ನೂ ಬಹುಮಾನಿಸಲ್ಪಟ್ಟಿರುತ್ತಾರೆ.

ಸೇನೆಯ ಚೀಫ್ ಕಮ್ಯಾಂಡೆಂಟರಾದ ಸರದಾರ್ ಬಹದ್ದೂರ್ ಲೆಫ್ಟಿನೆಂಟ್ ಕರ್ನಲ್ ಮ|| ಬಿ. ಚಾಮರಾಜ ಅರಸಿನವರು ತಮ್ಮ ಕುಮಾರರ ವಿವಾಹವನ್ನು ಮಾಡಿದುದರ ಸಂತೋಷಾರ್ಥವಾಗಿ ಕಳೆದ ಸೋಮವಾರ ಶ್ರೀಮನ್ಮಹಾರಾಜರವರನ್ನೂ ಶ್ರೀಮದ್ಯುವರಾಜರನ್ನೂ ತಮ್ಮ ಬಂಗಲೆಗೆ ಬಿಜಮಾಡಿಸಿಕೊಂಡು ಬಂದು ಶ್ರೀಮನ್ಮಹಾರಾಜರವರ ಪಾದಪೂಜೆಯನ್ನು ಮಾಡಿ ಮಹಾರಾಜ ಸಹೋದರರುಗಳನ್ನೂ ಇತರ ರಾಜಬಂಧುಗಳನ್ನೂ ಮೃಷ್ಟಾನ್ನ ಭೋಜನದಿಂದ ಸತ್ಕರಿಸಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು. ಮತ್ತು ತಾ|| ೨೨ ರಲ್ಲಿ ರಾಣಿವಾಸದವರನ್ನು ಬಿಜಮಾಡಿಸಿಕೊಂಡು ಬಂದು ದಿವ್ಯವಾದ ಔತಣದಿಂದ ಸತ್ಕರಿಸಿದರು. ಮಹಾರಾಜ ಮಹಾರಾಣಿಯವರುಗಳ ಸತ್ಕಾರಕ್ಕಾಗಿ ಮ|| ಅರಸಿನವರು ವಿಶೇಷವಾದೇರ್ಪಾಟನ್ನು ಮಾಡಿದ್ದರು.

ಮೈಸೂರು-ಬೆಂಗಳೂರು ಮಧ್ಯೆ ತಿರುಗಾಡುವ ೩ ರೈಲು ಬಂಡಿಗಳಲ್ಲಿ ಮೈಸೂರಿನಿಂದ ಬೆಳಿಗ್ಗೆ ೮-೨೦ಕ್ಕೆ ಹೊರಡುವ ಬಂಡಿಯು ಜುಲೈ ತಾ|| ೧ರಿಂದ ಬೆಳಿಗ್ಗೆ ೭-೪೦ ಕ್ಕೆ ಹೊರಟು ಬೆಂಗಳೂರನ್ನು ತಲುಪುವುದು. ಇದೇ ಜುಲೈ ತಾ|| ೧ರ ಆರಭ್ಯ ಮೈಸೂರಿನಿಂದ ಬೆಳಿಗ್ಗೆ ೬-೪೫ ಕ್ಕೆ ಹೊರಡುವ ಬಂಡಿಯು ಮಧ್ಯಾಹ್ನ ೧-೧೫ ಕ್ಕೂ ೧-೫೦ ಕ್ಕೆ ಹೊರಡುವ ಬಂಡಿಯು ರಾತ್ರಿ ೧೧-೧೫ ಕ್ಕೂ ಅರಶೀಕೆರೆಯನ್ನು ತಲುಪುವುವು. ಮತ್ತು ಅರಶೀಕೆರೆಯಿಂದ ಮಧ್ಯಾಹ್ನ ೨-೨೦ ಕ್ಕೆ ಹೊರಡುವ ಬಂಡಿಯು ರಾತ್ರಿ ೮-೪೫ ಕ್ಕೂ ಪ್ರಾತಃಕಾಲ ೪ ಗಂಟೆಗೆ ಹೊರಡುವ ಬಂಡಿಯು ಮಧ್ಯಾಹ್ನ ೧೨-೪೫ ಕ್ಕೂ ಮೈಸೂರನ್ನು ಸೇರುವುವು. ಮೈಸೂರಿನಿಂದ ಮಧ್ಯಾಹ್ನ ೧೨|| ಗೊಂದೂ, ೧-೨೦ ಕ್ಕೆ ಮತ್ತೊಂದೂ ಬಂಡಿಗಳು ಚಾಮರಾಜಪುರಂ ಸ್ಟೇಷನ್ನಿಗೆ ಹೋಗಿ ೧೨-೫೦ ಕ್ಕೂ ಮತ್ತು ೧-೪೦ ಕ್ಕೂ ಹಿಂದಿರುಗಿ ಬರುವುವು.

ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವವು ಕಳೆದ ತಾ|| ೫ರಲ್ಲಿ ದಾವಣಗೆರೆ ತಾ|| ಕಕ್ಕರಗೊಳ್ಳ, ಕಡೂರು ತಾ|| ಮಲಿದೇವಿಹಳ್ಳಿ, ಚಿಕ್ಕನಾಯಕನಹಳ್ಳಿ ತಾ|| ಶೆಟ್ಟಿಕೆರೆ, ಬೌರಿಂಗ್‌ಪೇಟೆ ತಾ|| ಸೂಲಿಕುಂಟೆ ಮಾದಮುರಗಲ, ತುಮಕೂರು ತಾಲ್ಲೂಕು ಕ್ಯಾತಸಂದ್ರ, ಹೆಗ್ಗಡದೇವನಕೋಟೆ ತಾ|| ಸರಗೂರು, ನಂಜನಗೂಡು ತಾ|| ನೇರಳೆ ಮೊದಲಾದ ಅನೇಕ ಸ್ಥಳಗಳಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿಸಲ್ಪಟ್ಟು ಬಾಲಕ ಬಾಲಿಕೆಯರುಗಳು ಆಟಪಾಟಗಳಿಂದಲೂ ಸಕ್ಕರೆ ಹಣ್ಣುಹಂಪಲುಗಳ ವಿನಿಯೋಗದಿಂದಲೂ ಸಂತೋಷಗೊಳಿಸಲ್ಪಟ್ಟರು. ರಾಜಭಕ್ತಿವಿಶ್ವಾಸ ವಿದ್ಯೆಯಿಂದಾಗತಕ್ಕ ಪ್ರಯೋಜನ ಮೊದಲಾದ ವಿಷಯಗಳ ಮೇಲೆ ಬೋಧಪರವಾದ ಭಾಷಣಗಳು ಮಾಡಲ್ಪಟ್ಟವು. ಈ ಮಹೋತ್ಸವದ ಸಂಬಂಧವಾದ ಲೇಖನಗಳನ್ನು ಸ್ಥಳಸಂಕೋಚದಿಂದ ಸಮಗ್ರವಾಗಿ ಪ್ರಕಟಿಸಲು ಅವಕಾಶವಾಗಲಿಲ್ಲವಾಗಿ ವಿಷಾದಿಸುತ್ತೇವೆ.

ಸರ್ಕಾರದವರು ಫೈನಾನ್ಸ್ ಕಮಿಟಿಯವರ ಸೂಚನೆಯನ್ನನುಸರಿಸಿ ರೆವಿನ್ಯೂಶಾಖೆಯಲ್ಲಿ ವೆಚ್ಚವನ್ನು ಈ ಪ್ರಕಾರ ಕಡಿಮೆಮಾಡಿರುತ್ತಾರೆ.—ರೆವಿನ್ಯೂ ಕಮಿಷನರ ಅಸಿಸ್ಟೆಂಟರುಗಳಲ್ಲಿ ಒಬ್ಬರು ಕಡಿಮೆಮಾಡಲ್ಪಟ್ಟಿರುವರು. ಪ್ರಯಾಣದ ಭತ್ಯ ಮತ್ತು ಚಿಲ್ಲರೆ ಖರ್ಚುಗಳು ಮುಂದಣವರ್ಷದ ಬಜೆಟ್ಟಿನಲ್ಲಿ ಕಡಿಮೆಹಾಕಲ್ಪಟ್ಟಿರುತ್ತವೆ. ಮುಂದೆಬರುವ ರೆವಿನ್ಯೂ ಕಮಿಷನರಿಗೆ ಡ್ಯೂಟಿ ಅಲೋಯನ್ಸು ತಪ್ಪಿಸಲ್ಪಟ್ಟಿರುವುದು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಚಿಂತಾಮಣಿ ಸಬ್‌ಡಿವಿಜನ್ನು ಜುಲೈ ತಾ|| 1 ರಲ್ಲೂ, ಗುಡಿಬಂಡೆ ಸಬ್‌ತಾಲ್ಲೂಕೂ, ಮೈಸೂರು ಡಿ|| ನಲ್ಲಿ ಫ್ರೆಂಚ್‌ರಾಕ್ಸ್ ಸಬ್‌ತಾಲ್ಲೂಕೂ ಬರುವ ಸೆಪ್ಟೆಂಬರ್ ತಾ|| 1 ರಲ್ಲೂ ತೆಗೆದುಹಾಕಲ್ಪಡುವುವು. ಅಮಲ್ದಾರರು ಮತ್ತು ಡೆಪ್ಯುಟಿ ಅಮಲ್ದಾರರು ತಮ್ಮ ತಾಲ್ಲೂಕು ಎಲ್ಲೆಯೊಳಗೆ ಸಂಚರಿಸುವಾಗ್ಗೆ ಮೊದಲನೆಯವರಿಗೆ ದಿನ 1ಕ್ಕೆ ೨ ರೂ. ನಂತೆಯೂ, ಎರಡನೆಯವರಿಗೆ ದಿನ 1ಕ್ಕೆ 1½ ರೂ. ನಂತೆಯೂ ಭತ್ಯವೂ ತಮ್ಮ ಎಲ್ಲೆಬಿಟ್ಟು ಹೊರಗೆ ಹೋದ ವೇಳೆಯಲ್ಲಿ ಎಲ್ಲರಂತೆ ಪ್ರಯಾಣದ ಭತ್ಯವೂ ಸಲ್ಲತಕ್ಕುದು. ಶಿವಮೊಗ್ಗಾ ಡಿ|| ನಲ್ಲಿ ತಕ್ಕೇರ್ಪಾಟನ್ನು ಮಾಡಿ ಕುಂಸಿ ಸಬ್‌ತಾಲ್ಲೂಕನ್ನು ತೆಗೆಯಲು ಸಾಧ್ಯವೆಂಬುದನ್ನು ರೆವಿನ್ಯೂ ಕಮಿಷನರು ಚೆನ್ನಾಗಿ ಪರ್ಯಾಲೋಚಿಸಿ ತಿಳಿಸತಕ್ಕುದು.

ಕೈಗಾರಿಕೆಯ ಡೈರೆಕ್ಟರಾಗಿದ್ದ ಮ|| ಎ. ರಂಗಸ್ವಾಮಯ್ಯಂಗಾರರು ಟ್ರೂತ್‌ಪತ್ರಿಕೆಯಲ್ಲಿ ತಮ್ಮ ಮೇಲೆ ಅಪಮಾನಕರವಾದ ಲೇಖನವು ಪ್ರಕಟಿಸಲ್ಪಟ್ಟಿದ್ದಿತೆಂದು ಅದರ ಸಂಪಾದಕರಾದ ಮ|| ನಾರಾಯಣಸ್ವಾಮಯ್ಯರ್‌ರವರ ಮೇಲೆ ಎರಡು ತಪ್ಪುಗಳನ್ನಾಪಾದಿಸಿ ಬೆಂಗಳೂರುಸಿಟಿ ಮ್ಯಾಜಿಸ್ಟ್ರೇಟರ

ಕೋರ್ಟಿನಲ್ಲಿ ವಿವಾದವನ್ನು ಹೂಡಿದ್ದರು. ಈ ವಿವಾದವು ಕೆಲ ಕಾಲದಿಂದಲೂ ನಡಿಯುತ್ತಿದ್ದು ಕಳೆದ ತಾ॥ ೨೧ರಲ್ಲಿ ಮ್ಯಾಜಿಸ್ಟ್ರೇಟರಾದ ಮ॥ ನಾನಾಸ್ವಾಮಿರಾಯರಿಂದ ಇತ್ಯರ್ಥಗೊಳಿಸಲ್ಪಟ್ಟು ಮೊದಲನೆಯ ತಪ್ಪಿತಕ್ಕಾಗಿ ೨ ತಿಂಗಳ ಸಾಧಾರಣ ಕಾರಾಗೃಹವಾಸದ ಶಿಕ್ಷೆಯೂ, ೪೦೦ ರೂ. ದಂಡವೂ ಇದನ್ನು ಕೊಡದೆಹೋದಲ್ಲಿ ಮತ್ತೆರಡು ತಿಂಗಳು ಸಾಧಾರಣ ಶಿಕ್ಷೆಯೂ, ಎರಡನೆಯ ತಪ್ಪಿತಕ್ಕಾಗಿ ೪೦೦ ರೂ. ದಂಡವು ಅಥವಾ ಅದನ್ನು ಕೊಡದೆ ತಪ್ಪಿದಲ್ಲಿ ೨ ತಿಂಗಳ ಸಾಧಾರಣ ಕಾರಾಗೃಹವಾಸದ ಶಿಕ್ಷೆಯೂ ವಿಧಿಸಲ್ಪಟ್ಟುವು ಎಂದು ತಿಳುಹಲು ವಿಷಾದವಾಗುತ್ತದೆ. ಮ್ಯಾಜಿಸ್ಟ್ರೇಟರು ಈ ತೀರ್ಪನ್ನು ಹೇಳುವಲ್ಲಿ, ವರ್ತಮಾನಪತ್ರಿಕೆಗಳ ಸಂಪಾದಕರು ಜನರ ಪ್ರೀತಿ ಗೌರವಕ್ಕೆ ಬಾಧ್ಯರಾಗಿರುತ್ತಾರೆ. ಮತ್ತು ಪ್ರಜೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಖಂಡಿಸುವುದರಲ್ಲೂ ಪ್ರಭುತ್ವದವರ ಹಾಗೂ ಅವರ ಪ್ರಜೆಗಳ ಕಾರ್ಯಗಳಲ್ಲಿ ನೆರವಾಗುವುದರ ಮೂಲಕ ದೇಶಕ್ಕುಪಕಾರಮಾಡುವುದರಲ್ಲೂ ಅವರಿಗಿರುವಷ್ಟು ಸ್ವಾತಂತ್ರ್ಯಾಧಿಕಾರವು ಇತರರಾರಿಗೂ ಇಲ್ಲ. ಆದರೂ ಇವರು ತಮ್ಮ ಸ್ವಾತಂತ್ರ್ಯಾಧಿಕಾರವನ್ನು ವಿನಿಯೋಗಿಸುವುದರಲ್ಲಿ ಪ್ರತಿಯೊಬ್ಬ ಮನುಷ್ಯನಿಗಿರತಕ್ಕ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ಅಲಕ್ಷಿಸಬಾರದು ಎಂದು ಮೊದಲಾಗಿ ತಿಳಿಸಿರುವರು.

ಭರತಖಂಡದ ವೃತ್ತಾಂತಗಳು.

ಮದ್ರಾಸಿನ ಕಲೋಲ್ಲಾಸಿನಿ ಸಭೆಯವರು ಮ॥ ಜೆಲ್ಲಾ ಗುರುಸ್ವಾಮಿಸೆಟ್ಟರಿಗೆ ದಿವಾನ್ ಬಹದ್ದೂರ್ ಪ್ರಶಸ್ತಿಯು ಲಭ್ಯವಾದುದರ ಗೌರವಾರ್ಥವಾಗಿ ಕಳೆದ ತಾ॥ ೧೭ ರಲ್ಲಿ ಒಂದು ಆನಂದೋತ್ಸವವನ್ನು ನಡಿಸಿದರು.

ಅಲಹಾಬಾದಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪಂಡಿತ ಮೋತಿಲಾಲ್ ನೆಹರುಯವರಿಗೆ, ನೀವು ಅಸಹಾಕಾರ ಕೃತ್ಯದಲ್ಲಿ ತೊಡಗಿರುವುದರಿಂದ ನಿಮಗೆ ಕೊಟ್ಟಿದ್ದ ಆಯುಧದ ಲೈಸೆನ್ಸು ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟಿರುವುದರಿಂದ ನಿಮ್ಮ ವಶದಲ್ಲಿರುವ ಆಯುಧಗಳನ್ನೆಲ್ಲಾ ಸರ್ಕಾರಕ್ಕೊಪ್ಪಿಸಬೇಕೆಂದು ನೋಟೀಸನ್ನು ಕೊಟ್ಟಿರುತ್ತಾರೆ.

ಭೂವ್ಯವಸಾಯ ಕೆಲಸಗಳಿಗೆ ನವೀನ ಯಂತ್ರೋಪಕರಣಗಳನ್ನುಪಯೋಗಿಸುವುದರಿಂದ ವಿಶೇಷ ಲಾಭವಾಗುತ್ತದೆಂಬುದನ್ನು ರೈತರಲ್ಲಿ ಪ್ರಸಾರಪಡಿಸುವುದಕ್ಕಾಗಿ ಬೊಂಬಾಯಿಯ ಪ್ರಭುತ್ವದವರು ಪ್ರತಿ ತಾಲ್ಲೂಕಿನಲ್ಲೂ ಒಂದು ಪ್ರಸಾರಕ ಸಂಘವನ್ನೇರ್ಪಡಿಸಬೇಕೆಂದೂ, ಸರ್ಕಾರಿಯ ವ್ಯವಸಾಯ ಪರೀಕ್ಷಾಲಯಗಳಲ್ಲಿ ಈ ನೂತನ ಯಂತ್ರೋಪಕರಣಗಳಿಂದ ವ್ಯವಸಾಯವನ್ನು ಮಾಡಿ ತೋರಿಸಬೇಕೆಂದೂ ತೀರ್ಮಾನಿಸಿರುವರು.

ಬೊಂಬಾಯಿ ಪ್ರಾಂತದಲ್ಲಿ ಸಣ್ಣ ಪುಟ್ಟ ಕೈಗಾರಿಕೆಗಳನ್ನಭಿವೃದ್ಧಿಗೊಳಿಸುವುದಕ್ಕಾಗಿ ಔಷಧ ಸಾಮಗ್ರಿಗಳು, ಸಾಬೂನು, ವಾಸನಾದ್ರವ್ಯ ಮೊದಲಾದವುಗಳನ್ನು ತಯಾರಿಸುವುದಕ್ಕೋಸ್ಕರ ಪರದೇಶಗಳಿಂದ ಬರಬೇಕಾದ ಪದಾರ್ಥಗಳ ಮೇಲಿನ ಸುಂಕವನ್ನು ತಗ್ಗಿಸಬೇಕೆಂದು ಬೊಂಬಾಯಿ ರಾಷ್ಟ್ರೀಯ ಪ್ರಭುತ್ವದವರು ತೀರ್ಮಾನಿಸಿರುವರು. ಪ್ರಕೃತದಲ್ಲಿ ಗ್ಯಾಲನ್ 1ಕ್ಕೆ 21-14-0 ಸುಂಕವು ವಿಧಿಸಲ್ಪಡುತ್ತಿರುವುದು; ಇನ್ನು ಮುಂದೆ ಗ್ಯಾಲನ್ 1ಕ್ಕೆ 5 ರೂಪಾಯಿಸಂತೆ ವಿಧಿಸಲ್ಪಡುವುದು.

ಎಂಗ್ ಇಂಡ್ಯಾ ಪತ್ರಿಕೆಯ ಸಂಪಾದಕರಾದ ಶಾಯಿಬ್ ಕುರೇಷಿಯವರೂ, ಪ್ರಕಾಶಕರಾದ ವಾಲ್ಜಿ ದೇಶಾಯರೂ, ಮುದ್ರಾಪಕರಾದ ಭಾರ್ಗಲೀಯವರೂ, ನವಜೀವನ ಮುದ್ರಾಲಯದ ಅಧಿಪತಿಯಾದ ಸ್ವಾಮಿ ಆನಂದಾನಂದರೂ 124 (ಎ) ಸೆಕ್ಷನ್ನಿನ ಪ್ರಕಾರ ಸೆರೆಹಿಡಿಯಲ್ಪಟ್ಟಿದ್ದು ರಾಜದ್ರೋಹಾಪರಾಧವು ಹೊರಿಸಲ್ಪಟ್ಟು 1 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯೂ 6000 ರೂ. ಅರ್ಥದಂಡವೂ ಅದನ್ನು ಕೊಡಲು ತಪ್ಪಿದಲ್ಲಿ ೬ ತಿಂಗಳ ಕಾರಾಗೃಹವಾಸ ಶಿಕ್ಷೆಯೂ ವಿಧಿಸಲ್ಪಟ್ಟರು.

ಮದ್ರಾಸಾಧಿಪತ್ಯದಲ್ಲಿರತಕ್ಕ ಎಲ್ಲಾ ಸಿವಿಲ್ ಕೋರ್ಟುಗಳಲ್ಲೂ ಒಟ್ಟು 1,00,000 ವಿವಾದಗಳು ಇತ್ಯರ್ಥವಾಗದೆ ಬಾಕಿಯಲ್ಲಿರುವುದರಿಂದ ಸರ್ಕಾರದವರಿಗೆ ಕುತೂಹಲವುಂಟಾಗಿರುವುದಾಗಿಯೂ ಇದರ ಕಾರಣವನ್ನೂ ಪರಿಹಾರೋಪಾಯವನ್ನೂ ಕಂಡುಹಿಡಿಯಲು ಮದ್ರಾಸಿನ ಚೀಫ್ ಕೋರ್ಟು ಚೀಫ್ ಜಡ್ಜಿಯರ ಸಮ್ಮತಿಯಿಂದ ಒಂದು ಕಮಿಟಿಯು ಏರ್ಪಡಿಸಲ್ಪಡುವುದಾಗಿಯೂ ತಿಳಿಯಬಂದಿದೆ. ಇಂತಹ ದೊಡ್ಡ ಆಧಿಪತ್ಯದಲ್ಲಿ 1 ಲಕ್ಷ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿರುವುದು ಆಶ್ಚರ್ಯವಲ್ಲದಿದ್ದಾಗ್ಯೂ ಸರ್ಕಾರದವರು ಅಷ್ಟಕ್ಕೇ ಕಳವಳಗೊಂಡು ಅದರ ಪರಿಹಾರೋಪಾಯಕ್ಕೆ ಪ್ರಯತ್ನಿಸಿರುವಾಗ್ಗೆ ಆ ಆಧಿಪತ್ಯದ 1-2 ಡಿಸ್ಟ್ರಿಕ್ಟುಗಳಿಗೆ ಸಮಾನವಾಗುವ ನಮ್ಮ ಮೈಸೂರು ಸೀಮೆಯಲ್ಲಿ ಅದರ ಯೋಗ್ಯತೆಗೆ ಮೀರಿ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿದ್ದರೂ ನಮ್ಮ ಸರ್ಕಾರದವರು ಅದರ ಕಾರಣವನ್ನು ಕಂಡುಹಿಡಿದು ನಿವಾರಣೆ ಮಾಡಲು ಯಾವ ಪ್ರಯತ್ನವನ್ನೂ ನಡೆಯಿಸದೆ ಇರುವುದು ಸಖೇದಾಶ್ಚರ್ಯವಾಗಿದೆ.

ಧಾರವಾಡ ಡಿ॥ ಗದಗ ತಾ॥ ಹುಲಕೋಟೆ ಗ್ರಾಮದಲ್ಲಿ ಬೊಂಬಾಯಿ ಪ್ರಾಂತಿಕ ರಡ್ಡಿ ಮಹಾಸಭೆಯು ಕಳೆದ ತಾ॥ ೧೭ ಮತ್ತು ೧೮ರಲ್ಲಿ ನಡೆದಿತು. ಬೊಂಬಾಯಿ ಮದ್ರಾಸು ಆಧಿಪತ್ಯಗಳಿಂದಲೂ ಮೈಸೂರು ಮತ್ತು ನೈಜಾಂ ಸಂಸ್ಥಾನಗಳಿಂದಲೂ ಬಹಳ ಜನ ಪ್ರತಿನಿಧಿಗಳೂ, ಪ್ರೇಕ್ಷಕರೂ ಬಂದಿದ್ದರು. ಮ॥ ಕೆ. ಎಚ್. ರಾಮಯ್ಯ, ಬಿ. ಎ., ಬಾರ್-ಆಟ್-ಲಾಯವರು ಸಭಾಧ್ಯಕ್ಷತೆಯನ್ನು ವಹಿಸಿ ರಡ್ಡಿ ಜನರು ಪೂರ್ವದಿಂದಲೂ ನಡೆದುಬಂದ ದುಷ್ಟಪದ್ಧತಿಯನ್ನು ಬಿಟ್ಟು ತಮ್ಮ ಜನಾಂಗದ ಪುರೋಭಿವೃದ್ಧಿಗೆ ಸಾಧಕವಾದ ವಿದ್ಯಾಭಿವೃದ್ಧಿಗೆ ಪ್ರತಿಯೊಬ್ಬನೂ ತನು ಮನ ಧನವನ್ನು ಅರ್ಪಿಸಿ ಸೇವೆಮಾಡಬೇಕೆಂದೂ ಪುರುಷರಂತೆ ಸ್ತ್ರೀಯರೂ ವಿದ್ಯಾವತಿಯರಾಗುವುದು ಅತ್ಯಾವಶ್ಯಕವೆಂದೂ, ಸ್ವಜನಾಭಿವೃದ್ಧಿಕಾರ್ಯದಲ್ಲಿ ಪರರ ಏಳಿಗೆಯನ್ನು ಮತ್ಸರಿಸದೆ ಅವರ ಅನುಕರಣವನ್ನು ಮಾಡಬೇಕೆಂದೂ, ಮೈಸೂರು ಸೀಮೆಯಲ್ಲಿರುವ ೧೫ ಲಕ್ಷ ಒಕ್ಕಲಿಗರ ಏಳಿಗೆಗಾಗಿ ಒಕ್ಕಲಿಗರ ಸಂಘವು ಏರ್ಪಟ್ಟು ಸ್ವಜನರ ವಿದ್ಯಾಭಿವೃದ್ಧಿಗಾಗಿ ಪಾಟುಪಡುತ್ತಿರುವುದೆಂದೂ, ಕೈ॥ ಸಿರಸಂಗಿ ದೇಶಾಯರು ತಮ್ಮ ಆಸ್ತಿಯೆಲ್ಲವನ್ನೂ ಲಿಂಗಾಯತರ ವಿದ್ಯಾಭಿವೃದ್ಧಿಗಾಗಿ ಧಾರೆಯೆರೆದು ಕೊಟ್ಟಿರುವಂತೆ ರಡ್ಡಿ ಜನರಲ್ಲಿ ಪುತ್ರಸಂತಾನವಿಲ್ಲದವರು ತಮ್ಮ ಜನರ ವಿದ್ಯಾಭಿವೃದ್ಧಿಗಾಗಿ ಅರ್ಪಿಸಿ ದೇಹಸಾರ್ಥಕಮಾಡಿಕೊಳ್ಳಬೇಕೆಂದೂ ಮೊದಲಾಗಿ ಬೋಧಪರವಾದ ಭಾಷಣವನ್ನು ಆವೇಶಪೂರಿತವಾಗಿಯೂ, ಗಂಭೀರವಾಗಿಯೂ ಮಾಡಿದರು. ತಾ॥ ೧೮ರಲ್ಲಿ ನಡೆದ ಸ್ತ್ರೀ ಸಭೆಯಲ್ಲಿ ಮ॥ ಕೆ ಎಚ್. ರಾಮಯ್ಯನವರ ಧರ್ಮಪತ್ನಿಯಾದ ಸೌ॥ ರೇವಮ್ಮನವರು ಅಧ್ಯಕ್ಷತೆಯನ್ನು ವಹಿಸಿ ಸ್ತ್ರೀಯರ ಕರ್ತವ್ಯ, ಸ್ತ್ರೀ ವಿದ್ಯಾಭ್ಯಾಸದಾವಶ್ಯಕತೆ ಮೊದಲಾದ ಉಪಯುಕ್ತ ವಿಷಯಗಳ ಮೇಲೆ ಶ್ಲಾಘ್ಯವಾಗಿಯೂ ಪರಿಣಾಮಕಾರಕವಾಗಿಯೂ ಭಾಷಣವನ್ನು ಮಾಡಿ ನೆರೆದಿದ್ದ ನಾರೀಮಣಿಯರೆಲ್ಲರನ್ನೂ ವಿಸ್ಮಯಗೊಳಿಸಿದರು.

ವೀರಾಪುರಕ್ಕೆ ಸಮೀಪವಾಗಿರುವ ಜೆಲಗುರ್ಕಿ ಗ್ರಾಮದಲ್ಲಿ ಒಂದು ಶತಮಾನಕ್ಕೆ ಮೇಲ್ಪಟ್ಟ ವಯಸ್ಸಿನ ಮೌನಸ್ವಾಮಿ ಎಂಬ ಒಬ್ಬ ವೃದ್ಧರು ಈಗ್ಗೆ ೩ ವಾರಗಳ ಹಿಂದೆ ಮೃತರಾದರು. ಈ ಸ್ವಾಮಿಯವರು ಈಗ್ಗೆ ೩೦ ವರ್ಷಗಳ ಕೆಳಗೆ ಜೆಲಗುರ್ಕಿ ಗ್ರಾಮದ ಒಂದು ಮಳಲು ಪ್ರದೇಶದಲ್ಲಿ ಕುತ್ತಿಗೆಯವರೆಗೂ ಹೂಳಲ್ಪಟ್ಟಿದ್ದುದನ್ನು ಗ್ರಾಮಸ್ಥರು ಕಂಡು ಅವರನ್ನು ಅಲ್ಲಿಂದ ಮೇಲಕ್ಕೆತ್ತಿ ಗ್ರಾಮದೊಳಗೆ ಕರೆದುಕೊಂಡು ಬಂದರು. ಇವರು ಮಿತಭಾಷಿಗಳಾಗಿದ್ದುಕೊಂಡು ಯಾರು ಎಷ್ಟು ವಿಧವಾಗಿ ಕೇಳಿದರೂ ತಮ್ಮ ಜನ್ಮಸ್ಥಲ, ಜಾತಿ ಹೆಸರು ಕುಲಗಳಾವುದನ್ನೂ ಹೇಳುತ್ತಿರಲಿಲ್ಲವು. ಗ್ರಾಮಸ್ಥರು ಮುಖ್ಯವಾಗಿ ಲಿಂಗಾಯತರು ಈ ಸ್ವಾಮಿಯವರು ಕೈಲಾಸದಿಂದ ಬಂದ ದೇವರ ಅಪರಾವತಾರರೆಂದು ನಂಬಿಕೊಂಡು ವಿಶೇಷ ಮರ್ಯಾದೆಯಿಂದ ಪೂಜಿಸತೊಡಗಿದರು. ಮತ್ತು ಅವರ ವಾಸಕ್ಕೆ ಒಂದು ಮಠವನ್ನು ಕಟ್ಟಿಸಿಕೊಟ್ಟು ಉದಾರವಾಗಿ ಪುದುವಟ್ಟನ್ನು ಹಾಕಿಕೊಟ್ಟರು. ಕೆಲ ಕಾಲಾನಂತರ ಲಿಂಗಾಯತರು ಈ ಸ್ವಾಮಿಗೆ ಲಿಂಗಾಧಾರಣೆಯನ್ನು ಮಾಡಲು ಪ್ರಯತ್ನಿಸಿದಾಗ ಅವರು ತಿರಸ್ಕರಿಸಿಬಿಟ್ಟರು. ಇವರ ವಿಪರೀತವಾದ ಮೌನವೃತ್ತಿಯು, ಜಾತಿ ಕುಲ ಗೋತ್ರ ತಾರತಮ್ಯವಿಲ್ಲದೆ ಎಲ್ಲರ ಕೈಯಿಂದಲೂ ಅನ್ನವನ್ನು ಸ್ವೀಕರಿಸುವುದು ಮತ್ತು ಇತರ ವಿಲಕ್ಷಣಸ್ವಭಾವ ಇವುಗಳಿಂದ ಪೆರಿ ಅಂದರೆ ಬುದ್ಧಿವಿಕಲ್ಪರು ಎಂದು ಜನರು ತಿಳಿದುಕೊಂಡು ಪೇರಿಸ್ವಾಮಿಯೆಂದು ಕರೆಯಲುಪಕ್ರಮಿಸಿದರು. ಇವರು ಭವಿಷ್ಯವನ್ನು ಹೇಳುತ್ತಾರೆ ಮತ್ತು ಅದ್ಭುತಕಾರ್ಯಗಳನ್ನು ಮಾಡುತ್ತಾರೆಂದು ಎಲ್ಲ ಕಡೆಗೂ ಪ್ರಖ್ಯಾತವಾಗಿ ಧಾರವಾಡ, ಮೈಸೂರು ಮೊದಲಾದ ದೂರದೇಶಗಳಿಂದ ಜನರು ಈ ಮಹಾತ್ಮರ ದರ್ಶನಕ್ಕೆ ಬರುತ್ತಿದ್ದರು. ಈ ಸ್ವಾಮಿಯವರ ಮೃತವಾರ್ತೆಯನ್ನು ಜನರು ಕೇಳಿ ಸುಮಾರು 5,000 ಕ್ಕೆ ಮೇಲ್ಪಟ್ಟು ಕಡೆಯ ದರ್ಶನಕ್ಕಾಗಿ ಬಂದು ಸೇರಿದ್ದರು. ಸ್ವಾಮಿಯ ಕಳೇಬರವು ಮಠದೊಳಗೆ ಸಿದ್ಧಗೊಳಿಸಲ್ಪಟ್ಟಿದ್ದ ಸಮಾಧಿಯೊಳಗೆ ನಿಲ್ಲಿಸಲ್ಪಟ್ಟು ಕೊರಳಿನವರೆಗೂ ವಿಭೂತಿರಾಶಿಯಿಂದ ಮುಚ್ಚಲ್ಪಟ್ಟಿದ್ದಿತು. ಜನಸಂದಣಿಯು ವಿಪರೀತವಾಗಿದ್ದುದರಿಂದ ಕೆಲವರು ಮೂರು ದಿನಗಳವರೆಗೆ ಕಾದುಕೊಂಡಿದ್ದರೂ ಅಲ್ಪಸ್ವಲ್ಪವಾಗಿ ಮುಖದರ್ಶನ ಮಾಡಲು ಮಹಾಪ್ರಯಾಸಪಡಬೇಕಾಗಿದ್ದಿತು. ಭಕ್ತಜನರು ಈಗಲೂ ಅವರ ಸಮಾಧಿಯಬಳಿಗೆ ಬಂದು ಪೂಜೆಯನ್ನು ಮಾಡಿಸಿಕೊಂಡು ಹೋಗುತ್ತಿರುವರಂತೆ.

ವಿದೇಶದ ವೃತ್ತಾಂತಗಳು

ಪೂರ್ವಾತ್ಯ ದೇಶಗಳ ಪರ್ಯಟನವನ್ನು ಪೂರೈಸಿಕೊಂಡು ಸ್ವದೇಶಕ್ಕೆ ಹಿಂದಿರುಗಿಬಂದ ವೇಲ್ಸ್ ಯುವರಾಜರವರ ಸ್ವಾಗತಕ್ಕಾಗಿ ಸಾರ್ವಭೌಮ ದಂಪತಿಗಳು ವಿಂಡ್ಸರಿನಿಂದ ಲಂಡನ್ ಪಟ್ಟಣಕ್ಕೆ ದಯಮಾಡಿಸಿದ್ದರು. ಈವರೆಗೆ ಯಾರಿಗೂ ನಡೆಯದಿದ್ದಂತಹ ಸ್ವಾಗತಸಮಾರಂಭವನ್ನು ಜರುಗಿಸುವುದಕ್ಕಾಗಿ ಲಂಡನ್ ನಗರವಾಸಿಗಳೂ ಅಧಿಕಾರಿಗಳೂ ಒಬ್ಬರನ್ನೊಬ್ಬರು ಮೀರಿಸುವವರಾಗಿದ್ದರು. ಆಗಮನದ ದಿವಸವೇ ಅವರ ಜನ್ಮದಿನೋತ್ಸವವೂ ನಡಿಸಲ್ಪಡಲು ಅಗಾಧವಾದ ಪಾರ್ಟಿ ನಡೆದಿದ್ದಿತು.

ರಷ್ಯಾರಾಜ್ಯದಲ್ಲಿ ಬೋಲ್ಷೆವಿಕ್ಕರಿಂದ 1917 ನೆಯ ನವಂಬರಾರಭ್ಯ ಈವರೆಗೆ 28 ಬಿಷಪ್ಪುಗಳೂ, 1,215 ಪಾದ್ರಿಗಳೂ, ಕೊಲ್ಲಲ್ಪಟ್ಟಿರುವರಲ್ಲದೆ, 6,775 ಸ್ಕೂಲ್ಮಾಸ್ಟರುಗಳು, 8,800 ವೈದ್ಯರು, 54,650 ಅಧಿಕಾರಿಗಳು, 2,60,000 ಸ್ವತಂತ್ರಜನರು, 10,500 ಪೋಲೀಸು ಅಧಿಕಾರಿಗಳು, 48,500 ಪೋಲೀಸು ಸೋಲ್ಜರುಗಳು 12,950 ಜಮೀನುದಾರರು, 3,55,250 ಲಾಯರು ಮೊದಲಾದ ಮೇಧಾವಿಗಳು, 1,92,350 ಕೂಲಿಕಾರರು ಮತ್ತು 8,15,100 ಬೇಸಾಯಗಾರರು ಒಟ್ಟು 17,66,118 ಜನರು ಕೊಲ್ಲಲ್ಪಟ್ಟಿರುತ್ತಾರೆ.

ಒಂದು ದಿನಕ್ಕೆ 10,00,000 ಮೈಲಿ ಪ್ರಕಾರ ಭೂಮಿಯ ಕಡೆಗೆ ಸಂಚರಿಸುತ್ತಿರುವ ಅಂಗಾರಕ ಗ್ರಹಸಂಬಂಧವಾಗಿ ಜ್ಯೋತಿಷ್ಕರು ಪರಿಶೋಧನೆಯನ್ನು ನಡಿಸಿರುವರು. ಜೂನ್ ತಾ॥ 18 ರ ಮಧ್ಯರಾತ್ರಿಯಲ್ಲಿ ನಮಗೆ ಸಮೀಪಗತವಾಗಿ ಅಂದರೆ 441 ಲಕ್ಷ ಮೈಲಿ ದೂರದಲ್ಲಿರುವುದು. ಅಂಗಾರಕ ಗ್ರಹವು ಅದರ ಕೆಂಪುಬಣ್ಣದಿಂದ ಗುರ್ತಿಸಲ್ಪಡತಕ್ಕದಾಗಿದೆ. ಈ ಅಂಗಾರಕ ಗ್ರಹವು ಸಜೀವವಾದುದೊ ಅಲ್ಲವೊ ಎಂಬುದನ್ನು ಉತ್ತರ ಅಮೇರಿಕಾದಲ್ಲಿರುವ ಅನೇಕ ಜೋತಿಷಶಾಲೆಗಳಲ್ಲಿ ಪರೀಕ್ಷಿಸಲು ಪ್ರಯತ್ನನಡಿಸಲ್ಪಟ್ಟಿರುವುದು. ಇದರಂತೆ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಕೆನರಿದ್ವೀಪಗಳಲ್ಲೂ ಪರೀಕ್ಷಿಸಲ್ಪಡುವುದು. 1924 ನೆಯ ಆಗಸ್ಟ್ ತಾ॥ 22ರಲ್ಲಿ ನಮ್ಮ ಭೂಮಂಡಲಕ್ಕೆ 357 ಲಕ್ಷ ಮೈಲಿ ಸಮೀಪಗತವಾಗಿರುವುದು.

ಬ್ರೈಟನ್ ದೇಶಸ್ಥನಾದ ಜಾನ್ ಟ್ಯಾನರ್ ಎಂಬಾತನು ಅತ್ಯಂತುದ್ದವಾದ ಗಡ್ಡವನ್ನುಳ್ಳವನಾಗಿದ್ದಾನೆ. ಈ ಗಡ್ಡದ ಉದ್ದವು ಗದ್ದದಿಂದ ತುದಿಯವರೆಗೆ 9 ಅಡಿಯಿದೆ. 84 ವರ್ಷ ವಯಸ್ಕನಾದ ಈತನು ಕಳೆದ 50 ವರ್ಷಗಳಿಂದಲೂ ಪ್ರಪಂಚದಲ್ಲಿ ಉದ್ದವಾಗಿ ಗಡ್ಡವನ್ನು ಬಳೆಸಿರತಕ್ಕವರೆಲ್ಲರಿಗಿಂತಲೂ ತಾನು ಉದ್ದವಾದ ಗಡ್ಡವನ್ನುಳ್ಳವನೆಂದೆನಿಸಿಕೊಳ್ಳಬೇಕೆಂಬ ಆಶೆಯುಳ್ಳವನಾಗಿದ್ದಾನೆ. ಎಷ್ಟೋ ಸರ್ಕಸ್ ಕಂಪೆನಿಯವರು ಅಭೂತಪೂರ್ವವಾದ ಗಡ್ಡವನ್ನು ಪ್ರದರ್ಶಿಸಲು ಬೇಕಾದಷ್ಟು ದ್ರವ್ಯವನ್ನು ಕೊಡುತ್ತೇವೆಂದರೂ ಒಪ್ಪದಿರುತ್ತಾನೆ. ತನ್ನ ಗಡ್ಡವನ್ನು ಪ್ರದರ್ಶಿಸಿ ದುಡ್ಡನ್ನು ಸಂಪಾದಿಸಬೇಕೆಂಬುದು ಇವನಿಷ್ಟವಾಗಿಲ್ಲವು, ಮತ್ತು ಮನೆಯೊಳಗಿರುವ ಬೆಂಕಿ ಮೊದಲಾದವುಗಳಿಂದ ಅಪಾಯಸಂಭವಿಸದಿರಲು ನೇತಾಡುವ ಗಡ್ಡವನ್ನು ಯಾವಾಗಲೂ ತನ್ನ ಶರಾಯಿನೊಳಗಡೆ ಹುದುಗಿಸಿಕೊಂಡಿರುವನು. ಈತನು ತನ್ನ 100 ನೆಯ ವರ್ಷದ ವರ್ಧಂತಿಯ ಕಾಲದಲ್ಲಿ ಈ ಗಡ್ಡವನ್ನು ಬೋಳಿಸಿಬಿಡಬೇಕೆಂದೂ ಅಷ್ಟರೊಳಗೆ ಸಂಪೂರ್ಣವಾಗಿ 12 ಅಡಿ ಉದ್ದ ಬಳೆಸಿರಬೇಕೆಂದೂ ಕುತೂಹಲವಿಷ್ಟನಾಗಿರುತ್ತಾನೆ. ದೇವರು ಇವನ ಇಷ್ಟಾಪೂರ್ತಿಯನ್ನು ಮಾಡಲಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ.

1. ಕ್ಯಾಪ್ಟನ್ ವೈ. ವಿಶ್ವನಾಥಯ್ಯನವರು, ಯುವಸಾರ್ವಭೌಮರವರು (ಪ್ರಿನ್ಸ್ ಆಫ್ ವೇಲ್ಸ್ ರವರು) ಮೈಸೂರುದೇಶಕ್ಕೆ ದಯಮಾಡಿದುದರ ಜ್ಞಾಪನಾರ್ಥವಾಗಿ ಐದು ಸಹಸ್ರ ರೂಪಾಯಿಗಳನ್ನು ಮೇಲ್ಕಂಡ ಫಂಡಿನ ಮೂಲಧನಕ್ಕೆ ಕೊಟ್ಟು, ಸದರಿ ಮೊಬಲಿಗಿನ ವೃದ್ಧ್ಯಂಶವನ್ನು ವೈದ್ಯ ವಿದ್ಯಾಭ್ಯಾಸ ಮಾಡಲಿಚ್ಛಿಸುವ ಮೈಸೂರುದೇಶದ ವೀರಶೈವ ವಿದ್ಯಾರ್ಥಿ ಅಥವ ವಿದ್ಯಾರ್ಥಿನಿಗೆ ಕೊಡುವಂತೆ ಉದ್ದೇಶಿಸಿರುತ್ತಾರೆ.

2. ಧರ್ಮಕರ್ತರ ಉದ್ದೇಶದಂತೆ ಇದೇ ಜೂನ್ ಲಾಗಾಯ್ತು ಮಾಹೆಯಾನ 25 ರೂ.ನಂತೆ ವೇತನವನ್ನು ಮದ್ರಾಸು ಅಥವಾ ಬೊಂಬಾಯಿ ಸರ್ಕಾರದ ಮೆಡಿಕಲ್ ಕಾಲೇಜಿನಲ್ಲಿ ಓದಲಪೇಕ್ಷಿಸುವ ಮೈಸೂರುದೇಶದ ವೀರಶೈವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡಲು ನಿಶ್ಚಯಿಸಲ್ಪಟ್ಟಿದೆ. ಸಹಾಯವನ್ನು ಹೊಂದಲಪೇಕ್ಷಿಸುವವರು ಕೂಡಲೆ ಫಂಡಿನ ಸೆಕ್ರೆಟರಿಯವರಿಗೆ ಬರೆದುಕೊಳ್ಳತಕ್ಕದು.

ಬೆಂಗಳೂರು. } ಜಿ. ಪರಮಶಿವಯ್ಯ ಬಿ.ಎ., ಎಲ್ ಎಲ್., ಬಿ.
ತಾ॥ 15-6-22 } ಅಡ್ವೋಕೇಟ್ ಮತ್ತು ಸೆಕ್ರೆಟರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ, ಬೆಂಗಳೂರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ವಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ತರುಣರಲ್ಲಿ ಜಾಗ್ರತೆ.

ತಾ॥ ೯-೬-೨೨ ರ ದಿವಸ ವಿಜಾಪುರದ ಬಸವವಿಜಯ ಸಂಸ್ಥೆಯವರಿಂದ ಷಪರ್ಡಹಾಲಿನಲ್ಲಿ ಶ್ರೀಯುತ ಆಲಮೇಲ ದೇಶಮುಖ ಇವರ ಅಧ್ಯಕ್ಷತೆಯಲ್ಲಿ ತರುಣರದೊಂದು ಸಭೆಯು ನಡೆದಿತು. ಈ ಸಭೆಗೆ ಊರೊಳಗಿನ ಯಾವತ್ತೂ ಸಭ್ಯಗೃಹಸ್ಥರು ದಯಮಾಡಿದ್ದರು. "ತರುಣರ ಕರ್ತವ್ಯ" ಈ ವಿಷಯದಮೇಲೆ ಬೆಂಗಳೂರ ತರುಣರ ಸಂಘದಿಂದ ಅಲ್ಲಲ್ಲಿ ಭಾಷಣಗಳನ್ನು ಮಾಡಿ ಜನತೆಯಲ್ಲಿ ಜಾಗ್ರತೆಯನ್ನು ಹುಟ್ಟಿಸುವದಕ್ಕೋಸ್ಕರ ಕಳುಹಿಸಲ್ಪಟ್ಟ ಮಿ॥ ವೀರಪ್ಪಾ ಡೆಂಕಿನಕೋಟಾ ಹಾಗೂ ಇಲ್ಲಿಯ ಬಸವವಿಜಯಸಂಸ್ಥೆಯ ಸೆಕ್ರೆಟರಿಯಾದ ಶ್ರೀಯುತ ವೀರಭದ್ರಯ್ಯ ಗುಟಗುಂಟಿ ಮೊದಲಾದವರ ಸುಶ್ರಾವ್ಯ ಭಾಷಣಗಳಾದವು. ಮರುದಿವಸ ರಾತ್ರಿ ಗುಟಗುಂಟಿ ಇವರ ವಠಾರದಲ್ಲಿ ಮ॥ ವೀರಪ್ಪಾ ಇವರು ಮ್ಯಾಜಿಕ್ ಲ್ಯಾಂಟರನ್ನು ತೋರಿಸಿದರು.

ಗುರುಬಾಲಪ್ಪಾ ಹಲಕಟ್ಟಿ.

ನಿಜವಾದ ಅನ್ನದಾನ.

ವಿರಜಸಂಸ್ಥಾನದ ವಸತಿಗೃಹವಾಸಿಗಳಾದ ವೀರಶೈವ ಸಮಾಜ ಸಂಜೀವಿಗಳಾದ ವೀರಶೈವ ಸಾಧುವರ್ಯರಾದ ಮ॥ ರಾ॥ ಶ್ರೀ ಗುರುಪ್ಪನವರು ಯಾಗಂಟಿಯವರು ಇದೇ ವಸತಿಗೃಹದಲ್ಲಿ ವೀರಶೈವರಿಂದ ಶ್ರೀಮಂತ ಸಿರಸಂಗಿ ಲಿಂಗರಾಜರ ಹೆಸರಿನಿಂದ ಸ್ಥಾಪಿಸಲ್ಪಟ್ಟ ಇಂಗ್ಲಿಷ್ ಎ.ವಿ. ಸ್ಕೂಲಿನಲ್ಲಿಯ ಹತ್ತು ಮಂದಿ ಬಡವಿದ್ಯಾರ್ಥಿಗಳಿಗೆ ಅನ್ನದಾನವನ್ನು ಮಾಡುತ್ತೇವೆಂದು ವಾಗ್ದಾನಮಾಡಿದ್ದಕ್ಕಾಗಿ ಅಭಿನಂದಿಸುತ್ತೇವೆ. ಆ ಪ್ರಕಾರ ಈಗ ಅವರಲ್ಲಿ ಐದುಮಂದಿ ಬಡವಿದ್ಯಾರ್ಥಿಗಳಿಗೆ ತೃಪ್ತಿಕರ ಭೋಜನವು ನಿಯಮಿತಕಾಲಕ್ಕೆ ನಿರಾತಂಕವಾಗಿ ಸಿಗುತ್ತದೆ. ಈ ಪ್ರಕಾರವಾಗಿ ನಮ್ಮ ವೀರಶೈವ ಪ್ರತಿಯೊಬ್ಬ ಶ್ರೀಮಂತರೂ ಕೈಕೊಂಡಿದ್ದಾದರೆ ಕ್ಷಿಪ್ರದಲ್ಲಿ ನಮ್ಮ ಸಮಾಜವು ವಿದ್ಯೆಯಿಂದ ಉನ್ನತಸ್ಥಿತಿಯನ್ನು ಹೊಂದುತ್ತದೆಂಬುವದರಲ್ಲಿ ತಿಲಮಾತ್ರ ಸಂದೇಹವಿಲ್ಲ.

ಲಿಂಗರಾಜ ಎ. ವಿ. ಸ್ಕೂಲ ಫಂಡ ಕಮಿಟಿ ಸೆಕ್ರೆಟರಿ, ಶಿಗ್ಗಲಿ.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕಸಂಘ, ಶಿವಮೊಗ್ಗ.

ಕೊಡ್ಲಗೆರೆ ಮಾಗಣಿ (ಶಿವಮೊಗ್ಗ ತಾಲ್ಲೂಕು) ಹೊಸಹಳ್ಳಿ ಪಟೇಲರು ನಂಜುಂಡಪ್ಪಗೌಡರವರ ಮನೆಯಲ್ಲಿ ನಡೆದ ವಿವಾಹಮಹೋತ್ಸವ ಕಾಲದಲ್ಲಿ ಮೇಲಿನ ಸಂಘಕ್ಕೆ ಮ॥ ಬಿ. ರುದ್ರಪ್ಪನವರ ಪ್ರೋತ್ಸಾಹದಿಂದ ವಸೂಲಾದ ಚಂದಾ ಮೊಬಲಗು :—ಮ॥ ಹಿರಿಯೂರು ಬಸಪ್ಪಗೌಡರವರಿಂದ 3 ರೂ. ಮ॥ ಹೊಸಹಳ್ಳಿ ಪಟೇಲ್ ಮಲ್ಲಿಕಾರ್ಜುನಪ್ಪನವರಿಂದ 4 ರೂ. ಮ॥ ಯಲವಟ್ಟಿ ನಂಜುಂಡಪ್ಪನವರಿಂದ 3 ರೂ.

ಕುಂಸಿ ಸಬ್ ತಾ॥ ಆಯನೂರಿನಲ್ಲಿ ನಡೆದ ಈ ಕೆಳಗಿನ ಲಗ್ನಗಳಲ್ಲಿ ಮ॥ ಶಿವಮೊಗ್ಗ ಕೇರಿಹಾಲಪ್ಪನವರ ಸೂಚನೆಯ ಮೇಲೆ ಮ॥ ವೇ. ಇಟ್ಟಿಗೆಹಳ್ಳಿಯಲ್ಲಿರುವ ಕೋಹಳ್ಳಿಮಠದ ತೋಟಪ್ಪಯ್ಯನವರ ಪ್ರೋತ್ಸಾಹದಿಂದ ವಸೂಲಾದ ಚಂದಾ ಮೊಬಲಗು :—ಮ॥ ನಗರದ ವರ್ತಕ ಷಟ್ಟಿ ಸೆಟ್ಟರ ಮಕ್ಕಳು ಚನ್ನಬಸಪ್ಪನವರಿಗೂ ಮ॥ ಸಾಲೂರು ಬಳ್ಳಾರಿ ಮಡಿವಾಳಪ್ಪನವರ ಪುತ್ರಿಗೂ ನಡೆದ ಲಗ್ನದಲ್ಲಿ 5 ರೂ. ಮ॥ ಆಯನೂರು ಬೆಲ್ಲದ ಸಂಗಪ್ಪನವರ ಮಕ್ಕಳು ಶಿದ್ದಪ್ಪನವರಿಗೂ ಮ॥ ನಗರದವರ್ತಕ ತೋಟಪ್ಪನವರ ಪುತ್ರಿ ಶಿವಮ್ಮನಿಗೂ ನಡೆದ ಲಗ್ನದಲ್ಲಿ 5 ರೂ. ಮ॥ ಸಾಸ್ವೆಹಳ್ಳಿ ರುದ್ರಪ್ಪನವರ ಮಕ್ಕಳು ವೀರಭದ್ರಪ್ಪನವರಿಗೂ ಮ॥ ಆಯನೂರು ಬೆಲ್ಲದ ಸಂಗಪ್ಪನವರ ಪುತ್ರಿ ಬಸಮ್ಮನಿಗೂ ನಡೆದ ಲಗ್ನದಲ್ಲಿ 5 ರೂ. ಮ॥ ಸಾಸ್ವೆಹಳ್ಳಿ ರುದ್ರಪ್ಪನವರ ಮಕ್ಕಳು ಮಹೇಶ್ವರಪ್ಪನವರಿಗೂ ಮ॥ ಆಯನೂರು ಬೆಲ್ಲದ ಸಂಗಪ್ಪನವರ ಪುತ್ರಿ ಶಾಂತಮ್ಮನಿಗೂ ನಡೆದ ಲಗ್ನದಲ್ಲಿ 5 ರೂ.

ಮೇಲೆ ನಮೂದಾಗಿರುವ ವೇ॥ ತೋಟಪ್ಪಯ್ಯನವರಂತೆ ಲಗ್ನ ಮುಂತಾದ ಶುಭಕಾರ್ಯಗಳನ್ನು ನಡಿಸತಕ್ಕ ಆಚಾರ್ಯರುಗಳು ಚಂದಾವಸೂಲಿ ತರಬೊದು ಇಟ್ಟು ಸಂಘಕ್ಕೆ ಸಹಾಯಮಾಡುತಾರೆಯಾಗಿ ಕೋರುತ್ತೇವೆ.

B. Rudrappa.

ಹಾವೇರಿಯ ವೈದಿಕ ಪಾಠಶಾಲೆ.

ಎಷ್ಟೋ ವರ್ಷಗಳಿಂದ ಈ ಊರಲ್ಲಿ ಇಲ್ಲಿಯ ಧರ್ಮಾಭಿಮಾನಿಗಳ ಸಹಾಯದಿಂದ ನಡೆಯಿಸಲ್ಪಡುತ್ತಿದ್ದ ಹುಕ್ಕೇರಿಮಠದ ವೈದಿಕ ಪಾಠಶಾಲೆಯು ಯೋಗ್ಯಶಿಕ್ಷಕರ ಅಭಾವದಿಂದ ಕಳೆದ ೩-೪ ವರ್ಷಗಳಿಂದ ನಿಲ್ಲಿಸಲ್ಪಟ್ಟಿತ್ತಷ್ಟೆ? ಆದರೆ ಇದೇ ಜೂನ್ ೧ನೇ ತಾರೀಖಿನಿಂದ ಪುನಃ ಯೋಗ್ಯ ಶಾಸ್ತ್ರಿಗಳ ಅಧ್ಯಾಪಕತ್ವದ ಕೆಳಗೆ ಪ್ರಾರಂಭವಾಯಿತೆಂದು ಪ್ರಕಟಿಸಲು ಸಂತೋಷವಾಗುತ್ತದೆ. ಈಗ ಪಾಠಶಾಲೆಯಲ್ಲಿ ವೈದಿಕ, ಧಾರ್ಮಿಕ, ಜ್ಯೋತಿಷ ವಿಷಯಗಳ ಅಧ್ಯಾಪನೆಯ ವ್ಯವಸ್ಥೆ ಮಾಡಿದೆ. ಪುರಾಣಕಥನ ಕೀರ್ತನಗಳ ಅವಶ್ಯವಿರುವದರಿಂದ ಆ ವಿಷಯವನ್ನು ನವೀನಪದ್ಧತಿಯಿಂದ ಹೇಳಿಸುವ ವ್ಯವಸ್ಥೆ ಮಾಡಿದೆ. ಅದ್ದರಿಂದ ಧರ್ಮಗುರುವಟುಗಳೂ ಧಾರ್ಮಿಕ ವಿಷಯ ಜ್ಞಾನಸಂಪಾದನೇಚ್ಛುಗಳೂ ಈ ಸಂಧಿಯನ್ನು ಹೋಗಲಾಡಿಸಬಾರದಾಗಿ ಕೋರಿಕೆಯಿದೆ.

ಈ ಪಾಠಶಾಲೆಯ ಪ್ರವೇಶಕ್ಕಾಗಿ ನಿಬಂಧನೆಗಳು.

೧. ವಿದ್ಯಾರ್ಥಿಗಳು ಕನಿಷ್ಠ ಪ್ರಾಥಮಿಕ ೪ ನೇ ಇಯತ್ತೆಯಲ್ಲಿ ಪಾಸಾದವರಿರಬೇಕು.

೨. ಇಲ್ಲಿ ಪ್ರವೇಶವಾದ ಮೇಲೆ ಮೂರು ವರ್ಷವಾದರೂ ಇರುವ ಬಗ್ಗೆ ಬರೆದುಕೊಡಬೇಕು.

೩. ಸ್ಥಿತಿಗತಿ ನಡತೆಯ ಬಗ್ಗೆ ಆಯಾ ಗ್ರಾಮದಿಂದ ವಿದ್ಯಾರ್ಥಿಗಳು ಸರಟಿಫಿಕೇಟನ್ನು ತರಬೇಕು.

ಈ ಪಾಠಶಾಲೆಯಲ್ಲಿ ಅಭ್ಯಾಸಿಸುವ ವಿದ್ಯಾರ್ಥಿಗಳ ಭೋಜನ ಮೊದಲಾದ ವ್ಯವಸ್ಥೆಯು ಈ ಪಾಠಶಾಲಾ ಕಮಿಟಿಯವರಿಂದ ಮಾಡಲ್ಪಡುವದು. ಶೀಘ್ರವೇ ಸಂಗೀತ ಪಾಠಶಾಲೆಯು ಶುರುವುಮಾಡಲ್ಪಡುವದು. ವಿಶೇಷ ಸಂಗತಿಯನ್ನು ಸ್ವತಃ ಪತ್ರವ್ಯವಹಾರದಿಂದ ತಿಳಿದುಕೊಳ್ಳಬೇಕು.

ಶಿವಮೂರ್ತಿಸ್ವಾಮಿ ಹಿರೇಮಠ, B.A.,LL.B., ವಕೀಲ,
ವೈಸ್ ಪ್ರೆಸಿಡೆಂಟ ವೀರಶೈವ ಸಂಸ್ಕೃತ ಪಾಠಶಾಲಾ,
ಹುಕ್ಕೇರಿಮಠ, ಹಾವೇರಿ.

ವಿವಾಹಮಹೋತ್ಸವ.

ನಿಜಾಮ ಇಲಾಖಾ ಶಹಪೂರ ತಾ॥ ಪೈಕಿ ಜಹಗೀರ ಕೋಡಾಲ ಮು॥ ಪಾ॥ ಶ್ರೀಯುತ ಚಂದಾವ ಇವರ ಮಂದಿರದಲ್ಲಿ ಇವರ ಚಿ॥ ಶಿದ್ಧಲಿಂಗಪ್ಪನ ವಿವಾಹವು ಇದೇ ವೈಶಾಖ ಬ॥ ೪ ಯಿಂದ ಬ॥ ೮ ವರೆಗೆ ಬಹು ವಿಜೃಂಭಣೆಯಿಂದ ನಡೆದು ಸರ್ವಮಾಹೇಶ್ವರರು ಭಕ್ಷ್ಯಭೋಜ್ಯ ಮೊದಲಾದ ಅಮೃತಪಾನದಿಂದಲೂ ದಕ್ಷಿಣೆಯಿಂದಲೂ ತೃಪ್ತಿಗೊಳಿಸಲ್ಪಟ್ಟರು. ಈ ವಿವಾಹಕ್ಕೆ ನೇರಡಗುಂಭದ ಮತ್ತು ಚಿಕ್ಕಸೂಗೂರಿನ ಶ್ರೀಗಳವರೂ ಗೊಬ್ಬೂರ ಚರಮೂರ್ತಿಗಳೂ ಅನೇಕ ಸಂಸ್ಕೃತ ಪಂಡಿತರುಗಳೂ ಗಾನವಿಶಾರದರೂ, ವಿದ್ಯಾರ್ಥಿಗಳೂ ಬರಮಾಡಲ್ಪಟ್ಟು ಶ್ರೀ ಗೊಬ್ಬೂರ ಚರವರ್ಯ ಬಸವಲಿಂಗಮೂರ್ತಿಗಳ ಅಧ್ಯಕ್ಷತೆಯಿಂದಲೂ ಮ॥ ರಾ॥ ವೆಂಕಟರಾವ ಉರಫ್ ಶಿವರಾವ ಪಾ॥ ಜೇಗರಕಲ್ಲ ಇವರ ಚಾಲಕತ್ವದಿಂದಲೂ ಧಾರ್ಮಿಕಸಭೆಯು ನಡಿಸಲ್ಪಟ್ಟಿತು. ನೇರಡಗುಂಭ ಮತ್ತು ರಾಯಿಚೂರ ಪಾಠಶಾಲಾ ಸಂಸ್ಕೃತ ವಿದ್ಯಾರ್ಥಿಗಳ ಭಾಷಣಗಳಾದ ಮೇಲೆ ನೇರಡಗುಂಭ ಪಾಠಶಾಲಾಸ್ಥಾಪಕ ವೇ॥ ಶಿದ್ಧಲಿಂಗಶಾಸ್ತ್ರಿಗಳು ಗುರು ಎಂಬುವರ ಮೇಲೂ, ವೇ॥ ಯಲ್ಲೇರಿ ಬಸವಶಾಸ್ತ್ರಿಗಳು ಕ್ರಿಯಾಜ್ಞಾನ ವಿಷಯದ ಮೇಲೂ, ವೇ॥ ಶರಣಯ್ಯ ಗುಲಬುರ್ಗೀಕರ ಇವರು ಭಕ್ತಿ ಮೇಲೂ, ಚನಮೂರ್ತಿ ಚನವೀರಯ್ಯ ಅರಸಿಣಗೇರಕರ ಇವರು ಮೋಕ್ಷದ ಮೇಲೂ ಅತ್ಯಂತ ಶ್ಲಾಘ್ಯವಾಗಿಯೂ ಶ್ರೋತೃಗಳ ಮನಸ್ಸಿನಲ್ಲಿ ನಾಟುವಂತೆಯೂ ಭಾಷಣಗಳನ್ನು ಮಾಡಿದರು. ತರುವಾಯ ಅಧ್ಯಕ್ಷರು ದೀಕ್ಷಾ ವಿಷಯದ ಬಗ್ಗೆ ಬಹು ಸರಸವಾಗಿ ಭಾಷಣಮಾಡಿದರು. ಪರಂತು ಇವರ ವಾಕ್ಯಸರಣಿಯು ಅಮೂಲ್ಯ ಮೌಕ್ತಿಕದ ಹಾರದಂತೆ ಒಪ್ಪುತ್ತಿತ್ತು. ಮತ್ತು ಈ ಸಭೆಯಲ್ಲಿ ಕೂಡಿದ ಭಕ್ತವೃಂದವನ್ನು ಮನಃಪೂರ್ವಕವಾಗಿ ದೀಕ್ಷಾಕಾಂಕ್ಷಿತರಾಗುವದಕ್ಕೆ ಒಪ್ಪಿಕೊಂಡರು. ನೇರಡಗುಂಭದ ಶ್ರೀಗಳವರೂ ಮೇಲಿನ ಸರ್ವವಿಷಯಗಳನ್ನೇ ಪುಷ್ಟೀಕರಿಸಿ ಕೇಳಿದಂತೆ ಆಚರಣೆಯಲ್ಲಿ ತರಬೇಕೆಂದೂ ತಮ್ಮ ಮಧುರೋಕ್ತಿಗಳಿಂದ ಆಶೀರ್ವಾದವೆಂಬ ಅಮೃತಪಾನ ಮಾಡಿಸಿದರು. ಆಮೇಲೆ ಸದರಿ ವಿವಾಹಕ್ಕೆ ಕಾರ್ಯದರ್ಶಿಯಾದ ವೆಂ. ಶಿವರಾವ ಪಾ॥ ಇವರು ಕೈ॥ ವೀರಸಂಗಪ್ಪನವರ ಸ್ಮಾರಕ ಸೇವಾ ರವಾನೆಮಾಡಿದರು. ತದನಂತರ ಸಭಾಧ್ಯಕ್ಷರ ಅನುಜ್ಞೆಯಿಂದ ಸರ್ವರೂ ಸಂತೋಷಚಿತ್ತರಾಗಿ ಸದರಿ ವಿವಾಹವಾದ ವಧೂವರರಿಗೆ ಆಶೀರ್ವದಿಸಿ ತೆರಳಿದರು.

ಓರ್ವ ಪ್ರತ್ಯಕ್ಷದರ್ಶಿ.

[೨ ರೂ. ಬಂದಿದೆ. ಪ.ಪ್ರ.]

ಒಂದು ಉಪಯುಕ್ತ ಸೂಚನೆ.

ಸದ್ಯಃ ನಮ್ಮಲ್ಲಿ ಶ್ರೀಮಜ್ಜಗದ್ಗುರು ರೇಣುಕಾಚಾರ್ಯಪಾದರ ಪೀಠಕ್ಕೆ ಯೋಗ್ಯರಾದ ಅಧಿಕಾರಿಗಳನ್ನು ನಿಯಮಿಸುವ ವಿಷಯದಲ್ಲಿ ಅನೇಕರು ಬಗೆಬಗೆಯ ಸೂಚನೆಗಳನ್ನು ಮಾಡುತ್ತಿದ್ದಾರೆ. ಇಂಥಾ ಕಾರ್ಯಗಳಲ್ಲಿ ಆದಷ್ಟು ಉಪಯುಕ್ತಸೂಚನೆಗಳನ್ನು ಸಮಾಜದವರ ಮುಂದಿಡುವದು ಪ್ರತಿಯೊಬ್ಬ ಸಮಾಜಾಭಿಮಾನಿಯ ಕರ್ತವ್ಯವೆಂದು ತಿಳಿದು ಒಂದೆರಡು ಮಾತುಗಳನ್ನು ಇಲ್ಲಿ ಸೂಚಿಸಿಕೊಳ್ಳುತ್ತೇನೆ.

ಸಾಧಾರಣವಾಗಿ ತನಗೆ ಉತ್ತಮವಸ್ತುವೇಬೇಕೆಂದು ಬಯಸಿ ಯತ್ನಿಸುವದು ಮನುಷ್ಯರ ಸ್ವಭಾವವಿರುವಾಗ ಸದ್ಯಃ ನಾವಾದರೂ ಸರ್ವಗುಣಸಂಪನ್ನರೇ ನಮ್ಮ ಆಚಾರ್ಯಪೀಠದ ಅಧಿಕಾರಿಗಳಾಗಬೇಕೆಂದು ಬಯಸುವದು ಅಸ್ವಾಭಾವಿಕವಲ್ಲ. ಆದರೂ ಸರಿಯಾದ ಪ್ರಯತ್ನವಿಲ್ಲದ ಆಶೆಯು ದುರಾಶಾಮಾತ್ರವೇ. ಆದರಲ್ಲಿಯೂ ನಮ್ಮ ಸಮಾಜದಲ್ಲಿ ಇಂಥಾ ಅಧಿಕಾರಕ್ಕೆ ಯೋಗ್ಯರಾದವರು ಸುಲಭರಲ್ಲ. ನಮ್ಮ ಸಮಾಜದಲ್ಲಿ ವಿದ್ಯಾಪ್ರಸಾರವಾದರೂ ಅಷ್ಟರಮಟ್ಟಿಗೇ ಇರುತ್ತದೆ; ವಿದ್ಯಾಪಾರಂಗತರ ಮಾತು ಹಾಗಿರಲಿ, ಸಾಧಾರಣವಾಗಿ ಶಾಸ್ತ್ರಗಳಲ್ಲಿ ಅಧಿಕಾರವನ್ನು ಹೊಂದಿದವರೂ ನಮ್ಮಲ್ಲಿ ದೊರೆಯುವುದು ಕಷ್ಟ.

ಈಗ ನಮ್ಮ ಸಮಾಜದಲ್ಲಿ ನಡೆದಿರುವ ಬಗೆಬಗೆಯ ಬಡಿದಾಟಗಳ ಕಡೆಗೂ, ಅನೇಕ ಸಂಸ್ಕಾರಗಳ ಕಡೆಗೂ ನೋಡಿದರೆ, ಇದರಿಂದಾಗುವ ಅನರ್ಥವನ್ನು ಮನಸ್ಸಿನಲ್ಲಿ ತಂದರೆ, ಇವನ್ನೆಲ್ಲ ಸುಧಾರಿಸುವ ಕುತೂಹಲವು ನಮಗಿದ್ದರೆ, ನಮ್ಮ ಗುರುಸ್ಥಾನಗಳಿಗೆ—ಅದರಲ್ಲಿಯೂ ಧರ್ಮಸಿಂಹಾಸನಗಳಿಗೆ ಎಂಥ ಮೂರ್ತಿಗಳನ್ನು ತರಬೇಕೆಂಬುವದು ಸ್ಪಷ್ಟವಾಗುತ್ತದೆ. ಜ್ಞಾನಲವದುರ್ವಿದಗ್ಧರಾಗಿ ದಂಭ-ಅವಿಚಾರಗಳಿಂದ ಉರಿಯುವ ಕಿಚ್ಚಿಗೆ ಹುಲ್ಲುಹಾಕುವವರಾಗಲೀ, ತಮ್ಮ ವಿಶಿಷ್ಟತೆಯ ಸ್ವಪ್ನದಲ್ಲಿ ಮಗ್ನರಾಗಿ ಸಮಾಜದ ಕಡೆಗೆ ಕಣ್ಣೆರೆಯದೇ ಹೋಗುವವರಾಗಲೀ ಪೀಠಾಧಿಪತಿಗಳಾದರೆ ನಮಗೇನು? ನಮ್ಮ ಅಭಾವವನ್ನು ಚೆನ್ನಾಗಿ ತಿಳಿದು ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡಿ, ಹೀನದೆಶೆಯಲ್ಲಿರುವ ನಮ್ಮ ಸಮಾಜವನ್ನು ಒಂದು ಆದರ್ಶಸಮಾಜವನ್ನು ಮಾಡುವ ಮಹಾತ್ಮರು ನಮಗೆಬೇಕು. ಈ ಬಗೆಯ ಸದ್ಗುಣ-ಕರ್ತವ್ಯದಕ್ಷತೆಗಳಿಲ್ಲದ ಬರೀ ಶಾಸ್ತ್ರತೀರ್ಥ-ವಿದ್ಯಾರತ್ನಾಕರಾದಿ ನಾಮಧಾರಿಗಳು ನಮಗೆ ಬೇಕಾಗಿಲ್ಲ.

ಹೀಗಿರುವಲ್ಲಿ ನಾವು ನಮ್ಮ ಆಚಾರ್ಯಪೀಠಕ್ಕೆ, ಸದಸದ್ವಿಚಾರಿಗಳೂ-ಕರ್ತವ ದಕ್ಷರೂ-ನಿರ್ಮತ್ಸರರೂ-ಒಟ್ಟಿನಮೇಲೆ ಗುಣಿಗಳೂ ಆದರಲ್ಲಿಯೂ ವಿದ್ವಾಂಸರಿಗಳೂ ಆದವರನ್ನೇ ನಿಯಮಿಸುವದು ನಮ್ಮ ಕರ್ತವ್ಯವೆಂದು ಬೇರೆ ಹೇಳುವ ಆವಶ್ಯಕತೆಯಿಲ್ಲ. ಈ ಕರ್ತವ್ಯವನ್ನು ನಾವು ಬಿಟ್ಟೀ ಈ ನಮ್ಮ ಧರ್ಮಪೀಠಗಳು ಈ ಹಾದಿಗೆ ಬಂದಿರುತ್ತವೆ. ಇನ್ನೂ ನಾವು ಉದಾಸೀನರಾದರೆ ಸಮಾಜವು ಅನಾಯಸವಾಗಿ ನಿರ್ನಾಮವಾಗುವದರಲ್ಲಿ ಸಂಶಯವೇನು? ಇದಕ್ಕಾಗಿ ಆದಷ್ಟು ಯತ್ನಿಸಿ ನಮ್ಮ ಈ ಧರ್ಮಪೀಠಗಳ ಸುಸ್ಥಿತಿಯು ನಮ್ಮ ಸಮಾಜದ ಪ್ರಮುಖರ ಕಡೆಯಿಂದಲೇ ಆಗುವಂತೆ ಮಾಡಬೇಕು. ಇದರಂತೆಯೇ ನಮ್ಮ ಸಮಾಜದ ಉಳಿದ ಮಠಗಳ ಸುಸ್ಥಿತಿಯೂ ನಮ್ಮ ಪ್ರಮುಖರಿಂದಲೇ ಆಗಬೇಕು. ಇರಲಿ! ಈಗ ಈ ವಿಷಯವನ್ನು ಸಮಾಜದ ಪ್ರಮುಖರು ಚೆನ್ನಾಗಿ ಪರಿಶೀಲಿಸಿ, ಬಾಳೆಹಳ್ಳಿ ಜಗದ್ಗುರುಸ್ಥಾನಕ್ಕೆ ಯೋಗ್ಯರಾದ ಅಧಿಕಾರಿಗಳನ್ನು ನಿಯಮಿಸುವದು ಮೊದಲನೆಯ ಕರ್ತವ್ಯವೆಂದು ನಮ್ಮ ಭಾವನೆ. ನಮಗೆ ಆತಿಶೀಘ್ರ ವ್ಯವಸ್ಥೆಯಾಗದಿದ್ದರೂ ಅಡ್ಡಿಯಿಲ್ಲ; ಕಾತ್ರದಿಂದ ಕಡೆಗೆ ಪಶ್ಚಾತ್ತಾಪ ಮಾತ್ರ ಆಗಬಾರದು. ಇದಕ್ಕಾಗಿ ನಾವು ನಮ್ಮ ಸಮಾಜಾಭಿಮಾನಿಗಳಿಗೆ ಸೂಚಿಸಿಕೊಳ್ಳುವದೇನಂದರೆ:—ಪ್ರತ್ಯೇಕಪ್ರಾಂತದ ಇಬ್ಬಿಬ್ಬರು ಯೋಗ್ಯರಾದ ಮೆಂಬರರಿಂದ ಒಂದು ಕಮಿಟಿಯನ್ನು ಸಂಘಟಿಸಿಕೊಂಡು, ಅವರು ಯೋಗ್ಯವಟುಗಳ ಪರಿಚಯವನ್ನು ಸಂಗ್ರಹಿಸಿ, ಅದರಲ್ಲಿಯೂ ಸರ್ವಸಮ್ಮತಿಯಿಂದ ಯೋಗ್ಯವಾದ ವ್ಯಕ್ತಿಯನ್ನೇ ಪೀಠಾಧಿಕಾರಿಯನ್ನು ಮಾಡಬೇಕು. ಹಾಗಲ್ಲದೆ ಒಂದು ಪ್ರಾಂತದ ಕೆಲಜನರೇ ತಮ್ಮ ಪ್ರವೃತ್ತಿಗೆ ತಕ್ಕಂತೆ ಆಸ್ಥಾನಕ್ಕೆ ಯಾರನ್ನಾದರೂ ನಿಯಮಿಸಿಬಿಡುವದಾಗಲೀ, ಈಗಿನ ಬೇರೆ ಪೀಠಾಧಿಕಾರಿಗಳು ಈ ವಿಷಯದಲ್ಲಿ ಎಲ್ಲ ಪ್ರಾಂತದವರ ಅಪೇಕ್ಷೆಯಿಲ್ಲದ ಅನ್ಯವಸ್ಥಿತವಾಗಿ ಹಸ್ತಕ್ಷೇಪಮಾಡಿ ಸಮಾಜದವರ ಉಪಮರ್ದಮಾಡುವದಾಗಲೀ ಒಳ್ಳೆಯದಲ್ಲ; ಹಾಗೆ ಮಾಡಿದರೂ ಹತ್ತಿದ ಬೇಗೆಯನ್ನು ಹರಿಯಿಸದೆ, ಸ್ವಾರ್ಥಪರಾಯಣತೆಯಿಂದ ಮುಂದೆ ಗುರುತ್ವಕ್ಕೂ ಲಘುತ್ವವನ್ನು ತಂದಲ್ಲಿ ಅಂಥಾ ವ್ಯಕ್ತಿಯು ನಿಜವಾಗಿಯೂ ಸಮಾಜದ ಎಲ್ಲ ಜನರಿಗೂ ಸಾಮಾನ್ಯವಾಗಿ ಮಾನ್ಯನಾಗುವದಿಲ್ಲ. ಇದನ್ನು ಪರಿಶೀಲಿಸಿಯೇ ಈಗಿನ ನಮ್ಮ ಆಚಾರ್ಯ ಜಗದ್ಗುರು ಪೀಠಾಧಿಕಾರಿಗಳೇ ಆದರೂ ಸರ್ವಪ್ರಾಂತದ ಸುಯೋಗ್ಯಭಕ್ತರನ್ನು ಕೂಡಿಸಿ, ತಾವು ಸದ್ಬುದ್ಧಿಯಿಂದ ಸಹಾಯಮಾಡಿ, ಸರ್ವಸಮ್ಮತಿಯಿಂದ ಸುಯೋಗ್ಯರಾದವರನ್ನೇ ಶ್ರೀರೇಣುಕಾಚಾರ್ಯ ಪೀಠಾಧಿಕಾರಿಗಳನ್ನು ಮಾಡಿದರಂತೂ ನಮ್ಮ ಸುದೈವವೇ. ಆದರೇನು ಇವರು ಹೀಗೆ ಮಾಡುವದುಂಟೇ? ಹೇಗಾದರೂ ಆಗಲಿ! ಈ ಸಮಯದಲ್ಲಿ ಸಮಾಜಾಭಿಮಾನಿಗಳು ಈ ಸುಯೋಗವನ್ನು ಕಳೆದುಕೊಳ್ಳದೇ ತಮ್ಮ ಕರ್ತವ್ಯದಕ್ಷತೆಯನ್ನು ತೋರಬೇಕು.

ಕ್ಷ.

೫ನೇ ಶ್ರೀಮದ್ವೀರಶೈವ ತರುಣರ ಸಮ್ಮೇಲನ ಬಾಗಲಕೋಟೆ.

ಈ ಮುಂಚೆ ಪ್ರಕಟವಾದ ಪ್ರಕಾರ ವೀರಶೈವ ತರುಣರ ೫ನೇ ಸಮ್ಮೇಲನದ ಕಾರ್ಯವು ಮೇ ೨೮ನೇ ತಾರೀಖಿನ ದಿವಸ ಇಲ್ಲಿಯ ನಿಡಗುಂದಿಯವರ ಥಿಯೇಟರದಲ್ಲಿ ಪ್ರಾರಂಭವಾಯಿತು. ಆ ದಿವಸ ಬೆಳಗಿನ ಗಾಡಿಗೆ ಈ ಸಮ್ಮೇಲನದ ಅಧ್ಯಕ್ಷರಾದ ಶ್ರೀಮಂತ ಸಿದ್ದಪ್ಪಣ್ಣ ಕಂಬಳಿ ಬಿ.ಎ.ಎಲ್.,ಎಲ್.ಬಿ.,ಎಮ್.ಎಲ್.ಸಿ. ಯವರು ಮತ್ತು ಬೆಂಗಳೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ಗದಗ ಮೊದಲಾದ ಸ್ಥಳಗಳ ಪ್ರತಿನಿಧಿಗಳು ಆಗಮಿಸಲು, ಸಮ್ಮೇಲನದ ಸತ್ಕಾರಕ ಸಂಘದವರು ಎಲ್ಲರನ್ನೂ ಮಂಗಲವಾದ್ಯದೊಡನೆ ಬರಮಾಡಿಕೊಂಡರು. ಅನಂತರ ೯ ಗಂಟೆಗೆ ಪಟ್ಟಣದ ಮುಖ್ಯ ಬೀದಿಗಳಲ್ಲಿ ಅಧ್ಯಕ್ಷರವರ ಮೆರವಣಿಗೆಯು ಅತ್ಯಂತ ವೈಭವದೊಡನೆ ಜರುಗಿತು. ತಳಿರು ತೋರಣಗಳಿಂದ ಆಯಾಯ ಬೀದಿಗಳನ್ನು ಬಹು ರಮಣೀಯವಾಗಿ ಶೃಂಗರಿಸಿದ್ದರು. ಬೆಂಗಳೂರು ವೀರಶೈವ ತರುಣರಸಂಘದ ವತಿಯಿಂದ ಪ್ರತಿನಿಧಿಗಳಾಗಿ ಬಂದಿದ್ದ ಮಿ॥ ಸಿ. ವೀರಪ್ಪನವರು ಈ ಉತ್ಸವದ ಭಾವಚಿತ್ರವನ್ನು ಮಧ್ಯಮಾರ್ಗದಲ್ಲಿ ತೆಗೆದುಕೊಂಡನಂತರ ಮೆರವಣಿಗೆಯು ಅಧ್ಯಕ್ಷರ ವಸತಿಸ್ಥಾನವಾದ ಶ್ರೀಯುತ ದಂಡಾವತಿ ಬಸವಯ್ಯನವರ ಬಂಗಲೆಗೆ ಸಾಗಿತು. ಅನಂತರ ಮಧ್ಯಾನ್ಹದ ನಾಲ್ಕು ಗಂಟೆಗೆ ಸಮ್ಮೇಲನದ ಕಾರ್ಯವು ಪ್ರಾರಂಭವಾಯಿತು. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಸಾಧಾರಣ ಒಂದು ನೂರು ವೀರಶೈವ ತರುಣ ಪ್ರತಿನಿಧಿಗಳು ಕೂಡಿದ್ದರು. ಈ ಸ್ಥಳದ ಸಕಲ ವೀರಶೈವ ಮಹಾಜನಗಳೂ ಸಭೆಗೆ ಆಗಮಿಸಿದ್ದರು. ವೀರಶೈವ ಸಮಾಜೋದ್ಧಾರದಲ್ಲಿಯೇ ನಿರತರಾಗಿರುವ ಶ್ರೀಮನ್ನಿರಂಜನ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಮತ್ತು ಶ್ರೀಮನ್ನಿರಂಜನ ಶ್ರೀಮಹಾಂತ ಶಿವಯೋಗಿಗಳವರು ದಯಮಾಡಿಸಿದ್ದರಿಂದ ಈ ಸಮ್ಮೇಲನಕ್ಕೆ ವಿಶೇಷವಾದ ಶೋಭೆಯೂ ಉತ್ಸಾಹವೂ ಉಂಟಾಗಿದ್ದವು. ಆರಂಭದಲ್ಲಿ ಇಲ್ಲಿಯ ಗವಾಯಿಗಳಾದ ವೇ॥ ಅನ್ನದಾನಯ್ಯನವರು ಸ್ವಾಗತಪರ ಪದ್ಯಗಳನ್ನು ಸುಸ್ವರದಲ್ಲಿ ಹೇಳಿದನಂತರ ಸ್ವಾಗತ ಸಂಘಾಧ್ಯಕ್ಷರಾದ ಶ್ರೀಯುತ ವೇ॥ ಮುರಿಗೆಯ್ಯನವರು ಜಂಗಿನ ಇವರು ತಮ್ಮ ಭಾಷಣವನ್ನು ಓದಿ ಹೇಳಿದರು. ಈ ಭಾಷಣದಲ್ಲಿ ವಿಜಾಪುರ ಜಿಲ್ಲೆಯು ವಿದ್ಯೆಯಲ್ಲಿ ಹಿಂದುಳಿದಿದೆಯೆಂತಲೂ, ೪ನೇ ವೀರಶೈವ ಮಹಾಸಭೆಯು ಈ ಊರಲ್ಲಿ ಜರುಗಿದನಂತರ ಸಮಾಜದಲ್ಲಿ ಜಾಗ್ರತೆಯುಂಟಾಗಿ ೪೦ ಸಹಸ್ರ ರೂಪಾಯಿಗಳವರೆಗೆ ವಿದ್ಯಾಭಿವೃದ್ಧಿಯ ಫಂಡಿಗೆ ಕೂಡಿ ಶ್ರೀ ಬಸವೇಶ್ವರ ಎ. ವಿ. ಸ್ಕೂಲ್ ಸ್ಥಾಪಿಸಲ್ಪಟ್ಟಿತೆಂತಲೂ, ಶಿವಯೋಗಮಂದಿರವು ಇದೇ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟದ್ದರಿಂದ ಧಾರ್ಮಿಕ ಜಾಗ್ರತೆಯು ಈ ಭಾಗದಲ್ಲಿ ಎಷ್ಟೋ ಮಟ್ಟಿಗೆ ನಡೆಯಲು ಅನುಕೂಲವಾಯಿತೆಂತಲೂ, ನಮ್ಮ ಸಮಾಜದ ಬೌದ್ಧಿಕ, ಧಾರ್ಮಿಕ ಮತ್ತು ಸಾಂಪತ್ತಿಕ ಉನ್ನತಿಯಾಗಬೇಕಾದರೆ, ಸಕ್ತಿ ಶಿಕ್ಷಣವು ಅವಶ್ಯಕವಾಗಿದೆಯೆಂತಲೂ, ಸ್ವದೇಶೀ ಪದಾರ್ಥಗಳನ್ನೇ ಅದರಲ್ಲಿಯೂ ಮೊದಲು ನಮ್ಮ ಸಮಾಜದವರು ಮಾಡುವ ವಸ್ತುಗಳನ್ನೇ ನಾವು ಉಪಯೋಗಿಸುವದು ಅಗತ್ಯವಾಗಿದೆಯೆಂತಲೂ, ನಮ್ಮ ಸಮಾಜದ ಹಣವು ನಮ್ಮ ಸಮಾಜದಲ್ಲಿಯೇ ಉಳಿಯುವಂತೆ ನಮ್ಮ ಮತಾಚಾರಗಳು ಏರ್ಪಟ್ಟಿರುವದರಿಂದ ನಾವು ನಮ್ಮ ಧರ್ಮದಂತೆ ನಡೆದರೆ, ನಮ್ಮ ಸಾಂಪತ್ತಿಕ ಸ್ಥಿತಿಯು ಸುಧಾರಿಸುವದರಲ್ಲಿ ಅಡ್ಡಿಯಿಲ್ಲವೆಂತಲೂ, ಸಕಲ ವೀರಶೈವ ಸ್ತ್ರೀ ಪುರುಷರು ದೀಕ್ಷಾಯುತರಾಗಿ ಆಚರಿಸಿದರೆ ಒಳಪಂಗಡಗಳು ಅಳಿದು ಹೋಗಿ, ಸಮಾಜದಲ್ಲಿ ಒಕ್ಕಟ್ಟು ಹೆಚ್ಚುತ್ತದೆಂತಲೂ ವಿವರಿಸಲ್ಪಟ್ಟಿದ್ದಿತು. ಅನಂತರ ಅಧ್ಯಕ್ಷರು ತಮ್ಮ ಸುಶ್ರಾವ್ಯವಾದ ಅತಿ ಮಹತ್ವದ ಭಾಷಣವನ್ನು ಓದಿ ಹೇಳಿದರು. "ನಮ್ಮ ಸಮಾಜದ ಸಕಲ ಸುಧಾರಣೆಗಳಿಗೆ ವಿದ್ಯೆಯೇ ಮೂಲವಾಗಿದೆ. ಇದನ್ನು ನಾವು ಎಷ್ಟು ಹೆಚ್ಚು ಪ್ರಸಾರಗೊಳಿಸುತ್ತೆವೆಯೋ ಅಷ್ಟು ನಮ್ಮ ಸಮಾಜವು ತೀವ್ರವಾಗಿ ಉನ್ನತಾವಸ್ಥೆಗೆ ಬರುತ್ತದೆ. ಅದ್ದರಿಂದ ವಿದ್ಯಾಪ್ರಸಾರದ ಕಡೆಗೆ ನಮ್ಮ ಸಮಾಜದವರು ದ್ರವ್ಯವನ್ನು ಧಾರಾಳವಾಗಿ ಸಹಾಯಮಾಡಬೇಕು. ಪುರಾಣ ಪ್ರಸಂಗಗಳಿಗೆ ದುಂದುವ್ಯಯಮಾಡದೆ ದಾನ ಪದ್ಧತಿಯನ್ನು ಕಾಲಕ್ಕೆ ತಕ್ಕಂತೆ ಬೇರೆ ಮಾಡಬೇಕಲ್ಲದೆ ಶಿವಯೋಗಮಂದಿರದಲ್ಲಿ ನಮ್ಮ ಸಮಾಜೋನ್ನತಿಗೋಸ್ಕರ ಇನ್ನೂ ಅನೇಕ ಸುಧಾರಣೆಗಳಾಗತಕ್ಕುದು ಆವಶ್ಯಕವಾಗಿದೆ. ಸರಕಾರದವರು ಸಕ್ತೀ ಶಿಕ್ಷಣವನ್ನು ಆಚರಣೆಯಲ್ಲಿ ತರಬೇಕಾದುದು ಅಗತ್ಯವು. ನಮ್ಮಲ್ಲಿ ಒಕ್ಕಟ್ಟು ಹೆಚ್ಚಬೇಕಾದರೆ ನಮ್ಮಲ್ಲಿರತಕ್ಕ ಒಳಭೇದಗಳನ್ನು ತೆಗೆದುಹಾಕಲೇಬೇಕು. ನಮ್ಮ ವೀರಶೈವಸಮಾಜದ ಸಂಪದಭಿವೃದ್ಧಿಗೆ ಸ್ವದೇಶೀ ಪದಾರ್ಥಗಳನ್ನು ಉಪಯೋಗಿಸುವದು ಮುಖ್ಯ ಸಾಧನವು. ಆದರೆ ಪರದೇಶದ ಎಲ್ಲಾ ವಸ್ತುಗಳನ್ನು ಬಹಿಷ್ಕರಿಸುವದು ಅನುಚಿತವೂ ಘಾತಕವೂ ಆದುದು. ಅಸಹಕಾರಿಗಳ ಬಲೆಗೆ ಬಿದ್ದು ನಮ್ಮ ಸಮಾಜದ ತರುಣರು ಶಾಲೆ ಕಾಲೇಜುಗಳನ್ನು ಬಿಡಬಿದ್ದುದು ಅತಿ ಸುತ್ಯವಾದುದು ಮತ್ತು ಇನ್ನು ಮೇಲಾದರೂ ನಮ್ಮ ಸಮಾಜದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ತಪ್ಪದೇ ನಡಿಸುತ್ತಿರಬೇಕು. ನಾವು ಅನ್ಯ ಸಮಾಜದವರ ಸಂಗಡ ಸಹಾನುಭೂತಿಯಿಂದ ವರ್ತಿಸುತಲೇ ನಮ್ಮ ಸಮಾಜವನ್ನು ಉನ್ನತಾವಸ್ಥೆಗೆ ತರಬೇಕಲ್ಲದೆ ಅನ್ಯ ಮತದವರಿಗೂ ಕೂಡ ನಮ್ಮ ಮತದ ದೀಕ್ಷೆಯನ್ನು ಕೊಟ್ಟು ನಮ್ಮ ಮತಪ್ರಸಾರಗೊಳಿಸುವುದು ಬಹಳ ಅವಶ್ಯಕವು" ಎಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರತಿಪಾದಿಸಿದರು. ಆ ಮೇಲೆ ಇಲ್ಲಿಯ ವಕೀಲರಾದ ಶ್ರೀಯುತ ಹಾಲಪ್ಪ ಬಿ.ಎ.,ಎಲ್ ಎಲ್.ಬಿ., ಇವರು ಶ್ರೀ ಶಾಹು ಛತ್ರಪತಿ ಮಹಾರಾಜ ಕೊಲ್ಲಾಪೂರ ಇವರ ಶೋಚನೀಯ ಮರಣವನ್ನು ಕುರಿತು ದುಃಖ ಪ್ರದರ್ಶನ ಠರಾವನ್ನು ಓದಿ ಹೇಳಲು ಯಾವತ್ತರೂ ಎದ್ದುನಿಂತು ಈ ಠರಾವನ್ನು ಪಾಸುಮಾಡಿದ ನಂತರ ಸಭೆಯು ಮುಕ್ತಾಯವಾಯಿತು. ಆ ಬಳಿಕ ಸಾಯಂಕಾಲದ ೬ ಗಂಟೆಗೆ ವಿಷಯ ನಿಯಾಮಕ ಸಂಘದವರು ಸಮ್ಮೇಲನದಲ್ಲಿ ಜರುಗತಕ್ಕ ವಿಷಯಗಳನ್ನು ಚರ್ಚಿಸಿ ನಿರ್ಧರಿಸಿದರು. ೨೯ನೆಯ ಬೆಳಗ್ಗೆ ೯ ಗಂಟೆಗೆ ಸಮ್ಮೇಲನದ ಕಾರ್ಯವು ಪ್ರಾರಂಭವಾಯಿತು. ಆ ದಿನ ಈ ಕೆಳಗಿನ ಠರಾವುಗಳು ತೀರ್ಮಾನವಾದವು.

(೧) ಶ್ರೀಮಾನ್ ಮಹಾರಾಜ ಶಾಹೂ ಛತ್ರಪತಿ ಕೊಲ್ಲಾಪೂರ ಇವರ ಆಕಸ್ಮಿಕ ಮರಣಕ್ಕಾಗಿ ಈ ಸಮ್ಮೇಲನವು ದುಃಖ ಪ್ರದರ್ಶನ ಮಾಡುತ್ತದೆ. (೨) ಪ್ರಾಥಮಿಕ ಮತ್ತು ಒತ್ತಾಯದ ಶಿಕ್ಷಣವನ್ನು ತೀವ್ರವೇ ಅನುಲಿನಲ್ಲಿ ತರಬೇಕೆಂದು ಈ ಸಮ್ಮೇಲನವು ಸರಕಾರಕ್ಕೂ ಮುನಸಿಪಾಲಿಟಿ ಹಾಗೂ ಲೋಕಲ್ ಬೋರ್ಡುಗಳಿಗೂ ಆಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತದೆ. (೩) ಬಳ್ಳಾರಿ ವೀರಶೈವ ವಿದ್ಯಾರ್ಥಿಗಳಿಗೋಸ್ಕರ ಇಪ್ಪತ್ತು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಹಾಸ್ಟೆಲನ್ನು ಕಟ್ಟಿಸಿ ಅಲ್ಲಿಯ ವೀರಶೈವ ವಿದ್ಯಾವರ್ಧಕ ಸಂಘದವರಿಗೆ ಒಪ್ಪಿಸಿದ ರಾ॥ರಾ॥ ವೀರಪ್ಪಣ್ಣ ತೊಗರಿ ಇವರಿಗೆ ಈ ವೀರಶೈವ ತರುಣ ಸಮ್ಮೇಲನವು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ. (೪) ಕರ್ನಾಟಕ ಲಿಂಗಾಯತ ವಿದ್ಯಾವರ್ಧಕ ಸಂಘ ಬೆಳಗಾವ ಇವರು ಧಾರವಾಡದಲ್ಲಿ ಹೊಸದಾಗಿ ಒಂದು ಇಂಗ್ಲೀಷ ಹಾಯ ಸ್ಕೂಲನ್ನು ಸ್ಥಾಪಿಸಿದ್ದಕ್ಕಾಗಿ ಈ ವೀರಶೈವ ತರುಣರ ಪರಿಷತ್ತು ಅವರನ್ನು ಅಭಿನಂದಿಸುತ್ತದೆ. ಮತ್ತು ಈ ಸಂಘವು ಕರ್ನಾಟಕದೊಳಗೆಲ್ಲ ವಿದ್ಯಾಪ್ರಸಾರ ಮಾಡುವ ಜವಾಬದಾರಿಯನ್ನು ತಕ್ಕೊಂಡಿದ್ದರಿಂದ ಅವರಿಗೆ ಧನಸಹಾಯವು ಅತ್ಯವಶ್ಯವಿದ್ದ ಮೂಲಕ ಶ್ರೀಗಳವರು ಮೊದಲ್ಗೊಂಡು ಎಲ್ಲರೂ ಈ ಸಂಘಕ್ಕೆ ತನು ಮನ ಧನದಿಂದ ಸಹಾಯಮಾಡಬೇಕೆಂದು ಈ ವೀರಶೈವ ತರುಣರ ಪರಿಷತ್ತು ವಿನಂತಿ ಮಾಡಿಕೊಳ್ಳುತ್ತದೆ. ಮತ್ತು ಇದರಂತೆ ಹಾಯ ಸ್ಕೂಲ ಕಾಲೇಜುಗಳಿಗೆ ಸಹಾಯ ಭೂತವಾದ ಶ್ರೀ ಮುರಘರಾಜೇಂದ್ರ ಬೋರ್ಡಿಗೆ ಸಹಾಯ ಮಾಡಬೇಕೆಂದು ಈ ಪರಿಷತ್ತು ಸೂಚಿಸುತ್ತದೆ. (೫) ಸರಕಾರಿ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣದ ವೆವಸ್ಥೆ ಇಲ್ಲದ್ದರಿಂದ ಈಗಿನ ನಮ್ಮ ಸಮಾಜದ ವತಿಯಿಂದ ಸ್ಥಾಪಿತವಾದ ಮತ್ತು ಮುಂದೆ ಸ್ಥಾಪನವಾಗುವಂಥ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣದ ಬಗ್ಗೆ ವೆವಸ್ಥೆ ಮಾಡಲಿಕ್ಕೆ ಪ್ರಯತ್ನಿಸಬೇಕೆಂದು ಈ ಸಮ್ಮೇಲನವು ಸೂಚಿಸುತ್ತದೆ. (೬) ಪ್ರಬೋಧ ಪತ್ರಿಕೆಯ ಸಾರೋದ್ಧಾರಕ್ಕೋಸ್ಕರ "ಪ್ರಬೋಧ ಪತ್ರಿಕಾ ಫಂಡ್" ಎಂಬ ಫಂಡನ್ನು ಏರ್ಪಡಿಸಿ, ಈ ಫಂಡಿಗೆ ಒಂದು ಸಾವಿರ ರೂಪಾಯಿ ಕೂಡಿದ ಕೂಡಲೆ, ಈ ಮುಂಚೆ ಹುಬ್ಬಳ್ಳಿ ಸಮ್ಮೇಲನದಲ್ಲಿ ಈ ಪತ್ರಿಕೆಯ ವೆವಸ್ಥೆಗಾಗಿ ನೇಮಕವಾದ ಕಮಿಟಿಯ ಸಹಾಯದಿಂದ ಪ್ರಕಟಿಸಲು ಉಪಕ್ರಮಿಸಬೇಕಾಗಿ ಈ ಸಮ್ಮೇಲನವು ಸೂಚಿಸುತ್ತದೆ. (೭) ನಮ್ಮ ಸಮಾಜದಲ್ಲಿ ಅಲ್ಲಲ್ಲಿಗೆ ವಾಚನಾಲಯಗಳು ಏರ್ಪಡಿಸಲ್ಪಟ್ಟಿರುವದನ್ನು ನೋಡಿ, ಈ ಸಮ್ಮೇಲನವು ಇಂಥ ಸಂಸ್ಥೆಗಳ ಚಾಲಕರನ್ನು ಅಭಿನಂದಿಸುತ್ತದೆ. ಇನ್ನು ಹೆಚ್ಚು ವಾಚನಾಲಯಗಳನ್ನು ಸ್ಥಾಪಿಸಲು ಪ್ರಯತ್ನಿಸುವಂತೆ ತರುಣರಿಗೆ ಸೂಚಿಸುತ್ತದೆ. ಎಲ್ಲ ವಾಚನಾಲಯಗಳನ್ನು ಸುವ್ಯವಸ್ಥೆಯಿಂದ ನಡಿಸುವಂತೆ ಚಾಲಕರಿಗೆ ವಿನಂತಿ ಮಾಡಿಕೊಳ್ಳುತ್ತದೆ. ವಾಚನಾಲಯಗಳ ಹೆಚ್ಚಳವಾಗಬೇಕಾದರೆ ಉತ್ತಮ ಪೋಸ್ಟಲ್ ವೆವಸ್ಥೆ ಇರಬೇಕಾದ್ದರಿಂದ, ಸರಕಾರಕ್ಕೆ ಈ ಸಮ್ಮೇಲನವು ಹೆಚ್ಚು ಬ್ರಾಂಚ ಆಫೀಸುಗಳನ್ನು ಏರ್ಪಡಿಸುವದಕ್ಕೆ ತಿಳಿಸುತ್ತದೆ. (೮) ಈ ಸಮ್ಮೇಲನದವರು ಬ್ರಿಟಿಷ ಸಾರ್ವಭೌಮರಿಗೆ ತಮ್ಮ ರಾಜನಿಷ್ಠೆಯನ್ನು ವ್ಯಕ್ತಪಡಿಸುತ್ತಾರೆ. (೯) ನಮ್ಮ ಸಮಾಜದ ಸಾಂಪತ್ತಿಕ ಸ್ಥಿತಿಯು ಸುಧಾರಿಸುವ ಕುರಿತು ಪ್ರತಿಯೊಬ್ಬ ವೀರಶೈವನು ಸ್ವದೇಶೀ ಪದಾರ್ಥಗಳನ್ನೇ ಅದರಲ್ಲಿಯೂ ನಮ್ಮ ಸಮಾಜದವರಿಂದಲೇ ತಯಾರಾದ ವಸ್ತುಗಳನ್ನೇ ಉಪಯೋಗಿಸಬೇಕೆಂದು ಈ ಸಮ್ಮೇಲನವು ಸೂಚಿಸುತ್ತದೆ.

ಕೋರ್ಟಿನಲ್ಲಿ ವಿವಾದವನ್ನು ಹೂಡಿದ್ದರು. ಈ ವಿವಾದವು ಕೆಲ ಕಾಲದಿಂದಲೂ ನಡಿಯುತ್ತಿದ್ದು ಕಳೆದ ತಾ|| ೨೧ರಲ್ಲಿ ಮ್ಯಾಜಿಸ್ಟ್ರೇಟರಾದ ಮ|| ನಾನಾಸ್ವಾಮಿರಾಯರಿಂದ ಇತ್ಯರ್ಥಗೊಳಿಸಲ್ಪಟ್ಟು ಮೊದಲನೆಯ ತಪ್ಪಿತಕ್ಕಾಗಿ ೨ ತಿಂಗಳ ಸಾಧಾರಣ ಕಾರಾಗೃಹವಾಸದ ಶಿಕ್ಷೆಯೂ, ೪೦೦ ರೂ. ದಂಡವೂ ಇದನ್ನು ಕೊಡದೆಹೋದಲ್ಲಿ ಮತ್ತೆರಡು ತಿಂಗಳು ಸಾಧಾರಣ ಶಿಕ್ಷೆಯೂ, ಎರಡನೆಯ ತಪ್ಪಿತಕ್ಕಾಗಿ ೪೦೦ ರೂ. ದಂಡವು ಅಥವಾ ಅದನ್ನು ಕೊಡದೆ ತಪ್ಪಿದಲ್ಲಿ ೨ ತಿಂಗಳ ಸಾಧಾರಣ ಕಾರಾಗೃಹವಾಸದ ಶಿಕ್ಷೆಯೂ ವಿಧಿಸಲ್ಪಟ್ಟುವು ಎಂದು ತಿಳುಹಲು ವಿಷಾದವಾಗುತ್ತದೆ. ಮ್ಯಾಜಿಸ್ಟ್ರೇಟರು ಈ ತೀರ್ಪನ್ನು ಹೇಳುವಲ್ಲಿ, ವರ್ತಮಾನಪತ್ರಿಕೆಗಳ ಸಂಪಾದಕರು ಜನರ ಪ್ರೀತಿ ಗೌರವಕ್ಕೆ ಬಾಧ್ಯರಾಗಿರುತ್ತಾರೆ. ಮತ್ತು ಪ್ರಜೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಖಂಡಿಸುವುದರಲ್ಲೂ ಪ್ರಭುತ್ವದವರ ಹಾಗೂ ಅವರ ಪ್ರಜೆಗಳ ಕಾರ್ಯಗಳಲ್ಲಿ ನೆರವಾಗುವುದರ ಮೂಲಕ ದೇಶಕ್ಕುಪಕಾರಮಾಡುವುದರಲ್ಲೂ ಅವರಿಗಿರುವಷ್ಟು ಸ್ವಾತಂತ್ರ್ಯಾಧಿಕಾರವು ಇತರರಾರಿಗೂ ಇಲ್ಲ. ಆದರೂ ಇವರು ತಮ್ಮ ಸ್ವಾತಂತ್ರ್ಯಾಧಿಕಾರವನ್ನು ವಿನಿಯೋಗಿಸುವುದರಲ್ಲಿ ಪ್ರತಿಯೊಬ್ಬ ಮನುಷ್ಯನಿಗಿರತಕ್ಕ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ಅಲಕ್ಷಿಸಬಾರದು ಎಂದು ನೊದಲಾಗಿ ತಿಳಿಸಿರುವರು.

ಭರತಖಂಡದ ವೃತ್ತಾಂತಗಳು.

ಮದ್ರಾಸಿನ ಕಲೋಲ್ಲಾಸಿನಿ ಸಭೆಯವರು ಮ|| ಚೆಲ್ಲಾ ಗುರುಸ್ವಾಮಿಸೆಟ್ಟರಿಗೆ ದಿವಾನ್ ಬಹದ್ದೂರ್ ಪ್ರಶಸ್ತಿಯು ಲಭ್ಯವಾದುದರ ಗೌರವಾರ್ಥವಾಗಿ ಕಳೆದ ತಾ|| ೧೭ ರಲ್ಲಿ ಒಂದು ಆನಂದೋತ್ಸವವನ್ನು ನಡಿಸಿದರು.

ಅಲಹಾಬಾದಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪಂಡಿತ ಮೋತಿಲಾಲ್ ನೆಹರುಯವರಿಗೆ, ನೀವು ಅಸಹಕಾರ ಕೃತ್ಯದಲ್ಲಿ ತೊಡಗಿರುವುದರಿಂದ ನಿಮಗೆ ಕೊಟ್ಟಿದ್ದ ಆಯುಧದ ಲೈಸೆನ್ಸು ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟಿರುವುದರಿಂದ ನಿಮ್ಮ ವಶದಲ್ಲಿರುವ ಆಯುಧಗಳನ್ನೆಲ್ಲಾ ಸರ್ಕಾರಕ್ಕೊಪ್ಪಿಸಬೇಕೆಂದು ನೋಟೀಸನ್ನು ಕೊಟ್ಟಿರುತ್ತಾರೆ.

ಭೂವ್ಯವಸಾಯ ಕೆಲಸಗಳಿಗೆ ನವೀನ ಯಂತ್ರೋಪಕರಣಗಳನ್ನುಪಯೋಗಿಸುವುದರಿಂದ ವಿಶೇಷ ಲಾಭವಾಗುತ್ತದೆಂಬುದನ್ನು ರೈತರಲ್ಲಿ ಪ್ರಸಾರಪಡಿಸುವುದಕ್ಕಾಗಿ ಬೊಂಬಾಯಿಯ ಪ್ರಭುತ್ವದವರು ಪ್ರತಿ ತಾಲ್ಲೂಕಿನಲ್ಲೂ ಒಂದು ಪ್ರಸಾರಕ ಸಂಘವನ್ನೇರ್ಪಡಿಸಬೇಕೆಂದೂ, ಸರ್ಕಾರಿಯ ವ್ಯವಸಾಯ ಪರೀಕ್ಷಾಲಯಗಳಲ್ಲಿ ಈ ನೂತನ ಯಂತ್ರೋಪಕರಣಗಳಿಂದ ವ್ಯವಸಾಯವನ್ನು ಮಾಡಿ ತೋರಿಸಬೇಕೆಂದೂ ತೀರ್ಮಾನಿಸಿರುವರು.

ಬೊಂಬಾಯಿ ಪ್ರಾಂತದಲ್ಲಿ ಸಣ್ಣ ಪುಟ್ಟ ಕೈಗಾರಿಕೆಗಳನ್ನಭಿವೃದ್ಧಿಗೊಳಿಸುವುದಕ್ಕಾಗಿ ಔಷಧ ಸಾಮಗ್ರಿಗಳು, ಸಾಬೂನು, ವಾಸನಾದ್ರವ್ಯ ಮೊದಲಾದವುಗಳನ್ನು ತಯಾರಿಸುವುದಕ್ಕೋಸ್ಕರ ಪರದೇಶಗಳಿಂದ ಬರಬೇಕಾದ ಪದಾರ್ಥಗಳ ಮೇಲಿನ ಸುಂಕವನ್ನು ತಗ್ಗಿಸಬೇಕೆಂದು ಬೊಂಬಾಯಿ ರಾಷ್ಟ್ರೀಯ ಪ್ರಭುತ್ವದವರು ತೀರ್ಮಾನಿಸಿರುವರು. ಪ್ರಕೃತದಲ್ಲಿ ಗ್ಯಾಲನ್ 1ಕ್ಕೆ 21-14-0 ಸುಂಕವು ವಿಧಿಸಲ್ಪಡುತ್ತಿರುವುದು; ಇನ್ನು ಮುಂದೆ ಗ್ಯಾಲನ್ 1ಕ್ಕೆ 5 ರೂಪಾಯಿಸಂತೆ ವಿಧಿಸಲ್ಪಡುವುದು.

ಯಂಗ್ ಇಂಡ್ಯಾ ಪತ್ರಿಕೆಯ ಸಂಪಾದಕರಾದ ಷಾಯಿಬ್ ಕುರೇಷಿಯವರೂ, ಪ್ರಕಾಶಕರಾದ ವಾಲ್ಜಿ ದೇಸಾಯರೂ, ಮುದ್ರಾಪಕರಾದ ಭಾರ್ಗಸಲೀಯವರೂ, ನವಜೀವನ ಮುದ್ರಾಲಯದ ಅಧಿಪತಿಯಾದ ಸ್ವಾಮಿ ಆನಂದಾನಂದರೂ 124 (ಎ) ಸೆಕ್ಷನ್ನಿನ ಪ್ರಕಾರ ಸೆರೆಹಿಡಿಯಲ್ಪಟ್ಟಿದ್ದು ರಾಜದ್ರೋಹಾಪರಾಧವು ಹೊರಿಸಲ್ಪಟ್ಟು 1 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯೂ 6000 ರೂ. ಅರ್ಥದಂಡವೂ ಅದನ್ನು ಕೊಡಲು ತಪ್ಪಿದಲ್ಲಿ ೬ ತಿಂಗಳ ಕಾರಾಗೃಹವಾಸ ಶಿಕ್ಷೆಯೂ ವಿಧಿಸಲ್ಪಟ್ಟರು.

ಮದ್ರಾಸಾಧಿಪತ್ಯದಲ್ಲಿರತಕ್ಕ ಎಲ್ಲಾ ಸಿವಿಲ್ ಕೋರ್ಟುಗಳಲ್ಲೂ ಒಟ್ಟು 1,00,000 ವಿವಾದಗಳು ಇತ್ಯರ್ಥವಾಗದೆ ಬಾಕಿಯಲ್ಲಿರುವುದರಿಂದ ಸರ್ಕಾರದವರಿಗೆ ಕುತೂಹಲವುಂಟಾಗಿರುವುದಾಗಿಯೂ ಇದರ ಕಾರಣವನ್ನೂ ಪರಿಹಾರೋಪಾಯವನ್ನೂ ಕಂಡುಹಿಡಿಯಲು ಮದ್ರಾಸಿನ ಚೀಫ್ ಕೋರ್ಟು ಚೀಫ್ ಜಡ್ಜಿಯರ ಸಮ್ಮತಿಯಿಂದ ಒಂದು ಕಮಿಟಿಯು ಏರ್ಪಡಿಸಲ್ಪಡುವುದಾಗಿಯೂ ತಿಳಿಯಬಂದಿದೆ. ಇಂತಹ ದೊಡ್ಡ ಅಧಿಪತ್ಯದಲ್ಲಿ 1 ಲಕ್ಷ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿರುವುದು ಆಶ್ಚರ್ಯವಲ್ಲದಿದ್ದಾಗ್ಯೂ ಸರ್ಕಾರದವರು ಅಷ್ಟಕ್ಕೇ ಕಳವಳಗೊಂಡು ಅದರ ಪರಿಹಾರೋಪಾಯಕ್ಕೆ ಪ್ರಯತ್ನಿಸಿರುವಾಗ್ಗೆ ಆ ಅಧಿಪತ್ಯದ 1-2 ಡಿಸ್ಟ್ರಿಕ್ಟುಗಳಿಗೆ ಸಮಾನವಾಗುವ ನಮ್ಮ ಮೈಸೂರು ಸೀಮೆಯಲ್ಲಿ ಅದರ ಯೋಗ್ಯತೆಗೆ ಮೀರಿ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿದ್ದರೂ ನಮ್ಮ ಸರ್ಕಾರದವರು ಅದರ ಕಾರಣವನ್ನು ಕಂಡುಹಿಡಿದು ನಿವಾರಣೆ ಮಾಡಲು ಯಾವ ಪ್ರಯತ್ನವನ್ನೂ ನಡೆಯಿಸದೆ ಇರುವುದು ಸಖೇದಾಶ್ಚರ್ಯವಾಗಿದೆ.

ಧಾರವಾಡ ಡಿ|| ಗದಗ ತಾ|| ಹುಲಕೋಟಿ ಗ್ರಾಮದಲ್ಲಿ ಬೊಂಬಾಯಿ ಪ್ರಾಂತಿಕ ರಡ್ಡಿ ಮಹಾಸಭೆಯು ಕಳೆದ ತಾ|| ೧೭ ಮತ್ತು ೧೮ರಲ್ಲಿ ನಡೆದಿತು. ಬೊಂಬಾಯಿ ಮದ್ರಾಸು ಅಧಿಪತ್ಯಗಳಿಂದಲೂ ಮೈಸೂರು ಮತ್ತು ನೈಜಾಂ ಸಂಸ್ಥಾನಗಳಿಂದಲೂ ಬಹಳ ಜನ ಪ್ರತಿನಿಧಿಗಳೂ, ಪ್ರೇಕ್ಷಕರೂ ಬಂದಿದ್ದರು. ಮ|| ಕೆ. ಎಚ್. ರಾಮಯ್ಯ, ಬಿ. ಎ., ಬಾರ್-ಆಟ್-ಲಾಯವರು ಸಭಾಧ್ಯಕ್ಷತೆಯನ್ನು ವಹಿಸಿ ರಡ್ಡಿ ಜನರು ಪೂರ್ವದಿಂದಲೂ ನಡೆದುಬಂದ ದುಷ್ಟಪದ್ಧತಿಯನ್ನು ಬಿಟ್ಟು ತಮ್ಮ ಜನಾಂಗದ ಪೂರ್ಣೋಭಿವೃದ್ಧಿಗೆ ಸಾಧಕವಾದ ವಿದ್ಯಾಭಿವೃದ್ಧಿಗೆ ಪ್ರತಿಯೊಬ್ಬನೂ ತನು ಮನ ಧನವನ್ನು ಅರ್ಪಿಸಿ ಸೇವೆಮಾಡಬೇಕೆಂದೂ ಪುರುಷರಂತೆ ಸ್ತ್ರೀಯರೂ ವಿದ್ಯಾವತಿಯರಾಗುವುದು ಅತ್ಯಾವಶ್ಯಕವೆಂದೂ, ಸ್ವಜನಾಭಿವೃದ್ಧಿಕಾರ್ಯದಲ್ಲಿ ಪರರ ಏಳಿಗೆಯನ್ನು ಮತ್ಸರಿಸದೆ ಅವರ ಅನುಕರಣವನ್ನು ಮಾಡಬೇಕೆಂದೂ, ಮೈಸೂರು ಸೀಮೆಯಲ್ಲಿರುವ ೧೫ ಲಕ್ಷ ಒಕ್ಕಲಿಗರ ಏಳಿಗೆಗಾಗಿ ಒಕ್ಕಲಿಗರ ಸಂಘವು ಏರ್ಪಟ್ಟು ಸ್ವಜನರ ವಿದ್ಯಾಭಿವೃದ್ಧಿಗಾಗಿ ಪಾಟುಪಡುತ್ತಿರುವುದೆಂದೂ, ಕೈ|| ಸಿರಸಂಗಿ ದೇಸಾಯರು ತಮ್ಮ ಆಸ್ತಿಯೆಲ್ಲವನ್ನೂ ಲಿಂಗಾಯತರ ವಿದ್ಯಾಭಿವೃದ್ಧಿಗಾಗಿ ಧಾರೆಯೆರೆದು ಕೊಟ್ಟಿರುವಂತೆ ರಡ್ಡಿ ಜನರಲ್ಲಿ ಪುತ್ರಸಂತಾನವಿಲ್ಲದವರು ತಮ್ಮ ಜನರ ವಿದ್ಯಾಭಿವೃದ್ಧಿಗಾಗಿ ಅರ್ಪಿಸಿ ದೇಹಸಾರ್ಥಕಮಾಡಿಕೊಳ್ಳಬೇಕೆಂದೂ ನೊದಲಾಗಿ ಬೋಧಪರವಾದ ಭಾಷಣವನ್ನು ಆವೇಶಪೂರಿತವಾಗಿಯೂ, ಗಂಭೀರವಾಗಿಯೂ ಮಾಡಿದರು. ತಾ|| ೧೮ರಲ್ಲಿ ನಡೆದ ಸ್ತ್ರೀ ಸಭೆಯಲ್ಲಿ ಮ|| ಕೆ ಎಚ್. ರಾಮಯ್ಯನವರ ಧರ್ಮಪತ್ನಿಯಾದ ಸೌ|| ರೇವಮ್ಮನವರು ಅಧ್ಯಕ್ಷತೆಯನ್ನು ವಹಿಸಿ ಸ್ತ್ರೀಯರ ಕರ್ತವ್ಯ, ಸ್ತ್ರೀ ವಿದ್ಯಾಭ್ಯಾಸದಾವಶ್ಯಕತೆ ಮೊದಲಾದ ಉಪಯುಕ್ತ ವಿಷಯಗಳ ಮೇಲೆ ಶ್ಲಾಘ್ಯವಾಗಿಯೂ ಪರಿಣಾಮಕಾರಕವಾಗಿಯೂ ಭಾಷಣವನ್ನು ಮಾಡಿ ನೆರೆದಿದ್ದ ನಾರೀಮಣಿಯರೆಲ್ಲರನ್ನೂ ವಿಸ್ಮಯಗೊಳಿಸಿದರು.

ವೀರಾಪುರಕ್ಕೆ ಸಮೀಪವಾಗಿರುವ ಚೆಲಗುರ್ಕಿ ಗ್ರಾಮದಲ್ಲಿ ಒಂದು ಶತಮಾನಕ್ಕೆ ಮೇಲ್ಪಟ್ಟ ವಯಸ್ಸಿನ ವೇರಸ್ವಾಮಿ ಎಂಬ ಒಬ್ಬ ವೃದ್ಧರು ಈಗ್ಗೆ ೩ ವಾರಗಳ ಹಿಂದೆ ಮೃತರಾದರು. ಈ ಸ್ವಾಮಿಯವರು ಈಗ್ಗೆ ೩೦ ವರ್ಷಗಳ ಕೆಳಗೆ ಚೆಲಗುರ್ಕಿ ಗ್ರಾಮದ ಒಂದು ಮಳಲು ಪ್ರದೇಶದಲ್ಲಿ ಕುತ್ತಿಗೆಯವರೆಗೂ ಹೂಳಲ್ಪಟ್ಟಿದ್ದುದನ್ನು ಗ್ರಾಮಸ್ಥರು ಕಂಡು ಅವರನ್ನು ಅಲ್ಲಿಂದ ಮೇಲಕ್ಕೆತ್ತಿ ಗ್ರಾಮದೊಳಗೆ ಕರೆದುಕೊಂಡು ಬಂದರು. ಇವರು ಮಿತಭಾಷಿಗಳಾಗಿದ್ದುಕೊಂಡು ಯಾರು ಎಷ್ಟು ವಿಧವಾಗಿ ಕೇಳಿದರೂ ತಮ್ಮ ಜನ್ಮಸ್ಥಲ, ಜಾತಿ ಹೆಸರು ಕುಲಗಳಾವುದನ್ನೂ ಹೇಳುತ್ತಿರಲಿಲ್ಲವು. ಗ್ರಾಮಸ್ಥರು ಮುಖ್ಯವಾಗಿ ಲಿಂಗಾಯತರು ಈ ಸ್ವಾಮಿಯವರು ಕೈಲಾಸದಿಂದ ಬಂದ ದೇವರ ಅಪರಾವತಾರರೆಂದು ನಂಬಿಕೊಂಡು ವಿಶೇಷ ಮರ್ಯಾದೆಯಿಂದ ಪೂಜಿಸತೊಡಗಿದರು. ಮತ್ತು ಅವರ ವಾಸಕ್ಕೆ ಒಂದು ಮಠವನ್ನು ಕಟ್ಟಿಸಿಕೊಟ್ಟು ಉದಾರವಾಗಿ ಪುದುವಟ್ಟನ್ನು ಹಾಕಿಕೊಟ್ಟರು. ಕೆಲ ಕಾಲಾನಂತರ ಲಿಂಗಾಯತರು ಈ ಸ್ವಾಮಿಗೆ ಲಿಂಗಾಧಾರಣೆಯನ್ನು ಮಾಡಲು ಪ್ರಯತ್ನಿಸಿದಾಗ ಅವರು ತಿರಸ್ಕರಿಸಿಬಿಟ್ಟರು. ಇವರ ವಿಪರೀತವಾದ ಮೌನವೃತ್ತಿಯು, ಜಾತಿ ಕುಲ ಗೋತ್ರ ತಾರತಮ್ಯವಿಲ್ಲದೆ ಎಲ್ಲರ ಕೈಯಿಂದಲೂ ಅನ್ನವನ್ನು ಸ್ವೀಕರಿಸುವುದು ಮತ್ತು ಇತರ ವಿಲಕ್ಷಣಸ್ವಭಾವ ಇವುಗಳಿಂದ ವೇರಿ ಅಂದರೆ ಬುದ್ಧಿವಿಕಲ್ಪರು ಎಂದು ಜನರು ತಿಳಿದುಕೊಂಡು ವೇರಿಸ್ವಾಮಿಯೆಂದು ಕರೆಯಲುಪಕ್ರಮಿಸಿದರು. ಇವರು ಭವಿಷ್ಯವನ್ನು ಹೇಳುತ್ತಾರೆ ಮತ್ತು ಅದ್ಭುತಕಾರ್ಯಗಳನ್ನು ಮಾಡುತ್ತಾರೆಂದು ಎಲ್ಲ ಕಡೆಗೂ ಪ್ರಖ್ಯಾತವಾಗಿ ಧಾರವಾಡ, ಮೈಸೂರು ಮೊದಲಾದ ದೂರದೇಶಗಳಿಂದ ಜನರು ಈ ಮಹಾತ್ಮರ ದರ್ಶನಕ್ಕೆ ಬರುತ್ತಿದ್ದರು. ಈ ಸ್ವಾಮಿಯವರ ಮೃತವಾರ್ತೆಯನ್ನು ಜನರು ಕೇಳಿ ಸುಮಾರು 5,000 ಕ್ಕೆ ಮೇಲ್ಪಟ್ಟು ಕಡೆಯ ದರ್ಶನಕ್ಕಾಗಿ ಬಂದು ಸೇರಿದ್ದರು. ಸ್ವಾಮಿಯ ಕಳೇಬರವು ಮಠದೊಳಗೆ ಸಿದ್ಧಗೊಳಿಸಲ್ಪಟ್ಟಿದ್ದ ಸಮಾಧಿಯೊಳಗೆ ನಿಲ್ಲಿಸಲ್ಪಟ್ಟು ಕೊರಳಿನವರೆಗೂ ವಿಭೂತಿರಾಶಿಯಿಂದ ಮುಚ್ಚಲ್ಪಟ್ಟಿದ್ದಿತು. ಜನಸಂದಣಿಯು ವಿಪರೀತವಾಗಿದ್ದುದರಿಂದ ಕೆಲವರು ಮೂರು ದಿನಗಳವರೆಗೆ ಕಾದುಕೊಂಡಿದ್ದರೂ ಅಲ್ಪಸ್ವಲ್ಪವಾಗಿ ಮುಖದರ್ಶನ ಮಾಡಲು ಮಹಾಪ್ರಯಾಸಪಡಬೇಕಾಗಿದ್ದಿತು. ಭಕ್ತಜನರು ಈಗಲೂ ಅವರ ಸಮಾಧಿಯಬಳಿಗೆ ಬಂದು ಪೂಜೆಯನ್ನು ಮಾಡಿಸಿಕೊಂಡು ಹೋಗುತ್ತಿರುವರಂತೆ.

ವಿದೇಶದ ವೃತ್ತಾಂತಗಳು

ಪೂರ್ವಾತ್ಯ ದೇಶಗಳ ಪರ್ಯಟನವನ್ನು ಪೂರೈಸಿಕೊಂಡು ಸ್ವದೇಶಕ್ಕೆ ಹಿಂದಿರುಗಿಬಂದ ವೇಲ್ಸ್ ಯುವರಾಜರವರ ಸ್ವಾಗತಕ್ಕಾಗಿ ಸಾರ್ವಭೌಮ ದಂಪತಿಗಳು ವಿಂಡ್ಸರಿನಿಂದ ಲಂಡನ್ ಪಟ್ಟಣಕ್ಕೆ ದಯಮಾಡಿಸಿದ್ದರು. ಈವರೆಗೆ ಯಾರಿಗೂ ನಡೆಯದಿದ್ದಂತಹ ಸ್ವಾಗತಸಮಾರಂಭವನ್ನು ಜರುಗಿಸುವುದಕ್ಕಾಗಿ ಲಂಡನ್ ನಗರವಾಸಿಗಳೂ ಅಧಿಕಾರಿಗಳೂ ಒಬ್ಬರನ್ನೊಬ್ಬರು ಮೀರಿಸುವವರಾಗಿದ್ದರು. ಆಗಮನದ ದಿವಸವೇ ಅವರ ಜನ್ಮದಿನೋತ್ಸವವೂ ನಡಿಸಲ್ಪಡಲು ಅಗಾಧವಾದೇರ್ಪಾಟು ನಡೆದಿದ್ದಿತು.

ರಷ್ಯಾರಾಜ್ಯದಲ್ಲಿ ಬೋಲ್ಷೆವಿಕ್ಕರಿಂದ 1917 ನೆಯ ನವಂಬರಾರಭ್ಯ ಈವರೆಗೆ 28 ಬಿಷಪ್ಪುಗಳೂ, 1,215 ಪಾದ್ರಿಗಳೂ, ಕೊಲ್ಲಲ್ಪಟ್ಟಿರುವರಲ್ಲದೆ, 6,775 ಸ್ಕೂಲ್ಮಾಸ್ಟರುಗಳು, 8,800 ವೈದ್ಯರು, 54,650 ಅಧಿಕಾರಿಗಳು, 2,60,000 ಸ್ವತಂತ್ರಜನರು, 10,500 ಪೋಲೀಸು ಅಧಿಕಾರಿಗಳು, 48,500 ಪೋಲೀಸು ಸೋಲ್ಜರುಗಳು 12,950 ಜಮೀನುದಾರರು, 3,55,250 ಲಾಯರು ಮೊದಲಾದ ಮೇಧಾವಿಗಳು, 1,92,350 ಕೂಲಿಕಾರರು ಮತ್ತು 8,15,100 ಬೇಸಾಯಗಾರರು ಒಟ್ಟು 17,66,118 ಜನರು ಕೊಲ್ಲಲ್ಪಟ್ಟಿರುತ್ತಾರೆ.

ಒಂದು ದಿನಕ್ಕೆ 10,00,000 ಮೈಲಿ ಪ್ರಕಾರ ಭೂಮಿಯ ಕಡೆಗೆ ಸಂಚರಿಸುತ್ತಿರುವ ಅಂಗಾರಕ ಗ್ರಹಸಂಬಂಧವಾಗಿ ಜ್ಯೋತಿಷ್ಕರು ಪರಿಶೋಧನೆಯನ್ನು ನಡಿಸಿರುವರು. ಜೂನ್ ತಾ|| 18 ರ ಮಧ್ಯರಾತ್ರಿಯಲ್ಲಿ ನಮಗೆ ಸಮೀಪಗತವಾಗಿ ಅಂದರೆ 441 ಲಕ್ಷ ಮೈಲಿ ದೂರದಲ್ಲಿರುವುದು. ಅಂಗಾರಕ ಗ್ರಹವು ಅದರ ಕೆಂಪುಬಣ್ಣದಿಂದ ಗುರ್ತಿಸಲ್ಪಡತಕ್ಕುದಾಗಿದೆ. ಈ ಅಂಗಾರಕ ಗ್ರಹವು ಸಜೀವವಾದುದೊ ಅಲ್ಲವೊ ಎಂಬುದನ್ನು ಉತ್ತರ ಅಮೇರಿಕಾದಲ್ಲಿರುವ ಅನೇಕ ಜೋತಿಷಶಾಲೆಗಳಲ್ಲಿ ಪರೀಕ್ಷಿಸಲು ಪ್ರಯತ್ನನಡಿಸಲ್ಪಟ್ಟಿರುವುದು. ಇದರಂತೆ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಕೆನರಿದ್ವೀಪಗಳಲ್ಲೂ ಪರೀಕ್ಷಿಸಲ್ಪಡುವುದು. 1924 ನೆಯ ಆಗಸ್ಟ್ ತಾ|| 22ರಲ್ಲಿ ನಮ್ಮ ಭೂಮಂಡಲಕ್ಕೆ 357 ಲಕ್ಷ ಮೈಲಿ ಸಮೀಪಗತವಾಗಿರುವುದು.

ಬ್ರೈಟನ್ ದೇಶಸ್ಥನಾದ ಜಾನ್ ಟ್ಯಾನರ್ ಎಂಬಾತನು ಅತ್ಯಂತುದ್ದವಾದ ಗಡ್ಡವನ್ನುಳ್ಳವನಾಗಿದ್ದಾನೆ. ಈ ಗಡ್ಡದ ಉದ್ದವು ಗದ್ದದಿಂದ ತುದಿಯವರೆಗೆ 9 ಅಡಿಯಿದೆ. 84 ವರ್ಷ ವಯಸ್ಕನಾದ ಈತನು ಕಳೆದ 50 ವರ್ಷಗಳಿಂದಲೂ ಪ್ರಪಂಚದಲ್ಲಿ ಉದ್ದವಾಗಿ ಗಡ್ಡವನ್ನು ಬೆಳೆಸಿರತಕ್ಕವರೆಲ್ಲರಿಗಿಂತಲೂ ತಾನು ಉದ್ದವಾದ ಗಡ್ಡವನ್ನುಳ್ಳವನೆಂದೆನಿಸಿಕೊಳ್ಳಬೇಕೆಂಬ ಆಶೆಯುಳ್ಳವನಾಗಿದ್ದಾನೆ. ಎಪ್ಪೋ ಸರ್ಕಸ್ ಕಂಪೆನಿಯವರು ಅಭೂತಪೂರ್ವವಾದ ಗಡ್ಡವನ್ನು ಪ್ರದರ್ಶಿಸಲು ಬೇಕಾದಷ್ಟು ದ್ರವ್ಯವನ್ನು ಕೊಡುತ್ತೇವೆಂದರೂ ಒಪ್ಪದಿರುತ್ತಾನೆ. ತನ್ನ ಗಡ್ಡವನ್ನು ಪ್ರದರ್ಶಿಸಿ ದುಡ್ಡನ್ನು ಸಂಪಾದಿಸಬೇಕೆಂಬುದು ಇವನಿಗಿಷ್ಟವಾಗಿಲ್ಲವು, ಮತ್ತು ಮನೆಯೊಳಗಿರುವ ಬೆಂಕಿ ಮೊದಲಾದವುಗಳಿಂದ ಅಪಾಯಸಂಭವಿಸದಿರಲು ನೇತಾಡುವ ಗಡ್ಡವನ್ನು ಯಾವಾಗಲೂ ತನ್ನ ಶರಾಯಿನೊಳಗಡೆ ಹುದುಗಿಸಿಕೊಂಡಿರುವನು. ಈತನು ತನ್ನ 100 ನೆಯ ವರ್ಷದ ವರ್ಧಂತಿಯ ಕಾಲದಲ್ಲಿ ಈ ಗಡ್ಡವನ್ನು ಬೋಳಿಸಿಬಿಡಬೇಕೆಂದೂ ಅಷ್ಟರೊಳಗೆ ಸಂಪೂರ್ಣವಾಗಿ 12 ಅಡಿ ಉದ್ದ ಬೆಳೆಸಿರಬೇಕೆಂದೂ ಕುತೂಹಲವಿಷ್ಟನಾಗಿರುತ್ತಾನೆ. ದೇವರು ಇವನ ಇಷ್ಟಾಪೂರ್ತಿಯನ್ನು ಮಾಡಲಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ.

1. ಕ್ಯಾಪ್ಟನ್ ವೈ. ವಿಶ್ವನಾಥಯ್ಯನವರು, ಯುವಸಾರ್ವಭೌಮರವರು (ಪ್ರಿನ್ಸ್ ಆಫ್ ವೇಲ್ಸ್‌ರವರು) ಮೈಸೂರುದೇಶಕ್ಕೆ ದಯಮಾಡಿದುದರ ಜ್ಞಾಪನಾರ್ಥವಾಗಿ ಐದು ಸಹಸ್ರ ರೂಪಾಯಿಗಳನ್ನು ಮೇಲ್ಕಂಡ ಫಂಡಿನ ಮೂಲಧನಕ್ಕೆ ಕೊಟ್ಟು, ಸದರಿ ಮೊಬಲಿಗಿನ ವೃದ್ಧ್ಯಂಶವನ್ನು ವೈದ್ಯ ವಿದ್ಯಾಭ್ಯಾಸ ಮಾಡಲಿಚ್ಛಿಸುವ ಮೈಸೂರುದೇಶದ ವೀರಶೈವ ವಿದ್ಯಾರ್ಥಿ ಅಥವ ವಿದ್ಯಾರ್ಥಿನಿಗೆ ಕೊಡುವಂತೆ ಉದ್ದೇಶಿಸಿರುತ್ತಾರೆ.

2. ಧರ್ಮಕರ್ತರ ಉದ್ದೇಶದಂತೆ ಇದೇ ಜೂನ್ ಲಾಗಾಯ್ತು ಮಾಹೆಯಾನ 25 ರೂ.ನಂತೆ ವೇತನವನ್ನು ಮದ್ರಾಸು ಅಥವಾ ಬೊಂಬಾಯಿ ಸರ್ಕಾರದ ಮೆಡಿಕಲ್ ಕಾಲೇಜಿನಲ್ಲಿ ಓದಲಪೇಕ್ಷಿಸುವ ಮೈಸೂರು ದೇಶದ ವೀರಶೈವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡಲು ನಿಶ್ಚಯಿಸಲ್ಪಟ್ಟಿದೆ. ಸಹಾಯವನ್ನು ಹೊಂದಲಪೇಕ್ಷಿಸುವವರು ಕೂಡಲೆ ಫಂಡಿನ ಸೆಕ್ರೆಟರಿಯವರಿಗೆ ಬರೆದುಕೊಳ್ಳತಕ್ಕದ್ದು.

ಬೆಂಗಳೂರು.
ತಾ|| 15-6-22

ಜಿ. ಪರಮಶಿವಯ್ಯ ಬಿ.ಎ., ಎಲ್‌ಎಲ್.,ಬಿ.
ಅಡ್ವೋಕೇಟ್ ಮತ್ತು ಸೆಕ್ರೆಟರಿ ಮೈಸೂರು ವೀರಶೈವ
ವಿದ್ಯಾಭಿವೃದ್ಧಿ ಫಂಡುಸಂಘ, ಬೆಂಗಳೂರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಬೇಕು.

ತರುಣರಲ್ಲಿ ಜಾಗ್ರತೆ.

ತಾ|| ೯-೬-೨೨ ರ ದಿವಸ ವಿಜಾಪುರದ ಬಸವವಿಜಯ ಸಂಸ್ಥೆಯವರಿಂದ ಸರದಾರಹಾಲಿನಲ್ಲಿ ಶ್ರೀಯುತ ಆಲಮೇಲ ದೇಶಮುಖ ಇವರ ಅಧ್ಯಕ್ಷತೆಯಲ್ಲಿ ತರುಣರದೊಂದು ಸಭೆಯು ನಡೆದಿತು. ಈ ಸಭೆಗೆ ಊರೊಳಗಿನ ಯಾವತ್ತೂ ಸಭ್ಯಗೃಹಸ್ಥರು ದಯಮಾಡಿದ್ದರು. "ತರುಣರ ಕರ್ತವ್ಯ" ಈ ವಿಷಯದಮೇಲೆ ಬೆಂಗಳೂರ ತರುಣರ ಸಂಘದಿಂದ ಅಲ್ಲಿ ಭಾಷಣಗಳನ್ನು ಮಾಡಿ ಜನತೆಯಲ್ಲಿ ಜಾಗ್ರತೆಯನ್ನು ಹುಟ್ಟಿಸುವದಕ್ಕೋಸ್ಕರ ಕಳುಹಿಸಲ್ಪಟ್ಟ ಮಿ|| ವೀರಪ್ಪಾ ಡೆಂಕಿನಕೋಟಾ ಹಾಗೂ ಇಲ್ಲಿಯ ಬಸವವಿಜಯಸಂಸ್ಥೆಯ ಸೆಕ್ರೆಟರಿಯಾದ ಶ್ರೀಯುತ ವೀರಭದ್ರಯ್ಯ ಗುಗ್ಗರಿಗುಂಟಿ ಮೊದಲಾದವರ ಸುಶ್ರಾವ್ಯ ಭಾಷಣಗಳಾದವು. ಮರುದಿವಸ ರಾತ್ರಿ ಗುಟಗುಂಟಿ ಇವರ ವಖಾರದಲ್ಲಿ ಮ|| ವೀರಪ್ಪಾ ಇವರು ಮಾಜಿಕ್ ಲ್ಯಾಂಟರನ್ನು ತೋರಿಸಿದರು.

ಗುರಬಾಲಪ್ಪಾ ಹಲಕಟ್ಟಿ.

ನಿಜವಾದ ಅನ್ನದಾನ.

ವಿರಜಸಂಸ್ಥಾನದ ವನಶಿಗ್ಗಲವಾಸಿಗಳಾದ ವೀರಶೈವ ಸಮಾಜ ಸುಸಂಜೀವಿಗಳಾದ ವೀರಶೈವ ಸಾಧುವರ್ಯರಾದ ಮ|| ರಾ|| ಶ್ರೀ ಗುರುಸಿದ್ದಪ್ಪನವರು ಯಾಗಂಟಿಯವರು ಇದೇ ವನಶಿಗ್ಗಲಿಯಲ್ಲಿ ವೀರಶೈವರಿಂದ ಶ್ರೀಮಂತ ಸಿರಸಂಗಿ ಲಿಂಗರಾಜರ ಹೆಸರಿನಿಂದ ಸ್ಥಾಪಿಸಲ್ಪಟ್ಟ ಇಂಗ್ಲೀಷ ಎ.ವಿ. ಸ್ಕೂಲಿನಲ್ಲಿಯ ಹತ್ತು ಮಂದಿ ಬಡವಿದ್ಯಾರ್ಥಿಗಳಿಗೆ ಅನ್ನದಾನವನ್ನು ಮಾಡುತ್ತೇವೆಂದು ವಾಗ್ದಾನಮಾಡಿದ್ದಕ್ಕಾಗಿ ಅಭಿನಂದಿಸುತ್ತೇನೆ. ಆ ಪ್ರಕಾರ ಈಗ ಅವರಲ್ಲಿ ಐದುಮಂದಿ ಬಡವಿದ್ಯಾರ್ಥಿಗಳಿಗೆ ತೃಪ್ತಿಕರ ಭೋಜನವು ನಿಯಮಿತಕಾಲಕ್ಕೆ ನಿರಾತಂಕವಾಗಿ ಸಿಗುತ್ತದೆ. ಈ ಪ್ರಕಾರವಾಗಿ ನಮ್ಮ ವೀರಶೈವ ಪ್ರತಿಯೊಬ್ಬ ಶ್ರೀಮಂತರೂ ಕೈಕೊಂಡಿದ್ದಾದರೆ ಕ್ಷಿಪ್ರದಲ್ಲಿ ನಮ್ಮ ಸಮಾಜವು ವಿದ್ಯೆಯಿಂದ ಉನ್ನತಸ್ಥಿತಿಯನ್ನು ಹೊಂದುತ್ತದೆಂಬುವದರಲ್ಲಿ ತಿಲಮಾತ್ರ ಸಂದೇಹವಿಲ್ಲ.

ಲಿಂಗರಾಜ ಎ. ವಿ. ಸ್ಕೂಲ ಫಂಡ ಕಮಿಟಿ ಸೆಕ್ರೆಟರಿ, ಶಿಗ್ಗಲಿ.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕಸಂಘ, ಶಿವಮೊಗ್ಗ.

ಕೊಡ್ಲಗೆರೆ ಮಾಗಣೆ (ಶಿವಮೊಗ್ಗ ತಾಲ್ಲೂಕು) ಹೊಸಹಳ್ಳಿ ಪಟೇಲರು ನಂಜುಂಡಪ್ಪಗೌಡರವರ ಮನೆಯಲ್ಲಿ ನಡೆದ ವಿವಾಹಮಹೋತ್ಸವ ಕಾಲದಲ್ಲಿ ಮೇಲಿನ ಸಂಘಕ್ಕೆ ಮ|| ಬಿ. ರುದ್ರಪ್ಪನವರ ಪ್ರೋತ್ಸಾಹದಿಂದ ವಸೂಲಾದ ಚಂದಾ ಮೊಬಲಗು :—ಮ|| ಹಿರಿಯೂರು ಬಸಪ್ಪಗೌಡರವರಿಂದ 3 ರೂ. ಮ|| ಹೊಸಹಳ್ಳಿ ಪಟೇಲ್ ಮಲ್ಲಿಕಾರ್ಜುನಪ್ಪನವರಿಂದ 4 ರೂ. ಮ|| ಯಲವಟ್ಟಿ ನಂಜುಂಡಪ್ಪನವರಿಂದ 3 ರೂ.

ಕುಂಸಿ ಸಬ್ ತಾ|| ಆಯನೂರಿನಲ್ಲಿ ನಡೆದ ಈ ಕೆಳಗಿನ ಲಗ್ನಗಳಲ್ಲಿ ಮ|| ಶಿವಮೊಗ್ಗ ಕೇರಿಹಾಲಪ್ಪನವರ ಸೂಚನೆಯ ಮೇಲೆ ಮ|| ವೇ. ಇಟ್ಟಿಗೆಹಳ್ಳಿಯಲ್ಲಿರುವ ಕೋಹಳ್ಳಿಮಠದ ತೋಟಪ್ಪಯ್ಯನವರ ಪ್ರೋತ್ಸಾಹದಿಂದ ವಸೂಲಾದ ಚಂದಾ ಮೊಬಲಗು :—ಮ|| ನಗರದ ವರ್ತಿಗಡ್ಡಪ್ಪಶೆಟ್ಟರ ಮಕ್ಕಳು ಚನ್ನಬಸಪ್ಪನವರಿಗೂ ಮ|| ಸಾಲೂರು ಬಳ್ಳಾರಿ ಮಡಿವಾಳಪ್ಪನವರ ಪುತ್ರಿಗೂ ನಡೆದ ಲಗ್ನದಲ್ಲಿ 5 ರೂ. ಮ|| ಆಯನೂರು ಬೆಲ್ಲದ ಸಂಗಪ್ಪನವರ ಮಕ್ಕಳು ಶಿದ್ದಪ್ಪನವರಿಗೂ ಮ|| ನಗರದವರ್ತಿ ತೋಟಪ್ಪನವರ ಪುತ್ರಿ ಶಿವಮ್ಮನಿಗೂ ನಡೆದ ಲಗ್ನದಲ್ಲಿ 5 ರೂ. ಮ|| ಸಾಸ್ವೆಹಳ್ಳಿ ರುದ್ರಪ್ಪನವರ ಮಕ್ಕಳು ವೀರಭದ್ರಪ್ಪನವರಿಗೂ ಮ|| ಆಯನೂರು ಬೆಲ್ಲದ ಸಂಗಪ್ಪನವರ ಪುತ್ರಿ ಬಸಮ್ಮನಿಗೂ ನಡೆದ ಲಗ್ನದಲ್ಲಿ 5 ರೂ. ಮ|| ಸಾಸ್ವೆಹಳ್ಳಿ ರುದ್ರಪ್ಪನವರ ಮಕ್ಕಳು ಮಹೇಶ್ವರಪ್ಪನವರಿಗೂ ಮ|| ಆಯನೂರು ಬೆಲ್ಲದ ಸಂಗಪ್ಪನವರ ಪುತ್ರಿ ಶಾಂತಮ್ಮನಿಗೂ ನಡೆದ ಲಗ್ನದಲ್ಲಿ 5 ರೂ.

ಮೇಲೆ ನಮೂದಾಗಿರುವ ವೇ|| ತೋಟಪ್ಪಯ್ಯನವರಂತೆ ಲಗ್ನ ಮುಂತಾದ ಶುಭಕಾರ್ಯಗಳನ್ನು ನಡಿಸತಕ್ಕ ಆಚಾರ್ಯರುಗಳು ಚಂದಾವಸೂಲಿ ತರಬೂದು ಇಟ್ಟು ಸಂಘಕ್ಕೆ ಸಹಾಯಮಾಡುತ್ತಾ ಬರಲಾಗಿ ಕೋರುತ್ತೇವೆ.

B. Rudrappa.

ಹಾವೇರಿಯ ವೈದಿಕ ಪಾಠಶಾಲೆ.

ಎಷ್ಟೋ ವರ್ಷಗಳಿಂದ ಈ ಊರಲ್ಲಿ ಇಲ್ಲಿಯ ಧರ್ಮಾಭಿಮಾನಿಗಳ ಸಹಾಯದಿಂದ ನಡೆಯಿಸಲ್ಪಡುತ್ತಿದ್ದ ಹುಕ್ಕೇರಿಮಠದ ವೈದಿಕ ಪಾಠಶಾಲೆಯು ಯೋಗ್ಯಶಿಕ್ಷಕರ ಅಭಾವದಿಂದ ಕಳೆದ ೩-೪ ವರ್ಷಗಳಿಂದ ನಿಲ್ಲಿಸಲ್ಪಟ್ಟಿತ್ತಷ್ಟೆ? ಆದರೆ ಇದೇ ಜೂನ್ ೧ನೇ ತಾರೀಖಿನಿಂದ ಪುನಃ ಯೋಗ್ಯ ಶಾಸ್ತ್ರಿಗಳ ಅಧ್ಯಾಪಕತ್ವದ ಕೆಳಗೆ ಪ್ರಾರಂಭವಾಯಿತೆಂದು ಪ್ರಕಟಿಸಲು ಸಂತೋಷವಾಗುತ್ತದೆ. ಈಗ ಪಾಠಶಾಲೆಯಲ್ಲಿ ವೈದಿಕ, ಧಾರ್ಮಿಕ, ಜ್ಯೋತಿಷ ವಿಷಯಗಳ ಅಧ್ಯಾಪನೆಯ ವ್ಯವಸ್ಥೆ ಮಾಡಿದೆ. ಪುರಾಣಕಥನ ಕೀರ್ತನಗಳ ಅವಶ್ಯವಿರುವದರಿಂದ ಆ ವಿಷಯವನ್ನು ನವೀನಪದ್ಧತಿಯಿಂದ ಹೇಳಿಸುವ ವ್ಯವಸ್ಥೆ ಮಾಡಿದೆ. ಆದ್ದರಿಂದ ಧರ್ಮಗುರುಪಟುಗಳೂ ಧಾರ್ಮಿಕ ವಿಷಯ ಜ್ಞಾನಸಂಪಾದನೇಚ್ಛುಗಳೂ ಈ ಸಂಧಿಯನ್ನು ಹೋಗಲಾಡಿಸಬಾರದಾಗಿ ಕೋರಿಕೆಯದೆ.

ಈ ಪಾಠಶಾಲೆಯ ಪ್ರವೇಶಕ್ಕಾಗಿ ನಿಬಂಧನೆಗಳು.

೧. ವಿದ್ಯಾರ್ಥಿಗಳು ಕನಿಷ್ಠ ಪ್ರಾಥಮಿಕ ೪ನೇ ಇಯತ್ತೆಯಲ್ಲಿ ಪಾಸಾದವರಿರಬೇಕು.

೨. ಇಲ್ಲಿ ಪ್ರವೇಶವಾದ ಮೇಲೆ ಮೂರು ವರ್ಷವಾದರೂ ಇರುವ ಬಗ್ಗೆ ಬರೆದುಕೊಡಬೇಕು.

೩. ಸ್ಥಿತಿಗತಿ ನಡತೆಯ ಬಗ್ಗೆ ಆಯಾ ಗ್ರಾಮದಿಂದ ವಿದ್ಯಾರ್ಥಿಗಳು ಸರಟಿಫಿಕೇಟನ್ನು ತರಬೇಕು.

ಈ ಪಾಠಶಾಲೆಯಲ್ಲಿ ಅಭ್ಯಾಸಿಸುವ ವಿದ್ಯಾರ್ಥಿಗಳ ಭೋಜನ ಮೊದಲಾದ ವ್ಯವಸ್ಥೆಯು ಈ ಪಾಠಶಾಲಾ ಕಮಿಟಿಯವರಿಂದ ಮಾಡಲ್ಪಡುವದು. ತೀವ್ರವೇ ಸಂಗೀತ ಪಾಠಶಾಲೆಯು ಶುರುವುಮಾಡಲ್ಪಡುವದು. ವಿಶೇಷ ಸಂಗತಿಯನ್ನು ಸ್ವತಃ ಪತ್ರವ್ಯವಹಾರದಿಂದ ತಿಳಿದುಕೊಳ್ಳಬೇಕು.

ಶಿವಮೂರ್ತಿಸ್ವಾಮಿ ಹಿರೇಮಠ, B.A.,LL.B., ವಕೀಲ,
ವೈಸ್ ಪ್ರೆಸಿಡೆಂಟ ವೀರಶೀವ ಸಂಸ್ಕೃತ ಪಾಠಶಾಲಾ,
ಹುಕ್ಕೇರಿಮಠ, ಹಾವೇರಿ.

ವಿವಾಹಮಹೋತ್ಸವ.

ನಿಜಾಮು ಇಲಾಖಾ ಶಹಪೂರ ತಾ|| ಪೈಕಿ ಜಹಗೀರ ಕೋಡಾಲ ಮು|| ಪೋ|| ಶ್ರೀಯುತ ಚಂದಾವ ಇವರ ಮಂದಿರದಲ್ಲಿ ಇವರ ಚಿ|| ಶಿದ್ಧಲಿಂಗಪ್ಪನ ವಿವಾಹವು ಇದೇ ವೈಶಾಖ ಬ|| ೪ ಯಿಂದ ಬ|| ೮ ವರೆಗೆ ಬಹು ವಿಜೃಂಭಣೆಯಿಂದ ನಡೆದು ಸರ್ವಮಾಹೇಶ್ವರರು ಭಕ್ಷ್ಯಭೋಜ್ಯ ಮೊದಲಾದ ಅಮೃತಪಾನದಿಂದಲೂ ದಕ್ಷಿಣೆಯಿಂದಲೂ ತೃಪ್ತಿಗೊಳಿಸಲ್ಪಟ್ಟರು. ಈ ವಿವಾಹಕ್ಕೆ ನೇರಡಗುಂಭದ ಮತ್ತು ಚಿಕ್ಕಸೂಗೂರಿನ ಶ್ರೀಗಳವರೂ ಗೊಬ್ಬೂರ ಚರಮೂರ್ತಿಗಳೂ ಅನೇಕ ಸಂಸ್ಕೃತ ಪಂಡಿತರುಗಳೂ ಗಾನವಿಶಾರದರೂ, ವಿದ್ಯಾರ್ಥಿಗಳೂ ಬರಮಾಡಲ್ಪಟ್ಟು ಶ್ರೀ ಗೊಬ್ಬೂರ ಚರವರ್ಯ ಬಸವಲಿಂಗಮೂರ್ತಿಗಳ ಅಧ್ಯಕ್ಷತೆಯಿಂದಲೂ ಮ|| ರಾ|| ವೆಂಕಟರಾವ ಉರಫ್ ಶಿವರಾವ ಪಾ|| ಜೇಗರಕಲ್ಲ ಇವರ ಚಾಲಕತ್ವದಿಂದಲೂ ಧಾರ್ಮಿಕಸಭೆಯು ನಡಿಸಲ್ಪಟ್ಟಿತು. ನೇರಡಗುಂಭ ಮತ್ತು ರಾಯಿಚೂರ ಪಾಠಶಾಲಾ ಸಂಸ್ಕೃತ ವಿದ್ಯಾರ್ಥಿಗಳ ಭಾಷಣಗಳಾದ ಮೇಲೆ ನೇರಡಗುಂಭ ಪಾಠಶಾಲಾಸ್ಥಾಪಕ ವೇ|| ಸಿದ್ಧಲಿಂಗಶಾಸ್ತ್ರಿಗಳು ಗುರು ಎಂಬುದರ ಮೇಲೂ, ವೇ|| ಯಳ್ಗೇರಿ ಬಸವಶಾಸ್ತ್ರಿಗಳು ಕ್ರಿಯಾಜ್ಞಾನ ವಿಷಯದ ಮೇಲೂ, ವೇ|| ಶರಣಯ್ಯ ಗುಲಬುರ್ಗೀಕರ ಇವರು ಭಕ್ತಿ ಮೇಲೂ, ಶಿವಮೂರ್ತಿ ಚನವೀರಯ್ಯ ಅರಸಿನಗೀಕರ ಇವರು ಮೋಕ್ಷದ ಮೇಲೂ ಅತ್ಯಂತ ಶ್ಲಾಘ್ಯವಾಗಿಯೂ ಶ್ರೋತೃಗಳ ಮನಸ್ಸಿನಲ್ಲಿ ನಾಟುವಂತೆಯೂ ಭಾಷಣಗಳನ್ನು ಮಾಡಿದರು. ತರುವಾಯ ಅಧ್ಯಕ್ಷರು ದೀಕ್ಷಾ ವಿಷಯದ ಬಗ್ಗೆ ಬಹು ಸರಸವಾಗಿ ಭಾಷಣಮಾಡಿದರು. ಪರಂತು ಇವರ ವಾಕ್ಯಸರಣಿಯು ಅಮೂಲ್ಯ ಮೌಕ್ತಿಕದ ಹಾರದಂತೆ ಒಪ್ಪುತ್ತಿತ್ತು. ಮತ್ತು ಈ ಸಭೆಯಲ್ಲಿ ಕೂಡಿದ ಭಕ್ತವೃಂದವು ಮನಃಪೂರ್ವಕವಾಗಿ ದೀಕ್ಷಾಕಾಂಕ್ಷಿಗಳಾಗುವದಕ್ಕೆ ಒಪ್ಪಿಕೊಂಡರು. ನೇರಡಗುಂಭದ ಶ್ರೀಗಳವರೂ ಮೇಲಿನ ಸರ್ವವಿಷಯಗಳನ್ನೇ ಪುಷ್ಟೀಕರಿಸಿ ಕೇಳಿದಂತೆ ಆಚರಣೆಯಲ್ಲಿ ತರಬೇಕೆಂದೂ ತಮ್ಮ ಮಧುರೋಕ್ತಿಗಳಿಂದ ಆಶೀರ್ವಾದವೆಂಬ ಅಮೃತಪಾನ ಮಾಡಿಸಿದರು. ಆಮೇಲೆ ಸದರಿ ವಿವಾಹಕ್ಕೆ ಕಾರ್ಯದರ್ಶಿಯಾದ ಮ|| ರಾ|| ಶಿವರಾವ ಪಾ|| ಇವರು ಕೈ|| ವೀರಸಂಗಪ್ಪನವರ ಸ್ಮಾರಕ [illegible] ರವಾನೆಮಾಡಿದರು. ತದನಂತರ ಸಭಾಧ್ಯಕ್ಷರ ಅನುಜ್ಞೆಯಿಂದ ಎಲ್ಲರೂ ಸಂತೋಷಚಿತ್ತರಾಗಿ ಸದರಿ ವಿವಾಹವಾದ ವಧೂವರರಿಗೆ ಆಶೀರ್ವದಿಸಿ ತೆರಳಿದರು.

ಓರ್ವ ಪ್ರತ್ಯಕ್ಷದರ್ಶಿ.

[೨ ರೂ. ಬಂದಿದೆ. ಪ.ಪ್ರ.]

ಒಂದು ಉಪಯುಕ್ತ ಸೂಚನೆ.

ಸದ್ಯಃ ನಮ್ಮಲ್ಲಿ ಶ್ರೀಮಜ್ಜಗದ್ಗುರು ರೇಣುಕಾಚಾರ್ಯಪಾದರ ಪೀಠಕ್ಕೆ ಯೋಗ್ಯರಾದ ಅಧಿಕಾರಿಗಳನ್ನು ನಿಯಮಿಸುವ ವಿಷಯದಲ್ಲಿ ಅನೇಕರು ಬಗೆಬಗೆಯ ಸೂಚನೆಗಳನ್ನು ಮಾಡುತ್ತಿದ್ದಾರೆ. ಇಂಥಾ ಕಾರ್ಯಗಳಲ್ಲಿ ಆದಷ್ಟು ಉಪಯುಕ್ತಸೂಚನೆಗಳನ್ನು ಸಮಾಜದವರ ಮುಂದಿಡುವದು ಪ್ರತಿಯೊಬ್ಬ ಸಮಾಜಾಭಿಮಾನಿಯ ಕರ್ತವ್ಯವೆಂದು ತಿಳಿದು ಒಂದೆರಡು ಮಾತುಗಳನ್ನು ಇಲ್ಲಿ ಸೂಚಿಸಿಕೊಳ್ಳುತ್ತೇನೆ.

ಸಾಧಾರಣವಾಗಿ ತಮಗೆ ಉತ್ತಮವಸ್ತುವೇಬೇಕೆಂದು ಬಯಸಿ ಯತ್ನಿಸುವದು ಮನುಷ್ಯರ ಸ್ವಭಾವವಿರುವಾಗ ಸದ್ಯಃ ನಾವಾದರೂ ಸರ್ವಗುಣಸಂಪನ್ನರೇ ನಮ್ಮ ಆಚಾರ್ಯಪೀಠದ ಅಧಿಕಾರಿಗಳಾಗಬೇಕೆಂದು ಬಯಸುವದು ಅಸ್ವಾಭಾವಿಕವಲ್ಲ. ಆದರೂ ಸರಿಯಾದ ಪ್ರಯತ್ನವಿಲ್ಲದ ಆಶೆಯು ದುರಾಶಾಮಾತ್ರವೇ. ಆದರಲ್ಲಿಯೂ ನಮ್ಮ ಸಮಾಜದಲ್ಲಿ ಇಂಥಾ ಅಧಿಕಾರಕ್ಕೆ ಯೋಗ್ಯರಾದವರು ಸುಲಭರಲ್ಲ. ನಮ್ಮ ಸಮಾಜದಲ್ಲಿ ವಿದ್ಯಾಪ್ರಸಾರವಾದರೂ ಅಷ್ಟರವಟ್ಟಿಗೇ ಇರುತ್ತದೆ; ವಿದ್ಯಾಪಾರಂಗತರ ಮಾತು ಹಾಗಿರಲಿ, ಸಾಧಾರಣವಾಗಿ ಶಾಸ್ತ್ರಗಳಲ್ಲಿ ಅಧಿಕಾರವನ್ನು ಹೊಂದಿದವರೂ ನಮ್ಮಲ್ಲಿ ದೊರೆಯುವುದು ಕಷ್ಟ.

ಈಗ ನಮ್ಮ ಸಮಾಜದಲ್ಲಿ ನಡೆದಿರುವ ಬಗೆಬಗೆಯ ಬಡಿವಾಟಗಳ ಕಡೆಗೂ, ಅನೇಕ ಸಂಸ್ಕಾರಗಳ ಕಡೆಗೂ ನೋಡಿದರೆ, ಇದರಿಂದಾಗುವ ಅನರ್ಥವನ್ನು ಮನಸ್ಸಿನಲ್ಲಿ ತಂದರೆ, ಇವನ್ನೆಲ್ಲ ಸುಧಾರಿಸುವ ಕುತೂಹಲವು ನಮಗಿದ್ದರೆ, ನಮ್ಮ ಗುರುಸ್ಥಾನಗಳಿಗೆ—ಅದರಲ್ಲಿಯೂ ಧರ್ಮಸಿಂಹಾಸನಗಳಿಗೆ ಎಂಥ ಮೂರ್ತಿಗಳನ್ನು ತರಬೇಕೆಂಬುವದು ಸ್ಪಷ್ಟವಾಗುತ್ತದೆ. ಜ್ಞಾನಲವದುರ್ವಿದಗ್ಧರಾಗಿ ದಂಭ-ಅವಿಚಾರಗಳಿಂದ ಉರಿಯುವ ಕಿಚ್ಚಿಗೆ ಹುಲ್ಲುಹಾಕುವವರಾಗಲೀ, ತಮ್ಮ ವಿಶಿಷ್ಟತೆಯ ಸ್ವಪ್ನದಲ್ಲಿ ಮಗ್ನರಾಗಿ ಸಮಾಜದ ಕಡೆಗೆ ಕಣ್ದೆರೆಯದೇ ಹೋಗುವವರಾಗಲೀ ಪೀಠಾಧಿಪತಿಗಳಾದರೆ ನಮಗೇನು? ನಮ್ಮ ಅಭಾವವನ್ನು ಚೆನ್ನಾಗಿ ತಿಳಿದು ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡಿ, ಹೀನದೆಶೆಯಲ್ಲಿರುವ ನಮ್ಮ ಸಮಾಜವನ್ನು ಒಂದು ಆದರ್ಶಸಮಾಜವನ್ನು ಮಾಡುವ ಮಹಾತ್ಮರು ನಮಗೆಬೇಕು. ಈ ಬಗೆಯ ಸದ್ಗುಣ-ಕರ್ತವ್ಯದಕ್ಷತೆಗಳಿಲ್ಲದ ಬರೇ ಶಾಸ್ತ್ರತೀರ್ಥ-ವಿದ್ಯಾರತ್ನಾಕರಾದಿ ನಾಮಧಾರಿಗಳು ನಮಗೆ ಬೇಕಾಗಿಲ್ಲ.

ಹೀಗಿರುವಲ್ಲಿ ನಾವು ನಮ್ಮ ಆಚಾರ್ಯಪೀಠಕ್ಕೆ, ಸದಸದ್ವಿಚಾರಿಗಳೂ-ಕರ್ತವ್ಯದಕ್ಷರೂ-ನಿರ್ಮತ್ಸರರೂ-ಒಟ್ಟಿನಮೇಲೆ ಗುಣಿಗಳೂ ಅದರಲ್ಲಿಯೂ ವಿದ್ಯಾವ್ಯಸನಿಗಳೂ ಆದವರನ್ನೇ ನಿಯಮಿಸುವದು ನಮ್ಮ ಕರ್ತವ್ಯವೆಂದು ಬೇರೆ ಹೇಳುವ ಅವಶ್ಯಕತೆಯಿಲ್ಲ. ಈ ಕರ್ತವ್ಯವನ್ನು ನಾವು ಬಿಟ್ಟೇ ಈ ನಮ್ಮ ಧರ್ಮಪೀಠಗಳು ಈ ಹಾದಿಗೆ ಬಂದಿರುತ್ತವೆ. ಇನ್ನೂ ನಾವು ಉದಾಸೀನರಾದರೆ ಸಮಾಜವು ಅನಾಯತವಾಗಿ ನಿರ್ನಾಮವಾಗುವದರಲ್ಲಿ ಸಂಶಯವೇನು? ಇದಕ್ಕಾಗಿ ಆದಷ್ಟು ಯತ್ನಿಸಿ ನಮ್ಮ ಈ ಧರ್ಮಪೀಠಗಳ ಸುಸ್ಥಿತಿಯು ನಮ್ಮ ಸಮಾಜದ ಪ್ರಮುಖರ ಕಡೆಯಿಂದಲೇ ಆಗುವಂತೆ ಮಾಡಬೇಕು. ಇದರಂತೆಯೇ ನಮ್ಮ ಸಮಾಜದ ಉಳಿದ ಮಠಗಳ ಸುಸ್ಥಿತಿಯೂ ನಮ್ಮ ಪ್ರಮುಖರಿಂದಲೇ ಆಗಬೇಕು. ಇರಲಿ! ಈಗ ಈ ವಿಷಯವನ್ನು ಸಮಾಜದ ಪ್ರಮುಖರು ಚೆನ್ನಾಗಿ ಪರಿಶೀಲಿಸಿ, ಬಾಳೆಹಳ್ಳಿ ಜಗದ್ಗುರುಸ್ಥಾನಕ್ಕೆ ಯೋಗ್ಯರಾದ ಅಧಿಕಾರಿಗಳನ್ನು ನಿಯಮಿಸುವದು ಮೊದಲನೆಯ ಕರ್ತವ್ಯವೆಂದು ನಮ್ಮ ಭಾವನೆ. ನಮಗೆ ಅತಿಶೀಘ್ರ ವ್ಯವಸ್ಥೆಯಾಗದಿದ್ದರೂ ಅಡ್ಡಿಯಿಲ್ಲ; ಕಾರ್ಯದಿಂದ ಕಡೆಗೆ ಪಶ್ಚಾತ್ತಾಪ ಮಾತ್ರ ಆಗಬಾರದು. ಇದಕ್ಕಾಗಿ ನಾವು ನಮ್ಮ ಸಮಾಜಾಭಿಮಾನಿಗಳಿಗೆ ಸೂಚಿಸಿಕೊಳ್ಳುವದೇನಂದರೆ:—ಪ್ರತ್ಯೇಕಪ್ರಾಂತದ ಇಬ್ಬಿಬ್ಬರು ಯೋಗ್ಯರಾದ ಮೆಂಬರರಿಂದ ಒಂದು ಕಮಿಟಿಯನ್ನು ಸಂಘಟಿಸಿಕೊಂಡು, ಅವರು ಯೋಗ್ಯವಟುಗಳ ಪರಿಚಯವನ್ನು ಸಂಗ್ರಹಿಸಿ, ಅದರಲ್ಲಿಯೂ ಸರ್ವಸಮ್ಮತಿಯಿಂದ ಯೋಗ್ಯವಾದ ವ್ಯಕ್ತಿಯನ್ನೇ ಪೀಠಾಧಿಕಾರಿಯನ್ನು ಮಾಡಬೇಕು. ಹಾಗಲ್ಲದೆ ಒಂದು ಪ್ರಾಂತದ ಕೆಲಜನರೇ ತಮ್ಮ ಪ್ರವೃತ್ತಿಗೆ ತಕ್ಕಂತೆ ಆಸ್ಥಾನಕ್ಕೆ ಯಾರನ್ನಾದರೂ ನಿಯಮಿಸಿಬಿಡುವದಾಗಲೀ, ಈಗಿನ ಬೇರೆ ಪೀಠಾಧಿಕಾರಿಗಳು ಈ ವಿಷಯದಲ್ಲಿ ಎಲ್ಲ ಪ್ರಾಂತದವರ ಅಪೇಕ್ಷೆಯಿಲ್ಲದೆ ಅವ್ಯವಸ್ಥಿತವಾಗಿ ಹಸ್ತಕ್ಷೇಪಮಾಡಿ ಸಮಾಜದವರ ಉಪಮರ್ದನಮಾಡುವದಾಗಲೀ ಒಳ್ಳೆಯದಲ್ಲ; ಹಾಗೆ ಮಾಡಿದರೂ ಹತ್ತಿದ ಬೇಗೆಯನ್ನು ಹರಿಯಿಸದೆ, ಸ್ವಾರ್ಥಪರಾಯಣತೆಯಿಂದ ಮುಂದೆ ಗುರುತ್ವಕ್ಕೂ ಲಘುತ್ವವನ್ನು ತಂದಲ್ಲಿ ಅಂಥಾ ವ್ಯಕ್ತಿಯು ನಿಜವಾಗಿಯೂ ಸಮಾಜದ ಎಲ್ಲ ಜನರಿಗೂ ಸಾಮಾನ್ಯವಾಗಿ ಮಾನ್ಯನಾಗುವದಿಲ್ಲ. ಇದನ್ನು ಪರಿಶೀಲಿಸಿಯೇ ಈಗಿನ ನಮ್ಮ ಆಚಾರ್ಯ ಜಗದ್ಗುರು ಪೀಠಾಧಿಕಾರಿಗಳೇ ಆದರೂ ಸರ್ವಪ್ರಾಂತದ ಸುಯೋಗ್ಯಭಕ್ತರನ್ನು ಕೂಡಿಸಿ, ತಾವೂ ಸದ್ಬುದ್ಧಿಯಿಂದ ಸಹಾಯಮಾಡಿ, ಸರ್ವಸಮ್ಮತಿಯಿಂದ ಸುಯೋಗ್ಯರಾದವರನ್ನೇ ಶ್ರೀರೇಣುಕಾಚಾರ್ಯ ಪೀಠಾಧಿಕಾರಿಗಳನ್ನು ಮಾಡಿದರಂತೂ ನಮ್ಮ ಸುದೈವವೇ. ಆದರೇನು ಇವರು ಹೀಗೆ ಮಾಡುವದುಂಟೇ? ಹೇಗಾದರೂ ಆಗಲಿ! ಈ ಸಮಯದಲ್ಲಿ ಸಮಾಜಾಭಿಮಾನಿಗಳು ಈ ಸುಯೋಗವನ್ನು ಕಳೆದುಕೊಳ್ಳದೇ ತಮ್ಮ ಕರ್ತವ್ಯದಕ್ಷತೆಯನ್ನು ತೋರಿಬೇಕು.

ಕ್ಷ.

೫ನೇ ಶ್ರೀಮದ್ ವೀರಶೈವ ತರುಣರ ಸಮ್ಮೇಲನ ಬಾಗಲಕೋಟೆ.

ಈ ಮುಂಚೆ ಪ್ರಕಟವಾದ ಪ್ರಕಾರ ವೀರಶೈವ ತರುಣರ ೫ನೇ ಸಮ್ಮೇಲನದ ಕಾರ್ಯವು ಮೇ ೨೮ನೇ ತಾರೀಖಿನ ದಿವಸ ಇಲ್ಲಿಯ ನಿಡಗುಂದಿಯವರ ಥಿಯೇಟರದಲ್ಲಿ ಪ್ರಾರಂಭವಾಯಿತು. ಆ ದಿವಸ ಬೆಳಗಿನ ಗಾಡಿಗೆ ಈ ಸಮ್ಮೇಲನದ ಅಧ್ಯಕ್ಷರಾದ ಶ್ರೀಮಂತ ಸಿದ್ದಪ್ಪಣ್ಣ ಕಂಬಳಿ ಬಿ.ಎ.ಎಲ್.,ಎಲ್.ಬಿ.,ಎಮ್.ಎಲ್.ಸಿ. ಯವರು ಮತ್ತು ಬೆಂಗಳೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ಗದಗ ಮೊದಲಾದ ಸ್ಥಳಗಳ ಪ್ರತಿನಿಧಿಗಳು ಆಗಮಿಸಲು, ಸಮ್ಮೇಲನದ ಸತ್ಕಾರಕ ಸಂಘದವರು ಎಲ್ಲರನ್ನೂ ಮಂಗಲವಾದ್ಯದೊಡನೆ ಬರಮಾಡಿಕೊಂಡರು. ಅನಂತರ ೯ ಗಂಟೆಗೆ ಪಟ್ಟಣದ ಮುಖ್ಯ ಬೀದಿಗಳಲ್ಲಿ ಅಧ್ಯಕ್ಷರವರ ಮೆರವಣಿಗೆಯು ಅತ್ಯಂತ ವೈಭವದೊಡನೆ ಜರುಗಿತು. ತಳಿರು ತೋರಣಗಳಿಂದ ಆಯಾಯ ಬೀದಿಗಳನ್ನು ಬಹು ರಮಣೀಯವಾಗಿ ಶೃಂಗರಿಸಿದ್ದರು. ಬೆಂಗಳೂರು ವೀರಶೈವ ತರುಣರಸಂಘದ ವತಿಯಿಂದ ಪ್ರತಿನಿಧಿಗಳಾಗಿ ಬಂದಿದ್ದ ಮಿ|| ಸಿ. ವೀರಪ್ಪನವರು ಈ ಉತ್ಸವದ ಭಾವಚಿತ್ರವನ್ನು ಮಧ್ಯಮಾರ್ಗದಲ್ಲಿ ತೆಗೆದುಕೊಂಡ ನಂತರ ಮೆರವಣಿಗೆಯು ಅಧ್ಯಕ್ಷರ ವಸತಿಸ್ಥಾನವಾದ ಶ್ರೀಯುತ ದಂಡಾವತಿ ಬಸವಯ್ಯನವರ ಬಂಗಲೆಗೆ ಸಾಗಿತು. ಅನಂತರ ಮಧ್ಯಾಹ್ನದ ನಾಲ್ಕು ಗಂಟೆಗೆ ಸಮ್ಮೇಲನದ ಕಾರ್ಯವು ಪ್ರಾರಂಭವಾಯಿತು. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಸಾಧಾರಣ ಒಂದು ನೂರು ವೀರಶೈವ ತರುಣ ಪ್ರತಿನಿಧಿಗಳು ಕೂಡಿದ್ದರು. ಈ ಸ್ಥಳದ ಸಕಲ ವೀರಶೈವ ಮಹಾಜನಗಳೂ ಸಭೆಗೆ ಆಗಮಿಸಿದ್ದರು. ವೀರಶೈವ ಸಮಾಜೋದ್ಧಾರದಲ್ಲಿಯೇ ನಿರತರಾಗಿರುವ ಶ್ರೀಮನ್ನಿರಂಜನ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಮತ್ತು ಶ್ರೀಮನ್ನಿರಂಜನ ಶ್ರೀಮಹಾಂತ ಶಿವಯೋಗಿಗಳವರು ದಯಮಾಡಿದ್ದರಿಂದ ಈ ಸಮ್ಮೇಲನಕ್ಕೆ ವಿಶೇಷವಾದ ಶೋಭೆಯೂ ಉತ್ಸಾಹವೂ ಉಂಟಾಗಿದ್ದವು. ಆರಂಭದಲ್ಲಿ ಇಲ್ಲಿಯ ಗವಾಯಿಗಳಾದ ವೇ|| ಅನ್ನದಾನಯ್ಯನವರು ಸ್ವಾಗತಪರ ಪದ್ಯಗಳನ್ನು ಸುಸ್ವರದಲ್ಲಿ ಹೇಳಿದನಂತರ ಸ್ವಾಗತ ಸಂಘಾಧ್ಯಕ್ಷರಾದ ಶ್ರೀಯುತ ವೇ|| ಮುರಿಗೆಯ್ಯನವರು ಜಂಗಿನ ಇವರು ತಮ್ಮ ಭಾಷಣವನ್ನು ಓದಿ ಹೇಳಿದರು. ಈ ಭಾಷಣದಲ್ಲಿ ವಿಜಾಪುರ ಜಿಲ್ಲೆಯು ವಿದ್ಯೆಯಲ್ಲಿ ಹಿಂದುಳಿದಿದೆಯಂತಲೂ, ೪ನೇ ವೀರಶೈವ ಮಹಾಸಭೆಯು ಈ ಊರಲ್ಲಿ ಜರುಗಿದನಂತರ ಸಮಾಜದಲ್ಲಿ ಜಾಗ್ರತೆಯುಂಟಾಗಿ ೪೦ ಸಹಸ್ರ ರೂಪಾಯಿಗಳವರೆಗೆ ವಿದ್ಯಾಭಿವೃದ್ಧಿಯ ಫಂಡಿಗೆ ಕೂಡಿ ಶ್ರೀ ಬಸವೇಶ್ವರ ಎ. ವಿ. ಸ್ಕೂಲ್ ಸ್ಥಾಪಿಸಲ್ಪಟ್ಟಿತೆಂತಲೂ, ಶಿವಯೋಗಮಂದಿರವು ಇದೇ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟಿದ್ದರಿಂದ ಧಾರ್ಮಿಕ ಜಾಗ್ರತೆಯು ಈ ಭಾಗದಲ್ಲಿ ಎಷ್ಟೋ ನಟ್ಟಿಗೆ ನಡೆಯಲು ಅನುಕೂಲವಾಯಿತೆಂತಲೂ, ನಮ್ಮ ಸಮಾಜದ ಬೌದ್ಧಿಕ, ಧಾರ್ಮಿಕ ಮತ್ತು ಸಾಂಪತ್ತಿಕ ಉನ್ನತಿಯಾಗಬೇಕಾದರೆ, ಸಕ್ತಿ ಶಿಕ್ಷಣವು ಅವಶ್ಯಕವಾಗಿದೆಯಂತಲೂ, ಸ್ವದೇಶೀ ಪದಾರ್ಥಗಳನ್ನೇ ಅದರಲ್ಲಿಯೂ ಮೊದಲು ನಮ್ಮ ಸಮಾಜದವರು ಮಾಡುವ ವಸ್ತುಗಳನ್ನೇ ನಾವು ಉಪಯೋಗಿಸುವದು ಆಗತ್ಯವಾಗಿದೆಯಂತಲೂ, ನಮ್ಮ ಸಮಾಜದ ಹಣವು ನಮ್ಮ ಸಮಾಜದಲ್ಲಿಯೇ ಉಳಿಯುವಂತೆ ನಮ್ಮ ಮತಾಚಾರಗಳು ಏರ್ಪಟ್ಟಿರುವದರಿಂದ ನಾವು ನಮ್ಮ ಧರ್ಮದಂತೆ ನಡೆದರೆ, ನಮ್ಮ ಸಾಂಪತ್ತಿಕ ಸ್ಥಿತಿಯು ಸುಧಾರಿಸುವದರಲ್ಲಿ ಅಡ್ಡಿಯಿಲ್ಲವೆಂತಲೂ, ಸಕಲ ವೀರಶೈವ ಸ್ತ್ರೀ ಪುರುಷರು ದೀಕ್ಷಾಯುತರಾಗಿ ಆಚರಿಸಿದರೆ ಒಳಪಂಗಡಗಳು ಅಳಿದುಹೋಗಿ, ಸಮಾಜದಲ್ಲಿ ಒಕ್ಕಟ್ಟು ಹೆಚ್ಚುತ್ತದೆಂತಲೂ ವಿವರಿಸಲ್ಪಟ್ಟಿದ್ದಿತು. ಅನಂತರ ಅಧ್ಯಕ್ಷರು ತಮ್ಮ ಸುಶ್ರಾವ್ಯವಾದ ಅತಿ ಮಹತ್ವದ ಭಾಷಣವನ್ನು ಓದಿ ಹೇಳಿದರು. "ನಮ್ಮ ಸಮಾಜದ ಸಕಲ ಸುಧಾರಣೆಗಳಿಗೆ ವಿದ್ಯೆಯೇ ಮೂಲವಾಗಿದೆ. ಇದನ್ನು ನಾವು ಎಷ್ಟು ಹೆಚ್ಚು ಪ್ರಸಾರಗೊಳಿಸುತ್ತವೆಯೋ ಅಷ್ಟು ನಮ್ಮ ಸಮಾಜವು ತೀವ್ರವಾಗಿ ಉನ್ನತಾವಸ್ಥೆಗೆ ಬರುತ್ತದೆ. ಆದ್ದರಿಂದ ವಿದ್ಯಾ ಪ್ರಸಾರದ ಕಡೆಗೆ ನಮ್ಮ ಸಮಾಜದವರು ದ್ರವ್ಯವನ್ನು ಧಾರಾಳವಾಗಿ ಸಹಾಯಮಾಡಬೇಕು. ಪುರಾಣ ಪ್ರಸ್ತಗಳಿಗೆ ದುಂದುವ್ಯಯಮಾಡವ ದಾನ ಪದ್ಧತಿಯನ್ನು ಕಾಲಕ್ಕೆ ತಕ್ಕಂತೆ ಬೇರೆ ಮಾಡಬೇಕಲ್ಲದೆ ಶಿವಯೋಗಮಂದಿರದಲ್ಲಿ ನಮ್ಮ ಸಮಾಜೋನ್ನತಿಗೋಸ್ಕರ ಇನ್ನೂ ಅನೇಕ ಸುಧಾರಣೆಗಳಾಗತಕ್ಕದು ಆವಶ್ಯಕವಾಗಿದೆ. ಸರಕಾರದವರು ಸಕ್ತೀ ಶಿಕ್ಷಣವನ್ನು ಆಚರಣೆಯಲ್ಲಿ ತರಬೇಕಾದುದು ಅಗತ್ಯವು. ನಮ್ಮಲ್ಲಿ ಒಕ್ಕಟ್ಟು ಹೆಚ್ಚಬೇಕಾದರೆ ನಮ್ಮಲ್ಲಿರತಕ್ಕ ಒಳಭೇದಗಳನ್ನು ತೆಗೆದುಹಾಕಲೇಬೇಕು. ನಮ್ಮ ವೀರಶೈವಸಮಾಜದ ಸಂಪದಭಿವೃದ್ಧಿಗೆ ಸ್ವದೇಶೀ ಪದಾರ್ಥಗಳನ್ನು ಉಪಯೋಗಿಸುವದು ಮುಖ್ಯ ಸಾಧನವು. ಆದರೆ ಪರದೇಶದ ಎಲ್ಲಾ ವಸ್ತುಗಳನ್ನು ಬಹಿಷ್ಕರಿಸುವದು ಅನುಚಿತವೂ ಘಾತಕವೂ ಆದುದು. ಅಸಹಕಾರಿಗಳ ಬಲೆಗೆ ಬಿದ್ದು ನಮ್ಮ ಸಮಾಜದ ತರುಣರು ಶಾಲೆ ಕಾಲೇಜುಗಳನ್ನು ಬಿಡದಿದ್ದುದು ಅತಿ ಸ್ತುತ್ಯವಾದುದು ಮತ್ತು ಇನ್ನು ಮೇಲಾದರೂ ನಮ್ಮ ಸಮಾಜದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ತಪ್ಪದೇ ನಡಿಸುತ್ತಿರಬೇಕು. ನಾವು ಅನ್ಯ ಸಮಾಜದವರ ಸಂಗಡ ಸಹಾನುಭೂತಿಯಿಂದ ವರ್ತಿಸುತ್ತಲೇ ನಮ್ಮ ಸಮಾಜವನ್ನು ಉನ್ನತಾವಸ್ಥೆಗೆ ತರಬೇಕಲ್ಲದೆ ಅನ್ಯ ಮತದವರಿಗೂ ಕೂಡ ನಮ್ಮ ಮತದ ದೀಕ್ಷೆಯನ್ನು ಕೊಟ್ಟು ನಮ್ಮ ಮತಪ್ರಸಾರಗೊಳಿಸುವುದು ಬಹಳ ಅವಶ್ಯಕವು" ಎಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರತಿಪಾದಿಸಿದರು. ಆ ಮೇಲೆ ಇಲ್ಲಿಯ ವಕೀಲರಾದ ಶ್ರೀಯುತ ಹಾಲಪ್ಪ ಬಿ.ಎ.,ಎಲ್‌ಎಲ್.ಬಿ., ಇವರು ಶ್ರೀ ಶಾಹು ಛತ್ರಪತಿ ಮಹಾರಾಜ ಕೊಲ್ಹಾಪೂರ ಇವರ ಶೋಚನೀಯ ಮರಣವನ್ನು ಕುರಿತು ದುಃಖ ಪ್ರದರ್ಶನ ಠರಾವನ್ನು ಓದಿ ಹೇಳಲು ಯಾವತ್ತರೂ ಎದ್ದುನಿಂತು ಈ ಠರಾವನ್ನು ಪಾಸುಮಾಡಿದ ನಂತರ ಸಭೆಯು ಮುಕ್ತಾಯವಾಯಿತು. ಆ ಬಳಿಕ ಸಾಯಂಕಾಲದ ೬ ಗಂಟೆಗೆ ವಿಷಯ ನಿಯಾಮಕ ಸಂಘದವರು ಸಮ್ಮೇಲನದಲ್ಲಿ ಜರುಗತಕ್ಕ ವಿಷಯಗಳನ್ನು ಚರ್ಚಿಸಿ ನಿರ್ಧರಿಸಿದರು. ೨೯ನೆಯ ಬೆಳಿಗ್ಗೆ ೯ ಗಂಟೆಗೆ ಸಮ್ಮೇಲನದ ಕಾರ್ಯವು ಪ್ರಾರಂಭವಾಯಿತು. ಆ ದಿನ ಈ ಕೆಳಗಿನ ಠರಾವುಗಳು ತೀರ್ಮಾನವಾದವು.

(೧) ಶ್ರೀಮನ್ ಮಹಾರಾಜ ಶಾಹೂ ಛತ್ರಪತಿ ಕೊಲ್ಹಾಪೂರ ಇವರ ಆಕಸ್ಮಿಕ ಮರಣಕ್ಕಾಗಿ ಈ ಸಮ್ಮೇಲನವು ದುಃಖ ಪ್ರದರ್ಶನ ಮಾಡುತ್ತದೆ. (೨) ಪ್ರಾಥಮಿಕ ಮತ್ತು ಒತ್ತಾಯದ ಶಿಕ್ಷಣವನ್ನು ತೀವ್ರವೇ ಅನುಲಿನಲ್ಲಿ ತರಬೇಕೆಂದು ಈ ಸಮ್ಮೇಲನವು ಸರಕಾರಕ್ಕೂ ಮುನಸಿಪಾಲಿಟಿ ಹಾಗೂ ಲೋಕಲ್ ಬೋರ್ಡುಗಳಿಗೂ ಆಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತದೆ. (೩) ಬಳ್ಳಾರಿ ವೀರಶೈವ ವಿದ್ಯಾರ್ಥಿಗಳಿಗೋಸ್ಕರ ಇಪ್ಪತ್ತು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಹಾಸ್ಟೆಲನ್ನು ಕಟ್ಟಿಸಿ ಅಲ್ಲಿಯ ವೀರಶೈವ ವಿದ್ಯಾವರ್ಧಕ ಸಂಘದವರಿಗೆ ಒಪ್ಪಿಸಿದ ರಾ||ರಾ|| ವೀರಪ್ಪಣ್ಣ ತೊಗರಿ ಇವರಿಗೆ ಈ ವೀರಶೈವ ತರುಣ ಸಮ್ಮೇಲನವು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ. (೪) ಕರ್ನಾಟಕ ಲಿಂಗಾಯತ ವಿದ್ಯಾವರ್ಧಕ ಸಂಘ ಬೆಳಗಾವ ಇವರು ಧಾರವಾಡದಲ್ಲಿ ಹೊಸದಾಗಿ ಒಂದು ಇಂಗ್ಲೀಷ ಹಾಯ ಸ್ಕೂಲನ್ನು ಸ್ಥಾಪಿಸಿದ್ದಕ್ಕಾಗಿ ಈ ವೀರಶೈವ ತರುಣರ ಪರಿಷತ್ತು ಅವರನ್ನು ಅಭಿನಂದಿಸುತ್ತದೆ. ಮತ್ತು ಈ ಸಂಘವು ಕರ್ನಾಟಕದೊಳಗೆಲ್ಲ ವಿದ್ಯಾಪ್ರಸಾರ ಮಾಡುವ ಜವಾಬದಾರಿಯನ್ನು ತಕ್ಕೊಂಡಿದ್ದರಿಂದ ಅವರಿಗೆ ಧನಸಹಾಯವು ಅತ್ಯವಶ್ಯವಿದ್ದ ಮೂಲಕ ಶ್ರೀಗಳವರು ಮೊದಲ್ಗೊಂಡು ಎಲ್ಲರೂ ಈ ಸಂಘಕ್ಕೆ ತನು ಮನ ಧನದಿಂದ ಸಹಾಯಮಾಡಬೇಕೆಂದು ಈ ವೀರಶೈವ ತರುಣರ ಪರಿಷತ್ತು ವಿನಂತಿ ಮಾಡಿಕೊಳ್ಳುತ್ತದೆ. ಮತ್ತು ಇದರಂತೆ ಹಾಯ ಸ್ಕೂಲ ಕಾಲೇಜುಗಳಿಗೆ ಸಹಾಯ ಭೂತವಾದ ಶ್ರೀ ಮುರಘರಾಜೇಂದ್ರ ಬೋರ್ಡಿಗೆ ಸಹಾಯ ಮಾಡಬೇಕೆಂದು ಈ ಪರಿಷತ್ತು ಸೂಚಿಸುತ್ತದೆ. (೫) ಸರಕಾರಿ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣದ ವೆವಸ್ಥೆ ಇಲ್ಲದ್ದರಿಂದ ಈಗಿನ ನಮ್ಮ ಸಮಾಜದ ವತಿಯಿಂದ ಸ್ಥಾಪಿತವಾದ ಮತ್ತು ಮುಂದೆ ಸ್ಥಾಪನವಾಗುವಂಥ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣದ ಬಗ್ಗೆ ವೆವಸ್ಥೆ ಮಾಡಲಿಕ್ಕೆ ಪ್ರಯತ್ನಿಸಬೇಕೆಂದು ಈ ಸಮ್ಮೇಲನವು ಸೂಚಿಸುತ್ತದೆ. (೬) ಪ್ರಬೋಧ ಪತ್ರಿಕೆಯ ಸಾರೋದ್ಧಾರಕ್ಕೋಸ್ಕರ "ಪ್ರಬೋಧ ಪತ್ರಿಕಾ ಫಂಡ್" ಎಂಬ ಫಂಡನ್ನು ಏರ್ಪಡಿಸಿ, ಈ ಫಂಡಿಗೆ ಒಂದು ಸಾವಿರ ರೂಪಾಯಿ ಕೂಡಿದ ಕೂಡಲೆ, ಈ ಮುಂಚೆ ಹುಬ್ಬಳ್ಳಿ ಸಮ್ಮೇಲನದಲ್ಲಿ ಈ ಪತ್ರಿಕೆಯ ವೆವಸ್ಥೆಗಾಗಿ ನೇಮಕವಾದ ಕಮಿಟಿಯ ಸಹಾಯದಿಂದ ಪ್ರಕಟಿಸಲು ಉಪಕ್ರಮಿಸಬೇಕಾಗಿ ಈ ಸಮ್ಮೇಲನವು ಸೂಚಿಸುತ್ತದೆ. (೭) ನಮ್ಮ ಸಮಾಜದಲ್ಲಿ ಅಲ್ಲಲ್ಲಿಗೆ ವಾಚಕಾಲಯಗಳು ಏರ್ಪಡಿಸಲ್ಪಟ್ಟಿರುವದನ್ನು ನೋಡಿ, ಈ ಸಮ್ಮೇಲನವು ಇಂಥ ಸಂಸ್ಥೆಗಳ ಚಾಲಕರನ್ನು ಅಭಿನಂದಿಸುತ್ತದೆ. ಇನ್ನು ಹೆಚ್ಚು ವಾಚನಾಲಯಗಳನ್ನು ಸ್ಥಾಪಿಸಲು ಪ್ರಯತ್ನಿಸುವಂತೆ ತರುಣರಿಗೆ ಸೂಚಿಸುತ್ತದೆ. ಎಲ್ಲ ವಾಚನಾಲಯಗಳನ್ನು ಸುವ್ಯವಸ್ಥೆಯಿಂದ ನಡಿಸುವಂತೆ ಚಾಲಕರಿಗೆ ವಿನಂತಿ ಮಾಡಿಕೊಳ್ಳುತ್ತದೆ. ವಾಚನಾಲಯಗಳ ಹೆಚ್ಚಳವಾಗಬೇಕಾದರೆ ಉತ್ತಮ ಪೋಸ್ಟಲ್ ವೆವಸ್ಥೆ ಇರಬೇಕಾದ್ದರಿಂದ, ಸರಕಾರಕ್ಕೆ ಈ ಸಮ್ಮೇಲನವು ಹೆಚ್ಚು ಬ್ರ್ಯಾಂಚ ಆಫೀಸುಗಳನ್ನು ಏರ್ಪಡಿಸುವದಕ್ಕೆ ತಿಳಿಸುತ್ತದೆ. (೮) ಈ ಸಮ್ಮೇಲನದವರು ಬ್ರಿಟಿಷ ಸಾರ್ವಭೌಮರಿಗೆ ತಮ್ಮ ರಾಜನಿಷ್ಠೆಯನ್ನು ವ್ಯಕ್ತಪಡಿಸುತ್ತಾರೆ. (೯) ನಮ್ಮ ಸಮಾಜದ ಸಾಂಪತ್ತಿಕ ಸ್ಥಿತಿಯು ಸುಧಾರಿಸುವ ಕುರಿತು ಪ್ರತಿಯೊಬ್ಬ ವೀರಶೈವನು ಸ್ವದೇಶೀ ಪದಾರ್ಥಗಳನ್ನೇ ಅದರಲ್ಲಿಯೂ ನಮ್ಮ ಸಮಾಜದವರಿಂದಲೇ ತಯಾರಾದ ವಸ್ತುಗಳನ್ನೇ ಉಪಯೋಗಿಸಬೇಕೆಂದು ಈ ಸಮ್ಮೇಲನವು ಸೂಚಿಸುತ್ತದೆ.

(೧೦) ಈ ಸಮಾಜದ ತರುಣ ಸಂಘದ ಮೆಂಬರರು ಹೆಚ್ಚು ಜಾಗ್ರತೆಯಿಂದಲೂ ಮತ್ತು ಸುಸಂಘಟಿತವಾಗಿಯೂ ಸಮಾಜಸೇವೆಯನ್ನು ಮಾಡಬೇಕೆಂದು ಈ ಪರಿಷತ್ತು ಸೂಚಿಸುತ್ತದೆ. (೧೧) ಮುಂಬೈಯಲ್ಲಿ ವೀರಶೈವ ಆಶ್ರಮವನ್ನು ಸ್ಥಾಪಿಸಲು ಶ್ರೀಮನ್ನಿರಂಜನ ಶ್ರೀ ಬೀಳೂರ ಶ್ರೀ ಗುರುಬಸವಸ್ವಾಮಿಗಳವರಿಗೆ ಈ ಸಮ್ಮೇಲನದವರು ಪ್ರಾರ್ಥಿಸುತ್ತಾರೆ. ಮತ್ತು ಈ ಆಶ್ರಮದ ವಿಷಯವಾಗಿ ಆಲೋಚಿಸಲು ಶ್ರೀಯುತ ಲೋಚನಪ್ಪ ಗೊಂಗಡಿ ಬಾಗಲಕೋಟೆ ಶ್ರೀಯುತ ಎಸ್. ಬಿ. ಹಿರೇಮಠ ಬಿ. ಎ., ಎಲ್ ಎಲ್. ಬಿ., ವಕೀಲ ಹಾವೇರಿ ಶ್ರೀಯುತ ಹರ್ಡೇಕರ ಮಂಜಪ್ಪನವರು ದಾವಣಗೆರೆ, ಶ್ರೀಯುತ ಎಸ್. ಎಸ್. ಕೇಸರಿ ಬಿ. ಎ. ಈ ನಾಲ್ಕು ಜನರ ಒಂದು ಕಮಿಟಿಯನ್ನು ಈ ಸಮ್ಮೇಲನವು ನಿರ್ಮಿಸಿದೆ. (೧೨) ಸಮಾಜದ ಹಿತವನ್ನೇ ಮುಂದಿಟ್ಟುಕೊಂಡು ವೀರಶೈವ ಸಮಾಜದ ಒಕ್ಕಟ್ಟಿಗೆ ವಿಘ್ನವಾಗುವಂಥ ಕೆಲವು ಅಜ್ಞಾನದಿಂದುಂಟಾದ ಪದ್ಧತಿಗಳನ್ನು ತೆಗೆದುಹಾಕಿ ಸಮಾಜದ ಏಕೀಕರಣ ಮಾಡತಕ್ಕದ್ದು. (೧೩) ವೀರಶೈವ ಮತ ತತ್ವಗಳು ಸಕಲ ವೀರಶೈವ ಸ್ತ್ರೀ ಪುರುಷರುಗಳಿಗೂ ತಿಳಿದು ಅವರು ಧರ್ಮಪರಾಯಣರಾಗಬೇಕಾದರೆ, ದೀಕ್ಷಾ ಸಂಸ್ಕಾರವನ್ನು ಸಕಲ ವೀರಶೈವರು ಹೊಂದುವದು ಅವಶ್ಯವೆಂದು ಈ ಸಮ್ಮೇಲನವು ಅಭಿಪ್ರಾಯಪಡುತ್ತದೆ. (೧೪) ಅನ್ಯ ಸಮಾಜದವರಲ್ಲಿ ನಮ್ಮ ಸಮಾಜದ ವಿಷಯಕ್ಕೆ ಕಂಡುಬರುವ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು ನಮ್ಮ ಮತ ಸಿದ್ಧಾಂತವನ್ನು ಆಯಾ ಭಾಷೆಗಳಲ್ಲಿ ಬರೆಯಲಿಕ್ಕೆ ಯಾವತ್ತೂ ತರುಣರು ಸಹಾಯಕರಾಗಬೇಕೆಂದು ಈ ಸಮ್ಮೇಲನವು ಸೂಚಿಸುತ್ತದೆ. (೧೫) ನಮ್ಮ ವೀರಶೈವರಲ್ಲಿ ಒಂದು ತರದ ಜಾಗ್ರತೆಯನ್ನುಂಟುಮಾಡಲು ನಮ್ಮ ಸಮಾಜದ ಪ್ರಸಿದ್ಧ ಪುರುಷರ ಚರಿತ್ರೆಗಳನ್ನು ಬರೆಯಿಸಲು ಎಲ್ಲರೂ ಚೆನ್ನಾಗಿ ಹೆಣಗಾಡಬೇಕಾಗಿ ಈ ಸಮ್ಮೇಲನವು ವಿನಂತಿ ಮಾಡಿಕೊಳ್ಳುತ್ತದೆ. ನಮ್ಮ ಸಮಾಜದವರಿಂದ ನಡೆಯುತ್ತಿರುವ ವಿದ್ಯಾಲಯಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡಬೇಕೆಂಬ ವಿಷಯವಾಗಿ ಶ್ರೀಮನ್ನಿರಂಜನ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಮಾಡಿದ ಭಾಷಣವೂ, ದೀಕ್ಷಾ ವಿಷಯದಲ್ಲಿ ಶ್ರೀಮನ್ನಿರಂಜನ ಶ್ರೀ ಮಹಾಂತ ಶಿವಯೋಗಿಗಳವರೂ ಮತ್ತು ಶ್ರೀಯುತ ಕಿಣಗಿ ಬಸವಲಿಂಗಪ್ಪನವರೂ ಮಾಡಿದ ವ್ಯಾಖ್ಯಾನಗಳೂ ತರುಣರ ಕರ್ತವ್ಯಗಳ ವಿಷಯವಾಗಿ ಇಲ್ಲಿಯ ಮಾಮಲೇದಾರರಾದ ಶ್ರೀಯುತ ಗಿಲಗಿಂಚಿಯವರು ಮಾಡಿದ ಉಪನ್ಯಾಸವೂ ಮತ್ತು 'ಪ್ರಬೋಧ' ಪತ್ರಿಕೆಯ ಜೀರ್ಣೋದ್ಧಾರದ ಸಂಬಂಧವಾಗಿ ಶ್ರೀಯುತ ಹರ್ಡೇಕರ ಮಂಜಪ್ಪನವರು ಮಾಡಿದ ಭಾಷಣವೂ ಅತಿ ಮಹತ್ವವಾದವುಗಳಾಗಿಯೂ ಬಹು ಪರಿಣಾಮಕಾರಿಗಳಾಗಿಯೂ ಇದ್ದವು. ಪ್ರಬೋಧ ಪತ್ರಿಕಾ ಫಂಡಿಗೆ ಸಭೆಯಲ್ಲಿಯೇ ಸಾಧಾರಣ ೩೦೦ ರೂಪಾಯಿಗಳವರೆಗೆ ಸಹಾಯ ದೊರೆಯಿತು. ಶ್ರೀ ಉಭಯ ಮಹಾಸ್ವಾಮಿಗಳವರು ಆರಂಭದಲ್ಲಿಯೇ ಇಪ್ಪತ್ತೈದು ಇಪ್ಪತ್ತೈದು ರೂಪಾಯಿಗಳನ್ನು ಆಶೀರ್ವದಿಸಿ, ಈ ಫಂಡು ಶಾಶ್ವತವಾದ ಅಭಿವೃದ್ಧಿಯನ್ನು ಹೊಂದುವಂತೆ ಮಾಡಿದ್ದಕ್ಕೆ ಪತ್ರಿಕಾಭಿಮಾನಿಗಳೆಲ್ಲರೂ ಉಭಯ ಮಹಾಸ್ವಾಮಿಗಳವರಿಗೆ ಅತ್ಯಂತ ಋಣಿಗಳಾಗಿದ್ದಾರೆ. ಶ್ರೀಮನ್ನಿರಂಜನ ಶ್ರೀ ಮಹಾಂತ ಶಿವಯೋಗಿಗಳವರು ತಾವು ಇನ್ನು ಮೇಲೆ ನಮ್ಮ ಸಮಾಜದವರಿಂದ ನೂತು ನೇಯಲ್ಪಟ್ಟ ಬಟ್ಟೆಯನ್ನೇ ಉಪಯೋಗಿಸುತ್ತೇವೆಂದು ಸಭೆಯಲ್ಲಿಯೇ ಪ್ರತಿಜ್ಞೆ ಮಾಡಿದ್ದರಿಂದ ಸಭಿಕರಲ್ಲಿ ಮುಖ್ಯವಾಗಿ ತರುಣರಲ್ಲಿ ಬಹು ಪರಿಣಾಮಕಾರಿಯಾಯಿತು. ಈ ಪ್ರಕಾರ ೫ನೆಯ ಸಮ್ಮೇಲನವು ಬಹು ಸಂಭ್ರಮದಿಂದ ಜರುಗಿದ್ದಲ್ಲದೆ, ಕಾರ್ಯರೂಪದಲ್ಲಿ ಎಷ್ಟೋ ಮಟ್ಟಿಗೆ ಬರುವಂತೆ ಪರಿಣಮಿಸಿತು. ಮುಂದಿನ ಸಮ್ಮೇಲನವನ್ನು ಬೆಂಗಳೂರು ಮತ್ತು ವಿಜಾಪೂರದವರು ತಾವು ಕೊಡಿಸುವದಾಗಿ ಕೇಳಿದ್ದಾರೆ. ಹೊಸದಾಗಿ ಆರಿಸಲ್ಪಟ್ಟ ವೀರಶೈವ ತರುಣ ಸಮ್ಮೇಲನದ ಕಾರ್ಯನಿರ್ವಾಹಕ ಮಂಡಳಿಯವರು ಯಾವ ಸ್ಥಲವನ್ನು ಒಪ್ಪುತ್ತಾರೆಯೋ ಅಲ್ಲಿ ಮುಂದಿನ ವರ್ಷದ ಸಮ್ಮೇಲನವು ಕೂಡುವದು.

ವೀರಪ್ಪ ಕಿಣಗಿ ಜನರಲ್ ಸೆಕ್ರೆಟರಿ.

ಬಡವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲು, ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸ ಮಾಡುತ್ತಿರುವ ಬಡ ವೀರಶೈವ ವಿದ್ಯಾರ್ಥಿಗಳು ಜುಲೈ ತಾ|| ೩೧ರ ಒಳಗಾಗಿ ಸೆಕ್ರೆಟರಿಯವರಿಗೆ [illegible] (Printed Prescribed Form) ನಲ್ಲಿ ಅರ್ಜಿ ಬರೆದುಕೊಳ್ಳತಕ್ಕದ್ದು. ಅರ್ಜಿಫಾರಂಗಳು ಬೇಕಾದಲ್ಲಿ ಒಂದಾಣೆ ಸ್ಟಾಂಪು ಕಳುಹಿಸಿ ಅಡ್ರೆಸ್ ತಿಳಿಸಿದಲ್ಲಿ ಕಳುಹಿಸಲ್ಪಡುತ್ತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅರ್ಜಿ ಜೊತೆಯಲ್ಲಿ ಸರ್ಟಿಫಿಕೇಟುಗಳನ್ನು ಕಳುಹಿಸಿಕೊಡಬೇಕು. ಸರ್ಟಿಫಿಕೇಟುಗಳು ಇಲ್ಲದೆಯೂ ಮತ್ತು ವಾಯಿದೆ ಮೀರಿಯೂ ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

ಜಿ. ಪರಮಶಿವಯ್ಯ, ಬಿ.ಎ.,ಎಲ್‌ಎಲ್.ಬಿ.,
ಸೆಕ್ರೆಟರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ,
ಬೆಂಗಳೂರು ಸಿಟಿ.

ಲಗ್ನದ ಫಂಡು.

1. ನೆಲಮಂಗಲದ ತಾ|| ಬಳಗೆರೆ ಮ|| ಶಿದ್ದಪ್ಪನವರ ಮಗಳ ಲಗ್ನದಲ್ಲಿ ಹುಲಿಕುಂಟೆ ಯಜಮಾನ್ ಮ|| ಚೆನ್ನಪ್ಪನವರ ಮೂಲಕ 2-0-0.

2. ದೊಡ್ಡಬಳ್ಳಾಪುರ ತಾ|| ಹುಲಿಕುಂಟೆಹಳ್ಳಿ ಬಸಪ್ಪನವರ ಮಗಳ ಲಗ್ನದಲ್ಲಿ ಮ|| ಯಜಮಾನ್ ಚೆನ್ನಪ್ಪನವರ ಮೂಲಕ 1-0-0.

3. ಚನ್ನಗಿರಿ ತಾ|| ಹೊದಿಗೆರೆ ಸಾಹುಕಾರ್ ಮ|| ಅಡವಪ್ಪಶೆಟ್ಟರ ಪುತ್ರ ಮಲ್ಲಪ್ಪನವರ ಲಗ್ನದಲ್ಲಿ ಮ|| ಚನ್ನಗಿರಿ ಸಾಹುಕಾರ್ ಸಿ. ನಂಜುಂಡಯ್ಯನವರ ಮೂಲಕ 50-0-0.

4. ಮೇಲ್ಕಂಡ ಲಗ್ನದಲ್ಲಿ ಹೆಣ್ಣಿನ ಕಡೆಯವರಿಂದ ದಾವಣಗೆರೆ ಮ|| ಕೊಟಗಿ ಬಸೆಟ್ಟಪ್ಪನವರಿಂದ ಫಂಡಿಗಾಗಿ ಮ|| ಚನ್ನಗಿರಿ ಸಾಹುಕಾರ್ ಸಿ. ನಂಜುಂಡಯ್ಯನವರ ಮೂಲಕ 10-0-0.

5. ತುಮಕೂರು ತಾ|| ಮಾವಿನಕುಂಟೆಯಲ್ಲಿ ನಡೆದ ಲಗ್ನದಲ್ಲಿ ಹೆಣ್ಣಿನ ತಂದೆ ಮ|| ಅಡವಿಯಪ್ಪನವರಿಂದ 1-0-0, ವರನ ತಂದೆ ಮ|| ಮೈಸೂರು ಕಾಡಪ್ಪನವರಿಂದ 1-0-0. ಬೆಳ್ಳಾವೆ ಇಡಕನಹಳ್ಳಿ ರೇವಣ್ಣನವರ ಮಗಳ ಲಗ್ನದಲ್ಲಿ ಗಂಡಿನವರಿಂದ 2-0-0, ಮತ್ತು ಹೆಣ್ಣಿನವರಿಂದ 1-0-0 ಜುಮ್ಲಾ 5 ರೂ. ಗಳು ಬೆಳ್ಳಾವೆ ಅಡಿಕೆಅಂಗಡಿ ಮ|| ಗ. ವಿ. ಬಸೆಟ್ಟಪ್ಪನಿಂದ ಜಮಾ.

6. ಕುಣಿಗಲ್ ತಾ|| ಹುಲಿಯೂರು ದುರ್ಗದ ಮ|| ಮಠದ ಹುಚ್ಚಪ್ಪದೇವರ ಮೂಲಕ ನಿಡಸಾಲೆ ಬಳೆಮಾದಪ್ಪನವರ ಮಗಳ ಲಗ್ನದಲ್ಲಿ ಹೆಣ್ಣಿನವರಿಂದ 2-0-0, ಗಂಡಿನವರಿಂದ ಮ|| ತೋಟಗಾನಹಳ್ಳಿ ಭದ್ರಶೆಟ್ಟಪ್ಪನವರಿಂದ 3-0-0 ಜುಮ್ಲಾ 5-0-0. ಗಳು.

7. ಬೆಂಗಳೂರು ಸಿಟಿ ಅರಳೇಪೇಟೆ ಪುಟ್ಟಬಸಪ್ಪನವರ ನಂಜುಂಡಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಅರಳೇಪೇಟೆ ದೇಶದಶೆಟ್ಟರು ಮ|| ಬಸವಲಿಂಗಶೆಟ್ಟರವರ ಮೂಲಕ 2-0-0.

8. ಚಿಕ್ಕಮಗಳೂರು ತಾ|| ಅರಿಶಿನಕುಪ್ಪೆಗ್ರಾಮದ ಪಟೇಲ್ ದೇವೀಗೌಡರ ಪುತ್ರಿ ದೇವೀರಮ್ಮನನ್ನು ಚಿಕ್ಕಮಸೆಗ್ರಾಮದ ಪಟೇಲ್ ದೇವೀಗೌಡರ ಪುತ್ರ ಶಿವೇಗೌಡರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ವಧೂವರರಿಂದ ವಾಕ್ಸಿನೇಟರ್ ಡಿ. ನಂಜಪ್ಪನವರಿಂದ ಸ್ಟಾಂಪ್ಸ್ ಮೂಲಕ 3-14-0.

9. ಕ್ಲೋಸ್‌ಪೇಟೆ ತಾ|| ಸುಗ್ಗನಹಳ್ಳಿ ಪಟೇಲ್ ಚೆನ್ನಪ್ಪನವರ ಮಗಳ ಲಗ್ನದಲ್ಲಿ ವಧೂವರರಿಂದ ಬಿಡದಿ ಮ|| ಎಚ್. ಜಿ. ಶಿವರುದ್ರಪ್ಪನವರ ಮೂಲಕ 4-0-0.

10. ರಾಯಚೂರು ಡಿ|| ಆಲಂಪೂರು ನಂದುಲಮಠದ ವೇ|| ರುದ್ರಮುನಿಸ್ವಾಮಿಗಳ ಲಗ್ನದಲ್ಲಿ ವಧೂವರರಿಂದ ಫಂಡಿಗಾಗಿ ಮ|| ಬೆಂಗಳೂರು ವೇ|| ಗುರುಲಿಂಗಶಾಸ್ತ್ರಿಗಳ ಮೂಲಕ 10-0-0.

11. ಕೋಲಾರದ ಮ|| ಚಿಕ್ಕಚೆನ್ನಂಜಪ್ಪನವರ ಮನೆ ಲಗ್ನದಲ್ಲಿ ವಧೂವರರಿಂದ ಫಂಡಿಗಾಗಿ ಬೆಂಗಳೂರು ಗ್ರಂದಿಗೆ ಅಂಗಡಿ ಮ|| ಪಿ. ವೀರಭದ್ರಪ್ಪನವರ ಮೂಲಕ 6-0-0.

12. ಗುಬ್ಬಿ ತಾ|| ಅದಲಗೆರೆ ಮಠದ ಗುರುಪಾದಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ವಧೂವರರಿಂದ ಫಂಡಿಗಾಗಿ ಮ|| ಬೆಂಗಳೂರು ಮಾವಿನಕೆರೆ ರುದ್ರಪ್ಪನವರ ಮೂಲಕ 7-0-0.

13. ನೆಲಮಂಗಲದ ತಾ|| ಬೇಗೂರು ಮ|| ಚಿಕ್ಕಣ್ಣಶೆಟ್ಟರ ಮಗಳನ್ನು ಶಿವಗಂಗೆ ಸಾಹುಕಾರ್ ಮ|| ರೇವಣ್ಣನವರ ಪುತ್ರರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ವಧೂವರರಿಂದ ಫಂಡಿಗಾಗಿ ಮ|| ಗುಬ್ಬಿ ಯಜಮಾನ್ ರೇವಣ್ಣನವರಿಂದ 12-0-0.

14. ಶಿವಮೊಗ್ಗ ಡಿ|| ಶಿಕಾರಿಪುರ ತಾ|| ಸಾಲೂರು ಹಿರೇಮಠದ ಪಟ್ಟಾಧಿಕಾರದಲ್ಲಿ ಮ|| ಚನ್ನವೀರಯ್ಯನವರಿಂದ 10-0-0.

15. ಶಿವಗಂಗೆ ಮ|| ಗಂಗಾಧರಶೆಟ್ಟರ ಮೂಲಕ ತನ್ಮಡಿಹಳ್ಳಿ ಮ|| ಶಿದ್ದರಾಮಗೌಡರ ಮಗಳ ಲಗ್ನದಲ್ಲಿ 5-0-0.

16. ತುಮಕೂರು ತಾ|| ಶೀತಕಲ್ಲಿನಲ್ಲಿರುವ ಮ|| ಅಡವಿಯಪ್ಪನವರ ಪುತ್ರಿ ಲಗ್ನದಲ್ಲಿ ವಧೂವರರ ಕಡೆಯಿಂದ ಫಂಡಿಗಾಗಿ ಮ|| ತ್ಯಾಮಗೊಂಡ್ಲು ಜವಳಿ ಹುಚ್ಚಪ್ಪನವರ ಮೂಲಕ 5-0-0.

17. ಚಾಮರಾಜನಗರದ ತಾ|| ಆಲೂರು ಅಪ್ಪೆಗೌಡರ ಮೂಲಕ ಮ|| ವೀರಪ್ಪನವರ ಮಲ್ಲಪ್ಪನವರಿಂದ ಲಗ್ನದಲ್ಲಿ 2-0-0, ಶಿದ್ದಲಿಂಗಪ್ಪನವರ ಮಗ ದ್ಯಾವಪ್ಪನವರಿಂದ ಲಗ್ನದಲ್ಲಿ 2-0-0, ಬಸಲಿಂಗದೇವರಿಂದ ಲಗ್ನಕಾಲದಲ್ಲಿ 2-0-0, ಹೊನ್ನೇಹಳ್ಳಿ ಮಾರಶೆಟ್ಟರಿಂದ 6-0-0, ರುದ್ರಾರಾಧ್ಯರ ಮನೆ ಲಗ್ನದಲ್ಲಿ 3-0-0 ಜುಮ್ಲಾ 15-0-0.

18. ಬೌರಿಂಗ್‌ಪೇಟೆಯಲ್ಲಿರುವ ಮ|| ಎಂ. ಕೆ. ಸಂಗಪ್ಪನವರ ಮೂಲಕ ಮ|| ಸಂಗಪ್ಪನವರ ಕುಮಾರ ನಂಜುಂಡಪ್ಪನವರ ಲಗ್ನದಲ್ಲಿ ವಧೂವರರ ಕಡೆಯಿಂದ 3-0-0, ಬೌರಿಂಗ್‌ಪೇಟೆ ಚಿಕ್ಕಸಂಗಪ್ಪನವರ ಲಗ್ನದಲ್ಲಿ 1-0-0 ಜುಮ್ಲಾ 4-0-0 ಗಳು.

19. ಹಾಸನ ತಾ|| ಬೆಳಗೋಡು ಮ|| ಎಸ್. ಸೊಗೂರಪ್ಪನವರ ಮೂಲಕ ರಾಯಚೂರು ಮಡಿವಾಳಪ್ಪಶೆಟ್ಟರ ಮಗಳನ್ನು ಅರಸೀಕೆರೆ ಪಲ್ಲೀದ ವೀರಪ್ಪಶೆಟ್ಟರ ಮಗ ಚಿ|| ರಾಜಪ್ಪನೆಂಬುವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ವಧೂವರರಿಂದ 2-0-0.

20. ಕೋಲಾರ ತಾ|| ಹೊಳೂರಲ್ಲಿರುವ ಮ|| ರುದ್ರಪ್ಪನವರ ಮನೆಯಲ್ಲಿ ನಡದ ಲಗ್ನದಲ್ಲಿ ಮ|| ಬೆಂಗಳೂರು ದೇಶದಶೆಟ್ಟರು ಬಸವಲಿಂಗಶೆಟ್ಟರ ಮೂಲಕ 3-0-0.

21. ಮದ್ದೂರು ಮ|| ಕೆ. ಚೆನ್ನಮಲ್ಲಪ್ಪನವರ ಮೂಲಕ ಮಂಡ್ಯ ತಾ|| ಗುತ್ತಲುಗ್ರಾಮದ ಮ|| ಗಂಗಪ್ಪನವರ ಮನೆಯಲ್ಲಿ ನಡದ ಲಗ್ನದಲ್ಲಿ 5-0-0 ಮತ್ತು ಮದ್ದೂರು ಮ|| ಭೋಗಯ್ಯನವರ ಮಕ್ಕಳು ನಂಜಪ್ಪನವರ ಲಗ್ನದಲ್ಲಿ 3-0-0 ಜುಮ್ಲಾ 8-0-0.

22. ಹುಣಸೂರು ತಾ|| ರಾಮಂದೂರು ಮ|| ಶಿವಪ್ಪನವರ ಚೆನ್ನಪ್ಪನವರ ಮಗಳ ಲಗ್ನದಲ್ಲಿ ಫಂಡಿಗಾಗಿ ಮ|| ಯಡಕೊರೆ ಶೆಟ್ಟಿಗಾರ ಪುಟ್ಟಣ್ಣಶೆಟ್ಟರ ಮೂಲಕ 5-0-0.

23. ಮಾಗಡಿ ತಾ|| ಕುದೂರು ಹೋಬಳಿ ಆದರಂಗಿಗ್ರಾಮದ ಮ|| ಯಜಮಾನ್ ಲಿಂಗದೇವರಪ್ಪನವರ ಮಕ್ಕಳು ದೊಡ್ಡಲಿಂಗಯ್ಯನವರ ಲಗ್ನದಲ್ಲಿ ಮ|| ಪಟೇಲ್ ಮುನಿಲಿಂಗಪ್ಪನವರ ಮೂಲಕ 2-0-0.

24. ತಿಪಟೂರು ಗ್ರಂದಿಗೆ ಮ|| ಗಿರಿಯಪ್ಪನವರ ಮಗಳ ಲಗ್ನದಲ್ಲಿ ಹೆಣ್ಣಿನವರಿಂದ 5-0-0 ಗಂಡಿನ ಪರವಾಗಿ ಹೊಳೇನರಸೀಪುರದ ಮ|| ರಾಚಯ್ಯನವರಿಂದ 20-0-0 ಗಳು ಒಟ್ಟು ಮ|| ಡಿ. ಎಸ್. ಮಲ್ಲಪ್ಪನವರ ಮೂಲಕ 25-0-0. ಜುಮ್ಲಾ 201-14-0.

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ.,
ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ನೋಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿಮಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿಮಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗ್ಯೆರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಮಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
21 ಬಳ್ಳಾರಿ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ



ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಶರ್ಷ ವಜ್ರದ ಬೆಂಡೋಲೆ. 15

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬಿನಾಯಕನ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

೧೯೨೨ನೆಯ ಇಸವಿ ಜೂನ್ ತಾ|| ೨೫ ರಿಂದ ೧೯೨೨ನೆಯ ಜುಲೈ ತಾ|| ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ದುಂದುಭಿನಾಮಸಂವತ್ಸರದ ಜ್ಯೇಷ್ಠ ಬಹುಳ ಅಮಾವಾಸ್ಯೆಯಿಂದ ಆಷಾಢ ಶುದ್ಧ ಸಪ್ತಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನಮಾ
25	ಭಾನು	ಅಮಾ	3-29	ಆರ್ದ್ರಾ	54-8	12
26	ಸೋಮ	ಪಾಡ್ಯ	5-35	ಪುನ	52-16	13
27	ಮಂಗಳ	ಬಿ-ಉ	1-42 55-45	ಪುಷ್ಯ	49-29	14
28	ಬುಧ	ಚೌತಿ	51-52	ಆಶ್ಲೇ	46-9	15
29	ಗುರು	ಪಂಚ	45-54	ಮಘಾ	42-20	16
30	ಶುಕ್ರ	ಷಷ್ಠಿ	39-42	ಪುಬ್ಬಾ	38-21	17
[illegible]	[illegible]	ಸಪ್ತ	33-25	ಉತ್ತ	33-46	18

ಶುಕ್ರವಾರ [illegible] ಅರಸಿನವರ ಕುಮಾರರ ವರ್ಧಂತಿ. (2) [illegible]

ಮೈಸೂರ್ [illegible] ಪ್ರೆಸ್ಸಿನಲ್ಲಿ ಮುದ್ರಿಸಿ [illegible] : ವೈ. ವಿರೂಪಾಕ್ಷಯ್ಯನವರಿಂದ [illegible] ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಳಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

REGISTERED NO. M. 124.

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಜೂಲೈ ತಾರೀಖು ೨ ನೆಯ ಭಾನುವಾರ (ಸಂಚಿಕೆ ೨೭

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿಯೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪುರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
25 ಮೈಸೂರು.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ನೋಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು [illegible] ಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿಮಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿಮಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗ್ಯೆರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಮಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
22 ಬಳ್ಳಾರಿ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ



ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಶರ್ಷ ವಜ್ರದ ಬೆಂಡೋಲೆ. 16

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ತವಾದ ಪುಂಡರೀ[illegible] ಅಂಡ್ ಕಂಪೆನಿ,
[illegible]ರು. ಇದರಲ್ಲಿ ಪುಂಡರೀಕನ [illegible] ಮದರಾಸು.
[illegible]ಗುರುಲಿಂಗಪ್ಪನವರು ಮತ್ತು [illegible]

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ.

1. ಕ್ಯಾಪ್ಟನ್ ವೈ. ವಿಶ್ವನಾಥಯ್ಯನವರು, ಯುವಸಾರ್ವಭೌಮರವರು (ಪ್ರಿನ್ಸ್ ಆಫ್ ವೇಲ್ಸ್‌ರವರು) ಮೈಸೂರುದೇಶಕ್ಕೆ ದಯಮಾಡಿಸಿದುದರ ಜ್ಞಾಪನಾರ್ಥವಾಗಿ ಐದು ಸಹಸ್ರ ರೂಪಾಯಿಗಳನ್ನು ಮೇಲ್ಕಂಡ ಫಂಡಿನ ಮೂಲಧನಕ್ಕೆ ಕೊಟ್ಟು, ಸದರಿ ಮೊಬಲಗಿನ ವೃದ್ಧ್ಯಂಶವನ್ನು ವೈದ್ಯ ವಿದ್ಯಾಭ್ಯಾಸ ಮಾಡಲಿಚ್ಛಿಸುವ ಮೈಸೂರುದೇಶದ ವೀರಶೈವ ವಿದ್ಯಾರ್ಥಿ ಅಥವ ವಿದ್ಯಾರ್ಥಿಗಳಿಗೆ ಕೊಡುವಂತೆ ಉದ್ದೇಶಿಸಿರುತ್ತಾರೆ.

2. ಧರ್ಮಕರ್ತರ ಉದ್ದೇಶದಂತೆ ಇದೇ ಜೂನ್ ಲಾಗಾಯ್ತು ಮಾಹೇಯಾನ 25 ರೂ. ನಂತೆ ವೇತನವನ್ನು ಮದರಾಸು ಅಥವಾ ಬೊಂಬಾಯಿ ಸರ್ಕಾರದ ಮೆಡಿಕಲ್ ಕಾಲೇಜಿನಲ್ಲಿ ಓದಲಪೇಕ್ಷಿಸುವ ಮೈಸೂರುದೇಶದ ವೀರಶೈವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡಲು ನಿಶ್ಚಯಿಸಲ್ಪಟ್ಟಿದೆ. ಸಹಾಯವನ್ನು ಹೊಂದಲಪೇಕ್ಷಿಸುವವರು ಕೂಡಲೆ ಫಂಡಿನ ಸೆಕ್ರೆಟರಿಯವರಿಗೆ ಬರೆದುಕೊಳ್ಳತಕ್ಕದ್ದು.

ಬೆಂಗಳೂರು. ತಾ|| 15-6-22 } ಜಿ. ಪರಮಶಿವಯ್ಯ ಬಿ.ಎ.,ಎಲ್‌ಎಲ್., ಬಿ. ಅಡ್ವೋಕೇಟ್ ಮತ್ತು ಸೆಕ್ರೆಟರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ, ಬೆಂಗಳೂರು.

ಮೈಸೂರು ಸ್ಟಾರ್.

ವರ್ಣದ್ವೇಷ.

ಪಾರ್ಲಿಮೆಂಟಿನಲ್ಲಿ ಕೋಳಿ.

ವೆಂದು ಸಂತೋಷಪಡೋಣ. ಪಾಶ್ಚಾತ್ಯ ದೇಶೀಯರು ಪೌರ್ವಾತ್ಯದ ಸಾತ್ವಿಕ ಆತ್ಮಬಲಸಾಧನ ಕ್ರಮವನ್ನಾದರೂ ನೋಡಿ ಎಚ್ಚೆತ್ತು ಉದ್ಧಾರವಾಗಲಿ.

MYSORE MUNICIPAL AFFAIRS.

We have been making comments from time to time on the administration of the Mysore City Municipality and the part that is being played in it by its nominated President, which is anything but satisfactory. The voice of the Council counts for little nor do the interests of the ratepayers, and the worthy President, who finds it difficult to get over the *nabobism* of those halcyon days of his official career, when he waved his sceptre despotically for, even in his non-official position as President feels as though he is the monarch of all he surveys. As time goes on there come more and more revelations of his despotic actions and the latest and the most important of those that are before the public is evidenced from the proceedings of the meeting of the Municipal Council held on Tuesday the 27th June 1922 when Mr. Purushottam Anandagiri Goswamy moved the proposition to the effect that from the accounts it was seen that the President had received Rs. 5000 on 16th April 1920 and paid back in three instalments, *viz*, Rs. 1,050 on 13th December 1920, Rs. 300 on the 26th July 1921 and Rs. 3,650 on the 15th October 1921 and asking at the same time why the money was kept in that private and unbusiness like manner though the President could issue cheques for small sums such as Rs. 10 or Rs. 15. The explanation that was sought to be offered by the President who was in the chair was that some money was received from the Palace for the acquisition of lands and this amount was a part of that money which ought to have been kept in a separate account; but nobody could swallow such a patently flimsy explanation, as the amount was returned to the same Municipal account and in instalments which ran till over a year and a half. The Council accordingly passed a resolution that the President's drawing of Rs. 5000 and keeping it with him was against Section I of Municipal Account Manual and irregular. The Rev. Mr. Edwards seems to have found the words to be too strong which if adopted would cause to bring about the resignation of the President but the Council was not disposed to sacrifice the interests of the ratepayers to placate any one in the Council however high his position might be therein. Further comment is needless on the above proposition. But the question remains, who is to bear the loss incurred by this unauthorised and illegal retention of the amount in the hands of the President and whether the interest on this amount of the ratepayers is to be foregone?

Another question with which the citizens are interested is the address presented by the deputation of the Mysore City Municipal Council to the Dewan in the matter of their being given the privilege of electing their President and the reply of the Dewan thereto, both of which are published in the *Sampadabhudaya* of the 30th June. The address which was couched in dignified language regretted the treatment meted out to this major Municipality and to its resolution praying for the grant of the privilege, and urged the Government to grant it at the earliest opportunity possible. The version of the proceedings of the deputation which has been sent to the Municipal Council is incomplete and misleading, for, after the reading of the address by Mr. B. Basavaradya who headed the deputation it is stated in the version that Messrs. Dharmaprakasa Banumiah, Anantha Rao and Purushotham Anandagiri Goswamy represented to the Dewan that the present administration of the Municipality was very unsatisfactory. Whereas, the fact is that nobody intended or was inclined to speak anything about anything else but it was only at the asking of the Dewan Saheb whether the other gentlemen had anything else to say that the above named Councillors gave out what they knew about the working of the Municipality. It is surprising in the circumstances that the Dewan should have stated in his reply that the deputation sought to mix up two totally different parts–one about the privilege of electing the President and the other about maladministration. They never wanted to do it so far as we know and it was because they were asked they had to say some other things–which they thought would interest the Dewan, and there could have been no justification for the Dewan to take it to mean that the deputation had gone there for complaining about the maladministration. If it were so, the address which the deputation presented should have itself contained some reference at least to that matter, whereas it had none at all. This apart, the Dewan's statement that if maladministration is a fact the remedy will not be fonnd in the mere securing of a non-official President is equally surprising, for, it is the first principle that an elected President or any elected officer is more alive to his responsibility to the body which elects him than an unelected one, and the fear of being voted out of confidence would count for proper loyalty to the electing body. After some reasoning which is difficult for us to follow the Dewan says suddenly "So you see, the case is after all a matter of public sentiment than of administrative or public utility." We can only express our regret that such a statement came from so experienced an administrator as Mr. Banerji. We have not much to say for being told to wait till the Municipal Regulation is amended, which is now under consideration. But when we hear the Dewan asking the members to possess their souls in patience and to co-operate with the executive in improving the condition of the affairs of the Municipality, they may give out some sighs and ask in all humility "what about the poor ratepayers: are they to be forgotten"? The Dewan further says that an elected President is not a panacea for all evils and that an elected President may also be as bad as a nominated President. We are sure no member of the deputation said anything to the contrary, and there was no need for the deputation to be told these commonplaces and probabilities. On the whole the reply of the Dewan was most disappointing and likely to damp the enthusiasm of the Councillors who were there to work not for themselves but for the good of the ratepayers, and with the executive irremovable–it would not be surprising if the appeal of the Dewan for harmony and unity were to be no more than a pious wish.

SERINGAPATAM ELECTION MUDDLE.

There has been a great muddle in the matter of election of members to the Representative Assembly from Seringapatam which was fixed for the 21st June 1922 which should be considered by the Government. That unfortunately was the day on which Mr. S. A. Javarayya, member, Mysore Legislative Council, and the most prominent citizen of the Taluk died. For his funeral which took place the same day came thousands of people, among whom were a large member of voters the majority of whom were Vokkaligars to which community Mr. Javarayya belonged. These voters wanted to record their votes before going to the funeral, but the Amildar who perhaps had no experience of elections, came to the office at about 1 p.m., instead of at 12 noon with the result that those who had come to vote could not wait for him and had to go away to the funeral. When these voters who numbered nearly 300 returned to the office after funeral at about 4 p.m. or 4-30 p.m. to vote it was closed. Only about 96 votes out of a total of over 400 for the Taluk were recorded. What is more, it would appear that Mr. Javaraya's name was not struck off the list of candidates though his demise was known early in the morning and that some persons even voted for him. We submit that the whole procedure is altogether wrong and unfair and in justice to all the candidates a re-election ought to be ordered.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಹಾಸನ ಡಿ|| ಗೆ ಸೇರಿದ ಕೆಲ ಪ್ರಾಂತಗಳಲ್ಲಿ ಸಂಚರಿಸಿಕೊಂಡು ಕಳೆದ ಮಂಗಳವಾರ ರಾಜಧಾನಿಗೆ ಸುರಕ್ಷಿತವಾಗಿ ದಯಮಾಡಿಸಿದರು.

ರಾಜಧಾನಿಯ ಮ್ಯುನಿಸಿಪಾಲಿಟಿ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗು ಕಳೆದ ಜೂನ್ ೨೯ ರ ಬೆಳಿಗ್ಗೆ ದಿವಾನ್ ಬಹದ್ದೂರ್ ಸಿ. ಶ್ರೀಕಂಠೇಶ್ವರಯ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು.

LEGISLATIVE COUNCIL.

The following is the speech made by Mr. G. Paramasivaih at the meeting of the Mysore Legislative Council held on the 27th June 1922.

Sir,

No Doctor of Finance could have given a better and clearer diagnosis of the present financial crisis of our State than the one that can be found in your address to the recent Birthday Session of the Representative Assembly, and the people of the State feel highly grateful to you, Sir, for your determination to pursue "a steady and persistent policy of sound financial administration to restore stability and equilibrium in the State's finances."

One of the main reasons for the present distress is the increasingly large surpluses, which characterised the State's Budget during the period of 11 years commencing from 1901-02. The surplus of 8 lakhs in that year gradually rose to 53 lakhs in 1912-13, except in the year 1908-09 when it fell to 3 lakhs. These surpluses provided ample scope for finding out ways of expenditure, without any attempt being made to find out the means to finance new schemes, from which no immediate profits could be expected. During the time of Sir M. Visveswaraiah, though 328 lakhs was invested on capital works, the revenue from Financial investments and productive works increased only by 14 lakhs, which amount too has been steadily declining since. By pursuing such a policy we have not only effaced the surpluses, but have also utilised the invested securities yielding a steady income in the realisation of which, to finance capital works, we have lost nearly half a crore and have entered upon a period of alarmingly increasing deficits. The years of deficit Budget began in 1919, but the people were not made fully aware of the seriousness of the situation, as the estimated deficit in a particular year was calculated far below the actual deficit. For instance the estimated deficit of one lakh and ten thousand in 1919-20 increased to 8 lakhs and 58 thousand, without providing even for the necessary reserves. Likewise, the anticipated deficit of 9·36 lakhs in 1920-21 came upto 14·72 lakhs, though Income Tax yielded 7½ lakhs being a new source of Revenue. The large surpluses in the past clearly show that the people were made to pay much more than what was absolutely necessary to meet the cost of various services which the Government rendered to them in return, which is opposed to the elementary principles of public economy.

Another thing which we have to guard against in future is that the expenditure on capital works should never exceed the amount allotted for the year, as it has been the case hitherto. Eminent economists have held that "the first requisite in the formation of a Budget is an approximately correct idea of the expenditure within the period to be considered."

Now coming to the Budget under consideration, all unnecessary items of expenditure like the 60 thousand Rupees, which has been allotted for the maintenance of Annachatrams should be avoided, and all unjustifiable items of expenditure like the fifty nine thousand Rupees which is proposed to be spent on Sanskrit Education, the benefits of which have been confined to the members of a single community, which forms a very small portion of the total population, of the State, must be put an end to unless its utility is extended to all the subjects of His Highness the Maharaja.

Before attempting to levy any new tax or to raise the rates of existing taxes, immediate steps must be taken to give effect to the various suggestions of retrenchment made by the Special Finance Committee, whose recommendations are very modest and practicable. In this connection we cannot lose sight of the fact that the people of Mysore have to share equally with their brethern in British India the burden of the heavy import and customs duties and the increased Postal rates, which are being frequently raised by the Imperial Government.

Let no measure to improve the revenue resources affect the already overburdened poor ryot, who is always treated as the financial Dhoby's Donkey.

In conclusion, Sir, I beg to propose that at least a sum of 5 lakhs be set apart out of the grants for Education to work out the scheme as laid down in the Educational Memorandum from the beginning of the next official year.

ಭರತಖಂಡದ ವೃತ್ತಾಂತಗಳು.

ಕಳೆದ ಭಾನುವಾರ ಬೊಂಬಾಯಿಯಲ್ಲಿ 7½ ಅಂಗುಲ ಮಳೆಯಾಯಿತು.

ವಿದೇಶದ ವೃತ್ತಾಂತಗಳು.

ತಂತಿಯಿಲ್ಲದೆ ವರ್ತಮಾನವನ್ನು ಕಳುಹಿಸುವ ವಿಧಾನವ ಕಂಡುಹಿಡಿದ ಮಾರ್ಕೋನಿಯವರು ಈಗ ತಂತಿಯ ಸಹಾಯವಿಲ್ಲದೆ ಹತ್ತುವ ಸರ್ಚ್‌ಲೈಟನ್ನು ಕಂಡುಹಿಡಿದಿದ್ದಾರೆ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸ. ಪ್ರ.

ಪ್ರಜಾಪ್ರತಿನಿಧಿಸಭಾ ಮೆಂಬರ ಚುನಾವಣೆ.

ಒಟ್ಟು ಮ್ಯುನಿಸಿಪಲ್ ಕೌನ್ಸಿಲರು.

ವಿದ್ಯಾಪ್ರೋತ್ಸಾಹ.

ಅಷ್ಟಪಲ್ಲಕ್ಕಿಯ ಮೆರವಣಿಗೆಯು, ಕುಕನೂರು.

ತಮ್ಮ ವಿಧೇಯ, ಬಸಪ್ಪಾ.

ಪುಸ್ತಕಾರ್ಪಣಸಮಾರಂಭ, ಆಲೂರು (ಹಾನಗಲ್ಲು).

(ಶ್ರೀ ಸಮ್ಮೇಲನ)

ಪುಸ್ತಕಾರ್ಪಣ ಸಮಾರಂಭ, ಆಲೂರು (ಹಾನಗಲ್ಲು).

(ಶ್ರೀ ಸಮ್ಮೇಲನ)

ಭಾಷಾಭಿಮಾನಿ.

ಇಂಡಿಯಾಸರಕಾರದಿಂದ ಬಹುಮಾನವು

ಸೂಚಿಸಿದ್ದಕ್ಕೆ ಶ್ರೀ ಅಂದಾನೆಪ್ಪಾ ವಿರೂಪಾಕ್ಷಪ್ಪಾ ಅಣ್ಣಾಶೆಟ್ಟಿ ಇವರು ಅನುಮೋದನ ಕೊಟ್ಟ ಪ್ರಕಾರ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಶ್ರೀ ಮಂಗಸೂಳಿಯವರು ತಮ್ಮ ೨೬ ವರುಷದ ಚಿಕ್ಕವಯಸ್ಸಿನಾರಭ್ಯ ಸಾರ್ವಜನಿಕ ಕೆಲಸವನ್ನು ವಹಿಸಿಕೊಂಡು ಆ ಅಸೋಸಿಯೇಷನ್ ಕೋ|| ಆ|| ಸೋಸಾಯಿಟೀಸ್, ಮುನ್ಸಿಪಲ್ ಪ್ರೆಸಿಡೆಂಟ, ಕಾನ್ಸಟಿಟ್ಯೂಷನಲ್ ಪ್ರೋಗ್ರೆಸಿವ್ಹ ಕಮಿಟಿ ಮುಂತಾದ ಲೋಕಸಂಗ್ರಹದ ಸುತ ಕರ್ತವ್ಯ ಕರ್ಮಗಳನ್ನು ಈಡೇರಿಸುವದರಲ್ಲಿ ನಿತ್ಯದ ಒಕ್ಕಲತನ, ವಕೀಲಿಯ ವ್ಯವಹಾರಗಳನ್ನೊಡಗೊಂಡು ಒಳ್ಳೇ ಚಟುವಟಿಕೆಯಿಂದ ಕೆಲಸಮಾಡಿದ್ದಕ್ಕಾಗಿ ಈ ಬಹುಮಾನದ ಪದವಿಯನ್ನು ಪಡೆದದ್ದು, ದೊಡ್ಡ ಮನೆತನದಲ್ಲಿ ಜನ್ಮವೆತ್ತಿ ಅಂಥಾ ಮನೆತನದವರೆಂದು ಬರೇ ಅಭಿಮಾನ ತಾಳುವ ಬದಲು ಅದಕ್ಕೆ ತಕ್ಕ ಲೋಕೋಪಯೋಗದ ಕಾರ್ಯಕುಶಲತೆಯನ್ನು ಕಂಡು ಓಡಿದು, ಹಿಂಗದ ತವಕದಿಂದ ಹಿಂಬಾಲಿಸಿ, ಕೈಕೊಂಡ ಕಾರ್ಯವನ್ನು ಕಡೆಗಾಣಿಸಿ ಜನಕಾತ್ಮನನ್ನು ಸಂತೋಷಪಡಿಸಿದ ಮೊದಲನೆಯ ಮೆಟ್ಟಲವನ್ನು ಹತ್ತಿ ಮುಂದಿನ ಸೋಪಾನವನ್ನು ಹತ್ತಲಿಕ್ಕಾಗುವಷ್ಟು ಆಯುರಾರೋಗ್ಯವನ್ನು ಜಗದೀಶನು ದಯಪಾಲಿಸಲಿ ಎಂದು, ಮತ್ತು ಇವರು ತೋರಿಸುತ್ತಿರುವ ಕಾರ್ಯಕುಶಲತೆಯನ್ನು ಕಿತ್ತಿಯನ್ನಾಗಿಟ್ಟುಕೊಂಡು ಯಾವತ್ತರು ಉತ್ತರೋತ್ತರವಾಗಿ ತಮ್ಮ ಏಳಿಗೆಯನ್ನು ಎತ್ತಿಕೊಳ್ಳುವವರಾಗಲಿ ಎಂಬದಾಗಿ ಸದ್ಬೋಧವನ್ನು ಸೂಸುವ ಸುಶ್ರಾವ್ಯ ಭಾಷಣಗಳನ್ನು ಶ್ರೀ ಅಂದಾನೆಪ್ಪಾ ಅಣ್ಣಾಶೆಟ್ಟಿ ಮಾಸ್ತರ, ಶ್ರೀ ಜೋತೆಪ್ಪಗೌಡಾ ಪಾಟೀಲ, ಶ್ರೀ ದುರ್ಗಾಸಮಾಸ್ತರ, ರಾ. ಸಾ. ವಿ. ಸಾ. ಕೆ. ಒಡೆಯರ್ ತಾಲೂಕ ಮಾಮಲೇದಾರ ಸಾಹೇಬರವರು ಮಾಡಿದನಂತರ ಅಧ್ಯಕ್ಷಮಹಾಶಯರು ರಾ. ಸಾಹೇಬ ಎಸ್. ಎಸ್. ಮಂಗಸೂಳಿಯವರಿಗೆ ಕರತಾಡನದ ಅಬ್ಬರದಲ್ಲಿ ಪುಷ್ಪಹಾರವನ್ನು ಸಮರ್ಪಿಸಿದರು. ನಂತರ ರಾ. ಸಾಹೇಬ ಮಂಗಸೂಳಿಯವರು ಇದೆಲ್ಲವು ಕೇವಲ ನಿಮ್ಮೆಲ್ಲರ ಅನ್ಯೋನ್ಯಭಾವದ ಅನುಕೂಲತೆಗಳ ಕೈನೆರವಿನ ಫಲವಿರುವದೇ ಹೊರತು ತಮ್ಮದೇನೂ ಅಲ್ಲವೆಂಬದಾಗಿ ತಮ್ಮ ಫಲಾಶಾರಹಿತವಾದ ಕರ್ತವ್ಯ ಜಾಗರೂಕತೆಯನ್ನು ವ್ಯಕ್ತಗೊಳಿಸಿದ ಕೂಡಲೆ ಶ್ರೀ ಹಿಪ್ಪರಗಿಯವರು ನೇಕನಾಮದಾರ ಗವರ್ನರ ಸಾಹೇಬ, ಮೆ. ಕಮಿಶನರ ಸಾಹೇಬ, ಮೆ. ಕಲೆಕ್ಟರ ಸಾಹೇಬ, ಇವರಿಗೆ ಅಭಿನಂದನಪರ ತಾರಮಾಡುವ ಕುರಿತು ಸೂಚಿಸಿ ತಮ್ಮ ಆಮಂತ್ರಣಕ್ಕೆ ಅನುಕೂಲಿಸಿದ ಬಗ್ಗೆ ಎಲ್ಲ ಸಭಿಕರ ಆಭಾರವನ್ನು ಸಮಾರೋಪ ದಾಖಲ ಮನ್ನಿಸಿದನಂತರ ಶ್ರೀಮನ್ನಿರಂಜನ ಗುರುವರ್ಯರ ಆಶೀರ್ವಾದವನ್ನು ಹೊಂದಿ ಸಭಾವಿಸರ್ಜನೆಯಾಯಿತು. ಪ್ರತ್ಯಕ್ಷದರ್ಶಿ.

ಕರ್ನಾಟಕ ಕವಿಚರಿತೆ ದ್ವಿತೀಯ ಸಂಪುಟ.

ಹೆಸರು ಗೊತ್ತಿಲ್ಲದ ವಚನಕಾರರೂ ಅವರ ಹೆಸರ ಶೋಧನೆಯೂ.

ಶೋಧಕ-ಸಿರಾಸಿ ಮಠ ಎಸ್. ಎಮ್. ದಾವಣಗೆರೆ.

ಹಿಂದುಸ್ಥಾನ ಸರಕಾರದ ಶಾಸನಖಾತೆಯ ಆನರರಿ ಕರೆಸ್ಪಾಂಡೆಂಟರೂ ಮೈಸೂರ್ ಸರಕಾರದ ಶಾಸನ ಖಾತೆಯ ಡೈರೆಕ್ಟರರೂ ಆದ ಪ್ರಾತ್ತನ ವಿಮರ್ಶವಿಚಕ್ಷಣ ರಾವಬಹದ್ದೂರ ಆರ್. ನರಸಿಂಹಾಚಾರ್ಯ ಎಂ. ಎ., ಎಂ. ಆರ್. ಎ. ಎಸ್. ಎಂಬ ಮಹಾಶಯರು ಕರ್ನಾಟಕ ಪ್ರಾಣಸ್ವರೂಪವಾದ ಬಹು ಪ್ರಾಚೀನ ಕಾಲದ ತಾಳವಾಲೆಯ ಗ್ರಂಥಗಳನ್ನೂ ತಾಮ್ರ ಶಿಲಾ ಲೇಖಗಳನ್ನೂ ಅತ್ಯಗಾಧಮಾನಸಿಕ ಶಾರೀರಕ ಶ್ರಮ ಸಹಿಷ್ಣುತೆಯಿಂದ ಶೋಧಿಸಿ ಲೌಕಿಕ ಪಾರಮಾರ್ಥಿಕ ತತ್ವಜ್ಞರು ಮೆಚ್ಚಿ ಸಾನಂದಾಶ್ಚರ್ಯಪಡುವಂಥ ಸಾರತರವಾದ ವಿಷಯಗಳನ್ನೇ ಮಾದರಿಗಾಗಿ ಸಂಗ್ರಹಿಸಿ ರಚಿಸಿದ ಸರ್ವಾಂಗ ಸುಂದರವಾದ "ಕರ್ನಾಟಕ ಕವಿಚರಿತೆ" ಎಂಬ ಗ್ರಂಥವು ಕರ್ನಾಟಕ ಭಾಷಾಮಾತೆಯ ಸೀಮಂತ ರತ್ನದಂತೆ ಕನ್ನಡಿಗರ ಕರಭೂಷಣವಾಗಿರುವದು ಸರಿಯಷ್ಟೆ! (2) ಈ ಗ್ರಂಥವು ಮೈಸೂರ್ ಯುನಿವರ್ಸಿಟಿಯ ಪಬ್ಲಿಕೇಶನ್ ಇದ್ದು ಅನೇಕ ವಿದ್ವನ್ಮಣಿಗಳ ಸದಭಿಪ್ರಾಯ ಶಿಖರವನ್ನೇರಿರುವ ಪ್ರಯುಕ್ತ ಪ್ರತಿಯೊಬ್ಬ ಕರ್ನಾಟಿಗನೂ ಈ ಗ್ರಂಥಕರ್ತರ ಕೃತಜ್ಞತೆಗೆ ಪಾತ್ರನಾಗಿರುತ್ತಾನೆಂದು ಹೇಳಿದರೆ ಏನೂ ಅತಿಶಯೋಕ್ತಿಯಾಗಲಾರದು. (3) ಈ ಮಹಾಶಯರಿಗೆ ಕೆಲವು ವಚನಕಾರರ ಹೆಸರುಗಳು ದೊರೆಯದೆ ಹೋದ ಮೂಲಕ ಕರ್ನಾಟಕ ಕವಿಚರಿತೆಯ ದ್ವಿತೀಯ ಸಂಪುಟದ 115ನೇ ಪಾನಿನಲ್ಲಿ ಅವರ ಅಂಕಿತಗಳನ್ನು ಮಾತ್ರ ಕೊಟ್ಟು ಅವರ ಹೆಸರು ಶೋಧಿಸುವ ಕರ್ತವ್ಯವನ್ನು ಶೋಧಕವಾಚಕರ ಕಡಿಗೆ ಬಿಟ್ಟಿರುತ್ತಾರೆ. (4) ಯಾವ ಮಹನೀಯರು ಸರ್ವವೇದಾಗಮಗಳ ಸಾರವನ್ನೆ ಮೃದು ಮಧುರವಾದ ಬಿಡುಗನ್ನಡದ ವಚನರೂಪದಲ್ಲಿ ರಚಿಸಿ ಪ್ರಾಪಂಚಿಕ ಪಾರಮಾರ್ಥ ತತ್ವಗಳನ್ನು ಕರ್ನಾಟಕದಲ್ಲೆಲ್ಲ ಪ್ರಸಾರ ಮಾಡಿದರೋ ಮತ್ತು ಯಾರ ಜನನದಿಂದ ಕರ್ನಾಟಕ ಭೂಮಿಯು ಪಾವನವಾಯಿತೋ ಅಂಥವರ ನಾಮವು ಸಹ ನಮ್ಮಗೆ ಗೊತ್ತಾಗದೆ ಹೋಗಿರುವದು ಎಂಥ ಶೋಚನೀಯವಾದ ದುರ್ದೈವದ ಸಂಗತಿಯು. ಇಂಥವರ ಪವಿತ್ರನಾಮಗಳನ್ನು ಶಾರೀರಕ ಮಾನಸಿಕ ಶ್ರಮಗಳಿಗೆ ಲಕ್ಷ್ಯಕೊಡದೆ ಶೋಧಿಸಿ ತೆಗೆಯುವದು ಪ್ರತಿಯೊಬ್ಬ ಕರ್ನಾಟಿಗ ಧರ್ಮಾಭಿಮಾನಿಯ, ಭಾಷಾಭಿಮಾನಿಯ ಹಾಗೂ ವಿಶೇಷವಾಗಿ ವೀರಶೈವನ ಆದ್ಯ ಮತ್ತು ಅಧ್ಯಕರ್ತವ್ಯವಾಗಿರುತ್ತದೆ. (5) ನಾನು ಇಂದಿಗೆ ಎರಡು ವರ್ಷಗಳ ಹಿಂದೆ ಬಿಜಾಪುರ ಡಿಸ್ಟ್ರಿಕ್ಟ ಬಾದಾಮಿ ತಾಲ್ಲೂಕ ಶಿವಯೋಗ ಮಂದಿರದಲ್ಲಿ ಇಂಗ್ಲೀಷ್ ಪಾಠಶಾಲೆಯ ಅಧ್ಯಾಪಕನಾಗಿದ್ದಾಗ ಅಲ್ಲಿಯ ಪವಿತ್ರ ಗ್ರಂಥಾಲಯದಲ್ಲಿ ಕರ್ನಾಟಕ ಕವಿಚರಿತೆಯ 2 ನೇ ಭಾಗವು ನನಗೆ ದೊರೆಯಿತು. ಆಗ ನಾನು ಅದನ್ನು ಅತ್ಯಾನಂದದಿಂದ ಓದುತ್ತಿದ್ದಾಗ 115ನೇ ಪಾನಿನಲ್ಲಿ ಹೆಸರು ಗೊತ್ತಿಲ್ಲದ ವಚನಕಾರರ ಅಂಕಿತಗಳ ಗುಂಪು ನನ್ನ ದೃಷ್ಟಿಗೆ ಗೋಚರವಾಯಿತು. ಆಗಲೇ ಅವುಗಳನ್ನು ಶೋಧಿಸಿ ತೆಗೆಯಬೇಕೆಂಬ ಲವಲವಿಕೆಯು ನನ್ನಲ್ಲಿ ಉತ್ಪನ್ನವಾಯಿತು. ಮತ್ತು ಹೋದವರುಷ ಶ್ರೀಮನ್ನಿರಂಜನ ಹಾನಗಲ್ ಕುಮಾರಸ್ವಾಮಿಗಳವರು ಅಂತಃಕರಣಪೂರ್ವಕವಾಗಿ ಗ್ರಂಥಶೋಧನ ಕಾರ್ಯವನ್ನು ಕೈಕೊಳ್ಳುವದಕ್ಕೆ ನನಗೆ ಸೂಚಿಸಿದ್ದಲ್ಲದೆ ಸಿಕಿಂದರಾಬಾದ್ ಮೊದಲಾದ ಸ್ಥಳಗಳಿಗೆ ಹೋಗಲಿಕ್ಕು ಸಹ ತುಂಬಾ ಪ್ರೋತ್ಸಾಹಪಡಿಸಿದರು. ನಂತರ ಪರಗ್ರಾಮಗಳಿಗೆ ಹೋಗುವ ಕರ್ತವ್ಯ ನನಗೆ ಬಂದದ್ದರಿಂದ ನಾನು ಹೋದಲ್ಲೆಲ್ಲ ವೀರಶೈವರ ಮನೆಗಳ ಮೂಲೆ ಮಕ್ಕಟ್ಟಸಲ್ಲಿ ಮತ್ತು ದೇವರ ಜಗಲಿಗಳ ಮೇಲೆ ಬಿಗಿಬಿಗಿದುಕಟ್ಟಿಟ್ಟ ಕೆಲವು ತಾಳವಾಲೆಯ ಮತ್ತು ಕೋರೀಹಾಳೆಯ ಪ್ರಾಚೀನಗ್ರಂಥಗಳನ್ನು ಸಂಗ್ರಹಿಸಿದೆನು ಮತ್ತು ಕೊನೆಗೆ 175 ವರ್ಷಗಳ ಹಿಂದೆ ಬರೆಯಲ್ಪಟ್ಟಂಥ 3222 ವಚನಗಳುಳ್ಳಂಥ ಒಂದು ಗ್ರಂಥ ಭಾಂಡಾರವು ಸುದೈವದಿಂದ ನನಗೆ ದೊರೆಯಿತು. ಆಗ ಅದರಲ್ಲಿಯ ವಚನಗಳನ್ನು ಶೋಧಿಸುತ್ತಿರಲಾಗಿ ಕರ್ನಾಟಕ ಕವಿಚರಿತೆಯಲ್ಲಿ ಹೆಸರು ಗೊತ್ತಿಲ್ಲದ ವಚನಕಾರರಲ್ಲಿ 20 ಜನ ವಚನಕಾರರ ಹೆಸರುಗಳನ್ನು ಮತ್ತು ಸಂಶಯದಿಂದ ತರ್ಕಿಸಲ್ಪಟ್ಟ ಕೆಲವು ವಚನಕಾರರ ಹೆಸರುಗಳ ಸ್ಪಷ್ಟೀಕರಣವನ್ನೂ ಇಲ್ಲಿ ಬರೆಯಲು ನನಗೆ ತುಂಬಾ ಅನುಕೂಲವಾಯಿತು.

ಕರ್ನಾಟಕ ಕವಿಚರಿತೆಯಲ್ಲಿ ಹೆಸರು ಗೊತ್ತಾಗದ ವಚನಕಾರರ ಅಂಕಿತಗಳು.	ಈ ಅಂಕಿತಗಳ ಆಧಾರದಿಂದ ಶೋಧಿಸಿತೆಗೆದ ವಚನಕಾರರ ಹೆಸರುಗಳು.
1. ಮಹಲಿಂಗ ಕಲ್ಲೇಶ್ವರ	1. ಹಾವಿನ ಹಾಳ ಕಲ್ಲಯ್ಯನವರು
2. ಮಹಲಿಂಗ ಗಜ್ಜೇಶ್ವರ	2. ಗಜ್ಜೇಶ ಮಸಣಯ್ಯ
3. ವಿಘಟದೂರ ರಾಮೇಶ್ವರಲಿಂಗ	3. ಮೆರೆಮಿಂಡಯ್ಯ
4. ಸದಾಶಿವಮೂರ್ತಿ ನಿಃಕಲಂಕ ಲಿಂಗ	4. ಅರಿವಿನಾ ಮಾರಿತಂದೆಗಳು
5. ನಾರಾಯಣಪ್ರಿಯ ರಾಮನಾಥ	5. ಗುಪ್ತ ಮಂಚಣ್ಣನವರು
6. ಮಾರೇಶ್ವರ	6. ಮನಸಂದಮಾರಿ ತಂದೆಗಳು
7. ಕಾಮಧೂಮ ಧೂಳೇಶ್ವರ	7. ಮಾದರಧೂಳಯ್ಯ
8. ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ	8. ಕೋಲಶಾಂತಯ್ಯನವರು
9. ಅರ್ಕೇಶ್ವರಲಿಂಗ	9. ಮಡಿವಾಳಯ್ಯ
10. ಚಂಡೇಶ್ವರಲಿಂಗ	10. ನುಲಿಯಚಂದಯ್ಯ
11. ಅಲೇಕನಾಥ ಶೂನ್ಯಕಲ್ಲಿನೊಳಗೇಕಾದೀತಯ್ಯ	11. ಕಲ್ಯಾಣದ ವಚನಭಂಡಾರಿ ಶಾಂತರಸರು
12. ಸೌರಾಷ್ಟ್ರ ಸೋಮೇಶ್ವರಲಿಂಗ	12. ಆದಯ್ಯನವರು
13. ಮಾತುಳಂಗ ಮಧುಕೇಶ್ವರ	13. ದಾಸೋಹದ ಸಂಗಣ್ಣನವರು
14. ಏಣಾಂಕಧರ ಸೋಮೇಶ್ವರ ಲಿಂಗ	14. ಬಿಬ್ಬಿಬಾಚಯ್ಯ
15. ಚೆನ್ನಬಸವಣ್ಣ ಪ್ರಿಯಭೋಗ ಮಲ್ಲಿಕಾರ್ಜುನ	15. ಪ್ರಸಾದಿ ಭೋಗಣ್ಣ
16. ಸದ್ಯೋಜಾತಲಿಂಗ	16. ಅವಸರದ ಕೇರಣ್ಣ
17. ಗೋಪತಿನಾಥ ವಿಶ್ವೇಶ್ವರಲಿಂಗ	17. ತುರುಗಾಹಿ ರಾಮಣ್ಣ
18. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ	18. ಶಿವಲೆಂಕ ಮಂಚಣ್ಣ
19. ಸಂಗಮೇಶ್ವರ	19. ಸಗರದ ಬೊಮ್ಮಣ್ಣ
20. ರಾಮೇಶ್ವರಲಿಂಗ	20. ಏಲೇಶ್ವರದ ಕೇತಯ್ಯನವರು

ಈ ಸರ್ವರ ವಚನಗಳು ನಮ್ಮಲ್ಲಿ ಸಂಪೂರ್ಣ ದೊರೆಯುತ್ತವೆ.

ಸಂಶಯದಿಂದ ಊಹಿಸಲ್ಪಟ್ಟ ವಚನಕಾರರ ಹೆಸರುಗಳ ಸ್ಪಷ್ಟೀಕರಣ.

ಪಾನು 112 ಚಿಕ್ಕಯ್ಯ.

ಚಿಕ್ಕಯ್ಯ ಪ್ರಿಯಸಿದ್ಧಲಿಂಗ ಎಂಬ ಅಂಕಿತಕ್ಕೆ ಬಸವನ ಕಾಲದಲ್ಲಿ ಬೋರಚಿಕ್ಕಯ್ಯನೆಂಬುವನು ಇದ್ದಂತೆ ತಿಳಿಯುತ್ತದೆ. ಈ ವಚನಗಳು ತತ್ವತಪೋ ಏನೋ ತಿಳಿಯದು ಎಂದು ಸಂಶಯದಿಂದ ಬರೆಯಲ್ಪಟ್ಟಿದೆ. ಆದರೆ ಈ ಅಂಕಿತವುಳ್ಳ ವಚನಗಳು "ಘಟ್ಟಿವಾಳಯ್ಯ" ಎಂಬ ಹೆಸರಿನ ಶಿವಶರಣರವಿರುತ್ತವೆ. ಇವರ ವಚನಗಳು ನಮ್ಮಲ್ಲಿ ಸಂಪೂರ್ಣ ದೊರೆವಿವೆ.

ಪಾನು 113 ರೇಕಣ್ಣ.

"ರೇಕಣ್ಣ ಪ್ರಿಯ ನಾಗಿನಾಥ" ಎಂಬ ಅಂಕಿತವುಳ್ಳ ಕೆಲವು ವಚನಗಳಿವೆ. ಈ ರೇಕಣ್ಣನಾರೋ ತಿಳಿಯದು ಎಂದು ಬರೆಯಲ್ಪಟ್ಟಿದೆ. ಆದರೆ ಈ ಅಂಕಿತವುಳ್ಳ ವಚನಗಳು ರೇಕಣ್ಣನವಿರದೆ "ಬಹುರೂಪಿಚೌಡಯ್ಯ" ನೆಂಬ ಶಿವಶರಣರವು ಇರುತ್ತವೆ.

ಇವರ ಸಂಪೂರ್ಣ ವಚನಗಳು ನಮ್ಮಲ್ಲಿ ಇರುತ್ತವೆ.

ಪಾನು 114 ರಾಮನಾಥ.

ರಾಮನಾಥನೆಂಬ ಅಂಕಿತವುಳ್ಳ ವಚನಗಳನ್ನು ರಾಮನಾಥಾಚಾರ್ಯನು ಬರೆದಿರಬಹುದೆಂದು ಗ್ರಂಥಕರ್ತರು ಊಹಿಸಿದ್ದಾರೆ. ಆದರೆ ಈ ಅಂಕಿತವುಳ್ಳ ವಚನಕಾರರ ಹೆಸರು "ಜೇಡರದಾಸಿಮಯ್ಯ" ಎಂಬ ಶಿವಶರಣರು. ಇವರ ಸಂಪೂರ್ಣ ವಚನಗಳು ನಮ್ಮಲ್ಲಿ ದೊರೆದಿವೆ.

ಸರ್ವರ ವಚನಗಳನ್ನು ಮಾದರಿಗಾಗಿ ಇಲ್ಲಿ ಉದಹರಿಸಬಹುದಾಗಿತ್ತು. ಆದರೆ ಲೇಖನವಿಸ್ತಾರಕ್ಕಾಗಿ ಬಿಡಬೇಕಾಯಿತು. ಈ ಸರ್ವವಿಷಯಗಳನ್ನು ಪ್ರಾ|| ವಿ|| ರಾ|| ಬ|| ಆರ್. ನರಸಿಂಹಾಚಾರ್ಯರು ಅಥವಾ ಮೈಸೂರು ಯೂನಿವರ್ಸಿಟಿಯವರೇ ಆಗಲಿ ಗಮನಕ್ಕೆ ತಂದು ಕ|| ಕವಿಚರಿತೆಯ ಪುನರ್ಮುದ್ರಣಕಾಲದಲ್ಲಿ ಪ್ರಕಟಿಸುವರೆಂದು ನಾನು ತುಂಬಾ ಆಶಿಸುತ್ತೇನೆ. ಇನ್ನು ಉಳಿದ ಕೆಲವು ವಚನಕಾರರ ವಚನಗಳನ್ನು ಸಹ ಆಕಾಲದಲ್ಲಿ ಕಳಿಸಿಕೊಡಲು ನಾನು ತುಂಬಾ ಆನಂದಪಡುತ್ತೇನೆ. ಗ್ರಂಥಶೋಧನಕ್ಕಾಗಿ ಪ್ರೋತ್ಸಾಹಪಡಿಸಿದ ಶ್ರೀ|| ಮಹಾಸ್ವಾಮಿಗಳವರ ಆಭಾರವುನ್ನಿಸುವದಲ್ಲದೆ ವಚನಗಳ ಪ್ರಸಾರಕ್ಕಾಗಿ ಪ್ರೋತ್ಸಾಹಪಡಿಸಿದ ವಿ|| ಆರ್. ಎಸ್. ಕೋಟಿಗಿ ಮತ್ತು ಸಾವಕಾರ್ ಕೊಟ್ರಬಸಪ್ಪ ಅಣ್ಣಾ ಬಣಕಾರ್ ರಾಣಿಬೆನ್ನೂರ ಇವರನ್ನು ನಾನು ಮರೆಯಲಾರೆನು. ದಾವಣಗೆರೆ.

ಬಡವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲು, ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸ ಮಾಡುತ್ತಿರುವ ಬಡ ವೀರಶೈವ ವಿದ್ಯಾರ್ಥಿಗಳು ಜುಲೈ ತಾ|| ೩೧ರ ಒಳಗಾಗಿ ಸೆಕ್ರೆಟರಿಯವರಿಗೆ ತಲಪುವಂತೆ (Printed Prescribed From) ನಲ್ಲಿ ಅರ್ಜಿ ಬರೆದು ಕೊಳ್ಳತಕ್ಕದ್ದು. ಅರ್ಜಿಫಾರಂಗಳು ಬೇಕಾದಲ್ಲಿ ಒಂದಾಣೆ ಸ್ಟಾಂಪು ಕಳುಹಿಸಿ ಅಡ್ರೆಸ್ ತಿಳಿಸಿದಲ್ಲಿ ಕಳುಹಿಸಲ್ಪಡುತ್ತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅರ್ಜಿ ಜೊತೆಯಲ್ಲಿ ಸರ್ಟಿಫಿಕೇಟುಗಳನ್ನು ಕಳುಹಿಸಿ ಕೊಡಬೇಕು. ಸರ್ಟಿಫಿಕೇಟುಗಳು ಇಲ್ಲದೆಯೂ ಮತ್ತು ವಾಯಿದೆ ಮೀರಿಯೂ ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

ಜಿ. ಪರಮಶಿವಯ್ಯ, ಬಿ. ಎ., ಎಲ್ಎಲ್. ಬಿ.,
ಸೆಕ್ರೆಟರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ,
ಬೆಂಗಳೂರು ಸಿಟಿ.

ಲಗ್ನದ ಫಂಡು.

1. ಬೆಂಗಳೂರು ತಾ|| ಚಿಕ್ಕಬಾಣಾವಾರದ ಗಂಗಪ್ಪನವರ ಮಕ್ಕಳು ಮ|| ರುದ್ರಪ್ಪನವರ ಮಗಳು ಭದ್ರಕಾಳಮ್ಮನ ಲಗ್ನಕಾಲದಲ್ಲಿ ಬೆಂಗಳೂರು ಸಿಟಿ ಗ್ರಂಧಿಗೆ ಅಂಗಡಿ ಗುರುಸಿದ್ದಪ್ಪನವರ ಮೂಲಕ 2-0-0.

2. ಬೆಂಗಳೂರು ಮ|| ಎಲೆಸಿದ್ಧಲಿಂಗಪ್ಪಶೆಟ್ಟರ ಸಿದ್ದಾಣಪ್ಪನವರ ಮಗಳನ್ನು ಎಲೆಕ್ಟ್ರಿಕ್ ಆಫೀಸ್ ಮ|| ವೀರಪ್ಪನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ಮ|| ತೂಬಗೆರೆ ನಂಜಪ್ಪನವರ ಮೂಲಕ 8-0-0.

3. ಹುಸ್ಕೂರು ಮ|| ಚನ್ನವೀರಪ್ಪನವರ ಪುತ್ರ ಪಾಪಣ್ಣನಿಗೆ ಹಾರೋಹಳ್ಳಿ ಮ|| ರುದ್ರಪ್ಪನವರ ತಂಗಿ ರೇವಮ್ಮನನ್ನು ಕೊಟ್ಟು ನಡಿಸಿದ ಲಗ್ನದಲ್ಲಿ ವಧೂವರರಿಂದ ಫಂಡಿಗಾಗಿ ಎಸ್. ಜಿ. ಎನ್. ಪ್ರೆಸ್ ಶಿವಪ್ಪನವರ ಮೂಲಕ 3-0-0.

4. ಮಾಗಡಿ ತಾ|| ಕುದೂರು ಹೋಬಳಿ ಕಣನೂರು ಮ|| ಭದ್ರೇಗೌಡರ ಮಗಳ ಲಗ್ನದಲ್ಲಿ ಹೆಣ್ಣಿನವರಿಂದ 3 ರೂ. ಗಂಡಿನವರಿಂದ 2 ರೂ. ಜುಮ್ಲಾ 5-0-0.

5. ಮಾಗಡಿ ತಾ|| ಕುದೂರು ಹೋಬಳಿ ಕೆಂಪಾಪುರದ ಮ|| ಬಸಪ್ಪನವರ ಮಗಳ ಲಗ್ನದಲ್ಲಿ ಗಂಡಿನವರಿಂದ 2 ರೂ. ಹೆಣ್ಣಿನವರಿಂದ 1 ರೂ. ಜುಮ್ಲಾ 3-0-0.

6. ಡಿಟೊ ಕೆಂಪಾಪುರದ ಮ|| ಹುಚ್ಚವೀರಪ್ಪನವರ ಮಗಳ ಲಗ್ನದಲ್ಲಿ ಗಂಡಿನವರಿಂದ 2-0-0.

7. ಡಿಟೊ ಕೆಂಪಾಪುರದ ಮ|| ಬೈರೆಗೌಡರ ಮೊಮ್ಮಗನ ಲಗ್ನದಲ್ಲಿ ಗಂಡಿನವರಿಂದ 2 ರೂ. ಹೆಣ್ಣಿನವರಿಂದ 1 ರೂ. ಜುಮ್ಲಾ 3-0-0.

8. ಮಂಡ್ಯದ ಸ್ಪೆಷಲ್ ಮ್ಯಾಜಿಸ್ಟ್ರೇಟರವರಾದ ಮ|| ಜಿ. ಮಲ್ಲಿಕಾರ್ಜುನಯ್ಯ, ಬಿ.ಎ. ಯವರಿಂದ ಅವರ ಮಗನ ನಾಮಕರಣೋತ್ಸವ ಕಾಲದಲ್ಲಿ 1-0-0.

9. ನೆಲಮಂಗಲದ ತಾ|| ಗುಬ್ಬಣ್ಣನವರ ಮ|| ಚನ್ನಬಸಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ವರನ ಕಡೆಯಿಂದ 3 ರೂ. ವಧುವಿನ ಕಡೆಯಿಂದ 2 ರೂ. ಮತ್ತು ಮ|| ಎಲೆಹೊನ್ನಪ್ಪನವರ ಮನೆ ಲಗ್ನದಲ್ಲಿ 1 ರೂ. ಜುಮ್ಲಾ 6 ರೂ. ಗಳು ಮ|| ಶೆಟ್ಟರು ಗುಬ್ಬಯ್ಯಶೆಟ್ಟರು ಮತ್ತು ಯಜಮಾನ್ ಹುಚ್ಚಪ್ಪನವರು ಇವರ ಮೂಲಕ.

10. ತುಮಕೂರು ಡಿ|| ತುರುವೇಕೆರೆ ಮ|| ವೀರತ್ತಯ್ಯನವರ ಮಗ ಅಡವಿ ರುದ್ರಪ್ಪನ ಲಗ್ನದಲ್ಲಿ ಮ|| ಶೆಟ್ಟರು ಟಿ. ವಿ. ಹೊನಪ್ಪಶೆಟ್ಟರ ಮೂಲಕ 2-0-0.

11. ಶಿಕಾರಿಪುರ ತಾ|| ಶಿರಾಳಕೊಪ್ಪದ ಮ|| ಬನವಾಸಿ ಹುಚ್ಚಪ್ಪನವರ ಮಗಳನ್ನು ಹಿರೇಕೇರಿ ಅಂಗಡಿ ಮ|| ವೀರಭದ್ರಪ್ಪನವರ ಮಗನಿಗೆ ಕೊಟ್ಟು ನಡೆಸಿದ ವೀಳ್ಯಪ್ರಸ್ತದಲ್ಲಿ ಮ|| ಶಿದ್ಧಬಸಪ್ಪ ಸೂರಣಗಿ ಇವರ ಮೂಲಕ 1-0-0.

12. ಚನ್ನಗಿರಿ ತಾ|| ಹೊಟ್ಯಾಪುರದ ಶ್ರೀ ಪಟ್ಟಾಧ್ಯಕ್ಷರವರ ತಮ್ಮಂದಿರ ಲಗ್ನದಲ್ಲಿ 8 ರೂ. ಮತ್ತು ತ್ಯಾವಣಗೆರೆ ಅಕ್ಕಮ್ಮನವರ ಗುರುಸಿದ್ದಪ್ಪನವರು ನಾಗಪ್ಪನವರು ಇವರ ಅಣ್ಣನ ಮಕ್ಕಳು ಹಾಲಪ್ಪನವರಿಗೆ ಪುತ್ರೋತ್ಸವವಾದದ್ದಕ್ಕಾಗಿ 2 ರೂ. ಜುಮ್ಲಾ 10 ರೂ. ಗಳು ತ್ಯಾವನಗೆರೆ ಸಾಹುಕಾರ್ ಮ|| ನಾಗಪ್ಪನವರ ಮೂಲಕ.

13. ಹೊಸಕೋಟೆ ತಾ|| ಅಟ್ಟೂರು ಪಟೇಲ್ ಮ|| ಎ. ಸಿ. ಸಿದ್ದೇಗೌಡರ ತಮ್ಮಂದಿರು ಮ|| ಅಪ್ಪಾಜಿಗೌಡರ ಲಗ್ನದಲ್ಲಿ ವೇ|| ಹೆಡ್‌ಗುಮಾಸ್ತೆ ಬಸವಾರಾಧ್ಯರ ಮೂಲಕ 5-0-0.

14. ತುಮಕೂರು ತಾ|| ಊರಡಗೆರೆ ಸಮ್ಮತು ಎಲೆರಾಂಪುರದ ಪಟೇಲ್ ಮ|| ಪುಟ್ಟವೀರಯ್ಯನವರ ಪುತ್ರನಿಗೆ ತ್ಯಾಮಗೊಂಡ್ಲು ಶೇಕದಾರ್ ಮರಿಗಂಗಯ್ಯನವರ ಮಗಳನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ವಧೂವರರಿಂದ 3-0-0.

15. ಮದ್ದೂರು ಮ|| ಕೆ. ಚನ್ನಮಲ್ಲಪ್ಪನವರ ಮೂಲಕ ಗುತ್ತಲು ಮ|| ಸಿದ್ದಣ್ಣನವರ ಮನೆ ಲಗ್ನದಲ್ಲಿ ಫಂಡಿಗಾಗಿ 3-2-0.

16. ದೊಡ್ಡಬಳ್ಳಾಪುರದ ತಾ|| ಹಂಬಲಗೆರೆ ಮ|| ಬಸವೇಗೌಡರ ಮನೆ ಲಗ್ನದಲ್ಲಿ 4 ರೂ. ಮತ್ತು ಸದರಿ ಗ್ರಾಮದ ಮ|| ಮರುಳಸಿದ್ದಪ್ಪನವರ ಮನೆ ನಿಷೇಕಪ್ರಸ್ತದಲ್ಲಿ 2 ರೂ. ಜುಮ್ಲಾ 6 ರೂ. ಗಳು ಮ|| ಬೆಂಗಳೂರು ಮಂಡಿ ಬಸಟ್ಟಪ್ಪನವರ ಮೂಲಕ.

17. ಗುಬ್ಬಿ ತಾ|| ದೊಡ್ಡಗುಣಿ ಮ|| ಪರುವಣ್ಣನವರ ರೇವಣ್ಣನವರ ಲಗ್ನದಲ್ಲಿ 2 ರೂ. ಮತ್ತು ರೇವಣ್ಣನವರ ಮಗ ಸ್ವಾಟಪ್ಪನವರ ಲಗ್ನದಲ್ಲಿ 1 ರೂ. ಜುಮ್ಲಾ 3 ರೂ. ಗಳು ದೊಡ್ಡಗುಣಿ ಮ|| ಜಿ. ನಂಜಪ್ಪಶೆಟ್ಟರ ಮೂಲಕ.

18. ಹಾಸನ ಡಿ|| ಯಸಳೂರು ಪೇಟೆ ಪಟ್ಟಣಶೆಟ್ಟಿ ನಂಜುಂಡಪ್ಪನವರ ಮೂಲ್ಕ ಕೊಡ್ಲಿಪೇಟೆ ಮ|| ರಾ|| ಅರೆಮಲ್ಲಶೆಟ್ಟಪ್ಪನವರ ಪುತ್ರನಿಗೆ ಯಸಳೂರು ಪೇಟೆ ಹದಾಲ್ ಮ|| ರಾ|| ಗುರುಶಾಂತಯ್ಯನವರ ಮಗಳನ್ನು ಕೊಟ್ಟು ನಡೆಸಿದ ಲಗ್ನದಲ್ಲಿ 2-0-0 ಕೊಡ್ಲಿಪೇಟೆ ಮ|| ರಾ|| ಮರೂರು ಸಿದ್ದಪ್ಪನವರ ಪುತ್ರನಿಗೆ ಯಸಳೂರು ಪೇಟೆ ಪಟ್ಟಣಶೆಟ್ಟಿ ಮ|| ರಾ|| ನಂಜಪ್ಪನವರ ಪುತ್ರಿಯನ್ನು ಕೊಟ್ಟು ನಡಸಿದ ಲಗ್ನದಲ್ಲಿ ೨ ರೂ. ಕೆ. ಹೊಸಕೋಟೆ ಮ|| ರಾ|| ದಾರಾಳಪ್ಪನವರ ಪುತ್ರನಿಗೆ ಯಸಳೂರು ಪೇಟೆ ಗುಣಾರಿ ನಂಜಲಗೋಡಪ್ಪನವರ ಪುತ್ರಿಯನ್ನು ಕೊಟ್ಟ ಲಗ್ನದಲ್ಲಿ ೨ರೂ. ಕೊಡಗು ಅಬ್ಬಿಮಠದ ನಂದಿ ಬಸಪ್ಪನವರ ಪುತ್ರನಿಗೆ ಯಸಳೂರು ಪೇಟೆ ಬಿಡಗಿನ ಮ|| ರಾ|| ಕಪ್ಪಯ್ಯನವರ ಪುತ್ರಿಯನ್ನು ಕೊಟ್ಟ ಲಗ್ನದಲ್ಲಿ ೨ ರೂ. ಹೆಗ್ಗಡಹಳ್ಳಿ ಬಿ ವಲಿಂಗಪ್ಪಶೆಟ್ಟರ ಪುತ್ರನಿಗೆ ಯಸಳೂರು ಪೇಟೆ ಜಡಗಿನ ಗುರುಶಾಂತಯ್ಯನವರ ಪುತ್ರಿಯನ್ನು ಕೊಟ್ಟು ನಡಸಿದ ಲಗ್ನದಲ್ಲಿ ೨ ರೂ. ಜುಮ್ಲಾ ೧೦ ರೂ. ಗಳು.

19. ಚಿಕ್ಕಮಗಳೂರು ತಾಲ್ಲೂಕು ಮುಗುಳವಳ್ಳಿ ಮಠದ ಮುಪ್ಪಿನಯ್ಯನವರ ಮೂಲ್ಕ ಉಪ್ಪಳ್ಳಿ ಮ|| ರಾ|| ಚಂದ್ರಪ್ಪನವರ ಪುತ್ರಿಯನ್ನು ಅರಸೀಕೆರೆ ಕರ್ಪೂರದ ಮ|| ರಾ|| ಸಿದ್ದಣ್ಣನವರ ಪುತ್ರನಿಗೆ ಕೊಟ್ಟು ನಡಸಿದ ಲಗ್ನದಲ್ಲಿ ವಧೂವರರಿಂದ ೮ ರೂ. ಮತ್ತು ಮುಗಳವಳ್ಳಿ ಪಟೇಲ್ ಮ|| ರಾ|| ರುದ್ರೇಗೌಡರ ಪುತ್ರನಿಗೆ ಮಾವಿನಕೆರೆ ಪೋಸ್ಟ್‌ಮಾಸ್ಟರು ಮ|| ರಾ|| ಪುಟ್ಟಣ್ಣನವರ ಪುತ್ರಿಯನ್ನು ಕೊಟ್ಟು ನಡಸಿದ ಲಗ್ನದಲ್ಲಿ ೩ ರೂ. ಜುಮ್ಲಾ ೧೧ ರೂ. ಗಳು. ಜುಮ್ಲಾ ೮೭-೨-೦.

ಈ ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್ಎಲ್.ಬಿ.,
ಸೆಕ್ರೆಟರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ,
ಬೆಂಗಳೂರು ಸಿಟಿ.

೧೯೨೩ನೆಯ ಇಸವಿ ಜುಲೈ ತಾ|| ೨ ರಿಂದ ೧೯೨೩ನೆಯ ಜುಲೈ ತಾ|| ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ದುಂದುಭಿನಾಮಸಂವತ್ಸರದ ಆಷಾಢ ಶುದ್ಧ ಅಷ್ಟಮಿಯಿಂದ ಆಷಾಢ ಶುದ್ಧ ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವಿ... ನವ...
2	ಭಾನು	ಅಷ್ಟ	27-18	ಹಸ್ತ	20-39	19
3	ಸೋಮ	ನವ	21-32	ಚಿತ್ತ	25-54	20
4	ಮಂಗಳ	ದಶ	15-52	ಸ್ವಾತಿ	22-44	21
5	[1] ಬುಧ	ಏಕಾ	11-47	ವಿಶಾ	20-15	22
6	[2] ಗುರು	ದ್ವಾದ	8-7	ಅನೂ	18-39	23
7	[3] ಶುಕ್ರ	ತ್ರಯೋ	5-20	ಜ್ಯೇಷ್ಠ	18-9	24
8	ಶನಿ	ಚತು	4-0	ಮೂಲ	18-46	25

(1) ಸರ್ವತ್ರಪ್ರಥಮೈಕಾದಶಿ, ಚಾತುರ್ಮಾಸವ್ರತಂ. (2) ಪ್ರದೋಷ, ಶಯನದ್ವಾದಶಿ. (3) ಆದಿಶುಕ್ರವಾರ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಯಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಪ್ಸದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಕಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೩ ನೆಯ ಇಸವಿ ಜುಲೈ ತಾರೀಖು ೮ ನೆಯ ಭಾನುವಾರ. (ಸಂಚಿಕೆ ೨೮

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ೬೩ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಶಕ್ತಿ ಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾರುರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಲೀಲೆಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಥರ್ಕ್ಕಿನ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ಕಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೃಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
26 ಮೈಸೂರು.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಡರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿನಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
23 ಬಳ್ಳಾರಿ.

ಗೆಜ್ಜೆ ಕೆಟ್ಟದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿವೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.



ಇಮಿಟೇಷನ್ ವಜ್ರದ ಬೆಂಡೋಲೆ. 17

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲಿಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿವಾಸಿ	೦— ೮—೦
ವ್ರತಪಂಚಕ	೦— ೯—೦

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ.

1. ಕ್ಯಾಪ್ಟನ್ ವೈ. ವಿಶ್ವನಾಥಯ್ಯನವರು, ಯುವಸಾರ್ವಭೌಮರವರು (ಪ್ರಿನ್ಸ್ ಅಫ್ ವೇಲ್ಸ್ ರವರು) ಮೈಸೂರುದೇಶಕ್ಕೆ ದಯಮಾಡಿಸಿದುದರ ಜ್ಞಾಪನಾರ್ಥವಾಗಿ ಐದು ಸಹಸ್ರ ರೂಪಾಯಿಗಳನ್ನು ಮೇಲ್ಕಂಡ ಫಂಡಿನ ಮೂಲಧನಕ್ಕೆ ಕೊಟ್ಟು, ಸದರಿ ಮೊಬಲಗಿನ ವೃದ್ಧ್ಯಂಶವನ್ನು ವೈದ್ಯ ವಿದ್ಯಾಭ್ಯಾಸ ಮಾಡಲಿಚ್ಛಿಸುವ ಮೈಸೂರುದೇಶದ ವೀರಶೈವ ವಿದ್ಯಾರ್ಥಿ ಅಥವ ವಿದ್ಯಾರ್ಥಿಗಳಿಗೆ ಕೊಡುವಂತೆ ಉದ್ದೇಶಿಸುರುತ್ತಾರೆ.

2. ಧರ್ಮಕರ್ತರ ಉದ್ದೇಶದಂತೆ ಇದೇ ಜೂನ್ ಲಾಗಾಯ್ತು ಮಾಹೆಯಾನ 25 ರೂ. ನಂತೆ ವೇತನವನ್ನು ಮದರಾಸು ಅಥವಾ ಬೊಂಬಾಯಿ ಸರ್ಕಾರದ ಮೆಡಿಕಲ್ ಕಾಲೇಜಿನಲ್ಲಿ ಓದಲಪೇಕ್ಷಿಸುವ ಮೈಸೂರು ದೇಶದ ವೀರಶೈವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡಲು ನಿಶ್ಚಯಿಸಲ್ಪಟ್ಟಿದೆ. ಸಹಾಯವನ್ನು ಹೊಂದಲಪೇಕ್ಷಿಸುವವರು ಕೂಡಲೆ ಫಂಡಿನ ಸೆಕ್ರೆಟರಿಯವರಿಗೆ ಬರೆದುಕೊಳ್ಳತಕ್ಕದ್ದು.

ಬೆಂಗಳೂರು, ತಾ|| 15-6-23 } ಜಿ. ಪರಮಶಿವಯ್ಯ ಬಿ.ಎ., ಎಲ್ಎಲ್., ಬಿ. ಅಡ್ವೋಕೇಟ್ ಮತ್ತು ಸೆಕ್ರೆಟರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ, ಬೆಂಗಳೂರು.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಜುಲೈ ತಾ|| ೯ನೆಯ ಭಾನುವಾರ.

ಅನುಕರಣೀಯ ಪ್ರಯತ್ನ.

ಬಳ್ಳಾರಿಜಿಲ್ಲೆಯ ಹೊಸಪೇಟೆಯ ನಿವಾಸಿಗಳಾದ ವೀರಶೈವ ಮಹಾಜನರು ಅದೇ ಜಿಲ್ಲೆಯಲ್ಲಿ ಈಗ ಸಂಚರಿಸುತ್ತಿರುವ ಜಗದ್ಗುರು ಶ್ರೀ ಏಕೋರಾಮ ಪೀಠಾಧೀಶ ಸ್ವಾಮಿಗಳ ಸ್ವಾರಿಯನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಸತ್ಕರಿಸಲು ಬಿನ್ನಹಮಾಡಿಕೊಂಡಿದ್ದಾರೆ. ಆ ಸ್ವಾಮಿಗಳಿಗೆ ಅಡ್ಡಪಲ್ಲಕ್ಕಿ, ಶ್ವೇತಛತ್ರ, ಮಕರತೋರಣಾದಿ ಮರ್ಯಾದೆಗಳೊಡನೆ ಬ್ರಿಟಿಷ್ ಇಂಡ್ಯಾದಲ್ಲಿ ಸಂಚರಿಸಲು ಅಪ್ಪಣೆಯಿರುವುದಾಗಿ ಕೇಳಿರುತ್ತೇವೆ. ಅದರಂತೆಯೇ ಇದುವರೆಗೂ ಅವರು ಸಂಚರಿಸುತ್ತಲಿದ್ದಾರೆ. ಅದೇ ಮರ್ಯಾದೆಯನ್ನನುಸರಿಸಿ ಹೊಸಪೇಟೆಯಲ್ಲೂ ಉತ್ಸವಗೊಂಡು ಹೋಗುವ ವಿಷಯದಲ್ಲಿ ಅವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಅಪ್ಪಣೆಗಾಗಿ ಬರೆದುಕೊಂಡಿರಲು, ಆ ಸ್ಥಲದ ಕೆಲವು ಬ್ರಾಹ್ಮಣರುಗಳು ಇದಿರು ಅರ್ಜಿಯನ್ನು ಕೊಟ್ಟು, ಹಿಂದೆ ೧೮೮೮ನೇ ವರ್ಷದಲ್ಲಿ ಲಿಂಗಧಾರಿಗಳಿಗೂ ತಮಗೂ ಆಗಿರುವ ಒಪ್ಪಂದದಪ್ರಕಾರ ಅವರ ಗುರುಗಳು ಅಡ್ಡಪಲ್ಲಕ್ಕಿ ಮೊದಲಾದ ವಿಶೇಷ ಬಿರುದುಗಳನ್ನು ಉಪಯೋಗಿಸಿಕೊಂಡು ಉತ್ಸವಬರಲಾಗದೆಂದು ಅಡ್ಡಿಯನ್ನು ಒಡ್ಡಿದ್ದಾರೆ. ಇದು ಇನ್ನೂ ಇತ್ಯರ್ಥವಾಗದೆ ಇರುವುದರಿಂದ ಸ್ವಾಮಿಗಳು ೧-೧|| ತಿಂಗಳಿಂದ ಹೊರಗೇ ನಿಂತಿರಬೇಕಾಗಿದೆಯಂತೆ. ಇದರಿಂದ ವೀರಶೈವರಿಗೂ ಇತರ ಬ್ರಾಹ್ಮಣರಿಗೂ ಪರಸ್ಪರದ್ವೇಷವು ಬಳೆಯಲು ವಿಶೇಷಾವಕಾಶವಾಗಿದೆ. ಇಂಥ ದ್ವೇಷಾಭಿವೃದ್ಧಿಯು ದೇಶದ ಸಾರ್ವಜನಿಕ ಕಾರ್ಯಗಳಿಗೆಲ್ಲಾ ಅತ್ಯಂತಕಂಟಕವಾದುದೆಂಬುದನ್ನು ಹೇಳಬೇಕಾಗಿಲ್ಲ. ಇದನ್ನು ಪರಿಭಾವಿಸಿಯೇ ಈ ದ್ವೇಷೋತ್ತೇಜಕ ಮೂಲಕಾರಣವನ್ನು ಹೇಗಾದರೂ ತೊಲಗಿಸಬೇಕೆಂದು ಹೊಸಪೇಟೆಯ ರಾ|| ಬ|| ಸಿ. ಹನುಮಂತಗೌಡರೂ ಇತರ ಕೆಲವುಮಂದಿ ಪ್ರಮುಖರಾದ ವಕೀಲರೇ ಮೊದಲಾದವರೂ ಒಂದು ಸ್ತುತ್ಯಪ್ರಯತ್ನವನ್ನು ಮಾಡಿರುವುದನ್ನು ಕೇಳಿ ನಾವು ಸಂತೋಷಿಸಿದೆವು. ಅದೇನೆಂದರೆ-ಅವರುಗಳ ಹೆಸರಿನಿಂದ ಒಂದು ಪ್ರಕಟನವನ್ನು ಮಾಡಿದ್ದಾರೆ. ಅದರಲ್ಲಿ "ಈಗಣಕಾಲಕ್ಕೆ ಇಂಥ ವಿಷಯದಲ್ಲಿ ಪರಸ್ಪರ ಕಲಹ ಮಾಡುತ್ತ ಸಾರ್ವಜನಿಕ ದೇಶಾಭ್ಯುದಯ ಕಾರ್ಯಗಳಿಗೆ ವಿಘಾತ ಮಾಡಿಕೊಳ್ಳುವುದು ಸರಿಯಲ್ಲ. ಬ್ರಾಹ್ಮಣರ ಮನಸ್ಸಿಗೆ ನೋವನ್ನುಂಟುಮಾಡುವ ನಂದಿಧ್ವಜ, ವ್ಯಾಸನತೋಳು, ಖಡ್ಗ ಒಡವು ಇವುಗಳನ್ನು ಬಿಟ್ಟು, ಅಡ್ಡಪಲ್ಲಕ್ಕಿ ಪಂಚಕಲಶ ಮೊದಲಾದ ಬಿರುದುಗಳೊಡನೆ ಲಿಂಗಾಯತರು ಜೈನರು ಮೊದಲಾದ ಯಾರೇ ಆಗಲಿ ತಂತಮ್ಮ ಗುರುಗಳನ್ನು ಹೊಸಪೇಟೆಯಲ್ಲಿ ಮೆರೆಯಿಸಬಹುದು. ಅದುಕಾರಣ ಆ ವೂರಿನ ಸಕಲ ವರ್ಗದವರೂ ಅದರಂತೆ ನಡೆದುಕೊಳ್ಳುವವರಾಗಬೇಕು" ಎಂದು ಶ್ರುತಪಡಿಸಿಕೊಂಡಿದ್ದಾರೆ.

ಸ್ತುತ್ಯವಾದ ಈ ಪ್ರಯತ್ನವು ಸಫಲವಾಗಬೇಕು. ಉಭಯಪಕ್ಷದವರೂ ಮೇಲೆ ಕಂಡ ಪ್ರಾರ್ಥನೆಗೆ ಗೌರವವಿತ್ತು, ಉದಾರಚಿತ್ತವನ್ನು ಹೊಂದಿ ಪರಸ್ಪರ ಸೌಮನಸಿಕೊಂಡುಹೋದರೆ ಉಭಯತ್ರ ಶ್ರೇಯಸ್ಕರವಲ್ಲದೆ ದೇಶಕ್ಕೇ ಹಿತವಾಗುವುದು. ಕರ್ನಾಟಕದಲ್ಲಿ ವೀರಶೈವಜನವರ್ಗವು ಒಂದು ಪ್ರಮುಖವಾದ ಪಂಗಡವಾಗಿದೆ. ಅಲ್ಪಸ್ವಲ್ಪವಾದ ಮತ್ತು ಸಲ್ಲದ ಕೀಟಲೆಗಳನ್ನು ಕೆಲವರು ಅನ್ಯರು ತೆಗೆದು ಇವರುಗಳ ಮನಸ್ಸನ್ನು ಕೆಡಿಸಿ ಯಾವುದೊಂದು ಕಾರ್ಯಗಳಲ್ಲೂ ಇವರು ಪ್ರತ್ಯೇಕವಾಗಿ ಸಿಡಿದು ನಿಲ್ಲುವಂತೆ ಮಾಡಿಕೊಂಡಿದ್ದಾರೆ. ವೀರಶೈವರು ಕೇವಲ ಧರ್ಮಶ್ರದ್ಧಾಳುಗಳು. ಧಾರ್ಮಿಕವಿಷಯದಲ್ಲಿ ಇತರರು ಅವರ ಮನಸ್ಸಿಗೆ ಕೊಡುವ ನೋವು ಬಹುಕಾಲ ಆರದೆ ನಿಂತುಹೋಗುವುದು. ಮುಂಬೈ ಕರ್ನಾಟಕದಲ್ಲಿ ಹಿಂದೆ ಹುಬ್ಬಳ್ಳಿಯ ಮೂರುಸಾವಿರ ಮಠದ ಪಲ್ಲಕ್ಕಿಯ ವ್ಯಾಜ್ಯ ಅಥಣಿಯ ವ್ಯಾಸನತೋಳಿನ ವ್ಯಾಜ್ಯ ಇತ್ಯಾದಿಗಳಲ್ಲಿ ಪರಮತದವರು ಅನ್ಯಾಯವಾಗಿ ಕೊಟ್ಟ ತ್ರಾಸವು ವೀರಶೈವರ ಮನಸ್ಸಿನಲ್ಲಿ ಎಷ್ಟು ಬೇಗೆಯನ್ನು ಹುಟ್ಟಿಸಿತೆಂಬುದನ್ನು ಹೇಳುವಂತಿರುವುದಿಲ್ಲ. "ಏಕಃಪಾಪಾನಿಕುರುತೇಫಲಂಭುಜ್ತೇ ಮಹಾಜನಃ" ಎಂಬಂತೆ ಎಲ್ಲೋ ಕೂಪಕೂರ್ಮದಂತಿರುವ ಕೆಲವರು ಬೇಗೆ ಹೊತ್ತಿಸಿಬಿಟ್ಟರೆ ಅದರ ಫಲವನ್ನು ದೇಶವೇ ಅನುಭವಿಸಬೇಕಾಗುತ್ತದೆ. ಮುಂಬೈ ಕರ್ನಾಟಕದೊಳಗೆ ವಿದ್ಯಾಸಂಪತ್ತಿಯಲ್ಲಿ ಮುಂಬರಿದಿರುವ ಬ್ರಾಹ್ಮಣವರ್ಗವೂ ಕೃಷಿ ವಾಣಿಜ್ಯಾದಿ ವ್ಯವಹಾರದಲ್ಲಿ ಮುಂಬರಿದಿರುವ ವೀರಶೈವ ವರ್ಗವೂ ಪ್ರಮುಖವಾದುವುಗಳು. ಇವೆರಡೂ ಒಟ್ಟುಗೂಡಿದರೆ ಸರಸ್ವತೀ ಲಕ್ಷ್ಮಿಯರು ಒಟ್ಟುಗೂಡಿದ ಸಂಸಾರದಂತೆ ದೇಶವು ಸಕಲ ವಿಧದಲ್ಲೂ ವಿಲಸಿತವಾಗುವುದು. ಬ್ರಾಹ್ಮಣವರ್ಗವು ದುರಭಿಮಾನ ಪ್ರೇರಿತವಾಗಿ ವೀರಶೈವರೇ ಮೊದಲಾದವರನ್ನು ತುಚ್ಛೀಕರಿಸಿ ಸಮಯಾಸಮಯಗಳಲ್ಲಿ ಅವರಿಗೆ ಕಿರುಕುಳವನ್ನು ಕೊಡುತ್ತ ಬಂದುದರಿಂದ ಅಂಥ ಪರಸ್ಪರ ಸಹಾನುಭೂತಿಯು ತಪ್ಪಿಹೋಗಿದೆ. ವ್ಯಾವಹಾರಿಕಜನರ ಒತ್ತಾಸೆಯು ತಪ್ಪಿಹೋಗಿರುವುದರಿಂದ ಬರೀ ವಿದ್ಯಾವಂತ ಜನರು ಮಾಡುತ್ತಿರುವ ಯಾವುದೊಂದು ಚಳವಳಿಯೂ ಒಂದು ಕೈಯಲ್ಲಿ ಹಾಕುವ ಚಪ್ಪಾಳೆಯಂತೆ ನೀರವವಾಗಿ ಹೋಗುತ್ತಲಿದೆ. ಈಗಣ ರಾಜಕೀಯ ಚಳವಳಿಯ ಅವಸ್ಥೆಯಾದರೂ ಹಾಗೆಯೇ ಆಗಿದೆ. ಖಾದಿಯ ಪ್ರಸಾರವು ಭರತಖಂಡದ ಉಳಿದ ಕಡೆಯಲ್ಲೆಲ್ಲಾ ಎಷ್ಟೋ ಪ್ರಬಲವಾಗಿ ಆಗಿದ್ದರೂ ಮುಂಬೈ ಕರ್ನಾಟಕದಲ್ಲಿ ಏನೂ ಆಗಿಲ್ಲವಂತೆ. ಇದಕ್ಕೆ ಮೇಲೆ ಕಂಡ ಕಾರಣವೇ ಮುಖ್ಯವಾದುದೆಂದು ಅಲ್ಲಿಯ ಕಾಂಗ್ರೆಸ್ ಪಕ್ಷದ ಕೆಲಜನರು ಈಗೀಗ ಅರಿತುಕೊಳ್ಳುತಿದ್ದಾರೆ. ಹೀಗೆ ಅರಿತವರಲ್ಲಿ ಧಾರವಾಡದ ಚಳವಳಿಕಾರರಲ್ಲಿ ಮುಂದಾಳಾದ ಮ|| ಕಡಪ ವಕೀಲರೂ ಮ|| ಜೋಷಿಯವರೂ ಹೊಸಪೇಟೆಯಲ್ಲಿ ಈಗ ನಡೆಯಿಸಿರುವ ಪರಸ್ಪರ ಶಾಂತಿ ಪ್ರಯತ್ನಕ್ಕೆ ಅಂಕುರಾರೋಪಣವನ್ನು ಮಾಡಿದಂತೆ ಕಾಣುತ್ತದೆ.

'ಸಮಯಬಿದ್ದಾಗ ಕತ್ತೆಯ ಕಾಲನ್ನಾದರೂ ಕಟ್ಟು' ಎಂಬ ನಾಣ್ಣುಡಿಯಂತೆ ಈಗಣ ಸ್ವರಾಜ್ಯಸಾಧನ ಪ್ರಯತ್ನದಲ್ಲಿ ಜನೈಕ್ಯವನ್ನು ವೃದ್ಧಿಗೊಳಿಸಿದರೆ ಸಾಕೆಂದು ಏನೋ ಗುರಿಯಿಂದ ತಾತ್ಕಾಲಿಕವಾಗಿ ಇಂಥ ಪ್ರಯತ್ನಪಡುವುದು ಫಲಕಾರಿಯಲ್ಲ. ಪರಸ್ಪರ ಜನವರ್ಗದ ದ್ವೇಷೋತ್ಪಾದನಾಭಿವೃದ್ಧಿಗಳಿಗೆ ಯಾವ ಯಾವ ಮೂಲಕಾರಣಗಳಿರುವುವೋ ಅವುಗಳನ್ನೆಲ್ಲಾ ಶೋಧಿಸಿ ನಿರ್ಮೂಲಮಾಡುವುದಕ್ಕೆ ದೇಶದ ಎಲ್ಲ ಭಾಗಗಳಲ್ಲೂ ಉದಾರ ಮತಿಗಳಾದ ದೇಶಾಭಿಮಾನಿಗಳು ದೃಢವಾದ ಪ್ರಯತ್ನಗಳನ್ನು ಶಾಶ್ವತವಾಗಿ ಮಾಡುವುದು ಅತ್ಯವಶ್ಯಕ. ಫಲಾಫಲಗಳ ದೃಷ್ಟಿಯೇ ಇಲ್ಲದೆ ಸ್ವವಿನಾಶ ಪರನಾಶಗಳ ಜ್ಞಾನವಿಲ್ಲದೆ ಕೆಲಕೆಲವರು ಲೇಖನಗಳ ಮೂಲಕವೂ ಉಪನ್ಯಾಸಗಳ ಮೂಲಕವೂ ಇತರ ವಿಧವಾದ ಕುಹಕಗಳ ಮೂಲಕವೂ ದೇಶದಲ್ಲಿ ರಂಧ್ರಗಳನ್ನು ಹೆಚ್ಚಿಸುತ್ತಾರೆ. ಅವುಗಳು ನಿರ್ಮೂಲವಾಗಬೇಕು. ಇಂಥ ಪ್ರಯತ್ನಗಳಿಗೆ ಕೆಲವು ವೃತ್ತಪತ್ರಿಕಾಕರ್ತರು ಅವಕಾಶ ಕೊಟ್ಟುಕೊಂಡು ಕುಣಿಸುತ್ತಿರುವುದರ ಅನರ್ಥವಂತೂ ವಾಚಾಮಗೋಚರವೂ ಸಂಪೂರ್ಣ ನಿಂದ್ಯವೂ ಆಗಿರುವುದು. ಏಕೆಂದರೆ ದೇಶಕ್ಕೆ ಎಚ್ಚರಿಕೆಯನ್ನು ಹೇಳುವ ಪತ್ರಿಕಾಕರ್ತರೇ ಅಂಥ ಕುತ್ಸಿತಲೇಖನಗಳಿಗೆ ಅವಕಾಶಕೊಡುತ್ತ ಬಂದರೆ ಯಜಮಾನನು ಜೋಳ ಕದ್ದನೆಂಬ ಗಾಥೆಗೆ ಸರಿಹೋಗುವುದು.

ಸದ್ಯಃ ಭರತಖಂಡದಲ್ಲಿ ದೇಶಾಭ್ಯುದಯೈಕಚಿಂತೆಯು ಪ್ರಬಲಿಸುತ್ತಿರುವುದರಿಂದ ಈ ಮಹಾಯೋಗದಿಂದಲಾದರೂ ಕ್ಷುದ್ರರಂಧ್ರಾನ್ವೇಷಕ-ಅನೈಕಮತ್ಯವರ್ಧಕ ಯತ್ನಗಳು ನಿರ್ಮೂಲಮಾಡಲ್ಪಡುವ ಕಾರ್ಯಗಳು ಸರ್ವತ್ರ ಜರುಗಲೆಂದೂ, ಹೊಸಪೇಟೆಯವರು ಅಗ್ರೇಸರರಾಗಿ ನಿಂತು ನಡೆಯಿಸಿರುವ ಪ್ರಯತ್ನವು ಯಶಸ್ಕರವಾಗಿ ಫಲಿಸಿ ಉಳಿದ ಕಡೆಗಳಲ್ಲೆಲ್ಲಾ ಅನುಸರಿಸಲ್ಪಡುವಂತಾಗಲೆಂದೂ ಕೋರುವೆವು.

ಈ ಸಂದರ್ಭದಲ್ಲಿ ಹೇಳಬೇಕಾದ ಸಂಗತಿಯೊಂದುಂಟು. ಉಳಿದ ಮರ್ಯಾದೆಗಳಿಗೆ ಇತರರು ಅಡ್ಡಿಪಡಿಸದಿದ್ದರೆ ವ್ಯಾಸನತೋಳನ್ನು ಮೆರೆಯಿಸಿಯೇ ತೀರಬೇಕೆಂಬ ಹಠವನ್ನು ವೀರಶೈವರು ಬಿಟ್ಟುಕೊಡುವುದು ದೊಡ್ಡದಲ್ಲ. ವೇದವ್ಯಾಸರನ್ನು ಅಪಮಾನಪಡಿಸಲು ವೀರಶೈವರು ಪವಿತ್ರವಾದ ನಂದಿಧ್ವಜದ ಮೇಲೆ ಅದನ್ನು ಕಟ್ಟುತ್ತಲಿಲ್ಲ. ವೇದವ್ಯಾಸರು ವೀರಶೈವರಿಗೂ ಸಂಮಾನ್ಯರೇ. ಅವರ ಪೂರ್ವಾಚಾರ್ಯರನೇಕರು ಇವರನ್ನು ಸನ್ಮಾನಿಸಿದ್ದಾರೆ. ಇವರ ಗ್ರಂಥಗಳು ಈಗ್ಗೂ ವೀರಶೈವರಿಗೆ ಮಾನ್ಯವಾಗಿರುತ್ತವೆ. ಬ್ರಾಹ್ಮಣ ವರ್ಗದವರು ವ್ಯಾಸನತೋಳಿನ ಮೆರೆವಣಿಗೆಯನ್ನು ವ್ಯಂಗ್ಯವಾಗಿ ಕಂಡರೆ ನಾವೂ ಉದಾರಮತಿಯಿಂದ ಬಿಟ್ಟುಕೊಡೋಣ. ಆದರೆ ನಂದಿಧ್ವಜದ ಮಾತು ಹಾಗಲ್ಲ, ಅದನ್ನು ಬಿಟ್ಟುಕೊಡಿರೆಂದು ಹೇಳುವುದು ಇತರರಿಗೂ ಧರ್ಮವಲ್ಲ; ನಮಗೂ ಶಕ್ಯವಲ್ಲ. ಏಕೆಂದರೆ ಹನುಮದ್ಗರುಡಧ್ವಜಗಳು ವೈಷ್ಣವದೈವಗಳಿಗೂ ವಿಷ್ಣುಭಕ್ತರಿಗೂ ಹೇಗೋ ಹಾಗೆ ಶೈವದೈವಗಳಿಗೂ ಶಿವಭಕ್ತರಿಗೂ ನಂದಿಧ್ವಜವು ಇರುತ್ತದೆ. ಪ್ರತಿ ಶಿವದೇವಾಲಯದ ಮುಂಗಡೆಯೂ ನಂದಿಮುದ್ರಾಂಕಿತ ಧ್ವಜವಿದ್ದೇ ಇರುವುದನ್ನು ಯಾರು ಕಾಣರು? ಅದು ಶಿವಾಗಮ ಸಿದ್ಧವಾದುದು. ಅಲ್ಲದೆ ವೇದವ್ಯಾಸರೇ ತಮ್ಮ ಸ್ಕಾಂದಾದಿ ಪುರಾಣಗಳಲ್ಲಿ ಶಿವೋತ್ಸವ ಕಾಲಗಳಲ್ಲಿ ನಂದಿಧ್ವಜದ ಮೆರೆವಣಿಗೆಯನ್ನು ಸ್ಪಷ್ಟವಾಗಿ ಉಲ್ಲೇಖಿಸಿರುವರು. ದೇವಾಲಯ ಪ್ರಾಸಾದಗಳ ಮೇಲೆಲ್ಲಾ ನಂದಿ ವಿಗ್ರಹಗಳಿರುವುದನ್ನು ಎಲ್ಲರೂ ಕಾಣಬಹುದು. ಹೀಗೆ ತಂತ್ರೋಕ್ತವಿಧಿಬದ್ಧವಾಗಿ ಅನೂಚಾನವಾಗಿ ನಡೆದುಬಂದಿರುವ ಆ ನಂದಿಧ್ವಜದ ಮೆರೆವಣಿಗೆಯು ಯಾರಿಗೂ ಅಪಮಾನಕರವೆನಿಸುವುದಕ್ಕೆ ಕಾರಣವೇ ಇಲ್ಲ. ಅದರ ವಿಷಯದಲ್ಲಿ ಆಕ್ಷೇಪಿಸುವುದನ್ನು ಪರಮತದವರು ಬಿಟ್ಟು ನಡೆದುಕೊಂಡರೆ ವೀರಶೈವರೂ ಸೌಮನಸಿಕೊಂಡು ಹೋಗುವುದರಲ್ಲಿ ಅಡ್ಡಿ ತೋರುವುದಿಲ್ಲ.

ವಿದ್ಯುಚ್ಛಕ್ತಿಯ ಇಂಜನ್ನುಗಳು.

ಬರುಬರುತ್ತ ಪ್ರಪಂಚದಲ್ಲಿ ವಿದ್ಯುಚ್ಛಕ್ತಿಯ ಉಪಯೋಗವು ಇಷ್ಟೇ ಸರಿಯೆಂದು ನಿರ್ಧರಿಸಿ ಹೇಳುವುದೇ ಅಸಾಧ್ಯವಾಗುತ್ತಲಿದೆ. ಅದರ ಉಪಯೋಗವು ಹೆಚ್ಚುತ್ತ ಬಂದಂತೆ ಅದರ ಸಮುತ್ಪಾದನ ತಂತ್ರಗಳೂ ಹೆಚ್ಚುತ್ತಿವೆ. ಹೆಚ್ಚು ವೆಚ್ಚವಿಲ್ಲದೆ ಸುಲಭವಾಗಿ ಆ ಶಕ್ತಿಯನ್ನು ಉತ್ಪಾದನಮಾಡುವುದರ ಕಡೆಗೆ ಶಾಸ್ತ್ರಜ್ಞರ ದೃಷ್ಟಿಯು ಮಗ್ನವಾಗಿ, ಬೀಸಿಕೊಂಡು ಹೋಗತಕ್ಕ ಗಾಳಿಯಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿಕೊಳ್ಳುವ ಸಾಧನವನ್ನು ಕಂಡು ಹಿಡಿಯಬೇಕೆಂದು ಅಮೇರಿಕಾದಲ್ಲಿ ಕೆಲ ಶಾಸ್ತ್ರಜ್ಞರು ೨೫ ವರ್ಷಗಳಿಂದಲೂ ಪ್ರಯತ್ನಪಡುತ್ತಿದ್ದುದಕ್ಕೆ ಈಗೀಗತಾನೇ ಅದು ಫಲಿಸಿತಂತೆ. ಅಮೇರಿಕಾದ ಪತ್ರಿಕೆಗಳಲ್ಲಿ ಈಗ ಅದರ ಸುದ್ದಿಯೇ ವಿಶೇಷವಾಗಿ ಬರುತ್ತಲಿದೆ. ಗಾಳಿಯಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸುವ ಈ ಯಂತ್ರಕ್ಕೆ "ಏರೋಎಲಕ್ಟ್ರಿಕ್" ಎಂದು ಹೆಸರಂತೆ. ಭೂಮಿಗೆ ೫೦ ಅಡಿ ಎತ್ತರದಲ್ಲಿ ಗಾಳಿ ಬೀಸಲು ತಡೆಯಿಲ್ಲದ ಈ ಯಂತ್ರವನ್ನಿಟ್ಟರೆ ಎಷ್ಟು ಅಲ್ಪಸ್ವಲ್ಪವಾಗಿ ಬೀಸುವ ಗಾಳಿಯನ್ನೂ ಗಾಳಿಗಿರಗನಂತಿರುವ ಈ ಯಂತ್ರವು ಆಕರ್ಷಿಸಿಕೊಂಡು ಅದರ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉಂಟುಮಾಡುವುದಂತೆ. ೨೪೦ ಆಂಪಿಯನ್ನಿನ ಬಾಟರಿಯಿದ್ದರೆ ೧೧ ದಿನಗಳಲ್ಲಿ ಮನೆಗೆ ದೀಪ ಅಡುಗೆ ಮೊದಲಾದ ಎಲ್ಲ ಕೆಲಸಗಳಿಗೂ ಒದಗುವಷ್ಟು ವಿದ್ಯುಚ್ಛಕ್ತಿಯನ್ನು ಹುಟ್ಟಿಸುವುದಂತೆ. ಅಮೇರಿಕಾದ ಮಿಲ್ಫರ್ಡ್ ಪಟ್ಟಣದಲ್ಲಿ ಜೇಸಬ್‌ಕ್ಲೇಸ್ ಎಂಬುವರ ಮನೆಯಲ್ಲಿ ಸ್ಥಾಪಿಸಿದ್ದ ಇಂಥ ಯಂತ್ರವನ್ನು ಫಾರಂಲೈಟ್ ಅಂಡ್‌ಪವರ್ ಎಂಬ ಪತ್ರಿಕೆಯ ಅಧಿಪತಿಯು ಹೋಗಿ ಪ್ರತ್ಯಕ್ಷವಾಗಿ ಅದರ ಪ್ರಯೋಜನವನ್ನು ಪರಿಶೀಲಿಸಿ ಸಂತೋಷಪಟ್ಟು ಈ ಯಂತ್ರದಿಂದ ಪ್ರಪಂಚಕ್ಕೆ ಮಹಾಪ್ರಯೋಜನವುಂಟಾಗುವುದೆಂದೂ, ಸ್ವಲ್ಪ ಕಾಲದೊಳಗೇ ಜಗತ್ತಿನೆಲ್ಲಾ ಈ ಯಂತ್ರಗಳು ಹರಡುವುವೆಂದೂ ಅಭಿಪ್ರಾಯಪಟ್ಟಿರುವರು. ದಿನಕ್ರಮೇಣ ನಮ್ಮ ದೇಶಕ್ಕೂ ಇವು ಬರದೆ ಇರಲಾರವು. ಈಗಾಗಲೇ ಬೇರೆ ಬೇರೆ ಸಾಧನಗಳಿಂದ ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಯ ಸಮುತ್ಪಾದನೆಯು ನಡೆಯುತ್ತಿದೆಯಷ್ಟೆ. ಕಲ್ಲಿದ್ದಲು ತಗ್ಗಾಗುತ್ತಾ ಬಂದೀಚೆಗೆ ಸ್ಟೀಮಿನ ಸಹಾಯದಿಂದ ನಡೆಯಿಸಲ್ಪಡುತ್ತಿದ್ದ ಯಂತ್ರಗಳನ್ನೆಲ್ಲಾ ವಿದ್ಯುಚ್ಛಕ್ತಿಯಿಂದ ನಡೆಯಿಸಬೇಕೆಂಬ ಕಡೆಗೆ ಜನರ ಮನಸ್ಸು ತಿರುಗಿದೆ. ನಮ್ಮ ಭರತಖಂಡದಲ್ಲಿ ಟ್ರಾಂ ಬಂಡಿಗಳು ಮದ್ರಾಸು ಕಲ್ಕತ್ತಾ ಮೊದಲಾದ ಕೆಲ ಪಟ್ಟಣಗಳಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಯುತ್ತಿರುವುವು. ಇನ್ನು ಮುಂದೆ ಹೊಗೆಬಂಡಿಗಳ ಇಂಜನ್ನುಗಳನ್ನೂ ವಿದ್ಯುಚ್ಛಕ್ತಿಯಿಂದ ನಡೆಯಿಸುವ ಪ್ರಯತ್ನವು ಆರಂಭವಾಗುವಂತಿದೆ. ಮೊಟ್ಟಮೊದಲು ಸೌತ್ ಇಂಡಿಯನ್ ರೈಲ್ವೆ ಕಂಪೆನಿಯವರು ಅದಕ್ಕೆ ಪ್ರಯತ್ನಪಟ್ಟಿದ್ದಾರೆ. ತಮ್ಮ ಬಂಡಿಗಳನ್ನೆಲ್ಲಾ ವಿದ್ಯುಚ್ಛಕ್ತಿಯ ಇಂಜನ್ನುಗಳಿಂದಲೇ ನಡೆಯಿಸಲು ನಿಶ್ಚಯಿಸಿ, ಅಂಥ ಇಂಜನ್ನುಗಳನ್ನು ತರಿಸಲಿಕ್ಕೆ ಈಗ ೬೦ ಲಕ್ಷ ಪೌನುಗಳನ್ನು ವಿನಿಯೋಗಿಸಬೇಕೆಂದು ನಿರ್ಧರಿಸಿ ಅಪ್ಪಣೆ ಮಾಡಿದ್ದಾರೆ. ಅದರ ಸಾಫಲ್ಯವನ್ನೂ ಮಿತವ್ಯಯವನ್ನೂ ತಜ್ಞಜನರ ಮೂಲಕ ನಿರ್ಧರಮಾಡಿಸಿಕೊಂಡಿರದೆ ಅವರು ಇಂಥ ಪ್ರಯತ್ನಕ್ಕೆ ಕೈಹಾಕಿರಲಾರರು. ಆ ಯಂತ್ರಗಳು ಬಂದು ಕೆಲಸವು ಸಮರ್ಪಕವಾಗಿ ನಡೆಯುವುದನ್ನು ಕಂಡರೆ ಇತರ ಕಂಪೆನಿಗಳೂ ಅದೇ ಮಾರ್ಗವನ್ನು ಅನುಸರಿಸದೆ ಬಿಡಲಾರವು. ನಮ್ಮ ಮೈಸೂರಿನಲ್ಲಿ ವಿದ್ಯುಚ್ಛಕ್ತಿಯು ಅತಿಸುಲಭವಾಗಿ ಉತ್ಪನ್ನವಾಗುತ್ತದೆ. ಇನ್ನೂ ಬೇಕಾದಷ್ಟು ಶಕ್ತಿಯನ್ನು ಶಿವನಸಮುದ್ರದಲ್ಲೂ ಕೃಷ್ಣರಾಜಸಾಗರದ ಬಳಿಯಲ್ಲೂ ಹುಟ್ಟಿಸಿಕೊಳ್ಳಲಿಕ್ಕೆ ಅವಕಾಶವಿದೆ. ಅದನ್ನು ರೈಲ್ವೆ ಇಂಜನ್ನುಗಳಿಗೆ ಉಪಯೋಗಿಸುವ ವಿಷಯದಲ್ಲಿ ನಮ್ಮ ಪ್ರಭುತ್ವದವರೂ ಕೂಡ ಗಮನವಿತ್ತು ಪರಿಶೋಧನೆ ಮಾಡಿಸಿದರೆ ಲೋಹಮಾರ್ಗ ವಿದ್ಯುಚ್ಛಕ್ತಿ ಶಾಖೆಗಳೆರಡೂ ವಿಶೇಷ ಲಾಭಪ್ರದವಾಗಿ ಪರಿಣಮಿಸಬಹುದು. ಬೌರಿಂಗ್‌ಪೇಟೆಯಿಂದ ಗಣಿಗಳವರೆಗೆ ಓಡಾಡುವ ರೇಲ್ವೆಯನ್ನು ಮೊದಲು ಇಂಥ ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಯಿಸುವುದಕ್ಕೆ ಅನುಕೂಲ್ಯವು ಹೆಚ್ಚಾಗಿರುವುದೆಂದೂ, ಸ್ಟೀಮ್ ಪವರಿನಿಂದ ಇಂಜನ್ನುಗಳನ್ನು ನಡೆಯಿಸಲು ಹಿಡಿಯುವ ವೆಚ್ಚಕ್ಕಿಂತಲೂ ಎಷ್ಟೋ ಕಡಿಮೆಯಾದ ವೆಚ್ಚವು ಇದಕ್ಕೆ ಹಿಡಿಯುವುದೆಂತಲೂ ಒಬ್ಬ ಇಂಜನಿಯರು ಹಿಂದೆ ಅರ್ಥಸಾಧಕ ಪತ್ರಿಕೆಯಲ್ಲಿ ವಿಮರ್ಶಾಪೂರ್ವಕವಾಗಿ ಬರೆದಿದ್ದರು. ಸಮರ್ಥರಾದ ಇಂಜನಿಯರುಗಳ ಮೂಲಕ ಇದನ್ನು ಚೆನ್ನಾಗಿ ವಿಚಾರ ಮಾಡಿಸಲು ನಮ್ಮ ಸರ್ಕಾರದವರು ಗಮನಕೊಡುವುದು ಅವಶ್ಯಕವೆಂದು ಸೂಚಿಸಲು ಅಪೇಕ್ಷಿಸುತ್ತೇವೆ.

ಪ್ರಜಾಪ್ರತಿನಿಧಿಗಳ ಆರಿಸುವಿಕೆ.

ಪ್ರಜಾಪ್ರತಿನಿಧಿ ಸಭೆಗೆ ಎಲ್ಲ ತಾಲ್ಲೂಕುಗಳಿಂದಲೂ ಮ್ಯುನ್ಸಿಪಾಲಿಟಿಗಳಿಂದಲೂ ಪ್ರತಿನಿಧಿಗಳನ್ನು ಆರಿಸುವ ಕೆಲಸವು ಕಳೆದ ತಿಂಗಳಲ್ಲಿ ಸಂಸ್ಥಾನದ ಎಲ್ಲ ಕಡೆಯಲ್ಲೂ ನಡೆದಿರುತ್ತದೆ. ಹೀಗೆ ನಡೆದಿರುವುದರಲ್ಲಿ ಕೆಲವು ನ್ಯೂನಾತಿರೇಕಗಳು ನಡೆಯಿಸಲ್ಪಟ್ಟಿರುವಂತೆ ನಮಗೆ ದೂರು ಬಂದಿರುತ್ತದೆ. ಕೆಲಕಡೆಯಿಂದ ಈ ವಿಷಯದಲ್ಲಿ ಸರ್ಕಾರಕ್ಕೆ ಅರ್ಜಿಗಳೂ ಹೋಗಿರುವುದಾಗಿ ತಿಳಿಯುತ್ತೇವೆ. ತಾಲ್ಲೂಕು ಆಫೀಸರುಗಳು ತಮ್ಮ ಕೈಕೆಳಗಣ ಗುಮಾಸ್ತರನ್ನು ಪೋಲಿಂಗ್ ಆಫೀಸರನ್ನಾಗಿ ಮಾಡಿ ಕುಳ್ಳಿರಿಸುತ್ತಾರೆ. ಅಂಥವರು ಕೆಲರು ಪಕ್ಷಪಾತವನ್ನಾಚರಿಸುವುದಕ್ಕೆ ಅವಕಾಶವುಂಟಾಗಿದೆ. ಬರೆವಣಿಗೆಯನ್ನು ತಿಳಿಯದ ಓಟರುಗಳು ಹೇಳಿದ ಹೆಸರುಗಳೊಂದಾದರೆ ಈ ಪೋಲಿಂಗ್ ಆಫೀಸರು ಗುರ್ತುಮಾಡುವ ಹೆಸರುಗಳು ಬೇರೆಯಾಗಿ, ಯಾವ ಪ್ರಯತ್ನವನ್ನೂ ಮಾಡದೆ ಮನೆಯಲ್ಲಿ ಕುಳಿತಿದ್ದ ಮತ್ತು ಪೋಲಿಂಗ್ ಆಫೀಸರ ಬಾಂಧವರೋ ಸ್ವಜಾತೀಯರೋ ಆಗಿದ್ದ ಜನರಿಗೆ ಹೆಚ್ಚು ಓಟುಗಳು ಬಂದು, ಓಟರುಗಳಿಂದಲೂ ಉಮೇದುವಾರರಿಂದಲೂ ಇಂಥವರೇ ಜಯಶಾಲಿಗಳಾಗುವರೆಂದು ಖಂಡಿತವಾಗಿ ನಂಬಲ್ಪಟ್ಟಿದ್ದ-ಅದಕ್ಕೆ ತಕ್ಕಂತೆ ಪ್ರಯತ್ನಪಟ್ಟು ಓಟನ್ನು ಸಂಪಾದಿಸಿದ್ದ ಜನರು ಅಪಜಯವನ್ನು ಪಡೆದಿರುತ್ತಾರೆ. ಈ ವಿಷಯವನ್ನು ಪ್ರಾಮಾಣಿಕರಾದ ಕೆಲ ಉಮೇದುವಾರರುಗಳು ಪ್ರತ್ಯಕ್ಷವಾಗಿಯೇ ನಮ್ಮಲ್ಲಿಗೆ ಬಂದು ತಿಳಿಯಿಸಿರುತ್ತಾರೆ. ಪೋಲಿಂಗ್ ಆಫೀಸರ ಬಳಿಯಲ್ಲಿ ಮಾತುಬಾರಿಗಳೂ ಉಮೇದುವಾರರಲ್ಲದವರೂ ಆದ ದೊಡ್ಡಮನುಷ್ಯರೊಬ್ಬರಿಬ್ಬರು ಸಾಕ್ಷಿಗಾಗಿ ಕುಳಿತಿದ್ದರೆ ಇಂಥ ಅನರ್ಥಗಳಾಗುವುದಕ್ಕೆ ಅವಕಾಶವಿಲ್ಲ. ನಡೆದ ಅನ್ಯಾಯವನ್ನು ಕುರಿತು ಮೇಲ್ಪಟ್ಟ ಸರ್ಕಾರಕ್ಕೆ ಬರೆದುಕೊಳ್ಳುವಲ್ಲಿ ಕೆಲ ಉಮೇದುವಾರರುಗಳು ಸ್ಥಲದ ಅಧಿಕಾರಿಗಳ ನಿಷ್ಠುರವನ್ನು ಕಟ್ಟಿಕೊಳ್ಳಬೇಕಾಗುವುದಲ್ಲಾ ಎಂಬ ಚಿಂತೆಯಿಂದ ಹಿಂದೆಗೆಯುತ್ತಿದ್ದಾರೆ. ಸರ್ಕಾರದ ಘನತರವಾದ ಉದ್ದೇಶವನ್ನು ಚಿಕ್ಕ ಪುಟ್ಟ ಸ್ಥಲಿಕಾಧಿಕಾರಿಗಳು ಹೀಗೆ ಅಧರ್ಮದಿಂದ ದುರ್ವಿನಿಯೋಗಪಡಿಸುವುದೂ, ಅದಕ್ಕೆ ತಾಲ್ಲೂಕು ಅಧಿಕಾರಿಗಳು ಮನಃಪೂರ್ವಕವಾಗಿಯೋ ಉಪೇಕ್ಷೆಯಿಂದಲೋ ಅವಕಾಶಕೊಡುವುದೂ ತೀರ ಅಧರ್ಮವಾಗಿದೆ. ಇಂಥ ಲೋಪಗಳನ್ನು ನಿವಾರಿಸುವುದಕ್ಕೆ ಕಟ್ಟುನಿಟ್ಟಾದ ಆಜ್ಞೆಯಾದ ಹೊರತು ಪ್ರತಿನಿಧಿಗಳನ್ನಾರಿಸುವಿಕೆಯು ಧರ್ಮವಾಗಿ ಎಂದಿಗೂ ನಡೆಯಲಾರದು. ಅನ್ಯಾಯಗೊಳಿಸಲ್ಪಟ್ಟ ಮತ್ತು ಅಧರ್ಮಕ್ಕೆ ಅಥವಾ ಮೋಸಕ್ಕೆ ಅವಕಾಶವಾಯಿತೆಂಬುದನ್ನು ತಿಳಿದ ಪ್ರಜೆಗಳು ಅದನ್ನು ಉಪೇಕ್ಷಿಸದೆ ಡಿಸ್ಟ್ರಿಕ್ಟ್ ಅಧಿಕಾರಿಗಳಿಗೆ ತಿಳಿಯಿಸುತ್ತ ಬರುವುದಕ್ಕೆ ಹಿಂದೆಗೆದರೆ ಇಂಥ ಲೋಪಗಳು ನಿರ್ನಾಮವಾಗಲಾರವು. ಈಗ ನಡೆದುಹೋಗಿರುವ ಲೋಪಗಳೊಳಗೆ ಸರ್ಕಾರದ ತಿಳುವಳಿಕೆಗೆ ಬಂದಿರುವವುಗಳ ವಿಷಯದಲ್ಲಿ ಗೌರ್ನ್ಮೆಂಟಿನವರು ಸರಿಯಾದ ಗಮನವನ್ನು ತೆಗೆದುಕೊಳ್ಳದಿರಲಾರರೆಂದು ನಂಬುತ್ತೇವೆ.

DEWAN'S CLOSING REMARKS.

The budget session of the Mysore Legislative Council this year was more interesting from the point of view of the discussions on the administration than on the actual budget estimates themselves. With regard to the latter, as the Dewan himself stated in his closing remarks, he was not able to indicate any material alterations in the figures as a result of their discussions there as no definite or specific recommendations, not already considered and disposed of were placed before Government. But with regard to the questions of general public interest there was a lively discussion and the Dewan deals at greater length on those subjects. He gives an idea of the policies and methods he wishes to pursue which are worthy of consideration.

On the first and most important question of constitutional reforms while we are glad to hear that the Government have done a great deal of spade work and a considerable amount of opinion has been collected, there was no reply to the main point raised by some members for the appointment of a Committee to report on the reforms. The justification for this becomes greater in view of the fact that the Government at present have their hands full up with financial problems, and cannot exercise that amount of concentration which is so essential for the purpose. In dealing with the subject of the University he stated that till the report of the University authorities on the subject of the reorganization of the Board of Studies and a general examination of the whole University policy was received the Government did not intend to close any of the Faculties. We hope their will be no delay about the receipt of the report nor about the examination of it by the Government for, there could be no justification in maintaining Faculties such as Engineering, which is more an ornament than a public utility. A University need not have all the Faculties to justify its existence and if our University will confine to and distinguish itself in the Arts and Sciences for the present it is sufficient.

We are sorry to see the attempt of the Dewan to support the cutting down of Educational budget by nearly Rs. 3½ lakhs. To say that the decrease in the grant under Primary education is due to the fact that many of the village elementary aided schools are in a totally languishing or inefficient condition is neither reasonable nor convincing. For one thing, the distinction between the village elementary schools and other primary schools which is a hindrance to the progress of boys of rural areas should be done away with. The abolition of this dualism has been pressed for for many years and even recently emphasised by Mr. C. R. Reddy in the brilliant address he delivered when opening Sri Meenakshi College at Chidambaram-an address which is worth the careful perusal of those handling educational questions in Mysore. If the languishing village elementary schools are to be closed it is all the greater reason for providing more funds to substitute more efficient schools of the A.V. type in their place. The intention of the Government to go more for quality than quantity without *altogether* (italics ours) ignoring the principle of wide distribution of educational facilities is as condescending as it is ominous. As Dr. Seal says, the investment on the education of the youth of the State is the most productive form of investment, but evidently this aspect does not seem to have been present in the mind of the Government at the time of employing their axe. It was well that Mr. M. Subbiah strongly urged for the better representation of the backward communities in public service by giving effect to the declared policy of the Government and elicited the reply by the Dewan that the principle would be steadfastly kept in view. We hope that the life of the *ad interim* order directing that no permanent vacancies should be filled up pending disposal of all questions of retrenchments will not be long, as otherwise it would certainly affect the principles of recruitment approved of by His Highness' Government in their order on Miller Committee Report in so far as the period by which the desired proportion could be brought about will necessarily be postponed.

Mr. Banerji has had at the start of his career the assurances of the goodwill and support of the representatives of all sections of the people alike and we have no doubt that if he gives practical effect to his own assurances and carries on his administration with sympathy and justice the people on their part will not fail to stand by their assurances of good will and cooperation.

GLARING INJUSTICE.

The supercession of Mr. B. Nagappa, Bar-at-law, District and Session's Judge, Bångalore by Mr. B. Subbanna, B. A., B. L., District and Sessions' Judge, Mysore in the matter of filling up the vacancy in the Chief Court of Mysore caused by the retirement of the Chief Judge Sir Leslie Miller is an act of such glaring injustice that we can hardly find its parallel anywhere. It is impossible to conceive that the Government of His Highness the Maharaja would be playing with its own principles and policies.

Mr. Nagappa acted for six months as a Puisne Judge of the Chief Court, and so far as we know his work was quite satisfactory there. That when the time came for the filling up of the vacancy he should be superceeded by one junior to himself and possessing no exceptional qualifications is to say the least an administrative blunder. The Government is not justified in maintaining a studied silence with regard to the reasons for passing such an extra ordinary and exceptional order. In fairness to Mr. Nagappa and to justice the people are entitled to know the reasons. We will close this brief note with the request and hope that the Government may yet reconsider their order and right the wrong.

ಒಳದೇಶದ ವೃತ್ತಾಂತಗಳು.

ಈಗ ಬೆಂಗಳೂರಲ್ಲಿರುವ ಶ್ರೀಮದ್ಯುವರಾಜರವರ ಸ್ವಾರಿಯು ಈ ತಾ|| 15 ರಲ್ಲಿ ರಾಜಧಾನಿಗೆ ಚಿತ್ತೈಸುವುದಾಗಿರುವುದು.

ನಮ್ಮ ಸರ್ಕಾರದವರು ಫೈನಾನ್ಸ್ ಕಮಿಟಿಯವರ ಸೂಚನೆಯಂತೆ ಎಲ್ಲ ಶಾಖೆಯಲ್ಲೂ ಈವರೆಗೆ ಒಟ್ಟು 12,30,496 ರೂ. ಗಳನ್ನು ಕಡಿಮೆಮಾಡಿರುತ್ತಾರೆ.

ಮಲೆನಾಡಿನಲ್ಲಿ ಮಳೆ ಹೆಚ್ಚಾಗಿ ಸುರಿದು ಲೋಹಮಾರ್ಗವು ಕೆಟ್ಟಿರುವುದರಿಂದ ಲಕ್ಕುವಳ್ಳಿ-ನರಸಿಂಹರಾಜಪುರಗಳ ಮಧ್ಯದಲ್ಲಿ ಟ್ರಾಂ ಬಂಡಿಯ ತಿರುಗಾಟವು ನಿಂತುಹೋಗಿದೆ.

ತಿಪ್ಟೂರು ತಾಲ್ಲೂಕು ಮರಿಸಿದ್ದನಪಾಳ್ಯದ ಕರಿಯಪ್ಪನ ಖೂನಿ ಮೊಕದ್ದಮೆಯಲ್ಲಿ ಸೆಷನ್ ಜಡ್ಜರಿಂದ ಶಿಕ್ಷಿಸಲ್ಪಟ್ಟಿದ್ದ ೫ ಮಂದಿಗಳೂ ಚೀಫ್ ಕೋರ್ಟಿನ ಅಪ್ಪೀಲಿನಲ್ಲಿ ನಿರಪರಾಧಿಗಳೆಂದು ಬಿಡಿಸಲ್ಪಟ್ಟರು.

ಮೈಸೂರು ಸಂಸ್ಥಾನದ ಜನಪರಿಗಣನೆಯ ವರದಿಯು ಸಿದ್ಧಗೊಳಿಸಲ್ಪಟ್ಟು ಕೆಲಪತ್ರಿಕಾಕರ್ತರುಗಳಿಗೆ ಕಳುಹಲ್ಪಟ್ಟಿರುವುದಾದರೂ ನಮಗೆ ಮಾತ್ರ ಇನ್ನೂ ಕಳುಹಲ್ಪಡದಿರುವುದರ ಕಾರಣವು ಗೊತ್ತಾಗಲಿಲ್ಲವು.

ರಾಜಧಾನಿಯಲ್ಲೂ ಸುತ್ತುಮುತ್ತಣ ಪ್ರಾಂತಗಳಲ್ಲೂ ಮೋಡವಾಡುವುದರ ಹೊರತು ತಕ್ಕ ಮಳೆ ಬೀಳುವುದಿಲ್ಲ. ಇರುವ ಜೋಳದ ಪೈರಿಗೂ ರಾಗಿ ಬಿತ್ತನೆಗೂ ಮಳೆಯು ಅವಶ್ಯಕವಾಗಿ ರೈತರು ಹಂಬಲಿಸುತ್ತಿದ್ದಾರೆ.

ಬರುವ ಆಷಾಢ ಬಹುಳ ೬ ಎಂದರೆ ಈ ತಾ|| 15 ನೆ ಶನಿವಾರದ ದಿವಸ ಶ್ರೀಜಯಚಾಮರಾಜ ಒಡೆಯರ ವರ್ಧಂತಿ ಮಹೋತ್ಸವವು ಅರಮನೆಯಲ್ಲಿ ವಿಜೃಂಭಣೆಯಿಂದ ಜರಗುವುದು; ತತ್ಪ್ರಯುಕ್ತವಾದ ಪಲ್ಲಕ್ಕಿಯುತ್ಸವವೂ ನಡಿಯುವುದು.

ಈ ವರ್ಷ ಪಂಡಿತ ಪರೀಕ್ಷೆಗೆ ಕುಳಿತಿದ್ದ ೧೬ ಮಂದಿಗಳಲ್ಲಿ ಒಬ್ಬನೇ ಒಬ್ಬ ವೀರಶೈವನಾಗಿದ್ದ ವಿದ್ಯಾರ್ಥಿಯ ಹೊರತು ಉಳಿದವರೆಲ್ಲಾ ಪ್ಯಾಸಾಗಿ ಫೇಲಾದವನು ತಾನು ವೀರಶೈವನಾಗಿ ಹುಟ್ಟಿದ ದುರ್ದೈವವನ್ನು ಕುರಿತು ದುಃಖಿಸುತ್ತಿದ್ದಾನೆ.

ಚಿಂತಾಮಣಿ ಸಬ್‌ಡಿವಿಜನ್ ತೆಗೆಯಲ್ಪಟ್ಟಿದ್ದರೂ ಅಲ್ಲಿಯ ಸಬ್ ಡಿವಿಜನ್‌ಆಫೀಸರಾಗಿದ್ದ ಮ|| ಚೆನ್ನರಾಜಅರಸಿನವರೇ ಅಲ್ಲಿಯ ವೈಶ್ಯ ಮಹಮ್ಮದೀಯರ ವ್ಯಾಜ್ಯದ ಕೇಸನ್ನು ವಿಚಾರಣೆ ಮಾಡಿ ಮುಗಿಸಲಿಕ್ಕೆ ಸ್ಪೆಷಲ್‌ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಇಂಜಿನಿಯರ್ ಶಾಖೆಯಲ್ಲಿ ಅಷ್ಟು ಹೆಚ್ಚು ವೆಚ್ಚಾಗುತ್ತ ಸಮೃದ್ಧವಾದ ಸಿಬ್ಬಂದಿಯಿದ್ದರೂ ಕಾಲಕ್ಕೆ ಸರಿಯಾಗಿ ನಾಲೆಗಳ ರಿಪೇರಿ ಕೆಲಸವು ಮುಗಿಯುವುದಿಲ್ಲ. ಈ ಕಾರಣದಿಂದಲೇ ಆಳಲಗಟ್ಟೆಯ ನಾಲೆಯಲ್ಲಿ ನೀರನ್ನು ಈಸಲ ಜುಲೈ ಆರಂಭಕ್ಕೆ ಬಿಟ್ಟುಕೊಟ್ಟಿದ್ದಾರೆ.

ರಾಜಧಾನಿಗೆ ಬೆಂಗಳೂರಿನಿಂದ ಬಂದಿರುವ ಸಾಮ್ರಾಜ್ಯ ಮಹಾಲಕ್ಷ್ಮಿ ನಾಟಕ ಸಂಘದವರು ಶ್ರೀಮನ್ ಮಹಾರಾಜರವರ ಅಪ್ಪಣೆಯಂತೆ ಸುಭದ್ರಾಕಲ್ಯಾಣವೆಂಬ ಕಥೆಯನ್ನು ಜಗನ್ಮೋಹನ ಪ್ರಾಸಾದದಲ್ಲಿ ಕಳೆದ ಬುಧವಾರ ರಾತ್ರಿ ಅಭಿನಯಿಸಿ ಪ್ರೋತ್ಸಾಹಿಸಲ್ಪಟ್ಟುದಾಗಿ ತಿಳಿಯುತ್ತೇವೆ.

ಬರುವ ದಸರಾಕಾಲದಲ್ಲಿ ನಡಿಯುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡುವುದಕ್ಕಾಗಿ ಮೈಸೂರು ಡಿಸ್ಟ್ರಿಕ್ಟಿನಿಂದ ಕಳುಹಲ್ಪಡಬೇಕಾಗಿರುವ ವಿಷಯಗಳನ್ನು ಗೊತ್ತುಮಾಡಲು ಈ ತಾ|| 12ನೆಯ ಬುಧವಾರ ಮಧ್ಯಾಹ್ನ 1 ಘಂಟೆಗೆ ಡೆ|| ಕಮಿಷನರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸಿನಲ್ಲಿ ಸಭೆಯು ಜರುಗುವುದು.

ಮಂಡ್ಯದಲ್ಲಿ ಪ್ಲೇಗುರೋಗೋಪದ್ರವ ಇನ್ನೂ ಶಮನವಾಗಿಲ್ಲವು. ಅಲ್ಲಿಯ ಪ್ಲೀಡರಾದ ಮ|| ದೇವೋಜಿರಾಯರ ಎರಡುಮಕ್ಕಳು ಈ ರೋಗಕ್ಕೆ ತುತ್ತಾದರೆಂದು ತಿಳುಹಲು ವಿಷಾದವಾಗುತ್ತದೆ. ಈ ರೋಗವು ಸಂಪೂರ್ಣವಾಗಿ ಶಮನವಾಗುವವರೆಗೂ ಜನರು ಊರಹೊರಗಡೆಯೇ ವಾಸವಾಗಿದ್ದರೆ ಹೆಚ್ಚು ಅನರ್ಥಕ್ಕೆ ಕಾರಣವಾಗುತ್ತಿರಲಿಲ್ಲವು.

ರಾಜಧಾನಿಯ ನರಸಿಂಹರಾಜಮೊಹಲ್ಲಾದಲ್ಲಿ ೪ ಮಾಡಲ್ (ಮಾದ್ರಿ) ಮನೆಗಳೂ ನಿವೇಶಗಳೂ ವಿಕ್ರಯಿಸಲ್ಪಡುವುದರಿಂದ ಇಷ್ಟವುಳ್ಳವರು ಅವುಗಳ ವಿವರವನ್ನು ಟ್ರಸ್ಟ್‌ಬೋರ್ಡ್ ಆಫೀಸಿನಲ್ಲಿ ಹಚ್ಚಿರುವ ನೋಟೀಸಿನಿಂದ ತಿಳಿದುಕೊಂಡು ಆಫೀಸಿನಲ್ಲಿ ದೊರೆಯುವ ಅಪ್ಲಿಕೇಷನ್ ಫಾರಮುಗಳಲ್ಲಿ ಬರೆದು ಈ ತಾ|| 22ರಲ್ಲಿ ಕೊಡಬೇಕಾಗಿ ಚೇರ್ಮನ್‌ರವರು ಪ್ರಕಟಿಸಿರುತ್ತಾರೆ.

ನಿನ್ನೆಯದಿನ ಪ್ರಾತಃಕಾಲ ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು ನಡೆದು ದಸರಾ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡಲು ಕೆಲವಿಷಯಗಳನ್ನು ಕಳುಹಿಸಿಕೊಡಬೇಕಾಗಿಯೂ, ಸ್ಯಾನಿಟರಿ ಇನ್‌ಸ್ಪೆಕ್ಟರುಗಳಲ್ಲಿ ಮೊದಲನೆಯವರಾದ ಮ|| ಬಸವಲಿಂಗಶೆಟ್ಟರು 6 ತಿಂಗಳು ಕಾಲ ಪ್ರಬೇಷನರಿ ಚೀಫ್ ಇನ್‌ಸ್ಪೆಕ್ಟರಾಗಿ ನಿಯಮಿಸಲ್ಪಡತಕ್ಕುದಾಗಿಯೂ ದಿವಾನರಲ್ಲಿಗೆ ಹೋಗಿದ್ದ ಡೆಪ್ಯುಟೇಷನ್ನಿನವರ ಪ್ರಾರ್ಥನೆ ಮತ್ತು ಅದಕ್ಕೆ ದಿವಾನರು ಕೊಟ್ಟ ಉತ್ತರ ಇವುಗನನ್ನು ಕುರಿತು ರೆವಿನ್ಯೂ ಕಮಿಷನರಿಂದ ಬರೆದು ಕಳುಹಲ್ಪಟ್ಟಿರುವುದು ರಿಕಾರ್ಡು ಮಾಡಲ್ಪಡತಕ್ಕುದಾಗಿಯೂ, ಈ ಡೆಪ್ಯುಟೇಷನ್ನಿನ ವಿಚಾರದಲ್ಲಿ ಮೆಸರ್ಸ್. ಎಡ್ವರ್ಡ್ ಮತ್ತು ಅಲ್ಲಿಖಾನರವರು ಕೇಳಬೇಕೆಂದಿರುವ ಪ್ರಶ್ನೆಗಳನ್ನು ಪ್ರತ್ಯೇಕ ಪ್ರಾಪೋಜಿಷನ್ನುಗಳನ್ನಾಗಿ ತರಬಹುದೆಂದೂ ನಿರ್ಧರಿಸಲ್ಪಟ್ಟಿತು.

ಶ್ರೀರಂಗಪಟ್ಟಣ ತಾಲ್ಲೂಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಆರಿಸುವಿಕೆಯು ಕಳೆದ ತಾ|| 21ರಲ್ಲಿ ನಡೆದುದರಲ್ಲಿ ಪೋಲಿಂಗಾಫೀಸರಾದ ಅಮಲ್ದಾರರು ಮೊದಲೇ ಗೊತ್ತುಮಾಡಿದ್ದಂತೆ 12 ಗಂಟೆಗೆ ಆರಂಭಿಸದೆ 1 ಗಂಟೆಗಾರಂಭಿಸಿ ೪ ಗಂಟೆಗೆ ಮುಕ್ತಾಯಗೊಳಿಸಿದುದರಿಂದ ಅದೇ ದಿವಸ ಗತಿಸಿದ ಜವರಯ್ಯನವರ ಶವಸಂಸ್ಕಾರಕ್ಕಾಗಿ ಹೋಗಬೇಕಾಗಿದ್ದ ನೂರಾರು ಓಟರುಗಳು 12ರಿಂದ 12½ ಗಂಟೆಯವರೆಗೂ ತಾಲ್ಲೂಕು ಆಫೀಸ್‌ಬಳಿ ಕಾದಿದ್ದು ಅಮಲ್ದಾರರು ಬಾರದಿದ್ದುದರ ಮೇಲೆ ಶವಸಂಸ್ಕಾರಕ್ಕೆ ಹೊರಟುಹೋಗಿ ಅದನ್ನು ಪೂರೈಸಿಕೊಂಡು 4½ ಗಂಟೆ ಸಮಯಕ್ಕೆ ಪುನಃ ತಾಲ್ಲೂಕಾಫೀಸಿಗೆ ಬಂದು ತಮ್ಮೋಟುಗಳನ್ನು ತೆಗೆದುಕೊಳ್ಳಬೇಕೆಂದು ಅಮಲ್ದಾರರುಗಳನ್ನು ಕೇಳುವಲ್ಲಿ ಅವರು ಓಟನ್ನು ತೆಗೆದುಕೊಳ್ಳುವ ಕಾಲವು ಮುಗಿದುಹೋಯಿತೆಂದು ಹೇಳಿಬಿಟ್ಟರು. ಇದರಿಂದ ಹೆಚ್ಚು ಓಟುಗಳು ಬರುತ್ತವೆಂದು ನಿರ್ಧರಿಸಿಕೊಂಡಿದ್ದ ಉಮೇದುವಾರರುಗಳಿಗೆ ಬಾರದೆ ಇತರರಿಗೆ ಹೆಚ್ಚು ಓಟು ಬರಲವಕಾಶವಾಯಿತು. ಮತ್ತು ಗತಿಸಿಹೋಗಿದ್ದ ಜವರಯ್ಯನವರ ಹೆಸರನ್ನು ಉಮೇದುವಾರರ ಪಟ್ಟಿಯಲ್ಲಿ ಹೊಡೆದು ಹಾಕಿರಲಿಲ್ಲವಾಗಿ ಸತ್ತುಹೋದವರಿಗೂ ೪ ಓಟುಗಳು ಕೊಡಲ್ಪಟ್ಟಿದ್ದುವು ಇತ್ಯಾದಿ ಅಕ್ರಮಗಳು ನಡೆದಿರುವುದರಿಂದ ಪುನಃ ಎಲಕ್ಷನ್ನು ನಡಿಯುವಂತೆ ಅಪ್ಪಣೆಯಾಗಬೇಕೆಂದು ಡೆ|| ಕಮಿಷನರಿಗೂ ಚೀಫ್ ಸೆಕ್ರೆಟರಿಯವರಿಗೂ ಮ|| ಅರಸಿಕೆರೆ ಶ್ರೀನಿವಾಸಯ್ಯಂಗಾರರು ಮೊದಲಾದವರು ಅರ್ಜಿಗಳನ್ನು ಬರೆದುಕೊಂಡಿರುವುದಾಗಿ ಶ್ರೀರಂಗಪಟ್ಟಣದವರೊಬ್ಬರು ತಿಳಿಸುತ್ತಾರೆ. ಸರ್ಕಾರದವರು ಈ ಸಂದರ್ಭವನ್ನು ಚೆನ್ನಾಗಿ ವಿಚಾರಿಸಿ ನಡವಳಿಕೆಯು ಅಕ್ರಮವಾಗಿದ್ದಲ್ಲಿ ಪುನಃ ಎಲಕ್ಷನ್ನು ನಡಿಯಲು ಅವಕಾಶ ಕೊಡುವುದು ಯುಕ್ತವಾಗಿದೆ.

ಬೆಂಗಳೂರು ಧಾನ್ಯದಮಂಡಿ ವರ್ತಕಸಂಘದ ಪರವಾಗಿ ಕೆಲಪ್ರಮುಖ ಮೆಂಬರುಗಳು ಕಳೆದ ಭಾನುವಾರ ದಿವಾನರನ್ನು ಕಂಡು ಪ್ರಜಾಪ್ರತಿನಿಧಿಸಭೆಗೂ, ಅರ್ಥಸಾಧಕಸಭೆಗೂ, ತಮ್ಮ ಸಂಘದಿಂದ ಪ್ರತಿನಿಧಿ ಮೆಂಬರನ್ನು ಕಳುಹಿಸಲಪ್ಪಣೆಯನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡುದರ ಮೇಲೆ ದಿವಾನರು ಅವರ ಪ್ರಾರ್ಥನೆಯನ್ನು ಪರ್ಯಾಲೋಚಿಸಿ ನೆರವೇರಿಸಿಕೊಡುವುದಾಗಿ ಅಪ್ಪಣೆ ಕೊಡಿಸಿದರು.

ಚೀಫ್ ಜಡ್ಜ್ ಸರ್ ಲೇಸ್ಲಿಮಿಲ್ಲರ್‌ರವರು ಮೈಸೂರು ಸರ್ವೀಸಿನಿಂದ ವಿಶ್ರಾಂತಿಹೊಂದಿ ಪೆನ್ಷನ್ ಪಡೆದುಕೊಂಡುದರಿಂದ ೨ನೆ ಜಡ್ಜರಾಗಿದ್ದ ಮ|| ಕೆ. ಎಸ್. ಚಂದ್ರಶೇಖರಯ್ಯರ್‌ರವರು ಚೀಫ್ ಜಡ್ಜರಾಗಿಯೂ ಮಿ|| ಆರ್. ಬಿ. ಪ್ಲಮರ್‌ರವರು ೨ನೆ ಜಡ್ಜರಾಗಿಯೂ ಮೈಸೂರು ಸೆಷನ್ ಜಡ್ಜರಾಗಿದ್ದ ಮ|| ಬಿ. ಸುಬ್ಬಣ್ಣನವರು ೩ನೆ ಜಡ್ಜರಾಗಿಯೂ ನಿಯಮಿಸಲ್ಪಟ್ಟಿದ್ದಾರೆ. ಮ|| ಬ್ಯಾ|| ಬಿ. ನಾಗಪ್ಪನವರಿಗೆ ಈ ಯೋಗವು ಏತಕ್ಕೆ ತಪ್ಪಿತೊ ?

ಮ|| ವಾಮನರಾವ್ ಮಾಸ್ಟರ್‌ರವರ ವಿಶ್ವಗುಣಾದರ್ಶ ನಾಟಕಮಂಡಲಿಯವರು ದೈವಭಕ್ತಿಯನ್ನೂ ಪತಿವ್ರತಾಧರ್ಮವನ್ನೂ ಬೋಧಿಸುವ "ಭಕ್ತಸಖೂದೇವಿ" ಎಂಬ ಹೊಸನಾಟಕವನ್ನು ಈ ತಾ|| 11ರ ರಾತ್ರಿ ರಾಜಧಾನಿಯ ಟೌನ್‌ಹಾಲಿನಲ್ಲಿ ಅಭಿನಯಿಸುವವರಾಗಿರುವರು. ನಾಟಕಕಲಾಭಿಮಾನಶಾಲಿಗಳಾದ ಪ್ರೇಕ್ಷಕಮಹಾಶಯರು ದಯಮಾಡಿ ಭಕ್ತಿಪ್ರದವಾದ ಈ ನಾಟಕಾವಲೋಕನದಿಂದ ಸಂತುಷ್ಟರಾಗಿ ಮಂಡಳಿಯವರನ್ನು ಪ್ರೋತ್ಸಾಹಿಸಬೇಕಾಗಿ ಕೋರಲ್ಪಟ್ಟಿರುತ್ತಾರೆ.

ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರರಾದ ಮ|| ಆರ್. ರಂಗರಾಯರು ೨ ತಿಂಗಳು ಮತ್ತು 26 ದಿನಗಳ ಪ್ರಿವಿಲೆಜ್ ರಜವನ್ನು ಈ ಜುಲೈ ತಾ|| 1 ರಿಂದ ದಸರಾ ರಜಾದಿನಗಳ ಸಮೇತ ಉಪಯೋಗಿಸಿಕೊಳ್ಳುವಂತೆ ಅಪ್ಪಣೆಮಾಡಲ್ಪಟ್ಟಿರುವ ಪ್ರಯುಕ್ತ ವ್ಯಾಪಾರದ ಡೆಪ್ಯುಟಿ ಡೈರೆಕ್ಟರಾದ ಮ|| ಕೆ. ಎಚ್. ರಾಮಯ್ಯ ಬ್ಯಾರಿಸ್ಟರ್‌ರವರು ಮ|| ರಂಗರಾಯರ ರಜಾ ಕಾಲದಲ್ಲಿ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಕೋಆಪರೇಟಿವ್ ಸೊಸೈಟಿಗಳ ಆಕ್ಟಿಂಗ್ ರೆಜಿಸ್ಟ್ರಾರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಸರ್ಕಾರಿಯ ಸಾಬೂನು ಕಾರ್ಖಾನೆಯು ಬೆಂಗಳೂರು ಮ|| ಪಾಪಯ್ಯಸೆಟ್ಟಿ ಸಹೋದರರುಗಳಿಗೆ ವಿಕ್ರಯಿಸಲ್ಪಡುವುದಾಗಿ ಒಪ್ಪಂದಮಾಡಲ್ಪಟ್ಟಿದ್ದಿತು. ಆದರೆ ಈ ಸಹೋದರರು ಕ್ರಯದ ಮೊಬಲಗಿನಲ್ಲಿ ಸ್ವಲ್ಪವನ್ನಾದರೂ ಕಟ್ಟಲಿಲ್ಲವಾದುದರಿಂದಲೂ, ಷೇರುಗಳನ್ನು ಕೂಡಿಸಿ ಒಂದು ಕಂಪನಿಯನ್ನೇರ್ಪಡಿಸಲು ಆವಶ್ಯಕವಾದ ಹೊಣೆಯನ್ನು ಕೊಡಲು ತಪ್ಪಿದುದರಿಂದಲೂ ಈ ಕಾರ್ಖಾನೆಯನ್ನು ಪಾಪಯ್ಯಸೆಟ್ಟಿ ಸಹೋದರರುಗಳಿಗೆ ವಿಕ್ರಯಿಸಲು ಮಾಡಲ್ಪಟ್ಟಿದ್ದ ಒಪ್ಪಂದವು ತಪ್ಪಿಸಲ್ಪಟ್ಟಿರುವುದಾಗಿ ಸರ್ಕಾರದವರು ಪ್ರಕಟಿಸಿರುತ್ತಾರೆ.

ಹಿಂದುಳಿದವರ ವೇತನದ ಏರ್ಪಾಡು ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲಣ ಅಪ್ಪಣೆ ವಿದ್ಯಾಭ್ಯಾಸದ ಮೊಮೋರಾಂಡಂ ಇವುಗಳ ಮೇಲಣ ಅಸೂಯೆಯು ಸಂಪದಭ್ಯುದಯಕ್ಕೆ ಇನ್ನೂ ತಪ್ಪಲಿಲ್ಲ. ಅವಕ್ಕೆಲ್ಲಾ ಅಲ್ಪಾಯುಸ್ಸನ್ನು ಕೋರಿ ಅದು ಜಪಮಾಡುವುದು ತಪ್ಪಲಿಲ್ಲ. ಕಳೆದ ತಾ|| ೭ನೆ ಸಂಚಿಕೆಯ ಅಗ್ರಲೇಖನದಲ್ಲಿ ಈ ವಿಷಯವಾಗಿ ಅದು ಬರೆದುಕೊಂಡಿರುವ ಅಭಿಪ್ರಾಯಗಳು ಹಿಂದುಳಿದವರ ಅಭ್ಯುದಯದ ವಿಷಯದಲ್ಲಿ ಅದಕ್ಕೆ ಎಷ್ಟು ಗಾಢದ್ವೇಷವಿದೆಯೆಂಬುದು ಸ್ಪಷ್ಟವಾಗುತ್ತಿರುವುದು. ಹುಟ್ಟಿದ ಸುಳಿಯು ಬೋಳಿಸಿದರೆ ಹೋದೀತೆ? ಪರರ ನಾಶವನ್ನೇ ಕೋರುತ್ತಿರುವವರಿಗೆ ಆತ್ಮನಾಶವು ಮೊದಲೇ ಆಗುವುದು ಸಿದ್ಧ.

ಅಟವಿಶಾಖೆಯಲ್ಲಿ ಡೆಪ್ಯುಟಿ ಕನ್‌ಸರ್ವೇಟರಾಗಿದ್ದ ಮ|| ಪಿ. ಎಸ್. ಗೋವಿಂದರಾಯರು ಈಗ ಪಡೆದುಕೊಂಡಿರುವ 2 ತಿಂಗಳ ರಜವು ಮುಗಿದಕೂಡಲೇ ಉದ್ಯೋಗದಿಂದ ನಿವೃತ್ತಿ ಮಾಡಲ್ಪಡುವರು. ಆ ಶಾಖೆಯಲ್ಲಿ ಈ ಕೆಳಗೆಕಂಡಂತೆ ರಿಟ್ರೆಂಚ್‌ಮೆಂಟ್ ಮಾಡಲ್ಪಡುವುದು. ಕಡೂರು ಡಿವೀಜನ್ ತೆಗೆಯಲ್ಪಟ್ಟು ತರೀಕೆರೆ ಡಿವೀಜನ್ನಿಗೆ ಸೇರಿಸಲ್ಪಡುವುದು. ಮೈಸೂರಿನ 2 ಡಿವೀಜನ್ನುಗಳಲ್ಲಿ ದಕ್ಷಿಣಡಿವೀಜನ್ ತೆಗೆಯಲ್ಪಟ್ಟು ಪಶ್ಚಿಮಡಿವೀಜನ್ನಿಗೆ ಸೇರಿಸಲ್ಪಡುವುದು. ಭದ್ರಾವತೀ ಫಾರೆಸ್ಟ್ ಡಿವೀಜನ್ನು ಇನ್ನೂ 1 ವರ್ಷ ಇರುವಂತೆ ಮಾಡಲ್ಪಡುವುದು. ತತ್ಕಾಲಿಕವಾಗಿ ಕೆಲಸದಮೇಲಿದ್ದ ಮೇಲೆಕಂಡ 2 ಡಿವೀಜನ್ ಉದ್ಯೋಗಿಗಳೂ ಕೆಲಸದಿಂದ ಬಿಡಿಸಲ್ಪಡುವರು. ಉಳಿದವರನ್ನು ಬೇರೆಕಡೆ ಸ್ಥಲಗಳಿಗೆ ವರ್ಗಾಯಿಸುವರು.

ಶ್ರೀಮನ್ಮಹಾರಾಜರು ಮೊನ್ನೆವಾರ ನಡೆಯಿಸಿದ ಸಂಚಾರಕಾಲದಲ್ಲಿ ಎಡಿಯೂರಿಯೊಳಗೆ ಶ್ರೀ ಚರವರ್ಯ ಬೆಟ್ಟದಪುರದ ಸ್ವಾಮಿಗಳವರಿಗೆ ಅವರ ಪ್ರತ್ಯಕ್ಷದರ್ಶನ ಸಂಭಾಷಣಗಳು ದೊರೆತಿದ್ದುವೆಂದೂ, ಸ್ವಾಮಿಗಳು ಮೈಸೂರಿನಲ್ಲಿ ವೀರಶೈವರುಗಾಗಿ ಸ್ಥಾಪಿಸಬೇಕೆಂದು ನಿಶ್ಚಯಿಸಿರುವ ವೀರಶೈವಾನಾಥಾಲಯಕ್ಕೆ ತಕ್ಕ ನಿವೇಶನವನ್ನು ಕೊಡಿಸಿಕೊಡಬೇಕೆಂದು ಶ್ರುತಪಡಿಸಿದುದಕ್ಕೆ ಸಮುಚಿತವಾದ ಉತ್ತರವು ಪ್ರಭುಗಳಿಂದ ಕೊಡಲ್ಪಟ್ಟುದಲ್ಲದೆ ವೀರಶೈವರಲ್ಲಿ ವಿದ್ಯಾಭ್ಯಾಸಕ್ಕೆ ಆಗಬೇಕಾಗಿರುವ ಸಹಾಯ್ಯಗಳನ್ನೂ ಅದಕ್ಕಾಗಿ ಸ್ವಾಮಿಗಳು ಉದ್ದೇಶಪಟ್ಟಿರುವ ಘನಪ್ರಯತ್ನವನ್ನೂ ಕುರಿತು ಸಂತೋಷವನ್ನು ವ್ಯಕ್ತಪಡಿಸಿದರೆಂದೂ ಕೇಳುತ್ತೇವೆ. ಶ್ರೀಗಳವರು ಉದ್ದೇಶಪಟ್ಟಿರುವಂಥ ಸತ್ಕಾರ್ಯಕ್ಕೆ ಮೆಚ್ಚದವರಾರು? "ಶುಭಸ್ಯ ಶೀಘ್ರಂ" ಎಂಬುವುದೊಂದಾಗಬೇಕು.

ಭರತಖಂಡದ ವೃತ್ತಾಂತಗಳು.

ಮದ್ರಾಸು ಲಾ ಪರೀಕ್ಷೆಗೆ ಈಸಲ ಕಟ್ಟಿದ್ದ 564 ಮಂದಿಗಳಲ್ಲಿ 150 ಮಂದಿಗಳು ಅನಾರೋಗ್ಯ ದಶೆಯಿಂದ ಪರೀಕ್ಷೆಗೇ ಕುಳಿತುಕೊಳ್ಳಲಿಲ್ಲ.

ಆಲಿಘರ್ ಮಹಮ್ಮದೀಯ ಕಲಾಶಾಲೆಯಲ್ಲಿ ಟೆಕ್ನಿಲಾಜಿಕಲ್ ಇನ್‌ಸ್ಟಿಟ್ಯೂಟನ್ನು ಏರ್ಪಡಿಸಲು 1 ಲಕ್ಷ ರೂ.ಗಳನ್ನು ನವಾಬ್ ಮುಜಾಮಿಲುಲ್ಲಾರವರು ಧರ್ಮ ಮಾಡಿರುತ್ತಾರೆ.

ಸೂರತ್‌ಪಟ್ಟಣದ ಹತ್ತಿರ ಮಹಮ್ಮದೀಯರಿಗೆ ಅನಾಥಶರಣಾಲಯವೊಂದನ್ನು ಸ್ಥಾಪಿಸಲಿಕ್ಕಾಗಿ ಸೇಟ್ ಹಾಜಿ ಎಂಬ ಪುಣ್ಯಾತ್ಮರು 40 ಲಕ್ಷ ರೂ. ಗಳನ್ನು ದಾನಮಾಡಿರುತ್ತಾರೆ.

ಬಂಗಾಳದಲ್ಲಿ ಅತಿವೃಷ್ಟಿಯಿಂದ ದಾಮೋದರ ನದಿಯು ದಡಮೀರಿಹರಿದು ಅನೇಕ ಗ್ರಾಮಗಳನ್ನೂ ಹೊಲಗದ್ದೆಗಳನ್ನೂ ರೈಲ್ವೆಗಳನ್ನೂ ಹಾಳುಮಾಡಿತು. ಈಗ ತಗ್ಗಿಹೋಗಿದೆ.

ಮೆಟ್ರಿಕ್ಯುಲೇಷನ್ ತರಗತಿಯವರೆಗೂ ಭಾಷೆಗೆ ಸಂಬಂಧಪಟ್ಟ ವಿಷಯಗಳನ್ನು ಬಂಗಾಳಿ ಭಾಷೆಯಲ್ಲೇ ಕಲಿಸಬೇಕೆಂದು ಕಲ್ಕತ್ತಾ ವಿದ್ಯಾಪೀಠದ ಸೆನೇಟ್ ಸಂಘದವರು ತೀರ್ಮಾನಿಸಿದ್ದಾರೆ. ಸ್ತುತ್ಯ.

ವೈಸ್ರಾಯರ ಮಂತ್ರಾಲೋಚನ ಸಭೆಯಲ್ಲಿ ನ್ಯಾಯಾಂಗ ಸಭಿಕರಾಗಿದ್ದ ಡಾ|| ಸಪ್ರೂರವರು ದೇಹಾನಾರೋಗ್ಯ ನಿಮಿತ್ತದಿಂದ ತಮ್ಮ ಪದವಿಗೆ ರಾಜೀನಾಮೆ ಕೊಟ್ಟರಂತೆ. ಯೂರೋಪ್ಯರಿಂದ ಪರಮಪಾವನವಾಗಿ ಅಂಗೀಕರಿಸಲ್ಪಡುತ್ತಿರುವ ಸಿಮ್ಲಾ ವಾತಾವರಣವು ಭಾರತೀಯ ಸಭ್ಯರಿಗೆ ವಿಷವಾಗಿ ಪರಿಣಮಿಸುತ್ತಿರುವುದು ಆಶ್ಚರ್ಯವೇ ಸರಿ.

ಈಸಲ ಅಲಹಾಬಾದಿನಲ್ಲಿ ನಡೆದ ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಮದ್ರಾಸಾಧಿಪತ್ಯದ ಎಂ. ಎಸ್. ಸುಬ್ರಹ್ಮಣ್ಯಂ, ಆರ್. ಎ. ಶಿವರಾಮಕೃಷ್ಣಯ್ಯರ್, ಪಿ. ಎನ್. ರಾಮಸ್ವಾಮಯ್ಯರ್; ಸಂಯುಕ್ತಪ್ರಾಂತಗಳ ಎ. ಎನ್. ಸಪ್ರೂ, ಬೊಂಬಾಯಿ ಆಧಿಪತ್ಯದ ಎ. ಡಿ. ಗೋರ್‍ವಾಲಾ, ಮಧ್ಯಪ್ರಾಂತದ ಪರಮಾನಂದ ಇಂತಿಷ್ಟು ಜನರು ಉತ್ತೀರ್ಣರಾದರು.

ಕರಾಚಿನಗರದಲ್ಲಿ ಸಾಣೇಕಲ್ಲಿನ ವ್ಯಾಪಾರಮಾಡುವ ಡಾಕ್ಟರ್ ಪೆಸೋಟನ್ ಸೊರಾಬ್ಜಿ ಗೂಲ್ಬೈದುಬಾಷ್ ಎಂಬ ಶಾಸ್ತ್ರಜ್ಞನು ಕುರುಡರು ನಾನಾತೆರದ ರಂಗುಗಳನ್ನು ತಮ್ಮ ಕಿವಿಯ ಬಳಿಯಲ್ಲಿ ಆಯಾ ರಂಗಿನ ವಸ್ತುಗಳನ್ನು ಇಟ್ಟುಕೊಂಡು ಅವುಗಳಿಂದ ಉಂಟಾಗುವ ಧ್ವನಿಯಿಂದ ಇಂಥ ರಂಗೆಂಬುದನ್ನು ತಿಳಿಯಬಲ್ಲರೆಂಬುದನ್ನು ಪರಿಶೋಧನದ್ವಾರಾ ಕಂಡುಹಿಡಿದಿದ್ದಾನೆ.

ಪ್ರಪಂಚವನ್ನೆಲ್ಲಾ ಕಾಲ್ನಡಗೆಯಲ್ಲೇ ಯಾತ್ರೆಮಾಡಿಕೊಂಡು ಹೋಗುವ ಸಂಕಲ್ಪಗೊಂಡು ಪ್ರಿನ್ಸ್ ಆಫ್ ವೇಲ್ಸ್ ದ್ವೀಪದಿಂದ ಹೊರಟಿರುವ ಆಂಗ್ಲೇಯನೊಬ್ಬನು ಈಗ ಬೊಂಬಾಯಿಗೆ ಬಂದಿರುತ್ತಾನೆ. ಇದುವರೆಗೆ ಆತನು 8 ಸಾವಿರ ಮೈಲಿ ಬಂದಿದ್ದಾನೆ. ಈತನು ಎಷ್ಟೋ ಅಡವಿಗಳಲ್ಲಿ ಕಾಡುಮನುಷ್ಯರನ್ನೆಲ್ಲಾ ಸಂಧಿಸಿ ಅತ್ಯಂತ ವಿಚಿತ್ರಗಳನ್ನೆಲ್ಲಾ ನೋಡಿ ಬಂದಿದ್ದಾನೆ.

20–25 ಸಹಸ್ರಜನರು ಭರತಖಂಡದ ಕಾರಾಗೃಹಗಳಲ್ಲಿ ರಾಜಕೀಯಾಪರಾಧಕ್ಕಾಗಿ ದಂಡಿಸಲ್ಪಟ್ಟಿರುವರೆಂದು ಅಸಹಾಯವಾದಿಗಳು ಕೋಲಾಹಲ ಮಾಡುತ್ತಿದ್ದಾರೆ. ಆದರೆ ಪಾರ್ಲಿಮೆಂಟಿನಲ್ಲಿ ಈ ವಿಷಯವಾಗಿ ಪ್ರಶ್ನೆಮಾಡಿದ್ದಕ್ಕೆ ಸಂಪೂರ್ಣವಾದ ವಿವರವನ್ನು ಇಷ್ಟರಲ್ಲೇ ತರಿಸಿ ತಿಳಿಯಿಸುತ್ತೇವೆಂತಲೂ ಅಂಥವರ ಸಂಖ್ಯೆಯು 4 ಸಾವಿರಕ್ಕಿಂತ ಹೆಚ್ಚಾಗಿರಲಾರದೆಂತಲೂ ಅ|| ಸ್ಟೇಟ್ ಸೆಕ್ರಟೆರಿಯವರು ಉತ್ತರಕೊಟ್ಟಿರುವರು.

ಸಿಂಧು ಹೈದರಾಬಾದಿನಲ್ಲಿ ಪ್ರಕಟವಾಗುವ ಹಿಂದೂ ಪತ್ರಿಕೆಗೆ ಸಂಪಾದಕರಾಗಿದ್ದ ಕರಾಂಪಾಜಾರವರ ಮೇಲೆ 124ನೆ ಸೆಕ್ಷನ್‌ಮೇರೆ ಜಿಲ್ಲಾ ಮೇಜಿಸ್ಟ್ರೇಟರು ನೋಟೀಸ್ ಕೊಟ್ಟು ಬರಮಾಡಿ 2 ಗಂಟೆ ಕಾಲದೊಳಗೆ ವಿಚಾರಣೆ ಪೂರೈಸಿ, ಅವರು ಏನೂ ಪ್ರತಿವಾದಿಸದಿರಲು 1½ ವರ್ಷ ಕಠಿನ ಕಾರಾಗೃಹವಾಸಶಿಕ್ಷೆ ವಿಧಿಸಿದರು. ಆ ಪತ್ರಿಕೆಗೆ ಸಂಪಾದಕರಾಗಿದ್ದವರಲ್ಲಿ ಇದುವರೆಗೆ 4 ಮಂದಿ ಶಿಕ್ಷೆ ಅನುಭವಿಸುತ್ತಿರುವರು. ಇವರು 5ನೆ ಯವರು.

ಬೊಂಬಾಯಿಯ ಸುಪ್ರಸಿದ್ಧ ಬ್ಯಾರಿಸ್ಟರಲ್ಲಿ ಒಬ್ಬರಾದ ಮತ್ತು ಡಿಸ್ಟ್ರಿಕ್ಟ್ ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಿದ್ದ ಮ|| ಎಂ. ಆರ್. ಜಯಕರ್‌ರವರು ಇದುವರೆಗೆ ತಮ್ಮ ನ್ಯಾಯವಾದಿವೃತ್ತಿಯನ್ನು ಬಿಟ್ಟು ಅಸಹಾಯವಾದಿಗಳಾಗಿದ್ದರು. ಈಗ ಮತ್ತೆ ಉದ್ಯೋಗಕ್ಕೆ ಆರಂಭಿಸಿದುದಲ್ಲದೆ, ಇನ್ನು ಮುಂದೆ ತಾವು ಕಾಂಗ್ರೆಸ್ಸನ್ನು ಬುದ್ಧಿಪೂರ್ವಕವಾಗಿ ಪ್ರತಿಭಟಿಸುವೆನೆಂತಲೂ, ಅಸಹಾಯಪಕ್ಷಕ್ಕೆ ಸೇರಿ ವಕೀಲತನವನ್ನು ಬಿಟ್ಟ ಲಾಯರುಗಳು ಬಹು ಕಷ್ಟಕ್ಕೀಡಾಗಿರುವರೆಂತಲೂ, ವಕೀಲತನವನ್ನು ಬಿಡಬೇಕೆಂದು ಕಾಂಗ್ರೆಸ್ಸಿನವರು ವಿಧಿಸಿರುವುದನ್ನು ನಾನು ಒಪ್ಪುವುದಿಲ್ಲವೆಂತಲೂ ವರ್ತಮಾನಪತ್ರಿಕೆಗಳಿಗೆ ಬರೆದಿದ್ದಾರೆ.

ಲಾರ್ಡ್ ಸಿನ್ಹರವರು ತಮ್ಮ ಗೌರ್ನರ್‌ಪದವಿಗೆ ರಾಜೀನಾಮೆ ಕೊಟ್ಟುದಕ್ಕೆ ಅವರ ದೇಹಾನಾರೋಗ್ಯವೇ ಕಾರಣವೆಂದು ಹೇಳಲ್ಪಟ್ಟಿದ್ದುದನ್ನು ಕೆಲರು ನಂಬುತ್ತಿರಲಿಲ್ಲ. ಆದರೆ ಈಗ ಬಂದಿರುವ ಸುದ್ದಿಯಿಂದ ಅದು ಸಂಪೂರ್ಣವಾಗಿ ನಿಜವೆಂದು ಸಿದ್ಧವಾಗುತ್ತದೆ. ಅವರು ಅಜೀರ್ಣನಿದ್ರಾಭಂಗರೋಗದಿಂದ ಪೀಡಿತರಾಗಿದ್ದು, ದೇಹಾರೋಗ್ಯವನ್ನು ಸರಿಪಡಿಸಿಕೊಳ್ಳುವುದಕ್ಕಾಗಿಯೇ ಸೀಮೆಗೆಹೋಗಿ ಆರೋಗ್ಯರಕ್ಷಣಶಾಲೆಯೊಂದರಲ್ಲಿದ್ದರು. ಅಲ್ಲಿಯ ಏರ್ಪಾಟುಗಳು ಅವರಿಗೆ ಸರಿಬೀಳದೆ ದೇಹಾರೋಗ್ಯವು ಸುಧಾರಿಸದೆ ಹೋಗಿರುವಕಾರಣ ಸತ್ತರೆ ಮನೆಬಾಗಿಲಲ್ಲೇ ಸಾಯೋಣವೆಂದು ಈಗ ಸ್ವದೇಶಕ್ಕೆ ತೆರಳುವವರಾಗಿದ್ದಾರಂತೆ.

ಮದರಾಸು ಪ್ರಭುತ್ವಕ್ಕೆ ವರ್ಷಕ್ಕೆ 16 ಕೋಟಿ ಆದಾಯವಿದೆ. ಅದರಲ್ಲಿ 8 ಕೋಟಿಯೂ 35 ಲಕ್ಷವು ಉದ್ಯೋಗಿಗಳ ಸಂಬಳಕ್ಕೇ ವಿನಿಯೋಗವಾಗುತ್ತದೆ. ಇಂಡ್ಯಾ ಗೌರ್ನಮೆಂಟಿಗೆ 3 ಕೋಟಿಯೂ 48 ಲಕ್ಷವನ್ನು ಸಲ್ಲಿಸಬೇಕಾಗಿದೆ. ಇದೆಲ್ಲಾ ಹೋಗುತ್ತ ಉಳಿದುದನ್ನು ವಿದ್ಯಾಭಿವೃದ್ಧಿ ಆರೋಗ್ಯಾಭಿವೃದ್ಧಿ ಪರಿಶ್ರಮಾಭಿವೃದ್ಧಿಗಳಿಗೆ ಉಪಯೋಗಿಸಬೇಕು. ಅದು ಎಷ್ಟುಮಟ್ಟಿಗೂ ಸಾಲದು. ಬರಬರುತ್ತ ಮದ್ಯಪಾನ ನಿಷೇಧ ಮೊದಲಾದುವುಗಳಿಂದ ಆದಾಯವು ತಗ್ಗುತ್ತಿದೆ. ವೆಚ್ಚವು ಹೆಚ್ಚುತ್ತಿದೆ. ಕಂದಾಯ ಮೊದಲಾದುವುಗಳು ಈಗಲೇ ಬಹಳ ಹೆಚ್ಚಿವೆ. ಬೊಂಬಾಯಿಯಲ್ಲಿ ಎಕರೆಗೆ 1–5–7 ಮಧ್ಯಪ್ರಾಂತ 0–10–0 ಸಂಯುಕ್ತರಾಷ್ಟ್ರ 1–12–8 ಅಯೋಧ್ಯ 1–15–3 ಹೀಗೆ ಕಂದಾಯ ಬಿದ್ದಿರುವಲ್ಲಿ ಮದ್ರಾಸಿನಲ್ಲಿ 2–9–11 ಬಿದ್ದಿರುತ್ತದೆ. ಆದುಕಾರಣ ನಾವು ಇಂಡ್ಯಾಗೌರ್ನಮೆಂಟಿಗೆ ಪ್ರತಿವರ್ಷದಲ್ಲಿಯೂ ಸಲ್ಲಿಸಬೇಕಾದ ಮೊತ್ತವನ್ನು ಕಡಿಮೆಮಾಡಿಕೊಡಬೇಕೆಂದು ಕೇಳಿಕೊಂಡಿರಲು, ಇಂಡ್ಯಾ ಗೌರ್ನಮೆಂಟಿನವರು ನಿರಾಕರಿಸಿಬಿಟ್ಟರು. ಆದುಕಾರಣ ನೀವು ಇದನ್ನು ನ್ಯಾಯವಾಗಿ ಪರಿಷ್ಕರಿಸಿಕೊಡಬೇಕೆಂದು ಮದ್ರಾಸು ನಿಯಮನಿರ್ಮಾಣಸಭೆಯ ಕೆಲಸಭಿಕರು ಪಾರ್ಲಿಮೆಂಟರಿ ಕಮಿಟಿಗೆ ಒಂದು ಮೆಮೊರಾಂಡಮನ್ನು ಬರೆದುಕೊಂಡಿದ್ದಾರೆ.

ವಿದೇಶದ ವೃತ್ತಾಂತಗಳು

ಐರ್ಲ್ಯಾಂಡಿನಲ್ಲಿ ರಣಕೋಲಾಹಲವೆದ್ದಿದೆ. ನೂತನ ಪ್ರಭುತ್ವದವರೂ ಪ್ರಜಾಸ್ವಾಮ್ಯವಾದಿಗಳೂ ಪರಸ್ಪರ ಮದ್ದುಗುಂಡು ಫಿರಂಗಿ ಮೊದಲಾದುವುಗಳನ್ನುಪಯೋಗಿಸಿ ಸೈನ್ಯಗಳನ್ನು ಅಣಿಮಾಡಿಕೊಂಡು ಕಾದಾಡುತ್ತಿದ್ದಾರೆ. ತಂತಮ್ಮ ಪಕ್ಷಗಳ ಸಾಧುತ್ವವನ್ನು ವಿವರಿಸುವ ಪ್ರಕಟನಗಳನ್ನು ಮಾಡಿ ತಂತಮ್ಮ ಪಕ್ಷದ ಪ್ರಜೆಗಳನ್ನು ಹುರಿದುಂಬಿಸುತ್ತಿದ್ದಾರೆ. ಪ್ರಭುತ್ವಪಕ್ಷದ ಸೈನಿಕರ ಬಲವು ಮಿಂಚಿದೆ. ಪ್ರಜಾಸ್ವಾಮ್ಯವಾದಿಗಳ ಪಕ್ಷವು ಹಿಂದಾಗಿದೆ. ಅವರ ಕಡೆ ಅನೇಕರು ಸತ್ತು ಸೆರೆ ಸಿಕ್ಕಿದ್ದಾರೆ. ಅವರು ಮದ್ದುಗುಂಡು ಮೊದಲಾದುವುಗಳನ್ನಿಟ್ಟುಕೊಂಡಿದ್ದ ಬೆಲ್‌ಫೈಸ್ಟಿನಲ್ಲಿದ್ದ ಫೋರ್ ಕೋರ್ಟ್ಸ್ ಎಂಬ ಕೋಟೆಯ ಭವನವನ್ನು ಪ್ರಭುತ್ವ ಸೈನಿಕರು ಫಿರಂಗಿಗುಂಡುಗಳಿಂದ ಹೊಡೆದು ನಿರ್ನಾಮಮಾಡಿದರು. ವಿಪ್ಲವಕಾರರು ರೈಲ್ವೆ ಸೇತುಗಳು ಮಾರ್ಗಗಳು ಟೇಲಿಫೋನ್ ಟೆಲಿಗ್ರಾಂ ತಂತಿಗಳು ಮೊದಲಾದುವನ್ನೆಲ್ಲಾ ಕಿತ್ತು ಹಾಳ್ಮಾಡಿದ್ದಾರೆ. ವರ್ತಮಾನಗಳು ಸರಿಯಾಗಿ ಬರುವುದೇ ಕಷ್ಟವಾಗಿದೆ.

ಪ್ರಪಂಚದ ಸಕಲಭಾಗದ ಮದ್ಯಪಾನನಿಷೇಧಕ ಜನರ ಅಂತರ್ಜಾತೀಯ ಪ್ರಥಮ ಸಮ್ಮೇಳನವನ್ನು ಅಮೇರಿಕಾದ ಕನಡಾರಾಷ್ಟ್ರದಲ್ಲಿ ಬರುವ ನವಂಬರ್ ತಾ|| 24ರಿಂದ 29ರವರೆಗೆ ಜರುಗುವಂತೆ ಏರ್ಪಡಿಸಿದ್ದಾರೆ. ಇದಕ್ಕೆ ಪ್ರಪಂಚದ ಎಲ್ಲ ಭಾಗಗಳಿಂದಲೂ 5000 ಮಂದಿ ಪ್ರತಿನಿಧಿಗಳು ಬರುವಂತೆ ಊಹಿಸಿದ್ದಾರೆ. ಬರತಕ್ಕ ಪ್ರತಿನಿಧಿಗಳಿಗೆ ಅಮೇರಿಕಾದಲ್ಲೆಲ್ಲಾ ಸಂಚರಿಸಿ ಅಲ್ಲಿ ಮದ್ಯಪಾನನಿಷೇಧಕ ಪ್ರಯತ್ನಗಳು ಹೇಗೆ ಜಯಶೀಲವಾಗಿವೆಯೆಂಬುದನ್ನೆಲ್ಲಾ ನೋಡಿಬರಲು ಮೋಟಾರು ಮೊದಲಾದವುಗಳನ್ನು ಸಿದ್ಧಪಡಿಸಿರುತ್ತಾರೆ. ಪ್ರಪಂಚದಲ್ಲೆಲ್ಲಾ ಮದ್ಯಪಾನವನ್ನು ನಿರ್ಮೂಲಮಾಡಬೇಕೆಂಬುದೇ ಈ ಸಮ್ಮೇಳನದ ಉದ್ದೇಶವಾಗಿದೆ. ವಿಲಿಯಂಪುಸ್ಸಿಫೂಟ್ ಜಾನ್‌ಸನ್‌ರವರು ಈಗ ಲಂಡನ್ನಿಗೆ ಹೋಗಿದ್ದಾರೆ. ಈ ಸಂಮೇಳನದ ಉದ್ದೇಶದಿಂದಲೇ ಏರ್ಪಟ್ಟಿರುವ ಸಂಘವು ಅಮೇರಿಕಾದಲ್ಲಿ ಬಹಳ ಪ್ರಬಲವಾಗಿ 3 ವರ್ಷಗಳಿಂದಲೂ ಕೆಲಸಮಾಡುತ್ತಿದೆ. ಕನಡಾ, ನ್ಯೂಜಿಲ್ಯಾಂಡ್, ಸ್ವಿಡ್ಜರ್‌ಲ್ಯಾಂಡುಗಳಲ್ಲಿ 5 ವರ್ಷಗಳಲ್ಲಿಯೂ ಬ್ರಿಟನ್ನಿನಲ್ಲಿ 15 ವರ್ಷಗಳೊಳಗೂ ಜರ್ಮನಿ ಫ್ರಾನ್ಸುಗಳಲ್ಲಿ ತದನಂತರ ಕೆಲ ಕಾಲದೊಳಗೂ ಮದ್ಯಪಾನಾಭ್ಯಾಸವು ನಿರ್ಮೂಲವಾಗುವುದೆಂದು ಜಾನ್‌ಸನ್‌ರವರು ಅಭಿಪ್ರಾಯಪಟ್ಟಿದ್ದಾರೆ.

ತನ್ನ ಮೇಲೆ ವಿಧಿಸಿರುವಷ್ಟು ನಷ್ಟಪರಿಹಾರವನ್ನು ಜರ್ಮನಿಯು ತೀರಿಸಲಾರದೆ ಒದ್ದಾಡುತ್ತ ಅಷ್ಟಿಷ್ಟನ್ನು ಕಡಿಮೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದೆ. ಆದರೆ ಫ್ರಾನ್ಸಿಗೆ ಲೇಸವೂ ದಯವಿಲ್ಲ. ಜರ್ಮನಿಯ ಮೇಲಣ ಹಿಂದಣ ಹಗೆತನವು ಅದಕ್ಕೆ ಇನ್ನೂ ತಪ್ಪಿಲ್ಲ. ಯೂರೋಪಿನ ಕೈಗಾರಿಕೆಗಳೂ ಸಂಪತ್ತು ಅಭಿವೃದ್ಧಿಗೊಳ್ಳಲಿಕ್ಕೆ ಜರ್ಮನಿಯೇ ಕೇಂದ್ರಸ್ಥಾನವು. ಅದನ್ನು ಹೇಗಾದರೂ ಮಾಡಿ ಚೇತರಿಸಿಕೊಳ್ಳುವಂತೆ ಮಾಡಬೇಕೆಂಬ ಕನಿಕರವೂ ಅಭಿಮಾನವೂ ಆಂಗ್ಲದೇಶಕ್ಕೆ ಸಂಪೂರ್ಣವಾಗಿದೆ. ಇತರ ಮಿತ್ರಮಂಡಲೀ ದೇಶಗಳೂ ಅದಕ್ಕೆ ಒಪ್ಪುತ್ತವೆ. ಆದರೆ ಫ್ರಾನ್ಸು ಮಾತ್ರ ಹಿಡಿದ ಮುಷ್ಟಿಯನ್ನೇ ಹಿಡಿದಿದೆ. ಜರ್ಮನರು ಬಡತನವನ್ನು ಅಭಿನಯಿಸುತ್ತಿರುವರೆಂತಲೂ, ಅವರ ಒಂದು ನೆಪದಿಂದ ತಲೆತಪ್ಪಿಸಿಕೊಳ್ಳಬೇಕೆಂದಿರುವರೆಂತಲೂ, ಈಗ ಅವರ ವ್ಯಾಪಾರ ಕೈಗಾರಿಕೆಗಳು ಚೆನ್ನಾಗಿ ಸಾಗುತ್ತಿರುವುವೆಂತಲೂ ಅವರು ಗೊತ್ತಾಗಿರುವ ನಷ್ಟದ್ರವ್ಯವನ್ನೆಲ್ಲಾ ಪೂರ್ಣವಾಗಿ ಸಲ್ಲಿಸದಿದ್ದರೆ ಮಿತ್ರಮಂಡಲಿಯವರೆಲ್ಲರೂ ಕೂಡ ಬಲವಂತವಾಗಿಯಾದರೂ ಅವರಿಂದ ವಸೂಲು ಮಾಡಿಕೊಳ್ಳುವ ಉಪಾಯವನ್ನು ಆಲೋಚಿಸಬೇಕೆಂತಲೂ ಫ್ರೆಂಚ್ ಮಂತ್ರಿ ಪಾಯಿಂಕೇರ್‌ರವರು ತಮ್ಮ ರಾಜ್ಯಾಂಗ ಸಭೆಯಲ್ಲಿ ಉಪನ್ಯಾಸಮಾಡಿದ್ದಾರೆ.

ಹೇಗ್ ಪಟ್ಟಣದಲ್ಲಿ ನಾನಾರಾಷ್ಟ್ರಸಂಘವು ಸೇರಿದ ರಷ್ಯಾ ಜರ್ಮನಿ ಫ್ರಾನ್ಸ್ ಬ್ರಿಟನ್ ಇಟಲಿ ಚೀನಾ ಜಪಾನ್ ಬೆಲ್ಜಿಯಂ ಮೊದಲಾದ 22 ರಾಷ್ಟ್ರ ಪ್ರಭುತ್ವಗಳ ಪ್ರತಿನಿಧಿಗಳು ಸೇರಿದ್ದಾರೆ. ಪ್ರಪಂಚದಲ್ಲಿ ಮರಳಿ ಯುದ್ಧವಾಗದಂತೆ ಶಾಶ್ವತ ಶಾಂತಿಸ್ಥಾಪನೆ ಮಾಡಬೇಕೆಂಬುದೇ ಈ ಸಮ್ಮೇಳನಗಳ ಉದ್ದೇಶವಾಗಿದೆ. ಆದರೆ ಅಲ್ಲಿ ನಡೆಯುವ ಚರ್ಚೆಗಳು ಮಹಾಸಮುದ್ರದ ಅಲೆಗಳಂತೆ ಒಂದೊಂದುಸಲ ಪರಸ್ಪರ ಚಕಮುಕಿಯನ್ನೇಳಿಸಿ ಮಹಾನರ್ಥವನ್ನುಂಟುಮಾಡುವಂತೆ ತೋರುತ್ತವೆ. ಬ್ರಿಟನ್ ಮಂತ್ರಿಗಳಾದ ಲಾಯಿಡ್ ಜಾರ್ಜ್‌ರವರು ಈ ಸಭೆಗಳಲ್ಲಿ ಮಾಡುವ ಉಪನ್ಯಾಸಗಳೂ ಸಮಾಧಾನ ಕ್ರಿಯೆಗಳೂ ಸಾಹಸಗಳೂ ಲೋಕೋತ್ತರಗಳಾಗಿರುತ್ತವೆ. ಎಲ್ಲರಿಗೂ ಪ್ರಪಂಚಶಾಂತಿಯನ್ನು ಕೋರುವುದರಲ್ಲಿ ಬ್ರಿಟನ್ನೇ ಮೊದಲನೆಯದೆಂಬ ಪ್ರತಿಪತ್ತಿಯನ್ನು ಅವರು ಉಂಟುಮಾಡುತ್ತಿದ್ದಾರೆ. ಈ ಸಭೆಯಲ್ಲಿ ರಷ್ಯಾ ಪ್ರತಿನಿಧಿಯಾದ ಲಿಟ್ವಿನಾಫ್‌ರವರು ರಷ್ಯಾದೇಶದ ಪುನರುದ್ಧಾರಕ್ಕಾಗಿ ತಮಗೆ 322 ಕೋಟಿಯೂ 40 ಲಕ್ಷ ರೂ. ಬಿಲ್ಲುಗಳು ಎಂದರೆ 34 ಕೋಟಿಯೂ 10 ಲಕ್ಷ ಸೌರನ್ನುಗಳನ್ನು ಸಾಲವು ಕೊಡಲ್ಪಡಬೇಕೆಂದು ಕೇಳಿದರು. ಇದನ್ನು ಕಂಡು ಇತರ ಪ್ರತಿನಿಧಿಗಳೆಲ್ಲಾ ದಿಗ್ಭ್ರಮೆ ಹೊಂದಿದರು. ಆ ಸಂದರ್ಭದಲ್ಲಿ ಲಿಟ್ವೀನಾಫ್‌ರವರು—ರಷ್ಯಾದೇಶಕ್ಕೆ ಯುದ್ಧಾತ್ಪೂರ್ವದಲ್ಲಿ 1½ ನ್ಯರ್ಬುದ ರೂಬಲ್ಸ್‌ಸಂಪತ್ತು ಇದ್ದಿತೆಂತಲೂ ಯುದ್ಧದಿಂದ ಅದರಲ್ಲಿ $\frac{5}{12}$ ಭಾಗವು ನಾಶವಾಗಿ ಹೋಯಿತೆಂತಲೂ ಹೇಳಿದರು. ಇನ್ನೊಬ್ಬ ರಷ್ಯನ್ ಪ್ರತಿನಿಧಿಯು ಮಾತನಾಡುವಾಗ್ಗೆ ಈ ಸಾಲವನ್ನು ಮಿತ್ರಮಂಡಲೀ ದೇಶಗಳವರು ಒದಗಿಸಿಕೊಟ್ಟೇ ತೀರಬೇಕೆಂತಲೂ ಇಲ್ಲದಿದ್ದರೆ ರಷ್ಯಾದ ಪುನರುದ್ಧಾರವಾಗುವುದಿಲ್ಲವೆಂತಲೂ, ಆಗ್ಗೆ ಇದುವರೆಗೆ ರಷ್ಯಾಕ್ಕೆ ಸಾಲವನ್ನು ಕೊಟ್ಟಿರುವವರು ತಮ್ಮ ಹಣವು ತಿರಿಗಿಬರುವುದೆಂಬ ಆಸೆಯನ್ನು ಇಟ್ಟುಕೊಳ್ಳಕೂಡದೆಂತಲೂ ಬೆದರಿಕೆ ಹಾಕಿದರು. ಅದರ ಮೇಲೆ ಋಣದಾನ ಸಂಘದವರು—ಇಷ್ಟು ಹಣವನ್ನು ಸಾಲ ಕೊಡುವುದು ಸಾಧ್ಯವಲ್ಲವೆಂತಲೂ ಸೋವಿಯಲ್ ಪ್ರಭುತ್ವದವರು ನಂಬುಗೆಯಿಂದ ಪ್ರವರ್ತಿಸಿದರೆ ತಕ್ಕಷ್ಟು ಮೊತ್ತವು ಅವರಿಗೆ ಕೊಡಲ್ಪಡಬಹುದೆಂತಲೂ ಅಭಿಪ್ರಾಯಕೊಟ್ಟರು.

ಸ್ವೀಕಾರ.

ಕೈ|| ವೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ಈ ಕೆಳಗೆ ಕಂಡ ವಿವಾಹಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.—

(1) ಮೈಸೂರು ಬಳೆಮಹದೇವಪ್ಪನವರಿಂದ, ಅವರ ಮನೆಯಲ್ಲಿ ನಡೆದ ಲಗ್ನದಲ್ಲಿ 1 ರೂ. (2) ಗುಬ್ಬಿ ತಾ|| ದೊಡ್ಡಗುಣಿ ಮ|| ಜಿ. ನಂಜಪ್ಪಶೆಟ್ಟರ ಮೂಲಕ--ಮ|| ಪರುವಣ್ಣನವರ ರೇವಣ್ಣನವರ ಲಗ್ನದಲ್ಲಿ 1 ರೂ, ಮತ್ತು ಮ|| ಸ್ವಾ|| ರೇವಣ್ಣನವರ ಮೊಮ್ಮಗ ಪ್ಯಾಟಪ್ಪನ ಲಗ್ನದಲ್ಲಿ 8 ಆ. (3) ಚಿಕ್ಕಮಗಳೂರು ತಾ|| ಮಳವಳ್ಳಿ ಮಠದ ವೇ|| ಮುಪ್ಪನಯ್ಯನವರ ಮೂಲಕ--ಉಪ್ಪಳ್ಳಿಯ ಸಾಹುಕಾರ್ ಚಂದಪ್ಪನವರ ಪುತ್ರಿ ಪಾರ್ವತಮ್ಮನಿಗೂ ಅರಸೀಕೆರೆ ಸಾಹುಕಾರ್ ಕರ್ಪೂರದ ಸಿದ್ದಪ್ಪನವರ ಪುತ್ರ ಸಿದ್ಧರಾಮಪ್ಪನಿಗೂ ನಡೆದ ಲಗ್ನದಲ್ಲಿ 1 ರೂ. ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾ|| ಕಸಬಾ ಶಿರಾಕೋಟೆಯಲ್ಲಿ ಇರುವ ಪುರಾಣದ ಮ|| ಗುರುಲಿಂಗಪ್ಪನವರ ಕುಮಾರ್ತಿ ಚನ್ನಮ್ಮನಿಗೂ ಮಡಕಶಿರಾ ತಾ|| ಕೇಶಾತಿಯಲ್ಲಿ ಇರುವ ಮ|| ವೀರಪ್ಪನವರ ಕುಮಾರ ಮುಂಡಪ್ಪನಿಗೂ ಶಿರಾದಲ್ಲಿ ಇರುವ ಮ|| ಕಾಳೀರಪ್ಪನವರ ಕುಮಾರ ಚಿಕ್ಕವೀರಪ್ಪನಿಗೂ ಮ|| ಅರಿನ ಗುರುಬಸಪ್ಪನವರ ಕುಮಾರ್ತಿ ರುದ್ರಮ್ಮನಿಗೂ ಮತ್ತು ಡಿಟ್ಟೋ ಅರಿನ ಗುರುಬಸಪ್ಪನವರ ಕುಮಾರ ಸಿದ್ದಪ್ಪನಿಗೂ ಮದ್ದಗಿರಿ ತಾ|| ಗೆಂಜಲಗುಂಟೆಯಲ್ಲಿ ಇರುವ ಮ|| ಮುದ್ದವೀರಪ್ಪನವರ ಕುಮಾರ್ತಿ ಅಡವೀರಮ್ಮನಿಗೂ ಶಿರಾ ಮ|| ಭೋಗಣ್ಣನವರ ಕಪ್ಪಣ್ಣನವರ ಕುಮಾರ್ತಿ ಮುದ್ದಮ್ಮನಿಗೂ ಮಡಕಶಿರಾ ತಾ|| ಅಗಳಿಯಲ್ಲಿ ಇರುವಮ|| ಗುಬ್ಬಿ ರಾಯಪ್ಪನವರ ಕುಮಾರ ಪುಟ್ಟಪ್ಪನಿಗೂ ನಡೆದ ಲಗ್ನಗಳಲ್ಲಿ 2 ರೂ. (4) ತಿಪಟೂರು ತಾ|| ಹೊನ್ನವಳ್ಳಿಯ ಮ|| ಯಜಮಾನ್ ಮರುಳಪ್ಪಶೆಟ್ಟರ ಕುಮಾರ್ತಿ ಸಿದ್ಧರಾಮಕ್ಕನಿಗೂ, ಅದೇ ಗ್ರಾಮದ ಮ|| ಕೋರಿಶೆಟ್ಟರ ಸುಬ್ಬಶೆಟಪ್ಪನವರಿಗೂ ದುರ್ಮತಿಸಂವತ್ಸರದಲ್ಲಿ ನಡೆದ ಲಗ್ನದಲ್ಲಿ 1 ರೂ. ತುಮಕೂರು ಡಿ|| ಶಿರಾ ತಾ|| ಶಿರಾಕೋಡಿಗುಣಿಮಠದ ವೇ|| ಕರಿಬಸವಯ್ಯನವರ ಕುಮಾರ್ತಿ ಗಂಗಮ್ಮನಿಗೂ ಹಿರಿಯೂರು ತಾ|| ಐಮಂಗಲದ ಮಠದ ವೇ|| ಹಾಲಪ್ಪನವರ ಕುಮಾರ ಕಲ್ಲಯ್ಯನವರಿಗೂ ನಡೆದ ಲಗ್ನದಲ್ಲಿ ವೇ|| ಹಾಲಪ್ಪಯ್ಯನವರಿಂದ 2 ರೂ. ವೇ|| ಕರಿಬಸವಯ್ಯನವರಿಂದ 1 ರೂ. (5) ಇದೇ ಗ್ರಾಮದ ಮ|| ಕೆಸರಿಬಾನೆ ಚಿಕ್ಕನಂಜಪ್ಪನವರ ಮತ್ತು ನಂಜುಂಡಪ್ಪನವರ ಕುಮಾರ್ತಿಯರ ಲಗ್ನದಲ್ಲಿ 8 ಆ., ಸದರಿ ಗ್ರಾಮದ ಹಂಪಯ್ಯನವರ ಕುಮಾರರ ಲಗ್ನದಲ್ಲಿ 8 ಆ. ಒಟ್ಟು 4 ರೂ. ಶಿರಾ ಫೋ|| ಹಂ|| ಮ|| ಪ|| ಸಿದ್ದಪ್ಪದೇವರ ಮೂಲಕ.

Extract from the speech delivered by Mr. H. G. Basavappa, Mysore Legislative Council Member, at the Councii on 27th June 1922.

Government have, as usual, allotted a considerable sum to the two Sanskrit Colleges, Bangalore and Mysore, without removing the restrictions as close preserve for a particular community. The recommendations of a Committee appointed to investigate this matter has been recently published in the Gazette inviting public criticism. Considering the personal of that Committee, no one is surprised at the result of their one sided deliberations. I cannot understand that even in these enlightened days when bitter religious animosities are fast disappearing, that even such communities as mine who have the proud privilege of owing allegiance to Vedas and who have contributed their humble quota to Sanskrit literature should be suffering under bane of exclusion. Our important scriptures, our philosophy and other dogmas are mostly in Sanskrit even including our daily prayer and worship. To exclude our community from the benefits of Sanskrit education, whether in Vedic class or other branches of Sanskrit learning is nothing short of a rancorous spirit of dark ages when supremacy for various cults belonging to Vedic religion was furiously fought.

In the last Mysore University Examination it is seen that a Veerasiva boy passed the B.A. Examination taking a first class in Sanskrit. And in fact he was the only candidate to secure a first class. This shows that other communities or at least the community to which I belong have as much aptitude for Sanskrit learning as the Brahmins. If the Government thinks that the time has not yet come to remove such restrictions, it is but fair and equitable that no contribution is made from public funds for the benefit of a particular community, attaching at the same time humiliation and degradation to other communities who have every reason to resent. No self-respecting community can be a party to contribute public funds to get as a return a bane of exclusion and sense of inferiority. And in these civilised days no Government can countenance such invidious distinctions and fritter away public money to please the sentiments and vanity of a particular community however powerful and influential it may be.

I therefore appeal strongly in the name of justice and fair play that either the grant provided to these Colleges should be cut off or the Colleges should be thrown open to the public.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ.

ಸಂಕ್ಷೇಪವಾಗಿ ಕಾಗದದ ಒಂದು ಕಡೆ ಮಾತ್ರ ಸ್ಪಷ್ಟವಾಗಿ ಬರೆಯಲ್ಪಟ್ಟಿರುವ ಪಕ್ಷಪಾತರಹಿತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳ [illegible] ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಬೇಕು.

SANSKRIT COLLEGES IN MYSORE.

The Government has called for opinion from the public regarding the admission of non-Brahmins into the Sanskrit Colleges in Mysore and Bangalore. I wish to contribute this article in favour of the Veerasaivas.

Veerasaivas were the first to open this question as they keenly felt a necessity to protect and preserve their sacred literature and philosophy by educating some of their young men in the Sastras and Vedas. This question was shelved by the Government without a definite answer everytime it was put in the Representative Assembly. When this matter was pushed very far by the Veerasaivas the Government found out the iniquity of the evasive answers given by it hitherto and constituted a Special Committee to enquire into and report the matter.

This Committee however was far from satisfactory for the members being all Brahmins the decision would be purely communal but the question is about the admission of non-Brahmins. Why not a fresh Committee be appointed on a representative basis to go into the question?

The inception of non-Brahmins in general, I am afraid, has included parties not very much interested in the subject. In this overwhelming majority it is quite possible that the Veerasaivas will be ruled over.

Since non-Brahmins are already getting tuitions in Kavya and Sahitya from even the orthodox Pandits in the English Colleges I very much urge that they should be given the privilege of attending the Sanskrit Colleges as well. In this connection the case of the Veerasaivas deserves particular consideration.

1. It is the Veerasaivas that opened this question as they felt an irresistable necessity to the study of Sahitya and Veda.

2. The Veerasaivas have got a vedic past. Their religious literature requires the study of Sanskrit in all branches including the Vedas.

3. Their philosophy is based on Veda *i.e.* Upanishads from which source Shankaracharya and Ramanujacharya have derived their philosophy.

4. Veerasaiva Community has suffered much by the exclusion of its members to Sanskrit Colleges. Though the number of Veerasaiva Pandits is reduced by such exclusion it is not extinct. Even to this day we see some well known scholars in Sahitya and Veda.

5. The existence of numerous Veerasaiva Mutts all over the State and the recognition of its priesthood by Rajas and Nabobs who have become its disciples even to this day points to the religious glory of the Veerasaivas.

6. Inspite of Brahmin partiality there still exist some Patashalas maintained by Veerasaivas for the education of their youngmen in Shastras and Vedas.

7. Impartial orthodox Pandits even among Brahmins will not have the sentimental objection towards Veerasaivas though otherwise disposed towards others.

In the consideration of these privileges for the Veerasaivas I am of opinion that sentiment should not sway over reason. Monopoly and privilege of one class should not have any place in an institution maintained by public funds. As the Veerasaivas have got a vedic past and require Sahitya and Vedic studies much more than others their claim to the admission into the Mysore and Bangalore Colleges must be considered as a special case.

A Veerasaiva.

ಜೈನ ವಿದ್ಯಾವರ್ಧಕ ಫಂಡ್ ಅಸೋಸಿಯೇಷನ್ ಸೆಕ್ರೆಟೆರಿಯವರಿಂದ.

ಜೈನ ವಿದ್ಯಾವರ್ಧಕ ಫಂಡ್ ಅಸೋಸಿಯೇಷನ್ನಿನಿಂದ ಮುಂದಿನ ರೆಪ್ರಿಜೆಂಟಟಿವ್ ಅಸೆಂಬ್ಲಿಗೆ ಮ|| ಸಾಲಿಗ್ರಾಮದ ಸರಾಫ್ ಪದ್ಮರಾಜಯ್ಯನವರು ಚುನಾಯಿಸಲ್ಪಟ್ಟಿದ್ದಾರೆ.

ಮೇಲ್ಕಂಡ ಫಂಡಿನಿಂದ ವಿದ್ಯಾರ್ಥಿವೇತನವನ್ನು ಅಪೇಕ್ಷಿಸತಕ್ಕ ಬಡ ಜೈನವಿದ್ಯಾರ್ಥಿಗಳು ಇದೇ ಮಾಹೆ ತಾರೀಖು 15 ರೊಳಗಾಗಿ ಅಪ್ಲಿಕೇಷನ್ ಹಾಕಿಕೊಳ್ಳಬೇಕಾಗಿ ಸೂಚನೆ.

ಶ್ರೀಕ್ಷೇತ್ರ ಕಾಶೀ ಜಂಗಮವಾಡೀ ಮಹಾಸಂಸ್ಥಾನದ ವಿದ್ವನ್ಮಂಡಲಿಯವರ ಪರೀಕ್ಷಾಪರಿಣಾಮವು.

ಈ ವರ್ಷ ಮಹಾಸಂಸ್ಥಾನದ ವಿದ್ವನ್ಮಂಡಲಿಯವರು ಕಲಕತ್ತಾ ವಿಶ್ವವಿದ್ಯಾಲಯದಲ್ಲಿಯೂ ಶ್ರೀ ಕಾಶೀಗವರ್ನಮೆಂಟ ಸಂಸ್ಕೃತ ಕಾಲೇಜದಲ್ಲಿಯೂ ನಿಮ್ನ ಲಿಖಿತಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವವರು.—

ವ್ಯಾಕರಣ ಶಾಸ್ತ್ರದಲ್ಲಿ

ಶ್ರಿ ಚಿದ್ಘನ ಶಿವಾಚಾರ್ಯರು ಪುರಗಿರಿ }
ಶ್ರೀ ವಿಶ್ವೇಶ್ವರ ಶಾಸ್ತ್ರಿಗಳು ಬೆಟಗೇರಿ } ಆದ್ಯ ಮತ್ತು ಮಧ್ಯಮ

ಸಾಹಿತ್ಯ ಶಾಸ್ತ್ರದಲ್ಲಿ

ಶ್ರೀ ಸರ್ವನಾಥ ಶಾಸ್ತ್ರಿಗಳು ಉರವಕೊಂಡ }
ಶ್ರೀ ನಂದಿಕೇಶ್ವರ ಶಿವಾಚಾರ್ಯರು ಸವದತ್ತಿ } ಆದ್ಯ ಮತ್ತು ಮಧ್ಯಮ

ವೇದಾಂತ ಶಾಸ್ತ್ರದಲ್ಲಿ

ಶ್ರೀ ಪಂಚಾಕ್ಷರಿ ಶಿವಾಚಾರ್ಯರು ತಾಸಗಾಂವ—ಆದ್ಯ

ಶ್ರೀ ಕಾಶೀ ಸಂಸ್ಕೃತಕಾಲೇಜದಲ್ಲಿ

ಶ್ರೀ ನೀಲಕಂಠ ಶಾಸ್ತ್ರಿಗಳು ಭಾನಾಪೂರ—ಆದ್ಯ

ಶ್ರೀ ಕ್ಷೇತ್ರಕಾಶಿ,
ವೇದಾಂತ ವಿಶಾರದ ವಿ. ಶ್ರೀ ನೀಲಕಂಠ ಶಿವಾಚಾರ್ಯರು,
ಹೂಲಿ, ಬೃಹನ್ಮಠ.

ನವಲಗುಂದ.

ತಾರೀಖು 1-7-22ನೆ ಶನಿವಾರ ಸಾಯಂಕಾಲಕ್ಕೆ ಇಲ್ಲಿಯ ಗವೀಮಠದಲ್ಲಿ ಹಾವೇರಿ ಹುಕ್ಕೇರಿ ಮಠದ ಸಂಸ್ಕೃತ ಪಾಠಶಾಲಾಧ್ಯಾಪಕರಾದ "ಕಾವ್ಯತೀರ್ಥ" ಗುರುಮೂರ್ತಿಶಾಸ್ತ್ರಿ ಕಜ್ಜರಿ ಇವರು ತಾವು ಸ್ವತಃ ರಚಿಸಿದ ಸೊಲ್ಲಾಪುರದ ವಾರದ ಅಪ್ಪಾಸಾಹೇಬರ ಕೀರ್ತನದ ಒಲಗು ಭಾಗವನ್ನು ಜನರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಗುವಂತೆ ಮಾಡಿದರು. ಆ ದಿವಸದ ಕೀರ್ತನದಿಂದ ಜನರು ಒಳ್ಳೇ ಉತ್ಸಾಹವುಳ್ಳವರಾಗಿ ಸೋಮವಾರ ಸಾಯಂಕಾಲಕ್ಕೆ ಸದರೀ ಕೀರ್ತನದ ಉತ್ತರಭಾಗವನ್ನು ನೇಮಿಸಿದರು. ಮೊದಲಿನ ದಿವಸಕ್ಕಿಂತಲೂ ಈ ದಿವಸ ಸ್ಥಳಪರಸ್ಥಳದ ಮತ ಪರಮತದ ಜನರೂ ಶಿರಸ್ತಾರರೇ ಮುಂತಾದ ಕಚೇರಿಮಂಡಳಿಯವರೂ ಹೆಚ್ಚಾಗಿ ಸೇರಿದ್ದರು. ಕೀರ್ತನದ ಉದ್ದೇಶವನ್ನಿಟ್ಟುಕೊಂಡು ಮಧ್ಯ ಮಧ್ಯದಲ್ಲಿ ಪ್ರಸಂಗಾನುಸಾರವಾಗಿ ವಿದ್ಯಾ, ಧರ್ಮ ನೀತಿ ಸ್ತ್ರೀ ಶಿಕ್ಷಣ ಸದಾಚಾರ ದೇಶ ಸಮಾಜಾದಿಗಳ ಅಭಿಮಾನ ಇತ್ಯಾದಿ ವಿಷಯಗಳನ್ನು ಜನರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಗುವಂತೆ ಆಧುನಿಕ ಪದ್ಧತಿಯಂತೆ ಹೇಳುವ ಕುಶಲತೆಯು ಶಾಸ್ತ್ರಿಗಳಿಗೆ ಚೆನ್ನಾಗಿ ಸಾಧಿಸಿರುತ್ತದೆ. ಅದರಂತೆ ಇವರು ಯಡೂರ ಅಥಣಿ ಬಿದ್ರೂ ಶ್ರೀ ಶಿವಯೋಗಿಗಳ ಮತ್ತು ಸಕ್ಕರಿ ಕರಡೆಪ್ಪ ಶಿರಸಂಗಿ ಲಿಂಗರಾಜ ಸೋಲಾಪೂರ ಶಿವಶರಣರ ಕೀರ್ತನಗಳನ್ನು ಮಾಡಲಿಕ್ಕೆ ಪ್ರಾರಂಭಿಸಿರುತ್ತಾರೆ. ಇದಕ್ಕಾಗಿ ಇಲ್ಲಿಯ (ನವಲಗುಂದದ) ವೀರಶೈವ ಮಂಡಳಿಯವರು, ಶಾಸ್ತ್ರಿಗಳಿಗೆ ಬಹುಮಾನಪೂರ್ವಕ

ವಾಗಿ ಸಂಪಗಾವಿ ಶ್ರೀ ಚರಪಟ್ಟಾಧ್ಯಕ್ಷರ ಹಸ್ತದಿಂದ - ಆಧುನಿಕ ಕೀರ್ತನ ಕುಶಲ " ಎಂಬ ಉಪಾಧಿಯ ಬಂಗಾರದ ಪದಕವನ್ನೂ ಉಡಗರೆಯನ್ನೂ ಸಮರ್ಪಿಸಿದರು. ಇದರಂತೆ ಸಕಲ ಪ್ರಾಂತಗಳಲ್ಲಿಯ ರಸಿಕ ಜನರು ಶಾಸ್ತ್ರಿಗಳ ಕೀರ್ತನೆಯ ಬೋಧಾಮೃತವನ್ನು ಪಾನಮಾಡಲೆಂದು ಹೇಳಿ ಈ ಚಿಕ್ಕ ಲೇಖನವನ್ನು ಮುಗಿಸುತ್ತೇವೆ.

ನವಲಗುಂದ ವೀರಶೈವ ಸಮಾಜ.

ಸಾಲಿಗ್ರಾಮಕ್ಕೆ ನಮ್ಮ ಶ್ರೀಮನ್ಮಹಾರಾಜರವರ ಆಗಮನ.

ಘನವನ್ನೈದಿದ ನಮ್ಮ ಶ್ರೀಮನ್ಮಹಾರಾಜರವರ ಸವಾರಿಯು ರಾಮನಾಥಪುರಕ್ಕೆ ದಯಮಾಡಿಸಿದ್ದುದು ಯಡತೊರೆ ತಾ॥ ಸಾಲಿಗ್ರಾಮಕ್ಕೆ ಕಳೆದ ತಿಂಗಳು 25 ನೇ ತಾ॥ ಭಾನುವಾರ ಚಿತ್ತೈಸುವದೆಂಬುದನ್ನು ಕೇಳಿ ಸಾವಿರಾರು ಜನಗಳು ಬೀದಿಯಲ್ಲಿ ದರ್ಶನವನ್ನು ಹೊಂದಲು ಬೆಳಗ್ಗೆ 7 ಗಂಟೆಯಿಂದಲೇ ನೆರೆದು ತುಂಬಿದ್ದರು. ಪ್ರಭುಗಳು ಬೆಳಗ್ಗೆ ಸುಮಾರು 11 ಗಂಟೆಗೆ ದಿವ್ಯಾಶ್ವಾರೂಢರಾಗಿ ಪುರಪ್ರವೇಶಮಾಡಿದರು. ಸ್ವಾಮಿಯವರ ಆಗಮನವನ್ನೇ ಎದುರುನೋಡುತ್ತಿದ್ದ ಮುಸಲ್ಮಾನ್ ಪ್ರಜೆಗಳು ಮೊಟ್ಟಮೊದಲು ಖಾವಂದರವರನ್ನು ಎದುರುಗೊಂಡು ನಜರು ಒಪ್ಪಿಸಿ ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ತೋರ್ಪಡಿಸಿಕೊಂಡರು. ಸವಾರಿಯು ಮುಂದರಿಯಲು ಪುರದ್ವಾರದಲ್ಲಿ ಜೈನಮಂಡಲಿಯು ಸ್ವಾಮಿಯವರಿಗೆ ಸ್ವಾಗತವನ್ನಪೇಕ್ಷಿಸಿ ನಜರುಮರ್ಯಾದೆಯನ್ನು ಮಾಡಿದಾಗ ಇಲ್ಲಿಯ ಮ॥ ಸರಾಫ್ ಪದ್ಮರಾಜಯ್ಯನವರ ಮಕ್ಕಳು ಮ॥ ಬ್ರಹ್ಮಸೂರಯ್ಯ ಬಿ. ಎ. ಯವರು ಮೈಸೂರಿನ ಶ್ರೀನಾನ್ ಮೋತೀಖಾನಾ ವರ್ಧಮಾನಯ್ಯನವರ ಹಿರಿಯರು ಪ್ರತಿಷ್ಠಿಸಿರುವ ಶ್ರೀ ಅನಂತನಾಥ ಸ್ವಾಮಿಯವರ ದೇವಾಲಯಕ್ಕೆ ಬಿಜಮಾಡಿಸಬೇಕೆಂದು ಪ್ರಭುಗಳನ್ನು ಪ್ರಾರ್ಥಿಸಲು, ಮಹಾಸ್ವಾಮಿಯವರು ಸಂತೋಷದಿಂದ ಅವರ ಪ್ರಾರ್ಥನೆಯಂತೆ ಆಮೇಲೆ ಬರುವದಾಗಿ ಅಪ್ಪಣೆಯನ್ನಿತ್ತು ಮುಂದೆ ಸಂತೆಬೀದಿಯ ಚೌಕದಲ್ಲಿ ಮ್ಯುನಿಸಿಪಾಲಿಟಿಯ ಮೆಂಬರುಗಳ ನಜರನ್ನು ಸ್ವೀಕರಿಸಿ ತಮ್ಮ ಬಿಡಾರಕ್ಕೆ ತೆರಳಿದರು. ಸಾಯಂಕಾಲ 5½ ಗಂಟೆಗೆ ಸರಿಯಾಗಿ ಮಹಾಪ್ರಭುಗಳು ಜೈನದೇವಾಲಯಕ್ಕೆ ದಯಮಾಡಿಸಿ ಸ್ವಾಮಿದರ್ಶನವನ್ನು ಮಾಡಿ ಜೈನಮುಖಂಡರು ನಾಡಿದ ಸನ್ಮಾನವನ್ನು ಕೈಕೊಂಡು ಬೀದಿಯಲ್ಲಿ ಹೊರಟು ಮ್ಯುನಿಸಿಪಲ್‌ವೈಸ್‌ಪ್ರೆಸಿಡೆಂಟ್ ಮ॥ ಸಾಹುಕಾರ್ ಬೋರೆಗೌಡರು ಮನೆಬಳಿ ಮಾಡಿದ ನಜರನ್ನು ಸ್ವೀಕರಿಸಿ ಅಲ್ಲಿಂದ ಮುಂದೆ ಸ್ಕೂಲ್ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಾಡಿದ ಶ್ರೀಯುಪ್ರಾರ್ಥನೆಯನ್ನು ಲಾಲಿಸಿ, ಪೇಟೆಯ ಬಾಗಲಿನಲ್ಲಿ ವೈದಿಕಮಂಡಲಿಯವರ ಫಲಮಂತ್ರಾಕ್ಷತೆಯನ್ನು ಒಪ್ಪಿಸಿಕೊಂಡು ಶ್ರೀ ಯೋಗಾನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿ ಸ್ವಾಮಿದರ್ಶನಾನಂತರ ಮುಸಲ್ಮಾನರ ಪ್ರಾರ್ಥನೆಯಂತೆ ಅವರ ಮಸೀದಿಗೂ ಹೋಗಿ ವಾಪಸ್ ತಮ್ಮ ಬಿಡಾರಕ್ಕೆ ತೆರಳಿದರು.—1922 ನೇ ಇಸವಿ ಜೂನ್ ತಾ॥ 25 ನೇ ಭಾನುವಾರವು ಸಾಲಿಗ್ರಾಮದ ಇತಿಹಾಸದಲ್ಲಿ ಚಿರಸ್ಮರಣೀಯವಾದುದು. ಮೈಸೂರು ಸಂಸ್ಥಾನದ ಪ್ರಭುಗಳಲ್ಲಿ ಈ ಪ್ರಾಂತ ದಯಮಾಡಿದವರಲ್ಲಿ ನಮ್ಮ ಈಗಿನ ಪ್ರಭುಗಳೇ ಮೊದಲನೆಯವರು. ಇವರ ಸ್ನೇಹಪೂರಿತವಾದ ಕುಶಲಪ್ರಶ್ನೆಗಳೂ ದಯಾರಸಮಯಗಳಾದ ಪ್ರತ್ಯುತ್ತರಗಳೂ ಯಾವ ಪ್ರಜೆಯ ಮನಸನ್ನೂ ಕರಗಿಸದೇ ಇರಲಾರವು. ನಮ್ಮ ರಾಜ್ಯವನ್ನು ತಮ್ಮ ವಿತರಣೆಯಿಂದ ರಾಮರಾಜ್ಯವೆಂದೆನಿಸಿರುವ ನಮ್ಮ ಒಡೆಯರನ್ನು ನೋಡಿ ನೋಡಿ ಆಬಾಲವೃದ್ಧರೂ ಆನಂದಿಸಿದರು. ಇಷ್ಟು ಮಮತೆಯಿಂದ ನಮಗೆ ದರ್ಶನವನ್ನಿತ್ತ ನಮ್ಮ ಪ್ರಭುಗಳಿಗೂ ಇವರ ಕುಟುಂಬಕ್ಕೂ ಭಗವಂತನು ದೀರ್ಘಾಯುಷ್ಯವನ್ನು ನಿರತಿಶಯವಾಗಿ ಕೊಡಲೆಂದು ಪ್ರಾರ್ಥಿಸುತ್ತೇವೆ.

ಒಬ್ಬ ರಾಜಭಕ್ತ.

ನೈಜಾಂ ದೇಶದ ವೀರಶೈವರ ಸುದೈವ.

ವಿದ್ಯೆಯಲ್ಲಿ ತೀರ ಹಿಂದುಳಿದಿರುವ ವೀರಶೈವರನ್ನು ಧಾರ್ಮಿಕ, ಸಾಮಾಜಿಕ ವಿಷಯಗಳಲ್ಲಿ ಮುಂದಕ್ಕೆ ತರಲು ಏನುಮಾಡಬೇಕೆಂಬ ಯೋಚನೆಯು ಪುರಪ್ರಮುಖರಾದವರ ಮನಸ್ಸಿನಲ್ಲಿ ಈಗತಾನೇ ಬಂದಿರುವದು ಸುಯೋಗವೆಂದು ಕಂಡುಬರುತ್ತದೆ. ಗತ ವೈಶಾಖ ಶು॥ ೩-೪ ಯಲ್ಲಿ ಇಟಗಿಯಲ್ಲಿ ನೆರೆದ ಪ್ರಾಂತಿಕಸಭೆಯಲ್ಲಿ ವೀರಶೈವ ಸಮಾಜ ಸಮುದ್ಧರಣಕಾರ್ಯವೇ ತಮ್ಮ ತಪಸ್ಸನ್ನಾಗಿ ಭಾವಿಸಿ ಅವಿಶ್ರಾಂತ ಶ್ರಮಬಡುತ್ತಿರುವ ಶ್ರೀ. ಪ್ರ. ದಾವಣಗೇರಿಯ ಮೃತ್ಯುಂಜಯ ಸ್ವಾಮಿಗಳವರು ಸಭಾಧ್ಯಕ್ಷರಾದ ಶ್ರೀಮಂತ ನಿರ್ಮಲ್‌ದೇಶಮುಖ ಬಾಪುರಾಯರಿಗೆ ಅಪ್ಪಣೆ ಕೊಡಿಸಿದಂತೆ ಅವರ ಕೃಪಾಶೀರ್ವಾದ ಬಲದಿಂದ ಈ ಜ್ಯೇಷ್ಠ ಶು॥ ೫-೬ ಈ ಎರಡು ದಿವಸಗಳಲ್ಲಿ ಹೈದರಾಬಾದಿನಲ್ಲಿ ಶ್ರೀ ಬಾಪುರಾಯರ ಭವನದಲ್ಲಿಯೇ ಒಂದು ಆಲೋಚನಾಸಭೆಯು ಜರುಗಿತು. ಇದಕ್ಕೆ ಧಾರೂರ್ ಭಾಲ್ಕಿ, ಮುಧೋಳ್, ದೇವಠಾನ ಭೋಕರ್, ಪಾಥ್ನೂರ್ ಕಡೆಯ ದೇಶಮುಖರು, ಕುಷ್ಟಗಿ, ಯಾದ್ಗೀರ್ ಗುಲ್ಬರ್ಗಾ, ಬಿದರ್, ಭಾಲ್ಕಿ ನಿಜಾಮಾಬಾದ್ ಪ್ರಾಂತದ ವಕೀಲರು, ಆಲಂಪಲ್ಲಿಯ ಶ್ರೀ. ಪ್ರ. ಬಸವಪ್ರಭುಸ್ವಾಮಿಗಳವರು, ವೇ॥ ಮಹಾಂತಮಠದ ಚನ್ನಬಸವಯ್ಯನವರು, ಗುರುವರದವರು, ಪುರಪ್ರಮುಖರು ಆಗಮಿಸಿದ್ದರು. ಮೊದಲನೆಯ ದಿವಸ ನೆರೆದ ಸಭೆಯಲ್ಲಿ ಸರ್ವಾನುಮತದಿಂದ ಅಧ್ಯಕ್ಷಪೀಠವನ್ನು ಶ್ರೀಮಂತ ಕಾಶೀರಾವು ದೇಶಮುಖ ಭಾಲ್ಕಿ ಇವರು ಅಲಂಕರಿಸಲು, ಸಭಾಪ್ರಾರಂಭದಲ್ಲಿ ವೇ॥ ಮುಕ್ತಲಿ ಬಸವಲಿಂಗಾರ್ಯರು ಈಶಸ್ತವನಂ ಮಾಡಿ ಸಭೆಯವರು ಕೈಕೊಳ್ಳುವ ಕಾರ್ಯವು ಸರ್ವತೋಮುಖವಾಗಿ ವೃದ್ಧಿಯಾಗಲೆಂದು ಜಗತ್ಪತಿಯಾದ ಶಂಕರನನ್ನು ಪ್ರಾರ್ಥಿಸಿದರು. ನಂತರ ಶ್ರೀಮಂತ ಬಾಪುರಾಯರು ವಿದ್ಯಾವಿಷಯವನ್ನೂ ನಮ್ಮ ಜನಾಂಗದ ಸದ್ಯದ ಪರಿಸ್ಥಿತಿಯನ್ನೂ ಕುರಿತು ಯುಕ್ತಿಯುಕ್ತವಾಗಿ ಭಾಷಣಮಾಡಲು, ಇದರ ಸಮರ್ಥನೆಗಾಗಿ, ಶ್ರೀಯುತರಾದ ಬಸವಂತರಾವು ವಕೀಲು, ಮತ್ತು ಎಮ್. ರುದ್ರಗೌಡ, ವೇ॥ ನಾಗನಾಥಸ್ವಾಮಿ, ಮ॥ ಪರ್ವತರೆಡ್ಡಿ, ಮ॥ ಗುರಪ್ಪ, ಮ॥ ಯಲ್ಲನಗೌಡ, ವೇ॥ ಶರಣಯ್ಯ, ಮ॥ ಶಂಭುಲಿಂಗನಗೌಡ, ಮ॥ ಸೋಮೇಶ್ವರರಾವು ಈ ವಕೀಲಜನರ ಭಾಷಣಗಳು ನಡೆದ ಬಳಿಕ ಸುಧಾರಿಸಿದ ರಾಷ್ಟ್ರದವರಂತೆ ನಮ್ಮ ಲೋಪಗಳು ನಿವಾರಣೆಗೊಂಡು, ನಾವು ಮುಂದಕ್ಕೆ ಬರಲು ಒಂದು ಸ್ಟಾಂಡಿಂಗ್ ಕಮಿಟಿಯನ್ನು ಸ್ಥಾಪಿಸಬೇಕೆಂತಲೂ, ಇದಕ್ಕೆ (ನೈಜಾಂ ರಾಜ್ಯದ) " ವೀರಶೈವ ಸಮಾಜಸುಧಾರಕ ಸಂಘ " ವೆಂಬ ಅಭಿಧಾನವನ್ನಿಡಬೇಕೆಂತಲೂ, ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಕೋಶಾಧ್ಯಕ್ಷರಾದಿಯಾಗಿ ಸಮಾಜಸೇವಾನಿರತರಾದ 50 ಜನ ಸಭಿಕರಿಂದ ಸಂಘದ ಕಾರ್ಯವು ಅವಿಚ್ಛಿನ್ನವಾಗಿ ಜರುಗಬೇಕೆಂತಲೂ, ಇದಕ್ಕೆ ತಕ್ಕ ನಿಯಮಗಳನ್ನು ರಚಿಸಿ ಅವು ಸರ್ವಾನುಮತಿಯನ್ನು ಪಡೆಯಬೇಕೆಂತಲೂ ನಿರ್ಧರಿಸಲು, ಅಧ್ಯಕ್ಷರೂ ಕೂಡ ತಮಗಿರುವ ಸಾನುಭೂತಿಯನ್ನು ತಮ್ಮ ಅಸ್ಖಲಿತವಾಣಿಯಿಂದ ಪ್ರದರ್ಶಿಸಿ ಆನಂದಪಡಿಸಿದರು. 2 ನೆಯ ದಿವಸ ಜರುಗಿದ ಸಭೆಯಲ್ಲಿ ಸಂಘದ ನಿಯಮಗಳ ಮಸೂದೆಯು ಎಮ್. ರುದ್ರಗೌಡ ವಕೀಲರಿಂದ ಓದಲ್ಪಟ್ಟು ಅದರಲ್ಲಿ ಕೆಲವು ಚರ್ಚಿತವಾಗಿ ಸರ್ವಾನುಮತಿಯಂ ಪಡೆದ ಬಳಿಕ ಈ ದೊಡ್ಡ ಕಾರ್ಯವು ತಕ್ಕ ಧನಸಹಾಯವಿಲ್ಲದೆ ಮುಂದುವರಿಯದೆಂದೂ ಇದಕ್ಕಾಗಿ ಸರ್ವರೂ ಒಮ್ಮನಸ್ಸಿನಿಂದ ಅವಕಾಶ ದೊರೆತಾಗಲೆಲ್ಲ ಅಲ್ಲಲ್ಲಿ ಸಂಚರಿಸಿ ಧನಸಂಚಯವನ್ನು ತಪ್ಪದೆ ಮಾಡಬೇಕೆಂದೂ, ಈ ಸಮಾಜಕಾರ್ಯಕ್ಕಾಗಿ ಇದೊಂದು ತೆರದ ಭಿಕ್ಷೆಯನ್ನು ಬೇಡಲು ಯಾರೂ ಲಜ್ಜಿತರಾಗ

ಬಾರದೆಂದೂ ಶ್ರೀ ಬಾಪುರಾಯರು ಸಭಿಕರ ಮನಸ್ಸಿನ ಮೇಲೆ ಚೆನ್ನಾಗಿ ಪರಿಣಾಮವಾಗುವಂತೆ ಹೇಳಿ ಧರ್ಮಪ್ರಭುಗಳಾದ ನೈಜಾಂರವರಿಗೆ ಪರಮೇಶ್ವರನು ಆಯುರಾರೋಗ್ಯ ಸೌಭಾಗ್ಯಗಳನ್ನು ದಯಪಾಲಿಸಲೆಂದು ಪ್ರಾರ್ಥಿಸಿದರು. ಸಿಕಂದರಾಬಾದಿನ ವೈದ್ಯಶಿಖಾಮಣಿಗಳಾದ ನಾಗಲಿಂಗಪ್ಪನವರು ಈ ಸಂಘಸ್ಥಾಪನೆಯ ವಿಷಯದಲ್ಲಿ ತಮಗುಂಟಾದ ಆನಂದವನ್ನು ಬಾಷಣರೂಪದಿಂ ತೋರ್ಪಡಿಸಲು, ಸಭೆಯ ಉಪಸಂಹಾರ ಕಾಲದಲ್ಲಿ ವೇ॥ ಮುಕ್ತಲಿ ಬಸವಲಿಂಗಾರ್ಯರ ಭಾಷಣವು ಜರುಗಿ, ಪರಮೇಶ್ವರ ಪ್ರಾರ್ಥನೆಯೂ ಶ್ರೀವಾರಜಯಘೋಷವೂ ಆದ ಬಳಿಕ ಶ್ರೀ ಆಲಂಪಲ್ಲಿ ಮಹಾಶ್ರೀಗಳವರ ಚರಣಕಮಲಂಗಳಿಗೆ ನೀರಾಜನವು ಕೊಡಲ್ಪಟ್ಟು ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಪ್ರಾರಂಭಶೂರರೆಂಬ ಬಿರುದಿಗೆ ಪಾತ್ರರಾಗದೆ ಕೈಕೊಂಡ ಕಾರ್ಯವನ್ನು ಕೊನೆಗಾಣಿಸುವರೆಂದು ಕೋರುವ,

ಓರ್ವ ಪ್ರತ್ಯಕ್ಷದರ್ಶಿ.

(ಸೂಚನೆ—ಸಭೆಯಲ್ಲಿ ಆದ ಭಾಷಣಗಳು ಎಲ್ಲ ಜನರ ತಿಳವಳಿಕೆಗಾಗಿ ಉರ್ದು ಭಾಷೆಯಲ್ಲೇ ಮಾಡಲ್ಪಟ್ಟು ನಿಯಮಗಳು ಅದರಲ್ಲಿಯೇ ಬರೆಯಲ್ಪಟ್ಟು ಮುದ್ರಣಕ್ಕೆ ಕೊಡಲ್ಪಟ್ಟಿವೆ. ನಂತರ ಕರ್ನಾಟಕಾಂಧ್ರಭಾಷೆಗಳಲ್ಲೂ ಪರಿವರ್ತಿಸಲ್ಪಟ್ಟು ಮುದ್ರಿಸಿ ಪ್ರಕಟಿಸಲ್ಪಡುವುದು.)

ವಿವಾಹ ಮಹೋತ್ಸವಗಳು.

ಬಳ್ಳಾರಿಜಿಲ್ಲಾ ಕೂಡ್ಲಿಗೆ ತಾಲ್ಲೂಕು ನಿಂಬಲಗೆರೆಯ ಸುಪ್ರಸಿದ್ಧ ವಂಶೀಯರೂ ಸಕಲಜನಾನುರಾಗಿಗಳೂ ಆದ ವೇ॥ ಚೂರಿಮಠದ ಸಿದ್ಧಲಿಂಗಪ್ಪಯ್ಯನವರಿಗೆ ಜಗಲೂರು ತಾ॥ ಗಡಿಮಾಕುಂಟೆವಾಸಿ ಕೊಟ್ಟೂರು ಭೂತಭುಜಂಗದೇವರ ಮಠದ ವೇ॥ ಗುರುಸಿದ್ಧಪ್ಪಯ್ಯನವರ ಸಹಜಾತೆಯಾದ ಚಿ॥ ಸ॥ ಬಸವಮ್ಮನವರನ್ನು ತಂದುಕೊಂಡು ಪಂಚಬ್ರಹ್ಮ ಕಲಶಸ್ಥಾಪನ ಮೂಲಕ ತಾ॥ 12-6-22 ರಲ್ಲಿ ನಡಿಸಿದ ವಿವಾಹಕ್ಕೆ ಸೇರಿದ್ದ ಅನಂತಪ್ರಮುಖ ಮಹಾಶಯರ ಸಭೆಯಲ್ಲಿ ಸಮಾಜಹಿತಕ್ಕಾಗಿ ದುಡಿಯುತ್ತಿರುವ ಸ್ಟಾರುಪತ್ರಿಕೆಯ ಪ್ರೋತ್ಸಾಹಕ್ಕಾಗಿಯೂ ಯಜಮಾನ್ ಮೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿಯೂ ಯಥಾಶಕ್ತಿ ದಕ್ಷಿಣೆಯನ್ನು ಸಮರ್ಪಿಸಬೇಕಾಗಿ ಶ್ರೀ ಸಂಸ್ಥಾನದ ಗು॥ ಪಿ. ಎಂ. ಚಂದ್ರಶೇಖರಯ್ಯನವರು ಕೊಟ್ಟ ಸಲಹೆಯನ್ನು ಸೊನ್ನದಮಠದ ವೇ॥ ಎಸ್. ಕೊಟ್ರಯ್ಯನವರು ಮಂಗಾಪುರದ ಮೇಗೆರೆ ಮ॥ ವೃಷಭೇಂದ್ರಯ್ಯನವರು ಸಭಿಕರಪರವಾಗಿ ಅನುಮೋದನಕೊಟ್ಟದ್ದರಿಂದ ವರನಪರವಾಗಿ 3 ರೂ. ಗಳು ವಧುವಿನಪರವಾಗಿ 2 ರೂ. ಗಳು ಜುಮ್ಲಾ 5 ರೂ. ಗಳನ್ನು ಸಭಾತಾಂಬೂಲದೊಡನೆ ಮಣಿಯಾರ್ಡರ್ ಬಗ್ಗೆ ವೇ॥ ಎಸ್. ಕೊಟ್ರಪ್ಪಯ್ಯನವರ ವಶಕ್ಕೆ ಕೊಡಲ್ಪಟ್ಟು ಸಮಸ್ತರ ಮನೋಬಯಕೆಯಂತೆ ಜಗದೀಶನು ಇವರ ವಂಶಾಭಿವೃದ್ಧಿಯನ್ನು ಸುಖಸಂಪತ್ತನ್ನು ಕೊಟ್ಟು ಕಾಪಾಡಲೆಂತ ಜಯಘೋಷಮಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

[ಈ 5 ರೂ. ಯನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.—ಪ. ಪ್ರ.]

ಹುಬ್ಬಳ್ಳಿ ತಾ॥ ಉಮಚಿಗಿ ಮಳೀಮಠದ ವೇ॥ ವೀರೈಯ್ಯನವರ ತಮ್ಮಂದಿರಾದ ಸಂಗೀತ ವಿದ್ವಾನ್ ಶಿವಲಿಂಗಯ್ಯನವರಿಗೂ ಮಾಡೊಳ್ಳಿ ಹಿರೇಮಠದ ವೇ॥ ರುದ್ರಯ್ಯನವರ ಸುಪುತ್ರಿ ಸೌಮಂಗಲ್ಯ ಶಾಲಿನಿಯಾದ ಗದ್ದಿಗೆವ್ವನಿಗೂ ಗತ ವೈಶಾಖ ಬ॥ 11 ರಲ್ಲಿ ವಿಧಿವಿಹಿತವಾಗಿ ವಿವಾಹವು ಒಳ್ಳೇ ವಿಜೃಂಭಣೆಯಿಂದ ಸದರಿ ಮಠದಲ್ಲಿಯೇ ನೆರವೇರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಶ್ರೀ ಮಚ್ಚರಸಾರ್ವಭೌಮ ಹಡಗಲಿ ಮತ್ತು ನಿಡಗುಂದಿ ಪಟ್ಟದ ರುದ್ರ ಮಹಾಸ್ವಾಮಿಗಳವರನ್ನು ಸರ್ವ ಮಂಗಳವಾದ್ಯಗಳಿಂದಲೂ ವೇದಘೋಷಮಾಡುವ ವೈದಿಕರಿಂದಲೂ ಅತ್ಯಂತ ಉತ್ಸಾಹದಿಂದ ಈ ಗ್ರಾಮದ ಸಮಸ್ತ ಭಕ್ತ ಮಹೇಶ್ವರರು ಇದಿರ್ಗೊಂಡು ತರತಂದರು. ತರುವಾಯ ಶ್ರೀಗಳವರ ಅಧ್ಯಕ್ಷತೆಯಕೆಳಗೆ ಧಾರ್ಮಿಕಸಭೆ ಕೂಡಿ ಶ್ರೀಮದುಜ್ಜಯನೀ ಸದ್ಧರ್ಮಸಂಸ್ಥಾನ ಆಸ್ಥಾನಪಂಡಿತರೂ ಉಪನಿಷತ್ತುಗಳಿಗೆ ಭಾಷ್ಯವನ್ನು ಬರೆದಿರುವವರೂ ಧರ್ಮರತ್ನವೆಂಬ ಬಿರುದಾಂಕವನ್ನು ಪಡೆದವರೂ ಆದ ಉಮಚಿಗಿ ಶಂಕರಶಾಸ್ತ್ರಿಗಳು ಪಾಣಿಗ್ರಹಣ ಈ ವಿಷಯದ ಮೇಲೆ ಸಭಿಕರಿಗೆ ಪರಿಣಾಮವಾಗುವಂತೆ ಭಾಷಣಮಾಡಿದರು. ನಂತರ ಅಧ್ಯಕ್ಷರು ಧರ್ಮ ಈ ವಿಷಯವನ್ನು ತೆಗೆದುಕೊಂಡು ಸಭಿಕರುಒಪ್ಪುವಂತೆ ಸುಶ್ರಾವ್ಯವಾಗಿ ಬೋಧಿಸಿದರು. ಆ ಮೇಲೆ ಸದರೀ ವಿವಾಹಕ್ಕೆ ಕಾರ್ಯದರ್ಶಿಯಾದ ಹಿರೇಮಠದ ವೇ॥ ಚನ್ನಯ್ಯನವರು ಕೈ॥ ವೀರಸಂಗಪ್ಪನವರ ಅಗ್ರತಾಂಬೂಲವನ್ನು ತೆಗೆಯಬೇಕೆಂದು ಸೂಚಿಸಿದ ಬಗ್ಗೆ ವಧೂವರರಿಂದ 3 ರೂ॥ ತೆಗೆಯಲ್ಪಟ್ಟಿತು. ಬಳಿಕ ಸಮಸ್ತ ಭಕ್ತ ಮಹೇಶ್ವರರಿಗೂ ಅನ್ನಸಂತರ್ಪಣೆಮಾಡಿ ಗಂಧಪುಷ್ಪ ತಾಂಬೂಲಗಳು ಕೊಡಲ್ಪಟ್ಟವು. ಆ ಮೇಲೆ ವಧೂವರರಿಗೆ ಆಯುರಾರೋಗ್ಯವನ್ನು ಬಯಸಿ ತೆರಳಿದರು.

ಓರ್ವ ಪ್ರತ್ಯಕ್ಷದರ್ಶಿ

[3 ರೂ ಗಳನ್ನು ಸಂತೋಷದಿಂದ ಅಂಗೀಕರಿಸಿರುತ್ತೇವೆ—ಪ.ಪ್ರ.]

ಚಿತ್ರದುರ್ಗ ತಾ॥ ಕೂನಬೇವು ಗ್ರಾಮದ ನಿವಾಸಿಗಳು ಶ್ರೀ ಗಿರಿರಾಜ ಸೂರ್ಯಸಿಂಹಾಸನದ ಖಾಸಾಕುಮಾರವಂಶಸ್ಥರು ಆದ ವೀರಭಿಕ್ಷಾವರ್ತಿ ಮಠದ ವೇ॥ ಉದ್ದಾನಪ್ಪಯ್ಯನವರು ಈ ನಾಡಿನಲ್ಲಿ ಧರ್ಮಸುಧಾರಕರಾಗಿ ಆಗಾಗ್ಗೆ ತಮ್ಮ ಮಠದಲ್ಲಿ ಧರ್ಮಾರ್ಥವಾಗಿ ವಿವಾಹ ಉಪನಯನಗಳನ್ನು ನಡಿಸುತ್ತಾ ಬಂದಿರುವ ಮೇರೆ ಈ ದುಂದುಭಿನಾಮ ಸಂ॥ ಜ್ಯೇಷ್ಠ ಬ॥ ೭ ಶುಕ್ರವಾರ (ತೇದಿ 16-6-22) ಕಟಕಲಗ್ನದಲ್ಲಿ ವೀರಮಾಹೇಶ್ವರವಟುಗಳಿಗೆ ಧರ್ಮದೀಕ್ಷಾ ಕಾರ್ಯ ನೆರವೇರಿಸಿದರು. ಇದಕ್ಕಾಗಿ ಕೂಡ್ಲಿಗಿ, ಕಲ್ಯಾಣದುರ್ಗ, ರಾಯದುರ್ಗ, ಚಳ್ಳಕೆರೆ ಹಿರಿಯೂರು, ಶೀರ್ಯ, ಚಿತ್ರದುರ್ಗ, ಜಗಳೂರು ವಗೈರೆ ತಾಲ್ಲೂಕುಗಳಿಂದ ಪಟ್ಟ ಚರಮೂರ್ತಿಗಳು ಮಠದ ಮಹತ್ತಿನವರು ಆಯಾ ಪ್ರಾಂತದ ಪ್ರಮುಖಮಹಾಶಯರು ಅನಂತಶಿಷ್ಯಮಂಡಲಿ ಹಾಗೂ ಬಂಧುಬಾಂಧವರೂ ದಯಮಾಡಿಸಿದ್ದರು. ಹಗರೀಬೊಮ್ಮನಹಳ್ಳಿ ಮಠದ ವೇ॥ ಮರಿಬಸಪ್ಪನವರ ಪುತ್ರಿ ಗೌರಮ್ಮನಿಗೂ ಕಾರ್ಯದರ್ಶಿಗಳಾದ ವೇದಮೂರ್ತಿ ಉದ್ದಾನಪ್ಪಯ್ಯನವರ ಪುತ್ರ ಬಿ. ಎಂ. ವೀರಭದ್ರಯ್ಯನಿಗೂ ಪಾಣಿಗ್ರಹಣಮಹೋತ್ಸವವು ಅದೇ ರಾತ್ರಿ ಮಕರಲಗ್ನದಲ್ಲಿ ನೆರವೇರಿಸಲ್ಪಟ್ಟಿತು. ತಾ॥ 17-6-22 ರ ಮಧ್ಯಾಹ್ನಾತ್ಪರ ವಿವಾಹಮಂಟಪದಲ್ಲಿ ಶ್ರೀ ಮಂಗಪೋಟಿಮಠದ ಪಟ್ಟಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾಮಾಜಿಕ ಸಭೆ ಸೇರಿಸಲ್ಪಟ್ಟಿತು. ಐಕಮತ್ಯ, ಧರ್ಮಸುಧಾರಣೆ ಸಮಾಜಸೇವಾ ಮೊದಲಾದ ವಿಷಯಗಳ ಮೇಲೆ ಭಾಷಣಗಳು ನಡಿಸಲ್ಪಟ್ಟವು. ಸಮಾಜಘಾತರೂಪವಾಗಿ ಗುರುವರ್ಗದಲ್ಲಿ ಉತ್ಪನ್ನವಾಗಿರುವ ವಾದಾನುವಾದ ಲೇಖನಗಳ ವಿಚಾರದಲ್ಲಿ ಸಮಾಜದ ಮುಂದಾಳುಗಳು (ಮಹಾಸಭೆಗಳ ಸ್ಟಾಂಡಿಂಗ್ ಕಮಿಟಿ ಪ್ರಮುಖರು ತಹಲ್ಪರಿವಿಗೂ ಹಟಸ್ಥರಾಗಿರುವದಕ್ಕಾಗಿ ವಿಷಾದಪ್ರದರ್ಶನ ಮಾಡಲ್ಪಟ್ಟಿತು. ಈ ಮಹತ್ಕಾರ್ಯಕ್ಕೆ ಸೇರಿರುವ ಸಮಸ್ತಮಠ ಮಹತ್ತಿನವರಿಗೂ ಅಧ್ಯಕ್ಷ, ಅಧ್ಯಯನ, ಅಧ್ಯಾಪಕರಿಗೂ ಸಲ್ಲಬೇಕಾದ ಸೌಮ್ಯದ್ರವ್ಯವು ತಮಗೆ ಸಂದಂತೆ ಭಾವಿಸಿ ಧರ್ಮೋದ್ಧಾರ ಸಮಾಜಹಿತಕ್ಕಾಗಿ ಸ್ಥಾಪಿಸಿ ಮತ್ತು ದುಡಿಯುತ್ತಿರುವ ಮೈಸೂರು ವೀರಶೈವ ವಿದ್ಯಾವರ್ಧಕ ಸಂಘಕ್ಕೂ ಸ್ಟಾರ್ ಪತ್ರಿಕೆಗೂ ಸಂಘಸಂಸ್ಕರಣ ಮೂಲಪುರುಷರಾದ ಮೈಸೂರು ಯಜಮಾನ್ ವೀರಸಂಗಪ್ಪನ

ವರ ಅಗ್ರತಾಂಬೂಲಕ್ಕೂ ಮೇಲ್ಕಂಡ ದ್ರವ್ಯವನ್ನು ಸಮರ್ಪಿಸಿ ಇತರರು ಸರ್ವರೂ ಈ ಮೂಲಕ ಪ್ರೋತ್ಸಾಹಿಸಬೇಕೆಂದು ಐಕ್ಯತರದಿಂದ ಸಭಿಕರು ಒಪ್ಪಿಗೆಕೊಟ್ಟಕಾರಣ ಇಲ್ಲಿನ ಉಭಯ ಕಾರ್ಯಗಳಿಂದಲೂ ವಿದ್ಯಾವರ್ಧಕ ಸಂಘಕ್ಕೆ 5 ರೂಪಾಯಿಗಳು ಸ್ಟಾರ್ ಪತ್ರಿಕೆಗೆ 3 ರೂಪಾಯಿಗಳು ಮೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕೆ 2 ರೂಪಾಯಿಗಳು ಹೀಗೆ 10 ರೂ. ಗಳನ್ನು ಮನಿಯಾರ್ಡರ್ ಬಗ್ಗೆ ಶ್ರೀ ಸಂಸ್ಥಾನ ಸುಬೇದಾರ್ ಪಿ. ಎಂ. ಚಂದ್ರಶೇಖರಯ್ಯನವರ ಸುಪರ್ದಿಗೆ ಸಭಾತಾಂಬೂಲದೊಡನೆ ಕೊಡಲ್ಪಟ್ಟಿ ಜಗದ್ಗುರು ಪಂಚಾಚಾರ್ಯರು ಈ ವಧೂವರರಿಗೆ ಸಕಲ ಸನ್ಮಂಗಳವನ್ನು ಇತ್ತು ಕಾಪಾಡಲೆಂತ ಜಯಧ್ವನಿಯು ಮಾಡಲ್ಪಟ್ಟು ಸಭಿಕರಿಗೆ ಗಂಧತಾಂಬೂಲವರ್ಪಿಸಿ ಸಭೆಯು ಮುಕ್ತಾಯಗೊಂಡಿತು.

ಸಮಾಜಹಿತಚಿಂತಕ.

[5 ರೂ.ಗಳನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ. ಪ. ಪ್ರ.]

ಬಡವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲು, ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸ ಮಾಡುತ್ತಿರುವ ಬಡ ವೀರಶೈವ ವಿದ್ಯಾರ್ಥಿಗಳು ಜುಲೈ ತಾ॥ ೩೧ರ ಒಳಗಾಗಿ ಸೆಕ್ರಿಟರಿಯವರಿಗೆ ತಲಪುವಂತೆ (Printed Prescribed Form) ನಲ್ಲಿ ಅರ್ಜಿ ಬರೆದು ಕೊಳ್ಳತಕ್ಕದ್ದು. ಅರ್ಜಿಫಾರಂಗಳು ಬೇಕಾದಲ್ಲಿ ಒಂದಾಣೆ ಸ್ಟಾಂಪು ಕಳುಹಿಸಿ ಅಡ್ರೆಸ್ ತಿಳಿಸಿದಲ್ಲಿ ಕಳುಹಿಸಲ್ಪಡುತ್ತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅರ್ಜಿ ಜೊತೆಯಲ್ಲಿ ಸರ್ಟಿಫಿಕೇಟುಗಳನ್ನು ಕಳುಹಿಸಿ ಕೊಡಬೇಕು. ಸರ್ಟಿಫಿಕೇಟುಗಳು ಇಲ್ಲದೆಯೂ ಮತ್ತು ವಾಯಿದೆ ಮೀರಿಯೂ ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

ಜಿ. ಪರಮಶಿವಯ್ಯ, ಬಿ. ಎ., ಎಲ್‌ಎಲ್. ಬಿ.,
ಸೆಕ್ರೆಟರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ,
ಬೆಂಗಳೂರು ಸಿಟಿ.

ಲಗ್ನದ ಫಂಡು.

1. ತುಮಕೂರು ತಾ॥ ಬೆಳ್ಳಾವೆ ಚಿಕ್ಕಸೋಮಣ್ಣನವರ ಮಕ್ಕಳು ಗಟ್ಟಿಪ್ಪನವರ ಲಗ್ನದಲ್ಲಿ ವರನಕಡೆಯಿಂದ 2 ರೂ. ವಧುವಿನ ಕಡೆ ಮ॥ ಅತ್ತಿಮಲ್ಲಣ್ಣನವರಿಂದ 2 ರೂ. ಬೆಳ್ಳಾವೆ ಮ॥ ಗ. ವಿ. ಬಸೆಟ್ಟಪ್ಪನವರ ಮೂಲಕ 4-0-0.

2. ಹುಲಿಯೂರುದುರ್ಗದ ತಾ॥ ಉಜ್ಜನಿಗ್ರಾಮದ ಮದ್ದೂರ್ ಪ್ರೈವೆಟ್ ಸ್ಕೂಲ್‌ಮಾಸ್ಟರ್ ಮ॥ ನಂಜುಂಡಯ್ಯನವರ ಮಗ ಸೋಮಯ್ಯನವರ ಲಗ್ನದಲ್ಲಿ ಗಂಡಿನವರಿಂದ 3 ರೂ. ವಧುವಿನ ಕಡೆಯಿಂದ 2ರೂ. ಜುಮ್ಲಾ 5 ರೂ. ಮ॥ ಹುಚ್ಚಪ್ಪನವರ ಮೂಲಕ.

3. ದೊಡ್ಡಬಳ್ಳಾಪುರದ ತಾ॥ ಚನ್ನಬಸವಯ್ಯನಪಾಳ್ಯದ ದೊಡ್ಡಬಸವಯ್ಯನವರ ಲಗ್ನದಲ್ಲಿ ಗಂಡಿನವರಿಂದ 2 ರೂ. ಹೆಣ್ಣಿನವರಿಂದ 1 ರೂ. ಜುಮ್ಲಾ 3 ರೂ. ಗಳು ಹುಲಿಕುಂಟೆ ಯಜಮಾನ್ ಚನ್ನಪ್ಪನವರ ಮೂಲ್ಕ.

4. ಮಂಡ್ಯದ ತಾ॥ ಮದ್ದೂರು ಪೋಸ್ಟ್ ಬೆಸಗರಹಳ್ಳಿ ಮ॥ ಮರಿಬಸಪ್ಪನವರ ನಂಜಪ್ಪನವರ ಲಗ್ನದಲ್ಲಿ 2 ರೂ. ಮ॥ ನಂಜಪ್ಪರವರ ಮಗ ಚಿಕ್ಕಬಸಪ್ಪನವರ ಲಗ್ನದಲ್ಲಿ 2 ರೂ. ಮ॥ ಕಾಡಮಲ್ಲಯ್ಯನವರ ಭಾವಮೈದ ಪುಟ್ಟಯ್ಯನವರ ಲಗ್ನದಲ್ಲಿ 2 ರೂ. ಜುಮ್ಲಾ 6 ರೂ. ಗಳು ದೇಶದ ಶೆಟ್ಟರು ಸುಬ್ಬಣ್ಣನವರ ಮೂಲಕ.

5. ಶಿರಾದಲ್ಲಿರುವ ಕೋಡಿಗುಣಿಮಠದ ಅಬ್ಕಾರಿ ಮ॥ ರಾಚಯ್ಯನವರ ಮೂಲಕ ಲಗ್ನಕಾಲಗಳಲ್ಲಿ ತೆಗೆದುಕಳುಹಿಸಿದ್ದು (ತಪಶಿಲ್ ತಿಳಿಸಿಲ್ಲ)

6. ದಾವಣಗೆರೆ ತಾ॥ ಹೆಬ್ಬಾಳು ಹಿರೆಮಠದ ಮುರಿಗಪ್ಪಯ್ಯನವರ ಮೂಲಕ ಚಿತ್ರದುರ್ಗ ತಾ॥ ಭರಮಸಾಗರದ ಮ॥ ದೊಡ್ಡಮುನಿಮಲ್ಲಪ್ಪನವರ ಪುತ್ರಿಯನ್ನು ಹರಪನಹಳ್ಳಿ ಪೆದ್ದಪ್ಪನವರ ಮ॥ ನಾಗಪ್ಪನವರ ಪುತ್ರನಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ 2 ರೂ.

7. ಕೋಲಾರ್‌ಪೇಟೆ ತಾ॥ ಬಿಡದಿಗ್ರಾಮದ ಗುರಪ್ಪನವರ ಮ॥ ಶಿವಪ್ಪನವರ ಮಗಳನ್ನು ಕಾನ್‌ಕಾನಹಳ್ಳಿ ಗುರುಕಾರ್ ಮ॥ ಚಿಕ್ಕಬಸವಣ್ಣನವರ ಮಕ್ಕಳು ರಾಜಶೇಖರಪ್ಪ ಎಂಬುವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ 5 ರೂ.

8. ಡಿಟೋ ಬಿಡದಿಗ್ರಾಮದ ಮ॥ ಚನ್ನಪ್ಪನವರ ಮಗಳನ್ನು ಚನ್ನಪಟ್ಟಣದ ಪಂಡಿತರು ಮ॥ ಚನ್ನಬಸಪ್ಪನವರ ಮಕ್ಕಳು ಮಲ್ಲಿಕಾರ್ಜುನಪ್ಪನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ವಧೂವರರಿಂದ 5 ರೂ.

ಜುಮ್ಲಾ ರೂ. 30—0 0.

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ.,
ಸೆಕ್ರೆಟರಿ,
ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ, ಬೆಂಗಳೂರು.

೧೯೨೨ನೆಯ ಇಸವಿ ಜುಲೈ ತಾ॥ ೯ ರಿಂದ ೧೯೨೨ನೆಯ ಜುಲೈ ತಾ॥ ೧೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ದುಂದುಭಿನಾಮಸಂವತ್ಸರದ ಆಷಾಢ ಶುದ್ಧ ಪೌರ್ಣಮಿಯಿಂದ ಆಷಾಢ ಬಹುಳ ಷಷ್ಠಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನಮಾ
9	ಭಾನು	ಪೌರ್ಣ	3-44	ಪೂಷಾ	20-37	26
10	ಸೋಮ	ಪಾಡ್ಯ	4-44	ಉಷಾ	23-55	27
11	ಮಂಗಳ	ಬಿದಿ	7-1	ಶ್ರವ	27-58	28
12	ಬುಧ	ತದಿ	10-10	ಧನಿ	33-14	29
13	ಗುರು	ಚೌತಿ	14-36	ಶತ	39-20	30
14	(1) ಶುಕ್ರ	ಪಂಚ	19-26	ಪೂಭಾ	45-53	31
15	(2) ಶನಿ	ಷಷ್ಠಿ	24-33	ಉಭಾ	52-27	32

(1) ಟೀಕಾಚಾರ್ಯರ ಪುಣ್ಯದಿನ. (2) ಜಯಚಾಮರಾಜ ಒಡೆಯರವರ ವರ್ಧಂತಿ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]

[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸನ್ ೧೯೨೨ ನೆಯ ಇಸವಿ ಜೂಲೈ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೨೯

REGISTERED NO. M. 124.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಪಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ॥ ವಿದ್ವಾನ್ ಎಮ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮಬಾಣಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊ

ಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
27 ಮೈಸೂರು.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿನಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ, ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಕಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಅಕ್ಷರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತದೆ. ಇಂಥಾಗ್ರಂಥವು ಯಾರೂ ಕಣ್ಣಿನಂದ ನೋಡಿರಲಿಕ್ಕಿಲ್ಲಾ. ಪ್ರತಿಯಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೭-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
24 ಬಳ್ಳಾರಿ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ



ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 18

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ ಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹಂದಾಸಿ	೦—೮—೦
ವ್ರತಪಂಚಕ	೦—೯—೦

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ.

1. ಕ್ಯಾಪ್ಟನ್ ವೈ. ವಿಶ್ವನಾಥಯ್ಯನವರು, ಯುವಸಾರ್ವಭೌಮರವರು (ಪ್ರಿನ್ಸ್ ಆಫ್ ವೇಲ್ಸ್‌ರವರು) ಮೈಸೂರುದೇಶಕ್ಕೆ ದಯಮಾಡಿಸಿದುದರ ಜ್ಞಾಪನಾರ್ಥವಾಗಿ ಐದು ಸಹಸ್ರ ರೂಪಾಯಿಗಳನ್ನು ಮೇಲ್ಕಂಡ ಫಂಡಿನ ಮೂಲಧನಕ್ಕೆ ಕೊಟ್ಟು, ಸದರಿ ಮೊಬಲಗಿನ ವೃದ್ಧ್ಯಂಶವನ್ನು ವೈದ್ಯ ವಿದ್ಯಾಭ್ಯಾಸ ಮಾಡಲಿಚ್ಛಿಸುವ ಮೈಸೂರುದೇಶದ ವೀರಶೈವ ವಿದ್ಯಾರ್ಥಿ ಅಥವ ವಿದ್ಯಾರ್ಥಿಗಳಿಗೆ ಕೊಡುವಂತೆ ಉದ್ದೇಶಿಸಿರುತ್ತಾರೆ.

2. ಧರ್ಮಕರ್ತರ ಉದ್ದೇಶದಂತೆ ಇದೇ ಜೂನ್ ಲಾಗಾಯ್ತು ಮಾಹೇಯಾನ 25 ರೂ. ನಂತೆ ವೇತನವನ್ನು ಮದರಾಸು ಅಥವಾ ಬೊಂಬಾಯಿ ಸರ್ಕಾರದ ಮೆಡಿಕಲ್ ಕಾಲೇಜಿನಲ್ಲಿ ಓದಲಪೇಕ್ಷಿಸುವ ಮೈಸೂರುದೇಶದ ವೀರಶೈವ ವಿದ್ಯಾರ್ಥಿ ಅಥವ ವಿದ್ಯಾರ್ಥಿನಿಗೆ ಕೊಡಲು ನಿಶ್ಚಯಿಸಲ್ಪಟ್ಟಿದೆ. ಸಹಾಯವನ್ನು ಹೊಂದಲಪೇಕ್ಷಿಸುವವರು ಕೂಡಲೆ ಫಂಡಿನ ಸೆಕ್ರೆಟರಿಯವರಿಗೆ ಬರೆದುಕೊಳ್ಳತಕ್ಕದ್ದು.

ಬೆಂಗಳೂರು, ತಾ॥ 15-6-22 } ಜಿ. ಪರಮಶಿವಯ್ಯ, ಬಿ.ಎ.,ಎಲ್‌ಎಲ್., ಬಿ.
ಅಡ್ವೋಕೇಟ್ ಮತ್ತು ಸೆಕ್ರೆಟರಿ, ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ, ಬೆಂಗಳೂರು.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಜುಲೈ ತಾ|| ೧೬ ನೆಯ ಭಾನುವಾರ.

ಸಂಸ್ಥಾನದ ಆಯವ್ಯಯ.

(ಸರ್ ಎಂ. ವಿಶ್ವೇಶ್ವರಯ್ಯನವರ ಸಮಾಧಾನ.)

(ಭಾಗ 1).

ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ತಕ್ಕ ಸೂಚನೆಗಳನ್ನು ಕೊಡಲಿಕ್ಕಾಗಿ ನಮ್ಮ ಪ್ರಭುತ್ವದವರಿಂದ ಏರ್ಪಡಿಸಲ್ಪಟ್ಟಿದ್ದ ಸ್ಪೆಷಲ್ ಫೈನಾನ್ಸ್ ಕಮಿಟಿಯವರು ಈಗ ಉಂಟಾಗಿರುವ ಆರ್ಥಿಕ ದುಸ್ಥಿತಿಗೆ ಉಂಟಾದ ಕಾರಣಗಳನ್ನು ತಮ್ಮ ವರದಿಯೊಳಗೆ ವಿವರಿಸಿರುವುದರಲ್ಲಿ—

(1) ಜಮೀನ್ ಕಂದಾಯ ಸ್ಟಾಂಪು ವಗೈರೆ ಖಾಯಂ ಹುಟ್ಟುವಳಿಯ ಕೆಲವು ಬಾಬುಗಳನ್ನು ಹೆಚ್ಚಿಸುವ ವಿಷಯದಲ್ಲಿ ಸಾಕಾದಷ್ಟು ಗಮನವನ್ನು ಕೊಡದೆ ಇದ್ದದ್ದು.

(2) ಖಾಯಂ ಅಥವಾ ಆವೃತ್ತಿಯ ಖರ್ಚುಗಳಿಗೆ ವಿನಿಯೋಗಿಸುವ ವಿಚಾರದಲ್ಲಿ ಯಾವ ಹುಟ್ಟುವಳಿಯ ಬಾಬುಗಳು ಬರವಸೆಯಾದವುಗಳು ಯಾವವು ಅಲ್ಲ ಎಂಬ ತಾರತಮ್ಯವನ್ನು ಸರಿಯಾಗಿ ಗ್ರಹಿಸದೆ ಇದ್ದದ್ದು.

(3) ಚಿನ್ನದ ಗಣಿಗಳ ಹುಟ್ಟುವಳಿಯೆಲ್ಲವನ್ನೂ ಮಾಮೂಲ್ ಹುಟ್ಟುವಳಿಯಂತೆ ಉಪಯೋಗಿಸಿಕೊಂಡದ್ದು.

(4) ಸರಾಸರಿ ಸಾಮಾನ್ಯ ಹುಟ್ಟುವಳಿಯ ಅಂತಸ್ತಿಗೆ ಮೀರುವಂತೆ ಇಲಾಖೆಗಳ ಖರ್ಚನ್ನು ಹೆಚ್ಚಿಸಿದ್ದು.

(5) ಏಕಕಾಲದಲ್ಲಿ ಭಾರಿಯಾಗಿ ಹೊಸ ಇಲಾಖೆಗಳನ್ನು ಸ್ಥಾಪಿಸಿದ್ದರ ಜತೆಗೆ ಹಳೇ ಇಲಾಖೆಗಳ ಕಾರ್ಯಗಳನ್ನು ವಿಶೇಷವಾಗಿ ಹೆಚ್ಚಿಸಿದ್ದು.

(6) ಪೂರೈಸುವುದಕ್ಕೆ ಸಾಕಾದಷ್ಟು ಹಣವೊದಗುವುದೇ ಇಲ್ಲವೇ ಎಂಬುದನ್ನು ವಿಚಾರಮಾಡದೆ ಅನೇಕ ಭಾರೀ ಕಟ್ಟಡಗಳನ್ನೂ ಕಾಮಗಾರಿಗಳನ್ನೂ ಕೈಗೊಂಡದ್ದು.

(7) ಸಾಕಾದಷ್ಟು ದ್ರವ್ಯವನ್ನೊದಗಿಸುವುದರ ಸಾಧ್ಯತೆಯನ್ನು ವಿಚಾರಕ್ಕೆ ತೆಗೆದುಕೊಳ್ಳದೆ ಏಕಕಾಲದಲ್ಲಿ ಮೂಲಧನದ ಖರ್ಚನ್ನೊಳಗೊಂಡ ಅನೇಕ ಭಾರೀ ಕಾಂಗಾರಿಗಳನ್ನು ವಹಿಸಿದ್ದು.

(8) ಸ್ವಲ್ಪವೂ ಲಾಭವಿಲ್ಲದಂತೆ ಅಥವಾ ನಿರೀಕ್ಷಿಸಿದ್ದ ಲಾಭದ ಬಹು ಸ್ವಲ್ಪ ಭಾಗವನ್ನು ಮಾತ್ರ ಕೊಡುವಂತೆ ಕಂಡು ಬಂದ ಪ್ರಾಜೆಕ್ಟುಗಳಿಗೆ ಸಾಲ ತೆಗೆದ ಹಣದಿಂದ ವಿಶೇಷವಾಗಿ ಖರ್ಚುಮಾಡಿದ್ದರಿಂದ ಬಡ್ಡಿಯ ವರಮಾನವು ನಷ್ಟವಾಗಿ ಲಾಭಕರವಲ್ಲದ ಸಾಲವು ಹುಟ್ಟಿಕೊಂಡು ಅದನ್ನು ಸಾಮಾನ್ಯ ಹುಟ್ಟುವಳಿಯಿಂದ ತೀರಿಸಬೇಕಾಗಿ ಬಂದದ್ದು. ಎಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ.

ಮಿ|| ಬಾನರ್ಜಿಯವರು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಕನ್ನಡಿಯಂತೆ ವಿವರಿಸಿಕೊಟ್ಟಿರುವ ಆರ್ಥಿಕಸ್ಥಿತಿಯ ಪೂರ್ವಾಪರಚರಿತ್ರವನ್ನೆಲ್ಲಾ ಕೂಲಂಕಷವಾಗಿ ಓದಿದವರಿಗೆ ಮೇಲೆ ಕಂಡ ಸ್ಪೆಷಲ್ ಕಮಿಟಿಯವರು ಕೊಟ್ಟಿರುವ ಕಾರಣಗಳೆಲ್ಲಾ ಯಥಾರ್ಥಗಳೆಂದು ತೋರಿಯೇ ತೋರುತ್ತವೆ. ಈಗಣ ಗೌರ್ನಮೆಂಟಿನವರೂ ಅದನ್ನು ಅನುಮೋದಿಸಿರುತ್ತಾರೆ.

ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ಸರ್ವೀಸಿನಲ್ಲಿ ೧೦ ವರ್ಷಗಳ ಕಾಲವಿದ್ದರು. ಆ ಕಾಲದಲ್ಲಿ ಅವರು ಮಾಡಿದ ದೇಶಸೇವೆಯು ಮನಃಪೂರ್ವಕವಾದ ಅಭಿಮಾನದಿಂದ ಕೂಡಿದ್ದುದಲ್ಲದೆ ದೇಶಕಾರ್ಯಕ್ಕಾಗಿ ವಿದ್ಯುಚ್ಛಕ್ತಿ ವೇಗದಿಂದ ಅಹರ್ನಿಶಿಯೂ ದುಡಿದ ದಿವಾನರುಗಳಲ್ಲಿ ಇವರಂಥವರು ಹಿಂದೆ ಯಾರೂ ಸಂಸ್ಥಾನಕ್ಕೆ ದೊರೆದಿರಲಿಲ್ಲವೆಂಬುದನ್ನು ಯಾರೂ ಅಲ್ಲವೆನ್ನುವಹಾಗಿಲ್ಲ. ಆದರೆ ಇವರ ಕಾರ್ಯಾವೇಶಾಧರವು ಕೆಲಸಂದರ್ಭಗಳಲ್ಲಿ ಎಲ್ಲೆ ಮೀರಿ ದೂರಾಲೋಚನೆಯಿಲ್ಲದೆ ನಡೆಯಿಸಲ್ಪಡುತ್ತಿವೆಯೆಂಬುದು ಕೊನೆಕೊನೆಯಲ್ಲಿ ತೋರುತ್ತ ಬಂದಿತು. ನಡೆಯುವವರು ಎಡಹುವುದು ಸ್ವಭಾವವಾಗಿರುವಂತೆ ಗುಣಭೂಯಿಷ್ಠವಾದ ಇವರ ಆಡಳಿತದಲ್ಲೂ ಲೋಪವೂ ಇಲ್ಲದೆ ಹೋಗಲಿಲ್ಲ. ಅದು ಆರ್ಥಿಕ ಸಂಬಂಧವಾದ ಲೋಪವಾದುದರಿಂದಲೂ ತತ್ರಾಪಿ ಈಗಣ ಕಾಲಸ್ಥಿತಿ ವೈಷಮ್ಯದಿಂದಲೂ ಅದಕ್ಕೆ ಅತ್ಯಂತ ಮಹತ್ವಬಂದು, ಅವರ ಕಾರ್ಯಭಾರದ ಗುಣವನ್ನೆಲ್ಲಾ ಈ ದೋಷವೊಂದೇ ಮುಚ್ಚಿಬಿಡುವ ಸ್ಥಿತಿಯಲ್ಲಿ ಎಲ್ಲರಬಾಯಲ್ಲೂ ತಾಂಡವವಾಡುತ್ತಿದೆ. ಸರ್ ಎಂ. ವಿಶ್ವೇಶ್ವರಯ್ಯನವರ 6 ವರ್ಷಗಳ ದಿವಾನಗಿರಿಯಲ್ಲಿ ನಡೆದ ದುಂದುವೆಚ್ಚಗಳಿಂದ ಸಂಸ್ಥಾನಕ್ಕೆ ಇಂಥ ಆರ್ಥಿಕ ದುಸ್ಸ್ಥಿತಿಯು ಪ್ರಾಪ್ತವಾಯಿತೆಂದು ವೃತ್ತಪತ್ರಿಕೆ ಮೊದಲಾದುವುಗಳಲ್ಲಿ ಜನಜನಿತವಾಗಿರುವ ವಿಷಯವೇ ಕೊನೆಗೆ ಸ್ಪೆಷಲ್ ಫೈನಾನ್ಷಿಯಲ್ ಕಮಿಟಿಯವರ ಬಾಯಿಂದಲೂ ಈಗಣ ಗೌರ್ನಮೆಂಟಿನವರ ಮುಖದಿಂದಲೂ ಹೊರಪಟ್ಟುದನ್ನು ವಿಶ್ವೇಶ್ವರಯ್ಯನವರು ನೋಡಿ ಆ ದೂರಿಗೆ ತಾವು ಪಾತ್ರರಲ್ಲವೆಂಬುದನ್ನು ತೋರಿಸಿಕೊಳ್ಳಲಿಕ್ಕಾಗಿ ಈ ಆಕ್ಷೇಪಗಳಿಗೆ ಖಂಡನರೂಪವಾದ ಪ್ರೆಸ್ ನೋಟೊಂದನ್ನು ಪ್ರಕಟಿಸಿರುತ್ತಾರೆ. ಅದರಲ್ಲಿ ತಮ್ಮ ವಿಷಯವಾಗಿ ಮಾಡುವ ಆಕ್ಷೇಪಣೆಗಳಿಗೆ ಸರ್ಕಾರದವರೂ ಇತರರೂ ಆಗಣ ಆಯವ್ಯಯಗಳ ಸಂಬಂಧವಾಗಿ ತಪ್ಪು ತಿಳುವಳಿಕೆಯನ್ನು ಹೊಂದಿರುವುದೇ ಕಾರಣವೆಂದು ಪೀಠಿಕೆಯನ್ನು ಹಾಕಿಕೊಂಡು ತಮ್ಮ ಮೇಲೆ ಮಾಡಲ್ಪಟ್ಟಿರುವ ಆಕ್ಷೇಪಗಳನ್ನೆಲ್ಲಾ ಮೂರು ಭಾಗಗಳನ್ನಾಗಿ ಮಾಡಿಕೊಂಡು ಸಮಾಧಾನ ಬರೆದಿದ್ದಾರೆ. ಆ ಮೂರು ಭಾಗಗಳೇನಂದರೆ—

(1) ನಾನು ದಿವಾನಗಿರಿಯನ್ನು ಬಿಟ್ಟ 1918 ನೆ ವರ್ಷದ ಡಿಶಂಬರ್ ತಿಂಗಳಲ್ಲಿ ದೇಶದ ಆಯತಿಯು ಹೀನಸ್ಥಿತಿಗೆ ಬಂದಿದ್ದಿತು.

(2) ನನ್ನ ದಿವಾನಗಿರಿಯಲ್ಲಿ ಖರ್ಚು ಬಹಳ ಜಾಸ್ತಿಯಾಯಿತು.

(3) ನಾನು ಉಪಕ್ರಮಿಸಿದ ಪ್ರತಿಫಲವುಳ್ಳ ಪಬ್ಲಿಕ್ ವರ್ಕ್ಸ್, ಕೈಗಾರಿಕೆ ಕೆಲಸಗಳು ಈಗ ಮಾಡಿರುವ ದೊಡ್ಡ ಸಾಲಗಳನ್ನು ಮಾಡುವುದಕ್ಕೆ ಮುಖ್ಯಕಾರಣಗಳು.

ಇವು ಮೂರಕ್ಕೂ ಇವರು ಕೊಟ್ಟಿರುವ ಸಮಾಧಾನಗಳು ದೂರನ್ನು ಪರಿಹರಿಸಲು ಸಂಪೂರ್ಣ ಸಮರ್ಥಗಳಾಗಿಲ್ಲವೆಂದು ತೋರುವುದು. ಹೇಗೆಂದರೆ-೧ನೆ ಆಕ್ಷೇಪಭಾಗಕ್ಕೆ ಉತ್ತರಕೊಟ್ಟಿರುವುದರಲ್ಲಿ ತಾವು ಅಧಿಕಾರಕ್ಕೆ ಬಂದ 1912ನೆ ವರ್ಷದ ಜುಲೈ ತಿಂಗಳಿಂದ 1918ನೆ ವರ್ಷದ ಕೊನೆಯವರಗೆ ಆದ 6 ವರ್ಷಗಳೊಳಗೆ ಪ್ರತಿ ವರ್ಷದಲ್ಲೂ ಖರ್ಚು ಕಳೆದುಳಿದ ಉತ್ಪತ್ತಿ ಮತ್ತು ಪ್ರತಿಫಲವುಳ್ಳ ಕೆಲಸಗಳಿಗೆ ತಾವು ಕೊಟ್ಟ ಹಣ ಇವುಗಳ ವಿವರಣವನ್ನು ಇವರು ಕೊಟ್ಟಿದ್ದಾರೆ. ಅದರ ಪ್ರಕಾರ ಉಳಿದ ಹಣವು 2 ಕೋಟಿಯೂ 91 ಲಕ್ಷವೂ ಕೆಲಸಗಳಿಗೆ ಕೊಟ್ಟ ಹಣವು 2 ಕೋಟಿಯೂ 89 ಲಕ್ಷವೂ ಆಗುವುದು. ಇದಿಷ್ಟನ್ನು ಮೇಲೆ ಮೇಲೆ ನೋಡುವವರಿಗೆ ಅವರು ಆಯವನ್ನು ಮೀರಿ ವ್ಯಯವನ್ನು ಮಾಡಿಲ್ಲವೆಂದು ತೋರಿಹೋದರೂ ಒಳಹುರುಳನ್ನು ನೋಡಿದರೆ ನಿಜಸ್ಥಿತಿಯು ಗೊತ್ತಾಗದೆ ಹೋಗುವುದಿಲ್ಲ. ಮಿ|| ಬಾನರ್ಜಿಯವರು ತಮ್ಮ ಭಾಷಣದಲ್ಲಿ ಹೇಳಿರುವಂತೆ ಇವರು ಅನುಸರಿಸಿದ ವಿಧಾನದಲ್ಲಿ ಮಿ|| ದತ್ತರವರ ಫೈನಾನ್ಷಿಯಲ್ ಸೆಟಲ್‌ಮೆಂಟಿಗೆ ವಿರೋಧವಾಗಿ ಸಂಸ್ಥಾನದ ಸಾಧಾರಣವಾದ ಆಯವ್ಯಯಗಳನ್ನೂ ಲಾಭಕರವೆಂದು ಕೈಕೊಂಡ ಕಾಮಗಾರಿಗಳನ್ನೂ ಪ್ರತ್ಯೇಕ ಪ್ರತ್ಯೇಕಪಡಿಸದೆ ಒಟ್ಟಿಗೆ ರಾಶಿಸೇರಿಸಿಕೊಂಡು ಕೆಲಸಮಾಡಲ್ಪಟ್ಟಿರುವ ದೋಷದ ಉದ್ಘಾಟನೆಗೆ ಇವರ ಉತ್ತರದಿಂದ ಸಮಾಧಾನವೇನೂ ಬರುವುದಿಲ್ಲ. ಮತ್ತು ಇವರ ಕಾಲದಲ್ಲಿ ಕೆಲವು ವಿಶಿಷ್ಟವಾದ ಆದಾಯಗಳು ಬರಲು ಅವಕಾಶವಿದ್ದಿತು, ಅವುಗಳು ಶಾಶ್ವತವಾದುವುಗಳಲ್ಲ. ಅದನ್ನು ಬಾನರ್ಜಿಯವರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇವರು ಆದಾಯ ಸಮೃದ್ಧವಾಗಿರುವ ಕಾಲದಲ್ಲಿ ದೊಡ್ಡದೊಡ್ಡ ಕಾಮಗಾರಿಗಳಿಗೆ ಉಪಕ್ರಮಿಸಿದರು. ಮತ್ತು ಸಾಧಾರಣವಾದ ಸಂಸ್ಥಾನದ ವೆಚ್ಚಗಳನ್ನು ವಿಪರೀತವಾಗಿ ಹೆಚ್ಚಿಸಿಬಿಟ್ಟರು. ವೆಚ್ಚಗಳು ಶಾಶ್ವತವಾಗಿದ್ದಂತೆ ಆದಾಯ ಭಾಗಗಳು ಶಾಶ್ವತವಾಗಿರತಕ್ಕವುಗಳಾಗಿರಲಿಲ್ಲ. ಸಂಸ್ಥಾನದ ಖರ್ಚು ಇವರು ಅಧಿಕಾರಕ್ಕೆ ಬಂದ ವರ್ಷದಲ್ಲಿ 2 ಕೋಟಿಯೂ 2 ಲಕ್ಷವಿದ್ದಿತು. ಇವರು ಅಧಿಕಾರವನ್ನು ಬಿಡುವ ವರ್ಷದಲ್ಲಿ 2 ಕೋಟಿಯೂ 98 ಲಕ್ಷ ಎಂದರೆ 96 ಲಕ್ಷದಷ್ಟು ಹೆಚ್ಚಿಸಿಬಿಟ್ಟರು. ಹೊಸಹೊಸ ಉದ್ಯೋಗಸ್ಥಾನಗಳನ್ನು ನಿರ್ಮಿಸಿ ಸಂಬಳದ ಮತ್ತು ಅಲೋಯೆನ್ಸುಗಳ ಮೊತ್ತವನ್ನು ಹೆಚ್ಚಿಸಿದುದರಿಂದ ಹೀಗಾಯಿತು. ಈ ವೆಚ್ಚವು ಹೀಗೆ ಹೆಚ್ಚಿಕೊಂಡುದು ಶಾಶ್ವತವಾಯಿತೇ ಹೊರತು ಇವರ ಕಾಲದಲ್ಲಿ ಅನಿರೀಕ್ಷಿತವಾಗಿ ಹೆಚ್ಚಿಬಂದ ಕೆಲವು ಆದಾಯಭಾಗಗಳು ಮುಂದೆಯೂ ಶಶ್ವತವಾಗಿರತಕ್ಕವುಗಳಾಗಿರಲಿಲ್ಲ. ಅದನ್ನು ವಿಚಾರಮಾಡದೆ ವೆಚ್ಚದ ಭಾಗಗಳನ್ನು ಹೆಚ್ಚುಮಾಡಿ ಕುಳ್ಳಿರಿಸಿದ ದೋಷವು ಅನಿವಾರ್ಯವಾಗಿಯೇ ಉಳಿದಿದೆ.

ತಮ್ಮ ಮುಂದಣವರು ಆದಾಯಕ್ಕಿಂತ ಹೆಚ್ಚು ಖರ್ಚಿಗೆ ದಾರಿಮಾಡಿಕೊಂಡರೆಂತಲೂ, ಸಾಲಮಾಡಿಕೊಂಡುದು ತಪ್ಪೆಂತಲೂ ಇವರು ಹೇಳುತ್ತಾರೆ. ಸಂಸ್ಥಾನದ ಆಯಕ್ಕಿಂತಲೂ ವ್ಯಯವನ್ನು ಹೆಚ್ಚಾಗಿ ಮಾಡಬೇಕಾದ ಅವಶ್ಯಕತೆಯು ಇವರ ಅಧಿಕಾರದ ಕೊನೆಯಲ್ಲೇ ಆರಂಭವಾಗಿದ್ದಿತು. 1918-19 ನೆ ವರ್ಷದಲ್ಲಿ ಹುಟ್ಟುವಳಿಯು 65 ಲಕ್ಷದಷ್ಟು ಹೆಚ್ಚಾಗಿ ಬಂದಿದ್ದರೂ ವೆಚ್ಚಕ್ಕೆ 3 ಲಕ್ಷದಷ್ಟು ಸಾಲದೆ ಹೋಯಿತು. ಮತ್ತು ಮುಂದೆಯೂ ಹೀಗೆಯೇ ಆಗಬಹುದೆಂದು ಇವರಿಗೆ ತೋಚಿದುದರಿಂದಲೇ ಏನೋ ಮುಂದೆ ಸಾಲವನ್ನು ಮಾಡಿ ಆವಶ್ಯಕ ವ್ಯಯಗಳನ್ನು ನಿರ್ವಹಿಸಬಹುದೆಂದು ನಿರ್ಧರಿಸಿ, 1918ನೆ ಅಕ್ಟೋಬರ್ ತಾ|| 24ನೆ ಫೈನಾನ್ಷಿಯಲ್ 21503 ಜನರಲ್ ಫೈನಾನ್ಸ್ 1861-5-5ನೆ ನಂಬರು ಸರ್ಕಾರಿ ಅಪ್ಪಣೆಯಲ್ಲಿ—"ಸಾಧಾರಣವಾಗಿ ಪ್ರತಿ ವರ್ಷದಲ್ಲಿಯೂ 70 ಲಕ್ಷ ರೂಪಾಯಿಯಷ್ಟು ಬಂಡವಾಳದ ಖರ್ಚನ್ನು ಮುಟ್ಟಿಸುವಂತೆಯೂ ಆ ಪೈಕಿ 40 ಲಕ್ಷ ರೂಪಾಯಿಯನ್ನು ರಿಜರ್ವ್ ಫಂಡುಗಳ ಲೆಕ್ಕದಲ್ಲಿ ಶಿಲ್ಕುನಿಂತ ಮೊಬಲಗಿಗೆ ಖರ್ಚುಹಾಕಿ 30 ಲಕ್ಷ ರೂಪಾಯಿಯನ್ನು ಸಾಲದಿಂದ ಮುಟ್ಟಿಸತಕ್ಕದ್ದು" ಎಂದು ಅಪ್ಪಣೆಮಾಡಿರುವರು. ಸಾಲವನ್ನು ಮಾಡಿಯೇ ಮುಂದಣ ಕಾರ್ಯಗಳನ್ನು ನಿರ್ವಹಿಸಬೇಕೆಂಬ ಅವಸ್ಥೆಗೆ ಇವರೇ ಅಂಕುರಾರೋಪಣಮಾಡಿದ್ದರೆಂಬ ಸಂಗತಿಯು ಇದರಿಂದ ಅತ್ಯಂತ ಸ್ಪಷ್ಟವಾಗಿರುವುದು. ಅಲ್ಲದೆ ಸಾಲಮಾಡಿಕೊಂಡಿರುವುದು ನಾಗರಕ ಪ್ರಭುತ್ವಕ್ಕೆ ಲಕ್ಷಣವೆಂಬಭಿಪ್ರಾಯವು ಅವರಿಗಿದ್ದಿತು. ಸಾಲಮಾಡುವ ಅವಶ್ಯಕತೆಯನ್ನು ಎಷ್ಟೋಸಲ ಹಿಂದೆ ತಮ್ಮ ಭಾಷಣಗಳಲ್ಲಿ ಇವರೇ ಸ್ಪಷ್ಟಗೊಳಿಸಿರುವರು.

SIR M. VISVESVARAYA'S STATEMENT.

The statement which Sir M. Visvesvaraya, has issued with the object of correcting some misapprehensions which has gained currency on the subject of Mysore Finances was not altogether unexpected in the circumstances of the case. The necessity for a clear diagnosis arose only when the financial difficulties became serious–to know the causes of the trouble so that suitable remedies may be administered. What the public have been candid enough to be saying for many years were embodied in official or semi-official pronouncements. So that it is not merely "a disposition to connect some of the present day difficulties with the administration for which Sir M. Visvesvaraya was responsible," but it is recognised as a fact, to which conclusion they have come after a very careful, analytical, searching and unbiassed examination of the situation, and after giving sufficient allowances to all other causes such as the general economic depression all over the world and the adverse exchange rates etc., which affected the whole world of which Sir M. Visvesvaraya wants to make too much of. We confess that even after considering all that he has advanced to absolve his administration of its share of bringing about the present trouble we are not in a position to revise what we have held in the matter already.

The whole statement of Sir M. Visvesvaraya seems to have proceeded on the basis that the actions of an administrator or administration is to be judged only by their effects or results during his or its tenure and not after a most fundamentaly wrong and dangerous basis. It looks as though he is surprised when people talk of the administration which "closed over three and a half years ago." While the criticisms have been grouped correctly under three mainheads, they are rarely met with and answered. On the other hand much labour has been spent to prove the stability of the financial position during his tenure–a matter which is never at issue. Sir M. Vesvesvaraya in considering the criticism of alleged disorganised condition of finances during his time, instead of answering that question shows a statement that so long as he was Dewan there was always a surplus every year. No mention is made of the accumulated surpluses of previous years which were spent out when he was Dewan, leaving nothing to his successor except liabilities of increasing potentiality. The differentiation between the certain and adventitious revenues as recommended by Mr. Basu in the first instance may not be so necessary when no large expenditure on productive works is contemplated but it becomes absolutely essential when such works are undertaken on a large scale and it could have been patent to any one at the helm of affairs that such a course was the only one to asertain our strength or our limitations for this purpose to guarantee the safety and soundness of our finauces for future. It is this unmethodical grouping of all revenues together ignoring the recommendation of Mr. Basu and diverting all surpluses to the starting of productive works with no chances of a steady income wherewith to work them to completion that has brought about this crisis. Further, we see no reason why the responsibility for the budget of 1918-19 should be taken off from the shoulders of Sir M. Visvesvaraya for the reason given by him that that official year he was not more than six months in office, when be has had the full hand in framing the budget for that year, and when on the face of it it was not possible for his successor to go back upon them. Taking then his own statement we find that the surplus of Rs. 60 lakhs in 1917-1918 to which he draws pointed attention had dwindled down in 1918-1919 to Rs. 7 lakhs. That indicates the downward course. We are supported in this view from the statement given by the present Dewan who shows in his address to the Representative Assembly that the last year of Sir M. Vesvesvraya was 1918-1919.

The same fallacy is to be observed with reference to the increase in State Expenditure. Sir M. Vesvesvaraya states that the Service Expenditure in his first year, 1912-13, was Rs. 1,94 lakhs and in his last year, according to his calculation to which we cannot subscribe, that is, 1917-18 was Rs. 2,52 lakhs, showing an increase of only Rs. 58 lakhs in 6 years. But from the statement mentioned above Mr. Banerji has given we find in the last year of Sir M. Vesvesvaraya which is 1918-19 the Service Expenditure mounting up to Rs. 2,95 lakhs–a sudden rise in the course of one year by Rs. 46 lakhs. Following up the statement of Mr.

Banerji, while in the first year of Sir M. Kantaraj Urs 1919-20 the Service Expenditure was Rs. 3,07 lakhs, the last year 1921-23 was only Rs. 2,91 lakhs. We do not understand what Sir M. Vesvesvaraya means by saying that this class of Expenditure rose to Rs. 3,36 lakhs in three years unless he means there by the total State Expenditure in which case the comparison of his own Service Expenditure with Sir M. Kantaraj Urs's State Expenditure is misleading and erroneous. And ipso facto the rise by Rs. 84 lakhs as stated in the statement under review in Service Expenditure 3 years after Sir M. Vesvesvaraya is nowhere evident. In the opening of his statement Sir M. Visvesvaraya says that to his recollection no dissatisfaction existed with regard to the increase in expenditure during his tenure or even up to 18 months later. If we remember correct it was the *Karnataka* now incorporated into the *Indian Review of Reviews* that vigourously protested against this kind of abnormal rise and extension of departments out of all proportion to the needs and the capacity of the State during his regime. Both the public and the press did not refrain from pointing out the danger after the first glamour was over though of course they could not foresee it in all its entirety. Notably among the leaders was the late Mr. M. Basaviah. It must not be forgotten that Sir M. Kantaraj Urs granted high price allowance to subordinate ranks and menials to the extent of Rs. 20 lakhs which should be taken into account when determining any increase in Service Expenditure during his period.

As regards the productive work we may add to what we have already said that the origin of the trouble began with starting them depending on the accumulated surpluses and without knowing the capacity of our State to bear the increasing demands which the progress of these works necessarily entailed. When at the end of his *regime* he had exhausted all surpluses of the past, to compare his period with the one succeeding his and saying instead of a surplus there was at the end of 1921–22 a deficit of Rs. 40 lakhs is we think not fair. While we cannot deny the effects of world-wide depression, adverse exchange etc., we feel sure that with the kind of stability of our State finances in our past which was our just pride the situation would not have become so bad. When we still hear of Mysore being not unique in this respect and nearly every civilised country in the larger world outside we are reminded of some of his favourate comparisons and contrasts as Dewan and of his support of his theory that debts are no danger to the State provided they are employed on productive works for the reason that all modern nations had national debts. It is astonishing to see that so business like a man as Sir M. Visvesvaraya suggesting calmly and seriously that on these productive works "there was no obligation on the part of the Government to spend any capital on them save at their leisure and save what was absolutely necessary to prevent deterioration or to pay for materials previously ordered." Granting there were no express terms binding on the Government to spend sums, still would it not stand to reason to think that so much money would be locked without interest and that supervision could not be abandoned. But in cases like the Iron Scheme we learn there were express terms which they could not refuse to fulfil. The additional expenditure was inevitable when once they were started and to restrict mathematically the expenditure on them so much for year as suggested, regardless of the needs or of the advice of experts to whom he is partial is not business. Supposing the K. G. F. people are suffering from financial stringency one could imagine what an excellent and salutory arrangement it would be for them to say "let us spend 25 lakhs a year and no more." We cannot also agree with the former Dewan in ignoring the minor works, such as Sandal Oil Factory, Weaving Factory, Soap Factory, Metal Factory etc. They have all contributed their share to bring about the embarassment however little.

To the best of our knowledge nobody has made Sir M. Visvesvaraya personally responsible for all the troubles. It would be foolish to do so when he had his colleagues and advisers. But when we know he was in charge of the portfolio–a certain responsibility does attach to him–and this is further enhanced by the fact that he was the Dewan–a position which gives him ample scope for direct initiative. We know also that Sir M. Visvesvaraya was not tardy in making use of this privileged position and often got what he wanted to be done. Sir M. Visvesvaraya has referred to the official pronouncements after he has left. We are accustomed to financial pronouncements everywhere, and they are not always beyond error or free from a note of exaggeration. We are also alive to the fact that very often anticipations do not come out true and there need be no agitation if what were schemed did not prove themselves to be so rosy as they originally presented themselves, for, human calculations are not infallible.

KUNIGAL STUD FARM.

We hear on credible authority that there is an offer of Rs. 2 lakhs from one in the line to buy up the Kunigal Stud Farm–as a going concern. In our opinion this is a matter which merits the sympathetic consideration of the Government. That the Farm is being run at a loss for many years is undisputed, and with so many other things more important on hand we find no reason why the Government should worry itself about running a Stud Farm, and that as a losing concern at the cost of people's money. The Special Finance Committee have recommended (the above proposal having come rather late for consideration) that the land measuring 1250 acres may fetch Rs. 1,25,000 and the stock Rs. 50,000 But here the price offered is Rs. 2 lakhs. Besides, the new proposal has many things to commend itself. The Farm has gained a certain reputation though owing to certain circumstances it is not so popular as it was before and if given over to an efficient private agency it is sure to become a national asset. The disadvantages of selling the Farm piecemeal are many, chief among them being the uncertainty of getting the expected money and the waste of the buildings and farm houses. The public also have already expressed themselves that the Farm should be closed. We hope that the Government will soon come to a decision to close it and dispose it off to the best offer.

ಒಳದೇಶದ ವೃತ್ತಾಂತಗಳು.

ನಾನಾತರದ ಅವ್ಯವಸ್ಥೆಯ ಕಾರಣಗಳಿಂದ ಸಂಸ್ಥಾನದ 28 ಪರಸ್ಪರ ಸಹಾಯಸಂಘಗಳು ಸರ್ಕಾರದಿಂದ ವಜಾಮಾಡಲ್ಪಟ್ಟಿವೆ.

ಇದುವರೆಗೆ ವ್ಯವಸಾಯಶಾಖೆಯಲ್ಲಿ ಅಭ್ಯಾಸಮಾಡುವವರಿಗಾಗಿ 8 ರೂ. ನ ಬಾಬತು 30 ವೇತನಗಳು ಕೊಡಲ್ಪಡುತ್ತಿದ್ದುವು. ಇನ್ನುಮುಂದೆ 12 ರೂ. ನ 20 ವೇತನಗಳನ್ನು ಮಾತ್ರ ಕೊಡುವಂತೆ ಏರ್ಪಡಿಸಿದ್ದಾರೆ.

ರಾಜಕುಮಾರ ದೇಶರಾಜೇ ಅರಸಿನವರನ್ನು (ಕರ್ನಲ್ ದೇಶರಾಜ ಅರಸಿನವರ ಪುತ್ರರು) ಹೈದರಾಬಾದ್ ಬ್ರಿಟಿಷ್ ರೆಸಿಡೆಂಟರ ಪರ್ಸನಲ್ ಅಸಿಸ್ಟೆಂಟರನ್ನಾಗಿ ನಿಯಮಿಸಿಕೊಂಡಿರುವುದರಿಂದ ಇಷ್ಟರಲ್ಲೇ ಅವರು ಹೈದರಾಬಾದಿಗೆ ಪ್ರಯಾಣ ಮಾಡುವವರಾಗಿದ್ದಾರಂತೆ. ಈ ಏರ್ಪಾಟು ನೂತನವಾಗಿದೆ.

ಸಂಸ್ಥಾನದ ಎಲಿಮೆಂಟರಿ ಮತ್ತು ಮಿಡಲ್‌ಸ್ಕೂಲುಗಳಿಗೆ ಸೇರಿದಂತೆ ಪೋಷಕಬೋಧಕ ಸಂಘಗಳನ್ನೇರ್ಪಡಿಸುವುದರಿಂದ ಪಾಠಶಾಲೆಗಳ ಕಾರ್ಯಗಳು ದಕ್ಷತೆಯಿಂದ ನೆರವೇರಿಸಲ್ಪಡಲು ಅನುಕೂಲವಾಗುವುದಾದ ಕಾರಣ, ಅಂಥ ಸಭೆಗಳನ್ನೇರ್ಪಡಿಸುವುದು ಅವಶ್ಯಕವೆಂದು ವಿದ್ಯಾಭ್ಯಾಸದ ಬೋರ್ಡಿನವರು ಸೂಚಿಸಿದಪ್ರಕಾರ ವಿದ್ಯಾಶಾಖಾ ಇನ್|| ಜನರಲ್‌ರವರು ಪಾಠಶಾಲೆಯ ಬೋಧಕರು ಮತ್ತು ವಿದ್ಯಾರ್ಥಿಗಳ ತಾಯಿತಂದೆಗಳಲ್ಲಿ ಕೆಲವರು ಸೇರಿದ ಸಂಘಗಳನ್ನೇರ್ಪಡಿಸಬಹುದೆಂದು ಅವರು ಸ್ಕೂಲುಗಳ ಅಭ್ಯುದಯಕ್ಕಾಗಿ ಮಾಡಬಹುದಾದ ಕಾರ್ಯಗಳ ವಿವರವನ್ನು ಕುರಿತು ಕೆಲವು ನಿಬಂಧನೆಗಳನ್ನು ಸೂಚಿಸಿದುದನ್ನು ಗೌರ್ನಮೆಂಟಿನವರು ಒಪ್ಪಿದ್ದಾರೆ.

ಅಗ್ನಿಸ್ತಂಭನವಿದ್ಯೆಯನ್ನರಿತ ಮಂತ್ರಗಾರನೊಬ್ಬನು ಕಳೆದ ಬುಧವಾರ ಖಾಸಬಂಗಲೆಯಲ್ಲಿ ೨ ಬಂಡಿ ಸವಿದೆಯನ್ನೊಟ್ಟಿಸಿ, ಬೆಂಕಿಹೊತ್ತಿಸಿ ಮಹಾಜ್ವಾಲೆಯಿಂದ ಅದು ಉರಿಯುತ್ತಿರುವಾಗ್ಗೆ ಶ್ರೀಮನ್ಮಹಾರಾಜರವರ ಸ್ವಾರಿಯು ಬಂದು ಪರಾಮರಿಸುತ್ತಿರಲು ಮಂತ್ರಿಸುತ್ತಲಿದ್ದು ಯಾರು ಬೇಕಿದ್ದರೂ ಅಗ್ನಿಯನ್ನು ಪ್ರವೇಶಮಾಡಬಹುದೆಂದು ಧೈರ್ಯಪಡಿಸಿ ಹೇಳಿದುದರಮೇಲೆ ಅಲ್ಲಿಯ ನೌಕರಮಾನೆಯರಲ್ಲಿ ಕೆಲವರು ತುಳಿದು ನಡೆದುಹೋದಹಾಗೂ ಯಾರ ಕಾಲೂ ಸುಡದೆ ತಣ್ಣಗಿದ್ದಂತೆಯೂ ಜ್ವಾಲೆಯು ಹೆಚ್ಚಾದಾಗ ಆತನು ನಿಂತು ಥೂತ್ಕರಿಸಿದರೆ ಅದು ಅಡಗುತ್ತಿದ್ದಿತೆಂತಲೂ, ಬಳಿಕ ಆತನು ಉರಿಯ ಮಧ್ಯದಲ್ಲಿ ಕೆಂಡದ ಮೇಲೆ ಒಂದು ತೆಂಗಿನ ಮಟ್ಟೆಯನ್ನು ಹಾಸಿ ಆದರ ಮೇಲೆ ಮಲಗಿ ಸ್ವಲ್ಪಕಾಲವಿದ್ದು ಎದ್ದನೆಂತಲೂ ಇದನ್ನು ನೆರೆದಿದ್ದ ಜನರೆಲ್ಲರೂ ನೋಡಿ ವಿಸ್ಮಿತರಾದರೆಂತಲೂ ಕೇಳಿದೆವು.

ಚಿತ್ರದುರ್ಗದ ಸರ್ಕಾರಿ ಹೈಸ್ಕೂಲಿನಲ್ಲಿ ಇದುವರೆಗೆ ಹೆಡ್ಮಾಸ್ಟರಾಗಿದ್ದು ಈ ತಿಂಗಳಾರಂಭದಿಂದ ರಿಟೈರಾದ ಮ|| ಸಂಜೀವಶೆಟ್ಟಿ ಬಿ. ಎ., ಯವರು ಅ|| ಮ್ಯಾಸ್ಟರುಗಳ ಮತ್ತು ಸಕಲವಿದ್ಯಾರ್ಥಿಗಳ ಅಲ್ಲದೆ ಪುರಜನರ ಪ್ರೀತಿವಿಶ್ವಾಸಗಳಿಗೆಲ್ಲಾ ಪಾತ್ರರಾಗಿದ್ದುದರಿಂದ ಅವರೆಲ್ಲರೂ ಮ|| ಶೆಟ್ಟರ ವಿಯೋಗವನ್ನು ಸಹಿಸಲಾರದೆ ಅವರಲ್ಲಿ ತಮಗಿರುವ ಅನುರಾಗವನ್ನು ತೋರ್ಪಡಿಸುವುದಕ್ಕಾಗಿ ಅ|| ಮಾಸ್ಟರುಗಳು ಹೈಸ್ಕೂಲು ವಿದ್ಯಾರ್ಥಿಗಳು, ಸರ್ಕಾರಿ ಹಾಸ್ಟಲ್ಲಿನ ವಿದ್ಯಾರ್ಥಿಗಳು, ವೀರಶೈವ ಬೋರ್ಡಿಂಗ್‌ವಿದ್ಯಾರ್ಥಿಗಳು ಪ್ರತ್ಯೇಕಪ್ರತ್ಯೇಕವಾಗಿ ತಮ್ಮತಮ್ಮ ಸ್ಥಲಗಳಿಗೆ ಶೆಟ್ಟರನ್ನು ಬರಮಾಡಿಕೊಂಡು ಅಲ್ಪಾಹಾರಾದಿಗಳಿಂದ ಸತ್ಕರಿಸಿದರು. ತಾ|| ೫ರಲ್ಲಿ ಟರ್ವಹಾಲಿನಲ್ಲಿ ಡಿಸ್ಟ್ರಿಕ್ಟ್ ಡಿ|| ಕಮೀಷನರಾದ ಮಿ|| ಸೈಯ್ಯದ್ ತಾಜ್ ಪೀರಾನ್ ಬಿ.ಎ. ಯವರ ಅಧ್ಯಕ್ಷತೆಯಿಂದ ಪುರಜನರೆಲ್ಲಾ ಸಭೆಗೂಡಿ ಬಹು ವಿಜೃಂಭಣೆಯಿಂದ ಸತ್ಕರಿಸಿ ಮರ್ಯಾದಿಸಿದರೆಂದು ಸ್ಥಳಿಕ ಬಾತ್ಮೀದಾರರೊಬ್ಬರು ಬರೆದಿರುತ್ತಾರೆ.

ಬರುವ ಆಗಸ್ಟ್ ತಾ|| 1 ರಿಂದ ರಿಜಿಸ್ಟ್ರೇಷನ್ ಫೀಜುಗಳು ಈ ಕೆಳಗೆ ಕಂಡಂತೆ ಹೆಚ್ಚಿಸಲ್ಪಡುತ್ತವೆ—

1-4 ಬುಕ್ಕುಗಳಲ್ಲಿ ರಿಜಿಸ್ಟರಾಗತಕ್ಕ ಪತ್ರಗಳಬೆಲೆಯು.

				ಛಾರ್ಜು.
10 ರೂಪಾಯಿನೊಳಗಿದ್ದರೆ				0-4-0
10 ರೂ. ನಿಂದ 25 ರೂ. ನೊಳಗಿದ್ದರೆ				0-6-0
25	,,	50	,,	0-8-0
50	,,	75	,,	0-12-0
75	,,	100	,,	1-0-0
100	,,	150	,,	1-8-0
150	,,	200	,,	2-0-0
200	,,	250	,,	2-8-0
250	,,	300	,,	3-0-0
300	,,	500	,,	3-8-0
500	,,	750	,,	4-0-0
750	,,	1000	,,	5-0-0

ಹೀಗೆ ಸಾವಿರಕ್ಕೆ ವಿಧಿಸಲ್ಪಡುವ ಛಾರ್ಜಿನಮೇಲೆ.

1000	,,	2500	,,	
		ಪ್ರತಿ 500 ಕ್ಕೂ		1-0-0
2500	,,	5000	,,	
		ಪ್ರತಿ 500 ಕ್ಕೂ		1-8-0
5000	,,	25000	,,	
		ಪ್ರತಿ 1000 ಕ್ಕೂ		2-0-0
25000	,,	50000	,,	
		ಪ್ರತಿ 1000 ಕ್ಕೂ		2-8-0
50000 ದ ಮೇಲೆ ಎಷ್ಟಾದರೂ ಪ್ರತಿ ಸಾವಿರಕ್ಕೂ				3-0-0

ಇದರಂತೆಯೇ ಬೇರೆಬೇರೆ ವ್ಯಾಲ್ಯೂಗಳಲ್ಲಿ ದಾಖಲಾಗತಕ್ಕ ಡಾಕ್ಯುಮೆಂಟ್ ಮೊದಲಾದುವುಗಳ ಛಾರ್ಜುಗಳು ಕೂಡ ಕೆಲಮಟ್ಟಿಗೆ ಹೆಚ್ಚಿಸಲ್ಪಟ್ಟಿವೆ.

ಭರತಖಂಡದ ವೃತ್ತಾಂತಗಳು.

ಕಲ್ಕತ್ತಾದಲ್ಲಿ ಕಳೆದ ೫ನೆ ತಾರೀಖಿನ ದಿನ 3 ಗಂಟೆಗಳ ಕಾಲ ಕುಂಭವೃಷ್ಟಿಯು ಅಖಂಡವಾಗಿ ಸುರಿದುದರಿಂದ ಬೀದಿಗಳಲ್ಲೆಲ್ಲಾ ಮೊಣಕಾಲುದ್ದದ ನೀರು ನಿಂತು ಟ್ರಾಂ ಬಂಡಿ ಮೊದಲಾದುವುಗಳ ಸಂಚಾರವೆಲ್ಲಾ ನಿಂತುಹೋಯಿತು. ಹಲವು ಬಂಡಿಗಳಿಗೆ ಅಪಾಯಸಂಭವಿಸಿತು. ಅರ್ಧರಾತ್ರಿಯವರೆಗೆ ಎಲ್ಲ ಕೆಲಸವೂ ಕಟ್ಟಾಯಿತು. ನಾಟಕಾದಿ ಪ್ರದರ್ಶನಗಳೆಲ್ಲಾ ನಿಂತುಹೋದುವು.

ಕೊಲ್ಹಾಪುರದಲ್ಲಿ ಬ್ರಾಹ್ಮಣೇತರರು ಒಂದುಸಭೆ ಗೂಡಿ, ಬ್ರಾಹ್ಮಣೇತರೋದ್ಯಮ ವಿಷಯದಲ್ಲಿ ವಿಶೇಷ ಸಾನುಭೂತಿಯನ್ನು ತೋರಿಸುತ್ತಿರುವ ಈಗಣ ಬೊಂಬಾಯಿ ಗೌರ್ನರಿಗೆ ವಂದನೆಯನ್ನರ್ಪಿಸುವ ತೀರ್ಮಾನವನ್ನು ಮಾಡಿದುದಲ್ಲದೆ, ಅವರನ್ನೇ ಇನ್ನು 5 ವರ್ಷಕಾಲ ಆ ಪದವಿಯಲ್ಲಿರಿಸಿಕೊಡುವಂತೆ ಮಾಡಬೇಕೆಂದು ಸಾಮ್ರಾಜ್ಯ ಪ್ರಭುತ್ವವನ್ನು ಕೋರಿ ಮತ್ತೊಂದು ತೀರ್ಮಾನವನ್ನು ಮಾಡಿದರು.

ಪ್ರಭುತ್ವಾಜ್ಞೆಯನ್ನು ಮೀರಿ ಅಸಹಾಯವನ್ನು ನಡೆಯಿಸುವ ವಿಷಯದಲ್ಲಿ ದೇಶೀಯರ ಅಭಿಪ್ರಾಯವು ಹೇಗಿರುವುದೆಂಬುದನ್ನು ತಿಳಿದುಕೊಳ್ಳಲಿಕ್ಕೆ ಕಾಂಗ್ರೆಸ್ಸಿನವರು ಒಂದು ಸಂಘವನ್ನೇರ್ಪಡಿಸಿದ್ದಾರೆ. ಅವರು ಮುಖ್ಯಮುಖ್ಯ ಸ್ಥಲಗಳಿಗೆಲ್ಲಾ ಹೋಗಿ ಪ್ರಮುಖರ ಸಾಕ್ಷ್ಯವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದುವರೆಗೆ ಬಂದಿರುವ ವಾಙ್ಮೂಲದಲ್ಲಿ ಆಜ್ಞೋಲ್ಲಂಘನೆಗೆ ದೇಶವು ಇನ್ನೂ ಸಿದ್ಧವಾಗಿಲ್ಲವೆಂಬುದು ಗೊತ್ತಾಗಿರುವುದಂತೆ.

ಹೆಚ್ಚು ಉತ್ಪತ್ತಿಯಾಗುವುದೆಂಬ ಆಸೆಯಿಂದ ರೈಲ್ವೆ ಬಾಡಿಗೆಯನ್ನೂ ಅಂಚೆಯ ದರಗಳನ್ನೂ ಹೆಚ್ಚಿಸಿದರು. ಆದರೆ ಕಳೆದ ಮೂರು ತಿಂಗಳ ಲೆಕ್ಕವನ್ನು ನೋಡುವಲ್ಲಿ ರೈಲ್ವೆಯಲ್ಲಿ 1-2 ಕೋಟಿಗಳೂ, ಪೋಸ್ಟಿನಲ್ಲಿ ಕೆಲವು ಲಕ್ಷಗಳೂ ಹಿಂದಿಗಿಂತ ಉತ್ಪತ್ತಿ ಕಡಿಮೆಯಾಗಿರುವುದೆಂದು ಗೊತ್ತಾಯಿತು. ದರಗಳು ಕಡಿಮೆಯಾಗಿದ್ದಷ್ಟೂ ಜನರ ಉಪಯೋಗವು ಹೆಚ್ಚುವುದೆಂಬುದನ್ನೂ, ದರಗಳು ಹೆಚ್ಚಿದಷ್ಟೂ ಜನರು ಉಪಯೋಗ ಕಡಿಮೆಮಾಡುವರೆಂಬುದನ್ನೂ ಅಧಿಕಾರಿಗಳು ಇದರಿಂದ ತಿಳಿದು

ಮೊದಲಿಗಿಂತ ದರಗಳನ್ನು ಇನ್ನೂ ಕಡಿಮೆಮಾಡಿದರೆ ಆ ಶಾಖೆಗಳ ವರಮಾನವು ಹೆಚ್ಚುವುದರಲ್ಲಿ ಅಭ್ಯಂತರವಿಲ್ಲ.

ಇಂಡ್ಯಾ ಸರ್ಕಾರದವರು ಹೊಸದಾಗಿ ಏರ್ಪಡಿಸಿದ ಸುಂಕದವಿಧಾನದಿಂದ ಸಕ್ಕರೆ, ಕೋರಾಬಟ್ಟೆ, ನೂಲು ಸರಕು, ಚಾಕು ಕತ್ತರಿ ಮೊದಲಾದುವುಗಳು, ತೇಯಲೆ, ಇವುಗಳ ಮೇಲಣ ಸುಂಕವು ಕಡಿಮೆಯಾಗಿ ಉಳಿದಪದಾರ್ಥಗಳ ಮೇಲಣ ಸುಂಕವೆಲ್ಲಾ ಹೆಚ್ಚಾಗಿದೆ. ಕಳೆದ ಜೂನ್ ತಿಂಗಳೊಂದರಲ್ಲಿ 28200000 ರೂ. ಗಳು ಉತ್ಪನ್ನವಾಗಿವೆ. ಕಳೆದವರ್ಷ ಇದೇ ಜೂನ್ ತಿಂಗಳಲ್ಲಿ 22100000 ರೂ. ಗಳು ಹುಟ್ಟುವಳಿಯಾಗಿದ್ದುವು. ಕಳೆದ ಏಪ್ರಿಲ್ ತಿಂಗಳಿಂದ ಜೂನ್ ಮಾಸದ ವರೆಗೆ ಈ ಉತ್ಪನ್ನವು 91200000 ರೂ. ಗಳಾಗಿರುವುವು. ಕಳೆದವರ್ಷ ಅಷ್ಟೇಕಾಲದಲ್ಲಿ 76000000 ರೂ. ಗಳಾಗಿದ್ದುವು.

ಮ|| ಸಿ. ರಾಮಲಿಂಗರೆಡ್ಡಿಯವರು ಚಿದಂಬರದ ಕಲಾಶಾಲೆಯಲ್ಲಿ ಬಿ. ಎ ತರಗತಿಯನ್ನು ಆರಂಭಿಸುವ ಮಹೋತ್ಸವವನ್ನು ಜರುಗಿಸಲಿಕ್ಕೆ ಪ್ರಾರ್ಥಿಸಲ್ಪಟ್ಟಿದ್ದರು. ಆಗ್ಗೆ ಅವರು ವಿದ್ಯಾವಿಷಯವಾಗಿ ದೀರ್ಘವಾದ ಉಪನ್ಯಾಸವನ್ನು ಮಾಡಿ ಸಭಿಕರನ್ನು ಅತ್ಯಂತವಾಗಿ ಸಂತೋಷಪಡಿಸಿದರು. ಕಾಂಗ್ರೆಸ್ಸಿನವರ ಮಾತನ್ನು ಕೇಳಿಕೊಂಡು ವಿದ್ಯಾರ್ಥಿಗಳು ಪಾಠಶಾಲೆಗಳನ್ನು ಬಿಟ್ಟುಬಿಡುವುದು ಅನ್ಯಾಯವೆಂದೂ, ಕಾಂಗ್ರೆಸ್ಸಿನವರು ಈಗಣ ವಿದ್ಯಾಭ್ಯಾಸ ವಿಧಾನದಲ್ಲಿರುವ ಲೋಪಗಳನ್ನು ಹೊರಪಡಿಸಿದುದಕ್ಕಾಗಿ ಸಂತೋಷಿಸಬೇಕೆಂದೂ, ದೇಶಭಾಷೆಯಲ್ಲೇ ವಿದ್ಯಾಭ್ಯಾಸಮಾಡಿಸುವುದು ವಿಶೇಷ ಪ್ರಯೋಜಕವಾದುದೆಂದೂ, ತಿರುಚನಾಪಲ್ಲಿಯಲ್ಲಿ ತಮಿಳರಿಗೆ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವುದು ಅತ್ಯವಶ್ಯಕವೆಂದೂ ಅವರ ಭಾಷಣದ ಮುಖ್ಯಾಭಿಪ್ರಾಯವಾಗಿದ್ದಿತು.

ಫಿರೋಜ್‌ಪೂರ್ ರೈಲ್ವೆಸ್ಟೇಷನ್ನಿನ ಗೂಡ್ಸ್‌ಷೆಡ್ಡಿಗೆ ೧೫ ಮಂದಿ ಕಳ್ಳರು ನುಗ್ಗಿ ಪದಾರ್ಥಗಳನ್ನು ದೋಚಿಕೊಂಡುಹೋದರು. ಅಲ್ಲಿ ಕಾವಲಿದ್ದ ಪೊಲೀಸಾಳುಗಳು ಇಬ್ಬರೂ ಚೌಕಿದಾರನೂ ಕಳ್ಳರ ಮೇಲೆ ಬಿದ್ದು ಅವರಲ್ಲಿದ್ದ ಸೊತ್ತುಗಳನ್ನೆಲ್ಲಾ ಮರಳಿ ಕಸುಕೊಂಡರು. ಈ ಸಂದರ್ಭದಲ್ಲಿ ಪೊಲೀಸಾಳು ಮೋಲಾಭಕ್ಷ್ ಎಂಬಾತನು ಒಬ್ಬ ಕಳ್ಳನನ್ನು ತುಪಾಕಿಯಿಂದ ಸುಟ್ಟನು. ಸಾಯುವಾಗ್ಗೆ ಆ ಕಳ್ಳನು ಮೋಲಾಭಕ್ಷನನ್ನು ಕತ್ತಿಯಿಂದ ಹೊಡೆದನು. ಸತ್ತವನ ಹೆಣವನ್ನು ಎತ್ತಿಕೊಂಡು ಹೋಗಲು ಇತರ ಕಳ್ಳರು ಬಹಳ ಸಾಹಸ ಮಾಡಿದರು. ಆಗ ಎರಡು ಪಕ್ಷದವರಿಗೂ ಕಾದಾಟವಾಯಿತು. ಮೋಲಾಭಕ್ಷ್ ಇನ್ನೊಬ್ಬ ಕಳ್ಳನಿಗೆ ತುಪಾಕಿಯಿಂದ ಹೊಡೆದನು. ಆಗ ಎಲ್ಲ ಕಳ್ಳರೂ ಓಡಿಹೋದರು. ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರು ಈಗ ಆ ಕಳ್ಳರ ಜಾಡನ್ನು ಪತ್ತೆಮಾಡುತ್ತಿದ್ದಾರೆ.

ಪುನರ್ಜನ್ಮವೇ ಇಲ್ಲವೆಂದು ಕ್ರೈಸ್ತರು ವಾದಿಸುವುದುಂಟು. ಎಡಿಂಬರೋ ವಿಶ್ವವಿದ್ಯಾಲಯದಲ್ಲಿ ಎಲ್ ಎಲ್. ಡಿ. ಬಿರುದನ್ನು ಪಡೆದು ಲಂಡನ್ನಿನಲ್ಲಿ ವೈದ್ಯವನ್ನು ಮಾಡಿಕೊಂಡಿದ್ದು ಎಷ್ಟೋ ನಾವೆಲ್ಲುಗಳನ್ನು ಬರೆದು ಪ್ರಸಿದ್ಧನಾಗಿರುವ ಸರ್ ಆರ್ಥರ್‌ಕಾನನ್ ಡಾಯಿಲ್ ಎಂಬ ಶಾಸ್ತ್ರಜ್ಞನು-ಪುನರ್ಜನ್ಮವುಂಟು, ಮರಣಾನಂತರ ಪಾಪಪುಣ್ಯ ಫಲಗಳನ್ನು ಸೂಕ್ಷ್ಮಶರೀರವು ಅನುಭವಿಸುವುದು ನಿಜ-ವೆಂಬುದನ್ನು ಪ್ರತ್ಯಕ್ಷಪ್ರಮಾಣಗೊಂಡು ಎಂದರೆ ಮಂತ್ರಗಾತಿಯರ ಮೂಲಕ ಎತ್ತಿಸಿದ ಮೃತರ ಶರೀರದ ಛಾಯಾ ಪಟಗಳನ್ನು (ಎಂದರೆ ಮೃತರಾಗಿ ಎಷ್ಟೋ ದಿನವಾಗಿದ್ದವರ ಭಾವಚಿತ್ರವನ್ನು ಆಗ ತಾನೇ ಎತ್ತಿದುವುಗಳು) ತೋರಿಸಿ, ಮತ್ತು ಮೃತರಾದವರ ಸೂಕ್ಷ್ಮಶರೀರಗಳು ಪರಲೋಕದಲ್ಲಿ ಅನುಭವಿಸುತ್ತಿರುವ ಕಷ್ಟ ಸುಖಗಳನ್ನು ಅವುಗಳ ಪರಿಮುಖದಿಂದಲೇ ತಿಳಿದು ತಾನು ಅನುಭವಮಾಡಿಕೊಂಡಿರುವುದನ್ನೂ ಕುರಿತು ಅಮೇರಿಕಾದಲ್ಲಿ ಎಷ್ಟೋ ಕಡೆ ಉಪನ್ಯಾಸಮಾಡಿರುವನು. ಸಾವಿರಾರು ಮಂದಿಗಳು ಇವನ ಉಪನ್ಯಾಸವನ್ನು ಕೇಳುವುದಕ್ಕೆ ಸೇರಿ ಆಶ್ಚರ್ಯಪಡುತ್ತಿರುವರು.

ಈಗ ರಾಜಕೀಯಾಪರಾಧಿಗಳು ಹೆಚ್ಚಿ ಕಾರಾಗೃಹಗಳು ತುಂಬುತ್ತಿವೆಯಷ್ಟೆ. ಶಿಕ್ಷಿತರಾಗಿ ಅಲ್ಲಿಗೆ ಹೋದ ಎಲ್ಲೋ ಕೆಲ ಪ್ರಮುಖರಿಗೆ ಮಾತ್ರ ಆಹಾರಾದಿಗಳಲ್ಲಿ ಪ್ರತ್ಯೇಕ ಸೌಕರ್ಯವು ಮಾಡಲ್ಪಡುತ್ತದೆ. ಉಳಿದವರನ್ನೆಲ್ಲಾ ಸಾಮಾನ್ಯ ಖೈದಿಗಳಂತೆಯೇ ಎಲ್ಲ ವಿಷಯದಲ್ಲೂ ಕಾಣುತ್ತಾರೆ. ಇದನ್ನು ತಪ್ಪಿಸಿ ರಾಜಕೀಯ ಖೈದಿಗಳಿಗೆಲ್ಲಾ ಪ್ರತ್ಯೇಕ ಸೌಕರ್ಯವನ್ನುಂಟುಮಾಡಬೇಕೆಂಬ ವಿಷಯದಲ್ಲಿ ಸಪ್ರಮಾಣ ಸಕಾರಣವಾದ ದೊಡ್ಡ ಲೇಖನವೊಂದನ್ನು ಬೊಂಬಾಯಿ ದಕ್ಕನ್ ಸಭೆಯವರು ಬೊಂಬಾಯಿ ಸರ್ಕಾರಕ್ಕೆ ಬರೆದುಕೊಂಡಿದ್ದಾರೆ. ಶಿಕ್ಷಿತರಿಗೆ ಕಾರಾಗೃಹದಲ್ಲಿ ಸೌಕರ್ಯಗಳುಂಟಾದರೆ "ಇಂಟಿಗಿನ್ನಗುಡಿಭದ್ರಂ" ಎಂಬ ನಾಣ್ನುಡಿಯಂತೆ ಕಾರಾಗೃಹ ಭೀತಿಯೇ ತಪ್ಪಿಹೋಗುವುದೆಂದೂ, ಅಪರಾಧಿಗಳಿಗೆ ಕಾರಾಗೃಹವಾಸವು ದುಸ್ಸಹ ಭೀಕರ ಸ್ಥಿತಿಯಲ್ಲಿರಬೇಕೆಂದೂ ಕೆಲರು ವಾದಿಸುವುದುಂಟು. ಆದರೆ ಕಳವು ಮೊದಲಾದ ಅಪರಾಧಗಳನ್ನು ಮಾಡಿ ಶಿಕ್ಷಿತರಾದವರು ಸ್ವಾರ್ಥಕ್ಕಾಗಿ ಅಂಥ ತಪ್ಪಿತವನ್ನು ಮಾಡುವಂತೆ ರಾಜಕೀಯಾಪರಾಧಿಗಳು ಸ್ವಾರ್ಥಕ್ಕೇನೂ ಅಂಥ ತಪ್ಪನ್ನು ಮಾಡದೆ ದೇಶಹಿತಕ್ಕಾಗಿ ಅಪರಾಧ ಮಾಡುವರಾದುದರಿಂದ ಇವರ ವಿಷಯದಲ್ಲಿ ಪ್ರತ್ಯೇಕ ಸೌಕರ್ಯವನ್ನು ಸ್ವಲ್ಪಮಟ್ಟಿಗಾದರೂ ಮಾಡುವುದು ವಿಹಿತವಾಗಿರುತ್ತದೆ.

ಪಾದಸಂಚಾರದಿಂದಲೇ ಪ್ರಪಂಚಯಾತ್ರೆಯನ್ನು ಮಾಡಿಕೊಂಡು ಹೋಗಲು ಸಂಕಲ್ಪಿಸಿ ಈಗ ಭರತಖಂಡಕ್ಕೆ ಬಂದಿರುವ ಅಮೇರಿಕಾದ ಮಾರ್ಟಿನೇಟ್‌ರವರು ಕಳೆದ ತಾ|| ೪ ರಲ್ಲಿ ಕಲ್ಕತ್ತಾದಿಂದ ಬರ್ಮಾಕ್ಕೆ ಪ್ರಯಾಣಮಾಡಿದರು. ಸಮುದ್ರವನ್ನು ದಾಟಬೇಕಾದಕಡೆಯಲ್ಲಿ ಮಾತ್ರ ಇವರು ಹಡಗುಗಳನ್ನೇರುವರು; ಉಳಿದ ಭೂಮಿಯಮೇಲೆಲ್ಲಾ ಪಾದರಕ್ಷೆಯನ್ನು ಮೆಡದೆ ಕೊಡೆಯನ್ನು ಹಿಡಿಯದೆ ಹಾಗೆಯೇ ಸಂಚರಿಸುವರು. ಇವರು ರಂಗೂನ್‌ಪಟ್ಟಣದಿಂದ ಷಾಂಘಾಯಿಗೂ ಅಲ್ಲಿಂದ ಹಾಂಕಾಂಗ್ ದ್ವೀಪಕ್ಕೂ ಹೋಗಿ ಅಲ್ಲಿಂದ ಜಪಾನಿಗೆ ಹೋಗುವರು. ಕಳೆದ ತಾ|| 7ರಲ್ಲಿ ಕಲ್ಕತ್ತಾಪಟ್ಟಣದ ಕಾಲೇಜ್‌ಸ್ಕ್ವೈರಿನಲ್ಲಿ ತಮ್ಮ ಸಂಚಾರದ ವಿಷಯವಾಗಿ ಇವರು ಒಂದು ಉಪನ್ಯಾಸವನ್ನು ಮಾಡಿದರು. ಅದರಲ್ಲಿ ಹೇಳಿದುದೇನೆಂದರೆ—"ನಾನು 1920ನೆ ವರ್ಷದ ಏಪ್ರಿಲ್ ತಾ|| 14ರಲ್ಲಿ ಜನ್ಮಸ್ಥಾನವನ್ನು ಬಿಟ್ಟು ನ್ಯೂಯಾರ್ಕ್‌ಪಟ್ಟಣಕ್ಕೆ ಪಾದಸಂಚಾರಿಯಾಗಿ ಬಂದೆನು. ಅಲ್ಲಿಂದ ಸೌತಾಂಪ್ಟನ್ನಿಗೆ ಹಡಗಿನಮೇಲೆ ಹೋದೆನು. ಅಲ್ಲಿಂದ ಬೆಲ್ಜಿಯಂ, ಫ್ರಾನ್ಸು, ಸ್ವಿಟ್ಜರ್ಲೆಂಡು, ಇಟಲಿ, ಆಲ್ಬೇನಿಯಾ, ಗ್ರೀಸುದೇಶಗಳಿಗೆ ಹೋದೆನು, ಅಲ್ಲಿಂದ ಹೊಗೆಹಡಗಿನ ಮೇಲೆ ಈಜಿಪ್ಟ್, ಪಾಲಿಸ್ಟೈನು, ಮೆಸಪಟೋಮಿಯಾಗಳಿಗೆ ಹೋದೆನು. ಅಲ್ಲಿಂದ ಹಡಗನ್ನೇರಿಯೇ ಬೊಂಬಾಯಿಗೆ ಬಂದೆನು. ಅಲ್ಲಿಂದ ಬಂಡಿಯದಾರಿಯಮೇಲೆ ನಾಗಪುರಕ್ಕೆ ನಡೆದುಬಂದೆನು. ನಾಗಪುರದಿಂದ ಕಲ್ಕತ್ತಾಕ್ಕೆ ಲೋಹಮಾರ್ಗದಮೇಲೆ ನಡೆದುಬಂದೆನು. ಈ ಮಾರ್ಗದಲ್ಲಿ ನಾನು ಎಲ್ಲಿಯೂ ಕಾಲುಜೋಡನ್ನಾಗಲೀ ಕೊಡೆಯನ್ನಾಗಲೀ ಉಪಯೋಗಿಸಿದುದಿಲ್ಲ. ಯೂರೋಪ್ಯದೇಶಗಳಲ್ಲಿ ಒಬ್ಬ ಆಲ್ಬೇನಿಯನ್ನರು ಮಾತ್ರ ಹೆಚ್ಚಾಗಿ ಅತಿಥಿಸತ್ಕಾರವನ್ನು ಮಾಡಿದರು. ಅವರೆಲ್ಲರಿಗಿಂತಲೂ ಪ್ರಪಂಚವೆಲ್ಲಕ್ಕಿಂತಲೂ ಭಾರತೀಯರ ಅತಿಥಿಸತ್ಕಾರವು ಮಿಗಿಲಾದುದು" ಎಂದು ಹೇಳಿದರು.

ನಿಖಿಲಭಾರತ ಖಿಲಾಫತ್ ಸಂಘಾಧ್ಯಕ್ಷರಾದ ಸೇಟ್ ಚೋಟಾನಿಯವರು ಆಂಗ್ಲ ಮಂತ್ರೀಶ್ವರರಿಗೂ ವಿದೇಶಾಂಗ ಮಂತ್ರಿಗೂ ಈ ಕೆಳಗೆ ಕಂಡ ಅಭಿಪ್ರಾಯದ ತಂತ್ರೀವಾರ್ತೆಯನ್ನು ಕಳುಹಿಸಿದ್ದಾರೆ—"ಕಳೆದ ವರ್ಷ ಗ್ರೀಕರಿಗೂ ತುರುಕರಿಗೂ ಯುದ್ಧವು ಪ್ರಾರಂಭವಾದಾಗ್ಗೆ ನಾವು ತಟಸ್ಥರಾಗಿರುವೆವೆಂದು ಆಂಗ್ಲೇಯರು ವಾಗ್ದಾನಮಾಡಿದರು. ಈಗ ಕಪ್ಪುಸಮುದ್ರದಲ್ಲಿ ತುರ್ಕಿ ವ್ಯಾಪಾರಕ್ಕೆ ಭಂಗವನ್ನುಂಟುಮಾಡುವುದಕ್ಕೂ, ಕೋಟೆಕೊತ್ತಲದ ರಕ್ಷಣೆಯೊಂದೂ ಇಲ್ಲದ ಬಹಿರಂಗವಾದ ಸಾಂಪನ್ ಪಟ್ಟಣದ ಮೇಲೆ ಗ್ರೀಕರು ಗುಂಡುಗಳನ್ನು ಹೊಡೆದು ಆ ಪಟ್ಟಣದ ಯುದ್ಧಕಾರ್ಯವೊಂದಕ್ಕೂ ಸೇರದ ನಿರ್ದೋಷಿಗಳಾದ ಪ್ರಜೆಗಳನ್ನೆಲ್ಲಾ ಕೊಲ್ಲುವುದಕ್ಕೂ, ಗ್ರೀಕ್ ಯುದ್ಧದ ಹಡಗುಗಳು ಡಾರ್ಡೆನಲ್ಸ್ ಜಲಸಂಧಿ ಮಾರ್ಗವಾಗಿ ನುಗ್ಗಿಹೋಗುವುದಕ್ಕೂ, ತುರುಕರಮೇಲೆ ಯುದ್ಧ ಮಾಡಲು ಬಂದ ಗ್ರೀಕ್ ಯುದ್ಧದ ಹಡಗುಗಳು ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ನೌಕಾಸ್ಥಾನವನ್ನು ಏರ್ಪಡಿಸಿಕೊಳ್ಳಲಿಕ್ಕೂ, ತುರ್ಕಿಯಲ್ಲಿರುವ ಹೈಕಮಿಷನರು ಅನುಮತಿಯನ್ನು ಕೊಟ್ಟಿರುವುದು ನಮಗೆ ಬಹಳ ದುರ್ಭರವಾಗಿ ತೋರುತ್ತಿದೆ. ಇದೇನೆಯೆ ಆಂಗ್ಲರ ತಾಟಸ್ಥ್ಯವು? ತುರ್ಕಿದೇಶದ ಮೇಲೂ ಮಹಮ್ಮದೀಯ ಮತದಮೇಲೂ ಆಂಗ್ಲೇಯರು ದ್ವೇಷಭಾವವನ್ನು ಹೊಂದಿದ್ದಾರೆ. ಆಂಗ್ಲ ಸಾಮ್ರಾಜ್ಯದ ಮೇಲೆಲ್ಲವೂ ಮತ್ತು ತುರ್ಕಿದೇಶದ ಮೇಲೂ ನಾವು ಪ್ರೇಮವುಳ್ಳವರಾಗಿದ್ದೇವೆಂದು ಆಂಗ್ಲೇಯರು ಹೇಳುವ ಮಾತುಗಳೆಲ್ಲಾ ಬರಿಯ ಪೊಳ್ಳುಟಕ್ಕಿನ ಮಾತುಗಳೆಂದೇ ಭಾರತ ಮಹಮ್ಮದೀಯರು ಇಂಥ ಕಾರ್ಯಗಳಿಂದ ಸ್ಪಷ್ಟವಾಗಿ ಗ್ರಹಿಸಿಕೊಳ್ಳುತ್ತಾರೆ. ಇದುವರೆಗೆ ಆಂಗ್ಲೇಯರು ತುರುಕರ ಮೇಲೆ ದ್ವೇಷಭಾವವನ್ನು ಹೊಂದಿರುವುದರಿಂದಲೇ ಆಂಗ್ಲ ಸಾಮ್ರಾಜ್ಯದ ದೃಢತೆಗೆ ಭಂಗವುಂಟಾಗಿದೆ. ಅದರ ಮೇಲೆ ವಿಶ್ವಾಸಪಡ ವಾಸಿಗಳಿಗೆ ವಿಮುಖತೆಯುಂಟಾಗಿದೆ. ಅದುಕಾರಣ ಆಂಗ್ಲೇಯರು ತಮ್ಮ ತಪ್ಪನ್ನು ಸವರಿಸಿಕೊಳ್ಳದೆಹೋದರೆ ಭರತಖಂಡದ ಮಹಮ್ಮದೀಯರು ಎಂದಿಗೂ ಸಂತೃಪ್ತರಾಗಿರಲಾರರು" ಎಂಬುದಾಗಿ.

ವಿದೇಶದ ವೃತ್ತಾಂತಗಳು.

ಜಪಾನ್ ದೇಶದಲ್ಲಿ ಸರ್ಕಾರಿ ವೆಚ್ಚವನ್ನು ಕಡಿಮೆಮಾಡುವ ಉದ್ದೇಶದಿಂದ ಸೈನ್ಯದಲ್ಲಿ 80 ಸಾವಿರ ಮಂದಿ ಸೈನಿಕರನ್ನು ತೆಗೆದುಬಿಡಬೇಕೆಂದು ಜಪಾನ್ ಮಂತ್ರಿ ವರ್ಗದವರು ನಿಶ್ಚೈಸಿರುವರು. ನಮ್ಮ ಭರತಖಂಡದಲ್ಲಿ ಇಂಥ ಕೆಲಸವು ಎಂದಿಗೆ ನಡೆಯುವುದೋ?

ಜರ್ಮನಿಯ ಹಿಂದಣ ಚಕ್ರವರ್ತಿಯ ಬಳಿಗೆ ಒಬ್ಬ ಪತ್ರಿಕಾವಿಲೇಖಕನು ಹೋಗಿ ಮಾತನಾಡಿದಾಗ್ಗೆ ಕೈಜರನು ಹೀಗೆ ಹೇಳಿದನಂತೆ—"ಜರ್ಮನಿಯಲ್ಲಿ ಮತ್ತೆ ಚಕ್ರವರ್ತಿ ಪ್ರಭುತ್ವವು ಆರಂಭವಾಗುವುದು. ಆದರೆ ನಾನು ಮಾತ್ರ ಆ ದೇಶಕ್ಕೆ ಹೋಗುವುದಿಲ್ಲ. ನಾನು ಇಲ್ಲೇ ಕಾಲವನ್ನು ಕಳೆಯುತ್ತೇನೆ."

ಐರ್ಲೆಂಡಿನ ಅಂತರ್ಯುದ್ಧದಲ್ಲಿ ಪ್ರಜಾಸ್ವಾಮ್ಯವಾದಿಗಳು ತುಂಬಾ ಪರಾಜಯಗೊಂಡಿದ್ದಾರೆ. ಆ ಸೇನೆಗೆ ಮುಖ್ಯರಾಗಿ ನಿಂತಿದ್ದ ಡಿ. ವೆಲರಾರವರು ಗಾಯಗೊಂಡು ಎಲ್ಲೋ ತಲೆಮರೆಸಿಕೊಂಡಿದ್ದಾರೆ. ಅವರ ಜತೆಯಲ್ಲಿದ್ದ ಮಾರ್ಕ್ವಿಸಿಸಪತ್ನಿಯನ್ನೂ ಇನ್ನಿಬ್ಬರು ಹೆಂಗುಸರನ್ನೂ ಡಿ. ವೆಲರಾವಿಗೆ ಮುಖ್ಯ ಸಂರಕ್ಷಕ ಮಂತ್ರಿಯಾಗಿದ್ದ ರಾಬರ್ಟ್‌ಬಾರ್ಟನ್ ಎಂಬುವನನ್ನೂ ಸಹ ಒಂದು ಮನೆಯಲ್ಲಿ ಪ್ರಭುತ್ವಸೈನಿಕರು ಹಿಡಿದರು. ಆ ಹೆಂಗುಸರುಗಳು ವಿಪ್ಲವಕಾರರಿಗೆ ಸಹಾಯಮಾಡುತ್ತಿದ್ದರು. ಹಿಡಿಯಲ್ಪಟ್ಟ ಮೇಲೆ ನಿಂನಿಮ್ಮ ಮನೆಗೆ ಹೋಗಿ ಸುಮ್ಮನಿರಿಯೆಂದು ಹೇಳಿದರೂ ಅವರು ಕೇಳಲಿಲ್ಲ. ಕಡೆಗೆ ಅವರನ್ನು ಬಿಟ್ಟುಬಿಟ್ಟರು. ರಾಬರ್ಟ್‌ಬಾರ್ಟನ್ನನೂ ಅವನ ಜತೆಯಲ್ಲಿದ್ದವನೂ ಕಾರಾಗೃಹದಿಂದ ತಪ್ಪಿಸಿಕೊಂಡು ಓಡಿರುವರು. ಡಬ್ಲಿನ್ ಪಟ್ಟಣದ ಶಕ್ವಿಲ್ ಬೀದಿಯಲ್ಲಿ ಯುದ್ಧದ ಬೇಗೆಯಿಂದ 50 ಲಕ್ಷ ರೂ.ನ ಸೊತ್ತುಗಳು ನಷ್ಟವಾಗಿವೆಯಂತೆ. ಈ ವಿಪ್ಲವಕಾರರ ಮುಖ್ಯಸ್ಥಾನವಾಗಿದ್ದ ಬ್ಲಸ್ಸಿಂಗ್‌ಟನ್ ಎಂಬ ಸ್ಥಳವನ್ನೂ ಅದರಲ್ಲಿದ್ದವರಲ್ಲಿ 60 ಮಂದಿಯನ್ನೂ ಯುದ್ಧಸಾಮಗ್ರಿಗಳನ್ನೂ ಪ್ರಭುತ್ವಸೈನಿಕರು ಹಿಡಿದರು. ಡಬ್ಲಿನ್ ಪಟ್ಟಣದಲ್ಲಿ ವಿಪ್ಲವಕಾರರು ಪರಾಜಯಗೊಂಡನಂತರ ಈ ಪಟ್ಟಣವನ್ನೇ ತಮ್ಮ ಮುಖ್ಯಕಾರ್ಯಸ್ಥಾನವನ್ನಾಗಿ ಮಾಡಿಕೊಂಡಿದ್ದರು. ಇಲ್ಲಿಂದಲೇ ತಮ್ಮ ಸೈನ್ಯವನ್ನು ಬೇಕಾದ ಕಡೆಗೆ ಕಳುಹಿಸಿಕೊಡುತ್ತಿದ್ದರು. ಉಳಿದ ವಿಪ್ಲವಕಾರರು ಬೆಟ್ಟಗಳಿಗೆ ಹೋಗಿ ಸೇರಿಕೊಂಡಿದ್ದಾರೆ. ಅವರನ್ನು ಸುತ್ತುವರಿಯಲಿಕ್ಕೆ ಪ್ರಭುತ್ವ ಸೈನಿಕರು ಆರಂಭಿಸಿದ್ದಾರೆ. ಇತರ ಜಿಲ್ಲೆಗಳಲ್ಲೆಲ್ಲಾ ವಿಪ್ಲವಕಾರರ ಹಾವಳಿಯು ಭಯಂಕರವಾಗಿದ್ದೇ ಇದ್ದಿತು. ಆದರೆ ಪ್ರಭುತ್ವಸೈನಿಕರು ಬಹುಜನರನ್ನೂ ಅವರ ಠಾಣ್ಯಗಳನ್ನೂ ಸೆರೆಹಿಡಿದು ಎಲ್ಲೆಲ್ಲೂ ಶಾಂತಿಯನ್ನು ಸ್ಥಾಪಿಸುತ್ತಿದ್ದಾರೆ. ಡಿ. ವೆಲರಾ ಹೊರತು ವಿಪ್ಲವಕಾರರ ನಾಯಕರೆಲ್ಲಾ ಸೆರೆಸಿಕ್ಕಿದರು, ಇಲ್ಲವೆ ಮೃತರಾದರು. ಡಿ. ವೆಲರಾನು ವೇಷಾಂತರದಿಂದ ಎಲ್ಲಿ ತಲೆತಪ್ಪಿಸಿಕೊಂಡಿರುವನೋ ಗೊತ್ತಾಗಿಲ್ಲ. ತಮಗೆ ಸಹಾಯಮಾಡಬೇಕೆಂದು ಅತನು ಅಮೇರಿಕಾಕ್ಕೆ ಬರೆದುಕೊಂಡಿದ್ದ ವಿಜ್ಞಾಪನೆಯು ನಿಷ್ಫಲವಾಯಿತು. ತಾ|| 15 ರಲ್ಲಿ ಐರಿಷ್ ಪಾರ್ಲಿಮೆಂಟಿನ ಪ್ರಥಮ ಸಮಾವೇಶವಾಗುವುದು. ಆಗ್ಗಾದರೂ ಡಿ. ವೆಲರಾನು ಸಭೆಗೆ ಬರುವನೋ ಅಥವಾ ವಿಪ್ಲವಕಾರನಾಯಕನೆಂದು ಶಿಕ್ಷೆಗೆ ಗುರಿಯಾಗುವನೋ ಎಂದು ಪ್ರಜೆಗಳು ಅವನ ವಿಷಯದಲ್ಲಿ ಜುಗುಪ್ಸೆಗೊಂಡು ಆಡಿಕೊಳ್ಳುತ್ತಿದ್ದಾರೆ.

Office of the President,
City Municipal Council, Mysore.
Dated 9th July 1922.

MEMO.

As some complaints have reached the undersigned as regards the Toll gates being closed during nights and rates higher than those sanctioned being levied by some of the gate keepers, the public are hereby informed that traffic through none of the Toll gates is to be prevented either by day or by night and that a list of sanctioned rates is affixed to the board put up at each gate, which may be referred to before payment is made.

C. Srikantesvara Aiyar,
President.

ನೋಟೀಸ್.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ—ಮೈಸೂರು ಸಿಟಿ ಟೋಲ್‌ಗೇಟುಗಳಲ್ಲಿ ಗೇಟ್ ಕೀಪರುಗಳು ಜನಗಳಿಂದ ಹೆಚ್ಚು ದರವನ್ನು ವಸೂಲ್ ಮಾಡುತ್ತಾರೆಂದು ಮತ್ತು ರಾತ್ರಿಕಾಲಗಳಲ್ಲಿ ಟೋಲ್‌ಗೇಟುಗಳನ್ನು ಮುಚ್ಚಿ ಅನಾನುಕೂಲ ಪಡಿಸುತ್ತಾರೆಂದು ಸಹ ಪುಕಾರು ಬಂದಿರುತ್ತೆ. ಯಾವ ಟೋಲುಗೇಟಿನಲ್ಲಿಯೂ ಹಗಲಾಗಲಿ ರಾತ್ರಿಯಾಗಲಿ ಪ್ರಯಾಣಿಕರಿಗೆ ಅಡಚಣೆ ಮಾಡಕೂಡದೆಂದೂ ಮತ್ತು ಪ್ರಯಾಣಿಕರು ಟೋಲ್‌ಫೀ ಕೊಡುವುದಕ್ಕೆ ಮುಂಚೆ ಗೇಟ್ ಬಳಿ ಹಾಕಿರುವ ಬೋರ್ಡಿನ ಮೇಲೆ ಚಿಕಟಾಯಿಸಿರುವ ದರಗಳ ಪಟ್ಟಿಯನ್ನು ನೋಡಿ ಅದರಂತೆ ಟೋಲು ಪಾವತಿ ಮಾಡಬೇಕೆಂದು ಸಹ ತಿಳಿಯಪಡಿಸಿರುತ್ತೆ.

ಕಾ. ಶ್ರೀಕಂಠೇಶ್ವರ ಐಯ್ಯರ್,
ಪ್ರಸಿಡೆಂಟ್.

೧೯೨೨ ನೆಯ ಇಸವಿ ಜುಲೈ ತಾ|| ೧೬ ರಿಂದ ೧೯೨೨ನೆಯ ಜುಲೈ ತಾ|| ೨೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ಆಷಾಢ ಬಹುಳ ಸಪ್ತಮಿಯಿಂದ ಆಷಾಢ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನಮಾ
16	1 ಭಾನು	ಸಪ್ತ	29.21	ರೇವ	58.49	1
17	ಸೋಮ	ಅಷ್ಟ	33.39	ಅಶ್ವಿ	60	2
18	ಮಂಗಳ	ನವ	36.57	ಅಶ್ವಿ	3.50	3
19	ಬುಧ	ದಶ	39.8	ಭರ	8.13	4
20	2 ಗುರು	ಏಕಾ	39.5	ಕೃತ್ತಿ	11.22	5
21	3 ಶುಕ್ರ	ದ್ವಾ	39.25	ರೋಹಿ	13.16	6
22	4 ಶನಿ	ತ್ರಯೋ	37.35	ಮೃಗ	13.54	7

(1) ದಕ್ಷಿಣಾಯನ ಪುಣ್ಯ ಕಾಲ. (2) ಸರ್ವತ್ರೈಕಾದಶಿ. (3) ಆಡಿಶುಕ್ರವಾರಂ. (4) ಪ್ರದೋಷ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಲಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೫) ಮೈಸೂರ್ ಸ್ಟಾರ್ ಸ್ಟ ೧೯೨೨ ನೆಯ ಇಸವಿ ಜುಲೈ ತಾರೀಖು ೧೬ ನೆಯ ಭಾನುವಾರ (ಸಂಚಿಕೆ ೩೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವನುಕಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶಿಖೀಶೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಭರ್ತ್ಯಿಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಂ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ವೀರಶೈವರು ಅವಶ್ಯ ಸಂಗ್ರಹಿಸತಕ್ಕ ವೀರಶೈವ ಧರ್ಮಪರವಾದ ಸುಂದರ ಫೋಟೋಗಳು.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

೧. ಇದರಲ್ಲಿ ಹನುಮಂತನಿಗೆ ಶ್ರೀ ವೀರಭದ್ರದೇವರು ಮೋಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿದ್ದಾರೆ—ಪೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೨. ಶ್ರೀ ಶಿವಯೋಗಿ ಸುಖ:—ಇದರಲ್ಲಿ ಶ್ರೀ ಜ|| ಗು|| ಚಿತ್ರದುರ್ಗ ಮಹಾಸ್ವಾಮಿಗಳು ಗದಗ ತೋಂಟದಾರ್ಯರು, ಅಥಣಿ ಶಿವಯೋಗಿಗಳು ಮುಂತಾದ ೧೮ ಶಿವಯೋಗಿಗಳ ಫೋಟೋಗಳು ಕೂಡಿಸಿ ಇರುವವು. ಇದರಿಂದ ಒಂದೇ ಕಾಲಕ್ಕೆ ಎಲ್ಲಾ ಶಿವಯೋಗಿಗಳ ದರ್ಶನ ಆಗುವದು ೧೮ × ೧೨ ಸೈಜದ ಚಿತ್ರದ ಕ್ರಯ ಪ್ರ|| ೧ಕ್ಕೆ ೮ ಆಣೆ.

೩. ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕನಾದ ಶ್ರೀ ಬಸವಣ್ಣನವರ ತೇಜಃಪುಂಜವಾದ ಖಾಸ ಫೋಟೋ ೧೮ × ೧೨ ಸೈಜದ ಪ್ರ|| ೧ಕ್ಕೆ ೮ ಆಣೆ ಕೈ ಬಣ್ಣದು ರೂ. ೧.

೪. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರ ಚನ್ನಬಸವೇಶ್ವರ ಮಡಿವಾಳ ಮಾಚಿದೇವರು ಸಿದ್ಧರಾಮದೇವರು ಮುಂತಾದ ಪ್ರಮಥರು ಶ್ರೀ ಪ್ರಭುದೇವರ ಪಾದಪೂಜಾಮಾಡುವ ಸಮಾರಂಭದ ಫೋಟೋ ಇರುವದು. ಪೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೫. ಶ್ರೀ ಚನ್ನಬಸವೇಶ್ವರ ಜನ್ಮ:—ಶ್ರೀ ಅಕ್ಕನಾಗಮ್ಮನವರ ಉದರದಲ್ಲಿ ಪ್ರಸಾದದ ಮಹತ್ವದಿಂದೇ ಷಣ್ಮುಖ ಅವತಾರಿಯಾದ ಶ್ರೀ ಚನ್ನಬಸವಣ್ಣನವರ ಜನನವಾದದ್ದು ಮಹತ್ವ ಪೂರ್ಣವಾದ ಫೋಟೋ ಇರುವದು. ಪೂ|| ಸಾ|| ೧ಕ್ಕೆ ೧-೪-೦ ಕ್ಯಾ||ಸಾ|| ೧ಕ್ಕೆ ೦-೧೨-೦.

೬. ಶ್ರೀಮಡಿವಾಳ ಮಾಚಿದೇವ ಮಹಿಮಾ:—ಸರ್ವಕಾಲಶುಚಿರ್ಭೂತದಿಂದೆ ಇರುವ ಮಡಿವಾಳಯ್ಯಗೆ ಚೇಷ್ಟೆ ಇಂದೆ ಒಬ್ಬ ಭವಿಯು ಮುಟ್ಟಿದ ಕೂಡಲೆ ವೀರಭದ್ರಾವತಾರಿ ಆದ ಮಡಿವಾಳಯ್ಯನು ತೋರಿಸಿದ ಪ್ರರಾಕ್ರಮ ಬಿಜ್ಜಳರಾಯನ ಪಶ್ಚಾತ್ತಾಪ, ಬಸವಣ್ಣನ ಭಕ್ತಿ ಇತ್ಯಾದಿಗಳು ಇದರಲ್ಲಿ ಕಂಡುಬರುತ್ತವೆ. ಇದು ಭಕ್ತಿಗಾಂಭೀರ್ಯಯುಕ್ತವಾದ ಫೋಟೋ ಇರುತ್ತದೆ. ಪೂ|| ಸಾ|| ಪ್ರ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೭. ಶ್ರೀ ಮಹಾದೇವಕಾಲಕೂಟ ವಿಷಪಾನ:—ವಿಷ್ಣು, ಬ್ರಹ್ಮಾದಿದೇವ ಅಸುರರು ಕೂಡಿ ಶ್ರೀ ಶಿವನಿಗೆ ಕಾಲಕೂಟ ವಿಷನಿವಾರಣಾರ್ಥಕ್ಕಾಗಿ ಪ್ರಾರ್ಥಿಸಲು ಶ್ರೀ ಪರಶಿವನು ಆ ಕಾಲಕೂಟವಿಷವನ್ನು ಪ್ರಾಶನಮಾಡಿ ಜಗತ್‌ಪ್ರಲಯವು ನಿಲ್ಲಿಸಿದ ಈ ಫೋಟೋ ಬಹಳ ಸುಂದರ ಇರುತ್ತದೆ. ಪೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦

೮. ಶ್ರೀ ಶಿವಪ್ರದೋಷಕಾಲದರ್ಶನ:—ಬ್ರಹ್ಮ, ವಿಷ್ಣು, ಇಂದ್ರ, ಅಗ್ನಿ ಮುಂತಾದ ದೇವತರು ಸರಸ್ವತಿ ಲಕ್ಷ್ಮೀ ಮುಂತಾದ ದೇವತಾಸ್ತ್ರೀಯರು ಕೂಡಿ ತಾಳ, ಮೃದಂಗ, ವೀಣಾ ಮುಂತಾದ ವಾದ್ಯಗಳಿಂದೇ ಗಾನ ಮತ್ತು ಭಜನೆ ಮಾಡುತ್ತ ಯಾವತ್ತು ದೇವತಾ ಋಷಿಗಳು ಶ್ರೀ ಪರಶಿವನ ದರ್ಶನ ತೆಗೆದುಕೊಳ್ಳುತ್ತಿರುವ ಈ ಫೋಟೋ ಬಹು ಸುಂದರವಾಗಿ ದರ್ಶನೀಯ ಇರುವದು. ಪೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೯. ಶ್ರೀ ಬಸವೇಶ್ವರ ಸಂಗಮೈಕ್ಯ:—ಶ್ರೀ ಬಸವಣ್ಣನವರು ಕೂಡಲ ಸಂಗಮನಾಥನಲ್ಲಿ ಐಕ್ಯವಾಗುವ ಇದು ಅಭೂತಪೂರ್ವವಾದ ಫೋಟೋ ಇರುವದು. ಪೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೧೦. ಶ್ರೀ ಪಂಚಾಚಾರ್ಯಲಿಂಗೋದ್ಭವ:—೧ ಶ್ರೀ ವಿಶ್ವೇಶಲಿಂಗದಿಂದ ಉದ್ಭವಿಸಿದ ಶ್ರೀ ವಿಶ್ವಾರಾಧ್ಯರು, ೨ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಿಂದೇ ಉದ್ಭವಿಸಿದ ಶ್ರೀ ಪಂಡಿತಾರಾಧ್ಯರು, ೩ ಶ್ರೀ ಹಿಮವತ್‌ಕೇದಾರ ರಾಮನಾಥಲಿಂಗದಿಂದ ಉದ್ಭವಿಸಿದ ಶ್ರೀ ಏಕೋರಾಮಾರಾಧ್ಯರು, ೪ ಶ್ರೀ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಅವತರಿಸಿದ ರೇವಣಾರಾಧ್ಯರು. ಈ ಆಚಾರ್ಯರ ಫೋಟೋಗಳು ಬೇರೆ ಬೇರೆ ಇರುವವು. ಇವು ಅತ್ಯಂತ ಮಹತ್ವವುಳ್ಳ ಫೋಟೋ ಇರುವವು. ಪೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

ಫೋಟೋ ಲಾಕೆಟ ಮತ್ತು ಫೋಟೋ ಬ್ರೂಚಗಳು ಇವುಗಳು ಬೇಕಾದ ದೇವರು, ಸತ್ಪುರುಷರು, ದೇವಭಕ್ತರ ಫೋಟೋ ಕೂಡ್ರಿಸಿ ಶಿಗುವವು. ಇವು ಗಡಿಯಾರ ಸರಪಳಿಗೆ ಕೋಟಿನ ಕಾಲರ ಮೇಲೆ ಹಚ್ಚ ಬಹುದು.

ರೋಲ್ಡಗೋಲ್ಡ ಪ್ಯಾಸ್ಲಿ ನಕ್ಷಿದಾರ ೨ ಫೋಟೋಗಳು ಕೂಡ್ರಿಸಿದ್ದು	೧ಕ್ಕೆ ೧- ೦-೦	ಸದರ ದುರ್ಬೀಣಿನ ದಪ್ಪಾದ ಹರಳದವು	೧ಕ್ಕೆ ೨- ೮-೦
ಸದರ ರೂಪಾಯಿ ಆಕಾರದ್ದು ೨ ಸದರ	೧ಕ್ಕೆ ೦-೧೨-೦	ಬೆಳ್ಳಿವು ಗೋಲಾಕಾರ	೧ಕ್ಕೆ ೧- ೮-೦
		ಬ್ರೂಚ ೧ ಫೋಟೋ ಕೂಡಿಸಿದ್ದು	೧ಕ್ಕೆ ೦- ೮-೦

ಎಲ್ಲಾ ಮಾಲಿಗೆ ಪ್ಯಾಕಿಂಗ ಮತ್ತು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರಿಗೆ ಚನ್ನಾಗಿ ಕಮಿಷನ್ ಗ್ರಾಮಗ್ರಾಮಕ್ಕೆ ಏಜಂಟರು ಬೇಕು. ೧ ಆಣೆ ಟಿಕ್ಕೆ ಕಳಿಸಿ ಕ್ಯಾಟಲಾಗ ತರ್‍ಸಿಕೊಳ್ಳಿ.

ಗಂಗಪ್ಪಾ ಜೇರಗೆ, ಸೋಲಾಪುರ ಸಿಟಿ.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.



ಇಮಿಟೇಷನ್ ವಜ್ರದ ಬೆಂಡೋಲೆ.

19

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲಿಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡುಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಳ್ಳ.

ರಾಯಲ್ ಪೌಂಟನ್‌ಪೆನ್.



ಎಂಬ ಈ ಪೇನಾವನ್ನು ಅಮೇರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿವಿಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಅಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಜುಲೈ ತಾ|| ೨೩ ನೆಯ ಭಾನುವಾರ.

ಸಂಸ್ಥಾನದ ಆಯವ್ಯಯ.

(ಸರ್. ಎಂ. ವಿಶ್ವೇಶ್ವರಯ್ಯನವರ ಸಮಾಧಾನ.)

ಭಾಗ II.

೨ನೆಯ ಆಕ್ಷೇಪಕ್ಕೆ ಸರ್ ಎಂ. ವಿಶ್ವೇಶ್ವರಯ್ಯನವರು ಸಮಾಧಾನ ಹೇಳಿರುವುದರಲ್ಲಿ "ನನ್ನ ದಿವಾನಗಿರಿಯಲ್ಲಿ ಸರ್ವೀಸ್ ಖರ್ಚು ಹೆಚ್ಚು ಮಾಡಲ್ಪಟ್ಟರೂ ಕಾಲದೇಶ ವರ್ತಮಾನಗಳನ್ನು ನೋಡಿಕೊಂಡು ಆಯಕ್ಕೆ ವ್ಯಯವು ಮೀರದಂತೆ ಮಾಡಿದೆನು. ಅದು ಅನುಪಯುಕ್ತವಾದುದಲ್ಲ. ನಾನು ದಿವಾನಗಿರಿ ಬಿಟ್ಟಮೇಲೆ ಮೂರು ವರ್ಷಗಳಲ್ಲಿ ಖರ್ಚು ಇನ್ನೂ ಹೆಚ್ಚಿತು. ಎಂದರೆ ಒಟ್ಟು ಖರ್ಚು 3 ಕೋಟಿಯೂ 36 ಲಕ್ಷವಾಯಿತು. ಈಚೆಗೆ ನಡೆದ ಖರ್ಚುಗಳಿಗೆ ನಾನು ಜವಾಬ್ದಾರಿವಹಿಸಲು ಕಾರಣ ತೋರುವುದಿಲ್ಲ" ಎಂದು ಹೇಳಿರುತ್ತಾರೆ. ಕಾಲದೇಶ ವಿದ್ಯಮಾನವನ್ನು ನೋಡಿಕೊಂಡು ಖರ್ಚನ್ನು ಹೆಚ್ಚಿಸಿನೆಂದು ಇವರು ಹೇಳುವ ವಿಧಾನವು ಸಂಗತವಲ್ಲನೆಂಬ ವಿಷಯವು ನಾವು ಹಿಂದಣ ಸಂಚಿಕೆಯಲ್ಲಿ ಬರೆದಿರುವಂತೆ ಈ ವರಮಾನವು ಹೀಗೆಯೇ ಶಾಶ್ವತವಾಗಿರುವುದೇ ಇಲ್ಲವೆ ಎಂಬುದನ್ನು ಪರ್ಯಾಲೋಚಿಸದೆ ಮಾಡಲ್ಪಟ್ಟುದರಿಂದ ಒಪ್ಪತಕ್ಕುದಾಗಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ತಾವು ದಿವಾನಗಿರಿಯನ್ನು ಬಿಟ್ಟಮೇಲೂ 1½ ವರ್ಷದವರೆಗೆ ಖರ್ಚಿಗೆ ಹಣ ಸಾಲದೆಂಬ ದೂರು ಇರಲಿಲ್ಲ. ಉತ್ಪತ್ತಿಯು ಹೆಚ್ಚಾಗಿಯೇ ಇದ್ದಿತು. ಆದರೆ ಅದಕ್ಕಿಂತಲೂ ಮೀರಿ ಖರ್ಚುಮಾಡಿಕೊಂಡರು. ಅದಕ್ಕೆ ನಾನು ಉತ್ತರವಾದಿಯಲ್ಲವೆಂದು ಇವರು ಹೇಳಿಕೊಂಡಿರುತ್ತಾರೆ. ಸರ್ ವಿಶ್ವೇಶ್ವರಯ್ಯನವರು ಕೆಲಸವನ್ನು ಬಿಟ್ಟ 1918-19 ರಲ್ಲಿ ಸಂಸ್ಥಾನದ ಒಟ್ಟು ಹುಟ್ಟುವಳಿಯು 5 ಲಕ್ಷ ಕಡಿಮೆಯಾಗಿ 3 ಕೋಟಿ ಇದ್ದಿತು. ಸರ್ ಕಾಂತರಾಜ ಅರಸಿನವರು ದಿವಾನಗಿರಿಗೆ ಬಂದಮೇಲೆ ಅವರ ಕಾರ್ಯಭಾರದ ಮೂರು ವರ್ಷಗಳ ಕಾಲದಲ್ಲಿ ಒಟ್ಟು ಹುಟ್ಟುವಳಿಯು ಕ್ರಮವಾಗಿ 3 ಕೋಟಿಯೂ 13 ಲಕ್ಷ, 3 ಕೋಟಿಯೂ 13 ಲಕ್ಷ, 3 ಕೋಟಿಯೂ 6 ಲಕ್ಷ ರೂ.ಗಳು ಈಮೇರೆಗೆ ಆದುವು. ಆದರೂ ವೆಚ್ಚಕ್ಕೆ ಮೊದಲನೆ ವರ್ಷದಲ್ಲಿ 11 ಲಕ್ಷ, ೨ನೆ ವರ್ಷದಲ್ಲಿ 31 ಲಕ್ಷ, 3ನೆ ವರ್ಷದಲ್ಲಿ 37 ಲಕ್ಷ ರೂ.ಗಳು ಸಾಲದೆ ಹೋದುವು. ಸರ್ ವಿಶ್ವೇಶ್ವರಯ್ಯನವರು ದಿವಾನಗಿರಿ ಬಿಡುವುದಕ್ಕೆ ೨ ವರ್ಷಗಳಿಗೆ ಮುಂಚೆಯೇ ಆಹಾರ್ಯ ಧಾನ್ಯಗಳ ಬೆಲೆಯು ಹೆಚ್ಚಿ ಸಂಸ್ಥಾನದಲ್ಲಿ ಹಾಹಾಕಾರವು ಹುಟ್ಟಿ, ಅವರ ಶಾಂತಿಯ ಏರ್ಪಾಟುಗಳು ನಡೆಯುತ್ತಿದ್ದುವು. ಸರ್ ಕಾಂತರಾಜ ಅರಸಿನವರ ಕಾಲದಲ್ಲಿ ಸರ್ಕಾರದ ಸಣ್ಣ ಉದ್ಯೋಗಿಗಳಿಗೆ ಕ್ಷಾಮದ ಅಲೋಯನ್ಸುಗಳನ್ನು ಕೊಡದೆ ಇದ್ದರೆ ನಿರ್ವಾಹವಿಲ್ಲವಾಗಿ ತೋರಿದ ಕಾರಣ ವರ್ಷಕ್ಕೆ ಕಾಲು ಕೋಟಿಯಮೇಲೆಯೇ ಅದಕ್ಕಾಗಿ ವ್ಯಯಮಾಡಬೇಕಾಗಿ ಬಂದಿತು. ಅಲ್ಲದೆ ಸರ್ವೀಸ್ ವೆಚ್ಚವು ಹಿಂದೆಯೇ ಹೆಚ್ಚಿಹೋಗಿದ್ದುದರಿಂದ ಏಕಾಏಕಿ ಅದನ್ನು ಸಂಪೂರ್ಣವಾಗಿ ಕಡಿಮೆಹಾಕುವುದು ಸಾಧ್ಯವಲ್ಲದಿದ್ದುದರಿಂದ ಆ ಹೆಚ್ಚು ವೆಚ್ಚವನ್ನು ನಡೆಸಿಯೇ ತೀರಬೇಕಾಯಿತು. ಅಂತೂ ಈ ಭಾಗದಲ್ಲಿ ಹೆಚ್ಚು ವೆಚ್ಚವು ತಮ್ಮ ಮುಂದಣ ದಿವಾನರಿಂದ ಮಾಡಲ್ಪಟ್ಟುದು ಅನುಪಯುಕ್ತವಾದುದಲ್ಲವೆಂದು ಇವರೇ ಒಪ್ಪಿಕೊಂಡಿರುವುದರಿಂದ ಈ ಭಾಗದಲ್ಲಿ ಹೆಚ್ಚಾಗಿ ವಿಚಾರಮಾಡಬೇಕಾದ ಅವಶ್ಯಕತೆಯೇ ಉಳಿಯಲಿಲ್ಲ.

ಇನ್ನು 3ನೆ ಭಾಗಕ್ಕೆ ಇವರು ಕೊಟ್ಟಿರುವ ಸಮಾಧಾನವನ್ನು ಕುರಿತು ಪರ್ಯಾಲೋಚಿಸುವ. ಲಾಭಪ್ರದಗಳೆಂದು ಭಾವಿಸಿ ದೊಡ್ಡದೊಡ್ಡ ಪ್ರತಿಷ್ಠಾಪನೆಗಳನ್ನೂ ಕೈಗಾರಿಕೆಗಳನ್ನೂ ಆರಂಭಿಸಿದುದರಿಂದ ಅದರ ನಿರ್ವಾಹಕ್ಕಾಗಿ ಹೆಚ್ಚು ವೆಚ್ಚವೂ ಸಾಲಮಾಡಬೇಕಾದ ಅವಶ್ಯಕತೆಯೂ ಉಂಟಾದುವು ಎಂಬುದೇ ಈ ಆಕ್ಷೇಪ ಭಾಗವಾಗಿರುತ್ತದೆ. ಇದಕ್ಕೆ ಸರ್ ವಿಶ್ವೇಶ್ವರಯ್ಯನವರು ಹೇಳಿರುವ ಸಮಾಧಾನವೇನೆಂದರೆ— "ನನ್ನ 6 ವರ್ಷದ ದಿವಾನಗಿರಿಯಲ್ಲಿ ವೆಚ್ಚಕಳೆದು 341 ಲಕ್ಷ ರೂ ಗಳು ಉಳಿದಿದ್ದುವು. ಪ್ರತಿಫಲವುಳ್ಳ ಕೆಲಸಗಳಿಗಾಗಿ ನಾನು ಮಾಡಿದ ವೆಚ್ಚವು 289 ಲಕ್ಷ ರೂ.ಗಳು ಎಂದರೆ ನಾನು ಉಪಕ್ರಮಿಸಿದ ಪ್ರತಿಫಲವುಳ್ಳ ಕೆಲಸಗಳಿಗೆ ಉಪಯೋಗಿಸಿದ ಮೇಲೂ 52 ಲಕ್ಷ ರೂ.ಗಳು ಉಳಿದಿದ್ದುವು. ಈಚೆಗೆ ಈ ಕೆಲಸಗಳಿಗಾಗಿ ಮಾಡಿರುವ ವೆಚ್ಚವು 294 ಲಕ್ಷ ರೂ.ಗಳಾಗಿರುತ್ತವೆ. 1916-19 ನೇ ವರ್ಷದಿಂದೀಚೆಗೆ 3 ವರ್ಷ ಕಾಲದಲ್ಲಿ ಮಾಡಿರುವ 3¼ ಕೋಟಿಯ ಸಾಲ ಅದರ ಬಡ್ಡಿ ಸಿಂಕಿಂಗ್ ಫಂಡು ಇವೆಲ್ಲಾ ಸೇರಿದರೆ ಆಯಕ್ಕಿಂತ ಹೆಚ್ಚಾಗಿ 424 ಲಕ್ಷ ರೂ. ಗಳು ವೆಚ್ಚಮಾಡಲ್ಪಟ್ಟಿರುತ್ತವೆ. ಧಾರಣೆವಾಸಿಗಳೂ ಕೂಲಿಯ ದರಗಳೂ ಹೆಚ್ಚಿಕೊಂಡು ಕಾಲಸ್ಥಿತಿಯು ವೈಷಮ್ಯಕ್ಕೆ ಬಂದು ನಮ್ಮ ಆದಾಯವೂ ಕಡಿಮೆಯಾಗಿರುವ ಕಾಲದಲ್ಲಿ ಲಾಭಕರವೆಂದು ಹಿಂದೆ ಆರಂಭಿಸಲ್ಪಟ್ಟಿದ್ದ ನೂತನ ಪ್ರತಿಷ್ಠಾಪನೆಗಳ ಕಾರ್ಯವನ್ನು ನಡೆಯಿಸದೆ ನಿಲ್ಲಿಸಿಬಿಡಬೇಕಾಗಿತ್ತು. ಅದಕ್ಕಾಗಿ ಸಾಲಮಾಡಿಕೊಂಡುದು ಸರಿಯಲ್ಲ. ಈ ಪ್ರತಿಷ್ಠಾಪನೆಗಳು ಲಾಭಕರಗಳೇ ಅಲ್ಲವೇ ಎಂಬುದನ್ನು ಪರ್ಯಾಲೋಚಿಸಿ ಮುಂದೆ ಹಣವನ್ನು ವೆಚ್ಚಮಾಡಬೇಕಾಗಿದ್ದಿತು. ಒಳ್ಳೆಯ ಕಾಲವು ಬಂದಾಗ ಲಾಭಕರವೆಂದು ತೋರಿದರೆ ಅದನ್ನು ಪೂರೈಸಬಹುದಾಗಿತ್ತು. ನಾನು ದಿವಾನಗಿರಿಯಲ್ಲಿದ್ದರೆ ಅದನ್ನೆಲ್ಲಾ ಪರ್ಯಾಲೋಚಿಸದೆ ಹೀಗೆ ಮಾಡಿಕೊಳ್ಳುತ್ತಿರಲಿಲ್ಲ. ಸಾಲಮಾಡದೆ ಎಷ್ಟು ಕೆಲಸವನ್ನು ಮಾಡುವುದು ಸಾಧ್ಯವೋ ಅಷ್ಟನ್ನು ಮಾಡಿಕೊಳ್ಳಬಹುದಾಗಿದ್ದಿತು. ಅಥವಾ ವರ್ಷಕ್ಕೆ ೨೫ ಲಕ್ಷದಂತೆ ಅದಕ್ಕಾಗಿ ವೆಚ್ಚಮಾಡಲು ಏರ್ಪಡಿಸಿಕೊಳ್ಳಬಹುದಾಗಿತ್ತು. ಈ ಹೊಸ ಕೆಲಸಗಳಿಗೆ ಉತ್ಪತ್ತಿ ಇರುವುದೇ ಇಲ್ಲವೆ ಎಂಬುದನ್ನು ಪರ್ಯಾಲೋಚಿಸದೆ ದುಡುಕಿದ್ದೂ 'ಹಣವು ಒದಗದೆಹೋದದ್ದೂ' ಈ ಹಣದ ಬಿಕ್ಕಟ್ಟಿಗೆ ಕಾರಣಗಳಾದುವು." ಎಂದು ಹೇಳಿರುತ್ತಾರೆ.

ಮೊಟ್ಟಮೊದಲು ಕಾರ್ಯಾರಂಭ ಮಾಡುವಾಗ್ಗೆ ಇದರಿಂದ ಲಾಭವೇ ನಷ್ಟವೆ ಎಂಬುದನ್ನು ಚೆನ್ನಾಗಿ ವಿಚಾರಮಾಡಿ ಆರಂಭಿಸುವ ಭಾರವು ಸರ್ ಎಂ. ವಿಶ್ವೇಶ್ವರಯ್ಯನವರ ಮೇಲಿದ್ದಿತೇ ಹೊರತು ಮತ್ತಾರಮೇಲೂ ಇರಲಿಲ್ಲ. ಕೃಷ್ಣರಾಜಸಾಗರ ಭದ್ರಾವತೀ ಕೆಲಸ ಇವುಗಳನ್ನೆಲ್ಲಾ ಆರಂಭಿಸುವುದಕ್ಕೆ ಇವರೇ ಮೂಲಕಾರಣರು. ಮಧ್ಯಕಾಲದಲ್ಲಿ ಅದರ ಸಾಧಕಬಾಧಕ ಲಾಭನಷ್ಟಗಳನ್ನು ಇತರರು ಪರ್ಯಾಲೋಚಿಸಬೇಕಾಗಿದ್ದಿತೆಂದು ಹೇಳುವುದು ಇವರಿಗೇ ನ್ಯಾಯವಾಗಿ ತೋರುತ್ತಿರಬಹುದೇ ಹೊರತು ಅದನ್ನು ನ್ಯಾಯವೆಂದು ಮತ್ತಾರೂ ನಂಬುವುದಿಲ್ಲ. ವಿದ್ಯುಚ್ಛಕ್ತಿ ಸಮುತ್ಪಾದನ ಪ್ರತಿಷ್ಠಾಪನೆಯಿಂದ ಸರ್ ಶೇಷಾದ್ರಿ ಅಯ್ಯರ ಕೀರ್ತಿಧ್ವಜವು ಶಾಶ್ವತ ಸ್ಥಾಪಿತವಾಗಿರುವಂತೆ ತನಗೂ ಶಾಶ್ವತಕೀರ್ತಿಯು ಈ ನೂತನ ಪ್ರತಿಷ್ಠಾಪನಗಳಿಂದ ಲಭಿಸುವುದೆಂಬ ಉದ್ದೇಶದಿಂದ ಈ ಅಗಾಧವಾದ ಕಾರ್ಯಗಳಿಗೆ ಇವರು ಕೈಹಚ್ಚದಿದ್ದರೆ ಸಂಸ್ಥಾನಕ್ಕೆ ಈಗಣಂಥ ಸಾಲದಹೊರೆಯೂ ಹಣದ ದುರ್ದಶೆಯೂ ಬರಬೇಕಾದ ಅವಶ್ಯಕತೆಯೇ ಉಂಟಾಗುತ್ತಿರಲಿಲ್ಲ. ಬಿಟ್ಟಿಳದ ಕೆಲಸಕ್ಕೂ ಆರಂಭಿಸಿಬಿಟ್ಟಿದ್ದರೆ ಈ ದುರ್ದಶೆಗೆ ಪಾರವೇ ಇರುತ್ತಿರಲಿಲ್ಲ. ದೈವಗತಿಯಿಂದ ಅದು ತಪ್ಪಿದುದು ಲೇಸಾಯಿತು. ಕೃಷ್ಣರಾಜಸಾಗರ, ಭದ್ರಾವತಿ ಈ ಅರೆಗೆಲಸದ ಮಹಾಪ್ರತಿಷ್ಠಾಪನೆಗಳ ಮಾತು ಹಾಗಿರಲಿ. ಇವರು ಆರಂಭಿಸಿದ ಸೆಯ್ಗೆಯ ಕಾರ್ಖಾನೆ ಆರ್ಟ್ ವರ್ಕ್‌ಷಾಪು ಮೆಟಲ್ ಫ್ಯಾಕ್ಟರಿ ಮೊದಲಾದ ಪ್ರತಿಷ್ಠಾಪನೆಗಳೂ ಲಾಭದಾಯಕವಾಗಲಿಲ್ಲ. ಅವುಗಳಿಂದೆಲ್ಲಾ 2 ಲಕ್ಷದ ಮೇಲೆಯೇ ನಷ್ಟವಾಗಿರುವಂತೆ ಪ್ರಕಟವಾಗಿದೆ. ಅಷ್ಟೇನೂ ಅವಶ್ಯಕವಾಗಿಲ್ಲದ ಹೊಸ ಕಟ್ಟಡಗಳನ್ನು ಕಟ್ಟಿಸಲು ಲಕ್ಷಗಟ್ಟಲೆ ವೆಚ್ಚಮಾಡಿದರು. ಕೆಲಸಗಳು ಲಾಭಕರಗಳೇ ಅಲ್ಲವೆ ಎಂಬುದನ್ನು ಮಧ್ಯಕಾಲದಲ್ಲಿ ಇತರರು ಪರ್ಯಾಲೋಚಿಸಬೇಕಾಗಿದ್ದಿತೆಂದು ಪರರ ಮೇಲೆ ತಪ್ಪುಹೊರಿಸಲು ಉಜ್ಜುಗಿಸಿರುವ ಇವರು ಆ ಕಾರ್ಯವನ್ನು ಆರಂಭಿಸಿದುದೇ ಅದಕ್ಕೆ ಅನುಗುಣವಾದ ಕಾಲವಾಗಿರಲಿಲ್ಲ. ಭದ್ರಾವತೀ ಕಬ್ಬಿಣದ ಕಾರ್ಯವನ್ನಾರಂಭಿಸುವಾಗ್ಗೆ ಯುದ್ಧಸಂಬಂಧದಿಂದ ಕಬ್ಬಿಣದ ಬೆಲೆಯು 1ಕ್ಕೆ ನಾಲ್ಕರಷ್ಟಾಗಿದ್ದಿತು. ಅದನ್ನು ನೋಡಿಕೊಂಡು ಇವರು ಈ ಪ್ರತಿಷ್ಠಾಪನೆಯು ಲಾಭಪ್ರದವೆಂದು ಭಾವಿಸಿ ಪರರ ಮಾತನ್ನು ನಂಬಿ ಕಾರ್ಯಾರಂಭ ಮಾಡಿಸಿ ಸರ್ಕಾರದ ಹಣವನ್ನು ಅದಕ್ಕೆ ಸುರಿಯಿಸಿದುದು ಸರಿಯಲ್ಲ. ಸ್ವಂತದ ಬಂಡವಾಳವನ್ನು ಹಾಕಿಕೊಂಡು ವಾಣಿಜ್ಯವನ್ನು ನಡೆಯಿಸುವ ವರ್ತಕರು ಕೂಡ ಆಗಣ ಧಾರಣೆಯನ್ನು ಕೊಟ್ಟು ಸಾಮಗ್ರಿಗಳನ್ನು ತಂದು ನೂತನವಾಗಿ ಒಂದು ವ್ಯಾಪಾರವನ್ನಾರಂಭಿಸಲು ಇದು ತಕ್ಕಸಮಯವಲ್ಲವೆಂದು ಹಿಂದೆಗೆಯುವ ಕಾಲವು ಅದಾಗಿತ್ತು, ಅಂಥ ಕಾಲದಲ್ಲಿ ಇವರು ಕಬ್ಬಿಣದ ಆಗಣ ಬೆಲೆಯನ್ನು ನೋಡಿಕೊಂಡು ಲಾಭವನ್ನು ಗುಣಿಸಿ ಕೋಟ್ಯಂತರ ವೆಚ್ಚವು ಹಿಡಿಯುವ ಮಹಾ ಪ್ರತಿಷ್ಠಾಪನೆಗೆ ಕೈಹಾಕಿದುದು ನ್ಯಾಯವೆ? ಆಗಣ ಕಾಲದಲ್ಲಿದ್ದಂತೆ ಮಣಕ್ಕೆ 8-9 ರೂ. ಗಳ ಬೆಲೆಯು ಶಾಶ್ವತವಾಗಿರುವುದೆ? ಈಗಾಗಲೇ ¾ ಭಾಗ ಬೆಲೆಗೆ ಇಳಿದುಹೋಗಿಲ್ಲವೆ? ಮುಂದೆ ಎಷ್ಟುಕಾಲಕ್ಕಾದರೂ ಅಂಥ ಹೆಚ್ಚಿನಬೆಲೆಯು ಬರುವುದೆಂದು ನಿರೀಕ್ಷಿಸಿ ಕುಳಿತುಕೊಳ್ಳುವುದು ಹೇಗೆ? ನಂಬುಗೆಯಿಲ್ಲದೆ ನಿರೀಕ್ಷಣೆಯಮೇಲೆ ದೊಡ್ಡ ಉತ್ತರವಾದಿತ್ವವುಳ್ಳ ತಮ್ಮ ಅಧಿಕಾರವನ್ನು ಉಪಯೋಗಿಸಿ ಪ್ರಜೆಗಳ ಕೋಟ್ಯಂತರ ದ್ರವ್ಯವನ್ನು ನುಂಗುವ ಹೊಸಕೆಲಸವನ್ನು ಕೈಕೊಳ್ಳಬಹುದೆ? ಎಂಬುದನ್ನು ಇವರು ಪರ್ಯಾಲೋಚಿಸದೆ ಹೋದರು.

ಅಲ್ಲದೆ ಈ ಕಬ್ಬಿಣದ ಯಂತ್ರಾಗಾರದ ಮ್ಯಾನೇಜಿಂಗ್ ಏಜಂಟರುಗಳ ಕಡೆಯ ಅನುಭವಸ್ಥರಾದ ತಜ್ಞ ಜನರು ಇದರ ಲಾಭ ನಷ್ಟವನ್ನು ಕುರಿತು ವಿಮರ್ಶಾಪೂರ್ವಕವಾಗಿ ಮಾಡಿರುವ ವರದಿಯಲ್ಲಿ "ಒರಟು ಕಬ್ಬಿಣದ ಬೆಲೆಯೇನೋ ಕಡಿಮೆಯಾಗಿ ಹೋಗಿದೆ. ಕಲ್ಲಿದ್ದಲ ಸಹಾಯದಿಂದ ನಿರ್ಮಿಸಿದ ಕಬ್ಬಿಣಕ್ಕೆ ಭರತಖಂಡದಲ್ಲಿಯೂ ಇತರ ಪೂರ್ವ ದೇಶಗಳಲ್ಲಿಯೂ ಬೆಲೆ ದೊರೆಯುವುದು ಅನಿಶ್ಚಿತವಾಗಿದೆ. ಇಲ್ಲಿ ನಿರ್ಮಿತವಾಗುವ ಉಳಿದ ಪದಾರ್ಥಗಳು ಎಂದರೆ ಆಲ್ಕೊಹಾಲ್, ಲೈಮ್ ಅಸಿಟೇಲ್, ಮೊದಲಾದುವುಗಳಿಗೆ ಭರತಖಂಡದಲ್ಲಿ ಗಿರಾಕಿಯಿಲ್ಲದ ಕಾರಣ ಅವನ್ನು ಯೂರೋಪು ಖಂಡಕ್ಕೆ ಸಾಗಿಸಬೇಕಾಗುವುದು" ಎಂದು ಹೇಳಿರುತ್ತಾರೆ. ಇದನ್ನು ನೋಡುವಲ್ಲಿ ಈ ಕರ್ಮಾಗಾರವು ತಿಂದಷ್ಟು ದುಡ್ಡಿಗೆ ತಕ್ಕ ಲಾಭವು ಬರುವುದೆಂದು ನಿರೀಕ್ಷೆಯನ್ನಿಟ್ಟುಕೊಳ್ಳಲಿಕ್ಕೇ ಮಾರ್ಗವಿರುವುದಿಲ್ಲ. ಈ ವರದಿಯನ್ನು ಮಾಡಿರುವವರು ಬೇಕೆನ್ನುತಲೇ ನಿರಾಶಾಜನಕವಾದ ಭವಿಷ್ಯತ್ತನ್ನು ಹೇಳಿ ಗೌರ್ನಮೆಂಟಿಗೂ ದೇಶೀಯರಿಗೂ ಎದೆಯೊಡೆಯಿಸಿಬಿಟ್ಟು, ಯಾರಾದರೂ ಇತರರು ಸುಲಭವಾದ ಬೆಲೆಗೆ ಪ್ರತಿಷ್ಠಾಪನೆಯನ್ನೆಲ್ಲಾ ವಹಿಸಿಕೊಳ್ಳಲು ದಾರಿಯಾಗುವಂತೆ ಮಾಡಲು ಇಂಥ ಸಹಜವಲ್ಲದ ವರದಿಯನ್ನು ಮಾಡಿದ್ದಾರೆಂದು ಸರ್ ವಿಶ್ವೇಶ್ವರಯ್ಯನವರ ವಂದಿಮಾಗಧರಲ್ಲಿ ಕೆಲವರು ಹೇಳುತ್ತಾರೆ. ಆ ವರದಿಗಾರರು ಪರಪ್ರೇರಣೆಯಿಂದ ಅಂಥ ವರದಿಮಾಡಿರುವುದು ನಿಜವಾಗಿದ್ದರೆ ಇದುವರೆಗೆ ಈ ಪ್ರತಿಷ್ಠಾಪನೆಗೆ ಹಿಡಿದಿರುವ ಹಣವನ್ನೆಲ್ಲಾ ಯಾರಾದರೂ ಪುಣ್ಯಾತ್ಮರು ಕೊಟ್ಟು ಅವರ ಸ್ವಂತಕ್ಕೆ ವಹಿಸಿಕೊಳ್ಳುವವರಾಗಿದ್ದರೆ ನಮ್ಮ ಸರ್ಕಾರದವರು ಈಗಳೇ ಅದನ್ನು ಕೊಟ್ಟುಬಿಟ್ಟು ತಲೆತೊಳೆದುಕೊಂಡಾರು. ಅದಕ್ಕೆ ಪ್ರಜೆಗಳಲ್ಲಿ ಯಾರೂ ಅಡ್ಡಿಯಾಗಲಾರರು. ಸರ್ ವಿಶ್ವೇಶ್ವರಯ್ಯನವರೇ ಆಗಲೀ ಅವರ ವಂದಿಮಾಗಧ ಕೋಟಿಯವರೇ ಆಗಲೀ ಅಂಥ ಕೆಲಸವನ್ನು ಮಾಡಿ ಗೌರ್ನಮೆಂಟಿನ ಈ ಶಿರೋಭಾರವನ್ನು ತಪ್ಪಿಸಿದರೆ ಸಂಸ್ಥಾನವು ಕೃತಜ್ಞವಾಗಿದ್ದೀತು.

ಹಿಂದೆ 1918-19ನೆ ವರ್ಷದಲ್ಲಿ—"ಬಂಡವಾಳದ ವೆಚ್ಚಕ್ಕೆ 70 ಲಕ್ಷ ರೂ. ಗಳನ್ನು ಪ್ರತಿವರ್ಷವೂ ವಿನಿಯೋಗಿಸಬೇಕು. ಅದರಲ್ಲಿ 40 ಲಕ್ಷವನ್ನು ರಿಜರ್ವ್ ಫಂಡಿನಿಂದಲೂ ಇನ್ನು 30 ಲಕ್ಷವನ್ನು ಸಾಲದಿಂದಲೂ ಒದಗಿಸಬೇಕು" ಎಂದು ಅಪ್ಪಣೆ ಮಾಡಿದ ಬಾಯಿಂದಲೇ ಸರ್ ವಿಶ್ವೇಶ್ವರಯ್ಯನವರು ಈಗ ಸಾಲಮಾಡಿ ಈ ಪ್ರತಿಷ್ಠಾಪನೆಗಳ ವೆಚ್ಚಕ್ಕೆ ಉಪಯೋಗಿಸಿದುದು ಸರಿಯಲ್ಲವೆಂದು ಹೇಗೆ ಹೇಳಿದರೋ ಗೊತ್ತಾಗುವುದಿಲ್ಲ.

ಯಂತ್ರದ ಬೆಲೆಗಳೂ ಕೂಲಿಯದರಗಳೂ ಇಳಿದು ಕಬ್ಬಿಣಕ್ಕೆ ತಕ್ಕ ಬೆಲೆಯು ಬರುವವರೆಗೂ ಈ ಕೆಲಸದ ಕಾಮಗಾರಿಯನ್ನು ಮುಂಬರಿಸದೆ ನಿಲ್ಲಿಸಿಬಿಡಬಹುದಾಗಿತ್ತು ಎಂದು ಇವರು ಅಭಿಪ್ರಾಯಪಟ್ಟಿರುತ್ತಾರಷ್ಟೆ. ಇದಕ್ಕೆ ಮಿ|| ಬಾನರ್ಜಿಯವರ ಮತ್ತು ಸರ್ ಕಾಂತರಾಜಅರಸಿನವರ ಪ್ರಜಾಪ್ರತಿನಿಧಿಸಭಾ ಭಾಷಣಗಳಲ್ಲೇ ಉತ್ತರವಿದೆ. ಕಾಲಸ್ಥಿತಿಯು ಅನುಕೂಲವಾಗಿ ಒದಗುವವರೆಗೆ ಕೆಲಸವನ್ನೇ ನಿಲ್ಲಿಸಿಬಿಡುವುದಾಗಿದ್ದರೆ ಅದುವರೆಗೆ ಈ ಪ್ರತಿಷ್ಠಾಪನೆಗಳಿಗಾಗಿ ವಿನಿಯೋಗಿಸಿರುವ ಅಪಾರವಾದ ಹಣಕ್ಕೆ ಬಡ್ಡಿಯನ್ನು ತೆರುತ್ತಲೇ ಇರಬೇಕಾದ ನಷ್ಟವು ಬೆಳೆಯುತ್ತಲೇ ಇರುವುದು. ಮತ್ತು ಅನುಕೂಲ ಕಾಲವು ಬರುವುದೆಂದಿಗೆ? ಯಂತ್ರಸಾಮಗ್ರಿಗಳ ಬೆಲೆಯು ದಿನದಿನಕ್ಕೆ ಹೆಚ್ಚುತ್ತಿರುವುದೇ ಹೊರತು ಕಡಿಮೆಯಾಗುವ ಚಿಹ್ನೆಯಿಲ್ಲ. ಈಚೆಗೆ ಯಂತ್ರೋಪಕರಣಗಳ ಮೇಲಣ ಸುಂಕವನ್ನು ಭಾರತ ಪ್ರಭುತ್ವದವರು ಹೆಚ್ಚಿಸಿಬಿಟ್ಟಿದ್ದಾರೆ. ಅಲ್ಲದೆ ಕೂಲಿಯ ಕಲ್ಲಿದ್ದಲ ಬೆಲೆಗಳ ದರಗಳು ಪಾಶ್ಚಾತ್ಯದೇಶಗಳಲ್ಲಿ ವಿಪರೀತವಾಗಿ ಹೆಚ್ಚಿರುವುದರಿಂದ ನಿರ್ಮಾಣ ಸ್ಥಲಗಳಲ್ಲೇ ಯಂತ್ರೋಪಕರಣಗಳ ಬೆಲೆಯು ಏರಿಹೋಗಿದೆ. ಅವೆಲ್ಲಾ ಇಳಿಯುವುದೆಂದು ನಂಬಿ ಕುಳಿತುಕೊಳ್ಳುವುದು ಯಾವ ಜಾಣತನ? ಅಲ್ಲದೆ ಸಮರ್ಥರಾದ ಹಿಂದಣ ದಿವಾನರು ಹಿಂದೆ ಆರಂಭಿಸಿದ ಕೆಲಸವನ್ನು ಈಗಣವರು ಹಿಡಿದು ಪೂರೈಸಲಾರದೆ ಹೋದರೆಂಬುದಾಗಿಯೋ ಇಲ್ಲವೆ ಹಿಂದಣವರು ಆರಂಭಿಸಿದ ಪ್ರತಿಷ್ಠಾಪನೆಗಳನ್ನು ದುರಭಿಪ್ರಾಯದಿಂದ ಮೂಲೆ ಮುಟ್ಟುಮಾಡಿಬಿಟ್ಟರೆಂಬುದಾಗಿಯೋ ಜನಾಪವಾದವು ಬೇರೆ ಸಂಘಟಿಸದೆ ಬಿಡುತ್ತಿರಲಿಲ್ಲ. ಇವೆಲ್ಲ ಕಾರಣಗಳಿಂದ ಕಾರ್ಯವನ್ನು ಕೊನೆಗಾಣಿಸಲು ಮುಂಬರಿದುದೇ ಯುಕ್ತವಾಯಿತು.

ಮೊದಲು ! ಅಂದಾಜುಮಾಡಿ ಕಡೆಗೆ 4ಕ್ಕೆ ತಂದು ನಿಲ್ಲಿಸುವ ಇಂಜನಿಯರಿಂಗ್ ಶಾಖೆಯ ಪದ್ಧತಿಯು ಅದೇ ಶಾಖೆಯಲ್ಲಿ ತೇಲಿಮುಳುಗಿದ ಸರ್ ವಿಶ್ವೇಶ್ವರಯ್ಯನವರಿಗೆ ತಿಳಿಯದ ಅಂಶವಲ್ಲ. ಮೊದಲು 64 ಲಕ್ಷ ರೂ.ಗಳ ಅಂದಾಜನ್ನು ಕಬ್ಬಿಣದ ಕಾರ್ಯಾಲಯ ಪ್ರತಿಷ್ಠಾಪನೆಗೆ ಮಾಡಿ ಆರಂಭಿಸಲ್ಪಟ್ಟಿತು. ಈಗ ೨ ಕೋಟಿಗೆ ಮಿಂಚಿಹೋಗಿದೆ. ಕೈಹಾಕಿ ಆರಂಭಿಸಿಬಿಟ್ಟಿರುವಾಗ ಇಂಜನಿಯರುಗಳು ಹೇಳಿದಷ್ಟು ಹಣವನ್ನು ಒದಗಿಸಿಯೇ ತೀರಬೇಕಾಗುತ್ತದಷ್ಟೆ. ಅದು ಕಾರಣವೂ ಮತ್ತು ಕೆಲಸವನ್ನು ಕ್ಷಿಪ್ರವಾಗಿ ಮುಗಿಸಿ ಪ್ರತಿಷ್ಠಾಪನೆಯಿಂದ ಸಾಧ್ಯವಾದಷ್ಟು ಆದಾಯವನ್ನು ಬೇಗನೆ ಉತ್ಪನ್ನವಾಗುವಂತೆ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದಲೂ ಸಾಲವನ್ನಾದರೂ ಮಾಡಿ ಕೆಲಸವನ್ನು ನಡೆಯಿಸುತ್ತಾ ಬರಬೇಕಾಯಿತು. ಅದನ್ನು ನ್ಯಾಯವಲ್ಲವೆಂದು ಹೇಳುವುದು ಧಾರ್ಷ್ಟ್ಯವೇ ಹೊತು ಸಾಧುವಲ್ಲ. ಈ ಕಾರ್ಯವನ್ನು ಆರಂಭಿಸುವಾಗ್ಗೆ ಮಿ|| ಪೆರಿನ್ ರವರು-ಹಾಕಿದ ಬಂಡವಾಳಕ್ಕೆ ಇದರಿಂದ ಸೇಕಡಾ 25 ರೂ. ಲಾಭವು ಬರುವುದೆಂದು ಆಶೋತ್ತರವನ್ನು ಹೇಳಿದ್ದರು. ಈಗ ಸರ್ ವಿಶ್ವೇಶ್ವರಯ್ಯನವರು ಇದರಿಂದ ಮುಂದೆ ಸೇಕಡಾ 10 ರಂತೆ ಲಾಭವು ಗಿಟ್ಟುವುದೆಂದು ಭವಿಷ್ಯತ್ತನ್ನು ಹೇಳಿರುತ್ತಾರೆ. ದೇಶದ ಪುಣ್ಯಕ್ಕೆ ಅಂಥ ಸ್ಥಿತಿಯು ಒದಗುವುದೇ ಬೇಕು. ಹಾಗೆ ಪರಿಣಮಿಸುವುದಾದರೆ ಈಗ ಇವರನ್ನು ಆಕ್ಷೇಪಿಸುತ್ತಿರುವವರೆಲ್ಲಾ ಇವರನ್ನು ಹಾಡಿ ಹರಸಿ ಚಿರಸ್ಮರಣೆಮಾಡುವುದರಲ್ಲಿ ಸಂಶಯವಿಲ್ಲ. ಈಗಣ ಆಕ್ಷೇಪಗಳೆಲ್ಲಾ ಸೂರ್ಯನ ಮುಂದಣ ಮಂಜಿನಂತೆ ಬಯಲಾಗಿಹೋಗುವುವು. ಅಂಥ ಸ್ಥಿತಿಯು ಬೇಗನೆ ಪ್ರಾಪ್ತವಾಗಲೆಂಬುದೇ ನಮ್ಮ ಕೋರಿಕೆ.

ಅಂತೂ ತಮಗಿಂತ ಹಿಂದಿದ್ದ ದಿವಾನರುಗಳು ಬೊಕ್ಕಸದಲ್ಲಿ ಸೇರಿಸಿದ್ದ ಹಣವನ್ನೆಲ್ಲಾ ವಿನಿಯೋಗಿಸಿ ತಮ್ಮ ಕಾಲದಲ್ಲಿ ಯಾವುದೊಂದು ರಿಜರ್ವಿಗೂ ಹಣವನ್ನೆತ್ತಿಡದೆ ಅನಿಶ್ಚಿತವಾದ ಶಾಶ್ವತವಲ್ಲದ ಬಾಬುಗಳ ಹುಟ್ಟುವಳಿಯನ್ನೂ, ಬಂಡವಾಳದ ಕಾಂಗಾರಿಗಳಿಂದಲೂ, ಬಡ್ಡಿಗೆ ಹಾಕಿದ ಹಣದಿಂದಲೂ, ಬಂದ ಉತ್ಪತ್ತಿಯನ್ನೂ ತಮ್ಮ ನೂತನ ಪ್ರತಿಷ್ಠಾಪನೆಗಳ ವ್ಯಯಕ್ಕೆ ಉಪಯೋಗಿಸಿಬಿಟ್ಟು ಮುಂದೆ ಅಗಾಧವಾದ ವೆಚ್ಚದ ಭಾರವನ್ನು ಸಂಸ್ಥಾನಕ್ಕೆ ಮೀಸಲಾಗಿಟ್ಟು, ಈಗಣ ಹಣದ ಬಿಕ್ಕಟ್ಟಿಗೆ ನಾನು ಉತ್ತರವಾದಿಯಲ್ಲವೆಂದು ಸರ್ ವಿಶ್ವೇಶ್ವರಯ್ಯನವರು ಸಿದ್ಧಾಂತಪಡಿಸುವುದಕ್ಕೆ ಈಗ ಮಾಡಿದ ಯತ್ನವು ಎಷ್ಟು ಚಮತ್ಕಾರಭರಿತವಾದುದೋ ಅಷ್ಟೇ ಅದು ನಿಷ್ಫಲವೂ ಆಗಿರುತ್ತದೆಂದು ಪ್ರಜೆಗಳು ಆಡಿಕೊಳ್ಳುತ್ತಿರುವುದು ಸಲ್ಲುವಹಾಗಿಲ್ಲ.

NO MORE MONOPOLY.

We have already stated that the report of the Special Committee appointed by the Government to suggest measures for the improvement of Sanskrit Education in the State may be laid by for the present and a fresh and more representative and less sectarian committee be formed to report on the same. This gains additional emphasis when persons like Mr. Hosakoppa Krishna Rao take upon themselves the duty of defending that document which is so strongly reminiscent of some bygone, medæval out-of-date annals, and create unnecessary heat and controversy in the land. Mr. Krishna Rao has sent a contribution to the *Hindu* of the 13th July 1922 in which he has striven elaborately to justify the recommendations. This 'orthodox'-cum-'reformed' Brahmin says, as he always does, that he feels sympathy for other classes of H. H's subjects, a saying for which the other classes are indeed grateful to him. But unfortunately, there is hardly any popular and beneficial measure which he does not in practice oppose most vehemently. It would serve no useful purpose for us to answer the many irrational and provoking statements of this eminent member for the Kadur District. In the *New India* of the 20th July 1922 is a reply to Mr. Krishna Rao by one Mr. Krishna Dasa–himself a Brahmin–to which we wish to invite the attention of our readers, particularly the members of the Special Committee. Mr. Krishna Dasa says how the words of Jagadguru Sri Sringeri Mutt on modern problems could not be of much value, what great Sanskrit Scholars there are among non-Brahmins, and Westerners, how great would be the loss if men like Duessen, Arabinda Ghose and Vivekananda had not studied the *Upanishads*, and how necessary it is to throw open Sanskrit Education to all classes and to liberalise it. We are glad to see that our Tumkur contemporary does not subscribe to the monopolistic theory so ably sponsored by the Special Committee. Instead of appealing to the non-Brahmins to wait for admission till that "distant date" when times would become more auspicious Mr. Krishna Rao would do well to spend his energy in getting round the Pandits themselves to teach non-Brahmins. We do not think that Pandits would object to teach their youths–particularly if that is made a condition precedent to increment in their pay.

There is no use in drawing the name of H. H. the ex-Raja of Cochin of whom we bear for the first time from Mr. Krishna Rao as an educationist of a very high order-rather a rare discovery–to support the retention of the monopoly when it does not find acceptance among the many liberal Brahmins themselves. It passes our comprehension how men who have some modern education, and who are never tired of enunciating *theories* of nationalism and democracy can uphold a system which is so patently unjust. It is a tragic feature of our motherland that, while in all other countries and other nationalities it is more or less obligatory on the part of their youth to know their scriptures, we only are denied a knowledge of our scriptures which are rightly our proud possession. There is some excuse for old orthodox Pandits to hold such views, but it is a pity that so many of the *intelligentia* should in this age not realise the danger of supporting a system so totally opposed to national self-respect and progress. Mr. Krishna Dasa rightly asks what wonder if the white men hold the views which they now do of the coloured in the colonies when the latter are treated in this manner by their own brethren in their own country? We are afraid that in the anxiety to preserve their exclusive privileges those who are now championing the existing iniquitous order of affairs are proving themselves, perhaps unconsciously, the enemies of Indian nationalism and its progress. It should be clearly understood that the rest of India is watching keenly the step that Mysore is going to take in this direction, and this way or that makes a great difference. Let Mysore, however, not stamp this antiquated and unexampled system with the authority of Government. Let the Government not issue a monopoly license to the Brahmins in the State to quarry the whole mine for themselves with the additional free grant of working expenses derived from the people and let the right of the non-Brahmin Hindus to study their religion through their Vedas and Upanishads, which is as legitimate and as just as of the other Hindus be recognised by throwing open both the Bangalore and Mysore Colleges irrespective of any reservation. What a glory would it be to Mysore if it led in the matter!

TRANSFER OF SOAP FACTORY.

We were all the while under the impression that all the arrangements for the transfer of the Mysore Government Soap Factory to Messrs. V. Papiah Chetty and Brothers were completed and that the latter had in compliance with the essential part of the terms had floated a joint stock company and the Memorandum and Articles of Association and the consent of the Directors were already filed for registration with the Registrar of Joint Stock companies. We were surprised to see all of a sudden a communique issued in the Mysore Gazette on the 5th instant stating that the period allowed to Messrs. V. Papiah Chetty and brothers had expired without their depositing the purchase money on account of the Factory and to furnish other necessary guarantees. The essential part of the terms is the flotation of the company which is done and when that is done the reasonable expectation would be to extend the time for the payment of the purchase money, considering especially the tightness of the money market and the heavy sum of nearly two lakhs now demanded for the factory. But when all the terms are completed except the payment of the purchase money for which time seems to have been prayed for, and when the party has incurred large sums for the flotation of the Company and other purposes for arranging the transfer and when further it is known that they have as the sole agents for the Factory striven well to establish a reputation for it,that the Government should be so prone to withdraw the offer unconditionally does not seem quite fair in the circumstances. If the transfer to Messrs. V. Papiah Chetty and Brothers may not be reconsidered we hope that the Government will at least negotiate directly with the company floated and transfer the Factory to them in accordance with their declared policy. This would not only not allow the trouble and expenses so for incurred to run to waste but would also save further time which fresh negotiations would necessary entail.

THE NEW DISTRICT AND SESSIONS JUDGE.

We wish to extend a cordial welcome to Mr. G. Sreenivasa Iyer, B.A., M.L., the new District and Sessions Judge to Mysore. He is not new to Mysore. He was for sometime the First Munsiff and only recently he acted as District and Sessions Judge in place of Mr. B. Nagappa, Bar-at-law. Within the short time he was here he became very popular both among the members of the Bar and the litigant public. It is needless for us to say that his elevation to the present position is richly deserved by him. One of the very few in the State who have obtained the highest University degree in Law, he is reputed to be a most earnest and devoted student of law. His legal attainments are only enhanced by his courtesy to the Bar and the strict judicial temperament he brings to bear upon his task. We may point out that the administrative section of the Judicial Department in this division requires looking into and should be quickened into a better sense of their work, and we are sure Mr. Sreenivasa Iyer will see to its greater efficiency in this direction which would relieve the litigant parties from a great deal of unnecessary delay, hardship and loss. We wish Mr. Sreenivasa Iyer quite a successful time in Mysore.

ಒಳದೇಶದ ವೃತ್ತಾಂತಗಳು.

ದಿವಾನರವರು ಈ ಮುಂದಣ ವಾರದಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂಚಾರಕ್ಕೆ ತೆರಳುವವರಾಗಿದ್ದಾರೆ.

ಡಾ|| ಎಸ್. ಪಾಲಚಿನ್ನಪ್ಪ ಎಂ. ಎ., ಎಲ್. ಟಿ. ಯವರು ಮೈಸೂರು ಸರ್ಕಲ್ ಸ್ಕೂಲುಗಳ ಇನ್ಸ್‌ಪೆಕ್ಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಅಕ್ಕೂರು ಗುಂಡಪ್ಪನ ಕೊಲೆಯ ಕೇಸಿನಲ್ಲಿ ಶಿಕ್ಷಿತನಾಗಿದ್ದ ಸಿದ್ದೇಗೌಡನನ್ನು ಕಳೆದ ಸೋಮವಾರ ಬೆಂಗಳೂರು ಸೆಂಟರಲ್ ಜೈಲಿನಲ್ಲಿ ಗಲ್ಲಿಗೇರಿಸಿದರು.

ಕೊಡಗಿನಲ್ಲಿ ಹೆಚ್ಚು ಮಳೆ ಸುರಿಯುತ್ತಿರುವುದರಿಂದ ಕಾವೇರೀ ಪ್ರವಾಹವು ಹೆಚ್ಚಿದೆ. ಈಗಾಗಲೇ ಕೃಷ್ಣರಾಜಸಾಗರದ ಕಟ್ಟೆಯಮೇಲೆ ನೀರು ಉರುಳುವುದಕ್ಕೆ ಆರಂಭಿಸಿದೆ.

ಇಂದೂರು ಸಂಸ್ಥಾನದ ದಿವಾನಗಿರಿಯಲ್ಲಿದ್ದು ಹಿಂದೆರಳಿ ಬಂದಿದ್ದ ಮ|| ಡಿ. ಎಂ. ನರಸಿಂಗರಾಯರು ಈಚೆಗೆ ನಭಾ ಸಂಸ್ಥಾನದ ದಿವಾನರಾಗಿ ಹೋಗಿದ್ದರು. ಈಗ ಮತ್ತೆ ಇಂದೂರು ರೆವಿನ್ಯು ಮಿನಿಸ್ಟರಾಗಿ ಹೋಗುವರಂತೆ.

ಮೈಸೂರು ಸಂಸ್ಥಾನದಲ್ಲಿ ಪ್ರಕಾಶಮಾನವಾದ ಬಣ್ಣಗಳ ಗರಿಗಳನ್ನುಳ್ಳ ಪಕ್ಷಿಗಳೂ, ನವಿಲುಗಳೂ, ಜಿಂಕೆಗಳೂ 1927 ನೆಯ ಜುಲೈ ತಾ|| 30ರ ಕಾಲಾವಧಿಯ ವರೆಗೂ ಹಿಡಿಯಲ್ಪಡಕೂಡದು ಅಥವಾ ಕೊಲ್ಲಲ್ಪಡಕೂಡದು ಎಂದು ಸರ್ಕಾರದಿಂದ ವಿಧಿಸಲ್ಪಟ್ಟಿದೆ.

ಶ್ರೀಮನ್ ಮಹಾರಾಜರವರು ಪ್ರೈವೇಟ್ ಸೆಕ್ರೆಟರಿಯವರೊಡನೆ ಈ ತಾ|| 21ರಲ್ಲಿ ಶಿವನಸಮುದ್ರಕ್ಕೆ ದಯಮಾಡಿಸಿ ಅಲ್ಲಿ ವೈದ್ಯುತ ಕಾರ್ಯಕಲಾಪವನ್ನು ಪರಾಮರ್ಶಿಸಿಕೊಂಡು ನೆನ್ನೆಯ ದಿನ ಬೆಂಗಳೂರಿಗೆ ಚಿತ್ತೈಸಿದರು, ಮತ್ತು ಬೆಂಗಳೂರಿನಲ್ಲಿ 2-3 ವಾರಗಳಿರುವುದಾಗಿ ತಿಳಿಯಬಂದಿದೆ.

ಬೆಂಗಳೂರು ದಕ್ಷಿಣ ಭಾಗದ ಎಕ್ಸ್‌ಟೆನ್ಷನ್ನುಗಳಿಗೆ ಕುಡಿಯುವ ನೀರು ಸರಿಯಾಗಿ ಒದಗುತ್ತಿರಲಿಲ್ಲ. ಆದುಕಾರಣ ಎಲಹಂಕದ್ವಾರದ ಬಳಿಯಿಂದ ದಕ್ಷಿಣದ ಕೊನೆಯವರೆಗೆ ಮತ್ತೊಂದು ದೊಡ್ಡ ನಲ್ಲಿಯನ್ನು ಹಾಕಿಸಲು 1 ಲಕ್ಷ ರೂ. ಗಳನ್ನು ಮ್ಯುನ್ಸಿಪಾಲಿಟಿಯವರು ಸ್ಯಾಂಕ್ಷನ್ ಮಾಡಿದ್ದಾರೆ.

ಸ್ಪ್ರೈಪರ್ ಖಾದಿ ಬಟ್ಟೆಗಳಿಗೆ ಪೌಂಡ್ 1ಕ್ಕೆ 1 ರೂ. ಸುಂಕವು ಬರುವ ಜನವರಿಯಿಂದ ವಸೂಲ್ಮಾಡಲ್ಪಡುವಂತೆ ನಮ್ಮ ಸರ್ಕಾರದವರು ವಿಧಿಸಿದ್ದಾರೆ. ಮಿಲ್ಲುಗಳಲ್ಲಿ ನೆಯ್ಯಲ್ಪಟ್ಟು ಕೈರಾಟೆ ಮಗ್ಗಗಳಿಂದ ನಿರ್ಮಿತವಾದುದೆಂದು ಮೋಸದಿಂದ ಮಾರಲ್ಪಡುತ್ತಿರುವ ಖಾದಿಯ ಮೇಲೆ ಮಾತ್ರ ಇದು ವಿಧಿಸಲ್ಪಟ್ಟಿದೆ.

ನಮ್ಮ ಸಂಸ್ಥಾನದ ದಿವಾನರಾದ ಮ|| ಎ. ಬಾನರ್ಜಿಯವರಿಗೆ ಇಂಡ್ಯಾಸರ್ಕಾರದ ಸರ್ವೀಸ್ ಸಂಬಂಧವು ಇದುವರೆಗೂ ಇದ್ದಿತು. ಯಾವಾಗ ಬೇಕಿದ್ದರೂ ಅಲ್ಲಿಯ ಕೆಲಸಕ್ಕೆ ಹೋಗಬಹುದಾಗಿದ್ದಿತು. ಈಚೆಗೆ ನಮ್ಮ ಸಂಸ್ಥಾನದ ದಿವಾನಗಿರಿಯು ಖಾಯಂ ಆದುದರ ಮೇಲೆ ಕಳೆದ ಮೇ ತಾ|| 1 ರಿಂದ ಇಂಡ್ಯಾ ಸರ್ಕಾರದ ಸರ್ವೀಸಿನ ಸಂಬಂಧದಿಂದ ನಿವೃತ್ತಿಯನ್ನು ಪಡೆದುಕೊಂಡರು.

ಚೀಫ್‌ಕೋರ್ಟಿನ ರಿಜಿಸ್ಟ್ರಾರ್ ಆಗಿದ್ದ ಮ|| ಜಿ. ಶ್ರೀನಿವಾಸಯ್ಯರ್, ಬಿ.ಎ., ಎಂ.ಎಲ್. ರವರು ಮೈಸೂರು ಡಿಸ್ಟ್ರಿಕ್ಟ್ ಜಡ್ಜರಾಗಿ ನಿಯಮಿಸಲ್ಪಟ್ಟು ಕಳೆದ ತಾ|| 20ರಿಂದ ಉದ್ಯೋಗವನ್ನು ನೋಡುತ್ತಿರುವರು. ಇವರು ಮ|| ಬಿ. ನಾಗಪ್ಪನವರು ಚೀಫ್‌ಕೋರ್ಟಿನಲ್ಲಿ ಬದಲಿ ನೋಡುತ್ತಿದ್ದಾಗ್ಗೆ ರಾಜಧಾನಿಯ ಡಿ|| ಜಡ್ಜರಾಗಿಯೂ, ಇದಕ್ಕೆ ಪೂರ್ವ ಕೆಲಕಾಲ ಮುನಸೀಫರಾಗಿಯೂ ಇದ್ದು ಬಹಳ ನಿಸ್ಪೃಹತೆಯಿಂದಲೂ ಸಮರ್ಥತೆಯಿಂದಲೂ ತಮ್ಮುದ್ಯೋಗವನ್ನು ನಿರ್ವಹಿಸಿ ಲಾಯರುಗಳ ಹಾಗೂ ಕಕ್ಷಿಗಾರರ ಪ್ರೀತಿ ಗೌರವಕ್ಕೆ ಪಾತ್ರರಾಗಿದ್ದರು. ಇಂತಹ ಗುಣಾಢ್ಯರು ಮೈಸೂರು ಡಿ|| ಜಡ್ಜರಾಗಿ ಪುನಃ ದಯಮಾಡಿಸಿರುವುದಕ್ಕಾಗಿ ಜನರು ಸಂತೋಷಪಟ್ಟು ಇವರು ಈ ಉದ್ಯೋಗದಲ್ಲಿ ಸ್ಥಿರಗೊಳಿಸಲ್ಪಡಲೆಂದು ಪ್ರಾರ್ಥಿಸುತ್ತಾರೆ.

ಚಿಕ್ಕದೇವರಾಯ ನಾಲೆಯಲ್ಲಿ ಮೊದಲು ಕಾಲಕ್ಕೆ ಸರಿಯಾಗಿ ಜೂನ್ ತಾ|| ೧೦ ಕ್ಕೆ ನೀರನ್ನು ಕೊಟ್ಟುದರಿಂದ ರೈತರು ಬೀಜವನ್ನು ಅಗೆಯೊಯ್ದರು. ಪೈರುಗಳು ನಾಟಿಗೆ ಸಿದ್ಧವಾಗುವ ಹೊತ್ತಿಗೆ ಇಂಜನಿಯರ್ ಇಲಾಖೆಯವರು ಇನ್ನು 15 ದಿನಗಳವರೆಗೆ ನಾಲೆಯಲ್ಲಿ ನೀರು ಕೊಡುವುದಿಲ್ಲ, ಮತ್ತೆ ಕಾಮಗಾರಿಯಾಗಬೇಕಾಗಿದೆ ಎಂದು ಟಾಂಟಾಂ ಹೊಡೆಯಿಸಿ ನೀರನ್ನು ತಡೆದುಬಿಟ್ಟರಂತೆ. ಈಗ ಪೈರುಗಳಿಗೆ ನೀರಿಲ್ಲದೆ ಒಣಗುತ್ತಿವೆ. ಅಲ್ಲದೆ ಮುಂದೆ ನಾಟಿಮಾಡುವ ಹೊತ್ತಿಗೆ ಕಾಲಾತೀತವಾಗಿ ಪೈರುಗಳು ಬಹಳ ಬಲಿತು ಉದ್ದವಾಗಿ ಹೋಗುತ್ತವೆ. ಬೆಳಸು ಅರ್ಧಭಾಗ ಮಾತ್ರವಾಗುತ್ತದೆ ಎಂದು ರೈತರು ಹಾಹಾಕಾರಪಡುತ್ತಿದ್ದಾರೆ. ರೈತರ ಕಷ್ಟವು ಇಂಜನಿಯರ್ ಶಾಖೆಯ ದೊರೆಗಳಿಗೆ ಗೊತ್ತಾಗುವುದಿಲ್ಲ. ನಮ್ಮ ಕಷ್ಟವನ್ನು ಯಾರಿಗೆ ಹೇಳಿಕೊಳ್ಳೋಣ ಎಂದು ಬಡ್ಡ ರೈತರು ಬರೆದುಕೊಂಡಿದ್ದಾರೆ. ಜೂನ್ ತಿಂಗಳಿಗೆ ಮುಂಚೆಯೇ ನಾಲಾ ಕಾಮಗಾರಿಯನ್ನೆಲ್ಲಾ ಮುಗಿಯಿಸದೆ ಹೋದ ಉದ್ಯೋಗಿಗಳಿಗೆ ತಕ್ಕ ಬಂದೋಬಸ್ತನ್ನು ಮಾಡುತ್ತ ಬಂದರೆ ಇಂಥ ತೊಂದರೆಗಳು ತಪ್ಪಿಹೋಗುವುವು.

ಭರತಖಂಡದ ವೃತ್ತಾಂತಗಳು.

ಲಂಡನ್ನಿನಿಂದ ಬೊಂಬಾಯಿಗೆ ೩ ದಿನಗಳಲ್ಲಿ ಪ್ರಯಾಣ ಮಾಡಿ ಸೇರಬಹುದಾದಂಥ ವಿಮಾನವೊಂದನ್ನು ಷೇಲ್ ಕಂಪೆನಿಯವರು ನಿರ್ಮಿಸಿರುವುದಾಗಿ ಕರ್ನಲ್ ಬರ್ನಿ, ಸರ್ ರಾಬರ್ಟ್ ಕಾರ್ಟೆ ಎಂಬುವರುಗಳು ತಿಳಿಯಪಡಿಸಿದ್ದಾರೆ.

ಜಗದ್ವಿಖ್ಯಾತ ಗಾಯಕಶಿಖಾಮಣಿಯಾದ ಪ್ರೊಫೆಸರ್ ರಹಿಮತ್ ಖಾನರವರು ಕುರಂದವಾಡದಲ್ಲಿ ಕಳೆದ ಜೂನ್ ತಾ|| 26 ರಲ್ಲಿ ಕಾಲಾಧೀನರಾದರು. ಇಂಥ ಗಾಯಕರು ಮತ್ತೊಬ್ಬರನ್ನು ಕಾಣುವುದು ಅಸದಳವೆಂದು ಗಾನವಿದ್ಯಾಮರ್ಮಜ್ಞರೆಲ್ಲಾ ವಿಷಾದಪಡುತ್ತಿದ್ದಾರೆ.

ಮಲಬಾರಿನಲ್ಲಿ ಮಾಲಾಪುರದ ಸ್ಪೆಷಲ್ ಜೈಲಿನಲ್ಲಿಡಲ್ಪಟ್ಟಿದ್ದ ಇಲ್ಲಿಕಾಲ್ ಎಂಬ ಭಯಂಕರ ವಿಪ್ಲವಕಾರನು ಒಬ್ಬ ಮಾಪಿಳಾ ಪೋಲೀಸ್ ಕಾನ್‌ಸ್ಟೆಬಲಿನ ಬಳಿಯಲ್ಲಿದ್ದ ತುಪಾಕಿಯನ್ನೂ ತೋಟಾಗಳನ್ನೂ ಹೇಗೋ ಅಪಹರಿಸಿ ತಲೆತಪ್ಪಿಸಿಕೊಂಡು ಓಡಿಹೋಗಿರುವನು. ಇವನ ಹೆಸರನ್ನು ಕೇಳಿದರೆ ಮಲಬಾರೇ ನಡುಗುವುದಂತೆ.

ಪಿಶಾವರ್‌ಪ್ರಾಂತದಲ್ಲಿ ಖಾನ್‌ಮಿರ್ಯನ್‌ವಾಲಿ ಜಿಲ್ಲೆಯಲ್ಲಿ ಹಗಲಹೊತ್ತೇ ಕಳ್ಳರುನುಗ್ಗಿ ಜನರನ್ನೂ ಸೊತ್ತುಗಳನ್ನೂ ಹೊತ್ತುಕೊಂಡು ಹೋಗುವುದು ಹೆಚ್ಚಿಹೋಗಿದೆ. ಕಳೆದ ಜೂನ್ ತಾ|| 17 ರಲ್ಲಿ ಪೋಲೀಸರಿಗೂ ಆ ಸುಲಿಗೆಕಳ್ಳರಿಗೂ ದೊಡ್ಡ ಕದನವಾಯಿತು. ಕಳ್ಳರಾರೂ ಸೆರೆ ಸಿಕ್ಕಲಿಲ್ಲ. ಈಗ ಹೆಚ್ಚು ಪೋಲೀಸುದಳವು ಅಲ್ಲಿಗೆ ಕಳುಹಿಸಲ್ಪಟ್ಟಿದೆ.

ಪ್ರಿನ್ಸ್ ಆಫ್ ವೇಲ್ಸ್‌ರವರು ಆಂಗ್ಲ ಮುಖ್ಯ ಮಂತ್ರಿಯವರೊಡನೆ ಭರತಖಂಡದ ಸ್ಥಿತಿಯನ್ನು ಕುರಿತು ಬಹಳ ಹೊತ್ತು ಮಾತನಾಡಿದರಂತೆ. ಆಗ ಇಂಡ್ಯಾ ಸ್ಟೇಟ್ ಸೆಕ್ರೆಟರಿಯವರೂ ಅವರ ಅಸಿಸ್ಟೆಂಟರೂ ಕೂಡ ಇದ್ದರಂತೆ. ಇದರಿಂದಲಾದರೂ ಲಾಯಿಡ್ ಜಾರ್ಜರ ಅಭಿಪ್ರಾಯವು ಭರತಖಂಡವನ್ನು ಸಂತೃಪ್ತಿಪಡಿಸುವ ಕಡೆಗೆ ತಿರುಗೀತೆ? ನೋಡಬೇಕು.

ಬೊಂಬಾಯಿ ಆಧಿಪತ್ಯದಲ್ಲಿ ಕಂಡುಕೇಳದಂಥ ಅದ್ಭುತವಾದ ರೀತಿಯಲ್ಲಿ ಹಲವು ಕಳ್ಳತನಗಳನ್ನು ಕೆಲವು ಕಳ್ಳರು ನಡೆಯಿಸುತ್ತಿದ್ದರು. ಷೇಕ್ ಅಹಮ್ಮದ್ ಎಂಬುವನ ನಾಯಕತ್ವದಿಂದ ಈ ಗುಂಪು ಸಾಹಸದ ಕೆಲಸಗಳನ್ನು ಮಾಡುತ್ತಿದ್ದಿತು. ಪೋಲೀಸರು ಇವರನ್ನೆಲ್ಲಾ ಹಿಡಿದು ಶಿಕ್ಷೆಮಾಡಿಸಿದರು. ಈ ಕಳ್ಳರು ಒಳ್ಳೆ ಘರಾಣೆವರ್ತಕಸಂಘಕ್ಕೆ ಸೇರಿದವರಂತೆ ಪ್ರವರ್ತಿಸುತ್ತಿದ್ದರು. ಈ ಕಳ್ಳರನ್ನು ಹಿಡಿದ ಪೋಲೀಸರಿಗೆ ಬೊಂಬಾಯಿ ಸರ್ಕಾರದವರು ವಂದನೆಯನ್ನರ್ಪಿಸಿದ್ದಾರೆ.

ವಿದೇಶದ ವೃತ್ತಾಂತಗಳು.

ಜರ್ಮನ್ ಪ್ರಭುತ್ವದವರು ನಷ್ಟಪರಿಹಾರವನ್ನು ಧನರೂಪದಿಂದಲ್ಲದೆ ವಸ್ತುರೂಪದಿಂದಲಾದರೂ ಕೊಡಬಹುದೆಂದು ಫ್ರಾನ್ಸ್ ಪ್ರಭುತ್ವದವರು ಒಪ್ಪಿರುತ್ತಾರೆ.

ಯಾವುದೊಂದು ಪರ್ಯವಸಾನವೂ ಕುದುರದೆ ಹೇಗ್ ಪಟ್ಟಣದ ನಾನಾರಾಷ್ಟ್ರ ಸಮಾವೇಶವು ಹರಿದುಹೋಯಿತು. ರಷ್ಯನರ ಒರಟು ಬಿಗಿಪಟ್ಟೇ ಈ ಪರಿಣಾಮಕ್ಕೆ ಹೇತುವೆಂದು ಪ್ರಕಟವಾಗಿದೆ.

ಆಂಗ್ಲದೇಶದಲ್ಲಿ ರೈಲ್ವೆ ಬಾಡಿಗೆಗಳನ್ನು ಬರುವ ಆಗಸ್ಟ್ ತಾ|| ೧ರಿಂದ ಕಡಿಮೆಮಾಡುತ್ತಾರೆ. ಅಲ್ಲಿ ಹಾಗಿರುವಾಗ ನಮ್ಮ ದೇಶದಲ್ಲಿ ಬಾಡಿಗೆಗಳು ದಿನದಿನಕ್ಕೆ ಹೆಚ್ಚಿಸಲ್ಪಡುತ್ತಿರುವುದು ವಿಚಿತ್ರವೇ ಸರಿ.

ತಾವು ಕಳೆದ ಜೂಲೈ ತಾ|| 15 ರ ಕಂತಿನೊಳಗೆ ಸಲ್ಲಿಸಬೇಕಾಗಿದ್ದ 5 ಕೋಟಿ ಮಾರ್ಕುಗಳಲ್ಲಿ 3 ಕೋಟಿಯೂ 20 ಲಕ್ಷದ ಮಾರ್ಕುಗಳನ್ನು ಜರ್ಮನರು ನಷ್ಟಪರಿಹಾರಾರ್ಥವಾಗಿ ಮಿತ್ರಮಂಡಲಿಗೆ ಸಲ್ಲಿಸಿದರು.

ಗ್ರೀಕ್ ಪ್ರಭುತ್ವದವರು ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ಮುತ್ತುವುದಕ್ಕಾಗಿ 1 ಲಕ್ಷ ಮಂದಿ ಹರೆಯದ ಸೈನಿಕರನ್ನು ಕೂಡಿಸುತ್ತಿದ್ದಾರಂತೆ. ಥ್ರೇಸಿನ ಬಳಿಯಲ್ಲಿ ಆಗಲೇ ಕೆಲವು ಸೈನ್ಯಗಳು ಬಂದು ಕೂಡಿವೆಯಂತೆ. ಗ್ರೀಸ್‌ದೇಶದಲ್ಲಿ ಸೈನಿಕಶಾಸನವನ್ನು ಸಾರಿದ್ದಾರಂತೆ.

ಆಂಗ್ಲ ಮುಖ್ಯ ಮಂತ್ರಿಯವರು ಯುವರಾಜರಿಗಾಗಿ ಒಂದು ಔತಣವನ್ನು ಮಾಡಿಸಿದರು. ಆ ಸಂದರ್ಭದಲ್ಲಿ ಮಂತ್ರೀಶ್ವರರು ಯುವರಾಜರು ಮಾಡಿದ ಪರ್ಯಟನವನ್ನು ಕುರಿತು ಶ್ಲಾಘಿಸುವಾಗ ಭರತಖಂಡದ ವಿಷಯವಾಗಿಯೂ ಉದ್ಬುದ್ಧನಾದ ಮಾತುಗಳನ್ನಾಡಿದರು. ಅದರಲ್ಲಿ ಭಾರತೀಯ ಪ್ರಜೆಗಳ ಮತ್ತು ಸಂಸ್ಥಾನಿಕರ ರಾಜಭಕ್ತಿಯ ಕೊಂಡಾಡುವಿಕೆಯ ಹೊರತು ಮತ್ತಾವ ಪುರುಷಾರ್ಥದ ಮಾತೂ ಇಲ್ಲ. ಯುವರಾಜರು ಪ್ರತ್ಯುತ್ತರವನ್ನು ಕೊಡುವಾಗ್ಗೆ ಕೊನೆಯಲ್ಲಿ "ಪೂರ್ವದಿಂದಲೂ ಸಾಮ್ರಾಜ್ಯ ಸೇವೆಯಲ್ಲಿ ಪ್ರಖ್ಯಾತಿಪಡೆದ ಆಂಗ್ಲೋದ್ಯೋಗಿಗಳು ಈಗಣ ಭರತಖಂಡದ ಸ್ಥಿತಿಯಲ್ಲಿಯೂ ಕೂಡ ದೊಡ್ಡ ವಿವೇಕವನ್ನೂ ಪ್ರತಿಭೆಯನ್ನೂ ತೋರ್ಪಡಿಸುವುದು ಅವಶ್ಯಕವು. ಭಾರತದೇಶವನ್ನು ಅದರ ಗಮ್ಯಸ್ಥಾನವನ್ನು ಸೇರಿಸುವುದರಲ್ಲಿ ಅವರು ವಿಶ್ವಾಸಪಾತ್ರರಾಗಿ ಸಹಾಯವನ್ನು ಮಾಡುತ್ತಿದ್ದಾರೆ. ಅದುಕಾರಣ ಆಂಗ್ಲದೇಶವು ಅವರಿಗೆ ಸಹಾಯಮಾಡಬೇಕು. ಭರತಖಂಡದ ಭವಿಷ್ಯತ್ ಸ್ಥಿತಿಯ ವಿಷಯದಲ್ಲಿ ನನ್ನ ಸಹಾನುಭೂತಿಯನ್ನು ಭರತಖಂಡವು ಅವಲಂಬಿಸಿಕೊಂಡಿರಬಹುದು" ಎಂಬುದಾಗಿ ಅಪೌಲ್ಯವಾದ ವಚನಗಳನ್ನಾಡಿ ಭರತಖಂಡದ ಮೇಲೆ ತಮಗಿರುವ ವಿಶ್ವಾಸವನ್ನು ವ್ಯಕ್ತಪಡಿಸಿ ಭರತಖಂಡಕ್ಕೆ ಅಭಯದಾನವನ್ನು ಕೂಡ ಮಾಡಿದುದು ಗಣ್ಯವಾದ ವಿಷಯವಾಗಿದ್ದಿತು.

ಐರ್ಲೆಂಡಿನಲ್ಲಿ ದಕ್ಷಿಣಭಾಗದೊಳಗೆ ಎಂದರೆ ಲಿಮರಿಕ್, ಕಾರ್ಕು, ಕೆರ್ರಿಲಾಟರ್‌ಫರ್ಡ್, ಟಿಪ್ಪರಾ ಮೊದಲಾದ ಪಟ್ಟಣಗಳ ಪ್ರಾಂತದಲ್ಲಿ ಪ್ರಜಾಸ್ವಾಮ್ಯವಾದಿಗಳ ಪಕ್ಷದ ಸೈನಿಕರು ಪ್ರಭುತ್ವ ಸೈನ್ಯದಮೇಲೆ ಬಿದ್ದು ಬಹಳ ಬಲವಾಗಿ ಕಾದಾಡಿದರು. ಕಾರ್ಕುಪಟ್ಟಣದಲ್ಲಿ ವಿಪ್ಲವಕಾರರು ತಮ್ಮ ಪ್ರಭುತ್ವವನ್ನು ಸಾರಿದ್ದರು. ಇವರು ಆಕ್ರಮಿಸಿದ ಪಟ್ಟಣಗಳಲ್ಲೆಲ್ಲಾ ಪ್ರಜೆಗಳ ಅಂಗಡಿ ಮನೆಗಳ ಸೊತ್ತುಗಳನ್ನೆಲ್ಲಾ ಸುಲಿದುಕೊಳ್ಳುತ್ತಿರುವುದರಿಂದ ಪ್ರಜೆಗಳು ಭಯಭ್ರಾಂತರಾಗಿರುವಗಲ್ಲದೆ ಆಹಾರ್ಯ ವಸ್ತುಗಳು ಪ್ರಜೆಗಳಿಗೆ ಸಿಕ್ಕದೆ ಕ್ಷಾಮಬಾಧೆಯು ಕಾಲಿಕ್ಕಿಕೊಂಡಿದೆ. ಈ ವಿಪ್ಲವಕಾರರು ಕಾರ್ಕ್ ಪಟ್ಟಣದ ನೌಕಾತ್ರಯದಲ್ಲಿ ನಿಂತಿದ್ದ ಹಡಗುಗಳಿಗೆಲ್ಲಾ ನುಗ್ಗಿ ಒಳಗಿದ್ದ ಪದಾರ್ಥಗಳನ್ನೆಲ್ಲಾ ದೋಚಿಕೊಂಡರು. ಈ ವಿಪ್ಲವಕಾರರಿಂದ ದೇಶಕ್ಕೆ ಉಂಟಾಗಿರುವ ಅನರ್ಥವನ್ನೆಲ್ಲಾ ವಿವರಿಸಿ ಇಷ್ಟರಲ್ಲೇ ಇವರನ್ನೆಲ್ಲಾ ಅಣಗಿಸುತ್ತೇವೆಂದು ಪ್ರಭುತ್ವ ಸೇನಾಪತಿಗಳು ದೇಶೀಯರಿಗೆ ಅಭಯದಾನ ಪತ್ರಿಕೆಗಳನ್ನು ಪ್ರಕಟಿಸಿದ್ದಾರೆ. ಇಂಚಿದ್ವೀಪದಲ್ಲಿ ವಿಪ್ಲವಕಾರರು ಅಣಗಿಕೊಂಡಿದ್ದರು. ಅವರ ಮೇಲೆ ಯುದ್ಧಮಾಡಿ ಸೋಲಿಸಿದರು. ಡಂಡಲ್ಕ್ ಪಟ್ಟಣದಲ್ಲಿ ವಿಪ್ಲವಕಾರರು ಮಲಗಿರುವ ಸಮಯದಲ್ಲಿ ಪ್ರಭುತ್ವ ಸೈನಿಕರು ಸದ್ದುಮಾಡದೆ ಹೋಗಿ 300 ಮಂದಿಗಳನ್ನೂ ದುರ್ಗದಲ್ಲಿದ್ದ ಮದ್ದು ಗುಂಡು ಮೊದಲಾದ ಸಾಮಗ್ರಿಗಳನ್ನೂ ಹಿಡಿದುಕೊಂಡರು. ಡಿ ವೆಲರಾನು ಕಾರ್ಕುಪಟ್ಟಣದ ಬಳಿಯಲ್ಲಿ ರಹಸ್ಯವಾಗಿದ್ದುಕೊಂಡು ಸೈನ್ಯವನ್ನು ಕೂಡಿಸುತ್ತಿರುವಂತೆ ವಾರ್ತೆಯಿದೆ. ಇದುವರೆಗೆ ನಡೆದ ಯುದ್ಧದಲ್ಲಿ ವಿಪ್ಲವಕಾರರಲ್ಲಿ ಅನೇಕ ಮಂದಿ ನಾಯಕರು ಸೆರೆಸಿಕ್ಕಿಹೋಗಿರುವರು. ಇವರವರಿಗೆ ಸಂಧಿಮಾಡಬೇಕೆಂದು ಕೂಲಿಕಾರ ಪಕ್ಷದವರೂ ವರ್ತಕ ಸಂಘದವರೂ ಪ್ರಯತ್ನಿಸಿದ್ದಾರೆ.

ಪ್ರಜಾಪ್ರತಿನಿಧಿ ಸಭೆಗೆ ಸಭಿಕರಾಗಿ ಪ್ರಜೆಗಳಿಂದ ಆರಿಸಲ್ಪಟ್ಟವರುಗಳು :—

ಹಾಸನ ಡಿಸ್ಟ್ರಿಕ್ಟಿನಿಂದ—

ಮ|| ಗಳಾದ ಎನ್. ಎಸ್. ನಂಜುಂಡಯ್ಯನವರು, ಕೇಣಿ ಮಹಾದೇವಪ್ಪನವರು, ಎಚ್. ಬೋರಣ್ಣನವರು, ಬೆಳ್ಳೂರು ದ್ಯಾವಪ್ಪಗೌಡರು, ಬಗೂರು ಮಲ್ಲೇಗೌಡರು, ದೋಣಗಾಲ್ ಬಸವೇಗೌಡರು, ಕೆ.ಟಿ. ಶೇಷಯ್ಯನರು, ಎಚ್.ಎಸ್. ಚಿಕ್ಕಣ್ಣಗೌಡರು, ಮರುಳಸಿದ್ಧಪ್ಪನವರು, ರುದ್ರಪ್ಪನವರು, ಎಂ. ನಂಜಪ್ಪನವರು, ನಂಜೇಗೌಡರು, ಎಚ್. ಮುಂಜಯ್ಯನವರು, ನಾರಣಪ್ಪನವರು, ಕುಮಾರಯ್ಯನವರು, ಎ. ವಿ. ಸೂರ್ಯನಾರಾಯಣಶೆಟ್ಟರು, ಜಿ. ಶಾಮಾಚಾರರು, ಕೆ. ಎನ್. ಶ್ರೀಕಂತಯ್ಯನವರು, ಎಚ್. ಎ. ರಂಗಸ್ವಾಮಿಯವರು, ಪಿ. ಸುಬ್ಬಾರಾಯಶೆಟ್ಟರು, ಚೆನ್ನಬಸಪ್ಪನವರು, ಮಳಲಿವೆಂಕಟರಾಮಯ್ಯನವರು, ಬಿ. ವೆಂಕಟಸಾಮಪ್ಪನವರು, ಎಸ್. ವೆಂಕಟೇಶಯ್ಯ, ಬಿ.ಎ., ಬಿ.ಎಲ್. ರವರು, ಎನ್. ನಾಗಪ್ಪಯ್ಯನವರು, ಸೆಂಟ್ ಜಾನ್ ಹಂಟ್‌ರವರು ಒಟ್ಟು 26 ಮಂದಿಗಳು.

ಕೋಲಾರ ಡಿಸ್ಟ್ರಿಕ್ಟಿನಿಂದ—

ಮ|| ಗಳಾದ ಜಿ. ಗಿರ್‍ಮಾಜಿರಾಯರು, ದೊಡ್ಡರಾಮೇಗೌಡರು, ಟಿ. ಶ್ರೀನಿವಾಸಾಚಾರರು, ಕೆ. ರಾಮೇಗೌಡರು, ಎನ್. ರಾಮಾರಡ್ಡಿಯವರು, ಟಿ. ಎಂ. ರಾಮಚಂದ್ರರಾವ್‌ರವರು, ತಾತಿರಡ್ಡಿಯವರು, ಚಿಕ್ಕರೆಡ್ಡಿಯವರು, ಎಚ್. ಕೃಷ್ಣಮೂರ್ತ್ಯಾಚಾರರು, ರಾಮಪ್ಪನವರು, ಸಿ. ನಾರಾಯಣಸ್ವಾಮಿಶೆಟ್ಟಿಯವರು, ಎಚ್. ನಾರಾಯಣಯ್ಯನವರು, ಎನ್. ಸಂಪಂಗಿರಾಮಯ್ಯನವರು, ವೆಂಕಟಸೋಮಿಗೌಡರು, ಜಿ. ರಾಮಪ್ಪನವರು, ಎಸ್. ನಾಗರಾಜಯ್ಯನವರು, ಚೆನ್ನಬಸಪ್ಪನವರು, ಮಹಮ್ಮದ್‌ಯಾಸಿಂಸಾಬರು, ಮಹಮ್ಮದ್‌ಯೂಸುಫ್ ಖಾನರು, ವೇಮಾರಡ್ಡಿಯವರು, ಬಿ. ಶ್ಯಾಮರಾವ್‌ರವರು, ಎಸ್. ಹಂಪಯ್ಯನವರು, ಸಿ. ಎಫ್. ಹೀತ್‌ಕೋಟ್‌ರವರು, ಸಿ. ಬಿ. ಗೋಪಾಲರಾವ್‌ರವರು, ಡಿ. ವೆಂಕಟರಾಮಯ್ಯನವರು ಒಟ್ಟು 25 ಮಂದಿಗಳು.

ತುಮಕೂರು ಡಿಸ್ಟ್ರಿಕ್ಟಿನಿಂದ—

ಮ|| ಗಳಾದ ವೀರಪ್ಪಗೌಡರು, ಅನಂತರಾಜಪ್ಪನವರು, ಬಿ. ಅನಂತಲಕ್ಷ್ಮೀನಾರಣಪ್ಪನವರು, ಲಕ್ಷ್ಮೀನರಸಪ್ಪನವರು, ಚಿಕ್ಕೇಗೌಡರು, ಪಟ್ಟಾಭಿರಾಮಶೆಟ್ಟರು, ವೆಂಕಟರಮಣಯ್ಯನವರು, ಸಿ. ಸೂರಪ್ಪನವರು, ನರಸಿಂಹಯ್ಯನವರು, ಜಿ. ಮುರಿಗಪ್ಪನವರು, ಜಿ. ಎಸ್. ಮುರಿಗಪ್ಪನವರು, ಚಿಕ್ಕತಿಮ್ಮೇಗೌಡರು, ಡಿ. ಎಸ್. ಮಲ್ಲಪ್ಪನವರು, ಆಂಜನೇಯಶೆಟ್ಟರು, ವಾಸುದೇವರಾವ್‌ರವರು, ಬಾಳೆಗೌಡರು, ಎಚ್. ಎಸ್. ಗುಂಡಪ್ಪನವರು, ಕೆ. ಎಸ್. ಗುಂಡಪ್ಪನವರು, ಟಿ. ಜಿ. ನಾಗಪ್ಪನವರು, ಎಚ್. ಗುಂಡಪ್ಪನವರು, ಎಸ್. ನಾರಣಪ್ಪನವರು, ಎಚ್. ಹೊನ್ನೆಗೌಡರು, ಬಿ ಕೆ. ವೆಂಕಟರಮಣಯ್ಯನವರು, ಕೆ. ಸುಬ್ಬರಾವ್‌ರವರು, ಸಿಂಗ್ರಿನಂಜಪ್ಪನವರು, ಗುರುಚೆನ್ನಬಸವಯ್ಯನವರು, ಅಬ್ದುಲ್ ನಬಿಖಾನ್‌ಸಾಬರು, ಸಿ. ಕೃಷ್ಣರಾವ್ ಬಿ.ಎ.ಬಿ.ಎಲ್. ರವರು, ಕೆ. ಸೂರ್ಯನಾರಾಯಣರಾವ್‌ರವರು ಒಟ್ಟು 29 ಮಂದಿಗಳು.

ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ—

ಮ|| ಗಳಾದ ಎ. ಅನಂತಯ್ಯನವರು, ಸಿ. ಸುಬ್ಬರಾವ್‌ರವರು, ಪಿ. ವೆಂಕಪ್ಪಯ್ಯನವರು, ಪಟೇಲ್ ಹಾಲಪ್ಪನವರು, ಪಟೇಲ್ ಬಸಪ್ಪನವರು, ನಗರದ ಗುರುಲಿಂಗಪ್ಪನವರು, ಕುದುಪಲೆ ಬಸವಲಿಂಗಪ್ಪನವರು, ಚೆನ್ನಬಸಪ್ಪಗೌಡರು, ಸೂರಣಗಿ ಸಿದ್ಧಬಸಪ್ಪನವರು, ನಾಡಿಗಭಾಸ್ಕರರಾವ್‌ರವರು, ನಾಡಿಗಲಕ್ಷ್ಮಣರಾವ್‌ರವರು, ಬಸವೇಶ್ವರಶಿವಾಜಿಬಡೆಯರು, ಕಾಳಿಗುಂಡಪ್ಪನವರು, ವೆಂಕಟಗಿರಿಯಪ್ಪನವರು, ಅಂಚೆ ತಿಮ್ಮಪ್ಪನವರು, ನಾಗಪ್ಪಗೌಡರು, ಶಾಂತವೀರಪ್ಪನವರು, ಎಲವತ್ತಿ ರಾಮರಾವ್‌ರವರು, ಬೀಗಮುದ್ರೆ ಗೋಪಾಲಾಚಾರರು, ಈಸುಫ್‌ಖಾನರು, ಶ್ರೀನಿವಾಸದೀಕ್ಷಿತರು, ಎಚ್. ಜಿ. ಬಸವಪ್ಪನವರು, ಬಿ. ಎನ್. ರಾಘವಯ್ಯನವರು, ಭೂಪಾಲಂರುಕ್ಕಯ್ಯನವರು, ಕೋರಿಹಾಲಪ್ಪನವರು ಒಟ್ಟು 25 ಮಂದಿಗಳು.

ಬೆಂಗಳೂರು ಡಿಸ್ಟ್ರಿಕ್ಟಿನಿಂದ—

ರಾವ್‌ಬಹದ್ದೂರ್ ಬಿ. ವಿ. ವೆಂಕಟಸಾಮಿನಾಯಿಡುರವರು, ಮ|| ಗಳಾದ ಬಿ. ಶ್ರೀನಿವಾಸಯ್ಯಂಗಾರರು, ಚಿಕ್ಕಗುರುವಾರೆಡ್ಡಿಯವರು, ಸೀನಪ್ಪನವರು, ಜೋಡಿದಾರ್ ಗೋವಿಂದಪ್ಪನವರು, ಡಿ. ಎಸ್. ಹನುಮಂತರಾವ್‌ರವರು, ವೀರೇಗೌಡರು, ಮುನಿಸಾಮಿಗೌಡರು, ಸಿ. ನರಹರಯ್ಯನವರು, ಹುಚ್ಚಹನುಮೆಗೌಡರು, ಪಿ. ಮುತ್ತಯ್ಯನವರು, ದಾಸೇಗೌಡರು, ವೆಂಕಟೇಗೌಡರು, ನಾರಾಯಣಗೌಡರು, ಬಿ. ಶ್ರೀನಿವಾಸಯ್ಯಂಗಾರರು, ಆರ್. ಸುಬ್ಬರಾವ್‌ರವರು. ಟಿ. ರಾಮಚಂದ್ರರಾವ್‌ರವರು, ಕರಣಿಕ ಕೃಷ್ಣಮೂರ್ತಿರಾವ್‌ರವರು, ಸುಬ್ಬರಾವ್‌ರವರು, ಬಿ. ಉಸ್ಮಾನ್ ಖಾನ್‌ರವರು, ಎ. ಶ್ರೀಕಂಠಪ್ಪನವರು, ಎಂ. ಸುಬ್ಬಯ್ಯ ಬಿ.ಎ. ಯವರು, ಆರ್. ಗೋಪಾಲಸ್ವಾಮಿಅಯ್ಯರು, ಎಚ್. ಕೃಷ್ಣಪ್ಪ ಬಿ.ಎ. ಯವರು, ಎಚ್. ವಿ. ಚಂದ್ರಶೇಖರಯ್ಯ ಬಿ.ಎ. ಬಿ.ಎಲ್. ರವರು, ಟಿ. ಸಿದ್ದಪ್ಪನವರು, ಜವಳಿ ಹುಚ್ಚಪ್ಪನವರು, ಪಿ. ಆರ್. ಬಸವರಾಜಪ್ಪನವರು, ಮಂಡಿ ದಾಸಪ್ಪನವರು, ಬಿಂದುಮಾಧವಾಚಾರರು, ಎಚ್. ಸುಬ್ಬಯ್ಯನವರು, ಸಯ್ಯದ್‌ಇಬ್ರಾಹಿಂಸಾಬರು, ಸಿ. ಕೃಷ್ಣಮೂರ್ತಿಯವರು, ಬಿ. ಎನ್. ವಿಜಯದೇವ, ಎಂ. ಎ. ಬ್ಯಾ-ಅಟ್-ಲಾ ಯವರು, ಜಿ. ಪರಮಶಿವಯ್ಯ ಬಿ.ಎ.ಎಲ್.ಎಲ್. ಬಿ. ಯವರು, ಜೆ.ಆರ್. ಇಸಾಕ್ ಬಿ.ಎ.,ಎಂ.ಬಿ.ಇ.ಯವರು, ಎನ್. ವಿ. ನಾರಾಯಣಮೂರ್ತಿ ಬಿ.ಎ.ಬಿ.ಎಲ್.ರವರು, ಮಹಮ್ಮದ್‌ಅಬ್ಬಾಸ್‌ಖಾನರು, ಪಿ. ಮುರಿಗೇಶಂಪಿಳ್ಳೆಯವರು, ಜಿ. ಸಂಜೀವಯ್ಯನವರು, ರಾಮಚಂದ್ರರಾವ್ ಸಿಂಧ್ಯರವರು, ಟಿ. ಸಂಜಪ್ಪನವರು, ಸಯ್ಯದ್ ಅಬ್ದುಲ್‌ರಷೀದ್‌ರವರು, ಡಿ. ಶ್ರೀಕಂಠರಾವ್‌ರವರು, ಷರಾಫ್ ವೆಂಕಟಸ್ವಾಮಿಶೆಟ್ಟರು ಒಟ್ಟು 45 ಮಂದಿಗಳು.

ಕೋಲಾರದ ಚಿನ್ನದಗಣಿಗಳ ಬೋರ್ಡಿನಿಂದ ಒಂದು ವರ್ಷದವರೆಗೆ ಮಾತ್ರ ಮಿ|| ಎಚ್. ಎಂ. ಎ. ಕುಕ್‌ರವರು.

ಮೈಸೂರು ಡಿಸ್ಟ್ರಿಕ್ಟಿನಿಂದ.—

ಮ|| ಗಳಾದ ಎಚ್. ಕೃಷ್ಣಶಾಸ್ತ್ರಿಗಳು, ತಮ್ಮಯ್ಯಗೌಡರು, ತಿಮ್ಮೇಗೌಡರು, ಗಂಗಪ್ಪನವರು, ಮಾಯಿಗೌಡರು, ಜಿ. ವೆಂಕಟಸಾಮಿಶೆಟ್ಟರು, ಪಿ. ಕೆಂಪಯ್ಯನವರು, ಸಂಗನಬಸಪ್ಪನವರು, ಪುಟ್ಟಣ್ಣನವರು, ಸಾಲಾರ್‌ಖಾನರು, ಮಾದಪ್ಪನವರು, ಖದೀಂ ವೆಂಕಟಸುಬ್ಬಯ್ಯನವರು, ನಾಗೇಂದ್ರಯ್ಯನವರು, ವಿ. ಕೆ. ನಂಜುಂಡಯ್ಯನವರು, ಪಿ. ಆರ್. ಲಕ್ಷ್ಮೀನಾರಣಪ್ಪನವರು, ಸಿದ್ಧಲಿಂಗಪ್ಪನವರು, ಬೋರೇಗೌಡರು, ಕೆ. ವೆಂಕಟಸಾಮಯ್ಯ ಬಿ. ಎ., ಬಿ. ಎಲ್ ರವರು, ಟಿ. ವೆಂಕಟಸಾಮಯ್ಯನವರು, ಷರಾಫ್ ಪದ್ಮರಾಜಯ್ಯನವರು, ಇ. ಪುರುಷೋತ್ತಮಾನಂದಗೋಸಾಯಿಯವರು, ಮಹಮ್ಮದ್‌ಸೇಟರು, ಪಿ. ಎಸ್. ಅನಂತರಾವ್‌ರವರು. ವೈ. ವಿರೂಪಾಕ್ಷಯ್ಯನವರು, ಕೆ. ಕೃಷ್ಣಸ್ವಾಮಿರಾವ್ ಬಿ. ಎ, ಎಲ್ ಎಲ್. ಬಿ. ಯವರು, ಮಿರ್ಯಾಕ್‌ಸಾಹೇಬರು, ಶ್ರೀನಿವಾಸಶೆಟ್ಟರು. ಒಟ್ಟು 27 ಮಂದಿಗಳು.

ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ—

ಮ|| ಗಳಾದ ಸಾಹುಕಾರ್ ವೀರಭದ್ರಪ್ಪನವರು, ಸಾಟಿ ಹಾಲಪ್ಪನವರು, ಟಿ. ಎಂ. ಓಂಕಾರಪ್ಪನವರು, ದೊಗ್ಗಹಳ್ಳಿ ಬಸವಣ್ಣಪ್ಪನವರು, ಅನಂತಪದ್ಮನಾಭತಿವಾರಿಯವರು, ಪಟೇಲ್ ಹನುಮಯ್ಯನವರು, ಎಚ್. ನಾರಾಯಣರಾವ್‌ರವರು ಸಂಕದ ರಂಗಣ್ಣನವರು, ನಾಡಿಗ ಮಲ್ಲಪ್ಪನವರು, ಪಟೇಲ್ ಷಣ್ಮುಖಪ್ಪನವರು, ಕೃಷ್ಣಪ್ಪನವರು, ವಿರುಪಣ್ಣನವರು, ಗುರಪ್ಪನವರು, ರಾಘವೇಂದ್ರರಾವ್‌ರವರು, ಭಾವಿಸಣ್ಣ ಅಪ್ಪಸ್ವಾಮಿಯವರು, ಎಂ. ಚೆನ್ನಬಸಪ್ಪನವರು, ಎಂ. ಮುರಿಗಪ್ಪನವರು, ಎಚ್. ವಿ. ಗೋಪಾಲಯ್ಯನವರು, ಎಂ. ಶಾಂತವೀರಪ್ಪನವರು. ಒಟ್ಟು 19 ಮಂದಿಗಳು.

(ಇವರಲ್ಲದೆ ಬಿಟ್ಟು ಹೋಗಿರುವ ಇನ್ನು ಕೆಲವರ ಹೆಸರುಗಳು ಮುಂದೆ ಗೆಜೆಟ್ಟಿನಲ್ಲಿ ಬಂದಾಗ ಪ್ರಕಟಿಸಲ್ಪಡುವುವು.)

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಿಸಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಸಂಪದಭ್ಯುದಯದ ವಿಲೇಖಕರ ಚಾಕಚಕ್ಯ.

ಸ್ವಾಮಿ,

ನಿಜಸ್ಥಿತಿಯನ್ನು ವಿಪರ್ಯಾಸಮಾಡಿ ಹೇಳಿ ಪರರಿಗೆ ಕೇಡನ್ನು ಬಯಸುವ ವಿಷಯದಲ್ಲಿ ಸಂಪದಭ್ಯುದಯದ ಕೂಟದವರಿಗೆ ಇರುವಷ್ಟು ಕುತೂಹಲವೂ ಪ್ರಾವೀಣ್ಯವೂ ಮತ್ತಾರಿಗೂ ಇಲ್ಲವೆಂದು ಹೇಳಬಹುದು. ದೃಷ್ಟಾಂತವಾಗಿ ಹಿಂದೆ ಎಷ್ಟೋ ಸಂಗತಿಗಳು ನಡೆದಿವೆ. ಈಗ ನಡೆದಿರುವ ಸಂಗತಿಯನ್ನು ಇಲ್ಲಿ ಬರೆಯುತ್ತೇನೆ. ಮ|| ಜಿ. ಪರಮಶಿವಯ್ಯ ಬಿ.ಎ., ಎಲ್‌ಎಲ್.ಬಿ., ಯವರು ಕಳೆದ ಲೆಜಿಸ್ಲೆಟೀವ್ ಕೌನ್ಸಿಲಿನ ಅಧಿವೇಶನದಲ್ಲಿ ಮಾಡಿದ ಭಾಷಣದ ಸಂದರ್ಭದಲ್ಲಿ "ರೈತರು ಅಗಸರ ಕತ್ತೆಗಳು" ಎಂದು ಹೇಳಿದರು. ಈ ಹೋಲಿಕೆಯು ಧರ್ಮವಾದದ್ದೆ?" ಎಂದು ಕಳೆದ ೭ನೆ ತಾರೀಖಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಪ್ರತ್ಯಕ್ಷದರ್ಶಿ ಎಂಬ ಅಂಕಿತದಿಂದ ಒಂದು ಲೇಖನವು ಬಂದಿರುವುದು. ರೈತರ ಮೇಲಣ ಅಭಿಮಾನದಿಂದ ಅವರ ಪಕ್ಷವನ್ನು ವಹಿಸಿ ಮಾತನಾಡುತ್ತಲಿದ್ದ ಮ|| ಪರಮಶಿವಯ್ಯನವರು ಅವರನ್ನು ಕತ್ತೆಗಳಿಗೆ ಹೋಲಿಸಿ ಅವಮಾನಪಡಿಸಬೇಕೆಂಬ ಉದ್ದೇಶದಿಂದ ಮಾತನಾಡುವ ಸಂಭವವುಂಟೆ? ಅವರು ಆ ಭಾಷಣವನ್ನು ಇಂಗ್ಲೀಷಿನಲ್ಲಿ ಮಾಡಿರುವರು. ಆ ಸಂದರ್ಭದಲ್ಲಿ ಉಪಯೋಗಿಸಿದ ವಾಕ್ಯವನ್ನೇ ಇಲ್ಲಿ ಕೊಡುತ್ತೇನೆ—Let no measure to improve the revenue resources affect the already over-burdened poor ryot, who is always treated as the financial Dhoby's Donkey. ಇದರ ಮುಖ್ಯಾಭಿಪ್ರಾಯವೇನೆಂದರೆ—ರೈತರು ಈಗಲೇ ಹೊರಲಾರದಷ್ಟು ಕಂದಾಯದ ಭಾರವನ್ನು ಹೊತ್ತಿದ್ದಾರೆ. ಅಗಸನು ಹೊರಿಸಿದಷ್ಟು ಭಾರವನ್ನೆಲ್ಲಾ ತಲೆಬಗ್ಗಿಸಿಕೊಂಡು ಹೊರುವ ಕತ್ತೆಯಂತೆ ರೈತರನ್ನು ಭಾವಿಸಿ ಫೈನಾನ್ಷಿಯಲ್ ಸೆಕ್ರೆಟರಿಯವರು ಬೊಕ್ಕಸವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಅಂಥ ರೈತರ ಮೇಲೆಯೇ ಮತ್ತಷ್ಟು ಭಾರವನ್ನು ಹೇರುವುದು ಧರ್ಮವಲ್ಲ ಎಂದು ಹೇಳುವುದೇ ಇಲ್ಲಿಯ ಸಂದರ್ಭ. ಇದರಿಂದ ಸರ್ಕಾರದವರು ಹೇರಿದಷ್ಟು ಭಾರವನ್ನೆಲ್ಲಾ ಸದ್ದಿಲ್ಲದೆ ರೈತರು ಹೊತ್ತು ತೆರುತ್ತಾರೆಂಬ ಭಾವದಿಂದ ರೈತರನ್ನು ಕತ್ತೆಗಳಂತೆ ಭಾವಿಸಿ ಕಂದಾಯದ ಭಾರಗಳನ್ನು ಹೆಚ್ಚಿಸಬಾರದೆಂದು ಸರ್ಕಾರಕ್ಕೆ ಬಿನ್ನಯಿಸಿರುವರೇ ಹೊರತು ರೈತರು ಕತ್ತೆಗಳೆಂದು ಸಿದ್ಧಾಂತಪಡಿಸುವುದಕ್ಕೆ ಮಿ|| ಪರಮಶಿವಯ್ಯನವರು ಪ್ರವರ್ತಿಸಿಲ್ಲವೆಂಬುದನ್ನು ಆ ಭಾಷಣದ ಪೂರ್ವಾಪರವಾಕ್ಯಗಳನ್ನು ಓದುವ ಒಬ್ಬ ೨-೩ನೆ ಫಾರಮ್ಮಿನ ವಿದ್ಯಾರ್ಥಿಯು ಕೂಡ ತಿಳಿದುಕೊಳ್ಳಬಲ್ಲನು. ಹೀಗಿದ್ದಾಗ್ಯೂ ಸಂಪದಭ್ಯುದಯದ ಲೇಖಕರು ಇಂಗ್ಲೀಷನ್ನು ಅರಿಯದ ರೈತರು ಮ|| ಪರಮಶಿವಯ್ಯನವರ ವಿಷಯದಲ್ಲಿ ಅಗ್ರಹಗೊಳ್ಳುವಂತೆ ಆಗಲೆಂಬ ದುರುದ್ದೇಶದಿಂದ ವಸ್ತುಸ್ಥಿತಿಯನ್ನು ವಿಪರ್ಯಾಸಮಾಡಿ ಬರೆದಿರುವುದನ್ನು ನೋಡಿದರೆ ಯಾತಕ್ಕೂ ಹೇಸದ ಲಜ್ಜೆಯಿಲ್ಲದ ಬರವಣಿಗೆಯನ್ನು ಬರೆಯಲೂ, ಅದರಿಂದ ಜನರನ್ನು ವಂಚಿಸಲೂ ಹೇಗೆ ಸಿದ್ಧರಾಗಿ ನಿಂತಿರುವರೆಂಬುದೂ ಈ ವ್ಯಾಪಾರದಿಂದ ದೇಶದಲ್ಲಿ ಪರಸ್ಪರ ದ್ವೇಷವನ್ನು ಬೆಳೆಯಿಸಲು ಎಷ್ಟು ಸನ್ನದ್ಧರಾಗಿರುವರೆಂಬುದೂ ಇಂಥ ಲೇಖನಗಳಿಗೆಲ್ಲಾ ಸಂಪದಭ್ಯುದಯ ಪತ್ರಿಕೆಯು ಸ್ಥಳವನ್ನು ಕೊಡುತ್ತ ಬರುತ್ತಿರುವುದರಲ್ಲಿ ಅವರ ಉದ್ದೇಶವೆಂಥಾದ್ದಾಗಿರಬೇಕೆಂಬುದೂ ಸಹ ಸುಜ್ಞವಾಚಕರಿಗೆಲ್ಲಾ ಗೊತ್ತಾಗದೆ ಇರದು.

ಸತ್ಯಾನ್ವೇಷಿ.

ರಾಜನಿಷ್ಠಾ ಸಭೆ.

ಹಾನಗಲ್ಲ ಶ್ರೀಮನ್ಮಹಾನಿರಂಜನ ಜಗದ್ಗುರು ಕುಮಾರಸ್ವಾಮಿಗಳವರ ಕೃಪಾಛತ್ರದ ಕೆಳಗೆ ತಾ|| 10-6-22ನೆ ಇಸವಿ ದಿನ ಹಾನಗಲ್ಲ ತಾ|| ಬಸಾಪುರ ಶ್ರೀ ಬಸವೇಶ್ವರ ದೇವಾಲಯದೊಳಗೆ ಮತ್ತು ತಾ|| 18-6-22ನೆ ಇಸವಿ ದಿನ ಆಡೂರ ಮೈಲಾರದೇವಸ್ಥಾನದಲ್ಲಿ ವೇ|| ಬಸವಾರ್ಯ ಬೂರಿಹಾಳಮಠ ಕನ್ನಡಶಾಲಾ ಹೆಡ್ಮಾಸ್ತರ ಆಲೂರ ಇವರ ಅಧ್ಯಕ್ಷತೆಯಲ್ಲಿ ಧಾರ್ಮಿಕಯುಕ್ತವಾದ ರಾಜನಿಷ್ಠ ಸಭೆಗಳು ಜರುಗಿದವು. ಈ ಸಭೆಗಳಿಗೆ ಆಜುಬಾಜು ಹಳ್ಳಿಗಳ ಯಾವತ್ತೂ ಜಾತಿಯ ಅಜಮಾಸು (1200) ಜನರು ಕೂಡಿದ್ದರು. ಈ ಸಭೆಯಲ್ಲಿ ಮಿ|| ಗುಂಡೋಕುಲಕರ್ಣಿ ವಾಸನ, ಮಿ|| ನರಸಿಂಹಮಾಸ್ತರ ಹಾವಣಗಿ, ಮಿ|| ರುದ್ರಗೌಡ ಪಾಟೀಲ ಹಾವಣಗಿ, ಮಿ|| ಬಸಪ್ಪ ಮಾಸ್ತರ ಸಂಕ್ರಿಕೊಪ್ಪ, ಮಿ|| ಚನ್ನವೀರಪ್ಪಸೆಟ್ಟರ, ಮಿ|| ಸಿ. ವಿ. ಸಿಂಧೂರ ಇವರ ವ್ಯಾಖ್ಯಾನಗಳು ಧಾರ್ಮಿಕ ರಾಜಕೀಯ ವಿಷಯಗಳಮೇಲೆ ಚನ್ನಾಗಿ ಆದವು. ನಂತರ ಸದರಿ ಶ್ರೀಗಳವರ ಅಮೃತತುಲ್ಯವಾದ ಉಪದೇಶವನ್ನು ಎಲ್ಲರೂ ಆನಂದದಿಂದ ಕೇಳಿ ಧನ್ಯರಾದರು ತರುವಾಯ ಅಧ್ಯಕ್ಷರ ಸಮಾರೋಪಣ ಭಾಷಣವಾದನಂತರ ಸುಗಂಧ ತಾಂಬೂಲ ವಿನಿಯೋಗದೊಡನೆ ಜಯಘೋಷವಾಗಿ ಸಭೆಯ ಮಂಗಲವಾಯಿತು.

ಸಿ. ವಿ. ಸಿಂಧೂರ,
ಚನ್ನವೀರೇಶ ವಾಚನಮಂದಿರ.

ಶ್ರೀ ರಂಭಾಪುರೀಮಠ.

ಇದು ಹಿಂದೂಸ್ಥಾನದ ಸರ್ವ ವೀರಶೈವ ಜನಾಂಗಕ್ಕೂ ಜಗದ್ಗುರು ಪೀಠವೆಂದು ಕೇಳಿದ್ದೇನೆ. ಇದನ್ನು ನೋಡಬೇಕೆಂದು, ತಾ||10-7-22ನೆದಿನ ಅಲ್ಲಿಗೆ ಹೋಗಿದ್ದೆನು. ಇಲ್ಲಿನ ಸ್ವಾಮಿಗಳವರು ಗತಿಸಿ 4-5 ತಿಂಗಳುಗಳಾಗಿವೆ. ಸಧ್ಯದ ಕಾರುಬಾರುಗಳು ಒಬ್ಬ ಸರ್ವಾಧಿಕಾರಿಗಳಿಂದ ನಡೆಯುತ್ತಲಿರುವುದೆಂದು ಕೇಳಿದೆನು. ಆದರೆ ವಿಶಾಲವಾಗಿರುವ ಈ ಮಠದ ಕಟ್ಟಡವು ಬಹು ಶಿಥಿಲವಾಗಿರುವುದನ್ನೂ ಪ್ರಕೃತದಲ್ಲಿ ಈ ಪೀಠವು ಅಧಿಕಾರಿಶೂನ್ಯವಾಗಿರುವುದನ್ನ ಸಹ ನೋಡಿದ ಬೇರೆ ಧರ್ಮದವನಾದ ನನಗೇನೆ ಬಹುವ್ಯಸನವುಂಟಾಯಿತು. ಭರತಖಂಡದಲ್ಲೆಲ್ಲಾ 35 ಲಕ್ಷ ವೀರಶೈವರಿದ್ದಾರೆಂದು ತಿಳಿದಿದ್ದೇನೆ ಇವರಲ್ಲಿ ಎಷ್ಟೋಜನ ಸ್ವಮತಾಭಿಮಾನಿಗಳೂ ಧರ್ಮನಿಷ್ಠರೂ ಇದ್ದಿರಬಹುದು. ಅಂಥವರಲ್ಲಿ ಒಬ್ಬರ ದೃಷ್ಟಿಯಾದರೂ ಕ್ರಮವರಿತು ಬಿದ್ದಿದ್ದರೆ ಇಂತಹ ಶೋಚನೀಯಾವಸ್ಥೆಗೆ ಕಾರಣವಿರಲಿಲ್ಲ. ಈ ಮೂಲಕವಾದರೂ ಈ ಜನಾಂಗದ ಪ್ರಮುಖರುಗಳು ತಮ್ಮಗಳ ಆಸ್ತಿಗಳಿಗಿಂತಲೂ ಅತಿಮುಖ್ಯವಾಗಿರುವ ಈ ಪೀಠದ ಅಧಿಕಾರವನ್ನು ಶೀಘ್ರದಲ್ಲಿ ಮಾಡೋಣದರಿಂದಲೂ ಜೀರ್ಣವಾಗುತ್ತಲಿರುವ ಈ ಮಠದ ಕಟ್ಟಡವನ್ನು ನವೀಕರಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದರಿಂದಲೂ ತಮಗಿರಬೇಕಾದ ನೈಜವೀರ ಭಕ್ತಿಯನ್ನು ಪ್ರದರ್ಶಿಸಿ ಈಶಪ್ರೀತಿಗೆ ಪಾತ್ರರಾಗುವ ಸುಯೋಗವನ್ನು ಆ ಜಗದೀಶನೇ ಕಲ್ಪಿಸಲೆಂದು ಹಾರೈಸುತ್ತೇನೆ.

ದೇವರಾವ್ ಸೋಲ್ ಏಜಂಟ್.

ವಿವಾಹಮಹೋತ್ಸವ.

ಬೀರೂರು ವೇ|| ಉಬ್ರಾಣಿಮಠದ ಎನ್. ಎಮ್. ಶಿವಲಿಂಗಸ್ವಾಮಿಯವರು ತಮ್ಮ ಕುಮಾರ ಚಿ|| ಶ್ರೀಕಂಠ ಶರ್ಮಾರಾಧ್ಯರೆಂಬುವರಿಗೆ ಬೀರೂರಲ್ಲಿರುವ ಕಣಬೆ ಗಟ್ಟೀಮಠದ ವೇ. ಕೆ. ಎಮ್. ಮರುಳಾರಾಧ್ಯರ ಪುತ್ರಿ ಚಿ. ಸೌ. ಗಿರಿಜಾಂಬೆಯೆಂಬ ಕನ್ಯಾಮಣಿಯನ್ನು ತಂದು ತಮ್ಮ ಸ್ವಗೃಹದಲ್ಲಿಯೇ ಪಾಣಿಗ್ರಹಣಮಹೋತ್ಸವವನ್ನು ತಾರೀಖು 19-6-22ರಲ್ಲಿ ವಿಧ್ಯುಕ್ತವಾಗಿ ನೆರವೇರಿಸಿದರು. ವಿವಾಹಕಾಲಕ್ಕೆ ಕಡೂರು ಡಿ|| ಡೆಪ್ಯುಟಿ ಕಮಿಷನರ್ ಸಾಹೇಬರವರು ಪೋಲೀಸ್ ಸೂಪರಿಂಟೆಂಡೆಂಟರವರು ತಾಲೋಕಿನ ಅಮಲ್ದಾರರವರು ಪೋಲೀಸ್ ಇನ್‌ಸ್ಪೆಕ್ಟರವರು ಬೀರೂರು ಡಾಕ್ಟರ್ ಸಾಹೇಬರವರು ಜಮೇದಾರರವರೇ ಮೊದಲಾದ ಸರ್ಕಾರಿ ಅಧಿಕಾರಿಗಳು ವೇ|| ಶ್ರೀಮಂತ ಪತ್ರೆ ವೀರಪ್ಪನವರು ದಾವಣಗೆರೆ ಶಿರುಕಪ್ಪನವರ ಮಠದ ವೇದಮೂರ್ತಿ ಷಡಕ್ಷರಪ್ಪಯ್ಯನವರು ಮೊದಲಾದ ಸ್ಥಳ ಪರಸ್ಥಳದ ದೊಡ್ಡಮನುಷ್ಯರನೇಕರುಗಳು ಸಹ ದಯಮಾಡಿಸಿ ಸಭಾಲಂಕೃತರಾಗಿದ್ದರು. ಮುಹೂರ್ತಕಾಲಕ್ಕೆ ಸರಿಯಾಗಿ ಚಿತ್ರದುರ್ಗದ ಶ್ರೀ|| ಶ್ರೀ|| ಜಗದ್ಗುರುಗಳವರ ಸನ್ನಿಧಿಯಿಂದಲೂ ಶ್ರೀಕಾಶಿ ಕೇದಾರ ಉಜ್ಜಯಿನಿ ಮುಂತಾದ ವೀರಶೈವ ಜಗದ್ಗುರುಗಳವರ ಸಂಸ್ಥಾನಾಧೀಶ್ವರರಿಂದಲೂ ಆಶೀರ್ವಾದ ಶ್ರೀಮುಖಗಳು ಕಳುಹಿಸಲ್ಪಟ್ಟಿದ್ದವಲ್ಲದೆ ಲೌಕಿಕ ದೊಡ್ಡಮನುಷ್ಯರುಗಳಾದ ಮ|| ರಾ|| ಮೆಥ್ಯೂ ಸಾಹೇಬರವರೇ ಮೊದಲಾದ ಅನೇಕ ಪದವೀಧರರಿಂದಲೂ ಅಭಿನಂದನಪತ್ರಗಳು ಕಳುಹಿಸಲ್ಪಟ್ಟಿದ್ದವು. ವಿವಾಹ ಮಹೋತ್ಸವವು ಬ್ಯಾಂಡ್ ಕ್ಲಾರಿಟ್ ಮುಂತಾದ ವಾದ್ಯವಿಶೇಷದಿಂದಲೂ ವೇಶ್ಯಾ ಸ್ತ್ರೀಯರ ಮನೋಹರವಾದ ನಾಟ್ಯ ಗಾನ ವಿನೋದದಿಂದಲೂ ಸಭಿಕರ ಮನಸ್ಸನ್ನು ಆನಂದ ಗೊಳಿಸುತ್ತಿದ್ದಿತು. ನಂತರ ವಧೂವರರಿಗೆ ಶ್ರೇಷ್ಠವಾದ ಉಡುಗೆರೆಗಳು ಮಾಡಲ್ಪಟ್ಟು ಫಲತಾಂಬೂಲ ಮರ್ಯಾದೆಯಿಂದಲೂ ದಿವ್ಯವಾದ ಭಕ್ಷ್ಯ ಭೋಜ್ಯಗಳಿಂದಲೂ ಮಾಡಿದ ಸತ್ಕಾರ ಸಂಭ್ರಮಗಳು ಸರ್ವರಿಗೂ ಸಂತೋಷವನ್ನುಂಟುಮಾಡಿದವು. ರಾತ್ರಿ ಬಾಣ ಬಿರುಸುಗಳಿಂದಲೂ ವಾದ್ಯಗಳಿಂದಲೂ ನಡೆದ ಪಲ್ಲಕ್ಕಿಯ ಉತ್ಸವವೂ ಬೀರೂರಿನ ಸಕಲ ಪಂಗಡದವರಿಗೂ ನಡೆಯಿಸಿದ ದಿವ್ಯವಾದ ಭೋಜನದ ಏರ್ಪಾಡುಗಳೂ ಈ ಸಂದರ್ಭದಲ್ಲಿ ಶ್ರೀಮಂತರಿಗೆ ತಕ್ಕ ಸಾರ್ಥಕತೆಯನ್ನುಂಟುಮಾಡಿತೆಂಬುದರಲ್ಲಿ ಸಂಶಯವಿಲ್ಲ. ಸಭೆಯಲ್ಲಿ ಮೈಸೂರು ಎಜುಕೇಷನ್ ಫಂಡಿಗೆ ಐದು ರೂಪಾಯಿಗಳು ಶ್ರೀ ಕಾಶಿ ವಿಶ್ವಾರಾಧ್ಯರ ಫಂಡಿಗೆ ಐದು ರೂಪಾಯಿಗಳು ಶ್ರೀ ಉಜ್ಜಯಿನೀ ಜಗದ್ಗುರು ಮಹಾಸಂಸ್ಥಾನಕ್ಕೆ ಐದು ರೂಪಾಯಿಗಳು ಶ್ರೀ ಗುರುವರ್ಗ ಸುಧಾರಕ ಶಿವಯೋಗ ಮಂದಿರಕ್ಕೆ ಐದು ರೂಪಾಯಿಗಳು ಕೈ|| ವೈ|| ವೀರಸಂಗಪ್ಪಯ್ಯನವರ ಅಗ್ರತಾಂಬೂಲದ ಬಗ್ಗೆ ಎರಡು ರೂಪಾಯಿಗಳು ತೆಗೆಯಲ್ಪಟ್ಟು ಕಳುಹಿಸಲ್ಪಟ್ಟವು.

ಓರ್ವ ಅಭಿಮಾನಿ.

[೨ ರೂ. ಗಳು ಬಂದಿದೆ.—ಪ. ಪ್ರ.]

ಗದಗ ತಾಲ್ಲೂಕು ಹಮ್ಮಿಗಿ.

ಈ ಗ್ರಾಮದಲ್ಲಿ ತಾ|| 14-7-1922 ನೇ ಇಸವಿ ದಿವಸ ಎರಡನೆಯ ರಾಜನಿಷ್ಠಾ ಸಭೆಯು ಕೂಡಿತ್ತು. ಸಭೆಯ ಅಧ್ಯಕ್ಷಸ್ಥಾನವನ್ನು ವಿರೂಪಾಕ್ಷಗೌಡ ಪಾಟೀಲ ಇವರ ಸೂಚನೆಯ ಮೇರೆಗೆ ಶಾಂತಪ್ಪಾ ವೀರಭದ್ರಪ್ಪಾ ಕುಬಸದ (ಗುರುಭಕ್ತಕೇಸರಿ) ಇವರು ವಹಿಸಿದ್ದರು. ಸಭೆಗೆ ರಾಮಚಂದ್ರ ಶ್ರೀನಿವಾಸ ಕುಲಕರ್ಣಿ, ಭೋಜರಾಜಪ್ಪಾ ಗುಂಜಳ, ಅನಂತಪ್ಪಾ ಉಪಾಧ್ಯಾಯ, ಚನ್ನಬಸಪ್ಪಾಗದ್ದೀಕೇರಿ, ವೀರಯ್ಯಾ ಶಿರಹಟ್ಟಿ, ವೀರಭದ್ರಯ್ಯಾ ಕಣ್ವಿಮಠ, ಹೊಂಬಪ್ಪಾ ಜವಳಿ, ಆರತಪ್ಪಾ ಮಾದಾನಶೆಟ್ಟಿ, ಫಕ್ಕೀರಪ್ಪಾ ಸಾಳೀರ ಮೊದಲಾದ ಪ್ರಮುಖ ಜನರು ಕೂಡಿದ್ದರು.

ಸಭೆಯಲ್ಲಿ ಕೆಳಗೆ ಬರೆದ ಪ್ರಕಾರ ಜನರ ವ್ಯಾಖ್ಯಾನಗಳಾದವು.

(1) ವಿದ್ಯೆ ಹಾಗೂ ಅಸಹಕಾರ ನಿಷೇಧ ಈ ವಿಷಯದಲ್ಲಿ ವಿರೂಪಾಕ್ಷಗೌಡ ಪಾಟೀಲ ಇವರು. (2) ಏಕಮತ್ಯದ ಬಗ್ಗೆ ಶರಭಯ್ಯಾನವರು ನಾಗಭೂಷಣಮಠ ಇವರು. (3) ಕೈಗಾರಿಕೆಯ ಮಹತ್ವವನ್ನು ಕುರಿತು ಜಿ. ಭೀ. ಕಾಮರಡ್ಡಿಯವರ ಗರ್ಲ್‌ಸ್ಕೂಲ್‌ಮಾಸ್ತರ ಇವರು. (4) ಒಕ್ಕಲತನದ ಸುಧಾರಣೆಯನ್ನು ಕುರಿತು ರಾ|| ಹ|| ತನಕವಾಡ ಗಸೀ ಅ|| ಮಾಸ್ತರ ಇವರು. (5) ರಾಜನಿಷ್ಠೆಯ ಪ್ರಸಾರದ ಬಗ್ಗೆ ಫಕರುದ್ದೀನಸಾಬ ಜವಳಿ ಇವರು. ಈ ಪ್ರಕಾರಜನರ ಭಾಷಣಗಳಾದ ನಂತರ ಅಧ್ಯಕ್ಷರು ಮೇಲಿನ ಯಾವತ್ತೂ ವಿಷಯಗಳನ್ನು ವಿವೇಚನೆ ಮಾಡಿ (ರಾಜಾ ಪ್ರತ್ಯಕ್ಷ ದೇವತಾ) ಎಂಬ ಆರ್ಯೋಕ್ತಿಯಂತೆ ನಾವೆಲ್ಲರೂ ರಾಜನಿಷ್ಠರಾಗಿ ಇರಬೇಕೆಂದು ಬೋಧಿಸಿದರು. ನಂತರ ಚನ್ನಬಸಪ್ಪಾ ಸಾಳೀರ ಈತನು ನೆಯ್ಗೆಯಿಂದಲೇ ತಯಾರಿಸಿದ ನಿಶಾನಿಯನ್ನು ತಂದು ತೋರಿಸಲು ಅಧ್ಯಕ್ಷರು ಒಂದು ರೂಪಾಯಿ ಬಹುಮಾನವನ್ನು ಕೊಟ್ಟರು. ಆಮೇಲೆ ಪಾಸಾದ ಠರಾವುಗಳು—

(1) ರಾಜನನ್ನು ದೇವರಂತೆ ಭಾವಿಸಬೇಕೆಂಬ ನಮ್ಮ ಪೂರ್ವಜರ ವಾಕ್ಯಕ್ಕೆ ಎಂದೆಂದಿಗೂ ಭಂಗವನ್ನು ತಂದುಕೊಳ್ಳಬಾರದು.

(2) ಸಹಕಾರಿಕೆಯನ್ನು ಸರ್ವತ್ರ ಪ್ರಸಾರಮಾಡತಕ್ಕದ್ದು.

(3) ವಿದ್ಯೆಯಲ್ಲಿ ಹಿಂದುಳಿದ ಜನಾಂಗದವರಿಗೆ ತಮ್ಮ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಉತ್ತೇಜನ ಕೊಟ್ಟು ನಮ್ಮ ಗ್ರಾಮದ ಶಾಲೆಯ ಬಾಲ ಬಾಲಿಕೆಯರ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಪಡತಕ್ಕದ್ದು.

ಈ ಪ್ರಕಾರ ಠರಾವುಗಳು ಪಾಸಾದ ಬಳಿಕ ಚನ್ನಬಸಪ್ಪಾ ಗದ್ದೀಕೇರಿ ಇವರು ಬ್ರಿಟಿಷ್ ಸಾಮ್ರಾಜ್ಯವು ನಿರಂತರವಾಗಿ ಇರಲೆಂದು ಹಾರೈಸಲು ಶ್ರೀಮನ್ ಪಂಚಮಹಾಚಾರ್ಯ ಸಾರ್ವಭೌಮರಿಗೆ ಜಯವಾಗಲೆಂದು ಸರ್ವರೂ ಪರಮಾತ್ಮನನ್ನು ಧ್ಯಾನಿಸಿದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ವೀರಪ್ಪಾ ಫಕ್ಕೀರಪ್ಪಾ ವರದಾ.

ಕ್ಲೋಸ್‌ಪೇಟೆ ಸಬ್ ತಾ|| ಕಸಬಾಹೋಬಳಿ ಚಿಕ್ಕಸೂಲ್ಕೆರೆ ಗ್ರಾಮದ ವಿಚಾರ--ಸದರಿ ಚಿಕ್ಕಸೂಲ್ಕೆರೆ ಮರುಳಾರಾಧ್ಯ ವಂಶೋದ್ಭವರಾದ ಗವಿಮಠದ ಮರುಳುಸಿದ್ಧಸ್ವಾಮಿಗಳು ಈಗ್ಗೆ ಸುಮಾರು 10-12 ವರ್ಷಗಳಲ್ಲಿ ಮಾಗಡಿ ತಾ|| ಹುಲುವೇನಹಳ್ಳಿ ಗ್ರಾಮದಬಳಿ ಇರುವ ಬಸವನಬೆಟ್ಟದಲ್ಲಿ ಶಿಥಿಲವಾಗಿದ್ದ ಶ್ರೀ ಸಿದ್ದೇಶ್ವರಸ್ವಾಮಿ ದೇವಾಲಯವನ್ನು ಅಲ್ಲಿನ ವೀರಶೈವ ಮಹಾಜನಗಳಿಂದ ಧನಸಹಾಯವನ್ನು ಸುಮಾರು 500 ರೂಪಾಯಿಗಳ ವರೆಗೆ ವಸೂಲ್ಮಾಡಿ ದೇವಸ್ಥಾನವನ್ನು ಕಟ್ಟಿಸಿ ಶ್ರೀ ಸಿದ್ದೇಶ್ವರಸ್ವಾಮಿಯನ್ನು ಪ್ರತಿಷ್ಠೆಗೊಳಿಸಿ ಜೀರ್ಣೋದ್ಧಾರವಾಗಿ ನಡೆಯುವಂತೆ ಮಾಡಿ ಇಟೊ ತಾ|| ತಾವರೆಕೆರೆಯೆಂಬ ಗ್ರಾಮಕ್ಕೆ ಹೋಗಿ ಅಲ್ಲಿ 40-50 ವರ್ಷಗಳಿಂದ ಹಾಳುಬಿದ್ದಿದ್ದ ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನವನ್ನು ಅಲ್ಲಿನ ವೀರಶೈವ ಭಕ್ತಮಂಡಲಿಯವರಿಂದ ಧನಸಹಾಯವನ್ನು ಒದಗಿಸಿಕೊಂಡು ದೇವಸ್ಥಾನವನ್ನು ರಿಪೇರಿಮಾಡಿಸಿ ಶ್ರೀ ಬಸವೇಶ್ವರಸ್ವಾಮಿಯನ್ನು ನೆಲೆಗೊಳಿಸಿ ಪೂಜಾಸತ್ಕಾರ್ಯಗಳು ನಡೆಯುವಂತೆ ಮಾಡಿ, ಅಲ್ಲಿಂದ ಹೊರಟು ಕ್ಲೋಸ್‌ಪೇಟೆ ತಾಲ್ಲೋಕಿನಲ್ಲಿ ಸಂಚಾರಮಾಡುತ್ತಿದ್ದ ಶ್ರೀ ಮರಳುಸಿದ್ಧಸ್ವಾಮಿಗಳನ್ನು ಮೇಲ್ಕಂಡ ಚಿಕ್ಕಸೂಲ್ಕೆರೆ ವೀರಶೈವ ಮಂಡಲಿಯವರು—ಸ್ವಾಮಿ ನಮ್ಮ ಗ್ರಾಮದ ಸಮೀಪದಲ್ಲಿರುವ ಸೋಣೆ ಅರೆಗವಿಯಲ್ಲಿ ಪಂಚಲಿಂಗ ಪ್ರತಿಷ್ಠೆಯನ್ನು ಮಾಡಿಸಬೇಕು ಅದಕ್ಕಾಗಿ ನಮ್ಮಗಳ ಶಕ್ತ್ಯನುಸಾರ ಧನಸಹಾಯ ಮಾಡುವುದಲ್ಲದೆ ಕೆಲಸಮಾಡುವ ಕಾಮಗಾರಿಯವರ ಊಟೋಪಚಾರಗಳಿಗೂ ಮತ್ತು ತಮ್ಮಗಳ ಶಿವಾರ್ಚನೆಗೂ ಸಹ ಈ ಕಾರ್ಯ ಪೂರ್ತಿಯಾಗುವವರೆಗೆ ನಡೆಸಿಕೊಂಡು ಹೋಗುತ್ತೇವೆಂದು ಹೇಳಿದ್ದರಮೇಲೆ ಸ್ವಾಮಿಗಳು ಚಿಕ್ಕಸೂಲ್ಕೆರೆ ಗ್ರಾಮದಲ್ಲಿದ್ದುಕೊಂಡು ಮಾಗಡಿ, ದೊಡ್ಡಬಳ್ಳಾಪುರ, ಕ್ಲೋಸ್‌ಪೇಟೆ, ಕೊಳ್ಳೆಗಾಲ ಈ ತಾಲ್ಲೋಕುಗಳಲ್ಲಿ ಸಂಚಾರಮಾಡಿ ವೀರಶೈವ ಭಕ್ತಮಂಡಲಿಯವರಿಂದ ಧರ್ಮಧನಸಹಾಯದಿಂದ ಒದಗಿಸಿದ ಸುಮಾರು 6 ಸಾವಿರ ರೂಪಾಯಿಗಳನ್ನು ಕೂಡಿಸಿ, ಮದರಾಸಿನಿಂದ ಶಿಲಾಶಿಲ್ಪಿಗಳನ್ನು ಕರೆಸಿ 6-7 ಸಾವಿರ ರೂಪಾಯಿಗಳನ್ನು ಖರ್ಚಿಟ್ಟು ದೇವಸ್ಥಾನವನ್ನು ತಯಾರ್ಮಾಡಿಸಿ ಲಿಂಗಪ್ರತಿಷ್ಠೆಗಾಗಿ 5 ಪಾಣಿಪಾಟುಗಳನ್ನು ಮನೋಹರವಾಗಿ ತಯಾರ್ಮಾಡಿಸಿರುವದಲ್ಲದೆ ಕಾಶಿಯಿಂದ ಪಂಚಲಿಂಗಗಳನ್ನು ತರಿಸಿ, ಜಲವಾಸು ಮಾಡಿ ಮೂರುವರ್ಷಗಳಾಗುತ್ತಾ ಬಂತು. ಪ್ರತಿಷ್ಠಾಕಾರ್ಯಕ್ಕಾಗಿ 15 ಪಲ್ಲ ಅಕ್ಕಿಯು ಇದಕ್ಕಾಗಿ ಚಿಲ್ಲರೆಸಾಮಾನು ಹಿತ್ತಾಳೆ ತಾಂಬ್ರದ ಪಾತ್ರೆಗಳನ್ನು ಒದಗಿಸಿ ಸುಮಾರು 1-2 ವರ್ಷಗಳ ಹಿಂದೆ ಪ್ರತಿಷ್ಠಾಕಾರ್ಯವನ್ನು ನಡೆಸಬೇಕೆಂದು ಪ್ರಯತ್ನಮಾಡಿದ್ದ ಕಾರ್ಯಕ್ಕೆ ಸದರಿ ಚಿಕ್ಕಸೂಲ್ಕೆರೆ ವೀರಶೈವ ಭಕ್ತಮಂಡಲಿಯವರು ಈ ಸತ್ಕಾರ್ಯಕ್ಕೆ ಗಮನಕೊಡದೆ ಇರುವದನ್ನು ನೋಡಿ ಸದರಿ ಮರಳುಸಿದ್ಧಸ್ವಾಮಿಗಳು ಇಷ್ಟು ಶ್ರದ್ಧೆಯಿಂದ ಮಾಡಿಸಿದ ಸತ್ಕಾರ್ಯಕ್ಕೆ ವಿಘ್ನವಾಗಿರುವದನ್ನು ಇಲ್ಲಿನ ಪರಬಾರೆ ವೀರಶೈವಮಹಾಜನಗಳೂ ಮತ್ತು ಇತರರೂ ಬಹಳ ವಿಷಾದಪರವಶರಾಗಿರುತ್ತಾರೆ.

ಒಬ್ಬ ಭಕ್ತ.

ಬಾಗಲಕೋಟೆ ವೀರಶೈವ ತರುಣಸಂಘದವರ ಕರ್ತವ್ಯ.

ಕಳೆದ ಮೇ ತಿಂಗಳಲ್ಲಿ ಇಲ್ಲಿ ಕೂಡಿದ ತರುಣಸಂಘದ ಸಮ್ಮೇಲನದಲ್ಲಿ ಪಾಸಾದ ಠರಾವುಗಳನ್ನು ಆಚರಣೆಯಲ್ಲಿ ತರುವ ಕುರಿತು ಶ್ರೀಮನ್ನಿರಂಜನ ಮೃತ್ಯುಂಜಯ ಮಹಾಸ್ವಾಮಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿ ಶ್ರೀಗಳವರ ಆಜ್ಞೆಯ ಪ್ರಕಾರ ಕೆಳಗೆ ಬರೆದಂತೆ ಕೆಲಸಗಳನ್ನು ಆರಂಭಮಾಡಿರುತ್ತದೆ. ಈ ಊರಲ್ಲಿರುವ ವೀರಶೈವರ ಜನಸಂಖ್ಯೆಯೆಷ್ಟು ಅದರಲ್ಲಿ ಹೆಣ್ಣು ಗಂಡು ಹುಡುಗರೆಷ್ಟು? ವಿದ್ಯಾ ಕಲಿಯುವ ಹುಡುಗರೆಷ್ಟು? ಕಲಿಯದೇ ಇದ್ದ ಹುಡುಗರೆಷ್ಟು? ಎಂಬುದನ್ನು ತಿಳಿದುಕೊಳ್ಳಲಿಕ್ಕೂ ಕಲಿಯದೆ ಇದ್ದ ಹುಡುಗ ಹುಡುಗಿಯರ ಅನಾನುಕೂಲತೆಗಳನ್ನು ದೂರಮಾಡಿ ಶಾಲೆಗೆಹಾಕಲಿಕ್ಕೂ ಪದ್ಧತಿಯಪ್ರಕಾರ ಅಷ್ಟಾವರಣಕ್ಕೆ ಸರಿಯಾಗಿ ಆಚರಣೆಯನ್ನು ಇಟ್ಟರುತ್ತಾರೋ ಇಲ್ಲವೋ ಎಂಬುದನ್ನು ನೋಡುವದಕ್ಕಾಗಿ ನೇಮಿಸಿದ ಆಯಾ ವಾರ್ಡಿನ ಸ್ವಯಂಸೇವಕರು ಒಳ್ಳೇ ಶ್ರಮವಹಿಸಿ ಕೆಲಸಮಾಡ ಹತ್ತಿದರೆ ವೀರಶೈವರ ಒಳಪಂಗಡದವರಾದ ಗವಳಿಗಜನರು ಧರ್ಮದಿಂದಲೂ ವಿದ್ಯದಿಂದಲೂ ಆಚರಣೆಯಿಂದಲೂ ಅತಿ ಹೀನಸ್ಥಿತಿಯಲ್ಲಿರುವದನ್ನು ಕಂಡು ಆಯಾ ವಾರ್ಡಿನ ಸ್ವಯಂಸೇವಕರು ಅವರಲ್ಲಿ ಲಿಂಗವಿಲ್ಲದವರಿಗೆ ವೇದೋಕ್ತ ಲಿಂಗಧಾರಣವನ್ನು ಮಾಡಿ ಅವರಿಗೆ ವೀರಶೈವರು ಆಚರಿಸಲಾದ ಪದ್ಧತಿಗಳನ್ನು ತಿಳಿಸಿ ಅವರಿಗೆ ಸದಾಚಾರದಿಂದ ನಡೆಯಲಿಕ್ಕೆ ಬೋಧಿಸಿದರು. ಶ್ರೀಮನ್ನಿರಂಜನ ಮೃತ್ಯುಂಜಯ ಮಹಾಸ್ವಾಮಿಗಳು ಇಲಕಲ್ಲ ಹುನಗುಂದ ಅಮಿನಗಡ ಸುಳಿಭಾವಿ ಕಮತಗಿಯಿಂದ ಶ್ರೀ ಮುರಘಾಮಠ ಬೋರ್ಡಿಂಗದ ಭಿಕ್ಷೆಯನ್ನು ತೀರಿಸಿಕೊಂಡು ಇಲ್ಲಿಗೆ ದಯಮಾಡಿಸಿದರು. ತಾವಾಗಿ ಶ್ರೀಗಳವರು ಎಲ್ಲ ಗವಳಿಗರನ್ನು ಕರಿಸಿಕೊಂಡು ಅವರಿಗೆ ಧರ್ಮನೀತಿ ವಿದ್ಯಾಭ್ಯಾಸ ಈ ವಿಷಯಗಳ ಮೇಲೆ ಚೆನ್ನಾಗಿ ಉಪದೇಶಿಸಿದರು. ಆಯಾಯ ವಾರ್ಡು ಪ್ರತಿ ಆದಿತ್ಯವಾರ ತೆಗೆಯಲ್ಪಟ್ಟು ರಿಪೋರ್ಟು ಓದಲ್ಪಟ್ಟಿತು. ಎಲ್ಲ ತರುಣರೂ ಸಮಾಧಾನಕರವಾಗಿ ಕೆಲಸಮಾಡಿದ್ದನ್ನೂ ಮಾಡಹತ್ತಿರುವದನ್ನೂ ನೋಡಿ ಬಹಳ ಸಂತೋಷಹೊಂದಿದರು. ಇವರಿಂದ ಸಮಾಜದಲ್ಲಿ ಒಂದು ತೆರದ ಪ್ರೀತಿ ಒಗ್ಗಟ್ಟು ಆಗುತ್ತಿರುವದನ್ನು ನೋಡಿ ಎಲ್ಲರಿಗೂ ಸಮಾಧಾನವಾಗದೆ ಇರದು. ಶ್ರೀಗಳವರು ಧಾರವಾಡದ ಮುರಘಾಬೋರ್ಡಿಂಗದ ದೆಸೆಯಿಂದ ಈ ಊರಲ್ಲಿ 1000 ರೂ. ಭಿಕ್ಷೆಯನ್ನು ಸ್ವಂತ ಶ್ರಮದಕಡೆಗೆ ಎಳ್ಳಷ್ಟೂ ಲಕ್ಷ್ಯ ಕೊಡದೆ ಮನೆಮನೆಗೂ ದಯಮಾಡಿಸಿದ್ದನ್ನು ನೋಡಿದರೆ ಯಾರಿಗೆ ಕನಿಕರ ಬರಲಿಕ್ಕಿಲ್ಲ? ನಮ್ಮ ಸಮಾಜದಲ್ಲಿ ನಾನು ಹೆಚ್ಚು ನೀನು ಹೆಚ್ಚು ಎಂದು ಒಬ್ಬರನ್ನೊಬ್ಬರು ಮತ್ಸರಭಾವದಿಂದಲೂ ದ್ವೇಷಬುದ್ಧಿಯಿಂದಲೂ ನೋಡುವ ವಿರಕ್ತ ಮಹಾಸ್ವಾಮಿಗಳ ಮತ್ತು ಪಟ್ಟಚರವರ್ಯರೆ ಸುಮ್ಮನೆ ಸಮಾಜದಲ್ಲಿ ಒಡಕುಹುಟ್ಟಿಸಿ ಮನಸ್ಸಿಗೆ ಬಂದಂತೆ ಲೇಖನಗಳನ್ನು ಬರೆಬರೆದು ನಿಮ್ಮ ಹುಳುಕುಗಳನ್ನು ನೀವೇ ತಕ್ಕೊಳ್ಳುತ್ತೀರಿ ಇನ್ನಾದರೂ ಬಿಡಿರಿ, ನಿಮ್ಮ ಕರ್ತವ್ಯದ ಕಡೆಗೆ ಲಕ್ಷ್ಯಕೊಡಿರಿ. ಸಮಾಜದಲ್ಲಿಯ ಅವಿದ್ಯಾ ಅನಾಚಾರಗಳನ್ನು ಕಳೆಯಲಿಕ್ಕೆ ಪ್ರಯತ್ನಮಾಡಿರಿ, ಮೃತ್ಯುಂಜಯಸ್ವಾಮಿಗಳವರ ಅನುಕರಣಮಾಡಿರಿ, ಸಮಾಜೋದ್ಧಾರಕಾರ್ಯದಲ್ಲಿ ಕಂಕಣಬದ್ಧರಾಗಬೇಕಲ್ಲದೆ ಒಡಕುಹುಟ್ಟಿಸುವ ಶಾಸ್ತ್ರವನ್ನು ಬಿಡುವಿರೆಂದು ತುಂಬಾ ನಂಬಿದ್ದೇನೆ.

ಮುಚಬಂಡಪ್ಪ ವಿರುಪಾಕ್ಷಪ್ಪ ಜಗಜ್ಜಿನ್ನಿ,
ಸೆ. ವಿ. ತ. ಸ. ಬಾಗಲಕೋಟೆ.

ಸಂಸ್ಕೃತ ಕಾಲೇಜುಗಳ ವಿದ್ಯಾಭ್ಯಾಸ ಸಂಸ್ಕರಣ ವಿಷಯದಲ್ಲಿ ಏರ್ಪಟ್ಟಿದ್ದ ಸಂಘದವರು ಕೊಟ್ಟಿರುವ ವರದಿಯಮೇಲೆ ಅನೇಕ ಲೇಖನಗಳು ನಮ್ಮಲ್ಲಿಗೆ ಬರೆದುಬಂದಿವೆ. ಅವುಗಳನ್ನು ನೋಡುವಲ್ಲಿ ವರದಿಯು ವೀರಶೈವರಿಗೆ ಎಷ್ಟು ಉದ್ವೇಗವನ್ನುಂಟುಮಾಡಿದೆಯೆಂಬುದು ಗೊತ್ತಾಗುತ್ತದೆ. ಅವುಗಳಲ್ಲಿ ಕೆಲವು ತೀರ ಕಠಿನವಾಕ್ಯಗಳಿಂದ ಕೂಡಿರುವುದರಿಂದ ಅವುಗಳ ಪ್ರಕಟನವನ್ನು ಮಾಡದೆ, ಅದಕ್ಕಾಗಿ ಅವುಗಳ ಲೇಖಕರ ಕ್ಷಮೆಯನ್ನು ಕೋರಿ, ಸೌಮ್ಯಗಳಾಗಿರುವ ಲೇಖನಗಳನ್ನು ಮಾತ್ರ ಒಂದೊಂದಾಗಿ ಪ್ರಕಟಿಸುತ್ತೇವೆ.

ಪ.ಪ್ರ.

ಮೈಸೂರ ರಾಜ್ಯವೂ ಸಂಸ್ಕೃತ ವಿದ್ಯಾಭಾಗವೂ.

ಲೇಖಕರು—ಶ್ರೀ ಕಾಶೀ ಹಿಂದೂ ವಿಶ್ವವಿದ್ಯಾಲಯದ ವೇದಾಂತ ಶಾಸ್ತ್ರದ ಶಾಸ್ತ್ರಿವರ್ಗದ ಪ್ರಧಾನ ವಿದ್ಯಾರ್ಥಿಗಳಾದ ವೇದಾಂತವಿಶಾರದ ನ್ಯಾಯಭೂಷಣ ಪದವೀ ಪ್ರತಿಷ್ಠಿತರಾದ ಹೂಲಿ ಬೃಹನ್ಮಠದ ಶ್ರೀ ನೀಲಕಂಠ ಶಿವಾಚಾರ್ಯರು.

ನಮ್ಮ ಭಾರತವರ್ಷದಲ್ಲಿ ಅತ್ಯಂತಪ್ರಸಿದ್ಧಿಯನ್ನು ಪಡೆದ ಅದ್ವೈತ, ಶಿವಾದ್ವೈತ, ವಿಶಿಷ್ಟಾದ್ವೈತ, ದ್ವೈತಗಳೆಂಬ ಚತುರ್ಮತಗಳ ಆವಾಸಸ್ಥಾನವು ನಮ್ಮ ಪರಮಪವಿತ್ರವಾದ ಕರ್ನಾಟಕದೇಶವಾಗಿರುವದೆಂದು ಹೇಳಲು ತಿಲಮಾತ್ರವೂ ಸಂದೇಹವಿಲ್ಲ. ಅದರಲ್ಲಿ ನಮ್ಮ ಮೈಸೂರ ರಾಜ್ಯವಂತೂ ಈ ಚತುರ್ಮತಗಳ ಜನ್ಮಭೂಮಿಯೆಂದರೂ ಅಭ್ಯಂತರವಿಲ್ಲ. ಅದ್ವೈತ ಮತಸ್ಥಾಪಕರಾದ ಶ್ರೀ ಶಂಕರಾಚಾರ್ಯರು ದ್ರಾವಿಡದೇಶದಲ್ಲಿ ಜನ್ಮವನ್ನೆತ್ತಿ ಸಮಸ್ತದೇಶಗಳಲ್ಲಿ ತಮ್ಮ ಮತವನ್ನು ಸ್ಥಾಪಿಸಿ, ಕಟ್ಟಕಡೆಗೆ ಮೈಸೂರ ಮಹಾರಾಜರ ಆಶ್ರಯದಿಂದಲೇ ಶೃಂಗೇರಿಯಲ್ಲಿ ತಮ್ಮ ಮುಖ್ಯಸಿಂಹಾಸನವನ್ನು ಸ್ಥಾಪಿಸಿದರು. ಶಿವಾದ್ವೈತ ಮತಸ್ಥಾಪಕರಾದ ಶ್ರೀ ರೇಣುಕಾದಿ ಪಂಚಾಚಾರ್ಯರೂ ಶ್ರೀ ನೀಲಕಂಠ ಶಿವಾಚಾರ್ಯರೂ ಸಮಸ್ತ ದೇಶಗಳಲ್ಲಿ ಶಿವಾದ್ವೈತವನ್ನು ಪ್ರತಿಷ್ಠೆಗೊಳಿಸಿ ಕಟ್ಟಕಡೆಗೆ ಮೈಸೂರ ಮಹಾರಾಜರ ಆಶ್ರಯದಿಂದಲೇ ಕರ್ನಾಟಕದಲ್ಲಿ ತಮ್ಮತಮ್ಮ ಸಿಂಹಾಸನಗಳನ್ನು ಸ್ಥಾಪಿಸಿದರು. ಶ್ರೀ ರೇಣುಕ ಶಿವಾಚಾರ್ಯರು ಮೈಸೂರ ಮಹಾರಾಜರ ದಾನಪ್ರಾಶಸ್ತ್ಯದಿಂದ ಅವರ ರಾಜ್ಯದಲ್ಲಿಯೇ ತಮ್ಮ ಸಿಂಹಾಸನವನ್ನು ಸ್ಥಾಪಿಸಿದರು. ಆ ಸಿಂಹಾಸನವು ಈಗಲೂ ಕಡೂರ ಡಿ|| ಬಾಳೆಹೊನ್ನೂರೆಂಬ ಗ್ರಾಮದಲ್ಲಿ ವಿರಾಜಿಸುತ್ತಿರುವದು. ಶ್ರೀ ಮರುಳಾರಾಧ್ಯ ಶಿವಾಚಾರ್ಯರಾದರೂ ಆಗಿನ ಮೈಸೂರ ರಾಜ್ಯಕ್ಕೊಳಪಟ್ಟ ಬಳ್ಳಾರಿ ಡಿ|| ಉಜ್ಜನಿಯಲ್ಲಿ ತಮ್ಮ ಸಿಂಹಾಸನವನ್ನು ಸ್ಥಾಪಿಸಿ ಮೈಸೂರ ಮಹಾರಾಜರಿಂದ ಎಷ್ಟೋ ಮಹತ್ತರಗಳಾದ ಮರ್ಯಾದೆಗಳನ್ನು ಪಡೆದರು. ಶ್ರೀ ನೀಲಕಂಠ ಶಿವಾಚಾರ್ಯರಾದರೂ ತಮ್ಮ ದಿಗ್ವಿಜಯದ ಆರಂಭದಲ್ಲಿಯೇ ಮೈಸೂರ ಮಹಾರಾಜರ ಆಶ್ರಯವನ್ನು ಮಾಡಬೇಕಾಯಿತು. ಈ ಭಗವತ್ಪಾದರು ಆಗಿನ ಮೈಸೂರ ಮಹಾರಾಜರ ಆಸ್ಥಾನಪಂಡಿತನೂ ಚತುರ್ವೇದಪಾರಂಗತನೂ ಪ್ರಸಿದ್ಧಮೀಮಾಂಸಕನೂ ಆದ ಭಾಸ್ಕರಭಟ್ಟನೆಂಬ ಸ್ಮಾರ್ತ ಬ್ರಾಹ್ಮಣನನ್ನು ಶಾಸ್ತ್ರಾರ್ಥದಲ್ಲಿ ಪರಾಜಯಗೊಳಿಸಿ, ಆ ಭಾಸ್ಕರಭಟ್ಟನ ಹೆಸರಿನ ಪೂರ್ವೋತ್ತರ ಶಬ್ದಗಳನ್ನು ವ್ಯತ್ಯಾಸಗೊಳಿಸಿ ಭಟ್ಟಭಾಸ್ಕರ ಶಿವಾಚಾರ್ಯನೆಂಬ ಅಭಿಧಾನವನ್ನು ಕೊಟ್ಟು ಅವನಿಗೆ ವೀರಶೈವ ದೀಕ್ಷೆಯನ್ನಿತ್ತು ಶಿವಾದ್ವೈತ ಸಿದ್ಧಾಂತವನ್ನು ಉಪದೇಶಿಸಿದರು. ಮತ್ತು ಅನ್ಯಮತದ ಪಂಡಿತರ ಜಾಲದಲ್ಲಿ ಸಿಲುಕಿದ ಆಗಿನ ಮಹಾರಾಜರನ್ನು ಪೂರ್ವದಂತೆ ವೀರಶೈವ ಧರ್ಮವನ್ನು ಪರಿಪಾಲಿಸುವಂತೆ ಉತ್ಸಾಹಗೊಳಿಸಿದರೆಂದು ಶ್ರೀ ನೀಲಕಂಠ ದಿಗ್ವಿಜಯದಿಂದ ತಿಳಿಯಬರುತ್ತದೆ. ಅರ್ಥಾತ್ ಶಿವಾದ್ವೈತಕ್ಕೆ ಆಶ್ರಯದಾತರಾದರೂ ನಮ್ಮ ಮೈಸೂರ ಮಹಾರಾಜರೇ ಆಗಿರುವರು. ವಿಶಿಷ್ಟಾದ್ವೈತ ಮತಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರು ವೀರಶೈವರಾಜನಾದ ಚೋಳರಾಜನ ಉಪದ್ರವವನ್ನು ತಪ್ಪಿಸಿಕೊಂಡು ನಮ್ಮ ಮೈಸೂರ ಮಹಾರಾಜ

ರ ಆಶ್ರಯದಿಂದಲೇ ತಮ್ಮ ಮತವನ್ನು ಸ್ಥಾಪಿಸಿದರೆಂದು ಇತಿಹಾಸದಿಂದ ತಿಳಿದುಬರುತ್ತದೆ. ಇವರ ಸಿಂಹಾಸನಮಠವು ಪರಕಾಲ ಸಿಂಹಾಸನವೆಂಬಭಿಧಾನದಿಂದ ಈಗಲೂ ರಾಜಧಾನಿಯಲ್ಲಿ ವಿರಾಜಿಸುತ್ತಿರುವದು. ದ್ವೈತಮತಸ್ಥಾಪಕರಾದ ಶ್ರೀ ಮಧ್ವಾಚಾರ್ಯರಂತೂ ನಮ್ಮ ಕರ್ನಾಟಕ ದೇಶದವರೇ ಆಗಿರುವರು. ಇವರ ಜನ್ಮಸ್ಥಾನವು ಕರ್ನಾಟ ರಾಜ್ಯಾಂತರ್ಗತ ಉಡುಪಿಯೆಂಬ ಗ್ರಾಮವಿದ್ದು ಇವರ ಉತ್ತರಾದಿ ಮಹಾಪೀಠವಾದರೂ ಮೈಸೂರ ಮಹಾರಾಜರವರ ಆಶ್ರಯದಿಂದಲೇ ಸ್ಥಾಪಿಸಲ್ಪಟ್ಟಿತು. ಸಾರಾಂಶ—ಆ ಆ ಮತಗಳ ಸ್ಥಾಪನೆಯ ಸಮಯಗಳಲ್ಲಿ ಆ ಆ ಮತಾಚಾರ್ಯರಿಗೆ ಸಂಪೂರ್ಣವಾದ ಆಶ್ರಯವನ್ನು ಕೊಟ್ಟು ಆ ಭಗವತ್ಪಾದರ ಸದಭಿಪ್ರಾಯಗಳನ್ನು ಈ ಜಗತ್ತಿನಲ್ಲಿ ವಿಸ್ತಾರಗೊಳಿಸಿದ ರಾಜಪೀಠವೆಂದರೆ ನವಿನ್ಮ ಮೈಸೂರ ಮಹಾರಾಜಪೀಠವು. ಈ ರಾಜಪೀಠಕ್ಕೆ ಸಮಸ್ತ ಧರ್ಮಪೀಠವೆಂದರೂ ಅಭ್ಯಂತರವಿಲ್ಲ. ಆ ಆ ಸಮಯಗಳಲ್ಲಿ ನಮ್ಮ ಧರ್ಮಗಳಿಗೆ ಆಶ್ರಯವನ್ನು ಕೊಟ್ಟು ಧರ್ಮಪರಿಪಾಲನೆಯನ್ನು ಮಾಡದಿದ್ದರೆ, ಇಂದಿನವರೆಗೆ ನಮ್ಮ ಧರ್ಮಪೀಠಗಳೂ ಧರ್ಮಗಳೂ ಉಳಿಯುವದು ಅಶಕ್ಯವಾಗಿದ್ದಿತೆಂದು ಹೇಳಲು ಏನೂ ಸಂಶಯವಿಲ್ಲ. ಗುರುಮನೆಗೂ ಅರಮನೆಗೂ ಭೇದವಿಲ್ಲೆಂಬ ನಾಣ್ನುಡಿಯು ನಮ್ಮ ಮೈಸೂರ ಅರಸುಮನೆತನಕ್ಕೆ ಸಂಬಂಧಿಸಿದಷ್ಟು ಮತ್ತಾವ ಅರಸುಮನೆತನಕ್ಕೂ ಸಂಬಂಧಿಸಲಾರದೆಂದು ಬೇರೆ ಹೇಳುವ ಕಾರಣವಿಲ್ಲ. ಇದಂತೂ ನಮ್ಮ ಮೈಸೂರರಾಜ್ಯದ ಪೂರ್ವದ ಇತಿಹಾಸವಾಯಿತು. ಈಗಿನ ಇತಿಹಾಸವನ್ನಷ್ಟು ವಿಚಾರಮಾಡೋಣ—ಮೈಸೂರ ಮಹಾರಾಜ್ಯದಲ್ಲಿ ಒಂದು ಶತಮಾನದಿಂದೀಚೆಗೆ ಸಮಸ್ತಧರ್ಮಗಳ ಕಟ್ಟುಗಳೂ ವ್ಯತ್ಯಾಸವನ್ನು ಹೊಂದಿರುವುವೆಂದು ಹೇಳಬಹುದು. ಈ ವ್ಯತ್ಯಾಸವು ನಮ್ಮ ಮಹಾರಾಜ ವಂಶದವರಿಂದ ಸಂಭವಿಸದಿದ್ದರೂ ಅದರ ಸಂಬಂಧವು ಮಹಾರಾಜರಿಗಲ್ಲದೆ ಮತ್ತಾರಿಗೂ ಇರಲಾರದು. ಎಷ್ಟೋ ವರ್ಷಗಳಿಂದ ಅಂದರೆ ಮೊಲ್ಕಂಡ ಚತುರ್ಮತಗಳೂ ಸ್ಥಾಪಿತಗಳಾದಂದಿನಿಂದ ಸಾವಿರಾರು ವರ್ಷಗಳವರೆಗೆ ಸಮಸ್ತಧರ್ಮಗಳ ಪಂಡಿತರಿಗೂ ಕವಿಗಳಿಗೂ ಆಶ್ರಯಸ್ಥಾನವಾಗಿದ್ದ ನಮ್ಮ ಮೈಸೂರ ಅರಸುಮನೆತನವು ಈಗ ತ್ರಿಮತಸ್ಥರ ತ್ರಿಕೂಟದಲ್ಲಿ ಸಿಲುಕಿ ತನ್ನ ಚತುರಂಗಬಲವನ್ನೇ ಕಳೆದುಕೊಂಡುಬಿಟ್ಟಿದೆ. ಪೂರ್ವಕಾಲದಲ್ಲಿ ಚತುರ್ಮತಗಳ ವಿದ್ಯಾಪೀಠವೆನಿಸಿದ ನವಿನ್ಮ ಮೈಸೂರರಾಜ್ಯವು ಈಗ ತ್ರಿಮತಸ್ಥರ ಬಲುಮೆಯಿಂದ ತ್ರಿಮತಸ್ಥರ ವಿದ್ಯಾಪೀಠವಾಗಿ ಉಳಿದಿದೆ. ಪೂರ್ವಕಾಲದಲ್ಲಿ ಧರ್ಮಭೇದವಿಲ್ಲದೆ ನಡೆಯುತ್ತ ಬಂದ ನಮ್ಮ ಮೈಸೂರ ರಾಜ್ಯಪದ್ಧತಿಯು ಈಗ ತ್ರಿಮತಸ್ಥರ ಆಗ್ರಹದಿಂದ ಧರ್ಮಭೇದಕ್ಕೆ ಆಸ್ಪದವನ್ನು ಕೊಟ್ಟಿರುವುದು. ಅರ್ಥಾತ್ ನಮ್ಮ ಮೈಸೂರ ಸಾಮ್ರಾಜ್ಯದಲ್ಲಿ ಎಲ್ಲಿ ನೋಡಿದರೂ ತ್ರಿಮತಸ್ಥರ ಸುಳಿದಾಟ, ಎಲ್ಲಿ ನೋಡಿದರೂ ತ್ರಿಮತಸ್ಥರ ತಂತ್ರಾಟ, ಎಲ್ಲಿ ನೋಡಿದರೂ ತ್ರಿಮತಸ್ಥರ ಚೆಲ್ಲಾಟವೇ ಆಗಿರುವುದು. ಅಂದಮೇಲೆ ಉಳಿದವರ ಒದರಾಟ ಚೀರಾಟಗಳನ್ನು ಕೇಳುವವರಾರು? ಅನ್ಯಮತಗಳ ಮೇಲೆ ಅವರುಗಳು ನಡೆಸಿರುವ ಅನ್ಯಾಯಾಚರಣೆಯನ್ನು ಕೇಳುವವರು ದಿಕ್ಕಿಲ್ಲದಂತಾಗಿದೆ. ಈಗಿನ ನವೀನ ಪರಿಸ್ಥಿತಿಯಲ್ಲಿಯೇ ಹೀಗಾದಮೇಲೆ ಹಿಂದಿನ ಪೇಶ್ವೆಕಾಲದಲ್ಲಿ ಈ ತ್ರಿಮತಸ್ಥರ ಚೆಲ್ಲಾಟವೆಷ್ಟಿರಬಹುದಾಗಿತ್ತೆಂದು ಚತುರರಾದ ವಾಚಕರೇ ಊಹಿಸಬಹುದು. ಈಗಿನ ಮೈಸೂರರಾಜ್ಯದ ವಿದ್ಯಾಖಾತೆಗೊಳಪಟ್ಟ ಸಂಸ್ಕೃತ ವಿದ್ಯಾವಿಭಾಗದ ನಿಯಮಗಳನ್ನು ಪರೀಕ್ಷಿಸಿ ನೋಡಿದರೆ, ನಾವು ಹೇಳಿದ ಮೇಲಿನವಿಷಯವು ತಾನೇ ವಿದಿತವಾಗುವುದು. ಈ ರಾಜ್ಯದ ಸಂಸ್ಕೃತ ವಿದ್ಯಾವಿಭಾಗದ ನಿಯಮಗಳೆಂದರೆ ಉಳಿದ ರಾಜ್ಯಗಳ ನಿಯಮಗಳಿಗಿಂತ ಬಹಳ ವಿಲಕ್ಷಣಗಳಾಗಿರುವವು. ನೋಡಿರಿ—ಸಂಸ್ಕೃತವನ್ನು ಸ್ಮಾರ್ತ-ರಾಮಾನುಜ-ಮಾಧ್ವರೆಂಬ ತ್ರಿಮತಸ್ಥರೇ ಓದಬೇಕು, ಇವರೇ ಅಧ್ಯಾಪಕರಿರಬೇಕು, ಪರೀಕ್ಷೆಗಳನ್ನಾದರೂ ಇವರೇ ಕೊಡಬೇಕು. ರಾಜ್ಯದ ದ್ರವ್ಯವಾದರೂ ಈ ತ್ರಿಮತಸ್ಥರ ಅಧ್ಯಯನಾಧ್ಯಾಪನ ಸೌಕರ್ಯಕ್ಕಾಗಿಯೇ ವಿನಿಯೋಗಿಸಲ್ಪಡಬೇಕು. ರಾಜ್ಯಾಶ್ರಯದಿಂದ ಈ ತ್ರಿಮತಸ್ಥರ ಗ್ರಂಥಗಳನ್ನೇ ಮುದ್ರಿಸಿ ಪ್ರಸಿದ್ಧಿಪಡಿಸಬೇಕು. ಅರ್ಥಾತ್ ಸಂಸ್ಕೃತ ವಿದ್ಯಾವಿಭಾಗವು ಈ ತ್ರಿಮತಸ್ಥರ ಹಿತಕ್ಕಾಗಿಯೇ ನಿರ್ಮಿಸಲ್ಪಟ್ಟಿರುವದರಿಂದ ಇದರ ಲಾಭವನ್ನು ಈ ತ್ರಿಮತಸ್ಥರೇ ಮಾಡಿಕೊಳ್ಳಬೇಕು. ಅಂದಮೇಲೆ ಉಳಿದವರ ಅಧ್ಯಯನಾಧ್ಯಾಪನಾದಿಗಳಿಗೆ ಆಶ್ರಯವು ಉಳಿಯುವ ಬಗೆಯಾದರೂ ಹೇಗೆ? ಒಂದು ಕಾಲದಲ್ಲಿ ಪರಮತಗಳೆಂಬ ತ್ರಿಪುರಗಳನ್ನು ಸುಟ್ಟು ಶಿವಾದ್ವೈತವೆಂಬ ಶಾಂತಿಸಮೃದ್ಧಿಯನ್ನು ನೆಲೆಗೊಳಿಸಿ ಸಮಸ್ತ ಮಾನವಪ್ರಪಂಚಕ್ಕೆ ಜ್ಞಾನಾಮೃತವನ್ನು ಪಾನಮಾಡಿಸಿ ಉದ್ಧಾರಮಾಡಿದ ಪರಮವೈದಿಕವಾದ ನವಿನ್ಮ ವೀರಶೈವಮತಕ್ಕೆ ನಿರಾಶ್ರಿತವಾದ ಈ ರಾಜ್ಯವು ಇದ್ದೂ ಇಲ್ಲದಂತಾಗಿದೆ. ಈ ತ್ರಿಮತಸ್ಥರಿಗಿರುವಷ್ಟು ಮತ್ಸರವೂ ಅರ್ಥಾತ್ ಪರಧರ್ಮಾಸಹಿಷ್ಣುತೆಯು ವೀರಶೈವರಿಗಿಲ್ಲದಿದ್ದರೂ ಸ್ವಧರ್ಮಾಭಿಮಾನವು ಅವರಿಗಿಂತ ಹತ್ತುಪಟ್ಟು ಹೆಚ್ಚಿಗಿರುವದು. ಈ ತ್ರಿಮತಸ್ಥರ ಸಿದ್ಧಾಂತಗಳಿಗಿರುವ ಪ್ರಾಶಸ್ತ್ಯಕ್ಕಿಂತ ಈ ಮತದ ಪ್ರಾಶಸ್ತ್ಯವೇನೂ ಕಡಿಮೆಯಿಲ್ಲ. ಈ ತ್ರಿಮತಸ್ಥರ ಧರ್ಮಗ್ರಂಥಗಳಂತೆಯೇ ಅಧಿಕಗಳಾದ ಧರ್ಮಗ್ರಂಥಗಳು ವೀರಶೈವ ಮತದಲ್ಲಿರುವವು. ಈ ತ್ರಿಮತಸ್ಥರ ಧರ್ಮಕ್ಕಿಂತ ಅತ್ಯಂತ ಪ್ರಾಚೀನತ್ವವು ವೀರಶೈವಧರ್ಮಕ್ಕಿರುವುದು. ಕಿಂಬಹುನಾ ಈ ತ್ರಿಮತಸ್ಥರ ಸಿದ್ಧಾಂತಗಳಿಗೆ ಮಾರ್ಗದರ್ಶಕವಾದ ಸಿದ್ಧಾಂತವು ನವಿನ್ಮ ವೀರಶೈವಸಿದ್ಧಾಂತವೆಂದು ಹೇಳಲು ಅತಿಶಯೋಕ್ತಿಯಾಗಲಾರದು. ವಸ್ತುಸ್ಥಿತಿಯು ಹೀಗಿದ್ದು ಪೇಶ್ವೆಕಾಲದಿಂದ ಬಲಾತ್ಕಾರವಾಗಿ ಪ್ರತಿಯೊಂದು ರಾಜ್ಯಸ್ಥಾನಗಳಲ್ಲಿ ತಮ್ಮ ಆಶ್ರಯವನ್ನು ಬೆಳಸಿಕೊಂಡು ಸಮಯಜಾಲದಲ್ಲಿ ಸಿಲುಕಿದ ನವಿನ್ಮ ವೀರಶೈವಧರ್ಮವನ್ನು ಮೂಲೆಗೊತ್ತಲು ಪ್ರಯತ್ನಮಾಡುತ್ತಿರುವ ತ್ರಿಮತಸ್ಥರ ಬಲುಮೆಯೊಳಗೆ ನಮ್ಮ ನಿಷ್ಪಕ್ಷಪಾತಿಯಾದ ಮೈಸೂರ ಸರಕಾರವೂ ಕೂಡ ಸಿಲುಕಿ ಉಳಿದವರ ಹಿತಾಹಿತ ಕರ್ತವ್ಯವನ್ನು ಮರೆತುಬಿಟ್ಟಿದ್ದು ನಮ್ಮ ದುರ್ದೈವವೇ ಸರಿ.

[ಸಶೇಷ]

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ ೫ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಕ್ರಯ ರೂ. 8-8-0 ಸೀಮೆ ಪಟ್ಟಿ ಸಹಿತ ರೂ. 6-3-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಲೋಕಪ್ರಸಿದ್ಧವಾದ ವಜ್ರಾಂಗಲೇಹ

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊಲದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಕೇಖರಿಸುವದು. ಈ ವಜ್ರಾಂಗಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು 15 ದಿನಗಳು ಸೇವಿಸುವದರಿಂದ ಪೂರಾ ಗುಣಕೊಡುವುದು. 3 ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರೆವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2-0-0.

ಒಂದೇ ಆವರ್ತಿ 3 ಡಬ್ಬಿಗಳನ್ನು ತರಿಸಿದರೆ ಟಪಾಲು ಖರ್ಚು ಮಾಫಿ.

ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೋ
ಸಾಹುಕಾರಪೇಟೆ, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಪತ್ಯದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
ಬಳ್ಳಾರಿ.
25

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ, ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿ ಸಹಿತ ರೂ. 4-8-0

ವಿಳಾಸ:—ಮ್ಯಾನೇಜರ್
ಸ್ಟಾರ್ ಹೌಸ್, ಪೋಸ್ಟ್‌ಬಾಕ್ಸ್ ನಂ. 508.
ಪಾರ್ಕ್‌ಟೌನ್, ಮದರಾಸು.

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲ್ಯುಯೆಂಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳೆ (ಮಾಂದ್ಯ) ವಾಯು, ಜ್ವರ, ಕೆಮ್ಮುಲುಗಳನ್ನು ಈ ಮಾತ್ರೆಗಳು ಗುಣಪಡಿಸುವಲ್ಲಿ ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲಾಗದಿರುವ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
28 ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ದೀಕ್ಷಾವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

೧೯೨೨ ನೆಯ ಇಸವಿ ಜುಲೈ ತಾ|| ೨೩ ರಿಂದ ೧೯೨೨ನೆಯ ಜುಲೈ ತಾ|| ೨೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಆಷಾಢ ಬಹುಳ ಚತುರ್ದಶಿಯಿಂದ ಶ್ರಾವಣಶುದ್ಧ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾಟಕ
23	ಭಾನು	ಚತು	34-53	ಆದ್ರಾ	13-24	8
24	[1] ಸೋಮ	ಅಮಾ	31-0	ಪುನ	10-49	9
25	[2] ಮಂಗಳ	ಪಾಡ್ಯ	26-13	ಪುಷ್ಯ	9-19	10
26	ಬುಧ	ಬಿದಿ	20-49	ಆಶ್ಲೇ	6-9	11
27	[3] ಗುರು	ತದಿ	15-0	ಮಘಾ	2-23	12
28	[4] ಶುಕ್ರ	ಚೌತಿ	8-53	ಉತ್ತ	54-23	13
29	[5] ಶನಿ	ಪಂ-ಉ	2-38 53-46	ಹಸ್ತ	50-0	14

(1) ಭೀಮಾಮಾವಾಸ್ಯಾ ಜ್ಯೋತಿಸ್ತಂಭವ್ರತಂ, ಉಮಾಮಹೇಶ್ವರ ವ್ರತಂ. (2) ಮಂಗಳಗೌರೀವ್ರತಂ. (3) ನಾಗರಚತುರ್ಥೀ. (4) ಆದಿ ಶುಕ್ರವಾರಂ. (5) ಗರುಡಪಂಚಮಿ, ಶ್ರಾವಣಶನಿವಾರ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಕೀರ್ತಿಃ | ಭುವಶಕೃಕ್ತಾವಶಾರಾ ಪಕ್ಷ್ಮಸ್ವನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತಮುಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತ ಮಾಲಾಕುಲಂ | ಪ್ರೇಮಂಚೆತ್ತೀಯುಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

REGISTERED NO. M. 124.

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಜುಲೈ ತಾರೀಖು ೩೦ ನೆಯ ಭಾನುವಾರ (ಸಂಚಿಕೆ ೩೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮೀಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರಗಳು--ಷಟ್ಸ್ಥಲಾಷ್ಟಾವರಣ, ಕತಿಇಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ವೀರಶೈವರು ಅವಶ್ಯ ಸಂಗ್ರಹಿಸತಕ್ಕ ವೀರಶೈವ ಧರ್ಮಪರವಾದ ಸುಂದರ ಫೋಟೋಗಳು.

ಶ್ರೀಹನುಮಂತನಿಗೆ-ವೀರಭದ್ರನಿಂದ-ಲಿಂಗಧಾರಣವು

೧. ಇದರಲ್ಲಿ ಹನುಮಂತನಿಗೆ ಶ್ರೀ ವೀರಭದ್ರದೇವರು ಮೋಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿದ್ದಾರೆ—ಪೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೨. ಶ್ರೀ ಶಿವಯೋಗಿ ಸುಘು:—ಇದರಲ್ಲಿ ಶ್ರೀ ಜ|| ಗು|| ಚಿತ್ರದುರ್ಗ ಮಹಾಸ್ವಾಮಿಗಳು ಗದಗ ತೋಂಟದಾರ್ಯರು, ಅಥಣಿ ಶಿವಯೋಗಿಗಳು ಮುಂತಾದ ೧೮ ಶಿವಯೋಗಿಗಳ ಫೋಟೋಗಳು ಕೂಡಿಸಿ ಇರುವವು. ಇದರಿಂದ ಒಂದೇ ಕಾಲಕ್ಕೆ ಎಲ್ಲಾ ಶಿವಯೋಗಿಗಳ ದರ್ಶನ ಆಗುವದು ೧೮ × ೧೨ ಸೈಜದ ಚಿತ್ರದ ಕ್ರಯ ಪ್ರ|| ೧ಕ್ಕೆ ೮ಆಣೆ.

೩. ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕನಾದ ಶ್ರೀ ಬಸವಣ್ಣನವರ ತೇಜಃಪುಂಜವಾದ ಖಾಸ ಫೋಟೊ ೧೮ × ೧೨ ಸೈಜದ ಪ್ರ|| ೧ಕ್ಕೆ ೮ ಆಣೆ ಕೈ ಬಣ್ಣದು ರೂ. ೧.

೪. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರ ಚನ್ನಬಸವೇಶ್ವರ ಮಡಿವಾಳ ಮಾಚಿದೇವರು ಸಿದ್ಧರಾಮದೇವರು ಮುಂತಾದ ಪ್ರಮಥರು ಶ್ರೀ ಪ್ರಭುದೇವರ ಪಾದಪೂಜಾಮಾಡುವ ಸಮಾರಂಭದ ಫೋಟೊ ಇರುವದು. ಪೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೫. ಶ್ರೀ ಚನ್ನಬಸವೇಶ್ವರ ಜನ್ಮ:—ಶ್ರೀ ಅಕ್ಕನಾಗಮ್ಮನವರ ಉದರದಲ್ಲಿ ಪ್ರಸಾದದ ಮಹತ್ವದಿಂದೇ ಷಣ್ಮುಖ ಅವತಾರಿಯಾದ ಶ್ರೀ ಚನ್ನಬಸವಣ್ಣನವರ ಜನನವಾದದ್ದು ಮಹತ್ವಪೂರ್ಣವಾದ ಫೋಟೊ ಇರುವದು. ಪೂ|| ಸಾ|| ೧ಕ್ಕೆ ೧-೪-೦ ಕ್ಯಾ||ಸಾ|| ೧ಕ್ಕೆ ೦-೧೨-೦.

೬. ಶ್ರೀಮಡಿವಾಳ ಮಾಚಿದೇವ ಮಹಿಮಾ:—ಸರ್ವಕಾಲಶುಚಿರ್ಭೂತದಿಂದೆ ಇರುವ ಮಡಿವಾಳಯ್ಯಗೆ ಚೇಷ್ಟೆ ಇಂದೆ ಒಬ್ಬ ಭವಿಯು ಮುಟ್ಟಿದ ಕೂಡಲೆ ವೀರಭದ್ರಾವತಾರಿ ಆದ ಮಡಿವಾಳಯ್ಯನು ತೋರಿಸಿದ ಪ್ರರಾಕ್ರಮು ಬಿಜ್ಜಳರಾಯನ ಪಶ್ಚಾತಾಪ, ಬಸವಣ್ಣನ ಭಕ್ತಿ ಇವುಗಳು ಇದರಲ್ಲಿ ಕಂಡುಬರುತ್ತವೆ. ಇದು ಭಕ್ತಿಗಾಂಭಿರ್ಯ್ಯಯುಕ್ತವಾದ ಫೋಟೊ ಇರುತ್ತದೆ. ಪೂ|| ಸಾ|| ಪ್ರ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೭. ಶ್ರೀ ಮಹಾದೇವಕಾಲಕೂಟ ವಿಷಪಾನ:—ವಿಷ್ಣು, ಬ್ರಹ್ಮಾದಿದೇವ ಅಸುರರು ಕೂಡಿ ಶ್ರೀ ಶಿವನಿಗೆ ಕಾಲಕೂಟ ವಿಷನಿವಾರಣಾರ್ಥಕ್ಕಾಗಿ ಪ್ರಾರ್ಥಿಸಲು ಶ್ರೀ ಪರಶಿವನು ಆ ಕಾಲಕೂಟವಿಷವನ್ನು ಪ್ರಾಶನಮಾಡಿ ಜಗತ್‌ಪ್ರಲಯವು ನಿಲ್ಲಿಸಿದ ಈ ಫೋಟೊ ಬಹಳ ಸುಂದರ ಇರುತ್ತದೆ. ಪೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦

೮. ಶ್ರೀ ಶಿವಪ್ರದೋಷಕಾಲದರ್ಶನ:—ಬ್ರಹ್ಮ, ವಿಷ್ಣು, ಇಂದ್ರ, ಅಗ್ನಿ ಮುಂತಾದ ದೇವತರು ಸರಸ್ವತಿ ಲಕ್ಷ್ಮೀ ಮುಂತಾದ ದೇವತಾಸ್ತ್ರೀಯರು ಕೂಡಿ ತಾಳ, ಮೃದಂಗ, ವೀಣಾ ಮುಂತಾದ ವಾದ್ಯಗಳಿಂದೇ ಗಾನ ಮತ್ತು ಭಜನೆ ಮಾಡುತ್ತ ಯಾವತ್ತು ದೇವತಾ ಋಷಿಗಳು ಶ್ರೀ ಪರಶಿವನ ದರ್ಶನ ತೆಗೆದುಕೊಳ್ಳುತ್ತಿರುವ ಈ ಫೋಟೊ ಬಹು ಸುಂದರವಾಗಿ ದರ್ಶನೀಯ ಇರುವದು. ಪೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೯. ಶ್ರೀ ಬಸವೇಶ್ವರ ಸಂಗಮೈಕ್ಯ:—ಶ್ರೀ ಬಸವಣ್ಣನವರು ಕೂಡಲ ಸಂಗಮನಾಥನಲ್ಲಿ ಐಕ್ಯವಾಗುವ ಇದು ಅಭೂತಪೂರ್ವವಾದ ಫೋಟೊ ಇರುವದು. ಪೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೧೦. ಶ್ರೀ ಪಂಚಾಚಾರ್ಯ್ಯಲಿಂಗೋದ್ಭವ:—೧ ಶ್ರೀ ವಿಶ್ವೇಶಲಿಂಗದಿಂದ ಉದ್ಭವಿಸಿದ ಶ್ರೀ ವಿಶ್ವಾರಾಧ್ಯರು, ೨ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಿಂದೇ ಉದ್ಭವಿಸಿದ ಶ್ರೀ ಪಂಡಿತಾರಾಧ್ಯರು, ೩ ಶ್ರೀ ಹಿಮವತ್‌ಕೇದಾರ ರಾಮನಾಥಲಿಂಗದಿಂದ ಉದ್ಭವಿಸಿದ ಶ್ರೀ ಏಕೋರಾಮಾರಾಧ್ಯರು, ೫ ಶ್ರೀ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಅವತರಿಸಿದ ರೇವಣಾರಾಧ್ಯರು. ಈ ಆಚಾರ್ಯರ ಫೋಟೋಗಳು ಬೇರೆ ಬೇರೆ ಇರುವವು. ಇವು ಅತ್ಯಂತ ಮಹತ್ವವುಳ್ಳ ಫೋಟೋ ಇರುವವು. ಪೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

ಫೋಟೋ ಲಾಕೆಟ ಮತ್ತು ಫೋಟೋ ಬ್ರುಚಗಳು ಇವುಗಳು ಬೇಕಾದ ದೇವರು, ಸತ್ಪುರುಷರು, ದೇಶಭಕ್ತರ ಫೋಟೋ ಕೂಡ್ರಿಸಿ ಸಿಗುವವು. ಇವು ಗಡಿಯಾರ ಸರಪಳಿಗೆ ಕೋಟಿನ ಕಾಲರ ಮೇಲೆ ಹಚ್ಚಬಹುದು.

ರೋಲ್ಡಗೋಲ್ಡ ಪ್ಯಾನ್ಸಿ ನಕ್ಷಿದಾರ ೨ ಫೋಟೋಗಳು ಕೂಡ್ರಿಸಿದ್ದು	೧ಕ್ಕೆ	೧- ೦-೦	ಸದರ ದುಬೀಣಿನ ದಪ್ಪಾದ ಹರಳದವು	೧ಕ್ಕೆ	೨- ೮-೦
			ಬೆಳ್ಳಿವು ಗೋಲಾಕಾರ	೧ಕ್ಕೆ	೧- ೮-೦
ಸದರ ರೂಪಾಯಿ ಆಕಾರದ್ದು ೨ ಸದರ	೧ಕ್ಕೆ	೦-೧೨-೦	ಬ್ರುಚ ೧ ಫೋಟೋ ಕೂಡಿಸಿದ್ದು	೧ಕ್ಕೆ	೦- ೮-೦

ಎಲ್ಲಾ ಮಾಲಿಗೆ ಪ್ಯಾಕಿಂಗ ಮತ್ತು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರಿಗೆ ಚನ್ನಾಗಿ ಕಮಿಷನ್ ಗ್ರಾಮಗ್ರಾಮಕ್ಕೆ ಏಜಂಟರು ಬೇಕು. ೧ ಆಣೆ ಬಿಲ್ಲೆ ಕಳಿಸಿ ಕ್ಯಾಟಲಾಗ ತರಿಸಿಕೊಳ್ಳಿ.

2 ಗಂಗಪ್ಪ ಜೇರಗೆ, ಸೋಲಾಪುರ ಸಿಟಿ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ.

ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 20

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು.

ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡುಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಜುಮಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸ್.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಟ್ ಭಂಗಾರದ ಮುಳ್ಳುಳ್ಳ,

2 ## ರಾಯಲ್ ಫೌಂಟೆನ್ ಪೆನ್.

ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿವಿಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು [illegible] ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ [illegible]ದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸ್ನಾನ, ೫ ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಸೀಸೆ 1ಕ್ಕೆ 1-8-0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 268, ಮದರಾಸ್.

ಕರ್ನಾಟಕದ ಸುದ್ದಿ.

ಸತ್‌ಶಿಕ್ಷಕವೆಂಬ ಮಾಸಪತ್ರಿಕೆಯು ಇದೇ ಶ್ರಾವಣದಿಂದ ಗದಗಿನಲ್ಲಿ ಹೊರಡುತ್ತದೆ. ಇದರ 20 ಪುಟಗಳಲ್ಲಿ ನಿಬಂಧ, ಕಥೆ, ಕಾದಂಬರಿ ಮೊದಲಾದ ಸಾಮಾಜಿಕ, ಧಾರ್ಮಿಕ, ನೈತಿಕವಿಷಯಗಳನ್ನೂ, 20 ಪುಟಗಳಲ್ಲಿ ಗೃಹವೈದ್ಯಕವನ್ನೂ, ಶಿಕ್ಷಣರೂಪದಿಂದ ಬರೆಯುತ್ತಾಹೋಗುವೆವು. ಆದರಿಂದ ಈ ಮಾಸಿಕವು ಅತಿ ಉಪಯುಕ್ತವೂ, ಸಂಗ್ರಹಿಸಿ ಇಡಲಿಕ್ಕೆ ಯೋಗ್ಯವೂ ಆಗಿರುವದು. ಇದಕ್ಕೆ ಆರಂಭದಿಂದಲೇ ಚಂದಾದಾರರಾಗತಕ್ಕದ್ದು. ಮೊದಲನೇ ಸಂಚಿಕೆಯ ಅರ್ಧದಲ್ಲಿ ವ್ಯಾಪಾರಸ್ಥರಿಗೆ ಅಪ್ರತಿಮವಾದ ಧೈರ್ಯ, ಸಾಹಸಗಳನ್ನು ಹುಟ್ಟಿಸುವ ಸುಜ್ಞಾನಶೆಟ್ಟಿಯ ಮನೋಹರವಾದ ಕಥೆಯೂ, ಅರ್ಧದಲ್ಲಿ ವೈದ್ಯರಿಗೆ ಅಗತ್ಯವಾದ ಉಪಕರಣಗಳು, ಕೀಟಕಗಳು, ಜ್ವರವು, ಪ್ಲೀಹ (ಗುಲ್ಮ), ಮೂತ್ರಪಿಂಡ, ಕಾಳಜ, ರಕ್ತಾಶಯ, ಉದರಸಂಬಂಧ ರೋಗ ಚಿಕಿತ್ಸೆಗಳು ಆರಂಭವಾಗುವವು. ವರ್ಷಕ್ಕೆ ವರ್ಗಣಿ 3 ರೂ. ಪೋ. 3 ಆಣೆ, ನಾವು ಹೆಚ್ಚಿಗೆ ಹೇಳಲಾರೆವು. ಒಂದು ಸಂಚಿಕೆಯನ್ನು ನೋಡಿ ನೀವೇ ಮನಗಾಣಿರಿ, ಅಥವಾ ಮನಸ್ಸಿಗೆ ಬಾರದಿದ್ದರೆ, ಪರತಕಳಿಸಿರಿ, ಹಣಕಳಿಸುವೆವು. ತೀವ್ರ ನಿಮ್ಮ ಹೆಸರು, ಪೋಸ್ಟ್ ಆಫೀಸು ತಿಳಿಸಿ, ವಿ. ಪಿ. ಯಿಂದ ತರಿಸಿಕೊಳ್ಳಿರಿ.

ಪತ್ತೆ—ಯಫ್. ಬಸವಲಿಂಗಸ್ವಾಮಿ, ತಲವಾಯಿಮಠ,
ಪೆನಶನ್ ಹೆ. ಮಾಸ್ತರ, ಪೋ. ಗದಗ,
ಜಿ. ಧಾರವಾಡ.

ವೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಜುಲೈ ತಾ|| ೩೦ ನೆಯ ಭಾನುವಾರ.

ಸಂಸ್ಕೃತ ಮಹಾಪಾಠಶಾಲೆಗಳೂ, ವೀರಶೈವರೂ.

ತ್ರಿಮತಸ್ಥ ಬ್ರಾಹ್ಮಣರ ಹೊರತು ಇತರರನ್ನು ಸಂಸ್ಥಾನದ ಸಂಸ್ಕೃತ ಮಹಾಪಾಠಶಾಲೆಗಳಿಗೆ ಸೇರಿಸುವ ವಿಷಯದಲ್ಲಿ ನಿಯಮಿತಸಂಘದವರು ಕೊಟ್ಟಿರುವ ಅಭಿಪ್ರಾಯದಮೇಲೆ ಸ್ವದೇಶ ಪರದೇಶದ ಪತ್ರಿಕೆಗಳಲ್ಲಿ ಅನೇಕತೆರದ ಪ್ರಸಂಗಗಳು ನಡೆಯುತ್ತಿವೆ. ಮುಖ್ಯವಾಗಿ ಗೀರ್ವಾಣಭಾಷೆಯ ಆವಶ್ಯಕತೆಯಿರುವವರು ಅದನ್ನು ಅಪೇಕ್ಷಿಸುವರೇ ಹೊರತು ಮತ್ತಾರ ಮೇಲಣ ಅಹಮಹಮಿಕೆಗೇನೂ ಅಲ್ಲ. ವೀರಶೈವರೂ ಜೈನರೂ ಕೂಡ ಬಹುಕಾಲದಿಂದ ಸಂಸ್ಕೃತ ಕರ್ಣಾಟಕೋಭಯ ಭಾಷೆಗಳಲ್ಲೂ ಪ್ರಾವೀಣ್ಯವನ್ನು ಪಡೆದವರೆಂಬುದು ಅಕ್ಷರಸ್ಥರಿಗೆಲ್ಲಾ ಗೊತ್ತುಂಟು. ಈಗಲೂ ಆವೆರಡು ಮತಸ್ಥರೂ ಅಲ್ಲಲ್ಲಿಗೆ ಸಂಸ್ಕೃತ ಪಾಠಶಾಲೆಗಳನ್ನೇರ್ಪಡಿಸಿಕೊಂಡು ತಮ್ಮ ಜನರ ವಿದ್ಯಾರ್ಥಿಗಳಿಗೆ ಅಷ್ಟೂ ಇಷ್ಟು ಸಾಹಿತ್ಯಾದಿ ಪಾಠಗಳನ್ನು ಅಭ್ಯಾಸಮಾಡಿಸಿಕೊಳ್ಳುತ್ತಾ ಬರುತ್ತಿದ್ದಾರೆ. ಆದರೆ ಅವುಗಳಲ್ಲಿ ಪ್ರೌಢಪಾಠಗಳು ನಡೆಯುವುದಕ್ಕೆ ಸೌಕರ್ಯವಿಲ್ಲ. ಈಗಣ ಕಾಲದಲ್ಲಿ ರಾಜಕೀಯ ವಿದ್ಯೆಯಂತೆ ಗೀರ್ವಾಣವಿದ್ಯೆಯು ಆಕರ್ಷಕವಾಗಿರುವುದಿಲ್ಲ. ಇದನ್ನೋದಿ ಪಂಡಿತರಾದವರು ಭುಕ್ತಿಗೂ ಕೂಡ ತಾಪತ್ರಯಪಡುತ್ತಿರುವುದೇ ಆಗಿರುತ್ತದೆ, ಅದರ ಮೇಲೆಯೇ "ವಿದ್ವಾನ್ ಧನಾಢ್ಯೋನ ತುದೀರ್ಘಜೀವೀ"—ಎಂದರೆ ವಿದ್ವಾಂಸನಾದವನು ಧನಿಕನಾಗಿಯೂ ಇರುವುದಿಲ್ಲ, ದೀರ್ಘಾಯುಷ್ಕನೂ ಆಗಿರುವುದಿಲ್ಲ, ಎಂಬ ವಚನವು ಹುಟ್ಟಿರುವುದು. ಈಗಣ ಕಾಲದಲ್ಲಿ ದೇಶಕ್ಕೆ ಭುಕ್ತಿಯ ತಾಪತ್ರಯವೇ ಮುಖ್ಯವಾಗಿ ಕುಳಿತಿದೆ. ರಾಜಕೀಯ ವಿದ್ಯೆಯನ್ನು ಅಭ್ಯಸಿಸಿದವರಿಗೆ ಹಾಗೂಹೀಗೂ ಭುಕ್ತಿಗೆ ಮಾರ್ಗವು ದೊರೆಯುತ್ತಿರುವುದರಿಂದ ಅನೂಚಾನವಾಗಿ ಬಹುಶ್ರುತರೂ, ಸೋಮಯಾಜಿಗಳೂ, ಜೋಯಿಸರೂ, ದೀಕ್ಷಿತರೂ, ಆಹಿತಾಗ್ನಿಗಳೂ, ವೇದಜ್ಞರೂ ಆಗಿ ಬಂದವರ ಮಕ್ಕಳು ಮಮ್ಮಕ್ಕಳೆಲ್ಲಾ ಹೂಣಭಾಷಾಭ್ಯಾಸಕ್ಕೆರಗಿ ವಿದೇಶಗಮನಾದಿಗಳ ಮೂಲಕ ವಿಶೇಷ ಕಲಾಕೌಶಲ್ಯವನ್ನು ಆರ್ಜಿಸಲು ತಮ್ಮ ಕುಲಾಚಾರಾದಿಗಳ ಭ್ರಷ್ಟತೆಯನ್ನು ಕೂಡ ಗಣಿಸದ ಸ್ಥಿತಿಗೆ ಈಗ ಬಂದಿರುತ್ತಾರೆ. ಹೀಗಿರುವಾಗ ಶುಷ್ಕ ಸಂಸ್ಕೃತ ವಿದ್ಯಾಭ್ಯಾಸದ ಕಡೆಗೆ ಮನಕೊಡುವವರೆಂದರೆ ಪಾರಮಾರ್ಥಿಕ ದೃಷ್ಟಿಯುಳ್ಳ ಧರ್ಮಾಭಿಮಾನಿಗಳೇ ಹೊರತು ಮತ್ತಾರೂ ಅಲ್ಲ. ಐಹಿಕಭೋಗಗಳಲ್ಲಿ ವೈರಾಗ್ಯವನ್ನು ಹೊಂದಿ ಪಾರಮಾರ್ಥಿಕ ದೃಷ್ಟಿಯುಳ್ಳವರು ದೇಶದಲ್ಲೇ ವಿರಳರಾಗಿದ್ದಾರೆಂಬುದು ಯಾರಿಗೆ ಗೊತ್ತಿಲ್ಲ? ಅದುಕಾರಣವೇ ವರ್ಷಕ್ಕೆ 13 ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಹಣವನ್ನು ವಿದ್ಯಾರ್ಥಿವೇತನಕ್ಕೆ ಕೊಡುತ್ತ, ಅಶನ ವಸತಿಗಳ ಸೌಕರ್ಯವನ್ನು ಬೇರೆ ಕಲ್ಪಿಸಿಕೊಟ್ಟು, ಅದರ ಮೇಲೆ ಪರೀಕ್ಷಾ ಬಹುಮಾನಗಳನ್ನೇರ್ಪಡಿಸಿ, ಹೀಗೆಲ್ಲಾ ಸರ್ಕಾರದವರು ಪ್ರೋತ್ಸಾಹಿಸುತ್ತಿದ್ದಾಗ್ಗೂ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿರುವುದು. ಪ್ರೌಢ ತರಗತಿ ವಿದ್ಯಾರ್ಥಿಗಳ ಸಂಖ್ಯೆಯಂತೂ ಬಹಳ ಕಡಿಮೆಯೆಂಬುದು ಕಮಿಟಿಯವರ ವರದಿಯಲ್ಲೇ ಹೇಳಲ್ಪಟ್ಟಿದೆ. ಸಂಸ್ಕೃತ ವಿದ್ಯೆಗೆ ನಾವೇ ಹಕ್ಕುದಾರರು ನಾವೇ ಪೋಷಕರು ಎಂದು ವಿಜೃಂಭಿಸತಕ್ಕ ವರ್ಗಗಳವರ ಗೀರ್ವಾಣ ಭಾಷಾಸಕ್ತಿಯೇ ಹೀಗಿರುವಾಗ ಇತರರ ಸ್ಥಿತಿಗತಿಯನ್ನು ಹೇಳುವುದೇನು? ವೀರಶೈವ ವಿದ್ಯಾರ್ಥಿಗಳ ಅವಸ್ಥೆಯೂ ಇದಕ್ಕೆ ಭಿನ್ನವಾಗಿರುವುದಿಲ್ಲ. ಸಂಸ್ಕೃತ ವಿದ್ಯಾಭ್ಯಾಸದ ಕಡೆಗೆ ಮನಃಪ್ರವೃತ್ತಿಯುಳ್ಳವರು ಅವರಲ್ಲೂ ವಿರಳರೇ. ಪ್ರೌಢ ವಿದ್ಯಾಕಾಂಕ್ಷಿಗಳು ಇನ್ನೂ ವಿರಳತಮರೇ ಆಗಿರುವರು. ಹೀಗಿರುವಾಗ ಎಲ್ಲೋ ಕೆಲಕೆಲವುಂದಿ ವಿದ್ಯಾರ್ಥಿಗಳಿಗೋಸ್ಕರ ಬಹುಧನವ್ಯಯಸಾಧ್ಯವಾದ ಪ್ರತ್ಯೇಕ ಮಹಾಪಾಠಶಾಲೆಯನ್ನು ಏರ್ಪಡಿಸುವುದು ಸುಲಭವೂ ಅಲ್ಲ; ವಿವೇಕವೂ ಅಲ್ಲ. ಅದುಕಾರಣವೇ ಅವರು ಈಗಣ ಸರ್ಕಾರಿ ಮಹಾಪಾಠಶಾಲೆಗಳಲ್ಲೇ ಸೇರಿ ಅಭ್ಯಾಸಮಾಡಬೇಕೆಂದು ಅಪೇಕ್ಷಿಸುತ್ತಾರೆಯೇ ಹೊರತು ಮತ್ತಾವ ಕಾರಣದಿಂದಲೂ ಅಲ್ಲ. ನಿಜಸ್ಥಿತಿಯು ಹೀಗಿರುವಲ್ಲಿ ಇದನ್ನು ವಂಚಿಸುವುದಕ್ಕಾಗಿ ವೃತ್ತಪತ್ರಿಕೆಗಳಲ್ಲಿ "ಅನಾದಿಯಾಗಿ ಬಂದ ಆಚಾರಶರಣರಾದ ಬ್ರಾಹ್ಮಣರಿಗೆ ಕ್ಲೇಶವನ್ನುಂಟುಮಾಡಬೇಕೆಂಬುವುದು ಒಂದು ಮಾತ್ರ ಈ ಗಲಾಟೆಮಾಡತಕ್ಕವರಲ್ಲಿ ಪ್ರಧಾನವಾಗಿ ಕಾಣುವುದು" ಎಂದು ಪ್ರಲಪಿಸುತ್ತಿರುವವರ ಸ್ವಾರ್ಥೈಕ ಚಿಂತೆಯ ಮಹತ್ತ್ವವನ್ನೆಷ್ಟೆಂದು ವರ್ಣಿಸೋಣ!

ವೀರಶೈವ ವಿದ್ಯಾರ್ಥಿಗಳಿಗೆ ಸಾಹಿತ್ಯಪಾಠಕ್ಕೆ ಅಷ್ಟೇನೂ ತಾಪತ್ರಯವಿಲ್ಲ. ಅದನ್ನು ಹೇಳಿಕೊಡುವ ಮಧ್ಯಮ ಪಾಠಶಾಲೆಗಳನ್ನು ಅವರು ಸ್ವತಂತ್ರವಾಗಿ ಎಷ್ಟೋ ಕಡೆಗಳಲ್ಲಿ ಏರ್ಪಡಿಸಿಕೊಂಡಿದ್ದಾರೆ. ಅತ್ಯವಶ್ಯಕವಾಗಿರುವುದು ಶಾಸ್ತ್ರಾದಿ ಪ್ರೌಢಪಾಠವೇ ಆಗಿರುತ್ತದೆ. ಅದನ್ನು ಆರ್ಜಿಸುವುದಕ್ಕಾಗಿಯೇ ಅವರ ವಿದ್ಯಾರ್ಥಿಗಳು ಕಾಯಕ್ಲೇಶಾದಿಗಳೊಂದನ್ನೂ ಗಣಿಸದೆ ಕಾಶೀಪಟ್ಟಣದಂಥ ದೂರಸ್ಥಲಗಳಿಗೆ ಹೋಗಿ ವಿದ್ಯಾರ್ಜನೆ ಮಾಡುತ್ತಲಿದ್ದಾರೆ. ಅವಶ್ಯಕತೆಯಿಲ್ಲದವರು ಹೀಗೆ ಕಷ್ಟಪಡುವುದುಂಟೆ? ಇವರುಗಳು ಕಾಶಿಯಲ್ಲಿ ಯಾರಿಗೆ ಕ್ಲೇಶವನ್ನುಂಟುಮಾಡುವುದಕ್ಕೆ ಅಷ್ಟು ಕಷ್ಟ ನಷ್ಟಗಳನ್ನು ಸಹಿಸಿಕೊಂಡು ಅಭ್ಯಾಸಮಾಡುತ್ತಾರೆ? ಇದನ್ನೆಲ್ಲಾ ವೃತ್ತಪತ್ರಿಕಾ ಪ್ರಸಂಗಿಗಳು ಪರ್ಯಾಲೋಚಿಸಬೇಕು. ವೀರಶೈವ ವಿದ್ಯಾರ್ಥಿಗಳಿಗೆ ಸರ್ಕಾರಿ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ಪ್ರೌಢಪಾಠಕ್ಕೆ ಅವಕಾಶಮಾಡಿಕೊಡದೆ ಸಾಹಿತ್ಯಪಾಠಕ್ಕೆ ಮಾತ್ರ ಕಮಿಟಿಯವರ ಅಭಿಪ್ರಾಯದಂತೆ ಸರ್ಕಾರದವರು ಏರ್ಪಡಿಸಿಕೊಡುವುದಾದರೆ ಅದು ಕೇವಲ ನಿರುಪಯೋಗವೇ ಸರಿ. ಅದರಿಂದ ವೀರಶೈವರ ಇಷ್ಟಾರ್ಥವೇನೂ ಪೂರೈಸಿದಂತಾಗುವುದಿಲ್ಲ.

ಕಮಿಟಿಯವರು ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ಸೂಚಿಸುವುದಕ್ಕೆ ಮೊದಲು ದೇಶ ಕಾಲ ಪರಿಸ್ಥಿತಿಯನ್ನೂ ಸಹೋದರ ದೇಶೀಯರ ಸಂಪ್ರದಾಯಾದಿಗಳನ್ನೂ ಅವಲೋಕಿಸಿ, ಯಾರ ಪ್ರಾರ್ಥನೆಯು ಸಹಜವಾದುದು ಯಾವುದು ಕಪಟವಾದುದು ಎಂಬುದನ್ನು ಪರ್ಯಾಲೋಚಿಸಿ, ಅದರ ಮೇಲೆ ನ್ಯಾಯವೆಂದು ತೋರಿದ ಅಭಿಪ್ರಾಯವನ್ನು ಕೊಟ್ಟಿದ್ದರೆ ಸಾಕಾಗುತ್ತಿದ್ದಿತು. ಅಷ್ಟನ್ನು ಮಾಡದೆ ವೀರಶೈವರ ಗುರ್ತೇ ಇಲ್ಲದ ದೇಶದಲ್ಲಿರುವ ಜಯಪುರದಂಥ ಸ್ಥಲದ ಸಂಸ್ಕೃತ ಮಹಾಪಾಠಶಾಲೆಯವರ ಮತ್ತು ಕೊಚ್ಚಿಯ ಗತಪ್ರಭುಗಳ ಅಭಿಪ್ರಾಯವನ್ನು ತಡಕಿಕೊಂಡುಹೋದುದೇತಕ್ಕೋ ತಿಳಿಯಲಿಲ್ಲ. ಪರರ ಪ್ರವೇಶಕ್ಕೆ ಈ ಮಹಾಪಾಠಶಾಲೆಗಳಲ್ಲಿ ಅವಕಾಶವಿಲ್ಲದಂತೆ ಮಾಡಬೇಕೆಂಬ ಸಿದ್ಧಾಂತವನ್ನು ಮನದಲ್ಲಿ ಮೊದಲೇ ಕಲ್ಪಿಸಿಕೊಂಡು, ಅದರ ಸಿದ್ಧಿಗೆ ಆವಶ್ಯಕಗಳಾದ ಸಾಧನಗಳನ್ನು ತಡಕುವುದಕ್ಕಾಗಿಯೇ ಕಮಿಟಿಯವರು ಹೀಗೆ ಮಾಡಿರಬೇಕೆಂದು ಅನೇಕರು ಈಗ ತರ್ಕಿಸುತ್ತಿದ್ದಾರೆ. ಹಾಗಿಲ್ಲದಿದ್ದರೆ ಕಮಿಟಿಯವರು ಈ ಭರತಖಂಡದಲ್ಲಿ ಪ್ರಾಚೀನ ಸರಸ್ವತೀ ಪೀಠವಾಗಿ ಪ್ರಸಿದ್ಧವಾಗಿ ಬಂದಿರುವ ಕಾಶ್ಮೀರದ ಸಂಸ್ಕೃತ ಮಹಾಪಾಠಶಾಲೆಗೂ, ಬರೋಡಾ, ಇಂದೂರು, ಲಾಹೋರು ಮೊದಲಾದ ಕಡೆಗಳಲ್ಲಿರುವ ಸಂಸ್ಕೃತ ಮಹಾಪಾಠಶಾಲೆಗಳಿಗೂ ಕೂಡ ಒಟ್ಟಿಗೆ ಬರೆದು, ಅವುಗಳಿಂದ ಬರುವ ಅಭಿಪ್ರಾಯವನ್ನೆಲ್ಲಾ ಏಕೆ ಸಂಗ್ರಹಿಸಬಾರದಾಗಿದ್ದಿತು? ಹಾಗೆ ಮಾಡಿದರೆ? ಮಾಡಿದ್ದರೆ ಅದನ್ನು ವರದಿಯಲ್ಲಿ ಏತಕ್ಕೆ ಕಾಣಿಸಲಿಲ್ಲ? ಆ ವಿವರಣೆಯೇ ವರದಿಯಲ್ಲಿಲ್ಲದಿರುವುದರಿಂದ ಅಂಥ ನಿಷ್ಪಕ್ಷಪಾತಾಚರಣೆಗೆ ಇವರು ಪ್ರಯತ್ನಿಸಲೇ ಇಲ್ಲವೆಂದು ಭಾವಿಸಬೇಕಾಗಿರುವುದು. ಇವರು ತರಿಸಿರುವ ಕಾಶೀ ಕಲಕತ್ತಾ ಸಂಸ್ಕೃತ ಕಾಲೇಜುಗಳ ಅಭಿಪ್ರಾಯಗಳು ಕೂಡ ವೀರಶೈವರನ್ನು ಮೈಸೂರು ಸಂಸ್ಕೃತ ಮಹಾಪಾಠಶಾಲೆಗಳಿಂದ ದೂರೀಕರಿಸುವುದಕ್ಕೆ ಸಾಧಕಗಳೇನೂ ಆಗಿಲ್ಲ. ಆವೆರಡು ಕಾಲೇಜುಗಳಲ್ಲೂ ಈಗಲೂ ವೀರಶೈವ ವಿದ್ಯಾರ್ಥಿಗಳು ಓದುತ್ತಲಿದ್ದಾರೆ. ಪ್ರತಿ ವರ್ಷವೂ ಪ್ರೌಢತರಗತಿ ಪರೀಕ್ಷೆಗೆ ಎಷ್ಟೋಮಂದಿ ಕುಳಿತುಕೊಳ್ಳುತ್ತಿದ್ದಾರೆ. ಅದೇ ಕಾಶಿಯಲ್ಲಿ ಪಂಡಿತ ಮದನಮೋಹನ ಮಾಳವ್ಯರ ವಿಶ್ವಪ್ರಯತ್ನದಿಂದ ಸ್ಥಾಪಿತವಾಗಿ, ನಮ್ಮ ಸರ್ಕಾರದ ಹಣದಿಂದಲೂ ಪರಿಪೋಷಿತವಾಗಿ, ನಮ್ಮ ಶ್ರೀಮನ್ಮಹಾರಾಜರನ್ನೇ ಚಾನ್ಸಲರನ್ನಾಗಿ ಪಡೆದಿರುವ ಹಿಂದೂ ವಿಶ್ವವಿದ್ಯಾಲಯದ ಸಂಸ್ಕೃತ ಭಾಗದ ಪಾಠಪದ್ಧತಿಯನ್ನಾದರೂ ಕಮಿಟಿಯವರು ವಿಚಾರಿಸುವುದು ಆವಶ್ಯಕವಾಗಿದ್ದಿತು. ಅದನ್ನೂ ಮಾಡಲಿಲ್ಲ.

ಕಮಿಟಿಯವರು ತಮ್ಮ ಈಗಣ ಅಭಿಪ್ರಾಯಕ್ಕೆ ಒತ್ತಾಸೆಯಾಗಿ ಹಿಂದಣ ಒಂದೆರಡು ಸರ್ಕಾರಿ ಅಪ್ಪಣೆಗಳನ್ನೂ ಮುಜರಾಯಿ ಅಧಿಕಾರಿಗಳ ಅಭಿಪ್ರಾಯವನ್ನೂ ಉದಹರಿಸಿಕೊಂಡಿದ್ದಾರೆ. ಎಷ್ಟೋ ಸಂಮಾನ್ಯತೆಯನ್ನು ಪಡೆದುಕೊಂಡು ಉಳಿದ ವಿಷಯಗಳಲ್ಲಿ ಉದಾರಚಿತ್ತವನ್ನು ತೋರಿಸುತ್ತಿರುವ ದೊಡ್ಡ ಮನುಷ್ಯರುಗಳುಳ್ಳ ಈ ಕಮಿಟಿಯು, ಧಾರ್ಮಿಕವಿಷಯ ಪ್ರಸಕ್ತವು ಬಂದಮಾತ್ರಕ್ಕೇ ಸಂಕುಚಿತ ಚಿತ್ತವನ್ನು ಹೊಂದಿರುವಾಗ್ಗೆ, ಪೂರ್ವದಿಂದಲೂ ಇಂಥ ಬ್ರಾಹ್ಮಣರ ಕೈವಾಡದಿಂದಲೇ ನಿರ್ಮಿತಗಳಾಗಿ ಬಂದ ಅಪ್ಪಣೆಗಳೂ ಅಭಿಪ್ರಾಯಗಳೂ ಇದಕ್ಕೆ ಭಿನ್ನವಾಗಿರುವುದುಂಟೆ? ಈ ಕಮಿಟಿಗೆ ಅಧ್ಯಕ್ಷರಾಗಿರುವ ಮ|| ಕರ್ಪೂರ ಶ್ರೀನಿವಾಸರಾಯರು ಆಂಗ್ಲಭಾಷೆಯಲ್ಲೇ ಅಲ್ಲದೆ ಗೀರ್ವಾಣಭಾಷೆಯಲ್ಲೂ ವೇದವೇದಾಂಗಾದಿಗಳಲ್ಲೂ ಪರಿಣತ ಪಾಂಡಿತ್ಯವುಳ್ಳವರು; ಇಂಜನಿಯರಿಂಗ್ ವಿದ್ಯೆಯಲ್ಲಿ ಬಿ.ಎಸ್.ಸಿ., ಎಲ್.ಸಿ.ಇ., ಎಂಬ ಪದವೀಧರರು; ಅದರ ಮೇಲೆ ರಾಜಸಭಾಭೂಷಣ ಪ್ರಶಸ್ತಿಮಂಡಿತರು. ಇಂಥ ದೊಡ್ಡ ಮನುಷ್ಯರು, ಬೆಂಗಳೂರಿಗೆ ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರುಗಳ ಸ್ವಾರಿಯು ಈಗ್ಗೆ 3 ವರ್ಷಗಳ ಕೆಳಗೆ ದಯಮಾಡಿಸಿದ್ದಾಗ್ಗೆ ಚಿಕ್ಕಪೇಟೆಯ ಒಂದು ಮೂಲೆಯಲ್ಲಿರುವ ತಮ್ಮ ಪ್ರಾಣದೇವರಗುಡಿಯ ಮತ್ತು ಯಾವ ಗುರುವೂ ವಾಸಮಾಡದ ತಮ್ಮ ವರದೊಂದು ಮುರುಕುಮಠದ ಮುಂದೆ ಈ ಸ್ವಾಮಿಗಳು ವಾಹನಾರೂಢರಾಗಿ ಹೋಗದೆ ಪಾದಚಾರಿಗಳಾಗಿ ಹೋಗುವಂತೆ ಮಾಡಬೇಕೆಂಬ ಅಭಿಪ್ರಾಯದ ಅರ್ಜಿಗೆ ರುಜುಮಾಡಿ ಡಿಸ್ಟ್ರಿಕ್ಟ್ ಡಿ|| ಕಮಿಷನರಿಗೆ ಕೊಡಲು ಹಿಂಜರಿಯಲಿಲ್ಲವೆಂದು ಕೇಳಿದ್ದೆವು. ಹೀಗಿರುವಾಗ ಧಾರ್ಮಿಕವಿಷಯದಲ್ಲಿ ಪರರಿಗೆ ಸಾನುಭೂತಿಯನ್ನು ತೋರಿಸಲು ಇವರುಗಳ ಮನಸ್ಸು ಎಷ್ಟು ಹ್ರಾಸವನ್ನು ಹೊಂದಿರುವುದೆಂಬುದಕ್ಕೆ ಇದಕ್ಕಿಂತಲೂ ಬೇರೆ ದೃಷ್ಟಾಂತವು ಬೇಕೆ? ಇದನ್ನೆಲ್ಲಾ ಮನಸ್ಸಿನಲ್ಲಿ ಪರಿಭಾವಿಸಿಯೇ ಈ ವಿಷಯದ ವ್ಯವಸ್ಥೆಯನ್ನು ಗೌರ್ನಮೆಂಟಿನವರು ಮಾಡಬೇಕೆಂಬುದು ನಮ್ಮ ಪ್ರಾರ್ಥನೆ.

ಈಗ ಮೈಸೂರು ಬೆಂಗಳೂರುಗಳಲ್ಲಿ ತ್ರಿಮತಸ್ಥ ಬ್ರಾಹ್ಮಣರುಗಳು ಸಭೆಸೇರಿ ಕಮಿಟಿಯವರ ವರದಿಯಮೇಲೆ ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಯಿಸುವುದಕ್ಕೆ ಏರ್ಪಡಿಸಿಕೊಂಡಿದ್ದಾರೆ. ಇವರುಗಳ ಅಭಿಪ್ರಾಯವು ಕಮಿಟಿಯವರ ಅಭಿಪ್ರಾಯಕ್ಕೆ ಉಪಷ್ಟಂಭಕವಾಗಿ ಅಥವಾ ಅದಕ್ಕಿಂತಲೂ ಇನ್ನಷ್ಟು ಸಂಕುಚಿತವಾಗಿರಬಹುದೇ ಹೊರತು ಪರರ ವಿಷಯದಲ್ಲಿ ಸಾನುಭೂತಿಯನ್ನು ತೋರಿಸುವುದಾಗಿರಲಿಕ್ಕಿಲ್ಲವೆಂದು ಸಾಮಾನ್ಯತಃ ಊಹಿಸಬಹುದಾಗಿದೆ. ಅವರವರ ಅಭಿಪ್ರಾಯವನ್ನು ಗೌರ್ನಮೆಂಟಿಗೆ ನಿವೇದಿಸುವುದಕ್ಕೆ ಅವರವರು ಸ್ವತಂತ್ರರು. ಆದರೆ ಇಂಥ ಸಂದರ್ಭಗಳೇ ಅವರ ಹೃದಯದ ಬಣ್ಣವನ್ನು ಒರೆಯಿಕ್ಕಿ ತೋರಿಸತಕ್ಕುವಾಗಿರುತ್ತವೆ. ವೀರಶೈವರಾದರೂ ಪ್ರತಿಯೊಂದು ಮುಖ್ಯಸ್ಥಲಗಳಲ್ಲೂ ಸಭೆಗಳನ್ನು ಮಾಡಿ ತಮ್ಮ ಅಭಿಪ್ರಾಯಗಳನ್ನು ನಿರ್ಧಾರಮಾಡಿ ಗೌರ್ನಮೆಂಟ್ ಚೀಫ್ ಸೆಕ್ರೆಟರಿಯವರಲ್ಲಿಗೆ ಕಳುಹಿಸಿಕೊಡಲು ತಕ್ಕ ಪ್ರಯತ್ನವನ್ನು ಇಡದೆ ಇಲ್ಲವೆಂದು ನಂಬುತ್ತೇವೆ. ಹಾಗೆ ಅಭಿಪ್ರಾಯವನ್ನು ಕಳುಹಿಸಿಕೊಡಬೇಕಾದ ಗಡುಬವು ಇನ್ನು 15 ದಿನಗಳು ಮಾತ್ರವೇ ಉಳಿದಿವೆಯೆಂಬುದನ್ನು ಮರೆಯಬಾರದು.

ಸಾಮಾನ್ಯಜನತೆಯು ಈ ವಿಷಯದಲ್ಲಿ ಕೊಡುವ ಅಭಿಪ್ರಾಯಕ್ಕಿಂತ ದೇಶಾಭಿಮಾನಿಗಳೆನಿಸಿಕೊಂಡು ದೇಶಸೇವೆಗೆ ಬದ್ಧಕಂಕಣರಾಗಿರುವ ಪತ್ರಿಕಾಕರ್ತರ ಅಭಿಪ್ರಾಯವು ಬಹಳ ತೂಕವುಳ್ಳುದಾಗಿರುತ್ತದೆ. ತತ್ರಾಪಿ ದೇಶಸೇವೆಗಾಗಿಯೇ ನನ್ನ ಸರ್ವಸ್ವವನ್ನೂ ಸೂರೆಗೊಟ್ಟೆನೆಂದೂ, ತಾನು ಸರ್ವ ಸಮದೃಷ್ಟಿಯುಳ್ಳ ವೃದ್ಧಪಿತಾಮಹನೆಂದೂ ಹೇಳಿಕೊಳ್ಳುವ ಅಥವಾ ಹೇಳಿಸಿಕೊಳ್ಳಲು ತವಕಪಡುವ ಪತ್ರಿಕಾಕರ್ತರ ಅಭಿಪ್ರಾಯವಂತೂ ವಿಶೇಷತಃ ಗಮನೀಯವಾಗಿರುತ್ತದೆ. ಸಂಪದಭ್ಯುದಯ ಪತ್ರಿಕೆಯಲ್ಲಿ ಈ ವಿಷಯವಾಗಿ ಅನೇಕ ಪತ್ರವ್ಯವಹಾರಗಳು ಬಂದಿದ್ದಾಗ್ಗೂ ಪತ್ರಿಕಾ ಸಂಪಾದಕರಾದ ಮ|| ಎಂ. ವೆಂಕಟಕೃಷ್ಣಯ್ಯನವರ ಅಭಿಪ್ರಾಯವು ಹೇಗೆ ಬರುವುದೆಂಬುದನ್ನು ಕಾಣಬೇಕೆಂದಿದ್ದೆವು. ಅದು ಕಳೆದ ತಾ|| 17 ನೆ ಸಂಪದಭ್ಯುದಯ ಸಂಚಿಕೆಯ ಅಗ್ರಲೇಖನದಲ್ಲಿ ಹೊರಬಿದ್ದಿತು. ಆ ಲೇಖನದಲ್ಲಿ ಇವರ ಹೃದಯದ ಬಣ್ಣವು ಚೆನ್ನಾಗಿ ಬಯಲಾಗಿರುವುದು. ಹಿಂದೆ ಮೊನ್ನೆವರ್ಷ ಪ್ರಜಾಪ್ರತಿನಿಧಿ ಸಭೆಯಲ್ಲಿ ಇದೇ ಸಂಸ್ಕೃತ ಪಾಠಶಾಲೆಗಳ ವಿಷಯವು ಜರ್ಚೆಗೆ ಬಂದಾಗ್ಗೆ "ಇತರರನ್ನು ಅಲ್ಲಿಗೆ ಸೇರಿಸುವ ವಿಷಯದಲ್ಲಿ ಅಲ್ಲಿಯ ಪಂಡಿತರುಗಳು ಒಪ್ಪುತ್ತಾರೆಯೆ ಎಂಬುದನ್ನು ಮೊದಲು ಪರ್ಯಾಲೋಚಿಸಬೇಕು" ಎಂಬುದಾಗಿ ಹೇಳಿ ಕೇಟಲೆಯ ಬೀಜಾವಾಪನೆಯನ್ನು ಇವರು ಮಾಡಿದ್ದರು. ಈಗಲೂ ಕೂಡ ಅದಕ್ಕೆ ನೀರೆರೆದು ಗಿಡುಮರವನ್ನು ಮಾಡಿಸುವ ಉದ್ದೇಶವು ಇವರಿಗಿದ್ದಂತೆ ಈ ಅಗ್ರಲೇಖನದಿಂದ ಗೊತ್ತಾಗುವುದೇ ಹೊರತು ಪರರಲ್ಲಿ ಸಾನುಭೂತಿಯನ್ನು ತೋರಿಸಬೇಕೆಂಬುದರ ಗಂಧವು ಲೇಶವಾದರೂ ಇಲ್ಲ. ಇವರ ಅಭಿಪ್ರಾಯದ ಮುಂದೆ ಕಮಿಟಿಯವರ ಅಭಿಪ್ರಾಯವೇ ಸ್ವಲ್ಪಮಟ್ಟಿಗೆ ಉದಾರವಾಗಿರುತ್ತದೆಂದು ಹೇಳಬೇಕು. ಏಕೆಂದರೆ "ವೈದಿಕಬ್ರಾಹ್ಮಣರು ವ್ಯಾಸಂಗಮಾಡತಕ್ಕ ಕಾಲೇಜುಗಳಿಗೂ ಸ್ಕೂಲುಗಳಿಗೂ ಅವರ ಇಷ್ಟಕ್ಕೆ ವಿರುದ್ಧವಾಗಿ ಇತರರನ್ನು ಸೇರಿಸುವುದು ತಪ್ಪು" ಎಂದು ಈ ಮಹಾಶಯರು ಬರೆದು, ಬೆಂಗಳೂರು ಸಂಸ್ಕೃತ ಪಾಠಶಾಲೆಗೆ ಅನ್ಯರನ್ನು ಸೇರಿಸಲಿಕ್ಕೆ ಕಮಿಟಿಯವರು ಮಾಡಿರುವ ಸೂಚನೆಯನ್ನು ಕೂಡ ಕೂಡದೆಂದು ಅಭಿಪ್ರಾಯ ಕೊಟ್ಟು, ಇವರು ತಮ್ಮ ಪರದ್ವೇಷಾನಲವನ್ನು ಶಾಂತಿಪಡಿಸಿಕೊಂಡಿದ್ದಾರೆ. ಆ ಲೇಖನದ ವಿಮರ್ಶೆಯನ್ನು ಮುಂದಣ ಸಂಚಿಕೆಯಲ್ಲಿ ಮಾಡುವವರಾಗಿದ್ದೇವೆ.

CIVIL JUSTICE IN MYSORE.

The Report on the Administration of Civil Justice in Mysore for the year 1920-21 with the Government Review thereon has been issued just this month. The Report was forwarded by the Registrar to the Government on the 29th October 1921, about four months after the year and the Government took four months to review the Report which was done in their G. O. dated 21st February 1921 and another four months for both the Review and the Report to be published. We need hardly say that the belated publication of the Administration Reports is not very helpful to the public in estimating the progress of the various departments, and a greater expedition in all the three stages would be more useful and serve the purpose better.

We are pleased to note that the Government are aware that disposals have not kept pace with the institutions, chiefly in Subordinate Judge's Courts and in the Subordinate Appellate Courts. The idea that is generally entertained, and we think rightly to an extent, is that in many cases judges seem to feel shy of big contested cases, and exhibit a willingness to leave the job to their successors after their transfer which takes place at regular periods. Another matter to which we wish to draw the attention of the Chief Court is the scandalously long adjournments given—sometimes even in simple money suits. Half yearly adjournments are quite common. Years elapse without a single witness being examined in full. The presiding judges cannot be unaware of the loss and the difficulties the litigants will be put to on account of these delays. Justice would then become more difficult to obtain and when obtained will be barren of good results. While the expression "law's delays" is becoming more and more proverbial on the one hand, on the other, the steady increase in suits refiled and remanded which have risen to 1275 in the year under review shows the tendency on the part of the subordinate courts for hasty disposals. But in the anxiety for getting disposals justice should not be forgotten. If the aim of giving justice as speedily as possible is kept in view and followed steadily the courts of justice would be a real source of relief and utility and not dreaded as they are at present. The instructions issued recently to the Subordinate Courts in the State by the Chief Judge to prevent the delays in disposal of cases are most salutory and have come none too soon and we are sure the problem will be solved to an appreciable extent if they are followed in practice.

We may add here that the tone of the administrative section of the judiciary in the State requires to be raised. As a Kannada saying goes, every pillar should be worshipped before seeking the interview one wants and we think every judge who presides over an office should see to it that the subordinate staff discharge their duties honestly and efficiently. The troubles to which the litigants, most of whom are ignorant, are put to is a real grievance. The District Judges of the respective divisions, it is hoped, will also exercise a vigilant care in the matter.

In the Chief Court though the number of total disposals has increased from 401 in 1919-20 to 561 in 1920-21 still the number of pending cases is 648, which could certainly be improved. It would be better for the Chief Court to follow the example of the High Courts of British India which are situated in less salubrious places than Bangalore, and which are more heavily worked, and sit for five days in the week instead of three. We are sure that the learned judges of the Chief Court are capable of following even the most complicated cases—and there are very few of such cases—without very elaborate study of the records at home, granting that that is a reason for claiming to be free on the two working days. The proper and efficient administration of justice is essential to the progress and prosperity of the people and we hope the authorities entrusted with this task will do their utmost to combine expedition with justice for the benefit of the people.

ದಿವಾನರ ಸಂಚಾರ.

ದಿವಾನರು ಬರುವ ಆಗಸ್ಟ್ ತಾ|| 8ರ ಬೆಳಿಗ್ಗೆ 7½ ಗಂಟೆಯಲ್ಲಿ ಬೆಂಗಳೂರನ್ನು ಬಿಟ್ಟು ಮಾಲೂರಿಗೆ ಪ್ರಯಾಣಮಾಡುವರು, ಅಲ್ಲಿಂದ ಅದೇ ಮಧ್ಯಾಹ್ನ ಕೋಲಾರಕ್ಕೆ ತೆರಳುವರು; ತಾ|| 9ರ ಮಧ್ಯಾಹ್ನ 2ರಿಂದ 4 ಗಂಟೆಯವರೆಗೆ ಪ್ರಜೆಗಳ ದರ್ಶನ ಭಾಷಣಗಳಿಗೆ ಅವಕಾಶವಿತ್ತು 4 ಗಂಟೆಗೆ ನಡೆಯುವ ಡಿಸ್ಟ್ರಿಕ್ಟ್ ಅಧಿಕಾರಿಗಳ ಕಾನ್ಫರೆನ್ಸಿಗೆ ಹೋಗಿ ಬರುವರು. ತಾ||10 ರಲ್ಲಿ ಶ್ರೀನಿವಾಸಪುರ, ತಾ|| 11ರಲ್ಲಿ ಬೌರಿಂಗ್‌ಪೇಟೆ, ತಾ|| 12ರಲ್ಲಿ ಚಿಕ್ಕಬಳ್ಳಾಪುರ, ತಾ|| 14ರಲ್ಲಿ ಗುಡಿಬಂಡೆ ಮತ್ತು ಬಾಗೆಪಲ್ಲಿ ತಾ|| 15ರಲ್ಲಿ ಗೋರಿಬಿದನೂರು ಮತ್ತು ಮಧ್ಗಿರಿ ತಾ|| 16ರಲ್ಲಿ ಪಾವಗಡ, ತಾ|| 17ರಲ್ಲಿ ಕೊರ್ಟಗೆರೆ ಮಾರ್ಗವಾಗಿ ತುಮಕೂರು, ತಾ|| 18ರಲ್ಲಿ ಗುಬ್ಬಿ ಮಾರ್ಗವಾಗಿ ಕಿಬ್ಬನಹಳ್ಳಿ, ತಾ|| 21ರಲ್ಲಿ ತುರ್ವೆಕೆರೆ ಮತ್ತು ತಿಪಟೂರು ತಾ|| 22ರಲ್ಲಿ ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ಶಿರಾ, ಹುಲಿಯೂರು ಮತ್ತು ಬೋರನಕಣಿವೆ ತಾ|| 23ರಲ್ಲಿ ಹಿರಿಯೂರು ಮತ್ತು ಜಳ್ಳಕೆರೆ, ತಾ|| 24ರಲ್ಲಿ ಮೊಳಕಾಲ್ಮುರು, ತಾ|| 25ರಲ್ಲಿ ಚಿತ್ರದುರ್ಗ, 27ರಲ್ಲಿ ಹೊಳಲ್ಕೆರೆ ತಾ|| 29ರಲ್ಲಿ ದಾವಣಗೆರೆ ಮತ್ತು ಹರಿಹರ ಈ ಪ್ರಕಾರ ಸಂಚರಿಸಿಕೊಂಡು ತಾ|| 31ರಲ್ಲಿ ಬೆಂಗಳೂರಿಗೆ ಹಿಂದಿರುಗಿ ಬಂದು ಸೇರುವರು.

ಒಳದೇಶದ ವೃತ್ತಾಂತಗಳು.

ಬರುವ ತಿಂಗಳು ತಾ|| 12-13 ರಲ್ಲಿ ರಾಜಧಾನಿಯ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಪದ್ಧತಿಯಂತೆ ಫಲಪುಷ್ಪ ಪ್ರದರ್ಶನವು ನಡೆಯುವುದಾಗಿದೆ.

ನೆಲಮಂಗಲದ ಟೌನ್ ಮ್ಯುನಿಸಿಪಾಲಿಟಿಯಿಂದ ಪ್ರಜಾಪ್ರತಿನಿಧಿ ಸಭೆಗೆ ಮೆಂಬರನ್ನು ಆರಿಸುವ ಅಧಿಕಾರವು ಇದುವರೆಗೂ ಇಲ್ಲದಿದ್ದುದು ಈಗ ಕೊಡಲ್ಪಟ್ಟಿತು.

ಕೋಲಾರದಲ್ಲಿ ಕೆಲಸಮಾಡುವ ಸರ್ಕಾರಿ ಉದ್ಯೋಗಿಗಳಿಗೆ ಸಂಬಳದ ಜತೆಗೆ ಅಲೋಯನ್ನು ಬೇರೆ ಸಲ್ಲುತ್ತಿದ್ದಿತು. ಇನ್ನು ಮುಂದೆ ಅದು ಸಲ್ಲಿಸಲ್ಪಡುವುದೆಂದು ಅಪ್ಪಣೆಯಾಗಿದೆ.

ವಿದ್ಯಾಶಾಖೆಯ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ಲರಾಗಿದ್ದ ಮ|| ಬಿ. ದಾಸಪ್ಪನವರಿಗೆ 1 ತಿಂಗಳ ಹಕ್ಕಿನ ರಜವು ಕೊಡಲ್ಪಟ್ಟಿದೆ. ಅದು ಮುಗಿದ ಕೂಡಲೇ ಉದ್ಯೋಗದಿಂದ ನಿವೃತ್ತರಾಗುತ್ತಾರೆ.

ಎಂದೆಂದಿಗೂ ಜೀರ್ಣೋದ್ಧಾರವಾಗಲು ಅರ್ಹವಾಗಿಲ್ಲವೆಂದು ನಿರ್ಧರಿಸಲ್ಪಟ್ಟ ಕೆರೆಗಳ ಒಳ ಅಂಗಳಗಳನ್ನು ನಂಬರುವಾರು ವಿಂಗಡಿಸಿ ಕಂದಾಯವನ್ನು ವಿಧಿಸಿ ಹರಾಜು ಮೂಲಕ ಖಾಯಂ ಸಾಗುವಳಿಗೆ ಕೊಡಬಹುದೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

ಅ|| ಕಮಿಷನರುಗಳಾದ ಮ|| ಪುಟ್ಟರಾಜೇ ಅರಸಿನವರು ನಂಜನಗೂಡಿಗೆ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ಮ|| ಕೆ. ಸುಬ್ಬರಾಯರು ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾಗಿಯೂ, ಮ|| ಬಿ. ಶ್ರೀನಿವಾಸಯ್ಯಂಗಾರರು ಕೋಲಾರ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಸಂಸ್ಥಾನದ ರೈಲ್ವೆ ಶಾಖೆಯವರು ಒಂದೊಂದಕ್ಕೆ 65 ಸಾವಿರ ರೂ. ಬೆಲೆಯ 5 ಇಂಜನ್ನುಗಳನ್ನು ತರಿಸಲು ಏರ್ಪಡಿಸಿರುವರಂತೆ. ಇವು ಬಂದ ಕೂಡಲೇ ಸಂಸ್ಥಾನದ ವಶದಲ್ಲಿರುವ ಎಲ್ಲ ಲೋಹಮಾರ್ಗಗಳಲ್ಲಿ ಈಗ ಬಿಡುತ್ತಿರುವ ಟ್ರೇನುಗಳೇ ಅಲ್ಲದೆ ಮತ್ತೊಂದೊಂದನ್ನು ಹೆಚ್ಚಾಗಿ ಬಿಡಲು ನಿರ್ಧರಿಸಿದ್ದಾರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಸಾಂಕ್ರಾಮಿಕ ರೋಗಾದ್ಯುಪದ್ರವಗಳೇನೂ ಇಲ್ಲ. ಮಳೆಯ ಅಭಾವವೂ ಧಾನ್ಯಗಳ ಬೆಲೆಯ ಏರುವಿಕೆಯೂ ಬಡಪ್ರಜೆಗಳನ್ನು ಚಿಂತೆಗೆ ಗುರಿಮಾಡಿದೆ. ಕಾವೇರಿಯಲ್ಲಿ ಪ್ರವಾಹವು ಸಮೃದ್ಧವಾಗಿದ್ದರೂ ರಾಜಧಾನಿಗೆ ಕುಡಿಯುವ ನೀರು ಮಾತ್ರ ಸಮೃದ್ಧವಾಗಿ ಒದಗುತ್ತಲಿಲ್ಲ. ಮಧ್ಯಾಹ್ನ ಮತ್ತು ರಾತ್ರಿವೇಳೆ ನಲ್ಲಿಗಳು ಬಂದಾಗಿರುತ್ತವೆ.

ಭರತಖಂಡದ ಸರ್ವಸೇನಾಪತಿಗಳಾದ ರಾಲಿನ್‌ಸನ್ ಪ್ರಭುಗಳು ದಕ್ಷಿಣ ಇಂಡ್ಯಾದಲ್ಲಿ 1 ತಿಂಗಳ ಕಾಲ ಸಂಚರಿಸಿ ಅಲ್ಲಲ್ಲಿರುವ ಸೈನ್ಯಗಳನ್ನೆಲ್ಲಾ ಪರಾಮರಿಸಿಕೊಂಡು ಹೋಗುವವರಾಗಿದ್ದಾರೆ. ಈ ಸಂದರ್ಭದಲ್ಲಿ ಇವರು ಬರುವ ತಾ|| 9 ರಲ್ಲಿ ಮದ್ರಾಸಿನಲ್ಲಿದ್ದು 10 ರಲ್ಲಿ ಬೆಂಗಳೂರಿನಲ್ಲಿದ್ದು 11 ಕ್ಕೆ ರಾಜಧಾನಿಗೆ ಬಂದು, ತಾ|| ೧೪ರ ವರೆಗೆ ಇಲ್ಲಿದ್ದು ಇಲ್ಲಿಂದ ಮಾಲಪ್ಪುರು, ಕನ್ನಾನೂರು, ಕಲ್ಲಿಕೋಟೆ, ನೀಲಗಿರಿಗಳ ಕಡೆಗೆ ಪ್ರಯಾಣ ಮಾಡುವರು.

ಸಂಸ್ಕೃತ ಕಾಲೇಜುಗಳಲ್ಲಿ ತ್ರಿಮತದ ವಿದ್ಯಾರ್ಥಿಗಳ ಹೊರತು ಇತರರನ್ನು ಪ್ರವೇಶಗೊಳಿಸುವ ವಿಷಯದಲ್ಲಿ ನಿಯುಕ್ತಸಂಘದವರು ಕೊಟ್ಟಿರುವ ಅಭಿಪ್ರಾಯವನ್ನು ಕುರಿತು ತುಮಕೂರು ಕ್ರಾನಿಕಲ್ ಪತ್ರಿಕೆಯೂ ಮೈಸೂರು ವೃತ್ತಾಂತ ಪತ್ರಿಕೆಯೂ ನಿಷ್ಪಕ್ಷಪಾತವಾದ ಅಭಿಪ್ರಾಯಗಳನ್ನು ಕೊಟ್ಟಿರುವುವು. ಇದಕ್ಕಾಗಿ ಹಿಂದುಳಿದಿರುವ ವಿಶೇಷ ಪ್ರಜೆಗಳೆಲ್ಲಾ ಸಂತೋಷಿಸದಿರಲಾರರು. ಆ ಲೇಖನಗಳು ಗೌರ್ನಮೆಂಟಿನವರ ಗಮನಕ್ಕೆ ಅರ್ಹವಾಗಿರುತ್ತವೆ.

ಶ್ರೀರಂಗಪಟ್ಟಣದಿಂದ ಮುನ್‌ಸೀಫ್ ಕೋರ್ಟನ್ನು ತಪ್ಪಿಸಕೂಡದೆಂದು ಅಲ್ಲಿಯ ಮತ್ತು ಸುತ್ತುಮುತ್ತಣ ಪ್ರಜೆಗಳು ಗೌರ್ನಮೆಂಟಿಗೂ ಶ್ರೀಮನ್ಮಹಾರಾಜರವರಿಗೂ ಅನೇಕ ಅರ್ಜಿಗಳನ್ನು ಬರೆದುಕೊಂಡಿದ್ದಾರೆಂದು ಕೇಳುತ್ತೇವೆ. ಆದರೆ ಮಂಡ್ಯದ ಪ್ರಜೆಗಳು ಆ ಕೋರ್ಟನ್ನು ಮೈಸೂರಿಗೆ ವರ್ಗಮಾಡುವದಕ್ಕೆ ಪ್ರತಿಯಾಗಿ ತಮ್ಮಲ್ಲಿ ಸ್ಥಾಪಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಕೆಲ ದೊಡ್ಡಮನುಷ್ಯರು ಪ್ರತ್ಯಕ್ಷವಾಗಿ ದಿವಾನರಲ್ಲಿಗೆ ಹೋಗಿ ಬಿನ್ನೈಸಿಕೊಂಡಿದ್ದಾರೆ.

ಮ್ಯುನಿಸಿಪಾಲಿಟಿಗಳಲ್ಲಿ ರೂ. ಗೆ 2 ಆಣೆ ಮೇರೆಗೆ ವಿದ್ಯಾಭ್ಯಾಸದ ತೆರುಗೆಯನ್ನು ವಿಧಿಸಬೇಕೆಂದು ನಿರ್ಣಯವಾಗಿದೆಯಷ್ಟೆ. ಇದರ ಮೇಲೆ ಬೆಂಗಳೂರು ಮ್ಯುನಿಸಿಪಾಲಿಟಿಯವರು ಕಳೆದವಾರ ಮೀಟಿಂಗ್ ಮಾಡಿ, ಅಂಥ ತೆರುಗೆಯನ್ನು ಹೊಸದಾಗಿ ತಮ್ಮಲ್ಲಿ ವಿಧಿಸಬೇಕಾಗಿಲ್ಲವೆಂದೂ, ಅಲ್ಲಿಯ ಬಾಲವಿದ್ಯಾಭ್ಯಾಸಕ್ಕಾಗಿ ವರ್ಷ 1ಕ್ಕೆ ತಗಲುವ 66000 ರೂ. ಗಳಲ್ಲಿ ⅓ ಭಾಗವನ್ನು ಎಂದರೆ 22000 ರೂ. ಗಳನ್ನು ಮ್ಯುನಿಸಿಪಾಲಿಟಿಯಿಂದಲೇ ಕೊಟ್ಟುಬಿಡುವುದಾಗಿಯೂ ತೀರ್ಮಾನಿಸಿದುದು ಶ್ಲಾಘ್ಯವೇ ಸರಿ. ಇಂಥ ಯೋಗ್ಯತೆಯೂ ಯೋಗವೂ ರಾಜಧಾನಿಯ ಮ್ಯುನಿಸಿಪಾಲಿಟಿಯ ಹಣೆಯಲ್ಲಿ ಬರೆದಿರುವುದೆ?

ವಿದ್ಯಾಶಾಖೆಯಲ್ಲಿ ಕೆಲಸಮಾಡಿ ನಿನ್ನೆ ತಾನೇ ಉದ್ಯೋಗ ನಿವೃತ್ತರಾದ ಮ|| ಕೆ. ಸಂಜೀವಶೆಟ್ಟಿ ಬಿ. ಎ. ಯವರು 10 ಸಹಸ್ರ ರೂಪಾಯಿಗಳನ್ನು ನಮ್ಮ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿ, ಅದರ ಬಡ್ಡಿಯಿಂದ ವೈಶ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಡಲು ಏರ್ಪಡಿಸಿರುವರು. ಲಕ್ಷಾಧಿಕಾರಿಗಳಾದ ವೈಶ್ಯರುಗಳು ಸಂಸ್ಥಾನದಲ್ಲಿ ಅನೇಕರಿರುವಲ್ಲಿ ಮಿತಾರ್ಜನೆ ಮಿತಸಂಪತ್ತುಳ್ಳವರಾಗಿರುವ ಈ ನಮ್ಮ ಮಿತ್ರರು ವಿದ್ಯಾಫಲವನ್ನು ಸ್ವತಃ ತಿಳಿದವರಾದುದರಿಂದ ಸ್ವಜನರ ವಿದ್ಯಾಭಿವೃದ್ಧಿಗಾಗಿ ಮಾಡಿದ ಈ ಉದಾರವಾದ ದಾನವು ವೈಶ್ಯವರ್ಗದ ಶ್ರೀಮಂತರುಗಳಿಗೆಲ್ಲಾ ಮಾರ್ಗದರ್ಶಕವಾಗಿದೆ. ಶೆಟ್ಟರ ಈ ಕಾರ್ಯವನ್ನು ನಾವು ಸಂತೋಷದಿಂದ ಅಭಿನಂದಿಸಿ ಧನ್ಯವಾದವನ್ನು ಮಾಡುವೆವು.

ಕಡೂರು ಡಿಸ್ಟ್ರಿಕ್ಟಿನಿಂದ ಪ್ರಜಾಪ್ರತಿನಿಧಿ ಸಭೆಗೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳು ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದಾರೆ—ಮ|| ಗಳಾದ ವಸ್ತಾರೆ ಹೊನ್ನಪ್ಪಯ್ಯನವರು, ಸಿ. ವಾಸುದೇವರಾಯರು, ಬಿ. ಕೇಶವಯ್ಯನವರು, ಬಿ. ಎನ್. ಎಂ. ಶಿವಲಿಂಗಪ್ಪಯ್ಯನವರು, ನಾಡಿಗ ಮೈಲಾರಯ್ಯನವರು, ದೊಡ್ಡಮನೆ ವಿ. ಹಾಲಪ್ಪನವರು, ಹೊಸಕೊಪ್ಪ ಕೃಷ್ಣರಾಯರು, ಬಿ. ರಂಗರಾಜಯ್ಯನವರು, ಕಲ್ಲೇಗೌಡರು, ಪಟೇಲ್ ಶಂಕರಪ್ಪನವರು, ಎ. ವೆಂಕಟರಾಮಯ್ಯನವರು, ದಾನಿವಾಸದ ಶಂಕರಪ್ಪ ಉರಫ್ ಗುಂಡಪ್ಪನವರು, ಸಿ. ಶ್ರೀನಿವಾಸರಾಯರು, ಜಿ. ಗಣೇಶರಾಯರು, ಎಂ. ಅಬ್ದುಲ್‌ಅಜೀಜ್‌ರವರು, ಟಿ. ಚೆಟ್ಟಪ್ಪನವರು, ಎಂ. ವಿ. ಮರುಳಸಿದ್ದಯ್ಯನವರು, ಇ. ಡಬ್ಲ್ಯು. ಫೋರ್ಕ್‌ರವರು, ಎಚ್. ಎಸ್. ಗಣೇಶರಾಯರು, ಟಿ. ಸಯ್ಯದ್ ಖಾಜಾಪೀರಾನ್‌ಸಾಹೇಬರು, ಬಿ.ಎ. ದೇವೇಗೌಡರು, ಎನ್. ಜಿ. ಬಿ. ಕ್ರೈರ್‌ವಾನ್‌ರವರು.

ಈ ಕೆಳಗೆ ಹೇಳುವಂತೆ ವೈದ್ಯಶಾಖೆಯಲ್ಲಿ ವರ್ಗಾವರ್ಗೀಗಳು ಮಾಡಲ್ಪಟ್ಟಿವೆ—ಚಿತ್ರದುರ್ಗದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿದ್ದ ಅ|| ಸರ್ಜನ್ ಮ|| ಬಿ. ಕೃಷ್ಣಮೂರ್ತಿಯವರು ಕೃಷ್ಣರಾಜ ಸಾಗರಕ್ಕೆ, ಅಲ್ಲಿದ್ದ ಅ|| ಸರ್ಜನ್ ಮ|| ದೀನದಯಾಳುಸಿಂಗ್‌ರವರು ಮೈಸೂರು ಕೃಷ್ಣರಾಜ ವೈದ್ಯಶಾಲೆಗೆ, ಕೋಲಾರ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿದ್ದ ಅ|| ಸರ್ಜನ್ ಮ|| ಎಸ್. ನಾರಾಯಣರಾಯರು ಚಿತ್ರದುರ್ಗ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಸ್ಥಾನಕ್ಕೆ, ಸರ್ಜನರಾದ ಮ|| ಮುತ್ತುಸಾಮಿದಾಸರು ಮೈಸೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಕೆಲಸದಿಂದ ಕೋಲಾರ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಸ್ಥಾನಕ್ಕೆ, ಸರ್ಜನ್ ಮ|| ಡಿ. ಎಸ್. ಪುಟ್ಟಣ್ಣನವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಉದ್ಯೋಗದಿಂದ ಕಡೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಸ್ಥಾನಕ್ಕೆ, ಅ|| ಸರ್ಜನ್ ಮ|| ಎಂ. ಎಸ್. ನಂಜುಂಡಯ್ಯನವರು ಕಡೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಉದ್ಯೋಗದಿಂದ ಬೆಂಗಳೂರು ಮಿಂಟೋ ನೇತ್ರವೈದ್ಯಾಲಯದ ರೆಸಿಡೆಂಟ್ ಮೆಡಿಕಲ್ ಆಫೀಸರ್ ಉದ್ಯೋಗಕ್ಕೆ, ಆ ಉದ್ಯೋಗದಲ್ಲಿದ್ದ ಅ|| ಸರ್ಜನ್ ಮ|| ಕೆ. ಶ್ರೀನಿವಾಸಾಚಾರ್ಯರು ಮೈಸೂರು ಕೃಷ್ಣರಾಜೇಂದ್ರ ವೈದ್ಯಾಲಯದ ನೇತ್ರಚಿಕಿತ್ಸಕೋದ್ಯೋಗಕ್ಕೆ, (ಜೈಲ್ ಸೂಪರಿಂಟೆಂಡೆಂಟರಾಗಿಯೂ ಸಹ) ಕೃಷ್ಣರಾಜೇಂದ್ರ ವೈದ್ಯಾಲಯದಲ್ಲಿದ್ದ ಸರ್ಜನ್ ಮ|| ಬಿ. ಕೆ. ನಾರಾಯಣರಾಯರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಉದ್ಯೋಗಕ್ಕೆ.

ಶಿವೈಕ್ಯ ಶ್ರೀ ಅಥಣಿ ಶಿವಯೋಗೀಶ್ವರರ ಸ್ಮಾರಕವಾಗಿ ದಾವಣಗೆರೆಯ ವೀರಶೈವಮಹಾಜನರು ತಮ್ಮ ಸ್ಥಲದಲ್ಲಿ 30 ಸಹಸ್ರ ರೂ.ಗಳ ವೆಚ್ಚದಿಂದ ಕಟ್ಟಿಸಬೇಕೆಂದು ಸಂಕಲ್ಪಿಸಿರುವ ಶ್ರೀ ಮುರಘೇಂದ್ರ ಶಿವಯೋಗಾಶ್ರಮ ಭವನದ ಶಂಕುಸ್ಥಾಪನ ಮಹೋತ್ಸವವು ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರ ಹಸ್ತದಿಂದ ಬರುವ ಆಗಸ್ಟ್ ತಾ|| 2ರ ಬೆಳಗ್ಗೆ ನಡೆಯಿಸಲ್ಪಡುತ್ತದೆ. ಅದೇ ದಿನ ಮಧ್ಯಾಹ್ನ 3 ಘಂಟೆಗೆ ಅವರ ಅಧ್ಯಕ್ಷತೆಯಲ್ಲೇ ಮೈಸೂರು ದೇಶೀಯ ವೀರಶೈವ ಮಹಾಸಭೆಯು ನೆರವೇರುತ್ತದೆ. ಅದರಲ್ಲಿ ಪ್ರಕೃತ ಕಾಲೀನಗಳಾದ ವೀರಶೈವ ಧಾರ್ಮಿಕ ವಿಷಯಗಳೂ ಮತ್ತು ಸರಕಾರಿ ಸಂಸ್ಕೃತ ಕಾಲೇಜುಗಳಿಗೆ ವೀರಶೈವರನ್ನು ಸೇರಿಸುವ ವಿಷಯವೂ ಚರ್ಚಿಸಲ್ಪಟ್ಟು ನಿರ್ಧಾರಗಳಾಗುವುವು. ಕಾರ್ಯದಕ್ಷರಾದ ದಾವಣಗೆರೆಯ ನಿವಾಸಿಗಳು ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟುಗಳ ವೀರಶೈವ ಪ್ರಮುಖರಿಗೂ ಜ್ಞಾಪ್ತಿಯಿದ್ದಮಟ್ಟಿಗೆ ಆಹ್ವಾನಪತ್ರಿಗಳನ್ನು ಕಳುಹಿಸಿಕೊಟ್ಟಿರುವರು. ಯಾರಿಗಾದರೂ ಪತ್ರವು ಬರದೆ ತಪ್ಪಿದ್ದರೂ ಮತಕಾರ್ಯವಾದುದರಿಂದ ಅಭಿಮಾನಶಾಲಿಗಳಾದವರೆಲ್ಲರೂ ಈ ಸಮಾರಂಭಗಳಿಗೆ ದಯಮಾಡಿಸಬೇಕೆಂದು ಪ್ರಾರ್ಥಿಸಲ್ಪಟ್ಟಿರುವರು. ವಿಜೃಂಭಣೆಯಿಂದ ಎಲ್ಲ ಕಾರ್ಯಗಳೂ ಜರುಗುವುದಕ್ಕೆ ತಕ್ಕೇರ್ಪಾಟುಗಳು ಮಾಡಲ್ಪಡುತ್ತಿರುವುವು. ಚಿತ್ರದುರ್ಗದ ಶ್ರೀ ಜಗದ್ಗುರು ಮಹಾಸ್ವಾಮಿ ಸ್ವಾರಿಯು ದಯಮಾಡಿಸುವುದಾಗಿರುವ ಕಾರಣ ಈ ಸಮಾರಂಭಗಳಿಗೆ ಮತ್ತಷ್ಟು ಶೋಭೆಯುಂಟಾಗಿ ಜನಸ್ತೋಮವೂ ವಿಶೇಷವಾಗಿ ಸೇರುತ್ತದೆಂಬುದಕ್ಕೆ ಸಂಶಯವಿಲ್ಲ.

ಭರತಖಂಡದ ವೃತ್ತಾಂತಗಳು.

ಭೂಪೇಂದ್ರನಾಥಬಾಸುರವರು ತಮ್ಮ ಉದ್ಯೋಗವನ್ನು ವಹಿಸಿಕೊಳ್ಳಲು ಆಗಸ್ಟ್ ತಾ|| 5 ರಲ್ಲಿ ಸೀಮೆಗೆ ಪ್ರಯಾಣ ಮಾಡುವರು.

ಬಂಗಾಳಾದಲ್ಲಿ ಕಳೆದ ೬ ತಿಂಗಳೊಳಗೆ 552 ಸುಲಿಗೆ ಕಳ್ಳತನಗಳು ನಡೆದಿವೆ. ಅದರಲ್ಲಿ 156 ಕೇಸುಗಳಲ್ಲಿ ಮಾತ್ರ ಅಪರಾಧಿಗಳು ಹಿಡಿಯಲ್ಪಟ್ಟವಂತೆ. ಪೋಲೀಸ್ ಸಿಬ್ಬಂದಿಯು

ವರ್ಷೇವರ್ಷೆ ಹೆಚ್ಚುತ್ತಿದ್ದರೂ ಈ ಪ್ರಜೋಪದ್ರವವು ಮಾತ್ರ ತಪ್ಪಲಿಲ್ಲ.

ಸರ್ ಶಂಕರ್ ನಾಯರ್‌ರವರು ಬರೆದಿರುವ "ಗಾಂಧಿ-ಅರಾಜಕತ್ವ" ಎಂಬ ಗ್ರಂಥದಲ್ಲಿ ತನಗೆ ಮಾನನಷ್ಟಕರವಾದ ವಿಷಯವಿರುವುದೆಂದೂ ಅದಕ್ಕಾಗಿ ವ್ಯಾಜ್ಯವನ್ನು ಹೂಡುವೆನೆಂದೂ, ಸರ್ ಮೈಕೇಲ್ ಒಡ್ವೈಯರ್‌ರವರು ನಾಯರ್‌ರವರಿಗೆ ನೋಟೀಸನ್ನು ಕೊಟ್ಟಿದ್ದಾರೆ.

ಕೊಡಗಿನಲ್ಲೂ ಮಂಗಳೂರು ಕನ್ನಾನೂರು ಕಡೆಯೂ ವಿಪರೀತ ಮಳೆಯು ಸುರಿಯುತ್ತಿದೆ. ಕಲ್ಲಿಕೋಟೆ ಪ್ರಾಂತದಲ್ಲಿ ಹೆಚ್ಚು ಮಳೆಯಿಂದ ನದಿಗಳಲ್ಲಿ ಇದುವರೆಗೆ ಯಾವಾಗಲೂ ಬರದಿದ್ದಷ್ಟು ಪ್ರವಾಹವು ಬಂದು ಬಡಬಗ್ಗರ ಗುಡಿಸಲುಗಳೆಲ್ಲಾ ಕೊಚ್ಚಿಹೋದುವು. ತರೀ ಗದ್ದೆಗಳು ಮುಳುಗಿಹೋದಾವೆಂಬ ಭಯವುಂಟಾಗಿದೆ.

ವೈಸ್ರಾಯರ ಮಂತ್ರಾಲೋಚನಾ ಸಭೆಯಲ್ಲಿ ಲಾ ಮೆಂಬರಾಗಿದ್ದ ಡಾ॥ ಸಪ್ರೂರವರು ರಾಜೀನಾಮೆ ಕೊಟ್ಟ ಸ್ಥಾನಕ್ಕೆ ಬೊಂಬಾಯಿ ಗೌರ್ನರ ಕಾರ್ಯಕಾರಿ ಸಂಘದಲ್ಲಿ ಸಭಿಕರಾಗಿರುವ ಸರ್ ಚಿಮನ್‌ಲಾಲ್ ಸೆಟಲ್ವಾಡ್‌ರವರು ನಿಯಮಿಸಲ್ಪಡುವರೆಂಬುದಕ್ಕೆ ನಂಬತಕ್ಕ ಕಾರಣಗಳಿವೆಯೆಂದು ಬಂಗಾಳಿ ಪತ್ರಿಕೆಯು ಹೇಳುತ್ತದೆ.

ಹಿಮವತ್ಪರ್ವತದ ಎವರೆಸ್ಟ್ ಶಿಖರವನ್ನು ಹತ್ತುವುದಕ್ಕೆ ಹೊರಟಿದ್ದ ಯಾತ್ರಿಕರು ಇನ್ನೂ 6000 ಅಡಿಗಳ ಎತ್ತರವನ್ನು ಏರಬೇಕಾಗಿದ್ದರೂ ಸಾಧ್ಯವಾಗದೆ ಹಿಂದಿರಿಗಿ ಬಂದರಷ್ಟೆ. ಈ ಯಾತ್ರಿಕರಲ್ಲಿ ಯೂರೋಪ್ಯರಾರಿಗೂ ಅಪಾಯವಾಗಲಿಲ್ಲ. ಒಡನೆ ಹೋಗಿದ್ದ ಕೂಲಿಕಾರ ಸಿಕ್ ಜನರಲ್ಲಿ 7 ಮಂದಿಗಳು ಮಾತ್ರ ಮಂಜಿನ ಬಂಡೆಗಳ ಅಡಿಗೆ ಸಿಕ್ಕಿ ಹತರಾಗಿ ಹೋದರೆಂದು ಪ್ರಕಟವಾಗಿದೆ.

ತಮ್ಮ "ಮದರ್ಲ್ಯಾಂಡ್" ಎಂಬ ಪತ್ರಿಕೆಯಲ್ಲಿ ಕಾರಾಗೃಹ ವಿಷಯವಾಗಿ ಯಾವುದೋ ಒಂದು ಲೇಖನವನ್ನು ಬರೆದಿದ್ದರೆಂಬ ತಪ್ಪಿಗಾಗಿ ದಂಡಾಧಿಕಾರಿಯು ಮಜರುಲ್ ಹಕ್ಕರಮೇಲೆ ವಾರಂಟನ್ನು ಹುಟ್ಟಿಸಿದರು. ಅದನ್ನು ತಿಳಿದು ತಮ್ಮ ಮೇಲೆ ವಾರಂಟು ಜಾರಿಯಾಗುವುದಕ್ಕೆ ಮುಂಚೆ ಇವರೇ ದಂಡಾಧಿಕಾರಿಯಿದಿರಿಗೆ ಹೋದರು. ತಾ॥ 26ಕ್ಕೆ ಕೇಸನ್ನು ಅಡ್ಜರ್ನ್ ಮಾಡಿ ಆದಿನ ಬರುವುದಕ್ಕೆ ಅಪ್ಪಣೆಮಾಡಿದರು.

ಬೊಂಬಾಯಿ ಮ್ಯುನ್ಸಿಪಲ್ ಕಾರ್ಪೊರೇಷನ್ನಿನವರು ತಮ್ಮ ಎಲ್ಲೆಯಲ್ಲಿ ಯಾರೂ ಗೋವಧೆಯನ್ನು ಮಾಡದಂತೆ ಒಂದು ತೀರ್ಮಾನವನ್ನು ಮಾಡಬೇಕೆಂದು ನಿರ್ಧರಿಸಿದ್ದರು. ಹೀಗೆ ಬಲಾತ್ಕಾರದಿಂದ ನಿರೋಧಿಸಲು ಹಿಂದುಗಳಿಗೆ ಹಕ್ಕಿಲ್ಲವೆಂತಲೂ ಹಾಗೆ ಮಾಡುವುದಾದರೆ ಮುಸಲ್ಮಾನರ ಮನಸ್ಸು ಕೆಟ್ಟು ಹಿಂದೂ ಮಹಮ್ಮದೀಯರ ಐಕ್ಯಕ್ಕೆ ಭಂಗಬರುವುದೆಂತಲೂ, ಮೃದುವಚನಗಳಿಂದ ಅದನ್ನು ತಪ್ಪಿಸಬೇಕೆಂತಲೂ ಸರೋಜಿನೀದೇವಿಯವರು ಬರೆದು ಪ್ರಕಟಿಸಿದ್ದಾರೆ.

ಕಣ್ಣೀರಿನಲ್ಲಿ ಅಲಿಸೊಜ್ಮೆ ಎಂಬ ಒಂದು ಪದಾರ್ಥವಿರುವುದೆಂತಲೂ, ಅದಕ್ಕೆ ಕ್ರಿಮಿಗಳನ್ನು ನಾಶಮಾಡುವ ಶಕ್ತಿಯಿರುವುದೆಂತಲೂ, ಅಲ್ಮರ್ತ್‌ರೈಟ್ ಎಂಬ ಡಾಕ್ಟರು ಪರೀಕ್ಷೆಯಿಂದ ಗೊತ್ತುಮಾಡಿದ್ದಾರೆ. ಕಣ್ಣೀರಿನ ಒಂದು ಬಿಂದುವು ಲಕ್ಷಾಂತರ ಕ್ರಿಮಿಗಳನ್ನು ಕೊಲ್ಲುವ ಶಕ್ತಿಯುಳ್ಳದಾಗಿರುವುದಂತೆ ! ಒಂದು ಸೀಸೆಯಲ್ಲಿ ಬ್ಯಾಕ್ಟೀರಿಯಾ ಕ್ರಿಮಿಗಳನ್ನು ಬಹಳವಾಗಿ ತುಂಬಿ ಅದಕ್ಕೆ ಒಂದು ತೊಟ್ಟು ಕಣ್ಣೀರನ್ನು ಹಾಕಿ ಕ್ರಿಮಿಗಳೆಲ್ಲಾ ನಾಶವಾದುದನ್ನು ತೋರಿಸಿ ತನ್ನ ಸಿದ್ಧಾಂತವನ್ನು ಇವರು ದೃಢಪಡಿಸಿರುವರು.

ಹೈದರಾಬಾದಿನಲ್ಲಿ ಉತ್ತಮ ಬ್ರಾಹ್ಮಣವಂಶೋದ್ಭವರಾದ ಶಂಕರರಾವ್ ಎಂಬುವರು ಒಂದು ಯಜ್ಞಮಾಡಲು ಸಂಕಲ್ಪಿಸಿ, 40 ಕರಿಯ ಮೇಕೆಗಳನ್ನು ಕೊಲ್ಲಲು ಪ್ರಯತ್ನಿಸಿದುದನ್ನು ಕೇಳಿ ಅಲ್ಲಿಯ ಆರ್ಯಸಮಾಜದವರು ಪಶು ಹಿಂಸೆಯು ಅವೈದಿಕವೆಂಬುದನ್ನು ಸಿದ್ಧಾಂತಪಡಿಸಲು ಶಂಕರರಾವ್ ಪಕ್ಷದವರನ್ನು ಕರೆದರು. ಅವರು ಬರಲಿಲ್ಲ. ಊರಿನ ಇತರ ಮತಸ್ಥರೆಲ್ಲಾ ಆ ಯಜ್ಞಕಾರ್ಯಕ್ಕೆ ತಮ್ಮ ಅಸಮ್ಮತಿಯನ್ನು ಕಾಣಿಸಿ ಪ್ರಕಟನಪತ್ರಿಕೆಗಳನ್ನು ಹೊರಡಿಸಿದರು. ಆದರೂ ರಾಯರು ತಾವು ಹಿಡಿದ ಪಟ್ಟನ್ನು ಬಿಡದೆ ನೆರವೇರಿಸಿದರಂತೆ.

ಬಂಗಾಳಾ ಗೌರ್ನರಾದ ಲಾರ್ಡ್ ಲಿಟ್ಟನ್‌ರವರು ಪತ್ನೀಸಮೇತರಾಗಿ ಸಂಚರಿಸಿಕೊಂಡು ಢಕ್ಕಾ ಪಟ್ಟಣಕ್ಕೆ ಹೋಗಿದ್ದರು. ಅಲ್ಲಿಯ ಪ್ರಜೆಗಳು ಒಪ್ಪಿಸಿದ ವಿಜ್ಞಾಪನ ಪತ್ರಿಕೆಗೆ ಉತ್ತರವನ್ನು ಕೊಡುವಾಗ್ಗೆ—"ಭರತಖಂಡಕ್ಕೆ ಸಂಪೂರ್ಣ ಸ್ವಪರಿಪಾಲನವನ್ನು ಕ್ರಮೇಣ ಕೊಡುವ ಪದ್ಧತಿಯಲ್ಲಿ ಯಾವ ಮಾರ್ಪೂ ಆಗುವುದಿಲ್ಲವೆಂಬ ಗಟ್ಟಿ ನಂಬುಗೆಯು ನನಗಿದ್ದುದರಿಂದಲೇ ನಾನು ಈ ಗೌರ್ನರ್ ಪದವಿಗೆ ಒಪ್ಪಿಕೊಂಡೆನು. ನನ್ನ ನಂಬುಗೆಯು ತಪ್ಪಾದುದೆಂದು ತಿಳಿದರೆ ಆ ಉತ್ತರಕ್ಷಣದಲ್ಲೇ ಈ ಉದ್ಯೋಗಕ್ಕೆ ರಾಜೀನಾಮೆ ಕೊಡುತ್ತೇನೆ" ಎಂದು ಹೇಳಿದರು.

ಪರರ ಸಹಾಯವಿಲ್ಲದೆ ತಾವು ನಡೆಯಲಾರದ ಸ್ಥಿತಿಯಲ್ಲಿರುವ ಕಾರಣ ಕಣ್ಣುಬೇನೆಯನ್ನು ನಾನು ಹೋಗಲಾಡಿಸಿಕೊಂಡು ಬರುವುದಕ್ಕಾಗಿ ಜರ್ಮನಿಗೆ ಹೋಗಿಬರಬೇಕೆಂದೂ ಅಲ್ಲಿರುವಂಥ ನೇತ್ರವೈದ್ಯರು ಇನ್ನೆಲ್ಲೂ ಇಲ್ಲವೆಂದೂ, ಅದಕ್ಕಾಗಿ ತಮಗೆ ಪ್ಯಾಸ್‌ಪೋರ್ಟನ್ನು ಕೊಡಬೇಕೆಂದೂ ಸ್ವಾಮಿಸತ್ಯದೇವರವರು ಬೊಂಬಾಯಿ ಸರ್ಕಾರಕ್ಕೆ ಬರೆದುಕೊಂಡಿರಲು, ನೀವು ಇಂಗ್ಲಂಡಿಗೆ ಹೋಗುವುದಾದರೆ ಮಾತ್ರ ಪ್ಯಾಸ್‌ಪೋರ್ಟ್ ಕೊಡಲ್ಪಡುವುದು, ಅದಕ್ಕೆ 3 ರೂ. ನ್ನು ಕಳುಹಿಸಿಕೊಡಬೇಕು. ಇಂಗ್ಲಂಡಿನಲ್ಲೂ ಪ್ರಸಿದ್ಧ ನೇತ್ರವೈದ್ಯರಿದ್ದಾರೆಂದು ಪ್ಯಾಸ್‌ಪೋರ್ಟನ್ನು ಕೊಡುವಧಿಕಾರಿಯು ಉತ್ತರವನ್ನು ಕೊಟ್ಟಿದ್ದಾರೆ.

"ಈ ದೇಶದಲ್ಲಿ ರಾಜಕೀಯಾಪರಾಧಕ್ಕಾಗಿ ಶಿಕ್ಷಿತರಾಗಿ ಕಾರಾಗೃಹದಲ್ಲಿರುವ ಜನರ ಸಂಖ್ಯೆಯನ್ನು ಕುರಿತು ಮಿತಿಮೀರಿದ ಸಂಖ್ಯೆಗಳು ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತಿವೆ. ಆದುಕಾರಣ ಸರಿಯಾದ ಸಂಖ್ಯೆಯನ್ನು ತಿಳಿಯಬೇಕೆಂದು ಎಲ್ಲ ಪ್ರಾಂತಿಕ ಸರಕಾರಗಳಿಗೂ ಬರೆದಿದ್ದೆವು. ಅದರ ಮೇಲೆ ಬಂದ ಲೆಕ್ಕಗಳಿಂದ ಇಂಥವರ ಸಂಖ್ಯೆಯೆಲ್ಲಾ 3816 ಮಾತ್ರವೇ ಎಂದು ಗೊತ್ತಾಗಿದೆ. ಇದರಲ್ಲಿ ಮಲಬಾರಿನಲ್ಲಿ ಶಿಕ್ಷಿತರಾಗಿರುವ ಮಾಪಿಳ್ಳೆಗಳ ಸಂಖ್ಯೆಯು ಮಾತ್ರ ಸೇರಿಲ್ಲ" ಎಂದು ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ. ಕಾರಾಗೃಹದಲ್ಲಿ 25 ಸಾವಿರ ಮಂದಿಗಳು ಇಡಲ್ಪಟ್ಟಿದ್ದಾರೆಂದು ಅಸಹಾಯವಾದಿಗಳು ಮಾಡುತ್ತಿರುವ ಕೋಲಾಹಲವು ಇನ್ನುಮೇಲಾದರೂ ನಿಲ್ಲುವುದೆ?

ಕಲ್ಕತ್ತಾದ ಬಟ್ಟೆ ವ್ಯಾಪಾರಿಗಳು ವಿದೇಶದ ಬಟ್ಟೆ ವ್ಯಾಪಾರವನ್ನು ಕೆಲಕಾಲ ನಿಲ್ಲಿಸಿದ್ದು ತಾವು ಮಾಡಿದ್ದ ವಾಗ್ದಾನಕಾಲ ಪರಿಮಿತಿಯು ಮುಗಿದುದರಿಂದ ಈಗ ಮರಳಿ ಅದನ್ನು ಆರಂಭಿಸಿದರು. ಡಾಕ್ಟರ್ ಪಿ. ಸಿ. ರಾಯಿ ಮೊದಲಾದ ದೊಡ್ಡ ಮನುಷ್ಯರುಗಳು ಅವರ ಬಳಿಗೆ ಹೋಗಿ, ಮತ್ತೆ ವಿದೇಶದ ಬಟ್ಟೆಗಳ ವ್ಯಾಪಾರವನ್ನು ಕೈಕೊಳ್ಳಬೇಡಿರೆಂದು ಎಷ್ಟು ಬೇಡಿಕೊಂಡರೂ ವರ್ತಕರು ಕೇಳಲಿಲ್ಲ; ವಿದೇಶದ ಬಟ್ಟೆಗಳನ್ನು ತರಿಸುವುದೇ ಸಿದ್ಧವೆಂದು ನಿಶ್ಚಯಿಸಿದರು. ಅದರ ಮೇಲೆ ಸಚ್ಚಿದಾನಂದ ಸ್ವಾಮಿಯೇ ಮೊದಲಾದ ಕೆಲ ಸನ್ಯಾಸಿಗಳು ವರ್ತಕರು ವಿದೇಶವಸ್ತ್ರವ್ಯಾಪಾರವನ್ನು ತ್ಯಜಿಸುವವರೆಗೂ ತಾವು ಉಪವಾಸವ್ರತವನ್ನು ಆಚರಿಸಿ ಅದರಲ್ಲೇ ಪ್ರಾಣವನ್ನಾದರೂ ಅರ್ಪಿಸುತ್ತೇವೆಂದು ನಿಶ್ಚಯಿಸಿರುವರೆಂದು ಅಮೃತಬಜಾರ್ ಪತ್ರಿಕೆಯು ಹೇಳುತ್ತದೆ.

ಬುದ್ಧದೇವನ ಅಸ್ಥಿಶಕಲಗಳು ಅವರ ಭಕ್ತರಿಂದ ಪರಮ ಪವಿತ್ರವೆಂದು ಹೇಗೆ ಪೂಜಿಸಲ್ಪಡುತ್ತವೆಯೋ ಹಾಗೆ ಮ॥ ಗಾಂಧಿಯವರು ಕಾರಾಗೃಹದಲ್ಲಿ ನೂತಿರುವ ನೂಲು ಪರಮ ಪವಿತ್ರವಾಗಿರುವುದರಿಂದ ಅದನ್ನು ಸ್ವಾತಂತ್ರ್ಯವಾದಿಗಳೆಲ್ಲರೂ ಪವಿತ್ರವಸ್ತುವನ್ನಾಗಿ ಸಂಗ್ರಹಿಸಬೇಕೆಂತಲೂ, ಕಾಂಗ್ರೆಸ್ಸಿನವರು ಅದನ್ನು ತರಿಸಿ ಉತ್ತಮವಾಗಿ ದೇಶಸೇವೆ ಮಾಡಿದರೆಂದು ತೋರುವ ದೇಶಭಕ್ತರಿಗೆ ಸ್ವಲ್ಪ ಸ್ವಲ್ಪ ಬಹುಮಾನವಾಗಿ ಕೊಡಬೇಕೆಂತಲೂ ಸಲಹೆಗಳು ವೃತ್ತಪತ್ರಿಕೆಗಳಲ್ಲಿ ಗಾಂಧಿಭಕ್ತರಿಂದ ಕೊಡಲ್ಪಡುತ್ತಿವೆ. ಎರೋಡಾ ಕಾರಾಗೃಹಕ್ಕೆ ಮೊನ್ನೆ ತಾನೇ ಹೋಗಿದ್ದ ಗಾಂಧಿ ಪತ್ನಿಯವರು ಗಾಂಧಿಯವರು ನೂತಿದ್ದ 10 ಪೌನು ನೂಲನ್ನು ಈಸಿಕೊಂಡು ಬಂದಿರುವರು. ಇನ್ನು 10 ಪೌಂಡು ನೂಲು ಬಾಂಗಿ ಮೂಲಕ ಸತ್ಯಾಗ್ರಹಾಶ್ರಮಕ್ಕೆ ಬಂದಿರುವುದಂತೆ.

ಮೌಲಾನಾ ಹಜರತ್ ಮೋಹನಿಯವರು ಖಿಲಾಫತ್ ಸಭೆಯಲ್ಲೂ ಕಾಂಗ್ರೆಸ್ಸಿನಲ್ಲೂ ಮಾಡಿದ ಉಪನ್ಯಾಸವು ರಾಜದ್ರೋಹಕರವಾಗಿದ್ದಿತೆಂತಲೂ, ಅದು ಚಕ್ರವರ್ತಿಯವರ ಮೇಲೆ ಯುದ್ಧ ಮಾಡಲಿಕ್ಕೆ ಸಂಚು ನಡಯಿಸುವುದಾಗಿದ್ದಿತೆಂತಲೂ 2 ಅಪರಾಧಗಳನ್ನು ಹೊರಿಸಿ ಅಹಮ್ಮದಾಬಾದ್ ಜಿಲ್ಲಾ ಜಡ್ಜರಲ್ಲಿ ಕೇಸಿನ ವಿಚಾರಣೆ ನಡೆದು 2 ಅಪರಾಧಗಳನ್ನೂ ಅವರು ಮಾಡಿದವರಲ್ಲವೆಂದು ಅಸ್ಸೇಸರುಗಳು ಹೇಳದರೂ ಜಡ್ಜರು ಒಪ್ಪದೆ ಮೊದಲನೆ ಅಪರಾಧಕ್ಕೆ 2 ವರ್ಷ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿ, 2ನೆ ಅಪರಾಧಕ್ಕಾಗಿ ಹೈಕೋರ್ಟಿನವರು ವಿಚಾರಣೆ ನಡೆಯಿಸಬಹುದೆಂದು ಬರೆದಿದ್ದರು. ಬೊಂಬಾಯಿ ಹೈಕೋರ್ಟಿನ ಫುಲ್ ಬೆಂಚಿನವರು ಇದನ್ನು ವಿಚಾರಿಸಿ 2ನೆ ಅಪರಾಧವು ಆಪಾದಿತರ ಮೇಲೆ ಹೊರುವುದಿಲ್ಲವೆಂದು ತೀರ್ಮಾನಿಸಿದರು. ಜಿಲ್ಲಾ ಜಡ್ಜರ ತೀರ್ಮಾನದ ಪ್ರಕಾರ ಮೊದಲನೆ ಅಪರಾಧಕ್ಕೆ 2 ವರ್ಷದ ಶಿಕ್ಷೆಯನ್ನು ಮಾತ್ರ ಅವರು ಅನುಭವಿಸಲೇಬೇಕಾಯಿತು.

ಪಂಜಾಬಿನಲ್ಲಿ ದೌಲ್ವಲಾ ಎಂಬಾತನಿಗೆ 8 ಮಂದಿ ಮಕ್ಕಳು. ತಾನು ಬರೆದ ಮರಣಶಾಸನದಲ್ಲಿ ಇಬ್ಬರು ಮಕ್ಕಳನ್ನು ಬಿಟ್ಟು ಇತರರಿಗೇ ಆಸ್ತಿಯನ್ನು ಬರೆದನು. ಕಡೆಗೆ ವ್ಯಾಜ್ಯವು ಪ್ರಿವಿಕೌನ್ಸಿಲವರೆಗೆ ಹತ್ತಿತು. ಅವರು ಮರಣಶಾಸನವನ್ನೇ ಖಾಯಂಮಾಡಿದರು. ಈಚೆಗೆ ಸಹೋದರರಲ್ಲಿ ಉಭಯಪಕ್ಷದವರಿಗೂ ಸಿವಿಲ್ ಕ್ರಿಮಿನಲ್ ವ್ಯಾಜ್ಯಗಳು ನಡೆಯುತ್ತಲೇ ಇದ್ದುವು. ಕಳೆದ ವರ್ಷದ ಜುಲೈ ತಾ॥ 16ರಲ್ಲಿ ಆ ಇಬ್ಬರು ಮಕ್ಕಳ ವಂಶಜರು ಇನ್ನು ಕೆಲರ ಸಹಾಯದೊಡನೆ ಆಯುಧಪಾಣಿಗಳಾಗಿ ರಾತ್ರಿ ಹೊತ್ತು ಉಳಿದ 6 ಮಂದಿ ಮಕ್ಕಳ ವಂಶಜರ ಮನೆಗೆ ನುಗ್ಗಿ, ಒಳಗಿದ್ದ ಗಂಡುಸರು ಹೆಂಗುಸರು ಮಕ್ಕಳು ಮರಿಗಳನ್ನೆಲ್ಲಾ ಕೊಂದುಬಿಟ್ಟರು. ಹೆಂಗುಸರು ಧರಿಸಿದ್ದ ಒಡವೆಗಳನ್ನು ಸುಲಿದುಕೊಳ್ಳುವಾಗ್ಗೆ ಅವರ ಅವಯವಗಳನ್ನೆಲ್ಲಾ ಭಯಂಕರವಾಗಿ ಕೊಯ್ದುಬಿಟ್ಟರು; ಸೊತ್ತನ್ನೆಲ್ಲಾ ದೋಚಿಕೊಂಡು ಹೋದರು. ಈ ಕೇಸಿನ ಅಪರಾಧಿಗಳನ್ನೆಲ್ಲಾ ಪೋಲೀಸರು ಹಿಡಿದರು. 18 ತಿಂಗಳ ಕಾಲ ವಿಚಾರಣೆ ನಡೆದಿತು. 13 ಮಂದಿಗೆ ಮರಣದಂಡನೆ, ಇನ್ನಿಬ್ಬರಿಗೆ ದ್ವೀಪಾಂತರ ವಾಸಶಿಕ್ಷೆಯು ವಿಧಿಸಲ್ಪಟ್ಟಿತು.

ಇದುವರೆಗೆ ಭರತಖಂಡದ ದಕ್ಷಿಣಭಾಗದಲ್ಲಿ ಮಳೆಯು ಸರಿಯಾಗಿ ಬೀಳಲಿಲ್ಲ. ಮಲೆಯಾಳದಲ್ಲಿ ಹೆಚ್ಚು ಮಳೆಯಾಗುತ್ತಿದೆ. ಉತ್ತರ ಹಿಂದೂಸ್ಥಾನ, ಬೊಂಬಾಯಿ ಬರ್ಮಾ ಬಂಗಾಳಗಳಲ್ಲಿ ಅನುಕೂಲವಾದ ಮಳೆಯಾಗಿದೆ. ಮದ್ರಾಸಾಧಿಪತ್ಯದ ಕರ್ನೂಲ್ ಭಳ್ಳೆಯಲ್ಲಿ 20 ಅಂಗುಲ ಮಳೆಯಾಗುವ ಪದ್ಧತಿ, ಆದರೆ ಈಸಲ ಇದುವರೆಗೂ ಒಂದು ಹದವೂ ಮಳೆ ಬೀಳಲಿಲ್ಲ. ಕ್ಷಾಮವು ತಾಂಡವವಾಡುತ್ತಿದೆ. ಸರ್ಕಾರದವರು ರಿಲೀಫ್ ಕೆಲಸಗಳನ್ನು ಆರಂಭಿಸಿದ್ದಾರೆ. 8000 ಮಂದಿ ದುಡಿಯುತ್ತಿದ್ದಾರೆ. ಗಂಡುಸರಿಗೆ 2¼ ಆಣೆ ಹೆಂಗುಸರಿಗೆ 2 ಆಣೆಯಂತೆ ಕೂಲಿ ಕೊಡುತ್ತಾರೆ. ಕೆಲಸ ಮಾಡಲಾರದ 800 ಮಂದಿ ಬಾಲಬಾಲಿಕೆಯರಿಗೂ ಮುದಿಕರಿಗೂ ಧರ್ಮಾರ್ಥವಾಗಿ ಅನ್ನದಾನಮಾಡಿಸುತ್ತಿದ್ದಾರೆ. ಬಡಬಗ್ಗರಿಗೆ 5000 ರೂ. ಗಳ ಬಟ್ಟೆಗಳನ್ನು ಹಂಚಿದರು. ತಿರುವಾಂಕೂರಿನಲ್ಲಿ ಪ್ರತಿದಿನವೂ ಮಳೆ ಸುರಿಯುತ್ತ ಹೊಳೆಗಳು ದಡಮೀರಿ ಹರಿದು ಗ್ರಾಮಗಳನ್ನೂ ಪೈರು ಪಚ್ಚೆಗಳನ್ನೂ ಮುಳುಗಿಸಿಬಿಟ್ಟಿವೆ. ಸಂಚಾರಾದಿ ವ್ಯವಹಾರಗಳೂ ಕೂಡ ಕಟ್ಟಾಗಿ ಹೋಗಿವೆ. ಒಂದು ಕಡೆ ಅನಾವೃಷ್ಟಿ ಒಂದುಕಡೆ ಅತಿವೃಷ್ಟಿ ಹೀಗಾಗಿ ಅಂತೂ ಈ ವರ್ಷದ ಸ್ಥಿತಿಯು ವಿಷಮವಾಗಿಯೇ ಇದೆ.

ಉಪಯೋಗಕರ ವಿಷಯಗಳು.

"ದಿನ 1ಕ್ಕೆ 15 ಮೊದಲು 30 ಗುಲಗಂಜಿ ತೂಕದಷ್ಟು ಮಾತ್ರ ಉಪ್ಪನ್ನು ಸೇವಿಸಬೇಕು; ಅದಕ್ಕಿಂತ ಹೆಚ್ಚಾಗಿ ತಿನ್ನಕೂಡದು. ಹೆಚ್ಚಾಗಿ ತಿಂದರೆ ಹೃದಯವ್ಯಾಧಿ ಮೂತ್ರಕೋಶವ್ಯಾಧಿಗಳು ಉಂಟಾಗುವುವು. ಕೆಲವರು ಈ ಪರಿಮಿತಿಗಿಂತ 10-20 ಭಾಗ ಹೆಚ್ಚಾಗಿ ತಿನ್ನುವರು ಅಂಥವರ ರಕ್ತವೆಲ್ಲಾ ಕ್ಷೀಣಿಸಿ ಜೀರ್ಣಶಕ್ತಿಯು ಕುಗ್ಗಿಹೋಗುವುದು. ರಕ್ತನಾಳಗಳಲ್ಲೂ ಕೀಲುಗಳಲ್ಲೂ ನೋವುಂಟಾಗುವುದು. ಮಾಂಸವನ್ನು ಕರಗಿಸಿಬಿಡುವುದು. ಯೌವನದಲ್ಲೇ ವಾರ್ಧಕ್ಯ ಲಕ್ಷಣಗಳುಂಟಾಗುವುವು. ಉಪ್ಪನ್ನು ಹೆಚ್ಚಾಗಿ ತಿನ್ನುವುದರಿಂದ ಉಂಟಾಗುವ ಕೇಡು ನೀರನ್ನು ಹೆಚ್ಚಾಗಿ ಕುಡಿಯುವುದರಿಂದ ನಿವೃತ್ತವಾಗುವುದು" ಎಂದು ಡಾಕ್ಟರ್ ಎಚ್. ಎಲ್. ಹಾರಿಸ್‌ರವರು ತಿಳಿಯಿಸಿರುತ್ತಾರೆ.

ವಿದ್ಯಾರ್ಥಿಗಳಿಗೆ ಆರೋಗ್ಯಸೂತ್ರಗಳು.

ಮದ್ರಾಸ್ ನಿಯಮನಿರ್ಮಾಣ ಸಭೆಯ ಸಭಿಕರಾದ ಡಾಕ್ಟರ್ ಯು. ರಾಮರಾಯರು ಮದ್ರಾಸ್ ವಿದ್ಯಾರ್ಥಿಗಳನ್ನು ಕುರಿತು ಒಂದು ಹಿತೋಪದೇಶವನ್ನು ಮಾಡಿರುತ್ತಾರೆ. ಅದು ಎಲ್ಲ ವಿದ್ಯಾರ್ಥಿಗಳಿಗೂ ಶ್ರೋತವ್ಯವೂ ಅನುಷ್ಠೇಯವೂ ಆಗಿರುವುದರಿಂದ ಅದನ್ನಿಲ್ಲಿ ಪ್ರಕಟಿಸಿರುತ್ತೇವೆ—ವಿದ್ಯಾಭ್ಯಾಸಕ್ಕಾಗಿ ಅನೇಕ ವಿದ್ಯಾರ್ಥಿಗಳು ಇತರ ಜಿಲ್ಲೆಗಳಿಂದ ಮದ್ರಾಸಿಗೆ ಬರುತ್ತಾರೆ. ಅಂಥವರು ತಂತಮ್ಮ ಆರೋಗ್ಯ ಕಾಪಾಡಿಕೊಳ್ಳುವುದನ್ನು ತಿಳಿಯದೆ ತೊಂದರೆಪಡುತ್ತಾರೆ. ತಕ್ಕ ಗೃಹವಸತಿಗಳು ಇಲ್ಲದೆ ಹೋಗುವುದು ಮೊದಲನೆ ತೊಂದರೆ. ಹೊಟೇಲುಗಳಲ್ಲಿ ಅನ್ನವೂ ತುಪ್ಪ ಎಣ್ಣೆ ಮೊದಲಾದುವುಗಳೂ ಶುಭ್ರವಾಗಿಲ್ಲದಿರುವುದರಿಂದ ಜ್ವರ ಮೊದಲಾದ ಉಪದ್ರವಗಳುಂಟಾಗುವುವು. ಆದುಕಾರಣ ವಿದ್ಯಾರ್ಥಿಗಳೆಲ್ಲಾ ಪಾಠಶಾಲೆಗಳಿಗೆ ಸೇರಿರುವ ವಿದ್ಯಾರ್ಥಿನಿಲಯ (ಹಾಸ್ಟೆಲ್ಲು) ಗಳಲ್ಲಿ ಸೇರುವುದು ಉತ್ತಮವು. ಹಾಗೆ ಸೇರಲಾರದವರು ಈ ಕೆಳಗೆ ಕಾಣಿಸಿರುವ ಆರೋಗ್ಯ ಸೂತ್ರಗಳನ್ನು ಚೆನ್ನಾಗಿ ಗಮನಿಸಿ ಅನುಷ್ಠಾನದಲ್ಲಿಟ್ಟುಕೊಳ್ಳಬೇಕು—

(1) ಶುಭ್ರವಾದ ಗಾಳಿಯು ಬರುವುದಕ್ಕೆ ಅವಕಾಶವಿರುವ ಕೊಟ್ಟಡಿಯಲ್ಲಿ ವಾಸಮಾಡಬೇಕು.

(2) ಹೊಟೇಲುಗಳಿಗೆ ಹೋಗಿ ಕಾಫಿಯನ್ನೂ ಇತರ ಪದಾರ್ಥಗಳನ್ನೂ ಸೇವಿಸುವುದನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು.

(3) ತಂತಮ್ಮ ಕೆಲಸಗಳನ್ನು ಸಕಾಲದಲ್ಲಿ ಕ್ರಮವಾಗಿ ಮಾಡಿಕೊಳ್ಳುತ್ತಿರಬೇಕು. ರಾತ್ರಿ ಹೊತ್ತು 10 ಗಂಟೆಗೆ ಮಲಗಿಕೊಳ್ಳಬೇಕು. ಬೆಳಗ್ಗೆ 6 ಗಂಟೆಗೆ ಏಳಬೇಕು.

(4) ನಾಟಕ ಬಯಾಸ್ಕೋಪುಗಳಿಗೆ ಹೋಗಿ ನಿದ್ರಾಭಂಗವನ್ನು ಮಾಡಿಕೊಳ್ಳುವುದು ಉಚಿತವಲ್ಲ.

(5) ವ್ಯಾಯಾಮಕ್ಕಾಗಿ ಪ್ರತಿದಿನವೂ ಸ್ವಲ್ಪ ಕಾಲವನ್ನು ಪ್ರತ್ಯೇಕಿಸಿಟ್ಟುಕೊಳ್ಳಬೇಕು. ಸಮುದ್ರತೀರದಲ್ಲಿ (ಅಥವಾ ಉತ್ತಮ ವಾತಾವರಣವಿರುವ ಬಯಲಿನಲ್ಲಿ) 4 ಮೈಲುಗಳ ದೂರ ನಡೆಯುವುದನ್ನೋ ಇಲ್ಲವೆ ಕ್ರಿಕೆಟ್ ಟೆನ್ನಿಸ್ ಮೊದಲಾದ ಆಟಗಳಾಡುವುದನ್ನೊ ಇಟ್ಟುಕೊಳ್ಳಬೇಕು.

(6) ಪ್ರತಿದಿನವೂ ಕಾಲಪ್ರವೃತ್ತಿಯು ಸರಿಯಾಗಿ ಆಗುತ್ತಿರುವಂತೆ ನೋಡಿಕೊಳ್ಳುವಲ್ಲಿ ಶ್ರದ್ಧೆವಹಿಸಬೇಕು. ಅಜೀರ್ಣವಾಗಿರುವಂತೆ ತೋರಿದರೆ ಭೋಜನವಾದ ಬಳಿಕ ಬಾಳೆಹಣ್ಣನ್ನೋ ಕಿತ್ತಲೆಹಣ್ಣನ್ನೋ ತಿನ್ನಬೇಕು.

(7) ಸೊಳ್ಳೆತೆರೆಯನ್ನು ಕಟ್ಟಿಕೊಂಡು ಮಲಗುವುದು ಮೇಲು, ಏಕೆಂದರೆ ಮದ್ರಾಸಿನಲ್ಲಿ ವಿದ್ಯಾರ್ಥಿಗಳಿಗೆ ಸಾಧಾರಣವಾಗಿ ಮಲೇರಿಯಾ ಜ್ವರವು ಬರುತ್ತಲಿರುವುದು.

(8) ನೀರನ್ನು ಚೆನ್ನಾಗಿ ಕಾಯಿಸಿದನಂತರವೇ ಕುಡಿಯಬೇಕು. ಹಾಗೆ ಕಾಯಿಸುವುದರಿಂದ ತಣ್ಣೀರಿನಲ್ಲಿರುವ ಕೆಟ್ಟ ಕ್ರಿಮಿಗಳೆಲ್ಲಾ ನಾಶವಾಗುವುವು. ಸೋಡಾವನ್ನು ಕುಡಿಯುವುದು ಒಳ್ಳೆಯದಲ್ಲ.

(9) ಸ್ವಲ್ಪ ಅನಾರೋಗ್ಯವುಂಟಾದಂತೆ ತೋರಿದರೆ ಸಿಡ್ಲಿಟ ಪೌಡರನ್ನಾಗಲಿ ಎಪ್ಸಂ ಉಪ್ಪನ್ನಾಗಲಿ ತೆಗೆದುಕೊಂಡರೆ ಕಾಲಪ್ರವೃತ್ತಿಯು ಚೆನ್ನಾಗಿ ಆಗುವುದು. ದಿನಕ್ಕೆ ಮೂರಾವೃತ್ತಿಯಿಂದ 5 ಗ್ರೇನು ಕ್ವಿನೈನನ್ನು ತೆಗೆದುಕೊಂಡರೆ ಆರೋಗ್ಯವುಂಟಾಗುವುದು.

ಈ ಮೇಲೆಕಂಡ ಸೂತ್ರಗಳನ್ನು ವಿದ್ಯಾರ್ಥಿಗಳು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡು ಆರೋಗ್ಯವನ್ನು ಕಾಪಾಡಿಕೊಂಡರೆ ವೈದ್ಯರಿಗೆ ತೆರುವ ವೆಚ್ಚವನ್ನು ಕಡಿಮೆಮಾಡಿಕೊಳ್ಳಬಹುದು.

ಮಳೆ ತರಿಸುವ ಯಂತ್ರವು

ಕಾಲಿಫೋರ್ನಿಯಾ ನಡುಗುಡ್ಡೆಯಲ್ಲಿ ಹ್ಯಾಟ್‌ಫೀಲ್ಡ್ ನೆಂಬ ಶಾಸ್ತ್ರಜ್ಞನು ಮಳೆ ಕೆಡಹುವ ಯುಕ್ತಿಯನ್ನು ಕಂಡು ಹಿಡಿದಿದ್ದಾನೆ, ಅವನು ಎರಡು ಸಾವಿರ ಪೌಂಡುಗಳನ್ನು ತಕೊಂಡು ನಾಲ್ಕು ಇಂಚು ಮಳೆಯನ್ನು ಕಳೆದ ವರ್ಷ 1921 ರಲ್ಲಿ ಆ ನಡುಗಡ್ಡೆಯಲ್ಲಿ ಕೆಡವಿರುತ್ತಾನೆ. ಹ್ಯಾಟ್‌ಫೀಲ್ಡನು ಮಳೆ ತರಿಸುವ ಶೋಧನವನ್ನು ಇ. ಸ. 1902 ರಲ್ಲಿಯೇ ಗೊತ್ತು ಹಚ್ಚಿದಲು ಅವನು ತನ್ನ ಸ್ವಂತ ಹೊಲದ ಮೇಲೆ ಬೇಕಾದಷ್ಟು ಮಳೆಯನ್ನು ಕೆಡಹಿಕೊಂಡನು. ಅಂದಿನಿಂದ ಈ ವರೆಗೆ ಎನಿಲ್ಲೆಂದರೂ ಐನೂರು ಸಲ ಅವನು ಆ ಮಳೆ ಕೆಡಹುವ ಪ್ರಯೋಗವನ್ನು ಮಾಡಿದ್ದು, ಬಹುಶಃ ಸಾರೆಯೂ ಅವನಿಗೆ ಅವುಗಳಲ್ಲಿ ಯಶಃಪ್ರಾಪ್ತವಾಗಿರುತ್ತದೆ. ಜನರಿಗೆ ಎಷ್ಟು ಮಳೆಯು ಬೇಕಾಗಿರುತ್ತದೋ ಅಷ್ಟು ಮಳೆಯನ್ನು ಗುತ್ತಿಗೆಯಿಂದ ಅವನು ಕೆಡಹಿ ಕೊಡುತ್ತಿರುತ್ತಾನೆ. 1912 ರಲ್ಲಿ ಕಾಲಿಫೋರ್ನಿಯಾದೊಳಗಿನ ಹೆಮ್ಮಟ್ಟ ಎಂಬ ಊರಲ್ಲಿ 11 ತಿಂಗಳೊಳಗೆ ಎರಡೇ ಇಂಚು ಮಳೆಯಾಯಿತಂತೆ. ಅದರಿಂದ ಅಲ್ಲಿಯ ಪ್ರಜೆಗಳ ಹೌಹಾರಿ ಹೋಗಿತ್ತು. ಗೊಡ್ಡು ಮೋಡಗಳು ನಿತ್ಯ ಮಧ್ಯಾಹ್ನ ಕವಿಯಬೇಕು; ಹಾಗೂ ಸಾಯಂಕಾಲದ ಹೊತ್ತಿಗೆ ಆಕಾಶವು ನಿರಭ್ರವಾಗಿ ಸುಳಿಗಾಳಿ ಬಿಡಬೇಕು, ಇದೇ ಕ್ರಮವಿತ್ತು. ದೇವತಾರಾಧನೆ ಮುಂತಾದ ಎಷ್ಟೋ ಪ್ರಯತ್ನಗಳನ್ನು ಮಾಡಿದರೂ ಮಳೆಯು ಬರಲಿಲ್ಲ ನಂತರ ಹ್ಯಾಟ್‌ಫೀಲ್ಡನಿಗೆ ಕಂಟ್ರ್ಯಾಕ್ಟ್ ಕೊಟ್ಟರು. ಕರಾರಿನಲ್ಲಿ ಅವನು ಆ ಊರಿಗೆ ಹನ್ನೊಂದು ಇಂಚು ಮಳೆ ಕೆಡಿಸಿದರೆ ಅವನಿಗೆ ನಾಲ್ಕು ಸಾವಿರ ಪೌಂಡು ಕೊಡಬೇಕೆಂದು ಗೊತ್ತಾಯಿತು. ಕೂಡಲೆ ಅವನು ತನ್ನ ಪ್ರಯೋಗವನ್ನು ಪ್ರಾರಂಭಿಸಿದನು. ಅವನ ಪ್ರಯೋಗವು ಆರುಭವಾದ ಎರಡೇ ದಿವಸಗಳಲ್ಲಿ ಅಲ್ಲಿ ಎರಡು ಇಂಚು ಮಳೆಯಾಯಿತು; ಹಾಗು ಮುಂದೆ ತುಸು ದಿವಸಗಳಲ್ಲಿಯೇ ಆ ಊರಿಗೆ ಹನ್ನೊಂದು ಇಂಚು ಮಳೆ ಕೆಡವಿ ಅವನು ಆ ಮಳೆಯ ಗುತ್ತಿಗೆಯನ್ನು ಪೂರೈಸಿದನು. ಹ್ಯಾಟ್‌ಫೀಲ್ಡನು ತನ್ನ ಈ ಶೋಧದಬಗ್ಗೆ ಅನ್ನುವುದೆನೆಂದರೆ—"ಈ ಮಳೆ ಕೆಡಹುವ ಪ್ರಯೋಗದಲ್ಲಿ ಜಾದೂ-ಅಥವಾ ಮಂತ್ರಸಿದ್ಧಿ ಮುಂತಾದ್ದೇನೂ ಇರುವುದಿಲ್ಲ. ಮೋಡಗಳ ರೂಪದಿಂದ ಆಕಾಶದಲ್ಲಿದ್ದ ನೀರನ್ನು ಬೇಕಾದಲ್ಲಿಗೆ ಬೇಕಾದಷ್ಟು ಆಕರ್ಷಿಸಿಕೊಳ್ಳುವುದೇ ಮುಖ್ಯ ವಿಷಯವಾಗಿರುತ್ತದೆ. ಅದಕ್ಕಾಗಿ ನಾನು ಕೆಲವು ರಸಾಯನಗಳನ್ನು ಶೋಧಿಸಿರುತ್ತೇನೆ, ಆದರೆ ಅವುಗಳ ಸ್ಥಿತಿಗತಿಗಳನ್ನು ಪರಿಸ್ಫೋಟನಮಾಡುವುದು ಶಕ್ಯವೂ ಯುಕ್ತಿಕವೂ ಆಗಲಾರದು. ಆರಸಾಯನಗಳನ್ನು ಭೂಮಿಯಿಂದ 35 ಫೂಟುಗಳಮೇಲೆ ಒಯ್ದು ಅವುಗಳಿಗೆ ಸೆಕೆ ಕೊಟ್ಟರೆ, ಅವುಗಳಿಂದ ಉಗಿ ಹೊರಡುವದು, ಮತ್ತು ಆ ಉಗಿಯು ವಾತಾವರಣದಲ್ಲಿ ಪಸರಿಸಿ ಅದರಿಂದ ಮಳೆಯು ಬೀಳುತ್ತದೆ. ಈ ಪಾಶ್ಚಾತ್ಯ ಶಾಸ್ತ್ರಜ್ಞರು ಇಷ್ಟು ದಿನಗಳವರೆಗೆ ಭೂಮಿ, ನೀರು ಹವೆ, ಪ್ರಕಾಶ ಇವುಗಳಿಂದಲೇ ಅದ್ಭುತ ಕೃತಿಗಳನ್ನು ಮಾಡುತ್ತಿದ್ದರು. ಇನ್ನು ಈ ಶೋಧಕರು ಆಕಾಶಕ್ಕೂ ಕೈಹಚ್ಚಿರುವರು. ಇವರ ಬುದ್ಧಿ ಸೆಲೆಯು ಇನ್ನೂ ಎಲ್ಲೆಲ್ಲಿ ಪ್ರವೇಶಿಸುವದೋ ಯಾರು ಬಲ್ಲರು.

ಅರ್ಥಸಾಧಕ ಪತ್ರಿಕೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಒಂದು ಸೂಚನೆ.

ಈಗ ನಮ್ಮ ಸಮಾಜದಲ್ಲಿ ಅವಶ್ಯಕವಾಗಿ ಮಾಡಿಕೊಳ್ಳಬೇಕಾದ ಸಾವಿರಾರು ಸುಧಾರಣೆಗಳಿರುತ್ತವೆ. ಈ ಸುಧಾರಣೆಗಳ ಸ್ವರೂಪವನ್ನು ತಿಳಿದುಕೊಂಡು ಕರ್ತವ್ಯಜಾಗ್ರತೆಯಿಂದ ಸಮಾಜವನ್ನು ಉನ್ನತ ದಶೆಗೆ ತಂದುಕೊಳ್ಳುವದನ್ನು ಬಿಟ್ಟು, ನಿರರ್ಥಕವಾದ ಅದರಲ್ಲಿಯೂ ಸಮಾಜ ವಿಘಾತಕವಾದ ಅನೇಕ ಕಾರ್ಯಗಳನ್ನು ನಮ್ಮವರು ನಡೆಯಿಸಿರುತ್ತಾರೆ. ಅವುಗಳಲ್ಲಿ ಸನ ೧ ವ್ಯಾಸನತೋಳಿನ ಉತ್ಸವವೊಂದು. ನಮ್ಮ ಸಮಾಜದಲ್ಲಿ ಅನೇಕರು ಕಲಹಜನಕವಾದ ಈ ವಿಚಾರಕ್ಕಾಗಿ ಹೆಣಗಾಡಿ, ಇದರಿಂದ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಿ, ಪರರನ್ನುನೋಯಿಸಿ, ಇಷ್ಟೇಅಲ್ಲದೆ ಪರರ ಅವಲಕ್ಷಣಕ್ಕಾಗಿ ತಮ್ಮ ಮೂಗನ್ನೇ ಕೊಯ್ದುಕೊಂಡಂತೆ ಮಾಡುತ್ತಿರುವರು. ಇದರಿಂದ ಸಮಾಜಕ್ಕೆ ಯಾವ ಉಪಕಾರವಾಗುವದೋ ತಿಳಿಯದು ಇಂತಹ ದುರಾಗ್ರಹಗಳಿಂದ ಸಮಾಜದ ಸ್ಥಿತಿಯು ಎಷ್ಟು ವಿಷಮಸ್ಥಿತಿಗೆ ಬರುವದೆಂದು ನಮ್ಮಲ್ಲಿ ಅನೇಕರಿಗೆ ಗೊತ್ತುಂಟು. ಆದರೂ ಹಠದಿಂದ ಈ ವಿಷಯದಲ್ಲಿ ಬಹುಜನರು ಬೀಳುತ್ತಿರುವರು. ಅಥಣಿ ಮೊದಲಾದ ಸ್ಥಾನಗಳಲ್ಲಿ ಈ ಉತ್ಸವದ ವಿಷಯದಲ್ಲಿ ಲಜ್ಜಾಜನಕವಾದ ಉದ್ಯೋಗವು ನಡೆದಿರುವದೆಂದು ಕೇಳುತ್ತೇವೆ. ಸಮಾಜಬಾಂಧವರು ಇನ್ನೂ ಕಣ್ತೆರೆಯುವದಿಲ್ಲವೆ! ಮೈಸೂರ್ ಸ್ಟಾರ್ ಸಂಪಾದಕರು ತಮ್ಮ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ "ವ್ಯರ್ಥವಾದ ಪ್ರಯತ್ನ" ವೆಂಬ ಶಿರೋಲೇಖದ ಕೆಳಗೆ ವ್ಯಾಸನತೋಳಿನ ವಿಷಯವಾಗಿ ಯುಕ್ತಿಯುಕ್ತವಾಗಿ ಸೂಚಿಸಿರುವದನ್ನು ನಮ್ಮವರು ಇನ್ನೊಮ್ಮೆ ಓದಿ ಮನನ ಮಾಡಿಕೊಳ್ಳಬೇಕು ಈ ಸಮಯದಲ್ಲಿ ನಮ್ಮವರು ಪರರ ಮೇಲಿನ ಆಗ್ರಹ ಅನುಗ್ರಹಗಳಿಂದಲ್ಲ; ಮನುಷ್ಯಮಾತ್ರಕ್ಕೆ ಬೇಕಾದ ಉದಾರತೆಯಿಂದ ಉತ್ಸವದಲ್ಲಿ ವ್ಯಾಸನತೋಳಿನ ಸುದ್ದಿಯನ್ನು ಬಿಟ್ಟು ಬಿಡುವದು ಪ್ರಥಮ ಕರ್ತವ್ಯವು. ಇದರಿಂದ ನಮಗೆ ಕಲಂಕವಲ್ಲ ಈಗಿನ ಕಲಂಕವು ತೊಡೆದು ಹೋಗುವದು. ಪ್ರತಿಭಟಿಸುವವರು ಎಷ್ಟು ಅಯೋಗ್ಯತೆಯನ್ನು ತೋರಿಸಿದರೂ, ಯೋಗ್ಯತೆಯಿಂದ ಅವರನ್ನು ಪ್ರತಿಭಟಿಸಲಿಕ್ಕೆ ನಾವುಯತ್ನಿಸಬೇಕು. ಈ ಸಮಯದಲ್ಲಿ ನಮ್ಮವರು ವಿಚಾರದಿಂದ ಕಾರ್ಯಮಾಡುವವರಾಗಬೇಕೆಂದು ಆಸಿಸುತ್ತೇನೆ.

ಒಬ್ಬ ವೀರಶೈವ.

ಚನ್ನಪಟ್ಟಣ ತಾಲ್ಲೂಕು ಮತ್ತು ಮ॥ ಸಿದ್ಧರಾಮಪ್ಪನವರು.

ಇವರು ಈ ತಾ॥ ಜಮಾಬಂದಿಕಾಲದಲ್ಲಿ ಬಹಳ ಮುತುವರ್ಜಿ ವಹಿಸಿ ಕೆಲಸಮಾಡಿದ್ದರಿಂದ ಅನೇಕಜನ ಶ್ಯಾನುಬೋಗರು ಕಂದಾಯದ ಹಣವನ್ನು ದಸ್ತುಮಾಡಿರುವುದೆಲ್ಲಾ ಪತ್ತೆ ಆಗಿ ಶ್ಯಾನುಬೋಗರ ಕಳ್ಳತನವೆಲ್ಲಾ ಹೊರಬಿದ್ದಿರುತ್ತೆ. ಈ ತಾಲ್ಲೂಕು ಪೈಕಿ ಸೋಗಾಲವೆಂಬ ಗ್ರಾಮದಲ್ಲಿ ವಸೂಲಾಗುತ್ತಿರುವ ಕಂದಾಯದ ಹಣವೆಲ್ಲಾ ನಮ್ಮ ಶ್ರೀಮನ್ಮಹಾರಾಜರವರ ಅರಮನೆಗೆ ಹೋಗುತಾ ಇರುತ್ತೆ. ಈ ಗ್ರಾಮದ ಶ್ಯಾನುಬೋಗರು ಅನೇಕ ವರ್ಷಗಳಿಂದಲೂ ವಸೂಲಾದ ಕಂದಾಯದ ಹಣವನ್ನು ತಾವೇ ಖರ್ಚುಮಾಡಿಕೊಳ್ಳುತಾ ಬಂದು ಈಗ 12 ಸಾವಿರ ರೂಪಾಯಿ ಬಾಕಿ ಮಾಡಿದ್ದಾರೆ. ಈ ಶ್ಯಾನುಬೋಗರ ಕಳ್ಳತನವನ್ನು ಯಾವ ಅಮಲ್ದಾರ್‌ರವರೂ ಪತ್ತೆ ಮಾಡಿರಲಿಲ್ಲ. ಸಿದ್ಧರಾಮಪ್ಪನವರು ಇವರ ಕಳ್ಳತನವನ್ನು ಕಂಡುಹಿಡಿದು ಕೂಡಲೇ ಇವರಿಗೆ ಸಸ್ಪೆಂಡ್‌ಮಾಡಿ ವಸೂಲಿ ತರದೂದು ಕ್ರಮಪಡಿಸಿದ್ದರಿಂದ ಹಣ ದಸ್ತಾಗಿರುವ ದಾಖಲೆಬಗ್ಗೆ ನೂರಾರು ರಸೀತಿಗಳು ಸಿಕ್ಕಿರುತ್ತವೆ. ಇದಕ್ಕೆ ರಿಕಾರ್ಡು ನಡೆಯಿರುತ್ತೆ, ಮುಂದೆ ಏನಾಗುವುದೋ ತಿಳಿಯದು. ಮತ್ತು ಮಂಕುಂದವೆಂಬ ಗ್ರಾಮದ ಶ್ಯಾನುಬೋಗರು ಹಣ ದಸ್ತುಮಾಡಿರುವ ವಿಚಾರದಲ್ಲಿ ಹಿಂದಿನ ಮೂರುಜನ ಅಮಲ್ದಾರ್‌ರವರ ಕಾಲದಿಂದಲೂ ರಿಕಾರ್ಡು ಬಹಳಸುಸ್ತಿಯಾಗಿ ನಡೆಯುತಾ ಇತ್ತು. ಈ ಅಮಲ್ದಾರ್‌ರವರು ಬಂದಮೇಲೆ ಸದರಿ ಶ್ಯಾನುಬೋಗರನ್ನು ಸಸ್ಪೆಂಡ್ ಮಾಡಿದ್ದರು. ಇವರ ಸಸ್ಪೆಂಡನ್ನು ಡೆಪ್ಯುಟಿಕಮಿಷನರ್ ಸಾಹೇಬರವರು ಖಾಯಂಮಾಡಿದ್ದರು; ರಿಕಾರ್ಡು ನಡೆಯುತಾ ಇತ್ತು. ಇದೇರೀತಿ ಕಂದಾಯದ ಹಣ ದಸ್ತುಮಾಡಿರುವ ಸುಮಾರು 10-12 ಜನ ಶ್ಯಾನುಬೋಗರುಗಳ ಮೇಲೆ ಈ ಅಮಲ್ದಾರ್‌ರವರು ಈ ತಾಲ್ಲೋಕಿಗೆ ಬಂದ ಸ್ವಲ್ಪಕಾಲದಲ್ಲಿಯೇ ಇಷ್ಟೊಂದು ಜನ ಶ್ಯಾನುಬೋಗರ ಕಳ್ಳತನವನ್ನು ಕಂಡುಹಿಡಿದು ಕ್ರಮನಡೆಸುತಾ ಬಂದದ್ದರಿಂದ ಶ್ಯಾನುಬೋಗರುಗಳೆಲ್ಲಾ ಗುಂಪುಕೂಡಿಕೊಂಡು ಅಮಲ್ದಾರ್‌ರವರ ಮೇಲೆ ಪುಂಡು ಅರ್ಜಿಗಳನ್ನು ಬರೆದುಕೊಂಡ ಮಾತ್ರಕ್ಕೇನೇ ಮೇಲ್ಪಟ್ಟ ಅಧಿಕಾರಿಗಳು ಶ್ಯಾನುಬೋಗರುಗಳ ಪಕ್ಷವನ್ನು ವಹಿಸಿ ನಿರ್ಭಂಚನೆಯಾಗಿ ಕೆಲಸಮಾಡುತ್ತಿದ್ದ ಅಮಲ್ದಾರ್‌ರವರನ್ನು ಬೇರೆಕಡೆ ವರ್ಗಮಾಡಬೇಕೆಂದು ಶಿಫಾರಸ್‌ಬರೆದು ವರ್ಗಮಾಡಿಸಿರುವುದು ಧರ್ಮವೇ? ಸಿದ್ಧರಾಮಪ್ಪನವರು ಈ ತಾಲ್ಲೋಕಿಗೆ ಬಂದಮೇಲೆ ಇಲ್ಲಿ ನಡೆಯುತಾ ಇದ್ದ ಖೂನಿ, ದರೋಡೆ ವ್ಯಾಜ್ಯಗಳೆಲ್ಲಾ ನಿಶ್ಶೇಷವಾಗಿ ನಿಂತುಹೋಗಿ ಗ್ರಾಮಾಂತರಗಳಲ್ಲಿ ರೈತರೆಲ್ಲಾ ನೆಮ್ಮದಿಯಾಗಿರುತ್ತಾರೆ. ಇವರ ಕಾಲದಲ್ಲಿ ಶ್ಯಾನುಬೋಗರ ಹಾವಳಿಯು ಬಹಳಮಟ್ಟಿಗೆ ಕಡಿಮೆಯಾಗಿತ್ತು. ಇವರು ಇನ್ನು ಕೆಲವುಕಾಲ ಈ ತಾಲ್ಲೋಕಿನಲ್ಲಿಯೇ ಇದ್ದರೆ ಇಲ್ಲಿ ನಡೆಯಬೇಕಾಗಿರುವ ಅನೇಕ ಕೆಲಸಗಳು ನಡೆದು ರೈತರಿಗೆಲ್ಲಾ ತುಂಬಾ ಅನುಕೂಲವಾಗುತಿತ್ತು. ಇವರು ಶ್ಯಾನುಬೋಗರುಗಳ ಕ್ಷೇಮಕ್ಕೋಸ್ಕರವಾಗಿ ವರ್ಗಪಟ್ಟಿರುತಾರೆಂಬುವುದರಲ್ಲಿ ಸಂದೇಹವೇ ಇಲ್ಲ. ಸಿಕ್ಕಿದಾರರಿಂದ ಕಂದಾಯ ತೆಗೆದುಕೊಂಡರೆ ಖಾಲಿ ರಸೀತಿಗಳನ್ನು ಕೊಡುವುದು ತುಂಬಾ ಅನಾನುಕೂಲವಾಗಿರುವುದರಿಂದ ಅಂಥಾವರಿಗೆ ಪ್ರಿಂಟ್ ರಸೀತಿಗಳನ್ನು ಕೊಡಬೇಕೆಂದು ರಸೀತಿಪುಸ್ತಕವನ್ನು ಇಡಿಸಿದ್ದರು. ಅಮಲ್ದಾರ್‌ರವರು ಇಲ್ಲಿಂದ ವರ್ಗಪಟ್ಟ ಕೂಡಲೇ ಈ ರಸೀತಿಪುಸ್ತಕವನ್ನು ಸಬ್‌ಡಿವಿಜನ್ ಸಾಹೇಬರವರು ವಜಾಮಾಡಿರುವುದು ನ್ಯಾಯವೇ? ವಾಚಕರೇ ಯೋಚಿಸಿಕೊಳ್ಳಬೇಕಾಗಿರುತ್ತೆ. ಮತ್ತು ಹಣ ದಸ್ತುಮಾಡಿ ಸಸ್ಪೆಂಡಿನಲ್ಲಿದ್ದ ಮಂಕುಂದದ ಶ್ಯಾನುಬೋಗರನ್ನು ಕೆಲಸದಮೇಲೆ ತೆಗೆದುಕೊಂಡಿರುತಾರೆ. ಈ ಶ್ಯಾನುಬೋಗರು ಗ್ರಾಮದಲ್ಲಿ ರೈತರನ್ನು ತುಂಬಾ ಆಶ್ರಯಿಸುತಾರಂತೆ. ಸಬ್‌ಡಿವಿಜನ್ ಸಾಹೇಬರವರು ಸ್ವಜಾತಿ ಅಭಿಮಾನದಿಂದ ಶ್ಯಾನುಬೋಗರುಗಳ ಪಕ್ಷವನ್ನು ವಹಿಸಿ ಶ್ಯಾನುಬೋಗರಿಗೆ ಸಹಾಯಮಾಡುತಾ ಇರುತಾರೆಂದೂ ಅಮಲ್ದಾರ್‌ರವರ ವರ್ಗಕ್ಕೆ ಇವರೇ ಮೂಲಕಾರಣರೆಂದೂ ತಪ್ಪುಮಾಡಿರುವ ಶ್ಯಾನುಬೋಗರುಗಳಿಗೆ ಯಾವ ಶಿಕ್ಷೆಯನ್ನೂ ಮಾಡುವುದಿಲ್ಲವೆಂದೂ ತಿಳಿಯಬರುತಾಗಿ ನಮ್ಮ ದಿವಾನ್ ಸಾಹೇಬರವರು ಬಡರೈತರ ಮೇಲೆ ದಯವಿಟ್ಟು ಹಣ ದಸ್ತುಮಾಡಿರುವ ಶ್ಯಾನುಬೋಗರುಗಳಿಗೆ ಸರಿಯಾದ ಬಂದೋಬಸ್ತು ಮಾಡಿಸಿ ರೈತರಿಗೆ ಅನುಕೂಲವಾಗುವಂತೆ ಶ್ಯಾನುಬೋಗರುಗಳ ಲೆಖ್ಖವನ್ನು ಬದಲಾವಣೆ ಮಾಡಿಸಿಕೊಟ್ಟು ಕಾಪಾಡಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಂಡಿರುತ್ತೇನೆ.

ರೈತರ ಹಿತಚಿಂತಕ.

ಮೈಸೂರ ರಾಜ್ಯವೂ ಸಂಸ್ಕೃತ ವಿದ್ಯಾಭಾಗವೂ.

ಲೇಖಕರು—ಶ್ರೀ ಕಾಶೀ ಹಿಂದೂ ವಿಶ್ವವಿದ್ಯಾಲಯದ ವೇದಾಂತ ಶಾಸ್ತ್ರದ ಶಾಸ್ತ್ರಿವರ್ಗದ ಪ್ರಧಾನ ವಿದ್ಯಾರ್ಥಿಗಳಾದ ವೇದಾಂತವಿಶಾರದ ನ್ಯಾಯಭೂಷಣ ಪದವೀ ಪ್ರತಿಷ್ಠಿತರಾದ ಹೂಲಿ ಬೃಹನ್ಮಠದ ಶ್ರೀ ನೀಲಕಂಠ ಶಿವಾಚಾರ್ಯರು.

(ಕಳೆದವಾರದ ಶೇಷ).

ವೀರಶೈವ ವಿದ್ಯಾರ್ಥಿಗಳನ್ನು ಸಂಸ್ಕೃತ ವಿದ್ಯಾವಿಭಾಗದಲ್ಲಿ ಸೇರಿಸಿಕೊಳ್ಳಬೇಕೆಂದು ಶ್ರೀಮನ್ಮಹಾರಾಜರವರಿಗೆ ಎಷ್ಟೋ ಸಾರಿ ಅಂಕಿತಮಾಡಿಕೊಳ್ಳಲ್ಪಟ್ಟಿತು; ಈಗಾದರೂ ಮಾಡಿಕೊಳ್ಳಲ್ಪಡುತ್ತಿರುವದು. ಆದರೆ ಸ್ವಾರ್ಥೈಕದೃಷ್ಟಿಪರರ ಚಾಪಲ್ಯದಿಂದ ನಮ್ಮ ಕೋರಿಕೆಗಳೆಲ್ಲ ವೈಫಲ್ಯವನ್ನು ಹೊಂದುತ್ತ ನಡೆದಿರುವವು. ಹೀಗಾದಮೇಲೆ ಪ್ರಜೆಗಳ ಮನೋವೈಕಲ್ಯವು ಉಂಟಾಗದಿರುವುದು ಹೇಗೆ? ಪ್ರಜೆಗಳನ್ನು ಸಮಾನಭಾವದಿಂದ ಸಂರಕ್ಷಣೆಮಾಡುವದೂ, ಅವರ ಧರ್ಮಗ್ಲಾನಿಯನ್ನು ದೂರಮಾಡುವದೂ ರಾಜರ ಮುಖ್ಯಕರ್ತವ್ಯವಾಗಿರುವದಲ್ಲವೇ? ಅಂದಮೇಲೆ ನಮ್ಮ ಮಹಾರಾಜರು ಇತ್ತ ಕಡೆಗೆ ಲಕ್ಷ್ಯವನ್ನು ಕೊಡುವದು ಅವರ ಪವಿತ್ರ ಕರ್ತವ್ಯಕ್ಕೆ ಅತ್ಯಂತಭೂಷಣವಲ್ಲವೇ? ಕಾಲಮಹಿಮೆಯಿಂದಲೋ ಅಥವಾ ನಮ್ಮಗಳ ದುರ್ದೈವದಿಂದಲೋ ಏನೋ ಇತ್ತೀಚೆಗೆ ನಮ್ಮ ಮಹಾರಾಜರು ನಮ್ಮ ಕಡೆಗೆ ಕೃಪಾಕಟಾಕ್ಷವನ್ನು ಚೆಲ್ಲಿರುವರೆಂತಲೂ, ಅದಕ್ಕಾಗಿ ಒಂದು ಶಿಷ್ಟರ ಮಂಡಲವನ್ನು ನಿಯಮಿಸಿರುವರೆಂತಲೂ ಕೇಳಿ ಮನಸ್ಸಿಗೆ ಸ್ವಲ್ಪ ಆನಂದವೆನಿಸಿದರೂ ಆ ಶಿಷ್ಟರ ಅಭಿಪ್ರಾಯಗಳಿಂದ ನಮಗೆ ಏನೂ ಪ್ರಯೋಜನ ವಾಗಲಾರದೆಂದು ತಿಳಿದು ಬಹಳ ಖೇದವಾಗುತ್ತದೆ. ಶಿಷ್ಟರ ಮಂಡಲದಲ್ಲಿ ರಾಮರಾವ ತಾಮರಾವರಂಥವರನ್ನು ನಿಯಮಿಸಿದಂತೆ ಉಳಿದ ಧರ್ಮದವರನ್ನೂ ನಿಯಮಿಸಿದ್ದರೆ ಸ್ವಲ್ಪವಾದರೂ ಪ್ರಯೋಜನವಾಗುತ್ತಿತ್ತು. ನಮ್ಮ ಮಹಾರಾಜರು ಹಾಗೆ ಮಾಡದಿದ್ದದ್ದೇ ನಮಗೆ ಖೇದಜನಕವಾಗಿ ಪರಿಣಮಿಸಿರುವುದು. ನಮ್ಮ ಶಿಷ್ಟಮಂಡಲದವರು ಸಾರಾಸಾರ ವಿಚಾರಶೀಲರಿದ್ದಾಗ್ಯೂ ಅವರು ಕೊಟ್ಟಿರುವ ಅಭಿಪ್ರಾಯಗಳಿಂದ ಅವರ ವಿಚಾರಕ್ಕೆ ಕಲಂಕತಗಲಿರುವದೆಂದು ಖಂಡಿತವಾಗಿ ಹೇಳುವೆವು. ನಮ್ಮ ಶಿಷ್ಟಮಂಡಲದವರು ಸಂಸ್ಕೃತವಿದ್ಯಾವಿಭಾಗದ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಕೊಡುವ ಅವಸರದಲ್ಲಿ ತಮ್ಮ ಅರ್ವಾಚೀನ ಪದ್ಧತಿಯನ್ನು ಕಾಯ್ದುಕೊಳ್ಳುವ ಹವ್ಯಾಸದಲ್ಲಿ ಬಿದ್ದು ತಾವು ಉದಾಹರಿಸಿದ ಕೆಲವು ಕಾಲೇಜುಗಳ ನಿಜಸ್ಥಿತಿಯನ್ನು ನಮ್ಮ ಶ್ರೀಮನ್ಮಹಾರಾಜರವರಿಗೆ ಸರಿಯಾಗಿ ವಿದಿತಪಡಿಸಿರುವದಿಲ್ಲೆಂದು ನಿಸ್ಸಂದೇಹವಾಗಿ ಹೇಳುತ್ತೇವೆ. ಕಾಶೀ ಗೌರ್ನಮೆಂಟ್ ಕಾಲೇಜಿನ ಅಧ್ಯಾಪಕರ ಅಭಿಪ್ರಾಯನಂತೆ ಅಧ್ಯಯನವು ನಡಿಸಲ್ಪಡುತ್ತಿರುವುದೆಂದು ಅಲ್ಲಿಯ ಪದ್ಧತಿಯನ್ನು ನಮ್ಮ ಮಹಾರಾಜರ ನಿದರ್ಶನಕ್ಕೆ ತಂದುಕೊಟ್ಟಿರುವರು. ಆದರೆ ಈ ಪದ್ಧತಿಯು ನಿಜವಿದ್ದರೂ ಆ ಕಾಲೇಜಿನಲ್ಲಿ ಚತುರ್ಮತದ ವಿದ್ಯಾರ್ಥಿಗಳಿಗೆ ವೇದ ವೇದಾಂಗ ವೇದಾಂತಾದಿ ಶಾಸ್ತ್ರಗಳಲ್ಲಿ ಅಧ್ಯಾಯನಮಾಡಲಿಕ್ಕೂ ಪರೀಕ್ಷೆಗಳನ್ನು ಕೊಡಲಿಕ್ಕೂ ಏನೂ ನಿರ್ಬಂಧವಿಲ್ಲ. ಎಷ್ಟೋ ವರ್ಷಗಳಿಂದ ಆ ಗೌರ್ನಮೆಂಟ್ ಕಾಲೇಜಿನಲ್ಲಿ ವೀರಶೈವ ವಿದ್ಯಾರ್ಥಿಗಳು ಅಧ್ಯಯನಮಾಡುತ್ತಿರುವರು. ಅಲ್ಲಿಯ ಅಧ್ಯಾಪಕರಾದರೂ ಭೇದಭಾವವಿಲ್ಲದೆ ಓದಿಸುತ್ತಿರುವರು. ಪರೀಕ್ಷೆಯ ಪಾಠ್ಯಗ್ರಂಥಗಳಲ್ಲಾದರೂ ಶಿವಾದ್ವೈತ ಗ್ರಂಥಗಳು ಸೇರಿಸಲ್ಪಟ್ಟಿರುವುವು. ಬೇಕಾದರೆ ಆ ಕಾಲೇಜಿನ ಸಂಸ್ಕೃತ ಪರೀಕ್ಷೆಯ ನಿಯಮಾವಲಿಯನ್ನು ನೋಡಬಹುದು. ಇದು ಕಾಶೀ ಗೌರ್ನಮೆಂಟ್ ಕಾಲೇಜಿನ ಮಾತಾಯಿತು. ಇನ್ನು ಕಲ್ಕತ್ತಾ ವಿಶ್ವವಿದ್ಯಾಲಯದ ವಿಷಯವನ್ನಷ್ಟು ಕೇಳಿರಿ—ನಮ್ಮ ಶಿಷ್ಟಮಂಡಲದವರು ಕಲಕತ್ತಾ ಕಾಲೇಜಿನ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವಿದಿತಪಡಿಸುವ ಅವಸರದಲ್ಲಿ ಬ್ರಾಹ್ಮಣೇತರರಿಗೆ ವೇದ ವೇದಾಂಗ ವೇದಾಂತ ಮೊದಲಾದ ಶಾಸ್ತ್ರಗಳನ್ನು ಓದಿಸುವುದಿಲ್ಲೆಂತಲೂ, ಸಾಹಿತ್ಯ ಗ್ರಂಥಗಳನ್ನು ಓದಲಿಕ್ಕೆ ಮಾತ್ರ ಉತ್ತಮ ಹಿಂದುಗಳಿಗೆ ಅಧಿಕಾರ ವಿರುತ್ತದೆಂತಲೂ ತಿಳಿಸಿರುವರು. ಇವರ ಅಭಿಪ್ರಾಯಕ್ಕೂ ಆ ಕಾಲೇಜಿನ ಪದ್ಧತಿಗೂ ಎಷ್ಟು ಅಂತರವಿರುತ್ತದೆಂಬು ಆ ಕಾಲೇಜಿನ ನಿಯಮಾವಲಿಯನ್ನು ನೋಡಿದರೆ ವ್ಯಕ್ತವಾಗುವದು. ಆ ಕಾಲೇಜಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರಿಗೆಲ್ಲಾ ಸರ್ವಶಾಸ್ತ್ರಗಳನ್ನೂ ಅಧ್ಯಯನ ಮಾಡಲಿಕ್ಕೂ ಪರೀಕ್ಷೆಗಳನ್ನು ಕೊಡಲಿಕ್ಕೂ ಮುಕ್ತದ್ವಾರವಿರುವುದು. ಈ ವಿಷಯದಲ್ಲಿ ಆ ವಿಶ್ವವಿದ್ಯಾಲಯದಿಂದ ಪ್ರತಿವರ್ಷ ಪ್ರಸಿದ್ಧವಾಗುವ ಪರೀಕ್ಷೆಯ ಗೆಜೆಟ್ಟೇ ದೊಡ್ಡ ಪ್ರಮಾಣವೆಂದು ಹೇಳಬಹುದು. ನಮ್ಮ ಶಿಷ್ಟಮಂಡಲದವರು ಜಯಪುರದ ಕಾಲೇಜನ್ನು ಉದಾಹರಿಸಿ ತಮ್ಮ ಅಭಿಪ್ರಾಯವನ್ನು ಬಲಪಡಿಸಿಕೊಂಡದ್ದನ್ನು ನೋಡಿದರೆ ಬಹಳ ಆಶ್ಚರ್ಯವಾಗುವುದು. ಜಯಪುರ ಪ್ರಾಂತದಲ್ಲಿ ನಮ್ಮ ವೀರಶೈವಜನರೇ ಇಲ್ಲ; ಉಳಿದಜನರಂತೂ ನಿಯಮಿತತನದಿಂದ ಸಂಸ್ಕೃತವನ್ನು ಓದುವುದಿಲ್ಲ. ಇದಲ್ಲದೆ ಅಲ್ಲಿಯ ಪಂಡಿತರಿಗೆ ಶಿವಾದ್ವೈತ ದರ್ಶನದ ಪರಿಚಯವಾದರೂ ಇಲ್ಲವೆಂದಮೇಲೆ ಅವರ ಕಾಲೇಜಿನ ಉದಾಹರಣವನ್ನು ತಮ್ಮ ಅಭಿಪ್ರಾಯದಲ್ಲಿ ಸಾದರ ಪಡಿಸಿಕೊಂಡದ್ದು ಎಷ್ಟು ವಿಸಂಗತವಾಗಿರುತ್ತದೆಂಬುದು ಪ್ರತಿಯೊಬ್ಬರಿಗೂ ತಾನೇ ಒಡೆದುಕಾಣುವುದು. ಇದು ನಮ್ಮ ಶಿಷ್ಟಮಂಡಲದವರು ಉದಾಹರಿಸಿದ ಕಾಲೇಜುಗಳ ವಿಷಯವಾಯಿತು. ಇನ್ನು ಅನ್ಯಕಾಲೇಜುಗಳ ವಿಷಯವನ್ನಷ್ಟು ವಿಚಾರಮಾಡೋಣ—ಬರೋಡಾ ಮಹಾರಾಜಾಕಾಲೇಜಿನಲ್ಲಿ ಸರ್ವರಿಗೂ ಅಧ್ಯಯನ ಮಾಡಲಿಕ್ಕೂ ಪರೀಕ್ಷೆಯನ್ನು ಕೊಡಲಿಕ್ಕೂ ನಿಯಮಗಳು ಮಾಡಲ್ಪಟ್ಟಿರುವುವು. ಇಂದೂರು ಮಹಾರಾಜರ ಕಾಲೇಜಿನಲ್ಲಿ ಸಮಸ್ತರಿಗೂ ಅಧ್ಯಯನಾಧ್ಯಾಪನಾದಿಗಳಿಗೆ ಮುಕ್ತದ್ವಾರವಿರುವುದು. ಕಾಶ್ಮೀರ ಮಹಾರಾಜಾ ಕಾಲೇಜಿನಲ್ಲಿಯೂ ಸರ್ವರಿಗೂ ಅಧ್ಯಯನ ಮಾಡಲಿಕ್ಕೂ ಪರೀಕ್ಷೆಕೊಡಲಿಕ್ಕೂ ನಿಯಮಗಳು ಮಾಡಲ್ಪಟ್ಟಿರುವುವು. ಕಾಶ್ಮೀರ ಮಹಾರಾಜರು ಮಹಾಶೈವರಿರುವುದರಿಂದ ಅವರ ಉದಾರಾಶ್ರಯದಿಂದ ನೂರಾರು ಶಿವಾದ್ವೈತ ಗ್ರಂಥಗಳು ಮುದ್ರಿತಗಳಾಗಿ ಪ್ರಸಿದ್ಧಿಸಲ್ಪಟ್ಟಿರುವುವು; ಮುಂದಾದರೂ ಮುದ್ರಿಸಲ್ಪಡುವುವು. ಕಾಶ್ಮೀರ ಶೈವಸೀರೀಸನ್ನು ನೋಡಿದರೆ ಇದರ ನಿಜಾಂಶವು ಸ್ಪಷ್ಟವಾಗುವುದು. ನೇಪಾಲ ಮಹಾರಾಜ ಕಾಲೇಜಿನಲ್ಲಿಯೂ ಚತುರ್ಮತದವರಿಗೆ ಪ್ರವೇಶವಿರುವುದು. ಆ ಮಹಾರಾಜರು ಮಹಾಶೈವರಿದ್ದು ಅದರಂತೆ ನಿಯಮಗಳು ಮಾಡಲ್ಪಟ್ಟಿದ್ದು ಆಶ್ಚರ್ಯವಲ್ಲ. ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಅರ್ಥಾತ್ ಲಾಹೋರ್ ಸಂಸ್ಕೃತ ಕಾಲೇಜಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರಿಗೆ ಓದಲಿಕ್ಕೂ ಪರೀಕ್ಷೆಗಳನ್ನು ಕೊಡಲಿಕ್ಕೂ ಏನೂ ನಿರ್ಬಂಧವಿಲ್ಲ. ಅಷ್ಟು ದೂರವೇಕೆ? ಪರಮಆಸ್ತಿಕರೂ ಶ್ರೌತ್ರಿಯ ಬ್ರಾಹ್ಮಣರೂ ಜಗತ್ಪ್ರಸಿದ್ಧ ದೇಶಭಕ್ತರೂ ಆದ ಪಂಡಿತ ಮದನಮೋಹನ ಮಾಲವೀಯರವರ ಪರಿಶ್ರಮದಿಂದ ಸ್ಥಾಪಿಸಲ್ಪಟ್ಟ ಕಾಶೀ ಹಿಂದೂವಿಶ್ವವಿದ್ಯಾಲಯದಲ್ಲಿ ಸಮಸ್ತ ಹಿಂದುಗಳೂ ಅಧ್ಯಯನಾಧ್ಯಾಪನ ಮಾಡಲಿಕ್ಕೂ ಪರೀಕ್ಷೆಗಳನ್ನು ಕೊಡಲಿಕ್ಕೂ ಏನೂ ನಿರ್ಬಂಧವಿರುವದಿಲ್ಲ. ಪ್ರಾಚ್ಯವಿದ್ಯಾ ವಿಭಾಗದ ಪದ್ಧತಿಯಂತೆ ಧರ್ಮ ವಿದ್ಯಾವಿಭಾಗದಲ್ಲಿಯಾದರೂ ಬ್ರಾಹ್ಮಣ ಬ್ರಾಹ್ಮಣೇತರರಿಗೆ ಅಧ್ಯಯನಾಧ್ಯಾಪನಾದಿಗಳನ್ನು ಮಾಡಲಿಕ್ಕೆ ಸಮಾನವಾದ ಅಧಿಕಾರವಿರುವುದು. ಈ ವಿಷಯದಲ್ಲಿ ನಾಲ್ಕೈದು ಅಧ್ಯಾಪಕರ ವಿರುದ್ಧ ಮತಗಳಿದ್ದರೂ ಬಹುಸಂಖ್ಯಾಕ ಪಂಡಿತರ ಮತಗಳು ಅನುಕೂಲಗಳಿರುವುವು, ಪ್ರಾಚ್ಯವಿದ್ಯಾವಿಭಾಗದಲ್ಲಂತೂ ಯಾರ ಮತಭೇದವೂ ಇರುವುದಿಲ್ಲ. ಈ ವಿಷಯವು ನಮ್ಮ ಮಹಾರಾಜರವರಿಗೆ ವಿದಿತವಾದದ್ದೇ ಇರುವುದು. ಇದರಂತೆ ಕಾಶೀಕ್ಷೇತ್ರದಲ್ಲಿರತಕ್ಕ ಇತರ ಸಂಸ್ಕೃತ ಕಾಲೇಜುಗಳಲ್ಲಿಯೂ, ಪಾಠಶಾಲೆಗಳಲ್ಲಿಯೂ ಸರ್ವರಿಗೂ ಅದರಲ್ಲಿಯೂ ಚತುರ್ಮತದವರಿಗೆ ಸಮಾನವಾದ ಅಧಿಕಾರವಿರುವುದು. ಅಂದಮೇಲೆ ನಮ್ಮ ಮೈಸೂರು ರಾಜ್ಯದಲ್ಲಷ್ಟೇ ಈ ವಿಷಯದಲ್ಲಿ ವಿಪರೀತನಿರ್ಬಂಧಗಳು ಮಾಡಲ್ಪಟ್ಟದ್ದನ್ನು ನೋಡಿ ಯಾರಿಗೆತಾನೇ ವ್ಯಸನವಾಗಲಿಕ್ಕಿಲ್ಲ? ಈಗಿನ ನವೀನಪರಿಸ್ಥಿತಿಯಲ್ಲಿ ಈ ಪ್ರಕಾರಗಳಾದ ವ್ಯರ್ಥನಿರ್ಬಂಧಗಳಿಂದ ಪ್ರಜೆಗಳ ಮನಸ್ಸನ್ನು ವಿಕಲಗೊಳಿಸಿ ಅವರ ಧರ್ಮಗ್ಲಾನಿಯನ್ನು ಮಾಡುವ ಕರ್ತವ್ಯವನ್ನು ರಾಜರು ಕೈಕೊಂಡರೆ ಮುಂದೆ ನಮ್ಮ ರಾಜ್ಯವು ಊರ್ಜಿತಸ್ಥಿತಿಯನ್ನು ಹೊಂದುವಬಗೆಯಾದರೂ ಹೇಗೆ? ಸಾರಾಸಾರ ವಿಚಾರಶೀಲರಾದ ನಮ್ಮ ಶ್ರೀಮನ್ಮಹಾರಾಜರವರು ಮಹಾಪಾಠಶಾಲೆಗಳ ಈಗಣ ಸುಧಾರಕ ಕಾಲಕ್ಕೆ ಅನನುಗುಣಗಳಾದ ಸಂಕುಚಿತ ನಿಯಮಗಳನ್ನು ತೆಗೆದುಹಾಕಿ, ಜಗನ್ಮಾನ್ಯಗಳಾದ ಕಾಶೀ ಹಿಂದೂವಿಶ್ವವಿದ್ಯಾಲಯದ ಸರ್ವೋತ್ತಮನಿಯಮಗಳನ್ನು ತಮ್ಮ ರಾಜ್ಯದಲ್ಲಿಯೂ ಜಾರಿಯಲ್ಲಿ ತಂದದ್ದಾದರೆ ಸರ್ವರಿಗೂ ಹಿತವಾಗುವುದು. ಸಾರಾಂಶವೇನೆಂದರೆ—ಸಾವಿರಾರು ವರ್ಷಗಳಿಂದ ನಮ್ಮ ಚತುರ್ಮತಗಳಿಗೆ ಜನ್ಮಭೂಮಿಯೂ, ಸಮಸ್ತ ಆಸ್ತಿಕಧರ್ಮಗಳ ಆವಾಸಸ್ಥಾನವೂ, ಹಿಂದೂಮುಸಲ್ಮಾನರಿಗೆ ಸಮಾನವಾದ ಆಶ್ರಯವೂ ಎಂದು ಪ್ರಸಿದ್ಧಿಯನ್ನುಪಡೆದು ಸರ್ವ ಪ್ರಜೆಗಳನ್ನೂ ಭೇದಭಾವವಿಲ್ಲದೆ ಪರಿಪಾಲನಮಾಡುತ್ತ ಬಂದ ನಮ್ಮ ಮೈಸೂರ ಧರ್ಮರಾಜ್ಯದಲ್ಲಿ ಪೂರ್ವದಂತೆ ಸುಖ ಸಮೃದ್ಧಿಗಳು ನೆಲೆಗೊಳ್ಳುವಂತೆ ವ್ಯವಸ್ಥೆಯನ್ನು ಮಾಡಿ, ನಮ್ಮ ಹಿಂದೂಧರ್ಮದ ಮುಖ್ಯ ವಿದ್ಯೆಯಾದ ಸಂಸ್ಕೃತ ವಿದ್ಯೆಯನ್ನು ಎಲ್ಲ ಮತದವರೂ ಭೇದಭಾವವಿಲ್ಲದೆ ಅಧ್ಯಯನಮಾಡಲಿಕ್ಕೆ ಸರ್ವೋತ್ತಮ ಪದ್ಧತಿಯನ್ನು ಜಾರಿಯಲ್ಲಿ ತರಬೇಕೆಂತಲೂ, ಈವಿಷಯದಲ್ಲಿ ಸಮಸ್ತ ಪ್ರಜೆಗಳೂ ಸತತಪ್ರಯತ್ನಮಾಡಬೇಕೆಂತಲೂ ಸೂಚಿಸಿ ಈ ಚಿಕ್ಕಲೇಖನವನ್ನು ಮುಗಿಸಿರುತ್ತೇನೆ.

ಲಗ್ನದ ಫಂಡು.

1. ತುರುವೇಕೆರೆ ಪೃಥ್ವಿಶೆಟ್ಟರು ಮ॥ ರುದ್ರಪ್ಪನವರ ಅಣ್ಣನವರ ಮಗಳನ್ನು ಟಿ. ನರಸೀಪುರದ ಮ॥ ಪುಟ್ಟಣ್ಣನವರ ಪುತ್ರ ನಂಜುಂಡಸ್ವಾಮಿ ಇವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ತುರುವೇಕೆರೆ ಪೇಟೆಶೆಟ್ಟರು ಮ॥ ಟಿ. ವಿ. ಮಲ್ಲಪ್ಪಶೆಟ್ಟರ ಮೂಲಕ 3-0-0.

2. ತೊಗರಿಹಂಕಲ್ ಕಾಫಿಎಸ್ಟೇಟು ಸಂತೇವೇರಿ ಪೋಸ್ಟು ಚಾವೂರು ಮಠದ ವೇ॥ ಜಿ. ಮುಪ್ಪಿನಯ್ಯಾರಾಧ್ಯರ ಮೂಲಕ ಈ ಕೆಳಗೆ ಬರದ ಪ್ರಕಾರ ಚಾವೂರು ಮಠದ ವೇ॥ ಜಿ. ಮುಪ್ಪಿನಯ್ಯಾರಾಧ್ಯ ಕುನ್ನಾಳು ಇವರಿಂದ 1-0-0, ವರನ ಕಡೆಯಿಂದ 3-0-0, ವಧುವಿನ ಕಡೆಯಿಂದ 2-0-0, ಇಂದವಾರದ ವೇ॥ ಮಠದ ಕೇವಣಸಿದ್ಧ ಆರಾಧ್ಯರಿಂದ 1-0-0, ಇವರ ಧರ್ಮಪತ್ನಿ ಮಲ್ಲಿಕಾಂಬ ಇವರಿಂದ 1-0-0, ಕುನ್ನಾಳುಮಠದ ವೇ॥ ಲಿಂ. ಪ್ರಭಯ್ಯಾರಾಧ ರಿಂದ 1-0-0, ಮುಗುಳವಳ್ಳಿ ವೇ॥ ಸಿದ್ಧಲಿಂಗಾರಾಧ್ಯರಿಂದ 0-8-0, ಇವರ ಧರ್ಮಪತ್ನಿ ಗಂಗಾಂಬ ಇವರಿಂದ 0-8-0, ಕರಘಟ್ಟದ ಮಠದ ಶ್ರೀಯವರ ಧರ್ಮಪತ್ನಿ ವೀರಮ್ಮಾಜಿ ಇವರಿಂದ 1-0-0, ವೇ॥ ಡಿ. ರುದ್ರಾರಾಧ್ಯರಿಂದ 0-2-0, ಇಂದವಾರದ ವೇ॥ ಸಿದ್ಧಾರಾಧ್ಯರಿಂದ 0-2-0, ಅಲ್ದೂರು ಮ. ಪು. ಪ. ಗೌರಮ್ಮನವರಿಂದ 1-0-0, ಇಂದವಾರದ ಮ. ಬ. ಪ. ವೀರಮ್ಮನವರಿಂದ 0-2-0, ವೇ॥ ಡಿ. ರುದ್ರಾರಾಧ್ಯರಿಂದ 0-2-0, ಕ. ಮ. ಕಿ. ಪ. ಬಸಮ್ಮನವರಿಂದ 0-4-0, ಮುತ್ತಿನಪುರದ ಗಂಗಾಂಬ ಇವರಿಂದ 0-8-0, ಸಕ್ಕರೆಪಟ್ಟದ

ರಂಗಣ್ಣನವರು 0-8-0, ಇವರ ಧರ್ಮಪತ್ನಿಯವರು 0-8-0, ಚಿ. ತ. ಮ. ...

ಮೆಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ.

N.B.—ತಾ॥ 9-7-22ನೇ ಪತ್ರಿಕೆಯ 2ನೇ ಕಾಲಂ 3ನೇ ಪಂಕ್ತಿಯಲ್ಲಿ ... 2-0-0 ಜುಮ್ಲ 5-0-0 ... ಓದಿಕೊಳ್ಳಬೇಕು.

ಜಿ. ಪರಮಶಿವಯ್ಯ, ಬಿ. ಎ., ಎಲ್‌ಎಲ್. ಬಿ.,
ಸೆಕ್ರೆಟರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ,
ಬೆಂಗಳೂರು ಸಿಟಿ.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.



2

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ... ಕ್ರಯ ರೂ. 8-8-0 ...

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್. 26

ಲೋಕಪ್ರಸಿದ್ಧವಾದ ವಜ್ರಾಂಗಲೇಹ

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವುದೂ ಇಲ್ಲ. ...

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
ಬಳ್ಳಾರಿ.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ...

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿ ಸಹಿತ ರೂ. 4-8-0

ವಿಳಾಸ:—ಮ್ಯಾನೇಜರ್
ಸ್ಟಾರ್ ಹೌಸ್, ಪೋಸ್ಟ್‌ಬಾಕ್ಸ್ ನಂ. 508.
2 ಪಾರ್ಕ್‌ಟೌನ್, ಮದರಾಸು.

ಶ್ರೀರಾಮವಿಜಯಂ.

...

ವಿಳಾಸ:—ವಿ. ಬಿ. ಎಸ್. ಪಾಣಿ ಅಂಡ್ ಕೋ
ಸಾಹುಕಾರಪೇಟೆ, ಮದರಾಸ್.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

...

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಪುರದ ಭೀಮಾವಧೂತರು, ...

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ:—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
29 ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ।	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

೧೯೨೨ ನೆಯ ಇಸವಿ ಜುಲೈ ತಾ॥ ೩೦ ರಿಂದ ೧೯೨೨ನೆಯ ಆಗಸ್ಟು ತಾ॥ ೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಶ್ರಾವಣಶುದ್ಧ ಸಪ್ತಮಿಯಿಂದ ಶ್ರಾವಣಶುದ್ಧ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾಟಕ
30	ಭಾನು	ಸಪ್ತ	50-33	ಚಿತ್ತ	46-9	15
31	ಸೋಮ	ಅಷ್ಟ	45-18	ಸ್ವಾತಿ	42-44	16
1	(1) ಮಂಗಳ	ನವ	40-39	ವಿಶಾ	40-2	17
2	ಬುಧ	ದಶ	37-0	ಅನೂ	38-14	18
3	ಗುರು	ಏಕಾ	34-21	ಜ್ಯೇ	37-21	19
4	(2) ಶುಕ್ರ	ದ್ವಾದ	32-43	ಮೂಲ	37-37	20
5	(3) ಶನಿ	ತ್ರಯೋ	32-26	ಪೂಷ	39-11	21

(1) ಮಂಗಳಗೌರೀವ್ರತಂ. (2) ವರಮಹಾಲಕ್ಷ್ಮೀವ್ರತಂ, ಆದಿಶುಕ್ರವಾರಂ. (3) ಶ್ರಾವಣಶನಿವಾರಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಪರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ರಿಳೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸೆ ೧೯೨೦ ನೆಯ ಇಸವಿ ಅಗಸ್ಟು ತಾರೀಖು ೬ ನೆಯ ಭಾನುವಾರ. ಸಂಚಿಕೆ ೩೨

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

...

ಆ॥ ವಿದ್ವಾನ್ ಎ. ಆರ್. ಶಂಭುಸಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ವೀರಶೈವರು ಅವಶ್ಯ ಸಂಗ್ರಹಿಸತಕ್ಕ ವೀರಶೈವ ಧರ್ಮಪರವಾದ ಸುಂದರ ಫೋಟೋಗಳು.

ಶ್ರೀಹನುಮಂತಪ್ಪ ಚಿಗೆ-ಬಿರ್ವಭದ್ರಪ್ಪನಿಂದೆ-ಲಿಂಗಧಾರಣಪ್ಪ

...

ಗಂಗಪ್ಪ ಜೇರಗೆ, ಸೋಲಾಪುರ ಸಿಟಿ

3

ಗಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಪಾಟಲಿಗಳು.

...

7 ಭರಿಕ ಬೆಂಡೋಲೆ ಕ್ರಯ 3-8-0. ಟಿಕಾಯಿ 1॥ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ರಾಯಲ್ ಫೌಂಟನ್‌ಪೆನ್.

3



...

ಲಿಲ್ಲಿ ಆಫ್ ದಿ ವ್ಯಾಲಿ.

...

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಮೈಸೂರು ಸ್ಟಾರ್.

೧೯೨೧ ನೆಯ ಇಸವಿಯ ಅಗಸ್ಟ್ ತಾ|| ೭ ನೆಯ ಭಾನುವಾರ.

ರಾ|| ಎಂ. ವೆಂಕಟಕೃಷ್ಣಯ್ಯನವರು.

ತಾವು ಸಮದೃಷ್ಟಿಯುಳ್ಳವರು, ಅದ್ವಿತೀಯ ದೇಶಾಭಿಮಾನಿಗಳು, ಸರ್ವಸಹೋದರತ್ವ ಪ್ರೇಮಿಗಳು ಎಂದು ಮ|| ವೆಂಕಟಕೃಷ್ಣಯ್ಯನವರು ಸಮಯ ಸಿಕ್ಕಿದಾಗಲೆಲ್ಲಾ ವಿಜೃಂಭಿಸಿಕೊಳ್ಳುವುದನ್ನು ಎಲ್ಲರೂ ಬಲ್ಲರಷ್ಟೆ. ಆದರೆ ಹಳೆ ಹಳೆಯದಾಗುತ್ತ ಪದಾರ್ಥದ ಹುಟ್ಟು ಬಣ್ಣವೇ ಗಟ್ಟಿಯಾಗಿ ನಿಂತು ಕಟ್ಟುಬಣ್ಣವು ಹೇಗೆ ನಿಲ್ಲಲಾರದೋ ಇವರ ಅವಸ್ಥೆಯಾದರೂ ಈಗ ಹಾಗೆಯೇ ಆಗಿದೆ. ಇವರ ಪತ್ರಿಕೆಗಳಲ್ಲಿ ಇವರಾಡುವ ಮಾತುಗಳಿಗೆ ಪರಸ್ಪರ ವಿರೋಧಗಳು ಪರಸ್ಸಹಸ್ರ ತುಂಬಿರುತ್ತವೆ. ಲೋಕವನ್ನೆಲ್ಲಾ ಜರೆದು ತನಗೆ ಬೇಕಾದವರನ್ನು ಮಾತ್ರ ಹೊಗಳುವ ರೋಗವು ಆ ಪತ್ರಿಕೆಗೆ ಅಂಟಿಹೋಯಿತು. ಇವರು ದಯಾಶಾಲಿಗಳು ವಿಶಾಲಹೃದಯರು ದೇಶಬಾಂಧವರು ಎಂದು ಮಧ್ಯವಯಸ್ಸಿನ ನಡತೆಯಲ್ಲಿ ತೋರ್ಪಡುತ್ತಿದ್ದ ಇವರ ಸ್ವಭಾವವೆಲ್ಲಾ ಈಗ ಸಂಪೂರ್ಣವಾಗಿ ಭೇದಿಸಿಹೋಯಿತು. ಆಗಣ ಇವರ ನಡೆನುಡಿಗಳನ್ನು ನೋಡಿ ಕೇಳಿದ್ದವರೆಲ್ಲಾ ಇವರೇನು ಆರೂಢಪದಾರೂಢರಾದ ವೈರಾಗ್ಯಮೂರ್ತಿಗಳೋ ಜಾತಿ ಮತ ಸಂಕಲೆಗಳನ್ನೆಲ್ಲಾ ತೊರೆದ ದಿವ್ಯಜ್ಞಾನಿಗಳೋ ಎಂದು ಭಾವಿಸುತ್ತಿದ್ದರು. ತನ್ನನ್ನು ದೂರೀಕರಿಸಿದ್ದ ಬ್ರಾಹ್ಮಣರನ್ನು ಲೋಕೋತ್ತರರೆಂದು ಹೊಗಳಿ ಅವರ ಪ್ರಸಾದವನ್ನು ಸಂಪಾದಿಸುವ ಮೂಲಕ ತನ್ನ ಹುಟ್ಟಿನ ಹುಳುಕನ್ನು ಮುಚ್ಚಿ ಸಿ ಸಮಾಜದಿಂದ ತಾನು ಗೌರವಿಸಲ್ಪಡುವಂತೆ ಆಗುವುದಕ್ಕಾಗಿ ವೇದವ್ಯಾಸನು ಪುಗಸಟ್ಟೆ ಪುರಾಣಗಳನ್ನು ಬರೆದು ಬ್ರಾಹ್ಮಣರನ್ನು ಅಟ್ಟಕ್ಕೇರಿಸಿದನೆಂದೂ, ಭಾರತ ಭಾಗವತಾದಿಗಳ ಕತೆಗಳೆಲ್ಲಾ ಸುಳ್ಳಿನ ಮೂಟೆಯೆಂದೂ ಬರೆದ ಧಾರವಾಡದ ಮಧ್ವ ಬ್ರಾಹ್ಮಣ ಮೊಕಾಸಿಯವರ ಹತ್ತಾರು ಲೇಖನಗಳಿಗೆ ತಮ್ಮ ಸಾಧ್ವೀ ಪತ್ರಿಕೆಯಲ್ಲಿ ಅವಕಾಶಕೊಟ್ಟು ಪ್ರಕಟಿಸಿ, ಆ ಅಭಿಪ್ರಾಯದಲ್ಲಿ ತಮಗಿದ್ದ ಸಾನುಭೂತಿಯನ್ನು ತೋರ್ಪಡಿಸಿಕೊಂಡಿದ್ದ ಇದೇ ವೆಂಕಟಕೃಷ್ಣಯ್ಯನವರೇ ಈಗ ಪರಮವೇದವ್ಯಾಸಭಕ್ತರಂತೆಯೂ, ಬ್ರಾಹ್ಮಣ್ಯೋದ್ಧಾರಕರಂತೆಯೂ ವಿಜೃಂಭಿಸುತ್ತಿರುವುದು ಕಲಿಪ್ರಭಾವವೇ ಸರಿ ಎಂದು ಅವರ ಚಿರಪರಿಚಿತರನೇಕರು ಆಡಿಕೊಳ್ಳುತ್ತಿದ್ದಾರೆ. ಆದರೆ ಇಂಥ ಪರಿಣಾಮಕ್ಕೆ ಅವರ ಮುದಿತನದ ಅರಳು ಮರುಳೇ ಕಾರಣವಲ್ಲದೆ ಬೇರೆಯೇನೂ ಇಲ್ಲವೆಂದು ನಾವು ನೆನಸುತ್ತೇವೆ. ಲೋಕಕ್ಕೆಲ್ಲಾ ವರ್ಣಾಶ್ರಮಧರ್ಮ ನಿರೂಪಣವನ್ನು ಎರಡು ಹೊತ್ತೂ ಮಾಡುತ್ತಿರುವ ಇವರು ಈ ಅಪರವಯಸ್ಸಿನಲ್ಲಿ ವಾನಪ್ರಸ್ಥ ದೀಕ್ಷೆಯನ್ನು ವಹಿಸಿ ಯಾವುದಾದರೂ ಪರ್ವತಗುಹೆಯಲ್ಲಿ ಸೇರಿ ಜನ್ಮೋತ್ತಾರವನ್ನು ಕೋರುತ್ತ ತಪಸ್ಸನ್ನಾಚರಿಸುವುದು ಧರ್ಮವಾಗಿದ್ದಿತು. ಯಾವ ಯಾವ ವರ್ಣದವರಿಗೆ ಯಾವ ಯಾವ ಧರ್ಮವೋ ಹಾಗೆ ಆಯಾ ವಯಸ್ಸಿಗೆ ಆಯಾ ಧರ್ಮವೂ ಕೂಡ ಶಾಸ್ತ್ರವಿಹಿತವಲ್ಲವೆ? ಕೈನಡುಗುವ ವೈದ್ಯನು ಶಸ್ತ್ರ ಚಿಕಿತ್ಸೆಮಾಡಲು ಅರ್ಹನೆ? ಪರೆಕಟ್ಟಿದ ಕಣ್ಣುಳ್ಳ ಪರಿಚಾರಕನು ಭಕ್ಷ್ಯಭೋಜ್ಯಗಳನ್ನು ಅಣಿಮಾಡಲು ಯೋಗ್ಯನೆ? ಪೂರ್ವಾಪರಾಲೋಚನೆಗಳಿಂದಲೂ, ದೇಶಕ್ಷೇಮೈಕದೃಷ್ಟಿಯಿಂದಲೂ, ನಿರ್ಮತ್ಸರ ಮತಿಯಿಂದಲೂ, ವಿಶಾಲ ಹೃದಯದಿಂದಲೂ ಕೂಡಿದ ಪ್ರಜ್ಞಾವಿಶೇಷದಿಂದ ನಿರ್ವಹಿಸಬೇಕಾದ ವೃತ್ತಪತ್ರಿಕಾ ಸಂಪಾದಕತ್ವಕಾರ್ಯವು ಇವರಂಥ ಅರಳುಮರಳಿನ ಅಜ್ಜಂದಿರ ಕೈಯಲ್ಲಿದ್ದರೆ ಕೇಳುವುದೇನು? ಆ ಪತ್ರಿಕೆಯು ದೇಶದ ಭಾಗಕ್ಕೆ ಹುಚ್ಚನ ಕೈಯಲ್ಲಿನ ಚಂದ್ರಾಯುಧದಂತೆ ಉಪಕರಿಸಬಲ್ಲುದೇ ಹೊರತು ಮತ್ತೇನೂ ಇಲ್ಲ. ನಮ್ಮ ಪ್ರಭುತ್ವದವರು ಇದರ ಪಟ್ಟವರಸೆಯ ವಿನೋದವನ್ನು ಎಲ್ಲಿಯತನಕ ನೋಡುತ್ತ ಕುಳಿತಿರುವರೋ! ಈ ಚಂದ್ರಾಯುಧದ ಹತಿಯ ಭೀತಿಯಿಂದ ಕುಳಿತಿರುವರೋ ತಿಳಿಯದು.

ಮ|| ವೆಂಕಟಕೃಷ್ಣಯ್ಯನವರೂ ಅವರ ಉಪವಿಲೇಖಕಕೋಟಿಯ ಕೆಲವರು ಸಹ ಸೇರಿ ಇವರ ಪತ್ರಿಕೆಗಳ ದ್ವಾರಾ ಮಾಡತಕ್ಕ ದುಷ್ಟ ಲೇಖನಗಳ ಗಲಾಟೆಯಿಂದ ದೇಶದ ಪ್ರಜೆಗಳಲ್ಲಿ ಪರಸ್ಪರ ಮೈತ್ರಿಯು ನೆಲಸುವುದು ಎಂದಿಗೂ ಸಾಧ್ಯವಲ್ಲವೆಂಬುದನ್ನ ಆ ಪತ್ರಿಕೆಗಳನ್ನು ಸಕ್ರಮವಾಗಿ ಓದುವವರೆಲ್ಲಾ ಅರಿಯಬಲ್ಲರು. ಈ ಕೆಲವರು ಮಾಡುವ ಚೇಷ್ಟೆಗಳಿಂದ ತ್ರಿಮತ ಬ್ರಾಹ್ಮಣ ವರ್ಗವನ್ನು ಇತರ ಜನರೆಲ್ಲಾ ದ್ವೇಷಿಸುವಂತೆಯೂ, ಹಿಂದುಳಿದ ಜನವರ್ಗಗಳನ್ನೆಲ್ಲಾ ಇವರುಗಳು ದ್ವೇಷಿಸಿ ತುಚ್ಛೀಕರಿಸುವಂತೆಯೂ ಆಗುತ್ತಿದೆ. ಜನವರ್ಗಗಳಲ್ಲಿ ಭೇದೋಪಾಯವನ್ನು ಪ್ರಯೋಗಿಸಿ, ಐಕಮತ್ಯವನ್ನು ಕೆಡಿಸುವುದರಲ್ಲೂ, ಇಲ್ಲದ ಅಪವಾದಗಳನ್ನು ಹುಟ್ಟಿಸಿ ಪ್ರಭು ಪ್ರಜಾಮಧ್ಯದಲ್ಲಿ ವಿಷಮದೃಷ್ಟಿ ಹುಟ್ಟುವಂತೆ ಮಾಡುವುದರಲ್ಲಿಯೂ ಇವರ ಪತ್ರಿಕೆಯ ಲೇಖನಗಳು ನಿಶಿತಾಸ್ತ್ರಗಳಾಗಿರುತ್ತವೆ. ಅವುಗಳನ್ನೆಲ್ಲಾ ಉದಹರಿಸುವುದಕ್ಕೆ ಸ್ಥಳವಿಲ್ಲ. ಸರ್ ಕಾಂತರಾಜ ಅರಸಿನವರು ದಿವಾನಗಿರಿಯಲ್ಲಿದ್ದಾಗಲೂ ಬಿಟ್ಟಾಗಲೂ ಈ ಪತ್ರಿಕೆಯಲ್ಲಿ ದುರ್ವಿಜೃಂಭಣೆಯ ಎಷ್ಟೋ ಲೇಖನಗಳು ಬಂದವು. ಅವುಗಳಲ್ಲೊಂದರಲ್ಲಿ "ಒಸವಯ್ಯನವರಿಗೆ ವೇಷಭ್ರಂಶ, ರೆಡ್ಡಿಯವರಿಗೆ ದೇಶಭ್ರಂಶ, ಅರಸಿನವರಿಗೆ ಸ್ಥಾನಭ್ರಂಶ. ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಂ" ಎಂದು ಮುಂತಾಗಿ ಬರೆದಿದ್ದಿತು. ಮತ್ತು ಹಿಂದುಳಿದ ಜನವರ್ಗಗಳನ್ನೆಲ್ಲಾ ಶೂದ್ರಮಾಲಿಗಳಿಗೂ ಸೈತಾನನಿಗೂ ಉಪಮಿಸಿ ಬರೆಯುವದಂತೂ ಇವರ ಪತ್ರಿಕೆಯ ಮೈಗುಣವಾಗಿ ಹೋಗಿದೆ. ಹಿಂದುಳಿದವರ ಹಿತಕ್ಕೆ ಸಾಧಕಗಳಾದ ಎಜ್ಯುಕೇಷನಲ್ ಮೆಮೋರಾಂಡಮು ಮಿಲ್ಲರ್ ಕಮಿಟಿ ರಿಪೋರ್ಟುಗಳ ಮೇಲೆ ಈ ಪತ್ರಿಕೆಯು ಕಲ್ಲನ್ನು ಹಿಡಿದೇ ಇದೆ. ಕಳೆದ ಜುಲೈ ತಿಂಗಳು ತಾ|| 17ರ ಸಂಪದಭ್ಯುದಯ ಸಂಚಿಕೆಯಲ್ಲಿ ತಮ್ಮ ತ್ರಿಮತ ಬ್ರಾಹ್ಮಣರ ಜತೆಗೆ ಇತರರಾರೂ ಕುಳಿತು ಸಂಸ್ಕೃತ ಪಾಠಶಾಲೆಗಳಲ್ಲಿ ಓದುವುದಕ್ಕೆ ಅರ್ಹರಲ್ಲವೆಂಬುದನ್ನು ಪ್ರತಿಪಾದಿಸುವ ಭರದಲ್ಲಿ "ರೇಲ್ ಬಂಡಿಗಳಲ್ಲಿ ಯೂರೋಪಿಯನ್ನರ ಕಂಪಾರ್ಟ್‌ಮೆಂಟಿಗೆ ಭಾರತೀಯರನ್ನು ಸೇರಿಸುವರೆ? ಇವೇ ಮೊದಲಾದ ವೈಲಕ್ಷಣ್ಯಗಳನ್ನು ನಾವು ಪ್ರತಿನಿತ್ಯವೂ ನೋಡುತ್ತಿದ್ದೇವೆ. ಆದಾಗ್ಯೂ ಸರ್ವಸಮದೃಷ್ಟಿಯು ಇರಬೇಕೆಂಬುದಾಗಿಯೂ, ದೇವರಿಗೂ ಪಿಶಾಚಕ್ಕೂ, ದೊರೆಗಳಿಗೂ ಶೂದ್ರಮಾಲಿಗಳಿಗೂ, ಮಹಾತ್ಮರಿಗೂ ಪತಿತರಿಗೂ, ಜಾರಚೋರ ಶಿಖಾಮಣಿಗಳಿಗೂ ಧರ್ಮಮಾರ್ಗೈಕಪರಾಯಣರಿಗೂ, ಕುಡಿಕರಿಗೂ ಕುಡಿಕತನವನ್ನು ಮಹಾಪಾತಕವೆಂದು ತಿಳಿದುಕೊಂಡಿರತಕ್ಕವರಿಗೂ, ವ್ಯತ್ಯಾಸವೇ ಇರಕೂಡದೆಂದು ವಾದಿಸುವ ವಜ್ರಕುಂಠರ ವಾದವನ್ನು ಕೇಳಿದರೆ ತುಂಬಾ ವಿಷಾದವಾಗುತ್ತದೆ" ಎಂದು ಬರೆದುಕೊಂಡಿದ್ದಾರೆ. ಇದರಿಂದ ಈಗ ಪಾಠಶಾಲೆಗಳಲ್ಲಿ ಓದುತ್ತಿರುವ ತ್ರಿಮತ ಬ್ರಾಹ್ಮಣರನ್ನು ದೇವರಿಗೂ, ದೊರೆಗಳಿಗೂ, ಮಹಾತ್ಮರಿಗೂ, ಧರ್ಮಮಾರ್ಗೈಕಪರಾಯಣರಿಗೂ, ಮದ್ಯಪಾನವನ್ನು ಮಹಾಪಾತಕವೆಂದು ತಿಳಿದಿರತಕ್ಕ ಪರಿಶುದ್ಧರಿಗೂ ಸಮಾನ ಮಾಡಿ ಗೌರವಿಸಿ, ಆ ಪಾಠಶಾಲೆಗಳಿಗೆ ಸೇರಬೇಕೆಂದು ಅಪೇಕ್ಷಿಸುವ ಇತರ ಹಿಂದುಗಳನ್ನೆಲ್ಲಾ ಪಿಶಾಚಕ್ಕೂ, ಶೂದ್ರಮಾಲಿಗಳಿಗೂ, ಪತಿತರಿಗೂ, ಜಾರಚೋರ ಶಿಖಾಮಣಿಗಳಿಗೂ ಕುಡಿಕರಿಗೂ ಹೋಲಿಸಿದ್ದಾರೆ. ಇಂಥ ಮಾತುಗಳನ್ನು ಆಡಿಸಿಕೊಂಡವರು ಸೈರಿಸಿಕೊಂಡಿರುವುದು ಸಾಧ್ಯವೆ? ಈ ದುರಭಿಮಾನ ದುರಹಂಕಾರಪೂರಿತಗಳಾದ ಕೀಟಲೆಯ ಮಾತುಗಳು ಜನವರ್ಗದಲ್ಲಿ ಮಹಾಪ್ರಳಯವನ್ನುಂಟುಮಾಡಲು ಅರಳೆಯ ರಾಶಿಗೆ ಬೆಂದು ಕಿಡಿಯಂತೆಯಲ್ಲವೆ? ಇದನ್ನೆಲ್ಲಾ ದೇಶಶಾಂತಿ ರಕ್ಷಣಭಾರವನ್ನು ಹೊತ್ತ ಪ್ರಭುತ್ವದವರು ಗಮನಿಸಬೇಕು.

ಕಾಂಗ್ರೆಸ್ ಶಿಖಾಮಣಿಗಳಂತೆಯೂ ಗಾಂಧಿ ಪರಮ ಶಿಷ್ಯರಂತೆಯೂ ಮಾಳವ್ಯರ ಭಕ್ತರಂತೆಯೂ ಇವರು ಮಾಡುತ್ತಿರುವ ಬಹಿರಾಡಂಬರಗಳಿಗೆ ಕೊನೆ ಮೊದಲಿಲ್ಲ. ಆದರೆ ಅನುಷ್ಠಾನದಲ್ಲಿ ಅವರ ತತ್ತ್ವಕ್ಕೆ ಪರಮ ವಿರೋಧಿಗಳೇ. ಗಾಂಧಿಯವರು ದೇಶದ ¼ ಭಾಗದವರಾಗಿರುವ ಅಂತ್ಯಜರ ಅಸ್ಪೃಶ್ಯತ್ವವನ್ನು ಮೊದಲು ತೊಲಗಿಸಿದಲ್ಲದೆ ದೇಶಕ್ಕೆ ಮೋಕ್ಷವಿಲ್ಲವೆಂದು ಸಾರಿ ಉಪದೇಶಿಸಿರುವುದಲ್ಲದೆ, ಲಕ್ಷ್ಮಿಯೆಂಬ ಅಂತ್ಯಜರ ಹುಡುಗಿಯನ್ನು ತಮ್ಮ ಆಶ್ರಮದಲ್ಲೇ ಇಟ್ಟುಕೊಂಡು ಸ್ವಂತದ ಮಗಳಿಗಿಂತಲೂ ಹೆಚ್ಚಿನ ಪ್ರೇಮದಿಂದ ಸಾಕುತ್ತಿದ್ದು, ಈಗ ತಾವು ಕಾರಾಗೃಹದಲ್ಲಿದ್ದರೂ ಆ ಹುಡುಗಿಯ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದಾರೆ. ಈ ನಮ್ಮ ದೇಶಭಕ್ತ ವಿಜೃಂಭಕರಾದರೊ ಗೌರ್ನಮೆಂಟಿನವರು ಸರ್ಕಾರಿ ಪಾಠಶಾಲೆಗಳಿಗೆ ಪಂಚಮ ಬಾಲಕರನ್ನು ಸೇರಿಸಬೇಕೆಂದು ಅಪ್ಪಣೆಮಾಡಿದ ಮಾತ್ರದಿಂದಲೇ ಇನ್ನೇನು ಭೂಮಿಯೇ ತಲೆಕೆಳಗು ಆಗಿಹೋಗುವುದೆಂಬಂತೆ ಕೂಗಿಕೊಳ್ಳುತ್ತ, ಪ್ರಭುತ್ವಕ್ಕೆ ಪ್ರತಿಯಾಗಿ ಗದ್ದಲವನ್ನೆಬ್ಬಿಸಲಿಕ್ಕೆ ತೊಡಗಿದರು! ಪಂಡಿತ ಮದನಮೋಹನ ಮಾಳವ್ಯರವರು ಮೊನ್ನೆತಾನೇ ಮುತ್ರಾ ಎಂಬ ಪಟ್ಟಣದಲ್ಲಿ ಒಂದು ದೊಡ್ಡ ಸಭೆಯೊಳಗೆ ಉಪನ್ಯಾಸಮಾಡುವಾಗ್ಗೆ—

"ನಿಮ್ಮ ಅಸ್ಪೃಶ್ಯ ಸೋದರರನ್ನು ಮೇಲಕ್ಕೆತ್ತಿರಿ; ನಿಮ್ಮಜಾತ್ಯುದ್ಧಾರವೆಂದರೆ ನೀವು ಅವರೊಡನೆ ಸೇರಿ ಭೋಜನವನ್ನು ಮಾಡಬೇಕೆಂದಾಗಲಿ ಅವರ ಬಾಂಧವ್ಯವನ್ನು ಬಳೆಯಿಸಬೇಕೆಂದಾಗಲಿ ನನ್ನ ಅಭಿಪ್ರಾಯವಲ್ಲ. ಅವರು ಶುಭ್ರವಾಗಿ ಸ್ನಾನಮಾಡಿ ಭಗವತ್ಪ್ರಾರ್ಥನೆ ಮಾಡಿಕೊಂಡು ಸಭೆಗಳಿಗೆ ಬಂದರೆ ಅವರನ್ನು ದೂರಹೋಗು ಎನ್ನಬೇಡಿ, ನಿಮ್ಮೊಡನೆ ಸಮಾನವಾಗಿ ಕುಳ್ಳಿರಿಸಿಕೊಳ್ಳಿರಿ. ಅವರಿಗೆ ವಿದ್ಯೆಯನ್ನು ಕಲಿಸಿಕೊಡಿ, ಮತಧರ್ಮವನ್ನು ಬೋಧಿಸಿರಿ, ನೀವು ಪೂಜಿಸುವ ದೇವರನ್ನೇ ಅವರೂ ಪೂಜಿಸುವರು. ನಿಮ್ಮಂತೆಯೇ ಅವರೂ ಗಂಗಾಮಾತಕುಜೈ ಯಮುನಾಮಾತಕುಜೈ ಎಂದು ಗಂಗಾಸ್ನಾನ ಮಾಡುವರು. ನಿಮ್ಮಂತೆಯೇ ಅವರೂ ಭಾರತ ರಾಮಾಯಣಾದಿ ಕಥೆಗಳನ್ನು ಶ್ರದ್ಧೆಯಿಂದ ಓದುವರು. ಅಂಥವರನ್ನೇ ನೀವು ಕ್ರೂರವಾಗಿ ಕಾಣುವುದು? ನೀವು ಎಷ್ಟುಮಟ್ಟಿಗೆ ಹಿಂದುಗಳೋ ಅವರೂ ಅಂಥ ಹಿಂದುಗಳೇ, ನಿಮಗೆ ಅವರು ಸಮೀಪ ಸಂಬಂಧಿಗಳಲ್ಲವೆ? ವಿದೇಶದಿಂದ ಬರತಕ್ಕ ಕ್ರೈಸ್ತರಿಗಿಂತ ಅವರು ನಿಮಗೆ ದೂರಸ್ಥರೆ? ನಾವು ಮಹಮ್ಮದೀಯರನ್ನು ಮುಟ್ಟುವುದಿಲ್ಲವೆ?........ಅವರು ಕ್ರೈಸ್ತರಾಗಿಬಿಟ್ಟು ನಮ್ಮ ಗೋವುಗಳನ್ನು ಕೊಲ್ಲುವಂಥವರಾಗಲೆಂಬುದು ನಿಮ್ಮ ಕೋರಿಕೆಯೆ?" ಇತ್ಯಾದಿಯಾಗಿ ತಮ್ಮ ದೇಶೀಯ ಸೋದರರಿಗೆ ಉಪದೇಶಿಸಿರುವರು. ಆ ಮಹಾಶಯರೆಲ್ಲಿ? ಪಂಚಮರನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಬೇಕೆಂದ ಕೂಡಲೇ ಸಿಡಿದುಬಿದ್ದು ಗಲಾಟೆಯೆಬ್ಬಿಸಿದ ಮಹಾನುಭಾವರೆಲ್ಲಿ? ಇಂಥ ವೇಷಧಾರಿ ದೇಶಾಭಿಮಾನಿಗಳನ್ನು ಗಾಂಧಿ ಮಾಳವ್ಯರ ಭಕ್ತರೆಂದೂ ದೇಶಬಾಂಧವರೆಂದೂ ಹೇಳಬೇಕೋ ಅವರ ಶತ್ರುಗಳೆಂದೂ ದೇಶದ್ರೋಹಿಗಳೆಂದೂ ಹೇಳಬೇಕೋ ಅದನ್ನು ವಾಚಕರೇ ನಿರ್ಧರಿಸಬೇಕು.

ವೆಂಕಟಕೃಷ್ಣಯ್ಯನವರು ಯಾವ 17 ನೆ ತಾ|| ಸಂಚಿಕೆಯಲ್ಲಿ ವೇದ ವೇದಾಂಗಗಳ ಅಭ್ಯಾಸವು ಸುಲಭವಲ್ಲ; ಅದರ ವ್ಯಾಸಂಗವು ಕ್ಲೇಶಕರ; ಅದನ್ನು ಬ್ರಾಹ್ಮಣರು ತಾವಿಟ್ಟುಕೊಂಡು ಕ್ಷತ್ರಿಯಾದಿಗಳಿಗೆ ದುಷ್ಟಶಿಕ್ಷಣ ಶಿಷ್ಟರಕ್ಷಣಾದಿ ಸುಲಭ ಧರ್ಮಗಳನ್ನು ವಹಿಸಿಕೊಟ್ಟರು. ಎಲ್ಲಾ ವರ್ಣದವರೂ ಎಲ್ಲಾ ಕೋಮಿನವರೂ ಅವರವರ ಧರ್ಮಗಳನ್ನು ಅವರು ತಿಳಿದು ಅನುಷ್ಠಾನದಲ್ಲಿಟ್ಟುಕೊಂಡರೆ ಇಹಪರಗಳುಂಟಾಗುವುವು ಎಂದು ಬರೆದುಕೊಂಡಿರುವರೋ ಅದೇ ಸಂಚಿಕೆಯಲ್ಲಿಯೇ ಆದೇ ಲೇಖನದಲ್ಲಿಯೇ ಮತ್ತೊಂದುಕಡೆ "ಯಾವ ವಿದ್ಯೆಯೂ ಯಾವ ಕಸಬುಗಳೂ ಯಾರಿಗೂ ಮನಾಪಲಿ (ಹಕ್ಕುದಾರ) ಯಾಗಿರುವುದಿಲ್ಲ" ಎಂದು ಬರೆದಿದ್ದಾರೆ. ಇದನ್ನು ಇವರ ಅರಳುಮರಳುತನದ ಅಸಂಬದ್ಧ ಪ್ರಲಾಪವೆಂದು ಕೆಲವರು ಭಾವಿಸಿದರೆ ಮೊದಲನೆ ವಾಕ್ಯವು ಹೃದ್ಗತ ನಿಜಾಭಿಪ್ರಾಯವೆಂದೂ, ಎರಡನೆಯದು ಲೋಕವನ್ನು ವಂಚಿಸುವ ಹೊರಗಣ ಬಣ್ಣದ ಮಾತೆಂದೂ ಮತ್ತೆ ಕೆಲರು ಭಾವಿಸುವರು.

ವಿಚಾರಮಾಡಿ ನೋಡಿದರೆ ಯಾವ ವಿದ್ಯೆಯೂ ಕ್ಲೇಶಕರವೂ ಆಗಿರಬಹುದು, ಸುಲಭವೂ ಆಗಿರಬಹುದು. ಪಾತ್ರತೆಯಿದ್ದವನಿಗೆ ಸುಕರವೂ ಅಪಾತ್ರನಿಗೆ ಕ್ಲೇಶಕರವೂ ಆಗಿರುವುದು. ಪಾತ್ರತೆಯು ವ್ಯಕ್ತಿಯ ಸಂಸ್ಕಾರ ವಿಶೇಷದಂತೆ ಸಿದ್ಧವಾಗಿರುವುದು. "ನಾದೇವಾಂಶೋದದಾತ್ಯನ್ನಂ ನಾರುದ್ರಃ ಕ್ರಮಪಾಠಕಃ | ನಾಋಷಿಃಕುರುತೇಕಾವ್ಯಂ ನಾಗಾಂಧರ್ವಸ್ತುಗಾಯಕಃ" ಎಂದರೆ-ದೇವಾಂಶ ಸಂಭೂತನಲ್ಲದವನು ಅನ್ನದಾನಿಯಾಗುವುದಿಲ್ಲ; ರುದ್ರಾಂಶವಿಲ್ಲದವನು ವೇದಪಾಠಕನಾಗುವುದಿಲ್ಲ, ಋಷ್ಯಂಶ ಸಂಭೂತನಲ್ಲದವನು ಕವಿಯಾಗುವುದಿಲ್ಲ, ಗಂಧರ್ವಾಂಶವಿಲ್ಲದವನು ಗಾಯಕನಾಗುವುದಿಲ್ಲ, ಎಂಬುದಾಗಿರುವ ಪ್ರಾಚೀನ ವಚನವು ಇದೇ ಅಭಿಪ್ರಾಯವನ್ನೇ ಸಮರ್ಥಿಸುತ್ತಿರುವುದು. ವೇದವೇದಾಂಗಾಭ್ಯಾಸವು ಒಂದು ವರ್ಣದಲ್ಲಿ ಹುಟ್ಟಿದ ಸರ್ವಜನರಿಗೂ ಸುಕರವಾಗಿರುವುದಿಲ್ಲ. ಒಬ್ಬ ಹೊಲಉಳುವವನಿಗೆ ವೇದಾಭ್ಯಾಸವು ಎಷ್ಟು ದುಷ್ಕರವೋ ಬ್ರಾಹ್ಮಣವರ್ಣದ ಎಷ್ಟೋ ಜನರಿಗೆ ಅಷ್ಟೇ ದುಷ್ಕರವಾಗಿರುವುದು. ಹಾಗೆ ಆ ವರ್ಣದ ಬಹುಜನಕ್ಕೆ ದುಷ್ಕರವಾಗಿರುವ ವಿದ್ಯೆಯು ಒಬ್ಬ ಕಮ್ಮಾರನಿಗೆ ಬಹು ಸುಕರವಾಗಿ ಸಿದ್ಧಿಸಬಹುದು. ಚಿತ್ರಗಾರರಿಗೂ ಕೂಡ ಅಸದಳವೆನಿಸಿದ್ದಷ್ಟು ಚಿತ್ರಕಲಾ ನೈಪುಣ್ಯವು ರಾಜಾ ರವಿವರ್ಮರವರಿಗೆ ಸಿದ್ಧಿಸಿದ್ದುದೇ ಇದಕ್ಕೆ ದೃಷ್ಟಾಂತ. ಹಾಗೆ ಸ್ವಧರ್ಮೇತರವೆಂದು ಪ್ರತಿಪಾದಿತವಾಗಿದ್ದರೂ ಇತರ ಧರ್ಮದಲ್ಲಿ ಪ್ರವೇಶಿಸುವ ಪಾತ್ರತೆಯು ಯಾವುದಾದರೊಂದು ವ್ಯಕ್ತಿಯಲ್ಲಿ ಪ್ರಸ್ಫುಟವಾಗಿ, ಆತನು ಅದಕ್ಕೆ ಪ್ರವೇಶಿಸಿದ ಮಾತ್ರವೇ ಆ ವರ್ಣಧರ್ಮವೇ ಆಗಲಿ ಕುಲವೇ ಆಗಲಿ ಕೆಟ್ಟು ಹೋಗುವುದೇನೂ ಇಲ್ಲ. "ಉತ್ತಮಾಗತಿಮಾಶ್ರಿತ್ಯ ನೀಚವೃತ್ತಿಂಸಮಾಶ್ರಿತಃ | ಆರೂಢಪತಿತೋಜ್ಞೇಯಸ್ಸರ್ವಕರ್ಮಬಹಿಷ್ಕೃತಃ" ಎಂದರೆ ಉತ್ತಮಗತಿಯನ್ನು ಹೊಂದಿದ್ದವನು ನೀಚವೃತ್ತಿಗಿಳಿದರೆ ಅವನು ಸರ್ವಕರ್ಮಕ್ಕೂ ಬಾಹಿರನಾದ ಆರೂಢಪತಿತನೆನಿಸಿಕೊಳ್ಳುವನೆಂದು ಇರುವ ಪ್ರಮಾಣಪ್ರಕಾರ ತನಗೆ ಹೀನವೆಂದು ಕಲ್ಪಿಸಲ್ಪಟ್ಟಿದ್ದ ಪರಧರ್ಮಕ್ಕೆ ಹೋದವನು ಕೆಟ್ಟವನೆನಿಸಿಕೊಳ್ಳುವಂತೆ ತನ್ನ ವೃತ್ತಿಗಿಂತಲೂ ಉತ್ತಮವೆನಿಸಿರುವ ವೃತ್ತಿಯನ್ನು ಅವಲಂಬಿಸುವವನು ಕೆಟ್ಟವನೆನಿಸಿಕೊಳ್ಳುವುದಿಲ್ಲ. ಬ್ರಾಹ್ಮಣ ವರ್ಣದ ಎಷ್ಟೋ ಮಂದಿಗಳು ಈಗ ತಮಗೆ ವಿಹಿತವಲ್ಲದ ನೀಚ ವೃತ್ತಿಗಳಲ್ಲೆಲ್ಲಾ ತೊಡಗಿದ್ದಾರೆ. ಆದ ಮಾತ್ರಕ್ಕೇ ಬ್ರಾಹ್ಮಣ್ಯವೆಲ್ಲಾ ಕೆಟ್ಟುಹೋಗಲಿಲ್ಲ; ಅವರು ಪ್ರವೇಶಿಸಿದ ವೃತ್ತಿಯೂ ಕೆಡಲಿಲ್ಲ. ಇದರಂತೆಯೇ ಇತರರು ತಮಗೆ ವಿಹಿತವಲ್ಲವೆಂದು ಅನ್ಯಾಯವಾಗಿ ನಿಷೇಧಿಸಲ್ಪಟ್ಟಿರುವ (ವಿಚಾರತಃ ಉಪಾದೇಯವಾದ) ಉತ್ತಮವೃತ್ತಿಗೆ ಪ್ರವೇಶಿಸಿದ ಮಾತ್ರಕ್ಕೇ ಪ್ರವೇಶಿಸಿದವನೂ ಪ್ರವೇಶಿಸಲ್ಪಟ್ಟ ವೃತ್ತಿಯೂ ಕೂಡ ಕೆಟ್ಟುಹೋಗುವುದೆಂದರೆ ಕುರಿಯೂ ತೋಳನೂ ಎಂಬ ಈಸೋಪನ ಕತೆಯ ಚಮತ್ಕಾರವೇ ಹೊರತು ಮತ್ತೇನೂ ಅಲ್ಲ.

ಇದೇ ವೆಂಕಟಕೃಷ್ಣಯ್ಯನವರು ತಮ್ಮ ಪತ್ರಿಕೆಯಲ್ಲಿ "ವೈದಿಕ ಬ್ರಾಹ್ಮಣರು ವ್ಯಾಸಂಗಮಾಡತಕ್ಕ ಕಾಲೇಜುಗಳಿಗೂ ಸ್ಕೂಲುಗಳಿಗೂ ಅವುಗಳಲ್ಲಿ ಬಹುಜನರ ಇಷ್ಟಕ್ಕೆ ವಿರುದ್ಧವಾಗಿ ಇತರರನ್ನು ಸೇರಿಸುವುದು ತಪ್ಪು, ಬೆಂಗಳೂರು ಕಾಲೇಜಿನಲ್ಲಿ ಸಾಹಿತ್ಯಪಾಠಕ್ಕೂ ವೇದಶಾಸ್ತ್ರಗಳಿಗೂ ಪ್ರತ್ಯೇಕವಾಗಿ ಏರ್ಪಾಟುಮಾಡುವುದೂ ತಪ್ಪು......ಶ್ರೀರಾಮನ ಕಾಲದಲ್ಲಿ ತನ್ನ ಕಸಬನ್ನು ಬಿಟ್ಟು ಇತರರ ಕಸಬನ್ನು ಅವಲಂಬಿಸಿದ ಮನುಷ್ಯನಿಗೆ ಶಿಕ್ಷೆಯಾದುದನ್ನು ಸಂಸ್ಕೃತ ಕಾಲೇಜಿಗೆ ಇತರರನ್ನು ಸೇರಿಸಬೇಕೆಂದು ಬರೆದಿರುವ ಕಮಿಟಿಯವರು ಪರ್ಯಾಲೋಚಿಸದೆ ಹೋದದ್ದಕ್ಕಾಗಿ ವಿಷಾದಿಸುತ್ತೇವೆ" ಎಂದು ಬರೆದುಕೊಂಡು, ಪರರಮೇಲೆ ತಮಗಿರುವ ದ್ವೇಷವನ್ನು ಸೂಚಿಸಿಬಿಟ್ಟಿರುವುದು ಸಾಲದೆ, ಸದ್ವಿದ್ಯಾಪಾಠಶಾಲೆಯಲ್ಲಿ ಒಂದು ಬ್ರಾಹ್ಮಣ ಸಭೆಯನ್ನು ಕೂಡಿಸಿ ತಾವೇ ಅಧ್ಯಕ್ಷರಾಗಿ ಕುಳಿತುಕೊಂಡು, ಸಂಸ್ಥಾನದಲ್ಲಿರುವ ಮೈಸೂರು ಬೆಂಗಳೂರು ಮೇಲುಕೋಟೆಯ ಮೂರು ಸಂಸ್ಕೃತ ಪಾಠಶಾಲೆಗಳಿಗೂ ಇತರರನ್ನು ಸೇರಿಸಲಾಗದೆಂದು ಗೌರ್ನಮೆಂಟಿಗೆ ತಿಳಿಯಿಸುವ ನಿರ್ಧಾರವನ್ನು ಮಾಡಿಸಿದ್ದಾರೆ. ಇವರ ಕ್ರಿಯೆಗಳು ಹೀಗಿವೆ. ಇವರ ನುಡಿಗೂ ನಡೆಗೂ ಎಷ್ಟು ಸಂಬಂಧವಿದೆ, ಇವರು ಎಷ್ಟುಮಟ್ಟಿನ ದೇಶಬಾಂಧವರು, ಇವರ ವಾಗ್ಬ್ರಹ್ಮಜಾಲವನ್ನು ಎಷ್ಟುಮಟ್ಟಿಗೆ ಪ್ರಜಾಸಮುದಾಯವು ನಂಬಬಹುದು ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲೆಂಬುದಕ್ಕಾಗಿಯೇ ನಾವು ಈ ವಿಸ್ತೃತ ಲೇಖನವನ್ನು ಬರೆಯಬೇಕಾಯಿತು.

ಕಳೆದ ಜುಲೈ ತಾ|| 29ರ ಸಂಪದಭ್ಯುದಯ ಸಂಚಿಕೆಯಲ್ಲಿ ಈ "ವೆಂಕಟಕೃಷ್ಣಯ್ಯನವರು ಅರ್ಧ ಶತಮಾನದಿಂದಲೂ ಅವರು ಮಾಡಿದ ಕೆಲಸದಿಂದ (ಮರಿಮಲ್ಲಪ್ಪನವರ ಹೈಸ್ಕೂಲು ಹೆಡ್ಮಾಸ್ಟರ್‌ಗಿರಿ) ತೆಗೆದುಹಾಕಲ್ಪಟ್ಟರು. ಮೈಸೂರು ಗೌರ್ನಮೆಂಟಿನಲ್ಲಿ ಅವರು ಮಾಡತಕ್ಕ ಯಾವ ಕೆಲಸಗಳಿಗೂ ಪ್ರೋತ್ಸಾಹಕೊಡದಂತೆಯೂ, ತಾವಾಗಿ ಅವರು ಗಡೀಪಾರು ಮಾಡಿಕೊಳ್ಳಬೇಕೆನ್ನುವಂತೆಯೂ ಆಯಿತು. ಅವರು ಏರ್ಪಡಿಸಿದ ಶಾರದಾವಿಲಾಸ ಹೈಸ್ಕೂಲಿಗೆ 4 ವರ್ಷಗಳಾದಾಗ್ಯೂ ರೆಕಗ್ನೀಷನ್ ಕೊಡಲ್ಪಡಲಿಲ್ಲ. ಅವರ ಮೇಲ್ವಿಚಾರಣೆಯಲ್ಲಿರುವ ಸದ್ವಿದ್ಯಾ ಪಾಠಶಾಲೆ ಮೊದಲಾದುವುಗಳು ಮೂಲೆಗೆ ತಳ್ಳಲ್ಪಟ್ಟುವು. ಅವರ ವರ್ತಮಾನ ಪತ್ರಿಕೆಗಳಿಗೆ ರಡ್ಡೀಸಾಹೇಬರು ಹಾಕಿದ ಬಹಿಷ್ಕಾರವು ಇನ್ನೂ ತೆಗೆದುಹಾಕಲ್ಪಡಲಿಲ್ಲ. ಪೌರಸಾಮಾಜಿಕ ಸಂಘದ ಸೆಕ್ರೆಟರಿ ಕೆಲಸದಿಂದ ಅವರು ತೆಗೆದುಹಾಕಲ್ಪಟ್ಟರು. ಅವರು ಯಾವ ಯಾವ ಸಭೆಗಳಲ್ಲಿ ಮೆಂಬರಾಗಿದ್ದರೋ ಅಲ್ಲಿಂದೆಲ್ಲಾ ವಜಾಮಾಡಲ್ಪಟ್ಟರು. ಅವರು ರಾಜದ್ರೋಹಿಗಳಾಗಿದ್ದರೆ ಹೇಗೋ ಹಾಗೆ ಗಣಿಸಲ್ಪಟ್ಟರು" ಎಂದು ಮೊದಲಾಗಿ ತಮ್ಮ ಒಡಲ ದುಃಖವು ಇವರ ಪ್ರತಿಕೃತಿಯಿಂದಲೇ ದೇಶಾಭಿಮಾನಿಯೆಂಬ ವೇಷದಿಂದ ದೂರಿಕೊಳ್ಳಲ್ಪಟ್ಟಿದೆ. "ಮಾಡಿದುದಕ್ಕೆ ಮನವೇ ಸಾಕ್ಷಿ, ತೋಡಿದುದಕ್ಕೆ ಜಲವೇ ಸಾಕ್ಷಿ" ಎಂಬ ಗಾಥೆಯಂತೆ ಇವರು ಮಾಡಿದ ಸೇವೆಯು ಎಂತಹದೋ ಅಂತಹ ಫಲವೇ ಆಗಿರುವುದು. ಅದು ನಿಷ್ಕಪಟವಾಗಿದ್ದರೆ ಈ ಅಪರ ವಯಸ್ಸಿನಲ್ಲಿ ಪ್ರಭುತ್ವದವರಿಂದಲೂ ಪ್ರಜಾಸಾಮಾನ್ಯದಿಂದಲೂ ದೇವದೂತನಂತೆ ಇವರು ಸನ್ಮಾನಿಸಲ್ಪಡುತ್ತಿದ್ದರು. ಈಗಳಾದರೊ ಇವರ ಸ್ತುತಿಗೆ ಬೆಲೆಕೊಟ್ಟುಕೊಂಡಿರುವವರೂ ಇವರ ಬೈಗುಳಕ್ಕೆ ಬೆದರಿಕೊಂಡಿರುವವರೂ ಮಾತ್ರ ಇವರನ್ನು ಓಲೈಸುವಂತಾಗಿದೆ. ಇದುವರೆಗಣ ಇವರ ಜೀವಿತ ವ್ಯವಹಾರದ ಫಲವು ಹೀಗಾಯಿತು. ಈಗಣ ಬದಲಾವಣೆಯ ಫಲವು ಹೇಗಾಗುವುದೋ ನೋಡಬೇಕು.

SANSKRIT EDUCATION.

(Contributed)

The report of the Special Committee regarding the admission of all classes of the Hindus to Sanskrit Colleges at Bangalore and Mysore has reopened an old question which has remained unsolved for many years due to circumstances which are peculiar to Mysore in the matter that Brahman supremacy in Mysore socially and politically has been on the ascendancy ever since the days of rendition. The monopoly of public service by the Brahmans has tended to keep the question off from being discussed. The absence of public opinion in Mysore has helped the monopoly to gain strength. In fact till very recently the public opinion in Mysore-be it in the Press, be it in the Legislative Council-be it in the Representative Assembly-be it in any Local Bodies possessing Self-Governing privileges conferred by law-has entirely been of a Brahmanical character. It reached its zenith and as a natural consequence there came an awakening in the light of which the evils of this unchecked influence are now being examined.

There have been people who had shaken off this influence from the very earliest days of the History of the Hindu religion, but their voice has proved a cry in the wilderness. This question of admission of Non-Brahmans to Sanskrit Colleges has been moved on many occasions only to meet with a rebuff of such vehemence by the Brahman Power that again for half-a-dozen years it would not be reopened. Such has been the history of this question before this Special Committee was appointed.

And that is the personal of this Committee! It reminds one of an old saying which is "Invite King Fox to govern the subdued flock of sheep." Its composition is admittedly one sided and it is of the bluest Brahman blood. The proceedings which are published with the report clearly point out the direction to which the spirit of prejudice was moving. Not one of the class against whom the decree was recommended to be passed was examined. Where was the necessity to go to the ex-Raja of Cochin or to the Benares College for information when materials were abundant in the State itself to help the Committee to arrive at a just conclusion? Ours is a Model State and many are the highly cultured men who are willing to throw light for the clearance of the abominable darkness which in the form of this "prohibition" is a stigma to the fair name of Mysore.

The report reads like a dark page in the history of the mediæval ages. The world of to-day-not alone India of ancient civilization but even South Africa of modern awakening refuses to read an insulting report on which public opinion is invited. The mind revolts to submit itself to the reproaches of prohibition to have a look at the solmnity of God by reading the Vedas, to have a peep at the inner side of the receptacle in which the voice of God-creation of all mankind-is said to have been captivated-to the reproaches of prohibition to have the pleasures of a dive into the waters of knowledge. It is iniquitous to force the mind to grasp the insolence of a report which recommends the perpetuation of an uncivilized blunder-a prohibition to look at God-to read Gods' words. This is materialism of materialisms. It is another form of untouchability-a deeper curse than the curse of keeping away the Panchamas from approach to the so-called high caste Hindu. Imagine the absurdity of a recommendation to hold the classes to teach Vedas in a separate building from that in which the brother religionist is taught Non-Vedic Sanskrit subjects. In para 16 of the Report they say "The Committee are of opinion that the *considerations* governing the order of 7th April 1906 still continue to exist *even with greater force*" with reference to the Mysore College. The order of the 7th April 1906 was one *devoid of considerations*, as it was based on the *biassed opinion of interested people*. Sixteen years ago the question was decided *arbitrarily*. To-day the Committee emphasise that the same arbitrary conditions do exist *even with greater force*. Wherein lies that greater force it is impossible to find except that it be in a perverse and prejudiced mind. If these imaginary considerations are to be presumed to exist, then the *Mysore public* has grown 16 years older in vain and in disgraceful ignorance. The Mysore College is called a seat of Ancient and Orthodox Learning and the Committee conclude therefrom that it should be exclusively for the Brahmans. There is no soundness in this argument. On the other hand the statistics of students on this study as published in the Report, show that the interest in this "Sound Religious Learning" is languishing. The Brahman cannot appropriate to himself the whole of the Hindu religion and the reading of its religious books. There are others within the same fold who ought to have a greater share in that orthodox learning. Because this is denied, the votaries of the "Orthodox Learning" have become fewer and fewer. If the "wrongfully confined" orthodox learning is not thrown open to others to whom also it legitimately belong, it is more than probable that the orthodox learning will die an unnatural death-a criminal and sinful death.

Well! Many are the words which are put into the mouth of His Highness the Ex-Raja of Cochin. The arguments have no claim for the beatings of the heart. They are more artificial than natural. They are more ancient than modern. If as His Highness says the lamp of ancient culture should ever be kept burning, it is when it is impartially shared by all of whom it legitimately is.

Speaking from the point of view of a Veerasiva, his claims for its study are traditionally as old as the beginning of the Vedic age is old. If philosophic considerations go to decide the question, his philosophy is the oldest. His philosophy precedes those of the Advita, Dvita and Visistadvita, being one Shakti Visistadvita. Religion and Philosophy are mixed up together giving rise to confusion. The Veerasiva Philosophy as being Shakti Visistadvita is the most ancient root of other branches of it which are in the order of their development Advita, Dvita and Visistadvita. The latter three might exchange their places of order of precedence but the root philosophy cannot. That such is the fact is clear from the textual and monumental evidence as existing in the several religious centres and temples and other institutions. The extreme Siva Faith (which is Veerasivaism) has been for many hundred thousands of years in a course of decay giving room to extreme Vishnavism which grew to its full heights during Dvaperayuga. The Veerasiva of to-day has survived many ages of onslaught and persecutions. It has had its periods of extinction but rapidly revived by the aid of reforms such as were introduced by the Great Basavesvara who joined this Ancient Faith. These were the days of intense ignorance and allowance should be made on that account to material changes in the external appearance of the followers of this ancient religion. Should then the portals of Vedic study be closed against these ancient Veerasivas? The Committee have utterly failed to consider the traditional claims of the Veerasivas by having conducted a thoroughly unsatisfactory and selfish investigation.

Every sane man sees to-day that a feeling of brotherhood is being estranged by blundering acts as the one of this Special Committee. It would be a tragic folly to accentuate it any further by an unsympathetic and unreasonable consideration of this vital question, on the smooth solution of which largely rests the future co-operation amongst the several classes of the people of Hinduism.

The monopoly has worked its wreckage in religion, in society and in administration. The claims of superiority has its seeds of ruin and this arrogance coupled with the contemptuous conduct of looking down on the legitimate aspirations of the brothren of his own religion, savours of serious troubles to everyone including the righteous Brahman. The bitterness must go for the sake of all. Let every one of us contribute our mite to bring about a peaceful life of progress and prosperity amongst all classes of people of the ancient Hinduism.

ಒಳದೇಶದ ವೃತ್ತಾಂತಗಳು

ಹೊಸಪೇಟೆಯಲ್ಲಿ ತಡೆಮಾಡಲ್ಪಟ್ಟಿದ್ದ ವೀರಶೈವ ಗುರುಗಳ ಉತ್ಸವವು ಈಚೆಗೆ ಜರುಗಿತೆಂಬ ಪತ್ರವ್ಯವಹಾರವನ್ನು ಬೇರೆಕಡೆ ಮುದ್ರಿಸಿರುತ್ತೇವೆ. ಆದರೆ ಕೊನೆಗೆ ಇದು ಸರ್ಕಾರದ ಸಹಾಯದಿಂದ ನಡೆದುದಕ್ಕಿಂತಲೂ ಉಭಯಪಕ್ಷದವರ ಸಾಮರಸ್ಯದಿಂದ ನಡೆಯಿತೆಂದು ಕೇಳಿದ್ದರೆ ಬಹಳ ಸಂತೋಷಿಸುತ್ತಿದ್ದೆವು.

ಸ್ಪೆಷಲ್ ಫೈನಾನ್ಸ್ ಕಮಿಟಿಯವರ ಸೂಚನೆಯ ಮೇರೆಗೆ ಪ್ರತ್ಯೇಕವಾಗಿರುವ ಮುಜರಾಯಿ ಶಾಖೆಯನ್ನು ತೆಗೆದುಹಾಕಿಬಿಟ್ಟರೆ ವರ್ಷಕ್ಕೆ 57 ಸಾವಿರ ರೂ. ಗಳು ಉಳಿಯುವುವೆಂದು ತಿಳಿಯಿಸಲ್ಪಟ್ಟಿದ್ದಿತು. ಅದರಂತೆಯೇ ಮುಜರಾಯಿ ಶಾಖೆಯನ್ನು ತೆಗೆದು ರೆವಿನ್ಯೂಶಾಖೆಗೆ ಸೇರಿಸಿಬಿಟ್ಟುದರಿಂದ ವರ್ಷಕ್ಕೆ 27 ಸಾವಿರ ರೂ. ಗಳು ಮಿಗುವಹಾಗಾಯಿತಂತೆ.

ಕಳೆದ ತಾ|| 1ರಲ್ಲಿ ರಾಜಧಾನಿಯಲ್ಲಿ ಕೆಲವರು ಸ್ವರ್ಗವಾಸಿ ತಿಲಕರ ಆಬ್ದಿಕವನ್ನಾಚರಿಸಿದರು. ಆದರೆ ಈ ಕಾರಣಕ್ಕಾಗಿ ಹಲವರು ವಿದ್ಯಾರ್ಥಿಗಳು ಪಾಠಶಾಲೆಗಳನ್ನು ಬಿಟ್ಟುದಲ್ಲದೆ ಇತರ ವಿದ್ಯಾರ್ಥಿಗಳನ್ನೆಲ್ಲಾ ಬಿಡಿಸುವಂತೆ ಮಾಡಬೇಕೆಂದು ಪಾಠಶಾಲೆಗಳಮೇಲೂ ಬೋಧಕರಮೇಲೂ ಶಿಲಾವೃಷ್ಟಿಮಾಡುವುದು, ಕೂಗುವುದು, ಬಯ್ಯುವುದು ಪರಿಹಾಸಮಾಡುವುದು ಇತ್ಯಾದಿ ಅಗೌರವ ವರ್ತನವನ್ನು ನಡೆಯಿಸಿದರೆಂದು ಕೇಳಿ ವಿಷಾದಿಸುತ್ತೇವೆ. ಇಂಥ ಗಲಾಟೆಗೆ ಪ್ರೇರಕರಾದವರನ್ನು ತಕ್ಕಬಂದೋಬಸ್ತು ಮಾಡಿದಲ್ಲದೆ ಇಂಥ ಗದ್ದಲಗಳು ಶಾಂತವಾಗಲಾರವು.

ಕಳೆದ ಜುಲೈ ತಾ|| 31ನೆ ಬೆಳಗ್ಗೆ 9 ಗಂಟೆ ಹೊತ್ತಿನಲ್ಲಿ ನೂರಡಿಯ ಮಾರ್ಗದಲ್ಲಿ ಒಂದು ಮೋಟಾರು ಹೋಗುತ್ತಿರಲು ಆಗತಾನೇ ಸ್ಕೂಲನ್ನು ಬಿಟ್ಟು ಓಡಿಬಂದ 9 ವರ್ಷದ ಅಯ್ಯಂಗಾರ್ ಬಾಲಕನೊಬ್ಬನು ಮೋಟಾರಿಗೆ ಸಿಕ್ಕದೆ ತಪ್ಪಿಸಿಕೊಳ್ಳಬೇಕೆಂದು ಓಡಿಹೋಗುವಾಗ ತಲೆಯಟೋಪಿಯು ಬಿದ್ದುಹೋಗಲು, ಅದನ್ನು ತೆಗೆದುಕೊಳ್ಳಬೇಕಂದು ಬಗ್ಗುವಷ್ಟರಲ್ಲಿ ಮೊಟಾರು ಅವನಮೇಲೆ ಹರಿದು ರಕ್ತನಿರ್ಗತವಾಗಿ ಬಳಿಯಲ್ಲೇ ಇದ್ದ ವೈದ್ಯಾಲಯಕ್ಕೆ ಸಾಗಿಸಲ್ಪಟ್ಟರೂ ಸ್ವಲ್ಪಹೊತ್ತಿನೊಳಗೆ ಮೃತನಾದನೆಂಬ ವಿಷಯವನ್ನು ತಿಳಿಯಿಸಲು ವಿಷಾದಿಸುತ್ತೇವೆ. ಭರತಖಂಡದ ಜನಕ್ಷಯಕ್ಕೆ ಈಗ ಒದಗಿರುವ ಕ್ಷಾಮಸಾಂಕ್ರಾಮಿಕ ರೋಗಾದಿಗಳು ಸಾಲದುದಕ್ಕೆ ಮೋಟಾರು ಮಾರಿಗಳು ಬೇರೆ ಒಂದು ಗಂಟುಬಿದ್ದಿರುತ್ತವೆ.

ಮೈಸೂರು ವೀರಶೈವ ಅನಾಥಾಲಯದಲ್ಲಿದ್ದುಕೊಂಡು ಸಂಸ್ಕೃತ ಮತ್ತು ಇಂಗ್ಲೀಷು ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳ ಉಚಿತ ಅನ್ನೋದಕಗಳ ಖರ್ಚಿಗಾಗಿ ನಂಜನಗೂಡು ತಾಲ್ಲೂಕು ಬಿಲ್ಲುಗೆರೆ ಹೋಬಳಿ ಸುತ್ತೂರು ಗ್ರಾಮದ ವೀರಸಿಂಹಾಸನ ಮಠದ ಪಟ್ಟದ ವೇದಮೂರ್ತಿ ಶಿವರಾತ್ರಿಸ್ವಾಮಿಗಳು 13 ಸಾವಿರ ರೂಪಾಯಿಯನ್ನಾಗಲಿ ಅಥವಾ 13 ಸಾವಿರ ರೂಪಾಯಿ ಬಾಳತಕ್ಕ ಗದ್ದೆಯನ್ನಾಗಲಿ ಸಹಾಯಮಾಡುವದಾಗಿ ವಾಗ್ದಾನಮಾಡಿದ್ದಾರೆ. ಮತ್ತು ಇದೇ ಹೋಬಳಿ ಜೀಮಾರಳ್ಳಿಯ ವಾಸಸ್ಥರಾದ ಬಳಿಗಿಲಿ ಪಟೇಲ್ ಮ|| ಶಿವಪ್ಪನವರು ಮೇಲೆ ನಮೂದಿರುವ ಉದ್ದೇಶಕ್ಕಾಗಿ ವರ್ಷ ಒಂದಕ್ಕೆ 25 ಪಲ್ಲ ಭತ್ತಕ್ಕೆ ಕಡಮೆಯಿಲ್ಲದೆ ಸಹಾಯಮಾಡುವದಾಗಿ ವಾಗ್ದಾನಮಾಡಿದ್ದಾರೆಂಬ ವಿಷಯವನ್ನು ಸೂಚಿಸುವದಕ್ಕೆ ಸಂತೋಷವಾಗುತ್ತದೆ. ಇದೇರೀತಿ ಇತರ ಮಹನೀಯರು ವೀರಶೈವ ಅನಾಥಾಲಯಕ್ಕೆ ಧನಧಾನ್ಯ ಸಹಾಯಮಾಡಿ ಪುಣ್ಯವನ್ನೂ ಕೀರ್ತಿಯನ್ನೂ ಹೊಂದಿ ವೀರಶೈವ ವಿದ್ಯಾರ್ಥಿಗಳ ಏಳ್ಗೆಗೆ ಕಾರಣಭೂತರಾಗಲೆಂದು ಹಾರೈಸುತ್ತೇವೆ ಎಂದು ಒಬ್ಬ ಬಾತ್ಮೀದಾರರು ಬರೆದಿದ್ದಾರೆ.

ಎಳಂದೂರು ಜಹಗೀರಿಯಲ್ಲಿ ಪರಿವಾರದವರ ಮೆರವಣಿಗೆಯು ತಮ್ಮ ಬೀದಿಯಲ್ಲಿ ಬರಕೂಡದೆಂದು ಮಹಮ್ಮದೀಯರು ಅಡ್ಡಿಮಾಡುತ್ತಿದ್ದರಂತೆ. ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರು ಅಲ್ಲಿಗೆ ಹೋಗಿ ಉಭಯಪಕ್ಷದ ಮುಖಂಡರನ್ನು ಕೂಡಿಸಿ ರಾಜಿಮಾಡಿ ಉತ್ಸವಮಾಡಿಸಿದರಂತೆ. ಇದರಮೇಲೆ ಸಂಪದಭ್ಯುದಯ ಪತ್ರಿಕೆಗೆ ಯಾರೋ ಬಾತ್ಮೀದಾರರು "ಪಬ್ಲಿಕ್ ರೋಡುಗಳಲ್ಲಿ ಯಾವ ಉತ್ಸವಗಳು ಬೇಕಾದರೂ ಹೋಗಬಹುದು. ಹಾಗೆ ಉತ್ಸವಗಳು ಬರಕೂಡದೆಂದು ಗಲಾಟೆ ಮಾಡುವ ಹಕ್ಕು ಯಾವ ಪಂಗಡದವರಿಗೂ ಇರುವುದಿಲ್ಲ. ಯಾರಿಗಾದರೂ ಅಂಥ ಪರಂಪರೆಯಿಂದ ಅಂಥ ಹಕ್ಕು ಬಂದಿ

ದ್ದಾಗ್ಯೂ ಅದು ರದ್ದಾಗತಕ್ಕದ್ದೆಂದು ಬ್ರಿಟಿಶ್ ರಾಜ್ಯದಲ್ಲಿಯೂ ಎಲ್ಲಾ ನಾಗರಿಕತೆಯುಳ್ಳ ದೇಶಗಳಲ್ಲಿಯೂ ರೂಲುಗಳಿರುವವು. ನಮ್ಮ ಸಂಸ್ಥಾನದ ಚೀಫ್ ಕೋರ್ಟಿನವರು ಕೂಡ ಈರೀತಿಯಾದ ಫೈಸಲನ್ನು ಮಾಡಿರುವರು '' ಎಂದು ಬರೆದಿದ್ದಾರೆ. ವಿದ್ಯಾವಂತರು ನಾಗರಿಕರು ಎನಿಸಿಕೊಂಡಿರುವ ಬ್ರಾಹ್ಮಣ ವರ್ಗದವರೇ ಇಂಥ ಗಲಾಟೆಗಳಿಗೆ ಮುಂದಾಗಿ ಕಾಲುಕೆರೆದು ನಿಂತುಕೊಂಡಿರುವರೆಂಬುದು ಜನಜನಿತವಾಗಿದೆಯಷ್ಟೆ. ಅಂಥ ಸಂದರ್ಭಗಳಲ್ಲೂ ಸಂಪದಭ್ಯುದಯದ ಬಾತ್ಮೀದಾರರ ಬಾಯಲ್ಲಿ ಇದೇ ನ್ಯಾಯದ ಮಾತುಗಳು ಬರುವುದುಂಟೆ?

ಕ್ಯಾಪ್ಟನ್ ವೈ. ವಿ. ಅಯ್ಯನವರು ಬೆಂಗಳೂರು ಚಿಕ್ಕಪೇಟೆಯಲ್ಲಿ ಹಿಂದೆ ರೈಲ್ವೆ ಬುಕಿಂಗ್ ಆಫೀಸು ಇದ್ದ ಕಟ್ಟಡದಲ್ಲಿ ಹೊಸದಾಗಿ ಜಯದೇವ ವೈದ್ಯಾಲಯವೆಂಬ ಹೆಸರಿನಿಂದ ಔಷಧ ವಿಕ್ರಯದ ಮತ್ತು ಚಿಕಿತ್ಸೆಯ ಶಾಲೆಯೊಂದನ್ನು ಕಳೆದ ವಾರ ಸ್ಥಾಪಿಸಿರುತ್ತಾರೆ. ಇದರ ಸ್ಥಾಪನ ಮಹೋತ್ಸವ ಸಂಬಂಧವಾಗಿ ಪಟ್ಟಣದ ಅನೇಕ ಪ್ರಮುಖರನ್ನೂ ಮಿತ್ರರನ್ನೂ ಈ ದಿವಸ ಸಾಯಂಕಾಲ ಅಲ್ಲಿಗೆ ಬರಮಾಡಿಕೊಂಡು ಸಂಗೀತವಿದ್ವಾನ್ ಮ|| ರಾಜಪ್ಪನವರ ಸಂಗೀತ ಶ್ರವಣಾದಿಗಳಿಂದ ಆನಂದಪಡಿಸಲು ಏರ್ಪಡಿಸಿರುವರು. ಇಂಡ್ಯಾಪ್ರಭುತ್ವದ ಅಧೀನದಲ್ಲಿ ಇವರು ವೈದ್ಯೋದ್ಯೋಗವನ್ನು 7-8 ವರ್ಷಗಳ ಕಾಲ ನಡೆಯಿಸಿ ಒಳ್ಳೆ ಹೆಸರನ್ನೂ ಅನುಭವವನ್ನೂ ಸಂಪಾದಿಸಿ, ದೂರದೇಶದಲ್ಲಿದ್ದು ಸ್ವದೇಶವನ್ನು ಮರೆಯುವುದಕ್ಕಿಂತಲೂ ಸ್ವದೇಶೀಯರ ಸೇವೆಯನ್ನು ಮಾಡಿ ವಿದ್ಯಾಸಾರ್ಥಕ್ಯವನ್ನು ಮಾಡಿಕೊಳ್ಳಬೇಕೆಂಬ ದೊಡ್ಡ ಉದ್ದೇಶದಿಂದ ತಮ್ಮ ಸರ್ಕಾರಿ ಉದ್ಯೋಗಕ್ಕೆ ರಾಜೀನಾಮೆಕೊಟ್ಟು ಈ ಸ್ವತಂತ್ರ ಪ್ರಯತ್ನವನ್ನು ಮಾಡಿರುವರು. ಯೌವನ ವಯಸ್ಸೂ ಚಟುವಟಿಕೆಯೂ ದೇಶೀಯ ಸೇವಾಭಿರತಿಯೂ ಸರಸಗುಣವೂ ಶಾಂತಿಯೂ ತುಂಬಿತುಳುಕುತ್ತಿರುವ ಇವರಿಗೆ ನಗರ ನಿವಾಸಿಗಳ ಪ್ರೋತ್ಸಾಹವು ಅನುಕೂಲವಾಗಿ ದೊರೆಯುವುದರಲ್ಲಿ ಸಂಶಯವಿಲ್ಲ. ಜಗದೀಶ್ವರನು ಇವರ ಪ್ರಯತ್ನಕ್ಕೆ ಜಯವನ್ನೀಯಲಿ.

ಭರತಖಂಡದ ವೃತ್ತಾಂತಗಳು.

ಕೋಮುಗಾಟಮಾರು ಹಡಗಿನ ಸಂಬಂಧದಲ್ಲಿ ಹೆಸರಿಗೆ ಬಂದ ಬಾಬಾ ಗುರುದತ್ತಸಿಂಗ್ ರವರಿಗೆ 5 ವರ್ಷ ದ್ವೀಪಾಂತರವಾಸ ಶಿಕ್ಷೆಯು ಅಮೃತಸರದ ದಂಡಾಧಿಕಾರಿಯಿಂದ ವಿಧಿಸಲ್ಪಟ್ಟಿತು.

ಜಮೀನ್ದಾರ್ ಗೋಪಾಲದಾಸ್ ಅಂಬಿಕಾದಾಸ್ ದೇಶಾಯಿರವರು ಅಸಹಾಯೋದ್ಯಮವನ್ನವಲಂಬಿಸಿದರೆಂಬ ಕಾರಣದಿಂದ ಅವರ ಜಹಗೀರಿಯನ್ನು ಬೊಂಬಾಯಿ ಸರ್ಕಾರದವರು ಕಿತ್ತುಕೊಂಡರು.

ಶ್ರೀಮತೀ ಸರೋಜಿನೀದೇವಿಯವರು ಹೃದ್ರೋಗದಿಂದ ಪೀಡಿತರಾಗಿ ಬೊಂಬಾಯಿ ತಾಜಾಮಹಲ್ ಹೋಟೇಲಿನಲ್ಲಿ ವಾಸಮಾಡುತ್ತ ಚಿಕಿತ್ಸೆಗೊಳ್ಳುತ್ತಿದ್ದಾರೆ. ವ್ಯಾಧಿಯು ಗುಣಮುಖವಾಗುತ್ತಿದೆ.

ಕಳೆದ ತಿಂಗಳು ತಾ|| 20ರಲ್ಲಿ ಬೊಂಬಾಯಿಯಲ್ಲಿ ಸೇರಿದ್ದ ಯಾವದ್ಭಾರತ ಖಿಲಾಪತ್ ಸಭೆಯವರು ಅಂಗೋರಾ ಸಹಾಯ ನಿಧಿಗೆ 10 ಲಕ್ಷ ರೂ. ಗಳನ್ನು ಕಳುಹಿಸಿಕೊಡತಕ್ಕದೆಂದು ನಿರ್ಧಾರಮಾಡಿದರು.

ದಿಲ್ಲಿಯಲ್ಲಿ ಪ್ರಕಟವಾಗುವ ಕಾಂಗ್ರೆಸ್ ಎಂಬ ಪತ್ರಿಕೆಯ ಸಂಪಾದಕರಾದ ಸಿದ್ದಿಕ್ ಎಂಬುವರ ಮೇಲೆ 124 ಎ. ಸೆಕ್ಷನ್ನುಗಳ 2 ಅಪರಾಧಗಳು ಹೊರಿಸಲ್ಪಟ್ಟು ವಿಚಾರಣೆಯಾಗಿ ದಿಲ್ಲಿ ಅಡಿಷನಲ್ ಮೇಜಸ್ಟ್ರೇಟರು 2 ಕೇಸುಗಳಿಂದಲೂ 3 ವರ್ಷ ಕಾರಾಗೃಹಶಿಕ್ಷೆಯನ್ನು ವಿಧಿಸಿದರು.

ಮಾರ್ಕೊನಿ ಕಂಪೆನಿಯ ಪ್ರತಿನಿಧಿಯು ಸೆಕೆಂದರಾಬಾದಿಗೆ ಬಂದು ತಂತಿಯಿಲ್ಲದೆ ವರ್ತಮಾನ ಕಳುಹಿಸುವ ಯಂತ್ರ ಪ್ರತಿಷ್ಠಾಪನೆಯನ್ನು ಹೈದರಾಬಾದಿನ ಬೇರೆ ಬೇರೆ ಜಿಲ್ಲೆಗಳಲ್ಲೂ ಮುಖ್ಯಪಟ್ಟಣಗಳಲ್ಲೂ ಏರ್ಪಡಿಸುವ ಪರೀಕ್ಷೆಯನ್ನು ಮಾಡಿ ನೋಡುತ್ತಿದ್ದಾರೆ.

ಪಂಜಾಬಿಗೆ ಸೇರಿದ ಜೇಲಂ ನದಿಯಲ್ಲಿ 40 ಮಂದಿ ಮದಿವೆಗಾಗಿ ಹೋಗಿದ್ದವರು ದೋಣಿಯಲ್ಲಿ ಕುಳಿತು ಬರುತ್ತಿರುವಾಗ ಅದು ಮಗುಚಿಕೊಂಡಿತು. ದಡದಲ್ಲಿ ಮತ್ತೊಂದು ದೋಣಿಯಿದ್ದುದರಿಂದ ಸಹಾಯಕ್ಕೆ ಹೋಗಿ 22 ಮಂದಿಯನ್ನು ಉಳಿಯಿಸಿತು. ಉಳಿದವರೆಲ್ಲಾ ಮುಳುಗಿ ಸತ್ತರು.

ದೇರಾದೂನ್ ಸಬ್ ಜಡ್ಜಿ ಪಂಡಿತ ನಿತ್ಯಾನಂದ ಪಾಂಡೆಯೆಂಬುವರು ತಾವು ವಿಚಾರ ನಡೆಯಿಸುತ್ತಿದ್ದ 2 ಕೇಸುಗಳಲ್ಲಿ 2-4 ಸಾವಿರ ರೂ. ಗಳ ಲಂಚವನ್ನು ತಿಂದರೆಂಬ ವಿಷಯವು ಸಿದ್ಧವಾಗಲು ಸರ್ಕಾರದವರು ಅವರನ್ನು ಕೆಲಸದಿಂದ ತೆಗೆದುಬಿಟ್ಟರು.

13ನೆ ಯಾವದ್ಭಾರತಾಯುರ್ವೇದ ಮಹಾಸಭೆಯು ರಾಜಮಹೇಂದ್ರದಲ್ಲಿ ಇದೇ ತಿಂಗಳು 5-6-7 ನೆ ತಾರೀಖುಗಳಲ್ಲಿ ಪೂನಾಪಟ್ಟಣದ ಆಯುರ್ವೇದ ಪಂಚಾನನ ಕೃಷ್ಣಶಾಸ್ತ್ರಿ ಕವಡೆಯವರ ಅಧ್ಯಕ್ಷತೆಯಿಂದ ನಡೆಯುವುದು. ಅದೇ ಕಾಲದಲ್ಲಿ ಮೂಲಿಕೆಗಳ ಮತ್ತು ಔಷಧಗಳ ಪ್ರದರ್ಶನವು ಕೂಡ ನಡೆಯುವುದು.

ಮಜಫೂರ್ ನಗರದಲ್ಲಿರುವ ಸೇಟ್ ಬೇಹಾರಿಲಾಲ್‌ರವರು ವರ್ಷ 1ಕ್ಕೆ 1 ಲಕ್ಷ ರೂ. ಆದಾಯವುಳ್ಳ ತಮ್ಮ ಯಾವದಾಸ್ತಿಯನ್ನೂ ದೇಶೀಯ ಪರಿಶ್ರಾಮಿಕ ವಿದ್ಯಾಭಿವೃದ್ಧಿಗಾಗಿ ಕೊಟ್ಟು, ಅದರ ಮೇಲ್ವಿಚಾರಣೆಗೆ ಪಂಡಿತ ಮಾಳವ್ಯ, ಹಕೀಂ ಅಜ್ಮಲ್‌ಖಾನ್, ಡಾಕ್ಟರ್ ಅನ್ಸಾರಿ ಮೊದಲಾದ ಕೆಲ ಪ್ರಮುಖರನ್ನು ಟ್ರಸ್ಟಿಗಳನ್ನಾಗಿ ಏರ್ಪಡಿಸಿದ್ದಾರೆ.

ಅಖಿಲ ಭಾರತ ಕಾಂಗ್ರೆಸ್ ಸಭೆಯ ಸಭ್ಯರಾಗಿ ತಮ್ಮ ವಕೀಲತನವನ್ನು 16 ತಿಂಗಳ ಕಾಲ ಬಿಟ್ಟುಬಿಟ್ಟಿದ್ದ ಕಲ್ಕತ್ತಾದ ಬ್ಯಾರಿಸ್ಟರ್ ಸೇನಗುಪ್ತರವರು ಮತ್ತೆ ವಕೀಲತನಕ್ಕೆ ಈಗ ಆರಂಭಿಸಿ, ತನಗೆ ದ್ರವ್ಯಾಭಾವದ ಕೊರತೆ ದುಸ್ಸಹವಾದುದರಿಂದ ಹೀಗೆ ಮಾಡಬೇಕೆಂದು ತಿಳಿಯಿಸಿದ್ದಾರೆ. ಬಂಗಾಳಾದ ಬಹುಮಂದಿ ಕೆಲಸ ಬಿಟ್ಟಿದ್ದ ವಕೀಲರೆಲ್ಲಾ ಈಗ ಮತ್ತೆ ಅದನ್ನೇ ಕೈಕೊಳ್ಳುತ್ತಿದ್ದಾರೆ.

ಕಾಥೆವಾಡಿಯ ಪ್ರಾಂತಕ್ಕೆ ಸೇರಿರುವ ಲಿಮ್ಡಿ ಎಂಬ ಸಂಸ್ಥಾನದಲ್ಲಿ ಯಾವುದೇ ತೆರನ ದೇಶೀಯ ಮದ್ಯವನ್ನು ಇಟ್ಟುಕೊಂಡಿರುವುದಾಗಲಿ ಹೊರಗಣಿಂದ ತರಿಸಿಕೊಳ್ಳುವುದಾಗಲಿ ಶಿಕ್ಷಾರ್ಹವಾದ ಅಪರಾಧವಾಗುವುದೆಂಬ ರಾಜಾಜ್ಞೆಯು ಮಾಡಲ್ಪಟ್ಟಿದೆ. ಇಂಥ ಅಪರಾಧಿಗಳನ್ನು ಹಿಡಿದುಕೊಡುವುದರಲ್ಲಿ ಸಹಾಯಮಾಡಿದವರಿಗೆ ದಂಡನದ್ರವ್ಯದಲ್ಲಿ ¼ ಭಾಗವನ್ನು ಕೊಡಲು ಏರ್ಪಡಿಸಿದ್ದಾರೆ.

ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ತಿರುವಲ್ಲ ತಾಲ್ಲೂಕು ಮನ್ನಾರ್ ಪಟ್ಟಣದ ಸಮೀಪದಲ್ಲಿರುವ ಕುತ್ತೆನ ಪೆರೂರು ಎಂಬ ಗ್ರಾಮದಲ್ಲಿರುವ ಪಾಲತುಂಕರಕೇಸರಂ ಎಂಬ ನಂಬೂದ್ರಿಯು ಕೈಯಿಂದಲಾಗಲಿ ಕಾಲಿಂದ ತುಳಿದಾಗಲಿ ನಡೆಯಿಸಿ, ಹತ್ತಿಯ ಬೀಜವನ್ನು ತೆಗೆಯಲಿಕ್ಕೂ, ನೂಲುವುದಕ್ಕೂ, ಕಣಿಕೆ ಸುತ್ತುವುದಕ್ಕೂ ಸಹ ಅನುಕೂಲಿಸುವಂಥ ಹೊಸ ರಾಟೆಯನ್ನು ನಿರ್ಮಿಸಿದ್ದಾನಂತೆ, ಅದರ ಬೆಲೆಯು 7 ರೂ. ಮಾತ್ರವೇ.

ಭರತಖಂಡದಲ್ಲಿ ಹತ್ತಿಯ ಯಂತ್ರಗಾರಿಕೆಯು ದಿನ ದಿನಕ್ಕೆ ಬಹಳ ಅಭಿವೃದ್ಧಿಹೊಂದುತ್ತಿದೆ. 1880-81 ನೆ ವರ್ಷದಲ್ಲಿ ಈ ದೇಶದೊಳಗೆಲ್ಲಾ 13 ಸಾವಿರ ಯಂತ್ರದ ಮಗ್ಗಗಳೂ 10 ಲಕ್ಷ ಕದರುಗಳೂ, 43 ಸಾವಿರ ಮಂದಿ ಕೆಲಸಗಾರರೂ ಇದ್ದರು. ಕಳೆದ 1919-20 ನೆ ವರ್ಷದಲ್ಲಿ ಮಗ್ಗಗಳ ಸಂಖ್ಯೆಯು 1 ಲಕ್ಷಕ್ಕೆ ಮಿಂಚಿತು; ಕದರುಗಳು 40 ಲಕ್ಷವಿರುವವು; ಕೆಲಸಗಾರರ ಸಂಖ್ಯೆಯು 2 ಲಕ್ಷಕ್ಕೆ ಮಿಂಚಿತು.

ಬೊಂಬಾಯಿಪಟ್ಟಣದಲ್ಲೂ ಆ ಪ್ರಾಂತಕ್ಕೆ ಸೇರಿದ ಇತರ ಸ್ಥಲಗಳಲ್ಲೂ ಕಳ್ಳತನಗಳು ಬಹಳ ಹೆಚ್ಚಿಹೋಗಿವೆ. ಕೂಲಿ ಕೆಲಸಕ್ಕೋಸ್ಕರವೆಂದು ಬಂದು ಆ ಪ್ರಾಂತದಲ್ಲಿ ಸೇರಿಕೊಂಡಿರುವ ಪಠಾನರುಗಳು ಈ ಕಳವುಗಳನ್ನು ಮಾಡುತ್ತಾರೆಂಬ ಸಂಶಯವುಂಟಾಗಿದೆ. ಬೊಂಬಾಯಿ ಸುತ್ತಲೂ 200 ಮಂದಿ ಪಠಾನರನ್ನು ಪೋಲೀಸರು ಹಿಡಿದು ಸೆರೆಯಲ್ಲಿಟ್ಟಿದ್ದಾರೆ. ಇದುವರೆಗೆ ಲಕ್ಷಾಂತರ ರೂ. ಗಳ ಕಳವು ಎಷ್ಟೋಕಡೆ ನಡೆದುಹೋಗಿದೆ.

ಮೌಲ್ವಿ ಮಜಮಲ್ ಹಕ್‌ರವರು ತಮ್ಮ ಮದರ್ಲ್ಯಾಂಡ್ ಪತ್ರಿಕೆಯಲ್ಲಿ ಕಾರಾಗೃಹದ ದುಸ್ಥಿತಿಯನ್ನು ಕುರಿತು ಬರೆದ ಲೇಖನಗಳು ತನಗೆ ಅಪಮಾನಕರವೆಂದು ಕಾರಾಗೃಹಾಧಿಕಾರಿಯು ತಂದಿದ್ದ ವ್ಯಾಜ್ಯದಮೇಲೆ ಹಕ್‌ರವರಿಗೆ 1000 ರೂ. ಅರ್ಥದಂಡ, ತಪ್ಪಿದರೆ 3 ತಿಂಗಳ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು. ಅವರು ಅರ್ಥದಂಡವನ್ನು ಕೊಡದೆ ತಿರಸ್ಕರಿಸಿ ಕಾರಾಗೃಹಕ್ಕೇ ತೆರಳಿದರು. ಮತ್ತೊಂದು ಇಂತಹ ವ್ಯಾಜ್ಯವೇ ಅವರಮೇಲೆ ಇರುವುದು.

ನೈನಿ ಕಾರಾಗೃಹದಲ್ಲಿದ್ದ ಒಬ್ಬ ಬಂದಿಯು ಡೆಪ್ಯುಟಿ ಜೈಲರ ಮೂಗನ್ನು ಕುಯ್ದುದಲ್ಲದೆ ಅವರನ್ನು ಕೊಲ್ಲುವುದಕ್ಕೆ ಅಟ್ಟಿಕೊಂಡುಹೋಗಿದ್ದನು. ಈತನಿಗೆ ಅಲಹಾಬಾದ್ ಸೆಷನ್ ಜಡ್ಜರು ಮರಣದಂಡನೆಯನ್ನು ವಿಧಿಸಿದರು. ಅಪರಾಧಿಯು ಹೈಕೋರ್ಟಿಗೆ ಅಪ್ಪೀಲುಮಾಡಿದನು. ಈತನು ಬಹಳ ದುರಾತ್ಮನಾದ ಕಳ್ಳನಾಗಿ 42 ವರ್ಷ ಕಾರಾಗೃಹ ಶಿಕ್ಷೆ ವಿಧಿಸಲ್ಪಟ್ಟಿರುವುದರಿಂದ ಇವನಿಗೆ ಇದಕ್ಕಿಂತ ಬೇರೆ ಶಿಕ್ಷೆಯೇನೂ ಇಲ್ಲವೆಂದು ತೀರ್ಮಾನಿಸಿದರು.

ಸರ್ ಫಜುಲ್‌ಭಾಯಿ ಕರೀಂಭಾಯಿಯವರು ಹೈದರಾಬಾದಿನಲ್ಲಿ 1 ಕೋಟಿ ರೂ.ಗಳ ವೆಚ್ಚದಿಂದ ಹತ್ತಿಯ 4 ಜಿನ್ನಿಂಗ್ ಫ್ಯಾಕ್ಟರಿಗಳನ್ನೂ ಒಂದು ನೆಯ್ಗೆ ಯಂತ್ರಾಲಯವನ್ನೂ '' ದಿ ಉಸ್ಮಾನಿಯಾ ಮಿಲ್ಸ್ ಕಂಪೆನಿ ಲಿಮಿಟೆಡ್ '' ಎಂಬ ಹೆಸರಿನಿಂದ ಸ್ಥಾಪಿಸಲು ಸಂಕಲ್ಪಿಸಿ, ರಿಜಿಸ್ಟರ್ ಮಾಡಿಸಿದ್ದಾರೆ. ಕಳೆದ ತಿಂಗಳು ಅವರು ಹೈದರಾಬಾದಿಗೆ ಬಂದು ನೈಜಾಮರ ಆತಿಥ್ಯದಲ್ಲಿದ್ದರು. ಇವರ ಉದ್ಯಮಕ್ಕೆ ನೈಜಾಂ ಪ್ರಭುತ್ವದವರು ಸಾಧ್ಯವಾದಷ್ಟು ಒತ್ತಾಸೆಕೊಡುವವರಾಗಿದ್ದಾರೆ. ಇದು ಜಾಯಿಂಟ್ ಸ್ಟಾಕ್ ಕಂಪೆನಿ; ಇದರ ಷೇರುಗಳಲ್ಲಿ ಕೆಲ ಭಾಗವನ್ನು ಹೈದರಾಬಾದು ಪ್ರಜೆಗಳಿಗೆ ಕೊಡಲು ಒಪ್ಪಂದವಾಗಿದೆ.

ಕಳೆದ ಡಿಶಂಬರ್ ತಿಂಗಳಲ್ಲಿ ಅಲಹಾಬಾದಿನಲ್ಲಿ 55 ಮಂದಿ ಕಾಂಗ್ರೆಸ್ ಸಭಿಕರಿಗೆ ಅಲಹಾಬಾದ್ ದಂಡಾಧಿಕಾರಿಗಳು ಶಿಕ್ಷೆ ವಿಧಿಸಿದ್ದರು. ಅದರಮೇರೆ ಅಪ್ಪೀಲು ಮಾಡಿಕೊಳ್ಳಲು ಅಪರಾಧಿಗಳು ಇಷ್ಟಪಡಲಿಲ್ಲ. ಭರತಖಂಡದಲ್ಲಿ ಆಂಗ್ಲ ಜನರು ಏರ್ಪಡಿಸಿರುವ ಯಾವುದೊಂದು ನ್ಯಾಯಸ್ಥಾನವನ್ನೂ ತಾವು ಲಕ್ಷೀಕರಿಸುವುದಿಲ್ಲವೆಂದು ಅಪರಾಧಿಗಳು ಹೇಳಿಬಿಟ್ಟಿದ್ದರು. ಆದರೆ ಕಾನ್ಪೂರಿನ ಪ್ಲೀಡರ್ ನಾರಾಯಣಪ್ರಸಾದ್ ರವರು ಅಲಹಾಬಾದ್ ಹೈಕೋರ್ಟಿನಲ್ಲಿ ಆ ಅಪರಾಧಿಗಳ ಶಿಕ್ಷೆಯನ್ನು ರದ್ದುಮಾಡಿಸಲು ಅಪ್ಪೀಲನ್ನು ಹಾಕಿದರು. ಅಪರಾಧಿಗಳು ಈ ಪ್ಲೀಡರಿಗೆ ಅಧಿಕಾರಪತ್ರಿಕೆಯನ್ನು ಕೊಟ್ಟಿಲ್ಲವಾದ ಕಾರಣ ನಾವು ಕೇಸನ್ನು ವಿಚಾರಿಸುವುದಿಲ್ಲವೆಂದು ಕೋರ್ಟಿನವರು ತಿರಸ್ಕರಿಸಿಬಿಟ್ಟರು.

ವಿಕ್ಟೋರಿಯಾ ಡೋಮಿನಿಯನ್ ನಕ್ಷತ್ರಶಾಲೆಯ ಶಾಸ್ತ್ರಜ್ಞರಾದ ಡಾಕ್ಟರ್ ಪ್ಲಾಸ್ಕೇಟ್‌ರವರು ಒಂದು ಹೊಸ ನಕ್ಷತ್ರವನ್ನು ಕಂಡುಹಿಡಿದಿದ್ದಾರೆ. ಈ ನಕ್ಷತ್ರದ ಕಾಂತಿಯು ಭೂಮಿಗೆ ಬಂದು ಬೀಳುವುದಕ್ಕೆ 10 ಸಾವಿರ ವರ್ಷಗಳು ಹಿಡಿದುವಂತೆ. ಇದು ಭೂಮಿಗೆ 5256 ಕೋಟಿ ಮೈಲಿಗಳ ದೂರದಲ್ಲಿದೆ. ಗಂಟೆಗೆ 200 ಮೈಲಿಗಳಂತೆ ಪ್ರಯಾಣಮಾಡಬಲ್ಲ ವಾಯುವಿಮಾನದಲ್ಲಿ ಕುಳಿತು ಭೂಮಂಡಲದಿಂದ ಈ ನಕ್ಷತ್ರದ ಬಳಿಗೆ ಹೋಗುವುದು ಸಾಧ್ಯವಾದರೆ 3 ಸಾವಿರ ಕೋಟಿ ವರ್ಷಗಳು ಬೇಕಾಗುವುವಂತೆ. ಅದು ಭೂಮಿಗೆ ಅಷ್ಟು ದೂರದಲ್ಲಿಲ್ಲದೆ ಅಂಗಾರಕ ಗ್ರಹವು ಇರುವಷ್ಟು ದೂರದಲ್ಲಿದ್ದಿದ್ದರೆ ಅದರ ಜ್ವಾಲೆಯಿಂದ ಭೂಮಂಡಲವು ಉರಿದು ಬೂದಿಯಾಗಿ ಹೋಗುತ್ತಿದ್ದಿತಂತೆ. ಆಕಾಶದಲ್ಲಿರುವ ಎಲ್ಲ ನಕ್ಷತ್ರಗಳಿಗಿಂತಲೂ ಇದು 5 ಭಾಗ ದೊಡ್ಡದಾಗಿಯೂ ಸೂರ್ಯಮಂಡಲಕ್ಕಿಂತ 160 ಭಾಗ ದೊಡ್ಡದಾಗಿಯೂ ಇರುವುದು.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸಿಂಧ್ ಹೈದರಾಬಾದಿನ ಪ್ರಾಂತದಲ್ಲಿ ಹಾಡುಹಗಲೇ ಸುಲಿಗೆ ಕಳ್ಳತನಗಳು ಬಹು ಭಯಂಕರವಾಗಿ ಲೆಕ್ಕವಿಲ್ಲದಷ್ಟು ನಡೆಯುತ್ತಿವೆ. ಬಾದಿನ ತಾಲ್ಲೂಕಿಗೆ ಸೇರಿದ ಕೇಡಾನ್ ಎಂಬ ಗ್ರಾಮಕ್ಕೆ 60 ಮಂದಿ ಕಳ್ಳರು ಆಯುಧಪಾಣಿಗಳಾಗಿ ಕುದುರೆಗಳನ್ನೇರಿಕೊಂಡು ಕಳೆದ ತಾ|| 26 ರಲ್ಲಿ ಹಗಲ ಹೊತ್ತೇ ನುಗ್ಗಿದರು. ಅಲ್ಲಿಗೆ ಕಾವಲಾಗಿ ಒಬ್ಬನೇ ಪೋಲೀಸಿನವನಿದ್ದನು. ಅವನೇನು ಮಾಡಬಲ್ಲ? ಕಳ್ಳರು ಅವನನ್ನು ಕಟ್ಟಿಹಾಕಿದರು; ಗ್ರಾಮವನ್ನೆಲ್ಲಾ ಸ್ವಾಧೀನಮಾಡಿಕೊಂಡರು. ಒಂದು ಪ್ರಾಣಿಯನ್ನೂ ಹೊರಕ್ಕೆ ಹೋಗಬಿಡಲಿಲ್ಲ. 3-4 ಗಂಟೆಗಳ ಹೊತ್ತು ಇದ್ದು ಪ್ರತಿ ಮನೆಗೂ ನುಗ್ಗಿ 1 ಲಕ್ಷ ರೂ. ಗಳವರೆಗೆ ನಗನಾಣ್ಯಗಳನ್ನೂ ಬಹಳ ದವಸಗಳನ್ನೂ ಕುದುರೆಗಳನ್ನೂ ಅಪಹರಿಸಿಕೊಂಡು ಹೋದರು. ಕಳ್ಳರು ಕಚ್ ದೇಶಸ್ಥರೆಂದು ಊಹಿಸಲ್ಪಟ್ಟಿದ್ದಾರೆ. ಪೋಲೀಸರು ಪತ್ತೆ ಮಾಡುವುದರಲ್ಲಿದ್ದಾರೆ.

ಸ್ವೀಕಾರ.

ತುಮಕೂರು ಮ|| ರಾ|| ಟಿ. ಸಿ. ರೇವಣ್ಣನವರ ಮನೆ ಲಗ್ನದಲ್ಲಿ ರೂ. 1 ರುದ್ರಯ್ಯನವರ ಮಗ ವೀರಭದ್ರಯ್ಯನವರ ಮನೆ ಲಗ್ನದಲ್ಲಿ ರೂ. 1 ಭದ್ರಯ್ಯನವರ ಮನೆ ಲಗ್ನದಲ್ಲಿ ರೂ. 1 ನೆಲಮಂಗಳ ಗಂಗಪ್ಪನವರ ಮಗ ನಾಗಪ್ಪನ ಲಗ್ನದಲ್ಲಿ ರೂ. 1 ಗಬ್ಬೂರು ಹೊನ್ನಗಂಗಪ್ಪನವರ ಮನೆ ಲಗ್ನದಲ್ಲಿ ರೂ. 1 ಒಟ್ಟು 5 ರೂಪಾಯಿ ಹೀಗೆ ಜ್ಯೇಷ್ಠಮಾಸದಲ್ಲಿ ನಡೆದ ಲಗ್ನಗಳಲ್ಲಿ ಕೈ|| ವ್ವಿ. ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ತೆಗೆಸಿದ ಅಗ್ರತಾಂಬೂಲದ ಮೊಬಲಗನ್ನು ಅಭಿಮಾನಪೂರ್ವಕವಾಗಿ ಕಳಿಸಿರುವುದನ್ನು ಅಂಗೀಕರಿಸಿದ್ದೇವೆ. ಪ.ಪ್ರ.

ವಿದೇಶದ ವೃತ್ತಾಂತಗಳು

1922-23 ನೆ ವರ್ಷದಲ್ಲಿ ಆಂಗ್ಲ ಸಾಮ್ರಾಜ್ಯವು ತನ್ನ ವಿಮಾನದಳಕ್ಕಾಗಿ 15177000 ಪೌನುಗಳನ್ನು ವ್ಯಯಮಾಡುವುದಾಗಿದೆ.

ಊರ್ಮಾ ಸರಸ್ಸಿನ ಹತ್ತಿರ ಕೇಮಲ್ ಎನ್ವರ್ ಪಾಷಾಗಳಿಬ್ಬರೂ ಸೇರಿ ಇನ್ನು ಮುಂದೆ ತುರ್ಕಿ ಸಾಮ್ರಾಜ್ಯಾಭಿವೃದ್ಧಿಗೂ ಇಬ್ಬರೂ ಏಕಮತ್ಯದಿಂದ ಕೆಲಸಮಾಡತಕ್ಕದೆಂದು ಒಡಂಬಡಿಕೆಮಾಡಿಕೊಂಡರಂತೆ.

ಜರ್ಮನಿಯಲ್ಲಿ ಚಕ್ರವರ್ತಿ ಪಕ್ಷಕಾರರಾಗಿರುವ ಜನರು ಫ್ರಾನ್ಸ್ ಮಂತ್ರಿ ಪಾಯಿಂಕೇರ್‌ರವರನ್ನು ಕೊಲೆಮಾಡಿಸಲು ಯತ್ನಿಸಿದ್ದಾರೆಂಬ ನಂಬುಗೆಯಾದ ವರ್ತಮಾನವು ಫ್ರೆಂಚ್ ಸರ್ಕಾರಕ್ಕೆ ಬಂದಿದೆಯಂತೆ

ರಷ್ಯಾದ ಲೆನಿನ್‌ರವರಿಗೆ ಯಾರೋ ವಿಷಪ್ರಯೋಗಮಾಡಿದರೆಂದೂ, ಚಿಕಿತ್ಸೆಯಲ್ಲಿರುವರೆಂದೂ, ಅವರು ಸತ್ತರೆಂದೂ ವರ್ತಮಾನಗಳು ಬರುತ್ತಿದ್ದುವು. ಆದರೆ ಅವರು ಮೃತರಾಗಿಲ್ಲ. ಹೀಗೆ ಅವರ ಮರಣವಾರ್ತೆಯು ಹಬ್ಬಿದುದಕ್ಕೆ ಇದು ಮೂರನೆಸಲ ಎಂದು ಈಚೆಗೆ ಸುದ್ದಿಬಂದಿದೆ.

ಐರ್ಲೆಂಡ್ ಪ್ರಜಾಸ್ವಾಮ್ಯವಾದಿ ಪಕ್ಷದ ನಾಯಕರಾದ ಡಿವೇಲರಾರವರು ಭರತಖಂಡದ ಸ್ವಾತಂತ್ರ್ಯವಾದಿಗಳಿಗೆ ಒಂದು ಸಂದೇಶವನ್ನು ಕಳುಹಿಸಿ, ಅಮೇರಿಕಾ ಐರ್ಲೆಂಡುಗಳಂತೆ ಸ್ವಾತಂತ್ರ್ಯವನ್ನು ಪಡೆಯಲು ನೀವು ದೃಢಸಂಕಲ್ಪಗೊಂಡು ಧೈರ್ಯಸ್ಥೈರ್ಯಗಳಿಂದ ಕೆಲಸಮಾಡಿರಿ ಎಂದು ತಿಳಿಸಿದ್ದಾರಂತೆ.

ಲಂಡನ್ ಕೌಂಟಿಕೌನ್ಸಿಲ್ಲಿನ ನೂತನಭವನದ ಪ್ರಾರಂಭೋತ್ಸವವನ್ನು ಕಳೆದ ತಾ|| 17ರಲ್ಲಿ ಸಾರ್ವಭೌಮರು ನಡೆಯಿಸಿದರು. ಈ ಕಟ್ಟಡವನ್ನು ಕಟ್ಟಿ ಮುಗಿಯಿಸಲು 40 ಲಕ್ಷ ಪವನ್ನುಗಳು ಕೂಡ ಸಾಲುವುದಿಲ್ಲವಂತೆ. ಯುದ್ಧಕಾಲದಲ್ಲಿ ಕಟ್ಟಡದ ಕೆಲಸವು ನಿಂತುಹೋಗಿದ್ದಿತು. ಇದು 750 ಅಡಿಗಳೆತ್ತರವೂ, 9 ಅಂತಸ್ತಿಗಳೂ, 900 ಕೊಟ್ಟಡಿಗಳೂ ಉಳ್ಳುದಾಗಿ 6½ ಎಕರೆಯಗಲದ ಭೂಮಿಯನ್ನು ಆಕ್ರಮಿಸಿರುವುದು.

ಅಮೇರಿಕಾದಲ್ಲಿ ಗಣಿಗಳ ಕೂಲಿಕಾರರ ಸಂಬಳವನ್ನು ತಗ್ಗಿಸಿದುದರಿಂದ 6½ ಲಕ್ಷ ಜನರಮೇಲೆಯೇ ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದ್ದಾರೆ. ಪ್ರಭುತ್ವದವರು ಸೈನಿಕರಿಂದ ಗಣಿಗಳ ಕೆಲಸವನ್ನು ಮಾಡಿಸಲು ಏರ್ಪಡಿಸಿರುವುದಲ್ಲದೆ ಆಂಗ್ಲದೇಶದಿಂದ 7 ಲಕ್ಷ ಟನ್ನುಗಳ ಕಲ್ಲಿದ್ದಲನ್ನು ತರಿಸಿಕೊಳ್ಳಲು ಏರ್ಪಡಿಸಿದ್ದಾರೆ. ಕೂಲಿಕಾರರಿಗೆ ದಿನ 1ಕ್ಕೆ 35 ರೂ.ನಷ್ಟು ಕೂಲಿಯು ಕೊಡಲ್ಪಡುತ್ತಿದ್ದರೂ ಅವರಿಗೆ ತೃಪ್ತಿಯಿಲ್ಲವಂತೆ.

1870 ನೆ ವರ್ಷದಲ್ಲಿ ನಡೆದಿದ್ದ ಫ್ರಾಂಕೊ ಜರ್ಮನ್ ಯುದ್ಧದಲ್ಲಿ ಜರ್ಮನರು ಕಿತ್ತುಕೊಂಡಿದ್ದ ಫ್ರೆಂಚ್ ಪ್ರಭುತ್ವ ಪತಾಕೆಯನ್ನು ಮರಳಿ ಫ್ರೆಂಚರಿಗೆ ಕೊಟ್ಟುಬಿಡಬೇಕೆಂದು ಮಿತ್ರ

ಮಂಡಲಿಯವರು ಮಾಡಿದ ಸೂಚನೆಯ ಮೇರೆಗೆ ಜರ್ಮನರು ಅದನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಫ್ರಾನ್ಸಿಗೆ ಸಾಗಿಸಿಕೊಟ್ಟರು. ಮಾರ್ಗ ಮಧ್ಯದಲ್ಲಿ ಅದು ಮಾಯವಾಯಿತು. ಅದನ್ನು ಪತ್ತೆಮಾಡಿಕೊಟ್ಟವರಿಗೆ 1 ಲಕ್ಷ ಮಾರ್ಕುಗಳ ಬಹುಮಾನವನ್ನು ಕೊಡುವುದಾಗಿ ಪ್ರಭುತ್ವದವರು ಪ್ರಕಟಿಸಿದ್ದಾರೆ.

ಯುದ್ಧಕಾಲಕ್ಕೆ ಮುಂಚೆ ಇದ್ದುದಕ್ಕಿಂತ ಈಗ ಇಂಗ್ಲೀಷರಲ್ಲಿ 14283000 ಟನ್ನುಗಳ ಭಾರದಷ್ಟು ಹಡಗುಗಳು ಹೆಚ್ಚಾಗಿವೆ. ಕಳೆದ ವರ್ಷಕ್ಕಿಂತ ಈ ವರ್ಷದಲ್ಲಿ ಇಂಗ್ಲೀಷರ ಹತ್ತಿರ 25 ಲಕ್ಷ ಟನ್ನುಗಳ ಭಾರದ ಹಡಗುಗಳು ಹೆಚ್ಚಿಗೆ ನಿರ್ಮಿಸಲ್ಪಟ್ಟುವು. ಅದೇ ಈ ವರ್ಷದಲ್ಲಿ ಉಳಿದ ಎಲ್ಲ ದೇಶಗಳಿಗಿಂತಲೂ ಜರ್ಮನರು ಹೆಚ್ಚಾಗಿ ಹಡಗುಗಳನ್ನು ಕಟ್ಟಿದ್ದಾರೆ. ಎಂದರೆ ಆ ದೇಶವು 1133000 ಟನ್ನುಗಳ ಭಾರದ ಹಡಗುಗಳನ್ನು ಕಟ್ಟಿದೆ; ಹಾಲೆಂಡು 409000, ಆಂಗ್ಲಾಧಿನಿವೇಶ ರಾಜ್ಯಗಳು 258000, ಫ್ರಾನ್ಸು 239000, ಜಪಾನು 232000, ಇಟಲಿ 231000 ಟನ್ನುಗಳ ಭಾರದ ಹಡಗುಗಳನ್ನು ಈ ವರ್ಷ ಕಟ್ಟಿರುತ್ತವೆ. ಈಗಲೂ ಪ್ರಪಂಚದೊಳಗೆಲ್ಲಾ ಆಂಗ್ಲದೇಶವೇ ನೌಕಾಬಲದಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ಅಮೇರಿಕಾ ಸಂಯುಕ್ತರಾಷ್ಟ್ರವು 2 ನೆಯದಾಗಿದೆ. ಯುದ್ಧಕ್ಕೆ ಮುಂಚೆ 6 ನೆಯ ಸ್ಥಾನದಲ್ಲಿದ್ದ ಜಪಾನ್‌ದೇಶವು ಈಗ 3 ನೆಯದಾಗಿದೆ.

ಲಂಡನ್ ಪಟ್ಟಣದಲ್ಲಿ ನಾನಾ ರಾಷ್ಟ್ರೀಯ ಸಂಘ ಸಭೆಯು ಕಳೆದ ತಾ|| ೨೪ ರಿಂದ ಕೂಡಿತು. 20 ರಾಷ್ಟ್ರಗಳಿಂದ 500 ಮಂದಿ ಪ್ರಭುತ್ವ ಪ್ರತಿನಿಧಿಗಳು ಬಂದಿದ್ದರು. ಆ ಸಭೆಯಲ್ಲಿ ಬಾಲ್ಫರ್‌ಪ್ರಭುಗಳು ಉಪನ್ಯಾಸಮಾಡುವಾಗ್ಗೆ ಪಾಲಸ್ತೀನನ್ನು ಮಾಂಡೇಟರಿಯ ನಿಬಂಧನೆಯಂತೆ (ಎಂದರೆ ಇಂಗ್ಲೀಷರಿಗೆ ಅಧೀನವಾದ ಸ್ವಪರಿಪಾಲನೆ) ನಡೆಯಿಸುವುದೇ ನಿಜವೆಂದೂ ಯಾವ ಮತದವರ ಆಚಾರ ಮತಪ್ರಾಶಸ್ತ್ಯ ಮೊದಲಾದುವುಗಳಿಗೂ ತಾವು ಭಂಗತರತಕ್ಕವರಲ್ಲವೆಂದೂ ಹೇಳಿದರು. ಸಭೆಯವರು ಆ ಮಾಂಡೇಟರಿ ಅಧಿಕಾರವನ್ನೇ ಸ್ಥಿರಪಡಿಸಿರುವರು. ಸಂಪೂರ್ಣ ಸ್ವಾತಂತ್ರ್ಯವನ್ನು ಕೋರುತ್ತಿದ್ದ ಪಾಲಸ್ತೀನ್ ಅರಬ್ಬಿಯವರಿಗೆ ಈ ಅಪೂರ್ವವಾದ ಅಧಿಕಾರಕ್ಕೆ ಅಂಕಿತವಾಗಿರಲು ಒಪ್ಪಿತವಿಲ್ಲ. ಅದನ್ನು ಸಭೆಯವರು ಅಂಗೀಕರಿಸಿದ ದಿನವು ದುಃಖಸೂಚಕ ದಿನವೆಂದು ಅರಬ್ಬಿಯವರು ಭಾವಿಸಿ ತಾಪಪಡುತ್ತಿರುವರು. ಆದರೆ ಜ್ಯೂ ಜನಗಳು ಮಾತ್ರ ಜಾತೀಯ ಗೀತಗಳನ್ನು ಹಾಡಿಕೊಂಡು ಆನಂದಪಡುತ್ತಿರುವರು. ಅಂತೂ ಪಾಲಸ್ತೀನಿನಲ್ಲಿ ಜ್ಯೂ ಜನರ ಮತ್ತು ಅರಬ್ಬಿಯವರ ಮಧ್ಯದ ಮನಃಕಷಾಯಗಳು ಮತ್ತಷ್ಟು ವೃದ್ಧಿಯಾಗುವಂತೆಯೇ ತೋರುತ್ತದೆ.

ಗ್ರೀಕರು ಕಾನ್‌ಸ್ಟಾಂಟಿನೋಪಲನ್ನು ಆಕ್ರಮಿಸುವ ಪ್ರಯತ್ನಮಾಡಿದ್ದರೆಂಬ ವರ್ತಮಾನವು ಪ್ರಬಲವಾಗಿದೆ. ಕೇಮಲ್ ಪಾಷಾರವರು ಅಂಗೋರಾದಿಂದ ಕಾನ್‌ಸ್ಟಾಂಟಿನೋಪಲ್ ಕಡೆಯ ರಣರಂಗಕ್ಕೆ ಹೋಗಿದ್ದಾರೆ. ಕಾನ್‌ಸ್ಟಾಂಟಿನೋಪಲ್ ಕಡೆಯಿಂದ ಬರುತ್ತಿರುವ ತಂತ್ರೀವಾರ್ತೆಗಳನ್ನು ನೋಡಿದರೆ ಗ್ರೀಕರಿಗೂ ತುರ್ಕಿಗೂ ಮತ್ತೆ ಯುದ್ಧಾರಂಭವಾಗುವಂತೆ ತೋರುತ್ತದೆ. ಗ್ರೀಕರ 25 ಹೊಸ ಪಟಾಲಮ್ಮುಗಳು ರಣರಂಗಕ್ಕೆ ಕಳುಹಿಸಲ್ಪಟ್ಟಿವೆಯಂತೆ. ಗ್ರೀಕ್ ಸೇನಾಪತಿ ಹಜ್ಜಿನೆಸ್ಟಿಯು ತನ್ನ ಕಾರ್ಯಾಲಯವನ್ನು ಸೇನಾಸಮೇತ ರಣರಂಗ ಪ್ರಾಂತಕ್ಕೆ ಬದಲಾಯಿಸಿರುವನಂತೆ. '' ಗ್ರೀಕರು ಕಾನ್‌ಸ್ಟಾಂಟಿನೋಪಲ್ಲಿನ ಮೇಲೆ ದಂಡೆತ್ತಿಹೋಗುವರೆಂಬ ವರ್ತಮಾನವು ನಿಜವಾದರೆ ಬಹಳ ವಿಷಮಪರಿಸ್ಥಿತಿಗಳುಂಟಾಗುವವು. ಕಾನ್‌ಸ್ಟಾಂಟಿನೋಪಲ್ಲಿನಲ್ಲಿರುವ ಆಂಗ್ಲ ಫ್ರಾನ್ಸ್ ಸೈನ್ಯಕ್ಕೂ ಗ್ರೀಕ್ ಸೈನ್ಯಕ್ಕೂ ಸಂಘಟ್ಟನವುಂಟಾಗುವುದು. ಆಗ್ಗೆ ಗ್ರೀಕರು ಆಂಗ್ಲ ಫ್ರಾನ್ಸ್ ಪ್ರಭುತ್ವದ ಮೇಲೆ ಯುದ್ಧವನ್ನಾರಂಭಿಸಿದಂತಾಗುವುದು '' ಎಂದು ಮಿತ್ರಮಂಡಲಿಯವರು ಗ್ರೀಕರಿಗೆ ತಿಳಿಯಿಸಿದರು. ಇದಕ್ಕೆ ಗ್ರೀಕ್ ಪ್ರಭುತ್ವದವರು ಮಿತ್ರಮಂಡಲಿಗೆ ಪ್ರತ್ಯುತ್ತರವಾಗಿ ಬರೆದಿರುವ ಲೇಖನದಲ್ಲಿ-ನೀವುಗಳು ಕಾನ್‌ಸ್ಟಾಂಟಿನೋಪಲನ್ನು ಆಕ್ರಮಿಸಿಕೊಂಡು ತುರ್ಕಿಗೆ ಸಂರಕ್ಷರಾಗಿರುವುದರಿಂದ ತುರುಕರು ನಮ್ಮೊಡನೆ ಸಂಧಿಮಾಡಿಕೊಳ್ಳುವಂತೆ ನಿರ್ಬಂಧಪಡಿಸಲು ಯತ್ನವಾಗಿಲ್ಲವೆಂದೂ, ಈಗಣ ಪರಿಸ್ಥಿತಿಯನ್ನು ಹೀಗೆಯೇ ಸಾಗಗೊಟ್ಟರೆ ಕ್ರೈಸ್ತರನ್ನು ನಿರ್ನಾಮಗೊಳಿಸಲಿಕ್ಕೆ ತುರ್ಕಿಯನ್ನು ಪ್ರೋತ್ಸಾಹಿಸಿದಂತೆಯೇ ಆಗುವುದೆಂದೂ, ಸಂಧಿ ಕುದುರಬೇಕಾಗಿದ್ದರೆ ಗ್ರೀಕರು ಕಾನ್‌ಸ್ಟಾಂಟಿನೋಪಲನ್ನು ವಶಪಡಿಸಿಕೊಳ್ಳುವುದೇ ಅವಶ್ಯಕವಾದ ಉಪಾಯವೆಂದೂ, ಆದಕ್ಕಾಗಿಯೇ ಗ್ರೀಕರು ಸರ್ವಸನ್ನಾಹವನ್ನೂ ಮಾಡಿರುವರೆಂದೂ, ಕಾನ್‌ಸ್ಟಾಂಟಿನೋಪಲ್ಲಿನಲ್ಲಿರುವ ತಮ್ಮ ಸೈನ್ಯಗಳಿಗೆ ಮಿತ್ರಮಂಡಲಿಯವರು ತಕ್ಕ ಆಜ್ಞೆಮಾಡುವುದೇ ತಡವೆಂದೂ ಬರೆದಿರುವರಂತೆ. ಈಗ ಮಿತ್ರಮಂಡಲಿಯವರು ತಮ್ಮ ಅಭಯದಾನದಂತೆ ಕಾನ್‌ಸ್ಟಾಂಟಿನೋಪಲ್ಲಿನ ತಾಟಸ್ಥ್ಯವನ್ನು ರಕ್ಷಿಸಲು ಗ್ರೀಕರನ್ನು ಅಣಗಿಸುವುದಕ್ಕೆ ತೊಡಗುವರೋ ಅಥವಾ ಅವರು ಎತ್ತಿಕ್ಕೆ ತೋರಿಸಿರುವ ಕ್ರೈಸ್ತಾಭಿಮಾನಕ್ಕೆ ಬಲಿಬಿದ್ದುಹೋಗುವರೋ ನೋಡಬೇಕು ಎಂದು ಏಷ್ಯಾಖಂಡದವರೆಲ್ಲಾ ನಿರೀಕ್ಷಿಸುತ್ತಿರುವರು. ಆದರೆ ಕಾನ್‌ಸ್ಟಾಂಟಿನೋಪಲನ್ನು ಆಕ್ರಮಿಸಿಕೊಳ್ಳಬೇಕೆಂಬ ಗ್ರೀಕರ ಕೋರಿಕೆಯನ್ನು ಮಿತ್ರಮಂಡಲಿಯವರು ಆ ಕೂಡಲೇ ನಿರಾಕರಿಸಿಬಿಟ್ಟರು. ಅದರ ಮೇಲೆ ಮಿತ್ರಮಂಡಲಿಯವರೊಡನೆ ವಿರೋಧಕಟ್ಟಿಕೊಂಡು ಕಾನ್‌ಸ್ಟಾಂಟಿನೋಪಲ್ಲನ್ನು ಹಿಡಿದುಕೊಳ್ಳುವಷ್ಟು ಧೈರ್ಯವು ಗ್ರೀಕರಿಗೆ ಇಲ್ಲದೆಹೋಯಿತು. ನೀವು ಒಪ್ಪದಿದ್ದರೆ ನಾವು ಆ ಕೆಲಸಕ್ಕೆ ಪ್ರಯತ್ನಿಸುವುದಿಲ್ಲವೆಂದು ಗ್ರೀಕರು ಮಿತ್ರಮಂಡಲಿಗೆ ತಿಳಿಯಿಸಿದ್ದಾರೆ. ತಟಸ್ಥ ಪ್ರದೇಶಕ್ಕೆ ಗ್ರೀಕ್ ಸೈನ್ಯವು ನುಗ್ಗಿದರೆ ತಕ್ಕ ಶಾಸನವನ್ನು ಮಾಡುವೆನೆಂದು ಅಲ್ಲಿರುವ ಆಂಗ್ಲ ಸೇನಾಪತಿಯು ಎಚ್ಚರಿಕೆ ಕೊಟ್ಟಿದ್ದಾರೆ. ಮತ್ತು ಇಂಗ್ಲೀಷರು ಒಂದು ಹೊಸ ಪಟಾಲಮನ್ನು ಅಲ್ಲಿಗೆ ಕಳಿಸಿಕೊಟ್ಟಿದ್ದಾರೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಲೇಬೇಕು.

ಶಾಸ್ತ್ರಿಗಳು ಬೇಕು.

ನಾರಾಯಣಪೇಟೆಯ ವೀರಶೈವ ಸಂಸ್ಕೃತ ಪಾಠಶಾಲೆಗೆ ಅಧ್ಯಾಪಕರಾಗಲು ಒಬ್ಬರು ಶಾಸ್ತ್ರಿಗಳು ಬೇಕು. ಅವರು ಸಾಹಿತ ಪಾಠವನ್ನೂ, ವ್ಯಾಕರಣವನ್ನೂ ಚೆನ್ನಾಗಿ ಬೋಧಿಸುವವರಾಗಿರಬೇಕು. ಅದರೊಂದಿಗೆ, ವೈದಿಕ ಜ್ಯೋತಿಷದ ಪರಿಚಯವುಳ್ಳವರಾಗಿದ್ದರೂ ವಿಶೇಷವೇನಿರಿ. ಯೋಗ್ಯತೆಗೆ ತಕ್ಕ ಸಂಬಳವು ಕೊಡಲ್ಪಡುವುದು. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಬಿಬ್ಬಳ್ಳಿ-ಬಸಯ್ಯ, ಪಾಠಶಾಲಾ ಕಾರ್ಯದರ್ಶಿ,
ಪೋ—ನಾರಾಯಣಪೇಟೆ,

ತಿಪಟೂರು.

ಈ ಊರಿನಲ್ಲಿ ಈಗ ಹಾಜರಿರುವ ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕಕಂಪನಿಯ ಪ್ರೊಪ್ರೈಟರ್ ವಿ|| ವೀರಣ್ಣನವರು ತಮ್ಮ ವೀರಶೈವಮತದ ವಿದ್ಯಾಭಿವೃದ್ಧಿಗಾಗಿ ಹಾಲಿ ಅಮೇರಿಕದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮುಪ್ಪಣ್ಣ ಚನ್ನವೀರಪ್ಪ ತುಮ್ಮಿನಕಟ್ಟಿ ಎಂಬುವ ವೀರಶೈವ ವಿದ್ಯಾರ್ಥಿಗೆ ತಮ್ಮ ಕಂಪನಿಯ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ಒಂದು ನಾಟಕವನ್ನಾಡಿ ಅದರಿಂದ ಬರುವ ಉತ್ಪತ್ತಿಯನ್ನು ಆತನಿಗೆ ಕಳುಹಿಸುತಾರಾಗಿ ವರ್ತಮಾನಕೇಳಿ ತುಂಬಾ ಸಂತೋಷಪಡುತ್ತೇನೆ. ಈರೀತಿ ಸ್ವಮತ ವಿದ್ಯಾಭಿಮಾನಿಯಾದ ಇವರ ಕಂಪನಿಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದು ಶ್ರೀ ಶಂಕರನನ್ನು ಪ್ರಾರ್ಥಿಸುವ.

ಬ್ಯಾಡಿಗಿ ಚನ್ನವೀರಪ್ಪ, ಅರಸೀಕೆರೆ.

ವೀರಶೈವ ಬಡವಿದ್ಯಾರ್ಥಿಗಳಿಗೆ ಸೂಚನೆ.

ಈ ಸಂಘದಿಂದ ಸ್ಕಾಲರ್‌ಷಿಪ್ಪು ಪಡೆಯಲಪೇಕ್ಷಿಸತಕ್ಕ ಕಾಲೇಜು ಹೈಸ್ಕೂಲು, ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳು ಕೆಳಗೆ ವಿವರಿಸಿದ ವಾಯಿದೆಯೊಳಗೆ ಫಂಡಿನ ಪ್ರಿಂಟೆಡ್ ಫಾರಂನಲ್ಲಿ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು. ಜತೆಗೆ ಸರಟಿಫಿಕೆಟ್ ಸಹ ಕಳಿಸತಕ್ಕದ್ದು.

1. ಎಲ್‌ಎಲ್.ಬಿ. ಮತ್ತು ಎಂ.ಎ. ತರಗತಿ ವಿದ್ಯಾರ್ಥಿಗಳು ತಾ|| 10-8-1922.
2. ದಾವಣಗೆರೆ, ಚಿತ್ರದುರ್ಗ ಹೈಸ್ಕೂಲು ವಿದ್ಯಾರ್ಥಿಗಳು ತಾ|| 20-8-1922.
3. ಯೂನಿವರ್ಸಿಟಿ ಎಂಟ್ರೆನ್ಸ್‌ಕ್ಲಾಸು ಮತ್ತು ಟೆಕ್ನಿಕಲ್ ಸ್ಕೂಲ್ ವಿದ್ಯಾರ್ಥಿಗಳು ತಾ|| 5-9-1922.
4. ಬಿ.ಎ. ವಿದ್ಯಾರ್ಥಿಗಳು ತಾ|| 10-10-1922.

ಸೂಚನೆ.—ಅಪ್ಲಿಕೇಷನ್ ಫಾರಂ ಸರಿಯಾಗಿ ಬರೆಯದ, ಸರಟಿಫಿಕೇಟು ಕಳಿಸದ ಮತ್ತು ಲೇಟಾಗಿಬರತಕ್ಕ ಅಪ್ಲಿಕೇಷನ್‌ಗಳು ತಿರಸ್ಕರಿಸಲ್ಪಡುವುವು.

ಸೆಕ್ರೆಟರಿ,
ವೀರಶೈವ ವಿದ್ಯಾವರ್ಧಕಫಂಡು ಸಂಘ, ದಾವಣಗೆರೆ.

ಮಹೋತ್ಸವ, ಕುಂದಗೋಳ.

ನಮ್ಮ ಗ್ರಾಮದಲ್ಲಿ ಶ್ರೀ ಶಿವಾನಂದ ಯೋಗೀಶ್ವರ ಮಹೋತ್ಸವವು ಒಳ್ಳೆ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಸದರಿ ಉತ್ಸವದ ದಿವಸ ಜನರು ಆನಂದೋಲ್ಲಾಸಗಳಿಂದ ಕೂಡಿದವರಾಗಿದ್ದರು. ಮಂಗಳವಾದ್ಯಗಳ ಧ್ವನಿಯು ಕಿವಿಗಳನ್ನು ಗಡಚಿಕ್ಕುತ್ತಿತ್ತು ಶ್ರೀ ಯೋಗಿ ಮಹಾರಾಜರ ಮೆರವಣಿಗೆಗೆ ನೂರಾರು ಜನರು ಕೂಡಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ಶಿವಭಜನೆಯನ್ನು ಮಾಡತಕ್ಕ ಶಿವಶರಣರ ಗುಂಪು ಮನೋಹರವಾಗಿತ್ತು. ಮೆರವಣಿಗೆಯು ಯೋಗೀಶ್ವರಾಶ್ರಮಕ್ಕೆ ತಲ್ಪಿದನಂತರ ಸದರಿ ಸ್ಥಳದಲ್ಲಿ ಸಭೆಗೂಡಿತ್ತು. ಸಭೆಗೆ ಮ|| ರಾ|| ದಾನಪ್ಪ ಹುಲಿಕಟ್ಟಿ ಬೀ, ಕೇ, ಲಕ್ಷ್ಮೀಶ್ವರ ವೇ|| ಚಂದ್ರಶೇಖರಯ್ಯ ಸಾಲೀಮಠ ಮ|| ರಾ|| ಚೆನ್ನಪ್ಪ ಉಳವಣ್ಣವರ ಮರ್ಚಂಟ್ ಎಸ್. ಜಿ. ಕುಡಿವಕ್ಕಲ ಈ ಪ್ರಮುಖರು ಆಗಮಿಸಿದ್ದರು. ಚಿದಾನಂದ ಯೋಗೀಶ್ವರ ಇವರು ಮೋಹ ವಿವೇಕ ಯುದ್ಧ ಎಂಬ ವಿಷಯದ ಮೇಲೆ ಸುಶ್ರಾವ್ಯವ್ಯಾಖ್ಯಾನ ಹೇಳಿದರು. ಇಷ್ಟಾದ ಮೇಲೆ ಶ್ರೀಮನ್ಮಹಾರಾಜ ಭಾಹುಸಾಹೇಬ ಬಹದ್ದೂರರವರಿಗೆ ಶಿವಯೋಗೀಶ್ವರರು ಆಯುರಾರೋಗ್ಯಗಳನ್ನು ಕೊಡಲೆಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಪ್ರತ್ಯಕ್ಷದರ್ಶಿ.

ಅಸೂಯೆ.

ಕಳೆದ ಜೂನ್ ತಾ|| 22ರಲ್ಲಿ ನಡೆದ ಮೈಸೂರು ಪ್ರಜಾಪ್ರತಿನಿಧಿಸಭಾ ಮೆಂಬರರ ಎಲೆಕ್ಷನ್ನಿನಲ್ಲಿ ದೇವನಹಳ್ಳಿ ತಾಲೋಕಿನಲ್ಲಿ ನಿಂತಿದ್ದ 6 ಜನ ಕ್ಯಾಂಡಿಡೇಟುಗಳಪೈಕಿ ಎಲೆಕ್ಟಾದ ಇಬ್ಬರಲ್ಲಿ ಹುಣಸಮಾರನಹಳ್ಳಿ ಶ್ರೀ ಮಠದ ಏಜೆಂಟ್ ಎಸ್. ತೋಂಟದಾರ್ಯರೆಂಬುವರು ಎರಡನೆಯವರಾಗಿ ಚುನಾವಣೆಯಾಗಿರುತ್ತಾರೆ. ಇವರನ್ನು ನೋಡಿ ಸಹಿಸಲಾರದ ಪರಮತೀಯರನೇಕರು ಕಾರ್ಯಗೌರವಕ್ಕೆ ಹಾನಿಯನ್ನುಂಟುಮಾಡಬೇಕೆಂಬ ನೆವದಿಂದ ಇಲ್ಲದ ಕಾರಣಗಳನ್ನು ಹುಡುಕಿ ಇವರ ಹೆಸರಿನಲ್ಲಿ ಸ್ವಂತಖಾತೆ ಯಾವುದೂ ಇಲ್ಲವೆಂದೂ ಹಾಗಿಲ್ಲದೆ ಇರಲು ಇವರನ್ನು ಕ್ಯಾಂಡಿಡೇಟ್ ಲಿಷ್ಟಿಗೆ ಹ್ಯಾಗೆ ದಾಖಲ್ಮಾಡಿದ್ದರೆಂತಲೂ ಮುಂತಾಗಿ ಚರ್ಚೆನಡಿಸಿ ಸರ್ಕಾರಕ್ಕೆ ಬಿನ್ನಯಿಸಿಕೊಂಡಿದ್ದರ ಮೇಲೆ ಘನಸರ್ಕಾರದವರು ದೀರ್ಘಾಲೋಚನೆಯಿಂದ ಪರಿಶೋಧಿಸಿ ಸಾವಿರಾರು ರೂಪಾಯಿಗಳ ಜೋಡಿ ಮತ್ತು ಕಂದಾಯ ಮೊಹತರ್ಫಾ ಕೊಡುತ್ತಿರುವ ಮಠದ ಶ್ರೀ ಸ್ವಾಮಿಗಳವರಿಂದ ಜನರಲ್ ಪವರ್ ಆಫ್ ಅಟರ್ನಿ (general power of attorney) ಪಡೆದು ಸರ್ವಾಧಿಕಾರವೂ ಇವರಿಂದಲೇ ನಡಿಸಲ್ಪಡುತ್ತಿರುವದರಿಂದ ಇವರು ಆ ಸ್ಥಾನಕ್ಕೆ ಅರ್ಹರೆಂದು ನಿರ್ಧರಿಸಿ ಖಾಯಂಮಾಡಲ್ಪಟ್ಟಿರುವರು.

ಅಡ್ಡಪಲ್ಲಕ್ಕಿಯುತ್ಸವ ಹೊಸಪೇಟೆ.

ಹೊಸಪೇಟೆಯಲ್ಲಿ ಬಹುಶಃ 3 ತಿಂಗಳುಗಳಲ್ಲಿ ನಡೆಯಬೇಕಾಗಿದ್ದ ವೀರಶೈವ ಧರ್ಮಗುರುಗಳ ಅಡ್ಡಪಲ್ಲಕ್ಕಿ ಪಂಚಕಲಶ ಬಿರುದಾವಳಿಗಳು ಅವರಿಗೆ ಸನಾತನ ಕಾಲದಿಂದ ಮೆರೆಯಲು ಅಧಿಕಾರವಿದ್ದಿದ್ದರೂ ಇಲ್ಲಿಯ ಭಟ್ಟರು ಇನ್ನು ಕೆಲವು ವೈಶ್ಯ ಜನರನ್ನು ಒಳಪಡಿಸಿಕೊಂಡು ಅಸೂಯಾಭಾವದಿಂದ ವಿನಾಕಾರಣವಾಗಿ ಪುಷ್ಕಳ ತಕರಾರುಗಳನ್ನು ನಡಿಸಿದಾಗ್ಯೂ ಬಳ್ಳಾರಿ ಜಿಲ್ಲಾ ಕಲೆಕ್ಟರ್ ದೊರೆಗಳಾದ ಮಿ|| ಎ. ಸಿ. ಥಫ್ ಐ. ಸಿ. ಎಸ್. ರವರು ಸದರಿ ಜನರ ಅನ್ಯಾಯದ ತಕರಾರನ್ನು ದೂರೀಕರಿಸಿ ಮೆ|| ಜಿಲ್ಲಾ ಸೂಪರಿಂಟೆಂಡೆಂಟ್ ಸಾಹೇಬರಿಗೆ ಖುದ್ದು ಪೋಲೀಸು ಬಂದೋಬಸ್ತಿನಿಂದ ಉತ್ಸವ ಜರಿಗಿಸಲು ಹುಕುಂ ದಯಪಾಲಿಸಿದ ಪ್ರಕಾರ ಹೊಸಪೇಟೆಯಲ್ಲಿ ತಾ|| 31-7-1922 ಸೋಮವಾರ ಪ್ರಾತಃಕಾಲ ಸದರಿ ಗ್ರಾಮದ ವೀರಶೈವಭಕ್ತಮಂಡಳಿಯವರು ತಮ್ಮ ಧರ್ಮ ಗುರುಗಳಾದ -ಶ್ರೀ ಹಿಮವತ್ ಕೇದಾರದ ಏಕೋರಾಮ ವೈರಾಗ್ಯ ಸಿಂಹಾಸನಾಧೀಶ್ವರ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಅಡ್ಡಪಲ್ಲಕ್ಕಿ ಪಂಚಕಲಶ ಮತ್ತು ಅನೇಕ ಬಿರುದಾವಳಿಗಳ ಸಹಿತವಾಗಿ ಬಹು ವಿಜೃಂಭಣೆಯಿಂದ ಉತ್ಸವವನ್ನು ಸಾಂಗೋಪಾಂಗವಾಗಿ ಜರುಗಿಸಿದರು ಮತ್ತು ಉತ್ಸವಕಾಲಕ್ಕೆ ನಮ್ಮಲ್ಲಿಯ ಮೆ|| ಸಬ್ ಕಲೆಕ್ಟರ್ ದೊರೆಗಳಾದ ಇ. ಜಿ. ಬಾರ್ನ್ಸ್ ಐ. ಸಿ. ಎಸ್. ಇವರು ಸಹ ಹಾಜರು ಇದ್ದು ಉತ್ಸವವನ್ನು ಸುರಕ್ಷಿತದಿಂದ ಸಾಂಗೋಪಾಂಗಮಾಡಿದರು. 10 ಸಾವಿರ ಪ್ರೇಕ್ಷಕ ಜನರು ನೆರೆದಿದ್ದರು. ಕು. ಸಿದ್ಧಲಿಂಗಯ್ಯ, ಗುತ್ತಿಗಡ್ಡೆ.

ಮೈಸೂರು ಸಂಸ್ಕೃತಕಾಲೇಜು.

ಈ ವಿಚಾರದಲ್ಲಿ ನನ್ನ ಸ್ನೇಹಿತರೊಬ್ಬರು "ಸಾಧ್ವಿ" ಪತ್ರಿಕೆಯಲ್ಲಿ ಒಬ್ಬ ಬಾತ್ಮೀದಾರರಿಂದ ಪ್ರಕಟಿಸಲ್ಪಟ್ಟಿದ್ದ ಲೇಖನಕ್ಕೆ "ಬ್ರಾಹ್ಮಣ" ನೆಂಬ ಅಭಿದಾನದಿಂದ ಉತ್ತರವನ್ನು ಬರೆದಿದ್ದರು. ಅದನ್ನು ನ್ಯಾಯವಾಗಿ ಪ್ರಕಟಿಸದೆ ಮೊದಲಿನ ಬಾತ್ಮೀದಾರರಿಗೆ ತೋರಿಸಿದಂತೆಯೂ ಅದಕ್ಕೆ ಅವರು ಕೊಟ್ಟಿರುವ ಜವಾಬನ್ನು ಪ್ರಕಟಿಸಿರುವಂತೆಯೂ ಪತ್ರಕರ್ತರು ತಮ್ಮ ಜುಲೈ 28 ರ ಪತ್ರಿಕೆಯಲ್ಲಿ ವಿಜೃಂಭಿಸಿರುತ್ತಾರೆ. ಇದರಿಂದ ಆ ಪತ್ರಿಕೆಯ ಬಾತ್ಮೀದಾರರೂ ಪತ್ರಕರ್ತರೂ ಒಂದೇಕಡೆ ಇದ್ದು ತಮ್ಮ ಮನಸ್ಸಿಗೆ ತೋರಿದಂತೆ ಬರೆಯುವ ಪದ್ಧತಿಯಿರುವಂತೆ ತೋರುತ್ತದೆ. ಹಾಗಿಲ್ಲದಿದ್ದರೆ ಉತ್ತರವನ್ನು ಪ್ರಕಟಿಸಿ ಅನಂತರ ಮೊದಲ ಬಾತ್ಮೀದಾರರ ಉತ್ತರವನ್ನು ಪ್ರಕಟಿಸಿದ್ದಿದ್ದರೆ ನಿಷ್ಪಕ್ಷಪಾತತೆಯು ಹೊರಬೀಳುತ್ತಿತ್ತು, ಇಲ್ಲವೇ ಅವರ ಉತ್ತರವನ್ನು ನನ್ನ "ಬ್ರಾಹ್ಮಣ" ಸ್ನೇಹಿತರಿಗೆ ಮೊದಲು ತೋರಿಸಿ ಪ್ರಕಟಮಾಡಬೇಕಿತ್ತು. ಹಾಗೆ ಮಾಡದೇಹೋದುದರಿಂದ ಭೇದಭಾವಗಳನ್ನು ಬಿಡಬೇಕೆಂಬ ಮತ್ತು ತಾವು ನಿಷ್ಪಕ್ಷಪಾತಿಗಳೆಂಬ ಹರಟೆ ಮಾತುಗಳನ್ನು ಪತ್ರದಲ್ಲಿ ತುಂಬಿಡುವ ಆ ಪತ್ರಕರ್ತರ ವರ್ತನವು ಕಾರ್ಯತಃ ಬದಲಾವಣೆಯಾಗಿರುವುದಕ್ಕೆ ನಾನೇನೆನ್ನಲಿ? ನನ್ನ ಮಿತ್ರರು ಬ್ರಾಹ್ಮಣರಾದಾಗ್ಯೂ ಅವರ ಲೇಖನದಲ್ಲಿ ಬ್ರಾಹ್ಮಣರಾದವರಿಗೆ ಇರಬೇಕಾದ ಶಾಂತಿಶಮದಮಾದಿ ಗುಣಗಳಿಲ್ಲವೆಂತಲೂ ಅಸಂಬದ್ಧ ಪ್ರಲಾಪವೆಂತಲೂ ಅಂದಿದ್ದಾರೆ. ಅವರು ಖಂಡಿತವಾಗಿ ನಿಜವಾದ ಬ್ರಾಹ್ಮಣರು; ಬ್ರಾಹ್ಮಣೇತರರ ವಿಚಾರದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ವಿವರಿಸಿದ್ದರು. "ಪರೋಪಕಾರಃಪುಣ್ಯಾಯ" ವೆಂದು ಪತ್ರಕರ್ತರು ಅವಲಂಬಿಸಿರುವ ಮತ್ತು "ಆತ್ಮವತ್ಸರ್ವಭೂತಾನಿ" ಎಂಬ ಮಾತಿನ ತತ್ವಾರ್ಥವನ್ನು ಅವರು ಬರೀಕಾಗದದ ಮೇಲೆ ಮಾತ್ರ ಇರುವಂತೆ ಮಾಡಿದ್ದು ಶೋಚನೀಯವಾಗಿದೆ. ಕ್ಷತ್ರಿಯ, ವೈಶ್ಯರಿಗೆ ವೇದಶಾಸ್ತ್ರಾದಿಗಳವಶ್ಯಕವೆಂತಲೂ ಅವುಗಳ ಪಾಠಹೇಳುವ ಅಧಿಕಾರವನ್ನು ಬ್ರಾಹ್ಮಣನಿಗೇ ಒಪ್ಪಿಸಬೇಕೆಂತಲೂ ಹೇಳುವ ಈ ಪತ್ರಕರ್ತರ ಸಂಘದವರೇ ಪಾಠಹೇಳಲು ಬ್ರಾಹ್ಮಣ ಪಂಡಿತರನ್ನು ನಿರ್ಬಂಧಿಸಲಾಗದೆಂತ ಹೇಳುತ್ತಾರೆ. ಮತ್ತು ವೇದಶಾಸ್ತ್ರಾದಿಗಳ ಅಭ್ಯಾಸಮಾಡುವವರ ಕ್ಲೇಶವನ್ನು ತಪ್ಪಿಸಿ, ಹಾಗೆ ತಿಳಿದವರಿಂದ ಧರ್ಮಗಳನ್ನು ತಿಳಿದುಕೊಂಡು ಅದರಂತೆ ನಡೆಯಬೇಕೆಂದು ವಿಧಾಯಕವಾಗಿರುವದಾಗಿ ಹೇಳಿದ್ದಾರೆ. ಭಲಾ! ಈ ಧರ್ಮಸೂಕ್ಷ್ಮವನ್ನು ಇವರು ತಿಳಿದಷ್ಟು ಯಾರೂ ಅರಿತಿರಲಾರರು! ಪಾಪ ಕ್ಲೇಶವನ್ನುತಪ್ಪಿಸಿ ತಾವೇ ಇಟ್ಟುಕೊಂಡದ್ದಕ್ಕೆ ಕೃತಜ್ಞರಾಗಬೇಕಾಗಿದೆ. ಈ ವಿಧಾಯಕವನ್ನು ಬಹುಶಃ ದೇವರು ಮಾಡಿರಲಾರನು. ಈ ಪತ್ರಕರ್ತರಂತಹವರೇ ಮಾಡಿರಬೇಕು. ಮಿಕ್ಕ ವಿಚಾರಗಳಿಗೆಲ್ಲಾ ಜವಾಬನ್ನು ಬರೆಯಬಹುದಾದರೂ ಪತ್ರ ದೀರ್ಘವಾಗುವುದಾಗಿ ಬಿಟ್ಟಿದ್ದೇನೆ. ಬ್ರಾಹ್ಮಣಮಿತ್ರ.

ವೀರಶೈವ ಮಹಾಸಭೆ.

ವಿ|| ವಿ|| ವೀರಶೈವ ಸಮಾಜದ ಏಳ್ಗೆಗೆ ಮುಖ್ಯಕಾರಣೀಭೂತವಾದ "ಮಹಾಸಭೆ" ಯು ಇತ್ತೀಚೆಗೆ ಮರೆತುಹೋಯಿತು. ಅದರ ಹೆಸರನ್ನು ಸಹ ಯಾರೂ ನೆನಪುಮಾಡುವದಿಲ್ಲ. ದಾಕ್ಷಿಣಾತ್ಯರು ಆರಂಭಶೂರರು ಎಂಬ ಮಾತು ವಿಶೇಷವಾಗಿ ವೀರಶೈವರಿಗೆ ಒಪ್ಪುತ್ತದೆಂದು ತೋರುತ್ತದೆ. ಯಾಕೆಂದರೆ ದಾಕ್ಷಿಣಾತ್ಯರೇ ಆದ ಜೈನರು, ಮರಾಠೇರು, ಪಾಂಚಾಲರು ತಮ್ಮತಮ್ಮ ಮಹಾಸಭೆಗಳನ್ನು ತಪ್ಪದೆ ಪ್ರತಿವರ್ಷ ಮಾಡುತ್ತಿದ್ದಾರೆ. ನಮಗೆ ಸ್ವಾಭಿಮಾನ (ದುರಭಿಮಾನ) ಬಹಳ, ಕೃತಿಯು ಮಾತ್ರ ಶೂನ್ಯ. ಹೀಗಾದರೆ ಈ ನವಯುಗದ ಜೀವನಶರ್ಯತಿನಲ್ಲಿ ನಮ್ಮ ವೀರಶೈವ ಸಮಾಜವು ಎಷ್ಟು ಹಿಂದೆ ಉಳಿಯುವದೋ ದೇವರೇ ಬಲ್ಲನು. ಮೈಸೂರು ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಮಹಾಸಭೆಗಳಾದವು. ಮೊಗಲಾಯಿ (ನೈಜಾಂ ಸ್ಟೇಟ್) ದವರು ಮಹಾಸಭೆಯನ್ನು ತಮ್ಮಲ್ಲಿ ಮಾಡುತ್ತೇವೆಂಬ ಉತ್ಸಾಹವನ್ನು ಬಹಳಸಾರೆ ತೋರಿಸಿದರು. ಆದರೆ ಅದರಂತೆ ಮಾಡಲಿಲ್ಲ. ಇರಲಿ; ಈ ನಮ್ಮ ವೀರಶೈವಬಾಂಧವರಿಗೆ ಅನಾಯಾಸವಾಗಿ ಒಂದು ಸುಸಂಧಿಯು ಒದಗಿಬಂದಿದೆ. ಅದರಕಡೆಗೆ ಅವರ ಲಕ್ಷ್ಯಹೋದಂತೆ ತೋರುವದಿಲ್ಲ ಅದೇನಂದರೆ—ಶ್ರೀ ಬಿಜ್ಜರಾಜೇಂದ್ರನ ರಾಜಧಾನಿಯಾದ ಪರಶಿವನ ಪ್ರಮಥಗಣಂಗಳ ತವರಮನೆಯಾದ, ವೀರಶೈವಮತದ ಕೀರ್ತಿಧ್ವಜದ ಪುರಾತನಸ್ಥಾನವಾದ ಹೆಸರು ಕೇಳಿದ ಮಾತ್ರವೇ ಪ್ರತಿಯೊಬ್ಬ ವೀರಶೈವನಿಗೆ ನಮ್ಮದೆಂಬ ಅಭಿಮಾನವನ್ನು ಹುಟ್ಟಿಸುವ ಮಂಗಲಕರವಾದ ಶ್ರೀ ಕಲ್ಯಾಣಪಟ್ಟಣದಲ್ಲಿ ಬಸವೇಶ್ವರಪುರಾಣ ಸಮಾಪ್ತಿಯ ಮಹೋತ್ಸವವು ಬಹು ವಿಜೃಂಭಣೆಯೊಡನೆ ಬರುವ ಕಾರ್ತಿಕ ಮಾಸದಲ್ಲಿ ಆಗತಕ್ಕದ್ದದೆ. ಇದಕ್ಕಾಗಿ ಶ್ರೀ ಮುಧೋಳಸ್ವಾಮಿಗಳು ಹೇರಳವಾಗಿ ಧಾನ್ಯ ಮೊದಲಾದ ಭೋಜನವಸ್ತುಸಂಗ್ರಹವನ್ನು ಮಾಡಿದ್ದಾರೆ, ಮತ್ತು ಕೂಡಿಸುತ್ತಲಿದ್ದಾರೆ. ಅಸಂಖ್ಯವೀರಶೈವ ಭಕ್ತಮಾಹೇಶ ಸಮೂಹವು ಕೂಡುವ ಸಂಭವವದೆ. ಮಹಾಸಭೆಯನ್ನು ಕೂಡಿಸುವ ಮೊದಲನೇ ಮಹತ್ವದ ಕಾರ್ಯವೆಂದರೆ ಜನರನ್ನು ಕೂಡಿಸುವದೂ, ಅವರ ಊಟದ ವ್ಯವಸ್ಥೆ ಮಾಡುವದೂ, ಇಷ್ಟಾದಮೇಲೆ ಸಭೆಯ ಕೆಲಸಗಳನ್ನು ಮಾಡುವದು ಅಷ್ಟೇನೂ ಬಿಕ್ಕಟ್ಟಿನದಲ್ಲ. ಅಂದಮೇಲೆ ಮುಖ್ಯಕೆಲಸದ ಸಿದ್ಧತೆಯು ಪುಣ್ಯಾನಿಮಿತ್ತವಾಗಿ ತಾನಾಗಿಯೇ ಆಗಿರುತ್ತದೆ. ಹಾಗೂ ಇದೇವೇಳೆಯಲ್ಲಿ ಮ

ಹಾಸಭೆಯನ್ನು ಕೂಡಿಸಿದರೆ ಅದಕ್ಕೂ ತಕ್ಕ ಸಹಾಯವನ್ನು ಮಾಡಲಿಕ್ಕೆ ಮುಧೋಳದ ಮಹಾಸ್ವಾಮಿಗಳು ಸಿದ್ಧರಿದ್ದಾರೆ. ಆದಕಾರಣ ಮೊಗಲಾಯಿಯ ವೀರಶೈವ ಧುರಂಧರಿಗಳು ವಿಶೇಷತಃ ಕಲಬುರ್ಗಿಯ ವೀರಶೈವ ಬಂಧುಗಳು ಇದರಕಡೆಗೆ ಲಕ್ಷ್ಯಕೊಟ್ಟು ಕಲ್ಯಾಣಪಟ್ಟಣದಲ್ಲಿ ಮಹಾಸಭೆಯನ್ನು ಕೂಡಿಸುವ ಸಿದ್ಧತೆಯನ್ನು ಮಾಡಬೇಕೆಂದು ಸವಿನಯ ಪ್ರಾರ್ಥನೆಯದೆ. ಇನ್ನು ದಿವಸಗಳು ಸ್ವಲ್ಪ ಉಳಿದವು. ಕಾರ್ಯವು ವಿಶೇಷವಿರುತ್ತದೆ. ಆದ್ದರಿಂದ ಸಿದ್ಧತೆಗೋಸ್ಕರ ಮಾಡತಕ್ಕ ಕೆಲಸಗಳನ್ನು ವಿಚಾರಮಾಡಿ ನಿರ್ಧರಿಸಿ ಈಗಿನಿಂದಲೇ ಕೈಕೊಳ್ಳಬೇಕು. ಶ್ರೀ ಬಸವೇಶ್ವರನ ಕಲ್ಯಾಣಪಟ್ಟಣವನ್ನು ಕಣ್ಣಾರಕಂಡು ಧನ್ಯರಾಗಬೇಕೆಂಬ ಲವಲವಿಕೆಯು ಮಹಾರಾಷ್ಟ್ರ, ಮದ್ರಾಸು, ಮೈಸೂರು, ಕರ್ನಾಟಕದ ವೀರಶೈವರಲ್ಲಿ ವಿಶೇಷವಾಗಿ ಉಂಟು. ಇದರ ಶ್ರೇಯಸನ್ನು ನಮ್ಮ ಕಲ್ಯಾಣ ಮತ್ತು ಕಲಬುರ್ಗಿಯ ಬಂಧುಗಳು ತೆಗೆದುಕೊಳ್ಳಬೇಕೆಂದು ಅಪೇಕ್ಷಿಸುವ.

ಓರ್ವ ವೀರಶೈವ ಸಮಾಜಸೇವಕ.

ಮುಂಬಯಿ ವೀರಶೈವಾಶ್ರಮವು.

(ಲೇಖಕ—ಗುಡಗುಂಟಿ ವಿ. ಎಸ್.)

ಭರತಖಂಡದ ಮುಗಟವೆಂದು ಕರೆಯಲ್ಪಡುವ ಮುಂಬಯಿ ಪಟ್ಟಣವನ್ನು ನೋಡಿದವರೆಲ್ಲರೂ ಇಂಥ ವ್ಯಾಪಾರದ ಜಗತ್ಪ್ರಸಿದ್ಧ ಪಟ್ಟಣದಲ್ಲಿ ವೀರಶೈವರು ಆದಿಕಾಲದಿಂದ ಖ್ಯಾತಿಗೊಂಡ ವ್ಯಾಪಾರಸ್ಥರೆಂದು ಹೆಸರು ಪಡೆದವರು ಹಾಗು ಪಡೆಯುತ್ತಿರುವವರು ಪೂರ್ವದ ತುದಿಗೊಬ್ಬರು ಪಶ್ಚಿಮದ ತುದಿಗೊಬ್ಬರು ದೃಗ್ಗೋಚರವಾಗುತ್ತಿರುವದನ್ನು ಕಂಡು ಮನಸ್ಸಿನಲ್ಲಿ ಬಹು ನೊಂದುಕೊಳ್ಳುವಲ್ಲಿ ವಿನಾಶ್ಚರ್ಯವು? ಆದರೆ ಅದರ ಸಂಬಂಧವಾಗಿ ಬರೀ ವ್ಯಾಕುಲಿತರಾಗಿ ಸೋಮಾರಿಯಂತೆ ಸುಮ್ಮನೆ ಕುಳಿತು ಬಿಡುವ ಜನಗಳೇ ಈ ಜಗತ್ತಿನಲ್ಲಿ ವಿಪುಲವಾಗಿ ದೊರೆಯುವರಲ್ಲದೆ ಅದರ ಮೂಲಕಾರಣವನ್ನು ಪರಿಶೋಧಿಸಿ ಅದಕ್ಕೆ ಸಮಯುಕ್ತಿಯನ್ನು ಹುಡುಕಿ ಅದರಂತೆ ವರ್ತಿಸುವವರು ಮಾತ್ರ ಸಿಗುವದು ತೀರ ವಿರಳವೇ. ಶ್ರೀ ಬೀಳೂರ ಸ್ವಾಮಿಗಳು ಮೇಲೆ ಉದಹರಿಸಿದ ಜನರಿಂದ ತೀರ ಭಿನ್ನರಾಗಿರುವರೆಂಬುದು ಎಲ್ಲರೂ ಮನಗಂಡ ಮಾತು. ಯಾಕಂದರೆ ಮೊದಲನೇ ಸಾರೆ ಅವರು ಮುಂಬಯಿಯನ್ನು ಕಾಣಲಿಕ್ಕೆಂದು ಹೋದಾಗ್ಗೆ ಅಲ್ಲಿ ವೀರಶೈವರಿಗಾಗುತ್ತಿರುವ ಎಡರುಗಳನ್ನು ತತ್‌ಕ್ಷಣವೇ ಕಂಡುಹಿಡಿದು ಅವುಗಳನ್ನು ನಿರ್ಮೂಲನಮಾಡಲು ವೀರಶೈವಾಶ್ರಮವೇ ಅದಕ್ಕೆ ಬಲವಾದ ಸ್ರಾಧನವೆಂದು ತಿಳಿದು, ಕೂಡಲೇ ಅದನ್ನು ಸ್ಥಾಪಿಸುವುದಕ್ಕೋಸ್ಕರ ತಮ್ಮ ಜೋಳಿಗೆಯನ್ನ ಕೈಯಲ್ಲಿ ತೆಗೆದುಕೊಂಡರು. ಪ್ರಥಮ ವಿಚಾರವು ಈ ಮಹನೀಯರ ತಲೆಯಲ್ಲಿ ಬಂದದ್ದೆಂದರೆ ವೀರಶೈವರಿಗೆ ಧರ್ಮವು ಪಂಚಪ್ರಾಣವು. ಅವರು ಅದರ ಸಲುವಾಗಿ ತಮ್ಮ ಜೀವವನ್ನಾದರೂ ತ್ಯಜಿಸುವರೇ ವಿನಾ ಧರ್ಮಲಂಡರಾಗಲಿಕ್ಕಿಲ್ಲ. ಮತ್ತು ಮುಂಬಯಿಯಲ್ಲಿ ವೀರಶೈವ ಆಶ್ರಮವೇ ಇಲ್ಲದಿರುವುದರಿಂದ ವ್ಯಾಪಾರಸ್ಥರು ಅಲ್ಲಿಗೆ ಬಂದು ಇಳಿದುಕೊಳ್ಳಲು ಬಲು ತೊಂದರೆಯಾಗಿರುವುದು. ಎಂಬೀ ಮೊದಲಾದ ವಿಚಾರಗಳಿಂದ ಅವರು ಅತೀವ ಪೀಡಿತರಾಗಿ ಮೇಲೆ ಕಾಣಿಸಿದಂಥ ಅಸಾಧ್ಯ ಕೃತ್ಯವನ್ನು ಕೈಕೊಂಡರು. ಇಂಥ ಮಹಾತ್ಮರು ಸಮಾಜಸೇವೆ ಮಾಡುತ್ತ ಕುಳಿತರೆ ಯಾವ ಕೆಲಸವಾದೀತು ಯಾವ ಕೆಲಸವಾಗಲಿಕ್ಕಿಲ್ಲ? ಸ್ವಲ್ಪಾವಧಿಯಲ್ಲಿ ಅವರಿಗೆ ಅಗಣಿತ ದ್ರವ್ಯವು ದೊರೆತದ್ದರಿಂದ ಆಶ್ರಮವನ್ನು ಅವರು ಬೇಗನೆ ಸಿದ್ಧಪಡಿಸಿದರು. ಆದರೆ ವೀರಶೈವರ ದುರ್ದೈವದಿಂದ ಆ ಆಶ್ರಮವು ಹಾಗು ಪಟ್ಟಣದಲ್ಲಿರುವ ಕೆಲವು ಕುಟಿಲ ಸ್ವಾರ್ಥೀ ಜನರಿಂದ ಅದು ತೀವ್ರವೇ ಕರಗಿಹೋಯಿತೆಂದು ಕೇಳಿ ಯಾವ ಧರ್ಮಾಭಿಮಾನಿಯ ಹೃದಯವು ದುಃಖದಿಂದ ತಲ್ಲೀನವಾಗದು? ಆ ಆಶ್ರಮದ ಹಣವನ್ನು ಅಲ್ಲಿರುವ ಎಷ್ಟೋ ಜನರು ತಮ್ಮ ತೊಡೆಯಕೆಳಗೆ ಹಾಕಿಕೊಂಡುಬಿಟ್ಟಿರುವರೆಂದು ನಮ್ಮ ಕೇಳಿಕೆಯಲ್ಲಿದೆ. ಆದರೆ ಇದು ಅವರ ಕೀರ್ತಿಗೆ ಕಲಂಕತರುವಂಥ ಮಾತಾಗಿರುವುದೆಂಬುದನ್ನು ಅವರೆಂದಿಗೂ ಮರೆಯಕೂಡದು. ಇನ್ನು ಮುಂದಾದರೂ ಅವರು ತಮ್ಮಲ್ಲಿರುವ ಹಣದ ಸಂಖ್ಯೆಯನ್ನು ವೃತ್ತಪತ್ರಗಳಲ್ಲಿ ಪ್ರಸಿದ್ಧಪಡಿಸಿದರೆ ಸಮಾಜದ ಮೇಲೆ ಒಂದು ಮಹದುಪಕಾರಮಾಡಿದಂತಾಗುವದು. ಶ್ರೀ ಗಂಗಾಧರಪ್ಪ ಸಾಬೋಜಿಯಂಥ ಸಮಾಜಪ್ರಿಯ ಜನರು ಇದರ ಸಂಬಂಧ ಸ್ವಲ್ಪ ಪ್ರಯತ್ನಪಟ್ಟರೆ ಕಾರ್ಯವು ಬೇಗನೆ ಕೊನೆಗಾಣದಿರದು. ಮತ್ತೊಂದು ಸಲ ನಾವು ಸ್ವಲ್ಪ ಸ್ವಾಮಿ ಮಹಾರಾಜರ ಕಡೆಗೆ ತೆರಳಿ ನಮ್ಮ ಲಂಬವಾದ ಲೇಖನವನ್ನು ವಿರಮಿಸುವೆವು. ಸ್ವಾಮಿಯವರು ಇತ್ತೀಚೆಲಾಗಿ ಸಮಾಜದ ಕಡೆಗೆ ಅಲ್ಪಸ್ವಲ್ಪ ಅಲಕ್ಷ್ಯಮಾಡುತ್ತಿರುವರೆಂದೂ ಅವರು ತಮ್ಮ ಅರಮನೆಯನ್ನು ಅತಿ ಅಂದವಾಗಿ ರಚಿಸುವಲ್ಲಿ ಮಗ್ನರಾಗಿರುವದರಿಂದ ಜನರು ಹಾಗೆ ಗ್ರಹಿಸಲು ಆಸ್ಪದವಾಗಿರುವುದು. ಅಷ್ಟೊಂದು ಅಪಾರದ್ರವ್ಯವನ್ನು ಅವರು ಒಂದು ಮೂಲೆಯಲ್ಲಿರುವ ಕಟ್ಟಡಕ್ಕಾಗಿ ಹಾಳುಮಾಡುವುದಕ್ಕಿಂತ ಇಂಥ ಪ್ರಸಿದ್ಧ ಸ್ಥಲದಲ್ಲಿ ಅತ್ಯವಶ್ಯಕವಾದ ಆಶ್ರಮದ ಸಲುವಾಗಿ ವೆಚ್ಚಮಾಡಿದರೆ ಅವರ ಹೆಸರು ಅಜರಾಮರ ಉಳಿಯುವದೆಂದು ಅವರ ದೃಢಾಭಿಪ್ರಾಯವು. ಇದರಿಂದ ಸ್ವಾಮಿಗಳು ಮಠ ಕಟ್ಟಿಸಬಾರದೆಂಬದಾಗಿ ಅವರ ಮತವಿರದೆ ಅದು ಸಾದಾ ವಿರುವದುಚಿತವೆಂಬುವದೇ ಅವರ ಸದ್ಧೇತುವು. ಸ್ವಂತ ಸ್ವಾಮಿಗಳೇ ಬಾಗಿಲತನಕ ಹೋಗಿ ಹಣವನ್ನು ಕೇಳಲು ಅಲ್ಪಾವಧಿಯಲ್ಲಿ ಬೇಕಾದಷ್ಟು ದ್ರವ್ಯ ಕೊಡುವುದಲ್ಲದೆ ಮುಂಬಯಿಯಲ್ಲಿರುವ ಜನರ ತೊಡೆ ಕೆಳಗಿನ ಹಣವಾದರೂ ಸರಸವಾಗಿ ಹೊರಪಡುವಲ್ಲಿ ರವೆಯಷ್ಟಾದರೂ ಸಂಶಯವಿಲ್ಲ. ಅಂದಬಳಿಕ ಅವರು ವೀರಶೈವರ ಉದ್ಧಾರಕ್ಕಾಗಿ ತಮ್ಮ ಜೋಳಿಗೆಯನ್ನು ಪುನಃ ಸಿದ್ಧಪಡಿಸುವರೇನು? ಸ್ವಾಮಿಗಳು ಸಮಾಜದ ಕೆಲಸಮಾಡದೆ ಮತ್ತಾರು ಮಾಡಬೇಕು? ಅವರು ಸೊಡ್ಡು ಹೊಡೆದು ನಿಂತರೆ ಆಶ್ರಮವು ನಾಳೆಯೆ ಪುನಃ ರಚಿಸಲ್ಪಟ್ಟಿತೆಂದು ನಾವು ಎದೆತಟ್ಟಿ ಹೇಳಬಲ್ಲೆವು.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.



3

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ ೫ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಕ್ರಯ ರೂ. 8-8-0 ಸೀಮೆ ಪಟ್ಟಿ ಸಹಿತ ರೂ. 6-8-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್. 27

ಲೋಕಪ್ರಸಿದ್ಧವಾದ ವಜ್ರಾಂಗಲೇಹ

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಪಾದರಸ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ತಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಕೇಂದ್ರಿಸುವದು. ಈ ವಜ್ರಾಂಗಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು 15 ದಿನಗಳು ಸೇವಿಸುವದರಿಂದ ಪೂರಾ ಗುಣಕೊಡುವುದು. 3 ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರೆಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2-0-0.

ಒಂದೇ ಆವರ್ತಿ 3 ಡಬ್ಬಿಗಳನ್ನು ತರಿಸಿದರೆ ಟಪಾಲು ಖರ್ಚು ಮಾಫಿ.

ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕೋ
3 ಸಾಹುಕಾರಪೇಟೆ, ಮದರಾಸ್.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಳನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
ಬಳ್ಳಾರಿ.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ, ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿ ಸಹಿತ ರೂ. 4-8-0

ವಿಳಾಸ:—ಮ್ಯಾನೇಜರ್
ಸ್ಟಾರ್ ಹೌಸ್, ಪೋಸ್ಟ್‌ಬಾಕ್ಸ್ ನಂ. 508.
3 ಪಾರ್ಕ್‌ಟೌನ್, ಮದರಾಸು.

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೇಡೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎರವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
30 ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ।	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

೧೯೩೩ ನೆಯ ಇಸವಿ ಅಗಸ್ಟ ತಾ|| ೬ ರಿಂದ ೧೯೩೩ನೆಯ ಅಗಷ್ಟ ತಾ|| ೧೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೫ ನೆಯ ದುಂದುಭಿನಾಮಸಂವತ್ಸರದ ಶ್ರಾವಣಶುದ್ಧ ಚತುರ್ದಶಿಯಿಂದ ಶ್ರಾವಣಬಹುಳ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾಟಕ
6	ಭಾನು	ಚತು	33-22	ಉಷಾ	41-57	22
7	[1] ಸೋಮ	ಪೌರ್ಣ	35-36	ಶ್ರವ	45-58	23
8	[2] ಮಂಗಳ	ಪಾಡ್ಯ	38-50	ಧನಿ	51-4	24
9	ಬುಧ	ಬಿದಿ	43-10	ಶತ	57-2	25
10	ಗುರು	ತದಿ	48-4	ಪೂಭಾ	60	26
11	[3] ಶುಕ್ರ	ಚೌತಿ	53-10	ಪೂಭಾ	3-47	27
12	ಶನಿ	ಪಂಚ	58-24	ಉಭಾ	10-9	28

(1) ಋಗ್ಯಜುರುಪಾಕರ್ಮ. (2) ಮಂಗಳಗೌರೀವ್ರತಂ. (3) ಆದಿ ಶುಕ್ರವಾರಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್‌ವರ್ಕ್ಸ್‌ನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜ ನಹೃತ್ತ ನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪) ಮೈಸೂರ್ ಸ್ಟಾರ್ ಸ್ ೧೯೩೩ ನೇಯ ಇಸವಿ ಅಗಸ್ಟ ತಾರೀಖು ೧೩ ನೇಯ ಭಾನುವಾರ. (ಸಂಚಿಕೆ ೩೩

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತಿಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶರಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಬಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ವೀರಶೈವರು ಅವಶ್ಯ ಸಂಗ್ರಹಿಸತಕ್ಕ ವೀರಶೈವ ಧರ್ಮಪರವಾದ ಸುಂದರ ಫೋಟೋಗಳು.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

೧. ಇದರಲ್ಲಿ ಹನುಮಂತನಿಗೆ ಶ್ರೀ ವೀರಭದ್ರದೇವರು ಮೋಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿದ್ದಾರೆ—ಫು|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೨. ಶ್ರೀ ಶಿವಯೋಗಿ ಸಂಘ:—ಇದರಲ್ಲಿ ಶ್ರೀ ಜ|| ಗು|| ಚಿತ್ರದುರ್ಗ ಮಹಾಸ್ವಾಮಿಗಳು ಗದಗ ತೋಂಟದಾರ್ಯರು, ಅಥಣಿ ಶಿವಯೋಗಿಗಳು ಮುಂತಾದ ೧೮ ಶಿವಯೋಗಿಗಳ ಫೋಟೋಗಳು ಕೂಡಿಸಿ ಇರುವವು. ಇದರಿಂದ ಒಂದೇ ಕಾಲಕ್ಕೆ ಎಲ್ಲಾ ಶಿವಯೋಗಿಗಳ ದರ್ಶನ ಆಗುವದು ೧೮ × ೧೨ ಸೈಜದ ಚಿತ್ರದ ಕ್ರಯ ಪ್ರ|| ೧ಕ್ಕೆ ೮ಆಣೆ.

೩. ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕನಾದ ಶ್ರೀ ಬಸವಣ್ಣನವರ ತೇಜಃಪುಂಜವಾದ ಖಾಸ ಫೋಟೊ ೧೮ × ೧೨ ಸೈಜದ ಪ್ರ|| ೧ಕ್ಕೆ ೮ ಆಣೆ ಕೈ ಬಣ್ಣದು ರೂ. ೧.

೪. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರ ಚನ್ನಬಸವೇಶ್ವರ ಮಡಿವಾಳ ಮಾಚಿದೇವರು ಸಿದ್ಧರಾಮದೇವರು ಮುಂತಾದ ಪ್ರಮಥರು ಶ್ರೀ ಪ್ರಭುದೇವರ ಪಾದಪೂಜಾಮಾಡುವ ಸಮಾರಂಭದ ಫೋಟೊ ಇರುವದು. ಫು|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೫. ಶ್ರೀ ಚನ್ನಬಸವೇಶ್ವರ ಜನ್ಮ:—ಶ್ರೀ ಅಕ್ಕನಾಗಮ್ಮನವರ ಉದರದಲ್ಲಿ ಪ್ರಸಾದದ ಮಹತ್ವದಿಂದೇ ಷಣ್ಮುಖ ಅವತಾರಿಯಾದ ಶ್ರೀ ಚನ್ನಬಸವಣ್ಣನವರ ಜನನವಾದದ್ದು ಮಹತ್ವ ಪೂರ್ಣವಾದ ಫೋಟೊ ಇರುವದು. ಫು|| ಸಾ|| ೧ಕ್ಕೆ ೧-೪-೦ ಕ್ಯಾ||ಸಾ|| ೧ಕ್ಕೆ ೦-೧೨-೦.

೬. ಶ್ರೀಮಡಿವಾಳ ಮಾಚಿದೇವ ಮಹಿಮಾ:—ಸರ್ವಕಾಲಶುಚಿರ್ಭೂತದಿಂದೆ ಇರುವ ಮಡಿವಾಳಯ್ಯಗೆ ಚೇಷ್ಟೆ ಇಂದೆ ಒಬ್ಬ ಭಕ್ತಿಯ ಮುಟ್ಟಿದ ಕೂಡಲೆ ವೀರಭದ್ರಾವತಾರಿ ಆದ ಮಡಿವಾಳಯ್ಯನು ತೋರಿಸಿದ ಪ್ರರಾಕ್ರಮ ಬಿಜ್ಜಳರಾಯನ ಪಶ್ಚಾತ್ತಾಪ, ಬಸವಣ್ಣನ ಭಕ್ತಿ ಇವುಗಳು ಇದರಲ್ಲಿ ಕಂಡುಬರುತ್ತವೆ. ಇದು ಭಕ್ತಿಗಾಂಭಿರ್ಯಯುಕ್ತವಾದ ಫೋಟೊ ಇರುತ್ತದೆ. ಫು|| ಸಾ|| ಪ್ರ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೭. ಶ್ರೀ ಮಹಾದೇವಕಾಲಕೂಟ ವಿಷಪಾನ:—ವಿಷ್ಣು, ಬ್ರಹ್ಮಾದಿದೇವ ಅಸುರರು ಕೂಡಿ ಶ್ರೀ ಶಿವನಿಗೆ ಕಾಲಕೂಟ ವಿಷನಿವಾರಣಾರ್ಥಕ್ಕಾಗಿ ಪ್ರಾರ್ಥಿಸಲು ಶ್ರೀ ಪರಶಿವನು ಆ ಕಾಲಕೂಟವಿಷವನ್ನು ಪ್ರಾಶನಮಾಡಿ ಜಗತ್‌ಪ್ರಲಯವು ನಿಲ್ಲಿಸಿದ ಈ ಫೋಟೊ ಬಹಳ ಸುಂದರ ಇರುತ್ತದೆ. ಫು|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦

೮. ಶ್ರೀ ಶಿವಪ್ರದೋಷಕಾಲದರ್ಶನ:—ಬ್ರಹ್ಮ, ವಿಷ್ಣು, ಇಂದ್ರ, ಅಗ್ನಿ ಮುಂತಾದ ದೇವತರು ಸರಸ್ವತಿ ಲಕ್ಷ್ಮೀ ಮುಂತಾದ ದೇವತಾಸ್ತ್ರೀಯರು ಕೂಡಿ ತಾಳ, ಮೃದಂಗ, ವೀಣಾ ಮುಂತಾದ ವಾದ್ಯಗಳಿಂದೇ ಗಾನ ಮತ್ತು ಭಜನೆ ಮಾಡುತ್ತ ಯಾವತ್ತು ದೇವತಾ ಋಷಿಗಳು ಶ್ರೀ ಪರಶಿವನ ದರ್ಶನ ತೆಗೆದುಕೊಳ್ಳುತ್ತಿರುವ ಈ ಫೋಟೊ ಬಹು ಸುಂದರವಾಗಿ ದರ್ಶನೀಯ ಇರುವದು. ಫು|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೯. ಶ್ರೀ ಬಸವೇಶ್ವರ ಸಂಗಮೈಕ್ಯ:—ಶ್ರೀ ಬಸವಣ್ಣನವರು ಕೂಡಲ ಸಂಗಮನಾಥನಲ್ಲಿ ಐಕ್ಯವಾಗುವ ಇದು ಅಭೂತಪೂರ್ವವಾದ ಫೋಟೊ ಇರುವದು. ಫು|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೧೦. ಶ್ರೀ ಪಂಚಾಚಾರ್ಯರ್ಲಿಂಗೋದ್ಭವ:—೧ ಶ್ರೀ ವಿಶ್ವೇಶಲಿಂಗದಿಂದ ಉದ್ಭವಿಸಿದ ಶ್ರೀ ವಿಶ್ವಾರಾಧ್ಯರು, ೨ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಿಂದೇ ಉದ್ಭವಿಸಿದ ಶ್ರೀ ಪಂಡಿತಾರಾಧ್ಯರು, ೩ ಶ್ರೀ ಹಿಮವತ್‌ಕೇದಾರ ರಾಮನಾಥಲಿಂಗದಿಂದ ಉದ್ಭವಿಸಿದ ಶ್ರೀ ಏಕೋರಾಮಾರಾಧ್ಯರು, ೫ ಶ್ರೀ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಅವತರಿಸಿದ ರೇವಣಾರಾಧ್ಯರು. ಈ ಆಚಾರ್ಯರ ಫೋಟೋಗಳು ಬೇರೆ ಬೇರೆ ಇರುವವು. ಇವು ಅತ್ಯಂತ ಮಹತ್ವವುಳ್ಳ ಫೋಟೋ ಇರುವವು. ಫು|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

ಫೋಟೋ ಲಾಕೆಟ ಮತ್ತು ಫೋಟೋ ಬ್ರುಚಗಳು ಇವುಗಳು ಬೇಕಾದ ದೇವರು, ಸತ್ಪುರುಷರು, ದೇಶಭಕ್ತರ ಫೋಟೋ ಕೂಡ್ರಿಸಿ ಸಿಗುವವು. ಇವು ಗಡಿಯಾರ ಸರಪಳಿಗೆ ಕೋಟಿನ ಕಾಲರ ಮೇಲೆ ಹಚ್ಚಬಹುದು.

ರೋಲ್ಡಗೋಲ್ಡ ಪ್ಯಾನ್ಸಿ ನಕ್ಷಿದಾರ ೨ ಫೋಟೋಗಳು ಕೂಡ್ರಿಸಿದ್ದು	೧ಕ್ಕೆ ೧- ೦-೦	ಸದರ ದುರ್ಬಿಣಿನ ದಪ್ಪಾದ ಹರಳದವು	೧ಕ್ಕೆ ೨- ೮-೦
		ಬೆಳ್ಳಿವು ಗೋಲಾಕಾರ	೧ಕ್ಕೆ ೧- ೮-೦
ಸದರ ರೂಪಾಯಿ ಆಕಾರದ್ದು ೨ ಸದರ	೧ಕ್ಕೆ ೦-೧೨-೦	ಬ್ರುಚ ೧ ಫೋಟೋ ಕೂಡಿಸಿದ್ದು	೧ಕ್ಕೆ ೦- ೮-೦

ಎಲ್ಲಾ ಮಾಲಿಗೆ ಪ್ಯಾಕಿಂಗ ಮತ್ತು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರಿಗೆ ಚನ್ನಾಗಿ ಕಮಿಷನ್ ಗ್ರಾಮಗ್ರಾಮಕ್ಕೆ ಏಜಂಟರು ಬೇಕು. ೧ ಆಣೆ ಬಿಲ್ಲೆ ಕಳಿಸಿ ಕ್ಯಾಟಲಾಗ ತರ್ಸಿಕೊಳ್ಳಿ.

4 ಗಂಗಪ್ಪಾ ಜೇರಗೆ, ಸೋಲಾಪುರ ಸಿಟಿ

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ.

ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 22

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲಿಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು.



ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡುಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲಿ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಟ್ ಭಂಗಾರದ ಮುಳ್ಳುಳ್ಳ

4

ರಾಯಲ್ ಫೌಂಟೆನ್‌ಪೆನ್.

ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿವಿಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹಾಸಭೆಯನ್ನು ಕೂಡಿಸಿದರೆ ಅದಕ್ಕೂ ತಕ್ಕ ಸಹಾಯವನ್ನು ಮಾಡಲಿಕ್ಕೆ ಮುಧೋಳದ ಮಹಾಸ್ವಾಮಿಗಳು ಸಿದ್ಧರಿದ್ದಾರೆ. ಆದಕಾರಣ ಮೊಗಲಾಯಿಯ ವೀರಶೈವ ಪುಢಾರಿಗಳು ವಿಶೇಷತಃ ಕಲಬುರ್ಗಿಯ ವೀರಶೈವ ಬಂಧುಗಳು ಇದರಕಡೆಗೆ ಲಕ್ಷ್ಯಕೊಟ್ಟು ಕಲ್ಯಾಣಪಟ್ಟಣದಲ್ಲಿ ಮಹಾಸಭೆಯನ್ನು ಕೂಡಿಸುವ ಸಿದ್ಧತೆಯನ್ನು ಮಾಡಬೇಕೆಂದು ಸವಿನಯ ಪ್ರಾರ್ಥನೆಯದೆ. ಇನ್ನು ದಿವಸಗಳು ಸ್ವಲ್ಪ ಉಳಿದವು. ಕಾರ್ಯವು ವಿಶೇಷವಿರುತ್ತದೆ. ಆದ್ದರಿಂದ ಸಿದ್ಧತೆಗೋಸ್ಕರ ಮಾಡತಕ್ಕ ಕೆಲಸಗಳನ್ನು ವಿಚಾರಮಾಡಿ ನಿರ್ಧರಿಸಿ ಈಗಿನಿಂದಲೇ ಕೈಕೊಳ್ಳಬೇಕು. ಶ್ರೀ ಬಸವೇಶ್ವರನ ಕಲ್ಯಾಣಪಟ್ಟಣವನ್ನು ಕಣ್ಣಾರಕಂಡು ಧನ್ಯರಾಗಬೇಕೆಂಬ ಲವಲವಿಕೆಯು ಮಹಾರಾಷ್ಟ್ರ, ಮದ್ರಾಸು, ಮೈಸೂರು, ಕರ್ನಾಟಕದ ವೀರಶೈವರಲ್ಲಿ ವಿಶೇಷವಾಗಿ ಉಂಟು. ಇದರ ಶ್ರೇಯಸನ್ನು ನಮ್ಮ ಕಲ್ಯಾಣ ಮತ್ತು ಕಲಬುರ್ಗಿಯ ಬಂಧುಗಳು ತೆಗೆದುಕೊಳ್ಳಬೇಕೆಂದು ಅಪೇಕ್ಷಿಸುವ.

ಓರ್ವ ವೀರಶೈವ ಸಮಾಜಸೇವಕ.

ಮುಂಬಯಿ ವೀರಶೈವಾಶ್ರಮವು.

(ಲೇಖಕ—ಗುಡಗುಂಟಿ ವಿ. ಎಸ್.)

ಭರತಖಂಡದ ಮುಗಟವೆಂದು ಕರೆಯಲ್ಪಡುವ ಮುಂಬಯಿ ಪಟ್ಟಣವನ್ನು ನೋಡಿದವರೆಲ್ಲರೂ ಇಂಥ ವ್ಯಾಪಾರದ ಜಗತ್ಪ್ರಸಿದ್ಧ ಪಟ್ಟಣದಲ್ಲಿ ವೀರಶೈವರು ಆದಿಕಾಲದಿಂದ ಖ್ಯಾತಿಗೊಂಡ ವ್ಯಾಪಾರಸ್ಥರೆಂದು ಹೆಸರು ಪಡೆದವರು ಹಾಗು ಪಡೆಯುತ್ತಿರುವವರು ಪೂರ್ವದ ತುದಿಗೊಬ್ಬರು ಪಶ್ಚಿಮದ ತುದಿಗೊಬ್ಬರು ದೃಗ್ಗೋಚರವಾಗುತ್ತಿರುವದನ್ನು ಕಂಡು ಮನಸ್ಸಿನಲ್ಲಿ ಬಹು ನೊಂದುಕೊಳ್ಳುವಲ್ಲಿ ಏನಾಶ್ಚರ್ಯವಾವು? ಆದರೆ ಅದರ ಸಂಬಂಧವಾಗಿ ಬರೇ ವ್ಯಾಕುಲಿತರಾಗಿ ಕೋಣಮಾಯಿಯಂತೆ ಸುಮ್ಮನೆ ಕುಳಿತು ಬಿಡುವ ಜನಗಳೇ ಈ ಜಗತ್ತಿನಲ್ಲಿ ವಿಪುಲವಾಗಿ ದೊರೆಯುವರಲ್ಲದೆ ಅದರ ಮೂಲಕಾರಣವನ್ನು ಪರಿಶೋಧಿಸಿ ಅದಕ್ಕೆ ಸಮುಕ್ತಿಯನ್ನು ಹುಡುಕಿ ಅದರಂತೆ ವರ್ತಿಸುವವರು ಮಾತ್ರ ಸಿಗುವದು ತೀರ ವಿರಳವೇ. ಶ್ರೀ ಬೀಳೂರ ಸ್ವಾಮಿಗಳು ಮೇಲೆ ಉದಹರಿಸಿದ ಜನರಿಂದ ತೀರ ಭಿನ್ನರಾಗಿರುವರೆಂಬುದು ಎಲ್ಲರೂ ಮನಗಂಡ ಮಾತು. ಯಾಕಂದರೆ ಮೊದಲನೇ ಸಲವೇ ಅವರು ಮುಂಬಯಿಯನ್ನು ಕಾಣಲಿಕ್ಕೆಂದು ಹೋದಾಗ ಅಲ್ಲಿ ವೀರಶೈವರಿಗಾಗುತ್ತಿರುವ ಎಡರುಗಳನ್ನು ತತ್‌ಕ್ಷಣವೇ ಕಂಡುಹಿಡಿದು ಅವುಗಳನ್ನು ನಿರ್ಮೂಲನಮಾಡಲು ವೀರಶೈವಾಶ್ರಮವೇ ಅದಕ್ಕೆ ಪಾವನ ಪ್ರಸಾದವೆಂದು ತಿಳಿದು, ಕೂಡಲೇ ಅದನ್ನು ಸ್ಥಾಪಿಸುವುದಕ್ಕೋಸ್ಕರ ತಮ್ಮ ಜೋಳಿಗೆಯನ್ನು ಕೈಯಲ್ಲಿ ತೆಗೆದುಕೊಂಡರು. ಪ್ರಥಮ ವಿಚಾರವು ಈ ಮಹನೀಯರ ತಲೆಯಲ್ಲಿ ಬಂದದ್ದೆಂದರೆ ವೀರಶೈವರಿಗೆ ಧರ್ಮವು ಪಂಚಪ್ರಾಣವು. ಅವರು ಅದರ ಸಲುವಾಗಿ ತಮ್ಮ ಜೀವವನ್ನಾದರೂ ತ್ಯಜಿಸುವರೇ ವಿನಾ ಧರ್ಮಲಂಡರಾಗಲಿಕ್ಕಿಲ್ಲ. ಮತ್ತು ಮುಂಬಯಿಯಲ್ಲಿ ವೀರಶೈವ ಆಶ್ರಮವೇ ಇಲ್ಲದಿರುವುದರಿಂದ ವ್ಯಾಪಾರಸ್ಥರು ಅಲ್ಲಿಗೆ ಬಂದು ಇಳಿದುಕೊಳ್ಳಲು ಬಲು ತೊಂದರೆಯಾಗಿರುವುದು. ಎಂಬೀ ಮೊದಲಾದ ವಿಚಾರಗಳಿಂದ ಅವರು ಅತೀವ ಪೀಡಿತರಾಗಿ ಮೇಲೆ ಕಾಣಿಸಿದಂಥ ಅಸಾಧ್ಯ ಕೃತ್ಯವನ್ನು ಕೈಕೊಂಡರು. ಇಂಥ ಮಹಾತ್ಮರು ಸಮಾಜಸೇವೆ ಮಾಡುತ್ತ ಕುಳಿತರೆ ಯಾವ ಕೆಲಸವಾದೀತು ಯಾವ ಕೆಲಸವಾಗಲಿಕ್ಕಿಲ್ಲ? ಸ್ವಲ್ಪಾವಧಿಯಲ್ಲಿ ಅವರಿಗೆ ಅಗಣಿತ ದ್ರವ್ಯವು ದೊರೆತದ್ದರಿಂದ ಆಶ್ರಮವನ್ನು ಅವರು ಬೇಗನೆ ಸಿದ್ಧಪಡಿಸಿದರು. ಆದರೆ ವೀರಶೈವರ ದುರ್ದೈವದಿಂದ ಆ ಆಶ್ರಮವು ಹಾಗು ಪಟ್ಟಣದಲ್ಲಿರುವ ಕೆಲವು ಕುಟಿಲ ಸ್ವಾರ್ಥೀ ಜನರಿಂದ ಅದು ತೀವ್ರವೇ ಕರಗಿಹೋಯಿತೆಂದು ಕೇಳಿ ಯಾವ ಧರ್ಮಾಭಿಮಾನಿಯ ಹೃದಯವು ದುಃಖದಿಂದ ತಲ್ಲೀನವಾಗದು? ಆ ಆಶ್ರಮದ ಹಣವನ್ನು ಅಲ್ಲಿರುವ ಎಷ್ಟೋ ಜನರು ತಮ್ಮ ತೊಡೆಯಕೆಳಗೆ ಹಾಕಿಕೊಂಡುಬಿಟ್ಟಿರುವರೆಂದು ನಮ್ಮ ಕೇಳಿಕೆಯಲ್ಲಿದೆ. ಆದರೆ ಇದು ಅವರ ಕೀರ್ತಿಗೆ ಕಲಂಕತರುವಂಥ ಮಾತಾಗಿರುವುದೆಂಬುದನ್ನು ಅವರೆಂದಿಗೂ ಮರೆಯಕೂಡದು. ಇನ್ನು ಮುಂದಾದರೂ ಅವರು ತಮ್ಮಲ್ಲಿರುವ ಹಣದ ಸಂಖ್ಯೆಯನ್ನು ವೃತ್ತಪತ್ರಗಳಲ್ಲಿ ಪ್ರಸಿದ್ಧಪಡಿಸಿದರೆ ಸಮಾಜದ ಮೇಲೆ ಒಂದು ಮಹದುಪಕಾರಮಾಡಿದಂತಾಗುವದು. ಶ್ರೀ ಗಂಗಾಧರಪ್ಪ ಸಾಬೋಜಿಯಂಥ ಸಮಾಜಪ್ರಿಯ ಜನರು ಇದರ ಸಂಬಂಧ ಸ್ವಲ್ಪ ಪ್ರಯತ್ನಪಟ್ಟರೆ ಕಾರ್ಯವು ಬೇಗನೆ ಕೊನೆಗಾಣಬಹುದು. ಮತ್ತೊಂದು ಸಲ ನಾವು ಸ್ವಲ್ಪ ಸ್ವಾಮಿ ಮಹಾರಾಜರ ಕಡೆಗೆ ತಿರುಗಿ ನಮ್ಮ ಲಂಬವಾದ ಲೇಖನವನ್ನು ವಿರಮಿಸುವೆವು. ಸ್ವಾಮಿಯವರು ಇತ್ತೀಚೆಗೆ ಸಮಾಜದ ಕಡೆಗೆ ಅಲ್ಪಸ್ವಲ್ಪ ಅಲಕ್ಷ್ಯಮಾಡುತ್ತಿರುವರೆಂದೂ ಅವರು ತಮ್ಮ ಅರಮನೆಯನ್ನು ಅತಿ ಅಂದವಾಗಿ ರಚಿಸುವಲ್ಲಿ ಮಗ್ನರಾಗಿರುವದರಿಂದ ಜನರು ಹಾಗೆ ಗ್ರಹಿಸಲು ಆಸ್ಪದವಾಗಿರುವುದು. ಅಷ್ಟೊಂದು ಅಪಾರದ್ರವ್ಯವನ್ನು ಅವರು ಒಂದು ಮೂಲೆಯಲ್ಲಿರುವ ಕಟ್ಟಡಕ್ಕಾಗಿ ಹಾಳುಮಾಡುವುದಕ್ಕಿಂತ ಇಂಥ ಪ್ರಸಿದ್ಧ ಸ್ಥಳದಲ್ಲಿ ಅತ ವಶ್ಯಕವಾದ ಆಶ್ರಮದ ಸಲುವಾಗಿ ವೆಚ್ಚಮಾಡಿದರೆ ಅವರ ಹೆಸರು ಅಜರಾಮರ ಉಳಿಯುವದೆಂದು ಅವರ ದೃಢಾಭಿಪ್ರಾಯವು. ಇದರಿಂದ ಸ್ವಾಮಿಗಳು ಮಠ ಕಟ್ಟಿಸಬಾರದೆಂಬದಾಗಿ ಅವರ ಮತವಿರದೆ ಅದು ಸಾದಾ ವಿರುವದುಚಿತವೆಂಬುವದೇ ಅವರ ಸದ್ಧೇತುವು. ಸ್ವಂತ ಸ್ವಾಮಿಗಳೇ ಬಾಗಿಲತನಕ ಹೋಗಿ ಹಣವನ್ನು ಕೇಳಲು ಅಲ್ಪಾವಧಿಯಲ್ಲಿ ಬೇಕಾದಷ್ಟು ದ್ರವ್ಯ ಕೊಡುವುದಲ್ಲದೆ ಮುಂಬಯಿಯಲ್ಲಿರುವ ಜನರ ತೊಡೆ ಕೆಳಗಿನ ಹಣವಾದರೂ ಸರಸವಾಗಿ ಹೊರಪಡುವಲ್ಲಿ ರವೆಯಷ್ಟಾದರೂ ಸಂಶಯವಿಲ್ಲ. ಅಂದಬಳಿಕ ಅವರು ವೀರಶೈವರ ಉದ್ಧಾರಕ್ಕಾಗಿ ತಮ್ಮ ಜೋಳಿಗೆಯನ್ನು ಪುನಃ ಸಿದ್ಧಪಡಿಸುವರೇನು? ಸ್ವಾಮಿಗಳು ಸಮಾಜದ ಕೆಲಸಮಾಡದೆ ಮತ್ತಾರು ಮಾಡಬೇಕು? ಅವರು ಸೊಡ್ಡುಹೊಡೆದು ನಿಂತರೆ ಆಶ್ರಮವು ನಾಳೆಯೆ ಪುನಃ ರಚಿಸಲ್ಪಟ್ಟೀತೆಂದು ನಾವು ಎದೆತಟ್ಟಿ ಹೇಳಬಲ್ಲೆವು.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.

3

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತದೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ ೫ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಕ್ರಯ ರೂ. 8-8-0 ಸೀಮೆ ಪಟ್ಟಿ ಸಹಿತ ರೂ. 6-9-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,

ಪೋಸ್ಟಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಲೋಕಪ್ರಸಿದ್ಧವಾದ ವಜ್ರಾಂಗಲೇಹ

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ನಾನಾತರ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟುಮಾತ್ರವು ಸಮಾನವಾಗಲಾರವು.

ಒಂದು ಡಬ್ಬಿ ಲೇಹವನ್ನು 15 ದಿನಗಳು ಸೇವಿಸುವದರಿಂದ ಪೂರಾ ಗುಣಕೊಡುವುದು. 3 ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರೆಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2-0-0.

ಒಂದೇ ಆವರ್ತಿ 3 ಡಬ್ಬಿಗಳನ್ನು ತರಿಸಿದರೆ ಟಪಾಲು ಖರ್ಚು ಮಾಫಿ.

ವಿಳಾಸ:—ವಿ. ಎ. ಎನ್. ಪಾಣಿ ಅಂಡ್ ಕೋ

3

ಸಾಹುಕಾರಪೇಟೆ, ಮದರಾಸ್.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ

ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

27

ಬಳ್ಳಾರಿ.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ, ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ; ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿ ಸಹಿತ ರೂ. 4-8-0

ವಿಳಾಸ:—ಮ್ಯಾನೇಜರ್

ಸ್ಟಾರ್ ಹೌಸ್, ಪೋಸ್ಟ್‌ಬಾಕ್ಸ್ ನಂ. 508.

3

ಪಾರ್ಕ್‌ಟೌನ್, ಮದರಾಸು.

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ,

30

ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

೧೯೩೩ ನೆಯ ಇಸವಿ ಅಗಸ್ಟ ತಾ|| ೬ ರಿಂದ ೧೯೩೩ನೆಯ ಅಗಸ್ಟ ತಾ|| ೧೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೫ ನೆಯ ದುಂದುಭಿನಾಮಸಂವತ್ಸರದ ಶ್ರಾವಣಶುದ್ಧ ಚತುರ್ದಶಿಯಿಂದ ಶ್ರಾವಣಬಹುಳ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾಟಕ
6	ಭಾನು	ಚತು	33-22	ಉತ್ತಾ	41-57	22
7	[1] ಸೋಮ	ಪೌರ್ಣ	35-36	ಶ್ರವ	45-58	23
8	[2] ಮಂಗಳ	ಪಾಡ್ಯ	38-50	ಧನಿ	51-4	24
9	ಬುಧ	ಬಿದಿ	43-10	ಶತ	57-2	25
10	ಗುರು	ತದಿ	48-4	ಪೂಭಾ	60	26
11	[3] ಶುಕ್ರ	ಚೌತಿ	53-10	ಪೂಭಾ	3-47	27
12	ಶನಿ	ಪಂಚ	58-24	ಉಭಾ	10-9	28

(1) ಋಗ್ಯಜುರುಪಾಕರ್ಮ. (2) ಮಂಗಳಗೌರೀವ್ರತಂ. (3) ಆದಿ ಶುಕ್ರವಾರಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]

[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೩೩ ನೆಯ ಇಸವಿ ಅಗಸ್ಟ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೩೩

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮುಖಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ವಿವಾಹವಿಧಿಯ ೩ ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿಗಳು,

ಗ್ರಂಥಪ್ರಸಾರಕಮಂಡಲಿ ಮೈಸೂರು.

ವೀರಶೈವರು ಅವಶ್ಯ ಸಂಗ್ರಹಿಸತಕ್ಕ ವೀರಶೈವ ಧರ್ಮಪರವಾದ ಸುಂದರ ಫೋಟೋಗಳು.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

೧. ಇದರಲ್ಲಿ ಹನುಮಂತನಿಗೆ ಶ್ರೀ ವೀರಭದ್ರದೇವರು ಮೋಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿದ್ದಾರೆ—ಪು|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೨. ಶ್ರೀ ಶಿವಯೋಗಿ ಸಂಘ:—ಇದರಲ್ಲಿ ಶ್ರೀ ಜ|| ಗು|| ಚಿತ್ರದುರ್ಗ ಮಹಾಸ್ವಾಮಿಗಳು ಗದಗ ತೋಂಟದಾರ್ಯರು, ಅಥಣಿ ಶಿವಯೋಗಿಗಳು ಮುಂತಾದ ೧೮ ಶಿವಯೋಗಿಗಳ ಫೋಟೋಗಳು ಕೂಡಿಸಿ ಇರುವವು. ಇದರಿಂದ ಒಂದೇ ಕಾಲಕ್ಕೆ ಎಲ್ಲಾ ಶಿವಯೋಗಿಗಳ ದರ್ಶನ ಆಗುವದು ೧೮ × ೧೨ ಸೈಜದ ಚಿತ್ರದ ಕ್ರಯ ಪ್ರ|| ೧ಕ್ಕೆ ೮ಆಣೆ.

೩. ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕನಾದ ಶ್ರೀ ಬಸವಣ್ಣನವರ ತೇಜಃಪುಂಜವಾದ ಖಾಸ ಫೋಟೊ ೧೮ × ೧೨ ಸೈಜದ ಪ್ರ|| ೧ಕ್ಕೆ ೮ ಆಣೆ ಕೈ ಬಣ್ಣದು ರೂ. ೧.

೪. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರ ಚನ್ನಬಸವೇಶ್ವರ ಮಡಿವಾಳ ಮಾಚಿದೇವರು ಸಿದ್ಧರಾಮದೇವರು ಮುಂತಾದ ಪ್ರಮುಖರು ಶ್ರೀ ಪ್ರಭುದೇವರ ಪಾದಪೂಜಾಮಾಡುವ ಸಮಾರಂಭದ ಫೋಟೊ ಇರುವದು. ಪು|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೫. ಶ್ರೀ ಚನ್ನಬಸವೇಶ್ವರ ಜನ್ಮ:—ಶ್ರೀ ಅಕ್ಕನಾಗಮ್ಮನವರ ಉದರದಲ್ಲಿ ಪ್ರಸಾದದ ಮಹತ್ವದಿಂದೇ ಷಣ್ಮುಖ ಅವತಾರಿಯಾದ ಶ್ರೀ ಚನ್ನಬಸವಣ್ಣನವರ ಜನನವಾದದ್ದು ಮಹತ್ವ ಪೂರ್ಣವಾದ ಫೋಟೊ ಇರುವದು. ಪು|| ಸಾ|| ೧ಕ್ಕೆ ೧-೪-೦ ಕ್ಯಾ||ಸಾ|| ೧ಕ್ಕೆ ೦-೧೨-೦.

೬. ಶ್ರೀಮಡಿವಾಳ ಮಾಚಿದೇವ ಮಹಿಮಾ:—ಸರ್ವಕಾಲಶುಚಿರ್ಭೂತದಿಂದೆ ಇರುವ ಮಡಿವಾಳಯ್ಯಗೆ ಚೇಷ್ಠೆ ಇಂದೆ ಒಬ್ಬ ಭವಿಯು ಮುಟ್ಟಿದ ಕೂಡಲೆ ವೀರಭದ್ರಾವತಾರಿ ಆದ ಮಡಿವಾಳಯ್ಯನು ತೋರಿಸಿದ ಪ್ರರಾಕ್ರಮ ಬಿಜ್ಜಳರಾಯನ ಪಶ್ಚಾತ್ತಾಪ, ಬಸವಣ್ಣನ ಭಕ್ತಿ ಇವುಗಳು ಇದರಲ್ಲಿ ಕಂಡುಬರುತ್ತವೆ. ಇದು ಭಕ್ತಿಗಾಂಭೀರ್ಯಯುಕ್ತವಾದ ಫೋಟೊ ಇರುತ್ತದೆ. ಪು|| ಸಾ|| ಪ್ರ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೭. ಶ್ರೀ ಮಹಾದೇವಕಾಲಕೂಟ ವಿಷಪಾನ:—ವಿಷ್ಣು, ಬ್ರಹ್ಮಾದಿದೇವ ಅಸುರರು ಕೂಡಿ ಶ್ರೀ ಶಿವನಿಗೆ ಕಾಲಕೂಟ ವಿಷನಿವಾರಣಾರ್ಥಕ್ಕಾಗಿ ಪ್ರಾರ್ಥಿಸಲು ಶ್ರೀ ಪರಶಿವನು ಆ ಕಾಲಕೂಟವಿಷವನ್ನು ಪ್ರಾಶನಮಾಡಿ ಜಗತ್‌ಪ್ರಲಯವು ನಿಲ್ಲಿಸಿದ ಈ ಫೋಟೊ ಬಹಳ ಸುಂದರ ಇರುತ್ತದೆ. ಪು|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦

೮. ಶ್ರೀ ಶಿವಪ್ರದೋಷಕಾಲದರ್ಶನ:—ಬ್ರಹ್ಮ, ವಿಷ್ಣು, ಇಂದ್ರ, ಅಗ್ನಿ ಮುಂತಾದ ದೇವತರು ಸರಸ್ವತಿ ಲಕ್ಷ್ಮೀ ಮುಂತಾದ ದೇವತಾಸ್ತ್ರೀಯರು ಕೂಡಿ ತಾಳ, ಮೃದಂಗ, ವೀಣಾ ಮುಂತಾದ ವಾದ್ಯಗಳಿಂದೇ ಗಾನ ಮತ್ತು ಭಜನೆ ಮಾಡುತ್ತ ಯಾವತ್ತು ದೇವತಾ ಋಷಿಗಳು ಶ್ರೀ ಪರಶಿವನ ದರ್ಶನ ತೆಗೆದುಕೊಳ್ಳುತ್ತಿರುವ ಈ ಫೋಟೊ ಬಹು ಸುಂದರವಾಗಿ ದರ್ಶನೀಯ ಇರುವದು. ಪು|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೯. ಶ್ರೀ ಬಸವೇಶ್ವರ ಸಂಗವೈಕ್ಯ:—ಶ್ರೀ ಬಸವಣ್ಣನವರು ಕೂಡಲ ಸಂಗಮನಾಥನಲ್ಲಿ ಐಕ್ಯವಾಗುವ ಇದು ಅಭೂತಪೂರ್ವವಾದ ಫೋಟೊ ಇರುವದು. ಪು|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೧೦. ಶ್ರೀ ಪಂಚಾಚಾರ್ಯಲಿಂಗೋದ್ಭವ:—೧ ಶ್ರೀ ವಿಶ್ವೇಶಲಿಂಗದಿಂದ ಉದ್ಭವಿಸಿದ ಶ್ರೀ ವಿಶ್ವಾರಾಧ್ಯರು, ೨ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಿಂದೇ ಉದ್ಭವಿಸಿದ ಶ್ರೀ ಪಂಡಿತಾರಾಧ್ಯರು, ೩ ಶ್ರೀ ಹಿಮವತ್‌ಕೇದಾರ ರಾಮನಾಥಲಿಂಗದಿಂದ ಉದ್ಭವಿಸಿದ ಶ್ರೀ ಏಕೋರಾಮಾರಾಧ್ಯರು, ೪ ಶ್ರೀ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಅವತರಿಸಿದ ರೇವಣಾರಾಧ್ಯರು. ಈ ಆಚಾರ್ಯರ ಫೋಟೋಗಳು ಬೇರೆ ಬೇರೆ ಇರುವವು. ಇವು ಅತ್ಯಂತ ಮಹತ್ವವುಳ್ಳ ಫೋಟೋ ಇರುವವು. ಪು|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

ಫೋಟೋ ಲಾಕೆಟ ಮತ್ತು ಫೋಟೋ ಬ್ರುಚಗಳು ಇವುಗಳು ಬೇಕಾದ ದೇವರು, ಸತ್ಪುರುಷರು, ದೇಶಭಕ್ತರ ಫೋಟೋ ಕೂಡ್ರಿಸಿ ಸಿಗುವವು. ಇವು ಗಡಿಯಾರ ಸರಪಳಿಗೆ ಕೋಟಿನ ಕಾಲರ ಮೇಲೆ ಹಚ್ಚಬಹುದು.

ರೋಲ್ಡಗೋಲ್ಡ ಪ್ಯಾನ್ಸಿ ನಕ್ಷಿದಾರ ೨ ಫೋಟೋಗಳು ಕೂಡ್ರಿಸಿದ್ದು	೧ಕ್ಕೆ ೧- ೦-೦	ಸದರ ದುರ್ಬೀಣಿನ ದಪ್ಪಾದ ಹರಳದವು	೧ಕ್ಕೆ ೨- ೮-೦
ಸದರ ರೂಪಾಯಿ ಆಕಾರದ್ದು ೨ ಸದರ	೧ಕ್ಕೆ ೦-೧೨-೦	ಬೆಳ್ಳಿಯ ಗೋಲಾಕಾರ	೧ಕ್ಕೆ ೧- ೮-೦
		ಬ್ರುಚ ೧ ಫೋಟೋ ಕೂಡಿಸಿದ್ದು	೧ಕ್ಕೆ ೦- ೮-೦

ಎಲ್ಲಾ ಮಾಲಿಗೆ ಪ್ಯಾಕಿಂಗ ಮತ್ತು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರಿಗೆ ಚನ್ನಾಗಿ ಕಮಿಶನ್ ಗ್ರಾಮಗ್ರಾಮಕ್ಕೆ ಏಜಂಟರು ಬೇಕು. ೧ ಆಣೆ ಟಿಲ್ಟೆ ಕಳಿಸಿ ಕ್ಯಾಟಲಾಗ ತರ್‍ಸಿಕೊಳ್ಳಿ.

4

ಗಂಗಪ್ಪಾ ಜೇರಗೆ, ಸೋಲಾಪುರ ಸಿಟಿ

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ.



ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ.

22

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡುಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,

ನಂ. 1 ತಂಬುನಾಯಕನ ಬೀದಿ, ಮದರಾಸು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಟ್ ಭಂಗಾರದ ಮುಳ್ಳುಳ್ಳ

4

ರಾಯಲ್ ಫೌಂಟೇನ್‌ಪೆನ್.

ಎಂಬ ಈ ಪೆನ್ನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿವಿಗೂ ಬರೆಯುವದು. 1ಕ್ಕೆ 1-10-0.

ಈ ಪೆನ್ನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರೆವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ

ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಅಗಸ್ಟ್ ತಾ|| ೧೩ನೆಯ ಭಾನುವಾರ.

ಸಂಸ್ಕೃತ ಮಹಾಪಾಠಶಾಲೆಗಳು—ವೀರಶೈವರು.

ಸಂಸ್ಥಾನದಲ್ಲಿರುವ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ವೀರಶೈವರು ಸೇರಿ ಓದಬೇಕಾಗಿರುವ ಆವಶ್ಯಕತೆಯನ್ನೂ, ಅವುಗಳಲ್ಲಿ ಇವರಿಗೆ ಪ್ರಭುತ್ವದವರು ಅವಕಾಶವನ್ನು ಕಲ್ಪಿಸಿಕೊಡಬೇಕಾದ ಆವಶ್ಯಕತೆಯನ್ನೂ, ನಿಯುಕ್ತ ಸಂಘದವರು ಮಾಡಿರುವ ವರದಿಯ ಪಕ್ಷಪಾತತೆಯನ್ನೂ ಕುರಿತು ಇದುವರೆಗೆ ನಾವು ಕೆಲವು ಲೇಖನಗಳನ್ನು ಬರೆದಿರುತ್ತೇವೆ. ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟುಗಳಿಂದಲೂ ಅನೇಕ ಸ್ಥಲಗಳ ವೀರಶೈವರು ಈ ಸಂಬಂಧವಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಭುತ್ವದ ಚೀಫ್ ಸೆಕ್ರಟರಿಯವರಿಗೆ ಬಿನ್ನಯಿಸಿಕೊಂಡಿರುವರೆಂಬ ಸುದ್ದಿಗಳೂ ಬಂದಿರುತ್ತವೆ. ಅಲ್ಲದೆ ದಾವಣಗೆರೆಯಲ್ಲಿ ಸಂಸ್ಥಾನದ ಸಕಲ ವೀರಶೈವರ ಪಕ್ಷವಾಗಿಯೂ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ ಕೂಡಿದ್ದ ವೀರಶೈವ ಮಹಾಸಭೆಯವರೂ ಕೂಡ ಈ ವಿಷಯವಾಗಿ ಕೂಲಂಕಷವಾದ ಚರ್ಚೆಯನ್ನು ನಡೆಯಿಸಿ, ನಿಷ್ಕೃಷ್ಟಗಳಾದ ತಮ್ಮ ನಿರ್ಧಾರಗಳನ್ನು ಪ್ರಭುತ್ವದವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಮತ್ತು ಶ್ರೀಮನ್ಮಹಾರಾಜರ ಸನ್ನಿಧಿಗೂ ದಿವಾನರಬಳಿಗೂ ವೀರಶೈವ ರಾಯಭಾರವೊಂದು ಹೋಗಿ ಪ್ರತ್ಯಕ್ಷವಾಗಿ ಬಿನ್ನಯಿಸಿಕೊಳ್ಳಬೇಕೆಂದೂ ನಿರ್ಧರಿಸಿದ್ದಾರೆ. ರಾಜಧಾನಿಯ ವೀರಶೈವ ಮಹಾಜನರು ಕಳೆದ ಭಾನುವಾರ ಶಂಕರವಿಲಾಸ ಸಂಸ್ಕೃತ ಪಾಠಶಾಲೆಯಲ್ಲಿ ನೆರೆದಿದ್ದು ಚರ್ಚೆ ನಡೆಯಿಸಿ, ಯುಕ್ತವಾದ ನಿರ್ಧಾರಗಳನ್ನು ಮಾಡಿ ಗೌರ್ನಮೆಂಟಿಗೆ ಕಳುಹಿಸಿಕೊಟ್ಟಿದ್ದಾರೆ. ನಮ್ಮಲ್ಲಿಗೆ ಪ್ರಕಟನಾರ್ಥವಾಗಿ ಅನೇಕ ಲೇಖನಗಳು ಈ ಸಂಬಂಧವಾಗಿ ಬಂದಿದ್ದು ಅವುಗಳಲ್ಲಿ ಅನೇಕವು ಆಗ್ರಹಮೂಲಕವಾದ ಕಠಿನ ಶಬ್ದಪ್ರಯೋಗಗಳಿಂದ ಕೂಡಿದ್ದ ಕಾರಣ ಅಂಥವುಗಳನ್ನು ಪ್ರಕಟಿಸದೆ ಯುಕ್ತವಾಗಿ ತೋರಿದ ಲೇಖನಗಳನ್ನು ಮಾತ್ರ ಪ್ರಕಟಿಸುತ್ತಲಿದ್ದೇವೆ. ಇವುಗಳೆಲ್ಲಾ ವೀರಶೈವರ ಮನಸ್ಸಿನಲ್ಲಿ ಈ ಸಂಬಂಧವಾಗಿ ಉಂಟಾಗಿರುವ ಆತುರತೆಯನ್ನು ಚೆನ್ನಾಗಿ ವ್ಯಕ್ತಪಡಿಸುತ್ತವೆ. ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ದಾವಣಗೆರೆಯಲ್ಲಿ ಸಭಾಧ್ಯಕ್ಷತೆಯ ಪಕ್ಷದಿಂದ ಮಾಡಿರುವ ಶ್ಲಾಘ್ಯವಾದ ಭಾಷಣವನ್ನು ಉದ್ಧರಿಸಿ ಈ ಪತ್ರಿಕೆಯಲ್ಲಿ ಬೇರೊಂದುಕಡೆ ಮುದ್ರಿಸಿರುತ್ತೇವೆ. ಸರ್ಕಾರದ ನಡೆವಳಿಕೆಗಳಲ್ಲಿ ದೀರ್ಘಕಾಲದ ಅನುಭವವು ಅವರಿಗಿರುವುದರಿಂದಲೂ, ಅವರ ಕೌನ್ಸಿಲ್‌ಗಿರಿಯಲ್ಲಿ ಮುಜರಾಯಿ ಶಾಖೆಯ ಮೇಲ್ವಿಚಾರಣೆಯು ಅವರಿಗೆ ಸಂಬಂಧಪಟ್ಟಿದ್ದುದರಿಂದಲೂ ಆ ಹಿಂದಣ ಕಾಲದಿಂದ ಇದುವರೆಗೆ ನಡೆದುಬಂದಿರುವ ವ್ಯವಹಾರಗಳೆಲ್ಲಾ ಚೆನ್ನಾಗಿ ತಿಳಿದಿರುವುವು. ಅದುಕಾರಣ ಈ ಸಂಬಂಧವಾಗಿ ಅವರು ಕೊಟ್ಟಿರುವ ಅಭಿಪ್ರಾಯಗಳು ಅಮೌಲ್ಯಗಳಾಗಿರುತ್ತವೆಂಬುದಕ್ಕೆ ಸಂಶಯವಿಲ್ಲ. ನಿಯುಕ್ತ ಸಂಘದವರು ತಮ್ಮ ವರದಿಗೆ ಆಧಾರಮಾಡಿಕೊಂಡು ಹೇಳಿರುವ 6 ಅಂಶಗಳನ್ನೂ ಯುಕ್ತಿಯುಕ್ತವಾದ ಕಾರಣಗಳಿಂದಲೂ ವಿಮರ್ಶೆಯಿಂದಲೂ ಖಂಡಿಸಿ, ವರದಿಯ ಪಕ್ಷಪಾತಿತ್ವ ಮತ್ತು ದುರ್ಬಲತ್ವಗಳನ್ನು ತಮ್ಮ ಭಾಷಣದಲ್ಲಿ ಚೆನ್ನಾಗಿ ಹೊರಗೆಡಹಿರುತ್ತಾರೆ. ನಿಯುಕ್ತ ಸಂಘದವರು ತಮ್ಮ ವರದಿಯಲ್ಲಿ ತ್ರಿಮತ ಬ್ರಾಹ್ಮಣೇತರರಾದ ಉತ್ತಮ ಹಿಂದುಗಳನ್ನೆಲ್ಲಾ ನಿರ್ದೇಶಿಸಿ ತಮ್ಮ ಅಭಿಪ್ರಾಯವನ್ನು ಕೊಟ್ಟಿರುವಂತೆಯೇ ಇವರಾದರೂ ವೀರಶೈವರೊಬ್ಬರ ವಿಷಯವನ್ನೇ ಎತ್ತಿಕೊಳ್ಳದೆ ಇತರ ಹಿಂದೂ ಜನವರ್ಗ ಸಾಮಾನ್ಯವನ್ನು ಕುರಿತೇ ವಿಷಯಪ್ರತಿಪಾದನವನ್ನು ಮಾಡಿರುತ್ತಾರೆ. ಅದುಕಾರಣ ಪ್ರಭುತ್ವದವರಿಂದಲೂ ಪ್ರಜಾವರ್ಗಗಳವರಿಂದಲೂ ಚೆನ್ನಾಗಿ ಗಮನಿಸಲು ಅವರ ಭಾಷಣವು ಅರ್ಹವಾಗಿರುತ್ತದೆ. ವೀರಶೈವ ಪ್ರತಿನಿಧಿಯೆಂಬುವರಿಂದ ಬಂದ ಮತ್ತೊಂದು ಪತ್ರವ್ಯವಹಾರವನ್ನು ಕೂಡ ಇದೇ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ. ಅದರಲ್ಲಿಯೂ ಏತದ್ವಿಷಯಸಂಬಂಧವಾಗಿ ವೀರಶೈವರ ಸಕಾರಣವಾದಗಳೇನುಂಟೋ ಅವೆಲ್ಲಾ ಕ್ರೋಡೀಕೃತವಾಗಿ ಉದಾಹರಿಸಲ್ಪಟ್ಟಿವೆ. ಅದುಕೂಡ ಪ್ರಭುತ್ವದವರಿಂದಲೂ ನಿಖಿಲಸಜ್ಜನರಿಂದಲೂ ಪರಿಶೀಲನೀಯವಾಗಿರುತ್ತದೆ.

ರೋಗಬಾಧೆಯಿದ್ದವರು ವೈದ್ಯಾಲಯಕ್ಕೆ ಬರುವರೇ ಹೊರತು ಇತರರೇನೂ ಬರುವುದಿಲ್ಲ. ಶಾಸ್ತ್ರೀಯ ಪ್ರೌಢಪಾಠಗಳ ಅಭ್ಯಾಸಕ್ಕೆ ವೀರಶೈವರಿಗೆ ಗತ್ಯಂತರವಿಲ್ಲದುದರಿಂದ ಈ ಮಹಾಪಾಠಶಾಲೆಗಳ ಆಶ್ರಯವನ್ನು ಅವರು ಬೇಡುವರೇ ಹೊರತು ಬೇರೆ ಯಾವ ಕಾರಣಕ್ಕೂ ಅಲ್ಲವೆಂಬುದು ಬುದ್ಧಿಯೂ ಕಣ್ಣೂ ಇರುವವರಿಗೆಲ್ಲಾ ಗೊತ್ತೇ ಆಗುತ್ತಿದೆ. ಪ್ರಜೆಗಳ ನ್ಯಾಯವಾದ ಪ್ರಾರ್ಥನೆಯನ್ನು ಈಡೇರಿಸಿಕೊಡುವಲ್ಲಿ "ಸತ್ಯಮೇವೋದ್ಧರಾಮ್ಯಹಂ'' ಎಂಬ ಬಿರುದಿನ ಶಪಥವನ್ನಾಂತಿರುವ ನಮ್ಮ ಪ್ರಭುವರ್ಯರೂ ಅವರ ಪ್ರಭುತ್ವದವರೂ ಸಹ ಅಚಲಿತವಾದ ಆದರವುಳ್ಳವರೆಂಬ ಪೂರ್ಣವಾದ ಭರವಸೆಯನ್ನಿಟ್ಟುಕೊಂಡೇ ಪ್ರಭುತ್ವದವರು ಈ ಸಂಬಂಧದಲ್ಲಿ ಅಭಿಪ್ರಾಯನಿವೇದನಾರ್ಥವಾಗಿ ಕೊಟ್ಟಿದ್ದ ಅವಕಾಶವನ್ನು ವೀರಶೈವರು ಉಪಯೋಗಿಸಿಕೊಂಡು ತಮ್ಮ ನಿರ್ದುಷ್ಟವಾದ ಅಭಿಪ್ರಾಯಗಳನ್ನು ನಿವೇದಿಸಿಕೊಂಡಿರುತ್ತಾರೆ. ಸಫಲಗೊಳಿಸುವ ಭಾರವು ಪ್ರಭುತ್ವದವರ ಸತ್ಯಧರ್ಮನ್ಯಾಯದೃಷ್ಟಿಭಾವಗಳನ್ನವಲಂಬಿಸಿರುತ್ತದೆ.

ಪಕ್ಷಾಂಧವಾಗಿರುವ ಎಲ್ಲೋ ಒಂದೆರಡು ವೃತ್ತಪತ್ರಿಕೆಗಳ ಹೊರತು ದೇಶದಮೇಲಿರುದ ಇತರ ವೃತ್ತಪತ್ರಗಳೆಲ್ಲಾ ನಿಯುಕ್ತಸಂಘದವರ ವರದಿಯ ಅಯುಕ್ತತೆಯನ್ನೂ ಸಂಸ್ಕೃತಭಾಷಾಭಿವೃದ್ಧಿಗಾಗಿ ಪ್ರಯತ್ನಪಡುವ ಸರ್ಕಾರವು ಇತರರಿಗೆಲ್ಲಾ ಮಹಾಪಾಠಶಾಲೆಗಳಲ್ಲಿ ಅಭ್ಯಾಸ ಸೌಕರ್ಯವನ್ನುಂಟುಮಾಡಿಕೊಡಬೇಕಾದುದರ ಯುಕ್ತತೆಯನ್ನೂ ಕುರಿತು ಉತ್ಕೃಷ್ಟವಾದ ಅಭಿಪ್ರಾಯಗಳನ್ನು ಕೊಟ್ಟಿರುತ್ತವೆ. ನಿರ್ಮತ್ಸರಮತಿಗಳಾದ ದೇಶಾಭಿಮಾನಿಗಳೆಲ್ಲಾ ಇಂಥ ಅಭಿಪ್ರಾಯವನ್ನೇ ಹೊಂದಿರುತ್ತಾರೆಂಬುದಕ್ಕೆ ಸಂಶಯವಿಲ್ಲ.

ಪ್ರಪಂಚದ ಮೇಲಿರುವ ಯಾವ ದೇಶೀಯರೂ ಪರರಿಗೆ ಉಪದೇಶಿಸುವುದರಿಂದ ತಮ್ಮ ವಿದ್ಯೆಯು ಅಪವಿತ್ರವಾಗಿ ಅಥವಾ ಪಾಳಾಗಿ ಹೋಗುವುದೆಂದು ಭಾವಿಸಿರುವುದಿಲ್ಲ. ಹಿಂದಣ ಬೌದ್ಧಯುಗದಲ್ಲಿ ತಕ್ಷಶಿಲಾ ನಲಂದಾಶ್ರಮಗಳಲ್ಲಿ ೨-೩ ಸಹಸ್ರ ಮಂದಿ ವಿದ್ಯಾರ್ಥಿಗಳಿದ್ದುಕೊಂಡು ಅಶನವಸನಾದಿಗಳನ್ನೆಲ್ಲಾ ಪ್ರಭುತ್ವದವರಿಂದಲೇ ಪಡೆಯುತ್ತ ಸಕಲ ಶಾಸ್ತ್ರಗಳನ್ನೂ ಅಭ್ಯಾಸಮಾಡುತ್ತಿದ್ದರು. ಅಲ್ಲಿ ಭಾರತೀಯರೇ ಅಲ್ಲದೆ ವಿದೇಶಗಳ ವಿದ್ಯಾವಂತರೆಲ್ಲಾ ಬಂದು ಈ ಮಹಾ ವಿದ್ಯಾಪೀಠಗಳ ಪಂಡಿತ ಮಂಡಲಿಯವರಿಂದ ತಂತಮ್ಮ ಶಾಸ್ತ್ರೀಯ ಸಂಶಯ ನಿವಾರಣೆಗಳನ್ನು ಮಾಡಿಕೊಂಡೂ, ಕೆಲಕಲರು ಅಲ್ಲೇ ನಿಂತು ಅಭ್ಯಾಸಮಾಡಿಕೊಂಡೂ ಹೋಗುತ್ತಿದ್ದರೆಂದು ಆ ಮಹಾ ವಿದ್ಯಾಪೀಠಗಳ ಪ್ರಾಚೀನ ಚರಿತ್ರದಿಂದ ಗೊತ್ತಾಗುತ್ತದೆ. ಪರಮತದ ಬೌದ್ಧಪಂಡಿತರುಗಳು ಕೂಡ ವಿದ್ಯಾದಾನದ ವಿಷಯದಲ್ಲಿ ಇವರವರೆಂಬ ಭೇದವನ್ನಿಟ್ಟುಕೊಂಡಿರಲ್ಲಿಲ್ಲ. ಕೆಲ ಹಿಂದೂ ಪೂರ್ವಾಚಾರ್ಯರು ಕೂಡ ಬೌದ್ಧ ಪಂಡಿತರಲ್ಲಿ ವಿದ್ಯಾಭ್ಯಾಸ ಮಾಡಿದ ಉದಾಹರಣೆಗಳು ಸಿಕ್ಕುತ್ತಿವೆ. ಹೀಗೆ ಪೂರ್ವಕಾಲದಲ್ಲಿ ವಿದ್ಯಾದಾನಕ್ಕೂ ಅರ್ಜನೆಗೂ ಜಾತಿಮತಗಳ ಮೂಲಕ ಪಾತ್ರಾಪಾತ್ರತೆಯನ್ನು ನಿರ್ಧರಿಸುವ ಸಂಕುಚಿತ ದುಷ್ಟ ಸ್ವಾರ್ಥೈಕ ದೃಷ್ಟಿಯು ನಮ್ಮ ದೇಶದಲ್ಲೂ ಕೂಡ ಇರಲಿಲ್ಲವೆಂಬುದು ಸಿದ್ಧವಾಗಿದೆ. ಹೀಗಿರುವಾಗ ಮಧ್ಯಕಾಲದಲ್ಲಿ ಯಾವ ಯಾವ ದೃಷ್ಟಿಯಿಂದಲೋ ಕಲ್ಪಿಸಿಕೊಂಡ ನಿರ್ಬಂಧಗಳಿಂದ ಸಂಸ್ಕೃತ ಜ್ಞಾನ ಭಾಂಡಾಗಾರದ ಪ್ರಯೋಜನವನ್ನು ಸ್ವದೇಶೀಯರಾದ ಸ್ವಮತೀಯರಾದ ಸಹೋದರ ಪ್ರಜೆಗಳಿಗೇ ಇಲ್ಲದಂತೆ ಮಾಡಬೇಕೆನ್ನುವವರ ಪರಿಜ್ಞಾನವೂ ವಾದವೂ ಎಷ್ಟು ಅಸಮಂಜಸವಾಗಿರುವುದೆಂಬುದನ್ನು ಹೇಳಬೇಕಾಗಿಲ್ಲ. ಪ್ರಗಮನ ಶೀಲವಾದ ಪ್ರಪಂಚದ ಈಗಣ ಪರಿಸ್ಥಿತಿಯನ್ನು ನೋಡಿದರೆ ಉತ್ತಮರಾದ ಹಿಂದುಗಳು ಹಾಗಿರಲಿ, ಈಗ ಅಸ್ಪೃಶ್ಯ ಕೋಟಿಯಲ್ಲಿ ಗಣಿಸಲ್ಪಟ್ಟಿರುವ ನಿಮ್ನಜಾತಿಯವರು ಕೂಡ ಇನ್ನು 50 ವರ್ಷಗಳಲ್ಲಿ ಅಧ್ಯಯನ ಸಂಪನ್ನರಾಗಿ ಗೋಚರಿಸುವುದು ಕೂಡ ಅರಿದಲ್ಲವೆಂದು ಭಾವಿಸಬೇಕಾಗಿರುತ್ತದೆ. ದುರಾಹಾರ ದುಷ್ಪಾನ ಮಾಡುವ ವಿದೇಶೀಯರ ಬಾಯಿಗಳಲ್ಲೆಲ್ಲಾ ಈಗ ನಮ್ಮ ವೇದಶಾಸ್ತ್ರಪುರಾಣಾಗಮಗಳು ಹೊಕ್ಕಾಡುತ್ತಿವೆ. ಹೀಗಿದ್ದರೂ ಈಗಣ 20ನೆ ಶತಮಾನದ ನಮ್ಮ ಮಾದರಿ ಮೈಸೂರು ಸಂಸ್ಥಾನದ ಕೆಲವು ದುರಭಿಮಾನಿಗಳು ಮಡಿಯಿಂದ ಸ್ವಜಾತೀಯರಿಗೆ ಮಾತ್ರವೇ ಹೇಳಿ ಕೊಡದೆ ಇತರರಿಗೆ ಬೋಧಿಸಿದರೆ ಸಂಸ್ಕೃತದ ಪಾವಿತ್ರ್ಯವೇ ಕೆಟ್ಟುಹೋಗುವುದೆಂದು ಮಾಡುತ್ತಿರುವ ವಾದವನ್ನು ನೋಡಿದರೆ ನಗೆ ಬರುತ್ತದೆ.

ಈಗ ಸಂಸ್ಕೃತ ಪ್ರೌಢ ಪಾಠಗಳ ಹೆಚ್ಚು ಆವಶ್ಯಕತೆಯನ್ನು ಹೊಂದಿ ಅದರ ಪ್ರಾಪ್ತಿಗಾಗಿ ತಾಪತ್ರಯಪಡುತ್ತಿರುವವರು ವೀರಶೈವರೂ ಮತ್ತು ಜೈನರೂ ಆಗಿರುತ್ತಾರೆ. ಇತರ ಉತ್ತಮಹಿಂದುಗಳಲ್ಲಿ ಈ ತೆರದ ಆವಶ್ಯಕತೆಯು ವಿರಳವಾಗಿರಬಹುದು. ಈ ಎರಡು ಜನವರ್ಗಗಳವರೂ ಕೂಡ ಮಡಿ ಮೈಲಿಗೆಯ ಸ್ವರೂಪಗಳನ್ನರಿತವರೂ ಶುದ್ಧರೂ ಸದಾಹಾರಿಗಳೂ ಆಗಿರುವರೆಂಬುದು ಲೋಕಕ್ಕೆಲ್ಲಾ ಗೊತ್ತೇ ಇದೆ. ಅವರವರ ಮತ ಪದ್ಧತಿಪ್ರಕಾರ ಸ್ನಾನಾದಿ ನಿತ್ಯಕ್ರಿಯೆಗಳನ್ನು ಆಚರಿಸಿಕೊಳ್ಳದೆ ಯಾವ ಸಂಸ್ಕೃತ ವಿದ್ಯಾರ್ಥಿಯೂ ತನ್ನ ಅಭ್ಯಾಸವನ್ನು ಸಾಗಿಸುತ್ತಲಿಲ್ಲ. ಮಡಿಯ ಸಂಬಂಧವಾಗಿ ಪರಪ್ರೇರಣ ನಿರ್ಬಂಧಗಳೇನೂ ಬೇಕಿಲ್ಲದೆ ಈ ವಿದ್ಯಾರ್ಥಿಗಳು ಅದನ್ನು ಪಾಲಿಸಲು ಸಮರ್ಥರೇ ಆಗಿರುತ್ತಾರೆ. ಹೀಗಿರುವಾಗ ಮಡಿಯ ಮಾತನ್ನು ಹೇಳಿಕೊಂಡು ವೀರಶೈವರ ಪ್ರವೇಶಕ್ಕೆ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ಅವಕಾಶಕೊಡಕೂಡದೆಂದು ಹೇಳುವ ವಾದವು ಎಷ್ಟು ಆಭಾಸಮಯವೂ ದುರ್ಬಲವೂ ಆಗಿರುವುದೆಂಬುದನ್ನು ಹೇಳಬೇಕಾಗಿಲ್ಲ. ನಮ್ಮ ಪವಿತ್ರ ಗ್ರಂಥಗಳೇ ಮೊದಲಾದ ಪ್ರಾಚೀನ ಸಂಪತ್ತಿಯನ್ನೆಲ್ಲಾ ವಿದೇಶೀಯರು ಸೂರೆಮಾಡಿಕೊಂಡಿದ್ದರೂ ಆತ್ಮೀಯ ಸಹೋದರರಿಗೆ ಅದರಲ್ಲಿ ಯತ್ಕಿಂಚಿದ್ಭಾಗವನ್ನು ಹಂಚಿಕೊಡುವಷ್ಟು ಉದಾರಚಿತ್ತವನ್ನು ತಾಳಲಾರದೆ ಈ ಕೆಲ ಜನರು ಮಡಿಯ ನೆಪದಿಂದ ಮಾಡುತ್ತಿರುವ ದುರ್ವಾದವು "ನಾನು ಮಡಿಯಲ್ಲಿ ಸೂರಿಗೆ ಒಣಗಲಿಕ್ಕೆ ಕಟ್ಟಿರುವ ಸೀರೆಯನ್ನು ಕಳ್ಳನು ಮುಟ್ಟಿ ಹೇಗೆ ಕದ್ದುಕೊಂಡು ಹೋಗುವನು?'' ಎಂದು ಹೇಳಿದ ಬೋಳಮ್ಮನ ಅಜ್ಞವಾದಕ್ಕೆ ಸಮನಾಗಿದೆಯೇ ಹೊರತು ವಿವೇಕಪೂರಿತವಾಗಿರುವುದಿಲ್ಲ. ಈ ವಿಚಾರಗಳನ್ನೆಲ್ಲಾ ನಮ್ಮ ಸುಜ್ಞ ಪ್ರಜಾವಾತ್ಸಲ್ಯಪೂರಿತ ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಚೆನ್ನಾಗಿ ಪರ್ಯಾಲೋಚಿಸಿ, ನ್ಯಾಯಸಮ್ಮತವೂ ನಿಷ್ಪಕ್ಷಪಾತವೂ ಆದ ತೀರ್ಮಾನವನ್ನು ಮಾಡಿ ದೇಶೀಯ ವಿಶೇಷ ಪ್ರಜೆಗಳ ಮನಸ್ಸಂತೃಪ್ತಿಯನ್ನುಂಟುಮಾಡದಿರಲಾರರೆಂದು ನಂಬುತ್ತೇವೆ.

ಗೌರ್ನಮೆಂಟಿನವರು ಈ ವಿಷಯದಲ್ಲಿ ತಮ್ಮ ಪಕ್ಷದ ವಾದಕ್ಕೆ ಅನುಕೂಲವಾಗಿ ತೀರ್ಮಾನಮಾಡದಿದ್ದರೆ ಗಾಂಧಿಯವರ ಅಸಹಕಾರವನ್ನು ಸಂಸ್ಕೃತ ಪಾಠಶಾಲೆಗಳ ಪಂಡಿತರೂ ವಿದ್ಯಾರ್ಥಿಗಳೂ ಇತರ ಬ್ರಾಹ್ಮಣರೂ ಅವಲಂಬಿಸುವರೆಂಬ ಬೆದರಿಕೆಯನ್ನು ಮೈಸೂರು ಸಂಪದಭ್ಯುದಯ ಪತ್ರಿಕಾ ಕೂಟದವರು ಹಾಕಿರುವರು. ನಮ್ಮ ಗೌರ್ನಮೆಂಟಿನವರು ಬಳೆ ತೊಟ್ಟುಕೊಂಡಿರುವರೆಂದು ಈ ಕೂಟದವರು ತಿಳಿದಿರಬಹುದು. ಅದರಿಂದಲೇ ಆಗಾಗ್ಗೆ ಇಂಥ ದಿಟ್ಟತನದ ಮಾತುಗಳ ಬೆದರಿಕೆಯನ್ನು ಹಾಕುತ್ತಿದ್ದಾರೆ. ಇದೇ ಕೂಟದವರು ಹಿಂದೆ ಸರ್ ಕಾಂತರಾಜ ಅರಸಿನವರ ದಿವಾನಗಿರಿಯಲ್ಲಿ ಪ್ರಜಾಪ್ರತಿನಿಧಿ ಸಭೆಯೊಳಗೆ ಅಸಹಕಾರವನ್ನು ತೋರಿಸಿ ಅದರ ಫಲವನ್ನು ಅನೇಕರು ಉಣ್ಣುವಂತೆ ಮಾಡಿದರು. ಆದರೂ ಪ್ರತಿನಿಧಿ ಸಭೆಯೇನೂ ನಿಂತುಹೋಗಲಿಲ್ಲ. ಈಗಲೂ ಗೌರ್ನಮೆಂಟಿನವರು ಸ್ವಾರ್ಥೈಕ ಚಿಂತಕರಾದ ಕೆಲವರ ವಾದಕ್ಕೆ ಮನಸೋತು ಬಹು ಪ್ರಜಾಮತಕ್ಕೆ ವಿರುದ್ಧವಾದ ತೀರ್ಮಾನವನ್ನು ಮಾಡದೆ ಹೋಗುವ ಪಕ್ಷದಲ್ಲಿ ಈ ಸಂಪದಭ್ಯುದಯಕೂಟದವರು ಮತ್ತೊಂದು ಸಲ ಸಹಾಯನಿರಾಕರಣವನ್ನು ಮಾಡಿಸಲಿ; ಸಂಸ್ಕೃತ ಮಹಾಪಾಠಶಾಲೆಗಳನ್ನು ಮುಚ್ಚಿಸಿಬಿಡಲಿ; ಅಲ್ಲಿಯ ಪಂಡಿತರ ಮನೆಗೆಲ್ಲಾ ಪತಿತರವನ್ನು ನಡೆಯಿಸಿಕೊಡಲಿ. ಅದನ್ನೂ ನೋಡಿಬಿಡೋಣ.

ನಷ್ಟಪರಿಹಾರ, ಮತ್ತು ಆಂಗ್ಲಪ್ರಭುತ್ವದ ಮಹೋದಾರಭಾವ.

ಯೂರೋಪಿನ ಮಹಾಯುದ್ಧವನ್ನು ಜರ್ಮನಿಯು ಕಾಲುಕೆರೆದು ಆರಂಭಿಸಿದುದರಿಂದ ಮಿತ್ರಮಂಡಲೀ ರಾಷ್ಟ್ರಗಳಿಗೆ ಅನಿರ್ವಚನೀಯವಾದಷ್ಟು ನಷ್ಟಕಷ್ಟಗಳುಂಟಾದುವೆಂಬುದರಲ್ಲಿ ಸಂಶಯವಿಲ್ಲ. ಆ ನಷ್ಟವನ್ನು ಜರ್ಮನಿಯು ತುಂಬಿಕೊಡಬೇಕೆಂಬುದು ಪಂಚಾಯತಿಯ ಮೂಲಕ ನಿರ್ಣೀತವಾಗಿ ಹೋಗಿದೆ. ಅದರ ಪ್ರಕಾರ ನಷ್ಟಪರಿಹಾರವನ್ನು ಕಂತುವಾರಾಗಿ ಕೊಡಲು ಜರ್ಮನಿಯು ಒಪ್ಪಿಕೊಂಡು, ಇದುವರೆಗೆ 50 ಕೋಟಿ ಸವರನ್ನುಗಳನ್ನು ಧನರೂಪವಾಗಿಯೂ ಇತರ ವಸ್ತುರೂಪವಾಗಿಯೂ ಜರ್ಮನಿಯು ಮಿತ್ರಮಂಡಲಿಗೆ ಸಲ್ಲಿಸಿರುತ್ತದೆ. ಅಲ್ಲದೆ ಸಂಧಿಪ್ರಕಾರ ಇದುವರೆಗೆ ಜರ್ಮನಿಯು 33478 ಫಿರಂಗಿಗಳನ್ನೂ 38000000 ಫಿರಂಗಿ ಗುಂಡುಗಳನ್ನೂ, 87000 ಯಂತ್ರದ ಫಿರಂಗಿಗಳನ್ನೂ 11000 ಟ್ರಂಚ್ ಮೋರ್ಟರ್ ಎಂಬ ಕಂದಕದ ಆಯುಧಗಳನ್ನೂ, 4500000 ತುಪಾಕಿಗಳನ್ನೂ ಮಿತ್ರಮಂಡಲಿಗೆ ಒಪ್ಪಿಸಿಬಿಟ್ಟಿದೆ. ಅದರ ನೌಕಾದಳವೆಲ್ಲ ಸಂಪೂರ್ಣವಾಗಿ ನಷ್ಟವಾಗಿ ಹೋಯಿತು. ಅದರ ಸೈನಿಕ ಶಕ್ತಿಯು ನಿರ್ಮೂಲವಾಗಿ ಹೋಯಿತು. ಯಾವುದೊಂದುಮಿತ್ರಮಂಡಲಿಯ ಸಣ್ಣ ರಾಷ್ಟ್ರವು ಪ್ರತಿಭಟಿಸಿದರೂ ಇದಿರಾಗುವಷ್ಟು ಸೈನಿಕ ಶಕ್ತಿಯು ಕೂಡ ಈಗ ಜರ್ಮನಿಗೆ ಇರುವುದಿಲ್ಲ. ಸ್ವದೇಶ ಶಾಂತಿರಕ್ಷಣೆಗೆ ತಕ್ಕಷ್ಟು ಸೇನಾಬಲವು ಕೂಡ ಅದಕ್ಕೆ ಇರುವುದಿಲ್ಲ. ಅದರ ಆರ್ಥಿಕ ಸ್ಥಿತಿಯು ಕೂಡ ಬಹಳ ಶೋಚನೀಯವಾಗಿ ದಿವಾಳಿಗೆ ಬಂದಿದೆ. ಸವರನ್ನು 1 ಕ್ಕೆ 20 ಮಾರ್ಕುಗಳ ಪ್ರಕಾರ ಮಾರ್ಪು ಇದ್ದುದು ಈಗ ಸವರನ್ನಿಗೆ 3670 ಮಾರ್ಕುಗಳ ಮಾರ್ಪುಳ್ಳುದಾಗಿ ಅದರ ನಾಣ್ಯವು ಅಷ್ಟು ಬಿದ್ದುಹೋಗಿದೆ. ದೇಶದ ವಾಣಿಜ್ಯ ಪರಿಶ್ರಮಗಳೆಲ್ಲಾ ಹಾಳಾಗಿಹೋದುವು. ಋಣಬಾಧೆಯು ವಿಪರೀತ. ಇದರ ಮೇಲೆ ರಾಜಪಕ್ಷವೊಂದು ಅಲ್ಲಿ ನೆಲಸಿಕೊಂಡು ಪದೇ ಪದೇ ಈಗಣ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ವಿಪ್ಲವವನ್ನುಂಟುಮಾಡುತ್ತಿದೆ. ಈ ತೊಂದರೆಗಳನ್ನೆಲ್ಲಾ ಸೈರಿಸಿಕೊಂಡು ತಲೆಯೆತ್ತಿ ಬಾಳುವುದು ಜರ್ಮನಿಗೆ ಪರಮ ದುಸ್ತರವಾಗಿದೆ. ಜರ್ಮನಿಯ ವಾಣಿಜ್ಯಪರಿಶ್ರಮಗಳು ಯೂರೋಪಿನ ಸಂಪತ್ತಿಗೆ ಮುಖ್ಯ ಸಾಧನಗಳಾಗಿರುತ್ತವೆ. ಜರ್ಮನಿಯು ಹಾಳಾದರೆ ಯೂರೋಪು ಖಂಡಕ್ಕೇ ಮುಪ್ಪುಬಂದಂತೆ ಆಗುವುದು. ಅದುಕಾರಣ ಅದನ್ನು ಆರ್ಥಿಕ ವಿಷಯದಲ್ಲಿ ತಲೆಯೆತ್ತಿಕೊಳ್ಳುವಂತೆ ಮಾಡುವುದು ಮಿತ್ರಮಂಡಲಿಯ ಬಹುರಾಷ್ಟ್ರಗಳಿಗೆ ತತ್ರಾಪಿ ಆಂಗ್ಲದೇಶಕ್ಕೆ ಇಷ್ಟವಾಗಿರುತ್ತದೆ. ಆದರೆ ಜರ್ಮನಿಯ ವಿಷಯದಲ್ಲಿ ಫ್ರಾನ್ಸಿನ ಮನೋಭಾವವು ಮಾತ್ರ ಹಾಗಿರುವುದಿಲ್ಲ. ಉಸುರು ಮಗುಚಿಕೊಳ್ಳುವುದಕ್ಕೆ ಅವಕಾಶಕೊಟ್ಟರೆ ಮತ್ತೆಲ್ಲಿ ಯುದ್ಧ ಸನ್ನದ್ಧವಾಗುವುದೋ ಎಂಬ ಸಂಶಯವು ಜರ್ಮನಿಯ ಮೇಲೆ ಫ್ರಾನ್ಸಿಗೆ ಪ್ರಬಲವಾಗಿದೆ. ಅಲ್ಲದೆ ರಷ್ಯಾ ಜರ್ಮನಿಗಳೆರಡೂ ಪರಸ್ಪರ ಸಂಧಿಮಾಡಿಕೊಂಡ ಮೇಲಂತೂ ಫ್ರಾನ್ಸಿನ ಸಂಶಯವು ಮತ್ತಷ್ಟು ಬಲವಾಗಿದೆ. ಈ ಕಾರಣದಿಂದ ಜರ್ಮನಿಯ ವಿಷಯದಲ್ಲಿ ಫ್ರಾನ್ಸು ಲೇಶಮಾತ್ರವೂ ಕನಿಕರವನ್ನು ತೋರಿಸುತ್ತಲಿಲ್ಲ. ಬಲಾತ್ಕಾರದಿಂದಲಾದರೂ ಜರ್ಮನಿಯಿಂದ ನಷ್ಟ ದ್ರವ್ಯವನ್ನೆಲ್ಲಾ ಸಂಪೂರ್ಣವಾಗಿ ದೀರ್ಘಕಾಲದ ಗಡುಬವನ್ನು ಕೊಡದೆ ಕಂತಿಗೆ ಸರಿಯಾಗಿ ಸುಲಿದುಕೊಳ್ಳಬೇಕೆಂಬುದೇ ಫ್ರಾನ್ಸಿನ ಮನೋನಿಶ್ಚಯವಾಗಿದೆ. ಯುದ್ಧ ಕಾಲದಲ್ಲಿ ಫ್ರಾನ್ಸು ಬೆಲ್ಜಿಯಂ ಇಟಲಿ ಮೊದಲಾದ ಮಿತ್ರಮಂಡಲೀ ರಾಷ್ಟ್ರಗಳಿಗೆ 260 ಕೋಟಿ ಸವರನ್ನುಗಳನ್ನು ಆಂಗ್ಲದೇಶವು ಸಾಲವಾಗಿ ಕೊಟ್ಟಿದೆ. ಈಗ ಆಂಗ್ಲದೇಶಕ್ಕೆ ಮಿತ್ರ ಶತ್ರುರಾಷ್ಟ್ರಗಳಿಂದೆಲ್ಲಾ ಬಡ್ಡಿಯಲ್ಲದೆ 340 ಕೋಟಿ ಸವರನ್ನುಗಳಷ್ಟು ಅಸಲು ಸಾಲವು ಹಿಂದಿರಿಗಿ ಬರಬೇಕಾಗಿದೆ. ಮಿತ್ರಮಂಡಲೀ ರಾಷ್ಟ್ರಗಳಿಗೆ ಬಡ್ಡಿಯಿಲ್ಲದೆಯೇ ಸಾಲವನ್ನು ಕೊಟ್ಟಿದೆ. ಆ 340 ಕೋಟಿಯಲ್ಲಿ 145 ಕೋಟಿ ಸವರನ್ನುಗಳನ್ನು ಜರ್ಮನಿಯೂ, 65 ಕೋಟಿಯನ್ನು ರಷ್ಯಾ[illegible], 130 ಕೋಟಿಯನ್ನು ಮಿತ್ರಮಂಡಲೀ ರಾಷ್ಟ್ರಗಳೂ [illegible]ಆಂಗ್ಲಪ್ರಭುತ್ವಕ್ಕೆ ಹಿಂದಿರಿಗಿಸಲ್ಲಿಸಬೇಕಾಗಿರುತ್ತವೆ. ಆಂಗ್ಲಪ್ರಭುತ್ವಕ್ಕೂ ಸಾಲವಿಲ್ಲದೆ ಇಲ್ಲ. ಯುದ್ಧಕಾಲದಲ್ಲಿ ಅದು ಸ್ವದೇಶೀಯರಿಂದಲೇ 200 ಕೋಟಿ ಸವರನ್ನುಗಳನ್ನು ಸಾಲಮಾಡಿ[illegible]. ಅಲ್ಲದೆ ಅಮೇರಿಕಾಕ್ಕೆ 85 ಕೋಟಿ ಸವರನ್ನುಗಳ ಸಾಲವನ್ನು ಕೊಡಬೇಕಾಗಿದೆ. ಈಗಳಾದರೊ ತನಗೆ ಬರಬೇಕಾದ ಸಾಲಕ್ಕಾಗಿ ಅಮೇರಿಕಾವು ಇಂಗ್ಲಂಡನ್ನೂ, ಇಂಗ್ಲಂಡು, ಫ್ರಾನ್ಸು ಮೊದಲಾದ ಮಿತ್ರ ರಾಷ್ಟ್ರಗಳನ್ನೂ, ಅವು ಜರ್ಮನಿಯನ್ನೂ ತಂತಮ್ಮ ಸಾಲಗಳಿಗಾಗಿ ಪೀಡಿಸುತ್ತಿವೆ. ತಾವು ಅಮೇರಿಕಾಕ್ಕೆ ಸಲ್ಲಿಸಬೇಕಾಗಿರುವ 85 ಕೋಟಿ ಪೌನುಗಳ ಸಾಲವನ್ನು ಅಮೇರಿಕಾವು ಕೇಳದೆ ಬಿಟ್ಟುಬಿಟ್ಟರೆ ತಮಗೆ ಮಿತ್ರಮಂಡಲೀ ರಾಷ್ಟ್ರ ಮೊದಲಾದುವುಗಳು ಕೊಡಬೇಕಾಗಿರುವ ಸಾಲಗಳನ್ನೆಲ್ಲಾ ತಾವು ಬಿಟ್ಟುಬಿಡುವುದಾಗಿಯೂ ಇಲ್ಲವೆ ತಾವು ಅಮೇರಿಕಾಕ್ಕೆ ಸಲ್ಲಿಸಬೇಕಾಗಿರುವ ಸಾಲದಷ್ಟು ಹಣವನ್ನು ಮಾತ್ರ ತಮ್ಮ ಸಾಲಗಾರರಿಂದ ವಸೂಲುಮಾಡಿಕೊಂಡು ಉಳಿದುದನ್ನೆಲ್ಲಾ ಬಿಟ್ಟುಬಿಡುವುದಾಗಿಯೂ ಸಹ ಈ ಆಂಗ್ಲಮಂತ್ರಿಮಂಡಲದ ಲಾರ್ಡ್ ಬಾಲ್ಫರ್‌ರವರು ಪಾರ್ಲಿಮೆಂಟಿನಲ್ಲಿ ಅಪ್ಪಣೆಕೊಡಿಸಿರುತ್ತಾರೆ. ಸಾಮ್ರಾಜ್ಯದ ಮಹಾಘನತೆಗೆ ಅನುಗುಣವಾದ ಈ ಮಹೋದಾರವಾದ ಅಭಿಪ್ರಾಯವನ್ನು ಕೇಳಿ ಪ್ರಪಂಚವೇ ತಲೆದೂಗುತ್ತಿದೆ. ಅಮೇರಿಕಾದವರಿಗೆ ಜರ್ಮನಿಯ ದುಸ್ಥಿತಿಯನ್ನು ಕಂಡು ಕನಿಕರವುಂಟಾಗಿದೆ. ಅದರ ಉದ್ಧಾರವು ಅವರಿಗೂ ಇಷ್ಟವಾಗಿದೆ. ಈ ಸಮಯದಲ್ಲಿ ಅಮೇರಿಕನ್ನರು ಇಂಗ್ಲೀಷರಿಂದ ತಮಗೆ ಬರಬೇಕಾಗಿರುವ 85 ಕೋಟಿ ಸವರನ್ನುಗಳನ್ನು ಮನ್ನಿಸಿಬಿಡುವ ಔದಾರ್ಯವನ್ನು ಜರ್ಮನಿಯನ್ನುದ್ಧರಿಸುವ ದೃಷ್ಟಿಯಿಂದಲಾದರೂ ತೋರಿಸಿದರೆ ಯೂರೋಪುಖಂಡದ ಈಗಿನ ಆರ್ಥಿಕ ಪರಿಸ್ಥಿತಿಯಿಂದ ದುಮುದುಮಿಸುತ್ತಿರುವ ವೈಷಮ್ಯವು ಬಲುಮಟ್ಟಿಗೆ ತೊಲಗಿಹೋಗುವುದು. ಇಂಗ್ಲೀಷರು ತಮ್ಮ ಸಾಲವನ್ನು ಕೇಳದೆ ಬಿಟ್ಟರೆ ಜರ್ಮನರು ತಮಗೆ ತೆರಬೇಕಾದ ಸಾಲವನ್ನು ಬಿಟ್ಟುಬಿಡಲಿಕ್ಕೆ ಫ್ರಾನ್ಸೂ ಸಿದ್ಧವಾಗಿರುವುದು. ಇಂಗ್ಲೀಷರು ಕೇವಲ ಅರ್ಥಲಾಲಸೆಗೇ ಪ್ರಾಧಾನ್ಯವನ್ನು ಕೊಡದೆ ಧರ್ಮಲಾಲಸೆಯನ್ನು ಕೂಡ ಈ ಸಮಯದಲ್ಲಿ ವ್ಯಕ್ತಪಡಿಸಿರುವುದು ಜಗದಭಿನಂದ್ಯವಾಗಿರುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲೆಲ್ಲಾ ಈ ತೆರದ ಮನೋಭಾವವು ಪ್ರಬಲಿಸುತ್ತ ಬಂದರೆ ಲೋಕಶಾಂತಿಯು ಮೂರೂಮುಕ್ಕಾಲು ಗಳಿಗೆಯಲ್ಲಿ ಸಿದ್ಧಿಸಿಹೋಗುವುದು. ಈಗ ಲಂಡನ್ ಪಟ್ಟಣದಲ್ಲಿ ನಷ್ಟಪರಿಹಾರಸಮಸ್ಯಾ ವಿಚಾರಕ್ಕಾಗಿ ಮಿತ್ರಮಂಡಲೀ ರಾಷ್ಟ್ರಗಳವರೆಲ್ಲಾ ಕೂಡಿರುತ್ತಾರೆ. ಅದರಲ್ಲಿ ಆಂಗ್ಲಮಂತ್ರಿವರ್ಯರು ಜರ್ಮನರಿಂದ ಎಷ್ಟುಮಟ್ಟಿಗೆ ನಷ್ಟಪರಿಹಾರವನ್ನು ಪಡೆದುಕೊಂಡು ಅದು ತಲೆಯೆತ್ತಿಕೊಳ್ಳಲು ಅವಕಾಶಕೊಡಬೇಕೆಂಬ ವಿಷಯವಾಗಿ ಬಹಳ ಧರ್ಮವಾದ ಮತ್ತು ಉದಾರವಾದ ಅಭಿಪ್ರಾಯಗಳನ್ನು ಹೊರಗೆಡಹಿದ್ದಾರೆ. ಇದು ಫ್ರಾನ್ಸು ಮಂತ್ರಿಗೆ ಸರಿತೋರದಿದ್ದರೂ, ಬೆಲ್ಜಿಯಂ, ಇಟಲಿ, ಜಪಾನ್ ಪ್ರತಿನಿಧಿಗಳೆಲ್ಲಾ ಅದನ್ನು ಅನುಮೋದಿಸಿರುತ್ತಾರೆ. ಈ ಕೂಟದ ಪರಿಣಾಮವಾದರೂ ಫ್ರಾನ್ಸಿನ ಮನಸ್ಸಿನಲ್ಲಿ ಜರ್ಮನಿಯಮೇಲೆ ಅಂತಃಕರಣವುಂಟಾಗುವಂತೆ ಮಾಡೀತೆಂದು ನಿರೀಕ್ಷಿಸಲ್ಪಟ್ಟಿದೆ.

SANSKRIT FOR NON-BRAHMINS.

MR. PUTTANNA CHETTY'S SPEECH.

We have been receiving quite an unusually large load of correspondence on the question of the admission of non-Brahmins into the Sanskrit Colleges and have had to put by very many of them for want of space. Elsewhare is published the presidential speech delivered in Kannada by Raja Sabhabhushana Dewan Bahadur K. P. Puttanna Chetty Esq., C.I.E., at the Lingayet Conference specially convened to consider this question at Davangere. To those learned members of the Special Committee and to all those who have championed their Report we would commend a careful perusal of the address. Couched in a subdued style, the address demolishes the prohibition theory of the Committee, taking point by point and making short work of each. He is surprised to see that the Committee sitting in the year of Grace 1922 should rely upon a Government order passed on the 7th July 1906, prohibiting non-Brahmins from entering into the Sanskrit Colleges to support their suggestions, though twenty two years ago non-Brahmin students were allowed to sit for examination in Sanskrit, and further to see the educated members of the Committee affirming after great consideration that the circumstances prevailing then held good even today. Education as we know has very little effect after all on the outlook of the orthodox community, which while conveniently refusing to follow its true *Dharma* wants to stick to all the privileges which Manu gave them and to which they have since added many more. They seem to learn one thing from education, that is, to forget reason and justice. Mr. Puttanna Chetty finds that the Committee has conveniently omitted to give the details about the working of the Sanskrit institutions in Benares, Jeypur and Calcutta, and says that even with the meagre facts before them it is evident that those other institutions are more liberal than what we have in Mysore. The Special Committee would have done well to have taken the example of Indore where His Highness has appointed a Veerashaiva Pandit of great fame who has obtained the title "Vedathirtha" from Calcutta University to teach Vedas in the Indore Sanskrit College. In fact we do not think we can find any one Sanskrit College or school in India where the Government refuses admission to non-Brahmins as a whole. Referring to the opinion of the Ex-Raja of Cochin which the Committee makes much of, Mr. Puttanna Chetty very rightly says that it is not a very convincing argument for the Ex-Raja to make that Brahmin Pandits would not like to teach the non-Brahmin youth and that it is not proper for the latter to study Vedas when himself, a non-Brahmin has studied under Brahmin Pandits and become an erudite Sanskrit scholar and there are a large number of non-Brahmin youths who are as keen as the Ex-Raja of Cochin to study Sanskrit. Thirty years ago non-Brahmins were admitted into the Bangalore Sanskrit College, and it would appear that one Student from Travancore belonging to a very backward class known as Shanaru was admitted into that College to study *tharka shastra*, by the then chairman of the College Committee Mr. Arcot Sreenivasacharlu, who also ordered that the non-Brahmin Hindus may be admitted into the College. As Mr. Puttanna Chetty says it is indeed shameful that that broad-mindedness of those early years has now disappeared.

Serious as the matter is, there is an element of humour in the attitude of the Committee. When Veda, Vedanta, Vedanga–all have been translated into English and other languages and have become the property of all Western scholars for our Committee living in a state of bliss to seriously suggest the exclusion of their own non-Brahmin brothren is as amusing as it is absurd and unjust. And to suggest that in Bangalore the non-Brahmins even for the few classes to which they have access are to be segregated is not only not honouring their self-respect but is positively revolting, and no non-Brahmin student would care to have anything with an institution like that. Rightly does Mr. Puttanna Chetty say that the time for prohibiting the non-Brahmins from Sanskrit Education is altogether gone, least of all by the Government. We would say that any attempt to keep out the people from studying Sânskrit and their Scriptures is positively dangerous. Cleavage between communities will become wider and brotherhood and unity-so devoutly wished for will become impossible. In these days when equality is the guiding principle, when in reality there is commingling of professions no community can claim with any advantage to itself religious or social superiority nor is any community going to grant it even if claimed. We have seen of the support given to the Report of the Special Committee by the Brahmins in Mysore and Bangalore, and it is regretable that those who profess nationalism and patriotism, at all seasons have now come forward to support the perpetuation of this iniquitous traditional blunder. The liberality of these patriots has revealed itself. Nationalism in theory and Brahminism in practice seem to be their motto–a principle which we are afraid will not pay any longer. Enough damage has been done to this ancient land by such practices and for the sake of the country would it not be wise and right to overhaul these antiquated notions and modernise them in accordance with the spirit of the times and the needs of the people? And is it not time that this campaign of "prohibition" of Sanskrit learning to non-Brahmins is stopped? No where in the world is their such a "prohibition" of knowledge–of knowing one's own religion. What is obligatory in every other creed on earth Christian or Mohammadan, Parsee, or Buddhist to know is forbidden in our land, and that in the name of religion! A perversion of religion indeed! This is surely a test case for Mysore, a signal to show which way Mysore is advancing. If progress is its watchword, as it should be the ban must be removed without any reservation. Otherwise, we may be pardoned if we say the future is gloomy. Justice and reason no less than peace and progress dictate only one course–to do away with distinctions by throwing open both the Colleges to non-Brahmins.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ಕೂಡ ಉಪಾಕರ್ಮದ ಹಬ್ಬಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದು, ನೆನ್ನೆಯದಿನ ಮತ್ತೆ ಬೆಂಗಳೂರಿಗೆ ಪ್ರಯಾಣಮಾಡಿದರು.

ದಿವಾನರು ಕಳೆದ ಗುರುವಾರ ಬೆಳಿಗ್ಗೆ ಬೆಂಗಳೂರಿಂದ ಸರ್ಕೀಟಿಗೆ ದಯಮಾಡಿಸಿದರು. ೨ನೆ ಕೌನ್ಸಿಲರಾದ ಮಿ|| ಮಿರ್ಹಂಜಾಹುಸೇನ್ ಬಿ.ಎ., ಬಿ.ಎಲ್. ರವರು ಕೂಡ ಈ ತಿಂಗಳಕೊನೆಯವರೆಗೂ ಬೆಂಗಳೂರು ಮೈಸೂರು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಸಂಚಾರಮಾಡುವವರಾಗಿದ್ದಾರೆ.

ಸರದಾರ್ ಸರ್ ಎಂ. ಕಾಂತರಾಜ ಅರಸಿನವರು ಕಳೆದ ತಾ|| 10 ರಲ್ಲಿ ಬೆಂಗಳೂರಿಗೆ ದಯಮಾಡಿಸಿ ಅಲ್ಲಿಂದ ನೆನ್ನೆಯ ದಿನ ಬೊಂಬಾಯಿಗೆ ಪ್ರಯಾಣ ಮಾಡಿದರು. ಅಲ್ಲಿಂದ ಹೊರಟು ಆ ಅಧಿಪತ್ಯದಲ್ಲಿನ ಮುಖ್ಯವಾದ ಪಟ್ಟಣಗಳನ್ನು ಸಂಚರಿಸಿಕೊಂಡು ಸೆಪ್ಟಂಬರ್ ತಾ|| 8ಕ್ಕೆ ದಿಲ್ಲಿಪಟ್ಟಣವನ್ನು ತಲುಪುವುದಾಗಿ ತಿಳಿಯಬರುತ್ತದೆ.

ಬೆಂಗಳೂರು ಲಾಲ್‌ಬಾಗ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಸಿ. ಜವರಯ್ಯನವರನ್ನು ಉದ್ಯಾನವನ ಪರಿಪಾಲನೆಯ ವಿಶೇಷ ಸಂಗತಿಗಳನ್ನು ಅರಿತುಬರಲು 1 ವರ್ಷ ಕಾಲ ಸೀಮೆಗೆ ಕಳುಹಿಸಿಕೊಡಲು ನಮ್ಮ ಸರ್ಕಾರದವರು ಏರ್ಪಡಿಸಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ. ಅದಕ್ಕೆ ತಗಲುವ ವೆಚ್ಚವನ್ನೆಲ್ಲಾ ಪ್ರಭುತ್ವದವರೇ ವಹಿಸುವರು.

ಭರತಖಂಡದ ಸರ್ವಸೇನಾಪತಿಗಳಾದ ಲಾರ್ಡ್ ರಾಲಿನ್ಸನ್‌ರವರು ಗುರುವಾರ ಸಾಯಂಕಾಲ ರಾಜಧಾನಿಗೆ ದಯಮಾಡಿಸಿ ರೆಸಿಡೆನ್ಸಿಯಲ್ಲಿ ನಮ್ಮ ಮಹಾರಾಜರ ಆತಿಥ್ಯದಲ್ಲಿದ್ದುಕೊಂಡಿದ್ದು ಈಗ ಕಾರಾಪುರದ ಕಾಡಿಗೆ ಬೇಟೆಗಾಗಿ ದಯಮಾಡಿಸಿರುತ್ತಾರೆ. ನಾಳೆದಿನ ರಾಜಧಾನಿಗೆ ಹಿಂದಿರಿಗಿ ಬರುತ್ತಾರೆ. ಅವರ ಆಗಮನಗೌರವಾರ್ಥವಾಗಿ 17 ಗುಂಡುಗಳು ಹಾರಿಸಲ್ಪಟ್ಟುವು.

ಸೀನಿಯರ್ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರೂ, ಒಂದಾವೃತ್ತಿ ಆಕ್ಟಿಂಗ್ ಚೀಫ್‌ಕೋರ್ಟು ಜಡ್ಜಿ ಪದವಿಯನ್ನು ಅನುಭವಿಸಿದ್ದವರೂ ಆಗಿರುವ ಮ|| ಬ್ಯಾರಿಸ್ಟರ್ ಬಿ. ನಾಗಪ್ಪನವರನ್ನು ಈಗ ಚೀಫ್‌ಕೋರ್ಟು ಜಡ್ಜೀಪದವಿಗೆ ತರದೆ ಜೂನಿಯರಾಗಿದ್ದವರಿಗೆ ಆ ಪದವಿಯನ್ನು ಕೊಟ್ಟು ಮಿ|| ಬಾನರ್ಜಿಯವರ ದಿವಾನಗಿರಿಯ ಆರಂಭದಲ್ಲೇ ನಡೆದ ಅನ್ಯಾಯದ ಅದ್ಭುತವನ್ನು ನೋಡಿ ವಿಸ್ಮಿತರಾಗಿದ್ದ ಪ್ರಜೆಗಳು, ಈಗ ಚೀಫ್‌ಕೋರ್ಟು ರಜಿಸ್ಟ್ರಾರ್ ಪದವಿಯ ವಿನಿಯೋಗ ವಿಷಯದಲ್ಲೂ ಸೀನಿಯರಾಗಿದ್ದವರನ್ನೆಲ್ಲಾ ಬಿಟ್ಟು ಜೂನಿಯಾರಿಟಿಯಲ್ಲಿದ್ದ ಒಬ್ಬ ಮುಸಲ್ಮಾನರಿಗೆ ಕೊಟ್ಟು ನಡೆಯಿಸಿರುವ ಪುನರಾವೃತ್ತಿಯ ಅನ್ಯಾಯವನ್ನು ನೋಡಿ, ನ್ಯಾಯನಿರ್ವಾಹಶಾಖೆಯಲ್ಲೇ ನ್ಯಾಯಕ್ಕೆ ಗಡೀಪಾರಾಗುತ್ತಿರುವುದು ಶುದ್ಧಾಂಗವಾಗಿ ಅನುಚಿತವಾದುದೆಂದು ಖೇದಪಡುತ್ತಿದ್ದಾರೆ. ಮಿ|| ಬಾನರ್ಜಿಯವರ ಕಾರ್ಯಭಾರದಲ್ಲಿ ಇಂಥ ಅನನ್ವಿತ ಕೃತ್ಯಗಳು ಜರಗುವುವೆಂದು ನಾವು ಕೂಡ ತಿಳಿದಿರಲಿಲ್ಲ.

ರಾಜಧಾನಿಯ ಖಾಸಬಂಗಲೆಯಲ್ಲಿ ಶ್ರೀಮನ್ಮಹಾರಾಜರ ಇದಿರಿಗೆ ಅಗ್ನಿಸ್ತಂಭನವಿದ್ಯೆಯನ್ನು ಪ್ರದರ್ಶಿಸಿ, ಭಂಗಾರದ ತೋಡಾವನ್ನೂ ಧನಬಹುಮಾನವನ್ನೂ ಪಡೆದ ಮೌಲ್ವಿ ಸಯ್ಯದ್ ಷಾ ಅತಿಷಿ ಸಾಹೇಬರವರು ಬರ್ಮಾದೇಶೀಯರಾಗಿರುತ್ತಾರೆ. ಇವರು ಪುರನಿವಾಸಿಗಳಿಗಾಗಿ ಕಳೆದ ಭಾನುವಾರ ತಮ್ಮ ಅಪೂರ್ವ ವಿದ್ಯಾಪ್ರಭಾವವನ್ನು ದೊಡ್ಡಪೇಟೆ ಹಳೆಬಾಡಿಗಾರ್ಡ್ ಲಾಯದ ಆವರಣದಲ್ಲಿ ನಡೆಯಿಸಿದರು. ಪ್ರೇಕ್ಷಕರಿಗೆ ಟಿಕೇಟುಗಳು ಏರ್ಪಡಿಸಲ್ಪಟ್ಟಿದ್ದುವು. ಮಿ|| ಎ. ಮಹಮ್ಮದ್‌ಸೇಟರು ಈ ಏರ್ಪಾಟನ್ನು ಮುತುವರ್ಜಿಯಿಂದ ಮಾಡಿಸಿದ್ದರು. ಹರಡಿದ ಅಗ್ನಿಯ ರಾಶಿಯಮೇಲೆ ಮೌಲ್ವಿಯವರ ಅಪ್ಪಣೆಮೇರೆ ಡಿ|| ಕಮಿಷನರ್ ಮಿ|| ಸಿ.ಎಫ್. ಬೌರಿಂಗ್‌ರವರು ಪೊಲೀಸ್ ಸೂಪರಿಂಟೆಂಡೆಂಟ್ ಮಿ|| ಗನ್ನಿಸಾಹೇಬರು ಅಡ್ವೊಕೇಟ್ ಮಿ|| ಎಂ.ಎಸ್. ಕೃಷ್ಣರಾಯರೇ ಮೊದಲಾದ ಅನೇಕರು ನಡೆದರು. ಪ್ರೇಕ್ಷಕರೆಲ್ಲಾ ಆಶ್ಚರ್ಯಪಟ್ಟರು. ವೀರಶೈವರಲ್ಲಿಯೂ ಇನ್ನೂ ಅನೇಕ ಹಿಂದೂಗಳಲ್ಲಿಯೂ ಅಗ್ನಿಕುಂಡಗಳನ್ನು ದೈವಭಕ್ತರು ನಿರಾಯಾಸದಿಂದ ಹಾಯ್ದು ಹೋಗುವುದು ಸರ್ವಸಾಮಾನ್ಯವಾಗಿದೆ.

ಮೈಸೂರು ಸಂಸ್ಥಾನದಲ್ಲಿ ಆಯುರ್ವೇದಿಕ್ ಕಾಲೇಜಿದೆಯೆಂಬ ಪ್ರಸಿದ್ಧಿಯೇನೊ ದೊಡ್ಡದಾಗಿದೆ. ಯಾರಾದರೂ ಹೊಸಬರು ಬಂದು ಅದಿರುವ ಸ್ಥಲವನ್ನು ನೋಡಿದರೆ ಹೇಸಿಕೊಳ್ಳುವಂತಿದೆ. ಮಾರಕಟ್ಟಿನ ವ್ಯಾಪಾರದ ತತ್ರಾಪಿ ಎಲೆ ಹೂವು ಮಾರುವ ಹೆಂಗುಸರ ಕೂಟವಿರುವ ಒಂದು ಅನಾರೋಗ್ಯವಾದ ಮಾರಕಟ್ಟು ಕಟ್ಟಡದ ಮೂಲೆಯಲ್ಲಿ ಇದು ಇಡಲ್ಪಟ್ಟಿದೆ. ಇದರ ಸಂಬಂಧವಾಗಿಟ್ಟಿರುವ ವೈದ್ಯಾಲಯವೂ ಅಲ್ಲೇ ಇದೆ. ಪಟಾಟೋಪಕ್ಕಲ್ಲದೆ ಆರ್ಯವೈದ್ಯದಲ್ಲಿ ಮೈಸೂರು ಸರ್ಕಾರಕ್ಕೆ ನಿಜವಾದ ಆಸಕ್ತಿಯಿದೆಯೆಂಬುದು ಗೊತ್ತಾಗಬೇಕಾದರೆ ಈ ಕಾಲೇಜನ್ನು ಆ ಸ್ಥಲದಿಂದ ಕೂಡಲೇ ಬದಲಾಯಿಸಿ ಬೇಕಾದಷ್ಟು ಖಾಲಿಬಿದ್ದಿರುವ ಚಾಮರಾಜೇಂದ್ರ ಕೈಗಾರಿಕೆಯ ಶಾಲೆಯ ಕಟ್ಟಡದ ಒಂದು ಭಾಗಕ್ಕೋ ಮತ್ತಾ

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಆಗಸ್ಟ್ ತಾ|| ೧೩ನೆಯ ಭಾನುವಾರ.

ಸಂಸ್ಕೃತ ಮಹಾಪಾಠಶಾಲೆಗಳು—ವೀರಶೈವರು.

ಸಂಸ್ಥಾನದಲ್ಲಿರುವ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ವೀರಶೈವರು ಸೇರಿ ಓದಬೇಕಾಗಿರುವ ಆವಶ್ಯಕತೆಯನ್ನೂ, ಅವುಗಳಲ್ಲಿ ಇವರಿಗೆ ಪ್ರಭುತ್ವದವರು ಅವಕಾಶವನ್ನು ಕಲ್ಪಿಸಿಕೊಡಬೇಕಾದ ಆವಶ್ಯಕತೆಯನ್ನೂ, ನಿಯುಕ್ತ ಸಂಘದವರು ಮಾಡಿರುವ ವರದಿಯ ಪಕ್ಷಪಾತತೆಯನ್ನೂ ಕುರಿತು ಇದುವರೆಗೆ ನಾವು ಕೆಲವು ಲೇಖನಗಳನ್ನು ಬರೆದಿರುತ್ತೇವೆ. ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟುಗಳಿಂದಲೂ ಅನೇಕ ಸ್ಥಲಗಳ ವೀರಶೈವರು ಈ ಸಂಬಂಧವಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಭುತ್ವದ ಚೀಫ್ ಸೆಕ್ರೆಟರಿಯವರಿಗೆ ಬಿನ್ನಯಿಸಿಕೊಂಡಿರುವರೆಂಬ ಸುದ್ದಿಗಳೂ ಬಂದಿರುತ್ತವೆ. ಅಲ್ಲದೆ ದಾವಣಗೆರೆಯಲ್ಲಿ ಸಂಸ್ಥಾನದ ಸಕಲ ವೀರಶೈವರ ಪಕ್ಷವಾಗಿಯೂ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ ಕೂಡಿದ್ದ ವೀರಶೈವ ಮಹಾಸಭೆಯವರೂ ಕೂಡ ಈ ವಿಷಯವಾಗಿ ಕೂಲಂಕಷವಾದ ಚರ್ಚೆಯನ್ನು ನಡೆಯಿಸಿ, ನಿಷ್ಕೃಷ್ಟಗಳಾದ ತಮ್ಮ ನಿರ್ಧಾರಗಳನ್ನು ಪ್ರಭುತ್ವದವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಮತ್ತು ಶ್ರೀಮನ್ಮಹಾರಾಜರ ಸನ್ನಿಧಿಗೂ ದಿವಾನರಬಳಿಗೂ ವೀರಶೈವ ರಾಯಭಾರವೊಂದು ಹೋಗಿ ಪ್ರತ್ಯಕ್ಷವಾಗಿ ಬಿನ್ನಯಿಸಿಕೊಳ್ಳಬೇಕೆಂದೂ ನಿರ್ಧರಿಸಿದ್ದಾರೆ. ರಾಜಧಾನಿಯ ವೀರಶೈವ ಮಹಾಜನರು ಕಳೆದ ಭಾನುವಾರ ಶಂಕರವಿಲಾಸ ಸಂಸ್ಕೃತ ಪಾಠಶಾಲೆಯಲ್ಲಿ ನೆರೆದಿದ್ದು ಚರ್ಚೆನಡೆಯಿಸಿ, ಯುಕ್ತವಾದ ನಿರ್ಧಾರಗಳನ್ನು ಮಾಡಿ ಗೌರ್ನಮೆಂಟಿಗೆ ಕಳುಹಿಸಿಕೊಟ್ಟಿದ್ದಾರೆ. ನಮ್ಮಲ್ಲಿಗೆ ಪ್ರಕಟನಾರ್ಥವಾಗಿ ಅನೇಕ ಲೇಖನಗಳು ಈ ಸಂಬಂಧವಾಗಿ ಬಂದಿದ್ದು ಅವುಗಳಲ್ಲಿ ಅನೇಕವು ಆಗ್ರಹಮೂಲಕವಾದ ಕಠಿನ ಶಬ್ದಪ್ರಯೋಗಗಳಿಂದ ಕೂಡಿದ್ದ ಕಾರಣ ಅಂಥವುಗಳನ್ನು ಪ್ರಕಟಿಸದೆ ಯುಕ್ತವಾಗಿ ತೋರಿದ ಲೇಖನಗಳನ್ನು ಮಾತ್ರ ಪ್ರಕಟಿಸುತ್ತಲಿದ್ದೇವೆ. ಇವುಗಳೆಲ್ಲಾ ವೀರಶೈವರ ಮನಸ್ಸಿನಲ್ಲಿ ಈ ಸಂಬಂಧವಾಗಿ ಉಂಟಾಗಿರುವ ಆತುರತೆಯನ್ನು ಚೆನ್ನಾಗಿ ವ್ಯಕ್ತಪಡಿಸುತ್ತಿವೆ. ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ದಾವಣಗೆರೆಯಲ್ಲಿ ಸಭಾಧ್ಯಕ್ಷತೆಯ ಪಕ್ಷದಿಂದ ಮಾಡಿರುವ ಶ್ಲಾಘ್ಯವಾದ ಭಾಷಣವನ್ನು ಉದ್ಧರಿಸಿ ಈ ಪತ್ರಿಕೆಯಲ್ಲಿ ಬೇರೊಂದುಕಡೆ ಮುದ್ರಿಸಿರುತ್ತೇವೆ. ಸರ್ಕಾರದ ನಡೆವಳಿಕೆಗಳಲ್ಲಿ ದೀರ್ಘಕಾಲದ ಅನುಭವವು ಅವರಿಗಿರುವುದರಿಂದಲೂ, ಅವರ ಕೌನ್ಸಿಲ್‌ಗಿರಿಯಲ್ಲಿ ಮುಜರಾಯಿ ಶಾಖೆಯ ಮೇಲ್ವಿಚಾರಣೆಯು ಅವರಿಗೆ ಸಂಬಂಧಪಟ್ಟಿದ್ದುದರಿಂದಲೂ ಆ ಹಿಂದಣ ಕಾಲದಿಂದ ಇದುವರೆಗೆ ನಡೆದುಬಂದಿರುವ ವ್ಯವಹಾರಗಳೆಲ್ಲಾ ಚೆನ್ನಾಗಿ ತಿಳಿದಿರುವುವು. ಅದುಕಾರಣ ಈ ಸಂಬಂಧವಾಗಿ ಅವರು ಕೊಟ್ಟಿರುವ ಅಭಿಪ್ರಾಯಗಳು ಅಮೌಲ್ಯಗಳಾಗಿರುತ್ತವೆಂಬುದಕ್ಕೆ ಸಂಶಯವಿಲ್ಲ. ನಿಯುಕ್ತ ಸಂಘದವರು ತಮ್ಮ ವರದಿಗೆ ಆಧಾರಮಾಡಿಕೊಂಡು ಹೇಳಿರುವ 6 ಅಂಶಗಳನ್ನೂ ಯುಕ್ತಿಯುಕ್ತವಾದ ಕಾರಣಗಳಿಂದಲೂ ವಿಮರ್ಶೆಯಿಂದಲೂ ಖಂಡಿಸಿ, ವರದಿಯ ಪಕ್ಷಪಾತಿತ್ವ ಮತ್ತು ದುರ್ಬಲತ್ವಗಳನ್ನು ತಮ್ಮ ಭಾಷಣದಲ್ಲಿ ಚೆನ್ನಾಗಿ ಹೊರಗೆಡಹಿರುತ್ತಾರೆ. ನಿಯುಕ್ತ ಸಂಘದವರು ತಮ್ಮ ವರದಿಯಲ್ಲಿ ತ್ರಿಮತ ಬ್ರಾಹ್ಮಣೇತರರಾದ ಉತ್ತಮ ಹಿಂದುಗಳನ್ನೆಲ್ಲಾ ನಿರ್ದೇಶಿಸಿ ತಮ್ಮ ಅಭಿಪ್ರಾಯವನ್ನು ಕೊಟ್ಟಿರುವಂತೆಯೇ ಇವರಾದರೂ ವೀರಶೈವರೊಬ್ಬರ ವಿಷಯವನ್ನೇ ಎತ್ತಿಕೊಳ್ಳದೆ ಇತರ ಹಿಂದೂ ಜನವರ್ಗ ಸಾಮಾನ್ಯವನ್ನು ಕುರಿತೇ ವಿಷಯಪ್ರತಿಪಾದನವನ್ನು ಮಾಡಿರುತ್ತಾರೆ. ಅದುಕಾರಣ ಪ್ರಭುತ್ವದವರಿಂದಲೂ ಪ್ರಜಾವರ್ಗಗಳವರಿಂದಲೂ ಚೆನ್ನಾಗಿ ಗಮನಿಸಲು ಅವರ ಭಾಷಣವು ಅರ್ಹವಾಗಿರುತ್ತದೆ. ವೀರಶೈವ ಪ್ರತಿನಿಧಿಯೆಂಬುವರಿಂದ ಬಂದ ಮತ್ತೊಂದು ಪತ್ರವ್ಯವಹಾರವನ್ನು ಕೂಡ ಇದೇ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ. ಅದರಲ್ಲಿಯೂ ಏತದ್ವಿಷಯಸಂಬಂಧವಾಗಿ ವೀರಶೈವರ ಸಕಾರಣವಾದಗಳೇನುಂಟೋ ಅವೆಲ್ಲಾ ಕ್ರೋಡೀಕೃತವಾಗಿ ಉದಾಹರಿಸಲ್ಪಟ್ಟಿವೆ. ಅದುಕೂಡ ಪ್ರಭುತ್ವದವರಿಂದಲೂ ನಿಖಿಲಸಜ್ಜನರಿಂದಲೂ ಪರಿಶೀಲನೀಯವಾಗಿರುತ್ತದೆ.

ರೋಗಬಾಧೆಯಿದ್ದವರು ವೈದ್ಯಾಲಯಕ್ಕೆ ಬರುವರೇ ಹೊರತು ಇತರರೇನೂ ಬರುವುದಿಲ್ಲ. ಶಾಸ್ತ್ರೀಯ ಪ್ರೌಢಪಾಠಗಳ ಅಭ್ಯಾಸಕ್ಕೆ ವೀರಶೈವರಿಗೆ ಗತ್ಯಂತರವಿಲ್ಲದುದರಿಂದ ಈ ಮಹಾಪಾಠಶಾಲೆಗಳ ಆಶ್ರಯವನ್ನು ಅವರು ಬೇಡುವರೇ ಹೊರತು ಬೇರೆ ಯಾವ ಕಾರಣಕ್ಕೂ ಅಲ್ಲವೆಂಬುದು ಬುದ್ಧಿಯೂ ಕಣ್ಣೂ ಇರುವವರಿಗೆಲ್ಲಾ ಗೊತ್ತೇ ಆಗುತ್ತಿದೆ. ಪ್ರಜೆಗಳ ನ್ಯಾಯವಾದ ಪ್ರಾರ್ಥನೆಯನ್ನು ಈಡೇರಿಸಿಕೊಡುವಲ್ಲಿ "ಸತ್ಯಮೇವೋದ್ಧರಾಮ್ಯಹಂ" ಎಂಬ ಬಿರುದಿನ ಶಪಥವನ್ನಾಂತಿರುವ ನಮ್ಮ ಪ್ರಭುವರ್ಯರೂ ಅವರ ಪ್ರಭುತ್ವದವರೂ ಸಹ ಅಚಲಿತವಾದ ಆದರವುಳ್ಳವರೆಂಬ ಪೂರ್ಣವಾದ ಬರವಸೆಯನ್ನಿಟ್ಟುಕೊಂಡೇ ಪ್ರಭುತ್ವದವರು ಈ ಸಂಬಂಧದಲ್ಲಿ ಅಭಿಪ್ರಾಯನಿವೇದನಾರ್ಥವಾಗಿ ಕೊಟ್ಟಿದ್ದ ಅವಕಾಶವನ್ನು ವೀರಶೈವರು ಉಪಯೋಗಿಸಿಕೊಂಡು ತಮ್ಮ ನಿರ್ದುಷ್ಟವಾದ ಅಭಿಪ್ರಾಯಗಳನ್ನು ನಿವೇದಿಸಿಕೊಂಡಿರುತ್ತಾರೆ. ಸಫಲಗೊಳಿಸುವ ಭಾರವು ಪ್ರಭುತ್ವದವರ ಸತ್ಯಧರ್ಮನ್ಯಾಯದೃಷ್ಟಿಭಾವಗಳನ್ನವಲಂಬಿಸಿರುತ್ತದೆ.

ಪಕ್ಷಾಂಧವಾಗಿರುವ ಎಲ್ಲೋ ಒಂದೆರಡು ವೃತ್ತಪತ್ರಿಕೆಗಳ ಹೊರತು ದೇಶದಮೇಲಿರುವ ಇತರ ವೃತ್ತಪತ್ರಗಳೆಲ್ಲಾ ನಿಯುಕ್ತಸಂಘದವರ ವರದಿಯ ಅಯುಕ್ತತೆಯನ್ನೂ ಸಂಸ್ಕೃತಭಾಷಾಭಿವೃದ್ಧಿಗಾಗಿ ಪ್ರಯತ್ನಪಡುವ ಸರ್ಕಾರವು ಇತರರಿಗೆಲ್ಲಾ ಮಹಾಪಾಠಶಾಲೆಗಳಲ್ಲಿ ಅಭ್ಯಾಸ ಸೌಕರ್ಯವನ್ನುಂಟುಮಾಡಿಕೊಡಬೇಕಾದುದರ ಯುಕ್ತತೆಯನ್ನೂ ಕುರಿತು ಉತ್ಕೃಷ್ಟವಾದ ಅಭಿಪ್ರಾಯಗಳನ್ನು ಕೊಟ್ಟಿರುತ್ತವೆ. ನಿರ್ಮತ್ಸರಮತಿಗಳಾದ ದೇಶಾಭಿಮಾನಿಗಳೆಲ್ಲಾ ಇಂಥ ಅಭಿಪ್ರಾಯವನ್ನೇ ಹೊಂದಿರುತ್ತಾರೆಂಬುದಕ್ಕೆ ಸಂಶಯವಿಲ್ಲ.

ಪ್ರಪಂಚದ ಮೇಲಿರುವ ಯಾವ ದೇಶೀಯರೂ ಪರರಿಗೆ ಉಪದೇಶಿಸುವುದರಿಂದ ತಮ್ಮ ವಿದ್ಯೆಯು ಅಪವಿತ್ರವಾಗಿ ಅಥವಾ ಹಾಳಾಗಿ ಹೋಗುವುದೆಂದು ಭಾವಿಸಿರುವುದಿಲ್ಲ. ಹಿಂದಣ ಬೌದ್ಧಯುಗದಲ್ಲಿ ತಕ್ಷಶಿಲಾ ನಲಂದಾಶ್ರಮಗಳಲ್ಲಿ 2-3 ಸಹಸ್ರ ಮಂದಿ ವಿದ್ಯಾರ್ಥಿಗಳಿದ್ದುಕೊಂಡು ಅಶನವಸನಾದಿಗಳನ್ನೆಲ್ಲಾ ಪ್ರಭುತ್ವದವರಿಂದಲೇ ಪಡೆಯುತ್ತ ಸಕಲ ಶಾಸ್ತ್ರಗಳನ್ನೂ ಅಭ್ಯಾಸಮಾಡುತ್ತಿದ್ದರು. ಅಲ್ಲಿ ಭಾರತೀಯರೇ ಅಲ್ಲದೆ ವಿದೇಶಗಳ ವಿದ್ಯಾವಂತರೆಲ್ಲಾ ಬಂದು ಈ ಮಹಾ ವಿದ್ಯಾಪೀಠಗಳ ಪಂಡಿತ ಮಂಡಲಿಯವರಿಂದ ತಂತಮ್ಮ ಶಾಸ್ತ್ರೀಯ ಸಂಶಯ ನಿವಾರಣೆಗಳನ್ನು ಮಾಡಿಕೊಂಡೂ, ಕೆಲಕಲರು ಅಲ್ಲೇ ನಿಂತು ಅಭ್ಯಾಸಮಾಡಿಕೊಂಡೂ ಹೋಗುತ್ತಿದ್ದರೆಂದು ಆ ಮಹಾ ವಿದ್ಯಾಪೀಠಗಳ ಪ್ರಾಚೀನ ಚರಿತ್ರದಿಂದ ಗೊತ್ತಾಗುತ್ತದೆ. ಪರಮತದ ಬೌದ್ಧಪಂಡಿತರುಗಳು ಕೂಡ ವಿದ್ಯಾದಾನದ ವಿಷಯದಲ್ಲಿ ಇವರವರೆಂಬ ಭೇದವನ್ನಿಟ್ಟುಕೊಂಡಿರಲಿಲ್ಲ. ಕೆಲ ಹಿಂದೂ ಪೂರ್ವಾಚಾರ್ಯರು ಕೂಡ ಬೌದ್ಧ ಪಂಡಿತರಲ್ಲಿ ವಿದ್ಯಾಭ್ಯಾಸ ಮಾಡಿದ ಉದಾಹರಣೆಗಳು ಸಿಕ್ಕುತ್ತಿವೆ. ಹೀಗೆ ಪೂರ್ವಕಾಲದಲ್ಲಿ ವಿದ್ಯಾದಾನಕ್ಕೂ ಅರ್ಜನೆಗೂ ಜಾತಿಮತಗಳ ಮೂಲಕ ಪಾತ್ರಾಪಾತ್ರತೆಯನ್ನು ನಿರ್ಧರಿಸುವ ಸಂಕುಚಿತ ದುಷ್ಟ ಸ್ವಾರ್ಥೈಕ ದೃಷ್ಟಿಯು ನಮ್ಮ ದೇಶದಲ್ಲೂ ಕೂಡ ಇರಲಿಲ್ಲವೆಂಬುದು ಸಿದ್ಧವಾಗಿದೆ. ಹೀಗಿರುವಾಗ ಮಧ್ಯಕಾಲದಲ್ಲಿ ಯಾವ ಯಾವ ದೃಷ್ಟಿಯಿಂದಲೋ ಕಲ್ಪಿಸಿಕೊಂಡ ನಿರ್ಬಂಧಗಳಿಂದ ಸಂಸ್ಕೃತ ಜ್ಞಾನ ಭಾಂಡಾಗಾರದ ಪ್ರಯೋಜನವನ್ನು ಸ್ವದೇಶೀಯರಾದ ಸ್ವಮತೀಯರಾದ ಸಹೋದರ ಪ್ರಜೆಗಳಿಗೇ ಇಲ್ಲದಂತೆ ಮಾಡಬೇಕೆನ್ನುವವರ ಪಟುಜ್ಞಾನವೂ ವಾದವೂ ಎಷ್ಟು ಅಸಮಂಜಸವಾಗಿರುವುದೆಂಬುದನ್ನು ಹೇಳಬೇಕಾಗಿಲ್ಲ. ಪ್ರಗಮನ ಶೀಲವಾದ ಪ್ರಪಂಚದ ಈಗಣ ಪರಿಸ್ಥಿತಿಯನ್ನು ನೋಡಿದರೆ ಉತ್ತಮರಾದ ಹಿಂದುಗಳು ಹಾಗಿರಲಿ, ಈಗ ಅಸ್ಪೃಶ್ಯ ಕೋಟಿಯಲ್ಲಿ ಗಣಿಸಲ್ಪಟ್ಟಿರುವ ನಿಮ್ನಜಾತಿಯವರು ಕೂಡ ಇನ್ನು 50 ವರ್ಷಗಳಲ್ಲಿ ಅಧ್ಯಯನ ಸಂಪನ್ನರಾಗಿ ಗೋಚರಿಸುವುದು ಕೂಡ ಅರಿದಲ್ಲವೆಂದು ಭಾವಿಸಬೇಕಾಗಿರುತ್ತದೆ. ದುರಾಹಾರ ದುಷ್ಪಾನ ಮಾಡುವ ವಿದೇಶೀಯರ ಬಾಯಿಗಳಲ್ಲೆಲ್ಲಾ ಈಗ ನಮ್ಮ ವೇದಶಾಸ್ತ್ರಪುರಾಣಾಗಮಗಳು ಹೊಕ್ಕಾಡುತ್ತಿವೆ. ಹೀಗಿದ್ದರೂ ಈಗಣ 20ನೆ ಶತಮಾನದ ನಮ್ಮ ಮಾದರಿ ಮೈಸೂರು ಸಂಸ್ಥಾನದ ಕೆಲವು ದುರಭಿಮಾನಿಗಳು ಮಡಿಯಿಂದ ಸ್ವಜಾತೀಯರಿಗೆ ಮಾತ್ರವೇ ಹೇಳಿ ಕೊಡದೆ ಇತರರಿಗೆ ಬೋಧಿಸಿದರೆ ಸಂಸ್ಕೃತದ ಪಾವಿತ್ರ್ಯವೇ ಕೆಟ್ಟುಹೋಗುವುದೆಂದು ಮಾಡುತ್ತಿರುವ ವಾದವನ್ನು ನೋಡಿದರೆ ನಗೆ ಬರುತ್ತದೆ.

ಈಗ ಸಂಸ್ಕೃತ ಪ್ರೌಢ ಪಾಠಗಳ ಹೆಚ್ಚು ಆವಶ್ಯಕತೆಯನ್ನು ಹೊಂದಿ ಅದರ ಪ್ರಾಪ್ತಿಗಾಗಿ ತಾಪತ್ರಯಪಡುತ್ತಿರುವವರು ವೀರಶೈವರೂ ಮತ್ತು ಜೈನರೂ ಆಗಿರುತ್ತಾರೆ. ಇತರ ಉತ್ತಮಹಿಂದುಗಳಲ್ಲಿ ಈ ತೆರದ ಆವಶ್ಯಕತೆಯು ವಿರಳವಾಗಿರಬಹುದು. ಈ ಎರಡು ಜನವರ್ಗಗಳವರೂ ಕೂಡ ಮಡಿ ಮೈಲಿಗೆಯ ಸ್ವರೂಪಗಳನ್ನರಿತವರೂ ಶುದ್ಧರೂ ಸದಾಹಾರಿಗಳೂ ಆಗಿರುವರೆಂಬುದು ಲೋಕಕ್ಕೆಲ್ಲಾ ಗೊತ್ತೇ ಇದೆ. ಅವರವರ ಮತ ಪದ್ಧತಿಪ್ರಕಾರ ಸ್ನಾನಾದಿ ನಿತ್ಯಕ್ರಿಯೆಗಳನ್ನು ಆಚರಿಸಿಕೊಳ್ಳದೆ ಯಾವ ಸಂಸ್ಕೃತ ವಿದ್ಯಾರ್ಥಿಯೂ ತನ್ನ ಅಭ್ಯಾಸವನ್ನು ಸಾಗಿಸುತ್ತಲಿಲ್ಲ. ಮಡಿಯ ಸಂಬಂಧವಾಗಿ ಪರಪ್ರೇರಣ ನಿರ್ಬಂಧಗಳೇನೂ ಬೇಕಿಲ್ಲದೆ ಈ ವಿದ್ಯಾರ್ಥಿಗಳು ಅದನ್ನು ಪಾಲಿಸಲು ಸಮರ್ಥರೇ ಆಗಿರುತ್ತಾರೆ. ಹೀಗಿರುವಾಗ ಮಡಿಯ ಮಾತನ್ನು ಹೇಳಿಕೊಂಡು ವೀರಶೈವರ ಪ್ರವೇಶಕ್ಕೆ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ಅನಕಾಶಕೊಡಕೂಡದೆಂದು ಹೇಳುವ ವಾದವು ಎಷ್ಟು ಆಭಾಸಮಯವೂ ದುರ್ಬಲವೂ ಆಗಿರುವುದೆಂಬುದನ್ನು ಹೇಳಬೇಕಾಗಿಲ್ಲ. ನಮ್ಮ ಪವಿತ್ರ ಗ್ರಂಥಗಳೇ ಮೊದಲಾದ ಪ್ರಾಚೀನ ಸಂಪತ್ತಿಯನ್ನೆಲ್ಲಾ ವಿದೇಶೀಯರು ಸೂರೆಮಾಡಿಕೊಂಡಿದ್ದರೂ ಆತ್ಮೀಯ ಸಹೋದರರಿಗೆ ಅದರಲ್ಲಿ ಯತ್ಕಿಂಚಿದ್ಭಾಗವನ್ನು ಹಂಚಿಕೊಡುವಷ್ಟು ಉದಾರಚಿತ್ತವನ್ನು ತಾಳಲಾರದೆ ಈ ಕೆಲ ಜನರು ಮಡಿಯ ನೆಪದಿಂದ ಮಾಡುತ್ತಿರುವ ದುರ್ವಾದವು "ನಾನು ಮಡಿಯಲ್ಲಿ ಸೂರಿಗೆ ಒಣಗಲಿಕ್ಕೆ ಕಟ್ಟಿರುವ ಸೀರೆಯನ್ನು ಕಳ್ಳನು ಮುಟ್ಟಿ ಹೇಗೆ ಕದ್ದುಕೊಂಡು ಹೋಗುವನು?" ಎಂದು ಹೇಳಿದ ಬೋಳಮ್ಮನ ಅಜ್ಞವಾದಕ್ಕೆ ಸಮನಾಗಿದೆಯೇ ಹೊರತು ವಿವೇಕಪೂರಿತವಾಗಿರುವುದಿಲ್ಲ. ಈ ವಿಚಾರಗಳನ್ನೆಲ್ಲಾ ನಮ್ಮ ಸುಜ್ಞ ಪ್ರಜಾವಾತ್ಸಲ್ಯಪೂರಿತ ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಚೆನ್ನಾಗಿ ಪರ್ಯಾಲೋಚಿಸಿ, ನ್ಯಾಯಸಂಮತವೂ ನಿಷ್ಪಕ್ಷಪಾತವೂ ಆದ ತೀರ್ಮಾನವನ್ನು ಮಾಡಿ ದೇಶೀಯ ವಿಶೇಷ ಪ್ರಜೆಗಳ ಮನಸ್ಸಂತೃಪ್ತಿಯನ್ನುಂಟುಮಾಡದಿರಲಾರರೆಂದು ನಂಬುತ್ತೇವೆ.

ಗೌರ್ನಮೆಂಟಿನವರು ಈ ವಿಷಯದಲ್ಲಿ ತಮ್ಮ ಪಕ್ಷದ ವಾದಕ್ಕೆ ಅನುಕೂಲವಾಗಿ ತೀರ್ಮಾನಮಾಡದಿದ್ದರೆ ಗಾಂಧಿಯವರ ಅಸಹಕಾರವನ್ನು ಸಂಸ್ಕೃತ ಪಾಠಶಾಲೆಗಳ ಪಂಡಿತರೂ ವಿದ್ಯಾರ್ಥಿಗಳೂ ಇತರ ಬ್ರಾಹ್ಮಣರೂ ಅವಲಂಬಿಸುವರೆಂಬ ಬೆದರಿಕೆಯನ್ನು ಮೈಸೂರು ಸಂಪದಭ್ಯುದಯ ಪತ್ರಿಕಾ ಕೂಟದವರು ಹಾಕಿರುವರು. ನಮ್ಮ ಗೌರ್ನಮೆಂಟಿನವರು ಬಳೆ ತೊಟ್ಟುಕೊಂಡಿರುವರೆಂದು ಈ ಕೂಟದವರು ತಿಳಿದಿರಬಹುದು. ಅದರಿಂದಲೇ ಆಗಾಗ್ಗೆ ಇಂಥ ದಿಟ್ಟತನದ ಮಾತುಗಳ ಬೆದರಿಕೆಯನ್ನು ಹಾಕುತ್ತಿದ್ದಾರೆ. ಇದೇ ಕೂಟದವರು ಹಿಂದೆ ಸರ್ ಕಾಂತರಾಜ ಅರಸಿನವರ ದಿವಾನಗಿರಿಯಲ್ಲಿ ಪ್ರಜಾಪ್ರತಿನಿಧಿ ಸಭೆಯೊಳಗೆ ಅಸಹಕಾರವನ್ನು ತೋರಿಸಿ ಅದರ ಫಲವನ್ನು ಅನೇಕರು ಉಣ್ಣುವಂತೆ ಮಾಡಿದರು. ಆದರೂ ಪ್ರತಿನಿಧಿ ಸಭೆಯೇನೂ ನಿಂತುಹೋಗಲಿಲ್ಲ. ಈಗಲೂ ಗೌರ್ನಮೆಂಟಿನವರು ಸ್ವಾರ್ಥೈಕ ಚಿಂತಕರಾದ ಕೆಲವರ ವಾದಕ್ಕೆ ಮನಸೋತು ಬಹು ಪ್ರಜಾಮತಕ್ಕೆ ವಿರುದ್ಧವಾದ ತೀರ್ಮಾನವನ್ನು ಮಾಡದೆ ಹೋಗುವ ಪಕ್ಷದಲ್ಲಿ ಈ ಸಂಪದಭ್ಯುದಯಕೂಟದವರು ಮತ್ತೊಂದು ಸಲ ಸಹಾಯನಿರಾಕರಣವನ್ನು ಮಾಡಿಸಲಿ; ಸಂಸ್ಕೃತ ಮಹಾಪಾಠಶಾಲೆಗಳನ್ನು ಮುಚ್ಚಿಸಿಬಿಡಲಿ; ಅಲ್ಲಿಯ ಪಂಡಿತರ ಮನೆಗೆಲ್ಲಾ ಪಡಿತರವನ್ನು ನಡೆಯಿಸಿಕೊಡಲಿ. ಅದನ್ನೂ ನೋಡಿಬಿಡೋಣ.

ನಷ್ಟಪರಿಹಾರ, ಮತ್ತು ಆಂಗ್ಲಪ್ರಭುತ್ವದ ಮಹೋದಾರಭಾವ.

ಯೂರೋಪಿನ ಮಹಾಯುದ್ಧವನ್ನು ಜರ್ಮನಿಯು ಕಾಲುಕೆರೆದು ಆರಂಭಿಸಿದುದರಿಂದ ಮಿತ್ರಮಂಡಲೀ ರಾಷ್ಟ್ರಗಳಿಗೆ ಅನಿರ್ವಚನೀಯವಾದಷ್ಟು ನಷ್ಟಕಷ್ಟಗಳುಂಟಾದುವೆಂಬುದರಲ್ಲಿ ಸಂಶಯವಿಲ್ಲ. ಆ ನಷ್ಟವನ್ನು ಜರ್ಮನಿಯು ತುಂಬಿಕೊಡಬೇಕೆಂಬುದು ಪಂಚಾಯತಿಯ ಮೂಲಕ ನಿರ್ಣೀತವಾಗಿ ಹೋಗಿದೆ. ಅದರ ಪ್ರಕಾರ ನಷ್ಟಪರಿಹಾರವನ್ನು ಕಂತುವಾರಾಗಿ ಕೊಡಲು ಜರ್ಮನಿಯು ಒಪ್ಪಿಕೊಂಡು, ಇದುವರೆಗೆ 50 ಕೋಟಿ ಸವರನ್ನುಗಳನ್ನು ಧನರೂಪವಾಗಿಯೂ ಇತರ ವಸ್ತುರೂಪವಾಗಿಯೂ ಜರ್ಮನಿಯು ಮಿತ್ರಮಂಡಲಿಗೆ ಸಲ್ಲಿಸಿರುತ್ತದೆ. ಅಲ್ಲದೆ ಸಂಧಿಪ್ರಕಾರ ಇದುವರೆಗೆ ಜರ್ಮನಿಯು 33478 ಫಿರಂಗಿಗಳನ್ನೂ 38000000 ಫಿರಂಗಿ ಗುಂಡುಗಳನ್ನೂ, 87000 ಯಂತ್ರದ ಫಿರಂಗಿಗಳನ್ನೂ 11000 ಟ್ರೆಂಚ್ ಮೋರ್ಟರ್ ಎಂಬ ಕಂದಕದ ಆಯುಧಗಳನ್ನೂ, 4500000 ತುಪಾಕಿಗಳನ್ನೂ ಮಿತ್ರಮಂಡಲಿಗೆ ಒಪ್ಪಿಸಿಬಿಟ್ಟಿದೆ. ಅದರ ನೌಕಾದಳವೆಲ್ಲ ಸಂಪೂರ್ಣವಾಗಿ ನಷ್ಟವಾಗಿ ಹೋಯಿತು. ಅದರ ಸೈನಿಕ ಶಕ್ತಿಯು ನಿರ್ಮೂಲವಾಗಿ ಹೋಯಿತು. ಯಾವುದೊಂದುಮಿತ್ರಮಂಡಲಿಯ ಸಣ್ಣ ರಾಷ್ಟ್ರವು ಪ್ರತಿಭಟಿಸಿದರೂ ಇದಿರಾಗುವಷ್ಟು ಸೈನಿಕ ಶಕ್ತಿಯು ಕೂಡ ಈಗ ಜರ್ಮನಿಗೆ ಇರುವುದಿಲ್ಲ. ಸ್ವದೇಶ ಶಾಂತಿರಕ್ಷಣೆಗೆ ತಕ್ಕಷ್ಟು ಸೇನಾಬಲವು ಕೂಡ ಅದಕ್ಕೆ ಇರುವುದಿಲ್ಲ. ಅದರ ಆರ್ಥಿಕ ಸ್ಥಿತಿಯು ಕೂಡ ಬಹಳ ಶೋಚನೀಯವಾಗಿ ದಿವಾಳಿಗೆ ಬಂದಿದೆ. ಸವರನ್ನು 1 ಕ್ಕೆ 20 ಮಾರ್ಕುಗಳ ಪ್ರಕಾರ ಮಾರ್ಪು ಇದ್ದುದು ಈಗ ಸವರನ್ನಿಗೆ 3670 ಮಾರ್ಕುಗಳ ಮಾರ್ಪುಳ್ಳದಾಗಿ ಅದರ ನಾಣ್ಯವು ಅಷ್ಟು ಬಿದ್ದುಹೋಗಿದೆ. ದೇಶದ ವಾಣಿಜ್ಯ ಪರಿಶ್ರಮಗಳೆಲ್ಲಾ ಹಾಳಾಗಿಹೋದುವು. ಋಣಬಾಧೆಯು ವಿಪರೀತ. ಇದರ ಮೇಲೆ ರಾಜಪಕ್ಷವೊಂದು ಅಲ್ಲಿ ನೆಲಸಿಕೊಂಡು ಪದೇ ಪದೇ ಈಗಣ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ವಿಪ್ಲವವನ್ನುಂಟುಮಾಡುತ್ತಿದೆ. ಈ ತೊಂದರೆಗಳನ್ನೆಲ್ಲಾ ಸೈರಿಸಿಕೊಂಡು ತಲೆಯೆತ್ತಿ ಬಾಳುವುದು ಜರ್ಮನಿಗೆ ಪರಮ ದುಸ್ತರವಾಗಿದೆ. ಜರ್ಮನಿಯ ವಾಣಿಜ್ಯಪರಿಶ್ರಮಗಳು ಯೂರೋಪಿನ ಸಂಪತ್ತಿಗೆ ಮುಖ್ಯ ಸಾಧನಗಳಾಗಿರುತ್ತವೆ. ಜರ್ಮನಿಯು ಹಾಳಾದರೆ ಯೂರೋಪು ಖಂಡಕ್ಕೇ ಮುಪ್ಪುಬಂದಂತೆ ಆಗುವುದು. ಅದುಕಾರಣ ಅದನ್ನು ಆರ್ಥಿಕ ವಿಷಯದಲ್ಲಿ ತಲೆಯೆತ್ತಿಕೊಳ್ಳುವಂತೆ ಮಾಡುವುದು ಮಿತ್ರಮಂಡಲಿಯ ಬಹುರಾಷ್ಟ್ರಗಳಿಗೆ ತತ್ರಾಪಿ ಆಂಗ್ಲದೇಶಕ್ಕೆ ಇಷ್ಟವಾಗಿರುತ್ತದೆ. ಆದರೆ ಜರ್ಮನಿಯ ವಿಷಯದಲ್ಲಿ ಫ್ರಾನ್ಸಿನ ಮನೋಭಾವವು ಮಾತ್ರ ಹಾಗಿರುವುದಿಲ್ಲ. ಉಸುರು ಮಗುಚಿಕೊಳ್ಳುವುದಕ್ಕೆ ಅವಕಾಶಕೊಟ್ಟರೆ ಮತ್ತೆಲ್ಲಿ ಯುದ್ಧ ಸನ್ನದ್ಧವಾಗುವುದೋ ಎಂಬ ಸಂಶಯವು ಜರ್ಮನಿಯ ಮೇಲೆ ಫ್ರಾನ್ಸಿಗೆ ಪ್ರಬಲವಾಗಿದೆ. ಅಲ್ಲದೆ ರಷ್ಯಾ ಜರ್ಮನಿಗಳೆರಡೂ ಪರಸ್ಪರ ಸಂಧಿಮಾಡಿಕೊಂಡ ಮೇಲಂತೂ ಫ್ರಾನ್ಸಿನ ಸಂಶಯವು ಮತ್ತಷ್ಟು ಬಲವಾಗಿದೆ. ಈ ಕಾರಣದಿಂದ ಜರ್ಮನಿಯ ವಿಷಯದಲ್ಲಿ ಫ್ರಾನ್ಸು ಲೇಶಮಾತ್ರವೂ ಕನಿಕರವನ್ನು ತೋರಿಸುತ್ತಲಿಲ್ಲ. ಬಲಾತ್ಕಾರದಿಂದಲಾದರೂ ಜರ್ಮನಿಯಿಂದ ನಷ್ಟ ದ್ರವ್ಯವನ್ನೆಲ್ಲಾ ಸಂಪೂರ್ಣವಾಗಿ ದೀರ್ಘಕಾಲದ ಗಡುಬವನ್ನು ಕೊಡದೆ ಕಂತಿಗೆ ಸರಿಯಾಗಿ ಸುಲಿದುಕೊಳ್ಳಬೇಕೆಂಬುದೇ ಫ್ರಾನ್ಸಿನ ಮನೋನಿಶ್ಚಯವಾಗಿದೆ. ಯುದ್ಧ ಕಾಲದಲ್ಲಿ ಫ್ರಾನ್ಸು ಬೆಲ್ಜಿಯಂ ಇಟಲಿ ಮೊದಲಾದ ಮಿತ್ರಮಂಡಲೀ ರಾಷ್ಟ್ರಗಳಿಗೆ 260 ಕೋಟಿ ಸವರನ್ನುಗಳನ್ನು ಆಂಗ್ಲದೇಶವು ಸಾಲವಾಗಿ ಕೊಟ್ಟಿದೆ. ಈಗ ಆಂಗ್ಲದೇಶಕ್ಕೆ ಮಿತ್ರ ಶತ್ರುರಾಷ್ಟ್ರಗಳಿಂದೆಲ್ಲಾ ಬಡ್ಡಿಯಲ್ಲದೆ 340 ಕೋಟಿ ಸವರನ್ನುಗಳಷ್ಟು ಅಸಲು ಸಾಲವು ಹಿಂದಿರುಗಿ ಬರಬೇಕಾಗಿದೆ. ಮಿತ್ರಮಂಡಲೀ ರಾಷ್ಟ್ರಗಳಿಗೆ ಬಡ್ಡಿಯಿಲ್ಲದೆಯೇ ಸಾಲವನ್ನು ಕೊಟ್ಟಿದೆ. ಆ 340 ಕೋಟಿಯಲ್ಲಿ 145 ಕೋಟಿ ಸವರನ್ನುಗಳನ್ನು ಜರ್ಮನಿಯೂ, 65 ಕೋಟಿಯನ್ನು ರಷ್ಯಾ

ವು, 130 ಕೋಟಿಯನ್ನು ಮಿತ್ರಮಂಡಲೀ ರಾಷ್ಟ್ರಗಳೂ ಆಂಗ್ಲಪ್ರಭುತ್ವಕ್ಕೆ ಹಿಂದಿರಿಗಿಸಲ್ಲಿಸಬೇಕಾಗಿರುತ್ತವೆ. ಆಂಗ್ಲಪ್ರಭುತ್ವಕ್ಕೂ ಸಾಲವಿಲ್ಲದೆ ಇಲ್ಲ. ಯುದ್ಧಕಾಲದಲ್ಲಿ ಅದು ಸ್ವದೇಶೀಯರಿಂದಲೇ 200 ಕೋಟಿ ಸವರನ್ನುಗಳನ್ನು ಸಾಲಮಾಡಿದೆ. ಅಲ್ಲದೆ ಅಮೇರಿಕಾಕ್ಕೆ 85 ಕೋಟಿ ಸವರನ್ನುಗಳ ಸಾಲವನ್ನು ಕೊಡಬೇಕಾಗಿದೆ. ಈಗಳಾದರೊ ತನಗೆ ಬರಬೇಕಾದ ಸಾಲಕ್ಕಾಗಿ ಅಮೇರಿಕಾವು ಇಂಗ್ಲಂಡನ್ನೂ, ಇಂಗ್ಲಂಡು, ಫ್ರಾನ್ಸು ಮೊದಲಾದ ಮಿತ್ರ ರಾಷ್ಟ್ರಗಳನ್ನೂ, ಅವು ಜರ್ಮನಿಯನ್ನೂ ತಂತಮ್ಮ ಸಾಲಗಳಿಗಾಗಿ ಪೀಡಿಸುತ್ತಿವೆ. ತಾವು ಅಮೇರಿಕಾಕ್ಕೆ ಸಲ್ಲಿಸಬೇಕಾಗಿರುವ 85 ಕೋಟಿ ಪೌನುಗಳ ಸಾಲವನ್ನು ಅಮೇರಿಕಾವು ಕೇಳದೆ ಬಿಟ್ಟುಬಿಟ್ಟರೆ ತಮಗೆ ಮಿತ್ರಮಂಡಲೀ ರಾಷ್ಟ್ರ ಮೊದಲಾದುವುಗಳು ಕೊಡಬೇಕಾಗಿರುವ ಸಾಲಗಳನ್ನೆಲ್ಲಾ ತಾವು ಬಿಟ್ಟುಬಿಡುವುದಾಗಿಯೂ ಇಲ್ಲವೆ ತಾವು ಅಮೇರಿಕಾಕ್ಕೆ ಸಲ್ಲಿಸಬೇಕಾಗಿರುವ ಸಾಲದಷ್ಟು ಹಣವನ್ನು ಮಾತ್ರ ತಮ್ಮ ಸಾಲಗಾರರಿಂದ ಭರಮಾಡಿಕೊಂಡು ಉಳಿದುದನ್ನೆಲ್ಲಾ ಬಿಟ್ಟುಬಿಡುವುದಾಗಿಯೂ ಸಹ ಈ ಆಂಗ್ಲಮಂತ್ರಿಮಂಡಲದ ಲಾರ್ಡ್ ಬಾಲ್ಫರ್‌ರವರು ಪಾರ್ಲಿಮೆಂಟಿನಲ್ಲಿ ಅಪ್ಪಣೆಕೊಡಿಸಿರುತ್ತಾರೆ. ಸಾಮ್ರಾಜ್ಯದ ಮಹಾಘನತೆಗೆ ಅನುಗುಣವಾದ ಈ ಮಹೋದಾರವಾದ ಅಭಿಪ್ರಾಯವನ್ನು ಕೇಳಿ ಪ್ರಪಂಚವೇ ತಲೆದೂಗುತ್ತಿದೆ. ಅಮೇರಿಕಾದವರಿಗೆ ಜರ್ಮನಿಯ ದುಸ್ಥಿತಿಯನ್ನು ಕಂಡು ಕನಿಕರವುಂಟಾಗಿದೆ. ಅದರ ಉದ್ಧಾರವು ಅವರಿಗೂ ಇಷ್ಟವಾಗಿದೆ. ಈ ಸಮಯದಲ್ಲಿ ಅಮೇರಿಕನ್ನರು ಇಂಗ್ಲೀಷರಿಂದ ತಮಗೆ ಬರಬೇಕಾಗಿರುವ 85 ಕೋಟಿ ಸವರನ್ನುಗಳನ್ನು ಮನ್ನಿಸಿಬಿಡುವ ಔದಾರ್ಯವನ್ನು ಜರ್ಮನಿಯನ್ನುದ್ಧರಿಸುವ ದೃಷ್ಟಿಯಿಂದಲಾದರೂ ತೋರಿಸಿದರೆ ಯೂರೋಪುಖಂಡದ ಈಗಿನ ಆರ್ಥಿಕ ಪರಿಸ್ಥಿತಿಯಿಂದ ದುಮುದುಮಿಸುತ್ತಿರುವ ವೈಷಮ್ಯವು ಬಲುಮಟ್ಟಿಗೆ ತೊಲಗಿಹೋಗುವುದು. ಇಂಗ್ಲೀಷರು ತಮ್ಮ ಸಾಲವನ್ನು ಕೇಳದೆ ಬಿಟ್ಟರೆ ಜರ್ಮನರು ತಮಗೆ ತೆರಬೇಕಾದ ಸಾಲವನ್ನು ಬಿಟ್ಟುಬಿಡಲಿಕ್ಕೆ ಫ್ರಾನ್ಸೂ ಸಿದ್ಧವಾಗಿರುವುದು. ಇಂಗ್ಲೀಷರು ಕೇವಲ ಅರ್ಥಲಾಲಸೆಗೇ ಪ್ರಾಧಾನ್ಯವನ್ನು ಕೊಡದೆ ಧರ್ಮಲಾಲಸೆಯನ್ನು ಕೂಡ ಈ ಸಮಯದಲ್ಲಿ ವ್ಯಕ್ತಪಡಿಸಿರುವುದು ಜಗದಭಿನಂದ್ಯವಾಗಿರುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲೆಲ್ಲಾ ಈ ತೆರದ ಮನೋಭಾವವು ಪ್ರಬಲಿಸುತ್ತಬಂದರೆ ಲೋಕಶಾಂತಿಯು ಮೂರೂಮುಕ್ಕಾಲು ಗಳಿಗೆಯಲ್ಲಿ ಸಿದ್ಧಿಸಿಹೋಗುವುದು. ಈಗ ಲಂಡನ್‌ಪಟ್ಟಣದಲ್ಲಿ ನಷ್ಟಪರಿಹಾರಸಮಸ್ಯಾ ವಿಚಾರಕ್ಕಾಗಿ ಮಿತ್ರಮಂಡಲೀ ರಾಷ್ಟ್ರಗಳವರೆಲ್ಲಾ ಕೂಡಿರುತ್ತಾರೆ. ಅದರಲ್ಲಿ ಆಂಗ್ಲಮಂತ್ರಿವರ್ಯರು ಜರ್ಮನಿಯಿಂದ ಎಷ್ಟುಮಟ್ಟಿಗೆ ನಷ್ಟಪರಿಹಾರವನ್ನು ಪಡೆದುಕೊಂಡು ಅದು ತಲೆಯೆತ್ತಿಕೊಳ್ಳಲು ಅವಕಾಶಕೊಡಬೇಕೆಂಬ ವಿಷಯವಾಗಿ ಬಹಳ ಧರ್ಮವಾದ ಮತ್ತು ಉದಾರವಾದ ಅಭಿಪ್ರಾಯಗಳನ್ನು ಹೊರಗೆಡಹಿದ್ದಾರೆ. ಇದು ಫ್ರಾನ್ಸು ಮಂತ್ರಿಗೆ ಸರಿತೋರದಿದ್ದರೂ, ಬೆಲ್ಜಿಯಂ, ಇಟಲಿ, ಜಪಾನ್ ಪ್ರತಿನಿಧಿಗಳೆಲ್ಲಾ ಅದನ್ನು ಅನುಮೋದಿಸಿರುತ್ತಾರೆ. ಈ ಕೂಟದ ಪರಿಣಾಮವಾದರೂ ಫ್ರಾನ್ಸಿನ ಮನಸ್ಸಿನಲ್ಲಿ ಜರ್ಮನಿಯಮೇಲೆ ಅಂತಃಕರಣವುಂಟಾಗುವಂತೆ ಮಾಡೀತೆಂದು ನಿರೀಕ್ಷಿಸಲ್ಪಟ್ಟಿದೆ.

SANSKRIT FOR NON-BRAHMINS.

MR. PUTTANNA CHETTY'S SPEECH.

We have been receiving quite an unusually large load of correspondence on the question of the admission of non-Brahmins into the Sanskrit Colleges and have had to put by very many of them for want of space. Elsewhere is published the presidential speech delivered in Kannada by Raja Sabbabhushana Dewan Bahadur K. P. Puttanna Chetty Esq., C.I.E., at the Lingayet Conference specially convened to consider this question at Davangere. To those learned members of the Special Committee and to all those who have championed their Report we would commend a careful perusal of the address. Couched in a subdued style, the address demolishes the prohibition theory of the Committee, taking point by point and making short work of each. He is surprised to see that the Committee sitting in the year of Grace 1922 should rely upon a Government order passed on the 7th July 1906, prohibiting non-Brahmins from entering into the Sanskrit Colleges to support their suggestions, though twenty two years ago non-Brahmin students were allowed to sit for examination in Sanskrit, and further to see the educated members of the Committee affirming after great consideration that the circumstances prevailing then held good even to-day. Education as we know has very little effect after all on the outlook of the orthodox community, which while conveniently refusing to follow its true *Dharma* wants to stick to all the privileges which Manu gave them and to which they have since added many more. They seem to learn one thing from education, that is, to forget reason and justice. Mr. Puttanna Chetty finds that the Committee has conveniently omitted to give the details about the working of the Sanskrit institutions in Benares, Jeypur and Calcutta, and says that even with the meagre facts before them it is evident that those other institutions are more liberal than what we have in Mysore. The Special Committee would have done well to have taken the example of Indore where His Highness has appointed a Veerashaiva Pandit of great fame who has obtained the title "Vedathirtha" from Calcutta University to teach Vedas in the Indore Sanskrit College. In fact we do not think we can find any one Sanskrit College or school in India where the Government refuses admission to non-Brahmins as a whole. Referring to the opinion of the Ex-Raja of Cochin which the Committee makes much of, Mr. Puttanna Chetty very rightly says that it is not a very convincing argument for the Ex-Raja to make that Brahmin Pandits would not like to teach the non-Brahmin youth and that it is not proper for the latter to study Vedas when himself, a non-Brahmin has studied under Brahmin Pandits and become an erudite Sanskrit scholar and there are a large number of non-Brahmin youths who are as keen as the Ex-Raja of Cochin to study Sanskrit. Thirty years ago non-Brahmins were admitted into the Bangalore Sanskrit College, and it would appear that one Student from Travancore belonging to a very backward class known as Shanaru was admitted into that College to study *tharka shastra*, by the then chairman of the College Committee Mr. Arcot Sreenivasacharlu, who also ordered that the non-Brahmin Hindus may be admitted into the College. As Mr. Puttanna Chetty says it is indeed shameful that that broadmindedness of those early years has now disappeared.

Serious as the matter is, there is an element of humour in the attitude of the Committee. When Veda, Vedanta, Vedanga–all have been translated into English and other languages and have become the property of all Western scholars for our Committee living in a state of bliss to seriously suggest the exclusion of their own non-Brahmin brothren is as amusing as it is absurd and unjust. And to suggest that in Bangalore the non-Brahmins even for the few classes to which they have access are to be segregated is not only not honouring their self-respect but is positively revolting, and no non-Brahmin student would care to have anything with an institution like that. Rightly does Mr. Puttanna Chetty say that the time for prohibiting the non-Brahmins from Sanskrit Education is altogether gone, least of all by the Government. We would say that any attempt to keep out the people from studying Sanskrit and their Scriptures is positively dangerous. Cleavage between communities will become wider and brotherhood and unity–so devoutly wished for will become impossible. In these days when equality is the guiding principle, when in reality there is commingling of professions no community can claim with any advantage to itself religious or social superiority nor is any community going to grant it even if claimed. We have seen of the support given to the Report of the Special Committee by the Brahmins in Mysore and Bangalore, and it is regretable that those who profess nationalism and patriotism, at all seasons have now come forward to support the perpetuation of this iniquitous traditional blunder. The liberality of these patriots has revealed itself. Nationalism in theory and Brahminism in practice seem to be their motto–a principle which we are afraid will not pay any longer. Enough damage has been done to this ancient land by such practices and for the sake of the country would it not be wise and right to overhaul these antiquated notions and modernise them in accordance with the spirit of the times and the needs of the people? And is it not time that this campaign of "prohibition" of Sanskrit learning to non-Brahmins is stopped? No where in the world is their such a "prohibition" of knowledge of knowing one's own religion. What is obligatory in every other creed on earth Christian or Mohammadan, Parsee, or Buddhist to know is forbidden in our land, and that in the name of religion! A perversion of religion indeed! This is surely a test case for Mysore, a signal to show which way Mysore is advancing. If progress is its watchword, as it should be the ban must be removed without any reservation. Otherwise, we may be pardoned if we say the future is gloomy. Justice and reason no less than peace and progress dictate only one course–to do away with distinctions by throwing open both the Colleges to non-Brahmins.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ಕೂಡ ಉಪಾಕರ್ಮದ ಹಬ್ಬಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದು, ನೆನ್ನೆಯದಿನ ಮತ್ತೆ ಬೆಂಗಳೂರಿಗೆ ಪ್ರಯಾಣಮಾಡಿದರು.

ದಿವಾನರು ಕಳೆದ ಗುರುವಾರ ಬೆಳಿಗ್ಗೆ ಬೆಂಗಳೂರಿಂದ ಸರ್ಕೀಟಿಗೆ ದಯಮಾಡಿಸಿದರು. ೨ ನೆ ಕೌನ್ಸಿಲರಾದ ಮಿ|| ಮಿರ್ ಹಂಜಾಹುಸೇನ್ ಬಿ.ಎ., ಬಿ.ಎಲ್. ರವರು ಕೂಡ ಈ ತಿಂಗಳಕೊನೆಯವರೆಗೂ ಬೆಂಗಳೂರು ಮೈಸೂರು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಸಂಚಾರಮಾಡುವವರಾಗಿದ್ದಾರೆ.

ಸರದಾರ್ ಸರ್ ಎಂ. ಕಾಂತರಾಜ ಅರಸಿನವರು ಕಳೆದ ತಾ|| 10 ರಲ್ಲಿ ಬೆಂಗಳೂರಿಗೆ ದಯಮಾಡಿಸಿ ಅಲ್ಲಿಂದ ನೆನ್ನೆಯದಿನ ಬೊಂಬಾಯಿಗೆ ಪ್ರಯಾಣ ಮಾಡಿದರು. ಅಲ್ಲಿಂದ ಹೊರಟು ಆ ಆಧಿಪತ್ಯದಲ್ಲಿನ ಮುಖ್ಯವಾದ ಪಟ್ಟಣಗಳನ್ನು ಸಂಚರಿಸಿಕೊಂಡು ಸೆಪ್ಟಂಬರ್ ತಾ|| 8ಕ್ಕೆ ದಿಲ್ಲಿಪಟ್ಟಣವನ್ನು ತಲುಪುವುದಾಗಿ ತಿಳಿಯಬರುತ್ತದೆ.

ಬೆಂಗಳೂರು ಲಾಲ್‌ಬಾಗ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಸಿ. ಜವರಯ್ಯನವರನ್ನು ಉದ್ಯಾನವನ ಪರಿಪಾಲನೆಯ ವಿಶೇಷ ಸಂಗತಿಗಳನ್ನು ಅರಿತುಬರಲು 1 ವರ್ಷ ಕಾಲ ಸೀಮೆಗೆ ಕಳುಹಿಸಿಕೊಡಲು ನಮ್ಮ ಸರ್ಕಾರದವರು ಏರ್ಪಡಿಸಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ. ಅದಕ್ಕೆ ತಗಲುವ ವೆಚ್ಚವನ್ನೆಲ್ಲಾ ಪ್ರಭುತ್ವದವರೇ ವಹಿಸುವರು.

ಭರತಖಂಡದ ಸರ್ವಸೇನಾಪತಿಗಳಾದ ಲಾರ್ಡ್ ರಾಲಿನ್‌ಸನ್‌ರವರು ಗುರುವಾರ ಸಾಯಂಕಾಲ ರಾಜಧಾನಿಗೆ ದಯಮಾಡಿಸಿ ರೆಸಿಡೆನ್ಸಿಯಲ್ಲಿ ನಮ್ಮ ಮಹಾರಾಜರ ಆತಿಥ್ಯದಲ್ಲಿ ಇದ್ದುಕೊಂಡಿದ್ದು ಈಗ ಕಾರಾಪುರದ ಕಾಡಿಗೆ ಬೇಂಟೆಗಾಗಿ ದಯಮಾಡಿಸಿರುತ್ತಾರೆ. ನಾಳೆದಿನ ರಾಜಧಾನಿಗೆ ಹಿಂದಿರುಗಿ ಬರುತ್ತಾರೆ. ಅವರ ಆಗಮನಗೌರವಾರ್ಥವಾಗಿ 17 ಗುಂಡುಗಳು ಹಾರಿಸಲ್ಪಟ್ಟುವು.

ಸೀನಿಯರ್ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರೂ, ಒಂದಾವೃತ್ತಿ ಆಕ್ಟಿಂಗ್ ಚೀಫ್‌ಕೋರ್ಟು ಜಡ್ಜಿ ಪದವಿಯನ್ನು ಅನುಭವಿಸಿದ್ದವರೂ ಆಗಿರುವ ಮ|| ಬ್ಯಾರಿಸ್ಟರ್ ಬಿ. ನಾಗಪ್ಪನವರನ್ನು ಈಗ ಚೀಫ್‌ಕೋರ್ಟು ಜಡ್ಜೀಪದವಿಗೆ ತರದೆ ಜೂನಿಯರಾಗಿದ್ದವರಿಗೆ ಆ ಪದವಿಯನ್ನು ಕೊಟ್ಟು ಮಿ|| ಬಾನರ್ಜಿಯವರ ದಿವಾನಗಿರಿಯ ಆರಂಭದಲ್ಲೇ ನಡೆದ ಅನ್ಯಾಯದ ಅದ್ಭುತವನ್ನು ನೋಡಿ ವಿಸ್ಮಿತರಾಗಿದ್ದ ಪ್ರಜೆಗಳು, ಈಗ ಚೀಫ್‌ಕೋರ್ಟು ರಿಜಿಸ್ಟ್ರಾರ್ ಪದವಿಯ ವಿನಿಯೋಗ ವಿಷಯದಲ್ಲೂ ಸೀನಿಯರಾಗಿದ್ದವರನ್ನೆಲ್ಲಾ ಬಿಟ್ಟು ಜೂನಿಯಾರಿಟಿಯಲ್ಲಿದ್ದ ಒಬ್ಬ ಮುಸ್ಲೀಮರಿಗೆ ಕೊಟ್ಟು ನಡೆಯಿಸಿರುವ ಪುನರಾವೃತ್ತಿಯ ಅನ್ಯಾಯವನ್ನು ನೋಡಿ, ನ್ಯಾಯನಿರ್ವಾಹಶಾಖೆಯಲ್ಲೇ ನ್ಯಾಯಕ್ಕೆ ಗಡೀಪಾರಾಗುತ್ತಿರುವುದು ಶುದ್ಧಾಂಗವಾಗಿ ಅನುಚಿತವಾದುದೆಂದು ಖೇದಪಡುತ್ತಿದ್ದಾರೆ. ಮಿ|| ಬಾನರ್ಜಿಯವರ ಕಾರ್ಯಭಾರದಲ್ಲಿ ಇಂಥ ಅನನ್ವಿತ ಕೃತ್ಯಗಳು ಜರಗುವುವೆಂದು ನಾವು ಕೂಡ ತಿಳಿದಿರಲಿಲ್ಲ.

ರಾಜಧಾನಿಯ ಖಾಸಬಂಗಲೆಯಲ್ಲಿ ಶ್ರೀಮನ್ಮಹಾರಾಜರ ಇದಿರಿಗೆ ಅಗ್ನಿಸ್ತಂಭನವಿದ್ಯೆಯನ್ನು ಪ್ರದರ್ಶಿಸಿ, ಭಂಗಾರದ ತೋಡಾವನ್ನೂ ಧನಬಹುಮಾನವನ್ನೂ ಪಡೆದ ಮೌಲ್ವಿ ಸಯ್ಯದ್ ಷಾ ಅತಿಷಿ ಸಾಹೇಬರವರು ಬರ್ಮಾದೇಶೀಯರಾಗಿರುತ್ತಾರೆ. ಇವರು ಪುರನಿವಾಸಿಗಳಿಗಾಗಿ ಕಳೆದ ಭಾನುವಾರ ತಮ್ಮ ಅಪೂರ್ವ ವಿದ್ಯಾಪ್ರಭಾವವನ್ನು ದೊಡ್ಡಪೇಟೆ ಹಳೆಬಾಡಿಗಾರ್ಡ್ ಲಾಯದ ಆವರಣದಲ್ಲಿ ನಡೆಯಿಸಿದರು. ಪ್ರೇಕ್ಷಕರಿಗೆ ಟಿಕೇಟುಗಳು ಏರ್ಪಡಿಸಲ್ಪಟ್ಟಿದ್ದುವು. ಮಿ|| ಎ. ಮಹಮ್ಮದ್‌ಸೇಟರು ಈ ಏರ್ಪಾಟನ್ನು ಮುತುವರ್ಜಿಯಿಂದ ಮಾಡಿಸಿದ್ದರು. ಹರಡಿದ ಅಗ್ನಿಯ ರಾಶಿಯಮೇಲೆ ಮೌಲ್ವಿಯವರ ಅಪ್ಪಣೆಮೇರೆ ಡಿ|| ಕಮಿಷನರ್ ಮಿ|| ಸಿ.ಎಫ್. ಬೌರಿಂಗ್‌ರವರು ಪೊಲೀಸ್ ಸೂಪರಿಂಟೆಂಡೆಂಟ್ ಮಿ|| ಗನ್ನಿಸಾಹೇಬರು ಅಡ್ವೊಕೇಟ್ ಮಿ|| ಎಂ.ಎಸ್. ಕೃಷ್ಣರಾಯರೇ ಮೊದಲಾದ ಅನೇಕರು ನಡೆದರು. ಪ್ರೇಕ್ಷಕರೆಲ್ಲಾ ಆಶ್ಚರ್ಯಪಟ್ಟರು. ವೀರಶೈವರಲ್ಲಿಯೂ ಇನ್ನೂ ಅನೇಕ ಹಿಂದೂಗಳಲ್ಲಿಯೂ ಅಗ್ನಿಕುಂಡಗಳನ್ನು ದೈವಭಕ್ತರು ನಿರಾಯಾಸದಿಂದ ಹಾಯ್ದುಹೋಗುವುದು ಸರ್ವಸಾಮಾನ್ಯವಾಗಿದೆ.

ಮೈಸೂರು ಸಂಸ್ಥಾನದಲ್ಲಿ ಆಯುರ್ವೇದಿಕ್ ಕಾಲೇಜಿದೆಯೆಂಬ ಪ್ರಸಿದ್ಧಿಯೇನೊ ದೊಡ್ಡದಾಗಿದೆ. ಯಾರಾದರೂ ಹೊಸಬರು ಬಂದು ಅದಿರುವ ಸ್ಥಲವನ್ನು ನೋಡಿದರೆ ಹೇಸಿಕೊಳ್ಳುವಂತಿದೆ. ಮಾರಕಟ್ಟಿನ ವ್ಯಾಪಾರದ ತತ್ರಾಪಿ ಎಲೆ ಹೂವು ಮಾರುವ ಹೆಂಗುಸರ ಕೂಟವಿರುವ ಒಂದು ಅನಾರೋಗ್ಯವಾದ ಮಾರಕಟ್ಟು ಕಟ್ಟಡದ ಮೂಲೆಯಲ್ಲಿ ಇದು ಇಡಲ್ಪಟ್ಟಿದೆ. ಇದರ ಸಂಬಂಧವಾಗಿಟ್ಟಿರುವ ವೈದ್ಯಾಲಯವೂ ಅಲ್ಲೇ ಇದೆ. ಪಟಾಟೋಪಕ್ಕಲ್ಲದೆ ಆರ್ಯವೈದ್ಯದಲ್ಲಿ ಮೈಸೂರು ಸರ್ಕಾರಕ್ಕೆ ನಿಜವಾದ ಆಸಕ್ತಿಯಿದೆಯೆಂಬುದು ಗೊತ್ತಾಗಬೇಕಾದರೆ ಈ ಕಾಲೇಜನ್ನು ಆ ಸ್ಥಲದಿಂದ ಕೂಡಲೇ ಬದಲಾಯಿಸಿ ಬೇಕಾದಷ್ಟು ಖಾಲಿಬಿದ್ದಿರುವ ಚಾಮರಾಜೇಂದ್ರ ಕೈಗಾರಿಕೆಯ ಶಾಲೆಯ ಕಟ್ಟಡದ ಒಂದು ಭಾಗಕ್ಕೋ ಮತ್ತಾ

ವುದಾದರೂ ಒಂದು ಉತ್ತಮವಾದ ಕಟ್ಟಡಕ್ಕೋ ವರ್ಗಾಯಿಸುವುದು ಆವಶ್ಯಕ. ಮ|| ಡಾಕ್ಟರ್ ಕೆ. ಕೃಷ್ಣಯ್ಯಂಗಾರರು ಈ ಕಾಲೇಜಿನ ಪ್ರಿನ್ಸಿಪಾಲರಾಗಿ ಬಂದಿರುವುದು ಅವರ ಪುಣ್ಯೋದಯವು, ಇವರು ಆಯುರ್ವೇದ ಜೀರ್ಣೋದ್ಧಾರದಲ್ಲಿ ವಿಶೇಷಾಭಿಮಾನವುಳ್ಳವರು.

ಸರ್ 1922 ನೆಯ ಇಸವಿ ಆಗಸ್ಟು ಮಾಹೆ 2 ನೆಯ ತಾರೀಖು ಬುಧವಾರದ ದಿವಸ ದಾವಣಗೆರೆಯಲ್ಲಿ ನಡೆದ ವೀರಶೈವ ಮಹಾಸಭೆಯಲ್ಲಿ ತ್ರಿಮತಬ್ರಾಹ್ಮಣೇತರರನ್ನು ಸಂಸ್ಕೃತಪಾಠಶಾಲೆಗೆ ಸೇರಿಸಿಕೊಳ್ಳುವ ವಿಚಾರವಾಗಿ ರಾಜಸಭಾಭೂಷಣ ದಿವಾನ್‌ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ. ಯವರು ಮಾಡಿದ ಭಾಷಣ.

(ಅಧ್ಯಕ್ಷರು ತಮ್ಮ ಭಾಷಣದ ಆರಂಭದಲ್ಲಿ ಕಮಿಟಿಯ ರಚನೆಯ ಕಾರಣ, ಕಮಿಟಿಯು ಕೊಟ್ಟ ಅಭಿಪ್ರಾಯ—ಇವುಗಳನ್ನು ವರ್ಣಿಸಿ, ಕಮಿಟಿಯವರು ತಮ್ಮ ವರದಿಗೆ ಆಧಾರವಾಗಿ ಹೇಳಿರುವ 6 ಅಂಶಗಳನ್ನು ಹಿಡಿದು ಈ ಕೆಳಗೆ ಕಂಡಂತೆ ತಮ್ಮ ಅಭಿಪ್ರಾಯವನ್ನು ಕೊಟ್ಟು ಖಂಡಿಸಿರುತ್ತಾರೆ.—)

(1) ಸರ್ 1904 ನೆಯ ಇಸವಿಯಲ್ಲಿ ಶ್ರವಣಬೆಳಗೊಳದ ಸಂಸ್ಕೃತ ಪಾಠಶಾಲೆಯ ಅಧ್ಯಕ್ಷರಾದ ಮ|| ರಾ|| ಶ್ರೀ|| ದೋರ್ಬಲಜಿನದಾಸಶಾಸ್ತ್ರಿಯವರು ತಮ್ಮನ್ನು ವ್ಯಾಸಂಗಕ್ಕೋಸ್ಕರ ಮೈಸೂರು ಸಂಸ್ಕೃತ ಪಾಠಶಾಲೆಗೆ ಸೇರಿಸಿಕೊಳ್ಳಬೇಕೆಂದು ಸರ್ಕಾರಕ್ಕೆ ಅರ್ಜಿಯನ್ನು ಬರೆದುಕೊಳ್ಳಲು, ಆ ಪಾಠಶಾಲೆಯು ಬ್ರಾಹ್ಮಣ ವಿದ್ಯಾರ್ಥಿಗಳಿಗೆ ವೇದ ಮತ್ತು ವೇದಾಂಗಗಳಲ್ಲಿ ಪಾಠಗಳನ್ನು ಹೇಳಿಕೊಡಲು ಸ್ಥಾಪಿಸಲ್ಪಟ್ಟಿರುವುದರಿಂದಲೂ, ಅಲ್ಲಿರುವ ಪಂಡಿತರೆಲ್ಲರೂ ವೈದಿಕ ಬ್ರಾಹ್ಮಣರಾದುದರಿಂದ ಬ್ರಾಹ್ಮಣೇತರರನ್ನು ಸೇರಿಸಲು ಅವರು ಒಡಂಬಡುವುದಿಲ್ಲವೆಂತಲೂ, ಮತ್ತು ಆ ಪಾಠಶಾಲೆಯ ಮೇಲ್ವಿಚಾರಕ ಕಮಿಟಿಯವರು ಈ ಹೊಸ ಬದಲಾವಣೆಯನ್ನು ಮಾಡಲು ಅನುಮೋದಿಸುವುದಿಲ್ಲವಾದುದರಿಂದಲೂ ಅರ್ಜಿದಾರರನ್ನು ಸೇರಿಸಲು ಆಗುವದಿಲ್ಲವೆಂದು ಸರ್ಕಾರದವರು ಅಪ್ಪಣೆಕೊಟ್ಟರು.

ಈ ಅಪ್ಪಣೆಯನ್ನು ಕೊಡುವುದಕ್ಕೆ ತತ್ಪೂರ್ವ ಅಂದರೆ 1900ನೆಯ ಇಸ್ವಿಯಲ್ಲಿ ಇದೇ ದೋರ್ಬಲಜಿನದಾಸಶಾಸ್ತ್ರಿಯವರ ಅರ್ಜಿಯಮೇಲೆ ಶ್ರವಣಬೆಳಗೊಳದ ಸಂಸ್ಕೃತದ ಪಾಠಶಾಲೆಯಲ್ಲಿ ವ್ಯಾಸಂಗಮಾಡಿದ ವಿದ್ಯಾರ್ಥಿಗಳನ್ನು ಮೈಸೂರು ಸಂಸ್ಕೃತ ಪಾಠಶಾಲೆಯ ವಾರ್ಷಿಕ ಪರೀಕ್ಷೆಗಳಿಗೆ ಸೇರಿಸಿದ್ದರು. ಅದರಿಂದ ಅನೇಕ ಜೈನ ವಿದ್ಯಾರ್ಥಿಗಳು ಐದು ವರ್ಷಗಳವರೆಗೂ ಕ್ರಮವಾಗಿ ಈ ಪರೀಕ್ಷೆಗಳಿಗೆ ಹೋಗಿ ವಿದ್ಯಾರ್ಥಿ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದ್ದರು. ಆದರೂ ವೇದ ಮತ್ತು ಉಪನಿಷತ್ತುಗಳಲ್ಲಿ ಪರೀಕ್ಷೆಗಳನ್ನು ಕೊಡಲು ಈ ವಿದ್ಯಾರ್ಥಿಗಳನ್ನು ಬಿಡಲಿಲ್ಲ. ಸರ್ 1904 ನೆಯ ಇಸವಿಯಿಂದೀಚೆಗೆ ದೋರ್ಬಲಜಿನದಾಸಶಾಸ್ತ್ರಿಯವರಿಗೆ ಪ್ರವೇಶವನ್ನು ತಪ್ಪಿಸಿದ ಮೇಲೆ ಜೈನ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹೋಗುವುದೂ ನಿಂತುಹೋಯಿತು. ಅಂದರೆ ಈಗ 22 ವರ್ಷಗಳ ಹಿಂದೆ ಇತರ ವಿದ್ಯಾರ್ಥಿಗಳು ಮೈಸೂರು ಪಾಠಶಾಲೆಯ ಪರೀಕ್ಷೆಗಳಿಗೆ ಹೋಗಿ ತೇರ್ಗಡೆ ಹೊಂದುತ್ತಿದ್ದುದು ಸರ್ 1904 ನೆಯ ಇಸವಿಯ ಸರ್ಕಾರದ ಅಪ್ಪಣೆಯ ದೆಸೆಯಿಂದ ನಿಂತುಹೋದ ಹಾಗಾಯಿತು. ಮೊದಲು ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿ ಆದಮೇಲೆ ನಾಲ್ಕೈದು ವರ್ಷಗಳ ನಂತರ ಅವರನ್ನು ವ್ಯಾಸಂಗಕ್ಕೆ ಸೇರಿಸುವುದು ಸುಲಭವಾಗಿಯೇ ಇದ್ದಿತು. ಸರ್ಕಾರದವರು ಈ ಕಾರಣವನ್ನು ಹಿಡಿದು ಅದಕ್ಕೆ ಅನುಮತಿಯನ್ನು ಕೊಟ್ಟಿದ್ದರೆ ಅವರು ಹೇಳುವ ಮೇರೆಗೆ ಪಂಡಿತರುಗಳಿಂದ ಅಷ್ಟೇನೂ ಪ್ರಬಲತರವಾದ ಆತಂಕವು ಬರುತ್ತಿರಲಿಲ್ಲ. ಈಗ ನೂರಾರು ಮಂದಿ ಜೈನರೂ ವೀರಶೈವರೂ ಇತರ ಕೋಮಿನ ಬ್ರಾಹ್ಮಣೇತರ ವಿದ್ಯಾರ್ಥಿಗಳೂ ಸಹ ಸಂಸ್ಕೃತ ವ್ಯಾಸಂಗವನ್ನು ಮಾಡಿ ಉತ್ತೀರ್ಣರಾಗುತ್ತಿದ್ದರು. ಇದರಿಂದ ಇತರರ ವ್ಯಾಸಂಗಕ್ಕೆ ಬ್ರಾಹ್ಮಣಪಂಡಿತರ ಅಭ್ಯಂತರವು ಈಗಲೂ ಇದೆಯೆಂದು ಕಮಿಟಿಯವರು ಹೇಳುವ ಆಕ್ಷೇಪಣೆಯು ಮತ್ತಷ್ಟು ನಿವಾರಣೆಯಾಗುತ್ತಿದ್ದಿತು.

ಇದೂ ಅಲ್ಲದೆ ಸರ್ 1918ನೆಯ ಏಪ್ರೆಲ್ ತಿಂಗಳಲ್ಲಿ ನಡೆದ ಪ್ರಜಾಪ್ರತಿನಿಧಿಸಭೆಯಲ್ಲಿ ಪ್ರಶ್ನೆಯನ್ನು ಕೇಳಿದಾಗ ಬ್ರಾಹ್ಮಣೇತರರಿಗೆ ಪ್ರವೇಶವನ್ನು ಕೊಟ್ಟರೆ ಬ್ರಾಹ್ಮಣೇತರರ ವಿದ್ಯಾರ್ಥಿಗಳಿಗೂ ಮತ್ತು ಸಂಸ್ಕೃತ ವ್ಯಾಸಂಗಕ್ಕೂ ಪ್ರಯೋಜನವಾಗುವುದಿಲ್ಲವೆಂದು ಬೆಂಗಳೂರು, ಮೈಸೂರು ಮತ್ತು ಮೇಲ್ಕೋಟೆಯ ಪಾಠಶಾಲೆಗಳ ಕಾರ್ಯನಿರ್ವಾಹಕ ಕಮಿಟಿಯವರು ಹೇಳಿರುವದರಿಂದಲೂ ಮೈಸೂರು ಪಾಠಶಾಲೆಯಲ್ಲಿ ವೇದಗಳನ್ನೂ ಶಾಸ್ತ್ರೀಯ ಪಾಠಗಳನ್ನೂ ಹೇಳಿಕೊಡುವುದರಿಂದಲೂ ಆ ಪಾಠಶಾಲೆಯು ಶುದ್ಧವೈದಿಕ ಪಾಠಶಾಲೆಯೆಂದು ಪ್ರಸಿದ್ಧಿಗೊಂಡಿರುವುದರಿಂದಲೂ ಅಲ್ಲಿ ಸಂಸ್ಕೃತ ವ್ಯಾಸಂಗವು ಬ್ರಾಹ್ಮಣೇತರರಿಗೆ ಫಲಕಾರಿಯಾಗುವುದಿಲ್ಲವೆಂದು ಆ ಕಮಿಟಿಯವರು ಹೇಳಿರುವುದು ಒಪ್ಪತಕ್ಕ ಅಭಿಪ್ರಾಯವಲ್ಲ. ಇದೇ ಅಭಿಪ್ರಾಯವನ್ನು ಈಗಿನ ಕಮಿಟಿಯವರೂ ಸಹ ಪುಷ್ಟೀಕರಿಸಿ ಮೈಸೂರು ಪಾಠಶಾಲೆಯಲ್ಲಿ ಹೊಸ ಬದಲಾವಣೆಯನ್ನು ಮಾಡಲಾಗುವುದಿಲ್ಲವೆಂದು ನಿರ್ಧರಿಸಿರುವುದು ಮತ್ತಷ್ಟು ಆಶ್ಚರ್ಯಕರವಾಗಿದೆ. ಶುದ್ಧ ವೈದಿಕ ವೃತ್ತಿಯನ್ನು ಬ್ರಾಹ್ಮಣರೇ ಅವಲಂಬಿಸಬೇಕೆಂತಲೂ ಸಂಸ್ಕೃತದಲ್ಲಿ ಪಾಠಗಳನ್ನು ಹೇಳಿಕೊಡುವುದು ಬ್ರಾಹ್ಮಣರಿಗೇನೇ ಸಲ್ಲತಕ್ಕ ಧರ್ಮವೆಂತಲೂ ಎಲ್ಲಿಯೂ ಹೇಳಿಲ್ಲ. ಅದು ಆರ್ಷೇಯದಿಂದ ಬಂದ ಆಚರಣೆಯೇ ಹೊರತು ಉದಾರವಾದ ತಿಳುವಳಿಕೆಗೆ ವಿರೋಧವೂ ಆಗಿರುವುದು. ಬ್ರಾಹ್ಮಣಭ್ರಾತೃಗಳು ಇತರರನ್ನು ತಮ್ಮೊಡನೆ ಸೇರಿಸಿಕೊಂಡು ಬೋಧನೆಯನ್ನು ಮಾಡಿದ್ದರೆ ತಮ್ಮಂತೆಯೇ ಅವರೂ ವೈದಿಕರೆಂದೆನಿಸಿಕೊಳ್ಳುವರಾಗುತ್ತಿದ್ದರು. ಪ್ರಜೆಗಳ ಹಣದಿಂದ ಪಾಲಿಸಲ್ಪಡುತ್ತಿರುವ ಸರ್ಕಾರಿ ಪಾಠಶಾಲೆಗಳಲ್ಲಿ ಬ್ರಾಹ್ಮಣರುಗಳೇ ಪಂಡಿತರಾಗಿರುವುದೂ, ಇತರರು ಪಂಡಿತರಾಗಲು ಅವಕಾಶಕೊಡದಿರುವುದೂ, ಮತ್ತು ವೈದಿಕ ವಿದ್ಯೆಯನ್ನೇ ಮುಖ್ಯಬೋಧನೆಯಾಗಿ ಮಾಡಿಕೊಂಡು ಅದಕ್ಕೂ ಬ್ರಾಹ್ಮಣ ವಿದ್ಯಾರ್ಥಿಗಳೇ ಅರ್ಹರೆಂದು ಹೇಳುವುದೂ, ಇದನ್ನೆಲ್ಲಾ ಈ ನವನಾಗರಿಕ ಕಾಲದಲ್ಲಿ ವಿದ್ಯಾವಂತರಾದ ಕಮಿಟಿ ಮೆಂಬರುಗಳು ದೃಢೀಕರಿಸುವುದೂ ಯುಕ್ತವಾಗಿ ತೋರುವುದಿಲ್ಲ.

(2) "ಕಾಶೀಪಟ್ಟಣದಲ್ಲಿರುವ ಸರಕಾರಿ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರು ತಮ್ಮ ಕೈಕೆಳಗೆ ಓದತಕ್ಕ ವಿದ್ಯಾರ್ಥಿಗಳನ್ನು ತಾವೇ ಚುನಾಯಿಸಿಕೊಳ್ಳುವರು; ಸರ್ಕಾರದ ಅಭ್ಯಂತರವೇ ಇಲ್ಲ. ಜಯಪುರದಲ್ಲಿ ದ್ವಿಜರೆಲ್ಲರೂ ಪಾಠಶಾಲೆಗೆ ಸೇರಿಸಿಕೊಳ್ಳಲ್ಪಡುವರು; ವೇದವನ್ನು ಮಾತ್ರ ಬ್ರಾಹ್ಮಣರೇ ವ್ಯಾಸಂಗಮಾಡುವರು. ಕಲ್ಕತ್ತಾಪಟ್ಟಣದಲ್ಲಿ ಜಾತಿಭೇದವಿಲ್ಲದೆ ಹಿಂದೂ ಜನಸಮುದಾಯದಲ್ಲಿ ಗೌರವಸ್ಥರಾಗಿರುವವರೆಲ್ಲರಿಗೂ ಪ್ರವೇಶವುಂಟು" ಎಂದು ಆಯಾ ಪಾಠಶಾಲೆಗಳ ಅಧಿಕಾರಿಗಳು ಬರೆದಿರುವ ಲೇಖನಗಳಿಂದ ತಿಳಿದುಬರುವುದು. ಈ ಆಚರಣೆಗಳ ವಿಚಾರವಾಗಿ ಕಮಿಟಿಯವರು ತಮ್ಮ ಸ್ವಂತ ಅಭಿಪ್ರಾಯವನ್ನು ತಿಳಿಯಪಡಿಸಿಲ್ಲ. ನಮ್ಮ ಸಂಸ್ಥಾನದ ಪಾಠಶಾಲೆಗಳಿಗಿಂತಲೂ ಕಲ್ಕತ್ತಾ ಮತ್ತು ಜಯಪುರದ ಪಾಠಶಾಲೆಗಳು ಬ್ರಾಹ್ಮಣೇತರರನ್ನು ಸೇರಿಸುವ ವಿಚಾರದಲ್ಲಿ ಸ್ವಲ್ಪ ಉದಾರವಾಗಿರುವುವೆಂದು ಹೇಳಬಹುದು. ಕಲ್ಕತ್ತಾ ಪಾಠಶಾಲೆಯಲ್ಲಿ ಎಷ್ಟುಮಂದಿ ಬ್ರಾಹ್ಮಣೇತರರು ಈಗ ಓದುತ್ತಿರುವರು, ಅಲ್ಲಿರುವ ಉಪಾಧ್ಯಾಯರುಗಳೆಲ್ಲರೂ ಬ್ರಾಹ್ಮಣರೇ ಅಥವಾ ಬ್ರಾಹ್ಮಣೇತರರೂ ಇದ್ದಾರೆಯೆ? ಮತ್ತು ಅಲ್ಲಿ ಬ್ರಾಹ್ಮಣೇತರ ವಿದ್ಯಾರ್ಥಿಗಳು ವೇದವೇದಾಂತಗಳನ್ನು ಪಠಿಸುತ್ತಾರೆಯೇ ಎಂಬೀ ಅಂಶಗಳನ್ನು ಕಮಿಟಿಯವರು ವಿಶದಪಡಿಸಿಕೊಳ್ಳದೆ ಬಿಟ್ಟುಬಿಟ್ಟಿದ್ದಾರೆ. ಯೂನಿವರ್ಸಿಟಿ ಕ್ಯಾಲೆಂಡರಿನಲ್ಲಿ ಮುದ್ರಿಸಿರುವುದನ್ನು ಮಾತ್ರ ಎತ್ತಿಕೊಂಡು ಅದನ್ನೇ ಆಧಾರವಾಗಿಟ್ಟುಕೊಂಡು ಮುಂದಿನ ಕ್ರಮವನ್ನು ಜರುಗಿಸದೆ ಹೋಗಿದ್ದಾರೆ. ಇದು ಒಂದು ದೊಡ್ಡ ಲೋಪವೆಂದೇ ಹೇಳಬೇಕು. ಕಾಶೀಪಟ್ಟಣದ ಪಾಠಶಾಲೆಯಲ್ಲಿ ಅಧ್ಯಾಪಕರು ತಮಗೆ ಬೇಕಾದ ವಿದ್ಯಾರ್ಥಿಯನ್ನು ಚುನಾಯಿಸಿಕೊಳ್ಳುವ ಪದ್ಧತಿಯು ಆರ್ಷೇಯದಿಂದ ನಡೆದುಕೊಂಡು ಬಂದಿರುವುದೆಂತಲೂ ಈ ಪಾಠಶಾಲೆಯನ್ನು ಪ್ರಜೆಗಳ ಧನವ್ಯಯದಿಂದ ಇಂಡಿಯಾ ಗವರ್ನಮೆಂಟಿನವರು ಪೋಷಿಸುತ್ತಿರುವುದರಿಂದ ಅಲ್ಲಿ ಆಚರಣೆಯಲ್ಲಿರುವ ಪೂರ್ವಪದ್ಧತಿಯು ಸಮರ್ಪಕವಾದುದೆಂತಲೂ ಅಭಿಪ್ರಾಯ ತೋರುವಂತೆ ಕಮಿಟಿಯವರು ಬರೆದಿದ್ದಾರೆ. ಆದರೆ ಅಧ್ಯಾಪಕರನ್ನು ಇಂಡಿಯಾ ಸರ್ಕಾರದವರು ನೇಮಿಸುವುದರಿಂದ ಅವರು ಬ್ರಾಹ್ಮಣ ಅಧ್ಯಾಪಕರನ್ನೇ ನೇಮಿಸುತ್ತಾರೆಯೋ ಅಥವಾ ಬ್ರಾಹ್ಮಣೇತರರನ್ನೂ ನೇಮಿಸುವದುಂಟೋ ಮತ್ತು ಈ ಅಧ್ಯಾಪಕರು ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು ಚುನಾಯಿಸಿಕೊಳ್ಳುತ್ತಾರೆಯೇ ಎಂಬ ಅಂಶವನ್ನು ಕಮಿಟಿಯವರು ವ್ಯಕ್ತಪಡಿಸಿರುವುದಿಲ್ಲ. ಈ ಪಾಠಶಾಲೆಗೆ ಇಂಥವರೇ ಸೇರಬೇಕೆಂದು ಸರ್ಕಾರದವರು ನಿರ್ಬಂಧಪಡಿಸದೆ, ಸೇರಿಸತಕ್ಕವರನ್ನು ಅಧ್ಯಾಪಕರ ಚುನಾವಣೆಗೆ ಬಿಟ್ಟು, ಆರ್ಷೇಯದಿಂದ ಅನುಸರಿಸಿ ಬಂದ ಪದ್ಧತಿಯನ್ನು ಇನ್ನೂ ನಡೆಯಿಸಿಕೊಂಡು ಬರುತ್ತಿದ್ದಾರೆಂದು ಕಮಿಟಿಯವರು ಆಮೋದದಿಂದ ಬರೆದಿರುವುದನ್ನು ನೋಡಿದರೆ ಇಂಡಿಯಾ ಸರ್ಕಾರದವರು ಬ್ರಾಹ್ಮಣ ವರ್ಗದವರಿಗೇ ಈ ಪಾಠಶಾಲೆಯ ಉದಾರಾಶ್ರಯವನ್ನು ಕೊಟ್ಟಿರುವರೆಂದು ಸುಲಭವಾಗಿ ಊಹಿಸಬಹುದಾಗಿದೆ. ಹೀಗಿರುವಲ್ಲಿ "ಈ ಪಾಠಶಾಲೆಗೆ ಸೇರತಕ್ಕವರಿಗೆ ಯಾವ ಅಭ್ಯಂತರವನ್ನೂ ಕಲ್ಪಿಸಿರುವುದಿಲ್ಲ; ಅಧ್ಯಾಪಕರೇ ತಮ್ಮ ತಮ್ಮ ವಿದ್ಯಾರ್ಥಿಗಳನ್ನು ಚುನಾಯಿಸಿಕೊಳ್ಳುವರು" ಎಂದು ಆ ಪಾಠಶಾಲೆಯ ರಿಜಿಸ್ಟ್ರಾರರವರು ಬರೆದಿರುವುದನ್ನು ಯೋಚಿಸಿದರೆ ಸರ್ಕಾರದವರು ಮಾತ್ರ ತಮ್ಮ ಜವಾಬ್ದಾರಿಯನ್ನು ಬುದ್ಧಿವಂತಿಕೆಯಿಂದ ತಪ್ಪಿಸಿಕೊಂಡಿರುವಂತೆ ಕಂಡುಬರುವುದು. ಜಯಪುರದ ಪಾಠಶಾಲೆಯಲ್ಲಿ ದ್ವಿಜರಿಗೆ ಮಾತ್ರ ಪ್ರವೇಶವಿರುವುದು ಸ್ವಲ್ಪ ಉತ್ತಮ ಪ್ರವರ್ತನೆಯಾದರೂ ಸಮರ್ಪಕವಾದ ಏರ್ಪಾಡಾಗಿರುವುದಿಲ್ಲ. ಕಮಿಟಿಯವರು ತೋರಿಸಿಕೊಟ್ಟಿರುವ ಈ ಮೂರು ಪಾಠಶಾಲೆಗಳ ಉದಾಹರಣೆಗಳಲ್ಲಿ ಈ ಪ್ರಕಾರವಾಗಿ ನ್ಯೂನತೆಗಳಿವೆ. ಆದರೂ ನಮ್ಮ ಸರ್ಕಾರದವರಿಗಿಂತ ಇಂಡಿಯಾ ಸರ್ಕಾರದವರೂ ಮತ್ತು ಜಯಪುರದ ಸಂಸ್ಥಾನದ ಸರ್ಕಾರದವರೂ ಹೆಚ್ಚು ಉದಾರಚಿತ್ತವುಳ್ಳವರಾಗಿರುವರೆಂಬುದು ತಕ್ಕಮಟ್ಟಿಗೆ ವ್ಯಕ್ತಪಡುವುದು. ಆದುದರಿಂದಲೇ ಕಮಿಟಿಯವರು ಈಗ ಬೆಂಗಳೂರು ಪಾಠಶಾಲೆಗೆ ಇತರರನ್ನು ವೇದಾಧ್ಯಯನಕ್ಕೆ ವಿನಾ ಉಳಿದ ವ್ಯಾಸಂಗಕ್ಕೆ ಸೇರಿಸಿಕೊಳ್ಳಬಹುದೆಂದು ಶಿಫಾರಸ್ಸು ಮಾಡಿರುವಂತೆ ತೋರುವುದು.

(3) ಕೊಚಿನ್ ಸಂಸ್ಥಾನದ ಮಾಜಿ ರಾಜರವರು ಬ್ರಾಹ್ಮಣೇತರರಾಗಿದ್ದಾರೆ ಮತ್ತು ಪೂರ್ಣಸಂಸ್ಕೃತ ಪಾಂಡಿತ್ಯವುಳ್ಳವರೆಂದು ತಿಳಿದುಬಂದಿದೆ. ಇವರು ಬ್ರಾಹ್ಮಣೇತರರನ್ನು ಎಲ್ಲಾ ತರಗತಿಗಳಿಗೂ ಸೇರಿಸುವುದು ಉಚಿತವಲ್ಲವೆಂತಲೂ, ಹಿಂದುಳಿದ ಜನಾಂಗದವರಿಗೆ ಬೇರೆ ಸ್ಕೂಲುಗಳನ್ನು ಏರ್ಪಡಿಸಿರುವಂತೆ ಬ್ರಾಹ್ಮಣೇತರರಿಗೆ ಪ್ರತ್ಯೇಕವಾದ ಸ್ಕೂಲುಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿಸುವುದು ಲೇಸೆಂತಲೂ, ಇಂಗ್ಲೀಷು ಸ್ಕೂಲುಗಳಲ್ಲಿ ಹೇಳಿಕೊಡುತ್ತಿರುವ ಸಂಸ್ಕೃತವನ್ನೇ ತಕ್ಕಮಟ್ಟಿಗೆ ಹೆಚ್ಚಿಸಿ ಹೇಳಿಕೊಡುವುದಕ್ಕೆ ಏರ್ಪಾಡುಗಳನ್ನು ಮಾಡುವುದು ಯುಕ್ತವೆಂತಲೂ ಅಭಿಪ್ರಾಯಪಟ್ಟಿದ್ದಾರೆ. ತಾವು ಮಾತ್ರ ಬ್ರಾಹ್ಮಣ ಪಂಡಿತರ ಮುಖದಿಂದ ಸಂಸ್ಕೃತ ವಿದ್ಯಾವ್ಯಾಸಂಗವನ್ನು ಮಾಡಿ ಹೆಸರುವಾಸಿಯನ್ನು ಪಡೆದಿರುವುದು ಪ್ರತ್ಯಕ್ಷವಾಗಿರುವಲ್ಲಿ, ಬ್ರಾಹ್ಮಣ ಪಂಡಿತರುಗಳು ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳಿಕೊಡಲು ಒಡಂಬಡುವುದಿಲ್ಲವೆಂದು ಅವರು ಹೇಳುವುದು ಸಮಂಜಸವಾಗಿಲ್ಲ. ವಿದ್ಯಾವಂತನಾಗಬೇಕೆಂಬ ಕುತೂಹಲವುಳ್ಳವನಾದ ಯಾವ ವಿದ್ಯಾರ್ಥಿಗಾದರೂ ಸರಿಯೆ ಯಾವ ಪಂಡಿತರಾದರೂ ಪಾಠ ಹೇಳಲು ಹಿಂತೆಗೆಯಲಾರರು. ಕೊಚಿನ್ ಸಂಸ್ಥಾನದ ರಾಜರವರಂತೆ ಸಂಸ್ಕೃತವನ್ನು ಕಲಿತು ಪಾಂಡಿತ್ಯವನ್ನು ಪಡೆಯಬೇಕೆಂಬುವ ಲವಲವಿಕೆಯುಳ್ಳ ಅನೇಕ ಮಂದಿ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕೊಡದೆ ಅವರನ್ನು ಹಿಂದಿಟ್ಟಿದುದರಿಂದ ಸಂಸ್ಕೃತಭಾಷೆಯ ವ್ಯಾಪನೆಗೂ ಅದರ ವ್ಯಾಸಂಗದಿಂದ ಲಭಿಸುವ ಪ್ರಯೋಜನಕ್ಕೂ ಮತ್ತು ಜಾತಿ ಮಾತ್ಸರ್ಯವು ತೊಲಗಿ ಭ್ರಾತೃಭಾವವು ಹಬ್ಬಿ ಹರಡುವುದಕ್ಕೂ ಉಂಟಾಗಿರುವ ವಿಘ್ನವು ಅಪಾರವಾಗಿರುವುದು. ಬ್ರಾಹ್ಮಣೇತರರಾದ ರಾಜರವರು ಇಂತಹ ನಷ್ಟಫಲವನ್ನುಂಟುಮಾಡಿರುವ ಆಚರಣೆಯನ್ನು ಖಂಡಿಸದೆ ಅನುಮೋದಿಸಿರುವುದು ವಿಷಾದಕರವಾಗಿರುವುದು.

(4) ಈಗ 32 ವರ್ಷಗಳ ಹಿಂದೆ ಅಂದರೆ ಸರ್ 1890 ನೆಯ ಇಸವಿಯಲ್ಲಿ ಬೆಂಗಳೂರು ಪಾಠಶಾಲೆಯಲ್ಲಿ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೋಸ್ಕರ ಬೇರೆ ತರಗತಿಗಳನ್ನು ಏರ್ಪಡಿಸಿದ್ದರು. ಇತರರು ಹೆಚ್ಚು ಮಂದಿ ಓದುವುದಕ್ಕೆ ಬರುವುದಾದರೆ ಅವರನ್ನು ಸೇರಿಸುವುದಕ್ಕೆ ಯಾವ ಅಭ್ಯಂತರವೂ ಇಲ್ಲವೆಂದು ಬೆಂಗಳೂರು ಪಾಠಶಾಲೆಯ ಕಮಿಟಿಯವರು ಅಷ್ಟು ಹಿಂದಿನ ಕಾಲದಲ್ಲಿಯೇ ತೀರ್ಮಾನಿಸಿದ್ದರು. ಈ ಅನುಕೂಲದಿಂದ ಪ್ರೋತ್ಸಾಹವನ್ನು ಹೊಂದಿ ಸರ್ 1903 ನೆಯ ಇಸವಿಯಲ್ಲಿ ಇಬ್ಬರು ಲಿಂಗಾಯಿತ ವಿದ್ಯಾರ್ಥಿಗಳು ವ್ಯಾಕರಣ ಶಾಸ್ತ್ರವನ್ನು ಕಲಿಯಲು ಪಾಠಶಾಲೆಯನ್ನು ಸೇರಿದರು. ಇದಕ್ಕೆ ತತ್ಪೂರ್ವ ತಿರುವಾಂಕೂರು ಸಂಸ್ಥಾನದ ಶಾನಾರು ಎಂಬ ಬಹು ಹಿಂದುಳಿದ ಜಾತಿಯ ವಿದ್ಯಾರ್ಥಿಯೊಬ್ಬನು ತರ್ಕಶಾಸ್ತ್ರವನ್ನು ಓದಲು ಬಂದನು. ಆತನನ್ನು ಆಗ ಪಾಠಶಾಲೆಯ ಕಮಿಟಿಯ ಅಧ್ಯಕ್ಷರಾಗಿದ್ದ ಕೀರ್ತಿಶೇಷರಾದ ಮ|| ಶ್ರೀನಿವಾಸಾಚಾರ್ಲುಯವರು ಸೇರಿಸಿದ್ದೂ ಅಲ್ಲದೆ ಉತ್ತಮ ವರ್ಣದ ಹಿಂದೂಗಳೆಲ್ಲರನ್ನೂ ಪಾಠಶಾಲೆಗೆ ಸೇರಿಸಬಹುದೆಂದು ಅಪ್ಪಣೆಮಾಡಿದರು. ಆ ವರ್ಷ ಕಾವ್ಯವನ್ನು ಓದುವ ತರಗತಿಗಳಲ್ಲಿಯೂ ಬ್ರಾಹ್ಮಣೇತರರು ಓದುತ್ತಾ ಇದ್ದರು. ಈ ಪ್ರಕಾರ ಮೂವತ್ತು ವರ್ಷಗಳ ಹಿಂದೆ ಬ್ರಾಹ್ಮಣ ವೈದಿಕ ಪಂಡಿತರುಗಳಲ್ಲಿಯೂ ಲೌಕಿಕ ದೊಡ್ಡಮನುಷ್ಯರುಗಳಲ್ಲಿಯೂ ಉದಾರಬುದ್ಧಿಯೂ ನಿಷ್ಪಕ್ಷಪಾತತೆಯೂ ಇದ್ದುವೆಂದು ಆ ಪಾಠಶಾಲೆಯ ರಿಕಾರ್ಡುಗಳಿಂದಲೇ ವ್ಯಕ್ತಪಟ್ಟಿರುತ್ತದೆ. ಆಗಿನ ದೊಡ್ಡ ಮನಸ್ಸು ಈಗ ಸಂಕುಚಿತವಾಯಿತೆಂದು ಹೇಳಿದರೆ ಎಷ್ಟು ನಾಚಿಕೆಕೇಡಾಗಿರುವುದು! ಅದೇ ಉದಾರವಾದ ಪ್ರವರ್ತನೆಯನ್ನು ಇದುವರೆಗೂ ನಡೆಸಿಕೊಂಡು ಬಂದಿದ್ದರೆ ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ಎಷ್ಟುಮಟ್ಟಿಗೆ ಸಹೃದಯವು ಬೆಳೆಯುತ್ತಿದ್ದಿತು! ಇತರರು ಎಷ್ಟು ಮಂದಿ ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಹೊಂದಿ ತಾವೂ ಕೀರ್ತಿಯನ್ನು ಹೊಂದುತ್ತಿದ್ದುದಲ್ಲದೆ ಭಾಷೆಗೂ ಎಷ್ಟು ಕೀರ್ತಿಯನ್ನು ತರುತ್ತಿದ್ದರು! ವೈದಿಕರಾದ ಬ್ರಾಹ್ಮಣ ಪಂಡಿತರುಗಳು ಸಂಕುಚಿತ ಬುದ್ಧಿಯುಳ್ಳವರೆಂದೂ, ಇತರ ವಿದ್ಯಾರ್ಥಿಗಳಿಗೆ ಉಪದೇಶಿಸಲು ಅವರು ಅಡ್ಡ ಬರುತ್ತಾರೆಂತಲೂ ಮೇಲ್ಕಂಡ ಉದಾಹರಣೆಗಳಿಂದ ಹೇಗೆತಾನೇ ಹೇಳುವುದಕ್ಕಾದೀತು? ಸರ್ 1903 ರಿಂದೀಚೆಗೆ ಬ್ರಾಹ್ಮಣೇತರರಿಗೆ ಪ್ರವೇಶವನ್ನು ತಡೆದ ಮ|| ವೈದ್ಯನಾಥ ಅಯ್ಯರವರಂತಹ ಲೌಕಿಕ ಮಹನೀಯರುಗಳ ದೆಸೆಯಿಂದ ಈಗಣ ಅವ್ಯವಸ್ಥೆಯು ಪ್ರಾಪ್ತವಾಗಿದೆಯೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಮೂವತ್ತು ವರ್ಷಗಳ ಹಿಂದೆ ಇದ್ದ ದೊಡ್ಡ ಮನಸ್ಸು, ಉದಾರಬುದ್ಧಿ, ನಿರ್ಭೇದಗಳು, ನಾಗರಿಕತೆಯು ಉನ್ನತಸ್ಥಿತಿಯಲ್ಲಿರುವ ಈಗಿನ ಕಾಲದಲ್ಲಿ ಇಲ್ಲದೆ ಹೋಗಿದೆಯಲ್ಲಾ ಎಂದು ಚಿಂತಿಸಬೇಕಾಗಿದೆ. ಶಾನಾರು ಜಾತಿಯವನಿಗೆ ತರ್ಕಶಾಸ್ತ್ರವನ್ನು ಕಲಿಸಿ ತಯಾರು ಮಾಡಿರುವ ಉದಾಹರಣೆಯು ಮುಂದಿದ್ದರೂ ಈಗ ಕಮಿಟಿಯವರು—ಬೆಂಗಳೂರು ಪಾಠಶಾಲೆಯಲ್ಲಿ ಬ್ರಾಹ್ಮಣೇತರರನ್ನು ಸೇರಿಸಿದರೆ ಬ್ರಾಹ್ಮಣರಿಗೆ ವೇದ ವೇದಾಂತಗಳಲ್ಲಿ ಪ್ರತ್ಯೇಕವಾಗಿ ಪಾಠಗಳನ್ನು ಹೇಳಿಕೊಡಬೇಕೆಂತಲೂ, ಬ್ರಾಹ್ಮಣೇತರರಿಗೆ ಪಾಠ ಹೇಳಲು ಬ್ರಾಹ್ಮಣ ಪಂಡಿತರು ಸಮ್ಮತಿಸದಿದ್ದರೆ ಅವರ ಮನಸ್ಸಾಕ್ಷಿಗೆ ಗೌರವವನ್ನು ಕೊಟ್ಟು ಅವರನ್ನು ಪಾಠಶಾಲೆಯಿಂದ ಬೇರೆ ಕಡೆಗೆ ವರ್ಗಾಯಿಸಿಕೊಡಬೇಕೆಂತಲೂ ಶಿಫಾರಸ್ಸು ಮಾಡಿರುವುದು ಪರಮಾಶ್ಚರ್ಯವಾಗಿದೆ. ಈ ಕಾರಣಗಳಿಂದ ಕಮಿಟಿಯವರು ಮಾಡಿರುವ ತೀರ್ಮಾನವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

(5&6) ಬೆಂಗಳೂರು ಪಾಠಶಾಲೆಯಲ್ಲಿ ಮೊದಲು ಬ್ರಾಹ್ಮಣೇತರರು ವ್ಯಾಸಂಗ ಮಾಡುತ್ತಿದ್ದುದರಿಂದ ಈಗ ಅವರನ್ನು ವೇದಭಾಗಕ್ಕಲ್ಲದೆ ಉಳಿದ ಇತರ ತರಗತಿಗಳಿಗೆಲ್ಲಾ ಸೇರಿಸಬಹುದೆಂದು ಮ|| ಜಯರಾಮಯ್ಯರವರು ಸಲಹೆಕೊಟ್ಟಿರುವರು. ಈ ಸಲಹೆಯನ್ನು ಕೊಡುವುದಕ್ಕೆ ಮತ್ತೊಂದು ಪ್ರಬಲತರವಾದ ಕಾರಣವಿರುವುದೆಂದು ತೋರುವುದು. ಬೆಂಗಳೂರು ಪಾಠಶಾಲೆಯಲ್ಲಿ ವ್ಯಾಸಂಗಮಾಡುವ ಬ್ರಾಹ್ಮಣ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆ ಯಾಗುತ್ತಿರುವುದರಿಂದ ಸರ್ಕಾರದವರು ಕಾಲೇಜುತರಗತಿಗಳನ್ನು ತೆಗೆದುಹಾಕಿ ಪಾಠಶಾಲೆಯನ್ನು ಹೈಸ್ಕೂಲು ದರ್ಜೆಗೆ ಏಕೆ ಇಳಿಸಬಾರದೆಂದು ಕೇಳಿರುವುದನ್ನು ನೋಡಿ, ಬ್ರಾಹ್ಮಣೇತರರನ್ನು ಸೇರಿಸಿಕೊಂಡರೆ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುವುದರಿಂದ ಪಾಠಶಾಲೆಯನ್ನು ಕಾಲೇಜನ್ನಾಗಿಯೇ ಇಟ್ಟುಕೊಳ್ಳುವುದು ಅವಶ್ಯಕವೆಂದು ಮ|| ಜಯರಾಮಯ್ಯರವರು ತಿಳಿಸಿರುವರು. ಕಾಲೇಜನ್ನು ಉಳಿಸಿಕೊಳ್ಳುವುದಕ್ಕಾದರೂ ಇತರರಿಗೆ ಪ್ರವೇಶ ದೊರಕುವಂತಾದುದಕ್ಕೆ ಸಂತೋಷಿಸಬೇಗಿದೆ. ಆದರೆ ಬ್ರಾಹ್ಮಣೇತರರಿಗೆ ಈ ಹಕ್ಕು ನ್ಯಾಯವಾಗಿ ಸಲ್ಲತಕ್ಕದ್ದೆಂಬುದನ್ನು ಸ್ಪಷ್ಟವಾಗಿ ಅಂಗೀಕರಿಸಿದ್ದರೆ ಬಹಳ ಚೆನ್ನಾಗಿರುತ್ತಿದ್ದಿತು. ಹಾಗೆ ಅಂಗೀಕರಿಸದೆ ಇತರರು ಸೇರಿದರೆ ಬ್ರಾಹ್ಮಣರಿಗೆ ಬೇರೆಯಾಗಿ ವೇದವೇದಾಂತಗಳನ್ನು ಹೇಳಿಕೊಡಬೇಕೆಂದು ಸೂಚಿಸಿರುವುದನ್ನು ನೋಡಿದರೆ ನ್ಯಾಯಕ್ಕೆ ಅನುಮೋದನೆಯು ದೊರೆಯಲಿಲ್ಲವೆಂದು ವ್ಯಸನಪಡಬೇಕಾಗಿದೆ.

ವೇದ ವೇದಾಂತ ಮತ್ತು ವೇದಾಂಗಗಳೆಲ್ಲವೂ ಇಂಗ್ಲೀಷು ಮತ್ತು ಇತರ ಭಾಷೆಗಳಿಗೆ ತರ್ಜುಮೆಯಾಗಿ ಅವುಗಳ ಸಾರವೆಲ್ಲವೂ ಪಾಶ್ಚಿಮಾತ್ಯ ಪಂಡಿತರುಗಳ ಪಾಲಾಗಿರುವಲ್ಲಿ ಬ್ರಾಹ್ಮಣೇತರರು ಸಂಸ್ಕೃತ ಪಾಠಶಾಲೆಗಳಲ್ಲಿ ಅವುಗಳನ್ನು ಓದಕೂಡದೆಂದು ನಿಷೇಧಿಸುವುದರಲ್ಲಿ ಅರ್ಥವಿಲ್ಲ. ಮತ್ತು ಹಾಗೆ ನಿಷೇಧಿಸಿ ಪ್ರತ್ಯೇಕವಾಗಿಟ್ಟು ಅವರನ್ನು ಬಾಹಿರರನ್ನಾಗಿ ಕಾಣುವುದು ಆ ಇತರರ ಆತ್ಮಗೌರವಕ್ಕೆ ಮರ್ಯಾದೆಯನ್ನು ಮಾಡಿದಂತಾಗುವುದಿಲ್ಲ; ಆದುದರಿಂದ ಬ್ರಾಹ್ಮಣೇತರರು ಈ ಯೇರ್ಪಾಡಿಗೆ ಎಂದಿಗೂ ಒಪ್ಪಲಾರರು. ವೀರಶೈವರು ತಮ್ಮ ಸ್ವಂತ ಪಾಠಶಾಲೆಗಳಲ್ಲಿ ವೇದಾಧ್ಯಯನವನ್ನು ಮಾಡಿರುತ್ತಾರೆ. ಅವರಲ್ಲಿ ಮಹಾವಿದ್ವಾಂಸರೂ, ಕವಿಶ್ರೇಷ್ಠರೂ, ಆಸ್ಥಾನಪಂಡಿತರೂ, ಉದ್ಗ್ರಂಥಕಾರರೂ, ವೈದಿಕ ವಿದ್ಯಾಪಾರಂಗತರೂ, ವೈಯಾಕರಣಿಗಳೂ, ಕವಿಗಳೂ ಹೇರಳವಾಗಿದ್ದರೆಂಬುದು ಕರ್ಣಾಟಕ ಕವಿಚರಿತೆಯಿಂದ ಸ್ಪಷ್ಟಪಟ್ಟಿದೆ. ಇಂತಹ ಮಹನೀಯರ ವಂಶಿಕರ ಸಂಪರ್ಕದಿಂದ ಬ್ರಾಹ್ಮಣರು ಬ್ರಾಹ್ಮಣೇತರರು–ಈ ಉಭಯತ್ರರಿಗೂ ಅಮೂಲ್ಯವಾದ ಪ್ರಯೋಜನವಾಗುತ್ತದೆಯೇ ವಿನಾ ಬಾಧಕವೇನೂ ಆಗಲಾರದು. ವೇದಘೋಷ, ವೇದಪ್ರಯೋಗ, ವೇದಾಧ್ಯಯನಗಳಿಂದ ಒಂದು ಜಾತಿಯವರಿಗೆ ಆಗುವ ಪ್ರಯೋಜನವು ಇತರರಿಗೆ ಏಕೆ ಆಗಕೂಡದು? ಅಧ್ಯಯನಕ್ಕೆ ಅವಕಾಶವು ದೊರೆತರೆ ಯಾವಜಾತಿಯವರಾದರೇನು? ಎಲ್ಲರೂ ಶಿಕ್ಷಣಹೊಂದಿ ಸತ್ಫಲವನ್ನು ಅನುಭವಿಸುವರು. ಮುಖ್ಯವಾಗಿ ನಮ್ಮ ಬ್ರಾಹ್ಮಣಭ್ರಾತೃಗಳಿಗೆ ಈ ವಿಷಯದಲ್ಲಿ ಸೌಹಾರ್ದವು ಬೇಕು. ಅವರು ಕಾಲಾನುಗುಣವಾಗಿ ತಮ್ಮ ಪದ್ಧತಿಗಳನ್ನು ತಿದ್ದಿಕೊಂಡು ತಮ್ಮಲ್ಲಿರುವ ನಿಧಿಯನ್ನು ಇತರೊಡನೆ ಹಂಚಿಕೊಳ್ಳಬೇಕೆಂಬ ದೊಡ್ಡ ಮನಸ್ಸನ್ನು ಮಾಡಬೇಕು. ಸರ್ ವಿಲಿಯಂ ಜೋನ್ಸ್, ಮಾನಿಯರ್ ವಿಲಿಯಂಸ್, ಪ್ರೊಫೆಸರ್ ಮಾಕ್ಸ್ ಮುಲ್ಲರ್, ಪಾಲ್ ಡ್ಯೂಸನ್, ಷೋಪನಾರ್, ಪ್ರೊಫೆಸರ್ ಮ್ಯಾಕ್‌ಡಾನಲ್ಡ್ ಮುಂತಾದ ಮಹನೀಯರಾದ ಪಾಶ್ಚಾತ್ಯ ವಿದ್ವಾಂಸರು ಅಮೋಘವಾದ ನಮ್ಮ ವೈದಿಕ ಗ್ರಂಥಗಳನ್ನೆಲ್ಲಾ ಪರಿಶೋಧಿಸಿ ಅವುಗಳಲ್ಲಿರುವ ಅಮೂಲ್ಯ ರತ್ನಗಳನ್ನೆಲ್ಲಾ ಪ್ರಪಂಚವೆಲ್ಲಾ ಸೂರೆಗೈಯಲಿ ಎಂದು ರಾಶಿಹಾಕಿರುವಲ್ಲಿ ಊರು ಕೊಳ್ಳೆಯಾದಮೇಲೆ ಊರಬಾಗಿಲನ್ನು ಹಾಕಿದಂತೆ ತಿರುಳನ್ನು ಕೊಟ್ಟು ಟೊಳ್ಳಿಗೋಸ್ಕರ ಹಿಡಿದಾಡುತ್ತಿರುವುದು ಈ ಕಾಲಕ್ಕೆ ತಕ್ಕ ಪ್ರವರ್ತನೆಯೆಂದೆನಿಸುವುದಿಲ್ಲ.

ಈಗಿನಕಾಲದ ಮಹಿಮೆಯೇ ಬೇರೆ. ಪ್ರಪಂಚವೇ ಮನೆಯೋಪಾದಿಯಾಗುತ್ತಿದೆ; ಪ್ರಜೆಗಳೆಲ್ಲರೂ ಭ್ರಾತೃಪ್ರಾಯರಾಗುತ್ತಿದ್ದಾರೆ; ಪರಸ್ಪರ ಮಿಳಿತವು ಹೆಚ್ಚುತ್ತಿರುವುದರಿಂದ ಅನ್ಯೋನ್ಯತೆಯು ಅಭಿವೃದ್ಧಿಯಾಗುತ್ತಿದೆ. ಒಬ್ಬರ ಸಹಾಯ, ಒಬ್ಬರ ಸಹವಾಸ, ಒಬ್ಬರ ಸಂಗತಿ ಇಲ್ಲದಿದ್ದರೆ ಇನ್ನೊಬ್ಬರು ಬದುಕುವುದೇ ಕಷ್ಟವಾಗುತ್ತಿದೆ. ಜಾತಿ, ಸಂಗಡ, ಮತ ಮುಂತಾದ ಬಂಧನಗಳ ಎಲ್ಲೆಕಟ್ಟು ಸಡಿಲುತ್ತಾ ಇದೆ. ಮನುಷ್ಯನೂ ಮತ್ತು ಅವನ ಗುಣವೂ ಪ್ರಾಮುಖ್ಯವಾಗುತ್ತಿವೆಯಲ್ಲದೆ ಅವನು ಹುಟ್ಟಿದ ಜಾತಿ ಊರು ಮುಂತಾದುವು ಗಣನೆಗೆ ಬರುತ್ತಿಲ್ಲ. ಸಂಸ್ಕೃತವು ಮೃತಿಹೊಂದಿದ ಭಾಷೆಯೆಂಬೆನಿಸಿಕೊಂಡಿರುವುದಕ್ಕೆ ನಮ್ಮ ಸ್ವಾರ್ಥಪರತೆಯೇ ಕಾರಣವು. ಎಲ್ಲಾ ಕೋಮಿನವರೂ ಅದನ್ನು ಅಭ್ಯಾಸಮಾಡುತ್ತಾ ಬಂದಿದ್ದಲ್ಲಿ ಅದರ ರಚನೆಯು ಈಗ ತುಂಬಾ ಪ್ರಕಾಶವಾಗಿರುತ್ತಿದ್ದಿತು. ಅದರ ವ್ಯಾಸಂಗಕ್ಕೆ ಅಡ್ಡಿಯನ್ನುಂಟುಮಾಡುವ ಕಾಲವು ಹೊರಟುಹೋಯಿತು; ಅದರಲ್ಲಿಯೂ ಸರ್ಕಾರದವರು ಅಡ್ಡಿಯನ್ನು ಕಲ್ಪಿಸುವುದಕ್ಕಾಗುವುದೇ ಇಲ್ಲ. ಆದಕಾರಣ ನಮ್ಮ ಬ್ರಾಹ್ಮಣಭ್ರಾತೃಗಳು ಉದಾರಮನಸ್ಸಿನಿಂದ ಇತರರನ್ನು ತಮ್ಮ ಆಶ್ರಯಕ್ಕೆ ತೆಗೆದುಕೊಂಡು ಸಂಸ್ಕೃತ ವ್ಯಾಸಂಗವನ್ನು ಅವರ ಜತೆಯಲ್ಲಿಯೇ ಮಾಡಿ, ಸರ್ವಸಮದೃಷ್ಟಿಯನ್ನು ತೋರಿಸಬೇಕೆಂದು ಪ್ರಾರ್ಥಿಸುತ್ತೇನೆ. ಕಮಿಟಿಯವರ ರಿಪೋರ್ಟಿನಲ್ಲಿ ಕಂಡುಬರುವ ನ್ಯೂನತೆಗಳನ್ನೂ ಪ್ರಕೃತಕಾಲದ ಬದಲಾವಣೆಗಳನ್ನೂ ನಮ್ಮ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು, ಬ್ರಾಹ್ಮಣ ಬ್ರಾಹ್ಮಣೇತರ ಭೇದಬುದ್ಧಿಯು ಅಂಕುರಿಸಿ ಬೆಳೆದು ವೃದ್ಧಿಯಾಗದಂತೆ ತಕ್ಕ ಏರ್ಪಾಡುಗಳನ್ನು ಮಾಡುವರೆಂದು ಹಾರೈಸುತ್ತೇನೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ 8 ನೆ ವಾರ್ಷಿಕೋತ್ಸವವು.

ಈ ತಾ|| 6 ನೆ ರವಿವಾರ ಪ್ರಾತಃಕಾಲಕ್ಕೆ ಶೃಂಗರಿಸಲ್ಪಟ್ಟ ವಾಚನಾಲಯದಲ್ಲಿ ಇಲ್ಲಿಯ ಶ್ರೀ ಬಾಲಲೀಲಾ ಸಂಗಮೇಶ್ವರ ಶಿವಾಚಾರ ಮಹಾಸ್ವಾಮಿ ಸಾಂಬಯ್ಯನಮಠ ಇವರ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿತ್ತು. ಸಭೆಗೆ ಇಲ್ಲಿಯ ಸ್ಥಿರಪಟ್ಟಾಧ್ಯಕ್ಷ ಮಹೇಶ್ವರ ಶಿವಾಚಾರ್ಯರು ಹಿರೀಮಠ ಈ ಸ್ವಾಮಿಗಳೂ ತಾ|| ಸವದತ್ತಿಯಿಂದಾಗಮಿಸಿದ ವೆ|| ಸಬ್ ಇನ್ಸ್‌ಪೆಕ್ಟರ್ ಸಿದ್ದಪ್ಪನವರು ಕಲಿಗೇರಿ ಇವರೂ ಆಗಮಿಸಿದ್ದರಲ್ಲದೆ ಪುರಪ್ರಮುಖರೂ ಸ್ಯಾನಿಟರಿ ಸೊಸೈಟಿ ಚೇರ್ಮನ್ ಮೆಂಬರ್ ಸೆಕ್ರೆಟರಿಯವರೂ ಕನ್ನಡಶಾಲಾ ಮಾಸ್ತರರೂ ಗೌಡ ಶ್ಯಾನುಭೋಗರೂ ಸ್ಕೂಲ್ ಮೆಂಬರರೂ ಇನ್ನುಳಿದ ಸಭ್ಯಗೃಹಸ್ಥರೂ ವಾಚನಾಲಯದ ಮೆಂಬರ್ ಸೆಕ್ರೆಟರಿಯವರೂ ಆಗಮಿಸಿದ್ದರು. 1. ಪಂಚಮಜಾರ್ಜ್ ಬಾದಶಹರವರಿಗೆ ಜಯವಾಗಲಿ. 2. ವಾಚನಾಲಯದಿಂದಾಗುವ ಲಾಭ. 3. ರಾಜನಿಷಾ ಸಂಘದ ಮಹತ್ವ. ಈ ವಿಷಯಗಳ ಮೇಲೆ ಇಲ್ಲಿಯ ಪಾಠಶಾಲಾಧ್ಯಾಪಕರಾದ ಎಸ್. ಎಂ. ಸಿದ್ಧಾಂತಿಗಳು ಹಿರೇಮಠ, ಮಿ|| ರೇವಣೋಹನಮಂತ ಕುಲಕರ್ಣಿ ಜಗದ್ಗುರು ವಿಶ್ವಾರಾಧ್ಯ ವಾಚನಾಲಯ ಮೆಂಬರ್ ಶಿವಮೂರ್ತಪ್ಪ ಗೋರೋಬಾಳ ಇವರುಗಳು ಭಾಷಣಮಾಡಿದ ಮೇಲೆ ರಾಜನಿಷಾ ಸಂಘ ಸ್ಥಾಪಿಸುವಲ್ಲಿ ಯಾವತ್ತರೂ ಅನುಮೋದವನ್ನು ಕೊಟ್ಟಿರಲ್ಲದೆ ಸದರಿ ಸಂಘಕ್ಕೆ ಮೆಂಬರಾಗುವಲ್ಲಿ 50 ಜನರು ಒಪ್ಪಿಕೊಂಡರು. ಮುಂದೆ ವಾಚನಾಲಯದ ರಿಪೋರ್ಟು ಓದಲ್ಪಟ್ಟಿತು. ಇದರ ಸಾರಾಂಶ—ವಾಚನಾಲಯವು ಮೊದಲು ಶ್ರೀಯುತ ಸದ್ಭಕ್ತವರ್ಯರಾದ ಕೈ|| ಸೋಮಪ್ಪಣ್ಣನವರು ಬಾಳಿಮು. ಮನ್ನೊಲ್ಲಿ ಈ ಮಹನೀಯರ ಉತ್ತೇಜನದಿಂದ ಸ್ಥಾಪಿಸಿ ಇಲ್ಲಿಗೆ 7 ವರ್ಷ ಸಮಾಪ್ತಿ ಆಗಿ 8ನೇ ವರ್ಷವು ಪ್ರಾರಂಭವಾಗಿದೆ. ಈ ವಾಚನಾಲಯಕ್ಕೆ ಸಹಾಯಮಾಡಿದ ಸ್ಥಳದ ಮೆಂಬರವಗೈರೆ ಸಭ್ಯಜನರ ಕಡೆಯಿಂದ ಬಂದ ಒಟ್ಟು ರಕಮು 600 ರೂಪಾಯಿಗಳು, ಸೊಸೈಟಿಯಲ್ಲಿಟ್ಟ ಫಂಡಿನ ರಕಮು 250 ರೂಪಾಯಿಗಳು, ಸರಕಾರದವರ ಸಹಾಯದಿಂದ ರಕಮು 415 ರೂ. ಒಟ್ಟು 1265 ರೂಪಾಯಿಗಳ ಜಮೆಯಲ್ಲಿ 864 ರೂ. ಗಳು ಪರಸ್ಥಳದ ವಿದ್ಯಾವರ್ಧಕ ಸಂಘಕ್ಕೂ, ಕೀರ್ತನ ಶಾಸ್ತ್ರಿಗಳಿಗೂ ಇಲ್ಲಿಯ ಕನ್ನಡಶಾಲೆಯ ಸಹಾಯಕ್ಕೂ ಖರ್ಚಾಗಿರುವವು. ಉಳಿದವುಗಳು ಇಲ್ಲಿ ತರಿಸಿದ ವಾರಪತ್ರಿಕೆ, ಮಾಸಪತ್ರಿಕೆ, ಧಾರ್ಮಿಕ, ನೈತಿಕ ಪೌರಾಣಿಕ, ಐತಿಹಾಸಿಕ ಗ್ರಂಥದ ಖರ್ಚಿಗಾಗಿ ವಿನಿಯೋಗಿಸಲ್ಪಟ್ಟಿದೆ. ವೀರವಿಜಯಧರ್ಮಾರ್ಥ ಪಾಠಶಾಲೆಯ ವಾರ್ಷಿಕ ಪರೀಕ್ಷೆಯು ಶ್ರೀ ಸ್ಥಿರಪಟ್ಟಾಧ್ಯಕ್ಷರಿಂದಲೂ ಮಿ|| ಕನ್ನಡಶಾಲಾ ಮಾಸ್ತರ ಕೃಷ್ಣೋ ವೆಂಕಟೇಶ ಇವರುಗಳಿಂದಲೂ ತಳೆಕೊಳ್ಳಲ್ಪಟ್ಟು ವಿದ್ಯಾರ್ಥಿಗಳು ಗುರು, ಲಿಂಗ ಈ ವಿಷಯದಮೇಲೆ ಮಾಡಿದ ಆನಂದದ ಭಾಷಣವನ್ನು ಯಾವತ್ತರೂ ಕೇಳಿ ಹರ್ಷಿತರಾದರು. ಸಭಾಧ್ಯಕ್ಷ ಮಹಾಸ್ವಾಮಿಗಳ ಭಾಷಣವಾದ ಮೇಲೆ 12 ಘಂಟೆ ಸುಮಾರಿಗೆ ನಮ್ಮನ್ನಾಳುವ ಪಂಚಮಜಾರ್ಜ್ ಬಾದಶಹರವರಿಗೆ ಜಗದ್ಗುರು ವಿಶ್ವಾರಾಧ್ಯ ಗುರುವರರು ಮಂಗಲಾಶೀರ್ವಾದವನ್ನೀಯಲೆಂಬ ಜಯಘೋಷದೊಡನೆ ಸಭಾ ವಿಸರ್ಜನೆಯಾಯಿತು. ಪ್ರತ್ಯಕ್ಷದರ್ಶಿ.

ಸಂಸ್ಕೃತಾಭ್ಯಾಸ.

(ಹಾವೇರಿ).

ತಾ|| 6-8-1922 ನೇ ರವಿವಾರ ಸಾಯಂಕಾಲ 5 ಘಂಟೆಗೆ ಇಲ್ಲಿಯ ಹುಕ್ಕೇರಿಮಠದ ವೀರಶೈವ ಸಂಸ್ಕೃತ ಪಾಠಶಾಲೆಯಲ್ಲಿ ಮಿ|| ಶಿವಮೂರ್ತಿಸ್ವಾಮಿ ಬಿ.ಎ. ಎಲ್‌ಎಲ್.ಬಿ. ವಕೀಲ ಇವರ ಅಧ್ಯಕ್ಷತೆಯ ಕೆಳಗೆ ಒಂದು ಜಾಹೀರಸಭೆಯು ಕೂಡಿತ್ತು. ಸಭೆಯಲ್ಲಿ ಇಲ್ಲಿಯ ಇಂಗ್ಲೀಷ್ ಶಾಲೆಯ ಹೆಡ್‌ಮಾಸ್ತರರಾದ ಮಿ|| ಶಿವಶಂಕರಪ್ಪಾ ನ್ಯಾಸರಗಿ ಬಿ.ಎ. ಇವರು "ವೀರಶೈವ ಕವಿಗಳು" ಎಂಬ ವಿಷಯದಮೇಲೆ ಸರಸವಾದ ವ್ಯಾಖ್ಯಾನವನ್ನು ಕೊಟ್ಟರು. ವ್ಯಾಖ್ಯಾತರು ಪಾಶ್ಚಾತ್ಯ ಕವಿಗಳನ್ನೂ ಮತ್ತೂ ಈ ದೇಶದ ಜೈನಬ್ರಾಹ್ಮಣ ಕವಿಗಳನ್ನೂ ಒಂದು ವರದಿಯಲ್ಲಿ ಮತ್ತೊಂದರಲ್ಲಿ ಕವಿಕುಲ ಸಾರ್ವಭೌಮರಿಂದ ಹೊಗಳಿಸಿಕೊಂಡು ಹೋದ ಶ್ರೀ ಷಡಕ್ಷರದೇವನ್ನು, ಆಸ್ಥಾನಪಂಡಿತ ಬಸವಪ್ಪಶಾಸ್ತ್ರಿ ಮುಂತಾದ ಕವಿಗಳನ್ನು ಕುಲ್ಲಿರಿಸಿ ವಿವೇಚನಾತ್ಮಕವಿಚಾರದಿಂದ ತಕ್ಕಡಿಯನ್ನು ಮೇಲಕ್ಕೆತ್ತಿ ಬಲಭಾಗದ ಪರಡಿಯಿಂದ (ಲಿಂಗಾಯತ ಕವಿಗಳಿಂದ) ಹೊರಸೂಸಿ ಚೆಲ್ಲುತ್ತಿರುವ ಕವಿಸಮಯದ ಚಾತುರ್ಯವನ್ನು ತಮ್ಮ ಶಿಕ್ಷಣಪದ್ಧತಿಯ ಬೋಧಕ ಕುಶಲತೆಯಿಂದ ಸ್ಪಷ್ಟವಾಗಿ ತಿಳಿಸಿದ್ದಲ್ಲದೆ ಅನಾದಿಕಾಲದಿಂದಲೂ ನಮ್ಮ ಸಮಾಜದಲ್ಲಿ ಕವಿಗಳೂ ಪಂಡಿತರೂ ಶಾಸ್ತ್ರಜ್ಞರೂ ಇರುತ್ತಿದ್ದರೆಂಬುದನ್ನು ಸಿದ್ಧಮಾಡಿ ತೋರಿಸಿ, ಹೀಗಿದ್ದರೂ ಮೈಸೂರು ಗೌರ್ನಮೆಂಟ್ ಸಂಸ್ಕೃತ ಕಾಲೇಜುಗಳಲ್ಲಿಯೂ ಪಾಠಶಾಲೆಗಳಲ್ಲಿಯೂ ಬ್ರಾಹ್ಮಣರ ವಿನಾ ಯಾರಿಗೂ ಪ್ರವೇಶಮಾಡಗೊಡದಿರುವದು ಬಹಳ ಖೇದದ ಸಂಗತಿಯಾಗಿರುತ್ತದೆಂಬುವದನ್ನು ಹೇಳಿ, ಈ ವಿಷಯದಲ್ಲಿ ಮೈಸೂರು ಸರ್ಕಾರದವರಿಂದ ನೇಮಿಸಲ್ಪಟ್ಟ ಕಮಿಟಿಯವರು ತಿಳಿಸಿರುವ ವಿಧಾನವು ಕೇವಲ ಪಕ್ಷಪಾತವುಳ್ಳದ್ದಿರುವದರಿಂದಲೇ ಬಹುಜನ ಬ್ರಾಹ್ಮಣೇತರ ಸಮುದಾಯಕ್ಕೆ ಅವಮಾನವನ್ನುಂಟುಮಾಡತಕ್ಕದ್ದಿರುವದರಿಂದ ಅದನ್ನು ತೀವ್ರವಾಗಿ ನಿಷೇಧಿಸಿ ಕೆಳಗೆ ಬರೆದಂತೆ ಒಂದು ಠರಾವನ್ನು ತಂದರು. ಏನಂದರೆ—ಸಂಸ್ಕೃತ ಭಾಷಾಭ್ಯಾಸವು ಧಾರ್ಮಿಕವಿಷಯ ಜ್ಞಾನಸಂಪಾದನೆಗೂ ಸಾಮಾನ್ಯ ಕಲಾಸಂಸ್ಕೃತಿಗೂ ಕಾರಣವಾಗಿದ್ದು, ಮೈಸೂರು ಸಂಸ್ಥಾನದೊಳಗಿನ ಒಟ್ಟು ಆದಾಯದಿಂದ ಪರಿಪೋಷಿತವಾಗಿ ನಡೆದಿರುವ ಮೈಸೂರು ಬೆಂಗಳೂರು ಸಂಸ್ಕೃತಕಾಲೇಜು ಪಾಠಶಾಲೆಗಳಲ್ಲಿ ಇತರ ಮತದವರಿಗೆ ಅವುಗಳಲ್ಲಿ ಪ್ರವೇಶಕ್ಕೆ ಅವಕಾಶವಿಲ್ಲದಂತೆ ತೀರ್ಮಾನಿಸಿರುವ ಸ್ಪೆಷಲ್ ಕಮಿಟಿಯವರ ಅಭಿಪ್ರಾಯವನ್ನು ಈ ಸಭೆಯು ಅತಿ ತೀವ್ರವಾಗಿ ನಿಷೇಧಿಸಿ ಸದರಿ ಕಾಲೇಜು ಪಾಠಶಾಲೆಗಳಲ್ಲಿ ಉಚ್ಚವರ್ಗದ ಇತರ ಮತದವರಿಗೂ ಅವಕಾಶ ಸಿಗುವಂತೆ ತೀವ್ರವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಈ ಸಭೆಯವರು ಮೈಸೂರು ಮಹಾರಾಜರವರನ್ನು ಕುರಿತು ಪ್ರಾರ್ಥಿಸುತ್ತಾರೆ. ಈ ಪ್ರಕಾರವಾದ ನ್ಯಾಸರಗಿಯವರ ಠರಾವಿಗೆ ಇಲ್ಲಿಯ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರಾದ ಕಾವ್ಯತೀರ್ಥ ಗುರುಮೂರ್ತಿ ಶಾಸ್ತ್ರಿ ಕಜ್ಜರಿ ಹಿರೇಮಠ, ಮತ್ತು ಕನ್ನಡಶಾಲೆಯ ಮಾಸ್ತರರಾದ ಮಿ|| ಕೌಲಿ ಈ ಉಭಯತರ ಅನುಮೋದನ ಭಾಷಣಗಳಾಗಿ ಸರ್ವಾನುಮತದಿಂದ ಆ ಠರಾವು ಪಾಸಾಯಿತು. ಆಮೇಲೆ ಅಧ್ಯಕ್ಷರ ಮತ್ತು ಸಭಾಸದರ ಆಭಾರವನ್ನು ಮಿ|| ಚನ್ನಪ್ಪಣ್ಣ ಚೌಸಿಸ್ಟಿ ವರು ಮನ್ನಿಸಿದ ನಂತರ ಸಭಾ ವಿಸರ್ಜನವಾಯಿತು. ಓರ್ವ ಪ್ರತ್ಯಕ್ಷದರ್ಶಿ.

ಸಂಸ್ಕೃತ ಕಾಲೇಜುಗಳು, ಮತ್ತು ವೀರಶೈವರು.

ಈಗ ಅನೇಕ ವರ್ಷಗಳಿಂದಲೂ ವೀರಶೈವರೂ ಮತ್ತು ಈಚೆಗೆ ಇತರರೂ ಸಹ ಮೈಸೂರು ಮತ್ತು ಬೆಂಗಳೂರು ಸಂಸ್ಕೃತ ಕಾಲೇಜುಗಳಿಗೆ ತಮ್ಮ ತಮ್ಮ ಪಂಗಡದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಂತೆ ಮಾಡಬೇಕೆಂದು ಪ್ರಭುತ್ವದವರನ್ನು ಕೇಳುತ್ತಾ ಬಂದಿದ್ದುದರಮೇಲೆ ಈ ವಿಚಾರವನ್ನು ಪರ್ಯಾಲೋಚಿಸುವುದಕ್ಕೆ ಒಂದು ಕಮಿಟಿಯನ್ನು ಏರ್ಪಡಿಸುವುದಾಗಿ ಸರ್ಕಾರದವರು ಅಪ್ಪಣೆಕೊಟ್ಟಂತೆ ಏರ್ಪಟ್ಟ ಕಮಿಟಿಯ ಸಂಕುಚಿತಾಭಿಪ್ರಾಯದ ರಿಪೋರ್ಟನ್ನು ಓದಿ ತಿಳಿದೆವು. ಸಂಸ್ಕೃತ ವಿದ್ಯಾಭ್ಯಾಸವು ತಮ್ಮ ಮತೀಯರಲ್ಲಿ ಮಾತ್ರವಲ್ಲದೆ, ಇತರ ಮತೀಯರಲ್ಲಿ ಹರಡಕೂಡದೆಂಬ ಸ್ವಾರ್ಥೈಕದೃಷ್ಟಿಯುಳ್ಳ ಏಕಮತಸ್ಥರಿಂದ ಕೂಡಿದ ಕಮಿಟಿಯ ಅಭಿಪ್ರಾಯವು ಕೇವಲ ನಿರಸನೀಯವಾಗಿರುತ್ತದೆ. ಮತ್ತು ಅಂಥ ದುರಭಿಮಾನಯುಕ್ತವಾದ ಕಮಿಟಿಯಿಂದ ಹೊರಟಿರುವ ರಿಪೋರ್ಟಿಗೆ ಸರ್ಕಾರದವರಾಗಲೀ ಅಥವಾ ಪ್ರಜೆಗಳೇ ಆಗಲೀ ಯಾವ ಬೆಲೆಯನ್ನೂ ಕೊಡುವುದಕ್ಕಾಗುವುದಿಲ್ಲ. ಸಾರ್ವತ್ರಿಕ ಸಂಸ್ಕೃತ ವಿದ್ಯಾಪ್ರಚಾರದ ವಿಚಾರದಲ್ಲಿ ಸರ್ಕಾರದವರಿಗಿರುವ ಶ್ರದ್ಧೆಯು ಸ್ತೋತ್ರಾರ್ಹವಾದದ್ದೇ ಸರಿ, ಆದರೆ ಈ ವಿದ್ಯೆಯು ಏಕಮತೀಯರಲ್ಲಿ ಮಾತ್ರ ಪ್ರಚುರಗೊಳ್ಳುವಂತೆ ಸೌಲಭ್ಯಗಳನ್ನೊದಗಿಸಿಕೊಟ್ಟು ಇತರ ಮತಗಳಿಗೆ ಅದೇ ಸೌಲಭ್ಯಗಳನ್ನೊದಗಿಸಿಕೊಡಲು ಸಮ್ಮತಿಸದಿರುವ ವಿಚಾರದಲ್ಲಿ ಮಾತ್ರ ಎಲ್ಲರೂ ಭಿನ್ನಾಭಿಪ್ರಾಯಪಡಬೇಕಾಗಿದೆ.

ಸರ್ಕಾರದ ಕಾರ್ಯಗಳು ಸಾರ್ವತ್ರಿಕವಾಗಿರಬೇಕೆಂಬುದು ಸರ್ವವಿದಿತವಾದ ಅಂಶವೇ ಆಗಿದೆ. ಹಾಗಿದ್ದಾಗ್ಗೂ ಸರ್ಕಾರದವರು ಒಂದುಮತದ ವಿದ್ಯಾಪ್ರಚಾರಕ್ಕೆ ಮಾತ್ರ ಸಹಾಯಮಾಡುತ್ತೇವೆಂಬುದು ಕೇವಲ ಅನುಚಿತವಲ್ಲವೆ? ಅದರಲ್ಲೂ ಈ ವೀರಶೈವಮತವು ಅನಾದಿಯಾದದ್ದಾಗಿಯೂ, ಮತ್ತು ವೇದ ವೇದಾಂಗಮುಸಮ್ಮತವಾದದ್ದಾಗಿಯೂ, ಅನಾದಿಯಾಗಿ ಸಂಸ್ಕೃತಗ್ರಂಥರಾಜಿಮಂಡಿತವಾಗಿಯೂ, ಗೀರ್ವಾಣಭಾಷಾಪಾಂಡಿತ್ಯ ಪರಿಶೋಭಿತ ವಿದ್ವದ್ವಿರಾಜಿತವಾಗಿಯೂ, ಆಧುನಿಕಕಾಲದಲ್ಲಿಯೂ ದೇವಭಾಷಾಭ್ಯಾಸನಿರತ ವಿದ್ಯಾರ್ಥಿಬೃಂದವಿಲಸಿತವಾಗಿಯೂ ಇರುತ್ತದೆ. ಸಂಸ್ಕೃತ ವಿದ್ಯಾಭ್ಯಾಸಕ್ಕೆ ವೀರಶೈವ ಮತೀಯರನ್ನು ಸೇರಿಸತಕ್ಕದ್ದಲ್ಲವೆಂಬುದಕ್ಕೆ ನ್ಯಾಯವಾದ ಕಾರಣವಿಲ್ಲವೆಂದು ಈ ಮತದ ಸ್ವರೂಪವನ್ನು ಅರಿತ ನಿರ್ಮತ್ಸರ ಮತಿಗಳಾರೂ ಹೇಳಲಾರರು. ಈ ಮತದಲ್ಲಿ ಅನೂಚಾನವಾಗಿ ಬಂದ ಸಂಸ್ಕೃತ ವಿದ್ಯಾಭ್ಯಾಸದ ಪ್ರಚಾರಕ್ಕೆ ಬೇಕಾದ ಪ್ರೋತ್ಸಾಹವನ್ನೂ ಮತ್ತು ಸೌಲಭ್ಯವನ್ನೂ ಸರ್ಕಾರದವರು ಒದಗಿಸಿಕೊಡದೆ ಹೋದಾಗ್ಗೂ ನಮ್ಮ ಜನಾಂಗದವರು ನಮ್ಮಲ್ಲಿ ಪಾರಂಪರ್ಯವಾಗಿ ಬಂದಿದ್ದ ಸಂಸ್ಕೃತ ಪಂಡಿತರುಗಳ ಸಹಾಯದಿಂದಲೂ, ಮತ್ತು ಕಾಶೀ ಮೊದಲಾದ ಸ್ಥಳಗಳಲ್ಲಿರುವ ನಿಷ್ಪಕ್ಷಪಾತಿಗಳಾದ ಪಂಡಿತರುಗಳ ಸಹಾಯದಿಂದಲೂ ವೈದಿಕವಿದ್ಯೆಯು ನಶಿಸದಂತೆ ಕಾಪಾಡಿಕೊಂಡು ಈಗಲೂ ಎಷ್ಟೋ ಜನ ಉದ್ದಾಮ ಪಂಡಿತರುಗಳು ಇರುವಂತೆ ಮಾಡಿಕೊಂಡಿದ್ದಾರೆ. ಆದಾಗ್ಯೂ, ಏಕಮತದವರಿಗೆ ಮಾತ್ರ ಸಂಸ್ಕೃತವಿದ್ಯಾಭ್ಯಾಸ ವಿಚಾರದಲ್ಲಿ ಸರ್ಕಾರದವರು ಮಾಡಿರುವ ಸಹಾಯವನ್ನು ನಮ್ಮ ಮತೀಯರಿಗೂ ಮಾಡಿದ್ದ ಪಕ್ಷದಲ್ಲಿ ಈ ಮತದಲ್ಲಿ ಎಷ್ಟೋ ಅಧಿಕಸಂಖ್ಯೆಯುಳ್ಳ ವಿದ್ಯಾವಂತರು ಆಗುತ್ತಿದ್ದರು. ಇನ್ನು ಮುಂದೆಯಾದರೂ ಈ ಮತೀಯರಿಗೆ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಬೇಕಾದ ಸೌಲಭ್ಯಗಳನ್ನೊದಗಿಸಿಕೊಡುವುದು ದಯಾಳು ಸರ್ಕಾರದವರ ನ್ಯಾಯವಾದ ಧರ್ಮವಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಒಂದೇ ಪಂಗಡದ ಸ್ಪೆಷಲ್ ಕಮಿಟಿಯವರ ಅಭಿಪ್ರಾಯವನ್ನೇ ಅನುಮೋದಿಸುವ ಪಕ್ಷದಲ್ಲಿ ವಿಶಿಷ್ಟ ವೀರಶೈವ ಜನಾಂಗದವರೂ, ಮತ್ತು ಇತರ ಜನಾಂಗದವರೂ ಸಹ ವಿಸ್ಮಯವನ್ನೂ ಮತ್ತು ಸರ್ಕಾರದವರ ನ್ಯಾಯವಿಮರ್ಶೆಯ ವಿಚಾರದಲ್ಲಿ ಸಂದೇಹವನ್ನೂ ಪಡದೆ ಇರಲಾರರು. ಮೇಲ್ಕಂಡ ಕಮಿಟಿಯ ರಿಪೋರ್ಟನ್ನು ವಿಮರ್ಶಿಸಿದರೆ ಈ ದೇಶದಲ್ಲಿ ಬ್ರಾಹ್ಮಣರೆಂದು ಹೇಳಿಕೊಳ್ಳುವ ಜನರು ಪರಮತೀಯರ ಏಳ್ಗೆಯಲ್ಲಿ ಎಷ್ಟು ಸಹಾನುಭೂತಿಯುಳ್ಳವರೆಂಬುದು ಪ್ರಭುತ್ವದವರಿಗೆ ವಿದಿತವಾಗದೆ ಇರಲಾರದು. ಈ ಕಮಿಟಿಯವರು ಸಂಸ್ಕೃತ ವಿದ್ಯಾಭ್ಯಾಸವು ತಮ್ಮ ಜನರಲ್ಲಿ ವಿನಾ ಇತರ ಮತೀಯರಲ್ಲಿ ಪೂರ್ವದಿಂದಲೂ ಇರಲಿಲ್ಲವೆಂಬ ತರಹವಾಗಿ ಪಡುವ ಅಭಿಪ್ರಾಯವು ತಪ್ಪಾಗಿದೆ. ಹಿಂದೆ ಜೈನಮತೀಯರಲ್ಲೂ, ಮತ್ತು ವೀರಶೈವರಾದ ನಮ್ಮಲ್ಲೂ, ಅನೇಕರು ಸಂಸ್ಕೃತದಲ್ಲಿ ಉದ್ದಾಮಪಂಡಿತರಾದವರು ಇದ್ದೇ ಇದ್ದರು. ನ್ಯಾಯಕುಸುಮಾಂಜಲಿ ಮೊದಲಾದ ಪ್ರಸಿದ್ಧ ಗ್ರಂಥಗಳನ್ನು ರಚಿಸಿರುವ ಉದಯನಾಚಾರ್ಯರೆಂಬ ವಿದ್ವಾಂಸರೂ ಕೂಡ ಒಬ್ಬ ಪ್ರಸಿದ್ಧ ಜೈನಪಂಡಿತರಲ್ಲಿ ಸಾಂಗವಾಗಿ ದರ್ಶನಗ್ರಂಥಗಳನ್ನು ಅಭ್ಯಾಸಮಾಡಿದರು. ನಾಮಲಿಂಗಾನುಶಾಸನ ಗ್ರಂಥವನ್ನು ರಚಿಸಿರುವ ಅಮರಸಿಂಹರೂ ಕೂಡ ಜೈನಮತಸ್ಥರು. ಇವರಲ್ಲದೆ ಹೇಮಚಂದ್ರ, ನೇಮಿಚಂದ್ರ, ಮೇಘಚಂದ್ರ, ಮಾಘಚಂದ್ರ, ಶೃತಕೀರ್ತಿ, ಆದಿನಾಥ, ಮೊದಲಾದ ಅನೇಕರು ಜೈನಮತದ ಸಂಸ್ಕೃತ ಮಹಾಪಂಡಿತರುಗಳಾಗಿದ್ದರು. ಅದರಂತೆ ವೀರಶೈವ ಮತೀಯರಲ್ಲಿಯೂ ಶ್ರೀ|| ಉತ್ಪಲಶಿವಾಚಾರ್ಯರು, ಪ್ರಭಾನಂದಶಿವಾಚಾರ್ಯರು, ಜ್ಯೋತಿರ್ನಾಥಾಚಾರ್ಯರು, ನಂದಿಕೇಶ್ವರಾರಾಧ್ಯರು, ನೀಲಕಂಠಶಿವಾಚಾರ್ಯರು, ಶ್ರೀಪತಿಪಂಡಿತ ಮಲ್ಲಿಕಾರ್ಜುನಪಂಡಿತ ಮಂಚನಪಂಡಿತರುಗಳು, ಶಿವಯೋಗಿ ಶಿವಾಚಾರ್ಯರು, ಪಾಲ್ಕುರಿಕೆ ಸೋಮಾರಾಧ್ಯರು, ತೋಂಟದಾರ್ಯರು, ಚೆನ್ನಬಸವ ಶಿವಾಚಾರ್ಯರು, ಮೌನಪ್ಪಪಂಡಿತರು, ಗುಬ್ಬಿ ಮಲ್ಲಣಾರ್ಯರು, ಗುರುರಾಜಕವೀಂದ್ರರು, ಷಡಕ್ಷರಮಂತ್ರೀಶ, ಮಲ್ಲಣಾರ್ಯರು, ಷಡಕ್ಷರದೇವರು, ಮಾಯಿದೇವರು, ನಿಜಗುಣ ಶಿವಯೋಗೀಶ್ವರರೇ ಮೊದಲಾದ ಅನೇಕರು ವೇದವೇದಾಂಗ ವಿದ್ಯಾಪಾರಂಗತ ವಿದ್ವಾಂಸರಾಗಿಯೂ ಗ್ರಂಥಕರ್ತೃಗಳಾಗಿಯೂ ಇದ್ದರು. ಈಗಲೂ ವೇದಾಂತ, ಸಾಂಖ್ಯ, ನ್ಯಾಯತೀರ್ಥರೆಂಬ ಬಿರುದಾಂಕಿತರಾದ ಜಗದೀಶಶಾಸ್ತ್ರಿಗಳು, ಮಹಾಕವಿ ಗೌರೀಶಂಕರಶಾಸ್ತ್ರಿಗಳೇ ಮೊದಲಾದ ಅನೇಕರು ಸಂಸ್ಕೃತ ಪಂಡಿತರುಗಳಾಗಿ ನಮ್ಮಲ್ಲಿರುತ್ತಾರೆ. ಮತ್ತು ಇಂದೂರು ಕಾಲೇಜಿನಲ್ಲಿ ವೇದಭಾಷ್ಯ ಪ್ರೊಫೆಸರ್ ವಿರೂಪಾಕ್ಷ ಒಡೆಯರು ಈಗಲೂ ವೇದಭಾಷ್ಯಬೋಧಕರಾಗಿ ಇರುತ್ತಾರೆ. ಹೀಗಿದ್ದಾಗ್ಗೂ ಕಮಿಟಿಯವರು ಆ ವಿಷಯಗಳನ್ನು ತಮ್ಮ ಗಮನಕ್ಕೆ ತಂದುಕೊಳ್ಳದೆ ಬಿಟ್ಟಿರುವುದು ಅವರಲ್ಲಿರುವ ಮತವೈಷಮ್ಯವನ್ನು ವ್ಯಕ್ತಗೊಳಿಸತಕ್ಕ ಅಂಶವಾಗಿದೆ. ಪರದೇಶದ ಅಧ್ಯಾಪಕರುಗಳು ನಮ್ಮಮತೀಯ ವಿದ್ಯಾರ್ಥಿಗಳಿಗೆ ವೇದವೇದಾಂಗಾದಿ ಪಾಠಗಳನ್ನು ಹೇಳುತ್ತಿರುವಾಗ ನಮ್ಮದೇಶದ ಅಧ್ಯಾಪಕರು ಹೇಳಲು ನಿರಾಕರಿಸುತ್ತಾರೆಂಬ ಕಾರಣದಿಂದ ನಮ್ಮಮತೀಯ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನೊದಗಿಸಿಕೊಡಲು ಸಾಧ್ಯವಿಲ್ಲವೆಂದು ಹೇಳುವಪಕ್ಷದಲ್ಲಿ ಅದು ಕೇವಲ ಸರ್ಕಾರದವರ ದರ್ಪ ಮತ್ತು ಗೌರವವನ್ನು ಕುಂದಿಸತಕ್ಕ ಅಂಶವಾಗಿ ಪರಿಣಮಿಸುತ್ತದೆ. ಈಗ ಸರ್ಕಾರಿ ಕಾಲೇಜುಗಳಲ್ಲಿರುವ ಅಧ್ಯಾಪಕರುಗಳು ಇತರ ಮತೀಯರಿಗೆ ವೇದವೇದಾಂಗಗಳನ್ನು ಬೋಧಿಸುವುದಿಲ್ಲವೆಂದು ಹಟಹಿಡಿದು ಸರ್ಕಾರದ ಅಪ್ಪಣೆಯನ್ನುಲ್ಲಂಘಿಸಿ ತಮ್ಮ ನೌಕರಿಗಳಿಗೆ ರಾಜೀನಾಮೆಯನ್ನು ಕೊಟ್ಟಪಕ್ಷದಲ್ಲಿ, ಈ ಪ್ರಾಚೀನ ವಿದ್ಯಾಪ್ರಸಾರವೇ ನಶಿಸುತ್ತದೆಂಬ ಶಂಕೆಯನ್ನು ಮೇಲ್ಕಂಡ ಕಮಿಟಿಯವರು ಸೂಚಿಸುತ್ತಾರೆ. ಆದರೆ ಈ ವಿಧವಾದ ಭೀತಿಪ್ರದರ್ಶನಕ್ಕೆ ಸರ್ಕಾರದವರು ಶಂಕಿಸತಕ್ಕ ಅಗತ್ಯವಿಲ್ಲ. ವೀರಶೈವಮತದ ಪಂಡಿತರೂ, ಜೈನಮತದ ಪಂಡಿತರೂ ಮತ್ತು ಕಾಶಿ ಕಲ್ಕತ್ತಾ ಮೊದಲಾದ ಕಡೆಯ ನಿಷ್ಪಕ್ಷಪಾತಿಗಳಾದ ವಿದ್ವಾಂಸರೂ, ಈ ಸರ್ಕಾರಿ ಕಾಲೇಜುಗಳಲ್ಲಿರುವ ಅಧ್ಯಾಪಕರುಗಳಿಗಿಂತಲೂ ಪ್ರಚಂಡವಿದ್ಯಾವಂತರಾಗಿಯೇ ಇದ್ದಾರೆ. ಮತ್ತು ಇವರುಗಳು ಸರ್ಕಾರದ ಅಪ್ಪಣೆಯನ್ನು ಲೇಶವೂ ಉಲ್ಲಂಘಿಸದೆ ಪಾಠಗಳನ್ನು ಹೇಳಲು ಸಿದ್ಧರಾಗಿ ಈಗ ಅಧ್ಯಾಪಕರುಗಳಿಗೆ ಸಲ್ಲುತ್ತಿರುವ ವೇತನಗಳನ್ನೇ ತೆಗೆದುಕೊಂಡು ಕೆಲಸ

ಕ್ಕೆ ಬರುವ ವಿಚಾರದಲ್ಲಿ ಲೇಶವೂ ಸಂಶಯವಿಲ್ಲ. ಸ್ಪೆಷಲ್ ಕಮಿಟಿಯವರಿಗೆ ಕಲಕತ್ತಾ ಮತ್ತು ಕಾಶಿಯಿಂದ ಬಂದಿರುವ ಈ ವಿಚಾರಕವಾದ ಜವಾಬುಗಳಲ್ಲಿಯೂ ಕೂಡ ಇತರ ಮತೀಯರನ್ನು ಸಂಸ್ಕೃತ ಕಾಲೇಜುಗಳಿಗೆ ಸೇರಿಸುವುದಿಲ್ಲವೆಂಬ ಅಂಶವು ವ್ಯಕ್ತಪಡುವುದಿಲ್ಲ. ಯಾವ ದೇಶದಲ್ಲಿಯೇ ಆಗಲಿ ಆ ದೇಶದ ವಿದ್ಯೆ ಮತ್ತು ಆಡಳಿತದ ವಿಚಾರದಲ್ಲಿ ಆ ದೇಶದ ನಿವಾಸಿಗಳೂ, ಆ ದೇಶದ ವಿಶಿಷ್ಟ ನಿರ್ಣಾನ ಭಾರವನ್ನು ವಹಿಸುವವರೂ ಆದ ಪ್ರಜಾಸಮುದಾಯದ ಅಭಿಪ್ರಾಯವು ಇತರ ದೇಶಸ್ಥರ ಅಭಿಪ್ರಾಯಕ್ಕಿಂತಲೂ ಪ್ರಾಮುಖ್ಯವಾದದ್ದು. ಹಾಗಿದ್ದಾಗ್ಯೂ ಸರ್ಕಾರದವರು ಅಂಥ ಬಹು ಮತದ ಅಭಿಪ್ರಾಯವನ್ನು ನಿರೋಧಿಸತಕ್ಕದ್ದು ನ್ಯಾಯಸಮ್ಮತವಲ್ಲ. ಈ ನವೀನಕಾಲದಲ್ಲಿ ಎಷ್ಟೋ ಜನ ಪಾಶ್ಚಾತ್ಯ ಪಂಡಿತರುಗಳು ಸಂಸ್ಕೃತ ವಿದ್ಯಾಪಾರಂಗತರಾಗಿ ವೇದ ವೇದಾಂಗಗಳನ್ನು ತಮ್ಮ ಭಾಷೆಯಲ್ಲಿ ತರ್ಜುಮೆಮಾಡಿರುವುದಲ್ಲದೆ ಭಾಷ್ಯಾರ್ಥ ವಿವರಣೆಗಳನ್ನು ಕೂಡ ಬರೆದಿರುತ್ತಾರೆ. ಮ್ಯಾಕ್ಸ್‌ಮುಲ್ಲರ್ ಎಂಬ ಪಾಶ್ಚಾತ್ಯ ಪಂಡಿತರು ಭಟ್ಟಾಚಾರ್ಯ ಎಂಬ ಬಿರುದನ್ನು ಪಡೆದರು. ಜರ್ಮನಿಯಲ್ಲಿ ಈ ಸಂಸ್ಕೃತ ವಿದ್ಯಾಪ್ರಚಾರವು ವಿಶೇಷವಾಗಿದೆ. ಇಂಥಾ ಕಾಲದಲ್ಲಿಯೂ ಕೂಡ, ಈ ಜ್ಞಾನ ವಿಕಾಸಕವಾದ ವಿದ್ಯೆಯು ಏಕಮತಸ್ಥರ ಕರಗತವಾಗಿರಬೇಕೆಂಬುದು ಎಂಥಾ ಕುತ್ಸಿತವಾದ ಮತ್ತು ಹಾಸ್ಯಾಸ್ಪದವಾದ ಅಭಿಪ್ರಾಯ! ಇಂಥ ಅಭಿಪ್ರಾಯಕ್ಕೆ ಸತ್ಯಸಂಧರಾದ ನಮ್ಮ ಶ್ರೀಮನ್ ಮಹಾರಾಜರವರ ಆಳಿಕೆಯಲ್ಲಿಯೂ ಮತ್ತು ಘನತೆಯನ್ನು ಹೊಂದಿದ ಪಾಶ್ಚಾತ್ಯ ವಿದ್ಯಾಸಂಸ್ಕಾರ ಪಾಶ್ಚಾತ್ಯ ನಾಗರಿಕ ದೇಶವಾಸ ಪರ್ಯಟನ ಪಂಡಿತಸಂಭಾಷಣಾದಿಗಳಿಂದ ಉದಾರಚಿತ್ತರಾಗಿ ಸಂಪೂರ್ಣ ಲೋಕಾನುಭವನುಂಡಿತರಾಗಿರುವ ಮಿ॥ ಎ. ಆರ್. ಬ್ಯಾನರ್ಜಿ ಸಿ. ಐ. ಇ. ಇವರ ದಿವಾನ್‌ಗಿರಿಯಲ್ಲಿಯೂ ಕೂಡ ಆಶ್ರಯ ಸಿಕ್ಕಿದ ಪಕ್ಷದಲ್ಲಿ ಬಹಳ ಆಶ್ಚರ್ಯ ಪಡಬೇಕಾಗುತ್ತದೆ. [illegible]

[illegible]

ಈ ಪ್ರಾರ್ಥನೆಗಳ [illegible] ಈ ದೇಶದ ಮತ್ತು ಇಂಡ್ಯಾದೇಶದ 40 ಲಕ್ಷ ವೀರಶೈವ ಜನಾಂಗದ [illegible] ವೀರಶೈವ ಪ್ರತಿನಿಧಿ.

ಕರ್ನಾಟಕದ ಸುದ್ದಿಗಳು.

[illegible]

ಪತ್ತೆ—ಎಫ್. ಬಸವಲಿಂಗಪ್ಪ, ಸವಣೂರು, ನೆರಳಿಕ್ ಹೌ॥ ಮಾಸ್ಟರ್, ಪೋ॥ ಗದಗ, ಜಿ. ಧಾರವಾಡ.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ತೋರಿಸುವ [illegible]

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್, ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೀ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನಹಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗಲೇಹಕ್ಕೆ ಬೆಳ್ಳಿ, ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟು ಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು 15 ದಿನಗಳ ಸೇವಿಸುವದರಿಂದ ಪೂರಾ ಗುಣಕೊಡುವದು. 3 ಡಬ್ಬಿಗಳನ್ನು ಸೇವಿಸುವದರಿಂದ [illegible] 15 ಕೋಲೆಯ ಡಬ್ಬಿ 1ಕ್ಕೆ 2-0-0. ಒಂದೇ ಆರ್ಡರ 3 ಡಬ್ಬಿಗಳನ್ನು [illegible]

ವಿಳಾಸ:—ವಿ. ಎ. ಎಸ್. ಶಾಣಿ ಅಂಡ್ ಕೋ, ಸಾಹುಕಾರಪೇಟೆ, ಮದರಾಸ್.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

[illegible]

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು, [illegible]

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್‌ಗಳಿಂದ ತಯಾರಿಸಿದೆ. [illegible]

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿ ಸಹಿತ ರೂ. 4-8-0

ವಿಳಾಸ:—ಮ್ಯಾನೇಜರ್, ಸ್ಟಾರ್‌ಹೌಸ್, ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸು.

ಶ್ರೀರಾಮವಿಜಯಂ.

[illegible]

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

[illegible]

ವೃಷಪಂಚಕ ೦—೯—೦

೧೯೨೨ನೆಯ ಇಸವಿ ಆಗಸ್ಟ್ ತಾ॥ ೧೩ ರಿಂದ ೧೯೨೨ನೆಯ ಆಗಷ್ಟ ತಾ॥ ೧೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ದುಂದುಭಿ ನಾಮಸಂವತ್ಸರದ ಶ್ರಾವಣಬಹುಳ ಷಷ್ಠಿಯಿಂದ ಶ್ರಾವಣ ಬಹುಳ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾಸಿಂಹ
13	ಭಾನು	ಷಷ್ಠಿ	60	ರೇವ	16-35	29
14	ಸೋಮ	ಷಷ್ಠಿ	2-27	ಅಶ್ವಿ	22-8	30
15	[1] ಮಂಗಳ	ಸಪ್ತ	5-46	ಭರ	26-44	31
16	ಬುಧ	ಅಷ್ಟ	8-0	ಕೃತ್ತಿ	30-11	32
17	ಗುರು	ನವ	8-57	ರೋಹಿ	32-24	1
18	ಶುಕ್ರ	ದಶ	8-37	ಮೃಗ	32-20	2
19	[2] ಶನಿ	ಏಕಾ	7-3	ಆರ್ದ್ರಾ	33-6	3

(1) ಮಂಗಳಗೌರೀವ್ರತಂ, ಜನ್ಮಾಷ್ಟಮಿ, ದಶಫಲವ್ರತಂ. (2) ಸರ್ವತ್ರೈಕಾದಶಿ, ಶ್ರಾವಣಶನಿವಾರಂ.

ಮೈಸೂರು: ಮೈ. ವಿರೂಪಾಕ್ಷಯ್ಯನವರಿಂದ ಕ್ಯಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾಶ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚೆತ್ತ್ರಿಳಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦]

[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಅಗಸ್ಟ್ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೩೪

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ [illegible]

ವೀರಶೈವಧರ್ಮಶಿರೋಮಣಿ.—[illegible]

ಬಸವರಾಜವಿಜಯಂ.—[illegible]

ಚೆನ್ನಬಸವೇಶವಿಜಯಂ.—[illegible]

ಸಿದ್ಧೇಶ್ವರಪುರಾಣ.—[illegible]

ಪ್ರಭುಲಿಂಗಲೀಲೆ.—[illegible]

ಸಂಪಾದನೆ.—[illegible]

ಸೌಂದರಪುರಾಣ.—[illegible]

[illegible]

ಪ॥ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು, ಗ್ರಂಥಪ್ರಸಾರಕಮಂಡಲಿ ಮೈಸೂರು.

ವೀರಶೈವರು ಅವಶ್ಯ ಸಂಗ್ರಹಿಸತಕ್ಕ ವೀರಶೈವ ಧರ್ಮಪರವಾದ ಸುಂದರ ಫೋಟೋಗಳು.

ಶ್ರೀಹನುಮಂತನಿಗೆ-ವೀರಭದ್ರನಿಂದ-ಲಿಂಗಧಾರಣವು

೧. ಇದರಲ್ಲಿ ಹನುಮಂತನಿಗೆ ಶ್ರೀ ವೀರಭದ್ರದೇವರು ಮೋಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿದ್ದಾರೆ—ಫು॥ ಸಾ॥ ೧ಕ್ಕೆ ರೂ. ೧-೪-೦ ಕ್ಯಾ॥ ಸಾ॥ ೧ಕ್ಕೆ ೦-೧೨-೦.

೨. ಶ್ರೀ ಶಿವಯೋಗಿ ಸಂಘ:—ಇದರಲ್ಲಿ ಶ್ರೀ ಜ॥ ಗು॥ ಚಿತ್ರದುರ್ಗ ಮಹಾಸ್ವಾಮಿಗಳು ಗದಗ ತೋಂಟದಾರ್ಯರು, ಅಥಣಿ ಶಿವಯೋಗಿಗಳು ಮುಂತಾದ ೧೮ ಶಿವಯೋಗಿಗಳ ಫೋಟೋಗಳು ಕೂಡಿಸಿ ಇರುವವು. ಇದರಿಂದ ಒಂದೇ ಕಾಲಕ್ಕೆ ಎಲ್ಲಾ ಶಿವಯೋಗಿಗಳ ದರ್ಶನ ಆಗುವದು ೧೮ × ೧೨ ಸೈಜದ ಚಿತ್ರದ ಕ್ರಯ ಪ್ರ॥ ೧ಕ್ಕೆ ೮ಆಣೆ.

೩. ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕನಾದ ಶ್ರೀ ಬಸವಣ್ಣನವರ ತೇಜಃಪುಂಜವಾದ ಖಾಸ ಫೋಟೋ ೧೮ × ೧೨ ಸೈಜದ ಪ್ರ॥ ೧ಕ್ಕೆ ೮ ಆಣೆ ಕೈ ಬಣ್ಣದು ರೂ. ೧.

೪. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರ ಚನ್ನಬಸವೇಶ್ವರ ಮಡಿವಾಳ ಮಾಚಿದೇವರು ಸಿದ್ಧರಾಮದೇವರು ಮುಂತಾದ ಪ್ರಮಥರು ಶ್ರೀ ಪ್ರಭುದೇವರ ಪಾದಪೂಜಾಮಾಡುವ ಸಮಾರಂಭದ ಫೋಟೋ ಇರುವದು. ಫು॥ ಸಾ॥ ೧ಕ್ಕೆ ರೂ. ೧-೪-೦ ಕ್ಯಾ॥ ಸಾ॥ ೧ಕ್ಕೆ ೦-೧೨-೦.

೫. ಶ್ರೀ ಚನ್ನಬಸವೇಶ್ವರ ಜನ್ಮ:—ಶ್ರೀ ಅಕ್ಕನಾಗಮ್ಮನವರ ಉದರದಲ್ಲಿ ಪ್ರಸಾದದ ಮಹತ್ವದಿಂದೇ ಷಣ್ಮುಖ ಅವತಾರಿಯಾದ ಶ್ರೀ ಚನ್ನಬಸವಣ್ಣನವರ ಜನನವಾದದ್ದು ಮಹತ್ವ ಪೂರ್ಣವಾದ ಫೋಟೋ ಇರುವದು. ಫು॥ ಸಾ॥ ೧ಕ್ಕೆ ೧-೪-೦ ಕ್ಯಾ॥ಸಾ॥ ೧ಕ್ಕೆ ೦-೧೨-೦.

೬. ಶ್ರೀಮಡಿವಾಳ ಮಾಚಿದೇವ ಮಹಿಮಾ:—ಸರ್ವಕಾಲಶುಚಿರ್ಭೂತದಿಂದೆ ಇರುವ ಮಡಿವಾಳಯ್ಯಗೆ ಚೇಷ್ಟೆ ಇಂದೆ ಒಬ್ಬ ಭವಿಯು ಮುಟ್ಟಿದ ಕೂಡಲೆ ವೀರಭದ್ರಾವತಾರಿ ಆದ ಮಡಿವಾಳಯ್ಯನು ತೋರಿಸಿದ ಪ್ರರಾಕ್ರಮ ಬಿಜ್ಜಳರಾಯನ ಪಶ್ಚಾತ್ತಾಪ, ಬಸವಣ್ಣನ ಭಕ್ತಿ ಇವುಗಳು ಇದರಲ್ಲಿ ಕಂಡುಬರುತ್ತವೆ. ಇದು ಭಕ್ತಿಗಾಂಭೀರ್ಯಯುಕ್ತವಾದ ಫೋಟೋ ಇರುತ್ತದೆ. ಫು॥ ಸಾ॥ ಪ್ರ॥ ೧ಕ್ಕೆ ರೂ. ೧-೪-೦ ಕ್ಯಾ॥ ಸಾ॥ ೧ಕ್ಕೆ ೦-೧೨-೦.

೭. ಶ್ರೀ ಮಹಾದೇವಕಾಲಕೂಟ ವಿಷಪಾನ:—ವಿಷ್ಣು, ಬ್ರಹ್ಮಾದಿದೇವ ಅಸುರರು ಕೂಡಿ ಶ್ರೀ ಶಿವನಿಗೆ ಕಾಲಕೂಟ ವಿಷನಿವಾರಣಾರ್ಥಕ್ಕಾಗಿ ಪ್ರಾರ್ಥಿಸಲು ಶ್ರೀ ಪರಶಿವನು ಆ ಕಾಲಕೂಟವಿಷವನ್ನು ಪ್ರಾಶನಮಾಡಿ ಜಗತ್‌ಪ್ರಲಯವು ನಿಲ್ಲಿಸಿದ ಈ ಫೋಟೋ ಬಹಳ ಸುಂದರ ಇರುತ್ತದೆ. ಫು॥ ಸಾ॥ ೧ಕ್ಕೆ ರೂ. ೧-೪-೦ ಕ್ಯಾ॥ ಸಾ॥ ೧ಕ್ಕೆ ೦-೧೨-೦

೮. ಶ್ರೀ ಶಿವಪ್ರದೋಷಕಾಲದರ್ಶನ:—ಬ್ರಹ್ಮ, ವಿಷ್ಣು, ಇಂದ್ರ, ಅಗ್ನಿ ಮುಂತಾದ ದೇವತರು ಸರಸ್ವತಿ ಲಕ್ಷ್ಮೀ ಮುಂತಾದ ದೇವತಾಸ್ತ್ರೀಯರು ಕೂಡಿ ತಾಳ, ಮೃದಂಗ, ವೀಣಾ ಮುಂತಾದ ವಾದ್ಯಗಳಿಂದೇ [illegible]

೯. ಶ್ರೀ ಬಸವೇಶ್ವರ ಸುಗಮೈಕ್ಯ:—[illegible]

೧೦. ಶ್ರೀ ಪಂಚಾಚಾರ್ಯಲಿಂಗೋದ್ಭವ:—[illegible]

ಗಂಗಪ್ಪ ಜೇರಗೆ, ಸೋಲಾಪುರ ಸಿಟಿ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

[illegible]

ಇಮಿಟೇಷನ್ ವಜ್ರದ ಬೆಂಡೋಲೆ.

[illegible]

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ, ನಂ. 1 ತಿಮ್ಮುನಾಯಕನ ಬೀದಿ, ಮದರಾಸು.

ರಾಯಲ್ ಫೌಂಟನ್‌ಪೆನ್.

[illegible]

ಲಿಲ್ಲಿ ಆಫ್ ದಿವ್ಯಾಲಿ.

[illegible]

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—ದೈರ್ಯಲಕ್ಷ್ಮೀ ಅಂಡ್ ಕೋ, ಪೋಸ್ಟ್‌ಬಾಕ್ಸ್ ನಂ. 263, ಮದರಾಸ್.

ಕ್ಕೆ ಬರುವ ವಿಚಾರದಲ್ಲಿ ಲೇಶವೂ ಸಂಶಯವಿಲ್ಲ. ಸ್ಪೆಷಲ್ ಕಮಿಟಿಯವರಿಗೆ ಕಲಕತ್ತಾ ಮತ್ತು ಕಾಶಿಯಿಂದ ಬಂದಿರುವ ಈ ವಿಚಾರಕವಾದ ಜವಾಬುಗಳಲ್ಲಿಯೂ ಕೂಡ ಇತರ ಮತೀಯರನ್ನು ಸಂಸ್ಕೃತ ಕಾಲೇಜುಗಳಿಗೆ ಸೇರಿಸುವದಿಲ್ಲವೆಂಬ ಅಂಶವು ವ್ಯಕ್ತಪಡುವದಿಲ್ಲ. ಯಾವ ದೇಶದಲ್ಲಿಯೇ ಆಗಲಿ ಆ ದೇಶದ ವಿದ್ಯೆ ಮತ್ತು ಆಡಳಿತದ ವಿಚಾರದಲ್ಲಿ ಆ ದೇಶದ ನಿವಾಸಿಗಳೂ, ಆ ದೇಶದ ವಿಶಿಷ್ಟ ಖರ್ಚಿನ ಭಾರವನ್ನು ವಹಿಸುವವರೂ ಆದ ಪ್ರಜಾಸಮುದಾಯದ ಅಭಿಪ್ರಾಯವು ಇತರ ದೇಶಸ್ಥರ ಅಭಿಪ್ರಾಯಕ್ಕಿಂತಲೂ ಪ್ರಾಮುಖ್ಯವಾದದ್ದು. ಹಾಗಿದ್ದಾಗ್ಯೂ ಸರ್ಕಾರದವರು ಅಂಥ ಬಹು ಮತದ ಅಭಿಪ್ರಾಯವನ್ನು ನಿರೋಧಿಸತಕ್ಕದ್ದು ನ್ಯಾಯಸಮ್ಮತವಲ್ಲ. ಈ ನವೀನಕಾಲದಲ್ಲಿ ಎಷ್ಟೋ ಜನ ಪಾಶ್ಚಾತ್ಯ ಪಂಡಿತರುಗಳು ಸಂಸ್ಕೃತ ವಿದ್ಯಾಪಾರಂಗತರಾಗಿ ವೇದ ವೇದಾಂಗಗಳನ್ನು ತಮ್ಮ ಭಾಷೆಯಲ್ಲಿ ತರ್ಜುಮೆಮಾಡಿರುವುದಲ್ಲದೆ ಭಾಷ್ಯಾರ್ಥ ವಿವರಣೆಗಳನ್ನು ಕೂಡ ಬರೆದಿರುತ್ತಾರೆ. ಮ್ಯಾಕ್ಸ್‌ಮುಲ್ಲರ್ ಎಂಬ ಪಾಶ್ಚಾತ್ಯ ಪಂಡಿತರು ಭಟ್ಟಾಚಾರ್ಯ ಎಂಬ ಬಿರುದನ್ನು ಪಡೆದರು. ಜರ್ಮನಿಯಲ್ಲಿ ಈ ಸಂಸ್ಕೃತ ವಿದ್ಯಾಪ್ರಚಾರವು ವಿಶೇಷವಾಗಿದೆ. ಇಂಥಾ ಕಾಲದಲ್ಲಿಯೂ ಕೂಡ, ಈ ಜ್ಞಾನ ವಿಕಾಸಕವಾದ ವಿದ್ಯೆಯು ಏಕಮತಸ್ಥರ ಕರಗತವಾಗಿರಬೇಕೆಂಬುದು ಎಂಥಾ ಕುತ್ಸಿತವಾದ ಮತ್ತು ಹಾಸ್ಯಾಸ್ಪದವಾದ ಅಭಿಪ್ರಾಯ! ಇಂಥ ಅಭಿಪ್ರಾಯಕ್ಕೆ ಸತ್ಯಸಂಧರಾದ ನಮ್ಮ ಶ್ರೀಮನ್ಮಹಾರಾಜರವರ ಆಳಿಕೆಯಲ್ಲಿಯೂ ಮತ್ತು ಘನತೆಯನ್ನು ಹೊಂದಿದ ಪಾಶ್ಚಾತ್ಯ ವಿದ್ಯಾಸಂಸ್ಕಾರ ಪಾಶ್ಚಾತ್ಯ ನಾಗರಿಕ ದೇಶವಾಸ ಪರ್ಯಟನ ಪಂಡಿತಸಂಭಾಷಣಾದಿಗಳಿಂದ ಉದಾರಚಿತ್ತರಾಗಿ ಸಂಪೂರ್ಣ ಲೋಕಾನುಭವಸಂಪನ್ನರಾಗಿರುವ ಮಿ|| ಎ. ಆರ್. ಬಾನರ್ಜಿ ಸಿ. ಐ. ಇ. ಇವರ ದಿವಾನ್‌ಗಿರಿಯಲ್ಲಿಯೂ ಕೂಡ ಆಶ್ರಯ ಸಿಕ್ಕಿದ ಪಕ್ಷದಲ್ಲಿ ಬಹಳ ಆಶ್ಚರ್ಯಪಡಬೇಕಾಗುತ್ತದೆ. "ವೀರಶೈವರು ಪ್ರತ್ಯೇಕ ಕಾಲೇಜನ್ನು ಮಾಡಿಕೊಂಡು ಅಭ್ಯಾಸಮಾಡಬಹುದು; ಅದಕ್ಕೆ ಸರ್ಕಾರದವರು ಗ್ರಾಂಟು ಕೊಡಬಹುದು" ಎಂದು ಕೆಲರು ವಾದಿಸುತ್ತಾರೆ. ಅದು ಸಾಧ್ಯವಲ್ಲ. ಸಂಸ್ಕೃತವಿದ್ಯೆಯು ಕೇವಲ ಧರ್ಮಾಭಿಮಾನದಿಂದ ಮಾಡತಕ್ಕದ್ದು. ಅದಕ್ಕೆ ಈಗ ರಾಜಕೀಯಾಂಗದ ಪ್ರೋತ್ಸಾಹವಿಲ್ಲ. ಆದುಕಾರಣ ಅಂಗ್ಲವಿದ್ಯೆಗೆ ಮೋಹಿಸುವಷ್ಟು ವಿದ್ಯಾರ್ಥಿಗಳು ಇದಕ್ಕೆ ಮೋಹಿಸುವುದಿಲ್ಲ. ಈಗಣ ಸಂಸ್ಕೃತ ಕಾಲೇಜಿನಲ್ಲಿ ವಿದ್ಯಾರ್ಥಿ ವೇತನವನ್ನೋ, ಭೋಜನ ವಸತಿ ಮೊದಲಾದ ಸೌಕರ್ಯಗಳನ್ನೋ ಪರೀಕ್ಷಾ ಬಹುಮಾನಗಳನ್ನೋ ನಮ್ಮ ಪ್ರಭುತ್ವದವರು ಏರ್ಪಡಿಸದಿದ್ದರೆ ಆ ಕಾಲೇಜುಗಳಲ್ಲಿ ಈಗ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ 1/10 ಭಾಗ ವಿದ್ಯಾರ್ಥಿಗಳೂ ಇರುತ್ತಿರಲಿಲ್ಲ. ಹೀಗಿರುವುದರಿಂದ ನಮ್ಮ ಮತದಲ್ಲೂ ಪ್ರೌಢ ವಿದ್ಯಾಭ್ಯಾಸಕ್ಕೆ ವಿಶೇಷ ಮಂದಿಗಳು ಸಿದ್ಧರಾಗುತ್ತಾರೆಂದು ನೆನಸುವುದಕ್ಕಾಗುವುದಿಲ್ಲ. ಕೆಲಕೆಲವರಿಗೋಸ್ಕರ ಅತ್ಯಂತ ವ್ಯಯ ಸಾಧ್ಯವಾದ ಕಾಲೇಜನ್ನು ಪ್ರತ್ಯೇಕವಾಗಿ ಏರ್ಪಡಿಸುವುದು ಸುಸಾಧ್ಯವೂ ಉಚಿತವೂ ಆದುದೆಂದು ವಿಚಾರಪರರು ಯಾರೂ ಒಪ್ಪಲಾರರು. ಆದುಕಾರಣವೇ ಈಗಿರುವ ಸರ್ಕಾರಿ ಸಂಸ್ಕೃತ ಮಹಾಪಾಠಶಾಲೆಯಲ್ಲೇ ನಮ್ಮ ವಿದ್ಯಾರ್ಥಿಗಳನ್ನೂ ಸೇರಿಸಿಕೊಳ್ಳಬೇಕೆಂದು ನಾವು ವಿನಯ ವಿಧೇಯತೆಗಳಿಂದ ಪ್ರಭುತ್ವದವರನ್ನು ಬಹುಕಾಲದಿಂದ ಪ್ರಾರ್ಥಿಸುತ್ತಿದ್ದೇವೆಯೇಹೊರತು ಮತ್ಸರ ಕಾರಣದಿಂದಲೂ ಅಲ್ಲ.

ಈ ಮೇಲ್ಕಂಡ ಎಲ್ಲಾ ವಿಚಾರಗಳನ್ನೂ ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಿ ಮೈಸೂರು ಮತ್ತು ಬೆಂಗಳೂರು ಕಾಲೇಜುಗಳಲ್ಲಿ ವೇದ ವೇದಾಂಗಾದಿ ಎಲ್ಲಾ ಪಾಠಗಳನ್ನೂ ಅಭ್ಯಾಸಿಸಲು ನಮ್ಮ ವೀರಶೈವ ವಿದ್ಯಾರ್ಥಿಗಳಿಗೆ ಸಂಪೂರ್ಣ ಅವಕಾಶವನ್ನು ಕೊಡಬೇಕಲ್ಲದೆ; ವೀರಶೈವ ಮತದ ಪಂಡಿತರನ್ನು ಈ ಕಾಲೇಜುಗಳಲ್ಲಿ ಅಧ್ಯಾಪಕರುಗಳನ್ನಾಗಿ ನೇಮಿಸಿಕೊಳ್ಳಬೇಕಾಗಿಯೂ ಪ್ರಾರ್ಥನೆ.

ಈ ಪ್ರಾರ್ಥನೆಗಳಿಗೆ ವಿರೋಧವಾದ ಏರ್ಪಾಡುಮಾಡುವುದರ ಮೂಲಕ ಈ ದೇಶದ ಮತ್ತು ಇಂಡ್ಯಾದೇಶದ 40 ಲಕ್ಷ ವೀರಶೈವ ಜನಾಂಗದಲ್ಲಿ ಅತೃಪ್ತಿಯು ಅಂಕುರಿಸಲು ಸರ್ಕಾರದವರು ಅವಕಾಶಕೊಡಲಾರರೆಂಬ ಪೂರ್ಣ ನಂಬಿಕೆಯಿಂದ ಈ ಪ್ರಾರ್ಥನೆಗಳನ್ನು ವೀರಶೈವರು ಮಾಡಿಕೊಂಡಿರುತ್ತಾರೆ.

ವೀರಶೈವ ಪ್ರತಿನಿಧಿ.

ಕರ್ನಾಟಕದ ಸುದ್ದೈವ.

ಸತ್‌ಶಿಕ್ಷಕವೆಂಬ ಮಾಸಪತ್ರಿಕೆಯು ಇದೇ ಶ್ರಾವಣದಿಂದ ಗದಗಿನಲ್ಲಿ ಹೊರಡುತ್ತದೆ. ಇದರ 20 ಪುಟಗಳಲ್ಲಿ ನಿಬಂಧ, ಕಥೆ, ಕಾದಂಬರಿ ಮೊದಲಾದ ಸಾಮಾಜಿಕ, ಧಾರ್ಮಿಕ, ನೈತಿಕ ವಿಷಯಗಳನ್ನೂ, 20 ಪುಟಗಳಲ್ಲಿ ಗೃಹವೈದ್ಯಕವನ್ನೂ, ಶಿಕ್ಷಣರೂಪದಿಂದ ಬರೆಯುತ್ತಾ ಹೋಗುವೆವು. ಆದರಿಂದ ಈ ಮಾಸಿಕವು ಅತಿ ಉಪಯುಕ್ತವೂ, ಸಂಗ್ರಹಿಸಿ ಇಡಲಿಕ್ಕೆ ಯೋಗ್ಯವೂ ಆಗಿರುವುದು. ಇದಕ್ಕೆ ಆರಂಭದಿಂದಲೇ ಚಂದಾದಾರರಾಗತಕ್ಕದ್ದು. ಮೊದಲನೇ ಸಂಚಿಕೆಯ ಅರ್ಧದಲ್ಲಿ ವ್ಯಾಪಾರಸ್ಥರಿಗೆ ಅತ್ಯವಶ್ಯವಾದ ಧೈರ್ಯ, ಸಾಹಸಗಳನ್ನು ಹುಟ್ಟಿಸುವ ಸುಜ್ಞಾನಶೆಟ್ಟಿಯ ಮನೋಹರವಾದ ಕಥೆಯೂ, ಅರ್ಧದಲ್ಲಿ ವೈದ್ಯರಿಗೆ ಆಗತ್ಯವಾದ ಉಪಕರಣಗಳು, ಕೀಟಕಗಳು, ಜ್ವರವು, ಪ್ಲೀಹ (ಗುಲ್ಮ), ಮೂತ್ರಪಿಂಡ, ಕಾಳಜ, ರಕ್ತಕ್ಷಯ, ಉದರಸಂಬಂಧ ರೋಗ ಚಿಕಿತ್ಸೆಗಳು ಆರಂಭವಾಗುವವು. ವರ್ಷಕ್ಕೆ ವರ್ಗಣಿ 3 ರೂ. ಪೋ|| 3 ಆಣೆ, ನಾವು ಹೆಚ್ಚಿಗೆ ಹೇಳಲಾರೆವು. ಒಂದು ಸಂಚಿಕೆಯನ್ನು ನೋಡಿ ನೀವೇ ಮನಗಾಣಿರಿ, ಅಥವಾ ಮನಸ್ಸಿಗೆ ಬಾರದಿದ್ದರೆ, ಪರತ ಕಳಿಸಿರಿ, ಹಣ ಕಳಿಸುವೆವು. ಶೀಘ್ರ ನಿಮ್ಮ ಹೆಸರು, ಪೋಸ್ಟ್ ಆಫೀಸು ತಿಳಿಸಿ, ವಿ. ಪಿ. ಯಿಂದ ತರಿಸಿಕೊಳ್ಳಿರಿ.

ಪತ್ತೆ—ಯಫ್. ಬಸವಲಿಂಗಸ್ವಾಮಿ, ಕಲವಾಯಿಮಠ,
2 ವೆನಕ್ಯುಲರ್ ಹೆ|| ಮಾಸ್ತರ, ಪೋ|| ಗದಗ, ಜಿ. ಧಾರವಾಡ.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.



4

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ ೫ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಕ್ರಯ ರೂ. 8-8-0 ಸೀಮೆ ಪಟ್ಟಿ ಸಹಿತ ರೂ. 6-8-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೇನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟುಮಾತ್ರವೂ ಸಮಾನವಾಗಲಾರವು.

ಒಂದು ಡಬ್ಬಿ ಲೇಹವನ್ನು 15 ದಿನಗಳು ಸೇವಿಸುವದರಿಂದ ಪೂರಾ ಗುಣಕೊಡುವುದು. 3 ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರೆವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2-0-0.

ಒಂದೇ ಆವರ್ತಿ 3 ಡಬ್ಬಿಗಳನ್ನು ತರಿಸಿದರೆ ಟಪಾಲು ಖರ್ಚು ಮಾಫಿ.

ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೋ
4 ಸಾಹುಕಾರಪೇಟೆ, ಮದರಾಸ್.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕ ಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಪತ್ಯದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿಮಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿಮಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ, ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
28 ಬಳ್ಳಾರಿ.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.



ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ, ಇರುವಂತೆ ಇಂಗ್ಲೀಷು ನಮೂನೆಯೂಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿ ಸಹಿತ ರೂ. 4-8-0

ವಿಳಾಸ:—ಮ್ಯಾನೇಜರ್
ಸ್ಟಾರ್ ಹೌಸ್, ಪೋಸ್ಟ್‌ಬಾಕ್ಸ್ ನಂ. 508.
4 ಪಾರ್ಕ್‌ಟೌನ್, ಮದರಾಸು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮುರಿತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
31 ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೪—೦
ಚಾರುಶೀಲೆಚರಿತ್ರೆ	೦—೧೦—೦
ಹರದಾಸಿ	೦— ೮—೦
ವೃಷಪಂಚಕ	೦— ೯—೦

೧೯೨೨ನೆಯ ಇಸವಿ ಆಗಸ್ಟ್ ತಾ|| ೧೩ ರಿಂದ ೧೯೨೨ನೆಯ ಆಗಷ್ಟು ತಾ|| ೧೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ಶ್ರಾವಣಬಹುಳ ಷಷ್ಠಿಯಿಂದ ಶ್ರಾವಣ ಬಹುಳ ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾಸಿಂಹ
13	ಭಾನು	ಷಷ್ಠಿ	60	ರೇವ	16-35	29
14	ಸೋಮ	ಷಷ್ಠಿ	2-27	ಅಶ್ವಿ	22-8	30
15	[1] ಮಂಗಳ	ಸಪ್ತ	5-46	ಭರ	26-44	31
16	ಬುಧ	ಅಷ್ಟ	8-0	ಕೃತ್ತಿ	30-11	32
17	ಗುರು	ನವ	8-57	ರೋಹಿ	32-24	1
18	ಶುಕ್ರ	ದಶ	8-37	ಮೃಗ	32-20	2
19	[2] ಶನಿ	ಏಕಾ	7-3	ಆರ್ದ್ರಾ	33-6	3

(1) ಮಂಗಳಗೌರೀವ್ರತಂ, ಜನ್ಮಾಷ್ಟಮಿ, ದಶಫಲವ್ರತಂ. (2) ಸರ್ವತ್ರೈಕಾದಶಿ, ಶ್ರಾವಣಶನಿವಾರಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಅಗಸ್ಟ್ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೩೪

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿಯೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ವೀರಶೈವರು ಅವಶ್ಯ ಸಂಗ್ರಹಿಸತಕ್ಕ ವೀರಶೈವ ಧರ್ಮಪರವಾದ ಸುಂದರ ಫೋಟೋಗಳು.

ಶ್ರೀಹನುಮಂತನಿಗೆ-ವೀರಭದ್ರನಿಂದೆ-ಲಿಂಗಧಾರಣವು

೧. ಇದರಲ್ಲಿ ಹನುಮಂತನಿಗೆ ಶ್ರೀ ವೀರಭದ್ರದೇವರು ಮೋಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿದ್ದಾರೆ—ಫೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೨. ಶ್ರೀ ಶಿವಯೋಗಿ ಸಂಘ:—ಇದರಲ್ಲಿ ಶ್ರೀ ಜ|| ಗು|| ಚಿತ್ರದುರ್ಗ ಮಹಾಸ್ವಾಮಿಗಳು ಗದಗ ತೋಂಟದಾರ್ಯರು, ಅಥಣಿ ಶಿವಯೋಗಿಗಳು ಮುಂತಾದ ೧೮ ಶಿವಯೋಗಿಗಳ ಫೋಟೋಗಳು ಕೂಡಿಸಿ ಇರುವವು. ಇದರಿಂದೆ ಒಂದೇ ಕಾಲಕ್ಕೆ ಎಲ್ಲಾ ಶಿವಯೋಗಿಗಳ ದರ್ಶನ ಆಗುವದು ೧೮ × ೧೨ ಸೈಜದ ಚಿತ್ರದ ಕ್ರಯ ಪ್ರ|| ೧ಕ್ಕೆ ೮ಆಣೆ.

೩. ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕನಾದ ಶ್ರೀ ಬಸವಣ್ಣನವರ ತೇಜಃಪುಂಜವಾದ ಖಾಸ ಫೋಟೋ ೧೮ × ೧೨ ಸೈಜದ ಪ್ರ|| ೧ಕ್ಕೆ ೮ ಆಣೆ ಕೈ ಬಣ್ಣದು ರೂ. ೧.

೪. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರ ಚನ್ನಬಸವೇಶ್ವರ ಮಡಿವಾಳ ಮಾಚಿದೇವರು ಸಿದ್ಧರಾಮದೇವರು ಮುಂತಾದ ಪ್ರಮಥರು ಶ್ರೀ ಪ್ರಭುದೇವರ ಪಾದಪೂಜಾಮಾಡುವ ಸಮಾರಂಭದ ಫೋಟೋ ಇರುವದು. ಫೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೫. ಶ್ರೀ ಚೆನ್ನಬಸವೇಶ್ವರ ಜನ್ಮ:—ಶ್ರೀ ಅಕ್ಕನಾಗಮ್ಮನವರ ಉದರದಲ್ಲಿ ಪ್ರಸಾದದ ಮಹತ್ವದಿಂದೇ ಷಣ್ಮುಖ ಅವತಾರಿಯಾದ ಶ್ರೀ ಚನ್ನಬಸವಣ್ಣನವರ ಜನನವಾದದ್ದು ಮಹತ್ವ ಪೂರ್ಣವಾದ ಫೋಟೋ ಇರುವದು. ಫೂ|| ಸಾ|| ೧ಕ್ಕೆ ೧-೪-೦ ಕ್ಯಾ||ಸಾ|| ೧ಕ್ಕೆ ೦-೧೨-೦.

೬. ಶ್ರೀಮಡಿವಾಳ ಮಾಚಿದೇವ ಮಹಿಮಾ:—ಸರ್ವಕಾಲಶುಚಿರ್ಭೂತವಿಂದೆ ಇರುವ ಮಡಿವಾಳಯ ಗೆ ಚೇಷ್ಟೆ ಇಂದೆ ಒಬ್ಬ ಭವಿಯು ಮುಟ್ಟಿದ ಕೂಡಲೆ ವೀರಭದ್ರಾವತಾರಿ ಆದ ಮಡಿವಾಳಯ್ಯನು ತೋರಿಸಿದ ಪ್ರರಾಕ್ರಮ ಬಿಜ್ಜಳರಾಯನ ಪಶ್ಚಾತ್ತಾಪ, ಬಸವಣ್ಣನ ಭಕ್ತಿ ಇವುಗಳು ಇದರಲ್ಲಿ ಕಂಡುಬರುತ್ತವೆ. ಇದು ಭಕ್ತಿಗಾಂಭಿರ್ಯಯುಕ್ತವಾದ ಫೋಟೋ ಇರುತ್ತದೆ. ಫೂ|| ಸಾ|| ಪ್ರ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೭. ಶ್ರೀ ಮಹಾದೇವಕಾಲಕೂಟ ವಿಷಪಾನ:—ವಿಷ್ಣು, ಬ್ರಹ್ಮಾದಿದೇವ ಅಸುರರು ಕೂಡಿ ಶ್ರೀ ಶಿವನಿಗೆ ಕಾಲಕೂಟ ವಿಷನಿವಾರಣಾರ್ಥಕ್ಕಾಗಿ ಪ್ರಾರ್ಥಿಸಲು ಶ್ರೀ ಪರಶಿವನು ಆ ಕಾಲಕೂಟವಿಷವನ್ನು ಪ್ರಾಶನಮಾಡಿ ಜಗತ್‌ಪ್ರಲಯವು ನಿಲ್ಲಿಸಿದ ಈ ಫೋಟೋ ಬಹಳ ಸುಂದರ ಇರುತ್ತದೆ. ಫೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦

೮. ಶ್ರೀ ಶಿವಪ್ರದೋಷಕಾಲದರ್ಶನ:—ಬ್ರಹ್ಮ, ವಿಷ್ಣು, ಇಂದ್ರ, ಅಗ್ನಿ ಮುಂತಾದ ದೇವತರು ಸರಸ್ವತಿ ಲಕ್ಷ್ಮೀ ಮುಂತಾದ ದೇವತಾಸ್ತ್ರೀಯರು ಕೂಡಿ ತಾಳ, ಮೃದಂಗ, ವೀಣಾ ಮುಂತಾದ ವಾದ್ಯಗಳಿಂದೇ ಗಾನ ಮತ್ತು ಭಜನೆ ಮಾಡುತ್ತ ಯಾವತ್ತು ದೇವತಾ ಋಷಿಗಳು ಶ್ರೀ ಪರಶಿವನ ದರ್ಶನ ತೆಗೆದುಕೊಳ್ಳುತ್ತಿರುವ ಈ ಫೋಟೋ ಬಹು ಸುಂದರವಾಗಿ ದರ್ಶನೀಯ ಇರುವದು. ಫೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೯. ಶ್ರೀ ಬಸವೇಶ್ವರ ಸಂಗಮೈಕ್ಯ:—ಶ್ರೀ ಬಸವಣ್ಣನವರು ಕೂಡಲ ಸಂಗಮನಾಥನಲ್ಲಿ ಐಕ್ಯವಾಗುವ ಇದು ಅಭೂತಪೂರ್ವವಾದ ಫೋಟೋ ಇರುವದು. ಫೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೧೦. ಶ್ರೀ ಪಂಚಾಚಾರ್ಯಲಿಂಗೋದ್ಭವ:—೧ ಶ್ರೀ ವಿಶ್ವೇಶಲಿಂಗದಿಂದ ಉದ್ಭವಿಸಿದ ಶ್ರೀ ವಿಶ್ವಾರಾಧ್ಯರು, ೨ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಿಂದೇ ಉದ್ಭವಿಸಿದ ಶ್ರೀ ಪಂಡಿತಾರಾಧ್ಯರು, ೩ ಶ್ರೀ ಹಿಮವತ್‌ಕೇದಾರ ರಾಮನಾಥಲಿಂಗದಿಂದ ಉದ್ಭವಿಸಿದ ಶ್ರೀ ಏಕೋರಾಮಾರಾಧ್ಯರು, ೫ ಶ್ರೀ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಅವತರಿಸಿದ ರೇವಣಾರಾಧ್ಯರು. ಈ ಆಚಾರ್ಯರ ಫೋಟೋಗಳು ಬೇರೆ ಬೇರೆ ಇರುವವು. ಇವು ಅತ್ಯಂತ ಮಹತ್ವವುಳ್ಳ ಫೋಟೋ ಇರುವವು. ಫೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

ಫೋಟೋ ಲಾಕೆಟ ಮತ್ತು ಫೋಟೋ ಬ್ರುಚಗಳು ಇವುಗಳು ಬೇಕಾದ ದೇವರು, ಸತ್ಪುರುಷರು, ದೇಶಭಕ್ತರ ಫೋಟೋ ಕೂಡ್ರಿಸಿ ಸಿಗುವವು. ಇವು ಗಡಿಯಾರ ಸರಪಳಿಗೆ ಕೋಟಿನ ಕಾಲರ ಮೇಲೆ ಹಚ್ಚಬಹುದು.

ರೋಲ್ಡ ಗೋಲ್ಡ ಪ್ಲಾನ್ಸಿ ನಕ್ಷಿದಾರ ೨ ಫೋಟೋಗಳು ಕುಡ್ರಿಸಿದ್ದು	೧ಕ್ಕೆ ೧- ೦-೦	ಸದರ ದುರ್ಬೀನಿನ ದಪ್ಪಾದ ಹರಳದವು	೧ಕ್ಕೆ ೨- ೮-೦
ಸದರ ರೂಪಾಯಿ ಆಕಾರದ್ದು ೨ ಸದರ	೧ಕ್ಕೆ ೦-೧೨-೦	ಬೆಳ್ಳಿವು ಗೋಲಾಕಾರ	೧ಕ್ಕೆ ೧- ೮-೦
		ಬ್ರುಚ ೧ ಫೋಟೋ ಕೂಡಿಸಿದ್ದು	೧ಕ್ಕೆ ೦- ೮-೦

ಎಲ್ಲಾ ಮಾಲಿಗೆ ಪ್ಯಾಕಿಂಗ ಮತ್ತು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರಿಗೆ ಚನ್ನಾಗಿ ಕಮಿಷನ್ ಗ್ರಾಮಗ್ರಾಮಕ್ಕೆ ಏಜಂಟರು ಬೇಕು. ೧ ಆಣೆ ಬಿಲ್ಲೆ ಕಳಿಸಿ ಕ್ಯಾಟಲಾಗ ತರ್‍ಸಿಕೊಳ್ಳಿ.

5 ಗಂಗಪ್ಪಾ ಜೇರಗೆ, ಸೋಲಾಪುರ ಸಿಟಿ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.



ಇಮಿಟೇಷನ್ ವಜ್ರದ ಬೆಂಡೋಲೆ.

23

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡುಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಗಾಡು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಟ್ ಭಂಗಾರದ ಮುಳ್ಳುಳ್ಳ

5

ರಾಯಲ್ ಫೌಂಟೆನ್‌ಪೆನ್.

ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರೆವಿಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ನಾಲ್ಕು ೩ ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಸೀಸೆ 1ಕ್ಕೆ 1-8-0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. ೨೬೫, ಮದರಾಸ್.

ಸೂಚನೆ.

☞ಬರುವ ಶುಕ್ರವಾರ ಶನಿವಾರಗಳ ದಿವಸ ಗೌರೀ ಗಣೇಶನ ಹಬ್ಬವಾದ ಪ್ರಯುಕ್ತ ಬರುವ ಭಾನುವಾರದಲ್ಲಿ (ತಾ|| 27—8—22) ಸ್ಟಾರ್ ಪತ್ರವು ಪ್ರಕಟವಾಗುವುದಿಲ್ಲ. ಪ. ಪ್ರ.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಅಗಸ್ಟ್ ತಾ|| ೨೦ನೆಯ ಭಾನುವಾರ.

ಸಂಸ್ಕೃತಾಭ್ಯಾಸವು.

ಮೈಸೂರು ಬೆಂಗಳೂರುಗಳಲ್ಲಿರುವ ಸಂಸ್ಕೃತ ಮಹಾಪಾಠಶಾಲೆಗಳು ಸರ್ಕಾರದ ಕಟ್ಟಡಗಳಲ್ಲಿರುವುವು. ಅಲ್ಲಿ ಬೋಧಕರಾಗಿರುವ ಪಂಡಿತರುಗಳು ಸರ್ಕಾರದ ಹಣದಿಂದ ಸಂಬಳವನ್ನು ಪಡೆಯುತ್ತಿರುವರು. ಅಲ್ಲಿ ಓದುವ ವಿದ್ಯಾರ್ಥಿಗಳಿಗೆ ಸರ್ಕಾರದ ಹಣದಿಂದ ವಿದ್ಯಾರ್ಥಿವೇತನಗಳೂ ಅಶನವೂ ಕೊಡಲ್ಪಡುತ್ತಿರುವುವು. ವರ್ಷಕ್ಕೆ 60 ಸಾವಿರಕ್ಕೆ ಕಡಿಮೆಯಿಲ್ಲದೆ ಈ ಪಾಠಶಾಲೆಗಳಿಗೆ ವೆಚ್ಚ ಮಾಡುತ್ತಿರುವಂತೆ ಸರ್ಕಾರಿ ಬಡ್ಜೆಟ್ಟಿನಿಂದ ಗೊತ್ತಾಗುವುದು. ಅದುಕಾರಣ ಇವನ್ನು ಸರ್ಕಾರಿ ಶಾಲೆಗಳೆಂದು ನಿರ್ಧರಿಸಿ, ಇಲ್ಲಿಯ ಬೋಧಕರೂ ವಿದ್ಯಾರ್ಥಿಗಳೂ ಸಹೋದರ ವಾತ್ಸಲ್ಯವನ್ನು ತಮ್ಮಗಳ ಮೇಲೆ ತೋರಿಸಿ ವಿದ್ಯಾರ್ಜನೆಗೆ ಅವಕಾಶಮಾಡಿಕೊಡದೆ ಹೋಗಲಾರರೆಂದು ನಂಬಿ, ಇವುಗಳಿಗೆ ತಾವೂ ಸೇರಿ ಉತ್ಕೃಷ್ಟವಾದ ಸಂಸ್ಕೃತ ವಿದ್ಯಾಪ್ರಾವೀಣ್ಯವನ್ನು ಪಡೆಯಬೇಕೆಂಬ ಸದಿಚ್ಛೆಯಿಂದ ಹಿಂದುಳಿದಿರುವ ಪಂಗಡಗಳಿಗೆ ಸೇರಿದ ಉತ್ತಮ ಹಿಂದುಗಳೂ ಜೈನರೂ ಸಹ ಸರ್ಕಾರದವರನ್ನು ಪ್ರಾರ್ಥಿಸಿಕೊಂಡರೇ ವಿನಾ ತ್ರಿಮತಸ್ಥರ ಸ್ವಂತದ ಮಠಗಳಿಗಾಗಲೀ ದೇವಾಲಯಗಳಿಗಾಗಲೀ ಅವರುಗಳ ಸ್ವಂತ ಮನೆಗಳಿಗಾಗಲೀ ನಾವು ಬಂದು ಸಪಙ್ತಿಭೋಜನಾದಿ ಸವ್ಯವಹಾರವನ್ನು ನಡೆಯಿಸಬೇಕೆಂದು ಯಾರೂ ಅಪೇಕ್ಷಿಸಲಿಲ್ಲ. "ಈ ದಿವಸ ಬ್ರಾಹ್ಮಣರ ಜತೆಗೆ ಕುಳಿತು ಓದಲಿಕ್ಕೆ ಅಪೇಕ್ಷಿಸಿದವರು ನಾಳೆಯ ದಿವಸ ಬ್ರಾಹ್ಮಣ ಸ್ತ್ರೀಯರನ್ನು ನಾವು ಮದುವೆಮಾಡಿಕೊಳ್ಳಬೇಕು ಸರ್ಕಾರದವರು ನಿರ್ಬಂಧಮಾಡಿ ಕೊಡಿಸಬೇಕು ಎಂತಲೂ ಕೇಳಬಹುದು" ಎಂಬುದಾಗಿ ಒಬ್ಬ ಕುಹಕಿಗಳು ಸಂಪದಭ್ಯುದಯದಲ್ಲಿ ಬರೆದುಕೊಂಡಿದ್ದಾರೆ. ಪಾಪ! ಇವರಿಗೇಕೆ ಅಭೀತಿ? ವಿದ್ಯಾವತಿಯರಾಗಿದ್ದರೂ ಗಂಡುಬೀರಿಯರಾಗಿಯೂ ಅಸಾಧ್ವಿಗಳಾಗಿಯೂ ಪರಿಣಮಿಸಿರುವ ಅನೇಕ ಬ್ರಾಹ್ಮಣ ಯುವತಿಯರ ದುಶ್ಚರಿತೆಯನ್ನು ಕೇಳಿಯೂ ನೋಡಿಯೂ ಬೇಸರುಪಟ್ಟಿರುವ ಹಿಂದುಳಿದ ಜನವರ್ಗಗಳ ಗೃಹಸ್ಥರಾರೂ ಅಂಥ ಹೆಣ್ಣುಗಳನ್ನು ತಮ್ಮ ಮನೆ ಬಾಗಿಲಿಗೂ ಸೇರಿಸುವವರಾಗಿಲ್ಲ. ಇದನ್ನು ಆ ಲೇಖಕರು ಉಚಿತವಾಗಿ ತಿಳಿದುಕೊಳ್ಳಲಿ. ಪಾಠಶಾಲೆಯ ಬೋಧಕರು ಪೂರ್ವಸಂಪ್ರದಾಯವನ್ನನುಸರಿಸಿ ಉಚಿತವಾಗಿ ವಿದ್ಯಾಭ್ಯಾಸ ಮಾಡಿಸುತ್ತಿದ್ದರೆ ಅವರನ್ನು ನಿರ್ಬಂಧಿಸಲು ಯಾರಿಗೂ ಅಧಿಕಾರವಿಲ್ಲ; ಕೇಳುತ್ತಲೂ ಇರಲಿಲ್ಲ. ಸರ್ಕಾರಿ ಸಂಬಳವನ್ನು ಪಡೆದ ಮೇಲೆ ಸರ್ಕಾರದ ಇತರ ಶಾಖೆಗಳ ಉದ್ಯೋಗಿಗಳಂತೆ ಅವರೂ ಗಣಿಸಲ್ಪಟ್ಟು ಸರ್ಕಾರದ ಅಪ್ಪಣೆಯನ್ನು ಶಿರಸಾಮಾನ್ಯಮಾಡಿಯೇ ತೀರಬೇಕು. ಹಾಗಿಲ್ಲದೆ ಸಹಾಯನಿರಾಕರಣವನ್ನು ಅವರು ಅವಲಂಬಿಸುವಂತಿದ್ದರೆ ಭರತಖಂಡದಲ್ಲಿ ಸಂಸ್ಕೃತ ಪಂಡಿತರಿಗೆ ಏನೂ ಕಡಿಮೆಯಿಲ್ಲ. ಪ್ರಕಟಮಾಡಿದರೆ ಮೂರು ದಿನಗಳೊಳಗೆ ಮೂರು ಸಾವಿರ ಮಂದಿಗಳು ಬೇಕಾದರು ಸಿದ್ಧರಾಗುವರು.

ಆಂಗ್ಲ ಪಾಠಶಾಲೆಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅವಕಾಶವಿರುವುದರಿಂದ ಅಲ್ಲಿ ಸೇರಿ ಓದಲು ಯಾವ ಅಭ್ಯಂತರವೂ ಇಲ್ಲವೆಂದು ಪ್ರತಿಪಕ್ಷದವರು ವಾದಿಸುತ್ತಾರೆ. ಆಂಗ್ಲ ಭಾಷೆಯ ಜತೆಗೆ ಉಪಭಾಷೆಯಾಗಿ ಸಂಸ್ಕೃತವನ್ನೇ ಆಗಲೀ ದೇಶಭಾಷೆಯನ್ನೇ ಆಗಲೀ ತೆಗೆದುಕೊಂಡು ಓದಿದವರು ಸಂಪಾದಿಸುವ ವ್ಯುತ್ಪತ್ತಿಗೂ ಆಯಾಭಾಷೆಯೊಂದನ್ನೇ ತೆಗೆದುಕೊಂಡು ಪ್ರತ್ಯೇಕವಾಗಿ ಅಭ್ಯಾಸಮಾಡಿದವರು ಸಂಪಾದಿಸುವ ವ್ಯುತ್ಪತ್ತಿಗೂ ತಾರತಮ್ಯವೆಷ್ಟಿರುವುದೆಂಬುದನ್ನು ತಿಳಿದವರಾರೂ ಇಂಥ ಅವಿಚಾರದ ಮಾತನ್ನಾಡಲಾರರು.

ವೀರಶೈವರೇ ಮೊದಲಾದವರಿಗೆ ಒಂದು ವೇಳೆ ಈ ಪಾಠಶಾಲೆಗಳಲ್ಲಿ ಅಭ್ಯಾಸಕ್ಕೆ ಅವಕಾಶಮಾಡಿಕೊಟ್ಟರೂ ಅವರ ವಿದ್ಯಾರ್ಥಿಗಳು ಸೇರುವುದೇ ಇಲ್ಲ. ಅದುಕಾರಣ ಈ ಪ್ರಯತ್ನವು ವ್ಯರ್ಥವೆಂಬುದೊಂದು ಕಾರಣವನ್ನು ಪ್ರತಿಪಕ್ಷದವರು ಒಡ್ಡಿರುತ್ತಾರೆ. ಒಂದು ವೇಳೆ ಆ ವಿದ್ಯಾರ್ಥಿಗಳು ಸೇರದಿರುವುದೇ ನಿಜವಾದರೆ ಇವರಿಗೆ ಇಷ್ಟಾಪತ್ತಿಯೇ ಆಯಿತಲ್ಲವೆ? ಅದಕ್ಕಾಗಿ ಇನ್ನು ತಾಪತ್ರಯಪಡಬೇಕಾದುದೇಕೆ?

ಯೂರೋಪಿಯನ್ನರು ತಮ್ಮ ಮಕ್ಕಳೋದುವ ಪಾಠಶಾಲೆಗಳಿಗೆ ಇತರರ ಮಕ್ಕಳನ್ನು ಸೇರಿಸುವರೆ? ಎಂಬುದೊಂದು ಉದಾಹರಣೆಯನ್ನು ಈ ಪ್ರತಿಪಕ್ಷದವರು ದೊಡ್ಡದಾಗಿ ಮಾಡುತ್ತಿದ್ದಾರೆ. ಯಾರ ಆಚರಣೆಯು ಪಕ್ಷಪಾತಮಯವಾದುದೆಂದು ಈಗ ಭಾರತೀಯ ದೇಶಾಭಿಮಾನಿಗಳಿಂದ ಆಕ್ಷೇಪಿಸಲ್ಪಡುತ್ತಿದೆಯೋ ಅಂಥ ವಿದೇಶೀಯ ವಿಧರ್ಮಿಗಳ ಉದಾಹರಣೆಯನ್ನು ಸ್ವದೇಶೀಯ ಸ್ವಧರ್ಮೀಯ ಸಹೋದರ ಪ್ರಜೆಗಳ ವಿಷಯದಲ್ಲಿ ಉಪಯೋಗಿಸುವ ಇವರನ್ನು ಯಾರೆಂದು ತಿಳಿಯಬೇಕು? ಬ್ರಹ್ಮ ಬೀಜೋತ್ಪನ್ನರಿಗೆ ಆ ವಿಧರ್ಮಿಗಳ ಉಪಮಾನವೇತಕ್ಕೆ?

ದಾವಣಗೆರೆಯ ಸಭಾಧ್ಯಕ್ಷತೆಯಿಂದ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಮಾಡಿದ ಭಾಷಣವನ್ನು ಕುರಿತು ಸಂಪದಭ್ಯುದಯ ಪತ್ರಿಕೆಯಲ್ಲಿ ಅತ್ಯಾಗ್ರಹದ ಮಾರುಮಾರುದ್ದದ ನಿಂದಾಪ್ರಚುರವಾದ 1-೨ ಲೇಖನಗಳು ಬಂದಿರುತ್ತವೆ. "ಶೆಟ್ಟರು ಅಸಾಧಾರಣವಾದ ಶಕ್ತಿಯಿಂದ ಸೀನಿಯರ್ ಕೌನ್ಸಿಲ್ ಪದವಿಯವರೆಗೂ ಏರಿ ನಿಸ್ಪೃಹರಾಗಿ ಕೆಲಸಮಾಡಿ ಸಂಸ್ಥಾನಕ್ಕೆ ಮಹೋಪಕಾರ ಮಾಡಿದವರು. ಆದರೂ ಈ ಭಾಷಣದಲ್ಲಿ ದುರಭಿಮಾನವನ್ನು ತೋರಿಸಿರುವುದರಿಂದ ಹಿಂದೆ ಆರ್ಜಿಸಿದ್ದ ಕೀರ್ತಿಗೆ ಕುಂದುತಂದುಕೊಂಡರು" ಎಂಬ ಪೀಠಿಕೆ ಹಾಕಿಕೊಂಡು ಆ ಲೇಖನಗಳು ಬರೆಯಲ್ಪಟ್ಟಿವೆ. ಜೀವಿತದ ಬಹುಭಾಗವನ್ನೆಲ್ಲಾ ನಿಸ್ಪೃಹತ್ವಾಚರಣೆಯಿಂದಲೂ, ನಿಷ್ಪಕ್ಷಪಾತತೆಯಿಂದಲೂ ಕಳೆದ ವಿವೇಕಿಗಳು ಒಂದಾವೃತ್ತಿಗೆ ಆದರ ಶಕ್ತಿಯನ್ನೆಲ್ಲಾ ನಾಶಿ ನುಂಗಿಸಿಕೊಳ್ಳುವಂಥ ಕೆಲಸವನ್ನು ಎಂದಿಗೂ ಮಾಡರು ಎಂಬುದನ್ನು ವಿಚಾರಪರರೆಲ್ಲರೂ ಬಲ್ಲರು. "ಆತ್ಮನಾಶವನ್ನು ಮಾಡಿಕೊಂಡರೂ ಸರಿ ತಮಗೆ ಹಿತವನ್ನು ಮಾಡಿಕೊಡುತ್ತ ತಮ್ಮನ್ನು ಅನುಸರಿಸಿಕೊಂಡಿರುವವರು ಲೋಕೋತ್ತರರು; ತಮಗೆ ಅಪ್ರಿಯವಾಗಿ ಆತ್ಮರಕ್ಷಣೆಗೆ ಅವಶ್ಯಕವಾದ ನ್ಯಾಯಕೃತ್ಯವನ್ನು ಮಾಡಿದವರು ಕೂಡ ದುರಾತ್ಮರು" ಎಂದು ಜರಚುವ ದುರುಳರ ಸಂಪ್ರದಾಯಕ್ಕೆ ಅನುಸಾರವಾಗಿ ಆ ಲೇಖನಗಳು ಕ್ಷುಲ್ಲಕ ವಚನಗಳಿಂದ ತುಂಬಿ ಬರೆಯಲ್ಪಟ್ಟಿರುತ್ತವೆ. ಮ|| ಶೆಟ್ಟರ ಭಾಷಣದ ಮತ್ತು ಈ ದುರ್ವಾದಿಗಳ ಲೇಖನದ ಗುಣಾವಗುಣಗಳನ್ನೂ ನ್ಯಾಯಾನ್ಯಾಯವನ್ನೂ ವಿಮರ್ಶಿಮಾಡಲು ಪ್ರಭುತ್ವದವರೂ ನಿರ್ಮತ್ಸರಮತಿಗಳಾದ ದೇಶಾಭಿಮಾನಿಗಳೂ ಸಮರ್ಥರಾಗಿಯೇ ಇರುವರು.

ಹಿಂದುಳಿದ ಜನವರ್ಗಗಳವರು ಸಂಸ್ಕೃತಾಭ್ಯಾಸ ವಿಷಯದಲ್ಲಿ ಸರ್ಕಾರವನ್ನು ಕುರಿತು ಮಾಡುತ್ತಿರುವ ಪ್ರಾರ್ಥನೆಯು ಅಧರ್ಮವಾದುದಲ್ಲವೆಂದೂ ಅದನ್ನು ಈಡೇರಿಸಿಕೊಡುವುದು ಪ್ರಭುತ್ವದವರಿಗೆ ನ್ಯಾಯವಾದ ಕರ್ತವ್ಯವೆಂದೂ ನಿರ್ಮತ್ಸರಮತಿಗಳೂ ನ್ಯಾಯಪ್ರಿಯರೂ ಆದ ಅನೇಕ ವೃತ್ತಪತ್ರಿಕಾಕರ್ತರುಗಳು ಅಭಿಪ್ರಾಯ ಕೊಟ್ಟಿರುವರು. ಹಾಗೆ ಅಭಿಪ್ರಾಯ ಕೊಡುವ ಸಜ್ಜನರು ನಮ್ಮ ಬ್ರಾಹ್ಮಣಸಹೋದರ ಮಂಡಲಿಯಲ್ಲೂ ಅನೇಕರಿರುವರೆಂಬುದನ್ನು ನಾವು ಬಲ್ಲೆವು. ಆದರೆ ಸಂಪದಭ್ಯುದಯ ಪತ್ರಿಕಾಕೂಟದವರಿಗೆ ಮಾತ್ರ ಇದು ಸೈರಿಸದು. ಪ್ರಜೆಗಳಲ್ಲಿ ಭಿನ್ನಭಾವಗಳನ್ನು ಅಭಿವೃದ್ಧಿಪಡಿಸಿ ಪರಸ್ಪರ ದ್ವೇಷಾಗ್ನಿಯಿಂದ ದೇಶವು ಹೊತ್ತಿ ಬೇಯುವುದನ್ನು ನೋಡಿ ವಿನೋದಪಡಬೇಕೆಂಬುದೇ ಅವರ ತತ್ವ. "ಪರರ ಏಳ್ಗೆಯಲ್ಲಿ ವಿದ್ಯಾಧಿಕಜನರು ಸಾನುಭೂತಿಯನ್ನು ತೋರಿಸಬೇಕು" ಎಂದು ಶ್ರೀಮನ್ಮಹಾರಾಜರು ಅಪ್ಪಣೆಕೊಡಿಸಿರುವುದನ್ನು ಈ ಕೂಟದವರು ಕಸದಂತೆ ಕಂಡು ಒತ್ತರಿಸಿಬಿಟ್ಟಿರುವರು. ಆದರಿಂದಲೇ ಆ ಕೂಟದವರು ಈ ಸಮಸ್ಯೆಗೆ ವಿಷಗಣದ ವಿಘ್ನವನ್ನೊಡ್ಡಲು ಅಸಮಸಾಹಸಪಡುತ್ತಿದ್ದಾರೆ. ಯುಕ್ತಾಯುಕ್ತವಿಮರ್ಶನಧುರೀಣರೂ ಪ್ರಜಾವಾತ್ಸಲ್ಯಪರಿಪೂರ್ಣರೂ ಆದ ನಮ್ಮ ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಸಹ ಬಹುಪ್ರಜೆಗಳ ನ್ಯಾಯವಾದ ಕೋರಿಕೆಗೆ ಭಂಗಬರುವಂತೆ ಈ ಸಮಸ್ಯೆಯನ್ನು ಎಂದಿಗೂ ಕೊನೆಮುಟ್ಟಿಸಲಾರರೆಂದು ಪೂರ್ಣವಾದ ಭರವಸೆಯಿರುವುದು. ಆದರೆ ಯಾವಯಾವ ಕಾರಣದಿಂದಲೋ ಕಾಲವೈಪರೀತ್ಯದಿಂದಲೋ ಅದಕ್ಕೆ ವಿರುದ್ಧವಾಗಿ ಇದರ ತೀರ್ಮಾನವಾಗುವುದಾದರೆ ದೇಶದ ವಿದ್ಯಾಧಿಕಜನರಿಗೂ ಇತರ ಹಿಂದುಳಿದ ಜನವರ್ಗಗಳವರಿಗೂ ಮಧ್ಯದಲ್ಲಿರುವ ಅಂತರವು ಇನ್ನಷ್ಟು ದೂರವಾಗುತ್ತ ಹೋಗುವುದೇ ಹೊರತು ಈಗಿರುವ ಅಂತರವು ಕಡಿಮೆಯಾಗಿ ಪರಸ್ಪರ ಸಹೋದರಭಾವವೂ ಐಕಮತ್ಯವೂ ವೃದ್ಧಿಗೊಳ್ಳುವುದಿಲ್ಲ. ಈ ಸಮಸ್ಯೆಯ ಪರಿಣಾಮವನ್ನು ತಿಳಿದನಂತರ ಹಿಂದುಳಿದ ಜನವರ್ಗಗಳವರು ತಮ್ಮ ಉತ್ತರೋತ್ತರ ಪ್ರಗತಿಯ ಮಾರ್ಗವನ್ನು ಕ್ರಮಪಡಿಸಿಕೊಳ್ಳುವಲ್ಲಿ ಮತ್ತಷ್ಟು ವ್ಯಗ್ರವಾಗುವುದೇನೋ ಖಂಡಿತ.

ಮುಖ್ಯಮಂತ್ರಿಯವರ ಉಪನ್ಯಾಸ.

ಈಗ ಭರತಖಂಡದ ಸ್ವರಾಜ್ಯಾಭಿಮಾನಿಗಳಿಗೆಲ್ಲಾ ಅತ್ಯಂತ ಹೃದಯವೇದನೆಯನ್ನುಂಟುಮಾಡಿ ಪ್ರತಿ ಪಟ್ಟಣದಲ್ಲೂ ಸಭಾಮೂಲಕ ಅಧಿಕ್ಷೇಪಗೊಳಿಸಿಕೊಳ್ಳಲು ಪಾತ್ರವಾಗಿರುವಂಥ ಉಪನ್ಯಾಸವೊಂದನ್ನು ಆಂಗ್ಲ ಮಂತ್ರೀಶ್ವರರಾದ ಮಿ|| ಲಾಯಿಡ್ ಜಾರ್ಜ್‌ರವರು ಕಳೆದ ತಾ|| ೨ ರಲ್ಲಿ ಕಾಮನ್ಸ್ ಸಭೆಯಲ್ಲಿ ಮಾಡಿದರು. ಅದು ಭರತಖಂಡದ ರಾಜಕೀಯೋದ್ಯೋಗಿಗಳ ವಿಷಯಕವಾಗಿ ಆರಂಭಿಸಲ್ಪಟ್ಟುದಾಗಿದ್ದಿತು. ಈಗಣ ನೂತನ ರಾಜಕೀಯ ಸಂಸ್ಕರಣವು ಏರ್ಪಟ್ಟ ಬಳಿಕ ಆಂಗ್ಲ ರಾಜಕೀಯೋದ್ಯೋಗಿಗಳಿಗೆ ಆದರಿಂದ ಏನೋ ಹಾನಿಯು ತಟ್ಟುವುದಾಗಿದೆಯಂತೆ! ಅವರ ಸಂಬಳಗಳೂ ಪಿಂಚನುಗಳೂ ಬಹಳ ಕಡಿಮೆಯಂತೆ! ಅವರಿಗೆಲ್ಲಾ ಅಸಂತೃಪ್ತಿಯುಂಟಾಗಿದೆಯಂತೆ!! ಅದುಕಾರಣ ಅವರ ಸಂರಕ್ಷಣೆಯ ಅವಶ್ಯಕತೆಯನ್ನು ಕುರಿತು ಸರ್ ಸಾಮ್ಯುಯಲ್ ಹೋರ್ ಎಂಬ ಪಾರ್ಲಿಮೆಂಟ್ ಮೆಂಬರು ಒಂದು ಚರ್ಚೆಯನ್ನು ತಂದರು. ಅದರಮೇಲೆ ಮುಖ್ಯಮಂತ್ರಿಯವರು ಉತ್ತರಕೊಡುವುದಕ್ಕಾಗಿ ಮಾಡಿದ ಉಪನ್ಯಾಸದೊಳಗೆ ಭರತಖಂಡದ ಆಂಗ್ಲ ರಾಜಕೀಯೋದ್ಯೋಗಿಗಳನ್ನು ಅಟ್ಟಕ್ಕೇರಿಸುವ ವಾಕ್ಯಗಳ ಮಳೆಗರೆವುದರಲ್ಲಿ ಸ್ವಲ್ಪವೂ ಕಡಿಮೆಮಾಡಲಿಲ್ಲ— "ಭರತಖಂಡದ ಸಿವಿಲ್ ಉದ್ಯೋಗಿಗಳು ಆಂಗ್ಲದೇಶದ ಪಕ್ಷದಿಂದ ಭಾರತಪ್ರಜೆಗಳ ಹಿತಕ್ಕಾಗಿ ಬಹಳ ದೊಡ್ಡ ಸೇವೆಯನ್ನು ಮಾಡಿರುವರು. ಅವರ ರಾಜಭಕ್ತಿಯ ಮತ್ತು ಸೇವಾತತ್ಪರತೆಯ ಸಾಹಾಯ್ಯವು ಇಲ್ಲದೆಹೋಗಿದ್ದರೆ ನಾವು 1 ಶತಮಾನ ಕಾಲದಲ್ಲಿ ಭರತಖಂಡವನ್ನು ಎಂಥ ಅರಾಜಕಸ್ಥಿತಿಯಿಂದ ರಕ್ಷಿಸಿದೆವೋ ಮತ್ತೆ ಅಂಥ ಸ್ಥಿತಿಗೆ ಆ ದೇಶವು ಬಿದ್ದುಹೋಗದಂತೆ ಕಾಪಾಡಲು ಸಮರ್ಥರಾಗುತ್ತಿರಲಿಲ್ಲ. ಇದುವರೆಗೆ ಒಂದು ವಿಧಾನದಿಂದ ರಾಜ್ಯಪರಿಪಾಲನೆ ಮಾಡಿದ ಉದ್ಯೋಗಿಗಳ ಮನಸ್ಸಿಗೆ ಈಗಣ ರಾಜಕೀಯ ಸಂಸ್ಕರಣಗಳು ಅಸಂತೃಪ್ತಿಯನ್ನುಂಟುಮಾಡುವುದು ಸಹಜವೇ ಆಗಿದೆ. ತಾವು ಇದುವರೆಗೆ ಅವಲಂಬಿಸಿಕೊಂಡಿದ್ದ ಪದ್ಧತಿಗೆ ಈಗಣ ಸಂಸ್ಕರಣದ ಪ್ರಕಾರ ಮಾರ್ಪುಗಳುಂಟಾಗುವುದಾದರೆ ತಮ್ಮ ಸ್ಥಿತಿಗತಿಗೆ ಎಲ್ಲಿ ನಷ್ಟವುಂಟಾಗುವುದೋ ಎಂದು ಅವರು ವ್ಯಾಕುಲಗೊಳ್ಳುವುದು ಸಹಜವಾಗಿದೆ. ಭರತಖಂಡದಲ್ಲಿರುವ ಆಂಗ್ಲೋದ್ಯೋಗಿಗಳ ಸ್ಥಿತಿಯು ಈಗ ಹಾಗಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ" ಎಂಬುದಾಗಿ ಅವರು ಈ ಪ್ರಥಮಪ್ರಕರಣವನ್ನು ಆಡಿ ಮುಗಿಸಿದುದು ಸಾಲದೆ, ೨ನೆ ಪ್ರಕರಣದಲ್ಲಿ ರಾಜಕೀಯ ಸಂಸ್ಕರಣದ ವಿಷಯವನ್ನೆತ್ತಿ ಕೆಲಮಾತುಗಳನ್ನಾಡಿದರು. ಅವುಗಳು ಆಂಗ್ಲಮಂತ್ರೀಶ್ವರರ ಬಾಯಿಂದ ಬರಲು ಸುತರಾಂ ಅರ್ಹವಾಗಿರಲಿಲ್ಲ. ಆ ಮಾತುಗಳೇನೆಂದರೆ—"ಈಗಣ ರಾಜಕೀಯ ಸಂಸ್ಕರಣಗಳು ಹೇಗೆ ಕೆಲಸಮಾಡುವುವೋ ಎಂದು ಪರೀಕ್ಷಣ ಮಾಡುವುದಕ್ಕಾಗಿ ಪ್ರಯೋಗಿಸಲ್ಪಟ್ಟವುಗಳು. ಅದುಕಾರಣ ಅವುಗಳು ಪರೀಕ್ಷಾಸ್ಥಿತಿಯಲ್ಲಿವೆಯೆಂದು ತಿಳಿದುಕೊಳ್ಳಬೇಕೇ ಹೊರತು ಅನ್ಯಥಾ ಭಾವಿಸಬಾರದು. ಈ ಪರೀಕ್ಷೆಯು ಬಹಳ ದೊಡ್ಡದು. ಎಷ್ಟು ದೊಡ್ಡದಾಗಿದ್ದರೂ ಪರೀಕ್ಷಾರ್ಥವೇ. ಅವುಗಳ ಕಾರ್ಯಾಚರಣದಲ್ಲಿ ಕೆಲವು ಕಷ್ಟಗಳೂ ಲೋಪಗಳೂ ಆಗಲೇ ತೋರಿಬಂದಿವೆ. ಇದುವರೆಗೆ 18 ತಿಂಗಳ ಕಾಲ ಮಾತ್ರವೇ ಈ ಸಂಸ್ಕರಣಗಳು ವ್ಯವಹರಿಸಲ್ಪಟ್ಟಿರುವ ವಿಷಯವನ್ನು ಗಮನಿಸಿದರೆ ಇವುಗಳಲ್ಲಿ ಸ್ವಲ್ಪ ಲೋಪವು ಕಂಡುಬಂದರೂ ಇದುವರೆಗೆ ಈ ಸಂಸ್ಕರಣಗಳು ಜಯಪ್ರದವಾಗಿ ಸಾಗಿಬಂದುವೆಂದೇ ಹೇಳಬಹುದು. ಈ ಸಂಸ್ಕರಣರೂಪದಿಂದ ಭರತಖಂಡವು ಇದುವರೆಗೆ ಯಾವಾಗಲೂ ಪರಿಪಾಲಿಸಲ್ಪಟ್ಟುದಿಲ್ಲ. ಸ್ವದೇಶೀಯ ಸಂಸ್ಥಾನಗಳಲ್ಲೂ ಕೂಡ ಇಂಥ ಪರಿಪಾಲನಕ್ರಮವು ಇರುವುದಿಲ್ಲ. ಪಾಶ್ಚಾತ್ಯಪರಿಸ್ಥಿತಿಗೂ ಪಾಶ್ಚಾತ್ಯಪದ್ಧತಿಗೂ ಅನುವಾದ ರೀತಿಯಲ್ಲಿ ನಿರ್ಮಿಸಲ್ಪಟ್ಟಿರುವ ಈ ಸಂಸ್ಕರಣಗಳ ವಿಧಾನಗಳಲ್ಲಿ ಎಷ್ಟೋ ಲೋಪಗಳು ಕಂಡುಬರುತ್ತಿರುವುದಲ್ಲದೆ ಭರತಖಂಡಕ್ಕೆ ಇದು ಸರಿಬರುವುದೆ ಎಂಬುದನ್ನು ಪರೀಕ್ಷಿಸಿ ತಿಳಿದುಕೊಳ್ಳಬೇಕಾಗಿದೆ. ಆದರೆ ಕಷ್ಟಗಳೂ ತೊಂದರೆಗಳೂ ಇದರಲ್ಲಿರುವುವೆಂಬ ಕಾರಣದಿಂದಲೇ ಈ ಸಂಸ್ಕರಣವು ವ್ಯರ್ಥವಾಯಿತೆಂದು ಅವಸರದಿಂದ ನಿರ್ಧರಿಸತಕ್ಕದು ಸರಿಯಲ್ಲ" ಎಂದು ಹೇಳಿದರು. ಈಗಣ ಸಂಸ್ಕರಣದ ಮೇರೆಗೆ ಸಿದ್ಧಿಸಿರುವ ದ್ವಂದ್ವಪ್ರಭುತ್ವವಿಧಾನವು ಈ ದೇಶದ ಉಗ್ರಮತವಾದಿಗಳಲ್ಲೊಬ್ಬರಿಗೂ ಒಪ್ಪಿಗೆಯಾಗದೆ ಮಿತವಾದಿಗಳಿಂದ ಮಾತ್ರವೇ ಅನುಮೋದಿಸಲ್ಪಟ್ಟು ಹಾಗೂ ಹೀಗೂ ಸಾಗುತ್ತಿದೆ. ಅದನ್ನು ಸ್ಥಿರಗೊಳಿಸಿ ಸಾಗಿಸಿ ಅಭಿವೃದ್ಧಿಗೊಳಿಸಬೇಕೆಂಬ ಅಭಿಮಾನವು ಕೂಡ ಮುಖ್ಯಮಂತ್ರಿಗಳಿಗೆ ಇರುವುದಿಲ್ಲವೆಂಬ ಸಂಗತಿಯು ಈ ಮೇಲೆ ಕಂಡ ಉಪನ್ಯಾಸದಿಂದ ಧ್ವನಿತವಾಗಿರುತ್ತದೆ. ಇದು ಭಾರತೀಯರನ್ನೆಲ್ಲಾ ಮತ್ತಷ್ಟು ನಿರಾಶಾಸಮುದ್ರದಲ್ಲಿ ಮುಳುಗಿಸಲು ಉಪಕರಿಸಿತೆಂಬುದರಲ್ಲಿ ಸಂಶಯವಿಲ್ಲ. ದೇಶೀಯರೇ ಅಲ್ಲದೆ ಬೊಂಬಾಯಿ ಟೈಮ್ಸ್ ಆಫ್ ಇಂಡ್ಯಾ ಪತ್ರಿಕೆಯಂಥ ಆಂಗ್ಲಪತ್ರಿಕೆಯು ಕೂಡ ಈ ಉಪನ್ಯಾಸವನ್ನು ಕುರಿತು ಬಲವಾಗಿ ಆಕ್ಷೇಪಿಸಿರುತ್ತದೆ. ಆ ಉಪನ್ಯಾಸವನ್ನು ಮಂತ್ರೀಶ್ವರರು ಮಾಡಿದ ಕೂಡಲೇ ಅದೇ ಸಭೆಯಲ್ಲಿದ್ದ ಕರ್ನಲ್ ವೆಡ್ಜ್‌ವುಡ್ ಎಂಬ ಸಭಿಕರು ಎದ್ದುನಿಂತು—"ಈ ದಿನ ಮುಖ್ಯಮಂತ್ರಿಯವರು ಮಾಡಿದ ಉಪನ್ಯಾಸದಿಂದ ನೂತನ ವಿಷಯವೊಂದು ಪ್ರಕಟವಾದಂತಾಯಿತು. 1917ನೆ ಆಗಸ್ಟ್ ತಿಂಗಳಲ್ಲಿ ಅವರು ಮಾಡಿದ್ದ ಉಪನ್ಯಾಸಕ್ಕೆ ಇದು ವಿರುದ್ಧವಾಯಿತು. ಈಗ ಕೊಟ್ಟಿರುವ ಸಂಸ್ಕರಣಗಳನ್ನು ಕೂಡ ಹಿಂದಿರಿಗಿಸಿಕೊಳ್ಳುತ್ತೇವೆಂದು ಅವರು ಬೆದರಿಕೆಯನ್ನು ಹಾಕಿದಂತಾಯಿತು. ಅಧಿನಿವೇಶ ರಾಜ್ಯಗಳಲ್ಲಿರುವ ಪರಿಪಾಲನ ಪದ್ಧತಿಯನ್ನು ಭರತಖಂಡಕ್ಕೆ ಉಂಟುಮಾಡಿಕೊಡಬೇಕೆಂಬುದು ಮುಖ್ಯಮಂತ್ರಿಗಳ ಉದ್ದೇಶವೇ ಹೇಗೆ? ಭರತಖಂಡಕ್ಕೆ ಅಲ್ಲಿಯ ಸಿವಿಲ್ ಉದ್ಯೋಗಿ ಶಾಖೆಯು ಮಾಡುವ ಮಹೋಪಕಾರವೆಂದರೆ ತನ್ನನ್ನು ತಾನು ಕೊನೆಮೊಂದಿಸಿಕೊಳ್ಳುವುದೇ ಆಗಿದೆ" ಎಂದು ಖಂಡಿಸಿದರು. ಅದರ ಮೇಲೆ ಇಂಡ್ಯಾ ಅಸಿಸ್ಟೆಂಟ್ ಸ್ಟೇಟ್ ಸೆಕ್ರೆಟರಿಯವರು ಸಮಾಧಾನ ಹೇಳುವುದಕ್ಕೆ ತೊಡಗಿ, ಮುಖ್ಯಮಂತ್ರಿಯವರ ಉಪನ್ಯಾಸಕ್ಕೆ ಈಗಣ ಸಂಸ್ಕರಣಗಳನ್ನು ಹಿಂತೆಗೆದುಕೊಳ್ಳಬೇಕೆಂಬುದು ಅವರ ಅಭಿಪ್ರಾಯವಾಗಿರುತ್ತದೆಂದು ಅರ್ಥಮಾಡಿಕೊಳ್ಳುವುದು ಸರಿಯಲ್ಲ. ಹೀಗೆ ವ್ಯಾಖ್ಯಾನಮಾಡುವುದರಿಂದ ಭರತಖಂಡದಲ್ಲಿ ತೀವ್ರಫಲಿತಗಳುಂಟಾಗುವುವು. ಭರತಖಂಡದಲ್ಲಿ ಆಂಗ್ಲಪರಿಪಾಲನವು ಕೊನೆಗಂಡುಹೋಗಬೇಕೆಂಬುದೇ ವೆಡ್ಜ್‌ವುಡ್‌ರವರ ಕೋರಿಕೆಯಾಗಿರಬೇಕೆಂದು ಅವರ ಉಪನ್ಯಾಸದಿಂದ ತಿಳಿಯಬರುತ್ತದೆ. ಆದರೆ ಆಂಗ್ಲಪ್ರಭುತ್ವದವರು ಸಹಕಾರಪದ್ಧತಿಯಿಂದ ಅದನ್ನು ಪರಿ

ಪಾಲಿಸಿಕೊಂಡು ಹೋಗಬೇಕೆಂದೇ ನಿರ್ಧರಿಸಿದ್ದಾರೆ" ಎಂದು ಹೇಳಿ ತೊಪ್ಪೆ ಸಾರಿಸಿಬಿಟ್ಟರು. ಅಂತೂ ಅಡ್ಡಗೋಡೆಯ ಮೇಲಣ ದೀಪದಂತೆ ಮಾತನಾಡಿರುವ ಲಾಯಿಡ್ ಜಾರ್ಜರ ರಾಜತಂತ್ರವು, ಮಿ|| ಮಾಂಟೊಗ್‌ರವರು ಸ್ಟೇಟ್‌ಸೆಕ್ರೆಟರಿ ಪದವಿಯಲ್ಲಿಲ್ಲದಿದ್ದರೆ ಈಗಣ ಸಂಸ್ಕರಣಗಳ ಆಚರಣೆಗೂ ಅವಕಾಶ ಕೊಡುತ್ತಿರಲಿಲ್ಲವೆಂದು ಭಾವಿಸಬೇಕಾಗಿದೆ

ಇದೇ ಉಪನ್ಯಾಸದ ೨ನೆ ಪ್ರಕರಣದಲ್ಲಿ ಆಂಗ್ಲಮಂತ್ರಿವರ್ಯರು ವ್ಯಕ್ತಪಡಿಸಿದ ಅಭಿಪ್ರಾಯವಂತೂ ಅವರ ಹೃದಯವನ್ನು ತೆರೆಮರೆಯಿಲ್ಲದೆ ಬಿಚ್ಚಿಟ್ಟಂತೆ ಮಾಡಿರುತ್ತದೆ. ಅದೇನೆಂದರೆ "ಆಂಗ್ಲಪ್ರಭುತ್ವವು ಭರತಖಂಡದಲ್ಲಿ ತನ್ನ ಪರಿಪಾಲಕತ್ವವನ್ನು ಕಾಲಾಂತರದಲ್ಲಿ ಬಿಟ್ಟುಕೊಟ್ಟುಹೋಗುವುದಕ್ಕಾಗಿ ಭಾರತೀಯರ ಸಹಾಯವನ್ನು ನಾವು ಕೋರುವುದಿಲ್ಲ. ಆಂಗ್ಲಪರಿಪಾಲನ ಪದ್ಧತಿ ನಿರ್ವಹಣದಲ್ಲಿ ಸಹಕರಿಸುವುದಕ್ಕೆ ಮಾತ್ರವೇ ನಾವು ಅವರ ಸಹಾಯವನ್ನು ಕೋರುವವರಾಗಿದ್ದೇವೆ. ನಮ್ಮ ಪೂರ್ವಿಕರಿಂದ ನಮಗೆ ಭಾರತಸಂರಕ್ಷಣಭಾರವು ಸಂಕ್ರಮಿಸಿಬಂದಿರುತ್ತದೆ. ಅದನ್ನು ನಾವು ನಮ್ಮ ಮುಂದಣ ಪೀಳಿಗೆಯವರಿಗೂ ಹಾಗೆಯೇ ಒಪ್ಪಿಸಿಕೊಟ್ಟು ಹೋಗುವವರಾಗಿದ್ದೇವೆ. ಭರತಖಂಡದಲ್ಲಿ ನಮ್ಮ ಸಂರಕ್ಷಣೆಯನ್ನು ಕೊನೆಮುಟ್ಟಿಸಿಕೊಳ್ಳುವುದು ನಮ್ಮ ಸಂಕಲ್ಪವಲ್ಲ. ಯಾವುದು ಹೇಗಿದ್ದರೂ ಯಾರು ಏನುಮಾಡಿದರೂ ಆಂಗ್ಲಸಾಮ್ರಾಜ್ಯವು ಭರತಖಂಡದ ತನ್ನ ಪ್ರಭುತ್ವಬಾಧ್ಯತೆಯನ್ನು ಮಾತ್ರ ಯಾವ ಸಂದರ್ಭದಲ್ಲಿಯೂ ಬಿಟ್ಟುಕೊಡಲಾರದು. ಅದನ್ನು ಕದಲಿಸುವುದಕ್ಕಾಗಿ ಯಾವ ಪ್ರಯತ್ನಗಳಾದರೂ ನಡೆದರೆ ಅದನ್ನಣಗಿಸುವುದಕ್ಕೆ ದೃಢತರವಾದ ಏರ್ಪಾಟುಗಳು ಮಾಡಲ್ಪಡುವುವು" ಎಂಬುದಾಗಿ ಅಪ್ಪಣೆ ಕೊಡಿಸಿರುವರು. ಇದರಿಂದ "ಭರತಖಂಡವು ಯಾವಾಗಲೂ ಆಂಗ್ಲಛತ್ರಾಶ್ರಯದಲ್ಲಿ ಅದರ ಸೇವಕತ್ವದಿಂದಿದ್ದರೆ ಅದಕ್ಕೆ ಪರಿಣಾಮವಾಗುವುದೇ ಹೊರತು ಇಲ್ಲದಿದ್ದರೆ ಇಲ್ಲ" ಎಂಬುದೇ ಆಂಗ್ಲಸಿದ್ಧಾಂತವೆಂಬುದನ್ನು ಮಂತ್ರೀಶ್ವರರು ಸುಸ್ಪಷ್ಟಪಡಿಸಿದಂತಾಯಿತು. ಭರತಖಂಡದ ಹಣೆಯಬರಹವನ್ನು ಅನ್ಯಥಾ ಮಾಡಲು ಮಿ|| ಲಾಯಿಡ್ ಜಾರ್ಜರು ನೂತನ ಬ್ರಹ್ಮರೇನೂ ಅಲ್ಲ. ಇದ್ದ ಸಂಗತಿಯನ್ನು ಮುಚ್ಚದೆ ಹೊರಬಿಚ್ಚಿಹಾಕಿದುದಕ್ಕಾಗಿ ಅವರು ವಂದ್ಯರೇ ಸರಿ. ಈ ಉಪನ್ಯಾಸದಿಂದ ಭಾರತಪ್ರಜೆಗಳು ತಂತಮ್ಮ ಮುಂದಣ ರಾಜಕೀಯ ಪ್ರಗತಿಯ ಮಾರ್ಗವು ಹೇಗಿರಬೇಕೆಂಬುದನ್ನು ನಿರ್ಧರಿಸಿಕೊಳ್ಳಲು ಚೆನ್ನಾಗಿ ಸಹಾಯವಾಯಿತೆಂಬುದಕ್ಕೆ ಸಂಶಯವಿಲ್ಲ.

ತುರ್ಕಿ ಸಮಸ್ಯೆ.

ಮುಖ್ಯಮಂತ್ರಿಯವರು ಕಾಮನ್ಸ್ ಸಭೆಯಲ್ಲಿ ತುರ್ಕಿ ಸಮಸ್ಯೆಯ ವಿಷಯವಾಗಿಯೂ ಒಂದುಪನ್ಯಾಸವನ್ನು ತಾ|| ೪ ರಲ್ಲಿ ಮಾಡಿದರು. ಅದು ಕೂಡ ಮಹಮ್ಮದೀಯ ಪ್ರಪಂಚವನ್ನು ಆಶಾಭಂಗಕ್ಕೆ ಗುರಿಮಾಡಿ ಅವರಲ್ಲಿ ಅಸಂತೃಪ್ತಿಯನ್ನು ಹೆಚ್ಚಿಸುವುದಕ್ಕೆ ಸಾಧಕವಾಗಿದ್ದಿತೇ ಹೊರತು ಶಾಂತಿರಕ್ಷಣೆಗೆ ಸಾಧಕವಾಗಿರಲಿಲ್ಲವೆಂದು ಹೇಳಲು ವ್ಯಸನವಾಗುತ್ತದೆ. ಗ್ರೀಕ್ ತುರ್ಕಿಗಳಿಗೆ ಸಂಧಿಯನ್ನು ಕೂಡಲೇ ಮಾಡಿ ಸಮೀಪ ಪ್ರಾಚ್ಯಸಮಸ್ಯೆಯನ್ನು ಅನುಕೂಲವಾಗಿ ಪರಿಷ್ಕರಿಸಬೇಕೆಂದು ಸಭೆಯಲ್ಲಿ ಕೆಲ ಸಭಿಕರು ಚರ್ಚೆಗೆ ತಂದುದರ ಮೇಲೆ ಮುಖ್ಯಮಂತ್ರಿಯವರು ಅದಕ್ಕೆ ಪ್ರತ್ಯುತ್ತರವಾಗಿ ಮಾಡಿದ ಈ ಭಾಷಣದಲ್ಲಿ—"ನಾವು ಶಾಶ್ವತವೂ ನ್ಯಾಯವೂ ಆದ ಸಂಧಿಗಾಗಿಯೇ ಪ್ರಯತ್ನಿಸುತ್ತಿದ್ದೇವೆ. ಪ್ರಭುತ್ವದವರು ತಮ್ಮ ವಿಧಾನದಿಂದ ತುರ್ಕಿಯ ಮೈತ್ರಿಯನ್ನು ದೂರಮಾಡಿಕೊಳ್ಳುತ್ತಿದ್ದಾರೆಂದು ಕೆಲವರು ಈಗ ಆಕ್ಷೇಪಿಸಿದರು. ಕಳೆದ 8 ವರ್ಷಗಳ ಚರಿತ್ರೆಯನ್ನು ನೋಡಿದರೆ ಅದು ಅಸತ್ಯವೆಂದು ಗೊತ್ತಾಗುವುದು. ನಾವು ಸಾವು ಬದುಕಿನ ವಿಪನ್ನಸ್ಥಿತಿಯಲ್ಲಿದ್ದಾಗ, ಡಾರ್ಡಿನಲ್ಸ್ ಜಲಸಂಧಿಯನ್ನೂ ಬಾಸ್ಪರಸ್ ಸಮುದ್ರವನ್ನೂ ಕಪ್ಪು ಸಮುದ್ರವನ್ನೂ ಪ್ರವೇಶಿಸಬೇಕಾದುದು ನಮಗೆಷ್ಟೋ ಅವಶ್ಯಕವಾಗಿದ್ದಾಗ, ತುರ್ಕಿ ದೇಶವು ಅವಲಂಬಿಸಿದ ಚರ್ಯೆಯು ಎಂತಹದಾಗಿದ್ದಿತೆಂಬುದನ್ನು ಗಮನಿಸಬೇಕು. ಯಾವ ಎರಡು ದೇಶಗಳ ನಿರಂತರ ಸಹಾಯವಿಲ್ಲದಿದ್ದರೆ ತುರ್ಕಿದೇಶವು ಆ 1914ನೆ ವರ್ಷದಲ್ಲಿ ಬದುಕಿಕೊಳ್ಳಲಾರದಾಗಿದ್ದಿತೋ ಅಂಥ ದೇಶಗಳಿಗೆ ಪ್ರತಿಕೂಲವಾಗಿ ನಮ್ಮ ಮಿತ್ರದೇಶವಾದ ತುರ್ಕಿಯು ಡಾರ್ಡಿನಲ್ಸ್ ಜಲಸಂಧಿಯ ಬಾಗಿಲನ್ನು ಮುಚ್ಚಿಬಿಟ್ಟಿತು. ಹಿಂದೆ ಎಷ್ಟೋಸಲ ತುರ್ಕಿಯ ಮೇಲೆ ಇತರರು ಕತ್ತಿಕಟ್ಟಿದ್ದಾಗ ನಾವು ತುರ್ಕಿ ಪಕ್ಷವನ್ನು ವಹಿಸಿ ಅದರ ರಕ್ಷಣೆಯನ್ನು ಮಾಡಿರುವೆವು. 1878ನೆ ವರ್ಷದಲ್ಲಿ ತುರ್ಕಿಗೆ ಅತ್ಯಂತ ವಿನಾಶಕರವಾದ ಪರಾಜಯವು ಪ್ರಾಪ್ತವಾಗುವುದಕ್ಕಿದ್ದ ಸಂದರ್ಭದಲ್ಲಿ ಅದನ್ನು ಕಾಪಾಡುವುದಕ್ಕಾಗಿ ಆಂಗ್ಲ ಪ್ರಭುತ್ವವು ತನ್ನ ಸೈನ್ಯವನ್ನೆಲ್ಲಾ ಸಜ್ಜುಗೊಳಿಸಿತು. ಅದರ ಸ್ಮರಣೆಯಿಂದಲಾದರೂ 1914 ನೆ ವರ್ಷದಲ್ಲಿ ಇಂಗ್ಲೀಷ್ ಫ್ರಾನ್ಸ್ ದೇಶಗಳು ವಿಪತ್ತಿಗೀಡಾಗಿದ್ದ ಸಂದರ್ಭದೊಳಗೆ ತುರ್ಕಿಯು ಅವುಗಳಿಗೆ ಸಹಾಯಕವಾಗಿ ನಿಂತು ಪ್ರತ್ಯುಪಕಾರಮಾಡುವುದಕ್ಕೆ ಪ್ರತಿಯಾಗಿ ನಮ್ಮ ಶತ್ರುಗಳ ಪಕ್ಷಕ್ಕೆ ಸೇರಿ ನಮಗೆ ದೊಡ್ಡ ಅನರ್ಥವನ್ನುಂಟುಮಾಡಿತು. ತುರ್ಕಿಯು ಹಾಗೆ ಮಾಡಿದುದರಿಂದಲೇ ಯುದ್ಧವು ಇನ್ನೆರಡು ವರ್ಷಗಳ ಕಾಲ ಬೆಳೆಯಲು ಅವಕಾಶವಾಯಿತು. ಇನ್ನು ಗ್ರೀಕರು ಸ್ಮಿರ್ನಾವನ್ನು ಆಕ್ರಮಿಸಿಕೊಳ್ಳುವ ವಿಷಯದಲ್ಲೂ ಸೆವರ್ಸ್ ಸಂಧಿ ನಿಬಂಧನೆಗಳ ವಿಷಯದಲ್ಲೂ ಆಂಗ್ಲೇಯರು ಪ್ರೋದ್ಬಲ ಮಾಡಿದುದೇ ಕಾರಣವೆಂದು ಹೇಳುವ ವಾದವು ಕೂಡ ಸುಳ್ಳಾಗಿರುತ್ತದೆ. ಪ್ಯಾರಿಸ್ ಕಮಿಷನ್ನಿನವರ ಸೂಚನೆಯ ಪ್ರಕಾರ ಅವು ನಡೆದಿರುತ್ತವೆ. ನಾವು ಅದರಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಂಡಿರಲಿಲ್ಲ. ಸ್ಮಿರ್ನಾವೂ ಅದರ ಸುತ್ತುಮುತ್ತಣ ಪ್ರಾಂತಗಳೂ ಹೆಚ್ಚಾಗಿ ಗ್ರೀಕ್ ಪ್ರಜೆಗಳ ನಿವಾಸಸ್ಥಾನವಾಗಿರುವುದರಿಂದ ಅವು ಗ್ರೀಕರಿಗೆ ಸೇರಬೇಕೆಂದು ಪ್ಯಾರಿಸ್ ಕಮಿಷನ್ನಿನವರು ಮಾಡಿದ ನಿರ್ಣಯದಲ್ಲಿ ಆಂಗ್ಲೇಯರು ಯಾವ ಸಂಬಂಧವನ್ನೂ ಇಟ್ಟುಕೊಂಡಿರಲಿಲ್ಲ. ಅಮೇರಿಕನ್ನರೂ ಹಾಗೆಯೇ ಅಭಿಪ್ರಾಯಪಟ್ಟರು. ಕಾಂಸ್ಟಾಂಟೈನ್ ಪ್ರಭುವು ಮರಳಿ ಗ್ರೀಕ್ ಸಿಂಹಾಸನವನ್ನೇರಿದುದರಿಂದ ಗ್ರೀಕಿನ ಮೇಲೆ ಆಂಗ್ಲ ಫ್ರಾನ್ಸ್ ದೇಶಗಳಿಗೆ ಸ್ವಲ್ಪ ವಿಮುಖತೆಯುಂಟಾಗಲು ಸೆವರ್ಸ್ ಸಂಧಿ ನಿಬಂಧನೆಗಳಲ್ಲಿ ಸ್ವಲ್ಪ ಮಾರ್ಪನ್ನು ಮಾಡಬೇಕಾಯಿತು. ಅದಕ್ಕೆ ಅಂಗೋರಾ ಪ್ರಭುತ್ವದವರು ಒಪ್ಪಿಕೊಂಡಿದ್ದರೆ ಗ್ರೀಕರೂ ಒಪ್ಪಿಕೊಳ್ಳುತ್ತಿದ್ದರು. ಗ್ರೀಕರು ತಾವು ಹೊಸದಾಗಿ ಆಕ್ರಮಿಸಿಕೊಂಡಿರುವ ಸ್ಮಿರ್ನಾ ಪ್ರಾಂತದಿಂದ ಅವರ ಸೈನ್ಯಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳಬೇಕೆಂದು ಅಂಗೋರಾ ಪ್ರಭುತ್ವದವರು ಕೋರಿದರು. ಆದರೆ ಆ ಪ್ರದೇಶದಲ್ಲಿ ವಾಸವಾಗಿರುವ ೫ ಲಕ್ಷ ಗ್ರೀಕ್ ಪ್ರಜೆಗಳ ಸಂರಕ್ಷಣೆಯ ಭಾರವನ್ನು ನಾವು ವಹಿಸುವೆವೆಂಬ ವಿಷಯಕ್ಕೆ ಅವರು ಹೊಣೆಕೊಟ್ಟರೆ ನಾವು ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳುವೆವೆಂದು ಗ್ರೀಕ್ ಪ್ರಭುತ್ವದವರು ಕೊಟ್ಟ ಉತ್ತರವು ನ್ಯಾಯವಾಗಿಯೇ ಇದೆ. ಯುದ್ಧ ನಡೆದ ಪ್ರದೇಶದಲ್ಲಿ ಗ್ರೀಕ್ ಸೈನಿಕರು ಅನೇಕ ವಿಷಾದಕರವಾದ ದೌರ್ಜನ್ಯವನ್ನು ತುರ್ಕಿ ಪ್ರಜೆಗಳ ಮೇಲೆ ನಡೆಯಿಸಿದರು. ಆದರೆ ಶಾಂತಸಮಯದಲ್ಲಿ ತುರ್ಕಿಯವರು ಹೆಂಗುಸರು ಮಕ್ಕಳೆಂದು ನೋಡದೆ ಫಾಂಟಸ್ ಮೊದಲಾದ ಸ್ಥಲಗಳಲ್ಲಿದ್ದ ಗ್ರೀಕ್ ಪ್ರಜೆಗಳ ಮೇಲೆ ನಡೆಯಿಸಿದ ದೌರ್ಜನ್ಯದಷ್ಟು ಗ್ರೀಕರ ದೌರ್ಜನ್ಯವು ಕ್ರೂರವಾಗಿರಲಿಲ್ಲ. ಏಷ್ಯಾಮೈನರನ್ನು ಅರ್ಮೇನಿಯನ್ನರು ಪಾಲಿಸುವರೆಂದಿಟ್ಟುಕೊಂಡರೂ ಅವರು ಇದೇ ತೆರದ ದೌರ್ಜನ್ಯವನ್ನು ನಡೆಯಿಸಿದರೆ ಅವರ ವಿಷಯದಲ್ಲಿ ಆಗಲೂ ನಾವು ಹೀಗೆಯೇ ಪ್ರವರ್ತಿಸತಕ್ಕವರು. ಇವರು ಕ್ರೈಸ್ತರು ಇವರು ಮಹಮ್ಮದೀಯರು ಎಂಬ ಮತವಿವಕ್ಷೆಯಿಂದ ಪ್ರೇರಿತರಾಗಿ ನಾವು ಹೀಗೆ ಮಾಡುವುದಿಲ್ಲ, ಮಾನವ ಜಾತಿಯ ಹಿತಾರ್ಥವಾಗಿಯೇ ನಾವು ಹೀಗೆ ಮಾಡುತ್ತೇವೆ. ಕೆಲವು ಹೊಣೆಗಳನ್ನು ತೆಗೆದುಕೊಳ್ಳದೆ ನಾವು ಮಾನವ ಪ್ರಾಣಹಾನಿ ಮೊದಲಾದ ಎಷ್ಟೋ ದೌರ್ಜನ್ಯವನ್ನು ನಡೆಯಿಸಿರುವ ತುರ್ಕಿಯನ್ನು ಸುಮ್ಮನೆ ಬಿಟ್ಟುಬಿಡುವಂಥ ಸಂಧಿಗೆ ಎಂದಿಗೂ ಒಡಂಬಡಲಾರೆವು. ಸಂಧಿಗೆ ಒಪ್ಪದೆ ಬಹುಕಾಲ ಕಳೆದುಬಿಟ್ಟರೆ ತಾವು ಕೋರುವ ನಿಬಂಧನೆಗಳಿಗೆಲ್ಲಾ ಪ್ರತಿಪಕ್ಷದವರು ಒಪ್ಪಿಕೊಳ್ಳುವರೆಂದು ತುರುಕರು ತಿಳಿದುಕೊಂಡಿರುವುದು ತಪ್ಪು. ಹಾಗೆ ಅವರು ಮಾಡಿದರೆ ಇಂಗ್ಲೀಷರು ಮತ್ತೆ ಪ್ಯಾರಿಸ್ ನಿಬಂಧನೆಯನ್ನೇ ಸೂಚಿಸುವರು. ಯುದ್ಧವನ್ನು ಈಗ ನಿಲ್ಲಿಸಿಬಿಟ್ಟರೆ ಹೀಗೆ ಹೀಗೆ ಮಾಡಿಕೊಡುವೆವೆಂದು 1917ರಲ್ಲಿ ನಾವು ಒಂದು ಸೂಚನೆಯನ್ನು ತುರ್ಕಿಗೆ ಮಾಡಿದೆವು. ಅದಕ್ಕೂ ಒಪ್ಪದೆ ಸಂಪೂರ್ಣ ಪರಾಜಯವನ್ನು ಹೊಂದುವವರೆಗೂ ತುರ್ಕಿಯು ಹೋರಾಡಿತು. ಅದರಿಂದ ನಮ್ಮ ಸೈನಿಕರಲ್ಲಿ ಎಷ್ಟೋಮಂದಿ ಮಡಿದರು; ಲಕ್ಷಾಂತರ ಸವರನ್ನುಗಳ ನಷ್ಟವಾಯಿತು. ಗ್ರೀಕಿನ ಮೇಲೆ ಇಂಗ್ಲೀಷರು ಪಕ್ಷಪಾತವನ್ನು ವಹಿಸಿರುವರೆಂದು ಕೆಲರು ಆಕ್ಷೇಪಿಸುತ್ತಿರುವರು. ಇವರಿವರ ವಿಷಯದಲ್ಲಿ ಇತರರು ಪ್ರವೇಶವನ್ನಿಟ್ಟುಕೊಳ್ಳದೆ ಗ್ರೀಕನ್ನೊಂದನ್ನೇ ಸ್ವತಂತ್ರವಾಗಿ ಬಿಟ್ಟುಬಿಟ್ಟರೆ ಅದು ಕೆಲವು ಗಂಟೆಗಳೊಳಗೇ ಕಾನ್ಸ್ಟಾಂಟಿನೋಪಲ್ಲನ್ನು ವಶಪಡಿಸಿಕೊಳ್ಳಬಲ್ಲುದು. ಆಗ ತುರ್ಕಿ ಸಮಸ್ಯೆಯು ಕೆಲವು ಗಂಟೆಗಳೊಳಗೇ ಪರಿಷ್ಕಾರ ಹೊಂದಿಹೋಗುವುದು. ಆದರೆ ಮಿತ್ರಮಂಡಲಿಯವರು ಕೈಹಾಕಿರುವುದರಿಂದಲೇ ಪರ್ಯವಸಾನವು ಹಾಗೆ ಆಗದೆ ಇದೆ. ಗ್ರೀಕರು ತಮ್ಮ ಸಂಪೂರ್ಣಬಲವನ್ನುಪಯೋಗಿಸಿ ತುರ್ಕಿಯ ಮೇಲೆ ಯುದ್ಧಮಾಡುವುದಕ್ಕೆ ನಾವು ಅಡ್ಡಿಪಡಿಸುತ್ತಿರುವೆವು; ಅಷ್ಟೇ. ಯಾವುದು ಹೇಗಾದರೂ ಏಷ್ಯಾಮೈನರಿನಲ್ಲಿರುವ ಕ್ರೈಸ್ತರ ಧನ ಪ್ರಾಣಗಳ ರಕ್ಷಣೆಗೆ ತಕ್ಕ ಹೊಣೆಯನ್ನು ಪಡೆದುಕೊಳ್ಳದ ಸಂಧಿಗೆ ನಾವೆಂದಿಗೂ ಒಪ್ಪುವವರಲ್ಲ. ಗ್ರೀಕೋ ತುರ್ಕಿಯ ಸಂಧಿಯು ಕುದುರಿಹೋಗುವಂತೆ ಮಾಡುವ ವಿಷಯದಲ್ಲಿ ಮಿತ್ರಮಂಡಲಿಯವರಿಗೂ ಆ ಪ್ರಭುತ್ವಗಳವರಿಗೂ ಈಗ ರಾಯಭಾರವು ನಡೆಯುತ್ತಿದೆ" ಎಂದು ಹೇಳಿದರು. ಮಂತ್ರಿವರ್ಯರ ಈ ಉಪನ್ಯಾಸವು ಪ್ರಪಂಚದ ಮೇಲಿರುವ ತುರುಷ್ಕ ಪ್ರಜೆಗಳಿಗೆಲ್ಲಾ ಅಸಮಾಧಾನವನ್ನು ಹೆಚ್ಚಿಸಿರುತ್ತದೆ; ಇದರಲ್ಲೂ ಗ್ರೀಕರನ್ನು ಉಬ್ಬೇರಿಸಿರುತ್ತದೆ. ಗ್ರೀಕ್‌ಪಕ್ಷವನ್ನೇ ಆಂಗ್ಲ ಮಂತ್ರಿಗಳು ವಹಿಸಿರುವರೆಂಬ ವಿಷಯವು ಸುಸ್ಪಷ್ಟವಾಗಿದೆಯೆಂದು ಅವರುಗಳು ಆಕ್ಷೇಪಿಸುತ್ತಿದ್ದಾರೆ. ಮುಖ್ಯವಾಗಿ ಲಾಯಿಡ್‌ಜಾರ್ಜ್‌ರವರ ಅಧಿಕಾರ ಕಾಲದಲ್ಲಿ ದೇಶಶಾಂತಿಗೆ ಸಾಧಕವಾಗುವಂತೆ ತುರ್ಕಿಸಮಸ್ಯೆಯು ಪರಿಷ್ಕರಿಸಲ್ಪಡುವುದೆಂಬ ಚಿಹ್ನೆಯು ತೋರುವುದಿಲ್ಲ. ಇದು ಆಂಗ್ಲ ಸಾಮ್ರಾಜ್ಯದ ದುರದೃಷ್ಟವೋ, ತುರ್ಕಿಯ ಪಾಪಶೇಷವೋ ಗೊತ್ತಾಗುವುದಿಲ್ಲ.

ಈಗ ಅಂಗೋರಾ ಪ್ರಭುತ್ವದ ವಿದೇಶ ಮಂತ್ರಿಯಾದ ಪತೇಬೆಯವರು ಲಂಡನ್ನಿಗೆ ಹೋಗಿದ್ದಾರೆ. ಸಂಧಿ ವಿಷಯವಾಗಿ ಆಂಗ್ಲಮಂತ್ರಿಗಳೊಡನೆ ಚರ್ಚಿಸುವುದೇ ಅವರ ಉದ್ದೇಶವಾಗಿದೆ. ಆರೋಗ್ಯಾರ್ಥವಾಗಿ ಸ್ಕಾಟ್ಲೆಂಡಿಗೆ ಹೋಗಿರುವ ಲಾರ್ಡ್‌ಕರ್ಜನರು ಬಂದ ಕೂಡಲೇ ಇವರ ರಾಯಭಾರವು ನಡೆಯುವುದಾಗಿದ್ದಿತು. ಈ ಮಧ್ಯೆ ಆಂಗ್ಲೋ ಓಟ್ಟಮಾನ್ ಸಂಘದವರು ಒಂದು ಮಹಜರನ್ನು ಮಾಡಿ ಮುಖ್ಯಮಂತ್ರಿಗಳಿಗೆ ಕಳುಹಿಸಿರುವರು. ಅದಕ್ಕೆ ಲಾರ್ಡ್ ಚಲಮ್ಸ್‌ಫರ್ಡ್ ಲಾರ್ಡ್ ಲ್ಯಾಮಿಂಗ್ಟನ್, ಲಾರ್ಡ್‌ಗ್ಲೆಂಟರ್ನ್, ಕಮ್ಯಾಂಡರ್ ಕೆನ್ವರ್ದಿ, ಬೆನ್‌ಸ್ಪೂರ್, ಅಮಿರಾಲಿ, ಮೊದಲಾದ ಪ್ರಮುಖರನೇಕರು ಹಸ್ತಾಕ್ಷರವನ್ನು ಹಾಕಿರುವರು. ಅದರಲ್ಲಿ ಕಾಣಿಸಿರುವ ಅಭಿಪ್ರಾಯವೇನೆಂದರೆ—"ಏಷ್ಯಾಮೈನರೂ ಸ್ಮಿರ್ನಾವೂ ತುರ್ಕಿಸುಲ್ತಾನ್ ಅಧಿಪತ್ಯಕ್ಕೊಳಪಟ್ಟಿರಬೇಕು. ಜಾತೀಯ ಸಮಿತಿಯವರು ಕೆಲವು ಸಾಯುಧ ಸೈನಿಕರನ್ನು ದೇಶರಕ್ಷಣಾರ್ಥವಾಗಿ ಅಲ್ಲಿಟ್ಟಿರಬಹುದು. ಆದರೆ ಈಯಧಿಕಾರವು ತಟಸ್ಥವಾಗಿರಬೇಕು. ಪೂರ್ವಥ್ರೇಸನ್ನೂ ಅದ್ರಿಯಾನೋಪಲನ್ನೂ ತುರ್ಕಿಗೆ ಬಿಟ್ಟುಬಿಡಬೇಕು. ಪಶ್ಚಿಮಥ್ರೇಸನ್ನು ಜಾತೀಯ ಸಮಿತಿಯ ಅಧಿಕಾರದ ಕೆಳಗೆ ಸ್ವತಂತ್ರ ಪ್ರಭುತ್ವವುಳ್ಳದನ್ನಾಗಿ ಮಾಡಬೇಕು. ಬಲ್ಗೇರಿಯಾವಿಗೆ ಈಜಿಯನ್ ಸಮುದ್ರಕ್ಕೆ ರಹದಾರಿಕೊಡುತ್ತೇವೆಂದು ಮಾಡಿದ್ದ ವಾಗ್ದಾನವನ್ನು ನೆರವೇರಿಸಿಕೊಡಬೇಕು. ಗ್ರೀಕು ತುರ್ಕಿ ಎಲ್ಲೆಕಟ್ಟುಗಳು ಕೂಡಿರಕೂಡದು. ಡಾರ್ಡಿನೆಲ್ಸ್ ಜಲಸಂಧಿಯನ್ನು ಮಿತ್ರಮಂಡಲೀವಶದಲ್ಲಿಡುವುದರಿಂದ ಪ್ರಪಂಚಶಾಂತಿಯು ಸಂಭವಿಸಲಾರದೆಂಬುದು ನಮ್ಮ ನಂಬುಗೆಯು. ಈಗಿರುವ ನಿಬಂಧನೆಯ ಪ್ರಕಾರವೇ ಡಾರ್ಡಿನೆಲ್ಸ್ ಸಂಧಿಯನ್ನಿಡುವುದಾದರೆ ಗ್ರೀಕರ ಅಥವಾ ಇನ್ನಾವುದಾದರೂ ನೌಕಾಬಲಸಂಪನ್ನವಾದ ರಾಜ್ಯದ ಮುತ್ತಿಗೆಯಿಂದ ಕಾನ್ಸ್ಟಾಂಟಿನೋಪಲನ್ನು ರಕ್ಷಿಸುವುದು ಅಸಾಧ್ಯವು. ಡಾರ್ಡಿನೆಲ್ಲನ್ನು ತುರ್ಕಿ ಸಾಮ್ರಾಜ್ಯದ ಅಧೀನಗೊಳಿಸದೆ ಹೋದರೆ, ಕಾನಸ್ಟಾಂಟಿನೋಪಲ್ಲಿನ ರಕ್ಷಣೆಯ ಹೊಣೆಯ ಮೇಲೆ ಅದನ್ನು ಜಾತೀಯಸಮಿತಿಯ ಅಧೀನದಲ್ಲಿಡಬೇಕು. ಆದರೆ ಆ ಸಮಿತಿಯಲ್ಲಿ ತುರ್ಕಿಗೂ ಪ್ರಾತಿನಿಧ್ಯವಿರಬೇಕು." ಈ ಪ್ರಕಾರವಾದ ಮಹಜರಿಗೆ ಏನು ಫಲವುಂಟಾಗುವುದೋ ಮುಂದೆ ನೋಡಬೇಕು. ಸರ್ ಚಾರಲ್ಸ್‌ಟೌನ್ಸೆಂಡ್‌ರವರು ಅಂಗೋರಾಕ್ಕೆ ಹೋಗಿದ್ದು ಕೇಮಲ್‌ಪಾಷಾರವರೊಡನೆ ಮಾತನಾಡಿಕೊಂಡು ಅಲ್ಲಿಯ ಪರಿಸ್ಥಿತಿಯನ್ನೆಲ್ಲಾ ತಿಳಿದುಕೊಂಡು ಹಿಂದಿರಿಗಿ ಬಂದರು. ಗ್ರೀಕರು ಏಷ್ಯಾಮೈನರನ್ನು ಬಿಟ್ಟುಹೋದರೆ ತಾನು ಸಂಧಿ ಪತ್ರಕ್ಕೆ ರುಜುಹಾಕುವೆನೆಂದು ಕೇಮಲ್‌ಪಾಷಾರವರು ಹೇಳಿದರೆಂದೂ, ಹಾಗೆ ಆಗದೆ ಹೋದರೆ ಏಷ್ಯಾಮೈನರು, ಈಜಿಪ್ಟು, ಭರತಖಂಡ—ಇವುಗಳಲ್ಲಿರುವ ಮಹಮ್ಮದೀಯರನ್ನೆಲ್ಲಾ ಮತಯುದ್ಧಕ್ಕೆ ಸಾರಿ ವಿಪ್ಲವವನ್ನೇಳಿಸುವೆನೆಂದು ಬೆದರಿಕೆ ಹಾಕಿರುವರೆಂದೂ ಸಹ ಹೇಳಿರುವರು. ಇದು ಎಷ್ಟುಮಟ್ಟಿಗೆ ನಿಜವೋ ಕೇಮಲ್‌ಪಾಷಾರವರ ಉದ್ದೇಶವು ಎಷ್ಟುಮಟ್ಟಿಗೆ ಸಾರ್ಥಕವಾಗುವುದೋ ಹೇಳಲಾಗುವುದಿಲ್ಲವಾದರೂ ಅಂಥ ವಿಷಮಸ್ಥಿತಿಯು ಪ್ರಪಂಚಕ್ಕೆ ಒದಗದಂತೆ ಮಾಡಲು ಜಗದೀಶ್ವರನು ಮಿತ್ರಮಂಡಲಿಗೆ ಮುಖ್ಯವಾಗಿ ಆಂಗ್ಲ ಪ್ರಭುತ್ವದವರಿಗೆ ತುರ್ಕಿ ಸಮಸ್ಯೆಯ ಪರಿಷ್ಕಾರ ವಿಷಯದಲ್ಲಿ ಈಗ ಹಿಡಿದಿರುವ ಪಟ್ಟನ್ನೇ ಹಿಡಿಯದೆ ಉದಾರಭಾವವನ್ನು ತೋರಿಸುವಂತೆ ಪ್ರೇರೇಪಿಸಲೆಂದು ಕೋರುವೆವು.

GREETINGS IN THE CHIEF COURT.

The public would not have failed to notice the rather amusing sentiments to which Mr. Justice B. Subbanna gave expression in his reply to the welcome given to him on behalf of the Bar on the day he took seat on the Chief Court Bench. We surely do not deny certain human frailties to men even in Mr. Subbanna's position. But it is certainly not edifying for one in his position to say "the ambition of my existence was always to sit on this Bench" and that it was the dream of his life, nor is it setting a very high example to the members of the Bar with whom he fraternises so much. To sit on the Bench is surely not an end in itself and some higher ideal must actuate one to seek any place in service and more so on the Chief Court Bench. We always thought that it is the zeal to serve others through whatever channel that should primarily actuate a person in position–official or non-official–and the dream if anything should be not to secure a place for oneself but an opportunity or field to help one's fellowmen. While in the rest of India men are seeking independence and are not over anxious to join service it was not very happy on the part of Mr. Subbanna to have upheld getting a place on the Bench as the dream of his life. It looks a very poor dream indeed! Nor was it quite in place on the part of the Chief Judge to have emphasised the scholastic friendship with Mr. Subbanna in the Law College and for Mr. Subbanna to return the compliments to the Chief Judge holding him up as an ideal person to serve with. Such an attitude of open mutual admiration would affect the independence which each judge of the Chief Court has to maintain in order to administer justice which is what the peop

ಸೂಚನೆ.

☞ ಬರುವ ಶುಕ್ರವಾರ ಶನಿವಾರಗಳ ದಿವಸ ಗೌರೀ ಗಣೇಶನ ಹಬ್ಬವಾದ ಪ್ರಯುಕ್ತ ಬರುವ ಭಾನುವಾರದಲ್ಲಿ (ತಾ॥ 27—8—22) ಸ್ಟಾರ್ ಪತ್ರವು ಪ್ರಕಟವಾಗುವುದಿಲ್ಲ. ಪ. ಪ್ರ.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಅಗಸ್ಟ್ ತಾ॥ ೨೦ನೆಯ ಭಾನುವಾರ.

ಸಂಸ್ಕೃತಾಭ್ಯಾಸವು.

ಮೈಸೂರು ಬೆಂಗಳೂರುಗಳಲ್ಲಿರುವ ಸಂಸ್ಕೃತ ಮಹಾ ಪಾಠಶಾಲೆಗಳು ಸರ್ಕಾರದ ಕಟ್ಟಡಗಳಲ್ಲಿರುವುವು. ಅಲ್ಲಿ ಬೋಧಕರಾಗಿರುವ ಪಂಡಿತರುಗಳು ಸರ್ಕಾರದ ಹಣದಿಂದ ಸಂಬಳವನ್ನು ಪಡೆಯುತ್ತಿರುವರು. ಅಲ್ಲಿ ಓದುವ ವಿದ್ಯಾರ್ಥಿಗಳಿಗೆ ಸರ್ಕಾರದ ಹಣದಿಂದ ವಿದ್ಯಾರ್ಥಿವೇತನಗಳೂ ಅಶನವೂ ಕೊಡಲ್ಪಡುತ್ತಿರುವುವು. ವರ್ಷಕ್ಕೆ ೬೦ ಸಾವಿರಕ್ಕೆ ಕಡಿಮೆಯಿಲ್ಲದೆ ಈ ಪಾಠಶಾಲೆಗಳಿಗೆ ವೆಚ್ಚ ಮಾಡುತ್ತಿರುವಂತೆ ಸರ್ಕಾರ ಬಜೆಟ್ಟಿನಿಂದ ಗೊತ್ತಾಗುವುದು. ಅದುಕಾರಣ ಇವನ್ನು ಸರ್ಕಾರಿ ಶಾಲೆಗಳೆಂದು ನಿರ್ಧರಿಸಿ, ಇಲ್ಲಿಯ ಬೋಧಕರೂ ವಿದ್ಯಾರ್ಥಿಗಳೂ ಸಹೋದರ ವಾತ್ಸಲ್ಯವನ್ನು ತಮ್ಮಗಳ ಮೇಲೆ ತೋರಿಸಿ ವಿದ್ಯಾರ್ಜನೆಗೆ ಅವಕಾಶಮಾಡಿಕೊಡದೆ ಹೋಗಲಾರರೆಂದು ನಂಬಿ, ಇವುಗಳಿಗೆ ತಾವೂ ಸೇರಿ ಉತ್ಕೃಷ್ಟವಾದ ಸಂಸ್ಕೃತ ವಿದ್ಯಾಪ್ರಾವೀಣ್ಯವನ್ನು ಪಡೆಯಬೇಕೆಂಬ ಸದಿಚ್ಛೆಯಿಂದ ಹಿಂದುಳಿದಿರುವ ಪಂಗಡಗಳಿಗೆ ಸೇರಿದ ಉತ್ತಮ ಹಿಂದುಗಳೂ ಜೈನರೂ ಸಹ ಸರ್ಕಾರದವರನ್ನು ಪ್ರಾರ್ಥಿಸಿಕೊಂಡರೇ ವಿನಾ ತ್ರಿಮತಸ್ಥರ ಸ್ವಂತದ ಮಠಗಳಿಗಾಗಲೀ ದೇವಾಲಯಗಳಿಗಾಗಲೀ ಅವರುಗಳ ಸ್ವಂತ ಮನೆಗಳಿಗಾಗಲೀ ನಾವು ಬಂದು ಸಹಪಙ್ತಿಭೋಜನಾದಿ ಸವ್ಯವಹಾರವನ್ನು ನಡೆಯಿಸಬೇಕೆಂದು ಯಾರೂ ಅಪೇಕ್ಷಿಸಲಿಲ್ಲ. "ಈ ದಿವಸ ಬ್ರಾಹ್ಮಣರ ಜತೆಗೆ ಕುಳಿತು ಓದಲಿಕ್ಕೆ ಅಪೇಕ್ಷಿಸಿದವರು ನಾಳೆಯ ದಿವಸ ಬ್ರಾಹ್ಮಣ ಸ್ತ್ರೀಯರನ್ನು ನಾವು ಮದುವೆಮಾಡಿಕೊಳ್ಳಬೇಕು ಸರ್ಕಾರದವರು ನಿರ್ಬಂಧಮಾಡಿ ಕೊಡಿಸಬೇಕು ಎಂತಲೂ ಕೇಳಬಹುದು" ಎಂಬುದಾಗಿ ಒಬ್ಬ ಕುಹಕಿಗಳು ಸಂಪದಭ್ಯುದಯದಲ್ಲಿ ಬರೆದುಕೊಂಡಿದ್ದಾರೆ. ಪಾಪ! ಇವರಿಗೇಕೆ ಅಭೀತಿ? ವಿದ್ಯಾವತಿಯರಾಗಿದ್ದರೂ ಗಂಡುಬೀರಿಯರಾಗಿಯೂ ಅಸಾಧ್ವಿಗಳಾಗಿಯೂ ಪರಿಣಮಿಸಿರುವ ಅನೇಕ ಬ್ರಾಹ್ಮಣ ಯುವತಿಯರ ದುಶ್ಚರಿತೆಯನ್ನು ಕೇಳಿಯೂ ನೋಡಿಯೂ ಬೇಸರುಪಟ್ಟಿರುವ ಹಿಂದುಳಿದ ಜನವರ್ಗಗಳ ಗೃಹಸ್ಥರಾರೂ ಅಂಥ ಹೆಣ್ಣುಗಳನ್ನು ತಮ್ಮ ಮನೆ ಬಾಗಿಲಿಗೂ ಸೇರಿಸುವವರಾಗಿಲ್ಲ. ಇದನ್ನು ಆ ಲೇಖಕರು ಖಚಿತವಾಗಿ ತಿಳಿದುಕೊಳ್ಳಲಿ. ಪಾಠಶಾಲೆಯ ಬೋಧಕರು ಪೂರ್ವಸಂಪ್ರದಾಯವನ್ನನುಸರಿಸಿ ಉಚಿತವಾಗಿ ವಿದ್ಯಾಭ್ಯಾಸ ಮಾಡಿಸುತ್ತಿದ್ದರೆ ಅವರನ್ನು ನಿರ್ಬಂಧಿಸಲು ಯಾರಿಗೂ ಅಧಿಕಾರವಿಲ್ಲ; ಕೇಳುತ್ತಲೂ ಇರಲಿಲ್ಲ. ಸರ್ಕಾರಿ ಸಂಬಳವನ್ನು ಪಡೆದ ಮೇಲೆ ಸರ್ಕಾರದ ಇತರ ಶಾ[illegible] ಉದ್ಯೋಗಿಗಳಂತೆ ಅವರೂ ಗಣಿಸಲ್ಪಟ್ಟು ಸರ್ಕಾರದ ಆ[illegible]ವನ್ನು ಶಿರಸಾವಹಿಸ್ಯಮಾಡಿಯೇ ತೀರಬೇಕು. ಹಾಗಿಲ್ಲದೆ ಸಹಾಯನಿರಾಕರಣವನ್ನು ಅವರು ಅವಲಂಬಿಸುವಂತಿದ್ದರೆ ಭರತಖಂಡದಲ್ಲಿ ಸಂಸ್ಕೃತ ಪಂಡಿತರಿಗೆ ಏನೂ ಕಡಿಮೆಯಿಲ್ಲ. ಪ್ರಕಟಮಾಡಿದರೆ ಮೂರು ದಿನಗಳೊಳಗೆ ಮೂರು ಸಾವಿರ ಮಂದಿಗಳು ಬೇಕಾದರು ಸಿದ್ಧರಾಗುವರು.

ಆಂಗ್ಲ ಪಾಠಶಾಲೆಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅವಕಾಶವಿರುವುದರಿಂದ ಅಲ್ಲಿ ಸೇರಿ ಓದಲು ಯಾವ ಅಭ್ಯಂತರವೂ ಇಲ್ಲವೆಂದು ಪ್ರತಿಪಕ್ಷದವರು ವಾದಿಸುತ್ತಾರೆ. ಆಂಗ್ಲ ಭಾಷೆಯ ಜತೆಗೆ ಉಪಭಾಷೆಯಾಗಿ ಸಂಸ್ಕೃತವನ್ನೇ ಆಗಲೀ ದೇಶಭಾಷೆಯನ್ನೇ ಆಗಲೀ ತೆಗೆದುಕೊಂಡು ಓದಿದವರು ಸಂಪಾದಿಸುವ ವ್ಯುತ್ಪತ್ತಿಗೂ ಆಯಾಭಾಷೆಯೊಂದನ್ನೇ ತೆಗೆದುಕೊಂಡು ಪ್ರತ್ಯೇಕವಾಗಿ ಅಭ್ಯಾಸಮಾಡಿದವರು ಸಂಪಾದಿಸುವ ವ್ಯುತ್ಪತ್ತಿಗೂ ತಾರತಮ್ಯವೆಷ್ಟಿರುವುದೆಂಬುದನ್ನು ತಿಳಿದವರಾರೂ ಇಂಥ ಅವಿಚಾರದ ಮಾತನ್ನಾಡಲಾರರು.

ವೀರಶೈವರೇ ಮೊದಲಾದವರಿಗೆ ಒಂದು ವೇಳೆ ಈ ಪಾಠಶಾಲೆಗಳಲ್ಲಿ ಅಭ್ಯಾಸಕ್ಕೆ ಅವಕಾಶಮಾಡಿಕೊಟ್ಟರೂ ಅವರ ವಿದ್ಯಾರ್ಥಿಗಳು ಸೇರುವುದೇ ಇಲ್ಲ. ಅದುಕಾರಣ ಈ ಪ್ರಯತ್ನವು ವ್ಯರ್ಥವೆಂಬುದೊಂದು ಕಾರಣವನ್ನು ಪ್ರತಿಪಕ್ಷದವರು ಒಡ್ಡಿರುತ್ತಾರೆ. ಒಂದು ವೇಳೆ ಆ ವಿದ್ಯಾರ್ಥಿಗಳು ಸೇರದಿರುವುದೇ ನಿಜವಾದರೆ ಇವರಿಗೆ ಇಷ್ಟಾಪತ್ತಿಯೇ ಆಯಿತಲ್ಲವೆ? ಅದಕ್ಕಾಗಿ ಇನ್ನು ತಾಪತ್ರಯಪಡಬೇಕಾದುದೇಕೆ?

ಯೂರೋಪಿಯನ್ನರು ತಮ್ಮ ಮಕ್ಕಳೋದುವ ಪಾಠಶಾಲೆಗಳಿಗೆ ಇತರರ ಮಕ್ಕಳನ್ನು ಸೇರಿಸುವರೆ? ಎಂಬುದೊಂದು ಉದಾಹರಣೆಯನ್ನು ಈ ಪ್ರತಿಪಕ್ಷದವರು ದೊಡ್ಡದಾಗಿ ಮಾಡುತ್ತಿದ್ದಾರೆ. ಯಾರ ಆಚರಣೆಯು ಪಕ್ಷಪಾತಮಯವಾದುದೆಂದು ಈಗ ಭಾರತೀಯ ದೇಶಾಭಿಮಾನಿಗಳಿಂದ ಆಕ್ಷೇಪಿಸಲ್ಪಡುತ್ತಿದೆಯೋ ಅಂಥ ವಿದೇಶೀಯ ವಿಧರ್ಮಿಗಳ ಉದಾಹರಣೆಯನ್ನು ಸ್ವದೇಶೀಯ ಸ್ವಧರ್ಮೀಯ ಸಹೋದರ ಪ್ರಜೆಗಳ ವಿಷಯದಲ್ಲಿ ಉಪಯೋಗಿಸುವ ಇವರನ್ನು ಯಾರೆಂದು ತಿಳಿಯಬೇಕು? ಬ್ರಹ್ಮ ಬೀಜೋತ್ಪನ್ನರಿಗೆ ಆ ವಿಧರ್ಮಿಗಳ ಉಪಮಾನವೇತಕ್ಕೆ?

ದಾವಣಗೆರೆಯ ಸಭಾಧ್ಯಕ್ಷತೆಯಿಂದ ದಿ॥ ಬ॥ ಕೆ. ಪಿ. ಪುಟ್ಟಣ್ಣಶೆಟ್ಟರು ಮಾಡಿದ ಭಾಷಣವನ್ನು ಕುರಿತು ಸಂಪದಭ್ಯುದಯ ಪತ್ರಿಕೆಯಲ್ಲಿ ಅತ್ಯಾಗ್ರಹದ ಮಾರುಮಾರುದ್ದದ ಸಿಂದಾಪ್ರಚುರವಾದ 1-2 ಲೇಖನಗಳು ಬಂದಿರುತ್ತವೆ. "ಶೆಟ್ಟರು ಅಸಾಧಾರಣವಾದ ಶಕ್ತಿಯಿಂದ ಸೀನಿಯರ್ ಕೌನ್ಸಿಲ್ ಪದವಿಯವರೆಗೂ ಏರಿ ನಿಸ್ಪೃಹರಾಗಿ ಕೆಲಸಮಾಡಿ ಸಂಸ್ಥಾನಕ್ಕೆ ಮಹೋಪಕಾರ ಮಾಡಿದವರು. ಆದರೂ ಈ ಭಾಷಣದಲ್ಲಿ ದುರಭಿಮಾನವನ್ನು ತೋರಿಸಿರುವುದರಿಂದ ಹಿಂದೆ ಆರ್ಜಿಸಿದ್ದ ಕೀರ್ತಿಗೆ ಕುಂದುತಂದುಕೊಂಡರು" ಎಂಬ ಪೀಠಿಕೆ ಹಾಕಿಕೊಂಡು ಆ ಲೇಖನಗಳು ಬರೆಯಲ್ಪಟ್ಟಿವೆ. ಜೀವಿತದ ಬಹುಭಾಗವನ್ನೆಲ್ಲಾ ನಿಸ್ಪೃಹತಾಚರಣೆಯಿಂದಲೂ, ನಿಷ್ಪಕ್ಷಪಾತತೆಯಿಂದಲೂ ಕಳೆದ ವಿವೇಕಿಗಳು ಒಂದಾವೃತ್ತಿಗೆ ಅದರ ಶಕ್ತಿಯನ್ನೆಲ್ಲಾ ನಾಶಿ ನುಂಗಿಸಿಕೊಳ್ಳುವಂಥ ಕೆಲಸವನ್ನು ಎಂದಿಗೂ ಮಾಡರು ಎಂಬುದನ್ನು ವಿಚಾರಪರರೆಲ್ಲರೂ ಬಲ್ಲರು. "ಆತ್ಮನಾಶವನ್ನು ಮಾಡಿಕೊಂಡರೂ ಸರಿ ತಮಗೆ ಹಿತವನ್ನು ಮಾಡಿಕೊಡುತ್ತ ತಮ್ಮನ್ನು ಅನುಸರಿಸಿಕೊಂಡಿರುವವರು ಲೋಕೋತ್ತರರು; ತಮಗೆ ಅಪ್ರಿಯವಾಗಿ ಆತ್ಮರಕ್ಷಣೆಗೆ ಅವಶ್ಯಕವಾದ ನ್ಯಾಯಕೃತ್ಯವನ್ನು ಮಾಡಿದವರು ಕೂಡ ದುರಾತ್ಮರು" ಎಂದು ಜರಗುವ ದುರುಳರ ಸಂಪ್ರದಾಯಕ್ಕೆ ಅನುಸಾರವಾಗಿ ಆ ಲೇಖನಗಳು ಕ್ಷುಲ್ಲಕ ವಚನಗಳಿಂದ ತುಂಬಿ ಬರೆಯಲ್ಪಟ್ಟಿರುತ್ತವೆ. ಮ॥ ಶೆಟ್ಟರ ಭಾಷಣದ ಮತ್ತು ಈ ದುರ್ವಾದಿಗಳ ಲೇಖನದ ಗುಣಾವಗುಣಗಳನ್ನೂ ನ್ಯಾಯಾನ್ಯಾಯವನ್ನೂ ವಿಮರ್ಶೆಮಾಡಲು ಪ್ರಭುತ್ವದವರೂ ನಿರ್ಮತ್ಸರಮತಿಗಳಾದ ದೇಶಾಭಿಮಾನಿಗಳೂ ಸಮರ್ಥರಾಗಿಯೇ ಇರುವರು.

ಹಿಂದುಳಿದ ಜನವರ್ಗಗಳವರು ಸಂಸ್ಕೃತಾಭ್ಯಾಸ ವಿಷಯದಲ್ಲಿ ಸರ್ಕಾರವನ್ನು ಕುರಿತು ಮಾಡುತ್ತಿರುವ ಪ್ರಾರ್ಥನೆಯು ಅಧರ್ಮವಾದುದಲ್ಲವೆಂದೂ ಅದನ್ನು ಈಡೇರಿಸಿಕೊಡುವುದು ಪ್ರಭುತ್ವದವರಿಗೆ ನ್ಯಾಯವಾದ ಕರ್ತವ್ಯವೆಂದೂ ನಿರ್ಮತ್ಸರಮತಿಗಳೂ ನ್ಯಾಯಪ್ರಿಯರೂ ಆದ ಅನೇಕ ವೃತ್ತಪತ್ರಿಕಾಕರ್ತರುಗಳು ಅಭಿಪ್ರಾಯ ಕೊಟ್ಟಿರುವರು. ಹಾಗೆ ಅಭಿಪ್ರಾಯ ಕೊಡುವ ಸಜ್ಜನರು ನಮ್ಮ ಬ್ರಾಹ್ಮಣಸಹೋದರ ಮಂಡಲಿಯಲ್ಲೂ ಅನೇಕರಿರುವರೆಂಬುದನ್ನು ನಾವು ಬಲ್ಲೆವು. ಆದರೆ ಸಂಪದಭ್ಯುದಯ ಪತ್ರಿಕಾಕೂಟದವರಿಗೆ ಮಾತ್ರ ಇದು ಸೈರಿಸದು. ಪ್ರಜೆಗಳಲ್ಲಿ ಭಿನ್ನಭಾವಗಳನ್ನು ಅಭಿವೃದ್ಧಿಪಡಿಸಿ ಪರಸ್ಪರ ದ್ವೇಷಾಗ್ನಿಯಿಂದ ದೇಶವು ಹೊತ್ತಿ ಬೇಯುವುದನ್ನು ನೋಡಿ ವಿನೋದಪಡಬೇಕೆಂಬುದೇ ಅವರ ತತ್ವ. "ಪರರ ವಿಳ್ಗೆಯಲ್ಲಿ ವಿದ್ಯಾಧಿಕಜನರು ಸಾನುಭೂತಿಯನ್ನು ತೋರಿಸಬೇಕು" ಎಂದು ಶ್ರೀಮನ್ಮಹಾರಾಜರು ಅಪ್ಪಣೆಕೊಡಿಸಿರುವುದನ್ನು ಈ ಕೂಟದವರು ಕಸದಂತೆ ಕಂಡು ಒತ್ತರಿಸಿಬಿಟ್ಟಿರುವರು. ಆದರಿಂದಲೇ ಆ ಕೂಟದವರು ಈ ಸಮಸ್ಯೆಗೆ ವಿಷಗಣದ ವಿಘ್ನವನ್ನೊಡ್ಡಲು ಅಸಮಸಾಹಸಪಡುತ್ತಿದ್ದಾರೆ. ಯುಕ್ತಾಯುಕ್ತವಿಮರ್ಶನಧುರೀಣರೂ ಪ್ರಜಾವಾತ್ಸಲ್ಯಪರಿಪೂರ್ಣರೂ ಆದ ನಮ್ಮ ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಸಹ ಬಹುಪ್ರಜೆಗಳ ನ್ಯಾಯವಾದ ಕೋರಿಕೆಗೆ ಭಂಗಬರುವಂತೆ ಈ ಸಮಸ್ಯೆಯನ್ನು ಎಂದಿಗೂ ಕೊನೆಮುಟ್ಟಿಸಲಾರರೆಂದು ಪೂರ್ಣವಾದ ಬರವಸೆಯಿರುವುದು. ಆದರೆ ಯಾವಯಾವ ಕಾರಣದಿಂದಲೋ ಕಾಲವೈಪರೀತ್ಯದಿಂದಲೋ ಅದಕ್ಕೆ ವಿರುದ್ಧವಾಗಿ ಇದರ ತೀರ್ಮಾನವಾಗುವುದಾದರೆ ದೇಶದ ವಿದ್ಯಾಧಿಕಜನರಿಗೂ ಇತರ ಹಿಂದುಳಿದ ಜನವರ್ಗಗಳವರಿಗೂ ಮಧ್ಯದಲ್ಲಿರುವ ಅಂತರವು ಇನ್ನಷ್ಟು ದೂರವಾಗುತ್ತ ಹೋಗುವುದೇ ಹೊರತು ಈಗಿರುವ ಅಂತರವು ಕಡಿಮೆಯಾಗಿ ಪರಸ್ಪರ ಸಹೋದರಭಾವವೂ ಐಕಮತ್ಯವೂ ವೃದ್ಧಿಗೊಳ್ಳುವುದಿಲ್ಲ. ಈ ಸಮಸ್ಯೆಯ ಪರಿಣಾಮವನ್ನು ತಿಳಿದನಂತರ ಹಿಂದುಳಿದ ಜನವರ್ಗಗಳವರು ತಮ್ಮ ಉತ್ತರೋತ್ತರ ಪ್ರಗತಿಯ ಮಾರ್ಗವನ್ನು ಕ್ರಮಪಡಿಸಿಕೊಳ್ಳುವಲ್ಲಿ ಮತ್ತಷ್ಟು ವ್ಯಗ್ರವಾಗುವುದೇನೋ ಖಂಡಿತ.

ಮುಖ್ಯಮಂತ್ರಿಯವರ ಉಪನ್ಯಾಸ.

ಈಗ ಭರತಖಂಡದ ಸ್ವರಾಜ್ಯಾಭಿಮಾನಿಗಳಿಗೆಲ್ಲಾ ಅತ್ಯಂತ ಹೃದಯವೇದನೆಯನ್ನುಂಟುಮಾಡಿ ಪ್ರತಿ ಪಟ್ಟಣದಲ್ಲೂ ಸಭಾಮೂಲಕ ಅಧಿಕ್ಷೇಪಗೊಳಿಸಿಕೊಳ್ಳಲು ಪಾತ್ರವಾಗಿರುವಂಥ ಉಪನ್ಯಾಸವೊಂದನ್ನು ಆಂಗ್ಲ ಮಂತ್ರೀಶ್ವರರಾದ ಮಿ॥ ಲಾಯಿಡ್ ಜಾರ್ಜರವರು ಕಳೆದ ತಾ॥ ೨ ರಲ್ಲಿ ಕಾಮನ್ಸ್ ಸಭೆಯಲ್ಲಿ ಮಾಡಿದರು. ಅದು ಭರತಖಂಡದ ರಾಜಕೀಯೋದ್ಯೋಗಿಗಳ ವಿಷಯಕವಾಗಿ ಆರಂಭಿಸಲ್ಪಟ್ಟುದಾಗಿದ್ದಿತು. ಈಗಣ ನೂತನ ರಾಜಕೀಯ ಸಂಸ್ಕರಣವು ಏರ್ಪಟ್ಟ ಬಳಿಕ ಆಂಗ್ಲ ರಾಜಕೀಯೋದ್ಯೋಗಿಗಳಿಗೆ ಅದರಿಂದ ಏನೋ ಹಾನಿಯು ತಟ್ಟುವುದಾಗಿದೆಯಂತೆ! ಅವರ ಸಂಬಳಗಳೂ ಪಿಂಚನುಗಳೂ ಬಹಳ ಕಡಿಮೆಯಂತೆ! ಅವರಿಗೆಲ್ಲಾ ಅಸಂತೃಪ್ತಿಯುಂಟಾಗಿದೆಯಂತೆ!! ಅದುಕಾರಣ ಅವರ ಸಂರಕ್ಷಣೆಯ ಅವಶ್ಯಕತೆಯನ್ನು ಕುರಿತು ಸರ್ ಸಾಮ್ಯುಯಲ್ ಹೋರ್ ಎಂಬ ಪಾರ್ಲಿಮೆಂಟ್ ಮೆಂಬರು ಒಂದು ಚರ್ಚೆಯನ್ನು ತಂದರು. ಅದರಮೇಲೆ ಮುಖ್ಯಮಂತ್ರಿಯವರು ಉತ್ತರಕೊಡುವುದಕ್ಕಾಗಿ ಮಾಡಿದ ಉಪನ್ಯಾಸದೊಳಗೆ ಭರತಖಂಡದ ಆಂಗ್ಲ ರಾಜಕೀಯೋದ್ಯೋಗಿಗಳನ್ನು ಅಟ್ಟಕ್ಕೇರಿಸುವ ವಾಕ್ಯಗಳ ಮಳೆಗರೆವುದರಲ್ಲಿ ಸ್ವಲ್ಪವೂ ಕಡಿಮೆಮಾಡಲಿಲ್ಲ—"ಭರತಖಂಡದ ಸಿವಿಲ್ ಉದ್ಯೋಗಿಗಳು ಆಂಗ್ಲದೇಶದ ಪಕ್ಷದಿಂದ ಭಾರತಪ್ರಜೆಗಳ ಹಿತಕ್ಕಾಗಿ ಬಹಳ ದೊಡ್ಡ ಸೇವೆಯನ್ನು ಮಾಡಿರುವರು. ಅವರ ರಾಜಭಕ್ತಿಯ ಮತ್ತು ಸೇವಾತತ್ಪರತೆಯ ಸಾಹಾಯ್ಯವು ಇಲ್ಲದೆಹೋಗಿದ್ದರೆ ನಾವು 1 ಶತಮಾನ ಕಾಲದಲ್ಲಿ ಭರತಖಂಡವನ್ನು ಎಂಥ ಅರಾಜಕಸ್ಥಿತಿಯಿಂದ ರಕ್ಷಿಸಿದೆವೋ ಮತ್ತೆ ಅಂಥ ಸ್ಥಿತಿಗೆ ಆ ದೇಶವು ಬಿದ್ದುಹೋಗದಂತೆ ಕಾಪಾಡಲು ಸಮರ್ಥರಾಗುತ್ತಿರಲಿಲ್ಲ. ಇದುವರೆಗೆ ಒಂದು ವಿಧಾನದಿಂದ ರಾಜ್ಯಪರಿಪಾಲನೆ ಮಾಡಿದ ಉದ್ಯೋಗಿಗಳ ಮನಸ್ಸಿಗೆ ಈಗಣ ರಾಜಕೀಯ ಸಂಸ್ಕರಣಗಳು ಅಸಂತೃಪ್ತಿಯನ್ನುಂಟುಮಾಡುವುದು ಸಹಜವೇ ಆಗಿದೆ. ತಾವು ಇದುವರೆಗೆ ಅವಲಂಬಿಸಿಕೊಂಡಿದ್ದ ಪದ್ಧತಿಗೆ ಈಗಣ ಸಂಸ್ಕರಣದ ಪ್ರಕಾರ ಮಾರ್ಪುಗಳುಂಟಾಗುವುದಾದರೆ ತಮ್ಮ ಸ್ಥಿತಿಗತಿಗೆ ಎಲ್ಲಿ ನಷ್ಟವುಂಟಾಗುವುದೋ ಎಂದು ಅವರು ವ್ಯಾಕುಲಗೊಳ್ಳುವುದು ಸಹಜವಾಗಿದೆ. ಭರತಖಂಡದಲ್ಲಿರುವ ಆಂಗ್ಲೋದ್ಯೋಗಿಗಳ ಸ್ಥಿತಿಯು ಈಗ ಹಾಗಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ" ಎಂಬುದಾಗಿ ಅವರು ಈ ಪ್ರಥಮಪ್ರಕರಣವನ್ನು ಅದಿ ಮುಗಿಸಿದುದು ಸಾಲದೆ, ೨ನೆ ಪ್ರಕರಣದಲ್ಲಿ ರಾಜಕೀಯ ಸಂಸ್ಕರಣದ ವಿಷಯವನ್ನೆತ್ತಿ ಕೆಲಮಾತುಗಳನ್ನಾಡಿದರು. ಅವುಗಳು ಆಂಗ್ಲಮಂತ್ರೀಶ್ವರರ ಬಾಯಿಂದ ಬರಲು ಸುತರಾಂ ಅರ್ಹವಾಗಿರಲಿಲ್ಲ. ಆ ಮಾತುಗಳೇನೆಂದರೆ—"ಈಗಣ ರಾಜಕೀಯ ಸಂಸ್ಕರಣಗಳು ಹೇಗೆ ಕೆಲಸಮಾಡುವುವೋ ಎಂದು ಪರೀಕ್ಷಣ ಮಾಡುವುದಕ್ಕಾಗಿ ಪ್ರಯೋಗಿಸಲ್ಪಟ್ಟುವುಗಳು. ಅದುಕಾರಣ ಅವುಗಳು ಪರೀಕ್ಷಾಸ್ಥಿತಿಯಲ್ಲಿವೆಯೆಂದು ತಿಳಿದುಕೊಳ್ಳಬೇಕೇ ಹೊರತು ಅನ್ಯಥಾ ಭಾವಿಸಬಾರದು. ಈ ಪರೀಕ್ಷೆಯು ಬಹಳ ದೊಡ್ಡದು. ಎಷ್ಟು ದೊಡ್ಡದಾಗಿದ್ದರೂ ಪರೀಕ್ಷಾರ್ಥವೇ. ಅವುಗಳ ಕಾರ್ಯಾಚರಣದಲ್ಲಿ ಕೆಲವು ಕಷ್ಟಗಳೂ ಲೋಪಗಳೂ ಆಗಲೇ ತೋರಿಬಂದಿವೆ. ಇದುವರೆಗೆ 18 ತಿಂಗಳ ಕಾಲ ಮಾತ್ರವೇ ಈ ಸಂಸ್ಕರಣಗಳು ವ್ಯವಹರಿಸಲ್ಪಟ್ಟಿರುವ ವಿಷಯವನ್ನು ಗಮನಿಸಿದರೆ ಇವುಗಳಲ್ಲಿ ಸ್ವಲ್ಪ ಲೋಪವು ಕಂಡುಬಂದರೂ ಇದುವರೆಗೆ ಈ ಸಂಸ್ಕರಣಗಳು ಜಯಪ್ರದವಾಗಿ ಸಾಗಿಬಂದುವೆಂದೇ ಹೇಳಬಹುದು. ಈ ಸಂಸ್ಕರಣರೂಪದಿಂದ ಭರತಖಂಡವು ಇದುವರೆಗೆ ಯಾವಾಗಲೂ ಪರಿಪಾಲಿಸಲ್ಪಟ್ಟುದಿಲ್ಲ. ಸ್ವದೇಶೀಯ ಸಂಸ್ಥಾನಗಳಲ್ಲೂ ಕೂಡ ಇಂಥ ಪರಿಪಾಲನಕ್ರಮವು ಇರುವುದಿಲ್ಲ. ಪಾಶ್ಚಾತ್ಯಪರಿಸ್ಥಿತಿಗೂ ಪಾಶ್ಚಾತ್ಯಪದ್ಧತಿಗೂ ಅನುವಾದ ರೀತಿಯಲ್ಲಿ ನಿರ್ಮಿಸಲ್ಪಟ್ಟಿರುವ ಈ ಸಂಸ್ಕರಣಗಳ ವಿಧಾನಗಳಲ್ಲಿ ಎಷ್ಟೋ ಲೋಪಗಳು ಕಂಡುಬರುತ್ತಿರುವುದಲ್ಲದೆ ಭರತಖಂಡಕ್ಕೆ ಇದು ಸರಿಬರುವುದೆ ಎಂಬುದನ್ನು ಪರೀಕ್ಷಿಸಿ ತಿಳಿದುಕೊಳ್ಳಬೇಕಾಗಿದೆ. ಆದರೆ ಕಷ್ಟಗಳೂ ತೊಂದರೆಗಳೂ ಇದರಲ್ಲಿರುವುವೆಂಬ ಕಾರಣದಿಂದಲೇ ಈ ಸಂಸ್ಕರಣವು ವ್ಯರ್ಥವಾಯಿತೆಂದು ಅವಸರದಿಂದ ನಿರ್ಧರಿಸತಕ್ಕುದು ಸರಿಯಲ್ಲ" ಎಂದು ಹೇಳಿದರು. ಈಗಣ ಸಂಸ್ಕರಣದ ಮೇರೆಗೆ ಸಿದ್ಧಿಸಿರುವ ದ್ವಂದ್ವಪ್ರಭುತ್ವವಿಧಾನವು ಈ ದೇಶದ ಉಗ್ರಮತವಾದಿಗಳಲ್ಲೊಬ್ಬರಿಗೂ ಒಪ್ಪಿಗೆಯಾಗದೆ ಮಿತವಾದಿಗಳಿಂದ ಮಾತ್ರವೇ ಅನುಮೋದಿಸಲ್ಪಟ್ಟು ಹಾಗೂ ಹೀಗೂ ಸಾಗುತ್ತಿದೆ. ಅದನ್ನು ಸ್ಥಿರಗೊಳಿಸಿ ಸಾಗಿಸಿ ಅಭಿವೃದ್ಧಿಗೊಳಿಸಬೇಕೆಂಬ ಅಭಿಮಾನವು ಕೂಡ ಮುಖ್ಯಮಂತ್ರಿಗಳಿಗೆ ಇರುವುದಿಲ್ಲವೆಂಬ ಸಂಗತಿಯು ಈ ಮೇಲೆ ಕಂಡ ಉಪನ್ಯಾಸದಿಂದ ಧ್ವನಿತವಾಗಿರುತ್ತದೆ. ಇದು ಭಾರತೀಯರನ್ನೆಲ್ಲಾ ಮತ್ತಷ್ಟು ನಿರಾಶಾಸಮುದ್ರದಲ್ಲಿ ಮುಳುಗಿಸಲು ಉಪಕರಿಸಿತೆಂಬುದರಲ್ಲಿ ಸಂಶಯವಿಲ್ಲ. ದೇಶೀಯರೇ ಅಲ್ಲದೆ ಬೊಂಬಾಯಿ ಟೈಮ್ಸ್ ಆಫ್ ಇಂಡ್ಯಾ ಪತ್ರಿಕೆಯಂಥ ಆಂಗ್ಲ ಪತ್ರಿಕೆಯು ಕೂಡ ಈ ಉಪನ್ಯಾಸವನ್ನು ಕುರಿತು ಬಲವಾಗಿ ಆಕ್ಷೇಪಿಸಿರುತ್ತದೆ. ಆ ಉಪನ್ಯಾಸವನ್ನು ಮಂತ್ರೀಶ್ವರರು ಮಾಡಿದ ಕೂಡಲೇ ಅದೇ ಸಭೆಯಲ್ಲಿದ್ದ ಕರ್ನಲ್ ವೆಡ್ಜ್‌ವುಡ್ ಎಂಬ ಸಭಿಕರು ಎದ್ದುನಿಂತು—"ಈ ದಿನ ಮುಖ್ಯಮಂತ್ರಿಯವರು ಮಾಡಿದ ಉಪನ್ಯಾಸದಿಂದ ನೂತನ ವಿಷಯವೊಂದು ಪ್ರಕಟವಾದಂತಾಯಿತು. 1917ನೆ ಆಗಸ್ಟ್ ತಿಂಗಳಲ್ಲಿ ಅವರು ಮಾಡಿದ್ದ ಉಪನ್ಯಾಸಕ್ಕೆ ಇದು ವಿರುದ್ಧವಾಯಿತು. ಈಗ ಕೊಟ್ಟಿರುವ ಸಂಸ್ಕರಣಗಳನ್ನು ಕೂಡ ಹಿಂದಿರುಗಿಸಿಕೊಳ್ಳುತ್ತೇವೆಂದು ಅವರು ಬೆದರಿಕೆಯನ್ನು ಹಾಕಿದಂತಾಯಿತು. ಅಧಿನಿವೇಶ ರಾಜ್ಯಗಳಲ್ಲಿರುವ ಪರಿಪಾಲನ ಪದ್ಧತಿಯನ್ನು ಭರತಖಂಡಕ್ಕೆ ಉಂಟುಮಾಡಿಕೊಡಬೇಕೆಂಬುದು ಮುಖ್ಯಮಂತ್ರಿಗಳ ಉದ್ದೇಶವೇ ಹೇಗೆ? ಭರತಖಂಡಕ್ಕೆ ಅಲ್ಲಿಯ ಸಿವಿಲ್ ಉದ್ಯೋಗಿ ಶಾಖೆಯು ಮಾಡುವ ಮಹೋಪಕಾರವೆಂದರೆ ತನ್ನನ್ನು ತಾನು ಕೊನೆಮೂಂದಿಸಿಕೊಳ್ಳುವುದೇ ಆಗಿದೆ" ಎಂದು ಖಂಡಿಸಿದರು. ಅದರ ಮೇಲೆ ಇಂಡ್ಯಾ ಅಸಿಸ್ಟೆಂಟ್ ಸ್ಟೇಟ್ ಸೆಕ್ರೆಟರಿಯವರು ಸಮಾಧಾನ ಹೇಳುವುದಕ್ಕೆ ತೊಡಗಿ, ಮುಖ್ಯಮಂತ್ರಿಯವರ ಉಪನ್ಯಾಸಕ್ಕೆ ಈಗಣ ಸಂಸ್ಕರಣಗಳನ್ನು ಹಿಂತೆಗೆದುಕೊಳ್ಳಬೇಕೆಂಬುದು ಅವರ ಅಭಿಪ್ರಾಯವಾಗಿರುತ್ತದೆಂದು ಅರ್ಥಮಾಡಿಕೊಳ್ಳುವುದು ಸರಿಯಲ್ಲ. ಹೀಗೆ ವ್ಯಾಖ್ಯಾನಮಾಡುವುದರಿಂದ ಭರತಖಂಡದಲ್ಲಿ ತೀವ್ರಫಲಿತಗಳುಂಟಾಗುವುವು. ಭರತಖಂಡದಲ್ಲಿ ಆಂಗ್ಲಪರಿಪಾಲನವು ಕೊನೆಗಂಡುಹೋಗಬೇಕೆಂಬುದೇ ವೆಡ್ಜ್‌ವುಡ್‌ರವರ ಕೋರಿಕೆಯಾಗಿರಬೇಕೆಂದು ಅವರ ಉಪನ್ಯಾಸದಿಂದ ತಿಳಿಯಬರುತ್ತದೆ. ಆದರೆ ಆಂಗ್ಲಪ್ರಭುತ್ವದವರು ಸಹಕಾರಪದ್ಧತಿಯಿಂದ ಅದನ್ನು ಪರಿಪಾಲಿಸಿಕೊಂಡು ಹೋಗಬೇಕೆಂದೇ ನಿರ್ಧರಿಸಿದ್ದಾರೆ" ಎಂದು ಹೇಳಿ ತೊಪ್ಪೆ ಸಾರಿಸಿಬಿಟ್ಟರು. ಅಂತೂ ಅಡ್ಡಗೋಡೆಯ ಮೇಲಣ ದೀಪದಂತೆ ಮಾತನಾಡಿರುವ ಲಾಯಿಡ್ ಜಾರ್ಜರ ರಾಜತಂತ್ರವು, ಮಿ॥ ಮಾಂಟೂಗ್‌ರವರು ಸ್ಟೇಟ್‌ಸೆಕ್ರೆಟರಿ ಪದವಿಯಲ್ಲಿಲ್ಲದಿದ್ದರೆ ಈಗಣ ಸಂಸ್ಕರಣಗಳ ಆಚರಣೆಗೂ ಅವಕಾಶ ಕೊಡುತ್ತಿರಲಿಲ್ಲವೆಂದು ಭಾವಿಸಬೇಕಾಗಿದೆ.

ಇದೇ ಉಪನ್ಯಾಸದ ೨ನೆ ಪ್ರಕರಣದಲ್ಲಿ ಆಂಗ್ಲಮಂತ್ರಿವರ್ಯರು ವ್ಯಕ್ತಪಡಿಸಿದ ಅಭಿಪ್ರಾಯವಂತೂ ಅವರ ಹೃದಯವನ್ನು ತೆರೆಮರೆಯಿಲ್ಲದೆ ಬಿಚ್ಚಿಟ್ಟಂತೆ ಮಾಡಿರುತ್ತದೆ. ಅದೇನೆಂದರೆ "ಆಂಗ್ಲಪ್ರಭುತ್ವವು ಭರತಖಂಡದಲ್ಲಿ ತನ್ನ ಪರಿಪಾಲಕತ್ವವನ್ನು ಕಾಲಾಂತರದಲ್ಲಿ ಬಿಟ್ಟುಕೊಟ್ಟುಹೋಗುವುದಕ್ಕಾಗಿ ಭಾರತೀಯರ ಸಹಾಯವನ್ನು ನಾವು ಕೋರುವುದಿಲ್ಲ. ಆಂಗ್ಲಪರಿಪಾಲನ ಪದ್ಧತಿ ನಿರ್ವಹಣದಲ್ಲಿ ಸಹಕರಿಸುವುದಕ್ಕೆ ಮಾತ್ರವೇ ನಾವು ಅವರ ಸಹಾಯವನ್ನು ಕೋರುವವರಾಗಿದ್ದೇವೆ. ನಮ್ಮ ಪೂರ್ವಿಕರಿಂದ ನಮಗೆ ಭಾರತಸಂರಕ್ಷಣಭಾರವು ಸಂಕ್ರಮಿಸಿ ಬಂದಿರುತ್ತದೆ. ಅದನ್ನು ನಾವು ನಮ್ಮ ಮುಂದಣ ಪೀಳಿಗೆಯವರಿಗೂ ಹಾಗೆಯೇ ಒಪ್ಪಿಸಿಕೊಟ್ಟು ಹೋಗುವವರಾಗಿದ್ದೇವೆ. ಭರತಖಂಡದಲ್ಲಿ ನಮ್ಮ ಸಂರಕ್ಷಣೆಯನ್ನು ಕೊನೆಮುಟ್ಟಿಸಿಕೊಳ್ಳುವುದು ನಮ್ಮ ಸಂಕಲ್ಪವಲ್ಲ. ಯಾವುದು ಹೇಗಿದ್ದರೂ ಯಾರು ಏನುಮಾಡಿದರೂ ಆಂಗ್ಲಸಾಮ್ರಾಜ್ಯವು ಭರತಖಂಡದ ತನ್ನ ಪ್ರಭುತ್ವಬಾಧ್ಯತೆಯನ್ನು ಮಾತ್ರ ಯಾವ ಸಂದರ್ಭದಲ್ಲಿಯೂ ಬಿಟ್ಟುಕೊಡಲಾರದು. ಅದನ್ನು ಕದಲಿಸುವುದಕ್ಕಾಗಿ ಯಾವ ಪ್ರಯತ್ನಗಳಾದರೂ ನಡೆದರೆ ಅದನ್ನಡಗಿಸುವುದಕ್ಕೆ ದೃಢತರವಾದ ಏರ್ಪಾಟುಗಳು ಮಾಡಲ್ಪಡುವುವು" ಎಂಬುದಾಗಿ ಅಪ್ಪಣೆ ಕೊಡಿಸಿರುವರು. ಇದರಿಂದ "ಭರತಖಂಡವು ಯಾವಾಗಲೂ ಆಂಗ್ಲಛತ್ರಾಶ್ರಯದಲ್ಲಿ ಅದರ ಸೇವಕತ್ವದಿಂದಿದ್ದರೆ ಅದಕ್ಕೆ ಪರಿಣಾಮವಾಗುವುದೇ ಹೊರತು ಇಲ್ಲದಿದ್ದರೆ ಇಲ್ಲ" ಎಂಬುದೇ ಆಂಗ್ಲಸಿದ್ಧಾಂತವೆಂಬುದನ್ನು ಮಂತ್ರೀಶ್ವರರು ಸುಸ್ಪಷ್ಟಪಡಿಸಿದಂತಾಯಿತು. ಭರತಖಂಡದ ಹಣೆಯಬರಹವನ್ನು ಅನ್ಯಥಾ ಮಾಡಲು ಮಿ॥ ಲಾಯಿಡ್ ಜಾರ್ಜರು ನೂತನ ಬ್ರಹ್ಮರೇನೂ ಅಲ್ಲ. ಇದ್ದ ಸಂಗತಿಯನ್ನು ಮುಚ್ಚದೆ ಹೊರಬಿಚ್ಚಿಹಾಕಿದುದಕ್ಕಾಗಿ ಅವರು ವಂದ್ಯರೇ ಸರಿ. ಈ ಉಪನ್ಯಾಸದಿಂದ ಭಾರತಪ್ರಜೆಗಳು ತಂತಮ್ಮ ಮುಂದಣ ರಾಜಕೀಯ ಪ್ರಗತಿಯ ಮಾರ್ಗವು ಹೇಗಿರಬೇಕೆಂಬುದನ್ನು ನಿರ್ಧರಿಸಿಕೊಳ್ಳಲು ಚೆನ್ನಾಗಿ ಸಹಾಯವಾಯಿತೆಂಬುದಕ್ಕೆ ಸಂಶಯವಿಲ್ಲ.

ತುರ್ಕಿ ಸಮಸ್ಯೆ.

ಮುಖ್ಯಮಂತ್ರಿಯವರು ಕಾಮನ್ಸ್ ಸಭೆಯಲ್ಲಿ ತುರ್ಕಿ ಸಮಸ್ಯೆಯ ವಿಷಯವಾಗಿಯೂ ಒಂದುಪನ್ಯಾಸವನ್ನು ತಾ॥ ೪ ರಲ್ಲಿ ಮಾಡಿದರು. ಅದು ಕೂಡ ಮಹಮ್ಮದೀಯ ಪ್ರಪಂಚವನ್ನು ಆಶಾಭಂಗಕ್ಕೆ ಗುರಿಮಾಡಿ ಅವರಲ್ಲಿ ಅಸಂತೃಪ್ತಿಯನ್ನು ಹೆಚ್ಚಿಸುವುದಕ್ಕೆ ಸಾಧಕವಾಗಿದ್ದಿತೇ ಹೊರತು ಶಾಂತಿರಕ್ಷಣೆಗೆ ಸಾಧಕವಾಗಿರಲಿಲ್ಲವೆಂದು ಹೇಳಲು ವ್ಯಸನವಾಗುತ್ತದೆ. ಗ್ರೀಕ್ ತುರ್ಕಿಗಳಿಗೆ ಸಂಧಿಯನ್ನು ಕೂಡಲೇ ಮಾಡಿ ಸಮೀಪ ಪ್ರಾಚ್ಯ ಸಮಸ್ಯೆಯನ್ನು ಅನುಕೂಲವಾಗಿ ಪರಿಷ್ಕರಿಸಬೇಕೆಂದು ಸಭೆಯಲ್ಲಿ ಕೆಲ ಸಭಿಕರು ಚರ್ಚೆಗೆ ತಂದುದರ ಮೇಲೆ ಮುಖ್ಯಮಂತ್ರಿಯವರು ಅದಕ್ಕೆ ಪ್ರತ್ಯುತ್ತರವಾಗಿ ಮಾಡಿದ ಈ ಭಾಷಣದಲ್ಲಿ—"ನಾವು ಶಾಶ್ವತವೂ ನ್ಯಾಯವೂ ಆದ ಸಂಧಿಗಾಗಿಯೇ ಪ್ರಯತ್ನಿಸುತ್ತಿದ್ದೇವೆ. ಪ್ರಭುತ್ವದವರು ತಮ್ಮ ವಿಧಾನದಿಂದ ತುರ್ಕಿಯ ಮೈತ್ರಿಯನ್ನು ದೂರಮಾಡಿಕೊಳ್ಳುತ್ತಿದ್ದಾರೆಂದು ಕೆಲವರು ಈಗ ಆಕ್ಷೇಪಿಸಿದರು. ಕಳೆದ 8 ವರ್ಷಗಳ ಚರಿತ್ರೆಯನ್ನು ನೋಡಿದರೆ ಅದು ಅಸತ್ಯವೆಂದು ಗೊತ್ತಾಗುವುದು. ನಾವು ಸಾವು ಬದುಕಿನ ವಿಪನ್ನಸ್ಥಿತಿಯಲ್ಲಿದ್ದಾಗ, ಡಾರ್ಡಿನಲ್ಸ್ ಜಲಸಂಧಿಯನ್ನೂ ಬಾಸ್ಪರಸ್ ಸಮುದ್ರವನ್ನೂ ಕಪ್ಪು ಸಮುದ್ರವನ್ನೂ ಪ್ರವೇಶಿಸಬೇಕಾದುದು ನಮಗೆಷ್ಟೋ ಅವಶ್ಯಕವಾಗಿದ್ದಾಗ, ತುರ್ಕಿ ದೇಶವು ಅವಲಂಬಿಸಿದ ಚರ್ಯೆಯು ಎಂತಹದಾಗಿದ್ದಿತೆಂಬುದನ್ನು ಗಮನಿಸಬೇಕು. ಯಾವ ಎರಡು ದೇಶಗಳ ನಿರಂತರ ಸಹಾಯವಿಲ್ಲದಿದ್ದರೆ ತುರ್ಕಿದೇಶವು ಆ 1914ನೆ ವರ್ಷದಲ್ಲಿ ಬದುಕಿಕೊಳ್ಳಲಾರದಾಗಿದ್ದಿತೋ ಅಂಥ ದೇಶಗಳಿಗೆ ಪ್ರತಿಕೂಲವಾಗಿ ನಮ್ಮ ಮಿತ್ರದೇಶವಾದ ತುರ್ಕಿಯು ಡಾರ್ಡಿನಲ್ಸ್ ಜಲಸಂಧಿಯ ಬಾಗಿಲನ್ನು ಮುಚ್ಚಿಬಿಟ್ಟಿತು. ಹಿಂದೆ ಎಷ್ಟೋಸಲ ತುರ್ಕಿಯ ಮೇಲೆ ಇತರರು ಕತ್ತಿಕಟ್ಟಿದ್ದಾಗ ನಾವು ತುರ್ಕಿ ಪಕ್ಷವನ್ನು ವಹಿಸಿ ಅದರ ರಕ್ಷಣೆಯನ್ನು ಮಾಡಿರುವೆವು. 1878ನೆ ವರ್ಷದಲ್ಲಿ ತುರ್ಕಿಗೆ ಅತ್ಯಂತ ವಿನಾಶಕರವಾದ ಪರಾಜಯವು ಪ್ರಾಪ್ತವಾಗುವುದಕ್ಕಿದ್ದ ಸಂದರ್ಭದಲ್ಲಿ ಅದನ್ನು ಕಾಪಾಡುವುದಕ್ಕಾಗಿ ಆಂಗ್ಲ ಪ್ರಭುತ್ವವು ತನ್ನ ಸೈನ್ಯವನ್ನೆಲ್ಲಾ ಸಜ್ಜುಗೊಳಿಸಿತು. ಅದರ ಸ್ಮರಣೆಯಿಂದಲಾದರೂ 1914 ನೆ ವರ್ಷದಲ್ಲಿ ಇಂಗ್ಲೀಷ್ ಫ್ರಾನ್ಸ್ ದೇಶಗಳು ವಿಪತ್ತಿಗೀಡಾಗಿದ್ದ ಸಂದರ್ಭದೊಳಗೆ ತುರ್ಕಿಯು ಅವುಗಳಿಗೆ ಸಹಾಯಕವಾಗಿ ನಿಂತು ಪ್ರತ್ಯುಪಕಾರಮಾಡುವುದಕ್ಕೆ ಪ್ರತಿಯಾಗಿ ನಮ್ಮ ಶತ್ರುಗಳ ಪಕ್ಷಕ್ಕೆ ಸೇರಿ ನಮಗೆ ದೊಡ್ಡ ಅನರ್ಥವನ್ನುಂಟುಮಾಡಿತು. ತುರ್ಕಿಯು ಹಾಗೆ ಮಾಡಿದುದರಿಂದಲೇ ಯುದ್ಧವು ಇನ್ನೆರಡು ವರ್ಷಗಳ ಕಾಲ ಬೆಳೆಯಲು ಅವಕಾಶವಾಯಿತು. ಇನ್ನು ಗ್ರೀಕರು ಸ್ಮಿರ್ನಾವನ್ನು ಆಕ್ರಮಿಸಿಕೊಳ್ಳುವ ವಿಷಯದಲ್ಲೂ ಸೆವರ್ಸ್ ಸಂಧಿ ನಿಬಂಧನೆಗಳ ವಿಷಯದಲ್ಲೂ ಆಂಗ್ಲೇಯರು ಪ್ರೋದ್ಬಲ ಮಾಡಿದುದೇ ಕಾರಣವೆಂದು ಹೇಳುವ ವಾದವು ಕೂಡ ಸುಳ್ಳಾಗಿರುತ್ತದೆ. ಪ್ಯಾರಿಸ್ ಕಮಿಷನ್ನಿನವರ ಸೂಚನೆಯ ಪ್ರಕಾರ ಅವು ನಡೆದಿರುತ್ತವೆ. ನಾವು ಅದರಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಂಡಿರಲಿಲ್ಲ. ಸ್ಮಿರ್ನಾವೂ ಅದರ ಸುತ್ತುಮುತ್ತಣ ಪ್ರಾಂತಗಳೂ ಹೆಚ್ಚಾಗಿ ಗ್ರೀಕ್ ಪ್ರಜೆಗಳ ನಿವಾಸಸ್ಥಾನವಾಗಿರುವುದರಿಂದ ಅವು ಗ್ರೀಕರಿಗೆ ಸೇರಬೇಕೆಂದು ಪ್ಯಾರಿಸ್ ಕಮಿಷನ್ನಿನವರು ಮಾಡಿದ ನಿರ್ಣಯದಲ್ಲಿ ಆಂಗ್ಲೇಯರು ಯಾವ ಸಂಬಂಧವನ್ನೂ ಇಟ್ಟುಕೊಂಡಿರಲಿಲ್ಲ. ಅಮೇರಿಕನ್ನರೂ ಹಾಗೆಯೇ ಅಭಿಪ್ರಾಯಪಟ್ಟರು. ಕಾನ್‌ಸ್ಟಾಂಟೈನ್ ಪ್ರಭುವು ಮರಳಿ ಗ್ರೀಕ್ ಸಿಂಹಾಸನವನ್ನೇರಿದುದರಿಂದ ಗ್ರೀಕಿನ ಮೇಲೆ ಆಂಗ್ಲ ಫ್ರಾನ್ಸ್ ದೇಶಗಳಿಗೆ ಸ್ವಲ್ಪ ವಿಮುಖತೆಯುಂಟಾಗಲು ಸೆವರ್ಸ್ ಸಂಧಿ ನಿಬಂಧನೆಗಳಲ್ಲಿ ಸ್ವಲ್ಪ ಮಾರ್ಪನ್ನು ಮಾಡಬೇಕಾಯಿತು. ಅದಕ್ಕೆ ಅಂಗೋರಾ ಪ್ರಭುತ್ವದವರು ಒಪ್ಪಿಕೊಂಡಿದ್ದರೆ ಗ್ರೀಕರೂ ಒಪ್ಪಿಕೊಳ್ಳುತ್ತಿದ್ದರು. ಗ್ರೀಕರು ತಾವು ಹೊಸದಾಗಿ ಆಕ್ರಮಿಸಿಕೊಂಡಿರುವ ಸ್ಮಿರ್ನಾ ಪ್ರಾಂತದಿಂದ ಅವರ ಸೈನ್ಯಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳಬೇಕೆಂದು ಅಂಗೋರಾ ಪ್ರಭುತ್ವದವರು ಕೋರಿದರು. ಆದರೆ ಆ ಪ್ರದೇಶದಲ್ಲಿ ವಾಸವಾಗಿರುವ ೫ ಲಕ್ಷ ಗ್ರೀಕ್ ಪ್ರಜೆಗಳ ಸಂರಕ್ಷಣೆಯ ಭಾರವನ್ನು ನಾವು ವಹಿಸುವೆನೆಂಬ ವಿಷಯಕ್ಕೆ ಅವರು ಹೊಣೆಕೊಟ್ಟರೆ ನಾವು ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳುವೆವೆಂದು ಗ್ರೀಕ್ ಪ್ರಭುತ್ವದವರು ಕೊಟ್ಟ ಉತ್ತರವು ನ್ಯಾಯವಾಗಿಯೇ ಇದೆ. ಯುದ್ಧ ನಡೆದ ಪ್ರದೇಶದಲ್ಲಿ ಗ್ರೀಕ್ ಸೈನಿಕರು ಅನೇಕ ವಿಷಾದಕರವಾದ ದೌರ್ಜನ್ಯವನ್ನು ತುರ್ಕಿ ಪ್ರಜೆಗಳ ಮೇಲೆ ನಡೆಯಿಸಿದರು. ಆದರೆ ಶಾಂತಸಮಯದಲ್ಲಿ ತುರ್ಕಿಯವರು ಹೆಂಗುಸರು ಮಕ್ಕಳೆಂದು ನೋಡದೆ ಫಾಂಟಸ್ ಮೊದಲಾದ ಸ್ಥಲಗಳಲ್ಲಿದ್ದ ಗ್ರೀಕ್ ಪ್ರಜೆಗಳ ಮೇಲೆ ನಡೆಯಿಸಿದ ದೌರ್ಜನ್ಯದಷ್ಟು ಗ್ರೀಕರ ದೌರ್ಜನ್ಯವು ಕ್ರೂರವಾಗಿರಲಿಲ್ಲ. ಏಷ್ಯಾಮೈನರನ್ನು ಆರ್ಮೇನಿಯನ್ನರು ಪಾಲಿಸುವರೆಂದಿಟ್ಟುಕೊಂಡರೂ ಅವರು ಇದೇ ತೆರದ ದೌರ್ಜನ್ಯವನ್ನು ನಡೆಯಿಸಿದರೆ ಅವರ ವಿಷಯದಲ್ಲಿ ಆಗಲೂ ನಾವು ಹೀಗೆಯೇ ಪ್ರವರ್ತಿಸತಕ್ಕವರು. ಇವರು ಕ್ರೈಸ್ತರು ಇವರು ಮಹಮ್ಮದೀಯರು ಎಂಬ ಮತವಿವಕ್ಷೆಯಿಂದ ಪ್ರೇರಿತರಾಗಿ ನಾವು ಹೀಗೆ ಮಾಡುವುದಿಲ್ಲ, ಮಾನವ ಜಾತಿಯ ಹಿತಾರ್ಥವಾಗಿಯೇ ನಾವು ಹೀಗೆ ಮಾಡುತ್ತೇವೆ. ಕೆಲವು ಹೊಣೆಗಳನ್ನು ತೆಗೆದುಕೊಳ್ಳದೆ ನಾವು ಮಾನವ ಪ್ರಾಣಹಾನಿ ಮೊದಲಾದ ಎಷ್ಟೋ ದೌರ್ಜನ್ಯವನ್ನು ನಡೆಯಿಸಿರುವ ತುರ್ಕಿಯನ್ನು ಸುಮ್ಮನೆ ಬಿಟ್ಟುಬಿಡುವಂಥ ಸಂಧಿಗೆ ಎಂದಿಗೂ ಒಡಂಬಡಲಾರೆವು. ಸಂಧಿಗೆ ಒಪ್ಪದೆ ಬಹುಕಾಲ ಕಳೆದುಬಿಟ್ಟರೆ ತಾವು ಕೋರುವ ನಿಬಂಧನೆಗಳಿಗೆಲ್ಲಾ ಪ್ರತಿಪಕ್ಷದವರು ಒಪ್ಪಿಕೊಳ್ಳುವರೆಂದು ತುರುಕರು ತಿಳಿದುಕೊಂಡಿರುವುದು ತಪ್ಪು. ಹಾಗೆ ಅವರು ಮಾಡಿದರೆ ಇಂಗ್ಲೀಷರು ಮತ್ತೆ ಪ್ಯಾರಿಸ್ ನಿಬಂಧನೆಯನ್ನೇ ಸೂಚಿಸುವರು. ಯುದ್ಧವನ್ನು ಈಗ ನಿಲ್ಲಿಸಿಬಿಟ್ಟರೆ ಹೀಗೆ ಹೀಗೆ ಮಾಡಿಕೊಡುವೆನೆಂದು 1917ರಲ್ಲಿ ನಾವು ಒಂದು ಸೂಚನೆಯನ್ನು ತುರ್ಕಿಗೆ ಮಾಡಿದೆವು. ಅದಕ್ಕೊ ಒಪ್ಪದೆ ಸಂಪೂರ್ಣ ಪರಾಜಯವನ್ನು ಹೊಂದುವವರೆಗೂ ತುರ್ಕಿಯು ಹೋರಾಡಿತು. ಅದರಿಂದ ನಮ್ಮ ಸೈನಿಕರಲ್ಲಿ ಎಷ್ಟೋಮಂದಿ ಮಡಿದರು; ಲಕ್ಷಾಂತರ ಸವರನ್ನುಗಳ ನಷ್ಟವಾಯಿತು. ಗ್ರೀಕಿನ ಮೇಲೆ ಇಂಗ್ಲೀಷರು ಪಕ್ಷಪಾತವನ್ನು ವಹಿಸಿರುವರೆಂದು ಕೆಲರು ಆಕ್ಷೇಪಿಸುತ್ತಿರುವರು. ಇವರಿವರ ವಿಷಯದಲ್ಲಿ ಇತರರು ಪ್ರವೇಶವನ್ನಿಟ್ಟುಕೊಳ್ಳದೆ ಗ್ರೀಕನ್ನೊಂದನ್ನೇ ಸ್ವತಂತ್ರವಾಗಿ ಬಿಟ್ಟುಬಿಟ್ಟರೆ ಅದು ಕೆಲವು ಗಂಟೆಗಳೊಳಗೇ ಕಾನ್‌ಸ್ಟಾಂಟಿನೋಪಲನ್ನು ವಶಪಡಿಸಿಕೊಳ್ಳಬಲ್ಲುದು. ಆಗ ತುರ್ಕಿ ಸಮಸ್ಯೆಯು ಕೆಲವು ಗಂಟೆಗಳೊಳಗೇ ಪರಿಷ್ಕಾರ ಹೊಂದಿಹೋಗುವುದು. ಆದರೆ ಮಿತ್ರಮಂಡಲಿಯವರು ಕೈಹಾಕಿರುವುದರಿಂದಲೇ ಪರ್ಯವಸಾನವು ಹಾಗೆ ಆಗದೆ ಇದೆ. ಗ್ರೀಕರು ತಮ್ಮ ಸಂಪೂರ್ಣಬಲವನ್ನುಪಯೋಗಿಸಿ ತುರ್ಕಿಯ ಮೇಲೆ ಯುದ್ಧಮಾಡುವುದಕ್ಕೆ ನಾವು ಅಡ್ಡಿಪಡಿಸುತ್ತಿರುವೆವು; ಅಷ್ಟೇ. ಯಾವುದು ಹೇಗಾದರೂ ಏಷ್ಯಾಮೈನರಿನಲ್ಲಿರುವ ಕ್ರೈಸ್ತರ ಧನ ಪ್ರಾಣಗಳ ರಕ್ಷಣೆಗೆ ತಕ್ಕ ಹೊಣೆಯನ್ನು ಪಡೆದುಕೊಳ್ಳದ ಸಂಧಿಗೆ ನಾವೆಂದಿಗೂ ಒಪ್ಪುವವರಲ್ಲ. ಗ್ರೀಕೋ ತುರ್ಕಿಯ ಸಂಧಿಯು ಕುದುರಿಹೋಗುವಂತೆ ಮಾಡುವ ವಿಷಯದಲ್ಲಿ ಮಿತ್ರಮಂಡಲಿಯವರಿಗೂ ಆ ಪ್ರಭುತ್ವಗಳವರಿಗೂ ಈಗ ರಾಯಭಾರವು ನಡೆಯುತ್ತಿದೆ" ಎಂದು ಹೇಳಿದರು. ಮಂತ್ರಿವರ್ಯರ ಈ ಉಪನ್ಯಾಸವು ಪ್ರಪಂಚದ ಮೇಲಿರುವ ತುರುಷ್ಕ ಪ್ರಜೆಗಳಿಗೆಲ್ಲಾ ಅಸಮಾಧಾನವನ್ನು ಹೆಚ್ಚಿಸಿರುತ್ತದೆ; ಇದರಲ್ಲೂ ಗ್ರೀಕರನ್ನು ಉಬ್ಬೇರಿಸಿರುತ್ತದೆ. ಗ್ರೀಕ್‌ಪಕ್ಷವನ್ನೇ ಆಂಗ್ಲ ಮಂತ್ರಿಗಳು ವಹಿಸಿರುವರೆಂಬ ವಿಷಯವು ಸುಸ್ಪಷ್ಟವಾಗಿದೆಯೆಂದು ಅವರುಗಳು ಆಕ್ಷೇಪಿಸುತ್ತಿದ್ದಾರೆ. ಮುಖ್ಯವಾಗಿ ಲಾಯಿಡ್‌ಜಾರ್ಜ್‌ರವರ ಅಧಿಕಾರ ಕಾಲದಲ್ಲಿ ದೇಶಶಾಂತಿಗೆ ಸಾಧಕವಾಗುವಂತೆ ತುರ್ಕಿಸಮಸ್ಯೆಯು ಪರಿಷ್ಕರಿಸಲ್ಪಡುವುದೆಂಬ ಚಿಹ್ನೆಯು ತೋರುವುದಿಲ್ಲ. ಇದು ಆಂಗ್ಲ ಸಾಮ್ರಾಜ್ಯದ ದುರದೃಷ್ಟವೋ, ತುರ್ಕಿಯ ಪಾಪಶೇಷವೋ ಗೊತ್ತಾಗುವುದಿಲ್ಲ.

ಈಗ ಅಂಗೋರಾ ಪ್ರಭುತ್ವದ ವಿದೇಶ ಮಂತ್ರಿಯಾದ ಪತೇಬೆಯವರು ಲಂಡನ್ನಿಗೆ ಹೋಗಿದ್ದಾರೆ. ಸಂಧಿ ವಿಷಯವಾಗಿ ಆಂಗ್ಲಮಂತ್ರಿಗಳೊಡನೆ ಚರ್ಚಿಸುವುದೇ ಅವರ ಉದ್ದೇಶವಾಗಿದೆ. ಆರೋಗ್ಯಾರ್ಥವಾಗಿ ಸ್ಕಾಟ್ಲಂಡಿಗೆ ಹೋಗಿರುವ ಲಾರ್ಡ್‌ಕರ್ಜನರು ಬಂದ ಕೂಡಲೇ ಇವರ ರಾಯಭಾರವು ನಡೆಯುವುದಾಗಿದ್ದಿತು. ಈ ಮಧ್ಯೆ ಆಂಗ್ಲೋ ಒಟ್ಟೋಮಾನ್ ಸಂಘದವರು ಒಂದು ಮಹಜರನ್ನು ಮಾಡಿ ಮುಖ್ಯಮಂತ್ರಿಗಳಿಗೆ ಕಳುಹಿಸಿರುವರು. ಅದಕ್ಕೆ ಲಾರ್ಡ್ ಚಲಮ್ಸ್‌ಫರ್ಡ್ ಲಾರ್ಡ್ ಲ್ಯಾಮಿಂಗ್ಟನ್, ಲಾರ್ಡ್‌ಗ್ಲೆಂಚ್, ಕಮ್ಯಾಂಡರ್ ಕೆನ್ವರ್ದಿ, ಬೆನ್‌ಸ್ಟೂರ್, ಅಮೀರಾಲಿ, ಮೊದಲಾದ ಪ್ರಮುಖರನೇಕರು ಹಸ್ತಾಕ್ಷರವನ್ನು ಹಾಕಿರುವರು. ಅದರಲ್ಲಿ ಕಾಣಿಸಿರುವ ಅಭಿಪ್ರಾಯವೇನೆಂದರೆ—"ಏಷ್ಯಾಮೈನರೂ ಸ್ಮಿರ್ನಾವೂ ತುರ್ಕಿಸುಲ್ತಾನ್ ಅಧಿಪತ್ಯಕ್ಕೊಳಪಟ್ಟಿರಬೇಕು. ಜಾತೀಯ ಸಮಿತಿಯವರು ಕೆಲವು ಸಾಯುಧ ಸೈನಿಕರನ್ನು ದೇಶರಕ್ಷಣಾರ್ಥವಾಗಿ ಅಲ್ಲಿಟ್ಟಿರಬಹುದು. ಆದರೆ ಈಯಧಿಕಾರವು ತಟಸ್ಥವಾಗಿರಬೇಕು. ಪೂರ್ವಥ್ರೇಸನ್ನೂ ಆದ್ರಿಯಾನೋಪಲನ್ನೂ ತುರ್ಕಿಗೆ ಬಿಟ್ಟುಬಿಡಬೇಕು. ಪಶ್ಚಿಮಥ್ರೇಸನ್ನು ಜಾತೀಯ ಸಮಿತಿಯ ಅಧಿಕಾರದ ಕೆಳಗೆ ಸ್ವತಂತ್ರ ಪ್ರಭುತ್ವವುಳ್ಳದನ್ನಾಗಿ ಮಾಡಬೇಕು. ಬಲ್ಗೇರಿಯಾವಿಗೆ ಈಜಿಯನ್ ಸಮುದ್ರಕ್ಕೆ ರಹದಾರಿಕೊಡುತ್ತೇವೆಂದು ಮಾಡಿದ್ದ ವಾಗ್ದಾನವನ್ನು ನೆರವೇರಿಸಿಕೊಡಬೇಕು. ಗ್ರೀಕು ತುರ್ಕಿ ಎಲ್ಲೆಕಟ್ಟುಗಳು ಕೂಡಿರಕೂಡದು. ಡಾರ್ಡಿನೆಲ್ಸ್ ಜಲಸಂಧಿಯನ್ನು ಮಿತ್ರಮಂಡಲೀವಶದಲ್ಲಿಡುವುದರಿಂದ ಪ್ರಪಂಚಶಾಂತಿಯು ಸಂಭವಿಸಲಾರದೆಂಬುದು ನಮ್ಮ ನಂಬುಗೆಯು. ಈಗಿರುವ ನಿಬಂಧನೆಯ ಪ್ರಕಾರವೇ ಡಾರ್ಡಿನೆಲ್ಸ್ ಸಂಧಿಯನ್ನಿಡುವುದಾದರೆ ಗ್ರೀಕರ ಅಥವಾ ಇನ್ನಾವುದಾದರೂ ನೌಕಾಬಲಸಂಪನ್ನವಾದ ರಾಜ್ಯದ ಮುತ್ತಿಗೆಯಿಂದ ಕಾನ್‌ಸ್ಟಾಂಟಿನೋಪಲನ್ನು ರಕ್ಷಿಸುವುದು ಅಸಾಧ್ಯವು. ಡಾರ್ಡಿನೆಲ್ಸನ್ನು ತುರ್ಕಿ ಸಾಮ್ರಾಜ್ಯದ ಅಧೀನಗೊಳಿಸದೆ ಹೋದರೆ, ಕಾನ್‌ಸ್ಟಾಂಟಿನೋಪಲ್ಲಿನ ರಕ್ಷಣೆಯ ಹೊಣೆಯ ಮೇಲೆ ಅದನ್ನು ಜಾತೀಯಸಮಿತಿಯ ಅಧೀನದಲ್ಲಿಡಬೇಕು. ಆದರೆ ಆ ಸಮಿತಿಯಲ್ಲಿ ತುರ್ಕಿಗೂ ಪ್ರಾತಿನಿಧ್ಯವಿರಬೇಕು." ಈ ಪ್ರಕಾರವಾದ ಮಹಜರಿಗೆ ಏನು ಫಲವುಂಟಾಗುವುದೋ ಮುಂದೆ ನೋಡಬೇಕು. ಸರ್ ಚಾರಲ್ಸ್ ಟೌನ್ಷೆಂಡ್‌ರವರು ಅಂಗೋರಾಕ್ಕೆ ಹೋಗಿದ್ದು ಕೇಮಲ್‌ಪಾಷಾರವರೊಡನೆ ಮಾತನಾಡಿಕೊಂಡು ಅಲ್ಲಿಯ ಪರಿಸ್ಥಿತಿಯನ್ನೆಲ್ಲಾ ತಿಳಿದುಕೊಂಡು ಹಿಂದಿರಿಗಿ ಬಂದರು. ಗ್ರೀಕರು ಏಷ್ಯಾಮೈನರನ್ನು ಬಿಟ್ಟುಹೋದರೆ ತಾನು ಸಂಧಿ ಪತ್ರಕ್ಕೆ ರುಜುಹಾಕುವೆನೆಂದು ಕೇಮಲ್ ಪಾಷಾರವರು ಹೇಳಿದರೆಂದೂ, ಹಾಗೆ ಆಗದೆ ಹೋದರೆ ಏಷ್ಯಾಮೈನರು, ಈಜಿಪ್ಟು, ಭರತಖಂಡ—ಇವುಗಳಲ್ಲಿರುವ ಮಹಮ್ಮದೀಯರನ್ನೆಲ್ಲಾ ಮತಯುದ್ಧಕ್ಕೆ ಸಾರಿ ಎಬ್ಬಿಸುವೆನೆಂದು ಬೆದರಿಕೆ ಹಾಕಿರುವರೆಂದೂ ಸಹ ಹೇಳಿರುವರು. ಇದು ಎಷ್ಟುಮಟ್ಟಿಗೆ ನಿಜವೋ ಕೇಮಲ್‌ಪಾಷಾರವರ ಉದ್ದೇಶವು ಎಷ್ಟುಮಟ್ಟಿಗೆ ಸಾರ್ಥಕವಾಗುವುದೋ ಹೇಳಲಾಗುವುದಿಲ್ಲವಾದರೂ ಅಂಥ ವಿಷಮಸ್ಥಿತಿಯು ಪ್ರಪಂಚಕ್ಕೆ ಒದಗದಂತೆ ಮಾಡಲು ಜಗದೀಶ್ವರನು ಮಿತ್ರಮಂಡಲಿಗೆ ಮುಖ್ಯವಾಗಿ ಆಂಗ್ಲ ಪ್ರಭುತ್ವದವರಿಗೆ ತುರ್ಕಿ ಸಮಸ್ಯೆಯ ಪರಿಷ್ಕಾರ ವಿಷಯದಲ್ಲಿ ಈಗ ಹಿಡಿದಿರುವ ಪಟ್ಟನ್ನೇ ಹಿಡಿಯದೆ ಉದಾರ ಭಾವವನ್ನು ತೋರಿಸುವಂತೆ ಪ್ರೇರೇಪಿಸಲೆಂದು ಕೋರುವೆವು.

GREETINGS IN THE CHIEF COURT.

The public would not have failed to notice the rather amusing sentiments to which Mr. Justice B. Subbanna gave expression in his reply to the welcome given to him on behalf of the Bar on the day he took seat on the Chief Court Bench. We surely do not deny certain human frailties to men even in Mr. Subbanna's position. But it is certainly not edifying for one in his position to say "the ambition of my existence was always to sit on this Bench" and that it was the dream of his life, nor is it setting a very high example to the members of the Bar with whom he fraternises so much. To sit on the Bench is surely not an end in itself and some higher ideal must actuate one to seek any place in service and more so on the Chief Court Bench. We always thought that it is the zeal to serve others through whatever channel that should primarily actuate a person in position—official or non-official—and the dream if anything should be not to secure a place for oneself but an opportunity or field to help one's fellowmen. While in the rest of India men are seeking independence and are not over anxious to join service it was not very happy on the part of Mr. Subbanna to have upheld getting a place on the Bench as the dream of his life. It looks a very poor dream indeed! Nor was it quite in place on the part of the Chief Judge to have emphasised the scholastic friendship with Mr. Subbanna in the Law College and for Mr. Subbanna to return the compliments to the Chief Judge holding him up as an ideal person to serve with. Such an attitude of open mutual admiration would affect the independence which each judge of the Chief Court has to maintain in order to administer justice which is what the peop

want from them. The attitude that was exhibited that day will certainly shake the confidence of the public in the Chief Court and it would not be without justification if they suspect that the desire to keep in the good graces of the authority would override the sense of independent judgment-a condition which ought to be avoided. We need hardly point out that the capacity to deal out justice without fear or favour according to one's judgment without allowing it to get cramped or warped is the primary qualification that should count in seeking a place in the Chief Court and not any dream.

ಸ್ವದೇಶದ ವೃತ್ತಾಂತಗಳು

ಮೈಸೂರು ನಿಯಮನಿರ್ಮಾಣ ಸಭೆಯು ಬರುವ ಸೆಪ್ಟಂಬರ್ ತಾ|| 18ರಲ್ಲಿ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆಯುವುದು.

ಗೌರ್ನಮೆಂಟ್ ಚೀಫ್ ಸೆಕ್ರೆಟರಿ ಮಿ|| ಕೆ. ಮ್ಯಾಥ್ಯೂ. ಬಿ.ಎ., ಯವರು ಈ ತಾ|| 16 ರಿಂದ 18 ದಿನಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುತ್ತಾರೆ.

ರಾಜಧಾನಿಯಲ್ಲಿ ಪ್ರತಿದಿನದಲ್ಲೂ ಹಗಲುವೇಳೆ ಮೋಡ ಮುಸುಕಿಕೊಂಡು ನಾಲ್ಕಾರು ಹನಿಗಳು ಮಾತ್ರ ಉದುರಿ ರಾತ್ರಿವೇಳೆಯಲ್ಲಿ ಆಕಾಶವು ನಿರ್ಮಲವಾಗುತ್ತಿದೆ. ರೈತರು ಮಳೆಯು ಬಾರದುದರಿಂದ ಭಯಗ್ರಸ್ತರಾಗಿದ್ದಾರೆ. ಆಹಾರ್ಯ ಪದಾರ್ಥಗಳ ಬೆಲೆಯು ಏರುತ್ತಿದೆ. ಜನರಿಗೆ ನೆಗಡಿ, ಕೆಮ್ಮಲು ಹೆಚ್ಚಾಗಿದೆ.

ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿ ಗುತ್ತಲು ಗ್ರಾಮದಲ್ಲಿ ಮಂಡ್ಯ, ಮಳವಳ್ಳಿ, ಮದ್ದೂರು, ಚಿಕ್ಕರೆ, ಕೆಟ್ಟಹಳ್ಳಿ, ಮಕ್ಕಂದ ಮೊದಲಾದ ಸ್ಥಳಗಳ ವೀರಶೈವರು ಗುತ್ತಲು ಮಠದ ಪಟ್ಟದ ವೇ|| ಚಂದ್ರಶೇಖರಸ್ವಾಮಿಗಳ ಅಧ್ಯಕ್ಷತೆಯಲ್ಲೂ, ತುಮಕೂರಿನ ವೀರಶೈವ ಮಹಾಜನರು ಶ್ರೀ ಮುರುಘಾಮಠದಲ್ಲಿ ಪ್ಲೀಡರ್ ಮ|| ಗುರುಸಂಗಾರ್ಯರ ಅಧ್ಯಕ್ಷತೆಯಲ್ಲೂ, ಬೆಂಗಳೂರು ಡಿ|| ನೆಲಮಂಗಲದ ತಾ|| ತ್ಯಾಮಗೊಂಡ್ಲಿನ ವೀರಶೈವ ನಿವಾಸಿಗಳು ಪ್ರಜಾಪ್ರತಿನಿಧಿಸಭಾಮೆಂಬರರಾದ ಮ|| ಯಜಮಾನ್ ಜವಳಿ ಹುಚ್ಚಪ್ಪನವರ ಅಧ್ಯಕ್ಷತೆಯಲ್ಲೂ ಸಭೆಗಳನ್ನು ನಡೆಯಿಸಿ ಬೆಂಗಳೂರು ಮೈಸೂರು ಸಂಸ್ಕೃತ ಕಾಲೇಜುಗಳಿಗೆ ಬ್ರಾಹ್ಮಣೇತರರನ್ನು ಸೇರಿಸಬಾರದೆಂಬ ಬಗ್ಗೆ ಕಮಿಟಿಯವರು ಕೊಟ್ಟಿರುವ ಅಭಿಪ್ರಾಯವನ್ನು ಖಂಡಿಸಿ ವೀರಶೈವರನ್ನು ಸೇರಿಸಿಕೊಳ್ಳಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ನಿರ್ಧಾರವನ್ನು ಮಾಡಿ ಚೀಫ್ ಸೆಕ್ರೆಟರಿಯವರಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ.

ಪ್ರಸಿದ್ಧ ಪುರುಷರ ಮರಣಗಳು.

ಕಳೆದವಾರ ಕೆಲ ಮಹಾಪುರುಷರ ದುಃಖಕರ ಮರಣವಾರ್ತೆಗಳು ಬಂದಿರುತ್ತವೆ. ಹಾಗೆ ಮೃತರಾದವರಲ್ಲಿ ಲಾರ್ಡ್ ನಾರ್ತ್‌ಕ್ಲಿಫ್‌ರವರು ಒಬ್ಬರು. ಇವರು ವೃತ್ತಪತ್ರಿಕೆಗಳ ದೊರೆಯೆನ್ನಿಸಿಕೊಳ್ಳುತ್ತಿದ್ದರು. ಆಂಗ್ಲ ದೇಶದಲ್ಲಿ ಪ್ರಸಿದ್ಧಗಳಾದ ಅನೇಕ ವೃತ್ತಪತ್ರಿಕೆಗಳಿಗೆ ಇವರ ಸಂಬಂಧವಿದ್ದಿತು. 1896 ನೆ ವರ್ಷದಲ್ಲಿ ಇವರಿಂದ ಸ್ಥಾಪಿತವಾಗಿ ನಡೆದುಕೊಂಡು ಬರುತ್ತಿರುವ "ಡೇಲಿ ಮೆಯಿಲ್" ಎಂಬ ಪತ್ರಿಕೆಗೆ 13½ ಲಕ್ಷ ಮಂದಿ ವರ್ಗಣೆದಾರರಿರುವರೆನ್ನುವಾಗ ಅವರ ಪ್ರತಿಭೆಯು ಎಷ್ಟು ಅಗಾಧವಾದುದೆಂಬುದನ್ನು ಊಹಿಸಿಕೊಳ್ಳಬಹುದು. ಮತ್ತು ಲಂಡನ್ ಟೈಮ್ಸ್ ಪತ್ರಿಕೆಗೂ ಕೂಡ ಇವರು ವ್ಯವಸ್ಥಾಪಕರಾಗಿದ್ದರು. ಜಗತ್ತಿನಲ್ಲಿ ಪತ್ರಿಕೆಗಳು ಎಷ್ಟು ಅಘಟಿತಘಟನ ಸಾಮರ್ಥ್ಯವುಳ್ಳವುಗಳೆಂಬುದನ್ನು ಇವರು ಪ್ರಪಂಚದ ನಿದರ್ಶನಕ್ಕೆ ತಂದುಕೊಟ್ಟಿದ್ದರು. ಯುದ್ಧಸಮಯದಲ್ಲಿ ಆಂಗ್ಲ ಮಂತ್ರಿಪದವಿಯಲ್ಲಿದ್ದ ಆಸ್ಕ್ವಿತ್‌ರವರ ನೀರಸಕಾರ್ಯಭಾರದಿಂದ ಆಂಗ್ಲದೇಶದ ವಿಜಯಕ್ಕೆ ಸೂಚಕವಾದ ಚಿಹ್ನೆಗಳು ತೋರದೆ ಇರಲು, ಆಗ ಅವರನ್ನು ಮಂತ್ರಿಪದವಿಯಿಂದ ನಿವೃತ್ತಿಗೊಳಿಸಲು ಇವರ ಪತ್ರಿಕೆಗಳು ಬೇಕಾದಷ್ಟು ಆಂದೋಳನವನ್ನು ನಡೆಯಿಸಿದುವು. ಅದರ ಫಲವಾಗಿಯೇ ಈಗಣ ಲಾಯಿಡ್ ಜಾರ್ಜ್ ಮಂತ್ರಿತ್ವವು ಏರ್ಪಟ್ಟಿತು. ಇಂಥ ಚಳವಳವನ್ನು ಇವರ ಪತ್ರಿಕೆಗಳು ಎಷ್ಟೋಸಲ ನಡೆಯಿಸಿರುವುವು. ಶತ್ರುದೇಶಗಳಲ್ಲಿ ಆಂಗ್ಲಪ್ರಭುತ್ವದ ಮೇಲೆ ಅನುಕೂಲಾಭಿಪ್ರಾಯವುಂಟಾಗುವಂತೆ ಮಾಡಲು ನಿಯುಕ್ತವಾಗಿದ್ದ ಪ್ರಚಾರಕ ಸಂಘಕ್ಕೆ ಇವರು ಅಧ್ಯಕ್ಷರಾಗಿ ಮಾಡಲ್ಪಟ್ಟಿದ್ದರು. ಮತ್ತು ಯುದ್ಧಕಾಲದಲ್ಲಿ ಅಮೇರಿಕಾ ಸಂಯುಕ್ತರಾಷ್ಟ್ರಗಳಿಗೆ ಕಳುಹಿಸಲ್ಪಟ್ಟಿದ್ದ ಯುದ್ಧಸಂಘಕ್ಕೆ ಇವರು ಅಧ್ಯಕ್ಷರಾಗಿದ್ದರು. ಇವರ ಪ್ರಯತ್ನದಿಂದಲೇ ಅಮೇರಿಕಾವು ಮಿತ್ರಮಂಡಲೀ ಪಕ್ಷಕ್ಕೆ ಸೇರಿ ಯುದ್ಧಕ್ಕೆ ದುಮುಕುವಂತಾಯಿತು. 1917ನೆ ವರ್ಷದಲ್ಲಿ ಇವರು ಲಾರ್ಡ್ ಪದವಿಗೇರಿಸಲ್ಪಟ್ಟರು. ಆಂಗ್ಲಸಾಮ್ರಾಜ್ಯದ ದೇಶಗಳನ್ನೆಲ್ಲಾ ಇವರು ಪ್ರತ್ಯಕ್ಷವಾಗಿ ಅವಲೋಕಿಸಿದ್ದರು. ಕಳೆದವರ್ಷ ನಮ್ಮ ಭರತಖಂಡಕ್ಕೂ ಜಪಾನ್ ಮೊದಲಾದ ಪೂರ್ವದೇಶಗಳಿಗೂ ಬಂದು ಹೋಗಿದ್ದರು. ತುರ್ಕಿಗೆ ನ್ಯಾಯವಾದ ಸಂಧಿಯನ್ನು ಮಾಡಿಕೊಟ್ಟು ಭರತಖಂಡದ ಮಹಮ್ಮದೀಯರನ್ನು ಸಂತೃಪ್ತಿಪಡಿಸಿದಲ್ಲದೆ ಶಾಂತಿಸ್ಥಾಪನವಾಗಲಾರದೆಂಬುದು ಇವರ ಅಭಿಪ್ರಾಯವಾಗಿದ್ದಿತು. ತುರ್ಕಿ ಸಮಸ್ಯೆಯು ಬಗೆಹರಿಯುವವರೆಗಾದರೂ ಇವರು ಉಳಿದಿದ್ದರೆ ಚೆನ್ನಾಗಿರುತ್ತಿದ್ದಿತು. ಅಂತ್ಯಕಾಲದಲ್ಲಿ ಇವರಿಗೆ 57 ವರ್ಷ ವಯಸ್ಸು. ಈ ಮಹನೀಯರು ಕೆಲದಿನಗಳಿಂದ ಅಸ್ವಸ್ಥರಾಗಿದ್ದು ಕಳೆದ ಸೋಮವಾರ ವಿಧಿವಶರಾದರು.

ಇನ್ನೊಬ್ಬರು ಈಗಣ ಐರ್ಲೆಂಡ್ ಪ್ರಭುತ್ವಕ್ಕೆ ಅಧ್ಯಕ್ಷರಾಗಿದ್ದ ಸರ್ ಆರ್ಥರ್ ಗ್ರಿಫಿತ್‌ರವರು. ಇವರು ಸಣ್ಣತನದಿಂದ ಮಹಾಪದವಿಗೇರಿದವರು. ಐರ್ಲೆಂಡಿನಲ್ಲಿ ಒಬ್ಬ ಕಂಪಾಜಿಟರ ಮಗನಾಗಿ ಹುಟ್ಟಿದ ಇವರು ಡಬ್ಲಿನ್‌ಪಟ್ಟಣದಲ್ಲಿ ಒಂದು ವೃತ್ತಪತ್ರಿಕಾ ಮುದ್ರಣಾಲಯದ ಕೆಲಸದಲ್ಲಿ ಕೆಲಕಾಲವಿದ್ದು, ಅಲ್ಲಿಂದ ದಕ್ಷಿಣಾಫ್ರಿಕಾಕ್ಕೆ ಹೋಗಿದ್ದು ಮರಳಿ ಐರ್ಲೆಂಡಿಗೆ ಬಂದು "ಯುನೈಟೆಡ್ ಐರಿಷ್‌ಮನ್" ಎಂಬ ವೃತ್ತಪತ್ರಿಕೆಯನ್ನು ಸ್ಥಾಪಿಸಿದರು. ಮತ್ತು ಅಲ್ಲಿಯ ಸಿನ್‌ಫಿನಿಯನ್ ಉದ್ಯಮಕ್ಕೆ ಸ್ಥಾಪಕರಾಗಿ, ತನ್ನ ಜೀವಿತಕಾಲವನ್ನೆಲ್ಲಾ ಆ ಉದ್ಯಮಕ್ಕೇ ವಿನಿಯೋಗಿಸಿದರು. ಈ ಪ್ರಯತ್ನದಲ್ಲಿ ಎಷ್ಟೋಸಲ ಇವರು ಕಾರಾಗೃಹ ನಿರ್ಬಂಧವನ್ನು ಅನುಭವಿಸಿ ಬಂದರು. ಇವರ ಸ್ವದೇಶಸೇವಾಧುರಂಧರತೆಯ ಪ್ರಭಾವವೇ ಈಗಣ ಐರ್ಲೆಂಡ್ ಸ್ವತಂತ್ರ ಪ್ರಭುತ್ವಪ್ರಾಪ್ತಿಗೆ ಎಷ್ಟೋಮಟ್ಟಿಗೆ ಕಾರಣವಾಗಿದ್ದಿತು. 1918ನೆ ವರ್ಷದಲ್ಲಿ ಇವರು ಸಿನ್‌ಫಿನಿಯನ್ ಪ್ರಮುಖತ್ವವನ್ನು ತ್ಯಜಿಸಿ, ಡಿ. ವೆಲರಾರವರಿಗೆ ವಹಿಸಿ, ಈಗಣ ಪ್ರಭುತ್ವವಿಷಯಕವಾದ ಸಂಧಿರಾಯಭಾರದಲ್ಲಿ ಸೇರಿ, ಆ ಸಂಧಿಪತ್ರಕ್ಕೆ ರುಜು ಹಾಕಿದವರಲ್ಲಿ ಇವರೂ ಒಬ್ಬರಾಗಿದ್ದರು. ಇವರು 10 ದಿನಗಳಕಾಲ ಇನ್‌ಫ್ಲುಯಂಜಾ ವ್ಯಾಧಿಪೀಡಿತರಾಗಿದ್ದು, ಗಂಟಲಲ್ಲಿ ಬೆಳೆದಿದ್ದ ದುರ್ಮಾಂಸಕ್ಕೆ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡು ನೆಮ್ಮದಿಯಾಗಿ ಬರುತ್ತಿದ್ದಾಗ ವೈದ್ಯಶಾಲೆಯನ್ನು ನೋಡುವುದಕ್ಕೆ ಹೋಗಿ ಮೆಟ್ಟಿಲನ್ನು ಇಳಿಯುವಾಗ ಮುಗ್ಗರಿಸಿ ಬಿದ್ದು ಮೂರ್ಛೆಗೊಂಡು ಸ್ವಲ್ಪಕಾಲದೊಳಗೇ ದೇಹವನ್ನು ಬಿಟ್ಟರು. ಐರ್ಲೆಂಡಿನ ಪ್ರಕೃತ ದುರವಸ್ಥೆಯನ್ನು ಕಂಡು ಇವರಿಗೆ ಉಂಟಾಗಿದ್ದ ಮನೋವ್ಯಥೆಯು ಸಹ ಇವರ ನೀರಸಸ್ಥಿತಿಗೂ ಅಕಾಲಮರಣಕ್ಕೂ ಅನೇಕಾಂಶದಿಂದ ಕಾರಣವಾಯಿತೆಂದು ಭಾವಿಸಲ್ಪಟ್ಟಿದೆ. ಇವರ ಮರಣವಾರ್ತೆಯು ಲಂಡನ್‌ಪಟ್ಟಣಕ್ಕೆ ಮುಟ್ಟಿದ ಕೂಡಲೇ ಮಹಾವಿಚಾರವುಂಟಾಯಿತು. ಬ್ರಿಟನ್ ಪಕ್ಷವಾಗಿ ಮುಖ್ಯಮಂತ್ರಿಯವರು ಸಾನುತಾಪ ತಂತ್ರೀವಾರ್ತೆಯನ್ನು ಕಳುಹಿಸಿ, ಅದರಲ್ಲಿ ಗ್ರಿಫಿತ್‌ರವರ ದೇಶಭಕ್ತಿ ಧೈರ್ಯಸ್ಥೈರ್ಯಾದಿಗಳನ್ನು ಕೊಂಡಾಡಿರುವರು. ಡಬ್ಲಿನ್‌ಪಟ್ಟಣದಲ್ಲೆಲ್ಲಾ ದುಃಖಚಿಹ್ನೆಯು ಪ್ರದರ್ಶಿಸಲ್ಪಟ್ಟಿತು.

ನಮ್ಮ ಭಾರತ ಮಹನೀಯರಲ್ಲಿ ದಿವಾನ್‌ಬಹದ್ದೂರ್ ಕರುಣಾಕರಮೆನನ್ ಬಿ.ಎ. ರವರು ಕಳೆದ ತಾ|| 11ರ ರಾತ್ರಿ ಮಲಬಾರಿಗೆ ಸೇರಿದ ಪರಪನಗುಡಿಯಲ್ಲೂ, ಸರ್ ವಿಠಲದಾಸ ಥಾಕರ್ಸೆಯವರು ಕಳೆದ ತಾ|| 12 ರ ಮಧ್ಯಾಹ್ನ ಬೊಂಬಾಯಿಯಲ್ಲಿರುವ ತಮ್ಮ ಭವನದಲ್ಲೂ ವಿಧಿವಶರಾದರು. ಇವರಿಬ್ಬರಲ್ಲಿ ಮೊದಲನೆಯವರು ಮೊಟ್ಟಮೊದಲು ಮದ್ರಾಸ್ ಹಿಂದೂಪತ್ರಿಕೆಯು ಕೈ. ಜಿ. ಸುಬ್ರಹ್ಮಣ್ಯಯ್ಯರ ಯಾಜಮಾನ್ಯದಿಂದ ನಡೆಯುತ್ತಿದ್ದಾಗ ಅದರ ಸಂಪಾದಕವರ್ಗದಲ್ಲಿ ಸೇರಿ ಕೆಲಸಮಾಡುತ್ತಿದ್ದು ಬಳಿಕ ಅದರ ಮುಖ್ಯಸಂಪಾದಕರಾಗಿಯೂ "ಮದರಾಸ್‌ರಿವ್ಯೂ" ಎಂಬ ತ್ರೈಮಾಸಿಕ ಪತ್ರಿಕೆಗೂ ಕೂಡ ಸಂಪಾದಕರಾಗಿಯೂ ಬಹುಕಾಲ ಕೆಲಸಮಾಡಿ, ಕಡೆಗೆ "ಇಂಡಿಯನ್ ಪೇಟ್ರಿಯಟ್" ಎಂಬ ದೈನಿಕಪತ್ರಿಕೆಯನ್ನು ಪ್ರಾರಂಭಿಸಿ ಕಳೆದ 12 ವರ್ಷಗಳಿಂದಲೂ ಒಳ್ಳೆಯ ಸಾಮರ್ಥ್ಯದಿಂದ ನಡೆಯಿಸಿಕೊಂಡು ಬರುತ್ತಿದ್ದರು. ದೇಹಾರೋಗ್ಯವು ಕ್ಷೀಣಿಸುತ್ತ ಬಂದುದರಿಂದ ಸ್ವಲ್ಪಕಾಲದ ಹಿಂದೆ ಆ ಉದ್ಯೋಗದಿಂದ ವಿರಾಮವನ್ನು ಹೊಂದಿದ್ದರು. ಮದ್ರಾಸು ಅಧಿಪತ್ಯದ ಪತ್ರಿಕಾಸಂಪಾದಕವರ್ಗದಲ್ಲಿ ಇವರು ಅತಿ ಪ್ರಾಚೀನರೂ ವಿಖ್ಯಾತಿವಂತರೂ ಆಗಿದ್ದರು.

2 ನೆಯ ಸರ್ ಥಾಕರ್ಸೆಯವರು ವಾಣಿಜ್ಯ ವಿಷಯದಲ್ಲೂ, ಆರ್ಥಿಕಶಾಸ್ತ್ರದಲ್ಲೂ ತುಂಬಾ ಅನುಭವವುಳ್ಳವರೂ ದಾನಶೂರರೂ ಆಗಿದ್ದರು. ಯಂತ್ರಾಲಯಾಧಿಪತಿಗಳ ಪಕ್ಷದಿಂದ ಸಾಮ್ರಾಜ್ಯಶಾಸನ ಸಭೆಯಲ್ಲಿ ಸಭಿಕರಾಗಿದ್ದರು. ತಮ್ಮ ಆರೋಗ್ಯವು ಕುಂದಿದುದರಿಂದ 1 ತಿಂಗಳ ಕೆಳಗೆ ಆ ಪದವಿಗೆ ರಾಜೀನಾಮೆ ಕೊಟ್ಟರು. ಇವರ ಗೌರವಾರ್ಥವಾಗಿ ಇಂಡಿಯನ್ ಕಾಮರ್ಸ್ ಚೇಂಬರ್ಸ್‌ರವರೂ ಉಳಿದ ವರ್ತಕಸಂಘಗಳವರೂ ಸಹ ತಮ್ಮ ಕಾರ್ಯಾಲಯಗಳನ್ನು ಒಂದುದಿವಸ ಮುಚ್ಚಿ ಸಾನುತಾಪವನ್ನು ಪ್ರದರ್ಶಿಸಿದರು.

ಮಹಾರಾಷ್ಟ್ರ ನಾಯಕರ ಒಲೆಮೊಗ.

ಸ್ವ|| ತಿಲಕರ ಕಾಲದಲ್ಲಿ ಸೂರತ್ತಿನೊಳಗೆ ಕೂಡಿದ್ದ ರಾಷ್ಟ್ರೀಯ ಮಹಾಸಭೆಯು ಮಹಾರಾಷ್ಟ್ರ ಪ್ರಮುಖರ ಹಠದಿಂದಲೇ ರಸಾಭಾಸಗೊಂಡು ರಾಜಕೀಯ ವಾದಿಗಳಲ್ಲಿ ಎರಡು ಪಕ್ಷಗಳು ಹುಟ್ಟಿ ತಿಲಕರ ಪಕ್ಷದ ಉಗ್ರವಾದಿಗಳು ಮಹಾಸಭೆಯ ಸಂಬಂಧವನ್ನೇ ಕಳೆದುಕೊಂಡಿದ್ದರು. ಎಷ್ಟೋ ಕಾಲದಮೇಲೆ ಅನಿಬೆಸೆಂಟಮ್ಮನವರ ಸಾಹಸದಿಂದ ಮತ್ತೆ ತಿಲಕರ ಪಕ್ಷದವರು ಇದಕ್ಕೆ ಸೇರಿಸಲ್ಪಟ್ಟರು. ಈಗಳಾದರೊ ಅದು ಉಗ್ರಮತವಾದಿಗಳ ಏಕಸೂತ್ರಾವಲಂಬಿಯಾಗಿ ನಿಂತಿರುವುದು ಸರ್ವವಿದಿತವಾಗಿದೆ. ಅದರ ನಾಯಕರಲ್ಲಿ ಹಲವರು ಕಾರಾಗೃಹವನ್ನು ಸೇರಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರ ನಾಯಕರು ಆ ಕಾಂಗ್ರೆಸ್ ಸಂಬಂಧವನ್ನು ಉಳಿಯಿಸಿಕೊಳ್ಳುವುದಕ್ಕೂ ಇಷ್ಟಪಡದೆ ಅದರಭಿಪ್ರಾಯದಲ್ಲಿ ಏಕೀಭವಿಸದೆ ಒಲೆಮೊಗವನ್ನು ಹೊತ್ತಿರುವುದು ಅವರ ಶಠತ್ವಕ್ಕೆ ಒಂದು ನಿದರ್ಶನವಾಗಿದೆ. ಈಗಣ ಮಹಾರಾಷ್ಟ್ರ ಪ್ರಮುಖರಲ್ಲಿ ಶ್ರೀಯುತ ಚಿಂತಾಮಣಿ ಕೇಳ್ಕರ್‌ರವರು ಪ್ರಧಾನರಾಗಿದ್ದಾರೆ. ಇವರು ತಿಲಕರಿಗೆ ಬಲಭುಜದಂತೆ ಇದ್ದವರು. ಮರಾಟಾಪತ್ರಿಕೆಗೆ ಇವರು ಸಂಪಾದಕರಾಗಿರುವುದಲ್ಲದೆ ಮಹಾರಾಷ್ಟ್ರ ಪ್ರಾಂತದ ರಾಷ್ಟ್ರೀಯಸಭೆಯ ಅಧ್ಯಕ್ಷರಾಗಿಯೂ, ಕಾಂಗ್ರೆಸ್ ಕಾರ್ಯಕಾರಿ ಸ್ಥಾಯಿಸಂಘದ ಸಭಿಕರಾಗಿಯೂ ಇದ್ದರು. ಕಾಂಗ್ರೆಸ್ ಸಂಬಂಧದ ಇವೆರಡು ಪದವಿಗಳಿಗೂ ಈಗ ಇವರು ರಾಜೀನಾಮೆ ಕೊಟ್ಟರು. ಕಾರಣವೇನೆಂದರೆ-ಶಾಸನಸಭೆ ಮೊದಲಾದುವುಗಳಿಗೆ ದೇಶೀಯರು ಸೇರಕೂಡದೆಂಬ ಕಾಂಗ್ರೆಸ್ ಸಿದ್ಧಾಂತವು ಇವರಿಗೆ ಒಪ್ಪಿತವಲ್ಲದೆ ಇರುವುದೇ ಆಗಿದೆಯಂತೆ. ಆ ರಾಜಕೀಯ ಸಭೆಗಳಲ್ಲಿ ಸೇರಿ ಪ್ರಭುತ್ವಕ್ಕೆ ಪ್ರತಿಘಟನವನ್ನುಂಟುಮಾಡಬೇಕೆಂಬುದೇ ಇವರ ತತ್ತ್ವ. ಇದೇ ಅಭಿಪ್ರಾಯವು ತಿಲಕರಿಗೂ ಇದ್ದಿತು. ಕಾಂಗ್ರೆಸ್ ತತ್ತ್ವಕ್ಕೆ ಭಿನ್ನವಾದ ಅಭಿಪ್ರಾಯವುಳ್ಳವರು ಅದರ ಯಾವ ಸಂಘದ ಯಾಜಮಾನ್ಯದಲ್ಲೂ ಇರಕೂಡದೆಂಬ ನಿಬಂಧನೆಯನ್ನು ಹಕೀಂ ಅಜಮಲ್‌ಖಾನರು ಇವರಿಗೆ ಮುಖತಃ ಹೇಳಿದ ಮೇಲೆ ಇವರು ರಾಜೀನಾಮೆ ಕೊಟ್ಟಿದ್ದಾರೆ. ಇದರಿಂದ ರಾಜಕೀಯ ನಾಯಕರಲ್ಲೇ ಭೇದಗಳು ದಿನದಿನಕ್ಕೆ ಪ್ರಬಲಿಸುತ್ತಿರುವುದೂ ಅಸಹಾಯೋದ್ಯಮಕ್ಕೆ ಉಂಟಾಗುತ್ತಿರುವ ಶೈಥಿಲ್ಯವು ಕೂಡ ವ್ಯಕ್ತವಾಗುತ್ತಿರುವುದು. ಈ ಅನೈಕಮತ್ಯ ಪ್ರಾಬಲ್ಯದಲ್ಲಿ ಸ್ವರಾಜ್ಯವು ಭರತಖಂಡಕ್ಕೆ ಸಿದ್ಧಿಸುವುದೆಂದಿಗೋ ತಿಳಿಯಲಿಲ್ಲ.

ನಿಮ್ನಜಾತಿಯವರಿಗೆ ಪ್ರೋತ್ಸಾಹ.

ಅಸ್ಪೃಶ್ಯರೆಂದು ಗಣಿಸಲ್ಪಟ್ಟಿದ್ದ ನಿಮ್ನಜಾತಿ ಜನರು ಎಷ್ಟು ದೀರ್ಘಕಾಲದಿಂದ ಅಧಃಪತನವನ್ನು ಹೊಂದಿ ನಾನಾ ಕಷ್ಟಗಳನ್ನು ಸಹಿಸುತ್ತಿದ್ದರೋ ಅಷ್ಟು ಶೀಘ್ರಕಾಲದಲ್ಲಿ ಅವರ ಅಭ್ಯುನ್ನತಿಯಾಗುವುದಕ್ಕೆ ತಕ್ಕ ಸಾಹಾಯ್ಯ ಪ್ರೋತ್ಸಾಹಗಳು ಭರತಖಂಡದ ಎಲ್ಲ ರಾಷ್ಟ್ರೀಯ ಪ್ರಭುತ್ವಗಳಿಂದಲೂ, ದೇಶೀಯ ಸಂಸ್ಥಾನಗಳಿಂದಲೂ, ದೇಶಭಕ್ತರಾದ ಪ್ರಜೆಗಳಿಂದಲೂ ಸಹ ಈಗ ಮಾಡಲ್ಪಡುತ್ತಿರುವುದು ಸಂತೋಷಪ್ರದವಾಗಿದೆ. "ಹಿಂದೆ ರಾಮಾನುಜಾಚಾರ್ಯರು ಪಂಚಮರನ್ನು ದೇವತಾಸಮಾನರಾದ ಆಳ್ವಾರುಗಳನ್ನಾಗಿ ಮಾಡಿ ಸ್ವೀಕರಿಸಿದರು; ಬಸವೇಶನು ಅವರಿಗೆ ಲಿಂಗಧಾರಣೆ ಮಾಡಿಸಿ ಹಿರಿಯಭಕ್ತರೆಂದು ಕರೆದು ಸನ್ಮಾನಿಸಿದನು." ಇತ್ಯಾದಿಯಾಗಿ ಹಿಂದಣವರ ಕಥೆಯನ್ನೇ ಹೇಳಿಕೊಂಡು ಈಗಣ ಸಮಯದಲ್ಲಿ ತಮ್ಮ ನಿಮ್ನಜಾತ್ಯಭಿಮಾನದ ಬೂಟಾಟಿಕೆಯನ್ನು ಮೆರೆಯಿಸಿ ಮುಗಿಸಿಬಿಡುವುದಕ್ಕಿಂತಲೂ ಸರ್ವರೂ ಆ ಜನರ ಅಸ್ಪೃಶ್ಯತ್ವನಿವಾರಣೆಗೆ ಅವಕಾಶ ಕೊಟ್ಟು, ಅವರಲ್ಲಿ ವಿದ್ಯೆ ಶುಚ್ಯಶುಚಿಜ್ಞಾನ, ದುರಾಹಾರಪರಿವರ್ಜನ, ಇತ್ಯಾದಿ ಗುಣಗಳು ನೆಲಸುವುದಕ್ಕೆ ಪ್ರೋತ್ಸಾಹ ಕೊಡುವುದು ಅತ್ಯವಶ್ಯಕವು. ಮದ್ರಾಸು ಸರ್ಕಾರದವರು ಈ ನಿಮ್ನಜಾತಿ ಜನರನ್ನು ಮುಂಬರಿಸುವುದಕ್ಕೆ ಅನಂತವಿಧದ ಪ್ರೋತ್ಸಾಹಗಳನ್ನು ಮಾಡಿದ್ದಾರೆ. ಅವರ ಪ್ರತಿನಿಧಿಯೊಬ್ಬರು ಅಲ್ಲಿಯ ನಿಯಮನಿರ್ಮಾಣಸಭೆಯಲ್ಲಿ ಸಭಿಕರಾಗಿರುವಂತೆ ಮಾಡಿದ್ದಾರೆ. ಸರ್ಕಾರಿ ಮತ್ತು ಗ್ರಾಂಟಿನ್ಏಡ್ ಪಾಠಶಾಲೆಗಳಲ್ಲೆಲ್ಲಾ ಅವರ ಹುಡುಗರನ್ನು ಸೇರಿಸಬೇಕೆಂದು ಅಪ್ಪಣೆ ಮಾಡಿರುವುದಲ್ಲದೆ ಈ ಸೌಕರ್ಯಕ್ಕಾಗಿ ಪಾಠಶಾಲೆಗಳನ್ನು ದೇವಾಲಯ ಮೊದಲಾದ ಸರ್ವಜನಪ್ರವೇಶ ಸಾಧ್ಯವಲ್ಲದ ಪ್ರದೇಶಗಳಿಂದ ಸಾಧ್ಯವಾದಮಟ್ಟಿಗೂ ತಪ್ಪಿಸಿ, ಎಲ್ಲರ ಪ್ರವೇಶಕ್ಕೂ ಸಾಧ್ಯವಾಗುವ ಸ್ಥಳಗಳಲ್ಲೇ ಏರ್ಪಡಿಸಬೇಕೆಂದು ಅಪ್ಪಣೆ ಮಾಡಿದ್ದಾರೆ. ಬೊಂಬಾಯಿ ಸರ್ಕಾರದವರು ನಿಮ್ನಜಾತಿಜನರ ವಿದ್ಯಾಭಿವೃದ್ಧಿಗಾಗಿ ಪ್ರೋತ್ಸಾಹಕರವಾದ ಅಪ್ಪಣೆಯೊಂದನ್ನು ಈಗತಾನೇ ಮಾಡಿರುತ್ತಾರೆ. ಅದರಲ್ಲಿ ಕಾಣಿಸಿರುವುದೇನೆಂದರೆ—"ಮಾಧ್ಯಮಿಕ (ಸೆಕೆಂಡರಿ) ಪಾಠಶಾಲೆಗಳಲ್ಲಿ ಓದುತ್ತಿರುವ ಪಂಚಮವಿದ್ಯಾರ್ಥಿಗಳಿಗೆ ಇದುವರೆಗೆ ಕೊಡಲ್ಪಡುತ್ತಿದ್ದ 5 ರೂ. ಮಾಸಿಕ ವಿದ್ಯಾರ್ಥಿವೇತನವು ಅವರಿಗೆ ಸಾಲದಿರುವ ಕಾರಣ 10 ರೂ. ಗಳಂತೆ 1921ನೆ ಜೂನ್ ತಿಂಗಳಿಂದಲೂ ಸಲ್ಲಿಸತಕ್ಕುದು. ಪ್ರೌಢತರಗತಿಗಳಲ್ಲಿ ಓದುವವರಿಗೆ 12-15 ರೂ. ಗಳಂತೆ ಮಾಸಿಕ ವಿದ್ಯಾರ್ಥಿಗಳನ್ನು ಕೊಡಬೇಕು" ಎಂಬುದಾಗಿ. ಈ ವೇತನಗಳಿಗಾಗಿಯೇ ಬೊಂಬಾಯಿ ಸರ್ಕಾರದವರು ವರ್ಷಕ್ಕೆ 20 ಸಾವಿರ ರೂ. ಗಳನ್ನು ವೆಚ್ಚಮಾಡುತ್ತಿರುವರು; ಅಲ್ಲದೆ ನಿಮ್ನಜಾತಿಯ ಬಾಲವಿದ್ಯಾರ್ಥಿಗಳಿಗೆ ತಿಂಗಳೊಂದಕ್ಕೆ ಪ್ರತಿಯೊಬ್ಬನಿಗೂ 5 ರೂ. ನಂತೆ ವಿದ್ಯಾರ್ಥಿವೇತನವನ್ನು ಕೊಡಲಿಕ್ಕೆ ಅಪ್ಪಣೆಮಾಡಿ, ಅದಕ್ಕಾಗಿ ವರ್ಷ 1ಕ್ಕೆ 10 ಸಹಸ್ರ ರೂ. ಗಳನ್ನು ವಿನಿಯೋಗಿಸಲು ತೀರ್ಮಾನಿಸಿದ್ದಾರೆ; ಅಲ್ಲದೆ ಪೂನಾಪಟ್ಟಣದಲ್ಲಿ ಈ ಜಾತಿಯ 60 ಮಂದಿ ವಿದ್ಯಾರ್ಥಿಗಳಿಗಾಗಿ ಉಚಿತಭೋಜನಶಾಲೆಯೊಂದನ್ನು ಏರ್ಪಡಿಸುವವರಾಗಿದ್ದಾರೆ, ಮತ್ತು ವಿದ್ಯಾರ್ಥಿಗಳಿಗೆ ಹಲಗೆ ಬಳಪ ಪುಸ್ತಕಗಳನ್ನು ತೆಗೆದುಕೊಡಲಿಕ್ಕಾಗಿ 1000 ರೂ. ಗಳನ್ನು ಬೇರೆ ವೆಚ್ಚಮಾಡಲು ಅಪ್ಪಣೆ ಮಾಡಿದ್ದಾರೆ. ನೆರೆಹೊರೆಯ ಸರ್ಕಾರಗಳೆಲ್ಲಾ ನಿಮ್ನಜಾತಿ ಸಮುದ್ಧಾರಕ್ಕಾಗಿ ಇಷ್ಟು ಪ್ರೋತ್ಸಾಹಗಳನ್ನು ಮಾಡುತ್ತಿರುವಾಗ ನಮ್ಮ ಮೈಸೂರು ಪ್ರಭುತ್ವದವರು ತಟಸ್ಥರಾಗಿದ್ದರೆ ಇವರ ಗೌರವಕ್ಕೆ ತಡೆಯುವುದೇ? ಇವರು ಇದುವರೆಗೆ ವ[illegible] ಸೂ ಮಾಡುತ್ತಲೂ ಇರುವ ನಿಮ್ನಜಾತಿ ಪ್ರೋ[illegible]ತ್ಸಾಹವು ಆ ನೆರೆಯ ಸರ್ಕಾರಗಳ ಏರ್ಪಾಟುಗಳಿಗಿಂತಲೂ ಏನೂ ಕಡಿಮೆಯಾಗಿಲ್ಲದಿರುವುದು ಸಂತೋಷಪ್ರದವೇ ಸರಿ.

"ಲೋಕಾಸ್ಸಮಸ್ತಾಸ್ಸುಖಿನೋಭವಂತು"

ತಿರುವಾಂಕೂರು ಸಂಸ್ಥಾನದಲ್ಲಿ ಅಸಹಾಯೋದ್ಯಮ ನಿರೋಧ.

ಕಾರಾಗೃಹವಾಸ ಶಿಕ್ಷೆಯನ್ನನುಭವಿಸಿ ಬಂದ ಚೊಕ್ಕಲಿಂಗಂ ಪಿಳ್ಳೆಯೆಂಬುವವರು ಕಳೆದ ಮೇ ತಿಂಗಳಲ್ಲಿ ಸುಚೀಂದ್ರಪಟ್ಟಣದ ಆಂಗ್ಲ ಪಾಠಶಾಲಾ ಭವನದಲ್ಲಿ ಅಸಹಾಯೋದ್ಯಮ ಪ್ರಶಂಸೆಮಾಡಿ ಉಪನ್ಯಾಸಕೊಟ್ಟರು. ಹೀಗೆ ಉಪನ್ಯಾಸ ನಡೆಯಲು ಪಾಠಶಾಲೆಯಲ್ಲಿ ಅವಕಾಶಕೊಟ್ಟುದಕ್ಕೆ ಕಾರಣವೇನೆಂದು ಅಲ್ಲಿಯ ವಿದ್ಯಾಶಾಖಾಧ್ಯಕ್ಷರು ಪಾಠಶಾಲೆಯ ಮ್ಯಾನೇಜರನ್ನು ಕೇಳಿರುವರು. ಆ ಸಭೆಗೆ ಇಬ್ಬರು ಡ್ರಾಯಿಂಗ್ ಮ್ಯಾಸ್ಟರುಗಳು ಹೋಗಿದ್ದರೆಂದು ಪೊಲೀಸರು ವರದಿಮಾಡಿದ್ದುದರಿಂದ ಅವರುಗಳನ್ನೂ ಸಮಾಧಾನಕೇಳಿರುವರು. ಮತ್ತು ಪಿಂಚನ್‌ದಾರರಾಗಿರುವ ದಿವಾನ್ ಪೇಷ್ಕಾರ್ ಕೃಷ್ಣಯ್ಯಂಗಾರರೆಂಬುವವರು ಒಂದು ಬಹಿರಂಗ ಸಭೆಯಲ್ಲಿ ಗಾಂಧಿಯವರನ್ನು ಕುರಿತು ಪ್ರಶಂಸೆಮಾಡಿ ಉಪನ್ಯಾಸಮಾಡಿದರೆಂಬ ಕಾರಣದಿಂದ ಸಮಾಧಾನಕೊಡಬೇಕೆಂದು ಅಲ್ಲಿಯ ಪ್ರಭುತ್ವದವರು ಅವರಿಗೂ ಬರೆದಿರುವರು. ತಿರುವಾಂಕೂರು ಸಂಸ್ಥಾನವು ತನ್ನಲ್ಲಿ ಅಸಹಾಯೋದ್ಯಮ ವ್ಯಾಪನೆಗೆ ಲೇಶವೂ ಅವಕಾಶ ಕೊಡಬಾರದೆಂದು ಅಷ್ಟು ಜಾಗರೂಕವಾಗಿರುವಾಗ, ನಮ್ಮ ಸಂಸ್ಥಾನವು ಗಾಂಧಿ ತಿಲಕ್ ಅಸಹಾಯೋದ್ಯಮ ವ್ಯಾಪನೆಗೂ ಕಾಂಗ್ರೆಸ್ ತತ್ತ್ವಪ್ರಚಾರಕ್ಕೂ ಪ್ರಶಂಸೆಗೂ ಪ್ರವೃತ್ತರಾಗಿರುವ ವಿದ್ಯಾರ್ಥಿಗಳಿಗೂ ವೃತ್ತಪತ್ರಿಕೆಗಳಿಗೂ ವಾಚಾಟರುಗಳಿಗೂ ಸ್ವೇಚ್ಛಾವಕಾಶವನ್ನಿತ್ತಿರುವುದರ ತತ್ತ್ವವೇನೋ ತಿಳಿಯಲಿಲ್ಲ.

ಹುಲಿಯವೇಷದ ರಜಕಾಶ್ವ.

ಕಳೆದ ತಾ|| 14 ರ ಸಂಪದಭ್ಯುದಯ ಪತ್ರಿಕೆಯಲ್ಲಿ "ವೀರಶೈವ" ಎಂಬ ಸಂಕೇತನಾಮದ ಮುದ್ರೆಯಿಂದ ಒಂದು ಲೇಖನವು ಪ್ರಕಟಿಸಲ್ಪಟ್ಟಿದೆ. "ಸ್ಟಾರ್‌ಪತ್ರಿಕಾ ಕರ್ತರು ವೀರಶೈವ ಪ್ರತಿನಿಧಿಗಳಂತೆ ವಿಜೃಂಭಿಸುತ್ತಾರೆ. ಇವರನ್ನು ವೀರಶೈವರಾದ ನಾವು ಯಾರೂ ಪ್ರತಿನಿಧಿಗಳಾಗಿ ಚುನಾಯಿಸಿಲ್ಲ. ಇವರ ಅಭಿಪ್ರಾಯವು ವೀರಶೈವ ಮಂಡಲಿಯ ಅಭಿಪ್ರಾಯವಲ್ಲ..·ಜುಲೈ 23 ನೇ ತಾರೀಖಿನ ಸ್ಟಾರ್‌ಪತ್ರಿಕೆಯಲ್ಲಿ ಶ್ರೀಮನ್ಮಹಾರಾಜರನ್ನೂ ಅವರ ಗೌರ್ನಮೆಂಟಿನವರನ್ನೂ ವಾಚಾಮಗೋಚರವಾಗಿ ಸ್ಟಾರ್‌ಪತ್ರಿಕಾ ಕರ್ತರು ನಿಂದಿಸಿರುವರು" ಎಂದು ಮೊದಲಾಗಿ ಆ ಲೇಖನದಲ್ಲಿ ಹೇಳಲ್ಪಟ್ಟಿರುವುದು. ವೀರಶೈವ ಬೀಜೋತ್ಪನ್ನನಾದ ಯಾವನೊಬ್ಬನ ಬಾಯಿಂದಲೂ ಇಂಥ ಮಾತುಗಳು ಬರುವುದಿಲ್ಲವೆಂಬುದನ್ನು ವೀರಶೈವ ಪ್ರಪಂಚವೆಲ್ಲವೂ ಬಲ್ಲುದು. ಆ ತಾರೀಖಿನ ಸ್ಟಾರ್‌ಪತ್ರದಲ್ಲಿ ಶ್ರೀಮನ್ಮಹಾರಾಜರನ್ನೂ ಅವರ ಗೌರ್ನಮೆಂಟನ್ನೂ ಸ್ಟಾರ್‌ಕರ್ತರು ವಾಚಾಮಗೋಚರವಾಗಿ ನಿಂದಿಸಿರುವುದು ನಿಜವಾಗಿದ್ದರೆ ಈ ಲೇಖಕನೂ ನಿಜವಾದ ವೀರಶೈವನೇ ಸರಿ. ಹಾಗಿಲ್ಲದಿದ್ದರೆ ಇವನು ಅನ್ಯರೇತಸ್ಸಮುತ್ಪನ್ನನೆಂದು ತಿಳಿಯುವುದರಲ್ಲಿ ಅಭ್ಯಂತರವೇನು? ವಾಚಕವರ್ಗವೆಲ್ಲವೂ ಮತ್ತೊಂದುಸಲ ಆ ಸಂಚಿಕೆಯನ್ನು ಆದ್ಯಂತವಾಗಿ ಓದಿ ನಿರ್ಧರಿಸಿಕೊಳ್ಳಲಿ. ಕಳ್ಳಮೇವಿಗಾಗಿ ಹುಲಿಯಚರ್ಮವನ್ನು ಹೊದೆಯಿಸಿ ಕಬ್ಬಿನಗದ್ದೆಗೆ ಬಿಡಲ್ಪಟ್ಟ ರಜಕಾಶ್ವದಂತೆ ಭೇದೋಪಾಯ ಪ್ರಯೋಗಕ್ಕೆ ಕಪಟಯತ್ನ ಮಾಡಿರುವ ಈ ಲೇಖಕನು ತೋಟಗಾರನ ದಂಡಪ್ರಯೋಗಕ್ಕೆ ಗುರಿಯಾದ ರಜಕಾಶ್ವದ ಅವಸ್ಥೆಯಂತೆ ವೀರಶೈವಮಂಡಲಿಯ ಛೀತ್ಕಾರಕ್ಕೆ ಪಾತ್ರನಲ್ಲದೆ ಅನ್ಯಥಾ ಅಲ್ಲ. ಸ್ಟಾರ್‌ಪತ್ರಿಕೆಯೂ ಅದರ ಕರ್ತರೂ ವೀರಶೈವಮತದ ಸೇವೆಯೇ ಜೀವಿತದ ಸಾರ್ಥಕಕೃತ್ಯವೆಂದು ತಿಳಿದು ಕೈಂಕರ್ಯವನ್ನು ಮಾಡುತ್ತಿರುವರೇ ಹೊರತು ಸಂಪದಭ್ಯುದಯ ಕರ್ತರಂತೆ ದೇಶೋದ್ಧಾರಕತ್ವವನ್ನೇ ಆಗಲೀ ಮತೋದ್ಧಾರಕತ್ವವನ್ನೇ ಆಗಲೀ ವಿಜೃಂಭಿಸಿಕೊಂಡಿರುವುದು ಎಂದಿಗೂ ಇಲ್ಲ. ಸ್ಟಾರ್‌ಪತ್ರದ ರಾಜದ್ರೋಹಚಿಂತನೆಯೂ ಸಂಪದಭ್ಯುದಯದ ರಾಜನಿಷ್ಠಾಪರಿಮಾಣವೂ ಜಗತ್ತಿಗೇ ಗೊತ್ತು. ಮುಂಗೈಕಂಕಣಕ್ಕೆ ಕನ್ನಡಿಯು ಬೇಕೆ?

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಜಾತಿಪದ್ಧತಿ.

ಲೇಖಕ—ಸ್ವಾಮಿ ವಿರೂಪಾಕ್ಷ ಒಡೆಯರ್, ಪ್ರೊಫೆಸರ್, ಸಂಸ್ಕೃತ ಕಾಲೇಜು, ಇಂದೋರ.

ಜಗತ್ತಿನ ಎಲ್ಲಾ ಭಾಗದಲ್ಲಿಯೂ ಜಾತಿವಿಷಯಕವಾದ ಕೋಲಾಹಲವು ಉಂಟೇ ಉಂಟೆಂದು ಕೇಳಬರುವದು. ಆದರೆ ನಮ್ಮ ಭರತಖಂಡದಲ್ಲಿ ಮಾತ್ರ ಜಾತಿವಾದವು ವಿಶೇಷವಾಗಿದ್ದು ಪೃಥ್ವಿಯ ಎಲ್ಲ ಭಾಗಕ್ಕಿಂತಲೂ ಮೊದಲು ಜಾತಿಭೇದವು ಈ ಭಾರತೀಯರಲ್ಲಿಯೇ ಹುಟ್ಟಿತೆಂಬಲೂ ಇಲ್ಲಿಯೇ ಅದರ ಮಹತ್ವವು ವಿಶೇಷವಿರುವುದೆಂತಲೂ ಬಹುಜನರ ನಂಬಿಕೆಯುಂಟು. ವಿಚಾರಮಾಡಿ ನೋಡಿದರೆ ಇದು ಅಹುದೆಂತಲೇ ಕಂಡುಬರುವದು ಯಾಕೆಂದರೆ—ವೇದ, ಉಪನಿಷತ್ತುಗಳನ್ನು ಬಿಟ್ಟು ಇತರ ಭಾರತೀಯರ ಯಾವ ಗ್ರಂಥಗಳಲ್ಲಿ ದೃಷ್ಟಿಯನ್ನಿಟ್ಟರೂ ಈ ಜಾತಿವಾದವು ಸರ್ವತ್ರ ಕಂಡುಬರುವುದು. ಈ ಜಾತಿಪದ್ಧತಿಯು ಒಂದು ಕಾಲದಲ್ಲಿ ಭಾರತೀಯರಿಗೆ ಉಪಯೋಗಕರವಾಗಿದ್ದಾಗ್ಯೂ ಈಗಮಾತ್ರ ಅದು ದೇಶವಿಘಾತಕವಾದದ್ದೆಂತಲೇ ತಿಳಿಯಲ್ಪಟ್ಟಿರುವುದು. ಯಾವ ಕಾಲಕ್ಕೆ ಈ ಜಾತಿಪದ್ಧತಿಯು ಭಾರತೀಯರಿಗೆ ಉಪಯೋಗಕರವಾಗಿತ್ತೋ ಆಗ್ಗೆ ಇದು ಈಗಿನ ವಾದಕ್ಕಿಂತಲೂ ಭಿನ್ನವಿಚಾರ ವಿನಿಮಯದಿಂದ ಕೂಡಿತೆಂದು ತಿಳಿದುಬರುತದೆ. ಹೇಗೆಂದರೆ—ವೇದಕಾಲದಲ್ಲಿ ಆರ್ಯ, ದಸ್ಯುಗಳೆಂಬೆರಡು ಭೇದಗಳಿದ್ದು ಅವು ಅವರವರ ಕೃತಿಗಳಿಂದ ಕರೆಯಲ್ಪಡುತ್ತಿದ್ದವು. ಆರ್ಯ, ದಸು ಗಳೆಂಬ ಶಬ್ದಗಳ ಅರ್ಥಗಳ ಮೇಲಿಂದಲೂ ವೇದದಲ್ಲಿ ತೋರಿಬರುವ ಮಂತ್ರಗಳಿಂದಲೂ ನಿರ್ಣಯಮಾಡಲು ಸಾಧ್ಯವಿರುವುದು. ಹೇಗೆಂದರೆ—ದಸ್ಯೂಇಭಿನ್ಯಾಂಶ್ಚ ಪುರುಹೂತ ಎನ್ಯೈರ್ಹತ್ವಾ ಪೃಥಿವ್ಯಾಂಶರ್ವಾನಿಬರ್ಹೀತ್ - ಆರ್ಯಾಂ ವೇದಾದಿ ಶಾಸ್ತ್ರಂಯೆ ಯೋಗ್ಯಾಸ್ತ ಏವ ಆರ್ಯಾಃ - ಯಾರು ವೇದಾದಿ ಶಾಸ್ತ್ರಗಳನ್ನು ಕಲಿಯಲು ಅರ್ಹರಾಗಿರುವರೋ ಅವರೇ ಆರ್ಯರೆಂತಲೂ, - ದಸು-ಉಪಕ್ಷಯೇ - ಎಂಬ ಶಬ್ದಾರ್ಥದಿಂದ ಯಾರು ವೇದೋಕ್ತ ಕರ್ಮಗಳನ್ನು ನಾಶಗೊಳಿಸುವರೋ ಅವರು ದಸ್ಯುಗಳೆಂತಲೂ, ಈ ದಸ್ಯು ಜನರೇ ಪುರಾಣಾದಿಗಳಲ್ಲಿ ಅಸುರರು, ರಾಕ್ಷಸರು, ಇತ್ಯಾದಿ ನಾಮಗಳಿಂದ ವರ್ಣಿಸಲ್ಪಟ್ಟಿರುವರು. ಇನ್ನು ಪೌರಾಣಿಕರು ವರ್ಣಿಸುವ ದೇವ, ದಾನವ, ಕಥೆಗಳಾದರೂ ಆರ್ಯ ದಸ್ಯುಗಳ ಪರವಾಗಿಯೇ ಎಂದು ತಿಳಿದುಬರುವುದು. ಹೇಗೆಂದರೆ—ವಿದ್ವಾಸರಾದ ಆರ್ಯರು ಮಾಡುವ ಕರ್ಮಗಳು ದಸ್ಯುಗಳಿಗೆ ಸೇರದೆ ಇದ್ದುದು ಪರಸ್ಪರ ವೈಮನಸ್ಯದಿಂದ ಪದೇಪದೇ ಕಲಹಗಳು ಉತ್ಪನ್ನವಾಗಿ ಸಂಘಶಕ್ತಿಯ ಪೂರ್ವಕ ಯುದ್ಧಪರ್ಯಂತ ಕೊನೆಗಾಣುತ್ತಿದ್ದವೆಂದು ಕಂಡು ಬರುವುದು. ಆದರೆ ಆರ್ಯರು ಮಹಾ ಸತ್ವಶೀಲರಾಗಿದ್ದುದರಿಂದ ಶಸ್ತ್ರಾಸ್ತ್ರಗಳಿಂದ ದಸ್ಯುಗಳನ್ನು ಹಿಂಸಿಸುವುದು ಮಹಾಪಾಪಕರವೆಂದು ತಿಳಿದು, ಈಶ್ವರನನ್ನು ಅನನ್ಯಭಾವನೆಯಿಂದ - ಹೆ ಇಂದ್ರ, ವರುಣ, ಆರ್ಯಮ, ಇತ್ಯಾದಿ ನಾಮಗಳುಳ್ಳ ಸರ್ವಶಕ್ತಿಮಾನನಾದ ದೇವನೆ! ಈ ದಸ್ಯುಗಳು ನಮ್ಮ ಕರ್ಮ ಪ್ರತಿಬಂಧಕರಾಗದಂತೆ ಮಾಡಿ, ಮತ್ತು ನಮ್ಮ ಕರ್ಮಾನುಯಾಯಿಗಳಾಗುವಂತೆ ಇವರಿಗೆ ಬುದ್ಧಿಯನ್ನು ಕೊಟ್ಟು ಇವರನ್ನು ನಮ್ಮಂತೆ ಆರ್ಯರನ್ನಾಗಿಮಾಡು, ಎಂಬುದಾಗಿ ದಸ್ಯುಗಳನ್ನು ತಮ್ಮ ಸಮಭಾವನೆಹೊಂದಿಸಲಿಕ್ಕೆ ಪ್ರಾರ್ಥಿಸಿಕೊಂಡಿರುವರು. ಅರ್ಥಾತ್ ಈಶ್ವರನನ್ನು ಕುರಿತು ಮಾಡುವ ತಮ್ಮ ಆತ್ಮಸ್ಫೂರ್ತಿಯ ಪ್ರಾರ್ಥನಾಬಲದಿಂದಲೇ ಅವರ ದಸ್ಯುತ್ವವು ಹೋಗಿ ಅವರನ್ನು ತಮ್ಮಂತೆ ಆರ್ಯರನ್ನಾಗಿಮಾಡುವ ಪ್ರಯತ್ನದಿಂದ ಕೂಡಿಕೊಂಡಿದ್ದರೆಂದು ಕೆಳಗೆ ತೋರಿಸುವ ಮಂತ್ರಗಳ ಮೇಲಿಂದ ಕಂಡುಬರುತದೆ.

- ಶ್ರುಷ್ಯಗ್ನೇನವಸ್ಯಮೋಸ್ತೋಮಸ್ಯವೀರವಿಶ್ಪತೇ ||
ನಿಮಾಯಿನಸ್ತಪಸಾರಕ್ಷಸೋದಹ || (ಸಾಮ, ಅ ೧, ಖಂ, ೧೧
- ಅಮಿತ್ರಹಾವೃತ್ರಹಾದಸ್ಯುಹಂತಮಂ |
ಜ್ಯೋತಿರ್ಜಜ್ಞೆ ಅಸುರಹಾ ಸಪತ್ನಹಾ ||

ಸಾಮವೇದ, ಉತ್ತರಾರ್ಚಿ. ಅ ೧೩, ಖಂ ೩

ದಸ್ಯುಗಳೇ ರಾಕ್ಷಸಾದಿ ಶಬ್ದಗಳಿಂದ ಹೇಳಲ್ಪಟ್ಟಿದ್ದು - ಮಾಯಾವಿನಃ ರಾಕ್ಷಸಾಃ ಕರ್ಮವಿಘ್ನಕಾರಿಣಃ ರಾಕ್ಷಸಾನ್ - ಎಂಬದಾಗಿ ಸಾಯನಾಚಾರ್ಯರು ಭಾಷ್ಯದಲ್ಲಿ ವೇದಕರ್ಮವಿಘಾತಿಗಳೇ ರಾಕ್ಷಸರೆಂದು ಅರ್ಥ ಬರೆದಿರುವರು.

- ಸಜಾತೂರ್ಯಶ್ರದ್ಧಾ ಧಾನಜೋಜಃ ಪುರೋವಿಭಿಂದನ್ನಚರದ್ವಿದಾಸೀಃ | ವಿದ್ವನ್‌ವಜ್ರಿನ್‌ದಸ್ಯವೇ ಹೇತಿಮಸ್ಯಾರ್ಯಂ ಸಹೋವರ್ಧಯದ್ಯುಮ್ನಮಿಂದ್ರ || ಋಗ್ವೇದ ಪ್ರಥಮಾಷ್ಟಕ.
- ಯವನ್ವಕೇಚಾಶ್ವಿನಾವಯಂತೇಷಾಂದುಹಂ
ತಾಮನುಷಾಯದಸ್ಯಾ ಅಭಿದಸ್ಯು ಂಬಕುರೇಣಾಧಮಂ |
ತೋರುಜ್ಯೋತಿಶ್ಚಕ್ರತುರಾರ್ಯಾಯ ||" ಋಗ್ವೇದ ಪ್ರಥಮಾಷ್ಟಕ.

ಈ ಮಂತ್ರದಲ್ಲಿ ಹೇ ತೇಜೋಭರಿತನಾದ ಹಾಗೂ ಸತತೈಶ್ವರ್ಯಯುಕ್ತನಾದ ಇಂದ್ರರೂಪಿಯಾದ ಪರಮಾತ್ಮನೇ! ನಿನ್ನ ಯಾವ ದಿವ್ಯಜ್ಞಾನ ತೇಜೋಮಯವಾದ ವಜ್ರಾಯುಧವುಂಟೋ ಅದರಿಂದ ದಸ್ಯುಗಳಲ್ಲಿರುವ ಅಮಾನುಷತ್ವವನ್ನು ಹೋಗಲಾಡಿಸಿ ಅವರಲ್ಲಿ ಆರ್ಯತ್ವವನ್ನುಂಟು ಮಾಡೆಂದು ಆರ್ಯರಿಂದ ಪರಮಾತ್ಮನು ಪ್ರಾರ್ಥಿಸಲ್ಪಟ್ಟಿರುವನು. ಈ ರೀತಿಯಾಗಿ ವೇದದಲ್ಲಿ ಎರಡು ಭೇದವು ತೋರಿಸಲ್ಪಟ್ಟಿದ್ದು, ಈ ಆರ್ಯ ದಸ್ಯುತ್ವಗಳು ಕರ್ಮದಿಂದಲೇ ಬರುತ್ತಿದ್ದವೆಂದು ಸಿದ್ಧವಾಗುವುದು. ಉದಾಹರಣಾರ್ಥ:—ಯಾವನೇ ಇರಲಿ ಅವನು ಕರ್ಮರಹಿತನಾಗಿದ್ದರೆ ಅವನು ದಸ್ಯುವೆಂತಲೂ, ಯಾವನೇ ಆಗಲಿ ಅವನು ಕರ್ಮಾನುಷ್ಠಾನಿಯಾಗಿದ್ದರೆ ಅವನು ಆರ್ಯನೆಂತಲೂ, ಆರ್ಯನು ದಸ್ಯುವಾಗಬಹುದಾಗಿದ್ದಿತೆಂತಲೂ ವಿದಿತವಾಗುವುದು.

ಸಶೇಷ.

ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವು.

ರಾಯಚೂರು ಸೋಮವಾರಪೇಟೆ ಹಿರೆಮಠದಲ್ಲಿ ಸ್ಥಾಪಿತವಾಗಿರುವ ಪಾಕ್ಷಿಕಪರಿಷತ್ಪಾಲಕರಾದ ಮುರಿಚೇಡ ಚೆನ್ನಬಸವಶಾಸ್ತ್ರಿಗಳು ಆಷಾಢ ಬ|| ೪ ಗುರುವಾರ ಶಿವಾಧೀನರಾದರೆಂದು ತಿಳಿಯಿಸಲಿಕ್ಕೆ ವಿಷಾದವೆನಿಸುತ್ತದೆ. ಅಂಥವರ ಅಗಲುವಿಕೆಯಿಂದುಂಟಾದ ಶೋಕಸಮಾಧಾನಕ್ಕಾಗಿ ಪ್ರತ್ಯಕ್ಷ ಪರಮೇಶ್ವರರೆಂಬ ಬಿರುದಾಂಕಿತರಾದ ಹಾನಗಲ್ ಶ್ರೀಕುಮಾರ ಮಹಾಸ್ವಾಮಿಗಳ ಅಪ್ಪಣೆಯಂತೆ ತನ್ಮಠಾಧ್ಯಕ್ಷರಾದ ರಾಚೋಟಿಸ್ವಾಮಿ ದೇಶಿಕವರ್ಯರು ಆಷಾಢ ಬ|| ೫ ದಿನ ಹೈಕೋರ್ಟ್ ವಕೀಲ್ ಕಿಶನರಾಯರು ಮ|| ಜಯನಾರಾಯಣ ಮುಂತಾದ ಪರಮತ ಸ್ವಮತದ ಮುಖಂಡರನ್ನು ಗೌರವಪುರಸ್ಸರವಾಗಿ ಬರಮಾಡಿ ಸಭಾಕಾರ್ಯಕ್ರಮಕ್ಕನುಜ್ಞೆಯನ್ನಿತ್ತರು. ಆ ಕೂಡಲೇ ಅದೇ ಸೋಮವಾರಪೇಟೆಯ ಸಂಗೀತವಿದ್ವಾನ್ ಚಾಚಣ್ಣ ಮುಂತಾದವರು ತಮ್ಮ ಸರ್ವಸನ್ನಾಹದೊಡನೆ ರಾಗ, ಪಲ್ಲವಿ ಇತ್ಯಾದಿಗಳಲ್ಲಿ ತಮ್ಮ ಬುದ್ಧಿಯ ಅದ್ಭುತಸಾಹಸವನ್ನು ವ್ಯಕ್ತಗೊಳಿಸಿ ಜನರಲ್ಲಿ ಶಾಸ್ತ್ರಿಗಳ ಮರಣದಿಂದುಂಟಾದ ದುಃಖವನ್ನು ತುಸು ತುಸು ತಗ್ಗಿಸಹತ್ತಿದರು. ಇಂತಹ ಸಂಗೀತಸಾಹಿತ್ಯ ಸಮ್ಮೇಳನದಿಂದ ಶಿವಕೀರ್ತನಕಾರರಾದ ವೇ|| ಆನಂಪಲ್ಲಿ ಶಾಂತಮೂರ್ತಿಗಳು ನಾಗೇಶಚರಿತ್ರವನ್ನು ಶ್ರೋತೃವರ್ಗದ ಹೃದಯಭೂಮಿಯಲ್ಲಿ ವೈರಾಗ್ಯಬೀಜಾರೋಪಣವಾಗುವಂತೆ ಕೀರ್ತನೆ ಮಾಡಿದರು. ಅಮೇಲೆ ಕಲ್ಲೂರು ಪೌರಾಣಿಕ ಸೂಗಯ್ಯನವರು ಗದ್ವಾಲಿ ಸೂಗಪ್ಪನೂ ಮತ್ತು ಈತನ ಸುಪುತ್ರ ವಿರುಪಣ್ಣನೂ ಅಶ್ರುಪೂರಿತನಯನದಿಂದ ಕೈ|| ಶಾಸ್ತ್ರಿಗಳ ಗುಣಕಥನವನ್ನು ಮಾಡಿದರು. ತದನಂತರ ನೀರಡಗುಂಭದ ಶ್ರೀ ಸಿದ್ಧಲಿಂಗ ಶಿವಯೋಗಿಗಳು ನಮ್ಮ ಶಾಲಾಧ್ಯಾಪಕ ಸಿದ್ಧಲಿಂಗಶಾಸ್ತ್ರಿಗಳು ಇದೇ ಮಾಂಕಾರೋಗದಿಂದ ಮೊನ್ನೆತಾನೇ ಶಿವಾಧೀನರಾದದ್ದು ಹೃದಯದಲ್ಲಿ ಹಿಡಿಯಲಾರದಷ್ಟು ದುಃಖವಿತ್ತು. ಅಷ್ಟರಲ್ಲಿಯೇ ಈ ಚೆನ್ನಬಸವಶಾಸ್ತ್ರಿಗಳು ದೇಹತ್ಯಾಗವಮಾಡಿದ್ದುದನ್ನು ಕೇಳಿದ ಮೇಲಂತೂ ಮೊದಲೇ ರಾಜಹುಣ್ಣು ಅದರಲ್ಲಿ ಖಿಗಿಖಿಗಿ ಎಂದು ಕಾದ ಸಲಾಕೆಯಿಂದ ಬರೆ ಎಳೆದಂತಾಯಿತು. ಈ ಉಭಯರು ಹೋದುದು ನೈಜಾಮ ಭರತಭೂಮಾತೆಯ ನೇತ್ರಯುಗ್ಮವು ಲೋಪವಾದಂತಾಯಿತೆಂದರೆ ಅತಿಶಯೋಕ್ತಿಯೆನಿಸದು. ಮತ್ತು ಪಾಕ್ಷಿಕ ಪರಿಷತ್ತೆಂಬ ಅಭಿಧಾನವುಳ್ಳ ಈ ಸಭಾವನಿತೆಯು ತನ್ನ ಮಂಗಳಸೂತ್ರವನ್ನು ಕಳಕೊಂಡು ಅಮಂಗಲಮಯಳಾಗಿದ್ದಾಳೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು [illegible]ವಾಗಿ ಭಾಷಣಮಾಡಿ ರಾಯಚೂರು ಜಿಲ್ಲೆಯೊಳಗಣ ಅಗದಿ ತೇಜಬುದ್ಧಿಯುಳ್ಳ ಒಬ್ಬ ವಿದ್ಯಾರ್ಥಿಯು ಚೆನ್ನಬಸವಶಾಸ್ತ್ರಿಗಳಂತೆ ಪಾಂಡಿತ್ಯವನ್ನೂ ಸರಸವಾದ ವಚನರಚನೆಯನ್ನೂ ಧೈರ್ಯಸಂಪತ್ತಿಯನ್ನೂ ಸಂಪಾದಿಸುವತನಕ ಆ ವಿದ್ಯಾರ್ಥಿಗೆ ತಿಂಗಳೊಂದಕ್ಕೆ ಶಾಸ್ತ್ರಿಗಳ ಸ್ಮಾರಕಕ್ಕಾಗಿ ಹತ್ತು ರೂಪಾಯಿಗಳನ್ನು ಕೊಡುತ್ತೇನೆಂದು ವಾಗ್ದಾನಮಾಡಿ ಸುಖಾಸೀನರಾದರು. ಅಮೇಲೆ ಶ್ರೀಮನ್ನಿರಂಜನಮೂರ್ತಿಗಳಾದ ಹಾನಗಲ್ ಕುಮಾರ ಮಹಾಸ್ವಾಮಿಯವರು ಪಂಡಿತ ಚನ್ನಬಸವಯ್ಯನವರನ್ನು ಕಳೆದುಕೊಂಡ ನಿಮ್ಮ ಅದೃಷ್ಟವು ಅತ್ಯಂತ ಹೀನವಾದದ್ದೇ ಸರಿ, ಇದೀ ನೈಜಾಮ ವೀರಶೈವರ ದುರ್ದೈವವೆಂದರೂ ಸಲ್ಲುವದು. ಈ ವ್ಯಕ್ತಿಯ ಸುತ್ತುಮತಿಯಾದರೂ ಸಮಾಜಸೇವೆಯ ಕಡೆಗೆ ಓಡುತ್ತಿತ್ತು ಎಂದು ಮೊದಲಾಗಿ ಅವರ ವರ್ಣನೆ ಮಾಡಿ ಪ್ರಮಾದವಶಾತ್ತಾಣವಿಯೋಗಕ್ಕೆ ಮರಣವೆನ್ನುವರು.—ಅದರಲ್ಲಿ ಶಿವಾಧೀನ, ಶಿವೈಕ್ಯವೆಂದು ಎರಡುಪ್ರಕರಣಗಳುಂಟು; ಅವೆರಡನ್ನು ಯುಕ್ತಯುಕ್ತಿಯಿಂದ ಶಾಸ್ತ್ರಿಗಳು ಶಿವಾಧೀನರಾದುದಕ್ಕೆ ನೀವು ದುಃಖಿಸಬೇಡಿರಿ. ಅವರು ಸ್ವಲ್ಪಕಾಲದಲ್ಲಿಯೇ ನಮ್ಮ ಮತತತ್ವವನ್ನು ಬೋಧಿಸುವದಕ್ಕಾಗಿಯೋ ಇಲ್ಲವೆ ದೊಡ್ಡಗುರುಪೀಠಕ್ಕಾಗಿಯೋ ಅವತರಿಸಿ ಬರುವರೆಂದು ಸಪ್ರಮಾಣವಾಗಿ ನಿರೂಪಿಸಿದರು. ಮತ್ತು ಕಲ್ಲೂರು ಸೂಗೂರಯ್ಯ ಪುರಾಣಿಕ ಈತನು ಅಧಃಪತನದ ಹಾದಿಯನ್ನು ಹಿಡಿದ ವೀರಶೈವ ಸಮಾಜವನ್ನು ಉದ್ಧರಿಸುವುದಕ್ಕೆ ಬಂದ ಸಹಜಕುಮಾರ (ಷಣ್ಮುಖ) ಸ್ವಾಮಿಗಳಲ್ಲದೆ ಬೇರೆಯಲ್ಲವು. ಬೇರೆಯೆಂದರೆ ನರಕಪಾತಕವು ಬಿಡದು. ಹೀಗೆ ವರ್ಣಿಸಿದ್ದು ಪುರಾಣಿಕರ ತಪ್ಪು. ಸ್ವದೇಶದ ಶ್ರೀಗಳವರನ್ನು ವರ್ಣಿಸಿದರೆ ಆತ್ಮಶ್ಲಾಘನವಾದಂತಾಗುವದೆಂದೆಣಿಸಿ ಹೀಗೆ ನಮ್ಮನ್ನು ವರ್ಣಿಸಿರಬಹುದು. ಸಮಾಜಸೇವೆಗೈಯುವವರಲ್ಲಿ ನಾನೊಬ್ಬ ಮಾನವನು ಇಷ್ಟು ಪ್ರಶಂಸೆಗೆ ಪಾತ್ರನಾಗಲಾರೆನು. ಇರಲಿ, ಈ ನೀರಡಗುಂಭದ ಶ್ರೀಗಳು ವಾಗ್ದಾನಮಾಡಿದಂತೆ ಶಾಸ್ತ್ರಿಗಳ ಸ್ಮರಣಕ್ಕಾಗಿ ಎಲ್ಲರೂ ಯಥಾಶಕ್ತಿ ದಾನಮಾಡಬೇಕೆಂದು ಅಪ್ಪಣೆಕೊಡಿಸಿದರು. ಇದಲ್ಲದೆ ಮಠದ ಹಿತಕ್ಕಾಗಿ ಸತತ ಹೆಣಗಾಡುತ್ತಿದ್ದ ಶಾಸ್ತ್ರಿಗಳ ಕಾರ್ಯಾರಂಭವು ಕೊನೆಮುಟ್ಟದೆ ಹೋದದ್ದರಿಂದ ಸಭಾಸದರೆಲ್ಲರೂ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆನ್ನುವ ವಾಕ್ಯವು ಸತ್ಯವೆಂದು ಊಹಿಸಿ ಉದಾಸೀನಮನಸ್ಕರಾಗಿ ಜಯಘೋಷದೊಡನೆ ಸಭಾವಿಸರ್ಜನೆ ಮಾಡಿದರು.

ಓರ್ವ ಪ್ರತ್ಯಕ್ಷದರ್ಶಿ.

ಜ್ಞಾನವರ್ಧಕಸಂಘ.

ನಿಜಾಮ ಇಲಾಖಾ ಗುಲ್ಬುರ್ಗಾ ಜಿಲ್ಲಾ ಜಹಗೀರು ಕಲ್ಯಾಣದ ಪಡವಿಡಿಯ ಶಾಖಾನುವರ್ತಿಯಾದ ರೇವಣಸಿದ್ಧೇಶ್ವರ ತಟ್ಟಿಮಠದಲ್ಲಿ ಇದೇ ಆಷಾಢ ಶು|| ಸೋಮವಾರ ಸಾಯಂಕಾಲಕ್ಕೆ ಈ ಊರ ಗುರುವರ್ಗದ ಮಹನೀಯರು ಒಂದು ಸಭೆಯನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ ಶೂನ್ಯಸಿಂಹಾಸನದ ಪ್ರಭುದೇವರ ಮಠಾಧ್ಯಕ್ಷರಾದ ನಿರಂಜನ ಚನ್ನಬಸವಸ್ವಾಮಿಗಳು ಮತ್ತು ಇದೇ ಮಠದ ಪಟ್ಟಾಧ್ಯಕ್ಷರಾದ ರೇವಣಸಿದ್ಧಸ್ವಾಮಿಗಳು ಬಸವೇಶ್ವರ ಮಠದ ಪಟ್ಟಾಧ್ಯಕ್ಷರೂ ಸ್ಥಾಯಿಕ ಸಭಾಧ್ಯಕ್ಷರಾಗಿಯೂ, ಮತ್ತು ಶಿವಯೋಗಸ್ವಾಮಿ ಗುಂಪಾ ಶಿವಲಿಂಗಸ್ವಾಮಿ ಬಲೂತಿ ಮಠ ಇವರು ಉಪಾಧ್ಯಕ್ಷರಾಗಿಯೂ, ವೇದಮೂರ್ತಿ ಗುರುಪಾದಯ್ಯ ಶಂಕರಗುಡಿ ವೇ|| ಗುರುಬಸವಯ್ಯ ಕನಡೆ ವೇ|| ರಾಚೋಟಸ್ವಾಮಿ ಹಂಜಗಿ ವೇ|| ಚನ್ನಯ್ಯಸ್ವಾಮಿ ಬಲಕುಂದಿಮಠ ಇವರು ಉಪನ್ಯಾಸಕರಾಗಿಯೂ ಮ|| ಶಿವಲಿಂಗಪ್ಪಾ ಡಿಗ್ಗಿ ಗುಮಾಸ್ತೆ ಮತ್ತು ಮ|| ಶಂಕರಪ್ಪಾ ಹಳಕಟ್ಟಿ ಇವರು ವ್ಯವಸ್ಥಾಪಕರಾಗಿಯೂ ವೇ|| ಬಸವತೀರ್ಥಸ್ವಾಮಿಮಠಪತಿ ಇವರು ಖಜಾಂಚಿರಾಗಿಯೂ ವೇ|| ಸಂಗನಬಸಯ್ಯಸ್ವಾಮಿ ವಸ್ತ್ರದ ಮತ್ತು ವೇ|| ರೇವಯ್ಯಸ್ವಾಮಿ ಕಾವಡೆ ಇವರು ಕೋಶಾಧ್ಯಕ್ಷರಾಗಿಯೂ ವೇ|| ಮಹಾಂತಯ್ಯಸ್ವಾಮಿ ಮಠಪತಿ ಕೋರವಾರ ಹಾಲಿವಸ್ತಿ ಇವರು ಸಹ ಧನಸಹಾಯಕರಾಗಿಯೂ ಇರಲು ಒಪ್ಪಿದನಂತರ ವೀರಶೈವಗುರುವರ್ಗದ ಜ್ಞಾನವರ್ಧಕ ಸಂಘವೆಂದು ಹೆಸರಿಟ್ಟು ಎಲ್ಲರೂ ಮೇಲಕ್ಕೆ ಕರಗಳನೆತ್ತಿ ಪಾರ್ವತೀವಲ್ಲಭನಾದ ಪರಮೇಶ್ವರನನ್ನು ಕೊಂಡಾಡಿ ಜಯಘೋಷವನ್ನು ಮಾಡಿದರು. ನಂತರ ವೇ|| ಗುರುಪಾದಯ್ಯ ಶಂಕರಗುಡಿ ಇವರು ಶಿವಭಕ್ತಿಯ ಘನತೆಯ ಮೇಲೂ ವೇ|| ಗುರುಬಸವಯ್ಯ ಕನಡೆ ಇವರು ಗುರುಭಕ್ತಿಯ ಮೇಲೂ ಉಪನ್ಯಾಸ ಮಾಡಿದನಂತರ ಸಭಾಧ್ಯಕ್ಷರ ಭಾಷಣ ಮಾಡುವಾಗ್ಗೆ ಇಲ್ಲಿ ಗುರುವರ್ಗದವರಾದ ಮಹನೀಯರು ಶಿವಮತ ಘನತೆಯನ್ನು ವಹಿಸಿ ಭಕ್ತಿಜ್ಞಾನ ವೈರಾಗ್ಯ ಅಷ್ಟಾವರಣದ ಮಹಾತ್ಮೆಯನ್ನು ತಿಳಿದು ಆಚರಿಸಿ ಸಾತ್ವಿಕವೃತ್ತಿಯಿಂದ ನಮ್ಮ ಬಸವಾದಿಪ್ರಮಥರಂತೆ ಶಿವಾಚಾರ್ಯ ಸಂಪನ್ನರಾಗಿ ನಿಜವಾದ ಕೈವಲ್ಯವನ್ನು ಪಡೆಯಲಿ ಎಂಬುವ ಅವರ ಮನೋಭಾವವನ್ನು ತಿಳಿಸಿ ಮತೋದ್ಧಾರಕರಾದ ಸ್ಟಾರ್ ಪತ್ರಕರ್ತರಿಗೆ ನಾಲ್ಕು ರೂಪಾಯಿಗಳನ್ನು ಬಹುಮಾನವಾಗಿ ತೆಗೆದಿಟ್ಟು ಅನಂತರ ಎಲ್ಲಾ ಮಹನೀಯರಿಗೂ ಪುಷ್ಪಹಾರವನ್ನು ಸಮರ್ಪಿಸಿ ಅನಂತರ ಈ ಊರ ವೀರಶೈವ ಪ್ರಮುಖರಾದ ಮ|| ಶಿವಲಿಂಗಪ್ಪ ಗಣಾಚಾರಿ ದೇಶಮುಖಿ ಮ|| ಸಿದ್ಧಪ್ಪಾ ಚಪ್ಪಳಗಿ ಮ|| ಮಲ್ಲಪ್ಪಾ ಸೇಂದ್ರಿಕಾರ ಮ|| ಮಡಿವಾಳಪ್ಪಾ ದುರಗೆ ಮ|| ಕೆಂದಾನಪ್ಪಾ ಮಹಗಾವ ಮ|| ಷಣ್ಮುಖಪ್ಪಾ ತುರಕೋಟಿ ಮ|| ಮರಿಪ್ಪಾ ಹೊದಲೂರ ಮ|| ಗುರುಸಿದ್ಧಪ್ಪಾ ಗುದಗೆ ಮ|| ರೇವಣಸಿದ್ಧಪ್ಪಾ ಗೊಬ್ಬರೆ ಮ|| ಶಿದ್ಧಪ್ಪಾ ಹಾಲಣ್ಣನವರ ಮ|| ಶಿದ್ಧರಾಮಪ್ಪಾ ಕಮಲಾಪುರ ಮ|| ಶಾಂತಪ್ಪಾ ಶಿರಸಂಗಿ ಮ|| ಗುರುಪಾದಪ್ಪಾ ದುರ್ಗೇ ಮ|| ವಲ್ಲಪ್ಪಾ ಚಪ್ಪಳಗಿ ಮ|| ಕಾಶಪ್ಪಾ ಗುಡ್ಡಾ ಮ|| ಮಹದಪ್ಪಾ ಪೊಲೀಸ್ ಪಾಟೀಲ ಮ|| ಸಂಗಪ್ಪಾ ಮಹಗಾಂವ ಈ ಮೊದಲಾದ ಸದ್ಭಕ್ತಮಂಡಲಿಯ ಉದಾರಾಶ್ರಯದಿಂದ ಈ ಸಭೆಯು ಕೊನೆಮುಟ್ಟಿತೆಂದು ಶ್ರೀಗುರುಮೂರ್ತಿಯನ್ನು ಕೊಂಡಾಡಿ ನಂತರ ನಮ್ಮನ್ನಾಳುವ ನಿಜಾಮ ಸರಕಾರ ಉಸ್ಮಾನಬಾದಶಹ ಇವರಿಗೆ ಚಿರಾಯುವಾಗಲೆಂದು ಹರಸಿ, ತ್ರಿವಾರ ಜಯಘೋಷವನ್ನು ಮಾಡಿ ಮಂಗಲಾಚರಣೆಯಿಂದ ಸಭೆಯು ವಿಸರ್ಜನೆಯಾಯಿತು. ಎಲ್ಲಕ್ಕೂ ಹಿಂದುಳಿದ ನಿರಾಶ್ರಯವಾದ ಈ ಶಿವಮತಕ್ಕೆ ತವರಮನೆಯಾದ ಕಲ್ಯಾಣದ ಸಮಾಜವನ್ನು ಪ್ರಜ್ವಲಿಸುವ ಭಾರವು ಸರ್ವವೀರಶೈವ ಬಾಂಧವರದೇ ಇರುವದು. ಅದಕ್ಕಾಗಿ ಎಲ್ಲಾ ವೀರಶೈವ ಬಾಂಧವರೂ ತಮ್ಮ ತಮ್ಮಲ್ಲಿ ತಯಾರಿಸಿದ ಶಿವಾಚಾರ ಗ್ರಂಥಗಳು ಮತ್ತು ಶಿವಶರಣರ ವಚನಗಳು ಮತ್ತು ಮಾಸಿಕಪುಸ್ತಕಗಳು ಮತ್ತು ವರ್ತಮಾನ ಪತ್ರಗಳು ಇವೇ ಮೊದಲಾದವುಗಳನ್ನು ತಮ್ಮ ಉದಾರಾಶ್ರಯದಿಂದ ಈ ಸಮಾಜಕ್ಕೆ ಕಳುಹಿ ಜಗದ್ವಿಖ್ಯಾತವಾದ ಕೀರ್ತಿ ವಿಶೇಷವನ್ನು ಪಡೆಯುವರೆಂದು ಸರ್ವರ ಆಭಾರಿಯಾಗಿ ನಾನು ಬೇಡಿಕೊಳ್ಳುತ್ತೇನೆ.

ಓರ್ವ ಪ್ರಮಥರ ಪಾದಧೂಳಿ.

ಮಳವಳ್ಳಿ.

ಈಗ 6-7 ದಿವಸದಲ್ಲಿ ಮಳೆ ಆಗಿದೆ. ರಾಗಿ ಬಿತ್ತುತ್ತಾರೆ. ಈಗ 4-5 ದಿವಸದಿಂದ ಮಳೆ ಬಿದ್ದಿಲ್ಲ. ಸ್ವಲ್ಪಮಳೆ ಆದರೆ ಅನುಕೂಲ. ಜೋಳದ

want from them. The attitude that was exhibited that day will certainly shake the confidence of the public in the Chief Court and it would not be without justification if they suspect that the desire to keep in the good graces of the authority would override the sense of independent judgment—a condition which ought to be avoided. We need hardly point out that the capacity to deal out justice without fear or favour according to one's judgment without allowing it to get cramped or warped is the primary qualification that should count in seeking a place in the Chief Court and not any dream.

ಸ್ವದೇಶದ ವೃತ್ತಾಂತಗಳು.

ಮೈಸೂರು ನಿಯಮನಿರ್ಮಾಣ ಸಭೆಯು ಬರುವ ಸೆಪ್ಟಂಬರ್ ತಾ|| 18ರಲ್ಲಿ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡಿಯುವುದು.

ಗೌರ್ನಮೆಂಟ್ ಚೀಫ್ ಸೆಕ್ರೆಟರಿ ಮಿ|| ಕೆ. ಮೆಥ್ಯೂ, ಬಿ.ಎ., ಯವರು ಈ ತಾ|| 15 ರಿಂದ 18 ದಿನಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುತ್ತಾರೆ.

ರಾಜಧಾನಿಯಲ್ಲಿ ಪ್ರತಿದಿನದಲ್ಲೂ ಹಗಲುವೇಳೆ ಮೋಡ ಮುಸುಕಿಕೊಂಡು ನಾಲ್ಕಾರು ಹನಿಗಳು ಮಾತ್ರ ಉದುರಿ ರಾತ್ರಿವೇಳೆಯಲ್ಲಿ ಆಕಾಶವು ನಿರ್ಮಲವಾಗುತ್ತಿದೆ. ರೈತರು ಮಳೆಯು ಬಾರದುದರಿಂದ ಭಯಗ್ರಸ್ತರಾಗಿದ್ದಾರೆ. ಆಹಾರ್ಯ ಪದಾರ್ಥಗಳ ಬೆಲೆಯು ಏರುತ್ತಿದೆ. ಜನರಿಗೆ ನೆಗಡಿ, ಕೆಮ್ಮಲು ಹೆಚ್ಚಾಗಿದೆ.

ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿ ಗುತ್ತಲು ಗ್ರಾಮದಲ್ಲಿ ಮಂಡ್ಯ, ಮಳವಳ್ಳಿ, ಮದ್ದೂರು, ಚಿಕ್ಕರೆ, ಕಿಟ್ಟಹಳ್ಳಿ, ಮಕ್ಕಂದ ಮೊದಲಾದ ಸ್ಥಳಗಳ ವೀರಶೈವರು ಗುತ್ತಲು ಮಠದ ಪಟ್ಟದ ವೇ|| ಚಂದ್ರಶೇಖರಸ್ವಾಮಿಗಳ ಅಧ್ಯಕ್ಷತೆಯಲ್ಲೂ, ತುಮಕೂರಿನ ವೀರಶೈವ ಮಹಾಜನರು ಶ್ರೀ ಮುರುಘಾಮಠದಲ್ಲಿ ಪ್ಲೀಡರ್ ಮ|| ಗುರುಸಂಗಾರ್ಯರ ಅಧ್ಯಕ್ಷತೆಯಲ್ಲೂ, ಬೆಂಗಳೂರು ಡಿ|| ನೆಲಮಂಗಲದ ತಾ|| ತ್ಯಾಮಗೊಂಡ್ಲಿನ ವೀರಶೈವ ನಿವಾಸಿಗಳು ಪ್ರಜಾಪ್ರತಿನಿಧಿಸಭಾಮೆಂಬರರಾದ ಮ|| ಯಜಮಾನ್ ಜವಳಿ ಹುಚ್ಚಪ್ಪನವರ ಅಧ್ಯಕ್ಷತೆಯಲ್ಲೂ ಸಭೆಗಳನ್ನು ನಡೆಯಿಸಿ ಬೆಂಗಳೂರು ಮೈಸೂರು ಸಂಸ್ಕೃತ ಕಾಲೇಜುಗಳಿಗೆ ಬ್ರಾಹ್ಮಣೇತರರನ್ನು ಸೇರಿಸಬಾರದೆಂಬ ಬಗ್ಗೆ ಕಮಿಟಿಯವರು ಕೊಟ್ಟಿರುವ ಅಭಿಪ್ರಾಯವನ್ನು ಖಂಡಿಸಿ ವೀರಶೈವರನ್ನು ಸೇರಿಸಿಕೊಳ್ಳಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ನಿರ್ಧಾರವನ್ನು ಮಾಡಿ ಚೀಫ್ ಸೆಕ್ರೆಟರಿಯವರಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ.

ಪ್ರಸಿದ್ಧ ಪುರುಷರ ಮರಣಗಳು.

ಕಳೆದವಾರ ಕೆಲ ಮಹಾಪುರುಷರ ದುಃಖಕರ ಮರಣವಾರ್ತೆಗಳು ಬಂದಿರುತ್ತವೆ. ಹಾಗೆ ಮೃತರಾದವರಲ್ಲಿ ಲಾರ್ಡ್ ನಾರ್ತ್‌ಕ್ಲಿಫ್‌ರವರು ಒಬ್ಬರು. ಇವರು ವೃತ್ತಪತ್ರಿಕೆಗಳ ದೊರೆಯೆನ್ನಿಸಿಕೊಳ್ಳುತ್ತಿದ್ದರು. ಆಂಗ್ಲ ದೇಶದಲ್ಲಿ ಪ್ರಸಿದ್ಧಗಳಾದ ಅನೇಕ ವೃತ್ತಪತ್ರಿಕೆಗಳಿಗೆ ಇವರ ಸಂಬಂಧವಿದ್ದಿತು. 1896 ನೆ ವರ್ಷದಲ್ಲಿ ಇವರಿಂದ ಸ್ಥಾಪಿತವಾಗಿ ನಡೆದುಕೊಂಡು ಬರುತ್ತಿರುವ ''ಡೇಲಿ ಮೇಯಿಲ್'' ಎಂಬ ಪತ್ರಿಕೆಗೆ 13½ ಲಕ್ಷ ಮಂದಿ ವರ್ಗಣಿದಾರರಿರುವರೆನ್ನುವಾಗ ಅವರ ಪ್ರತಿಭೆಯು ಎಷ್ಟು ಅಗಾಧವಾದುದೆಂಬುದನ್ನು ಊಹಿಸಿಕೊಳ್ಳಬಹುದು. ಮತ್ತು ಲಂಡನ್ ಟೈಮ್ಸ್ ಪತ್ರಿಕೆಗೂ ಕೂಡ ಇವರು ವ್ಯವಸ್ಥಾಪಕರಾಗಿದ್ದರು. ಜಗತ್ತಿನಲ್ಲಿ ಪತ್ರಿಕೆಗಳು ಎಷ್ಟು ಅಘಟಿತಘಟನ ಸಾಮರ್ಥ್ಯವುಳ್ಳವುಗಳೆಂಬುದನ್ನು ಇವರು ಪ್ರಪಂಚದ ನಿದರ್ಶನಕ್ಕೆ ತಂದುಕೊಟ್ಟಿದ್ದರು. ಯುದ್ಧಸಮಯದಲ್ಲಿ ಆಂಗ್ಲ ಮಂತ್ರಿಪದವಿಯಲ್ಲಿದ್ದ ಆಸ್ಕ್ವಿತ್‌ರವರ ನೀರಸಕಾರ್ಯಭಾರದಿಂದ ಆಂಗ್ಲದೇಶದ ವಿಜಯಕ್ಕೆ ಸೂಚಕವಾದ ಚಿಹ್ನೆಗಳು ತೋರದೆ ಇರಲು, ಆಗ ಅವರನ್ನು ಮಂತ್ರಿಪದವಿಯಿಂದ ನಿವೃತ್ತಿಗೊಳಿಸಲು ಇವರ ಪತ್ರಿಕೆಗಳು ಬೇಕಾದಷ್ಟು ಆಂದೋಳನವನ್ನು ನಡೆಯಿಸಿದುವು. ಅದರ ಫಲವಾಗಿಯೇ ಈಗಣ ಲಾಯಿಡ್ ಜಾರ್ಜ್ ಮಂತ್ರಿತ್ವವು ಏರ್ಪಟ್ಟಿತು. ಇಂಥ ಚಳವಳವನ್ನು ಇವರ ಪತ್ರಿಕೆಗಳು ಎಷ್ಟೋಸಲ ನಡೆಯಿಸಿರುವುವು. ಶತ್ರುದೇಶಗಳಲ್ಲಿ ಆಂಗ್ಲಪ್ರಭುತ್ವದ ಮೇಲೆ ಅನುಕೂಲಾಭಿಪ್ರಾಯವುಂಟಾಗುವಂತೆ ಮಾಡಲು ನಿಯುಕ್ತವಾಗಿದ್ದ ಪ್ರಚಾರಕ ಸಂಘಕ್ಕೆ ಇವರು ಅಧ್ಯಕ್ಷರಾಗಿ ಮಾಡಲ್ಪಟ್ಟಿದ್ದರು. ಮತ್ತು ಯುದ್ಧಕಾಲದಲ್ಲಿ ಅಮೇರಿಕಾ ಸಂಯುಕ್ತರಾಷ್ಟ್ರಗಳಿಗೆ ಕಳುಹಿಸಲ್ಪಟ್ಟಿದ್ದ ಯುದ್ಧಸಂಘಕ್ಕೆ ಇವರು ಅಧ್ಯಕ್ಷರಾಗಿದ್ದರು. ಇವರ ಪ್ರಯತ್ನದಿಂದಲೇ ಅಮೇರಿಕಾವು ಮಿತ್ರಮಂಡಲೀ ಪಕ್ಷಕ್ಕೆ ಸೇರಿ ಯುದ್ಧಕ್ಕೆ ಧುಮಿಕುವಂತಾಯಿತು. 1917ನೆ ವರ್ಷದಲ್ಲಿ ಇವರು ಲಾರ್ಡ್ ಪದವಿಗೇರಿಸಲ್ಪಟ್ಟರು. ಆಂಗ್ಲಸಾಮ್ರಾಜ್ಯದ ದೇಶಗಳನ್ನೆಲ್ಲಾ ಇವರು ಪ್ರತ್ಯಕ್ಷವಾಗಿ ಅವಲೋಕಿಸಿದ್ದರು. ಕಳೆದವರ್ಷ ನಮ್ಮ ಭರತಖಂಡಕ್ಕೂ ಜಪಾನ್ ಮೊದಲಾದ ಪೂರ್ವದೇಶಗಳಿಗೂ ಬಂದು ಹೋಗಿದ್ದರು. ತುರ್ಕಿಗೆ ನ್ಯಾಯವಾದ ಸಂಧಿಯನ್ನು ಮಾಡಿಕೊಟ್ಟು ಭರತಖಂಡದ ಮಹಮ್ಮದೀಯರನ್ನು ಸಂತೃಪ್ತಿಪಡಿಸಿದ್ದಲ್ಲದೆ ಶಾಂತಿಸ್ಥಾಪನವಾಗಲಾರದೆಂಬುದು ಇವರ ಅಭಿಪ್ರಾಯವಾಗಿದ್ದಿತು. ತುರ್ಕಿ ಸಮಸ್ಯೆಯು ಬಗೆಹರಿಯುವವರೆಗಾದರೂ ಇವರು ಉಳಿದಿದ್ದರೆ ಚೆನ್ನಾಗಿರುತ್ತಿದ್ದಿತು. ಅಂತ್ಯಕಾಲದಲ್ಲಿ ಇವರಿಗೆ 57 ವರ್ಷವಯಸ್ಸು. ಈ ಮಹನೀಯರು ಕೆಲದಿನಗಳಿಂದ ಅಸ್ವಸ್ಥರಾಗಿದ್ದು ಕಳೆದ ಸೋಮವಾರ ವಿಧಿವಶರಾದರು.

ಇನ್ನೊಬ್ಬರು ಈಗಣ ಐರ್ಲೆಂಡ್ ಪ್ರಭುತ್ವಕ್ಕೆ ಅಧ್ಯಕ್ಷರಾಗಿದ್ದ ಸರ್ ಆರ್ಥರ್ ಗ್ರಿಫಿತ್‌ರವರು. ಇವರು ಸಣ್ಣತನದಿಂದ ಮಹಾಪದವಿಗೇರಿದವರು. ಐರ್ಲೆಂಡಿನಲ್ಲಿ ಒಬ್ಬ ಕಂಪಾಜಿಟರ ಮಗನಾಗಿ ಹುಟ್ಟಿದ ಇವರು ಡಬ್ಲಿನ್ ಪಟ್ಟಣದಲ್ಲಿ ಒಂದು ವೃತ್ತಪತ್ರಿಕಾ ಮುದ್ರಣಾಲಯದ ಕೆಲಸದಲ್ಲಿ ಕೆಲಕಾಲವಿದ್ದು, ಅಲ್ಲಿಂದ ದಕ್ಷಿಣಾಫ್ರಿಕಾಕ್ಕೆ ಹೋಗಿದ್ದು ಮರಳಿ ಐರ್ಲೆಂಡಿಗೆ ಬಂದು ''ಯುನೈಟೆಡ್ ಐರಿಶ್‌ಮನ್'' ಎಂಬ ವೃತ್ತಪತ್ರಿಕೆಯನ್ನು ಸ್ಥಾಪಿಸಿದರು. ಮತ್ತು ಅಲ್ಲಿಯ ಸಿನ್‌ಫಿನಿಯನ್ ಉದ್ಯಮಕ್ಕೆ ಸ್ಥಾಪಕರಾಗಿ, ತನ್ನ ಜೀವಿತಕಾಲವನ್ನೆಲ್ಲಾ ಆ ಉದ್ಯಮಕ್ಕೇ ವಿನಿಯೋಗಿಸಿದರು. ಈ ಪ್ರಯತ್ನದಲ್ಲಿ ಎಷ್ಟೋಸಲ ಇವರು ಕಾರಾಗೃಹ ನಿರ್ಬಂಧವನ್ನು ಅನುಭವಿಸಿ ಬಂದರು. ಇವರ ಸ್ವದೇಶಸೇವಾಧುರಂಧರತೆಯ ಪ್ರಭಾವವೇ ಈಗಣ ಐರ್ಲೆಂಡ್ ಸ್ವತಂತ್ರ ಪ್ರಭುತ್ವಪ್ರಾಪ್ತಿಗೆ ಎಷ್ಟೋಮಟ್ಟಿಗೆ ಕಾರಣವಾಗಿದ್ದಿತು. 1918ನೆ ವರ್ಷದಲ್ಲಿ ಇವರು ಸಿನ್‌ಫಿನಿಯನ್ ಪ್ರಮುಖತ್ವವನ್ನು ತ್ಯಜಿಸಿ, ಡಿ. ವೆಲರಾರವರಿಗೆ ವಹಿಸಿ, ಈಗಣ ಪ್ರಭುತ್ವವಿಷಯಕವಾದ ಸಂಧಿಕಾರ್ಯಭಾರದಲ್ಲಿ ಸೇರಿ, ಆ ಸಂಧಿಪತ್ರಕ್ಕೆ ರುಜು ಹಾಕಿದವರಲ್ಲಿ ಇವರೂ ಒಬ್ಬರಾಗಿದ್ದರು. ಇವರು 10 ದಿನಗಳಕಾಲ ಇನ್‌ಫ್ಲುಯಂಜಾ ವ್ಯಾಧಿಪೀಡಿತರಾಗಿದ್ದು, ಗಂಟಲಲ್ಲಿ ಬೆಳೆದಿದ್ದ ದುರ್ಮಾಂಸಕ್ಕೆ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡು ನೆಮ್ಮದಿಯಾಗಿ ಬರುತ್ತಿದ್ದಾಗ ವೈದ್ಯಶಾಲೆಯನ್ನು ನೋಡುವುದಕ್ಕೆ ಹೋಗಿ ಮೆಟ್ಟಿಲನ್ನು ಇಳಿಯುವಾಗ ಮುಗ್ಗರಿಸಿ ಬಿದ್ದು ಮೂರ್ಛೆಗೊಂಡು ಸ್ವಲ್ಪಕಾಲದೊಳಗೇ ದೇಹವನ್ನು ಬಿಟ್ಟರು. ಐರ್ಲೆಂಡಿನ ಪ್ರಕೃತ ದುರವಸ್ಥೆಯನ್ನು ಕಂಡು ಇವರಿಗೆ ಉಂಟಾಗಿದ್ದ ಮನೋವ್ಯಥೆಯು ಸಹ ಇವರ ನಿರಸ್ಥಿತಿಗೂ ಅಕಾಲಮರಣಕ್ಕೂ ಅನೇಕಾಂಶದಿಂದ ಕಾರಣವಾಯಿತೆಂದು ಭಾವಿಸಲ್ಪಟ್ಟಿದೆ. ಇವರ ಮರಣವಾರ್ತೆಯು ಲಂಡನ್ ಪಟ್ಟಣಕ್ಕೆ ಮುಟ್ಟಿದ ಕೂಡಲೇ ಮಹಾವಿಚಾರವುಂಟಾಯಿತು. ಬ್ರಿಟಿಷ್ ಪಕ್ಷವಾಗಿ ಮುಖ್ಯಮಂತ್ರಿಯವರು ಸಾನುತಾಪ ತಂತ್ರೀವಾರ್ತೆಯನ್ನು ಕಳುಹಿಸಿ, ಅದರಲ್ಲಿ ಗ್ರಿಫಿತ್‌ರವರ ದೇಶಭಕ್ತಿ ಧೈರ್ಯಸ್ಥೈರ್ಯಾದಿಗಳನ್ನು ಕೊಂಡಾಡಿರುವರು. ಡಬ್ಲಿನ್ ಪಟ್ಟಣದಲ್ಲೆಲ್ಲಾ ದುಃಖಚಿಹ್ನೆಯು ಪ್ರದರ್ಶಿಸಲ್ಪಟ್ಟಿತು.

ನಮ್ಮ ಭಾರತ ಮಹನೀಯರಲ್ಲಿ ದಿವಾನ್ ಬಹದ್ದೂರ್ ಕರುಣಾಕರಮೆನನ್ ಬಿ.ಎ. ರವರು ಕಳೆದ ತಾ|| 11ರ ರಾತ್ರಿ ಮಲಬಾರಿಗೆ ಸೇರಿದ ಪರಪನಗುಡಿಯಲ್ಲೂ, ಸರ್ ವಿಠಲದಾಸ ಥಾಕರ್ಸೆಯವರು ಕಳೆದ ತಾ|| 12ರ ಮಧ್ಯಾಹ್ನ ಬೊಂಬಾಯಿಯಲ್ಲಿರುವ ತಮ್ಮ ಭವನದಲ್ಲೂ ವಿಧಿವಶರಾದರು. ಇವರಿಬ್ಬರಲ್ಲಿ ಮೊದಲನೆಯವರು ಮೊಟ್ಟಮೊದಲು ಮದ್ರಾಸ್ ಹಿಂದೂಪತ್ರಿಕೆಯು ಕೈ. ಜಿ. ಸುಬ್ರಹ್ಮಣ್ಯಯ್ಯರ ಯಾಜಮಾನ್ಯದಿಂದ ನಡೆಯುತ್ತಿದ್ದಾಗ ಅದರ ಸಂಪಾದಕವರ್ಗದಲ್ಲಿ ಸೇರಿ ಕೆಲಸಮಾಡುತ್ತಿದ್ದು ಬಳಿಕ ಅದರ ಮುಖ್ಯಸಂಪಾದಕರಾಗಿಯೂ ''ಮದರಾಸ್‌ರಿವ್ಯೂ'' ಎಂಬ ತ್ರೈಮಾಸಿಕ ಪತ್ರಿಕೆಗೂ ಕೂಡ ಸಂಪಾದಕರಾಗಿಯೂ ಬಹುಕಾಲ ಕೆಲಸಮಾಡಿ, ಕಡೆಗೆ ''ಇಂಡಿಯನ್ ಪೇಟ್ರಿಯಟ್'' ಎಂಬ ದೈನಿಕಪತ್ರಿಕೆಯನ್ನು ಪ್ರಾರಂಭಿಸಿ ಕಳೆದ 12 ವರ್ಷಗಳಿಂದಲೂ ಒಳ್ಳೆಯ ಸಾಮರ್ಥ್ಯದಿಂದ ನಡೆಯಿಸಿಕೊಂಡು ಬರುತ್ತಿದ್ದರು. ದೇಹಾರೋಗ್ಯವು ಕ್ಷೀಣಿಸುತ್ತ ಬಂದುದರಿಂದ ಸ್ವಲ್ಪಕಾಲದ ಹಿಂದೆ ಆ ಉದ್ಯೋಗದಿಂದ ವಿರಾಮವನ್ನು ಹೊಂದಿದ್ದರು. ಮದ್ರಾಸು ಅಧಿಪತ್ಯದ ಪತ್ರಿಕಾಸಂಪಾದಕವರ್ಗದಲ್ಲಿ ಇವರು ಅತಿ ಪ್ರಾಚೀನರೂ ವಿಖ್ಯಾತಿವಂತರೂ ಆಗಿದ್ದರು.

2 ನೆಯ ಸರ್ ಥಾಕರ್ಸೆಯವರು ವಾಣಿಜ್ಯ ವಿಷಯದಲ್ಲೂ, ಅರ್ಥಶಾಸ್ತ್ರದಲ್ಲೂ ತುಂಬಾ ಅನುಭವವುಳ್ಳವರೂ ದಾನಶೂರರೂ ಆಗಿದ್ದರು. ಯಂತ್ರಾಲಯಾಧಿಪತಿಗಳ ಪಕ್ಷದಿಂದ ಸಾಮ್ರಾಜ್ಯಶಾಸನ ಸಭೆಯಲ್ಲಿ ಸಭಿಕರಾಗಿದ್ದರು. ತಮ್ಮ ಆರೋಗ್ಯವು ಕುಂದಿದುದರಿಂದ 1 ತಿಂಗಳ ಕೆಳಗೆ ಆ ಪದವಿಗೆ ರಾಜೀನಾಮೆ ಕೊಟ್ಟರು. ಇವರ ಗೌರವಾರ್ಥವಾಗಿ ಇಂಡಿಯನ್ ಕಾಮರ್ಸ್ ಜೇಂಬರ್ಸ್‌ರವರೂ ಉಳಿದ ವರ್ತಕಸಂಘಗಳವರೂ ಸಹ ತಮ್ಮ ಕಾರ್ಯಾಲಯಗಳನ್ನು ಒಂದುದಿವಸ ಮುಚ್ಚಿ ಸಾನುತಾಪವನ್ನು ಪ್ರದರ್ಶಿಸಿದರು.

ಮಹಾರಾಷ್ಟ್ರ ನಾಯಕರ ಓರೆಮೊಗ.

ಸ್ವ|| ತಿಲಕರ ಕಾಲದಲ್ಲಿ ಸೂರತ್ತಿನೊಳಗೆ ಕೂಡಿದ್ದ ರಾಷ್ಟ್ರೀಯ ಮಹಾಸಭೆಯು ಮಹಾರಾಷ್ಟ್ರ ಪ್ರಮುಖರ ಹಠದಿಂದಲೇ ರಸಾಭಾಸಗೊಂಡು ರಾಜಕೀಯ ವಾದಿಗಳಲ್ಲಿ ಎರಡು ಪಕ್ಷಗಳು ಹುಟ್ಟಿ ತಿಲಕರ ಪಕ್ಷದ ಉಗ್ರವಾದಿಗಳು ಮಹಾಸಭೆಯ ಸಂಬಂಧವನ್ನೇ ಕಳೆದುಕೊಂಡಿದ್ದರು. ಎಷ್ಟೋ ಕಾಲದಮೇಲೆ ಅನಿಬೆಸೆಂಟಮ್ಮನವರ ಸಾಹಸದಿಂದ ಮತ್ತೆ ತಿಲಕರ ಪಕ್ಷದವರು ಇದಕ್ಕೆ ಸೇರಿಸಲ್ಪಟ್ಟರು. ಈಗಲಾದರೊ ಅದು ಉಗ್ರಮತವಾದಿಗಳ ಏಕಸೂತ್ರಾವಲಂಬಿಯಾಗಿ ನಿಂತಿರುವುದು ಸರ್ವವಿದಿತವಾಗಿದೆ. ಅದರ ನಾಯಕರಲ್ಲಿ ಹಲವರು ಕಾರಾಗೃಹವನ್ನು ಸೇರಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರ ನಾಯಕರು ಆ ಕಾಂಗ್ರೆಸ್ ಸಂಬಂಧವನ್ನು ಉಳಿಯಿಸಿಕೊಳ್ಳುವುದಕ್ಕೂ ಇಷ್ಟಪಡದೆ ಅದರಭಿಪ್ರಾಯದಲ್ಲಿ ಏಕೀಭವಿಸದೆ ಓರೆಮೊಗವನ್ನು ಹೊತ್ತಿರುವುದು ಅವರ ಶಠತ್ವಕ್ಕೆ ಒಂದು ನಿದರ್ಶನವಾಗಿದೆ. ಈಗಣ ಮಹಾರಾಷ್ಟ್ರ ಪ್ರಮುಖರಲ್ಲಿ ಶ್ರೀಯುತ ಚಿಂತಾಮಣಿ ಕೇಳ್ಕರ್‌ರವರು ಪ್ರಧಾನರಾಗಿದ್ದಾರೆ. ಇವರು ತಿಲಕರಿಗೆ ಬಲಭುಜದಂತೆ ಇದ್ದವರು. ಮರಾಟಾಪತ್ರಿಕೆಗೆ ಇವರು ಸಂಪಾದಕರಾಗಿರುವುದಲ್ಲದೆ ಮಹಾರಾಷ್ಟ್ರ ಪ್ರಾಂತದ ರಾಷ್ಟ್ರೀಯಸಭೆಯ ಅಧ್ಯಕ್ಷರಾಗಿಯೂ, ಕಾಂಗ್ರೆಸ್ ಕಾರ್ಯಕಾರಿ ಸ್ಥಾಯಿಸಂಘದ ಸಭಿಕರಾಗಿಯೂ ಇದ್ದರು. ಕಾಂಗ್ರೆಸ್ ಸಂಬಂಧದ ಇವೆರಡು ಪದವಿಗಳಿಗೂ ಈಗ ಇವರು ರಾಜೀನಾಮೆ ಕೊಟ್ಟರು. ಕಾರಣವೇನೆಂದರೆ-ಶಾಸನಸಭೆ ಮೊದಲಾದುವುಗಳಿಗೆ ದೇಶೀಯರು ಸೇರಕೂಡದೆಂಬ ಕಾಂಗ್ರೆಸ್ ಸಿದ್ಧಾಂತವು ಇವರಿಗೆ ಒಪ್ಪಿತವಲ್ಲದೆ ಇರುವುದೇ ಆಗಿದೆಯಂತೆ. ಆ ರಾಜಕೀಯ ಸಭೆಗಳಲ್ಲಿ ಸೇರಿ ಪ್ರಭುತ್ವಕ್ಕೆ ಪ್ರತಿಘಟನವನ್ನುಂಟುಮಾಡಬೇಕೆಂಬುದೇ ಇವರ ತತ್ತ್ವ. ಇದೇ ಅಭಿಪ್ರಾಯವು ತಿಲಕರಿಗೂ ಇದ್ದಿತು. ಕಾಂಗ್ರೆಸ್ ತತ್ತ್ವಕ್ಕೆ ಭಿನ್ನವಾದ ಅಭಿಪ್ರಾಯವುಳ್ಳವರು ಅದರ ಯಾವ ಸಂಘದ ಯಾಜಮಾನ್ಯದಲ್ಲೂ ಇರಕೂಡದೆಂಬ ನಿಬಂಧನೆಯನ್ನು ಹಕೀಂ ಅಜಮಲ್‌ಖಾನರು ಇವರಿಗೆ ಮುಖತಃ ಹೇಳಿದ ಮೇಲೆ ಇವರು ರಾಜೀನಾಮೆ ಕೊಟ್ಟಿದ್ದಾರೆ. ಇದರಿಂದ ರಾಜಕೀಯ ನಾಯಕರಲ್ಲೇ ಭೇದಗಳು ದಿನದಿನಕ್ಕೆ ಪ್ರಬಲಿಸುತ್ತಿರುವುದೂ ಅಸಹಾಯೋದ್ಯಮಕ್ಕೆ ಉಂಟಾಗುತ್ತಿರುವ ಶೈಥಿಲ್ಯವು ಕೂಡ ವ್ಯಕ್ತವಾಗುತ್ತಿರುವುದು. ಈ ಅನೈಕಮತ್ಯ ಪ್ರಾಬಲ್ಯದಲ್ಲಿ ಸ್ವರಾಜ್ಯವು ಭರತಖಂಡಕ್ಕೆ ಸಿದ್ಧಿಸುವುದೆಂದಿಗೋ ತಿಳಿಯಲಿಲ್ಲ.

ನಿಮ್ನಜಾತಿಯವರಿಗೆ ಪ್ರೋತ್ಸಾಹ.

ಅಸ್ಪೃಶ್ಯರೆಂದು ಗಣಿಸಲ್ಪಟ್ಟಿದ್ದ ನಿಮ್ನಜಾತಿ ಜನರು ಎಷ್ಟು ದೀರ್ಘಕಾಲದಿಂದ ಅಧಃಪತನವನ್ನು ಹೊಂದಿ ನಾನಾ ಕಷ್ಟಗಳನ್ನು ಸಹಿಸುತ್ತಿದ್ದರೋ ಅಷ್ಟು ಶೀಘ್ರಕಾಲದಲ್ಲಿ ಅವರ ಅಭ್ಯುನ್ನತಿಯಾಗುವುದಕ್ಕೆ ತಕ್ಕ ಸಾಹಾಯ್ಯ ಪ್ರೋತ್ಸಾಹಗಳು ಭರತಖಂಡದ ಎಲ್ಲ ರಾಷ್ಟ್ರೀಯ ಪ್ರಭುತ್ವಗಳಿಂದಲೂ, ದೇಶೀಯ ಸಂಸ್ಥಾನಗಳಿಂದಲೂ, ದೇಶಭಕ್ತರಾದ ಪ್ರಜೆಗಳಿಂದಲೂ ಸಹ ಈಗ ಮಾಡಲ್ಪಡುತ್ತಿರುವುದು ಸಂತೋಷಪ್ರದವಾಗಿದೆ. ''ಹಿಂದೆ ರಾಮಾನುಜಾಚಾರ್ಯರು ಪಂಚಮರನ್ನು ದೇವತಾಸಮಾನರಾದ ಆಳ್ವಾರುಗಳನ್ನಾಗಿ ಮಾಡಿ ಸ್ವೀಕರಿಸಿದರು; ಬಸವೇಶನು ಅವರಿಗೆ ಲಿಂಗಧಾರಣೆ ಮಾಡಿಸಿ ಪಿರಿಯಭಕ್ತರೆಂದು ಕರೆದು ಸನ್ಮಾನಿಸಿದನು.'' ಇತ್ಯಾದಿಯಾಗಿ ಹಿಂದಣವರ ಕಥೆಯನ್ನೇ ಹೇಳಿಕೊಂಡು ಈಗಣ ಸಮಯದಲ್ಲಿ ತಮ್ಮ ನಿಮ್ನಜಾತ್ಯಭಿಮಾನದ ಬೂಟಾಟಿಕೆಯನ್ನು ಮೆರೆಯಿಸಿ ಮುಗಿಸಿಬಿಡುವುದಕ್ಕಿಂತಲೂ ಸರ್ವರೂ ಆ ಜನರ ಅಸ್ಪೃಶ್ಯತ್ವನಿವಾರಣೆಗೆ ಅವಕಾಶ ಕೊಟ್ಟು, ಅವರಲ್ಲಿ ವಿದ್ಯೆ ಶುಚ್ಯಶುಚಿಜ್ಞಾನ, ದುರಾಹಾರಪರಿವರ್ಜನ, ಇತ್ಯಾದಿ ಗುಣಗಳು ನೆಲಸುವುದಕ್ಕೆ ಪ್ರೋತ್ಸಾಹ ಕೊಡುವುದು ಅತ್ಯವಶ್ಯಕವು. ಮದ್ರಾಸು ಸರ್ಕಾರದವರು ಈ ನಿಮ್ನಜಾತಿ ಜನರನ್ನು ಮುಂಬರಿಸುವುದಕ್ಕೆ ಅನಂತವಿಧದ ಪ್ರೋತ್ಸಾಹಗಳನ್ನು ಮಾಡಿದ್ದಾರೆ. ಅವರ ಪ್ರತಿನಿಧಿಯೊಬ್ಬರು ಅಲ್ಲಿಯ ನಿಯಮನಿರ್ಮಾಣಸಭೆಯಲ್ಲಿ ಸಭಿಕರಾಗಿರುವಂತೆ ಮಾಡಿದ್ದಾರೆ. ಸರ್ಕಾರಿ ಮತ್ತು ಗ್ರಾಂಟಿನ್ನೇಡ್ ಪಾಠಶಾಲೆಗಳಲ್ಲೆಲ್ಲಾ ಅವರ ಹುಡುಗರನ್ನು ಸೇರಿಸಬೇಕೆಂದು ಅಪ್ಪಣೆ ಮಾಡಿರುವುದಲ್ಲದೆ ಈ ಸೌಕರ್ಯಕ್ಕಾಗಿ ಪಾಠಶಾಲೆಗಳನ್ನು ದೇವಾಲಯ ಮೊದಲಾದ ಸರ್ವಜನಪ್ರವೇಶ ಸಾಧ್ಯವಲ್ಲದ ಪ್ರದೇಶಗಳಿಂದ ಸಾಧ್ಯವಾದಮಟ್ಟಿಗೂ ತಪ್ಪಿಸಿ, ಎಲ್ಲರ ಪ್ರವೇಶಕ್ಕೂ ಸಾಧ್ಯವಾಗುವ ಸ್ಥಳಗಳಲ್ಲೇ ಏರ್ಪಡಿಸಬೇಕೆಂದು ಅಪ್ಪಣೆ ಮಾಡಿದ್ದಾರೆ. ಬೊಂಬಾಯಿ ಸರ್ಕಾರದವರು ನಿಮ್ನಜಾತಿಜನರ ವಿದ್ಯಾಭಿವೃದ್ಧಿಗಾಗಿ ಪ್ರೋತ್ಸಾಹಕರವಾದ ಅಪ್ಪಣೆಯೊಂದನ್ನು ಈಗತಾನೇ ಮಾಡಿರುತ್ತಾರೆ. ಅದರಲ್ಲಿ ಕಾಣಿಸಿರುವುದೇನೆಂದರೆ—'' ಮಾಧ್ಯಮಿಕ (ಸೆಕೆಂಡರಿ) ಪಾಠಶಾಲೆಗಳಲ್ಲಿ ಓದುತ್ತಿರುವ ಪಂಚಮವಿದ್ಯಾರ್ಥಿಗಳಿಗೆ ಇದುವರೆಗೆ ಕೊಡಲ್ಪಡುತ್ತಿದ್ದ 5 ರೂ. ಮಾಸಿಕ ವಿದ್ಯಾರ್ಥಿವೇತನವು ಅವರಿಗೆ ಸಾಲದಿರುವ ಕಾರಣ 10 ರೂ.ಗಳಂತೆ 1921ನೆ ಜೂನ್ ತಿಂಗಳಿಂದಲೂ ಸಲ್ಲಿಸತಕ್ಕುದು. ಪ್ರೌಢತರಗತಿಗಳಲ್ಲಿ ಓದುವವರಿಗೆ 12-15 ರೂ. ಗಳಂತೆ ಮಾಸಿಕ ವಿದ್ಯಾರ್ಥಿಗಳನ್ನು ಕೊಡಬೇಕು'' ಎಂಬುದಾಗಿ. ಈ ವೇತನಗಳಿಗಾಗಿಯೇ ಬೊಂಬಾಯಿ ಸರ್ಕಾರದವರು ವರ್ಷಕ್ಕೆ 20 ಸಾವಿರ ರೂ. ಗಳನ್ನು ವೆಚ್ಚಮಾಡುತ್ತಿರುವರು; ಅಲ್ಲದೆ ನಿಮ್ನಜಾತಿಯ ಬಾಲವಿದ್ಯಾರ್ಥಿಗಳಿಗೆ ತಿಂಗಳೊಂದಕ್ಕೆ ಪ್ರತಿಯೊಬ್ಬನಿಗೂ 5 ರೂ. ನಂತೆ ವಿದ್ಯಾರ್ಥಿವೇತನವನ್ನು ಕೊಡಲಿಕ್ಕೆ ಅಪ್ಪಣೆಮಾಡಿ, ಅದಕ್ಕಾಗಿ ವರ್ಷ 1ಕ್ಕೆ 10 ಸಹಸ್ರ ರೂ. ಗಳನ್ನು ವಿನಿಯೋಗಿಸಲು ತೀರ್ಮಾನಿಸಿದ್ದಾರೆ; ಅಲ್ಲದೆ ಪೂನಾಪಟ್ಟಣದಲ್ಲಿ ಈ ಜಾತಿಯ 60 ಮಂದಿ ವಿದ್ಯಾರ್ಥಿಗಳಿಗಾಗಿ ಉಚಿತಭೋಜನಶಾಲೆಯೊಂದನ್ನು ಏರ್ಪಡಿಸುವವರಾಗಿದ್ದಾರೆ, ಮತ್ತು ವಿದ್ಯಾರ್ಥಿಗಳಿಗೆ ಹಲಗೆ ಬಳಪ ಪುಸ್ತಕಗಳನ್ನು ತೆಗೆದುಕೊಡಲಿಕ್ಕಾಗಿ 1000 ರೂ. ಗಳನ್ನುಬೇರೆ ವೆಚ್ಚಮಾಡಲು ಅಪ್ಪಣೆ ಮಾಡಿದ್ದಾರೆ. ನೆರೆಹೊರೆಯ ಸರ್ಕಾರಗಳೆಲ್ಲಾ ನಿಮ್ನಜಾತಿ ಸಮುದ್ಧಾರಕ್ಕಾಗಿ ಇಷ್ಟು ಪ್ರೋತ್ಸಾಹಗಳನ್ನು ಮಾಡುತ್ತಿರುವಾಗ ನಮ್ಮ ಮೈಸೂರು ಪ್ರಭುತ್ವದವರು ತಟಸ್ಥರಾಗಿದ್ದರೆ ಇದರ ಗೌರವಕ್ಕೆ ತಡೆಯುವುದೇ? ಇವರು ಇದುವರೆಗೆ ವಿ[illegible]ಯೂ ಮಾಡುತ್ತಲೂ ಇರುವ ನಿಮ್ನಜಾತಿ [illegible]ತ್ಸಾಹವು ಆ ನೆರೆಯ ಸರ್ಕಾರಗಳ ಏರ್ಪಾಟುಗಳಿಗಿಂತಲೂ ಏನೂ ಕಡಿಮೆಯಾಗಿಲ್ಲದಿರುವುದು ಸಂತೋಷಪ್ರದವೇ ಸರಿ.

''ಲೋಕಾಸ್ಸಮಸ್ತಾಸ್ಸುಖಿನೋಭವಂತು''

ತಿರುವಾಂಕೂರು ಸಂಸ್ಥಾನದಲ್ಲಿ ಅಸಹಾಯೋದ್ಯಮ ನಿರೋಧ.

ಕಾರಾಗೃಹವಾಸ ಶಿಕ್ಷೆಯನ್ನನುಭವಿಸಿ ಬಂದ ಚೊಕ್ಕಲಿಂಗಂ ಪಿಳ್ಳೆಯೆಂಬುವವರು ಕಳೆದ ಮೇ ತಿಂಗಳಲ್ಲಿ ಸುಚೀಂದ್ರಪಟ್ಟಣದ ಆಂಗ್ಲ ಪಾಠಶಾಲಾ ಭವನದಲ್ಲಿ ಅಸಹಾಯೋದ್ಯಮ ಪ್ರಶಂಸೆಮಾಡಿ ಉಪನ್ಯಾಸಕೊಟ್ಟರು. ಹೀಗೆ ಉಪನ್ಯಾಸ ನಡೆಯಲು ಪಾಠಶಾಲೆಯಲ್ಲಿ ಅವಕಾಶಕೊಟ್ಟುದಕ್ಕೆ ಕಾರಣವೇನೆಂದು ಅಲ್ಲಿಯ ವಿದ್ಯಾಶಾಖಾಧ್ಯಕ್ಷರು ಪಾಠಶಾಲೆಯ ಮ್ಯಾನೇಜರನ್ನು ಕೇಳಿರುವರು. ಆ ಸಭೆಗೆ ಇಬ್ಬರು ಡ್ರಾಯಿಂಗ್ ಮ್ಯಾಸ್ಟರುಗಳು ಹೋಗಿದ್ದರೆಂದು ಪೊಲೀಸರು ವರದಿಮಾಡಿದ್ದುದರಿಂದ ಅವರುಗಳನ್ನೂ ಸಮಾಧಾನಕೇಳಿರುವರು. ಮತ್ತು ಪಿಂಚನ್‌ದಾರರಾಗಿರುವ ದಿವಾನ್ ಪೇಷ್ಕಾರ್ ಕೃಷ್ಣಯ್ಯಂಗಾರರೆಂಬುವವರು ಒಂದು ಬಹಿರಂಗ ಸಭೆಯಲ್ಲಿ ಗಾಂಧಿಯವರನ್ನು ಕುರಿತು ಪ್ರಶಂಸೆಮಾಡಿ ಉಪನ್ಯಾಸಮಾಡಿದರೆಂಬ ಕಾರಣದಿಂದ ಸಮಾಧಾನಕೊಡಬೇಕೆಂದು ಅಲ್ಲಿಯ ಪ್ರಭುತ್ವದವರು ಅವರಿಗೂ ಬರೆದಿರುವರು. ತಿರುವಾಂಕೂರು ಸಂಸ್ಥಾನವು ತನ್ನಲ್ಲಿ ಅಸಹಾಯೋದ್ಯಮ ವ್ಯಾಪನೆಗೆ ಲೇಶವೂ ಅವಕಾಶ ಕೊಡಬಾರದೆಂದು ಅಷ್ಟು ಜಾಗರೂಕವಾಗಿರುವಾಗ, ನಮ್ಮ ಸಂಸ್ಥಾನವು ಗಾಂಧಿ ತಿಲಕ್ ಅಸಹಾಯೋದ್ಯಮ ವ್ಯಾಪನೆಗೂ ಕಾಂಗ್ರೆಸ್ ತತ್ವಪ್ರಚಾರಕ್ಕೂ ಪ್ರಶಂಸೆಗೂ ಪ್ರವೃತ್ತರಾಗಿರುವ ವಿದ್ಯಾರ್ಥಿಗಳಿಗೂ ವೃತ್ತಪತ್ರಿಕೆಗಳಿಗೂ ವಾಚಾಟುಗಳಿಗೂ ಸ್ವೇಚ್ಛಾವಕಾಶವನ್ನಿತ್ತಿರುವುದರ ತತ್ತ್ವವೇನೋ ತಿಳಿಯಲಿಲ್ಲ.

ಹುಲಿಯವೇಷದ ರಜಕಾಶ್ವ.

ಕಳೆದ ತಾ|| 14 ರ ಸಂಪದಭ್ಯುದಯ ಪತ್ರಿಕೆಯಲ್ಲಿ ''ವೀರಶೈವ'' ಎಂಬ ಸಂಕೇತನಾಮದ ಮುದ್ರೆಯಿಂದ ಒಂದು ಲೇಖನವು ಪ್ರಕಟಿಸಲ್ಪಟ್ಟಿದೆ. ''ಸ್ಟಾರ್‌ಪತ್ರಿಕಾ ಕರ್ತರು ವೀರಶೈವ ಪ್ರತಿನಿಧಿಗಳಂತೆ ವಿಜೃಂಭಿಸುತ್ತಾರೆ. ಇವರನ್ನು ವೀರಶೈವರಾದ ನಾವು ಯಾರೂ ಪ್ರತಿನಿಧಿಗಳಾಗಿ ಚುನಾಯಿಸಿಲ್ಲ. ಇವರ ಅಭಿಪ್ರಾಯವು ವೀರಶೈವ ಮಂಡಲಿಯ ಅಭಿಪ್ರಾಯವಲ್ಲ.··ಜುಲೈ 23 ನೇ ತಾರೀಖಿನ ಸ್ಟಾರ್‌ಪತ್ರಿಕೆಯಲ್ಲಿ ಶ್ರೀಮನ್ಮಹಾರಾಜರನ್ನೂ ಅವರ ಗೌರ್ನಮೆಂಟಿನವರನ್ನೂ ವಾಚಾಮಗೋಚರವಾಗಿ ಸ್ಟಾರ್‌ಪತ್ರಿಕಾ ಕರ್ತರು ನಿಂದಿಸಿರುವರು'' ಎಂದು ಮೊದಲಾಗಿ ಆ ಲೇಖನದಲ್ಲಿ ಹೇಳಲ್ಪಟ್ಟಿರುವುದು. ವೀರಶೈವ ಬೀಜೋತ್ಪನ್ನನಾದ ಯಾವನೊಬ್ಬನ ಬಾಯಿಂದಲೂ ಇಂಥ ಮಾತುಗಳು ಬರುವುದಿಲ್ಲವೆಂಬುದನ್ನು ವೀರಶೈವ ಪ್ರಪಂಚವೆಲ್ಲವೂ ಬಲ್ಲುದು. ಆ ತಾರೀಖಿನ ಸ್ಟಾರ್‌ಪತ್ರದಲ್ಲಿ ಶ್ರೀಮನ್ಮಹಾರಾಜರನ್ನೂ ಅವರ ಗೌರ್ನಮೆಂಟನ್ನೂ ಸ್ಟಾರ್‌ಕರ್ತರು ವಾಚಾಮಗೋಚರವಾಗಿ ನಿಂದಿಸಿರುವುದು ನಿಜವಾಗಿದ್ದರೆ ಈ ಲೇಖಕನೂ ನಿಜವಾದ ವೀರಶೈವನೇ ಸರಿ. ಹಾಗಿಲ್ಲದಿದ್ದರೆ ಇವನು ಅನ್ಯರೇತಸ್ಸಮುತ್ಪನ್ನನೆಂದು ತಿಳಿಯುವುದರಲ್ಲಿ ಅಭ್ಯಂತರವೇನು? ವಾಚಕವರ್ಗವೆಲ್ಲವೂ ಮತ್ತೊಂದುಸಲ ಆ ಸಂಚಿಕೆಯನ್ನು ಆದ್ಯಂತವಾಗಿ ಓದಿ ನಿರ್ಧರಿಸಿಕೊಳ್ಳಲಿ. ಕಳ್ಳಮೇವಿಗಾಗಿ ಹುಲಿಯಚರ್ಮವನ್ನು ಹೊದೆಯಿಸಿ ಕಬ್ಬಿನಗದ್ದೆಗೆ ಬಿಡಲ್ಪಟ್ಟ ರಜಕಾಶ್ವದಂತೆ ಭೇದೋಪಾಯ ಪ್ರಯೋಗಕ್ಕೆ ಕಪಟಯತ್ನ ಮಾಡಿರುವ ಈ ಲೇಖಕನು ತೋಟಗಾರನ ದಂಡಪ್ರಯೋಗಕ್ಕೆ ಗುರಿಯಾದ ರಜಕಾಶ್ವದ ಅವಸ್ಥೆಯಂತೆ ವೀರಶೈವಮಂಡಲಿಯ ಛೀತ್ಕಾರಕ್ಕೆ ಪಾತ್ರನಲ್ಲದೆ ಅನ್ಯಥಾ ಅಲ್ಲ. ಸ್ಟಾರ್‌ಪತ್ರಿಕೆಯೂ ಅದರ ಕರ್ತರೂ ವೀರಶೈವಮತದ ಸೇವೆಯೇ ಜೀವಿತದ ಸಾರ್ಥಕಕೃತ್ಯವೆಂದು ತಿಳಿದು ಕೈಂಕರ್ಯವನ್ನು ಮಾಡುತ್ತಿರುವರೇ ಹೊರತು ಸಂಪದಭ್ಯುದಯ ಕರ್ತರಂತೆ ದೇಶೋದ್ಧಾರಕತ್ವವನ್ನೇ ಆಗಲೀ ಮತೋದ್ಧಾರಕತ್ವವನ್ನೇ ಆಗಲೀ ವಿಜೃಂಭಿಸಿಕೊಂಡಿರುವುದು ಎಂದಿಗೂ ಇಲ್ಲ. ಸ್ಟಾರ್‌ಪತ್ರದ ರಾಜದ್ರೋಹಚಿಂತನೆಯೂ ಸಂಪದಭ್ಯುದಯದ ರಾಜನಿಷ್ಠಾಪರಿಮಾಣವೂ ಜಗತ್ತಿಗೇ ಗೊತ್ತು. ಮುಂಗೈಕಂಕಣಕ್ಕೆ ಕನ್ನಡಿಯು ಬೇಕೆ?

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಜಾತಿಪದ್ಧತಿ.

ಲೇಖಕ—ಸ್ವಾಮಿ ವಿರೂಪಾಕ್ಷ ಒಡೆಯರ್, ಪ್ರೊಫೆಸರ್, ಸಂಸ್ಕೃತ ಕಾಲೇಜು, ಇಂದೋರ.

ಜಗತ್ತಿನ ಎಲ್ಲಾ ಭಾಗದಲ್ಲಿಯೂ ಜಾತಿವಿಷಯಕವಾದ ಕೋಲಾಹಲವು ಉಂಟೇ ಉಂಟೆಂದು ಕೇಳಬರುವದು. ಆದರೆ ನಮ್ಮಾ ಭರತಖಂಡದಲ್ಲಿ ಮಾತ್ರ ಜಾತಿವಾದವು ವಿಶೇಷವಾಗಿದ್ದು ಪೃಥ್ವಿಯ ಎಲ್ಲ ಭಾಗಕ್ಕಿಂತಲೂ ಮೊದಲು ಜಾತಿಭೇದವು ಈ ಭಾರತೀಯರಲ್ಲಿಯೇ ಹುಟ್ಟಿತೆಂಬಲೂ ಇಲ್ಲಿಯೇ ಅದರ ಮಹತ್ವವು ವಿಶೇಷವಿರುವುದೆಂತಲೂ ಬಹುಜನರ ನಂಬಿಕೆಯುಂಟು. ವಿಚಾರಮಾಡಿ ನೋಡಿದರೆ ಇದು ಅಹುದೆಂತಲೇ ಕಂಡುಬರುವುದು ಯಾಕೆಂದರೆ—ವೇದ, ಉಪನಿಷತ್ತುಗಳನ್ನು ಬಿಟ್ಟು ಇತರ ಭಾರತೀಯರ ಯಾವ ಗ್ರಂಥಗಳಲ್ಲಿ ದೃಷ್ಟಿಯನ್ನಿಟ್ಟರೂ ಈ ಜಾತಿವಾದವು ಸರ್ವತ್ರ ಕಂಡುಬರುವುದು. ಈ ಜಾತಿಪದ್ಧತಿಯು ಒಂದು ಕಾಲದಲ್ಲಿ ಭಾರತೀಯರಿಗೆ ಉಪಯೋಗಕರವಾಗಿದ್ದಾಗ್ಗೂ ಈಗಮಾತ್ರ ಅದು ದೇಶವಿಘಾತಕವಾದದ್ದೆಂತಲೇ ತಿಳಿಯಲ್ಪಟ್ಟಿರುವುದು. ಯಾವ ಕಾಲಕ್ಕೆ ಈ ಜಾತಿಪದ್ಧತಿಯು ಭಾರತೀಯರಿಗೆ ಉಪಯೋಗಕರವಾಗಿತ್ತೋ ಆಗ್ಗೆ ಇದು ಈಗಿನ ವಾದಕ್ಕಿಂತಲೂ ಭಿನ್ನವಿಚಾರ ವಿನಿಮಯದಿಂದ ಕೂಡಿತ್ತೆಂದು ತಿಳಿದುಬರುತ್ತದೆ. ಹೇಗೆಂದರೆ—ವೇದಕಾಲದಲ್ಲಿ ಆರ್ಯ, ದಸ್ಯುಗಳೆಂಬೆರಡು ಭೇದಗಳಿದ್ದುವು ಅವರವರ ಕೃತಿಗಳಿಂದ ಕರೆಯಲ್ಪಡುತ್ತಿದ್ದವು. ಆರ್ಯ, ದಸ್ಯುಗಳೆಂಬ ಶಬ್ದಗಳ ಅರ್ಥಗಳ ಮೇಲಿಂದಲೂ ವೇದದಲ್ಲಿ ತೋರಿಬರುವ ಮಂತ್ರಗಳಿಂದಲೂ ನಿರ್ಣಯಮಾಡಲು ಸಾಧ್ಯವಿರುವುದು. ಹೇಗೆಂದರೆ—ದಸ್ಯೂಞ್ಛಿಮ್ಯೂಞ್ಶ್ಚ ಪುರುಹೂತ ಏವೈರ್ಹತ್ವಾ ಪೃಥಿವ್ಯಾಂಶರ್ವಾನಿಬರ್ಹಯೇತ್ " "ಅರ್ತುಂ ವೇದಾದಿ ಶಾಸ್ತ್ರಂಯೇ ಯೋಗ್ಯಾಸ್ತ ಏವ ಆರ್ಯಾಃ।" ಯಾರು ವೇದಾದಿ ಶಾಸ್ತ್ರಗಳನ್ನು ಕಲಿಯಲು ಅರ್ಹರಾಗಿರುವರೋ ಅವರೇ ಆರ್ಯರೆಂತಲೂ, "ದಸು-ಉಪಕ್ಷಯೇ" ಎಂಬ ಶಬ್ದಾರ್ಥದಿಂದ ಯಾರು ವೇದೋಕ್ತ ಕರ್ಮಗಳನ್ನು ನಾಶಗೊಳಿಸುವರೋ ಅವರು ದಸ್ಯುಗಳೆಂತಲೂ, ಈ ದಸ್ಯು ಜನರೇ ಪುರಾಣಾದಿಗಳಲ್ಲಿ ಅಸುರರು, ರಾಕ್ಷಸರು, ಇತ್ಯಾದಿ ನಾಮಗಳಿಂದ ವರ್ಣಿಸಲ್ಪಟ್ಟಿರುವರು. ಇನ್ನು ಪೌರಾಣಿಕರು ವರ್ಣಿಸುವ ದೇವ, ದಾನವ, ಕಥೆಗಳಾದರೂ ಆರ್ಯ ದಸ್ಯುಗಳ ಪರವಾಗಿಯೇ ಎಂದು ತಿಳಿದುಬರುವುದು. ಹೇಗೆಂದರೆ—ವಿದ್ವಾಂಸರಾದ ಆರ್ಯರು ಮಾಡುವ ಕರ್ಮಗಳು ದಸ್ಯುಗಳಿಗೆ ಸೇರದೆ ಇದ್ದುದು ಪರಸ್ಪರ ವೈಮನಸ್ಯದಿಂದ ಪದೇಪದೇ ಕಲಹಗಳು ಉತ್ಪನ್ನವಾಗಿ ಸಂಘಶಕ್ತಿಯ ಪೂರ್ವಕ ಯುದ್ಧಪರ್ಯಂತ ಕೊನೆಗಾಣುತ್ತಿದ್ದವೆಂದು ಕಂಡು ಬರುವುದು. ಆದರೆ ಆರ್ಯರು ಮಹಾ ಸತ್ವಶೀಲರಾಗಿದ್ದುದರಿಂದ ಶಸ್ತ್ರಾಸ್ತ್ರಗಳಿಂದ ದಸ್ಯುಗಳನ್ನು ಹಿಂಸಿಸುವುದು ಮಹಾಪಾಪಕರವೆಂದು ತಿಳಿದು, ಈಶ್ವರನನ್ನು ಅನನ್ಯಭಾವನೆಯಿಂದ "ಹೆ ಇಂದ್ರ, ವರುಣ, ಆರ್ಯಮ, ಇತ್ಯಾದಿ ನಾಮಗಳುಳ್ಳ ಸರ್ವಶಕ್ತಿವಾನನಾದ ದೇವನೆ! ಈ ದಸ್ಯುಗಳು ನಮ್ಮ ಕರ್ಮ ಪ್ರತಿಬಂಧಕರಾಗದಂತೆ ಮಾಡಿ, ಮತ್ತು ನಮ್ಮ ಕರ್ಮಾನುಯಾಗಿಳಾಗುವಂತೆ ಇವರಿಗೆ ಬುದ್ಧಿಯನ್ನುಕೊಟ್ಟು ಇವರನ್ನು ನಮ್ಮಂತೆ ಆರ್ಯರನ್ನಾಗಿಮಾಡು" ಎಂಬುದಾಗಿ ದಸ್ಯುಗಳನ್ನು ತಮ್ಮ ಸಮಭಾವನೆಹೊಂದಿಸಲಿಕ್ಕೆ ಪ್ರಾರ್ಥಿಸಿಕೊಂಡಿರುವರು. ಅರ್ಥಾತ್ ಈಶ್ವರನನ್ನು ಕುರಿತು ಮಾಡುವ ತಮ್ಮ ಆತ್ಮಸ್ಫೂರ್ತಿಯ ಪ್ರಾರ್ಥನಾಬಲದಿಂದಲೇ ಅವರ ದಸ್ಯುತ್ವವು ಹೋಗಿ ಅವರನ್ನು ತಮ್ಮಂತೆ ಆರ್ಯರನ್ನಾಗಿಮಾಡುವ ಪ್ರಯತ್ನದಿಂದ ಕೂಡಿಕೊಂಡಿದ್ದರೆಂದು ಕೆಳಗೆ ತೋರಿಸುವ ಮಂತ್ರಗಳ ಮೇಲಿಂದ ಕಂಡುಬರುತ್ತದೆ.

"ಶೃಷ್ಯಗ್ನೇನವಸ್ಯಮೇಸ್ತೋಮಸ್ಯವೀರವಿಶ್ಪತೇ ||
ನಿಮಾಯಿನಸ್ತಪಸಾರಕ್ಷಸೋದಹ || (ಸಾಮ, ಅ ೧, ಖಂ, ೧೧
"ಅಮಿತ್ರಹಾವೃತ್ರಹಾದಸ್ಯುಹಂತಮಂ |
ಜ್ಯೋತಿರ್ಜಜ್ಞೆ ಅಸುರಹಾ ಸಪತ್ನಹಾ ||
ಸಾಮವೇದ, ಉತ್ತರಾರ್ಚಿ. ಅ ೧೩, ಖಂ ೩

ದಸ್ಯುಗಳೇ ರಾಕ್ಷಸಾದಿ ಶಬ್ದಗಳಿಂದ ಹೇಳಲ್ಪಟ್ಟಿದ್ದು "ಮಾಯಾವಿನಃ ರಾಕ್ಷಸಾಃ ಕರ್ಮವಿಘ್ನಕಾರಿಣಃ ರಾಕ್ಷಸಾನ್" ಎಂಬದಾಗಿ ಸಾಯನಾಚಾರ್ಯರು ಭಾಷ್ಯದಲ್ಲಿ ವೇದಕರ್ಮವಿಘಾತಿಗಳೇ ರಾಕ್ಷಸರೆಂದು ಅರ್ಥ ಬರೆದಿರುವರು.

"ಸಜಾತೂರ್ಯಶ್ರದ್ಧಾ ಧಾನಜೋಜಃ ಪುರೋವಿಭಿಂದನ್ನಚರದ್ವಿದಾಸೀಃ| ವಿದ್ವಾನ್‌ವಜ್ರಿನ್‌ದಸ್ಯವೇ ಹೇತಿಮಸ್ಯಾರ್ಯಂ ಸಹೋವರ್ಧಯದ್ಯುಮ್ನಮಿಂದ್ರ || ಋಗ್ವೇದ ಪ್ರಥಮಾಷ್ಟಕ.
"ಯವತ್ವಕೇಣಾಶ್ವಿನಾವಯಂತೇಷಾಂದುಹಂ ಕಾಮನುಷಾಯದಸ್ಯಾ ಅಭಿದಸು ಂಬಕುರೇಣಾಧಮಂ | ತೋರುಜ್ಯೋತಿಶ್ಚಕ್ರತುರಾರ್ಯಾಯ ||" ಋಗ್ವೇದ ಪ್ರಥಮಾಷ್ಟಕ.

ಈ ಮಂತ್ರದಲ್ಲಿ ಹೇ ತೇಜೋಭರಿತನಾದ ಹಾಗೂ ಸತತೈಶ್ವರ್ಯಯುಕ್ತನಾದ ಇಂದ್ರರೂಪಿಯಾದ ಪರಮಾತ್ಮನೇ! ನಿನ್ನ ಯಾವ ದಿವ್ಯಜ್ಞಾನತೇಜೋಮಯವಾದ ವಜ್ರಾಯುಧವುಂಟೋ ಅದರಿಂದ ದಸ್ಯುಗಳಲ್ಲಿರುವ ಅಮಾನುಷತ್ವವನ್ನು ಹೋಗಲಾಡಿಸಿ ಅವರಲ್ಲಿ ಆರ್ಯತ್ವವನ್ನುಂಟು ಮಾಡೆಂದು ಆರ್ಯರಿಂದ ಪರಮಾತ್ಮನು ಪ್ರಾರ್ಥಿಸಲ್ಪಟ್ಟಿರುವನು. ಈ ರೀತಿಯಾಗಿ ವೇದದಲ್ಲಿ ಎರಡು ಭೇದವು ತೋರಿಸಲ್ಪಟ್ಟಿದ್ದು, ಈ ಆರ್ಯ ದಸ್ಯುತ್ವಗಳು ಕರ್ಮದಿಂದಲೇ ಬರುತ್ತಿದ್ದವೆಂದು ಸಿದ್ಧವಾಗುವುದು. ಉದಾಹರಣಾರ್ಥ:—ಯಾವನೇ ಇರಲಿ ಅವನು ಕರ್ಮರಹಿತನಾಗಿದ್ದರೆ ಅವನು ದಸ್ಯುವೆಂತಲೂ, ಯಾವನೇ ಆಗಲಿ ಅವನು ಕರ್ಮಾನುಷ್ಠಾನಿಯಾಗಿದ್ದರೆ ಅವನು ಆರ್ಯನೆಂತಲೂ, ಆರ್ಯನು ದಸ್ಯುವಾಗಬಹುದಾಗಿದ್ದಿತೆಂತಲೂ ವಿದಿತವಾಗುವುದು.

ಸಶೇಷ.

ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವು.

ರಾಯಚೂರು ಸೋಮವಾರಪೇಟೆ ಹಿರೆಮಠದಲ್ಲಿ ಸ್ಥಾಪಿತವಾಗಿರುವ ಪಾಕ್ಷಿಕಪರಿಷತ್ಚಾಲಕರಾದ ಮರಿಚೇಡ ಚೆನ್ನಬಸವಶಾಸ್ತ್ರಿಗಳು ಆಷಾಢ ಬ|| ೪ ಗುರುವಾರ ಶಿವಾಧೀನರಾದರೆಂದು ತಿಳಿಯಿಸಲಿಕ್ಕೆ ವಿಷಾದವೆನಿಸುತ್ತದೆ. ಅಂಥವರ ಅಗಲುವಿಕೆಯಿಂದುಂಟಾದ ಶೋಕಸಮಾಧಾನಕ್ಕಾಗಿ ಪ್ರತ್ಯಕ್ಷ ಪರಮೇಶ್ವರರೆಂಬ ಬಿರುದಾಂಕಿತರಾದ ಹಾನಗಲ್ ಶ್ರೀಕುಮಾರ ಮಹಾಸ್ವಾಮಿಗಳ ಅಪ್ಪಣೆಯಂತೆ ತನ್ಮಠಾಧ್ಯಕ್ಷರಾದ ರಾಚೋಟಿಸ್ವಾಮಿ ದೇಶಿಕವರ್ಯರು ಆಷಾಢ ಬ|| ೫ ದಿನ ಹೈಕೋರ್ಟ ವಕೀಲ್ ಕಿಶನರಾಯರು ಮ|| ಜಯನಾರಾಯಣ ಮುಂತಾದ ಪರಮತ ಸ್ವಮತದ ಮುಖಂಡರನ್ನು ಗೌರವಪುರಸ್ಸರವಾಗಿ ಬರಮಾಡಿ ಸಭಾಕಾರ್ಯಕ್ರಮಕ್ಕನುಜ್ಞೆಯನ್ನಿತ್ತರು. ಆ ಕೂಡಲೇ ಅದೇ ಸೋಮವಾರಪೇಟೆಯ ಸಂಗೀತವಿದ್ವಾನ್ ಬಾಜಣ್ಣ ಮುಂತಾದವರು ತಮ್ಮ ಸರ್ವಸನ್ನಾಹದೊಡನೆ ರಾಗ, ಪಲ್ಲವಿ ಇತ್ಯಾದಿಗಳಲ್ಲಿ ತಮ್ಮ ಬುದ್ಧಿಯ ಅದ್ಭುತಸಾಹಸವನ್ನು ವ್ಯಕ್ತಗೊಳಿಸಿ ಜನರಲ್ಲಿ ಶಾಸ್ತ್ರಿಗಳ ಮರಣದಿಂದುಂಟಾದ ದುಃಖವನ್ನು ತುಸು ತುಸು ತಗ್ಗಿಸಹತ್ತಿದರು. ಇಂತಹ ಸಂಗೀತಸಾಹಿತ್ಯ ಸಮ್ಮೇಳನದಿಂದ ಶಿವಕೀರ್ತನಕಾರರಾದ ವೇ|| ಆನಂಪಲ್ಲಿ ಶಾಂತಮೂರ್ತಿಗಳು ನಾಗೇಶಚರಿತ್ರವನ್ನು ಶ್ರೋತೃವರ್ಗದ ಹೃದಯಭೂಮಿಯಲ್ಲಿ ವೈರಾಗ್ಯ ಬೀಜಾರೋಪಣವಾಗುವಂತೆ ಕೀರ್ತನೆ ಮಾಡಿದರು. ಆಮೇಲೆ ಕಲ್ಲೂರು ಪೌರಾಣಿಕ ಸೂಗಯ್ಯನವರು ಗದ್ವಾಲಿ ಸೂಗಪ್ಪನೂ ಮತ್ತು ಈತನ ಸುಪುತ್ರ ವಿರುಪಣ್ಣನೂ ಅಶ್ರುಪೂರಿತನಯನದಿಂದ ಶ್ರೀ|| ಶಾಸ್ತ್ರಿಗಳ ಗುಣಕಥನವನ್ನು ಮಾಡಿದರು. ತದನಂತರ ನೀರಡಗುಂಭದ ಶ್ರೀ ಸಿದ್ಧಲಿಂಗ ಶಿವಯೋಗಿಗಳು ನಮ್ಮ ಶಾಲಾಧ್ಯಾಪಕ ಸಿದ್ಧಲಿಂಗಶಾಸ್ತ್ರಿಗಳು ಇದೇ ಮಾರಿಕಾರೋಗದಿಂದ ಮೊನ್ನೆತಾನೇ ಶಿವಾಧೀನರಾದದ್ದು ಹೃದಯದಲ್ಲಿ ಹಿಡಿಯಲಾರದಷ್ಟು ದುಃಖವಿತ್ತು. ಅಷ್ಟರಲ್ಲಿಯೇ ಈ ಚೆನ್ನಬಸವಶಾಸ್ತ್ರಿಗಳು ದೇಹತ್ಯಾಗಮಾಡಿದ್ದುದನ್ನು ಕೇಳಿದ ಮೇಲಂತೂ ಮೊದಲೇ ರಾಜಹುಣ್ಣು ಅದರಲ್ಲಿ ಬಿಗಿಬಿಗಿ ಎಂದು ಕಾದ ಸಲಾಕೆಯಿಂದ ಬರೆ ಎಳೆದಂತಾಯಿತು. ಈ ಉಭಯರು ಹೋದುದು ನೈಜಾಮು ಭರತಭೂಮಾತೆಯ ನೇತ್ರಯುಗ್ಮವು ಲೋಪವಾದಂತಾಯಿತೆಂದರೆ ಅತಿಶಯೋಕ್ತಿಯೆನಿಸದು. ಮತ್ತು ಪಾಕ್ಷಿಕ ಪರಿಷತ್ತೆಂಬ ಅಭಿಧಾನವುಳ್ಳ ಈ ಸಭಾವನಿತೆಯು ತನ್ನ ಮಂಗಳಸೂತ್ರವನ್ನು ಕಳೆಕೊಂಡು ಅಮಂಗಲಮಯಳಾಗಿದ್ದಾಳೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು [illegible]ವಾಗಿ ಭಾಷಣಮಾಡಿ ರಾಯಚೂರು ಜಿಲ್ಲೆಯೊಳಗಣ ಅದಿ ತೀಕ್ಷ್ಣಬುದ್ಧಿಯುಳ್ಳ ಒಬ್ಬ ವಿದ್ಯಾರ್ಥಿಯು ಚನ್ನಬಸವಶಾಸ್ತ್ರಿಗಳಂತೆ ಪಾಂಡಿತ್ಯವನ್ನೂ ಸರಸವಾದ ವಚನರಚನೆಯನ್ನೂ ಧೈರ್ಯಸಂಪತ್ತಿಯನ್ನೂ ಸಂಪಾದಿಸುವತನಕ ಆ ವಿದ್ಯಾರ್ಥಿಗೆ ತಿಂಗಳೊಂದಕ್ಕೆ ಶಾಸ್ತ್ರಿಗಳ ಸ್ಮಾರಕಕ್ಕಾಗಿ ಹತ್ತು ರೂಪಾಯಿಗಳನ್ನು ಕೊಡುತ್ತೇನೆಂದು ವಾಗ್ದಾನಮಾಡಿ ಸುಖಾಸೀನರಾದರು. ಆಮೇಲೆ ಶ್ರೀಮನ್ನಿರಂಜನಮೂರ್ತಿಗಳಾದ ಹಾನಗಲ್ ಕುಮಾರ ಮಹಾಸ್ವಾಮಿಯವರು ಪಂಡಿತ ಚನ್ನಬಸವಯ್ಯನವರನ್ನು ಕಳೆದುಕೊಂಡ ನಿಮ್ಮ ಅದೃಷ್ಟವು ಅತ್ಯಂತ ಹೀನವಾದದ್ದೇ ಸರಿ; ಇದೀ ನೈಜಾಮು ವೀರಶೈವರ ದುರ್ದೈವವೆಂದರೂ ಸಲ್ಲುವದು. ಈ ವ್ಯಕ್ತಿಯ ಸುತ್ತ್ಯವಾತಿಯಾದರೂ ಸಮಾಜಸೇವೆಯ ಕಡೆಗೆ ಓಡುತ್ತಿತ್ತು ಎಂದು ಮೊದಲಾಗಿ ಅವರ ವರ್ಣನೆ ಮಾಡಿ ಪ್ರಮಾದವಶಾತ್ತಾಣವಿಯೋಗಕ್ಕೆ ಮರಣವೆನ್ನುವರು.—ಅದರಲ್ಲಿ ಶಿವಾಧೀನ, ಶಿವೈಕ್ಯವೆಂದು ಎರಡುಪ್ರಕರಣಗಳುಂಟು; ಅವೆರಡನ್ನು ಯುಕ್ತಯುಕ್ತಿಯಿಂದ ಶಾಸ್ತ್ರಿಗಳು ಶಿವಾಧೀನರಾದುದಕ್ಕೆ ನೀವು ದುಃಖಿಸಬೇಡಿರಿ. ಅವರು ಸ್ವಲ್ಪಕಾಲದಲ್ಲಿಯೇ ನಮ್ಮ ಮತತತ್ವವನ್ನು ಬೋಧಿಸುವದಕ್ಕಾಗಿಯೋ ಇಲ್ಲವೆ ದೊಡ್ಡ ಗುರುಪೀಠಕ್ಕಾಗಿಯೋ ಅವತರಿಸಿ ಬರುವರೆಂದು ಸಪ್ರಮಾಣವಾಗಿ ನಿರೂಪಿಸಿದರು. ಮತ್ತು ಕಲ್ಲೂರು ಸೂಗೂರಯ್ಯ ಪುರಾಣಿಕ ಈತನು ಅಧಃಪತನದ ಹಾದಿಯನ್ನು ಹಿಡಿದ ವೀರಶೈವ ಸಮಾಜವನ್ನು ಉದ್ಧರಿಸುವುದಕ್ಕೆ ಬಂದ ಸಹಜಕುಮಾರ (ಷಣ್ಮುಖ) ಸ್ವಾಮಿಗಳಲ್ಲದೆ ಬೇರೆಯಲ್ಲವು. ಬೇರೆಯೆಂದರೆ ನರಕಪಾತಕವು ಬಿಡದು. ಹೀಗೆ ವರ್ಣಿಸಿದ್ದು ಪುರಾಣಿಕರ ತಪ್ಪು. ಸ್ವದೇಶದ ಶ್ರೀಗಳವರನ್ನು ವರ್ಣಿಸಿದರೆ ಆತ್ಮಶ್ಲಾಘನವಾದಂತಾಗುವದೆಂದೆಣಿಸಿ ಹೀಗೆ ನಮ್ಮನ್ನು ವರ್ಣಿಸಿರಬಹುದು. ಸಮಾಜಸೇವೆಗೈಯುವವರಲ್ಲಿ ನಾನೊಬ್ಬ ಮಾನವನು ಇಷ್ಟು ಪ್ರಶಂಸೆಗೆ ಪಾತ್ರನಾಗಲಾರೆನು. ಇರಲಿ, ಈ ನೀರಡಗುಂಭದ ಶ್ರೀಗಳು ವಾಗ್ದಾನಮಾಡಿದಂತೆ ಶಾಸ್ತ್ರಿಗಳ ಸ್ಮರಣಕ್ಕಾಗಿ ಎಲ್ಲರೂ ಯಥಾಶಕ್ತಿ ದಾನಮಾಡಬೇಕೆಂದು ಅಪ್ಪಣೆಕೊಡಿಸಿದರು. ಇದಲ್ಲದೆ ಮಠದ ಹಿತಕ್ಕಾಗಿ ಸತತ ಹೆಣಗಾಡುತ್ತಿದ್ದ ಶಾಸ್ತ್ರಿಗಳ ಕಾರ್ಯಾರಂಭವು ಕೊನೆಮುಟ್ಟದೆ ಹೋದದ್ದರಿಂದ ಸಭಾಸದರೆಲ್ಲರೂ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆನ್ನುವ ವಾಕ್ಯವು ಸತವೆಂದು ಊಹಿಸಿ ಉದಾಸೀನಮನಸ್ಕರಾಗಿ ಜಯಘೋಷದೊಡನೆ ಸಭಾವಿಸರ್ಜನೆ ಮಾಡಿದರು.

ಓರ್ವ ಪ್ರತ್ಯಕ್ಷದರ್ಶಿ.

ಜ್ಞಾನವರ್ಧಕಸಂಘ.

ನಿಜಾಮು ಇಲಾಖಾ ಗುಲ್ಬುರ್ಗಾ ಜಿಲ್ಲಾ ಜಹಗೀರು ಕಲ್ಯಾಣದ ಪಡುವಿಡಿಯ ಶಾಖಾನುವರ್ತಿಯಾದ ರೇವಣಸಿದ್ಧೇಶ್ವರ ತಟ್ಟಿಮಠದಲ್ಲಿ ಇದೇ ಆಷಾಢ ಶು|| ಸೋಮವಾರ ಸಾಯಂಕಾಲಕ್ಕೆ ಈ ಊರ ಗುರುವರ್ಗದ ಮಹನೀಯರು ಒಂದು ಸಭೆಯನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ ಶೂನ್ಯಸಿಂಹಾಸನದ ಪ್ರಭುದೇವರ ಮಠಾಧ್ಯಕ್ಷರಾದ ನಿರಂಜನ ಚನ್ನಬಸವಸ್ವಾಮಿಗಳು ಮತ್ತು ಇದೇ ಮಠದ ಪಟ್ಟಾಧ್ಯಕ್ಷರಾದ ರೇವಣಸಿದ್ಧಸ್ವಾಮಿಗಳು ಬಸವೇಶ್ವರ ಮಠದ ಪಟ್ಟಾಧ್ಯಕ್ಷರೂ ಸ್ಥಾಯಿಕ ಸಭಾಧ್ಯಕ್ಷರಾಗಿಯೂ, ಮತ್ತು ಶಿವಯೋಗಸ್ವಾಮಿ ಗುಂಪಾ ಶಿವಲಿಂಗಸ್ವಾಮಿ ಬಲೂತಿ ಮಠ ಇವರು ಉಪಾಧ್ಯಕ್ಷರಾಗಿಯೂ, ವೇದಮೂರ್ತಿ ಗುರುಪಾದಯ್ಯ ಶಂಕರಗುಡಿ ವೇ|| ಗುರುಬಸವಯ್ಯ ಕನಡೆ ವೇ|| ರಾಚೋಟಸ್ವಾಮಿ ಹಂಜಿಗಿ ವೇ|| ಚನ್ನಯ್ಯಸ್ವಾಮಿ ಬಲಕುಂದಿಮಠ ಇವರು ಉಪನ್ಯಾಸಕರಾಗಿಯೂ ಮ|| ಶಿವಲಿಂಗಪ್ಪಾ ಡಿಗ್ಗಿ ಗುಮಾಸ್ತೆ ಮತ್ತು ಮ|| ಶಂಕರಪ್ಪಾ ಹಳಕಟ್ಟಿ ಇವರು ವ್ಯವಸ್ಥಾಪಕರಾಗಿಯೂ ವೇ|| ಬಸವತೀರ್ಥಸ್ವಾಮಿಮಠಪತಿ ಇವರು ಖಜಾಂಟರಾಗಿಯೂ ವೇ|| ಸಂಗನಬಸಯ್ಯಸ್ವಾಮಿ ವಸ್ತ್ರದ ಮತ್ತು ವೇ|| ರೇವಯ್ಯಸ್ವಾಮಿ ಕಾವಡೆ ಇವರು ಕೋಶಾಧ್ಯಕ್ಷರಾಗಿಯೂ ವೇ|| ಮಹಾಂತಯ್ಯಸ್ವಾಮಿ ಮಠಪತಿ ಕೋರವಾರ ಹಾಲಿವಸ್ತಿ ಇವರು ಸಹ ಧನಸಹಾಯಕರಾಗಿಯೂ ಇರಲು ಒಪ್ಪಿದನಂತರ ವೀರಶೈವಗುರುವರ್ಗದ ಜ್ಞಾನವರ್ಧಕ ಸಂಘವೆಂದು ಹೆಸರಿಟ್ಟು ಎಲ್ಲರೂ ಮೇಲಕ್ಕೆ ಕರಗಳನೆತ್ತಿ ಪಾರ್ವತೀವಲ್ಲಭನಾದ ಪರಮೇಶ್ವರನನ್ನು ಕೊಂಡಾಡಿ ಜಯಘೋಷವನ್ನು ಮಾಡಿದರು. ನಂತರ ವೇ|| ಗುರುಪಾದಯ್ಯ ಶಂಕರಗುಡಿ ಇವರು ಶಿವಭಕ್ತಿಯ ಘನತೆಯ ಮೇಲೂ ವೇ|| ಗುರುಬಸವಯ್ಯ ಕನಡೆ ಇವರು ಗುರುಭಕ್ತಿಯ ಮೇಲೂ ಉಪನ್ಯಾಸ ಮಾಡಿದನಂತರ ಸಭಾಧ್ಯಕ್ಷರ ಭಾಷಣ ಮಾಡುವಾಗ್ಗೆ ಇಲ್ಲಿ ಗುರುವರ್ಗದವರಾದ ಮಹನೀಯರು ಶಿವಮಠ ಘನತೆಯನ್ನು ವಹಿಸಿ ಭಕ್ತಿಜ್ಞಾನ ವೈರಾಗ್ಯ ಅಷ್ಟಾವರಣದ ಮಹಾತ್ಮೆಯನ್ನು ತಿಳಿದು ಆಚರಿಸಿ ಸಾತ್ವಿಕವೃತ್ತಿಯಿಂದ ನಮ್ಮ ಬಸವಾದಿಪ್ರಮಥರಂತೆ ಶಿವಾಚಾರ್ಯ ಸಂಪನ್ನರಾಗಿ ನಿಜವಾದ ಕೈವಲ್ಯವನ್ನು ಪಡೆಯಲಿ ಎಂಬುವ ಅವರ ಮನೋಭಾವವನ್ನು ತಿಳಿಸಿ ಮತೋದ್ಧಾರಕರಾದ ಸ್ಟಾರ್ ಪತ್ರಕರ್ತರಿಗೆ ನಾಲ್ಕು ರೂಪಾಯಿಗಳನ್ನು ಬಹುಮಾನವಾಗಿ ತೆಗೆದಿಟ್ಟು ಅನಂತರ ಎಲ್ಲಾ ಮಹನೀಯರಿಗೂ ಪುಷ್ಪಹಾರವನ್ನು ಸಮರ್ಪಿಸಿ ಅನಂತರ ಈ ಊರ ವೀರಶೈವ ಪ್ರಮುಖರಾದ ಮ|| ಶಿವಲಿಂಗಪ್ಪ ಗಣಾಚಾರಿ ದೇಶಮುಖ ಮ|| ಸಿದ್ಧಪ್ಪಾ ಚಪ್ಪಳಗಿ ಮ|| ಮಲ್ಲಪ್ಪಾ ಸೇಂಧಿಕಾರ ಮ|| ಮಡಿವಾಳಪ್ಪಾ ದುರಗೆ ಮ|| ಕೆಂದಾನಪ್ಪಾ ಮಹಗಾಂವ ಮ|| ಷಣ್ಮುಖಪ್ಪಾ ತುರಕೋಟಿ ಮ|| ಮರಿಪ್ಪಾ ಹೊದಲೂರ ಮ|| ಗುರುಸಿದ್ಧಪ್ಪಾ ಗುದಗೆ ಮ|| ರೇವಣಸಿದ್ಧಪ್ಪಾ ಗೊಬ್ಬರೆ ಮ|| ಶಿದ್ಧಪ್ಪಾ ಹಾಲಣ್ಣನವರ ಮ|| ಶಿದ್ಧರಾಮಪ್ಪಾ ಕಮಲಾಪುರ ಮ|| ಶಾಂತಪ್ಪಾ ಶಿರಸಂಗಿ ಮ|| ಗುರುಪಾದಪ್ಪಾ ದುರ್ಗೇ ಮ|| ವಲ್ಲಪ್ಪಾ ಚಪ್ಪಳಗಿ ಮ|| ಕಾಶಪ್ಪಾ ಗುಡ್ಡಾ ಮ|| ಮಹದಪ್ಪಾ ಪೊಲೀಸ್ ಪಾಟೀಲ ಮ|| ಸಂಗಪ್ಪಾ ಮಹಗಾಂವ ಈ ಮೊದಲಾದ ಸದ್ಭಕ್ತಮಂಡಳಿಯ ಉದಾರಾಶ್ರಯದಿಂದ ಈ ಸಭೆಯು ಕೊನೆಮುಟ್ಟಿತೆಂದು ಶ್ರೀಗುರುಮೂರ್ತಿಯನ್ನು ಕೊಂಡಾಡಿ ನಂತರ ನಮ್ಮನ್ನಾಳುವ ನಿಜಾಮು ಸರಕಾರ ಉಸ್ಮಾನಬಾದಶಹ ಇವರಿಗೆ ಚಿರಾಯುವಾಗಲೆಂದು ಹರಸಿ, ತ್ರಿವಾರ ಜಯಘೋಷವನ್ನು ಮಾಡಿ ಮಂಗಲಾಚರಣೆಯಿಂದ ಸಭೆಯು ವಿಸರ್ಜನೆಯಾಯಿತು. ಎಲ್ಲಕ್ಕೂ ಹಿಂದುಳಿದ ನಿರಾಶ್ರಯವಾದ ಈ ಶಿವಮಠಕ್ಕೆ ತವರಮನೆಯಾದ ಕಲ್ಯಾಣದ ಸಮಾಜವನ್ನು ಪ್ರಜ್ವಲಿಸುವ ಭಾರವು ಸರ್ವವೀರಶೈವ ಬಾಂಧವರದೇ ಇರುವದು. ಅದಕ್ಕಾಗಿ ಎಲ್ಲಾ ವೀರಶೈವ ಬಾಂಧವರೂ ತಮ್ಮ ತಮ್ಮಲ್ಲಿ ತಯಾರಿಸಿದ ಶಿವಾಚಾರ ಗ್ರಂಥಗಳು ಮತ್ತು ಶಿವಶರಣರ ವಚನಗಳು ಮತ್ತು ಮಾಸಿಕಪುಸ್ತಕಗಳು ಮತ್ತು ವರ್ತಮಾನಪತ್ರಗಳು ಇವೇ ಮೊದಲಾದವುಗಳನ್ನು ತಮ್ಮ ಉದಾರಾಶ್ರಯದಿಂದ ಈ ಸಮಾಜಕ್ಕೆ ಕಳುಹಿ ಜಗದ್ವಿಖ್ಯಾತವಾದ ಕೀರ್ತಿ ವಿಶೇಷವನ್ನು ಪಡೆಯುವರೆಂದು ಸರ್ವರ ಅಭಾರಿಯಾಗಿ ನಾನು ಬೇಡಿಕೊಳ್ಳುತ್ತೇನೆ.

ಓರ್ವ ಪ್ರಮಥರ ಪಾದಧೂಳಿ.

ಮಳವಳ್ಳಿ.

ಈಗ 6-7 ದಿವಸದಲ್ಲಿ ಮಳೆ ಆಗಿದೆ. ರಾಗಿ ಬಿತ್ತುತ್ತಾರೆ. ಈಗ 4-5 ದಿವಸದಿಂದ ಮಳೆ ಬಿದ್ದಿಲ್ಲ. ಸ್ವಲ್ಪಮಳೆ ಆದರೆ ಅನುಕೂಲ. ಹೋಳದ

ಬೆಳೆಯು ಹೀನವಾದದ್ದರಿಂದ ರಾಗಿ ಖರೀದಿಯು ಇನ್ನೂರುಸೇರಿನ ಖಂಡಿಗೆ 1ಕ್ಕೆ 22 ರೂ. ಗಳಿಂದ 26 ರೂ. ಗಳವರೆಗೆ ಹೆಚ್ಚಿದೆ. ಹವಾ ಆರೋಗ್ಯಕರವಾಗಿದೆ. 3-8-22 ನೇ ತಾರೀಖಿನ ಸಂಪದಭ್ಯುದಯಪತ್ರಿಕೆ ಮತ್ತು 11-8-22 ರ ಸಾಧ್ವೀ ಪತ್ರಿಕೆಯಲ್ಲಿ ಈ ತಾಲ್ಲೂಕಿನ ಅಮಲ್ದಾರರ ವಿಚಾರವಾಗಿ "ಬದರೈತ" ನೆಂಬ ಅಭಿಧಾನದಿಂದ ನಿರಾಧಾರವಾದ ಕೆಲವು ಆಕ್ಷೇಪಣೆಗಳು ಬರೆಯಲ್ಪಟ್ಟಿರುವುವು. ಇದಕ್ಕೆ ಅಮಲ್ದಾರರಲ್ಲಿರುವ ನಿಸ್ಪೃಹತೆ ಮತ್ತು ನಡೆಯಬೇಕಾದ ಕೆಲಸಗಳನ್ನು ಸಾವಕಾಶಕ್ಕೆ ಅವಕಾಶಕೊಡದೆ ಮಾಡುತ್ತಿರುವುದು, ಇವೇ ಕಾರಣವಾಗಿದೆ ಎಂದು ತೋರುತ್ತದೆ. ಇವರು ಸಾಧ್ಯವಾದಮಟ್ಟಿಗೆ ಬೆಳಗಿನ ವೇಳೆಯಲ್ಲಿ ಸ್ಯಾನಿಟೇಷನ್, ವಿಲೇಜ್ ಇಂಪ್ರೂವ್‌ಮೆಂಟ್, ರೈತರ ತಕರಾರುಗಳ ಫೈಸಲಾತಿ ಮತ್ತು ವಸೂಲಿ ಮೊದಲಾದ ಕೆಲಸಗಳಿಗೋಸ್ಕರವಾಗಿ ಗ್ರಾಮಾಂತರಗಳಲ್ಲಿ ಸಂಚಾರ ಮಾಡುತ್ತಿರುವರೇ ವಿನಾ ಮತ್ತೆ ಬೇರೆ ಅಲ್ಲ. ಪ್ರಜೆಗಳ ಅನುಕೂಲತೆಗಾಗಿ ತಮ್ಮ ಶರೀರಶ್ರಮಕ್ಕೂ ಗಮನಕೊಡದೆ ಕೆಲಸಮಾಡುತ್ತಿರುವರು. ಪ್ರಜೆಗಳ ನೆಮ್ಮದಿಗೆ ಭಂಗತರುವುದು ಇವರ ಸ್ವಭಾವದಲ್ಲಿಯೇ ಇಲ್ಲವೆಂದು ತೋರುತ್ತದೆ. ನೆಮ್ಮದಿಗೆ ಭಂಗಬಾರದೇ ಇರಲು ಬೇಕಾದ ತರದೂದು ಯಾವಾಗಲೂ ಮಾಡುತ್ತಾ ಇರುತ್ತಾರೆ. ಕಂದಾಯದ ಮೊದಲನೇ ಕಿಸ್ತಿನಲ್ಲಿ ವಸೂಲಾಗದ ಬಾಕಿಗಳಿಗಾಗಿ ರೂಲ್ಸ್ ಮೇರೆ ನೋಟೀಸ್ ವಗೈರೆ ಮಾಡದೆ ಇದ್ದುದಕ್ಕೋಸ್ಕರ ಆಕ್ಷೇಪಣೆ ಮಾಡಿ ಬಾಕಿಪಟ್ಟಿಯನ್ನು ತೆಗೆದುಕೊಂಡು ವಸೂಲಿಗೆ ಹುಕ್ಕುಂ ಮಾಡಿದ್ದು, ಲೆಕ್ಕಾಚಾರದ ರೈತರಿಗೆ ಸಮಜಾಯಿಷಿ ಕೊಡುವುದು, ಇದು ಯಾವತರಹವಾದ ತಪ್ಪಿತವೋ ನನಗೆ ಗೊತ್ತಿಲ್ಲ. ಮತ್ತು ಶ್ಯಾನುಭೋಗರುಗಳಲ್ಲಿ ಕೆಲವರು ದಸ್ತು ಮಾಡುವುದು, ಸಕಾಲದಲ್ಲಿ ವಸೂಲಿಗೆ ಹೋಗದಿರುವುದು, ಇವುಗಳನ್ನು ತಿಳಿದು ಹಣಕ್ಕೆ ಪಟೇಲರೇ ಜವಾಬ್ದಾರರಾಗಿರಬೇಕೆಂದೂ, ಅವರು ವಸೂಲಾದ ಹಣದ ಲೆಕ್ಕವನ್ನು ತಕ್ಷಣ ಶ್ಯಾನುಭೋಗರಲ್ಲಿ ಬರೆಸಬೇಕೆಂದೂ, ವಸೂಲಿಯೂ, ಸರ್ಕಾರದ ಲೆಕ್ಕಪತ್ರಗಳೂ ಪೂರೈಸಿದ ನಂತರ ಪಟೇಲ್ ಶ್ಯಾನುಭೋಗರಿಗೆ ಯಾವ ತೊಂದರೆಯೂ ಇಲ್ಲವೆಂದು ಹೇಳಿರುವುದೇನೋ ವಾಸ್ತವ. ಅದರಂತೆ ಗಮನವನ್ನು ಕೊಡುತ್ತಿರುವರು. ವಸೂಲಾದ ಹಣವು ಪಟೇಲ್ ಶ್ಯಾನುಭೋಗರಲ್ಲಿ ನಿಲ್ಲಲು ಅವಕಾಶವಿಲ್ಲದಂತೆಯೂ, ಬಾಕಿ ಬೀಳಲವಕಾಶವಿಲ್ಲದಂತೆಯೂ ನೋಡಿಕೊಳ್ಳುತ್ತಿರುವರು. ಪಟೇಲ್ ಮತ್ತು ಶ್ಯಾನುಭೋಗರು ವಸೂಲಾದ ಹಣವನ್ನು ತಮ್ಮ ಮರಮು ತೀರಿಸಿಕೊಳ್ಳಲು ಉಪಯೋಗಿಸಿಕೊಳ್ಳಲಾಗುವುದಿಲ್ಲವೆಂದೋ ಮತ್ತು ತಮ್ಮ ಅವಿವೇಕಗಳಿಗೆ ಅವಕಾಶ ಕಡಮೆಯಾಯಿತೆಂದೋ ಬರೆದ ಬರವಣಿಗೆಗಳಾಗಿ ಅವು ಇವೆಯೇ ವಿನಾ ಮತ್ತೆ ಬೇರೆ ಇಲ್ಲವೆಂದು ತೋರುತ್ತದೆ. ಮೇಲ್ಪಟ್ಟ ಆರ್ಡರುಗಳಿಗೆ ವ್ಯತಿರಿಕ್ತವಾಗಿ ಏರ್ಪಾಡು ಮಾಡುವರೆಂಬುದು ಶುದ್ಧ ಸುಳ್ಳು. ತಮ್ಮ ಅವಿವೇಕಗಳಿಗೆ ಅವಕಾಶ ಸಿಕ್ಕದುದರಿಂದ ಉಂಟಾದ ಅಸೂಯೆಯಿಂದ ಬರೆಯಲ್ಪಟ್ಟ ಮಾತಾಗಿರಬಹುದು. ಮುಖ್ಯವಾಗಿ ಅಧಿಕಾರ ಮಾಡುವುದರಲ್ಲಿ ಎಲ್ಲರಿಗೂ ಅನುಕೂಲವಾಗುತ್ತದೆಂದು ಹೇಳಲಾಗುವುದಿಲ್ಲ. ಅವಿವೇಕಿಗಳಿಗೆ ತೊಂದರೆಯೂ, ವಿವೇಕಿಗಳಿಗೆ ಸನ್ಮಾನವೂ ಆಗುವುದು. ಅನೇಕರು ತಮ್ಮ ಅವಿವೇಕವನ್ನು ತಿಳಿದುಕೊಳ್ಳದೆ ಇಲ್ಲದ ದುರಾಕ್ಷೇಪಣೆ ಮಾಡುವರು. ಇದು ಲೋಕದ ಸ್ವಭಾವ. ಎಷ್ಟೇ ನಿಷ್ಪಕ್ಷಪಾತದಿಂದಲೂ, ದಯೆಯಿಂದಲೂ, ಪಕ್ಷಪಾತವಿಲ್ಲದೆಯೂ, ನಿಸ್ಪೃಹತೆಯಿಂದಲೂ ಕೆಲಸಮಾಡಿದರೂ ಆಕ್ಷೇಪಣೆಗೆ ಸಿಕ್ಕದಿರುವುದು ಕಷ್ಟ. "ನಾಯಿ ಬಗುಳಿದರೆ ದೇವಲೋಕ ಹಾಳೇ" ಎಂಬ ಗಾದೆಯಂತೆ ನಮ್ಮ ಅಮಲ್ದಾರರವರಿಗೆ ಇದೇನೂ ಕುಂದಕವಲ್ಲ. ಇವರು ಬಂದಮೇಲೆ ಆಗಿರುವ ವಸೂಲಿ ಅಕ್ರಾಯಿ ಉತ್ಪತ್ತಿ ಮತ್ತು ಫೈಸಲಾಗಿರುವ ತಕರಾರುಗಳು ಮೊದಲಾದ ಸರ್ಕಾರಿ ಕೆಲಸಗಳನ್ನು ವಿಮರ್ಶೆಮಾಡಿ ನೋಡಿದರೆ ಇವರ ಸತ್ಯಸಂಧತೆಯೂ, ಪಾಪಭೀತಿಯೂ, ಚಟುವಟಿಕೆಯೂ, ಉದ್ಯೋಗಸಾಮರ್ಥ್ಯವೂ ವ್ಯಕ್ತಪಡುವುವು. ಸಂಪದಭ್ಯುದಯದಲ್ಲಿಯೂ ಸಾಧ್ವಿಯಲ್ಲಿಯೂ ಬಾತ್ಮೀದಾರರು ತಮ್ಮ ಯಾವ ಅಸೂಯೆಯಿಂದ ಬರೆದರೋ ಗೊತ್ತಾಗುವುದಿಲ್ಲ. ಈ ತರದಿಂದ ಬಾತ್ಮೀದಾರರ ಮುಖವು ಶಾಂತವಾಗಲಾರದು; ಸತ್ಯದಿಂದ ಶಾಂತವಾಗಬಹುದು. ಇನ್ನುಮುಂದೆ ಇಂತಹ ಬಾತ್ಮಿಗಳನ್ನು ಕೊಡಲಾರರೆಂದು ನಂಬಿರುತ್ತೇನೆ. ಸತ್ಯವಾದಿ.

ಕರ್ನಾಟಕದ ಸುದೈವ.

ಸಚ್ಛಿಕ್ಷಕವೆಂಬ ಮಾಸಪತ್ರಿಕೆಯು ಇದೇ ಶ್ರಾವಣದಿಂದ ಗದಗಿನಲ್ಲಿ ಹೊರಡುತ್ತದೆ. ಇದರ 20 ಪುಟಗಳಲ್ಲಿ ನಿಬಂಧ, ಕಥೆ, ಕಾದಂಬರಿ ಮೊದಲಾದ ಸಾಮಾಜಿಕ, ಧಾರ್ಮಿಕ, ನೈತಿಕ ವಿಷಯಗಳನ್ನೂ, 20 ಪುಟಗಳಲ್ಲಿ ಗೃಹವೈದ್ಯಕವನ್ನೂ, ಶಿಕ್ಷಣರೂಪದಿಂದ ಬರೆಯುತ್ತಾ ಹೋಗುವೆವು. ಆದರಿಂದ ಈ ಮಾಸಿಕವು ಅತಿ ಉಪಯುಕ್ತವೂ, ಸಂಗ್ರಹಿಸಿ ಇಡಲಿಕ್ಕೆ ಯೋಗ್ಯವೂ ಆಗಿರುವುದು. ಇದಕ್ಕೆ ಆರಂಭದಿಂದಲೇ ಚಂದಾದಾರರಾಗತಕ್ಕದ್ದು. ಮೊದಲನೇ ಸಂಚಿಕೆಯ ಅರ್ಧದಲ್ಲಿ ವ್ಯಾಪಾರಸ್ಥರಿಗೆ ಅಪ್ರತಿಮವಾದ ಧೈರ್ಯ, ಸಾಹಸಗಳನ್ನು ಹುಟ್ಟಿಸುವ ಸುಜ್ಞಾನಶೆಟ್ಟಿಯ ಮನೋಹರವಾದ ಕಥೆಯೂ, ಅರ್ಧದಲ್ಲಿ ವೈದ್ಯರಿಗೆ ಅಗತ್ಯವಾದ ಉಪಕರಣಗಳು, ಕೀಟಕಗಳು, ಜ್ವರವು, ಪ್ಲೀಹ (ಗುಲ್ಮ), ಮೂತ್ರಪಿಂಡ, ಕಾಳಜ, ರಕ್ತಾಶಯ, ಉದರಸಂಬಂಧ ರೋಗ ಚಿಕಿತ್ಸೆಗಳು ಆರಂಭವಾಗುವುವು. ವರ್ಷಕ್ಕೆ ವರ್ಗಣಿ 3 ರೂ. ಪೋ|| 3 ಆಣೆ, ನಾವು ಹೆಚ್ಚಿಗೆ ಹೇಳಲಾರೆವು. ಒಂದು ಸಂಚಿಕೆಯನ್ನು ನೋಡಿ ನೀವೇ ಮನಗಾಣಿರಿ, ಅಥವಾ ಮನಸ್ಸಿಗೆ ಬಾರದಿದ್ದರೆ, ಮರಳ ಕಳಿಸಿರಿ, ಹಣ ಕಳಿಸುವೆವು. ತೀವ್ರ ನಿಮ್ಮ ಹೆಸರು, ಪೋಸ್ಟ ಆಫೀಸು ತಿಳಿಸಿ. ವಿ. ಪಿ. ಯಿಂದ ತರಿಸಿಕೊಳ್ಳಿರಿ.

ಪತ್ತೆ—ಯಫ್. ಬಸವಲಿಂಗಸ್ವಾಮಿ, ತಲವಾಯಿಮಠ,
3 ಪೆನಶೆನ್ ಹೆ|| ಮಾಸ್ತರ, ಪೋ|| ಗದಗ, ಜಿ. ಧಾರವಾಡ.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು

5

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ ೫ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಕ್ರಯ ರೂ. 8-8-0 ಸೀಮೆ ಪಟ್ಟಿ ಸಹಿತ ರೂ. 6-8-0

ವಿಳಾಸ:— ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಲೋಕಪ್ರಸಿದ್ಧವಾದ ವಜ್ರಾಂಗಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ಗಳಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವುದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನಹಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟುಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು 15 ದಿನಗಳು ಸೇವಿಸುವದರಿಂದ ಪೂರಾ ಗುಣಕೊಡುವುದು. 3 ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರೆವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2-0-0.

ಒಂದೇ ಆವರ್ತಿ 3 ಡಬ್ಬಿಗಳನ್ನು ತರಿಸಿದರೆ ಟಪಾಲು ಖರ್ಚು ಮಾಫಿ.

ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೋ
5 ಸಾಹುಕಾರಪೇಟೆ, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಪತ್ಯದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅವರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಅಕ್ಷರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
29 ಬಳ್ಳಾರಿ.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ, ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ ; ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿ ಸಹಿತ ರೂ. 4-8-0.

ವಿಳಾಸ:— ಮ್ಯಾನೇಜರ್
ಸ್ಟಾರ್‌ಹೌಸ್, ಪೋಸ್ಟ್‌ಬಾಕ್ಸ್ ನಂ. 508.
5 ಪಾರ್ಕ್‌ಟೌನ್, ಮದರಾಸು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ;

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
32 ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

೧೯೨೨ನೆಯ ಇಸವಿ ಆಗಸ್ಟ ತಾ|| ೨೦ ರಿಂದ ೧೯೨೨ನೆಯ ಆಗಸ್ಟ ತಾ|| ೨೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿ ನಾಮಸಂವತ್ಸರದ ಶ್ರಾವಣ ಬಹುಳ ದ್ವಾದಶಿಯಿಂದ ಭಾದ್ರಪದ ಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
20	ಭಾನು	ದ್ವಾದ	4-29	ಪುನ	31-42	4
21	ಸೋಮ	ತ್ರ-ಉ	0-37 5-55	ಪುಷ್ಯ	29-24	5
22	1 ಮಂಗಳ	ಅಮಾ	51-7	ಆಶ್ಲೆ	26-16	6
23	ಬುಧ	ಪಾಡ್ಯ	45-18	ಮಘಾ	23-4	7
24	2 ಗುರು	ಬಿದಿ	39-4	ಪುಬ್ಬ	18-38	8
25	3 ಶುಕ್ರ	ತದಿ	32-52	ಉತ್ತ	14-24	9
26	4 ಶನಿ	ಚೌತಿ	26-47	ಹಸ್ತ	10-16	10

(1) ಸರ್ವತ್ರಾಮಾವಾಸ್ಯಾ, ಮಂಗಳಗೌರೀವ್ರತಂ, (2) ಮೊಹರಂ ಪ್ರಾರಂಭಃ. (3) ಸ್ವರ್ಣಗೌರೀವ್ರತಂ, ಸಾಮಗೋಪಾಕರ್ಮ, (4) ಸಿದ್ಧಿ ವಿನಾಯಕವ್ರತಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧೀಗತರಾಜಮಂಡಲಿಕೆಸ್ಸಾ | [illegible] ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | [illegible] ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಯೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಸೆಪ್ಟಂಬರ್ ತಾರೀಖು ೩ ನೆಯ ಭಾನುವಾರ. (ಸಂಚಿಕೆ ೩೬

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಖಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ವೀರಶೈವರು ಅವಶ್ಯ ಸಂಗ್ರಹಿಸತಕ್ಕ ವೀರಶೈವ ಧರ್ಮಪರವಾದ ಸುಂದರ ಫೋಟೋಗಳು.

ಫೋಟೊ ಲಾಕೇಟುಗಳು ಇವುಗಳಲ್ಲಿ ಶ್ರೀ|| ಜ|| ಗು|| ಚಿತ್ರದುರ್ಗ ಮಹಾಸ್ವಾಮಿ ಅಥಣಿ ಶಿವಯೋಗಿ ಶ್ರೀ ಬಸವೇಶ್ವರ, ಹಾನಗಲ್, ಬೀಳೂರ, ಕಮತಗಿ ಹುಚ್ಚೇಂದ್ರಸ್ವಾಮಿ ಮುಂತಾದಸ್ವಾಮಿಗಳು. ಕಾಶಿ, ಕೇದಾರ, ಉಜ್ಜನಿ, ಬಾಳೆಹಳ್ಳಿ ಶ್ರೀಶೈಲ್ಯ, ಪಂಚಾಚಾರ್ಯರು ಮತ್ತು ಬೇಕಾದ ದೇವತಾಫೋಟೊ ಕೂಡ್ರಿಸಿ ಸಿಗುವವು. ಇವು ಮೊದಲದಂತೆ ಕೋಟಿನ ಕಾಲರ ಮೇಲೆ ಹಚ್ಚುವದಕ್ಕೆ ಅಥವ ಯಾವತ್ತೂ ದರ್ಶನಸಲುವಾಗಿ ಗಡಿಯಾರ ಸರಪಣಿಗಳಿಗೆ ಹಚ್ಚುವದಕ್ಕೆ ಅತ್ಯಂತ ಶೋಭಾಯಮಾನ ಇರುವವು. ರೋಲ್ಡಗೋಲ್ಡ ಫ್ಯಾನ್ಸಿ ನಕ್ಷೆದು ೧ಕ್ಕೆ ರೂ. ೧. ಬೆಳ್ಳಿದು ೧-೧೦-೦. ೧೦ ವರ್ಷ ಗ್ಯಾರಂಟಿಯು ರೋಲ್ಡಗೋಲ್ಡದು ೧-೧೨-೦ ರೋಲ್ಡಗೋಲ್ಡ ಮ್ಯಾಗ್ನಿಫಾ ಇಂಗ ಗ್ಲಾಸದು ಹಿರಾದಂತೆ ಅತ್ಯಂತ ಶೋಭಾಯಮಾನವಾದುದ್ದು ೨-೮-೦ ಗಿಲ್ಟಿಂದು ಮಜಬೂತ ೧ಕ್ಕೆ ೦-೮-೦

೧. ಶ್ರೀ ಪಂಚಾಚಾರ್ಯಲಿಂಗೋದ್ಭವ:—೧ ಶ್ರೀ ವಿಶ್ವೇಶಲಿಂಗದಿಂದ ಉದ್ಭವಿಸಿದ ಶ್ರೀ ವಿಶ್ವಾರಾಧ್ಯರು, ೨ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಿಂದೇ ಉದ್ಭವಿಸಿದ ಶ್ರೀ ಪಂಡಿತಾರಾಧ್ಯರು, ೩ ಶ್ರೀ ಹಿಮವತ್‌ಕೇದಾರ ರಾಮನಾಥಲಿಂಗದಿಂದ ಉದ್ಭವಿಸಿದ ಶ್ರೀ ಏಕೋರಾಮಾರಾಧ್ಯರು, ೫ ಶ್ರೀ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಅವತರಿಸಿದ ರೇವಣಾರಾಧ್ಯರು. ಈ ಆಚಾರ್ಯರ ಫೋಟೋಗಳು ಬೇರೆ ಬೇರೆ ಇರುವವು. ಇವು ಅತ್ಯಂತ ಮಹತ್ವವುಳ್ಳ ಫೋಟೋ ಇರುವವು. ಫೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೨. ಶ್ರೀಮಡಿವಾಳ ಮಾಚಿದೇವ ಮಹಿಮಾ:—ಸರ್ವಕಾಲಶುಚಿರ್ಭೂತದಿಂದೆ ಇರುವ ಮಡಿವಾಳಯ್ಯಗೆ ಚೇಷ್ಟೆ ಇಂದೆ ಒಬ್ಬ ಧನಿಯು ಮುಟ್ಟಿದ ಕೊಡಲಿ ವೀರಭದ್ರಾವತಾರಿ ಆದ ಮಡಿವಾಳಯ್ಯನು ತೋರಿಸಿದ ಪ್ರರಾಕ್ರಮ ಬಿಜ್ಜಳರಾಯನ ಪಶ್ಚಾತಾಪ, ಬಸವಣ್ಣನ ಭಕ್ತಿ ಇವುಗಳು ಇದರಲ್ಲಿ ಕಂಡುಬರುತ್ತವೆ. ಇದು ಭಕ್ತಿಗಾಂಭಿರ್ಯಯುಕ್ತವಾದ ಫೋಟೊ ಇರುತ್ತದೆ. ಫೂ|| ಸಾ|| ಪ್ರ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೩. ಶ್ರೀ ಚನ್ನಬಸವೇಶ್ವರ ಜನ್ಮ:—ಶ್ರೀ ಅಕ್ಕನಾಗಮ್ಮನವರ ಉದರದಲ್ಲಿ ಪ್ರಸಾದದ ಮಹತ್ವದಿಂದೇ ಷಣ್ಮುಖ ಅವತಾರಿಯಾದ ಶ್ರೀ ಚನ್ನಬಸವಣ್ಣನವರ ಜನನವಾದದ್ದು ಮಹತ್ವ ಪೂರ್ಣವಾದ ಫೋಟೊ ಇರುವದು. ಫೂ|| ಸಾ|| ೧ಕ್ಕೆ ೧-೪-೦ ಕ್ಯಾ||ಸಾ|| ೧ಕ್ಕೆ ೦-೧೨-೦.

೪. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ:—ಇದರಲ್ಲಿ ಶ್ರೀ ಬಸವೇಶ್ವರ ಚನ್ನಬಸವೇಶ್ವರ ಮಡಿವಾಳ ಮಾಚಿದೇವರು ಸಿದ್ಧರಾಮದೇವರು ಮುಂತಾದ ಪ್ರಮಥರು ಶ್ರೀ ಪ್ರಭುದೇವರ ಪಾದಪೂಜಾಮಾಡುವ ಸಮಾರಂಭದ ಫೋಟೊ ಇರುವದು. ಫೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦.

೫. ಶ್ರೀ ಬಸವೇಶ್ವರ ಸಂಗಮೈಕ್ಯ:—ಶ್ರೀ ಬಸವಣ್ಣನವರು ಕೂಡಲ ಸಂಗಮನಾಥನಲ್ಲಿ ಐಕ್ಯವಾಗುವ ಇದು ಅಭೂತಪೂರ್ವವಾದ ಫೋಟೊ ಇರುವದು. ಫೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೬. ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕನಾದ ಶ್ರೀ ಬಸವಣ್ಣನವರ ತೇಜಃಪುಂಜವಾದ ಖಾಸ ಫೋಟೊ ೧೮ × ೧೨ ಸೈಜದ ಪ್ರ|| ೧ಕ್ಕೆ ೮ ಆಣೆ ಕೈ ಬಣ್ಣದು ರೂ. ೧.

೭. ಶ್ರೀ ಶಿವಪ್ರದೋಷಕಾಲದರ್ಶನ:—ಬ್ರಹ್ಮ, ವಿಷ್ಣು, ಇಂದ್ರ, ಅಗ್ನಿ ಮುಂತಾದ ದೇವತರು ಸರಸ್ವತಿ ಲಕ್ಷ್ಮೀ ಮುಂತಾದ ದೇವತಾಸ್ತ್ರೀಯರು ಕೂಡಿ ತಾಳ, ಮೃದಂಗ, ವೀಣಾ ಮುಂತಾದ ವಾದ್ಯಗಳಿಂದೇ ಗಾನ ಮತ್ತು ಭಜನೆ ಮಾಡುತ್ತ ಯಾವತ್ತು ದೇವತಾ ಋಷಿಗಳು ಶ್ರೀ ಪರಶಿವನ ದರ್ಶನ ತೆಗೆದುಕೊಳ್ಳುತ್ತಿರುವ ಈ ಫೋಟೊ ಬಹು ಸುಂದರವಾಗಿ ದರ್ಶನೀಯ ಇರುವದು. ಫೂ|| ಸಾ|| ೧ಕ್ಕೆ ೧-೪-೦ ಕ್ಯಾ|| ಸಾ|| ೦-೧೨-೦.

೮. ಶ್ರೀ ಮಹಾದೇವಕಾಲಕೂಟ ವಿಷಪಾನ:—ವಿಷ್ಣು, ಬ್ರಹ್ಮಾದಿದೇವ ಅಸುರರು ಕೂಡಿ ಶ್ರೀ ಶಿವನಿಗೆ ಕಾಲಕೂಟ ವಿಷನಿವಾರಣಾರ್ಥಕ್ಕಾಗಿ ಪ್ರಾರ್ಥಿಸಲು ಶ್ರೀ ಪರಶಿವನು ಆ ಕಾಲಕೂಟವಿಷವನ್ನು ಪ್ರಾಶನಮಾಡಿ ಜಗತ್‌ಪ್ರಲಯವು ನಿಲ್ಲಿಸಿದ ಈ ಫೋಟೊ ಬಹಳ ಸುಂದರ ಇರುತ್ತದೆ. ಫೂ|| ಸಾ|| ೧ಕ್ಕೆ ರೂ. ೧-೪-೦ ಕ್ಯಾ|| ಸಾ|| ೧ಕ್ಕೆ ೦-೧೨-೦

೯. ಶ್ರೀ ಶಿವಯೋಗಿ ಸಂಘ:—ಇದರಲ್ಲಿ ಶ್ರೀ ಜ|| ಗು|| ಚಿತ್ರದುರ್ಗ ಮಹಾಸ್ವಾಮಿಗಳು ಗದಗ ತೋಂಟದಾರ್ಯರು, ಅಥಣಿ ಶಿವಯೋಗಿಗಳು ಮುಂತಾದ ೧೮ ಶಿವಯೋಗಿಗಳ ಫೋಟೋಗಳು ಕೂಡಿಸಿ ಇರುವವು. ಇದರಿಂದ ಒಂದೇ ಕಾಲಕ್ಕೆ ಎಲ್ಲಾ ಶಿವಯೋಗಿಗಳ ದರ್ಶನ ಆಗುವದು ೧೮ × ೧೨ ಸೈಜದ ಚಿತ್ರದ ಕ್ರಯ ಪ್ರ|| ೧ಕ್ಕೆ ೮ಆಣೆ.

ಫೋಟೋ ಲಾಕೆಟ ಮತ್ತು ಫೋಟೋ ಬ್ರುಚಗಳು ಇವುಗಳು ಬೇಕಾದ ದೇವರು, ಸತ್ಪುರುಷರು, ದೇಶಭಕ್ತರ ಫೋಟೋ ಕೂಡ್ರಿಸಿ ಸಿಗುವವು. ಇವು ಗಡಿಯಾರ ಸರಪಳಿಗೆ ಕೋಟಿನ ಕಾಲರ ಮೇಲೆ ಹಚ್ಚಬಹುದು.

ರೋಲ್ಡಗೋಲ್ಡ ಫ್ಯಾನ್ಸಿ ನಕ್ಷಿದಾರ ೨ ಫೋಟೋಗಳು ಕೂಡ್ರಿಸಿದ್ದು	೧ಕ್ಕೆ ೧- ೦-೦	ಸದರ ದುರ್ಬಿಣಿನ ದಪ್ಪಾದ ಹರಳದವು	೧ಕ್ಕೆ ೨- ೮-೦
		ಬೆಳ್ಳಿಯ ಗೋಲಾಕಾರ	೧ಕ್ಕೆ ೧- ೮-೦
ಸದರ ರೂಪಾಯಿ ಆಕಾರದ್ದು ೨ ಸದರ	೧ಕ್ಕೆ ೦-೧೨-೦	ಬ್ರುಚ ೧ ಫೋಟೋ ಕೂಡಿಸಿದ್ದು	೧ಕ್ಕೆ ೦- ೮-೦

ಎಲ್ಲಾ ಮಾಲಿಗೆ ಪ್ಯಾಕಿಂಗ ಮತ್ತು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರಿಗೆ ಚನ್ನಾಗಿ ಕಮಿಷನ್ ಗ್ರಾಮಗ್ರಾಮಕ್ಕೆ ಏಜಂಟರು ಬೇಕು. ೧ ಆಣೆ ಟಿಕೆಟ್ ಕಳಿಸಿ ಕ್ಯಾಟಲಾಗ ತರ್ಸಿಕೊಳ್ಳಿ.

6 ಗಂಗಪ್ಪಾ ಜೇರಗೆ, ಸೋಲಾಪುರ ಸಿಟಿ.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.



ಇಮಿಟೇಷನ್ ವಜ್ರದ ಬೆಂಡೋಲೆ.

24

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲಿಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡುಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ ಭಂಗಾರದ ಮುಳ್ಳುಳ್ಳ

6

ರಾಯಲ್ ಫೌಂಟೆನ್‌ಪೆನ್.

ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿವಿಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಸೀಸೆ 1ಕ್ಕೆ 1-8-0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 365, ಮದರಾಸ್.

ಶ್ರೀ

ಜಯದೇವ ಔಷಧಾಲಯಂ,

(ಮೊದಲು ರೈಲ್ವೆಬುಕಿಂಗ್ ಆಫೀಸ್ ಇದ್ದ ಕಟ್ಟಡದಲ್ಲಿ)
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಔಷಧಾಲಯದಲ್ಲಿ ಎಲ್ಲ ವಿಧದ ರೋಗಗಳಿಗೂ ಅನುಗುಣವಾದ ಚಿಕಿತ್ಸೆಯನ್ನು ಹೊಂದಬಹುದು. ರೋಗಿಗಳ ಪರೀಕ್ಷೆಯು ಅನುಭವಸ್ಥರಾದ ಡಾಕ್ಟರಿಂದ (ಇವರು ವೀರಶೈವರು) ಉಚಿತವಾಗಿ ನಡಿಸಲ್ಪಡುವುದು.

ಎಲ್ಲ ವಿಧದ ಪೇಟೆಂಟ್ ಔಷಧಗಳೂ ಇಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿ ಸೆಪ್ಟಂಬರ್ ತಾ|| ೩ನೆಯ ಭಾನುವಾರ.

ಅರಮನೆಯಲ್ಲಿ ಪುತ್ರಿ ಕಾರತ್ಯೋತ್ಸವ.

ಕಳೆದತಿಂಗಳು ತಾ|| ೨೮ನೆ (ಭಾದ್ರಪದ ಶುದ್ಧ ೭ ಸೋಮವಾರ) ಸಾಯಂಕಾಲ ೬-೫೫ ಗಂಟೆಗೆ ಸುಶೋಭನ ಶುಭ ಮುಹೂರ್ತದಲ್ಲಿ ನಮ್ಮ ಶ್ರೀಮನ್ಮಹಾರಾಜ ಕಂಠೀರವ ನರಸಿಂಹರಾಜ ಒಡೆಯರವರಿಗೆ ಪುತ್ರಿ ಕಾರತ್ಯೋತ್ಸವವಾಯಿತೆಂದು ತಿಳಿಸಲು ಅತಿಶಯವಾಗಿ ಸಂತೋಷಿಸುತ್ತೇವೆ. ಯದುವಂಶಾಂಬುಧಿಯಲ್ಲಿ ಬಾಲಚಂದ್ರನಂತೆ ಜನಿಸಿದ ಈ ಬಾಲಿಕೆಯು ... ಪ್ರಜೆಗಳೆಲ್ಲರಿಗೂ ... ಸಂತೋಷವುಂಟಾಗಿದೆ. ... ಶ್ರೀ ಜಗದೀಶ್ವರನ ಕರುಣಾಕಟಾಕ್ಷದಿಂದ ಸುಖಪ್ರಸವವಾಗಿ ಮಗು ಬಾಣಂತಿಯರಿಬ್ಬರೂ ಆರೋಗ್ಯದಿಂದಿರುವರೆಂದು ಕೇಳಿ ಸಂತೋಷಿಸುತ್ತೇವೆ. ಜನನವಾದ ಕೂಡಲೆ ಸಂತೋಷ ಸೂಚಕವಾದ ೨೧ ಗುಂಡುಗಳು ಹಾರಿಸಲ್ಪಟ್ಟವು. ... ನಮ್ಮ ರಾಜವಂಶವು ಅಭಿವೃದ್ಧಿಹೊಂದುತ್ತಾ ... ಎಂದು ಸಕಲ ಪ್ರಜೆಗಳ ಪರವಾಗಿ ನಾವು ಕೋರುತ್ತಿರುವೆವು.

ತಾತಾರವರ ಉಕ್ಕಿನ ಯಂತ್ರಾಗಾರ.

ಸಾಕ್ಚಿ ನಗರದಲ್ಲಿ ಸ್ಥಾಪಿತವಾಗಿ ಬಹು ಅದ್ಭುತವಾಗಿ ನಡೆಯುತ್ತ ಬಂದ ಈ ಯಂತ್ರಾಗಾರದ ಧಂಡೆಯು ಈಗ ತಗ್ಗಿಹೋಗುತ್ತಬಂದಂತೆ ಕಾಣುತ್ತದೆ. ಕಳೆದ ತಾ|| ೨೪ರಲ್ಲಿ ಸರ್ ದೊರಾಬ್ಜಿ ತಾತಾರವರ ಅಧ್ಯಕ್ಷತೆಯಿಂದ ಭಾಗದಾರರ ಸಭೆಯು ಕೂಡಿತ್ತು. "ಬಿಲ್ಡಿಂಗ್ ಪ್ಲಾಂಟ್ ಇರುವ ಬಿಲ್ಲು ಸಿಂಧಾ... ಎಂದು ಮೊದಲು ಭಾಗದಾರರು ಆಕ್ಷೇಪಿಸಿದರು. ... ಭಾಗದಾರರಿಗೆ ವರ್ಷಕ್ಕೆ ಸೇಕಡಾ ೪ ರೂ. ನಂತೆ ಲಾಭವನ್ನು ಹಂಚುವ ... ೨೦ ಲಕ್ಷ ಪೌನು ಗಳ ಬೆಲೆಯ ಡಿಬೆಂಚರುಗಳು ... ಭಾಗದಾರರು ಕನಸಾಭಿಲಾಷೆ ... ಈಗ ಕಬ್ಬಿಣದ ಬೆಲೆಗೆ ದುರವಸ್ಥೆಯು ಬಂದಿರುವಕಾರಣ, ಈ ಯಂತ್ರಾಲಯವು ಅಷ್ಟೇನೂ ಲಾಭಕರವಾಗಿಲ್ಲದೆ ಹೋಗಿದೆ. ನಾಲಕೋಟಿ ಹಣಕ್ಕೆ ಪ್ರಥಮ ಪ್ರತಿವರ್ಷ ೬-೭ ರೂ. ಗಳ ಬಡ್ಡಿಯನ್ನು ಕೊಡುತ್ತಿರುವಾಗ, ೧ ರೂ. ನ ಲಾಭದಿಂದ ಭಾಗದಾರರು ತೃಪ್ತಿಪಡುವುದು ಅಸಂಭವನ ಸರಿ. ಎಷ್ಟೋ ಕಾಲದಿಂದ ಲಾಭದಾಯಕವಾಗಿ ನಡೆದುಬಂದ ಯಂತ್ರಾಲಯದ ಅವಸ್ಥೆಯೇ ಈಗ ಇಂಥ ಶೋಚನೀಯಸ್ಥಿತಿಗೆ ಬಂದಿರುವಲ್ಲಿ ನೂತನವಾಗಿ ಪ್ರತಿಷ್ಠಾಪಿಸಲ್ಪಡುತ್ತಿರುವ ನಮ್ಮ

ಭದ್ರಾವತಿಯ ಕಬ್ಬಿಣದ ಯಂತ್ರಾಗಾರ ಪ್ರತಿಷ್ಠಾಪನೆಯ ಪರಿಣಾಮವು ಹೇಗಾಗುವುದೋ ಎಂದು ದೇಶೀಯರು ಚಿಂತಿಸುವುದು ಸಹಜವಾಗಿದೆ.

ಆಂಗ್ಲ ಮಂತ್ರಿವರ್ಯರ ಉಪನ್ಯಾಸನೂತ್ರಕ್ಕೆ ವೈಸರಾಯರ ಭಾಷ್ಯ.

ವಿ|| ಲಾಯಿಡ್ ಜಾರ್ಜ್‌ರವರು, ಭರತಖಂಡಕ್ಕೆ ಕೊಡಲ್ಪಟ್ಟಿರುವ ನೂತನ ಸಂಸ್ಕರಣವು ಪರೀಕ್ಷಾರ್ಥವಾದುದೆಂತಲೂ, ಆಂಗ್ಲೋಇಂಡಿಯನ್ನರ ಪಾಲನೆಯೇ ಭರತಖಂಡದಲ್ಲಿ ಆ ... ಬರುವುದೆಂದೂ ... ಭರತಖಂಡದಲ್ಲಿ ಎಲ್ಲ ಪಕ್ಷದ ಪ್ರಜಾ ನಾಯಕರೂ ಅಸಂತುಷ್ಟರಾಗಿ ಆಕ್ಷೇಪಗಳನ್ನು ಈಗ ನಾನಾ ವಿಧವಾಗಿ ನಡಸುತ್ತಿದ್ದಾರೆ. ... ಈ ಮಧ್ಯೆ ಕೆಲವು ದಿವಸದಿಂದ ಶಾಸನಸಭಿಕರು ಮ|| ಎಂ. ಕೆ. ರಡ್ಡಿಯವರ ಅಧ್ಯಕ್ಷತೆಯಿಂದ ವೈಸರಾಯ್ ರೀಡಿಂಗ್ ಪ್ರಭುಗಳ ಬಳಿಗೆ ರಾಯಭಾರಕ್ಕಾಗಿ ಹೋಗಿ, ಲಾಯಿಡ್ ಜಾರ್ಜ್ ಭಾಷಣವು ೧೯೧೭ನೆ ವರ್ಷದ ಪ್ರಕಟನೆಗೂ, ಸಾರ್ವಭೌಮರ ೧೯೧೯ನೆ ವರ್ಷದ ಸಂದೇಶಕ್ಕೂ ವಿರುದ್ಧವಾಗಿರುವುದನ್ನೂ ... "ಮಂತ್ರಿವರ್ಯರ ಭಾಷಣದ ಅದ್ಭುತ ಭಾಗವನ್ನೂ, ಸನ್ನಿವೇಶವನ್ನು ... ವೈಸರಾಯರು ... ಮುಂದೆ ೧೯೧೭-೧೯ ನೆ ವರ್ಷಗಳ ... ಮುತ್ತೇನೆಂದರೆ—ಮುಂದೆ ಬರುವ ಶಾಸನ ಸಭೆಗಳ ಸಭ್ಯರ ... ಸಭೆಗಳನ್ನು ... ಬ್ರಿಟಿಷರ ಸರಕಾರದ ... ೩೨ ಕೋಟಿ ಪ್ರಜಾಸಂಖ್ಯೆಯುಳ್ಳ ಈ ದೊಡ್ಡ ದೇಶದ ಅಭ್ಯುದಯಕ್ಕೆ ಸಾಧಕವಾಗಿ ಪಾರ್ಲಿಮೆಂಟಿನಿಂದಲೂ ಸಾರ್ವಭೌಮರಿಂದಲೂ ಅನುಮೋದಿತವಾಗಿ ಸ್ಥಾಪಿಸಲ್ಪಟ್ಟಿರುವ ನೂತನ ಸಂಸ್ಕರಣ ಶಾಸನವನ್ನೇ ಹಿಂದೆಗೆದುಕೊಳ್ಳುವುದೆಂದರೆ ... ಹೀಗೆ ಮುಖ್ಯಮಂತ್ರಿಯವರು ಸಮಯೋಚಿತವಾಗಿ ... ಇನ್ನೊಂದು ನಿಸ್ಸಂದಿಗ್ಧ ಭಾಷಣವನ್ನು ... ಅಗ್ಗಿ ಇತರರ ವ್ಯಾಖ್ಯೆಗಳೇ ಅವಶ್ಯಕವಿಲ್ಲದೆ ಹೋಗುವುವು.

ಐರ್ಲಂಡಿನಲ್ಲಿ ಮತ್ತೊಂದು ಕೊಲೆ.

ಐರ್ಲಂಡಿನ ಈಗಣ ಪ್ರಭುತ್ವದಲ್ಲಿ ಮುಖ್ಯಮಂತ್ರಿಯಾಗಿದ್ದ ಮೈಕೇಲ್ ಕಾಲಿನ್ಸ್‌ರವರು ಕಳೆದತಿಂಗಳು ತಾ|| ೨೨ರಲ್ಲಿ ಪ್ರಜಾಸ್ವಾಮ್ಯವಾದಿ ಪಕ್ಷದ ಹಂತಕರ ತುಪಾಕಿ ಗುಂಡಿನೇಟಿನಿಂದ ಕೊಲ್ಲಲ್ಪಟ್ಟರು. ಇವರು ಆದಿಯಿಂದಲೂ ಐರ್ಲಂಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಜಾನಾಯಕರೂ ಶೂರ ಸೇನಾನಿಗಳೂ ಧೀರರೂ ಆಗಿದ್ದರು. ಇಂಗ್ಲೆಂಡಿಗೂ ಐರ್ಲಂಡಿಗೂ ಈಗ ನಡೆದಿರುವ ಸಂಧಿಪತ್ರಕ್ಕೆ ಹಸ್ತಾಕ್ಷರವನ್ನು ಹಾಕಿದ ಪ್ರಮುಖರಲ್ಲಿ ಇವರೂ ಒಬ್ಬರಾಗಿದ್ದರು. ಆರ್ಥರ್ ಗ್ರಿಫಿತ್‌ರವರು ಕೆಲವು ದಿವಸಗಳ ಹಿಂದೆ ಕಾಲವಾದ ಮೇಲೆ ... ಡೆವಲೇರಾ ... ಐರ್ಲಂಡಿನ ಪ್ರಜಾಸ್ವಾಮ್ಯವಾದಿಗಳ ಮೇಲಣ ಯುದ್ಧವನ್ನು ಬಿಗಿಪಟ್ಟಿನಿಂದ ಸಾಗಿಸುತ್ತಲೇ ಇದ್ದಾರೆ.

ಕಾಲಿನ್ಸ್‌ರವರ ಮರಣವಾರ್ತೆಯನ್ನು ಕೋರ್ಕ್ ಕೆಥೊಲಿಕ್ ಕ್ರೈಸ್ತ ಜಗದ್ಗುರುವಾದ ಪೋಪರವರು ಕೇಳಿ ವಿಶಾದಪಟ್ಟು, ... ಆದರೇನು ? ... ಭರತಖಂಡದ ಅಸಹಾಯವಾದಿಗಳಲ್ಲಿ ದುಡುಕಿನ ಸ್ವಭಾವದವರಿಗೆ ಇದು ಬೋಧಪ್ರದವಾಗದೆ ?

ಗತಿಸಿದ ಕಾಲಿನ್ಸ್‌ರವರು ಒಬ್ಬ ಯುವತಿಯನ್ನು ಮದುವೆಯಾಗಬೇಕೆಂದಿದ್ದರು. ... ತಾ|| ೨೨ನೆ ಮಂಗಳವಾರದಿನವೇ ಅವರ ಹತ್ಯೆಯು ನಡೆದುದು ಮತ್ತಷ್ಟು ವಿಶಾದಕರವು. ಕೊಲೆಯಾದ ದಿನ ಬೆಳಿಗ್ಗೆ ಕಾಲಿನ್ಸ್‌ರವರು ಇನ್ನು ಕೆಲ ಪ್ರಮುಖರೊಡನೆ (ಸುಮಾರು ೨೦ ಮಂದಿ) ಕೂಡಿ ಪ್ರಭುತ್ವ ಸೈನ್ಯದ ಶಿಬಿರವನ್ನು ನೋಡುವುದಕ್ಕೆ ಹೋಗಿದ್ದು, ಆ ಸಾಯಂಕಾಲ ಬಾಂಡನ್ ಪಟ್ಟಣದಿಂದ ಕಾರ್ಕ್‌ನಗರಕ್ಕೆ ಹಿಂದಿರುಗಿ ಬರುತ್ತಿದ್ದರು. ಬೆಲ್ಮಾಟ್ಸ್ ಬಳಿಗೆ ಇವರು ಬರುವ ಹೊತ್ತಿಗೆ ಮಗ್ಗುಲಿನ ಗುಡ್ಡದಲ್ಲಿ ಅಡಗಿದ್ದ ಪ್ರಜಾಸ್ವಾಮ್ಯವಾದಿ

ಪಕ್ಷದ ಸೈನಿಕರು ೨೦೦ ಮಂದಿಗಳು ಅಕಸ್ಮಾತ್ತಾಗಿ ಇಳಿದು ಬಂದು ಈ ಗುಂಪಿನ ಮೇಲೆ ಬಿದ್ದರು. ಎರಡು ಪಕ್ಷದವರಿಗೂ ೧ ಗಂಟೆಯ ಕಾಲ ಯುದ್ಧವಾಯಿತು. ಕಾಲಿನ್ಸ್‌ರವರೂ ಅವರ ಜತೆಯವರೂ ತಾವು ಕುಳಿತಿದ್ದ ಸಾಯುಧವಾದ ಬಂಡಿಯಿಂದ ಕೆಳಕ್ಕೆ ಧುಮಿಕಿ ತುಪಾಕಿಗಳನ್ನು ಪ್ರಯೋಗಿಸುತ್ತಾ ಕಾದಾಡಿದರು. ಇವರ ಎದೆಗೆ ಇದಿರುಪಕ್ಷದವರು ಸೋತು ಓಡಿಹೋಗುವ ಸ್ಥಿತಿಯಲ್ಲಿರುವಾಗ್ಗೆ ಅವರ ಕಡೆಯ ಒಂದು ಗುಂಡು ಧಿಡೀರನೆ ಬಂದು ಕಾಲಿನ್ಸ್‌ರವರ ಹಣೆಗೆ ಬಿದ್ದಿತು. ಕೂಡಲೇ ಅವರು ನೆಲಕ್ಕೆ ಬಿದ್ದರು. "ಅವರನ್ನು ಕ್ಷಮಿಸಿ" ಎಂದು ಉಚ್ಚರಿಸುತ್ತ ಕೆಲ ನಿಮಿಷಗಳೊಳಗೆ ಅಲ್ಲೇ ಮೃತರಾದರು. ಕೂಡಲೇ ಅಲ್ಲಿಂದ ಶವವನ್ನು ಕಾರ್ಕ್‌ನಗರಕ್ಕೆ ಸಾಗಿಸಿ ಅಲ್ಲಿಂದ ಹಡಗಿನ ಮೇಲೆ ಡಬ್ಲಿನ್ ಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಉಚಿತಮರ್ಯಾದೆಯಿಂದ ಕಳೆದ ಸೋಮವಾರದ ದಿವಸ ಸಮಾಧಿಕ್ರಿಯೆಯನ್ನು ಜರುಗಿಸಿದರು.

CONSPIRACY
(Contributed).

This is the heading of a leader in one of the political extremist organs by which the political exploiters in British India call the deliberations of the British people in the matter of "Indianization" of the Services. Whether their view is right or not is not the point of consideration in Mysore. It at any rate reminds us of our own conditions here. There have been many occasions on which "conspiracies" have been held in the poor land of Mysore, which are not yet extant, to thwart the legitimate aspirations of the people, and unfortunately for the people these conspiracies have often proved successful. The crusade against the "Miller Committee Report" was one such. The Recruitment Board, the interpellations in the Legislative Council, the orders of Government are all ineffective to check the influence of the conspiracy which is underneath the Mysore Service. Appointments are made every day in the teeth of the retrenchment operations. Who are those that obtain new appointments and who are those that suffer under the retrenchment "cuts"? The members of the conspiracy get the former and the members against whom the conspiracy wages war are the victims of the latter. Who is there to examine the inner and insiduous working of the conspiracy? None. Everything favours conspiracy and every effort on the other side fails to arrest the evil effects of conspiracy. The network of power in Mysore Service is strong and all embracing being the result of many years of deliberate conspiracy and to break through it the strength of Hercules is needed.

Now the question of admission of all classes of Hindus into the Sanskrit Colleges is the "Rock" on which the conspiracy is venturing to prove its strength. The Shankar Mutt meeting in Bangalore has deliberated. The recommendations of the Special Committee are staring in the face. And the injured have for the first time in public life expressed their case in the press and in special meetings. The volume of public opinion is decidedly against the monopoly. The question is easy of solution. Much light has been thrown on the question to perceive the justice of the demand. But the clouds of conspiracy are thick and persistant. The point at issue has already been argued in these columns and many valuable contributions in Kannada and in English have been published. This paper has done its best in the past for the removal of this iniquity and is still fighting hard against the conspiracy. But the members of the conspiracy are the heirs of many ages of culture and those who are fighting the iniquity are generally the heirs of many ages of ignorance. The world as a whole is marching onwards leaving far behind many mile stones of social prejudices. The forward countries are inviting the backward countries to go with them to share equally the benefits of modern Science and knowledge and to form cultural comradeship. The world is looking forward for a day of world Democracy, for a day of world consciousness, for a day of equal rights and privileges, for a day of Universal Brotherhood. In this Universal forward move are we in Mysore to be moving backward to the scenes of darkness leaving the blessings of light held up in the pages of the Vedas to be appropriated by a small minority of the Hindu Community. Is this then the place of ancient civilization? Is this the place where the best of the past and of present could unite to achieve a yet more glorious future? We appeal to our brothren who are fighting unjustly for the selfish and exclusive preserve of the Vedas to their own use, to extend their hands so to form a wider circle of fraternity whose common goal is the knowledge of the "Vedas."

ಸ್ವದೇಶದ ವೃತ್ತಾಂತಗಳು

ಕಾಮಧೇನು ಎಂಬ ಪುಸ್ತಕದ ಪ್ರಕಟನಪತ್ರಿಕೆಯು ಈ ಸಂಚಿಕೆಯಲ್ಲಿ ಗರ್ಭಿತವಾಗಿದೆ. ವಾಚಕರು ದಯವಿಟ್ಟು ಗಮನಿಸಬೇಕಾಗಿ ಕೋರಿದೆ.

ನಂಜನಗೂಡು ಬೆಂಗಳೂರುಗಳ ಮಧ್ಯದಲ್ಲಿ ತಿರುಗಾಡುವ ಹೊಗೆಬಂಡಿಗಳನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಯಿಸುವಂತೆ ಮಾಡುವುದರಲ್ಲಿ ಲಾಭವನ್ನುಗಳನ್ನು ತಿಳಿಯಲು ನಮ್ಮ ಪ್ರಭುತ್ವದವರು ಅಪ್ಪಣೆ ಮಾಡಿರುವುದಾಗಿ ಕೇಳುತ್ತೇವೆ.

ಕಳೆದ ಗೌರೀಹಬ್ಬದ ದಿನದಿಂದಲೂ ಮಳೆಯು ಈ ಡಿಸ್ಟ್ರಿಕ್ಟಿನಲ್ಲಿ ಹಲವುಕಡೆ ನಡೆಯುತ್ತಿರುವ ಸುದ್ದಿಯು ಬಂದಿದೆ. ರಾಜಧಾನಿಯಲ್ಲೂ ಮೋಡಮುಸುಗಿ ಆಗಾಗ್ಗೆ ಮಳೆಯಾಗುತ್ತಿದೆ. ... ರೈತರು ತುಂಬಾ ಆನಂದವಾಯಿತು.

ನಮ್ಮ ದಿವಾನರವರು ಕಳೆದ ತಿಂಗಳಲ್ಲಿ ನಡೆಯಿಸಿದ ಸಂಚಾರದಲ್ಲಿ ಚಿತ್ರದುರ್ಗಕ್ಕೆ ದಯಮಾಡಿಸಿದ್ದಾಗ್ಗೆ ಶ್ರೀ ಜಗದ್ಗುರು ನಿರಂಜನ ಸಂಸ್ಥಾನಮಠಕ್ಕೆ ದಯಮಾಡಿಸಿ ... ಸಂತುಷ್ಟರಾಗಿ ತೆರಳಿದರೆಂದು ಕೇಳುತ್ತೇವೆ.

ಅರಮನೆಯಲ್ಲಿ ಕಳೆದ ಶುಕ್ರವಾರದ ದಿವಸ ಬೆಳಗ್ಗೆ ನೂತನ ರಾಜಪುತ್ರಿಯವರ ಜಾತಕರ್ಮ ಮಹೋತ್ಸವವು ಜರುಗಿತು. ... ಭಾದ್ರಪದ ಬಹುಳ ೨ ಗುರುವಾರದ ದಿವಸ ನಾಮಕರಣಮಹೋತ್ಸವವು ನಡೆಯುವುದಾಗಿದೆ.

ಈ ತಿಂಗಳ ಆರಂಭದಿಂದ ಎಂ.ಎಸ್.ಎಂ. ರೈಲ್ವೆ ಸಂಘದವರು ಬಂಡಿಗಳು ಹೊರಡುವ ವಾಸಿಯಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡುತ್ತಾರೆ. ... ಬೆಂಗಳೂರಿಂದ ... ಸಂಜೆ ೬-೨೦ ಗಂಟೆಗೆ ಹೊರಡುತ್ತಿದ್ದ ಪಾಸಂಜರ್ ಎಕ್ಸ್‌ಪ್ರೆಸ್ ಬಂಡಿಯನ್ನು ಮಧ್ಯಾಹ್ನ ೨½ ಗಂಟೆಗೆ ಬಿಡುವಂತೆ ಮಾಡಿರುವ ಏರ್ಪಾಟು ಒಂದಾಗಿರುತ್ತದೆ.

ಸಂಸ್ಥಾನದಲ್ಲಿ ವ್ಯವಸಾಯದ ಭೂಮಿಯನ್ನು ಹೆಚ್ಚಿಸಿ, ತನ್ಮೂಲಕ ಭೂಗಂದಾಯವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಹೆಗ್ಗಡದೇವನಕೋಟೆ ಹುಣಸೂರು ತಾಲ್ಲೂಕುಗಳಲ್ಲಿ ಕೆಲವು ಕಾಡುಪ್ರದೇಶಗಳನ್ನೆಲ್ಲಾ ಜಲವಸತಿಯಿಂದ ತರಿಯಿಸಾಗುವಳಿಗೆ ಅನುಕೂಲಪಡಿಸಿಕೊಡಲು ಸರ್ಕಾರದವರು ಪ್ರಯತ್ನಿಸಿ, ಈ ಕಾರ್ಯದ ಮೇಲ್ವಿಚಾರಣೆಗಾಗಿ ಮ|| ಸಿ. ಎಸ್. ಕುಪ್ಪಸ್ವಾಮಯ್ಯಂಗಾರರನ್ನು ಸ್ಪೆಷಲ್ ಆಫೀಸರನ್ನಾಗಿ ನಿಯಮಿಸಿದ್ದಾರೆ.

ಅರ್ಥಸಾಧಕಪತ್ರಿಕೆಯ ಸಂಪಾದಕತ್ವವೇ ಮೊದಲಾದ ಸಂಬಂಧವನ್ನು ಮ|| ಎಂ. ಗೋಪಾಲಯ್ಯಂಗಾರರು ಪುತ್ತು ಬಿಡಿದರೆಂದು ಸುದ್ದಿಯನ್ನು ಕಳೆದ ೨೦ನೇ ತಾರೀಖಿನ ಆ ಸಂಚಿಕೆಯಿಂದ ತಿಳಿದು ನಾವು ವಿಷಾದಿಸಿದೆವು. ... ಆ ಪತ್ರಿಕೆಯು ಸಾಗುವಂತೆ ಮಾಡುವುದು ಅವಶ್ಯಕವೆಂದು ನಾವು ಹೇಳದೆ ಇರಲಾರೆವು.

ವರ್ತಮಾನ ಸಂಗ್ರಹ.

ಜರ್ಮನಿಯ ಚಕ್ರವರ್ತಿಯಾಗಿದ್ದ ಕೈಸರರು ತಮ್ಮ ಚರಿತ್ರೆಯನ್ನು ಬರೆದು ಪ್ರಕಟಿಸಿಕೊಂಡಿದ್ದಾರೆ. ಅದರಲ್ಲಿ ಕಳೆದ ಮಹಾಯುದ್ಧಕ್ಕೆ ಕಾರಣವಾಗಿ ಜರ್ಮನಿ ದೇಶವಾಗಲಿ ಎಷ್ಟು ಮಾತ್ರಕ್ಕೂ ಬಾಧ್ಯರಲ್ಲವೆಂದೂ ಇಂಗ್ಲಂಡೇ ಅದಕ್ಕೆ ಬಾಧ್ಯನೆಂದೂ ಬರೆದುಕೊಂಡಿದ್ದಾರೆ.

ಜರ್ಮನಿಯ ಸುಪ್ರಸಿದ್ಧ ವಿಜ್ಞಾನಿಕಾರ ಸಂಘದ ಸಭಿಕನಾಗಿರುವ ಗಂಡಾರ್ ಎಂಬಾತನು ಫ್ರಾನ್ಸ್ ಮಂತ್ರೀಶ್ವರರಾದ ಪಾಯಿಂಕೇರ್‌ರವರನ್ನು ಕೊಲೆಮಾಡುವ ಉದ್ದೇಶದಿಂದ ಪ್ಯಾರಿಸ್ ಪಟ್ಟಣಕ್ಕೆ ಬಂದಿದ್ದನು. ... ಎಚ್ಚರಿಕೆಯಿಂದಿದ್ದು ಆ ಹಂತಕನನ್ನು ಹಿಡಿದುಬಿಟ್ಟರು.

ಜರ್ಮನರು ನಷ್ಟಪರಿಹಾರಕ್ಕಾಗಿ ಮಿತ್ರಮಂಡಲಿಗೆ ಇನ್ನೂ ಸಲ್ಲಿಸಬೇಕಾಗಿರುವುದು ೭೨ ಕೋಟಿ ಥಂಗಾರದ ನಾಣ್ಯಗಳಾಗಿರುತ್ತವೆ. ಅದರಲ್ಲಿ ಸ್ವಲ್ಪಭಾಗವನ್ನು ನಗದಾಗಿಯೂ

ಉಳಿದುದನ್ನು ಕಿತ್ತಾವಾರು ವಸ್ತುರೂಪವಾಗಿಯೂ ತೆಗೆದುಕೊಳ್ಳಲು ಮಿತ್ರಮಂಡಲಿಯವರೆಲ್ಲಾ ಒಪ್ಪಿಗೆಗೆ ಬರುವಂತೆ ತೋರುತ್ತಿದೆ. ಹಾಗಿಲ್ಲದಿದ್ದರೆ ಜರ್ಮನಿಯು ದಿವಾಳಿತ್ವವುದು.

ಪಾಲೆಸ್ಟೈನಿನಲ್ಲಿ ಅರಬ್ಬಿಯವರಿಗೆ ಸಂಪೂರ್ಣಸ್ವಾತಂತ್ರ್ಯವು ಇಂಗ್ಲೆಂಡಿನಿಂದ ಕೊಡಲ್ಪಡಲಿಲ್ಲ. ಮಾಂಡೇಟ್ ಎಂಬ ರೀತಿಯಲ್ಲಿ ಪ್ರಮುಖ ಪರಿಪಾಲನೆಯು ಕೊಡಲ್ಪಟ್ಟಿದೆ. ಮತ್ತು ಅಲ್ಲಿ ಜ್ಯೂ ಜನರ ವಸತಿಗೆ ವಿಶೇಷಾನುಕೂಲ್ಯವನ್ನುಂಟುಮಾಡಿಕೊಡಬೇಕೆಂಬುದು ಅವರ ತತ್ವವಾಗಿದೆ. ಇದನ್ನೆಲ್ಲಾ ಅರಬ್ಬಿಯವರು ಒಪ್ಪದೆ ತಮಗೆ ಸಂಪೂರ್ಣಸ್ವಾತಂತ್ರ್ಯವೇ ಆಗಬೇಕೆಂದು ತೀರ್ಮಾನಿಸಿಕೊಂಡಿದ್ದಾರೆ. ಮತ್ತು ಆಂಗ್ಲರು ಏರ್ಪಡಿಸಿದ ಶಾಸನಸಭೆಗಳಲ್ಲಿ ತಮ್ಮ ಪರವಾರೂ ಸೇರಬಾರದೆಂದೂ ನಿಷ್ಕರ್ಷಿಸಿಕೊಂಡಿದ್ದಾರೆ.

ಏಷ್ಯಾಮೈನರಿನಲ್ಲಿ ತುರ್ಕಿಯವರಿಗೂ ಗ್ರೀಕರಿಗೂ ಯುದ್ಧವು ಭಯಂಕರವಾಗಿ ನಡೆಯುತ್ತಿದೆ. ಅಲ್ಲಿ ಕಮಾಲ್‌ಪಾಷಾರ ಕಡೆಯ ೧೦ ಡಿವಿಜನ್ ಸೈನ್ಯಗಳು ಉತ್ತಮಗಳಾದ ಆಯುಧಪರಿಕರಗಳಿಂದ ಕೂಡಿ ಶತ್ರುಗಳ ಮೇಲೆ ಯುದ್ಧಮಾಡುತ್ತಿವೆಯಂತೆ. ... ಗ್ರೀಕರು ಚಟಲ್ಜಾಪ್ರಾಂತದಲ್ಲಿ ಸೇನೆಯನ್ನು ಹೆಚ್ಚಾಗಿ ಸೇರಿಸುತ್ತಿದ್ದಾರೆ.

ವಿಷಸರ್ಪದಿಂದ ಕಚ್ಚಲ್ಪಟ್ಟವನಿಗೆ ೫ ತೊಲೆ ಹಿಂಗು ಪ್ಪನ್ನು ೧೦ ತೊಲೆ ನೀರಿನಲ್ಲಿ ಕಲಸಿ, ನೀರಿನಲ್ಲಿ ... ಇನ್ನೂ ಇವರುಗಳು ಕಂಡುಬರುವುದು ... ಸಂಗತಿಯನ್ನು ... "ಪ್ರಾಕ್ಟಿಕಲ್ ಮೆಡಿಸಿನ್" ಎಂಬ ಪತ್ರಿಕೆಗೆ ಬರೆದಿರುತ್ತಾರೆ.

ತುರ್ಕಿದೇಶದ ವಿಜ್ಞಾನಿಕಾರರಲ್ಲಿ ಪ್ರಮುಖರೂ ಧೀರರೂ ಸಾಹಸವಂತರೂ ಮಾತ್ರದೇಶ ಸೇವಾನುರಕ್ತರೂ ಆದವರೆಂದು ಪ್ರಸಿದ್ಧರಾಗಿದ್ದ ಎನ್ವರ್‌ಪಾಷಾರವರು, ಕಮಲ್ ಪಾಷಾರವರಿಗೂ ತಮಗೂ ಸರಿಬೀಳದಿದ್ದುದರಿಂದ ಹೊರಹೊರಗೆ ಸಂಚರಿಸಿಕೊಂಡಿದ್ದರು. ... ಬೊಲ್ಷೆವಿಕ್ ರಾಯಭಾರಿಗಳಿಂದ ಒಡೋಸಿಪೊಸ್ಕಿ ಹತ್ತಿರ ಕೊಲ್ಲಲ್ಪಟ್ಟರು.

ಮದ್ರಾಸಿನ ಸುಪ್ರಸಿದ್ಧ ಗಣಿತಜ್ಞನೆನಿಸಿಕೊಂಡಿದ್ದ ಸುಬ್ರಹ್ಮಣ್ಯ ಅವತಾರವು ಸಮಾಪ್ತಿಯಾಯಿತಷ್ಟೆ. ಈಗ ಬಾಬು ಸೋಮೇಶಚಂದ್ರಬೋಸ್ ಎಂಬ ಅದ್ಭುತಗಣಿತಜ್ಞನು ಪ್ರಖ್ಯಾತನಾಗಿ ಈಗ ತಾನೇ ಲಂಡನ್ ಪಟ್ಟಣಕ್ಕೆ ಹೋಗಿರುತ್ತಾನೆ. ... ೮-೧೦ ಸಂಖ್ಯೆಗಳ ಉದ್ದವಾದ ಗುಣಾಕಾರ ಭಾಗಾಕಾರಗಳನ್ನು ಈತನು ಬಾಯಲ್ಲೇ ಲೆಕ್ಕಮಾಡಿ ಚಾಚೂ ತಪ್ಪದಂತೆ ಸ್ವಲ್ಪಕಾಲದಲ್ಲೇ ಹೇಳಿಬಿಡುತ್ತಿರುವನು. ... ಈತನು ಕೇವಲ ಶಾಸ್ತ್ರಾಭ್ಯಾಸದಿಂದಲೂ ಸ್ವಯಂಪಾಠಕಿಯೂ ಯೋಗಮಾರ್ಗ ಸಂಪನ್ನನೂ ಆಗಿರುವನು.

ಪ್ರಕೃತ ಚರ್ಚಾಸ್ಪದವಾಗಿರುವ ಸಂಸ್ಕೃತಾಭ್ಯಾಸ ವಿಷಯದಲ್ಲಿ ದೇಶಭಾಷಾ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿರುವ ಅನುಕೂಲಾಭಿಪ್ರಾಯಗಳು.

ಮೈಸೂರು ನ್ಯಾಯಪತ್ರಿಕೆ—(ತಾ|| ೨೭-೭-೧೯೨೨).

"ಮೇಲ್ಕಂಡ ಕಮಿಟಿಯವರು ತೀರ್ಮಾನಮಾಡಿರೀಣ ಬಂದ ವಿಚಾರಗಳು ಬಹಳ ಶ್ಲಾಘನೀಯವಾಗಿದೆ ... ಎಂದು ಅಪೇಕ್ಷಿಸುತ್ತೇವೆ.

ಈಗ ಹಿಂದುಸ್ಥಾನದಲ್ಲಿ ಪ್ರಚಾರದ ಆರ್ಯರಲ್ಲಿದ್ದ ಕೆಳವರ್ಗಗಳಿಗೂ ಸಂಸ್ಕೃತ ವಿದ್ಯಾಭ್ಯಾಸವು ... ಸಂಸ್ಕೃತ ವಿದ್ಯಾಭ್ಯಾಸ ... ಹಿಂದೂ ಪ್ರಜಾವರ್ಗಕ್ಕೆ ...

ಬೇಕಾದರೆ (ಇಂಥಾ ಪ್ರಯೋಜನವು ಆರ್ಯರ ಕಲೆಗಳಿಂದುಂಟಾಗುವುದೆಂದು ಅನೇಕ ಬ್ರಾಹ್ಮಣೇತರರಿಗೂ ಯಥಾರ್ಥವಾದ ನಂಬಿಕೆ ಇದೆ.) ಅಂಥಾ ಕಲೆಯ ಪ್ರಚಾರಕ್ಕೂ ಶೋಧನೆಗೂ ಬಹು ವಿಶೇಷವಾಗಿಯೂ ಉದಾರವಾಗಿಯೂ ಸಹಾಯ ಪ್ರೋತ್ಸಾಹಗಳನ್ನು ಮಾಡುವುದಕ್ಕೂ ಇವೀಗ ಅವಶ್ಯವಾದ ಸಮಯವಾಗಿದೆ. ವಿದ್ವಮಾಸಗಳು ಈ ರೀತಿ ಇರುವಲ್ಲಿ ಮೇಲ್ಕಂಡ ರಿಪೋರ್ಟನ್ನು ಓದುತ್ತಾ ಬಂದರೆ ಸಂಸ್ಕೃತ ವಿದ್ಯೆಯನ್ನು ಹರಡುವುದಕ್ಕೆ ಪ್ರಯತ್ನವಾಗಲಿ ಪ್ರೋತ್ಸಾಹವಾಗಲಿ ಅದರಲ್ಲಿ ಕಂಡುಬರುವುದಿಲ್ಲವಲ್ಲಾ ಎಂದು ಕಿಂಚಿತ್ತು ಪಡುವಹಾಗಾಗಿದೆ. ಯಾವ ನಿಮಿತ್ತವಾಗಿಯೋ ಕಮಿಟಿಯವರು ಅಂಥಾ ವಿದ್ಯೆಯ ಪ್ರಾಬಲ್ಯವನ್ನೇ ತಡೆಗಟ್ಟುವಂಥಾ ಸಾಧನಗಳನ್ನು ಸೂಚಿಸಿರುತ್ತಾರೆ. ಧಾರಾಳವಾದ ಭಾವವನ್ನು ತೋರ್ಪಡಿಸುವಂಥಾ ಸಲಹೆಗಳೊಂದೂ ಇಲ್ಲವಲ್ಲಾ ಎಂದು ಚಿಂತೆಪಡಬೇಕಾಗಿದೆ.....................

ಈಗ ಕಮಿಟಿಯವರು ಬರೆದಿರುವ ರಿಪೋರ್ಟು ಅನೇಕರಿಗೆ ಆಶಾಭಂಗವನ್ನುಂಟುಮಾಡಿರುವುದು. ಈ ಸಂಸ್ಕೃತ ವಿದ್ಯಾಭ್ಯಾಸದ ವಿಷಯದಲ್ಲಿ ಬಹುಕಾಲದಿಂದಲೂ ಪ್ರಜೆಗಳಿಗೆ ಆಕಾಂಕ್ಷೆಯುಂಟೆನ್ನುವುದು ಕಮಿಟಿಯವರು ಹೇಳಿರುವಂತೆ ಅವರಿಗೆ ತಿಳಿದಿತ್ತು. ಅದನ್ನು ನೆರವೇರಿಸಿ ಕೊಡುವುದಕ್ಕೆ ಕಮಿಟಿಗೆ ಒಳ್ಳೇ ಅವಕಾಶದೊರಕಿದ್ದಾಗ್ಯೂ ಅವರು ಹಾಗೆ ಮಾಡಲಾರದೆ ಹೋದರು.....................

ಹಿಂದುಸ್ಥಾನದಲ್ಲಿ ಈಗ ಪ್ರಜಾಬಾಹುಳ್ಯದ ಮನೋವೃತ್ತಿಗಳು ಏಕಮುಖವಾಗಿಲ್ಲ. ಪ್ರಜೆಗಳಲ್ಲಿ ತಾರತಮ್ಯವಿಡದೆ ಸಕಲರೂ ಒಂದೇ ಎಂಬ ಭಾವನೆಯು ಪ್ರಕಾಶಕ್ಕೆ ಬರುತ್ತಿರುವುದು. ನಮ್ಮಾ ಮೈಸೂರು ಸಂಸ್ಥಾನದಲ್ಲೇನೋ ಈ ಭಾವನೆಯು ಚೆನ್ನಾಗಿಯೇ ಬೇರೂರಿರುವುದೆಂದು ಹೇಳಬಹುದಾಗಿದೆ. ಈ ಕಮಿಟಿಯವರು ಎದುರು ಪಕ್ಷದ ಭಾವನೆಯ ಪ್ರತಿನಿಧಿಗಳಾಗಿದ್ದಾರೆ. ಇವರು ಜನರಿಂದ ಜನರಿಗೆ ತಾರತಮ್ಯ ಉಂಟೆಂದೂ ಕೆಲವರಿಗೆ ವಿಶೇಷವಾದ ಹಕ್ಕು ಬಾಧ್ಯತೆಗಳೂ ಸೌಲಭ್ಯಗಳೂ ಇರುವವೆಂದೂ ಹೇಳತಕ್ಕ ಪಕ್ಷದವರಾಗಿದ್ದಾರೆ. ಪ್ರಜಾಪಾಲನೆಯಲ್ಲಿ ಪಾಲುಗಾರರಾಗಬೇಕೆಂದು ಸಮಸ್ತ ಪ್ರಜೆಗಳನ್ನೂ ಕರೆಯುವುದೇನು? ಪ್ರಜೆಗಳಲ್ಲಿ ಬಹುಭಾಗದವರನ್ನು ದೇಶದ ಪ್ರಾಚೀನ ವಿದ್ಯಾಪ್ರೌಢಿಮೆಗೆ ಬಾಹಿರರನ್ನಾಗಿ ಮಾಡುವುದೇನು? ಕಾಶಿ, ಜಯಪುರಗಳೆಂಬ ಸ್ಥಳಗಳ ವಿದ್ವಮಾನಗಳನ್ನೂ ಸೋಮಪಾಲ್ಪ ಪಂಡಿತರೂ ಆದ ಕೊಚ್ಚಿ ಸಂಸ್ಥಾನದ ಮಹಾರಾಜರ ಶುಭ ಮಕರಲಗ್ನದೃಷ್ಟಾಂತವಾಗಿ ಹೇಳುವುದು ನಿಷ್ಪ್ರಯೋಜನ. ಅವ ನರಸಿಂಹರಾಜ ಒಡೆಯರವರೇ ಅವರ ಅಭಿಪ್ರಾಯವೇನೆಂದು ಹೇಳುತ್ತೇವೆಂದು ತಿಳಿಯಿಸಲು "ಬ್ರಾಹ್ಮಣೇತರರನ್ನು ಸೇರಿಸಬಾರದೆಂಬ ವಿಷ[illegible] ಎಂಬ ಅಭಿಪ್ರಾಯವನ್ನು ಆ ರಾಜ ಯದುವಂಶಾಂಬುಧಿಯಲ್ಲಿ [illegible] ಕಾಲದ ವಿದ್ವಮಾನಗಳು ಸರಿಯಾಗಿ ರಾಜ ಒಡೆಯರವರು ಶ್ರೀಮದ್ [illegible] ಅಂಥವರ ಮಾತನ್ನು ಕೇಳಿ ಜನಿಸಿ, ದಿನದಿನಾಭಿವೃದ್ಧಿಗೊಳ್ಳುತ್ತ ಮೈಸೂರು ತಾನಾಗಿಯೇ ತೋಷಮಯವಾಗಿ ಮಾಡಿರುವರು. ಈಗ ಇಷ್ಟು ಮಹತ್ತರವೂ [illegible]ಕವನ್ನಾಗಿ ಈ ಬಾಲಿಕಾರತ್ನವು ಕ್ಷೀರಾಬ್ಧಿಯಲ್ಲಿ ಜಲಶಲ್ಯಾದಿ ಗುಪ್ತಧನವನ್ನೆಲ್ಲಾ [illegible] ಪ್ರವೃತ್ತಿಕಾಲದಲ್ಲಿ ಹಿಂದುಸ್ಥಾನ ಆತ್ಯಾಧಿಕದ ಜೀವಮಾನವನ್ನೂ ಆಲೋಚನೆಯನ್ನೂ ಪರಿಪೂರ್ಣಮಾಡಲು ಮೈಸೂರು ಸಂಸ್ಥಾನವು ಯಾಕೆ ಮುಂದರಿಯಬಾರದು?"

ಒಕ್ಕಲಿಗರ ಪತ್ರಿಕೆ—(ತಾ॥ 26-7-1922).

ಸರ್ಕಾರಿ ಹಣದಿಂದ ನಡೆಸಲ್ಪಡುತ್ತಿರುವ ಈ ವಿದ್ಯಾಲಯಗಳಲ್ಲೂ ಈ ಭೇದಭಾವಗಳನ್ನು ಹೂಡುವುದರಿಂದ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಜಿಜ್ಞಾಸೆಯು ಅಭಿವೃದ್ಧಿಯಾಗುವುದು ಆಶ್ಚರ್ಯವಲ್ಲ...................

ಬ್ರಾಹ್ಮಣೇತರರಾದ ಸ್ವಾಮಿ ವಿವೇಕಾನಂದರು, ಇಂಗ್ಲೆಂಡಿನ ಗ್ರಿಫಿತ್‍ರು, ಹೈದರಾಬಾದಿನ ಒಬ್ಬಮುಸಲ್ಮಾನ ಶ್ರೀಮಂತರು, ಜರ್ಮನಿಯ ಪ್ರೊಫೆಸರ್ ಡ್ಯೂಸನ್‍ರವರು, ಮ್ಯಾಕ್ಸ್‍ಮುಲ್ಲರ್‍ರವರು ಇವರಿಗೆ ವೇದವೇದಾಂಗಗಳನ್ನು ಬೋಧಿಸಿದವರ್ಯಾರು? ಇವರೆಲ್ಲರೂ ವೇದವೇದಾಂಗಗಳನ್ನೂ ಉಪನಿಷತ್ತುಗಳನ್ನೂ ಓದಿ ಪಂಡಿತೋತ್ತಮರೆನಿಸಿಕೊಂಡು ಅವುಗಳನ್ನು ಭಾಷಾಂತರಿಸಿ ಲೋಕಪ್ರಸಿದ್ಧರಾಗಿಲ್ಲವೆ? ವಿದೇಶೀಯರು ಕೂಡ ವೈದಿಕವಿದ್ಯೆಗೆ ಅರ್ಹರಾದರೆ ಸ್ವದೇಶದಲ್ಲೇ ಹುಟ್ಟಿ ಸಹೋದರರಂತೆ ಬೆಳೆದು ತಮ್ಮಂತೆ ಭಾರತೀಯರೆಂದೆನ್ನಿಸಿಕೊಂಡ ಬ್ರಾಹ್ಮಣೇತರರು ವೇದಾಭ್ಯಾಸಕ್ಕೆ ಅನರ್ಹರೆಂದು ಬ್ರಾಹ್ಮಣರಿಗೆ ತೋರಿದರೆ, ಆಫ್ರಿಕದಲ್ಲೂ ಅಮೇರಿಕದಲ್ಲೂ ಆಸ್ಟ್ರೇಲಿಯದಲ್ಲೂ ಭಾರತೀಯರನ್ನು ದೇಶೀಯರು ಸ್ಥಾನಚ್ಯುತರನ್ನಾಗಿ ಮಾಡುವುದು ಒಂದು ವಿಶೇಷವಲ್ಲ. ನಮ್ಮಲ್ಲೇ ಏಕಮತ್ಯವಿಲ್ಲದಿರುವಾಗ ಪರದೇಶಗಳಲ್ಲಿ ನಾವು ಐಕ್ಯಮಾಡುವುದು ಹೇಗೆ? ವೈದಿಕವಿದ್ಯೆಯು ಬ್ರಾಹ್ಮಣರಿಗೆಮಾತ್ರ ಯುಕ್ತವಾದುದೆಂದೂ ಇತರರಿಗೆ ಸಲ್ಲತಕ್ಕದ್ದಲ್ಲವೆಂದೂ ಹೇಳಿದಮೇಲೆ, ಅವರು ಆ ವಿದ್ಯೆಯಲ್ಲಿಯೇ ನಿರತರಾಗಿದ್ದರೆ ಒಪ್ಪಬಹುದಾಗಿತ್ತು. ಬ್ರಾಹ್ಮಣೇತರರ ಯಾವ ಕಸಬುಗಳಲ್ಲಿ ಬ್ರಾಹ್ಮಣರು ಪ್ರವೇಶಮಾಡಿಲ್ಲವೋ ಅವರೇ ಹೇಳಬೇಕಾಗಿದೆ.....................

ಸಂಸ್ಕೃತಪಾಠಶಾಲೆಗಳಿಗೆ ಒದಗುತ್ತಿರುವ ಹಣವು ಸರ್ಕಾರಿ ಉತ್ಪತ್ತಿಯಿಂದ ಕೊಡಲಾಗುತ್ತದೆ. ಸರ್ಕಾರಿ ಉತ್ಪತ್ತಿಯು ಪ್ರಜಾಸಾಮಾನ್ಯದಿಂದ ಬಂದುದಾಗಿದೆ. ಇಂಥಾದ್ದರಲ್ಲಿ ಸರ್ಕಾರದವರ ಖರ್ಚೆಲ್ಲವೂ ಜನರ ಜಾತಿ ಭೇದಗಳನ್ನೆಣಿಸದೆ ಸಮಸ್ತರಿಗೂ ಪ್ರಯೋಜನಕರವಾದ ಕಾರ್ಯಗಳಲ್ಲಿ ವಿನಿಯೋಗವಾಗುವದು ಧರ್ಮವು. ಈ ಸಂಸ್ಕೃತ ಕಾಲೇಜುಗಳಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರೆಂಬ ಭೇದಭಾವವು ಹುಟ್ಟಿದಕೂಡಲೆ ಇವುಗಳ ಖರ್ಚು ಪ್ರಜಾಸಮ್ಮತವಾದುದೆಂದು ನಂಬುವುದು ಹೇಗೆ? ಈ ವಿದ್ಯಾಲಯಗಳಿಂದ ಬ್ರಾಹ್ಮಣೇತರರಿಗೆ ಪ್ರಯೋಜನವಿಲ್ಲವೆಂದು ಹೇಳುವುದು ಇದಕ್ಕೆ ತಕ್ಕ ಕಾರಣವಲ್ಲ. ಪ್ರಯೋಜನವಾಗಲಿ ನಿಷ್ಪ್ರಯೋಜನವಾಗಲಿ, ಸರ್ಕಾರಿ ಸ್ಕೂಲುಗಳಲ್ಲಿ ಜಾತಿ ಮತಗಳ ಭೇದಗಳಮೇಲೆ ವಿದ್ಯಾಬೋಧೆಯಾಗಬಾರದು. ಪಂಚಮರನ್ನು ಪಾಠಶಾಲೆಗಳಿಗೆ ಸೇರಿಸದಿದ್ದಮೇಲೆ, ಆ ಸ್ಕೂಲುಗಳಿಗೆ ಗವರ್ನಮೆಂಟಿನವರು ಗ್ರಾಂಟುಕೊಡುವುದಿಲ್ಲವಷ್ಟೆ? ಅದರಂತೆಯೇ ಸರ್ಕಾರದವರು ಈ ವಿದ್ಯಾಲಯಗಳಲ್ಲಿ ಭೇದಭಾವಕ್ಕೆ ಆಸ್ಪದಕೊಡದಂತೆ ಗ್ರಾಂಟು ಸಲ್ಲಿಸುವುದು ಯುಕ್ತವೆಂದು ತೋರುತ್ತದೆ. ಪಂಚಮರು ವಿದ್ಯಾಭ್ಯಾಸಮಾಡಲಿ ಹೋಗಲಿ, ಅವರಿಗೆ ಎಲ್ಲಾ ಸ್ಕೂಲುಗಳಲ್ಲಿಯೂ ಪ್ರವೇಶಕ್ಕೆ ಅವಕಾಶವುಂಟುಮಾಡಿದಂತೆಯೇ, ಈ ಸಂಸ್ಕೃತ ಕಾಲೇಜುಗಳಲ್ಲಿ ಸರ್ವರಿಗೂ ಜಾತಿಮತ ಪಕ್ಷಪಾತವಿಲ್ಲದೆ ವಿದ್ಯಾರ್ಜನೆಗೆ ಅವಕಾಶವುಂಟಿಂತ ಆರ್ಡರು ಮಾಡುವುದು ನಿಷ್ಪಕ್ಷಪಾತಿಗಳಾದ ಸರ್ಕಾರದವರ ಕರ್ತವ್ಯವಾಗಿರುತ್ತದೆ."

ಮಂಗಳೂರು ಕಂಠೀರವ—(ತಾ॥ 18-7-1922).

"ವೇದಾದಿಗಳು ಫ್ರೆಂಚು-ಜರ್ಮನ್ ಭಾಷೆಗಳಲ್ಲಿದ್ದು ಪ್ರಪಂಚದಲ್ಲಿ ಹರಡಿರುವಾಗ, ಹಿಂದೀಭಾಷೆಯಲ್ಲಿ ಪ್ರಿಂಟು ಮಾಡಲ್ಪಟ್ಟು ಕಾಸಿಗೆ ಕೊಸರಿಗೆ ಬೊಂಬಾಯಲ್ಲಿ ಮಾರಲ್ಪಡುತ್ತಿರುವಾಗ, ವೇದಾಧಿಕಾರವನ್ನು ಹೊಂದಿದ ಬ್ರಾಹ್ಮಣರಿಂದಲೇ ತಾನೇ ಬಹಿರಂಗವಾಯಿತು? ಆ ಮಹನೀಯರೇ ಭಾರತಪುತ್ರರಾದ ನಮಗೆ ವೇದ-ವೇದಾಂಗಗಳು ಕೂಡದೆಂದರೆ, ವಿದೇಶಿಗಳ ಹೇಳನಕ್ಕೆ ನಾವು ಗುರಿಯಾಗಲೇಬೇಕಲ್ಲವೆ? ಉತ್ತಮ ವಿಧದ ಹಿಂದೂಗಳಿಗಾದರೂ ಅದರ ಮಾಧುರ್ಯ ಬೇಡವೆ? ಒಂದಾವರ್ತಿ ಮೈಸೂರಿನ ರೆವರೆಂಡ್ ಸಾಡೇಸಾಹೇಬರು ಪರಸ್ಥಳದಲ್ಲಿ ಸರ್ಕ್ಯೂಟ್‍ನಲ್ಲಿದ್ದಾಗ ಒಬ್ಬ ಬ್ರಾಹ್ಮಣ ವೃದ್ಧರನ್ನು ಕಂಡು "ಏನು ಮಾಡಿಕೊಂಡಿದ್ದೀರಿ" ಎಂದು ಪ್ರಶ್ನೆ ಮಾಡಿದ್ದಕ್ಕೆ ಅವರು "ನಾನು ಭಗವದ್ಗೀತಾ ಪಾರಾಯಣ ಇತ್ಯಾದಿಗಳಿಂದ ಕಾಲವನ್ನು ಕಳೆಯುತ್ತಿದ್ದೇನೆ" ಎಂದರು. ಸಾಡೇ ಸಾಹೇಬರು ಒಂದೆರಡು ಶ್ಲೋಕಗಳನ್ನು ಹೇಳಿ ಅದರ ಅಭಿಪ್ರಾಯವನ್ನೂ ಮುಂದಿನ ಶ್ಲೋಕಗಳನ್ನೂ ಹೇಳಿರೆಂದಾಗ "ನನಗೆ ಜ್ಞಾಪಕದಲ್ಲಿಲ್ಲ" ವೆಂದರು. ನಾನು ಸ್ವತಃ ಕಂಡು ಕೇಳಿದ ವಿಚಾರವಾದ್ದರಿಂದ ಖಿಲವಾಗುತ್ತಿರುವ ವಾತ್ಸ್ಯವಿದ್ಯೆಯನ್ನು ಮತ್ತಷ್ಟು ಖಿಲಗೊಳಿಸುವುದು ದೊಡ್ಡ ಸಾಹಸವೇ ಅಲ್ಲವೆ?............

ಪ್ರಕೃತ ಇವರ ಶಿಫಾರಸ್ಸಿನಿಂದ ರಾಜ್ಯಕ್ಕೆ ಯಾವ ಕ್ಷೇಮವೂ ಇಲ್ಲ. ಅಬ್ರಾಹ್ಮಣರಿಗೆ ವೇದವೂ ಬೇಡ, ವೇದಾಂಗವೂ ಬೇಡ. ವೇದಕ್ಕಧಿಪತಿಯ ದಯವೇ ಇರಲಿ. ಅವೆರಡೂ ಬ್ರಾಹ್ಮಣರಿಗೇ ಇರಲಿ. ಇಷ್ಟಕ್ಕೆ ರಾಜ್ಯದ ಹುಟ್ಟುವಳಿಯಲ್ಲಿ ಖರ್ಚು ಏಕೆ ಕೊಡಬೇಕು? ವೇದಾಧ್ಯಯನವು ನಿರ್ಜನ ಪ್ರದೇಶದಲ್ಲಿ ಗುರುಕುಲದಲ್ಲಿ ನಡೆಯಬೇಕು. ಅಂತಹ ಗುರುಕುಲಗಳನ್ನು ಏರ್ಪಡಿಸಿ ಬ್ರಾಹ್ಮಣ ಮಠಾಧಿಪತಿಗಳ ಸಹಾಯವನ್ನು ಪಡೆದು ವೇದವನ್ನುದ್ಧರಿಸುವುದು ಪ್ರಥಮ ಕರ್ತವ್ಯವಾಗಿದೆ. ಬ್ರಾಹ್ಮಣೇತರರ ದ್ರವ್ಯದಿಂದ ಬ್ರಾಹ್ಮಣರು ತಮ್ಮ ಹೊಟ್ಟೆಪಾಡನ್ನು ತೀರಿಸಿಕೊಂಡು ಪವಿತ್ರವಾದ ವೇದ-ವೇದಾಂಗಗಳನ್ನು ತಾನೇ ಅಪವಿತ್ರಗಳನ್ನಾಗಿ ಏಕೆ ಮಾಡಬೇಕು? ಅಂತಹ ಗುರುಕುಲಗಳನ್ನಿಡಲಿ. ಶೃಂಗೇರಿಯಂತಹ "ವಿದ್ಯಾಪೀಠ"ದಲ್ಲಿ "ವೇದದ ಕಾಲೇಜೊಂದ"ನ್ನು ಪ್ರಾರಂಭಿಸಲಿ. ಬ್ರಾಹ್ಮಣೇತರರೂ ರಾಜಾಧಿರಾಜರುಗಳೂ ಸಹಾಯ ಮಾಡಿ ನಿಜವಾದ ಬ್ರಾಹ್ಮಣಸೇವೆ ಮಾಡುವರು. ವಿದ್ಯುಚ್ಛಕ್ತಿಯ ಬೆಳಕು-ಚರ್ಮದ ವಾಷರ್ ಹಾಕಿದ ನಲ್ಲಿನೀರು-ನಗರವಾಸದ ಶೋಕಿ; ಇವುಗಳಲ್ಲಿ ಬೆರೆತು ಸಮಯ ಬಂದಾಗ್ಗೆ ಬೆರಕೆ ಹೋಟಲುಗಳಲ್ಲಿ ತಿಂದು (ಕಾಫಿ) ಕುಡಿದು ತಿರುಗುವ ತೊಣ ಪ್ಪರಿಗೆ ಕಾಲೇಜುಗಳಲ್ಲಿ ವೇದಪಾಠವೆಂದರೆ ಸುತರಾಂ ಯೋಗ್ಯವಲ್ಲ. ಕಾಲೇಜುಗಳು ವಿದ್ಯಾವ್ಯಾಸಂಗಕ್ಕಾಗಿರತಕ್ಕವುಗಳು. ವಿದ್ಯಾತುರರಾದ ಸಮಸ್ತರೂ ಸೇರಿ ಓದಬೇಕಾದ ಮಂದಿರಗಳು. ಮಾತ್ರ ವಿದ್ಯಾಸಾಧನೆಗೆ ತಕ್ಕ ಗರುಡಿ ಮನೆಗಳು. ಇಂತಹವನ್ನು ಬರೀ ವೈದಿಕ ಮಾರ್ಗದ ವಿಶ್ರಾಂತಿಮಂದಿರವನ್ನಾಗಿ ಮಾಡುವುದು ಚೆನ್ನಾಗಿಲ್ಲ. ಹಾಗಿಲ್ಲವಾದರೆ ಈ ಸಂಸ್ಕೃತ ಕಾಲೇಜುಗಳನ್ನೇ ತೊಡೆದು ಪ್ರತಿ ಕಾಲೇಜು-ಹೈಸ್ಕೂಲು-ಎ. ವಿ. ಸ್ಕೂಲುಗಳಲ್ಲಿ ಸಂಸ್ಕೃತವನ್ನು ಕಲಿಯಲು ತಕ್ಕ ಏರ್ಪಾಡುಗಳನ್ನು ಮಾಡಿದಲ್ಲಿ ಭಾಷೋಜ್ಜೀವನವು ನಡೆಯುವುದು............

ಸಂಬಳಕ್ಕಾಗಿ ಹೊಲೆಯರ ಸಂಸರ್ಗದಲ್ಲಿ ಬ್ರಾಹ್ಮಣ ಮಾಸ್ಟರುಗಳಿರುವಾಗ ಉತ್ತಮ ಹಿಂದುಗಳಿಗೆ ಸಂಸ್ಕೃತವನ್ನು ಹೇಳಲು ಅವರು ಒಪ್ಪಲಾರರೆಂದರೆ ಅವರ ದೌರ್ಭಾಗ್ಯವನ್ನೆಷ್ಟೆಂದು ಹೇಳಲಿ? ಈ ಸಮಯದಲ್ಲಿ ಸರಕಾರದವರಾದರೂ ಲಿಂಗಾಯಿತ—ಜೈನ ಆರ್ಯ ಸಮಾಜಗಳಲ್ಲಿ ಸಂಸ್ಕೃತ ಪಂಡಿತರಿಗಾಗಿ ಜಾಹಿರಾತುಗಳನ್ನು ಹೊರಡಿಸಿದರೆ ಬಹುಮಂದಿ ಸಿದ್ಧರಾಗಿರುವರು. ಯಾವದೂ ಪೋಟಾಪೋಟಿ ಇಲ್ಲದಿದ್ದರೆ ಪ್ರಯೋಜನವಿಲ್ಲವಷ್ಟೆ.

ಧಾರವಾಡದ ಕರ್ನಾಟಕ ಟೈಮ್ಸ್—(ತಾ॥ 18-8-22)

ಬ್ರಾಹ್ಮಣರು ಮಾಡುವ ಪುಂಡಾಟಿಕೆಯಿಂದಲೇ ಜನರಲ್ಲಿ ಅವರ ಬಗ್ಗೆ ತಿರಸ್ಕಾರ ಉಂಟಾಗಿ ಈಗ ಬ್ರಾಹ್ಮಣ ಬ್ರಾಹ್ಮಣೇತರರೆಂಬ ದ್ವೈಧೀಭಾವವು ಹುಟ್ಟಿ ಅದು ಹೆಚ್ಚು ಹೆಚ್ಚು ಬೆಳೆಯಹತ್ತಿರುವದು. ಕಾರಣವಿಲ್ಲದೆ ಒಬ್ಬರು ಮತ್ತೊಬ್ಬರನ್ನು ದ್ವೇಷಿಸಲಾರರು. ಒಬ್ಬರಲ್ಲ, ಇಬ್ಬರಲ್ಲ; ಯಾವವಿಶಿಷ್ಟ ಜಾತಿಯ ಜನರು ಅವರೊಬ್ಬರನ್ನೆ ಕೈಬಿಟ್ಟು ಬ್ರಾಹ್ಮಣೇತರರೆಂಬದೊಂದು ದೊಡ್ಡ ಸಮಾಜವನ್ನೇ ಮಾಡಿಕೊಳ್ಳಬೇಕಾದರೆ ಇದೇ ಕಾರಣವಲ್ಲದೆ ಮತ್ತಾವ ಕಾರಣವೂ ಇಲ್ಲ. ಇದನ್ನು ತಿಳಿದೂ ತಿಳಿದು ಅರಿಯದವರಂತೆ ಬ್ರಾಹ್ಮಣೇತರರನ್ನೇ ಪುನಃ ಒಡಕು ಹುಟ್ಟಿಸುವವರೂ ದೇಶದ್ರೋಹಿಗಳೂ ಎಂದು ನಿಂದಿಸುತ್ತಿರುವರು. ಇದು ಅವರ ವಿವೇಕ ಬುದ್ಧಿಗೆ ಹ್ಯಾಗೆ ಸರಿದೋರುವದೋ? ಪರಮಾತ್ಮನೇ ಬಲ್ಲ.

ನಾವೇನಾದರೂ ಇಂಥ ನೀಚಕೃತಿಗಳನ್ನು ನಿಷೇಧಿಸಿ ಬರೆದರೆ "ಬ್ರಹ್ಮದ್ವೇಷಿಗಳೆಂತಲೂ ಬ್ರಾಹ್ಮಣ ಬ್ರಾಹ್ಮಣೇತರರೆಂಬ ಭೇದ ಹುಟ್ಟಿಸುವ ದೇಶವಿಘಾತಕರೆಂ"ತಲೂ ಉಸುರುವ ಬ್ರಾಹ್ಮಣೋತ್ತಮರೇ ಯಾವ ಮೂಲೆಯಲ್ಲಿ ಕುಳಿತಿರುವಿರಿ? ಇಂಥ ಪ್ರಸಂಗದಲ್ಲಿ ನಿಮ್ಮ ಶಬ್ದವು ಯಾಕೆ ಅಡಗಿರುವದು? ಯಾವ ಮ॥ ಗಾಂಧಿಯವರು ಸ್ಪೃಶ್ಯಾಸ್ಪೃಶ್ಯತೆಯನ್ನು ತೆಗೆದುಹಾಕಿ ೬ ಕೋಟಿ ಅಸ್ಪೃಶ್ಯರನ್ನು ಒಳಗೆ ತೆಗೆದುಕೊಂಡು ಸರ್ವಸಮತ್ವವನ್ನು ಸ್ಥಾಪಿಸುವದು ಸ್ವರಾಜ್ಯದ ಒಂದು ಮುಖ್ಯ ಸಾಧನವೆಂದು ಹೇಳುವರೋ ಮತ್ತು ಅಸ್ಪೃಶ್ಯಕನ್ನಿಕೆಯನ್ನು ದತ್ತಪುತ್ರಿಯನ್ನಾಗಿ ಮಾಡಿಕೊಂಡು ಲಕ್ಷ್ಮೀ ಎಂದು ಹೆಸರಿಟ್ಟುಕೊಂಡು ಬಹು ಪ್ರೀತಿಪೂರ್ವಕ ಪಾಲನ ಮಾಡುವರೋ ಅಂಥ ಗಾಂಧಿಯವರ ಪಟ್ಟಶಿಷ್ಯರು ನಾವೆಂದು ನೀವು ಹೇಳಿಕೊಳುವದಿಲ್ಲವೋ? ಅಂಥ ನಿಮಗೆ ಮೇಲೆ ಹೇಳಿದ ಈ ಮೈಸೂರ ಪ್ರಾಂತ್ಯದ ಕೆಲವು ಭೂರಕ್ಷಕರ ಕೃತಿಗಳು ಸರಿದೋರುವವೋ? ಸರಿದೋರಿದರೆ ಗಾಂಧಿಯವರ ಪರ್ಲುಹರಕೊಂಡು ನಿಮ್ಮ ಸ್ವಜಾತಿಯರನ್ನು ಕೂಡಿಕೊಳ್ಳಿರಿ. ಇಲ್ಲವಾದರೆ ನೀವು ವರ್ತಮಾನಪತ್ರಗಳಲ್ಲಿ ತೀಕ್ಷ್ಣವಾದ ಲೇಖಗಳಿಂದಲೂ ಸಾರ್ವಜನಿಕ ಸಭೆಗಳಲ್ಲಿ ಉಗ್ರವಾದ ಭಾಷಣಗಳಿಂದಲೂ ಅವರ ನೀಚಕೃತಿಗಳನ್ನು ನಿಷೇಧಿಸಿರಿ. ಯಾವದನ್ನೂ ಆಚರಿಸದೆ ನೀವು ಮೌನದಿಂದಿದ್ದರೆ ನಿಮಗೆ ನಾವು ದೇಶದ್ರೋಹಿಗಳೆಂತಲೂ ಗಾಂಧಿಯವರ ಸೋಗಿನ ಶಿಷ್ಯರೆಂತಲೂ ಪ. ಮಾಲವಿಯವರ ಜೊಳ್ಳುಭಕ್ತರೆಂತಲೂ ಅಂದರೆ ತಪ್ಪೇನು? ಹಾಗೂ ನಿಮಗೆ ಸಿಟ್ಟು ಬರಲು ಕಾರಣವೇನು? ಇಂಥ ಪ್ರಸಂಗದಲ್ಲಿ ನೀವು ನಿಮ್ಮ ಅಂತರಂಗದ ನಿಜಸ್ಥಿತಿಯನ್ನು ಹೊರಗೆಡವಿ ನಿಮ್ಮ ನಿಷ್ಪಕ್ಷಪಾತತನವನ್ನು ತೋರಿಸಿ ನಿಮ್ಮವರೇ ಆಗಲಿ ಅವರು ತಪ್ಪುಮಾಡಿದರೆ ಅವರ ಕಿವಿಹಿಂಡಿ ಬುದ್ಧಿಗಲಿಸಿ ನೀವು ಸರ್ವಸಮತ್ವವನ್ನು ತೋರಿಸಿದರೆ ಮಾತ್ರ ನೀವು ಬ್ರಾಹ್ಮಣ ಬ್ರಾಹ್ಮಣೇತರರ ಭೇದ ಹೋಗಲಾಡಿಸುವ ಮಧ್ಯವರ್ತಿಗಳೆಂದು ತಿಳಿಯಬಹುದು. ನಾವು ಹೇಳುವದಕ್ಕಿಂತ ಮೊದಲೇ ಈ ಕೆಲಸವನ್ನು ನೀವು ಮಾಡಿ ತೋರಿಸಿದ್ದರೆ ಬ್ರಾಹ್ಮಣೇತರರು ಯಾವ ಪ್ರೇಮದೃಷ್ಟಿಯಿಂದ ನಿಮ್ಮನ್ನು ಕಾಣುತ್ತಿದ್ದರೆಂಬದನ್ನು ನೀವೇ ವಿಚಾರಿಸಿರಿ. ಮೈಸೂರ ಪ್ರಾಂತದಲ್ಲಿ ಇಷ್ಟು ಕೋಲಾಹಲವೆದ್ದರೂ ನೀವು ನಿಮ್ಮ ವರ್ತಮಾನಪತ್ರಗಳಲ್ಲಿ ಒಂದಾದರೂ ಲೇಖವನ್ನು ಪ್ರಕಟಿಸಲಿಲ್ಲ. ಸಾರ್ವಜನಿಕ ಸಭೆ ಮಾಡಿ ಒಂದಾದರೂ ಭಾಷಣಮಾಡಲಿಲ್ಲ. ಕೇವಲ ಕಿವಿಯ ಮೇಲೆ ಕೈ ಇಟ್ಟುಕೊಂಡು ಅರಿಯದವರರಸರೆಂಬಂತೆ ಚಕ್ಕಂದದಿಂದ ಮೌಜುನೋಡುತ್ತ ಕುಳಿತಿರುವಿರಿ.................

ಇನ್ನು ಮೈಸೂರು ಪ್ರಾಂತದ ಭೂಸುರೋತ್ತಮರಿಗೆ ಎರಡು ಮಾತುಗಳನ್ನು ಹೇಳಿ ಈ ವಿಸ್ತೃತವಾದ ಲೇಖವನ್ನು ಮುಗಿಸುತ್ತೇವೆ. ಮೈಸೂರ ದೇಶದ ಭೂಸುರರೇ, ನಿಮ್ಮ ಕೂಪಮಂಡೂಕವರ್ತನವನ್ನು ದೂರಮಾಡಿರಿ. ಹಾಗೂ ವಂಶಪಾರಂಪರ್ಯದಿಂದ ನಿಮ್ಮಲ್ಲಿ ನೆಲಸಿರುವ ಜಾತಿದ್ವೇಷವೆಂಬ ಪಿಶಾಚಿಯನ್ನು ಇನ್ನುಮೇಲಾದರೂ ಹೊಡೆದೋಡಿಸಿರಿ. ಯಾತಕಂದರೆ ಅದರಿಂದ ನಿಮ್ಮ ಹಾನಿಯಷ್ಟೇ ಅಲ್ಲ, ಇಡೀ ರಾಷ್ಟ್ರದ ಹಾನಿಯೇ ಆಗುತ್ತಿರುವುದು. ದೇಶದ ಮುಂದಾಳುಗಳು ದೇಶೋದ್ಧಾರಕ್ಕಾಗಿ ರಾಷ್ಟ್ರದ ಐಕ್ಯವನ್ನು ಅಪೇಕ್ಷಿಸುತ್ತಿರುವರು. ನಾವು ಬ್ರಾಹ್ಮಣರೆಂದು ಅಹಮ್ಮನ್ಯತೆಯನ್ನು ತೋರಿಸಬೇಡಿರಿ. ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹವೆಂಬ ಬ್ರಾಹ್ಮಣ್ಯಲಕ್ಷಣದ ಷಟ್ಕರ್ಮಗಳು ಎಂದೋ ಲೋಪವಾಗಿರುವವು. ಇದ್ದರೂ ಸಾವಿರಕ್ಕೊಬ್ಬರಲ್ಲಿವೆಯೋ ಲಕ್ಷಕ್ಕೊಬ್ಬರಲ್ಲಿವೆಯೋ ಯಾರಿಗೆ ಗೊತ್ತು? ಈಗ ಸರ್ವಸಮತ್ವವನ್ನು ಅಪೇಕ್ಷಿಸುವ ಜನರು ಅಸ್ಪೃಶ್ಯರೊಡನೆ ಸಹಪಂಕ್ತಿಭೋಜನವನ್ನು ಮಾಡುತ್ತಿರುವರು. ನಿಮ್ಮ ವೇದವೆಲ್ಲಿ? ನಿಮ್ಮ ವೇದಾಂತವೆಲ್ಲಿ? ಯಾರಿಗೆ ಆರ್ಯಪೂರ್ವಜರು ಮ್ಲೇಂಚ್ಛರೆಂದು ಕರೆಯುತ್ತಿದ್ದರೋ ಅಂಥ ಅಮೇರಿಕೆ ಮೊದಲಾದ ಪರದೇಶಸ್ಥರಿಗೆ ಶ್ರೀ ವಿವೇಕಾನಂದರು ವೇದಾಂತವನ್ನುಪದೇಶಿಸಿ ಅಲ್ಲಲ್ಲಿ ವೇದಾಂತಪಾಠಶಾಲೆಗಳನ್ನು ಸ್ಥಾಪಿಸಿರುವರು. ದುಷ್ಪಾನ ದುರಾಹಾರಗಳನ್ನು ತೆಗೆದುಕೊಳ್ಳುವವರ ಬಾಯಲ್ಲಿ ವೇದಶಾಸ್ತ್ರಗಳು ಹೊಕ್ಕು ಬಳಕೆ ಮಾಡುತ್ತಿರುವವು. ಯಾವ ವೇದಗಳನ್ನು ಬ್ರಾಹ್ಮಣೇತರರು ಸ್ಪರ್ಶಸಹ ಮಾಡಬಾರದೆಂದು ನೀವು ಹಟ ತೊಟ್ಟಿರುವಿರೊ ಅಂಥ ವೇದಗಳನ್ನು ಜರ್ಮನಿಯ ಮ್ಯಾಕ್ಸ್‍ಮುಲರ ಮೊದಲಾದವರು ಪಠನ ಮಾಡುವದೊಂದು ಕಡಿಗಿರಲಿ, ಅವುಗಳ ತಲಬುಡಗಳನ್ನೆಲ್ಲ ಕಿತ್ತು ಈಡಾಡಿ ಜರ್ಮನಿ ಹಾಗೂ ಇಂಗ್ಲಿಷ ಮೊದಲಾದ ಭಾಷೆಗಳಲ್ಲಿ ಭಾಷಾಂತರಿಸಿಕೊಂಡಿರುವರು. ಇಷ್ಟೇ ಅಲ್ಲ. ಮಾಕ್ಸ್‍ಮುಲರರು ಭಟ್ಟಾಚಾರ್ಯರೆಂಬ ಪದವಿಯನ್ನು ಸಹ ಪಡೆದಿರುವರು. ಸದ್ಯಃ ಕಾಶೀವಿಶ್ವವಿದ್ಯಾಲಯ, ಕಲಕತ್ತಾ ಸಂಸ್ಕೃತಕಾಲೇಜ ಮೊದಲಾದ ದೊಡ್ಡದೊಡ್ಡ ಸಂಸ್ಥೆಗಳಲ್ಲಿ ಎಲ್ಲಜಾತಿಯ ಜನರು ವೇದವೇದಾಂಗಾದಿ ಸಕಲ ಶಾಸ್ತ್ರಗಳನ್ನು ಅಭ್ಯಾಸ ಮಾಡುತ್ತಿರುವರು. ಇಷ್ಟೇ ಅಲ್ಲ. ವಿದೇಶೀಯರು ಅಧ್ಯಾಪಕರಾಗಿ ಪಾಠಹೇಳುತ್ತಿರುವರು. ಈ ಪ್ರಕಾರ ಪರಕೀಯರು ವೇದವೇದಾಂತಗಳನ್ನೆಲ್ಲ ಕಿತ್ತು ತಿರುವಿಹಾಕಿದರೂ ಅವುಗಳು ಅಪವಿತ್ರವಾಗುವುದಿಲ್ಲವಂತೆ! ಆದರೆ ತಮ್ಮ ನೆರೆಯವರೂ ಬಂಧುಗಳೂ ಸುಸಂಸ್ಕಾರ ಹೊಂದಿದವರೂ ಆದ ಬ್ರಾಹ್ಮಣೇತರರು ಮುಟ್ಟಿದ ಮಾತ್ರಕ್ಕೆ ಅಪವಿತ್ರಗಳಾಗುವವಂತೆ! ಇಷ್ಟು ನಿಮ್ಮ ಬುದ್ಧಿಯು ಯಾಕೆ ಮುಸಣಿಸಿತು! ಬ್ರಾಹ್ಮಣೇತರರ ಮೇಲೆ ನಿಮಗೆ ಇಷ್ಟು ಮತ್ಸರ ವೇಕೆ!

ಮೈಸೂರ ಬೆಂಗಳೂರ ಗವ್ನರ್ನಮೆಂಟ ಸಂಸ್ಕೃತ ಕಾಲೇಜುಗಳು ಸರಕಾರದ ಹಣದಿಂದ ನಡೆಯುವವಷ್ಟೆ! ಆದರೆ ಆ ಹಣವನ್ನು ಸರಕಾರದವರು ತಮ್ಮ ಕಿಸೆಯೊಳಗಿಂದ ಕೊಡುವದಿಲ್ಲ. ಬ್ರಾಹ್ಮಣೇತರು ಕೊಟ್ಟ ಕರಕಂದಾಯಗಳಲ್ಲಿಯೆ ಕೆಲವು ಭಾಗವನ್ನು ಕೊಡುವರು. ಅಂದ ಮೇಲೆ ಆ ಕಾಲೇಜುಗಳು ಬ್ರಾಹ್ಮಣೇತರರ ಹಣದಿಂದ ಪೋಷಿತವಾಗುವುದಿಲ್ಲವೆ! ಈಗ ಯಾರ ನೆರಳು ಸಹ ನಿಮಗೆ ಬೇಕಾಗಿಲ್ಲವೊ ಅಂಥ ಬ್ರಾಹ್ಮಣೇತರರ ಸಂಬಂಧದ ಕಾಲೇಜಗಳಲ್ಲಿ ಅವರನ್ನು ದೂರಮಾಡಿ ನಿಮ್ಮಷ್ಟಕ್ಕೆ ನೀವೆ ಕೂತು ಓದಲಿಕ್ಕೆ ನಿಮಗೆ ಹೇಯವಾದರೂ ಹ್ಯಾಗೆ ಬರುವದಿಲ್ಲ! ಮನೋಲಜ್ಜೆಯಿಲ್ಲದಿದ್ದರೂ ಜನಲಜ್ಜೆಗಾದರೂ ಅಂಜಬೇಕಾಗುತದೆ. ಮೇಲೆ ಹೇಳಿದಂತೆ ಬ್ರಾಹ್ಮಣೇತರರ ಹಣದ ಸಂಬಂಧದ ಶಾಲೆ ಕಾಲೇಜುಗಳಿಗೆ ನೀವೇ ಅದಕ್ಕೆ ಶರಣುಹೊಡೆದು ನಿಮ್ಮಷ್ಟಕ್ಕೆ ನೀವೇ ವರ್ಗಣಿ ಕೂಡಿಸಿಕೊಂಡು ನಿಮ್ಮ ಸ್ವಂತ ಶಾಲೆ ಕಾಲೇಜುಗಳನ್ನು ಸ್ಥಾಪಿಸಿಕೊಂಡು ಯಾವ ಬ್ರಾಹ್ಮಣೇತರ ಬಾಧೆಯೂ ತಟ್ಟದಂತೆಯೂ, ಯಾವ ಬ್ರಾಹ್ಮಣೇತರರ ಗಾಳಿಯು ಸಹ ಸೋಂಕದಂತೆಯೂ ಮಡಿಯಿಂದ ವೇದವೇದಾಂತ ಶಾಸ್ತ್ರಾಧ್ಯಯನವನ್ನು ಮಾಡಿಕೊಳ್ಳಿರಿ. ಹಾಗೆ ಮಾಡದೆ ನೀವು ಬಲಾತ್ಕಾರ ನಡಿಸಿದರೆ ದೇವತೆಗಳನ್ನು ವಂಚಿಸಿ ಅವರ ಐಶ್ವರ್ಯವನ್ನು ಅನಾಯಾಸವಾಗಿ ಎತ್ತಿಕೊಂಡು ಹೋಗುವ ಸ್ವರ್ಗೀಯ ರಾಕ್ಷಸರಿಗೂ ನಿಮಗೂ ಭೇದವೇನು? ಈ ಎಲ್ಲವನ್ನೂ ಪೂರ್ಣ ಲಕ್ಷಕ್ಕೆ ತಂದುಕೊಂಡು ನಿಮ್ಮಷ್ಟಕ್ಕೆ ನೀವೇ ಸನ್ಮಾರ್ಗಗಾಮಿಗಳಾಗಿರಿ. ಬೇಗನೆ ಶುದ್ಧಿಯ ಮೇಲೆ ಬಂದು ನಿಮ್ಮ ಬುದ್ಧಿಯನ್ನು ಸುಧಾರಿಸಿಕೊಂಡು ಅನ್ಯರಿಗೆ ಮಾರ್ಗದರ್ಶಕರಾಗಿರಿ. ಹಾಗೆ ಮಾಡದಿದ್ದರೆ ಮಾತ್ರ ಶಿರೋಲೇಖನದಲ್ಲಿ ಹೇಳಿದಂತೆ ನಿಮಗೆ ಬಹುದಿವಸದಿಂದ ಬಂದಿರುವ ಭೂಸುರರೆಂಬ ಹೆಸರನ್ನು ಕಳಕೊಂಡು ಭೂರಕ್ಕಸರೆಂಬ ಅಭಿಧಾನಕ್ಕೆ ಪಾತ್ರರಾದೀರಿ. ನಾವು ಹೇಳುವುದೆಲ್ಲವೂ ನಿಮ್ಮ ದ್ವೇಷಮೂಲಕವೆಂದು ಭಾವಿಸದೆ ನಿಮ್ಮ ಹಿತಕ್ಕಾಗಿಯೇ ಎಂಬುದನ್ನು ಮಾತ್ರ ಪೂರಾ ಲಕ್ಷದಲ್ಲಿಡಿರಿ.................

ವಿಜಾಪುರದ ಕರ್ನಾಟಕ ವೈಭವ—(ತಾ॥ 22-8-1922).

ಮೈಸೂರ ಸರಕಾರದ ಸಂಸ್ಕೃತ ಕಾಲೇಜುಗಳಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳಿಗಷ್ಟೇ ಸಂಸ್ಕೃತಶಿಕ್ಷಣವನ್ನು ಕೊಡುವ ರೂಢಿ ಇರುತ್ತದೆ. ಇತರ ಯಾವ ವಿದ್ಯಾರ್ಥಿಗಳಿಗೂ ಅಲ್ಲಿ ಪ್ರವೇಶವಿಲ್ಲ. ಈ ರೂಢಿಯ ವಿರುದ್ಧವಾಗಿ ಮೈಸೂರ ಬ್ರಾಹ್ಮಣೇತರರು ತಕರಾರು ಮಾಡಿದರು. ಮೈಸೂರ ಸರಕಾರದವರು ಈ ಪ್ರಶ್ನವನ್ನು ವಿಚಾರ ಮಾಡುವ ಕುರಿತು ಒಂದು ಕಮಿಟಿಯನ್ನು ನೇಮಿಸಿದರು. ಆ ಕಮಿಟಿಯವರು ಹಳೇ ರೂಢಿಯನ್ನು ಸಮರ್ಥಿಸಿ ತಮ್ಮ ರಿಪೋರ್ಟನ್ನು ಬರೆದರು. ಕಮಿಟಿಯವರ ನಿರ್ಣಯವು ಕೇವಲ ಅನ್ಯಾಯವಾದದ್ದೆಂದು ನಾವು ಹೇಳದೆ ಇರಲಾರೆವು. ಈಗ ಜಗತ್ತಿನಲ್ಲಿ ಕಾಮಕ್ರೋಧಾದಿಗಳನ್ನು ಬಿಟ್ಟು ಷಟ್‍ಕರ್ಮನಿರತರಾದ ಬ್ರಾಹ್ಮಣರು ಸಿಗುವದೇ ದುರ್ಲಭ. ನಾಮಮಾತ್ರಕ್ಕೆ ಬ್ರಾಹ್ಮಣರೆನಿಸಿಕೊಳ್ಳುತ್ತಾರೆಯೇ ಹೊರ್ತು ಆಚಾರ ದೃಷ್ಟಿಯಿಂದ ನೋಡಿದರೆ ಎಲ್ಲರೂ ಅಬ್ರಾಹ್ಮಣರೇ. ಬ್ರಾಹ್ಮಣೇತರರಲ್ಲಿ ಬಹುಜನ ಸಂಖ್ಯಾಕರು ನೀತಿವಂತರೂ ಶುದ್ಧಾಚರಣೆಯುಳ್ಳವರೂ ಇರುತ್ತಾರೆಂದು ನಮ್ಮ ಮತವಿಲ್ಲ. ಸಾರಾಂಶವೇನಂದರೆ ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ನಿಜವಾದ ಭೇದವೇ ಉಳಿದಿರುವದಿಲ್ಲವೆಂದು ಹೇಳಿದರೆ ತೀರ ತಪ್ಪಾಗಲಿಕ್ಕಿಲ್ಲ. ಇಂಥ ವೇಳೆಯಲ್ಲಿ ಇಲ್ಲದ ಭೇದವನ್ನು ಕಲ್ಪಿಸಿ ಜನರ ಕ್ಷೋಭವನ್ನು ಕಟ್ಟಿಕೊಳ್ಳುವದು ನ್ಯಾಯವಾದದ್ದಲ್ಲ. ಮತ್ತು ಈ ರೂಢಿಯನ್ನು ನಾವು ತೀವ್ರವಾಗಿ ನಿಷೇಧಿಸುತ್ತೇವೆ. ಕರ್ನಾಟಕ ಟಾಯಿಮ್ಸ್‍ಕಾರರು ಈ ಸಂದರ್ಭದಲ್ಲಿ ಬರೆದ ವಿಧಾನಗಳು ಕೆಲಮಟ್ಟಿಗೆ ಯಥಾಯೋಗ್ಯವಿದ್ದರೂ ಇಂಥ ಕೆಲವು ಸಂಗತಿಗಳನ್ನು ಎತ್ತಿ ಹಿಡಿದು ಇಡೀ ಬ್ರಾಹ್ಮಣ ವರ್ಗವನ್ನು ತಮ್ಮ ಟೀಕಾಸ್ತ್ರಕ್ಕೆ ಗುರಿ ಮಾಡುವದಾದರೂ ಅವರ ಸೌಜನ್ಯಕ್ಕೆ ಶೋಭಿಸುವದಿಲ್ಲ. ಮೇಲ್ಕಂಡ ಘಾತುಕ ರೂಢಿಯನ್ನು ಮೈಸೂರ ಸರಕಾರದವರು ಆದಷ್ಟು ತೀವ್ರ ಕಿತ್ತುಹಾಕಬೇಕು. ಸುವಿಚಾರಿಗಳಾದ ಬ್ರಾಹ್ಮಣರಾದರೂ ಈ ವಿಷಯದಲ್ಲಿ ಸರಕಾರಕ್ಕೆ ಸಹಾಯ ಮಾಡಬೇಕೆಂದು ನಮ್ರವಾಗಿ ಸೂಚಿಸುತ್ತೇವೆ.

ಸಂಕ್ಷಿಪ್ತವಾಗಿ ಕಾಗದದ ಒಂದು ಕಡೆ ಮಾತ್ರ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟಿರುವ ಜನೋಪಯುಕ್ತವಾದ ಲೇಖನಗಳಿಗೆ ಮಾತ್ರ ಈ ಸ್ಟಾರ್ ಪತ್ರಿಕೆಯಲ್ಲಿ ಸ್ಥಳದೊರೆಯುತ್ತದಲ್ಲದೆ ಈ ನಿಬಂಧನೆಗೆ ವಿರುದ್ಧವಾದ ಲೇಖನಗಳಿಗೆ ಖಂಡಿತವಾಗಿ ಸ್ಥಳ ದೊರೆಯುವುದಿಲ್ಲವೆಂಬ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕು. ತಿರಸ್ಕೃತವಾದ ಲೇಖನಗಳು ಹಿಂದಿರುಗಿ ಕಳುಹಲ್ಪಡುವುದಿಲ್ಲವು. ಲೇಖಕರು ತಮ್ಮ ರಿಜಿಸ್ಟರ್ ನಂಬರನ್ನೂ ಪೂರ್ಣವಾದ ಹೆಸರನ್ನೂ ತಿಳಿಸಬೇಕು.

ಬ್ರಾಹ್ಮಣಮಿತ್ರ—ನಿಮ್ಮ ಲೇಖನವನ್ನು ಮೊದಲು ಸಾಧ್ವೀ ಪತ್ರಿಕೆಗೆ ಕಳುಹಿಸಿಕೊಡುವುದು ಹಿತ. ಅವರು ಪ್ರಕಟಿಸಿ ಉತ್ತರಕೊಡದಿದ್ದರೆ ನಾವು ಪ್ರಕಟಿಸುತ್ತೇವೆ. ಪ. ಪ್ರ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ರಾಜಧಾನಿಯ ಮ್ಯುನಿಸಿಪಾಲಿಟಿ.

ಈ ಮ್ಯುನಿಸಿಪಾಲಿಟಿಯ ಚೀಫ್ ಆಫೀಸರ ಮೇಲ್ವಿಚಾರಣೆಗೊಳಪಟ್ಟ ದೇವರಾಜ ಮಾರ್ಕೆಟ್ಟಿನಲ್ಲಿರುವ ಅಂಗಡಿಗಳ ಬಾಡಿಗೆಯು 3000 ರೂ.ಗಳ ವರೆಗೆ ಬಾಕಿ ನಿಂತಿರುವುದಲ್ಲದೆ ಮನೆಕಂದಾಯವನ್ನೆತ್ತುವ ಗುಮಾಸ್ತರುಗಳಲ್ಲಿ ಕೆಲರು ಹಣವನ್ನು ವಸೂಲ್ಮಾಡಿ ದುರುಪಯೋಗಪಡಿಸಿಕೊಂಡಿರುವರಾದರೂ ಕೌನ್ಸಿಲಿನ ಪ್ರೆಸಿಡೆಂಟರಾಗಲಿ ಅಥವಾ ಮೆಂಬರುಗಳಾಗಲಿ ಬಾಕಿ ನಿಂತಿರುವ ಹಣದ ವಸೂಲಿಗೆ ತಕ್ಕ ಏರ್ಪಾಟನ್ನು ಮಾಡದೆ ಮತ್ತು ಆದಾಯಕ್ಕಿನ್ನ ಖರ್ಚನ್ನು ಹೆಚ್ಚಿಸಿಕೊಂಡು ಅದಕ್ಕಾಗಿ ಜನರ ಮೇಲೆ ಆದಾಯದ ತೆರಗೆಯನ್ನು ವಿಧಿಸಿ ಕಡಿಮೆ ಬರುವ ಹಣವನ್ನು ಸರಿಪಡಿಸಿಕೊಳ್ಳಬೇಕೆಂದು ಯೋಚಿಸಿರುತ್ತಾರಲ್ಲದೆ ಅನಾವಶ್ಯಕವಾದ ಖರ್ಚುಬಾಬುಗಳನ್ನು ಕಡಿಮೆ ಮಾಡಿ ತಂತಮ್ಮ ಜೀವನವನ್ನು ನಿರ್ವಹಿಸಲು ಅಸಮರ್ಥರಾಗಿರುವ ಬಡಜನರ ಮೇಲೆ ಹೊಸಕಂದಾಯಗಳ ಭಾರವನ್ನು ಹೊರಿಸದೆ ಉಪಕರಿಸಬೇಕೆಂದು ಯೋಚಿಸದೆ ಇರುವುದಕ್ಕಾಗಿ ವಿಷಾದಿಸಬೇಕಾಗಿದೆ.

ಒಬ್ಬ ರೇಟ್‍ಪೇಯರ್.

ಹುಲಿವೇಷದ ರಜಕಾಶ್ವ.

ಹಿಂದೆ ಸಂಪದಭ್ಯುದಯ ಪತ್ರಿಕೆಯ ಕರಸ್ಪಾಂಡೆನ್ಸ್ ಕಾಲಮ್ಮಿನಲ್ಲಿ "ವೀರಶೈವ" ಎಂಬ ಕಲ್ಪಿತನಾಮದಿಂದ ಮೋಸಗಾರಿಕೆಯ ಬರವಣಿಗೆಯನ್ನು ಬರೆದುಕೊಟ್ಟದ್ದವನಿಗೆ ಸ್ಟಾರ್‍ಕರ್ತರು ಮೇಲ್ಕಂಡ ಹೆಡ್ಡಿಂಗಿನಿಂದ ಕೊಟ್ಟಿದ್ದ ಉತ್ತರವು ಸಮರ್ಪಕವಾಗಿರುತ್ತದೆ. ಈ ಭಂಡಲೇಖಕನಿಗೆ ಅದರಿಂದ ಜ್ಞಾನೋದಯವಾದಂತೆ ತೋರುವುದಿಲ್ಲ. ರಜಕಾಶ್ವವು ಒಂದೆರಡು ಸಣ್ಣಪೆಟ್ಟುಗಳಿಗೆ ಮಣಿಯತಕ್ಕದ್ದಲ್ಲವಷ್ಟೆ? ಈಚೆಗೆ ಅದೇ ಹೆಸರಿನಿಂದ ಇನ್ನೂ ಒಂದೆರಡು ಲೇಖನಗಳು ಸಂಪದಭ್ಯುದಯದ ಸಂಚಿಕೆಗಳಲ್ಲಿ ಮುದ್ರಿತವಾಗಿವೆ. ವೀರಶೈವ ಸಮಾಜದಲ್ಲಿ ಪರಸ್ಪರ ಒಡಕು ಹುಟ್ಟಿಸಬೇಕೆಂಬುದೇ ಮೊದಲಾದ ದುರ್ವಿಚಾರದಿಂದ ಅಸತ್ಯವಿಧಾನಗಳನ್ನು ಅಸಮಂಜಸವಾಗಿ ಮಾಡಿರುವ ಈ ಲೇಖಕನು ನಿಜವಾದ ವೀರಶೈವನೆಂದಿಗೂ ಅಲ್ಲ. ಹಾಗಿದ್ದರೆ ಅವನು ಯಾವ ಊರಿನವನು? ಯಾರ ಮಗನು? ತನ್ನ ಹೆಸರೇನು? ವಿಳಾಸವೇನು? ಎಂಬುದನ್ನು ಪ್ರಕಟಿಸಿಕೊಳ್ಳಲಿ. "ಸ್ಟಾರ್‍ಕರ್ತರಿಗೆ ಸಂಸ್ಕೃತ ಕಾಲೇಜಿನಲ್ಲಿ ಓದುವ ಯೋಗ್ಯತಾಸಿದ್ಧಿಯಿಲ್ಲ. ಸಾಹಿತ್ಯಜ್ಞಾನವಿಲ್ಲ. ಇವರ ತಂದೆಯವರಂತೆ ಮಿತ್ರಭಾವದಿಂದಿರುವವರಲ್ಲಿ ಭೇದಭಾವವನ್ನು ಇವರು ಹುಟ್ಟಿಸುತ್ತಿದ್ದಾರೆ. ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ವೀರಶೈವರ ಸಂಸ್ಕೃತ ಪಾಠಶಾಲೆಗೆ ಬರುತ್ತಿರುವ ವೀರಶೈವರೇ ಅಪೂರ್ವ. ಹೀಗಿರುವಾಗ ಬ್ರಾಹ್ಮಣರ ಪಾಠಶಾಲೆಗೆ ಬರುವರೆಂದು ನಂಬುವುದು ಹೇಗೆ? ಸಂಸ್ಕೃತ ಕಾಲೇಜುಗಳಿಗೆ ಇತರರನ್ನೆಲ್ಲಾ ಸೇರಿಸಬೇಕೆಂಬ ಸಂಕಲ್ಪವು ವರ್ಣಸಂಕರಪ್ರಯತ್ನವಾಗಿದೆ. ಈ ಉದ್ದೇಶವು ಸ್ಟಾರ್‍ಕರ್ತರಿಗೆ ಇರುವುದೇ ಹೊರತು ಸಕಲ ವೀರಶೈವರ ಅಭಿಪ್ರಾಯವಲ್ಲ. ರಾಜಧಾನಿಯಲ್ಲಿ ವೀರಶೈವ ಸಂಘಕ್ಕೆ ಡಾಕ್ಟರ್ ಸಿದ್ದಪ್ಪನವರು ಅಧ್ಯಕ್ಷರಾಗಿದ್ದಾರೆ. ಬ್ರಾಹ್ಮಣರ ಸ್ಪೆಷಲ್ ಕಾಲೇಜುಗಳಿಗೆ ಬ್ರಾಹ್ಮಣೇತರರನ್ನೆಲ್ಲಾ ಸೇರಿಸಿಕೊಳ್ಳಬೇಕೆಂದು ಹೊಡೆದಾಡುವುದು ಸ್ಟಾರ್‍ಪತ್ರಿಕಾಕರ್ತರ ಹೊಡೆದಾಟವೇ ಹೊರತು ವೀರಶೈವ ಮಹಾಜನರ ಹೊಡೆದಾಟವಲ್ಲ. ಪಂಚಮರೇ ಮೊದಲಾದವರನ್ನು ವೀರಶೈವರ ಪಾಠಶಾಲೆಗೆ ಸೇರಿಸಲು ಒಪ್ಪದಿರುವಾಗ ಬ್ರಾಹ್ಮಣರ ಪ್ರೈವೆಟ್ ಪಾಠಶಾಲೆಗಳಿಗೆ ಇತರರನ್ನು ಸೇರಿಸಬೇಕೆಂಬ ವಾದವು ಶುದ್ಧ ತಪ್ಪು ಎಂಬದಾಗಿ ಆ ಸಭೆಯಲ್ಲಿ ಚರ್ಚೆಯಾಯಿತು. ಇದು ಸಾಧುವಾದದ್ದು" ಇತ್ಯಾದಿಯಾಗಿ ಸದರಿ ಲೇಖನದಲ್ಲಿ ಹೇಳಲ್ಪಟ್ಟಿರುತ್ತದೆ.

ಪತ್ರಿಕಾಕರ್ತರು ಹೊಡೆದಾಡುವುದೆಲ್ಲಾ ಸ್ವಾರ್ಥಕ್ಕೆಂಬ ಸಿದ್ಧಾಂತವು ಈ ಬರವಣಿಗೆಯನ್ನು ಬರೆದವನಿಗೆ ಇರಬಹುದಾದುದರಿಂದಲೇ ಮತ್ತು ಅಂಥ ಸಂಕಲ್ಪವು ಸಂಪದಭ್ಯುದಯ ಕರ್ತರಿಗೂ ಇದ್ದಿರಬಹುದಾದ ಕಾರಣವೇ ಸ್ಟಾರ್ ಕರ್ತರು ಸಂಸ್ಕೃತ ಕಾಲೇಜಿನಲ್ಲಿ ಸೇರಿ ಓದಲು ಆಶೆಪಟ್ಟಿರುವರೆಂದೂ, ಅಲ್ಲಿ ಅಭ್ಯಾಸ ಮಾಡಲು ತಕ್ಕ ಯೋಗ್ಯತಾಸಿದ್ಧಿಯು ಅವರಿಗಿಲ್ಲವೆಂದೂ ಈ ಲೇಖನಕಾರನು ಹೇಳಿರುತ್ತಾನೆ. ಅದಕ್ಕೆ ಪ್ರತಿಆಡದೆ ಸಂಪದಭ್ಯುದಯಕರ್ತರು ೨ ಸಲ ಅದನ್ನು ಪ್ರಕಟಿಸಿಕೊಂಡಿದ್ದಾರೆ. ಈ ಲೇಖಕನಿಗೂ ಇವನಿಗೆ ಆಶ್ರಯಕೊಟ್ಟಿರುವ ಪತ್ರಿಕಾಕರ್ತರಿಗೂ ಇರುವ ಸಂಸ್ಕೃತಜ್ಞಾನಕ್ಕಿಂತಲೂ ಸ್ಟಾರ್‍ಕರ್ತರ ಜ್ಞಾನವು ಏನೂ ಕಡಿಮೆಯಾದುದಲ್ಲವೆಂಬುದನ್ನು ವಿಚಾರಶಕ್ತಿಯೇ ಇಲ್ಲದ ಈ ಲೇಖಕನೇನುಬಲ್ಲನು? ಅದು ಹಾಗಿರಲಿ. ಈಗ ಬ್ರಾಹ್ಮಣರು ಓದುತ್ತಿರುವ ಸರ್ಕಾರಿ ಸಂಸ್ಕೃತ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಎಷ್ಟು ವಿಧವಾದ ಪ್ರೋತ್ಸಾಹವು ಕಲ್ಪಿಸಲ್ಪಟ್ಟಿದೆಯೋ ಅದರಂತೆ ಇತರರ ಸಂಸ್ಕೃತ ವಿದ್ಯಾಭ್ಯಾಸಕ್ಕೂ ಕಲ್ಪಿಸಿಕೊಟ್ಟರೆ ವೀರಶೈವ ವಿದ್ಯಾರ್ಥಿಗಳು ಎಷ್ಟುಮಂದಿ ಕಾಲೇಜುಗಳಿಗೆ ಬರುವರೆಂಬುದೂ ಇಲ್ಲದಿರುವುದೂ ಗೊತ್ತಾದೀತು. ಸ್ಟಾರ್‍ಕರ್ತರು ಮಾತ್ರ ಈ ಗಲಾಟೆಗೆ ಕಾರಣಭೂತರೆಂದು ಕೂಗಿರುವ ಈ ಲೇಖಕನಂಥ ಕುರುಡನು ಈ ಪ್ರಪಂಚದಲ್ಲೇ ಇಲ್ಲವೆಂದು ಹೇಳಬಹುದು. ದೇಶದ ಪ್ರತಿ ಡಿಸ್ಟ್ರಿಕ್ಟು ತಾಲ್ಲೂಕುಗಳಿಂದಲೂ, ದಾವಣಗೆರೆಯಲ್ಲಿ ಕೂಡಿದ್ದ ಇಡೀ ದೇಶದ ವೀರಶೈವರ ಸಭೆಯಿಂದಲೂ ಸರ್ಕಾರಕ್ಕೆ ಮಾಡಿಕೊಳ್ಳಲ್ಪಟ್ಟಿರುವ ವಿಜ್ಞಾಪನೆಗಳ ಪರಿಜ್ಞಾನವೇ ಈ ಕುರುಡನಿಗೆ ಇಲ್ಲದೆಹೋಯಿತು. ಇವನಿಗೆ ಬುದ್ಧಿಹೇಳುವ ಶಕ್ತಿಯು ಸಂಪದಭ್ಯುದಯ ಕರ್ತರಿಗೂ ಇಲ್ಲದೆ ಹೋಗಿರಬೇಕಾದರೆ ಅವರ ಇಂದ್ರಿಯ ಶಕ್ತಿಗಳೂ ಕುಗ್ಗಿಹೋಗಿರುವುದೇ ಕಾರಣವಾಗಿರಬೇಕು, ಅಥವಾ ಪಕ್ಷಾಂಧತೆಯು ಪ್ರಬಲವಾಗಿರಬೇಕು. ರಾಜಧಾನಿಯ ವೀರಶೈವ ಸಂಘದ ಸಭೆಯಲ್ಲಿ "ಬ್ರಾಹ್ಮಣರ ಸ್ಪೆಷಲ್ ಕಾಲೇಜುಗಳಿಗೆ ಬ್ರಾಹ್ಮಣೇತರರನ್ನೆಲ್ಲಾ ಸೇರಿಕೊಳ್ಳಬೇಕೆಂದು ಹೊಡೆದಾಡುವುದು ಸ್ಟಾರ್‍ಪತ್ರಿಕಾಕರ್ತರ ಹೊಡೆದಾಟವೇ ಹೊರತು ವೀರಶೈವ ಮಹಾಜನರ ಹೊಡೆದಾಟವಲ್ಲವೆಂದು ಚರ್ಚೆಯಾಯಿತೆಂಬುದೇ ಮೊದಲಾದ ಸುಳ್ಳುಬರವಣಿಗೆಯ ಮೋಸವನ್ನು ಕುರಿತು ಸದರಿ ಸಭಾಚಾಲನದ ಪ್ರಮುಖರಾಗಿದ್ದ ಡಾ॥ ಸಿದ್ದಪ್ಪನವರೇ ಮೊದಲಾದವರು ನಿಜಸ್ಥಿತಿಯನ್ನು ಪ್ರಕಟಿಸಿ ಈ ಲೇಖಕನ ಮುಖದ ನೀರನ್ನು ಇಳಿಯಿಸದೆ ಬಿಡಲಾರರು. ಅಂಥ ಅಭಿಪ್ರಾಯವು ಡಾ॥ ಸಿದ್ದಪ್ಪನವರೇ ಮೊದಲಾದವರಿಗೆ ಇದ್ದಿದ್ದರೆ ಅವರು ಈ ಸಭೆಯನ್ನೇತಕ್ಕೆ ಕೂಡಿಸುತ್ತಿದ್ದರು? ರೆಜಲ್ಯೂಷನ್ನನ್ನು ಮಾಡಿ ಮೆಮೊರಾಂಡಮ್ಮನ್ನು ಸರ್ಕಾರಕ್ಕೆ ಕಳಿಸಿಕೊಡುವ ಪ್ರಯತ್ನಕ್ಕೆ ಯಾಕೆ ತೊಡಗುತ್ತಿದ್ದರು? ಎಂಬ ಇಷ್ಟು ವಿಚಾರವು ಕೂಡ ಈ ಹಸೀದಡ್ಡನ ತಲೆಬುರುಡೆಗೆ ಹುಗಲಿಲ್ಲ! ಅದೂ ಹೋಗಲಿ. ಸದರಿ ಸಭೆಯವರ ಮೆಮೊರಾಂಡಮ್ಮನ್ನು ಸಂಪದಭ್ಯುದಯದ ಸಂಚಿಕೆಯಲ್ಲೇ ಪ್ರಕಟಿಸಿಕೊಂಡಿರುವುದನ್ನಾದರೂ ಈ ಅಜ್ಞಶಿಖಾಮಣಿಯೂ ಈತನ ಆಶ್ರಯದಾತರೂ ಸಹ ಪರ್ಯಾಲೋಚಿಸದೆ ಹೀಗೆ ಪ್ರಕಟಿಸಿಕೊಂಡಿರುವುದು ಪರಿಹಾಸಾಸ್ಪದವಲ್ಲವೆ? ದುರಭಿಮಾನದ ತಮ್ಮ ಮೇಲ್ಪಜ್ಞತೆಯನ್ನು ಅಳಿಸಿ ಸರ್ಕಾರಿ ಸಂಸ್ಕೃತ ಕಾಲೇಜುಗಳಿಗೆ ಇತರರನ್ನು ಸೇರಿಸಿಕೊಳ್ಳುವ ಉದಾರತನವನ್ನು ಪ್ರತಿಪಕ್ಷದವರು ತೋರಿಸಿಕೊಟ್ಟು ಬಳಿಕ ವೀರಶೈವರು ತಮ್ಮ ಸ್ವಕೀಯ ಸಂಸ್ಕೃತ ಪಾಠಶಾಲೆಗಳಿಗೆ ಇತರರನ್ನು ಸೇರಿಸಿಕೊಳ್ಳುತ್ತಾರೆಯೋ ಇಲ್ಲವೆ ಎಂಬುದನ್ನು ಪರೀಕ್ಷಿಸಿ ನೋಡಲಿ. ನಾಟಕದಲ್ಲಿ ಒಬ್ಬನೇ ಅನೇಕ ವೇಷಧಾರಿಯಾಗಿ ಬರುವಂತೆ ಸಂಪದಭ್ಯುದಯದ ನಾಟಕದಲ್ಲಿ ಅದರ ಕೂಟದವರು ಸಮಯಸಂದರ್ಭಗಳಲ್ಲಿ ಒಬ್ಬೊಬ್ಬರೇ ಮಹಮ್ಮದೀಯನೂ ಕ್ರೈಸ್ತನೂ ವೀರಶೈವನೂ ಒಕ್ಕಲಿಗನೂ ಪಂಚಮನೂ ಆಗಿ ವೇಷಾಂತರ ನಾಮಾಂತರ ಧಾರಣೆಯಿಂದ ಕಾಣಿಸಿಕೊಳ್ಳುವುದುಂಟು. ಇಂಥ ಕಪಟನಾಟಕದಿಂದಲೇ ತಾವು ಕೃತಾರ್ಥರಾಗುವೆವೆಂಬ ಭ್ರಾಂತಿಯು ಸಂಪದಭ್ಯುದಯ ಕೂಟದವರಿಗೆ ಜನ್ಮಾಂತದವರೆಗೆ ತೊಲಗಿಹೋಗುವಂತೆ ತೋರುವುದಿಲ್ಲ. ಬೆಕ್ಕು ಕಣ್ಣನ್ನು ಮುಚ್ಚಿ ಹಾಲನ್ನು ಕದ್ದು ಕುಡಿದ ಮಾತ್ರಕ್ಕೇ ಜಗತ್ತಿನ ಕಣ್ಣೆಲ್ಲಾ ಮುಚ್ಚಿಹೋಗುವುದು ನಿಜವಾದರೆ ಸಂಪದಭ್ಯುದಯ ಕಾಪಟ್ಯವೂ ಜಯಶಾಲಿಯಾದೀತು. ಸ್ಟಾರ್‍ಕರ್ತರೂ ಅವರ ಯಜಮಾನರೂ ಸ್ಟಾರ್ ಪತ್ರಿಕೆಯೂ ನಮ್ಮ ಸಮಾಜದ ಭಾಗ್ಯೋದಯಸ್ವರೂಪವಾಗಿದ್ದುದರಿಂದಲೇ ಸಮಾಜವು ಇಷ್ಟುಮಟ್ಟಿಗೆ ಕಣ್ದೆರೆಯುವಲವಕಾಶವಾಯಿತೆಂಬುವದು ವಿಚಾರವಂತರಾದ ವೀರಶೈವರೆಲ್ಲರ ಅಭಿಪ್ರಾಯವೂ ಆಗಿರುತ್ತದೆ. ಈ ಲೇಖಕನಂಥ ಅನ್ಯರೇತಸ್ಸಂಜಾತನಿಗೆ ಮಾತ್ರ ಅದಕ್ಕೆ ಭಿನ್ನಾಭಿಪ್ರಾಯವಿದ್ದರೆ ಬಾಧಕವಿಲ್ಲ.

ನಿಜವೀರಶೈವ.

ಶ್ರೀಮನ್ಮಹಾರಾಜ ನಿರಂಜನಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾಸಂಸ್ಥಾನದಿಂದ.

ಶ್ರೀಮನ್ಮಹಾಸಂಸ್ಥಾನದ ಧಾರವಾಡ ಹಾವೇರಿ ಪೇಟೆಯಲ್ಲಿರುವ ಮುರುಘಮಠ (ಬಸಾಪುರ) ದ ಪಾಠಶಾಲಾ ಮತ್ತು ಬೋರ್ಡಿಂಗ್ ವಿದ್ಯಾರ್ಥಿಗಳಿಗೆ ಸಂಸ್ಕೃತಪಾಠ ಹೇಳುವದಕ್ಕೆ ಸಾಹಿತ್ಯ, ವೈದಿಕ, ಜ್ಯೋತಿಷ ಇವುಗಳಲ್ಲಿ ಪಾಂಡಿತ್ಯವುಳ್ಳ ಯೋಗ್ಯರಾದ ಒಬ್ಬರು ಶಾಸ್ತ್ರಿಗಳು ಬೇಕಾಗಿದೆ. ಬೋರ್ಡಿಂಗ್ ಕಮಿಟಿಯವರ ನಿಯಮದಂತೆ ಪಾಠಕ್ರಮಗಳು ನಡೆಯುತ್ತವೆ. ಶಾಸ್ತ್ರಿಗಳ ವೇತನವು ಅವರ ಯೋಗ್ಯತೆಯಪ್ರಕಾರ ಕೊಡಲ್ಪಡುವುದು. ಅಪೇಕ್ಷೆಯುಳ್ಳವರು ಕೆಳಗೆಕಂಡ ಮಾಹಿತಿಪ್ರಕಾರ ಶ್ರೀ ಮಹಾಸಂಸ್ಥಾನದ ರೂಬರೂಬು 1922 ನೆ ಇಸವಿ ಸೆಪ್ಟಂಬರು ಮಾಹೆ ಅಖೈರೊಳಗೆ ಅರ್ಜಿಯೊಂದಿಗೆ ಹಾಜರಾಗತಕ್ಕದ್ದು. ಅರ್ಜಿಯಲ್ಲಿ ಹೆಸರು, ತಂದೆಹೆಸರು, ಅಡ್ಡಹೆಸರು, ವಯಸ್ಸು, ಗ್ರಾಮ ಮತ್ತು ಈ ಮೊದಲು ಯಾವ ಪಾಠಶಾಲೆಯಲ್ಲಿದ್ದರೆಂಬುದನ್ನು ಬರೆಯಬೇಕು. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಸರ್ಟಿಫಿಕೇಟು ಇದ್ದರೆ ತರಬೇಕು.

ಮುಕ್ಕಾಂ ನ್ಯಾಮತಿ, ಏಜಂಟ್.

ಪ್ರಾಕ್ತನವಿಮರ್ಶನ ವಿಚಕ್ಷಣ ರಾವ್‍ಬಹದ್ದೂರ್ ರಾ॥ ನರಸಿಂಹಾಚಾರ್ಯ, ಎಂ.ಎ., ಎಂ. ಆರ್. ಎ. ಎಸ್., ಇವರು ಬರೆದ ಪತ್ರದ ಸಾರಾಂಶ:—

ಮಲ್ಲೇಶ್ವರಂ ಬೆಂಗಳೂರು 12-8-22.

ಮೆ॥ ಮ॥ ರಾ॥ ನಿಶಾನಿಮಠ ಎಸ್. ಎಂ. ದಾವಣಗೆರೆ, ಇವರ ಸನ್ನಿಧಿಯಲ್ಲಿ ವಿಜ್ಞಾಪನೆ.

ತಾವು ಆದರಪೂರ್ವಕವಾಗಿ ಬರೆದ ಪತ್ರವು ತಲುಪಿ ಅಭಿಪ್ರಾಯವು ವೇದ್ಯವಾಯಿತು. ಯೂನಿವರ್ಸಿಟಿಗೆ ತಾವು ಕಳುಹಿಸಿಕೊಟ್ಟ ಕಾಗದವನ್ನು ಅವರು ನನಗೆ ಕಳುಹಿಸಿಕೊಟ್ಟಿದ್ದಾರೆ. ಇದುವರೆಗೂ ಉತ್ತರವನ್ನು ಕಳುಹಿಸಲು ಅವಕಾಶವಿಲ್ಲದೆ ಹೋದುದಕ್ಕಾಗಿ ಬಹಳ ವಿಷಾದಿಸುತ್ತೇನೆ. ಈ ವಚನಕಾರರ ವಿಷಯದಲ್ಲಿ ಸುಮ್ಮೆಮದಿಂದ ತಮಗೆ ದೊರೆತ ಪುಸ್ತಕವನ್ನು ಪರಿಶೀಲಿಸಿ ಹೊಸವಿಷಯಗಳನ್ನು ಕಂಡುಹಿಡಿದುದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ. ಕವಿಚರಿತೆಯ ಮೂರನೆಯ ಸಂಪುಟವು ಈಗ ಅಚ್ಚಾಗುತ್ತಲಿದೆ. ನೀವು ಅನುಮತಿಕೊಟ್ಟರೆ ಈ ಹೊಸವಿಷಯಗಳನ್ನು ಆ ಸಂಪುಟದಲ್ಲಿ ಪರಿಶಿಷ್ಟವಾಗಿ ಸೇರಿಸಬಹುದು. ಎರಡನೆಯ ಸಂಪುಟದ ಪುನರ್ಮುದ್ರಣಕ್ಕೆ ಇನ್ನೂ ಬಹಳಕಾಲ ಬೇಕಾಗಬಹುದಾದುದರಿಂದ ಅದರಲ್ಲಿ ಸೇರಿಸಲು ಅವಕಾಶವಿಲ್ಲ. ಮೂರನೆಯ ಸಂಪುಟದಲ್ಲಿ ನಿಮ್ಮ ಹೆಸರನ್ನು ಹೇಳಿ ಈ ವಿಷಯಗಳನ್ನು ಸೇರಿಸಬಹುದು. ಆದರೆ ಆ ಪುಸ್ತಕವನ್ನು ಸಾಧ್ಯವಾದಲ್ಲಿ ನಾನು ಒಂದಾವೃತ್ತಿ ನೋಡಿ ಮನಸ್ಸಿಗೆ ನಿಶ್ಚಯಜ್ಞಾನವನ್ನು ಉಂಟುಮಾಡಿಕೊಂಡು ಈ ಕೆಲಸವನ್ನು ಮಾಡಬೇಕೆಂಬ ಹಾರೈಕೆ ಇದೆ. ಇದಕ್ಕೆ ನೀವು ಸಹಾಯಮಾಡಿದರೆ ಬಹಳ ಸಂತೋಷ. ನೀವು ಬರೆದಿರುವುದರಲ್ಲಿ ನನಗೆ ಸಂದೇಹವುಂಟಾಗಿದೆಯೆಂದು ತಿಳಿಯಬಾರದು. ಮನಸ್ಸಿಗೆ ಧೈರ್ಯವನ್ನು ಹುಟ್ಟಿಸಿಕೊಂಡು ಜನರ ಆಕ್ಷೇಪಣೆಗಳಿಗೆ ಅವಕಾಶಕೊಡದೆ ಕೆಲಸಮಾಡಬೇಕೆಂಬುದೇ ನನ್ನ ಕೋರಿಕೆಯಾಗಿದೆ. ನೀವು ಕಂಡುಹಿಡಿದಿರುವ ಪ್ರತಿಯೊಬ್ಬ ವಚನಕಾರರಿಗೂ ಒಂದೊಂದು ವಚನವನ್ನಾದರೂ ಆರಿಸಿ ಉದಹರಿಸಬೇಕೆಂಬ ಲವಲವಿಕೆಯಿದೆ. ಇದಕ್ಕೆ ಅನುಕೂಲ್ಯವುಂಟೆ? ಈ ವಿಷಯಕ್ಕೆಲ್ಲ ಉತ್ತರವನ್ನು ಬೇಗ ಬೆಳಸಬೇಕೆಂದು ಕೋರುತ್ತೇನೆ. ಕನ್ನಡಿಗರ ವಾಙ್ಮಯಕ್ಕಾಗಿ ಶ್ರಮಪಡುವ ಜನಗಳಸಂಖ್ಯೆ ಬಹಳ ಕಡಿಮೆ. ಈ ಸಂದರ್ಭದಲ್ಲಿ ನೀವು ಪಟ್ಟಿರುವ ಶ್ರಮಕ್ಕಾಗಿ ಬಹಳ ಸಂತೋಷಿಸುತ್ತೇನೆ. ಪ್ರತಿಫಲವನ್ನು ಅಪೇಕ್ಷಿಸದ ಕೆಲಸಮಾಡಿದರೇನೇ ಇಂಥ ಕಾರ್ಯಗಳು ನೆರವೇರುವವು." ಇತ್ಯಾದಿ.

ರಾ॥ ನರಸಿಂಹಾಚಾರ್ಯ.

ವಾಚಕಮಹಾಶಯರೇ! ಕನ್ನಡವಾಙ್ಮಯ ಸೇವಾಧುರೀಣರೂ, ಜ್ಞಾನವೃದ್ಧರೂ, ಲೋಕೋತ್ತರವಾದ ಅನುಭವಶಾಲಿಗಳೂ ಮುವ್ವತ್ತು ವರ್ಷಗಳಿಂದಲೂ ಕನ್ನಡ ಭಾಷಾಮಾತೆಯ ಸೇವೆಯನ್ನು ಮಾಡುತ್ತಲಿರುವರೂ ಆದ ಪ್ರಾಕ್ತನವಿಮರ್ಶನ ವಿಚಕ್ಷಣ ರಾವ್ ಬಹದ್ದೂರ್ ರಾ॥ ನರಸಿಂಹಾಚಾರ್ಯರು, ಎಂ.ಎ., ಎಂ.ಆರ್.ಎ.ಎಸ್. ಇವರು ನನ್ನ ಅಲ್ಪಸೇವೆಗೆ ಸಂತುಷ್ಟರಾಗಿ ನನ್ನನ್ನು ಪ್ರೋತ್ಸಾಹಪಡಿಸಿದ್ದಕ್ಕಾಗಿ ನಾನು ಇವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ. ಆದಷ್ಟು ತೀವ್ರವಾಗಿ ಸದರಿ ಮಹಾಶಯರು ನನ್ನ ಸರ್ವವಿಷಯಗಳನ್ನೂ ಮನಸ್ಸಿಗೆ ದೃಢ ನಿಶ್ಚಯಮಾಡಿಕೊಂಡು ಮುಂದಿನ ಕಾರ್ಯವನ್ನು ಶೀಘ್ರವಾಗಿ ನೆರವೇರಿಸುವರೆಂದು ಸಂಪೂರ್ಣ ನಂಬಿದ್ದೇನೆ.

ಶಾಂತವೀರಾರ್ಯ, ನಿಶಾನಿಮಠ, ದಾವಣಗೆರೆ.

ಜಾತಿಪದ್ಧತಿ.

ಲೇಖಕ—ಸ್ವಾಮಿ ವಿರೂಪಾಕ್ಷ ಒಡೆಯರ್, ಪ್ರೊಫೆಸರ್, ಸಂಸ್ಕೃತ ಕಾಲೇಜು, ಇಂದೋರ.

(ಕಳೆದವಾರದ ಶೇಷ.)

ಇನ್ನು ಈ ಆರ್ಯ ಶಬ್ದಕ್ಕೆ ಮ್ಯಾಕ್ಸ್‍ಮುಲ್ಲರೆಂಬ ಜರ್ಮನ ಪ್ರೊಫೇಸರರು, "ಆರ್ಯಃಸ್ವಾಮಿ ವೈಶ್ಯಯೋಃ॥" ಎಂಬ ಪಾಣಿನಿಯ ಸೂತ್ರದ ಮೇಲಿಂದ ಆರ್ಯ ಅಂದರೆ ವೈಶ್ಯರು; ಅರ್ಥಾತ್ ವೇದಕಾಲದಲ್ಲಿಯ ಭಾರತೀಯರಿಗೆ ಬ್ರಹ್ಮಜ್ಞಾನ ಮೊದಲಾದದ್ದಿರದೆ ಕೇವಲ ಒಕ್ಕಲಿಗರೇ ಇಲ್ಲಿ ವಾಸಮಾಡುತ್ತಿದ್ದು ಅವರಿಂದಲೇ ಈ ವೇದಗಳು ರಚಿತವಾಗಿರುವುವೆಂದು ಬರೆದಿರುವರು. ಆದರೆ ಅವರ ಈ ವ್ಯಾಖ್ಯಾನವು ಎಷ್ಟು ಅಸಂಗತ ವಿರುವದೆಂಬುದು ಮುಂದಿನ ವಿಚಾರದಿಂದ ವಾಚಕರಿಗೆ ಸ್ಪಷ್ಟವಾಗಬಹುದು. ಹೇಗೆಂದರೆ-ಪಾಣಿನಿಯು "ಆರ್ಯ" ಮತ್ತು "ಅರ್ಯ" ಎಂಬೆರಡು ಶಬ್ದಗಳನ್ನು ಬೇರೆಬೇರೆ ಹಿಡಿದಿದ್ದು ಮೇಲೆ ತೋರಿಸಿದ "ಅರ್ಯಃ ಸ್ವಾಮಿ ವೈಶ್ಯಯೋಃ" ಎಂಬ ಸೂತ್ರದಲ್ಲಿಯ ಅರ್ಯ ಶಬ್ದವನ್ನು ವೈಶ್ಯವಾಚಕವಾಗಿಯೂ "ಆರ್ಯೋ ಬ್ರಾಹ್ಮಣಕುಮಾರಯೋಃ" ಎಂಬೀ ಸೂತ್ರದಿಂದ ಆರ್ಯ ಶಬ್ದವನ್ನು ಬ್ರಹ್ಮಜ್ಞಾನಿಗೂ ಹಾಗೂ ಆ ಬ್ರಹ್ಮಜ್ಞಾನವನ್ನು ಸಂಪಾದಿಸುವ ಬ್ರಹ್ಮಚಾರಿಗೂ ವಾಚಕವನ್ನಾಗಿ ತೋರಿಸಿರುವನು. ಇದರಂತೆಯೇ ವೇದ ಮಂತ್ರಗಳಲ್ಲಿಯೂ ಕಂಡುಬರುವುದು,

"ಬೃಹಸ್ಪತೇ ಅತಿಯದರ್ಯೋ ಅರ್ಹಾದ್ದ್ಯುಮದ್ವಿಭಾತಿ" ॥
(ಯಜುರ್ವೇದ, ಅ, ೨೬-೩)

ಈ ಮಂತ್ರದಲ್ಲಿಯ "ಅರ್ಯ" ಶಬ್ದವು ಐಶ್ವರ್ಯವುಳ್ಳ ವೈಶ್ಯವಾಚಕವಾಗಿಯೂ ಹಾಗು

"ಆರ್ಯೋವಾಗಿರಾಂ ಅಭ್ಯರ್ಚವಿದ್ವಾರ್ಕ್ಷ ಋಷೀಣಾಂ |
ವಿಪ್ರಃ ಸುಮತಿಕಾಂಚನಃ ॥" (ಋಗ್ವೇದ, ಅಷ್ಟಕ, ೮)

ಎಂಬೀಮಂತ್ರದಲ್ಲಿಯ "ಆರ್ಯ" ಶಬ್ದವು ಕೃಷಿಕರ್ಮಜ್ಞನೆಂಬರ್ಥ ವಾಚಕವಾಗಿಯೂ ತೋರಿಸಲ್ಪಟ್ಟಿರುವದು. ಹೀಗಿರದೆ ಆರ್ಯ ಶಬ್ದವು ಬ್ರಹ್ಮಜ್ಞಾನವಾಚಕವಾಗಿದ್ದರೆ ಮುಂದೆ ಇದೇ ಮಂತ್ರದಲ್ಲಿ "ವಿದ್ವಾನ್" ಎಂಬ ಶಬ್ದಪ್ರಯೋಗವೆಂದೂ ಬರುತ್ತಿದ್ದಿಲ್ಲ. ಅಂದ ಮೇಲೆ "ಆರ್ಯ" ಮತ್ತು "ಅರ್ಯ" ಇವೆರಡು ಶಬ್ದಗಳ ಅರ್ಥಗಳಲ್ಲಿ ಮಹದಂತರವುಂಟೆಂದು ಸ್ಪಷ್ಟವಾಗಿ ಕಾಣುತ್ತಿದ್ದು, ವೇದಗಳಲ್ಲಿ "ಆರ್ಯ" ಶಬ್ದವು ವೇದಜ್ಞರಿಗೇನೇ ಉಪಯೋಗಿಸಲ್ಪಟ್ಟಿರುವುದು. ಈ ರೀತಿಯಾದ ಭೇದವನ್ನು ಪ್ರೊ. ಮ್ಯಾಕ್ಸ್‍ಮುಲ್ಲರ್‍ರವರು ತಿಳಿಯದೆ ಮನಬಂದಂತೆ ಬರೆದಿರುವರು. ಇದರಿಂದ ಒಂದು ದೇಶದವರು ಮತ್ತೊಂದು ದೇಶದ ಜ್ಞಾನ ಕರ್ಮಾದಿಗಳ ವಿಷಯದಲ್ಲಿ ಎಷ್ಟು ಜ್ಞಾನಿಗಳೆನಿಸಿಕೊಂಡರೂ ಆ ದೇಶದ ಜನ್ಮಸಂಸ್ಕಾರವವರಿಗಿಲ್ಲದಿರುವುದರಿಂದ ಸರ್ವಥಾ ಅವರಿಗೆ ಪರಕೀಯರ ಧರ್ಮ ಕರ್ಮಾದಿಗಳಾಲೋಚನೆಯಲ್ಲಿ ನ್ಯೂನತ್ವವೇ ಕಂಡುಬರುವುದು. ಇದರಿಂದ ತತ್ವದೃಷ್ಟಿಯಿಂದ ಎಷ್ಟು ಅನರ್ಥವುಂಟಾಗುವುದೆಂಬುದನ್ನು ವಾಚಕರು ಲಕ್ಷ್ಯದಲ್ಲಿ ತಂದು ತಮ್ಮ ತಮ್ಮ ದೇಶಗಳ ಇತಿಹಾಸಗಳನ್ನು ತಮ್ಮತಮ್ಮ ದೇಶದಲ್ಲಿ ಜನಿಸಿದ ಸ್ವದೇಶಾಭಿಮಾನದಿಂದಲೇ ಬರೆಯಿಸಬೇಕು. ಹಾಗೂ ಅನರಿಂದ ಬರೆದ ಐತಿಹಾಸಿಕ ಗ್ರಂಥಗಳೇ ದೇಶಕಲ್ಯಾಣಕರಗಳಾಗುವವೆಂಬುದನ್ನು ಸಂಪೂರ್ಣ ಲಕ್ಷ್ಯದಲ್ಲಿಡತಕ್ಕದ್ದು. ಆ ವಿಷಯವು ಹಾಗಿರಲಿ. ಇನ್ನು ಯದ್ಯಪಿ ಋಗ್ವೇದದ ಹತ್ತನೆ ಮಂಡಲದಲ್ಲಿ ಹಾಗೂ ಯಜುರ್ವೇದದ ಕೆಲವು ಅಧ್ಯಾಯಗಳಲ್ಲಿ ಬ್ರಾಹ್ಮಣಾದಿ ನಾಮಗಳು ಕಂಡುಬರುತ್ತಿರುವವಾದಾಗ್ಯೂ ಇವುಗಳು ಆಯಾ ಮಂತ್ರಗಳಲ್ಲಿಯೂ ಕ್ರಮದಿಂದ ತೋರಿಸಲ್ಪಟ್ಟಿಲ್ಲವಾದುದರಿಂದಲೂ ಪೂರ್ವಾಪರ ಸಂಗತಾರ್ಥವುಳ್ಳವುಗಳಾಗಿಲ್ಲ ವಾದುದರಿಂದಲೂ ಮತ್ತು ಅಲ್ಲಲ್ಲಿ ಕಂಡುಬರುವ ಈ ಬ್ರಾಹ್ಮಣಾದಿ ಶಬ್ದಗಳು ಆಯಾ ಜಾತಿವಾಚಕಗಳಿರುವುವೆಂದು ಅರ್ಥ ಮಾಡಿ ತೋರಿಸಲಿಕ್ಕೆ ಬರುವಂತಿಲ್ಲ ವಾದುದರಿಂದಲೂ ಇವೆಲ್ಲಾ ಸಾಮಾನ್ಯ ಅರ್ಥಬೋಧಕಗಳಿದ್ದು, ಇವು ವರ್ಣ ಧರ್ಮ ಕರ್ಮದ ಅರ್ಥದಂತೆ ವಿಶಿಷ್ಟ ವರ್ಗವಾಚಕಗಳೆಂದು ಯಾವ ವೇದಾರ್ಥಜ್ಞನೂ ಹೇಳಲು ಸಾಧ್ಯವಿಲ್ಲ. ಮೇಲೆ ತೋರಿದ ಆರ್ಯ ದಸ್ಯು ಭೇದವಾದವು ಕೇವಲ ಋಗ್ವೇದ, ಯಜುರ್ವೇದ ಕಾಲಕ್ಕಷ್ಟೇ ಪ್ರಚಾರದಲ್ಲಿದ್ದು, ಮುಂದೆ ಉಪನಿಷತ್ ಕಾಲದಲ್ಲಿ ಆರ್ಯ ದಸ್ಯು ವಾದವೂ ಸಹ ನಿರ್ಮೂಲವಾದಂತೆ ಕಂಡುಬರುವುದು. ಈ ಆರ್ಯ ದಸ್ಯು ವಾದವನ್ನು ನಿರ್ಮೂಲಮಾಡಬೇಕೆಂಬ ವಿಚಾರವು ಅಥರ್ವಣವೇದಕಾಲಕ್ಕೇನೇ ಅಂಕುರಿಸಿರಬಹುದೆಂದು ಅನುಮಾನಿಸಲು ಮಾರ್ಗ ವಿರುವುದು. ಹೇಗೆಂದರೆ—ಅಥರ್ವಣವೇದದ

"ನವೋವಾಸೋವಾರ್ಯೋ ಮಹಿತ್ವಾವ್ರತಂ |
ಮಿಮಾಯ ಯದಹಂಧರಿಷ್ಯೇ ॥" ಅಥರ್ವಣ, ೫-೩-೧೧

ಇತ್ಯಾದಿ ಮಂತ್ರಗಳಲ್ಲಿ ಯಾವ ಆರ್ಯತ್ವ ದಸ್ಯುತ್ವಾದಿ ಭೇದವೂ ನನಗಿಲ್ಲೆಂತಲೂ, ನಾನುಬಯಸಿರುವ ವೇದ ಕರ್ಮವನ್ನು ಆಚರಿಸಲು ಯಾರಿಗೂ ಪ್ರತಿಬಂಧವಿಲ್ಲವೆಂತಲೂ ತೋರಿಸಲ್ಪಟ್ಟಿರುವುದು. ಮುಂದೆ ಉಪನಿಷತ್ತುಗಳಂತೂ ಈ ಭೇದವಾದವನ್ನು ಬುಡಸಹಿತ ಕಿತ್ತು ಹಾಕಿರುವವು. ಹೇಗೆಂದರೆ—"ಗತಾಃಕಲಾಃ ಪಂಚದಶ ಪ್ರತಿಷ್ಠಾ ದೇವಾಶ್ಚ ಸರ್ವೇ ಪ್ರತಿದೇವತಾಸು | ಕರ್ಮಾಣಿವಿಜ್ಞಾನಮಯಶ್ಚ ಆತ್ಮಾಪರೇ ವ್ಯಯೇ ಸರ್ವ ಏಕೀಭವಂತಿ ॥"ಮುಂಡಕೋಪನಿಷತ್, ತೃತೀಯಮುಂಡ" ೩-೭

ಸಯೋಹವೈತತ್ಪರಮಂ ಬ್ರಹ್ಮವೇದ ಬ್ರಹ್ಮೈವಭವತಿ ||
"ಮುಂಡಕೋಪನಿಷತ್. ಖಂಡ; ೩-೯

ವಾಯುರ್ಯಥೈಕೋಭುವನಂ ಪ್ರವಿಷ್ಟೋ ರೂಪಂರೂಪಂ ಪ್ರತಿರೂಪೋಬಭೂವ | ಏಕಸ್ತಥಾ ಸರ್ವ ಭೂತಾಂತರಾತ್ಮಾರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥ (ಕಾಠಕೋಪನಿಷತ್-ಪಂಚಮವಲ್ಲೀ-೧೦)

ಏಕೋವಶೀಸರ್ವಭೂತಾಂತರಾತ್ಮಾಏಕಂರೂಪಂ ಬಹುಧಾ ಯಃ ಕರೋತಿ ॥ (ಕಠ ಪಂಚಮವಲ್ಲೀ)

ಭೂತೇಷು ಭೂತೇಷು ವಿಚಿತ್ಯಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ (ಕೇನೋಪನಿಷತ್- ಖಂಡ ೨-೧೩)

ಈ ಮೇಲಿನ ಉಪನಿಷತ್ ವಾಕ್ಯಗಳಿಂದ ಉಪನಿಷದ್ ಕಾಲಗಳಲ್ಲಿ ಆರ್ಯ ದಸ್ಯು ವೆಂಬ ಭೇದಭಾವವೂ ಸಹ ನಿರ್ಮೂಲವಾಗಿ "ಸಹನಾವವತು ಸಹನೌಭುನಕ್ತು ಸಹವೀರ್ಯಂ ಕರವಾವಹೈ॥ ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ" ಎಂಬ ಸರ್ವಾತ್ಮಭಾವವು ಸರ್ವತ್ರ ಭಾರತದಲ್ಲಿ ಪ್ರಸರಿಸಲ್ಪಟ್ಟು "ಸಮಾನೋ ಮಂತ್ರಃ ಸಮಿತಿಃ ಸಮಾನೀಸಮಾನಂ ಮನಃ ಸಹಚಿತ್ತಮೇಷಾಂ" ಋಗ್ವೇದ

"ಯೇಸಮಾನಾಃ ಸಮನಸೋಜೀವಾಜೀವೇಷು ಮಾಮಕಾಃ|ತೇಷಾಂ ಶ್ರೀರ್ಮಯಿಕಲ್ಪತಾ ಮಸ್ಮಿನ್‍ಲೋಕೇ ಶತಂಸಮಾಃ॥ (ಯಜುರ್ವೇದ ಅಧ್ಯಾ, ೧೯-೪೬)

ಇತ್ಯಾದಿ ಋಗ್ವೇದ ಯಜುರ್ವೇದ ಮಂತ್ರಗಳ ಸಮಭಾವನೆಯು ಸರ್ವತ್ರ ಆರ್ಯಾವರ್ತದಲ್ಲಿ ಪ್ರಚಲಿತವಾಗಿ ಭರತಖಂಡವು ಕೆಲವು ಕಾಲ ಸ್ವತಂತ್ರ ಸುಖಸಾಮ್ರಾಜ್ಯವನ್ನು ಅನುಭವಿಸುತ್ತಿರಲು, ಕಾಲಗತಿಗನುಸಾರವಾಗಿ ಚಕ್ರನೇಮಿಕ್ರಮದಂತೆ ವಿಕರೀಯಾದಿ ಬ್ರಾಹ್ಮಣ ಗ್ರಂಥಗಳ ಲಕ್ಕೆ ಪುನಃ ಭರತಖಂಡವು ಜಾತಿವಾದದಿಂದ ತುಂಬಾ ವ್ಯಾಪಿಸಿಕೊಂಡಿತು.

ಆದರೆ ಒಂದುವೇಳೆ ವೇದಗಳಲ್ಲಿ ಬ್ರಾಹ್ಮಣಾದಿಶಬ್ದಗಳು ಕಂಡುಬಂದಾಗ್ಯೂ ಅವು ಜಾತಿವಾಚಕಗಳೆಂದು ಅರ್ಥಮಾಡಲು ಯಾರಿಗೂ ಬರುವಂತಿಲ್ಲ. ಏಕೆಂದರೆ-ಅವುಗಳಿಗೆ ವಿಶೇಷಣ ವಿಶೇಷ್ಯಭಾವದಿಂದ ಎಲ್ಲಿಯೂ ವರ್ಣಶಬ್ದವೂ ಹಾಗೂ ಜಾತಿಶಬ್ದವೂ ಉಪಯೋಗಿಸಲ್ಪಟ್ಟಿಲ್ಲ. ಅರ್ಥಾತ್ ಸಮಸ್ತವೇದಗಳಲ್ಲಿ ಎಲ್ಲಿ ಹುಡುಕಿದರೂ ಬ್ರಾಹ್ಮಣಜಾತಿ, ಬ್ರಾಹ್ಮಣವರ್ಣವೆಂಬ ಶಬ್ದಗಳು ಎಂದೂ ಸಿಕ್ಕಲಾರವು. ಇನ್ನು ಬ್ರಾಹ್ಮಣಾದಿಶಬ್ದಗಳು ಅವರವರ ಕೃತಿಯನ್ನನುಸರಿಸಿ ಆಯಾ ಯೋಗ್ಯತೆಯವರಿಗೆ ಸಮುಪಾಚಕಗಳಾಗಿದ್ದವೆಂದು ಹೇಳಬಹುದು. ಹೇಗೆಂದರೆ-ಯಜುರ್ವೇದದಲ್ಲಿ

"ಬ್ರಹ್ಮಣೇ ಬ್ರಾಹ್ಮಣಂ ಕ್ಷತ್ರಾಯರಾಜನ್ಯಂ ಮರುದ್ಭ್ಯೋವೈಶ್ಯಂ ತಪಸೇಶೂದ್ರಂ ||
ಯಜುರ್ವೇದ, ಅಧ್ಯಾ, ೩೦ ಮಂತ್ರ ೫;

ಈ ರೀತಿ ವೇದಮಂತ್ರಗಳಲ್ಲಿರುವ ಬ್ರಾಹ್ಮಣ ಕ್ಷತ್ರಿಯಾದಿ ಶಬ್ದಗಳನ್ನು ಯಾವ ಪಂಡಿತನು ತಾನೇ ಜಾತಿ ವಾಚಕಗಳೆಂದು ಸಿದ್ಧ ಮಾಡುವನು? ಇನ್ನು ಈ ಶಬ್ದಗಳು ಬ್ರಾಹ್ಮಣಾದಿ ಗ್ರಂಥಗಳಲ್ಲಿ ಮಾತ್ರ ವರ್ಣವಾಚಕಗಳೆಂದು ವಿಶೇಷಣ ವಿಶೇಷ್ಯಭಾವವನ್ನಿಟ್ಟು ತೋರಿಸಲ್ಪಟ್ಟಿರುವವು. ಹೇಗೆಂದರೆ—"ಬ್ರಹ್ಮ ಪುರಸ್ತಾ ನಾಲ್ಗ್ರಂಥಾಂಶಸ್ತ್ರ[illegible]

ಶೌದ್ರೋವರ್ಣಃ ಏಕವಿಂಶೋವಿಶಂಚಾಸ್ಕೃತಚ್ಛೌದ್ರಂ ವರ್ಣಮನುವರ್ತ್ಯ ನೌಕುವರ್ಣಂಕ್ಯಥೇಃ ||" (ಐತರೇಯ ಬ್ರಾಹ್ಮಣ, ಅ-೩೬ ಖಂಡ ೪)

ಈ ರೀತಿ ಬ್ರಾಹ್ಮಣಾದಿ ಶಬ್ದಗಳಿಗೆ ವರ್ಣವಾಚಕತ್ವವನ್ನು ತೋರಿಸಿ ಈ ವರ್ಣಗಳು ಜನ್ಮಸಿದ್ಧವಲ್ಲವೆಂಬುದನ್ನು ಮುಂದೆ ಇದೇ ಬ್ರಾಹ್ಮಣ ಗ್ರಂಥಗಳಲ್ಲಿ ತೋರಿಸಿರುವುದು ಹೇಗೆಂದರೆ—

" ತ್ರಿವೃತ್‌ಸ್ತೋಮೇನಬ್ರಾಹ್ಮಣೋಬಂಧುನಾಸಹೋದವಸ ಸ್ನೇವ ಕ್ಷತ್ರಿಯತಾಮಭ್ಯುಸ್ಮೈತಿ | ಸತ್ಯಹೋದವನಸ್ಯತೋಗ್ನಿರೇವತೇಜ ಆದತ್ತೆ ಗಾಯತ್ರೀವೀರ್ಯಂತ್ರಿವೃತ್‌ಸ್ತೋಮ ಆಯುಬ್ರಾಹ್ಮಣಾಬ್ರಹ್ಮಯಶಸ್ಸೀ ರ್ತಾಮನ್ಯೋವಾ ಆಯಮಸ್ಮತ್ಪವತಿ ಕ್ಷತ್ರಂವಾಆಯಂಭವತಿ ಕ್ಷತ್ರಂವಾ ಆಯಮುಪಾವರ್ತತ " (ಐತರೇಯ ಬ್ರಾಹ್ಮಣ, ಅ-೩೪ ಖಂಡ೬)

ಈ ಮಂತ್ರದಲ್ಲಿ ಸಾಯಣಾಚಾರ್ಯರು ಜಾತಿಪರಿವರ್ತನಪರವಾದ ರ್ಥವನ್ನೇ ಬರೆದಿರುವರು. ಹೇಗೆಂದರೆ —" ಅಯಂ ಯಜಮಾನಃ ಪುರಾ ಕ್ಷತ್ರಿಯೋಪೀದಾನೀಂ ದೀಕ್ಷಿತಸ್ಸನ್‌ಬ್ರಾಹ್ಮಣ್ಯಂ ಪ್ರಾಪ್ಯದೇವತಯಾ ಅಗ್ನಿಸಂಬಂಧೋಭವತಿ " ||................" ತಾದೃಶಇದಾನೀಂಬ್ರಾಹ್ಮಣ ಸ್ಸನ್ನುದವಸ್ಯನ್ನೇವೋದವಸಾನಿಯೇಷ್ಟ್ಯಾ ಸೋಮಯಾಗಂ ಸಮಾಪಯನ್ನೇವ ಬ್ರಾಹ್ಮಣ್ಯಂ ಪರಿತ್ಯಜ್ಯಕ್ಷತ್ರಿಯತ್ವಂ ಪ್ರಾಪ್ನೋತಿ || "

ತತ್ಪರ್ಯಾನುಸಾರವಾಗಿ ಕ್ಷತ್ರಿಯನು ಬ್ರಾಹ್ಮಣನಾಗುವನೆಂತಲೂ, ಬ್ರಾಹ್ಮಣನು ಕ್ಷತ್ರಿಯನಾಗುವನೆಂತಲೂ ಮಂತ್ರ ಹಾಗು ಭಾಷ್ಯಗಳಿಂದ ಸ್ಪಷ್ಟವಾಗಿ ಕಂಡುಬರುವುದು. ಈ ರೀತಿಯಾಗಿ ಬ್ರಾಹ್ಮಣ ಗ್ರಂಥಗಳ ಕಾಲದಲ್ಲಿ ಬ್ರಾಹ್ಮಣಾದಿ ಶಬ್ದಗಳು ಜಾತಿವಾಚಕಗಳೆಂತಲೂ ಹಾಗೂ ಈ ಜಾತಿತ್ವವು ಜನ್ಮಸಿದ್ಧವಿರದೆ ಪರಿವರ್ತನವುಳ್ಳದ್ದೆಂತಲೂ ಪರಸ್ಪರಭಯಂಕರ ವಾಗಿ ಕೋಲಾಹಲಕ್ಕೆ ಆಸ್ಪದವಾದ ಸಮಯವಾಗಿತ್ತು. ಇದೇ ಸಮಯವೇ ಭರತಭೂಮಿಗೆ ಮುಂದೆ ಬರುವ ದುರ್ದಶೆಯ ದುಶ್ಚಿಹ್ನವು. ಈ ಬ್ರಾಹ್ಮಣ ಗ್ರಂಥಗಳು ಪೂರ್ವಕಾಲದಲ್ಲಿ ೩೪೦ ಇದ್ದವೆಂದು ಬಂಗಾಲದ " ರಮೇಶ ಚಂದ್ರಬೋಸ " ಎಂಬುವರ ವಾದವಿರುವುದು. ಸದ್ಯಕ್ಕೆ ಇವೆಲ್ಲಾ ಗ್ರಂಥ ಗಳು ಹಾಳಾಗಿಹೋಗಿ ೭-೮ ಮಾತ್ರ ಉಳಿದಿರುವವು. ಅಂತೂ ಈ ಗ್ರಂಥ ಗಳು ಅತಿಪ್ರಾಚೀನ ಋಷಿಕಾಲದ ಇತಿಹಾಸಗಳೆನ್ನಲಿಕ್ಕೆ ಅಡ್ಡಿಯಿಲ್ಲ. ಇನ್ನು ಇಲ್ಲಿಂದ ಭರತಭೂಮಿಯಲ್ಲಿ ಜಾತಿವಾದಕ್ಕೆ ಆರಂಭವಾಗಿ ಮುಂದೆ ಹಾಗೆಯೇ ಅದೇ ಬ್ರಾಹ್ಮಣ ಕ್ಷತ್ರಿಯಾದಿಗಳಲ್ಲಿ ಒಂದೊಂದು ಬ್ರಾಹ್ಮಣ ಮೊದಲಾದವರ ಗುಂಪು ಒಂದೊಂದು ಜಾತಿಯೆನಿಸಿ ಅದೇ ನೂರಾರು ಒಳಜಾತಿ (ಪಂಗಡ) ಗಳಾದವು. ಹೇಗೆಂದರೆ— ಬ್ರಾಹ್ಮಣವರ್ಣದವರಲ್ಲಿ ಶೈವ, ಶಾಕ್ತ, ವೈಷ್ಣವ, ಕಾಪಾಲಿಕ, ಮೊದಲಾದ ಭೇದನಾಮಗಳು, ಕ್ಷತ್ರಿಯರಲ್ಲಿ ರಾಜಪೂತ, ಜಾಠ, ಸಂಗಡ, ರಾಠೋಡ, ಮರಾಠಾ, ಪ್ರಭು, ಕಾಯಸ್ಥ ಮೊದಲಾದ ಭೇದದ ಹೆಸರುಗಳು ಇದರಂತೆ ವೈಶ್ಯ ಶೂದ್ರಾದಿಗಳಲ್ಲಿಯೂ ಅನೇಕ ಪಂಗಡಗಳಾಗಿ ಪರಸ್ಪರ ವೈಮನಸ್ಯಕ್ಕೆ ಕಾರಣಗಳಾಗಿರುವವು. ಇನ್ನು ಇದೇ ಭರತಭೂಮಿಯಲ್ಲಿ ಜನ್ಮವಂ ತಾಳಿ ಮೊದಲು ವೇದಮಾರ್ಗಾನುವರ್ತಿಗಳಾಗಿದ್ದು ಅನಂತರ ಕೆಲವು ಆಂತರಿಕ ಭಿನ್ನವಿಚಾರಗಳಿಂದ ಕೂಡಿದ ಜೈನ ಬೌದ್ಧಾದಿಗಳೆಂಬುವರೊಡನೆ ಸ್ವಾರ್ಥವನ್ನೇಸಾಧಿಸಿ ಶ್ರೇಷ್ಠತ್ವವಿಚಾರದಿಂದ ಕೂಡಿದ ಬ್ರಾಹ್ಮಣನೆಂಬ ಹೆಸರುಳ್ಳ ಪಂಗಡದವರು ಸಹಾನುಭೂತಿ ತೋರಿಸದೆ ಇದ್ದುದರಿಂದಲೂ, ಆ ಜೈನ ಬೌದ್ಧಾದಿಗಳು ನಾವು ನಿಮ್ಮ ಅಭಿಪ್ರಾಯದಂತಿರುವ ನಿಮ್ಮ ವೇದಮಂತ್ರವನ್ನು ಅನುಸರಿಸಲಾರೆವೆಂದು ಹೇಳಿ ಬಹುಕಾಲ ವಾದವನ್ನು ಮಾಡಿ ಈ ಬ್ರಾಹ್ಮಣಾದಿಗಳಿಂದ ತಾವು ಭಿನ್ನರೆಂದೆನಿಸಿಕೊಂಡಿರುವರು. ಇಷ್ಟೇ ಅಲ್ಲದೆ ಈ ಜಾತಿವಾದದಿಂದ ಭಯಂಕರ ಯುದ್ಧಗಳು ಸಹ ಜರುಗಿ ಹೋಗುತ್ತಿದ್ದವೆಂದು ಕಂಡುಬರುತ್ತದೆ. ಇಷ್ಟೆಲ್ಲಾ ಅನರ್ಥಕ್ಕೆ ಕಾರಣ ವೇನೆಂದರೆ; ಬ್ರಾಹ್ಮಣರೆಂಬುವವರು ನಾವು ಜನ್ಮಾರಭ್ಯ ಶ್ರೇಷ್ಠ ಜಾತಿಯವರು; ಇತರರು ನಮಗಧೀನರು; ಎಂಬ ಅವರ ಸ್ವಾರ್ಥದುರ್ವಾದವೇ ಇದಕ್ಕೆ ಮೂಲಕಾರಣವು. ಆಗಿನ ಕಾಲದ ಬ್ರಾಹ್ಮಣರಲ್ಲಿ ಸರ್ವರೂ ಸಮಾನರೆಂಬ ಉದಾತ್ತ ಬುದ್ಧಿಯು ಉಳಿದಿದ್ದರೆ ಈ ಭಾರತಭೂಮಿಯು ಈಗಳೂ ಅನುಭವಿಸುತ್ತಿರುವಂಥ ದುರ್ದಶೆಯನ್ನೆಂದೂ ಅನುಭವಿಸುತ್ತಿರಲಿಲ್ಲ. ಈ ರೀತಿಯಾದ ಜಾತಿವಾದದಿಂದ ಪರಸ್ಪರರಲ್ಲಿ ದ್ವೇಷವು ಬೆಳೆದು ಎಷ್ಟೋ ಅವರೌಲ್ಯ ಋಷಿ ಗ್ರಂಥಗಳು ಆಗಿನ ಕಾಲಕ್ಕೇನೇ ಅಗ್ನಿಯಪಾಲಾಗಿ ಹೋದವು.

ಕರ್ನಾಟಕದ ಸುದ್ದಿ.

ಸಚ್ಛಿಕ್ಷಕವೆಂಬ ಮಾಸಪತ್ರಿಕೆಯು ಇದೇ ಶ್ರಾವಣದಿಂದ ಗದಗಿನಲ್ಲಿ ಹೊರಡುತ್ತದೆ. ಇದರ 20 ಪುಟಗಳಲ್ಲಿ ನಿಬಂಧ, ಕಥೆ, ಕಾದಂಬರಿ ಮೊದಲಾದ ಸಾಮಾಜಿಕ, ಧಾರ್ಮಿಕ, ನೈತಿಕ ವಿಷಯಗಳನ್ನೂ, 20 ಪುಟಗಳಲ್ಲಿ ಗೃಹವೈದ್ಯಕವನ್ನೂ, ಶಿಕ್ಷಣರೂಪದಿಂದ ಬರೆಯುತ್ತಾ ಹೋಗುವವು. [illegible] ವರ್ಷಕ್ಕೆ ವರ್ಗಣಿ 3 ರೂ. ಪೋ|| 3 ಆಣೆ, ನಾಲ್ಕು ಹೆಚ್ಚಿಗೆ ಹೇಳಲಾಗಿದೆ. ಒಂದು ಸಂಚಿಕೆಯನ್ನು ಹಣ ಸಿಗದೆ ಮನೆಗಳಿಗೆ, ಅಥವಾ ಮನಸ್ಸಿಗೆ ಬಾರದಿದ್ದರೆ, ಪರತ ಕಳಿಸಿ, ಹಣ ಕಳಿಸುವದೆ. ತಿದ್ದ ನಿಮ್ಮ ಹೆಸರು, ಪೋಸ್ಟ್ ಆಫೀಸು ತಿಳಿಸಿ. ವಿ. ಪಿ. ಯಿಂದ ತರಿಸಿಕೊಳ್ಳಿರಿ.

ಪತ್ರ—ಯಾ. ಬಸವಲಿಂಗಸ್ವಾಮಿ, ಸಂಪಾದಕರು,
4 ವೆಂಕಟೇಶ ಮುದ್ರಣಾಲಯ, ಪೋ|| ಗದಗ, ಜಿ. ಧಾರವಾಡ.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ ೫ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಕ್ರಯ ರೂ. 8-8-0 ಸೀಮೆ ಪಟ್ಟಿ ಸಹಿತ ರೂ. 6-8-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಲೋಕಪ್ರಸಿದ್ಧವಾದ ವಜ್ರಾಂಗಲೇಹ

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೀ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟುಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು 15 ದಿನಗಳು ಸೇವಿಸುವದರಿಂದ ಪೂರಾ ಗುಣಕೊಡುವುದು. 3 ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರೆವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2-0-0.

ಒಂದೇ ಆವರ್ತಿ 3 ಡಬ್ಬಿಗಳನ್ನು ತರಿಸಿದರೆ ಟಪಾಲು ಖರ್ಚು ಮಾಫಿ.

ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕೋ
6 ಸಾಹುಕಾರಪೇಟೆ, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವಕೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧಮಾಡುವಕ್ರಮವನ್ನು ಚೆನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗ್ಯೆರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ, ಅಕ್ಷರ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
30 ಬಳ್ಳಾರಿ.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.



ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ, ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ ? ಒಂದನ್ನು ತರಿಸಿನೋಡಿರಿ, ತಿಳಿಯುವುದು.
ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿಸಹಿತ ರೂ. 4-8-0.
ವಿಳಾಸ:— ಮ್ಯಾನೇಜರ್
ಸ್ಟಾರ್ ಹೌಸ್, ಪೋಸ್ಟ್‌ಬಾಕ್ಸ್ ನಂ. 508.
6 ಪಾರ್ಕ್‌ಟೌನ್, ಮದರಾಸು.

ಶ್ರೀರಾಮಬಾಣಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
33 ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೪—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦—೬—೦
ವ್ರತಪಂಚಕ	೦—೯—೦

೧೯೨೨ನೆಯ ಇಸವಿ ಸೆಪ್ಟೆಂಬರ್ ತಾ|| ೩ ರಿಂದ ೧೯೨೨ನೆಯ ಸೆಪ್ಟೆಂಬರ್ ತಾ|| ೯ ರ ವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೪ ನೆಯ ದುಂದುಭಿನಾಮಸಂವತ್ಸರದ ಭಾದ್ರಪದ ಶುದ್ಧ ದ್ವಾದಶಿಯಿಂದ ಭಾದ್ರಪದ ಬಹುಳ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
3	[1] ಭಾನು	ದ್ವಾದ	3-53	ಉಷಾ	0-48	18
4	[2] ಸೋಮ	ತ್ರಯೋ	6-5	ಶ್ರವ	4-31	19
5	[3] ಮಂಗಳ	ಚತು	9-26	ಧನಿ	9-19	20
6	[4] ಬುಧ	ಪೌರ್ಣ	13-42	ಶತ	15-5	21
7	ಗುರು	ಪಾಡ್ಯ	8-40	ಪೂಭಾ	21-24	22
8	ಶುಕ್ರ	ಬಿದಿ	23-50	ಉಭಾ	27-58	23
9	ಶನಿ	ತದಿ	28-51	ರೇವ	34-25	24

(1) ಮೊಹರಂ ಕೊನೆದಿನ. (2) ಸೌರವೀತ್ಯಾ ಋಗುಪಾಕರ್ಮ (3) ಅನಂತಪದ್ಮನಾಭವ್ರತಂ, ಉಮಾಮಹೇಶ್ವರವ್ರತಂ. (4) ಅಪರಪಕ್ಷಾರಂಭಃ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಸೆಪ್ಟೆಂಬರ್ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೩೭

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

[illegible] ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಕೂಡ್ಲಿಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಆ|| ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಲೋಕಪ್ರಸಿದ್ಧವಾದ ವಜ್ರಾಂಗಲೇಹ

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೀ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟುಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು 15 ದಿನಗಳು ಸೇವಿಸುವದರಿಂದ ಪೂರಾ ಗುಣಕೊಡುವುದು. 3 ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರೆವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2-0-0.

ಒಂದೇ ಆವರ್ತಿ 3 ಡಬ್ಬಿಗಳನ್ನು ತರಿಸಿದರೆ ಟಪಾಲು ಖರ್ಚು ಮಾಫಿ.

ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕೋ
7 ಸಾಹುಕಾರಪೇಟೆ, ಮದರಾಸ್.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.



ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ, ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ ? ಒಂದನ್ನು ತರಿಸಿನೋಡಿರಿ, ತಿಳಿಯುವುದು.
ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿಸಹಿತ ರೂ. 4-8-0.
ವಿಳಾಸ:— ಮ್ಯಾನೇಜರ್
ಸ್ಟಾರ್ ಹೌಸ್, ಪೋಸ್ಟ್‌ಬಾಕ್ಸ್ ನಂ. 508.
7 ಪಾರ್ಕ್‌ಟೌನ್, ಮದರಾಸು.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ ೫ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಕ್ರಯ ರೂ. 8-8-0 ಸೀಮೆ ಪಟ್ಟಿ ಸಹಿತ ರೂ. 6-8-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಶ್ರೀರಾಮಬಾಣಂ

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯನ್‌ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
34 ಮೈಸೂರು.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.

ಇಮಿಟೇಷನ್ ವಜ್ರದ ಬೆಂಡೋಲೆ. 25

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.

7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,
ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೪—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦—೬—೦
ವ್ರತಪಂಚಕ	೦—೯—೦

ಶೌದ್ರೋವರ್ಣಃ ಏಕವಿಂಶೋವಿಶಂಚಾಸ್ಮಾತಚ್ಛೌದ್ರಂ ವರ್ಣಮನುವರ್ತ್ಯಾ ನೌಕವರ್ಣಂತ್ಯಥೋ ||" (ಐತರೇಯ ಬ್ರಾಹ್ಮಣ, ೮-೩. ಖಂಡ ೪)

ಈ ರೀತಿ ಬ್ರಾಹ್ಮಣಾದಿ ಶಬ್ದಗಳಿಗೆ ವರ್ಣವಾಚಕತ್ವವನ್ನು ತೋರಿಸಿ ಈ ವರ್ಣಗಳು ಜನ್ಮಸಿದ್ಧವಲ್ಲವೆಂಬುದನ್ನು ಮುಂದೆ ಇದೇ ಬ್ರಾಹ್ಮಣ ಗ್ರಂಥಗಳಲ್ಲಿ ತೋರಿಸಿರುವುದು ಹೇಗೆಂದರೆ—

" ತ್ರಿವೃತ್‌ಸ್ತೋಮೇನಬ್ರಾಹ್ಮಣೋಬಂಧುನಾಸಹೋದನಸ್ನೇವ ಕ್ಷತ್ರಿಯತಾಮಭ್ಯುಪೈತಿ | ಸತ್ಯಹೋದನಸ್ಯತೋಗ್ನಿರೇವತೇಜ ಆದತ್ತೆ ಗಾಯತ್ರೀವೀರ್ಯಂತ್ರಿವೃತ್‌ಸ್ತೋಮ ಆಯುಬ್ರಾಹ್ಮಣಾಬ್ರಹ್ಮಯಶಸ್ಮೀ ತೀಮನ್ಯೋವಾ ಆಯಮುಷ್ಮಧ್ಯವತಿ ಕ್ಷತ್ರಂವಾಆಯಾಭವತಿ ಕ್ಷತ್ರಂವಾ ಅಯಮುಪಾವರ್ತತ " (ಐತರೇಯ ಬ್ರಾಹ್ಮಣ, ೮-೩೪ ಖಂಡ೬)

ಈ ಮಂತ್ರದಲ್ಲಿ ಸಾಯನಾಚಾರ್ಯರು ಜಾತಿಪರಿವರ್ತನಪರವಾದ ಅರ್ಥವನ್ನೇ ಬರೆದಿರುವರು. ಹೇಗೆಂದರೆ — " ಅಯಂ ಯಜಮಾನಃ ಪುರಾ ಕ್ಷತ್ರಿಯೋಪೀದಾನೀಂ ದೀಕ್ಷಿತಸ್ಸನ್‌ಬ್ರಾಹ್ಮಣ್ಯಂ ಪ್ರಾಪ್ಯದೇವತಯಾ ಅಗ್ನಿಸಂಬಂಧೋಭವತಿ " ||............." ತಾದೃಶಇದಾನೀಂಬ್ರಾಹ್ಮಣಸ್ಸನ್ನುದವಸ್ಯನ್ನೇವೋದವಸಾನಿಯೇಷ್ಟ್ಯಾಸೋಮಯಾಗಂ ಸಮಾಪಯನ್ನೇವ ಬ್ರಾಹ್ಮಣ್ಯಂ ಪರಿತ್ಯಜ್ಯಕ್ಷತ್ರಿಯತ್ವಂ ಪ್ರಾಪ್ನೋತಿ || "

ತತ್ಕರ್ಮಾನುಸಾರವಾಗಿ ಕ್ಷತ್ರಿಯನು ಬ್ರಾಹ್ಮಣನಾಗುವನೆಂತಲೂ, ಬ್ರಾಹ್ಮಣನು ಕ್ಷತ್ರಿಯನಾಗುವನೆಂತಲೂ ಮಂತ್ರ ಹಾಗು ಭಾಷ್ಯಗಳಿಂದ ಸ್ಪಷ್ಟವಾಗಿ ಕಂಡುಬರುವುದು. ಈ ರೀತಿಯಾಗಿ ಬ್ರಾಹ್ಮಣ ಗ್ರಂಥಗಳ ಕಾಲದಲ್ಲಿ ಬ್ರಾಹ್ಮಣಾದಿ ಶಬ್ದಗಳು ಜಾತಿವಾಚಕಗಳೆಂತಲೂ ಹಾಗೂ ಈ ಜಾತಿತ್ವವು ಜನ್ಮಸಿದ್ಧವಿರದೆ ಪರಿವರ್ತನವುಳ್ಳದ್ದೆಂತಲೂ ಪರಸ್ಪರಭಯಂಕರವಾಗಿ ಕೋಲಾಹಲಕ್ಕೆ ಆಸ್ಪದವಾದ ಸಮಯವಾಗಿತ್ತು. ಆದೇ ಸಮಯವೇ ಭರತಭೂಮಿಗೆ ಮುಂದೆ ಬರುವ ದುರ್ದಶೆಯ ಮುಕ್ತಿಸ್ಥಾನವು. ಈ ಬ್ರಾಹ್ಮಣ ಗ್ರಂಥಗಳು ಪೂರ್ವಕಾಲದಲ್ಲಿ ೩೪೦ ಇದ್ದವೆಂದು ಬಂಗಾಲದ " ರಮೇಶ ಚಂದ್ರಬೋಸ " ಎಂಬುವರ ವಾದವಿರುವುದು. ಸದ್ಯಕ್ಕೆ ಇವೆಲ್ಲಾ ಗ್ರಂಥಗಳು ಹಾಳಾಗಿಹೋಗಿ ೭-೮ ಮಾತ್ರ ಉಳಿದಿರುವವು. ಅಂತೂ ಈ ಗ್ರಂಥಗಳು ಅತಿಪ್ರಾಚೀನ ಋಷಿಕಾಲದ ಇತಿಹಾಸಗಳೆನ್ನಲಿಕ್ಕೆ ಅಡ್ಡಿಯಿಲ್ಲ. ಇನ್ನು ಇಲ್ಲಿಂದ ಭರತಭೂಮಿಯಲ್ಲಿ ಜಾತಿವಾದಕ್ಕೆ ಆರಂಭವಾಗಿ ಮುಂದೆ ಹಾಗೆಯೇ ಅದೇ ಬ್ರಾಹ್ಮಣ ಕ್ಷತ್ರಿಯಾದಿಗಳಲ್ಲಿ ಒಂದೊಂದು ಬ್ರಾಹ್ಮಣ ಮೊದಲಾದವರ ಗುಂಪು ಒಂದೊಂದು ಜಾತಿಯೆನಿಸಿ ಅದೇ ನೂರಾರು ಒಳಜಾತಿ (ಪಂಗಡ) ಗಳಾದವು. ಹೇಗೆಂದರೆ— ಬ್ರಾಹ್ಮಣವರ್ಣದವರಲ್ಲಿ ಶೈವ, ಶಾಕ್ತ, ವೈಷ್ಣವ, ಕಾಪಾಲಿಕ, ಮೊದಲಾದ ಭೇದನಾಮಗಳು, ಕ್ಷತ್ರಿಯರಲ್ಲಿ ರಾಜಪೂತ, ಜಾಠ, ಸಂಗಡ, ರಾಠೋರ, ಮರಾಠಾ, ಪೃಥು, ಕಾಯಸ್ಥ ಮೊದಲಾದ ಭೇದದ ಹೆಸರುಗಳು ಇದರಂತೆ ವೈಶ್ಯ ಶೂದ್ರಾದಿಗಳಲ್ಲಿಯೂ ಅನೇಕ ಪಂಗಡಗಳಾಗಿ ಪರಸ್ಪರ ವೈಮನಸ್ಯಕ್ಕೆ ಕಾರಣಗಳಾಗಿರುವವು. ಇನ್ನು ಇದೇ ಭರತಭೂಮಿಯಲ್ಲಿ ಜನ್ಮವಂ ತಾಳಿ ಮೊದಲು ವೇದಮಾರ್ಗಾನುವರ್ತಿಗಳಾಗಿದ್ದು ಅನಂತರ ಕೆಲವು ಆಂತರಿಕ ಭಿನ್ನವಿಚಾರಗಳಿಂದ ಕೂಡಿದ ಜೈನ ಬೌದ್ಧಾದಿಗಳೆಂಬುವರೊಡನೆ ಸ್ವಾರ್ಥವನ್ನೇಸಾಧಿಸಿ ಶ್ರೇಷ್ಠತ್ವವಿಚಾರದಿಂದ ಕೂಡಿದ ಬ್ರಾಹ್ಮಣನೆಂಬ ಹೆಸರುಳ್ಳ ಪಂಗಡದವರು ಸಹಾನುಭೂತಿ ತೋರಿಸದೆ ಇದ್ದುದರಿಂದಲೂ, ಆ ಜೈನ ಬೌದ್ಧಾದಿಗಳು ನಾವು ನಿಮ್ಮ ಅಭಿಪ್ರಾಯದಂತಿರುವ ನಿಮ್ಮ ವೇದಮಂತ್ರವನ್ನು ಅನುಸರಿಸಲಾರೆವೆಂದು ಹೇಳಿ ಬಹುಕಾಲ ವಾದವನ್ನು ಮಾಡಿ ಈ ಬ್ರಾಹ್ಮಣಾದಿಗಳಿಂದ ತಾವು ಭಿನ್ನರೆಂದೆನಿಸಿಕೊಂಡಿರುವರು. ಇಷ್ಟೇ ಅಲ್ಲದೆ ಈ ಜಾತಿವಾದದಿಂದ ಭಯಂಕರ ಯುದ್ಧಗಳು ಸಹ ಜರುಗಿ ಹೋಗುತ್ತಿದ್ದವೆಂದು ಕಂಡುಬರುತ್ತದೆ. ಇಷ್ಟೆಲ್ಲಾ ಅನರ್ಥಕ್ಕೆ ಕಾರಣ ವೇನೆಂದರೆ; ಬ್ರಾಹ್ಮಣರೆಂಬುವವರು ನಾವು ಜನ್ಮಾರಭ್ಯ ಶ್ರೇಷ್ಠ ಜಾತಿಯವರು; ಇತರರು ನಮಗಧೀನರು; ಎಂಬ ಅವರ ಸ್ವಾರ್ಥದುರ್ವಾದವೇ ಇದಕ್ಕೆ ಮೂಲಕಾರಣವು. ಆಗಿನ ಕಾಲದ ಬ್ರಾಹ್ಮಣರಲ್ಲಿ ಸರ್ವರೂ ಸಮಾನರೆಂಬ ಉದಾತ್ತ ಬುದ್ಧಿಯು ಉಳಿದಿದ್ದರೆ ಈ ಭಾರತಭೂಮಿಯು ಈಗಳೂ ಅನುಭವಿಸುತ್ತಿರುವಂಥ ದುರ್ದಶೆಯನ್ನೆಂದೂ ಅನುಭವಿಸುತ್ತಿರಲಿಲ್ಲ. ಈ ರೀತಿಯಾದ ಜಾತಿವಾದದಿಂದ ಪರಸ್ಪರರಲ್ಲಿ ದ್ವೇಷವು ಬೆಳೆದು ಎಷ್ಟೋ ಅಮೌಲ್ಯ ಋಷಿ ಗ್ರಂಥಗಳು ಆಗಿನ ಕಾಲಕ್ಕೇನೇ ಅಗ್ನಿಯಪಾಲಾಗಿ ಹೋದವು.

ಕರ್ನಾಟಕದ ಸುದೈವ.

ಸತ್‌ಶಿಕ್ಷಕವೆಂಬ ಮಾಸಪತ್ರಿಕೆಯು ಇದೇ ಶ್ರಾವಣದಿಂದ ಗದಗಿನಲ್ಲಿ ಹೊರಡುತ್ತದೆ. ಇದರ 20 ಪುಟಗಳಲ್ಲಿ ನಿಬಂಧ, ಕಥೆ, ಕಾದಂಬರಿ ಮೊದಲಾದ ಸಾಮಾಜಿಕ, ಧಾರ್ಮಿಕ, ನೈತಿಕ ವಿಷಯಗಳನ್ನು, 20 ಪುಟಗಳಲ್ಲಿ ಗೃಹವೈದ್ಯಕವನ್ನು, ಶಿಕ್ಷಣರೂಪದಿಂದ ಬರೆಯುತ್ತಾ ಹೋಗುವೆವು. ಅದರಿಂದ ಈ ಮಾಸಿಕವು ಅತಿ ಉಪಯುಕ್ತವೂ, ಸಂಗ್ರಹಿಸಿ ಇಡಲಿಕ್ಕೆ ಯೋಗ್ಯವೂ ಆಗಿರುವುದು. ಇದಕ್ಕೆ ಆರಂಭದಿಂದಲೇ ಚಂದಾದಾರರಾಗತಕ್ಕದ್ದು. ಮೊದಲನೇ ಸಂಚಿಕೆಯ ಅರ್ಧದಲ್ಲಿ ವ್ಯಾಪಾರಸ್ಥರಿಗೆ ಅಪ್ರತಿಮವಾದ ಧೈರ್ಯ, ಸಾಹಸಗಳನ್ನು ಹುಟ್ಟಿಸುವ ಸುಜ್ಞಾನಕಟ್ಟಿಯ ಮನೋಹರವಾದ ಕಥೆಯೂ, ಅರ್ಧದಲ್ಲಿ ವೈದ್ಯರಿಗೆ ಅಗತ್ಯವಾದ ಉಪಕರಣಗಳು, ಕೀಟಕಗಳು, ಜ್ವರವು, ಪ್ಲೀಹ (ಗುಲ್ಮ), ಮೂತ್ರಪಿಂಡ, ಕಾಳಜ, ರಕ್ತಾಶಯ, ಉದರಸಂಬಂಧ ರೋಗ ಚಿಕಿತ್ಸೆಗಳು ಆರಂಭವಾಗುವವು. ವರ್ಷಕ್ಕೆ ವರ್ಗಣಿ 3 ರೂ. ಪೋ|| 3 ಆಣೆ, ನಾವು ಹೆಚ್ಚಿಗೆ ಹೇಳಲಾರೆವು. ಒಂದು ಸಂಚಿಕೆಯನ್ನು ನೋಡಿ ನೀವೇ ಮನಗಾಣಿರಿ, ಅಥವಾ ಮನಸ್ಸಿಗೆ ಬಾರದಿದ್ದರೆ, ಪರತ ಕಳಿಸಿರಿ. ಹಣ ಕಳಿಸುವೆವು. ಶೀಘ್ರ ನಿಮ್ಮ ಹೆಸರು, ಪೋಸ್ಟ್ ಆಫೀಸು ತಿಳಿಸಿ. ವಿ. ಪಿ. ಯಿಂದ ತರಿಸಿಕೊಳ್ಳಿರಿ.

ಪತ್ತೆ—ಯಫ್. ಬಸವಲಿಂಗಸ್ವಾಮಿ, ತಲವಾಯಿಮಠ,

4 ವೆನರ್ಕ್ ಹೆ|| ಮಾಸ್ತರ, ಪೋ|| ಗದಗ, ಜಿ. ಧಾರವಾಡ.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.

ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ ೫ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಕ್ರಯ ರೂ. 8-8-0 ಸೀಮೆ ಪಟ್ಟಿ ಸಹಿತ ರೂ. 6-8-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,

ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಲೋಕಪ್ರಸಿದ್ಧವಾದ ವಜ್ರಾಂಗಲೇಹ

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟುಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು 15 ದಿನಗಳು ಸೇವಿಸುವದರಿಂದ ಪೂರಾ ಗುಣಕೊಡುವುದು. 3 ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರೆವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2-0-0.

ಒಂದೇ ಆವರ್ತಿ 3 ಡಬ್ಬಿಗಳನ್ನು ತರಿಸಿದರೆ ಟಪಾಲು ಖರ್ಚು ಮಾಫಿ.

ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೋ

6 ಸಾಹುಕಾರಪೇಟೆ, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಪತ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧಮಾಡುವಕ್ರಮವನ್ನು ಚೆನ್ನಾಗಿಬರಮ ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ, ಆಶ್ಚರ್ಯ ಆದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ಪ್ರಸನ್ನಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ

ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

30 ಬಳ್ಳಾರಿ.

ಜಂಟಲ್‌ಮೆರ್ಕ್ ಪಾಕೆಟ್ ಲೀವರ್ ವಾಚ್.

ಈ ನಮ್ಮ ಜಂಟಲ್‌ಮೆರ್ಕ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ, ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿಸಹಿತ ರೂ. 4-8-0.

ವಿಳಾಸ:— ಮ್ಯಾನೇಜರ್

ಸ್ಟಾರ್‌ಹೌಸ್, ಪೋಸ್ಟ್‌ಬಾಕ್ಸ್ ನಂ. 508.

6 ಪಾರ್ಕ್‌ಟೌನ್, ಮದರಾಸು.

ಶ್ರೀರಾಮಜಯಮ್.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ,ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮರೆತ, ಜ್ವರ, ಚಳಿ ಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ,

33 ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

೧೯೨೨ನೆಯ ಇಸವಿ ಸೆಪ್ಟಂಬರ್ ತಾ|| ೩ ರಿಂದ ೧೯೨೨ನೆಯ ಸೆಪ್ಟಂಬರ್ ತಾ|| ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಭಾದ್ರಪದ ಶುದ್ಧ ದ್ವಾದಶಿಯಿಂದ ಭಾದ್ರಪದ ಬಹುಳ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
3	1 ಭಾನು	ದ್ವಾದ	3-53	ಉಷಾ	0-48	18
4	2 ಸೋಮ	ತ್ರಯೋ	6-5	ಶ್ರವ	4-31	19
5	3 ಮಂಗಳ	ಚತು	9-26	ಧನಿ	9-19	20
6	4 ಬುಧ	ಪೌರ್ಣ	13-42	ಶತ	15-5	21
7	ಗುರು	ಪಾಡ್ಯ	8-40	ಪೂಭಾ	21-24	22
8	ಶುಕ್ರ	ಬಿದಿ	23-50	ಉಭಾ	27-58	23
9	ಶನಿ	ತದಿ	28-51	ರೇವ	34-25	24

(1) ಮೊಹರಂ ಕೊನೆದಿನ. (2) ಸೌರಏಕಾ ಋಗುಪಾಕರ್ಮ (3) ಅನಂತಪದ್ಮನಾಭವ್ರತಂ, ಉಮಾಮಹೇಶ್ವರವ್ರತಂ. (4) ಅಪರಪಕ್ಷಾರಂಭಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಕಾರಾ ಪರಮಪ್ರೀಗತರಾಜಮಂಡಲಿಚಿಹ್ನಿತಾ | ಘನಪವಕೃತಾವತಾರಾ ಪಕ್ಷಜನಕ್ಷತ್ರ ನೋಹರಾಜೀಯತ್ ||

ಶ್ರೀಯುತ್ಮಕ್ಷನ್ಯವಾಲನತ್ವಮಳಳಾಲೋಲಂಸುಧೀಘಂಗನ | ಸ್ತೋಮನಾಭಿಸ್ಯದಶೀಲ ನಾಶಕಲಿತ ಸಾಮ್ಯಾನ್ವಾಲಾಲಂಬರು ||

ಸೀಮಾತೀತಯಶಃಪ್ರಕಾಶವಿಭವಃ ಸದ್ವೃತ್ತಮಾಲಾಕುಲಃ | ಪ್ರೇಮಂಬೆತ್ತೀಯಂತತರಾಪೂರಿಗೆ ಗೌರೀತನಾಮುತಪೋಜ್ಞುಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿಸಿವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ೬೩ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪುರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಫ್. ಆರ್. ಕರಿಬಸವಶಾಸ್ತ್ರಿಗಳು,

ಗ್ರಂಥಪ್ರಸಾರಕಮಂಡಲಿ ಮೈಸೂರು.

ಲೋಕಪ್ರಸಿದ್ಧವಾದ ವಜ್ರಾಂಗಲೇಹ

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟುಮಾಡುವದು. ಪ್ರಮೇಹ, ಜ್ವರ, ಮುಂತಾದ ರೋಗಗಳಿಂದ ಆಗಲೇ ಎದ್ದವರು ಸೇವಿಸಿದರೆ ತುಂಬಾ ಗುಣಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ವಜ್ರಾಂಗಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ಹಳೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು ಧಾತುವನ್ನು ಶೇಖರಿಸುವದು. ಈ ವಜ್ರಾಂಗ ಲೇಹಕ್ಕೆ ಬೆಳ್ಳಿ ಭಂಗಾರ ಮತ್ತು ತಾಂಬ್ರ ಭಸ್ಮವು ಎಷ್ಟುಮಾತ್ರವು ಸಮಾನವಾಗಲಾರದು.

ಒಂದು ಡಬ್ಬಿ ಲೇಹವನ್ನು 15 ದಿನಗಳು ಸೇವಿಸುವದರಿಂದ ಪೂರಾ ಗುಣಕೊಡುವುದು. 3 ಡಬ್ಬಿಗಳನ್ನು ಸೇವಿಸುವದರಿಂದ ಜನ್ಮಾಂತರದ ವರೆವಿಗೂ ಗುಣಕೊಡುವದು. 15 ತೊಲೆಯ ಡಬ್ಬಿ 1ಕ್ಕೆ 2-0-0.

ಒಂದೇ ಆವರ್ತಿ 3 ಡಬ್ಬಿಗಳನ್ನು ತರಿಸಿದರೆ ಟಪಾಲು ಖರ್ಚು ಮಾಫಿ.

ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೋ

7 ಸಾಹುಕಾರಪೇಟೆ, ಮದರಾಸ್.

ಜಂಟಲ್‌ಮೆರ್ಕ್ ಪಾಕೆಟ್ ಲೀವರ್ ವಾಚ್.

ಈ ನಮ್ಮ ಜಂಟಲ್‌ಮೆರ್ಕ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ, ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಚೀಟಿಸಹಿತ ರೂ. 4-8-0.

ವಿಳಾಸ:— ಮ್ಯಾನೇಜರ್

ಸ್ಟಾರ್‌ಹೌಸ್, ಪೋಸ್ಟ್‌ಬಾಕ್ಸ್ ನಂ. 508.

7 ಪಾರ್ಕ್‌ಟೌನ್, ಮದರಾಸು.

ಕತ್ತಲಲ್ಲಿ ಬೆಳಕಿನ ಸಹಾಯವಿಲ್ಲದೆ ಗಂಟೆ ತೋರಿಸುವ ರೇಡಿಯಂ ಗಡಿಯಾರಗಳು.



ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾ ದೇಶದ ಗಡಿಯಾರಗಳು. ಬಹು ದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ ೫ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಕ್ರಯ ರೂ. 8-8-0 ಸೀಮೆ ಪಟ್ಟಿ ಸಹಿತ ರೂ. 6-8-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,

ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಶ್ರೀರಾಮಜಯಮ್.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ,ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮರೆತ, ಜ್ವರ, ಚಳಿ ಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ,

34 ಮೈಸೂರು.

ಗೆಜ್ಜೆ ಕೆಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3.



ಇಮಿಟೇಷನ್ ವಜ್ರದ ಬೆಂಡೋಲೆ. 25

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲಿಂದೇ ಹೇಳುವರು. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಸರಿಯಾಗಿ ಸರಿಯಾಗಿ ಥಳಥಳಿಸುವವು. ಅಚ್ಚವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು.



7 ಕಲ್ಲಿನ ಬೆಂಡೋಲೆ ಕ್ರಯ 3-8-0. ಬುಲಾಕು 1ಕ್ಕೆ 2-0-0.

ವಿಳಾಸ—ಎಸ್. ಆರ್. ಕೃಷ್ಣ ಅಂಡ್ ಕಂಪೆನಿ,

ನಂ. 1 ತಂಬುನಾಯಕನ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

ಶ್ರೀ

ಜಯದೇವ ಔಷಧಾಲಯ.

(ಮೊದಲು ರೈಲ್ವೆಬುಕಿಂಗ್ ಆಫೀಸ್ ಇದ್ದ ಕಟ್ಟಡದಲ್ಲಿ)

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಔಷಧಾಲಯದಲ್ಲಿ ಎಲ್ಲ ವಿಧದ ರೋಗಗಳಿಗೂ ಅನುಗುಣವಾದ ಚಿಕಿತ್ಸೆಯನ್ನು ಹೊಂದಬಹುದು. ರೋಗಿಗಳ ಪರೀಕ್ಷೆಯು ಅನುಭವಸ್ಥರಾದ ಡಾಕ್ಟರಿಂದ ಉಚಿತವಾಗಿ ನಡಿಸಲ್ಪಡುವುದು.

ಎಲ್ಲ ವಿಧದ ಪೇಟೆಂಟ್ ಔಷಧಗಳೂ ಇಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಸೆಪ್ಟಂಬರ್ ತಾ|| ೧೦ನೆಯ ಭಾನುವಾರ.

ಅಸೂಯೆ ಮತ್ತು ದ್ರೋಹ.

(ಮಿರ್ಜಾಇಸ್ಮಾಯಿಲ್ ಸರ್ಕಾರ)

ವಿದ್ಯೆಯು ದೀಪಕ್ಕೆ ಸಮನಾದುದು. ದೀಪವನ್ನು ನೇರ್ಪಾಗಿ ಉಪಯೋಗಿಸಿದರೆ ಅಂಧಕಾರವನ್ನು ತೊಲಗಿಸಿ ಪ್ರಕಾ... [illegible]

ಹಿಂದುಗಳ ಮೇಲೆ ಅಮೀರರ ಅಭಿಮಾನ.

[illegible]

ಹಿಂದೂಮಹಮ್ಮದೀಯ ಕಲಹ.

[illegible]

ಮತ್ತೊಂದು ಕಡೆ.

[illegible]

ಗಂಗಾನದಿಯ ಅನಾಹುತ.

[illegible]

...ಸಿಲ್ಲದೆ ಹಸಿಯುತ್ತಿರುವುದರಿಂದ ಕಳೆದುಳಿದ ಜನರಿಗೆ ನಿಲ್ಲುವುದಕ್ಕೆ ಆಶ್ರಯವೂ ಇಲ್ಲವಾಗಿದೆ. ಹೊಳೆಯು ಈಚೆಗೆ ಸ್ವಲ್ಪ ತಗ್ಗುತ್ತ ಬಂದಿದೆ. ಮನೆಮಠಗಳನ್ನು ಕಳೆದುಕೊಂಡವರು ಬೇರೆ ಬೇರೆ ಊರುಗಳಿಗೆ ಹೋಗಿ ವಾಸಮಾಡಿಕೊಂಡಿದ್ದಾರೆ.

THE NEW PRINCESS.

We heartily congratulate His Highness the Yuvaraja of Mysore on his getting a daughter on the 28th August 1922. The birth of the Royal Princess which took place at 5-55 P.M. that day was announced with a salute of 21 guns from the Palace Battery and the litting up of the Palace and important buildings in the City. It was a day of universal rejoicing in the State. On the fifth day after the birth the ceremony of horoscope writing was gone through and there was a generous distribution of sugar throughout the capital city and the schools and offices in the city were closed. The Namakarana ceremony of the Princess took place on the 8th September 1922 when a Durbar of the kinsmen of His Highness the Maharaja was held in the Palace and the Princess was named Vijayalaxmammanni. The poor in the city ware fed and clothed the same day. It was a little over three years ago that His Highness the Yuvaraja got an Heir apparent and it has given the greatest delight to the subjects of His Highness the Maharaja to see the growth and progress of Jayachamaraja Wodaiyar. It would give all the greater pleasure to the people of Mysore to watch the progress of the little Princess side by side with her Royal brother. We join the chorus of prayer along with the people of Mysore in invoking the blessings of the Almighty on both of them for their long life, happiness and prosperity.

ARTHASADHAKA PATRIKE.

In one of the recent issues of the *Arthasadhaka Patrike* its able Editor Mr. M. Gopal Iyengar has announced that he has retired from the editorship of the paper and severed his connection with the publication of the same, and we find that as a result of it the last week's issue has not come out. We see no reason why Mr. Gopal Iengar who had worked with so much energy and enthusiasm and made the *Patrike* so very instructive and readable and whom the public know to be devoted to the progress of the State should have been driven to the extreme necessity of severing all his connection with the *Patrike* unless he had very valid reasons for doing so. We believe there was some agreement between the Government and Mr. Gopal Iengar-and it is not unlikely that his freedom in the conduct of the paper to which he was entitled was interfered with, and the support and encouragement which he deserved was denied to him. We could confidently say that under Mr. Gopal Iengar's experienced editorship and direction the *Arthasadhaka Patrike* became a very useful and beneficial organ of public enlightenment, and it would be a great pity and public loss if his severance is going to be a settled fact.

We hear that it is under contemplation to hand over its publication and editorship to either Mr. Hayavadan Rao of the *Economic Journal* fame or Mr. D. V. Gundappa of the Ex *Karnataka* fame. Well, it is no business of ours to speak of the merits or otherwise of either of them. But this much we can confidently say that if ever it is to happen the quality of the paper is sure to deteriorate and scissoring and pasting will commence once again. The continuous changing of editorship is the one thing to be avoided in journalism and where it is to be removed from the hands of so able, so zealous and so experienced a man like Mr. Gopal Iengar it is doubly regrettable. There are very few in the State who can lay claim to the same wide knowledge of economic conditions of India and journalistic experience as Mr. Gopaliengar and we hope that the Government will see its way to retain the services of Mr. Gopaliengar by giving him a freer hand and greater encouragement and continue its mission of usefulness to agriculturists and indistrialists.

ಸ್ವದೇಶದ ವೃತ್ತಾಂತಗಳು.

ಕಳೆದ ವಾರ ನಂಜನಗೂಡು ಕಪಿಲಾ ನದಿಯಲ್ಲಿ 2 ಅಸಾಹುತಗಳು ನಡೆದುವು. ನದಿಗೆ ಮನೆಯವರೊಡನೆ ಹೋಗಿದ್ದ 7 ವರ್ಷದ ಬ್ರಾಹ್ಮಣ ಕನ್ಯೆಯೊಂದು ಅಲ್ಲಿಯ ತೆಪ್ಪಕಡುವಿನಲ್ಲಿ ಕಾಲುಜಾರಿ ಮಗುಚಿಕೊಂಡು ನೀರುಸುಳಿಗೆ ಸಿಕ್ಕಿ ಅಡಿಯ... [illegible]

ವರ್ತಮಾನ ಸಂಗ್ರಹ.

[illegible]

ಶ್ರೀ

ಜಯದೇವ ಔಷಧಾಲಯ.

(ಮೊದಲು ರೈಲ್ವೆಬುಕಿಂಗ್ ಆಫೀಸ್ ಇದ್ದ ಕಟ್ಟಡದಲ್ಲಿ)
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಔಷಧಾಲಯದಲ್ಲಿ ಎಲ್ಲ ವಿಧದ ರೋಗಗಳಿಗೂ ಅನುಗುಣವಾದ ಚಿಕಿತ್ಸೆಯನ್ನು ಹೊಂದಬಹುದು. ರೋಗಿಗಳ ಪರೀಕ್ಷೆಯು ಅನುಭವಸ್ಥರಾದ ಡಾಕ್ಟರಿಂದ ಉಚಿತವಾಗಿ ನಡಿಸಲ್ಪಡುವುದು.

ಎಲ್ಲ ವಿಧದ ಪೇಟೆಂಟ್ ಔಷಧಗಳೂ ಇಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಸೆಪ್ಟಂಬರ್ ತಾ|| ೧೦ನೆಯ ಭಾನುವಾರ.

ಅಸೂಯೆ ಮತ್ತು ದ್ರೋಹ.

(ವಿಜೋರ್‌ನಿಯರ್ ಸರ್ಕಾರ)

ವಿದ್ಯೆಯು ದೀಪಕ್ಕೆ ಸಮನಾದುದು. ದೀಪವನ್ನು ನೇರ್ಪಾಗಿ ಉಪಯೋಗಿಸಿದರೆ ಅಂಧಕಾರವನ್ನು ತೊಲಗಿಸಿ ಪ್ರಕಾಶವನ್ನೀಯುವುದು; ದುರ್ವಿನಿಯೋಗಪಡಿಸಿದರೆ ಮನೆಯನ್ನೇ ಹೊತ್ತಿಸಿಬಿಡುವುದು. ಅದರಂತೆ ವಿದ್ಯೆಯಾದರೂ ದುರ್ಜನರಿಗೆ ಬಂದರೆ ಪರಪೀಡನೆಗೂ ದ್ರೋಹಾಚರಣೆ ಕಲಹ ಮೊದಲಾದ ಪಾಪಕೃತ್ಯಗಳಿಗೂ ವಿನಿಯೋಗವಾಗುವುದು; ಸಜ್ಜನರಿಗೆ ಬಂದರೆ ಲೋಕಕಲ್ಯಾಣ ಸಾಧಕವಾಗುವುದು. ಮೈಸೂರು ದೇಶದಲ್ಲಿ ಕೆಲ ವಿದ್ಯಾಸಂಪನ್ನರು ಕಲಿತ ವಿದ್ಯೆಯು ಪರಪೀಡನೆಗೂ ದ್ವೇಷಾಸೂಯಾಭಿವೃದ್ಧಿಗೂ ದ್ರೋಹಾಚರಣೆಗೂ ಸಾಧಕವಾಗುತ್ತಿರುವುದನ್ನೂ ಅದಕ್ಕೆ ನಿರಂಕುಶವಾದ ಅವಕಾಶವು ಕೊಡಲ್ಪಟ್ಟಿರುವುದನ್ನೂ ನೋಡಿದರೆ ವಿಷಾದವಾಗುತ್ತದೆ. ಈ ವರ್ಗಕ್ಕೆ ಸೇರಿದ ಕೆಲವರು ಮೈಸೂರು ರಾಜ್ಯಭಾರದ ವಿಷಯದಲ್ಲಿ ಆಗಾಗ್ಗೆ ಮದ್ರಾಸು ಬೊಂಬಾಯಿ ಪ್ರಾಂತಗಳ ಅಂಗ್ಲಭಾಷಾ ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆಯುತ್ತಿದ್ದಾರೆ. ಅವುಗಳಲ್ಲಿ ಹಲವು ಹೊಟ್ಟೆಕಿಚ್ಚಿನಿಂದಲೂ ಪರೋತ್ಕರ್ಷಾಸಹನೆಯಿಂದಲೂ ಆತ್ಮಲಾಭನ್ಯೂನತೆಯಿಂದುಂಟಾದ ಅಸಂತೃಪ್ತಿಯಿಂದಲೂ ಬರೆದ ಅಸದ್ವಿಧಾನವುಳ್ಳ ಅನೃತಮಯ ಲೇಖನಗಳಾಗಿರುತ್ತವೆ. ಇಂಥ ಲೇಖನಗಳಲ್ಲಿ ಕಳೆದ ತಿಂಗಳು ಪುನಾಪಟ್ಟಣದ ಮರಾಟಾಪತ್ರಿಕೆಗೆ "ವಿಜೋರ್‌ನಿಯರ್ ಸರ್ಕಾರ" ಎಂಬ ಶಿರೋಲೇಖನದಿಂದ ಬರೆಯಲ್ಪಟ್ಟ ಪತ್ರವ್ಯವಹಾರವು ಒಂದಾಗಿರುತ್ತದೆ. ಅದರಲ್ಲಿ—ಮೈಸೂರು ರಾಜ್ಯಪರಿಪಾಲನವನ್ನು ಮಹಾರಾಜರು ಮಾಡದೆ ಅವರ ಆಪ್ತ ಪ್ರೈವೇಟ್ ಸೆಕ್ರೆಟರಿಯಾದ ಮಿ|| ಮಿರ್ಜಾಯವರೇ ನಿಜವಾಗಿ ಮಾಡುತ್ತಾರಾದುದರಿಂದ ಇದನ್ನು ವಿಜೋರ್‌ನಿಯರ್ ಸರ್ಕಾರವೆಂದು ಕರೆಯುವುದು ಯುಕ್ತವಾಗಿದೆಯೆಂತಲೂ, ಇವರ ಆಡಳಿತದಲ್ಲಿ ರಾಜನೀತಿಗೆ ಸೊನ್ನೆ ತಿದ್ದಲ್ಪಟ್ಟಿದೆಯೆಂತಲೂ, ಎಗ್ಜಿಕ್ಯುಟೀವ್ ಕೌನ್ಸಿಲಿನಲ್ಲಿ ಒಬ್ಬ ಮೆಂಬರಾಗಿರುವ ಮಿ|| ಮಿರ್ ಹಂಜಾಹುಸೇನರೆಂಬ ಮಹಮ್ಮದೀಯರು ಸಂಸ್ಥಾನದ ಆಡಳಿತದಲ್ಲೆಲ್ಲಾ ಪಾರುಪತ್ಯವನ್ನು ಮಾಡುವರೆಂತಲೂ, ಇವರ ಕಾರ್ಯಕ್ರಮಗಳು, ಹಿಂದೆ ಯಾವನು ಟಿಪ್ಪೂಸುಲ್ತಾನರಿಗೆ ಮಂತ್ರಿಯಾಗಿದ್ದನೋ ಯಾರ ದುರ್ಬೋಧನೆಯಿಂದ ಟಿಪ್ಪೂಸುಲ್ತಾನರು ನಾಶಹೊಂದಿದರೋ ಅಂಥ ಮಿರ್‌ಸಾಬಿಯ ಕಾರ್ಯಗಳಂತೆ ಸಂಧಾನಯುಕ್ತವಾಗಿವೆಯೆಂತಲೂ, ಅದುಕಾರಣ ಇವರ ಸಂಬಂಧವು ಮೈಸೂರು ಸಂಸ್ಥಾನಕ್ಕೆ ಮಿರ್‌ಸಾದಿಕ್ಕಿನ ಪುನರಾಗಮನದಂತಾಗಿದೆಯೆಂತಲೂ, ಇವರು ಅನ್ಯಾಯಾಚರಣೆಯನ್ನು ಮಾಡುವುದರಲ್ಲಿ ಮಿತಿಮೀರಿರುವರೆಂತಲೂ ಮೊದಲಾಗಿ ಬರೆಯಲ್ಪಟ್ಟಿರುವುದು.

ಅಸೂಯಾಪರರು ಎಷ್ಟು ಅನ್ಯಾಯಾಚರಣೆಗೂ ಹೇಸುವವರಲ್ಲವೆಂಬುದಕ್ಕೆ ಇದಕ್ಕಿಂತಲೂ ಬೇರೆ ದೃಷ್ಟಾಂತ ಬೇಕೆ? ಶ್ರೀಮನ್ಮಹಾರಾಜರು ಅಹರ್ನಿಶಿಯೂ ಪ್ರಜೆಗಳ ಕಷ್ಟಸುಖಗಳ ವಿಚಾರದಲ್ಲೇ ಮಗ್ನಚಿತ್ತರಾಗಿದ್ದು, ಪ್ರಭುತ್ವದ ಪ್ರತಿಶಾಖೆಯ ಮುಖ್ಯಭಾಗಗಳ ಆಗುಹೋಗುಗಳನ್ನು ಎಚ್ಚರದಿಂದ ಅವಲೋಕಿಸುತ್ತ, ಉತ್ತಮ ರಾಜನೀತಿವಿಶಾರದರಾಗಿ ರಾಜ್ಯಭಾರವನ್ನು ಅತಿವಿಚಕ್ಷಣತೆಯಿಂದ ಸ್ವತಃ ಸಾಗಿಸುತ್ತಿರುವಾಗ ಈ ಮೇಲೆಕಂಡ ಲೇಖಕರು ಎಲ್ಲ ರಾಜ್ಯಭಾರವನ್ನೂ ಮಿ|| ಮಿರ್ಜಾರವರಿಗೇ ವಹಿಸಿಬಿಟ್ಟು ಮಹಾರಾಜರು ತಾವು ನಿಶ್ಚಿಂತರಾಗಿರುವರೆಂಬ ಧ್ವನಿ ಬರುವಹಾಗೆ ಅಸತ್ಯದ ಬರವಣಿಗೆಯನ್ನು ಬರೆದಿರುವುದು ನೀಚಕಾರ್ಯವಲ್ಲದೆ ಸಜ್ಜನಕೃತ್ಯವಲ್ಲ. ಅಲ್ಲದೆ ಶ್ರೀಮನ್ಮಹಾರಾಜರು ಸ್ವತಃ ಎಷ್ಟು ಪರಿಶುದ್ಧಾತ್ಮರೂ ನಿರ್ಮಲಚರಿತರೂ ಆಗಿರುವರೋ ತಮ್ಮ ಸಮೀಪಸ್ಥರಲ್ಲೂ ಅದೇ ಗುಣವನ್ನೇ ಅರಸತಕ್ಕವರು. ಸ್ವಲ್ಪಸಂಶಯಕ್ಕೆ ಆಸ್ಪದಗೊಟ್ಟವರನ್ನು ಅವರು ಕ್ಷಣಮಾತ್ರವೂ ಹತ್ತಿರಕ್ಕೆ ಸೇರಗೊಡಿಸರು. ಹೀಗಿರುವಲ್ಲಿ ಮಿ|| ಮಿರ್ಜಾ ಇಸ್ಮಾಯಿಲ್, ಬಿ. ಎ., ಯವರು ಶ್ರೀಮನ್ಮಹಾರಾಜರ ಬಳಿಯಲ್ಲಿ ಅಖಂಡವಾಗಿ ಹತ್ತಾರುವರ್ಷಗಳಿಂದ ಉದ್ಯೋಗಮಾಡಿಕೊಂಡಿರಬೇಕಾದರೆ ಅವರ ನಿಸ್ಪೃಹತೆ, ಕಾರ್ಯದಕ್ಷತೆ, ಪ್ರಜಾಭಿಮಾನ, ಸ್ವಾಮಿಭಕ್ತಿ, ಸತ್ಶೀಲ ಮೊದಲಾದುವುಗಳು ಎಷ್ಟು ಪವಿತ್ರಗಳಾಗಿರಬೇಕೆಂಬುದನ್ನು ಹೇಳಬೇಕಾಗಿಲ್ಲ. ಅಲ್ಲದೆ ಅವರ ಶಾಂತಿ ಸಮವರ್ತನೆ ಮೊದಲಾದ ಸದ್ಗುಣಗಳ ಪರಿಚಯವು ಸಂಸ್ಥಾನದ ಎಷ್ಟೋ ಪ್ರಜೆಗಳಿಗೆ ಚೆನ್ನಾಗಿ ಪ್ರತ್ಯಕ್ಷವಾಗಿಯೂ ಇರುವುದು. ದಿನಕ್ರಮೇಣ ಅವರು ಸಂಸ್ಥಾನದ ಉನ್ನತೋದ್ಯೋಗಗಳನ್ನು ವಹಿಸಿ ಒಂದಾನೊಂದು ಕಾಲದಲ್ಲಿ ಮಂತ್ರಿವರ್ಯಪದವಿಗೂ ಬರಬಹುದೆಂಬ ನಿರೀಕ್ಷಣೆಯು ಇರುವುದು. ಹಾಗಾಗುವುದು ಕೂಡ ಇಷ್ಟವಾದುದೇ.

ಮಿ|| ಮಿರ್ ಹಂಜಾಹುಸೇನ್ ಬಿ.ಎ.,ಬಿ.ಎಲ್., ರವರು ಕೂಡ ಇದುವರೆಗೆ ಸಂಸ್ಥಾನದ ನ್ಯಾಯನಿರ್ವಾಹ ಶಾಖೆಯಲ್ಲಿ ಚೀಫ್‌ಕೋರ್ಟು ನ್ಯಾಯಮೂರ್ತಿಪದವಿಯ ವರೆಗೂ ಏರಿ ಅತ್ಯಂತ ನಿಷ್ಪಕ್ಷಪಾತಿಗಳೂ ಸಮರ್ಥರೂ ಎಂಬ ಹೆಸರನ್ನು ಸಂಪೂರ್ಣವಾಗಿ ಸಂಪಾದಿಸಿರುವುದಲ್ಲದೆ, ಪೊಲೀಸ್ ಶಾಖೆಯಲ್ಲೂ ಕೆಲಕಾಲ ಕೆಲಸಮಾಡಿ, ಆ ಶಾಖೆಯ ಇನ್‌ಸ್ಪೆಕ್ಟರ್ ಜನರಲ್ಲರಾಗಿಯೂ ಇದ್ದು ಉತ್ತಮತರವಾಗಿ ಕಾರ್ಯನಿರ್ವಾಹ ಮಾಡಿ ಪ್ರಭು ಪ್ರಜೆಗಳೀರ್ವರ ಪ್ರೀತಿಗೂ ಪಾತ್ರರಾಗಿರುವರು. ಇವರ ಸಾಮರ್ಥ್ಯಗಳಿಗೆ ಮೆಚ್ಚಿಯೇ ಶ್ರೀಮನ್ಮಹಾರಾಜರು ಕೌನ್ಸಿಲ್ಲಿನ ಸಭಿಕತನಕ್ಕೆ ಇವರನ್ನು ತಂದಿಟ್ಟಿರುವರು. ನಿಷ್ಪಕ್ಷಪಾತಿಗಳೂ ಸಮರ್ಥರೂ ಆದ ಇಂಥವರೊಬ್ಬರು ಕೌನ್ಸಿಲಿನಲ್ಲಿಲ್ಲದಿದ್ದರೆ ರಾಜ್ಯಭಾರದ ವೈಲಕ್ಷಣ್ಯವು, ಈಗಣ ಸಂಸ್ಕೃತಾಭ್ಯಾಸ ಸಂಬಂಧದಲ್ಲಿ ಏರ್ಪಟ್ಟಿದ್ದ ನಿಯುಕ್ತಸಂಘದವರ ಕಾರ್ಯಕಲಾಪದಂತೆ ಪಕ್ಷಾಂಧತೆಯ ಮಬ್ಬಿನಿಂದ ಕವಿದುಹೋಗುವುದೆಂಬ ಸಂಗತಿಯು ಶ್ರೀಮನ್ಮಹಾರಾಜರಿಗೆ ಚೆನ್ನಾಗಿ ಗೊತ್ತಿರುವುದು. ಅದುಕಾರಣವೇ ಕೌನ್ಸಿಲು ನಿಷ್ಪಕ್ಷಪಾತಾಚರಣೆಯುಳ್ಳದಾಗಿರಬೇಕೆಂದು ಒಬ್ಬೊಬ್ಬ ಬ್ರಾಹ್ಮಣೇತರರನ್ನು ಸಭಿಕರನ್ನಾಗಿ ಅದರಲ್ಲಿ ಸೇರಿಸುತ್ತಾಬರುವ ಪದ್ಧತಿಯು ಬಂದಿರುತ್ತದೆ. ಈ ಸಂಸ್ಥಾನಕ್ಕೆ ಪ್ರಕೃತ ಮಿ|| ಮಿರ್ ಹಂಜಾಹುಸೇನರವರಿಗಿಂತ ಸಮರ್ಥರೂ ಉನ್ನತೋದ್ಯೋಗಿಗಳೂ ಹಿಂದುಳಿದ ಜನವರ್ಗಗಳಲ್ಲಿ ಮತ್ತಾರೂ ಇಲ್ಲದ್ದರಿಂದ ಅವರ ನಿಯಮನವು ಬಹಳ ನ್ಯಾಯವಾಗಿರುತ್ತದೆ. ಆ ಸ್ಥಾನದಲ್ಲಿದ್ದುಕೊಂಡು ಅವರು ನಿರ್ವಹಿಸುತ್ತಿರುವ ಕಾರ್ಯಭಾರಗಳು ಕೂಡ ನ್ಯಾಯಸಮ್ಮತವಾಗಿರುವುವೇ ಹೊರತು ನಿಂದಾಸ್ಪದಗಳಾಗಿರುವುದಿಲ್ಲ. ಹಿಂದುಳಿದ ಜನವರ್ಗಗಳ ಉದ್ಧಾರಾರ್ಥವಾಗಿ ಶ್ರೀಮನ್ಮಹಾರಾಜರ ಪ್ರಭುತ್ವದವರು ಮಾಡುತ್ತಿರುವ ನ್ಯಾಯಸಮ್ಮತ ಪ್ರಯತ್ನಗಳಲ್ಲಿ ಇವರು ವಿಶೇಷ ಸಾನುಭೂತಿಯುಳ್ಳವರಾಗಿರುವುದು ನಿಜ. ಅದನ್ನು ತಪ್ಪೆಂದು ಯಾವ ವಿಚಾರಪರನೂ ಹೇಳಲಾರನು. ಆದರೆ ಪರೋತ್ಕರ್ಷಾಸಹಿಷ್ಣುಗಳೂ ಸ್ವಾರ್ಥೈಕಚಿಂತಕರೂ ಆದ ಕೆಲ ದುರುಳರು ಮಾತ್ರ ಅದನ್ನು ಸೈರಿಸದೆ, ಅವರಿಗೆ ಬ್ರಹ್ಮದ್ವೇಷಿಗಳೆಂದೂ ಪಕ್ಷಪಾತಿಗಳೆಂದೂ ಹೆಸರಿಡುವುದಕ್ಕೆ ಹೇಸದೆ, ಸ್ವದೇಶ ಪರದೇಶದ ಪತ್ರಿಕೆಗಳಲ್ಲಿ ಸಮಯಾನುಸಾರ ಹೀಗೆ ನಿಂದಾಭೂಯಿಷ್ಠವಾದ ಲೇಖನಗಳನ್ನು ಬರೆದು ಹಾವಳಿಮಾಡುತ್ತಿರುವರು. ಅವರುಗಳು ಗೂಢವಾಗಿದ್ದುಕೊಂಡು ಇಂಥ ನೀಚಪ್ರಯತ್ನವನ್ನು ಮಾಡುತ್ತಿದ್ದರೂ ಅವರ ಕಪಟಾಚರಣೆಯು ತಿಳಿಯಬಲ್ಲವರಿಗೆ ಗೊತ್ತಾಗದೆ ಹೋಗುವುದಿಲ್ಲ. ಮತ್ತು ಇದರಿಂದ ಅವರ ನೀಚತನವು ಲೋಕಕ್ಕೆ ವಿದಿತವಾಗುವುದೇ ಹೊರತು ಮತ್ತೇನೂ ಫಲವಿಲ್ಲ. ನಿಜವಾಗಿರತಕ್ಕ ಅನ್ಯಾಯಾಚರಣೆಗಳೇನೆಂಬುದನ್ನು ಪತ್ರಿಕಾಮುಖದಿಂದಲೋ ಇನ್ನಾವ ರೀತಿಯಿಂದಲೋ ದೇಶಾಭಿಮಾನಿಗಳು ವಿಮರ್ಶಿಸುವುದರಲ್ಲಿ ತಪ್ಪೇನೂ ಇಲ್ಲ. ಅದನ್ನು ಬಿಟ್ಟು ನಿಜಸ್ಥಿತಿಯನ್ನರಿಯದ ಹೊರಗಣ ನಾಡಿನವರ ಪತ್ರಿಕೆಗಳಿಗೆ ಅಸತ್ಯಸಂಗತಿಗಳನ್ನು ಬರೆದು ಗುಲ್ಲೆಬ್ಬಿಸುವುದರಿಂದ ಒಂದುಕೈಯಲ್ಲಿ ಅನ್ನವನ್ನುಂಡು ಮತ್ತೊಂದುಕೈಯಲ್ಲಿ ಮಣ್ಣನ್ನು ಹಿಡಿದವರ ದ್ರೋಹಾಚರಣೆಯಂತೆ ಫಲಪ್ರದವಾದೀತಲ್ಲದೆ ಮತ್ತೇನೂ ಇಲ್ಲ. ಸಂಸ್ಥಾನದ ಮುಖ್ಯೋದ್ಯೋಗಸ್ಥಾನಗಳೊಂದೆರಡರಲ್ಲಿ ಮಹಮ್ಮದೀಯರು ಬಂದು ಸೇರಿದ ಮಾತ್ರಕ್ಕೇ ಸೈರಿಸದೆ ಇರುವ ಜನರು, ಈಗ ತ್ರಿಮತಬ್ರಾಹ್ಮಣರು ಸಂಸ್ಥಾನದ ಸಕಲಶಾಖೆಗಳಲ್ಲೂ ಬೇರುಬಿಟ್ಟುಕೊಂಡಿರುವಂತೆ ಹಿಂದುಳಿದ ಜನವರ್ಗಗಳವರು ತಂತಮ್ಮ ಜನಸಂಖ್ಯಾನುಗುಣವಾಗಿ ಸೇರಿ ರಾಜ್ಯಕಾರ್ಯನಿರ್ವಾಹ ಮಾಡುವಂತಾದರೆ ನೋಡಿ ಬದುಕಿರುವುದುಂಟೆ? ಅದರಿಂದಲೇ ಅಲ್ಲವೆ ಮಿಲ್ಲರ್ ಕಮಿಟಿ ರಿಪೋರ್ಟು, ವಿದ್ಯಾಭ್ಯಾಸದ ಮೆಮೋರಾಂಡಮು, ಹಿಂದುಳಿದ ವಿದ್ಯಾರ್ಥಿವೇತನ ಮೊದಲಾದುವುಗಳಿಗೆ ಇವರುಗಳು ಪ್ರತಿಭಟಿಸುತ್ತಿರುವುದು? ಇಂಥ ಅಸೂಯಾಪರರು ಈ ವಿಧವಾದ ಪ್ರಯತ್ನಗಳಿಂದ ಹೇಗೋ ಆತ್ಮತೃಪ್ತಿಯನ್ನು ಪಡೆದುಕೊಳ್ಳುತ್ತಿದ್ದರೂ, ಅದರಿಂದ ದೇಶಕ್ಕೆ ಅನ್ಯವಿಧವಾದ ಪ್ರಯೋಜನವೂ ಉಂಟೆಂದು ನಾವು ತಿಳಿಯುತ್ತೇವೆ. ಅದೇನೆಂದರೆ—ಈ ದುರುಳರ ಸ್ವಾರ್ಥೈಕಚಿಂತನೆಯ ಇಂದ್ರಜಾಲಗಳೂ, ಗೋಮುಖವ್ಯಾಘ್ರನಟನೆಯೂ, ಪರೋತ್ಕರ್ಷಾಸಹನಸ್ವಭಾವವೂ, ಸ್ವಾಮಿದ್ರೋಹ ಸಹೋದರದ್ರೋಹ ಸಾಹಸದ ಪರಿಮಾಣವೂ ಸಹ ಪ್ರಭುತ್ವದವರಿಗೂ ಪ್ರಜೆಗಳಿಗೂ ಸಹ ಗೊತ್ತಾಗಿ ಅವರುಗಳನ್ನು ಎಚ್ಚರುಗೊಳಿಸದೆ ಬಿಡವು. ಅದು ಸಾಮಾನ್ಯವಾದ ಫಲವಲ್ಲ.

ಹಿಂದುಗಳ ಮೇಲೆ ಅಮೀರರ ಅಭಿಮಾನ.

ಅಫ್ಘಾನಿಸ್ಥಾನದ ಈಗಣ ಅಮೀರರು ಒಳ್ಳೆಯ ಯೋಗಶಾಲಿಗಳು. ಅಬ್ದುಲ್‌ಹಾಮಿದ್‌ರವರ ಕಾಲಕ್ಕಿಂತಲೂ ಈಗ ಅಫ್ಘಾನಿಸ್ಥಾನದ ತೇಜಸ್ಸು ಬಹಳ ವ್ಯಾಪಕವಾಯಿತು. ಅಮೀರರ ಸಹೋದರರಲ್ಲಿ ಪರಸ್ಪರ ಅಂತಃಕಲಹವೆಲ್ಲಾ ಶಾಂತವಾಗಿ ಸಖ್ಯತ್ವವು ನೆಲೆಗೊಂಡಿದೆ. ಆ ದೇಶದ ರಾಯಭಾರಿಗಳು ಯೂರೋಪುಖಂಡದ ರಾಷ್ಟ್ರಗಳ ಎಲ್ಲ ರಾಜಧಾನಿಗಳಲ್ಲೂ ಸಮಾನಸ್ಕಂದತೆಯಿಂದ ನೆಲಸಿರುವ ಗೌರವವು ಉಂಟಾದುದು ಇವರ ಕಾಲದಲ್ಲೇ. ಲಂಡನ್, ಪ್ಯಾರಿಸ್, ಬರ್ಲಿನ್ ಮೊದಲಾದ ಪಟ್ಟಣಗಳಲ್ಲಿ ಅಫ್ಘನ್ ರಾಜಪತಾಕೆಯು ಕುಣಿಯುವಂತಾದುದು ಈಗಲೇ. ಈಗಣ ಅಫ್ಘನ್ ಪ್ರಭುತ್ವವು ಸಮಯಸನ್ನಿವೇಶಗಳಿಗನುಸಾರವಾಗಿ ರಾಜತಂತ್ರದಲ್ಲಿ ಕೇವಲ ನಿಪುಣತೆಯನ್ನು ತೋರಿಸುತ್ತಿರುವುದರಿಂದಲೇ ಅದಕ್ಕೆ ಅಭೂತಪೂರ್ವವಾದ ವೈಭವವು ಪ್ರಾಪ್ತವಾಯಿತು. ಪ್ರಜೆಗಳ ಪ್ರೀತಿಯನ್ನು ಸಂಪಾದಿಸುವುದರಲ್ಲೂ ಅದು ಮೈಮರೆತಿರುವುದಿಲ್ಲ. ಪ್ರಜೆಗಳ ವಿದ್ಯಾಭಿವೃದ್ಧಿ ಸಂಪದಭಿವೃದ್ಧಿ ಸಂಚಾರಾನುಕೂಲ್ಯ ಮೊದಲಾದುವುಗಳ ಕಲ್ಪನೆಯಲ್ಲಿ ವಿಶೇಷಾಸಕ್ತಿಯನ್ನು ತೋರಿಸುತ್ತಿದೆ. ಮತ್ತು ತನ್ನ ಬಾಹುಬಲವನ್ನು ಪುಷ್ಟಿಗೊಳಿಸಿಕೊಳ್ಳುವುದರಲ್ಲೂ ತುಂಬಾ ವ್ಯಗ್ರವಾಗಿದೆ. ಈಚೆಗೆ ತಮ್ಮ ದೇಶದ ಹಿಂದುಗಳ ಮೇಲೆ ವಿಶೇಷಾಭಿಮಾನವನ್ನು ತೋರಿಸುವ ಒಂದು ಪ್ರಕಟನೆಯನ್ನು ಅಮೀರರು ಮಾಡಿರುವುದಾಗಿ ಸ್ವರಾಜ್ಯಪತ್ರಿಕೆಯಿಂದ ತಿಳಿದುಬರುತ್ತದೆ. ಆ ಪ್ರಕಟನೆಯ ವಿಧಾನಗಳೇನೆಂದರೆ—(1) ಹಿಂದುಗಳಾರನ್ನೂ ಬಲಾತ್ಕಾರದಿಂದ ಮಹಮ್ಮದೀಯ ಮತಕ್ಕೆ ಸೇರಿಸಿಕೊಳ್ಳಕೂಡದು (2) ಹಿಂದುಗಳೆಲ್ಲರೂ ತಮ್ಮ ಮತಪದ್ಧತಿಗನುಸಾರವಾಗಿ ಸ್ವೇಚ್ಛೆಯಿಂದ ನಡೆದುಕೊಳ್ಳಬಹುದು. ಹಿಂದುಗಳ ವ್ಯಾಜ್ಯಗಳು ಅವರ ಶಾಸ್ತ್ರನಿಯಮಕ್ಕನುಸಾರವಾಗಿಯೇ ಪರಿಷ್ಕರಿಸಲ್ಪಡುವುವು. (3) ಹಿಂದುಸ್ತ್ರೀಯರು ಅಫ್ಘನ್‌ರಾಜ್ಯದಲ್ಲಿ ಎಲ್ಲಿಬೇಕಾದರೂ ತಮಗೆ ಅನುಕೂಲವಾದ ಸ್ಥಳದಲ್ಲಿ ವಾಸಮಾಡಿಕೊಂಡಿರಬಹುದು. ಅವರನ್ನು ಪ್ರಭುತ್ವದವರು ಕಾಪಾಡುವರು. (4) ಶಿಥಿಲವಾಗಿ ಹಾಳಾಗಿರುವ ಹಿಂದೂ ಧರ್ಮಶಾಲೆಗಳನ್ನೆಲ್ಲಾ ಅಫ್ಘನ್ ಪ್ರಭುತ್ವದವರು ಜೀರ್ಣೋದ್ಧಾರಮಾಡಿಸುವರು. ಅವುಗಳಲ್ಲಿ ಯಾವ ಹಿಂದುಪ್ರಯಾಣಿಕರಾದರೂ ವಾಸಮಾಡಿಹೋಗಬಹುದು. (5) ಗೋವಧೆಯನ್ನು ಯಾರೂ ಮಾಡಕೂಡದು. ಸತ್ತ ಗೋವಿನ ಮಾಂಸವನ್ನು ಕೂಡ ಯಾರೂ ತಿನ್ನಕೂಡದು. (6) ಅಫ್ಘನ್ ರಾಜ್ಯದ ಯಾವ ಕಡೆಯಲ್ಲಾದರೂ ಹಿಂದುಗಳು ಭೂಮಿಯಾಸ್ತಿಯನ್ನು ಮಾಡಿಕೊಳ್ಳಬಹುದು. (7) ಮಹಮ್ಮದೀಯರಿಗೆ ಸಮನಾಗಿಯೇ ಹಿಂದುಗಳಿಗೂ ಕಂದಾಯಗಳು ವಿಧಿಸಲ್ಪಡುವುವೇ ಹೊರತು ಹಿಂದುಗಳಿಗೆ ಪ್ರತ್ಯೇಕವಾದ ಕಂದಾಯಗಳು ಹೇರಲ್ಪಡುವುದಿಲ್ಲ. (8) ಒಬ್ಬ ಹೆಂಗುಸೇ ಆಗಲೀ ಗಂಡುಸೇ ಆಗಲೀ ಮಹಮ್ಮದೀಯ ಮತವನ್ನವಲಂಬಿಸಿದರೆ ಅವರು ತಮ್ಮ ಗಂಡನನ್ನಾಗಲೀ ಹೆಂಡತಿಯನ್ನಾಗಲೀ ಮಹಮ್ಮದೀಯ ಮತಕ್ಕೆ ಸೇರಬೇಕೆಂದು ಬಲಾತ್ಕರಿಸಕೂಡದು. (9) ತಂದೆಯು ಬದುಕಿರುವಾಗ ಮಗನು ಮಹಮ್ಮದೀಯ ಮತವನ್ನವಲಂಬಿಸಿದರೆ ತಂದೆಯಾಸ್ತಿಯ ಮೇಲೆ ಮಗನಿಗೆ ಯಾವ ಹಕ್ಕೂ ಇರುವುದಿಲ್ಲ. ಮಗನಿಗೆ ಅವನ ಸ್ವಾರ್ಜಿತದ ಮೇಲೆ ಮಾತ್ರ ಹಕ್ಕಿರುವುದು. (10) ಹಿಂದುಗಳು ತಮಗೆ ಅವಶ್ಯಕತೆ ತೋರಿದಾಗಲೆಲ್ಲಾ ಅಫ್ಘನ್ ರಾಜ್ಯಕ್ಕೆ ನಿರುಪಾಧಿಕವಾಗಿ ಬಂದುಹೋಗಬಹುದು. ಯಾವ ಅಭ್ಯಂತರವನ್ನೂ ಅವರಿಗೆ ಮಾಡುವುದಿಲ್ಲ. (11) ಸರ್ಕಾರಿ ಉದ್ಯೋಗಗಳು ಹಿಂದುಗಳಿಗೂ ಮಹಮ್ಮದೀಯರಿಗೂ ಸಮಾನವಾಗಿಯೇ ಕೊಡಲ್ಪಡುವುವು. ಅವರ ಹಕ್ಕುಗಳು ಕೂಡ ಸಮನಾಗಿಯೇ ವಿಚಾರಿಸಲ್ಪಡುವುವು. (12) ಮಹಮ್ಮದೀಯರಿಗೆ ಉಂಟುಮಾಡಿಕೊಡುವ ಸೌಕರ್ಯಗಳನ್ನೆಲ್ಲಾ ಹಿಂದುಗಳಿಗೂ ಕೂಡ ಪ್ರಭುತ್ವದವರು ಉಂಟುಮಾಡಿಕೊಟ್ಟು ಶ್ರದ್ಧೆಯಿಂದ ಈರ್ವರನ್ನೂ ಸಮಾನವಾಗಿ ಕಾಣುವರು.

ಈ ಮೇಲೆ ಕಂಡ ಪ್ರಕಟನೆಯು ಈಗಣ ಅಮೀರರ ಸರ್ವಪ್ರಜಾಸಮಾನ ವಾತ್ಸಲ್ಯವನ್ನೂ ಜನಮನೋರಂಜನ ಗುಣಾತಿಶಯವನ್ನೂ ಚೆನ್ನಾಗಿ ವ್ಯಕ್ತಪಡಿಸುತ್ತಿದೆ. ಪ್ರಕೃತದಲ್ಲಿ ಖಿಲಾಪತ್ತಿನ ಸಂಬಂಧವಾಗಿ ಮಹಮ್ಮದೀಯರ ಜತೆಗೆ ಭರತಖಂಡದ ಹಿಂದುಗಳೂ ಸೇರಿ ಕೆಲಸಮಾಡುತ್ತಿರುವುದರ ಪ್ರತಿಫಲಕ್ಕಾಗಿಯೋ ಅಥವಾ ಪ್ರೋತ್ಸಾಹಕ್ಕಾಗಿಯೋ ಇಂಥ ಉದಾರಶಾಸನವನ್ನು ಅಮೀರರು ಪ್ರಕಟಗೊಳಿಸಿರುವರೆಂದು ಭಾವಿಸಲವಕಾಶವಿದ್ದರೂ ಅದು ಕೂಡ ಕಪಟವೇನೂ ಅಲ್ಲ. ಉಪಕಾರಕ್ಕೆ ಅಪಕಾರವನ್ನೆಸಗುವವರಿಗಿಂತ ಪ್ರತ್ಯುಪಕಾರವನ್ನು ಮಾಡಬೇಕೆನ್ನುವವರೇ ಉತ್ತಮರಲ್ಲವೆ?

ಹಿಂದೂಮಹಮ್ಮದೀಯ ಕಲಹ.

ಒಂದುಕಡೆ ಹಿಂದೂಮಹಮ್ಮದೀಯ ಮೈತ್ರೀವೃದ್ಧಿಗೆ ಮಹನೀಯರು ಹೀಗೆ ದೊಡ್ಡದೊಡ್ಡ ಪ್ರಯತ್ನಗಳನ್ನು ಮಾಡುತ್ತಿರುವಾಗ ಮತ್ತೊಂದೊಂದು ಕಡೆಯಲ್ಲಿ ಅವೆರಡು ಸಂಘಗಳ ಮಧ್ಯೆ ಕಲಹವು ಬೆಳೆದು ಅನರ್ಥವಾಗುವುದಕ್ಕೆ ಸಾಮಾನ್ಯಜನಗಳು ಕಾರಣರಾಗುತ್ತಿರುವುದು ತಪ್ಪಿಲ್ಲ. ಪಂಜಾಬಿನಲ್ಲಿ ಹಿಂದೂಮಹಮ್ಮದೀಯರೊಳಗೆ ಸಖ್ಯವು ಅಷ್ಟಕ್ಕಷ್ಟರಲ್ಲೇ ಇದೆ. ಉಭಯವರ್ಗಗಳ ಮಧ್ಯದ ವೈಮನಸ್ಯಾಗ್ನಿಯು ಕವರುತ್ತಲೇ ಇದೆ. "ಕಳೆದ ಮೊಹರಂ ಹಬ್ಬದ ಕಡೆಯ ದಿನವಾದ ತಾ|| 3 ರಲ್ಲಿ ಮುಲ್ತಾನಿನೊಳಗೆ ಹಿಂದುಗಳಿಗೂ ಮಹಮ್ಮದೀಯರಿಗೂ ಕಲಹವಾಗಿ ಬಹುಮಂದಿಗಳು ಸತ್ತರು. ಅನೇಕರಿಗೆ ಗಾಯಗಳಾಗಿವೆ. ಅಂಗಡಿಗಳನ್ನೂ ಹಲವು ಮನೆಗಳನ್ನೂ ಸೂರೆಮಾಡಿದರು. ಹಲವು ಅಂಗಡಿಗಳಿಗೆ ಬೆಂಕಿಯಿಕ್ಕಿ ಪೂರ್ಣವಾಗಿ ಸುಟ್ಟುಬಿಟ್ಟರು. ಹಿಂದೂ ದೇವಾಲಯಗಳನ್ನೂ ಧರ್ಮಶಾಲೆಗಳನ್ನೂ ಭ್ರಷ್ಟಗೊಳಿಸಿಬಿಟ್ಟರು. ಅನೇಕಮಂದಿ ಹೆಂಗುಸರೂ ಮಕ್ಕಳೂ ಏನಾದರೋ ಗೊತ್ತಿಲ್ಲ. ಪ್ರಭುತ್ವದವರು ಸೈನ್ಯವನ್ನು ಕಳುಹಿಸಿ ಪ್ರಜೆಗಳನ್ನು ರಕ್ಷಿಸುತ್ತಿದ್ದಾರೆ. ರಾತ್ರಿ 9 ಗಂಟೆಯಾದ ಮೇಲೆ ಹೊರಗೆ ಯಾರೂ ತಿರುಗಕೂಡದೆಂದು ಆಜ್ಞಾಪಿಸಿದ್ದಾರೆ" ಎಂಬುದಾಗಿ ಪ್ರಭುತ್ವದವರು ಮಾಡಿರುವ ಪ್ರಕಟನದಿಂದಲೂ ಮುಲ್ತಾನ್‌ಕಾಂಗ್ರೆಸ್ ಸಂಘದವರು ಮಾಡಿರುವ ಪ್ರಕಟನದಿಂದಲೂ ತಿಳಿಯಬಂದಿದೆ.

ಮತ್ತೊಂದು ಕಡೆ.

ಕಲ್ಕತ್ತಾವಿಗೆ ೨೦ ಮೈಲಿಗಳ ದೂರದಲ್ಲಿರುವ ಹೂಗ್ಲಿ ಜಿಲ್ಲೆಗೆ ಸೇರಿದ ತೆಲಿನಿಪರಾ ಎಂಬ ಪಟ್ಟಣದಲ್ಲಿ ಕಳೆದ ಬಕ್ರೀದಿನಲ್ಲಿ ಮುದ್ರೆಯೊತ್ತಿಬಿಟ್ಟಿದ್ದ ಬಸವನನ್ನು ಮಹಮ್ಮದೀಯರು ಹಿಡಿದು ಕೊಂದುಹಾಕಿದರಂತೆ. ಅದರಿಂದ ಹಿಂದುಗಳು ಕ್ಷುಬ್ಧರಾಗಿದ್ದರು; ಎರಡು ಕಡೆಯವರಿಗೂ ಮಸೆಯುತ್ತಿದ್ದಿತು. ಕಳೆದ ಮೊಹರಂ ಹಬ್ಬದಲ್ಲಿ ದೊಡ್ಡ ಕಲಹವಾಗುವುದೆಂಬ ಚಿಹ್ನೆಗಳು ತೋರುತ್ತಿದ್ದವು. ಪ್ರಭುತ್ವದವರು ತಕ್ಕ ಏರ್ಪಾಟನ್ನು ಮಾಡಿದ್ದರು. ತಾ|| 3ರ ಸಾಯಂಕಾಲ ಚಾಬಖ್ಯಗಳ ಮೆರವಣಿಗೆಯು ಬೀದಿಯಲ್ಲಿ ಹೋಗುತ್ತಿರುವಾಗ ನದೀತೀರದಲ್ಲಿರುವ ಹಿಂದೂ ದೇವಾಲಯದ ಬಳಿಯಲ್ಲಿ ಬಹುಮಂದಿ ಹಿಂದುಗಳು ಸೇರಿ ಉಪನ್ಯಾಸಮಾಡುತ್ತಿದ್ದರು. ಆ ದೇವಾಲಯದ ಬಳಿಗೆ ಮಹಮ್ಮದೀಯರ ಗುಂಪು ನುಗ್ಗುವುದಕ್ಕೆ ತೊಡಗಲು ಪೊಲೀಸರು ತಡೆದರು. ಅದನ್ನು ಲಕ್ಷಿಸದೆ ಅವರು ಮುಂದಕ್ಕೆ ನುಗ್ಗಿದರು. ಮತ್ತು ಭದ್ರೇಶ್ವರದ ಪೊಲೀಸ್ ಸಬ್ ಇನ್‌ಸ್ಪೆಕ್ಟರನ್ನೂ ಪೊಲೀಸಾಳುಗಳನ್ನೂ ಮಹಮ್ಮದೀಯರು ದೊಣ್ಣೆಗಳಿಂದ ಬಡಿದರು, ಮತ್ತು ಹಿಂದುಗಳ ಗುಂಪಿನ ಮೇಲೆ ಮಹಮ್ಮದೀಯರು ಕಲ್ಲುಗಳನ್ನು ಬೀರಿದರು. ಅವರೂ ಇವರ ಗುಂಪಿನ ಮೇಲೆ ಬೀರಿದರು. ಹಿಂದುಗಳಿಗೆ ಬಹಳ ಬಲವಾದ ಏಟುಗಳು ಬಿದ್ದುವು. ಸಾಯುಧರಾದ ಗೂರ್ಖಾ ಪೊಲೀಸರು ಅಲ್ಲಿಗೆ ಬರುವುದರೊಳಗೆ ಮಹಮ್ಮದೀಯರ ಗುಂಪು ಅಂಗಡಿ ಮನೆಗಳಿಗೆ ನುಗ್ಗಿ ಬಹುಶಃ 100 ಅಂಗಡಿಗಳನ್ನೂ 50 ಮನೆಗಳನ್ನೂ ಸೂರೆಮಾಡಿ ಸಾಮಗ್ರಿಗಳನ್ನೆಲ್ಲಾ ಬೀದಿಗೆ ಚೆಲ್ಲಿಬಿಟ್ಟರು. ಆ ಬೀದಿಯಲ್ಲಿ ವಾಸವಾಗಿದ್ದ ಜನರೆಲ್ಲಾ ಮನೆ ಮಾರುಗಳನ್ನು ಬಿಟ್ಟು ಓಡಿಹೋದರು. ಅಷ್ಟರಲ್ಲಿ ಗೂರ್ಖಾ ಪೊಲೀಸು ಸೈನ್ಯವು ಬರಲು ಗುಂಪು ಚದುರಿಹೋಯಿತು. ಬಳಿಕ ಅರ್ಧರಾತ್ರಿಯ ಮೇಲೆ ಮತ್ತೆ ಹೋರಾಟಕ್ಕೆ ಆರಂಭವಾಯಿತು. ಆಗಲೂ ಗೂರ್ಖಾ ಸೈನ್ಯವು ಬಂದು ಚದರಿಸಿತು. ಬರದ್ವಾನ್ ಡಿವಿಜನ್ ಕಮಿಷನರೂ, ಜಿಲ್ಲಾ ಮೇಜಿಸ್ಟ್ರೇಟರೂ ಪೊಲೀಸ್ ಡೆಪ್ಯುಟಿ ಇನ್|| ಜನರಲ್‌ರವರೂ ಅಲ್ಲಿಗೆ ಹೋದರು. ಗಾಯಗೊಂಡಿದ್ದವರಿಗೆಲ್ಲಾ ತಕ್ಕ ಚಿಕಿತ್ಸೆಗೆ ಏರ್ಪಡಿಸಿದರು. ಭಯದಿಂದ ಓಡಿಹೋಗಿದ್ದವರನ್ನೆಲ್ಲಾ ಅವರವರ ಮನೆಗೆ ಸೇರಿಸಿದರು. 4ನೆ ತಾರೀಖಿನಲ್ಲೂ ಸ್ವಲ್ಪ ಜಗಳವಾಯಿತು. ಪೊಲೀಸರು ಅಡಗಿಸಿದರು. ಇನ್ನೂ ಹೋರಾಟವಾಗಬಹುದೆಂದು ಪುರಜನರು ಭಯಸ್ಥರಾಗಿದ್ದಾರೆ. ತಾ|| 3ರಲ್ಲಿ ನಡೆದ ಜಗಳದಲ್ಲಿ ಒಬ್ಬ ಹಿಂದೂ ವರ್ತಕನು ಸತ್ತನು. 53 ಮಂದಿ ಹೆಂಗುಸರು ಗಂಡುಸರುಗಳಿಗೆ ಗಾಯಗಳಾಗಿವೆ. 12 ಮಂದಿ ಪೊಲೀಸರಿಗೂ ಕೂಡ ಏಟುಗಳು ಬಿದ್ದಿವೆ. ಅನೇಕ ಮಂದಿ ಹೆಂಗುಸರು ಧರಿಸಿದ್ದ ನಗಗಳನ್ನು ಗುಂಪಿನವರು ಕಿತ್ತುಕೊಂಡರು. ಯಾರನ್ನೂ ಪೊಲೀಸರು ಹಿಡಿದಿಲ್ಲ, ಮಹಮ್ಮದೀಯರಲ್ಲಿ ಯಾರಿಗೂ ಗಾಯವಾದಂತಿಲ್ಲ. ಇನ್ನೆರಡು ತಿಂಗಳವರೆಗೂ ಯಾರೂ ಸಭೆಗಳನ್ನು ಲೈಸೆನ್ಸಿಲ್ಲದೆ ನಡೆಯಿಸಕೂಡದೆಂದೂ ದೊಣ್ಣೆಗಳನ್ನೂ ಕತ್ತಿಗಳನ್ನೂ ಹಿಡಿದು ತಿರುಗಾಡಕೂಡದೆಂದೂ ರಾತ್ರಿ 9 ಗಂಟೆಮೇಲೆ ಬೆಳಗಿನ ಜಾವ 4 ಗಂಟೆಯವರೆಗೂ ಪೊಲೀಸರ ಹೊರತು ಮತ್ತಾರೂ ಬೀದಿಗಳಲ್ಲಿ ಸಂಚರಿಸಕೂಡದೆಂದೂ ಸರ್ಕಾರದವರು ಪ್ರಕಟಿಸಿದ್ದಾರೆ. ಸಾಯುಧರಾದ ಪೊಲೀಸರು ಕಾವಲಿದ್ದಾರೆ, ಅಲ್ಲಲ್ಲಿ ಸಣ್ಣಪುಟ್ಟ ಜಗಳಗಳು ಆಗುತ್ತಲೇ ಇವೆ.

ಗಂಗಾನದಿಯ ಅನಾಹುತ.

ಕಳೆದ 30 ವರ್ಷಗಳಲ್ಲಿ ಯಾವಾಗಲೂ ಬರದಿದ್ದಷ್ಟು ಮಿತಿಮೀರಿದ ಪ್ರವಾಹವು ಕಳೆದ ವಾರ ಗಂಗಾನದಿಯಲ್ಲಿ ಹುಟ್ಟಿ ತೀರದಲ್ಲಿರುವ ಪುರ ಗ್ರಾಮ ಹೊಲ ತೋಟ ಗದ್ದೆಗಳನ್ನೆಲ್ಲಾ ಹಾಳ್ಮಾಡಿದ ಭಯಂಕರವಾದ ಸುದ್ದಿಯು ಬಂದಿರುತ್ತದೆ. ಹಿಂದೆ 1880ನೆ ವರ್ಷದಲ್ಲಿ ವಿಶೇಷಾನರ್ಥವನ್ನು ಮಾಡಿದ್ದ ಹುಚ್ಚು ಹೊಳೆಗಿಂತಲೂ ಇದು ಮೀರಿದುದಾಗಿದೆ. ನದಿಯ ಆಚೆ ಈಚೆ ಪ್ರಾಂತಗಳಿಗೆ ಯಾವ ಸುದ್ದಿಯು ಹೋಗುವುದಕ್ಕೂ ಅವಕಾಶವಿಲ್ಲ. ದಡದ ಗ್ರಾಮಗಳ ಮನೆ ಮಠಗಳೆಲ್ಲಾ ಜಲಸಮಾಧಿಗೊಂಡಿವೆ. ದನ ಕರು ಮೇಕೆ ಮೊದಲಾದ ಪ್ರಾಣಿಗಳೆಷ್ಟೋ ಕೊಚ್ಚಿಹೋದುವು. ನಿಂತಿದ್ದ ಪೈರು ಪಚ್ಚೆಗಳೆಲ್ಲಾ ನಿರ್ನಾಮವಾದುವು. ಎಷ್ಟು ಜನ ಹಾನಿಯಾಯಿತೋ ಗೊತ್ತಿಲ್ಲ. ಅನೇಕರು ಮರಗಳನ್ನೇರಿಕೊಂಡು ಹಗಲೂ ರಾತ್ರಿ ಆಹಾರವಿಲ್ಲದೆ ಅಲ್ಲೇ ಕಾಲಹರಣಮಾಡಿದರು. ಹೊಳೆಯಲ್ಲಿ ತೇಲಿಹೋಗುತ್ತಿದ್ದವರನ್ನು ಸಾಧ್ಯವಾದ ಮಟ್ಟಿಗೆ ರಕ್ಷಿಸಲಿಕ್ಕೆ ಹಗ್ಗಗಳನ್ನೂ ತೆಪ್ಪಗಳನ್ನೂ ಸಹಾಯಗೊಳಿಸಿದರು. ಔಡ್ ಮತ್ತು ರೋಹಿಲ್‌ಖಂಡ್ ಲೋಹಮಾರ್ಗದಲ್ಲಿ 700 ಅಡಿಗಳ ದೂರ ಮಾರ್ಗವು ಕೊಚ್ಚಿಹೋಗಿದೆ. ಅದುಕಾರಣ ಪ್ರಯಾಣಿಕರನ್ನೂ ಅಂಚೆಯನ್ನೂ ಒಂದು ಕಡೆಯಿಂದ ಇಳಿಯಿಸಿ ಮತ್ತೊಂದು ಕಡೆಯಲ್ಲಿ ಬಂದು ನಿಂತಿರುವ ಬಂಡಿಗೆ ಹತ್ತಿಸಿ ಸಾಗಿಸುತ್ತಿದ್ದಾರೆ. ಕಾಣ್‌ಪೂರ್ ನೇನಿಟಾಲ್ ಮಾರ್ಗವೂ ಕೂಡ ಹಲವು ಕಡೆ ನೀರಿನಲ್ಲಿ ಮುಳುಗಿ ಎತ್ತಿನ ಬಂಡಿಗಳೂ ಮೋಟಾರುಗಳೂ ಕೂಡ ತಿರುಗಲವಕಾಶವಿಲ್ಲವಾಗಿದೆ. ತಿಲಕಪುರ, ಭಿಕ್ಕಾಪುರ, ಸಾಲೆಂಪುರ, ತಾಜ್ಪುರ, ರಿಜ್ವಾರುಕೋಟೆ, ಜಾರ್ವಾಲಾಗ್ರಾಮಗಳು ಇವೆಲ್ಲಾ ಮುಳುಗಿಹೋಗಿವೆ. ಜಿಲ್ಲಾ ಬೋರ್ಡಿನವರು ವಿಪನ್ನರಿಗೆ ಅನ್ನಾಹಾರಗಳನ್ನೂ ಬಟ್ಟೆಬರೆಗಳನ್ನೂ ವಸತಿಗಳನ್ನೂ ಕಲ್ಪಿಸಿಕೊಡುವುದಕ್ಕೆ ಬಹಳ ಶ್ರಮಪಡುತ್ತಿದ್ದಾರೆ. ದೋಣಿಗಳ ಸಹಾಯದಿಂದ ಎಷ್ಟೋಮಂದಿಗಳ ಪ್ರಾಣವನ್ನು ಕಾಪಾಡಿದರು. ಮ್ಯುನ್ಸಿಪಲ್ ಸಂಘಗಳು ಕೂಡ ತುಂಬಾ ಸಹಾಯಮಾಡುತ್ತಿವೆ. ಮಳೆಯು ಇನ್ನೂ ನಿಲ್ಲದೆ ಹಿಡಿಯುತ್ತಿರುವುದರಿಂದ ಕಳೆದುಳಿದ ಜನರಿಗೆ ನಿಲ್ಲುವುದಕ್ಕೆ ಆಶ್ರಯವೂ ಇಲ್ಲವಾಗಿದೆ. ಹೊಳೆಯು ಈಚೆಗೆ ಸ್ವಲ್ಪ ತಗ್ಗುತ್ತ ಬಂದಿದೆ. ಮನೆಮಠಗಳನ್ನು ಕಳೆದುಕೊಂಡವರು ಬೇರೆ ಬೇರೆ ಊರುಗಳಿಗೆ ಹೋಗಿ ವಾಸಮಾಡಿಕೊಂಡಿದ್ದಾರೆ.

THE NEW PRINCESS.

We heartily congratulate His Highness the Yuvaraja of Mysore on his getting a daughter on the 28th August 1922. The birth of the Royal Princess which took place at 5-55 P.M. that day was announced with a salute of 21 guns from the Palace Battery and the litting up of the Palace and important buildings in the City. It was a day of universal rejoicing in the State. On the fifth day after the birth the ceremony of horoscope writing was gone through and there was a generous distribution of sugar throughout the capital city and the schools and offices in the city were closed. The Namakarana ceremony of the Princess took place on the 8th September 1922 when a Durbar of the kinsmen of His Highness the Maharaja was held in the Palace and the Princess was named Vijayalaxmammanni. The poor in the city ware fed and clothed the same day. It was a little over three years ago that His Highness the Yuvaraja got an Heir apparent and it has given the greatest delight to the subjects of His Highness the Maharaja to see the growth and progress of Jayachamaraja Wodaiyar. It would give all the greater pleasure to the people of Mysore to watch the progress of the little Princess side by side with her Royal brother. We join the chorus of prayer along with the people of Mysore in invoking the blessings of the Almighty on both of them for their long life, happiness and prosperity.

ARTHASADHAKA PATRIKE.

In one of the recent issues of the *Arthasadhaka Patrike* its able Editor Mr. M. Gopal Iyengar has announced that he has retired from the editorship of the paper and severed his connection with the publication of the same, and we find that as a result of it the last week's issue has not come out. We see no reason why Mr. Gopal Iengar who had worked with so much energy and enthusiasm and made the *Patrike* so very instructive and readable and whom the public know to be devoted to the progress of the State should have been driven to the extreme necessity of severing all his connection with the *Patrike* unless he had very valid reasons for doing so. We believe there was some agreement between the Government and Mr. Gopal Iengar–and it is not unlikely that his freedom in the conduct of the paper to which he was entitled was interfered with, and the support and encouragement which he deserved was denied to him. We could confidently say that under Mr. Gopal Iengar's experienced editorship and direction the *Arthasadhaka Patrike* became a very useful and beneficial organ of public enlightenment, and it would be a great pity and public loss if his severance is going to be a settled fact.

We hear that it is under contemplation to hand over its publication and editorship to either Mr. Hayavadan Rao of the *Economic Journal* fame or Mr. D. V. Gundappa of the Ex *Karnataka* fame. Well, it is no business of ours to speak of the merits or otherwise of either of them. But this much we can confidently say that if ever it is to happen the quality of the paper is sure to deteriorate and scissoring and pasting will commence once again. The continuous changing of editorship is the one thing to be avoided in journalism and where it is to be removed from the hands of so able, so zealous and so experienced a man like Mr. Gopal Iengar it is doubly regrettable. There are very few in the State who can lay claim to the same wide knowledge of economic conditions of India and journalistic experience as Mr. Gopaliengar and we hope that the Government will see its way to retain the services of Mr. Gopaliengar by giving him a freer hand and greater encouragement and continue its mission of usefulness to agriculturists and indistrialists.

ಸ್ವದೇಶದ ವೃತ್ತಾಂತಗಳು.

ಕಳದ ವಾರ ನಂಜನಗೂಡು ಕಪಿಲಾ ನದಿಯಲ್ಲಿ 2 ಅನಾಹುತಗಳು ನಡೆದುವು. ನದಿಗೆ ಮನೆಯವರೊಡನೆ ಹೋಗಿದ್ದ 7 ವರ್ಷದ ಬ್ರಾಹ್ಮಣ ಕನ್ಯೆಯೊಂದು ಅಲ್ಲಿಯ ತೆಪ್ಪಕಡುವಿನಲ್ಲಿ ಕಾಲುಜಾರಿ ಮಗುಚಿಕೊಂಡು ನೀರುಸುಳಿಗೆ ಸಿಕ್ಕಿ ಅಡಿಯನ್ನು ಸೇರಿ ಸತ್ತಿತು. ಹುಣ್ಣಿಮೆಯ ಸೇವೆಗಾಗಿ ಮೈಸೂರಿನ ಒಂಟಿಕೊಪ್ಪಲಿನಿಂದ ಹೋಗಿದ್ದ ಒಕ್ಕಲಿಗರಜಾತಿಯ ಪ್ರಾಯಸ್ಥನೊಬ್ಬನು ಅದೇ ಸ್ಥಳದಲ್ಲಿ ಸ್ನಾನಕ್ಕಿಳಿದು ಸುಳಿಗೆ ಸಿಕ್ಕಿ ಮಾಯವಾದನು.

ಅಂಗೋರಾ ಕಮಲ್ ಪಾಷಾರವರಿಗೆ ಜಯವನ್ನು ಕೋರಿ ದೇವತಾಪ್ರಾರ್ಥನೆಯನ್ನು ತಾ|| 8 ನೇ ಶುಕ್ರವಾರ ರಾತ್ರಿ 8 ರಿಂದ 9 ಗಂಟೆಯವರೆಗೆ ಸರ್ವತ್ರ ಮಹಮದೀಯರು ನಡೆಯಿಸಬೇಕೆಂದು ಯಾವದ್‌ಭಾರತ ಖಿಲಾಫತ್ ಸಂಘದವರು ಪ್ರಕಟಿಸಿದ್ದ ಪ್ರಕಾರಕ್ಕೆ ರಾಜಧಾನಿಯ ಮಹಮ್ಮದಿಯರೂ ನಡೆಯಿಸಿದರು. ದೊಡ್ಡಪೇಟೆಯ ಮಸೀದಿಯಲ್ಲಿ ಹಗಲು ಅನ್ನದಾನವು ಮಾಡಲ್ಪಟ್ಟಿತು. ಬೀದಿಯನ್ನೆಲ್ಲಾ ರಾತ್ರಿ ಧ್ವಜತೋರಣಗಳಿಂದಲೂ ಗ್ಯಾಸ್ ದೀವಿಗೆಗಳಿಂದಲೂ ಶೃಂಗರಿಸಿದ್ದರು.

ರಾಜಧಾನಿಯ ಮ್ಯುನ್ಸಿಪಲ್ ಪ್ರೆಸಿಡೆಂಟರಿಗೆ ಹೊಸಹೊಸ ತೆರುಗೆಗಳನ್ನು ಪ್ರಜೆಗಳ ಮೇಲೆ ಹೇರಲು ಬಹಳ ಇಷ್ಟ. ಮನೆಗಳಿಗೆ ತಿಂಗಳೊಂದಕ್ಕೆ 4 ಆಣೆಗೆ ಕಡಿಮೆಯಿಲ್ಲದಂತೆ ಕಕ್ಕಸ್ ತೆರುಗೆಯನ್ನು ವಿಧಿಸಿದರೆ ಅದರಿಂದಲೂ ಗೊಬ್ಬರದ ಮಾರಾಟದಿಂದಲೂ ವರ್ಷಕ್ಕೆ 12 ಸಾವಿರ ರೂಪಾಯಿಗಳು ಉತ್ಪತ್ತಿಯಾಗುವುದೆಂದು ಕಳೆದ ಮೀಟಿಂಗಿನಲ್ಲಿ ಒಂದು ತೀರ್ಮಾನವನ್ನು ಅವರು ತಂದರು. ಬಹುಮಂದಿ ಮೆಂಬರರು ಅದಕ್ಕೆ ಒಪ್ಪದೆ ಹೋದುದರಿಂದ ಅದು ನಿಂತುಹೋಯಿತು.

ಕಳೆದ ಶುಕ್ರವಾರ ಅರಮನೆಯಲ್ಲಿ ರಾಜ ಕುಮಾರಿಯವರಿಗೆ ನಾಮಕರಣಮಹೋತ್ಸವವು ನಡೆದಿತು. "ವಿಜಯಲಕ್ಷ್ಮಮ್ಮಣ್ಣಿ"ಯವರೆಂದು ಹೆಸರು ಇಡಲ್ಪಟ್ಟಿತು. ಈ ಉತ್ಸವ ಪ್ರಯುಕ್ತವಾಗಿ ಸಂತೆಪೇಟೆಯಲ್ಲಿ ವರ್ತಕರು ಬಡಬಗ್ಗರಿಗೆ ಉದಾರವಾಗಿ ಅನ್ನದಾನ ಮಾಡಿಸಿದರು. ಹಳೆ ಅಗ್ರಹಾರದಲ್ಲಿ ಲಿಂಗಧಾರಿಗಳೇ ಮೊದಲಾದ ವರ್ತಕರು ಶಿವಭಕ್ತರಿಗೂ ಇತರ ಬಡಬಗ್ಗರಿಗೂ ಅನ್ನದಾನ ಮಾಡಿಸಿದರು. ಇದಕ್ಕೆ ಮ್ಯುನ್ಸಿಪಾಲಿಟಿಯಿಂದಲೂ ಸ್ವಲ್ಪ ಧನಸಹಾಯವು ಮಾಡಲ್ಪಟ್ಟಿತು. ರಾತ್ರಿ ಅರಮನೆಯ ಮೇಲೂ ಟವನ್‌ಹಾಲು ಮೊದಲಾದ ಕಟ್ಟಡಗಳಮೇಲೂ ವಿದ್ಯುದ್ದೀಪಾವಳಿಯು ಹೊತ್ತಿಸಲ್ಪಟ್ಟಿತು.

ವರ್ತಮಾನ ಸಂಗ್ರಹ.

ರೈಲ್ವೆ ಬಾಡಿಗೆಗಳನ್ನು ಹೆಚ್ಚಿಸಿದರೆ ಆದಾಯವು ವೃದ್ಧಿಯಾಗುವುದೆಂದು ಇಂಡ್ಯಾ ಸರ್ಕಾರದವರು ಭಾವಿಸಿ ಹೆಚ್ಚಿಸಿದರು. ಆದರೆ ಪರಿಣಾಮವು ಅದಕ್ಕೆ ವ್ಯತಿರಿಕ್ತವೇ ಆಗಿದೆ. ಹೇಗೆಂದರೆ—ಕಳೆದ ಏಪ್ರಿಲ್ ತಾ|| 1ರಿಂದ ಜೂಲೈ ತಾ|| 20ರ ವರೆಗೆ ಒಟ್ಟು 295 ಕೋಟಿ ರೂ. ಗಳ ವರಮಾನವಾಗಿದೆ. ಇದು ಅವರು ನಿರೀಕ್ಷಿಸಿಕೊಂಡಿದ್ದುದಕ್ಕಿಂತಲೂ 3 ಕೋಟಿ ಕಡಿಮೆಯಾಯಿತು.

ತುರ್ಕಿ ಗ್ರೀಕ್-ಸಂಧಿಪರಿಷ್ಕಾರಕ್ಕಾಗಿ ವೆನಿಸ್‌ಪಟ್ಟಣದಲ್ಲಿ ಮಿತ್ರಮಂಡಲೀ ಸಮಾವೇಶವಾಗಬೇಕೆಂದು ನಿಶ್ಚಯವಾಗಿದೆ. ಇದಕ್ಕಾಗುವ ವೆಚ್ಚದಲ್ಲಿ ⅓ ಭಾಗವನ್ನು ಫ್ರಾನ್ಸು ವಹಿಸಿಕೊಳ್ಳಬೇಕೆಂದು ತಿಳಿಯಿಸಿದ್ದರು. ಆಂಗ್ಲರು ಈ ಸಂಬಂಧದಲ್ಲಿ ಮಾಡಿರುವ ಸೂಚನೆಗಳೆಲ್ಲಾ ಫ್ರಾನ್ಸಿನವರು ಒಪ್ಪಿಕೊಂಡುದು ಮಾತ್ರವಲ್ಲದೆ ಗ್ರೀಕರು ಮೊದಲು ಆಸ್ಯಾಮೈನರನ್ನು ಬಿಟ್ಟು ತೊಲಗಬೇಕೆಂದು ತಿಳಿಯಿಸಿದ್ದಾರೆ. ಇದರಿಂದ ಫ್ರೆಂಚರು ತುರ್ಕಿ ಪಕ್ಷಪಾತಿಗಳಾಗಿರುವುದು ವ್ಯಕ್ತವಾಗುತ್ತದೆ.

ಆಂಗ್ಲ ಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರು ಯುದ್ಧಸಂಬಂಧದ ಚರಿತ್ರವನ್ನೂ ರಣನೀತಿಯನ್ನೂ ಕುರಿತು ಒಂದು ಗ್ರಂಥವನ್ನು ಬರೆದಿದ್ದಾರೆ. ಇದನ್ನು ಪ್ರಕಟಿಸಿ ಧನಸಂಪಾದನೆ ಮಾಡಿಕೊಳ್ಳುವ ಅಧಿಕಾರವನ್ನು ಪಡೆಯುವವರು 20–30 ಲಕ್ಷ ರೂ. ಗಳನ್ನು ಲಾಯಿಡ್ ಜಾರ್ಜ್‌ರವರಿಗೆ ಕೊಡುವುದರಲ್ಲಿದ್ದಾರೆ. ಇದರಿಂದ ಬಂದ ಧನವನ್ನೆಲ್ಲಾ ಅವರು ಯುದ್ಧದಲ್ಲಿ ಮೃತರಾಗಿ ಅಥವಾ ಅಂಗವಿಕಲರಾಗಿ ಹೋಗಿರುವವರ ಕುಟುಂಬದವರ ಜೀವಿತಕ್ಕಾಗಿ ವಿನಿಯೋಗಿಸುವವರಾಗಿದ್ದಾರಂತೆ.

"ರಾಜಕುರು (ಕಾರ್ಬಂಕಲ್) ಗಳಿಗೆ ಸೀತಾಫಲದ ಗಿಡದ ಎಲೆಗಳನ್ನು ಜಜ್ಜಿ ತೆಗೆದ ರಸವನ್ನು ಹುಣ್ಣಿನಮೇಲೆಲ್ಲಾ ಸವರಿ ಬಳಿಕ ಎಲೆಗಳನ್ನು ಚೂರುಚೂರಾಗಿ ಕತ್ತರಿಸಿ ನೀರಿನ ಆವಿಯಲ್ಲಿ ಬಾಡಿಸಿ ಅದನ್ನೇ ಪೋಲ್ಟೀಸನ್ನಾಗಿ ಹುಣ್ಣಿನಮೇಲೆ ಕಟ್ಟಬೇಕು. ಹೀಗೆ ದಿನಕ್ಕೆ 2 ಆವೃತ್ತಿ ಮಾಡಬೇಕು. ಇದರಿಂದ ಮೊದಲನೆಯದಾಗಿ ಕಾಣುವ ಗುಣದ ಗುರ್ತೇನೆಂದರೆ—ಗಾಯದ ಸುತ್ತಲೂ ಚಕ್ರಾಕಾರವಾಗಿ ಬಿಳಿಯಗುರ್ತು ಕಂಡುಬರುವುದು. ಬಳಿಕ ದಿನಕ್ರಮೇಣ ಸಂಪೂರ್ಣ ಗುಣವಾಗು

ವುದು'' ಎಂದು ಬೊಂಬಾಯಿಯ ಒಬ್ಬ ಪ್ರಸಿದ್ಧ ಡಾಕ್ಟರು ಸ್ವಾನುಭವದಿಂದ ಪ್ರಕಟಿಸಿರುತ್ತಾರೆ.

ಸುಪ್ರಸಿದ್ಧವಾದ ಅಮೃತಬಜಾರ್ ಪತ್ರಿಕೆಯ ಮುಖ್ಯ ಸಂಪಾದಕರೂ ಕರ್ತರೂ ಆಗಿದ್ದ ಬಾಬುಮೋತೀಲಾಲ್ ಘೋಷರು ಕೆಲ ತಿಂಗಳಿಂದ ಅಸ್ವಸ್ಥರಾಗಿದ್ದು ಕಳೆದ ತಾ|| 5 ನೇ ಮಂಗಳವಾರ ಕಲ್ಕತ್ತಾಪಟ್ಟಣದಲ್ಲಿ ತಮ್ಮ 77ನೇ ವಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರು ಮಾಡಿದ ದೇಶಸೇವೆಯು ಅಗಾಧವಾದುದು. ಅಮೃತಬಜಾರ್ ಪತ್ರಿಕೆಯು ಹಾಸ್ಯರಸೋಕ್ತಿಗಳಿಂದಲೂ ಸಮಯೋಚಿತವಾದ ಕಥಾದೃಷ್ಟಾಂತಗಳಿಂದಲೂ ಅಧಿಕಾರಿಗಳ ಗುಣದೋಷ ವಿಮರ್ಶೆ ಮಾಡುವಲ್ಲಿ ಎಷ್ಟು ಅದ್ಭುತವಾದ ಶಕ್ತಿಯನ್ನು ಪಡೆದಿತ್ತೆಂಬುದನ್ನು ಆಂಗ್ಲಭಾಷಾಭಿಜ್ಞರೆಲ್ಲರೂ ಬಲ್ಲರು. ಅಮೃತಬಜಾರ್ ಪತ್ರಿಕೆಯು ಮೋತೀಲಾಲರ ಅಣ್ಣಂದಿರಿಂದ ದೇಶಭಾಷೆಯಲ್ಲಿ ಮೊದಲು ಆರಂಭಿಸಲ್ಪಟ್ಟು ಬಳಿಕ ಆಂಗ್ಲವಿಷಯಪತ್ರಿಕೆಯಾಯಿತು. ಅದರ ಸರ್ವತೋಮುಖವಾದ ಪ್ರಾಶಸ್ತ್ಯಕ್ಕೆ ಮೋತೀಲಾಲರೇ ಕಾರಣಭೂತರು. ಇವರ ಜನ್ಮಸ್ಥಳವು ಅಮೃತಬಜಾರೆಂಬುದು. ಇವರ ತಾಯಿಯ ಹೆಸರಿನಿಂದಲೇ ಆ ಗ್ರಾಮಕ್ಕೆ ಆ ಹೆಸರು ಇಡಲ್ಪಟ್ಟಿತಂತೆ. ಮೋತೀಲಾಲರು ಸಭಾಂಗಣದಲ್ಲಿ ಯಾವಾಗಲೂ ಉಪನ್ಯಾಸ ಮಾಡಿದವರಲ್ಲ. ಸ್ಫುಟವಾಗಿಯೂ ಲಲಿತವಾದ ಸರಣಿಯಿಂದಲೂ ಅಚ್ಚುಕಟ್ಟಾಗಿ ವಿಷಯವಿಮರ್ಶೆ ಮಾಡಲು ಅವರಿಗೆ ಸಿದ್ಧಿಸಿದ್ದ ಲೇಖನಪಾಂಡಿತ್ಯವು ಅಸಾಧಾರಣವಾಗಿದ್ದಿತು. ''ದೇಶಕ್ಕೆ ನನ್ನ ಸೇವೆಯು ಸ್ವಲ್ಪ ಅವಶ್ಯಕವಾಗಿದ್ದ ಸಮಯದಲ್ಲಿ ಈಶ್ವರನು ನನ್ನನ್ನು ಕರೆದುಕೊಳ್ಳುತ್ತಾನಲ್ಲಾ! ಎಂದು ಘೋಷರು ತಮ್ಮ ಅವಸಾನಕಾಲದಲ್ಲಿ ನುಡಿದು ದೇಹತ್ಯಾಗಮಾಡಿದರಂತೆ. ಇವರಂಥ ದೇಶಸೇವಾಧುರಂಧರರು ದೇಶದಲ್ಲಿ ಅತ್ಯಂತ ವಿರಳರು. ಇವರಲ್ಲಿ ಪ್ರಜಾವರ್ಗಕ್ಕೇ ಅಲ್ಲದೆ ಪ್ರಭುತ್ವದವರಿಗೂ ಬಹಳ ಗೌರವವಿದ್ದಿತು. ಎಡ್ವರ್ಡ್ ಚಕ್ರವರ್ತಿಯವರೂ ಜಾರ್ಜ್ ಚಕ್ರವರ್ತಿಯವರೂ ಸಹ ಯುವರಾಜರಾಗಿ ಭರತಖಂಡಕ್ಕೆ ದಯಮಾಡಿಸಿದ್ದ ಕಾಲಗಳಲ್ಲಿ ಇವರನ್ನು ಬರಮಾಡಿಕೊಂಡು ದೇಶದ ಪರಿಸ್ಥಿತಿಯನ್ನು ಕುರಿತು ಸಂಭಾಷಣೆ ಮಾಡಿದ್ದರು. ಇಂಥ ಮಹನೀಯರ ಮೃತಿಯು ದೇಶಕ್ಕೆ ವಿಶೇಷ ನಷ್ಟಕಾರಿಯೆಂಬುದರಲ್ಲಿ ಸಂಶಯವಿಲ್ಲ.

ಮಲೆಯಾಳದಲ್ಲಿ ನಡೆದ ವಿಪ್ಲವದಲ್ಲಿ ಜಾತಿಭ್ರಷ್ಟರಾಗಿ ಹೋಗಿರುವ ಹಿಂದುಗಳನ್ನು ಪ್ರಾಯಶ್ಚಿತ್ತದ ಮೂಲಕ ಮರಳಿ ಸ್ವಮತಕ್ಕೆ ಸೇರಿಸಿಕೊಳ್ಳುವ ವಿಷಯವನ್ನು ಪರ್ಯಾಲೋಚಿಸುವುದಕ್ಕಾಗಿ ಕಳೆದ ತಿಂಗಳು ತಾ|| 20ರಲ್ಲಿ ಕಲ್ಲಿಕೋಟೆಯ ಜಾಮರಿನ್ ಯವರ ಏರ್ಪಾಟಿನ ಪ್ರಕಾರ ಒಂದು ವೈದಿಕ ಲೌಕಿಕ ಜನರ ಸಭೆಯು ಸೇರಿದ್ದಿತು. ಜಾಮರಿನ್ ರಾಜರೂ ಜಿಲ್ಲಾ ಕಲೆಕ್ಟರು ಇತರಾಧಿಕಾರಿಗಳು ಸಹ ಸಭೆಗೆ ಬಂದಿದ್ದರು. ಚರ್ಚೆ ನಡೆದುದರಲ್ಲಿ ಬ್ರಾಹ್ಮಣರ ಹೊರತು ಇತರ ಹಿಂದುಗಳನ್ನೆಲ್ಲಾ ಪ್ರಾಯಶ್ಚಿತ್ತದ ಮೂಲಕ ಸೇರಿಸಿಕೊಳ್ಳಬಹುದೆಂದೂ, ಜಾತಿಭ್ರಷ್ಟರಾಗಿರುವ ಬ್ರಾಹ್ಮಣರ ವಿಷಯವನ್ನು ಮಾತ್ರ ಇನ್ನೂ ಸ್ವಲ್ಪ ಪರ್ಯಾಲೋಚಿಸಬೇಕೆಂದೂ, ಕೊಚ್ಚಿ ತಿರುವಾಂಕೂರು ಸಂಸ್ಥಾನಗಳವರೂ ಮತ್ತು ಬ್ರಿಟಿಷ್ ಮಲಬಾರ್ ಪ್ರಜೆಗಳೂ ಇವರ ವಿಷಯದಲ್ಲಿ ನಿರ್ಣಯ ಮಾಡಬೇಕೆಂದೂ ತೀರ್ಮಾನಿಸಲ್ಪಟ್ಟಿತು. ಇತರ ಹಿಂದುಗಳಿಗೆಲ್ಲಾ ವಿಧಿಸಲ್ಪಟ್ಟ ಪ್ರಾಯಶ್ಚಿತ್ತದ ಕ್ರಮವೇನೆಂದರೆ—1. ಜುಟ್ಟನ್ನು ಬೋಳಿಸಿ, ಮಹಮ್ಮದೀಯ ಮಂತ್ರವನ್ನುಪದೇಶಿಸಿರುವುದು, ಹೆಂಗುಸರಿಗೆ ಕಿವಿ ಚುಚ್ಚಿ ಮಾಪಿಳ್ಳಾ ರವಿಕೆಗಳನ್ನು ತೊಡಿಸಿರುವುದು, ಇಷ್ಟು ನಡೆದಿದ್ದರೆ ಅಂಥವರಿಗೆ ದೇವಾಲಯಗಳಲ್ಲಿ 3 ದಿನಗಳು ಪಂಚಗವ್ಯಪ್ರಾಶನಮಾಡಿಸಿ ಶಿವಮಂತ್ರವನ್ನೋ ನಾರಾಯಣ ಮಂತ್ರವನ್ನೋ ದಿನಕ್ಕೆ 3000 ಜಪಮಾಡಿಸಬೇಕು. 2. ಸುನ್ನತಿಯೂ ಅನ್ಯಜಾತಿ ಸ್ತ್ರೀ ಪುರುಷರ ಸಂಗವೂ ನಡೆದು ಹೋಗಿದ್ದರೆ ಅಂಥವರಿಗೆ 12 ದಿನಗಳ ಕಾಲ ದೇವಾಲಯಗಳಲ್ಲಿ ಪಂಚಗವ್ಯವನ್ನು ಕುಡಿಯಿಸಿ, ದಿನಕ್ಕೆ 12ಸಾವಿರ ಜಪವನ್ನು ಮಾಡಿಸಬೇಕು. 3. ಮಾಪಿಳ್ಳೆಗಳು ಬೇಯಿಸಿದ ಅನ್ನವನ್ನು ತಿಂದಿದ್ದರೆ ಪವಿತ್ರವಾದ ತೀರ್ಥದಲ್ಲಿ ಸ್ನಾನಮಾಡಿಸಿ 41 ದಿನಗಳ ಕಾಲ ಪಂಚಗವ್ಯಪ್ರಾಶನಮಾಡಿಸಿ ಪ್ರತಿದಿನಕ್ಕೆ 12 ಸಾವಿರದಂತೆ ಅಷ್ಟು ದಿನವೂ ಮಂತ್ರಜಪವನ್ನು ಮಾಡಿಸಬೇಕು. 4. ಇತರ ವಿಧದ ಯಾವ ಭ್ರಷ್ಟತನವು ನಡೆದಿದ್ದರೂ ಮೇಲೆ ಹೇಳಿದಂತೆ 21 ದಿನಗಳ ಕಾಲ ಪ್ರಾಯಶ್ಚಿತ್ತವಿಧಿಯನ್ನು ನೆರವೇರಿಸಬೇಕು.

ಶ್ರೀಮದ್ಯುವರಾಜಪುತ್ರಿಕೋತ್ಸವಾಷ್ಟಕಂ.

|| ಕಂದಪದ್ಯಂಗಳ್ ||

ಯದುವಂಶದ ಸಿರಿಮೊಗಕೊ |
ಪ್ಪದು ಕಣ್ಣೊಂದೆಂದು ಲೋಕಮಾತೆ ಲಲಿತೆ ತಾ ||
ನೊದವಿಸಿ ದೆರಡನೆ ಕಣ್ಣೆನೆ |
ಸದಮಳ ಯುವರಾಜಪುತ್ರಿ ಸಂಜನಿಸಿರ್ಕುಂ ||೧||
ಮೈಸೂರುಭೂಪ ರರಮನೆ |
ಯೈಸಿರಿ ಸಿರಿಮೊಗದೆ ಮೆರೆವ ಕಣ್ಣೆರಡೆಂಬೋಲ್ ||
ಭಾಸಿಕ್ಕುಂ ಯುವರಾಜರ |
ಕೂಸುಗ ಳೆರ ಡತುಳವಿಮಳತೇಜೋಭರಗಳ್ ||೨||
ಕದಲದ ನೃಪಭಕ್ತಿಗೆ ಮ |
ಚ್ಚಿದ ಲಲಿತಾಂಬೆಯ ಕೃಪಾಸುಧಾಲಹರಿಯೆ ಜಂ ||
ದದ ಪೆಣ್ಮಣಿರೂಪಂ ತಾ |
ಳ್ದುದಿಸಿತು ಯುವರಾಜಧರ್ಮಪತ್ನಿಯ ಪೊಡೆಯಿಂ ||೩||
ಚಂದಿರನ ಪಿಂದೆ ಕಡಲಿಂ |
ದಿಂದಿರೆ ಯೊಗೆದಂತೆ ಯದುಕುಲಾಂಭೋನಿಧಿಯೊಳ್ ||
ಸುಂದರ ಜಯಚಾಮೇಂದ್ರನ |
ಹಿಂದುದಿಸಿದು ದಿಂದು ವಿಮಲಪುತ್ರೀರತ್ನಂ ||೪||
ದುಂದುಭಿಸಂವತ್ಸರದೊಳ್ |
ಸಂದಿಹ ಭಾದ್ರಪದಶುಕ್ಲಸಪ್ತಮಿಯಿಂ ಸೆಂ ||
ಪೊಂದಿದ ಶಶಿವಾಸರ ಮಿ |
ನ್ನೆಂದುಂ ಸ್ಮರಣೀಯ ಮರಸುಗುವರಿಯ ಜನಿಯಿಂ ||೫||
ನಲಿದರ್ ಶತಘ್ನಿಯುಲಿಯಿಂ |
ತಿಳಿದೀ ನಾಗರಿಕ ರರಸುಗುವರಿ ಯುದಯಮಂ ||
ಸಲೆ ಕೊಂಡಾಡಿತು ವಿದ್ವ |
ತ್ಕುಲ ಮಾಳ್ವರ ಭೋಗಭಾಗ್ಯವೈಭವಫಲಮಂ ||೬||
ಪೂವಿಂ ಕಾಯಿಂ ಪಣ್ಣಿಂ |
ತೀವಿದ ಸುರಲತೆಯ ತೆರದಿ ನೆಮ್ಮಾ ಭೂಪರ ||
ಪಾವನಸಂತತಿಲತೆ ತಾ |
ಬಾವಿತತಿಯ ನಿಂತು ತಾಳ್ದು ಮಿಗೆ ಮೆರೆಗೆ ಚಿರಂ ||೭||
ಸಾಂಬನ ಸುಂದರಿ ಚಾಮುಂ |
ಡಾಂಬಿಕೆ ಜಗದಂಬೆ ಭಕ್ತವತ್ಸಲೆ ತನ್ನಂ ||
ನಂಬಿದ ಮೈಸೂರರಸರ |
ಬೆಂಬಿಡ ದಿಷ್ಟಾರ್ಥಮಿತ್ತು ಪೊರೆಗೆ ನಿತಾಂತಂ ||೮||

ಯುವರಾಜಸುತಾಜನಿಯು |
ತ್ಸವಪದ್ಯಾಷ್ಟಕಮ ನಿಂತು ಗರಪುರದ ಕರಿಬ ||
ಸವಶಾಸ್ತ್ರಿ ರಚಿಸಿದಂ ಭೂ |
ಧವಕರುಣಾಪಾಂಗರಕ್ಷಿತಾಸ್ಥಾನಬುಧಂ ||

ತಾ|| ೬-೯-೧೯೨೨,
ಮೈಸೂರು.

ಶ್ರೀಮಹಾಪ್ರಭುಕೃಪಾಪೋಷಿತ,
ಎನ್. ಆರ್. ಕರಿಬಸವಶಾಸ್ತ್ರೀ,
ಆಸ್ಥಾನವಿದ್ವಾನ್.

ದಿವಾನರು, ಮತ್ತು ಚಿತ್ರದುರ್ಗದ ಜಗದ್ಗುರು ಮಠ.

ಕಳೆದ ತಿಂಗಳಲ್ಲಿ ದಿವಾನ್ ಸಾಹೇಬರು ಚಿತ್ರದುರ್ಗಕ್ಕೆ ದಯಮಾಡಿಸಿದ್ದಾಗ ತಾ|| ೨೯ರಲ್ಲಿ ಅಲ್ಲಿಯ ಜಗದ್ಗುರು ನಿರಂಜನ ಮಹಾಸಂಸ್ಥಾನ ಮಠಕ್ಕೆ ದಯಮಾಡಿಸಿದ್ದರು. ಆ ಕಾಲಕ್ಕೆ ಶ್ರೀಗಳ ಸ್ವಾರಿಯು ಮಠದಲ್ಲೇ ಇದ್ದು ಸ್ವಾಗತಕ್ಕೆ ತಕ್ಕ ಏರ್ಪಾಟುಗಳು ಮಾಡಲ್ಪಟ್ಟಿದ್ದುವು. ಆ ಪ್ರಾಂತದ ಪ್ರಮುಖ ಮಹಾಜನರು ದಿವಾನರನ್ನು ವಾದ್ಯ ವೈಭವಾದಿಗಳೊಡನೆ ಉತ್ಸವಪೂರ್ವಕವಾಗಿ ಮಠಕ್ಕೆ ಕರೆತಂದನಂತರ ಮಠದಲ್ಲಿ ಮೊದಲು ಮಹಾಕರ್ತೃ ಗದ್ದಿಗೆಯಲ್ಲಿ ದರ್ಶನ ಫಲಮಂತ್ರಾಕ್ಷತೆ ವೇದೋಕ್ತಮಂತ್ರಾಶೀರ್ವಾದಗಳನ್ನು ಪರಿಗ್ರಹಿಸಿ, ದಿವಾನಖಾನೆಗೆ ತೆರಳಿ, ಅಲ್ಲಿ ಶ್ರೀಗಳವರ ಸಂದರ್ಶನ ವೇದೋಕ್ತಮಂತ್ರಾಶೀರ್ವಚನ ಪುರಸ್ಸರ ಫಲಮಂತ್ರಾಕ್ಷತೆಗಳನ್ನು ಪಡೆದ ಬಳಿಕ ಉಚಿತಾಸನದಲ್ಲಿ ಕುಳಿತು ಕೆಲ ಹೊತ್ತು ಸಂಭಾಷಣೆಯನ್ನು ನಡೆಯಿಸಿದನಂತರ ಸಂಸ್ಥಾನದ ಪರವಾಗಿ ಶ್ರೀಗಳವರು ಅಪ್ಪಣೆಕೊಡಿಸಿದ ವಿಷಯವೇ ಪತ್ರಿಕಾರೂಪದಲ್ಲಿ ಓದಲ್ಪಟ್ಟು ದಿವಾನರಿಗೆ ಗಂಧದ ಪೆಟ್ಟಿಗೆಯಲ್ಲಿಟ್ಟು ಕೊಡಿಸಲ್ಪಟ್ಟಿತು. ಅದನ್ನೂ ಅದಕ್ಕೆ ದಿವಾನರು ಇಂಗ್ಲೀಷಿನಲ್ಲಿ ಕೊಟ್ಟ ಉತ್ತರದ ಭಾಷಾಂತರವನ್ನೂ ಇದರಡಿಯಲ್ಲಿ ಪ್ರಕಟಿಸಿರುತ್ತೇವೆ. ಅನಂತರ ದಿವಾನರು ಸನ್ನದ್ಧವಾಗಿದ್ದ ಉಪಾಹಾರವನ್ನೂ ಗಂಧ ತಾಂಬೂಲ ಪುಷ್ಪಾದಿಗಳನ್ನೂ ಸ್ವೀಕರಿಸಿ ಸಂತೋಷಪಟ್ಟು ವಂದಿಸಿ ತೆರಳಿದರು.

ಸಂಸ್ಥಾನದಿಂದ ದಿವಾನರಿಗೆ ಅರ್ಪಿಸಲ್ಪಟ್ಟ ಪತ್ರಿಕೆ.—

ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಮೈಸೂರು ಸಂಸ್ಥಾನದ ಘನತೆಯನ್ನೈದಿದ ಶ್ರೀಮಾನ್ ಎ.ಆರ್. ಬಾನರ್ಜಿ, ಎಂ.ಎ.,ಸಿ.ಐ.ಇ.,ಸಿ.ಎಸ್.ಐ. ಯವರಿಗೆ ಶ್ರೀ ಸದಾಶಿವಸ್ಮರಣಪೂರ್ವಕವಾಗಿ ಮಾಡುವ ಶುಭವಾದಗಳು.

ತಾವು ಅಸಾಧಾರಣ ವಿದ್ಯಾವೈದುಷ್ಯವನ್ನು ಪಡೆದು ಬ್ರಿಟಿಷ್ ಇಂಡ್ಯಾ ಸಿವಿಲ್ ಸರ್ವೀಸಿನಲ್ಲೂ ಕೊಚಿನ್ ಸಂಸ್ಥಾನದ ಅಮಾತ್ಯ ಪದವಿಯಲ್ಲೂ ಶ್ಲಾಘನೀಯವಾದ ಕೌಶಲವನ್ನು ತೋರಿಸಿ ಕಾರ್ಯನಿರ್ವಾಹಮಾಡಿ ಪ್ರಸಿದ್ಧಿಗೊಂಡಿದ್ದುದನ್ನು ನಮ್ಮ ಶ್ರೀಮಾನ್ ಮಹಾರಾಜರವರು ತಿಳಿದು, ತಮ್ಮಂಥವರ ಸರ್ವೀಸಿನ ಪ್ರಯೋಜನವನ್ನು ನಮ್ಮ ಸಂಸ್ಥಾನಕ್ಕೆ ಉಂಟುಮಾಡಿಕೊಳ್ಳುವ ಲವಲವಿಕೆಯಿಂದ ತಮ್ಮನ್ನು ಬರಮಾಡಿಕೊಂಡು ಮೊಟ್ಟಮೊದಲು ಸಂಸ್ಥಾನದ ಎಗ್ಜಿಕ್ಯುಟೀವ್ ಕೌನ್ಸಿಲಿನಲ್ಲಿ ದ್ವಿತೀಯಸ್ಥಾನವನ್ನೂ ಬಳಿಕ ಪ್ರಥಮ ಸ್ಥಾನವನ್ನೂ ಅನುಗ್ರಹಿಸಿದ್ದು, ಅವುಗಳಲ್ಲಿ ತಾವು ತೋರಿಸಿದ ಘನತರವಾದ ಮೆಹನತ್ತಿಗೆ ಮೆಚ್ಚಿ ಪೂರ್ಣವಾದ ಜವಾಬ್ದಾರಿಯುಳ್ಳ ಮುಖ್ಯಾಮಾತ್ಯ ಪದವಿಯನ್ನೇ ತಮಗೆ ಅನುಗ್ರಹಿಸಿರುತ್ತಾರೆ. ಇದು ಅಶೇಷಪ್ರಜೆಗಳಿಗೂ ಸಂತೋಷವನ್ನುಂಟುಮಾಡಿರುತ್ತದೆ.

ಪ್ರಪಂಚವನ್ನೇ ನಲುಗಿಸುತ್ತಿರುವ ಆರ್ಥಿಕದುಸ್ಥಿತಿಯು ನಮ್ಮ ಸಂಸ್ಥಾನಕ್ಕೆ ಒದಗಿರುವ ಈಗಣ ದುರ್ಭರಸಮಯದಲ್ಲಿ ತಮ್ಮಂಥ ವಿಶೇಷ ಮೇಧಾವಿಗಳೂ ರಾಜತಂತ್ರನಿಪುಣರೂ ಮಂತ್ರಿಗಳಾಗಿ ದೊರೆದುದು ಮೈಸೂರು ಪ್ರಜೆಗಳ ಪುಣ್ಯೋದಯವೆಂತಲೇ ಹೇಳಬಹುದು. ಆದುಕಾರಣ ಈ ಘನಪದವಿಯು ತಮಗೆ ದೊರೆದುದಕ್ಕಾಗಿ ನಾವಾದರೂ ಅತ್ಯಂತ ಸಂತುಷ್ಟರಾಗಿರುವುದಲ್ಲದೆ ತಮ್ಮ ಕಾಲದಲ್ಲಿ ದೇಶದ ಆರ್ಥಿಕ ವೈಷಮ್ಯವು ತೊಲಗಿ ದೇಶವು ಸರ್ವವಿಧದಲ್ಲೂ ಅಭಿವೃದ್ಧಿಗೊಳ್ಳುವಂತಾದೀತೆಂದು ನಿರೀಕ್ಷಿಸುತ್ತೇವೆ.

ಪ್ರಾಚೀನವೂ ಸರ್ವವೀರಶೈವ ಪೂಜ್ಯಸ್ಥಾನವೂ ಆದ ಈ ಸಂಸ್ಥಾನಮಠಕ್ಕೆ ಈಗಣ ಸರ್ಕೀಟಿನಲ್ಲಿ ತಾವು ಆಗಮಿಸಿದುದಕ್ಕಾಗಿ ನಾವು ಸಂತೋಷಿಸುತ್ತೇವೆ. ಈ ಸಂಸ್ಥಾನಮಠವು ಆಸೇತುಹಿಮಾಚಲಾಂತವಾದ ಭರತಖಂಡದ ಎಲ್ಲಭಾಗಗಳಲ್ಲೂ ಶಾಖಾಮಠಗಳುಳ್ಳದಾಗಿಯೂ ವೀರಶೈವ ಜನವರ್ಗಕ್ಕೆ ಮುಖ್ಯ ಜಗದ್ಗುರುಪೀಠವಾಗಿಯೂ ಗೌರವಗೊಂಡಿದೆ. ಈ ಪೀಠದ ಅಧಿಕಾರವು ನಮಗೆ ದೊರೆದು ಇಲ್ಲಿಗೆ ೧೯ ವರ್ಷಗಳಾದುವು. ಮತಸ್ಥರ ಜ್ಞಾನವಿಕಾಸಕ್ಕೆ ಸಾಧಕವಾದ ವಿದ್ಯಾಭಿವೃದ್ಧಿಗೂ ಧರ್ಮಸುಧಾರಣೆಗೂ ಅವಶ್ಯಕಗಳಾದ ಪ್ರೋತ್ಸಾಹಗಳನ್ನು ಕಲ್ಪಿಸುವುದು ಮಠಾಧೀಶರ ಮುಖ್ಯಕರ್ತವ್ಯವೆಂಬ ಭಾವನೆಯಿಂದ ತದಾರಭ್ಯ ಈ ಸಂಸ್ಥಾನದ ಕಡೆಯಿಂದ ಮೈಸೂರು ದೇಶದಲ್ಲೂ, ಕೊಲ್ಹಾಪುರ ಸಂಸ್ಥಾನದಲ್ಲೂ, ಹೈದರಾಬಾದು ಸಂಸ್ಥಾನದಲ್ಲೂ, ಧಾರವಾಡ ಮೊದಲಾದ ಬ್ರಿಟಿಷ್ ಇಂಡ್ಯಾ ಸೀಮೆಯಲ್ಲೂ ವಿದ್ಯಾರ್ಥಿನಿಲಯಗಳೂ ವೀರಶೈವಾಶ್ರಮಗಳೂ ಪಾಠಶಾಲೆಗಳೂ ಸಹ ಪ್ರತಿಷ್ಠಾಪಿಸಲ್ಪಟ್ಟು ನಡೆಯುತ್ತಿರುವುದೂ, ಸ್ವದೇಶ ಪರದೇಶಗಳಲ್ಲಿ ಪ್ರೌಢವಿದ್ಯಾಭ್ಯಾಸಂಗ ಮಾಡುತ್ತಿರುವ ವೀರಶೈವ ವಿದ್ಯಾರ್ಥಿಗಳಿಗೂ ಕೆಲ ಪರಮತ ವಿದ್ಯಾರ್ಥಿಗಳಿಗೂ ಸಹ ವೇತನಗಳು ಕೊಡಲ್ಪಡುತ್ತಿರುವುದೂ, ಪ್ರತಿದಿನವೂ ಶ್ರೀ ಮಠದಲ್ಲಿ ಎರಡುಕಾಲವೂ ನೂರಾರುಮಂದಿ ಆಗಂತುಕ ಜನರಿಗೆ ಅನ್ನದಾನವು ಪುರಾತನ ಪದ್ಧತಿಗೆ ಅನುಸಾರವಾಗಿ ನಡೆಯುತ್ತಿರುವುದೂ ಸಹ ಕರ್ಣಾಕರ್ಣಿಕಯಾ ತಮಗೆ ವಿದಿತವಾಗಿರಬಹುದು.

ಇವೆಲ್ಲ ಕಾರಣಗಳಿಂದ ಸಂಸ್ಥಾನಕ್ಕೆ ಧನವ್ಯಯಭಾರವು ಬಹಳವಾಗಿದೆ. ಕಾಲಸ್ಥಿತಿಯು ವಿಷಮವಾಗಿರುವುದರಿಂದ ಶಿಷ್ಯಾರ್ಜನೆಯ ಬರವಸೆಯಿಂದಲೇ ಇದನ್ನೆಲ್ಲಾ ಸಾರೋದ್ಧಾರವಾಗಿ ನಡೆಯಿಸಿಕೊಂಡುಹೋಗುವುದು ಅಸಾಧ್ಯವಾಗುತ್ತಿದೆ. ಪೂರ್ವದಲ್ಲಿ ಈ ಪೀಠಕ್ಕೆ 7 ಗ್ರಾಮಗಳು ಇನಾಮತಿಯಾಗಿ ಕೊಡಲ್ಪಟ್ಟಿದ್ದುವು. ಬಳಿಕ ಕೆಲವು ಕಾಲದಮೇಲೆ 1440 ವರಹಗಳ ವರ್ಷಾಶನವನ್ನು ಸಲ್ಲಿಸುವಂತೆ ಏರ್ಪಡಿಸಿ ಇನಾಂಗ್ರಾಮಗಳು ವಾಪಸು ತೆಗೆದುಕೊಳ್ಳಲ್ಪಟ್ಟುವು. ತದನಂತರ ಮಠದಲ್ಲಿ ತಕ್ಕ ವ್ಯವಸ್ಥೆಯಿಲ್ಲದಿದ್ದ ಕಾರಣದಿಂದಲೋ ಏನೋ ಆ ನಗದು ವರ್ಷಾಶನವೂ ಕೂಡ ನಿಲ್ಲಿಸಲ್ಪಟ್ಟು, ಶ್ರೀಮಠದ ಮತ್ತು ಅದಕ್ಕೆ ಸೇರಿದ ದೇವಾಲಯದ ದೀಪಾರಾಧನೆಯ ಖರ್ಚಿಗೋಸ್ಕರವೆಂದು 24 ರೂ. ಗಳ ಮಾಸಿಕ ಸಹಾಯ ದ್ರವ್ಯವು ಸರ್ಕಾರದಿಂದ ಈಗ ಕೊಡಲ್ಪಡುತ್ತಿದೆ.

ಈಗಳಾದರೋ ದೇಶದ ಸಕಲಭಾಗದ ವೀರಶೈವರ ಪುರೋವೃದ್ಧಿಗೂ ಅವಶ್ಯಕಗಳಾದ ಲಕ್ಷಾಂತರ ರೂಪಾಯಿಗಳ ಪ್ರತಿಷ್ಠಾಪನೆಗಳು ಶ್ರೀ ಮಠದಿಂದ ನಡೆದು ಸರ್ವಕಾರ್ಯಗಳೂ ಸುವ್ಯವಸ್ಥಿತವಾಗಿ ಸಾಗುತ್ತಿವೆ. ಆದರೆ ಇದು ಶಾಶ್ವತವಾಗಿ ನಡೆದುಕೊಂಡುಹೋಗುವಂತೆ ಮಾಡುವುದಕ್ಕೆ ತಕ್ಕ ವರಮಾನವು ಸಂಸ್ಥಾನ ಮಠಕ್ಕೆ ಇಲ್ಲವಾಗಿರುವುದು ನಮಗೆ ಮಾತ್ರವೇ ಅಲ್ಲದೆ ಅಶೇಷ ವೀರಶೈವ ಜನವರ್ಗಕ್ಕೂ ವ್ಯಾಕುಲವನ್ನುಂಟುಮಾಡಿದೆ. ಪ್ರಾಚೀನ ಮಠಗಳ ಗೌರವೋದ್ಧರಣದಲ್ಲೂ ಧರ್ಮರಕ್ಷಣೆಯಲ್ಲೂ ಹೆಸರಾಂತಿರುವ ಮೈಸೂರು ಸಂಸ್ಥಾನವು ಇತರ ಮಠಗಳ, ಮುಖ್ಯ ಪೀಠಗಳ ಗೌರವಕ್ಕೆ ತಕ್ಕಷ್ಟು ಇನಾಮತಿಗಳನ್ನೋ ವಾರ್ಷಿಕ ಸಹಾಯ ದ್ರವ್ಯವನ್ನೋ ಅನುಗ್ರಹಿಸಿಕೊಡುತ್ತಿರುವಂತೆ ಈ ಮುಖ್ಯ ಮಠದ ಗೌರವಕ್ಕೂ ಕಾರ್ಯಬಾಹುಳ್ಯಕ್ಕೂ ಅನುಗುಣವಾದಷ್ಟು ಧನಸಾಹಾಯ್ಯವು ಒದಗುವಂತೆ ತಾವು ಏರ್ಪಡಿಸಿಕೊಟ್ಟು, ಇದರಿಂದ ದೇಶದ ಮುಖ್ಯ ಜನಾಂಗವೊಂದರ ವಿದ್ಯಾದಿ ಸಕಲ ಪುರೋವೃದ್ಧಿಗೂ ಪ್ರೋತ್ಸಾಹವು ಸಾರೋದ್ಧಾರವಾಗಿ ನಡೆಯಲು ಅವಕಾಶಮಾಡಿಕೊಟ್ಟು, ಪುಣ್ಯಕೀರ್ತಿಗಳಿಗೂ ಅಶೇಷ ವೀರಶೈವ ಜನವರ್ಗದ ಚಿರಕೃತಜ್ಞತೆಗೂ ತಾವು ಪಾತ್ರರಾಗಬೇಕೆಂದು ಆಶಿಸುತ್ತೇವೆ.

ಪ್ರಸಕ್ತ ಸಮಯದಲ್ಲಿ ಚರ್ಚಾಸ್ಪದವಾಗಿರುವ ಸರ್ಕಾರಿ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ವೀರಶೈವ ಜನವರ್ಗದ ವಿದ್ಯಾರ್ಥಿಗಳನ್ನು ಸೇರಿಸುವ ವಿಷಯದಲ್ಲಿ ನಿಷ್ಪಕ್ಷಪಾತವಾದ ಏರ್ಪಾಟು ತಮ್ಮ ಕಾರ್ಯಭಾರ ಕಾಲದಲ್ಲಿ ಜರುಗದೆ ಇರಲಾರದೆಂದು ನಂಬುತ್ತೇವೆ. ವೀರಶೈವ ಮತವು ವೇದವೇದಾಂಗ ಸಂಮತವಾಗಿದ್ದು ಅನಾದಿಕಾಲದಿಂದಲೂ ಈ ಮತದಲ್ಲಿ ಉಭಯಭಾಷಾಪಾಂಡಿತ್ಯವನ್ನು ಸಂಪಾದಿಸಿದವರು ಇರುತ್ತಲಿರುವುದರಿಂದ ಈ ಜನವರ್ಗಕ್ಕೆ ವೇದಶಾಸ್ತ್ರಾಭ್ಯಾಸವು ಚಿರಕಾಲದಿಂದ ನಡೆದುಬಂದಿರುತ್ತದೆ. ನಿಯುಕ್ತ ಸಂಘದವರು ಮಾಡಿರುವ ವರದಿಯು ಪಕ್ಷಪಾತಮಯವಾದುದೆಂದು ವೀರಶೈವಜನವರ್ಗದಿಂದೆಲ್ಲಾ ಭಾವಿಸಲ್ಪಟ್ಟು ಅವರುಗಳಿಗೆ ತೀವ್ರವಾದ ಮನೋವೇದನೆಯನ್ನುಂಟುಮಾಡಿರುತ್ತದೆ. ವೀರಶೈವ ವಿದ್ಯಾರ್ಥಿಗಳಿಗೆ ಮೈಸೂರು ಬೆಂಗಳೂರು ಸರ್ಕಾರಿ ಸಂಸ್ಕೃತಪಾಠಶಾಲೆಗಳೆರಡರಲ್ಲೂ ಎಲ್ಲ ತೆರದ ವಿದ್ಯಾಭ್ಯಾಸಕ್ಕೂ ಅವಕಾಶವಾಗುವಂತೆ ಅಪ್ಪಣೆಮಾಡಿ ಈ ಸಮಾಜದವರಿಗುಂಟಾಗಿರುವ ಮನೋವ್ಯಥೆಯನ್ನು ತಾವು ಪರಿಹಾರಗೊಳಿಸಿಕೊಡುವವರಾಗಬೇಕೆಂದು ಅಪೇಕ್ಷಿಸುತ್ತೇವೆ.

ಅಮೌಲ್ಯವಾದ ತಮ್ಮ ಸಂಚಾರಕಾಲದಲ್ಲಿ ಸ್ವಲ್ಪ ಅವಕಾಶವನ್ನು ಕಲ್ಪಿಸಿಕೊಂಡು ಈ ಪ್ರಾಚೀನ ಸಂಸ್ಥಾನಮಠಕ್ಕೆ ಆಗಮಿಸಿ ಸಂಭಾಷಣಾವಕಾಶವನ್ನಿತ್ತುದಕ್ಕಾಗಿ ನಾವು ಪರಮಾನಂದಗೊಂಡಿರುತ್ತೇವಲ್ಲದೆ ಶ್ರೀ ಮುರುಘೇಶನು ಶ್ರೀಮನ್ಮಹಾರಾಜ ಸಹೋದರರಿಗೂ ಅವರ ಅಶೇಷ ಕುಟುಂಬಕ್ಕೂ ಅವರ ಅಮಾತ್ಯಶ್ರೇಷ್ಠರಾದ ತಮಗೂ ಚಿರಾಯುರಾರೋಗ್ಯಗಳನ್ನೂ ಸಕಲ ಸತ್ಕಾರ್ಯಸಂಸಿದ್ಧಿಯನ್ನೂ ಉರುತರ ಯಶೋವೈಭವವನ್ನೂ ಉಂಟುಮಾಡಲೆಂದು ಕೋರುತ್ತೇವೆ.

ದಿವಾನರ ಪ್ರತ್ಯುತ್ತರ.

(ಇಂಗ್ಲೀಷಿನಲ್ಲಿದ್ದುದನ್ನು ಭಾಷಾಂತರಿಸಿದೆ.)

ಮಹಾಸ್ವಾಮಿಗಳೇ, ನನ್ನ ಈ ಡಿಸ್ಟ್ರಿಕ್ಟಿನ ಸಂಚಾರದ ವೇಳೆಯಲ್ಲಿ ತಮ್ಮ ದರ್ಶನಪರಿಚಯಗಳಿಗೆ ಸಮಯ ದೊರೆದುದಕ್ಕಾಗಿ ನಿಜವಾಗಿಯೂ ಬಹಳ ಹರ್ಷಿತನಾಗಿದ್ದೇನೆ. ಮಹಾಸ್ವಾಮಿಯವರ ಪ್ರಶಂಸೆ, ಸಂಸ್ಕೃತದಲ್ಲಿರತಕ್ಕ ಪಾಂಡಿತ್ಯ, ತಮ್ಮ ಪೂಜ್ಯಸ್ಥಾನವನ್ನು ತೇಜಸ್ವಿಯಾಗಿ ನಿರ್ವಹಿಸುವ ಕಾರ್ಯಕ್ರಮ, ತಮ್ಮ ಪೀಠವನ್ನು ಮುಖ್ಯವಾಗಿಟ್ಟುಕೊಂಡು ಬಹಳ ಶ್ರದ್ಧಾಭಕ್ತಿಯಿಂದಿರುವ—ದೊಡ್ಡದಾಗಿಯೂ ಪ್ರತಿಷ್ಠಿತವಾಗಿಯೂ ಇರುವ—ಜನವರ್ಗದ ಮತ ನೀತಿ ಮತ್ತು ವಿದ್ಯೆಯ ಅಭಿವೃದ್ಧಿಯ ವಿಚಾರದಲ್ಲಿ ತಮಗಿರತಕ್ಕ ಪೂರ್ಣವಾದ ಆಸಕ್ತಿ ಈ ವಿಚಾರಗಳಲ್ಲಿ ನಾನು ಬಹಳವಾಗಿ ಕೇಳಿರುವೆನು. ವಿದ್ಯಾಭಿವೃದ್ಧಿಯ ವಿಚಾರದಲ್ಲಿ ಮುಖ್ಯವಾಗಿ ವಿದ್ಯಾರ್ಥಿನಿಲಯಗಳು, ಪಾಠಶಾಲೆಗಳು, ವಿದ್ಯಾರ್ಥಿವೇತನಗಳು, ಪುಸ್ತಕಭಂಡಾರಗಳು ಮೊದಲಾದವುಗಳ ಸ್ಥಾಪನೆಯಲ್ಲಿ ತಮಗೆ ವಿಶೇಷವಾದ ಆಸಕ್ತಿಯಿರುವುದೆಂದು ಕೇಳಿ ಸಂತುಷ್ಟನಾಗಿದ್ದೇನೆ. ಇವೆಲ್ಲವೂ ತಮ್ಮ ಉದಾರಬುದ್ಧಿಯನ್ನೂ ಪೂರ್ಣಪಾಂಡಿತ್ಯವನ್ನೂ ಪ್ರದರ್ಶಿಸತಕ್ಕುವಾಗಿವೆ. ನಾನು ಚಿತ್ರದುರ್ಗಕ್ಕೆ ಬಂದಾಗ ಸಾಧಾರಣರೀತಿಯಿಂದ ತಮ್ಮ ದರ್ಶನವನ್ನು ತೆಗೆದುಕೊಂಡು ಮೈತ್ರೀಭಾವದಿಂದ ಪರಸ್ಪರ ಸಂಭಾಷಣಾನಂತರ ತಮ್ಮ ಆಶೀರ್ವಾದವನ್ನು ಪಡೆದುಕೊಂಡು ಹೋಗಬೇಕೆಂದು ಯೋಚಿಸಿದ್ದೆನಲ್ಲದೆ ತಾವು ಇಷ್ಟೊಂದು ಶ್ರಮೆಯನ್ನು ವಹಿಸಿ ನನ್ನನ್ನು ಬಹಿರಂಗವಾಗಿಯೂ ಅಟ್ಟಹಾಸದಿಂದಲೂ ಬರಮಾಡಿಕೊಳ್ಳುವ ಪ್ರಯತ್ನ ಮಾಡಿರುವಿರೆಂದು ನಿರೀಕ್ಷಿಸಿರಲಿಲ್ಲವು. ಈಗಳಾದರೋ ಪ್ರಾಯಶಃ ಬಹಿರಂಗವಾದೇರ್ಪಾಟು ಮಾಡಲ್ಪಟ್ಟಿರುತ್ತದೆ, ಮತ್ತು ತಾವು ಕರುಣವಿಟ್ಟು ವಿಜ್ಞಾಪನಪತ್ರಿಕೆಯನ್ನು ಕೊಟ್ಟಿರುವುದಾಗಿದೆ. ಈ ಪತ್ರಿಕೆಯಲ್ಲಿ ತಿಳಿಯಿಸಲ್ಪಟ್ಟಿರುವ ವಿಚಾರಗಳಲ್ಲಿ ಮಠಕ್ಕೂ ವೀರಶೈವ ಜನಾಂಗಕ್ಕೂ ಸಂಬಂಧಪಟ್ಟ ಎರಡು ಮುಖ್ಯವಿಚಾರಗಳಿವೆ. ಈ ಸಂದರ್ಭದಲ್ಲಿ ಮೇಲ್ಕಂಡ ವಿಚಾರಗಳನ್ನು ಕುರಿತು ಸಮಗ್ರವಾಗಿ ಪ್ರಸ್ತಾಪಿಸಲು ಸಾಧ್ಯವಿಲ್ಲವಾಗಿ ಮಹಾಸ್ವಾಮಿಯವರು ಕ್ಷಮಿಸುವಿರೆಂದು ನಿರೀಕ್ಷಿಸುತ್ತೇನೆ. ಈ ವಿಷಯಗಳ ಸಂಬಂಧವಾದ ಕಾಗದಪತ್ರಗಳು ನನ್ನಲ್ಲಿಲ್ಲವು; ಮತ್ತು ಸಂಗತಿಗಳಾದರೂ ಗೊತ್ತಿಲ್ಲವು.

ಮಠಕ್ಕೆ ಸರ್ಕಾರದಿಂದ ಸಲ್ಲುವ ಗ್ರಾಂಟ್‌ವಿಚಾರವು ನನಗೆ ಹೊಸದಾಗಿದೆ. ಈ ವಿಚಾರದ ಪೂರ್ವಚರಿತ್ರೆಯನ್ನು (ಸಂದರ್ಭವನ್ನು) ತಿಳಿದು ಕಾಗದಪತ್ರಗಳನ್ನು ನೋಡಿದ ವಿನಾ ನಾನು ಯಾವ ಉತ್ತರವನ್ನೂ ಕೊಡಲು ಬಹಳ ಕಷ್ಟವಾಗಿದೆ. ಮತ್ತು ಸಂಸ್ಥಾನದ ಕಾಲೇಜುಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡತಕ್ಕ ವಿಚಾರದಲ್ಲೂ ಮೇಲೆ ತಿಳಿಸಿದ ರೀತಿಯಲ್ಲಿ ಏನನ್ನೂ ಹೇಳಲಾಗುವುದಿಲ್ಲವು. ಈ ವಿಚಾರದಲ್ಲಿ ತಮ್ಮ ಭಕ್ತರಾದ ವೀರಶೈವ ಮತಸ್ಥರೆಲ್ಲರಿಗೂ ಕಳವಳವುಂಟಾಗಿದೆಯೆಂಬ ವಿಚಾರವು ನನಗೂ ಸರ್ಕಾರಕ್ಕೂ ವಿದಿತವಾಗಿದೆ. ಈ ಚರ್ಚಾಸ್ಪದವಾದ ವಿಚಾರವು ಶ್ರೀಮನ್ಮಹಾರಾಜಾ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ ಎಂಬುದು ಶ್ರೀಯುತರಿಗೆ ವಿದಿತವೇ ಇದೆ. ಮತ್ತು ಸರ್ಕಾರದವರು ಈ ವಿಚಾರವನ್ನು ಇತ್ಯರ್ಥಮಾಡುವಾಗ್ಗೆ ತಮ್ಮ ಭಕ್ತಮಂಡಲಿಯ ಮನೋಭಾವವನ್ನು ಸಂಪೂರ್ಣವಾಗಿ ಪರಿಗ್ರಹಿಸುವರೆಂದು ನಾನು ದೃಢವಾಗಿರುತ್ತೇನೆ. ಸದ್ಯದಲ್ಲಿ ಈ ವಿಚಾರವಾಗಿ ನಾನು ಇನ್ನೇನನ್ನೂ ಹೇಳಲು ಬಹಳ ಕಷ್ಟವಾಗಿರುತ್ತದೆ. ನನ್ನ ವಿಚಾರದಲ್ಲಿ ಅಪ್ಪಣೆಕೊಡಿಸಿದ ಕರುಣಾಮಯವಾದ ವಚನಗಳಿಗಾಗಿಯೂ, ಮೈಸೂರು ಸಂಸ್ಥಾನದ ಮಂತ್ರಿಪದವಿಯಲ್ಲಿ ನನಗೆ ಶ್ರೇಯಸ್ಸನ್ನು ಕೋರಿ ಅಪ್ಪಣೆಕೊಟ್ಟ ಆಶೀರ್ವಚನಕ್ಕಾಗಿಯೂ ಮಹಾಸ್ವಾಮಿಯವರನ್ನು ನಾನು ನಿಷ್ಕಪಟವಾಗಿ ವಂದಿಸುತ್ತೇನೆ.

ಪ್ರಕೃತ ಚರ್ಚಾಸ್ಪದವಾಗಿರುವ ಸಂಸ್ಕೃತಾಭ್ಯಾಸ ವಿಷಯದಲ್ಲಿ ದೇಶಭಾಷಾವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿರುವ ಅನುಕೂಲಾಭಿಪ್ರಾಯಗಳು.

II

ಧಾರವಾಡದ ಕರ್ನಾಟಕವೃತ್ತ ಮತ್ತು ಧನಂಜಯ—(ತಾ|| 29-8-22).

ಮೈಸೂರ ಪ್ರಾಂತದ ವೀರಶೈವರೂ ಬ್ರಾಹ್ಮಣೇತರರೂ ಸಂಸ್ಕೃತ ಪಾಠಶಾಲೆಯ ವಾದದಿಂದ ಇಡೀ ಕರ್ನಾಟಕ ಮನವನ್ನೇ ಆಕರ್ಷಿಸಿರುವರು. ಅಲ್ಲಿಯ ಸರಕಾರದ ನಡುವೆ ಹಾಗು ಪ್ರಜೆಗಳ ನಡುವೆ ಒಳ್ಳೇ ನಿಕರಕ್ಕೆಯೇ ಬಂದಿರುವದು. ಸಂಸ್ಕೃತ ಪಾಠಶಾಲೆಗಳಲ್ಲಿ ಇಷ್ಟು ದಿವಸ ಕೇವಲ ಬ್ರಾಹ್ಮಣರದೇ ಪ್ರತಿಷ್ಠೆಯಿತ್ತು. ಈ ಶತಮಾನವು ಮಾನವಪ್ರಾಣಿಯ ಜಾಗ್ರತಿಯ ಯುಗವಾದ್ದರಿಂದ ಎಲ್ಲ ಪ್ರಜೆಗಳೂ ಎಚ್ಚತ್ತು ಮಾನವನ ಧ್ಯೇಯವೇನು ? ಎಂದು ವಿಚಾರಿಸ ತೊಡಗಿರುವರು. ಮೈಸೂರಿನ ಜನರೂ ಮಾನವ ಪ್ರಾಣಿಗಳೇ ! ಆದುದರಿಂದ ಅವರು ತಮ್ಮ ಹಿತವನ್ನು ತಿಳಿಯಲು ಉತ್ಸುಕರಾಗಿರುವರು. ಸರಕಾರದವರು ತೆಗೆದ ಪಾಠಶಾಲೆಯಲ್ಲಿ ವೇದಾಧ್ಯಯನ ಬ್ರಾಹ್ಮಣರಿಗೆ ಹೇಗೆ ಪ್ರವೇಶವಿರುವದೋ ಅದರಂತೆಯೇ ಅಲ್ಲಿ ನಮಗೂ ವೇದಾಧ್ಯಯನಕ್ಕೆ ಅನುವು ದೊರೆಯಬೇಕೆಂದು ಅಲ್ಲಿಯ ಬ್ರಾಹ್ಮಣೇತರರ ಬೇಡಿಕೆಯು. ಈ ಬೇಡಿಕೆಯು ಈಡೇರಬೇಕೆಂದು ಒಳ್ಳೇ ನಿಕರದ ಚಳವಳಿಯನ್ನು ನಡಿಸಿರುವರು. ಸರಕಾರದವರು ಒಂದು ಕಮಿಟಿಯನ್ನು ನೇಮಿಸಿ ಇದರ ವಿಚಾರಣೆಯನ್ನು ಮಾಡಲು ಹಚ್ಚಿದರು. ಆದರೆ ಈ ಕಮಿಟಿಯಲ್ಲಿ ಬರೇ ಬ್ರಾಹ್ಮಣರೇ ಇದ್ದದರಿಂದ ಅವರು ತೀರ್ಪನ್ನು ಸರಿಯಾಗಿ ಕೊಟ್ಟಿರುವದಿಲ್ಲ. ಇದರಿಂದ ಬ್ರಾಹ್ಮಣೇತರರಿಗೆ ಮತ್ತಿಷ್ಟು ಅಸಮಾಧಾನವಾಗಿ ಎಲ್ಲ ಕಡೆಗೆ ಕಮಿಟಿಯ ತೀರ್ಪನ್ನು ನಿಷೇಧಿಸತೊಡಗಿರುವರು. ಆದರೆ ಕೆಲವು ವೃತ್ತಪತ್ರಗಳು ಮಾತ್ರ (ಪಕ್ಷಭೇದದಿಂದ) ಸಮರ್ಥಿಸ ತೊಡಗಿರುವವು. ಇದರಲ್ಲಿ ಬ್ರಾಹ್ಮಣೇತರರ ಬೇಡಿಕೆಯು ನಮಗಂತೂ ದೋಷವೆಂದು ಕಾಣುವದಿಲ್ಲ. ವೇದಗಳನ್ನು ಬ್ರಾಹ್ಮಣರೇ ಓದಬೇಕೆಂದು ಯಾರೂ ಜಾಹಗೀರ ಹಾಕಿಕೊಟ್ಟಿಲ್ಲ. ಜ್ಞಾನಸಂಪಾದನೆ ಮಾಡಲು ಮಾನವ ಪ್ರಾಣಿಗೇ ಅಧಿಕಾರವಿರುತ್ತದೆ. ವೇದಗಳು ಮಾನವ ಪ್ರಾಣಿಯ ಉದ್ಧಾರಕ್ಕೆಂದು ಪರಮಾತ್ಮನಿಂದ ನಿರ್ಮಿಸಲ್ಪಟ್ಟಿವೆ. ಮಾನವ ಪ್ರಾಣಿಯ ಒಂದು ಅಂಗವಾದ ಬ್ರಾಹ್ಮಣ ಜಾತಿಯ ಸಲುವಾಗಿ ಎಂದಲ್ಲ. ಈ ವೇದಗಳ ರಹಸ್ಯವನ್ನು ತಿಳಿದು ಯಾವನು ಪರಬ್ರಹ್ಮನ ಜ್ಞಾನವನ್ನು ಪಡೆಯುವನೋ ಅವನು ಬ್ರಾಹ್ಮಣನು. ಅಂದ ಮೇಲೆ ಅಧಿಕಾರವಿಲ್ಲೆಂದು ಹೇಳುವ ಬ್ರಾಹ್ಮಣರೇ ನೀವು ಬ್ರಾಹ್ಮಣರೆಂದು ಯಾವ ತೋರಿಯಿಂದ ಹೇಳಿಕೊಳ್ಳುವಿರಿ ? ವಸಿಷ್ಠಾದಿಗಳ ಬ್ರಹ್ಮತೇಜಸ್ಸು ನಿಮ್ಮಲ್ಲಿರುವದೋ ! ಅಂದ ಮೇಲೆ ಅಧಿಕಾರದ ಅಧಿಷ್ಠಾನವು ನಿಮ್ಮಲ್ಲಿ ಇಲ್ಲದೇ ನಿಮಗೆ ಅಧಿಕಾರವು ಹೇಗೆ ಪ್ರಾಪ್ತವಾಗುವದು ? ಯೋಗ್ಯತೆಯಿಲ್ಲದೆ ಮಾನವನ್ನು ಅಪೇಕ್ಷಿಸಿದರೆ ಮಾನಭಂಗವೇ ಪಾಲಿಗೆ ಬರುವದು. "ದೀಪಕ್ಕೇನು ಪತಂಗಕ್ಕೆ ಬಾ ಎಂದು ಆಮಂತ್ರಣವನ್ನು ಕೊಡಬೇಕಾಗುವದೇ ? ಅದು ತನ್ನ ಪ್ರಕಾಶವನ್ನು ಕೆಡವಿದಷ್ಟು ಪತಂಗಗಳು ತಾನಾಗಿಯೇ ಮೇಲೆ ಬಂದು ಬೀಳುವವು." ಬ್ರಾಹ್ಮಣರೇ ! ನೀವು ಬ್ರಾಹ್ಮಣ್ಯವನ್ನು ಬಿಟ್ಟಿರುವದರಿಂದ ದೇಶದ ಅವಸ್ಥೆಯು ನಿಮ್ಮ ಅವಸ್ಥೆಯು ಹೀಗಾಗುವದೆಂಬುದನ್ನು ಮರೆಯಬೇಡಿರೆಂದು ಸೂಚಿಸುತ್ತೇವೆ. ಅಜ್ಜನು ಶ್ರೀಮಂತನಿದ್ದು ಮೊಮ್ಮಗನು ಭಿಕ್ಷಾಪದವಿಯಿದ್ದರೆ ಅವನ ಮಾತನ್ನು ಯಾರು ಕೇಳಬೇಕು ? ಸರಕಾರದವರು ಈ ಕಮಿಟಿಯನ್ನು ನೇಮಿಸುವದರಲ್ಲಿಯೇ ತಪ್ಪಾಗಿರುವದೆಂದು ನಮಗೆ ತೋರುತ್ತದೆ. ಯಾಕೆಂದರೆ ಈ ಪ್ರಕಾರವಾದ ಪ್ರಶ್ನೆಯ ವಿಚಾರಣೆಯಲ್ಲಿ ಬರೇ ಬ್ರಾಹ್ಮಣರನ್ನೇ ನೇಮಿಸದೆ ಎರಡೂ ಪಕ್ಷಗಳ ಒಂದು ವಿಚಾರಣಾ ಕಮಿಟಿಯನ್ನು ಸಜ್ಜುಗೊಳಿಸಿದ್ದರೆ ಒಳಿತಾಗುತ್ತಿತ್ತೆಂದು ನಮ್ಮ ಅಭಿಪ್ರಾಯವು. ಅದರಂತೆಯೇ ಈ ತೀರ್ಪು ಅನ್ಯಾಯವಾಗಿರುವದೆಂದು ನಮ್ಮ ಅಭಿಪ್ರಾಯವು. ಯಾಕೆಂದರೆ ಎಲ್ಲ ಪ್ರಜೆಗಳಿಂದ ಕರರೂಪದಿಂದ ತೆಗೆದುಕೊಳ್ಳುವ ಹಣದ ಉಪಯೋಗವು ಎಲ್ಲರಿಗೂ ಆಗಲಿಕ್ಕೇಬೇಕು. ಅಂದ ಮೇಲೆ ಸರಕಾರದಿಂದ ತೆಗೆಯಲ್ಪಟ್ಟ ಪಾಠಶಾಲೆಯಲ್ಲಿ ಬರೆ ಬ್ರಾಹ್ಮಣರಿಗೇ ಏನು ಅಧಿಕಾರವು ? ಈ ಪ್ರಕಾರ ನಡೆಯುವದು ಅಂದರೆ ಪ್ರಜೆಗಳಲ್ಲಿ ಸಮತ್ವದೃಷ್ಟಿಯನ್ನು ಇಡುವದು ನ್ಯಾಯವೋ ಅನ್ಯಾಯವೋ ಇದೇ ಮೊದಲನೆಯ ಪ್ರಶ್ನೆಯು. ಪ್ರಜೆಗಳಲ್ಲಿ ಸಮದೃಷ್ಟಿಯು ಇಲ್ಲದವನು ರಾಜನಲ್ಲೆಂದು ಮನುವು ಸಾರಿ ಸಾರಿ ಹೇಳಿರುವನು. ಈ ದೃಷ್ಟಿಯಿಂದ ವಿಚಾರಿಸಿದರೆ ಮೇಲಿನ ತೀರ್ಪು ನ್ಯಾಯವೋ ಅನ್ಯಾಯವೋ ವಾಚಕರೇ ವಿಚಾರಿಸಬೇಕು. ಈ ಪ್ರಕಾರ ಬ್ರಾಹ್ಮಣೇತರರು ಬ್ರಹ್ಮಜ್ಞಾನಕ್ಕಾಗಿ ಹಂಬಲಿಸತೊಡಗಿರುವದನ್ನು ನೋಡಿ ನಮಗಂತೂ ಹಿಡಿಸಲಾರದಷ್ಟು ಆನಂದವಾಗಿದೆ. ಇದೇನು ? ಸತ್ಯಯುಗ ಸೂಚಕ ಲಕ್ಷಣವಲ್ಲವೇ ? ಪರಮಾತ್ಮನು ಈ ಪ್ರಕಾರ ಮಾನವ ಕೋಟಿಯನ್ನು ಮೇಲಕ್ಕೆತ್ತಲು ನಿಶ್ಚಯಿಸಿರಲು ಈ ಅಲ್ಪ ಸ್ವಲ್ಪ ಬ್ರಾಹ್ಮಣರಿಂದ ಆಗುವದೇನು ?

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸ. ಪ್ರ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಪತ್ರವ್ಯವಹಾರ ಸಂಬಂಧವಾಗಿರುವ ನಮ್ಮ ನಿಯಮವನ್ನು ಬಹು ಜನರು ಗಮನಿಸದೆ ಅಸ್ಪಷ್ಟವಾಗಿಯೂ ಕಾಗದದ ಹಿಂದುಮುಂದೂ ಬರೆಯುವುದಲ್ಲದೆ ಸಾಮಾನ್ಯ ವಿಷಯಗಳನ್ನೆಲ್ಲಾ ವೃಥಾ ಲಂಬಿಸಿ ಬರೆಯುತ್ತಿದ್ದಾರೆ. ಇವುಗಳನ್ನೆಲ್ಲಾ ಸಮಗ್ರವಾಗಿ ಪ್ರಕಟಿಸುವುದಾದರೆ ಮೈಸೂರು ಸ್ಟಾರ್ ಪತ್ರಿಕೆಯ ಪುಟಗಳು ಪ್ರತಿವಾರದಲ್ಲೂ 12-16 ಆದರೂ ಸಾಲುವುದಿಲ್ಲವು. ಆದುಕಾರಣ ಸರ್ವಜನ ಸಮ್ಮತವೂ ಅತ್ಯುಪಯುಕ್ತವೂ ಆದ ಲೇಖನಗಳನ್ನು ಮಾತ್ರ ಆರಿಸಿ ಪ್ರಕಟಿಸುತ್ತಿದ್ದೇವೆ. ಆದರೆ ಅನೇಕರು ತಾವು ಕಳುಹಿಸಿದ ಲೇಖನಗಳುಪಯುಕ್ತವಾಗಿರಲಿ ಇಲ್ಲದಿರಲಿ ಅವನ್ನು ಪ್ರಕಟಿಸಲಿಲ್ಲವೆಂದು ಆಗ್ರಹಯುಕ್ತರಾಗಿರುವರು. ಪತ್ರವ್ಯವಹಾರಕರು ಇನ್ನುಮೇಲಾದರೂ ನಮ್ಮ ನಿಯಮಗಳನ್ನು ಅನುಸರಿಸಿ ಬಹಳ ಉಪಯುಕ್ತವಾದ ಮತ್ತು ಮುಖಸ್ತುತಿಯಿಲ್ಲದಿರುವ ವಿಷಯಗಳನ್ನು ಆದಷ್ಟು ಸಂಕ್ಷಿಪ್ತವಾಗಿಯೂ ಸ್ಪಷ್ಟವಾಗಿಯೂ ಕಾಗದದ ಒಂದುಕಡೆ ಮಾತ್ರ ಬರೆದು ಕಳುಹಿಸಬೇಕಾಗಿ ಕೋರಿದೆ. ನಮ್ಮ ತಿಳಿವಳಿಕೆಗಾಗಿ ಹೆಸರು ವಿಳಾಸವೂ ರೆಜಿಸ್ಟರ್ ನಂಬರೂ ಪೂರ್ಣವಾಗಿ ತಿಳಿಯಿಸಲ್ಪಡದಿದ್ದಲ್ಲಿ ಯಾವ ಲೇಖನವೂ ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವು.

(1) ತೋರಣಗಟ್ಟದ K.M.R. ನಿಮ್ಮ ಹೆಸರು ಪೂರ್ಣವಾಗಿಲ್ಲವು.
(2) ಎರಡುಸಾರೆ ರಥೋತ್ಸವ—ಇದು ಮನಃಖೇದವನ್ನುಂಟುಮಾಡತಕ್ಕದಾಗಿದೆ.

ಕೂಡಗಿ ತಾಲ್ಲೂಕು ಬಾಗೇವಾಡಿ.

ಶ್ರೀ ಬಸವೇಶ್ವರ ಜಾತ್ರೆ ಮಹೋತ್ಸವವು:—ಕೂಡಗಿಯಲ್ಲಿ ಪ್ರತಿವರ್ಷದಂತೆ ಶ್ರೀ ಬಸವೇಶ್ವರ ಜಾತ್ರೆ ಮಹೋತ್ಸವವು ಇದೇ ಶ್ರಾವಣ ವ|| ೩೦ ದಿವಸ ಬಾಜಾಬಜಂತ್ರಿಯಿಂದ ದೊಡ್ಡ ದೊಡ್ಡ ವೀರಶೈವ ಮುಂದಾಳುಗಳಿಂದ ಮೆರೆವಣಿಗೆಯು ಶ್ರೀ ಮಲ್ಲಿಕಾರ್ಜುನದೇವರ ಗುಡಿಯಿಂದ ಹೊರಟು ಪಾಲಕಿ ನಂದಿಧ್ವಜದೊಂದಿಗೆ ಶ್ರೀ ಬಸವೇಶ್ವರ ದೇವಾಲಯಕ್ಕೆ ತಲಪಿತು. ಊರಲ್ಲಿ ತಳಿರುತೋರಣಗಳಿಂದ ಅಲಂಕರಿಸಿದ್ದರು. ಊರಲ್ಲಿ ಮಾಂಕಾಳೇವಿಯು ಬಂದಿದ್ದೂ ವೀರಶೈವ ತರುಣ ಸಂಘದವರ ಉತ್ಸುಕತೆಯಿಂದಲೋ ಅಥವಾ ಭಕ್ತಿಪ್ರಭಾವಕ್ಕೋ ಎಲ್ಲಿಯೋ ಅಡಗಿಹೋಯಿತು. ವೀರಶೈವ ತರುಣ ಸಂಘದವರಿಗೆ ಈ ಶ್ರೇಯಸ್ಸು ಇರತಕ್ಕದ್ದು.

ಓರ್ವ ಪ್ರತ್ಯಕ್ಷದರ್ಶಿ.

ಭಂಗಾರಕ್ಕೆ ಕುಂದಣ.

ಹೊಸಪೇಟೆಯಲ್ಲಿ ತಾ|| 31-7-22ನೆ ದಿವಸ ನಡೆದ ಶ್ರೀ ಹಿಮವತ್ಕೇದಾರ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳವರ ಸಕಲ ಬಿರುದಾವಳಿಯುಕ್ತ ಪಿರ್ಯಗಾಂದೋಳನೋತ್ಸವ ಸಮಾರಂಭವನ್ನು ನೋಡಲು ಮಿತ್ರಮಂಡಲಿಯೊಡನೆ ಅಲ್ಲಿಗೆ ನಾವು ತೆರಳಿದೆವು. ಆ ದಿವಸ ಉತ್ಸವವು ಸಾಂಗೋಪಾಂಗವಾಗಿ ಜರಗಿತು. ಬಳಿಕ ತಾ|| 1-8-22 ದಿವಸ ಶ್ರೀ ಮಹಾಸನ್ನಿಧಿಯಲ್ಲಿ ನೆರೆದ ಭಕ್ತಮಾಹೇಶ್ವರಾದಿ ವೃಂದಕ್ಕೆ ಶ್ರೀಗಳವರು, ಸಂಸ್ಕೃತ, ಇಂಗ್ಲೀಷು, ಹಿಂದೀ, ಕನ್ನಡ, ಮೊದಲಾದ ಭಾಷೆಗಳಿಂದ ತಮ್ಮ ಮೂಲಪೀಠವಾದ ಹಿಮವತ್ಕೇದಾರದಲ್ಲಿರುವಂಥ ಮಹತ್ಕಾತಿಶಯಗಳನ್ನೂ ಹಾಗೂ ಸಂಸ್ಥಾನಕ್ಕೆ ಅನೇಕ ರಾಜರುಗಳಿಂದಲೂ ಇಂಡಿಯಾ ಸರಕಾರದವರಿಂದಲೂ ದೊರೆತಿರುವಂಥ ಸನ್ನದುಗಳನ್ನೂ ಮತ್ತು ಬಹು ಕಾಲದ ರಿಕಾರ್ಡುಗಳನ್ನೂ ಪ್ರಕಾಶಗೊಳಿಸುತ್ತಾ ವೀರಶೈವ ಮತದ ಸಿದ್ಧಾಂತಗಳನ್ನೂ ಲೌಕಿಕ ಪಾರಮಾರ್ಥಿಕ ವಿಷಯಗಳನ್ನೂ ಬಹು ಸರಸವಾಗಿ ಬೋಧಿಸಿದರು. ವೀರಶೈವಮತಕ್ಕೆ ಮೂಲ ಕರ್ತೃಗಳಾದ ಪಂಚಪೀಠಾಧಿಕಾರಿಗಳೂ ಈವರೆಗೂ ಕಾಲವೈಚಿತ್ರದಿಂದ ಕ್ಷೀಣಾವಸ್ಥೆಯಲ್ಲಿದ್ದರು. ಈಗ ನಮ್ಮ ಸುದೈವದಿಂದ ಹಗಲಿರುಳೂ ಮಠೋದ್ಧಾರ ಕಾರ್ಯದಲ್ಲಿ ಕಾಲಕಳೆಯುವಂಥಾ ಶ್ರೀ ಕೇದಾರಪೀಠಕ್ಕೆ ನೀಲಕಂಠ ಶಿವಾಚಾರ್ಯರು ಪ್ರಾಪ್ತವಾದದ್ದು ಭಂಗಾರಕ್ಕೆ ಕುಂದಣ ಹಾಕಿದಂತೆ ಅತ್ಯಂತ ಶೋಭಾಯಮಾನವಾಗಿದೆ. ಇದರಂತೆ ಸದ ಕ್ಕೆ ಶ್ರೀ ರಂಭಾಪುರೀ (ಬಾಳೆಹಳ್ಳಿ) ಪೀಠಕ್ಕೂ ವಿದ್ವಾಂಸರಾದ ಹಾಗೂ ಮಠೋದ್ಧಾರ ಕಾರ್ಯದಕ್ಷರಾದ ಯೋಗ್ಯ ಮೂರ್ತಿಗಳನ್ನು ಶೋಧಮಾಡಿ ಅಧಿಕಾರಗಳನ್ನು ಮಾಡಿದಲ್ಲಿ ನಮ್ಮ ವೀರಶೈವ ಮತವು ಕ್ಷಿಪ್ರದಲ್ಲಿಯೇ ವೃದ್ಧಿಂಗತವಾಗಿ ಪ್ರಕಾಶಕ್ಕೆ ಬರಲು ಸಂದೇಹವಿಲ್ಲ. ಈ ಬಗ್ಗೆ ಪೀಠಾಭಿಮಾನಿಗಳೆಲ್ಲರೂ ತನುಮನಧನಗಳಿಂದ ಸಾಹಸ ಮಾಡಿ ಈ ಮಂಗಲಕರವಾದ ಮಹತ್ಕಾರ್ಯವನ್ನು ಸಾಂಗಗೊಳಿಸಿ ಕೀರ್ತಿಭಾಜನರಾಗಬೇಕೆಂದು ಸೂಚನೆ.

ವಿರೂಪಾಕ್ಷಾರ್ಯ ಪುರಾಣಿಕ ಮಠ, ಹಿರೇಹಡಗಲಿ.

ಸಂಪದಭ್ಯುದಯದಲ್ಲಿ ಸುಳ್ಳುಕರಸ್ಪಾಂಡೆನ್ಸು.

ಕಳೆದ ಆಗಸ್ಟ್ 31ನೇ ತಾರೀಖಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಪ್ರಕಟಿಸಿದ್ದ "ವೀರಶೈವ" ಎಂಬ ಹೆಸರಿನ ಕರೆಸ್ಪಾಂಡೆನ್ಸಿನ ವಿಷಯವಾಗಿ ಈ ಕೆಳಗೆ ನಮೂದಿಸಿರುವ ಪ್ರಕಾರ ಆ ಪತ್ರಿಕಾ ಎಡಿಟರವರಿಗೆ ವಂದು ವಾರದ ಕೆಳಗೆ ನಾನು ಕರಸ್ಪಾಂಡೆನ್ಸನ್ನು ಬರೆದಿದ್ದನು. ಇದುವರೆಗೆ ಅವರು ತಮ್ಮ ಪತ್ರಿಕೆಯಲ್ಲಿ ಅದನ್ನು ಪ್ರಕಟಿಸಿರುವುದಿಲ್ಲ. ಆದುದರಿಂದ ತಾವಾದರೂ ಈ ವಿಷಯವನ್ನು ಕೂಡಲೇ ಪ್ರಕಟಿಸಬೇಕಾಗಿ ಕೋರುತ್ತೇನೆ. ಕಳೆದ ಆಗಸ್ಟ್ 31ನೇ ತಾ|| ತಮ್ಮ ಸಂಪದಭ್ಯುದಯ ಪತ್ರಿಕೆಗೆ "ವೀರಶೈವ" ಎಂಬ ಹೆಸರಿನಿಂದ ಕೊಟ್ಟಿರತಕ್ಕ ಕರೆಸ್ಪಾಂಡೆನ್ಸಿನಲ್ಲಿ ಕೆಲವು ಅಸತ್ಯವಿಧಾನಗಳು ಇರುವುದರಿಂದ ಈ ಲೇಖನವನ್ನು ನಿಮಗೆ ಬರೆಯಬೇಕಾಯಿತು. ಈ ಊರಿನಲ್ಲಿ ಒಂದು ವೀರಶೈವ ಸಂಘವಿರುವುದು ನಿಜ, ಅದಕ್ಕೆ ನಾನು ಪ್ರೆಸಿಡೆಂಟಾಗಿರುವದೂ ನಿಜ. ಆದರೆ ಈ ಸಂಘದವರು ಸೇರಿಸಿದ್ದ ಸಭೆಯಲ್ಲಿ ಬ್ರಾಹ್ಮಣರ ಸ್ಪೆಷಲ್ ಕಾಲೇಜುಗಳಿಗೆ ಬ್ರಾಹ್ಮಣೇತರನ್ನೆಲ್ಲಾ ಸೇರಿಸಬೇಕೆಂದು ಹೊಡೆದಾಡುವದು ಸ್ಟಾರ್‌ಪತ್ರಿಕಾಕರ್ತರ ಹೊಡೆದಾಟವೇ ಹೊರತು ವೀರಶೈವ ಮಹಾಜನಗಳ ಹೊಡೆದಾಟವಲ್ಲವೆಂಬದಾಗಿಯೂ, ಪಂಚಮರೇ ಮೊದಲಾದವರು ವೀರಶೈವ ಪಾಠಶಾಲೆಗಳಿಗೆ ಬರಬೇಕೆಂದು ಅಪೇಕ್ಷಿಸಿದರೆ ಅದಕ್ಕೆ ವೀರಶೈವರೆಲ್ಲರೂ ಒಪ್ಪುವುದಿಲ್ಲವೆಂಬದಾಗಿಯೂ ಇಂಥಾದ್ದರಲ್ಲಿ ಬ್ರಾಹ್ಮಣರ ಪ್ರೈವೇಟ್ ಪಾಠಶಾಲೆಗಳಿಗೆ ಇತರರನ್ನು ಸೇರಿಸಬೇಕೆಂಬ ವಾದವು ಶುದ್ಧತಪ್ಪೆಂಬದಾಗಿಯೂ ವೀರಶೈವರ ಪ್ರೈವೇಟ್ ಪಾಠಶಾಲೆಗಳಿಗೆ ಹೇಗೋ ಹಾಗೆ ಉದಾರಸಹಾಯವನ್ನು ಅಪೇಕ್ಷಿಸಬೇಕೆಂಬದಾಗಿಯು ಚರ್ಚೆನಡಿಸಿದರು" ಎಂದು ಬರೆದಿದ್ದಾರೆ. ಇದು ಸಂಪೂರ್ಣವಾಗಿ ನಿಜವಲ್ಲ. ಇಂಥಾ ಚರ್ಚೆಯನ್ನು ಸಭೆಯಲ್ಲಿ ಯಾರೂ ಮಾಡಲಿಲ್ಲ. ಅಲ್ಲಿ ಐಕಮತ್ಯದಿಂದ ನಡೆದು ಗೌರ್ನಮೆಂಟಿಗೆ ಕಳುಹಿಸಿರತಕ್ಕ ಮೆಮೋರಾಂಡಂ ನಕಲನ್ನು ನಿಮ್ಮ ಆಗಸ್ಟ್ 19ನೇ ತಾರೀಖಿನ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೀರಿ. ನಮ್ಮ ಸಮಾಜದವರ ಅಭಿಪ್ರಾಯವೆಲ್ಲಾ ಈ ಮೆಮೋರಾಂಡಮ್ಮಿನ ಅಭಿಪ್ರಾಯಕ್ಕೆ ಅನುಸಾರವಾಗಿದೆಯೆಂದು ನಂಬುತ್ತೇನೆ.

T. S. SIDDAPPA, President.

ಶ್ರೀಯುತ ಗುಡಗುಂಟಿ ಇವರ ಅಭಿನಂದನವು.

ಉತ್ಸಾಹಿತ ತರುಣರೂ ಮತ್ತು ಸಮಾಜದ ಹಿತಚಿಂತಕರೂ ಆದ ಗುಡಗುಂಟಿ. ವ್ಹಿ. ಎಸ್. ಇವರು ಮುಂಬಯಿ ವೀರಶೈವಾಶ್ರಮದ ಸಂಬಂಧವಾಗಿ ವೃತ್ತಪತ್ರಗಳಲ್ಲಿ ಒಂದು ಲೇಖನವನ್ನು ಕೊಟ್ಟಿದ್ದನ್ನು ವಾಚಕವೃಂದವು ಅರಿತಿರಬಹುದು. ಅದನ್ನು ನಿಷ್ಪಕ್ಷಪಾತದಿಂದ ಪರೀಕ್ಷಿಸಿ ನೋಡಿದವರಿಗೆ ಅವರ ಬೆಲೆಯು ಹೊಳೆಯದೆ ಇರದು. ಅವರು ಸ್ವತಃ ಜಂಗಮಶಾಹಿ ಕೋಟೆಯೊಳಗಿನ ಒಬ್ಬ ವ್ಯಕ್ತಿಗಳಾಗಿದ್ದು, ನಿರ್ಭಯತನದಿಂದಲೂ, ನಿಷ್ಪಕ್ಷಪಾತದಿಂದಲೂ, ವಿವಿಧ ಮಾಹಿತಿಯಿಂದಲೂ, ಸಾಧಕಬಾಧಕ ಪ್ರಮಾಣ ಕೊಟ್ಟು ಆ ಲೇಖನವನ್ನು ಬರೆಯಲು ಸಾಹಸ ಪಟ್ಟಿದ್ದರಿಂದ ನಾವು ಅವರನ್ನು ಅಂತಃಕರಣಪೂರ್ವಕ ಅಭಿನಂದಿಸದೆ ಇರೆವು. ಮತ್ತು ಆಶ್ರಮ ಲೇಖನವು ಶ್ರೀಮನ್ನಿರಂಜನ ಬಿಳ್ಳೂರ ಶ್ರೀಗಳವರ ಮನಸ್ಸನ್ನು ಈ ಆಶ್ರಮದಂಥ ಪರಮ ಮಹತ್ವದ ಕಾರ್ಯದ ಕಡೆಗೆ ಎಳಕೊಳ್ಳದೆ ಬಿಡದೆಂದು ನಮ್ಮ ದೃಢನಂಬಿಗೆಯು. ವೀರಶೈವ ಸಮಾಜದ ಇಂಥ ಅವನತಸ್ಥಿತಿಯಲ್ಲಿ ಅದನ್ನು ಪುನೀತವಾಗಿ ಮಾಡುವ ಮಹಾತ್ಮರು ಬೀಳೂರ ಸ್ವಾಮಿಜಿಯೇ ತಕ್ಕವರೆಂದು ಗುಡಗುಂಟಿ ಇವರು ಮನಗಂಡು ಆಶ್ರಮದಂಥ ಮಹತ್ವದ ಕಾರ್ಯವನ್ನು ಕೈಕೊಳ್ಳಲು ಅವರಿಗೆ ಕೇಳಿಕೊಂಡಿರಬಹುದು. ಮತ್ತು ಅದು ನಿಜವಿರುವದು. ಶ್ರೀ ಗಂಗಾಧರಪ್ಪಾ ಸಾಬೋಜಿ ಇವರು ಆಶ್ರಮವನ್ನು ಪುನಃ ರಚಿಸುವ ಕುರಿತು ಮುಂಬಯಿಯಲ್ಲಿರುವ ಜನರ ತೊಡೆಕೆಳಗಿನ ಹಣವನ್ನು ಬೇಗನೆ ಸೆಳೆಯಬೇಕಲ್ಲದೆ ಆಶ್ರಮವನ್ನು ಏರ್ಪಡಿಸ ಬೇಕಾದರೆ ಯಾವ ಮಾರ್ಗವನ್ನು ಕೈಕೊಂಡಲ್ಲಿ ಅದು ತೀವ್ರವೇ ಕೊನೆಗಾಣುವದೆಂಬದಾಗಿ ತಮ್ಮ ಅಭಿಪ್ರಾಯವನ್ನು ವರ್ತಮಾನ ಪತ್ರಗಳ ದ್ವಾರದಿಂದ ವ್ಯಕ್ತಪಡಿಸಬೇಕೆಂದು ಕೋರಿಕೆ. ಕೊನೆಗೆ ಶ್ರೀಯುತ ಗುಡಗುಂಟಿ ಇವರು ಆಶ್ರಮದ ಬೆಸೆಯಿಂದ ಲೇಖನವನ್ನು ಪ್ರಕಟಿಸಿದ್ದರ ಸಲುವಾಗಿ ಯಾರೂ ವ್ಯರ್ಥ ಪ್ರತಿಭಟಿಸಬಾರದೆಂದೂ ಮತ್ತು ಗುಡಗುಂಟಿ ಇವರು ಇದರಂತೆ ಇನ್ನು ಮುಂದಾದರೂ ಸಮಾಜದ ಕೆಲಸಕ್ಕೆ ಹೆಚ್ಚು ಹೆಚ್ಚಾಗಿ ಹೆಣಗಾಡ ಬೇಕೆಂದೂ ಪ್ರಾರ್ಥಿಸಿ ನಾವು ಲೇಖನವನ್ನು ವಿರಮಿಸುವೆವು.

ಅಭಿನಂದಕರು (1) ಗುಂಡಪ್ಪಾ ತಾಬಾದಿ, (2) ರಾಮಚಂದ್ರಪ್ಪಾ ಚೋವಾಳ, (3) ಮಹಾಲಿಂಗಪ್ಪಾ ಕೋರಿ.

ಕಲ್ಯಾಣ.

ನಿಜಾಮ ಇಲಾಖಾ ಗುಲ್ಬರ್ಗಾ ಜಿಲ್ಲಾ ಜಹಾಗೀರ ಕಲ್ಯಾಣದಲ್ಲಿ ಹಿರಿಯತನದ ರೇವಣಸಿದ್ಧೇಶ್ವರ ಕಟ್ಟೆಮಠದಲ್ಲಿ ಕಳೆದ ಶ್ರಾವಣ ಬ|| ೭. ಸೋಮವಾರ ಮಧ್ಯಾಹ್ನದಲ್ಲಿ ವೀರಶೈವ ಜ್ಞಾನವರ್ಧಕ ಸಂಘದವರು ಪದ್ಧತಿಯಂತೆ ಒಂದು ಸಭೆಯನ್ನೇರ್ಪಡಿಸಿದ್ದರು. ಆ ಸಭೆಯಲ್ಲಿ ಸುಮಾರು ನಾಲ್ಕೈದುನೂರುಜನ ವೀರಶೈವ ಮಹನೀಯರು ನೆರೆದಿದ್ದರು. ಅಲ್ಲಿ ಕರಿಬಸಯ್ಯ ಉದಬ್ಬಾಳ ಎಂಬ ವಿದ್ಯಾರ್ಥಿಯು ಸತ್ಸಂಗ ಲಾಭ ಎಂಬ ವಿಷಯದಲ್ಲಿ ಬಹಳ ಉತ್ತಮರೀತಿಯಿಂದ ಹೇಳಿ ಸಂತೋಷಗೊಳಿಸಿದರು. ಮತ್ತು ಗುರುಪಾದಯ್ಯ ಶಂಕರಗುಡಿಯವರು ಐಕಮತ್ಯ ವಿಷಯವಾಗಿ, ಗುರುಬಸಯ್ಯ ಕಸಡೆ ಎಂಬ ವಿದ್ಯಾರ್ಥಿಯು ಗುರುಮಹಿಮೆ ಎಂಬ ವಿಷಯದಲ್ಲಿ ಸರಸವಾಗಿ ಮಾತನಾಡಿದರು. ಅನಂತರ ಆ ಸಭೆಯಲ್ಲಿ ಓರ್ವವಾಚಕನು ಸ್ಟಾರ್ ಪತ್ರದಲ್ಲಿ ಬರೆದಿರುವ ಮಹಾಸಭೆಯೆಂಬ ಶಿರೋಲೇಖನದ ಅಭಿಪ್ರಾಯವನ್ನು ಎಲ್ಲರೂ ತಿಳಿಯುವಂತೆ ಓದತಕ್ಕಂಥವನಾದನು. ಅದನ್ನು ಸಮಾಜದವರು ಕೇಳಿ ಸಂತೋಷಪಟ್ಟರು. ಮತ್ತು ಕೆಲವರು ಉಸುರ್ಗರೆದರು. ಇನ್ನು ಖೇದವೇತಕ್ಕೆಂದರೆ—ಕಳೆದ ಹನ್ನೆರಡು ವರ್ಷದಿಂದಲೂ ನಮ್ಮ ಕಲ್ಯಾಣಕ್ಕೆ ಆರುಸಾರೆ ಪ್ಲೇಗು ರೋಗದಿಂದಲೂ ಮತ್ತು ಇಂಫ್ಲೂಯಂಜಾ ರೋಗದಿಂದಲೂ ಗುರುವರ್ಗದಲ್ಲಿ ಐವತ್ತು ಅರವತ್ತು ಜನ ಮುಖ್ಯಸ್ಥ ಮಹನೀಯರು ಶಿವಾಧೀನರಾಗಿರುವರು. ಉಳಿದ ಚಿಕ್ಕವರಲ್ಲಿಯಾದರೂ ವಿದ್ಯೆಯಿಲ್ಲವು. ಏಕೆಂದರೆ ಈ ಊರಲ್ಲಿ ಎಂದೂ ಕನ್ನಡ ಶಾಲೆಯಿಲ್ಲದ್ದಕ್ಕೆ ಹಾಗೂ ಹೀಗೂ ಕಲಿತರೆ ಎಲ್ಲಿಗಾದರೂ ಶಾಸ್ತ್ರಿಗಳ ಸನ್ನಿಧಿಗೆ ಹೋಗಿ ಕಲಿತದ್ದೇ ಅದರೂ ಆಗಲಿ ಧನಸಹಾಯ ಮಾಡತಕ್ಕ ವೀರಶೈವ ಮಹನೀಯರೆಲ್ಲಿ? ಅಂದರೆ (ಮಹಾರುದ್ರಪ್ಪಚೀಣಿ) ಯವರಂಥ ಮುಖಸ್ಥರಾದರೂ ಉಳಿಯದಂತಾಯಿತು. ಅಂದಮೇಲೆ ಇಂಥಾ ಮಹತ್ಕಾರ್ಯವು ಹೇಗೆ ಜರುಗೀತೆಂದು ವಿಷಾದಿಸಿ ಅನಂತರ ಮುಧೋಳ ಮಹಾಸ್ವಾಮಿಗಳಂತೂ ನಾಲ್ಕೈದು ತಿಂಗಳಿಂದಲೂ ಈ ಪುರಾಣಸಮಾಪ್ತಿಯ ಬಗ್ಗೆ ವ್ಯವಸ್ಥೆಯನ್ನು ಮಾಡಿ ಸ್ವಲ್ಪಾನುಸಾರ ಬತ್ತವನ್ನು ತಂದಿರಿಸಿರುವರೆಂತಲೂ, ಮತ್ತು ಕೊಡಿಸುವದಕ್ಕೆ ಸೋಲಾಪೂರ, ಕಲಬುರ್ಗಿ, ವಿಜಾಪುರ—ಸ್ಥಳಗಳಿಗೆ ಹೋಗಿ ಒಂದು ತಿಂಗಳು ಆಗಿರುವದೆಂತಲೂ ತಿಳಿದು-ವಿಚಾರಿಸಿ ಮಹಾಸ್ವಾಮಿಗಳಿಗೆ ಒಂದು ಪತ್ರವನ್ನು ಬರೆದು ಅವರು ಬಂದನಂತರ ಒಂದು ಆಲೋಚನಾಸಭೆಯನ್ನು ಏರ್ಪಡಿಸಿ ಆ ಸಭೆಗೆ ಕಲಬುರ್ಗಿ ಬಂಧುಗಳನ್ನೂ ಮತ್ತು ನಮ್ಮ ಪ್ರಾಂತದ ವೀರಶೈವ ಮಹನೀಯರನ್ನೂ ಬರಮಾಡಿಕೊಂಡು ಒಂದು ನಿರ್ಧಾರ ಮಾಡಿ ಮಹಾಸಭೆಯ ಬಗ್ಗೆ ಏನಾದರೂ ವ್ಯವಸ್ಥೆ ಮಾಡಲಿಕ್ಕೆ ಬಂದೀತೆಂದು ಮಾತನಾಡಿ ಸರ್ವಗುರುವರ್ಗದವರಿಗೂ ಪುಷ್ಪಹಾರವನ್ನು ಸಮರ್ಪಿಸಿ ಮಂಗಲಾಚರಣೆಯಿಂದ ಸಭೆಯ ವಿಸರ್ಜನವಾಯಿತು.

ಓರ್ವಪುರನಿವಾಸಿ.

ಚೆನ್ನಗಿರಿ ತಾಲ್ಲೂಕು ತ್ಯಾವಣಿಗೆಗ್ರಾಮದ ವೃತ್ತಾಂತವು.

ಶ್ರೀ ಗಿರಿರಾಜ ಸೂರ್ಯಸಿಂಹಾಸನ ವೀರಶೈವ ಜಗದ್ಗುರು ಮಹಾಸ್ವಾಮಿ ವೀರಭಿಕ್ಷಾವೃತ್ತಿ ರಾಜದೇಶಿಕೇಂದ್ರ ಮಹಾಸ್ವಾಮಿಯವರು ದಾವಣಗೆರೆ ತಾಲ್ಲೂಕು ಕಂದುಗಲ್ಲು ಮೊಕ್ಕಾಂನಿಂದ, ಚನ್ನಗಿರಿ ತಾಲ್ಲೂಕು ತ್ಯಾವಣಗೆ ಗ್ರಾಮಕ್ಕೆ ತಾ|| 22-7-1922 ರಲ್ಲಿ ಸಕಲವೈಭವಗಳಿಂದ ಆಗಮಿಸಿ ಭಕ್ತಮಾಹೇಶ್ವರರ ಸೇವಾಸತ್ಕಾರ್ಯ ಬಿನ್ನಹಗಳಂ ಸ್ವೀಕರಿಸಿದನಂತರ, ಶ್ರೀ ಸನ್ನಿಧಿಯ ಅಪ್ಪಣೆಯ ಮೇರೆಗೆ ಈ ಹಿಂದೆ, ಶ್ರೀಮನ್ನಿರಂಜನ ಜಗದ್ಗುರು ಮ|| ರಾಜೇಂದ್ರಮಹಾಸ್ವಾಮಿಗಳವರನ್ನು ಅಪ್ಪಣೆಯಂತೆ ಸ್ವಗೃಹಕ್ಕೆ ಬಿಜಯಂಗೈಸಿಕೊಂಡಾಗ ಅವರ ಪ್ರಸಾದವಾಣಿಯ ಮೇರೆಗೆ ಜನನಾನಂತರ ಮುರಿಗೇಶಪ್ಪನೆಂಬ ನಾಮಾಂಕಿತನಾಗಿ, ಪುನಃ ಶ್ರೀಗಳವರ ಅಪ್ಪಣೆಯಂತೆಯೇ ಕೇವಲ ಭಕ್ತ್ಯುತ್ಸಾಹ ವೈಭವಗಳಿಂದ ಸ್ವಗೃಹಕ್ಕೆ ಬರಮಾಡಿಕೊಳ್ಳಲು ನಡೆಸಿದಸಾಹಸಕಾರ್ಯಗಳನ್ನು ನೋಡಿ ಚಿತ್ತೋಲ್ಲಾಸದಿಂದ ಶ್ರೀ ಸನ್ನಿಧಿಯು ಬಹದ್ದೂರ್ ಎಂಬ ಬಿರುದನ್ನು ದಯಪಾಲಿಸಿರುವದಾಗಿ, ಶ್ರೀ ಮುಖದಿಂದಲೇ ವಿಸ್ತರಿಸಿಕೊಂಡ ತ್ಯಾವಣಿಗೆ ಸಾಹುಕಾರ್ ಚನ್ನಪ್ಪನವರ ಪುತ್ರ ಎಸ್. ಮುರಿಗೆಪ್ಪನೆಂಬ ವಿದ್ಯಾರ್ಥಿಯೂ, ತಮ್ಮ ಎಸ್. ಮಲ್ಲೇಶಪ್ಪನೆಂಬ ವಿದ್ಯಾರ್ಥಿಯೂ, ಸಹ ತಾ|| 7-8-22ರಲ್ಲಿ ಶ್ರೀ|| ೧|| ರಾ|| ಸೂ|| ಸಿಂ|| ಸ್ವಾಮಿಗಳವರ ಅಪ್ಪಣೆಯ ಮೇರೆಗೆ ಮನೋಹರವಾಗಲಂಕರಿಸಲ್ಪಟ್ಟಗ್ರಾಮದ ಬೀದಿಗಳಲ್ಲೆಲ್ಲಾ ಅತ್ಯಂತ ವೈಭವಗಳಿಂದ ಉತ್ಸವಮೂಲಕ ತಮ್ಮ ಗೃಹಕ್ಕೆ ಬಿಜಯಂಗೈಸ್ಸಿಕೊಂಡ ನಂತರ ಭದ್ರಾಸನಾರೂಢರಾದ ಶ್ರೀಗಳವರ ಅಧ್ಯಕ್ಷತೆಯಲ್ಲಿ, ದರ್ಶನಾಶೀರ್ವಾದಕ್ಕಾಗಿ ಸೇರಿದ ಅನೇಕ ದೊಡ್ಡ ಮನುಷ್ಯರುಗಳಿಂದ ನೆರೆದಿದ್ದ ಸಭೆಯಲ್ಲಿ ಶ್ರೀಗಳವರ ಅಪ್ಪಣೆಮೇರೆಗೆ ಎಸ್. ಯಂ. ವೀರಭದ್ರಶಾಸ್ತ್ರಿಗಳು, ಶ್ರೀ ಶೈಲಮಾಹಾತ್ಮ್ಯವನ್ನೂ ಸಮಾಜಾಭಿವೃದ್ಧಿಗಾಗಿ ತನುಮನಗಳನ್ನು ಸಮರ್ಪಿಸಿದ ಕೈ|| ವೈ|| ಮೈಸೂರು ವೀರಸಂಗಪ್ಪನವರ ಮತ್ತು ಹಾಲೀ ಶ್ರೇಯೋಭಿವೃದ್ಧಿಯನ್ನೈದುತ್ತಿರುವ ಮಹಾಶಯರುಗಳ ಗುಣಕಥನಗಳನ್ನೂ ಮಾಡಿದ ತರುವಾಯ ಈ ವಿಜ್ಯಂಭ

ವುದು'' ಎಂದು ಬೊಂಬಾಯಿಯ ಒಬ್ಬ ಪ್ರಸಿದ್ಧ ಡಾಕ್ಟರು ಸ್ವಾನುಭವದಿಂದ ಪ್ರಕಟಿಸಿರುತ್ತಾರೆ.

ಸುಪ್ರಸಿದ್ಧವಾದ ಅಮೃತಬಜಾರ್ ಪತ್ರಿಕೆಯ ಮುಖ್ಯ ಸಂಪಾದಕರೂ ಕರ್ತರೂ ಆಗಿದ್ದ ಬಾಬುಮೋತೀಲಾಲ್ ಘೋಷರು ಕೆಲ ತಿಂಗಳಿಂದ ಅಸ್ವಸ್ಥರಾಗಿದ್ದು ಕಳೆದ ತಾ|| 5 ನೇ ಮಂಗಳವಾರ ಕಲ್ಕತ್ತಾಪಟ್ಟದಲ್ಲಿ ತಮ್ಮ 77ನೇ ವುಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರು ಮಾಡಿದ ದೇಶಸೇವೆಯು ಅಗಾಧವಾದುದು. ಅಮೃತಬಜಾರ್ ಪತ್ರಿಕೆಯು ಹಾಸ್ಯರಸೋಕ್ತಿಗಳಿಂದಲೂ ಸಮಯೋಚಿತವಾದ ಕಥಾದೃಷ್ಟಾಂತಗಳಿಂದಲೂ ಅಧಿಕಾರಿಗಳ ಗುಣದೋಷ ವಿಮರ್ಶೆ ಮಾಡುವಲ್ಲಿ ಎಷ್ಟು ಅದ್ಭುತವಾದ ಶಕ್ತಿಯನ್ನು ಪಡೆದಿತ್ತೆಂಬುದನ್ನು ಆಂಗ್ಲಭಾಷಾಭಿಜ್ಞರೆಲ್ಲರೂ ಬಲ್ಲರು. ಅಮೃತಬಜಾರ್ ಪತ್ರಿಕೆಯು ಮೋತೀಲಾಲರ ಅಣ್ಣಂದಿರಿಂದ ದೇಶಭಾಷೆಯಲ್ಲಿ ಮೊದಲು ಆರಂಭಿಸಲ್ಪಟ್ಟು ಬಳಿಕ ಆಂಗ್ಲ ದಿನಪತ್ರಿಕೆಯಾಯಿತು. ಅದರ ಸರ್ವತೋಮುಖವಾದ ಪ್ರಾಶಸ್ತ್ಯಕ್ಕೆ ಮೋತೀಲಾಲರೇ ಕಾರಣಭೂತರು. ಇವರ ಜನ್ಮಸ್ಥಲವು ಅಮೃತಬಜಾರೆಂಬುದು. ಇವರ ತಾಯಿಯ ಹೆಸರಿನಿಂದಲೇ ಆ ಗ್ರಾಮಕ್ಕೆ ಆ ಹೆಸರು ಇಡಲ್ಪಟ್ಟಿತಂತೆ. ಮೋತೀಲಾಲರು ಸಭಾಂಗಣದಲ್ಲಿ ಯಾವಾಗಲೂ ಉಪನ್ಯಾಸ ಮಾಡಿದವರಲ್ಲ. ಸ್ಫುಟವಾಗಿಯೂ ಲಲಿತವಾದ ಸರಣಿಯಿಂದಲೂ ಅಚ್ಚುಕಟ್ಟಾಗಿ ವಿಷಯವಿಮರ್ಶೆ ಮಾಡಲು ಅವರಿಗೆ ಸಿದ್ಧಿಸಿದ್ದ ಲೇಖನಪಾಂಡಿತ್ಯವು ಅಸ್ವಾದ್ಯಶವಾಗಿದ್ದಿತು. "ದೇಶಕ್ಕೆ ನನ್ನ ಸೇವೆಯು ಸ್ವಲ್ಪ ಅವಶ್ಯಕವಾಗಿದ್ದ ಸಮಯದಲ್ಲಿ ಈಶ್ವರನು ನನ್ನನ್ನು ಕರೆದುಕೊಳ್ಳುತ್ತಾನಲ್ಲಾ! ಎಂದು ಘೋಷರು ತಮ್ಮ ಅವಸಾನಕಾಲದಲ್ಲಿ ನುಡಿದು ದೇಹತ್ಯಾಗಮಾಡಿದರಂತೆ. ಇವರಂಥ ದೇಶಸೇವಾಧುರಂಧರರು ದೇಶದಲ್ಲಿ ಅತ್ಯಂತ ವಿರಳರು. ಇವರಲ್ಲಿ ಪ್ರಜಾವರ್ಗಕ್ಕೇ ಅಲ್ಲದೆ ಪ್ರಭುತ್ವದವರಿಗೂ ಬಹಳ ಗೌರವವಿದ್ದಿತು. ಎಡ್ವರ್ಡ್ ಚಕ್ರವರ್ತಿಯವರೂ ಜಾರ್ಜ್ ಚಕ್ರವರ್ತಿಯವರೂ ಸಹ ಯುವರಾಜರಾಗಿ ಭರತಖಂಡಕ್ಕೆ ದಯಮಾಡಿಸಿದ್ದ ಕಾಲಗಳಲ್ಲಿ ಇವರನ್ನು ಬರಮಾಡಿಕೊಂಡು ದೇಶದ ಪರಿಸ್ಥಿತಿಯನ್ನು ಕುರಿತು ಸಂಭಾಷಣೆ ಮಾಡಿದ್ದರು. ಇಂಥ ಮಹನೀಯರ ಮೃತಿಯು ದೇಶಕ್ಕೆ ವಿಶೇಷ ನಷ್ಟಕಾರಿಯೆಂಬುದರಲ್ಲಿ ಸಂಶಯವಿಲ್ಲ.

ಮಲೆಯಾಳದಲ್ಲಿ ನಡೆದ ವಿಪ್ಲವದಲ್ಲಿ ಜಾತಿಭ್ರಷ್ಟರಾಗಿ ಹೋಗಿರುವ ಹಿಂದುಗಳನ್ನು ಪ್ರಾಯಶ್ಚಿತ್ತದ ಮೂಲಕ ಮರಳಿ ಸ್ವಮತಕ್ಕೆ ಸೇರಿಸಿಕೊಳ್ಳುವ ವಿಷಯವನ್ನು ಪರ್ಯಾಲೋಚಿಸುವುದಕ್ಕಾಗಿ ಕಳೆದ ತಿಂಗಳು ತಾ|| 20ರಲ್ಲಿ ಕಲ್ಲಿಕೋಟೆಯ ಜಾಮರಿನ್‌ಯವರ ಏರ್ಪಾಟಿನ ಪ್ರಕಾರ ಒಂದು ವೈದಿಕ ಲೌಕಿಕ ಜನರ ಸಭೆಯು ಸೇರಿದ್ದಿತು. ಜಾಮರಿನ್‌ರಾಜರೂ ಜಿಲ್ಲಾ ಕಲೆಕ್ಟರು ಇತರಾಧಿಕಾರಿಗಳು ಸಹ ಸಭೆಗೆ ಬಂದಿದ್ದರು. ಚರ್ಚೆ ನಡೆದುದರಲ್ಲಿ ಬ್ರಾಹ್ಮಣರ ಹೊರತು ಇತರ ಹಿಂದುಗಳನ್ನೆಲ್ಲಾ ಪ್ರಾಯಶ್ಚಿತ್ತದ ಮೂಲಕ ಸೇರಿಸಿಕೊಳ್ಳಬಹುದೆಂದೂ, ಜಾತಿಭ್ರಷ್ಟರಾಗಿರುವ ಬ್ರಾಹ್ಮಣರ ವಿಷಯವನ್ನು ಮಾತ್ರ ಇನ್ನೂ ಸ್ವಲ್ಪ ಪರ್ಯಾಲೋಚಿಸಬೇಕೆಂದೂ, ಕೊಚ್ಚಿ ತಿರುವಾಂಕೂರು ಸಂಸ್ಥಾನಗಳವರೂ ಮತ್ತು ಬ್ರಿಟಿಷ್ ಮಲಬಾರ್ ಪ್ರಜೆಗಳೂ ಇವರ ವಿಷಯದಲ್ಲಿ ನಿರ್ಣಯ ಮಾಡಬೇಕೆಂದೂ ತೀರ್ಮಾನಿಸಲ್ಪಟ್ಟಿತು. ಇತರ ಹಿಂದುಗಳಿಗೆಲ್ಲಾ ವಿಧಿಸಲ್ಪಟ್ಟ ಪ್ರಾಯಶ್ಚಿತ್ತದ ಕ್ರಮವೇನೆಂದರೆ—1. ಜುಟ್ಟನ್ನು ಬೋಳಿಸಿ, ಮಹಮ್ಮದೀಯ ಮಂತ್ರವನ್ನುಪದೇಶಿಸಿರುವುದು, ಹೆಂಗುಸರಿಗೆ ಕಿವಿ ಚುಚ್ಚಿ ಮಾಪಿಳ್ಳಾ ರವಿಕೆಗಳನ್ನು ತೊಡಿಸಿರುವುದು, ಇಷ್ಟು ನಡೆದಿದ್ದರೆ ಅಂಥವರಿಗೆ ದೇವಾಲಯಗಳಲ್ಲಿ 3 ದಿನಗಳು ಪಂಚಗವ್ಯಪ್ರಾಶನಮಾಡಿಸಿ ಶಿವಮಂತ್ರವನ್ನೋ ನಾರಾಯಣ ಮಂತ್ರವನ್ನೋ ದಿನಕ್ಕೆ 3000 ಜಪಮಾಡಿಸಬೇಕು. 2. ಸುನ್ನತಿಯೂ ಅನ್ಯಜಾತಿ ಸ್ತ್ರೀ ಪುರುಷರ ಸಂಗವೂ ನಡೆದು ಹೋಗಿದ್ದರೆ ಅಂಥವರಿಗೆ 12 ದಿನಗಳ ಕಾಲ ದೇವಾಲಯಗಳಲ್ಲಿ ಪಂಚಗವ್ಯವನ್ನು ಕುಡಿಯಿಸಿ, ದಿನಕ್ಕೆ 12ಸಾವಿರ ಜಪವನ್ನು ಮಾಡಿಸಬೇಕು. 3. ಮಾಪಿಳ್ಳೆಗಳು ಬೇಯಿಸಿದ ಅನ್ನವನ್ನು ತಿಂದಿದ್ದರೆ ಪವಿತ್ರವಾದ ತೀರ್ಥದಲ್ಲಿ ಸ್ನಾನಮಾಡಿಸಿ 41 ದಿನಗಳ ಕಾಲ ಪಂಚಗವ್ಯಪ್ರಾಶನಮಾಡಿಸಿ ಪ್ರತಿದಿನಕ್ಕೆ 12 ಸಾವಿರದಂತೆ ಅಷ್ಟು ದಿನವೂ ಮಂತ್ರಜಪವನ್ನು ಮಾಡಿಸಬೇಕು. 4. ಇತರ ವಿಧದ ಯಾವ ಭ್ರಷ್ಟತನವು ನಡೆದಿದ್ದರೂ ಮೇಲೆ ಹೇಳಿದಂತೆ 21 ದಿನಗಳ ಕಾಲ ಪ್ರಾಯಶ್ಚಿತ್ತವಿಧಿಯನ್ನು ನೆರವೇರಿಸಬೇಕು.

ಶ್ರೀಮದ್ಯುವರಾಜಪುತ್ರಿಕೋತ್ಸವಾಷ್ಟಕಂ.

|| ಕಂದಪದ್ಯಂಗಳ್ ||

ಯದುವಂಶದ ಸಿರಿಮೊಗಕೊ |
ಪ್ಪದು ಕಣ್ಣೊಂದೆಂದು ಲೋಕಮಾತೆ ಲಲಿತೆ ತಾ ||
ನೊದವಿಸಿ ದೆರಡನೆ ಕಣ್ಣಿನೆ |
ಸದಮಳ ಯುವರಾಜಪುತ್ರಿ ಸಂಜನಿಸಿರ್ಕುಂ ||೧||

ಮೈಸೂರುಭೂಪ ರರಮನೆ |
ಯ್ಯೆಸಿರಿ ಸಿರಿಮೊಗದೆ ಮೆರೆವ ಕಣ್ಣೆರಡೆಂಬೋಲ್ ||
ಭಾಸಿಕ್ಕುಂ ಯುವರಾಜರ |
ಕೂಸುಗ ಳಿರ ಡತುಳವಿಮಳತೇಜೋಭರಗಳ್ ||೨||

ಕದಲದ ನೃಪಭಕ್ತಿಗೆ ಮ |
ಚ್ಚಿದ ಲಲಿತಾಂಬೆಯ ಕೃಪಾಸುಧಾಲಹರಿಯೆ ಚೆಂ ||
ದದ ಪೆಣ್ಮಣಿರೂಪಂ ತಾ |
ಳ್ದುದಿಸಿತು ಯುವರಾಜಧರ್ಮಪತ್ನಿಯ ಪೊಡೆಯಿಂ ||೩||

ಚಂದಿರನ ಪಿಂದೆ ಕಡಲಿಂ |
ದಿಂದಿರೆ ಯೊಗೆದಂತೆ ಯದುಕುಲಾಂಭೋನಿಧಿಯೊಳ್ ||
ಸುಂದರ ಜಯಚಾಮೇಂದ್ರನ |
ಪಿಂದುದಿಸಿದು ದಿಂದು ವಿಮಲಪುತ್ರೀರತ್ನಂ ||೪||

ದುಂದುಭಿಸಂವತ್ಸರದೊಳ್ |
ಸಂದಿಹ ಭಾದ್ರಪದಶುಕ್ಲಸಪ್ತಮಿಯಿಂ ಪೆಂ ||
ಪೊಂದಿದ ಶಶಿವಾಸರ ದಿ |
ನ್ನೆಂದುಂ ಸ್ಮರಣೀಯ ಮೆರಸುಗುವರಿಯ ಜನಿಯಿಂ ||೫||

ನಲಿದರ್ ಶತಘ್ನಿಯುಲಿಯಿಂ |
ತಿಳಿದೀ ನಾಗರಕ ರರಸುಗುವರಿ ಯುದಯಮಂ ||
ಸಲೆ ಕೊಂಡಾಡಿತು ವಿದ್ವ |
ತ್ಕುಲ ಮಾಳ್ವರ ಭೋಗಭಾಗ್ಯ ವೈಭವಫಲಮಂ ||೬||

ಪೂವಿಂ ಕಾಯಿಂ ಪಣ್ಣಿಂ |
ತೀವಿದ ಸುರಲತೆಯ ತೆರದಿ ನೆವಿಶ್ಮಾ ಭೂಪರ ||
ಪಾವನಸಂತತಿಲತೆ ತಾ |
ಭಾವಿತತಿಯ ನಿಂತು ತಾಳ್ದು ಮಿಗೆ ಮೆರೆಗೆ ಚಿರಂ ||೭||

ಸಾಂಬನ ಸುಂದರಿ ಚಾಮುಂ |
ಡಾಂಬಿಕೆ ಜಗದಂಬೆ ಭಕ್ತವತ್ಸಲೆ ತನ್ನಂ ||
ನಂಬಿದ ಮೈಸೂರರಸರ |
ಬೆಂಬಿಡ ದಿಷ್ಟಾರ್ಥಮಿತ್ತು ಪೊರೆಗೆ ನಿತಾಂತಂ ||೮||

ಯುವರಾಜಸುತಾಜನಿಯು |
ತ್ಸವಪದ್ಯಾಷ್ಟಕಮ ನಿಂತು ಗರಪುರದ ಕರಿಬ ||
ಸವಶಾಸ್ತ್ರಿ ರಚಿಸಿದಂ ಭೂ |
ಧವಕರುಣಾಪಾಂಗರಕ್ಷಿತಾಸ್ಥಾನೆಬುಧಂ ||

ತಾ|| ೪—೯—೧೯೨೨, ಮೈಸೂರು.

ಶ್ರೀಮಹಾಪ್ರಭುಕೃಪಾಪೋಷಿತ, ಎ. ಆರ್. ಕರಿಬಸವಶಾಸ್ತ್ರೀ, ಆಸ್ಥಾನವಿದ್ವಾನ್.

ದಿವಾನರು, ಮತ್ತು ಚಿತ್ರದುರ್ಗದ ಜಗದ್ಗುರು ಮಠ.

ಕಳೆದ ತಿಂಗಳಲ್ಲಿ ದಿವಾನ್ ಸಾಹೇಬರು ಚಿತ್ರದುರ್ಗಕ್ಕೆ ದಯಮಾಡಿಸಿದ್ದಾಗ ತಾ|| ೩೧ರಲ್ಲಿ ಅಲ್ಲಿಯ ಜಗದ್ಗುರು ನಿರಂಜನ ಮಹಾಸಂಸ್ಥಾನ ಮಠಕ್ಕೆ ದಯಮಾಡಿಸಿದ್ದರು. ಆ ಕಾಲಕ್ಕೆ ಶ್ರೀಗಳ ಸ್ವಾರಿಯು ಮಠದಲ್ಲೇ ಇದ್ದು ಸ್ವಾಗತಕ್ಕೆ ತಕ್ಕ ಏರ್ಪಾಟುಗಳು ಮಾಡಲ್ಪಟ್ಟಿದ್ದುವು. ಆ ಪ್ರಾಂತದ ಪ್ರಮುಖ ಮಹಾಜನರು ದಿವಾನರನ್ನು ವಾದ್ಯ ವೈಭವಾದಿಗಳೊಡನೆ ಉತ್ಸವಪೂರ್ವಕವಾಗಿ ಮಠಕ್ಕೆ ಕರೆತಂದನಂತರ ಮಠದಲ್ಲಿ ಮೊದಲು ಮಹಾಕರ್ತೃ ಗದ್ದಿಗೆಯಲ್ಲಿ ದರ್ಶನ ಫಲಮಂತ್ರಾಕ್ಷತೆ ವೇದೋಕ್ತಮಂತ್ರಾಶೀರ್ವಾದಗಳನ್ನು ಪರಿಗ್ರಹಿಸಿ, ದಿವಾನಖಾನೆಗೆ ತೆರಳಿ, ಅಲ್ಲಿ ಶ್ರೀಗಳವರ ಸಂದರ್ಶನ ವೇದೋಕ್ತಮಂತ್ರಾಶೀರ್ವಚನ ಪುರಸ್ಸರ ಫಲಮಂತ್ರಾಕ್ಷತೆಗಳನ್ನು ಪಡೆದ ಬಳಿಕ ಉಚಿತಾಸನದಲ್ಲಿ ಕುಳಿತು ಕೆಲ ಹೊತ್ತು ಸಂಭಾಷಣೆಯನ್ನು ನಡೆಯಿಸಿದನಂತರ ಸಂಸ್ಥಾನದ ಪರವಾಗಿ ಶ್ರೀಗಳವರು ಅಪ್ಪಣೆಕೊಡಿಸಿದ ವಿಷಯವೇ ಪತ್ರಿಕಾರೂಪದಲ್ಲಿ ಓದಲ್ಪಟ್ಟು ದಿವಾನರಿಗೆ ಗಂಧದ ಪೆಟ್ಟಿಗೆಯಲ್ಲಿಟ್ಟು ಕೊಡಿಸಲ್ಪಟ್ಟಿತು. ಅದನ್ನೂ ಅದಕ್ಕೆ ದಿವಾನರು ಇಂಗ್ಲೀಷಿನಲ್ಲಿ ಕೊಟ್ಟ ಉತ್ತರದ ಭಾಷಾಂತರವನ್ನೂ ಇದರಡಿಯಲ್ಲಿ ಪ್ರಕಟಿಸಿರುತ್ತೇವೆ. ಅನಂತರ ದಿವಾನರು ಸನ್ನದ್ಧವಾಗಿದ್ದ ಉಪಾಹಾರವನ್ನೂ ಗಂಧ ತಾಂಬೂಲ ಪುಷ್ಪಾದಿಗಳನ್ನೂ ಸ್ವೀಕರಿಸಿ ಸಂತೋಷಪಟ್ಟು ವಂದಿಸಿ ತೆರಳಿದರು.

ಸಂಸ್ಥಾನದಿಂದ ದಿವಾನರಿಗೆ ಅರ್ಪಿಸಲ್ಪಟ್ಟ ಪತ್ರಿಕೆ.—

ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಮೈಸೂರು ಸಂಸ್ಥಾನದ ಘನತೆಯನ್ನೈದಿದ ಶ್ರೀಮಾನ್ ಎ. ಆರ್. ಬಾನರ್ಜಿ, ಎಂ.ಎ., ಸಿ.ಐ.ಇ., ಸಿ.ಎಸ್.ಐ. ಯವರಿಗೆ ಶ್ರೀ ಸದಾಶಿವಸ್ಮರಣಪೂರ್ವಕವಾಗಿ ಮಾಡುವ ಶುಭವಾದಗಳು.

ತಾವು ಅಸಾಧಾರಣ ವಿದ್ಯಾವೈದುಷ್ಯವನ್ನು ಪಡೆದು ಬ್ರಿಟಿಷ್ ಇಂಡ್ಯಾ ಸಿವಿಲ್ ಸರ್ವೀಸಿನಲ್ಲೂ ಕೊಚ್ಚಿನ್ ಸಂಸ್ಥಾನದ ಅಮಾತ್ಯ ಪದವಿಯಲ್ಲೂ ಶ್ಲಾಘನೀಯವಾದ ಕೌಶಲವನ್ನು ತೋರಿಸಿ ಕಾರ್ಯನಿರ್ವಾಹ ಮಾಡಿ ಪ್ರಸಿದ್ಧಿಗೊಂಡಿದ್ದುದನ್ನು ನಮ್ಮ ಶ್ರೀಮಾನ್ ಮಹಾರಾಜರವರು ತಿಳಿದು, ತಮ್ಮಂಥವರ ಸರ್ವೀಸಿನ ಪ್ರಯೋಜನವನ್ನು ನಮ್ಮ ಸಂಸ್ಥಾನಕ್ಕೆ ಉಂಟುಮಾಡಿಕೊಳ್ಳುವ ಲವಲವಿಕೆಯಿಂದ ತಮ್ಮನ್ನು ಬರಮಾಡಿಕೊಂಡು ಮೊಟ್ಟಮೊದಲು ಸಂಸ್ಥಾನದ ಎಗ್ಸಿಕ್ಯುಟೀವ್ ಕೌನ್ಸಿಲಿನಲ್ಲಿ ದ್ವಿತೀಯ ಸ್ಥಾನವನ್ನೂ ಬಳಿಕ ಪ್ರಥಮ ಸ್ಥಾನವನ್ನೂ ಅನುಗ್ರಹಿಸಿದ್ದು, ಅವುಗಳಲ್ಲಿ ತಾವು ತೋರಿಸಿದ ಘನತರವಾದ ಮೆಹನತ್ತಿಗೆ ಮೆಚ್ಚಿ ಪೂರ್ಣವಾದ ಜವಾಬ್ದಾರಿಯುಳ್ಳ ಮುಖ್ಯಾಮಾತ್ಯ ಪದವಿಯನ್ನೇ ತಮಗೆ ಅನುಗ್ರಹಿಸಿರುತ್ತಾರೆ. ಇದು ಅಶೇಷಪ್ರಜೆಗಳಿಗೂ ಸಂತೋಷವನ್ನುಂಟುಮಾಡಿರುತ್ತದೆ.

ಪ್ರಪಂಚವನ್ನೇ ನಲುಗಿಸುತ್ತಿರುವ ಆರ್ಥಿಕದುಸ್ಥಿತಿಯು ನಮ್ಮ ಸಂಸ್ಥಾನಕ್ಕೆ ಒದಗಿರುವ ಈಗಣ ದುರ್ಭರಸಮಯದಲ್ಲಿ ತಮ್ಮಂಥ ವಿಶೇಷ ಮೇಧಾವಿಗಳೂ ರಾಜತಂತ್ರನಿಪುಣರೂ ಮಂತ್ರಿಗಳಾಗಿ ದೊರೆತುದು ಮೈಸೂರು ಪ್ರಜೆಗಳ ಪುಣ್ಯೋದಯವೆಂತಲೇ ಹೇಳಬಹುದು. ಆದುಕಾರಣ ಈ ಘನಪದವಿಯು ತಮಗೆ ದೊರೆತುದಕ್ಕಾಗಿ ನಾವಾದರೂ ಅತ್ಯಂತ ಸಂತುಷ್ಟರಾಗಿರುವುದಲ್ಲದೆ ತಮ್ಮ ಕಾಲದಲ್ಲಿ ದೇಶದ ಆರ್ಥಿಕ ವೈಷಮ್ಯವು ತೊಲಗಿ ದೇಶವು ಸರ್ವವಿಧದಲ್ಲೂ ಅಭಿವೃದ್ಧಿಗೊಳ್ಳುವಂತಾದೀತೆಂದು ನಿರೀಕ್ಷಿಸುತ್ತೇವೆ.

ಪ್ರಾಚೀನವೂ ಸರ್ವವೀರಶೈವ ಪೂಜ್ಯಸ್ಥಾನವೂ ಆದ ಈ ಸಂಸ್ಥಾನ ಮಠಕ್ಕೆ ಈಗಣ ಸರ್ಕೀಟಿನಲ್ಲಿ ತಾವು ಆಗಮಿಸಿದುದಕ್ಕಾಗಿ ನಾವು ಸಂತೋಷಿಸುತ್ತೇವೆ. ಈ ಸಂಸ್ಥಾನಮಠವು ಆಸೇತುಹಿಮಾಚಲಾಂತವಾದ ಭರತಖಂಡದ ಎಲ್ಲಭಾಗಗಳಲ್ಲೂ ಶಾಖಾಮಠಗಳುಳ್ಳುದಾಗಿಯೂ ವೀರಶೈವ ಜನವರ್ಗಕ್ಕೆ ಮುಖ್ಯ ಜಗದ್ಗುರುಪೀಠವಾಗಿಯೂ ಗೌರವಗೊಂಡಿದೆ. ಈ ಪೀಠದ ಅಧಿಕಾರವು ನಮಗೆ ದೊರೆದು ಇಲ್ಲಿಗೆ ೧೯ ವರ್ಷಗಳಾದುವು. ಮತಸ್ಥರ ಜ್ಞಾನವಿಕಾಸಕ್ಕೆ ಸಾಧಕವಾದ ವಿದ್ಯಾಭಿವೃದ್ಧಿಗೂ ಧರ್ಮಸುಧಾರಣೆಗೂ ಅವಶ್ಯಕಗಳಾದ ಪ್ರೋತ್ಸಾಹಗಳನ್ನು ಕಲ್ಪಿಸುವುದು ಮಠಾಧೀಶರ ಮುಖ್ಯಕರ್ತವ್ಯವೆಂಬ ಭಾವನೆಯಿಂದ ತದಾರಭ್ಯ ಈ ಸಂಸ್ಥಾನದ ಕಡೆಯಿಂದ ಮೈಸೂರು ದೇಶದಲ್ಲೂ, ಕೊಲ್ಲಾಪುರ ಸಂಸ್ಥಾನದಲ್ಲೂ, ಹೈದರಾಬಾದು ಸಂಸ್ಥಾನದಲ್ಲೂ, ಧಾರವಾಡ ಮೊದಲಾದ ಬ್ರಿಟಿಷ್ ಇಂಡ್ಯಾ ಸೀಮೆಯಲ್ಲೂ ವಿದ್ಯಾರ್ಥಿನಿಲಯಗಳೂ ವೀರಶೈವಾಶ್ರಮಗಳೂ ಪಾಠಶಾಲೆಗಳೂ ಸಹ ಪ್ರತಿಷ್ಠಾಪಿಸಲ್ಪಟ್ಟು ನಡೆಯುತ್ತಿರುವುದೂ, ಸ್ವದೇಶ ಪರದೇಶಗಳಲ್ಲಿ ಪ್ರೌಢವಿದ್ಯಾವ್ಯಾಸಂಗ ಮಾಡುತ್ತಿರುವ ವೀರಶೈವ ವಿದ್ಯಾರ್ಥಿಗಳಿಗೂ ಕೆಲ ಪರಮತ ವಿದ್ಯಾರ್ಥಿಗಳಿಗೂ ಸಹ ವೇತನಗಳು ಕೊಡಲ್ಪಡುತ್ತಿರುವುದೂ, ಪ್ರತಿದಿನವೂ ಶ್ರೀ ಮಠದಲ್ಲಿ ಎರಡುಕಾಲವೂ ನೂರಾರುಮಂದಿ ಆಗಂತುಕ ಜನರಿಗೆ ಅನ್ನದಾನವು ಪುರಾತನ ಪದ್ಧತಿಗೆ ಅನುಸಾರವಾಗಿ ನಡೆಯುತ್ತಿರುವುದೂ ಸಹ ಕರ್ಣಾಕರ್ಣಿಕಯಾ ತಮಗೆ ವಿದಿತವಾಗಿರಬಹುದು.

ಇವೆಲ್ಲ ಕಾರಣಗಳಿಂದ ಸಂಸ್ಥಾನಕ್ಕೆ ಧನವ್ಯಯಭಾರವು ಬಹಳವಾಗಿದೆ. ಕಾಲಸ್ಥಿತಿಯು ವಿಷಮವಾಗಿರುವುದರಿಂದ ಶಿಷ್ಯಾರ್ಜನೆಯ ಬರವಸೆಯಿಂದಲೇ ಇದನ್ನೆಲ್ಲಾ ಸಾರೋದ್ಧಾರವಾಗಿ ನಡೆಯಿಸಿಕೊಂಡುಹೋಗುವುದು ಅಸಾಧ್ಯವಾಗುತ್ತಿದೆ. ಪೂರ್ವದಲ್ಲಿ ಈ ಪೀಠಕ್ಕೆ 7 ಗ್ರಾಮಗಳು ಇನಾಮತಿಯಾಗಿ ಕೊಡಲ್ಪಟ್ಟಿದ್ದವು. ಬಳಿಕ ಕೆಲವು ಕಾಲದಮೇಲೆ 1440 ವರಹಗಳ ವರ್ಷಾಶನವನ್ನು ಸಲ್ಲಿಸುವಂತೆ ಏರ್ಪಡಿಸಿ ಇನಾಂಗ್ರಾಮಗಳು ವಾಪಸು ತೆಗೆದುಕೊಳ್ಳಲ್ಪಟ್ಟುವು. ತದನಂತರ ಮಠದಲ್ಲಿ ತಕ್ಕ ವ್ಯವಸ್ಥೆಯಿಲ್ಲದಿದ್ದ ಕಾರಣದಿಂದಲೋ ಏನೋ ಆ ನಗದು ವರ್ಷಾಶನವೂ ಕೂಡ ನಿಲ್ಲಿಸಲ್ಪಟ್ಟು, ಶ್ರೀಮಠದ ಮತ್ತು ಅದಕ್ಕೆ ಸೇರಿದ ದೇವಾಲಯದ ದೀಪಾರಾಧನೆಯ ಖರ್ಚಿಗೋಸ್ಕರವೆಂದು 24 ರೂ. ಗಳ ಮಾಸಿಕ ಸಹಾಯ ದ್ರವ್ಯವು ಸರ್ಕಾರದಿಂದ ಈಗ ಕೊಡಲ್ಪಡುತ್ತಿದೆ.

ಈಗಳಾದರೋ ದೇಶದ ಸಕಲಭಾಗದ ವೀರಶೈವರ ಪುರೋವೃದ್ಧಿಗೂ ಅವಶ್ಯಕಗಳಾದ ಲಕ್ಷಾಂತರ ರೂಪಾಯಿಗಳ ಪ್ರತಿಷ್ಠಾಪನೆಗಳು ಶ್ರೀ ಮಠದಿಂದ ನಡೆದು ಸರ್ವಕಾರ್ಯಗಳೂ ಸುವ್ಯವಸ್ಥಿತವಾಗಿ ಸಾಗುತ್ತಿವೆ. ಆದರೆ ಇದು ಶಾಶ್ವತವಾಗಿ ನಡೆದುಕೊಂಡುಹೋಗುವಂತೆ ಮಾಡುವುದಕ್ಕೆ ತಕ್ಕ ವರಮಾನವು ಸಂಸ್ಥಾನ ಮಠಕ್ಕೆ ಇಲ್ಲವಾಗಿರುವುದು ನಮಗೆ ಮಾತ್ರವೇ ಅಲ್ಲದೆ ಅಶೇಷ ವೀರಶೈವ ಜನವರ್ಗಕ್ಕೂ ವ್ಯಾಕುಲವನ್ನುಂಟುಮಾಡಿದೆ. ಪ್ರಾಚೀನ ಮಠಗಳ ಗೌರವೋದ್ಧರಣದಲ್ಲೂ ಧರ್ಮರಕ್ಷಣೆಯಲ್ಲೂ ಹೆಸರಾಂತಿರುವ ಮೈಸೂರು ಸಂಸ್ಥಾನವು ಇತರ ಮಠಗಳ ಮುಖ್ಯ ಪೀಠಗಳ ಗೌರವಕ್ಕೆ ತಕ್ಕಷ್ಟು ಇನಾಮತಿಗಳನ್ನೋ ವಾರ್ಷಿಕ ಸಹಾಯ ದ್ರವ್ಯವನ್ನೋ ಅನುಗ್ರಹಿಸಿಕೊಡುತ್ತಿರುವಂತೆ ಈ ಮುಖ್ಯ ಮಠದ ಗೌರವಕ್ಕೂ ಕಾರ್ಯಬಾಹುಳ್ಯಕ್ಕೂ ಅನುಗುಣವಾದಷ್ಟು ಧನಸಾಹಾಯ್ಯವು ಒದಗುವಂತೆ ತಾವು ಏರ್ಪಡಿಸಿಕೊಟ್ಟು, ಇದರಿಂದ ದೇಶದ ಮುಖ್ಯ ಜನಾಂಗವೊಂದರ ವಿದ್ಯಾದಿ ಸಕಲ ಪುರೋವೃದ್ಧಿಗೂ ಪ್ರೋತ್ಸಾಹವು ಸಾರೋದ್ಧಾರವಾಗಿ ನಡೆಯಲು ಅವಕಾಶಮಾಡಿಕೊಟ್ಟು, ಪುಣ್ಯಕೀರ್ತಿಗಳಿಗೂ ಅಶೇಷ ವೀರಶೈವ ಜನವರ್ಗದ ಚಿರಕೃತಜ್ಞತೆಗೂ ತಾವು ಪಾತ್ರರಾಗಬೇಕೆಂದು ಆಶಿಸುತ್ತೇವೆ.

ಪ್ರಸಕ್ತ ಸಮಯದಲ್ಲಿ ಚರ್ಚಾಸ್ಪದವಾಗಿರುವ ಸರ್ಕಾರಿ ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ವೀರಶೈವ ಜನವರ್ಗದ ವಿದ್ಯಾರ್ಥಿಗಳನ್ನು ಸೇರಿಸುವ ವಿಷಯದಲ್ಲಿ ನಿಷ್ಪಕ್ಷಪಾತವಾದ ಏರ್ಪಾಟು ತಮ್ಮ ಕಾರ್ಯಭಾರ ಕಾಲದಲ್ಲಿ ಜರುಗದೆ ಇರಲಾರದೆಂದು ನಂಬುತ್ತೇವೆ. ವೀರಶೈವ ಮತವು ವೇದವೇದಾಂಗ ಸಂಮತವಾಗಿದ್ದು ಅನಾದಿಕಾಲದಿಂದಲೂ ಈ ಮತದಲ್ಲಿ ಉಭಯ ಭಾಷಾಪಾಂಡಿತ್ಯವನ್ನು ಸಂಪಾದಿಸಿದವರು ಇರುತ್ತಲಿರುವುದರಿಂದ ಈ ಜನವರ್ಗಕ್ಕೆ ವೇದಶಾಸ್ತ್ರಾಭ್ಯಾಸವು ಚಿರಕಾಲದಿಂದ ನಡೆದುಬಂದಿರುತ್ತದೆ. ನಿಯುಕ್ತ ಸಂಘದವರು ಮಾಡಿರುವ ವರದಿಯು ಪಕ್ಷಪಾತಮಯವಾದುದೆಂದು ವೀರಶೈವಜನವರ್ಗದಿಂದೆಲ್ಲಾ ಭಾವಿಸಲ್ಪಟ್ಟು ಅವರುಗಳಿಗೆ ತೀವ್ರವಾದ ಮನೋವೇದನೆಯನ್ನುಂಟುಮಾಡಿರುತ್ತದೆ. ವೀರಶೈವ ವಿದ್ಯಾರ್ಥಿಗಳಿಗೆ ಮೈಸೂರು ಬೆಂಗಳೂರು ಸರ್ಕಾರಿ ಸಂಸ್ಕೃತಪಾಠಶಾಲೆಗಳೆರಡರಲ್ಲೂ ಎಲ್ಲ ತೆರದ ವಿದ್ಯಾಭ್ಯಾಸಕ್ಕೂ ಅವಕಾಶವಾಗುವಂತೆ ಅಪ್ಪಣೆಮಾಡಿ ಈ ಸಮಾಜದವರಿಗುಂಟಾಗಿರುವ ಮನೋವ್ಯಥೆಯನ್ನು ತಾವು ಪರಿಹಾರಗೊಳಿಸಿಕೊಡುವವರಾಗಬೇಕೆಂದು ಅಪೇಕ್ಷಿಸುತ್ತೇವೆ.

ಅಮೌಲ್ಯವಾದ ತಮ್ಮ ಸಂಚಾರಕಾಲದಲ್ಲಿ ಸ್ವಲ್ಪ ಅವಕಾಶವನ್ನು ಕಲ್ಪಿಸಿಕೊಂಡು ಈ ಪ್ರಾಚೀನ ಸಂಸ್ಥಾನಮಠಕ್ಕೆ ಆಗಮಿಸಿ ಸಂಭಾಷಣಾವಕಾಶವನ್ನಿತ್ತುದಕ್ಕಾಗಿ ನಾವು ಪರಮಾನಂದಗೊಂಡಿರುತ್ತೇವಲ್ಲದೆ ಶ್ರೀ ಮುರುಘೇಶನು ಶ್ರೀಮನ್ಮಹಾರಾಜ ಸಹೋದರರಿಗೂ ಅವರ ಅಶೇಷ ಕುಟುಂಬಕ್ಕೂ ಅವರ ಅಮಾತ್ಯಶ್ರೇಷ್ಠರಾದ ತಮಗೂ ಚಿರಾಯುರಾರೋಗ್ಯಗಳನ್ನೂ ಸಕಲ ಸತ್ಕಾರ್ಯಸಂಸಿದ್ಧಿಯನ್ನೂ ಉರುತರ ಯಶೋವೈಭವವನ್ನೂ ಉಂಟುಮಾಡಲೆಂದು ಕೋರುತ್ತೇವೆ.

ದಿವಾನರ ಪ್ರತ್ಯುತ್ತರ.

(ಇಂಗ್ಲೀಷಿನಲ್ಲಿದ್ದುದನ್ನು ಭಾಷಾಂತರಿಸಿದೆ.)

ಮಹಾಸ್ವಾಮಿಗಳೇ, ನನ್ನ ಈ ಡಿಸ್ಟ್ರಿಕ್ಟಿನ ಸಂಚಾರದ ವೇಳೆಯಲ್ಲಿ ತಮ್ಮ ದರ್ಶನಪರಿಚಯಗಳಿಗೆ ಸಮಯ ದೊರೆದುದಕ್ಕಾಗಿ ನಿಜವಾಗಿಯೂ ಬಹಳ ಹರ್ಷಿತನಾಗಿದ್ದೇನೆ. ಮಹಾಸ್ವಾಮಿಯವರ ಪ್ರಶಂಸೆ, ಸಂಸ್ಕೃತದಲ್ಲಿರತಕ್ಕ ಪಾಂಡಿತ್ಯ, ತಮ್ಮ ಪೂಜ್ಯಸ್ಥಾನವನ್ನು ತೇಜಸ್ವಿಯಾಗಿ ನಿರ್ವಹಿಸುವ ಕಾರ್ಯಕ್ರಮ, ತಮ್ಮ ಪೀಠವನ್ನು ಮುಖ್ಯವಾಗಿಟ್ಟುಕೊಂಡು ಬಹಳ ಶ್ರದ್ಧಾಭಕ್ತಿಯುಂವಿರುವ—ದೊಡ್ಡದಾಗಿಯೂ ಪ್ರತಿಷ್ಠಿತವಾಗಿಯೂ ಇರುವ—ಜನವರ್ಗದ ಮತ ನೀತಿ ಮತ್ತು ವಿದ್ಯೆಯ ಅಭಿವೃದ್ಧಿಯ ವಿಚಾರದಲ್ಲಿ ತಮಗಿರತಕ್ಕ ಪೂರ್ಣವಾದ ಆಸಕ್ತಿ ಈ ವಿಚಾರಗಳಲ್ಲಿ ನಾನು ಬಹಳವಾಗಿ ಕೇಳಿರುವೆನು. ವಿದ್ಯಾಭಿವೃದ್ಧಿಯ ವಿಚಾರದಲ್ಲಿ ಮುಖ್ಯವಾಗಿ ವಿದ್ಯಾರ್ಥಿನಿಲಯಗಳು, ಪಾಠಶಾಲೆಗಳು, ವಿದ್ಯಾರ್ಥಿವೇತನಗಳು, ಪುಸ್ತಕಭಂಡಾರಗಳು ಮೊದಲಾದವುಗಳ ಸ್ಥಾಪನೆಯಲ್ಲಿ ತಮಗೆ ವಿಶೇಷವಾದ ಆಸಕ್ತಿಯಿರುವುದೆಂದು ಕೇಳಿ ಸಂತುಷ್ಟನಾಗಿದ್ದೇನೆ. ಇವೆಲ್ಲವೂ ತಮ್ಮ ಉದಾರಬುದ್ಧಿಯನ್ನೂ ಪೂರ್ಣಪಾಂಡಿತ್ಯವನ್ನೂ ಪ್ರದರ್ಶಿಸತಕ್ಕವಾಗಿವೆ. ನಾನು ಚಿತ್ರದುರ್ಗಕ್ಕೆ ಬಂದಾಗ್ಗೆ ಸಾಧಾರಣರೀತಿಯಿಂದ ತಮ್ಮ ದರ್ಶನವನ್ನು ತೆಗೆದುಕೊಂಡು ಮೈತ್ರೀಭಾವದಿಂದ ಪರಸ್ಪರ ಸಂಭಾಷಣಾನಂತರ ತಮ್ಮ ಆಶೀರ್ವಾದವನ್ನು ಪಡೆದುಕೊಂಡು ಹೋಗಬೇಕೆಂದು ಯೋಚಿಸಿದ್ದೆನಲ್ಲದೆ ತಾವು ಇಷ್ಟೊಂದು ಶ್ರಮೆಯನ್ನು ವಹಿಸಿ ನನ್ನನ್ನು ಬಹಿರಂಗವಾಗಿಯೂ ಅಟ್ಟಹಾಸದಿಂದಲೂ ಬರಮಾಡಿಕೊಳ್ಳುವ ಪ್ರಯತ್ನ ಮಾಡುವಿರೆಂದು ನಿರೀಕ್ಷಿಸಿರಲಿಲ್ಲವು. ಈಗಳಾದರೊ ಪ್ರಾಯಶಃ ಬಹಿರಂಗವಾದೇರ್ಪಾಟು ಮಾಡಲ್ಪಟ್ಟಿರುತ್ತದೆ, ಮತ್ತು ತಾವು ಕರುಣವಿಟ್ಟು ವಿಜ್ಞಾಪನಪತ್ರಿಕೆಯನ್ನು ಕೊಟ್ಟಿರುವುದಾಗಿದೆ. ಈ ಪತ್ರಿಕೆಯಲ್ಲಿ ತಿಳಿಯಿಸಲ್ಪಟ್ಟಿರುವ ವಿಚಾರಗಳಲ್ಲಿ ಮಠಕ್ಕೂ ವೀರಶೈವ ಜನಾಂಗಕ್ಕೂ ಸಂಬಂಧಪಟ್ಟ ಎರಡು ಮುಖ್ಯವಿಚಾರಗಳಿವೆ. ಈ ಸಂದರ್ಭದಲ್ಲಿ ಮೇಲ್ಕಂಡ ವಿಚಾರಗಳನ್ನು ಕುರಿತು ಸಮಗ್ರವಾಗಿ ಪ್ರಸ್ತಾಪಿಸಲು ಸಾಧ್ಯವಿಲ್ಲವಾಗಿ ಮಹಾಸ್ವಾಮಿಯವರು ಕ್ಷಮಿಸುವಿರೆಂದು ನಿರೀಕ್ಷಿಸುತ್ತೇನೆ. ಈ ವಿಷಯಗಳ ಸಂಬಂಧವಾದ ಕಾಗದಪತ್ರಗಳು ನನ್ನಲ್ಲಿಲ್ಲವು; ಮತ್ತು ಸಂಗತಿಗಳಾದರೂ ಗೊತ್ತಿಲ್ಲವು.

ಮಠಕ್ಕೆ ಸರ್ಕಾರದಿಂದ ಸಲ್ಲುವ ಗ್ರಾಂಟ್‌ವಿಚಾರವು ನನಗೆ ಹೊಸದಾಗಿದೆ. ಈ ವಿಚಾರದ ಪೂರ್ವಚರಿತ್ರೆಯನ್ನು (ಸಂದರ್ಭವನ್ನು) ತಿಳಿದು ಕಾಗದಪತ್ರಗಳನ್ನು ನೋಡಿದ ವಿನಾ ನಾನು ಯಾವ ಉತ್ತರವನ್ನೂ ಕೊಡಲು ಬಹಳ ಕಷ್ಟವಾಗಿದೆ. ಮತ್ತು ಸಂಸ್ಥಾನದ ಕಾಲೇಜುಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡತಕ್ಕ ವಿಚಾರದಲ್ಲೂ ಮೇಲೆ ತಿಳಿಸಿದ ರೀತಿಯಲ್ಲಿ ಏನನ್ನೂ ಹೇಳಲಾಗುವುದಿಲ್ಲವು. ಈ ವಿಚಾರದಲ್ಲಿ ತಮ್ಮ ಭಕ್ತರಾದ ವೀರಶೈವ ಮತಸ್ಥರೆಲ್ಲರಿಗೂ ಕಳವಳವುಂಟಾಗಿದೆಯೆಂಬ ವಿಚಾರವು ನನಗೂ ಸರ್ಕಾರಕ್ಕೂ ವಿದಿತವಾಗಿದೆ. ಈ ಚರ್ಚಾಸ್ಪದವಾದ ವಿಚಾರವು ಶ್ರೀಮನ್ಮಹಾರಾಜಾ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ ಎಂಬುದು ಶ್ರೀಯುತರಿಗೆ ವಿದಿತವೇ ಇದೆ. ಮತ್ತು ಸರ್ಕಾರದವರು ಈ ವಿಚಾರವನ್ನು ಇತ್ಯರ್ಥ ಮಾಡುವಾಗ್ಗೆ ತಮ್ಮ ಭಕ್ತಮಂಡಲಿಯ ಮನೋಭಾವವನ್ನು ಸಂಪೂರ್ಣವಾಗಿ ಪರಿಗ್ರಹಿಸುವರೆಂದು ನಾನು ದೃಢವಾಗಿರುತ್ತೇನೆ. ಸದ್ಯದಲ್ಲಿ ಈ ವಿಚಾರವಾಗಿ ನಾನು ಇನ್ನೇನನ್ನೂ ಹೇಳಲು ಬಹಳ ಕಷ್ಟವಾಗಿರುತ್ತದೆ. ನನ್ನ ವಿಚಾರದಲ್ಲಿ ಅಪ್ಪಣೆಕೊಡಿಸಿದ ಕರುಣಾಮಯವಾದ ವಚನಗಳಿಗಾಗಿಯೂ, ಮೈಸೂರು ಸಂಸ್ಥಾನದ ಮಂತ್ರಿಪದವಿಯಲ್ಲಿ ನನಗೆ ಶ್ರೇಯಸ್ಸನ್ನು ಕೋರಿ ಅಪ್ಪಣೆಕೊಟ್ಟ ಆಶೀರ್ವಚನಕ್ಕಾಗಿಯೂ ಮಹಾಸ್ವಾಮಿಯವರನ್ನು ನಾನು ನಿಷ್ಕಪಟವಾಗಿ ವಂದಿಸುತ್ತೇನೆ.

ಪ್ರಕೃತ ಚರ್ಚಾಸ್ಪದವಾಗಿರುವ ಸಂಸ್ಕೃತಾಭ್ಯಾಸ ವಿಷಯದಲ್ಲಿ ದೇಶಭಾಷಾವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿರುವ ಅನುಕೂಲಾಭಿಪ್ರಾಯಗಳು.

II

ಧಾರವಾಡದ ಕರ್ನಾಟಕವೃತ್ತ ಮತ್ತು ಧನಂಜಯ—(ತಾ|| 29-8-22).

ಮೈಸೂರ ಪ್ರಾಂತದ ವೀರಶೈವರೂ ಬ್ರಾಹ್ಮಣೇತರರೂ ಸಂಸ್ಕೃತ ಪಾಠಶಾಲೆಯ ವಾದದಿಂದ ಇಡೀ ಕರ್ನಾಟಕ ಮನವನ್ನೇ ಆಕರ್ಷಿಸಿರುವರು. ಅಲ್ಲಿಯ ಸರಕಾರದ ನಡುವೆ ಹಾಗು ಪ್ರಜೆಗಳ ನಡುವೆ ಒಳ್ಳೇ ನಿಕರಕ್ಕೆಯೇ ಬಂದಿರುವದು. ಸಂಸ್ಕೃತ ಪಾಠಶಾಲೆಗಳಲ್ಲಿ ಇಷ್ಟು ದಿವಸ ಕೇವಲ ಬ್ರಾಹ್ಮಣರದೇ ಪ್ರತಿಷ್ಠೆಯಿತ್ತು. ಈ ಶತಮಾನವು ಮಾನವ ಪ್ರಾಣಿಯ ಜಾಗ್ರತಿಯ ಯುಗವಾದ್ದರಿಂದ ಎಲ್ಲ ಪ್ರಜೆಗಳೂ ಎಚ್ಚತ್ತು ಮಾನವನ ಧ್ಯೇಯವೇನು ? ಎಂದು ವಿಚಾರಿಸ ತೊಡಗಿರುವರು. ಮೈಸೂರಿನ ಜನರೂ ಮಾನವ ಪ್ರಾಣಿಗಳೇ ! ಆದುದರಿಂದ ಅವರು ತಮ್ಮ ಹಿತವನ್ನು ತಿಳಿಯಲು ಉತ್ಸುಕರಾಗಿರುವರು. ಸರಕಾರದವರು ತೆಗೆದ ಪಾಠಶಾಲೆಯಲ್ಲಿ ವೇದಾಧ್ಯಯನ ಬ್ರಾಹ್ಮಣರಿಗೆ ಹೇಗೆ ಪ್ರವೇಶವಿರುವದೋ ಅದರಂತೆಯೇ ಅಲ್ಲಿ ನಮಗೂ ವೇದಾಧ್ಯಯನಕ್ಕೆ ಅನುವು ದೊರೆಯಬೇಕೆಂದು ಅಲ್ಲಿಯ ಬ್ರಾಹ್ಮಣೇತರರ ಬೇಡಿಕೆಯು. ಈ ಬೇಡಿಕೆಯು ಈಡೇರಬೇಕೆಂದು ಒಳ್ಳೇ ನಿಕರದ ಚಳವಳಿಯನ್ನು ನಡಿಸಿರುವರು. ಸರಕಾರದವರು ಒಂದು ಕಮಿಟಿಯನ್ನು ನೇಮಿಸಿ ಇದರ ವಿಚಾರಣೆಯನ್ನು ಮಾಡಲು ಹಚ್ಚಿದರು. ಆದರೆ ಈ ಕಮಿಟಿಯಲ್ಲಿ ಬರೇ ಬ್ರಾಹ್ಮಣರೇ ಇದ್ದದರಿಂದ ಅವರು ತೀರ್ಪನ್ನು ಸರಿಯಾಗಿ ಕೊಟ್ಟಿರುವದಿಲ್ಲ. ಇದರಿಂದ ಬ್ರಾಹ್ಮಣೇತರರಿಗೆ ಮತ್ತಿಷ್ಟು ಅಸಮಾಧಾನವಾಗಿ ಎಲ್ಲಕಡೆಗೆ ಕಮಿಟಿಯ ತೀರ್ಪನ್ನು ನಿಷೇಧಿಸತೊಡಗಿರುವರು. ಆದರೆ ಕೆಲವು ವೃತ್ತಪತ್ರಗಳು ಮಾತ್ರ (ಪಕ್ಷಭೇದದಿಂದ) ಸಮರ್ಥಿಸ ತೊಡಗಿರುವವು. ಇದರಲ್ಲಿಬ್ರಾಹ್ಮಣೇತರರ ಬೇಡಿಕೆಯು ನಮಗಂತೂ ದೋಷವೆಂದು ಕಾಣುವದಿಲ್ಲ. ವೇದಗಳನ್ನು ಬ್ರಾಹ್ಮಣರೇ ಓದಬೇಕೆಂದು ಯಾರೂ ಜಾಹಗೀರ ಹಾಕಿಕೊಟ್ಟಿಲ್ಲ. ಜ್ಞಾನಸಂಪಾದನೆ ಮಾಡಲು ಮಾನವ ಪ್ರಾಣಿಗೇ ಅಧಿಕಾರವಿರುತ್ತದೆ. ವೇದಗಳು ಮಾನವ ಪ್ರಾಣಿಯ ಉದ್ಧಾರಕ್ಕೆಂದು ಪರಮಾತ್ಮನಿಂದ ನಿರ್ಮಿಸಲ್ಪಟ್ಟಿವೆ. ಮಾನವ ಪ್ರಾಣಿಯ ಒಂದು ಅಂಗವಾದ ಬ್ರಾಹ್ಮಣ ಜಾತಿಯ ಸಲುವಾಗಿ ಎಂದಲ್ಲ. ಈ ವೇದಗಳ ರಹಸ್ಯವನ್ನು ತಿಳಿದು ಯಾವನು ಪರಬ್ರಹ್ಮನ ಜ್ಞಾನವನ್ನು ಪಡೆಯುವನೋ ಅವನು ಬ್ರಾಹ್ಮಣನು. ಅಂದ ಮೇಲೆ ಅಧಿಕಾರವಿಲ್ಲೆಂದು ಹೇಳುವ ಬ್ರಾಹ್ಮಣರೇ ನೀವು ಬ್ರಾಹ್ಮಣರೆಂದು ಯಾವ ಮೋರೆಯಿಂದ ಹೇಳಿಕೊಳ್ಳುವಿರಿ ? ವಸಿಷ್ಠಾದಿಗಳ ಬ್ರಹ್ಮತೇಜಸ್ಸು ನಿಮ್ಮಲ್ಲಿರುವದೋ ! ಅಂದ ಮೇಲೆ ಅಧಿಕಾರದ ಅಧಿಷ್ಠಾನವು ನಿಮ್ಮಲ್ಲಿ ಇಲ್ಲದೇ ನಿಮಗೆ ಅಧಿಕಾರವು ಹೇಗೆ ಪ್ರಾಪ್ತವಾಗುವದು ? ಯೋಗ್ಯತೆಯಿಲ್ಲದೆ ಮಾನವನ್ನು ಅಪೇಕ್ಷಿಸಿದರೆ ಮಾನಭಂಗವೇ ಪಾಲಿಗೆ ಬರುವದು. "ದೀಪಕ್ಕೇನು ಪತಂಗಕ್ಕೆ ಬಾ ಎಂದು ಆಮಂತ್ರಣವನ್ನು ಕೊಡಬೇಕಾಗುವದೇ ? ಅದು ತನ್ನ ಪ್ರಕಾಶವನ್ನು ಕೆಡವಿದಷ್ಟು ಪತಂಗಗಳು ತಾನಾಗಿಯೇ ಮೇಲೆ ಬಂದು ಬೀಳುವವು." ಬ್ರಾಹ್ಮಣರೇ ! ನೀವು ಬ್ರಾಹ್ಮಣ್ಯವನ್ನು ಬಿಟ್ಟಿರುವದರಿಂದ ದೇಶದ ಅವಸ್ಥೆಯು ನಿಮ್ಮ ಅವಸ್ಥೆಯು ಹೀಗಾಗುವದೆಂಬುದನ್ನು ಮರೆಯಬೇಡಿರೆಂದು ಸೂಚಿಸುತ್ತೇವೆ. ಅಜ್ಜನು ಶ್ರೀಮಂತನಿದ್ದು ಮೊಮ್ಮಗನು ಭಿಕ್ಷಾಪದವಿಯಿದ್ದರೆ ಅವನ ಮಾತನ್ನು ಯಾರು ಕೇಳಬೇಕು ? ಸರಕಾರದವರು ಈ ಕಮಿಟಿಯನ್ನು ನೇಮಿಸುವದರಲ್ಲಿಯೇ ತಪ್ಪಾಗಿರುವದೆಂದು ನಮಗೆ ತೋರುತ್ತದೆ. ಯಾಕೆಂದರೆ ಈ ಪ್ರಕಾರವಾದ ಪ್ರಶ್ನೆಯ ವಿಚಾರಣೆಯಲ್ಲಿ ಬರೇ ಬ್ರಾಹ್ಮಣರನ್ನೇ ನೇಮಿಸದೆ ಎರಡೂ ಪಕ್ಷಗಳ ಒಂದು ವಿಚಾರಣಾ ಕಮಿಟಿಯನ್ನು ಸಜ್ಜುಗೊಳಿಸಿದ್ದರೆ ಒಳಿತಾಗುತ್ತಿತ್ತೆಂದು ನಮ್ಮ ಅಭಿಪ್ರಾಯವು. ಅದರಂತೆಯೇ ಈ ತೀರ್ಪು ಅನ್ಯಾಯವಾಗಿರುವದೆಂದು ನಮ್ಮ ಅಭಿಪ್ರಾಯವು. ಯಾಕೆಂದರೆ ಎಲ್ಲ ಪ್ರಜೆಗಳಿಂದ ಕರರೂಪದಿಂದ ತೆಗೆದುಕೊಳ್ಳುವ ಹಣದ ಉಪಯೋಗವು ಎಲ್ಲರಿಗೂ ಆಗಲಿಕ್ಕೇಬೇಕು. ಅಂದ ಮೇಲೆ ಸರಕಾರದಿಂದ ತೆಗೆಯಲ್ಪಟ್ಟ ಪಾಠಶಾಲೆಯಲ್ಲಿ ಬರೆ ಬ್ರಾಹ್ಮಣರಿಗೇ ಏನು ಅಧಿಕಾರವು ? ಈ ಪ್ರಕಾರ ನಡೆಯುವದು ಅಂದರೆ ಪ್ರಜೆಗಳಲ್ಲಿ ಸಮದೃಷ್ಟಿಯನ್ನು ಇಡುವದು ನ್ಯಾಯವೋ ಅನ್ಯಾಯವೋ ಇದೇ ಮೊದಲನೆಯ ಪ್ರಶ್ನೆಯು. ಪ್ರಜೆಗಳಲ್ಲಿ ಸಮದೃಷ್ಟಿಯು ಇಲ್ಲದವನು ರಾಜನಲ್ಲೆಂದು ಮನುವು ಸಾರಿ ಸಾರಿ ಹೇಳಿರುವನು. ಈ ದೃಷ್ಟಿಯಿಂದ ವಿಚಾರಿಸಿದರೆ ಮೇಲಿನ ತೀರ್ಪು ನ್ಯಾಯವೋ ಅನ್ಯಾಯವೋ ವಾಚಕರೇ ವಿಚಾರಿಸಬೇಕು. ಈ ಪ್ರಕಾರ ಬ್ರಾಹ್ಮಣೇತರರು ಬ್ರಹ್ಮಜ್ಞಾನಕ್ಕಾಗಿ ಹಂಬಲಿಸತೊಡಗಿರುವದನ್ನು ನೋಡಿ ನಮಗಂತೂ ಹಿಡಿಸಲಾರದಷ್ಟು ಆನಂದವಾಗಿದೆ. ಇದೇನು ? ಸತ್ಯಯುಗ ಸೂಚಕ ಲಕ್ಷಣವಲ್ಲವೇ ? ಪರಮಾತ್ಮನು ಈ ಪ್ರಕಾರ ಮಾನವ ಕೋಟಿಯನ್ನು ಮೇಲಕ್ಕೆತ್ತಲು ನಿಶ್ಚಯಿಸಿರಲು ಈ ಅಲ್ಪ ಸ್ವಲ್ಪ ಬ್ರಾಹ್ಮಣರಿಂದ ಆಗುವದೇನು ?

ಪತ್ರವ್ಯವಹಾರ.

☞ ಪತ್ರವ್ಯವಹಾರರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಪತ್ರವ್ಯವಹಾರ ಸಂಬಂಧವಾಗಿರುವ ನಮ್ಮ ನಿಯಮವನ್ನು ಬಹು ಜನರು ಗಮನಿಸದೆ ಅಸ್ಪಷ್ಟವಾಗಿಯೂ ಕಾಗದದ ಹಿಂದುಮುಂದೂ ಬರೆಯುವುದಲ್ಲದೆ ಸಾಮಾನ್ಯ ವಿಷಯಗಳನ್ನೆಲ್ಲಾ ವೃಥಾ ಲಂಬಿಸಿ ಬರೆಯುತ್ತಿದ್ದಾರೆ. ಇವುಗಳನ್ನೆಲ್ಲಾ ಸಮಗ್ರವಾಗಿ ಪ್ರಕಟಿಸುವುದಾದರೆ ಮೈಸೂರು ಸ್ಟಾರ್ ಪತ್ರಿಕೆಯ ಪುಟಗಳು ಪ್ರತಿವಾರದಲ್ಲೂ 12-16 ಆದರೂ ಸಾಲುವುದಿಲ್ಲವು. ಅನುಕಾರಣ ಸರ್ವಜನ ಸಮ್ಮತವೂ ಅತ್ಯುಪಯುಕ್ತವೂ ಆದ ಲೇಖನಗಳನ್ನು ಮಾತ್ರ ಆರಿಸಿ ಪ್ರಕಟಿಸುತ್ತಿದ್ದೇವೆ. ಆದರೆ ಅನೇಕರು ತಾವು ಕಳುಹಿಸಿದ ಲೇಖನಗಳುಪಯುಕ್ತವಾಗಿರಲಿ ಇಲ್ಲದಿರಲಿ ಅವನ್ನು ಪ್ರಕಟಿಸಲಿಲ್ಲವೆಂದು ಆಗ್ರಹಯುಕ್ತರಾಗಿರುವರು. ಪತ್ರವ್ಯವಹಾರಕರು ಇನ್ನುಮೇಲಾದರೂ ನಮ್ಮ ನಿಯಮಗಳನ್ನು ಅನುಸರಿಸಿ ಬಹಳ ಉಪಯುಕ್ತವಾದ ಮತ್ತು ಮುಖಸ್ತುತಿಯಿಲ್ಲದಿರುವ ವಿಷಯಗಳನ್ನು ಆದಷ್ಟು ಸಂಕ್ಷಿಪ್ತವಾಗಿಯೂ ಸ್ಪಷ್ಟವಾಗಿಯೂ ಕಾಗದದ ಒಂದುಕಡೆ ಮಾತ್ರ ಬರೆದು ಕಳುಹಿಸಬೇಕಾಗಿ ಕೋರಿದೆ. ನಮ್ಮ ತಿಳುವಳಿಕೆಗಾಗಿ ಹೆಸರು ವಿಳಾಸವೂ ರೆಜಿಸ್ಟರ್ ನಂಬರೂ ಪೂರ್ಣವಾಗಿ ತಿಳಿಯಿಸಲ್ಪಡದಿದ್ದಲ್ಲಿ ಯಾವ ಲೇಖನವೂ ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವು.

(1) ತೋರಣಗಟ್ಟದ K.M.R. ನಿಮ್ಮ ಹೆಸರು ಪೂರ್ಣವಾಗಿಲ್ಲವು.

(2) ಎರಡುಸಾರೆ ರಥೋತ್ಸವ—ಇದು ಮನಃಭೇದವನ್ನುಂಟುಮಾಡತಕ್ಕುದಾಗಿದೆ.

ಕೂಡಗಿ ತಾಲ್ಲೂಕು ಬಾಗೇವಾಡಿ.

ಶ್ರೀ ಬಸವೇಶ್ವರ ಜಾತ್ರೆ ಮಹೋತ್ಸವ:—ಕೂಡಗಿಯಲ್ಲಿ ಪ್ರತಿ ವರ್ಷದಂತೆ ಶ್ರೀ ಬಸವೇಶ್ವರ ಜಾತ್ರೆ ಮಹೋತ್ಸವವು ಇದೇ ಶ್ರಾವಣ ವ|| ೩೦ ದಿವಸ ಬಾಜಾಬಜಂತ್ರಿಯಿಂದ ದೊಡ್ಡ ದೊಡ್ಡ ವೀರಶೈವ ಮುಂದಾಳುಗಳಿಂದ ಮೆರೆವಣಿಗೆಯು ಶ್ರೀ ಮಲ್ಲಿಕಾರ್ಜುನದೇವರ ಗುಡಿಯಿಂದ ಹೊರಟು ಪಾಲಕಿ ನಂದಿಧ್ವಜದೊಂದಿಗೆ ಶ್ರೀ ಬಸವೇಶ್ವರ ದೇವಾಲಯಕ್ಕೆ ತಲಪಿತು. ಊರಲ್ಲಿ ತಳಿರುತೋರಣಗಳಿಂದ ಅಲಂಕರಿಸಿದ್ದರು. ಊರಲ್ಲಿ ನಾನಿಕಾದೇವಿಯು ಬಂದಿದ್ದೂ ವೀರಶೈವ ತರುಣ ಸಂಘದವರ ಉತ್ಸುಕತೆಯಿಂದಲೋ ಅಥವಾ ಭಕ್ತಿಪ್ರಭಾವಕ್ಕೋ ಎಲ್ಲಿಯೋ ಅಡಗಿಹೋಯಿತು. ವೀರಶೈವ ತರುಣ ಸಂಘದವರಿಗೆ ಈ ಶ್ರೇಯಸ್ಸು ಇರತಕ್ಕದ್ದು.

ಓರ್ವ ಪ್ರತ್ಯಕ್ಷದರ್ಶಿ.

ಧಂಗಾರಕ್ಕೆ ಕುಂದಣ.

ಹೊಸಪೇಟೆಯಲ್ಲಿ ತಾ|| 31-7-22ನೆ ದಿವಸ ನಡೆದ ಶ್ರೀ ಹಿಮವತ್ಕೇದಾರ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳವರ ಸಕಲ ಬಿರುದಾವಳಿಯುಕ್ತ ತಿರ್ಯಗಾಂದೋಳನೋತ್ಸವ ಸಮಾರಂಭವನ್ನು ನೋಡಲು ಮಿತ್ರಮಂಡಲಿಯೊಡನೆ ಅಲ್ಲಿಗೆ ನಾವು ತೆರಳಿದೆವು. ಆ ದಿವಸ ಉತ್ಸವವು ಸಾಂಗೋಪಾಂಗವಾಗಿ ಜರಗಿತು. ಬಳಿಕ ತಾ|| 1-8-22 ದಿವಸ ಶ್ರೀ ಮಹಾಸನ್ನಿಧಿಯಲ್ಲಿ ನೆರೆದ ಭಕ್ತಮಾಹೇಶ್ವರಾದಿ ವೃಂದಕ್ಕೆ ಶ್ರೀಗಳವರು, ಸಂಸ್ಕೃತ, ಇಂಗ್ಲೀಷು, ಹಿಂದೀ, ಕನ್ನಡ, ಮೊದಲಾದ ಭಾಷೆಗಳಿಂದ ತಮ್ಮ ಮೂಲಪೀಠವಾದ ಹಿಮವತ್ಕೇದಾರದಲ್ಲಿರುವಂಥ ಮಹತ್ವಾತಿಶಯಗಳನ್ನೂ ಹಾಗೂ ಸಂಸ್ಥಾನಕ್ಕೆ ಅನೇಕ ರಾಜರುಗಳಿಂದಲೂ ಇಂಡಿಯಾ ಸರಕಾರದವರಿಂದಲೂ ದೊರೆತಿರುವಂಥ ಸನ್ನದುಗಳನ್ನೂ ಮತ್ತು ಬಹು ಕಾಲದ ರಿಕಾರ್ಡುಗಳನ್ನೂ ಪ್ರಕಾಶಗೊಳಿಸುತ್ತಾ ವೀರಶೈವ ಮತದ ಸಿದ್ಧಾಂತಗಳನ್ನೂ ಲೌಕಿಕ ಪಾರಮಾರ್ಥಿಕ ವಿಷಯಗಳನ್ನೂ ಬಹು ಸರಸವಾಗಿ ಬೋಧಿಸಿದರು. ವೀರಶೈವಮತಕ್ಕೆ ಮೂಲ ಕರ್ತೃಗಳಾದ ಪಂಚಪೀಠಾಧಿಕಾರಿಗಳೂ ಈವರೆಗೂ ಕಾಲವೈಚಿತ್ರದಿಂದ ಕ್ಷೀಣಾವಸ್ಥೆಯಲ್ಲಿದ್ದರು. ಈಗ ನಮ್ಮ ಸುದೈವದಿಂದ ಹಗಲಿರುಳೂ ಮಠೋದ್ಧಾರ ಕಾರ್ಯದಲ್ಲಿ ಕಾಲಕಳೆಯುವಂಥಾ ಶ್ರೀ ಕೇದಾರಪೀಠಕ್ಕೆ ನೀಲಕಂಠ ಶಿವಾಚಾರ್ಯರು ಪ್ರಾಪ್ತವಾದದ್ದು ಭಂಗಾರಕ್ಕೆ ಕುಂದಣ ಹಾಕಿದಂತೆ ಅತ್ಯಂತ ಶೋಭಾಯಮಾನವಾಗಿದೆ. ಇದರಂತೆ ಸದ್ಯಕ್ಕೆ ಶ್ರೀ ರಂಭಾಪುರೀ (ಬಾಳೆಹಳ್ಳಿ) ಪೀಠಕ್ಕೂ ವಿದ್ವಾಂಸರಾದ ಹಾಗೂ ಮಠೋದ್ಧಾರ ಕಾರ್ಯದಕ್ಷರಾದ ಯೋಗ್ಯ ಮೂರ್ತಿಗಳನ್ನು ಶೋಧಮಾಡಿ ಅಧಿಕಾರಿಗಳನ್ನು ಮಾಡಿದಲ್ಲಿ ನಮ್ಮ ವೀರಶೈವ ಮತವು ಕ್ಷಿಪ್ರದಲ್ಲಿಯೇ ವೃದ್ಧಿಂಗತವಾಗಿ ಪ್ರಕಾಶಕ್ಕೆ ಬರಲು ಸಂದೇಹವಿಲ್ಲ. ಈ ಬಗ್ಗೆ ಪೀಠಾಭಿಮಾನಿಗಳೆಲ್ಲರೂ ತನುಮನಧನಗಳಿಂದ ಸಾಹಸ ಮಾಡಿ ಈ ಮಂಗಲಕರವಾದ ಮಹತ್ಕಾರ್ಯವನ್ನು ಸಾಂಗಗೊಳಿಸಿ ಕೀರ್ತಿಭಾಜನರಾಗಬೇಕೆಂದು ಸೂಚನೆ.

ವಿರೂಪಾಕ್ಷಾರ್ಯ ಪುರಾಣಿಕ ಮಠ, ಹಿರೇಹಡಗಲಿ.

ಸಂಪದಭ್ಯುದಯದಲ್ಲಿ ಸುಳ್ಳು ಕರಸ್ಪಾಂಡೆನ್ಸು.

ಕಳೆದ ಆಗಸ್ಟ 31ನೇ ತಾರೀಖಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಪ್ರಕಟಿಸಿದ್ದ "ವೀರಶೈವ" ಎಂಬ ಹೆಸರಿನ ಕರೆಸ್ಪಾಂಡೆನ್ಸಿನ ವಿಷಯವಾಗಿ ಈ ಕೆಳಗೆ ನಮೂದಿಸಿರುವ ಪ್ರಕಾರ ಆ ಪತ್ರಿಕಾ ಎಡಿಟರವರಿಗೆ ವಂದು ವಾರದ ಕೆಳಗೆ ನಾನು ಕರಸ್ಪಾಂಡೆನ್ಸನ್ನು ಬರೆದಿದ್ದೆನು. ಇದುವರೆಗೆ ಅವರು ತಮ್ಮ ಪತ್ರಿಕೆಯಲ್ಲಿ ಅದನ್ನು ಪ್ರಕಟಿಸಿರುವುದಿಲ್ಲ. ಆದುದರಿಂದ ತಾವಾದರೂ ಈ ವಿಷಯವನ್ನು ಕೂಡಲೇ ಪ್ರಕಟಿಸಬೇಕಾಗಿ ಕೋರುತ್ತೇನೆ. ಕಳೆದ ಆಗಸ್ಟ 31ನೇ ತಾ|| ತಮ್ಮ ಸಂಪದಭ್ಯುದಯ ಪತ್ರಿಕೆಗೆ "ವೀರಶೈವ" ಎಂಬ ಹೆಸರಿನಿಂದ ಕೊಟ್ಟಿರತಕ್ಕ ಕರೆಸ್ಪಾಂಡೆನ್ಸಿನಲ್ಲಿ ಕೆಲವು ಅಸತ್ಯವಿಧಾನಗಳು ಇರುವುದರಿಂದ ಈ ಲೇಖನವನ್ನು ನಿಮಗೆ ಬರೆಯಬೇಕಾಯಿತು. ಈ ಊರಿನಲ್ಲಿ ಒಂದು ವೀರಶೈವ ಸಂಘವಿರುವುದು ನಿಜ, ಅದಕ್ಕೆ ನಾನು ಪ್ರೆಸಿಡೆಂಟಾಗಿರುವದೂ ನಿಜ. ಆದರೆ ಈ ಸಂಘದವರು ಸೇರಿಸಿದ್ದ ಸಭೆಯಲ್ಲಿ ಬ್ರಾಹ್ಮಣರ ಸ್ಪೆಷಲ್ ಕಾಲೇಜುಗಳಿಗೆ ಬ್ರಾಹ್ಮಣೇತರರನ್ನೆಲ್ಲಾ ಸೇರಿಸಬೇಕೆಂದು ಹೊಡೆದಾಡುವದು ಸ್ಟಾರ್‌ಪತ್ರಿಕಾಕರ್ತರ ಹೊಡೆದಾಟವೇ ಹೊರತು ವೀರಶೈವ ಮಹಾಜನಗಳ ಹೊಡೆದಾಟವಲ್ಲವೆಂಬದಾಗಿಯೂ, ಪಂಚಮರೇ ಮೊದಲಾದವರು ವೀರಶೈವ ಪಾಠಶಾಲೆಗಳಿಗೆ ಬರಬೇಕೆಂದು ಅಪೇಕ್ಷಿಸಿದರೆ ಅದಕ್ಕೆ ವೀರಶೈವರೆಲ್ಲರೂ ಒಪ್ಪುವುದಿಲ್ಲವೆಂಬದಾಗಿಯೂ ಇಂಥಾದ್ದರಲ್ಲಿ ಬ್ರಾಹ್ಮಣರ ಪ್ರೈವೇಟ್ ಪಾಠಶಾಲೆಗಳಿಗೆ ಇತರರನ್ನು ಸೇರಿಸಬೇಕೆಂಬ ವಾದವು ಶುದ್ಧತಪ್ಪೆಂಬದಾಗಿಯೂ ವೀರಶೈವರ ಪ್ರೈವೇಟ್ ಪಾಠಶಾಲೆಗಳಿಗೆ ಹೇಗೋ ಹಾಗೆ ಉದಾರಸಹಾಯವನ್ನು ಅಪೇಕ್ಷಿಸಬೇಕೆಂಬದಾಗಿಯು ಚರ್ಚಿಸಿದರು" ಎಂದು ಬರೆದಿದ್ದಾರೆ. ಇದು ಸಂಪೂರ್ಣವಾಗಿ ನಿಜವಲ್ಲ. ಇಂಥಾ ಚರ್ಚೆಯನ್ನು ಸಭೆಯಲ್ಲಿ ಯಾರೂ ಮಾಡಲಿಲ್ಲ. ಅಲ್ಲಿ ಏಕಕಂಠ್ಯದಿಂದ ನಡೆದು ಗೌರ್ನಮೆಂಟಿಗೆ ಕಳುಹಿಸಿರತಕ್ಕ ಮೆಮೋರಾಂಡಂ ನಕಲನ್ನು ನಿಮ್ಮ ಆಗಸ್ಟ 19ನೇ ತಾರೀಖಿನ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೀರಿ. ನಮ್ಮ ಸಮಾಜದವರ ಅಭಿಪ್ರಾಯವೆಲ್ಲಾ ಈ ಮೆಮೋರಾಂಡಮ್ಮಿನ ಅಭಿಪ್ರಾಯಕ್ಕೆ ಅನುಸಾರವಾಗಿದೆಯೆಂದು ನಂಬುತ್ತೇನೆ.

T. S. SIDDAPPA, President.

ಶ್ರೀಯುತ ಗುಡಗುಂಟಿ ಇವರ ಅಭಿನಂದನವು.

ಉತ್ಸಾಹಿತ ತರುಣರೂ ಮತ್ತು ಸಮಾಜದ ಹಿತಚಿಂತಕರೂ ಆದ ಗುಡಗುಂಟಿ, ವ್ಹಿ. ಎಸ್. ಇವರು ಮುಂಬಯಿ ವೀರಶೈವಾಶ್ರಮದ ಸಂಬಂಧವಾಗಿ ವೃತ್ತಪತ್ರಗಳಲ್ಲಿ ಒಂದು ಲೇಖನವನ್ನು ಕೊಟ್ಟಿದ್ದನ್ನು ವಾಚಕವೃಂದವು ಅರಿತಿರಬಹುದು. ಅದನ್ನು ನಿಷ್ಪಕ್ಷಪಾತದಿಂದ ಪರೀಕ್ಷಿಸಿ ನೋಡಿದವರಿಗೆ ಅವರ ಬೆಲೆಯು ಹೊಳೆಯದೆ ಇರದು. ಅವರು ಸ್ವತಃ ಜಂಗಮಶಾಹಿ ಕೋಟೆಯೊಳಗಿನ ಒಬ್ಬ ವ್ಯಕ್ತಿಗಳಾಗಿದ್ದು, ನಿರ್ಭಯತನದಿಂದಲೂ, ನಿಷ್ಪಕ್ಷಪಾತದಿಂದಲೂ, ವಿವಿಧ ಮಾಹಿತಿಯಿಂದಲೂ, ಸಾಧಕ ಬಾಧಕ ಪ್ರಮಾಣ ಕೊಟ್ಟು ಆ ಲೇಖನವನ್ನು ಬರೆಯಲು ಸಾಹಸ ಪಟ್ಟಿದ್ದರಿಂದ ನಾವು ಅವರನ್ನು ಅಂತಃಕರಣಪೂರ್ವಕ ಅಭಿನಂದಿಸದೆ ಇರೆವು. ಮತ್ತು ಅಂತಸ್ಥ ಲೇಖನವು ಶ್ರೀಮನ್ನಿರಂಜನ ಬಳ್ಳಾರ ಶ್ರೀಗಳವರ ಮನಸ್ಸನ್ನು ಈ ಆಶ್ರಮದಂಥ ಪರಮ ಮಹತ್ವದ ಕಾರ್ಯದ ಕಡೆಗೆ ಎಳೆಕೊಳ್ಳದೆ ಬಿಡದೆಂದು ನಮ್ಮ ದೃಢನಂಬಿಗೆಯು. ವೀರಶೈವ ಸಮಾಜದ ಇಂಥ ಅವನತಸ್ಥಿತಿಯಲ್ಲಿ ಅದನ್ನು ಪುನೀತವಾಗಿ ಮಾಡುವ ಮಹಾತ್ಮರು ಬಳ್ಳಾರ ಸ್ವಾಮಿಜಿಯೇ ತಕ್ಕವರೆಂದು ಗುಡಗುಂಟಿ ಇವರು ಮನಗಂಡು ಆಶ್ರಮದಂಥ ಮಹತ್ವದ ಕಾರ್ಯವನ್ನು ಕೈಕೊಳ್ಳಲು ಅವರಿಗೆ ಕೇಳಿಕೊಂಡಿರಬಹುದು. ಮತ್ತು ಅದು ನಿಜವಿರುವದು. ಶ್ರೀ ಗಂಗಾಧರಪ್ಪಾ ಸಾಬೋಜಿ ಇವರು ಆಶ್ರಮವನ್ನು ಪುನಃ ರಚಿಸುವ ಕುರಿತು ಮುಂಬಯಿಯಲ್ಲಿರುವ ಜನರ ತೊಡೆಕೆಳಗಿನ ಹಣವನ್ನು ಬೇಗನೆ ಸೆಳೆಯಬೇಕಲ್ಲದೆ ಆಶ್ರಮವನ್ನು ಏರ್ಪಡಿಸ ಬೇಕಾದರೆ ಯಾವ ಮಾರ್ಗವನ್ನು ಕೈಕೊಂಡಲ್ಲಿ ಅದು ತೀವ್ರವೇ ಕೊನೆಗಾಣುವದೆಂಬದಾಗಿ ತಮ್ಮ ಅಭಿಪ್ರಾಯವನ್ನು ವರ್ತಮಾನ ಪತ್ರಗಳ ದ್ವಾರದಿಂದ ವ್ಯಕ್ತಪಡಿಸಬೇಕೆಂದು ಕೊಂಕೆ. ಕೊನೆಗೆ ಶ್ರೀಯುತ ಗುಡಗುಂಟಿ ಇವರು ಆಶ್ರಮದ ಬೆಸೆಯಿಂದ ಲೇಖನವನ್ನು ಪ್ರಕಟಿಸಿದ್ದರ ಸಲುವಾಗಿ ಯಾರೂ ವ್ಯರ್ಥ ಪ್ರತಿಭಟಿಸಬಾರದೆಂದೂ ಮತ್ತು ಗುಡಗುಂಟಿ ಇವರು ಇದರಂತೆ ಇನ್ನು ಮುಂದಾದರೂ ಸಮಾಜದ ಕೆಲಸಕ್ಕೆ ಹೆಚ್ಚು ಹೆಚ್ಚಾಗಿ ಹೆಣಗಾಡ ಬೇಕೆಂದೂ ಪ್ರಾರ್ಥಿಸಿ ನಾವು ಲೇಖನವನ್ನು ವಿರಮಿಸುವೆವು.

ಅಭಿನಂದಕರು (1) ಗುಂಡಪ್ಪಾ ಕಾಬಾಡಿ, (2) ರಾಮಚಂದ್ರಪ್ಪಾ ಬೋಳಾಳ, (3) ಮಹಾಲಿಂಗಪ್ಪಾ ಕೋರಿ.

ಕಲ್ಯಾಣ.

ನಿಜಾಮ ಇಲಾಖಾ ಗುಲ್ಬರ್ಗಾ ಜಿಲ್ಲಾ ಜಹಾಗೀರ ಕಲ್ಯಾಣದಲ್ಲಿ ಹಿಂಯತನದ ರೇವಣಸಿದ್ಧೇಶ್ವರ ಕಟ್ಟಿಮಠದಲ್ಲಿ ಕಳೆದ ಶ್ರಾವಣ ಬ|| ೭ ಸೋಮವಾರ ಮಧ್ಯಾಹ್ನದಲ್ಲಿ ವೀರಶೈವ ಜ್ಞಾನವರ್ಧಕ ಸಂಘದವರು ಪದ್ಧತಿಯಂತೆ ಒಂದು ಸಭೆಯನ್ನೇರ್ಪಡಿಸಿದ್ದರು. ಆ ಸಭೆಯಲ್ಲಿ ಸುಮಾರು ನಾಲ್ಕೈದುನೂರುಜನ ವೀರಶೈವ ಮಹನೀಯರು ನೆರೆದಿದ್ದರು. ಅಲ್ಲಿ ಶಂಭುಶಯ್ಯ ಉಡಚ್ಯಾಣ ಎಂಬ ವಿದ್ಯಾರ್ಥಿಯು ಸತ್ಸಂಗಲಾಭ ಎಂಬ ವಿಷಯದಲ್ಲಿ ಬಹಳ ಉತ್ತಮರೀತಿಯಿಂದ ಹೇಳಿ ಸಂತೋಷಗೊಳಿಸಿದರು. ಮತ್ತು ಗುರುಪಾದಯ್ಯ ಸಂಕರಗುಡಿಯವರು ಏಕಮತ್ಯ ವಿಷಯವಾಗಿ, ಗುರುಬಸಯ್ಯ ಕನಡೆ ಎಂಬ ವಿದ್ಯಾರ್ಥಿಯು ಗುರುಮಹಿಮೆ ಎಂಬ ವಿಷಯದಲ್ಲಿ ಸರಸವಾಗಿ ಮಾತನಾಡಿದರು. ಅನಂತರ ಆ ಸಭೆಯಲ್ಲಿ ಓರ್ವವಾಚಕನು ಸ್ಟಾರ್ ಪತ್ರದಲ್ಲಿ ಬರೆದಿರುವ ಮಹಾಸಭೆಯೆಂಬ ಶಿರೋಲೇಖನದ ಅಭಿಪ್ರಾಯವನ್ನು ಎಲ್ಲರೂ ತಿಳಿಯುವಂತೆ ಓದತಕ್ಕಂಥವನಾದನು. ಅದನ್ನು ಸಮಾಜದವರು ಕೇಳಿ ಸಂತೋಷಪಟ್ಟರು. ಮತ್ತು ಕೆಲವರು ಉಸುರ್ಗರೆದರು. ಇನ್ನು ಹೇಳತಕ್ಕೆಂದರೆ—ಕಳೆದ ಹನ್ನೆರಡು ವರ್ಷದಿಂದಲೂ ನಮ್ಮ ಕಲ್ಯಾಣಕ್ಕೆ ಆರುಸಾರೆ ಪ್ಲೇಗು ರೋಗದಿಂದಲೂ ಮತ್ತು ಇಂಫ್ಲುಯೆಂಜಾ ರೋಗದಿಂದಲೂ ಗುರುವರ್ಗದಲ್ಲಿ ಐವತ್ತು ಅರವತ್ತು ಜನ ಮುಖ್ಯಸ್ಥ ಮಹನೀಯರು ಶಿವಾಧೀನರಾಗಿರುವರು. ಉಳಿದ ಚಿಕ್ಕವರಲ್ಲಿಯಾದರೂ ವಿದ್ಯೆಯಿಲ್ಲವು. ಏಕೆಂದರೆ ಈ ಊರಲ್ಲಿ ಎಂದೂ ಕನ್ನಡ ಶಾಲೆಯಿಲ್ಲದ್ದಕ್ಕೆ ಹಾಗೂ ಹೀಗೂ ಕಲಿತರೆ ಎಲ್ಲಿಗಾದರೂ ಶಾಸ್ತ್ರಿಗಳ ಸನ್ನಿಧಿಗೆ ಹೋಗಿ ಕಲಿತದ್ದೇ ಆದರೂ ಆಗಲಿ ಧನಸಹಾಯ ಮಾಡತಕ್ಕ ವೀರಶೈವ ಮಹನೀಯರೆಲ್ಲಿ? ಅಂದರೆ (ಮಹಾರುದ್ರಪ್ಪ ಚೀಣಿ) ಯವರಂಥ ಮುಖ್ಯಸ್ಥರಾದರೂ ಉಳಿಯದಂತಾಯಿತು. ಅಂದಮೇಲೆ ಇಂಥಾ ಮಹತ್ಕಾರ್ಯವು ಹೇಗೆ ಜರುಗೀತೆಂದು ವಿಷಾದಿಸಿ ಅನಂತರ ಮುಧಾಳ ಮಹಾಸ್ವಾಮಿಗಳಂತೂ ನಾಲ್ಕೈದು ತಿಂಗಳಿಂದಲೂ ಈ ಪುರಾಣಸಮಾಪ್ತಿಯ ಬಗ್ಗೆ ವ್ಯವಸ್ಥೆಯನ್ನು ಮಾಡಿ ಸ್ವಲ್ಪಾನುಸಾರ ಬತ್ತವನ್ನು ತಂದಿರಿಸಿರುವರೆಂತಲೂ, ಮತ್ತು ಕೂಡಿಸುವದಕ್ಕೆ ಸೋಲಾಪೂರ, ಕಲಬುರ್ಗಿ, ವಿಜಾಪುರ—ಸ್ಥಳಗಳಿಗೆ ಹೋಗಿ ಒಂದು ತಿಂಗಳು ಆಗಿರುವದೆಂತಲೂ ತಿಳಿದು-ವಿಚಾರಿಸಿ ಮಹಾಸ್ವಾಮಿಗಳಿಗೆ ಒಂದು ಪತ್ರವನ್ನು ಬರೆದು ಅವರು ಬಂದನಂತರ ಒಂದು ಆಲೋಚನಾಸಭೆಯನ್ನು ಏರ್ಪಡಿಸಿ ಆ ಸಭೆಗೆ ಕಲಬುರ್ಗಿ ಬಂಧುಗಳನ್ನೂ ಮತ್ತು ನಮ್ಮ ಪ್ರಾಂತದ ವೀರಶೈವ ಮಹನೀಯರನ್ನೂ ಬರಮಾಡಿಕೊಂಡು ಒಂದು ನಿರ್ಧಾರ ಮಾಡಿ ಮಹಾಸಭೆಯ ಬಗ್ಗೆ ಏನಾದರೂ ವ್ಯವಸ್ಥೆ ಮಾಡಲಿಕ್ಕೆ ಬಂದೀತೆಂದು ಮಾತನಾಡಿ ಸರ್ವಗುರುವರ್ಗದವರಿಗೂ ಪುಷ್ಪಹಾರವನ್ನು ಸಮರ್ಪಿಸಿ ಮಂಗಲಾಚರಣೆಯಿಂದ ಸಭೆಯ ವಿಸರ್ಜನವಾಯಿತು.

ಓರ್ವಪುರವಾಸಿ.

ಚನ್ನಗಿರಿ ತಾಲ್ಲೂಕು ತ್ಯಾವಣಿಗೆಗ್ರಾಮದ ವೃತ್ತಾಂತವು.

ಶ್ರೀ ಗಿರಿರಾಜ ಸೂರ್ಯಸಿಂಹಾಸನ ವೀರಶೈವ ಜಗದ್ಗುರು ಮಹಾಸ್ವಾಮಿ ವೀರಭಿಕ್ಷಾವೃತ್ತಿ ರಾಜದೇಶಿಕೇಂದ್ರ ಮಹಾಸ್ವಾಮಿಯವರು ದಾವಣಗೆರೆ ತಾಲ್ಲೂಕು ಕಂದುಗಲ್ಲು ಮೊಕ್ಕಾಂನಿಂದ, ಚನ್ನಗಿರಿ ತಾಲ್ಲೂಕು ತ್ಯಾವಣಿಗೆ ಗ್ರಾಮಕ್ಕೆ ತಾ|| 22-7-1922 ರಲ್ಲಿ ಸಕಲವೈಭವಗಳಿಂದ ಆಗಮಿಸಿ ಭಕ್ತಮಾಹೇಶ್ವರರ ಸೇವಾಸತ್ಕಾರ್ಯ ಬಿನ್ನಹಗಳಂ ಸ್ವೀಕರಿಸಿದನಂತರ, ಶ್ರೀ ಸನ್ನಿಧಿಯ ಅಪ್ಪಣೆಯ ಮೇರೆಗೆ ಈ ಹಿಂದೆ, ಶ್ರೀಮನ್ನಿರಂಜನ ಜಗದ್ಗುರು ಮ|| ರಾಜೇಂದ್ರಮಹಾಸ್ವಾಮಿಗಳವರನ್ನು ಅಪ್ಪಣೆಯಂತೆ ಸ್ವಗೃಹಕ್ಕೆ ಬಿಜಯಂಗೈಸಿಕೊಂಡಾಗ ಅವರ ಪ್ರಸಾದವಾಣಿಯ ಮೇರೆಗೆ ಜನನಾನಂತರ ಮುರಿಗೇಶಪ್ಪನೆಂಬ ನಾಮಾಂಕಿತನಾಗಿ, ಪುನಃ ಶ್ರೀಗಳವರ ಅಪ್ಪಣೆಯಂತೆಯೇ ಕೇವಲ ಭಕ್ತ್ಯುತ್ಸಾಹ ವೈಭವಗಳಿಂದ ಸ್ವಗೃಹಕ್ಕೆ ಬರಮಾಡಿಕೊಳ್ಳಲು ನಡೆಸಿದಸಾಹಸಕಾರ್ಯಗಳನ್ನು ನೋಡಿ ಚಿತ್ತೋಲ್ಲಾಸದಿಂದ ಶ್ರೀ ಸನ್ನಿಧಿಯು ಬಹದ್ದೂರ್ ಎಂಬ ಬಿರುದನ್ನು ದಯಪಾಲಿಸಿರುವದಾಗಿ, ಶ್ರೀ ಮುಖದಿಂದಲೇ ವಿಸ್ತರಿಸಿಕೊಂಡ ತ್ಯಾವಣಿಗೆ ಸಾಹುಕಾರ್ ಚನ್ನಪ್ಪನವರ ಪುತ್ರ ಎಸ್. ಮುರಿಗಪ್ಪನೆಂಬ ವಿದ್ಯಾರ್ಥಿಯೂ, ತಮ್ಮ ಎಸ್. ಮಲ್ಲೇಶಪ್ಪನೆಂಬ ವಿದ್ಯಾರ್ಥಿಯೂ, ಸಹ ತಾ|| 7-8-22ರಲ್ಲಿ ಶ್ರೀ|| ಗಿ|| ರಾ|| ಸೂ|| ಸಿಂ|| ಸ್ವಾಮಿಗಳವರ ಅಪ್ಪಣೆಯ ಮೇರೆಗೆ ಮನೋಹರವಾಗಲಂಕರಿಸಲ್ಪಟ್ಟ ಗ್ರಾಮದ ಬೀದಿಗಳಲ್ಲೆಲ್ಲಾ ಅತ್ಯಂತ ವೈಭವಗಳಿಂದ ಉತ್ಸವಮೂಲಕ ತಮ್ಮ ಗೃಹಕ್ಕೆ ಬಿಜಯಂಗೈಸ್ಕೊಂಡ ನಂತರ ಭದ್ರಾಸನಾರೂಢರಾದ ಶ್ರೀಗಳವರ ಅಧ್ಯಕ್ಷತೆಯಲ್ಲಿ, ದರ್ಶನಾಶೀರ್ವಾದಕ್ಕಾಗಿ ಸೇರಿದ ಅನೇಕ ದೊಡ್ಡ ಮನುಷ್ಯರುಗಳಿಂದ ನೆರೆದಿದ್ದ ಸಭೆಯಲ್ಲಿ ಶ್ರೀಗಳವರ ಅಪ್ಪಣೆಮೇರೆಗೆ ಎಸ್. ಯಂ. ವೀರಭದ್ರಶಾಸ್ತ್ರಿಗಳು, ಶ್ರೀ ಶೈಲಮಾಹಾತ್ಮ್ಯವನ್ನೂ ಸಮಾಜಾಭಿವೃದ್ಧಿಗಾಗಿ ತನುಮನಗಳನ್ನು ಸಮರ್ಪಿಸಿದ ಕೈ|| ವೈ|| ಮೈಸೂರು ವೀರಸಂಗಪ್ಪನವರ ಮತ್ತು ಹಾಲೀ ಶ್ರೇಯೋಭಿವೃದ್ಧಿಯನ್ನೈದುತ್ತಿರುವ ಮಹಾಶಯರುಗಳ ಗುಣಕಥನಗಳನ್ನೂ ಮಾಡಿದ ತರುವಾಯ ಈ ವಿಜೃಂಭ

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಭರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ...

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ, ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

... ಸೆಪ್ಟೆಂಬರ್ ತಾ|| ೧೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ದುಂದುಭಿನಾಮಸಂವತ್ಸರದ ಭಾದ್ರಪದ ಬಹುಳ ಚೌತಿಯಿಂದ ಭಾದ್ರಪದ ಬಹುಳ ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
10	ಭಾನು	ಚೌತಿ	33-17	ಅಶ್ವಿ	40-12	25
11	[1]ಸೋಮ	ಪಂಚ	36-49	ಭರ	45-7	26
12	[2]ಮಂಗಳ	ಷಷ್ಠಿ	39-10	ಕೃತ್ತಿ	48-53	27
13	[3]ಬುಧ	ಸಪ್ತ	40-17	ರೋಹಿ	51-29	28
14	[4]ಗುರು	ಅಷ್ಟ	40-6	ಮೃಗ	52-37	29
15	ಶುಕ್ರ	ನವ	38-41	ಆದ್ರ್ರಾ	52-38	30
16	ಶನಿ	ದಶ	36-0	ಪುನ	5-31	31

(1) ಮಹಾಭರಣಿ, ಶ್ರೀ ಪ್ರಸನ್ನಕೃಷ್ಣಸ್ವಾಮಿ ರಥಃ. (2) ಚೆಲುವಾಜಮ್ಮಣ್ಣಿಯವರ 2ನೇ ಕುಮಾರೀಯವರ ವರ್ಧಂತಿ. (3) ಮನ್ನಾರ್ ಸಂಪ್ರದಾಯತ್ಕೂ ಅರಮನೆಗೂ ಸಹ ಶ್ರೀ ಕೃಷ್ಣಜಯಂತಿ. (4) ಮಧ್ವಾಷ್ಪವಿ, ತೋಳಪ್ಪರ್ ಸಂ|| ಶ್ರೀಜಯಂತಿ.

ರಾಯಲ್ ಪೌಂಟೆನ್‌ಪೆನ್.

ಲಿಲ್ಲಿ ಆಫ್ ದಿ ವ್ಯಾಲಿ.

ವಿಳಾಸ:— ಧೈರ್ಯಲಕ್ಷ್ಮೀ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ...

ಮೈಸೂರು ಸ್ಟಾರ್

REGISTERED No. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಚಿಹ್ನಾ | ಘನಪಥಕೃತಾವತಾರಾ ಪಕ್ಕಜ್ಜ ನಚೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
... | ಶ್ರೀಮಂಚಿತ್ರೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯–೦ ನೆಯ ಇಸವಿ ಸೆಪ್ಟೆಂಬರ್ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೩೮

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈ ...

ಶ್ರೀರಾಮಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ



ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಟಾಕಿಂಗ್ ಮಿಷನ್ ಯಂತ್ರ.

ವಿಳಾಸ—ರತ್ನಂ ಅಂಡ್ ಬ್ರದರ್ಸ್, ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಸಿನೆಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಷೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡ ಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.
,, ನಂ. 2 ರೂ. 7—8—0.

26 ವಿಳಾಸ—ಎಸ್. ಪಾಲ್ ಅಂಡ್ ಕೊ, ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

8 ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



... ಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.
ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0
,, ,, ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್, ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ।	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೫—೦
ವ್ರತಪಂಚಕ	೦— ೯—೦

ಶ್ರೀ

ಜಯದೇವ ಔಷಧಾಲಯ.

(ಮೊದಲು ರೈಲ್ವೆ ಬುಕಿಂಗ್ ಆಫೀಸ್ ಇದ್ದ ಕಟ್ಟಡದಲ್ಲಿ)
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಔಷಧಾಲಯದಲ್ಲಿ ಎಲ್ಲ ವಿಧದ ರೋಗಗಳಿಗೂ ಅನುಗುಣವಾದ ಚಿಕಿತ್ಸೆಯನ್ನು ಹೊಂದಬಹುದು. ರೋಗಿಗಳ ಪರೀಕ್ಷೆಯು ಅನುಭವಸ್ಥರಾದ ಡಾಕ್ಟರಿಂದ ಉಚಿತವಾಗಿ ನಡಿಸಲ್ಪಡುವುದು.

ಎಲ್ಲ ವಿಧದ ಪೇಟೆಂಟ್ ಔಷಧಗಳೂ ಇಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಸೆಪ್ಟೆಂಬರ್ ತಾ|| ೧೭ನೆಯ ಭಾನುವಾರ.

ಸಾಂಘಿಕ ಪ್ರಾತಿನಿಧ್ಯ.

ಸರ್ಕಾರದ ಉದ್ಯೋಗಗಳನ್ನು ಪಡೆಯುವುದಕ್ಕೆ ವಿದ್ಯಾವಿವೇಕಸಂಪನ್ನರಾದ ಪ್ರಜೆಗಳೆಲ್ಲರೂ ಹಕ್ಕುದಾರರಾಗಿರುತ್ತಾರೆ. ಆದರೆ ಕೆಲವು ವಿಶಿಷ್ಟಕಾರಣಗಳಿಂದ ಭರತಖಂಡದ ಎಲ್ಲ ಸರ್ಕಾರಗಳಲ್ಲೂ ಒಂದು ವಿಶಿಷ್ಟ ಜನವರ್ಗದವರೇ ಸಂಖ್ಯಾಪರಿಮಿತಿಯಲ್ಲಿ ಚಿಕ್ಕವರಾಗಿದ್ದಾಗ್ಗೂ ಸರ್ಕಾರದ ಅಧಿಕಾರಸ್ಥಾನಗಳ ಬಹುಭಾಗವನ್ನೆಲ್ಲಾ ಆಕ್ರಮಿಸಿಕೊಂಡು ಬಂದರು. ಮೊದಮೊದಲು ಇದರ ಅನರ್ಥಪರಿಣಾಮವು ಗೊತ್ತಾಗಲಿಲ್ಲ. ದಿನಕ್ರಮೇಣ ಗೊತ್ತಾಗುತ್ತ ಬಂದಿತು. ಎಲ್ಲ ಜನವರ್ಗಗಳೂ ಸರ್ಕಾರದಧಿಕಾರಸ್ಥಾನಗಳಲ್ಲಿರುವಂತೆ ಮಾಡುವುದರ ಅವಶ್ಯಕತೆಯು ಪ್ರತಿಯೊಂದು ಪ್ರಭುತ್ವದವರಿಗೂ ಗೋಚರಿಸಿತು. ಈ ವಿಷಯದಲ್ಲಿ ಯಾವ ಜನವರ್ಗಗಳವರು ಹಿಂದುಬಿದ್ದುಹೋಗಿರುವರೋ ಅವರನ್ನು ಮುಂಬರಿಸುವುದಕ್ಕೆ ತಕ್ಕ ಅಪ್ಪಣೆಗಳೂ ತನ್ಮೂಲಕವಾದ ಪ್ರೋತ್ಸಾಹಗಳೂ ಹುಟ್ಟಲಾರಂಭಗೊಂಡವು. ನಮ್ಮ ಮೈಸೂರು ಪ್ರಭುತ್ವದಲ್ಲಿಯೂ ಕೂಡ ಸರ್ ಕೆ. ಶೇಷಾದ್ರಿಅಯ್ಯರ ಕಾಲದಲ್ಲೇ ಈ ಅವಶ್ಯಕತೆಯು ತೋರಿ 1892 ನೆ ಇಸವಿಯಲ್ಲಿ "ಎಲ್ಲಾ ಕೋಮಿನವರೂ ಸರ್ಕಾರಿ ಉದ್ಯೋಗದಲ್ಲಿ ಯುಕ್ತಪರಿಮಾಣದಲ್ಲಿರುವಂತೆ ನೋಡಿಕೊಳ್ಳುವುದು ಅವಶ್ಯಕ" ಎಂದು ಬರೆದಿಟ್ಟಿದ್ದರು. ಅವರಿಂದೀಚೆಗೂ ಪ್ರಭುತ್ವದವರು ಆ ಸಂಕಲ್ಪವನ್ನು ಸ್ವಲ್ಪಮಟ್ಟಿಗೆ ಪೋಷಿಸುತ್ತ ಬಂದರು. 1914-15-16 ನೆ ವರ್ಷಗಳಲ್ಲಿ ಇದಕ್ಕಾಗಿ ಬೇರೆಬೇರೆ ಅಪ್ಪಣೆಗಳು ಮಾಡಲ್ಪಟ್ಟುವು. ಆದರೆ ಈ ಅಪ್ಪಣೆಗಳು ಕಾಗದದಲ್ಲಿ ಆದಮಟ್ಟಿಗೆ ಕಾರ್ಯವು ಜರುಗಲಿಲ್ಲ. ಹಿಂದುಳಿದ ಜನವರ್ಗಗಳ ಪ್ರಾತಿನಿಧ್ಯವು ಸರ್ಕಾರದುದ್ಯೋಗಸ್ಥಾನಗಳಲ್ಲಿ ತಕ್ಕಷ್ಟು ಉಂಟಾಗಲಿಲ್ಲ. ಆದರಮೇಲೆ ಬಲವಾದ ಏರ್ಪಾಟನ್ನು ಮಾಡಿ ಈ ಸಂಕಲ್ಪವನ್ನು ನೆರವೇರಿಸಬೇಕೆಂಬ ಉದ್ದೇಶವು 1918ನೆ ವರ್ಷದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ಮಾಡಲ್ಪಟ್ಟು ಮಿಲ್ಲರ್ ಸಂಘವನ್ನು ನಿಯಮಿಸಲಾಯಿತು. "ಈಗಾಗಲೇ ಬಹುಮಂದಿ ಬ್ರಾಹ್ಮಣರು ಸರ್ಕಾರದ ಅಧಿಕಾರಗಳಲ್ಲಿರುವುದರಿಂದ ಸಂಸ್ಥಾನದ ಇತರ ಮುಖ್ಯಜಾತಿಗಳ ಪರವಾದ ಜನರನ್ನೂ ತಕ್ಕಷ್ಟು ಸರ್ಕಾರದುದ್ಯೋಗಗಳಿಗೆ ಸೇರಿಸಬೇಕೆಂಬುದು ಶ್ರೀಮನ್ಮಹಾರಾಜರ ಸರ್ಕಾರದ ಅಭಿಲಾಷೆಯಾಗಿದೆ. ಅದನ್ನು ನೆರವೇರಿಸಲು ಯಾವ ವಿಧವಾದ ಏರ್ಪಾಟನ್ನು ಪ್ರೋತ್ಸಾಹವನ್ನು ಮಾಡಬೇಕೆಂಬುದು ಬಹುಕಾಲದಿಂದ ಪರ್ಯಾಲೋಚಿಸಲ್ಪಡುತ್ತಿದೆ. ಅದನ್ನು ವಿಚಾರದಿಂದ ವರದಿಮಾಡಬೇಕು" ಎಂಬುದಾಗಿ ಪ್ರಭುತ್ವದವರು ಮಿಲ್ಲರ್ ಸಂಘದವರಿಗೆ ಅಪ್ಪಣೆ ಮಾಡಿದರು. ಆದರ ಮೇಲೆ ಸಂಘದವರು ಮಾಡಿದ ವರದಿಯು ವಿಚಾರವೂ, ಅದರಲ್ಲಿ ಕೆಲಭಾಗವನ್ನು ಸಂಸ್ಕರಿಸಿ ಸರ್ಕಾರದವರು ಮಾಡಿದ ತೀರ್ಮಾನವೂ, ಅದರ ನಿರ್ವರ್ತನ ಸಾಹಾಯ್ಯಕ್ಕಾಗಿ ರಿಕ್ರೂಟ್‌ಮೆಂಟ್ ಬೋರ್ಡನ್ನೊಂದನ್ನು ಏರ್ಪಡಿಸಿರುವುದೂ ಸಹ ಸರ್ವವಿದಿತವೇ ಆಗಿದೆ.

ಆದರೆ ಈ ಅಪ್ಪಣೆಯ ಪ್ರಕಾರ ನಡೆಯುವ ಕಾರ್ಯಭಾಗವು ಮಾತ್ರ "ಪೂರ್ವ ಇತಿಪೂರ್ವಃ" ಎಂಬಂತಾಗಿದೆಯೇ ಹೊರತು ನೂತನ ಪರಿಣಾಮವೇನೂ ಅನುಕೂಲವಾಗಿ ಆದಂತೆ ಕಾಣುವುದಿಲ್ಲ. 7 ವರ್ಷಗಳಲ್ಲಿ 100 ಕ್ಕೆ 50 ಸ್ಥಾನಗಳು ಹಿಂದುಳಿದ ಜನವರ್ಗಗಳವರಿಗೆ ಸೇರಿರುವಂತೆ ಮಾಡಬೇಕೆಂಬ ಉದ್ದೇಶವು ಹೇಗೆ ನೆರವೇರುವುದೆಂಬುದೇ ಸಂಶಯವಾಗಿದೆ. ರಿಕ್ರೂಟ್‌ಮೆಂಟ್ ಬೋರ್ಡು ಎಷ್ಟುಮಟ್ಟಿಗೆ ಕೆಲಸಮಾಡಿದೆ? ಡಿಸ್ಟ್ರಿಕ್ಟ್ ಅಧಿಕಾರಿಗಳೂ ಇತರ ಮುಖ್ಯೋದ್ಯೋಗಿಗಳೂ ಈ ಅಪ್ಪಣೆಗೆ ಅನುಸಾರವಾಗಿ ಎಷ್ಟುಮಟ್ಟಿಗೆ ಕೆಲಸಮಾಡಿದ್ದಾರೆ? ಎಂಬುದು ಗೊತ್ತಾಗಲಿಲ್ಲ. ಅಪ್ಪಣೆಮಾಡಿ ಕಾಗದಪತ್ರಗಳನ್ನು ಅಲಂಕರಿಸಿಬಿಟ್ಟ ಮಾತ್ರಕ್ಕೇ ಫಲವಾಗುವುದಿಲ್ಲ. ಶ್ರೀಮನ್ಮಹಾರಾಜರಿಗೆ ಈ ವಿಷಯದಲ್ಲಿ ಹೇಗೋ ಹಾಗೆ ಅವರ ಅಧೀನರಾದ ಅಧಿಕಾರಿಗಳಲ್ಲೆಲ್ಲಾ ಮುತುವರ್ಜಿಯು ಇದ್ದಲ್ಲದೆ ಫಲಪ್ರದವಾಗುವುದಿಲ್ಲ. ಇತರ ಜನರನ್ನು ಮುಂದಕ್ಕೆ ತರುವ ವಿಷಯದಲ್ಲಿ ಆದರವನ್ನು ತೋರಿಸುವ ಗುಣವುಳ್ಳ ಮುಖ್ಯಾಧಿಕಾರಿಗಳು ಸಂಸ್ಥಾನದಲ್ಲಿ ಎಷ್ಟುಮಂದಿಯಿರುವರೋ ಹೇಳಲಾಗುವುದಿಲ್ಲ. ದಿವಾನರೂ ಕೌನ್ಸಿಲರುಗಳೂ ಈ ವಿಷಯದಲ್ಲಿ ಪದೇಪದೇ ಎಚ್ಚರಕೊಡದಿದ್ದರೆ ಕಾರ್ಯಸಿದ್ಧಿಯಾಗುವ ಹಾಗೆಯೇ ಇಲ್ಲ.

ಅಲ್ಲದೆ ಮಿಲ್ಲರ್ ಸಂಘದ ವರದಿಯ ಮೇಲಣ ಸರ್ಕಾರದ ಅಪ್ಪಣೆಯಲ್ಲೂ ಕೂಡ ಒಂದು ಕೊರತೆಯಿದೆ. ಯಾವುದೊಂದೂ ಸರ್ಕಾರದ ಉದ್ಯೋಗದ ನಿರ್ವಾಹಕ್ಕಾಗಿ ವಿಧಿಸಲ್ಪಟ್ಟ ಯೋಗ್ಯತೆಯು ಮುಂಬರಿದ ಮತ್ತು ಹಿಂದುಳಿದ ಜನವರ್ಗಗಳ ಉಮೇದುವಾರರಿಗೆಲ್ಲಾ ಒಂದೇ ತೆರನಾಗಿರುವಂತೆ ಮಾಡಿರುತ್ತಾರೆ. ಮತ್ತು ಉದ್ಯೋಗಕ್ಕೆ ಸೇರಿದ ಮೇಲೆ ಬಡತಿಯ ವಿಷಯದಲ್ಲಿ ಹಿಂದುಳಿದ ಜನವರ್ಗಗಳವರಿಗೆ ಯಾವ ವಿಶೇಷವಾದ ಪ್ರೋತ್ಸಾಹ ಸೌಕರ್ಯಗಳೂ ಕಲ್ಪಿಸಲ್ಪಟ್ಟಿಲ್ಲ. ಸಮಾನವಾದ ಕಾರ್ಯದಕ್ಷತೆ ವಿಚಕ್ಷಣತೆಗೇ ಗಮನಿಸಲ್ಪಡುವಂತೆ ಮಾಡಲ್ಪಟ್ಟಿರುತ್ತದೆ. ಈಏರ್ಪಾಟಿನಿಂದ ಹಿಂದುಳಿದವರ ಪರಿಮಾಣವು ಸರ್ಕಾರದ ಉದ್ಯೋಗಗಳಲ್ಲಿ ಹೆಚ್ಚುವುದಕ್ಕೆ ಅಷ್ಟೇನೂ ಅನುಕೂಲವಾಗಲಾರದೆಂದು ನಾವು ಈ ಅಪ್ಪಣೆ ಹುಟ್ಟಿದಾಗಲೇ ವಿಮರ್ಶಾಪೂರ್ವಕವಾಗಿ ಬರೆದಿರುತ್ತೇವೆ. ಆದರೂ ಸರ್ಕಾರದವರು ಮಿಲ್ಲರ್‌ಸಂಘದ ವರದಿಯ ವಿಷಯದಲ್ಲಿ ಗಲಾಟೆ ಮಾಡುತ್ತಿದ್ದವರ ಕೋಲಾಹಲಕ್ಕೆ ಬೆದರಿಯೋ ಏನೋ ಈ ಅಪ್ಪಣೆಯನ್ನು ಆಕಾರಮಾತ್ರ ಪ್ರಯೋಜಕವನ್ನಾಗಿ ಮಾಡಿಟ್ಟರೇ ಹೊರತು ಕಾರ್ಯಸಾಫಲ್ಯಕ್ಕೆ ತಕ್ಕ ಸಂಸ್ಕರಣವನ್ನು ಬಲವಾಗಿ ಅದರಲ್ಲಿ ಮಾಡಲಿಲ್ಲ.

ನೆರೆಯ ಮದ್ರಾಸು ಪ್ರಭುತ್ವದವರು ಇದೇ ವಿಷಯದಲ್ಲಿ ಬಹು ಮುತುವರ್ಜಿಯಿಂದ ಕೆಲಸಮಾಡುತ್ತಿರುವುದನ್ನಾದರೂ ನಮ್ಮ ಪ್ರಭುತ್ವದವರು ಗಮನಿಸುವುದು ಆವಶ್ಯಕ. ಹಿಂದುಳಿದ ಜನವರ್ಗಗಳಿಗೆ ಅವರವರ ಜನಸಂಖ್ಯಾಪರಿಮಿತಿಗನುಗುಣವಾಗಿ ಸರ್ಕಾರದ ಉದ್ಯೋಗಸ್ಥಾನಗಳನ್ನು ಕೊಡಿಸುವುದಕ್ಕಾಗಿ ಕಳೆದ 1921ನೆ ಆಗಸ್ಟ್ ತಿಂಗಳಲ್ಲಿ ಅಲ್ಲಿಯ ಶಾಸನಸಭೆಯಲ್ಲಿ ಮಾಡಲ್ಪಟ್ಟ ತೀರ್ಮಾನಕ್ಕನುಸಾರವಾಗಿ ಮದ್ರಾಸು ಪ್ರಭುತ್ವದವರು ರೆವಿನ್ಯೂಶಾಖೆಯಲ್ಲಿ ಅದಕ್ಕೆಮುಂಚೆ ಇದ್ದ ನಿಬಂಧನೆಗಳನ್ನೇ ಎಲ್ಲ ಶಾಖೆಯವರೂ ಅನುವರ್ತಿಸುವಂತೆ ಮಾಡಿದುದಲ್ಲದೆ, ಅದಕ್ಕೆ ಎಲ್ಲ ಮುಖ್ಯಾಧಿಕಾರಿಗಳೂ ಬದ್ಧರಾಗಿ ನಡೆದುಕೊಳ್ಳಬೇಕೆಂದು ನಿರ್ಬಂಧಾಜ್ಞೆಯನ್ನು ಮಾಡಿದರು. ಮತ್ತೂ ಅದರಂತೆ ಅವರುಗಳು ನಡೆಯಿಸಿದ ಕಾರ್ಯಕ್ರಮಗಳನ್ನು ವಿವರಿಸುವ ವರದಿಯನ್ನು 6 ತಿಂಗಳಿಗೊಂದಾವೃತ್ತಿ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದೂ, ಆ ವಿವರಣದಲ್ಲಿ ಬ್ರಾಹ್ಮಣರು, ಬ್ರಾಹ್ಮಣೇತರ ಹಿಂದುಗಳು, ಭಾರತಕ್ರೈಸ್ತರು, ಮಹಮ್ಮದೀಯರು, ಯೂರೋಪಿಯನ್ನರು ಮತ್ತು ಆಂಗ್ಲೋ ಹೈಂಡವರು, ಇತರರು, ಎಂದು 6 ಭಾಗಗಳನ್ನು ಮಾಡಿ, ಈ 6 ಭಾಗದ ಜನಗಳಲ್ಲಿ ಎಷ್ಟೆಷ್ಟುಮಂದಿ ಉದ್ಯೋಗಗಳಲ್ಲಿರುವರೆಂಬುದನ್ನು ಕಾಣಿಸುತ್ತಾ ಬರಬೇಕೆಂದು ವಿಧಿಸಿದರು. ಅದರಪ್ರಕಾರ ನಡೆದ ಏರ್ಪಾಟಿನಿಂದ ಕಳೆದ ಡಿಸೆಂಬರ್ ತಿಂಗಳ ಕೊನೆಯವರೆಗೆ ಆದ 6 ತಿಂಗಳ ಕಾಲದಲ್ಲಿ ಜರುಗಿರುವ ಪರಿಣಾಮವು ಸರ್ಕಾರಕ್ಕೆ ವರದಿಮಾಡಲ್ಪಟ್ಟಿರುವುದರಲ್ಲಿ—ಹೊಸದಾಗಿ ಶಾಶ್ವತವಾದ ಉದ್ಯೋಗಸ್ಥಾನಗಳಲ್ಲಿ ಸೇರಿಸಲ್ಪಟ್ಟವರ ಸಂಖ್ಯೆಯು 100ಕ್ಕೆ ಬ್ರಾಹ್ಮಣರು 22, ಬ್ರಾಹ್ಮಣೇತರ ಹಿಂದುಗಳು 48, ಭಾರತೀಯ ಕ್ರೈಸ್ತರು 10, ಮಹಮ್ಮದೀಯರು 15, ಯೂರೋಪಿಯನ್ನರು ಮತ್ತು ಆಂಗ್ಲೋಹೈಂಡವರು 2, ಇತರರು 3, ಈ ಪ್ರಕಾರ ಸೇರಿಸಲ್ಪಟ್ಟಿರುವರೆಂದು ಗೊತ್ತಾಗುತ್ತದೆ.

ಈ ಪರಿಣಾಮವು ಕೂಡ ಅಲ್ಲಿಯ ಹಿಂದುಳಿದ ಜನವರ್ಗಗಳಿಗೆ ತೃಪ್ತಿಕರವಾಗಲಿಲ್ಲ. ಶಾಶ್ವತೋದ್ಯೋಗ ಅಥವಾ ತಾತ್ಕಾಲಿಕಸ್ಥಾನ, ಇಲ್ಲವೆ ಬದಲಿಕೆಲಸ, ಇವುಗಳೆಲ್ಲಾವುದಕ್ಕಾದರೂ ಸರಿಯೆ ಮನುಷ್ಯರನ್ನು ನಿಯಮಿಸಿಕೊಳ್ಳುವಾಗಲೆಲ್ಲಾ ಸಾಂಘಿಕ ಪ್ರಮಾಣವನ್ನು ಕೆಳ ಅಂತಸ್ತಿನ ಉದ್ಯೋಗಗಳಿಂದಲೂ ಅನುಸರಿಸುತ್ತಾ ಹೋಗಬೇಕೆಂದೂ, ಹೊಸದಾಗಿ ಸೇರಿಸಿಕೊಳ್ಳುವಾಗಲೂ, ಬಡತಿ ಕೊಡುವಾಗಲೂ ಕೂಡ ಕೀಳು ಮೇಲು ದರ್ಜೆಗಳನ್ನು ನೋಡದೆ ಸಾಂಘಿಕ ಪ್ರಾತಿನಿಧ್ಯ ಪರಿಪೂರಣಕ್ಕಾಗಿ ಜಾತಿವಾರು ಆರಿಸುವಿಕೆಯನ್ನೇ ಮುಖ್ಯವಾಗಿ ಗಮನಿಸುವಂತೆ ಅಪ್ಪಣೆಮಾಡಬೇಕೆಂದೂ ಚಳವಳಿಯನ್ನು ನಡೆಯಿಸಿದರು. ಅದರಮೇಲೆ ಆ ಪ್ರಭುತ್ವದವರು ಮೊನ್ನೆ ತಾನೇ ಮಾಡಿರುವ ಎಂದರೆ ಕಳೆದ ಆಗಸ್ಟ್ ತಾ|| 13 ರಲ್ಲಿ 658ನೆ ನಂಬರಿನ ಅಪ್ಪಣೆಯಲ್ಲಿ—"ಪ್ರತಿ ಜಿಲ್ಲೆಗಳಲ್ಲಿಯೂ ಇರುವ ವಿವಿಧಜಾತಿಯ ಜನರನ್ನು ಗಮನಿಸಿ ಉದ್ಯೋಗಸ್ಥಾನಗಳಿಗೆ ಸೇರಿಸಬೇಕೆಂಬ ಬೋರ್ಡು ಸ್ಟಾಂಡಿಂಗ್ ಅಪ್ಪಣೆಯಲ್ಲಿರುವ ಸೂತ್ರವನ್ನು ಸಮನ್ವಯಗೊಳಿಸುವುದಕ್ಕಾಗಿ ಆ ಅಪ್ಪಣೆಯಲ್ಲಿರುವ ವಿವರಗಳನ್ನು ಇನ್ನೂ ಅಭಿವೃದ್ಧಿಪಡಿಸಬೇಕೆಂಬ ಕೋರಿಕೆಯನ್ನು ಪ್ರಭುತ್ವದವರು ಪರಿಶೀಲನೆಮಾಡಿ ಈಗ ಅಪ್ಪಣೆಮಾಡುವುದೇನೆಂದರೆ—ಮುಖ್ಯೋದ್ಯೋಗಗಳನ್ನು ನಾನಾ ಸಂಘಗಳಿಗೆಲ್ಲಾ ಹಂಚಬೇಕಾದರೆ ಮೊದಲಿನಿಂದಲೇ ಎಂದರೆ ಕೆಳ ಅಂತಸ್ತಿನ ಉದ್ಯೋಗಗಳಿಂದಲೇ ಆ ತತ್ತ್ವವನ್ನು ಗಮನಿಸುತ್ತಾ ಹೋಗಬೇಕು. ಹೊಸದಾಗಿ ಉದ್ಯೋಗಕ್ಕೆ ಸೇರಿಸಿಕೊಳ್ಳುವಾಗಲೂ, ಬಡತಿಯನ್ನು ಕೊಡಬೇಕಾದಾಗಲೂ, ಸಂಖ್ಯಾಪರಿಮಿತಿಯನ್ನು ಸರಿಹೋಗಿಸುವುದಕ್ಕಾಗಿ "ಸೀನಿಯಾರಿಟಿ" ಗಿಂತ "ಸೆಲಕ್ಷನ್" ನನ್ನೇ ಅವಶ್ಯಕವಾಗಿ ಮಾಡತಕ್ಕದ್ದು. 6 ತಿಂಗಳಿಗೊಂದಾವೃತ್ತಿ ಕಳುಹಿಸಿಕೊಡಬೇಕಾದ ವಿವರಣದ ಪಟ್ಟಿಯಲ್ಲಿ "ಪರ್ಮನೆಂಟು, ಆಕ್ಟಿಂಗು, ಟೆಂಪೊರರಿ, ಹೈಯರ್‌ಗ್ರೇಡ್, ಲೋವರ್‌ಗ್ರೇಡ್" ಎಂಬ ವಿವರಗಳನ್ನೆಲ್ಲಾ ಕಾಣಿಸುವುದು ಕಷ್ಟವಾದುದರಿಂದ ಅದನ್ನು ಬಿಟ್ಟು, ನಾನಾ ಸಂಘಗಳವರನ್ನೆಲ್ಲಾ 6 ಭಾಗಗಳನ್ನಾಗಿ ಮಾಡಿಕೊಂಡು ವಿವರಣದ ಪಟ್ಟಿಯನ್ನು ಪ್ರತಿವರ್ಷವೂ ಕಳುಹಿಸಿಕೊಡುತ್ತಾ ಬಂದರೆ ಸಾಕು. ಅದರಲ್ಲಿ ಬಡತಿಯಕ್ರಮ ಉದ್ಯೋಗಕ್ರಮ ಮೊದಲಾದುವುಗಳನ್ನೆಲ್ಲಾ ವಿವರಿಸಬೇಕು." ಇತ್ಯಾದಿಯಾಗಿ ವಿವರಿಸಿದ್ದಾರೆ. ಮತ್ತು ಶಾಸನಸಭೆಗೆ ಈ ಪಟ್ಟಿಯನ್ನು ಕಳುಹಿಸಿಕೊಡುವಂತೆಯೂ ಏರ್ಪಡಿಸಿದ್ದಾರೆ.

ಇದರಿಂದ ಮದ್ರಾಸು ಪ್ರಭುತ್ವದವರು ಸಾಂಘಿಕ ಪ್ರಾತಿನಿಧ್ಯಪರಿಮಿತಿ ಕಲ್ಪನೆಗಾಗಿ ಉಳಿದ ಯೋಗ್ಯತೆಗಳೆಷ್ಟಿದ್ದರೂ "ಸೀನಿಯಾರಿಟಿ" ಯನ್ನೂ ಕೂಡ ಗಮನಿಸದೆ "ಸೆಲಕ್ಷನ್" ಪ್ರಕಾರವೇ ಬಡತಿಗಳ ಏರ್ಪಾಟನ್ನು ಜರುಗಿಸಬೇಕೆಂದು ವಿಧಿಸಿರುವುದರಲ್ಲಿ ನಮ್ಮ ಮೈಸೂರು ಪ್ರಭುತ್ವದವರು ಮಾಡಿರುವ ಪ್ರಸ್ತವಾದ ಏರ್ಪಾಟಿಗಿಂತಲೂ ಕಾರ್ಯಸಾಫಲ್ಯ ಸಾಧಕವಾದ ಉದಾರವಾದ ಏರ್ಪಾಟನ್ನು ಮಾಡುವುದಕ್ಕೆ ಎಷ್ಟು ವ್ಯಗ್ರರಾಗಿರುವರೆಂಬುದು ಗೊತ್ತಾಗುತ್ತದೆ. 350 ರೂ. ಸಂಬಳದ ಒಂದುಸ್ಥಲಕ್ಕೆ ಬಡತಿಮಾಡಿ ಒಬ್ಬರನ್ನು ವರ್ಗಾಯಿಸಬೇಕಾದ ಸಂದರ್ಭದಲ್ಲಿ 300ರೂ. ಸಂಬಳದ ಗ್ರೇಡಿನಲ್ಲಿ ಒಬ್ಬ ಬ್ರಾಹ್ಮಣನಿದ್ದರೂ, ಆತನನ್ನು ಆರಿಸಿಕೊಳ್ಳದೆ ಸಾಂಘಿಕಪ್ರಾತಿನಿಧ್ಯ ಪರಿಪೂರಣ ತತ್ತ್ವವನ್ನನುಸರಿಸಿ 200-250 ರೂ. ಸಂಬಳದಲ್ಲಿರುವ ಒಬ್ಬ ಹಿಂದುಳಿದ ಜನವರ್ಗದವನನ್ನು ಆರಿಸಿಕೊಂಡು ಅವನಿಗೆ ಆ 350 ರೂ. ಸಂಬಳದ ಸ್ಥಾನಕ್ಕೆ ಬಡತಿಕೊಡಬಹುದೆಂದು ವಿಧಿಸಿದಹಾಗಾಯಿತು. ಇಂಥ ಸೌಕರ್ಯವಿದ್ದರೇನೆಯೇ ಕ್ಲಪ್ತಕಾಲದಲ್ಲಿ ಹಿಂದುಳಿದವರ ಸಂಖ್ಯಾಪರಿಮಾಣವು ವೃದ್ಧಿಯಾಗಲು ಅವಕಾಶವಾದೀತೇ ಹೊರತು ಕೆಲಸಕ್ಕೆ ಹೊಸದಾಗಿ ಸೇರಿಸುವಾಗ ಮಾತ್ರ "ಸೆಲಕ್ಷನ್" ಏರ್ಪಾಟನ್ನು (ಅದೂ ಸಮಾನಯೋಗ್ಯತೆಯಿದ್ದರೇನೆಯೇ) ಇಟ್ಟು, ಮುಂದೆ ಪ್ರತಿಯೊಂದು ಬಡತಿಯನ್ನೂ ಮುಂಬರಿದ ಹಿಂದುಳಿದ ಜನವರ್ಗಗಳಿಗೆಲ್ಲಾ ಸಮಾನವಾಗಿಯೇ ಇರುವಂತೆ ಮಾಡಿಟ್ಟರೆ ಏನೂ ಫಲವಾಗುವುದಿಲ್ಲ. ಮೈಸೂರು ಪ್ರಭುತ್ವದವರು ಮಾಡಿರುವ ಈ ಕುಂದನ್ನು ಮದ್ರಾಸು ಪ್ರಭುತ್ವದವರು ಕೊಲಗಿಸಿಬಿಟ್ಟಿದ್ದಾರೆ. ಹಾಗೆ ಆಗುವುದಕ್ಕೆ ಅಲ್ಲಿಯ ಹಿಂದುಳಿದ ಜನವರ್ಗಗಳು ಸಾಮರ್ಥ್ಯದಿಂದ ಕಾಲೋಚಿತವಾಗಿ ನಡೆಯಿಸುವ ಚಳವಳವೂ, ನಿಯಮನಿರ್ಮಾಣ ಸಭೆಯಲ್ಲಿ ಆ ಪ್ರತಿನಿಧಿಗಳು ಸಾಹಸದಿಂದ ಮಾಡುತ್ತಿರುವ ಕಾರ್ಯಭಾಗಗಳೂ, ಉಚಿತಾನುಸಾರ ಅಲ್ಲಿಯ ಸರ್ಕಾರದವರು ಮನಃಪೂರ್ವಕವಾದ ಏರ್ಪಾಟುಗಳನ್ನು ಸಾರ್ಥಕವಾಗುವ ರೀತಿಯಲ್ಲಿ ಮಾಡಿಕೊಡಲು ಸಹಾಯಕರಾಗಿರುವುದೂ ಸಹ ಕಾರಣಗಳಾಗಿರುತ್ತವೆ. ನಮ್ಮ ಪ್ರಭುತ್ವದವರು ಮದ್ರಾಸು ಸರ್ಕಾರದ ಈಗಣ ಅಪ್ಪಣೆಯಲ್ಲಿ ಮಾಡಿರುವಂಥ ಪ್ರೋತ್ಸಾಹವನ್ನು ನೋಡಿದಮೇಲಾದರೂ ಮಿಲ್ಲರ್‌ಸಂಘದ ವರದಿಯಮೇಲಣ ಅಪ್ಪಣೆಯಲ್ಲಿರುವ ಲೋಪವನ್ನು ಪರಿಹರಿಸಲು ತಕ್ಕ ಸಂಸ್ಕರಣವನ್ನು ಮಾಡಿಕೊಡುವುದು ಅವಶ್ಯಕವೆಂದು ಸೂಚಿಸದೆ ಇರಲಾರೆವು. ಹಾಗೆ ಮಾಡಿಸಲು ಹಿಂದುಳಿದ ಪ್ರಜಾವರ್ಗಗಳ ಏಳ್ಗೆಯಲ್ಲಿ ಅಭಿಮಾನಶೀಲರಾದ ಪ್ರಜಾಪ್ರತಿನಿಧಿಗಳೂ ನಿಯಮನಿರ್ಮಾಣ ಸಭಾಸಭಿಕರೂ ತಕ್ಕ ಚಳವಳವನ್ನು ಅವಶ್ಯಕವಾಗಿ ಮಾಡಬೇಕಾಗಿರುವುದು.

ಶಾಸನಸಭಾ ಸಭಿಕರ ಆರಿಸುವಿಕೆ.

ಮದ್ರಾಸು ಸರ್ಕಾರದಿಂದ ಹಿಂದುಳಿದವರ ಅಭ್ಯುದಯಕ್ಕೆ ಪ್ರೋತ್ಸಾಹಕರಗಳಾದ ಅಪ್ಪಣೆಗಳು ಹುಟ್ಟುವಂತಾಗುವುದಕ್ಕೆ ಅಲ್ಲಿಯ ಶಾಸನಸಭೆಯಲ್ಲಿ ಮ|| ಎ. ತಣಿಕಾಚಲಂ ಶೆಟ್ಟರೇ ಮೊದಲಾದ ಹಿಂದುಳಿದ ಪ್ರಜಾವರ್ಗಗಳ ಪಕ್ಷದ ಸಮರ್ಥಸಭಿಕರ ಮಾತುಗಾರಿಕೆಯು ಪ್ರಬಲವಾಗಿದ್ದುದೇ ಕಾರಣವು. ಹಾಗಲ್ಲದೆ ಹಿಂದುಳಿದ ಜನವರ್ಗಗಳ ಏಳ್ಗೆಯನ್ನು ಸೈರಿಸಲಾರದವರ ಸಂಖ್ಯೆಯು ಆ ಸಭೆಯಲ್ಲಿ ಹೆಚ್ಚಾಗಿದ್ದರೆ ಮದ್ರಾಸು ಅಧಿಪತ್ಯದಲ್ಲಿ ಸಾಂಘಿಕಪ್ರಾತಿನಿಧ್ಯ ಪ್ರಾಬಲ್ಯಕ್ಕೆ ಈಗನಷ್ಟು ಅವಕಾಶವು ಎಂದಿಗೂ ಉಂಟಾಗುತ್ತಿರಲಿಲ್ಲವೆಂಬುದು ಖಂಡಿತ. ಆತ್ಮೋದ್ಧಾರವನ್ನು ಮಾಡಿಕೊಳ್ಳಬೇಕೆನ್ನುವವರು, ಪರರ ಜೋಗಸೆಯ ನೀರನ್ನು ಕುಡಿದು ದಾಹಶಾಂತಿಯನ್ನು ಮಾಡಿಕೊಳ್ಳಬೇಕೆನ್ನುವಂಥ ಕನಿಷ್ಠ ಪ್ರಯತ್ನಕ್ಕೆ ತೊಡಗದೆ, ಸ್ವಶಕ್ತಿಯನ್ನು ಅಭಿವೃದ್ಧಿಪಡಿಸಿಕೊಂಡು ತಮ್ಮ ಕಾಲಮೇಲೆ ತಾವು ನಿಂತುಕೊಂಡು ಉದ್ಧಾರಮಾಡಿಕೊಳ್ಳಬೇಕೆಂಬ ಉತ್ತಮ ಪ್ರಯತ್ನಕ್ಕೇ ಗಮನಕೊಡಬೇಕು. "ಪರರೇ ವಿದ್ಯಾಬುದ್ಧಿಸಂಪನ್ನರು, ಅವರೇ ಸಮರ್ಥರು, ಅವರಮುಂದೆ ನಾವಲ್ಲ, ಅವರೇ ನಮಗೋಸ್ಕರ ಕಾರ್ಯಸಾಧನೆಮಾಡುತ್ತಾ ಬರಲಿ" ಎಂದು ಹೇಳುತ್ತ ಇದುವರೆಗೆ ಕೈಕಟ್ಟಿ ಕುಳಿತ ಮಾಂದ್ಯದಿಂದ ಹಿಂದುಬಿದ್ದುಹೋದಂತೆ ಮುಂದೆಯೂ ಮಾಡುತ್ತಾ ಬಂದರೆ, ಹಿಂದುಳಿದ ಜನವರ್ಗಗಳು ಮುಂದಾಗುವುದು ಇನ್ನೆಷ್ಟು ಕಾಲಕ್ಕೆ? ಮುಂಬರಿದ ಜನವರ್ಗಗಳವರೇ ಹಿಂದುಳಿದವರ ಪ್ರತಿನಿಧಿಗಳಾಗಿದ್ದುಕೊಂಡು ಸರ್ಕಾರಿ ಸಭೆಗಳಲ್ಲಿ ಕೆಲಸಮಾಡುವುದಕ್ಕೆ ಎಷ್ಟುಮಟ್ಟಿಗೆ ಅನುಕೂಲರು ಎಂಬ ಸಂಗತಿಯು, ಹಿಂದುಳಿದ ವರ್ಗಗಳ ವಿದ್ಯಾರ್ಥಿವೇತನಗಳ ಕಲ್ಪನೆ, ವಿದ್ಯಾಭ್ಯಾಸದ ಮೆಮೊರಾಂಡಮು, ಮಿಲ್ಲರ್‌ಸಂಘದ ವರದಿ, ಸಂಸ್ಕೃತ ವಿದ್ಯಾಭ್ಯಾಸ, ಮೊದಲಾದ ಹಿಂದುಳಿದ ಜನವರ್ಗ ಕ್ಷೇಮಸಾಧಕ ವಿಷಯಗಳು ಸಭೆಗಳಲ್ಲಿ ಚರ್ಚೆಗೆ ಬಂದಾಗ ಆ ಸಭಿಕರು ತೋರಿಸಿದ ವರ್ತನೆಯಿಂದಲೇ ಸರ್ವರಿಗೂ ವಿದಿತವಾಗಿದೆ. ಹಿಂದುಳಿದ ಜನವರ್ಗಗಳಿಗೆ ಸೇರಿದ ಪ್ರತಿನಿಧಿಗಳು ಒಮ್ಮನಸ್ಸಿನಿಂದಲೂ ಯುಕ್ತಿಯುಕ್ತ ಸಮಾಧಾನದಿಂದಲೂ ಆತ್ಮಬಲದಿಂದಲೂ ಪ್ರತಿಷ್ಠೆಯನ್ನು ನಡೆಯಿಸದಿದ್ದರೆ ಸರ್ಕಾರದ ಉದಾರವಾದ ಏರ್ಪಾಟುಗಳೆಲ್ಲಾ ಕಾರ್ಯರೂಪಕ್ಕೆ ಬರಲು ಅವಕಾಶವೇ ಆಗುತ್ತಿರಲಿಲ್ಲವೆಂಬುದು ಗೊತ್ತೇ ಇದೆ. ಮುಂಬರಿದ ಜನವರ್ಗಗಳವರು ವ್ಯಕ್ತಿವಿಷಯದಲ್ಲಿ ಎಷ್ಟೇ ಮಿತ್ರರಾಗಿದ್ದರೂ ಆತ್ಮಲಾಭತ್ಯಾಗವನ್ನು ಮಾಡಿಕೊಂಡು ಪರಲಾಭಕ್ಕೆ ಸಹಾಯಮಾಡುವುದು ಅತ್ಯಂತ ವಿರಳವೆಂಬುದು ಹಲವರಿಗೆ ಅನುಭವಸಿದ್ಧವಾದ ಮಾತಾಗಿರುತ್ತದೆ. ಹಿಂದುಳಿದ ಜನವರ್ಗಗಳ ಏಳ್ಗೆಗಾಗಿ ಹಿಂದುಳಿದ ಜನವರ್ಗ ಪ್ರತಿನಿಧಿಗಳು ಎಷ್ಟು ಸಾಹಸವನ್ನು ಮಾಡುವರೋ ಅದರಲ್ಲಿ ಸಹಸ್ರದ ಒಂದಂಶವನ್ನೂ ಮುಂಬರಿದವರು ಮನಃಪೂರ್ವಕವಾಗಿ ಮಾಡಲಾರರು. ಹಿಂದುಳಿದ ಜನವರ್ಗಕ್ಕೆ ಸೇರಿದ ಯಾವೊಬ್ಬ ಸಾಧಾರಣ ವಿದ್ಯಾದಿಸಾಮರ್ಥ್ಯವುಳ್ಳ ಪ್ರತಿನಿಧಿಯಿಂದ ಎಷ್ಟು ಲಾಭವಾಗಬಹುದೋ ಅದರಲ್ಲಿ ಕಾಲುಭಾಗದಷ್ಟು ಕೂಡ ಅತ್ಯಂತ ಸಮರ್ಥನೆನಿಸುವ ಮುಂಬರಿದ ಪರಮನುಷ್ಯನಿಂದ ಆಗಲಾರದೆಂಬುದು ಖಂಡಿತ. "ಉದ್ಧರೇದಾತ್ಮನಾತ್ಮಾನಂ" ಎಂದು ಅಭಿಯುಕ್ತ ವಚನವಿರುವುದು. ಪರೋಪಾಶ್ರಯದಿಂದಲೇ ಬದುಕಿ ತಲೆಯೆತ್ತಿಕೊಳ್ಳುವುದು ಈಗಣ ಮನ್ವಂತರಕ್ಕೆ ಅತ್ಯಂತಾಸಂಭವವು. ಸ್ವಸಾಮರ್ಥ್ಯ ಸ್ವಾತಂತ್ರ್ಯ ಬಲದಿಂದಲೇ ಆತ್ಮೋದ್ಧಾರವನ್ನು ಮಾಡಿಕೊಳ್ಳಬೇಕು. ಹಿಂದುಳಿದ ಜನವರ್ಗಗಳಲ್ಲಿ ಏಕಮತ್ಯಬಲವು ದೃಢವಾಗಿ ಸಾಮುದಾಯಿಕ ಪ್ರಯತ್ನದಿಂದ ಆತ್ಮೋದ್ಧಾರ ಕಾರ್ಯವಾಗಬೇಕಲ್ಲದೆ ವಿಭಿನ್ನಪ್ರಯತ್ನಗಳಿಂದ ಎಂದಿಗೂ ಸಾಧ್ಯವಲ್ಲ. ಬೆಳ್ಳಗಿರುವುದೆಲ್ಲಾ ಹಾಲೆಂದು ನಂಬಿ ಮೋಸಹೋಗುವುದಕ್ಕೆ ಇದು ಸಮಯವಲ್ಲ.

ಈಗ ಮುಂದಣ ಆಶ್ವಯುಜಮಾಸದಲ್ಲಿ ನೆರೆಯುವುದಕ್ಕಿರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಶಾಸನಸಭೆಗೆ 4 ಮಂದಿ ಸಭಿಕರನ್ನು ಆ ಸಭೆಯಪಕ್ಷದಿಂದ ಆರಿಸುವ ಕೆಲಸವು ನಡೆಯಬೇಕಾಗಿದೆ. ಶಾಸನಸಭೆಯಲ್ಲಿ ಹಿಂದುಳಿದ ಜನವರ್ಗಗಳ ಪಕ್ಷದಿಂದ ಅವರ ಹಿತಕ್ಕೆ ಸಾಧಕವಾಗಿಯೂ, ಅವರ ಅಭ್ಯುದಯವನ್ನು ಭಂಗಪಡಿಸಬೇಕೆಂದು ಒಡ್ಡಲ್ಪಡುವ ತೊಡಕಿಗೆ ಪ್ರತಿಕ್ರಿಯಾರೂಪವಾಗಿಯೂ, ಕೆಲಸಮಾಡಲು ಶಕ್ತರಾದ ಸಭಿಕರು ತಕ್ಕಷ್ಟುಮಂದಿ ಇಲ್ಲದೆಹೋದರೆ ಎಷ್ಟು ಅನರ್ಥವಾಗುವುದೆಂಬುದನ್ನು ಹೇಳಬೇಕಾಗಿಲ್ಲ. ಅದನ್ನು ಹಿಂದುಳಿದ ಜನವರ್ಗಕ್ಕೆ ಸೇರಿದ ಮತ್ತು ಅವರುಗಳ ಏಳ್ಗೆಯಲ್ಲಿ ಸಾನುಭೂತಿಯುಳ್ಳ ಪ್ರಜಾಪ್ರತಿನಿಧಿಸಭಾ ಸಭಿಕರೆಲ್ಲಾ ಮುಖ್ಯವಾಗಿ ಗಮನಿಸಿ, ಶಾಸನಸಭಾ ಸಭಿಕತ್ವಕ್ಕೆ ಉಮೇದುವಾರರಾಗಿ ನಿಂತಿರುವ ದೊಡ್ಡಮನುಷ್ಯರುಗಳಲ್ಲಿ ಯಾರಿಗೆ ತಮ್ಮ ಓಟನ್ನು ಕೊಟ್ಟರೆ ಸಫಲವಾದೀತೆಂಬುದನ್ನು ಪರದಾಕ್ಷಿಣ್ಯ ಬಲಾತ್ಕಾರಗಳಿಗೀಡಾಗದೆ ಸ್ವಬುದ್ಧಿಯಿಂದ ಪರ್ಯಾಲೋಚಿಸಿ ದೃಢಪಡಿಸಿಕೊಂಡು, ಯಾವುದೊಂದು ಅನಿವಾರ್ಯಗಳಿದ್ದರೂ ತೆರವುಮಾಡಿಕೊಂಡು ಸಭಾಕಾಲಕ್ಕೆ ರಾಜಧಾನಿಗೆ ದಯಮಾಡಿಸಿ, ತಂತಮ್ಮ ಓಟುಗಳನ್ನು ಕೊಟ್ಟು, ಉಳಿದ ಸಭಾಕಾರ್ಯಗಳನ್ನು ನೆರವೇರಿಸಿಕೊಂಡು ಹೋಗುವಲ್ಲಿ ಉದಾಸೀನಮಾಡಬಾರದೆಂದು ಪ್ರಜಾಪ್ರತಿನಿಧಿ ಸಭೆಗೆ ಹೊಸದಾಗಿ ಆರಿಸಲ್ಪಟ್ಟಿರುವ ಪ್ರತಿನಿಧಿ ಮಹಾಶಯರುಗಳಿಗೆಲ್ಲಾ ಈ ಮೂಲಕ ಶ್ರುತಪಡಿಸುತ್ತೇವೆ.

LEGISLATIVE COUNCIL ELECTIONS.

The triennial election to the Mysore Legislative Council is fast approaching and at the ensuing Dasara Session of the Representative Assembly four members have to be elected to the Legislative Council. One would naturally expect that politics and public life would have made a considerable progress during the past three years. But unfortunately it looks as though public enthusiasm and keenness have cooled down to a great extent and seem to suffer from the general depression which is in evidence today in other fields of our activities. Infusing a sense of responsibility into the public bodies by giving them some actual powers would in our opinion improve matters much, and we hope that the Government will place their draft scheme of constitutional reforms before the coming Assembly.

It is quite likely that this year a very large number of candidates will stand for election to the Council. This is inevitable in a country where party system has not yet developed and leadership is not properly distributed between various parties. There is plenty of scope for men to be changing their moods, plans and fields of operations as it suits them and the principles for which one stands could also undergo similar changes. It is also easy for one to pose as the benefactor of the whole people particularly masses though as a matter of fact the latter are hardly in his mind at any time other than that of election, and if they are to be remembered it is only to oppose stoutly their interest. Much as this situation is to be regretted, still there are certain outstanding principles which should guide the voters in the choice of their representatives. The controversy over such just, beneficial liberal and progressive measures as the orders on the Educational Memorandum and the Miller Committee Report and the admission of the Panchamas into Government educational institutions is still fresh in the minds of the public and they have had ample opportunities to discriminate between their friends real and assumed. If there are some who have forgotten the matter, to them we would remind the most important question of the day, namely, the admission of non-Brahmins into the Sanskrit Colleges, and let them find out who are in favour of it and who are not. In advanced democratic countries it is the big national issues on which the seats are contested. For instance at the last presidential election in the United States of America one of the main issues on which the election was fought out was the Prohibition of liquor and the Prohibitionist Mr. Harding was elected by an overwhelming majority. Here the issue to day is the Prohibition of Sanskrit Education to non-Brahmins. We had thought that the war against the Miller Committee Report and the Educational Memorandum was unholy enough. But this one against Sanskrit for non-Brahmins is more unholy. The question is not whether the nation's progress depends entirely on the admission of the non-Brahmins into the two particular Sanskrit institutions in Bangalore and Mysore, but whether such an attitude to close the portals of knowledge, whatever it may be against a whole people is to be tolerated and whether, if so tolerated, it would not pervade every other department of our activities as it has been doing already and blast the country's progress. If the Shastras or Upanishads lay any injunction that other people should not study Vedas, what would these sticklers do if, following the same principle that Brahmins are only to minister the spiritual needs of the people and not to become devotees of Mammon, the industrial, commercial and agricultural Schools are closed against them? Well, we would urge upon the voters to keep this issue in mind when they record their votes, along with of course the other issues which are still before the country, namely, the successful working of the Educational Memorandum and the Miller Committee Report. The country has had enough of schemes and enterprises. Its future prosperity depends on the working of the Memorandum. As for the Miller Committee Report we are painfully reminded of the last words of Mr. C. R. Reddy uttered by him in the Mysore Legislative Council that unless the Government work the measure with earnestness and vigour it would only be like firing a blank cartridge. We do not want men who would speak well on occasions and court sympathy on occasions, but men who would ceaselessly and zealously strive for the good of the people keeping personal vanities in the background and this time we would say that no man who is not in the fullest sympathy with the admission of non-Brahmins into the Sanskrit Colleges unreservedly should be supported. We would also remind the members of the Assembly of the elections which took place last time when late Mr. Basaviah led the House. The co-operation and concerted action that then prevailed will, we hope be kept up this year also for, otherwise, whatever individuals might think there would be more to lose than to gain.

ಸ್ವದೇಶದ ವೃತ್ತಾಂತಗಳು.

ಕರ್ನಾಟಕಸಾಹಿತ್ಯ ಪರಿಷತ್ತಿಗಾಗಿ ತಿಂಗಳಿಗೆ 100 ರೂ. ಗಳಂತೆ ಈ ವರ್ಷವೆಲ್ಲಾ ಸಹಾಯಮಾಡಲು ನಮ್ಮ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ರಾಜಧಾನಿಯಲ್ಲಿ ಕಳೆದ ಬುಧವಾರ 1 ಹದ ಉತ್ತಮವಾದ ಮಳೆಯಾಯಿತು. ಇನ್ನೂ ಮಳೆಬರುವ ಲಕ್ಷಣವಿದೆ. ಸಾಂಕ್ರಾಮಿಕ ರೋಗಾದಿಗಳ ಭಯವೇನೂ ಇಲ್ಲ.

ಮೈಸೂರು ವೈಣಿಕಶಿಖಾಮಣಿ ಮ|| ಶೇಷಣ್ಣನವರ ವೀಣಾವಾದನದ ಕಚೇರಿಯು ಮದ್ರಾಸಿನಲ್ಲಿ ಕಳೆದವಾರ ೨ ಕಡೆ ನಡೆದಿತು ಸಭಿಕರು ಅತ್ಯಾನಂದಪಟ್ಟು ಮರ್ಯಾದಿಸಿದರು.

ಮಿ|| ಎ. ಮಹಮ್ಮದ್ ಸೇಟ್‌ರವರು ತಮ್ಮ ಮತಗುರುಗಳೊಬ್ಬರೊಡನೆ ಬಲೂಚಿಸ್ಥಾನ್ ಅಫ್ಘಾನಿಸ್ಥಾನ್ ದೇಶಗಳನ್ನು ನೋಡಿಕೊಂಡು ಬರುವುದಕ್ಕಾಗಿ ಕಳೆದವಾರ ಪ್ರಯಾಣ ಮಾಡಿದರು.

ಶ್ರೀಮನ್ಮಹಾರಾಜರು ತಮ್ಮ ಪ್ರೈವೇಟ್ ಹುಜೂರು ಸೆಕ್ರಟರಿಗಳೊಡನೆಯೂ ಏಡಿಕಾಂಗ್‌ರೊಡನೆಯೂ ಮುಜರಾಯಿ ಭಕ್ಷಿಯವರೊಡನೆಯೂ ಕುಣಿಗಲು ಹಾಸನಡಿಸ್ಟ್ರಿಕ್ಟು ಮೊದಲಾದ ಕಡೆಗೆ ಸಂಚಾರಕ್ಕೆ ದಯಮಾಡಿಸಿದ್ದಾರೆ.

ಬರುವ ಭಾದ್ರಪದ ಬಹುಳ 21 ಗುರುವಾರದ ದಿವಸ ಸೂರ್ಯಗ್ರಹಣವಾಗುತ್ತದೆ. ಹಗಲು 7-44 ಗಂಟೆಗೆ ಗ್ರಹಣಾರಂಭವಾಗುವುದು. 9-53 ಗಂಟೆಗೆ ಬಿಡುಗಡೆಯು. ಅರ್ಧಭಾಗಕ್ಕಿಂತಲೂ ಸ್ವಲ್ಪ ಮಿಗಿಲಾಗಿಯೇ ಗ್ರಾಸವಾಗುವುದು.

ನವರಾತ್ರಿಯ ಕಾಲದಲ್ಲಿ ರಾಜಧಾನಿಯೊಳಗೆ ಕೂಡುವುದಕ್ಕಿರುವ ಪಂಚಮಸಮ್ಮೇಳನದ ಸಭೆಯ ವೆಚ್ಚಕ್ಕಾಗಿ ಶ್ರೀಮನ್ಮಹಾರಾಜರು 100 ರೂ. ಗಳನ್ನು ಅನುಗ್ರಹಿಸಿರುತ್ತಾರೆ. ಬೆಂಗಳೂರು ಮ್ಯುನ್ಸಿಪಾಲಿಟಿಯವರು 100 ರೂ. ಗಳನ್ನು ಕೊಟ್ಟಿರುತ್ತಾರೆ. ಇನ್ನು ಕೆಲ ಮ್ಯುನ್ಸಿಪಾಲಿಟಿಗಳೂ ಸಹಾಯ ಮಾಡಿವೆ.

ರಾಜಧಾನಿಯ ಮ್ಯುನ್ಸಿಪಲ್ ಆಫೀಸಿನ ಉದ್ಯೋಗಿಗಳಲ್ಲಿ ಇಬ್ಭಾಗವುಂಟಾಗಿ ಅನರ್ಥಕ್ಕಾಸ್ಪದವಾಗಿದೆಯೆಂದು ಕೇಳುತ್ತೇವೆ. ಚೀಫ್ ಆಫೀಸರ ಪಕ್ಷಾಂಧತೆಯು ಇದಕ್ಕೆಲ್ಲಾ ಮೂಲವಾಗಿದೆಯೆಂದು ಅರಿಯುತ್ತೇವೆ. ಪ್ರೆಸಿಡೆಂಟರು ಪ್ರಯತ್ನಿಸಿಯೇ ಆಗಲಿ ಗೌರ್ನಮೆಂಟಿನವರು ಗಮನಿಸಿಯೇ ಆಗಲಿ ಬೇರೊಬ್ಬರನ್ನು ಆ ಸ್ಥಾನಕ್ಕೆ ತರುವುದು ಕ್ಷೇಮಕರವು.

ಬರುವ ತಾ|| 22ನೆ ಶುಕ್ರವಾರದ ದಿವಸ ಶ್ರೀಮನ್ಮಹಾರಾಜರು ಸಿಂಹಾಸನಾರೋಹಣ ಮಾಡುವರು. ತಾ|| 30 ನೆ ಶನಿವಾರ ವಿಜಯದಶಮಿ ಉತ್ಸವವು ಜರಗುವುದು. ಕಳೆದ ವರ್ಷದಂತೆ ಈಸಲ ರೋಗಾದ್ಯುಪದ್ರವಗಳೊಂದೂ ರಾಜಧಾನಿಯಲ್ಲಿಲ್ಲದ ಕಾರಣ ನೋಟಕ್ಕಾಗಿ ಪ್ರಜಾಸ್ತೋಮವು ವಿಶೇಷವಾಗಿ ಸೇರಬಹುದೆಂದೂ, ರೈಲ್ವೆಯಲ್ಲಿ ಮಾಡಿಕೊಟ್ಟಿರುವ ಬಾಡಿಗೆಯ ಸೌಕರ್ಯವು ಅದಕ್ಕೆ ಮತ್ತಷ್ಟು ಅನುಕೂಲಿಸುವುದೆಂದೂ ತೋರುತ್ತದೆ.

ಸಂಸ್ಕೃತಾಭ್ಯಾಸ ವಿಷಯದಲ್ಲಿ ದಿವಾನರ ಬಳಿಗೆ ವೀರಶೈವಸಮಾಜದ ಪರವಾಗಿ ಡೆಪ್ಯುಟೇಷನ್ ಹೋಗಬೇಕೆಂದು ದಾವಣಗೆರೆಯ ಸಭೆಯಲ್ಲಿ ನಿರ್ಧಾರವಾಗಿದ್ದಪ್ರಕಾರಕ್ಕೆ ಕಳೆದ ಶುಕ್ರವಾರದ ದಿವಸ ಬೆಳಗ್ಗೆ ದಿ|| ಬ|| ಕೆ. ಪಿ. ಶೆಟ್ಟರನ್ನು ಮುಂದಿಟ್ಟುಕೊಂಡು ಅನೇಕಸ್ಥಲಗಳ ವೀರಶೈವ ದೊಡ್ಡಮನುಷ್ಯರು ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿವಾನರನ್ನು ಕಂಡು ತಮ್ಮ ಕೋರಿಕೆಯನ್ನು ಶ್ರುತಪಡಿಸಿಕೊಂಡರು. ಅದರ ವಿವರವನ್ನೂ ದಿವಾನರ ಉತ್ತರವನ್ನೂ ಮುಂದಣವಾರದ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ.

ಮಹಾನವಮಿಯ ನೋಟಕ್ಕಾಗಿ ರಾಜಧಾನಿಗೆ ಬಂದು ಹೋಗುವವರಿಗೆ ಮೈಸೂರು ಸಂಸ್ಥಾನಕ್ಕೆ ಸೇರಿದ ಹೊಗೆಬಂಡಿಗಳ ಎಲ್ಲತರಗತಿಯ ಬಾಡಿಗೆಯೂ ಅರ್ಧಮಾಡಲ್ಪಟ್ಟಿದೆ. ಎಂದರೆ ಹೋಗಬರುವ ಬಾಡಿಗೆಗಳೆರಡೂ ಸೇರಿ ಒಂದೇ ಆಗಿರುತ್ತದೆ. ಸೆಪ್ಟಂಬರ್ ತಾ|| 20 ರಿಂದ 30 ರೊಳಗೆ ಈ ಟಿಕೀಟುಗಳು ಸಂಸ್ಥಾನದ ಅಧೀನದಲ್ಲಿರುವ ಲೋಹಮಾರ್ಗಗಳ ಎಲ್ಲ ನಿಲ್ದಾಣಗಳಲ್ಲೂ ಕೊಡಲ್ಪಡುತ್ತವೆ. ಅವುಗಳ ಉಪಯೋಗವು ಅಕ್ಟೋಬರ್ ತಾ|| 7 ರ ವರೆಗೆ ನಡೆಯುತ್ತದೆ. M. S. M. ರೈಲ್ವೆ ಕಂಪೆನಿಯವರಿಗೆ ಸೇರಿ ನಡೆಯುತ್ತಿರುವ ಭಾಗಗಳಲ್ಲಿ ಈ ಏರ್ಪಾಟಿಲ್ಲ. ಆದರೆ ಕುದುರೆಜೂಜು ಮೊದಲಾದುವುಗಳನ್ನು ನೋಡುವುದಕ್ಕಾಗಿ ರಾಜಧಾನಿಗೆ ಹೋಗಿಬರುವವರಿಗೆ 1½ ಛಾರ್ಜನ್ನು ಮಾತ್ರ ಮಾಡಿರುತ್ತಾರೆ.

ರಾಜಧಾನಿಯಲ್ಲಿ ಚೀನಾಜವಳಿ ವರ್ತಕರಾಗಿದ್ದ ಮಿ|| ಈಸಾಸೇಟರು 4-5 ದಿವಸಗಳಿಂದ ಅಸ್ವಸ್ಥರಾಗಿದ್ದು ಕಳೆದ ಗುರುವಾರ ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರು ಹಿಂದೂಸ್ಥಾನಿ ಗಾನಕಲೆಯಲ್ಲಿ ಪ್ರವೀಣರಾಗಿದ್ದು ನ್ಯಾಷನಲ್ ಕಾಂಗ್ರೆಸ್ ಮೊದಲಾದ ಅನೇಕ ಸಭೆಗಳಲ್ಲಿ ಉರ್ದು ಕವನಗಳನ್ನು ಬಹು ರಸವತ್ತಾಗಿ ಹಾಡಿ ಸಭಿಕರನ್ನು ಅತ್ಯಾನಂದಗೊಳಿಸುತ್ತಿದ್ದರು. ಹೈದರಾಬಾದಿನ ನೈಜಾಮರು ಇವರಿಗೆ ಅಸರಫ್ ಮೊಹರಾಗಳನ್ನು ಅಭಿಷೇಕಿಸಿದ್ದರು. ಅನೇಕ ಸುವರ್ಣಪದಕಗಳು ಕೊಡಲ್ಪಟ್ಟಿದ್ದುವು. 35 ವರ್ಷ ವಯಸ್ಸಿನ ಚಿಕ್ಕತನದಲ್ಲೇ ಇವರಿಗೆ ಮರಣವು ಪ್ರಾಪ್ತವಾದುದು ಅವರ ಪರಿಚಿತರಿಗೆಲ್ಲಾ ದುಃಖಕರವಾಗಿದೆ. ರಾತ್ರಿವೇಳೆಯಾದರೂ 2-3 ಸಹಸ್ರ ಜನರು ಸ್ಮಶಾನದವರೆಗೆ ಹೋಗಿ ಅಂತ್ಯಕ್ರಿಯೆಯನ್ನು ನಡೆಯಿಸಿ ಬಂದುದು ಇವರ ಬಹುಜನಪ್ರೀತಿಯನ್ನು ವ್ಯಕ್ತಪಡಿಸಿತು.

ವರ್ತಮಾನ ಸಂಗ್ರಹ.

ಜರ್ಮನಿಯ ಕೈಜರು ಈಗ ಒಬ್ಬ 35 ವರ್ಷದ ವಿಧವೆಯನ್ನು ವರಿಸಿ ಮದುವೆಮಾಡಿಕೊಳ್ಳಲು ನಿಶ್ಚಯಿಸಿರುವರಂತೆ!

ಭರತಖಂಡಕ್ಕೂ ಇಂಗ್ಲೆಂಡಿಗೂ ತಂತಿಯ ಸಹಾಯವಿಲ್ಲದೆ ವಾರ್ತೆಯನ್ನು ಕಳುಹಿಸುವ ಯಂತ್ರಾದಿ ಪ್ರತಿಷ್ಠಾಪನೆಗೆ 185000 ಪೌಂಡು ವೆಚ್ಚ ಹಿಡಿಯವುದಂತೆ.

ಪಾಲಸ್ತೈನಿನಲ್ಲಿ ಮಾಂಡೇಟ್ ಪ್ರಭುತ್ವವು ಕಳೆದ ತಾ|| ೧೭ ರಲ್ಲಿ ಪ್ರಕಟಿಸಲ್ಪಟ್ಟಿತು. ಪ್ರಜೆಗಳು ಅದರ ವಿಷಯದಲ್ಲಿ ತಮ್ಮ ಅಸಮಾಧಾನವನ್ನು ತೋರಿಸುವುದಕ್ಕಾಗಿ ಆ ದಿನವೆಲ್ಲಾ ಅಂಗಡಿಗಳನ್ನು ಮುಚ್ಚಿಬಿಟ್ಟಿದ್ದರು.

ಲೆಫ್ಟಿನೆಂಟ್ ಲಟಿವ್ ಎಂಬುವರು 22¾ ಗಂಟೆ ಹೊತ್ತಿನಲ್ಲಿ 2276 ಮೈಲಿಗಳ ದೂರ ವಿಮಾನದಲ್ಲಿ ಸಂಚಾರಮಾಡಿದರು. ಮಧ್ಯೆ 1 ಸ್ಥಲದಲ್ಲಿ ಮಾತ್ರ ಕಲ್ಲಿದ್ದಲನ್ನು ತುಂಬಿಕೊಳ್ಳಲು 75 ನಿಮಿಷಗಳ ಕಾಲ ವಿಮಾನವು ನಿಂತಿದ್ದಿತು.

ತಮ್ಮ ದೇಶದಲ್ಲಿ ತಿಂಡಿಪೋಕರ ಮೇಲೆ 100ಕ್ಕೆ 40 ರಿಂದ 100ರ ವರೆಗೂ ಆಗುವ ಒಂದು ಹೊಸಕಂದಾಯವನ್ನು ಹಾಕಿ ಅದರಿಂದ ಬರುವ ಉತ್ಪತ್ತಿಯನ್ನು ಬಡವರ ಅನ್ನಾಹಾರಾದಿಗಳಿಗೆ ಉಪಯೋಗಿಸಬೇಕೆಂದು ಯೋಚಿಸಿದ್ದಾರೆ.

ನೈಜಾಮ್ ಪ್ರಭುತ್ವದ ಎಗ್ಸಿಕ್ಯೂಟೀವ್ ಕೌನ್ಸಿಲಿನಲ್ಲಿ ಅಧ್ಯಕ್ಷರಾಗಿದ್ದ ಸರ್ ಆಲಿ ಇಮಾಂರವರು ರಾಜೀನಾಮೆ ಕೊಟ್ಟು ಪಾಟ್ನಾಕ್ಕೆ ಹೋದರು. ಅಲ್ಲಿ ಮರಳಿ ತಮ್ಮ ಪೂರ್ವದ ಹೈಕೋರ್ಟು ನ್ಯಾಯಮೂರ್ತಿ ಪದವಿಯನ್ನು ಸ್ವೀಕರಿಸುವವರಾಗಿದ್ದಾರೆ.

ತುರ್ಕಿಯವರಿಗೆ ಈಗ ಉಂಟಾಗಿರುವ ಜಯದಿಂದ ಮಿತ್ರಮಂಡಲಿಯ ಕೆಲವರಲ್ಲಿ ಆಗಲೇ ಅಸಂತುಷ್ಟಿಯು ಹುಟ್ಟಿದಂತೆ ಕಾಣುತ್ತದೆ. ಮುಂದೆ ತುರುಕರು ವಿಶೇಷ ಪ್ರಬಲರಾದರೆ ಹೇಗೆಂಬ ಚಿಂತೆಯು ಈಗಲೇ ಅವರನ್ನು ಬಾಧಿಸುತ್ತಿದೆ. ಇದಕ್ಕಾಗಿ ಮಿತ್ರಮಂಡಲಿಯವರೇ ಸೇರಿ ಒಂದು ಸಭೆ ನಡೆಯಿಸಿ, ಮುಂದಣ ಕ್ರಮವನ್ನು ನಿರ್ಧರಿಸಿಕೊಳ್ಳಬಹುದೆಂದು ಕಾಣುತ್ತದೆ.

ಸ್ಟೇಟುಕೌನ್ಸಿಲು, ಮತ್ತು ಸಾಮ್ರಾಜ್ಯಶಾಸನಸಭೆ.

ಸಿಮ್ಲಾಪಟ್ಟಣದಲ್ಲಿ ಸ್ಟೇಟ್‌ಕೌನ್ಸಿಲ್ ಸಭೆಯೂ ಸಾಮ್ರಾಜ್ಯಶಾಸನಸಭೆಯೂ ಮೊನ್ನೆವಾರದಲ್ಲಿ ಆರಂಭಗೊಂಡು ನಡೆಯುತ್ತಿವೆ. ಶಾಸನಸಭೆಯನ್ನು ಆರಂಭಿಸುವಾಗ್ಗೆ ವೈಸ್ರಾಯರು ಮಾಡುವ ಭಾಷಣದಲ್ಲಿ ಮುಖ್ಯಮಂತ್ರಿಯವರ ಭಾಷಣದ ವಿಷಯದಲ್ಲಿ ಏನು ಹೇಳುವರೋ ನೋಡಬೇಕೆಂದು ಎಲ್ಲರೂ ಕುತೂಹಲಗೊಂಡಿದ್ದರು. ಇತರ ವಿಷಯಗಳ ಜತೆಗೆ ಈ ವಿಷಯವನ್ನು ಕುರಿತೂ ವೈಸ್ರಾಯರು ಕೆಲವು ಮಾತುಗಳನ್ನಾಡಿದರು. ಆದರೆ ಅದರಲ್ಲಿ ಹೊಸದೇನೂ ಹೇಳಾಗಿಲ್ಲ. "ಸಂಸ್ಕರಣಗಳು ಪರೀಕ್ಷಾರ್ಥವಾದುವುಗಳು ಎಂದು ಮುಖ್ಯಮಂತ್ರಿಯವರು ಆಡಿದ ವಾಕ್ಯಕ್ಕೆ ತಪ್ಪು ಅರ್ಥವನ್ನು ಮಾಡಿಕೊಳ್ಳಬಾರದು. ಸಂಸ್ಕರಣವನ್ನು ಹಿಂದಿರಿಗಿಸಿಕೊಳ್ಳುವ ಉದ್ದೇಶವು ಸಾಮ್ರಾಜ್ಯಪ್ರಭುತ್ವಕ್ಕೆ ಎಂದಿಗೂ ಇಲ್ಲ. ತಾವು ಆ ಅಭಿಪ್ರಾಯದಿಂದ ಆಡಿದುದೇ ಅಲ್ಲವೆಂದು ಈಚೆಗೆ ನನಗೆ ಮುಖ್ಯಮಂತ್ರಿಯವರು ತಿಳಿಯಪಡಿಸಿಯೂ ಇದ್ದಾರೆ. ಕ್ರಮಾಂತರದಿಂದ ಬಾಧ್ಯತಾಯುತ ಪ್ರಭುತ್ವವನ್ನು ಭರತಖಂಡಕ್ಕೆ ಕೊಡುವುದರಲ್ಲಿ ಹಿಂದೆ ಸಾರ್ವಭೌಮರಿಂದ ಮಾಡಲ್ಪಟ್ಟಿರುವ ವಾಗ್ದಾನಕ್ಕೆ ಇದೇನೂ ವಿರುದ್ಧವಲ್ಲ. ಮಂತ್ರಿಯವರ ಭಾಷಣವನ್ನೇ ಹಿಡಿದು ಖಂಡಿಸುತ್ತ ಕುಳಿತುಕೊಳ್ಳುವುದು ನಿಷ್ಫಲ. ನನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟಿರುವುದೂ ಕೂಡ ಅಂಥ ಬಾಧ್ಯತಾಯುತ ಪರಿಪಾಲನವನ್ನು ಭಾರತೀಯರು ಪಡೆದುಕೊಳ್ಳುವಂತೆ ಮಾಡಲು ಸಹಾಯಗೊಳಿಸುವುದಕ್ಕಾಗಿಯೇ. ಆದರೆ ಆ ಪ್ರಭುತ್ವ ಬಾಧ್ಯತೆಯು ಯಾವಾಗ ಹೇಗೆ ಕೊಡಲ್ಪಡುವುದು, ಅದರ ಅಭಿವೃದ್ಧಿಯು ಹೇಗೆ ಎಂಬುದೇ ನೊದಲಾದ ವಿಷಯವನ್ನೆಲ್ಲಾ ಪಾರ್ಲಿಮೆಂಟಿನವರು ನಿರ್ಧರಿಸುವರು. ಆ ನಿರ್ಧಾರವು ಭಾರತೀಯರು ತೋರಿಸುವ ಸಹಕಾರದ ಮೇಲೂ ಶಾಸನಸಭಾಸಭಿಕರು ತೋರಿಸುವ ಬಾಧ್ಯತೆಯ ಮೇಲೂ ಆಧಾರಪಟ್ಟುಕೊಂಡಿರುವುದು. ಭರತಖಂಡದ ಭವಿಷ್ಯದ್ಭಾಗ್ಯಕ್ಕೆ ಇದೇ ಹದಿಯು. ದೇಶದಲ್ಲಾದರೊ ಕೆಲವರು ಈಗಲೇ ತಮಗೆ ಸಂಸ್ಕರಣದಲ್ಲಿ ಹೇಳಲ್ಪಟ್ಟಿರುವ ಅಧಿಕಾರ ಬಾಧ್ಯತೆಯೆಲ್ಲಾ ಬಂದುಬಿಡಬೇಕೆಂದು ಕೇಳುತ್ತ ಚಳವಳ ಮಾಡುತ್ತಿದ್ದಾರೆ. ಬುದ್ಧಿಪೂರ್ವಕವಾಗಿ ಪ್ರಭುತ್ವಕ್ಕೆ ಆಟಂಕಪಡಿಸುತ್ತಿದ್ದಾರೆ. ಜಾತಿದ್ವೇಷವನ್ನು ಬೆಳೆಯಿಸುತ್ತಿದ್ದಾರೆ. ಈ ಚರ್ಯೆಯು ಪಾರ್ಲಿಮೆಂಟಿನವರ ಮನಸ್ಸನ್ನು ಕೆಡಿಸಿಬಿಡುವುದು. ಅದರಿಂದ ಭರತಖಂಡದ ಪರಿಪಾಲನಾಭ್ಯುದಯಕ್ಕೆ ಭಂಗವುಂಟಾಗುವುದು. ಅದುಕಾರಣ ಅಂಥ ಅಸಹಾಯ ಪಕ್ಷದವರ ಆಟವು ನಡೆಯದಂತೆ ಮಿತವಾದಿಗಳು ಕೆಲಸಮಾಡಿ ಸರ್ಕಾರಕ್ಕೆ ಸಹಾಯಗೊಳಿಸುತ್ತ ಬರಬೇಕು" ಎಂಬ ಅಭಿಪ್ರಾಯವನ್ನು ಸೂಚಿಸಿದರು. ಮುಖ್ಯಮಂತ್ರಿಯವರ ಭಾಷಣದಲ್ಲಿ ಕಂಡ ಇನ್ನೊಂದು ಮುಖ್ಯವಾಕ್ಯಕ್ಕೆ ಎಂದರೆ "ಭರತಖಂಡದ ಪರಿಪಾಲನೆಗೆ ಆಂಗ್ಲೋದ್ಯೋಗಿಗಳು ಉಕ್ಕಿನ ಪಂಜರದಂತೆ ಎಂದೆಂದಿಗೂ ರಕ್ಷಕರಾಗಿರತಕ್ಕವರು" ಎಂದು ಹೇಳಿರುವ ಮಾತಿನ ಮೇಲೆ ಭಾರತೀಯರು ಮಾಡುತ್ತಿರುವ ಆಕ್ಷೇಪಕ್ಕೆ ವೈಸ್ರಾಯರಿಂದ ಯಾವ ಪ್ರತ್ಯುತ್ತರವೂ ಬರಲಿಲ್ಲ.

೬ನೆ ತಾರೀಖಿನಲ್ಲಿ ಕೂಡಿದ್ದ ಸ್ಟೇಟ್ ಕೌನ್ಸಿಲ್ ಸಭೆಯಲ್ಲಿ ಪ್ರೊ॥ ಕಲೆಯವರು—"ಮುಖ್ಯಮಂತ್ರಿಯವರು ಕಾಮನ್ಸ್‌ಪಾರ್ಲಿಮೆಂಟಿನಲ್ಲಿ ಭರತಖಂಡದ ವಿಷಯವಾಗಿ ನುಡಿದ ವಾಕ್ಯಗಳಿಂದ ಭಾರತೀಯ ಪ್ರಜೆಗಳಿಗೆ ಅತ್ಯತಿಶಯವಾದ ಆಶಾಭಂಗವೂ ದೊಡ್ಡ ಅನುಮಾನವೂ ಉಂಟಾಗಿದೆಯೆಂದು ಸ್ಟೇಟ್ ಸೆಕ್ರೆಟರಿಯವರ ಮೂಲಕ ಆಂಗ್ಲಪ್ರಭುತ್ವಕ್ಕೆ ತಿಳಿಯಪಡಿಸಬೇಕೆಂದು ಗೌರ್ನರ್‌ಜನರಲ್ ಸಂಘದವರನ್ನು ಸ್ಟೇಟ್ ಕೌನ್ಸಿಲು ಕೋರುತ್ತದೆ" ಎಂಬ ತೀರ್ಮಾನವನ್ನು ಪ್ರತಿಪಾದಿಸಿದರು. ಇದನ್ನು ಸಮರ್ಥಿಸುವ ವಿರೋಧಿಸುವ ಭಾಷಣಗಳು ಅನೇಕವಾಗಿ ನಡೆದುವು. ಪ್ರಭುತ್ವಪಕ್ಷದಿಂದ ಸರ್ ವಿಲಿಯಂವಿನ್‌ಸೆಂಟ್‌ರವರು ಭಾಷಣಮಾಡುವಾಗ್ಗೆ—ಈ ತೀರ್ಮಾನವನ್ನು ಹಿಂದೆಗೆದುಕೊಳ್ಳುವುದು ವಿಹಿತವೆಂತಲೂ, ಭರತಖಂಡದ ಭವಿಷ್ಯದ್ ಭಾಗ್ಯೋದಯಕ್ಕೆ ಆಂಗ್ಲ ದೇಶೀಯರ ಸದ್ಭಾವ ಸಹಾನುಭೂತಿಗಳು ಅತ್ಯವಶ್ಯಕವೆಂತಲೂ, ಕೋಪತಾಪಗಳಿಂದ ಇಲ್ಲಿ ಯಾವತೆರದ ಪ್ರಸಂಗವನ್ನು ಮಾಡಿದರೂ ಅದು ಆಂಗ್ಲರ ಸದ್ಭಾವವನ್ನು ತೊಲಗಿಸಿ ಹಾನಿಯುಂಟುಮಾಡುವುದೆಂತಲೂ ಬೆದುರಿಕೆಯನ್ನು ಹಾಕಿದುದಲ್ಲದೆ, ಈ ದೇಶದಲ್ಲಿ ಅಸಹಾಯವಾದಿಗಳು ೨ ವರ್ಷದಿಂದ ಮಾಡುತ್ತಿರುವ ಹಾವಳಿಯನ್ನು ಕಠಿನ ವಚನಗಳಿಂದ ಧಿಕ್ಕರಿಸಿ, ದೇಶದ ಸಕಲಾಭ್ಯುದಯಕ್ಕೂ ಗಾಂಧಿಯವರು ಪರಮಶತ್ರುಗಳಾಗಿದ್ದಾರೆಂದೂ, ದೇಶೀಯರು ವೈಸ್‌ರಾಯರು ಮಾಡಿದ ಭಾಷಣದಿಂದ ತಮ್ಮ ಸಂಶಯವನ್ನು ಪರಿಹರಿಸಿಕೊಂಡು ಇನ್ನು ಮುಂದೆ ಆ ವಿಷಯವನ್ನು ಎತ್ತದೆ ಇರುವುದು ವಿಹಿತವೆಂದೂ ಮೊದಲಾಗಿ ದೀರ್ಘ ಭಾಷಣವನ್ನು ಮಾಡಿ, ಸಭಿಕರಲ್ಲಿ ಬಹು ಜನರ ಮನಸ್ಸನ್ನು ತಿರುಗಿಸಿಬಿಟ್ಟರು. ಆದರ ಮೇಲೆ ತೀರ್ಮಾನಕ್ಕೆ ಸಭಿಕರ ಅನುಮತಿಯನ್ನು ಕೇಳಲು, ಅಧಿಕ ಸಂಖ್ಯಾಕರು ಅಸಂಮತಿಪಟ್ಟುದರಿಂದ ತೀರ್ಮಾನವು ಬಿದ್ದುಹೋಯಿತು.

ತಾ॥ 8 ರಲ್ಲಿ ನೆರೆದಿದ್ದ ಸಾಮ್ರಾಜ್ಯ ಶಾಸನ ಸಭೆಯಲ್ಲಿ ಮ॥ ಅಗ್ನಿಹೋತ್ರಿಯವರು—"ಮುಖ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ಹೇಳಿದಂತೆ ಸಂಸ್ಕರಣಗಳು ಪರೀಕ್ಷಾರ್ಥಗಳಲ್ಲ, ಸಾರ್ವಭೌಮರ 1917ನೆ ವರ್ಷದ ಪ್ರಕಟನೆಯೇ ಶಾಶ್ವತವು ಎಂಬುದಾಗಿ ಮುಖ್ಯಮಂತ್ರಿಯವರೂ ಸ್ಟೇಟ್ ಸೆಕ್ರೆಟರಿಯವರೂ ಮತ್ತೆ ಪ್ರಕಟಿಸಬೇಕು; ಭರತಖಂಡಕ್ಕೆ ಅಧಿನಿವೇಶಗಳಿಗಿರುವಂಥ ಸ್ವಪರಿಪಾಲನವನ್ನು ಬೇಗನೆ ಕೊಡಬೇಕು ಎಂದು ಈ ಸಭೆಯವರು ಕೋರುತ್ತಾರೆ" ಎಂಬ ತೀರ್ಮಾನವನ್ನು ಉಪಪಾದಿಸಿದರು. ಇದರ ಮೇಲೂ ಅನುಕೂಲ ಪ್ರತಿಕೂಲ ಚರ್ಚೆಯು ಬಹಳವಾಗಿ ನಡೆದಿತು. ಸರ್ ವಿನ್ಸೆಂಟ್‌ರವರು ಈ ವಿಷಯವಾಗಿ ಮಾತನಾಡುವಾಗ್ಗೆ—ಮುಖ್ಯ ಮಂತ್ರಿಯವರ ಮಾತನ್ನೇ ಹಿಡಿದು ಖಂಡಿಸುತ್ತಲಿರುವುದು ಕೃತಘ್ನತೆಯಾಗುವುದೆಂದೂ, ಈ ತೀರ್ಮಾನವನ್ನು ಅಂಗೀಕರಿಸಿದರೆ ಆಂಗ್ಲದೇಶ ಪ್ರಭುತ್ವದ ಅಧ್ಯಕ್ಷನನ್ನೇ ಹಿಯ್ಯಾಳಿಸಿದಂತಾಗುವುದೆಂದೂ, ಭರತಖಂಡಕ್ಕೆ ಸ್ವರಾಜ್ಯ ಪ್ರಾಪ್ತಿಯಾಗಲು ಒಂದನೆ ಬಾಹುಬಲ 2ನೆ ಪಾರ್ಲಿಮೆಂಟಿನ ಅನುಗ್ರಹವೆಂಬ ಎರಡೇ ಮಾರ್ಗಗಳಿರುವುವೆಂದೂ, ಅಂಥ ಅನುಗ್ರಹವು ಬೇಕಾಗಿದ್ದರೆ ಆಂಗ್ಲ ಜನತೆಗೆ ಆಗ್ರಹವನ್ನು ಹುಟ್ಟಿಸಬಾರದೆಂದೂ, ಇದುವರೆಗೆ ಈ ದೇಶದಲ್ಲಿ ಜರುಗಿದ ಚರ್ಯೆಗಳಿಂದ ಆಂಗ್ಲದೇಶೀಯರಿಗೆ ಆಗ್ರಹವುಂಟಾಗಿರುವುದೆಂದೂ, ಈಗ ಅವರ ಮನಸ್ಸನ್ನು ನಾವು ಶಾಂತಿಪಡಿಸಬೇಕಾಗಿರುವುದೆಂದೂ, ಇಂಥ ಸ್ಥಿತಿಯಲ್ಲಿ ಈ ತೀರ್ಮಾನವನ್ನು ಮಾಡುವುದರಿಂದ ಉರಿಯುವುದರ ಮೇಲೆ ಮತ್ತಷ್ಟು ಉಪ್ಪನ್ನು ಹಾಕಿದಂತಾಗುವುದೆಂದೂ, 1921ನೆ ಆಗಸ್ಟ್ ತಾ॥ 20ರಲ್ಲಿ ಮಾಡಿದ ಸಾರ್ವಭೌಮ ಪ್ರಕಟನೆಯು ಅಚ್ಯುತವಾದ ಶಿಲಾಶಾಸನವಾಗಿರುವುದೆಂದೂ, ಮುಖ್ಯಮಂತ್ರಿಯವರ ಭಾಷಣವನ್ನು ನಂಬಿ ಹೋರಾಡುವ ನೀವು ಅವರು ವೈಸ್ರಾಯರಿಗೆ ಕಳುಹಿಸಿಕೊಟ್ಟಿರುವ ತಂತ್ರೀವಾರ್ತೆಯನ್ನು ಏತಕ್ಕೆ ನಂಬಕೂಡದೆಂದೂ, ಇವನ್ನೆಲ್ಲಾ ಸಭೆಯವರು ಗಮನಿಸಿ ದೇಶಕ್ಷೇಮಕ್ಕೆ ಭಂಗಕರವಾಗದಂತೆ ನಡೆದುಕೊಳ್ಳಬೇಕೆಂದೂ, ರಷ್ಯಾ ಆಸ್ಟ್ರಿಯಾ ದೇಶಗಳಲ್ಲಿ ಇದುವರೆಗಿದ್ದ ಪ್ರಭುತ್ವವನ್ನು ತೊಲಗಿಸಿದುದರಿಂದ ಈಗ ಅವಕ್ಕೆ ಯಾವ ಸ್ಥಿತಿಯು ಪ್ರಾಪ್ತವಾಗಿರುವುದೋ ಭರತಖಂಡದಲ್ಲಿ ಸಿವಿಲ್ ಸರ್ವೆಂಟರನ್ನೆಲ್ಲಾ ತೊಲಗಿಸಿಬಿಟ್ಟರೆ ಅದೇ ಸ್ಥಿತಿಯುಂಟಾಗುವುದೆಂಬ ಭೀತಿಯಿಂದ ಮುಖ್ಯಮಂತ್ರಿಯವರು ಈ ದೇಶಕ್ಕೆ ಅಂಥ ಪ್ರಮಾದವು ಉಂಟಾಗಬಾರದೆಂದು ಎಚ್ಚರಿಸುವುದಕ್ಕಾಗಿ ಅಂಥ ಮಾತನ್ನಾಡಿರಬೇಕೆಂದೂ, ಭಾರತೀಯರನ್ನು ಹೆಚ್ಚುಹೆಚ್ಚಾಗಿ ಸರ್ಕಾರಿ ಅಧಿಕಾರಕ್ಕೆ ಸೇರಿಸಲು ಅಭ್ಯಂತರವೇನೂ ಇಲ್ಲವೆಂದೂ, ಲೋಹಪಂಜರವೆಂಬ ಮಾತಿನಲ್ಲಿ ಆಂಗ್ಲಲೋಹದೊಡನೆ ಭಾರತಲೋಹವೂ ಸೇರಿಯೇ ಇರುವುದೆಂದೂ ಬೋಧಿಸಿದುದಲ್ಲದೆ, ಆಂಗ್ಲೋದ್ಯೋಗಿಗಳನ್ನೆಲ್ಲಾ ಈ ದೇಶವನ್ನು ಬಿಟ್ಟು ಹೋಗಬೇಕೆಂದು ನೀವು ಕೋರುವಿರಾ? ಕೂಡಲೇ ಸಂಪೂರ್ಣ ಸ್ವಪರಿಪಾಲನವನ್ನು ಪಡೆಯುವುದಕ್ಕೆ ಭರತಖಂಡವು ಸಿದ್ಧವಾಗಿದೆಯೆ? ಇದಕ್ಕೆ ಭೂದಳ ನೌಕಾದಳಗಳು ಇರುವುವೆ? ಓಟರುಗಳು ತಕ್ಕಷ್ಟು ವಿದ್ಯಾವಂತರಾಗಿರುವರೆ? ಜನಸಾಮಾನ್ಯಕ್ಕೂ ರಾಜಕೀಯವ್ಯವಸ್ಥಾಜ್ಞಾನವುಂಟಾಗಿದೆಯೆ? ಅಧಿನಿವೇಶ ರಾಜ್ಯಗಳಲ್ಲಿರುವಂತೆ ಇಲ್ಲಿಯ ಸಾಮಾನ್ಯಪ್ರಜೆಗಳು ಪೌರಬಾಧ್ಯತೆಯನ್ನು ಅರಿತಿರುವರೆ? ಜಾತಿಮತಮಾತ್ಸರ್ಯಗಳೂ ಭಾಷಾಭೇದಗಳೂ ಅಳಿದಿರುವುವೆ? ಎಂದು ಮೊದಲಾಗಿ ಪ್ರಶ್ನೆಗಳನ್ನು ಹಾಕಿದರು. ಮತ್ತು ನೀವುಗಳು ಈ ತೀರ್ಮಾನವನ್ನು ಅನುಮೋದಿಸಿದರೆ ಆಂಗ್ಲದೇಶದವರೊಡನೆ ವಿರೋಧ ಹುಟ್ಟುವುದು. ಅಸಹಾಯವಾದಿಗಳಿಗೆ ಪ್ರೋತ್ಸಾಹವಾಗುವುದು. ಅವೆರಡೂ ಹಾನಿಕರಗಳೇ ಎಂದು ಬೆದರಿಕೆಯನ್ನೂ ಹಾಕಿದರು. ಇದರಮೇಲೆ ಸ್ವಲ್ಪ ಸವರಣೆಯಾಯಿತು. ಕಡೆಗೆ ತೀರ್ಮಾನಕ್ಕೆ 48 ಮಂದಿ ಅನುಕೂಲವಾಗಿಯೂ 34ಮಂದಿ ಪ್ರತಿಕೂಲವಾಗಿಯೂ ಅನುಮತಿಯನ್ನು ಕೊಟ್ಟರು. ತೀರ್ಮಾನವೇನೋ ಗೆದ್ದಿತು. ಆದರೆ ಇದನ್ನು ಗೌರ್ನರ್ ಜನರಲ್‌ರವರು ಒಪ್ಪದೆಹೋದರೆ ಫಲವೇನು? ಮದರಾಸು, ಬಂಗಾಳಾ, ಬೊಂಬಾಯಿ, ಮಧ್ಯಪ್ರಾಂತದ ಶಾಸನಸಭೆಗಳಲ್ಲಿ ಮುಖ್ಯಮಂತ್ರಿಯವರ ಭಾಷಣದ ಮೇಲೆ ಚರ್ಚೆನಡೆಯಿಸಲಿಕ್ಕೆ ಅಲ್ಲಲ್ಲಿಯ ಗೌರ್ನರುಗಳು ಅನುಮತಿಯನ್ನೇ ಕೊಡಲಿಲ್ಲ. ಕೊಟ್ಟು ಚರ್ಚೆನಡೆದಿದ್ದರೂ ಆಗುವ ಸೌಭಾಗ್ಯವೇನು? ಅಂತೂ ಇದುವರೆಗೆ ಭರತಖಂಡದಲ್ಲಿ ಮುಖ್ಯಮಂತ್ರಿಯವರ ಭಾಷಣದಮೇಲೆ ನಡೆದಿರುವ ವ್ಯಾಖ್ಯಾನಗಳಿಂದ ಮುಖ್ಯಮಂತ್ರಿಯವರಿಗೆ ಜ್ಞಾನೋದಯವಾಗದೆ ಇಲ್ಲ. ಅದು ಅನಾಲೋಚನೆಯಿಂದ ದುಡುಕಿಮಾಡಿದ ಭಾಷಣವೆಂದೂ, ಹಾಗೆ ಆಡದೆ ಇದ್ದರೆ ಚೆನ್ನಾಗಿದ್ದಿತೆಂದೂ ಅವರಿಗೆ ತೋಚದೆ ಇರಲಾರದು. ಮುಂದಾದರೂ ಇಂಥ ದುಡುಕಿನ ಮಾತುಗಳು ಅವರ ಬಾಯಿಂದ ಉರುಳದಂತೆ ಈಗಣ ಭಾರತ ಚಳವಳಿಯು ಅವರನ್ನು ಎಚ್ಚರಿಸದೆ ಬಿಟ್ಟಿಲ್ಲ.

ಗ್ರೀಕು ತುರ್ಕಿ ಯುದ್ಧ.

ಗ್ರೀಕು ತುರ್ಕಿ ಸಂಧಿ ಸಮಸ್ಯೆಯನ್ನು ಪರಿಷ್ಕರಿಸುವುದಕ್ಕಾಗಿ ಇಟಲಿಗೆ ಸೇರಿದ ವೆನಿಸ್ ಪಟ್ಟಣದಲ್ಲಿ ಈ ತಿಂಗಳ ಕೊನೆಯೊಳಗೆ ಮಿತ್ರಮಂಡಲಿಯವರು ಒಂದು ಸಭೆಯನ್ನು ಮಾಡುವವರಾಗಿದ್ದಾರೆ. ಈ ವಿಷಯದಲ್ಲಿ ಇಂಗ್ಲೀಷರು ತಿಳಿಯಪಡಿಸಿದ್ದ ಸೂಚನೆಗಳಿಗೆಲ್ಲಾ ಫ್ರೆಂಚರು ಒಪ್ಪಿಕೊಂಡರಾದರೂ, ಗ್ರೀಕರು ಮೊದಲು ಆಸ್ಯಾಮೈನರನ್ನು ಬಿಟ್ಟು ಹೋದಲ್ಲದೆ ಈ ಸಂಧಿ ಪರಿಷ್ಕಾರವಾಗಕೂಡದೆಂದು ಸೂಚಿಸಿದ್ದರು. ಅದಕ್ಕೆ ಇಂಗ್ಲೀಷರು ಒಪ್ಪಲಿಲ್ಲ. ಆದರೆ ದೈವಯೋಗದಿಂದ ಗ್ರೀಕರೇ ಆಸ್ಯಾಮೈನರನ್ನು ಬಿಟ್ಟುಹೋಗುವ ಅವಸ್ಥೆ ಬಂದಿರುತ್ತದೆ. ಅಂಗೋರಾ ತುರ್ಕಿ ಸೈನ್ಯದ ಪ್ರತಾಪವು ಬಹಳವಾಗಿ ಗ್ರೀಕರು ನೂರಾರು ಮೈಲಿಯ ಪ್ರದೇಶವನ್ನು ಬಿಟ್ಟು ಸೋತು ಓಡಿಹೋದರು. ಹೋಗುವಾಗ ದಾರಿಯಲ್ಲಿ ಪುರಗ್ರಾಮಗಳನ್ನೆಲ್ಲಾ ಸುಟ್ಟುಹೋಗಿದ್ದಾರೆ. ಗ್ರೀಕ್ ಸೈನ್ಯಕ್ಕೆ ತುಂಬಾ ನಷ್ಟವು ಉಂಟಾಯಿತು. "ತಮ್ಮ ಮುಖ್ಯ ಸೈನ್ಯವು ಸೋತುದಲ್ಲದೆ ೨ ಭಾಗಮಾಡಲ್ಪಟ್ಟಿತು. ಮತ್ತು ಉತ್ತರದ ಸೈನ್ಯವು ಸಂಪೂರ್ಣವಾಗಿ ಸೋತು ಚೆಲ್ಲಾಪಿಲ್ಲಿಯಾಗಿ ಹೋಯಿತು" ಎಂದು ಗ್ರೀಕ್ ಪ್ರಭುತ್ವದವರೇ ಪ್ರಕಟಿಸಿಕೊಂಡಿದ್ದಾರೆ. ಎಸ್ಕಿಷರ್ ಎಂಬ ಪಟ್ಟಣವನ್ನು ತುರುಕರು ವಶಪಡಿಸಿಕೊಂಡರು. ಯುಷಕ್ ಪಟ್ಟಣ ಪ್ರಾಂತದಲ್ಲಿ ತಮ್ಮ ಸೈನ್ಯವನ್ನು ಕ್ರೋಢೀಕರಿಸಿ ಆ ಪರ್ವತ ಪ್ರಾಂತದಲ್ಲಿ ತುರುಷ್ಕ ಸೈನ್ಯದ ಆಗಮನವನ್ನು ತಡೆಯಬೇಕೆಂದು ಗ್ರೀಕರು ಸನ್ನಾಹ ಮಾಡಿಕೊಂಡಿದ್ದರು. ಅದೂ ಸಫಲವಾಗಲಿಲ್ಲ. ಯುಷಕ್ ಪಟ್ಟಣವನ್ನೂ ತುರುಕರು ಹಿಡಿದರು. ಮಿತ್ರಮಂಡಲಿ ಹೈಕಮಿಷನರಿಗೆ ಗ್ರೀಕ್ ಕಮಿಷನರರಾದ ಸ್ಟೆರ್ಜಿಯಾಡ್ಸ್‌ರವರು ಒಂದು ಪತ್ರವನ್ನು ಬರೆದು, ಅದರಲ್ಲಿ "ತಾವು ಆಸ್ಯಾಮೈನರನ್ನು ಶಾಂತವಾಗಿ ಬಿಟ್ಟು ಬಿಟ್ಟುಬಿಡುವುದಕ್ಕೂ ತಾತ್ಕಾಲಿಕ ಸಂಧಿಯನ್ನು ಮಾಡಿಕೊಳ್ಳಲಿಕ್ಕೂ ಒಪ್ಪುತ್ತೇವೆ" ಎಂದು ತಿಳಿಯಪಡಿಸಿಕೊಂಡರು. ತುರುಕರಿಗೆ ಈಗ ಉಂಟಾಗಿರುವ ಜಯದಿಂದ ತುರುಷ್ಕ ಪ್ರಪಂಚವೆಲ್ಲಾ ಉಬ್ಬಿಹೋಗುವುದು ಸ್ವಭಾವವಾಗಿದೆ. ಕಳೆದ ಶುಕ್ರವಾರದ ದಿವಸ ಎಲ್ಲಕಡೆಯ ತುರುಷ್ಕರೂ ಅಂಗೋರಾದ ಕಮಾಲ್‌ಪಾಷಾರವರಿಗೆ ಜಯವನ್ನನುಗ್ರಹಿಸಬೇಕೆಂದು ಪ್ರಾರ್ಥನೆಯನ್ನು ಸಲ್ಲಿಸಬೇಕೆಂದು ಯಾವದ್ಭಾರತ ಖಿಲಾಪತ್ ಸಂಘದವರು ಪ್ರಕಟಿಸಿದ್ದ ಪ್ರಕಾರ ಹಲವು ಕಡೆ ಹಾಗೆಯೇ ನಡೆಯಿಸಲ್ಪಟ್ಟಿತು. ಅಂಗೋರಾ ಸೈನ್ಯಕ್ಕೆ ಧನಸಾಹಾಯ್ಯವು ಕೂಡ ಭಾರತ ಮಹಮ್ಮದೀಯರಿಂದ ನಡೆಯಿಸಲ್ಪಟ್ಟಿದೆ. ತುರ್ಕಿ ಸೈನ್ಯದಲ್ಲಿ ಈಗಣ ನಾಗರಕ ಯುದ್ಧ ಸಾಮಗ್ರಿಗಳೆಲ್ಲಾ ಸಮೃದ್ಧವಾಗಿರುವುದಲ್ಲದೆ ಸಮರ್ಥರಾದ ಸೇನಾಪತಿಗಳು ಅವರ ಸೈನ್ಯಗಳನ್ನು ನಡೆಯಿಸುತ್ತಿದ್ದಾರಂತೆ. 2½ ಲಕ್ಷ ಸೈನ್ಯವು ಈಗ ಇವರ ಕಡೆಯಲ್ಲಿದೆ. ಸ್ಮಿರ್ನಾವನ್ನು ಕೂಡ ಗ್ರೀಕ್ ಸೈನ್ಯಗಳು ಬಿಟ್ಟು ತೊಲಗಿದುವೆಂದು ಗೊತ್ತಾಗುತ್ತದೆ. ತುರುಕರ ಮುಂದೆ ಪ್ರತಿಭಟಿಸಲು ಅವರಿಗೆ ಶಕ್ತಿಯಿಲ್ಲದೆ ಹೋದುದೇ ಇದಕ್ಕೆ ಕಾರಣ. ತುರ್ಕಿ ಸೈನ್ಯಗಳು ತಾ॥ 8 ರಲ್ಲಿ ಸ್ಮಿರ್ನಾವನ್ನೂ ಕೂಡ ಆಕ್ರಮಿಸಿಕೊಂಡವು. ಅಲ್ಲಿದ್ದ ತಮ್ಮ ಶಿಬಿರವನ್ನು ಗ್ರೀಕರು ಮಿಟಿಲೀನ್ ಪಟ್ಟಣಕ್ಕೆ ಸಾಗಿಸಿದರು. ಪುರವೀಥಿಗಳಲ್ಲಿ ಅಮೇರಿಕಾ ಇಂಗ್ಲೀಷ್ ಫ್ರೆಂಚ್ ಸೈನಿಕರು ಆಯುಧಸಮೇತರಾಗಿ ಪ್ರಜಾರಕ್ಷಣೆಯನ್ನು ಮಾಡುತ್ತಿದ್ದರು. ತುರ್ಕಿ ಸೈನ್ಯವು ಸ್ಮಿರ್ನಾಕ್ಕೆ ಮೊದಲು ನುಗ್ಗಿದಾಗ ಒಳಗಿದ್ದ ಗ್ರೀಕರೂ ಆರ್ಮೀನಿಯನ್ನರೂ ಇವರ ಮೇಲೆ ಯದ್ವಾತದ್ವಾ ತುಪಾಕಿಗಳನ್ನು ಹಾರಿಸಿದರು. ಆದರೆ ಅದರ ಪ್ರತಿಕ್ರಿಯೆಗೆ ತುರ್ಕಿ ಸೇನಾಪತಿಯು ತನ್ನ ಸೈನ್ಯಕ್ಕೆ ಅಪ್ಪಣೆಮಾಡದೆ ಶಾಂತಿಯನ್ನೇ ತೋರಿಸಿದರು. ಈಗ ಆ ಪಟ್ಟಣವು ತುರುಕರ ವಶವಾಗಿದೆ. ಸಮುದ್ರದವರೆಗೂ ಇರುವ ತಮ್ಮ ಪ್ರದೇಶವನ್ನೆಲ್ಲಾ ಹಿಡಿಸಿಕೊಂಡು ಶತ್ರುಗಳನ್ನು ಆಚೆಗಟ್ಟಿಬಿಡಬೇಕೆಂಬುದೇ ಅಂಗೋರಾ ತುರ್ಕಿಯವರ ಸಂಕಲ್ಪವಾಗಿದೆಯಂತೆ. ಬ್ರೂಸಾಪಟ್ಟಣವನ್ನೂ ಇವರುಹಿಡಿದುಕೊಂಡರು. ಪರದೇಶದ ಆಕ್ರಮಣೇಚ್ಛೆಯು ಇವರಿಗೆ ಇರುವುದಿಲ್ಲ. ತಮ್ಮದನ್ನು ತಾವು ಉಳಿಯಿಸಿಕೊಳ್ಳಬೇಕೆಂಬುದೇ ಇವರ ಸಂಕಲ್ಪ. ಥ್ರೇಸು, ಆಡ್ರಿಯಾನೋಪಲ್ಲು, ಕಾನ್‌ಸ್ಟಾಂಟಿನೋಪಲ್ಲು ಇವುಗಳು ಪರಸಂಬಂಧವಿಲ್ಲದೆ ತುರ್ಕಿಯ ಸ್ವಾತಂತ್ರ್ಯಕ್ಕೊಳಪಟ್ಟಿರುವಂತೆ ಆಗಬೇಕೆಂಬುದು ಇವರ ಹೇಳಿಕೆ. ಈಗ ತಾತ್ಕಾಲಿಕ ಸಂಧಿಯಾಗಬೇಕಾದರೆ ಗ್ರೀಕರು ಆಸ್ಯಾಮೈನರನ್ನೆಲ್ಲಾ ಸಂಪೂರ್ಣವಾಗಿ ಬಿಟ್ಟು, ತಮಗೆ ಯುದ್ಧನಷ್ಟಪರಿಹಾರವನ್ನು ಕೊಡಬೇಕೆಂಬುದು ಕಮಾಲ್‌ಪಾಷಾರವರ ಅಭಿಪ್ರಾಯ. ಆಸ್ಯಾಮೈನರಿಂದ ದಿಕ್ಕುಗೆಟ್ಟು ಓಡಿಬಂದ 5 ಲಕ್ಷ ಮಂದಿ ಶರಣಾಗತರು ಸ್ಮಿರ್ನಾದಲ್ಲಿ ಸೇರಿದ್ದಾರೆ. ಅವರ ರಕ್ಷಣೆಗೆ ಅಮೇರಿಕಾ ನಿವಾರಣ ಸಂಘದವರು ಪ್ರಯತ್ನಪಟ್ಟಿದ್ದಾರೆ. ಗ್ರೀಕ್ ಮಂತ್ರಿಮಂಡಲವೂ ಸೇನಾಪತಿಗಳೂ ಬದಲಾಯಿಸಲ್ಪಟ್ಟಿರುವರು. ಗ್ರೀಕ್ ಸರ್ವಸೇನಾಪತಿಯಾದ ಟ್ರಿಕೂಪಸ್‌ರವರು ತಮ್ಮ ಕೈಕೆಳಗಣ ಕೆಲ ಸೇನಾಪತಿಗಳೊಡನೆ ಕೂಡಿ ಎಡಿಸಾ ಹತ್ತಿರ ಪ್ಲಾನನ್ನು ಬರೆಯಿಸುತ್ತ ಕುಳಿತಿದ್ದಾಗ ಒಂದು ತುರ್ಕಿ ಸೈನ್ಯವು ಅಕಸ್ಮಾತ್ತಾಗಿ ಅಲ್ಲಿಗೆಹೋಗಿ ಅವರನ್ನೆಲ್ಲಾ ಸೆರೆಹಿಡಿದುಕೊಂಡು ಹೋಯಿತು. ಅವರೆಲ್ಲಾ ಈಗ ಕಮಾಲ್‌ಪಾಷಾರವರ ಅತಿಥಿಗಳಾಗಿದ್ದಾರೆ. ಇದುವರೆಗೆ ತುರ್ಕಿಸೈನ್ಯವು ಗ್ರೀಕರಿಂದ 700 ತುಪಾಕಿಗಳನ್ನೂ 11 ವಿಮಾನಗಳನ್ನೂ ೪ ಸಾವಿರ ಯಂತ್ರದ ಫಿರಂಗಿಗಳನ್ನೂ ಕಿತ್ತುಕೊಂಡಿದ್ದಾರೆ. ಮಿತ್ರಮಂಡಲಿಯವರ ಯುದ್ಧದ ಹಡಗುಗಳು ಸ್ವಜನರಕ್ಷಣಾರ್ಥವಾಗಿಯೆಂದು ಸ್ಮಿರ್ನಾರೇವಿಗೆ ಬಂದಿವೆ. ಕೆಲವು ಡಾರ್ಡಿನೆಲ್ಸಿಗೂ ನುಗ್ಗಿವೆ. ತುರ್ಕಿಜಯಕ್ಕೆ ಫ್ರೆಂಚ್ ಪತ್ರಿಕೆಗಳು ಹಿಗ್ಗುತ್ತಿವೆ. ಗ್ರೀಕ್ ಪ್ರಭುವಾದ ಕಾನ್‌ಸ್ಟಾಂಟೈನ್ ರಾಜನು ಸಿಂಹಾಸನವನ್ನು ಪರಿತ್ಯಜಿಸುವನೆಂತಲೂ, ವೆನಿಜುಲಾಸ್‌ರವರು ಪ್ರಭುತ್ವವನ್ನು ಮೊದಲಿನಂತೆ ವಹಿಸಿಕೊಳ್ಳುವರೆಂತಲೂ ಸುದ್ದಿಯಿದೆ. ಈಗ ಅವರು ಪ್ಯಾರಿಸ್ಸಿಗೆ ಹೋಗಿದ್ದಾರೆ. ಈಗಣ ಗ್ರೀಕ್ ಯುದ್ಧ ಪರಿಣಾಮದಿಂದಲಾದರೂ ವೆನಿಸ್ ಸಮಾವೇಶದ ಪರಿಣಾಮವು ತುರ್ಕಿಗೆ ನ್ಯಾಯ್ಯವನ್ನು ಕಲ್ಪಿಸಿದರೆ ಸಾಕು. ಆದರೆ ಡಾರ್ಡಿನಲ್ಸ್ ಜಲಸಂಧಿಯನ್ನು ತುರ್ಕಿಗೆ ಸ್ವಾಧೀನಪಡಿಸುವುದಕ್ಕೆ ಅವಕಾಶವಿಲ್ಲವೆಂತಲೂ, ಆಸ್ಯಾಮೈನರಿನಲ್ಲಿ ಅಲ್ಪಸಂಖ್ಯಾಕರಾಗಿರುವವರ ವಿಷಯವನ್ನು ನಾನಾ ರಾಷ್ಟ್ರೀಯ ಸಂಘಕ್ಕೆ ತಿಳಿಯಿಸಬೇಕೆಂತಲೂ ಅವರ ರಕ್ಷಣೆಗಾಗಿ ಅವಶ್ಯಕವಾದ ಸಾಧನಗಳನ್ನೆಲ್ಲಾ ಅವಲಂಬಿಸಬೇಕಾಗುವುದೆಂತಲೂ ಇಂಗ್ಲೀಷರು ಅಭಿಪ್ರಾಯಪಡುತ್ತಾರಂತೆ. ಅಲ್ಪಸಂಖ್ಯಾಕರೆಂದರೆ ಕ್ರೈಸ್ತರೆಂದರ್ಥ. ಇವರ ರಕ್ಷಣೆಯ ನೆಪದಮೇಲೆಯೇ ತುರ್ಕಿಗೆ ಇದುವರೆಗೆ ಸ್ವಾತಂತ್ರ್ಯಭಂಗವು ಕಲ್ಪಿಸಲ್ಪಟ್ಟಿರುವುದು. ಇಂಗ್ಲೀಷರು ಪಕ್ಷಪಾತವನ್ನು ನಡೆಯಿಸದಿದ್ದರೆ ಈ ಸಮಸ್ಯೆಯು ತುರ್ಕಿಗೆ ಸಂತೃಪ್ತಿಕರವಾಗಿ ಪರಿಷ್ಕಾರಗೊಳ್ಳುವುದೆಂಬುದು ಬಹುಜನರ ಅಭಿಪ್ರಾಯವಾಗಿದೆ. ಆಂಗ್ಲಸಾಮ್ರಾಜ್ಯಲಕ್ಷ್ಮಿಯ ಅನುಗ್ರಹದಿಂದ ಮಿ॥ ಲಾಯಿಡ್‌ಜಾರ್ಜ್‌ರವರಿಗೆ ಅದಕ್ಕೆ ತಕ್ಕ ಬುದ್ಧಿಯುಂಟಾಗಲೆಂದು ನಾವು ಕೋರುತ್ತೇವೆ.

20 ನೇ ಶತಮಾನದ ಕುಂಭಕರ್ಣ.

ರಷ್ಯಾ ದೇಶಕ್ಕೆ ಸೇರಿದ ಸೈಬೇರಿಯಾದಲ್ಲಿ ಕಜನಲಫ್ ಎಂಬಾತನಿರುವನು. ಅವನಿಗೆ ಈಗ 34 ವಯಸ್ಸು. ಅವನ ದೇಹದ ಎತ್ತರವು 9 ಅಡಿಯೂ 3 ಅಂಗುಲ ಆ ಎತ್ತರಕ್ಕೆ ತಕ್ಕಂತೆ ಉಳಿದ ಅಂಗಭಾಗಗಳೆಲ್ಲಾ ಪರಿಪುಷ್ಟವಾಗಿಯೇ ಇರುವುವು. ಹೇಗೆಂದರೆ—ಕರತಳದ ಉದ್ದವು 13 ಅಂಗುಲ, ಕಾಲಹೆಜ್ಜೆಯು 21 ಅಂಗುಲದುದ್ದ, ಎದೆಯಗಲವು 56 ಅಂಗುಲ, ತಲೆಯ ಸುತ್ತಳತೆ 25 ಅಂಗುಲ, ಅವನ ದೇಹದ ಒಟ್ಟು ತೂಕವು 458 ಪೌನು. ಈ ಆಕೃತಿಗೆ ತಕ್ಕಂತೆ ಅವನಿಗೆ ಜೀರ್ಣಶಕ್ತಿಯು ಮಿಗಿಲಾಗಿಯೇ ಇರುವುದು. ದಿನಕ್ಕೆ 4 ವೇಳೆ ಭುಂಜಿಸುವನು. ಒಟ್ಟು ಒಂದು ದಿನದ ಅವನ ಆಹಾರ್ಯವೆಷ್ಟೆಂದರೆ—2-2½ ಸೇರು ಹಾಲು, 15-20 ಕೋಳಿಮೊಟ್ಟೆ, 3-4 ಪೌನು ತೂಕದ ಮಾಂಸ, 5-6 ದೊಡ್ಡರೊಟ್ಟಿಗಳು, ಆಲೂಗಡ್ಡೆ ಮೊದಲಾದ ಕಾಯಿಫಲ್ಯಗಳು ಯಥೇಚ್ಛ, ೨ ಅಥವಾ 3 ಸೇರು ವೈನು ಸಾರಾಯಿಗಳು, ಇವಿಷ್ಟನ್ನು ಸರ್ವಸಾಧಾರಣವಾಗಿ ಪ್ರತಿದಿನವೂ ತಿಂದು ಅರಗಿಸಿಕೊಳ್ಳುವನು. ಅವನು ಮಾಡುವ ಕೆಲಸವೆಂದರೆ ಹಗಲೂ ರಾತ್ರಿಯೂ ಮಲಗಿ ನಿದ್ರಿಸುತ್ತಿವುದೇ. ಯಾರಾದರೂ ಬಂದು ಎಬ್ಬಿಸಿದರೆ ಮಂಕಾಗಿ ಬೇಜಾರಿನಿಂದ ಕುಳಿತಿದ್ದು ಅವರು ಹೋದ ಕೂಡಲೇ ಮತ್ತೆ ಮಲಗಿಬಿಡುವನು. ಊಟದ ಹೊತ್ತಿಗೆ ಮಾತ್ರ ಸರಿಯಾಗಿ ತಾನೇ ಎಚ್ಚರಗೊಳ್ಳುವನು. ಈಗ ಅವನು ಮಾಸ್ಕೊ ಕಡೆಯಿಂದ ತನ್ನ ಸ್ವಸ್ಥಲವಾದ ಸೈಬೇರಿಯಾಕ್ಕೆ ಹೊರಬರುವನು. ಅಲ್ಲಿ ತನ್ನ ತಾಯ್ತಂದೆಗಳಿಗೆ ಬೇಸಾಯದ ಕೆಲಸದಲ್ಲಿ ಸಹಾಯ ಮಾಡುವುದಾಗಿ ಹೇಳಿಕೊಂಡು ಹೋಗಿದ್ದಾನೆ. ಹೊಟ್ಟೆಗಿಲ್ಲದೆ ಮನುಷ್ಯರನ್ನು ಮನುಷ್ಯರೇ ಕಡಿದು ತಿನ್ನುವಂಥ ದುರ್ಭಿಕ್ಷ ಹೊಂದಿದ್ದ ರಷ್ಯಾದೇಶದಲ್ಲಿ ಈ ಮಹಾರಾಕ್ಷಸನು ಏನನ್ನು ತಿಂದು ಬದುಕಿದನೋ ತಿಳಿಯಲಿಲ್ಲ. ಈ ಹೊಟ್ಟೆಬಾಕ ರಕ್ಕಸನನ್ನು ಪರಿಸುವುದಕ್ಕೆ ಯಾವ ಮಹಾತಾಯಿಯು ಭೂಮಿಯಲ್ಲಿ ಅವತರಿಸುವಳೋ ನೋಡಬೇಕು.

ಪ್ರಕೃತ ಚರ್ಚಾಸ್ಪದವಾದ ಸಂಸ್ಕೃತಾಭ್ಯಾಸ ವಿಷಯದಲ್ಲಿ ದೇಶಭಾಷಾ ಪತ್ರಿಕೆಗಳಲ್ಲಿ ಬಂದಿರುವ ಅನುಕೂಲಾಭಿಪ್ರಾಯಗಳು.

ಧಾರವಾಡ-ಕರ್ಮವೀರ (ತಾ॥ 25-8-22)

ಈಗಿನ ಕಾಲದಲ್ಲಿ—(ಅದಕ್ಕೆ ನೀವು ಕಲಿಯುಗವೆಂದು ಹೀಯಾಳಿಸಿ ಬೊಟ್ಟನ್ನೇ ಮುರಿಯಿರಿ. ಅಥವಾ ಕೃತಯುಗದ ಪೂರ್ವ ಭಾವಿಯುಗವೆಂದು ಸ್ತುತಿಸಿರಿ) ಬ್ರಾಹ್ಮಣರು ವೇದಗಳನ್ನು ಕಲಿಯುವ ಅಧಿಕಾರವು ತಮಗಷ್ಟೇ ಇರುವದೆಂದು ಆಗ್ರಹತೊಡುವದು ಹುಚ್ಚುತನವು ಮಾತ್ರವೇ ಅಲ್ಲ; ನಿರರ್ಥಕವು. ಬ್ರಾಹ್ಮಣರಿಗಷ್ಟೇ ವೇದಾಧಿಕಾರವಿರುವದೆಂದು ಒಂದು ವೇಳೆ ಕಲ್ಪಿಸಿದರೂ, ಆ ಅಧಿಕಾರವನ್ನು ಬ್ರಾಹ್ಮಣರು ತಮ್ಮ ಬುದ್ಧಿಬಲದಿಂದ, ತಪೋಬಲದಿಂದಲೇ ಪಡೆದಿದ್ದರಲ್ಲದೆ, ಕೇವಲ ಬಾಹುಬಲದಿಂದಲ್ಲ. ಅಥವಾ ಸರಕಾರದವರ ಬೆಂಬಲದಿಂದ ಅಲ್ಲವೆಂಬುವದನ್ನು ಬ್ರಾಹ್ಮಣರು ಮರೆಯಬಾರದು. ಹಾಗು ಈಗಿನ ಬ್ರಾಹ್ಮಣರಲ್ಲಿ ಆ ಬಗೆಯ ಬ್ರಹ್ಮವರ್ಚಸ್ಸು ಇಲ್ಲದವರು ಭೂಸುರರು ಹೇಗಾದಾರು? ಆ ಬಗೆಯ ಬ್ರಹ್ಮವರ್ಚಸ್ಸುಳ್ಳವರು ತಮ್ಮ ಬ್ರಹ್ಮತೇಜದಿಂದಲೇ ವಿರೋಧಿಗಳವಾದವನ್ನು ಅಡಗಿಸುತ್ತಾರೆ. ಅಂಥವರಿಗೆ ವಿರೋಧಿಗಳು ತಾವಾಗಿಯೇ ಶರಣಾಗತರಾಗುತ್ತಾರೆ. ಮೇಲಾಗಿ ಈಗಿನ ದಿವಸಗಳನ್ನು ಬ್ರಾಹ್ಮಣರು ಲಕ್ಷದಲ್ಲಿ ತರಬೇಕು. ಹಿಂದಕ್ಕೆ ಬ್ರಾಹ್ಮಣಧರ್ಮವನ್ನು ಸಂರಕ್ಷಿಸಲಿಕ್ಕೆ ಬ್ರಾಹ್ಮಣರಲ್ಲಿ ಪೂಜ್ಯಬುದ್ಧಿಯುಳ್ಳ ಕ್ಷತ್ರಿಯರು ಸದಾ ಕಂಕಣಬದ್ಧರಾಗಿದ್ದರು. ಆ ಬಗೆಯ ಬ್ರಾಹ್ಮಣರೇ ಇಲ್ಲದಬಳಿಕ ಕ್ಷತ್ರಿಯರೆಲ್ಲಿಂದ ಬರಬೇಕು? ಸಾರಾಂಶ-ಈಗಿನ ಮನ್ವಂತರದಲ್ಲಿ ಮನಸ್ಥಿತಿಯೇ ಬದಲಾಗಿದ. ಮೊದಲಿನ ಆತ್ಮವೂ ಮನೋರಚನೆಯೂ ಹೊರಟುಹೋದಬಳಿಕ, ಮಿತ್ತುದೆಲ್ಲವೂ ಶವಪ್ರಾಯವೇ ಅಲ್ಲವೇ? ಸಾರಾಂಶ-ಬ್ರಾಹ್ಮಣರು ಮುಖ್ಯಮಾತಿನ ಸಲುವಾಗಿ ಬಡಿದಾಡದೆ ಅಮುಖ್ಯಮಾತಿನ ಸಲುವಾಗಿ ಬಡಿದಾಡಹತ್ತಿರುವರು. ಬ್ರಾಹ್ಮಣಧರ್ಮ ವಿರುದ್ಧ ಬರೇ ಬ್ರಾಹ್ಮಣೇತರರೇ ಇರುವದಿಲ್ಲ; ಬಹುಶಃ ಇಡೀ ಜಗತ್ತೇ ಇರುತ್ತದೆ. ಇಂಥ ಸ್ಥಿತಿಯು ಬಂದದ್ದಾದರೂ ಬ್ರಾಹ್ಮಣರ ಹಾಗು ಇಡೀ ಸಮಾಜದ ಅವನತಿಯ ಮೂಲಕವೇ. ಆದರೆ ಬ್ರಾಹ್ಮಣತೇಜಕ್ಕೆ ಕಾರಣೀಭೂತವಾದ ಅಧ್ಯಾತ್ಮ ವಿದ್ಯೆಯು ಮತ್ತೆ ತಲೆಯೆತ್ತಹತ್ತಿದೆ. ಆ ವಿದ್ಯೆಯನ್ನು ಬ್ರಾಹ್ಮಣರು ಸಂಪಾದಿಸಿದರೆ ತೀರಿತು. ಸಾರಾಂಶ-ಈಗಿನ ಕಾಲಮಹಿಮೆಯನ್ನು ಲಕ್ಷಕ್ಕೆ ತಂದು ತಾವು ತಳಕೊಂಡಲ್ಲಿ ಹುಡುಕಬೇಕಲ್ಲದೆ, ಮಿಕ್ಕ ಕಡೆಗೆ ಹುಡುಕಿ ಪ್ರಯೋಜನವಿಲ್ಲ. ಅದಕಾರಣ, ಈಗಿನ ಪರಿಸ್ಥಿತಿಯಲ್ಲಿ ವೇದಾಧಿಕಾರದ ಗುತ್ತಿಗೆಯು ತಮ್ಮ ಕಡೆಗೇ ಉಂಟೆಂದು ವಾದಿಸುವದರಲ್ಲಿ ಏನು ಅರ್ಥವದೆ? ವೇದಗಳ ರಹಸ್ಯವನ್ನು ತಿಳಿಯದಿದ್ದರೆ, ತಾವು ಬ್ರಹ್ಮ ಬಂಧುಗಳೇ ಸ್ತ್ರೀ ಶೂದ್ರ ಹಾಗು ಬ್ರಹ್ಮ ಬಂಧುಗಳನ್ನು ನಮ್ಮವರು ಒಂದೇ ವರ್ಗದಲ್ಲಿ ಸೇರಿಸುತ್ತಾರೆ. ವೇದಗಳ ರಹಸ್ಯವನ್ನು ತಿಳಿಯದೆ ಅವುಗಳನ್ನು ಯಾರುಓದಿದರೂ ಅಷ್ಟೇ ಫಲವು ದೊರೆಯುತ್ತದೆ. ವೇದಗಳೆಂದರೆ ವೇದಪುಸ್ತಕಗಳೊಳಗಿನ ಅಕ್ಷರಗಳಲ್ಲ. ಅದರೊಳಗಿನ ಅಪರೋಕ್ಷಜ್ಞಾನವು. ಆ ಜ್ಞಾನವು ನೀವು ವೇದಗಳಂನೋದಿದಮಾತ್ರಕ್ಕೇ ನಿಮಗೆ ಉಂಟಾಗುವದಿಲ್ಲ ಮಿಕ್ಕವರು ಓದಿದಮಾತ್ರಕ್ಕೇ ಅವರಿಗೂ ಉಂಟಾಗುವದಿಲ್ಲ. ಆದ್ದರಿಂದ ವೇದಗಳ ಅಧಿಕಾರವು ಬ್ರಾಹ್ಮಣರಿಗೆ ಮಾತ್ರವೇ ಇರುತ್ತದೆಯೋ ಹೇಗೆ ಎಂಬ ಪ್ರಶ್ನೆಯನ್ನು ಕೇವಲ ತಾತ್ವಿಕವಾಗಿ ಚರ್ಚಿಸುವದೆಂದರೆ ಆನೆಯೋ ಹೊರಟುಹೋಗಿರಲು, ಅದರ ಬಾಲಕ್ಕಾಗಿ ಬಡಿದಾಡುತ್ತ ಕುಳಿತಂತೆಯೇ ಸರಿ.

ಹರಪನಹಳ್ಳಿ-ವೀರಶೈವ ಧರ್ಮಪ್ರಕಾಶಿಕೆ. (1922ನೆ ಜುಲೈ ಸಂಚಿಕೆ)

ಶ್ರೀಮನ್ಮಹಾರಾಜರೇ ಬ್ರಾಹ್ಮಣೇತರರಾಗಿರುವದರಿಂದ ಒಂದು ಪಕ್ಷ ಶ್ರೀಮನ್ಮಹಾರಾಜರ ವಂಶದವರೇ ವೇದಾಧ್ಯಯನ ಮಾಡಬೇಕೆಂದರೆ ಅವರಿಗೂ ಸಹ ಆರ್ಡರು ಇಲ್ಲದಂತಿರುವದು. ವೇದಾಧ್ಯಯನವನ್ನು ಬ್ರಾಹ್ಮಣರೇ ಮಾಡಬೇಕೆಂದು ಯಾವ ವೇದಗಳಲ್ಲಿಯೂ ಹೇಳಿರುವದಿಲ್ಲ. ಗೌತಮ, ವಸಿಷ್ಠ ಮುಂತಾದ ಋಷಿಗಳು ಬ್ರಾಹ್ಮಣರೇ ಹೇಗೆ? ಅವರೇಕೆ ವೇದಾಧ್ಯಯನವನ್ನು ಮಾಡಿದರು? ಬ್ರಹ್ಮಜ್ಞಾನೇನ ಬ್ರಾಹ್ಮಣಃ - ಬ್ರಹ್ಮಜ್ಞಾನವುಳ್ಳವನೇ ಬ್ರಾಹ್ಮಣನು ಅಂದಮೇಲೆ ಇದರಲ್ಲಿ ಬ್ರಾಹ್ಮಣರೇ ಬ್ರಾಹ್ಮಣರೆಂಬುವ ವಿಷಯವು ಹೇಗೆ ವಿಶದವಾಗುತ್ತೆ? ಕಾರಣ ಮೈಸೂರು ಸಂಸ್ಕೃತ ಕಾಲೇಜುಗಳಲ್ಲಿ ಬ್ರಾಹ್ಮಣರನ್ನು ಮಾತ್ರ ಸೇರಿಸಿ ಬ್ರಾಹ್ಮಣೇತರರನ್ನು ಸೇರಿಸದೆ ಇರುವದು ಕಡು ಅನ್ಯಾಯವೆನಿಸುತ್ತೆ. ಶ್ರೀ ಮನ್ಮಹಾರಾಜರವರು ಈ ವಿಷಯದಲ್ಲಿ ಕಟಿಬಿಟ ಸಹ ವಿಚಾರಿಸುವ ಅವಶ್ಯಕವಿಲ್ಲ. "ಸಂಸ್ಕೃತ ವಿದ್ಯೆಯು ಸರ್ವ ಮತದವರಿಗೂ ಅವಶ್ಯವಾದದ್ದು ಮತ್ತು ಸಂಸ್ಕೃತ ಭಾಷೆಯೇ ಸರ್ವ ಭಾಷೆಗಳಿಗೂ ಮೂಲ ಕಾರಣವು. ಆದ್ದರಿಂದ ಸಂಸ್ಕೃತ ವಿದ್ಯೆಯು ಸರ್ವ ಜನಾಂಗದವರಿಗೆ ಅತ್ಯಂತಾಗತ ವಾದದ್ದೆಂದು ಹೇಳಲು ಸಂದೇಹವಿಲ್ಲ. ಅಲ್ಲದೆ ಸರ್ವ ಮತದವರೂ ಕಂದಾಯವನ್ನು ಕೊಡುತ್ತಿರುವರು. ಕಾರಣ ಶ್ರೀ ಮನ್ಮಹಾರಾಜರವರು ಈ ವಿಷಯದಲ್ಲಿ ಪರ್ಯಾಲೋಚಿಸಿ, ಈ ವಿಷಯದಲ್ಲಿ ಕಟಿಬಿಟಿಯೇ ಉಪಯೋಗವಿಲ್ಲವೆಂದು ಭಾವಿಸಿ ಸರ್ವ ಜನಾಂಗದವರನ್ನೂ ಸಂಸ್ಕೃತಕಾಲೇಜುಗಳಲ್ಲಿ ಸೇರಿಸುವದಕ್ಕೆ ಉತ್ತರವನ್ನು ದಯಪಾಲಿಸಬೇಕೆಂದು ನಮ್ಮಗಳ ಪ್ರಾರ್ಥನೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ದೇವನಹಳ್ಳಿ.

ನಮ್ಮ ತಾಲ್ಲೂಕಿಗೆ ಅಮಲ್‌ದಾರರಾಗಿ ಮ॥ ರಾ॥ ಬಿ. ಲಿಂಗಯ್ಯನವರು ಬಂದು 2½ ವರ್ಷವಾಯಿತು. ಇವರನ್ನು ಸರ್ಕಾರದವರು ತುಮಕೂರು ತಾಲ್ಲೂಕಿಗೆ ವರ್ಗಾಯಿಸಿರುತ್ತಾರೆ. ಇವರು ಈ ತಾಲ್ಲೂಕಿಗೆ ಬಂದಲಾಗಾಯಿತು ಮತಭೇದಗಳನ್ನೂ, ಪಕ್ಷಪಾತವನ್ನೂ ಸ್ವಲ್ಪವೂ ತೋರಿಸದೆ ಸರ್ವಸಮತೆಯಿಂದ ತಾಲ್ಲೂಕಿನ ಆಡಳಿತವನ್ನು ಬಹು ದರ್ಪದಿಂದ ಮಾಡಿ, ಪ್ರಜೆಗಳನ್ನು ಕಾಪಾಡಿಕೊಂಡು ಬಂದರು. ಇವರು ಈ ರೀತಿ ಅಧಿಕಾರ ಚಲಾಯಿಸಿದ್ದನ್ನು ನೋಡಿ ವಡಿಗೇನಹಳ್ಳಿಯ ಕೆಲವರು ಸರ್ಕಾರದಲ್ಲಿ ಇವರ ಹೆಸರನ್ನು ಬದನಾಮೆಮಾಡಿದರು. ಜನಿ ಕೌನ್ಸಿಲರ್ ಮಹಾಸ್ವಾಮಿಯವರು ಈ ತಾಲ್ಲೂಕಿಗೆ ದಯಮಾಡಿಸಿದ್ದಾಗ್ಗೆ ವಡಿಗೇನಹಳ್ಳಿಗೆ ದಯಮಾಡಿಸಿ ನಿಜತ್ವವನ್ನು ವಿಚಾರಿಸಿದ್ದರಲ್ಲಿ ಇವರ ನಿಷ್ಪಕ್ಷಪಾತತೆಯನ್ನು ಕಂಡುಹಿಡಿದು, ಬಹಳ ಸಂತೋಷಪಟ್ಟು ತೆರಳಿದರು. ಇಂಥ ದರ್ಪವುಳ್ಳ ಅಮಲ್‌ದಾರರವರು ಈ ತಾಲ್ಲೂಕಿನಲ್ಲಿ ಇನ್ನು ಕೆಲವು ದಿನಗಳಿದ್ದರೆ ಚೆನ್ನಾಗಿತ್ತು. ಇವರನ್ನೇ ವಡಿಗೇನಹಳ್ಳಿಗೆ ಕರೆಯಿಸಿ ಅನೇಕರು ತಮ್ಮ ಕೃತಜ್ಞತೆಗಳನ್ನು ಅರ್ಪಿಸಿ ಸಾಗಕಳುಹಿಸಿದರು. ಈ ತಾಲ್ಲೂಕಿನ ವಡಿಗೇನಹಳ್ಳಿಯಲ್ಲಿ ಪಂಚಮರ ಮನೆಗಳು ಸುಮಾರು 100ರ ಮೇಲಿದ್ದು 250 ಪ್ರಜಾಸಂಖ್ಯೆಯುಳ್ಳವರಾಗಿರುತ್ತಾರೆ. ಇವರ ಪಾಳ್ಯದಲ್ಲಿ ಯಾವುದೋ ಒಂದು ವಿಧವಾದ ಅಂಟುರೋಗವು ಪ್ರಬಲಿಸಿ 120 ಜನಗಳು ಈ ರೋಗಕ್ಕೆ ಆಹುತಿಯಾಗಿರುತ್ತಾರೆ. ಆ ಊರಿನಲ್ಲಿ ಇಂಗ್ಲೀಷ್ ಆಸ್ಪತ್ರೆ ಇದ್ದು ಡಾಕ್ಟರ್‌ರವರು ಇವರ ಕಷ್ಟ ಸುಖಗಳನ್ನು ಸ್ವಲ್ಪವೂ ವಿಚಾರಿಸದೆ ಇರುವುದು ಇವರ ದುರದೃಷ್ಟವೆಂತಲೇ ಹೇಳಬೇಕಾಗಿರುತ್ತದೆ. ಡಾಕ್ಟರವರು ಬ್ರಾಹ್ಮಣರಾಗಿರುವುದರಿಂದ ಪಂಚಮರ ಕೇರಿಗೆ ಹೋಗಿ ರೋಗಿಗಳನ್ನು ವಿಚಾರಿಸುವುದು ಅವರ ಮತಕ್ಕೆ ವಿರೋಧವಾಗಿರಬಹುದೆಂದು ಕಾಣುತ್ತದೆ.

ಪ್ರತ್ಯಕ್ಷದರ್ಶಿ.

ತೋರಣಕಟ್ಟೆ ಟಿ. ವಿ. ಸದುದ್ಯೋಗಸಂಘ.

ವಿದ್ಯಾವಂತರಾದ ಮ॥ ಪಿ. ಚೆನ್ನಬಸವಯ್ಯನವರ ಉತ್ತಮ ಸಲಹೆಗಳಿಗೆ ಗಮನ ಕೊಟ್ಟು ಜಗಲೂರು ತಾಲ್ಲೂಕು ತೋರಣಕಟ್ಟೆ ಗ್ರಾಮವಾಸಿಗಳು ತಮ್ಮಲ್ಲಿ ಸದುದ್ಯೋಗ ಸಂಘವೆಂಬುದನ್ನು ಈಗ ಒಂದುವರುಷದ ಮುಂಚೆ ಸ್ಥಾಪಿಸಿಕೊಂಡು, ಅದನ್ನು ಸಮರ್ಪಕವಾಗಿ ನಡೆಯಿಸಿಕೊಂಡು ಬರುತ್ತಿರುವುದು ತುಂಬಾ ಶ್ಲಾಘನೀಯವಾಗಿಯೂ ಅನ್ಯರಿಂದ ಅನುಕರಣೀಯವಾಗಿಯೂ ಇರುತ್ತದೆ. ಈ ಸಂಘಕ್ಕೆ ಮ॥ ಗೌ॥ ಹೊನ್ನೂರಪ್ಪನವರು ಪ್ರೆಸಿಡೆಂಟರಾಗಿಯೂ, ಮ॥ ಗೌ॥ ಹನುಮಂತಪ್ಪನವರು ಸೆಕ್ರೆಟರಿಯವರಾಗಿಯೂ, ಮ॥ ಪತ್ರೆನಾಗಪ್ಪನವರು ಟ್ರೆಜರರಾಗಿಯೂ ಮ॥ ಇ. ಮಲ್ಲಪ್ಪ ಮತ್ತು ಮ॥ ಪತ್ರೆಪೂರಪ್ಪ ಇವರು ಕಾರ್ಯದರ್ಶಿಗಳಾಗಿಯೂ ಇರುತ್ತಾರೆ. ಪಕ್ಷಕ್ಕೊಮ್ಮೆ ಮೀಟಿಂಗು ನಡೆಸಲ್ಪಡುತ್ತದೆ. ಪ್ರತಿ ಮೀಟಿಂಗಿನ ಆದಿ ಅಂತ್ಯಗಳಲ್ಲಿಯೂ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆ ನಡೆಯುತ್ತದೆ. ಈ ಮೀಟಿಂಗುಗಳಲ್ಲಿ ವಿದ್ಯೆ, ವ್ಯವಸಾಯ, ವ್ಯಾಪಾರ, ಕೈಗಾರಿಕೆ ಮುಂತಾದ ಅರ್ಥಸಾಧಕ ವಿಷಯಗಳ ಮೇಲೂ, ಮಾನುಷಕರ್ತವ್ಯ, ನ್ಯಾಯ, ರಾಜಭಕ್ತಿ, ಧರ್ಮ ಮತ್ತು ನೀತಿ ವಿಷಯಗಳ ಮೇಲೆಯೂ ಉಪನ್ಯಾಸಗಳು ಜರುಗಿಸಲ್ಪಡುತ್ತವೆ. ರೀಡಿಂಗ್‌ರೂಂ ಸ್ಥಾಪನೆ ಮಾಡಿಕೊಂಡು ಕೆಲವು ವರ್ತಮಾನ ಪತ್ರಿಕೆಗಳನ್ನೂ ಮಾಸಿಕಪುಸ್ತಕಗಳನ್ನೂ ತರಿಸಿ ಓದುತ್ತಾರೆ. ಗ್ರಾಮದಲ್ಲಿ ಉಂಟಾಗಬಹುದಾದ ಮತಸಂಬಂಧದ ಮತ್ತು ಲೇವಾದೇವಿಯ ಸಣ್ಣಪುಟ್ಟ ವ್ಯಾಜ್ಯಗಳನ್ನು ಸಂಘದವರೇ ತೀರಿಸುತ್ತಾರೆ. ಅನವಶ್ಯಕವಾಗಿ ಕೋರ್ಟಿಗೆ ಹೋಗಿ ವ್ಯಾಜ್ಯ ದಾಖಲ್ ಮಾಡಿ ಅಮೂಲ್ಯವಾದ ಕಾಲವ್ಯಯ ಮಾಡಿಕೊಂಡು ದೇಹಶ್ರಮಪಟ್ಟು ಮನೆಕೆಲಸಗಳಿಗೆ ತಿಲಾಂಜಲಿಯನ್ನಿತ್ತು ಧನವನ್ನು ಕಳೆದುಕೊಂಡು, ಕೆಲವು ವೇಳೆ ನ್ಯಾಯವನ್ನು ಕಳೆದುಕೊಳ್ಳುವ ಸಂಭವವನ್ನು ತಪ್ಪಿಸಿ ಸಂಘದಲ್ಲಿಯೇ ನಿಷ್ಪಕ್ಷಪಾತವಾಗಿ ತೀರಿಸುತ್ತಾರೆ. ಈ ವಿಷಯದಲ್ಲಿ ಇವರ ನ್ಯಾಯದೃಷ್ಟಿಯು, ನ್ಯಾಯಪದವೀಧರರು ಕೊಡುವ ನ್ಯಾಯಕ್ಕಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲ. ಈ ಸಂಘದಿಂದುಂಟಾಗುವ ಪ್ರಯೋಜನಗಳನ್ನು ತಿಳಿಯಬೇಕಾದರೆ ಪ್ರತಿಯೊಂದು ಗ್ರಾಮದಲ್ಲಿಯೂ ಇಂಥ ಸಂಘಗಳನ್ನು ಸ್ಥಾಪಿಸಿಕೊಂಡರೆ ಗೊತ್ತಾಗುತ್ತದೆಯೇ ವಿನಾ ಬರಿಯ ಬರವಣಿಗೆಯಿಂದ ತಿಳಿಯುವುದಿಲ್ಲ. ಈ ಸಂಘವು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ, ಶಾಂತಿ ಸುಖ ಸಂಪತ್ತಿಗೆ ಕಾರಣವಾಗಲೆಂದು ಜಗದೀಶ್ವರನನ್ನು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಹುನಗುಂದ.

ಸಮಾಜಸೇವೆಯೇ ಈಶ್ವರಸೇವೆ.

ಅನೇಕ ಧರ್ಮಗಳ ಆಶ್ರಯಸ್ಥಾನವಾದೀ ಭಾರತಭೂಮಿಯಲ್ಲಿ ಕಾಲಕಾಲಕ್ಕೆ ಮಹಾಪುರುಷರು ಅವತರಿಸಿ ನಿದ್ರಿತರನ್ನು ಜಾಗ್ರತರನ್ನಾಗಿಯೂ ಅಜ್ಞಾನಿಗಳನ್ನು ಸುಜ್ಞಾನಿಗಳನ್ನಾಗಿಯೂ ಮಾಡುತ್ತ ಬಂದುದು ಇತಿಹಾಸ ಪ್ರಸಿದ್ಧ ಸಂಗತಿಯಷ್ಟೆ. ಅದರಂತೆಯೇ ಅಜ್ಞಾನದ ಗಾಢಾಂಧಕಾರದಲ್ಲಿ ಮುಳುಗಿದ ಭಾರತದಲ್ಲಿಯ ವೇದಕಾಲದಿಂದ ಪ್ರಸಿದ್ಧಿಯನ್ನು ಹೊಂದಿದ ವೀರಶೈವ ಸಮಾಜವನ್ನು ಉದ್ಧರಿಸಲೋಸುಗ ಪ್ರಯತ್ನಿಸಿದ ಅನೇಕ ಮಹಾಪುರುಷರಲ್ಲಿ ದಾವಣಗೆರೆಯ ಶ್ರೀಮನ್ನಿರಂಜನ ಮೃತ್ಯುಂಜಯಸ್ವಾಮಿಗಳೊಬ್ಬರಾಗಿದ್ದಾರೆಂಬುದು ಪ್ರತಿಯೊಬ್ಬ ಕರ್ನಾಟಕ ನಿವಾಸಿಗೆ ಗೊತ್ತಿರದೆ ಇಲ್ಲ. ಇಂಥ ಮಹಾಮಹಿಮರು ತಾರೀಖು 27-6-22ರ ದಿವಸ ಇಲ್ಲಿಯ ವೀರಶೈವ ತರುಣ ಸಂಘದವರ ಆಮಂತ್ರಣದ ಮೇರೆಗೆ ದಯಮಾಡಿಸಿದರು. ಆ ದಿವಸ ಸಂಜೆಯ 5 ಗಂಟೆಗೆ ಶ್ರೀಮಂತ ದೊಡ್ಡಪ್ಪಣ್ಣ ನಾಗರಹಾಳ ಇವರ ಬಂಗಲೆಯಲ್ಲಿ ಶ್ರೀಗಳವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿ ವೇ॥ ವೀರಭದ್ರಶಾಸ್ತ್ರಿಗಳವರು ಮತ್ತು ಬಸೆಟ್ಟೆಪ್ಪ ಬಿಳೂಟಗಿ ನಿಜಲಿಂಗಪ್ಪಶ್ರೇಷ್ಠಿ ಕಮತಗಿ ಇವರುಗಳು ಧರ್ಮ ಮತ್ತು ವಿದ್ಯೆ ವೀರಶೈವ ತರುಣಸಂಘಗಳ ಅವಶ್ಯಕತೆ ಈ ವಿಷಯಗಳ ಮೇಲೆ ಉಪನ್ಯಾಸಗಳನ್ನು ಮಾಡಿ ಯಾವತ್ತೂ ನೆರೆದ ಜನರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವನ್ನುಂಟುಮಾಡಿದರು. ಅನಂತರ ಶ್ರೀಗಳವರು ಸಮಾಜಸೇವೆಯೆಂಬ ವಿಷಯದ ಮೇಲೆ ತಮ್ಮ ಅಸ್ಖಲಿತವಾಣಿಯಿಂದ ಉಪನ್ಯಾಸಮಾಡಿ ಯಾವತ್ತರ ಮನಸ್ಸನ್ನೂ ಆನಂದಸಾಗರದಲ್ಲಿ ಮುಳುಗಿಸಿದರು. ಈ ಮಹಾಮಹಿಮರು ವಿರಕ್ತರಾಗಿದ್ದು, ತಮ್ಮ ಕಾಲವನ್ನೆಲ್ಲಾ ಧರ್ಮಕ್ಕನುಸರಿಸಿ ಸದಾ ಈಶಚಿಂತನೆಯಲ್ಲಿಯೇ ಕಳೆದು ತಾವೊಬ್ಬರೇ ಮುಕ್ತಿಮಾರ್ಗಗಾಮಿಗಳಾಗಬಹುದಾಗಿತ್ತು. ಆದರೆ ಅವರ ವಿರಕ್ತ ಧರ್ಮಕ್ಕೆ ಮೂಲಭೂತವಾದ ಭೂತದಯೆಯಿಂದ ಪ್ರೇರಿತರಾಗಿ ತಮ್ಮ ಸುತ್ತುಮುತ್ತೂ ಹೀನಸ್ಥಿತಿಯಲ್ಲಿರುವ ಭಕ್ತರನ್ನು ಉದ್ಧರಿಸದೆ ತಾವೊಬ್ಬರೇ ಮೋಕ್ಷವನ್ನು ಪಡೆಯುವುದು ಸರಿಯಲ್ಲವೆಂದೂ, ಅನ್ನಾನ್ನಗತಿಕರಾದ ಜನಗಳ ದೀನವದನವನ್ನು ಪ್ರತಿದಿನವೂ ನೋಡುತ್ತ ಅವರನ್ನು ಉದ್ಧರಿಸುವ ಮಾರ್ಗವನ್ನು ಕೈಕೊಳ್ಳದೆ ಪರಮಾತ್ಮನ ಪೂಜನ ಮಾಡುವುದರಿಂದ ಆ ಜಗತ್ ಕರ್ತೃವು ಎಂದೂ ಒಲಿಯನೆಂದೂ ಭಾವಿಸಿ, ಸಮಾಜೋದ್ಧಾರವನ್ನು ಕೈಕೊಂಡು ದೇಹಶ್ರಮವನ್ನು ಲೆಕ್ಕಿಸದೆ, ಜನನಿಂದಾ ಭೂಷಣಗಳನ್ನು ಲೆಕ್ಕಿಸದೆ ಅವಿಶ್ರಾಂತಶ್ರಮಪಡುತ್ತಿರುವರು. ಮಹಾಪುರುಷರ ಆಗಮನವು ಪತಿತರಾದ ನಮ್ಮಗಳ ಗ್ರಾಮಕ್ಕೆ ಅದುಗು ಮಹಾ ಭಾಗ್ಯವಲ್ಲವೆ? ಈ ಮಹನೀಯರ ಸಹವಾಸದಲ್ಲಿ ಅತ್ಯಲ್ಪಕಾಲವಿದ್ದರೂ ನಮ್ಮಲ್ಲಿ ನೆರೆದ ಸಭೆಯಲ್ಲಿ ಮಾಡಿದ ಉಪನ್ಯಾಸದಲ್ಲಿ ಪ್ರತಿಯೊಂದು ಶಬ್ದಗಳೂ ನಮ್ಮಗಳ ಹೃದಯರಂಗ ಭೂಮಿಯಲ್ಲಿ ಸದಾ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಲಿವೆ. ಮತ್ತು ಕ್ಷಣಕ್ಷಣಕ್ಕೆ ಸ್ವಾರ್ಥತ್ಯಾಗ ಸಮಾಜಸೇವೆಯೆಂಬ ಮಹಾಮಂತ್ರವನ್ನು ಜಪಿಸಲಿಕ್ಕೆ ಉತ್ಸಾಹವನ್ನುಂಟುಮಾಡುತ್ತಲಿವೆ. ಸದರಿ ಸಭೆಯಲ್ಲಿ ಧಾರವಾಡ ಶ್ರೀಮನ್ ಮಹಾರಾಜನಿರಂಜನ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿಗಳ ಧರ್ಮಾರ್ಥ ಬೋರ್ಡಿಂಗಿಗೆ ಶ್ರೀಮಂತ ದೊಡ್ಡಪ್ಪಣ್ಣ ನಾಗರಾಳ ಇವರು (101) ನೂರಒಂದುರೂಪಾಯಿ, ಶ್ರೀಮಂತ ರಂಗಪ್ಪಣ್ಣ ಜನಾದ್ರಿ (ವೈಶ್ಯ) ಇವರು 25 ರೂಪಾಯಿಗಳನ್ನೂ ಉಳಿದ ಸಭ್ಯಗೃಹಸ್ಥರು ಕೂಡಿ 175 ರೂಪಾಯಿಗಳನ್ನೂ ಕೂಡಿಸಿ ಕೊಟ್ಟರು. ಅನಂತರ ವೀರಶೈವ ತರುಣಸಂಘದವರಿಂದ ಹೊಸದಾಗಿ ಸ್ಥಾಪಿತವಾದಂಥ ಬಸವೇಶ್ವರ ಭಜನಾಮಂಡಲದವರು ಅಧ್ಯಕ್ಷರ ಆಭಾರವನ್ನೂ ಸಭೆಗೆ ಬಂದಂಥ ಯಾವತ್ತೂ ಜನರ ಆಭಾರವನ್ನೂ ಮನ್ನಿಸಿ ನಿತ್ಯದಂತೆ ತಮ್ಮ ಭಜನೆಯನ್ನು ಮಾಡಿದರು. ಜಯಘೋಷದೊಡನೆ ಸಭೆಯ ವಿಸರ್ಜನವಾಯಿತು.

ಓರ್ವ ಪ್ರತ್ಯಕ್ಷದರ್ಶಿ.

ಹಿಂದೂಜನರೊಳಗಿನ ಗೊಂದಲ (ಸಂಸ್ಕೃತವಿದ್ಯಾಭ್ಯಾಸ).

ಈ ಭರತಖಂಡದಲ್ಲಿ ವಾಸಿಸಿರುವ ಸಮಸ್ತ ಜನಾಂಗದವರೂ ಜಾತಿದ್ವೇಷವನ್ನು ಬಿಟ್ಟು ಸಮಾನದೃಷ್ಟಿಯುಳ್ಳವರಾಗಿ ಹಿಂದುಳಿದ ಜನಾಂಗದವರನ್ನು ಮುಂದಕ್ಕೆ ತಂದು, ವಿದ್ಯೆ, ಕೈಗಾರಿಗೆ, ಒಕ್ಕಲತನ, ವ್ಯಾಪಾರ ಇತ್ಯಾದಿ ದೇಶಾಭಿವೃದ್ಧಿಯ ಸಾಧನಗಳನ್ನು ಸಮಾನತ್ವದಿಂದ ನೆಲೆಗೊಳಿಸಿ ನಮ್ಮ ನಮ್ಮ ಸುಖಸ್ವಾತಂತ್ರ್ಯಗಳನ್ನು ಶಾಶ್ವತವಾಗಿ ಪಡೆಯಬೇಕೆಂಬುವ ಅತ್ಯುದಾತ್ತ ತತ್ವಗಳನ್ನು ದೇಶೋದ್ಧಾರಕರು ಸದಾ ಬೋಧಿಸುತ್ತಿರುವರು. ಇಂಥ ದೇಶೀಯಪುಂಗವರಲ್ಲಿರುವಂಥ ಶಕ್ತಿಯೂ ಸಾಹಸವೂ ಸಹನಶೀಲತೆಯೂ ಸಮಾನದೃಷ್ಟಿಯೂ ನೆಲೆಗೊಳ್ಳದೆ ನಿಷ್ಕಾರಣವಾಗಿ ರಾವಣಸನ್ಯಾಸಿಗಳಂತೆ ವೇಷಧರಿಸಿ ದೇಶೋದ್ಧಾರ ಮಾಡುತ್ತೇವೆಂದು ಒಣಹೆಮ್ಮೆಯಿಂದ ಮೆರೆಯುತ್ತಿರುವ ಕೆಲವರಲ್ಲಿ ಮೈಸೂರು ದೇಶದ ಕೆಲ ಬ್ರಾಹ್ಮಣರು ಸಮಾವೇಶಗೊಳ್ಳುತ್ತಾರೆ. ಇವರುಗಳು ಸಹೋದರಭಾವವನ್ನು ಲೆಕ್ಕಿಸದೆ ಮೈಸೂರು ಗೌರ್ನಮೆಂಟ್ ಸಂಸ್ಕೃತ ಕಾಲೇಜಿನಲ್ಲಿ ತ್ರಿಮತಸ್ಥ ಬ್ರಾಹ್ಮಣರನ್ನು ಬಿಟ್ಟು ಇನ್ನುಳಿದವರು ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಲು ಅವಕಾಶವನ್ನು ಕೊಡಲಾಗದೆಂದು ಸಾಧಿಸಲು ಕುಯುಕ್ತಿ ಮಾಡುತ್ತಿರುವುದನ್ನು ನೋಡಿದರೆ ಯಾರಿಗೆ ತಾನೇ ಚೋದ್ಯವಾಗಲಿಕ್ಕಿಲ್ಲ?

ಅಹೋಬ್ರಾಹ್ಮಣಬಂಧುಗಳೇ! ಬ್ರಾಹ್ಮಣ ಬ್ರಾಹ್ಮಣ ಎಂದು ಬಡಿಬಡಿಸುವುದರಿಂದ ಪ್ರಯೋಜನವೇನು? ಜುಟ್ಟುಜನ್ನಿವಾರವನ್ನು ಧರಿಸಿದ ಮಾತ್ರದಿಂದಲೇ ಬ್ರಾಹ್ಮಣ್ಯ ವುಂಟಾಗುವುದೆಂದು ತಿಳಿದುಕೊಂಡಿರುವಿರೇನು? ಸ್ಮೈ-ಸ್ಮೈ (ಬ್ರಹ್ಮಜ್ಞಾನೇನ ಬ್ರಾಹ್ಮಣಃ) ಎಂಬುವ ಮಹನೀಯವಾಕ್ಯವನ್ನು ಸ್ಮೃತಿಯಲ್ಲಿ ತರದ ಬಳಿಕ ನಿಮ್ಮಲ್ಲಿ ಬ್ರಾಹ್ಮಣ್ಯವು ಹೇಗೆ ಸಿದ್ಧಿಸುವುದು? ಬ್ರಾಹ್ಮಣಧರ್ಮದ ಉದಾತ್ತ ತತ್ವಗಳೆತ್ತ? ನಿಮ್ಮ ನಡತೆಯೆತ್ತ? ಶಾಸ್ತ್ರವು ಒತ್ತಟ್ಟಿಗಿರಲಿ. ಸದ್ಯದ ಸ್ಥಿತಿಯನ್ನು ವಿಚಾರಿಸಿದರೂ ದೇಶಭಕ್ತರ ಬೋಧೆಯೆತ್ತ? ನಿಮ್ಮ ಕುಚೋದ್ಯತನವೆತ್ತ? ಹೀಗಾದಮೇಲೆ ದೇಶೋದ್ಧಾರವಾಗುವುದೆ? ದೇಶದಲ್ಲಿ ಶ್ರೇಷ್ಠತರವಾದ ಸುಖೋಪಭೋಗಗಳನ್ನು ಮಾಡುವದೇ ಬ್ರಾಹ್ಮಣರ ಜನ್ಮಸಿದ್ಧವಾದ ಹಕ್ಕೆಂದು ತಿಳಿದುಕೊಂಡಿರುವಿರೇನು? ಈ ನಿಮ್ಮ ತಪ್ಪುತಿಳುವಳಿಕೆಯಿಂದ ದೇಶದಲ್ಲಿ ದ್ವೇಷಾಸೂಯೆಗಳು

[illegible]

ವೀರಪ್ಪ. ಬಸಪ್ಪ ಬಂತಿ.

ಬೆಳ್ಳಟ್ಟಿ.

[illegible]

ಯ ಸಲುವಾಗಿ ಮಹಾಸನ್ನಿಧಿಗೆ ನೇದ್ಯಪಡಿಸಿದರು. ಆಗ ಅದಕ್ಕೋಸ್ಕರ ವಾಗಿ ಹನ್ನೆರಡು ರೂಪಾಯಿಗಳನ್ನು ಆಶೀರ್ವದಿಸಿ ಸರ್ವ ವಿದ್ಯಾರ್ಥಿಗಳಿಗೆ ಮಿಠಾಯಿ ಫಲಾಹಾರಗಳನ್ನು ಹಂಚಿಸಿ ಅನಂತರ ನಮ್ಮನ್ನಾಳುವ ಸಾಂಗಲಿ ದೊರೆಗಳವರಿಗೆ ಸರ್ವೇಶನು ದೀರ್ಘಾಯುಷ್ಯವನ್ನೀಯಲೆಂದು ಜಯಘೋಷ ವನ್ನು ಮಾಡಿದ ನಂತರ ಸಭೆಯು ವಿಸರ್ಜನೆಯಾಯಿತು.

ಪ್ರತ್ಯಕ್ಷದರ್ಶಿ.

ನೋಟೀಸು.

ಹೊನ್ನಾಳಿ ತಾಲ್ಲೂಕು ಕುಂದೂರು ಮಾಗಣಿ ಕೋಲಂಬಿಯಲ್ಲಿರುವ ಕಟ್ಟೆ ಮುರಿಗೆಪ್ಪನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವ ದೇನಂದರೆ:—ನನ್ನ ಎರಡನೇ ಮಗ ಬಸವಲಿಂಗಪ್ಪನೆಂಬುವವನು ಜುಗಾರು ವಗೈರೆ ದುರ್ವ್ಯಸನಗಳಿಗೆ ಉಪಕ್ರಮಿಸಿ ನನ್ನ ಮಾತನ್ನು ಕೇಳದೆ ಕುಟುಂಬದ ಮನೆಯಿಂದ ಹೊರಟುಹೋಗಿ ಈಗ ಸುಮಾರು ಮೂರು ತಿಂಗಳಿಂದಲೂ ಪುಂಡುಜನರೊಂದಿಗೂ, ನನ್ನ ದ್ವೇಷಿ ಜನರೊಂದಿಗೂ ಸೇರಿಕೊಂಡು ಮನಸ್ವೀಯಾಗಿ ತಿರುಗಾಡುತಾ ಇದ್ದಾನೆ. ಈತನು ನನಗೂ ಮತ್ತು ನನ್ನ ಇತರ ಮಕ್ಕಳಿಗೂ ಮೋಸಮಾಡಬೇಕೆಂಬ ಇರಾದೆಯಿಂದ ಯಾವ ಪ್ರತಿಫಲವೂ ಇಲ್ಲದೆ ತನಗೆ ಬೇಕಾದವರ ಹೆಸರಿಗೆ ನೆಪಮಾತ್ರ ಪ್ರೋನೋಟುಗಳು ದಸ್ತಾವೇಜುಗಳು ವಗೈರೆ ಕಾಗದಪತ್ರಗಳನ್ನು ಬರೆದುಕೊಡುತಾ ಇದ್ದಾನೆಂತಲೂ ಮತ್ತು ಹೊರಗಿನಿಂದ ನನಗೆ ಬರತಕ್ಕ ಸಾಲಗಾರರಿಂದ ಹಣ ವಸೂಲು ಮಾಡಿಕೊಂಡಂತೆ ರಶೀದಿಗಳು ಕೊಡುವ ತರದೂದಿನಲ್ಲಿದ್ದಾನೆಂತಲೂ ನಾನು ವರ್ತಮಾನ ಕೇಳುತ್ತೇನೆ. ಆ ರೀತಿ ಸದರಿ ಬಸವಲಿಂಗಪ್ಪನಿಂದ ಯಾರಾದರೂ ಪ್ರೋನೋಟು ವಗೈರೆ ಕಾಗದಪತ್ರಗಳು ಬರಸಿಕೊಂಡಿದ್ದರೇ ಆಗಲೀ ಅಥವಾ ಇನ್ನುಮುಂದೆ ಬರಸಿಕೊಂಡರೇ ಆಗಲೀ ಅವುಗಳ್ಯಾವದಕ್ಕೂ ಕುಟುಂಬದ ಇತರ ಮೆಂಬರುಗಳೇ ಆಗಲೀ ಕುಟುಂಬದ ಆಸ್ತಿಗಳೇ ಆಗಲೀ ಜವಾಬ್ದಾರಿಯಾಗತಕ್ಕದ್ದಲ್ಲ. ಮತ್ತು ನನಗೆ ಹಣಕೊಡತಕ್ಕವರ್‍ಯಾರಾದರೂ ಆತನಿಗೆ ಹಣ ಕೊಟ್ಟರಾಗಲೀ ಅಥವಾ ರಶೀತಿಗಳು ಪಡೆದರಾಗಲೀ ನಾನು ಅದರಿಂದ ಬದ್ಧನಾಗುವದಿಲ್ಲವೆಂಬ ಸಂಗತಿಯನ್ನು ಈ ಮೂಲಕ ಎಲ್ಲರಿಗೂ ತಿಳಿಯಪಡಿಸಿರುತ್ತೆ.

ಪಲದರಗೌತಟರ ಮುರಿಗಪ್ಪನ ರುಜುವು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಳ್ಳ

8 ರಾಯಲ್ ಫೌಂಟೆನ್ ಪೆನ್

ಎಂಬ ಈ ಪೇನಾವನ್ನು ಅಮೇರಿಕಾ ದೇಶದಲ್ಲಿ ಮೇಲಾದ ಪ್ಲಾಟಿನಮ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿವಿಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಅಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮಾನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಳು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ

ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕ ಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿನಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವಕ್ಕೆ ತಂದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋಇಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,

ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

32 ಬಳ್ಳಾರಿ.

೧೯೨೨ನೆಯ ಇಸವಿ ಸೆಪ್ಟೆಂಬರ್ ತಾ|| ೧೭ ರಿಂದ ೧೯೨೨ನೆಯ ಸೆಪ್ಟೆಂಬರ್ ತಾ|| ೨೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಭಾದ್ರಪದ ಬಹುಳ ಏಕಾದಶಿಯಿಂದ ಆಶ್ವೀಜ ಶುದ್ಧ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
17	ಭಾನು	ಏಕಾ	32-18	ಪುಷ್ಯ	49-26	1
18	ಸೋಮ	ದ್ವಾದ	27-43	ಆಶ್ಲೇ	46-20	2
19	ಮಂಗಳ	ತ್ರಯೋ	22-32	ಮಖಾ	42-46	3
20	[1] ಬುಧ	ಚತು	16-50	ಪುಬ್ಬ	38-49	4
21	[2] ಗುರು	ಅಮಾ	10-50	ಉತ್ತ	34-37	5
22	[3] ಶುಕ್ರ	ಪಾ-ಉ	4-46 53-55	ಹಸ್ತ	30-20	6
23	ಶನಿ	ತದಿ	52-50	ಚಿತ್ತ	26-19	7

(1) ಮಹಾಲಯಾಮಾವಾಸ್ಯ. (2) ಸೂರ್ಯಗ್ರಹಣಂ. (3) ನವರಾತ್ರಾರಂಭಃ, ಜಯಲಕ್ಷ್ಮೀವ್ರತಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಂಕ್ಷಜ್ಞ ನಕ್ಷತ್ರ ಮೋಪರಾಜೀಯಾತ್ ||

ಶ್ರೀಮತ್ಕೃಷ್ಣನೃಪಾಲನುತ್ತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ರ್ಯಾಲವಾಲಂವಲು ||

ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಯಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]

[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಸೆಪ್ಟೆಂಬರ್ ತಾರೀಖು ೨೪ ನೆಯ ಭಾನುವಾರ. (ಸಂಚಿಕೆ ೩೯

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಮಾಲ್ ಟೈಪ್ ಅಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗತಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,

ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಖಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆಂಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ,

36 ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಎನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಎನ್ನುವ ಸಂಗೀತವಾದ್ಯವನ್ನು ಈ ಪಟದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು

ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧ ಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋಪ್ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಫ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.



ವಿಳಾಸ—ರತ್ನಂ ಅಂಡ್ ಬ್ರದರ್ಸ್,

9 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಸಿನೆಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಷೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡವನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.

,, ನಂ. 2 ರೂ. 7—8—0.

27 ವಿಳಾಸ—ಎಸ್. ಪಾಲ್ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

9

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.

ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0

,, ,, ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,

ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಶ್ರೀ

ಜಯದೇವ ಔಷಧಾಲಯ

(ಮೊದಲು ರೈಲ್ವೆಬುಕಿಂಗ್ ಆಫೀಸ್ ಇದ್ದ ಕಟ್ಟಡದಲ್ಲಿ)
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಔಷಧಾಲಯದಲ್ಲಿ ಎಲ್ಲ ವಿಧದ ರೋಗಗಳಿಗೂ ಅನುಗುಣವಾದ ಚಿಕಿತ್ಸೆಯನ್ನು ಹೊಂದಬಹುದು. ರೋಗಿಗಳ ಪರೀಕ್ಷೆಯು ಅನುಭವಸ್ಥರಾದ ಡಾಕ್ಟರಿಂದ ಉಚಿತವಾಗಿ ನಡಿಸಲ್ಪಡುವುದು.

ಎಲ್ಲ ವಿಧದ ಪೇಟೆಂಟ್ ಔಷಧಗಳೂ ಇಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೨೨ನೆಯ ಇಸವಿಯ ಸೆಪ್ಟಂಬರ್ ತಾ|| ೨೪ನೆಯ ಭಾನುವಾರ.

ದಿವಾನರ ಬಳಿಗೆ ವೀರಶೈವರ ರಾಯಭಾರ.

ದಾವಣಗೆರೆಯ ಸಭೆಯಲ್ಲಿ ನಿರ್ಧಾರವಾಗಿದ್ದ ಮೇರೆಗೆ ವೀರಶೈವರ ರಾಯಭಾರವು ಕಳೆದ ತಾ|| 14ನೆ ಬೆಳಗ್ಗೆ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ., ಯವರ ಅಗ್ರೇಸರತ್ವದಿಂದ ದಿವಾನರ ಸನ್ನಿಧಿಗೆ ಹೋಗಿದ್ದಿತು. ಈ ರಾಯಭಾರದಲ್ಲಿ ಮ|| ಗಳಾದ ದಾವಣಗೆರೆಯ ಟಿ ಷಡಕ್ಷರಪ್ಪಯ್ಯನವರು, ಉರುವುಕೊಂಡೆ ಚೆನ್ನಬಸವಪ್ಪನವರು, ಮೈಸೂರು ಮಠದ ಚನ್ನವೀರಪ್ಪಯ್ಯನವರು, ಶಿವಮೊಗ್ಗೆಯ ಎಚ್. ಜಿ. ಬಸವಪ್ಪನವರು (ಶಾಸನಸಭಾಸಭಿಕರು) ಬೀರೂರಿನ ಶಿವಲಿಂಗಪ್ಪಯ್ಯನವರು, ನರಸಿಂಹರಾಜಪುರದ ಇಂ. ಶಾಂತಪ್ಪಶೆಟ್ಟರು. ತಿಪಟೂರಿನ ಡಿ. ಎಸ್. ಮಲ್ಲಪ್ಪನವರು, ತುಮಕೂರಿನ ಪ್ಲೀಡರ್ ಗುರುಸಂಗಾರ್ಯರು, ಸಿಡಲಘಟ್ಟದ ಎಸ್. ಹಂಪಯ್ಯನವರು, ಮೈಸೂರಿನ ವೈ. ವಿರೂಪಾಕ್ಷಯ್ಯನವರು, ಬೆಂಗಳೂರಿನ ಅಡ್ವೋಕೇಟ್ ಜಿ. ಪರಮಶಿವಯ್ಯನವರು (ಶಾಸನ ಸಭಾಸಭಿಕರು) ಪಿ. ಎಂ. ಬಸಪ್ಪನವರು, ಅರಳೆಪೇಟೆ ಯಜಮಾನ್ ಬಸವಪ್ಪನವರು, ಕಂಟ್ರಾಕ್ಟರ್ ಟಿ. ರಾಚಪ್ಪನವರು, (ಬೆಂಚ್ ಮ್ಯಾಜಿಸ್ಟ್ರೇಟರು) ಮತ್ತು ಟಿ. ನಂಜಪ್ಪನವರು (ಬೆಂಚ್‌ಮ್ಯಾಜಿಸ್ಟ್ರೇಟರು) ಈ ದೊಡ್ಡಮನುಷ್ಯರುಗಳೆಲ್ಲಾ ದಯಮಾಡಿಸಿದ್ದರು. ಪ್ರಥಮದಲ್ಲಿ ದಿ|| ಬ|| ಸೆಟ್ಟರು ತಮ್ಮ ಜತೆಯ ದೊಡ್ಡಮನುಷ್ಯರನ್ನೆಲ್ಲಾ ದಿವಾನರಿಗೆ ಪರಿಚಯಮಾಡಿಸಿದರು. ಬಳಿಕ ರಾಯಭಾರದ ವಿಷಯವನ್ನು ತಿಳಿಯಿಸಲು ದಿವಾನರು ಅಪ್ಪಣೆಕೊಡಿಸಿದ ಕೂಡಲೇ ದಿ|| ಬ|| ಸೆಟ್ಟರು ಸರ್ಕಾರಿ ಸಂಸ್ಕೃತ ಕಾಲೇಜುಗಳಿಗೆ ವೀರಶೈವರ ಮತ್ತು ಇತರ ಹಿಂದುಳಿದ ಜನವರ್ಗಗಳ ವಿದ್ಯಾರ್ಥಿಗಳನ್ನು ಸೇರಿಸಬೇಕಾದ ಅವಶ್ಯಕತೆಯನ್ನು ಕುರಿತು ಸಯುಕ್ತಿಕವಾದ ಭಾಷಣದ ಮೂಲಕ ಅರಿಕೆಮಾಡಿಕೊಂಡರು. ಅದರ ಮುಖ್ಯಸಾರಾಂಶವೇನೆಂದರೆ–ಸರ್ಕಾರದವರು ಸಂಸ್ಕೃತ ವಿದ್ಯಾಭ್ಯಾಸಕ್ರಮವನ್ನು ಉತ್ತಮಗೊಳಿಸುವ ಸಲುವಾಗಿ ತಕ್ಕ ಸೂಚನೆಗಳನ್ನು ಕೊಡಬೇಕೆಂದು ಏರ್ಪಡಿಸಿದ್ದ ಸಂಘದವರು ಕೊಟ್ಟ ವರದಿಯನ್ನು ಪ್ರಕಟಿಸಿ, ಅದರ ಮೇಲೆ ಪ್ರಜಾಭಿಪ್ರಾಯವನ್ನು ತಿಳಿಯಬೇಕೆಂದು ಅಪೇಕ್ಷಿಸಿದ್ದ ಪ್ರಕಾರಕ್ಕೆ ಸಂಸ್ಥಾನದ ಅನೇಕ ಸಂಘಗಳವರು ತಂತಮ್ಮ ಅಭಿಪ್ರಾಯಗಳನ್ನು ತಿಳಿಯಿಸಿರುವುದಲ್ಲದೆ ಮೈಸೂರು ದೇಶದ ಮತ್ತು ಹೊರಗಣನಾಡಿನ ವೃತ್ತಪತ್ರಿಕೆಗಳಲ್ಲೂ ಬಹಳವಾಗಿ ಚರ್ಚೆನಡೆದು ಅಭಿಪ್ರಾಯಗಳು ಕೊಡಲ್ಪಟ್ಟಿರುತ್ತವೆ. ದಾವಣಗೆರೆಯಲ್ಲಿ ಯಾವದ್ದೇಶೀಯ ವೀರಶೈವ ಸಭೆಯು ನೆರೆದಿದ್ದಿತು. ಅದರಲ್ಲಿ ನಾನು ಅಧ್ಯಕ್ಷನಾಗಿದ್ದು ಮಾಡಿದ ಭಾಷಣದ ಪ್ರತಿಯನ್ನೂ ಅಲ್ಲಿ ಆದ ನಿರ್ಧಾರಗಳನ್ನೂ ತಮ್ಮ ಬಳಿಗೆ ಕಳುಹಿಸಿಕೊಟ್ಟದಾಗಿದೆ. ಅಲ್ಲದೆ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದಿಂದ ಒಂದು ಮೆಮೊರಾಂಡಮ್ಮನ್ನೂ ಕಳುಹಿಸಿಕೊಟ್ಟಿದೆ. ನಿಯುಕ್ತಸಂಘದವರು ತಮ್ಮ ವರದಿಯಲ್ಲಿ ಜಯಪುರ ಕಾಶಿ ಕಲ್ಕತ್ತಾಪಟ್ಟಣಗಳ ಪ್ರೌಢವಿದ್ಯಾಲಯಗಳಲ್ಲಿ ನಡೆಯುತ್ತಿರುವ ಪಾಠಕ್ರಮವನ್ನು ಉದಹರಿಸಿದ್ದಾರೆ. ಇವುಗಳೊಳಗೆ ಜಯಪುರದ ಮಹಾಪಾಠಶಾಲೆಯಲ್ಲಿ ದ್ವಿಜರಿಗೆ (ತ್ರಿವರ್ಣದವರಿಗೆಲ್ಲಾ) ಪ್ರವೇಶವುಂಟು, ಕಾಶಿಯಲ್ಲಿ ಅಧ್ಯಾಪಕರೊಪ್ಪಿದರೆ ಅವರುಗಳನ್ನು ಸೇರಿಸಿಕೊಳ್ಳಬಹುದು, ಕಲ್ಕತ್ತಾದಲ್ಲಿ ನಿರ್ಬಂಧವೇನೂ ಇಲ್ಲವೆಂದು ಹೇಳಲ್ಪಟ್ಟಿದೆ. ಕಾಶಿಯಲ್ಲಿ ನೂರಾರು ಮಂದಿ ವೀರಶೈವ ವಿದ್ಯಾರ್ಥಿಗಳು ವೇದಶಾಸ್ತ್ರಾದಿ ಅಭ್ಯಾಸಗಳನ್ನು ಮಾಡಿ ಪ್ರಶಸ್ತಿಗಳನ್ನು ಪಡೆದೂ ಪಡೆಯುತ್ತಲೂ ಇದ್ದಾರೆ. ಮೈಸೂರಿನ ವಿದ್ಯಾರ್ಥಿಯೊಬ್ಬರು ಅರಮನೆಯಿಂದ ವೇತನವನ್ನು ಪಡೆದು ಅಲ್ಲಿ ಶಾಸ್ತ್ರಾಭ್ಯಾಸಮಾಡುತ್ತಿರುವರು. ಕಲ್ಕತ್ತಾದಲ್ಲಾದರೊ ಯಾವ ಅಭ್ಯಂತರವೂ ಇಲ್ಲದೆ ಯಾರು ಬೇಕಾಗಿದ್ದರೂ ಶಾಸ್ತ್ರಾದಿ ಅಭ್ಯಾಸಗಳನ್ನು ಮಾಡಬಹುದಾಗಿದೆ. ಸಂಘದವರು ಸೂಚಿಸಿರುವ ಮೂರು ಪ್ರೌಢಶಾಲೆಗಳಲ್ಲದೆ ಬರೋಡಾ, ಕೊಲ್ಹಾಪುರ, ಇಂದೋರು, ಕಾಶ್ಮೀರ, ಲಾಹೋರು ಮೊದಲಾದ ಊರುಗಳ ಕಡೆಗಳಲ್ಲಿರುವ ಸಂಸ್ಕೃತ ಕಲಾಶಾಲೆಗಳಲ್ಲೆಲ್ಲಾ ಸಕಲರಿಗೂ ಓದಲವಕಾಶವಿದೆ. ಚೌಡದಾನಪುರದ ಪಂಡಿತ ವಿರೂಪಾಕ್ಷ ಒಡೆಯರು ಕಾಶೀ ಕಲಕತ್ತಾಗಳಲ್ಲಿ ವೇದಶಾಸ್ತ್ರಾಭ್ಯಾಸಗಳನ್ನು ಮಾಡಿ ಘನತರವಾದ ಪ್ರಶಸ್ತಿಯನ್ನು ಪಡೆದು ಈಗ ಇಂದೋರು ಸಂಸ್ಕೃತ ಕಾಲೇಜಿನಲ್ಲಿ ವೇದಭಾಷ್ಯ ಬೋಧಕರಾಗಿರುವರು. ಆ ಪದವಿಯನ್ನು ಅವರಿಗೆ ಕೊಡುವ ವಿಷಯದಲ್ಲಿ ಅಲ್ಲಿಯ ಬ್ರಾಹ್ಮಣರು ಎಷ್ಟೋ ವಿರೋಧಿಸಿದರೂ ಮಹಾರಾಜರು ಅದನ್ನು ಲಕ್ಷಿಸಲಿಲ್ಲ. ಈ ಒಡೆಯರು ನಮ್ಮ ದೇಶಕ್ಕೂ ಬಂದಿದ್ದರು. ವೇದಶಾಸ್ತ್ರಾದಿ ವಿಷಯದಲ್ಲಿ ಉಪನ್ಯಾಸಗಳನ್ನು ಮಾಡಿದರು. ಇಲ್ಲಿಯ ಬ್ರಾಹ್ಮಣ ಪಂಡಿತರುಗಳು ಅದನ್ನು ಕೇಳಿ ಅವರ ಪಾಂಡಿತ್ಯಕ್ಕೆ ಮೆಚ್ಚಿದರು. ಪಾಶ್ಚಾತ್ಯದೇಶೀಯರಾದ ಸರ್ ಮೂನಿಯರ್ ವಿಲಿಯಮ್ಸ್, ಜೋನ್ಸ್, ಮ್ಯಾಕ್ಸ್‌ಮುಲ್ಲರ್ ಮೊದಲಾದ ಮಹಾಪಂಡಿತರುಗಳು ವೇದಾಭ್ಯಾಸವನ್ನು ಮಾಡಿ ಅವುಗಳಮೇಲೆ ವ್ಯಾಖ್ಯಾನವನ್ನು ಬರೆದು ಪ್ರಪಂಚಕ್ಕೆಲ್ಲಾ ತಿಳಿಯುವಂತೆ ಪ್ರಕಟಿಸಿದ್ದಾರೆ. ಹೀಗಿರುವಲ್ಲಿ ಈ ದೇಶದ ಕೆಲ ಬ್ರಾಹ್ಮಣರು ಸ್ವದೇಶೀಯರಾದ ಇತರ ಸಹೋದರ ಪ್ರಜೆಗಳಾರೂ ತಮ್ಮೊಡನೆ ವೇದವೇದಾಂಗಗಳನ್ನೋದಕೂಡದೆಂದು ವಾದಿಸುತ್ತಿರುವುದು ಎಷ್ಟು ನ್ಯಾಯವೋ ವಿಚಾರಮಾಡಬೇಕು. ವೇದವನ್ನು ಕೇಳಿದ ಬ್ರಾಹ್ಮಣೇತರರ ಕಿವಿಗೆ ಸೀಸವನ್ನು ಕಾಯಿಸಿ ಹುಯ್ಯಿಸಬೇಕೆಂದು ಮನುಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಆದರೆ ನಮ್ಮ ಮಹಾರಾಜರ ಆಳಿಕೆಯಲ್ಲಿ ಹಾಗೆ ಮಾಡಲಾದೀತೆ? ಇದೆಲ್ಲಾ ಶತಮಾನಗಳ ಹಿಂದಣಮಾತು. ಇದು 20ನೆಯ ಶತಮಾನ. ಸರ್ವರೂ ಸಮಾನವಾದ ಹಕ್ಕನ್ನು ಬಯಸತಕ್ಕ ಕಾಲ. ಇತರರಾರೂ ಶಾಸ್ತ್ರಾಭ್ಯಾಸ ನಡೆಯಿಸಕೂಡದೆಂದು ಹೇಳಿ ನಿರೋಧಿಸುವ ಕಾಲವು ಗತಿಸಿಹೋಯಿತು. ನಮ್ಮ ವೀರಶೈವ ಮತಗ್ರಂಥಗಳೆಲ್ಲವೂ ಸಂಸ್ಕೃತಭಾಷಾಮಯವಾಗಿವೆ. ನಮ್ಮ ನಿತ್ಯಕರ್ಮಮಂತ್ರಗಳೂ ಶುಭಾಶುಭ ಕರ್ಮಪ್ರಯೋಗಗಳೂ ಗೀರ್ವಾಣಭಾಷೆಯಲ್ಲಿವೆ. ಹಿಂದೆ ನಮ್ಮ ಮತದಲ್ಲಿ ಅನೇಕ ಸಿದ್ಧಾಂತಿಗಳೂ ಭಾಷ್ಯಾಚಾರ್ಯರೂ ಕವಿಗಳೂ ಅನೇಕರಿದ್ದರೆಂಬುದನ್ನು ರಾ|| ಬ|| ನರಸಿಂಹಾಚಾರ್ಯರು ತಿಳಿಯಿಸಿರುತ್ತಾರೆ. ಈಗಲೂ ಅನೇಕ ಪಂಡಿತರಿದ್ದಾರೆ. ಪೂರ್ವಕಾಲದಿಂದಲೂ ಇದ್ದಂತೆ ಸಂಸ್ಕೃತಾಭ್ಯಾಸವು ಈಗಲೂ ನಮಗೆ ಅವಶ್ಯಕವಾಗಿದೆ. ಜೈನರೂ ಬೌದ್ಧರೂ ಹಿಂದುಗಳಲ್ಲದಿದ್ದರೂ ಅವರಲ್ಲಿ ಎಂಥ ಅಘಟನಘಟನ ಸಾಮರ್ಥ್ಯವುಳ್ಳ ಪಂಡಿತರಿದ್ದರೆಂಬುದು ವಿದ್ವಜ್ಜನರಿಗೆಲ್ಲಾ ಗೊತ್ತು. ಸಂಸ್ಕೃತಾಭ್ಯಾಸದ ಆವಶ್ಯಕತೆಯು ಹೆಚ್ಚಾಗಿರುವ ವೀರಶೈವರನ್ನು ಸರ್ಕಾರಿ ಸಂಸ್ಕೃತಕಾಲೇಜುಗಳಿಗೆ ಆವಶ್ಯಕವಾಗಿ ಸೇರಿಸಬೇಕು. ಸಂಸ್ಥಾನದಲ್ಲಿ ಸರ್ಕಾರದ ಕಾಲೇಜಿದ್ದರೂ ಪ್ರವೇಶಾನುಕೂಲ್ಯವಿಲ್ಲದ ಕಾರಣ ನಮ್ಮ ವಿದ್ಯಾರ್ಥಿಗಳು ಹೊರಗಣ ದೇಶಗಳಿಗೆ ಹೋಗಿ ಕಷ್ಟಪಟ್ಟು ಓದಬೇಕಾಗಿದೆ. ಅವಶ್ಯಕತೆಯುಳ್ಳ ಇತರರನ್ನೂ ಸಂಸ್ಕೃತ ಕಾಲೇಜುಗಳಿಗೆ ಸೇರಿಸುವುದಾದರೆ ನಮ್ಮ ಅಭ್ಯಂತರವೇನೂ ಇಲ್ಲ. ಅರ್ಕಾಟು ಶ್ರೀನಿವಾಸಾಚಾರ್ಯರ ಕಾಲದಲ್ಲಿ ಬೆಂಗಳೂರು ಪಾಠಶಾಲೆಗೆ ಇತರರನ್ನು ಸೇರಿಸಲು ಏರ್ಪಡಿಸಿದ್ದುದರ ಮೇಲೆ ಕೆಲ ವೀರಶೈವ ವಿದ್ಯಾರ್ಥಿಗಳೂ ಮತ್ತು ತಿಯಾಜಾತಿಯ ಡಾಕ್ಟರ್ ಪಲ್ಪುಯವರ ತಮ್ಮನೂ ಸೇರಿ ಓದುತ್ತಿದ್ದರು. ವೇದಶಾಸ್ತ್ರಗಳ ಪಾಠವನ್ನು ಇತರರಿಗೆ ಹೇಳಲು ಬ್ರಾಹ್ಮಣ ಪಂಡಿತರು ಒಪ್ಪುವುದಿಲ್ಲವೆಂದು ಹೇಳುವ ಮಾತನ್ನು ನಂಬಲಾಗುವುದಿಲ್ಲ. ಯಾಕೆಂದರೆ ಅವರಲ್ಲಿ ಅನೇಕರು ಇತರರಿಗೆ ಪಾಠಗಳನ್ನು ಹೇಳಿಯೂ ಹೇಳುತ್ತಲೂ ಇದ್ದಾರೆ. ಎಲ್ಲೋ ಕೆಲ ಸಂಕುಚಿತಮನಸ್ಕರು ಮಾತ್ರ ಈ ವಿಷಯದಲ್ಲಿ ಪ್ರತಿಭಟಿಸಿ ಕೋಲಾಹಲ ಮಾಡುತ್ತಿದ್ದಾರಲ್ಲದೆ ಯುಕ್ತಾಯುಕ್ತ ವಿಮರ್ಶನವಿಚಕ್ಷಣರಾದ ಉದಾರಮತಿ ಪಂಡಿತರುಗಳು ತಿರಸ್ಕರಿಸುವಂತೆ ತೋರುವುದಿಲ್ಲ. ವೀರಶೈವ ಪಂಡಿತರುಗಳು ಸರ್ಕಾರಿ ಪಾಠಶಾಲೆಗಳಲ್ಲಿ ಯಾರಿಗೆ ಬೇಕಾದರೂ ಪಾಠಹೇಳಲು ತಿರಸ್ಕರಿಸುವುದಿಲ್ಲ. ಈಗಿರುವ ಸಂಸ್ಕೃತಪಾಠಶಾಲೆಗಳು "ಏಡೆಡ್" ಶಾಲೆಗಳಾಗಿದ್ದಲ್ಲಿ ನಾವು ಅವುಗಳ ಪ್ರವೇಶಕ್ಕಾಗಿ ಕುತೂಹಲಪಟ್ಟು ಇಷ್ಟು ಒತ್ತಿ ಹೇಳಿಕೊಳ್ಳುತ್ತಿರಲಿಲ್ಲ. ಆ ಪಾಠಶಾಲೆಗಳು ಸಂಸ್ಥಾನದ ಬೊಕ್ಕಸದ ಧನವ್ಯಯದಿಂದ ನಡೆಯಿಸಲ್ಪಡುತ್ತಿರುವ ಕಾರಣ, ಅವುಗಳಲ್ಲಿ ಸೇರಿ ಓದಲು ಎಲ್ಲರಿಗೂ ಹಕ್ಕಿರುವುದೆಂಬ ನ್ಯಾಯವಾದ ಕಾರಣದಿಂದಲೇ ನಾವು ಹೋರಾಡುತ್ತಿದ್ದೇವೆ. ಜಸ್ಟಿಸ್ ಸದಾಶಿವಯ್ಯರ್‌ರವರು ಸರ್ಕಾರಿ ಪಾಠಶಾಲೆಗಳಿಗೆ ಸೇರಿ ಓದಲು ಪ್ರತಿಯೊಬ್ಬ ಪ್ರಜೆಗೂ ಅವಕಾಶವಿರಬೇಕೆಂದು ಅಭಿಪ್ರಾಯಪಟ್ಟು ಮದ್ರಾಸಿನ ವೃತ್ತಪತ್ರಿಕೆಗೆ ಬರೆದಿರುತ್ತಾರೆ, ಪರಾಮರಿಸಬಹುದು (ಆ ಪತ್ರಿಕೆಯನ್ನೇ ಕೊಟ್ಟರು). ನಮ್ಮ ಜಸ್ಟಿಸ್ ಚಂದ್ರಶೇಖರಯ್ಯರ್‌ರವರಿಗೂ ಇದೇ ಉದಾರಾಭಿಪ್ರಾಯವಿದೆ. ಇವೆಲ್ಲ ಕಾರಣಗಳಿಂದ ತಾವು ನಮ್ಮಗಳ ಪ್ರಾರ್ಥನೆಯ ಸಮುಚಿತತ್ವವನ್ನು ಚೆನ್ನಾಗಿ ಗಮನಿಸಿ ಈ ವಿಷಯದಲ್ಲಿ ನ್ಯಾಯಸಮ್ಮತವೂ ಲೋಕಸಮ್ಮತವೂ ಆದ ತೀರ್ಮಾನವಾಗುವಂತೆ ಮಾಡಿ, ವೀರಶೈವರಿಗೂ ಇತರರಿಗೂ ಸರ್ಕಾರಿ ಸಂಸ್ಕೃತಪಾಠಶಾಲೆಗಳ ಅಭ್ಯಾಸಕ್ಕೆ ಅವಕಾಶವುಂಟಾಗುವಂತೆ ಅನುಕೂಲಪಡಿಸಿ ಶಾಶ್ವತವಾದ ಕೀರ್ತಿಯನ್ನು ಪಡೆಯುವವರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಹೀಗೆ ಬಿನ್ನಯಿಸುವಾಗ್ಗೆ ಮಧ್ಯಮಧ್ಯದಲ್ಲಿ ದಿವಾನರು ಕೆಲ ಪ್ರಶ್ನೆಗಳನ್ನು ಮಾಡಿ ಅವುಗಳಿಗೆಲ್ಲಾ ಶೆಟ್ಟರಮುಖದಿಂದಲೇ ಸಮರ್ಪಕವಾದ ಉತ್ತರಗಳನ್ನು ಪಡೆದರು. ಕಡೆಗೆ ದಿವಾನರು ಕೊಟ್ಟ ಉತ್ತರದ ಮುಖ್ಯಾಭಿಪ್ರಾಯವೇನೆಂದರೆ— ನಿಯುಕ್ತಸಂಘದವರ ವರದಿಯಮೇಲೆ ಅನೇಕ ಪಂಗಡಗಳವರ ಮತ್ತು ಸಂಘಗಳ ಅಭಿಪ್ರಾಯಗಳು ಸರ್ಕಾರಕ್ಕೆ ಬಂದಿವೆ. ಈಗ ತಾವು ಹೇಳಿದ ವಿಚಾರವೆಲ್ಲವನ್ನೂ ಕೇಳಿದೆನು. ಪಾಶ್ಚಾತ್ಯ ಪಂಡಿತರೆಲ್ಲಾ ವೇದಾಧ್ಯಯನ ಮಾಡಿ ವ್ಯಾಖ್ಯಾನಗಳನ್ನು ಬರೆದು ಹರಡುತ್ತಿರುವಾಗ ಸರ್ವ ಜನೋಪಯುಕ್ತವಾದ ವಿದ್ಯೆಯನ್ನು ಇಂಥವರೇ ಕಲಿಯಬೇಕೆಂದು ನಿರ್ಬಂಧಪಡಿಸುವುದು ನ್ಯಾಯವಲ್ಲವೆಂದು ಹೇಳುವುದು ನನ್ನ ಸ್ವಕೀಯಾಭಿಪ್ರಾಯವಾಗಿರುತ್ತದೆ. ವಂಶಪಾರಂಪರ್ಯದಿಂದ ಬಂದಿರುವ ವಿದ್ಯೆಯನ್ನು ಇತರರಿಗೆ ಹೇಳಿಕೊಡುವುದಿಲ್ಲವೆನ್ನುವವರನ್ನು ಸರ್ಕಾರದವರು ಬಲಾತ್ಕಾರಪಡಿಸಲಾಗುವುದಿಲ್ಲ. ನಿಮ್ಮ ಜನರಲ್ಲೂ ಸಂಸ್ಕೃತಪಂಡಿತರೂ ಕವಿಗಳೂ ಇದ್ದಾರೆಂಬುದನ್ನು ಕೇಳಬಲ್ಲೆ. ಬೆಂಗಳೂರಿನಲ್ಲಿರುವ ಸಂಸ್ಕೃತ ಕಾಲೇಜನ್ನು ಸರ್ವರ ಉಪಯೋಗಕ್ಕೂ ಅನುಕೂಲಿಸುವಂತೆ ಮಾಡಿದರೆ ಸಾಲದೆ? ಈ ವಿಚಾರದಲ್ಲಿ ಇನ್ನೂ ಚೆನ್ನಾಗಿ ವಿಚಾರಮಾಡಿ ಆದಷ್ಟು ಬೇಗನೆ ಇತ್ಯರ್ಥಮಾಡಲಾಗುತ್ತದೆ" ಎಂದು ಅಪ್ಪಣೆ ಕೊಡಿಸಿದರು. ತಮ್ಮ ರಾಯಭಾರಕ್ಕೆ ಅವಕಾಶಕೊಟ್ಟು ಸಮಾಧಾನದಿಂದ ಸಂಗತಿಯನ್ನೆಲ್ಲಾ ಕೇಳಿದುದಕ್ಕಾಗಿ ದಿವಾನರಿಗೆ ರಾಯಭಾರಿಗಳ ಪರವಾದ ವಂದನೆಯನ್ನು ಶೆಟ್ಟರು ತಿಳಿಸಿದಬಳಿಕ ಅಪ್ಪಣೆ ಪಡೆದು ಸರ್ವರೂ ತೆರಳಿದರು.

ಈ ಸಂಬಂಧದಲ್ಲಿ ನಮ್ಮ ದಿ|| ಬ|| ಕೆ. ಪಿ. ಪಿ. ಶೆಟ್ಟರವರು ಆದಿಯಿಂದಲೂ ಮುತುವರ್ಜಿವಹಿಸಿ ಮಾಡಬೇಕಾಗಿದ್ದ ಕಾರ್ಯವನ್ನೆಲ್ಲಾ ಸಾಂಗವಾಗಿ ನೆರವೇರಿಸಿ ಸಮಾಜದ ಕೃತಜ್ಞತಾವಂದನೆಗಳಿಗೆ ಸಂಪೂರ್ಣ ಪಾತ್ರರಾದರಲ್ಲದೆ, ಸಮಾಜದವರು ಅವರಲ್ಲಿಟ್ಟಿರುವ ಬರವಸೆಯನ್ನೂ ಗೌರವವನ್ನೂ ಸಾರ್ಥಕಪಡಿಸಿಕೊಂಡಿರುವುದಕ್ಕಾಗಿ ಸಂತೋಷಿಸುತ್ತೇವೆ. ದೇಶೀಯ ವೀರಶೈವರ ಮಹಾಸಭೆಯನ್ನು ಕೂಡಿಸಲು ಧನವ್ಯಯಾದಿಗಳ ಭಾರವನ್ನು ವಹಿಸಿ ಆದಿಯಿಂದಲೂ ಈ ಭಾಗದಲ್ಲಿ ತುಂಬಾ ಮುತುವರ್ಜಿಯನ್ನು ತೋರಿಸಿದ ದಾವಣಗೆರೆಯ ವಿರಶೈವ ಮಹಾಜನರ ಉಚಿತಜ್ಞತೆಯು ಕೂಡ ಅಭಿನಂದ್ಯವಾಗಿ ಇತರರಿಗೆಲ್ಲಾ ಮಾರ್ಗದರ್ಶಕವಾಯಿತು. "ಹೊಳೆಯುತನಕ ಓಟ, ದೊರೆಯುತನಕದೂರು" ಎಂಬ ಗಾಧೆಯಂತೆ ಕರ್ತವ್ಯಕರ್ಮವೇನೋ ಅದನ್ನು ಪ್ರಜೆಗಳು ಮಾಡಿದುದಾಯಿತು. "ಕರ್ಮಣ್ಯೇವಾಧಿಕಾರಸ್ತೇ" ಎಂಬ ಗೀತೋಕ್ತಿಯಂತೆ ರಾಜಭಕ್ತಿಯಿಂದ ನಮ್ಮ ಕಷ್ಟವನ್ನು ಹೇಳಿಕೊಳ್ಳುವ ಕೆಲಸವು ನಮ್ಮದು. ಇಹಪರಗಳ ದೃಷ್ಟಿಯಿಂದ ಜಗತ್ತೂ ದೇವರೂ ಒಪ್ಪುವಂಥ ತೀರ್ಮಾನವನ್ನು ಕೊಟ್ಟು ಪ್ರತ್ಯಕ್ಷ ದೈವವೆಂದು ಪ್ರಜೆಗಳಿಟ್ಟುಕೊಂಡಿರುವ ಬರವಸೆಯನ್ನು ಯಥಾರ್ಥಗೊಳಿಸಿಕೊಳ್ಳುವ ಭಾರವು "ಸತ್ಯಮೇವೋದ್ಧರಾಮ್ಯಹಂ" ಎಂಬ ಬಿರುದನ್ನಾಂತಿರುವ ಶ್ರೀಮನ್ಮಹಾರಾಜರಿಗೂ ಅವರ ಪ್ರಭುತ್ವಕ್ಕೂ ಸೇರಿರುವುದು.

ಮಧ್ಯದಲ್ಲಿ ದಿವಾನರು ಮಾಡಿದ ಪ್ರಶ್ನಗಳಲ್ಲಿ—ಈ ವಿಷಯವಾಗಿ ವೀರಶೈವರೇ ಹೆಚ್ಚಾಗಿ ಕುತೂಹಲಪಡುತ್ತಿರುವಂತೆ ಕೆಂಡುಬಂದಿದೆ ಎಂದು ತಿಳಿಯಿಸಿದರು. ಇದು ನಿಜವಾದ ಮಾತು. ಯಾರಿಗೆ ಹಸಿವು ಹೆಚ್ಚಾಗಿರುವುದೋ ಅವರಿಗೇ ಅನ್ನಾತುರವು ಹೆಚ್ಚಾಗಿರುವುದು ಸಹಜವೇ ತಾನೇ? ವಿದ್ಯಾಭ್ಯಾಸದ ವಿಷಯದಲ್ಲಿ ಇಂಥವರೇ ಕಲಿಯಬೇಕೆಂದು ನಿರ್ಬಂಧಪಡಿಸುವುದು ನ್ಯಾಯವಲ್ಲವೆಂದು ದಿವಾನರು ಸ್ವಕೀಯಾಭಿಪ್ರಾಯವನ್ನು ಕೊಟ್ಟಿರುವುದಕ್ಕಾಗಿ ನಾವು ಸಂತೋಷಿಸುತ್ತೇವೆ. ಇದರಿಂದ ಅವರ ನ್ಯಾಯಪ್ರೀತಿ ನಿಷ್ಪಕ್ಷಪಾತಿತ್ವಗಳು ವ್ಯಕ್ತವಾಗಿರುತ್ತವೆ. ವೀರಶೈವರೂ ಇತರರೂ ಈ ಸಂಬಂಧದಲ್ಲಿ ಮಾಡಿರುವ ಚಳವಳವೂ ಕೋರಿಕೆಯೂ ನ್ಯಾಯವಾದುವೆಂದು ಅವರ ಮನೋದೇವತೆಯು ಒಪ್ಪಿದಂತಾಯಿತು. ಶ್ರೀಮನ್ಮಹಾರಾಜರ ಚಿತ್ತವು ಕೂಡ ಇದಕ್ಕೆ ವ್ಯತಿರಿಕ್ತವಾಗಿರಲಾರದು. ನಮ್ಮ ಪ್ರಯತ್ನಕ್ಕೆ ಮುಖ್ಯ ಫಲವಾಯಿತೆಂದು ಹೇಳಬಹುದು. ಈ ಮನಸ್ಸಾಕ್ಷಿಗೆ ವಿರುದ್ಧವಾಗಿ ಒಂದು ವೇಳೆ ತೀರ್ಮಾನವು ಕೊಡಲ್ಪಟ್ಟರೆ ಅದರ ಉತ್ತರವಾದಿತ್ವವು ಅವರಿಗೇ ಸೇರುವುದು. ಮನಸ್ಸಿನಲ್ಲೊಂದು ಕಾರ್ಯದಲ್ಲೊಂದು ತೆರನಾಗಿ ಮಾಡುವುದು ಮಹನೀಯರ ಕೆಲಸವೆಂದು ಯಾರೂ ನಂಬಲಾರರು.

ಬೆಂಗಳೂರು ಸಂಸ್ಕೃತ ಕಾಲೇಜಿನಲ್ಲೊಂದರಲ್ಲಿ ಎಲ್ಲರಿಗೂ ಅವಕಾಶಕೊಟ್ಟರೆ ಸಾಲದೆ? ಎಂದು ದಿವಾನರು ಪ್ರಶ್ನೆ ಮಾಡಿರುತ್ತಾರೆ. ಮಾಡಿದ ತೀರ್ಮಾನವು ಹೆಣ್ಣು ಅಥವಾ ಗಂಡು ಎಂಬುದರಲ್ಲಾವುದೊಂದನ್ನಾದರೂ ನಿರ್ಧರಿಸಿದಂತಿರಬೇಕು; ದೆಹಲೀ ದೀಪದಂತಾಗಬಾರದು. ಮತ್ತು ಪಾಠಕ್ರಮಗಳು ಒಬ್ಬರಿಗೊಂದು ಒಬ್ಬರಿಗೊಂದು ತೆರನಾಗಿ ಪಕ್ಷಪಾತದಿಂದ ನಡೆಯುವುದಕ್ಕವಕಾಶವಿರದೆ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ನಡೆಯುವಂತೆಯೇ ಅವರಜತೆಯಲ್ಲಿಯೇ ನಡೆಯುವ ಸೌಕರ್ಯವಿರಬೇಕು. ಸಂಸ್ಕೃತಾಭ್ಯಾಸಕ್ಕೆ ಕೇವಲ ಬಡವಿದ್ಯಾರ್ಥಿಗಳು ಬರುವುದೇ ಹೆಚ್ಚಾಗಿರುವುದರಿಂದ ಒಂದೇ ಕಡೆಯಲ್ಲಿ ಅಂಥವರಿಗೆಲ್ಲಾ ಸಮಾಜದವರು ಅಶನಸಾಹಾಯ್ಯವನ್ನು ಒದಗಿಸುವುದು ಸಾಧ್ಯವಾಗದು. ೨ ಕಡೆಯೂ ಆದರೆ ಅಲ್ಲಷ್ಟು ಇಲ್ಲಷ್ಟುಮಂದಿಗೆ ಅನ್ನಸಹಾಯವನ್ನು ಸಮಾಜದವರು ಮಾಡಬಹುದು. ಹಾಗಲ್ಲದೆ ಒಂದೇಕಡೆಯ ಪಾಠಶಾಲೆಯಲ್ಲಿ ಪ್ರವೇಶಸೌಕರ್ಯವನ್ನೊದಗಿಸಿಕೊಡುವುದಾದರೆ ಮೈಸೂರು ಸಂಸ್ಕೃತಕಾಲೇಜಿನಲ್ಲಿರುವಂತೆ ಅನ್ನಸಹಾಯದ ಸೌಕರ್ಯವನ್ನು ಇತರ ವಿದ್ಯಾರ್ಥಿಗಳಿಗೂ ಪ್ರಭುತ್ವದವರು ಒದಗಿಸಿಕೊಡಬೇಕಾಗುವುದು. ಈ ವಿಷಯಗಳನ್ನೆಲ್ಲಾ ಪ್ರಭುತ್ವದವರು ಸಾವಧಾನದಿಂದ ಪರ್ಯಾಲೋಚಿಸಿ ನ್ಯಾಯವಾದ ತೀರ್ಪನ್ನು ಕೊಟ್ಟು ಪ್ರಜೆಗಳ ಮನಸ್ಸಂತೃಪ್ತಿಗೊಳಿಸದಿರಲಾರರೆಂದು ನಂಬುತ್ತೇವೆ.

UNFORTUNATE VICTIMS.

When the Government of His Highness the Maharaja of Mysore passed the Order on the Miller Committee Report we had occasion to point out that much as the Backward classes welcomed it as a great instrument of equality its actual benefit to them would only depend upon the Government giving effect to it in practice on all possible occasions and we were not slow in expressing our fears that those who had the immediate power of official patronage might thwart the good intentions of the Government. The Order had come also unfortunately at a time when extension of departments was not possible and on the other hand, all round retrenchment had become necessary. We still hoped that there would be an honest attempt to increase the representation of the Backward classes and the principle underlying the Order would be steadfastly kept in view by the Government, so that even if it became necessary to make vigourous cuts in the various departments, those belonging to the Backward classes in Service would not be affected. But the Government Orders issued on the recommendations of the Finance Committee reveal a sad and staggering fall. The Order on the reorganisation of the Public Works Department is published in the *Mysore Gazette*, dated 14th September 1922, and we find therein that three non-Brahmins of the grade of Executive Engineers have to go home, two of whom with a good record of work are compulsorily retired though they have still some years of service before them, and the third, a Sanitary Engineer, has been given notice to quit. A new rule has been specially framed for the purpose, namely, that persons who are over 50 years of age or have put in 25 years of service have to be retired. The justice of this rule is certainly questionable. It is a matter for the Government to consider whether the rules of Public Service under which officers are recruited or appointed could be altered so rapidly without a moral breach of contract. May we ask, if this rule has any intrinsic worth in it, why it should not be extended to all other departments, and made applicable primarily to the superannuated Chief Engineer and Secretary to Government, P. W. Dept., who seems to be the virtual author of this reorganisation and who wants to secure an extension of his time and make himself appear indispensable to the State even though he was not found indispensable in British Service from which he was retired about 5 years ago?

The Sanitary Engineer who has been served with a notice to quit was, as the order says, first appointed in March 1920 for a period of 5 years. The fact that the terms of appointment provide for the termination of his services after a previous notice of three months on either side has evidently been clutched at to get ride of the officer. This officer possesses high English University qualifications, has specialised in Sanitary Engineering, acquired good practical knowledge by staying for a number of years in Great Britain and has spent nearly 18 years in the line, but all that avails nothing. The reasons for his services being dispensed with are perhaps two.–First, he is a non-Brahmin, and secondly, he is one of the ablest engineers in the State. One would like to know whether the authors of the reorganisation have considered what the elevation of the Sanitary Superintending Engineer to the Chief Engineer's place which would leave him little time to attend to Sanitary Engineering and the removal of the only other Expert Sanitary Engineer available in the State would mean to the Sanitary and Drainage Department, especially when large schemes of water supply are under contemplation for places like Kolar, Tumkur and Chitaldrug where the Dewan Saheb toured recently and where he was pressed for sanctioning the schemes. There is also the big drainage scheme for Bangalore City costing nearly 18 lakhs which is likely to be undertaken in the immediate future. It evidently looks as though Public Health and Sanitation, on the improvement of which the public have beee crying hoarse for many years, have weighed little in the estimation of the reorganisers. The much boasted theory of efficiency has been given a clean go bye, and they would rather prefer to experiment on large costly schemes of water supply and drainage with incompetent non-experts regardless of the waste of public funds in such experimentation and of the welfare of the public. The whole thing is a clever Camonflage.

There are after all very few members of Backward classes in Gazetted ranks–and those in the P. W. Department are fewever still and it is regrettable that those few are being made the unfortunate victims of retrenchment cuts. The retrenchment axe should be more wisely and judiciously used. Otherwise it would have disastrous effects. Verily, it is like asking for bread and getting stone in return. It would shake the confidence of the people if what is promised and declared as a State policy through a State document and in solemn Assemblies is not going to be fulfilled in action. The danger of the Order on the Miller Committee Report becoming a mere scrap of paper must be avoided. One of the objects of the Government at the time of appointing the Miller Committee was that increased representation of Backward classes in service would be an "inducement" for the development of education among the various communities. What a set back will it be to them if the few in service have to be sent home? The people have full faith in the Dewan for getting justice and it is our hope that no scope will be provided for any attempt to eliminate capable officers of the Backward classes from service and to endanger the success of his administration.

ಸ್ವದೇಶದ ವೃತ್ತಾಂತಗಳು

ಸ್ಥಳಸಂಕೋಚದಿಂದ ಈ ವಾರ ಬಂದಿರುವ ಅನೇಕ ಪತ್ರವ್ಯವಹಾರಗಳನ್ನು ಪ್ರಕಟಿಸಲಾಗಲಿಲ್ಲ. ಮುಂದಣವಾರ ಕೆಲವನ್ನು ಪ್ರಕಟಿಸುತ್ತೇವೆ.

ದಿವಾನ್ ಸಾಹೇಬರೂ ಕೌನ್ಸಿಲರುಗಳೂ ಸೆಕ್ರೆಟರಿಯೆಟ್ಟೂ ಶಾಖಾಮುಖ್ಯಾಧಿಕಾರಿಗಳೇ ಮೊದಲಾದವರೂ ಮಹಾನವಮಿಯ ಪ್ರಯುಕ್ತ ರಾಜಧಾನಿಗೆ ದಯಮಾಡಿಸಿದ್ದಾರೆ.

ಸುಪ್ರಸಿದ್ಧನಾದ ಭವಭೂತಿಕವಿಯು ವೀರಶೈವನೆಂದೂ ಶ್ರೀಕಂಠಭಾಷ್ಯವನ್ನು ಆತನೇ ರಚಿಸಿದನೆಂದೂ, ಮದ್ರಾಸಿನ ಮ|| ಎಸ್. ಕೆ. ರಾಮನಾಥಶಾಸ್ತ್ರಿಗಳು ಅಭಿಪ್ರಾಯ ಪಡುತ್ತಾರೆ.

ಈ ಸಲ ಮೈಸೂರು ವಿಶ್ವವಿದ್ಯಾಲಯದ ಕಾನ್ವೋಕೇಷನ್ ಸಭೆಯಲ್ಲಿ ಹಿಂದೆ ಮೈಸೂರು ವಿದ್ಯಾಶಾಖಾಧ್ಯಕ್ಷರಾಗಿದ್ದ ಮ|| ಎಚ್. ಭಾಭಾರವರು ಉಪನ್ಯಾಸ ಮಾಡುವವರಾಗಿದ್ದಾರೆ.

ರಾಜಧಾನಿಯ ಈದಿಗಾದಲ್ಲಿ ಶ್ರೀಮಂತ ವರ್ಧಮಾನಯ್ಯನವರ ರೈಸ್‌ಮಿಲ್ಲಿಗೆ ಸಂಬಂಧಪಟ್ಟ ಕೊಳದಲ್ಲಿ ಯಾರೋ ಒಬ್ಬ ಯುವತಿಯು ಬಿದ್ದು ಪ್ರಾಣಹತ್ಯೆಮಾಡಿಕೊಂಡುದಾಗಿ ತಿಳಿಯಬರುತ್ತದೆ.

ಕುಣಿಗಲಿನಲ್ಲಿ ನಡೆದ ಕುದುರೆಗಳ ಪ್ರದರ್ಶನಕ್ಕೆ ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ದಿವಾನ್ ಸಾಹೇಬರೂ ದಯಮಾಡಿಸಿದ್ದರು. ಅಲ್ಲದೆ ನೋಟಕ್ಕಾಗಿ ಇನ್ನೂ ಸಹಸ್ರಾರು ಜನರು ಸೇರಿದ್ದರು. ಪ್ರದರ್ಶನವು ವಿಜೃಂಭಣೆಯಿಂದ ನಡೆದಿತು.

ಕಳೆದ ತಾ|| 7ರಲ್ಲಿ ಸಿಮ್ಲಾ ಪಟ್ಟಣದಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ವೈಸ್ರಾಯರಿಂದ ಕೊಡಲ್ಪಟ್ಟ ಕೆ. ಸಿ. ಐ. ಇ. ಬಿರುದಿಗೆ ಸಂಬಂಧಪಟ್ಟ ಬಿರುದಾಂಕನಗಳನ್ನು ಶ್ರೀಮಾನ್ ಸರ್ ಕಾಂತರಾಜ ಅರಸಿನವರು ಸ್ವೀಕರಿಸಿದರು. ಈಗ ರಾಜಧಾನಿಗೆ ದಯಮಾಡಿಸಿರುವರು.

ರಾಜಧಾನಿಯ ಸಾಹುಕಾರ್ ಮ|| ಅತ್ತಿಗುಪ್ಪೆ ಸೂರ್ಯನಾರಾಯಣಸೆಟ್ಟರು ಬೆಂಕಿನವಾಬರ ಬೀದಿಯಲ್ಲಿರುವ ತಮ್ಮ ಸತ್ರದಲ್ಲಿ ಮಹಾನವಮಿಯುತ್ಸವವನ್ನು ನೋಡಲು ಪರಸ್ಥಳದಿಂದ ಬರುವ ತಮ್ಮ ವೈಶ್ಯಜನರಿಗೆ ಉಚಿತವಾಗಿ ಭೋಜನ ಮಾಡಿಸಲು ತಕ್ಕೇರ್ಪಾಟನ್ನು ಮಾಡಿರುವರು.

ಕಳೆದ ಶುಕ್ರವಾರ ಬೆಳಗ್ಗೆ 8½ ಗಂಟೆಗೆ ಶ್ರೀಮನ್ಮಹಾರಾಜರು ಪದ್ಧತಿಯಂತೆ ಸಜ್ಜೆಯಲ್ಲಿ ಸಿಂಹಾಸನಾರೋಹಣವನ್ನು ಮಾಡಿದರು. ಅಂದಿನಿಂದ ಉತ್ಸವಪ್ರಯುಕ್ತವಾದ ದರ್ಬಾರುಗಳು ಸಾಂಗವಾಗಿ ಜರುಗುತ್ತಲಿವೆ. ಮತ್ತು ಬರುವ ಶನಿವಾರ ವಿಜಯಯಾತ್ರಾಮಹೋತ್ಸವವು ನಡೆಯುವುದು.

ನವರಾತ್ರಿ ಮಹೋತ್ಸವಕ್ಕೆ ರೈಲ್ವೆಯ ಮೂಲಕ ಮೈಸೂರಿಗೆ ಹೋಗಿ ಬರುವವರಿಗೆ 1⅓ ಛಾರ್ಜು ಮಾಡಿರುವುದಲ್ಲದೆ ಪ್ರಜಾಪ್ರತಿನಿಧಿಸಭಾ ಸಭಿಕರು 1⅓ ಛಾರ್ಜಿಗೆ ಹೋಗಿಬರಬಹುದಾದ ಕಾಲವನ್ನು ಅಕ್ಟೋಬರ್ ತಾ|| 14 ರ ವರೆಗೆ ಹೆಚ್ಚಿಸಿರುತ್ತಾರೆ. ಇತರರಿಗೆ ಅಕ್ಟೋಬರ್ ತಾ|| 7 ರ ವರೆಗೆ ಮಾತ್ರವೇ.

ಮದ್ದಗಿರಿ ಮುರ್ಸೀಫರ 8 ವರ್ಷದ ಗಂಡುಮಗನನ್ನು ಹಗಲುಹೊತ್ತಿನಲ್ಲೇ ಒಬ್ಬ ಸಿಪಾಯಿಯು ಮೈಮೇಲಿನ ನಗದ ಆಸೆಯಿಂದ ಉಪಾಯಮಾಡಿ ಮರೆಗೆ ಕರೆದುಕೊಂಡುಹೋಗಿ ಬಲಾತ್ಕಾರದಿಂದ ಕೊಂದು ಹಾಳುಬಾವಿಗೆ ಹಾಕಿಬಿಟ್ಟಿದ್ದನು. ಪೋಲೀಸರು ಆ ಹಂತಕನನ್ನು ಪತ್ತೆಮಾಡಿ ವಿಚಾರಣೆಗೆ ಗುರಿಮಾಡಿರುವರು.

ಮೈಸೂರು ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್ನಿನ ಚತುರ್ಥ ವಾರ್ಷಿಕಾಧಿವೇಶನವು ರಾಯಚೂರು ಶ್ರೀಯುತ ಹರಧರ ಧರಣಪ್ಪ ನಾಗಪ್ಪನವರ ಅಧ್ಯಕ್ಷತೆಯಲ್ಲಿ ತಾ|| 1-10-22 ಭಾನುವಾರ ಪ್ರಾತಃಕಾಲ 9 ಘಂಟೆಗೆ ಸರಿಯಾಗಿ ಮೈಸೂರು ಶ್ರೀಮಾನ್ ಮೋತೀಖಾನಾ ಲಕ್ಷ್ಮೀಪತಯ್ಯನವರ ಜೈನ ವಿದ್ಯಾರ್ಥಿನಿಲಯದಲ್ಲಿ ನಡೆಯುವುದು.

ಕಳೆದ ತಾ|| 18 ರಲ್ಲಿ ಬೆಂಗಳೂರಿನಲ್ಲಿ ದಿವಾನರ ಅಧ್ಯಕ್ಷತೆಯಿಂದ ಶಾಸನಸಭೆಯು ಕೂಡಿದ್ದಿತು. ಮುಖ್ಯವಾದ ಕೆಲವು ವಿಷಯಗಳ ಪ್ರಶ್ನೋತ್ತರಗಳು ನಡೆದುವು. ಅವನ್ನು ಮುಂದಣ ಸಂಚಿಕೆಯಲ್ಲಿ ತಿಳಿಯಿಸುತ್ತೇವೆ. ಮುದ್ರಣಶಾಸನದ ವಿಷಯದಲ್ಲಿ ಸರ್ಕಾರದಭಿಪ್ರಾಯವನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ತಿಳಿಯಿಸುವುದಾಗಿ ದಿವಾನರು ಅಪ್ಪಣೆಕೊಟ್ಟರು.

ಈ ತಿಂಗಳು 19ನೇ ತಾರೀಖು ಮಂಡ್ಯದಲ್ಲಿ ರೆಪ್ರೆಸೆಂಟೆಟಿವ್ ಅಸೆಂಬ್ಲಿ ಮೆಂಬರುಗಳ ಚುನಾವಣೆಯು ಪುನಃ ನಡೆಯಿತು. ಹಿಂದೆ ಚುನಾಯಿಸಲ್ಪಟ್ಟಿದ್ದ ಮ|| ಎಸ್. ಸಿ. ಮಲ್ಲಯ್ಯನವರು, ಒಕ್ಕಲಿಗರ ಸಂಘದ ಮ|| ಎಂ. ಸಿ. ಲಿಂಗೇಗೌಡರೂ, ಮ|| ಚನ್ನಪ್ಪನವರೂ ಪುನಃ ಬಹುಜನಸಮ್ಮತಿಯಿಂದ ಚುನಾಯಿಸಲ್ಪಟ್ಟರು. ಅಸೂಯೆಯಿಂದ ದಿವಾನರಲ್ಲಿ ಅರ್ಜಿಕೊಟ್ಟ ಜನರ ಉದ್ದೇಶವೇನೂ ನೆರವೇರಲಿಲ್ಲ. ಚುನಾವಣೆಯಲ್ಲಿ ಅಮಲ್ದಾರ್ ಮ|| ನರಸಿಂಹನಾಯಕರ ಜತೆಗೆ ಮ|| ಸ್ಪೆಷಲ್ ಮ್ಯಾಜಿಸ್ಟ್ರೇಟರು ಮಲ್ಲಿಕಾರ್ಜುನಯ್ಯನವರೂ ನಿಂತು ಮುತುವರ್ಜಿ ವಹಿಸಿ ಆದಿನದ ಕೆಲಸವನ್ನು ನೆರವೇರಿಸಿದರು ಎಂದು ಈ ಪತ್ರಿಕಾವಾಚಕರೊಬ್ಬರು ತಿಳಿಸುತ್ತಾರೆ.

ರಾಜಧಾನಿಯ ಮ್ಯುನಿಸಿಪಾಲಿಟಿಯ ಚೀಫ್ ಆಫೀಸರಾದ ಮಿ|| ಮಹಮದ್‌ಪೀರ್‌ರವರ ಅಡಳಿತಕ್ಕೊಳಪಟ್ಟ ಆಫೀಸಿನ ಕೆಲಸಗಾರರಲ್ಲಿ ಪರಸ್ಪರ ವೈಮನಸ್ಸಿನಿಂದ ಪಾರ್ಟಿಗಳೇರ್ಪಟ್ಟು ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತಿಲ್ಲವೆಂದೂ, ತೆರುಗೆಯು ಕ್ರಮವಾಗಿ ವಸೂಲಾಗದೆ ಸಾವಿರಾರು ರೂಪಾಯಿಗಳು ಬಾಕಿ ನಿಂತಿರುವುದಾಗಿಯೂ, ತೆರುಗೆಯ ಮುತ್ಸದ್ದಿಯರಲ್ಲಿ ಕೆಲರು ಹಣವನ್ನು ದುರುಪಯೋಗಪಡಿಸಿಕೊಂಡಿದ್ದರೂ ಅವರುಗಳನ್ನು ವಿಚಾರಣೆಯಿಂದ ತಕ್ಕ ಶಿಕ್ಷೆಗೆ ಗುರಿಮಾಡದೆ ಇರುವುದರ ಕಾರಣ ಗೊತ್ತಿಲ್ಲವಾಗಿಯೂ ಈ ಅವ್ಯವಸ್ಥೆಯಿಂದ ಜನರಿಗೆ ಬಹಳ ತೊಂದರೆಯಾಗಿರುವುದರಿಂದ ಪ್ರಜಾಪ್ರತಿನಿಧಿಗಳೆನಿಸಿಕೊಂಡಿರುವ ಕೌನ್ಸಿಲರುಗಳು ಈಗಲಾದರೂ ಕಣ್ತೆರೆದು ಅವ್ಯವಸ್ಥಿತವಾದ ಮ್ಯುನಿಸಿಪಲ್ ಕಾರ್ಯಕ್ರಮಗಳನ್ನು ಸರಿಪಡಿಸುವವರಾಗಬೇಕಾಗಿಯೂ ಸೂಚಿಸಲ್ಪಟ್ಟಿರುವ ಕರೆಸ್ಪಾಂಡೆನ್ಸುಗಳು ನಮ್ಮಲ್ಲಿಗೆ ಬಂದಿವೆ.

ಚೆನ್ನಪಟ್ಟಣದ ತಾಲ್ಲೂಕಿನ ಶಾನುಭೋಗನೊಬ್ಬನು ಮಳವಳ್ಳಿಗೆ ಹೋಗಿ ನಿಂತು ಅಲ್ಲಿ ಈಗ ಅಮಲ್ದಾರರಾಗಿರುವ ಮ|| ಕೆ. ಸಿದ್ಧರಾಮಪ್ಪನವರ ಮೇಲೆ ನಾನಾ ತೆರವಾದ ದೂರಿನ ಹೆಸರಿಲ್ಲದ ಅರ್ಜಿಗಳನ್ನು ಬರೆಯಿಸಿ ಶ್ರೀಮನ್ಮಹಾರಾಜರಿಗೂ ದಿವಾನರಿಗೂ ಹಾಕಿಸಿದ್ದನಂತೆ. ಅದರ ಮೇಲೆ ಡಿಸ್ಟ್ರಿಕ್ಟ್ ಡಿ|| ಕಮಿಷನರಿಗೆ ಎನ್‌ಕ್ವೈರಿಗಾಗಿ ಬರೆದು ಬರಲು ಅವರು ಪ್ರತ್ಯಕ್ಷವಾಗಿ ಅಲ್ಲಿಗೆ ಹೋಗಿದ್ದು ಎಲ್ಲವನ್ನೂ ವಿಚಾರಮಾಡಿ, ಅರ್ಜಿಗಳಲ್ಲಿ ಕಂಡಿದ್ದ ವಿಷಯಗಳೆಲ್ಲಾ ಸುಳ್ಳೆಂಬುದನ್ನು ಅರಿತುಕೊಂಡು, ಅವರು ನಿಸ್ಪೃಹತೆಯಿಂದ ಆ ತಾಲ್ಲೂಕಿನಲ್ಲಿ ಮಾಡಿರುವ ಸರ್ಕಾರಿ ಕೆಲಸದ ವಿಷಯದಲ್ಲಿ ಈ ಡಿಸ್ಟ್ರಿಕ್ಟಿನ ಯಾವ ತಾಲ್ಲೂಕಿನಲ್ಲೂ ಇಷ್ಟು ಸಮರ್ಪಕವಾಗಿ ಕೆಲಸವು ನಡೆದಿಲ್ಲವೆಂದು ಅಭಿಪ್ರಾಯಪಟ್ಟು, ಮೇಲಕ್ಕೂ ವರದಿ ಮಾಡಿರುವರೆಂದು ಸುದ್ದಿ ಕೇಳುತ್ತೇವೆ. ಹೊಟ್ಟೆಕಿಚ್ಚಿನಿಂದ ಇಂಥಾ ಪುಂಡುತನವನ್ನೆಬ್ಬಿಸುವವರನ್ನು ಕಂಡುಹಿಡಿದು ತಕ್ಕ ಶಿಕ್ಷೆಯನ್ನು ಮಾಡಿಸುವುದು ಗೌರ್ನಮೆಂಟಿನವರ ಕರ್ತವ್ಯ.

ಮೈಸೂರು ಸರ್ಕಾರಿಯ ಮುದ್ರಣಕಾರ್ಯವು ತಕ್ಕಮಟ್ಟಿಗೆ ಪ್ರೈವೆಟ್ ಪ್ರೆಸ್ಸುಗಳಲ್ಲಿ ಮಾಡಿಸಲ್ಪಡುತ್ತಿದ್ದುದು ಈಚೀಚೆಗೆ ತಪ್ಪಿಸಲ್ಪಟ್ಟುದರ ಮೂಲಕ ದೇಶೀಯ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂಬ ಸರ್ಕಾರದ ಸಂಕಲ್ಪವನ್ನು ನಿರರ್ಥಕಪಡಿಸುತ್ತಿರುವುದು ಸಾಲದೆ ಪ್ರೈವೆಟ್ ಪ್ರೆಸ್ಸುಗಳ ಕೆಲಸಗಾರರನ್ನು ಪ್ರೆಸ್ಸಿನ ಸೂಪರಿಂಟೆಂಡೆಂಟರು ಪ್ರೋತ್ಸಾಹಿಸಿ ಗೌರ್ನಮೆಂಟ್ ಪ್ರೆಸ್ಸಿಗೆ ಸೇರಿಸಿಕೊಳ್ಳುತ್ತ ಆ ಪ್ರೆಸ್ಸುಗಳು ಕೆಲಸಗಾರರ ಅಭಾವದಿಂದ ಖಾಸಗಿ ಜನರ ಕೆಲಸವನ್ನು ಸಹ ಮಾಡಿಕೊಂಡು ಜೀವಿಸುವುದಕ್ಕೆ ಯತ್ನವಿಲ್ಲದಂತೆ ಮಾಡುತ್ತಿರುವುದರ ಮೂಲಕವೂ ಮಹೋಪಕಾರವನ್ನು ಮಾಡುತ್ತಿರುವರು. ಇದರಿಂದ ಸಾವಿರಾರು ರೂಪಾಯಿಗಳನ್ನು ಬಂಡವಾಳ ಹಾಕಿಕೊಂಡು ಪ್ರೆಸ್ಸಿಟ್ಟುಕೊಂಡಿರುವವರ ಪಾಡೇನಾಗಬೇಕೆಂಬುದನ್ನು ದೇಶೀಯ ಕೈಗಾರಿಕೆಗೆ ಬೇಕಾದ ಪ್ರೋತ್ಸಾಹವನ್ನು ಕೊಡುತ್ತೇವೆಂದು ವಿಜೃಂಭಿಸುತ್ತಿರುವ ಅಧಿಕಾರಿಗಳು ಯೋಚಿಸಬಾರದೆ? ಎಂದು ಅನುಭವಸ್ಥರಾದ ಕೆಲಸಗಾರರನ್ನು ಕಳೆದುಕೊಂಡಿರುವ ಪ್ರೈವೆಟ್ ಪ್ರೆಸ್ಸಿನವರು ನಮ್ಮಲ್ಲಿಗೆ ದೂರುಮಾಡಿರುತ್ತಾರೆ.

ಸ್ಟೇಟಿಕೌನ್ಸಿಲು, ಮತ್ತು ಸಾಮ್ರಾಜ್ಯಶಾಸನ ಸಭೆಗಳಲ್ಲಿ ನಡೆದ ಚರ್ಚೆಯೊಳಗೆ ಹೊರಬಿದ್ದ ಕೆಲವು ಮುಖ್ಯಸಂಗತಿಗಳು.

ಜಾತ್ಯಂತರ ವಿವಾಹವನ್ನು ಬದ್ಧಗೊಳಿಸುವ ಡಾಕ್ಟರ್ ಗೋರ್‌ರವರ ಶಾಸನದ ಮಸೂದೆಯನ್ನು ಮಹಮ್ಮದೀಯ ಸಭಿಕರೂ ಪೂರ್ವಾಚಾರ ಪರಾಯಣರಾದ ಕೆಲ ಹಿಂದೂ ಸಭಿಕರೂ ಸಹ ಆಕ್ಷೇಪಿಸಿದರು. ಇದು ನಿರ್ಬಂಧಶಾಸನವಲ್ಲ, ಸ್ವೇ

ಚ್ಛಾಧೀನವಾಗಿ ಮಾಡಲ್ಪಡತಕ್ಕದು ಎಂದು ಗೋರ್‌ರವರು ಹೇಳಿದರು. ಮಸೂದೆಯನ್ನು ಉಪಸಂಘದ ಪರ್ಯಾಲೋಚನೆಗೆ ಕಳುಹಿಸಬೇಕೆಂಬ ತೀರ್ಮಾನಕ್ಕೆ 34 ಮಂದಿ ಅನುಕೂಲವಾಗಿಯೂ 33 ಮಂದಿ ಪ್ರತಿಕೂಲವಾಗಿಯೂ ಓಟನ್ನು ಕೊಟ್ಟರು. ತೀರ್ಮಾನವು ಗೆದ್ದಿತು. ಮ|| ಗಳಾದ ಜೆ. ಚೌಧುರಿ, ಸಮರ್ಥ, ರಂಗಾಚಾರಿ, ಈಶ್ವರಶರಣ್ಯ, ಚೌಧುರಿಷಹಬುದೀನ್, ವಾಜಪೇಯ, ಜೋಷಿ, ಲಟ್ಟೆ, ಲಿಂಡ್ಸೆ, ಗೋರ್— ಇಷ್ಟುಮಂದಿಗಳು ಉಪಸಂಘದ ಸಭಿಕರಾಗಿ ಆರಿಸಲ್ಪಟ್ಟರು.

ಸಿಮ್ಲಾದಲ್ಲಿರುವ ಸರ್ಕಾರಿ ಆಸ್ತಿಗಳ ಒಟ್ಟು ಬೆಲೆಯು 20535477 ರೂ. ಗಳು ಇದರಲ್ಲಿ ವೈಸ್ರಾಯರ ಭವನಕ್ಕೆ 3761291 ರೂ. ಉಳಿದ ಸಿವಿಲ್ ಉದ್ಯೋಗಿಗಳ ವಾಸದ ಬಂಗಲೆಗಳಿಗೆ 5552594 ರೂ. ಸೈನಿಕೋದ್ಯೋಗಿಗಳ ಭವನಗಳಿಗೆ 858071ರೂ. ಸಾಮಾನ್ಯೋದ್ಯೋಗಿಗಳ ವಾಸದ 83 ಮನೆಗಳಿಗೆ 899359 ರೂ. ಸೇನಾಪತಿಯ ಭವನಕ್ಕೆ 404162ರೂ.

ಇಂಡ್ಯಾ ಸರ್ಕಾರದವರು ಈವರ್ಷ ಮಾಡಿದ ಸಾಲಕ್ಕೆ 46 ಕೋಟಿ ರೂ. ಗಳು ಕೂಡಿರುತ್ತವೆ.

ಸ್ಟಾಂಪುಗಳನ್ನೂ ಛಾಪಾ ದಸ್ತಾವೇಜು ಕಾಗದಗಳನ್ನೂ ಇನ್ನುಮುಂದೆ ಭರತಖಂಡದಲ್ಲೇ ಮುದ್ರಿಸುವುದನ್ನು ಸರ್ಕಾರದವರು ಆಲೋಚಿಸುತ್ತಿದ್ದಾರೆ.

ಅಂಚೆಯ ಕವರುಗಳನ್ನು ದೊಡ್ಡದು ಮಾಡುವುದಲ್ಲದೆ ಉತ್ತಮವಾದ ಕಾಗದದಲ್ಲಿ ಅವನ್ನು ನಿರ್ಮಿಸುವುದಕ್ಕೆ ಪತ್ರವ್ಯವಹಾರವನ್ನು ಸರ್ಕಾರದವರು ನಡೆಯಿಸುತ್ತಿದ್ದಾರೆ.

ಜಮೀನ್ದಾರರುಗಳು ಶಾಸನಸಭಾ ಸಭಿಕರನ್ನು ಆರಿಸುವಾಗ್ಗೆ ಓಟನ್ನು ಕೊಡಲು ಪೋಲಿಂಗ್ ಸ್ಟೇಷನ್ನುಗಳಿಗೆ ಹೋಗಬೇಕಾದ ನಿರ್ಬಂಧವಿಲ್ಲದೆ ಇದ್ದಕಡೆಯಿಂದಲೇ ಓಟನ್ನು ಬರೆದು ಕಳುಹಿಸಬಹುದೆಂದು ವಿಧಿಯಲ್ಲಿ ಸವರಣೆಮಾಡಲು ಅಂಗೀಕೃತವಾಯಿತು.

ಹೊಗೆಬಂಡಿಗಳಲ್ಲಿ 3ನೆ ತರಗತಿ ಪ್ರಯಾಣಿಕರ ತೊಂದರೆಗಳನ್ನೆಲ್ಲಾ ವಿಮರ್ಶಿಸಿ ಇದರ ಪರಿಹಾರವಾಗಬೇಕಾದರೆ ರೈಲ್ವೆ ಮ್ಯಾನೇಜ್‌ಮೆಂಟನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು, ರೈಲ್ವೆಯ ಒಟ್ಟು 35 ಕೋಟಿ ರೂ. ಆದಾಯದಲ್ಲಿ 29 ಕೋಟಿಯು 3ನೆ ತರಗತಿಯ ಪ್ರಯಾಣಿಕರಿಂದಲೇ ಬರುತ್ತವೆ. ಹೀಗಿರುವಾಗ್ಗೆ 1-2ನೆ ತರಗತಿಯ ಪ್ರಯಾಣಿಕರಿಗೆ ಮಾತ್ರ ಅನೇಕ ಸೌಕರ್ಯಗಳನ್ನು ಮಾಡಿಕೊಟ್ಟು 3ನೆ ತರಗತಿಯವರನ್ನು ಉಪೇಕ್ಷಿಸುವುದು ಯುಕ್ತವಲ್ಲವೆಂದು ತಿಳಿಯಪಡಿಸಿದುದಕ್ಕೆ ದಿಲ್ಲಿಯಲ್ಲಿ ಬರುವ ನವಂಬರ್ ತಿಂಗಳಲ್ಲಿ ರೈಲ್ವೆ ಸಮಸ್ಯಾಚರ್ಚೆಗಾಗಿ ಸಭೆಕೂಡುವ ಕಾರಣ ಅಲ್ಲೇನಾಗುವುದೋ ತಿಳಿದನಂತರ ಈ ಸಂಗತಿಯನ್ನು ಚರ್ಚಿಸೋಣವೆಂದು ಉತ್ತರವು ಕೊಡಲ್ಪಟ್ಟಿತು.

ಬಡ್ಜೆಟ್ ಅಂದಾಜಿಗಿಂತ ಈಗ ಇಂಡ್ಯಾ ಸರ್ಕಾರದ ವರಮಾನವು ಬಹು ಕಡಿಮೆಯಾಗುವ ಸ್ಥಿತಿಯು ಗೋಚರಿಸಿದೆ. ಸುಂಕದ ಕಟ್ಟೆಯಿಂದ ವರ್ಷಕ್ಕೆ 45½ ಕೋಟಿ ಆದಾಯವಾಗುವುದೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಕಳೆದ ಜುಲೈ ತಿಂಗಳ ಕಡೆಯವರೆಗೆ 11½ ಕೋಟಿ ಉತ್ಪತ್ತಿಯಾಗಿದೆ. ವರ್ಷದ ಕಡೆಗೆ ಈ ಭಾಗದ ಉತ್ಪತ್ತಿಯು 1-2 ಕೋಟಿ ಕಡಿಮೆಯಾಗಬಹುದು. ಬಟ್ಟೆಗಳು ಹೊರದೇಶದಿಂದ ಇಲ್ಲಿಗೆ ಬರುವುದು ವೃದ್ಧಿಯಾಗುತ್ತಿದೆ. ರೈಲ್ವೆ ಆದಾಯವೂ ಕೂಡ 2-3 ಕೋಟಿ ಕಡಿಮೆಯಾಗುವಂತಿದೆ. ಪ್ರಯಾಣಿಕರ ಸಂಚಾರವು ಹಿಂದಿಗಿಂತ ಈಗ 100ಕ್ಕೆ 12 ಭಾಗದಷ್ಟು ಕಡಿಮೆಯಾಯಿತು. ಆದರೆ ಸಾಮಾನುಗಳು ಸಾಗುವುದು ಹೆಚ್ಚಾಗಿದೆ. ಪ್ರಯಾಣಿಕರ ಬಾಡಿಗೆ ದರಗಳನ್ನು ಕಡಿಮೆಮಾಡುವುದಿಲ್ಲ. ವೆಚ್ಚದಲ್ಲಿ ಸೈನಿಕವ್ಯಯವು ಮತ್ತಷ್ಟು ಹೆಚ್ಚುತ್ತದೆ. ವಜೀರಸ್ತಾನಯುದ್ಧದ ವೆಚ್ಚಕ್ಕೆ 35 ಲಕ್ಷ ರೂ. ಹಿಡಿಯುವುದೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಈಗ ಅದಕ್ಕೆ 2 ಕೋಟಿ ರೂ. ಗಳನ್ನು ವೆಚ್ಚಮಾಡಬೇಕಾಗುವುದು. ಅಂಚೆಕಂತಿಗಳ ಶಾಖೆಯಲ್ಲಿ 1 ಕೋಟಿ ರೂ. ಗಳ ವರಮಾನವು ಕಡಿಮೆಯಾಗುವುದು.

ಗೋದುವೆ ಮೊದಲಾದ ಧಾನ್ಯಗಳಲ್ಲಿ ಎಣ್ಣೆಬೀಜಗಳು ಮೊದಲಾದುವನ್ನು ಹೊರಕ್ಕೆ ವ್ಯಾಪಾರಾರ್ಥವಾಗಿ ಕಳುಹಿಸಿಕೊಡುವ ವಿಷಯದಲ್ಲಿ ಸರ್ಕಾರದವರು ಮಾಡಿರುವ ನಿರ್ಬಂಧವನ್ನು ತೆಗೆದುಹಾಕಬೇಕೆಂದು ತಲ್ಪಟ್ಟ ತೀರ್ಮಾನಕ್ಕೆ ಸರ್ಕಾರದಿಂದ ಉತ್ತರಕೊಡುವಾಗ್ಗೆ—ಅಕ್ಕಿ ಎಣ್ಣೆಬೀಜ ಇವುಗಳನ್ನು ಸಾಗಿಸುವುದಕ್ಕೆ ನಿರ್ಬಂಧವೇ ಇಲ್ಲ. ಉಳಿದ ಆಹಾರ್ಯವಸ್ತುಗಳಿಗೆ ಮಾತ್ರ ಬಲವಾದ ನಿರ್ಬಂಧವಿದೆ. ನಿರ್ಬಂಧವನ್ನು ಸಂಪೂರ್ಣವಾಗಿ ತಪ್ಪಿಸಿಬಿಟ್ಟರೆ ದೇಶಕ್ಕೆ ಸಾಕಾಗುವಷ್ಟು ಆಹಾರ್ಯವಸ್ತುವು ಇಲ್ಲಿ ಉಳಿಯದೆ ಹೊರಕ್ಕೆ ಸಾಗಿಹೋಗುವುದರಿಂದ ಬೆಲೆಯು ಹೆಚ್ಚಿಹೋಗಿ ಕೊಂಡುತಿನ್ನುವವರಿಗೆ ಕಷ್ಟವಾಗುವುದು. ಈ ವರ್ಷ ಭರತಖಂಡದಲ್ಲಿ ಗೋದುವೆ ಮೊದಲಾದುವುಗಳು ಸಮೃದ್ಧವಾಗಿ ಬೆಳೆದುವು. ನಿರ್ಬಂಧಪದ್ಧತಿಯಿದ್ದುದರಿಂದ ಅವುಗಳು ಅಗ್ಗವಾಗಿ ದೊರೆಯುತ್ತಿರುವುವು. ಹಿಂದೆ ಲಯಲ್ಪೂರಿನಲ್ಲಿ ಗೋದುವೆ ಮಣಕ್ಕೆ 9½ ರೂ. ಇದ್ದಿತು. ಈಗ 5 ರೂ. ಆಗಿದೆ. ಸೊಲ್ಲಾಪುರದಲ್ಲಿ 10 ರೂ. ಇದ್ದಿತು. ಈಗ 3-5-0 ಆಗಿದೆ. ಅಲ್ಲದೆ ಈ ತಿಂಗಳಲ್ಲಿ ಮಳೆ ಸರಿಯಾಗಿ ಬರದಿದ್ದರೆ ಮುಂದಿನ ಬೆಳಸು ಕೆಡುವುದು. ಕ್ಷಾಮಸ್ಥಿತಿಯು ಪ್ರಾಪ್ತವಾಗಬಹುದು. ನಿರ್ಬಂಧ ಪದ್ಧತಿಯಿಲ್ಲದೆಹೋದರೆ ಹೆಚ್ಚು ತೊಂದರೆಯಾಗುವುದು. ಈ ಮುಂದಣ ಮಳೆಯು ಸರಿಯಾಗಿ ಬಿದ್ದು ಬೆಳಸಿನ ಸ್ಥಿತಿಯು ಸಮರ್ಪಕವಾಗಿ ಕಂಡರೆ ನಿರ್ಬಂಧವನ್ನು ಸರ್ಕಾರದವರು ತೊಲಗಿಸುವರು ಎಂದು ಉತ್ತರ ಕೊಡಲ್ಪಟ್ಟಿತು.

ಶಾಸನಗಳಲ್ಲಿ ರೌಲತ್ ಆಕ್ಟು, ಪ್ರೆಸ್ ಆಕ್ಟು ಮೊದಲಾದ ನಿರ್ಬಂಧದ ಶಾಸನಗಳು 20ರ ಮೇಲೆಯೇ ತೆಗೆದುಹಾಕಲ್ಪಟ್ಟು, ದೇಶೀಯ ಸಂಸ್ಥಾನಿಕರನ್ನು ಬ್ರಿಟಿಷ್ ಇಂಡ್ಯಾದ ವೃತ್ತಪತ್ರಿಕೆಗಳು ಸ್ವಚ್ಛಂದವಾಗಿ ವಿಮರ್ಶಿಸುವ ಬಾಧೆಯಿಂದ ರಕ್ಷಿಸುವಂಥ ಶಾಸನ, ಪೋಲೀಸರನ್ನು ದುರ್ಬೋಧನೆ ಮಾಡುವುದರಿಂದ ತಪ್ಪಿಸುವ ಶಾಸನ ಮೊದಲಾದ ಕೆಲ ನೂತನ ಶಾಸನಗಳು ಏರ್ಪಡಿಸಲ್ಪಡುವುವು.

ಪೌರೋಹಿತ್ಯವನ್ನು ಮಾಡಿಸಿಕೊಳ್ಳದಿದ್ದರೂ ಸೊಮ್ಮಿಗೆ ತಮ್ಮ ಹಕ್ಕುಂಟೆಂದು ಪುರೋಹಿತರೋ ಮಠಾಧಿಪತಿಗಳೊ ಕೋರ್ಟುಗಳಲ್ಲಿ ವ್ಯಾಜ್ಯವನ್ನು ಹೂಡುವುದು ಹೆಚ್ಚುತ್ತಿದೆ. ಇಂಥ ವ್ಯಾಜ್ಯಗಳನ್ನು ಹೂಡಲು ಅಧಿಕಾರವಿಲ್ಲನೆಂದು ಶಾಸನವಾಗಬೇಕೆಂಬ ತೀರ್ಮಾನವನ್ನು ಪ್ರೊ|| ಕಲೆಯವರು ಉಪಪಾದಿಸಿದರು. ಹೀಗೆ ಮಾಡಿದರೆ ಬ್ರಾಹ್ಮಣರಿಗೆ ಜೀವನಾಧಾರವು ತಪ್ಪಿಹೋಗುವುದೆಂದೂ, ಅವರ ಹಕ್ಕನ್ನು ತಪ್ಪಿಸುವುದು ಅಕ್ರಮವೆಂದೂ, ರಂಗಸ್ವಾಮಯ್ಯಂಗಾರರು ಕಪರ್ದಿಯವರು ಮೊದಲಾದ ಕೆಲ ಬ್ರಾಹ್ಮಣ ಸಭಿಕರು ವಾದಿಸಿದರು. ಕೆಲಸವನ್ನು ಮಾಡದಿದ್ದವರು ಸೌಮ್ಯವನ್ನು ಕೋರುವುದು ನ್ಯಾಯವಲ್ಲವೆಂದೂ, ಸಭಿಕರೆಲ್ಲಾ ತೀರ್ಮಾನಕ್ಕೆ ಅನುಮೋದಿಸಿದರೆ ಸರ್ಕಾರದವರು ಅಡ್ಡಿಮಾಡುವುದಿಲ್ಲವೆಂದೂ ಸರ್ ಷಫೀಯವರು ಹೇಳಿದರು. ಅನುಕೂಲ ಪ್ರತಿಕೂಲವಾದಗಳು ಸ್ವಲ್ಪಹೊತ್ತು ನಡೆದಮೇಲೆ ಬಹುಮಂದಿ ಸಭಿಕರಿಗೆ ಈ ಶಾಸನದ ಸಂಗತಿಯು ತಿಳಿಯದಿರುವ ಕಾರಣ ಸದ್ಯಕ್ಕೆ ಇದರ ಪ್ರಸಂಗವನ್ನು ನಿಲ್ಲಿಸಿರಬೇಕೆಂದು ಗೊತ್ತಾಯಿತು. ಮುಂದಣ ಸಮಾವೇಶಕ್ಕೆ ಇದು ಬರುವುದು.

ತುರ್ಕಿ.

ಮತ್ತೊಂದು ಯುದ್ಧವೋ ?

ಅಂಗೋರಾ ತುರ್ಕಿಗೆ ಉಂಟಾದ ಜಯವನ್ನು ಕಂಡು ಯೂರೋಪ್ಯರ ಮಿದುಳು ಕೆದರಿಹೋಗಿದೆ. ಯೂರೋಪು ತೀರಕ್ಕೂ ತುರುಕರು ನುಗ್ಗುವರೆಂಬ ದಿಗಿಲು ಅವರಿಗೆ ಹಿಡಿದಂತೆ ತೋರುತ್ತದೆ. ಆಂಗ್ಲನೃಪಭವು ಬಲವಾಗಿ ಗುಟುರುಹಾಕುತ್ತಾ ಯೂರೋಪುಖಂಡವನ್ನೆಲ್ಲಾ ಯುದ್ಧಕ್ಕೆ ಅಣಿಮಾಡುವಂತೆ ಕಾಣುತ್ತದೆ. ತನ್ನ ಅಧಿನಿವೇಶ ರಾಷ್ಟ್ರಗಳೆಲ್ಲಾ ಡಾರ್ಡನಲ್ಸ್ ಜಲಸಂಧಿ ರಕ್ಷಣಕಾರ್ಯಕ್ಕಾಗಿ ಸಹಾಯಸೈನ್ಯವನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಂಡಿದೆ. ತಟಸ್ಥ ಪ್ರದೇಶ ರಕ್ಷಣೆಗಾಗಿ ತಮಗೆ ಸಹಾಯಮಾಡಬೇಕೆಂದು ರುಮೇನಿಯಾ, ಜುಗೋಸ್ಲಾವಿಯೂ, ಗ್ರೀಸ್‌ದೇಶಗಳವರನ್ನು ಸಹ ಕೋರಿದೆ. ಫ್ರಾನ್ಸ್ ಇಟಲಿಗಳು ಕೂಡ ಆಂಗ್ಲರ ಅಭಿಪ್ರಾಯಕ್ಕೇ ಒಲಿದಂತೆ ಕಾಣುತ್ತದೆ. ಅತ್ತ ರಷ್ಯಾ ಕರಡಿಯು ಅಂಗೋರಾಕ್ಕೆ ಸಹಾಯಮಾಡಲು ಸಿದ್ಧವಾಗಿದ್ದೇನೆಂದು ಹೇಳಿಕೊಂಡು ತನ್ನ ತೀಕ್ಷ್ಣನಖಗಳನ್ನು ಚಾಚಿ ಮಸೆದುಕೊಳ್ಳುತ್ತಿದೆ. ಯೂರೋಪು ತೀರಕ್ಕೆ ತುರ್ಕಿ ಸೈನ್ಯವನ್ನು ಸೇರಗೊಡದಂತೆ ಮಾಡಬೇಕೆಂದು ಇಂಗ್ಲೀಷರು ಮಧ್ಯಧರಾ ಸಮುದ್ರದಲ್ಲಿರುವ ತಮ್ಮ ನೌಕಾದಳಕ್ಕೆ ಆಜ್ಞೆಮಾಡಿದ್ದಾರೆ. 5 ಸಮುದ್ರ ವಿಮಾನಗಳು 30 ಮಂದಿ ಅಧಿಕಾರಿಗಳೊಡನೆ ಕಾನ್‌ಸ್ಟಾಂಟಿನೋಪಲ್ಲಿಗೆ ಹೋಗಬೇಕೆಂದು ಅಪ್ಪಣೆ ಮಾಡಿದ್ದಾರೆ. ಮೆಸಪೊಟೋಮಿಯಾವಿಗೂ ಕೂಡ ಕೆಲ ಸೈನ್ಯವನ್ನು ಕಳುಹಿಸಿಕೊಡಲು ಅನುಜ್ಞೆಕೊಟ್ಟಿದ್ದಾರೆ. ಅನೇಲ್ಲಾ ಆಗಲೇ ಆಯಾಸ್ಥಳಕ್ಕೆ ಹೋಗಿ ಸೇರಿಯೂ ಸೇರುತ್ತಲೂ ಇವೆ. ಕೇಮಲ್ ಪಾಷಾರವರು ತಮ್ಮ ಸೈನಿಕರ ಪರಾಕ್ರಮಕ್ಕಾಗಿ ಅವರನ್ನು ಶ್ಲಾಘಿಸಿದುದಲ್ಲದೆ ಮುಂದೆ ಸಂಭವಿಸಬಹುದಾದ 2ನೆ ಕಾರ್ಯದಲ್ಲೂ ಕೂಡ ಹಾಗೆಯೇ ಶೌರ್ಯವನ್ನು ಪ್ರಕಟಿಸಬೇಕೆಂದು ಪ್ರೋತ್ಸಾಹಿಸಿದ್ದಾರೆ.

"1922 ನೆ ವರ್ಷದ ಜನವರಿಯಲ್ಲಿ ಲಂಡನ್ನಿನಲ್ಲಿ ಕೂಡಿದ್ದ ಮಿತ್ರಮಂಡಲೀ ಸಮಾವೇಶದಲ್ಲಿ ವ್ಯವಹಾರಗಳೆಲ್ಲಾ ಸಂತೃಪ್ತಿಕರವಾಗಿ ಪರಿಷ್ಕಾರಗೊಂಡರೆ ಕಾನ್‌ಸ್ಟಾಂಟಿನೋಪಲನ್ನು ತುರುಕರಿಗೆ ಕೊಟ್ಟುಬಿಡಬೇಕೆಂದೂ ಅದಕ್ಕಾಗಿ ಮತ್ತೊಂದು ಕೂಟವು ಕೂಡಬೇಕೆಂದೂ ನಿರ್ಣಯವಾಗಿದ್ದಿತು. ಆದರೆ ಕೇಮಲ್‌ಪಾಷಾ ಪಕ್ಷದವರು ತಟಸ್ಥ ಪ್ರದೇಶಗಳ ಮೇಲೆ ಯುದ್ಧಮಾಡುತ್ತಿರುವುದರಿಂದ ಆ ಹಿಂದಣ ನಿಯಮದಂತೆ ಕೂಟವನ್ನು ಈಗ ಕೂಡಿಸಲಾಗುವುದಿಲ್ಲ" ಎಂದು ಆಂಗ್ಲಪ್ರಭುತ್ವದವರು ಪ್ರಕಟಿಸಿಕೊಂಡಿದ್ದಾರೆ. "ಸ್ವಪ್ನದಲ್ಲೂ ಕೂಡ ಊಹಿಸಬಾರದಿದ್ದಂಥ ಚಿಕ್ಕ ತುರ್ಕಿಪ್ರಭುತ್ವವು ಕಾನ್‌ಸ್ಟಾಂಟಿನೋಪಲ್ಲಿನಿಂದ ಮಿತ್ರಮಂಡಲಿಯವರನ್ನು ಓಡಿಸಿಬಿಡುವುದಾದರೆ ಮುಂದೆ ಬಹಳ ವಿಚಾರಕರವಾದ ಫಲಿತವುಂಟಾಗುವುದು. ಅದರಿಂದ ಮಹಮ್ಮದೀಯ ರಾಷ್ಟ್ರಗಳಲ್ಲೇ ಅಲ್ಲದೆ ಹಿಂದಣ ಯುದ್ಧದಲ್ಲಿ ಪರಾಜಿತಗಳಾದ ರಾಷ್ಟ್ರಗಳಲ್ಲೂ ಕೂಡ ಬೇರೆ ಬೇರೆ ಫಲಿತಗಳುಂಟಾಗುವುವು. ತುರುಕರು ಯೂರೋಪು ತೀರಕ್ಕೆ ಪ್ರವೇಶಿಸಿದರೆ ಬಾಲ್ಕನ್ ರಾಷ್ಟ್ರಗಳಲ್ಲಿ ರಕ್ತಪಾತವುಂಟಾಗುವುದು. ಅದಕ್ಕಾಗಿ ಬಾಲ್ಕನ್ ರಾಷ್ಟ್ರಗಳೆಲ್ಲಾ ಮಿತ್ರಮಂಡಲಿಗೆ ಸಹಾಯಮಾಡಬೇಕು. ತುರುಕರೂ ಬಲ್ಗೇರಿಯನ್ನರೂ ಸ್ನೇಹವಾಗಿರುವುದರಿಂದ ಜುಗೋಸ್ಲಾವಿಯಾವಿಗೆ ನಷ್ಟವುಂಟಾಗುವುದು. ಜಲಸಂಧಿಯು ತುರುಕರ ವಶವಾದರೆ ಡಾನ್ಯೂಬ್ ವ್ಯಾಪಾರವೆಲ್ಲಾ ಕಟ್ಟಾಗುವುದು" ಎಂದು ಮೊದಲಾಗಿ ಇಂಗ್ಲೀಷರು ಪ್ರಕಟಿಸಿ ಎಲ್ಲರನ್ನೂ ತಮ್ಮ ಕಡೆಗೆ ಸೇರಿಸಿಕೊಳ್ಳಲು ಉದ್ಯೋಗಿಸಿದ್ದಾರೆ.

ಕಾನ್‌ಸ್ಟಾಂಟಿನೋಪಲ್ಲು ತಮ್ಮಗಳ ಅಧೀನಕ್ಕೊಳಪಡಬೇಕೆಂಬುದು ಫ್ರಾನ್ಸಿಗೆ ಇಷ್ಟವಿಲ್ಲ. ಜಲಸಂಧಿಯ ಸ್ವಾತಂತ್ರ್ಯವು ಮಾತ್ರ ಎಲ್ಲರಿಗೂ ಇರಬೇಕೆಂಬುದು ಅವರಭಿಪ್ರಾಯ. ಕಾನ್‌ಸ್ಟಾಂಟಿನೋಪಲ್ಲಿನಲ್ಲಿಟ್ಟಿರುವ ತಮ್ಮ ಸೈನ್ಯವನ್ನು ಈ ವರ್ಷದ ಕೊನೆಯೊಳಗೆ ಹಿಂದಕ್ಕೆ ಕರೆಯಿಸಿಕೊಳ್ಳಲು ಅವರು ನಿಶ್ಚಯಿಸಿರುವರು. ಜಲಸಂಧಿಯ ಸ್ವಾತಂತ್ರ್ಯೇಚ್ಛೆಯ ಹೊರತು ತುರ್ಕಿಯ ಮೇಲೆ ಯುದ್ಧಕ್ಕೆ ನಿಲ್ಲಲು ಇಟಲಿಯೂ ಫ್ರಾನ್ಸೂ ಕೂಡ ಒಪ್ಪುವಂತೆ ತೋರುವುದಿಲ್ಲ.

ಮುಖ್ಯವಾಗಿ ಇದರಲ್ಲಿ ಆಂಗ್ಲರ ಗಡಬಿಡಿಯೇ ಹೆಚ್ಚಾಗಿದೆ. ತುರ್ಕಿಯವರಿಗೆ ಯೂರೋಪು ತೀರಕ್ಕೆ ನುಗ್ಗಬೇಕೆಂಬ ಅಪೇಕ್ಷೆಯೂ ಇಲ್ಲ, ಪ್ರಯತ್ನವೂ ಇಲ್ಲ. ಇಂಗ್ಲೀಷರು ಒಂದು ಕಡೆ ಸಮರಸನ್ನಾಹವನ್ನು ಮಾಡುತ್ತಿದ್ದಾರೆ. ಒಂದುಕಡೆ ಸಂಧಿಪ್ರಯತ್ನಕ್ಕೂ ಅನುಕೂಲತೆಯನ್ನು ತೋರಿಸುತಿದ್ದಾರೆ. ತಾತ್ಕಾಲಿಕಸಂಧಿಗೆ ಅಂಗೋರಾ ತುರ್ಕಿಪ್ರಭುತ್ವದವರೂ ಒಪ್ಪಿದ್ದಾರೆ. "ಗ್ರೀಕರು ಆರ್ಮ್ಯಾನ್ಯನರು ಥ್ರೇಸುಗಳಮೇಲೆ ತಮ್ಮಹಕ್ಕನ್ನು ಕೋರದೆ ಅವುಗಳ ಮೇಲೆ ತುರ್ಕಿಯ ಪರಿಪಾಲನಾಧಿಕಾರವನ್ನು ಒಪ್ಪಿಕೊಳ್ಳಬೇಕು. ತುರ್ಕಿ ಪ್ರದೇಶಗಳ ಮೇಲೆ ಗ್ರೀಕರು ಉಂಟುಮಾಡಿದ ಹಾವಳಿಗಾಗಿ ನಷ್ಟ ಪರಿಹಾರವನ್ನು ತುರುಕರಿಗೆ ಗ್ರೀಕರು ಕೊಡಬೇಕು. ಯುದ್ಧಕಾಲದಲ್ಲಿ ದೌರ್ಜನ್ಯವನ್ನೆಸಗಿದ ಗ್ರೀಕರನ್ನೆಲ್ಲಾ ತುರುಕರ ವಶಪಡಿಸಬೇಕು. ಗ್ರೀಕರು ಆಕ್ರಮಿಸಿಕೊಂಡಿದ್ದ ತುರ್ಕಿ ಪ್ರದೇಶವೆಲ್ಲಾ ತುರ್ಕಿಗೆ ಸೇರಬೇಕು." ಎಂಬುದಿಷ್ಟೇ ಅಂಗೋರಾ ತುರ್ಕಿಯ ತಾತ್ಕಾಲಿಕ ಸಂಧಿನಿಯಮಗಳಾಗಿರುವುವು. ಡೇಲಿಮೇಲ್ ಪತ್ರಿಕಾವಿಲೇಖಕನೊಡನೆ ಕೇಮಲ್ ಪಾಷಾರವರು ಮಾತನಾಡಿದುದರಲ್ಲಿ—ನಾವು ಇನ್ನು ಪಡೆಯಬೇಕಾದುದೇನೂ ಇಲ್ಲ. ನಾವು ಮನಃಪೂರ್ವಕವಾಗಿ ಶಾಂತಿಯನ್ನಪೇಕ್ಷಿಸುತ್ತೇವೆ; ಗ್ರೀಕರನ್ನು ಆರ್ಮ್ಯಾನ್ಯರಿಂದ ಹೊರಕ್ಕೆ ಹೊರಡಿಸಲು ಬೇರೆ ಮಾರ್ಗವಿಲ್ಲದೆ ಹೋದುದರಿಂದ ಯುದ್ಧಕ್ಕೆ ನಿಲ್ಲಬೇಕಾಯಿತು. ನಾವು ಸಿರಿಯಾ ಮೆಸಪೊಟೋಮಿಯಾಗಳನ್ನು ಕೇಳುವುದಿಲ್ಲ, ತುರುಕರು ಹೆಚ್ಚಾಗಿ ವಾಸಿಸಿಕೊಂಡಿರುವ ಪ್ರದೇಶಗಳನ್ನು ಮಾತ್ರ ನಮ್ಮಧೀನಕ್ಕೆ ಬರಬೇಕೆಂದು ಕೇಳುತ್ತೇವೆ. ಆರ್ಮ್ಯಾನ್ಯರು ಥ್ರೇಸುಗಳಲ್ಲಿ ಮಾರಿಜ್ ನದಿಯವರೆಗಣ ಪ್ರದೇಶವೂ ಕಾನ್‌ಸ್ಟಾಂಟಿನೋಪಲೂ ತುರ್ಕಿಯ ಅಧಿಕಾರಕ್ಕೊಳಪಟ್ಟಿರಬೇಕೆಂದು ಕೋರುತ್ತೇವೆ. ಡಾರ್ಡನಲ್ಸಿನಲ್ಲಿ ಇತರರ ಹಡಗುಗಳೆಲ್ಲಾ ಸ್ವೇಚ್ಛೆಯಿಂದ ಹೋಗಿಬರುವುದಕ್ಕೆ ನಾವು ಒಪ್ಪುತ್ತೇವೆ. ಆದರೆ ಕಾನ್‌ಸ್ಟಾಂಟಿನೋಪಲ್ಲಿನ ರಕ್ಷಣಾರ್ಥವಾಗಿ ಮರ್ಮೋರಾ ಸಮುದ್ರ ಪ್ರಾಂತದಲ್ಲಿ ಕೆಲವು ಕಟ್ಟಡಗಳನ್ನು ನಾವು ಕಟ್ಟಿಕೊಳ್ಳಬೇಕಾಗಿದೆ. ಮಿತ್ರಮಂಡಲಿಯವರು ಕಾನ್‌ಸ್ಟಾಂಟಿನೋಪಲನ್ನು ಬಿಟ್ಟುಕೊಡದಿದ್ದರೆ ನಾವು ಅದರ ಮೇಲೆ ದಂಡೆತ್ತಿ ಹೋಗಬೇಕಾಗುತ್ತದೆ. ಅದು ಸ್ವಲ್ಪ ದಿನದಲ್ಲೇ ಜರಗುವುದು. ಸಂಧಿ ರಾಯಭಾರದ ಮೂಲಕ ಶಾಂತವಾಗಿ ಕಾನ್‌ಸ್ಟಾಂಟಿನೋಪಲನ್ನು ಅಧೀನಪಡಿಸಿಕೊಳ್ಳುವುದೇ ನನಗೆ ಇಷ್ಟ; ಆದರೆ ರಾಯಭಾರಕ್ಕಾಗಿ ಬಹುಕಾಲ ನಿರೀಕ್ಷಣೆ ಮಾಡಿಕೊಂಡಿರಲಾರೆವು. ಅದರ ಮೇಲೆ ವಿದೇಶೀಯರು ಇಟ್ಟುಕೊಂಡಿರುವ ಪ್ರತ್ಯೇಕ ಹಕ್ಕುಗಳನ್ನೆಲ್ಲಾ ಅವರು ಬಿಟ್ಟುಬಿಡಬೇಕು. ಗ್ರೀಕ್ ನೌಕಾದಳವನ್ನು ತುರ್ಕಿಗೆ ಒಪ್ಪಿಸಿಬಿಡಬೇಕು. ಸಂಧಿ ಸಭೆಯು ಎಲ್ಲಿ ಜರುಗಿದರೂ ಬರಲು ನಾನು ಸಿದ್ಧನಾಗಿದ್ದೇನೆ. ಆದರೆ ತುರ್ಕಿ ದೇಶದ ಹೊರತು ಹೊರಗೆಲ್ಲಾದರೂ ಕೂಡಿದರೆ ನಾನು ಪ್ರತ್ಯಕ್ಷವಾಗಿ ಬರುವುದಿಲ್ಲ.'' ಎಂದು ಹೇಳಿದರಂತೆ. ಇದರಿಂದ ಕೆಮಲಿಸ್ಟರ ಅಭಿಪ್ರಾಯವೇನೆಂಬುದು ಸ್ಥೂಲವಾಗಿ ಗೊತ್ತಾಗುತ್ತದೆ. ಜಲಸಂಧಿಯ ಸ್ವಾತಂತ್ರ್ಯವನ್ನು ಸರ್ವರಿಗೂ ಉಂಟುಮಾಡಿಕೊಡಲು ಅವರು ಒಪ್ಪುವಾಗ ಯೂರೋಪು ತೀರಕ್ಕೆ ನುಗ್ಗಬೇಕೆಂಬುದು ಅವರ ಇಷ್ಟವಾಗಿಲ್ಲದಿರುವಾಗ, ಲಂಡನ್‌ಟೈಮ್ಸ್ ಪತ್ರಿಕೆಯು ಹೇಳಿರುವ ಬುದ್ಧಿವಾದವನ್ನು ಲಕ್ಷಿಸಿ, ಇಂಗ್ಲೀಷರೂ ಫ್ರೆಂಚರೂ ಈಗ ಪ್ರಪಂಚ ಶಾಂತಿಯ ಕಡೆಗೆ ಮುಖ್ಯ ಗಮನವಿತ್ತು ನಿಷ್ಕಲ್ಮಷಭಾವದಿಂದ ತುರ್ಕಿ ಸಮಸ್ಯೆಯನ್ನು ಪರಿಹರಿಸಿಬಿಟ್ಟರೆ ಮತ್ತೊಂದು ಮಹಾಯುದ್ಧದ ವಿಪತ್ತು ಜಗತ್ತಿಗೆ ತಪ್ಪಿಹೋಗುವುದು. ಆದರೆ ಲಾಯಿಡ್ ಜಾರ್ಜರಿಗೂ ಅವರ ಸಹಾಯಕ ಮಂತ್ರಿವರ್ಗಕ್ಕೂ ಯುದ್ಧದ ಲವಲವಿಕೆಯು ಇನ್ನೂ ತಪ್ಪಿದೆಯೋ ಇಲ್ಲವೋ ಕಾಣಲಿಲ್ಲ. ಇಂಗ್ಲಂಡು ಫ್ರಾನ್ಸು ಇಟಲಿಗಳು ಐಕ್ಯವಾಗಿ ಶಾಂತಿಗೆ ಪ್ರಯತ್ನಿಸಿದರೆ ಅವರಭಿಪ್ರಾಯವನ್ನು ಮೀರಿ ಕೇಮಲಿಸ್ಟರು ಯುದ್ಧಕ್ಕೆ ಎಂದಿಗೂ ನಿಲ್ಲರು. ಎಚ್. ಎಚ್. ಆಗಾಖಾನರನ್ನು ಒಬ್ಬ ಆಂಗ್ಲ ಪತ್ರಿಕಾಪ್ರತಿನಿಧಿಯು ಕಂಡು ಮಾತನಾಡಿದಾಗ "ತುರ್ಕಿ ಸಾಮ್ರಾಜ್ಯಕ್ಕೆ ಮುಖ್ಯಸ್ಥಾನವಾದ ಕಾನ್‌ಸ್ಟಾಂಟಿನೋಪಲ್ಲು ತುರ್ಕಿ ಅಧೀನದಲ್ಲೇ ಇರಬೇಕು. ಅದನ್ನು ತಮ್ಮ ವಶಮಾಡಿಕೊಂಡಿರುವುದರಿಂದ ಆಂಗ್ಲ ಸಾಮ್ರಾಜ್ಯಕ್ಕೂ ಕೂಡ ವಿಪತ್ತೇ ಹೊರತು ಫಲವೇನೂ ಇಲ್ಲ. ತುರ್ಕಿ ವಿಷಯದಲ್ಲಿ ಇದುವರೆಗೆ ಆಂಗ್ಲರು ನಡೆಯಿಸಿದ ಪ್ರವರ್ತನೆಯಿಂದ ಭಾರತ ಮಹಮ್ಮದೀಯರೆಲ್ಲಾ ಕ್ಷುಬ್ಧರಾಗಿದ್ದಾರೆ. ತಮ್ಮ ಪ್ರದೇಶಗಳ ಮೇಲೆ ತುರ್ಕಿಯವರಿಗೆ ಸಂಪೂರ್ಣ ಪಾಲನಾಧಿಕಾರವಿರಬೇಕು. ಅರಬ್ಬ ಪ್ರದೇಶದ ಮೇಲೆ ತುರುಕರು ಅಧಿಕಾರವನ್ನು ಕೋರುವುದಿಲ್ಲ. ಜಲಸಂಧಿ ಪರಿಪಾಲನವು ಅಂತರ್ಜಾತೀಯ ಸಂಘಕ್ಕೆ ಸೇರಿರಬಹುದು. ಅದರಲ್ಲಿ ತುರ್ಕಿಗೂ ಭಾಗವಿರಬೇಕು'' ಎಂದು ಹೇಳಿದ್ದಾರೆ. ಇದನ್ನೆಲ್ಲಾ ಗಮನಿಸಿ ಶಾಂತರೀತಿಯಿಂದ ಸಂಧಿ ಪರಿಷ್ಕಾರವನ್ನು ಮಾಡಿಬಿಡುವುದು ಮಿತ್ರಮಂಡಲಿಗೆ ಕಷ್ಟವೇನೂ ಅಲ್ಲ. ಆದರೆ ಲಾಯಿಡ್ ಜಾರ್ಜರು ಗ್ರೀಕ್ ಪಕ್ಷಪಾತವನ್ನು ಬಿಡಬೇಕು. ನ್ಯಾಯದೃಷ್ಟಿಯೂ ಮಹಮ್ಮದೀಯ ಪ್ರಪಂಚ ಸಂತೃಪ್ತಿಯ

ಗಮನವೂ ಅವರಿಗೆ ಉಂಟಾಗಬೇಕು. ಸೆವರ್ಸ್ ಸಂಧಿ ಪ್ರಕಾರ ಸ್ಮಿರ್ನಾ ಭಾಗವನ್ನು ತಮಗೆ ಕೊಡಿಸಿಕೊಡಬೇಕೆಂದು ಗ್ರೀಕರು ಮಿತ್ರಮಂಡಲಿಗೆ ಹೇಳಿಕೊಂಡಿದ್ದಾರೆ. 5 ವರ್ಷದವರೆಗೂ ಆ ಪ್ರದೇಶವು ಗ್ರೀಕರ ವಶದಲ್ಲಿರಬೇಕೆಂದೂ ತದನಂತರ ಅಲ್ಲಿಯ ಪ್ರಜೆಗಳು ಯಾರ ಪರಿಪಾಲನೆಯನ್ನು ಕೋರುವರೋ ಅವರಿಗೆ ಆ ದೇಶವು ಅಧೀನವಾಗಬೇಕೆಂದೂ ಹಿಂದೆ ಆ ಸಭೆಯಲ್ಲಿ ನಿರ್ಣಯಿಸಿದ್ದರು. ಆದರೆ ಇದಕ್ಕೆ ಮೊದಲಿಂದಲೂ ಅಂಗೋರಾ ತುರ್ಕಿ ಪ್ರಭುತ್ವವು ಒಪ್ಪಲಿಲ್ಲ. ಕಡೆಗೆ ಯುದ್ಧ ಜಯದಿಂದಲೇ ಅವರು ತಮ್ಮ ಇಷ್ಟಾರ್ಥವನ್ನು ಪೂರಯಿಸಿಕೊಂಡರು. ಜಯಿಸಿದವರಿಗೆ ತಕ್ಕ ಫಲವುಂಟಾಗುವುದೂ, ಸೋತವರಿಗೆ ಅದಕ್ಕೆ ತಕ್ಕ ಫಲವುಂಟಾಗುವುದೂ ಸಹಜವೆಂಬ ನೀತಿಯನ್ನು ಲಾಯಿಡ್ ಜಾರ್ಜರು ಹಿಂದೆ ತುರ್ಕಿ ಜರ್ಮನಿಗಳ ವಿಷಯದಲ್ಲಿ ಆಡಿತೋರಿಸಿದ್ದರು. ಅದೇ ನ್ಯಾಯವನ್ನು ಈಗಲೂ ತುರ್ಕಿ ಗ್ರೀಕುಗಳ ವಿಷಯದಲ್ಲಿ ತೋರಿಸಲು ಅವರು ತಪ್ಪಬಾರದು. ಅಂಥ ಬುದ್ಧಿಯು ಅವರಿಗೆ ಹುಟ್ಟದೆಹೋದರೆ ಮತ್ತೊಂದು ಮಹಾ ಯುದ್ಧದ ಅನರ್ಥವನ್ನು ಪ್ರಪಂಚಕ್ಕೆ ಅವರೇ ತಂದರೆಂಬ ಕೀರ್ತಿಗೆ ಒಳಗಾಗಬೇಕಾಗುವುದು.

ಸ್ಮಿರ್ನಾ ಪಟ್ಟಣವು ಅಗ್ನಿಗಾಹುತಿಯಾಗಿದೆ. ಆ ಪಟ್ಟಣದ ಬಹುಭಾಗವೆಲ್ಲಾ ಬೆಂಕಿಯಿಂದ ದಗ್ಧವಾಗಿಹೋಯಿತು. ಬೆಂಕಿಯು ಇನ್ನೂ ಆರಿಲ್ಲ. ತುರುಕಪ್ರಜೆಗಳು ಹೆಚ್ಚಾಗಿ ವಾಸಮಾಡುವ ಭಾಗದ ಹೊರತು ಉಳಿದ ಪ್ರದೇಶವೆಲ್ಲಾ ಸುಟ್ಟುಹೋಗಿದೆ. ಇಂಗ್ಲೀಷ್ ಫ್ರಾನ್ಸು ಮೊದಲಾದ ವಿದೇಶ ರಾಯಭಾರಿಗಳ ಕಾರ್ಯಾಲಯಗಳೂ ಕೇಮಲ್‌ಪಾಷಾರವರ ಮುಖ್ಯ ಕಾರ್ಯಾಲಯವೂ ಸಹ ಸುಟ್ಟುಹೋಗಿದೆ. 2 ಮೈಲಿಗಳ ಅಗಲಕ್ಕೆ ಆಕಾಶಕ್ಕೆ ಕೀಲುಕೊಟ್ಟಂತೆ ಉರಿಯೆದ್ದು ಬಹು ಭಯಂಕರವಾಗಿ ಪಟ್ಟಣವನ್ನೆಲ್ಲಾ ಬೆಂಕಿಯು ಸುಟ್ಟುಬಿಟ್ಟಿತು. ಮಸೀದುಗಳು ಚರ್ಚುಗಳೆಲ್ಲಾ ದಗ್ಧವಾದುವು. 4 ಕೋಟಿ ಪೌನುಗಳ ಆಸ್ತಿಯ ನಷ್ಟವೂ 120000 ಮಂದಿಗಳ ಪ್ರಾಣಹಾನಿಯೂ ಆಗಿರುವುದೆಂದು ಎಣಿಸಲ್ಪಟ್ಟಿದೆ. ಬೆಂಕಿಯನ್ನಾರಿಸಲು ತುರುಕರು ಪ್ರಯತ್ನಪಟ್ಟಾಗ, ಗ್ರೀಕರು ಅದಕ್ಕೆ ತಡೆಮಾಡಿದರಂತೆ. ಪಟ್ಟಣಕ್ಕೆ ಹೀಗೆ ಬೆಂಕಿಯನ್ನಿಕ್ಕಿದರೆಂಬ ಸಂಶಯದ ಮೇಲೆ ಬಹುಮಂದಿ ಗ್ರೀಕರನ್ನೂ ಆರ್ಮೇನಿಯನ್ನರನ್ನೂ ತುರ್ಕಿಯವರು ಹಿಡಿದಿದ್ದಾರೆ. ತಾವೇ ಬೆಂಕಿಯಿಕ್ಕಿದವರೆಂದು ಅವರುಗಳು ಒಪ್ಪಿಕೊಂಡಿದ್ದಾರಂತೆ. ಇವೆಲ್ಲ ಅನರ್ಥಗಳಿಂದ ಸ್ಮಿರ್ನಾದಲ್ಲಿ 10 ಲಕ್ಷ ಮಂದಿಗಳು ಕ್ಷಾಮಬಾಧೆಗಳಿಗೆ ಈಡಾಗಿ ಕಷ್ಟಪಡುತ್ತಿದ್ದಾರೆ. ಮಿತ್ರಮಂಡಲೀ ನೌಕೆಗಳು ವಿಪನ್ನಪ್ರಜೆಗಳನ್ನು ಸಾಗಿಸಿಕೊಂಡುಹೋಗುತ್ತಿವೆ.

ವರ್ತಮಾನ ಸಂಗ್ರಹ.

1922-23ನೆ ವರ್ಷದಲ್ಲಿ ಉದ್ಯೋಗಿಗಳ ಬತ್ಯದಲ್ಲಿ 10 ಲಕ್ಷ ರೂ. ಗಳನ್ನು ಕಡಿಮೆ ಹಾಕಲು ಮದ್ರಾಸು ಸರ್ಕಾರದವರು ಏರ್ಪಡಿಸಿದ್ದಾರೆ.

ಈಸಲ ಜೆಡ್ಡಾಯಾತ್ರೆಗಾಗಿ 56319 ಮಂದಿ ಮಹಮ್ಮದೀಯರು ಹೋಗಿದ್ದರು. ರೋಗಾದಿಗಳಿಂದ 26 ಮಂದಿಗಳು ಮಾತ್ರ ಸತ್ತರು. ಜಾತ್ರೆ ಚೆನ್ನಾಗಿ ನಡೆದಿತು.

ಜಯಪುರದ ರೀಜಂಟರಾಗಿದ್ದ ಸರ್ ಪ್ರತಾಪಸಿಹ್ಮರವರು ಮೃತರಾದರು. ಇವರ ಮೃತಿ ವಾರ್ತೆಯನ್ನು ಕೇಳಿ ಸಾರ್ವಭೌಮರೂ ವೈಸ್ರಾಯರೇ ಮೊದಲಾದವರೂ ಸಾನುತಾಪ ತಂತ್ರೀವಾರ್ತೆಯನ್ನು ಅವರ ಕುಮಾರರಿಗೆ ಕಳುಹಿಸಿಕೊಟ್ಟಿದ್ದಾರೆ.

ಭಾರತದ ಉಪಮಂತ್ರಿಯವರಾದ ಮಿ|| ವಿಂಟರ್ಟನ್‌ರವರು ಕಳೆದ ತಾ|| 15 ರಲ್ಲಿ ಬೊಂಬಾಯಿ ರೇವೆಯಲ್ಲಿ ಬಂದಿಳಿದರು. ಸ್ವಂತಕಾರ್ಯದ ಮೇಲೆ ಬಂದಿರುವುದರಿಂದ ರಾಜಕೀಯಾಭಿಪ್ರಾಯವೇನನ್ನೂ ಕೊಡುವುದಿಲ್ಲವೆಂದು ಪ್ರೆಸ್ ಪ್ರತಿನಿಧಿಯೊಡನೆ ಹೇಳಿದರು.

ಇಂಡ್ಯಾ ಸರ್ಕಾರದವರು ನಡೆಯುವ ವರ್ಷದ ಬಜೆಟ್ಟಿನಲ್ಲಿ ವೆಚ್ಚಕ್ಕೆ ೯ ಕೋಟಿಯಷ್ಟು ಹಣವು ಸಾಲದೆ ಹೋಗಬಹುದೆಂದು ನಿರೀಕ್ಷಿಸಿದ್ದರು. ಈಗಣ ಸ್ಥಿತಿಯನ್ನು ನೋಡಿದರೆ ವರ್ಷಾಂತ್ಯದೊಳಗೆ ವೆಚ್ಚಕ್ಕೆ 30 ಕೋಟಿಯಷ್ಟು ಸಾಲದೆಹೋಗಬಹುದೆಂದು ತೋರುತ್ತದೆ. ಭರತಖಂಡದ ಗತಿಯೇನು ?

ಅಮೇರಿಕಾದೇಶದ ಓಹಿಯೊಹಾರ್ಡಿನ್ ಪಟ್ಟಣದಲ್ಲಿ ಒಬ್ಬ ಪಾದ್ರಿಯ 10 ವರ್ಷದ ಬಾಲಕಿಯು 1 ಗಂಡುಮಗುವನ್ನು ಹೆತ್ತಳು. ಹುಟ್ಟಿದ ಮಗುವು 7 ಪೌಂಡ್ ತೂಕವಿದ್ದಿತು. ಗರ್ಭಧಾರಣೆಯು ಯಾರಿಂದ ಆಯಿತೆಂದು ಕೇಳಿದರೆ ಆಕೆಯು ಏನನ್ನೂ ಹೇಳುವುದಿಲ್ಲವಂತೆ. ಮಗು ಬಾಣಂತಿಯರು ಆರೋಗ್ಯವಾಗಿದ್ದಾರೆ.

3ನೆ ತರಗತಿ ರೈಲ್ವೆ ಪ್ರಯಾಣಿಕರ ಅನನುಕೂಲತೆಗಳನ್ನು ತಪ್ಪಿಸುವ ವಿಷಯವನ್ನು ಕುರಿತು ಡಾ|| ಆನಿಬೆಸೆಂಟರು ಶೇಷಗಿರಿಅಯ್ಯರು ಮೊದಲಾದವರು ಕಳೆದ ತಾ|| 13ರಲ್ಲಿ ರೈಲ್ವೆ ಬೋರ್ಡಿನವರನ್ನು ಕಂಡು ಸಂಭಾಷಿಸಲಾಗಿ, ಅದಕ್ಕೋಸ್ಕರ ದೃಢವಾದ ಪ್ರಯತ್ನವು ಈಗ ಮಾಡಲ್ಪಡುತ್ತಿದೆಯೆಂಬ ಉತ್ತರವು ದೊರೆಯಿತು.

ಸ್ಮಿರ್ನಾಪಟ್ಟಣವನ್ನು ಕೇಮಲ್‌ಪಾಷಾರವರು ತಮ್ಮ ಮುಖ್ಯ ಸೈನ್ಯವನ್ನು ಕೂಡಿಕೊಂಡು ವೈಭವದಿಂದ ಪ್ರವೇಶಿಸಿದರು. ಶರಣಾಗತರಾಗಿದ್ದ ಜನರಿಗೆಲ್ಲಾ ಅಭಯದಾನಮಾಡಿ ಅವರವರ ಮನೆಗಳಿಗೆ ಕಳುಹಿಸಿಕೊಟ್ಟರು! ಅಲ್ಲಿ ಈಗ ತುರ್ಕಿ ಪೋಲೀಸ್ ದಳವನ್ನು ಏರ್ಪಡಿಸಿದ್ದಾರೆ. ಜನರಲ್ ನೌರುದ್ದೀನ್‌ಪಾಷಾರವರು ಗೌರ್ನರಾಗಿ ನಿಯಮಿಸಲ್ಪಟ್ಟಿದ್ದಾರೆ.

ನಮ್ಮ ವೈಸ್ರಾಯರಾದ ಲಾರ್ಡ್ ರೀಡಿಂಗ್‌ರವರ ಮಾತೃಶ್ರೀಯವರಾದ ಜೆ. ಎಂ. ಇಜಾಕ್ ಸತಿಯವರು ತಮ್ಮ 89ನೆ ವಯಸ್ಸಿನಲ್ಲಿ ಕಳೆದ ತಾ|| 14ರಲ್ಲಿ ವಿಧಿವಶರಾದರು. ಆದಿನದ ಸ್ಟೇಟ್ ಕೌನ್ಸಿಲ್ ಸಭೆಯಲ್ಲಿ ಸರ್ ಡಿ. ವಾಚಾರವರು ವೈಸ್ರಾಯರಿಗೆ ಸಾನುತಾಪವನ್ನು ತಿಳಿಯಿಸುವ ತೀರ್ಮಾನವನ್ನು ಉಪಪಾದಿಸಲು ಸಭಿಕರೆಲ್ಲಾ ಅನುಮೋದಿಸಿದರು.

ವಿಜಯನಗರದ ಪ್ರಭುಗಳಾದ ಶ್ರೀಮಾನ್ ಪೂಸಪಾಟಿವಿಜಯ ರಾಮಗಜಪತಿ ಮನ್ನೆಸುಲ್ತಾನ್ ಬಹದೂರ್‌ರವರು ಕೆಲಕಾಲದಿಂದ ಅಸ್ವಸ್ಥರಾಗಿ ಆರೋಗ್ಯಾರ್ಥವಾಗಿ ಮದ್ರಾಸಿಗೆ ಬಂದಿದ್ದು ಕಳೆದ ತಾ|| ೧೦ರಲ್ಲಿ ದೈವಾಧೀನರಾದರು. ಇವರು ವಿದ್ಯಾಭಿಮಾನಿಗಳೂ ಪ್ರಜಾವಾತ್ಸಲ್ಯಶೀಲರೂ ಆಗಿದ್ದರು. ತಮ್ಮ ಹಿರಿಯ ಮಕ್ಕಳಿಗೆ ರಾಜ್ಯಭಾರವನ್ನು ವಹಿಸಿ ತಾವು ವಿಶ್ರಾಂತಿಯಲ್ಲಿದ್ದರು.

ಏಲ್ಲಿ ಪ್ರಾಂತದಲ್ಲಿ ಕೆಲ ಮೋಸಗಾರರು ಅನಾಥ ಬಾಲಿಕೆಯರನ್ನು ಪೋಷಿಸಲು ಆಲಯವನ್ನು ಸ್ಥಾಪಿಸಿರುವೆವೆಂದು ಹೇಳುತ್ತ ಬಡಬಗ್ಗರ ಮನೆಯ ಹೆಣ್ಣುಗಳನ್ನು ಸಾಗಿಸಿಕೊಂಡು ಹೋಗಿ ಅವರನ್ನು ಗುಟ್ಟಾಗಿ ಮಾರುವುದು ಅಥವಾ ದುರ್ವೃತ್ತಿಗಳಿಗೆ ಉಪಯೋಗಿಸುವುದು ಹೀಗೆ ಮಾಡುತ್ತಿರುವರು. ಇಂಥ 2 ಕೇಸುಗಳನ್ನು ಪ್ಯಜಾಬಾದು ಪೋಲೀಸರು ಈಗ ಕಂಡುಹಿಡಿದಿರುವರು.

500 ರೂ. ಗಳಿಗೆ ಮೇಲ್ಪಟ್ಟ ಸಂಬಳದ ಸ್ಥಾನಗಳಿಗೆ ಹೊಸದಾಗಿ ಯಾರಾರು ನಿಯಮಿಸಲ್ಪಡುವರೋ ಅಂಥವರ ಪಟ್ಟಿಯನ್ನು ಶಾಸನ ಸಭೆಗೆ ತಿಳಿಯಪಡಿಸಬೇಕೆಂಬ ಶಾಸನಸಭಾ ತೀರ್ಮಾನಕ್ಕೆ ಮದ್ರಾಸ್ ಪ್ರಭುತ್ವದವರು ಒಪ್ಪಿ ಅದರಂತೆ ಕಳೆದ 1921ನೆ ಡಿಸೆಂಬರ್ ತಾ|| 13ರಿಂದ 1922ನೆ ಮಾರ್ಚಿ ತಾ|| 7ರ ವರೆಗೆ ನಿಯಮಿತವಾದವರ ಪಟ್ಟಿಯನ್ನು ಈಗಣ ಶಾಸನ ಸಭೆಯ ಮುಂದೆ ತಂದಿಟ್ಟಿದ್ದರು.

ಕೀರ್ತಿಶೇಷರಾದ ಸರ್ ವಿಠಲದಾಸ ಥಾಕರ್ಸೆಯವರ ಸ್ಮರಣಾರ್ಥವಾಗಿ ಬೊಂಬಾಯಿ ಮುಖ್ಯ ಸಹಕಾರಸಂಘಕ್ಕೆ ಒಂದು ಭವನವನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಸರ್ ನಾರಾಯಣಚಂದ್ರವಾರ್ಕರ್‌ರವರ ಅಧ್ಯಕ್ಷತೆಯಿಂದ ಬೊಂಬಾಯಿ ಪಟ್ಟಣದಲ್ಲಿ ಒಂದು ಸಭೆ ಕೂಡಿ, ಫಂಡನ್ನು ಸೇರಿಸಬೇಕೆಂಬ ನಿರ್ಧಾರವಾಯಿತು. ಆಗಲೇ 25 ಸಾವಿರ ರೂ. ಗಳವರೆಗೆ ವಾಗ್ದಾನವಾಗಿರುವುದು.

ಮದ್ರಾಸು ಶಾಸನಸಭೆಯಲ್ಲಿ ಕೇಳಲ್ಪಟ್ಟ ಪ್ರಶ್ನೆಗೆ 1921ನೆ ಜನವರಿಯಿಂದ ಕಳೆದ ಮಾರ್ಚಿ ತಾ|| 31ರ ವರೆಗೆ ಅಲ್ಲಿಯ ಗೌರ್ನರ ಪ್ರಯಾಣದ ವೆಚ್ಚಗಳು 133307-6-1 ಆಗಿದೆಯೆಂತಲೂ, ಅಷ್ಟೇ ಕಾಲದಲ್ಲಿ ಕಾರ್ಯನಿರ್ವಾಹಕ ಸಂಘಸಭಿಕರ ಮತ್ತು ಮಂತ್ರಿಗಳ ಪ್ರಯಾಣದ ವೆಚ್ಚವು 70981-8-7 ರೂ. ಆಗಿದೆಯೆಂತಲೂ, ಶಾಸನ ಸಭಾಸಭಿಕರ ಬತ್ಯವು 194159-13 ಎಂತಲೂ ವಿವರವಾಗಿ ಉತ್ತರವು ಕೊಡಲ್ಪಟ್ಟಿತು.

ಕಳೆದ ಮಾರ್ಚಿ ತಾ|| 1ರಿಂದ ಮದ್ರಾಸು ಪ್ರಭುತ್ವದವರು ವೈದ್ಯಾಲಯಗಳ ಕಾಂಪೌಂಡರುಗಳ ವೇತನವನ್ನು ಅಭಿವೃದ್ಧಿಪಡಿಸಿರುತಾರೆ. ಯಾವೊಬ್ಬ ಕಾಂಪೌಂಡರಿಗೂ 30 ರೂ. ಗೆ ಕಡಿಮೆ ಸಂಬಳವಿಲ್ಲ. 30 ರೂ. ಸಂಬಳದವನಿಗೆ 2 ವರ್ಷಕ್ಕೆ 1 ರೂ. ನಂತೆ 35 ರೂ. ವರೆಗೆ ಅಭಿವೃದ್ಧಿ ಆ ಬಳಿಕ 4 ವರ್ಷಗಳಿಗೊಂದುಸಲ 5 ರೂ. ನಂತೆ ಅಭಿವೃದ್ಧಿ. ಈ ವೇತನಕ್ರಮವು ಅಲ್ಲಿಯ ಸಿವಲ್ ಮೆಡಿಕಲ್ ಕೋಡಿನ ಪ್ರಕಾರ ಪೂರ್ಣವಾಗಿ ಪರೀಕ್ಷೆಕೊಟ್ಟವರಿಗೆ ಮಾತ್ರವೇ ಸಲ್ಲುವುದು.

ವಿಮಾನಗಳ ಪಂದ್ಯವೊಂದನ್ನು ಆಂಗ್ಲದೇಶೀಯರು ಏರ್ಪಡಿಸಿದ್ದರು. 13 ವಿಮಾನಗಳು ಈ ಪಂದ್ಯಕ್ಕೆ ನಿಂತಿದ್ದುವು. ಕ್ರೋಯಿಡನ್ ಪಟ್ಟಣದಿಂದ ಇವುಗಳ ಜೂಜಿನ ಓಟವು ಪ್ರಾರಂಭವಾಯಿತು. ಆ ವೈಮಾನಿಕರಲ್ಲಿ ಲ್ಯಾ ಬೀರ್ನಾರ್ಟ್ ಎಂಬುವವರು ಅಲ್ಲಿಗೆ 18394 ಮೈಲಿಗಳ ದೂರದಲ್ಲಿರುವ ಗ್ಲಾಸ್ಗೊ ಪಟ್ಟಣವನ್ನು 3 ಗಂಟೆ 21 ನಿಮಿಷ 22 ಸೆಕೆಂಡುಗಳ ಕಾಲದಲ್ಲಿ ಹೋಗಿ ಸೇರಿದರು. ರೆವನ್ಸಾ ಎಂಬುವವರು 3 ಗಂಟೆ 58 ನಿಮಿಷಗಳಲ್ಲಿ ಸೇರಿ 2 ನೆಯವರಾದರು. ಈ ಅದ್ಭುತವಾದ ವಿಮಾನ ಪ್ರಯಾಣವು ವಾಯುವೇಗವನ್ನು ಕೂಡ ಮೀರಿದ್ದಿತೆಂದು ಹೇಳಬಹುದಲ್ಲವೆ ?

ನಾನಾರಾಷ್ಟ್ರಸಂಘಕ್ಕೆ ಭರತಖಂಡದ ಪ್ರಾತಿನಿಧ್ಯವು ಕೊಡಲ್ಪಟ್ಟ ಬಹುಮಾನದ ತಾತ್ಪರ್ಯವೇನೋ ಆಯಿತಷ್ಟೆ. ಅಷ್ಟುಮಾತ್ರಕ್ಕೇ ಸಮ್ಮೇಳನದ ವ್ಯಯಭಾರದ ಪಾಲನ್ನು ಅಧಿನಿವೇಶ ರಾಷ್ಟ್ರಗಳ ಜತೆಗೆ ಭರತಖಂಡವೂ ವಹಿಸಬೇಕಾಯಿತು. ಆದರೆ ಅಧಿನಿವೇಶಗಳಿಗೆ ಫಲವು ಹೆಚ್ಚು. ಭರತಖಂಡಕ್ಕೆ ಭಾರವು ಹೆಚ್ಚು. ಇಷ್ಟೇ ವ್ಯತ್ಯಾಸ. ಹೇಗೆಂದರೆ—ವೆಚ್ಚದಪಾಲು ಆಸ್ಟ್ರೇಲಿಯಾದ ತಲೆಯಮೇಲೆ 576000 ಫ್ರಾಂಕುಗಳು, ದಕ್ಷಿಣಾಫ್ರಿಕಾದ ಮೇಲೆ 332000 ಫ್ರಾಂಕುಗಳು, ನ್ಯೂಜಿಲೆಂಡಿನ ಮೇಲೆ 221000 ಫ್ರಾಂಕುಗಳು, ಕೆನಡಾದ ಮೇಲೆ 775000 ಫ್ರಾಂಕುಗಳು, ಭರತಖಂಡದ ಮೇಲೆ 1440000 ಫ್ರಾಂಕುಗಳು.

ಚಂದ್ರನಗರದಿಂದ ಕಲ್ಕತ್ತಾಕ್ಕೆ ನದಿಯಮೇಲೆ ಈಜಿಬರುವ (22 ಮೈಲಿಗಳ ದೂರದ) ಪಂದ್ಯವನ್ನು ಅಲ್ಲಿಯ ಪ್ರಾಣರಕ್ಷಕ ಭಾರತಸಂಘದವರು ಏರ್ಪಡಿಸಿದ್ದರು. ತಾ|| 17ರಲ್ಲಿ ಮಧ್ಯಾಹ್ನ ಇದು ನಡೆದಿತು. 14 ಮಂದಿಗಳು ಪಂದ್ಯಕ್ಕೆ ಸೇರಿದ್ದರು. ಬಳಲಿ ಮಧ್ಯಮಾರ್ಗದಲ್ಲೇ 7 ಮಂದಿಗಳು ನಿಂತುಹೋದರು. ಉಳಿದವರಲ್ಲಿ ಬಿ. ಬಾಸು ಎಂಬಾತನು 4 ಗಂಟೆ 24 ನಿಮಿಷಗಳಲ್ಲಿ ಕಲ್ಕತ್ತಾಕ್ಕೆ ಮೊದಲನೆಯವನಾಗಿ ಸೇರಿದನು. ತದನಂತರ 6 ನಿಮಿಷಕ್ಕೆ ಆಶುತೋಷದತ್ತ ಎಂಬಾತನು ಸೇರಿ 2 ನೆಯವನಾದನು. ಪರ್ಯವಸಾನವನ್ನು ನೋಡುವುದಕ್ಕೆ ಬಹುಜನರು ಒಂದುಕಡೆ ಕಟಕಟ್ಟೆಯ ಮೇಲೆ ನುಗ್ಗಿದ ಒತ್ತಡದಲ್ಲಿ ಇಬ್ಬರು ಸತ್ತರು.

ಕಲ್ಕತ್ತಾಪಟ್ಟಣದಲ್ಲಿ ಭೂಮಿಯೊಳಗೆ ರೈಲ್ವೆಯನ್ನು ೬|| ಮೈಲಿಗಳ ದೂರ ಹಾಕಿಸಬೇಕೆಂದು ಯೋಚಿಸಿ ಸಮರ್ಥರಾದ ಇಂಜನಿಯರ ಅಭಿಪ್ರಾಯವನ್ನು ಕೇಳಿದ್ದರು. ಅವರು ಸ್ಥಲವನ್ನೆಲ್ಲಾ ಪರಿಶೋಧಿಸಿ ಮಾಡಿರುವ ವರದಿಯಲ್ಲಿ--ಹೂಗ್ಲಿ ನದಿಯನ್ನು ದಾಟುವಾಗ್ಗೆ ನದಿಯ ಒಳಗೆ 104 ಅಡಿಯಷ್ಟು ಕೆಳಗೆ 2 ಟ್ಯೂಬುಗಳನ್ನು ಹಾಕಿ ಅದರೊಳಗೆ ಮಾರ್ಗವು ನುಗ್ಗಿ ಹೋಗುವಂತೆ ಆಗಬೇಕೆಂತಲೂ, 9 ಕಡೆಯಲ್ಲಿ ಮೇಲಕ್ಕೆ ಸುರಂಗವನ್ನು ಕೊರೆದು ನಿಲ್ದಾಣಗಳನ್ನು ಏರ್ಪಡಿಸಬೇಕಾಗುವುದೆಂತಲೂ ಅದಕ್ಕೆಲ್ಲಾ 30-40 ಲಕ್ಷ ಪವನ್ನುಗಳ ವೆಚ್ಚವು ಹಿಡಿಯುವುದೆಂತಲೂ, ಆದರೆ ಕಲ್ಕತ್ತಾ ಪ್ರಾಂತದ ಭೂಮಿಯು ಇಂಥ ಮಾರ್ಗ ನಿರ್ಮಾಣಕ್ಕೆ ತಕ್ಕುದಲ್ಲವೆಂತಲೂ ತಿಳಿಯಿಸಿರುತಾರೆ.

ಮುಲ್ತಾನಿನಲ್ಲಿ ನಡೆದ ಹಿಂದೂ ಮಹಮ್ಮದೀಯರ ಜಗಳದಲ್ಲಿ ೧೦ ಮಂದಿಗಿಂತ ಹೆಚ್ಚಾಗಿ ಮೃತರಾಗಲಿಲ್ಲವೆಂದೂ, ಕೆಲ ಮಹಮ್ಮದೀಯರು ಹಿಂದೂ ಸ್ತ್ರೀಯರ ಮಾನಭಂಗಮಾಡಿದರೆಂದೂ ಹಿಂದೂ ಹೆಂಗುಸರ ನಗಗಳನ್ನು ಸುಲಿದುಕೊಂಡರೆಂದೂ ಇಬ್ಬರ ಕಿವಿ ಓಲೆಗಳನ್ನು ಕಿವಿಯನ್ನು ಕಿತ್ತು ಸೆಳೆದುಕೊಂಡರೆಂದೂ, ಅದನ್ನು ಕಂಡು ಹೆದರಿ ಇನ್ನು ಕೆಲ ಹಿಂದೂ ಸ್ತ್ರೀಯರು ತಂತಮ್ಮ ಆಭರಣಗಳನ್ನು ತಾವೇ ತೆಗೆದುಕೊಟ್ಟುಬಿಟ್ಟರೆಂದೂ, ದೇವಾಲಯಗಳನ್ನೂ ಧರ್ಮಸತ್ರಗಳನ್ನೂ ಭ್ರಷ್ಟಗೊಳಿಸಿದರೆಂದೂ, 3 ದೇವಾಲಯಗಳನ್ನೂ, 3 ಧರ್ಮಶಾಲೆಗಳನ್ನೂ 4-5 ಗ್ರಂಥ ಸಾಹೇಬುಗಳನ್ನೂ 35 ಅಂಗಡಿಗಳನ್ನೂ ಮಹಮ್ಮದೀಯ ತುಂಟರು ಸುಟ್ಟುಹಾಕಿಬಿಟ್ಟರೆಂದೂ, ಹಿಂದುಗಳ 30 ಅಂಗಡಿಗಳನ್ನೂ 30 ಮನೆಗಳನ್ನೂ ದೋಚಿಕೊಂಡರೆಂದೂ, ಮಹಮ್ಮದೀಯರ 10 ಅಂಗಡಿಗಳು ಸುಡಲ್ಪಟ್ಟು 1 ಮನೆಯು ದೋಚಿಕೊಳ್ಳಲ್ಪಟ್ಟಿತೆಂದೂ, ಒಟ್ಟು ಹಿಂದುಗಳಿಗೇ ಬಹಳ ನಷ್ಟವಾಗಿರುವುದೆಂದೂ, ನಗನಾಣ್ಯಗಳಲ್ಲದೆ 10-15 ಲಕ್ಷ ರೂ. ಗಳ ಸೊತ್ತುಗಳ ನಷ್ಟವಾಗಿರುವುದೆಂದೂ ಕಾಂಗ್ರೆಸ್ ಸಂಘದವರ ವರದಿಯಿಂದ ಗೊತ್ತಾಗುತ್ತದೆ.

ಜಾನ್ಸಿ ಪಟ್ಟಣದಲ್ಲಿ ಲಾನ್ಸ್‌ಕಾರ್ಪೊರಲ್ ಸಿಡ್ನೆ ಅಲಗ್ಸಾಂಡರ್ ಎಂಬ ಪಾಶ್ಚಾತ್ಯ ಸೈನಿಕನು ತನ್ನನ್ನು ನಾನಿ ಎಂಬ ಒಬ್ಬ ಹಿಂದೂ ಸೇವಕನು "ಬಹಳ ಬದ್ಮಾಷ್" ಎಂದು ಬೈದನೆಂಬ ಕಾರಣದಿಂದ ತುಪಾಕಿ ಗುಂಡನ್ನು ಹೊಡೆದು ಕೊಂದುಬಿಟ್ಟನು. ಅಲಹಾಬಾದ್ ಹೈಕೋರ್ಟಿನಲ್ಲಿ ಈ ಕೇಸಿನ ವಿಚಾರಣೆ ನಡೆಯಿತು. "ಆ ಸೇವಕನು ತನ್ನನ್ನು ಬೈದಕಾರಣದಿಂದ ಅವನನ್ನು ಕೊಲ್ಲಬೇಕೆಂದು ನಾನು ನಿಶ್ಚಯಿಸಿಕೊಂಡೆ" ಎಂದು ಅಪರಾಧಿಯು ಕೊಂದುಬಂದನಂತರ ತನ್ನೊಡನೆ ಹೇಳಿದನೆಂಬದಾಗಿ ರಿಜಮೆಂಟ್ ಸೇನಾನಿಯು ಸಾಕ್ಷ್ಯವನ್ನು ಹೇಳಿದರು. ಹಾಗೆ ಮಾಡಿದುದುಂಟೆಂದು ಅಪರಾಧಿಯೂ ಒಪ್ಪಿಕೊಂಡನು. ಅಪರಾಧಿಯು ಹತ್ಯಮಾಡಿದುದು ನಿಜ; ಆದರೂ ಅವನ ಮೇಲೆ ದಯೆತೋರಿಸಬೇಕೆಂದು ಜೂರರುಗಳು ಹೇಳಿದರು. ಅದರ ಮೇಲೆ ಜಡ್ಜರು-ತನಿಕರವನ್ನು ತೋರಿಸಲು ನನಗೆ ಇಷ್ಟವಿಲ್ಲ. ಅಪರಾಧಿಯು ಒಬ್ಬನ ಪ್ರಾಣವನ್ನು ತೆಗೆದನು. ಅವನ ಪ್ರಾಣವು ಎಷ್ಟು ಮುಖ್ಯವೋ ಅವನ ಪ್ರಾಣವೂ ಅಷ್ಟು ಮುಖ್ಯವೇ. ಈ ಘೋರಕೃತ್ಯದಿಂದ ಅಪರಾಧಿಯ ರಿಜಮಿಂಟಿಗೆಲ್ಲಾ ಕಳಂಕವುಂಟಾಯಿತು. ಎಂದು ಹೇಳಿ ಮರಣದಂಡನೆಯನ್ನು ವಿಧಿಸಿದರು. ಅಪರಾಧಿಯ ವಯಸ್ಸು ೨೨.

ಸಿಮ್ಲಾ ಪಟ್ಟಣದಲ್ಲಿ ಸ್ಟೇಟ್‌ಕೌನ್ಸಿಲ್ಲಿಗೂ ಶಾಸನ ಸಭೆಗೂ ಹೋಗಿದ್ದ ಮಹಮ್ಮದೀಯ ಸಭಿಕರೂ ಇನ್ನು ಕೆಲ ಪ್ರಮುಖ ಮಹಮ್ಮದೀಯರು ಸಹ ತಾ|| ೧೯ ರಲ್ಲಿ ಒಂದು ಸಭೆಗೂಡಿ, "ತುರ್ಕಿ ಗ್ರೀಕ್ ಯುದ್ಧದಲ್ಲಿ ಆಂಗ್ಲ ಪ್ರಭುತ್ವದವರು ತಟಸ್ಥರಾಗಿರಬೇಕು, ಇಂಗ್ಲಂಡಿಗೂ ತುರ್ಕಿಗೂ ಮತ್ತೆ ಮೈತ್ರಿಯುಂಟಾಗುವಂತೆ ಆಂಗ್ಲರು ಪ್ರವರ್ತಿಸಬೇಕು. ಹಾಗೆ ಮಾಡಿದರೆ ಆಂಗ್ಲ ಸಾಮ್ರಾಜ್ಯಕ್ಕೂ ಮಹಮ್ಮದೀಯ ರಾಜ್ಯಕ್ಕೂ ಮಿತ್ರತ್ವವುಂಟಾಗುವುದು. ತುರ್ಕಿ ಸಾಮ್ರಾಜ್ಯಕ್ಕೆ ಚಿಕ್ಕ ಆಸ್ಯಾ, ಥ್ರೇಸು, ಅಡ್ರಿಯಾನೋಪಲ್‌ಗಳು ಸೇರಬೇಕು. ಸ್ವಲ್ಪ ಜನಸಂಘಗಳ ರಕ್ಷಣ ಸೌಕಾರ್ಯಗಳಿಗೆ ತುರ್ಕಿಯು ಹೊಣೆವಹಿಸಬೇಕು. ಕಾನ್‌ಸ್ಟಾಂಟಿನೋಪಲ್ಲಿನ ಮೇಲೂ ಡಾರ್ಡನಲ್ಸಿನ ಮೇಲೂ ಮಿತ್ರಮಂಡಲಿಯವರು ಇಟ್ಟುಕೊಂಡಿರುವ ಅಧಿಕಾರವು ತೊಲಗಬೇಕು. ಮಿತ್ರಮಂಡಲಿಯವರ ಸ್ವಾತಂತ್ರ್ಯಕ್ಕೆ ತುರ್ಕಿಯವರು ಹೊಣೆಹೊತ್ತುಕೊಳ್ಳಬೇಕು. ತುರ್ಕಿ ಸುಲ್ತಾನರನ್ನು ಕಾಲಿಫಾ ಎಂದು ಸಂಪೂರ್ಣವಾಗಿ ಮಿತ್ರಮಂಡಲಿಯವರು ಒಪ್ಪಿಕೊಳ್ಳಬೇಕು. ಈ ಪ್ರಕಾರಕ್ಕೆ ಸಂಧಿನಿಬಂಧನೆಗಳಾದರೆ ಶಾಂತಿಸ್ಥಾಪಿತವಾಗುವುದು" ಎಂದು ವೈಸ್‌ರಾಯರ ಮೂಲಕ ಮುಖ್ಯಮಂತ್ರಿಯವರಿಗೆ ಶ್ರುತಪಡಿಸಬೇಕೆಂದು ನಿರ್ಧಾರಮಾಡಿದರು.

ಮಲಬಾರಿನ ಪರಿಸ್ಥಿತಿಯನ್ನು ಕುರಿತು ಪ್ರಭುತ್ವದವರು ಆಗಾಗ್ಗೆ ಪ್ರಕಟನವನ್ನು ಮಾಡುತ್ತಿದ್ದರು. ಈಗ ಅಲ್ಲಿ ಸೌಮ್ಯಸ್ಥಿತಿಯು ಏರ್ಪಟ್ಟಿರುವುದರಿಂದ ಇನ್ನುಮುಂದೆ ಅಲ್ಲಿಯ ಪರಿಸ್ಥಿತಿಯನ್ನು ಕುರಿತ ಪ್ರಕಟನವನ್ನು ಮಾಡುವುದಿಲ್ಲವೆಂದು ಸರ್ಕಾರದವರು ತಿಳಿಯಿಸಿ, ಆಗಸ್ಟ್ ತಿಂಗಳ ಕೊನೆಯಲ್ಲಿ ಕಡೆಯ ವರದಿಯನ್ನು ಪ್ರಕಟಿಸಿದ್ದಾರೆ. ಅದರಲ್ಲಿ ವ್ಯಕ್ತವಾಗಿರುವುದೇನೆಂದರೆ—ಧಾನ್ಯದ ಬೆಳಸು ಸಮೃದ್ಧವಾಗಿದೆ. ಎರ್ನಾಡು ವಲುವನಾಡು ತಾಲ್ಲೂಕುಗಳಲ್ಲಿ ಕೆಲಸಗಾರರಿಗೆ ಕೂಲಿ ದೊರೆಯುತ್ತಿದೆ. ಕಲ್ಲಿಕೋಟೆ ತಾಲ್ಲೂಕಿನಲ್ಲಿ 2 ನೆ ಕಾರುಬಿತ್ತನೆಯು ಆರಂಭವಾಗಿದೆ. ಧಾನ್ಯದ ಬೆಲೆಯು ಇಳಿಯುತ್ತಿದೆ. ಆಗಸ್ಟ್ ತಿಂಗಳ ಕೊನೆಯವರೆಗೆ ಸರ್ಕಾರದವರು ಅಲ್ಲಿಯ ವಿಪನ್ನಪ್ರಜೆಗಳಿಗೆ 846708 ರೂ. ಗಳನ್ನು ಸಾಲವಾಗಿ ಕೊಟ್ಟಿದ್ದಾರೆ. ಇನ್ನು ಸಾಲ ಕೊಡುವುದು ಅನವಶ್ಯಕವೆಂದು ನಿರ್ಧರಿಸಿದ್ದಾರೆ. ಆಗಸ್ಟ್ ತಿಂಗಳಲ್ಲಿ 518 ಮಂದಿ ವಿಪ್ಲವಕಾರರಿಗೆ ಶಿಕ್ಷೆ ವಿಧಿಸಲ್ಪಟ್ಟಿತು. 9984 ಮಂದಿಗೆ ಅರ್ಥದಂಡವು ವಿಧಿಸಲ್ಪಟ್ಟಿತು. ಮೊದಲಿಂದ ಇಲ್ಲಿಯವರೆಗೆ 700106 ರೂ. ಗಳ ಅರ್ಥದಂಡವು ವಿಧಿಸಲ್ಪಟ್ಟಿತು. ವಿಪ್ಲವಕಾರರಲ್ಲಿ ಇನ್ನೂ 600 ಮಂದಿಗಳು ಪೋಲೀಸರಿಗೆ ಸಿಕ್ಕಿಲ್ಲ. ಇನ್ನುಮುಂದೆ ವಿಪ್ಲವಕಾರರ ವಿಚಾರಣೆಯು ಸಾಧಾರಣವಾದ ಕೋರ್ಟುಗಳಲ್ಲೇ ನಡೆಯುವುದು. ವಿಪ್ಲವಕಾರರಿಂದ ಧ್ವಂಸಮಾಡಲ್ಪಟ್ಟಿದ್ದ ರೆವಿನ್ಯೂ ಆಫೀಸ್ ಭವನಗಳು ಬಹುಮಟ್ಟಿಗೆ ಜೀರ್ಣೋದ್ಧಾರ ಮಾಡಲ್ಪಟ್ಟಿವೆ. ಮಾರ್ಗಗಳೆಲ್ಲಾ ಸರಿಪಡಿಸಲ್ಪಟ್ಟುವು. ವಿಪ್ಲವದಿಂದ ಸಂಭವಿಸಿದ ಕಷ್ಟಗಳನ್ನು ತಗ್ಗಿಸುವ ವಿಷಯದಲ್ಲಿ ಕೃಷಿಮಾಡಿದ ಅನಧಿಕಾರಿ ಸಂಘದವರಿಗೆ ಸರ್ಕಾರದವರು ವಂದನೆಯನ್ನರ್ಪಿಸಿದ್ದಾರೆ.

ಅಮೃತಸರದ ಸುವರ್ಣ ದೇವಾಲಯವಲ್ಲದೆ ಅಲ್ಲಿಗೆ ಸ್ವಲ್ಪ ದೂರದಲ್ಲಿ ಸಿಕ್ಕರ ಪವಿತ್ರಸ್ಥಾನವಾದ ಗುರುಕಾಬಾಗ್ ಎಂಬ ಸ್ಥಲವಿದೆ, ಅಲ್ಲಿಯ ಮಹಾಂತನ ನಡತೆಯು ಭಕ್ತಜನರಿಗೆ ಒಪ್ಪದೆ ಪರಸ್ಪರ ಮನಃಕಷಾಯವಿದ್ದಿತು. ಗುರುಕಾಬಾಗಿನ ಸಮಾರಾಧನೆಯ ಅಡುಗೆಗಾಗಿ ಸವಿದೆಬೇಕಾಗಲು ಅದಕ್ಕೆ ಸೇರಿದ ವನದಲ್ಲಿ ಕೆಲ ಮರಗಳನ್ನು ಮಹಾಜನ ಪಕ್ಷದ ಪಂಚರ ಕಡೆಯ ಜನರು ಕಡಿಯುವುದಕ್ಕೆ ಉಜ್ಜುಗಿಸಿದಾಗ ಮಹಾಂತನು ತಡೆದನು. ಅದನ್ನು ಅವರು ಲಕ್ಷಿಸಲಿಲ್ಲ. ಆದರ ಮೇಲೆ ಪೋಲೀಸರಿಗೆ ಬಿನ್ನಯಿಸಿಕೊಂಡು ಮಹಾಂತನು ಅವರ ಸಹಾಯವನ್ನು ಪಡೆದನು. ಅವರು ತಡೆಯಲು ಉಪಕ್ರಮಿಸಿ ದಂಡಿಸಿದರು. ಅದನ್ನು ಕೇಳಿ ನೂರಾರು ಸಾವಿರಾರುಗಟ್ಟಲೆ ಅಕಾಲಿ (ಸಿಕ್) ಜನರು ಗುಂಪುಗುಂಪಾಗಿ ಬಂದು ನುಗ್ಗುತ್ತಿದ್ದಾರೆ. ಅವರನ್ನು ನಾನಾತರದಲ್ಲಿ ಪೋಲೀಸರು ಬಡಿದು ಎಳೆದು ಕೆಡಹಿ ಚಿತ್ರಹಿಂಸೆಮಾಡುತ್ತಿದ್ದಾರೆ. ಎಷ್ಟೋ ಜನರನ್ನು ಕಾರಾಗೃಹಕ್ಕೆ ಕಳುಹಿಸಿದರು. ಪೋಲೀಸರ ಏಟಿನಿಂದ ಸಾವಿರಾರು ಮಂದಿಗೆ ಗಾಯಗಳಾಗಿವೆ. ಆದರೂ ಅಕಾಲಿ ಜನರು ಸ್ವಲ್ಪವೂ ಪ್ರತಿಭಟಿಸದೆ ಅವರು ಕೊಟ್ಟ ಹಿಂಸೆಗಳನ್ನೆಲ್ಲಾ ಸೈರಿಸಿಕೊಂಡು ಮೊಂಡಾಟವನ್ನು ಮಾಡಿ ಮಾರ್ಗಗಳಲ್ಲೇ ಬಿದ್ದುಕೊಳ್ಳುತ್ತಿದ್ದಾರೆ. ನುಗ್ಗುವ ಪ್ರಯತ್ನವನ್ನು ಬಿಟ್ಟೇ ಇಲ್ಲ. ಪಂ|| ಮದನಮೋಹನ ಮಾಳವ್ಯರೂ ಶಾಸನಸಭಾ ಸಭಿಕರಾದ ಕೆಲವು ಸಿಕ್ ಪ್ರಮುಖರೂ ಆ ಸ್ಥಲಕ್ಕೆ ಹೋಗಿ ಪೋಲೀಸರ ಅತ್ಯಾಚಾರವನ್ನು ನಿಷೇಧಿಸಿ ಸ್ವಲ್ಪ ಕಡಿಮೆಮಾಡಿಸಿದ್ದಾರೆ. ರಣರಂಗದಲ್ಲಿ ದೇಹಾಭಿಮಾನವನ್ನು ಕೂಡ ಮರೆತು ಯುದ್ಧಮಾಡಿ ಶತ್ರುವಿಗೆ ಯಮಸ್ವರೂಪದಂತೆ ತೋರುವ ಮಹಾಪರಾಕ್ರಮಿಗಳಾದ ಸಿಕ ಜನರು ಈ ಸಂದರ್ಭದಲ್ಲಿ ಪೋಲೀಸರ ಹಿಂಸೆಗೆ ಪ್ರತಿಮಾಡದೆ ಪ್ರಶಾಂತಿವಹಿಸಿರುವುದನ್ನು ನೋಡಿ ದೇಶವೇ ಆಶ್ಚರ್ಯಪಡುತ್ತಿದೆ.

ವಿಜಾಪುರ ಜಿಲ್ಲೆಗೆ ಸೇರಿದ ಬಾಗೆವಾಡಿ ತಾಲ್ಲೂಕು ಉಕ್ಕಲಿಗ್ರಾಮದ ತಮ್ಮಾಜಿಲಕ್ಷ್ಮಣ ಎಂಬ ಜೋಯಿಸರು ಆ ಗ್ರಾಮದ ಇಬ್ಬರು ವೀರಶೈವರ ಮೇಲೆ ತಮ್ಮ ಜೋಯಿಸಿಕೆ ಹಕ್ಕನ್ನು ತಮಗೆ ಕೊಡಲಿಲ್ಲವೆಂಬದಾಗಿ ಅದನ್ನು ಕೊಡಿಸಲಿಕ್ಕೆ ಮುದ್ದೆಬಿಹಾಳು ಕೋರ್ಟಿನಲ್ಲಿ ವ್ಯಾಜ್ಯವನ್ನು ಹೂಡಿದ್ದರು. ಆದರೆ ಇಂಥ ವ್ಯಾಜ್ಯದಲ್ಲಿ ತಮಗೆ ಜಯವಾಗುವುದಿಲ್ಲವೆಂಬುದನ್ನು ತಿಳಿದುಕೊಂಡೋ ಏನೋ ವ್ಯಾಜ್ಯವನ್ನು ಹಿಂದಕ್ಕೆ ತೆಗೆದುಕೊಂಡದ್ದಲ್ಲದೆ ಪ್ರತಿವಾದಿಗಳ ಕೋರ್ಟುವೆಚ್ಚವನ್ನು ಕೂಡ ಕೊಡಲು ಒಪ್ಪಿದರು. ಆದರೆ ಪ್ರತಿವಾದಿಗಳು ವ್ಯಾಜ್ಯಕ್ಕಾಗಿ ಕೂಡಿಸಿದ್ದ ಹಣವನ್ನು ಕಾಂಗ್ರೆಸ್ ಫಂಡಿಗೆ ಕೊಡಲು ಒಪ್ಪಿದರೆಂದೂ, ವೀರಶೈವರ ಮನಸ್ಸು ಕೆಡಬಾರದೆಂದು ಜೋಯಿಸರು ಕೆಲ ದೊಡ್ಡಮನುಷ್ಯರ ಮಾತಿನಮೇಲೆ ವ್ಯಾಜ್ಯವನ್ನು ಹಿಂದಿರಿಗಿಸಿಕೊಂಡರೆಂದೂ ಮೊದಲಾಗಿ ಸುಳ್ಳುಸುದ್ದಿಯನ್ನು ಅವರ ಕಡೆಯವರಾರೋ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಅದೆಲ್ಲಾ ಸುಳ್ಳೆಂದು ಈಗ ತೋರಬಿದ್ದಿತು. ಪೌರೋಹಿತ್ಯದ ಮತ್ತು ಜೋಯಿಸದ ಸೌಮ್ಯವೆಂಬುದು ಒಂದುತರದ ಕೂಲಿಯೇ ಸರಿ. ಇಷ್ಟವಿದ್ದವರು ಇದನ್ನು ಮಾಡಿಸಿಕೊಂಡು ಕೂಲಿ ಕೊಡಬಹುದು. ಇಲ್ಲವೆ ದೂರೀಕರಿಸಬಹುದು. ನನ್ನಿಂದಲೇ ಮಾಡಿಸಿಕೊಳ್ಳಬೇಕೆಂದು ಕೂಲಿಕಾರನು ಬಲಾತ್ಕರಿಸಲಾಗುವುದಿಲ್ಲ. ತತ್ಕಾಪಿ ಪರಧರ್ಮೀಯರು ತಮಗೆ ಯಾವ ತೆರದಲ್ಲೂ ಸಂಬಂಧಿಸದ ಮತ್ತೊಂದು ಧರ್ಮದವರಿಗೆ ಪೌರೋಹಿತ್ಯಾದಿಗಳನ್ನು ನಡೆಯಿಸಲು ತಮಗೆ ಹಕ್ಕುಂಟೆಂದು ಸಾಧಿಸುವುದಂತೂ ಪೂರ್ಣಾಸಂಭವವು. ಇಂಥ ವ್ಯಾಜ್ಯಗಳು ಹೈಕೋರ್ಟಿನವರೆಗೂ ಹೋಗಿ ವಾದಿಗಳಿಗೆ ವಿರುದ್ಧವಾಗಿ ತೀರ್ಮಾನಗಿವೆ. ಅಜ್ಞಾನದಿಂದ ಹೇಗೋ ನಡೆದುಬಂದ ಅನಾಚಾರಪದ್ಧತಿ ಯಾವುದಾದರೂ ಇದ್ದರೆ ಅದು ಜ್ಞಾನೋದಯವಾದ ಮೇಲೂ ಆಚಂದ್ರಾರ್ಕವಾಗಿ ನಡೆದುಬರುವುದೆಂದು ತಿಳಿಯುವುದು ತಪ್ಪು.

ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಸೆಪ್ಟಂಬರ್ ತಾರೀಖು ೨೪ ನೆಯ ಭಾನುವಾರ. ೫

ಚ್ಛಾಧೀನವಾಗಿ ಮಾಡಲ್ಪಡತಕ್ಕುದು ಎಂದು ಗೋರ್‌ರವರು ಹೇಳಿದರು. ಮಸೂದೆಯನ್ನು ಉಪಸಂಘದ ಪರ್ಯಾಲೋಚನೆಗೆ ಕಳುಹಿಸಬೇಕೆಂಬ ತೀರ್ಮಾನಕ್ಕೆ 34 ಮಂದಿ ಅನುಕೂಲವಾಗಿಯೂ 33 ಮಂದಿ ಪ್ರತಿಕೂಲವಾಗಿಯೂ ಓಟನ್ನು ಕೊಟ್ಟರು. ತೀರ್ಮಾನವು ಗೆದ್ದಿತು. ಮ|| ಗಳಾದ ಜೆ. ಚೌಧುರಿ, ಸಮರ್ಥ, ರಂಗಾಚಾರಿ, ಈಶ್ವರಶರಣ್ಯಾ, ಚೌಧುರಿಷಹಬುದ್ದೀನ್, ವಾಜಪೇಯ, ಜೋಷಿ, ಲಟ್ಟಿ, ಲಿಂಡ್ಸೆ, ಗೋರ್— ಇಷ್ಟುಮಂದಿಗಳು ಉಪಸಂಘದ ಸಭಿಕರಾಗಿ ಆರಿಸಲ್ಪಟ್ಟರು.

ಸಿಮ್ಲಾದಲ್ಲಿರುವ ಸರ್ಕಾರಿ ಆಸ್ತಿಗಳ ಒಟ್ಟು ಬೆಲೆಯು 20535477 ರೂ. ಗಳು ಇದರಲ್ಲಿ ವೈಸ್ರಾಯರ ಭವನಕ್ಕೆ 3761291 ರೂ. ಉಳಿದ ಸಿವಿಲ್ ಉದ್ಯೋಗಿಗಳ ವಾಸದ ಬಂಗಲೆಗಳಿಗೆ 5552594 ರೂ. ಸೈನಿಕೋದ್ಯೋಗಿಗಳ ಭವನಗಳಿಗೆ 858071ರೂ. ಸಾಮಾನ್ಯೋದ್ಯೋಗಿಗಳ ವಾಸದ 83 ಮನೆಗಳಿಗೆ 899359 ರೂ. ಸೇನಾಪತಿಯ ಭವನಕ್ಕೆ 404162ರೂ.

ಇಂಡ್ಯಾ ಸರ್ಕಾರದವರು ಈವರ್ಷ ಮಾಡಿದ ಸಾಲಕ್ಕೆ 16 ಕೋಟಿ ರೂ. ಗಳು ಕೂಡಿರುತ್ತವೆ.

ಸ್ಟಾಂಪುಗಳನ್ನೂ ಛಾಪಾ ದಸ್ತಾವೇಜು ಕಾಗದಗಳನ್ನೂ ಇನ್ನುಮುಂದೆ ಭರತಖಂಡದಲ್ಲೇ ಮುದ್ರಿಸುವುದನ್ನು ಸರ್ಕಾರದವರು ಆಲೋಚಿಸುತ್ತಿದ್ದಾರೆ.

ಅಂಚೆಯ ಕವರುಗಳನ್ನು ದೊಡ್ಡದು ಮಾಡುವುದಲ್ಲದೆ ಉತ್ತಮವಾದ ಕಾಗದದಲ್ಲಿ ಅವನ್ನು ನಿರ್ಮಿಸುವುದಕ್ಕೆ ಪತ್ರವ್ಯವಹಾರವನ್ನು ಸರ್ಕಾರದವರು ನಡೆಸುತ್ತಿದ್ದಾರೆ.

ಜಮೀನ್ದಾರರುಗಳು ಶಾಸನಸಭಾ ಸಭಿಕರನ್ನು ಆರಿಸುವಾಗ್ಗೆ ಓಟನ್ನು ಕೊಡಲು ಪೋಲಿಂಗ್ ಸ್ಟೇಷನ್ನುಗಳಿಗೆ ಹೋಗಬೇಕಾದ ನಿರ್ಬಂಧವಿಲ್ಲದೆ ಇದ್ದ ಕಡೆಯಿಂದಲೇ ಓಟನ್ನು ಬರೆದು ಕಳುಹಿಸಬಹುದೆಂದು ವಿಧಿಯಲ್ಲಿ ಸವರಣೆ ಮಾಡಲು ಅಂಗೀಕೃತವಾಯಿತು.

ಹೊಗೆಬಂಡಿಗಳಲ್ಲಿ 3ನೆ ತರಗತಿ ಪ್ರಯಾಣಿಕರ ತೊಂದರೆಗಳನ್ನೆಲ್ಲಾ ವಿವರಿಸಿ ಇದರ ಪರಿಹಾರವಾಗಬೇಕಾದರೆ ರೈಲ್ವೆ ಮ್ಯಾನೇಜ್‌ಮೆಂಟನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು, ರೈಲ್ವೆಯ ಒಟ್ಟು 35 ಕೋಟಿ ರೂ. ಆದಾಯದಲ್ಲಿ 29 ಕೋಟಿಯು 3ನೆ ತರಗತಿಯ ಪ್ರಯಾಣಿಕರಿಂದಲೇ ಬರುತ್ತವೆ. ಹೀಗಿರುವಾಗ್ಗೆ 1-2ನೆ ತರಗತಿಯ ಪ್ರಯಾಣಿಕರಿಗೆ ಮಾತ್ರ ಅನೇಕ ಸೌಕರ್ಯಗಳನ್ನು ಮಾಡಿಕೊಟ್ಟು 3ನೆ ತರಗತಿಯವರನ್ನು ಉಪೇಕ್ಷಿಸುವುದು ಯುಕ್ತವಲ್ಲವೆಂದು ತಿಳಿಯಪಡಿಸಿದುದಕ್ಕೆ ದಿಲ್ಲಿಯಲ್ಲಿ ಬರುವ ನವಂಬರ್ ತಿಂಗಳಲ್ಲಿ ರೈಲ್ವೆ ಸಮುಸ್ಯಾಚರ್ಚೆಗಾಗಿ ಸಭೆಕೂಡುವ ಕಾರಣ ಅಲ್ಲೇನಾಗುವುದೋ ತಿಳಿದ ನಂತರ ಈ ಸಂಗತಿಯನ್ನು ಚರ್ಚಿಸೋಣವೆಂದು ಉತ್ತರವು ಕೊಡಲ್ಪಟ್ಟಿತು.

ಬಜೆಟ್ ಅಂದಾಜಿಗಿಂತ ಈಗ ಇಂಡ್ಯಾ ಸರ್ಕಾರದ ವರಮಾನವು ಬಹು ಕಡಿಮೆಯಾಗುವ ಸ್ಥಿತಿಯು ಗೋಚರಿಸಿದೆ. ಸುಂಕದ ಕಟ್ಟೆಯಿಂದ ವರ್ಷಕ್ಕೆ 45¼ ಕೋಟಿ ಆದಾಯವಾಗುವುದೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಕಳೆದ ಜುಲೈ ತಿಂಗಳ ಕಡೆಯವರೆಗೆ 11¾ ಕೋಟಿ ಉತ್ಪತ್ತಿಯಾಗಿದೆ ವರ್ಷದ ಕಡೆಗೆ ಈ ಭಾಗದ ಉತ್ಪತ್ತಿಯು 1-2 ಕೋಟಿ ಕಡಿಮೆಯಾಗಬಹುದು. ಬಟ್ಟೆಗಳು ಹೊರದೇಶದಿಂದ ಇಲ್ಲಿಗೆ ಬರುವುದು ವೃದ್ಧಿಯಾಗುತ್ತಿದೆ. ರೈಲ್ವೆ [illegible] ಯವೂ ಕೂಡ 3-4 ಕೋಟಿ ಕಡಿಮೆಯಾಗು[illegible] ಪ್ರಯಾಣಿಕರ ಸಂಚಾರವು ಹಿಂದಿಗಿಂತ ಈಗ 100ಕ್ಕೆ 1[illegible] ವನ್ನು ಕಡಿಮೆಯಾಯಿತು. ಆದರೆ ಸಾಮಾನುಗಳು [illegible] ಗುವುದು ಹೆಚ್ಚಾಗಿದೆ. ಪ್ರಯಾಣಿಕರ ಬಾಡಿಗೆ ದರಗಳನ್ನು ಕಡಿಮೆಮಾಡುವುದಿಲ್ಲ. ವೆಚ್ಚದಲ್ಲಿ ಸೈನಿಕವ್ಯಯವು ಮತ್ತಷ್ಟು ಹೆಚ್ಚುತ್ತದೆ. ವಜೀರಿಸ್ತಾನಯುದ್ಧದ ವೆಚ್ಚಕ್ಕೆ 35 ಲಕ್ಷ ರೂ. ಹಿಡಿಯುವುದೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಈಗ ಅದಕ್ಕೆ 2 ಕೋಟಿ ರೂ. ಗಳನ್ನು ವೆಚ್ಚಮಾಡಬೇಕಾಗುವುದು. ಅಂಚೆತಂತಿಗಳ ಶಾಖೆಯಲ್ಲಿ 1 ಕೋಟಿ ರೂ. ಗಳ ವರಮಾನವು ಕಡಿಮೆಯಾಗುವುದು.

ಗೋದುವೆ ಮೊದಲಾದ ಧಾನ್ಯಗಳಲ್ಲಿ ಎಣ್ಣೆಬೀಜಗಳು ಮೊದಲಾದುವನ್ನು ಹೊರಕ್ಕೆ ವ್ಯಾಪಾರಾರ್ಥವಾಗಿ ಕಳುಹಿಸಿಕೊಡುವ ವಿಷಯದಲ್ಲಿ ಸರ್ಕಾರದವರು ಮಾಡಿರುವ ನಿರ್ಬಂಧವನ್ನು ತೆಗೆದುಹಾಕಬೇಕೆಂದು ತರಲ್ಪಟ್ಟ ತೀರ್ಮಾನಕ್ಕೆ ಸರ್ಕಾರದಿಂದ ಉತ್ತರಕೊಡುವಾಗ್ಗೆ—ಅಕ್ಕಿ ಎಣ್ಣೆಬೀಜ ಇವುಗಳನ್ನು ಸಾಗಿಸುವುದಕ್ಕೆ ನಿರ್ಬಂಧವೇ ಇಲ್ಲ. ಉಳಿದ ಆಹಾರ್ಯವಸ್ತುಗಳಿಗೆ ಮಾತ್ರ ಬಲವಾದ ನಿರ್ಬಂಧವಿದೆ. ನಿರ್ಬಂಧವನ್ನು ಸಂಪೂರ್ಣವಾಗಿ ತಪ್ಪಿಸಿಬಿಟ್ಟರೆ ದೇಶಕ್ಕೆ ಸಾಕಾಗುವಷ್ಟು ಆಹಾರ್ಯವಸ್ತುವು ಇಲ್ಲಿ ಉಳಿಯದೆ ಹೊರಕ್ಕೆ ಸಾಗಿಹೋಗುವುದರಿಂದ ಬೆಲೆಯು ಹೆಚ್ಚಿಹೋಗಿ ಕೊಂಡುತಿನ್ನುವವರಿಗೆ ಕಷ್ಟವಾಗುವುದು. ಈ ವರ್ಷ ಭರತಖಂಡದಲ್ಲಿ ಗೋದುವೆ ಮೊದಲಾದುವುಗಳು ಸಮೃದ್ಧವಾಗಿ ಬೆಳೆದುವು. ನಿರ್ಬಂಧಪದ್ಧತಿಯಿದ್ದುದರಿಂದ ಅವುಗಳು ಅಗ್ಗವಾಗಿ ದೊರೆಯುತ್ತಿರುವುವು. ಹಿಂದೆ ಲಯಲ್ಪೂರಿನಲ್ಲಿ ಗೋದುವೆ ಮಣಕ್ಕೆ 9½ ರೂ. ಇದ್ದಿತು. ಈಗ 5 ರೂ. ಆಗಿದೆ. ಸೊಲ್ಲಾಪುರದಲ್ಲಿ 10 ರೂ. ಇದ್ದಿತು. ಈಗ 3-5-0 ಆಗಿದೆ. ಅಲ್ಲದೆ ಈ ತಿಂಗಳಲ್ಲಿ ಮಳೆ ಸರಿಯಾಗಿ ಬರದಿದ್ದರೆ ಮುಂದಿನ ಬೆಳಸು ಕೆಡುವುದು. ಕ್ಷಾಮಸ್ಥಿತಿಯು ಪ್ರಾಪ್ತವಾಗಬಹುದು. ನಿರ್ಬಂಧ ಪದ್ಧತಿಯಿಲ್ಲದೆಹೋದರೆ ಹೆಚ್ಚು ತೊಂದರೆಯಾಗುವುದು. ಈ ಮುಂದಣ ಮಳೆಯು ಸರಿಯಾಗಿ ಬಿದ್ದು ಬೆಳಸಿನ ಸ್ಥಿತಿಯು ಸಮರ್ಪಕವಾಗಿ ಕಂಡರೆ ನಿರ್ಬಂಧವನ್ನು ಸರ್ಕಾರದವರು ತೊಲಗಿಸುವರು ಎಂದು ಉತ್ತರ ಕೊಡಲ್ಪಟ್ಟಿತು.

ಶಾಸನಗಳಲ್ಲಿ ರೌಲತ್ ಆಕ್ಟು, ಪ್ರೆಸ್ ಆಕ್ಟು ಮೊದಲಾದ ನಿರ್ಬಂಧದ ಶಾಸನಗಳು 20ರ ಮೇಲೆಯೇ ತೆಗೆದುಹಾಕಲ್ಪಟ್ಟು, ದೇಶೀಯ ಸಂಸ್ಥಾನಿಕರನ್ನು ಬ್ರಿಟಿಷ್ ಇಂಡ್ಯಾದ ವೃತ್ತಪತ್ರಿಕೆಗಳು ಸ್ವಚ್ಛಂದವಾಗಿ ವಿಮರ್ಶಿಸುವ ಬಾಧೆಯಿಂದ ರಕ್ಷಿಸುವಂಥ ಶಾಸನ, ಪೊಲೀಸರನ್ನು ದುರ್ಬೋಧನೆ ಮಾಡುವುದರಿಂದ ತಪ್ಪಿಸುವ ಶಾಸನ ಮೊದಲಾದ ಕೆಲ ನೂತನ ಶಾಸನಗಳು ಏರ್ಪಡಿಸಲ್ಪಡುವುವು.

ಪೌರೋಹಿತ್ಯವನ್ನು ಮಾಡಿಸಿಕೊಳ್ಳದಿದ್ದರೂ ಸೊಮ್ಮಿಗೆ ತಮ್ಮ ಹಕ್ಕುಂಟೆಂದು ಪುರೋಹಿತರೋ ಮಠಾಧಿಪತಿಗಳೋ ಕೋರ್ಟುಗಳಲ್ಲಿ ವ್ಯಾಜ್ಯವನ್ನು ಹೂಡುವುದು ಹೆಚ್ಚುತ್ತಿದೆ. ಇಂಥ ವ್ಯಾಜ್ಯಗಳನ್ನು ಹೂಡಲು ಅಧಿಕಾರವಿಲ್ಲವೆಂದು ಶಾಸನವಾಗಬೇಕೆಂಬ ತೀರ್ಮಾನವನ್ನು ಪ್ರೊ|| ಕಲೆಯವರು ಉಪಪಾದಿಸಿದರು. ಹೀಗೆ ಮಾಡಿದರೆ ಬ್ರಾಹ್ಮಣರಿಗೆ ಜೀವನಾಧಾರವು ತಪ್ಪಿಹೋಗುವುದೆಂದೂ, ಅವರ ಹಕ್ಕನ್ನು ತಪ್ಪಿಸುವುದು ಅಕ್ರಮವೆಂದೂ, ರಂಗಸ್ವಾಮಯ್ಯಂಗಾರರು ಕಪರ್ದಿಯವರು ಮೊದಲಾದ ಕೆಲ ಬ್ರಾಹ್ಮಣ ಸಭಿಕರು ವಾದಿಸಿದರು. ಕೆಲಸವನ್ನು ಮಾಡದಿದ್ದವರು ಸೌಮ್ಯವನ್ನು ಕೋರುವುದು ನ್ಯಾಯವಲ್ಲವೆಂದೂ, ಸಭಿಕರೆಲ್ಲಾ ತೀರ್ಮಾನಕ್ಕೆ ಅನುಮೋದಿಸಿದರೆ ಸರ್ಕಾರದವರು ಅಡ್ಡಿಮಾಡುವುದಿಲ್ಲವೆಂದೂ ಸರ್ ಷಫೀಯವರು ಹೇಳಿದರು. ಅನುಕೂಲ ಪ್ರತಿಕೂಲವಾದಗಳು ಸ್ವಲ್ಪಹೊತ್ತು ನಡೆದಮೇಲೆ ಬಹುಮಂದಿ ಸಭಿಕರಿಗೆ ಈ ಶಾಸನದ ಸಂಗತಿಯು ತಿಳಿಯದಿರುವ ಕಾರಣ ಸದ್ಯಕ್ಕೆ ಇದರ ಪ್ರಸಂಗವನ್ನು ನಿಲ್ಲಿಸಬೇಕೆಂದು ಗೊತ್ತಾಯಿತು. ಮುಂದಣ ಸಮಾವೇಶಕ್ಕೆ ಇದು ಬರುವುದು.

ತುರ್ಕಿ.

ಮತ್ತೊಂದು ಯುದ್ಧವೋ ?

ಅಂಗೋರಾ ತುರ್ಕಿಗೆ ಉಂಟಾದ ಜಯವನ್ನು ಕಂಡು ಯೂರೋಪ್ಯರ ಮಿದುಳು ಕೆದರಿಹೋಗಿದೆ. ಯೂರೋಪು ತೀರಕ್ಕೂ ತುರುಕರು ನುಗ್ಗುವರೆಂಬ ದಿಗಿಲು ಅವರಿಗೆ ಹಿಡಿದಂತೆ ತೋರುತ್ತದೆ. ಆಂಗ್ಲವೃಷಭವು ಬಲವಾಗಿ ಗುಟುರೆಹಾಕುತ್ತಾ ಯೂರೋಪುಖಂಡವನ್ನೆಲ್ಲಾ ಯುದ್ಧಕ್ಕೆ ಅಣಿಮಾಡುವಂತೆ ಕಾಣುತ್ತದೆ. ತನ್ನ ಅಧಿನಿವೇಶ ರಾಷ್ಟ್ರಗಳೆಲ್ಲಾ ಡಾರ್ಡಿನಲ್ಸ್ ಜಲಸಂಧಿ ರಕ್ಷಣಕಾರ್ಯಕ್ಕಾಗಿ ಸಹಾಯಸೈನ್ಯವನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಂಡಿದೆ. ತಟಸ್ಥ ಪ್ರದೇಶ ರಕ್ಷಣೆಗಾಗಿ ತಮಗೆ ಸಹಾಯಮಾಡಬೇಕೆಂದು ರುಮೇನಿಯಾ, ಜುಗೋಸ್ಲಾವಿಯೂ, ಗ್ರೀಸ್‌ದೇಶಗಳವರನ್ನು ಸಹ ಕೋರಿದೆ. ಫ್ರಾನ್ಸ್ ಇಟಲಿಗಳು ಕೂಡ ಆಂಗ್ಲರ ಅಭಿಪ್ರಾಯಕ್ಕೇ ಒಲಿದಂತೆ ಕಾಣುತ್ತದೆ. ಅತ್ತ ರಷ್ಯಾ ಕರಡಿಯು ಅಂಗೋರಾಕ್ಕೆ ಸಹಾಯಮಾಡಲು ಸಿದ್ಧವಾಗಿದ್ದೇನೆಂದು ಹೇಳಿಕೊಂಡು ತನ್ನ ತೀಕ್ಷ್ಣನಖಗಳನ್ನು ಚಾಚಿ ಮಸೆದುಕೊಳ್ಳುತ್ತಿದೆ. ಯೂರೋಪು ತೀರಕ್ಕೆ ತುರ್ಕಿ ಸೈನ್ಯವನ್ನು ಸೇರಗೊಡದಂತೆ ಮಾಡಬೇಕೆಂದು ಇಂಗ್ಲೀಷರು ಮಧ್ಯಧರಾ ಸಮುದ್ರದಲ್ಲಿರುವ ತಮ್ಮ ನೌಕಾದಳಕ್ಕೆ ಆಜ್ಞೆಮಾಡಿದ್ದಾರೆ. 6 ಸಮುದ್ರ ವಿಮಾನಗಳು 30 ಮಂದಿ ಅಧಿಕಾರಿಗಳೊಡನೆ ಕಾನ್‌ಸ್ಟಾಂಟಿನೋಪಲ್ಲಿಗೆ ಹೋಗಬೇಕೆಂದು ಅಪ್ಪಣೆ ಮಾಡಿದ್ದಾರೆ. ಮೆಸಪೆಟೋಮಿಯಾವಿಗೂ ಕೂಡ ಕೆಲ ಸೈನ್ಯವನ್ನು ಕಳುಹಿಸಿಕೊಡಲು ಅನುಜ್ಞೆಕೊಟ್ಟಿದ್ದಾರೆ. ಅವೆಲ್ಲಾ ಆಗಲೇ ಆಯಾ ಸ್ಥಳಕ್ಕೆ ಹೋಗಿ ಸೇರಿಯೂ ಸೇರುತ್ತಲೂ ಇವೆ. ಕೇಮಲ್ ಪಾಷಾರವರು ತಮ್ಮ ಸೈನಿಕರ ಪರಾಕ್ರಮಕ್ಕಾಗಿ ಅವರನ್ನು ಶ್ಲಾಘಿಸಿದುದಲ್ಲದೆ ಮುಂದೆ ಸಂಭವಿಸಬಹುದಾದ 2ನೆ ಕಾರ್ಯದಲ್ಲೂ ಕೂಡ ಹಾಗೆಯೇ ಶೌರ್ಯವನ್ನು ಪ್ರಕಟಿಸಬೇಕೆಂದು ಪ್ರೋತ್ಸಾಹಿಸಿದ್ದಾರೆ.

"1922 ನೆ ವರ್ಷದ ಜನವರಿಯಲ್ಲಿ ಲಂಡನ್ನಿನಲ್ಲಿ ಕೂಡಿದ್ದ ಮಿತ್ರಮಂಡಲೀ ಸಮಾವೇಶದಲ್ಲಿ ವ್ಯವಹಾರಗಳೆಲ್ಲಾ ಸಂತೃಪ್ತಿಕರವಾಗಿ ಪರಿಷ್ಕಾರಗೊಂಡರೆ ಕಾನ್‌ಸ್ಟಾಂಟಿನೋಪಲನ್ನು ತುರುಕರಿಗೆ ಕೊಟ್ಟುಬಿಡಬೇಕೆಂದೂ ಅದಕ್ಕಾಗಿ ಮತ್ತೊಂದು ಕೂಟವು ಕೂಡಬೇಕೆಂದೂ ನಿರ್ಣಯವಾಗಿದ್ದಿತು. ಆದರೆ ಕೇಮಲ್‌ಪಾಷಾ ಪಕ್ಷದವರು ತಟಸ್ಥ ಪ್ರದೇಶಗಳ ಮೇಲೆ ಯುದ್ಧಮಾಡುತ್ತಿರುವುದರಿಂದ ಆ ಹಿಂದಣ ನಿಯಮದಂತೆ ಕೂಟವನ್ನು ಈಗ ಕೂಡಿಸಲಾಗುವುದಿಲ್ಲ" ಎಂದು ಆಂಗ್ಲಪ್ರಭುತ್ವದವರು ಪ್ರಕಟಿಸಿಕೊಂಡಿದ್ದಾರೆ. "ಸ್ವಪ್ನದಲ್ಲೂ ಕೂಡ ಊಹಿಸಬಾರದಿದ್ದಂಥ ಚಿಕ್ಕ ತುರ್ಕಿಪ್ರಭುತ್ವವು ಕಾನ್‌ಸ್ಟಾಂಟಿನೋಪಲ್ಲಿನಿಂದ ಮಿತ್ರಮಂಡಲಿಯವರನ್ನು ಓಡಿಸಿಬಿಡುವುದಾದರೆ ಮುಂದೆ ಬಹಳ ವಿಚಾರಕರವಾದ ಫಲಿತವುಂಟಾಗುವುದು. ಅದರಿಂದ ಮಹಮ್ಮದೀಯ ರಾಷ್ಟ್ರಗಳಲ್ಲೇ ಅಲ್ಲದೆ ಹಿಂದಣ ಯುದ್ಧದಲ್ಲಿ ಪರಾಜಿತಗಳಾದ ರಾಷ್ಟ್ರಗಳಲ್ಲೂ ಕೂಡ ಬೇರೆ ಬೇರೆ ಫಲಿತಗಳುಂಟಾಗುವುವು. ತುರುಕರು ಯೂರೋಪು ತೀರಕ್ಕೆ ಪ್ರವೇಶಿಸಿದರೆ ಬಾಲ್ಕನ್ ರಾಷ್ಟ್ರಗಳಲ್ಲಿ ರಕ್ತಪಾತವುಂಟಾಗುವುದು. ಅದಕ್ಕಾಗಿ ಬಾಲ್ಕನ್ ರಾಷ್ಟ್ರಗಳೆಲ್ಲಾ ಮಿತ್ರಮಂಡಲಿಗೆ ಸಹಾಯಮಾಡಬೇಕು. ತುರುಕರೂ ಬಲ್ಗೇರಿಯರೂ ಸ್ನೇಹವಾಗಿರುವುದರಿಂದ ಜುಗೋಸ್ಲಾವಿಯಾವಿಗೆ ನಷ್ಟವುಂಟಾಗುವುದು. ಜಲಸಂಧಿಯು ತುರುಕರ ವಶವಾದರೆ ಡಾನ್ಯೂಬ್ ವ್ಯಾಪಾರವೆಲ್ಲಾ ಕಟ್ಟಾಗುವುದು" ಎಂದು ಮೊದಲಾಗಿ ಇಂಗ್ಲೀಷರು ಪ್ರಕಟಿಸಿ ಎಲ್ಲರನ್ನೂ ತಮ್ಮ ಕಡೆಗೆ ಸೇರಿಸಿಕೊಳ್ಳಲು ಉದ್ಯೋಗಿಸಿದ್ದಾರೆ.

ಕಾನ್‌ಸ್ಟಾಂಟಿನೋಪಲ್ಲು ತಮ್ಮಗಳ ಅಧೀನಕ್ಕೊಳಪಡಬೇಕೆಂಬುದು ಫ್ರಾನ್ಸಿಗೆ ಇಷ್ಟವಿಲ್ಲ. ಜಲಸಂಧಿಯ ಸ್ವಾತಂತ್ರ್ಯವು ಮಾತ್ರ ಎಲ್ಲರಿಗೂ ಇರಬೇಕೆಂಬುದು ಅವರಭಿಪ್ರಾಯ. ಕಾನ್‌ಸ್ಟಾಂಟಿನೋಪಲ್ಲಿನಲ್ಲಿಟ್ಟಿರುವ ತಮ್ಮ ಸೈನ್ಯವನ್ನು ಈ ವರ್ಷದ ಕೊನೆಯೊಳಗೆ ಹಿಂದಕ್ಕೆ ಕರೆಯಿಸಿಕೊಳ್ಳಲು ಅವರು ನಿಶ್ಚಯಿಸಿರುವರು. ಜಲಸಂಧಿಯ ಸ್ವಾತಂತ್ರ್ಯೇಚ್ಛೆಯ ಹೊರತು ತುರ್ಕಿಯ ಮೇಲೆ ಯುದ್ಧಕ್ಕೆ ನಿಲ್ಲಲು ಇಟಲಿಯೂ ಫ್ರಾನ್ಸೂ ಕೂಡ ಒಪ್ಪುವಂತೆ ತೋರುವುದಿಲ್ಲ.

ಮುಖ್ಯವಾಗಿ ಇದರಲ್ಲಿ ಆಂಗ್ಲರ ಗಡಬಿಡಿಯೇ ಹೆಚ್ಚಾಗಿದೆ. ತುರ್ಕಿಯವರಿಗೆ ಯೂರೋಪು ತೀರಕ್ಕೆ ನುಗ್ಗಬೇಕೆಂಬ ಅಪೇಕ್ಷೆಯೂ ಇಲ್ಲ, ಪ್ರಯತ್ನವೂ ಇಲ್ಲ. ಇಂಗ್ಲೀಷರು ಒಂದು ಕಡೆ ಸಮರಸನ್ನಾಹವನ್ನು ಮಾಡುತ್ತಿದ್ದಾರೆ. ಒಂದುಕಡೆ ಸಂಧಿಪ್ರಯತ್ನಕ್ಕೂ ಅನುಕೂಲತೆಯನ್ನು ತೋರಿಸುತಿದ್ದಾರೆ. ತಾತ್ಕಾಲಿಕಸಂಧಿಗೆ ಅಂಗೋರಾ ತುರ್ಕಿಪ್ರಭುತ್ವದವರೂ ಒಪ್ಪಿದ್ದಾರೆ. "ಗ್ರೀಕರು ಆಸ್ಯಾಮೈನರು ಥ್ರೇಸುಗಳಮೇಲೆ ತಮ್ಮಹಕ್ಕನ್ನು ಕೋರದೆ ಅವುಗಳ ಮೇಲೆ ತುರ್ಕಿಯ ಪರಿಪಾಲನಾಧಿಕಾರವನ್ನು ಒಪ್ಪಿಕೊಳ್ಳಬೇಕು. ತುರ್ಕಿ ಪ್ರದೇಶಗಳ ಮೇಲೆ ಗ್ರೀಕರು ಉಂಟುಮಾಡಿದ ಹಾವಳಿಗಾಗಿ ನಷ್ಟ ಪರಿಹಾರವನ್ನು ತುರುಕರಿಗೆ ಗ್ರೀಕರು ಕೊಡಬೇಕು. ಯುದ್ಧಕಾಲದಲ್ಲಿ ದೌರ್ಜನ್ಯವನ್ನೆಸಗಿದ ಗ್ರೀಕರನ್ನೆಲ್ಲಾ ತುರುಕರ ವಶಪಡಿಸಬೇಕು. ಗ್ರೀಕರು ಆಕ್ರಮಿಸಿಕೊಂಡಿದ್ದ ತುರ್ಕಿ ಪ್ರದೇಶವೆಲ್ಲಾ ತುರ್ಕಿಗೆ ಸೇರಬೇಕು." ಎಂಬುದಿಷ್ಟೇ ಅಂಗೋರಾ ತುರ್ಕಿಯ ತಾತ್ಕಾಲಿಕ ಸಂಧಿನಿಯಮಗಳಾಗಿರುವುವು. ಡೇಲಿಮೇಲ್ ಪತ್ರಿಕಾ ವಿಲೇಖಕನೊಡನೆ ಕೇಮಲ್ ಪಾಷಾರವರು ಮಾತನಾಡಿದುದರಲ್ಲಿ—ನಾವು ಇನ್ನು ಪಡೆಯಬೇಕಾದುದೇನೂ ಇಲ್ಲ. ನಾವು ಮನಃಪೂರ್ವಕವಾಗಿ ಶಾಂತಿಯನ್ನಪೇಕ್ಷಿಸುತ್ತೇವೆ; ಗ್ರೀಕರನ್ನು ಆಸ್ಯಾಮೈನರಿಂದ ಹೊರಕ್ಕೆ ಹೊರಡಿಸಲು ಬೇರೆ ಮಾರ್ಗವಿಲ್ಲದೆ ಹೋದುದರಿಂದ ಯುದ್ಧಕ್ಕೆ ನಿಲ್ಲಬೇಕಾಯಿತು. ನಾವು ಸಿರಿಯಾ ಮೆಸಪೆಟೋಮಿಯಾಗಳನ್ನು ಕೇಳುವುದಿಲ್ಲ, ತುರುಕರು ಹೆಚ್ಚಾಗಿ ವಾಸಿಸಿಕೊಂಡಿರುವ ಪ್ರದೇಶಗಳನ್ನು ಮಾತ್ರ ನಮ್ಮಧೀನಕ್ಕೆ ಬರಬೇಕೆಂದು ಕೇಳುತ್ತೇವೆ. ಆಸ್ಯಾಮೈನರು ಥ್ರೇಸುಗಳಲ್ಲಿ ಮಾರಿಜ್ ನದಿಯವರೆಗಣ ಪ್ರದೇಶವೂ ಕಾನ್‌ಸ್ಟಾಂಟಿನೋಪಲೂ ತುರ್ಕಿಯ ಅಧಿಕಾರಕ್ಕೊಳಪಟ್ಟಿರಬೇಕೆಂದು ಕೋರುತ್ತೇವೆ ಡಾರ್ಡಿನಲ್ಸಿನಲ್ಲಿ ಇತರರ ಹಡಗುಗಳೆಲ್ಲಾ ಸ್ವೇಚ್ಛೆಯಿಂದ ಹೋಗಿಬರುವುದಕ್ಕೆ ನಾವು ಒಪ್ಪುತ್ತೇವೆ. ಆದರೆ ಕಾನ್‌ಸ್ಟಾಂಟಿನೋಪಲ್ಲಿನ ರಕ್ಷಣಾರ್ಥವಾಗಿ ಮರ್ಮೋರಾ ಸಮುದ್ರ ಪ್ರಾಂತದಲ್ಲಿ ಕೆಲವು ಕಟ್ಟಡಗಳನ್ನು ನಾವು ಕಟ್ಟಿಕೊಳ್ಳಬೇಕಾಗಿದೆ. ಮಿತ್ರಮಂಡಲಿಯವರು ಕಾನ್‌ಸ್ಟಾಂಟಿನೋಪಲನ್ನು ಬಿಟ್ಟುಕೊಡದಿದ್ದರೆ ನಾವು ಅದರ ಮೇಲೆ ದಂಡೆತ್ತಿ ಹೋಗಬೇಕಾಗುತ್ತದೆ. ಅದು ಸ್ವಲ್ಪ ದಿನದಲ್ಲೇ ಜರಗುವುದು. ಸಂಧಿ ರಾಯಭಾರದ ಮೂಲಕ ಶಾಂತವಾಗಿ ಕಾನ್‌ಸ್ಟಾಂಟಿನೋಪಲನ್ನು ಅಧೀನಪಡಿಸಿಕೊಳ್ಳುವುದೇ ನನಗೆ ಇಷ್ಟ; ಆದರೆ ರಾಯಭಾರಕ್ಕಾಗಿ ಬಹುಕಾಲ ನಿರೀಕ್ಷಣೆ ಮಾಡಿಕೊಂಡಿರಲಾರೆವು. ಅದರ ಮೇಲೆ ವಿದೇಶೀಯರು ಇಟ್ಟುಕೊಂಡಿರುವ ಪ್ರತ್ಯೇಕ ಹಕ್ಕುಗಳನ್ನೆಲ್ಲಾ ಅವರು ಬಿಟ್ಟುಬಿಡಬೇಕು. ಗ್ರೀಕ್ ನೌಕಾದಳವನ್ನು ತುರ್ಕಿಗೆ ಒಪ್ಪಿಸಿಬಿಡಬೇಕು. ಸಂಧಿ ಸಭೆಯು ಎಲ್ಲಿ ಜರುಗಿದರೂ ಬರಲು ನಾನು ಸಿದ್ಧನಾಗಿದ್ದೇನೆ. ಆದರೆ ತುರ್ಕಿ ದೇಶದ ಹೊರತು ಹೊರಗೆಲ್ಲಾದರೂ ಕೂಡಿದರೆ ನಾನು ಪ್ರತ್ಯಕ್ಷವಾಗಿ ಬರುವುದಿಲ್ಲ." ಎಂದು ಹೇಳಿದರಂತೆ. ಇದರಿಂದ ಕೆಮಲಿಸ್ಟರ ಅಭಿಪ್ರಾಯವೇನೆಂಬುದು ಸ್ಥೂಲವಾಗಿ ಗೊತ್ತಾಗುತ್ತದೆ. ಜಲಸಂಧಿಯ ಸ್ವಾತಂತ್ರ್ಯವನ್ನು ಸರ್ವರಿಗೂ ಉಂಟುಮಾಡಿಕೊಡಲು ಅವರು ಒಪ್ಪುವಾಗ ಯೂರೋಪು ತೀರಕ್ಕೆ ನುಗ್ಗಬೇಕೆಂಬುದು ಅವರ ಇಷ್ಟವಾಗಿಲ್ಲದಿರುವಾಗ, ಲಂಡನ್‌ಟೈಮ್ಸ್ ಪತ್ರಿಕೆಯು ಹೇಳಿರುವ ಬುದ್ಧಿವಾದವನ್ನು ಲಕ್ಷಿಸಿ, ಇಂಗ್ಲೀಷರೂ ಫ್ರೆಂಚರೂ ಈಗ ಪ್ರಪಂಚ ಶಾಂತಿಯ ಕಡೆಗೆ ಮುಖ್ಯ ಗಮನವಿತ್ತು ನಿಷ್ಕಲ್ಮಷಭಾವದಿಂದ ತುರ್ಕಿ ಸಮುಸ್ಯೆಯನ್ನು ಪರಿಹರಿಸಿಬಿಟ್ಟರೆ ಮತ್ತೊಂದು ಮಹಾಯುದ್ಧದ ವಿಪತ್ತು ಜಗತ್ತಿಗೆ ತಪ್ಪಿಹೋಗುವುದು. ಆದರೆ ಲಾಯಿಡ್ ಜಾರ್ಜರಿಗೂ ಅವರ ಸಹಾಯಕ ಮಂತ್ರಿವರ್ಗಕ್ಕೂ ಯುದ್ಧದ ಲವಲವಿಕೆಯು ಇನ್ನೂ ತಪ್ಪಿದೆಯೋ ಇಲ್ಲವೋ ಕಾಣಲಿಲ್ಲ. ಇಂಗ್ಲೆಂಡು ಫ್ರಾನ್ಸು ಇಟಲಿಗಳು ಐಕ್ಯವಾಗಿ ಶಾಂತಿಗೆ ಪ್ರಯತ್ನಿಸಿದರೆ ಅವರಭಿಪ್ರಾಯವನ್ನು ಮೀರಿ ಕೇಮಲಿಸ್ಟರು ಯುದ್ಧಕ್ಕೆ ಎಂದಿಗೂ ನಿಲ್ಲರು. ಎಚ್. ಎಚ್. ಆಗಾಖಾನರನ್ನು ಒಬ್ಬ ಆಂಗ್ಲ ಪತ್ರಿಕಾಪ್ರತಿನಿಧಿಯು ಕಂಡು ಮಾತನಾಡಿದಾಗ "ತುರ್ಕಿ ಸಾಮ್ರಾಜ್ಯಕ್ಕೆ ಮುಖ್ಯಸ್ಥಾನವಾದ ಕಾನ್‌ಸ್ಟಾಂಟಿನೋಪಲ್ಲು ತುರ್ಕಿ ಅಧೀನದಲ್ಲೇ ಇರಬೇಕು. ಅದನ್ನು ತಮ್ಮ ವಶಮಾಡಿಕೊಂಡಿರುವುದರಿಂದ ಆಂಗ್ಲ ಸಾಮ್ರಾಜ್ಯಕ್ಕೂ ಕೂಡ ವಿಪತ್ತೇ ಹೊರತು ಫಲವೇನೂ ಇಲ್ಲ. ತುರ್ಕಿ ವಿಷಯದಲ್ಲಿ ಇದುವರೆಗೆ ಆಂಗ್ಲರು ನಡೆಯಿಸಿದ ಪ್ರವರ್ತನೆಯಿಂದ ಭಾರತ ಮಹಮ್ಮದೀಯರೆಲ್ಲಾ ಕ್ಷುಬ್ಧರಾಗಿದ್ದಾರೆ. ತಮ್ಮ ಪ್ರದೇಶಗಳ ಮೇಲೆ ತುರ್ಕಿಯವರಿಗೆ ಸಂಪೂರ್ಣ ಪಾಲನಾಧಿಕಾರವಿರಬೇಕು. ಅರಬ್ಬ ಪ್ರದೇಶದ ಮೇಲೆ ತುರುಕರು ಅಧಿಕಾರವನ್ನು ಕೋರುವುದಿಲ್ಲ. ಜಲಸಂಧಿ ಪರಿಪಾಲನವು ಅಂತರ್ಜಾತೀಯ ಸಂಘಕ್ಕೆ ಸೇರಿರಬಹುದು. ಅದರಲ್ಲಿ ತುರ್ಕಿಗೂ ಭಾಗವಿರಬೇಕು" ಎಂದು ಹೇಳಿದ್ದಾರೆ. ಇದನ್ನೆಲ್ಲಾ ಗಮನಿಸಿ ಶಾಂತರೀತಿಯಿಂದ ಸಂಧಿ ಪರಿಷ್ಕಾರವನ್ನು ಮಾಡಿಬಿಡುವುದು ಮಿತ್ರಮಂಡಲಿಗೆ ಕಷ್ಟವೇನೂ ಅಲ್ಲ. ಆದರೆ ಲಾಯಿಡ್ ಜಾರ್ಜರು ಗ್ರೀಕ್ ಪಕ್ಷಪಾತವನ್ನು ಬಿಡಬೇಕು. ನ್ಯಾಯದೃಷ್ಟಿಯೂ ಮಹಮ್ಮದೀಯ ಪ್ರಪಂಚ ಸಂತೃಪ್ತಿಯ ಗಮನವೂ ಅವರಿಗೆ ಉಂಟಾಗಬೇಕು. ಸೆವರ್ಸ್ ಸಂಧಿ ಪ್ರಕಾರ ಸ್ಮಿರ್ನಾ ಭಾಗವನ್ನು ತಮಗೆ ಕೊಡಿಸಿಕೊಡಬೇಕೆಂದು ಗ್ರೀಕರು ಮಿತ್ರಮಂಡಲಿಗೆ ಹೇಳಿಕೊಂಡಿದ್ದಾರೆ. 5 ವರ್ಷದವರೆಗೂ ಆ ಪ್ರದೇಶವು ಗ್ರೀಕರ ವಶದಲ್ಲಿರಬೇಕೆಂದೂ ತದನಂತರ ಅಲ್ಲಿಯ ಪ್ರಜೆಗಳು ಯಾರ ಪರಿಪಾಲನೆಯನ್ನು ಕೋರುವರೋ ಅವರಿಗೆ ಆ ದೇಶವು ಅಧೀನವಾಗಬೇಕೆಂದೂ ಹಿಂದೆ ಆ ಸಭೆಯಲ್ಲಿ ನಿರ್ಣಯಿಸಿದ್ದರು. ಆದರೆ ಇದಕ್ಕೆ ಮೊದಲಿಂದಲೂ ಅಂಗೋರಾ ತುರ್ಕಿ ಪ್ರಭುತ್ವವು ಒಪ್ಪಲಿಲ್ಲ. ಕಡೆಗೆ ಯುದ್ಧ ಜಯದಿಂದಲೇ ಅವರು ತಮ್ಮ ಇಷ್ಟಾರ್ಥವನ್ನು ಪೂರಯಿಸಿಕೊಂಡರು. ಜಯಿಸಿದವರಿಗೆ ತಕ್ಕ ಫಲವುಂಟಾಗುವುದೂ, ಸೋತವರಿಗೆ ಅದಕ್ಕೆ ತಕ್ಕ ಫಲವುಂಟಾಗುವುದೂ ಸಹಜವೆಂಬ ನೀತಿಯನ್ನು ಲಾಯಿಡ್ ಜಾರ್ಜರು ಹಿಂದೆ ತುರ್ಕಿ ಜರ್ಮನಿಗಳ ವಿಷಯದಲ್ಲಿ ಆಡಿತೋರಿಸಿದ್ದರು. ಅದೇ ನ್ಯಾಯವನ್ನು ಈಗಲೂ ತುರ್ಕಿ ಗ್ರೀಕುಗಳ ವಿಷಯದಲ್ಲಿ ತೋರಿಸಲು ಅವರು ತಪ್ಪಬಾರದು. ಅಂಥ ಬುದ್ಧಿಯು ಅವರಿಗೆ ಹುಟ್ಟದೆಹೋದರೆ ಮತ್ತೊಂದು ಮಹಾ ಯುದ್ಧದ ಅನರ್ಥವನ್ನು ಪ್ರಪಂಚಕ್ಕೆ ಅವರೇ ತಂದರೆಂಬ ಕೀರ್ತಿಗೆ ಒಳಗಾಗಬೇಕಾಗುವುದು.

ಸ್ಮಿರ್ನಾ ಪಟ್ಟಣವು ಅಗ್ನಿಗಾಹುತಿಯಾಗಿದೆ. ಆ ಪಟ್ಟಣದ ಬಹುಭಾಗವೆಲ್ಲಾ ಬೆಂಕಿಯಿಂದ ದಗ್ಧವಾಗಿಹೋಯಿತು. ಬೆಂಕಿಯು ಇನ್ನೂ ಆರಿಲ್ಲ. ತುರುಕಪ್ರಜೆಗಳು ಹೆಚ್ಚಾಗಿ ವಾಸಮಾಡುವ ಭಾಗದ ಹೊರತು ಉಳಿದ ಪ್ರದೇಶವೆಲ್ಲಾ ಸುಟ್ಟುಹೋಗಿದೆ. ಇಂಗ್ಲೀಷ್ ಫ್ರಾನ್ಸು ಮೊದಲಾದ ವಿದೇಶ ರಾಯಭಾರಿಗಳ ಕಾರ್ಯಾಲಯಗಳೂ ಕೇಮಲ್‌ಪಾಷಾರವರ ಮುಖ್ಯ ಕಾರ್ಯಾಲಯವೂ ಸಹ ಸುಟ್ಟುಹೋಗಿದೆ. 2 ಮೈಲಿಗಳ ಅಗಲಕ್ಕೆ ಆಕಾಶಕ್ಕೆ ಕೀಲುಕೊಟ್ಟಂತೆ ಉರಿಯೆದ್ದು ಬಹು ಭಯಂಕರವಾಗಿ ಪಟ್ಟಣವನ್ನೆಲ್ಲಾ ಬೆಂಕಿಯು ಸುಟ್ಟುಬಿಟ್ಟಿತು. ಮಸೀದುಗಳು ಚರ್ಚುಗಳೆಲ್ಲಾ ದಗ್ಧವಾದುವು. 4 ಕೋಟಿ ಪೌನುಗಳ ಆಸ್ತಿಯ ನಷ್ಟವೂ 120000 ಮಂದಿಗಳ ಪ್ರಾಣಹಾನಿಯೂ ಆಗಿರುವುದೆಂದು ಎಣಿಸಲ್ಪಟ್ಟಿದೆ. ಬೆಂಕಿಯನ್ನಾರಿಸಲು ತುರುಕರು ಪ್ರಯತ್ನಪಟ್ಟಾಗ, ಗ್ರೀಕರು ಅದಕ್ಕೆ ತಡೆಮಾಡಿದರಂತೆ. ಪಟ್ಟಣಕ್ಕೆ ಹೀಗೆ ಬೆಂಕಿಯನ್ನಿಕ್ಕಿದರೆಂಬ ಸಂಶಯದ ಮೇಲೆ ಬಹುಮಂದಿ ಗ್ರೀಕರನ್ನೂ ಆರ್ಮೇನಿಯನ್ನರನ್ನೂ ತುರ್ಕಿಯವರು ಹಿಡಿದಿದ್ದಾರೆ. ತಾವೇ ಬೆಂಕಿಯಿಕ್ಕಿದವರೆಂದು ಅವರುಗಳು ಒಪ್ಪಿಕೊಂಡಿದ್ದಾರಂತೆ. ಇವೆಲ್ಲ ಅನರ್ಥಗಳಿಂದ ಸ್ಮಿರ್ನಾದಲ್ಲಿ 10 ಲಕ್ಷ ಮಂದಿಗಳು ಕ್ಷಾಮಬಾಧೆಗಳಿಗೆ ಈಡಾಗಿ ಕಷ್ಟಪಡುತ್ತಿದ್ದಾರೆ. ಮಿತ್ರಮಂಡಲೀ ನೌಕೆಗಳು ವಿಪನ್ನಪ್ರಜೆಗಳನ್ನು ಸಾಗಿಸಿಕೊಂಡುಹೋಗುತ್ತಿವೆ.

ವರ್ತಮಾನ ಸಂಗ್ರಹ.

1922-23ನೆ ವರ್ಷದಲ್ಲಿ ಉದ್ಯೋಗಿಗಳ ಬತ್ಯದಲ್ಲಿ 10 ಲಕ್ಷ ರೂ. ಗಳನ್ನು ಕಡಿಮೆ ಹಾಕಲು ಮದ್ರಾಸು ಸರ್ಕಾರದವರು ಏರ್ಪಡಿಸಿದ್ದಾರೆ.

ಈಸಲ ಜೆಡ್ಡಾ ಯಾತ್ರೆಗಾಗಿ 56319 ಮಂದಿ ಮಹಮ್ಮದೀಯರು ಹೋಗಿದ್ದರು. ರೋಗಾದಿಗಳಿಂದ 26 ಮಂದಿಗಳು ಮಾತ್ರ ಸತ್ತರು. ಜಾತ್ರೆ ಚೆನ್ನಾಗಿ ನಡೆದಿತು.

ಜಯಪುರದ ರೀಜಂಟರಾಗಿದ್ದ ಸರ್ ಪ್ರತಾಪಸಿಹ್ಮರವರು ಮೃತರಾದರು. ಇವರ ಮೃತಿ ವಾರ್ತೆಯನ್ನು ಕೇಳಿ ಸಾರ್ವಭೌಮರೂ ವೈಸ್ರಾಯರೇ ಮೊದಲಾದವರೂ ಸಾನುತಾಪ ತಂತ್ರೀವಾರ್ತೆಯನ್ನು ಅವರ ಕುಮಾರರಿಗೆ ಕಳುಹಿಸಿಕೊಟ್ಟಿದ್ದಾರೆ.

ಭಾರತದ ಉಪಮಂತ್ರಿಯವರಾದ ಮಿ|| ವಿಂಟರ್ಟನ್‌ರವರು ಕಳೆದ ತಾ|| 15 ರಲ್ಲಿ ಬೊಂಬಾಯಿ ರೇವೆಯಲ್ಲಿ ಬಂದಿಳಿದರು. ಸ್ವಂತಕಾರ್ಯದ ಮೇಲೆ ಬಂದಿರುವುದರಿಂದ ರಾಜಕೀಯಾಭಿಪ್ರಾಯವೇನನ್ನೂ ಕೊಡುವುದಿಲ್ಲವೆಂದು ಪ್ರೆಸ್ ಪ್ರತಿನಿಧಿಯೊಡನೆ ಹೇಳಿದರು.

ಇಂಡ್ಯಾ ಸರ್ಕಾರದವರು ನಡೆಯುವ ವರ್ಷದ ಬಜೆಟ್ಟಿನಲ್ಲಿ ವೆಚ್ಚಕ್ಕೆ ೯ ಕೋಟಿಯಷ್ಟು ಹಣವು ಸಾಲದೆ ಹೋಗಬಹುದೆಂದು ನಿರೀಕ್ಷಿಸಿದ್ದರು. ಈಗಣ ಸ್ಥಿತಿಯನ್ನು ನೋಡಿದರೆ ವರ್ಷಾಂತ್ಯದೊಳಗೆ ವೆಚ್ಚಕ್ಕೆ 30 ಕೋಟಿಯಷ್ಟು ಸಾಲದೆಹೋಗಬಹುದೆಂದು ತೋರುತ್ತದೆ. ಭರತಖಂಡದ ಗತಿಯೇನು ?

ಅಮೇರಿಕಾದೇಶದ ಓಹಿಯೊಹಾರ್ಡಿನ್ ಪಟ್ಟಣದಲ್ಲಿ ಒಬ್ಬ ಪಾದ್ರಿಯ 10 ವರ್ಷದ ಬಾಲಿಕೆಯು 1 ಗಂಡುಮಗುವನ್ನು ಹೆತ್ತಳು. ಹುಟ್ಟಿದ ಮಗುವು 7 ಪೌನ್ ತೂಕವಿದ್ದಿತು. ಗರ್ಭಧಾರಣೆಯು ಯಾರಿಂದ ಆಯಿತೆಂದು ಕೇಳಿದರೆ ಆಕೆಯು ಏನನ್ನೂ ಹೇಳುವುದಿಲ್ಲವಂತೆ. ಮಗು ಬಾಣಂತಿಯರು ಆರೋಗ್ಯವಾಗಿದ್ದಾರೆ.

3ನೆ ತರಗತಿ ರೈಲ್ವೆ ಪ್ರಯಾಣಿಕರ ಅನನುಕೂಲತೆಗಳನ್ನು ತಪ್ಪಿಸುವ ವಿಷಯವನ್ನು ಕುರಿತು ಡಾ|| ಅನಿಬೆಸೆಂಟರು ಶೇಷಗಿರಿಅಯ್ಯರು ಮೊದಲಾದವರು ಕಳೆದ ತಾ|| 13ರಲ್ಲಿ ರೈಲ್ವೆ ಬೋರ್ಡಿನವರನ್ನು ಕಂಡು ಸಂಭಾಷಿಸಲಾಗಿ, ಅದಕ್ಕೋಸ್ಕರ ದೃಢವಾದ ಪ್ರಯತ್ನವು ಈಗ ಮಾಡಲ್ಪಡುತ್ತಿದೆಯೆಂಬ ಉತ್ತರವು ದೊರೆಯಿತು.

ಸ್ಮಿರ್ನಾಪಟ್ಟಣವನ್ನು ಕೇಮಲ್‌ಪಾಷಾರವರು ತಮ್ಮ ಮುಖ್ಯ ಸೈನ್ಯವನ್ನು ಕೂಡಿಕೊಂಡು ವೈಭವದಿಂದ ಪ್ರವೇಶಿಸಿದರು. ಶರಣಾಗತರಾಗಿದ್ದ ಜನರಿಗೆಲ್ಲಾ ಅಭಯದಾನಮಾಡಿ ಅವರವರ ಮನೆಗಳಿಗೆ ಕಳುಹಿಸಿಕೊಟ್ಟರು! ಅಲ್ಲಿ ಈಗ ತುರ್ಕಿ ಪೊಲೀಸ್ ದಳವನ್ನು ಏರ್ಪಡಿಸಿದ್ದಾರೆ. ಜನರಲ್ ನೌರುದ್ದೀನ್‌ಪಾಷಾರವರು ಗೌರ್ನರಾಗಿ ನಿಯಮಿಸಲ್ಪಟ್ಟಿದ್ದಾರೆ.

ನಮ್ಮ ವೈಸ್ರಾಯರಾದ ಲಾರ್ಡ್ ರೀಡಿಂಗ್‌ರವರ ಮಾತೃಶ್ರೀಯವರಾದ ಜೆ. ಎಂ. ಇಜಾಕ್ ಸತಿಯವರು ತಮ್ಮ 89ನೆ ವಯಸ್ಸಿನಲ್ಲಿ ಕಳೆದ ತಾ|| 14ರಲ್ಲಿ ವಿಧಿವಶರಾದರು. ಆದಿನದ ಸ್ಟೇಟ್ ಕೌನ್ಸಿಲ್ ಸಭೆಯಲ್ಲಿ ಸರ್ ಡಿ. ವಾಚಾರವರು ವೈಸ್ರಾಯರಿಗೆ ಸಾನುತಾಪವನ್ನು ತಿಳಿಯಿಸುವ ತೀರ್ಮಾನವನ್ನು ಉಪಪಾದಿಸಲು ಸಭಿಕರೆಲ್ಲಾ ಅನುಮೋದಿಸಿದರು.

ವಿಜಯನಗರದ ಪ್ರಭುಗಳಾದ ಶ್ರೀಮನ್ ಪೂಸಪಾಟಿವಿಜಯ ರಾಮಗಜಪತಿ ಮನ್ನೆಸುಲ್ತಾನ್ ಬಹದೂರ್‌ರವರು ಕೆಲಕಾಲದಿಂದ ಅಸ್ವಸ್ಥರಾಗಿ ಆರೋಗ್ಯಾರ್ಥವಾಗಿ ಮದ್ರಾಸಿಗೆ ಬಂದಿದ್ದು ಕಳೆದ ತಾ|| ೧೦ರಲ್ಲಿ ದೈವಾಧೀನರಾದರು. ಇವರು ವಿದ್ಯಾಭಿಮಾನಿಗಳೂ ಪ್ರಜಾವಾತ್ಸಲ್ಯಶೀಲರೂ ಆಗಿದ್ದರು. ತಮ್ಮ ಹಿರಿಯ ಮಕ್ಕಳಿಗೆ ರಾಜ್ಯಭಾರವನ್ನು ವಹಿಸಿ ತಾವು ವಿಶ್ರಾಂತಿಯಲ್ಲಿದ್ದರು.

ಇಲ್ಲಿ ಪ್ರಾಂತದಲ್ಲಿ ಕೆಲ ಮೋಸಗಾರರು ಅನಾಥ ಬಾಲಿಕೆಯರನ್ನು ಪೋಷಿಸಲು ಆಲಯವನ್ನು ಸ್ಥಾಪಿಸಿರುವೆವೆಂದು ಹೇಳುತ್ತ ಬಡಬಗ್ಗರ ಮನೆಯ ಹೆಣ್ಣುಗಳನ್ನು ಸಾಗಿಸಿಕೊಂಡು ಹೋಗಿ ಅವರನ್ನು ಗುಟ್ಟಾಗಿ ಮಾರುವುದು ಅಥವಾ ದುರ್ವೃತ್ತಿಗಳಿಗೆ ಉಪಯೋಗಿಸುವುದು ಹೀಗೆ ಮಾಡುತ್ತಿರುವರು. ಇಂಥ 2 ಕೇಸುಗಳನ್ನು ಫೈಜಾಬಾದು ಪೊಲೀಸರು ಈಗ ಕಂಡುಹಿಡಿದಿರುವರು.

500 ರೂ. ಗಳಿಗೆ ಮೇಲ್ಪಟ್ಟ ಸಂಬಳದ ಸ್ಥಾನಗಳಿಗೆ ಹೊಸದಾಗಿ ಯಾರಾರು ನಿಯಮಿಸಲ್ಪಡುವರೋ ಅಂಥವರ ಪಟ್ಟಿಯನ್ನು ಶಾಸನ ಸಭೆಗೆ ತಿಳಿಯಪಡಿಸಬೇಕೆಂಬ ಶಾಸನಸಭಾ ತೀರ್ಮಾನಕ್ಕೆ ಮದ್ರಾಸ್ ಪ್ರಭುತ್ವದವರು ಒಪ್ಪಿ ಅದರಂತೆ ಕಳೆದ 1921ನೆ ಡಿಸಂಬರ್ ತಾ|| 13ರಿಂದ 1922ನೆ ಮಾರ್ಚಿ ತಾ|| 7ರ ವರೆಗೆ ನಿಯಮಿತವಾದವರ ಪಟ್ಟಿಯನ್ನು ಈಗಣ ಶಾಸನ ಸಭೆಯ ಮುಂದೆ ತಂದಿಟ್ಟದ್ದರು.

ಕೀರ್ತಿಶೇಷರಾದ ಸರ್ ವಿಠಲದಾಸ ಥಾಕರ್ಸೆಯವರ ಸ್ಮರಣಾರ್ಥವಾಗಿ ಬೊಂಬಾಯಿ ಮುಖ್ಯ ಸಹಕಾರಸಂಘಕ್ಕೆ ಒಂದು ಭವನವನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಸರ್ ನಾರಾಯಣಚಂದ್ರವಾರ್ಕರ್‌ರವರ ಅಧ್ಯಕ್ಷತೆಯಿಂದ ಬೊಂಬಾಯಿ ಪಟ್ಟಣದಲ್ಲಿ ಒಂದು ಸಭೆ ಕೂಡಿ, ಫಂಡನ್ನು ಸೇರಿಸಬೇಕೆಂಬ ನಿರ್ಧಾರವಾಯಿತು. ಆಗಲೇ 25 ಸಾವಿರ ರೂ. ಗಳವರೆಗೆ ವಾಗ್ದಾನವಾಗಿರುವುದು.

ಮದ್ರಾಸು ಶಾಸನಸಭೆಯಲ್ಲಿ ಕೇಳಲ್ಪಟ್ಟ ಪ್ರಶ್ನೆಗೆ 1921ನೆ ಜನವರಿಯಿಂದ ಕಳೆದ ಮಾರ್ಚಿ ತಾ|| 31ರ ವರೆಗೆ ಅಲ್ಲಿಯ ಗೌರ್ನರ ಪ್ರಯಾಣದ ವೆಚ್ಚಗಳು 133307-6-1 ಆಗಿದೆಯೆಂತಲೂ, ಅಷ್ಟೇ ಕಾಲದಲ್ಲಿ ಕಾರ್ಯನಿರ್ವಾಹ ಸಂಘಸಭಿಕರ ಮತ್ತು ಮಂತ್ರಿಗಳ ಪ್ರಯಾಣದ ವೆಚ್ಚವು 70381-8-7 ರೂ. ಆಗಿದೆಯೆಂತಲೂ, ಶಾಸನ ಸಭಾಸಭಿಕರ ಬತ್ಯವು 194150-13 ಎಂತಲೂ ವಿವರವಾಗಿ ಉತ್ತರವು ಕೊಡಲ್ಪಟ್ಟಿತು.

ಕಳೆದ ಮಾರ್ಚಿ ತಾ|| 10ರಿಂದ ಮದ್ರಾಸು ಪ್ರಭುತ್ವದವರು ವೈದ್ಯಾಲಯಗಳ ಕಾಂಪೌಂಡರುಗಳ ವೇತನವನ್ನು ಅಭಿವೃದ್ಧಿ ಪಡಿಸಿರುತ್ತಾರೆ. ಯಾವೊಬ್ಬ ಕಾಂಪೌಂಡರಿಗೂ 30 ರೂ. ಗೆ ಕಡಿಮೆ ಸಂಬಳವಿಲ್ಲ. 30 ರೂ. ಸಂಬಳದವನಿಗೆ 2 ವರ್ಷಕ್ಕೆ 1 ರೂ. ನಂತೆ 35 ರೂ. ವರೆಗೆ ಅಭಿವೃದ್ಧಿ. ಆ ಬಳಿಕ 4 ವರ್ಷಗಳಿಗೊಂದುಸಲ 5 ರೂ. ನಂತೆ ಅಭಿವೃದ್ಧಿ. ಈ ವೇತನಕ್ರಮವು ಅಲ್ಲಿಯ ಸಿವಲ್ ಮೆಡಿಕಲ್ ಕೋಡಿನ ಪ್ರಕಾರ ಪೂರ್ಣವಾಗಿ ಪರೀಕ್ಷೆ ಕೊಟ್ಟವರಿಗೆ ಮಾತ್ರವೇ ಸಲ್ಲುವುದು.

ವಿಮಾನಗಳ ಪಂದ್ಯವೊಂದನ್ನು ಆಂಗ್ಲದೇಶೀಯರು ಏರ್ಪಡಿಸಿದ್ದರು. 13 ವಿಮಾನಗಳು ಈ ಪಂದ್ಯಕ್ಕೆ ನಿಂತಿದ್ದುವು. ಕ್ರೋಯಿಡನ್ ಪಟ್ಟಣದಿಂದ ಇವುಗಳ ಜೂಜಿನ ಓಟವು ಪ್ರಾರಂಭವಾಯಿತು. ಆ ವೈಮಾನಿಕರಲ್ಲಿ ಲ್ಯಾ ಬಿರ್ನಾರ್ಡ್ ಎಂಬುವವರು ಅಲ್ಲಿಗೆ 18394 ಮೈಲಿಗಳ ದೂರದಲ್ಲಿರುವ ಗ್ಲಾಸ್ಗೊ ಪಟ್ಟಣವನ್ನು 3 ಗಂಟೆ 21 ನಿಮಿಷ 22 ಸೆಕೆಂಡುಗಳ ಕಾಲದಲ್ಲಿ ಹೋಗಿ ಸೇರಿದರು. ರೆವನ್ಸ್ ಎಂಬುವವರು 3 ಗಂಟೆ 58 ನಿಮಿಷಗಳಲ್ಲಿ ಸೇರಿ 2 ನೆಯವರಾದರು. ಈ ಅದ್ಭುತವಾದ ವಿಮಾನ ಪ್ರಯಾಣವು ವಾಯುವೇಗವನ್ನು ಕೂಡ ಮೀರಿದ್ದಿತೆಂದು ಹೇಳಬಹುದಲ್ಲವೆ ?

ನಾನಾರಾಷ್ಟ್ರಸಂಘಕ್ಕೆ ಭರತಖಂಡದ ಪ್ರಾತಿನಿಧ್ಯವು ಕೊಡಲ್ಪಟ್ಟ ಬಹುಮಾನದ ಶಾಸ್ತ್ರವೇನೋ ಆಯಿತಷ್ಟೆ. ಅಷ್ಟುಮಾತ್ರಕ್ಕೇ ಸಮ್ಮೇಳನದ ವ್ಯಯಭಾರದ ಪಾಲನ್ನು ಅಧಿನಿವೇಶ ರಾಷ್ಟ್ರಗಳ ಜತೆಗೆ ಭರತಖಂಡವೂ ವಹಿಸಬೇಕಾಯಿತು. ಆದರೆ ಅಧಿನಿವೇಶಗಳಿಗೆ ಫಲವು ಹೆಚ್ಚು. ಭರತಖಂಡಕ್ಕೆ ಭಾರವು ಹೆಚ್ಚು. ಇಷ್ಟೇ ವ್ಯತ್ಯಾಸ. ಹೇಗೆಂದರೆ—ವೆಚ್ಚದಪಾಲು ಆಸ್ಟ್ರೇಲಿಯಾದ ತಲೆಯಮೇಲೆ 576000 ಫ್ರಾಂಕುಗಳು, ದಕ್ಷಿಣಾಫ್ರಿಕಾದ ಮೇಲೆ 332000 ಫ್ರಾಂಕುಗಳು, ನ್ಯೂಜಿಲೆಂಡಿನ ಮೇಲೆ 221000 ಫ್ರಾಂಕುಗಳು, ಕೆನಡಾದ ಮೇಲೆ 775000 ಫ್ರಾಂಕುಗಳು, ಭರತಖಂಡದ ಮೇಲೆ 1440000 ಫ್ರಾಂಕುಗಳು.

ಚಂದ್ರನಗರದಿಂದ ಕಲ್ಕತ್ತಾಕ್ಕೆ ನದಿಯಮೇಲೆ ಈಜಿಬರುವ (22 ಮೈಲಿಗಳ ದೂರದ) ಪಂದ್ಯವನ್ನು ಅಲ್ಲಿಯ ಪ್ರಾಣರಕ್ಷಕ ಭಾರತಸಂಘದವರು ಏರ್ಪಡಿಸಿದ್ದರು. ತಾ|| 17ರಲ್ಲಿ ಮಧ್ಯಾಹ್ನ ಇದು ನಡೆದಿತು. 14 ಮಂದಿಗಳು ಪಂದ್ಯಕ್ಕೆ ಸೇರಿದ್ದರು. ಬಳಲಿ ಮಧ್ಯಮಾರ್ಗದಲ್ಲೇ 7 ಮಂದಿಗಳು ನಿಂತುಹೋದರು. ಉಳಿದವರಲ್ಲಿ ಬಿ. ಬಾಸು ಎಂಬಾತನು 4 ಗಂಟೆ 24 ನಿಮಿಷಗಳಲ್ಲಿ ಕಲ್ಕತ್ತಾಕ್ಕೆ ಮೊದಲನೆಯವನಾಗಿ ಸೇರಿದನು. ತದನಂತರ 6 ನಿಮಿಷಕ್ಕೆ ಅಶುತೋಷದತ್ತ ಎಂಬಾತನು ಸೇರಿ 2 ನೆಯವನಾದನು. ಪರ್ಯವಸಾನವನ್ನು ನೋಡುವುದಕ್ಕೆ ಬಹುಜನರು ಒಂದುಕಡೆ ಕಟಕಟ್ಟೆಯ ಮೇಲೆ ನುಗ್ಗಿದ ಒತ್ತಡದಲ್ಲಿ ಇಬ್ಬರು ಸತ್ತರು.

ಕಲ್ಕತ್ತಾಪಟ್ಟಣದಲ್ಲಿ ಭೂಮಿಯೊಳಗೆ ರೈಲ್ವೆಯನ್ನು ೬|| ಮೈಲಿಗಳ ದೂರ ಹಾಕಿಸಬೇಕೆಂದು ಯೋಚಿಸಿ ಸಮರ್ಥರಾದ ಇಂಜನಿಯರ ಅಭಿಪ್ರಾಯವನ್ನು ಕೇಳಿದ್ದರು. ಅವರು ಸ್ಥಲವನ್ನೆಲ್ಲಾ ಪರಿಶೋಧಿಸಿ ಮಾಡಿರುವ ವರದಿಯಲ್ಲಿ--ಹೂಗ್ಲಿ ನದಿಯನ್ನು ದಾಟುವಾಗ್ಗೆ ನದಿಯ ಒಳಗೆ 104 ಅಡಿಯಷ್ಟು ಕೆಳಗೆ 2 ಟ್ಯೂಬುಗಳನ್ನು ಹಾಕಿ ಅದರೊಳಗೆ ಮಾರ್ಗವು ನುಗ್ಗಿ ಹೋಗುವಂತೆ ಆಗಬೇಕೆಂತಲೂ, 9 ಕಡೆಯಲ್ಲಿ ಮೇಲ್ಕಕ್ಕೆ ಸುರಂಗವನ್ನು ಕೊರೆದು ನಿಲ್ದಾಣಗಳನ್ನು ಏರ್ಪಡಿಸಬೇಕಾಗುವುದೆಂತಲೂ ಅದಕ್ಕೆಲ್ಲಾ 30-40 ಲಕ್ಷ ಪವನ್ನುಗಳ ವೆಚ್ಚವು ಹಿಡಿಯುವುದೆಂತಲೂ, ಆದರೆ ಕಲ್ಕತ್ತಾ ಪ್ರಾಂತದ ಭೂಮಿಯು ಇಂಥ ಮಾರ್ಗ ನಿರ್ಮಾಣಕ್ಕೆ ತಕ್ಕುದಲ್ಲವೆಂತಲೂ ತಿಳಿಯಿಸಿರುತ್ತಾರೆ.

ಮುಲ್ತಾನಿನಲ್ಲಿ ನಡೆದ ಹಿಂದೂ ಮಹಮ್ಮದೀಯರ ಜಗಳದಲ್ಲಿ ೧೦ ಮಂದಿಗಿಂತ ಹೆಚ್ಚಾಗಿ ಮೃತರಾಗಲಿಲ್ಲವೆಂದೂ, ಕೆಲ ಮಹಮ್ಮದೀಯರು ಹಿಂದೂ ಸ್ತ್ರೀಯರ ಮಾನಭಂಗಮಾಡಿದರೆಂದೂ ಹಿಂದೂ ಹೆಂಗುಸರ ನಗಗಳನ್ನು ಸುಲಿದುಕೊಂಡರೆಂದೂ ಇಬ್ಬರ ಕಿವಿ ಹೋಲೆಗಳನ್ನು ಕಿವಿಯನ್ನು ಕಿತ್ತು ಸೆಳೆದುಕೊಂಡರೆಂದೂ, ಅದನ್ನು ಕಂಡು ಹೆದರಿ ಇನ್ನು ಕೆಲ ಹಿಂದೂ ಸ್ತ್ರೀಯರು ತಂತಮ್ಮ ಆಭರಣಗಳನ್ನು ತಾವೇ ತೆಗೆದುಕೊಟ್ಟುಬಿಟ್ಟರೆಂದೂ, ದೇವಾಲಯಗಳನ್ನೂ ಧರ್ಮಸತ್ರಗಳನ್ನೂ ಭ್ರಷ್ಟಗೊಳಿಸಿದರೆಂದೂ, 3 ದೇವಾಲಯಗಳನ್ನೂ, 3 ಧರ್ಮಶಾಲೆಗಳನ್ನೂ 4-5 ಗ್ರಂಥ ಸಾಹೇಬುಗಳನ್ನೂ 35 ಅಂಗಡಿಗಳನ್ನೂ ಮಹಮ್ಮದೀಯ ತುಂಟರು ಸುಟ್ಟುಹಾಕಿಬಿಟ್ಟರೆಂದೂ, ಹಿಂದುಗಳ 30 ಅಂಗಡಿಗಳನ್ನೂ 30 ಮನೆಗಳನ್ನೂ ದೋಚಿಕೊಂಡರೆಂದೂ, ಮಹಮ್ಮದೀಯರ 10 ಅಂಗಡಿಗಳು ಸುಡಲ್ಪಟ್ಟು 1 ಮನೆಯು ದೋಚಿಕೊಳ್ಳಲ್ಪಟ್ಟಿತೆಂದೂ, ಒಟ್ಟು ಹಿಂದುಗಳಿಗೇ ಬಹಳ ನಷ್ಟವಾಗಿರುವುದೆಂದೂ, ನಗನಾಣ್ಯಗಳಲ್ಲದೆ 10-15 ಲಕ್ಷ ರೂ. ಗಳ ಸೊತ್ತುಗಳ ನಷ್ಟವಾಗಿರುವುದೆಂದೂ ಕಾಂಗ್ರೆಸ್ ಸಂಘದವರ ವರದಿಯಿಂದ ಗೊತ್ತಾಗುತ್ತದೆ.

ಝಾನ್ಸಿ ಪಟ್ಟಣದಲ್ಲಿ ಲಾನ್ಸ್‌ಕಾರ್ಪೊರಲ್ ಸಿಡ್ನೆ ಅಲಗ್ಜಾಂಡರ್ ಎಂಬ ಪಾಶ್ಚಾತ್ಯ ಸೈನಿಕನು ತನ್ನನ್ನು ನಾನಿ ಎಂಬ ಒಬ್ಬ ಹಿಂದೂ ಸೇವಕನು "ಬಹಳ ಬದ್ಮಾಷ್" ಎಂದು ಬೈದನೆಂಬ ಕಾರಣದಿಂದ ತುಪಾಕಿ ಗುಂಡನ್ನು ಹೊಡೆದು ಕೊಂದುಬಿಟ್ಟನು. ಅಲಹಾಬಾದ್ ಹೈಕೋರ್ಟಿನಲ್ಲಿ ಈ ಕೇಸಿನ ವಿಚಾರಣೆ ನಡೆದಿತು. "ಆ ಸೇವಕನು ತನ್ನನ್ನು ಬೈದಕಾರಣದಿಂದ ಅವನನ್ನು ಕೊಲ್ಲಬೇಕೆಂದು ನಾನು ನಿಶ್ಚಯಿಸಿಕೊಂಡೆ" ಎಂದು ಅಪರಾಧಿಯು ಕೊಂದುಬಂದನಂತರ ತನ್ನೊಡನೆ ಹೇಳಿದನೆಂಬದಾಗಿ ರಿಜಮಿಂಟ್ ಸೇನಾನಿಯು ಸಾಕ್ಷ್ಯವನ್ನು ಹೇಳಿದರು. ಹಾಗೆ ಮಾಡಿದುದುಂಟೆಂದು ಅಪರಾಧಿಯೂ ಒಪ್ಪಿಕೊಂಡನು. ಅಪರಾಧಿಯು ಹತ್ಯಮಾಡಿದುದು ನಿಜ; ಆದರೂ ಅವನ ಮೇಲೆ ದಯೆತೋರಿಸಬೇಕೆಂದು ಜ್ಯೂರರುಗಳು ಹೇಳಿದರು. ಅದರ ಮೇಲೆ ಜಡ್ಜರು-ಕನಿಕರವನ್ನು ತೋರಿಸಲು ನನಗೆ ಇಷ್ಟವಿಲ್ಲ. ಅಪರಾಧಿಯು ಒಬ್ಬನ ಪ್ರಾಣವನ್ನು ತೆಗೆದನು. ಇವನ ಪ್ರಾಣವು ಎಷ್ಟು ಮುಖ್ಯವೋ ಅವನ ಪ್ರಾಣವೂ ಅಷ್ಟು ಮುಖ್ಯವೇ. ಈ ಘೋರಕೃತ್ಯದಿಂದ ಅಪರಾಧಿಯ ರಿಜಮಿಂಟಿಗೆಲ್ಲಾ ಕಳಂಕವುಂಟಾಯಿತು. ಎಂದು ಹೇಳಿ ಮರಣದಂಡನೆಯನ್ನು ವಿಧಿಸಿದರು. ಅಪರಾಧಿಯ ವಯಸ್ಸು ೨೨.

ಸಿಮ್ಲಾ ಪಟ್ಟಣದಲ್ಲಿ ಸ್ಟೇಟ್‌ಕೌನ್ಸಿಲ್ಲಿಗೂ ಶಾಸನ ಸಭೆಗೂ ಹೋಗಿದ್ದ ಮಹಮ್ಮದೀಯ ಸಭಿಕರೂ ಇನ್ನು ಕೆಲ ಪ್ರಮುಖ ಮಹಮ್ಮದೀಯರು ಸಹ ತಾ|| ೧೪ ರಲ್ಲಿ ಒಂದು ಸಭೆಗೂಡಿ, "ತುರ್ಕಿ ಗ್ರೀಕ್ ಯುದ್ಧದಲ್ಲಿ ಆಂಗ್ಲ ಪ್ರಭುತ್ವದವರು ತಟಸ್ಥರಾಗಿರಬೇಕು, ಇಂಗ್ಲೆಂಡಿಗೂ ತುರ್ಕಿಗೂ ಮತ್ತೆ ಮೈತ್ರಿಯುಂಟಾಗುವಂತೆ ಆಂಗ್ಲರು ಪ್ರವರ್ತಿಸಬೇಕು. ಹಾಗೆ ಮಾಡಿದರೆ ಆಂಗ್ಲ ಸಾಮ್ರಾಜ್ಯಕ್ಕೂ ಮಹಮ್ಮದೀಯ ರಾಜ್ಯಕ್ಕೂ ಮಿತ್ರತ್ವವುಂಟಾಗುವುದು. ತುರ್ಕಿ ಸಾಮ್ರಾಜ್ಯಕ್ಕೆ ಚಿಕ್ಕ ಆಸ್ಯಾ, ಥ್ರೇಸು, ಅಡ್ರಿಯಾನೋಪಲ್‌ಗಳು ಸೇರಬೇಕು. ಸ್ವಲ್ಪ ಜನಸಂಘಗಳ ರಕ್ಷಣ ಸೌಕರ್ಯಗಳಿಗೆ ತುರ್ಕಿಯು ಹೊಣೆವಹಿಸಬೇಕು. ಕಾನ್‌ಸ್ಟಾಂಟಿನೋಪಲ್ಲಿನ ಮೇಲೂ ಡಾರ್ಡಿನಲ್ಸಿನ ಮೇಲೂ ಮಿತ್ರಮಂಡಲಿಯವರು ಇಟ್ಟುಕೊಂಡಿರುವ ಅಧಿಕಾರವು ತೊಲಗಬೇಕು. ಮಿತ್ರಮಂಡಲಿಯವರ ಸ್ವಾತಂತ್ರ್ಯಕ್ಕೆ ತುರ್ಕಿಯವರು ಹೊಣೆಹೊತ್ತುಕೊಳ್ಳಬೇಕು. ತುರ್ಕಿ ಸುಲ್ತಾನರನ್ನು ಕಾಲಿಫಾ ಎಂದು ಸಂಪೂರ್ಣವಾಗಿ ಮಿತ್ರಮಂಡಲಿಯವರು ಒಪ್ಪಿಕೊಳ್ಳಬೇಕು. ಈ ಪ್ರಕಾರಕ್ಕೆ ಸಂಧಿನಿಬಂಧನೆಗಳಾದರೆ ಶಾಂತಿಸ್ಥಾಪಿತವಾಗುವುದು" ಎಂದು ವೈಸ್‌ರಾಯರ ಮೂಲಕ ಮುಖ್ಯಮಂತ್ರಿಯವರಿಗೆ ಶ್ರುತಪಡಿಸಬೇಕೆಂದು ನಿರ್ಧಾರಮಾಡಿದರು.

ಮಲಬಾರಿನ ಪರಿಸ್ಥಿತಿಯನ್ನು ಕುರಿತು ಪ್ರಭುತ್ವದವರು ಆಗಾಗ್ಗೆ ಪ್ರಕಟನವನ್ನು ಮಾಡುತ್ತಿದ್ದರು. ಈಗ ಅಲ್ಲಿ ಸೌಮ್ಯಸ್ಥಿತಿಯು ಏರ್ಪಟ್ಟಿರುವುದರಿಂದ ಇನ್ನುಮುಂದೆ ಅಲ್ಲಿಯ ಪರಿಸ್ಥಿತಿಯನ್ನು ಕುರಿತ ಪ್ರಕಟನವನ್ನು ಮಾಡುವುದಿಲ್ಲವೆಂದು ಸರ್ಕಾರದವರು ತಿಳಿಯಿಸಿ, ಆಗಸ್ಟ ತಿಂಗಳ ಕೊನೆಯಲ್ಲಿ ಕಡೆಯ ವರದಿಯನ್ನು ಪ್ರಕಟಿಸಿದ್ದಾರೆ. ಅದರಲ್ಲಿ ವ್ಯಕ್ತವಾಗಿರುವುದೇನೆಂದರೆ—ಧಾನ್ಯದ ಬೆಳಸು ಸಮೃದ್ಧವಾಗಿದೆ. ಎರ್ನಾಡು ವಲುವನಾಡು ತಾಲ್ಲೂಕುಗಳಲ್ಲಿ ಕೆಲಸಗಾರರಿಗೆ ಕೂಲಿ ದೊರೆಯುತ್ತಿದೆ. ಕಲ್ಲಿಕೋಟೆ ತಾಲ್ಲೂಕಿನಲ್ಲಿ 2 ನೆ ಕಾರುಬಿತ್ತನೆಯು ಆರಂಭವಾಗಿದೆ. ಧಾನ್ಯದ ಬೆಲೆಯು ಇಳಿಯುತ್ತಿದೆ. ಆಗಸ್ಟ ತಿಂಗಳ ಕೊನೆಯವರೆಗೆ ಸರ್ಕಾರದವರು ಅಲ್ಲಿಯ ವಿಪನ್ನಪ್ರಜೆಗಳಿಗೆ 846708 ರೂ. ಗಳನ್ನು ಸಾಲವಾಗಿ ಕೊಟ್ಟಿದ್ದಾರೆ. ಇನ್ನು ಸಾಲ ಕೊಡುವುದು ಅನವಶ್ಯಕವೆಂದು ನಿರ್ಧರಿಸಿದ್ದಾರೆ. ಆಗಸ್ಟ ತಿಂಗಳಲ್ಲಿ 518 ಮಂದಿ ವಿಪ್ಲವಕಾರರಿಗೆ ಶಿಕ್ಷೆ ವಿಧಿಸಲ್ಪಟ್ಟಿತು. 9984 ಮಂದಿಗೆ ಅರ್ಥದಂಡವು ವಿಧಿಸಲ್ಪಟ್ಟಿತು. ಮೊದಲಿಂದ ಇಲ್ಲಿಯವರೆಗೆ 700106 ರೂ. ಗಳ ಅರ್ಥದಂಡವು ವಿಧಿಸಲ್ಪಟ್ಟಿತು. ವಿಪ್ಲವಕಾರರಲ್ಲಿ ಇನ್ನೂ 600 ಮಂದಿಗಳು ಪೊಲೀಸರಿಗೆ ಸಿಕ್ಕಿಲ್ಲ. ಇನ್ನುಮುಂದೆ ವಿಪ್ಲವಕಾರರ ವಿಚಾರಣೆಯು ಸಾಧಾರಣವಾದ ಕೋರ್ಟುಗಳಲ್ಲೇ ನಡೆಯುವುದು. ವಿಪ್ಲವಕಾರರಿಂದ ಧ್ವಂಸಮಾಡಲ್ಪಟ್ಟಿದ್ದ ರೆವಿನ್ಯೂ ಆಫೀಸ್ ಭವನಗಳು ಬಹುಮಟ್ಟಿಗೆ ಜೀರ್ಣೋದ್ಧಾರ ಮಾಡಲ್ಪಟ್ಟಿವೆ. ಮಾರ್ಗಗಳೆಲ್ಲಾ ಸರಿಪಡಿಸಲ್ಪಟ್ಟುವು. ವಿಪ್ಲವದಿಂದ ಸಂಭವಿಸಿದ ಕಷ್ಟಗಳನ್ನು ತಗ್ಗಿಸುವ ವಿಷಯದಲ್ಲಿ ಕೃಷಿಮಾಡಿದ ಅನಧಿಕಾರಿ ಸಂಘದವರಿಗೆ ಸರ್ಕಾರದವರು ವಂದನೆಯನ್ನರ್ಪಿಸಿದ್ದಾರೆ.

ಅಮೃತಸರದ ಸುವರ್ಣ ದೇವಾಲಯವಲ್ಲದೆ ಅಲ್ಲಿಗೆ ಸ್ವಲ್ಪ ದೂರದಲ್ಲಿ ಸಿಕ್ಕರ ಪವಿತ್ರಸ್ಥಾನವಾದ ಗುರುಕಾಬಾಗ್ ಎಂಬ ಸ್ಥಲವಿದೆ, ಅಲ್ಲಿಯ ಮಹಾಂತನ ನಡತೆಯು ಭಕ್ತಜನರಿಗೆ ಒಪ್ಪದೆ ಪರಸ್ಪರ ಮನಃಕಷಾಯವಿದ್ದಿತು. ಗುರುಕಾಬಾಗಿನ ಸಮಾರಾಧನೆಯ ಅಡುಗೆಗಾಗಿ ಸವೆದೆಬೇಕಾಗಲು ಅದಕ್ಕೆ ಸೇರಿದ ವನದಲ್ಲಿ ಕೆಲ ಮರಗಳನ್ನು ಮಹಾಜನ ಪಕ್ಷದ ಪಂಚರ ಕಡೆಯ ಜನರು ಕಡಿಯುವುದಕ್ಕೆ ಉಜ್ಜುಗಿಸಿದಾಗ ಮಹಾಂತನು ತಡೆದನು. ಅದನ್ನು ಅವರು ಲಕ್ಷಿಸಲಿಲ್ಲ. ಅದರ ಮೇಲೆ ಪೊಲೀಸರಿಗೆ ಬಿನ್ನಯಿಸಿಕೊಂಡು ಮಹಾಂತನು ಅವರ ಸಹಾಯವನ್ನು ಪಡೆದನು. ಅವರು ತಡೆಯಲು ಉಪಕ್ರಮಿಸಿ ದಂಡಿಸಿದರು. ಅದನ್ನು ಕೇಳಿ ನೂರಾರು ಸಾವಿರಾರುಗಟ್ಟಲೆ ಅಕಾಲಿ (ಸಿಕ್) ಜನರು ಗುಂಪುಗುಂಪಾಗಿ ಬಂದು ನುಗ್ಗುತ್ತಿದ್ದಾರೆ. ಅವರನ್ನು ನಾನಾತರದಲ್ಲಿ ಪೊಲೀಸರು ಬಡಿದು ಎಳೆದು ಕೆಡಹಿ ಚಿತ್ರಹಿಂಸೆಮಾಡುತ್ತಿದ್ದಾರೆ. ಎಷ್ಟೋ ಜನರನ್ನು ಕಾರಾಗೃಹಕ್ಕೆ ಕಳುಹಿಸಿದರು. ಪೊಲೀಸರ ಏಟಿನಿಂದ ಸಾವಿರಾರು ಮಂದಿಗೆ ಗಾಯಗಳಾಗಿವೆ. ಆದರೂ ಅಕಾಲಿ ಜನರು ಸ್ವಲ್ಪವೂ ಪ್ರತಿಭಟಿಸದೆ ಅವರು ಕೊಟ್ಟ ಹಿಂಸೆಗಳನ್ನೆಲ್ಲಾ ಸೈರಿಸಿಕೊಂಡು ಮೊಂಡಾಟವನ್ನು ಮಾಡಿ ಮಾರ್ಗಗಳಲ್ಲೇ ಬಿದ್ದುಕೊಳ್ಳುತ್ತಿದ್ದಾರೆ. ನುಗ್ಗುವ ಪ್ರಯತ್ನವನ್ನು ಬಿಟ್ಟೇ ಇಲ್ಲ. ಪಂ|| ಮದನಮೋಹನ ಮಾಳವ್ಯರೂ ಶಾಸನಸಭಾ ಸಭಿಕರಾದ ಕೆಲವು ಸಿಕ್ ಪ್ರಮುಖರೂ ಆ ಸ್ಥಲಕ್ಕೆ ಹೋಗಿ ಪೊಲೀಸರ ಅತ್ಯಾಚಾರವನ್ನು ನಿಷೇಧಿಸಿ ಸ್ವಲ್ಪ ಕಡಿಮೆಮಾಡಿಸಿದ್ದಾರೆ. ರಣರಂಗದಲ್ಲಿ ದೇಹಾಭಿಮಾನವನ್ನು ಕೂಡ ಮರೆತು ಯುದ್ಧಮಾಡಿ ಶತ್ರುವಿಗೆ ಯಮಸ್ವರೂಪದಂತೆ ತೋರುವ ಮಹಾಪರಾಕ್ರಮಿಗಳಾದ ಸಿಕ ಜನರು ಈ ಸಂದರ್ಭದಲ್ಲಿ ಪೊಲೀಸರ ಹಿಂಸೆಗೆ ಪ್ರತಿಮಾಡದೆ ಪ್ರಶಾಂತಿವಹಿಸಿರುವುದನ್ನು ನೋಡಿ ದೇಶವೇ ಆಶ್ಚರ್ಯಪಡುತ್ತಿದೆ.

ವಿಜಾಪುರ ಜಿಲ್ಲೆಗೆ ಸೇರಿದ ಬಾಗೆವಾಡಿ ತಾಲ್ಲೂಕು ಉಕ್ಕಲಿಗ್ರಾಮದ ತಮ್ಮಾಜಿಲಕ್ಷ್ಮಣ ಎಂಬ ಜೋಯಿಸರು ಆ ಗ್ರಾಮದ ಇಬ್ಬರು ವೀರಶೈವರ ಮೇಲೆ ತಮ್ಮ ಜೋಯಿಸಕಿ ಹಕ್ಕನ್ನು ತಮಗೆ ಕೊಡಲಿಲ್ಲವೆಂಬದಾಗಿ ಅದನ್ನು ಕೊಡಿಸಲಿಕ್ಕೆ ಮುದ್ದೆಬಿಹಾಳು ಕೋರ್ಟಿನಲ್ಲಿ ವ್ಯಾಜ್ಯವನ್ನು ಹೂಡಿದ್ದರು. ಆದರೆ ಇಂಥ ವ್ಯಾಜ್ಯದಲ್ಲಿ ತಮಗೆ ಜಯವಾಗುವುದಿಲ್ಲವೆಂಬುದನ್ನು ತಿಳಿದುಕೊಂಡೋ ಏನೋ ವ್ಯಾಜ್ಯವನ್ನು ಹಿಂದಕ್ಕೆ ತೆಗೆದುಕೊಂಡದ್ದಲ್ಲದೆ ಪ್ರತಿವಾದಿಗಳ ಕೋರ್ಟುವೆಚ್ಚವನ್ನು ಕೂಡ ಕೊಡಲು ಒಪ್ಪಿದರು. ಆದರೆ ಪ್ರತಿವಾದಿಗಳು ವ್ಯಾಜ್ಯಕ್ಕಾಗಿ ಕೂಡಿಸಿದ್ದ ಹಣವನ್ನು ಕಾಂಗ್ರೆಸ್ ಫಂಡಿಗೆ ಕೊಡಲು ಒಪ್ಪಿದರೆಂದೂ, ವೀರಶೈವರ ಮನಸ್ಸು ಕೆಡಬಾರದೆಂದು ಜೋಯಿಸರು ಕೆಲ ದೊಡ್ಡಮನುಷ್ಯರ ಮಾತಿನಮೇಲೆ ವ್ಯಾಜ್ಯವನ್ನು ಹಿಂದಿರಿಗಿಸಿಕೊಂಡರೆಂದೂ ಮೊದಲಾಗಿ ಸುಳ್ಳುಸುದ್ದಿಯನ್ನು ಅವರ ಕಡೆಯವರಾರೋ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಅದೆಲ್ಲಾ ಸುಳ್ಳೆಂದು ಈಗ ತೋರಬಿದ್ದಿತು. ಪೌರೋಹಿತ್ಯದ ಮತ್ತು ಜೋಯಿಸದ ಸೌಮ್ಯವೆಂಬುದು ಒಂದುತೆರದ ಕೂಲಿಯೇ ಸಂ. ಇಷ್ಟವಿದ್ದವರು ಇದನ್ನು ಮಾಡಿಸಿಕೊಂಡು ಕೂಲಿ ಕೊಡಬಹುದು. ಇಲ್ಲವೆ ದೂರೀಕರಿಸಬಹುದು. ನನ್ನಿಂದಲೇ ಮಾಡಿಸಿಕೊಳ್ಳಬೇಕೆಂದು ಕೂಲಿಕಾರನು ಬಲಾತ್ಕರಿಸಲಾಗುವುದಿಲ್ಲ. ತಪ್ಪಾಪಿ ಪರಧರ್ಮೀಯರು ತಮಗೆ ಯಾವ ತೆರದಲ್ಲೂ ಸಂಬಂಧಿಸದ ಮತ್ತೊಂದು ಧರ್ಮದವರಿಗೆ ಪೌರೋಹಿತ್ಯಾದಿಗಳನ್ನು ನಡೆಯಿಸಲು ತಮಗೆ ಹಕ್ಕೆಂದು ಸಾಧಿಸುವುದಂತೂ ಪೂರ್ಣಾ ಸಂಭವವು. ಇಂಥ ವ್ಯಾಜ್ಯಗಳು ಹೈಕೋರ್ಟಿನವರೆಗೂ ಹೋಗಿ ವಾದಿಗಳಿಗೆ ವಿರುದ್ಧವಾಗಿ ತೀರ್ಪಾಗಿವೆ. ಅಜ್ಞಾನದಿಂದ ಹೇಗೋ ನಡೆದುಬಂದ ಅನಾಚಾರಪದ್ಧತಿ ಯಾವುದಾದರೂ ಇದ್ದರೆ ಅದು ಜ್ಞಾನೋದಯವಾದ ಮೇಲೂ ಆಚಂದ್ರಾರ್ಕವಾಗಿ ನಡೆದುಬರುವುದೆಂದು ತಿಳಿಯುವುದು ತಪ್ಪು.

ವರ್ತಮಾನಪತ್ರ ವ್ಯವಹಾರ.

[illegible]

ಮೈಸೂರಿನ "ಆನೃತಬಜಾರ್"

ಸ್ವಾಮಿ! [illegible]

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

[illegible]

ಪ್ರತ್ಯಕ್ಷಫಲ ಪಂಚಸಿದ್ಧಿ.

[illegible]

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ್ ಬುಕ್ ಡಿಪೋ ಪ್ರೆಸ್,
ಬಳ್ಳಾರಿ.

೧೯೨೦ನೆಯ ಇಸವಿ ಸೆಪ್ಟಂಬರ್ ತಾ|| ೨೪ ರಿಂದ ೧೯೨೦ನೆಯ ಸೆಪ್ಟಂಬರ್ ತಾ|| ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೨ ನೆಯ ದುಂದುಭಿನಾಮಸಂವತ್ಸರದ ಆಶ್ವಯುಜ ಶುದ್ಧ ಏಕಾದಶಿಯಿಂದ ಆಶ್ವಯುಜ ಶುದ್ಧ ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
24	ಭಾನು	ಚೌತಿ	47-40	ಸ್ವಾತಿ	22-43	8
25	ಸೋಮ	ಪಂಚ	43-5	ವಿಶಾ	19-42	9
26	ಮಂಗಳ	ಷಷ್ಠಿ	39-27	ಅನೂ	17-27	10
27	[1] ಬುಧ	ಸಪ್ತ	36-46	ಜ್ಯೇಷ್ಠ	16-12	11
28	[2] ಗುರು	ಅಷ್ಟ	35-17	ಮೂಲ	16-0	12
29	[3] ಶುಕ್ರ	ನವ	34-58	ಪೂಷಾ	16-56	13
30	[4] ಶನಿ	ದಶ	35-56	ಉಷಾ	19-7	14

(1) ಗಜಗೌರೀವ್ರತಂ, ಕಾಳರಾತ್ರಿ, ಮಹಿಷಾಸುರ ಸಂಹಾರ, ಸರಸ್ವತೀಪೂಜಾ (2) ದುರ್ಗಾಷ್ಟಮಿ (3) ಮಹಾನವಮಿ, ಆಯುಧಗಜಾಶ್ವ ಪೂಜಾ, ಹಯಗ್ರೀವಪೂಜಾ (4) ವಿಜಯದಶಮಿ, ಶಮಿಪೂಜಾ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸ್ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮುಕ್ಕುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಗಳು

ರಾಯಲ್ ಪೋರ್ಟಬಲ್.

[illegible]

ಕ್ರಯ 1-10-0.

ಘಮಘಮಿಸುವ ಸುಗಂಧದ್ರವ್ಯಗಳೆಲ್ಲಾ ಚಕ್ರವರ್ತಿಯಾದುದು.

ಲಿಲ್ಲಿ ಆಫ್ ದಿ ವ್ಯಾಲಿ.

[illegible]

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಲೈರ್ಯಲಕ್ಷ್ಮೀ ಅಂಡ್ ಕೋ

ಪೋಸ್ಟ್ ಬಾಕ್ಸ್ ನಂ. 265, ಮದರಾಸ್.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ಸತ್ಕೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳೆಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಅಕ್ಟೋಬರ್ ತಾರೀಖು ೧ ನೆಯ ಭಾನುವಾರ. (ಸಂಚಿಕೆ ೪೦

REGISTERED NO. M. 124.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಸರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. [illegible]

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

[illegible]

ಆ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ [illegible]

[illegible]

ವಿಳಾಸ—ಸ್ವಾಮಿ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

ಜರ್ಮನ್ ಫ್ಲೂಟ್ ಹಾರ್ಮೋನಿಯಂ ಅನ್ನುವ ಸಂಗೀತಪೆಟ್ಟಿಗೆ



[illegible]

ಈ ತಿಂಗಳ ಕೊನೆವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಿಮಾಟೋಗ್ರಾಫ್ ಯಂತ್ರ.

[illegible]

ವಿಳಾಸ—ರತ್ನಂ ಅಂಡ್ ಬ್ರದರ್ಸ್,
ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಸಿನೆಮೋಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನ [illegible]

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

[illegible]

ಕ್ರಯ ನಂ. 1 ರೂ. 6—8—0.

" ನಂ. 2 ರೂ. 7—8—0.

ವಿಳಾಸ—ಎನ್. ಪಾಲ್ ಅಂಡ್ ಕೋ,
ಪೋಸ್ಟ್ ಬಾಕ್ಸ್ ನಂ. 512, ಸಾರ್ಕಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

[illegible]

ಜಂಪ್ಲಿ ಅಂತ ಲೇಡೀಸ್ ಪಾಕೆಟ್ ವಾಚ್.

[illegible]

ಕ್ರಯ 4 ವರುಷಗಳ ಜ್ಯಾಯದ ಗ್ಯಾರಂಟಿ ಸರಪಣಿ ಸಹಿತ 6-0-0
ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್ ಬಾಕ್ಸ್ ನಂ. 508, ಸಾರ್ಕಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೨—೦
ಚಾರುಶೀಲೆಚರಿತ್ರೆ	೦—೪—೦
ಹಂಡಾಜ	೦—೨—೦
ವೃತ್ತಪಂಚಕ	೦—೬—೦

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಮೈಸೂರಿನ "ಅನೃತಬಜಾರ್"

ಸ್ವಾಮಿ !

ಮೇಲ್ಕಂಡ ಹೆಸ್ಸಿಂಗನ್ನು ನೋಡಿದ ಕೂಡಲೇ ವಾಚಕರೆಲ್ಲಾ ಆಶ್ಚರ್ಯಪಡಬಹುದಲ್ಲವೆ ! ಇದನ್ನು ಕಂಡು ವಿಸ್ಮಯಪಡುವವರು ಮೈಸೂರಿನ ಸಂಪದಭ್ಯುದಯದ ವಿಚಿತ್ರವನ್ನು ಕೇಳಿದರೆ ಪರಮಾಶ್ಚರ್ಯವನ್ನು ಪಡದೆ ಹೋಗಲಾರರು. ಸಂಪದಭ್ಯುದಯದಲ್ಲಿ ಹಿಂದೆ ಜೈನವಿದ್ವಾಂಸರಾದ ದೋರ್ಬಲಿ ಜಿನದಾಸಶಾಸ್ತ್ರಿಗಳನ್ನೂ ಜೈನಮತದವರನ್ನೂ ಕುರಿತು ಹೇಳನಮಾಡಿ ಬರೆದಿದ್ದ ಕರಸ್ಪಾಂಡೆನ್ಸನ್ನು ಕುರಿತು ಆಕ್ಷೇಪಿಸಿ, ಯಾರೋ ಒಬ್ಬ ಜೈನ ದೊಡ್ಡಮನುಷ್ಯರು ಈಗಿನ ಸಂಸ್ಕೃತಾಭ್ಯಾಸ ಚರ್ಚೆಯ ಸಂಬಂಧದಲ್ಲಿ ನಿಮ್ಮ ಅಭಿಪ್ರಾಯವೇನೆಂದು ಸಂಪದಭ್ಯುದಯ ಪತ್ರಿಕಾಕರ್ತರಿಗೆ ಬರೆದು ಕೇಳಿದ್ದರಂತೆ. ಅದಕ್ಕೆ ಉತ್ತರವನ್ನು ಸದರಿ ಪತ್ರಿಕಾಕರ್ತರು ತಾ॥ 15-9-22 ನೆ ಸಂಚಿಕೆಯಲ್ಲಿ ಕೊಡುವದಕ್ಕೆ ಪ್ರಯತ್ನಿಸಿ, "ಸಂಸ್ಕೃತ ಕಾಲೇಜುಗಳಿಗೆ ಇತರರನ್ನು ಸೇರಿಸತಕ್ಕ ವಿಷಯದಲ್ಲಿ ನಾವು ಇದುವರೆಗೂ ನಮ್ಮ ಅಭಿಪ್ರಾಯವನ್ನು ಬರೆಯಲಿಲ್ಲ" ಎಂಬದಾಗಿ ಪೀಠಿಕೆಯನ್ನು ಹಾಕಿಕೊಂಡಿರುತ್ತಾರೆ. ಇದನ್ನು ನೋಡಿದ ಕೂಡಲೇ ನಾನೂ ನನ್ನ ಜತೆಯಲ್ಲಿ ಕೂತಿದ್ದ ವಾಚಕಶಾಲೆಯ ಸಭಿಕರೆಲ್ಲರೂ ಕೊಳ್ಳೆಂದು ನಕ್ಕೆವು. ಬಹುಶಃ ಸಂಪದಭ್ಯುದಯದ ವಾಚಕರೆಲ್ಲರೂ ಸದರಿ ಪತ್ರಿಕಾಕರ್ತರ ಪದವಾಕ್ಯಪ್ರಾಮಾಣಿಕತನವನ್ನು ಇದರಿಂದ ಊಹಿಸಿಕೊಂಡು ಪರಮಾಶ್ಚರ್ಯಪಡದೆ ಬಿಟ್ಟಿರಲಾರರು.

ಟೀಕಾಯಿಸುವವರು ಒಬ್ಬಿಬ್ಬರ ಕಣ್ಣಿಗೆ ಮಣ್ಣನ್ನೆರಚಬಹುದು. ಆದರೆ ಲೋಕದ ಕಣ್ಣಿಗೇ ಮಣಸಿನಪುಡಿಯನ್ನು ತೂರುವುದು ಪರಮಾಶ್ಚರ್ಯದ ಕೆಲಸವಲ್ಲವೆ ? ಸಂಪದಭ್ಯುದಯದ ಪ್ರವರ್ತನವು ಹಾಗೆಯೇ ಇರುವುದು. ಇದೇ ಸಂಸ್ಕೃತಾಭ್ಯಾಸದ ಸಂಬಂಧದಲ್ಲಿ ಆ ಪತ್ರಿಕಾಕರ್ತರು ತಮ್ಮ ಸ್ವಂತದ ಅಭಿಪ್ರಾಯಗಳನ್ನು ಎಷ್ಟುಸಲ ತಮ್ಮ ಅಗ್ರಲೇಖನಗಳಲ್ಲಿ ಕೊಟ್ಟಿಲ್ಲ ! ಅವನ್ನು ಅವರ ವಾಚಕರಲ್ಲಿ ಯಾರುತಾನೇ ಕಂಡಿಲ್ಲ ! ಕಳೆದ ಜುಲೈ ತಾ॥ 17 ರ ಸಂಚಿಕೆಯಲ್ಲಿ "ಸಂಸ್ಕೃತ ಕಾಲೇಜುಗಳು" ಎಂಬ ಹೆಡ್ಡಿಂಗಿನಿಂದ 2½ ಕಾಲಮ್ಮುಗಳ ಉದ್ದದ ಅಗ್ರಲೇಖನವನ್ನು ಬರೆದುಕೊಂಡಿರುವದನ್ನು ಯಾರೂ ಕಾಣರೆ ? ಪತ್ರಿಕೆಯ ಆ ಎಡಿಟರು ಬದುಕಿದ್ದಾರೋ ? ಇಲ್ಲವೆ ಆಗಿನವರೇ ಬೇರೆ ಈಗಿನ ಎಡಿಟರೇ ಬೇರೆಯೋ ? ಒಂದುವೇಳೆ ಬೇರೆಯಾಗಿದ್ದರೂ ಹಿಂದಿನ ಅಭಿಪ್ರಾಯವನ್ನು ಪತ್ರಿಕಾಕರ್ತರ ಅಭಿಪ್ರಾಯವಲ್ಲವೆಂದು ಸಾಧಿಸಲು ಬರುತ್ತದೆಯೆ ? ಅಷ್ಟುಮಾತ್ರವೇ ಅಲ್ಲದೆ ಜುಲೈ ತಾ॥ 22 ರ ಸಂಚಿಕೆಯಲ್ಲಿ ನಾಗಮಂಗಲದ ಬಾತ್ಮೀದಾರರ ಕರಸ್ಪಾಂಡೆನ್ಸಿನ ಮೇಲೆ ವ್ಯಾಖ್ಯಾನ ಮಾಡುವಾಗ್ಗೆ ಈ ಪತ್ರಿಕಾಕರ್ತರು ತಮ್ಮ ಸಂಪ್ರದಾಯ ಸಿದ್ಧವಾದ ವಚನಗಳನ್ನೇ ಅದರಲ್ಲೂ ಯಥೇಚ್ಛವಾಗಿ ಆಡಿಕೊಂಡಿರುವರು. ಮತ್ತು ಕಳೆದ ಆಗಸ್ಟ್ ತಾ॥ 15-16-17-23 ನೆ ತಾರೀಖು ಸಂಚಿಕೆಗಳಲ್ಲಿ ಇಂಗ್ಲೀಷ್ ಕಾಲಮ್ಮುಗಳಲ್ಲೂ ಅದೇ ಅಭಿಪ್ರಾಯದ ಹಾಡನ್ನು ಸ್ವಂತವಾಗಿ ಹಾಡಿಕೊಂಡಿರುವರು. ಹೀಗೆಲ್ಲಾ ಇದ್ದರೂ ಮೈಸೂರುದೇಶದ ಹಿಂದುಳಿದ ಪ್ರಜಾವರ್ಗಗಳ ಆಕಾಂಕ್ಷೆಗೆಲ್ಲಾ ತಡೆಗಟ್ಟಿ ತಮ್ಮ ಬ್ರಾಹ್ಮಣವರ್ಗದವರೊಬ್ಬರೇ ಜಗತ್ತಿನಲ್ಲಿ ಸಂಸ್ಕೃತ ಪಾಂಡಿತ್ಯ ಧುರಂಧರರಾಗಿರುವಂತೆ ಮಾಡಿಕೊಳ್ಳಬೇಕೆಂಬ ಹವ್ಯಾಸದಲ್ಲಿ ಕೊಡಗಿ ಕಂಕಣಕಟ್ಟಿಕೊಂಡಿರುವ ಸಂಪದಭ್ಯುದಯ ಕರ್ತರು ಇಂಥ ಅವಿತುಗುಮ್ಮನ ಆಟವನ್ನು ಆಡುವುದೇಕೆ ? ಇದರಿಂದ ತಾವು ನಿಷ್ಪಕ್ಷಪಾತಿಗಳೂ ನ್ಯಾಯಸತ್ಯಸಂಕಲ್ಪರೂ ಎಂದು ಜಗತ್ತೆಲ್ಲಾ ತಮ್ಮನ್ನು ತಿಳಿದುಕೊಳ್ಳುವರೆಂದು ಭ್ರಮಿಸಿ ಇಂಥ ಚಾಕಚಕ್ಯವನ್ನು ಮಾಡುತ್ತಿದ್ದರೆ, ಲೋಕವೆಲ್ಲಾ ಇದನ್ನು ಕಣ್ಣುಮುಚ್ಚಿ ಹಾಲುಕುಡಿದು ಮನೆಯವರನ್ನು ವಂಚಿಸಿಬಿಡುವೆನೆಂಬ ಮಾರ್ಜಾಲದ ಬುದ್ಧಿವಂತಿಗೆಗೆ ಸಮನಾದುದೆಂದು ತಿಳಿಯದೆ ಇದ್ದಾರೆ ?

ಇಂಥಾ ಮಹಾ ಪ್ರಾಮಾಣಿಕವಾದ ವೃತ್ತಪತ್ರಿಕೆಯು ನಮ್ಮಲ್ಲಿರುವುದು ಮೈಸೂರು ದೇಶದ ಭಾಗ್ಯವೆಂದೇ ಹೇಳಬೇಕು ! ಇಂಥ ಸಹೋದ್ಯೋಗಿಗಳನ್ನು ಸಂಪಾದಿಸಿಕೊಂಡಿರುವ ಮೈಸೂರು ವೃತ್ತಪತ್ರಿಕಾ ಪ್ರೊಪ್ರೈಟರುಗಳೇ ಧನ್ಯರು!! ದಾನಧರ್ಮ ಪರೋಪಕಾರ ವಿದ್ಯಾವೈದುಷ್ಯಾದಿಗಳಲ್ಲಿ ಮುಂದಾಗಿ ಕಂಡ ಜನರಿಗೆ ಶ್ರೀಮನ್ಮಹಾರಾಜರು ಅವರವರ ಕೃತಿಗೆ ಒಪ್ಪುವಂಥ ಟೈಟಲನ್ನು ಕೊಟ್ಟು ರಾಜಸಭೆಯಲ್ಲಿ ಮರ್ಯಾದಿಸುತ್ತಾರೆ. ದೇಶದ ವೃತ್ತಪತ್ರಿಕೆಗಳಲ್ಲಿ ಯಾವುದಕ್ಕೂ ಇರದಂಥ ಅದ್ಭುತಶಕ್ತಿಯುಳ್ಳ ಈ ಪತ್ರಿಕೆಗೆ ಅನ್ವರ್ಥವಾದ ಟೈಟಲೊಂದನ್ನು ಕೊಟ್ಟು ಕನಕಾಭಿಷೇಕವನ್ನು ಪ್ರಭುಗಳು ಮಾಡದಿದ್ದರೂ ಪ್ರಜೆಗಳೇ ಮಾಡದೆ ಬಿಡರು. ಯಾವ ಟೈಟಲು ಉಚಿತವಾದುದೆಂದು ಕೇಳುವುದಾದರೆ "ಅನೃತಬಜಾರ್" ಎಂಬುದು ಅನ್ವರ್ಥವಾದದ್ದೆಂದು ಆ ಪತ್ರಿಕೆಯೇ ತೋರಿಸಿಕೊಡುತ್ತಿರುವುದು. ಕಲಕತ್ತಾದ ಶಿಶಿರಕುಮಾರಘೋಷ್ ಮೋತೀಲಾಲಘೋಷರು ತಮ್ಮ ತಾಯಿಯು "ಅಮೃತ" ಎಂಬ ಹೆಸರನ್ನು ತಮ್ಮ ಪತ್ರಿಕೆಗೆ ಇಟ್ಟು ದೇಶಕ್ಕೆಲ್ಲಾ ರಾಜಕೀಯ ಜ್ಞಾನಾಮೃತವನ್ನೇ ಪ್ರಾಶನಮಾಡಿಸಿ ಅಮೃತಬಜಾರ್ ಎಂಬ ಹೆಸರನ್ನು ಚಿರಸ್ಮರಣೀಯವಾಗಿ ರುವಂತೆ ಮಾಡಿದರು. ನಮ್ಮ ಸಂಪದಭ್ಯುದಯ ಕರ್ತರು ಇಂದು ಆಡಿದ ಮಾತು ನಾಳೆಗೆ ಇಲ್ಲದಂತೆಯೂ ಕರಸ್ಪಾಂಡೆನ್ಸುಗಳ ತರೆಯಿಂದ ಅನೃತವಾದ ಸುದ್ದಿಗಳನ್ನು ಹರಡಿ ಪ್ರಜಾಮನಃಕಾಲುಷ್ಯವನ್ನು ವೃದ್ಧಿಪಡಿಸುತ್ತಲೂ ಅನೃತಪ್ರಸಾರವನ್ನು ದೇಶಕ್ಕೆ ಮಾಡುತ್ತಿರುವ ಕಾರಣದಿಂದ ತನ್ನ ಹೆಸರನ್ನು "ಅನೃತಬಜಾರ್" ಎಂದು ತಾನಾಗಿಯೇ ಪರ್ಯಾಯಿಸಿಕೊಂಡರೂ ಚೆನ್ನಾಗಿ ಒಪ್ಪುವದು.

ಸರ್ದಾರ್ ಲಕ್ಷ್ಮೀಕಾಂತರಾಜ ಅರಸಿನವರು, ಹಜರತ್ ವಿಜಾರ್ ಹಂಚಾಹುಸೇನ್ ಸಾಹೇಬರು ಮೊದಲಾದ ಅನೇಕ ದೊಡ್ಡಮನುಷ್ಯರ ವಿಷಯದಲ್ಲಿ ಅಸತ್ಯವಾದ ಮತ್ತು ಅಗೌರವತರವಾದ ಬರವಣಿಗೆಗಳನ್ನು ಪ್ರಕಟಿಸಿಬಿಟ್ಟು ಬಳಿಕ ಅದನ್ನು ಸರಿಪಡಿಸಿಕೊಳ್ಳುವದೊ ಕ್ಷಮಾಪಣೆ ಕೇಳಿಕೊಳ್ಳುವದೋ ಹೀಗೆ ಎಷ್ಟೋಸಲ ಈ ಪತ್ರಿಕೆಗೆ ಪದ್ಧತಿಯಾಗಿ ನಡೆದು ಬಂದಿದೆ. ಮೊನ್ನೆತಾನೇ ಮೈಸೂರು ವೀರಶೈವ ಸಂಘದಲ್ಲಿ ಚರ್ಚೆ ನಡೆದ ಸಂಗತಿಯೆಂದು ಒಂದು ಸುಳ್ಳು ಕರಸ್ಪಾಂಡೆನ್ಸು ಪ್ರಕಟಮಾಡಿ ಕಡೆಗೆ ಅದರ ಪ್ರೆಸಿಡೆಂಟರಿಂದ ವಷಟ್ಕಾರಪಡೆದುಕೊಂಡಿತು. ಹೀಗೆ ನಡೆಯುವದು ಇದಕ್ಕೆ ಸರ್ವಸಾಮಾನ್ಯವಾಗಿ, ಇದರಲ್ಲಿ ಬರುವ ಸಂಗತಿಗಳ ಮೇಲೆ ಜನರಿಗೆ ಅಷ್ಟೊಂದು ವಿಶ್ವಾಸಹುಟ್ಟುವದಕ್ಕೆ ರಹವೇ ಕಡಿಮೆಯಾಗುತ್ತಿದೆ. ಜೈನ ದೊಡ್ಡಮನುಷ್ಯರು ಯಾವ ಲೇಖನದಲ್ಲಿ ಕಂಡ ದುರ್ವಚನಗಳನ್ನು ಆಕ್ಷೇಪಿಸಿರುವರೋ ಆ ಕರಸ್ಪಾಂಡೆಂಟರು ದೋರ್ಬಲಿ ಜಿನದಾಸಶಾಸ್ತ್ರಿಗಳಂಥ ಪಂಡಿತರನ್ನೂ, ಶಂಕರವಿಲಾಸ ಪಾಠಶಾಲಾಧ್ಯಾಪಕರಾದ ಶಿರಸಿ ಗುರುಶಾಂತಶಾಸ್ತ್ರಿಗಳನ್ನೂ ಸಹ ಶಾಸ್ತ್ರಿಗಳೆಂದು ಕರೆಯುವಷ್ಟರ ಸಹನೆಯೂ ಕೂಡ ಇಲ್ಲದೆ "ದುರ್ಬಲಿ ದಾಸ, ಗುರುಶಾಂತ" ಎಂದು ಸಂಬೋಧಿಸಿಕೊಂಡಿರುತ್ತಾರೆ. ಆ ಶಾಸ್ತ್ರಿದ್ವಯರಲ್ಲಿ ಒಂದು ತಪದವರೆಗೆ ಶಿಷ್ಯವೃತ್ತಿಯಿಂದ ಇದ್ದರೂ ಅವರ ಯೋಗ್ಯತೆಯನ್ನು ಸಂಪಾದಿಸಲಾರದ ಇಂಥ ಕ್ಷುದ್ರಜನರ ಬರವಣಿಗೆಗಳನ್ನೆಲ್ಲಾ ತೃಣದಂತೆ ಗಣಿಸದೆ ಪರ್ವತದಂತೆ ದೊಡ್ಡದುಮಾಡಿಕೊಂಡು ತಮ್ಮ ಪತ್ರಿಕೆಯಲ್ಲಿ ಅವಕ್ಕೆ ಸ್ಥಳಕೊಡುವ ಸಂಪದಭ್ಯುದಯ ಕರ್ತರ ಉಚಿತಾನುಚಿತಜ್ಞತೆಯು ಅವರ ಮಹಾಪ್ರಾಮಾಣಿಕತೆಗೆ ತಕ್ಕಂತೆಯೇ ಇರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಜೈನ ದೊಡ್ಡಮನುಷ್ಯರು ಲೇಖನವನ್ನು ಬರೆದಮೇಲಾದರೂ ಅವರ ಶಾಂತಿಸಹನೆಗಳನ್ನು ಅಭಿನಂದಿಸಿದ ಈ ಪತ್ರಿಕಾಕರ್ತರು ನಿಷ್ಕಾರಣವಾಗಿ ಜೈನರ ಮನಸ್ಸನ್ನೆಲ್ಲಾ ನೋಯಿಸುವಂಥ ಕರಸ್ಪಾಂಡೆನ್ಸನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿಕೊಂಡ ತಪ್ಪಿಗಾಗಿ ಕ್ಷಮಾಪಣೆಯನ್ನಾದರೂ ಕೇಳಲಿಲ್ಲ; ಕಡೆಗೆ ವಿಷಾದಪ್ರದರ್ಶನವನ್ನಾದರೂ ಸ್ವಲ್ಪವೂ ಮಾಡಲಿಲ್ಲ. ದೊಡ್ಡಸ್ತಿಗೆಯೆಂದರೆ ಹೀಗಿರಬೇಕಲ್ಲವೆ ? ಅದು ಹಾಗಿರಲಿ.

ಈ ಪತ್ರಿಕಾಕರ್ತರು ಸಂಸ್ಕೃತಾಭ್ಯಾಸ ವಿಷಯದಲ್ಲಿ ಇದುವರೆಗೆ ತಮ್ಮ ಬಾಯನ್ನೇ ಬಿಚ್ಚದೆ ಈಗ ಮಾತ್ರ ಬಿಚ್ಚುತ್ತೇವೆಂದು ಹೇಳಿಕೊಂಡು ಸುರಿಸಿರುವ ಮುಕ್ತಾಫಲಗಳಲ್ಲಿ ವಿಶೇಷವೇನಿದೆ ? ಎಷ್ಟೋಸಲ ಅದೇ ಪತ್ರಿಕೆಯಲ್ಲಿ ಕರಸ್ಪಾಂಡೆನ್ಸಿನ ತೆರೆಯಲ್ಲೂ ರಾಜಾರೋಷು ಪತ್ರಿಕಾಭಿಪ್ರಾಯವಾಗಿಯೂ ಬಂದಿರುವುದರ ಹೊರತು ಬೇರೇನೂ ಇಲ್ಲ. ಆದರೆ ಸ್ವಲ್ಪ ಬುದ್ಧಿವಂತಿಕೆಯನ್ನು ತೋರಿಸಿ ಹಿಂದೆ ಕೊಟ್ಟಿರುವ ಅಭಿಪ್ರಾಯದ ಅಸಾಧುತ್ವವನ್ನು ಮರೆಪಡಿಸುವದಕ್ಕೆ ಪ್ರಯತ್ನಿಸಿದಂತೆ ತೋಚುತ್ತದೆ. ಆದರೂ ಒಳಗಿನ ದುರ್ಗಂಧವು ತಪ್ಪಿಲ್ಲ. ಬೆಂಗಳೂರು ಸಂಸ್ಕೃತ ಹೈಸ್ಕೂಲಿನಲ್ಲಿ ಇತರರನ್ನು ಸೇರಿಸಿಕೊಳ್ಳಬಹುದೆಂದು ಸ್ಪೆಷಲ್ ಕಮಿಟಿಯವರು ಹೇಳಿದ್ದೂ ಕೂಡ ತಪ್ಪೆಂದು ಹಿಂದೆ ಈ ಪತ್ರಿಕಾಕರ್ತರು ಬರೆದು ತಮ್ಮ ವಿಚಿವಿರಿದ ಅಸೂಯೆಯನ್ನು ತೋರ್ಪಡಿಸಿಕೊಂಡಿದ್ದರು. ಈಗ "ಸಂಸ್ಕೃತಕ್ಕೂ ಸಂಸ್ಕೃತದಲ್ಲಿರತಕ್ಕ ವೇದಶಾಸ್ತ್ರಪುರಾಣಾದಿ ಗ್ರಂಥಗಳಿಗೂ ಜಾತಿಕುಲ ಗೋತ್ರಗಳ್ಯಾವವೂ ಇಲ್ಲ, ಯಾರು ಬೇಕಾದರೂ ಅಭ್ಯಾಸಮಾಡಬಹುದು. ಈ ಸಂಸ್ಕೃತ ಪಾಠಶಾಲೆಗಳಲ್ಲಿ ಆ ಗ್ರಂಥಗಳು ಸಂಸ್ಕೃತದಲ್ಲಿ ಹೇಳಲ್ಪಡುತ್ತವೆ. ಸಂಸ್ಕೃತಭಾಷೆಯನ್ನು ತಿಳಿದಿರತಕ್ಕವರು ಈ ಕಾಲೇಜುಗಳಿಗೆ ಹೋಗಿ ವ್ಯಾಸಂಗಮಾಡಬಹುದು. ಮೊದಲು ಪಬ್ಲಿಕ್ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಓದಿ ಸಂಸ್ಕೃತಭಾಷೆಯನ್ನು ಓದಿ ಕಲಿತು ಅನಂತರ ಈ ಸ್ಪೆಷಲ್ ಕಾಲೇಜುಗಳಿಗೆ ಸೇರುವ ಪ್ರಯತ್ನವನ್ನು ಮಾಡಬಹುದು" ಎಂದು ಬರೆದಿರುತ್ತಾರೆ. ಹಿಂದೆ ಆಡುತ್ತಿದ್ದ ದುರಭಿಪ್ರಾಯಕ್ಕೆ ಪಶ್ಚಾತ್ತಾಪಗೊಂಡು ತಕ್ಕಮಟ್ಟಿಗೆ ವಿವೇಕವನ್ನೂ ಶಾಂತಿಯನ್ನೂ ಹೊಂದಿ ಇಂಥ ಅಭಿಪ್ರಾಯಪಟ್ಟಿದ್ದಕ್ಕಾಗಿ ಸಂತೋಷಿಸಬೇಕಾಗಿದೆ. ಆದರೆ ಕೇವಲ ಸಂಸ್ಕೃತಭಾಷೆಯನ್ನೇ ತೆಗೆದುಕೊಂಡು ಓದಬೇಕೆನ್ನುವವರಿಗೆ ಇಂಗ್ಲೀಷ್‌ಸ್ಕೂಲು ಕಾಲೇಜುಗಳಲ್ಲಿ ಪ್ರವೇಶಿಸಿ ಅಭ್ಯಾಸಮಾಡುವದು ಸಾಧ್ಯವಲ್ಲವೆಂಬ ಸಂಗತಿಯು ಇವರ ಅಸೂಯಾಗ್ನಿ ದಗ್ಧಜ್ಞಾನೇಂದ್ರಿಯಕ್ಕೆ ಸ್ಫುರಿಸಲಿಲ್ಲವೆಂದು ತೋರುತ್ತೆ. ಸ್ಪೆಷಲ್ ಕಾಲೇಜುಗಳನ್ನು ಮಾಡಿಕೊಂಡು ಗ್ರ್ಯಾಂಟನ್ನು ಪಡೆದು ಇತರರೆಲ್ಲಾ ಅಭ್ಯಾಸಮಾಡಬಹುದೆಂಬ ದೊಡ್ಡ ಸಲಹೆಯನ್ನು ಇವರು ಕೊಟ್ಟಿರುತ್ತಾರೆ. ಅದನ್ನು ಇವರೇ ಹೇಳಿಕೊಡಬೇಕಾಗಿತ್ತೆ ? ಅದರ ಸಾಧ್ಯಾಸಾಧ್ಯತೆಯನ್ನೂ ಯುಕ್ತಾಯುಕ್ತತೆಯನ್ನೂ ಪ್ರಜೆಗಳೂ ಸರ್ಕಾರದವರೂ ಯೋಚಿಸಿ ಕೆಲಸಮಾಡಲು ಸಮರ್ಥರೇ ಆಗಿದ್ದಾರೆ. "ಲಿಂಗಾಯತರ ಹೊರತು ಇನ್ಯಾವಪಂಗಡದವರೂ ಈ ಸ್ಪೆಷಲ್ ಸಂಸ್ಕೃತಕಾಲೇಜುಗಳಿಗೆ ಸೇರಬೇಕೆಂಬ ಪ್ರಯತ್ನಮಾಡಿಲ್ಲ. ಬ್ರಾಹ್ಮಣರ ವೇದಶಾಸ್ತ್ರಗಳಲ್ಲಿ ಇವರಿಗೆ ನಂಬಿಕೆಯಿಲ್ಲದೆ ಇದ್ದಾಗ್ಯೂ ಅವರ ವೇದಶಾಸ್ತ್ರಗಳನ್ನು ಅವರ ಜೊತೆಯಲ್ಲಿಯೇ ಓದಬೇಕೆಂದು ಅಪೇಕ್ಷಿಸುವ ಲಿಂಗಾಯತರು ವಿಶೇಷವಾಗಿಲ್ಲ. ಅದರ ಪ್ರಯೋಜನವನ್ನು ಹೊಂದುವದಕ್ಕೆ ಯೋಗ್ಯತೆ ಇಲ್ಲದವರು ಯಾರೋ ಕೆಲವು ಜನಗಳು ಈ ಪ್ರಯತ್ನಮಾಡುವರು" ಎಂದು ಈ ಪತ್ರಿಕಾಕರ್ತರು ಈ ಸಮಯದಲ್ಲಿ ಆಡಿರುವ ಮಾತುಗಳು ಕಣ್ಣು ಕಿವಿಯುಳ್ಳವರು ಆಡತಕ್ಕ ಮಾತೇ ಅಲ್ಲ. ಅದಕ್ಕಾಗಿ ಪ್ರತ್ಯುತ್ತರವನ್ನು ಕೊಡಬೇಕಾದುದು ಅಪ್ರಕೃತ. ವೀರಶೈವರ ಧರ್ಮಸ್ವರೂಪವನ್ನೂ ಅವರ ಸಿದ್ಧಾಂತ ಗ್ರಂಥಗಳನ್ನೂ ಸ್ವಲ್ಪವೂ ಅರಿಯದ--ಅರಿಯಲು ಸಾಮರ್ಥ್ಯವೂ ಇಲ್ಲದ—ಈ ಪತ್ರಿಕಾಕರ್ತರು ವೇದಶಾಸ್ತ್ರಗಳಲ್ಲಿ ಲಿಂಗಾಯತರಿಗೆ ನಂಬಿಕೆ ಇಲ್ಲವೆಂದು ಹರಟಿರುವ ಅತಿಪ್ರಸಕ್ತಿಯು ಇವರ ಪದವಾಕ್ಯಪ್ರಮಾಣ ಗೌರವಕ್ಕೆ ತಕ್ಕಂತೆಯೇ ಇದೆ. ಈ ಸಂಸ್ಕೃತಕಾಲೇಜು ಬ್ರಾಹ್ಮಣರ ಸ್ಪೆಷಲ್ ಕಾಲೇಜು ಎಂಬುದಾಗಿ ಈ ಪತ್ರಿಕೆಯು ಪದೇ ಪದೇ ಕೂಗಿಕೊಂಡು ಅದರಮೇಲೆ ಇತರರ ಪ್ರವೇಶವನ್ನು ತಡೆಯುವುದಕ್ಕೆ ಸಾಹಸಪಡುತ್ತಿದೆ. ಸರ್ಕಾರಿಯಲ್ಲದೆ ಅದು ಸ್ಪೆಷಲ್ ಕಾಲೇಜೇ ಆಗಿದ್ದರೆ ಈ ಸಂಬಂಧವಾದ ಸಬ್ಜೆಕ್ಟನ್ನು 30 ವರ್ಷದಿಂದಲೂ ಬಗೆಹರಿಸದೆ ಸರ್ಕಾರದವರು ತಳ್ಳಿಕೊಂಡು ಬರಬೇಕಾದದ್ದೇಕೊ ? ಒಂದು ಕ್ಷಣಮಾತ್ರದಲ್ಲಿ "ಅದರಮೇಲಣ ಅಧಿಕಾರವು ನಮಗಿಲ್ಲ" ಎಂದು ಈ ಸಬ್ಜೆಕ್ಟನ್ನು ಪ್ರಜಾಪ್ರತಿನಿಧಿಸಭೆಗೆ ತಂದಿದ್ದ ಮೆಂಬರಿಗೆ ಉತ್ತರಹೇಳಿ ಕಳುಹಿಸಿಬಿಡಬಹುದಾಗಿತ್ತು. ಈ ಕಾಲೇಜುಗಳಿಗಾಗಿ ವರ್ಷ 1ಕ್ಕೆ ತಗಲುವ 60 ಸಾವಿರ ರೂ. ಗಳನ್ನು ಬೇರ್ಪಡಿಸಿಟ್ಟು ಬ್ರಾಹ್ಮಣರ ಕಂದಾಯದ ದ್ರವ್ಯದಿಂದಲೇ ಒದಗಿಸಿಕೊಳ್ಳುತ್ತಿರಬಹುದಾಗಿಯೂ, ಅದರಿಂದಲೇ ಇದಕ್ಕೆ ಸ್ಪೆಷಲ್ ಕಾಲೇಜೆಂದು ಇವರು ನಾಮಕರಣ ಮಾಡಿರಬಹುದಾಗಿಯೂ ಯೋಚಿಸಬೇಕಾಗುತ್ತದೆ. ಅದೇ ನಿಜವಾಗಿದ್ದರೆ ಇದನ್ನೇರ್ಪಡಿಸುವಾಗ ಇದು ಬ್ರಾಹ್ಮಣರ ಸ್ಪೆಷಲ್ ಕಾಲೇಜೆಂದು ಗೌರ್ನಮೆಂಟಿನವರು ಪ್ರೊಸಿಡಿಂಗ್ಸ್ ಮಾಡಿದ್ದರೆ ಈಗಲೂ ಸರ್ಕಾರದವರು ಇಂಥ ಉತ್ತರಕೊಡುವ ಉಪಾಯವನ್ನು ಇವರು ಕಲಿಸಿಕೊಟ್ಟುದಕ್ಕಾಗಿ ಥ್ಯಾಂಕ್ಸ್ ಮಾಡಿ, ಸುಲಭದಲ್ಲಿ ಈ ಸಮಸ್ಯೆಯನ್ನು ಮುಗಿಸಿಬಿಡದೆ ಹೋಗಲಾರರು.

ಸಂಪದಭ್ಯುದಯದ ವಾಚಕ.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ವ್ಯಾರಿಕ್ಟ್ ಭಂಗಾರದ ಮುಳ್ಳುಳ್ಳ

9

ರಾಯಲ್ ಪೌಂಟೆನ್‌ಪೆನ್.



ಎಂಬ ಈ ಪೇನಾವನ್ನು ಅಮೇರಿಕಾ ದೇಶದಲ್ಲಿ ಮೇಲಾದ ವಾಲ್ಕನೆಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿವಿಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ

ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಡರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,

ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

33 ಬಳ್ಳಾರಿ.

೧೯೨೨ನೆಯ ಇಸವಿ ಸೆಪ್ಟಂಬರ್ ತಾ॥ ೨೪ ರಿಂದ ೧೯೨೨ನೆಯ ಸೆಪ್ಟಂಬರ್ ತಾ॥ ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಆಶ್ವಯುಜ ಶುದ್ಧ ಏಕಾದಶಿಯಿಂದ ಆಶ್ವಯುಜ ಶುದ್ಧ ದಶಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
24	ಭಾನು	ಚೌತಿ	47-40	ಸ್ವಾತಿ	22-43	8
25	ಸೋಮ	ಪಂಚ	43-5	ವಿಶಾ	19-42	9
26	ಮಂಗಳ	ಷಷ್ಠಿ	39-27	ಅನೂ	17-27	10
27	[1] ಬುಧ	ಸಪ್ತ	36-46	ಜ್ಯೇಷ್ಠ	16-12	11
28	[2] ಗುರು	ಅಷ್ಟ	35-17	ಮೂಲ	16-0	12
29	[3] ಶುಕ್ರ	ನವ	34-58	ಪೂಷಾ	16-56	13
30	[4] ಶನಿ	ದಶ	35-56	ಉಷಾ	19-7	14

(1) ಗಜಗೌರೀವ್ರತಂ, ಕಾಳರಾತ್ರಿಃ, ಮಹಿಷಾಸುರ ಸಂಹಾರಃ, ಸರಸ್ವತೀಪೂಜಾ (2) ದುರ್ಗಾಷ್ಟಮಿ (3) ಮಹಾನವಮಿ, ಆಯುಧಗಜಾಶ್ವಪೂಜಾ, ಹಯಗ್ರೀವಪೂಜಾ (4) ವಿಜಯದಶಮಿ, ಶಮಿಪೂಜಾ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ಸತ್ಸ್ವತ್ತ ಮೋಹರಾಜೀಯಾತ್ ‖

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖

ಸೀಮಾತೀತಯಶಃಸ್ತ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪ | ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಅಕ್ಟೋಬರ್ ತಾರೀಖು ೧ ನೆಯ ಭಾನುವಾರ. | ಸಂಚಿಕೆ ೪೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಪತಿ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ॥ ವಿದ್ವಾನ್ ಎಫ್. ಆರ್. ಕರಿಬಸವಶಾಸ್ತ್ರಿಗಳು,

ಗ್ರಂಥಪ್ರಸಾರಕಮಂಡಲಿ ಮೈಸೂರು.

ಶ್ರೀರಾಮವಿಜಯಂ.

ಇಂದೇ ತಾವು ತರಿಸಿಕೊಳ್ಳಿರಿ ! ಏಕೆಂದರೆ ?

ಲೋಕಾಮಯಹರ ಕಸ್ತೂರಿಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಬಾಯಿಲೆಗೂ ಗುರಿಯಾಗದೆ ಆರೋಗ ಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ವೈಕ್ಲೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ, ಎಳವು (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾ ಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ವಿಳಾಸ—ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ,

37 ಮೈಸೂರು.

ಜರ್ಮನ್ ಫ್ಯಾಷನ್ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ತಿರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಪ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಪೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಪೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,

10 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಸಿನೆಮೊಟೊಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಷೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡ ಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.

,, ನಂ. 2 ರೂ. 7—8—0.

28 ವಿಳಾಸ—ಎಸ್. ಪಾಲ್ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

10

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.

ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್ ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರನಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0

,, ,, ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,

ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

ಶ್ರೀ

ಜಯದೇವ ಔಷಧಾಲಯ.

(ಮೊದಲು ರೈಲ್ವೆಬುಕಿಂಗ್ ಆಫೀಸ್ ಇದ್ದ ಕಟ್ಟಡದಲ್ಲಿ)

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಔಷಧಾಲಯದಲ್ಲಿ ಎಲ್ಲ ವಿಧದ ರೋಗಗಳಿಗೂ ಅನುಗುಣವಾದ ಚಿಕಿತ್ಸೆಯನ್ನು ಹೊಂದಬಹುದು. ರೋಗಿಗಳ ಪರೀಕ್ಷೆಯು ಅನುಭವಸ್ಥರಾದ ಡಾಕ್ಟರಿಂದ ಉಚಿತವಾಗಿ ನಡಿಸಲ್ಪಡುವುದು.

ಎಲ್ಲ ವಿಧದ ಪೇಟೆಂಟ್ ಔಷಧಗಳೂ ಇಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

[illegible] ನೆಯ ಇಸವಿಯ ಅಕ್ಟೋಬರ್ ತಾ|| [illegible] ನೆಯ ಭಾನುವಾರ.

ನೂತನ ಮುದ್ರಣಶಾಸನ.

ಪ್ರೆಸ್ ಆಕ್ಟು, ರೌಲಟ್ ಆಕ್ಟು ಮೊದಲಾದ ನಿರ್ಬಂಧ ಶಾಸನಗಳನೇಕವನ್ನು ಭಾರತಪ್ರಭುತ್ವದವರು ತೊಲಗಿಸಿಬಿಟ್ಟರೂ ದೇಶೀಯ ಸಂಸ್ಥಾನಿಕರ ಹಿತಕ್ಕಾಗಿ ಮತ್ತೊಂದು ತೆರದ [illegible]

ನವರಾತ್ರಿ ಮಹೋತ್ಸವ.

ರಾಜಧಾನಿಯಲ್ಲಿ ರೋಗಾದ್ಯುಪದ್ರವಗಳಿಲ್ಲದುದರಿಂದ ಪ್ರೇಕ್ಷಕ ಜನಸ್ತೋಮವು ವಿಶೇಷವಾಗಿಯೇ ಸೇರಿದ್ದಿತು. [illegible]

ಅಥಣಿಯಲ್ಲಿ ಸೌಹಾರ್ದ.

[illegible]

NEGLECT.

The results of neglect have reached the climax in respect of public rights and privileges which belong to the people of all classes in Mysore. One single class of people has got all the benefits of education as a result of assumed religious and social superiority. If we go back to the most ancient period of Indian Politics, it will be seen that the most predominent class in power to-day occupied a position which had least to do with politics. The study of religious books and the worship of the village diety were the allotted occupations of those people who have to-day misinterpreted that division of occupation. Changes came in and disturbed that division. The student of the Vedas took the other occupations such as trade and agriculture. He began to invade other territories of occupation and the result to-day is that the pride and power of that one class have assumed such huge proportions as to endanger the economic condition of the people as a whole.

There are about 400,000 Kurubars in the Province and about 160,000 Gollars. Between these two classes there prospered in Mysore a big industry of wool growing and the manufacture of of articles made of wool. About 100,000 people, Devangas and Neygis represent the weaving industry in Mysore. Besides 1,300,000 Vokkaligars half as many from other classes such as Holeyars, Madigars etc., represent the agricultural interests. Out of a population of 9,10,000 of Banagigars, Komatis, Lingayets, Nagartars and Vaisyas, half of it may be said to represent interests connected with trade. In this way there are so many interests which according to the old allotment were very important occupatians in determining the economic prosperity of the country. When the old customs and privileges existed, they were not negligible. But when new order of things came to prevail, the man to whom the innocent study of the Vedas and the worship of the village diety had been allotted, began to invade every other occupation of importance and to sow the seeds of disunion and factions and strangle all efforts towards enlightenment of other ignorant classes. He has not only appropriated other occupations but has denied the study of the Vedas to others and preserves it as his birthright.

When a democratic institution like the Representative Assembly was instituted, it was for the benefit of the agriculturist, the tradesman, the manu facturer. But what has it been? It became the talking stage of one class of people. Their number is only 200,000 or about 3·4 per cent of the entire population. And what are their specific interests according to *Varnashramadharma* which they uphold as the most sacred and unchangeable order of things? It is the study of the Vedas. Does this interest require 50% of the total number of members of the Dasara Representative Assembly? Here is the result of neglect on the part of the people of Mysore.

Will the large peoples who represent the grave interests in the country still neglect to care for their interests and still be without proper representation in the Representative Assembly and Legislative Council? Do they not see that their rightful places have been usurped by a small minority whose profession is to swallow all the good things of the State themselves and oppose every progressive measure in the interest of the masses? The time has come for them to be up and doing. Let them "Arise, awake and stop not till the goal is reached."

ELECTION CONTEST.

The one conspiciuos matter of interest in the Capital during the Dasara week is the election of four members from the Representative Assembly to the Legislative Council which comes off shortly, and the campaign from various quarters is faring on briskly. Competition seems to be much keener than last time. A number of candidates have stood for election. During the last election—thanks to the splendid work of late Mr. M. Basaviah and the *Mysore Praja Mitra Mandali*—the forces which used to be always disunited were brought together and all the four seats were carried away by the *Mandali* representatives. That was the first fruit of the Mandali's efforts. The death of so stalwart and so unselfish a patriot as Mr. M. Basaviah just when the movement had begun to grow and he was needed most, was no doubt a serious loss. But to the good fortune of the people there are persons who stand by the banner that he hoisted and are striving cheerfully for the causes so dear to his heart.

It will be no easy task for the *Mandali* to achieve a similar victory this time. The tactics of their opponents have considerably changed. The old browbeating and decoying methods are given up, as no longer useful. New arms of sophistry such as misrepresentations and misinterpretations of the intentions of the people and the Government are being forged, a notorious instance of which is the letter by Mr. Gopalaswamier in the issue of the *Daily Post* of the 16th instant. "Divide and rule" is another old trick. It is to their interest to create differences amongst our ranks and it is our duty–and it is a sacred duty of the members of the Representative Assembly–to be united, sinking any small differences that may be for the sake of the righteous cause at stake. They would talk of compromise in words of "sweet reasonableness" or set up other candidates of the backward classes promising them every help. These are dangerous methods and are to be guarded against. Further, the campaign of the *Mandali* to back up their candidates will be misrepresented as hatred of Brahmins, and they would thus play on the sentiments of the members. There is no hatred in the movement itself and much less in its contest for seats. It is an honourable fight. There is no civilised country with a democratic constitution, where election fights are not based on party principles. In England or in India, in America or in Germany it is the same. The *Mysore Praja Mitra Mandali* stands for certain broad liberal principles such as adequate representation of all communities in Public Service and in Public Councils, and equal opportunities to all, and in particular to the effective working of the orders on the Miller Committee Report, the Educational Memorandum, the admission of Panchamas into all Government and Aided educational institutions, and to the free admission of non-Brahmins into Sanskrit Colleges. There shall be no compromise on these questions. The *Mandali* must strengthen itself–and it should spare no efforts to capture as many seats as possible. The trust of the many in the few has been tried and it has been found to have been placed in wrong hands. It has worked their ruin and time has come when they should now trust themselves. We hope the Representatives will remember the days of last election, how unity brought success, and how very beneficial that success has proved to them. We hope they will bring all the virtues of loyalty to the cause of the party, of united effort, of patience, of integrity, of unselfishness and above all charity which are so essential to sound political working to play on this critical occasion. If what has been achieved last time is not retained this time not only what has been gained in the past after hard struggles will be lost but the future that was just beginning to grow bright will be jeopardised altogether. We hope that bearing these facts in mind, the Representatives will give a united fight, and regain the inalienable rights which have been snatched away from us surreptitiously.

ಸ್ವದೇಶದ ವೃತ್ತಾಂತಗಳು.

ಡಾಕ್ಟರ್ ಸರ್ ಕವೀಂದ್ರ ರವೀಂದ್ರನಾಥ ಠಾಕೂರ್‌ರವರು ಶ್ರೀಮನ್ಮಹಾರಾಜರ ಅತಿಥಿಗಳಾಗಿ ರಾಜಧಾನಿಗೆ ದಯಮಾಡಿಸಿದ್ದರು.

ಪ್ರಜಾಪ್ರತಿನಿಧಿ ಸಭೆಯು ನಾಳೆ ಮಧ್ಯಾಹ್ನ 12 ಗಂಟೆಗೆ ದಿವಾನ್ ಮಿ|| ಎ. ಆರ್. ಬಾನರ್ಜಿಯವರ ಅಧ್ಯಕ್ಷತೆಯಿಂದ ಆರಂಭಗೊಳ್ಳುವುದು.

ನಾಳೆದಿನದಿಂದ ಬೆಟ್ಟದಕಿಬ್ಬಿಯ ಜೂಜಿನ ಬಯಲಿನಲ್ಲಿ ಕುದುರೆಗಳ ಜೂಜೂ ಪೋಲೋ ಪಂದ್ಯವೂ ಇತರ ವಿನೋದಗಳೂ ನಡೆಯಲು ಏರ್ಪಾಟಾಗಿದೆ.

ನಮ್ಮ ವಿಶ್ವವಿದ್ಯಾಲಯದ ಪಟ್ಟಪ್ರದಾನ ಮಹಾಸಭೆಯು ಬರುವ ತಾ|| [illegible]ರ ಬೆಳಗಿನ [illegible] ಗಂಟೆಗೆ ನಡೆಯುವುದು. ಚಾನ್ಸಲರಾದ ಶ್ರೀಮನ್ಮಹಾರಾಜರವರು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪಟ್ಟಪ್ರದಾನ ಮಾಡುವರು.

ಡಾ|| ವ್ರಜೇಂದ್ರನಾಥಸೀಲ್‌ರವರ ಅಧ್ಯಕ್ಷತೆಯಿಂದ ಕಳೆದ ಗುರುವಾರ ಪಂಚಮರ ಸಭೆಯು ನಡೆದಿತು. ಮಿ|| ಬೌರಿಂಗ್‌ರವರ ಪತ್ನಿಯವರು ಸಭಾ ಪ್ರಾರಂಭ ಭಾಷಣವನ್ನು ಮಾಡಿದರು ಅಧ್ಯಕ್ಷರ ಭಾಷಣವೂ ಆಯಿತು.

ನವರಾತ್ರಿಯ ಉದ್ದೇಶದಿಂದ ರಾಜಧಾನಿಗೆ ಕರೆಯಿಸಲ್ಪಟ್ಟಿರುವ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯಾತಿಥಿಗಳು ದೊಡ್ಡ ಬಂಗಲೆಯಲ್ಲೂ, ಭಾರತೀಯಾತಿಥಿಗಳು ಬೇರೆ ಬೇರೆ ಭವನಗಳಲ್ಲೂ ಇಳಿಸಲ್ಪಟ್ಟು, ಸತ್ಕಾರಗೊಳ್ಳುತ್ತಿರುವರು.

ರಾಜಧಾನಿಗೆ ನೋಟಕ್ಕೆ ಬಂದಿದ್ದವರಲ್ಲಿ ಪರಸ್ಥಳದ ಹಲವು ಜನರು ತಮ್ಮ ವಸ್ತ್ರಾಭರಣಗಳನ್ನೂ, ದುಡ್ಡುಗಳನ್ನೂ [illegible]

ಶ್ರೀ

ಜಯದೇವ ಔಷಧಾಲಯ.

(ಮೊದಲು ರೈಲ್ವೆಬುಕಿಂಗ್ ಆಫೀಸ್ ಇದ್ದ ಕಟ್ಟಡದಲ್ಲಿ)

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಔಷಧಾಲಯದಲ್ಲಿ ಎಲ್ಲ ವಿಧದ ರೋಗಗಳಿಗೂ ಅನುಗುಣವಾದ ಚಿಕಿತ್ಸೆಯನ್ನು ಹೊಂದಬಹುದು. ರೋಗಿಗಳ ಪರೀಕ್ಷೆಯು ಅನುಭವಸ್ಥರಾದ ಡಾಕ್ಟರಿಂದ ಉಚಿತವಾಗಿ ನಡಿಸಲ್ಪಡುವುದು.

ಎಲ್ಲ ವಿಧದ ಪೇಟೆಂಟ್ ಔಷಧಗಳೂ ಇಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೨೦ನೆಯ ಇಸವಿಯ ಅಕ್ಟೋಬರ್ ತಾ|| ೧ನೆಯ ಭಾನುವಾರ.

ನೂತನ ಮುದ್ರಣಶಾಸನ.

ಪ್ರೆಸ್ ಆಕ್ಟು, ರೌಲತ್ ಆಕ್ಟು ಮೊದಲಾದ ನಿರ್ಬಂಧ ಶಾಸನಗಳನೇಕವನ್ನು ಭಾರತಪ್ರಭುತ್ವದವರು ತೊಲಗಿಸಿಬಿಟ್ಟರೂ ದೇಶೀಯ ಸಂಸ್ಥಾನಿಕರ ಹಿತಕ್ಕಾಗಿ ಮತ್ತೊಂದು ತೆರದ ಮುದ್ರಣಶಾಸನವನ್ನು ಹೊಸದಾಗಿ ನಿರ್ಮಿಸಲು ಯೋಚಿಸಿರುವರೆಂಬ ವಿಷಯವನ್ನು ಹಿಂದಣ ಸಂಚಿಕೆಯಲ್ಲಿ ತಿಳಿಯಿಸಿದ್ದೆವಷ್ಟೆ. ಆದರೆ ಭಾರತಪ್ರಭುತ್ವಕ್ಕೇ ಅನವಶ್ಯಕವಾಗಿ ತೋರಿದಂಥ ಮುದ್ರಣಶಾಸನವನ್ನು ದೇಶೀಯ ಸಂಸ್ಥಾನಗಳಿಗೋಸ್ಕರ ನಿರ್ಮಿಸಬೇಕಾದ ಅವಶ್ಯಕತೆಯೇನುಂಟೆಂದು ಅನೇಕರು ಆಕ್ಷೇಪಿಸುತ್ತಾರೆ. ಆದರೆ ಈ ಸಂಬಂಧವಾಗಿ ಸಾಮ್ರಾಜ್ಯಶಾಸನ ಸಭೆಯಲ್ಲೂ ಸ್ಟೇಟ್‌ಕೌನ್ಸಿಲಿನಲ್ಲೂ ನಡೆದಿರುವ ಚರ್ಚೆಗಳನ್ನು ಕೇಳುವಲ್ಲಿ—ದೇಶೀಯ ಸಂಸ್ಥಾನಾಧಿಪತಿಗಳ ಮೇಲೆ ಪ್ರಜೆಗಳಿಗೆ ದ್ವೇಷವನ್ನು ಹುಟ್ಟಿಸುವ ಕಾರ್ಯವನ್ನು ನಡೆಯಗೊಡದಂತೆ ಅಣಗಿಸುವ ಅವಶ್ಯಕತೆಯನ್ನರಿತು ಕೀ|| ಶೇ|| ವಿಕ್ಟೋರಿಯಾ ಮಹಾರಾಣಿಯವರೂ ಎಡ್ವರ್ಡ್ ಸಾರ್ವಭೌಮರೂ ಸಹ "ನಿಮ್ಮ ಗೌರವವನ್ನು ನಾವು ಕಾಪಾಡುತ್ತೇವೆ" ಎಂಬುದಾಗಿ ಸಂಸ್ಥಾನಪತಿಗಳಿಗೆ ವಾಗ್ದಾನಮಾಡಿದ್ದರೆಂತಲೂ, ಆ ಉದ್ದೇಶವನ್ನು ನೆರವೇರಿಸುವುದಕ್ಕಾಗಿಯೇ 1910ನೇ ವರ್ಷದಲ್ಲಿ ಹುಟ್ಟಿದ ಮುದ್ರಣಶಾಸನದಲ್ಲಿ ಇದಕ್ಕೆ ಸಂಬಂಧಿಸಿದ ನಿಬಂಧನೆಯೊಂದು ಸೇರಿಸಲ್ಪಟ್ಟಿದ್ದಿತೆಂತಲೂ, ಅದಕ್ಕೆ ಹಿಂದಿನಿಂದಲೂ ಕೂಡ ಇಂಥ ವಿಧಿಯೊಂದು ಇದ್ದೇಇದ್ದಿತೆಂತಲೂ ಗೊತ್ತಾಗುತ್ತದೆ. ಭರತಖಂಡದಲ್ಲಿ ⅓ ಭಾಗವನ್ನು ದೇಶೀಯ ಸಂಸ್ಥಾನಾಧಿಪತಿಗಳೇ ಆಳುತ್ತಿದ್ದಾರೆ. ಇಂಥವರನ್ನು ಹಲವು ವೃತ್ತಪತ್ರಿಕೆಗಳು ದೂಷಿಸುತ್ತಲೂ, ಅವರ ಮೇಲೆ ದ್ವೇಷಾಭಿವೃದ್ಧಿಗೊಳಿಸುವಂಥ ಲೇಖನಗಳನ್ನು ಬರೆಯುತ್ತಲೂ ಇವೆಯಂತೆ. ಹೀಗೆ ಮಾಡಕೂಡದೆಂದು 13 ವಾರ್ತಾಪತ್ರಿಕೆಗಳಿಗೆ ಸರ್ಕಾರದವರು ಎಚ್ಚರಿಕೆಯನ್ನು ಕೊಟ್ಟಿರುವರಂತೆ. ಮತ್ತು ಹೊಣೆಯ ಹಣವನ್ನು ಕೇಳಿದುದಲ್ಲದೆ, ಆ ಹಣವನ್ನು ವಶಪಡಿಸಿಕೊಂಡಿರುವುದೂ ಉಂಟಂತೆ. ಕಳೆದ 1 ವರ್ಷ ಕಾಲದಲ್ಲಿಯೇ ಸಂಸ್ಥಾನಪತಿಗಳನ್ನು ದೂಷಿಸುವ 170 ಲೇಖನಗಳು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿವೆಯಂತೆ. ಇದನ್ನೆಲ್ಲಾ ನೋಡಿ ಇಂಥ ನೂತನಮುದ್ರಣಶಾಸನವೊಂದನ್ನು ಏರ್ಪಡಿಸುವುದು ಅವಶ್ಯಕವೆಂದು ಪ್ರಭುತ್ವದವರು ನಿರ್ಧರಿಸಿದ್ದಾರೆ. ಅಲ್ಲದೆ ಕಳೆದ ಮಹಾಯುದ್ಧದಲ್ಲಿ ಸಂಸ್ಥಾನಪತಿಗಳು ಬಹಳ ವಿಧವಾಗಿ ಆಂಗ್ಲಸಾಮ್ರಾಜ್ಯಕ್ಕೆ ಸಹಾಯಮಾಡಿದ್ದಾರೆ. ಅಂಥವರುಗಳ ಹಿತವನ್ನು ಅನುಲಕ್ಷಿಸದೆ ಬಿಡುವುದೆಂದರೆ ಅವರ ಮೈತ್ರಿಯನ್ನು ಕಳೆದುಕೊಂಡು ಶತೃತ್ವವನ್ನು ಬೆಳೆಯಿಸಿಕೊಳ್ಳುವುದಕ್ಕೆ ಅವಕಾಶವಾಗುವುದೆಂದು ಭಾರತಪ್ರಭುತ್ವದವರು ಪರ್ಯಾಲೋಚಿಸಿ, ಈ ನೂತನ ಶಾಸನಸ್ಥಾಪನೆಗೆ ಪ್ರಯತ್ನಿಸಿರುತ್ತಾರೆ. ದೇಶೀಯ ಸಂಸ್ಥಾನಿಕರ ಬೆಂಬಲವು ಸಾಮ್ರಾಜ್ಯ ಪ್ರಭುತ್ವಕ್ಕೆ ಯಾವಾಗ್ಗೂ ಅತಿ ಮುಖ್ಯವೆಂಬುದನ್ನು ಹೇಳಬೇಕಾಗಿಲ್ಲ. ಈಗಣ ಅಸಹಕಾರ ರಾಜಕೀಯ ಚಳವಳಿಯ ಸ್ಥಿತಿಯನ್ನು ನೋಡಿದರಂತೂ ಅದು ಮತ್ತಷ್ಟು ಅವಶ್ಯಕವೆಂದು ತೋರುತ್ತದೆ. ಹೀಗಿರುವುದರಿಂದ ಈ ಶಾಸನ ನಿಯಮನದ ಮೂಲಕ ಸಂಸ್ಥಾನಪತಿಗಳಿಗೆ ಮುಯ್ಯನ್ನು ಮಾಡಿ ಅವರ ಸಾನುಭೂತಿಯನ್ನು ದೃಢಪಡಿಸಿಕೊಳ್ಳಲು ಭಾರತಪ್ರಭುತ್ವದವರು ಕೃತಸಂಕಲ್ಪರಾಗಿದ್ದಾರೆಂಬುದು ಸಿದ್ಧವಾಗುತ್ತದೆ. ಹೀಗೆ ಮಾಡುವುದರಿಂದ ಈಗಲೇ ಎಷ್ಟೋ ನಿರಂಕುಶವಾಗಿ ರಾಜ್ಯಪರಿಪಾಲನೆ ಮಾಡುತ್ತಿರುವ ಕೆಲ ಸಂಸ್ಥಾನಪತಿಗಳಿಗೆ ಈ ಶಾಸನದ ಮೂಲಕ ಮತ್ತಷ್ಟು ನಿರ್ಭಯ ನಿರಂಕುಶತ್ವವು ವೃದ್ಧಿಯಾಗುವುದೆಂತಲೂ, ಅದನ್ನು ಇತರರಾರೂ ಪತ್ರಿಕೆಗಳ ಮೂಲಕ ಹೊರಹಾಕಿ ಅಣಗಿಸುವುದಕ್ಕೆ ಅವಕಾಶ ತಪ್ಪಿಹೋಗುವುದೆಂತಲೂ ಯೋಚಿಸಿ, ಸಾಮ್ರಾಜ್ಯಶಾಸನಸಭಾ ಸಭಿಕರಲ್ಲಿ ಅನೇಕರು ಇದನ್ನು ಶಾಸನ ಮಾಡಗೊಡಲು ಅನುಮತಿ ಕೊಡದೆಹೋದರು. ಆದರ ಮೇಲೆ ಇದು ಬಿದ್ದುಹೋಯಿತು. ಹೀಗೆ ನೀವು ಮಾಡಿದುದು ಸರಿಯಲ್ಲ; ಪುನರಾಲೋಚನೆಗೆ ಇದನ್ನು ನೀವುಗಳು ತಂದುಕೊಳ್ಳಲು ಅನುಮತಿಸುವುದಾದರೆ ನಾನು ವೈಸ್ರಾಯರಿಗೆ ಹೇಳಿಕೊಂಡು ಅದಕ್ಕೆ ಅನುಮತಿ ಕೊಡಿಸುತ್ತೇನೆಂದು ಸರ್ ವಿನ್ಸೆಂಟ್‌ರವರು ಸಭಿಕರಿಗೆ ಹೇಳಿಕೊಂಡರು. ಅದಕ್ಕೆ ಅವರಲ್ಲಿ ಕೆಲವರು ಒಪ್ಪಿದರು. ಆದರೆ ಅಷ್ಟರಲ್ಲಿ ವೈಸ್ರಾಯರು ನೂತನ ಸಂಸ್ಕರಣ ಶಾಸನದ ೬೭ನೆ ಸೆಕ್ಷನ್ ಪ್ರಕಾರ ತಮಗಿರುವ ಸರ್ಟಿಫಿಕೇಟ್ ಅಧಿಕಾರವನ್ನು ಉಪಯೋಗಿಸಿಕೊಂಡು ಸ್ಟೇಟ್ ಕೌನ್ಸಿಲ್ ಸಭೆಯ ಮುಂದೆ ಈ ಬಿಲ್ಲನ್ನಿಟ್ಟು ಶಾಸನಗೊಳಿಸುವುದಕ್ಕೆ ಅಪ್ಪಣೆಮಾಡಿದರು. "ಸರ್ಕಾರದವರು ಸಂಕಲ್ಪಿಸಿದ ಯಾವುದಾದರೂ ಬಿಲ್ಲನ್ನು ಶಾಸನಸಭೆಯಲ್ಲಿ ಪ್ರವೇಶಗೊಳಿಸಲು ಸಭಿಕರು ನಿರಾಕರಿಸಿದರೇ ಆಗಲೀ, ಸರ್ಕಾರದವರು ಉದ್ದೇಶಪಟ್ಟಿದ್ದ ರೀತಿಯಲ್ಲಿ ಅದನ್ನು ಅಂಗೀಕರಿಸದೆ ಹೋದರೇ ಆಗಲೀ ಗೌರ್ನರ್ ಜನರಲ್‌ರವರು ತಮ್ಮ ಸರ್ಟಿಫಿಕೇಟ್ ಅಧಿಕಾರವನ್ನು ಉಪಯೋಗಿಸಿ ಆ ಬಿಲ್ಲನ್ನು ಮತ್ತೆ ಉದ್ಧರಿಸಲಿಕ್ಕಾಗಿ ಸ್ಟೇಟ್ ಕೌನ್ಸಿಲ್ಲಿಗೆ ಕಳುಹಿಸಬಹುದು. ಅವರು ಒಪ್ಪಿದರೆ ವೈಸ್ರಾಯರ ರುಜುವಿನಿಂದ ಬಿಲ್ಲು ಶಾಸನವಾಗುವುದು. ಒಂದು ವೇಳೆ ಸ್ಟೇಟ್ ಕೌನ್ಸಿಲಿನವರೂ ಒಪ್ಪದೆಹೋದರೂ ಗೌರ್ನರ್ ಜನರಲ್‌ರವರು ಒಪ್ಪಿ ಹಸ್ತಾಕ್ಷರವನ್ನು ಹಾಕಿ ಶಾಸನವನ್ನಾಗಿ ಏರ್ಪಡಿಸಿ, ಅದನ್ನು ಬೇಗನೆ ಪಾರ್ಲಿಮೆಂಟಿಗೆ ಕಳುಹಿಸಿ, ಸಾರ್ವಭೌಮರ ಅನುಮತಿಯನ್ನು ಪಡೆಯಬೇಕಾಗುವುದು." ಹೀಗೆ ಕಾರ್ಯಕ್ರಮವು ಆ ಸೆಕ್ಷನ್ನಿನಲ್ಲಿ ಸೂಚಿಸಲ್ಪಟ್ಟಿರುವುದು. ನೂತನ ಸಂಸ್ಕರಣಗಳು ಏರ್ಪಟ್ಟಾಗಿನಿಂದಲೂ ಈ ಸೆಕ್ಷನ್ನಿನ ಉಪಯೋಗವು ಆಗಿರಲಿಲ್ಲ. ಈಗತಾನೇ ಅದನ್ನು ಮೊದಲಸಲ ವೈಸ್ರಾಯರು ಉಪಯೋಗಿಸಿಕೊಂಡಂತಾಯಿತು. ಆದರೆ ಸರ್ಟಿಫಿಕೇಟ್ ಅಧಿಕಾರವನ್ನು ವಿನಿಯೋಗಿಸಲು ವೈಸ್ರಾಯರು ನಿರ್ಧರಿಸಿದರೆಂಬ ಸಂಗತಿಯು ಶಾಸನ ಸಭಿಕರಿಗೆ ಗೊತ್ತಾದಕೂಡಲೇ ತಾವು ಅಸಮ್ಮತಿ ಕೊಟ್ಟುದು ಸರಿಯಾಗಲಿಲ್ಲವೆಂದು ತಿಳಿದೋ ವಿನ್ಸೆಂಟರ ಹಿತವಾದಕ್ಕೆ ವಶರಾಗಿಯೋ ಏನೋ ಮರಳಿ ತಮ್ಮ ಸಭೆಯ ಚರ್ಚೆಗೆ ಬಿಲ್ಲನ್ನು ತರಲು ಒಪ್ಪಿಗೆಕೊಟ್ಟರು. ಆದರೇನು ? ಈ ವಿಷಯವಾಗಿ ವಿನ್ಸೆಂಟರು ವೈಸ್ರಾಯರ ಬಳಿಗೆ ಹೋಗಿ ಹೇಳಬೇಕಾದುದನ್ನು ಹೇಳಿ ಮಧ್ಯಸ್ತಿಗೆ ಮಾಡಿದರೂ ಅದಕ್ಕೆ ವೈಸ್ರಾಯರು ಒಪ್ಪಲಿಲ್ಲವಂತೆ. ತಮ್ಮ ಸರ್ಟಿಫಿಕೇಟ್ ಅಧಿಕಾರ ವಿನಿಯೋಗಕ್ಕೆ ಮಾಡಿದ್ದ ನಿಶ್ಚಯವನ್ನು ಅವರು ಬದಲಾಯಿಸಲಿಲ್ಲವಂತೆ. ಅದರ ಮೇಲೆ ಶಾಸನ ಸಭಾ ಸಭಿಕರು ಆಶಾಭಂಗಗೊಂಡು ತೆಪ್ಪಗಾದರು. ತಾ|| 24ರಲ್ಲಿ ಕೂಡಿದ್ದ ಸ್ಟೇಟ್ ಕೌನ್ಸಿಲ್ಲಿಗೆ ಈ ಬಿಲ್ಲು ಪ್ರವೇಶಗೊಳಿಸಲ್ಪಟ್ಟಿತು. ಕೆಲ ಸಭಿಕರು ಅಲ್ಲೂ ವಿರೋಧಿಸಿ ಭಾಷಣಮಾಡಿದರು. ಸಭಾಧ್ಯಕ್ಷರು ಶಾಸನದ ಅವಶ್ಯಕತೆಯನ್ನೂ, ಒಂದುವೇಳೆ ಸ್ಟೇಟ್‌ಕೌನ್ಸಿಲ್ಲು ಅನುಮೋದಿಸದೆ ಹೋದರೂ ಬಿಲ್ಲು ವೈಸ್ರಾಯರ ಒಪ್ಪಿಗೆ ಮೇರೆಗೆ ಶಾಸನವಾಗಿಯೇ ತೀರುವ ಪರಿಸ್ಥಿತಿಯನ್ನೂ ಕುರಿತು ಭಾಷಣಮಾಡಿದ ಬಳಿಕ ಬಿಲ್ಲಿನ ನಿಬಂಧನೆಗಳ ವಿಷಯವಾಗಿ ಕೆಲ ಸವರಣೆಗಳು ಆಗಬೇಕೆಂದು ಸೂಚಿಸಲ್ಪಟ್ಟಿತು. ಸರ್ಟಿಫಿಕೇಟ್ ಅಧಿಕಾರದ ಮೇಲೆ ಸ್ಟೇಟ್ ಕೌನ್ಸಿಲ್ಲಿಗೆ ಬಂದ ಬಿಲ್ಲಿನ ಮೇಲೆ ಸವರಣೆ ಮಾಡಲು ವಿಧಿಯಲ್ಲಿ ಅವಕಾಶವಿಲ್ಲವೆಂದು ಸಭಾಧ್ಯಕ್ಷರು ಹೇಳಿ ನಿರೋಧಿಸಿಬಿಟ್ಟರು. ಬಳಿಕ ರಂಗಸ್ವಾಮಯ್ಯಂಗಾರರ ಹೊರತು ಉಳಿದ ಸಭಿಕರೆಲ್ಲಾ ಶಾಸನವಾಗುವುದಕ್ಕೆ ಅನುಮತಿಕೊಟ್ಟರು. ಹೀಗೆ ಈ ಶಾಸನದ ಜನ್ಮ ಜಾತ್ರೆಯು ಮುಗಿದಿತು.

ಈ ಶಾಸನವು ವ್ಯವಹಾರಕ್ಕೆ ಬಂದರೂ ದೇಶೀಯ ಸಂಸ್ಥಾನಿಕರ ಲೋಪಾಲೋಪಗಳು ನಿಷ್ಪಕ್ಷಪಾತ ಬುದ್ಧಿಯಿಂದಲೂ ಪ್ರಾಮಾಣಿಕವಾಗಿಯೂ ವಿಮರ್ಶಿಸುವಲ್ಲಿ ಪತ್ರಿಕಾಕರ್ತರ ಸ್ವಾತಂತ್ರ್ಯಕ್ಕೆ ಈ ವಿಧಿಯಿಂದ ಯಾವ ಆತಂಕವೂ ಉಂಟಾಗುವ ಹಾಗಿಲ್ಲ. ದುರುದ್ದೇಶ ದುಷ್ಪ್ರೇರಣೆಗಳಿಂದ ಬರೆಯಲ್ಪಡುವ ದುರ್ಮಾರ್ಗಿಯ ಲೇಖನಗಳಿಗೆ ಮಾತ್ರ ಇದರಿಂದ ಪ್ರತಿಬಂಧಕವುಂಟಾಗುವುದು ನಿಜ. ಹಾಗೆ ಆಗುವುದನ್ನು ಅನ್ಯಾಯವೆಂದು ಯಾರೂ ಹೇಳಲಾರರು. ಆದುಕಾರಣ ಸತ್ಯವಾದ ವಾರ್ತೆಗಳನ್ನು ಪ್ರಕಟಿಸಿ, ಅವುಗಳ ಮೇಲೆ ನ್ಯಾಯವಾದ ವಿಮರ್ಶೆಮಾಡುವ ವೃತ್ತಪತ್ರಿಕಾ ಕರ್ತರುಗಳಿಗೆ ಈ ಶಾಸನದಿಂದ ಯಾವ ಉಪಹತಿಯೂ ಉಂಟಾಗುವ ಹಾಗಿಲ್ಲ. ಶಾಸನಕ್ಕೆ ವಿರುದ್ಧವಾಗಿ ಪ್ರವರ್ತಿಸಿದ ಪತ್ರಿಕಾ ಕರ್ತರ ಸಂಪಾದಕರ ಮುದ್ರಾಪಕರ ಮೇಲಣ ವ್ಯಾಜ್ಯವು ವೈಸ್ರಾಯರ ಅನುಮತಿ ಪಡೆದು ಹೈ ಕೋರ್ಟುಗಳಲ್ಲಿ ವಿಚಾರಣೆಮಾಡಲ್ಪಡುವುದು. ಹೀಗಿರುವುದರಿಂದ ಅನ್ಯಾಯವಾದ ಶಿಕ್ಷೆಗೆ ಪತ್ರಕರ್ತರು ಗುರಿಯಾಗ ಬೇಕಾಗುವುದೆಂಬ ಭಯಕ್ಕೇನೂ ಕಾರಣವಿರುವುದಿಲ್ಲ. ನಮ್ಮ ಮೈಸೂರಿನ ಮುದ್ರಣ ಶಾಸನವು ಏನಾಗುವುದೆಂಬ ಸಂಗತಿಯು ನಾಳೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಗೊತ್ತಾಗುತ್ತದೆ. ಅದರ ವಿಚಾರವನ್ನು ಸಭೆಯಲ್ಲಿ ತಿಳಿಸುವುದಾಗಿ ದಿವಾನರು ಈ ಹಿಂದೆಯೇ ಅಪ್ಪಣೆ ಕೊಟ್ಟಿದ್ದಾರೆ. ಸಂಪೂರ್ಣವಾಗಿ ತೆಗೆದು ಹಾಕಲ್ಪಡುವ ಅಥವಾ ಈಗಣ ನೂತನ ಶಾಸನದ ಪ್ರಕಾರ ಸುಧಾರಿತವಾದ ಮತ್ತೊಂದು ಶಾಸನವನ್ನು ಏರ್ಪಡಿಸುವ ಸಂಭವವೇನೆಂಬುದು ಆಗ ಗೊತ್ತಾಗುವುದು.

ನವರಾತ್ರಿ ಮಹೋತ್ಸವ.

ರಾಜಧಾನಿಯಲ್ಲಿ ರೋಗಾದ್ಯುಪದ್ರವಭೀತಿಯೇನೂ ಇಲ್ಲದುದರಿಂದ ಪ್ರೇಕ್ಷಕ ಜನಸ್ತೋಮವು ವಿಶೇಷವಾಗಿಯೇ ನೆರೆದ್ದಿತು. ಪ್ರತಿನಿತ್ಯವೂ ಸ್ಪೆಷಲ್ ಟ್ರೇನುಗಳು ಬಿಡಲ್ಪಟ್ಟುದರಿಂದ ಬರತಕ್ಕವರಿಗೆ ಎಷ್ಟೋ ಅನುಕೂಲವಾಯಿತು. ಆದರೂ ಎಲ್ಲ ನಿಲ್ದಾಣಗಳಲ್ಲೂ ಜನರ ತಿಕ್ಕಾಟ ನುಗ್ಗಾಟಗಳು ವಿಶೇಷವಾಗಿಯೇ ಇದ್ದುವೆಂದು ತಿಳಿಯಬಂದಿದೆ. ನೋಟದ ಜನರಿಗೆ ಅರಮನೆಯ ಮುಂದೆ ಪೋಲೀಸರಿಂದ ಯಾವ ತೊಂದರೆಯೂ ಹಿಂಸೆಯೂ ಆಗದಂತೆ ಏರ್ಪಡಿಸಲ್ಪಟ್ಟಿದ್ದಿತು. ಕೋಟೆಯ ಒಳಭಾಗವೂ ಮುಖ್ಯ ರಾಜವೀಧಿಯೂ ಗುಡಿತೋರಣ ಮೊದಲಾದುವುಗಳಿಂದ ಶೃಂಗರಿಸಲ್ಪಟ್ಟು, ರಾತ್ರಿಯಹೊತ್ತು ಅರಮನೆ ಕೋಟೆಬಾಗಿಲು ಕ್ಲಾಕ್‌ಟವರು ಟರ್ವಪಾಲು ಇತ್ಯಾದಿ ಭಾಗಗಳೆಲ್ಲಾ ವಿದ್ಯುದ್ದೀಪರಾಜಿಯಿಂದ ಪ್ರಕಾಶಿಸುತ್ತಿರುವ ನೋಟವೂ, ದೇದೀಪ್ಯಮಾನವಾಗಿರುವ ಸಿಂಹಾಸನದ ಮೇಲೆ ಶ್ರೀಮನ್ಮಹಾರಾಜರು ಥಳಥಳಿಸುವ ರತ್ನಾಭರಣವಸ್ತ್ರಾದಿಗಳಿಂದ ವಿಭೂಷಿತರಾಗಿ ಮಂಡಿಸಿ ದರ್ಶನಕೊಡುತ್ತಿರುವುದೂ ಪ್ರೇಕ್ಷಕರಿಗೆ ಆತ್ಯಾನಂದವನ್ನುಂಟುಮಾಡಿದುವು. ರಾತ್ರಿಯ ವೇಳೆಯಲ್ಲಿ 3-4 ಕಡೆ ನಡೆಯುತ್ತಿರುವ ನಾಟಕಗಳೂ ಸಿನಿಮಾ ಪ್ರದರ್ಶನಗಳೂ ಸಹ ಯಾತ್ರಿಕರನ್ನು ಆನಂದಪಡಿಸುತ್ತಿರುವುವು. ಜಂಬೂಸವಾರಿಯ ಹಗಲು ರಾತ್ರಿಯ ಉತ್ಸವಗಳೆರಡೂ ಪ್ರಜೆಗಳ ಕಣ್ಮನಗಳನ್ನು ಆಕರ್ಷಿಸಿ ಬಹು ಶೋಭಾಯಮಾನವಾಗಿದ್ದುವು. ಯೂರೋಪ್ಯಾತಿಥಿಗಳ ದರಬಾರು ಶುಕ್ರವಾರ ಸಾಯಂಕಾಲ ಜರುಗಿತು. ಹೊರಗಣ ಉತ್ಸವಗಳೂ ಸಜ್ಜೆಯ ದರಬಾರುಗಳೂ ನಿನ್ನೆಗೆ ಮುಗಿದುವು. ನಿನ್ನೆ ರಾತ್ರಿಯೂ ಈ ದಿನ ರಾತ್ರಿಯೂ ನಾಳೆದಿನದ ರಾತ್ರಿಯೂ ಅಂಬಾವಿಲಾಸದಲ್ಲಿ ದರಬಾರುಗಳೂ ನಜರು ಮುಜರೆಗಳೂ ಜರುಗುವುವು. ಪ್ರಜಾಪ್ರತಿನಿಧಿ ಸಭಾಸಭಿಕರು ಹೆಚ್ಚಾಗಿಯೇ ಬಂದಿರುವಂತೆ ತೋರುತ್ತದೆ. ನಾಳೆಯಿಂದ ಆ ಸಭಾಕಾರ್ಯಗಳು ಆರಂಭಗೊಳ್ಳುವುವು. ಸಭೆಗೆ ಹೆಚ್ಚಿನ ರಾಜಕೀಯಾಧಿಕಾರವು ಶ್ರೀಮನ್ಮಹಾರಾಜರಿಂದ ಯಾವ ರೀತಿಯಲ್ಲಿ ಅನುಗ್ರಹಿಸಲ್ಪಡುವುದೆಂಬುದು ದಿವಾನರ ಭಾಷಣದಲ್ಲಿ ಹೊರಬೀಳಲಿಕ್ಕಿರುವುದು. ಉತ್ಸವ ಕಾರ್ಯಗಳೆಲ್ಲವೂ ವಿಜೃಂಭಣೆಯಿಂದಲೂ ಸಲಕ್ಷಣವಾಗಿಯೂ ಮುಕ್ತಾಯವಾಗುತ್ತ ಬಂದುವು. ಪ್ರಭುಗಳ ಪ್ರಜಾರಂಜಕತೆಯೂ, ಪ್ರಭುಗಳ ವಿಷಯದಲ್ಲಿ ಪ್ರಜೆಗಳ ಭಕ್ತಿ ವಿಶ್ವಾಸಗಳೂ ಎಷ್ಟು ದೃಢತಮವಾಗಿರುವುವೆಂಬುದನ್ನು ಈ ಮಹೋತ್ಸವ ದಿನಗಳಲ್ಲಿ ರಾಜಧಾನಿಯೊಳಗಿರುವ ಪರಿಸ್ಥಿತಿಯನ್ನು ಕಣ್ಣಾರೆ ನೋಡಿದವರು ಸ್ಪಷ್ಟವಾಗಿ ತಿಳಿದುಕೊಳ್ಳದೆ ಇರಲಾರರು. ನಿವಾರಣೀಯವಾದ ಭೌತಿಕ ಬಾಧೆಗಳೊಂದಕ್ಕೂ ಈಡಾಗದೆ ಸುಖಿಸುವ ಪ್ರಜೆಗಳನ್ನು ನೋಡಿ ಆನಂದಿಸಬೇಕೆಂದು ಅಹರ್ನಿಶಿಯೂ ಹಾರೈಸುತ್ತಿರುವ ಶ್ರೀಮನ್ಮಹಾರಾಜರ ಕೋರಿಕೆಯನ್ನು ಜಗದಂಬೆಯು ಸಾರ್ಥಕಪಡಿಸಲೆಂದೂ, ಇಂಥ ಉತ್ಸವಗಳನ್ನು ನಮ್ಮ ಪ್ರಭುಗಳು ಸಹೋದರರೊಡನೆ ಚಿರಕಾಲ ಅನುಭವಿಸುತ್ತಿರಲೆಂದೂ ಸಕಲ ಪ್ರಜೆಗಳೊಡನೆ ನಾವು ಕೋರುತ್ತೇವೆ. ಮತ್ತು

ಚಿರಕಾಲಮಿರ್ಕೆ ನಿಮ್ಮಯ |
ದೊರೆತನ ಮಿಳೆ ನಲಿಯುತಿರ್ಕೆ ಮಳೆಬೆಳೆಯಿಂದಂ ||
ವರಧರ್ಮನಿಷ್ಠೆ ನಿಮ್ಮೊಳ್ |
ಪರಿವರ್ಧಿಸುತಿರ್ಕೆ ಸುಮತಿ ಕೃಷ್ಣಕ್ಷಿತಿಪಾ ||

ಎಂದು ಮಂಗಳಾಶಾಸನವನ್ನು ಮಾಡುವೆವು.

ಅಥಣಿಯಲ್ಲಿ ಸೌಹಾರ್ದ.

ನಂದಿಧ್ವಜದಲ್ಲಿ ವೀರಶೈವರು ವ್ಯಾಸಭುಜವನ್ನು ಕಟ್ಟಿ ಮೆರೆಯಿಸುವ ಸಂಬಂಧದಿಂದ ಅಥಣಿಯಲ್ಲಿ ಪರಸ್ಪರ ಬಡಿದಾಟಗಳಾಗಿ ಕೋರ್ಟು ಕಚೇರಿಗಳ ವ್ಯಾಜ್ಯಗಳು ಕೆಲವು ವರ್ಷಗಳಿಂದ ಅಲ್ಲಿಯ ವೀರಶೈವರಿಗೂ ಇತರ ಬ್ರಾಹ್ಮಣರಿಗೂ ನಡೆಯುತ್ತಿದ್ದುವು. ಮನಃಕಲಹವು ಬೆಳೆಯುತ್ತಲೇ ಇದ್ದಿತು. ಇದು ಎರಡು ಪಕ್ಷಕ್ಕೂ ಅನರ್ಥಕಾರಿಯಲ್ಲದೆ ಸಾರ್ವಜನಿಕ ಕಾರ್ಯಗಳಿಗೆ ಎಷ್ಟೋ ವಿಘ್ನವನ್ನುಂಟುಮಾಡುತ್ತಿದ್ದಿತು. ಎರಡು ಕಡೆಯವರೂ ಬೇಸರುಪಟ್ಟಿದ್ದರು. ಪಂಚಾಯತರ ಮುಖೇನ ತಮ್ಮ ವಿವಾದವನ್ನು ಬಗೆಹರಿಸಿಕೊಳ್ಳಲಿಕ್ಕೆ ಇಬ್ಬರೂ ಒಪ್ಪಿಗೆ ಕೊಟ್ಟರು. ಆದರಮೇಲೆ ಉಭಯಪಕ್ಷದ ಕೆಲವು ಮುಂದಾಳುಗಳ ಇಷ್ಟದಂತೆ ಕೆಲ ಪಂಚಾಯಿತರು ಸೇರಿ ರಾಜಿಯನ್ನು ಮಾಡಿದರೆಂದು ಧಾರ್ವಾಡದ ವಿಜಯಪತ್ರದಿಂದ ತಿಳಿದು ಸಂತೋಷಿಸುತ್ತೇವೆ. ಉಭಯಪಕ್ಷದ ಸಮ್ಮತಿಯಿಂದ ಮ|| ಗಳಾದ ಶ್ರೀನಿವಾಸರಾವ್ ಕೌಜಲಗಿ, ಗಂಗಾಧರ ಬಾಳಕೃಷ್ಣ ದೇಶಪಾಂಡೆ, ನೀಲಕಂಠಪ್ಪ ರಂಗಪ್ಪ ಸುಗಂಧಿ, ಚೆನ್ನಬಸಪ್ಪ ಸಿದ್ಧರಾಮಪ್ಪ ಕುರಲಿ—ಈ ನಾಲ್ಕು ಮಂದಿಗಳು ಪಂಚಾಯತರಾಗಿ ನಿಯಮಿಸಲ್ಪಟ್ಟು, ಇವರು ಹೇಳಿದ ತೀರ್ಮಾನದಂತೆ ಉಭಯಪಕ್ಷದವರೂ ನಡೆದುಕೊಳ್ಳಲು ಒಪ್ಪುಗೆ ಕೊಟ್ಟರಂತೆ. ಆದರಮೇಲೆ ಎರಡುಪಕ್ಷದವರ ಹೇಳಿಕೆಗಳನ್ನೂ ಪಂಚಾಯತರು ಕೇಳಿಕೊಂಡು ತಂತಮ್ಮಲ್ಲಿ ಆಲೋಚಿಸಿ ಮಾಡಿದ ನಿರ್ಧಾರವನ್ನು ನೆರೆದಿದ್ದ ಮಹಾಸಭೆಯಲ್ಲಿ ಓದಿ ಹೇಳಿದರು. ಅದಕ್ಕೆ ಸರ್ವರೂ ಒಪ್ಪಿ ಕರತಾಡನ ಮಾಡಿದರು. ಹಾಗೆ ನಡೆದುಕೊಳ್ಳುತ್ತೇವೆಂದು ಉಭಯಪಕ್ಷದ ಪ್ರಮುಖರೂ ಸ್ವಾಮಿಗಳ ಗದ್ದುಗೆಯ ಮುಂದೆ ನಿಂತು ಪ್ರಮಾಣಮಾಡಿದರು. ತೀರ್ಮಾನದ ಮುಖ್ಯಾಂಶವೇನೆಂದರೆ-ನಂದಿಧ್ವಜದಲ್ಲಿ ವ್ಯಾಸನ ತೋಳನ್ನು ಅವರ ಅವಮಾನ ಮಾಡುವ ಉದ್ದೇಶದಿಂದ ಕಟ್ಟದೆ, ವ್ಯಾಸರು ಯಾವ ಕೈಯಿಂದ ಶೈವಪುರಾಣವನ್ನು ಬರೆದರೋ ಅಂಥ ಹಸ್ತವನ್ನು ಮರ್ಯಾದಿಸುವುದಕ್ಕಾಗಿಯೇ ನಾವು ವ್ಯಾಸನತೋಳನ್ನು ಮೆರೆಯಿಸುತ್ತೇವೆಂಬರ್ಥದ ಪ್ರಕಟಿನೆಯನ್ನು ವೀರಶೈವರು ಆಶ್ವಯುಜ ಶುದ್ಧ ಹುಣ್ಣಿಮೆಯೊಳಗೆ ಪ್ರಕಟಿಸಬೇಕು. ವೀರಶೈವರ ಉದ್ದೇಶಕ್ಕೆ ಗಮನಕೊಟ್ಟು ಬ್ರಾಹ್ಮಣರು ಇದುವರೆಗೆ ತಿಳಿದಿದ್ದ ತಪ್ಪು ತಿಳಿವಿಕೆಯನ್ನು ತ್ಯಜಿಸಿ, ವೀರಶೈವರ ಮೆರೆವಣಿಗೆಗೆ ಇನ್ನು ಮುಂದೆ ವಿರೋಧಿಸಬಾರದು. ವ್ಯಾಸನ ತೋಳನ್ನು ಕಟ್ಟಿದ ನಂದಿಧ್ವಜದ ಮೆರೆವಣಿಗೆಯನ್ನು ವರ್ಷಕ್ಕೆ ಎರಡುಸಲ ಎಂದರೆ 1. ಶಿವರಾತ್ರಿಯ ದಿವಸ, 2. ಚೈತ್ರಶುದ್ಧ ಪ್ರತಿಪತ್ತಿನದಿನ ನಡೆಯುವ ಶ್ರೀ ಶಿವಯೋಗಿ ಮುರಘೇಂದ್ರಸ್ವಾಮಿಗಳ ಮೆರೆವಣಿಗೆ ದಿವಸ. ಮತ್ತು ಚಿತ್ರದುರ್ಗದ ಜಗದ್ಗುರು ಶ್ರೀ ಮುರುಘರಾಜೇಂದ್ರಮಹಾಸ್ವಾಮಿಗಳವರು ಅಥಣಿಗೆ ದಯಮಾಡಿಸಿದ ಕಾಲದಲ್ಲಿ ಜರಗುವ ಉತ್ಸವದ ದಿವಸ. ಹೀಗಲ್ಲದೆ ಇನ್ನಾವ ಕಾಲದಲ್ಲೂ ಮೆರೆಯಿಸಕೂಡದು. ಮತ್ತು ವೀರಶೈವರು ತಮ್ಮ ಅಂಗಡಿ ಮನೆ ಮುಂಗಟ್ಟುಗಳ ಮುಂದೆ ವ್ಯಾಸನ ತೋಳನ್ನು ಕಟ್ಟಬಾರದು. ಇದೇ ತೀರ್ಮಾನದ ಮುಖ್ಯಾಶಯವು. ಅಂತು ವೀರಶೈವರ ವ್ಯಾಸಭುಜದ ಮೆರೆವಣಿಗೆಯ ಸದುದ್ದೇಶವು ಈಗಲಾದರೂ ಪ್ರತಿಪಕ್ಷದವರಿಗೆ ಒಪ್ಪಿಗೆಯಾಗಿ, ತಪ್ಪು ತಿಳಿವಳಿಕೆಯಿಂದ ಅವರುಗಳು ನಡೆಯಿಸುತ್ತಿದ್ದ ಪ್ರತಿಸ್ತಂಭನವು ಇಲ್ಲಿಗೆ ಕೊನೆಮುಟ್ಟಿದುದಕ್ಕಾಗಿ ನಾವು ಸಂತೋಷಿಸುತ್ತೇವೆ. ಇನ್ನೂ ಅನೇಕ ಸ್ಥಲಗಳಲ್ಲಿ ಇದೇ ತೆರದ ತಪ್ಪು ತಿಳಿವಳಿಕೆಯುಳ್ಳ ಬ್ರಾಹ್ಮಣ ಬಂಧುಗಳು ಅನೇಕರಿರುತ್ತಾರೆ. ಅವರೆಲ್ಲಾ ಅಥಣಿಯ ಸ್ವಜಾತಿ ಜನರು ಹಾಕಿಕೊಟ್ಟ ಮೇಲುಪಂಕ್ತಿಯನ್ನು ಅನುಸರಿಸುವರಾದರೆ ಎಷ್ಟೋ ಕ್ಷೇಮವಾಗುವುದು.

NEGLECT.

The results of neglect have reached the climax in respect of public rights and privileges which belong to the people of all classes in Mysore. One single class of people has got all the benefits of education as a result of assumed religious and social superiority. If we go back to the most ancient period of Indian Politics, it will be seen that the most predominent class in power to-day occupied a position which had least to do with politics. The study of religious books and the worship of the village diety were the allotted occupations of those people who have to-day misinterpreted that division of occupation. Changes came in and disturbed that division. The student of the Vedas took the other occupations such as trade and agriculture. He began to invade other territories of occupation and the result to-day is that the pride and power of that one class have assumed such huge proportions as to endanger the economic condition of the people as a whole.

There are about 400,000 Kurubars in the Province and about 160,000 Gollars. Between these two classes there prospered in Mysore a big industry of wool growing and the manufacture of of articles made of wool. About 100,000 people, Devangas and Neygis represent the weaving industry in Mysore. Besides 1,300,000 Vokkaligars half as many from other classes such as Holeyars, Madigars etc., represent the agricultural interests. Out of a population of 9,10,000 of Banagigars, Komatis, Lingayets, Nagartars and Vaisyas, half of it may be said to represent interests connected with trade. In this way there are so many interests which according to the old allotment were very important occupatians in determining the economic prosperity of the country. When the old customs and privileges existed, they were not negligible. But when new order of things came to prevail, the man to whom the innocent study of the Vedas and the worship of the village diety had been allotted, began to invade every other occupation of importance and to sow the seeds of disunion and factions and strangle all efforts towards enlightenment of other ignorant classes. He has not only appropriated other occupations but has denied the study of the Vedas to others and preserves it as his birthright.

When a democratic institution like the Representative Assembly was instituted, it was for the benefit of the agriculturist, the tradesman, the manufacturer. But what has it been? It became the talking stage of one class of people. Their number is only 200,000 or about 3·4 per cent of the entire population. And what are their specific interests according to *Varnashramadharma* which they uphold as the most sacred and unchangeable order of things? It is the study of the Vedas. Does this interest require 50% of the total number of members of the Dasara Representative Assembly? Here is the result of neglect on the part of the people of Mysore.

Will the large peoples who represent the grave interests in the country still neglect to care for their interests and still be without proper representation in the Representative Assembly and Legislative Council? Do they not see that their rightful places have been usurped by a small minority whose profession is to swallow all the good things of the State themselves and oppose every progressive measure in the interest of the masses? The time has come for them to be up and doing. Let them "Arise, awake and stop not till the goal is reached."

ELECTION CONTEST.

The one conspiciuos matter of interest in the Capital during the Dasara week is the election of four members from the Representative Assembly to the Legislative Council which comes off shortly, and the campaign from various quarters is faring on briskly. Competition seems to be much keener than last time. A number of candidates have stood for election. During the last election—thanks to the splendid work of late Mr. M. Basaviah and the *Mysore Praja Mitra Mandali*—the forces which used to be always disunited were brought together and all the four seats were carried away by the *Mandali* representatives. That was the first fruit of the Mandali's efforts. The death of so stalwart and so unselfish a patriot as Mr. M. Basaviah just when the movement had begun to grow and he was needed most, was no doubt a serious loss. But to the good fortune of the people there are persons who stand by the banner that he hoisted and are striving cheerfully for the causes so dear to his heart.

It will be no easy task for the *Mandali* to achieve a similar victory this time. The tactics of their opponents have considerably changed. The old browbeating and decoying methods are given up, as no longer useful. New arms of sophistry such as misrepresentations and misinterpretations of the intentions of the people and the Government are being forged, a notorious instance of which is the letter by Mr. Gopalaswamier in the issue of the *Daily Post* of the 16th instant. "Divide and rule" is another old trick. It is to their interest to create differences amongst our ranks and it is our duty—and it is a sacred duty of the members of the Representative Assembly–to be united, sinking any small differences that may be for the sake of the righteous cause at stake. They would talk of compromise in words of "sweet reasonableness" or set up other candidates of the backward classes promising them every help. These are dangerous methods and are to be guarded against. Further, the campaign of the *Mandali* to back up their candidates will be misrepresented as hatred of Brahmins, and they would thus play on the sentiments of the members. There is no hatred in the movement itself and much less in its contest for seats. It is an honourable fight. There is no civilised country with a democratic constitution, where election fights are not based on party principles. In England or in India, in America or in Germany it is the same. The *Mysore Praja Mitra Mandali* stands for certain broad liberal principles such as adequate representation of ali communities in Public Service and in Public Councils, and equal opportunities to all, and in particular to the effective working of the orders on the Miller Committee Report, the Educational Memorandum, the admission of Panchamas into all Government and Aided educational institutions, and to the free admission of non-Brahmins into Sanskrit Colleges. There shall be no compromise on these questions. The *Mandali* must strengthen itself–and it should spare no efforts to capture as many seats as possible. The trust of the many in the few has been tried and it has been found to have been placed in wrong hands. It has worked their ruin and time has come when they should now trust themselves. We hope the Representatives will remember the days of last election, how unity brought success, and how very beneficial that success has proved to them. We hope they will bring all the virtues of loyalty to the cause of the party, of united effort, of patience, of integrity, of unselfishness and above all charity which are so essential to sound political working to play on this critical occasion. If what has been achieved last time is not retained this time not only what has been gained in the past after hard struggles will be lost but the future that was just beginning to grow bright will be jeopardised altogether. We hope that bearing these facts in mind, the Representatives will give a united fight, and regain the inalienable rights which have been snatched away from us surreptitiously.

ಸ್ವದೇಶದ ವೃತ್ತಾಂತಗಳು.

ಡಾಕ್ಟರ್ ಸರ್ ಕವೀಂದ್ರ ರವೀಂದ್ರನಾಥ ಠಾಕೂರ್‌ರವರು ಶ್ರೀಮನ್ಮಹಾರಾಜರ ಅತಿಥಿಗಳಾಗಿ ರಾಜಧಾನಿಗೆ ದಯಮಾಡಿಸಿದ್ದರು.

ಪ್ರಜಾಪ್ರತಿನಿಧಿ ಸಭೆಯು ನಾಳೆ ಮಧ್ಯಾಹ್ನ 12 ಗಂಟೆಗೆ ದಿವಾನ್ ಮಿ|| ಎ. ಆರ್. ಬಾನರ್ಜಿಯವರ ಅಧ್ಯಕ್ಷತೆಯಿಂದ ಆರಂಭಗೊಳ್ಳುವುದು.

ನಾಳೆದಿನದಿಂದ ಚೆಟ್ಟದಕಿಬ್ಬಿಯ ಬೊಖೆನ ಬಯಲಿನಲ್ಲಿ ಕುದುರೆಗಳ ಬೂಜೂ ಪೋಲೋ ಪಂದ್ಯವೂ ಇತರ ವಿನೋದಗಳೂ ನಡೆಯಲು ಏರ್ಪಾಟಾಗಿದೆ.

ನಮ್ಮ ವಿಶ್ವವಿದ್ಯಾಲಯದ ಪಟ್ಟಪ್ರದಾನ ಮಹಾಸಭೆಯು ಬರುವ ತಾ|| ೨೮ ಬೆಳಗಿನ 9 ಗಂಟೆಗೆ ನಡೆಯುವುದು. ಛಾನ್ಸಲರಾದ ಶ್ರೀಮನ್ಮಹಾರಾಜರವರು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪಟ್ಟಪ್ರದಾನ ಮಾಡುವರು.

ಡಾ|| ವ್ರಜೇಂದ್ರನಾಥಸೀಲ್‌ರವರ ಅಧ್ಯಕ್ಷತೆಯಿಂದ ಕಳೆದ ಗುರುವಾರ ಪಂಚಮರ ಸಭೆಯು ನಡೆದಿತು. ಮಿ|| ಬೌರಿಂಗ್‌ರವರ ಪತ್ನಿಯವರು ಸಭಾ ಪ್ರಾರಂಭ ಭಾಷಣವನ್ನು ಮಾಡಿದರು ಅಧ್ಯಕ್ಷರ ಭಾಷಣವೂ ಆಯಿತು.

ನವರಾತ್ರಿಯ ಉದ್ದೇಶದಿಂದ ರಾಜಧಾನಿಗೆ ಕರೆಯಿಸಲ್ಪಟ್ಟಿರುವ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯಾತಿಥಿಗಳು ದೊಡ್ಡ ಬಂಗಲೆಯಲ್ಲೂ, ಭಾರತೀಯಾತಿಥಿಗಳು ಬೇರೆ ಬೇರೆ ಭವನಗಳಲ್ಲೂ ಇಳಿಸಲ್ಪಟ್ಟು ಸತ್ಕಾರಗೊಳ್ಳುತ್ತಿರುವರು.

ರಾಜಧಾನಿಗೆ ನೋಟಕ್ಕೆ ಬಂದಿದ್ದವರಲ್ಲಿ ಪರಸ್ಥಳದ ಹಲವು ಜನರು ತಮ್ಮ ವಸ್ತ್ರಾಭರಣಗಳನ್ನೂ ದುಡ್ಡುಗಳನ್ನೂ ರಿಟರ್ನ್ ರೈಲ್ವೆಟಿಕೇಟುಗಳನ್ನೂ ಕಳೆದುಕೊಂಡು ಪರಿತಾಪಪಟ್ಟರು. ಪೋಲೀಸರ ನಿಗಾವಣೆಯು ಸಾಕಾದಷ್ಟು ಇರಲಿಲ್ಲವೆಂದು ಹೇಳಬೇಕಾಗುತ್ತದೆ.

ನವರಾತ್ರಿಯುತ್ಸವಗಳಿಗಾಗಿ ಆಹ್ವಾನಗೊಂಡು ಹೊರಗಣಿಂದ ಬಂದಿರುವ ದೇಶೀಯರಲ್ಲಿ ಹೈದರಾಬಾದಿನ ನವಾಬ್ ಸಾಲಾರ್‌ಜಂಗ್ ಬಹದ್ದೂರ್‌ರವರೂ, ಢಕ್ಕಾದ ಬೇಗಂಸಾಹೇಬರೂ ಮುನೀರುಲ್ ತಾಲಿಂ ಎಚ್. ಜೆ. ಭಾಭಾ ಎಂ.ಎ., ರವರೂ ಪ್ರಮುಖರಾಗಿರುತ್ತಾರೆ.

ಈಗ ನಿಕಲ್‌ಲೋಹದ 1-2-4-8 ಆಣೆಗಳ ಬಾಬತು ನಾಣ್ಯಗಳು ವ್ಯವಹರಣೆಯಲ್ಲಿವೆಯಷ್ಟೆ. ಇನ್ನುಮುಂದೆ ನಿಕಲ್ 8 ಆಣೆ ಬಾಬತು ನಾಣ್ಯವನ್ನು ಮಾತ್ರ ಸರ್ಕಾರಿ ಖಜಾನೆಗಳಿಂದಲೂ ಕರೆನ್ಸಿ ಆಫೀಸುಗಳಿಂದಲೂ ಪ್ರಜೆಗಳಿಗೆ ಕೊಡಕೂಡದೆಂದು ಇಂಡ್ಯಾ ಪ್ರಭುತ್ವದವರು ನಿಶ್ಚಯಿಸಿದ್ದಾರೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳಲ್ಲಿ ಈಸಲ ಹೊಸದಾಗಿ ದರ್ಬಾರಿನಲ್ಲಿ ಖಾಸಾಹಾರದ ಮರ್ಯಾದೆಯು ಮ|| ಕೆ. ಧನಕೋಟಿಶೆಟ್ಟಿಗೂ, ಮ|| ಎಂ. ನಾರಾಯಣಸ್ವಾಮಿಯವರಿಗೂ ಅನುಗ್ರಹಿಸಲ್ಪಟ್ಟವು. ವೈದಿಕರಲ್ಲಿ ಈ ಮರ್ಯಾದೆಗೆ ಪುರೋಹಿತ ನಂಜುಂಡಶಾಸ್ತ್ರಿಗಳು, ಗೋಮಠಂ ಶ್ರೀನಿವಾಸ ಜೋಯಿಸರು, ಕಾನಕಾನಹಳ್ಳಿ ನರಸಿಂಹಶಾಸ್ತ್ರಿಗಳು, ಶಿವಶಂಕರಶಾಸ್ತ್ರಿಗಳು, ಗೌ|| ವೆಂಕಟರಮಣಾಚಾರ್ಯರು, ಮ|| ತಿರುಮಲಾಚಾರ್ಯರು ಸಹ ಪಾತ್ರರಾದರು.

ಶ್ರೀಮನ್ಮಹಾರಾಜರ ದರಬಾರಿನಲ್ಲಿ ದಿವಾನರಿಗೆ ಅಗ್ರಸ್ಥಾನವೂ ಬಳಿಕ ರಿಟೈರ್ ದಿವಾನರು ಸರ್ದಾರರು ಮೊದಲಾದವರಿಗೂ ಅನುಕ್ರಮಸ್ಥಾನಗಳೂ ಮರ್ಯಾದೆಗಳೂ ನಡೆಯುತ್ತಿದ್ದುವು. ಈಗ ಸರ್ ಕಾಂತರಾಜ ಅರಸಿನವರಿಗೆ ಅಗ್ರಸ್ಥಾನವೂ ಪ್ರಥಮ ಮರ್ಯಾದೆಯೂ, ಅವರಹಿಂದೆ ದ್ವಿತೀಯ ಸ್ಥಾನದಲ್ಲಿ ಮಂತ್ರಿವರರು ಮ|| ಎ.ಆರ್. ಬಾನರ್ಜಿಯವರಿಗೂ ಬಳಿಕ ಕರ್ನಲ್ ದೇಶರಾಜ ಅರಸರು, ಸರ್ದಾರ್ ಲಕ್ಷ್ಮೀಕಾಂತರಾಜ ಅರಸರೇ ಮೊದಲಾದ ಸರ್ದಾರರುಗಳಿಗೂ ಅನುಕ್ರಮಸ್ಥಾನಗಳೂ ಮರ್ಯಾದೆಗಳೂ ನಡೆಯುವಂತೆ ಶ್ರೀಮನ್ಮಹಾರಾಜರು ಏರ್ಪಡಿಸಿರುವರು.

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಸ್ವಾರಿಯು ಈಗ ಶಿವಮೊಗ್ಗಾ ಡಿಸ್ಟ್ರಿಕ್ಟ್ ಹೊಳಲೂರಿನಲ್ಲಿರುತ್ತದೆ. ಈ ವರ್ಷದ ನವರಾತ್ರಿ ಮಹೋತ್ಸವವು ಪದ್ಧತಿಯಂತೆ ಮಹಾಸಂಸ್ಥಾನ ಮಠದಲ್ಲಿ ನಡೆದಿತು. ಮುಕ್ಕಾಂ ಸ್ಥಲವು ತುಂಗಭದ್ರಾ ನದೀತೀರವಾಗಿ ಪ್ರಶಸ್ತವಾಗಿದ್ದರೂ ಮಹಾಜನವಸತಿಗೆ ತಕ್ಕಷ್ಟು ಅನುಕೂಲ್ಯವುಳ್ಳುದಾಗಿಲ್ಲವಾದ ಕಾರಣ ನವರಾತ್ರಿ ಮಹೋತ್ಸವವು ಇಲ್ಲಿ ಸಾಧಾರಣವಾಗಿ ನಡೆಯಿಸಲ್ಪಡುವ ಏರ್ಪಾಡು ಮಾಡಲ್ಪಟ್ಟಿತೆಂದೂ, ಅದರಿಂದಲೇ ಸಾರ್ವತ್ರಿಕ ಆಹ್ವಾನಪತ್ರಿಕೆಗಳನ್ನು ಕಳುಹಿಸಿಕೊಡಲಿಲ್ಲವೆಂದೂ ತಿಳಿಯಬಂದಿದೆ.

ಶಿಕಾರಿಪುರದ ತಾ|| ಮಾರವಳ್ಳಿಗ್ರಾಮದಲ್ಲಿ ಪ್ರತಿ ಶುಕ್ರವಾರ ಸಂತೆ ಕಟ್ಟುವಂತೆ ಸರ್ಕಾರದವರು ಈಚಿಗೆ ಅಪ್ಪಣೆಕೊಟ್ಟಿದ್ದಾರೆ. ಅದರಮೇಲೆ ಧಾರವಾಡ ಜಿಲ್ಲೆಯ ರಾಣಿಬನ್ನೂರು ತಾಲ್ಲೂಕು ಮೊದಲಾದುವುಗಳಿಂದ ಸರಕುಗಳು ಈ ಸಂತೆಗೆ ಬಂದೂ ಇಲ್ಲಿಂದ ಅನೇಕ ಸರಕುಗಳನ್ನು ಹೊರಕ್ಕೆ ಸಾಗಿಸುತ್ತಲೂ ಇರುವ ಕಾರಣ ದಿನೇದಿನೇ ವ್ಯಾಪಾರವು ವೃದ್ಧಿ

ಯಾಗುತ್ತಿದೆ. ಆದರೆ ಈ ಊರಿಂದ ಶಿಕಾರಿಪುರ ಮಾಸೂರು ಕಡೆಗಳಿಗೆ ಹೋಗಿಬರುವ ಮಾರ್ಗಗಳನ್ನು ಜೀರ್ಣೋದ್ಧಾರ ಪಡಿಸಲು ಡಿಸ್ಟ್ರಿಕ್ಟ್ ಬೋರ್ಡಿನವರು ಅವಶ್ಯಕವಾಗಿ ಗಮನಕೊಡಬೇಕಾಗಿದೆಯೆಂದು ಬಾತ್ಮೀದಾರರೊಬ್ಬರು ತಿಳಿಯಿಸುತ್ತಾರೆ.

ಈ ಸಂಚಿಕೆಯಲ್ಲಿ ಪ್ರಕಟಿತವಾಗಿರುವ ಚಿಕ್ಕಮಗಳೂರು ವೀರಶೈವ ಸ್ಟೂಡೆಂಟ್ಸ್ ಹೋಮಿನ ಸಂಬಂಧದ ಪತ್ರವ್ಯವಹಾರವನ್ನು ನೋಡಿ ಮತಾಭಿಮಾನಿಗಳು ವಿಚಾರಗೊಳ್ಳದೆ ಹೋಗಲಾರರು. ಸತ್ಸಂಕಲ್ಪ ಹುಟ್ಟುವುದೇ ಕಷ್ಟ. ಹುಟ್ಟಿದ ಬಳಿಕ ಕಾರ್ಯರೂಪಕ್ಕೆ ಬರುವುದು ಇನ್ನೂ ಕಷ್ಟ: ಕಾರ್ಯರೂಪಕ್ಕೆ ಬಂದ ಬಳಿಕ ಅದನ್ನು ನಿಸ್ವಾರ್ಥತೆಯಿಂದಲೂ ಸಮಾಜಹಿತೈಕದೃಷ್ಟಿಯಿಂದಲೂ ಕೊನೆಮುಟ್ಟಿಸಲಾರದೆ ಕೆಡಿಸಿಕೊಳ್ಳುವುದು ಪರಮಾನ್ಯಾಯ. ನಿಸ್ಪೃಹತೆಯು ಅಚಂಚಲವಾದ್ದರೆ ಆ ಸ್ಥಲದಮೇಲೆ ಸರ್ವ ಜನಾದರಣೆಯೂ ಅಚಂಚಲವಾಗಿರುವುದು. ಸಮಾಜದ ವಿದ್ಯಾಭಿವೃದ್ಧಿ ಪ್ರಯತ್ನಗಳು ದಿನದಿನಕ್ಕೆ ಹಲವುತೆರದಿಂದ ತಲೆಯೆತ್ತಿಕೊಳ್ಳಬೇಕಾದ ಅವಶ್ಯಕತೆಯು ಹೆಚ್ಚಾಗಿರುವ ಈ ಕಾಲದಲ್ಲಿ ಅಂಥ ಪ್ರಯತ್ನಗಳನ್ನೋ ಪ್ರತಿಷ್ಠಾಪನೆಗಳನ್ನೋ ಕರ್ತವ್ಯಕುಂಠತೆಯಿಂದ ಕೆಡಿಸಿಕೊಳ್ಳುತ್ತಾ ಹೋಗುವುದು ಬಹಳ ಅನುಚಿತ. ವಿವೇಕಿಗಳಾದ ಹೋಂ ಪ್ರೆಸಿಡೆಂಟರು ಜನಾಪವಾದಕ್ಕೆ ಹೆಯಿಲ್ಲದಂತೆಯೂ ಜಗದೀಶ್ವರನು ಮೆಚ್ಚುವಂತೆಯೂ ತಾವು ಹಾಕಿದ ಸಸಿಯನ್ನು ಚಿರಕಾಲ ಫಲವತ್ತರವಾಗಿ ಬಾಳುವಂತೆ ಮಾಡುವಲ್ಲಿ ಎಚ್ಚರುಗೊಂಡು ಈಗಣ ಲೋಪಗಳನ್ನು ಪರಿಹರಿಸದೆ ಇರಲಾರರೆಂದು ನಂಬುತ್ತೇವೆ.

ತುರ್ಕಿಸಮಸ್ಯೆ.

ಕಳೆದವಾರ ಸೀಮೆಯಿಂದ ಬಂದಿರುವ ತಂತ್ರೀವಾರ್ತೆಗಳನ್ನು ನೋಡುವಲ್ಲಿ ಮತ್ತೊಂದು ಮಹಾಯುದ್ಧದ ಸಂಭವವುಂಟಾಗಲಾರದೆಂದು ತೋರುತ್ತದೆ. ಫ್ರಾನ್ಸ್, ಇಟಲಿ ದೇಶಗಳು ಯುದ್ಧಕ್ಕೆ ಒಪ್ಪುಗೆಯನ್ನು ತೋರಿಸಲಿಲ್ಲ. ಮತ್ತು ತುರ್ಕಿಯಲ್ಲಿ ಮಿತ್ರಮಂಡಲಿಯವರು ಆಕ್ರಮಿಸಿಕೊಂಡಿದ್ದ ಪ್ರದೇಶದಲ್ಲಿ (ಚನಕ್ ರೇವೆ) ಯಲ್ಲಿ ಇರಿಸಿದ್ದ ತಂತಮ್ಮ ಸೈನ್ಯಗಳನ್ನು ಇವೆರಡು ದೇಶಗಳವರೂ ಹಿಂದಕ್ಕೆ ಕರೆಯಿಸಿಕೊಂಡುಬಿಟ್ಟರು. ಆದರೆ ಇಂಗ್ಲೀಷರು ಮಾತ್ರ ಹಾಗೆ ಮಾಡಲಿಲ್ಲ. ತಟಸ್ಥಪ್ರದೇಶದ ರಕ್ಷಣೆಗೋಸ್ಕರನೆಂದು ತಮ್ಮ ನೂತನ ಭೂಜಲಾಕಾಶ ಸೈನ್ಯಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟು ಕಂದಕಗಳನ್ನು ತೋಡುವುದೇ ಮೊದಲಾದ ಯುದ್ಧಸಿದ್ಧತೆಯನ್ನು ಮಾಡುತ್ತ ಬಂದರು. ಕಾನ್‌ಸ್ಟಾಂಟಿನೋಪಲ್ಲಿಗೆ ನುಗ್ಗಿಹೋಗಲು ಕೇಮಲ್‌ಪಾಷಾರವರ ಸೈನ್ಯವು ಬರುವುದಾದರೆ ಈ ತಟಸ್ಥ ಪ್ರದೇಶದಿಂದ ಹಾದುಹೋಗದಂತೆ ಹಿಂದೆ ಗ್ರೀಕರಿಗೆ ಎಚ್ಚರಿಕೆ ಕೊಡಿಸಿದಂತೆ ಇವರಿಗೂ ಕೊಡಿಸಲು ಅಪ್ಪಣೆಮಾಡಿದರು. ಆದರೆ ಅಂಗೋರಾತುರ್ಕಿಯ ಜೂಣಿಯ ಸೈನ್ಯವೇನೋ ಸ್ಮಿರ್ನಾದಿಂದ ಕಾನ್‌ಸ್ಟಾಂಟಿನೋಪಲ್ಲಿನ ಕಡೆಗೆ ಹೊರಟು ತಟಸ್ಥ ಪ್ರದೇಶದ ಎಲ್ಲೆಕಟ್ಟಿಗೆ ಬಂದು ಸೇರಿದೆ. ಇಂಗ್ಲೀಷ್ ಸೈನ್ಯವು ಕೂಡ ಚನಕ್ ಪಟ್ಟಣವನ್ನು ತೆರವು ಮಾಡಿತೆಂದು ತಿಳಿದು ತಟಸ್ಥಪ್ರದೇಶಕ್ಕೂ ತುರ್ಕಿ ಸೈನ್ಯವು ನುಗ್ಗಿದ್ದ ಹಾಗೂ ಅದರ ಮೇಲೆ ಕಾನ್‌ಸ್ಟಾಂಟಿನೋಪಲ್ಲಿನಲ್ಲಿರುವ ಇಂಗ್ಲೀಷ್ ಅಧಿಕಾರಿಯು ಎಚ್ಚರು ಕೊಟ್ಟ ಬಳಿಕ ಹಿಂದಕ್ಕೆ ಹೋದ ಹಾಗೂ, ಆದರೂ ಮತ್ತೊಂದುಸಲ ತುರುಷ್ಕಸೈನ್ಯವು ತಟಸ್ಥಪ್ರದೇಶಕ್ಕೆ ನುಗ್ಗಿದ ಹಾಗೂ ವರ್ತಮಾನಗಳು ಬಂದಿವೆ. ಶಾಂತಮಾರ್ಗದಿಂದ ತಾತ್ಕಾಲಿಕಸಂಧಿ ಮಾಡಿಕೊಳ್ಳಲು ಕೇಮಲ್‌ಪಾಷಾರವರು ಒಪ್ಪಿದರೂ, ಇದರ ನೆಪದಿಂದ ಕಾಲಾತೀತವಾಗುವುದಕ್ಕೆ ಅವರು ಒಪ್ಪುವುದಿಲ್ಲ. 48 ಗಂಟೆಗಳೊಳಗೆ ಯಾವುದೂ ಗೊತ್ತಾಗಬೇಕೆಂದು ಅವರು ಹೇಳಿರುತ್ತಾರೆ.

ಈ ಮಧ್ಯೆ ಫ್ರೆಂಚ್ ಇಟಲಿ ದೇಶಗಳವರು ಯುದ್ಧವಿಮುಖತೆಯನ್ನು ತೋರಿಸಿದುದರಿಂದ ಇಂಗ್ಲೀಷರೊಬ್ಬರೇ ತುರ್ಕಿಯ ಮೇಲೆ ಯುದ್ಧಕ್ಕೆ ಸನ್ನದ್ಧರಾಗಿ ನಿಲ್ಲುವ ಹೊತ್ತು ಬರುವಂತೆ ತೋರಿತು. ಫ್ರಾನ್ಸ್ ಇಟಲಿಗಳ ವರ್ತನೆಗೆ ಆಶ್ಚರ್ಯಪಟ್ಟು, ಅವರನ್ನು ತಮ್ಮ ಕಡೆಗೆ ತಿರುಗಿಸಿಕೊಳ್ಳಲಿಕ್ಕೆ ಲಾರ್ಡ್ ಕರ್ಜನ್‌ರವರು ಫ್ರಾನ್ಸಿಗೆ ಹೋಗಿದ್ದರು. ಅವರ ಯತ್ನವೇನೂ ಸಫಲವಾಗಲಿಲ್ಲ. ಕಡೆಗೆ ಜುಗೋಸ್ಲಾವಿಯಾವು ಕೂಡ ಆಂಗ್ಲರಿಗೆ ಸಹಾಯಮಾಡಲು ಒಪ್ಪಲಿಲ್ಲ. ಅಲ್ಲದೆ ಇಂಗ್ಲಂಡಿನಲ್ಲೇ ಭಿನ್ನಾಭಿಪ್ರಾಯವು ಹುಟ್ಟಿರುವುದು. ಕೂಲಿಕಾರ ಪಕ್ಷದವರು ಲಾಯಿಡ್ ಜಾರ್ಜರ ಮತ್ತೊಂದು ಯುದ್ಧಸನ್ನಾಹಕ್ಕೆ ಒಪ್ಪಲಿಲ್ಲ. ಯಾವುದೊಂದು ಸಾಹಾಯವನ್ನೂ ನಾವು ಮಾಡುವುದಿಲ್ಲನೆಂದು ಘಂಟಾಘೋಷವಾಗಿ ಹೇಳಿಬಿಟ್ಟರು. ಕನ್ಸರ್ವೆಟೀವ್ ಪಕ್ಷಕ್ಕೂ ಕೂಡ ಮತ್ತೊಂದು ಯುದ್ಧಕ್ಕೆ ಇಂಗ್ಲಂಡು ತೊಡಗುವುದು ಇಷ್ಟವಾಗಿಲ್ಲ. ಪಾರ್ಲಿಮೆಂಟಿನ ಅಭಿಪ್ರಾಯವಿಲ್ಲದೆ ಮತ್ತೊಂದು ಯುದ್ಧಕ್ಕೆ ಆಹ್ವಾನ ಮಾಡಿದುದು ತಪ್ಪೆಂದು ನುಡಿಯುವ ಪಕ್ಷವು ಬೇರೆ ಇಂಗ್ಲಂಡಿನಲ್ಲಿ ಮೂಡಿದೆ. ವೈಕೌಂಟ್‌ಗ್ರೇಯವರಂಥ ಜ್ಞಾನವಯೋವೃದ್ಧರೂ ಕೂಡ ಫ್ರೆಂಚರ ಕೂಡ ಆಲೋಚಿಸದೆ ಇಂಗ್ಲಂಡು ಯುದ್ಧಕ್ಕೆ ನಿಲ್ಲುತ್ತೇನೆಂದು ಪ್ರಕಟಿಸಿಕೊಂಡಿರುವುದು ಅವಿವೇಕವೆಂದು ಸಾರಿದರು. ಅಧಿನಿವೇಶ ರಾಜ್ಯಗಳ ಸಾಹಾಯ್ಯವನ್ನು ಲಾಯಿಡ್‌ಜಾರ್ಜರು ಕೇಳಿಕೊಂಡಿದ್ದರಷ್ಟೆ. ಕಾನಡಾ ರಾಷ್ಟ್ರವು ಹಿಂದುಮುಂದೆ ನೋಡುತ್ತಿದೆ. ದಕ್ಷಿಣಾಫ್ರಿಕಾ ಆಸ್ಟ್ರೇಲಿಯಾಗಳು ಯುದ್ಧದಲ್ಲಿ ತ್ವರೆಪಡುವ ಲಕ್ಷಣಗಳು ತೋರುವುದಿಲ್ಲ. ಇದರ ಮೇಲೆ ಅತ್ತ ರಷ್ಯಾಬೋಲ್ಷೆವಿಕ್ಕರು ಅಂಗೋರಾ ತುರ್ಕಿಯೊಡನೆ ಮುಂಚೆಯೇ ಸಂಧಿಮಾಡಿಕೊಂಡಿರುವುದಲ್ಲದೆ ಈಗಲೂ ಯುದ್ಧ ಸಂಘಟನೆಯಾದರೆ ತುರ್ಕಿಗೆ ಸಂಪೂರ್ಣ ಸಹಾಯಮಾಡುವುದಾಗಿ ಪ್ರಕಟಿಸಿಕೊಂಡಿದ್ದಾರೆ. ಸೇನಾಸಿದ್ಧತೆಯನ್ನು ಮಾಡಿಕೊಂಡೇ ಇದ್ದಾರೆ. ಅಲ್ಲದೆ ಇವರುಗಳಿಗೆ ಸಂಧಿ ನಡೆಯಗೊಡದಂತೆ ಮಾಡಲು ಹವಣಿಸಿಕೊಂಡೂ ಇದ್ದಾರೆ. ಇಷ್ಟೆಲ್ಲಾ ವಿಷಮಪರಿಸ್ಥಿತಿಗಳು ಪ್ರಾಪ್ತವಾಗುವುದಕ್ಕೆ ಲಾಯಿಡ್ ಜಾರ್ಜರು ಗ್ರೀಸಿನ ಮೇಲೆ ತೋರಿಸಿದ ಅಭಿಮಾನವೇ ಕಾರಣವು ಗ್ರೀಸಿನವರೊಬ್ಬರು ಮಾತ್ರ ಇಂಗ್ಲೀಷರಿಗೆ ಯುದ್ಧ ಸಹಾಯ ಮಾಡಲು ಹಾತೊರೆಯುವುದು ಸಹಜವು. ಪ್ರಬಲ ರಾಷ್ಟ್ರಗಳ ಒತ್ತಾಸೆಯನ್ನು ಬಿಟ್ಟು ಗ್ರೀಕನ್ನು ಮಾತ್ರ ನಂಬಿ ಇಂಗ್ಲಂಡು ಯುದ್ಧಕ್ಕೆ ಸನ್ನದ್ಧವಾಗಿದ್ದರೆ ಹರಕುಹರಿಗೋಲನ್ನು ನಂಬಿ ಸಮುದ್ರವನ್ನು ದಾಟಲು ಪ್ರಯತ್ನಿಸಿದಂತೆಯೇ ಆಗುತ್ತಿದ್ದಿತು. ಇದನ್ನೆಲ್ಲಾ ಪರಿಭಾವಿಸಿಯೇ ಲಾಯಿಡ್ ಜಾರ್ಜರು ಕೂಡ ಹಿಂದೆಗೆಯಬೇಕಾಗಿ ಬಂದಿತು.

ಆದರ ಮೇಲೆ ಫ್ರಾನ್ಸ್ ಮಂತ್ರಿಯವರು ಆಂಗ್ಲದೇಶಕ್ಕೂ ಅಂಗೋರಾ ಕೇಮಲ್‌ಪಾಷಾರಿಗೂ ಮಧ್ಯಸ್ಥಗಾರರಾಗಿನಿಂತು ಸಂಧಿ ಪರಿಷ್ಕರಣೆಗೆ ತುಂಬಾ ಸಾಹಸಪಟ್ಟರು. ಇಂಗ್ಲೆಂಡ್ ಫ್ರಾನ್ಸು ಇಟಲಿ ದೇಶಗಳ ಪ್ರತಿನಿಧಿಗಳು ಒಂದುಕಡೆ ಸೇರಿ ಸ್ಥಿತಿಗತಿಯನ್ನು ಕುರಿತು ವಿಚಾರಮಾಡಿ, ಮಿತ್ರಮಂಡಲೀ ಪಕ್ಷದಿಂದ ಅಂಗೋರಾ ತುರ್ಕಿಗೆ ಆಹ್ವಾನ ಪತ್ರವನ್ನು ಕಳುಹಿಸಿ ಸಂಧಿ ಸಭೆಗೆ ಕರೆಯಿಸಿಕೊಳ್ಳಲಿಕ್ಕೂ ಮರಿಟ್ಜಾ ಎಲ್ಲೆಕಟ್ಟಿನ ಅಧಿಕಾರವನ್ನೂ ಅಡ್ರಿಯಾನೋಪಲನ್ನೂ ಸ್ಟ್ರೇಟ್ಸಿನ ಮೇಲಣ ಅಧಿಕಾರವನ್ನು ಸಹ ತುರ್ಕಿಗೆ ವಹಿಸಿಬಿಡಲೂ, ಸಂಧಿ ಮುಗಿಯುವವರೆಗೂ ಜಲಸಂಧಿಯು ತಟಸ್ಥವಾಗಿರುವಂತೆಯೂ, ಅದನ್ನು ಅಂಗೋರಾಪ್ರಭುತ್ವದವರು ದಾಟದೆ ಇರುವಂತೆಯೂ ಒಪ್ಪಿ ನಡೆದುಕೊಂಡರೇನೆಯೇ ಈ ನಿಬಂಧನೆಗಳು ಸಲ್ಲತಕ್ಕುದೆಂದೂ ನಿಶ್ಚಯಿಸಿದಂತೆ ಗೊತ್ತಾಗುತ್ತದೆ. ಅಂತು ಆ ನಿಬಂಧನೆಗಳೊಂದೂ ಚೆನ್ನಾಗಿ ಹೊರಬಿದ್ದಿರುವುದಿಲ್ಲ. ಸಂಧಿಯೇನೋ ನಡೆದುಹೋಗುವ ಲಕ್ಷಣಗಳೇ ಹೆಚ್ಚಾಗಿವೆ. ಆಂಗ್ಲ ಸಾಮ್ರಾಜ್ಯ, ಫ್ರಾನ್ಸು, ಇಟಲಿ, ಜಪಾನು, ರುಮೇನಿಯಾ, ಜುಗೋಸ್ಲಾವಿಯಾ, ತುರ್ಕಿ—ಈ ದೇಶಗಳ ಪ್ರತಿನಿಧಿಗಳೆಲ್ಲಾ ವೆನಿಸ್ ಪಟ್ಟಣದಲ್ಲೋ ಇನ್ನಾವ ಕಡೆಯಲ್ಲೋ ಸೇರಿ ಸಂಧಿ ಪರಿಷ್ಕಾರವನ್ನು ಮಾಡಿಕೊಳ್ಳಬಹುದು. ಈ ಮಧ್ಯೆ ತಾತ್ಕಾಲಿಕ ಸಂಧಿಸಭೆಯೊಂದು ಮುದೇನಿಯಾವಿನಲ್ಲೋ ಇಸ್ಮಿದ್ದಿನಲ್ಲೋ ಕೂಡುವುದಾಗಿದೆ ಅದಕ್ಕೆ ಕೇಮಲ್‌ಪಾಷಾರವರು ಕೂಡ ಸೇರುತ್ತಾರೆ.

ಡಾರ್ಡನೆಲ್ಸು, ಮರ್ಮೋರಾಸಮುದ್ರ, ಬಾಸ್ಫರಸ್ ಜಲಸಂಧಿ ಇವುಗಳು ನಾನಾಜಾತಿ ಸಮಿತಿಯವರ ರಕ್ಷಣೆಯ ಕೆಳಗೆ ಸರ್ವರ ಪ್ರವೇಶಕ್ಕೂ ಸಾಧ್ಯವಾಗಿರಬೇಕು ಎಂಬುದೊಂದು ಬಲವಾದ ಬಿಗಿಪಟ್ಟನ್ನು ಇಂಗ್ಲೆಂಡು ತೋರಿಸುತ್ತಲಿದೆ. ಈ ಭಾಗಕ್ಕೆ ತುರ್ಕಿ ರಷ್ಯಗಳ ಹೊರತು ಉಳಿದ ದೇಶಗಳೆಲ್ಲಾ ಸಂಮತಿಯನ್ನು ಸೂಚಿಸುತ್ತಿವೆ. ತುರುಕರು ಈ ವಿಷಯದಲ್ಲಿ ಮಿತ್ರಮಂಡಲಿಯ ಅಭಿಪ್ರಾಯಕ್ಕೆ ಬದ್ಧರಾಗಿಯೇ ತೀರಬೇಕಾಗಬಹುದು. ಹಾಗಲ್ಲದೆ ಹೋದರೆ ಮಾತ್ರ ಯುದ್ಧವು ನಡೆಯದೆ ತಪ್ಪುವುದಿಲ್ಲ. ಇದಕ್ಕೆ ತುರ್ಕಿಯವರು ಒಪ್ಪಿಕೊಂಡರೆ ಉಳಿದ ತುರ್ಕಿಯ ಕೋರಿಕೆಗಳೆಲ್ಲಾ ಸಫಲವಾಗಬಹುದು. ಕೇಮಲ್‌ಪಾಷಾರವರನ್ನು ಒಪ್ಪಿಸಲು ಫ್ರೆಂಚ್ ಪ್ರತಿನಿಧಿಯೊಬ್ಬರು ಸ್ಮಿರ್ನಾಪಟ್ಟಣಕ್ಕೆ ಹೋಗಿದ್ದಾರೆ. ಕೇಮಲ್ ಪಾಷಾರವರು ದುಡುಕತಕ್ಕವರಲ್ಲ. ತಮ್ಮ ಸೈನ್ಯಕ್ಕೆಲ್ಲಾ ಪದೇಪದೇ ಎಚ್ಚರವನ್ನು ಹೇಳಿ ಸಮಾಧಾನದಲ್ಲಿಟ್ಟುಕೊಂಡಿದ್ದಾರೆ. ಅವರು ತೋರಿಸುತ್ತ ಬಂದಿರುವ ರಾಜನೀತಿಯನ್ನು ಲೋಕವೇ ಶ್ಲಾಘಿಸುತ್ತಿದೆ. ತುರ್ಕಿಯ ಪುನರುದ್ಧಾರಕ್ಕೆ ಇವರ ಅಸಾಧಾರಣ ರಾಜ್ಯತಂತ್ರ ಸಾಮರ್ಥ್ಯಾದಿಗಳೇ ಮೂಲಕಾರಣಗಳು.

ಹಿಂದಣ ಮಹಾಯುದ್ಧ ಕಾಲದಲ್ಲಿ ತುರ್ಕಿ ಸುಲ್ತಾನರು ಮಿತ್ರಮಂಡಲಿಯವರು ಹೇಳಿದ ಒಪ್ಪಂದಗಳಿಗೆಲ್ಲಾ ಒಪ್ಪಿ ರಾಜ್ಯವನ್ನು ಕಳೆದುಕೊಳ್ಳುವಂತಾದುದಕ್ಕೂ, ಈಗ ಮರಳಿ ತುರ್ಕಿಯ ರಾಜ್ಯಭಾಗಗಳು ಅದಕ್ಕೆ ದೊರೆಯುವಂತಾಗಿರುವುದಕ್ಕೂ ದೌರ್ಬಲ್ಯ ಸೌಬಲ್ಯಗಳೇ ಕಾರಣವೆಂಬುದು ಸ್ಪಷ್ಟವಾಗಿದೆ. ತುರ್ಕಿಯು ಯೂರೋಪುಖಂಡದಲ್ಲಿ ಉಳಿದುಕೊಂಡಿರುವಂತಾದುದಕ್ಕೆ ಅದರ ಭಾಗ್ಯಸ್ವರೂಪರಾಗಿ ಕೇಮಲ್ ಪಾಷಾರವರು ಅವತರಿಸಿದರೆಂದು ಭಾವಿಸಬೇಕು. ಪ್ರಪಂಚದಮೇಲಿರುವ 30 ಕೋಟಿ ಮಹಮ್ಮದೀಯ ಪ್ರಜೆಗಳೂ 25 ಕೋಟಿ ಭಾರತೀಯರೂ ತುರ್ಕಿಯ ಸಮುದ್ಧಾರಕ್ಕಾಗಿ ಮಾಡುತ್ತಾಬಂದ ದೈವಪ್ರಾರ್ಥನೆಯೂ ಬಿಗಿಪಟ್ಟಿನ ಕೋರಿಕೆಯೂ ಸಾರ್ಥಕವಾಗುವಂತೆ ಜಗದೀಶ್ವರನು ಅನುಗ್ರಹಿಸುತ್ತಲಿರುವನೆಂದು ತೋರುತ್ತದೆ. ಸ್ವಶಕ್ತಿಪುಷ್ಟಿಯಿಂದಲ್ಲದೆ ಯಾರಿಗೂ ಯಾವ ವಿಧದಲ್ಲೂ ಪುರಸ್ಕಾರವುಂಟಾಗುವುದಿಲ್ಲವೆಂಬುದಕ್ಕೆ ಈಗಣ ತುರ್ಕಿ ಪರಿಸ್ಥಿತಿಯು ಪ್ರಬಲ ದೃಷ್ಟಾಂತವಾಗಿದೆ.

ಕೇಮಲ್‌ಪಾಷಾರವರಿಂದ ತುರ್ಕಿಗೆ ಉಂಟಾಗುವಂತಿರುವ ಮಹಾಫಲವನ್ನು ಕಂಡು ಈಗಣ ಸುಲ್ತಾನರು ತಮ್ಮ ದೌರ್ಬಲ್ಯಕ್ಕೆ ನಾಚಿ ತಾವಾಗಿ ಸಿಂಹಾಸನವನ್ನು ಬಿಟ್ಟು ತೆರಳುವಂತೆ ಕಾಣುತ್ತದೆ. ಅವರು ಹಾಗೆ ಮಾಡದಿದ್ದರೆ ಅಂಗೋರಾ ಪ್ರಭುತ್ವದವರು ಬಲಾತ್ಕಾರದಿಂದಲಾದರೂ ಹಾಗೆ ಮಾಡಿಸುತ್ತಿದ್ದರು. ನಿಮಗೆ ಯಾವ ತೊಂದರೆಯೂ ಉಂಟಾಗದಂತೆ ಮಾಡುವುದಕ್ಕಾಗಿ ನಾವೇ ರಾಜ್ಯಾಧಿಪತ್ಯಕ್ಕೆ ರಾಜೀನಾಮೆ ಕೊಡುತ್ತೇವೆಂದು ತುರ್ಕಿ ಸುಲ್ತಾನರು ಕೇಮಲ್‌ಪಾಷಾರವರಿಗೆ ತಂತ್ರೀವಾರ್ತೆಯ ಮೂಲಕ ತಿಳಿಯಿಸಿದ್ದಾರಂತೆ. ಅಲ್ಲದೆ ಸುಲ್ತಾನ್ ಪ್ರಭುತ್ವದ ಮುಖ್ಯಮಂತ್ರಿ, ಪ್ರಧಾನಸೇನಾನಿ, ವಿದೇಶಾಂಗ ಮಂತ್ರಿ, ದೇಶೀಯ ಮಂತ್ರಿ ಇವರೆಲ್ಲಾ ರಾಜೀನಾಮೆ ಕೊಟ್ಟುದಲ್ಲದೆ ಇನ್ನುಮೇಲೆ ತುರ್ಕಿಯಲ್ಲಿ ಜಾತೀಯ ಪ್ರಭುತ್ವವು ಏರ್ಪಡುವುದೆಂದು ತಿಳಿಯಪಡಿಸಿರುವರಂತೆ. ಈಗಣ ಸುಲ್ತಾನರ ಕುಮಾರರಾದ ಯುವರಾಜರು ಅಂಗೋರಾ ಜಾತೀಯ ಪ್ರಭುತ್ವದವರಲ್ಲಿ ಸ್ನೇಹವುಳ್ಳವರಾಗಿದ್ದಾರೆ. ಇವರೇ ಮುಂದಣ ಸುಲ್ತಾನರಾಗಿ ಜಾತೀಯ ವಾದಿಗಳಿಂದ ನಿಯಮಿಸಲ್ಪಡಬಹುದೆಂಬ ಸೂಚನೆಯೂ ತೋರುತ್ತಿದೆ.

ವರ್ತಮಾನ ಸಂಗ್ರಹ.

ಸ್ಮಿರ್ನಾದಹನದಿಂದ ೧೫ ಕೋಟಿ ಡಾಲರಿನ ನಷ್ಟವಾದಂತೆ ಎಣಿಸಲ್ಪಟ್ಟಿದೆ

ಆಸ್ಯಾ ಮೈನರಿನಲ್ಲಿ ನಡೆದ ಗ್ರೀಕ್ ತುರ್ಕಿ ಯುದ್ಧದಲ್ಲಿ ತುರ್ಕಿಯವರು ೬೫ ಸಾವಿರ ಮಂದಿ ಗ್ರೀಕ್ ಸೈನಿಕರನ್ನು ಸೆರೆಹಿಡಿದಿರುವರು.

ಎನ್ವರ್‌ಪಾಷಾರವರು ಕೊಲೆಮಾಡಲ್ಪಟ್ಟುದು ನಿಜವೆಂಬ ಸಂಗತಿಯು ದೃಢಪಟ್ಟುದರಿಂದ ಕಲ್ಕತ್ತಾ ಮಹಮ್ಮದೀಯರು ತಮ್ಮ ವಿಷಾದಪ್ರದರ್ಶನ ಸಭೆಯನ್ನು ಕೂಡಿಸಿದ್ದರು.

ಈಗಣ ಲಾರ್ಡ್ ರೀಡಿಂಗ್‌ರವರಿಗೆ ಪ್ರತಿಯಾಗಿ ಆಸ್ಟಿನ್ ಚೇಂಬರ್ಲೇನ್‌ರವರು ವೈಸ್ರಾಯರಾಗಿ ಬರುವರೆಂದು ಜಾನ್‌ಬುಲ್ ಎಂಬ ಆಂಗ್ಲಪತ್ರಿಕೆಯು ಪ್ರಕಟಿಸಿರುವುದಂತೆ.

ಆಂಗ್ಲ ಸಾರ್ವಭೌಮರಮೇಲೆ ಯುದ್ಧಕ್ಕೆ ಪ್ರವೃತ್ತರಾದರೆಂಬ ಕಾರಣಕ್ಕಾಗಿ ಮಲಬಾರಿನ ವಕೀಲ್ ಎಂ. ಪಿ. ನಾರಾಯಣಮೆನನ್‌ರವರಿಗೆ ದ್ವೀಪಾಂತರವಾಸ ಶಿಕ್ಷೆಯು ಸ್ಪೆಷಲ್ ಜಡ್ಜರಿಂದ ವಿಧಿಸಲ್ಪಟ್ಟಿತು.

ಕೈಜರು ಈಗ ೬೦ ವಯಸ್ಸಿನವರು. ಅವರು ಈಗ ಮದುವೆಯಾಗಲು ನಿಷ್ಕರ್ಷಿಸಿರುವಾಕೆಗೆ ೩೫ ವಯಸ್ಸು. ಆಕೆ ವಿಧವೆ, ೭ ಮಕ್ಕಳುಳ್ಳವಳು. ನವಂಬರ್ ತಿಂಗಳಲ್ಲಿ ಇವರ ಮದುವೆಯಾಗುವುದು.

ಭಾರತದ ಉಪಮಂತ್ರಿ ಲಾರ್ಡ್ ವಿಂಟರ್ಟನ್‌ರವರು ಕಳೆದ ತಾ|| ೨೫ರಲ್ಲಿ ಸಿಮ್ಲಾಪಟ್ಟಣಕ್ಕೆ ಹೋಗಿ ವೈಸ್ರಾಯರ ಆತಿಥ್ಯದಲ್ಲಿದ್ದಾರೆ. ಶಾಸನಸಭಾಸಭಿಕರುಗಳು ಇವರನ್ನು ಕಂಡು ಸಂಭಾಷಣೆ ಮಾಡಿದರು.

ವಿಜಾಪುರದ ಸುಪ್ರಸಿದ್ಧ ಸಹಕಾರನಿರಾಕರಣವಾದಿಗಳಾದ ಮ|| ಶ್ರೀನಿವಾಸ ಕೌಜಲಗಿಯವರು ರಾಜದ್ರೋಹಪ್ರಬೋಧಕವಾದ ಉಪನ್ಯಾಸಗಳನ್ನು ಮಾಡಿದರೆಂಬ ತಪ್ಪಿತಕ್ಕಾಗಿ ವಿಚಾರಣೆನಡೆದು ೧ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟರು.

ಧಾರವಾಡದ ಕರ್ನಾಟಕ ವೃತ್ತ ಮತ್ತು ಧನಂಜಯ ಪತ್ರಕ್ಕೆ ಈಗ ಸಂಪಾದಕರಾಗಿರುವ ಮ|| ರಂಗಾಚಾರ್ಯರು ತಮ್ಮ ಪತ್ರದಲ್ಲಿ ಆಕ್ಷೇಪಾಸ್ಪದವಾದ ಲೇಖನವನ್ನು ಬರೆದಿದ್ದರೆಂಬ ಕಾರಣದಿಂದ ೧೨೪ ಎ ಕಲಮಿನ ಪ್ರಕಾರದ ಅಪರಾಧಾರೋಪಣೆಯಿಂದ ವಾರಂಟಿಗೆ ಗುರಿಯಾಗಿದ್ದಾರೆ.

ಕಳೆದ ಸೂರ್ಯಗ್ರಹಣ ಕಾಲದಲ್ಲಿ ಕುರುಕ್ಷೇತ್ರದ ಪವಿತ್ರ ಸರೋವರದಲ್ಲಿ ಸ್ನಾನಮಾಡುವುದಕ್ಕಾಗಿ ನಾನಾ ಸ್ಥಲಗಳಿಂದ ದಿನಕ್ಕೆ 20 ಸಾವಿರದಂತೆ 14 ಸ್ಪೆಷಲ್ ಟ್ರೇನುಗಳಲ್ಲಿ ಸಾಗಿ ಹೋಗುತ್ತಿದ್ದರು. ಲಕ್ಷಾಂತರ ಪ್ರಜೆಗಳು ಸೇರಿದ್ದರು. ಗದ್ದಲದಿಂದ ಪವಿತ್ರ ಸರೋವರದಲ್ಲಿ ಮುಳುಗಿ ಅನೇಕರು ಸತ್ತರು.

ಗುರಕಾಬಾಗಿನಲ್ಲಿ ಈಗ ಸತ್ಯಾಗ್ರಹದ ಅಕಾಲಿಗಳ ಮೇಲೆ ಪೊಲೀಸರ ದೌರ್ಜನ್ಯವೇನೂ ಇಲ್ಲ. ಹಿಡಿದು ವಿಚಾರಣೆಗೊಳಪಡಿಸಿ ಕಾರಾಗೃಹಕ್ಕೆ ಕಳುಹಿಸುವ ಕೆಲಸವು ನಡೆಯುತ್ತಿದೆ. ಆದರೆ ಕಾರಾಗೃಹಕ್ಕೆ ಹೋಗಲು ಸಾವಿರಾರು ಮಂದಿಗಳು ಸಿದ್ಧರಾಗಿ ಬರುತ್ತಿದ್ದಾರೆ. ತಮ್ಮ ಪಟ್ಟನ್ನು ಅವರು ಬಿಟ್ಟಿಲ್ಲ.

ಮದರ್ಲಂಡ್ ಎಂಬ ಪತ್ರಿಕೆಯ ಸಂಪಾದಕರಾದ ಮಜರುಲ್ ಹಕ್‌ರವರು ದಂಡಾಧಿಕಾರಿಗಳಿಂದ ವಿಧಿಸಲ್ಪಟ್ಟಿದ್ದ ಅರ್ಥದಂಡವನ್ನು ಸಲ್ಲಿಸದೆ ಕಾರಾಗೃಹಕ್ಕೆ ಹೋಗಿದ್ದರಷ್ಟೆ. ಪ್ರಭುತ್ವದವರು ಹಕ್‌ರವರ ಸೊತ್ತುಗಳನ್ನು ಹರಾಜುಮಾಡಿಸಿ ಅರ್ಥದಂಡವನ್ನೆತ್ತಿಕೊಂಡು ಅವರನ್ನು ಕಾರಾಗೃಹದಿಂದ ಬಿಡುಗಡೆಮಾಡಿದರು.

ಕೀರ್ತನಕೇಸರಿ ಮ|| ಕೊಪ್ಪಳದ ಜಯರಾಮಾಚಾರ್ಯರನ್ನು ಕರ್ನಾಟಕ ಪ್ರಾಂತಿಕ ರಾಷ್ಟ್ರೀಯ ಸಂಘದವರು ಕಾಂಗ್ರೆಸ್ ಕಾರ್ಯಪ್ರಚಾರಕರನ್ನಾಗಿ ನಿಯಮಿಸಿದ್ದರು. ಈಗ ಇವರನ್ನು ಆ ಕೆಲಸದಿಂದ ತೆಗೆದುಬಿಟ್ಟಿರುವುದಾಗಿಯೂ, ಇವರ ವಶಕ್ಕೆ ಯಾವ ತೆರದಿಂದಲೂ ರಾಷ್ಟ್ರೀಯ ಸಂಘ ಸಂಬಂಧದ ಹಣವನ್ನು ಯಾರೂ ಕೊಡಕೂಡದೆಂದೂ, ಕರ್ನಾಟಕ ಪ್ರಾಂತಿಕ ಸಂಬಂಧವಾದ ಯಾವ ರಾಷ್ಟ್ರಕಾರ್ಯದಲ್ಲೂ ಇವರ ಸಂಬಂಧವು ಸ್ವಲ್ಪವೂ ಇಲ್ಲವೆಂದೂ, ಪ್ರಾಂತಿಕ ಸಂಘದವರು ಪ್ರಕಟಿಸಿದ್ದಾರೆ. ಈ ಆಚಾರ್ಯರು ಇದುವರೆಗಣ ಸಂಚಾರದಲ್ಲಿ ಎತ್ತಿದ ಹಣದ ವ್ಯವಸ್ಥೆಯು ಸರಿಯಾಗಿರಲಿಲ್ಲವೆಂಬುದೇ ಇದಕ್ಕೆ ಕಾರಣವಾಗಿ ತೋರುತ್ತದೆ.

ಇದುವರೆಗೆ ವೈಸ್‌ರಾಯರ ಕಾರ್ಯಕಾರಿ ಸಂಘದಲ್ಲಿ ಹೋಂ ಮೆಂಬರಾಗಿದ್ದ ಸರ್ ವಿಲಿಯಂ ವಿನ್ಸೆಂಟ್‌ರವರು ತಮ್ಮ ಪದವಿಯನ್ನು ಬಿಟ್ಟು ಇಷ್ಟರಲ್ಲೇ ಇಂಡ್ಯಾ ಕೌನ್ಸಿಲ್ ಮೆಂಬರಾಗಿ ಹೋಗುವವರಾಗಿದ್ದಾರೆ. ಕಳೆದ 6 ವರ್ಷಗಳಿಂದ ಇವರು ಸಾಮ್ರಾಜ್ಯಶಾಸನ ಸಭೆಯಲ್ಲೂ ಸ್ಟೇಟ್ ಕೌನ್ಸಿಲಿನಲ್ಲೂ ತೋರ್ಪಡಿಸಿಕೊಂಡ ಸಾಮರ್ಥ್ಯವು ಅದ್ಭುತವಾದುದು. ಸ್ಟೇಟ್ ಕೌನ್ಸಿಲಿನ ಸಭಿಕರು ಸರ್ ಡಿ. ವಾಚಾರವರ ಅಧ್ಯಕ್ಷತೆಯಿಂದ ಸಿಮ್ಲಾಪಟ್ಟಣದಲ್ಲಿ ಒಂದು ದೊಡ್ಡ ಸಭೆಮಾಡಿ, ಅಲ್ಲಿಗೆ ವಿನ್ಸೆಂಟರನ್ನು ಬರಮಾಡಿಕೊಂಡು ಸನ್ಮಾನಿಸಿ ತಮ್ಮ ಅಭಿನಂದನ ಕೃತಜ್ಞತೆಗಳನ್ನು ತಿಳಿಯಿಸಿದರು. ಆಗ ವಿನ್ಸೆಂಟರ ಸಾಮರ್ಥ್ಯವನ್ನು ಕುರಿತು ಶ್ಲಾಘಿಸುವ ಉಪನ್ಯಾಸಗಳು ವಿಶೇಷವಾಗಿ ಜರುಗಿದುವು.

ಬೊಂಬಾಯಿಗೆ ಸೇರಿದ ಅಕೋಲಾಜಿಲ್ಲಾ ಬೋರ್ಡು ಇಂಜನಿಯರ್ ಎಗ್ಗಿನ್ಸ್‌ರವರು ಕಂಟ್ರಾಕ್ಟರಿಂದ ಬೋರ್ಡಿಗೆ ಬಂದ 1100 ರೂ.ಗಳನ್ನು ಆಫೀಸಿಗೆ ಜಮಾಕಟ್ಟದೆ ತನ್ನ ಹೆಂಡತಿಯ ಕೈಗೆ ಕೊಟ್ಟನು. ಆಕೆಯು ವೆಚ್ಚಮಾಡಿಕೊಂಡಳು. ಕೆಲ ದಿನಗಳ ಮೇಲೆ ಅದನ್ನು ಬೋರ್ಡಿಗೆ ಸಲ್ಲಿಸಿದನು. ಆದರೂ ನಂಬುಗೆಗೆ ದ್ರೋಹಮಾಡಿದ ತಪ್ಪಿತಕ್ಕಾಗಿ ಆತನ ಮೇಲೆ ವ್ಯಾಜ್ಯವು ಹೂಡಲ್ಪಟ್ಟು ಬೊಂಬಾಯಿ ಹೈ ಕೋರ್ಟಿನಲ್ಲಿ ವಿಚಾರಣೆ ನಡೆದಿತು. ನಡೆದ ಸಂಗತಿಯನ್ನು ಇಂಜನಿಯರು ಹೇಳಿಕೊಂಡನು. ಅಪರಾಧಿಯ ಹೆಂಡತಿಯು ಹಣವನ್ನು ವೆಚ್ಚಮಾಡಿಕೊಂಡುದು ಅಪರಾಧಿಯ ತಪ್ಪನ್ನು ನಿವಾರಣೆಮಾಡಲಾರದೆಂದು ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟರು. ಪಂಚಾಯಿತರು ಅಪರಾಧಿಯನ್ನು ನಿರ್ದೋಷಿಯೆಂದು ಅಭಿಪ್ರಾಯಕೊಟ್ಟುದರಿಂದ ಆತನು ನಿರ್ದೋಷಿಯೆಂದು ಬಿಡಲ್ಪಟ್ಟನು.

ದೇಶಬಂಧುಚಿತ್ತರಂಜನದಾಸರು ಜ್ವರರೋಗಗ್ರಸ್ತರಾಗಿ ದೇಹಾರೋಗ್ಯಾರ್ಥವಾಗಿ ಕಾಶ್ಮೀರ ಸಂಸ್ಥಾನಕ್ಕೆ ತಮ್ಮ ಕುಟುಂಬದ ಇನ್ನು ಕೆಲರೊಡನೆ ಹೋಗಿ ಮುರ್ರೆಯೆಂಬಲ್ಲಿ ಇಳಿದುಕೊಂಡರು. ಅಲ್ಲಿಯ ಪ್ರಭುತ್ವದವರ ಅಪ್ಪಣೆಮೇರೆ ಪೊಲೀಸ್ ಡೆಪ್ಯುಟಿಸೂಪರಿಂಟೆಂಡೆಂಟರು ಇವರ ಬಿಡಾರಕ್ಕೆ ಬಂದು "ನಾನು ಆರೋಗ್ಯಾರ್ಥವಾಗಿ ಈ ದೇಶಕ್ಕೆ ಬಂದಿದ್ದೇನೆ; ರಾಜಕೀಯ ವಿಷಯದಲ್ಲಿ ಸ್ವತಃ ಆಗಲೀ ಪರೋಕ್ಷವಾಗಾಗಲೀ ಯಾವ ಸಂಬಂಧವನ್ನೂ ಇಟ್ಟುಕೊಳ್ಳತಕ್ಕವನಲ್ಲ" ಎಂಬ ವಿಷಯಕ್ಕೆ ನೀವು ಹೊಣೆಯನ್ನು ಕೊಡಬೇಕೆಂದು ತಿಳಿಯಿಸಿದರು. ಅದಕ್ಕೆ ದಾಸರು ಒಪ್ಪಲಿಲ್ಲ. ಕೂಡಲೇ ಆ ಸ್ಥಲವನ್ನು ಬಿಟ್ಟು ಬಾರಾಮುಲಾಕ್ಕೆ ಹೋದರು. ಅಲ್ಲಿಯ ಅಧಿಕಾರಿಗಳು ಇವರನ್ನು ಕಂಡು, ನೀವು ಮುಂದಕ್ಕೆ ಹೋಗಕೂಡದೆಂದೂ ಹೊಣೆಯನ್ನು ಕೊಡದಿದ್ದರೆ ಕಾಶ್ಮೀರ ಸಂಸ್ಥಾನವನ್ನೇ ಬಿಟ್ಟು ಹೋಗಬೇಕೆಂದೂ ಲಿಖಿತವಾದ ಅಪ್ಪಣೆಯನ್ನು ಕೊಟ್ಟರು. ಹೊಣೆಯನ್ನು ಕೊಡಲು ತಿರಸ್ಕರಿಸಿ, ಅವರೆಲ್ಲರೂ ಹಿಂದಿರುಗಿದರು. ದಾಸರಿಗೆ ಜ್ವರೋಪದ್ರವವು ಹೆಚ್ಚಾಗಿದೆಯಂತೆ.

ಈಗ ನೆರೆದಿರುವ ಬೊಂಬಾಯಿ ಶಾಸನ ಸಭೆಯಲ್ಲಿ ಸುಧಾರಿತವಾದ ಲೋಕಲ್ ಬೋರ್ಡ್ ಶಾಸನವು ಒಪ್ಪಿತಕ್ಕಾಗಿ ತರಲ್ಪಡುವುದು. ಇದರ ಪ್ರಕಾರ ಇನ್ನು ಮುಂದೆ ಬೋರ್ಡುಗಳಲ್ಲಿ ಮುಕ್ಕಾಲುಭಾಗ ಪ್ರಜೆಗಳಿಂದ ಆರಿಸಲ್ಪಟ್ಟ ಸಭಿಕರೂ ಕಾಲುಭಾಗ ಪ್ರಭುತ್ವೋದ್ಯೋಗಿಗಳೂ ಇರುವರು. ಸ್ತ್ರೀಯರು ಲೋಕಲ್‌ಬೋರ್ಡು ಮೆಂಬರಾಗಿಯೂ ವೋಟರುಗಳಾಗಿಯೂ ಇರಬಹುದು. ಅಧ್ಯಕ್ಷರನ್ನೂ ಉಪಾಧ್ಯಕ್ಷರನ್ನೂ ಬೋರ್ಡಿನವರೇ ತಮ್ಮಲ್ಲಿ ಆರಿಸಿಕೊಳ್ಳಬಹುದು. ಸರ್ಕಾರದ ಅಧಿಕಾರಿಗಳು ಈ ಪದವಿಗಳನ್ನು ಹೊಂದಕೂಡದು. ಹೊಸ ಕಂದಾಯಗಳನ್ನು ವಿಧಿಸಿಯೂ ನೀರಿನ ಕಂದಾಯವನ್ನು ಹೆಚ್ಚಿಸಿಯೂ ಬೋರ್ಡುಗಳ ವರಮಾನವನ್ನು ವೃದ್ಧಿಪಡಿಸಿಕೊಳ್ಳಬಹುದು. ಇನಾಮ್ದಾರರುಗಳಿಗೆ ಪುರಪಾಲಕ ಸಂಘಗಳಲ್ಲಿ ಕೊಡಲ್ಪಡುತ್ತಿದ್ದ ಪ್ರತ್ಯೇಕ ಪ್ರಾತಿನಿಧ್ಯವು ತಪ್ಪಿಸಲ್ಪಡುವುದು. ಮಹಮ್ಮದೀಯರಿಗೂ ಇತರ ಸ್ವಲ್ಪ ಸಂಖ್ಯಾಕ ವರ್ಗಗಳಿಗೂ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಟ್ಟು ಅಂಥ ಮೆಂಬರನ್ನು ಸರ್ಕಾರದವರೇ ಆರಿಸುವರು. ಈ ಮಸೂದೆಯ ಮೇಲೆ ಚರ್ಚೆ ನಡೆಯುವುದಾಗಿದೆ.

ಕಳೆದ ತಾ|| ೨೦ನೆ ಸಾಯಂಕಾಲ ಸಾಮ್ರಾಜ್ಯಶಾಸನ ಸಭೆಯ ಸಭಿಕರಾದ ೨೫ ಮಂದಿ ಮಹಮ್ಮದೀಯ ಪ್ರಮುಖರು ವೈಸ್‌ರಾಯರಬಳಿಗೆ ಹೋಗಿ ತುರ್ಕಿ ಗ್ರೀಸ್ ಯುದ್ಧ ಸಂಬಂಧದಿಂದ ಭಾರತ ಮಹಮ್ಮದೀಯರಲ್ಲುಂಟಾಗಿರುವ ಅಭಿಪ್ರಾಯವನ್ನು ಹೀಗೆ ತಿಳಿಯಿಸಿದರು —"ಹಿಂದಣ ಯುದ್ಧದಲ್ಲಿ ತುರ್ಕಿಯು ಜರ್ಮನಿಯೊಡನೆ ಸೇರಿದುದು ಅಕ್ರಮಕಾರ್ಯವಾದರೂ ಮತವಿಷಯದಲ್ಲಿ ತುರ್ಕಿಯ ಮೇಲೆ ಮಹಮ್ಮದೀಯರಿಗೆಲ್ಲಾ ತುಂಬಾ ಸಾನುಭೂತಿಯಿರುವುದು. ಈಗಣ ಕೇಮಲ್ ಪಾಷಾರವರ ವಿಜಯದಿಂದ ಮಹಮ್ಮದೀಯರಿಗೆಲ್ಲಾ ಭಾವೋದ್ರೇಕವುಂಟಾಗಿದೆ. ತುರ್ಕಿಯ ಗೌರವಕ್ಕೆ ಭಂಗತರದಂಥ ಸಂಧಿಯು ಜರುಗಬೇಕು. ಥ್ರೇಸು ಅಡ್ರಿಯಾನೋಪಲ್ಲು, ಕಾನ್‌ಸ್ಟಾಂಟಿನೋಪಲ್ಲು, ಚಿಕ್ಕ ಆಸ್ಯಾ, ಸ್ಮಿರ್ನಾ ಇವುಗಳನ್ನು ತುರ್ಕಿಗೆ ಕೊಟ್ಟುಬಿಡಬೇಕು. ತುರ್ಕಿಯ ಹೊಣೆಯಮೇಲೆ ಡಾರ್ಡನಲ್ಸನ್ನು ಕೂಡ ತುರ್ಕಿಗೆ ವಹಿಸಿಬಿಡಬೇಕು. ಸಂಧಿ ನಿಬಂಧನೆಗಳನ್ನು ಚರ್ಚಿಸುವಾಗ ಭರತಖಂಡದ ಮಹಮ್ಮದೀಯ ಪ್ರತಿನಿಧಿಯೂ ಕೂಡ ಇರಬೇಕು." ಇತ್ಯಾದಿ ವಿಜ್ಞಾಪನೆ ಮಾಡಲು, ಇದನ್ನೆಲ್ಲಾ ತಾವು ಆಂಗ್ಲಪ್ರಭುತ್ವಕ್ಕೆ ಶ್ರುತಪಡಿಸುವುದಾಗಿ ವೈಸ್‌ರಾಯರು ಉತ್ತರಕೊಟ್ಟರು.

ಕಳೆದ ತಾ|| 19ರಲ್ಲಿ ಎಲ್ಲ ರಾಜಕೀಯ ಪಕ್ಷದ ಮಹಮ್ಮದೀಯರೂ ಕಲ್ಕತ್ತಾಪಟ್ಟಣದೊಳಗೆ ಫಜಲುಲ್ ಹಕ್‌ರವರ ಅಧ್ಯಕ್ಷತೆಯಿಂದ ದೊಡ್ಡ ಸಭೆಗೂಡಿ ಕೆಮಲ್‌ಪಾಷಾರವರನ್ನೂ ಅವರ ವೀರಸೈನಿಕರನ್ನೂ ಅಭಿನಂದಿಸುವುದಕ್ಕೂ ತುರ್ಕಿ ಗ್ರೀಸ್ ಯುದ್ಧದಲ್ಲಿ ಆಂಗ್ಲರು ಗ್ರೀಸ್ ಪಕ್ಷಪಾತವನ್ನು ಮಾಡುತ್ತಿರುವುದರಿಂದ ಮಹಮ್ಮದೀಯರಿಗೆಲ್ಲಾ ವಿಶೇಷಾಗ್ರಹವುಂಟಾಗಲವಕಾಶವಾಗಿ ಅದರಿಂದ ಬಹು ಪ್ರಮಾದಸಂಭವಿಸುವಂತಿರುವುದು, ಅಂಗೋರಾನಿಧಿಗೆ ಹಣವನ್ನು ಕೂಡಿಸುವುದು, ದೇಶೀಯರೆಲ್ಲರೂ ಖದ್ದರ್ ಬಟ್ಟೆಯನ್ನೇ ಧರಿಸಬೇಕೆಂಬುದು—ಈ ಪ್ರಕಾರವಾದ ತೀರ್ಮಾನಗಳನ್ನು ಮಾಡಿದರು. ಆ ಕಾಲದಲ್ಲಿ ಅಧ್ಯಕ್ಷರೇ ಮೊದಲಾದವರು ಮಾಡಿದ ಪ್ರಸಂಗಗಳು ಬಹಳ ತೀಕ್ಷ್ಣವಾಗಿದ್ದುವು. ಅದರಲ್ಲಿ ಸ್ವಲ್ಪ ಭಾಗವನ್ನು ಇಲ್ಲಿ ಮಾದರಿಗಾಗಿ ಪ್ರಕಟಿಸಿದ್ದೇವೆ-"ಈಗ ಹದ್ದಿನಲ್ಲಿ ಇಟ್ಟುಕೊಳ್ಳಲಾಗದಷ್ಟು ಮಿತಿಮೀರಿದ ಆಗ್ರಹವು ಯುವಕರಲ್ಲುಂಟಾಗಿದೆ. ನಾನಾದೇಶಸಂಘದವರ ಆಜ್ಞೆಯೆಂಬುದೇ ಮೊದಲಾದ ಕಾಡು ನೆಪಗಳನ್ನು ಲಾಯಿಡ್‌ಜಾರ್ಜರು ಹೇಳಿಕೊಂಡರೆ ಅದನ್ನು ನಂಬುವವರಾರಿದ್ದಾರೆ? ಪ್ರಾಣವಿರುವವರೆಗೂ ಮತವನ್ನು ಕಾಪಾಡುವುದು ಮಹಮ್ಮದೀಯ ಧರ್ಮವೆಂದು ಭಗವಂತನೇ ನಿರ್ಣಯಿಸಿದ್ದಾನೆ. ದೇವರ ನಿರ್ಣಯಕ್ಕಿಂತ ನಾನಾದೇಶ ಸಂಘದವರ ನಿರ್ಣಯವು ದೊಡ್ಡದೆ? ಉಳಿದಿರುವ ಮಹಮ್ಮದೀಯ ಸಾಮ್ರಾಜ್ಯದ ನಿರ್ಮೂಲನ ಕಾರ್ಯದಲ್ಲಿ ಆಂಗ್ಲ ದೇಶವೂ ಸೇರಿದರೆ ಆಂಗ್ಲಸಾಮ್ರಾಜ್ಯವು ಮಹಮ್ಮದೀಯ ಮತಕ್ಕೆ ವಿರೋಧಿಯೆಂಬುದು ಸಿದ್ಧವಾಗುವುದು. ಆಗ್ಗೆ ಪ್ರಪಂಚದಲ್ಲಿರುವ ಮಹಮ್ಮದೀಯರೆಲ್ಲರೂ ಮತಕ್ಕಾಗಿ ಮಾಡುವ ಕೊನೆಯ ಮಹಾಯುದ್ಧಕ್ಕೆ ಆಂಗ್ಲ ದೇಶವು ಸನ್ನದ್ಧವಾಗಬೇಕಾಗುವುದು. ಈಗೇನೋ ಮಹಮ್ಮದೀಯರು ಬಲಹೀನರೇ ಆಗಿರಬಹುದು. ಅವರನ್ನು ನಂಬಿಸಿ ವಂಚಿಸಿ ಮೋಸಗೊಳಿಸಲೂ ಬಹುದು. ಆದರೆ ಅದರಿಂದುಂಟಾದ ವೈಮನಸ್ಯವಿಕೆಯು ಮಹಮ್ಮದೀಯ ಪ್ರಪಂಚದಿಂದ ಯಾವಾಗಲಾದರೂ ತೊಲಗಿಹೋಗದೆ ಇರುವುದಿಲ್ಲ. ಮಾಡಲ್ಪಟ್ಟ ಮೋಸವು ಗೊತ್ತಾಗದೆ ಹೋಗುವುದಿಲ್ಲ. ಆಗ ಅವರು ತಮ್ಮ ಮಹಮ್ಮದೀಯ ಮತದ ಶತ್ರುಗಳ ಮೇಲೆ ಹಗೆತೀರಿಸಿಕೊಳ್ಳಲಿಕ್ಕಾಗಿ ಒಟ್ಟಿಗೆ ಸಿಂಹನಾದವನ್ನು ಮಾಡದೆ ಬಿಡರು. ಲಾಯಿಡ್‌ಜಾರ್ಜರ ರಾಜನೀತಿಯು ಲಜ್ಜೆಯಿಲ್ಲದ ಕಪಟನಟನೆಯು. ಇಂಥ ವಂಚನೆಯು ಪ್ರಪಂಚದ ಚರಿತ್ರದಲ್ಲಿ ಇದುವರೆಗೆ ಯಾವಾಗಲೂ ಗೋಚರಿಸಿದುದಿಲ್ಲವೆಂದು ಈಗ ನಾಗರಕ ದೇಶಗಳವರೆಲ್ಲಾ ಚೆನ್ನಾಗಿ ಗ್ರಹಿಸಿಕೊಂಡೇ ಇದ್ದಾರೆ. ಅಸಹಾಯೋದ್ಯಮದಲ್ಲಿ ಇದುವರೆಗೆ ಸೇರದಿದ್ದವರೂ ಕೂಡ ಈಗ ಮುಖ್ಯಮಂತ್ರಿಯವರ ಚರ್ಚೆಯನ್ನು ನೋಡಿ ಅದರಲ್ಲಿ ಸೇರಿಕೊಳ್ಳುವಂತಾಗಿದೆ. ಮುಖ್ಯಮಂತ್ರಿಯವರ ದುರಭಿಮಾನವು ದುಸ್ಸಹವಾಗಿದೆ. ಪೂರ್ವದೇಶ ವಿಷಯದಲ್ಲಿ ಲಾಯಿಡ್‌ಜಾರ್ಜರು ಅವಲಂಬಿಸಿರುವ ರಾಜ್ಯಪದ್ಧತಿಯು ಆಂಗ್ಲದೇಶವನ್ನು ಅಪಖ್ಯಾತಿಯ ಪಾಲುಮಾಡುವುದಲ್ಲದೆ ಪ್ರಾಚ್ಯದೇಶೀಯರಿಗೆಲ್ಲಾ ಪ್ರಬಲವಾದ ಆಗ್ರಹವನ್ನುಂಟುಮಾಡಿದೆ. ಆದುಕಾರಣ ದೇಶೀಯರೆಲ್ಲರೂ ಏಕೀಭವಿಸಿ ಆತನನ್ನು ಮಂತ್ರಿಪದವಿಯಿಂದ ತೊಲಗಿಸಲು ದೃಢಪ್ರಯತ್ನವನ್ನು ಮಾಡಬೇಕು."

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ವಿಜಾಪುರದ ವೃತ್ತಾಂತವು.

ಪ್ರತಿ ವರ್ಷದಂತೆ ಈ ತಡವೆಯಾದರೂ ವೀರಶೈವರ ಪರವಾಗಿ ಹಳೆ ಸಿದ್ಧೇಶ್ವರ ದೇವಾಲಯದಲ್ಲಿ ಗಣೇಶನನ್ನು ಅತಿ ವೈಭವದಿಂದ ಇಟ್ಟು ಪೂಜಿಸಿದರು. ಶುಕ್ರವಾರ ತಾ|| 1-9-22 ದಿವಸ ಇಲ್ಲಿಯ ಪುರದ ಪ್ರಸಿದ್ಧ ವ್ಯಾಖ್ಯಾನಕಾರರಾದ ಶ್ರೀಯುತ ಗುಡಗುಂಟಿ ವಿ.ಎಸ್. ಇವರಿಂದ "ಸದ್ಯದಸ್ಥಿತಿ" ಈ ವಿಷಯದ ಮೇಲೆ ಉಪನ್ಯಾಸಕೊಡಿಸಲ್ಪಟ್ಟಿತು. ಸಭೆಗೆ ವೀರಶೈವ ಅಖಿಲ ಮುಂದಾಳುಗಳೂ ಬರಮಾಡಲ್ಪಟ್ಟಿದ್ದರಲ್ಲದೆ ಇತರ ಸಮಾಜದ ಚಾಲಕರಾದ ಶ್ರೀ ಕೌಜಲಗಿ ಮತ್ತು ಶ್ರೀ ಜಾನವೇಕರ ಪ್ರಭೃತಿಗಳೂ ಕೂಡ ಆಗಮಿಸಿದ್ದರು. ಮುಖ್ಯವಕ್ತೃಗಳಾದ ಶ್ರೀ ಗುಡಗುಂಟಿಯವರು ಸುಮಾರು ಒಂದು ತಾಸಿನವರೆಗೆ ಪಂಚಾಮೃತರಾದ ಸುಶ್ರಾವ್ಯಭಾಷಣ ಮಾಡಿದನಂತರ ಶ್ರೀ ಅಂಗಡೀ ವಕೀಲ ಹಾಗು ಶ್ರೀ ಗುಂಡಪ್ಪಾ ತಾಬಾದಿಯವರ ಸ್ವಲ್ಪ ಭಾಷಣವಾದ ಬಳಿಕ ಅಧ್ಯಕ್ಷರಾದ ಶ್ರೀಮಂತ ಆಲಮೇಲ ದೇಶಮುಖರ ಸಹಾನುಭೂತಿಪರ ಸರಸ ವ್ಯಾಖ್ಯಾನವಾದ ಮೇಲೆ ಸಭೆಯು ಗಜಾನನ ಮಹಾರಾಜಕಿಜಯ, ಬಸವೇಶ್ವರ ಮಹಾರಾಜಕಿಜಯ ಎಂಬೀ ಸುಜಯ ಘೋಷಗಳಲ್ಲಿ ವಿಸರ್ಜಿತವಾಯಿತು. ಜಿ. ಬಿ. ಹಲಕಟ್ಟಿ.

ಬಾಗಲಕೋಟೆ, ನಾಟಕ ಕಂಪೆನಿ.

ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಶಿರಹಟ್ಟಿ ಕರ್ನಾಟಕ ಸಂಗೀತ ನಾಟಕಮಂಡಳಿಯ ಮಾಲಕ ವೆಂಕೋಬರಾವ ಇವರ ಕಂಪೆನಿಯು ಇಲ್ಲಿಗೆ ಬಂದು ಎರಡು ತಿಂಗಳಾಯಿತು. ಈ ಊರಲ್ಲಿ ಪ್ರಹ್ಲಾದ ನಾಟಕವನ್ನು ಇಟ್ಟರೆ ದಂಗೆ ಆಗುವ ಸಂಭವದಿಸೆಯೆಂದು ತಿಳಿದುಕೊಂಡು 1 ತಿಂಗಳಿಂದ ಆಡುವದನ್ನು ಬಿಟ್ಟಿದ್ದರು. ಮುಂದೆ ಕೆಲವು ಜನರ ಚಿತಾವಣೆಯಿಂದ ಇಲ್ಲಿ ರಾವಸಾಹೇಬ ಮಾಮಲೇದಾರರ ಕಡೆಯಿಂದ ಅಪ್ಪಣೆ ತೆಗೆದುಕೊಂಡು ತಾ|| 1-9-1922 ಶುಕ್ರವಾರದ ದಿವಸ ಪ್ರಹ್ಲಾದ ನಾಟಕವನ್ನು ಇಟ್ಟಿದ್ದರು. ಇಲ್ಲಿಯ ಶಿವಭಕ್ತರಾದವರು ಈ ನಾಟಕವನ್ನು ಬಂದು ಇಡುವದರ ದೆಸೆಯಿಂದ ಮೆ|| ಕಲೆಕ್ಟರ್‌ಸಾಹೇಬರ ಕಡೆಯಿಂದ ಪ್ರತಿಬಂಧದ ಹುಕುಮನ್ನು ತಂದರು. ಇದರ ಸಂಬಂಧವಾಗಿ ರಾ|| ಮಾಮಲೇದಾರ ಇವರ ಮನೆಯಲ್ಲಿ ರಾತ್ರಿ 9 ಘಂಟೆವರೆಗೆ ಚರ್ಚೆಯಾಗಿ ಹಿರಣ್ಯಕಶ್ಯಪನ ವಧೆ ಮಾಡುವುದು, ಮತ್ತು ಶಿವನ ನಿಂದಾಪರವಾದ ಶಬ್ದಗಳನ್ನು ಮಾತಾಡುವುದು—ಇವನ್ನು ಬಿಟ್ಟು ಉಳಿದ ಆಟವನ್ನು ಆಡಲಿಕ್ಕೆ ರಾ|| ವೆಂಕೋಬರಾಯರು ಕಬೂಲಮಾಡಿ ರಾ|| ಮಾಮಲೇದಾರ ಇವರಿಗೆ ಲೇಖನವನ್ನು ಬರೆದುಕೊಟ್ಟಿರುತ್ತಾರೆ. ಅದರಂತೆಯೇ ಆ ದಿವಸದ ನಾಟಕವನ್ನು ಆಡಿದರು. ಆಮೇಲೆ ಇದರಂತೆ 5-6 ಆಟವನ್ನು ಸಹ ಆಡಿರುತ್ತಾರೆ. 1-2 ನಾಟಕವನ್ನು ಆಡಿ ಮುಂದೆ ಈ ಕಂಪೆನಿಯು ವಿಜಾಪುರಕ್ಕೆ ಹೋಗುತ್ತದೆಂದು ಕೇಳುತ್ತೇವೆ. ವಿಜಾಪುರದವರೂ ಮತ್ತು ಉಳಿದ ಪ್ರಾಂತದವರೂ ಇದರ ಕಡೆಗೆ ಲಕ್ಷ್ಯಕೊಡುವರೆಂದು ಆಶಿಸುತ್ತೇವೆ. ಶಿವಭಕ್ತ.

ವೀರಶೈವ ಮತೋತ್ತೇಜನ ಹಿತೋಪದೇಶಕ ಸಭೆ.

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲ್ಲೂಕು ಮಹಾಪುಣ್ಯಕ್ಷೇತ್ರದೋಳ್ ಗಖ್ಯಾತವಾದ ಶ್ರೀಮತ್ಕಾನಾಮಡುವಿನ ಗುರುಲಿಂಗ ಜಂಗಮಭಕ್ತಿ ಸೇವಾಧುರೀಣ ಶ್ರೀ ಶರಣಾರ್ಯರವರ ದಾಸೋಹಮಠದಲ್ಲಿ ಇದೇ ದುಂದುಭಿನಾಮ ಸಂವತ್ಸರ ಶ್ರಾವಣ ಬಹುಳ ೧೩ ಸೋಮವಾರ "ಶ್ರೀಮದ್ವೀರಶೈವ ಮತೋತ್ತೇಜನ ಹಿತೋಪದೇಶಕ ಸಭೆಯು" ಜಗದೀಶಸ್ವರೂಪಿಗಳಾದ ಶ್ರೀ ಶರಣಾರ್ಯರವರ ಕೃಪಾಬಲದಿಂದ ಶ್ರೀಮದ್ವೇದ ಮೂರ್ತಿಗಳಾದ ಕೋಗುಂಡೆ ಮಠದ ಪಟ್ಟಾಧ್ಯಕ್ಷರವರೂ, ಶ್ರೀಶರಣ ಚನ್ನಬಸವಸ್ವಾಮಿಗಳವರು ಗುರುಪೀಠವನ್ನಲಂಕರಿಸಿ, ಮ|| ರಾ|| ಜೋಗಿಹಳ್ಳಿಯಲ್ಲಿರುವ ಮಂಗಾಪುರದ ಮಠದ ಜಿ. ಯಂ. ಚಂದ್ರಶೇಖರ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ನಿರ್ವಿಘ್ನವಾಗಿ ನೆರವೇರಿಸಲ್ಪಟ್ಟಿತು. ಈ ಸಭೆಗೆ ಕಾನಾಮಡುವಿನ ವಾಸಿಗಳಾದ ದಾಸೋಹಮಠದ ಏಜೆಂಟು ರುದ್ರಪ್ಪನವರು, ಸಿದ್ಧನಗೌಡರು, ಜೋಗಿಹಳ್ಳಿ ಎ. ಇ. ಸ್ಕೂಲ್ ಹೆಡ್‌ಮಾಸ್ಟರ್ ಜಿ. ಯಂ. ಗಂಗಾಧರಯ್ಯನವರು, ಚಿತ್ರದುರ್ಗ ಡಿಸ್ಟ್ರಿಕ್ಟು ಬೋರ್ಡು ಮೆಂಬರು ಜಮೀನ್ದಾರ್ ಹೊಸಹಳ್ಳಿಗೆ ಬಿ. ಚೆನ್ನೋಬಯ್ಯನವರು ಮುಂತಾದ ಪ್ರಮುಖರುಗಳು ಆಗಮಿಸಿದ್ದರು. ಈ ಸಭೆಯಲ್ಲಿ ವಿದ್ಯಾಪ್ರಚುರತೆಯ ಮಹತ್ವ, ವೀರಶೈವ ಮತ ಸಿದ್ಧಾಂತ ಧರ್ಮದ ಸರ್ವೋತ್ಕೃಷ್ಟತೆ ಈ ವಿಷಯಗಳ ಮೇಲೆ ಸಭಾಧ್ಯಕ್ಷರು ಸಭಾಸೀನರ ಮನಸ್ಸಾಕರ್ಷಣವಾಗುವಂತೆಯೂ, ಮಹದಾನಂದವುಂಟಾಗುವಂತೆಯೂ ಗಂಭೀರವಾಣಿಯಿಂದ ಉಪನ್ಯಾಸಿಸಿದರು. ನಂತರ ಸರ್ವಾಂತರ್ಯಾಮಿಯಾದ ಜಗದೀಶ್ವರನ ಧ್ಯಾನಪೂರ್ವಕವಾದ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ವಿ. ಯಂ. ವೀರಭದ್ರಗೌಡ.

ದೇವನಹಳ್ಳಿ, ತಾಲ್ಲೂಕು ವಡಿಗೇನಹಳ್ಳಿ ವರ್ತಮಾನಗಳು.

ಈಗ ಸುಮಾರು 8-10 ದಿನಗಳಿಂದ ಮಳೆಯಿಲ್ಲ. ಆಗಾಗ್ಗೆ ಮೋಡವಾಡುತ್ತಿದೆ. ಮಳೆಯು ಮಾತ್ರ ಬೀಳದೆ ಜನರು ಆಕಾಶವನ್ನು ಬಹು ಆತುರದಿಂದ ನೋಡುತ್ತಿದ್ದಾರೆ. ಕೆರೆಗೆ ನೀರು ಇನ್ನೂ ಬಂದಿರುವುದಿಲ್ಲ. ಧಾರಣೆವಾಸಿಗಳು ಒಂದೇ ಸಮನಾಗಿವೆ, ಈ ಊರಿನಲ್ಲಿ ಪೋಲೀಸು ಸಿಬ್ಬಂದಿಯು ಈಗ ಆರು ತಿಂಗಳಿಂದ ದಫೇದಾರ್‌ರವರ ಮ್ಯಾನೇಜುಮೆಂಟಿನಿಂದ ತೃಪ್ತಿಕರವಾಗಿದೆ. ಮತ್ತು ಟರ್ನ್ ಡ್ಯೂಟಿ ಬಹಳ ಮುತುವರ್ಜಿಯಿಂದ ಕಳ್ಳಕಾಕರಿಗೆ ಆಸ್ಪದವಿಲ್ಲದಂತೆ ನೋಡುತ್ತಿದ್ದಾರೆ. ಇದು ತುಂಬಾ ಸ್ತೋತ್ರಾರ್ಹವಾಗಿದೆ. ಪಂಚಮರ ಕೇರಿಯಲ್ಲಿ ಇನ್ನೂ ಪ್ರತಿನಿತ್ಯವೂ ಮರಣಗಳಾಗುತ್ತಲಿವೆ ಮತ್ತು 14ನೇ ತಾರೀಖಿನ ವೃತ್ತಾಂತಪತ್ರಿಕೆಯಲ್ಲಿ ನೂತನವಾಗಿ ಸಬ್ ಅಸಿಸ್ಟೆಂಟ್ ಸರ್ಜನ್‌ರಾಗಿ ಆಕ್ಟಿಂಗ್ ಆಗಿ ಬಂದಿರುವವರನ್ನು ಕೊಂಡಾಡಿರುವುದು ನೋಡಿದರೆ ಶೋಚನೀಯವಾಗಿದೆ. ಈ ಊರಿನಲ್ಲಿ ಪಂಚಮರ ಮನೆಗಳು 100ರ ಮೇಲಿದ್ದು 250 ಪ್ರಜಾಸಂಖ್ಯೆಯುಳ್ಳವರಾಗಿರುತ್ತಾರೆ. ಇವರ ಪಾಳ್ಯದಲ್ಲಿ ಯಾವುದೋ ಒಂದು ವಿಧವಾದ ಅಂಟುರೋಗದಿಂದ 120ರ ವರೆಗೆ ಇವರ ಕಾಲದಲ್ಲಿಯೇ ಮರಣಗಳಾಗಿರುವುದನ್ನು ನೋಡಿದರೆ ಇವರ ಮುತುವರ್ಜಿಯೆಷ್ಟೆಂಬುದು ದೃಷ್ಟಾಂತವಾಗುತ್ತದೆ. ಡಾಕ್ಟರವರು ಮತ್ತು ಪಟೇಲರು ಈ ಪಂಚಮರ ಕೇರಿಯಲ್ಲಿ ನಡೆದ ಮರಣಗಳ ವಿಷಯವನ್ನು ಎಷ್ಟರಮಟ್ಟಿಗೆ ರಿಪೋರ್ಟುಮಾಡಿರುತ್ತಾರೋ ಆ ವಿಷಯ ನಮಗೆ ಸಂಶಯವಾಗಿದೆ. ಜಮೀನ್ದಾರರು ಮತ್ತು ಪ್ರಜಾಸೇವಕರು ಎಂಬದಾಗಿ ಹೊಗಳಿಸಿಕೊಂಡ ದೊಡ್ಡ ಮನುಷ್ಯರಿಗೆ ಈ ಊರಿನಲ್ಲಿ ನಡೆದ ಮುನಿಸಿಪಲ್ ಎಲೆಕ್ಷನ್ನಿನಲ್ಲಿ ಓಟು ಬಾರದೆಯಿದ್ದದ್ದು ಮತ್ತು ವೈಸ್ ಪ್ರಸಿಡೆಂಟ್ ಎಲೆಕ್ಷನ್ನಿನಲ್ಲಿ ಹಿಂದೆ ಬಿದ್ದದ್ದು ಮತ್ತು ತಾಲ್ಲೂಕು ಬೋರ್ಡಿನಲ್ಲಿ ಸಹ ಓಟುಬಾರದೆ ಗೌರ್ನಮೆಂಟ್ ಅಧಿಕಾರಿಗಳ ಪ್ರೀತಿಗೊಳಪಟ್ಟು ನಾಮಿನೇಷನ್ ದೊರೆತದ್ದು ಇವರು ಪ್ರಜಾಸೇವಕರು ಎನ್ನುವುದು ಈ ಮೂರು ಕಾರಣಗಳಿಂದ ತಿಳಿಯಬರುತ್ತದೆ. ಮತ್ತು ಈ ಊರಿನಲ್ಲಿ ಪಾರ್ಟಿಗಳಿವೆ ಎಂಬದಾಗಿ ಬರೆದಿರುವ ಮಹನೀಯರೇ ಈ ಪಾರ್ಟಿಗಳಿಗೆ ಮೂಲಕಾರಣರಾಗಿರುವುದರಲ್ಲಿ ಏನೂ ಸಂದೇಹವಿಲ್ಲ. ಈ ಗ್ರಾಮದ ಎ. ವಿ. ಸ್ಕೂಲ್ ಹೆಡ್‌ಮಾಸ್ಟರವರು ಹಿಂದುಳಿದ ಬಾಲಕರ ವಿದ್ಯಾ ಪ್ರೋತ್ಸಾಹಕ್ಕೆ ಹೆಚ್ಚು ನಿಗಾ ಕೊಡದೆ ಇರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ದಿನೇದಿನೇ ಕಡಿಮೆಯಾಗುತ್ತಾ ಬರುತ್ತಿದೆ. ಎಲ್ಲಾ ಎ. ವಿ. ಸ್ಕೂಲುಗಳಲ್ಲಿಯೂ ಘನಹೊಂದಿದ ಸರ್ಕಾರದವರು ಸ್ಕೂಲ್ ಫೀ ಮಾಫ್‌ಮಾಡಿರುವುದು ಹಿಂದುಳಿದ ಪ್ರಜೆಗಳಿಗೆ ಅನುಕೂಲವಿದ್ದರೂ ಕಾರಣಾಂತರಗಳ ನೆಪದಿಂದ ಈ ಎ. ವಿ. ಸ್ಕೂಲಿನಲ್ಲಿ ಫೀಜು ವಸೂಲುಮಾಡುವುದು ತಪ್ಪಲಿಲ್ಲ. ಹಾಲಿ ಈ ತಿಂಗಳಿನಲ್ಲಿ 2 ರೂಪಾಯಿನಂತೆ ಫೀಜುಕೊಡಬೇಕೆಂದು ಬಾಲಕರನ್ನು ಒತ್ತಾಯಮಾಡುವುದೂ ಡಿಸ್ಮಿಸ್‌ಮಾಡುತ್ತೇನೆಂದು ಹೆದರಿಸುವುದೂ ಬಹಳವಾಗಿದೆ ಕಾರಣವನ್ನು ಘನಸರ್ಕಾರದವರು ವಿಚಾರಿಸಬೇಕು. ಮಿಕ್ಕ ವಿಷಯಗಳನ್ನು ಮುಂದೆ ಬರೆಯುತ್ತಿರುತ್ತೇನೆ. ಪ್ರಜಾಸೇವಕ.

ದೇವನಹಳ್ಳಿ ತಾ|| ವಡಿಗೇನಹಳ್ಳಿ. (ಮತ್ತೊಂದುಪತ್ರ)

ಈ ಪ್ರಾಂತ ಮಳೆಯಿಲ್ಲ. ಬೆಳೆಗಳು ಚೆನ್ನಾಗಿರುತ್ತವೆ. ರೈತರು ಮಳೆ ಬರುವುದನ್ನು ಎದುರುನೋಡುತ್ತಲಿದ್ದಾರೆ. ಊರಿನ ಸುತ್ತುಮುತ್ತಣ ಗ್ರಾಮಗಳಲ್ಲಿ ಪ್ಲೇಗು ಪ್ರಾರಂಭವಾಗಿದೆ. ಈ ಊರಿನಲ್ಲಿ ಪಂಚಮರ ಕೇರಿಯಲ್ಲಿ ಈ ಗಲಾಟೆ ಕಡಿಮೆಯಾಗುತ್ತಾ ಬರುತ್ತಲಿದೆ. ಇಲ್ಲಿಯ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರವರು ಸರ್ಕಾರಿ ಕೆಲಸಗಳಲ್ಲಿ ತುಂಬಾ ಆಸಕ್ತರಾಗಿ ಪ್ರಜಾಹಿತಚಿಂತಕರಾಗಿರುತ್ತಾರೆ. ಮ್ಯುನಿಸಿಪಲ್ ಲಾಂದ್ರಗಳು ಬಹಳ ಚೆನ್ನಾಗಿ ಉರಿಯುತ್ತಲಿವೆ. ಈ ಊರಿನಲ್ಲಿ ಒಂದು ರೀಡಿಂಗ್‌ರೂಂ ಕಟ್ಟಬೇಕೆಂಬದಾಗಿ 10-12 ವರ್ಷಗಳ ಲಾಗಾಯಿತು ಪ್ರಯತ್ನಮಾಡುತ್ತಿದ್ದರು. ಯಾವುದೋ ಕಾರಣಾಂತರಗಳಿಂದ ನಿಂತುಹೋಗಿದ್ದಿತು. ಈಗ ಈ ಊರಿನಲ್ಲಿ ಸ್ಥಾಪಿತವಾಗಿರುವ ಪ್ರಜಾಮಿತ್ರಮಂಡಲಿಯವರು ಬಹು ಶ್ರದ್ಧೆವಹಿಸಿ ಜಾಗ್ರತೆ ತಯಾರು ಮಾಡಿಸಬೇಕೆಂದು ಕೆಲಸ ಮಾಡಿಸುತ್ತಿರುವುದು ತುಂಬಾ ಸ್ತೋತ್ರಾರ್ಹವಾಗಿದೆ. ಈ ಊರಿನಲ್ಲಿ ಬಜ್ಜಪ್ಪನವರ ರುದ್ರಪ್ಪ ಎಂಬುವರು ತಾ|| 19-9-22 ನೆ ಮಂಗಳವಾರ ಈ ಊರಿಗೆ 3 ಮೈಲಿ ಫಾಸಲೆಯಿರುವ ನಾಗಮಂಗಲಕ್ಕೆ ಸೀರೆಗಳನ್ನು ಕೊಂಡುಕೊಂಡು ಬರುವುದಕ್ಕಾಗಿ ಹೋಗುತ್ತಿದ್ದಾಗ ಮಧ್ಯೆ ದಾರಿಯಲ್ಲಿ ನೀರಿನ ಕಾಲುವೆಯಲ್ಲಿ ಹೋಗುತ್ತಿದ್ದಾಗ ಅಕಸ್ಮಾತ್ ಸೆಳವು ಬಂದು ನೀರಿನಲ್ಲಿ ಕೊಚ್ಚಿಹೋಗಿ ಮರಣವನ್ನೈದಿದರು. ಅವರಿಗೆ ಈ ರೀತಿ ಅಕಸ್ಮಾತ್ ಮರಣ ಸಂಭವಿಸಿದ್ದಕ್ಕಾಗಿ ನಾವುಗಳು ತುಂಬಾ ವ್ಯಸನಪಡುತ್ತೇವೆ. ಈ ಊರುಮುಂದೆ ಇರುವ ಛತ್ರದ ಬಾಗಿಲಿನಲ್ಲಿ ಒಬ್ಬ ಬೇವಾರಸಿಯು ಯಾವುದೋ ಕಾರಣಾಂತರಗಳಿಂದ ಸತ್ತುಹೋದನು. ಸ್ಥಲನಿವಾಸಿ.

ಕದಡಿ.

"ವೀರಶೈವ ಕುಡಿಒಕ್ಕಲಿಗರ ಸಭೆಯು"

ಗದಗ ತಾ|| ಕದಡೀಗ್ರಾಮದಲ್ಲಿ ಕುಡಿಒಕ್ಕಲಿಗರ ಸಮಾಜದ ಸಭೆಯು ನೆರೆದು ಈ ಕೆಳಗೆ ಬರೆದ ಠರಾವುಗಳು ಪಾಸಾದವು. 1ನೆ ಠರಾವು—ಕುಡಿಒಕ್ಕಲಿಗರ ಸಮಾಜದವರೆಲ್ಲರೂ ನಮ್ಮನ್ನಾಳುವ ಬ್ರಿಟಿಷ್ ಸರ್ಕಾರ

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿ !!

ಕೋಕಶಾಸ್ತ್ರವು

ಪ್ರತ್ಯಕ್ಷಫಲ ಪಂಚಸಿದ್ಧಿ.

ವೀರಶೈವ ಸೇವಾಸಮಾಜ, ತುಮಕೂರು.

ಪ್ರಕಟನೆ.

ರಾಯಲ್ ಬ್ಲ್ಯಾಕ್ ಫೆನ್.



ಲಿಲ್ಲಿ ಆಫ್ ದಿ ವ್ಯಾಲಿ.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧನ್ವಂತರಿ ಲಕ್ಷ್ಮೀ ಅಂಡ್ ಕೊ

ಪೋಸ್ಟ್ ಬಾಕ್ಸ್ ನಂ. 268, ಮದರಾಸ್.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
33 ಬಳ್ಳಾರಿ.

೧೯೨೨ನೆಯ ಇಸವಿ ಅಕ್ಟೋಬರ್ ತಾ|| ೧ ರಿಂದ ೧೯೨೨ ನೆಯ ಅಕ್ಟೋಬರ್ ತಾ|| ೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಆಶ್ವಯುಜ ಶುದ್ಧ ಏಕಾದಶಿಯಿಂದ ಆಶ್ವಯುಜ ಬಹುಳ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ. ವಾಸ
1	ಭಾನು	ಏಕಾ	38-15	ಶ್ರವ	22-30	15
2	ಸೋಮ	ದ್ವಾದ	41-36	ಧನಿ	27-5	16
3	ಮಂಗಳ	ತ್ರಯೋ	46-4	ಶತ	32-41	17
4	ಬುಧ	ಚತು	51-5	ಪೂಭಾ	38-53	18
5	ಗುರು	ಪೌರ್ಣ	56-32	ಉಭಾ	45-7	19
6	ಶುಕ್ರ	ಪಾಡ್ಯ	60	ರೇವ	52-1	20
7	ಶನಿ	ಪಾಡ್ಯ	1-38	ಅಶ್ವಿ	8-9	21

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವಕಾರಾ ಪಕ್ಷಜ್ಞ ನಕ್ಷತ್ತ ನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಅಕ್ಟೋಬರ್ ತಾರೀಖು ೮ ನೆಯ ಭಾನುವಾರ. (ಸಂಚಿಕೆ ೪೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ...

ಸಿನಿಮೋಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಟ) ಗಳನ್ನು ಹಾಕುವಾಗಲೂ...

ಬಂಗುದಿ ರುದ್ರಾಕ್ಷಿ ಅಂಚಿನ ಸೀರೆಗಳು.

ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 512, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನಿ ಬೆಳ್ಳಿಯ ರಿಸ್ಟ್ ವಾಚ್.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ವಿಳಾಸ: ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ಸೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋಧಯ.

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಲಾಸ್ಟ್ ಬಲತರಂಗ ಅನ್ನುವ ಸಂಗೀತಪೆಟ್ಟಿಗೆ

ಈ ತಿಂಗಳ ಕೊನೇವರೆಗೂ ಅರ್ಧ ಕ್ರಯ.

ಪಾಕೆಟ್ ಸಿನಿಮಾಸ್ಕೋಪ್ ಯಂತ್ರ.

ವಿಳಾಸ—ರತ್ನಂ ಅಂಡ್ ಬ್ರದರ್ಸ್,
11 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಕ್ಕೆ ರಾಜನಿಷ್ಠೆಯಿಂದ ಇರಬೇಕೆಂದು ಈ ಸಭೆಯು ಇಚ್ಛಿಸುತ್ತದೆ. 2ನೆ ಠರಾವು—ಶ್ರೀಮಂತ ಸರ್ ದೇಸಾಯಿ ಶಿರಸಂಗೀಕರ ಇವರು ಕೊಟ್ಟ ಉದಾರ ದೇಣಿಗೆಯಲ್ಲಿ ನಮ್ಮ ಜಾತಿಯ ವಿದ್ಯಾರ್ಥಿಗಳಿಗೆ ಮೊದಲು ಸಹಾಯಮಾಡಬೇಕೆಂದು ಶ್ರೀಮಂತರವರ ಉದ್ದೇಶವು ಇರುತ್ತದೆ. ಆ ಉದ್ದೇಶವನ್ನು ನೆರವೇರಿಸಲಿಕ್ಕೆ ಸಾಕಷ್ಟು ಪ್ರಯತ್ನಗಳಾಗಿಲ್ಲ. ಕಾರಣ ಶ್ರೀಮಂತರ ಉದ್ದೇಶವನ್ನು ಅನುಲಕ್ಷಿಸಿ ಸಹಾಯಮಾಡಬೇಕು. ಬರೇ ಯೋಗ್ಯರಾದ ವಿದ್ಯಾರ್ಥಿಗಳಿಗೆ ಮತ್ತು ಬಡವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪನ್ನು ಕೊಡುತ್ತೇವೆಂದು ಅನ್ನುವದರಿಂದ ಇನ್ನೂ ನೂರಾರು ವರ್ಷಗಳವರೆಗಾದರೂ ನಮ್ಮ ಸಮಾಜವು ಜಾಗ್ರತಿಗೊಳ್ಳಲಾರದೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಬೇನೆಬಿದ್ದವನು ವೈದ್ಯನಕಡೆಗೆ ಹೋಗಲಿಕ್ಕೆ ಅಸಮರ್ಥನಿದ್ದರೆ ವೈದ್ಯನೇ ಬೇನೆಯವನ ಹತ್ತರ ಹೋಗಬೇಕಾಗುವದು. ಇದೇ ಸ್ಥಿತಿಯು ನಮ್ಮ ಸಮಾಜದ್ದು ಆದೆ. ಆದ್ದರಿಂದ ನಮ್ಮ ಪರಿಸ್ಥಿತಿಯನ್ನು ತಿಳಿದು ನಮ್ಮನ್ನು ಜಾಗ್ರತಿಗೊಳಿಸುವದಕ್ಕೆ ವಿಶೇಷ ಪ್ರಯತ್ನಗಳನ್ನು ಮಾಡಬೇಕೆಂದು ಈ ಸಭೆಯು ಈ ಫಂಡಿನ ಪ್ರೆಸಿಡೆಂಟರವರಿಗೆ ವಿನಂತಿಮಾಡಿಕೊಳ್ಳುತ್ತದೆ. 3ನೆ ಠರಾವು—ನಮ್ಮ ಸಮಾಜವು ವಿದ್ಯೆಯಲ್ಲಿ ಬಹಳ ಹಿಂದುಳಿದು ನಿದ್ರಾವಸ್ಥೆಯಲ್ಲಿರುತ್ತದೆ. ಇವರಲ್ಲಿ ಯಾವನೊಬ್ಬ ವ್ಯಾಸಾದವರೂ ಹಾಗೂ ಯಾವದೊಂದು ಸರ್ಕಾರಿ ಉದ್ಯೋಗದಲ್ಲಿರುವವರೂ ಯಾರೂ ಇಲ್ಲ. ಈಪ್ರಕಾರ ಕೆಳಗೆಬಿದ್ದ ಈ ಜನರಿಗೆ ವಿದ್ಯೆ ಕಲಿಯುವ ಕಲ್ಪನೆ ಹಾಗೂ ಅಭಿಲಾಷೆ ಸುತರಾಂ ಇರುವುದಿಲ್ಲ. ಆದ್ದರಿಂದ ಫಂಡಿನ ಸಹಾಯದಿಂದ ಕೆಲವು ಯೋಗ್ಯರಾದ ಉಪದೇಶಕರನ್ನು ನಮ್ಮ ಸಮಾಜದಲ್ಲಿ ವಿದ್ಯೆಯಬಗ್ಗೆ ಜಾಗ್ರತಿಯನ್ನು ಮಾಡಲಿಕ್ಕೆ ನೇಮಿಸಬೇಕೆಂದು ಈ ಫಂಡಿನ ಪ್ರೆಸಿಡೆಂಟರವರಿಗೆ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. 4ನೆ ಠರಾವು—ಈಗಿದ್ದ ಸರ್ಕಾರಿ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ನಮ್ಮ ವಿದ್ಯಾರ್ಥಿಗಳು ವಾಸಮಾಡುವುದರ ಹಾಗೂ ಊಟದವಸತಿಯಿಂದ ಪ್ರತ್ಯೇಕ ವಸತಿಗೃಹಗಳನ್ನು ಕಟ್ಟಿಸಿಕೊಡಬೇಕೆಂದು ಈ ಸಭೆಯು ಪ್ರೆಸಿಡೆಂಟರವರಿಗೆ ಬೇಡಿಕೊಳ್ಳುತ್ತದೆ. 5ನೆ ಠರಾವು—ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಕಲಿಯುವ ಕುಡಿಒಕ್ಕಲಿಗರ ವಿದ್ಯಾರ್ಥಿಗಳಿಗೆ ಶಿರಸಂಗೀಕರರ ಸ್ಕಾಲರ್‌ಷಿಪ್ಪನ್ನು ಸಾಕಷ್ಟು ಕೊಟ್ಟಿರುವುದಿಲ್ಲ. ಇದರಿಂದ ಈ ಸಮಾಜಕ್ಕೆ ಅಸಮಾಧಾನವುಂಟಾಗಿದೆ. ಕಾರಣ ಸಾಕಷ್ಟು ಸ್ಕಾಲರ್‌ಷಿಪ್ಪನ್ನು ಅಂದರೆ ಪ್ರತಿ ತಿಂಗಳ ಕನಿಷ್ಠ ಪಕ್ಷಕ್ಕೆ (30) ರೂಪಾಯಿ ಕೊಡಬೇಕೆಂದು ಈ ಸಭೆಯು ಈ ಫಂಡಿನ ಪ್ರೆಸಿಡೆಂಟರಿಗೆ ವಿನಂತಿಮಾಡಿಕೊಳ್ಳುತ್ತದೆ.

ಧರಮಗೌಡ ಪೋಲೀಸ್‌ಪಾಟೀಲ, ಸಾ॥ ಕದಡಿ.

ವೀರಶೈವ ಸೇವಾಸಮಾಜ, ತುಮಕೂರು.

ಇಲ್ಲಿನ ಶ್ರೀ ಸೋಮೆಶೆಟ್ಟಿ ಮಠದಲ್ಲಿ ನಡೆಯುತ್ತಿರುವ ವೀರಶೈವ ವಿದ್ಯಾರ್ಥಿನಿಲಯಕ್ಕೆ ಶ್ರೀಗುರು ಚೆನ್ನಬಸವದೇವರು ಸಕಲ ಪಾತ್ರೆಗಳನ್ನು ದಯಪಾಲಿಸಿರುವುದೂ, ಮತ್ತು ಪ್ಲೀಡರ್ ಗುರುಸಂಗಾರ್ಯರು ಈ ನಿಲಯದ ಪರಿಚಾರಕನಿಗೆ ಒಂದು ವರ್ಷದ ಸಂಬಳವನ್ನು ಉಚಿತವಾಗಿ ಕೊಡುತ್ತಿರುವುದೂ ಅಭಿನಂದನೀಯವಾಗಿದೆ. ಇದರಂತೆಯೇ ಸರಸ್ಥಳದ ವೀರಶೈವ ಬಡವಿದ್ಯಾರ್ಥಿಗಳಿಗೆ ತಮ್ಮ ಸ್ವಂತಮನೆಗಳಲ್ಲಿಯೇ ಉಚಿತವಾಗಿ ಭೋಜನದ ವ್ಯವಸ್ಥೆಯನ್ನು ಮಾಡಿಕೊಟ್ಟಿರುವ ನಮ್ಮ ಪ್ಲೀಡರವರೂ ಮ॥ ರಾ॥ ಗುಬ್ಬಣ್ಣನವರೂ, ಮ॥ ಟಿ. ಸಿ. ರೇವಣ್ಣನವರೇ ಮೊದಲಾದ 7-8 ಮಂದಿ ವೀರಶೈವ ಮಹನೀಯರು ಕೃತಜ್ಞತೆಗೆ ಅರ್ಹರಾಗಿದ್ದಾರೆ. ಇವರಂತೆ ಎಲ್ಲರೂ ಉದಾರವಾಗಿ ಪ್ರೋತ್ಸಾಹಿಸಿದರೆ ನಮ್ಮ ವಿದ್ಯಾರ್ಥಿಗಳ ಕಷ್ಟವು ನಿವಾರಣೆಯಾಗಬಹುದು. ಆದರೂ ಶ್ರೀ ಜಗದ್ಗುರು ಮಹಾಸ್ವಾಮಿಯವರ ಅನುಗ್ರಹದಿಂದ ಹೊಸ ಕಟ್ಟಡವನ್ನು ಜಾಗ್ರತೆ ನೆರವೇರಿಸಬೇಕಾದದ್ದು ಮುಖ್ಯ ಕರ್ತವ್ಯವಾಗಿದೆ. ಈ ಸೇವಾಸಮಾಜದವರು 4-9-22 ರಲ್ಲಿ - ಶ್ರೀ ಜಯದೇವ ಭಜನಾಮಂದಿರವನ್ನು ಮೈಸೂರು ಶಿವಕಥಾ ವೇ॥ ಶ್ರೀ॥ ಶಿವಯ್ಯಶಾಸ್ತ್ರಿಗಳವರ ಪ್ರೋತ್ಸಾಹದಿಂದ ಸ್ಥಾಪಿಸಿಕೊಂಡು, ಅಂದಿನಿಂದಲೂ ಪ್ರತಿ ಸೋಮವಾರವೂ ಶಿವಭಜನೆಯನ್ನು ನೆರವೇರಿಸುತ್ತಿರುವದೂ ಮತ್ತು ಇದರ ಕಾರ್ಯದರ್ಶಿಗಳಾದ ಶಿವಕಥಾ ಶ್ರೀ ಡಿ. ವೀರಣ್ಣನವರ ಮತ್ತು ಮ॥ ಟಿ. ಹೆಚ್. ಗುಬ್ಬಯ್ಯನವರ ಪ್ರೋತ್ಸಾಹದಿಂದ ಅನೇಕ ವೀರಶೈವರು ಬಲ್ಲಿದರು ಬಡವರು ಎಂಬ ಭೇದಭಾವನೆಯಿಲ್ಲದೆ ಏಕಮತ್ಯದಿಂದ ಶಿವಭಕ್ತಿಯುತರಾಗಿ ನೆರೆಯುತ್ತಿರುವದು ಸಹ ಬಹಳ ಸ್ತುತ್ಯರ್ಹವಾಗಿದೆ. ಈ ಸಂಘವು ಚಿರಸ್ಥಾಯಿಯಾಗಿ ಸರ್ವರಲ್ಲಿ ಶಿವಭಕ್ತಿಯನ್ನು ದೃಢೀಕರಿಸಲೆಂಬುವದೇ ಕೋರಿಕೆ. ಮೇಲ್ಕಂಡ ಶಿವಕಥಾ ವೇ॥ ಶಿವಯ್ಯಶಾಸ್ತ್ರಿಗಳವರು ಇಲ್ಲಿ ಅರಳೇಪೇಟೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ 13-9-22 ನೆ ರಾತ್ರೆ ಶರಭಲೀಲಾ ಎಂಬ ಶಿವಕಥೆಯನ್ನು ನಡೆಸಿದಾಗ ಸ್ಥಳವರಸ್ಥಳದ ಪ್ರೇಕ್ಷಕಸಮೂಹವು 1000ಕ್ಕೆ ಮಿಗಿಲಾಗಿಯೇ ಇದ್ದು ಶಿವಕಥಾಶ್ರವಣದಿಂದ ಧನ್ಯವಾಯಿತು. ತರುವಾಯ ಇಲ್ಲಿನ ವೀರಶೈವ ಸಮಾಜದವರ ಕೋರಿಕೆಯಂತೆ ವೇ॥ ಶಾಸ್ತ್ರಿಗಳವರು 17-9-22 ನೆ ಸಾಯಂಕಾಲ 5 ಘಂಟೆಯಿಂದ ಶ್ರೀ ಕೃಷ್ಣರಾಜೇಂದ್ರ ಟವರ್‌ಹಾಲಿನಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರಾದ ಮಿ॥ ಜಹಿರುದ್ದೀನ್ ಮೆಕ್ಕೆ, ಬಿ.ಎ., ಯವರ ಅಧ್ಯಕ್ಷತೆಯಲ್ಲಿ "ಜಗನ್ಮಿತ್ರವಿಲಾಸ" ವೆಂಬ ನೂತನ ಕಥೆಯನ್ನು ನವರಸಾಲಂಕಾರಯುಕ್ತವಾಗಿಯೂ ಸುಶ್ರಾವ್ಯವಾಗಿಯೂ ಗಂಭೀರವಾಗಿಯೂ ನೆರವೇರಿಸಿ ಸಭಾಸದರಿಗೆಲ್ಲಾ ಆನಂದವನ್ನುಂಟುಮಾಡಿದರು. ಆಗ್ಗೆ ವೀರಶೈವರೇ ಅಲ್ಲದೆ ಅನೇಕ ಬ್ರಾಹ್ಮಣರೂ, ಸ್ಥಳೀಯಾಧಿಕಾರಿಗಳೂ, ಲಾಯರುಗಳೂ, ವರ್ತಕರೇ ಮೊದಲಾದ ಪರಮತದ ಮಹಾಶಯರೆಲ್ಲಾ ದಯಮಾಡಿಸಿ ಕರ್ಣಾನಂದವಂ ಹೊಂದಿ ಶಾಸ್ತ್ರಿಗಳನ್ನು ವಂದಿಸಿದರು. ವೀರಶೈವ ಮಹಾಜನಗಳ ಕೋರಿಕೆಯಂತೆ ಅಧ್ಯಕ್ಷರು ಗೋರಕ್ಷಣದ ಅವಶ್ಯಕತೆಯನ್ನು ಕುರಿತು ಸದುಪದೇಶವನ್ನಿತ್ತು ತಮ್ಮ ದಿವ್ಯಹಸ್ತದಿಂದ ವೇ॥ ಶಾಸ್ತ್ರಿಗಳವರಿಗೆ ಸಮಾಜದ ಕೃತಜ್ಞತಾಪರವಾದ ಭಂಗಾರದ ಪದಕವನ್ನು ಧರಿಸಿದನಂತರ ವಂದನಾಪೂರ್ವಕವಾಗಿ ಸಭೆಯು ವಿರಮಿಸಲ್ಪಟ್ಟಿತು.

ಪ್ರೇಕ್ಷಕ.

ಶ್ರೀಮದ್ವೀರಶೈವ ಸ್ಟೂಡೆಂಟ್ಸ್‌ಹೋಂ, ಚಿಕ್ಕಮಗಳೂರು.

ಸ್ವಾಮಿ,

ಈ ಹೋಮಿನ ಅವ್ಯವಸ್ಥೆಯ ದೆಸೆಯಿಂದ ಬಾಲಕರ ಸಂಖ್ಯೆಯು ಬಹಳವಾಗಿ ಕಡಿಮೆಯಾಗುತ್ತಾ ಬರುತ್ತದೆ. ಸದ್ಯ ಬಾಲಕರ ಸಂಖ್ಯೆಯು 34 ಇದೆ. ಇರತಕ್ಕ ಬಾಲಕರಿಗಾದರೂ ಅನ್ನೋದಕಗಳ ವ್ಯವಸ್ಥೆಯು ಅವರ್ಣನೀಯವಾಗಿರುವುದು. ಈ ಹೋಮಿನ ಪ್ರೆಸಿಡೆಂಟ್ ಎಂಬ ಹೆಸರು ತೆಗೆದುಕೊಂಡಿರುವ ಶ್ರೀ ಸ್ವಾಮಿಗಳವರು ಈ ಹೋಮಿನಲ್ಲಿ ವ್ಯಾಸಂಗಮಾಡುವ 6 ಮಂದಿ ಬಾಲಕರ ಅನ್ನೋದಕಗಳಿಗೆ ಫ್ರೀಯಾಗಿ ಅನುಕೂಲಮಾಡಿಕೊಡುವುದಾಗಿ ವಾಗ್ದಾನಮಾಡಿ ಅಬಗ್ಗೆ 18 ಸಾವಿರ ರೂಪಾಯಿಗಳು ಬೇಕಾಗುವುದೆಂದು ಹೇಳಿ ತಮ್ಮ ಶಿಷ್ಯಮಂಡಲಿಯಿಂದ ಸುಮಾರು 12 ಸಾವಿರ ರೂಪಾಯಿಗಳನ್ನು ಚಂದಾಎತ್ತಿಕೊಂಡು ತಮಗೆ ಬೇಕಾದವರಲ್ಲಿ ಬಡ್ಡಿಗೆ ಕೊಟ್ಟುಕೊಂಡು ಅದನ್ನು ತಮ್ಮ ಸ್ವಾರ್ಥಹಿತಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವರು. ಈ ಪೈಕಿ ಒಂದೂವರೆ ಸಾವಿರ ರೂಪಾಯಿಗಳು ಮಾತ್ರ ಹೋಮಿನ ಉಪಯೋಗಕ್ಕಾಗಿ ಕೊಡಲ್ಪಟ್ಟಿರುವುವು. ಇನರ ಲ್ಲಿರುವ ಹಣವನ್ನು ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಕಮಿಟಿ ಹೆಸರಿನಿಂದ ಡಿಪಾಜಿಟ್ ಮಾಡಿಸಬೇಕೆಂದು ಮೊದಲನೆ ಜನರಲ್ ಕಮಿಟಿ ಮೀಟಿಂಗಿನಲ್ಲಿಯೇ (5 ವರ್ಷದ ಹಿಂದೆಯೇ) ಠರಾವಾಗಿದ್ದು, ಈಚೆಗೆ ಆಗಾಗೆ ನಡೆದ ಮಾಸಿಕ ಮೀಟಿಂಗಿನಲ್ಲಿ ಖರ್ಚಿನ ಅನುಕೂಲತೆಯನ್ನು ಸೂಚಿಸಿ ಕೇಳಿಕೊಂಡರೂ ಅದೆಲ್ಲವೂ ಅರಣ್ಯರೋದನವಾಗಿ ಪರಿಣಮಿಸಿತು. ಕೊನೆಕೊನೆಗೆ ಮಾಸಿಕ ಮೀಟಿಂಗುಗಳೆಲ್ಲವೂ ಮಾಯವಾದವೆಂದು ಹೇಳಿದರೆ ಜನರಲ್ ಕಮಿಟಿ ಮೀಟಿಂಗಿನ ಮಾತುಗಳು ಜಿಜ್ಞಾಗುವುದೊಂದಾಶ್ಚರ್ಯವೇ? ಶೈಶವಾವಸ್ಥೆಯಲ್ಲಿರುವ ಈ ಸಮಾಜದ ವಿದ್ಯಾಸುಧಾರಣೆಯನ್ನು ಆದಿಯಲ್ಲಿ ಸುಲಲಿತವಾಗಿ ನಡೆಸಲು ಈ ಪ್ರಾಂತ್ಯ ಮನೆಯೊಂದರ 4 ಸೇರು ದವಸದಂತೆಯೂ ವಿವಾಹ ಒಂದರ 5 ರೂಪಾಯಿನಂತೆಯೂ ಈ ಹೋಮಿಗೆ ಕೊಡತಕ್ಕದೆಂದು ಇವರ ಸನ್ನುಖದಲ್ಲಿಯೇ ನಿರ್ಣಯವಾಗಿದ್ದರೂ ಆ ನಿರ್ಣಯಗಳೆಲ್ಲವೂ ಇವರ ಕಾಲದಲ್ಲಿಯೇ ನಿರ್ನಾಮವಾಗಿ ಹೋದವು. ಮಾಹೆಯಾನಾ 6 ರೂಪಾಯಿನಂತೆ ಬೋರ್ಡಿಂಗ್ ಫೀಜ್ ಕೊಡುವ ಯಾವ ಒಬ್ಬ ವೀರಶೈವ ವಿದ್ಯಾರ್ಥಿಗೂ ಈ ಹೋಮಿಗೆ ಸೇರಿ ವ್ಯಾಸಂಗಮಾಡಲು ಅನುಕೂಲ ಕಲ್ಪಿಸಲ್ಪಟ್ಟಿರುವುದು. ಇದರ ಮೇಲೆ ಬಾಲಕರ ಯೋಗ್ಯತಾನುಸಾರ ಫ್ರೀ ಆಫ್ ಫ್ರೀ ಮೊದಲಾದದ್ದನ್ನು ಕಮಿಟಿಯವರ ತೀರ್ಮಾನದಂತೆ ಪಡೆದುಕೊಳ್ಳಬಹುದಾಗಿದೆ. ಸದ್ಯ ಈ ಶ್ರೀ ಸ್ವಾಮಿಗಳವರ ಅಪ್ಪಣೆಯನ್ನು ಪಡೆದ 5 ಮಂದಿ ಬಾಲಕರು ಫ್ರೀ ಬೋರ್ಡಿಂಗ್ ಪಡೆಯುತ್ತಾ ಇದ್ದಾರೆ. ಇನ್ನು ಕೆಲವರು 1-2 ರೂಪಾಯಿಗಳಂತೆ ರಿಯಾಯತಿಯನ್ನು ಪಡೆದುಕೊಂಡಿದ್ದಾರೆ. ಫ್ರೀ ಬೋರ್ಡಿಂಗ್ ಪಡೆದ ವಿದ್ಯಾರ್ಥಿಗಳಲ್ಲಿ ಕೆಲವರು ಇವರ ಕೇವಲ ರಕ್ತಸಂಬಂಧಿಗಳು. ಈರೀತಿ ಫ್ರೀ ಬೋರ್ಡಿಂಗ್ ರಿಯಾಯತಿಯನ್ನು ಪಡೆದ ವಿದ್ಯಾರ್ಥಿಗಳ ಖರ್ಚಿನ ಬಗ್ಗೆ ಇವರು ಒಂದು ಕಾಸನ್ನಾದರೂ ಕಮಿಟಿಗೆ ಜಮಾಕೊಟ್ಟಿರುವರೇ? ಅಡುಗೆಯವರೇ ಮೊದಲಾದ ಎಲ್ಲಾ ಖರ್ಚುಗಳೂ ಬೋರ್ಡಿಂಗ್ ಛಾರ್ಜುಕೊಡುವ ಬಾಲಕರ ಹಣದಿಂದಲೇ ವ್ಯವಸ್ಥೆಯಾಗಬೇಕು. ದಿನ ಬೆಳಗಾದರೆ ಹುಡುಗರು ಹಣ್ಣು ಮುಳುಗಾಯಿ ಹುಳಿಅನ್ನವನ್ನು ತಿಂದು ಮಧ್ಯಾಹ್ನದ ತನ್ನ ಉದರಾಧಾರಕ್ಕೆ ಒಂದು ತಿಂಡಿಯಾದರೂ ಇಲ್ಲವೆಂದು ಉಪವಾಸ ಮಾಡಿ ಉಸ್ ಎಂದು ನಿಟ್ಟುಸುರು ಬಿಡುತ್ತಿರುವರು. ಇದರೊಂದಿಗೆ ಅಲ್ಪಸಂಬಳವನ್ನು ಪಡೆದ ಅಡುಗೆಯವರ ಪಲಾಯನದಿಂದುಂಟಾದ ಫಲವನ್ನೂ ಅನುಭವಿಸಬೇಕು. ಹೋಮಿನ ಸುತ್ತಮುತ್ತಣ ಹೊಲಸಂತೂ ಹೇಳತೀರದು. ಈಚೆಗೆ ನಿಯಮಿತರಾಗಿರುವ ಎಜ್ಯುಕೇಷನ್ ಸೂಪರ್‌ವೈಜರ್ ಮಿ॥ ಗೋವಿಂದರಾಯರವರು ಇವೆಲ್ಲವನ್ನೂ ಚೊಕ್ಕಟಮಾಡಿಸಿ ಹೋಮಿನ ಅವ್ಯವಸ್ಥೆಯನ್ನು ಸುಧಾರಿಸಿ ಸರಿಪಡಿಸಲು ಸಾಹಸಪಡುತ್ತಿರುವರು. ಆದರೇನು? ಅಕ್ಕಿಯಿಲ್ಲದೆ ಅಡುಗೆಯನ್ನು ಮಾಡಲು ಸಾಧ್ಯವೇ? ಪೂಜ್ಯರೆ, ಯಾವ ಸಮಾಜದ ಸಹಾಯದಿಂದ ಸುಖಜೀವಿಗಳಾಗಿ ಬಾಳಿದರೂ ಅಂತಹ ಸಮಾಜಕ್ಕೆ ಸಹಾಯಲೇಶವನ್ನೂ ಮಾಡದೆ ಹುಣಿಗಳಾಗಿ ಶಿವಲೋಕಪ್ರಾಪ್ತಿ ಸನ್ನಿಹಿತಕಾಲದಲ್ಲಿಯೂ ಬಾಲಭುಕ್ತಾನ್ನಭಾಗಿಗಳಾದ ತಮ್ಮ ಭಾಗ್ಯಭೋಗವೇ ಭೋಗ! ಸಮಾಜಬಾಂಧವರೇ, ಅಗುಳನ್ನು ಎಷ್ಟಾವರ್ತಿ ಅದುಮಿ ನೋಡುವಿರಿ? ಅನರ್ಥಕ್ಕೆ ಗುರಿಯಾದ ಮೇಲೆ ಅನುತಾಪಪಡುವಿರಾ? ಕಾಲಮಹಿಮೆಯನ್ನು ಕಣ್ಣುಬಿಟ್ಟು ಪರಾಂಬರಿಸಿ ಆಳುವ ಮಹಾಸ್ವಾಮಿಯವರು ಆದಿಯಲ್ಲಿಯೇ ಅನುಗ್ರಹಿಸಿರ ಅಭಯದಾನವನ್ನು ಅರಿತುಕೊಳ್ಳದೆ ಅಜ್ಞರಾಗುವರೆ? ಕಾಲಪುರುಷನೇ ಕಾಲಾನುಗುಣ್ಯವಾದ ಕೌಶಲಸರಣಿಗೆ ನಾವುಗಳು ಅನುವರ್ತಿಗಳಾಗುವಂತೆ ಅನುಗ್ರಹವನ್ನು ಆಶೀರ್ವದಿಸು.

ಹೋಮಿನ ಅಭಿಮಾನಿ.

ಪ್ರಕಟನೆ.

ಸಮಸ್ತ ಅಂಬಿಗ (ಗಂಗಿ) ಮತಸ್ಥರಿಗೆ ಈ ಜಾಹಿರಾತಿನಿಂದ ತಿಳಿಸುವದೇನೆಂದರೆ:—ಕಳೆದ ಮಹಾಶಿವರಾತ್ರಿಯ ಕಾಲಕ್ಕೆ ಶರಣಚೌಡಯ್ಯನ ಐಕ್ಯಸ್ಥಾನವೂ ವ ಅಂಬಿಗ ಮತಸ್ಥರ ಗುರುಸ್ಥಾನವೂ ಆದ ಚೌಡದಾನಪುರದಲ್ಲಿ ಅಖಿಲ ಅಂಬಿಗ ಜಾತಿಯ ಮಹಾಸಭೆಯು ಜರುಗಿದ್ದು ವರ್ತಮಾನ ಪತ್ರಗಳಿಂದ ಸರ್ವ ಅಂಬಿಗ (ಗಂಗಿ) ಮತದ ಜನರಿಗೂ ತಿಳಿದಿರಬಹುದು. ಸದರಿ ಸಭೆಯಲ್ಲಿ ಮುಖ್ಯಮುಖ್ಯ ಪ್ರಾಂತಗಳ ಯಾವತ್ತೂ ಅಂಬಿಗಮತಸ್ಥರಿಂದ ಒಂದು ಕಮಿಟಿಯು ಸ್ಥಾಪನೆಯಾಗಿದ್ದು ಅದರಲ್ಲಿ 7 ಜನರು ಮ್ಯಾನೇಜಿಂಗ್ ಕಮಿಟಿಯ ಮೆಂಬರಾಗಿ ಆರಿಸಲ್ಪಟ್ಟಿದ್ದಾರೆ. ಈ ಕಮಿಟಿಗೆ (ಅಖಿಲ ಅಂಬಿಗ ಅಸೋಸಿಯೇಷನ್) ಎಂದು ಗೊತ್ತುಪಡಿಸಿರುತ್ತದೆ. ಕಾರಣ ಅಂಬಿಗ (ಗಂಗಿ) ಮತಸ್ಥರಲ್ಲಿ ಯಾರಾದರೂ ಮುಲ್ಕಿಪರೀಕ್ಷೆ ಪಾಸಾದವರಾಗಲಿ ದೇಶಭಾಷೆಯ ಕಾಲೇಜಿಗೆ ಸೇರಿದವರಾಗಲಿ ಅಥವಾ ಇಂಗ್ಲೀಷ ಮೆಟ್ರಿಕ್‌ಪಾಸಾದವರಾಗಲಿ ತಮ್ಮ ತಮ್ಮ ಇಚ್ಛಾನುಸಾರವಾಗಿ ನೌಕರಿಯಲ್ಲಿ ಸೇರಲಿಕ್ಕೆ ಅಪೇಕ್ಷಿಸುವವರು ಕೆಳಗೆ ಸಹಿಮಾಡಿದವರ ಕಡೆಗೆ ತುಮ್ಮ ತಮ್ಮ ಕ್ವಾಲಿಫಿಕೇಶನ್ ಸಹಿತ ಅರ್ಜಿಮಾಡಿದಲ್ಲಿ ಆಯಾಯ ಡಿಪಾರ್ಟಮೆಂಟಿನ ಮುಖ್ಯ ಅಮಲ್ದಾರರ ಕಡೆಗೆ ಮೇಲ್ಕಾಣಿಸಿದ ಕಮಿಟಿಯವರು ವಿಚಾರಮಾಡಿ ಸದರಿ ಅರ್ಜಿಗಳನ್ನು ಶಿಫಾರಸ್ ಮಾಡುವದರಲ್ಲಿ ಬರುವಕಾರಣ ಹಿಂದುಳಿದವರೂ ಅಲ್ಪವಿದ್ಯಾವಂತರೂ ಆದ ಸದರಿ ಮತಸ್ಥರು ಈ ಸುಸಂಧಿಯನ್ನು ಕಳಕೊಳ್ಳದೆ ನಮ್ಮ ಕಡೆಗೆ ಅರ್ಜಿಗಳನ್ನು ಕಳಿಸತಕ್ಕದ್ದು.

ಪುಟ್ಟರಾಜಒಡೆಯರು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಳ್ಳ

9 ರಾಯಲ್ ಪೌಂಟನ್‌ಪೆನ್.



ಎಂಬ ಈ ಪೇನಾವನ್ನು ಅಮೇರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿದಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ

ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿಂ!!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಪತ್ಯದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೨-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಷ್ಟಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮುಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗ್ಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,

ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

33 ಬಳ್ಳಾರಿ.

೧೯೨೨ನೆಯ ಇಸವಿ ಅಕ್ಟೋಬರ್ ತಾ॥ ೧ ರಿಂದ ೧೯೨೨ ನೆಯ ಅಕ್ಟೋಬರ್ ತಾ॥ ೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮಸಂವತ್ಸರದ ಆಶ್ವಯುಜ ಶುದ್ಧ ಏಕಾದಶಿಯಿಂದ ಆಶ್ವಯುಜ ಬಹುಳ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾಮಾಸ
1	ಭಾನು	ಏಕಾ	38-15	ಶ್ರವ	22-30	15
2	ಸೋಮ	ದ್ವಾದ	41-36	ಧನಿ	27-5	16
3	ಮಂಗಳ	ತ್ರಯೋ	46-4	ಶತ	32-41	17
4	ಬುಧ	ಚತು	51-5	ಪೂಭಾ	38-53	18
5	ಗುರು	ಪೌರ್ಣ	56-32	ಉಭಾ	45-7	19
6	ಶುಕ್ರ	ಪಾಡ್ಯ	60	ರೇವ	52-1	20
7	ಶನಿ	ಪಾಡ್ಯ	1-38	ಅಶ್ವಿ	8-9	21

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಜ್ಞನಕ್ಷತ್ರ ಮೋಹರಾಜೀಯಾತ್ ॥

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥

ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳೆಯಂಗದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦]

[ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಅಕ್ಟೋಬರ್ ತಾರೀಖು ೮ ನೆಯ ಭಾನುವಾರ. (ಸಂಚಿಕೆ ೪೧

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿಯೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ.ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹಳಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಆತಿಥ್ಯಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾತನಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ॥ ವಿದ್ವಾನ್ ಎಂ. ಆರ್. ಕರಿಬಸವಶಾಸ್ತ್ರಿಗಳು,

ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಿನಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಷೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.

,, ನಂ. 2 ರೂ. 7—8—0.

29 ವಿಳಾಸ—ಎಸ್. ಪಾಲ್ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



11

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.

ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.



ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರನಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0

,, ,, ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,

ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲುಯೆಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.

25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

38 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ತ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧ ಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋಪ್ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಪ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 50 ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,

11 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಮೈಸೂರು ವೀರಶೈವ ಸಂಘ.

ಕಳೆದ ತಾ|| ೧೮ ರ ಬೆಳಗ್ಗೆ ಧರ್ಮಪ್ರಕಾಶ ಡಿ. ಬನುಮಯ್ಯನವರ ಶಾಲಾಭವನದಲ್ಲಿ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ.ಐ.ಇ. ಯವರ ಅಧ್ಯಕ್ಷತೆಯಿಂದ ಒಂದು ವೀರಶೈವ ಸಭೆಯು ಮೈಸೂರು ವೀರಶೈವ ಸಂಘದವರ ಆಹ್ವಾನಪ್ರಕಾರ ಕೂಡಿದ್ದಿತು. ಪ್ರಜಾಪ್ರತಿನಿಧಿ ಸಭೆಗೂ ನವರಾತ್ರಿಯ ಉತ್ಸವಕ್ಕೂ ಬಂದಿದ್ದ ಅನೇಕ ಮಂದಿ ವೀರಶೈವ ದೊಡ್ಡ ಮನುಷ್ಯರುಗಳೂ ಸ್ಥಳದ ವೀರಶೈವ ಮಹಾಜನರೂ ನೆರೆದಿದ್ದರು. ವೀರಶೈವ ಸಮಾಜದಲ್ಲಿ ವಿದ್ಯಾಭಿವೃದ್ಧಿ ಸಂಪದಭಿವೃದ್ಧಿ, ಧರ್ಮಶ್ರದ್ಧೆ, ರಾಜಕೀಯಾಭ್ಯುದಯ-ಇತ್ಯಾದಿಗಳನ್ನು ಉಂಟುಮಾಡಲು ಸಾಧಕವಾಗುವಂತೆ ಒಂದು ಧನನಿಧಿಯನ್ನು ಕೂಡಿಸಿ, ಅದರ ವೃದ್ಧ್ಯಂಶದಿಂದ ಉದ್ದಿಷ್ಟಕಾರ್ಯಗಳನ್ನು ಸಾಗಿಸಬೇಕೆಂಬ ಮತ್ತು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಸಹೋದರ ಸಂಘವಾಗಿ ಇದು ಕೆಲಸಮಾಡಲು ಉದ್ದೇಶಪಟ್ಟಿರುವುದೆಂಬ ವಿಷಯಗಳೂ, ಕಳೆದ ೨-೩ ವರ್ಷಗಳಿಂದ ಈ ಸಂಘವು ನಿರ್ವಹಿಸಿರುವ ಕೆಲಸಗಳೂ ಸಹ ಸೆಕ್ರಟರಿಯವರು ಓದಿದ ವರದಿಯಿಂದ ಗೊತ್ತಾಯಿತು. ಸಮಾಜದ ಅಭ್ಯುದಯಕ್ಕೆ ಇಂಥ ಸಂಘಗಳು ಪ್ರತಿ ಡಿಸ್ಟ್ರಿಕ್ಟಿನಲ್ಲೂ ತಾಲ್ಲೂಕುಗಳಲ್ಲೂ ಸಹ ಏರ್ಪಡುವುದು ಅವಶ್ಯಕವಾಗಿರುವುದು. ರಾಜಧಾನಿಗೆ ಪ್ರತಿವರ್ಷವೂ ದೇಶದ ಎಲ್ಲಾ ಪ್ರಾಂತಗಳಿಂದ ವೀರಶೈವ ಮಹನೀಯರು ಬರುತ್ತಿರುವ ಕಾರಣ ಸಿರಾಯಾಸವಾಗಿ ಅವರ ಸಹಾ...

...ಮಾತ್ರ ಮೂಲೆಹಿಡಿದು ಕುಳಿತಂತಾಗಿದೆ. ಮಹಾಸಭೆಯು ಇಲ್ಲಿ ನಡೆದರೆ ಈ ಡಿಸ್ಟ್ರಿಕ್ಟಿನ ಸಮಾಜ ಬಾಂಧವರಲ್ಲಿ ಗೂಡುಕಟ್ಟಿಕೊಂಡಿರುವ ಆಲಸತೆಯು ತೊಲಗಿ ಕಾಲೋಚಿತವಾದ ಅಭ್ಯುದಯದ ದಾರಿಯನ್ನು ಹಿಡಿಯಲು ಈ ಪ್ರಾಂತದವರು ಇತರರಾರಿಗೂ ಕಡಿಮೆಯಲ್ಲವೆಂದು ತೋರಿಸಿಕೊಳ್ಳುವರೆಂಬುದರಲ್ಲಿ ಸಂಶಯವಿಲ್ಲ. ಡಿಸೆಂಬರ್ ತಿಂಗಳೆಂಬುದು ದೂರವಾಗಿಲ್ಲ. ಕಾರ್ಯಕಾರಿ ಸಂಘದವರು ಇಂದಿನಿಂದಲೇ ಮುಂದಣ ಕೆಲಸಗಳಿಗೆ ತ್ವರೆಪಡಬೇಕಾಗಿದೆ. ಬಡವರು ಬಲ್ಲಿದರು, ವಿದ್ಯಾವಂತರು ಅವಿದ್ಯಾವಂತರು ಮೊದಲಾದ ಸಕಲರಿಗೂ ಮನವು ಒಂದೇ ಆಗಿರುತ್ತದೆ. ಮಹಾಸಭೆಯ ಕಾರ್ಯವು ಸರ್ವರಿಗೂ ಸ್ವಂತ ಕಾರ್ಯವು. ಆದುಕಾರಣ ಪ್ರತಿಯೊಬ್ಬರೂ ಅವರವರ ಯಥಾಶಕ್ತಿ ಸಹಾಯಮಾಡಿ ನಿರ್ವಿಘ್ನವಾಗಿಯೂ ವೈಭವದಿಂದಲೂ ಮಹಾಸಭೆಯು ನೆರವೇರುವಂತೆ ಮಾಡಿ ಕೀರ್ತಿಯನ್ನು ತಂದುಕೊಳ್ಳುವವರಾಗಬೇಕು.

ಶ್ರೀಮಾನ್ ಎಚ್. ಲಿಂಗರಾಜ ಅರಸರವರ ಸನ್ಮಾನಸಮಾರಂಭ.

ನಮ್ಮ ಶ್ರೀಮನ್ಮಹಾರಾಜರವರ ಸನ್ನಿಧಿಯ ಮುಜರಾಯಿ ಭಕ್ಷಿಯವರಾಗಿರುವ ಶ್ರೀಮಾನ್ ಎಚ್. ಲಿಂಗರಾಜ ...

ಭೋಜೌಪಮ್ಯಮುಪಾಗತಸ್ಯ ಸದಸಿ ಶ್ರೀ ಕೃಷ್ಣರಾಜಪ್ರಭೋಃ |
ಪ್ರಾಪ್ತಸ್ತ್ವಂ ಕವಿಕಾಲಿದಾಸತುಲನಾಮದ್ಯಾಸಿ ಧೀಮಾನ್ಕವಿಃ ||೧||
ಯಸ್ಮಾತ್ತ್ವಂ ನೃಪವಂಶಜಸ್ಸ್ವನಿಯತಂ ಕಾರ್ಯಂ ಸದಾ ನಿರ್ವಹನ್ |
ವೈರಾಮೇಽಪಿ ಸುಖಾನುಭೂತಿವಿಮುಖಃ ಕಾಲೇ ಕರೋಽರೀದೃಶಮ್ ||
ಗ್ರನ್ಥಂ ಸರ್ವಜನೋಪಕಾರಧಿಷಣಾನುನ್ನಂ ಪ್ರಪೂರ್ಣಂ ರಸೈಃ |
ತಸ್ಮಾತ್ತುಷ್ಟಿಮುಪಾಗತಾ ವಯಮಮೀ ಪೌರಾಃ ಕೃತಜ್ಞಾಸ್ತವ ||೨||
ದೇವಸ್ಸರ್ವಜನೀನವೃತ್ತಿರಖಿಲೈರ್ದೋಷೈರ್ವಿಮುಕ್ತೋ ವಿಭುಃ |
ದತ್ತಾತ್ತೇಽವಹಿತಸ್ಯ ಪೂಜ್ಯಭಗವಾನಾರೋಗ್ಯದೀರ್ಘಾಯುಷೀ ||
ಪಾಯಾದಿತ್ಥಮಮೀ ಸದಾ ಪುರಗುಣಾಂ ಸಮ್ಪ್ರಾರ್ಥಯಾಮೋಹರಿಮ್ |
ಪೌರಾಃ ಕಾರ್ಯವಿದಸ್ತ್ವದೀಯಕವಿತಾಚಾತುರ್ಯತುಷ್ಟಾ ವಯಮ್ ||೩||
ಹೇದೀನಬನ್ಧೋ ಗುಣಪಕ್ಷಪಾತಿನ್ | ಸೂರೇ ದಯಾಪೂರಿತ ಚಿತ್ತವೃತ್ತೇ ||
ಸಮ್ಪಾದಿತೇಯಂ ಶುಭಪದ್ಯಮಾಲಾ | ತುಭ್ಯಂ ಪ್ರಮೋದೇನ ಸಮರ್ಪ್ಯತೇದ್ಯ ||೪||

ವೇ|| ಎ. ಶಾಂತರಾಜಶಾಸ್ತ್ರಿಗಳು,
ನ್ಯಾಯತೀರ್ಥ

ಇವುಗಳಲ್ಲಿ ಕನ್ನಡ ಪದ್ಯಗಳನ್ನು ಕೈ|| ಸಿದ್ಧಲಿಂಗಶಾಸ್ತ್ರಿಗಳ ಮಕ್ಕಳು ವೀರಭದ್ರಪ್ಪನವರು ಬಹಳ ಮನೋಹರವಾಗಿ ರಾಗಗಳಿಂದ ಓದಿದರು. ಸಂಸ್ಕೃತ ಕವನಗಳನ್ನು ರಚಿಸಿದವರುಗಳೇ ಓದಿದರು. ಬಳಿಕ ಮಹಾರಾಜಾಸ್ಥಾನ ಸಂಗೀತ ...

ತಾವು ನಮ್ಮಗಳ ಪ್ರಾರ್ಥನೆಯನ್ನು ತಿರಸ್ಕರಿಸದೆ, ಅಲ್ಪತರವಾದ ನಮ್ಮ ಸತ್ಕಾರಗಳನ್ನು ಸ್ವೀಕರಿಸಲು ಅಂಗೀಕರಿಸಿ, ದಯಮಾಡಿಸಿದುದಕ್ಕಾಗಿ ಕೃತಜ್ಞತೆಯಿಂದ ನಾವುಗಳು ತಮ್ಮನ್ನು ವಂದಿಸುತ್ತೇವೆ.

ಮೈಸೂರು ಪುರವಾಸಿಗಳು

ಬಳಿಕ ಬಹುಮಾನಾರ್ಥವಾದ ಬೆಳ್ಳಿಯ ವ್ಯಾಸಪೀಠವನ್ನೂ ಬೆಳ್ಳಿಯ ಪೆಟ್ಟಿಗೆಯನ್ನೂ ಅಧ್ಯಕ್ಷರು ತಮ್ಮ ಬಲಗಡೆಯಲ್ಲಿ ಕುಳಿತಿದ್ದ ಮ|| ಎಚ್. ಲಿಂಗರಾಜ ಅರಸಿನವರ ಹಸ್ತಕ್ಕೆ ಕೊಟ್ಟು, ಹಾರ ತುರಾಯಿಗಳನ್ನರ್ಪಿಸಿದರು. ಮತ್ತು ಈ ಕೆಳಗೆ ಕಂಡಂತೆ ತಮ್ಮ ಭಾಷಣವನ್ನು ಮಾಡಿದರು.—

ಈ ಸನ್ಮಾನಾರಂಭದ ಮ್ಯಾನೇಜಿಂಗ್ ಕಮಿಟಿಯವರು ಈ ಸಭೆಗೆ ಅಧ್ಯಕ್ಷತೆಯನ್ನು ವಹಿಸಲು ನನ್ನನ್ನು ಕೋರಿದಾಗ ಬಹಳ ಸಂತೋಷದಿಂದ ಅದಕ್ಕೆ ನನ್ನ ಸಮ್ಮತಿಯನ್ನು ಕೊಟ್ಟೆನು. ಏತಕ್ಕೆಂದರೆ ದೇಶಭಾಷಾಸೇವೆಯನ್ನು ಸ್ಮರಣೀಯವಾದ ರೂಪದಲ್ಲಿ ಮಾಡಿದ ಒಬ್ಬ ದೊಡ್ಡ ...

... ಟಕ ದೇಶದ ಸಕಲ ಪ್ರಜೆಗಳೂ ಇವರ ಭಾಷಾ ಸೇವಾರೂಪವಾದ ಉಪಕೃತಿಯಿಂದ ಬದ್ಧರಾಗಿರುತ್ತಾರೆ. ಈ ಗ್ರಂಥರಚನೆಯ ಮೂಲಕ ಶಾಶ್ವತವಾದ ಯಶಸ್ಸಂಪತ್ತಿಯನ್ನು ಮ|| ಅರಸಿನವರು ಸಂಪಾದಿಸಿಕೊಂಡು ಧನ್ಯಜನ್ಮರಾಗಿರುತ್ತಾರೆ. ಜಗದೀಶ್ವರನು ಇವರಿಗೆ ಚಿರಕಾಲಾಯುರಾರೋಗ್ಯಗಳನ್ನು ಅನುಗ್ರಹಿಸಿ ಹೀಗೆಯೇ ಇನ್ನು ಕೆಲವು ಗ್ರಂಥಗಳನ್ನು ರಚಿಸುವ ಯೋಗವನ್ನುಂಟುಮಾಡಿಕೊಡಲೆಂದು ಸಭಿಕರೆಲ್ಲರ ಪರವಾಗಿ ನಾನು ಕೋರುತ್ತೇನೆ.

ಇದಕ್ಕೆ ಮ|| ಅರಸಿನವರು ಕೊಟ್ಟ ಪ್ರತ್ಯುತ್ತರ:—

ಸಭಾಧ್ಯಕ್ಷರೆ, ಸಭಾಸದರೆ:—

ನಾನು ಸಂಸ್ಕೃತವನ್ನಾಗಲಿ ಕನ್ನಡವನ್ನಾಗಲಿ ಕ್ರಮವಾಗಿ ಅಭ್ಯಾಸಮಾಡಿದವನಲ್ಲ. ಭಾರತ ಜೈಮಿನಿ ಮುಂತಾದ ಕೆಲವು ಕರ್ನಾಟಕ ಗ್ರಂಥಗಳನ್ನು ಪಠನ ಮಾಡಿದ ಅಭ್ಯಾಸಬಲದಿಂದ ಈ ರಾಮಾಯಣ ಸಂಗ್ರಹವನ್ನು ಬರೆದೆನು.

...

... ಮಂತ ವರ್ಧಮಾನಯ್ಯನರು ಮ್ಯು|| ಕೌನ್ಸಿಲರು ಮ|| ಗಳಾದ ಮಾಧವರಾಯರು, ಧನಕೋಟಿಶೆಟ್ಟರು ಮೊದಲಾದವರನ್ನು ಮನಃಪೂರ್ವಕವಾಗಿ ಅಭಿನಂದಿಸುವೆವು.

ಪ್ರಜಾಪ್ರತಿನಿಧಿಸಭೆ.

ಈ ಸಭೆಯು ಕಳೆದ ತಾ|| ೨ನೆ ಸೋಮವಾರ ಆರಂಭಿಸಲ್ಪಟ್ಟಿತು. ಪಬ್ಲಿಕ್ ಆಫೀಸಿನ ಸಭಾಂಗಣವು ಪದ್ಧತಿಯಂತೆ ಅಲಂಕರಿಸಲ್ಪಟ್ಟಿದ್ದಿತು. ಅಧ್ಯಕ್ಷಪೀಠದ ಜಗತಿಯ ... ಗೊತ್ತಾಗಿದ್ದ ಆಸನಗಳ ಮೇಲೆ ಕೌನ್ಸಿಲರುಗ...ಯನ್ನು ಮುಖ್ಯಾಧಿಕಾರಿಗಳೂ ಡಿ|| ಕಮಿಷನರು ...ಸ್ ಕಮಿಟಿ ... ದವರು ಮಂಜೂ ... ಮಹಾರಾಜರ ಹುಜೂರು, ಪ್ರೈವೇಟ್ ... ಆಗಿ ಈ ಪ್ರದೇಶಕ್ಕೆ ... ಷಡ್ ಆಫೀಸರುಗಳೂ ಕೆಲಮ... ದಿಯು ಅವಶ್ಯಕವಾಗಿದೆ ... ನಿಯರೂ ದೊಡ್ಡಮನುಷ್ಯರುಗ... ರಮಾಡಿ ರಿಪೋರ್ಟನ್ನು ಕಳು... ಗಳ ಸ್ಥಲಗಳೆಲ್ಲಾ ತುಂಬಿ ... ಸ್ಪೆಕ್ಟರ್ ಜನರಲ್‌ರವರಿಗೆ ಅಪ್ಪಣೆ

ಮೈಸೂರು ವೀರಶೈವ ಸಂಘ.

ಕಳೆದ ತಾ|| ೧೭ ಬೆಳಗ್ಗೆ ಧರ್ಮಪ್ರಕಾಶ ಡಿ. ಬನುಮಯ್ಯನವರ ಶಾಲಾಭವನದಲ್ಲಿ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ.ಐ.ಇ. ಯವರ ಅಧ್ಯಕ್ಷತೆಯಿಂದ ಒಂದು ವೀರಶೈವ ಸಭೆಯು ಮೈಸೂರು ವೀರಶೈವ ಸಂಘದವರ ಆಹ್ವಾನಪ್ರಕಾರ ಕೂಡಿದ್ದಿತು. ಪ್ರಜಾಪ್ರತಿನಿಧಿ ಸಭೆಗೂ ನವರಾತ್ರಿಯ ಉತ್ಸವಕ್ಕೂ ಬಂದಿದ್ದ ಅನೇಕ ಮಂದಿ ವೀರಶೈವ ದೊಡ್ಡ ಮನುಷ್ಯರುಗಳೂ ಸ್ಥಳದ ವೀರಶೈವ ಮಹಾಜನರೂ ನೆರೆದಿದ್ದರು. ವೀರಶೈವ ಸಮಾಜದಲ್ಲಿ ವಿದ್ಯಾಭಿವೃದ್ಧಿ ಸಂಪದಭಿವೃದ್ಧಿ, ಧರ್ಮಶ್ರದ್ಧೆ, ರಾಜಕೀಯಾಭ್ಯುದಯ—ಇತ್ಯಾದಿಗಳನ್ನು ಉಂಟುಮಾಡಲು ಸಾಧಕವಾಗುವಂತೆ ಒಂದು ಧನನಿಧಿಯನ್ನು ಕೂಡಿಸಿ, ಅದರ ವೃದ್ಧ್ಯಂಶದಿಂದ ಉದ್ದಿಷ್ಟಕಾರ್ಯಗಳನ್ನು ಸಾಗಿಸಬೇಕೆಂಬ ಮತ್ತು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಸಹೋದರ ಸಂಘವಾಗಿ ಇದು ಕೆಲಸಮಾಡಲು ಉದ್ದೇಶಪಟ್ಟಿರುವುದೆಂಬ ವಿಷಯಗಳೂ, ಕಳೆದ ೨-೩ ವರ್ಷಗಳಿಂದ ಈ ಸಂಘವು ನಿರ್ವಹಿಸಿರುವ ಕೆಲಸಗಳೂ ಸಹ ಸೆಕ್ರೆಟರಿಯವರು ಓದಿದ ವರದಿಯಿಂದ ಗೊತ್ತಾಯಿತು. ಸಮಾಜದ ಅಭ್ಯುದಯಕ್ಕೆ ಇಂಥ ಸಂಘಗಳು ಪ್ರತಿ ಡಿಸ್ಟ್ರಿಕ್ಟಿನಲ್ಲೂ ತಾಲ್ಲೂಕುಗಳಲ್ಲೂ ಸಹ ಏರ್ಪಡುವುದು ಅವಶ್ಯಕವಾಗಿರುವುದು. ರಾಜಧಾನಿಗೆ ಪ್ರತಿ ವರ್ಷವೂ ದೇಶದ ಎಲ್ಲ ಪ್ರಾಂತಗಳಿಂದ ವೀರಶೈವ ಮಹನೀಯರು ಬರುತ್ತಿರುವ ಕಾರಣ ನಿರಾಯಾಸವಾಗಿ ಅವರ ಸಹಾಯಾಭಿಪ್ರಾಯಗಳನ್ನನುಸರಿಸಿ ಕಾರ್ಯನಿರ್ವಾಹಮಾಡಲು ರಾಜಧಾನಿಯ ಈ ಸಂಘಕ್ಕೆ ಹೆಚ್ಚು ಅನುಕೂಲ್ಯವಿರುವುದರಿಂದ ಇಲ್ಲಿ ಇದನ್ನು ಶಾಶ್ವತವಾಗಿ ನಡೆಯಿಸಿಕೊಂಡು ಹೋಗುವುದು ಉಚಿತವೆಂತಲೂ, ಮೈಸೂರು ಡಿಸ್ಟ್ರಿಕ್ಟಿನ ವೀರಶೈವ ಸಂಘವಾಗಿ ಇದು ಇರಬಹುದೆಂತಲೂ, ಆದರೆ ಎಲ್ಲ ಭಾಗದವರೂ ಇದಕ್ಕೆ ಸಹಾಯಮಾಡಲು ಅಭ್ಯಂತರವಿಲ್ಲವೆಂತಲೂ ಸಭಿಕರೆಲ್ಲರೂ ಸಮ್ಮತಿಸಿದರು.

ಬೀರೂರಿನಲ್ಲಿ ವೀರಶೈವ ಮಹಾಸಭೆಯು ನಡೆದೀಚೆಗೆ ಅದನ್ನು ಮರಳಿ ನೆರವೇರಿಸುವ ಪ್ರಯತ್ನವು ಯಾವ ಪ್ರಾಂತದವರಿಂದಲೂ ಮಾಡಲ್ಪಟ್ಟ ಹಾಗೆ ತೋರಲಿಲ್ಲವಾದ ಕಾರಣ ದೇಶದ ಮುಖ್ಯ ಸ್ಥಾನವಾದ ರಾಜಧಾನಿಯಲ್ಲಿ ಇದುವರೆಗೆ ಒಂದು ಸಲವೂ ನಡೆಯದಿರುವ ಆ ಸಭೆಯನ್ನು ಈ ವರ್ಷದ ಕೊನೆಗೆ ಡಿಸೆಂಬರ್ ತಿಂಗಳಲ್ಲಿ ಕೂಡಿಸಿ, ಈ ಡಿಸ್ಟ್ರಿಕ್ಟಿನ ವೀರಶೈವರಲ್ಲಿ ಸಾಮಾಜಿಕಾಭಿಮಾನ ಜಾಗರೂಕತೆಗಳನ್ನುಂಟುಮಾಡುವುದು ಅವಶ್ಯಕವೆಂಬ ವಿಷಯವು ಚರ್ಚಿಸಲ್ಪಟ್ಟು ಸರ್ವಾನುಮತಿಯಿಂದ ಅದು ಕರ್ತವ್ಯವೆಂದು ನಿರ್ಧರಿಸಲ್ಪಟ್ಟಿತು. ಕಾರ್ಯಕಾರಿ ಸಂಘದ ಅಧ್ಯಕ್ಷರೂ, ಉಪಾಧ್ಯಕ್ಷರೂ, ಸೆಕ್ರೆಟರಿಗಳೇ ಮೊದಲಾದವರೂ ಆರಿಸಲ್ಪಟ್ಟರು. ಮೈಸೂರಿನಲ್ಲಿ ನೆರೆಯುವ ಈ ಮಹಾಸಭೆಯ ವೆಚ್ಚಕ್ಕೆ ಹಿರಿಯೂರು ತಾ|| ಮೇಟಿಕುರಿಕೆ ಶ್ರೀಗಿರೀಶ ವೀರಶೈವ ಹಿತೋಪದೇಶಕ ಸಂಘದ ಸೆಕ್ರೆಟರಿ ಮ|| ಆರ್. ಸಿದ್ದಯ್ಯನವರು 100 ರೂ. ಗಳನ್ನು ಕೊಡಲು ವಾಗ್ದಾನಮಾಡಿದ ವಿಷಯವು ಸಭೆಯಲ್ಲಿ ಸೂಚಿಸಲ್ಪಟ್ಟಾಗ ಅವರ ಅಭಿಮಾನವನ್ನು ಕುರಿತು ಎಲ್ಲರೂ ಅಭಿನಂದಿಸಿದರು. ಸಭೆಯ ವೆಚ್ಚಕ್ಕಾಗಿ ಚಂದಾಮೂಲಕ ದ್ರವ್ಯವನ್ನು ಕೂಡಿಸುವುದೇ ಮೊದಲಾದ ಪ್ರಯತ್ನವನ್ನು ಮಾಡಬೇಕೆಂದೂ, ಮಹಾಸಭಾ ಚಿರಸ್ಥಾಯಿಫಂಡಿನ ವರ್ಷದ ಬಡ್ಡಿಯನ್ನು ನಿಯಮದ ಪ್ರಕಾರ ಈ ಸಭಾಕಾರ್ಯಕ್ಕೆ ಕೊಡಿಸಿಕೊಡಬೇಕೆಂದು ಆ ನಿಧಿಯ ಮ್ಯಾನೇಜಿಂಗ್ ಕಮಿಟಿಯವರಿಗೆ ಬರೆದುಕೊಳ್ಳಬೇಕೆಂದೂ, ನಿರ್ಧರಿಸಲ್ಪಟ್ಟಿತು.

ಸರ್ಕಾರಿ ಸಂಸ್ಕೃತ ಕಾಲೇಜುಗಳಲ್ಲಿ ವೀರಶೈವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಕುರಿತು ಸರ್ಕಾರಕ್ಕೆ ಹಲವು ಕಡೆಗಳಿಂದ ವಿಜ್ಞಾಪನಪತ್ರಗಳೇನೋ ಕಳುಹಿಸಿಕೊಡಲ್ಪಟ್ಟಿವೆ. ಮತ್ತು ದಿವಾನರ ಬಳಿಗೆ ಪ್ರತ್ಯಕ್ಷವಾಗಿಯೂ ವೀರಶೈವ ರಾಯಭಾರವು ಹೋಗಿದ್ದು ತಿಳಿಯಿಸಬೇಕಾಗಿದ್ದ ಸಂಗತಿಯನ್ನೆಲ್ಲಾ ಅರಿಕೆಮಾಡಿಕೊಂಡುದಾಗಿದೆ. ಆದರೆ ಶ್ರೀಮನ್ಮಹಾರಾಜರವರ ಸನ್ನಿಧಿಗೆ ಈ ಸಂಬಂಧವಾದ ವಿಜ್ಞಾಪನಪತ್ರವನ್ನು ಅರ್ಪಿಸಬೇಕಾದ ವಿಷಯವೊಂದು ಮಾತ್ರ ಉಳಿದಿದೆ. ಅದನ್ನೂ ಕೂಡ ತ್ವರ್ಯವಾಗಿಮಾಡಿ ಮುಗಿಯಿಸಬೇಕೆಂಬ ನಿರ್ಧಾರವು ಕೂಡ ಮಾಡಲ್ಪಟ್ಟಿತು. ಕಡೆಗೆ ಸಭಾಧ್ಯಕ್ಷರ ವಂದನೆಯೂ ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯ ಜಯಘೋಷವೂ ಆಗಿ ಸಭೆಯು ವಿರಮಿಸಲ್ಪಟ್ಟಿತು.

ಸಮಾಜದ ಅಭ್ಯುದಯ ವಿಷಯದಲ್ಲಿ ನಮ್ಮ ಔತ್ತರೇಯ ಬಂಧುಗಳು ನಡೆಯಿಸುತ್ತಿರುವಷ್ಟು ಚಳವಳಿಯು ಮೈಸೂರು ದೇಶದ ವೀರಶೈವರಲ್ಲಿಲ್ಲ. ತತ್ರಾಪಿ ಮೈಸೂರು ದೇಶದೊಳಗೂ ಮೈಸೂರುಡಿಸ್ಟ್ರಿಕ್ಟು ಸಮಾಜಕಾರ್ಯ ವಿಷಯದಲ್ಲಿ ಬಹಳ ಹಿಂದೆ ಬಿದ್ದುಹೋಗಿದೆ. ಆದರೆ ಸಮಾಜದ ಅಭಿಮಾನವೂ ಔದಾರ್ಯವೂ ಧನಸಂಪತ್ತಿಯುಳ್ಳ ಜನರಿಗೆ ಇಲ್ಲೇನೂ ಕಡಿಮೆಯಿಲ್ಲ. ಆದರೆ ಅಂಥ ಜನರಿಗೆಲ್ಲಾ ಕರ್ತವ್ಯಜ್ಞಾನವನ್ನುಂಟುಮಾಡಿಕೊಟ್ಟು ಎಚ್ಚರಿಸಿ, ಅವರುಗಳಲ್ಲಿರುವ ಸಾಧನಸಂಪತ್ತಿಗಳನ್ನು ಒಟ್ಟುಗೂಡಿಸಿಕೊಂಡು ಸಮಾಜಾಭ್ಯುದಯಕ್ಕೆ ವಿನಿಯೋಗಪಡಿಸಿಕೊಳ್ಳುವಂಥ ಮುಂದಾಳುಗಳು ಇಲ್ಲಿ ಕಡಿಮೆಯಾಗಿರುತ್ತಾರೆ. ಮೊಟ್ಟಮೊದಲು ಸಾಮಾಜಿಕ ಚಳವಳದ ಜ್ಞಾನವನ್ನು ಮತೀಯರಿಗೆಲ್ಲಾ ಉಂಟುಮಾಡಿಕೊಡಲು ರಾಜಧಾನಿಯ ವೀರಶೈವ ವರ್ಗವೇ ಕಾರಣವಾಗಿದ್ದಿತು. ಈಗಲಾದರೂ ಇತರರಿಗೆ ಮಾರ್ಗದರ್ಶನವನ್ನು ಮಾಡಿಕೊಟ್ಟು ತಾನು ಮಾತ್ರ ಮೂಲೆಹಿಡಿದು ಕುಳಿತಂತಾಗಿದೆ. ಮಹಾಸಭೆಯು ಇಲ್ಲಿ ನಡೆದರೆ ಈ ಡಿಸ್ಟ್ರಿಕ್ಟಿನ ಸಮಾಜ ಬಾಂಧವರಲ್ಲಿ ಗೂಡುಕಟ್ಟಿಕೊಂಡಿರುವ ಆಲಸತೆಯು ತೊಲಗಿ ಕಾಲೋಚಿತವಾದ ಅಭ್ಯುದಯದ ದಾರಿಯನ್ನು ಹಿಡಿಯಲು ಈ ಪ್ರಾಂತದವರು ಇತರರಿಗೂ ಕಡಿಮೆಯಲ್ಲವೆಂದು ಹೇಳಿಸಿಕೊಳ್ಳುವರೆಂಬುದರಲ್ಲಿ ಸಂಶಯವಿಲ್ಲ. ಡಿಸೆಂಬರ್ ತಿಂಗಳೆಂಬುದು ದೂರವಾಗಿಲ್ಲ. ಕಾರ್ಯಕಾರಿ ಸಂಘದವರು ಇಂದಿನಿಂದಲೇ ಮುಂದಣ ಕೆಲಸಗಳಿಗೆ ತ್ವರೆಪಡಬೇಕಾಗಿದೆ. ಬಡವರು ಬಲ್ಲಿದರು, ವಿದ್ಯಾವಂತರು ಅವಿದ್ಯಾವಂತರು ಮೊದಲಾದ ಸಕಲರಿಗೂ ಮತವು ಒಂದೇ ಆಗಿರುತ್ತದೆ. ಮಹಾಸಭೆಯ ಕಾರ್ಯವು ಸರ್ವರಿಗೂ ಸ್ವಂತ ಕಾರ್ಯವು. ಆದುಕಾರಣ ಪ್ರತಿಯೊಬ್ಬರೂ ಅವರವರ ಯಥಾಶಕ್ತಿ ಸಹಾಯಮಾಡಿ ನಿರ್ವಿಘ್ನವಾಗಿಯೂ ವೈಭವದಿಂದಲೂ ಮಹಾಸಭೆಯು ನೆರವೇರುವಂತೆ ಮಾಡಿ ಕೀರ್ತಿಯನ್ನು ತಂದುಕೊಳ್ಳುವವರಾಗಬೇಕು.

ಶ್ರೀಮಾನ್ ಎಚ್. ಲಿಂಗರಾಜ ಅರಸರವರ ಸನ್ಮಾನಸಮಾರಂಭ.

ನಮ್ಮ ಶ್ರೀಮನ್ಮಹಾರಾಜರವರ ಸನ್ನಿಧಿಯ ಮುಜರಾಯಿ ಭಕ್ಷಿಯವರಾಗಿರುವ ಶ್ರೀಮಾನ್ ಎಚ್. ಲಿಂಗರಾಜ ಅರಸಿನವರು ಕನ್ನಡದಲ್ಲಿ "ರಾಮಾಯಣ ಸಂಗ್ರಹ" ವೆಂಬ ಷಟ್ಪದೀ ಗ್ರಂಥವನ್ನು ಬರೆದಿರುವುದು ಸರ್ವವಿಶ್ರುತವಷ್ಟೆ. ಅದು ಸ್ವಲ್ಪ ಕಾಲದಲ್ಲಿಯೇ ಕನ್ನಡಿಗರಿಗೆಲ್ಲಾ ಚಿತ್ತಾಕರ್ಷಕವಾಗಿ ಅತಿಶಯವಾದ ವ್ಯಾಪನೆಯನ್ನು ಪಡೆದುಕೊಂಡಿರುತ್ತದೆ. ಈ ಗ್ರಂಥವು ಮೃದುಮಧುರ ಪದಬಂಧವುಳ್ಳದಾಗಿಯೂ ಲಲಿತಶಯ್ಯೆಯುಳ್ಳದಾಗಿಯೂ, ಅಪ್ರಯತ್ನಸಿದ್ಧವಾದ ಪ್ರಾಸಬಂಧದಿಂದ ಬಂಧುರವಾಗಿಯೂ, ಗಂಗಾತಟಿನೀಪ್ರವಾಹದಂತೆ ನಿರರ್ಗಳವಾಗಿ ಹೊರಟಿರುವ ಕವಿತಾಧಾಟಿಯುಳ್ಳದಾಗಿಯೂ ಇರುವ ಕಾರಣ, ಓದುವ ಕೇಳುವ ಜನರಿಗೆಲ್ಲಾ ಪರಮಾಹ್ಲಾದಕವಾಗಿರುತ್ತದೆ. ಆದುಕಾರಣವೇ ಇದು ಸ್ವಲ್ಪ ಕಾಲದಲ್ಲೇ ತೊರವೆರಾಮಾಯಣಕ್ಕಿಂತಲೂ ಹೆಚ್ಚಾದ ವ್ಯಾಪನೆಯನ್ನು ಪಡೆದು ಕನ್ನಡನಾಡಿನಲ್ಲೆಲ್ಲಾ ಜೈಮಿನಿಯಂತೆ ಮಹಾವ್ಯಾಪಕತೆಯನ್ನು ಪಡೆದು ಚಿರಸ್ಥಾಯಿಯಾಗಬಹುದೆಂದು ತೋರುತ್ತದೆ. ಪ್ರತಿಪಾದ್ಯವಾದ ವಿಷಯವು ಪುರಾತನವೇ ಆಗಿದ್ದರೂ, ಪ್ರೌಢ ಶಿಲ್ಪಿಯ ಕೈಗೆ ಸಿಕ್ಕಿದ ಬಂಗಾರವು ನವನವಾಭರಣವಾಗಿ ರಚಿಸಲ್ಪಡುವಂತೆ ಮಹಾ ಕವಿಯ ಪ್ರತಿಭೆಯೆಂಬ ಕರುವಿಗೆ (ಮೌಲ್ಡ್) ವಿಷಯವು ಬಿದ್ದ ಕೂಡಲೇ ಲೋಕಾಹ್ಲಾದಕರವಾದ ನವನವಾಕೃತಿಯನ್ನು ಪಡೆದು ಶೋಭಿಸುವುದು. ಮ|| ಅರಸಿನವರು ಈಗ ರಚಿಸಿರುವ ಗ್ರಂಥವು ಅದೇರೀತಿಯಲ್ಲಿ ಇರುವುದು. ಓದುವುದಕ್ಕೆ ಆರಂಭಿಸಿದರೆ ಇದು ಹಳೆಯಪುರಾಣದ ಕಗ್ಗವೆಂದು ಬೇಸರಿಸುವುದಕ್ಕೆ ಸ್ವಲ್ಪವೂ ಅವಕಾಶಕೊಡದೆ, ಆಯಾ ಪಾತ್ರ ಕಾಲ ಅವಸ್ಥೆಗಳಿಗೆ ತಕ್ಕ ಭಾವಗಳನ್ನು ಸರಿಯಾಗಿ ಹೊರಪಡಿಸುವ ಪದವಾಕ್ಯಬಂಧಗಳಿಂದ ಅತ್ಯಂತ ಮಧುರವಾಗಿರುವುದು. ಈ ಕಾರಣದಿಂದಲೇ ರಾಜಧಾನಿಯಲ್ಲಿ ಬೀದಿಬೀದಿಯಲ್ಲೂ ಕೇರಿಕೇರಿಯಲ್ಲೂ ಈ ಪುರಾಣ ಪಠನ ಶ್ರವಣ ವಾರ್ತೆಯೇ ಕೇಳಬರುತ್ತಿರುವುದು. ಈ ಕಾವ್ಯರಚನೆಯ ಮೂಲಕ ದೇಶಭಾಷಾಸೇವೆಯನ್ನು ಶ್ಲಾಘನೀಯವಾಗಿ ಮಾಡಿದ ಉಪಕೃತಿಗಾಗಿ ರಾಜಧಾನಿಯ ಪುರನಿವಾಸಿಗಳು ಮ|| ಅರಸಿನವರನ್ನು ಕೃತಜ್ಞತಾಪೂರ್ವಕವಾದ ಅಭಿನಂದನದಿಂದ ಸತ್ಕರಿಸುವುದಕ್ಕಾಗಿ ಕಳೆದ ವರ್ಷವೇ ಸಂಕಲ್ಪಿಸಿದರು. ಆದರೆ ವಿಜ್ಞಾಪನಪತ್ರ ಸಮರ್ಪಣಕ್ಕೆ ಅವಶ್ಯಕವಾದ ಬೆಳ್ಳಿಯ ವ್ಯಾಸಪೀಠವನ್ನೂ ಪುಸ್ತಕಾಕಾರವಾದ ರಜತಪೇಟಿಕೆಯನ್ನೂ ಶಿಲ್ಪಿಗಳು ನಿರ್ಮಿಸಿಕೊಡಲು ಬಹುಕಾಲ ಹಿಡಿದುದರಿಂದ ಈಗ ಆ ಸಂಕಲ್ಪವನ್ನು ನೆರವೇರಿಸಲು ಅವಕಾಶವಾಯಿತು.

ಕಳೆದ ೩ನೆ ತಾರೀಖು ಸಾಯಂಕಾಲ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಈ ಸನ್ಮಾನ ಸಮಾರಂಭ ಸಭೆಯು ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರ ಅಧ್ಯಕ್ಷತೆಯಿಂದ ಕೂಡಿದ್ದಿತು. ಸರ್ ಕಾಂತರಾಜ ಅರಸಿನವರು, ೨ನೆ ಕೌನ್ಸಿಲರ್ ಮಿ|| ಮಿರಾರ್ ಹಂಜಾಹುಸೇನ್ ಬಿ. ಎ. ಬಿ. ಎಲ್ ರವರು, ಶ್ರೀಮಾನ್ ಮಹಾರಾಜರವರ ಪ್ರೈ|| ಸೆಕ್ರೆಟರಿ ಅಮಾನುಲ್ ಉಲ್ಲಾ ಮಿರ್ಜಾ ಇಸ್ಮಾಯಿಲ್ ಬಿ. ಎ. ಯವರು, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮ|| ಎ. ಸುಬ್ರಹ್ಮಣ್ಯಯ್ಯರು, ದಿ|| ಬ||ಸಿ. ಶ್ರೀಕಂಠೇಶ್ವರಯ್ಯರು, ಅರಮನೆ ಇನ್‌ಛಾರ್ಜು ಆಫೀಸರು ಮ|| ರಾಜಗೋಪಾಲಾಚಾರ್ಯರು, ಕಾಲೇಜ್ ಪ್ರಿನ್ಸಿಪಾಲ್ ಮ|| ಎನ್. ಎಸ್. ಸುಬ್ಬರಾವ್‌ರವರು, ಸರ್ದಾರ್ ಎಂ. ಎನ್. ಬಾಳರಾಜ ಅರಸಿನವರು, ರಾ|| ಸಾ|| ಹೆಚ್. ಚೆನ್ನಯ್ಯನವರು, ಲೋಕಹಿತೈಷಿ ನಂಜುಂಡರಾಜ ಅರಸಿನವರು, ರಾಜಶಿಲ್ಪವಿಶಾರದ ಬಿ. ಸುಬ್ಬರಾಯರು, ಧರ್ಮನಿರತ ಅಂಬೈಅಣ್ಣಯ್ಯಪಂಡಿತರು, ಡಿ|| ರಾಮಚಂದ್ರಮೊದಲ್ಯಾರರು, ರಾವ್ ಬಹದ್ದೂರ್ ಬಿ. ವಿ. ವೆಂಕಟಸ್ವಾಮಿನಾಯಿಡುಯವರು, ರಿಟೈರ್ಡ್ ಡಿ|| ಕಮಿಷನರ್ ಎಂ. ಜಂಗಯ್ಯಸೆಟ್ಟರು ಮ|| ಎಂ. ವೆಂಕಟಕೃಷ್ಣಯ್ಯನವರು, ಮ|| ವರ್ಧಮಾನಯ್ಯನವರು, ಲೆ|| ಕೌನ್ಸಿಲ್ ಮೆಂಬರು ಮ|| ಜಿ. ಪರಮಶಿವಯ್ಯನವರು, ಸ್ಪೆ|| ಮ್ಯಾಜಿಸ್ಟ್ರೇಟ್ ಜಿ. ಮಲ್ಲಿಕಾರ್ಜುನಯ್ಯ, ಬಿ. ಎ. ಯವರು, ಮೊದಲಾದ ಅನೇಕ ದೊಡ್ಡಮನುಷ್ಯರೂ ಮಹಾರಾಜಾಸ್ಥಾನ ಪಂಡಿತರಾದ ಕವಿತಿಲಕ ಅಯ್ಯಾಶಾಸ್ತ್ರಿಗಳು, ಕವಿರತ್ನಂ ಮ|| ರಾಮಾಶಾಸ್ತ್ರಿಗಳು, ಕರ್ನಾಟಕ ಭಾಷಾರತ್ನ ಪಿ. ಆರ್. ಕರಿಬಸವಶಾಸ್ತ್ರಿಗಳು, ಎನ್. ಆರ್. ಕರಿಬಸವಶಾಸ್ತ್ರಿಗಳು, ತರ್ಕತೀರ್ಥ ಶಾಂತರಾಜಶಾಸ್ತ್ರಿಗಳು ಮೊದಲಾದ ಅನೇಕ ಪಂಡಿತವರ್ಯರುಗಳೂ, ಪ್ರಜಾಪ್ರತಿನಿಧಿಸಭೆಯ ಅನೇಕ ಸದಸ್ಯರುಗಳೂ ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರೂ ವರ್ತಕ ಪ್ರಮುಖರೂ ವಿದ್ಯಾರ್ಥಿಗಳೂ ಸಹ ಕಿಕ್ಕಿರಿಯುವಂತೆ ತುಂಬಿದ್ದರು. ೬½ ಗಂಟೆಗೆ ಸರಿಯಾಗಿ ಸಭಾಧ್ಯಕ್ಷರೂ, ಸಂಮಾನ್ಯಾತಿಥಿಯವರೂ, ಸರ್ ಕಾಂತರಾಜ ಅರಸಿನವರೂ ಸಭೆಗೆ ದಯಮಾಡಿಸಿದ ಕೂಡಲೇ ಸರ್ವರೂ ಎದ್ದು ಕರತಾಡನಗಳನ್ನು ಮಾಡಿ ಮರ್ಯಾದಿಸಿದರು. ಬಳಿಕ ಮ|| ಲಿಂಗರಾಜ ಕವಿವರರ ಅಭಿನಂದನಪರವಾದ ಕವಿತೆಗಳು ಕರ್ಣಾನಂದಕರವಾಗಿ ಓದಲ್ಪಟ್ಟುವು. ಅವುಗಳನ್ನು ಈ ಕೆಳಗೆ ಕೊಟ್ಟಿರುತ್ತೇವೆ:—

ಶ್ರೀ ಲಿಂಗರಾಜ ಮಂಗಳಾಶಂಸನಂ.

ಶ್ರೀರಾಮಸ್ಯ ಭವಾತನೋತು ಭವತಃ ಶ್ರೀಲಿಂಗರಾಜಪ್ರಭೋ |
ಶ್ರೀಮತ್ಕೃಷ್ಣಮಹೀಂದ್ರಪಾದಯುಗಳೀಸೇವಾಧುರೀಣೋಽಪಿ ಸನ್ ||
ಸಾರಳ್ಯೇನ ಕವಿತ್ವತತ್ತ್ವನಿಚಯನ್ ರಾಮಾಯಣಾಖ್ಯಾಂ ಕೃತಿಂ |
ಪದ್ಯೈಃ ಶ್ರೋತ್ರಮನೋಹರೈರ್ವ್ಯರಚಯಃ ಕರ್ಣಾಟಭಾಷಾತ್ಮನಾ ||೧||
ತ್ವದ್ರಾಮಾಯಣಸಂಗ್ರಹಃ ಪುರಜನೈರ್ವೀಥೀಷು ವಿಖ್ಯಾಪ್ಯತೇ |
ತೈಸ್ತೈಸ್ತನ್ಮಧುರಾರ್ಥಬೋಧಚತುರೈಃ ಸಂಸತ್ಸು ಸಂಕಥ್ಯತೇ ||
ವಿದ್ವದ್ಭಿಃ ಪರಿಶೀಲ್ಯ ಚೇತಸಿ ಗುಣಾನ್ ಅಂತರ್ಮುದಾ ಶ್ಲಾಘ್ಯತೇ |
ತ್ವದ್ಭಾಗ್ಯಂ ಮಹದಿತ್ಯಮೀಭಿ ಹೃದಿ ಯಜ್ಞೀವನ್ ಯಶಃ ಪ್ರಾಪ್ತವಾನ್ ||
ಡಂಭೋನಾಟಕನಾಟಕಾಪ್ರಕರಣವ್ಯಾಯೋಗಭಾಣಾದಿಷು |
ಪ್ರೌಢಾನಾಂ ವಿದುಷಾಂ ಪುರಃ ಪುರಜನೈ ಸ್ಸಂಭಾವ್ಯಸೇ ಯತ್ತತಃ ||
ಸಾರಾಸಾರವಿವೇಕಶೂನ್ಯಹೃದಯೈಸ್ಸಂಪೂರಿತೇಽಸ್ಮಿನ್ ಯುಗೇ |
ಪ್ಯದ್ಯಾಪತ್ರ ಪುರೇ ಕವೀಶ್ವರಗುಣಗ್ರಾಹೀ ಜನೋ ವರ್ತತೇ ||೨||
ವಕ್ತುಂ ರಾಮಕಥಾಮುಪಕ್ರತುದಿನಾದಾರಭ್ಯ ಚಿತ್ತೇ ಸದಾ |
ಧ್ಯಾಯನ್ ರಾಮಗುಣಾನ್ ಸದಾ ರಸನಯಾ ತನ್ನಾಮ ಸಂಕೀರ್ತಯನ್ ||
ತತ್ತಾದಾತ್ಮ್ಯಮುಪೇತ್ಯ ತಸ್ಯ ಮಹತೀಂ ಶಾಂತಾಮವಸ್ಥಾಂ ಲಭನ್ |
ಪೂತೋಽಸಿ ಪ್ರತಿಪಾದ್ಯವಸ್ತುಮಹಿಮಾ ಹ್ಯಾನುನ್ನತಿಂ ನೀತವಾನ್ ||೪||
ಪೂರ್ವಂ ಮುಮ್ಮಡಿಕೃಷ್ಣರಾಜಸದಸಿ ಶ್ರೀ ಲಿಂಗರಾಜಃ ಕವಿಃ |
ಶ್ರೀಮಾನ್ ಪಂಡಿತಮಂಡಲೀಪರಿವೃತಃ ಕಾವ್ಯಾನ್ಯಕಾರ್ಷೀತ್ ಸ್ವಯಂ ||
ತಸ್ಮಿನ್ ನಾಲ್ವಡಿಕೃಷ್ಣರಾಜವಿಭುತಾಂ ಪ್ರಾಪ್ತೇಽದ್ಯ ಕೃಷ್ಣಪ್ರಭೌ |
ತ್ವದ್ರೂಪೇಣ ಸಮಾಗತಃ ಸಕವಿರಿತ್ಯಾಲೋಕ್ಯ ಮೋದಾಮಹೇ ||೫||
ವಾಲ್ಮೀಕೇರ್ಮುನಿಪುಂಗವಸ್ಯ ವಚಸಾಂ ಸಾರೋ ಯದಾಽಽಸ್ವಾದಿತಃ |
ಸರ್ವೇಷಾಂ ಜಗತಾಂ ಮನಾಂಸಿ ಸಹಸಾಽಽಕೃಷ್ಯಾಪಿ ಯೇನ ಸ್ವಯಂ ||
ಯಸ್ಮೈ ಲಾಭಪರಿಕಲ್ಪಿತಃ ಪುರಜನೈ ರೇವಂ ಮಹಾನುತ್ಸವಃ |
ತ್ವದ್ರಾಮಾಯಣಸಂಗ್ರಹೋ ವಿಜಯತಾ ಮಾಚಂದ್ರಮಾತಾರಕಂ ||೬||

ವೇ|| ಆಸ್ಥಾನಕವಿರತ್ನ ಮಹಾವಿದ್ವಾನ್,
ಮಂಡಿಗಲ್ ರಾಮಾಶಾಸ್ತ್ರಿಗಳು.

ಶ್ರೀಮಲ್ಲಿಂಗರಾಜಕವಿವರಾಭಿನಂದನಂ.

ಕಂದಪದ್ಯಂಗಳ್.

ಶ್ರೀ ರಾಮಾಯಣಸಂಗ್ರಹ |
ಸಾರತರ ಗ್ರಂಥರಚನಮಂ ನೀನೆಸಗು ||
ತ್ತೀರಸೆ ಯಿಪ್ಪ ನೈವರಂ |
ತೀರದ ಯಶಮಾಂತೆ ಲಿಂಗರಾಜವರೇಣ್ಯಾ ||೧||

ಶ್ರೀ ರಾಮಚರಿತ್ರಾಮೃತ |
ವಾರಿಧಿಯಂ ತೆಗೆದು ನೆಗಳ್ದ ಮಣಿಮಾಲೆಯವೋಲ್ ||
ತೋರುವ ನಿನ್ನಯ ಸತ್ಕೃತಿ |
ಭೂರಿಜನರ ಕಂಠಭೂಷಣಮದಾಗಿರ್ಕುಂ ||೨||

ನಿರುಪಮ ರಸಜ್ಞ ಕುಲಶೇ |
ಖರ ನೆನಸಿಯು ಮರಸ ನೆಂದೆನಿಪೆ ನೀಂ ಬಗೆಯಲ್ ||
ಸಿರಿಯರ್ ಕಿಂ ಕರತೆಯನೇ
ಮರೆದಿರ್ಪ್ಪರದು ಸಾಜಮಲ್ತೆ ಧರಣೀತಲದೋಳ್ ||೩||

ಮುಮ್ಮಡಿಯ ಕೃಷ್ಣಭೂವರ |
ಸಮ್ಮುಖದೊಳದೊರ್ವ ಲಿಂಗರಾಜಂ ನೆಗಳ್ದಂ ||
ವಿಮ್ಮಿಗದ ಕಬ್ಬಿಗನೆನಿಸು |
ತ್ತೊಮ್ಮೆ ಮಹೀಸೂರ ರಾಜಬಾಂಧವಕುಲದೊಳ್ ||೪||

ಇಂದೀ ನಾಲ್ವಡಿಕೃಷ್ಣ ವ |
ಸುಂಧರೆ ಯಧಿಪತಿಯ ಕಾಲದೊಳ್ ರಸವತ್ಕವಿ ||
ವೃಂದದೆ ಮೆರೆದಿರ್ಪ್ಪೆ ನೀಂ |
ಚಂದಿರ ನೆಸೆವಂತೆ ತಾರಕಾಮಂಡಲದೊಳ್ ||೫||

ನಿನ್ನಯ ವಿಮಲಿನ ಸೌಜ |
ನ್ಯೋನ್ನತಿಗಂ ಧರ್ಮನಿರತಿಗಂ ಕವಿತಾಸಂ ||
ಪನ್ನತೆಗಂ ಮೆಚ್ಚಿ ನೃಪಂ |
ಸನ್ನುತ ಮುಜರಾಯಿ ಭಕ್ಷಿಪದವಿತ್ತಿರ್ಪ್ಪಂ ||೬||

ಸರಸತಿಯ ಪದಾಂಬುಜ ನೂ |
ಪುರ ಕಿಂಕಿಣ ಕಲನಿನಾದದಂತಿರೆ ನಿನ್ನೀ ||
ಸರಸಪದಬಂಧ ಬಂಧುರ |
ತರ ಕೃತಿ ಕಿವಿಗಿಂಪುನೊಂಪ ನೆರೆಯುತ್ತಿರ್ಕುಂ ||೭||

ಜಯಮಕ್ಕೆ ಕನ್ನಡಕೆ ನಿ |
ರ್ಭಯಮಕ್ಕೀ ನಾಡಜನಕೆ ರಾಜಾಶ್ರಯದಿಂ ||
ದಯೆಗೆಯ್ದು ವಿಬುಧಕವಿಸಂ |
ಚಯಮಂ ಪಾಲಿಪ್ಪ ಭೂಪ ನಾಳ್ಗಿಮ ಸುಚಿರಂ ||೮||

ಆಸ್ಥಾನ ವಿದ್ವಾನ್,
ವೇ|| ಎನ್. ಆರ್. ಕರಿಬಸವಶಾಸ್ತ್ರಿಗಳು

ಶ್ರೀಮಲ್ಲಿಂಗರಾಜಾಭಿನಂದನಪತ್ರಿಕಾ.

ಕರ್ಣಾಟಕ್ಷಿತಿಪಾಲಕಾತ್ತಮಹಿಮಾ ಶ್ರೀ ಲಿಂಗರಾಜಪ್ರಭುಃ |
ಸಮ್ಪ್ರಾಪ್ತೋ ಮುಜರಾಯಿಭಕ್ಷಿಪದವೀಂ ಯೋ ರಾಜತೇ ಸನ್ನಿಧೌ ||
ತಸ್ಯೈತತ್ಪುರವಾಸಿನೋ ವಯಮಮೀ ಸಮ್ಪ್ರಾರ್ಥಯಾಮೋಽಧುನಾ |
ಸ್ವೀಕರ್ತುಂ ಪರಿಕಲ್ಪಿತಂ ಜನತಯಾ ಸತ್ಕಾರಮತ್ಯಾದರಾತ್ ||೧||
ಅಸ್ಮತ್ಪಾಲಕ ಕೃಷ್ಣಭೂಪವಿಹಿತಾಮಾಜ್ಞಾಂ ಮುದಾ ಮಸ್ತಕೇ |
ಧೃತ್ವಾ ಶ್ರೀರಘುರಾಮಪೂತಚರಿತಂ ಶೈಲ್ಯಾ ಮನೋಹಾರಿಣಾ ||
ಶ್ರೀರಾಮಾಯಣಸಙ್ಗ್ರಹೋತ್ತರಪದಂ ಕರ್ಣಾಟ ಪೂರ್ವಾಙ್ಕಿತಮ್ |
ಸ್ವಾಮಿನ್ನದ್ಗ್ರಥಿತಂ ತ್ವಯಾ ಸುಲಲಿತಂ ಸರ್ವೋಪಯೋಗ್ಯಂ ತತ್ ||೨||
ಆಸ್ಥಾನೇ ಪೃಥುಪುಙ್ಗವಸ್ಯ ವಿದುಷೋ ಭೋಜಸ್ಯ ಸಾಮಾಜಿಕಾಃ |
ನಾನಾಶಾಸ್ತ್ರಕಲಾಪ್ರವೀಣ ಮತಯಸ್ಸನ್ತಿ ಸ್ಮ ಧೀರಾಃ ಪುರಾ ||

ಭೋಜೌಪಮ್ಯಮುಪಾಗತಸ್ಯ ಸದಸಿ ಶ್ರೀ ಕೃಷ್ಣರಾಜಪ್ರಭೋಃ |
ಪ್ರಾಪ್ತಸ್ತ್ವಂ ಕವಿಕಾಲಿದಾಸತುಲನಾಮದ್ಯಾಪಿ ಧೀಮಾನ್ಕವಿಃ ||೩||
ಯಸ್ಮಾತ್ತ್ವಂ ನೃಪವಂಶಜಸ್ತ್ವ ನಿಯತಂ ಕಾರ್ಯಂ ಸದಾ ನಿರ್ವಹನ್ |
ವೈರಾಮೇಽಪಿ ಸುಖಾನುಭೂತಿವಿಮುಖಃ ಕಾಲೇ ಕರೋರೀದೃಶಮ್ ||
ಗ್ರನ್ಥಂ ಸರ್ವಜನೋಪಕಾರಧಿಷಣಾನುನ್ನಂ ಪ್ರಭೂರ್ಣಂ ರಸೈಃ |
ತಸ್ಮಾತ್ತುಷ್ಟಿಮುಪಾಗತಾ ವಯಮಮೀ ಪೌರಾಃ ಕೃತಜ್ಞಾಸ್ತವ ||೪||
ದೇವಸ್ಸರ್ವಜನೀನವೃತ್ತಿರಖಿಲೈರ್ದೋಷೈರ್ವಿಮುಕ್ತೋ ವಿಭುಃ |
ದತ್ತ್ವಾತೇವಹಿತಸ್ಯ ಪೂಜ್ಯಭಗವಾನಾರೋಗ್ಯದೀರ್ಘಾಯುಷೀ ||
ಪಾಯಾದಿತ್ಥಮಮೀ ಸದಾ ಪುರಗುಣಂ ಸಮ್ಪ್ರಾರ್ಥಯಾಮೋಽಹರಿನ್ |
ಪೌರಾಃ ಕಾರ್ಯವಿದಸ್ತ್ವದೀಯಕವಿತಾಚಾತುರ್ಯತುಷ್ಟಾವಯಮ್ ||೫||
ಹೇದೀನಬನ್ಧೋ ಗುಣಪಕ್ಷಪಾತಿನ್ | ಸೂರೇ ದಯಾಪೂರಿತ ಚಿತ್ತವೃತ್ತೇ ||
ಸಮ್ಪಾದಿತೇಯಂ ಶುಭಪದ್ಯಮಾಲಾ | ತುಭ್ಯಂ ಪ್ರಮೋದೇನ ಸಮರ್ಪ್ಯತೇದ್ಯ ||೬||

ವೇ|| ಎ. ಶಾಂತರಾಜಶಾಸ್ತ್ರಿಗಳು,
ನ್ಯಾಯತೀರ್ಥ

ಇವುಗಳಲ್ಲಿ ಕನ್ನಡ ಪದ್ಯಗಳನ್ನು ಕೈ|| ಸಿದ್ಧಲಿಂಗಶಾಸ್ತ್ರಿಗಳ ಮಕ್ಕಳು ವೀರಭದ್ರಪ್ಪನವರು ಬಹಳ ಮನೋಹರವಾಗಿ ರಾಗಗಳಿಂದ ಓದಿದರು. ಸಂಸ್ಕೃತ ಕವನಗಳನ್ನು ರಚಿಸಿದವರುಗಳೇ ಓದಿದರು. ಬಳಿಕ ಮಹಾರಾಜಾಸ್ಥಾನ ಸಂಗೀತ ವಿದ್ವಾನ್ ರಾಜೋಟಪ್ಪನವರ ಹಾಡುಗಾರಿಕೆಯು ಶ್ರಾವ್ಯವಾಗಿ ಸ್ವಲ್ಪಕಾಲ ನಡೆದಿತು. ಬಾಲಚಮೂವಿನ ೩-೪ ಮಂದಿಗಳ ವಿನೋದಪರವಾದ ಸಂಭಾಷಣವು ಜರುಗಿತು. ತದನಂತರ ಮ|| ಕೆ. ಸಂಜೀವಶೆಟ್ಟಿ ಬಿ.ಎ.ಯವರು ಈ ಕೆಳಗೆ ಕಾಣಿಸಿರುವಂತೆ ವಿಜ್ಞಾಪನ ಪತ್ರವನ್ನು ಸ್ಪಷ್ಟವಾಗಿ ಓದಿದರು.

ಆಳುವ ಮಹಾಸ್ವಾಮಿಯವರಾದ ಶ್ರೀಮಾನ್ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ., ಜಿ.ಬಿ.ಇ., ಯವರ ಅರಮನೆಯ ಮುಜರಾಯಿ ಭಕ್ಷಿಯವರಾದ ಶ್ರೀಮಾನ್ ಎಚ್. ಲಿಂಗರಾಜ ಅರಸಿನವರ ಸನ್ನಿಧಿಯಲ್ಲಿ ಮೈಸೂರು ಪುರನಿವಾಸಿಗಳಾದ ನಾವುಗಳು ಕೃತಜ್ಞತಾಪೂರ್ವಕವಾಗಿ ಅರ್ಪಿಸಿದ ವಿಜ್ಞಾಪನಪತ್ರಿಕೆ.

ಸರ್ವಜನ ಪಠನೀಯವಾದ ಶ್ರೀ ರಾಮಕಥಾಮೃತವನ್ನು ಆಬಾಲವೃದ್ಧರೂ ಸವಿದು ಧನ್ಯರಾಗುವಂತೆ, ಲಲಿತಪದಬಂಧುರವಾಗಿ "ಕರ್ಣಾಟಕ ರಾಮಾಯಣ ಸಂಗ್ರಹ" ವೆಂಬ ಹೆಸರಿನ ಷಟ್ಪದಿ ಗ್ರಂಥವನ್ನು ತಾವು ರಚಿಸಿ, ಕನ್ನಡಿಗರಿಗೆಲ್ಲಾ ಮಾಡಿದ ಚಿರಸ್ಮರಣೀಯವಾದ ಉಪಕೃತಿಗಾಗಿ ತಮ್ಮನ್ನು ಅಭಿನಂದಿಸುವುದು ಕೃತಜ್ಞರಾದ ಪುರನಿವಾಸಿಗಳ ಧರ್ಮವಾದುದರಿಂದ ಈ ಮಹಾ ವಿದ್ವಜ್ಜನಮಂಡಿತವಾದ ಸಭೆಯಲ್ಲಿ ತಮ್ಮನ್ನು ಗೌರವಿಸಲು ನಾವು ಕುತೂಹಲಗೊಂಡಿದ್ದೇವೆ.

ಕ್ಷತ್ರಿಯರು ಕೇವಲ ಬಾಹುಬಲದಿಂದಲೇ ಅಲ್ಲದೆ ಸಾರಸ್ವತಮಹತ್ವದಿಂದಲೂ ಲೋಕವಿಖ್ಯಾತಿಯನ್ನು ಪಡೆದವರೆಂಬುದನ್ನು ಪ್ರಾಚೀನ ಭಾರತೇತಿಹಾಸದಿಂದ ನಾವು ತಿಳಿಯುತ್ತಿದ್ದೇವೆ. ಪ್ರಸಿದ್ಧವಾದ ನಮ್ಮ ಮೈಸೂರು ರಾಜಸಂತತಿಯಲ್ಲೂ, ಚಿಕ್ಕದೇವರಾಜ ಒಡೆಯರು, ಚಾಮರಾಜರು, ಚೆನ್ನರಾಜರು, ಮೊದಲಾದ ಅನೇಕರು ವಿದ್ವಾಂಸರಾಗಿಯೂ, ಕವಿಗಳಾಗಿಯೂ ಇದ್ದರು. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರವರು ಸ್ವತಃ ವಿದ್ವಾಂಸರಾಗಿದ್ದು, ಅನೇಕ ಗ್ರಂಥಗಳನ್ನು ಬರೆದು ವಿಖ್ಯಾತರಾದರು. ಅವರ ಕಾಲದಲ್ಲೇ ಎ. ಲಿಂಗರಾಜ ಅರಸಿನವರು ರಸಜ್ಞಕವಿತಿಲಕರಾಗಿದ್ದು, ಕೆಲವು ಗ್ರಂಥಗಳನ್ನು ರಚಿಸಿದರು. ಈಗಣ ನಮ್ಮ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರವರ ಕಾಲದಲ್ಲಿ ರಾಜಬಂಧುವರ್ಗದೊಳಗೆ ಕವಿಗಳಿರಲಿಲ್ಲವೆಂಬ ಹೇಳಿಕೆಗೆ ಆಸ್ಪದವಿಲ್ಲದಂತೆ ತಾವು ಮಾಡಿ ಶ್ರೀಮಾನ್ ಮಹಾರಾಜರವರ ಮತ್ತು ಅವರ ವಿನಮ್ರಪ್ರಜೆಗಳ ಅಭಿನಂದನೆಗೆ ಪಾತ್ರರಾಗಿರುತ್ತೀರಿ.

ಈ ನಮ್ಮ ಕಾಲದಲ್ಲಿ ರಾಜವರ್ಗದವರೊಳಗೆ ಕ್ಷತ್ರಿಯ ಕುಲೋಚಿತವಾದ ಸೈನಿಕವಿದ್ಯೆಯಲ್ಲಿ ನಿಪುಣರಾಗಿ, ಖಂಡಾಂತರಗಳ ರಣರಂಗದಲ್ಲೂ ತಮ್ಮ ಶೌರ್ಯಧೈರ್ಯ ಸಾಹಸಗಳನ್ನು ಪ್ರದರ್ಶನಮಾಡಿ, ಮೈಸೂರಿಗೆ ಕೀರ್ತಿಯನ್ನು ತಂದಿರುವ ಶ್ರೀಮಂತರುಗಳಾದ ಕರ್ನಲ್ ಸರ್ದಾರ್ ಜೆ. ದೇಶರಾಜ ಅರಸಿನವರು, ಚೀಫ್ ಕಮ್ಯಾಂಡೆಂಟ್ ಲೆಫ್ಟಿನೆಂಟ್ ಕರ್ನಲ್ ಬಿ. ಚಾಮರಾಜ ಅರಸ್ ಬಹದ್ದೂರ್‌ರವರೇ ಮೊದಲಾದವರು ವಿಖ್ಯಾತರಾಗಿರುವರು. ರಾಜಕೀಯ ವಿದ್ಯೆಯಲ್ಲೂ ಕೂಡ ಈಗಣ ಅರಸುಸಂಗಡದ ತರುಣರು ವಿಶೇಷ ಪಾಂಡಿತ್ಯವನ್ನು ಸಂಪಾದಿಸಿ, ರಾಜಕೀಯೋದ್ಯೋಗಗಳಲ್ಲೂ ಸ್ವತಂತ್ರೋದ್ಯೋಗಗಳಲ್ಲೂ ನಿಪುಣತೆಯನ್ನು ತೋರಿಸುತ್ತಿರುವರು. ಇವರಲ್ಲೆಲ್ಲಾ ಭೂಷಣಪ್ರಾಯರಾಗಿ ಸರ್ ಕಾಂತರಾಜ ಅರಸಿನವರು ಸಂಸ್ಥಾನದ ಅಮಾತ್ಯಪದವಿಯನ್ನೂ ಕೂಡ ಅಲಂಕರಿಸಿ, ಮೈಸೂರು ಸಂಸ್ಥಾನದ ಸಮಸ್ತ ಜನಗಳ ಏಳಿಗೆಗೆ ಬೇಕಾದಂಥ ಸೌಕರ್ಯಗಳನ್ನು ಕಲ್ಪಿಸಿ, ಸರ್ವರ ಅನುರಾಗವನ್ನೂ ಸಂಪಾದಿಸಿದುದಲ್ಲದೆ, ಶ್ರೀ ಸಾರ್ವಭೌಮರಿಂದಲೂ ಸನ್ಮಾನಿತರಾಗಿ ವಿಶ್ರಾಂತಿಸುಖವನ್ನು ಅನುಭವಿಸುತ್ತಿರುವರು.

ಹೀಗೆ ನಮ್ಮ ಪರಮ ಪ್ರೀತ್ಯಾಸ್ಪದರಾದ ರಾಜವಂಶೀಯರು ಅನೇಕ ಮುಖವಾಗಿ ಪುರೋವೃದ್ಧಿಗೊಳ್ಳುತ್ತಿರುವುದು ಪ್ರಜೆಗಳಾದ ನಮಗೆಲ್ಲಾ ಸಂತೋಷಪ್ರದವಾಗಿರುವುದು.

ರಾಜಕಾರ್ಯಾಂತರಗಳಲ್ಲಿ ಪ್ರವೃತ್ತರಾಗಿದ್ದರೂ ಸಮಯವನ್ನೊದವಿಸಿಕೊಂಡು ಶ್ರೀ ರಾಮಚರಿತದಂಥ ಮಹಾ ಕಾವ್ಯವನ್ನು ರಚಿಸುವುದರಲ್ಲಿ ತಾವು ತೊಡಗಿ, ಭಗವದನುಗ್ರಹೀತವಾಗಿರುವ ಕವಿತಾಶಕ್ತಿಯನ್ನು ಸಾರ್ಥಕಪಡಿಸಿಕೊಂಡುದು ವಿಶೇಷತಃ ಅಭಿನಂದ್ಯವೇ ಸರಿ.

ತಮ್ಮ ಶಾಂತಿ, ಸಹನೆ, ಸರಳತೆ, ಸೌಹಾರ್ದ, ರಸಜ್ಞತೆ ಮೊದಲಾದ ಸದ್ಗುಣಗಳ ಪ್ರತ್ಯಕ್ಷ ಪರಿಚಯವುಳ್ಳ ಮಹಾಜನರು ತಮ್ಮನ್ನು ಮೊದಲೇ ವಿಶೇಷವಾಗಿ ಪ್ರೀತಿಸುತ್ತಿದ್ದರು. ಈ ರಾಮಾಯಣ ಸಂಗ್ರಹವೆಂಬ ರತ್ನದರ್ಪಣದಲ್ಲಿ ಪ್ರತಿಫಲಿಸಿರುವ ತಮ್ಮ ಪ್ರತಿಭಾಶಕ್ತಿ ಮೊದಲಾದುವುಗಳನ್ನು ಅರಿತಮೇಲಂತು, ಸಕಲ ಪ್ರಜೆಗಳೂ ತಮ್ಮನ್ನು ಅತ್ಯತಿಶಯವಾಗಿ ಪ್ರೀತಿಸುವಂತೆ ಆಗಿರುವುದು. ತಮ್ಮಲ್ಲಿ ನಮಗೆ ಎಷ್ಟು ಗೌರವವೂ ಆದರವೂ ಇರುವುವೆಂಬುದಕ್ಕೆ ಈ ದಿನದ ಸಭೆಯೇ ಸಾಕ್ಷಿಯಾಗಿರುವುದು.

ಕವಿವರ್ಯರುಗಳಿಗೆ ಲೋಕಹಿತವೇ ಲಕ್ಷ್ಯವು. ಈ ನಮ್ಮ ಅಲ್ಪವಾದ ಸನ್ಮಾನಗಳೆಲ್ಲಾ ಕೇವಲ ಔಪಚಾರಿಕಗಳು ಮಾತ್ರವೇ. ಭಾಷಾಮತಲ್ಲಿಯನ್ನು ನೂತನಗ್ರಂಥಮಣಿಹಾರಗಳಿಂದ ಅಲಂಕರಿಸುವ ತಮ್ಮಂಥ ಮಹನೀಯರೆಲ್ಲಾ ದೇಶಕ್ಕೆ ವಂದನೀಯರಾಗಿರುತ್ತಾರೆ. ತಮ್ಮಂಥ ಭಾಷಾಸೇವಾತತ್ಪರರಿಗೆಲ್ಲಾ ಉಚಿತಪ್ರೋತ್ಸಾಹಗಳನ್ನಿತ್ತು ರಾಜ್ಯಪರಿಪಾಲನೆ ಮಾಡುತ್ತಿರುವ ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ತಮ್ಮಂಥ ಕವಿತಾಧುರೀಣರ ಸಂಖ್ಯೆಯು ಹೆಚ್ಚುತ್ತಿರಬೇಕೆಂದೂ, ತಮಗೆ ಜಗದೀಶ್ವರನು ಚಿರತರಾಯುರಾರೋಗ್ಯಭಾಗ್ಯಗಳನ್ನು ಅನುಗ್ರಹಿಸಿ, ಇದೇ ತೆರದ ಇನ್ನೂ ಕೆಲವು ಗ್ರಂಥಗಳು ತಮ್ಮಿಂದ ಅವತರಿಸುವಂತೆ ಮಾಡಲೆಂದೂ ಪ್ರಾರ್ಥಿಸುತ್ತೇವೆ.

ತಾವು ನಮ್ಮಗಳ ಪ್ರಾರ್ಥನೆಯನ್ನು ತಿರಸ್ಕರಿಸದೆ, ಅಲ್ಪತರವಾದ ನಮ್ಮ ಸತ್ಕಾರಗಳನ್ನು ಸ್ವೀಕರಿಸಲು ಅಂಗೀಕರಿಸಿ, ದಯಮಾಡಿಸಿದುದಕ್ಕಾಗಿ ಕೃತಜ್ಞತೆಯಿಂದ ನಾವುಗಳು ತಮ್ಮನ್ನು ವಂದಿಸುತ್ತೇವೆ.

ಮೈಸೂರು ಪುರನಿವಾಸಿಗಳು

ಬಳಿಕ ಬಹುಮಾನಾರ್ಹವಾದ ಬೆಳ್ಳಿಯ ವ್ಯಾಸಪೀಠವನ್ನೂ ಬೆಳ್ಳಿಯ ಪೆಟ್ಟಿಗೆಯನ್ನೂ ಅಧ್ಯಕ್ಷರು ತಮ್ಮ ಬಲಗಡೆಯಲ್ಲಿ ಕುಳಿತಿದ್ದ ಮ|| ಎಚ್. ಲಿಂಗರಾಜ ಅರಸಿನವರ ಹಸ್ತಕ್ಕೆ ಕೊಟ್ಟು, ಹಾರ ತುರಾಯಿಗಳನ್ನರ್ಪಿಸಿದರು. ಮತ್ತು ಈ ಕೆಳಗೆ ಕಂಡಂತೆ ತಮ್ಮ ಭಾಷಣವನ್ನು ಮಾಡಿದರು.—

ಈ ಸಮಾರಂಭದ ಮ್ಯಾನೇಜಿಂಗ್ ಕಮಿಟಿಯವರು ಈ ಸಭೆಗೆ ಅಧ್ಯಕ್ಷತೆಯನ್ನು ವಹಿಸಲು ನನ್ನನ್ನು ಕೋರಿದಾಗ ಬಹಳ ಸಂತೋಷದಿಂದ ಅದಕ್ಕೆ ನನ್ನ ಸಮ್ಮತಿಯನ್ನು ಕೊಟ್ಟೆನು. ಏತಕ್ಕೆಂದರೆ ದೇಶಭಾಷಾಸೇವೆಯನ್ನು ಸ್ಮರಣೀಯವಾದ ರೂಪದಲ್ಲಿ ಮಾಡಿದ ಒಬ್ಬ ದೊಡ್ಡ ಮನುಷ್ಯರ ಸನ್ಮಾನವನ್ನು ನಡೆಯಿಸುವುದೇ ಈ ಸಮಾರಂಭದ ಉದ್ದೇಶವಾಗಿದ್ದಿತು. ಎಷ್ಟು ಅಲ್ಪಮಾತ್ರದ ಭಾಷಾಸೇವೆಯನ್ನು ಮಾಡಶಕ್ಯವರೂ ಸಹ ನಿಜವಾಗಿ ದೇಶದ ಸುಪುತ್ರರೂ ಮತ್ತು ದೇಶೀಯರಿಂದೆಲ್ಲಾ ವಂದ್ಯರೂ ಆಗಿರುತ್ತಾರೆ. ದೇಶಭಾಷಾ ವೃದ್ಧಿಗೆ ಸಾಧ್ಯವಾದ ಪ್ರೋತ್ಸಾಹಗಳನ್ನೆಲ್ಲಾ ಮಾಡುವುದು ಪ್ರಭುತ್ವದವರಿಗೂ ಪ್ರತಿಯೊಬ್ಬ ಪ್ರಜೆಗೂ ಕರ್ತವ್ಯವಾಗಿರುತ್ತದೆ. ಬಂಗಾಳಾ, ಮಹಾರಾಷ್ಟ್ರ, ಆಂಧ್ರಭಾಷೆಗಳಿಗೆ ಆಯಾದೇಶಿಯರು ಶ್ರದ್ಧಾಪೂರ್ವಕವಾಗಿ ಸೇವೆಯನ್ನು ಮಾಡುತ್ತಿರುವುದರಿಂದಲೇ ಆ ಭಾಷೆಗಳು ನಮ್ಮ ಇಂಡಿಯಾದೇಶದಲ್ಲಿ ಬಹಳ ಪರಿಪುಷ್ಟಿಯನ್ನು ಪಡೆದಿರುತ್ತವೆ. ನಮ್ಮ ಕನ್ನಡದ ಅಭಿವೃದ್ಧಿಗೆ ತಕ್ಕಷ್ಟು ಸೇವಾಪ್ರಯತ್ನಗಳು ನಡೆಯದೆ ಇರುವುದು ಶೋಚನೀಯವು. ನಮ್ಮ ರಾಜಸಂತತಿಯವರು ಬಹು ದೀರ್ಘಕಾಲದಿಂದಲೂ ಭಾಷಾಸೇವೆಗಾಗಿ ಸ್ವಪ್ರಯತ್ನವನ್ನೂ ಪರರಿಗೆ ಪ್ರೋತ್ಸಾಹವನ್ನೂ ಮಾಡುತ್ತಲಿದ್ದರೆಂಬ ಸಂಗತಿಯು ಇತಿಹಾಸದಿಂದ ಗೊತ್ತಾಗುತ್ತದೆ. ಚಿಕ್ಕ ದೇವರಾಜ ಒಡೆಯರೇ ಮೊದಲಾದ ಕೆಲರು ಸ್ವತಃ ಗ್ರಂಥರಚಯಿತೃಗಳಾಗಿಯೂ ಇದ್ದರು. ಹಿಂದಿನ ಮಾತನ್ನು ಬಿಟ್ಟು ಒಂದು ಶತಮಾನದ ಈಚಿನ ಸ್ಥಿತಿಯನ್ನು ಪರ್ಯಾಲೋಚಿಸಿದರೂ ಆಳಿದ ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರೂ, ಶ್ರೀ ಚಾಮರಾಜಒಡೆಯರವರೂ, ಈಗಿನ ನಮ್ಮ ಆಳುವ ಮಹಾಸ್ವಾಮಿಯವರೂ ಕೂಡ ಭಾಷಾಭಿವೃದ್ಧಿಗೆ ಎಷ್ಟೋ ಪ್ರೋತ್ಸಾಹಗಳನ್ನು ಮಾಡಿಕೊಂಡೇ ಬಂದಿದ್ದಾರೆಂಬುದು ಗೊತ್ತಾಗುತ್ತದೆ. ನಮ್ಮ ಮಹಾರಾಜರ ದೇಶಭಾಷಾಭಿಮಾನವು ಸಾಮಾನ್ಯವಾಗಿಲ್ಲ. ಅವರ ಪ್ರಭುತ್ವದ ಉದಾರಾಶ್ರಯದಿಂದ ಕರ್ನಾಟಕಸಾಹಿತ್ಯ ಪರಿಷತ್ತು ಸಾಧ್ಯವಾದಷ್ಟು ಕೆಲಸವನ್ನು ಮಾಡುತ್ತಿದೆ. ನಮ್ಮ ಸರ್ ಕಾಂತರಾಜ ಅರಸಿನವರು ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಆಯಾ ಶಾಸ್ತ್ರೀಯ ಗ್ರಂಥಗಳೆಲ್ಲಾ ದೇಶಭಾಷೆಯಲ್ಲೇ ದೊರೆಯುವಹಾಗಿದ್ದರೆ ನಮ್ಮ ಯೂನಿವರ್ಸಿಟಿಯು ಹೈದರಾಬಾದ್ ಯೂನಿವರ್ಸಿಟಿಯಂತೆ ದೇಶಭಾಷಾ ವಿದ್ಯಾಪೀಠವಾಗಿಯೇ ನಿರ್ಮಿಸಲ್ಪಡುವ ಸಂಭವವನ್ನು ಶ್ರೀಮನ್ಮಹಾರಾಜರು ಉಂಟುಮಾಡಿಕೊಡದೆ ಹೋಗುತ್ತಿರಲಿಲ್ಲವೆಂದು ಊಹಿಸಬಹುದಾಗಿರುತ್ತದೆ. ವಿದ್ಯಾವಂತರೂ, ಕವಿಗಳೂ, ಸಹ ನೂತನಗ್ರಂಥ ರಚನೆಯ ಮೂಲಕ ದೇಶಭಾಷೆಗೆ ಪರಿಪುಷ್ಟಿಯನ್ನುಂಟುಮಾಡುತ್ತ ಬರಬೇಕು. ದೇಶೀಯರು ತಕ್ಕ ಪ್ರೋತ್ಸಾಹ ಮರ್ಯಾದೆಗಳನ್ನು ಅವರುಗಳಿಗೆ ಕೊಡುತ್ತಾ ಬರಬೇಕು. ಪ್ರಕೃತದಲ್ಲಿ ನಮ್ಮನ್ನಾಳುವ ಪ್ರಭುಗಳ ಬಂಧುವರ್ಗದಲ್ಲಿ ಒಬ್ಬರಾದ ಮ|| ಹೆಚ್. ಲಿಂಗರಾಜ ಅರಸಿನವರು ನೂತನ ಗ್ರಂಥ ರಚನೆಯಲ್ಲಿ ಕೃತಕೃತ್ಯರಾಗಿ ಯಶಸ್ಸನ್ನು ಸಂಪಾದಿಸಿ ಈವಿಷಯದಲ್ಲಿ ಈಗಿನ ಅರಸು ಮಂಡಲಿ ಯೊಳಗೆಲ್ಲಾ ಅದ್ವಿತೀಯರೆನಿಸಿಕೊಂಡದ್ದು ತುಬಾ ಸಂತೋಷಪ್ರದ ವಿಷಯವಾಗಿದೆ. ಇವರಿಗೆ ಅಳವಟ್ಟಿರುವ ಕವಿತಾಶಕ್ತಿಯು ಆಶ್ಚರ್ಯಕರವಾದದ್ದು. ಓದಿ ವಿದ್ವಾಂಸರಾದವರಿಗೆಲ್ಲಾ ಕವಿತಾಶಕ್ತಿಯು ಬರುವುದಿಲ್ಲ. ಅದು ದೈವಾನುಗ್ರಹದಿಂದ ಲಭ್ಯವಾಗತಕ್ಕದ್ದು. ಗ್ರಂಥಕರ್ತರಾದ ಕವಿಗಳ ಘನತೆಯು ಲೋಕೋತ್ತರವಾದದ್ದು. ಜಗತ್ತಿಗೆ ಅವರಿಂದ ಆಗತಕ್ಕ ಉಪಕಾರವು ಮತ್ತೆ ಯಾರಿಂದಲೂ ಆಗುವುದಿಲ್ಲವೆಂದು ಹೇಳಬಹುದು. ಲಕ್ಷಾಂತರ ಚತುರಂಗ ಬಲವುಳ್ಳ ಮಹಾಸಾರ್ವಭೌಮನಾಗಿದ್ದರೂ ಅವನ ಕೀರ್ತಿ ಪರಾಕ್ರಮಾದಿಗಳು ಕವಿಮುಖದಿಂದ ಸ್ಥಾಪಿತವಾಗದಿದ್ದರೆ ಅವು ಅವನ ತಲೆಗೇ ಕೊನೆಮುಟ್ಟಿಹೋಗುವುವು. ಶ್ರೀ ವೇದವ್ಯಾಸರಿಲ್ಲದಿದ್ದರೆ ಪಾಂಡವರ ಮಹತ್ವವನ್ನೂ ವಾಲ್ಮೀಕಿ ಮಹಾಕವಿಯಿಲ್ಲದಿದ್ದರೆ ಶ್ರೀ ರಾಮಚರಿತ್ರವನ್ನೂ ಯಾರೂ ಸ್ಮರಿಸಲೂ ಅವಕಾಶವಿರುತ್ತಿರಲಿಲ್ಲ. ಪೂರ್ವದ ಕಾಳಿದಾಸಾದಿ ಮಹಾಕವಿಗಳೂ ನಾನಾ ಶಾಸ್ತ್ರೀಯ ಗ್ರಂಥನಿರ್ಮಾತೃಗಳಾದ ನಮ್ಮ ಪ್ರಾಚೀನ ಶಾಸ್ತ್ರಜ್ಞರೂ ಗ್ರಂಥಗಳನ್ನು ಬರೆದು ಇಡದಿದ್ದರೆ ನಮ್ಮ ಭರತಖಂಡವು ಒಂದು ಅನಾಗರಿಕವಾದ ಮೂಗ ಜನರ ಕೊಂಪೆ ಯೆಂಬ ಭಾವನೆಗೆ ಗುರಿಯಾಗಿ ಹೋಗುತ್ತಿತ್ತು. ಕವಿಯು ಒಂದು ಕಾಲ ಒಂದು ದೇಶಕ್ಕೆ ಮಾತ್ರವೇ ಸಂಬಂಧಿಸಿ ಇರತಕ್ಕವನಲ್ಲ. ಅವನ ಗ್ರಂಥವು ಎಷ್ಟು ದೇಶಗಳಲ್ಲಿ ವ್ಯಾಪಿಸಿರುವುದೋ ಅಷ್ಟು ದೇಶಗಳಲ್ಲೂ, ಅವನ ಕಾವ್ಯವು ಭೂಮಿಯಮೇಲೆ ಎಷ್ಟು ಕಾಲ ವಿರಾಜಿಸುತ್ತಿರುವುದೋ ಅಷ್ಟು ಕಾಲವೂ ಯಶಶ್ಶರೀರಿಯಾಗಿ ಬದುಕಿಯೇ ಇರುವನು. ಕವಿಯಿಂದ ಜಗತ್ತಿಗೆ ಆಗತಕ್ಕ ಉಪಕಾರವನ್ನು ಇಷ್ಟಿಷ್ಟೆಂದು ವರ್ಣಿಸುವುದು ಅಸಾಧ್ಯ. ಈ ನಮ್ಮ ಲಿಂಗರಾಜ ಅರಸಿನವರು ಅಂಥ ಕವಿಗಳಲ್ಲಿ ಒಬ್ಬರಾಗಿ ತಮಗೆ ದೊರೆತಿರುವ ಕವಿತಾಶಕ್ತಿಯನ್ನು ಸಾಮಾನ್ಯವಾದ ಉಪಯೋಗದಲ್ಲೀ ಕೊನೆಗಾಣಿಸದೆ ಶಾಶ್ವತವಾಗಿರತಕ್ಕ ಪವಿತ್ರವಾದ "ರಾಮಾಯಣ ಸಂಗ್ರಹ" ವೆಂಬ ಒಂದಾನೊಂದು ಕಾವ್ಯವನ್ನು ರಚಿಸುವುದರಿಂದ ಸಾರ್ಥಕ ಪಡಿಸಿಕೊಂಡಿದ್ದಾರೆ. ಕವಿತೆಯಲ್ಲೂ ಲಲಿತಪದ ಪ್ರಯೋಗ ರಸಭಾವ ಪುಷ್ಟಿಗಳಿಂದ ಕೂಡಿದ ಗ್ರಂಥವೇ ಜನಾದರಕ್ಕೆ ವಿಶೇಷವಾಗಿ ಪಾತ್ರವಾಗತಕ್ಕದ್ದು. ಈ ಅರಸಿನವರ ಕೃತಿಯು ಸಾಮಾನ್ಯ ವಿದ್ಯಾಭ್ಯಾಸವುಳ್ಳ ಜನರೂ ಕೂಡ ಸುಲಭವಾಗಿ ಓದಿ ಅರ್ಥ ಮಾಡಿಕೊಳ್ಳಬಹುದಾದಷ್ಟು ಸುಲಭವಾಗಿರುತ್ತದೆ. ಆದರಿಂದಲೇ ಈ ಟವನ್ನಿನಲ್ಲಿ ವರ್ಷದೊಳಗೆ ಹತ್ತಾರು ಕಡೆ ಆ ಪುರಾಣದ ಪಠನ ಶ್ರವಣಾದಿಗಳನ್ನು ಪ್ರಜೆಗಳು ಅತ್ಯಾಸಕ್ತಿಯಿಂದ ಮಾಡುತ್ತಾ ಬಂದಿದ್ದಾರೆ. ಶ್ರೀಮನ್ಮಹಾರಾಜರೂ ಕೂಡ ಇದನ್ನು ಓದಿಸಿ ಕೇಳಿ ತಮ್ಮ ಪರಿತೃಪ್ತಿಯನ್ನು ವ್ಯಕ್ತಪಡಿಸಿರುವರೆಂದು ಗೊತ್ತಾಗುತ್ತದೆ. ಅಲ್ಲದೆ ಈ ಕಾವ್ಯವನ್ನು ಮೈಸೂರು ಮದರಾಸು, ಬೊಂಬಾಯಿ ಸರ್ಕಾರಗಳ ವಿದ್ಯಾಭ್ಯಾಸದ ಇಲಾಖೆಯವರು ಸ್ಕೂಲುಗಳ ಪಠನೀಯ ಗ್ರಂಥವನ್ನಾಗಿ ಏರ್ಪಡಿಸಿಕೊಂಡಿದ್ದಾರೆ. ಇದರಿಂದೆಲ್ಲಾ ಗ್ರಂಥದ ಯೋಗ್ಯತೆಯು ವ್ಯಕ್ತವಾಗಿರುತ್ತದೆ. ಇಂಥ ಗ್ರಂಥವನ್ನು ರಚಿಸಿ ಕನ್ನಡಿಗರಿಗೆಲ್ಲಾ ಉಪಕರಿಸಿದ ಮ|| ಅರಸಿನವರನ್ನು ರಾಜಧಾನಿಯ ಪುರನಿವಾಸಿಗಳು ಕೃತಜ್ಞತೆಯಿಂದ ಸನ್ಮಾನಿಸುವುದಕ್ಕಾಗಿ ಈ ಸಮಾರಂಭವನ್ನು ಏರ್ಪಡಿಸಿದ್ದು ಅವರುಗಳ ಗುಣೈಕ ಪಕ್ಷಪಾತಿತ್ವಕ್ಕೆ ನಿದರ್ಶನವಾಗಿದೆ. ಈ ಸಮಾರಂಭ ಸನ್ಮಾನಗಳು ಮೈಸೂರು ರಾಜಧಾನಿಯ ಪ್ರಜೆಗಳಿಗೆ ಮಾತ್ರವೇ ಸಂಬಂಧಪಟ್ಟವುಗಳೆಂದು ಭಾವಿಸದೆ ಒಟ್ಟು ಮೈಸೂರು ಸಂಸ್ಥಾನದ ಮತ್ತು ಇದರ ಹೊರಗಿರುವ ಎಲ್ಲ ಕನ್ನಡ ನಾಡಿನ ಒಂದು ಕೋಟಿ ಪ್ರಜೆಗಳ ಕೃತಜ್ಞತಾಭಿನಂದನರೂಪವಾದವುಗಳೆಂದು ಮ|| ಅರಸಿನವರು ಭಾವಿಸಬೇಕೆಂದು ನಾನು ಕೋರುತ್ತೇನೆ. ಏಕೆಂದರೆ, ಕರ್ನಾಟಕ ದೇಶದ ಸಕಲ ಪ್ರಜೆಗಳೂ ಇವರ ಭಾಷಾ ಸೇವಾರೂಪವಾದ ಉಪಕೃತಿಯಿಂದ ಬದ್ಧರಾಗಿರುತ್ತಾರೆ. ಈ ಗ್ರಂಥರಚನೆಯ ಮೂಲಕ ಶಾಶ್ವತವಾದ ಯಶಸ್ಸಂಪತ್ತಿಯನ್ನು ಮ|| ಅರಸಿನವರು ಸಂಪಾದಿಸಿಕೊಂಡು ಧನ್ಯಜನ್ಮರಾಗಿರುತ್ತಾರೆ. ಜಗದೀಶ್ವರನು ಇವರಿಗೆ ಚಿರಕಾಲಾಯುರಾರೋಗ್ಯಗಳನ್ನು ಅನುಗ್ರಹಿಸಿ ಹೀಗೆಯೇ ಇನ್ನು ಕೆಲವು ಗ್ರಂಥಗಳನ್ನು ರಚಿಸುವ ಯೋಗವನ್ನುಂಟುಮಾಡಿಕೊಡಲೆಂದು ಸಭಿಕರೆಲ್ಲರ ಪರವಾಗಿ ನಾನು ಕೋರುತ್ತೇನೆ.

ಇದಕ್ಕೆ ಮ|| ಅರಸಿನವರು ಕೊಟ್ಟ ಪ್ರತ್ಯುತ್ತರ:—

"ಸಭಾಧ್ಯಕ್ಷರೆ, ಸಭಾಸದರೆ:—

ನಾನು ಸಂಸ್ಕೃತವನ್ನಾಗಲಿ ಕನ್ನಡವನ್ನಾಗಲಿ ಕ್ರಮವಾಗಿ ಅಭ್ಯಾಸಮಾಡಿದವನಲ್ಲ. ಭಾರತ ಜೈಮಿನಿ ಮುಂತಾದ ಕೆಲವು ಕರ್ಣಾಟಕ ಗ್ರಂಥಗಳನ್ನು ಪಠನ ಮಾಡಿದ ಅಭ್ಯಾಸಬಲದಿಂದ ಈ ರಾಮಾಯಣ ಸಂಗ್ರಹವನ್ನು ಬರೆದೆನು.

ಸಂಸ್ಕೃತ ಕರ್ಣಾಟಸಾಹಿತ್ಯ ವಿದ್ಯಾವಿಶಾರದರಾದ ಮಹಾ ವಿದ್ವತ್ಕವಿಗಳಿಂದ ಅಲಂಕೃತವಾದ ಈ ಮಹಾ ಸಭೆಯಲ್ಲಿ ನಾನು ಸೂರ್ಯಮಂಡಲದ ಮುಂದೆ ಮಿಣುಕು ಹುಳುವಿನಂತಿರುವೆನು.

ಹಿಂದಣ ಮಹಾ ಕವಿಗಳಿಂದ ರಚಿತವಾದ ರಾಮಾಯಣವೆಂಬ ಮಹಾರ್ಣವದಲ್ಲಿ ಒಂದು ಹನಿಯನ್ನೂ ನನ್ನ ಈ ಗ್ರಂಥವು ಹೋಲುವುದಿಲ್ಲ. ನನ್ನಲ್ಲಿ ಶ್ಲಾಘ್ಯವಾದ ಅಂತಹ ಗುಣವಾವುದೂ ಇಲ್ಲದಿದ್ದರೂ ಪರಗುಣರೇಣುವನ್ನು ಪರ್ವತದಂತೆ ಭಾವಿಸುವುದು ಸಜ್ಜನರಾದ ನಿಮ್ಮ ಸ್ವಭಾವವಾದುದರಿಂದ ನೀವು ನನ್ನ ಗುಣಲೇಶವನ್ನೂ ಮಹತ್ತಾಗಿ ಭಾವಿಸಿರುವಿರಿ. ಇಂತಹ ನನಗೆ ಈ ಮಹಾಸಭೆಯಲ್ಲಿ ನೀವು ಮಾಡಿದ ವಿಶೇಷ ಬಹುಮಾನಕ್ಕೆ ನನ್ನ ಮನಸ್ಸು ಸಂಕೋಚವುಳ್ಳದಾಗಿರುವುದು.

ಶ್ರೀ ರಾಮಚಂದ್ರನಲ್ಲಿ ನಿಮಗಿರುವ ದೃಢಭಕ್ತಿವಿಶೇಷದಿಂದ ನೀವು ಆ ಮಹಾನುಭಾವನ ಪರಮ ಚರಿತ್ರೆಯನ್ನು ಪ್ರತಿಪಾದಿಸುವ ನನ್ನ ಈ ಗ್ರಂಥವನ್ನು ಶ್ಲಾಘಿಸುವಿರೆಂದು ಭಾವಿಸಿ ನನ್ನ ಮನಸ್ಸಂಕೋಚವನ್ನು ಪರಿಹರಿಸಿಕೊಳ್ಳುವೆನು.

ಶ್ರೀ ರಾಮನು ದಶರಥನಿಂದ ಕೌಸಲ್ಯಾ ಗರ್ಭದಲ್ಲಿ ಜನಿಸಿದಾಗ ವಸಿಷ್ಠ ಮುಂತಾದ ಕೆಲವರು ಮಹರ್ಷಿಗಳು ಹೊರತು ಮಿಕ್ಕವರೆಲ್ಲರೂ ಆತನನ್ನು ಸಾಮಾನ್ಯ ರಾಜಕುಮಾರನೆಂದು ಭಾವಿಸಿದ್ದರು. ಆತನ ಅಸಾಧಾರಣವಾದ ಗುಣಗಳನ್ನು ತಿಳಿದ ಮೇಲೆ ಸಾಕ್ಷಾದ್ಭಗವಂತನ ಅವತಾರವೆಂದು ಲೋಕಕ್ಕೆಲ್ಲಾ ವಿದಿತವಾಯಿತು.

ಇದರಿಂದ ನಾವು ತಿಳಿದುಕೊಳ್ಳಬೇಕಾದ ಅಂಶವೇನಂದರೆ—ಮನುಷ್ಯನಾದವನು ಪ್ರಯತ್ನ ಪಟ್ಟು ಅಸಾಧಾರಣವಾದ ಗುಣಗಳನ್ನು ಸಂಪಾದಿಸಿ ಅದರಂತೆಯೇ ಆಚರಿಸಿದರೆ ಯಾವ ಮಹಾ ಪದವಿಯನ್ನಾದರೂ ಹೊಂದಬಹುದೆಂದು ಲೋಕಕ್ಕೆ ನಿದರ್ಶನ ಮಾಡುವುದಕ್ಕಾಗಿಯೇ ಶ್ರೀ ರಾಮನು ಈ ಅವತಾರವನ್ನೆತ್ತಿದನೆಂದು ತಿಳಿದುಕೊಳ್ಳಬಹುದು.

ಪ್ರಕೃತದಲ್ಲಿ ಈ ಗುಣಗಳೆಲ್ಲವೂ ನಮ್ಮನ್ನಾಳುವ ಮಹಾ ಪ್ರಭುಗಳಲ್ಲಿ ನೆಲೆಗೊಂಡಿರುವುದನ್ನು ಪ್ರತ್ಯಕ್ಷವಾಗಿ ನಾವು ನೋಡುತ್ತಿದ್ದೇವೆ. ಈ ಕಾರಣದಿಂದಲೇ ಅಚಂಚಲವಾದ ರಾಜಭಕ್ತಿ ವಿಶ್ವಾಸಗಳು ಅವರಲ್ಲಿ ನಿಮಗೆ ತುಂಬಿ ತುಳುಕುತ್ತಿವೆ. ಇಂಥವರ ಬಂಧುವರ್ಗಕ್ಕೆ ಸೇರಿದವರೆಂಬ ಅಭಿಮಾನದಿಂದ ನಮ್ಮ ಮಂಡಲಿಯನ್ನು ವಿಶೇಷವಾಗಿ ಶ್ಲಾಘಿಸಿ ನಮ್ಮ ಏಳಿಗೆಯನ್ನು ಬಯಸಿ ಮುಂದೆ ನನ್ನ ಗ್ರಂಥ ರಚನೆಗೂ ವಿಶೇಷ ಪ್ರೋತ್ಸಾಹವನ್ನುಂಟುಮಾಡಿರುವುದಕ್ಕೋಸ್ಕರ ನಾನು ನಮ್ಮ ಅರಸು ಮಂಡಲಿಯ ಪರವಾಗಿ ನಿಮ್ಮನ್ನು ಅತ್ಯಂತ ಕೃತಜ್ಞತೆಯಿಂದ ವಂದಿಸುವೆನು.

ನಮ್ಮನ್ನು ಕೇವಲ ವಾತ್ಸಲ್ಯದಿಂದ ಪರಿಪಾಲಿಸುತ್ತಿರುವ ನಮ್ಮ ಶ್ರೀಮನ್ಮಹಾಪ್ರಭುಗಳಿಗೂ ಇವರ ಸಕಲ ಕುಟುಂಬ ವರ್ಗಕ್ಕೂ ಜಗದೀಶ್ವರನು ಆಯುರಾರೋಗ್ಯಾದಿ ಸಕಲ ಶ್ರೇಯಸ್ಸಂಪತ್ತನ್ನು ದಯೆಪಾಲಿಸಲೆಂದು ನಿಮ್ಮೆಲ್ಲರೊಡನೆ ಈಗ ನಾನು ಪ್ರಾರ್ಥನೆ ಮಾಡುವೆನು.

ಬಳಿಕ ಸಭಾಧ್ಯಕ್ಷರಿಗೂ ಸಭಾಸದರಿಗೂ ಪುಷ್ಪಹಾರಗುಚ್ಛಗಳು ಸಮರ್ಪಿಸಲ್ಪಟ್ಟುವು. ರಿಟೈರ್ಡ್ ಡೆಪ್ಯುಟಿಕಮಿಷನರ್ ಮ|| ಜಂಗಯ್ಯಶೆಟ್ಟರವರು ಸಭಾಧ್ಯಕ್ಷರಿಗೆ ವಂದನೆಯನ್ನರ್ಪಿಸುವ ಚಿಕ್ಕಭಾಷಣವನ್ನು ಮಾಡಿ, ಈ ಸಮಾರಂಭವು ಕನ್ನಡದ ಏಳ್ಗೆಗೆ ಶುಭಸೂಚಕವಾಗಿರುವುದೆಂತಲೂ ಈಗಣ ಕಾಲದಲ್ಲಿ ಆಂಗ್ಲಭಾಷೆಯ ವ್ಯಾಮೋಹದಲ್ಲಿ ಸ್ತ್ರೀಯರು ಬಾಲರು ತರುಣರು ವೃದ್ಧರು ಮೊದಲಾದವರೆಲ್ಲಾ ಮುಳುಗಿ ದೇಶಭಾಷೆಯನ್ನು ಅಲಕ್ಷಿಸಿರುವರೆಂತಲೂ, ಅದು ಅನ್ಯಾಯವೆಂತಲೂ, ದೇಶಭಾಷಾಭಿಮಾನವು ಸರ್ವರಿಗೂ ಅವಶ್ಯಕವಾಗಿಲ್ಲದಿದ್ದರೆ ಅದು ವೃದ್ಧಿಗೊಳ್ಳುವುದಿಲ್ಲವೆಂತಲೂ ಹೇಳಿದರು. ಶ್ರೀಮಾನ್ ಮಹಾರಾಜರ ತ್ರಿವಾರಜಯಘೋಷದೊಡನೆಯೂ ಬ್ಯಾಂಡಿನ ಸಲಾಂ ಬಾಜಾದಿಂದಲೂ ಸಭಾಕಾರ್ಯವು ಮುಕ್ತಾಯವಾಯಿತು.

ಮ|| ಎಚ್. ಲಿಂಗರಾಜಅರಸಿನವರು ಕಾವ್ಯರೂಪ ಸತ್ಸಂತಾನವನ್ನು ಪಡೆದು ತನ್ಮೂಲಕ ತಮ್ಮ ಕಣ್ಣೆದುರಿಗೇ ಇಂಥ ಸನ್ಮಾನಯಶೋವೈಭವಗಳನ್ನು ಪಡೆದುದಕ್ಕಾಗಿ ನಾವು ಸಂತೋಷಿಸಿ ಧನ್ಯವಾದವನ್ನರ್ಪಿಸುವೆವು. ಈ ಸಮಾರಂಭದ ಏರ್ಪಾಟಿನಲ್ಲಿ ತುಂಬಾ ಮುತುವರ್ಜಿ ವಹಿಸಿ ಆದ್ಯಂತವಾಗಿ ಸರ್ವವೂ ಸಲಕ್ಷಣವಾಗಿ ಜರಗುವಂತೆ ಮಾಡಲು ಸಾಹಸಪಟ್ಟ ಶ್ರೀಮಂತ ವರ್ಧಮಾನಯ್ಯನವರು ಮ್ಯು|| ಕೌನ್ಸಿಲರು ಮ|| ಗಳಾದ ಮಾಧವರಾಯರು, ಧನಕೋಟಿಶೆಟ್ಟರು ಮೊದಲಾದವರನ್ನು ಮನಃಪೂರ್ವಕವಾಗಿ ಅಭಿನಂದಿಸುವೆವು.

ಪ್ರಜಾಪ್ರತಿನಿಧಿಸಭೆ.

ಈ ಸಭೆಯು ಕಳೆದ ತಾ|| ೭ನೆ ಸೋಮವಾರ ಆರಂಭಿಸಲ್ಪಟ್ಟಿತು. ಪಬ್ಲಿಕ್ ಆಫೀಸಿನ ಸಭಾಂಗಣವು ಪದ್ಧತಿ[illegible] ಅಲಂಕರಿಸಲ್ಪಟ್ಟಿದ್ದಿತು. ಅಧ್ಯಕ್ಷಪೀಠದ ಜಗತಿಯ[illegible] ಗೊತ್ತಾಗಿದ್ದ ಆಸನಗಳ ಮೇಲೆ ಕೌನ್ಸಿಲರುಗ[illegible]ಯನ್ನು ಮುಖ್ಯಾಧಿಕಾರಿಗಳೂ ಡಿ|| ಕಮಿಷನರು[illegible]ಸ್ ಕಮಿಟಿ[illegible] ಮಹಾರಾಜರ ಹುಜೂರು, ಪ್ರೈವೆಟ್[illegible]ದವರು ಮಂಜೂ[illegible]ಷಡ್ ಆಫೀಸರುಗಳೂ ಕೆಲಮ[illegible]ಗಿ ಈ ಪ್ರದೇಶಕ್ಕೆ ನಿಯರೂ ದೊಡ್ಡಮನುಷ್ಯರುಗ[illegible]ದಿಯು ಅವಶ್ಯಕವಾಗಿದೆ [illegible]ರಮಾಡಿ ರಿಪೋರ್ಟನ್ನು ಕಳು[illegible] ಗಳ ಸ್ಥಲಗಳೆಲ್ಲಾ ತುಂಬಿ[illegible] ಸ್ಪೆಕ್ಟರ್ ಜನರಲ್‌ರವರಿಗೆ ಅಪ್ಪಣೆ

ಡೆಯಲ್ಲಿ ವಿಜ್ಞಾಪನ ಪತ್ರಿಕೆಗಳನ್ನು ಒಪ್ಪಿಸುವ ನಿಯುಕ್ತಸಂಘಗಳ ಪ್ರತಿನಿಧಿಗಳಿಗೆ ಸಾಲಾಗಿ ಹಾಕಲ್ಪಟ್ಟಿದ್ದ ಕುರ್ಚಿಗಳ ಮೇಲೆ ಅವರುಗಳು ಕುಳಿತಿದ್ದರು. ದಕ್ಷಿಣಭಾಗದಲ್ಲಿ ಸೆಕ್ರಿಟರಿಯೆಟ್ಟಿನ ಉದ್ಯೋಗಿಗಳಿಗೂ ಉತ್ತರಭಾಗದಲ್ಲಿ ಪತ್ರಿಕಾಪ್ರತಿನಿಧಿಗಳಿಗೂ ಆಸನಗಳು ಏರ್ಪಡಿಸಲ್ಪಟ್ಟಿದ್ದುವು. ಪ್ರೇಕ್ಷಕಸ್ತೋಮವೂ ವಿಶೇಷವಾಗಿಯೇ ಇದ್ದಿತು. ಎಷ್ಟೋ ಮಂದಿಗಳಿಗೆ ಕುಳಿತುಕೊಳ್ಳಲು ಸ್ಥಳಸಿಕ್ಕದೆ ನಿಂತುಕೊಂಡೇ ಇರಬೇಕಾಯಿತು. ದಿವಾನ್ ಮ|| ಎ. ಆರ್. ಬಾನರ್ಜಿ ಎಂ. ಎ. ಸಿ.ಎಸ್.ಐ., ಸಿ.ಐ.ಇ.,ಯವರು 12–5 ಗಂಟೆಗೆ ಆನರಬಲ್ ಬ್ರಿಟಿಷ್ ರೆಸಿಡೆಂಟರು ಅಸಿಸ್ಟೆಂಟ್ ರೆಸಿಡೆಂಟರುಗಳೊಡನೆ ಸಭಾಪ್ರವೇಶ ಮಾಡಿದ ಕೂಡಲೇ ಸಭಿಕರೆಲ್ಲಾ ಎದ್ದುನಿಂತು ಮರ್ಯಾದಿಸಿದರು. ದಿವಾನರು ಅಧ್ಯಕ್ಷಪೀಠವನ್ನು ಅಲಂಕರಿಸಿದರು. ಅವರ ಬಲಪಕ್ಕದ ಆಸನಗಳನ್ನು ಬ್ರಿಟಿಷ್ ರೆಸಿಡೆಂಟರೂ ಅ|| ರೆಸಿಡೆಂಟರೂ ಅಲಂಕರಿಸಿದರು. ಸಭಿಕರು ಕರತಾಡನ ಮಾಡುತ್ತಿರುವಾಗ್ಗೆ ದಿವಾನರು ಎದ್ದುನಿಂತು ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ಸ್ಫುಟವಾಗಿ ಓದಿಮುಗಿಸುವುದಕ್ಕೆ 1¼ ಗಂಟೆ ಹಿಡಿಯಿತು. ಬಳಿಕ ದಿವಾನರು ರೆಸಿಡೆಂಟರಿಗೆ ಪುಷ್ಪಗುಚ್ಛವನ್ನಿತ್ತು ಮರ್ಯಾದಿಸಿದರು. ಅವರು ತಮ್ಮ ಅತಿಥಿಗಳ ಸಂಗಡ ಬೀಳ್ಕೊಂಡು ತೆರಳಿದರು. ಬಳಿಕ ವಿಜ್ಞಾಪನ ಪತ್ರಗಳನ್ನೋದಿ ಸಮರ್ಪಿಸುವುದಕ್ಕೆ ಅನುಜ್ಞೆಯಾಯಿತು. ಕೋಲಾರದ ಚಿನ್ನದ ಗಣಿಗಳ ಸಂಘದ ಪಕ್ಷದ ವಿಜ್ಞಾಪನಪತ್ರವನ್ನು ಮಿ|| ಎಚ್. ಎಂ. ಎ. ಕುಕ್‌ರವರೂ, ಬೆಂಗಳೂರಿನಲ್ಲಿರುವ ಮೈಸೂರು ವರ್ತಕಸಂಘ ಪಕ್ಷದಿಂದ ಮ|| ರಾಮಚಂದ್ರರಾವ್ ಸಿಂಧ್ಯರವರೂ, ಮಲೆನಾಡು ಭೂಸ್ವಾಮಿಗಳ ಸಂಘದ ಪಕ್ಷದಿಂದ ಮಿ|| ಎಸ್. ಎಚ್. ಗಣೇಶರಾವ್‌ರವರೂ, ಮೈಸೂರು ದಕ್ಷಿಣ ಯೂರೋಪಿಯನ್ ಕಾಫಿಪ್ಲಾಂಟರುಗಳ ಸಂಘದ ಪಕ್ಷದಿಂದ ಮಿ|| ಸೆಂಟ್ ಜಾನ್‌ಹಂಟರ್‌ರವರೂ, ಒಕ್ಕಲಿಗರ ಸಂಘದ ಪಕ್ಷದಿಂದ ಮಿ|| ವಿಜಯದೇವ ಎಂ. ಎ. ಬ್ಯಾ|| ಅಟ್‌ಲಾಯವರೂ, ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಪಕ್ಷದಿಂದ ಮ|| ಜೆ. ಪರಮಶಿವಯ್ಯ ಬಿ.ಎ.ಎಲ್.ಎಲ್.ಬಿ.ಯವರೂ, ಸೆಂಟರಲ್ ಮಹಮ್ಮದೀಯ ಸಂಘ ಪಕ್ಷದಿಂದ ಮಿ|| ಅಬ್ಬಾಸ್‌ಖಾನ್‌ರವರೂ, ಜೈನ ವಿದ್ಯಾಭಿವೃದ್ಧಿ ಫಂಡ್ ಸಂಘದ ಪಕ್ಷದಿಂದ ಮ|| ಸರಾಫ್ ಪದ್ಮರಾಜಯ್ಯನವರೂ, ಭಾರತ ಕ್ರೈಸ್ತಸಂಘ ಪಕ್ಷದಿಂದ ಮಿ|| ಜೆ. ಆರ್. ಐಸಾಕ್‌ರವರೂ, ಆದಿದ್ರಾವಿಡಾಭಿವೃದ್ಧಿ ಸಂಘ ಪಕ್ಷದಿಂದ ಮಿ|| ಪಿ. ಮುನಿಗೇಶಂಪಿಳ್ಳೆಯವರೂ, ಆರ್ಯವೈಶ್ಯಮಹಾಸಭಾ ಪಕ್ಷದಿಂದ ಮ|| ಎನ್. ವಿ. ನಾರಾಯಣಮೂರ್ತಿ ಬಿ. ಎ. ಬಿ. ಎಲ್. ರವರೂ, ಕುರುಬರ ಸಂಘದ ಪಕ್ಷದಿಂದ ಮ|| ಜಿ. ಸಂಜೀವಯ್ಯನವರೂ, ಚೆನ್ನಪಟ್ಟಣದ ಅಂಜುಮಾನೆ ಮಹದೇವಿಯಾ ಸಂಘದ ಪಕ್ಷದಿಂದ ಮಿ|| ಸಯ್ಯದ್‌ಅಬ್ದುಲ್‌ಷರೀಫ್‌ರವರೂ ವಿಜ್ಞಾಪನಪತ್ರಗಳನ್ನು ಓದಿ ಸಮರ್ಪಿಸಿದರು. ಇವೆಲ್ಲಾ ಮುಗಿಯುವುದಕ್ಕೆ 1¼ ಗಂಟೆ ಹಿಡಿಯಿತು. ಜೈನಸಂಘದ ವಿಜ್ಞಾಪನ ಪತ್ರದ ಹೊರತು ಉಳಿದುವೆಲ್ಲಾ ಆಂಗ್ಲಭಾಷೆಯಲ್ಲೇ ಇದ್ದುವು. ಜೈನರಲ್ಲಿ ಆಂಗ್ಲಭಾಷಾಕೋವಿದರು ಇಲ್ಲದೆ ಇಲ್ಲ. ಆದರೆ ಆದಿಯಿಂದಲೂ ಜೈನರು ಕನ್ನಡಕ್ಕೆ ಜೀವಾತ್ಮಗಳು. ಈಗ್ಗೂ ಅವರು ಆ ದೇಶಭಾಷಾಭಿಮಾನವನ್ನು ಬಿಡದೆ ಇರುವರೆಂಬುದು ಅವರ ಸಂಘದ ಈ ಪ್ರವರ್ತನದಿಂದ ಗೊತ್ತಾದುದು ಅಭಿನಂದ್ಯವಾಗಿರುತ್ತದೆ. ಯೂರೋಪ್ಯ ಸಂಘದವರ ಹೊರತು ಇತರ ದೇಶೀಯ ಸಂಘಗಳವರೆಲ್ಲಾ ತಂತಮ್ಮ ವಿಜ್ಞಾಪನಪತ್ರಗಳನ್ನು ದೇಶಭಾಷೆಯಲ್ಲೇ ಏತಕ್ಕೆ ರಚಿಸಬಾರದೋ ತಿಳಿಯಲಿಲ್ಲ.

ಕಡೆಗೆ ದಿವಾನರು ಈ ವಿಜ್ಞಾಪನಪತ್ರಗಳಿಗೆಲ್ಲಾ ಕೊಟ್ಟ ಉತ್ತರವನ್ನು ಬೇರೆಕಡೆ ಮುದ್ರಿಸಿರುತ್ತೇವೆ. ಅಂತೂ ಮೊದಲನೆ ದಿವಸ ಆದ್ಯಂತವಾಗಿ 2½ ಗಂಟೆಗಳ ಕಾಲ ನಡೆದ ಭಾಷಣಗಳೆಲ್ಲಾ ಆಂಗ್ಲಭಾಷೆಯಲ್ಲೇ ಇದ್ದ ಕಾರಣ ಪ್ರತಿನಿಧಿಗಳಲ್ಲಿ ಮುಕ್ಕಾಲುಪಾಲು ಜನಕ್ಕೆ ಏನೂ ಗೊತ್ತಾಗದೆ ಬೇಸರವನ್ನು ಹುಟ್ಟಿಸಿತು. ಏಕೆಂದರೆ ಅವರಲ್ಲಿ ಆಂಗ್ಲಭಾಷಾಭ್ಯಾಸವಿಲ್ಲದ ಕನ್ನಡಿಗರೇ ಹೆಚ್ಚು. ಸಭೆಯೆಲ್ಲಾ ಮುಗಿದು ಈಚೆಗೆ ಬಂದಮೇಲೆ ಈ ದಿವಸ ನಡೆದದ್ದೇನು ? ದಿವಾನರ ಭಾಷಣದಲ್ಲಿ ಹೆಚ್ಚಿನ ವಿಷಯವೇನು ? ಎಂದು ಆಂಗ್ಲಭಾಷಾಭಿಜ್ಞರನ್ನು ಕೇಳಲಿಕ್ಕೆ ತೊಡಗಿದರು. ದಿವಾನರ ಭಾಷಣದ ಕನ್ನಡದ ಪ್ರತಿಯು ಓದಲ್ಪಡಲೂ ಇಲ್ಲ. ಮತ್ತು ಇಂಗ್ಲೀಷಿನ ಕನ್ನಡದ ಭಾಷಣ ಪ್ರತಿಗಳಾವುವೂ ಸಭಿಕರಿಗೆ ಹಂಚಲ್ಪಡಲೂ ಇಲ್ಲ. ಅವು ಇನ್ನೂ ಸಿದ್ಧವಾಗಿದ್ದಂತೆ ತೋರಲಿಲ್ಲ. ಮರುದಿನ ಅವು ಕೊಡಲ್ಪಟ್ಟುವು. ವಿಶೇಷ ರಾಜಕೀಯ ಸಂಸ್ಕರಣಗಳು ಕೆಲವನ್ನು ಶ್ರೀಮನ್ಮಹಾರಾಜರು ಅನುಗ್ರಹಿಸುವ ಸಂಭವವಿರುತ್ತದೆ. ಅದನ್ನು 3–4 ದಿನಗಳೊಳಗೆ ಸಭೆಗೆ ಶ್ರುತಪಡಿಸುವುವೆಂದು ದಿವಾನರು ಅಪ್ಪಣೆಕೊಡಿಸಿದರು. ಈ ದಿನದ ಭಾಷಣದಲ್ಲಿ ಆ ವಿವರವೇನೂ ತಿಳಿಯಿಸಲ್ಪಡಲಿಲ್ಲ. ಅದುಕಾರಣ ನಿಯಮನಿರ್ಮಾಣ ಸಭೆ, ಸಂಪದಭ್ಯುದಯ ಸಮಾಜದ ಬೋರ್ಡು, ಫೈನಾನ್ಸ್ ಕಮಿಟಿ ಇವುಗಳಿಗೆ ಪ್ರಜಾಪ್ರತಿನಿಧಿಸಭೆಯಿಂದ ಮೆಂಬರುಗಳನ್ನು ಆರಿಸಿಕೊಡಬೇಕಾದ ಕೆಲಸವು ಈಸಲದ ಸಭೆಯಲ್ಲಿ ನಡೆಯುವುದಕ್ಕವಕಾಶವಿಲ್ಲವಾಯಿತು. ಆ ನೂತನ ಸಂಸ್ಕರಣಗಳೆಲ್ಲಾ ಪ್ರಕಟವಾದನಂತರವೇ ಮೇಲೆಕಂಡ ಸಭೆಗಳ ಮೆಂಬರುಗಳ ಆರಿಸುವಿಕೆಯು ನಡೆಯಬೇಕೆಂದು ಪ್ರತಿನಿಧಿಗಳು ಅಭಿಪ್ರಾಯಪಟ್ಟುದರಿಂದ ಹಾಗೆಯೇ ಆಗಲೆಂದು ದಿವಾನರು ಸಮ್ಮತಿಸಿದರು. ಪ್ರಥಮದಿನದ ಕೆಲಸಗಳು ಅಲ್ಲಿಗೆ ಮುಗಿದುವು.

CONSTITUTIONAL REFORMS ANNOUNCED IN THE ASSEMBLY

Main Features :—

1. The Representative Assembly will be given a definite place in the constitution.

2. Power to vote on budget estimates to the Legislative Council except those affecting foreign relations, Palace, Military and pensions.

3. The Representative Assembly will be given the right to move resolutions on matters relating to the public administration and also on the annual State budget.

4. No new tax will be levied without previously consulting the Representative Assembly.

5. Reduction of the strength of the Representative Assembly to 200 members.

6. Legislative Council to contain 40 to 50 members.

7. The number of candidates to be returned from the Representative Assembly to the Legislative Council to be substantially increased.

8. Lowering of the franchise.

9. Removal of sex disqualification.

10. Appointment of one or more Standing Committees consisting of members of both Houses

While deferring our opinion regarding the Reforms we hasten to convey our feelings of loyal gratitude to His Highness the Maharaja of Mysore for graciously conferring these privileges to His Highness subjects and our hearty congratulations to the Dewan, for announcing the same yesterday on which doubtless a great deal of labour and thought have been bestowed.

ಮೈಸೂರು ಸ್ಟಾರ್.

೧೯೨೨ನೆಯ ಇಸವಿಯ ಅಕ್ಟೋಬರ್ ತಾ|| ೮ನೆಯ ಭಾನುವಾರ.

ಪ್ರಜಾಪ್ರತಿನಿಧಿಸಭೆ.

ಈ ಸಭೆಯು ಕಳೆದ ಸೋಮವಾರದಿಂದ ಆರಂಭಗೊಂಡು ನಡೆಯುತ್ತಿದೆ. ಸಭಾಧ್ಯಕ್ಷರಾದ ದಿವಾನರಿಗೆ ದೇಶಭಾಷಾಪರಿಚಯವು ವಿಶೇಷವಾಗಿಲ್ಲದಿದ್ದರೂ, ಸಭಿಕರು ಕನ್ನಡದಲ್ಲಿ ಅರಿಕೆಮಾಡುವುದನ್ನೆಲ್ಲಾ ತಿಳಿದುಕೊಳ್ಳುತ್ತಾರೆ. ಮತ್ತು ಪ್ರತಿ ಚರ್ಚೆಯೂ ಕನ್ನಡದಲ್ಲೇ ನಡೆಯಬೇಕೆಂದು ತಾವೇ ಒತ್ತಿಹೇಳಿ ಹಾಗೆಯೇ ಮಾಡಿಸುತ್ತಿದ್ದಾರೆ. ಅವರೂ ಅವರ ಸಹೋದ್ಯೋಗಿಗಳೂ ಸಹ ಪ್ರತಿಯೊಂದು ಅರಿಕೆಗೂ ಸಮಾಧಾನಗಳನ್ನು ಸಾಧ್ಯವಾದಮಟ್ಟಿಗೂ ಕನ್ನಡದಲ್ಲೇ ಹೇಳುತ್ತಿದ್ದಾರೆ. ಆದರೆ ಹಿಂದಣ ಅಧಿವೇಶನಗಳಲ್ಲಿ ಚರ್ಚೆಗೆ ಬಂದು ಹೋಗಿರುವ ಮತ್ತು ಡಿಸ್ಟ್ರಿಕ್ಟ್ ಅಧಿಕಾರಿಗಳಿಂದಲೇ ಬಗೆಹರಿದುಹೋಗಬಹುದಾಗಿರುವ ಸಾಮಾನ್ಯ ವಿಷಯಗಳೆಷ್ಟೋ ಈ ಸಭೆಯ ಚರ್ಚೆಗೆ ಇಡಲ್ಪಡುವ ಪದ್ಧತಿಯು ಮಾತ್ರ ಈಗಲೂ ತಪ್ಪಿಲ್ಲ. ಪ್ರತಿಸಲವೂ ಎಷ್ಟೋ ವಿಷಯಗಳು ಚರ್ಚೆಗೆ ಅವಕಾಶವನ್ನೇ ಪಡೆಯದೆ ನಿಂತುಹೋಗುತ್ತಿದ್ದರೂ ಡಿಸ್ಟ್ರಿಕ್ಟ್ ಅಧಿಕಾರಿಗಳು ಪ್ರಶ್ನಾಂಶಗಳ ಸಂಖ್ಯೆಯನ್ನು ಮಿತಪಡಿಸದಿರುವುದು ಸರಿಯಾಗಿಲ್ಲ. ಪ್ರಭುತ್ವದವರು ಅತ್ತ ಗಮನವನ್ನು ಕೊಟ್ಟರೆ, ಮುಖ್ಯವೂ ಅತ್ಯಂತ ಪ್ರಯೋಜಕವೂ ಆದ ಚರ್ಚೆಗಳನ್ನಷ್ಟೇ ಕೂಲಂಕಷವಾಗಿ ಚರ್ಚಿಸಲು ಈ ಸಭೆಯ ಅಮೂಲ್ಯ ಕಾಲವನ್ನು ವಿನಿಯೋಗಿಸಬಹುದಾಗಿದೆ. ವಿಷಯಸಂಖ್ಯೆ ಹೆಚ್ಚಾಗಿರುವುದರಿಂದ ಮುಖ್ಯ ವಿಷಯಗಳ ಚರ್ಚೆಯು ಅರ್ಧಾಂತವಾಗಿಯೇ ನಿಂತುಹೋಗಬೇಕಾಗುತ್ತದೆ. ಆದರಿಂದ ಮತ್ತೆ ಮತ್ತೆ ಅದೇ ವಿಷಯಗಳು ಕೊನೆಮುಟ್ಟದೆ ಮುಂದಣ ಅಧಿವೇಶನಗಳಿಗೂ ಬಂದೇಬರುತ್ತವೆ.-

ದಿವಾನರ ಭಾಷಣವು ಪದ್ಧತಿಯಂತೆ ೨ ಭಾಗಗಳಾಗಿ ಮಾಡಲ್ಪಟ್ಟು 1ನೆ ಭಾಗದಲ್ಲಿ ಪ್ರಭುತ್ವದ ಕಾರ್ಯನಿರ್ವಾಹಕ್ಕೆ ಸಂಬಂಧಪಟ್ಟ ಮುಖ್ಯ ವಿಷಯಗಳ ಮತ್ತು ಏರ್ಪಾಟುಗಳ ವಿಚಾರವೂ, ೨ನೆಯ ಭಾಗದಲ್ಲಿ ಆಯಾ ಶಾಖೆಗಳ ಆಡಳಿತದ ವಿವರಣವೂ ತಿಳಿಸಲ್ಪಟ್ಟಿವೆ. ಪ್ರಥಮ ಭಾಗವನ್ನು ಆದ್ಯಂತವಾಗಿ ಓದಿ ನೋಡುವವರಿಗೆ ಅದು ಆಶಾಜನಕವಾಗಿಯೂ ಉತ್ಸಾಹಕ್ಕೆಡೆಯುಳ್ಳದಾಗಿಯೂ ಇರುತ್ತದೆ. ಕಳೆದ ವರ್ಷಾಂತ ಕಾಲದ ಅಧಿವೇಶನದಲ್ಲಿಯೂ ಈಗಣ ಅಧಿವೇಶನದಲ್ಲಿಯೂ ಮಾಡಲ್ಪಟ್ಟಿರುವ ದಿವಾನರ ೨ ಭಾಷಣಗಳೂ ಕೂಡ ಪ್ರಭುತ್ವದ ಪೂರ್ವಾಪರ ಪರಿಸ್ಥಿತಿಯನ್ನು ಮುಚ್ಚುಮರೆಯಿಲ್ಲದಂತೆ ಪ್ರಜೆಗಳೆಲ್ಲಾ ತಿಳಿದುಕೊಳ್ಳುವುದಕ್ಕೆ ಸಾಧಕವಾದ ಅನೇಕ ವಿವರಣೆಗಳನ್ನೊಳಗೊಂಡಿರುವುವೆಂಬುದಕ್ಕೆ ಸಂಶಯವಿಲ್ಲ. ದುಡ್ಡಿನ ಮುಗ್ಗಟ್ಟಿನಿಂದ ಪ್ರಭುತ್ವವು ಎಲ್ಲಿ ಮುಗ್ಗರಿಸಿ ಹೋಗುವುದೋ ಎಂದು ಪ್ರಜೆಗಳು ಶಂಕಿಸುತ್ತಿರುವಾಗ, ಅಂಥ ಭಯದ ನಿವಾರಣೆಗೆ ಬೇಕಾದಷ್ಟು ಧೈರ್ಯವು ಕಳೆದ ಸಲದ ದಿವಾನರ ಭಾಷಣದಲ್ಲಿ ಕೊಡಲ್ಪಟ್ಟಿದ್ದಿತು. ಆದರೂ ಕಾರ್ಯತಃ ಅದನ್ನು ತಿಳಿದಮೇಲೆಯೇ ಸಂಶಯವು ನಿವಾರಣೆಗೊಳ್ಳತಕ್ಕುದಾಗಿದ್ದಿತು. ಈಗಣ ಭಾಷಣದಿಂದ ದಿವಾನರು ಪ್ರಥಮತಃ ಮಾಡಿದ ನಿರೀಕ್ಷಣೆಯೂ ಕೊಟ್ಟ ಧೈರ್ಯವೂ ವ್ಯರ್ಥವಾಗತಕ್ಕುವಲ್ಲವೆಂಬ ಸಂಗತಿಯನ್ನು ದೃಢಪಡಿಸಿಕೊಳ್ಳಲು ಅವಕಾಶವಿರುತ್ತದೆ. ಸ್ಪೆಷಲ್ ಫೈನಾನ್ಸ್ ಕಮಿಟಿಯವರು ಕೊಟ್ಟಿರುವ ಸೂಚನೆಗಳಲ್ಲಿ ಅನೇಕವನ್ನು ಸರ್ಕಾರದವರು ಸಂಪೂರ್ಣವಾಗಿಯೂ ಕೆಲವನ್ನು ಸಂಕುಚಿತವಾಗಿಯೂ ವ್ಯವಹರಣೆಗೆ ತಂದಿರುತ್ತಾರೆ. ಇದರಿಂದ ವಾರ್ಷಿಕ ವ್ಯಯದಲ್ಲಿ ಈಗಾಗಲೇ ¼ ಕೋಟಿಯಷ್ಟು ಹಣವು ತಗ್ಗಿಹೋಗುವಂತೆ ಏರ್ಪಡಿಸಿರುತ್ತಾರೆ. ಮುಂದೆ ಇನ್ನಷ್ಟನ್ನು ಕೂಡ ತಗ್ಗಿಸಲು ಸಾಧ್ಯವಾಗಬಹುದು. ವ್ಯಯವನ್ನು ಹೀಗೆ ಕಡಿಮೆಮಾಡುವುದರ ಜತೆಗೆ ಆದಾಯಭಾಗಗಳು ಒಂದುಕಡೆ ವೃದ್ಧಿಯಾಗಿರುವ ಸಂಗತಿಯು ಸಂತೋಷಪ್ರದವಾಗಿದೆ. 1921–22ನೆ ವರ್ಷದ ವರಮಾನವು 3 ಕೋಟಿಯೂ 6¾ ಲಕ್ಷ ರೂ. ಗಳಾಗುವುವೆಂದು ಸ್ಥೂಲಮಾನದ ಲೆಕ್ಕದಿಂದ ಗೊತ್ತುಮಾಡಿಕೊಂಡಿದ್ದರು. ಈಗ ಪರಿಷ್ಕೃತವಾಗಿ ಸಿದ್ಧವಾಗಿರುವ ಲೆಕ್ಕವನ್ನು ನೋಡುವಾಗ್ಗೆ ಕಳೆದ ವರ್ಷದ ವರಮಾನವು 3ಕೋಟಿಯೂ 16¼ಲಕ್ಷವಾಗಿದೆಯೆಂದು ಗೊತ್ತಾಗಿದೆ. ಆ ವರ್ಷದಲ್ಲಿ ಭೂಗಂದಾಯ, ವರಮಾನದ ತೆರಿಗೆ, ಮದದ್ರವ್ಯಶಾಖೆಗಳಿಂದ ಬಂದ ಹೆಚ್ಚುಗೆಯ ಆದಾಯ—ಇವುಗಳೆಲ್ಲಾ ಈ ಅಭಿವೃದ್ಧಿಗೆ ಕಾರಣವಾಗಿವೆ. ಭೂ ಗಂದಾಯವು ವೃದ್ಧಿಮುಖದಲ್ಲೇ ಇದೆ. ಸಾಗುವಳಿಯ ಭೂಮಿಗಳನ್ನು ಹೆಚ್ಚಿಸಲು ಈಗ ಕೈಕೊಂಡಿರುವ ದೃಢಪ್ರಯತ್ನಗಳಿಂದಲೂ ರೀಸರ್ವೆಯ ಏರ್ಪಾಟುಗಳಿಂದಲೂ ಸ್ವಲ್ಪಕಾಲದೊಳಗೆ ಈ ಶಾಖೆಯ ವರಮಾನವೇ 1¼ ಕೋಟಿಯವರೆಗೆ ಏರುವುದೆಂದು ತೋರುತ್ತದೆ. ಮೊಟ್ಟಮೊದಲು ವಿಧಿಸುವಾಗ ವರಮಾನದ ತೆರಿಗೆಯು 6 ಲಕ್ಷದಷ್ಟಾಗಬಹುದೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಈಗ ಅದು 14 ಲಕ್ಷದಷ್ಟಾಗಿದೆ. ಕಾಲಸ್ಥಿತಿ ಅನುಕೂಲವಾಗಿದ್ದರೆ ಅದು 16 ಲಕ್ಷದವರೆಗೂ ಏರಬಹುದೆಂದು ದಿವಾನರು ನಂಬುತ್ತಾರೆ. ಹೀಗೆ ಈ ಶಾಖೆಯ ವರಮಾನದಲ್ಲಿ ಅತ್ಯಂತಾಭಿವೃದ್ಧಿ ಕಂಡುಬಂದುದಕ್ಕೆ ದೊಡ್ಡದೊಡ್ಡ ಜಾಯಿಂಟ್ ಸ್ಟಾಕ್ ಕಂಪನಿಗಳ ಮೂಲಕ ಬಂದ ವರಮಾನವೇ ಬಹುಶಃ 12 ಲಕ್ಷದಷ್ಟಾಗಿರುವುದೇ ಕಾರಣವೆಂದು ಗೊತ್ತಾಗುತ್ತದೆ. ವ್ಯಾಪಾರಗಾರರು ಲೇವಾದೇವಿಗಾರರು ಮೊದಲಾದವರ ಮೂಲಕ ಬರುವ ವರಮಾನವು ಸ್ವಲ್ಪ ಹೆಚ್ಚು ಕಡಿಮೆ ೨ ಲಕ್ಷದಷ್ಟೇ ಎಂದು ತಿಳಿಯಬರುತ್ತದೆ. ಏತೇನ ಈ ಶಾಖೆಯ ವರಮಾನವು ಸಂಸ್ಥಾನದ ಆರ್ಥಿಕ ದುಸ್ಥಿತಿಯ ನಿವಾರಣೆಗೆ ಎಷ್ಟೋ ಸಹಾಯಮಾಡಿತೆಂಬುದರಲ್ಲಿ ಸಂಶಯವಿಲ್ಲ. ಬೆಂಗಳೂರು ದಂಡಿನ ಆದಾಯದಲ್ಲಿ ವೆಚ್ಚ ಕಳೆದು ಉಳಿದುದು 4 ವರ್ಷಗಳ ಬಾಬತು 16¾ ಲಕ್ಷ ಬರಬೇಕಾಗಿದ್ದುದಕ್ಕೆ ಸದ್ಯಃ 13⅓ ಲಕ್ಷ ರೂಪಾಯಿಗಳು ಬಂದಿರುತ್ತವೆ. ಇದರಿಂದಲೂ ಅಷ್ಟು ಸಹಾಯವಾಯಿತು. ನಿಂತುಹೋಗಿದ್ದ ಗಂಧದೆಣ್ಣೆಯ ಮಾರಾಟದಿಂದ ಹೆಚ್ಚುಗೆಯ ಆದಾಯವು ಸರ್ಕಾರಕ್ಕೆ ದೊರೆದಿರುತ್ತದೆ. ಆದರೆ ಅಟವೀ ಶಾಖೆಯ ವರಮಾನವು ಮಾತ್ರ ಕ್ಷೀಣಿಸಿಹೋಗಿರುತ್ತದೆ. ಗಂಧದ ಮರದ ಮಾರಾಟದ ಮೂಲಕ ಬಂದ ಹಣವು ಕಡಿಮೆಬಿದ್ದು ಹೋಗಿದೆ. ದಿನೇದಿನೇ ಈ ಶಾಖೆಯ ವರಮಾನವು ಕೆಲವು ವರ್ಷಗಳಿಂದಲೂ ಹೆಚ್ಚುತ್ತಲೇ ಇದ್ದಿತು. ಈಗ ಕ್ಷೀಣಿಸಿಹೋಗಲು ಉಂಟಾದ ಕಾರಣವೇನೋ ಅದನ್ನು ನಿರ್ಣಯಿಸಿ ಪರಿಹರಿಸಬೇಕಾಗಿದೆ. ಲೋಹಮಾರ್ಗ ಶಾಖೆಯ ವರಮಾನವು ಕೂಡ ಬಹು ಶೋಚನೀಯವಾಗಿದೆ. ಹಾಕಿರುವ ಬಂಡವಾಳಕ್ಕೆ ಸೇಕಡಾ 1 ರೂ. ಬಡ್ಡಿಯು ಕೂಡ ಗಿಟ್ಟುತ್ತಲಿಲ್ಲ. ಇದು ತುಂಬಾ ಶೋಚನೀಯವು. ವಿಷಮ ಪರಿಸ್ಥಿತಿಯು ತೀವ್ರವಾಗಿದ್ದರೂ ಸಮರ್ಥರಾದ ನಮ್ಮ ದಿವಾನರು ಎದೆಗೊಡದೆ ಆಯವ್ಯಯ ಪರಿಸ್ಥಿತಿಯನ್ನು ಸಮತೂಕಕ್ಕೆ ತಂದು ನಿಲ್ಲಿಸಿಕೊಳ್ಳಲು ಮಾಡಿದ ಯೋಜನೆಗಳೂ ಏರ್ಪಾಟುಗಳೂ ಫಲೋನ್ಮುಖಕ್ಕೆ ಬಂದಿವೆಯೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇಷ್ಟು ಶೀಘ್ರವಾಗಿ ಉತ್ತಮಸ್ಥಿತಿಯು ಪ್ರಾಪ್ತವಾಗಲಾರದೆಂದು ದಿವಾನರು ಹೇಗೋ ಹಾಗೆ ಪ್ರಜೆಗಳೂ ಭಾವಿಸಿದ್ದರು. ಅಂಥ ಸಂಶಯವು ತೊಡೆದುಹೋಗುವಂಥ ಸ್ಥಿತಿಯು ಈಗಲೇ ಕಾಣಿಸಿಕೊಂಡಿರುವುದಕ್ಕಾಗಿ ಸಂತೋಷಿಸುತ್ತೇವೆ.

ಕಾಲಮಾನಸ್ಥಿತಿಯ ವಿಷಯವಾಗಿ ದಿವಾನರು ಮಾಡಿದ ಭಾಷಣದೊಳಗೆ ಮುಂಗಾರುಮಳೆಯು ಅನುಕೂಲವಾಗಿದ್ದಿತೆಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಸ್ಥಿತಿಯು ಸಾರ್ವತ್ರಿಕವಾಗಿರುವುದಿಲ್ಲ. ಚಿತ್ರದುರ್ಗ ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಹಲವುಕಡೆ ಮುಂಗಾರುಮಳೆಯೇ ಆಗಿಲ್ಲ. ಮದ್ದಗಿರಿ, ಪಾವಗಡ, ಹಿರಿಯೂರು ಮೊದಲಾದ ಕೆಲವು ತಾಲ್ಲೂಕುಗಳಲ್ಲಿ ಮಳೆಬೆಳೆಗಳಿಲ್ಲದೆ ಜನರ ಸ್ಥಿತಿಯು ಬಹಳ ಪರಿತಾಪಕರವಾಗಿದೆಯೆಂದು ಸುದ್ದಿ ಬಂದಿದೆ. ಗೆಡ್ಡೆಗೆಣಸುಗಳನ್ನು ತಿಂದು ಬಡಜನರು ಜೀವಿಸುತ್ತಿದ್ದಾರೆ. ಜಾನುವಾರುಗಳು ಮೇವಿಲ್ಲದೆ ಸಾಯುತ್ತಲಿವೆ. ಕೆರೆಕಟ್ಟೆಗಳಿಗೆ ನೀರಿಲ್ಲದೆ ಈಗಲೇ ತಾಪತ್ರಯವಾಗಿದೆ. ದಿವಾನರು ಪ್ರತ್ಯಕ್ಷವಾಗಿ ಹೋಗಿದ್ದ ಕೆಲವುಕಡೆ ಈ ಸ್ಥಿತಿಯನ್ನು ಕಣ್ಣಾರೆ ನೋಡಿಯೂ ಕೇಳಿಯೂ ಇರಬಹುದು. ಇಂಥ ಪ್ರದೇಶಗಳ ರೈತರಿಗೆಲ್ಲಾ ಕಂದಾಯದ ರಿಮಿಷನನ್ನೋ ಅಥವಾ ಈ ಸಲಕ್ಕೆ ವಸೂಲಾತಿಯನ್ನು ನಿಲ್ಲಿಸಿರುವುದನ್ನೋ ಮಾಡಬೇಕಲ್ಲದೆ ಕ್ಷಾಮನಿವಾರಣೆಯ ಕೆಲಸವನ್ನು ಕೂಡ ಆರಂಭಿಸಬೇಕಾಗುವುದು. ಪಕ್ಕದ ಮದ್ರಾಸಾಧಿಪತ್ಯದ ಸೀಡೆಡ್ ಡಿಸ್ಟ್ರಿಕ್ಟುಗಳಲ್ಲಿ ಇದೇ ಸ್ಥಿತಿಯುಂಟಾಗಿರುವುದರಿಂದ ಅವರು ಕ್ಷಾಮನಿವಾರಣೆಯ ಕಾರ್ಯಗಳನ್ನು ಆರಂಭಿಸಿ ಬಡಬಗ್ಗರಿಗೆ ಅನ್ನವಸ್ತ್ರದಾನಕ್ಕೂ ಏರ್ಪಡಿಸಿದ್ದಾರೆ. ನಮ್ಮ ದಿವಾನರ ಭಾಷಣದಲ್ಲಿ ಆ ಸಂಬಂಧವಾಗಿ ಯಾವ ಅಭಯವೂ ಧೈರ್ಯವೂ ಹೇಳಲ್ಪಡದಿರುವುದು ಒಂದು ಕೊರತೆಯೇ ಸರಿ.

ವಿದ್ಯಾಭ್ಯಾಸದ ಮೆಮೋರಾಂಡಮು, ಮಿಲ್ಲರ್ ಸಂಘದ ವರದಿಯ ಮೇಲಣ ಅಪ್ಪಣೆಯ ಪ್ರಕಾರದ ಕಾರ್ಯನಿರ್ವಹಣೆ ಮೊದಲಾದ ಮುಖ್ಯವಿಷಯಗಳನೇಕವನ್ನು ಕುರಿತು ದಿವಾನರು ಪ್ರಸ್ತಾವಿಸಿರುತ್ತಾರೆ. ಅವುಗಳ ಸಂಬಂಧವಾದ ವಿಮರ್ಶೆಯನ್ನು ಕ್ರಮೇಣ ನಾವು ಮಾಡುವವರಾಗಿದ್ದೇವೆ.

ಕೊಡಲ್ಪಡಲಿಕ್ಕಿರುವ ನೂತನ ರಾಜಕೀಯ ಸುಧಾರಣೆಗಳ ವಿವರವನ್ನು ಸಭೆಗೆ ಪ್ರಥಮ ದಿವಸವೇ ತಿಳಿಯಪಡಿಸಲು ಸರ್ವಸಿದ್ಧತೆಯೂ ಆಗಿದ್ದಿತೆಂದು ದಿವಾನರ ಭಾಷಣದ ಮೊದಲನೆ ಪ್ಯಾರಾದಲ್ಲಿ ಕಂಡಿರುವ ವಾಕ್ಯಗಳಿಂದ ಸಿದ್ಧವಾಗಿರುತ್ತದೆ. ಮಧ್ಯೆ ಸಂಭವಿಸಿದ ಯಾವುದೋ ಅನಿವಾರ್ಯ ಕಾರಣದಿಂದ ಅದು ಹಾಗೆಯೇ ನಿಂತು ಪ್ರತ್ಯೇಕವಾಗಿ ನಿನ್ನೆ ದಿವಸ ಪ್ರಕಟ ಮಾಡಲ್ಪಟ್ಟಿತು. ಇದರಂತೆಯೇ ಹೊಸದಾಗಿ ಕಲ್ಪಿಸಬೇಕೆಂದಿರುವ ಮುದ್ರಣಶಾಸನದ ಮಸೂದೆಯ ಪತ್ರಿಕೆಯೂ ಕೂಡ ಕಳೆದ ತಾ|| ೫ರ ಸಭೆಯಲ್ಲಿ ಹಂಚಲ್ಪಟ್ಟಿತು. ತಾ|| ೬ರ ಸಭೆಯಲ್ಲಿ ಅದರ ಮೇಲೆ ಖಂಡನರೂಪವಾದ ಚರ್ಚೆಯನ್ನು ಸಭಿಕರು 2½ ಗಂಟೆಯ ಕಾಲ ದೀರ್ಘವಾಗಿ ನಡೆಯಿಸಿದರು. ಅದರ ವಿಮರ್ಶೆಯನ್ನು ಕೂಡ ಮುಂದೆ ನಾವು ಮಾಡುವವರಾಗಿದ್ದೇವೆ.

MYSORE ADMINISTRATION.
DEWAN'S COMPREHENSIVE REVIEW.

The Dewan's address delivered at the opening of the Dasara Session of the Mysore Representative Assembly which was newly constituted this year reviewing the administration during the past year and the measures and problems engaging the attention of Government is a statesmanlike utterance. It is indicative as much of his close and detailed knowledge of the working of the various departments and of the needs and requirements of the people as of his zeal, determination and capacity to deal with the difficult situation in which the State is involved and to carry the State forward on progressive paths as far as possible. The reduction of the strength of the Executive Council from four to three including the Dewan at the retirement of Sir M. Kantaraj Urs may be welcomed as a measure of retrenchment, but the policy, as it is in all modern Governments, should be to have as many interests as possible represented in Government if the all round development of the State could be ensured. The reduction could only be justified as a temporary measure and when the new reforms come we hope that the enlargement of the Executive Council will be taken into consideration, the additional members being appointed from non-officials. The figures given by the Dewan regarding the working of the orders on the Miller Committee Report are very disappointing, and it evidently looks as though the Government have not seriously attempted to see the recommendations of the Recruitment Board being given effect to by those in whom the immediate power of making appointments was vested. Out of 533 vacancies that occurred during the half year ending 30th June 1922, 452 of them were filled up, among whom 270 were Brahmins, 120 non-Brahmin Hindus, 29 Mahomedans, 29 Indian Christians and 4 of other Communities, that is, much more than half of the appointments went to Brahmins. Is this keeping steadily in view the policy formulated by the Government ? We have said often that the good intentions of Government unless backed up by keen, earnest, vigourous and unyielding steps would be fruitless, and here we witness the spectacle of the progressive reduction of backward classes in Service under the very nose of Government's standing orders. The Dewan, we are glad to note, has promised to review the position and issue definite instructions to ensure the steady keeping in view of the policy. Mere issuing instructions will not do. Any deviation from the orders issued must be noted and such cases severely dealt with.

As regards the financial position of the State we are glad to learn that the actuals for the year 1921-22 exceeded the anticipations by about Rs. 7¼ lakhs. The improvement of Rs. 10 lakhs in revenue is due to increased collections under Land Revenue, Income-tax and Excise. It is pleasing to see also that the Government of India have paid a sum of Rs. 13⅓ lakhs towards the arrears of surplus revenues of the Civil and Military Station due for the years 1920-21 and 1921-22. The Dewan further assures us that the question of the indirect contributions by the people of Mysore to the Government of India on account of customes revenue is also engaging the serions attention of Government. One can safely leave this matter to the Dewan to secure the best results. As the Dewan said, the first quarter of the current year is just over and it is too early to judge what the position would be at the end of the year. But this much we can say; that the gloomy position with which he started is assuming a brighter aspect and thin streaks of the coming dawn are already breaking through the thick clouds that hung over the skies, and with the vigourous pursuit of his plans with which we are in general agreement and the cooperation of the people it will not be long before our finances are placed on a sound and stable basis.

The Dewan has very rightly decided not to withdraw the Local Fund and Mohatarfa assigned to the District Boards. It would be impossible to expect the Government to give full effect to their orders on the Educational Memorandum without the anticipated receipts under Local Fund and Mohatarfa and without the education cess. The people we hope will realise better the need for better and wider education and that the six Districts which have given their opinion against the levy will reconsider and follow the splendid example of Bangalore and Chitaldrug—where the improvements have been promised to be introduced without delay, and see that education could progress at the same rapid rate all over the State.

The Dewan has indicated the retrenchments the Government are affecting in various departments on the recommendations of the Special Finance Committee and they are doubtless justifiable in the circumstances. In recent times the departments grew in number and in size at a rate out of all proportion to the needs or capacity of the State and a good pruning of overgrown or useless parts is most welcome. We have only to repeat what we have stated often before that retrenchment should not be made a means of reducing the strength of backward classes in Service as it is feared it is being done in some cases. The policy of the Government is one, namely, to increase the proportion of backward classes in service and if fresh appointments are not open and retrenchments are to be made, the one way of carrying out the policy is not to make retrenchment applicable to the backward classes.

The Dewan referred to the repeal of the existing Press Law in Mysore and the enactment of a new Bill which would be placed before the House for their opinion. It has been done and we will have more to say of it later. Whatever theorists might say and sentiments apart, it cannot be denied that the kind of journalism that obtains in Mysore does need some regulation.

The Dewan referred to the impressions of his recent tour and we are glad to note that he is deeply conscious of the deplorable condition of the ryots. In the very excellent survey of the food situation he gives, it is evident that the fertile plateau of Mysore after all does not produce enough food for its own consumption. If in agriculture alone, the main industry of the people, we are not on firm ground, our absolute dependence on foreign goods in every other economic branch needs no mention. The country is indebted to the Dewan for having taken up this question definitely on hand and for the steps he is going to take in order to bring a larger area of land under cultivation. There are at present too many unnecessary restrictions for acquiring arable lands and we hope they will all be removed.

It is clear that the Dewan is earnestly bent on furthering the progress of the state in every direction. His announcement of the orders of Government sanctioning the election of a non-official President for the Bangalore District Board and the nominations of non-official Presidents for the two District Board of Kolar and Hassan are steps in the right direction. We hope that he will be able to help onwards the fruition of all progressive policies of the State not the least of which is the proper representation of all classes in the Public Service—and thus ensure an all-round development of the State.

ಸ್ವದೇಶದ ವೃತ್ತಾಂತಗಳು.

ಕಳೆದ ೩ನೆ ತಾರೀಖು ಬೆಳಗ್ಗೆ ಶ್ರೀಮನ್ಮಹಾರಾಜರ ಅಧ್ಯಕ್ಷತೆಯಿಂದ ನೆರೆದ ವಿಶ್ವವಿದ್ಯಾಲಯ ಪಟ್ಟಪ್ರಧಾನ ಮಹಾಸಭೆಯಲ್ಲಿ ಆಯಾ ಪರೀಕ್ಷಾ ಪ್ರಶಸ್ತಿಗಳೂ ಬಹುಮಾನಪದಕಗಳೂ ದ್ರವ್ಯರೂಪ ಬಹುಮಾನವೂ ಯೋಗ್ಯತಾಪತ್ರಿಕೆಗಳೂ ಸಹ ಶ್ರೀಮನ್ಮಹಾರಾಜರಿಂದ ಅನುಗ್ರಹಿಸಲ್ಪಟ್ಟುವು. ಇಂಥವರಲ್ಲಿ ಮೈಸೂರಿನ ಮ|| ಎಂ. ಎಸ್. ಬಸವಲಿಂಗಯ್ಯನವರೆಂಬ ಬಿ. ಎಲ್. ವಿದ್ಯಾರ್ಥಿಗಳು ವೀರಶೈವರಾಗಿದ್ದು, ಅವರಿಗೆ ಎರಡು ಸುವರ್ಣಪದಕಗಳು ದೊರೆತುವು. ೧ನೆಯದು ಎಲ್ಲ ಸಬ್ಜೆಕ್ಟು ಅತ್ಯಧಿಕವಾದ ನಂಬರುಗಳನ್ನು ಪಡೆದು ಬಿ. ಎ. ಪರೀಕ್ಷೆಯಲ್ಲಿ ಉತ್ತಮ ವರ್ಗದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗೋಸ್ಕರ ಕೊಡಲು ಏರ್ಪಡಿಸಿರುವ ಎಚ್. ರಾಮಾನುಜಯ್ಯಂಗಾರರ ಮೆಡಲು. ೨ನೆಯದು–ಸಂಸ್ಕೃತವನ್ನು ಉಪಭಾಷೆಯಾಗಿ ತೆಗೆದುಕೊಂಡು ಎಲ್ಲರಿಗಿಂತಲೂ ಹೆಚ್ಚಾದ ನಂಬರುಗಳನ್ನು ಪಡೆದು ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾದ ವಿದ್ಯಾರ್ಥಿಗೋಸ್ಕರವೆಂದು ಮಹಾವಿದ್ವಾನ್ ನವೀನಂ ರಾಮಾನುಜಾಚಾರ್ಯರು ಏರ್ಪಡಿಸಿರುವ ಮೆಡಲು. ಇಂಥ ಬಹುಮಾನಗಳನ್ನು ಪಡೆದುದಕ್ಕಾಗಿ ವೀರಶೈವ ಮಂಡಲಿಯ ಪರವಾಗಿ ನಾವು ಈ ಬಸವಲಿಂಗಯ್ಯನವರು ಅತ್ಯಂತ ಸಂತೋಷದಿಂದ ಅಭಿನಂದಿಸುವೆವು.

ಈಸಲದ ಅರಮನೆಯ ದರ್ಬಾರಿನಲ್ಲಿ ಸಂಸ್ಕೃತ ಪಂಡಿತರಲ್ಲಿ ವೇ|| ಗಳಾದ ಪಂಚಾಪಗೇಶಶಾಸ್ತ್ರಿಗಳಿಗೆ ವೇದಾಂತ ವಿಶಾರದ ಎಂಬ ಬಿರುದೂ, ವಿರೂಪಾಕ್ಷಶಾಸ್ತ್ರಿಗಳಿಗೆ ವಿದ್ಯಾನಿಧಿಯೆಂಬ ಬಿರುದೂ ಸ್ವರ್ಣಕಂಕಣ ಶಾಲುಜೋಡಿ ಮೊದಲಾದ ಮರ್ಯಾದೆಗಳೊಡನೆ ಕೊಡಲ್ಪಟ್ಟುವು. ದೇಶಸೇವಾ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಮ|| ಗಳಾದ ಚಿಕ್ಕನಹಳ್ಳಿಯ ಅಣ್ಣಯ್ಯನವರಿಗೂ, ಕಡಬದ ಹುಚ್ಚವೀರೇಗೌಡರಿಗೂ, ಬಾಚಿಹೊನ್ನೂರು ಶ್ರೀನಿವಾಸ ಪ್ರಭುಗಳಿಗೂ, ಚಿಕ್ಕಮಗಳೂರು ಸಿ. ಶ್ರೀನಿವಾಸರಾಯರಿಗೂ, ಮೈಸೂರಿನ ಕೆ. ಸಂಜೀವಶೆಟ್ಟರಿಗೂ, ಮೈಸೂರಿನ ಮಹಮ್ಮದ್‌ಜಾಫರ್‌ಸಾಹೇಬರಿಗೂ, ಕೋಲಾರದ ಎಚ್. ಶ್ರೀನಿವಾಸರಾಯರಿಗೂ, ಗುಡಿಬಂಡೆಯ ಎಸ್. ಲಕ್ಷ್ಮಣರಡ್ಡಿಯವರಿಗೂ ಗುಬ್ಬಿಯ ಎಂ. ಶಂಭುಲಿಂಗಶೆಟ್ಟರಿಗೂ ಸಹ ಬಂಗಾರದ ಪದಕಗಳನ್ನು ಉಚಿತ ವಸ್ತ್ರಮರ್ಯಾದೆಯೊಡನೆ ದಯಪಾಲಿಸಲ್ಪಟ್ಟುವು. ಸರ್ಕಾರದ ಉದ್ಯೋಗಿಗಳಲ್ಲಿ ಫೈನಾನ್ಷಿಯಲ್ ಸೆಕ್ರೆಟರಿ ಮ|| ಎಂ. ಎನ್. ಕೃಷ್ಣರಾವ್ ಬಿ. ಎ ಯವರಿಗೆ ರಾಜಕಾರ್ಯಪ್ರಸಕ್ತ ಎಂಬ ಬಿರುದನ್ನು ಗಂಡಭೇರುಂಡಾಂಕಿತ ಸುವರ್ಣಪದಕ ಕಂಠೀಸರ ಶಾಲುಜೋಡಿ ಮೊದಲಾದ ಮರ್ಯಾದೆಗಳೂ, ಇಂಪೀರಿಯಲ್ ಸರ್ವೀಸ್ ಅಶ್ವಸೈನ್ಯದ ಕ್ಯಾಪ್ಟನ್ ಎ. ಟಿ. ತ್ಯಾಗರಾಜಯ್ಯನವರಿಗೂ ರಿಟೈರ್ಡ್ ರಿಸಾಲ್ದಾರ್ ಮ|| ಆನಂದರಾವ್ ಭೋಸ್ಲೆಯವರಿಗೆ ೨ನೆ ತರಗತಿ ಸರ್ವೀಸ್ ಮೆಡಲೂ, ಮ|| ಗಳಾದ ಸುಬೇದಾರ್ ಆರ್. ಹೀರಾಸಿಂಗ್‌ರವರಿಗೂ ಸುಬೇದಾರ್ ಬಿ. ಹನುಮಂತರಾವ್‌ರವರಿಗೂ ಸಹ 3ನೆ ತರಗತಿ ಸರ್ವೀಸ್ ಮೆಡಲುಗಳೂ ಅನುಗ್ರಹಿಸಲ್ಪಟ್ಟುವು.

ಪ್ರಜಾಪ್ರತಿನಿಧಿ ಸಭೆಯು ಉಪಕ್ರಮವಾಗುವುದಕ್ಕೆ ಮುಂಚೆ ಒಪ್ಪಿಸಲ್ಪಟ್ಟ ಅಭಿನಂದನಪತ್ರಿಕೆಗಳಿಗೆ ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದ ಉತ್ತರ.

(ತಾರೀಖು 2ನೇ ಅಕ್ಟೋಬರ್ 1922)

ಮಹಾಶಯರೇ,

ತಮ್ಮ ಅಭಿನಂದನಪತ್ರಿಕೆಗಳಲ್ಲಿ ನಮ್ಮ ವಿಷಯವಾಗಿ ಸೂಚಿಸಿರುವ ದಯಾಪೂರಿತವಾದ ಶ್ಲಾಘನೆಗಳಿಗಾಗಿಯೂ ಮುಖ್ಯವಾಗಿ ನಮಗೆ ದಿವಾನ್ ಪದವಿಯು ಲಭಿಸಿದುದಕ್ಕೆ ತೋರಿಸಿರುವ ತೃಪ್ತಿವಚನಗಳಿಗಾಗಿಯೂ ತಮ್ಮೆಲ್ಲರಿಗೂ ನಾವು ತುಂಬಾ ಕೃತಜ್ಞರಾಗಿರುತ್ತೇವೆ. ಈ ಪದವಿಯ ಅವಧಿಯಲ್ಲಿ ನಾವು ನೆರವೇರಿಸಬಹುದೆಂದು ನಿರೀಕ್ಷಿಸುವ ಕಾರ್ಯಕಲಾಪಗಳ ಪೈಕಿ ಸ್ವಲ್ಪಮಾತ್ರವನ್ನಾದರೂ ನೆರವೇರಿಸಲು ಪೂರ್ಣ ಪ್ರಯತ್ನ ಮಾಡುತ್ತೇವೆಂದು ತಾವು ಭರವಸೆಯಿಂದಿರಬಹುದು.

ನಮಗೆ ಒಪ್ಪಿಸಲ್ಪಟ್ಟಿರುವ ಅಭಿನಂದನಪತ್ರಿಕೆಗಳ ಪೈಕಿ ಪ್ರತಿಯೊಂದಕ್ಕೂ ಕ್ರಮಶಃ ಪ್ರಸ್ತಾಪಿಸಿ ಅವುಗಳಲ್ಲಿ ಸೂಚಿತವಾಗಿರುವ ಅಂಶಗಳಿಗೆ ಸಮೂಹತ್ವೇನ ಉತ್ತರವನ್ನು ಕೊಡಲು ಉಪಕ್ರಮಿಸುತ್ತೇವೆ.

ಕೋಲಾರದ ಚಿನ್ನದಗಣಿಗಳವರಿಗೆ ಬೇಕಾಗುವ ಅನುಕೂಲತೆಗಳನ್ನು ಶ್ರೀಮನ್ಮಹಾರಾಜಾ ಸರ್ಕಾರದವರು ಒದಗಿಸಿಕೊಡುವ ವಿಚಾರದಲ್ಲಿ ಈ ಹಿಂದೆಯೂ ಇನ್ನು ಮುಂದೆಯೂ ಏಕಪ್ರಕಾರವಾಗಿ ಸಾವಧಾನದಿಂದ ಪರ್ಯಾಲೋಚಿಸುತ್ತಿರುವರು.

ಅವರ ಅಭಿನಂದನಪತ್ರಿಕೆಯಲ್ಲಿ ಎರಡು ವಿಶೇಷ ವಿಷಯಗಳು ಪ್ರಸ್ತಾಪಿಸಲ್ಪಟ್ಟಿರುತ್ತವೆ. ಅವುಗಳ ಪೈಕಿ ಒಂದನೆಯದಾದ ನೀರು ಸರಬರಾಯಿಯ ವಿಷದಲ್ಲಿ ಬೇತಮಂಗಲದಲ್ಲಿ ನೀರು ಎತ್ತುವ ಯಂತ್ರಕ್ಕೆ ವಿದ್ಯುಚ್ಛಕ್ತಿಯನ್ನು ಕೊಟ್ಟದ್ದಕ್ಕೆ ಈಚೆಗೆ ದೊಡ್ಡ ಕೊಳಾಯಿಗಳಲ್ಲಿ ನೀರಿನ ವೇಗವು ಒಂದೇ ಸಮನಾಗಿರುವಂತೆಯೂ ಈಗ ಆಕಸ್ಮಿಕ ತೊಂದರೆಗಳು ಕಡಮೆಯಾಗಿರುವಂತೆಯೂ ತಿಳಿಯಬರುತ್ತದೆ. ನೀರು ಸರಬರಾಯಿಯ ಇಲಾಖೆಯವರು ಹೊಸಕೊಳಾಯಿ ಹಾಕುವ ವಿಷಯವನ್ನು ಕೈಕೊಳ್ಳುವುದರಲ್ಲಿದ್ದಾರೆಂದು ನಮಗೆ ತಿಳಿಯಬರುತ್ತದೆ. ಈ ಕೆಲಸವು ಪೂರೈಸಿದಲ್ಲಿ ಮೈನಿಂಗ್ ಬೋರ್ಡಿನವರು ಸೂಚಿಸಿರುವ ಅನಾನುಕೂಲಗಳು ಪರಿಹಾರವಾಗುವುದರಲ್ಲಿ ಸಂದೇಹವಿಲ್ಲ. ಕೋಡಹಳ್ಳಿ ಗ್ರಾಮವನ್ನು ದೂರಹಾಕುವ ವಿಚಾರವನ್ನು ಪುನಃ ಇನ್ನೊಂದುವೇಳೆ ಅಜಮಾಯಿಷಿ ಮಾಡುವ ಏರ್ಪಾಡು ಮಾಡಿಸುತ್ತೇವೆ.

ಗಣಿಗಳ ಪ್ರದೇಶದಲ್ಲಿ ಪೋಲೀಸು ಸಿಬ್ಬಂದಿಯನ್ನು ಕಡಮೆಮಾಡತಕ್ಕದ್ದೆಂದು ಸ್ಪೆಷಲ್ ಫೈನಾನ್ಸ್ ಕಮಿಟಿಯವರು ಮಾಡಿದ ಸಲಹೆಗಳನ್ನು ಸರ್ಕಾರದವರು ಮಂಜೂರು ಮಾಡಿರುವುದಿಲ್ಲ. ಅದಕ್ಕೆ ಬದಲಾಗಿ ಈ ಪ್ರದೇಶಕ್ಕೆ ಎಷ್ಟರಮಟ್ಟಿಗೆ ಪೋಲೀಸು ಸಿಬ್ಬಂದಿಯು ಅವಶ್ಯಕವಾಗಿದೆ ಎಂಬುದನ್ನು ತಪಶೀಲಾಗಿ ವಿಚಾರಮಾಡಿ ರಿಪೋರ್ಟನ್ನು ಕಳುಹಿಸುವಂತೆ ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅಪ್ಪಣೆ

ಮಾಡಿರುತ್ತದೆ. ಈ ಪ್ರದೇಶಕ್ಕೆ ತಕ್ಕಷ್ಟುಮಟ್ಟಿಗೆ ಪೋಲೀಸು ಏರ್ಪಾಡು ಮಾಡಬೇಕಾದುದು ಅವಶ್ಯಕವೆಂಬುದನ್ನು ಸರ್ಕಾರದವರು ಅಂಗೀಕರಿಸುತ್ತಾರೆ.

ಮೈಸೂರು ವಾಣಿಜ್ಯ ಸಂಘದವರು ತಮ್ಮ ಅಭಿನಂದನ ಪತ್ರಿಕೆಯಲ್ಲಿ ನಮೂದು ಮಾಡಿರುವ ವಿಷಯಗಳನ್ನು ಯುಕ್ತ ರೀತಿಯಲ್ಲಿ ಪರ್ಯಾಲೋಚಿಸಲಾಗುವುದು. ಸಂಘದವರು ಮಾಡುತ್ತಿರುವ ಕೆಲಸವು ಸಂಸ್ಥಾನದ ವಾಣಿಜ್ಯಕ್ಕೆ ಸಂಬಂಧಪಟ್ಟದ್ದಾದ್ದರಿಂದ ಇದು ಬಹು ಮುಖ್ಯವಾದ ವಿಷಯವಾಗಿರುತ್ತದೆ. ಇದನ್ನು ಇನ್ನೂ ಉತ್ತಮಪಡಿಸುವ ವಿಷಯದಲ್ಲಿ ಸರ್ಕಾರದವರು ತುಂಬಾ ಕುತೂಹಲವುಳ್ಳವರಾಗಿರುತ್ತಾರೆ. ಈ ದಿವಸ ಈ ಸಭೆಯಲ್ಲಿ ನಾವು ಮಾಡಿದ ಭಾಷಣದಲ್ಲಿ ರೈಲ್ವೆ ಗಾಡಿ ವಗೈರೆಗಳನ್ನು ಹೆಚ್ಚಿಸುವ ಬಗ್ಗೆ ಏರ್ಪಾಡು ಮಾಡುತ್ತಿದ್ದೇವೆಂದು ಮುಂಚೆಯೇ ತಿಳಿಸಿದ್ದೇವೆ. ಬೆಂಗಳೂರಲ್ಲಿಯೂ, ಮೈಸೂರಲ್ಲಿಯೂ "ಪಬ್ಲಿಕ್ ಟೆಲಿಫೋನ್" ಏರ್ಪಡಿಸಬೇಕೆಂದು ಹಿಂದೆ ಪರ್ಯಾಲೋಚಿಸಿತ್ತು, ಆದರೆ ಸಾಮಾನುಗಳ ಬೆಲೆ ಏರಿದ್ದರಿಂದ ಆ ಏರ್ಪಾಡನ್ನು ಸದ್ಯಕ್ಕೆ ನಿಲ್ಲಿಸಬೇಕಾಯಿತು. ಈ ವಿಚಾರವನ್ನು ಪುನಃ ಪರ್ಯಾಲೋಚಿಸಲಾಗುವುದು. ನ್ಯಾಯವಿಧಾಯಕ ಸಭೆಯಲ್ಲಿ ಈ ಸಂಘಕ್ಕೆ ಒಂದು ಸ್ಥಾನವನ್ನೇರ್ಪಡಿಸಬೇಕೆಂಬ ವಿಚಾರದಲ್ಲಿ ವ್ಯಾಪಾರ ಮತ್ತು ಇತರ ಪ್ರತ್ಯೇಕ ಬಾಬುಗಳಿಗೂ ತಕ್ಕಷ್ಟು ಪ್ರಾತಿನಿಧ್ಯವನ್ನು ಪಡೆಯದೆ ಇರುವ ಸಣ್ಣಸಣ್ಣ ಪಂಗಡಗಳಿಗೂ, ರಾಜ್ಯಭಾರ ಕ್ರಮಕ್ಕೆ ಸಂಬಂಧಪಟ್ಟ ಸಭೆಗಳಲ್ಲಿ ಸ್ಥಾನವನ್ನು ಕಲ್ಪಿಸಬೇಕೆಂಬುದು ಸರ್ಕಾರದವರ ಉದ್ದೇಶವಾಗಿದೆ.

ಮಲೆನಾಡು ಪ್ರತಿನಿಧಿಗಳ, ತಮ್ಮ ಅವಶ್ಯಕತೆಗಳು ಸರ್ಕಾರದವರಿಗೆ ಸಂಪೂರ್ಣವಾಗಿ ಗೊತ್ತುಂಟು. ಮತ್ತು ತಮ್ಮಗಳಿಗೆ ಇರುವ ವಿಶೇಷವಾದ ಕಷ್ಟಗಳಿಗಾಗಿ ಸರ್ಕಾರದವರು ಕನಿಕರ ಪಡುತ್ತಾರೆ. ಮೂರು ವರುಷಗಳ ಹಿಂದೆ ನಾವು ಆಫಿಷಿಯೇಟಿಂಗ್ ದಿವಾನರಾಗಿದ್ದಾಗ ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸರ್ವತ್ರ ಸಂಚಾರಮಾಡಿ ತಮ್ಮಗಳಿಗೆ ಅತ್ಯವಶ್ಯವಾಗಿ ಬೇಕಾದ ಪ್ರಮೇಯಗಳನ್ನು ಖುದ್ದಾಗಿ ತಿಳಿದುಕೊಂಡಿದ್ದೇವೆ. ಆ ಈಚೆಗೆ ಕೆಲವು ಘಾಟಿ ರಸ್ತೆಗಳನ್ನು ಉತ್ತಮ ಪಡಿಸುವುದರಲ್ಲಿಯೂ, ವೈದ್ಯ ಸಹಾಯದಬಗ್ಗೆ ಕೆಲವು ಅನುಕೂಲ್ಯಗಳನ್ನು ಹೆಚ್ಚಿಸುವುದರಲ್ಲಿಯೂ, ಜಂಗಲಿಗಳಬಗ್ಗೆ ಇದ್ದ ಕೆಲವು ತೊಂದರೆಗಳನ್ನು ನಿವಾರಣೆ ಮಾಡುವುದರಲ್ಲಿಯೂ, ವಾಸ್ತವವಾದ ಮೇಲ್ಪಾಡುಗಳು ಹೆಚ್ಚಾಗಿಯೇ ನಡೆದಿವೆ ಎಂಬುದನ್ನು ತಾವು ಒಪ್ಪಬೇಕಾಗಿದೆ. ದುರದೃಷ್ಟವಶಾತ್ ದ್ರವ್ಯಾಭಾವದ ದೆಸೆಯಿಂದ ಮಲೆನಾಡು ಅಭಿವೃದ್ಧಿಯ ಬಗ್ಗೆ ಹೆಚ್ಚು ಗ್ರಾಂಟನ್ನು ಕೊಡುವುದಕ್ಕೆ ಸರ್ಕಾರದವರಿಗೆ ಅಸಾಧ್ಯವಾಗಿ ಪರಿಣಮಿಸಿತು. ಮುಂದೆ ಬರುವ ಚಳಿಗಾಲದಲ್ಲಿ ತಮ್ಮಗಳ ರಮಣೀಯವಾದ ಡಿಸ್ಟ್ರಿಕ್ಟುಗಳಲ್ಲಿ ಮತ್ತೊಂದು ಸಾರಿ ಸಂಚಾರ ಮಾಡಬೇಕೆಂದು ಏರ್ಪಾಡು ಮಾಡಿದೇವೆ. ಆಗ ಸ್ಥಳವಿದ್ಯಮಾನಗಳನ್ನು ಪರಿಶೀಲನೆಮಾಡಿ ತಾವುಗಳು ಈಗ ಅರಿಕೆ ಮಾಡಿಕೊಂಡಿರುವ ವಿಷಯಗಳೆಲ್ಲವನ್ನೂ ವಿಚಾರ ಮಾಡುತ್ತೇವೆ. ಶ್ರೀಮನ್ಮಹಾರಾಜಾ ಸರ್ಕಾರದವರು ಅವರು ಮಾಡಬೇಕಾದ ಇತರ ಅವಶ್ಯಕತೆಗಳನ್ನು ನೋಡಿಕೊಂಡು ಮಲೆನಾಡಿನ ಸ್ಥಿತಿಯನ್ನು ಮೇಲ್ಪಡಿಸಲು ತಮ್ಮ ಕೈಲಾದದ್ದನ್ನೆಲ್ಲಾ ಮಾಡುವರೆಂದು ತಾವುಗಳು ದೃಢವಾಗಿ ನಂಬಿರಬಹುದು.

ಹಾಸನ—ಮಂಗಳೂರು ರೈಲ್ವೆಯ ಏರ್ಪಾಡನ್ನು ಶೀಘ್ರದಲೇ ಉಪಕ್ರಮಿಸಲು ಸಾಧ್ಯವಿಲ್ಲವೆಂಬ ಅಂಶವನ್ನು ದಕ್ಷಿಣಮೈಸೂರು ಪ್ಲಾಂಟರುಗಳ ಸಂಘದವರಿಗೆ ತಿಳಿಯಪಡಿಸಲು ವಿಷಾದಿಸುತ್ತೇವೆ. ರೈಲ್ವೆಯ ಏರ್ಪಾಡುಗಳು ಹಾಲಿ ಯಾವ ಸ್ಥಿತಿಯಲ್ಲಿರುತ್ತವೆ ಎಂಬ ವಿವರಗಳನ್ನು ನಮ್ಮ ಉಪಕ್ರಮ ಭಾಷಣದಲ್ಲಿ ಆಮೂಲಾಗ್ರವಾಗಿ ವಿವರಿಸಿರುತ್ತೇವೆ. ಮತ್ತು ಮುಂದೆ ಕೆಲವು ವರುಷಗಳವರೆಗೆ ಸರ್ಕಾರೀ ಹಣದಿಂದ ಹೊಸ ಲೈನುಗಳನ್ನು ಹಾಕುವುದಕ್ಕಾಗಿ ಬಂಡವಾಳವನ್ನು ಒದಗಿಸಲಾಗುವುದಿಲ್ಲ. ನಾವು ಸೂಚನೆ ಮಾಡಿದಂತೆ ಈ ವಿಷಯವನ್ನು ಡಿಸ್ಟ್ರಿಕ್ಟು ಬೋರ್ಡಿನವರು ಪರ್ಯಾಲೋಚಿಸಬೇಕು.

ಉಳಿದ ಅಭಿನಂದನ ಪತ್ರಿಕೆಗಳಲ್ಲಿ ಆಯಾ ಪಂಗಡಗಳ ಪ್ರತ್ಯೇಕ ಅವಶ್ಯಕತೆಗಳನ್ನು ಕುರಿತು ಪ್ರಸ್ತಾಪಿಸಿರುತ್ತಾರೆ. ಒಕ್ಕಲಿಗರ ಸಂಘದವರೂ, ಲಿಂಗಾಯತ ವಿದ್ಯಾಭ್ಯಾಸದ ಫಂಡು ಸಂಘದವರೂ, ಜೈನಸಂಘದವರೂ, ವಿದ್ಯಾಭ್ಯಾಸದ ಸುಧಾರಣೆಗಳ ವಿಷಯದಲ್ಲಿಯೂ ಸರ್ಕಾರಿ ನೌಕರಿಯಲ್ಲಿ ಸದರು ಪಂಗಡಗಳ ಜನಗಳನ್ನು ಸೇರಿಸಿಕೊಳ್ಳುವ ವಿಷಯದಲ್ಲಿಯೂ ಹೆಚ್ಚಾಗಿ ಪ್ರಸ್ತಾಪ ಮಾಡಿರುತ್ತಾರೆ. ವಿದ್ಯಾಭ್ಯಾಸದ ಸುಧಾರಣೆಗಳ ಪೈಕಿ ಕೆಲವನ್ನು ಜಾರಿಗೆ ತರುವುದಕ್ಕೂ, ವಿದ್ಯಾಭ್ಯಾಸದ ಕೆಳದರ್ಜೆಗಳನ್ನು ಪರಿಷ್ಕರಿಸುವ ಕೆಲಸವನ್ನು ಉಪಕ್ರಮಿಸುವುದಕ್ಕೂ ಈ ವರ್ಷ ಹೆಚ್ಚು ಗ್ರಾಂಟನ್ನು ಕೊಡಲಾಗುವುದೆಂದು ನಮ್ಮ ಭಾಷಣದಲ್ಲಿಯೇ ತಿಳಿಸಿರುತ್ತೇವೆ. ಸರ್ಕಾರಿ ನೌಕರಿಯಲ್ಲಿ ಹಿಂದುಳಿದ ಪಂಗಡಗಳ ಜನಗಳಿರಬೇಕಾದ ವಿಷಯದಲ್ಲಿ ಸರ್ಕಾರದವರು ನಡೆದುಕೊಳ್ಳಬೇಕೆಂದು ನಿರ್ಧರಿಸಿದ್ದ ನಿಯಮವನ್ನು ಸಂಪೂರ್ಣವಾಗಿ ಜಾರಿಗೆ ತರಲು ಉಂಟಾದ ಪ್ರತಿಬಂಧಕಗಳನ್ನು ನಮ್ಮ ಭಾಷಣದಲ್ಲಿ ಮೊದಲೇ ತಿಳಿಸಿರುತ್ತೇವೆ. ಈ ವಿಷಯದಲ್ಲಿ ಆ ಪಂಗಡಗಳವರು ಭಗ್ನಮನೋರಥರಾಗುವುದಕ್ಕೆ ಸ್ವಲ್ಪ ಅವಕಾಶ ಉಂಟಾದುದಕ್ಕಾಗಿ ನಾವು ತುಂಬಾ ವಿಷಾದಪಡುತ್ತೇವೆ; ಮತ್ತು ನಾವು ಭಾಷಣದಲ್ಲಿ ಈ ಮೊದಲೇ ತಿಳಿಸಿರುವಂತೆ, ಸ್ಥಿತಿಗಳನ್ನು ವಿಮರ್ಶಿಸುವುದಕ್ಕೂ ಶ್ರೀಮನ್ಮಹಾರಾಜಾ ಸರ್ಕಾರದವರು ಈ ಭಾಗದಲ್ಲಿ ಮಾಡಿರುವ ಹುಕುಮುಗಳನ್ನು ಸ್ವಲ್ಪವೂ ಚ್ಯುತಿ ಇಲ್ಲದಂತೆ ಸಂಪೂರ್ಣವಾಗಿ ಜಾರಿಗೆ ತರುವಂತೆ ನೋಡಿಕೊಳ್ಳಲು ನಿಷ್ಕೃಷ್ಟವಾದ ಹುಕುಮನ್ನು ಸಾದರ್ಪಡಿಸಲಾಗುವುದು. ಹಿಂದುಳಿದ ಪಂಗಡಗಳಿಗೆ ಖರ್ಚು ಕಡಿಮೆ ಮಾಡುವುದರಿಂದ ಉಂಟಾಗುವ ವಿಷಯದಲ್ಲಿಯೂ ಸ್ಥಿತಿಗಳನ್ನು ಜಾಗರೂಕತೆಯಿಂದ ಪರೀಕ್ಷಿಸಲಾಗುವುದೆಂದು ನಾವು ನಿಮಗೆ ಭರವಸೆ ಕೊಡಲು ಸಹ ಅಪೇಕ್ಷಿಸುತ್ತೇವೆ.

ಮಹಮ್ಮದೀಯ ಪ್ರತಿನಿಧಿಗಳು ಒಪ್ಪಿಸಿದ ಅಭಿನಂದನ ಪತ್ರಿಕೆಗಳಲ್ಲಿ, ವಾಡಿಕೆಯಂತೆ, ಅವರ ವಿದ್ಯಾಭ್ಯಾಸದ ಪ್ರತ್ಯೇಕ ಏರ್ಪಾಡುಗಳ ಪಟ್ಟಿಯೊಂದು ಅಡಗಿದೆ. ಲಿಂಗಾಯತ ವಿದ್ಯಾಭ್ಯಾಸದ ಮೆಮೊರಾಂಡಮಿನ ಹುಕುಮುಗಳಿಗೆ ಅನುಸಾರವಾಗಿ ಕ್ಷಿಪ್ರದಲ್ಲಿ ಕೆಲಸ ನಡೆಸಬೇಕೆಂದು ಒತ್ತಿ ಹೇಳಲ್ಪಟ್ಟಿದೆ. ಮಹಮ್ಮದೀಯ ವಿದ್ಯಾಭ್ಯಾಸವು ಮತ್ತು ವಿದ್ಯಾಭ್ಯಾಸದ ಇತರ ಎಲ್ಲಾ ದರ್ಜೆಗಳ ಅವಶ್ಯಕತೆಗಳನ್ನು ಜಾಗರೂಕತೆಯಿಂದ ತನಿಖೆ ಮಾಡುತ್ತಲಿದೆಯಲ್ಲದೆ ಮಹಮ್ಮದೀಯ ವಿದ್ಯಾಭ್ಯಾಸವನ್ನು ಉತ್ತಮಪಡಿಸಿ, ಅದರಲ್ಲಿನ ನ್ಯೂನತೆಗಳನ್ನು ಹೋಗಲಾಡಿಸಲು ಪ್ರಬಲವಾದ ಪ್ರಯತ್ನಗಳನ್ನು ಮಾಡಲಾಗುವುದು. ಮಹಮ್ಮದೀಯ ವಿದ್ಯಾಭ್ಯಾಸದ ವಿಷಯವನ್ನೆಲ್ಲಾ ಆಮೂಲಾಗ್ರವಾಗಿ ಪರಿಶೀಲಿಸಲು ಒಂದು ಸಮ್ಮೇಳನವನ್ನು ಕೂಡಿಸಬೇಕೆಂಬ ಸಲಹೆಯನ್ನು ಅಂಗೀಕರಿಸಲು ನಾವು ಸಿದ್ಧರಾಗಿದ್ದೇವೆ. ಮತಾಂತರವನ್ನು ಅವಲಂಬಿಸುವುದರಿಂದ ಉಂಟಾಗುವ ಸ್ವತ್ತಿನ ಪ್ರಯುಕ್ತವಾದ ಅನರ್ಹತೆಯನ್ನು ವಜಾ ಮಾಡುವ ಬಗ್ಗೆ ಕಾನೂನು ಮಾಡಬೇಕೆಂಬ ವಿಷಯವನ್ನು ಇಂಡಿಯನ್ ಕ್ರಿಶ್ಚಿಯನ್ ಸಂಘದ ಪ್ರತಿನಿಧಿಯು ಪುನಃ ಚರ್ಚೆಗೆ ತೆಗೆದುಕೊಂಡಿದ್ದಾರೆ. ಇದು ಕೇವಲ ಜಾತಿ ಮತ ಸಂಬಂಧವಾದ ವಿಷಯ. ಇದರಲ್ಲಿ ಸರ್ಕಾರದವರು ಸಂಪೂರ್ಣವಾಗಿ ತಟಸ್ಥರಾಗಿರಬೇಕಾಗಿದೆ. ಆದರೂ ಈ ವಿಷಯದಲ್ಲಿ ಈಗ ಮನೋಗತವು ಯಾವರೀತಿಯಲ್ಲಿರುವುದೆಂಬುದನ್ನು ಗೊತ್ತು ಮಾಡುವುದಕ್ಕಾಗಿ ಈ ಸಭೆಯಲ್ಲಿಯೂ ನ್ಯಾಯ ವಿಧಾಯಕ ಸಭೆಯಲ್ಲಿಯೂ ಈ ವಿಷಯವನ್ನು ಚರ್ಚೆಗೆ ತರುವ ಭಾಗದಲ್ಲಿ ಸರ್ಕಾರದವರ ಆಕ್ಷೇಪಣೆಯೇನೂ ಇರುವುದಿಲ್ಲ. ಹಿಂದುಳಿದ ಪಂಗಡಗಳ ವಿದ್ಯಾರ್ಥಿ ವೇತನಗಳನ್ನು ಹಂಚುವ ವಿಷಯವು ಸ್ಕೂಲುಗಳನ್ನು ನಾವು ಪರಾಮರ್ಶಿಸಿದ ಕಾಲದಲ್ಲಿ ನಮ್ಮ ಪರಿಶೀಲನೆಗೆ ಬಂದಿತ್ತು. ಪರ್ಯಾಲೋಚನೆಗೆ ತಕ್ಕುದೆಂದು ತೋರುವ ಈ ವಿಷಯದ ಮೇಲಣ ತಮ್ಮ ಅಭಿಪ್ರಾಯಗಳನ್ನು ನಾವು ಗುರ್ತು ಮಾಡಿಕೊಳ್ಳುವೆವು.

ಆದಿದ್ರಾವಿಡರ ಮೇಲ್ಮೆಗಾಗಿ ಸರ್ಕಾರದವರು ವಾಗ್ದಾನಮಾಡಿದ ಪ್ರತ್ಯೇಕ ಆಫೀಸರನ್ನು ನೇಮಿಸುವ ಬಗ್ಗೆ ಕೂಡಲೇ ಕ್ರಮ ಜರುಗಿಸುವ ವಿಷಯವು ಆಲೋಚನೆಯಲ್ಲಿದೆ ಎಂದು ಸದರಿ ಪಂಗಡದ ಪ್ರತಿನಿಧಿಯವರಿಗೆ ಭರವಸೆ ಕೊಡಲಪೇಕ್ಷಿಸುತ್ತೇವೆ; ಮತ್ತು ಅವರ ಮೇಲ್ಮೆಗೆ ಸಂಬಂಧಪಡುವ ವಿಷಗಳಿಗೆ ನಾವು ಸರ್ವದಾ ಗಮನ ಕೊಡುವೆವೆಂಬುದನ್ನು ತಮಗೆ ದೃಢವಾಗಿ ಹೇಳಬಲ್ಲೆವು. ಅಲ್ಲದೆ, ನೌಕರಿಗಳ ವಿಷಯದಲ್ಲಿ ನಿಮ್ನತರಗತಿಯ ಜನರಲ್ಲಿ ಬರುವ ಸಮರ್ಥರಾದ ಉಮೇದಾರರಿಗೆ ಪ್ರಥಮ ಪ್ರಾಶಸ್ತ್ಯವು ದೊರೆಯುವಂತೆ ಹುಕುಂ ಸಾದರಾಗಿದೆ. ದರ್ಜೆಯುಳ್ಳ ಹುದ್ದೆಗಳಲ್ಲಿ ನೌಕರಿಯು ಈ ಪಂಗಡದ ಉಪಯುಕ್ತವಾದ ಉಮೇದ್ವಾರರಿಗೆ ಕೊಡಿಸುವ ವಿಷಯವನ್ನು ಸರ್ಕಾರದವರು ಸರ್ವದಾ ಕನಿಕರದಿಂದ ಪರ್ಯಾಲೋಚಿಸುವರು.

ಮೈಸೂರು ಆರ್ಯವೈಶ್ಯ ಪಂಗಡದ ಮೇಲ್ಮೆಗೆ ಸಂಬಂಧಪಟ್ಟ ವಿಷಯಗಳು ಗಮನಿಸಲ್ಪಡದೆ ಹೋದಾವೆಂಬ ಭಯವಾಗಲಿ ಅಥವಾ ಚಿಂತೆಯಾಗಲಿ ಇರಬೇಕಾದುದಿಲ್ಲ. ಸರಿಯಾದ ಪ್ರಾತಿನಿಧ್ಯವು ದೊರೆಯದೆ ಇದ್ದ ಪಂಗಡಗಳ ಮೇಲ್ಮೆಗಳು ಕ್ರಮವಾಗಿ ಕಾಪಾಡಲ್ಪಡುವುದನ್ನು ನೋಡಿಕೊಳ್ಳುವ ಬಗ್ಗೆ ಸರ್ಕಾರದವರು ವಿಶೇಷ ಗಮನ ಕೊಡುವರು.

ಕುರಿಗಳ ಪಾಲನೆಯ ಕೈಗಾರಿಕೆಗೂ, ಕಂಬಳಿಗಳ ತಯಾರಿಗೂ ವಿಶೇಷ ಪ್ರೋತ್ಸಾಹ ಕೊಡಬೇಕೆಂದು ಕುರುಬರ ಸಂಘದ ಅಭಿನಂದನ ಪತ್ರಿಕೆಯಲ್ಲಿ ಸೂಚಿತವಾಗಿದೆ. ಇದು ಕುರುಬರ ಪಂಗಡಕ್ಕೆ ಬಹು ಮುಖ್ಯವಾದ ವಿಷಯ. ಇದಕ್ಕೆ ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯವರು ಗಮನ ಕೊಡುತ್ತಿದಾರೆಂದು ನಮ್ಮ ತಿಳುವಳಿಕೆಗೆ ಬಂದಿದೆ. ಸರ್ಕಾರದವರು ಈ ಭಾಗಗಳಲ್ಲಿ ಬೇಕಾದ ಅನುಕೂಲ್ಯಗಳನ್ನೆಲ್ಲಾ ಕಲ್ಪಿಸಿಕೊಡಲು ಹರ್ಷವುಳ್ಳವರಾಗಿದ್ದಾರೆ.

ಅಂಜುಮಾನ್-ಇ-ಇಸ್ಲಾಂ ಮಹದೇವಿಯ ಸಂಘದವರು ಕೆಲವು ಕುಂದು ಕೊರತೆಗಳನ್ನೂ, ಸ್ವಲ್ಪ ಹೆಚ್ಚು ಕಡಿಮೆ ಸ್ಥಳೀಯ ವಿಷಯಗಳಾಗಿ ಭಾವಿಸಬಹುದಾದಂಥಾ ಇತರ ಕೆಲವು ಸಂಗತಿಗಳನ್ನೂ ಅವಗಾಹನೆಗೆ ತಂದಿರುತ್ತಾರೆ. ಮಹಮ್ಮದೀಯ ಸಮ್ಮೇಳನವನ್ನು ಏರ್ಪಾಟು ಮಾಡಿದರೆ ಈ ವಿಷಯಗಳನ್ನು ಪರ್ಯಾಲೋಚನೆಯ ಬಗ್ಗೆ ಅದಕ್ಕೆ ವಹಿಸಲಾಗುವುದು.

ಮಹಾಶಯರೇ, ತಮ್ಮ ಅಭಿನಂದನ ಪತ್ರಿಕೆಗಳಲ್ಲಿ ಕೇಳಿರುವ ಪ್ರತಿಯೊಂದು ಸಂಗತಿಯನ್ನೂ ಕುರಿತು ಪ್ರಸ್ತಾಪ ಮಾಡುವುದು ಸಾಧ್ಯವಾಗಲಾರದೆಂಬುದು ತಮಗೇ ವೇದ್ಯವಾಗಿರಬಹುದು. ಅವುಗಳ ಪೈಕಿ ಕೆಲವು ವಿಷಯಗಳು ಈ ಸಭೆಯಲ್ಲಿ ಚರ್ಚೆಗೆ ಬಂದೇಬರುತ್ತವೆ. ಬಾಕಿ ಅನೇಕ ವಿಷಯಗಳನ್ನು ಕುರಿತು ನಮ್ಮ ಭಾಷಣದಲ್ಲಿ ಪ್ರಸ್ತಾಪಿಸಿರುತ್ತೇವೆ. ಆದರೂ ಅವುಗಳನ್ನೆಲ್ಲಾ ಸಾವಧಾನವಾಗಿ ಪರ್ಯಾಲೋಚನೆಗೆ ತೆಗೆದುಕೊಂಡು ಕಾಲಕ್ರಮದಲ್ಲಿ ತಕ್ಕ ಹುಕುಮುಗಳನ್ನು ಕೊಡುವ ಏರ್ಪಾಡು ಮಾಡಲಾಗುವುದೆಂದು ತಾವು ದೃಢವಾಗಿ ನಂಬಬಹುದು.

ಶ್ರೀಮದ್ಯುವರಾಜರವರಿಗೆ ರಾಜಕುಮಾರಿಯು ಜನಿಸಿರುವುದಕ್ಕಾಗಿ ತಮ್ಮಗಳಿಗೆ ಉಂಟಾದ ಆನಂದಾತಿಶಯಗಳನ್ನು ಅವರಿಗೆ ನಾವು ಅತ್ಯಂತ ಸಂತೋಷದಿಂದ ಶ್ರುತಪಡಿಸುವೆವು. ಅಲ್ಲದೆ, ತಮ್ಮಗಳ ಅಭಿನಂದನ ಪತ್ರಿಕೆಗಳಲ್ಲಿ ವ್ಯಕ್ತಗೊಳಿಸಿರುವ ರಾಜಭಕ್ತಿ ವಿಶ್ವಾಸಪೂರಿತವಾದ ವಿಜ್ಞಾಪನೆಗಳನ್ನು ಶ್ರೀಮನ್ಮಹಾರಾಜರವರಿಗೆ ಅರಿಕೆ ಮಾಡುವುದು ನಮಗೆ ಅತ್ಯಂತ ಸಂತೋಷಕರವಾಗಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

(ದಸರಾ ಅಧಿವೇಶನ)

2ನೆಯ ಅಕ್ಟೋಬರ್ 1922

ಒಂದನೆಯ ಭಾಗ.

ಮಹಾಶಯರೇ,

ಘನವನ್ನು ಹೊಂದಿದ ಶ್ರೀಮನ್ ಮಹಾರಾಜಾಸಾಹೇಬ್ಬಹದ್ದೂರವರ ಆಜ್ಞಾನುಸಾರವಾಗಿ ಪ್ರಜೆಗಳ ಪ್ರತಿನಿಧಿಗಳಾದ ತಮ್ಮಗಳನ್ನು ಮೈಸೂರು ಪ್ರಜಾಪ್ರತಿನಿಧಿಸಭೆಯ ಈ 39 ನೆಯ ದಸರಾ ಅಧಿವೇಶನಕ್ಕೆ ಆದರಪೂರ್ವಕ ಬರಮಾಡಿಕೊಳ್ಳುವ ವಿಶೇಷ ಗೌರವವು ನಮಗೆ ಲಭಿಸಿರುತ್ತದೆ. ಸಂಸ್ಥಾನದ ಕಳೆದ ವರ್ಷದ ರಾಜ್ಯಭಾರಕ್ಕೆ ಸಂಬಂಧಪಟ್ಟ ಮುಖ್ಯ ವಿಷಯಗಳನ್ನೂ, ಈಗಾಗಲೇ ಈ ಸಂಸ್ಥಾನದಲ್ಲಿ ರೂಢಿಯಲ್ಲಿರುವ ವಿಚಕ್ಷಣವಾದ ರಾಜ್ಯಭಾರ ಕ್ರಮದಲ್ಲಿ ಕ್ಷಿಪ್ರದಲ್ಲಿಯೇ ನಡೆಯಬೇಕೆಂದಿರುವ ಸುಧಾರಣೆಗಳನ್ನು ಜಾರಿಗೆ ತರುವುದಕ್ಕಾಗಿ ಸರ್ಕಾರದವರ ಪರ್ಯಾಲೋಚನೆಯಲ್ಲಿರುವ ಏರ್ಪಾಡುಗಳನ್ನೂ ಸಂಕ್ಷೇಪವಾಗಿ ತಮ್ಮಗಳಿಗೆ ತಿಳಿಯಪಡಿಸುತ್ತೇವೆ.

ಈ ಸಭೆಯು ಕಳೆದ ಜೂನ್ ತಿಂಗಳಲ್ಲಿ ಸೇರಿದಂದಿಚೆಗೆ ಮೆಂಬರುಗಳ ತ್ರೈವಾರ್ಷಿಕ ಚುನಾವಣೆಯು ಹೊಸದಾಗಿ ನಡೆದಿರುವುದರಿಂದ ಈಗ ಸೇರಿರುವ ಸಭೆಯವರಿಗೆ ವಿಶೇಷವಾದ ಸುಸ್ವಾಗತವನ್ನು ಬಯಸತಕ್ಕದ್ದು ಯುಕ್ತವಾಗಿ ತೋರುತ್ತದೆ; ಆದಕಾರಣ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ಬಗ್ಗೆ ಅವರುಗಳಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿಯೂ ಸಮೂಹಕ್ಕೇನ ಎಲ್ಲರಿಗೂ ಮನಃಪೂರ್ವಕವಾದ ನಮ್ಮ ಅಭಿನಂದನಗಳನ್ನು ತಿಳಿಯಪಡಿಸುತ್ತೇವೆ. ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಚುನಾವಣೆ ಕಾಲದಲ್ಲಿ ಜನರು ತೋರ್ಪಡಿಸಿದ ವಿಶೇಷವಾದ ಉತ್ಸಾಹವನ್ನು ಬಹು ಆದರದಿಂದ ಗಮನಿಸಿರುತ್ತೇವೆ. ಈ ಅಂಶವು, ಈ ಸಭೆಯ ಮೆಂಬರುತನಕ್ಕೆ ಜನರು ಸಾಮಾನ್ಯವಾಗಿ ಎಷ್ಟು ಹೆಚ್ಚಿನ ಗೌರವವನ್ನು ಕೊಡುತ್ತಿರುವರೆಂಬುದಕ್ಕೆ ಒಂದು ನಿದರ್ಶನವಾಗಿರುತ್ತದೆ. ರಾಜ್ಯಾಡಳಿತದ ವಿಷಯದಲ್ಲಿ ನಾವು ನಿರ್ಣಯಿಸಬೇಕಾದ ಅಂಶಗಳು ವರ್ಷೇ ವರ್ಷೇ ಹೆಚ್ಚುಹೆಚ್ಚಾಗಿ ಕಷ್ಟಕರವಾಗುತ್ತಲಿರುವುವು; ಆದಕಾರಣ ನೀವುಗಳು ನಡೆಸಬೇಕಾಗಿರುವ ಕಾರ್ಯಗಳನ್ನು ಚರ್ಚಿಸುವ ವಿಷಯದ ಜಿಜ್ಞಾಸೆಗಳಲ್ಲಿಯೂ ಚರ್ಚೆಗಳಲ್ಲಿಯೂ ಹಿಂದೆ ಈ ಸಭೆಯು ತೋರ್ಪಡಿಸುತ್ತಿದ್ದ ಪ್ರೌಢಿಮೆಯನ್ನು ನೀವುಗಳು ತೋರ್ಪಡಿಸುವಿರೆಂದೂ, ಅನ್ಯಾದೃಶವಾದ ಈ ಸಭೆಯು ಬಹುಸಾಮರ್ಥ್ಯದೊಡನೆ ಹಿಂದಿನಿಂದಲೂ ಸ್ಥಾಪಿಸುತ್ತ ಬಂದ ಕೀರ್ತಿ ಪ್ರತಿಷ್ಠೆಗಳಿಗೆ ಚ್ಯುತಿಬಾರದಂತೆ ಅವುಗಳನ್ನು ಕಾಪಾಡುವುದು ಮಾತ್ರವಲ್ಲದೆ ಇನ್ನೂ ಉಚ್ಛ್ರಾಯಸ್ಥಿತಿಗೂ ತರುವಿರೆಂದೂ ಶ್ರೀಮನ್ ಮಹಾರಾಜಾ ಸರ್ಕಾರದವರ ಪರವಾಗಿ ನಾವು ನಿರೀಕ್ಷಿಸುತ್ತೇವೆ.

ನಾವು ಈ ಸಭೆಯ ಕಾರ್ಯವನ್ನು ಉಪಕ್ರಮಿಸುವುದಕ್ಕೆ ಮೊದಲು ಶ್ರೀಮದ್ಯುವರಾಜರವರಿಗೆ ಕಳೆದ ಆಗಸ್ಟು ಮಾಹೆ 28 ನೆಯ ತಾರೀಖಿನ ದಿವಸ ರಾಜಕುಮಾರಿಯ ಜನನವಾದದ್ದಕ್ಕಾಗಿ ಈ ಸಭೆಯವರ ಪರವಾಗಿಯೂ ಇಲ್ಲಿ ಈ ದಿವಸ ಹಾಜರಾಗಿರುವ ಎಲ್ಲಾ ಸರ್ಕಾರಿ ಆಫೀಸರುಗಳ ಪರವಾಗಿಯೂ ನಮ್ಮ ವಿನಯಪೂರ್ವಕವಾದ ಅಭಿನಂದನಗಳನ್ನು ಸಮರ್ಪಿಸಲು ಅಪೇಕ್ಷಿಸುತ್ತೇವೆ.

ಮಹಾಮಹಿಮರಾದ ಪ್ರಿನ್ಸ್ ಆಫ್ ವೇಲ್ಸ್‌ರವರ ಆಗಮನ.

ಮಹಾಮಹಿಮರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಕಳೆದ ಜನವರಿ ತಿಂಗಳಲ್ಲಿ ನಮ್ಮ ಸಂಸ್ಥಾನಕ್ಕೆ ಬಿಜಯಮಾಡಿದುದೇ ಈ ವರ್ಷದಲ್ಲಿ ನಡೆದ ಬಹು ಮುಖ್ಯ ವಿಷಯವಾಗಿದೆ. ಇವರು 1922 ನೆಯ ಜನವರಿ 18ನೆಯ ತಾರೀಖಿನ ದಿವಸ ಬೆಂಗಳೂರಿಗೆ ದಯಮಾಡಿಸಿ ಮಾರನೆಯ ದಿವಸ ಮೈಸೂರಿಗೆ ಪ್ರಯಾಣ ಬೆಳಸಿದರು. ಮೈಸೂರಿನಲ್ಲಿ ಮೂರು ದಿವಸ ಇದ್ದು ಅನಂತರ ಕಾರಾಪುರದ ಕ್ಯಾಂಪಿನಲ್ಲಿ ಮೃಗಯಾವಿನೋದದಲ್ಲಿ ಎರಡುದಿವಸ ಕಳೆದರು. ಈ ಮಹನೀಯರು ಮೈಸೂರಿನಲ್ಲಿದ್ದ ಕಾಲದಲ್ಲಿ ಕೃಷ್ಣರಾಜಸಾಗರಕ್ಕೂ ಶ್ರೀರಂಗಪಟ್ಟಣಕ್ಕೂ ದಯಮಾಡಿಸಿದ್ದುದಲ್ಲದೆ ರಾಜಧಾನಿಯ ಕೆಲವು ಸಂಸ್ಥೆಗಳಿಗೂ ದಯಮಾಡಿಸಿದ್ದರು. ಈ ಮಹಾಮಹಿಮರವರ ಆಗಮನದಿಂದ ಶ್ರೀಮನ್ ಮಹಾರಾಜರವರಿಗೂ ಅವರ ಪ್ರಜೆಗಳಿಗೂ ಪರಿಪೂರ್ಣಾನಂದವುಂಟಾಯಿತು. ಈ ವಿಖ್ಯಾತಕೀರ್ತಿಯುತರಾದ ತಮ್ಮ ಅತಿಥಿಶ್ರೇಷ್ಠರನ್ನು ಪ್ರಜೆಗಳು ಪರಮೋತ್ಸಾಹದಿಂದ ಸ್ವಾಗತಪೂರ್ವಕವಾಗಿ ಬರಮಾಡಿಕೊಂಡುದಕ್ಕಾಗಿ ಶ್ರೀಮನ್ ಮಹಾರಾಜರವರು ತಮ್ಮ ಮೆಚ್ಚಿಗೆಯನ್ನು ತೋರ್ಪಡಿಸಿರುವರೆಂಬ ಅಂಶವನ್ನು ತಮ್ಮಗಳಿಗೆ ತಿಳಿಸಬೇಕೆಂದು ನಮಗೆ ಆಜ್ಞಾಪಿಸಿರುತ್ತಾರೆ. ಮಹಾಮಹಿಮರಾದ ಪ್ರಿನ್ಸ್‌ಆಫ್‌ವೇಲ್ಸ್‌ರವರು ಈ ಸಂಸ್ಥಾನದಿಂದ ತೆರಳಿದ ಬಳಿಕ ಅವರು ಇದರಡಿ ಕಂಡ ಸಂದೇಶವನ್ನು ಶ್ರೀಮನ್ ಮಹಾರಾಜರವರಿಗೆ ತಂತಿಯ ಮೂಲಕ ಕಳುಹಿಸಿದರು ;—

"ತಾವು ನಮ್ಮ ವಿಷಯದಲ್ಲಿ ಸರ್ವಪ್ರಕಾರದಲ್ಲಿಯೂ ತೋರ್ಪಡಿಸಿದ ಪ್ರೀತಿ ವಿಶ್ವಾಸಗಳಿಗೂ ಸತ್ಕಾರಾತಿಶಯಕ್ಕೂ ಮನಃಪೂರ್ವಕವಾದ ನಮ್ಮ ಕೃತಜ್ಞತೆಯನ್ನು ನಾವು ತಮ್ಮ ಸಂಸ್ಥಾನವನ್ನು ಬಿಟ್ಟು ಹೊರಡುವ ಸಂದರ್ಭದಲ್ಲಿ ತಮಗೆ ಸೂಚಿಸಲಪೇಕ್ಷಿಸುತ್ತೇವೆ. ನಾವು ತಮ್ಮ ರಾಜ್ಯದಲ್ಲಿ ಅತಿಶಯವಾದ ಸುಖಸಂತೋಷಗಳನ್ನು ಅನುಭವಿಸಿದೆವು. ತಮ್ಮ ಪರಿಚಯವನ್ನು ಸಂಪಾದಿಸಿದುದು ನಮಗೆ ತುಂಬಾ ಸಂತೋಷವನ್ನುಂಟುಮಾಡಿತು. ಮೈಸೂರು ದೇಶದ ರಮಣೀಯತೆಯನ್ನೂ ರಾಜ್ಯಭಾರಕ್ರಮದ ವಿಚಕ್ಷಣೆಯನ್ನೂ ನಾವು ವಿಶೇಷವಾಗಿ ಮೆಚ್ಚಿಕೊಂಡೆವು. ತಮ್ಮ ಪ್ರಜೆಗಳು ನಮಗೆ ಸ್ವಾಗತವನ್ನು ಬಯಸುವುದರಲ್ಲಿ ಪ್ರಕಟಪಡಿಸಿದ ಆದರಾತಿಶಯಕ್ಕಾಗಿ ನಾವು ಅವರಿಗೆ ತುಂಬಾ ಕೃತಜ್ಞರಾಗಿರುತ್ತೇವೆ."

ಇದಕ್ಕೆ ಶ್ರೀಮನ್ ಮಹಾರಾಜರವರು ಈ ಕೆಳಗೆ ಕಂಡ ಪ್ರತಿಸಂದೇಶವನ್ನು ಕಳುಹಿಸಿದರು :—

"ನಮ್ಮ ಸಂಸ್ಥಾನವನ್ನು ಬಿಟ್ಟು ಹೊರಡುವ ಸಂದರ್ಭದಲ್ಲಿ ತಾವು ವಿಶ್ವಾಸಪೂರ್ವಕವಾಗಿ ದಯಪಾಲಿಸಿದ ಸಂದೇಶಕ್ಕಾಗಿ ನಾವು ತಮಗೆ ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ. ತಮ್ಮ ಆಗಮನದಿಂದ ನಮಗೂ ನಮ್ಮ ಪ್ರಜೆಗಳಿಗೂ ಉಂಟಾದ ಆನಂದಾತಿಶಯಕ್ಕೆ ಪಾರವೇ ಇಲ್ಲ. ಈ ವಿಚಾರವಾದ ಸ್ಮರಣೆಯನ್ನು ನಾವುಗಳು ನಿರಂತರವೂ ಗೌರವಪ್ರದವೆಂತ ಭಾವಿಸುವೆವು."

ಶ್ರೀಮನ್ ಮಹಾರಾಜರವರ ಸಂಚಾರ.

ಪ್ರಸಕ್ತವರ್ಷದಲ್ಲಿ ಶ್ರೀಮನ್ ಮಹಾರಾಜರವರು ಎರಡುಸಾರಿ ಉತ್ತರ ಹಿಂದೂಸ್ಥಾನದಲ್ಲಿಯೂ, ಎರಡುಸಾರಿ ಸಂಸ್ಥಾನದೊಳಗೂ ಈ ರೀತಿಯಾಗಿ ನಾಲ್ಕಾವರ್ತಿ ಸಂಚಾರ ಮಾಡಿದರು. ಮಹಾಮಹಿಮರಾದ ಪ್ರಿನ್ಸ್ ಆಫ್‌ವೇಲ್ಸ್‌ರವರಿಗೆ ಒಂದು ಆನರರಿ ಡಿಗ್ರಿಯನ್ನು ದಯಪಾಲಿಸಲು ಬನಾರಸ್ ಯೂನಿವರ್ಸಿಟಿಯ ಅಸಾಧಾರಣವಾದ ಸಮ್ಮೇಳನದಲ್ಲಿ ಅಧ್ಯಕ್ಷಪದವಿಯನ್ನಲಂಕರಿಸುವ ಬಗ್ಗೆ ಕಳೆದ ಡಿಸೆಂಬರಿನಲ್ಲಿ ಶ್ರೀಮನ್ ಮಹಾರಾಜರವರು ಬನಾರಸಿಗೆ ದಯಮಾಡಿಸಿದ್ದರು. ಅನಂತರ 1922ನೆಯ ಏಪ್ರಿಲ್ 24ನೆಯ ತಾರೀಖಿನಲ್ಲಿ ಶ್ರೀಮನ್ ಮಹಾರಾಜರವರು ಮೈಸೂರಿನಿಂದ ಸಿಮ್ಲಾಕ್ಕೆ ಪ್ರಯಾಣ ಬೆಳಸಿ, ಅಲ್ಲಿ ಸುಮಾರು ನಾಲ್ಕುವಾರಗಳಿದ್ದು 1922 ನೆಯ ಮೇ 28ನೆಯ ತಾರೀಖಿನಲ್ಲಿ ರಾಜಧಾನಿಗೆ ಸವಾರಿ ಚಿತ್ತೈಸಿದರು. ಅತಿ ಮುಖ್ಯವಾದ ರಾಜಕೀಯ ವಿಷಯಗಳನ್ನು ಕುರಿತು ಘನವನ್ನು ಹೊಂದಿದ ವೈಸ್ರಾಯಿರವರೊಂದಿಗೆ ರೂಬರೂಬು ಸಂಭಾಷಣೆ ನಡೆಸುವುದೇ ಶ್ರೀಮನ್ ಮಹಾರಾಜರವರು ಸಿಮ್ಲಾಕ್ಕೆ ತೆರಳಿದುದರ ಮುಖ್ಯೋದ್ದೇಶವಾಗಿತ್ತು.

1922ನೆಯ ಮಾರ್ಚಿ 10 ರಲ್ಲಿ ಶ್ರೀಮನ್ ಮಹಾರಾಜರವರ ಸ್ವಾಮಿಯು ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ಪ್ರಾರಂಭಿಸುವ ಬಗ್ಗೆ ಚಿತ್ತೈಸಿ, ಕಬ್ಬಿಣ ಕರಗಿಸುವ ಭಟ್ಟಿಯನ್ನು ಕೂಲಂಕಷವಾಗಿ ಪರೀಕ್ಷಿಸಿ ನೋಡಿದ್ದಲ್ಲದೆ, ಇದ್ದಲನ್ನು ತಯಾರಿಸಿ ಮರದೆಣ್ಣೆಯನ್ನಿಳಿಸುವ ಯಂತ್ರವನ್ನೂ ಶಂಕರಗುಡ್ಡ ಮತ್ತು ಚಟ್ನಹಳ್ಳಿಯ ಸಮೀಪದಲ್ಲಿನ ಕಬ್ಬಿಣದ ಗಣಿಗಳನ್ನೂ ಸೌದೆ ಜಮಾಯಿಸುವ ಕೆಲಸಗಳನ್ನೂ ಪ್ರಾರಂಭಿಸಿದರು.

ಅನಂತರದಲ್ಲಿ ಮಹಾಸ್ವಾಮಿಗಳವರು 1922ನೆಯ ಜೂನ್ 21 ರಿಂದ 27ನೆಯ ತಾರೀಖಿನ ವರೆಗೆ ಮೈಸೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಬೆಳಸಿ ಪ್ರಜೆಗಳಿಂದ ಅಹವಾಲುಗಳನ್ನು ಚಿತ್ತೈಸಿದರು. ಈ ಅರಿಕೆಗಳು ಆಯಾ ಆಡಳಿತದ ಇಲಾಖೆಗಳಲ್ಲಿ ವ್ಯವಸ್ಥೆ ಮಾಡಲ್ಪಟ್ಟವು.

ಸೆಂಟ್ರಲ್ ಅಡ್ಮಿನಿಸ್ಟ್ರೇಷನ್.

ಈ ವರ್ಷ ರಾಜ್ಯಾಡಳಿತದ ಮೂಲಸ್ಥಾನದಲ್ಲಿ ಒಂದು ಮುಖ್ಯವಾದ ಬದಲಾವಣೆಯುಂಟಾಯಿತು. ನಮ್ಮ ಹಿಂದೆ ಪ್ರಖ್ಯಾತಿಯಿಂದ ದಿವಾನ್ ಪದವಿಯನ್ನಲಂಕರಿಸಿದ್ದ ರಾಜಸೇವಾಧುರೀಣ ಸರ್ ಎಂ. ಕಾಂತರಾಜ ಅರಸ್ ಕೆ.ಸಿ.ಐ.ಇ., ಸಿ.ಎಸ್.ಐ. ಯವರು ಅಧಿಕಾರದಿಂದ ನಿವೃತ್ತರಾಗಿ ವಿಶ್ರಾಂತಿಸುಖವನ್ನು ಪಡೆದು ನಾವು ಆ ಸ್ಥಾನಕ್ಕೆ ಬಂದನಂತರ ಆ ಸಮಯವನ್ನುಪಯೋಗಿಸಿಕೊಂಡು ಶ್ರೀಮನ್ ಮಹಾರಾಜಾಸಾಹೇಬ್ಬಹದ್ದೂರವರ ಎಗ್ಸಿಕ್ಯುಟಿವ್ ಕೌನ್ಸಲಿಗೆ ಒಬ್ಬ ಮೆಂಬರನ್ನು ಕಡಿಮೆ ಮಾಡಲಾಯಿತು. ಸರ್ಕಾರಿ ಆಡಳಿತಕಾರ್ಯದ ಪರಿಮಾಣವು ಬಹಳ ಹೆಚ್ಚಿದ್ದರಿಂದ 1917-18ನೆಯ ಸಾಲಿನಲ್ಲಿ ಮತ್ತೊಬ್ಬ ಕೌನ್ಸಿಲ್ ಮೆಂಬರನ್ನು ನೇಮಿಸಲಾಯಿತೆಂಬ ಸಂಗತಿಯು ನಿಮಗೆ ಜ್ಞಾಪಕದಲ್ಲಿರಬಹುದು. ಆಗಿನ ದಿವಾನ್‌ರವರ ಅಂದಾಜಾ ಪ್ರಕಾರ ತತ್ಪೂರ್ವ ಏಳು ವರ್ಷಗಳ ಕಾಲದಲ್ಲಿದ್ದ ಸರ್ಕಾರಿ ಆಡಳಿತದ ಪರಿಮಾಣವು ಮೊದಲಿಗಿಂತ ದ್ವಿಗುಣವಾಗಿತ್ತು. ಮೊದಲಿನಲ್ಲಿ ಅಜಮಾಯಿಸಿ ತರೀಖು ನೇಮಕವಾದ ಎಕ್ಸ್‌ಟ್ರಾ ಮೆಂಬರವರ ಹುದ್ದೆಯು ಸ್ವಲ್ಪಕಾಲಾನಂತರ ತಾತ್ಕಾಲಿಕವಾಗಿ ಖಾಯಂ ಮಾಡಲ್ಪಟ್ಟಿತು; ಮತ್ತು 1922 ನೆಯ ಮಾರ್ಚಿ 6ನೆಯ ತಾರೀಖಿನವರೆಗೂ ಅದೇ ರೀತಿಯಲ್ಲಿ ನಡೆಯಿತು. ಸೆಂಟ್ರಲ್ ಅಡ್ಮಿನಿಸ್ಟ್ರೇಷನನ್ನು ಸದ್ಯದಲ್ಲಿ ದಿವಾನ್‌ರವರೂ ಇಬ್ಬರು ಕೌನ್ಸಿಲ್ ಮೆಂಬರುಗಳೂ ಸಹ ನಡಿಸುತ್ತಿದ್ದಾರೆ. ಸೆಕ್ರಿಟೇರಿಯಟ್ಟಿನ ಸಿಬ್ಬಂದಿಗಳು ಈ ವರ್ಷ ಬಹಳಮಟ್ಟಿಗೆ ಖೋತಾಮಾಡಲ್ಪಟ್ಟವೆ. ಮತ್ತು ಈಚೆಗೆ ಖರ್ಚನ್ನು ಕಡಿಮೆಮಾಡುವ ಬಗ್ಗೆ ಆ ಸಿಬ್ಬಂದಿಗಳಲ್ಲಿ ಮತ್ತಷ್ಟು ಖೋತಾಮಾಡಿದೆ. ಈ ಎಲ್ಲಾ ಬದಲಾವಣೆಗಳಿಂದಲೂ ಸರ್ಕಾರಕ್ಕೆ ಸಾಲೀಯಾನಾ ಒಂದು ಲಕ್ಷದ ಐವತ್ತುಸಾವಿರ ರೂಪಾಯಿಗಳ ನಿವ್ವಳ ಉಳಿತಾಯವಾಗಿರುತ್ತದೆ.

ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡು.—ಮಿಲ್ಲರ್ ಕಮಿಟಿಯ ರಿಪೋರ್ಟಿನ ಮೇಲೆ ಸಾದರಾದ ಸರ್ಕಾರಿ ಹುಕುಂಗಳನ್ನು ಅನುಸರಿಸಿ ಈ ವರ್ಷದ ಆದಿಯಲ್ಲಿ ಈಗಿನ ಎರಡನೆಯ ಕೌನ್ಸಿಲ್ ಮೆಂಬರವರ ಅಧ್ಯಕ್ಷತೆಯಲ್ಲಿ ಒಂದು ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡನ್ನು ಸ್ಥಾಪಿಸಲಾಯಿತು. ಈ ಬೋರ್ಡಿನವರು ಆರುಸಲ ಮೀಟಿಂಗ್ ನಡಿಸಿ ಸರ್ಕಾರಿ ನೌಕರಿಗಳಿಗೆ ಜನರನ್ನು ನೇಮಿಸುವುದನ್ನೂ ಬಡ್ತಿಗಳನ್ನು ಕೊಡುವುದನ್ನೂ ಕ್ರಮಪಡಿಸುವುದಕ್ಕೆ ಸಂಬಂಧಪಟ್ಟ ಅನೇಕ ಮುಖ್ಯವಾದ ವಿಷಯಗಳನ್ನು ಕುರಿತು ತಮ್ಮ ಸಲಹೆಗಳನ್ನು ಕೊಟ್ಟಿರುತ್ತಾರೆ. ಅವರು ಸರ್ಕಾರೀ ನೌಕರಿಗಳಿಗಾಗಿ ಬಂದ 1,021 ಅರ್ಜಿಗಳನ್ನು ದಾಖಲ್ಮಾಡಿಕೊಂಡು ಸಂಬಂಧಪಟ್ಟ ಇಲಾಖೆಗಳಿಗೆಲ್ಲಾ ಉಮೇದುವಾರರ ಪಟ್ಟಿಯನ್ನು ಕಳುಹಿಸಿಕೊಟ್ಟರು. ಸರ್ಕಾರಿ ಹುಕುಂಗಳು ಎಷ್ಟರಮಟ್ಟಿಗೆ ಜಾರಿಗೆ ತರಲ್ಪಟ್ಟಿರುವುವೆಂಬುದನ್ನು ಪರಿಶೀಲಿಸುವ ಬಗ್ಗೆ ಕಳುಹಿಸಬೇಕಾದ ಲೆಕ್ಕಗಳನ್ನೂ ಸಹ ಅವರು ನಿಷ್ಕರ್ಷೆ ಮಾಡಿರುತ್ತಾರೆ. ಇದುವರೆಗೆ ಬಂದಿರತಕ್ಕ ಲೆಕ್ಕಗಳನ್ನು ನೋಡಲಾಗಿ, 1922 ನೆಯ ಜೂನ್ 30 ಕ್ಕೆ ಆಖೈರಾದ ಅರ್ಧವರ್ಷದಲ್ಲಿ 533 ನೌಕರಿಗಳು ಖಾಲಿಬಿದ್ದಂತೆಯೂ ಆ ಪೈಕಿ 452 ಭರ್ತಿಯಾದಂತೆಯೂ ತಿಳಿಯಬರುತ್ತದೆ. ಈ 452 ನೌಕರರ ಪೈಕಿ 270 ಮಂದಿ ಬ್ರಾಹ್ಮಣರೂ, 120 ಮಂದಿ ಬ್ರಾಹ್ಮಣೇತರ ಹಿಂದುಗಳೂ, 29 ಮಂದಿ ಮಹಮ್ಮದೀಯರೂ ಮತ್ತು 29 ಮಂದಿ ದೇಶೀಯ ಕ್ರಿಸ್ತರೂ 4 ಮಂದಿ ಇತರ ಪಂಗಡಗಳವರೂ ಆಗಿದ್ದರು. ಹಿಂದಿನ ಅನುಭವದ ಆಧಾರದಮೇಲೆ ಬೋರ್ಡಿನವರು ಕಾರ್ಯಕ್ರಮವನ್ನು ಸುಲಭಪಡಿಸುವುದಕ್ಕಾಗಿಯೂ ಹಾಲಿ ಜಾರಿಯಲ್ಲಿರುವ ಕೆಲವು ಹುಕುಂಗಳನ್ನು ಬದಲಾಯಿಸುವುದಕ್ಕಾಗಿಯೂ ಸರ್ಕಾರಕ್ಕೆ ತಮ್ಮ ಶಿಫಾರಸುಗಳನ್ನು ಈಚೆಗೆ ಕಳುಹಿಸಿರುತ್ತಾರೆ. ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟ ನಾನಾ ಇಲಾಖೆಗಳಲ್ಲಿ ಈಚೆಗೆ ಖರ್ಚನ್ನು ಖೋತಾಮಾಡಿರುವ ಪ್ರಯುಕ್ತ ಹೊಸ ನೇಮಕರಾತಿಗಳನ್ನು ಮಾಡುವುದಕ್ಕೆ ಅವಕಾಶವು ತುಂಬಾ ಕಡಿಮೆಯಾಗಿತ್ತು; ಆದ್ದರಿಂದ ಬೋರ್ಡಿಗೆ ಅರ್ಜಿ ಬರೆದುಕೊಂಡವರಲ್ಲಿ ಅನೇಕರನ್ನು ಸರ್ಕಾರಿ ನೌಕರಿಗೆ ಸೇರಿಸಿಕೊಳ್ಳುವುದರಲ್ಲಿ ತುಂಬಾ ನಿಧಾನವಾದ ಬಗ್ಗೆ ವಿಷಾದಿಸಬೇಕಾಗಿದೆ. ಪ್ರಕೃತ ಸ್ಥಿತಿಯು ಕೇವಲ ಅಸಾಧಾರಣವಾದದ್ದು. ಒಂದುಕಡೆ, ಸಿಬ್ಬಂದಿಗಳನ್ನು ಖೋತಾಮಾಡಿದ್ದರಿಂದ ಹೊಸ ನೌಕರಿಗಳನ್ನು ಕೊಡುವುದಕ್ಕೆ ಅವಕಾಶವಿಲ್ಲ; ಮತ್ತೊಂದು ಕಡೆ, ನೌಕರಿಯಿಂದ ತೆಗೆದುಹಾಕಲ್ಪಟ್ಟ ಬಹುಮಂದಿ ನೌಕರರಿಗೆ ವಿಶೇಷ ಕಷ್ಟವುಂಟಾಗಿದೆ. ಈ ವಿಷಯಗಳನ್ನೆಲ್ಲಾ ಪರಿಶೀಲನೆಮಾಡುವ ಬಗ್ಗೆ ಈ ಮೊದಲೇ ಏರ್ಪಡಿಸಿರುವ ಕಾರ್ಯಕ್ರಮವನ್ನು ಎಡೆಬಿಡದೆ ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ನಡೆಸಲಾಗುವುದೆಂಬುದನ್ನು ದೃಢಪಡಿಸಿಕೊಳ್ಳಲು ಖಂಡಿತವಾದ ಹುಕುಂ ಕೊಡುವ ಬಗ್ಗೆ ಸರ್ಕಾರದವರು ಕ್ಷಿಪ್ರದಲ್ಲಿಯೇ ಕ್ರಮ ನಡೆಸುವರು.

ಪ್ರತಿನಿಧಿ ಸಭೆಗಳು.

ಪ್ರಜಾಪ್ರತಿನಿಧಿ ಸಭೆ.—ಪ್ರಸಕ್ತ ವರ್ಷದಲ್ಲಿ ಪದ್ಧತಿಯ ಪ್ರಕಾರ ಈ ಸಭೆಯು ಎರಡಾವರ್ತಿ ನಡೆಯಿತು. 1921 ನೆಯ ಅಕ್ಟೋಬರು ತಿಂಗಳ ದಸರಾ ಅಧಿವೇಶನದಲ್ಲಿ ಒಟ್ಟು 270 ಮೆಂಬರುಗಳ ಪೈಕಿ 213 ಮಂದಿ ಹಾಜರಾಗಿದ್ದರು. ಮತ್ತು ಒಟ್ಟು 317 ವಿಷಯಗಳ ಪೈಕಿ 178 ವಿಷಯಗಳು ಚರ್ಚಿಸಲ್ಪಟ್ಟುವು. ವಿದ್ಯಾಭ್ಯಾಸದ ಸೆಸ್ಸು ಹಾಕುವುದು, ಹೆಂಗಸರಿಗೆ ಚುನಾವಣೆಯ ಹಕ್ಕನ್ನು ಕೊಡುವುದು, ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲಣ ಹುಕುಮುಗಳು, ಸರ್ಕಾರಿ ನೌಕರಿಯಲ್ಲಿ ಎಲ್ಲಾ ಪಂಗಡದವರೂ ಇರಬೇಕೆಂಬುದು, ವರ್ತಮಾನಪತ್ರಿಕೆಗಳ ರೆಗ್ಯುಲೇಷನು ಮತ್ತು ವಿಧಿಬದ್ಧವಾದ ಸುಧಾರಣೆಗಳು ಇವುಗಳೇ ಅವುಗಳಪೈಕಿ ಅತ್ಯಂತ ಮುಖ್ಯವಾದುವುಗಳು. ಕಳೆದ ಜೂನ್ ತಿಂಗಳಲ್ಲಿ ನಡೆದ ವರ್ಧಂತ್ಯುತ್ಸವದ ಅಧಿವೇಶನದಲ್ಲಿ, 264 ಮಂದಿ ಮೆಂಬರುಗಳ ಪೈಕಿ 202 ಮಂದಿ ಹಾಜರಾಗಿದ್ದರು; ಮತ್ತು ಸಂಸ್ಥಾನದ ಬಡ್ಜೆಟ್ಟಿನ ಜತೆಯಲ್ಲಿ 79 ಸಾರ್ವತ್ರಿಕ ವಿಷಯಗಳು ಚರ್ಚಿಸಲ್ಪಟ್ಟುವು. ಈ ಎರಡನೆಯ ಅಧಿವೇಶನದಲ್ಲಿ ವಾಡಿಕೆಯಾದ ಸಭಾಕಾರ್ಯವಲ್ಲದೆ, ಆರು ಪ್ರತ್ಯೇಕ ವಿಷಯಗಳನ್ನು ಚರ್ಚೆಯ ಬಗ್ಗೆ ಸರ್ಕಾರದವರು ಸಭೆಯ ಮುಂದಿಟ್ಟಿದ್ದರು; ನೀರಾವರಿಯ ಮುಸೂದಾ ಕಾನೂನು ಅವುಗಳಲ್ಲೊಂದಾಗಿತ್ತು.

ನ್ಯಾಯವಿಧಾಯಕಸಭೆ.—ಪ್ರಸಕ್ತ ವರ್ಷದಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯು ಮೂರಾವರ್ತಿ ನಡೆಯಿತು. ಈ ಸಭೆಯಲ್ಲಿ ಪರ್ಯಾಲೋಚಿಸಲ್ಪಟ್ಟ 16 ಮುಸೂದಾ ಕಾನೂನುಗಳ ಪೈಕಿ 7 ಮುಸೂದೆಗಳು ಪ್ರಸಕ್ತವರ್ಷದಲ್ಲಿ ಕಾನೂನಾಗಿ ವಿಧಿಸಲ್ಪಟ್ಟುವು. ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾಭ್ಯಾಸದ ಸೆಸ್ಸನ್ನು ಹಾಕುವ ಉದ್ದೇಶದಿಂದ ಮೈಸೂರು ಲೋಕಲ್ ಬೋರ್ಡ್ಸ್ ಮತ್ತು ಗ್ರಾಮಪಂಚಾಯಿತಿಗಳ ರೆಗ್ಯುಲೇಷನ್ನನ್ನು ತಿದ್ದುಪಾಟುಮಾಡುವ ಬಗ್ಗೆ ಏರ್ಪಟ್ಟ ರೆಗ್ಯುಲೇಷನು ಅವುಗಳಲ್ಲಿ ಅತಿ ಮುಖ್ಯವಾದುದು. ನ್ಯಾಯವಿಧಾಯಕ ಸಭೆಯ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳು ಆರು ತೀರ್ಮಾನಗಳನ್ನು ಸಭೆಯಲ್ಲಿ ಚರ್ಚೆಗೆ ತಂದರು; ಅವುಗಳ ಪೈಕಿ ಒಂದನ್ನು ವಾಪಸು ತೆಗೆದುಕೊಂಡರು; ಸೂಚಕರಿಂದ ಒಪ್ಪಿತವಾದ ಅಲ್ಪ ತಿದ್ದುಪಾಟುಗಳ ಸಮೇತ ಉಳಿದವುಗಳನ್ನು ಸರ್ಕಾರದವರು ಅಂಗೀಕರಿಸಿದರು. ಇವುಗಳ ಪೈಕಿ (1) ಓಟುಗಳನ್ನು ಕೊಡುವುದೂ ಸೇರಿ ಚುನಾವಣೆಗೆ ನಿಲ್ಲುವ ಹಕ್ಕು ಸ್ತ್ರೀಯರಿಗೂ ಅನ್ವಯಿಸುವಂತೆ ಮಾಡುವುದು, (2) ಸರ್ಕಾರದವರ ಮೇಲೆ ದಾವೆಗಳನ್ನು ತರುವುದು, ಇವು ಅತ್ಯಂತ ಮುಖ್ಯವಾದುವುಗಳು.

ಮೈಸೂರು ಸಂಪದಭಿವೃದ್ಧಿ ಸಮಾಜ.—ಪ್ರಸಕ್ತ ವರ್ಷದಲ್ಲಿ ಮೈಸೂರು ಎಕನಾಮಿಕ್ ಡೆವಲಪ್‌ಮೆಂಟ್ ಬೋರ್ಡಿನವರು ಮೂರಾವರ್ತಿ ಸಭೆ ನಡೆಸಿದರು. ಮೂರು ಸೆಂಟ್ರಲ್ ಬೋರ್ಡುಗಳವರೂ ಸಹ ತಮ್ಮ ಕಾರ್ಯಕ್ರಮದಲ್ಲಿ ಸೇರಿದ ಹಲವು ವಿಷಯಗಳನ್ನೂ, ಏರ್ಪಾಟುಗಳನ್ನೂ ಪರ್ಯಾಲೋಚಿಸುವ ಬಗ್ಗೆ ಆಗಿಂದಾಗ್ಗೆ ಕೌನ್ಸಿಲಿನ ಮೆಂಬರುಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದರು. ಕೌನ್ಸಲಿನ ಮೂರನೆಯ ಮೆಂಬರವರ ಹುದ್ದೆಯು ವಜಾ ಆದ ಪ್ರಯುಕ್ತ ನಮ್ಮ ವಿಶ್ವವಿದ್ಯಾಲಯದ ವೈಸ್‌ಚಾನ್ಸಲರರಾದ ಡಾಕ್ಟರ್ ಬ್ರಜೇಂದ್ರನಾಥಸೀಲರವರನ್ನು ವಿದ್ಯಾಭ್ಯಾಸದ ಬೋರ್ಡಿನ ಅಧ್ಯಕ್ಷರನ್ನಾಗಿ ನೇಮಿಸಲಾಯಿತು; ಮತ್ತು ಆದರಿಂದ ಸಂಪದಭಿವೃದ್ಧಿ ಸಮಾಜಕ್ಕೆ ವಿಶೇಷ ಸಹಾಯವಾಗುವುದೆಂದು ದೃಢವಾಗಿ ನಂಬುತ್ತೇವೆ. ಸಂಪದಭಿವೃದ್ಧಿ ಸಮಾಜದ ರಚನಾ ಪ್ರಕಾರವನ್ನು ಆಮೂಲಾಗ್ರವಾಗಿ ಪರಿಶೀಲಿಸುವ ಬಗ್ಗೆ ಸರ್ಕಾರಿ ಉದ್ಯೋಗಸ್ಥರೂ ಖಾಸಗಿ ದೊಡ್ಡಮನುಷ್ಯರೂ ಸೇರಿದ ಒಂದು ಕಮಿಟಿಯನ್ನು ಏರ್ಪಡಿಸಲಾಯಿತು. ಆ ಕಮಿಟಿಯ ರಿಪೋರ್ಟನ್ನು ಪರ್ಯಾಲೋಚಿಸಿ ಸರ್ಕಾರದವರು ಖರ್ಚನ್ನು ಕಡಿಮೆ ಮಾಡುವ ಉದ್ದೇಶದಿಂದ ಸಮಾಜದ ಏರ್ಪಾಡಿನಲ್ಲಿ ಕೆಲವು ಸಣ್ಣ ಬದಲಾವಣೆಗಳನ್ನು ಮಾಡಿ ಹುಕುಮುಗಳನ್ನು ಸಾದರ್ಮಾಡಿರುತ್ತಾರೆ; ಆದರೆ ಸಮಾಜದ ಕಳೆದ ಜೂನ್ ತಿಂಗಳ ಅಧಿವೇಶನದಲ್ಲಿ ನಿರ್ಧರಿಸಿದ ಕಾರ್ಯಕ್ರಮಗಳಿಗೆ ಸ್ವಲ್ಪವೂ ಲೋಪವುಂಟಾಗಿರುವುದಿಲ್ಲ.

ಸ್ಥಳೀಯ ಪ್ರಜಾಧಿಕಾರ.

ಲೋಕಲ್ ಬೋರ್ಡುಗಳು ಸಂಪದಭಿವೃದ್ಧಿ ಕಾರ್ಯಗಳನ್ನೂ, ವಿದ್ಯಾಭ್ಯಾಸದ ಸೆಸ್ಸಿನ ವಸೂಲಿಯನ್ನೂ ಕೈಗೊಳ್ಳಲು ಅಧಿಕಾರವನ್ನು ಪಡೆಯುವಂತೆ ಪ್ರಸಕ್ತ ವರ್ಷದಲ್ಲಿ ಸ್ಥಳೀಯ ಸಭೆಗಳ ಮತ್ತು ಗ್ರಾಮಪಂಚಾಯಿತಿಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡಲಾಯಿತು. ಸರ್ಕಾರಿ ಉದ್ಯೋಗಸ್ಥರಲ್ಲದ ಪ್ರೆಸಿಡೆಂಟರನ್ನು ಬೆಂಗಳೂರು ಡಿಸ್ಟ್ರಿಕ್ಟುಬೋರ್ಡಿಗೆ ಚುನಾಯಿಸುವುದನ್ನೂ ಕೋಲಾರ ಮತ್ತು ಹಾಸನ, ಈ ಎರಡು ಡಿಸ್ಟ್ರಿಕ್ಟುಬೋರ್ಡುಗಳಿಗೆ ನೇಮಕ ಮಾಡುವುದನ್ನೂ ಮಂಜೂರ್ಮಾಡಿ ಸರ್ಕಾರದವರು ಈಚೆಗೆ ಹುಕುಮುಗಳನ್ನು ಸಾದರ್ಮಾಡಿರುತ್ತಾರೆ.

ಆಯವ್ಯಯಗಳು.

ಒಟ್ಟಿನಲ್ಲಿ ಆಯವ್ಯಯಗಳ ಸ್ಥಿತಿಯನ್ನೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಈ ಸಭೆಯ ಕಳೆದ ಅಧಿವೇಶನದ ನಮ್ಮ ಸಮಾರಂಭದ ಭಾಷಣದಲ್ಲಿ ತಕ್ಕಮಟ್ಟಿಗೆ ಚರ್ಚಿಸಲಾಯಿತು. ಅವುಗಳನ್ನು ಕುರಿತು ಈಗ ತಪಶೀಲಾಗಿ ಹೇಳಬೇಕಾದ ಆವಶ್ಯಕತೆಯು ತೋರುವುದಿಲ್ಲ. ಆದರೂ ನಮ್ಮ ಆಯವ್ಯಯದ ಈಗಿರುವ ಸ್ಥಿತಿಯನ್ನೂ ಅದನ್ನು ಮೇಲ್ಪಡಿಸುವುದಕ್ಕಾಗಿ ಸರ್ಕಾರದವರು ಅವಲಂಬಿಸುತ್ತಿರುವ ಏರ್ಪಾಟುಗಳನ್ನೂ ಸಹ ತಮ್ಮಗಳಿಗೆ ತಿಳಿಯಪಡಿಸುವ ಉದ್ದೇಶದಿಂದ ನಮ್ಮ ಆಯವ್ಯಯಗಳಿಗೆ ಸಂಬಂಧಪಟ್ಟ ಕೆಲವು ಮುಖ್ಯಾಂಶಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇವೆ.

ಕಳೆದ ಜೂನ್ ತಿಂಗಳಲ್ಲಿ ನಾವು ಈ ಸಭೆಗೆ ಒಪ್ಪಿಸಿದ 1921-22ನೆಯ ವರ್ಷದ ತಿದ್ದುಪಾಟಾದ ಅಂದಾಜುಗಳ ಮೇರೆಗೆ ಪ್ರಸಕ್ತವರ್ಷದ ಒಟ್ಟು ಹುಟ್ಟುವಳಿಯು 306¾ ಲಕ್ಷ ರೂಪಾಯಿಯೂ ಒಟ್ಟು ಖರ್ಚು 323¼ ಲಕ್ಷ ರೂಪಾಯಿಯೂ ಆಗಿ 16½ ಲಕ್ಷ ರೂಪಾಯಿ ಕಡಿಮೆಬಿತ್ತೆಂಬುದು ನಿಮಗೆ ಜ್ಞಾಪಕವಿರಬಹುದು. ತಾತ್ಕಾಲಿಕವಾಗಿ ಅಂದಾಜಾದ ಆ ವರ್ಷದ ಕರಾರ್ಖಾಸಾ ಲೆಕ್ಕಗಳು ಈಗ ಸಿದ್ಧವಾಗಿವೆ ಮತ್ತು ಅವುಗಳ ಮೇರೆಗೆ ಸುಮಾರು 7¾ ಲಕ್ಷ ರೂಪಾಯಿ ಕಡಿಬಂತೆಂದು ತಿಳಿಸಲು ಸಂತೋಷಿಸುತ್ತೇವೆ. ಒಟ್ಟಿನಲ್ಲಿ 316⅝ ಲಕ್ಷ ರೂಪಾಯಿ ವಸೂಲಾಯಿತು; ಆ ಪೈಕಿ ಸುಮಾರು 10 ಲಕ್ಷದಷ್ಟು ಹೆಚ್ಚಿಗೆ ಹುಟ್ಟುವಳಿಯು ಮುಖ್ಯವಾಗಿ ಜಮೀನ್ ಕಂದಾಯ, ವರಮಾನದ ತೆರಿಗೆ, ಮತ್ತು ಎಕ್ಸೈಜು ಬಾಬುಗಳಲ್ಲಿ ಹೆಚ್ಚಾಗಿ ವಸೂಲಾದ್ದರಿಂದ ಬಂದದ್ದಾಗಿದೆ. ವರಮಾನದ ತೆರಿಗೆಯ ಮೂಲಕವಾದ ಹುಟ್ಟುವಳಿಯು ನಮ್ಮ ನಿರೀಕ್ಷಣೆಯಲ್ಲಿದ್ದುದಕ್ಕಿಂತಲೂ ಹೆಚ್ಚಿದೆ. ಚಾಲ್ತಿ ವರ್ಷದಲ್ಲಿ ಈ ಬಾಬಿನ ಹುಟ್ಟುವಳಿಯು, ಕಳೆದ ವರ್ಷದ ಪ್ರಮಾಣಕ್ಕೆ, ಅಂದರೆ 14 ಲಕ್ಷ ರೂಪಾಯಿಗೆ ಮೇಲ್ಪಡದಿದ್ದರೂ ಅಧಮಪಕ್ಷ ಅಷ್ಟಕ್ಕಾದರೂ ನಿಲ್ಲುವುದೆಂದು ನಂಬಿದೆ. ಸ್ಥಿತಿಗತಿಗಳಲ್ಲಿ ವ್ಯತ್ಯಾಸವೇನೂ ಇಲ್ಲವಾದರೆ ವರಮಾನದ ತೆರಿಗೆಯಿಂದ ಉತ್ಪತ್ತಿಯು ವರ್ಷವರ್ಷವೂ ಹೆಚ್ಚುತ್ತಿರಬೇಕು. ಕೈಗಾರಿಕೆಗಳಿಗೂ ವ್ಯಾಪಾರ ವಾಣಿಜ್ಯಗಳಿಗೂ ಕಾಲದೇಶಸ್ಥಿತಿಗಳು ಅನುಕೂಲವಾಗಿದ್ದರೆ ಸಾಲೀಯಾನಾ ಸುಮಾರು 16 ಲಕ್ಷ ರೂಪಾಯಿ ಹುಟ್ಟುವಳಿಯಾಗಿ, ಕಳೆದ ಅಧಿವೇಶನದ ಭಾಷಣದಲ್ಲಿ ನಾವು ತಿಳಿಸಿರುವಂತೆ 6 ಲಕ್ಷದಷ್ಟು ಹೆಚ್ಚು ಆದಾಯ ಬರುವುದೆಂದು ನಿರೀಕ್ಷಿಸಬಹುದಾಗಿದೆ. ಜಮೀನ್ ಕಂದಾಯದಿಂದ ಒಟ್ಟು 117 ಲಕ್ಷ ರೂಪಾಯಿ ವಸೂಲಾಯಿತು. 1919-20 ನೆಯ ಸಾಲನ್ನು ಬಿಟ್ಟರೆ ಬಹುಶಃ ಇಷ್ಟು ಭಾರಿ ಮೊಬಲಗು ಈ ಬಾಬಿನಲ್ಲಿ ಹಿಂದೆ ಯಾವಾಗಲೂ ಹುಟ್ಟುವಳಿಯಾಗಿಲ್ಲ. ವ್ಯವಸಾಯದ ಸ್ಥಿತಿಗಳು ಮಾತ್ರ ಈಗಿನಂತೆ ತೃಪ್ತಿಕರವಾಗಿದ್ದರೆ, ಸರ್ವೆಸೆಟಲ್ಮೆಂಟುಗಳನ್ನು ತ್ವರೆಪಡಿಸುವುದರಿಂದಲೂ ಸಾಗುವಳಿಯ ವಿಸ್ತೀರ್ಣವನ್ನು ಹೆಚ್ಚಿಸುವುದಕ್ಕೆ ಮಾಡುವ ವಿಶೇಷ ಏರ್ಪಾಡುಗಳಿಂದಲೂ ಮತ್ತು ವಿಶೇಷ ಮುತವರ್ಜಿ ವಹಿಸಿ ವಸೂಲಿ ಕೆಲಸವನ್ನು ನಡೆಸುವುದರಿಂದಲೂ ಈ ಬಾಬಿನ ಸಾಲೀಯಾನಾ ಹುಟ್ಟುವಳಿಯನ್ನು ಮೂರು ವರ್ಷಗಳ ಕಾಲದಲ್ಲಿ 123 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬಹುದೆಂಬ ನಮ್ಮ ನಿರೀಕ್ಷಣೆಯು ಧಾರಾಳವಾಗಿ ನೆರವೇರುವುದೆಂದು ನಾವು ದೃಢವಾಗಿದ್ದೇವೆ. ಎಕ್ಸೈಜು ಬಾಬಿನ ಹುಟ್ಟುವಳಿಯು ತಿದ್ದುಪಾಟಾದ ಅಂದಾಜಿಗಿಂತ 1½ ಲಕ್ಷ ರೂಪಾಯಿ ಜಾಸ್ತಿಯಾಗಿದೆ. ಈ ಹುಟ್ಟುವಳಿಯು ಈಚೀಚೆಗೆ ಸ್ವಲ್ಪಮಟ್ಟಿಗೆ ಖಾತರಿಯಾಗಿಲ್ಲವಾದರೂ ಕಳೆದ ವರ್ಷದಂತೆ 76 ಲಕ್ಷ ರೂಪಾಯಿ ಪರಿಮಾಣಕ್ಕೆ ಕಡಿಮೆಯಾಗದೇ ಇದ್ದಲ್ಲಿ ಆಯವ್ಯಯವನ್ನು ಸಮತೂಕ ಮಾಡುವುದಕ್ಕಾಗಿ ನಾವು ಇಟ್ಟುಕೊಂಡಿರುವ ಅಂಕೆಗಳಲ್ಲಿ ಬಹಳ ವ್ಯತ್ಯಾಸಬಾರದೇ ಇರಬಹುದು. ವಿದ್ಯುಚ್ಛಕ್ತಿ ಮತ್ತು ಕೃಷ್ಣರಾಜ ಸಾಗರದ ಕಾಂಗಾರಿಗಳಿಂದ 23¾ ಲಕ್ಷರೂಪಾಯಿ ಉತ್ಪತ್ತಿಯಾಗಬಹುದೆಂದು ನಮ್ಮ ನಿರೀಕ್ಷಣೆ ಯಿದ್ದಂತೆಯೇ ಸುಮಾರು ಅಷ್ಟೇ ಹಣ, ಅಂದರೆ 23.93 ಲಕ್ಷರೂಪಾಯಿ, ಉತ್ಪತ್ತಿಯಾಗಿದೆ. ರೈಲ್ವೆಗಳಿಂದ 8¼ ಲಕ್ಷರೂಪಾಯಿಯ ನಿವ್ವಳ ಹುಟ್ಟುವಳಿಯನ್ನು ನಿರೀಕ್ಷಿಸಿತ್ತು; ವಸ್ತುತಃ ಸುಮಾರು 8 ಲಕ್ಷರೂಪಾಯಿ ಉತ್ಪತ್ತಿಯಾಗಿದೆ. ಮಾರಾಟವಾಗಬಹುದೆಂದು ನಿರೀಕ್ಷಿಸಿದ್ದದಕ್ಕಿಂತ ಹೆಚ್ಚಾಗಿ ಗಂಧದೆಣ್ಣೆಯು ಕಳೆದ ವರ್ಷ ಬಿಕರಿಯಾಯಿತು. ಎಣ್ಣೆಗೆ ಹೆಚ್ಚು ಗಿರಾಕಿಯೂ ಖರ್ಚಾಗದೆ ಉಳಿದಿದ್ದ ದಾಸ್ತಾನು ಕಡಿಮೆ ಬಿದ್ದುದೂ ಅನುಕೂಲವಾದ ಅಂಶಗಳಾಗಿವೆ.

ಖರ್ಚು ಬಾಬಿನಲ್ಲಿ ತಿದ್ದುಪಡಿಯಾದ ಅಂದಾಜಿನ ಮೇರೆಗೆ 323¼ ಲಕ್ಷರೂಪಾಯಿ ಇದ್ದುದು ಕಳೆದ ವರ್ಷದ ತಾತ್ಕಾಲಿಕ ನಿವ್ವಳ ಲೆಕ್ಕಗಳ ಮೇರೆಗೆ 325¼ ಲಕ್ಷ ರೂಪಾಯಿಗೆ ಬಂದಿತು; ಗಣ್ಯವಾದ ಹೆಚ್ಚು ಖರ್ಚು, ಸೈನ್ಯ ಮತ್ತು ಜಮೀನ್ ಕಂದಾಯದ ಬಾಬುಗಳಲ್ಲಿ ಮಾತ್ರ ಕಂಡು ಬಂದಿದೆ. ಕೆಲವು ಖರ್ಚು ಬಾಕಿಗಳನ್ನು ಫೈಸಲ್ಮಾಡಿದ್ದೂ ಮಿಲಿಟರಿ ಸ್ಟೋರಿನ ಖರ್ಚನ್ನು ಇದುವರೆಗಿನ ಪದ್ಧತಿಯಂತೆ ಅನಾಮತ್ತಾಗಿ ತೋರಿಸದೆ ಆಖೈರು ಖರ್ಚಾಗಿ ಬಿಂಗಡಿಸಿದುದೂ ಸಹ ಸೈನ್ಯದ ಬಾಬಿನ ಖರ್ಚು ಹೆಚ್ಚಿರುವುದಕ್ಕೆ ಕಾರಣಗಳಾಗಿವೆ. ಜಮೀನ್ ಕಂದಾಯದ ಬಾಬಿನ ಖರ್ಚು ಹೆಚ್ಚಾದದ್ದಕ್ಕೆ ಕಂದಾಯದ ವಸೂಲಿಯೂ ಆ ಬಗ್ಗೆ ಕೊಡಬೇಕಾದ ಕಮಿಷನ್ ಮತ್ತು ಸಾದಿಲ್‌ವಾರ್ ದರಗಳೂ ಹೆಚ್ಚಿದ ಪ್ರಯುಕ್ತ ಪಟೇಲ, ಶಾನುಭೋಗರುಗಳಿಗೆ ಹೆಚ್ಚಾಗಿ ವೇತನಗಳನ್ನು ಕೊಟ್ಟದ್ದೇ ಮುಖ್ಯ ಕಾರಣವಾಗಿದೆ. ಇತರ ಬಾಬುಗಳ ಖರ್ಚಿನಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲ. ಇದಕ್ಕಾಗಿಯೇ ಪ್ರತ್ಯೇಕವಾಗಿ ಸಾದರಾದ ಹುಕುಂ ಅನುಸರಿಸಿ ವರ್ಷದ ಆಖೈರು ತಿಂಗಳುಗಳಲ್ಲಿ ಖರ್ಚನ್ನು ಕೇವಲ ಹತೋಟಿಯಲ್ಲಿಟ್ಟುಕೊಂಡಿದ್ದರಿಂದ ಆ ಪೈಕಿ ಅನೇಕ ಬಾಬುಗಳಲ್ಲಿ ವಾಸ್ತವವಾಗಿ ಆದ ಖರ್ಚು ತಿದ್ದುಪಾಟಾದ ಅಂದಾಜಿಗಿಂತ ಕಡಿಮೆಯಾಗಿದೆ. ಸಾಲದ ಪತ್ರಗಳನ್ನು ಪಡೆದುಕೊಂಡವರು ಬಡ್ಡಿಯನ್ನು ಕೇಳಿ ತೆಗೆದುಕೊಳ್ಳದೆ ಇದ್ದ ಪ್ರಯುಕ್ತ ಕಳೆದ ವರ್ಷದ ಬಡ್ಡಿ ಖರ್ಚಿನ ಬಾಬಿನಲ್ಲಿ ಸುಮಾರು 6½ ಲಕ್ಷದಷ್ಟು ಭಾರಿ ಮೊಬಲಗು ಬಾಕಿಯಾಗದೆ ನಿಂತಿದೆ. ಪರಂತು ಈ ಮೊಬಲಗನ್ನು ಅವರು ಮುಂದೆ ಕೇಳಿದಾಗ ಕೊಡಬೇಕಾದ ಸಾಲವೆಂತಲೇ ಭಾವಿಸಬೇಕು.

ತಿದ್ದುಪಾಟಾದ ಅಂದಾಜಿನಲ್ಲಿ 16½ ಲಕ್ಷವು ಖರ್ಚಿಗೆ ಸಾಲದೇಬರುವುದೆಂತಲೂ ಬಡ್ಜೆಟ್ಟಿನಲ್ಲಿ ಸುಮಾರು 64,000 ರೂಪಾಯಿ ಖರ್ಚು ಜಾಸ್ತಿ ಉಳಿಯುವುದೆಂತಲೂ ನಿರೀಕ್ಷಿಸಿದ್ದಕ್ಕೆ ಬದಲಾಗಿ ಸುಮಾರು 9 ಲಕ್ಷ ರೂಪಾಯಿ ಖರ್ಚಿಗೆ ಸಾಲದೇ ಬಂದಿರುವುದೇ ಕಳೆದ ವರ್ಷದ ಆಯವ್ಯಯದ ನಿವ್ವಳ ಫಲಿತಾಂಶವಾಗಿದೆ. ಹಣವಿಲ್ಲದಿದ್ದುದರಿಂದ ಸಾಲ ತೀರಿಸುವ ಬಗ್ಗೆ ಏರ್ಪಟ್ಟ ಸಿಂಕಿಂಗ್ (ಇಳಿವಾರ) ಫಂಡಿಗೆ ಹೊರತು ಮತ್ತೆ ಯಾವ ರಿಜರ್ವ್‌ಗಳಿಗೂ ಕಳೆದ ವರ್ಷ ಹಣ ಹಾಕಲಿಲ್ಲವೆಂತಲೂ ಆ ಫಂಡಿಗೂ ಸಹ ಅದಕ್ಕೆ ಹಾಕಬೇಕಾದ 18¾ ಲಕ್ಷ ರೂಪಾಯಿಗೆ ಬದಲಾಗಿ 12½ ಲಕ್ಷವನ್ನು ಮಾತ್ರ ಕೊಟ್ಟಿದೆಯೆಂತಲೂ ಮತ್ತು ಸದರಿ ವರ್ಷದ ಹುಟ್ಟುವಳಿಯಿಂದ ಅದನ್ನು ಕೊಡುವುದಕ್ಕೂ ಸಹ ಆಗದಿದ್ದುದರಿಂದ ಸಿಂಕಿಂಗ್ ಫಂಡುಗಳ ಬಗ್ಗೆ ಹಿಂದಿನ ವರ್ಷಗಳಲ್ಲಿ ಕೂಡಿಟ್ಟಿದ್ದ ರಿಜರ್ವ್‌ಗಳಿಂದ 12½ ಲಕ್ಷದಷ್ಟು ಹಣವನ್ನು ಒದಗಿಸಿದುದಾಯಿತೆಂತಲೂ ತಿಳಿಸಬೇಕಾಗಿದೆ. ಮುಖ್ಯವಾದ ರಿಜರ್ವ್‌ಗಳಿಗೆ ಹಾಕಬೇಕಾದ ಕಂಟ್ರಿಬ್ಯೂಷನ್ ಹಣವನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಈಗ ವಾಸ್ತವವಾಗಿ ಕಡಮೆಬಿದ್ದಿರುವ ಹಣವು ಈಗ ತೋರಿಸಿರುವ 9 ಲಕ್ಷ ರೂಪಾಯಿಗಿಂತ ಇನ್ನೂ ಬಹಳ ಹೆಚ್ಚಾಗುವುದೆಂತಲೂ ಇದರಿಂದ ಕಂಡುಬರುತ್ತದೆ.

ಕಳೆದ ವರ್ಷದ ತಾತ್ಕಾಲಿಕ ಕರಾರ್ಖಾಸಾ ಲೆಕ್ಕಗಳಿಂದ ಬಂಡವಾಳದ ಕಾಂಗಾರಿಗಳಿಗಾಗಿ ಈ ಕೆಳಗೆ ಕಾಣಿಸಿರುವಂತೆ ಸುಮಾರು 122 ಲಕ್ಷ ರೂಪಾಯಿಯನ್ನು ಒಟ್ಟಿನಲ್ಲಿ ಒದಗಿಸಿತ್ತೆಂದು ತಿಳಿದುಬರುತ್ತದೆ:—

ರೈಲ್ವೆಗಳು ಮತ್ತು ಟ್ರಾಂವೆಗಳು	20½ ಲಕ್ಷ
ಕೃಷ್ಣರಾಜಸಾಗರದ ಕಾಂಗಾರಿ	9½ ,,
ವಿದ್ಯುಚ್ಛಕ್ತಿಯ ಕಾಂಗಾರಿ	36 ,,
ಕಬ್ಬಿಣದ ಕಾರ್ಖಾನೆ ಮತ್ತು ಸಂಬಂಧಪಟ್ಟ ಟ್ರಾಂವೆಗಳು	55½ ,,
ಇತರ ಕಾಂಗಾರಿಗಳು	½ ,,
ಒಟ್ಟು	122 ಲಕ್ಷ

ತಿದ್ದುಪಾಟಾದ ಅಂದಾಜಿನಲ್ಲಿ ಸುಮಾರು 155 ಲಕ್ಷ ರೂಪಾಯಿನ ಖರ್ಚನ್ನು ತೋರಿಸಿತ್ತು. ಕಬ್ಬಿಣದ ಕಾರ್ಖಾನೆಗೂ ಅದಕ್ಕೆ ಸಂಬಂಧಪಟ್ಟ ರೈಲ್ವೆಗಳಿಗೂ ಸಂಬಂಧಪಟ್ಟ ಕೆಲಸಗಳನ್ನು ಶೀಘ್ರದಲ್ಲಿ ಪ್ರಾರಂಭಿಸುವುದಕ್ಕೆ ಅತ್ಯವಶ್ಯಕವಾಗಿ ಬೇಕಾಗುವಷ್ಟರಮಟ್ಟಿಗೆ ಕೆಲಸವನ್ನು ಮಿತಪಡಿಸಿ ಕಾಂಗಾರಿಗಳು ನಿಧಾನವಾಗಿ ನಡೆಯುವಂತೆ ಮಾಡಿದ್ದರಿಂದ ಮುಖ್ಯವಾಗಿ ಈ ಬಾಬುಗಳಿಗೆ ಕೊಡಬೇಕೆಂದು ಗೊತ್ತುಮಾಡಿದ್ದ ಹಣದಲ್ಲಿ ಸುಮಾರು 33 ಲಕ್ಷ ರೂಪಾಯಿಯಷ್ಟು ಹಣ ಖರ್ಚಾಗದೆ ನಿಂತಿತು. ಆದರೆ ತಿದ್ದುಪಾಟಾದ ಕಾರ್ಯಕ್ರಮದ ಮೇರೆಗೆ ಕಾಂಗಾರಿಗಳನ್ನು ಮುಗಿಸಬೇಕಾದ ಕಾಲಪರಿಮಿತಿಯನ್ನು ಹೆಚ್ಚಿಸಿದಾಗ್ಗೂ ಮೇಲ್ಕಂಡಂತೆ ಬಾಕಿಯಾಗದೆ ನಿಂತ ಹಣದ ಪೈಕಿ ಬಹು ಭಾಗವನ್ನು ಮಂಜೂರಾಗಿರುವ ಕಾಂಗಾರಿಗಳನ್ನೆಲ್ಲವನ್ನೂ ಪೂರೈಸುವುದಕ್ಕೆ ಹಂಚಿಕೊಡಬೇಕಾಗಿದೆ.

ಸಾಲದ ಫಂಡುಗಳು.—ಕಳೆದ ಎರಡು ವರ್ಷಗಳಲ್ಲಿ 329 ಲಕ್ಷ ರೂಪಾಯಿ ಸಾಲ ತೆಗೆಯಲಾಯಿತು. ಈ ಹಣದಿಂದ 1920-21 ನೆಯ ಸಾಲಿನಲ್ಲಿ 111 ಲಕ್ಷ ರೂಪಾಯಿಯನ್ನೂ 1921-22ನೆಯ ಸಾಲಿನಲ್ಲಿ 122 ಲಕ್ಷ ರೂಪಾಯಿಯನ್ನೂ ಬಂಡವಾಳದ ಖರ್ಚಿಗಾಗಿ ಒದಗಿಸಲಾಯಿತು. ಚಾಲ್ತಿ ವರ್ಷದ ಬಡ್ಜೆಟ್ಟಿನಲ್ಲಿ 46½ ಲಕ್ಷ ರೂಪಾಯಿಯ ಖರ್ಚನ್ನು ಒದಗಿಸಿದೆಯಲ್ಲದೆ ಕಳೆದ ವರ್ಷದ ಬಂಡವಾಳದ ಕಾಂಗಾರಿಗಳಿಗೆ ಕೊಟ್ಟಿದ್ದ ಹಣದ ಪೈಕಿ ಖರ್ಚಾಗದೆ ಉಳಿದಿರುವ 33 ಲಕ್ಷ ರೂಪಾಯಿನಲ್ಲಿ ಬಹು ಭಾಗವನ್ನು ಈ ವರ್ಷ ಪುನಃ ಕೊಡಬೇಕಾಗಿದೆ. 1920-21 ನೆಯ ಸಾಲಿನ ಲಾಗಾಯಿತು ಮೂರು ವರ್ಷಗಳಲ್ಲಿ ಸುಮಾರು 29 ಲಕ್ಷ ರೂಪಾಯಿ ಹುಟ್ಟುವಳಿ ಕಡಿಮೆ ಬಿದ್ದಿದೆಯಾದ್ದರಿಂದ ಈ ಹಣವನ್ನೂ ಸಹ ಸಾಲದ ಹಣದಿಂದಲೇ ಹಂಗಾಮಿಯಾಗಿ ಭರ್ತಿ ಮಾಡಿದೆ. ಈ ರೀತಿಯಲ್ಲಿ ಸಾಲದಿಂದ ಬಂದ ಪೂರಾ ಹಣವೂ ಖರ್ಚಾಗಿ ಮುಂದಿನ ಬಂಡವಾಳದ ಖರ್ಚಿಗೆ ಶಿಲ್ಕು ಏನೂ ಉಳಿದಿರುವುದಿಲ್ಲ.

ಚಾಲ್ತಿ ವರ್ಷದ ಮೊದಲನೆಯ ಮೂರು ತಿಂಗಳು ಈಗತಾನೇ ಮುಗಿದಿರುವುದರಿಂದ ವರ್ಷದ ಅಂತ್ಯದಲ್ಲಿ ಸ್ಥಿತಿಯು ಬಹುಶಃ ಯಾವ ರೀತಿ ಇರುವುದೆಂಬುದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಮುಂಗಾರು ಬೆಳೆಯು ಅನುಕೂಲವಾಗಿದೆ; ಅದರಂತೆ ಹಿಂಗಾರು ಮಳೆಯೂ ಸಹ ಸಕಾಲದಲ್ಲಿಯೂ ಸಾಕಾದಷ್ಟು ಮಟ್ಟಿಗೂ ಆದಲ್ಲಿ ಈ ಸುಭಿಕ್ಷವಾಗುವ

ಮಾಡಿರುತ್ತನೆ. ಈ ಪ್ರದೇಶಕ್ಕೆ ತಕ್ಕಷ್ಟುಮಟ್ಟಿಗೆ ಪೋಲೀಸು ಏರ್ಪಾಡು ಮಾಡಬೇಕಾದುದು ಅವಶ್ಯಕವೆಂಬುದನ್ನು ಸರ್ಕಾರದವರು ಅಂಗೀಕರಿಸುತ್ತಾರೆ.

ಮೈಸೂರು ವಾಣಿಜ್ಯ ಸಂಘದವರು ತಮ್ಮ ಅಭಿನಂದನ ಪತ್ರಿಕೆಯಲ್ಲಿ ನಮೂದು ಮಾಡಿರುವ ವಿಷಯಗಳನ್ನು ಯುಕ್ತ ರೀತಿಯಲ್ಲಿ ಪರ್ಯಾಲೋಚಿಸಲಾಗುವುದು. ಸಂಘದವರು ಮಾಡುತ್ತಿರುವ ಕೆಲಸವು ಸಂಸ್ಥಾನದ ವಾಣಿಜ್ಯಕ್ಕೆ ಸಂಬಂಧಪಟ್ಟದ್ದಾದ್ದರಿಂದ ಇದು ಬಹು ಮುಖ್ಯವಾದ ವಿಷಯವಾಗಿರುತ್ತದೆ. ಇದನ್ನು ಇನ್ನೂ ಉತ್ತಮಪಡಿಸುವ ವಿಷಯದಲ್ಲಿ ಸರ್ಕಾರದವರು ತುಂಬಾ ಕುತೂಹಲವುಳ್ಳವರಾಗಿರುತ್ತಾರೆ. ಈ ದಿವಸ ಈ ಸಭೆಯಲ್ಲಿ ನಾವು ಮಾಡಿದ ಭಾಷಣದಲ್ಲಿ ರೈಲ್ವೆಗಾಡಿ ವಗೈರೆಗಳನ್ನು ಹೆಚ್ಚಿಸುವ ಬಗ್ಗೆ ಏರ್ಪಾಡು ಮಾಡುತ್ತಿದ್ದೇವೆಂದು ಮುಂಚೆಯೇ ತಿಳಿಸಿದ್ದೇವೆ. ಬೆಂಗಳೂರಲ್ಲಿಯೂ, ಮೈಸೂರಲ್ಲಿಯೂ "ಪಬ್ಲಿಕ್ ಟೆಲಿಫೋನ್" ಏರ್ಪಡಿಸಬೇಕೆಂದು ಹಿಂದೆ ಪರ್ಯಾಲೋಚಿಸಿತ್ತು, ಆದರೆ ಸಾಮಾನುಗಳ ಬೆಲೆ ಏರಿದ್ದರಿಂದ ಆ ಏರ್ಪಾಡನ್ನು ಸದ್ಯಕ್ಕೆ ನಿಲ್ಲಿಸಬೇಕಾಯಿತು. ಈ ವಿಚಾರವನ್ನು ಪುನಃ ಪರ್ಯಾಲೋಚಿಸಲಾಗುವುದು. ನ್ಯಾಯವಿಧಾಯಕ ಸಭೆಯಲ್ಲಿ ಈ ಸಂಘಕ್ಕೆ ಒಂದು ಸ್ಥಾನವನ್ನೇರ್ಪಡಿಸಬೇಕೆಂಬ ವಿಚಾರದಲ್ಲಿ ವ್ಯಾಪಾರ ಮತ್ತು ಇತರ ಪ್ರತ್ಯೇಕ ಬಾಬುಗಳಿಗೂ ತಕ್ಕಷ್ಟು ಪ್ರಾತಿನಿಧ್ಯವನ್ನು ಪಡೆಯದೆ ಇರುವ ಸಣ್ಣಸಣ್ಣ ಪಂಗಡಗಳಿಗೂ, ರಾಜ್ಯಭಾರ ಕ್ರಮಕ್ಕೆ ಸಂಬಂಧಪಟ್ಟ ಸಭೆಗಳಲ್ಲಿ ಸ್ಥಾನವನ್ನು ಕಲ್ಪಿಸಬೇಕೆಂಬುದು ಸರ್ಕಾರದವರ ಉದ್ದೇಶವಾಗಿದೆ.

ಮಲೆನಾಡು ಪ್ರತಿನಿಧಿಗಳ, ತಮ್ಮ ಅವಶ್ಯಕತೆಗಳು ಸರ್ಕಾರದವರಿಗೆ ಸಂಪೂರ್ಣವಾಗಿ ಗೊತ್ತುಂಟು. ಮತ್ತು ತಮ್ಮಗಳಿಗೆ ಇರುವ ವಿಶೇಷವಾದ ಕಷ್ಟಗಳಿಗಾಗಿ ಸರ್ಕಾರದವರು ಕನಿಕರ ಪಡುತ್ತಾರೆ. ಮೂರು ವರುಷಗಳ ಹಿಂದೆ ನಾವು ಆಫಿಸಿಯೇಟಿಂಗ್ ದಿವಾನರಾಗಿದ್ದಾಗ ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸರ್ವತ್ರ ಸಂಚಾರಮಾಡಿ ತಮ್ಮಗಳಿಗೆ ಅತ್ಯವಶ್ಯವಾಗಿ ಬೇಕಾದ ಪ್ರಮೇಯಗಳನ್ನು ಖುದ್ದಾಗಿ ತಿಳಿದುಕೊಂಡಿದ್ದೇವೆ. ಆ ಈಚೆಗೆ ಕೆಲವು ಘಾಟಿ ರಸ್ತೆಗಳನ್ನು ಉತ್ತಮಪಡಿಸುವುದರಲ್ಲಿಯೂ, ವೈದ್ಯ ಸಹಾಯದಬಗ್ಗೆ ಕೆಲವು ಅನುಕೂಲ್ಯಗಳನ್ನು ಹೆಚ್ಚಿಸುವುದರಲ್ಲಿಯೂ, ಜಂಗಲಿಗಳಬಗ್ಗೆ ಇದ್ದ ಕೆಲವು ತೊಂದರೆಗಳನ್ನು ನಿವಾರಣೆ ಮಾಡುವುದರಲ್ಲಿಯೂ, ವಾಸ್ತವವಾದ ಮೇಲ್ಪಾಡುಗಳು ಹೆಚ್ಚಾಗಿಯೇ ನಡೆದಿವೆ ಎಂಬುದನ್ನು ತಾವು ಒಪ್ಪಬೇಕಾಗಿದೆ. ದುರದೃಷ್ಟವಶಾತ್ ದ್ರವ್ಯಾಭಾವದ ದೆಸೆಯಿಂದ ಮಲೆನಾಡು ಅಭಿವೃದ್ಧಿಯ ಬಗ್ಗೆ ಹೆಚ್ಚು ಗ್ರಾಂಟನ್ನು ಕೊಡುವುದಕ್ಕೆ ಸರ್ಕಾರದವರಿಗೆ ಅಸಾಧ್ಯವಾಗಿ ಪರಿಣಮಿಸಿತು. ಮುಂದೆ ಬರುವ ಚಳಿಗಾಲದಲ್ಲಿ ತಮ್ಮಗಳ ರಮಣೀಯವಾದ ಡಿಸ್ಟ್ರಿಕ್ಟುಗಳಲ್ಲಿ ಮತ್ತೊಂದು ಸಾರಿ ಸಂಚಾರ ಮಾಡಬೇಕೆಂದು ಏರ್ಪಾಡು ಮಾಡಿದೇವೆ. ಆಗ ಸ್ಥಳವಿದ್ಯಮಾನಗಳನ್ನು ಪರಿಶೀಲನೆಮಾಡಿ ತಾವುಗಳು ಈಗ ಅರಿಕೆ ಮಾಡಿಕೊಂಡಿರುವ ವಿಷಯಗಳೆಲ್ಲವನ್ನೂ ವಿಚಾರ ಮಾಡುತ್ತೇವೆ. ಶ್ರೀಮನ್ಮಹಾರಾಜಾ ಸರ್ಕಾರದವರು ಅವರು ಮಾಡಬೇಕಾದ ಇತರ ಅವಶ್ಯಕತೆಗಳನ್ನು ನೋಡಿಕೊಂಡು ಮಲೆನಾಡಿನ ಸ್ಥಿತಿಯನ್ನು ಮೇಲ್ಪಡಿಸಲು ತಮ್ಮ ಕೈಲಾದದ್ದನ್ನೆಲ್ಲಾ ಮಾಡುವರೆಂದು ತಾವುಗಳು ದೃಢವಾಗಿ ನಂಬಿರಬಹುದು.

ಹಾಸನ—ಮಂಗಳೂರು ರೈಲ್ವೆಯ ಏರ್ಪಾಡನ್ನು ಶೀಘ್ರದಲೇ ಉಪಕ್ರಮಿಸಲು ಸಾಧ್ಯವಿಲ್ಲವೆಂಬ ಅಂಶವನ್ನು ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘದವರಿಗೆ ತಿಳಿಯಪಡಿಸಲು ವಿಷಾದಿಸುತ್ತೇವೆ. ರೈಲ್ವೆಯ ಏರ್ಪಾಡುಗಳು ಹಾಲಿ ಯಾವ ಸ್ಥಿತಿಯಲ್ಲಿರುತ್ತವೆ ಎಂಬ ವಿವರಗಳನ್ನು ನಮ್ಮ ಉಪಕ್ರಮ ಭಾಷಣದಲ್ಲಿ ಆಮೂಲಾಗ್ರವಾಗಿ ವಿವರಿಸಿರುತ್ತೇವೆ. ಮತ್ತು ಮುಂದೆ ಕೆಲವು ವರುಷಗಳವರೆಗೆ ಸರ್ಕಾರೀ ಹಣದಿಂದ ಹೊಸ ಲೈನುಗಳನ್ನು ಹಾಕುವುದಕ್ಕಾಗಿ ಬಂಡವಾಳವನ್ನು ಒದಗಿಸಲಾಗುವುದಿಲ್ಲ. ನಾವು ಸೂಚನೆ ಮಾಡಿದಂತೆ ಈ ವಿಷಯವನ್ನು ಡಿಸ್ಟ್ರಿಕ್ಟ ಬೋರ್ಡಿನವರು ಪರ್ಯಾಲೋಚಿಸಬೇಕು.

ಉಳಿದ ಅಭಿನಂದನ ಪತ್ರಿಕೆಗಳಲ್ಲಿ ಆಯಾ ಪಂಗಡಗಳ ಪ್ರತ್ಯೇಕ ಅವಶ್ಯಕತೆಗಳನ್ನು ಕುರಿತು ಪ್ರಸ್ತಾಪಿಸಿರುತ್ತಾರೆ. ಒಕ್ಕಲಿಗರ ಸಂಘದವರೂ, ಲಿಂಗಾಯತ ವಿದ್ಯಾಭ್ಯಾಸದ ಫಂಡು ಸಂಘದವರೂ, ಜೈನಸಂಘದವರೂ, ವಿದ್ಯಾಭ್ಯಾಸದ ಸುಧಾರಣೆಗಳ ವಿಷಯದಲ್ಲಿಯೂ ಸರ್ಕಾರಿ ನೌಕರಿಯಲ್ಲಿ ಸದರು ಪಂಗಡಗಳ ಜನಗಳನ್ನು ಸೇರಿಸಿಕೊಳ್ಳುವ ವಿಷಯದಲ್ಲಿಯೂ ಹೆಚ್ಚಾಗಿ ಪ್ರಸ್ತಾಪ ಮಾಡಿರುತ್ತಾರೆ. ವಿದ್ಯಾಭ್ಯಾಸದ ಸುಧಾರಣೆಗಳ ಪೈಕಿ ಕೆಲವನ್ನು ಜಾರಿಗೆ ತರುವುದಕ್ಕೂ, ವಿದ್ಯಾಭ್ಯಾಸದ ಕೆಳದರ್ಜೆಗಳನ್ನು ಪರಿಷ್ಕರಿಸುವ ಕೆಲಸವನ್ನು ಉಪಕ್ರಮಿಸುವುದಕ್ಕೂ ಈ ವರ್ಷ ಹೆಚ್ಚು ಗ್ರಾಂಟನ್ನು ಕೊಡಲಾಗುವುದೆಂದು ನಮ್ಮ ಭಾಷಣದಲ್ಲಿಯೇ ತಿಳಿಸಿರುತ್ತೇವೆ. ಸರ್ಕಾರಿ ನೌಕರಿಯಲ್ಲಿ ಹಿಂದುಳಿದ ಪಂಗಡಗಳ ಜನಗಳಿರಬೇಕಾದ ವಿಷಯದಲ್ಲಿ ಸರ್ಕಾರದವರು ನಡೆದುಕೊಳ್ಳಬೇಕೆಂದು ನಿರ್ಧರಿಸಿದ್ದ ನಿಯಮವನ್ನು ಸಂಪೂರ್ಣವಾಗಿ ಜಾರಿಗೆ ತರಲು ಉಂಟಾದ ಪ್ರತಿಬಂಧಕಗಳನ್ನು ನಮ್ಮ ಭಾಷಣದಲ್ಲಿ ಮೊದಲೇ ತಿಳಿಸಿರುತ್ತೇವೆ. ಈ ವಿಷಯದಲ್ಲಿ ಆ ಪಂಗಡಗಳವರು ಭಗ್ನಮನೋರಥರಾಗುವುದಕ್ಕೆ ಸ್ವಲ್ಪ ಅವಕಾಶ ಉಂಟಾದುದಕ್ಕಾಗಿ ನಾವು ತುಂಬಾ ವಿಷಾದಪಡುತ್ತೇವೆ; ಮತ್ತು ನಾವು ಭಾಷಣದಲ್ಲಿ ಈ ಮೊದಲೇ ತಿಳಿಸಿರುವಂತೆ, ಸ್ಥಿತಿಗಳನ್ನು ವಿಮರ್ಶಿಸುವುದಕ್ಕೂ ಶ್ರೀಮನ್ಮಹಾರಾಜಾ ಸರ್ಕಾರದವರು ಈ ಭಾಗದಲ್ಲಿ ಮಾಡಿರುವ ಹುಕುಮುಗಳನ್ನು ಸ್ವಲ್ಪವೂ ಚ್ಯುತಿ ಇಲ್ಲದಂತೆ ಸಂಪೂರ್ಣವಾಗಿ ಜಾರಿಗೆ ತರುವಂತೆ ನೋಡಿಕೊಳ್ಳಲು ನಿಷ್ಕೃಷ್ಟವಾದ ಹುಕುಮನ್ನು ಸಾದರ್ಪಡಿಸಲಾಗುವುದು. ಹಿಂದುಳಿದ ಪಂಗಡಗಳಿಗೆ ಖರ್ಚು ಕಡಿಮೆ ಮಾಡುವುದರಿಂದ ಉಂಟಾಗುವ ವಿಷಯದಲ್ಲಿಯೂ ಸ್ಥಿತಿಗಳನ್ನು ಜಾಗರೂಕತೆಯಿಂದ ಪರೀಕ್ಷಿಸಲಾಗುವುದೆಂದು ನಾವು ನಿಮಗೆ ಭರವಸೆ ಕೊಡಲು ಸಹ ಅಪೇಕ್ಷಿಸುತ್ತೇವೆ.

ಮಹಮ್ಮದೀಯ ಪ್ರತಿನಿಧಿಗಳು ಒಪ್ಪಿಸಿದ ಅಭಿನಂದನ ಪತ್ರಿಕೆಗಳಲ್ಲಿ, ವಾಡಿಕೆಯಂತೆ, ಅವರ ವಿದ್ಯಾಭ್ಯಾಸದ ಪ್ರತ್ಯೇಕ ಏರ್ಪಾಡುಗಳ ಪಟ್ಟಿಯೊಂದು ಇದೆ. ಲಿಂಗಾಯತ ವಿದ್ಯಾಭ್ಯಾಸದ ಮೆಮೊರಾಂಡಮಿನ ಹುಕುಮುಗಳಿಗೆ ಅನುಸಾರವಾಗಿ ಕ್ಷಿಪ್ರದಲ್ಲಿ ಕೆಲಸ ನಡೆಯಬೇಕೆಂದು ಒತ್ತಿ ಹೇಳಲ್ಪಟ್ಟಿದೆ. ಮಹಮ್ಮದೀಯ ವಿದ್ಯಾಭ್ಯಾಸದ ಮತ್ತು ವಿದ್ಯಾಭ್ಯಾಸದ ಇತರ ಎಲ್ಲಾ ದರ್ಜೆಗಳ ಅವಶ್ಯಕತೆಗಳನ್ನೂ ಜಾಗರೂಕತೆಯಿಂದ ತನಿಖೆ ಮಾಡುತ್ತಲಿದೆಯಲ್ಲದೆ ಮಹಮ್ಮದೀಯ ವಿದ್ಯಾಭ್ಯಾಸವನ್ನು ಉತ್ತಮಪಡಿಸಿ, ಅದರಲ್ಲಿನ ನ್ಯೂನತೆಗಳನ್ನು ಹೋಗಲಾಡಿಸಲು ಪ್ರಬಲವಾದ ಪ್ರಯತ್ನಗಳನ್ನು ಮಾಡಲಾಗುವುದು. ಮಹಮ್ಮದೀಯ ವಿದ್ಯಾಭ್ಯಾಸದ ವಿಷಯವನ್ನೆಲ್ಲಾ ಆಮೂಲಾಗ್ರವಾಗಿ ಪರಿಶೀಲಿಸಲು ಒಂದು ಸಮ್ಮೇಳನವನ್ನು ಕೂಡಿಸಬೇಕೆಂಬ ಸಲಹೆಯನ್ನು ಅಂಗೀಕರಿಸಲು ನಾವು ಸಿದ್ಧರಾಗಿದ್ದೇವೆ. ಮತಾಂತರವನ್ನು ಅವಲಂಬಿಸುವುದರಿಂದ ಉಂಟಾಗುವ ಸ್ವತ್ತಿನ ಪ್ರಯುಕ್ತವಾದ ಅನರ್ಹತೆಯನ್ನು ವಜಾ ಮಾಡುವ ಬಗ್ಗೆ ಕಾನೂನು ಮಾಡಬೇಕೆಂಬ ವಿಷಯವನ್ನು ಇಂಡಿಯನ್ ಕ್ರಿಶ್ಚಿಯನ್ ಸಂಘದ ಪ್ರತಿನಿಧಿಯು ಪುನಃ ಚರ್ಚೆಗೆ ತೆಗೆದುಕೊಂಡಿದ್ದಾರೆ. ಇದು ಕೇವಲ ಜಾತಿ ಮತ ಸಂಬಂಧವಾದ ವಿಷಯ. ಇದರಲ್ಲಿ ಸರ್ಕಾರದವರು ಸಂಪೂರ್ಣವಾಗಿ ತಟಸ್ಥರಾಗಿರಬೇಕಾಗಿದೆ. ಆದರೂ ಈ ವಿಷಯದಲ್ಲಿ ಈಗ ಮನೋಗತವು ಯಾವರೀತಿಯಲ್ಲಿರುವುದೆಂಬುದನ್ನು ಗೊತ್ತು ಮಾಡುವುದಕ್ಕಾಗಿ ಈ ಸಭೆಯಲ್ಲಿಯೂ ನ್ಯಾಯ ವಿಧಾಯಕ ಸಭೆಯಲ್ಲಿಯೂ ಈ ವಿಷಯವನ್ನು ಚರ್ಚೆಗೆ ತರುವ ಭಾಗದಲ್ಲಿ ಸರ್ಕಾರದವರ ಆಕ್ಷೇಪಣೆಯೇನೂ ಇರುವುದಿಲ್ಲ. ಹಿಂದುಳಿದ ಪಂಗಡಗಳ ವಿದ್ಯಾರ್ಥಿ ವೇತನಗಳನ್ನು ಹಂಚುವ ವಿಷಯವು ಸ್ಕೂಲುಗಳನ್ನು ನಾವು ಪರಾಮರ್ಶಿಸಿದ ಕಾಲದಲ್ಲಿ ನಮ್ಮ ಪರಿಶೀಲನೆಗೆ ಬಂದಿತ್ತು. ಪರ್ಯಾಲೋಚನೆಗೆ ತಕ್ಕುದೆಂದು ತೋರುವ ಈ ವಿಷಯದ ಮೇಲಣ ತಮ್ಮ ಅಭಿಪ್ರಾಯಗಳನ್ನು ನಾವು ಗುರ್ತು ಮಾಡಿಕೊಳ್ಳುವೆವು.

ಆದಿದ್ರಾವಿಡರ ಮೇಲ್ಮೆಗಾಗಿ ಸರ್ಕಾರದವರು ವಾಗ್ದಾನಮಾಡಿದ ಪ್ರತ್ಯೇಕ ಆಫೀಸರನ್ನು ನೇಮಿಸುವ ಬಗ್ಗೆ ಕೂಡಲೇ ಕ್ರಮ ಜರುಗಿಸುವ ವಿಷಯವು ಆಲೋಚನೆಯಲ್ಲಿದೆ ಎಂದು ಸದರಿ ಪಂಗಡದ ಪ್ರತಿನಿಧಿಯವರಿಗೆ ಭರವಸೆ ಕೊಡಲಪೇಕ್ಷಿಸುತ್ತೇವೆ; ಮತ್ತು ಅವರ ಮೇಲ್ಮೆಗೆ ಸಂಬಂಧಪಡುವ ವಿಷಯಗಳಿಗೆ ನಾವು ಸರ್ವದಾ ಗಮನ ಕೊಡುವೆವೆಂಬುದನ್ನು ತಮಗೆ ದೃಢವಾಗಿ ಹೇಳಬಲ್ಲೆವು. ಅಲ್ಲದೆ, ನೌಕರಿಗಳ ವಿಷಯದಲ್ಲಿ ನಿಮ್ನತರಗತಿಯ ಜನರಲ್ಲಿ ಬರುವ ಸಮರ್ಥರಾದ ಉಮೇದಾರರಿಗೆ ಪ್ರಥಮ ಪ್ರಾಶಸ್ತ್ಯವು ದೊರೆಯುವಂತೆ ಹುಕುಂ ಸಾದರಾಗಿದೆ. ದರ್ಜೆಯುಳ್ಳ ಹುದ್ದೆಗಳಲ್ಲಿ ನೌಕರಿಯು ಈ ಪಂಗಡದ ಉಪಯುಕ್ತವಾದ ಉಮೇದ್ವಾರರಿಗೆ ಕೊಡಿಸುವ ವಿಷಯವನ್ನು ಸರ್ಕಾರದವರು ಸರ್ವದಾ ಕನಿಕರದಿಂದ ಪರ್ಯಾಲೋಚಿಸುವರು.

ಮೈಸೂರು ಆರ್ಯವೈಶ್ಯ ಪಂಗಡದ ಮೇಲ್ಮೆಗೆ ಸಂಬಂಧಪಟ್ಟ ವಿಷಯಗಳು ಗಮನಿಸಲ್ಪಡದೆ ಹೋದಾವೆಂಬ ಭಯವಾಗಲಿ ಅಥವಾ ಚಿಂತೆಯಾಗಲಿ ಇರಬೇಕಾದುದಿಲ್ಲ. ಸರಿಯಾದ ಪ್ರಾತಿನಿಧ್ಯವು ದೊರೆಯದೆ ಇದ್ದ ಪಂಗಡಗಳ ಮೇಲ್ಮೆಗಳು ಕ್ರಮವಾಗಿ ಕಾಪಾಡಲ್ಪಡುವುದನ್ನು ನೋಡಿಕೊಳ್ಳುವ ಬಗ್ಗೆ ಸರ್ಕಾರದವರು ವಿಶೇಷ ಗಮನ ಕೊಡುವರು.

ಕುರಿಗಳ ಪಾಲನೆಯ ಕೈಗಾರಿಕೆಗೂ, ಕಂಬಳಿಗಳ ತಯಾರಿಗೂ ವಿಶೇಷ ಪ್ರೋತ್ಸಾಹ ಕೊಡಬೇಕೆಂದು ಕುರುಬರ ಸಂಘದ ಅಭಿನಂದನ ಪತ್ರಿಕೆಯಲ್ಲಿ ಸೂಚಿತವಾಗಿದೆ. ಇದು ಕುರುಬರ ಪಂಗಡಕ್ಕೆ ಬಹು ಮುಖ್ಯವಾದ ವಿಷಯ. ಇದಕ್ಕೆ ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯವರು ಗಮನ ಕೊಡುತ್ತಿದಾರೆಂದು ನಮ್ಮ ತಿಳುವಳಿಕೆಗೆ ಬಂದಿದೆ. ಸರ್ಕಾರದವರು ಈ ಭಾಗಗಳಲ್ಲಿ ಬೇಕಾದ ಅನುಕೂಲ್ಯಗಳನ್ನೆಲ್ಲಾ ಕಲ್ಪಿಸಿಕೊಡಲು ಹರ್ಷವುಳ್ಳವರಾಗಿದ್ದಾರೆ.

ಅಂಜುಮಾನ್-ಇ-ಇಸ್ಲಾಂ ಮಹದೇವಿಯ ಸಂಘದವರು ಕೆಲವು ಕುಂದು ಕೊರತೆಗಳನ್ನೂ ಸ್ವಲ್ಪ ಹೆಚ್ಚು ಕಡಿಮೆ ಸ್ಥಳೀಯ ವಿಷಯಗಳಾಗಿ ಭಾವಿಸಬಹುದಾದಂಥಾ ಇತರ ಕೆಲವು ಸಂಗತಿಗಳನ್ನೂ ಅವಗಾಹನೆಗೆ ತಂದಿರುತ್ತಾರೆ. ಮಹಮ್ಮದೀಯ ಸಮ್ಮೇಳನವನ್ನು ಏರ್ಪಾಟು ಮಾಡಿದರೆ ಈ ವಿಷಯಗಳನ್ನು ಪರ್ಯಾಲೋಚನೆಯ ಬಗ್ಗೆ ಅದಕ್ಕೆ ವಹಿಸಲಾಗುವುದು.

ಮಹಾಶಯರೇ, ತಮ್ಮ ಅಭಿನಂದನ ಪತ್ರಿಕೆಗಳಲ್ಲಿ ಕೇಳಿರುವ ಪ್ರತಿಯೊಂದು ಸಂಗತಿಯನ್ನೂ ಕುರಿತು ಪ್ರಸ್ತಾಪ ಮಾಡುವುದು ಸಾಧ್ಯವಾಗಲಾರದೆಂಬುದು ತಮಗೇ ವೇದ್ಯವಾಗಿರಬಹುದು. ಅವುಗಳ ಪೈಕಿ ಕೆಲವು ವಿಷಯಗಳು ಈ ಸಭೆಯಲ್ಲಿ ಚರ್ಚೆಗೆ ಬಂದೇಬರುತ್ತವೆ. ಬಾಕಿ ಅನೇಕ ವಿಷಯಗಳನ್ನು ಕುರಿತು ನಮ್ಮ ಭಾಷಣದಲ್ಲಿ ಪ್ರಸ್ತಾಪಿಸಿರುತ್ತೇವೆ. ಆದರೂ ಅವುಗಳನ್ನೆಲ್ಲಾ ಸಾವಧಾನವಾಗಿ ಪರ್ಯಾಲೋಚನೆಗೆ ತೆಗೆದುಕೊಂಡು ಕಾಲಕ್ರಮದಲ್ಲಿ ತಕ್ಕ ಹುಕುಮುಗಳನ್ನು ಕೊಡುವ ಏರ್ಪಾಡು ಮಾಡಲಾಗುವುದೆಂದು ತಾವು ದೃಢವಾಗಿ ನಂಬಬಹುದು.

ಶ್ರೀಮದ್ಯುವರಾಜರವರಿಗೆ ರಾಜಕುಮಾರಿಯು ಜನಿಸಿರುವುದಕ್ಕಾಗಿ ತಮ್ಮಗಳಿಗೆ ಉಂಟಾದ ಆನಂದಾತಿಶಯಗಳನ್ನು ಅವರಿಗೆ ನಾವು ಅತ್ಯಂತ ಸಂತೋಷದಿಂದ ಶ್ರುತಪಡಿಸುವೆವು. ಅಲ್ಲದೆ, ತಮ್ಮಗಳ ಅಭಿನಂದನ ಪತ್ರಿಕೆಗಳಲ್ಲಿ ವ್ಯಕ್ತಗೊಳಿಸಿರುವ ರಾಜಭಕ್ತಿ ವಿಶ್ವಾಸಪೂರಿತವಾದ ವಿಜ್ಞಾಪನೆಗಳನ್ನು ಶ್ರೀಮನ್ಮಹಾರಾಜರವರಿಗೆ ಅರಿಕೆ ಮಾಡುವುದು ನಮಗೆ ಅತ್ಯಂತ ಸಂತೋಷಕರವಾಗಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

(ದಸರಾ ಅಧಿವೇಶನ)

೨ನೆಯ ಅಕ್ಟೋಬರ್ 1922

ಒಂದನೆಯ ಭಾಗ.

ಮಹಾಶಯರೇ,

ಘನವನ್ನು ಹೊಂದಿದ ಶ್ರೀಮನ್ ಮಹಾರಾಜಾಸಾಹೇಬ್ಬಹದ್ದೂರವರ ಆಜ್ಞಾನುಸಾರವಾಗಿ ಪ್ರಜೆಗಳ ಪ್ರತಿನಿಧಿಗಳಾದ ತಮ್ಮಗಳನ್ನು ಮೈಸೂರು ಪ್ರಜಾಪ್ರತಿನಿಧಿಸಭೆಯ ಈ 39 ನೆಯ ದಸರಾ ಅಧಿವೇಶನಕ್ಕೆ ಆದರಪೂರ್ವಕ ಬರಮಾಡಿಕೊಳ್ಳುವ ವಿಶೇಷ ಗೌರವವು ನನಗೆ ಲಭಿಸಿರುತ್ತದೆ. ಸಂಸ್ಥಾನದ ಕಳೆದ ವರ್ಷದ ರಾಜ್ಯಭಾರಕ್ಕೆ ಸಂಬಂಧಪಟ್ಟ ಮುಖ್ಯ ವಿಷಯಗಳನ್ನೂ, ಈಗಾಗಲೇ ಈ ಸಂಸ್ಥಾನದಲ್ಲಿ ರೂಢಿಯಲ್ಲಿರುವ ವಿಚಕ್ಷಣವಾದ ರಾಜ್ಯಭಾರ ಕ್ರಮದಲ್ಲಿ ಕ್ಷಿಪ್ರದಲ್ಲಿಯೇ ನಡೆಯಬೇಕೆಂದಿರುವ ಸುಧಾರಣೆಗಳನ್ನು ಜಾರಿಗೆ ತರುವುದಕ್ಕಾಗಿ ಸರ್ಕಾರದವರ ಪರ್ಯಾಲೋಚನೆಯಲ್ಲಿರುವ ಏರ್ಪಾಡುಗಳನ್ನೂ ಸಂಕ್ಷೇಪವಾಗಿ ತಮ್ಮಗಳಿಗೆ ತಿಳಿಯಪಡಿಸುತ್ತೇವೆ.

ಈ ಸಭೆಯು ಕಳೆದ ಜೂನ್ ತಿಂಗಳಲ್ಲಿ ಸೇರಿದಂದಿಚೆಗೆ ಮೆಂಬರುಗಳ ತ್ರೈವಾರ್ಷಿಕ ಚುನಾವಣೆಯು ಹೊಸದಾಗಿ ನಡೆದಿರುವುದರಿಂದ ಈಗ ಸೇರಿರುವ ಸಭೆಯವರಿಗೆ ವಿಶೇಷವಾದ ಸುಸ್ವಾಗತವನ್ನು ಬಯಸತಕ್ಕದ್ದು ಯುಕ್ತವಾಗಿ ತೋರುತ್ತದೆ; ಆದಕಾರಣ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ಬಗ್ಗೆ ಅವರುಗಳಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿಯೂ ಸಮೂಹಕ್ಕೇನ ಎಲ್ಲರಿಗೂ ಮನಃಪೂರ್ವಕವಾದ ನಮ್ಮ ಅಭಿನಂದನಗಳನ್ನು ತಿಳಿಯಪಡಿಸುತ್ತೇವೆ. ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಚುನಾವಣೆ ಕಾಲದಲ್ಲಿ ಜನರು ತೋರ್ಪಡಿಸಿದ ವಿಶೇಷವಾದ ಉತ್ಸಾಹವನ್ನು ಬಹು ಆದರದಿಂದ ಗಮನಿಸಿರುತ್ತೇವೆ. ಈ ಅಂಶವು, ಈ ಸಭೆಯ ಮೆಂಬರುತನಕ್ಕೆ ಜನರು ಸಾಮಾನ್ಯವಾಗಿ ಎಷ್ಟು ಹೆಚ್ಚಿನ ಗೌರವವನ್ನು ಕೊಡುತ್ತಿರುವರೆಂಬುದಕ್ಕೆ ಒಂದು ನಿದರ್ಶನವಾಗಿರುತ್ತದೆ. ರಾಜ್ಯಾಡಳಿತದ ವಿಷಯದಲ್ಲಿ ನಾವು ನಿರ್ಣಯಿಸಬೇಕಾದ ಅಂಶಗಳು ವರ್ಷೇ ವರ್ಷೇ ಹೆಚ್ಚುಹೆಚ್ಚಾಗಿ ಕಷ್ಟಕರವಾಗುತ್ತಲಿರುವುವು; ಆದಕಾರಣ ನೀವುಗಳು ನಡೆಸಬೇಕಾಗಿರುವ ಕಾರ್ಯಗಳನ್ನು ಚರ್ಚಿಸುವ ವಿಷಯದ ಜಿಜ್ಞಾಸೆಗಳಲ್ಲಿಯೂ ಚರ್ಚೆಗಳಲ್ಲಿಯೂ ಹಿಂದೆ ಈ ಸಭೆಯು ತೋರ್ಪಡಿಸುತ್ತಿದ್ದ ಪ್ರೌಢಿಮೆಯನ್ನು ನೀವುಗಳು ತೋರ್ಪಡಿಸುವಿರೆಂದೂ, ಅನ್ಯಾದೃಶವಾದ ಈ ಸಭೆಯು ಬಹುಸಾಮರ್ಥ್ಯದೊಡನೆ ಹಿಂದಿನಿಂದಲೂ ಸ್ಥಾಪಿಸುತ್ತ ಬಂದ ಕೀರ್ತಿ ಪ್ರತಿಷ್ಠೆಗಳಿಗೆ ಚ್ಯುತಿಬಾರದಂತೆ ಅವುಗಳನ್ನು ಕಾಪಾಡುವುದು ಮಾತ್ರವಲ್ಲದೆ ಇನ್ನೂ ಉಚ್ಚ್ರಾಯಸ್ಥಿತಿಗೂ ತರುವಿರೆಂದೂ ಶ್ರೀಮನ್ ಮಹಾರಾಜಾ ಸರ್ಕಾರದವರ ಪರವಾಗಿ ನಾವು ನಿರೀಕ್ಷಿಸುತ್ತೇವೆ.

ನಾವು ಈ ಸಭೆಯ ಕಾರ್ಯವನ್ನು ಉಪಕ್ರಮಿಸುವುದಕ್ಕೆ ಮೊದಲು ಶ್ರೀಮದ್ಯುವರಾಜರವರಿಗೆ ಕಳೆದ ಆಗಸ್ಟು ಮಾಹೆ 28 ನೆಯ ತಾರೀಖಿನ ದಿವಸ ರಾಜಕುಮಾರಿಯು ಜನನವಾದದ್ದಕ್ಕಾಗಿ ಈ ಸಭೆಯವರ ಪರವಾಗಿಯೂ ಇಲ್ಲಿ ಈ ದಿವಸ ಹಾಜರಾಗಿರುವ ಎಲ್ಲಾ ಸರ್ಕಾರಿ ಆಫೀಸರುಗಳ ಪರವಾಗಿಯೂ ನಮ್ಮ ವಿನಯಪೂರ್ವಕವಾದ ಅಭಿನಂದನಗಳನ್ನು ಸಮರ್ಪಿಸಲು ಅಪೇಕ್ಷಿಸುತ್ತೇವೆ.

ಮಹಾಮಹಿಮರಾದ ಪ್ರಿನ್ಸ್ ಆಫ್ ವೇಲ್ಸ್‌ರವರ ಆಗಮನ.

ಮಹಾಮಹಿಮರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಕಳೆದ ಜನವರಿ ತಿಂಗಳಲ್ಲಿ ನಮ್ಮ ಸಂಸ್ಥಾನಕ್ಕೆ ಬಿಜಯಮಾಡಿದುದೇ ಈ ವರ್ಷದಲ್ಲಿ ನಡೆದ ಬಹು ಮುಖ್ಯ ವಿಷಯವಾಗಿದೆ. ಇವರು 1922 ನೆಯ ಜನವರಿ 18ನೆಯ ತಾರೀಖಿನ ದಿವಸ ಬೆಂಗಳೂರಿಗೆ ದಯಮಾಡಿಸಿ ಮಾರನೆಯ ದಿವಸ ಮೈಸೂರಿಗೆ ಪ್ರಯಾಣ ಬೆಳಸಿದರು. ಮೈಸೂರಿನಲ್ಲಿ ಮೂರು ದಿವಸ ಇದ್ದು ಅನಂತರ ಕಾರಾಪುರದ ಕ್ಯಾಂಪಿನಲ್ಲಿ ಮೃಗಯಾವಿನೋದದಲ್ಲಿ ಎರಡುದಿವಸ ಕಳೆದರು. ಈ ಮಹನೀಯರು ಮೈಸೂರಿನಲ್ಲಿದ್ದ ಕಾಲದಲ್ಲಿ ಕೃಷ್ಣರಾಜಸಾಗರಕ್ಕೂ ಶ್ರೀರಂಗಪಟ್ಟಣಕ್ಕೂ ದಯಮಾಡಿಸಿದ್ದುದಲ್ಲದೆ ರಾಜಧಾನಿಯ ಕೆಲವು ಸಂಸ್ಥೆಗಳಿಗೂ ದಯಮಾಡಿಸಿದ್ದರು. ಈ ಮಹಾಮಹಿಮರವರ ಆಗಮನದಿಂದ ಶ್ರೀಮನ್ ಮಹಾರಾಜರವರಿಗೂ ಅವರ ಪ್ರಜೆಗಳಿಗೂ ಪರಿಪೂರ್ಣಾನಂದವುಂಟಾಯಿತು. ಈ ವಿಖ್ಯಾತಕೀರ್ತಿಯುತರಾದ ತಮ್ಮ ಅತಿಥಿಶ್ರೇಷ್ಠರನ್ನು ಪ್ರಜೆಗಳು ಪರಮೋತ್ಸಾಹದಿಂದ ಸ್ವಾಗತಪೂರ್ವಕವಾಗಿ ಬರಮಾಡಿಕೊಂಡುದಕ್ಕಾಗಿ ಶ್ರೀಮನ್ ಮಹಾರಾಜರವರು ತಮ್ಮ ಮೆಚ್ಚಿಗೆಯನ್ನು ತೋರ್ಪಡಿಸಿರುವರೆಂಬ ಅಂಶವನ್ನು ತಮ್ಮಗಳಿಗೆ ತಿಳಿಸಬೇಕೆಂದು ನಮಗೆ ಆಜ್ಞಾಪಿಸಿರುತ್ತಾರೆ. ಮಹಾಮಹಿಮರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಈ ಸಂಸ್ಥಾನದಿಂದ ತೆರಳಿದ ಬಳಿಕ ಅವರು ಇದರಡಿ ಕಂಡ ಸಂದೇಶವನ್ನು ಶ್ರೀಮನ್ ಮಹಾರಾಜರವರಿಗೆ ತಂತಿಯ ಮೂಲಕ ಕಳುಹಿಸಿದರು:—

"ತಾವು ನಮ್ಮ ವಿಷಯದಲ್ಲಿ ಸರ್ವಪ್ರಕಾರದಲ್ಲಿಯೂ ತೋರ್ಪಡಿಸಿದ ಪ್ರೀತಿ ವಿಶ್ವಾಸಗಳಿಗೂ ಸತ್ಕಾರಾತಿಶಯಕ್ಕೂ ಮನಃಪೂರ್ವಕವಾದ ನಮ್ಮ ಕೃತಜ್ಞತೆಯನ್ನು ನಾವು ತಮ್ಮ ಸಂಸ್ಥಾನವನ್ನು ಬಿಟ್ಟು ಹೊರಡುವ ಸಂದರ್ಭದಲ್ಲಿ ತಮಗೆ ಸೂಚಿಸಲಪೇಕ್ಷಿಸುತ್ತೇವೆ. ನಾವು ತಮ್ಮ ರಾಜ್ಯದಲ್ಲಿ ಅತಿಶಯವಾದ ಸುಖಸಂತೋಷಗಳನ್ನು ಅನುಭವಿಸಿದೆವು. ತಮ್ಮ ಪರಿಚಯವನ್ನು ಸಂಪಾದಿಸಿದುದು ನಮಗೆ ತುಂಬಾ ಸಂತೋಷವನ್ನುಂಟುಮಾಡಿತು. ಮೈಸೂರು ದೇಶದ ರಮಣೀಯತೆಯನ್ನೂ ರಾಜ್ಯಭಾರಕ್ರಮದ ವಿಚಕ್ಷಣೆಯನ್ನೂ ನಾವು ವಿಶೇಷವಾಗಿ ಮೆಚ್ಚಿಕೊಂಡೆವು. ತಮ್ಮ ಪ್ರಜೆಗಳು ನಮಗೆ ಸ್ವಾಗತವನ್ನು ಬಯಸುವುದರಲ್ಲಿ ಪ್ರಕಟಪಡಿಸಿದ ಆದರಾತಿಶಯಕ್ಕಾಗಿ ನಾವು ಅವರಿಗೆ ತುಂಬಾ ಕೃತಜ್ಞರಾಗಿರುತ್ತೇವೆ."

ಇದಕ್ಕೆ ಶ್ರೀಮನ್ ಮಹಾರಾಜರವರು ಈ ಕೆಳಗೆ ಕಂಡ ಪ್ರತಿಸಂದೇಶವನ್ನು ಕಳುಹಿಸಿದರು:—

"ನಮ್ಮ ಸಂಸ್ಥಾನವನ್ನು ಬಿಟ್ಟು ಹೊರಡುವ ಸಂದರ್ಭದಲ್ಲಿ ತಾವು ವಿಶ್ವಾಸಪೂರ್ವಕವಾಗಿ ದಯಪಾಲಿಸಿದ ಸಂದೇಶಕ್ಕಾಗಿ ನಾವು ತಮಗೆ ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ. ತಮ್ಮ ಆಗಮನದಿಂದ ನಮಗೂ ನಮ್ಮ ಪ್ರಜೆಗಳಿಗೂ ಉಂಟಾದ ಆನಂದಾತಿಶಯಕ್ಕೆ ಪಾರವೇ ಇಲ್ಲ. ಈ ವಿಚಾರವಾದ ಸ್ಮರಣೆಯನ್ನು ನಾವುಗಳು ನಿರಂತರವೂ ಗೌರವಪ್ರದವೆಂತ ಭಾವಿಸುವೆವು."

ಶ್ರೀಮನ್ ಮಹಾರಾಜರವರ ಸಂಚಾರ.

ಪ್ರಸಕ್ತವರ್ಷದಲ್ಲಿ ಶ್ರೀಮನ್ ಮಹಾರಾಜರವರು ಎರಡುಸಾರಿ ಉತ್ತರ ಹಿಂದೂಸ್ಥಾನದಲ್ಲಿಯೂ, ಎರಡುಸಾರಿ ಸಂಸ್ಥಾನದೊಳಗೂ ಈ ರೀತಿಯಾಗಿ ನಾಲ್ಕಾವರ್ತಿ ಸಂಚಾರ ಮಾಡಿದರು. ಮಹಾಮಹಿಮರಾದ ಪ್ರಿನ್ಸ್ ಆಫ್‌ವೇಲ್ಸರವರಿಗೆ ಒಂದು ಆನರರಿ ಡಿಗ್ರಿಯನ್ನು ದಯಪಾಲಿಸಲು ಬನಾರಸ್ ಯೂನಿವರ್ಸಿಟಿಯು ಅಸಾಧಾರಣವಾದ ಸಮ್ಮೇಳನದಲ್ಲಿ ಅಧ್ಯಕ್ಷಪದವಿಯನ್ನಲಂಕರಿಸುವ ಬಗ್ಗೆ ಕಳೆದ ಡಿಸಂಬರಿನಲ್ಲಿ ಶ್ರೀಮನ್ ಮಹಾರಾಜರವರು ಬನಾರಸಿಗೆ ದಯಮಾಡಿಸಿದ್ದರು. ಅನಂತರ 1922ನೆಯ ಏಪ್ರಿಲ್ 24ನೆಯ ತಾರೀಖಿನಲ್ಲಿ ಶ್ರೀಮನ್ ಮಹಾರಾಜರವರು ಮೈಸೂರಿನಿಂದ ಸಿಮ್ಲಾಕ್ಕೆ ಪ್ರಯಾಣ ಬೆಳಸಿ, ಅಲ್ಲಿ ಸುಮಾರು ನಾಲ್ಕುವಾರಗಳಿದ್ದು 1922 ನೆಯ ಮೇ 28ನೆಯ ತಾರೀಖಿನಲ್ಲಿ ರಾಜಧಾನಿಗೆ ಸವಾರಿ ಚಿತ್ತೈಸಿದರು. ಅತಿ ಮುಖ್ಯವಾದ ರಾಜಕೀಯ ವಿಷಯಗಳನ್ನು ಕುರಿತು ಘನವನ್ನು ಹೊಂದಿದ ವೈಸ್ರಾಯಿರವರೊಂದಿಗೆ ರೂಬರೂಬು ಸಂಭಾಷಣೆ ನಡೆಸುವುದೇ ಶ್ರೀಮನ್ ಮಹಾರಾಜರವರು ಸಿಮ್ಲಾಕ್ಕೆ ತೆರಳಿದುದರ ಮುಖ್ಯೋದ್ದೇಶವಾಗಿತ್ತು.

1922ನೆಯ ಮಾರ್ಚಿ 10 ರಲ್ಲಿ ಶ್ರೀಮನ್ ಮಹಾರಾಜರವರ ಸ್ವಾಮಿಯು ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ಪರಾಂಬರಿಸುವ ಬಗ್ಗೆ ಚಿತ್ತೈಸಿ, ಕಬ್ಬಿಣ ಕರಗಿಸುವ ಭಟ್ಟಿಯನ್ನು ಕೂಲಂಕಷವಾಗಿ ಪರೀಕ್ಷಿಸಿ ನೋಡಿದ್ದಲ್ಲದೆ, ಇದ್ದಲನ್ನು ತಯಾರಿಸಿ ಮರದೆಣ್ಣೆಯನ್ನಿಳಿಸುವ ಯಂತ್ರವನ್ನೂ ಶಂಕರಗುಡ್ಡ ಮತ್ತು ಚಟ್ಟಹಳ್ಳಿಯ ಸಮೀಪದಲ್ಲಿನ ಕಬ್ಬಿಣದ ಗಣಿಗಳನ್ನೂ ಸೌದೆ ಜಮಾಯಿಸುವ ಕೆಲಸಗಳನ್ನೂ ಪರಾಂಬರಿಸಿದರು.

ಅನಂತರದಲ್ಲಿ ಮಹಾಸ್ವಾಮಿಗಳವರು 1922ನೆಯ ಜೂನ್ 21 ರಿಂದ 27ನೆಯ ತಾರೀಖಿನ ವರೆಗೆ ಮೈಸೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಬೆಳಸಿ ಪ್ರಜೆಗಳಿಂದ ಅಹವಾಲುಗಳನ್ನು ಚಿತ್ತೈಸಿದರು. ಈ ಅರಿಕೆಗಳು ಆಯಾ ಆಡಳಿತದ ಇಲಾಖೆಗಳಲ್ಲಿ ವ್ಯವಸ್ಥೆ ಮಾಡಲ್ಪಟ್ಟವು.

ಸೆಂಟ್ರಲ್ ಅಡ್ಮಿನಿಸ್ಟ್ರೇಷನ್.

ಈ ವರ್ಷ ರಾಜ್ಯಾಡಳಿತದ ಮೂಲಸ್ಥಾನದಲ್ಲಿ ಒಂದು ಮುಖ್ಯವಾದ ಬದಲಾವಣೆಯುಂಟಾಯಿತು. ನಮ್ಮ ಹಿಂದೆ ಪ್ರಖ್ಯಾತಿಯಿಂದ ದಿವಾನ್ ಪದವಿಯನ್ನಲಂಕರಿಸಿದ್ದ ರಾಜಸೇವಾಧುರೀಣ ಸರ್ ಎಂ. ಕಾಂತರಾಜ ಅರಸ್ ಕೆ.ಸಿ.ಐ.ಇ., ಸಿ.ಎಸ್.ಐ. ಯವರು ಅಧಿಕಾರದಿಂದ ನಿವೃತ್ತರಾಗಿ ವಿಶ್ರಾಂತಿಸುಖವನ್ನು ಪಡೆದು ನಾವು ಆ ಸ್ಥಾನಕ್ಕೆ ಬಂದನಂತರ ಆ ಸಮಯವನ್ನುಪಯೋಗಿಸಿಕೊಂಡು ಶ್ರೀಮನ್ ಮಹಾರಾಜಾಸಾಹೇಬ್ಬಹದ್ದೂರವರ ಎಗ್ಜಿಕ್ಯುಟಿವ್ ಕೌನ್ಸಿಲಿಗೆ ಒಬ್ಬ ಮೆಂಬರನ್ನು ಕಡಿಮೆ ಮಾಡಲಾಯಿತು. ಸರ್ಕಾರಿ ಆಡಳಿತಕಾರ್ಯದ ಪರಿಮಾಣವು ಬಹಳ ಹೆಚ್ಚಿದ್ದರಿಂದ 1917-18ನೆಯ ಸಾಲಿನಲ್ಲಿ ಮತ್ತೊಬ್ಬ ಕೌನ್ಸಿಲ್ ಮೆಂಬರನ್ನು ನೇಮಿಸಲಾಯಿತೆಂಬ ಸಂಗತಿಯು ನಿಮಗೆ ಜ್ಞಾಪಕದಲ್ಲಿರಬಹುದು. ಆಗಿನ ದಿವಾನ್ ರವರ ಅಂದಾಜಾ ಪ್ರಕಾರ ತತ್ಪೂರ್ವ ಏಳು ವರ್ಷಗಳ ಕಾಲದಲ್ಲಿದ್ದ ಸರ್ಕಾರಿ ಆಡಳಿತದ ಪರಿಮಾಣವು ಮೊದಲಿಗಿಂತ ದ್ವಿಗುಣವಾಗಿತ್ತು. ಮೊದಲಿನಲ್ಲಿ ಅಜಮಾಯಿಷಿ ತರೀಖು ನೇಮಕವಾದ ಎಕ್ಸ್‌ಟ್ರಾ ಮೆಂಬರವರ ಹುದ್ದೆಯು ಸ್ವಲ್ಪಕಾಲಾನಂತರ ತಾತ್ಕಾಲಿಕವಾಗಿ ಖಾಯಂ ಮಾಡಲ್ಪಟ್ಟಿತು; ಮತ್ತು 1922 ನೆಯ ಮಾರ್ಚಿ 6 ನೆಯ ತಾರೀಖಿನವರೆಗೂ ಅದೇ ರೀತಿಯಲ್ಲಿ ನಡೆಯಿತು. ಸೆಂಟ್ರಲ್ ಅಡ್ಮಿನಿಸ್ಟ್ರೇಷನನ್ನು ಸದ್ಯದಲ್ಲಿ ದಿವಾನ್‌ರವರೂ ಇಬ್ಬರು ಕೌನ್ಸಿಲ್ ಮೆಂಬರುಗಳೂ ಸಹ ನಡಿಸುತ್ತಿದ್ದಾರೆ. ಸೆಕ್ರೆಟೇರಿಯೆಟ್ಟಿನ ಸಿಬ್ಬಂದಿಗಳು ಈ ವರ್ಷ ಬಹಳಮಟ್ಟಿಗೆ ಖೋತಾಮಾಡಲ್ಪಟ್ಟವೆ. ಮತ್ತು ಈಚೆಗೆ ಖರ್ಚನ್ನು ಕಡಿಮೆಮಾಡುವ ಬಗ್ಗೆ ಆ ಸಿಬ್ಬಂದಿಗಳಲ್ಲಿ ಮತ್ತಷ್ಟು ಖೋತಾಮಾಡಿದೆ. ಈ ಎಲ್ಲಾ ಬದಲಾವಣೆಗಳಿಂದಲೂ ಸರ್ಕಾರಕ್ಕೆ ಸಾಲೀಯಾನಾ ಒಂದು ಲಕ್ಷದ ಐವತ್ತುಸಾವಿರ ರೂಪಾಯಿಗಳ ನಿವ್ವಳ ಉಳಿತಾಯವಾಗಿರುತ್ತದೆ.

ಸೆಂಟ್ರಲ್ ರಿಕ್ರ್ಯುಟ್‌ಮೆಂಟ್ ಬೋರ್ಡು.—ಮಿಲ್ಲರ್ ಕಮಿಟಿಯ ರಿಪೋರ್ಟಿನ ಮೇಲೆ ಸಾದರಾದ ಸರ್ಕಾರಿ ಹುಕುಂಗಳನ್ನು ಅನುಸರಿಸಿ ಈ ವರ್ಷದ ಆದಿಯಲ್ಲಿ ಈಗಿನ ಎರಡನೆಯ ಕೌನ್ಸಿಲ್ ಮೆಂಬರವರ ಅಧ್ಯಕ್ಷತೆಯಲ್ಲಿ ಒಂದು ಸೆಂಟ್ರಲ್ ರಿಕ್ರ್ಯುಟ್‌ಮೆಂಟ್ ಬೋರ್ಡನ್ನು ಸ್ಥಾಪಿಸಲಾಯಿತು. ಈ ಬೋರ್ಡಿನವರು ಆರುಸಲ ಮೀಟಿಂಗ್ ನಡಿಸಿ ಸರ್ಕಾರಿ ನೌಕರಿಗಳಿಗೆ ಜನರನ್ನು ನೇಮಿಸುವುದನ್ನೂ ಬಡ್ತಿಗಳನ್ನು ಕೊಡುವುದನ್ನೂ ಕ್ರಮಪಡಿಸುವುದಕ್ಕೆ ಸಂಬಂಧಪಟ್ಟ ಅನೇಕ ಮುಖ್ಯವಾದ ವಿಷಯಗಳನ್ನು ಕುರಿತು ತಮ್ಮ ಸಲಹೆಗಳನ್ನು ಕೊಟ್ಟಿರುತ್ತಾರೆ. ಅವರು ಸರ್ಕಾರೀ ನೌಕರಿಗಳಿಗಾಗಿ ಬಂದ 1,021 ಅರ್ಜಿಗಳನ್ನು ದಾಖಲ್ಮಾಡಿಕೊಂಡು ಸಂಬಂಧಪಟ್ಟ ಇಲಾಖೆಗಳಿಗೆಲ್ಲಾ ಉಮೇದುವಾರರ ಪಟ್ಟಿಯನ್ನು ಕಳುಹಿಸಿಕೊಟ್ಟರು. ಸರ್ಕಾರಿ ಹುಕುಂಗಳು ಎಷ್ಟರಮಟ್ಟಿಗೆ ಜಾರಿಗೆ ತರಲ್ಪಟ್ಟಿರುವುವೆಂಬುದನ್ನು ಪರಿಶೀಲಿಸುವ ಬಗ್ಗೆ ಕಳುಹಿಸಬೇಕಾದ ಲೆಕ್ಕಗಳನ್ನೂ ಸಹ ಅವರು ನಿಷ್ಕರ್ಷೆ ಮಾಡಿರುತ್ತಾರೆ. ಇದುವರೆಗೆ ಬಂದಿರತಕ್ಕ ಲೆಕ್ಕಗಳನ್ನು ನೋಡಲಾಗಿ, 1922 ನೆಯ ಜೂನ್ 30 ಕ್ಕೆ ಆಖೈರಾದ ಅರ್ಧ ವರ್ಷದಲ್ಲಿ 533 ನೌಕರಿಗಳು ಖಾಲಿಬಿದ್ದಂತೆಯೂ ಆ ಪೈಕಿ 452 ಭರ್ತಿಯಾದಂತೆಯೂ ತಿಳಿಯಬರುತ್ತದೆ. ಈ 452 ನೌಕರರ ಪೈಕಿ 270 ಮಂದಿ ಬ್ರಾಹ್ಮಣರೂ, 120 ಮಂದಿ ಬ್ರಾಹ್ಮಣೇತರ ಹಿಂದುಗಳೂ, 29 ಮಂದಿ ಮಹಮ್ಮದೀಯರೂ ಮತ್ತು 29 ಮಂದಿ ದೇಶೀಯ ಕ್ರೈಸ್ತರೂ 4 ಮಂದಿ ಇತರ ಪಂಗಡಗಳವರೂ ಆಗಿದ್ದರು. ಹಿಂದಿನ ಅನುಭವದ ಆಧಾರದಮೇಲೆ ಬೋರ್ಡಿನವರು ಕಾರ್ಯಕ್ರಮವನ್ನು ಸುಲಭಪಡಿಸುವುದಕ್ಕಾಗಿಯೂ ಹಾಲಿ ಜಾರಿಯಲ್ಲಿರುವ ಕೆಲವು ಹುಕುಂಗಳನ್ನು ಬದಲಾಯಿಸುವುದಕ್ಕಾಗಿಯೂ ಸರ್ಕಾರಕ್ಕೆ ತಮ್ಮ ಶಿಫಾರಸುಗಳನ್ನು ಈಚೆಗೆ ಕಳುಹಿಸಿರುತ್ತಾರೆ. ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟ ನಾನಾ ಇಲಾಖೆಗಳಲ್ಲಿ ಈಚೆಗೆ ಖರ್ಚನ್ನು ಖೋತಾಮಾಡಿರುವ ಪ್ರಯುಕ್ತ ಹೊಸ ನೌಕರರಾತಿಗಳನ್ನು ಮಾಡುವುದಕ್ಕೆ ಅವಕಾಶವು ತುಂಬಾ ಕಡಿಮೆಯಾಗಿತ್ತು; ಆದ್ದರಿಂದ ಬೋರ್ಡಿಗೆ ಅರ್ಜಿ ಬರೆದುಕೊಂಡವರಲ್ಲಿ ಅನೇಕರನ್ನು ಸರ್ಕಾರಿ ನೌಕರಿಗೆ ಸೇರಿಸಿಕೊಳ್ಳುವುದರಲ್ಲಿ ತುಂಬಾ ನಿಧಾನವಾದ ಬಗ್ಗೆ ವಿಷಾದಿಸಬೇಕಾಗಿದೆ. ಪ್ರಕೃತ ಸ್ಥಿತಿಯು ಕೇವಲ ಅಸಾಧಾರಣವಾದದ್ದು. ಒಂದುಕಡೆ, ಸಿಬ್ಬಂದಿಗಳನ್ನು ಖೋತಾಮಾಡಿದ್ದರಿಂದ ಹೊಸ ನೌಕರಿಗಳನ್ನು ಕೊಡುವುದಕ್ಕೆ ಅವಕಾಶವಿಲ್ಲ; ಮತ್ತೊಂದು ಕಡೆ, ನೌಕರಿಯಿಂದ ತೆಗೆದುಹಾಕಲ್ಪಟ್ಟ ಬಹುಮಂದಿ ನೌಕರ್ದಾರರಿಗೆ ವಿಶೇಷ ಕಷ್ಟವುಂಟಾಗಿದೆ. ಈ ವಿಷಯಗಳನ್ನೆಲ್ಲಾ ಪರಿಶೀಲನೆಮಾಡುವ ಬಗ್ಗೆ ಈ ಮೊದಲೇ ಏರ್ಪಡಿಸಿರುವ ಕಾರ್ಯಕ್ರಮವನ್ನು ಎಡೆಬಿಡದೆ ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ನಡೆಸಲಾಗುವುದೆಂಬುದನ್ನು ದೃಢಪಡಿಸಿಕೊಳ್ಳಲು ಖಂಡಿತವಾದ ಹುಕುಂ ಕೊಡುವ ಬಗ್ಗೆ ಸರ್ಕಾರದವರು ಕ್ಷಿಪ್ರದಲ್ಲಿಯೇ ಕ್ರಮ ನಡೆಸುವರು.

ಪ್ರತಿನಿಧಿ ಸಭೆಗಳು.

ಪ್ರಜಾಪ್ರತಿನಿಧಿ ಸಭೆ.—ಪ್ರಸಕ್ತ ವರ್ಷದಲ್ಲಿ ಪದ್ಧತಿಯ ಪ್ರಕಾರ ಈ ಸಭೆಯು ಎರಡಾವರ್ತಿ ನಡೆಯಿತು. 1921 ನೆಯ ಅಕ್ಟೋಬರು ತಿಂಗಳ ದಸರಾ ಅಧಿವೇಶನದಲ್ಲಿ ಒಟ್ಟು 270 ಮೆಂಬರುಗಳ ಪೈಕಿ 213 ಮಂದಿ ಹಾಜರಾಗಿದ್ದರು. ಮತ್ತು ಒಟ್ಟು 317 ವಿಷಯಗಳ ಪೈಕಿ 178 ವಿಷಯಗಳು ಚರ್ಚಿಸಲ್ಪಟ್ಟುವು. ವಿದ್ಯಾಭ್ಯಾಸದ ಸೆಸ್ಸು ಹಾಕುವುದು, ಹೆಂಗಸರಿಗೆ ಚುನಾವಣೆಯ ಹಕ್ಕನ್ನು ಕೊಡುವುದು, ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲಣ ಹುಕುಮುಗಳು, ಸರ್ಕಾರಿ ನೌಕರಿಯಲ್ಲಿ ಎಲ್ಲಾ ಪಂಗಡದವರೂ ಇರಬೇಕೆಂಬುದು, ವರ್ತಮಾನಪತ್ರಿಕೆಗಳ ರೆಗ್ಯುಲೇಷನು ಮತ್ತು ವಿಧಿಬದ್ಧವಾದ ಸುಧಾರಣೆಗಳು ಇವುಗಳೇ ಅವುಗಳಪೈಕಿ ಅತ್ಯಂತ ಮುಖ್ಯವಾದುವುಗಳು. ಕಳೆದ ಜೂನ್ ತಿಂಗಳಲ್ಲಿ ನಡೆದ ವರ್ಧಂತ್ಯುತ್ಸವದ ಅಧಿವೇಶನದಲ್ಲಿ, 264 ಮಂದಿ ಮೆಂಬರುಗಳ ಪೈಕಿ 202 ಮಂದಿ ಹಾಜರಾಗಿದ್ದರು; ಮತ್ತು ಸಂಸ್ಥಾನದ ಬಡ್ಜೆಟ್ಟಿನ ಜತೆಯಲ್ಲಿ 79 ಸಾರ್ವತ್ರಿಕ ವಿಷಯಗಳು ಚರ್ಚಿಸಲ್ಪಟ್ಟುವು. ಈ ಎರಡನೆಯ ಅಧಿವೇಶನದಲ್ಲಿ ವಾಡಿಕೆಯಾದ ಸಭಾಕಾರ ವಲ್ಲದೆ, ಆರು ಪ್ರತ್ಯೇಕ ವಿಷಯಗಳನ್ನು ಚರ್ಚೆಯ ಬಗ್ಗೆ ಸರ್ಕಾರದವರು ಸಭೆಯ ಮುಂದಿಟ್ಟದ್ದರು; ನೀರಾವರಿಯ ಮಸೂದಾ ಕಾನೂನು ಅವುಗಳಲ್ಲೊಂದಾಗಿತ್ತು.

ನ್ಯಾಯವಿಧಾಯಕಸಭೆ.—ಪ್ರಸಕ್ತ ವರ್ಷದಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯು ಮೂರಾವರ್ತಿ ನಡೆಯಿತು. ಈ ಸಭೆಯಲ್ಲಿ ಪರ್ಯಾಲೋಚಿಸಲ್ಪಟ್ಟ 16 ಮಸೂದಾ ಕಾನೂನುಗಳ ಪೈಕಿ 7 ಮಸೂದೆಗಳು ಪ್ರಸಕ್ತವರ್ಷದಲ್ಲಿ ಕಾನೂನಾಗಿ ವಿಧಿಸಲ್ಪಟ್ಟುವು. ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾಭ್ಯಾಸದ ಸೆಸ್ಸನ್ನು ಹಾಕುವ ಉದ್ದೇಶದಿಂದ ಮೈಸೂರು ಲೋಕಲ್ ಬೋರ್ಡ್ಸ್ ಮತ್ತು ಗ್ರಾಮಪಂಚಾಯಿತಿಗಳ ರೆಗ್ಯುಲೇಷನ್ನನ್ನು ತಿದ್ದುಪಾಟು ಮಾಡುವ ಬಗ್ಗೆ ಏರ್ಪಟ್ಟ ರೆಗ್ಯುಲೇಷನು ಅವುಗಳಲ್ಲಿ ಅತಿ ಮುಖ್ಯವಾದುದು. ನ್ಯಾಯವಿಧಾಯಕ ಸಭೆಯ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳು ಆರು ತೀರ್ಮಾನಗಳನ್ನು ಸಭೆಯಲ್ಲಿ ಚರ್ಚೆಗೆ ತಂದರು; ಅವುಗಳ ಪೈಕಿ ಒಂದನ್ನು ವಾಪಸು ತೆಗೆದುಕೊಂಡರು; ಸೂಚಕರಿಂದ ಒಪ್ಪಿತವಾದ ಅಲ್ಪ ತಿದ್ದುಪಾಟುಗಳ ಸಮೇತ ಉಳಿದುವುಗಳನ್ನು ಸರ್ಕಾರದವರು ಅಂಗೀಕರಿಸಿದರು. ಇವುಗಳ ಪೈಕಿ (1) ಓಟುಗಳನ್ನು ಕೊಡುವುದೂ ಸೇರಿ ಚುನಾವಣೆಗೆ ನಿಲ್ಲುವ ಹಕ್ಕು ಸ್ತ್ರೀಯರಿಗೂ ಅನ್ವಯಿಸುವಂತೆ ಮಾಡುವುದು, (2) ಸರ್ಕಾರದವರ ಮೇಲೆ ದಾವೆಗಳನ್ನು ತರುವುದು, ಇವು ಅತ್ಯಂತ ಮುಖ್ಯವಾದುವುಗಳು.

ಮೈಸೂರು ಸಂಪದಭಿವೃದ್ಧಿ ಸಮಾಜ.—ಪ್ರಸಕ್ತ ವರ್ಷದಲ್ಲಿ ಮೈಸೂರು ಎಕನಾಮಿಕ್ ಡೆವಲಪ್‌ಮೆಂಟ್ ಬೋರ್ಡಿನವರು ಮೂರಾವರ್ತಿ ಸಭೆ ನಡೆಸಿದರು. ಮೂರು ಸೆಂಟ್ರಲ್ ಬೋರ್ಡುಗಳವರೂ ಸಹ ತಮ್ಮ ಕಾರ್ಯಕ್ರಮದಲ್ಲಿ ಸೇರಿದ ಹಲವು ವಿಷಯಗಳನ್ನೂ ಏರ್ಪಾಟುಗಳನ್ನೂ ಪರ್ಯಾಲೋಚಿಸುವ ಬಗ್ಗೆ ಆಗಿಂದಾಗ್ಗೆ ಕೌನ್ಸಿಲಿನ ಮೆಂಬರುಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದರು. ಕೌನ್ಸಿಲಿನ ಮೂರನೆಯ ಮೆಂಬರವರ ಹುದ್ದೆಯು ವಜಾ ಆದ ಪ್ರಯುಕ್ತ ನಮ್ಮ ವಿಶ್ವವಿದ್ಯಾಲಯದ ವೈಸ್‌ಚಾನ್ಸೆಲರರಾದ ಡಾಕ್ಟರ್ ಬ್ರಜೇಂದ್ರನಾಥಸೀಲರವರನ್ನು ವಿದ್ಯಾಭ್ಯಾಸದ ಬೋರ್ಡಿನ ಅಧ್ಯಕ್ಷರನ್ನಾಗಿ ನೇಮಿಸಲಾಯಿತು; ಮತ್ತು ಅದರಿಂದ ಸಂಪದಭಿವೃದ್ಧಿ ಸಮಾಜಕ್ಕೆ ವಿಶೇಷ ಸಹಾಯವಾಗುವುದೆಂದು ದೃಢವಾಗಿ ನಂಬುತ್ತೇವೆ. ಸಂಪದಭಿವೃದ್ಧಿ ಸಮಾಜದ ರಚನಾ ಪ್ರಕಾರವನ್ನು ಆಮೂಲಾಗ್ರವಾಗಿ ಪರಿಶೀಲಿಸುವ ಬಗ್ಗೆ ಸರ್ಕಾರಿ ಉದ್ಯೋಗಸ್ಥರೂ ಖಾಸಗಿ ದೊಡ್ಡಮನುಷ್ಯರೂ ಸೇರಿದ ಒಂದು ಕಮಿಟಿಯನ್ನು ಏರ್ಪಡಿಸಲಾಯಿತು. ಆ ಕಮಿಟಿಯ ರಿಪೋರ್ಟನ್ನು ಪರ್ಯಾಲೋಚಿಸಿ ಸರ್ಕಾರದವರು ಖರ್ಚನ್ನು ಕಡಿಮೆ ಮಾಡುವ ಉದ್ದೇಶದಿಂದ ಸಮಾಜದ ಏರ್ಪಾಡಿನಲ್ಲಿ ಕೆಲವು ಸಣ್ಣ ಬದಲಾವಣೆಗಳನ್ನು ಮಾಡಿ ಹುಕುಮುಗಳನ್ನು ಸಾದರ್ಮಾಡಿರುತ್ತಾರೆ; ಆದರೆ ಸಮಾಜದ ಕಳೆದ ಜೂನ್ ತಿಂಗಳ ಅಧಿವೇಶನದಲ್ಲಿ ನಿರ್ಧರಿಸಿದ ಕಾರ್ಯಕ್ರಮಗಳಿಗೆ ಸ್ವಲ್ಪವೂ ಲೋಪವುಂಟಾಗಿರುವುದಿಲ್ಲ.

ಸ್ಥಳೀಯ ಪ್ರಜಾಧಿಕಾರ.

ಲೋಕಲ್ ಬೋರ್ಡುಗಳು ಸಂಪದಭಿವೃದ್ಧಿ ಕಾರ್ಯಗಳನ್ನೂ, ವಿದ್ಯಾಭ್ಯಾಸದ ಸೆಸ್ಸಿನ ವಸೂಲಿಯನ್ನೂ ಕೈಗೊಳ್ಳಲು ಅಧಿಕಾರವನ್ನು ಪಡೆಯುವಂತೆ ಪ್ರಸಕ್ತ ವರ್ಷದಲ್ಲಿ ಸ್ಥಳೀಯ ಸಭೆಗಳ ಮತ್ತು ಗ್ರಾಮಪಂಚಾಯತಿಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡಲಾಯಿತು. ಸರ್ಕಾರಿ ಉದ್ಯೋಗಸ್ಥರಲ್ಲದ ಪ್ರೆಸಿಡೆಂಟರನ್ನು ಬೆಂಗಳೂರು ಡಿಸ್ಟ್ರಿಕ್ಟುಬೋರ್ಡಿಗೆ ಚುನಾಯಿಸುವುದನ್ನೂ, ಕೋಲಾರ ಮತ್ತು ಹಾಸನ, ಈ ಎರಡು ಡಿಸ್ಟ್ರಿಕ್ಟು ಬೋರ್ಡುಗಳಿಗೆ ನೇಮಕ ಮಾಡುವುದನ್ನೂ ಮಂಜೂರ್ಮಾಡಿ ಸರ್ಕಾರದವರು ಈಚೆಗೆ ಹುಕುಮುಗಳನ್ನು ಸಾದರ್ಮಾಡಿರುತ್ತಾರೆ.

ಆಯವ್ಯಯಗಳು.

ಒಟ್ಟಿನಲ್ಲಿ ಆಯವ್ಯಯಗಳ ಸ್ಥಿತಿಯನ್ನೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಈ ಸಭೆಯ ಕಳೆದ ಅಧಿವೇಶನದ ನಮ್ಮ ಸಮಾರಂಭದ ಭಾಷಣದಲ್ಲಿ ತಕ್ಕಮಟ್ಟಿಗೆ ಚರ್ಚಿಸಲಾಯಿತು. ಅವುಗಳನ್ನು ಕುರಿತು ಈಗ ತಪಸೀಲಾಗಿ ಹೇಳಬೇಕಾದ ಆವಶ್ಯಕತೆಯು ತೋರುವುದಿಲ್ಲ. ಆದರೂ ನಮ್ಮ ಆಯವ್ಯಯದ ಈಗಿರುವ ಸ್ಥಿತಿಯನ್ನೂ ಅದನ್ನು ಮೇಲ್ಪಡಿಸುವುದಕ್ಕಾಗಿ ಸರ್ಕಾರದವರು ಅವಲಂಬಿಸುತ್ತಿರುವ ಏರ್ಪಾಟುಗಳನ್ನೂ ಸಹ ತಮ್ಮಗಳಿಗೆ ತಿಳಿಯಪಡಿಸುವ ಉದ್ದೇಶದಿಂದ ನಮ್ಮ ಆಯವ್ಯಯಗಳಿಗೆ ಸಂಬಂಧಪಟ್ಟ ಕೆಲವು ಮುಖ್ಯಾಂಶಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇವೆ.

ಕಳೆದ ಜೂನ್ ತಿಂಗಳಲ್ಲಿ ನಾವು ಈ ಸಭೆಗೆ ಒಪ್ಪಿಸಿದ 1921-22ನೆಯ ವರ್ಷದ ತಿದ್ದುಪಾಟಾದ ಅಂದಾಜುಗಳ ಮೇರೆಗೆ ಪ್ರಸಕ್ತ ವರ್ಷದ ಒಟ್ಟು ಹುಟ್ಟುವಳಿಯು 306¾ ಲಕ್ಷ ರೂಪಾಯಿಯೂ ಒಟ್ಟು ಖರ್ಚು 323¼ ಲಕ್ಷ ರೂಪಾಯಿಯೂ ಆಗಿ 16½ ಲಕ್ಷ ರೂಪಾಯಿ ಕಡಿಮೆಬಿತ್ತೆಂಬುದು ನಿಮಗೆ ಜ್ಞಾಪಕವಿರಬಹುದು. ತಾತ್ಕಾಲಿಕವಾಗಿ ಅಂದಾಜಾದ ಆ ವರ್ಷದ ಕರಾರ್ಖಾ ಲೆಕ್ಕಗಳು ಈಗ ಸಿದ್ಧವಾಗಿವೆ ಮತ್ತು ಅವುಗಳ ಮೇರೆಗೆ ಸುಮಾರು 7¾ ಲಕ್ಷ ರೂಪಾಯಿ ಕಡಿಬಂತೆಂದು ತಿಳಿಸಲು ಸಂತೋಷಿಸುತ್ತೇವೆ. ಒಟ್ಟಿನಲ್ಲಿ 316⅓ ಲಕ್ಷ ರೂಪಾಯಿ ವಸೂಲಾಯಿತು; ಆ ಪೈಕಿ ಸುಮಾರು 10 ಲಕ್ಷದಷ್ಟು ಹೆಚ್ಚಿಗೆ ಹುಟ್ಟುವಳಿಯು ಮುಖ್ಯವಾಗಿ ಜಮೀನ್ ಕಂದಾಯ, ವರಮಾನದ ತೆರಿಗೆ, ಮತ್ತು ಎಕ್ಸೈಜು ಬಾಬುಗಳಲ್ಲಿ ಹೆಚ್ಚಾಗಿ ವಸೂಲಾದ್ದರಿಂದ ಬಂದದ್ದಾಗಿದೆ. ವರಮಾನದ ತೆರಿಗೆಯ ಮೂಲಕವಾದ ಹುಟ್ಟುವಳಿಯು ನಮ್ಮ ನಿರೀಕ್ಷಣೆಯಲ್ಲಿದ್ದುದಕ್ಕಿಂತಲೂ ಹೆಚ್ಚಿದೆ. ಚಾಲ್ತಿ ವರ್ಷದಲ್ಲಿ ಈ ಬಾಬಿನ ಹುಟ್ಟುವಳಿಯು, ಕಳೆದ ವರ್ಷದ ಪ್ರಮಾಣಕ್ಕೆ, ಅಂದರೆ 14 ಲಕ್ಷ ರೂಪಾಯಿಗೆ ಮೇಲ್ಪಡದಿದ್ದರೂ ಅಧಮಪಕ್ಷ ಅಷ್ಟಕ್ಕಾದರೂ ನಿಲ್ಲುವುದೆಂದು ನಂಬಿದೆ. ಸ್ಥಿತಿಗತಿಗಳಲ್ಲಿ ವ್ಯತ್ಯಾಸವೇನೂ ಇಲ್ಲವಾದರೆ ವರಮಾನದ ತೆರಿಗೆಯಿಂದ ಉತ್ಪತ್ತಿಯು ವರ್ಷವರ್ಷವೂ ಹೆಚ್ಚುತ್ತಿರಬೇಕು. ಕೈಗಾರಿಕೆಗಳಿಗೂ ವ್ಯಾಪಾರ ವಾಣಿಜ್ಯಗಳಿಗೂ ಕಾಲದೇಶಸ್ಥಿತಿಗಳು ಅನುಕೂಲವಾಗಿದ್ದರೆ ಸಾಲೀಯಾನಾ ಸುಮಾರು 16 ಲಕ್ಷ ರೂಪಾಯಿ ಹುಟ್ಟುವಳಿಯಾಗಿ, ಕಳೆದ ಅಧಿವೇಶನದ ಭಾಷಣದಲ್ಲಿ ನಾವು ತಿಳಿಸಿರುವಂತೆ 6 ಲಕ್ಷದಷ್ಟು ಹೆಚ್ಚು ಆದಾಯ ಬರುವುದೆಂದು ನಿರೀಕ್ಷಿಸಬಹುದಾಗಿದೆ. ಜಮೀನ್ ಕಂದಾಯದಿಂದ ಒಟ್ಟು 117 ಲಕ್ಷ ರೂಪಾಯಿ ವಸೂಲಾಯಿತು. 1919-20 ನೆಯ ಸಾಲನ್ನು ಬಿಟ್ಟರೆ ಬಹುಶಃ ಇಷ್ಟು ಭಾರಿ ಮೊಬಲಗು ಈ ಬಾಬಿನಲ್ಲಿ ಹಿಂದೆ ಯಾವಾಗಲೂ ಹುಟ್ಟುವಳಿಯಾಗಿಲ್ಲ. ವ್ಯವಸಾಯದ ಸ್ಥಿತಿಗಳು ಮಾತ್ರ ಈಗಿನಂತೆ ತೃಪ್ತಿಕರವಾಗಿದ್ದರೆ, ಸರ್ವೆಸೆಟಲ್ಮೆಂಟುಗಳನ್ನು ತ್ವರೆಪಡಿಸುವುದರಿಂದಲೂ ಸಾಗುವಳಿಯ ವಿಸ್ತೀರ್ಣವನ್ನು ಹೆಚ್ಚಿಸುವುದಕ್ಕೆ ಮಾಡುವ ವಿಶೇಷ ಏರ್ಪಾಡುಗಳಿಂದಲೂ ಮತ್ತು ವಿಶೇಷ ಮುತವರ್ಜಿ ವಹಿಸಿ ವಸೂಲಿ ಕೆಲಸವನ್ನು ನಡೆಸುವುದರಿಂದಲೂ ಈ ಬಾಬಿನ ಸಾಲೀಯಾನಾ ಹುಟ್ಟುವಳಿಯನ್ನು ಮೂರು ವರ್ಷಗಳ ಕಾಲದಲ್ಲಿ 123 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬಹುದೆಂಬ ನಮ್ಮ ನಿರೀಕ್ಷಣೆಯು ಧಾರಾಳವಾಗಿ ನೆರವೇರುವುದೆಂದು ನಾವು ದೃಢವಾಗಿದ್ದೇವೆ. ಎಕ್ಸೈಜು ಬಾಬಿನ ಹುಟ್ಟುವಳಿಯು ತಿದ್ದುಪಾಟಾದ ಅಂದಾಜಿಗಿಂತ 1⅓ ಲಕ್ಷ ರೂಪಾಯಿ ಜಾಸ್ತಿಯಾಗಿದೆ. ಈ ಹುಟ್ಟುವಳಿಯು ಈಚೀಚೆಗೆ ಸ್ವಲ್ಪಮಟ್ಟಿಗೆ ಖಾತರಿಯಾಗಿಲ್ಲವಾದರೂ ಕಳೆದ ವರ್ಷದಂತೆ 76 ಲಕ್ಷ ರೂಪಾಯಿ ಪರಿಮಾಣಕ್ಕೆ ಕಮ್ಮಿಯಾಗದೇ ಇದ್ದಲ್ಲಿ ಆಯವ್ಯಯವನ್ನು ಸಮತೂಕ ಮಾಡುವುದಕ್ಕಾಗಿ ನಾವು ಇಟ್ಟುಕೊಂಡಿರುವ ಅಂಕೆಗಳಲ್ಲಿ ಬಹಳ ವ್ಯತ್ಯಾಸಬಾರದೇ ಇರಬಹುದು. ವಿದ್ಯುಚ್ಛಕ್ತಿ ಮತ್ತು ಕೃಷ್ಣರಾಜ ಸಾಗರದ ಕಾಂಗಾರಿಗಳಿಂದ 23¾ ಲಕ್ಷ ರೂಪಾಯಿ ಉತ್ಪತ್ತಿಯಾಗಬಹುದೆಂದು ನಮ್ಮ ನಿರೀಕ್ಷಣೆ ಯಿದ್ದಂತೆಯೇ ಸುಮಾರು ಅಷ್ಟೇ ಹಣ, ಅಂದರೆ 23.93 ಲಕ್ಷ ರೂಪಾಯಿ, ಉತ್ಪತ್ತಿಯಾಗಿದೆ. ರೈಲ್ವೆಗಳಿಂದ 8¼ ಲಕ್ಷ ರೂಪಾಯಿಯ ನಿವ್ವಳ ಹುಟ್ಟುವಳಿಯನ್ನು ನಿರೀಕ್ಷಿಸಿತ್ತು; ವಸ್ತುತಃ ಸುಮಾರು 8 ಲಕ್ಷ ರೂಪಾಯಿ ಉತ್ಪತ್ತಿಯಾಗಿದೆ. ಮಾರಾಟವಾಗಬಹುದೆಂದು ನಿರೀಕ್ಷಿಸಿದ್ದದಕ್ಕಿಂತ ಹೆಚ್ಚಾಗಿ ಗಂಧದೆಣ್ಣೆಯು ಕಳೆದ ವರ್ಷ ಬಿಕರಿಯಾಯಿತು. ಎಣ್ಣೆಗೆ ಹೆಚ್ಚು ಗಿರಾಕಿಯೂ ಖರ್ಚಾಗದೆ ಉಳಿದಿದ್ದ ದಾಸ್ತಾನು ಕಡಿಮೆ ಬಿದ್ದುದೂ ಅನುಕೂಲವಾದ ಅಂಶಗಳಾಗಿವೆ.

ಖರ್ಚು ಬಾಬಿನಲ್ಲಿ ತಿದ್ದುಪಡಿಯಾದ ಅಂದಾಜಿನ ಮೇರೆಗೆ 323¼ ಲಕ್ಷ ರೂಪಾಯಿ ಇದ್ದುದು ಕಳೆದ ವರ್ಷದ ತಾತ್ಕಾಲಿಕ ನಿವ್ವಳ ಲೆಕ್ಕಗಳ ಮೇರೆಗೆ 325¼ ಲಕ್ಷ ರೂಪಾಯಿಗೆ ಬಂದಿತು; ಗಣ್ಯವಾದ ಹೆಚ್ಚು ಖರ್ಚು, ಸೈನ್ಯ ಮತ್ತು ಜಮೀನ್ ಕಂದಾಯದ ಬಾಬುಗಳಲ್ಲಿ ಮಾತ್ರ ಕಂಡು ಬಂದಿದೆ. ಕೆಲವು ಖರ್ಚು ಬಾಕಿಗಳನ್ನು ಫೈಸಲ್ಮಾಡಿದ್ದೂ ಮಿಲಿಟರಿ ಸ್ಟೋರಿನ ಖರ್ಚನ್ನು ಇದುವರೆಗಿನ ಪದ್ಧತಿಯಂತೆ ಅನಾಮತ್ತಾಗಿ ತೋರಿಸದೆ ಆಖೈರು ಖರ್ಚಾಗಿ ಬಿಂಗಡಿಸಿದುದೂ ಸಹ ಸೈನ್ಯದ ಬಾಬಿನ ಖರ್ಚು ಹೆಚ್ಚಿರುವುದಕ್ಕೆ ಕಾರಣಗಳಾಗಿವೆ. ಜಮೀನ್ ಕಂದಾಯದ ಬಾಬಿನ ಖರ್ಚು ಹೆಚ್ಚಾದದ್ದಕ್ಕೆ ಕಂದಾಯದ ವಸೂಲಿಯೂ ಆ ಬಗ್ಗೆ ಕೊಡಬೇಕಾದ ಕಮಿಷನ್ ಮತ್ತು ಸಾದಿಲ್‌ವಾರ್ ದರಗಳೂ ಹೆಚ್ಚಿದ ಪ್ರಯುಕ್ತ ಪಟೇಲ, ಶಾನುಭೋಗರುಗಳಿಗೆ ಹೆಚ್ಚಾಗಿ ವೇತನಗಳನ್ನು ಕೊಟ್ಟದ್ದೇ ಮುಖ್ಯ ಕಾರಣವಾಗಿದೆ. ಇತರ ಬಾಬುಗಳ ಖರ್ಚಿನಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲ. ಇದಕ್ಕಾಗಿಯೇ ಪ್ರತ್ಯೇಕವಾಗಿ ಸಾದರಾದ ಹುಕುಂ ಅನುಸರಿಸಿ ವರ್ಷದ ಆಖೈರು ತಿಂಗಳುಗಳಲ್ಲಿ ಖರ್ಚನ್ನು ಕೇವಲ ಹತೋಟಿಯಲ್ಲಿಟ್ಟುಕೊಂಡಿದ್ದರಿಂದ ಆ ಪೈಕಿ ಅನೇಕ ಬಾಬುಗಳಲ್ಲಿ ವಾಸ್ತವವಾಗಿ ಆದ ಖರ್ಚು ತಿದ್ದುಪಾಟಾದ ಅಂದಾಜಿಗಿಂತ ಕಮ್ಮಿಯಾಗಿದೆ. ಸಾಲದ ಪತ್ರಗಳನ್ನು ಪಡೆದುಕೊಂಡವರು ಬಡ್ಡಿಯನ್ನು ಕೇಳಿ ತೆಗೆದುಕೊಳ್ಳದೆ ಇದ್ದ ಪ್ರಯುಕ್ತ ಕಳೆದ ವರ್ಷದ ಬಡ್ಡಿ ಖರ್ಚಿನ ಬಾಬಿನಲ್ಲಿ ಸುಮಾರು 6⅓ ಲಕ್ಷದಷ್ಟು ಭಾರಿ ಮೊಬಲಗು ಬಾಕಿಯಾಗದೆ ನಿಂತಿದೆ. ಪರಂತು ಈ ಮೊಬಲಗನ್ನು ಅವರು ಮುಂದೆ ಕೇಳಿದಾಗ ಕೊಡಬೇಕಾದ ಸಾಲವೆಂತಲೇ ಭಾವಿಸಬೇಕು.

ತಿದ್ದುಪಾಟಾದ ಅಂದಾಜಿನಲ್ಲಿ 16½ ಲಕ್ಷವು ಖರ್ಚಿಗೆ ಸಾಲದೇಬರುವುದೆಂತಲೂ ಬಡ್ಜೆಟ್ಟಿನಲ್ಲಿ ಸುಮಾರು 64,000 ರೂಪಾಯಿ ಖರ್ಚು ಜಾತಾ ಉಳಿಯುವುದೆಂತಲೂ ನಿರೀಕ್ಷಿಸಿದ್ದಕ್ಕೆ ಬದಲಾಗಿ ಸುಮಾರು 9 ಲಕ್ಷ ರೂಪಾಯಿ ಖರ್ಚಿಗೆ ಸಾಲದೇ ಬಂದಿರುವುವೇ ಕಳೆದ ವರ್ಷದ ಆಯವ್ಯಯದ ನಿವ್ವಳ ಫಲಿತಾಂಶವಾಗಿದೆ. ಹಣವಿಲ್ಲದಿದ್ದುದರಿಂದ ಸಾಲ ತೀರಿಸುವ ಬಗ್ಗೆ ಏರ್ಪಟ್ಟ ಸಿಂಕಿಂಗ್ (ಇಳಿವಾರ) ಫಂಡಿಗೆ ಹೊರತು ಮತ್ತೆ ಯಾವ ರಿಜರ್ವ್‌ಗಳಿಗೂ ಕಳೆದ ವರ್ಷ ಹಣ ಹಾಕಲಿಲ್ಲವೆಂತಲೂ ಆ ಫಂಡಿಗೂ ಸಹ ಅದಕ್ಕೆ ಹಾಕಬೇಕಾದ 18¾ ಲಕ್ಷ ರೂಪಾಯಿಗೆ ಬದಲಾಗಿ 12½ ಲಕ್ಷವನ್ನು ಮಾತ್ರ ಕೊಟ್ಟದೆಯೆಂತಲೂ ಮತ್ತು ಸದರಿ ವರ್ಷದ ಹುಟ್ಟುವಳಿಯಿಂದ ಅದನ್ನು ಕೊಡುವುದಕ್ಕೂ ಸಹ ಆಗದಿದ್ದುದರಿಂದ ಸಿಂಕಿಂಗ್ ಫಂಡುಗಳ ಬಗ್ಗೆ ಹಿಂದಿನ ವರ್ಷಗಳಲ್ಲಿ ಕೂಡಿಟ್ಟಿದ್ದ ರಿಜರ್ವ್‌ಗಳಿಂದ 12½ ಲಕ್ಷದಷ್ಟು ಹಣವನ್ನು ಒದಗಿಸಿದುದಾಯಿತೆಂತಲೂ ತಿಳಿಸಬೇಕಾಗಿದೆ. ಮುಖ್ಯವಾದ ರಿಜರ್ವ್‌ಗಳಿಗೆ ಹಾಕಬೇಕಾದ ಕಂಟ್ರಿಬ್ಯೂಷನ್ ಹಣವನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಈಗ ವಾಸ್ತವವಾಗಿ ಕಡಮೆಬಿದ್ದಿರುವ ಹಣವು ಈಗ ತೋರಿಸಿರುವ 9 ಲಕ್ಷ ರೂಪಾಯಿಗಿಂತ ಇನ್ನೂ ಬಹಳ ಹೆಚ್ಚಾಗುವುದೆಂತಲೂ ಇದರಿಂದ ಕಂಡುಬರುತ್ತದೆ.

ಕಳೆದ ವರ್ಷದ ತಾತ್ಕಾಲಿಕ ಕರಾರ್ಖಾ ಲೆಕ್ಕಗಳಿಂದ ಬಂಡವಾಳದ ಕಾಂಗಾರಿಗಳಿಗಾಗಿ ಈ ಕೆಳಗೆ ಕಾಣಿಸಿರುವಂತೆ ಸುಮಾರು 122 ಲಕ್ಷ ರೂಪಾಯಿಯನ್ನು ಒಟ್ಟಿನಲ್ಲಿ ಒದಗಿಸಿತ್ತೆಂದು ತಿಳಿದುಬರುತ್ತದೆ:—

ರೈಲ್ವೆಗಳು ಮತ್ತು ಟ್ರಾಂವೆಗಳು	20½ ಲಕ್ಷ
ಕೃಷ್ಣರಾಜಸಾಗರದ ಕಾಂಗಾರಿ	9½ ,,
ವಿದ್ಯುಚ್ಛಕ್ತಿಯ ಕಾಂಗಾರಿ	36 ,,
ಕಬ್ಬಿಣದ ಕಾರ್ಖಾನೆ ಮತ್ತು ಸಂಬಂಧಪಟ್ಟ ಟ್ರಾಂವೆಗಳು	55½ ,,
ಇತರ ಕಾಂಗಾರಿಗಳು	½ ,,
ಒಟ್ಟು	122 ಲಕ್ಷ

ತಿದ್ದುಪಾಟಾದ ಅಂದಾಜಿನಲ್ಲಿ ಸುಮಾರು 155 ಲಕ್ಷ ರೂಪಾಯಿನ ಖರ್ಚನ್ನು ತೋರಿಸಿತ್ತು. ಕಬ್ಬಿಣದ ಕಾರ್ಖಾನೆಗೂ ಅದಕ್ಕೆ ಸಂಬಂಧಪಟ್ಟ ರೈಲ್ವೆಗಳಿಗೂ ಸಂಬಂಧಪಟ್ಟ ಕೆಲಸಗಳನ್ನು ಶೀಘ್ರದಲ್ಲಿ ಪ್ರಾರಂಭಿಸುವುದಕ್ಕೆ ಅತ್ಯವಶ್ಯಕವಾಗಿ ಬೇಕಾಗುವಷ್ಟರಮಟ್ಟಿಗೆ ಕೆಲಸವನ್ನು ಮಿತಪಡಿಸಿ ಕಾಂಗಾರಿಗಳು ನಿಧಾನವಾಗಿ ನಡೆಯುವಂತೆ ಮಾಡಿದ್ದರಿಂದ ಮುಖ್ಯವಾಗಿ ಈ ಬಾಬುಗಳಿಗೆ ಕೊಡಬೇಕೆಂದು ಗೊತ್ತುಮಾಡಿದ್ದ ಹಣದಲ್ಲಿ ಸುಮಾರು 33 ಲಕ್ಷ ರೂಪಾಯಿಯಷ್ಟು ಹಣ ಖರ್ಚಾಗದೆ ನಿಂತಿತು. ಆದರೆ ತಿದ್ದುಪಾಟಾದ ಕಾರ್ಯಕ್ರಮದ ಮೇರೆಗೆ ಕಾಂಗಾರಿಗಳನ್ನು ಮುಗಿಸಬೇಕಾದ ಕಾಲಪರಿಮಿತಿಯನ್ನು ಹೆಚ್ಚಿಸಿದಾಗ್ಯೂ ಮೇಲ್ಕಂಡಂತೆ ಬಾಕಿಯಾಗದೆ ನಿಂತ ಹಣದ ಪೈಕಿ ಬಹು ಭಾಗವನ್ನು ಮಂಜೂರಾಗಿರುವ ಕಾಂಗಾರಿಗಳನ್ನೆಲ್ಲವನ್ನೂ ಪೂರೈಸುವುದಕ್ಕೆ ಹಂಚಿಕೊಡಬೇಕಾಗಿದೆ.

ಸಾಲದ ಫಂಡುಗಳು.—ಕಳೆದ ಎರಡು ವರ್ಷಗಳಲ್ಲಿ 329 ಲಕ್ಷ ರೂಪಾಯಿ ಸಾಲ ತೆಗೆಯಲಾಯಿತು. ಈ ಹಣದಿಂದ 1920-21 ನೆಯ ಸಾಲಿನಲ್ಲಿ 111 ಲಕ್ಷ ರೂಪಾಯಿಯನ್ನೂ 1921-22ನೆಯ ಸಾಲಿನಲ್ಲಿ 122 ಲಕ್ಷ ರೂಪಾಯಿಯನ್ನೂ ಬಂಡವಾಳದ ಖರ್ಚಿಗಾಗಿ ಒದಗಿಸಲಾಯಿತು. ಚಾಲ್ತಿ ವರ್ಷದ ಬಡ್ಜೆಟ್ಟಿನಲ್ಲಿ 46½ ಲಕ್ಷ ರೂಪಾಯಿಯ ಖರ್ಚನ್ನು ಒದಗಿಸಿದೆಯಲ್ಲದೆ ಕಳೆದ ವರ್ಷದ ಬಂಡವಾಳದ ಕಾಂಗಾರಿಗಳಿಗೆ ಕೊಟ್ಟಿದ್ದ ಹಣದ ಪೈಕಿ ಖರ್ಚಾಗದೆ ಉಳಿದಿರುವ 33 ಲಕ್ಷ ರೂಪಾಯಿನಲ್ಲಿ ಬಹು ಭಾಗವನ್ನು ಈ ವರ್ಷ ಪುನಃ ಕೊಡಬೇಕಾಗಿದೆ. 1920-21 ನೆಯ ಸಾಲಿನ ಲಾಗಾಯಿತು ಮೂರು ವರ್ಷಗಳಲ್ಲಿ ಸುಮಾರು 29 ಲಕ್ಷ ರೂಪಾಯಿ ಹುಟ್ಟುವಳಿ ಕಡಿಮೆ ಬಿದ್ದಿದೆಯಾದ್ದರಿಂದ ಈ ಹಣವನ್ನೂ ಸಹ ಸಾಲದ ಹಣದಿಂದಲೇ ಹುಂಗಾಮಿಯಾಗಿ ಭರ್ತಿ ಮಾಡಿದೆ. ಈ ರೀತಿಯಲ್ಲಿ ಸಾಲದಿಂದ ಬಂದ ಪೂರಾ ಹಣವೂ ಖರ್ಚಾಗಿ ಮುಂದಿನ ಬಂಡವಾಳದ ಖರ್ಚಿಗೆ ಶಿಲ್ಕು ಏನೂ ಉಳಿದಿರುವುದಿಲ್ಲ.

ಚಾಲ್ತಿ ವರ್ಷದ ಮೊದಲನೆಯ ಮೂರು ತಿಂಗಳು ಈಗತಾನೇ ಮುಗಿದಿರುವುದರಿಂದ ವರ್ಷದ ಅಂತ್ಯದಲ್ಲಿ ಸ್ಥಿತಿಯು ಬಹುಶಃ ಯಾವ ರೀತಿ ಇರುವುದೆಂಬುದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಮುಂಗಾರು ಬೆಳೆಯು ಅನುಕೂಲವಾಗಿದೆ; ಅದರಂತೆ ಹಿಂಗಾರು ಮಳೆಯೂ ಸಹ ಸಕಾಲದಲ್ಲಿಯೂ ಸಾಕಾದಷ್ಟು ಮಟ್ಟಿಗೂ ಆದಲ್ಲಿ ಈ ಸುಭಿಕ್ಷವಾಗುವ

ದೆಂತಲೂ ನಾವು ನಿರೀಕ್ಷಿಸಿದ ಹುಟ್ಟುವಳಿಯ ಪೈಕಿ ಬಹುಭಾಗವು ಸಂಪೂರ್ಣವಾಗಿ ಕೈಗೂಡುವುದೆಂತಲೂ ನಂಬಬಹುದಾಗಿದೆ. ಈಗ ನಮಗೆ ಬಹಳ ವಿಷಮಕಾಲವು ಒದಗಿದೆ. ಖರ್ಚಿನ ವಿಷಯವನ್ನು ಆಲೋಚಿಸಿದರೆ ಕಳೆದ ಜೂನ್ ತಿಂಗಳಿನಲ್ಲಿ ಹೇಳಿದುದನ್ನೇ ಪುನಃ ತಿಳಿಸಬೇಕಾಗಿದೆ. ಅದೇನೆಂದರೆ, ಕಳೆದ ವರ್ಷಕ್ಕೆ ಮಂಜೂರಾದ ಅಂದಾಜನ್ನು ನೋಡಿಕೊಂಡು ಚಾಲ್ತಿ ವರ್ಷದ ಬಜೆಟ್ ಅಂದಾಜುಗಳನ್ನು ಮಾಡುವುದರಲ್ಲಿ ಸುಮಾರು 16½ ಲಕ್ಷವನ್ನು ಹಿಂದೆಯೇ ಕಡಿಮೆ ಮಾಡಿರುವುದರ ಜತೆಗೆ, ನಮ್ಮ ಆಯವ್ಯಯದ ಸ್ಥಿತಿಯನ್ನು ಕ್ರಮಪಡಿಸುವುದಕ್ಕೋಸ್ಕರ ಮಾಡಿದ ಈ ಏರ್ಪಾಡಿನ ಒಂದು ಭಾಗವಾಗಿ ಸುಮಾರು 7 ಲಕ್ಷ ರೂಪಾಯಿನಷ್ಟು ಖರ್ಚು ಕಡಿಮೆ ಮಾಡಲು ಪ್ರಯತ್ನಿಸಲಾಗುವುದು. ಸುಮಾರು 4 ಲಕ್ಷ ರೂಪಾಯಿ ಉಳಿಯುವ ಹಾಗೆ ಖರ್ಚು ಕಡಿಮೆಮಾಡುವ ಏರ್ಪಾಡನ್ನು ಈಗಾಗಲೇ ಮಂಜೂರ್ಮಾಡಿದೆಯೆಂತಲೂ ಸುಮಾರು ಇನ್ನೂ 4 ಲಕ್ಷವನ್ನು ಉಳಿಸುವುದಕ್ಕಾಗಿ ಬಂದಿರುವ ಸಲಹೆಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ ಎಂತಲೂ ತಿಳಿಸಬೇಕಾಗಿದೆ. ಖರ್ಚು ಕಡಿಮೆ ಮಾಡುವ ಬಗ್ಗೆ ಈ ಮೊದಲೇ ಸಾದರಾಗಿರುವ ಮತ್ತು ಇನ್ನು ಸ್ವಲ್ಪ ಕಾಲದಲ್ಲಿಯೇ ಸಾದರಾಗುವ ಹುಕುಮುಗಳ ಫಲಿತಾಂಶವಾಗಿ, ಚಾಲ್ತಿ ವರ್ಷದ ಬಜೆಟ್ಟಿನ ಖರ್ಚು ಬಾಬಿನಲ್ಲಿ ತೋರಿಸಿರುವ 332 ಲಕ್ಷ ರೂಪಾಯಿಯು ಕಡಿಮೆ ಮಾಡಲ್ಪಟ್ಟು ಈಗ ಉಳಿಸಬಹುದೆಂದು ನಿರೀಕ್ಷಿಸಿರುವ 7 ಲಕ್ಷ ರೂಪಾಯಿನ ಪೈಕಿ ಬಹುಭಾಗವು ಚಾಲ್ತಿ ವರ್ಷದಲ್ಲಿಯೇ ಉಳಿಯುವುದು. ಇಷ್ಟು ಶೀಘ್ರವಾಗಿ ಉತ್ತಮಸ್ಥಿತಿಯು ಬರುವುದೆಂದು ನಮ್ಮ ಹಿಂದಿನ ಭಾಷಣವನ್ನು ಮಾಡಿದಾಗ್ಗೆ ನಾವು ನಂಬಿರಲಿಲ್ಲ. ಖರ್ಚು ಕಡಿಮೆ ಮಾಡುವ ಬಗ್ಗೆ ಸಾದರಾಗಿರುವ ಮತ್ತು ಪರ್ಯಾಲೋಚನೆಯಲ್ಲಿರುವ ಹುಕುಮುಗಳು ಹೆಚ್ಚು ಕಡಿಮೆ ಎಲ್ಲಾ ಇಲಾಖೆಗಳಿಗೂ ಅನ್ವಯಿಸುವುವೆಂತಲೂ, ಸದರಿ ಇಲಾಖೆಗಳ ಕೆಲಸಕ್ಕೆ ಅಡಚಣೆಯಾಗದಂತೆಯೂ ವಜಾ ಆಗುವ ಸಿಬ್ಬಂದಿಗಳಿಗೆ ಅನವಶ್ಯಕವಾದ ತೊಂದರೆಯುಂಟಾಗದಂತೆಯೂ ಅವುಗಳನ್ನು ಜಾರಿಗೆ ತರಲು ಸ್ವಲ್ಪ ಕಾಲ ಹಿಡಿಯುವುದೆಂತಲೂ ತಿಳಿಸಬೇಕಾಗಿದೆ. ಖರ್ಚನ್ನು ಮಿತಪಡಿಸಲು ತೀರ್ಮಾನಿಸಿರುವ ನಾನಾ ಏರ್ಪಾಡುಗಳಲ್ಲಿ ಕೆಲವು ಜಾರಿಗೆ ಬಂದಿವೆ. ಮತ್ತೆ ಕೆಲವು ಜಾರಿಗೆ ಬರುವುದರಲ್ಲಿವೆ. ಚಾಲ್ತಿ ವರ್ಷದಲ್ಲಿಯೇ ಸಾಧ್ಯವಾದಷ್ಟುಮಟ್ಟಿಗೆ ಆಯವ್ಯಯದ ಸ್ಥಿತಿಯನ್ನು ಉತ್ತಮಪಡಿಸಲು ಸರ್ವಪ್ರಯತ್ನಗಳನ್ನೂ ಮಾಡುತ್ತಲಿದೆ.

ಚಾಲ್ತಿ ವರ್ಷದ ಬಜೆಟ್ಟನ್ನು ತಯಾರುಮಾಡುವುದರಲ್ಲಿ, ಬೆಂಗಳೂರು ದಂಡಿನ ಸರ್‌ಪ್ಲಸ್ ಹುಟ್ಟುವಳಿಬಾಬಿನಿಂದ 16½ ಲಕ್ಷ ರೂಪಾಯಿ ವರಮಾನ ಬರುವುದಾಗಿಯೂ ಆ ಪೈಕಿ 1920-21 ಕ್ಕೆ ಅಖೈರಾಗುವ ಮೂರು ವರ್ಷಗಳ ಬಾಕಿಗೋಸ್ಕರ 10 ಲಕ್ಷವೂ, 1921-22 ಕ್ಕೆ ಕೊಡಬೇಕಾದ ಸರ್‌ಪ್ಲಸ್ ಬಗ್ಗೆ 6½ ಲಕ್ಷ ರೂಪಾಯಿಯೂ ಬರುವುದೆಂದು ಭಾವಿಸಿತ್ತು. ಆದರೆ ಇಂಡಿಯಾ ಸರ್ಕಾರದವರು ಹಿಂದಿನ ಬಾಕಿಗೋಸ್ಕರ 13½ ಲಕ್ಷ ರೂಪಾಯಿಯನ್ನು ಕೊಟ್ಟಿರುವುದಕ್ಕಾಗಿ ಸಂತೋಷಿಸುತ್ತೇವೆ. ಹಿಂದಿನ ವರ್ಷಕ್ಕಾಗಿ ಕೊಡಬೇಕಾಗಿರುವ ಸರ್‌ಪ್ಲಸ್ ಮೊಬಲಗೂ ಸೇರಿ ಈ ಬಾಬಿನಲ್ಲಿ ಸುಮಾರು 20 ಲಕ್ಷದಷ್ಟು ಉತ್ಪತ್ತಿಯಾಗುವುದೆಂದು ನಿರೀಕ್ಷಿಸುತ್ತೇವೆ. ನಾವು ಕಳೆದ ಜೂನ್ ತಿಂಗಳಲ್ಲಿಯೇ ತಿಳಿಸಿರುವಂತೆ ಈ ಹಣದ ಪೈಕಿ ಬಹುಭಾಗವನ್ನು ಸಾಲ ತೀರಿಸುವ ಬಗ್ಗೆ ಏರ್ಪಟ್ಟ ಸಿಂಕಿಂಗ್ ಫಂಡಿಗೆ ಕೊಡತಕ್ಕದ್ದೆಂದು ತೀರ್ಮಾನಿಸಿ ಇದೆ.

ನಮ್ಮ ಸಾಲೀಯಾನಾ ಬಜೆಟ್ಟುಗಳನ್ನು ಸಮತೂಕಕ್ಕೆ ತರುವುದಕ್ಕೂ ನಮ್ಮ ಆಯವ್ಯಯದ ಸ್ಥಿತಿಯನ್ನು ಸ್ಥಿರಗೊಳಿಸುವುದಕ್ಕೂ ಹಿಂದಿನ ಅಧಿವೇಶನದಲ್ಲಿ ನಾವು ಮಾಡಿದ ಭಾಷಣದಲ್ಲಿ ವಿವರಿಸಿರುವ ಏರ್ಪಾಡನ್ನು ಪುನಃ ತಿಳಿಸಬೇಕಾಗಿಲ್ಲ. ಆದಾಯಕರವಾದ ಕಾಂಗಾರಿಗಳ ಜಮಾಖರ್ಚನ್ನು ಇತರ ಸಾಮಾನ್ಯ ಜಮಾಖರ್ಚಿನಿಂದ ಪ್ರತ್ಯೇಕಪಡಿಸಿ, ಮಾಮೂಲು ಹುಟ್ಟುವಳಿಗೆ ಮಾಮೂಲು ಆಡಳಿತದ ಖರ್ಚನ್ನು ಸರಿಪಡಿಸುವುದು ಮುಖ್ಯವಾದ ಸಿದ್ಧಾಂತವಾಗಿರತಕ್ಕದ್ದೆಂದು ಆಗ ವಿವರಿಸಲಾಯಿತು. ಆದ್ದರಿಂದ ನಮ್ಮ ಉದ್ದಿಷ್ಟಾರ್ಥವನ್ನು ನಡೆಯಿಸುವುದಕ್ಕಾಗಿ ಮಾಡಬೇಕೆಂದು ತಿಳಿಸಿರುವ ಏರ್ಪಾಡುಗಳಿಗೆಲ್ಲಾ ನಿರಂತರವಾದ ಗಮನ ಕೊಡುತ್ತಲಿದೆಯೆಂದು ಈಗ ನಾವು ತಮಗೆ ದೃಢವಾಗಿ ಹೇಳಿದರೆ ಸಾಕೆಂದು ತೋರುತ್ತದೆ.

ನಮ್ಮಿಂದ ಅವಶ್ಯವಾಗಿ ಹಣ ಒದಗಿಸಬೇಕಾದ ಮತ್ತು ಯಾವ ಸಂದರ್ಭದಲ್ಲಿಯೂ ಕೆಲಸ ನಿಲ್ಲಿಸಲು ನಮಗೆ ಸಾಧ್ಯವಿಲ್ಲದೆ ಇರುವ ಬಂಡವಾಳದ ಕಾಂಗಾರಿಗಳಿಗೆ, ಸಾಧ್ಯವಾದರೆ ಸಾಲಕ್ಕೆ ಕೈಹಾಕದೆ, ಮುಂದಿನ ಕೆಲವು ವರ್ಷಗಳವರೆಗೆ ಹಣ ಒದಗಿಸುವ ವಿಷಯವು ಬಹು ಮುಖ್ಯವಾದದ್ದಾಗಿಯೂ ಬಹು ಜರೂರಾಗಿ ನಿರ್ಣಯಿಸಲ್ಪಡತಕ್ಕದ್ದಾಗಿಯೂ ಇದೆ. ಈ ವಿಷಯವನ್ನೂ ಸಹ ಸರ್ಕಾರದವರು ಬಹಳ ಮುತುವರ್ಜಿಯಿಂದ ಪರ್ಯಾಲೋಚಿಸುತ್ತಿದ್ದಾರೆ ಎಂದು ನಾವು ತಿಳಿಸಲಪೇಕ್ಷಿಸುತ್ತೇವೆ.

ಮೈಸೂರು ದೇಶದ ಜನರು ಇಂಡಿಯಾ ಸರ್ಕಾರಕ್ಕೆ ಪರೋಕ್ಷವಾಗಿ ಸುಂಕಗಳ ಬಗ್ಗೆ ಕೊಡುತ್ತಿರುವ ಹಣದ ವಿಷಯವೂ ಸಹ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ನಗದಿಯಾತಿನ ಸ್ಥಿತಿ.—ತಿದ್ದುಪಾಟಾದ ಅಂದಾಜಿನ ಮೇರೆ 1922 ನೆಯ ಜುಲೈ 1ನೆಯ ತಾರೀಖಿನ ದಿನ 91 ಲಕ್ಷ ರೂಪಾಯಿ ನಗದು ಶಿಲ್ಕು ಇರಬಹುದೆಂದು ನಿರೀಕ್ಷಿಸಿ ಇತ್ತು. ಆದರೆ ಆದಿವಸ ವಸ್ತುತಃ 138½ ಲಕ್ಷ ರೂಪಾಯಿ ಶಿಲ್ಕು ನಿಂತಿತ್ತು, ಎಂದರೆ ಅಂದಾಜಿಗಿಂತ 47½ ಲಕ್ಷ ಜಾಸ್ತಿಯಾಗಿತ್ತು. ನಾವು ಹಿಂದೆಯೇ ತಿಳಿಸಿರುವಂತೆ ಹುಟ್ಟುವಳಿಯ ಕೆಲವು ಮುಖ್ಯ ಬಾಬುಗಳಲ್ಲಿ ವಸೂಲಿಯು ಚೆನ್ನಾಗಿ ಆದದ್ದೂ, ಬಂಡವಾಳದ ಕಾಂಗಾರಿಗಳಿಗೆ ಒದಗಿಸಿದ್ದ ಹಣ ಖರ್ಚಾಗದೇ ಉಳಿದದ್ದೂ ಈ ಜಾಸ್ತಿ ಶಿಲ್ಕಿಗೆ ಮುಖ್ಯ ಕಾರಣಗಳಾಗಿವೆ. ಈ ಹೆಚ್ಚು ಶಿಲ್ಕಿನ ಬಹು ಭಾಗವು ಖಾಯಂ ತಿಯಾಗದೆ ಬಾಕಿ ನಿಂತಿರುವ ಬಡ್ಡಿಯ ಹಣವನ್ನು ಕೊಡುವುದಕ್ಕೂ ಪುನಃ ಹಣ ಒದಗಿಸಬೇಕಾಗಿರುವ ಬಂಡವಾಳದ ಕಾಂಗಾರಿಗಳ ಖರ್ಚನ್ನು ಕೊಡುವುದಕ್ಕೂ ಚಾಲ್ತಿ ವರ್ಷದಲ್ಲಿ ಬೇಕಾಗುತ್ತದೆ. ಆದ್ದರಿಂದ ನಗದು ಶಿಲ್ಕು ಸ್ವಲ್ಪಕಾಲದ ಮಟ್ಟಿಗೆ ಜಾಸ್ತಿಯಾಗಿ ನಿಂತಿರುತ್ತದೆ. ಸದರಿ ಜಾಸ್ತಿ ಹಣವನ್ನು ಸ್ವಲ್ಪಕಾಲ ಬಡ್ಡಿಗೆ ಹಾಕುವುದರಿಂದ ಸಾಧ್ಯವಾದಷ್ಟು ಬಡ್ಡಿಯನ್ನು ಸಂಪಾದಿಸಲು ಏರ್ಪಾಡುಗಳನ್ನು ಮಾಡಲಾಗಿದೆ.

ಲೇಣೆಗಳೂ ದೇಣೆಗಳೂ.

ಲೇಣೆಗಳು.—1921 ನೆಯ ಇಸವಿ ಜುಲೈ ಮಾಹೆ 1ನೆಯ ತಾರೀಖಿನ ದಿವಸದಲ್ಲಿದ್ದ ನಗದು ಶಿಲ್ಕು 121 ಲಕ್ಷ ರೂಪಾಯಿನಲ್ಲಿ ಮೈಸೂರು ಬ್ಯಾಂಕಿನವರೊಡನೆ ಮಾಡಿಕೊಂಡ ಶೇಕಡ 6¼ ರೂಪಾಯಿ ಸಾಲದ ಒಪ್ಪಂದಕ್ಕೆ ಅನುಸಾರವಾಗಿ ಅಲ್ಲಿಯೇ ಇಡಬೇಕಾದ 35 ಲಕ್ಷ ರೂಪಾಯಿನ ಅನುಪಯುಕ್ತವಾದ ಶಿಲ್ಕು ಸಹ ಸೇರಿ ಇದೆ. 1922 ನೆಯ ಇಸವಿ ಜುಲೈ 1 ನೆಯ ತಾರೀಖಿನಲ್ಲಿ ಇದ್ದ ನಗದು ಶಿಲ್ಕಿನಲ್ಲಿ ಅದೇ ಬ್ಯಾಂಕಿನಲ್ಲಿರುವ ಅನುಪಯುಕ್ತವಾದ 47 ಲಕ್ಷ ರೂಪಾಯಿನ ಶಿಲ್ಕು ಅದೇ ಪ್ರಕಾರ ಸೇರಿ ಇದೆ. ಈ ಮೊಬಲಗುಗಳನ್ನು ಕಳೆದ ಮೇಲೆ 1921ನೆಯ ಜುಲೈ 1ನೆಯ ತಾರೀಖಿನಲ್ಲಿದ್ದ ಸುಮಾರು 86 ಲಕ್ಷ ರೂಪಾಯಿ ಶಿಲ್ಕಿಗೂ 1922ನೆಯ ಜುಲೈ 1ನೆಯ ತಾರೀಖಿನಲ್ಲಿದ್ದ 92 ಲಕ್ಷ ರೂಪಾಯಿ ಶಿಲ್ಕಿಗೂ ಅಷ್ಟೊಂದು ವ್ಯತ್ಯಾಸವೇನೂ ಕಾಣಬರುವುದಿಲ್ಲ.

ಇನ್ವೆಸ್ಟ್‌ಮೆಂಟ್ ಲೆಕ್ಕ.—1922 ನೆಯ ಜುಲೈ 1 ನೆಯ ತಾರೀಖಿನಲ್ಲಿದ್ದ ಬಡ್ಡಿಗೆ ಹಾಕಿದ ಹಣದ ಲೆಕ್ಕಾಚಾರದ ಶಿಲ್ಕು 180 ಲಕ್ಷ ರೂಪಾಯಿನಲ್ಲಿ ಬ್ಯಾಂಕು ಡಿಪಾಜಿಟ್ಟು ರೂಪವಾದ ಅಲ್ಪಕಾಲದ ಇನ್ವೆಸ್ಟ್‌ಮೆಂಟುಗಳೂ ಇಂಡಿಯನ್ ಟ್ರೆಜರಿ ಬಿಲ್ಲುಗಳೂ ಸೇರಿ 30 ಲಕ್ಷ ರೂಪಾಯಿ ಇದೆ. ಅಂತಹ ಇನ್ವೆಸ್ಟ್‌ಮೆಂಟುಗಳನ್ನು ವಜಾ ಮಾಡಿದರೆ ಕಳೆದ ವರುಷದ ಪ್ರಾರಂಭದಲ್ಲಿದ್ದ 98 ಲಕ್ಷ ರೂಪಾಯಿಗೆ ಬದಲಾಗಿ 150 ಲಕ್ಷ ರೂಪಾಯಿ ಶಿಲ್ಕು ಇದ್ದ ಹಾಗಾಯಿತು. ಕ್ಷಾಮನಿವಾರಣೆಯ ಇನ್ಷೂರೆನ್ಸು, ಸೇವಿಂಗ್ಸ್ ಬ್ಯಾಂಕು, ಇವೇ ಮೊದಲಾದ ನಾವು ಕೊಡತಕ್ಕ ದೇಣೆಗಳಿಗಾಗಿ ಇಟ್ಟಿರಬೇಕಾದ ಚಾಲತಿ ರಿಜರ್ವ್ ಮೊಬಲಗುಗಳ ಪರವಾದ ನಮ್ಮ ಸೆಕ್ಯೂರಿಟಿ ಇನ್ವೆಸ್ಟ್‌ಮೆಂಟುಗಳು 1920-21ನೆಯ ಅಖೈರು ಒಳಗಾಗಿ ಬಹುಮಟ್ಟಿಗೆ ಖರ್ಚಾಗಿದ್ದ ಕಾರಣ ಅವುಗಳನ್ನು ಭರ್ತಿಮಾಡಬೇಕಾಯಿತು. ಆದ್ದರಿಂದ ನಮ್ಮ ಶೇಕಡ 6½ ಮತ್ತು 7 ರೂಪಾಯಿ ಬಡ್ಡಿಯ ಸಾಲಗಳಿಗಾಗಿ ಇಂಡಿಯಾ ಸರ್ಕಾರದ ಬಾಂಡುಗಳ ಮೂಲಕ ಬಂದ ಚಂದಾ ಮೊಬಲಗುಗಳೆಲ್ಲವನ್ನೂ ಇನ್ವೆಸ್ಟ್‌ಮೆಂಟ್ ಫಂಡಿಗೆ ವರ್ಗಾಯಿಸಲಾಯಿತು.

ಬಂಡವಾಳದ ಲೇಣೆಗಳು.—ಕಳೆದ ವರುಷದ ಪ್ರಾರಂಭದಲ್ಲಿ ನಮ್ಮ ಪ್ರತ್ಯೇಕ ಬಂಡವಾಳದ ಲೇಣೆಗಳು 893 ಲಕ್ಷ ರೂಪಾಯಿ ಇದ್ದುದು ಪ್ರಸಕ್ತ ವರುಷದ ಪ್ರಾರಂಭದಲ್ಲಿ 1,015 ಲಕ್ಷ ರೂಪಾಯಿಯಾಗಿದೆ. ಈ 122 ಲಕ್ಷ ರೂಪಾಯಿನ ವ್ಯತ್ಯಾಸವು 2021-22 ನೆಯ ಸಾಲಿನಲ್ಲಿ ಖರ್ಚಾದ 122 ಲಕ್ಷ ರೂಪಾಯಿನ ಬಂಡವಾಳವನ್ನು ತೋರಿಸುತ್ತದೆ.

ದೇಣೆಗಳು.—1921 ನೆಯ ಜುಲೈ 1 ನೆಯ ತಾರೀಖಿನಲ್ಲಿ ನಮ್ಮ ದೇಣೆಯು 309 ಲಕ್ಷ ಇದ್ದುದು 1922 ನೆಯ ಜುಲೈ 1 ನೆಯ ತಾರೀಖಿನಲ್ಲಿ 510 ಲಕ್ಷಕ್ಕೆ ಏರಿತು. ಈ ಎರಡಕ್ಕೂ ವ್ಯತ್ಯಾಸವಿರುವ ಎರಡು ಕೋಟಿಯು ಹೋದವರ್ಷ ಸಾಲ ತೆಗೆದುಕೊಂಡಿದ್ದಾಗಿರುತ್ತದೆ. ಇದಕ್ಕೆ ಹೋಲಿಸಿ ನೋಡಿದಲ್ಲಿ, ಇತರ ಬಾಬುಗಳಲ್ಲಿ ಕಂಡುಬರುವ ವ್ಯತ್ಯಾಸವು ಅಲ್ಪವಾದದ್ದು. ಈ ಎರಡು ವರುಷಗಳ ಪ್ರಾರಂಭದಲ್ಲಿದ್ದ ಶಿಲ್ಕು, ಸಂಬಂಧಗಳನ್ನು ಹೋಲಿಸಿ ನೋಡುವಬಗ್ಗೆ ಮುಂದಣ ತಖ್ತೆಯಲ್ಲಿ ಕಾಣಿಸಿದೆ.

ಲೇಣೆಗಳ ಮತ್ತು ದೇಣೆಗಳ ತಖ್ತೆ.

	1921ನೆ ಜೂನ್ 30 ನೆ ತಾರೀಖಿನ ಲೆಖ್ಖಗಳು.	1922 ನೆ ಜೂನ್ 30ನೆ ತಾರೀಕಿನ ಹಂಗಾಮಿ ಲೆಖ್ಖಗಳು.
ಲೇಣೆಗಳು—	ರೂ.	ರೂ.
ನಗದು ಶಿಲ್ಕು	1,20,79,335	1,38,65,861
ಇನ್ವೆಸ್ಟ್‌ಮೆಂಟ್ ಲೆಖ್ಖ	98,28,046	1,80,27,480
ಬಂಡವಾಳ	8,93,15,934	10,15,35,312
ಮುಂಗಡಗಳು	56,86,700	52,11,347
ಸಾಲಗಳು	26,33,983	21,98499
ರೈಲ್ವೆ ಸ್ಟರ್‌ಲಿಂಗ್‌ಲೋನ್ ಸಿಂಕಿಂಗ್ ಫಂಡ್ ಇನ್ವೆಸ್ಟ್‌ಮೆಂಟ್	1,10,17,358	1,10,17,358
ಜುಮ್ಲಾ	13,05,61,356	15,18,55,857
ದೇಣೆಗಳು—		
ಸಾಲ	3,09,26,140	5,09,77,352
ಇನ್ಷೂರೆನ್ಸು ಮತ್ತು ಪ್ರಾವಿಡೆಂಟ್ ಫಂಡುಗಳು	58,91,456	63,67,056
ಸೇವಿಂಗ್ಸ್ ಬ್ಯಾಂಕ್—		
ಡಿಪಾಜಿಟ್ಟುಗಳು	77,09,810	78,82,718
ಧರ್ಮಾದಾಯ ಮತ್ತು ಇತರ ಲೆಖ್ಖಗಳು	15,74,634	16,39,544
ರಿಜರ್ವ್ ಫಂಡುಗಳು (ಕ್ಷಾಮನಿವಾರಣೆಯ ಇನ್ಷೂರೆನ್ಸ್, ಡಿಪ್ರೀಸಿಯೇಷನ್ ವೈನಿಂಗ್ ರೆವಿನ್ಯೂ, ಕ್ಯಾಪಿಟಲೈಜೇಷನ್ ಮತ್ತು ಇತರ ಫಂಡುಗಳು.)	1,58,35,487	1,67,88,647
ಸ್ಥಳೀಯ ಮತ್ತು ಇತರ ಫಂಡುಗಳು	64,28,348	67,58,056
ಠೇವಣಿಗಳು	21,10,875	28,31,967
ವಿವಿಧಭಾಗಗಳು	12,26,286	6,37,693
ಜುಮ್ಲಾ	7,17,03,036	9,38,83,033
ದೇಣೆಗಳಿಗಿಂತ ಲೇಣೆಗಳ ಹೆಚ್ಚುವರಿ	5,88,58,320	5,79,72,824
ಜುಮ್ಲಾ	13,05,61,356	15,18,55,857

ನಾನಾ ಸರ್ಕಾರಿ ಇಲಾಖೆಗಳ ಆಡಳಿತಕ್ಕೆ ಸಂಬಂಧಪಟ್ಟ ಅತಿ ಮುಖ್ಯವಾದ ಅಂಶಗಳನ್ನು ವಾಡಿಕೆಯ ಮೇರೆಗೆ ಒಂದು ಪ್ರತ್ಯೇಕ ಭಾಗದಲ್ಲಿ ಕೊಟ್ಟಿದೆ. ಅದರಲ್ಲಿ ಇದುವರೆಗೆ ಕೊಡುತ್ತಿದ್ದ ಬರೀ ಸಿಕ್ಕಗಟ್ಟೆಯ ಮತ್ತು ಲೆಕ್ಕಪಕ್ಕಗಳ ವಿವರಗಳಲ್ಲದೆ ಕೆಲವು ವಿಶೇಷಾಂಶಗಳೂ ನಮೂದಾಗಿರುವುವು. ಈಗ ಶ್ರೀಮನ್ಮಹಾರಾಜರವರ ಸರ್ಕಾರದ ಪರ್ಯಾಲೋಚನೆಯಲ್ಲಿರುವ ಕೆಲವು ಭಾರಿ ವಿಷಯಗಳನ್ನು ಕುರಿತು ವಿಚಾರ ಮಾಡತೊಡಗುವೆವು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಟ್ ಭಂಗಾರದ ಮುಳ್ಳುಳ್ಳ

11 ರಾಯಲ್ ಫೌಂಟೇನ್‌ಪೆನ್.



ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿದಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮಾನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾತು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ

ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚೆನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,

ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

34 ಬಳ್ಳಾರಿ.

೧೯೨೨ನೆಯ ಇಸವಿ ಅಕ್ಟೋಬರ್ ತಾ|| ೮ ರಿಂದ ೧೯೨೨ ನೆಯ ಅಕ್ಟೋಬರ್ ತಾ|| ೧೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ನೆಯ ದುಂದುಭಿನಾಮ ಸಂವತ್ಸರದ ಆಶ್ವಯುಜ ಬಹುಳ ಬಿದಿಗೆಯಿಂದ ಆಶ್ವಯುಜ ಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
8	[1] ಭಾನು	ಬಿದಿ	6.9	ಭರ	60	22
9	ಸೋಮ	ತದಿ	9.56	ಭರ	2.50	23
10	ಮಂಗಳ	ಚೌತಿ	12.6	ಕೃತ್ತಿ	6.48	24
11	ಬುಧ	ಪಂಚ	13.13	ರೋಹಿ	9.33	25
12	ಗುರು	ಷಷ್ಠಿ	1.7	ಮೃಗ	11.4	26
13	ಶುಕ್ರ	ಸಪ್ತ	11.45	ಆರ್ದ್ರಾ	11.19	27
14	ಶನಿ	ಅಷ್ಟ	9.15	ಪುನ	10.28	28

(1) ಶ್ರೀ ಚಾಮುಂಡೇಶ್ವರೀ ರಥಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಯಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

REGISTERED NO. M. 124.

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಅಕ್ಟೋಬರ್ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೪೨

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕತಿಪಯಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪುರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,

ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಿನೆಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಶೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡ ಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.

„ ನಂ. 2 ರೂ. 7—8—0.

30 ವಿಳಾಸ—ಎಸ್. ಪಾಲ್ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

12

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.

ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0

„ „ ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ವಾನ್ ಹೌಸ್,

ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦—೮—೦
ವೃತಪಂಚಕ	೦—೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯೆನ್ಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.

25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋಧಿನಿ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

39 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ್ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು.

ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧ ಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೆಟ್ ರೋಸ್, ಪೆರಲ್ ವೈಟ್, ಪ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಫೋಟೋ ಫಿಲಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,

12 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ದೆಂತಲೂ ನಾವು ನಿರೀಕ್ಷಿಸಿದ ಹುಟ್ಟುವಳಿಯ ಪೈಕಿ ಬಹುಭಾಗವು ಸಂಪೂರ್ಣವಾಗಿ ಕೈಗೂಡುವುದೆಂತಲೂ ನಂಬಬಹುದಾಗಿದೆ. ಈಗ ನಮಗೆ ಬಹಳ ವಿಷಮಕಾಲವು ಒದಗಿದೆ. ಖರ್ಚಿನ ವಿಷಯವನ್ನು ಆಲೋಚಿಸಿದರೆ ಕಳೆದ ಜೂನ್ ತಿಂಗಳಿನಲ್ಲಿ ಹೇಳಿರುವುದನ್ನೇ ಪುನಃ ತಿಳಿಸಬೇಕಾಗಿದೆ. ಅದೇನಂದರೆ, ಕಳೆದ ವರ್ಷಕ್ಕೆ ಮಂಜೂರಾದ ಅಂದಾಜನ್ನು ನೋಡಿಕೊಂಡು ಚಾಲ್ತಿ ವರ್ಷದ ಬಡ್ಜೆಟ್ ಅಂದಾಜುಗಳನ್ನು ಮಾಡುವುದರಲ್ಲಿ ಸುಮಾರು 16⅓ ಲಕ್ಷವನ್ನು ಹಿಂದೆಯೇ ಕಡಿಮೆ ಮಾಡಿರುವುದರ ಜತೆಗೆ, ನಮ್ಮ ಆಯವ್ಯಯದ ಸ್ಥಿತಿಯನ್ನು ಕ್ರಮಪಡಿಸುವುದಕ್ಕೋಸ್ಕರ ಮಾಡಿದ ಈ ಏರ್ಪಾಡಿನ ಒಂದು ಭಾಗವಾಗಿ ಸುಮಾರು 7 ಲಕ್ಷ ರೂಪಾಯಿನಷ್ಟು ಖರ್ಚು ಬೋಶಾಮಾಡಲು ಪ್ರಯತ್ನಿಸಲಾಗುವುದು. ಸುಮಾರು 4 ಲಕ್ಷ ರೂಪಾಯಿ ಉಳಿಯುವ ಹಾಗೆ ಖರ್ಚು ಕಡಿಮೆಮಾಡುವ ಏರ್ಪಾಡನ್ನು ಈಗಾಗಲೇ ಮಂಜೂರ್ಮಾಡಿದೆಯೆಂತಲೂ ಸುಮಾರು ಇನ್ನೂ 4 ಲಕ್ಷವನ್ನು ಉಳಿಸುವುದಕ್ಕಾಗಿ ಬಂದಿರುವ ಸಲಹೆಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ ಎಂತಲೂ ತಿಳಿಸಬೇಕಾಗಿದೆ. ಖರ್ಚು ಕಡಿಮೆ ಮಾಡುವ ಬಗ್ಗೆ ಈ ವೊದಲೇ ಸಾದರಾಗಿರುವ ಮತ್ತು ಇನ್ನು ಸ್ವಲ್ಪಕಾಲದಲ್ಲಿಯೇ ಸಾದರಾಗುವ ಹುಕುಮುಗಳ ಫಲಿತಾಂಶವಾಗಿ, ಚಾಲ್ತಿ ವರ್ಷದ ಬಡ್ಜೆಟ್ಟಿನ ಖರ್ಚು ಬಾಬಿನಲ್ಲಿ ತೋರಿಸಿರುವ 332 ಲಕ್ಷ ರೂಪಾಯಿಯು ಕಡಿಮೆ ಮಾಡಲ್ಪಟ್ಟು ಈಗ ಉಳಿಸಬಹುದೆಂದು ನಿರೀಕ್ಷಿಸಿರುವ 7 ಲಕ್ಷ ರೂಪಾಯಿನ ಪೈಕಿ ಬಹುಭಾಗವು ಚಾಲ್ತಿ ವರ್ಷದಲ್ಲಿಯೇ ಉಳಿಯುವುದು. ಇಷ್ಟು ಶೀಘ್ರವಾಗಿ ಉತ್ತಮಸ್ಥಿತಿಯು ಬರುವುದೆಂದು ನಮ್ಮ ಹಿಂದಿನ ಭಾಷಣವನ್ನು ಮಾಡಿದಾಗ್ಗೆ ನಾವು ನಂಬಿರಲಿಲ್ಲ. ಖರ್ಚು ಕಡಿಮೆ ಮಾಡುವ ಬಗ್ಗೆ ಸಾದರಾಗಿರುವ ಮತ್ತು ಪರ್ಯಾಲೋಚನೆಯಲ್ಲಿರುವ ಹುಕುಮುಗಳು ಹೆಚ್ಚುಕಡಿಮ್ಮೆ ಎಲ್ಲಾ ಇಲಾಖೆಗಳಿಗೂ ಅನ್ವಯಿಸುವುವೆಂತಲೂ, ಸದರಿ ಇಲಾಖೆಗಳ ಕೆಲಸಕ್ಕೆ ಅಡಚಣೆಯಾಗದಂತೆಯೂ ವಜಾ ಆಗುವ ಸಿಬ್ಬಂದಿಗಳಿಗೆ ಅನವಶ್ಯಕವಾದ ತೊಂದರೆಯುಂಟಾಗದಂತೆಯೂ ಅವುಗಳನ್ನು ಜಾರಿಗೆ ತರಲು ಸ್ವಲ್ಪಕಾಲ ಹಿಡಿಯುವುದೆಂತಲೂ ತಿಳಿಸಬೇಕಾಗಿದೆ. ಖರ್ಚನ್ನು ಮಿತಪಡಿಸಲು ತೀರ್ಮಾನಿಸಿರುವ ನಾನಾ ಏರ್ಪಾಡುಗಳಲ್ಲಿ ಕೆಲವು ಜಾರಿಗೆ ಬಂದಿವೆ. ಮತ್ತೆ ಕೆಲವು ಜಾರಿಗೆ ಬರುವುದರಲ್ಲಿವೆ. ಚಾಲ್ತಿ ವರ್ಷದಲ್ಲಿಯೇ ಸಾಧ್ಯವಾದಷ್ಟು ಮಟ್ಟಿಗೆ ಆಯವ್ಯಯದ ಸ್ಥಿತಿಯನ್ನು ಉತ್ತಮಪಡಿಸಲು ಸರ್ವಪ್ರಯತ್ನಗಳನ್ನೂ ಮಾಡುತ್ತಲಿದೆ.

ಚಾಲ್ತಿವರ್ಷದ ಬಜೆಟ್ಟನ್ನು ತಯಾರುಮಾಡುವುದರಲ್ಲಿ, ಬೆಂಗಳೂರು ದಂಡಿನ ಸರ್‌ಪ್ಲಸ್ ಹುಟ್ಟುವಳಿಬಾಬಿನಿಂದ 16½ ಲಕ್ಷ ರೂಪಾಯಿ ವರಮಾನಬರುವುದಾಗಿಯೂ ಆ ಪೈಕಿ 1920-21 ಕ್ಕೆ ಅಖೈರಾಗುವ ಮೂರು ವರ್ಷಗಳ ಬಾಕಿಗೋಸ್ಕರ 10 ಲಕ್ಷವೂ, 1921-22 ಕ್ಕೆ ಕೊಡಬೇಕಾದ ಸರ್‌ಪ್ಲಸ್ ಬಗ್ಗೆ 6½ ಲಕ್ಷ ರೂಪಾಯಿಯೂ ಬರುವುದೆಂದು ಭಾವಿಸಿತ್ತು. ಆದರೆ ಇಂಡಿಯಾ ಸರ್ಕಾರದವರು ಹಿಂದಿನ ಬಾಕಿಗೋಸ್ಕರ 13⅓ ಲಕ್ಷ ರೂಪಾಯಿಯನ್ನು ಕೊಟ್ಟಿರುವುದಕ್ಕಾಗಿ ಸಂತೋಷಿಸುತ್ತೇವೆ. ಹಿಂದಿನ ವರ್ಷಕ್ಕಾಗಿ ಕೊಡಬೇಕಾಗಿರುವ ಸರ್‌ಪ್ಲಸ್ ವೊಬಲಗೂ ಸೇರಿ ಈ ಬಾಬಿನಲ್ಲಿ ಸುಮಾರು 20 ಲಕ್ಷದಷ್ಟು ಉತ್ಪತ್ತಿಯಾಗುವುದೆಂದು ನಿರೀಕ್ಷಿಸುತ್ತೇವೆ. ನಾವು ಕಳೆದ ಜೂನ್ ತಿಂಗಳಲ್ಲಿಯೇ ತಿಳಿಸಿರುವಂತೆ ಈ ಹಣದ ಪೈಕಿ ಬಹುಭಾಗವನ್ನು ಸಾಲ ತೀರಿಸುವ ಬಗ್ಗೆ ಏರ್ಪಟ್ಟ ಸಿಂಕಿಂಗ್ ಫಂಡಿಗೆ ಕೊಡತಕ್ಕದ್ದೆಂದು ತೀರ್ಮಾನಿಸಿ ಇದೆ.

ನಮ್ಮ ಸಾಲೀಯಾನಾ ಬಜೆಟ್ಟುಗಳನ್ನು ಸಮತೂಕಕ್ಕೆ ತರುವುದಕ್ಕೂ ನಮ್ಮ ಆಯವ್ಯಯದ ಸ್ಥಿತಿಯನ್ನು ಸ್ಥಿರಗೊಳಿಸುವುದಕ್ಕೂ ಹಿಂದಿನ ಅಧಿವೇಶನದಲ್ಲಿ ನಾವು ಮಾಡಿದ ಭಾಷಣದಲ್ಲಿ ವಿವರಿಸಿರುವ ಏರ್ಪಾಡನ್ನು ಪುನಃ ತಿಳಿಸಬೇಕಾಗಿಲ್ಲ. ಆದಾಯಕರವಾದ ಕಾಂಗಾರಿಗಳ ಜಮಾಖರ್ಚನ್ನು ಇತರ ಸಾಮಾನ್ಯ ಜಮಾಖರ್ಚಿನಿಂದ ಪ್ರತ್ಯೇಕಪಡಿಸಿ, ಮಾಮೂಲು ಹುಟ್ಟುವಳಿಗೆ ಮಾಮೂಲು ಆಡಳಿತದ ಖರ್ಚನ್ನು ಸರಿಪಡಿಸುವುದು ಮುಖ್ಯವಾದ ಸಿದ್ಧಾಂತವಾಗಿರತಕ್ಕದ್ದೆಂದು ಆಗ ವಿವರಿಸಲಾಯಿತು. ಆದ್ದರಿಂದ ನಮ್ಮ ಉದ್ದಿಷ್ಟಾರ್ಥವನ್ನು ಪಡೆಯುವುದಕ್ಕಾಗಿ ಮಾಡಬೇಕೆಂದು ತಿಳಿಸಿರುವ ಏರ್ಪಾಡುಗಳಿಗೆಲ್ಲಾ ನಿರಂತರವಾದ ಗಮನ ಕೊಡುತ್ತಲಿದೆಯೆಂದು ಈಗ ನಾವು ತಮಗೆ ದೃಢವಾಗಿ ಹೇಳಿದರೆ ಸಾಕೆಂದು ತೋರುತ್ತದೆ.

ನಮ್ಮಿಂದ ಅವಶ್ಯವಾಗಿ ಹಣ ಒದಗಿಸಬೇಕಾದ ಮತ್ತು ಯಾವಸಂದರ್ಭದಲ್ಲಿಯೂ ಕೆಲಸ ನಿಲ್ಲಿಸಲು ನಮಗೆ ಸಾಧ್ಯವಿಲ್ಲದೆ ಇರುವ ಬಂಡವಾಳದ ಕಾಂಗಾರಿಗಳಿಗೆ, ಸಾಧ್ಯವಾದರೆ ಸಾಲಕ್ಕೆ ಕೈಹಾಕದೆ, ಮುಂದಿನ ಕೆಲವು ವರ್ಷಗಳವರೆಗೆ ಹಣ ಒದಗಿಸುವ ವಿಷಯವು ಬಹು ಮುಖ್ಯವಾದದ್ದಾಗಿಯೂ ಬಹು ಜರೂರಾಗಿ ನಿರ್ಣಯಿಸಲ್ಪಡತಕ್ಕದ್ದಾಗಿಯೂ ಇದೆ. ಈ ವಿಷಯವನ್ನೂ ಸಹ ಸರ್ಕಾರದವರು ಬಹಳ ಮುತವರ್ಜಿಯಿಂದ ಪರ್ಯಾಲೋಚಿಸುತ್ತಿದ್ದಾರೆ ಎಂದು ನಾವು ತಿಳಿಸಲಪೇಕ್ಷಿಸುತ್ತೇವೆ.

ಮೈಸೂರು ದೇಶದ ಜನರು ಇಂಡಿಯಾ ಸರ್ಕಾರಕ್ಕೆ ಪರೋಕ್ಷವಾಗಿ ಸುಂಕಗಳ ಬಗ್ಗೆ ಕೊಡುತ್ತಿರುವ ಹಣದ ವಿಷಯವೂ ಸಹ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ನಗದಿಯಾತಿನ ಸ್ಥಿತಿ.—ತಿದ್ದುಪಾಟಾದ ಅಂದಾಜಿನ ಮೇರೆ 1922 ನೆಯ ಜುಲೈ 1ನೆಯ ತಾರೀಖಿನ ದಿನ 91 ಲಕ್ಷ ರೂಪಾಯಿ ನಗದು ಶಿಲ್ಕು ಇರಬಹುದೆಂದು ನಿರೀಕ್ಷಿಸಿ ಇತ್ತು. ಆದರೆ ಆದಿವಸ ವಸ್ತುತಃ 138½ ಲಕ್ಷ ರೂಪಾಯಿ ಶಿಲ್ಕು ನಿಂತಿತ್ತು, ಎಂದರೆ ಅಂದಾಜಿಗಿಂತ 47½ ಲಕ್ಷ ಜಾಸ್ತಿಯಾಗಿತ್ತು. ನಾವು ಹಿಂದೆಯೇ ತಿಳಿಸಿರುವಂತೆ ಹುಟ್ಟುವಳಿಯ ಕೆಲವು ಮುಖ್ಯ ಬಾಬುಗಳಲ್ಲಿ ವಸೂಲಿಯು ಚೆನ್ನಾಗಿ ಆದದ್ದೂ, ಬಂಡವಾಳದ ಕಾಂಗಾರಿಗಳಿಗೆ ಒದಗಿಸಿದ್ದ ಹಣ ಖರ್ಚಾಗದೇ ಉಳಿದದ್ದೂ ಈ ಜಾಸ್ತಿ ಶಿಲ್ಕಿಗೆ ಮುಖ್ಯ ಕಾರಣಗಳಾಗಿವೆ. ಈ ಹೆಚ್ಚು ಶಿಲ್ಕಿನ ಬಹು ಭಾಗವು ಪಾವತಿಯಾಗದೆ ಬಾಕಿ ನಿಂತಿರುವ ಬದ್ದಿಯ ಹಣವನ್ನು ಕೊಡುವುದಕ್ಕೂ ಪುನಃ ಹಣ ಒದಗಿಸಬೇಕಾಗಿರುವ ಬಂಡವಾಳದ ಕಾಂಗಾರಿಗಳ ಖರ್ಚನ್ನು ಕೊಡುವುದಕ್ಕೂ ಚಾಲ್ತಿ ವರ್ಷದಲ್ಲಿ ಬೇಕಾಗುತ್ತದೆ. ಆದ್ದರಿಂದ ನಗದು ಶಿಲ್ಕು ಸ್ವಲ್ಪಕಾಲದ ಮಟ್ಟಿಗೆ ಜಾಸ್ತಿಯಾಗಿ ನಿಂತಿರುತ್ತದೆ. ಸದರಿ ಜಾಸ್ತಿ ಹಣವನ್ನು ಸ್ವಲ್ಪಕಾಲ ಬಡ್ಡಿಗೆ ಹಾಕುವುದರಿಂದ ಸಾಧ್ಯವಾದಷ್ಟು ಬಡ್ಡಿಯನ್ನು ಸಂಪಾದಿಸಲು ಏರ್ಪಾಡುಗಳನ್ನು ಮಾಡಲಾಗಿದೆ.

ಲೇಣಿಗಳೂ ದೇಣಿಗಳೂ.

ಲೇಣಿಗಳು.—1921 ನೆಯ ಇಸವಿ ಜುಲೈ ಮಾಹೆ 1ನೆಯ ತಾರೀಖಿನ ದಿವಸದಲ್ಲಿದ್ದ ನಗದು ಶಿಲ್ಕು 121 ಲಕ್ಷ ರೂಪಾಯಿನಲ್ಲಿ ಮೈಸೂರು ಬ್ಯಾಂಕಿನವರೊಡನೆ ಮಾಡಿಕೊಂಡ ಶೇಖಡ 6¼ ರೂಪಾಯಿ ಸಾಲದ ಒಪ್ಪಂದಕ್ಕೆ ಅನುಸಾರವಾಗಿ ಅಲ್ಲಿಯೇ ಇಡಬೇಕಾದ 35 ಲಕ್ಷ ರೂಪಾಯಿನ ಅನುಪಯುಕ್ತವಾದ ಶಿಲ್ಕು ಸಹ ಸೇರಿ ಇದೆ. 1922 ನೆಯ ಇಸವಿ ಜುಲೈ 1 ನೆಯ ತಾರೀಖಿನಲ್ಲಿ ಇದ್ದ ನಗದು ಶಿಲ್ಕಿನಲ್ಲಿ ಅದೇ ಬ್ಯಾಂಕಿನಲ್ಲಿರುವ ಅನುಪಯುಕ್ತವಾದ 47 ಲಕ್ಷ ರೂಪಾಯಿನ ಶಿಲ್ಕು ಅದೇ ಪ್ರಕಾರ ಸೇರಿ ಇದೆ. ಈ ವೊಬಲಗುಗಳನ್ನು ಕಳೆದ ಮೇಲೆ 1921ನೆಯ ಜುಲೈ 1ನೆಯ ತಾರೀಖಿನಲ್ಲಿದ್ದ ಸುಮಾರು 86 ಲಕ್ಷ ರೂಪಾಯಿ ಶಿಲ್ಕಿಗೂ 1922ನೆಯ ಜುಲೈ 1ನೆಯ ತಾರೀಖಿನಲ್ಲಿದ್ದ 92 ಲಕ್ಷ ರೂಪಾಯಿ ಶಿಲ್ಕಿಗೂ ಅಷ್ಟೊಂದು ವ್ಯತ್ಯಾಸವೇನೂ ಕಾಣಬರುವುದಿಲ್ಲ.

ಇನ್‌ವೆಸ್ಟ್‌ಮೆಂಟ್ ಲೆಕ್ಕ.—1922ನೆಯ ಜುಲೈ 1 ನೆಯ ತಾರೀಖಿನಲ್ಲಿದ್ದ ಬಡ್ಡಿಗೆ ಹಾಕಿದ ಹಣದ ಲೆಕ್ಕಾಚಾರದ ಶಿಲ್ಕು 180 ಲಕ್ಷ ರೂಪಾಯಿನಲ್ಲಿ ಬ್ಯಾಂಕುಗಳು ಡಿಪಾಜಿಟ್ಟು ರೂಪವಾದ ಅಲ್ಪಕಾಲದ ಇನ್‌ವೆಸ್ಟ್‌ಮೆಂಟುಗಳೂ ಇಂಡಿಯನ್ ಟ್ರೆಜರಿ ಬಿಲ್ಲುಗಳೂ ಸೇರಿ 30 ಲಕ್ಷ ರೂಪಾಯಿ ಇದೆ. ಅಂತಹ ಇನ್‌ವೆಸ್ಟ್‌ಮೆಂಟುಗಳನ್ನು ವಜಾ ಮಾಡಿದರೆ ಕಳೆದ ವರುಷದ ಪ್ರಾರಂಭದಲ್ಲಿದ್ದ 98 ಲಕ್ಷ ರೂಪಾಯಿಗೆ ಬದಲಾಗಿ 150ಲಕ್ಷ ರೂಪಾಯಿ ಶಿಲ್ಕು ಇದ್ದ ಹಾಗಾಯಿತು. ಕ್ಷಾಮ ನಿವಾರಣೆಯ ಇನ್‌ಷೂರೆನ್ಸು, ಸೇವಿಂಗ್ಸ್ ಬ್ಯಾಂಕು, ಇವೇ ಮೊದಲಾದ ನಾವು ಕೊಡತಕ್ಕ ದೇಣಿಗಳಿಗಾಗಿ ಇಟ್ಟಿರಬೇಕಾದ ಚಾಲತಿ ರಿಜರ್ವ್ ಮೊಬಲಗುಗಳ ಪರವಾದ ನಮ್ಮ ಸೆಕ್ಯೂರಿಟಿ ಇನ್‌ವೆಸ್ಟ್‌ಮೆಂಟುಗಳು 1920-21ನೆಯ ಅಖೈರು ಒಳಗಾಗಿ ಬಹುಮಟ್ಟಿಗೆ ಖರ್ಚಾಗಿದ್ದ ಕಾರಣ ಅವುಗಳನ್ನು ಭರ್ತಿಮಾಡಬೇಕಾಯಿತು. ಆದ್ದರಿಂದ ನಮ್ಮ ಶೇಕಡ 6½ ಮತ್ತು 7 ರೂಪಾಯಿ ಬಡ್ಡಿಯ ಸಾಲಗಳಿಗಾಗಿ ಇಂಡಿಯಾ ಸರ್ಕಾರದ ಬಾಂಡುಗಳ ಮೂಲಕ ಬಂದ ಚಂದಾ ಮೊಬಲಗುಗಳೆಲ್ಲವನ್ನೂ ಇನ್‌ವೆಸ್ಟ್‌ಮೆಂಟ್ ಫಂಡಿಗೆ ವರ್ಗಾಯಿಸಲಾಯಿತು.

ಬಂಡವಾಳದ ಲೇಣಿಗಳು.—ಕಳೆದ ವರುಷದ ಪ್ರಾರಂಭದಲ್ಲಿ ನಮ್ಮ ಪ್ರತ್ಯೇಕ ಬಂಡವಾಳದ ಲೇಣಿಗಳು 893 ಲಕ್ಷ ರೂಪಾಯಿ ಇದ್ದದ್ದು ಪ್ರಸಕ್ತ ವರುಷದ ಪ್ರಾರಂಭದಲ್ಲಿ 1,015 ಲಕ್ಷ ರೂಪಾಯಿಯಾಗಿದೆ. ಈ 122 ಲಕ್ಷ ರೂಪಾಯಿನ ವ್ಯತ್ಯಾಸವು 2921-22 ನೆಯ ಸಾಲಿನಲ್ಲಿ ಖರ್ಚಾದ 122 ಲಕ್ಷ ರೂಪಾಯಿನ ಬಂಡವಾಳವನ್ನು ತೋರಿಸುತ್ತದೆ.

ದೇಣಿಗಳು.—1921 ನೆಯ ಜುಲೈ 1ನೆಯ ತಾರೀಖಿನಲ್ಲಿ ನಮ್ಮ ದೇಣಿಯು 309 ಲಕ್ಷ ಇದ್ದದ್ದು 1922 ನೆಯ ಜುಲೈ 1 ನೆಯ ತಾರೀಖಿನಲ್ಲಿ 510 ಲಕ್ಷಕ್ಕೆ ಏರಿತು. ಈ ಎರಡಕ್ಕೂ ವ್ಯತ್ಯಾಸವಿರುವ ಎರಡು ಕೋಟಿಯು ಹೋದವರ್ಷ ಸಾಲ ತೆಗೆದುಕೊಂಡಿದ್ದಾಗಿರುತ್ತದೆ. ಇದಕ್ಕೆ ಹೋಲಿಸಿ ನೋಡಿದಲ್ಲಿ, ಇತರ ಬಾಬುಗಳಲ್ಲಿ ಕಂಡುಬರುವ ವ್ಯತ್ಯಾಸವು ಅಲ್ಪವಾದದ್ದು. ಈ ಎರಡು ವರುಷಗಳ ಪ್ರಾರಂಭದಲ್ಲಿದ್ದ ಶಿಲ್ಕು, ಸಂಬಿಗಳನ್ನು ಹೋಲಿಸಿ ನೋಡುವಬಗ್ಗೆ ಮುಂದಣ ತಖ್ತೆಯಲ್ಲಿ ಕಾಣಿಸಿದೆ.

ಲೇಣಿಗಳ ಮತ್ತು ದೇಣಿಗಳ ತಖ್ತೆ.

	1921ನೆ ಜೂನ್ 30 ನೆ ತಾರೀಖಿನ ಲೆಖ್ಖಗಳು.	1922 ನೆ ಜೂನ್ 30ನೆ ತಾರೀಕಿನ ಹಂಗಾಮಿ ಲೆಖ್ಖಗಳು.
ಲೇಣಿಗಳು—	ರೂ.	ರೂ.
ನಗದು ಶಿಲ್ಕು	1,20,79,335	1,38,65,861
ಇನ್‌ವೆಸ್ಟ್‌ಮೆಂಟ್ ಲೆಖ್ಖ	98,28,046	1,80,27,480
ಬಂಡವಾಳ	8,93,15,934	10,15,35,312
ಮುಂಗಡಗಳು	56,86,700	52,11,347
ಸಾಲಗಳು	26,33,983	21,98499
ರೈಲ್ವೆ ಸ್ಟರ್ಲಿಂಗ್‌ಲೋನ್ ಸಿಂಕಿಂಗ್ ಫಂಡ್ ಇನ್‌ವೆಸ್ಟ್‌ಮೆಂಟ್	1,10,17,358	1,10,17,358
ಜುಮ್ಲಾ	13,05,61,356	15,18,55,857
ದೇಣಿಗಳು—		
ಸಾಲ	3,09,26,140	5,09,77,352
ಇನ್‌ಷೂರೆನ್ಸು ಮತ್ತು ಪ್ರಾವಿಡೆಂಟ್ ಫಂಡುಗಳು	58,91,456	63,67,056
ಸೇವಿಂಗ್ಸ್‌ಬ್ಯಾಂಕ್—		
ಡಿಪಾಜಿಟ್ಟುಗಳು	77,09,810	78,82,718
ಧರ್ಮಾದಾಯ ಮತ್ತು ಇತರ ಲೆಖ್ಖಗಳು	15,74,634	16,39,544
ರಿಜರ್ವ್ ಫಂಡುಗಳು (ಕ್ಷಾಮನಿವಾರಣೆಯ ಇನ್‌ಷೂರೆನ್ಸ್, ಡಿಪ್ರಿಸಿಯೇಷನ್ ವೈನಿಂಗ್ ರೆವಿನ್ಯೂ, ಕ್ಯಾಪಿಟಲೈಜೇಷನ್ ಮತ್ತು ಇತರ ಫಂಡುಗಳು.)	1,58,35,487	1,67,88,647
ಸ್ಥಳೀಯ ಮತ್ತು ಇತರ ಫಂಡುಗಳು	64,28,348	67,58,056
ಠೇವಣಿಗಳು	21,10,875	28,31,967
ವಿವಿಧಭಾಗಗಳು	12,26,286	6,37,693
ಜುಮ್ಲಾ	7,17,03,036	9,38,83,033
ದೇಣಿಗಳಿಗಿಂತ ಲೇಣಿಗಳ ಹೆಚ್ಚುವರಿ	5,88,58,320	5,79,72,824
ಜುಮ್ಲಾ	13,05,61,356	15,18,55,857

ನಾನಾ ಸರ್ಕಾರಿ ಇಲಾಖೆಗಳ ಆಡಳಿತಕ್ಕೆ ಸಂಬಂಧಪಟ್ಟ ಅತಿ ಮುಖ್ಯವಾದ ಅಂಶಗಳನ್ನು ವಾಡಿಕೆಯ ಮೇರೆಗೆ ಒಂದು ಪ್ರತ್ಯೇಕ ಭಾಗದಲ್ಲಿ ಕೊಟ್ಟಿದೆ. ಅದರಲ್ಲಿ ಇದುವರೆಗೆ ಕೊಡುತ್ತಿದ್ದ ಬರೀ ನಿಶ್ಚಗಟ್ಟಿಯ ಮತ್ತು ಲೆಕ್ಕಪಕ್ಕಗಳ ವಿವರಗಳಲ್ಲದೆ ಕೆಲವು ವಿಶೇಷಾಂಶಗಳೂ ನಮೂದಾಗಿರುವುವು. ಈಗ ಶ್ರೀಮನ್ಮಹಾರಾಜರವರ ಸರ್ಕಾರದ ಪರ್ಯಾಲೋಚನೆಯಲ್ಲಿರುವ ಕೆಲವು ಭಾರಿ ವಿಷಯಗಳನ್ನು ಕುರಿತು ವಿಚಾರ ಮಾಡತೊಡಗುವೆವು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಟ್ ಭಂಗಾರದ ಮುಳ್ಳುಳ್ಳ

11 ರಾಯಲ್ ಫೌಂಟನ್‌ಪೆನ್.

ಎಂಬ ಈ ಪೇನಾವನ್ನು ಅಮೇರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರೆಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮುಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

'ಲಿಲ್ಲಿ ಅಫ್ ದಿ ವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮಾನದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮುಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ

ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ.

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ್ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಪತ್ಯದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪುರುಷರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿ ಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿ ಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜ್ಯೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜ್ಯೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,

ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

34 ಬಳ್ಳಾರಿ

೧೯೨೨ನೆಯ ಇಸವಿ ಅಕ್ಟೋಬರ್ ತಾ॥ ೮ ರಿಂದ ೧೯೨೨ ನೆಯ ಅಕ್ಟೋಬರ್ ತಾ॥ ೧೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ನೆಯ ದುಂದುಭಿನಾಮ ಸಂವತ್ಸರದ ಆಶ್ವಯುಜ ಬಹುಳ ಬಿದಿಗೆಯಿಂದ ಆಶ್ವಯುಜ ಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
8	(1) ಭಾನು	ಬಿದಿ	6-9	ಭರ	60	22
9	ಸೋಮ	ತದಿ	9-56	ಭರ	2-50	23
10	ಮಂಗಳ	ಚೌತಿ	12-6	ಕೃತ್ತಿ	6-48	24
11	ಬುಧ	ಪಂಚ	13-13	ರೋಹಿ	9-33	25
12	ಗುರು	ಷಷ್ಠಿ	1-7	ಮೃಗ	11-4	26
13	ಶುಕ್ರ	ಸಪ್ತ	11-45	ಆದ್ರಾ	11-19	27
14	ಶನಿ	ಅಷ್ಟ	9-15	ಪುನ	10-28	28

(1) ಶ್ರೀ ಚಾಮುಂಡೇಶ್ವರೀ ರಥಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವಶಾರಾ ಪಶ್ಯಜ್ಞನಹೃತ್ತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತೇಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಅಕ್ಟೋಬರ್ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೪೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತಿಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶರ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಕತಿಪಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ॥ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,

ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಿನೆಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪಂಕೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡ ಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.

„ ನಂ. 2 ರೂ. 7—8—0.

30 ವಿಳಾಸ—ಎಸ್. ಪಾಲ್ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



12

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.

ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0

„ „ ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,

ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವೃತಪಂಚಕ	೦— ೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯೆಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಸಾಯ್ತೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

39 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡು ಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧ ಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಪ್ರಿಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಪೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಪೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,

12 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಅಕ್ಟೋಬರ್ ತಾ|| ೧೫ನೆಯ ಭಾನುವಾರ.

ಪ್ರಜಾಪ್ರತಿನಿಧಿಸಭೆ.

ಕಳೆದ ಮಂಗಳವಾರ ಸಾಯಂಕಾಲಕ್ಕೆ ಈ ಸಭೆಯ ಕಾರ್ಯಗಳೆಲ್ಲಾ ಮುಗಿದುವು. ಒಟ್ಟು ಸಭೆನಡೆದ 6 ದಿನಗಳಲ್ಲಿ ಅರಿಕೆಗಿಡಲ್ಪಟ್ಟಿದ್ದ ಸಾಮಾನ್ಯವಿಷಯಗಳ ಮತ್ತು ಸ್ಥಳೀಯ ವಿಷಯಗಳ ಚರ್ಚೆಯೆಲ್ಲಾ ಮುಗಿದು ಕೆಲವು ಉಪ (ಸಪ್ಲಿಮೆಂಟರಿ) ವಿಷಯಗಳು ಮಾತ್ರ ಉಳಿದುಹೋದುವು. ಇವುಗಳಿಗೆ ಸರ್ಕಾರದಪ್ಪಣೆಯನ್ನು ಹಿಂದಣಿಂದ ತಾವೇ ಪ್ರಕಟಿಸುವುದಾಗಿ ದಿವಾನರು ಅಪ್ಪಣೆ ಕೊಡಿಸಿದರು. ಚರ್ಚೆಗಿಡಲ್ಪಟ್ಟಿದ್ದ ವಿಷಯಗಳ ವಿಚಾರವನ್ನೆಲ್ಲಾ ಹೀಗೆ ಮುಗಿಯಿಸಿದ ಅಧಿವೇಶನಗಳು ಇದುವರೆಗೆ ಬಹು ವಿರಳವೆಂದೇ ಹೇಳಬಹುದು. ಬೇಸರಿಲ್ಲದೆಯೂ ಸಹನೆಯಿಂದಲೂ ಕೋಪತಾಪಗಳಿಲ್ಲದೆಯೂ ಸಭಾಧ್ಯಕ್ಷರು ಸಭಿಕರ ಅರಿಕೆಗಳನ್ನೆಲ್ಲಾ ಸಾವಧಾನವಾಗಿ ಕೇಳಿ ಯಥೋಚಿತವಾದುತ್ತರಗಳನ್ನು ಕೊಟ್ಟುದು ಪ್ರತಿನಿಧಿಗಳಿಗೆ ಸಂತೃಪ್ತಿಯನ್ನುಂಟುಮಾಡಿದೆ. ಕೆಲಸಾಧಿಕಾರಿಗಳ ಅಲಸತೆಯಿಂದ ಪ್ರಜೆಗಳು ಅನ್ಯಾಯವಾದ ಕಷ್ಟನಷ್ಟಗಳಿಗೆ ಎಷ್ಟುಮಟ್ಟಿಗೆ ಗುರಿಯಾಗುತ್ತಿರುವರೆಂಬ ಸಂಗತಿಯು ಈ ಅಧಿವೇಶನದ ಕಾರ್ಯಕಲಾಪಗಳಿಂದ ನೂತನಮಂತ್ರಿವರ್ಯರಿಗೆ ಚೆನ್ನಾಗಿ ವಿದಿತವಾಗದೆ ಇಲ್ಲ. ಅದರ ಫಲವು ಪ್ರಜೆಗಳಿಗೆ ಎಷ್ಟುಮಟ್ಟಿಗೆ ಉಂಟಾಗುವುದೆಂಬುದನ್ನು ಉತ್ತರತ್ರ ನೋಡಬೇಕಾಗಿದೆ.

ಪತ್ರಿಕಾಶಾಸನ.

ಈ ಅಧಿವೇಶನದಲ್ಲಿ ದೀರ್ಘಕಾಲ ಚರ್ಚೆಗೀಡಾಗಿದ್ದ 3–4 ಮುಖ್ಯ ವಿಷಯಗಳಿದ್ದುವು. ಅವುಗಳಲ್ಲಿ ಹಿಂದಣ 1908ನೆ ವರ್ಷದ ಪತ್ರಿಕಾಶಾಸನವನ್ನು ತೆಗೆದುಬಿಟ್ಟು ಅದರ ಸ್ಥಾನಕ್ಕೆ ಸುಧಾರಿತವಾದ ಮತ್ತೊಂದು ಸೌಮ್ಯಶಾಸನವನ್ನು ಕಲ್ಪಿಸುವ ವಿಷಯವೊಂದಾಗಿದ್ದಿತು. ಈ ನೂತನ ಶಾಸನದ ಸ್ಥೂಲ ವಿವರಣಪತ್ರದಲ್ಲಿ ಕಂಡ ವಿಷಯಗಳನ್ನು ಸಭಿಕರು ಆಲೋಚನೆ ಮಾಡಿದಾಗ್ಗೆ ಹಿಂದಿದ್ದ ಶಾಸನಕ್ಕಿಂತಲೂ ಇದು ಕ್ರೂರತರವಾದುದೆಂದು ಅವರಿಗೆ ತೋರಿಬಂದಿತು. ಹೊಸದಾಗಿ ಪತ್ರಿಕೆಯನ್ನು ಹೊರಡಿಸಲು ಉದ್ದೇಶಪಟ್ಟವರು ಸರ್ಕಾರದವರ ಅಪ್ಪಣೆಯನ್ನು ಪಡೆಯಬೇಕೆಂಬ ನಿರ್ಬಂಧವು ಈ ನೂತನ ಶಾಸನದಿಂದ ತಪ್ಪಿಸಲ್ಪಟ್ಟಿರುವುದರ ಹೊರತು ಪತ್ರಿಕಾಸ್ವಾತಂತ್ರ್ಯಕ್ಕೆ ಪರಿಪೋಷಕವಾದ ಮತ್ತಾವ ವಿಷಯವೂ ಇದರಲ್ಲಿಲ್ಲ. ಮತ್ತೇನೆಂದರೆ—ಹಿಂದಣ ಶಾಸನದಲ್ಲಿ ರಾಜದ್ರೋಹಕರವಾದ ಲೇಖನಗಳೆಂಬುದಷ್ಟೇ ಶಿಕ್ಷಾಪಾತ್ರವೆಂದು ಗೂಢವಾಗಿ ಹೇಳಲ್ಪಟ್ಟಿದ್ದಿತು. ಈಗಲಾದರೊ ರಾಜದ್ರೋಹ ಲೇಖನಗಳ ಸ್ವರೂಪವೆಲ್ಲಾ ವಿವರಿಸಲ್ಪಟ್ಟಿರುವುದರಲ್ಲಿ ಇ|| ಪಿ|| ಕೋಡು 124ನೆ ಎ. 153ನೆ ಎ. ಪ್ರಕರಣಗಳ ಮೇರೆಗೆ ಶಿಕ್ಷಣೀಯವಾದ ವಿಷಯಗಳನ್ನೂ, ಕೋರ್ಟು ಜಡ್ಜಿಗಳಿಗೆ ಭಯಪಡಿಸುವ ಮಾನನಷ್ಟಪಡಿಸುವ ವಿಷಯಗಳನ್ನೂ, ಶ್ರೀಮನ್ಮಹಾರಾಜರಿಗೆ ಅಗೌರವ ಪಡಿಸುವ ವಿಷಯವನ್ನೂ, ಸರ್ಕಾರದವರ ಕಾರ್ಯವನ್ನೋ ಉದ್ದೇಶವನ್ನೋ ಪ್ರಜೆಗಳಿಗೆ ಅಪಾರ್ಥವಾಗಿ ತಿಳಿದುಕೊಳ್ಳುವಂತೆ ದುರಭಿಪ್ರಾಯದಿಂದ ವಿಮರ್ಶಿಸುವ ಲೇಖನಗಳನ್ನೂ, ಸರ್ಕಾರದ ಉದ್ಯೋಗಿಗಳಿಗೆ ಮಾನನಷ್ಟಕರವಾದ-ರಾಜ್ಯಾಡಳಿತದ ವಿಷಯದಲ್ಲಿ ಪ್ರಜೆಗಳಿಗೆ ತಿರಸ್ಕಾರವನ್ನು ಹುಟ್ಟಿಸಲು ಸಾಧಕವಾದ ವಿಷಯಗಳನ್ನೂ ವೃತ್ತಪತ್ರಿಕೆಗಳಲ್ಲಿ ಬರೆದು ಪ್ರಕಟಿಸಿದರೆ ಅದನ್ನು ಮುದ್ರಿಸುವವನೂ ಸಂಪಾದಕನೂ ಪ್ರಕಾಶಕನೂ ಸಹ ಶಿಕ್ಷಾಪಾತ್ರರಾಗುವರೆಂದು ಹೇಳಲ್ಪಟ್ಟಿರುವುದು. ಶಿಕ್ಷಾಸ್ವರೂಪವು ಹೇಗೆಂದರೆ-ಸರ್ಕಾರದವರು ಮೊದಲು ಎಚ್ಚರಿಕೆ ಕೊಡುವುದು, ಇಲ್ಲವೆ ವಿಚಾರಣೆ ನಡೆಯಿಸುವಂತೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅಪ್ಪಣೆ ಕೊಡುವುದು. ಅವರು ಕ್ರಮವಾಗಿ ವಿಚಾರಣೆ ನಡೆಯಿಸಿ, ತಪ್ಪನ್ನು ನಿರ್ಧರಿಸಿದರೆ, ಆ ವರ್ತಮಾನಪತ್ರಿಕೆಯನ್ನು 6 ತಿಂಗಳ ಕಾಲ ಪ್ರಕಟಗೊಳ್ಳದಂತೆ ತಡೆಯ ಅಪ್ಪಣೆಯನ್ನು ಕೊಡುವುದು. ಆ ಅಪ್ಪಣೆಯನ್ನು ಪತ್ರಿಕಾ ಮುದ್ರಾಪಕಾದಿಗಳು ಅಲಕ್ಷ್ಯಮಾಡಿದರೆ ಪತ್ರಿಕೆಯನ್ನೂ ಅದರ ಯಂತ್ರಾದಿ ಸಕಲ ಸಾಮಗ್ರಿಗಳನ್ನೂ ಮುಟ್ಟುಗೋಲು ಹಾಕಿ ಸರ್ಕಾರಕ್ಕೆ ತೆಗೆದುಕೊಂಡು (ಸಸ್ಪೆಂಡ್ ಕಾಲಾವಧಿಯವರೆಗೆ) ಇಟ್ಟುಕೊಳ್ಳುವುದು. ಒಂದುವೇಳೆ ಸಂಪಾದಕಾದಿಗಳು ಕ್ಷಮಾಪಣೆ ಬೇಡಿ ಮುಂದೆ ಅಂಥ ತಪ್ಪನ್ನು ಮಾಡುವುದಿಲ್ಲವೆಂದು ನಿಬಂಧನೆಯ ಪತ್ರವನ್ನು ಬರೆದುಕೊಟ್ಟರೆ ಕ್ಷಮಾರ್ಹರಾಗಬಹುದು. ಶಿಕ್ಷಾರ್ಹವಾದ ವಿಷಯವನ್ನೊಳಗೊಂಡಿರುವ ವೃತ್ತಪತ್ರಿಕೆಯ ಪ್ರತಿಗಳನ್ನು ದಂಡರೂಪವಾಗಿ ಸರ್ಕಾರದವರು ಸ್ವಾಧೀನಪಡಿಸಿಕೊಳ್ಳಬಹುದು. ತದನಂತರ ಅಂಥ ಪತ್ರಿಕೆಗಳು ಹೊರಗೆ ಎಲ್ಲಿ ಸಿಕ್ಕಿದರೂ ಯಾವ ಪೊಲೀಸುದ್ಯೋಗಿಯಾದರೂ ಅವನ್ನು ವಶಪಡಿಸಿಕೊಳ್ಳಬಹುದು. ಅಂಥ ಪತ್ರಿಕೆಗಳು ಮೈಸೂರು ಸೀಮೆಯ ಇಂಥ ಸ್ಥಲದಲ್ಲಿವೆಯೆಂದು ಸಂದೇಹ ತೋರಿದರೆ ಅಂಥ ಮನೆಗಳಿಗೆ ನುಗ್ಗಿ ಪರಿಶೋಧಿಸಲು ಸಬ್‌ಇನ್ಸ್‌ಪೆಕ್ಟರ್ ಪದವಿಗೆ ಕಡಿಮೆಯಿಲ್ಲದ ಯಾವೊಬ್ಬ ಪೊಲೀಸುದ್ಯೋಗಿಗಾದರೂ ಯಾವ ಮ್ಯಾಜಿಸ್ಟ್ರೇಟಾದರೂ ಅಪ್ಪಣೆ ಮಾಡಿ ಕಳುಹಿಸಬಹುದು. ವಿಧಿಸಲ್ಪಟ್ಟ ಶಿಕ್ಷೆಯಮೇಲೆ ಪತ್ರಿಕಾಸಂಪದಕಾದಿಗಳು ಚೀಫ್‌ಕೋರ್ಟಿಗೆ ಅಪ್ಪೀಲನ್ನು 2 ತಿಂಗಳೊಳಗೆ ಮಾಡಿಕೊಳ್ಳಬಹುದು. ಇವೇ ಮಸೂದೆಯಲ್ಲಿ ಕಂಡಿರುವ ಮುಖ್ಯ ವಿಷಯಗಳು.

ಇದರ ಮೇಲೆ ಚರ್ಚೆನಡೆದಾಗ್ಗೆ ಮ|| ಗಳಾದ ಬಿ. ನರಸಿಂಗರಾಯರು, ಸಿ. ಕೃಷ್ಣಮೂರ್ತಿಯವರು, ಎಂ. ಸುಬ್ಬಯ್ಯನವರು, ಎಸ್. ಬಾಲಕೃಷ್ಣರಾಯರು, ಎಚ್. ಕೃಷ್ಣಶಾಸ್ತ್ರಿಗಳು, ಹೊಸಕೊಪ್ಪದ ಕೃಷ್ಣರಾಯರು, ಗೋಪಾಲಸ್ವಾಮಯ್ಯರು ಮೊದಲಾದನೇಕರು ಆಕ್ಷೇಪಣೆ ಮಾಡಿ ನಡೆಯಿಸಿದ ವಾದವೇನೆಂದರೆ—ರೋಗಕ್ಕಿಂತಲೂ ಔಷಧದ ಹಿಂಸೆಯೇ ಹೆಚ್ಚಾಯಿತೆಂಬಂತೆ ಈ ನೂತನ ಶಾಸನಸ್ವರೂಪವಾಗಿದೆ. ಕ್ರಿ. ಪ್ರೊ. 124ಎ. 153ಎ. ಪ್ರಕರಣಗಳಿಂದಲೇ ಕಾರ್ಯಸಿದ್ಧಿಯಾಗುತ್ತಿರುವಾಗ ಈ ಹೊಸಕೋಡು ಅನವಶ್ಯಕ. ಮೊದಲಿದ್ದ ಶಾಸನಕ್ಕಿಂತಲೂ ಇದು ಕಠಿನವಾಗಿದೆ. ಜಡ್ಜರು ಪೊಲೀಸರು ಮೊದಲಾದವರೆಲ್ಲಾ ಸರ್ಕಾರದ ಉದ್ಯೋಗಿಗಳೇ. ಅವರಾರಕಾರ್ಯವನ್ನೂ ವಿಮರ್ಶಿಸಕೂಡದೆಂದು ಈ ಶಾಸನದಿಂದ ವಿದಿತವಾಗುತ್ತದೆ. ಆ ಉದ್ಯೋಗಿಗಳ ಸ್ವಂತ ಕಾರ್ಯವನ್ನು ಯಾರೂ ವಿಮರ್ಶಿಸುವುದಿಲ್ಲ. ಅವರ ಸರ್ಕಾರಿ ಕರ್ತವ್ಯದ ನ್ಯೂನಾತಿರೇಕಗಳನ್ನು ಮಾತ್ರ ವಿಮರ್ಶಿಸುತ್ತಾರೆ. ಅದನ್ನೂ ಕೂಡದೆಂದು ನಿರ್ಬಂಧಪಡಿಸಿದರೆ ಸರ್ಕಾರಕ್ಕೆ ತಮ್ಮ ಉದ್ಯೋಗಿಗಳ ಲೋಪಾಲೋಪಗಳೇ ಗೋಚರಿಸದಂತೆ ಆಗುತ್ತದೆ. ಆಗ ಸರ್ಕಾರವು ಅಂಧವಾಗಿರಬೇಕಾಗುತ್ತದೆ. ನಮ್ಮ ಮಹಾರಾಜರ ಹೆಸರನ್ನು ಈ ಶಾಸನದಲ್ಲಿ ಸೇರಿಸಿದುದು ವಿಷಾದಾಸ್ಪದ. ಈ ದೇಶದ ಪ್ರಜೆಗಳೆಲ್ಲರೂ ಪ್ರಭುಗಳನ್ನು ಪ್ರತ್ಯಕ್ಷದೈವವೆಂದು ತಿಳಿದಿರತಕ್ಕವರು. ಯಾವ ದೇಶದಲ್ಲೂ ವೃತ್ತಪತ್ರಿಕೆಗಳಿರುವುದು ಸರ್ಕಾರದ ನ್ಯೂನಾತಿರೇಕಗಳನ್ನು ಆಕ್ಷೇಪಿಸುವುದಕ್ಕಾಗಿಯೇ. ಸರ್ಕಾರದ ಉದ್ದೇಶವು ಒಂದು ತೆರನಾಗಿರಬಹುದು; ಅದೇ ಪ್ರಜಾಸಾಮಾನ್ಯಕ್ಕೆ ಮತ್ತೊಂದು ತೆರನಾಗಿ ತೋರಬಹುದು. ಅಂಥ ಸಂದರ್ಭದಲ್ಲಿ ಪತ್ರಿಕಾಕರ್ತರು ಸರ್ಕಾರದ ಉದ್ದೇಶವನ್ನು ವಿಮರ್ಶಿಸಿದರೆ ಅದು ಕೂಡ ತಪ್ಪಾಗಿಹೋಗುತ್ತದೆ. ಇಷ್ಟು ಅಪಾಯಸ್ಥಿತಿಯನ್ನು ತಂದಿಡುವುದಕ್ಕಿಂತಲೂ ದೇಶದಲ್ಲಿ ವೃತ್ತಪತ್ರಿಕೆಗಳೇ ಇರಕೂಡದೆಂದು ಮಾಡಿಬಿಡಬಹುದು. ಇದರಿಂದ ಪ್ರಜೆಗಳಿಗೆ ಮಾತ್ರವೇ ಅಲ್ಲದೆ ಸರ್ಕಾರಕ್ಕೂ ನಷ್ಟವುಂಟು. ಬಲಗೈಯಲ್ಲಿ ಕೊಟ್ಟುದನ್ನು ಎಡಗೈಯಲ್ಲಿ ಕಿತ್ತುಕೊಳ್ಳುವುದರ ಜತೆಗೆ ನಮ್ಮಲ್ಲಿದ್ದುದನ್ನೂ ಕಿತ್ತುಕೊಂಡಹಾಗೆ ಈ ನೂತನ ಶಾಸನದಿಂದ ಆಗುತ್ತದೆ. ಆದುಕಾರಣ ಇದು ಶಾಸನವಾಗಕೂಡದು. ಬಹು ಆಕ್ಷೇಪಗಳು ಡಿಸ್ಟ್ರಿಕ್ಟ್ ಅಧಿಕಾರಿಗಳ ಮೇಲೆಯೇ ಇರುತ್ತವೆ. ಇಂಥ ಸಂದರ್ಭದಲ್ಲಿ ಇದರ ವಿಚಾರಣಾಧಿಕಾರವನ್ನು ಅವರಿಗೆ ವಹಿಸುವುದು ಸರಿಯಲ್ಲ. ಡಿಸ್ಟ್ರಿಕ್ಟ್ ಜಡ್ಜರಿಗಾದರೂ ಕೊಡಬೇಕು. ದಂಡಾಧಿಕಾರಿಯಲ್ಲಿ ವಿಚಾರಣೆ ನಡೆದು ಶಿಕ್ಷೆ ವಿಧಿಸಲ್ಪಟ್ಟನಂತರ ಕ್ಷಮಾಪಣೆ ಕೇಳಿಕೊಂಡರೆ ಮನ್ನಿಸಬಹುದೆಂದು ಇರುವುದಕ್ಕಿಂತ ದಂಡಾಧಿಕಾರಿಯ ಕೈಗೆ ಕೊಡುವುದಕ್ಕೆ ಮೊದಲೇ ಕ್ಷಮಾಪಣೆ ಕೇಳಿಕೊಂಡರೆ ಮನ್ನಿಸುವ ಏರ್ಪಾಟಿಡುವುದು ಯುಕ್ತವಾಗಿದೆ. ಈ ಶಾಸನದಿಂದ ಸರ್ಕಾರದ ರಕ್ಷಣೆಯನ್ನು ಮಾತ್ರ ಮಾಡಿಕೊಂಡು ಪ್ರಜಾಭಿಪ್ರಾಯವನ್ನು ತುಳಿದುಬಿಡಲು ಅವಕಾಶಮಾಡಿದಂತಾಗುತ್ತದೆ. ಇಂಡ್ಯಾ ಸರ್ಕಾರದವರೇ ಪತ್ರಿಕಾಶಾಸನವನ್ನು ತೆಗೆದುಹಾಕಿರುವಾಗ ಇಲ್ಲಿ ಇಷ್ಟು ಅತ್ಯಂತ ನಿರ್ಬಂಧಕವಾದ ನೂತನ ಶಾಸನವನ್ನೇರ್ಪಡಿಸುವುದು ಅನುಚಿತ. ಇದನ್ನು ತಪ್ಪಿಸಿಬಿಡಬೇಕಲ್ಲದೆ ನಿಯಮನಿರ್ಮಾಣ ಸಭೆಗೆ ಇದನ್ನು ಇಡಲೇ ಕೂಡದು. ಹಿಂದಣ ಶಾಸನವನ್ನು ತೆಗೆದುಬಿಡಬೇಕು. ಹಿಂದಣ ಶಾಸನವಿದ್ದಾಗ ಪತ್ರಿಕಾ ಸಂಪಾದಕರು ಅಷ್ಟೂ ಇಷ್ಟು ಧೈರ್ಯದಿಂದ ಬರೆಯುತ್ತಿದ್ದರು. ಈಗ ಯಾವುದನ್ನು ಬರೆಯುವುದಕ್ಕೂ ಈ ಶಾಸನದಿಂದ ಧೈರ್ಯವೇ ಇಲ್ಲದ ಹಾಗಾಗುತ್ತದೆ. ಸರ್ಕಾರಿ ಉದ್ಯೋಗಿಗಳೂ ಪ್ರಜೆಗಳೂ ಎಲ್ಲಾ ಒಂದೇ. ಎಲ್ಲರೂ ಮಾಡುವುದು ದೇಶಸೇವೆಯೇ. ಸರ್ಕಾರದ ಉದ್ಯೋಗಿಗಳು ಮಾಡುವ ತಪ್ಪನ್ನು ಹೊರಹಾಕದಿದ್ದರೆ ಅವುಗಳ ಪರಿಹಾರವಾಗುವುದು ಹೇಗೆ? ಪತ್ರಿಕಾಕರ್ತರಾರೂ ಈ ಉದ್ಯೋಗದಿಂದ ಧನಿಕರಾಗುವಂತಿಲ್ಲ; ನಷ್ಟಪಟ್ಟುಕೊಂಡೇ ದೇಶಹಿತಾರ್ಥವಾಗಿ ಈ ಕೆಲಸವನ್ನು ಸಾಗಿಸುತ್ತಾರೆ. ಇಂಥ ಭಯೋತ್ಪಾದಕ ಶಾಸನವು ಬೇರೆ ಅವರ ಬೆನ್ನು ಹತ್ತಿದರೆ ಯಾರೂ ಇದಕ್ಕೆ ಹೆಗಲು ಕೊಡುವವರೇ ಇಲ್ಲದಂತಾಗುತ್ತದೆ. ಸಬ್ ಇನ್ಸ್‌ಪೆಕ್ಟರು ಕೂಡ ಪತ್ರಿಕಾಸಂಪಾದಕರ ಮೇಲೆ ಕಾರ್ಯಭಾಗ ಮಾಡಬಹುದಾದರೆ ಅವರ ಗೌರವವು ಎಷ್ಟುಮಟ್ಟಿಗೆ ಉಳಿಯಬಹುದು? ಪತ್ರಿಕೆಯ ಸಂಪಾದಕರಾದವರಿಗೆ ಸಾಮಾನ್ಯ ಮನುಷ್ಯರಿಗಿರುವಷ್ಟು ಸ್ವಾತಂತ್ರ್ಯವು ಕೂಡ ಇರಬಾರದೆಂದು ಈ ಶಾಸನದಿಂದ ವಿಧಿತವಾಗುತ್ತದೆ. ಎಚ್ಚರಿಕೆ ಕೊಡುವುದು ಕೂಡ ಒಂದು ಶಿಕ್ಷೆಯೇ. ಜುಡಿಷಿಯಲ್ ವಿಚಾರಣೆಯಾದನಂತರವೇ ಎಚ್ಚರಿಕೆಕೊಡುವ ಏರ್ಪಾಡಿರುವುದು ಉಚಿತ. ಈ ಶಾಸನದಿಂದ ಸರ್ಕಾರದ ಉದ್ಯೋಗಿಗಳಲ್ಲಿ ನಿರ್ಭೀತಿ ನಿರಂಕುಶತ್ವಗಳು ಹೆಚ್ಚಲು ಅವಕಾಶವಾಗುತ್ತದೆ. ಹಿಂದಣ ಶಾಸನದಲ್ಲಿದ್ದ ಗಡೀಪಾರು ಲೈಸೆನ್ಸ್ ಎಂಬಿವೆರಡು ಮಾತ್ರ ಇದರಲ್ಲಿ ತಪ್ಪಿವೆ. ಅಷ್ಟು ಮಾಡಿಬಿಟ್ಟಿದ್ದರೆ ಸಾಕಾಗಿತ್ತು. ಹಿಂದಣ ಶಾಸನವು ಹುಟ್ಟಿದ ಮೇಲೆ 8 ವೃತ್ತಪತ್ರಿಕೆಗಳು ನಿಂತುಹೋದವು. ಈ ಶಾಸನವು ಏರ್ಪಟ್ಟ ಮೇಲೆ ಇನ್ನೆಷ್ಟು ನಿಂತುಹೋಗುತ್ತವೋ. ಆಗ್ಗೆ ಮೈಸೂರು ದೇಶೀಯರು ಹೊರಗಣ ಪತ್ರಿಕೆಗಳನ್ನೇ ನಂಬಿಕೊಂಡಿರಬೇಕಾಗುತ್ತದೆ. ಹಾಗೆ ಮಾಡಿಡುವುದು ನಾಗರಕ ರಾಜ್ಯಭಾರಕ್ರಮಕ್ಕೆ ಒಪ್ಪುವುದಿಲ್ಲ. ಒಂದು ವೇಳೆ ಇದನ್ನು ಶಾಸನವನ್ನಾಗಿಯೇ ಮಾಡಿದ್ದರೆ ರುಜುವಾತು ಮಾಡಿಕೊಡುವ ಭಾರವನ್ನು ಫಿರ್ಯಾದಿಯ ಮೇಲೆ ಹೊರಿಸಬೇಕು'' ಇತ್ಯಾದಿಯಾಗಿ ವಾದಿಸಿದರು.

ಮ|| ಜಿ. ಪರಮಶಿವಯ್ಯನವರು ಈ ನೂತನ ಶಾಸನವು ಅನವಶ್ಯಕವೆಂದು ಪ್ರತಿಪಾದಿಸುವಾಗ್ಗೆ-ಲೈಸೆನ್ಸ್ ಪಡೆದೇ ನೂತನ ಪತ್ರಿಕೆಯನ್ನು ಪ್ರಕಟಿಸಬೇಕೆಂಬ ನಿರ್ಬಂಧವನ್ನು ತಪ್ಪಿಸಲಾಗದು. ಅದರಿಂದ ಪತ್ರಿಕಾ ಸ್ವಾತಂತ್ರ್ಯಕ್ಕೆ ಭಂಗವೇನೂ ಬರುವುದಿಲ್ಲ. ಆ ನಿರ್ಬಂಧವಿಲ್ಲದೆ ಹೋದರೆ ಅರ್ಹತೆಯಿಲ್ಲದಂಥ ಯಕಶ್ಚಿತ್ತರೆಲ್ಲಾ ಮನಸ್ಸಿಗೆ ಬಂದಂತೆ ಪತ್ರಿಕೆಗಳನ್ನು ಹೊರಡಿಸಬಹುದು. ಈಗಿರುವ ಪಿನಲ್‌ಕೋಡಿನಿಂದಲೇ ಇಷ್ಟಸಿದ್ಧಿಯನ್ನು ಮಾಡಿಕೊಳ್ಳಬಹುದಾಗಿರುವಾಗ ಸ್ಪೆಷಲ್ ಕೋರ್ಟು ಮೊದಲಾದುವುಗಳ ಕಲ್ಪನೆಯು ಅನವಶ್ಯಕ. ನಾಗರಕತೆಗೂ ದೇಶಾಭಿಮಾನಕ್ಕೂ ಪ್ರತಿಬಂಧವನ್ನುಂಟುಮಾಡುವ ಶಾಸನವನ್ನೇರ್ಪಡಿಸಕೂಡದು'' ಎಂದು ಹೇಳಿದರು. ಈ ಲೈಸೆನ್ಸ್ ಪದ್ಧತಿಯನ್ನಿಡಬಹುದೆಂಬುದನ್ನು ಇನ್ನೂ ಅನೇಕ ಪ್ರತಿನಿಧಿಗಳು ಅನುಮೋದಿಸಿದರು.

ಮಿ|| ಮಹಮ್ಮದ್ ಅಬ್ಬಾಸ್‌ಖಾನರು, ಮ|| ಕೆ. ಸಂಜೀವಯ್ಯನವರೇ ಮೊದಲಾದ ಕೆಲವರು—ಪತ್ರಿಕಾಶಾಸನವೊಂದಿರುವುದು ಅವಶ್ಯಕವೆಂಬ ವಿಷಯವನ್ನು ಪ್ರತಿಪಾದಿಸಿ ಹೀಗೆ ಹೇಳಿದರು.—"ಇಂಥ ಶಾಸನದ ಅವಶ್ಯಕತೆಯೇ ಇಲ್ಲದೆ ಪತ್ರಿಕೆಗಳನ್ನು ನಡೆಯಿಸುವಂಥ ಸ್ಥಿತಿಗೆ ನಮ್ಮದೇಶವು ಇನ್ನೂ ಬಂದಿಲ್ಲ. ಅನೇಕಮಂದಿ ಪತ್ರಿಕಾಸಂಪಾದಕರು ತಮ್ಮ ಉತ್ತರವಾದಿತ್ವವು ಎಂತಹದೆಂಬುದನ್ನು ತಿಳಿದುಕೊಂಡು ಕೆಲಸಮಾಡುತ್ತಾ ಇಲ್ಲ. ಇನ್ನೂ ಹತ್ತಾರುವರ್ಷಗಳು ಕಳೆದು ಸಾಂಕುಶವಾಗಿ ಪತ್ರಿಕೆಗಳು ನಡೆಯುವಂಥ ಸ್ಥಿತಿಯು ಬಂದಾಗ ಇದನ್ನು ತಪ್ಪಿಸಬಹುದು. ಆದರೆ ಮಾಡಲ್ಪಡುವ ಶಾಸನವು ಬಹಳ ಕ್ರೂರವಾಗಿಯೂ ಪತ್ರಿಕಾ ಸ್ವಾತಂತ್ರ್ಯಕ್ಕೆ ಸಂಪೂರ್ಣ ಭಂಗತರತಕ್ಕುದಾಗಿಯೂ ಇರಬಾರದು. ಈಗಣ ಮಸೂದೆಯಲ್ಲಿ ಅಂಥ ತೀಕ್ಷ್ಣವಾದ ನಿಯಮವೇನೂ ಇಲ್ಲವೆಂದು ತೋರುತ್ತದೆ. ಶ್ರೀಮನ್ಮಹಾರಾಜರ ಹೆಸರು ಶಾಸನದಲ್ಲಿರಬೇಕಾದುದೇ ಯುಕ್ತವು. ಈಚೆಗೆ ಕೆಲವು ಪತ್ರಿಕೆಗಳಲ್ಲಿ ಅಸಹ್ಯಕರವೂ ವಿಪರೀತವೂ ಆದ ಲೇಖನಗಳು ಬರೆಯಲ್ಪಟ್ಟಿದ್ದ ಸಂಗತಿಯನ್ನು ಈ ಸಭೆಯಲ್ಲೇ ತಿಳಿಯಿಸಲಾಗಿದೆ. ಆದುದರಿಂದ ಸ್ವಲ್ಪ ನಿರ್ಬಂಧವಿರಬೇಕಾದುದು ಅವಶ್ಯಕ. ಹೋದವರ್ಷದ ಮೊಹರಂ ಕಾಲದಲ್ಲಿ ಮಹಮ್ಮದೀಯರು ದಂಗೆ ನಡೆಯಿಸುತ್ತಾರೆಂದು ಪತ್ರಿಕೆಯಲ್ಲಿ ಸುಳ್ಳು ಪ್ರಕಟಿಸಿಬಿಟ್ಟರು. ಅದರಿಂದ ಮಹಮ್ಮದೀಯರಿಗುಂಟಾದ ಅಗೌರವವನ್ನೂ ಅಸಮಾಧಾನವನ್ನೂ ಕುರಿತು ಪ್ರಭುಗಳಿಗೆ ಬಿನ್ನಯಿಸಿಕೊಳ್ಳಬೇಕಾಯಿತು. ಮುದ್ರಣಶಾಸನವಿದ್ದಾಗಲೇ ಹೀಗೆಲ್ಲಾ ನಡೆದಿರುವಾಗ, ನಿರ್ಬಂಧಶಾಸನವೇ ಇಲ್ಲದೆ ಹೋದರೆ ಎಷ್ಟು ಅನರ್ಥವಾಗುವುದೆಂಬುದನ್ನು ವಿಚಾರಮಾಡತಕ್ಕುದಾಗಿದೆ. ಆದುಕಾರಣ ಒಂದು ನಿರ್ಬಂಧಶಾಸನವು ಇದ್ದೇ ಇರಬೇಕು.''

ಹೀಗೆನಡೆದ 2 ಪಕ್ಷಗಳ ವಾದೋಪವಾದಗಳನ್ನೂ ದಿವಾನರು ಕೇಳಿ, ಈ ಮಸೂದೆಯನ್ನು ತಪ್ಪಿಸಿಬಿಟ್ಟು ಒಂದು ಉಪಸಂಘದವರ ವಿಚಾರಣೆಗೆ ಇದನ್ನೊಪ್ಪಿಸಿ, ಅವರಿಂದ ಸುಧಾರಿತವಾಗಿಬಂದ ಮಸೂದೆಯನ್ನು ನಿಯಮನಿರ್ಮಾಣ ಸಭೆಯ ಮುಂದೆ ಇಡುವುದಾಗಿ ಅಪ್ಪಣೆಮಾಡಿದರು.

ಸದ್ಯದಲ್ಲಿ ಹಿಂದಿದ್ದ ಶಾಸನವನ್ನು ತೆಗೆದುಬಿಟ್ಟು ಸುಧಾರಿತ ಶಾಸನವೊಂದನ್ನು ಅದರ ಸ್ಥಾನದಲ್ಲಿಡಬೇಕೆಂಬುದೇ ಶ್ರೀಮನ್ಮಹಾರಾಜರ ಮತ್ತು ಅವರ ಸರ್ಕಾರದವರ ಇಷ್ಟವಾಗಿರಬೇಕೆಂಬುದಕ್ಕೆ ಸಂಶಯವಿಲ್ಲ. ನಿರ್ಬಂಧ ಶಾಸನವಿರಬೇಕಾದುದು ಅವಶ್ಯಕವೆಂಬುದು ಕಳೆದ 2–3 ವರ್ಷಗಳಲ್ಲಿ ನಮ್ಮ ದೇಶದ ವೃತ್ತಪತ್ರಿಕಾಸಾಮ್ರಾಜ್ಯದಲ್ಲಿ ನಡೆದಿರುವ ಲೇಖನ ಪರಂಪರೆಗಳನ್ನು ನೋಡಿದವರಿಗೆಲ್ಲಾ ಗೊತ್ತಾಗದೆ ಹೋಗದು. ಜಾತಿಮತದ್ವೇಷದಿಂದ ಪರರ ಗುಣವನ್ನೂ ದೋಷವನ್ನಾಗಿಯೇ ಭಾವಿಸಿ ವಿಮರ್ಶಿಸುವ ಕ್ಷುಲ್ಲಕತನವು ಎಷ್ಟುಮಟ್ಟಿಗೆ ಕೆಲವರಲ್ಲಿ ಮನೆಮಾಡಿಕೊಂಡಿದೆಯೆಂಬುದೂ, ಇಂಥ ಸಂದರ್ಭದಲ್ಲಿ ಪ್ರಭುಗಳನ್ನೂ ಅವರ ವರ್ಗೀಯರನ್ನೂ ಕೂಡ ಬ್ರಹ್ಮದ್ವೇಷಿಗಳು ಎಂದು ಮೊದಲಾಗಿ ಸಂಬೋಧಿಸಿ, ವ್ಯಾಜಾಂತರ ರೂಪಾಂತರಗಳಿಂದ ದೂಷಿಸುವುದು ಸಹ ವ್ಯಕ್ತಗೊಂಡಿದೆ. ಅದರಿಂದಲೇ "ಕೆಲವು ವರ್ತಮಾನ ಪತ್ರಿಕೆಗಳ ಸ್ವಭಾವವನ್ನೂ ರೀತಿಯನ್ನೂ ನೋಡಿ ಡಿ. ಕ್ಲಾಸನ್ನು (ಶ್ರೀಮನ್ಮಹಾರಾಜರಿಗೆ ಅಗೌರವವನ್ನುಂಟುಮಾಡುವ ಸಂಗತಿಗಳನ್ನು ಬರೆಯುವುದು ಅಪರಾಧ ಎಂಬುದನ್ನು) ಸೇರಿಸಬೇಕಾಯಿತು'' ಎಂದು ಈ ಶಾಸನ ಕಲ್ಪನೆಯ ಉದ್ದೇಶ ವಿವರಣದಲ್ಲಿ ಪ್ರಭುತ್ವದವರು ಸ್ಪಷ್ಟವಾಗಿ ಹೇಳಿದ್ದಾರೆ. ಅತಿ ಕ್ರೂರನಿಬಂಧನೆಗಳಿಲ್ಲದ-ಬೆದರಿಕೆಗೆ ಮಾತ್ರ ಸಾಧಕವಾದ-ನಿರ್ಬಂಧಶಾಸನವೊಂದು ಇರುವುದೇ ಅವಶ್ಯಕವೆಂದು ನಾವು ಅಭಿಪ್ರಾಯಪಡುತ್ತೇವೆ. ಹಿಂದಣ ಶಾಸನವಿದ್ದರೂ ಬರಿಯ ಭೀತಿಯಿದ್ದಿತೇ ಹೊರತು ಅದರ ಪ್ರಕಾರ ಕೆಲ ಉಚ್ಛೃಂಖಲ ಪ್ರವರ್ತಕ ಸಂಪಾದಕರಿಗೆ ಎಚ್ಚರಿಕೆ ಕೊಡುವುದರ ಹೊರತು ಮತ್ತಾವ ಶಿಕ್ಷೆಯೂ ಕಳೆದ 14 ವರ್ಷಗಳ ಕಾಲದಲ್ಲೂ ಕೊಡಲ್ಪಟ್ಟುದಿಲ್ಲ. ಸದುದ್ದೇಶದಿಂದಲೂ ರಾಜಭಕ್ತಿಯಿಂದಲೂ ದೇಶಹಿತೈಕ ದೃಷ್ಟಿಯಿಂದಲೂ ನ್ಯಾಯವಾಗಿ ಗುಣದೋಷಗಳನ್ನು ವಿಮರ್ಶಿಸುವ ಸಂಕಲ್ಪವನ್ನು ನಿಜವಾಗಿ ಇಟ್ಟುಕೊಂಡಿರುವ ಪತ್ರಕರ್ತರಿಗೆ ಎಷ್ಟು ಕಠಿನತರ ಶಾಸನಗಳಿದ್ದರೆ ತಾನೇ ಬಾಧಕವೇನು? ಅಪ್ಪಣೆ ಚೀಟಿಯನ್ನು ಪಡೆದೇ ಪತ್ರಿಕೆಯನ್ನು ಪ್ರಕಟಿಸಬೇಕೆಂಬ ನಿರ್ಬಂಧವುಳ್ಳ ನೂತನ ಶಾಸನವು ಇದ್ದೇ ತೀರಬೇಕು. ಮತ್ತು ಈಗಣ ಮಸೂದೆಯಲ್ಲಿ ಕಂಡ ಡಿ|| ಮೇಜಿಸ್ಟ್ರೇಟರಲ್ಲಿ ವಿಚಾರಣೆ ನಡೆಯುವುದು, ಯಾವ ಮೇಜಿಸ್ಟ್ರೇಟಾದರೂ ವಾರಂಟನ್ನು ಹೊರಡಿಸಬಹುದೆಂಬುದು, ಪೊಲೀಸ್ ಸಬ್ ಇನ್ಸ್‌ಪೆಕ್ಟರು ಕೂಡ ಕಾರ್ಯಭಾಗ ನಡೆಯಿಸಬಹುದೆಂಬುದು, ಶಿಕ್ಷಾನಂತರವೇ ಕ್ಷಮಾಪಣೆಗೆ ಅವಕಾಶಕೊಟ್ಟಿರುವುದು-ಇತ್ಯಾದಿ ಕ್ರೂರ ನಿಬಂಧನೆಗಳು ಮಾತ್ರ ಇರಬಾರದು ಎಂಬುದೇ ಈ ವಿಷಯದಲ್ಲಿ ನಮ್ಮಭಿಪ್ರಾಯವಾಗಿರುತ್ತದೆ.

ನೂತನ ರಾಜಕೀಯಸುಧಾರಣೆಗಳು:—

ಈಗಣ ರಾಜ್ಯಭಾರಕ್ರಮದಲ್ಲಿ ಪ್ರಜೆಗಳ ಅಭಿಪ್ರಾಯಕ್ಕೆ ಹೆಚ್ಚು ಬಲವನ್ನು ಕೊಟ್ಟು ಅದನ್ನಂಗಪಡಿಸಿಕೊಳ್ಳಬೇಕೆಂಬುದು ಶ್ರೀಮನ್ಮಹಾರಾಜರ ವಿಚಕ್ಷಣವಾದ ಮತ್ತು ದಯಾಪೂರಿತವಾದ ಅಭಿಪ್ರಾಯವಾಗಿರುವುದರಿಂದಲೂ, ಪ್ರಜೆಗಳ ಇಷ್ಟವು ಕೂಡ ಅದೇ ಆಗಿರುವುದರಿಂದಲೂ, ಅವುಗಳ ಸಾಫಲ್ಯವನ್ನುಂಟುಮಾಡಿಕೊಡತಕ್ಕ ರಾಜಕೀಯ ಸುಧಾರಣ ಕ್ರಮವನ್ನು ಈಸಲದ ಅಧಿವೇಶನದಲ್ಲಿ ತಮ್ಮ ಮಂತ್ರಿವರ್ಯರ ಮುಖತಃ ಶ್ರೀಮನ್ಮಹಾರಾಜರು ಅಪ್ಪಣೆಮಾಡಿಸಿರುತ್ತಾರೆ. ಅದರ ವಿವರಣವನ್ನು ಇದೇ ಸಂಚಿಕೆಯ ಬೇರೆಕಡೆಯಲ್ಲಿ ಮುದ್ರಿಸಿರುತ್ತೇವೆ. ಇದರ ಮೇಲೆ ಸಭೆಯಲ್ಲಿ ಅಭಿಪ್ರಾಯಗಳು ಹೊರಪಟ್ಟುದರಲ್ಲಿ—ಇದರಿಂದ ದೊರೆದ ಅಧಿಕಾರವು ಸ್ವಲ್ಪ ಮಾತ್ರವೇ ಎಂದು ಕೆಲವರು ಅಭಿಪ್ರಾಯಪಟ್ಟರೂ, ಬಹುಜನರು ಇದಕ್ಕೆ ಪರಿತೃಪ್ತಿಪಟ್ಟು ತಮ್ಮ ಸಂತೋಷ ಕೃತಜ್ಞತೆಗಳನ್ನು ಶ್ರೀಮನ್ಮಹಾರಾಜರಿಗೆ ಬಿನ್ನಯಿಸಬೇಕೆಂದು ಮಂತ್ರಿವರ್ಯರಿಗೆ ಅರಿಕೆಮಾಡಿಕೊಂಡರು. ನಿಯಮನಿರ್ಮಾಣ ಸಭೆಯ ಸಭಾಸ್ತಾರರ ಸಂಖ್ಯೆಯನ್ನು 40ಕ್ಕೆ ಕಡಿಮೆಯಿಲ್ಲದೆಯೂ 50ಕ್ಕೆ ಹೆಚ್ಚಿಲ್ಲದಂತೆಯೂ ಮಾಡಲು ಈ ಸಂದೇಶದಿಂದ ಏರ್ಪಡಿಸಿರುವಾಗ, ಪ್ರಜಾಪ್ರತಿನಿಧಿ ಸಭೆಯ ಸಭಿಕರ ಸಂಖ್ಯೆಯನ್ನು 280ರಿಂದ 200ಕ್ಕೆ ಇಳಿಯಿಸುತ್ತೇವೆಂದು ಸೂಚಿಸಲ್ಪಟ್ಟಿರುವುದಕ್ಕೆ ಮಾತ್ರ ಅನೇಕರು ಅಸಮಾಧಾನವನ್ನು ವ್ಯಕ್ತಪಡಿಸಿದರು. "ಓಟು'' ಕೊಡುವವರ ಸಂಖ್ಯೆಯು ಹೆಚ್ಚುವುದಕ್ಕೆ ಈಗ ಅವಕಾಶವನ್ನು ಕಲ್ಪಿಸಿದ ಬಳಿಕ ಸಭಿಕರ ಸಂಖ್ಯೆಯೂ 300ಕ್ಕಾದರೂ ಹೆಚ್ಚಲೇ ಬೇಕು. ಹೀಗಿರುವಾಗ ಸಂಖ್ಯೆಯನ್ನು ಕಡಿಮೆಮಾಡುವುದರಿಂದ ಸರ್ಕಾರದ ವ್ಯಯಭಾರವು ಸ್ವಲ್ಪ ಕಡಿಮೆಯಾಗುವುದರ ಹೊರತು ಮತ್ತಾವ ಲಾಭವೂ ತೋರಿಬರುವುದಿಲ್ಲವೆಂಬುದೇ ಅವರ ವಾದವು. ಮುಖ್ಯವಾಗಿ ಸರ್ಕಾರಕ್ಕೆ ಕಂದಾಯವನ್ನು ತೆರುವ ಪ್ರಜೆಗಳ ಅಭಿಪ್ರಾಯವೇ ಇಲ್ಲದೆ ಸರ್ಕಾರದ ಉದ್ಯೋಗಿಗಳು ತಮ್ಮ ಇಷ್ಟಬಂದಂತೆ ಬೊಕ್ಕಸದ ಹಣವನ್ನು ವೆಚ್ಚಮಾಡುತ್ತಿದ್ದ ಅನರ್ಥವು ತಪ್ಪಬೇಕಾದುದು ಅವಶ್ಯಕವಾಗಿದ್ದಿತು. ಅಂಥ ಏರ್ಪಾಟಿಲ್ಲದ ಕಾರಣದಿಂದಲೇ ನಷ್ಟಕಾರಿಯಾದ ಮತ್ತು ಸಾಲಕ್ಕೆ ತಲೆಕೊಡಬೇಕಾದ ಭದ್ರಾವತೀ ಯಂತ್ರಾಲಯ ಪ್ರತಿಷ್ಠಾಪನೆ ಕೃಷ್ಣರಾಜಸಾಗರದ ಸ್ಥಾಪನೆಗಳಂಥ ಮಹಾಕಾರ್ಯಗಳನ್ನು ಕಟ್ಟಿಕೊಂಡು ಒದೆದಾಡುವ ಸ್ಥಿತಿಯು ಪ್ರಾಪ್ತವಾಗಿದೆಯೆಂಬ ಸಂಗತಿಯನ್ನು ನಾವು ಕಳೆದ ಏಪ್ರಿಲ್ ತಾ|| 23ರ ಸ್ಟಾರ್ ಪತ್ರದಲ್ಲಿ ಸ್ಪಷ್ಟವಾಗಿ ಬರೆದು ಇಂಥ ಅಧಿಕಾರವನ್ನು ಪ್ರಜೆಗಳಿಗೆ ಕೊಡುವಂಥ ರಾಜಕೀಯ ಸುಧಾರಣೆಯುಂಟಾಗಬೇಕೆಂದು ತಿಳಿಯಿಸಿದ್ದೆವು. ಈಗಣ ಸುಧಾರಣೆಯಿಂದ ರಾಜ್ಯಾಡಳಿತದ ವಿಷಯಗಳ ಮೇಲೂ, ಸಂಸ್ಥಾನದ ಪ್ರತಿವರ್ಷದ ಬಜೆಟ್ಟಿನ ಮೇಲೂ ನಿರ್ಣಯಗಳನ್ನು ಸೂಚಿಸುವ ಅಧಿಕಾರವು ದೊರೆದಿರುವುದು ಮಾತ್ರವೇ ಅಲ್ಲದೆ, ಹೊಸತೆರಿಗೆ ಯಾವುದನ್ನು ವಿಧಿಸಬೇಕಾದರೂ ಪ್ರಜಾಪ್ರತಿನಿಧಿ ಸಭೆಯ ಆಲೋಚನೆಯನ್ನು ಕೇಳದೆ ವಿಧಿಸುವುದಿಲ್ಲವೆಂದೂ, ಪ್ರತಿಯೊಂದು ಶಾಸನ ಕಲ್ಪನೆಯ ಸಂದರ್ಭದಲ್ಲೂ ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡೇ ತೀರುವೆವೆಂದೂ ಹೇಳಿ ಕಲ್ಪಿಸಿಕೊಟ್ಟಿರುವ ಅಧಿಕಾರಗಳು ವಿಶೇಷಗಳಾಗಿರುತ್ತವೆ. ಮ|| ಎಂ. ಸುಬ್ಬಯ್ಯನವರು ಇದರ ಅಭಿನಂದನ ಭಾಷಣಸಂದರ್ಭದಲ್ಲಿ ಹೇಳಿದಂತೆ ಈ ಸುಧಾರಣೆಯು ಪ್ರಜೆಗಳು ನಿರೀಕ್ಷಿಸಿಕೊಂಡಿದ್ದುದಕ್ಕಿಂತಲೂ ಹೆಚ್ಚಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುತ್ತದೆ ಯೆಂಬುದು ನಿಜವಾಗಿದೆ. ಆದರೆ ಸಭೆಯು ಮಾಡಿದ ನಿರ್ಧಾರವನ್ನು ಶಿಫಾರಸ್ ರೂಪವಾಗಿ ಮಾತ್ರ ಪರಿಗ್ರಹಿಸದೆ ಖಂಡಿತವಾಗಿ ಅಂಗೀಕರಿಸುವಂತೆಯೇ ಏರ್ಪಡಬೇಕು. ಪ್ರಜಾಭಿಪ್ರಾಯಕ್ಕೆ ಗೌರವಕೊಟ್ಟು ಕಾಲೋಚಿತವಾದ ಸುಧಾರಣೆಗಳನ್ನು ಮಾಡುವಲ್ಲಿ ಶ್ರೀಮನ್ಮಹಾರಾಜರೂ ಅವರ ಪ್ರಭುತ್ವದವರೂ ತೋರಿಸಿದ ಉದಾರಭಾವಗಳಿಗಾಗಿ ನಾವು ಸಂತೋಷದಿಂದ ಅಭಿವಂದಿಸುವೆವು. ಇಂಥ ನೂತನಾಧಿಕಾರವು ಈ ಸಭೆಗೆ ಅತ್ಯವಶ್ಯಕವಾಗಿದ್ದಿತು. ಅದನ್ನು ಈ ಸಭೆಯು ತನ್ನ ವಿಚಕ್ಷಣವಾದ ಕಾರ್ಯಸಾಮರ್ಥ್ಯದಿಂದ ಸಫಲಪಡಿಸಿ ಉತ್ತರತ್ರ ಇನ್ನೂ ವಿಶಿಷ್ಟತರವಾದ ಅಧಿಕಾರಗಳನ್ನು ಪಡೆದುಕೊಂಡೀತೆಂಬುದಕ್ಕೆ ಸಂಶಯವಿಲ್ಲ.

ಸಭೆಯ ಸಭಿಕರ ಸಂಖ್ಯೆಯನ್ನು ತಗ್ಗಿಸುವುದು, ಸ್ಥಳೀಯ ವಿಷಯಗಳನ್ನೆಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲೇ ಚರ್ಚೆಯಾಗುವಂತೆ ಮಾಡಿ ಇಲ್ಲಿಗೆ ಬರಗೊಡಿಸದಿರುವುದು, ಅಂಗೀಕೃತಸಂಘಗಳ ಪ್ರಾತಿನಿಧ್ಯ, ಸಭಾರಚನೆ-ಇತ್ಯಾದಿ ವಿಷಯಗಳಲ್ಲಿ ಭಿನ್ನಭಿನ್ನಾಭಿಪ್ರಾಯಗಳಿರುತ್ತವೆ. ಇವುಗಳಿಗೆ ಸಂಬಂಧಪಟ್ಟ ನಿಯಮಗಳನ್ನೆಲ್ಲಾ ಪೂರ್ವಾಪರ ವಿಚಾರದಿಂದ ನಿರ್ಧರಿಸಬೇಕಾಗಿರುತ್ತದೆ. ಆ ನಿರ್ಧಾರ ಮಾಡುವುದಕ್ಕಾಗಿ ಒಂದು ಸಂಘವನ್ನು ಏರ್ಪಡಿಸಿದ್ದಾರೆ. ಶ್ರೀಮನ್ಮಹಾರಾಜರವರಿಂದ ಅಂಗೀಕೃತವಾದ ಅದರ ಸಭಿಕರನ್ನು ಕಡೆಯದಿನದ ಸಭೆಯಲ್ಲಿ ದಿವಾನರು ಅಪ್ಪಣೆ ಕೊಡಿಸಿದರು. ಆ ಸಭೆಯಲ್ಲಿ ಒಟ್ಟು 12 ಮಂದಿ ಸಭಿಕರಿದ್ದಾರೆ. ಇದರಲ್ಲಿ ಸರ್ಕಾರದ ಉದ್ಯೋಗಿಗಳೂ ಅನುದ್ಯೋಗಿಗಳೂ ಸಹ ಸಮಾರ್ಧಭಾಗವಾಗಿದ್ದಾರೆ. ವಿಶ್ವವಿದ್ಯಾಲಯದ ವೈಸ್‌ಚಾನ್ಸಲರಾದ ಮ|| ಬ್ರಜೇಂದ್ರನಾಥಸೀಲ್‌ರವರು ಅಧ್ಯಕ್ಷರಾಗಿ ಮಾಡಲ್ಪಟ್ಟಿದ್ದಾರೆ. ರೆ|| ಕಮಿಷನರ್ ಮ|| ಕೆ. ಶ್ರೀನಿವಾಸಯ್ಯಂಗಾರರು, ಫೈನಾನ್ಷಿಯಲ್ ಸೆಕ್ರೆಟರಿ ರಾಜಕಾರ್ಯಪ್ರಸಕ್ತ ಮ|| ಎಂ. ಎನ್. ಕೃಷ್ಣರಾವ್‌ರವರು, ಮದದ್ರವ್ಯಶಾಖೆಯ, ಮುಖ್ಯಾಧಿಕಾರಿಗಳಾದ ಮಿ|| ಕೆ. ಚಾಂಡಿಯವರು, ಚೀಫ್‌ಸೆಕ್ರೆಟರಿಯವರಾದ ಮಿ|| ಕೆ. ಮೆಥ್ಯೂರವರು ಇವರೆಲ್ಲಾ ಔದ್ಯೋಗಿಕ ಸಭಾಸದರಾಗಿಯೂ, ಮಿ|| ತ್ಯಾಗರಾಜಯ್ಯರು ಸೆಕ್ರೆಟರಿಯಾಗಿಯೂ ಮಾಡಲ್ಪಟ್ಟಿದ್ದಾರೆ. ಅನೌದ್ಯೋಗಿಕ ಸಭಾಸದರಲ್ಲಿ ದಿ|| ಬ|| ರಾಜಸಭಾಭೂಷಣ ಕೆ.ಪಿ. ಪುಟ್ಟಣ್ಣಶೆಟ್ಟಿ ಸಿ.ಐ.ಇ. ಯವರೂ, ಮ|| ವೆಂಕಟೇಶಯ್ಯನವರೂ, ಮಿ|| ಅಬ್ಬಾಸ್‌ಖಾನರೂ, ಮ|| ಬಿ. ಎ. ರಾಮಸ್ವಾಮಿಶೆಟ್ಟರೂ, ಮ|| ಎಂ. ಸುಬ್ಬಯ್ಯನವರೂ, ಮ|| ಸಿ. ಶ್ರೀನಿವಾಸರಾಯರೂ, ಆರಿಸಿಕೊಳ್ಳಲ್ಪಟ್ಟಿದ್ದಾರೆ.

ಶ್ರೀಮನ್ಮಹಾರಾಜರು ಅನುಗ್ರಹಿಸಿರುವ ನೂತನಾಧಿಕಾರದಿಂದ ಪ್ರಜಾಪ್ರತಿನಿಧಿ ಸಭೆಯು ದೇಶಹಿತಸಾಧನೆಗೆ ಸಂಪೂರ್ಣವಾಗಿ ಸಮರ್ಥವಾಗುವಂತೆ ಮಾಡಿಕೊಡಲು ಅದರ ರಚನೆ ಮೊದಲಾದುವುಗಳನ್ನು ನಿರ್ಧರಿಸುವಲ್ಲಿ ಈ ಮೇಲೆ ಕಂಡ ಸಭೆಯವರು ಪಡುವ ಶ್ರಮವು ಪ್ರಜೆಗಳಿಗೆಲ್ಲಾ ಪರಿತೃಪ್ತಿಯನ್ನುಂಟುಮಾಡುವಂತೆ ಆಗಬೇಕಾದುದು ಮುಖ್ಯವಾಗಿರುತ್ತದೆ. ದೇಶಾಭಿಮಾನಿಗಳಾದ ಅನುಭವಸ್ಥರೂ ಪತ್ರಕರ್ತರೂ ಆವಶ್ಯಕವಾದ ಸೂಚನೆಗಳನ್ನು ಈ ಸಭೆಯವರ ಗಮನಕ್ಕೆ ತರುವುದು ಕೂಡ ಅವಶ್ಯಕವಾಗಿರುತ್ತದೆ.

REFORMS IN MYSORE.

The announcement of the constitutional reforms by the Dewan at the Mysore Representative Assembly will be hailed with universal joy by all the people in the State. It is a proof positive–if proof is needed–of the solicitude which our beloved Sovereign, His Highness the Maharaja of Mysore has towards his subjects and his desire to respond to their rising aspirations and to enlist more and more their co-operation in the administration of the State. For this beneficent and liberal act of His Highness, which will be the most memorable event in the history of Mysore, all Mysoreans have to tender their most respectful and loyal gratitude to His Highness the Maharaja. We also heartily congratulate Mr. A. R. Banerji, Dewan of Mysore, for being able to announce the Reforms in this Session. Those who have studied the subject of Mysore Constitution know that the implanting of an out and out democratic system of Government as exists in other countries on the existing one in Mysore is not free from difficulties, and the Government must have bestowed a great deal of thought and labour in evolving the scheme. We cannot on this occasion, fail to remember the name of Sir M. Kantaraj Urs, without being open for a serious charge of want of gratitude, for, it was he who unmistakeably indicated when he was Dewan that the goal of Mysore Government was the increasing association of the people in the administration of the country and immediately set about preparing a suitable scheme. It cannot be gainsaid that the granting of the new privileges to the people was much accelerated by his genuine endeavours.

For all purposes the lines of constitutional advance indicated in the announcement are not open for modification as they have evidently been "decided upon." But we may be permitted to observe that the impression is that the reforms originally under contemplation have to some extent been whittled down in the present scheme which discloses a certain amount of diffidence in the capacity of the people. We have always stood for sure and steady progress and have never expressed any sympathy with those who cry for radical changes regardless of the local conditions and limitations. But we expected that some amount of responsibility to the Legislature would be introduced into the Government and that the whole Executive would not remain altogether an independent and fixed body unanswerable to the Legislature. In the scheme before us, ample scope is provided for full expression of public opinion on matters of Public Administration and for influencing the policy of Government, though the actual control over administration which is what mostly counts for in any system of responsible government is absent. The elements of a democratic constitution are present and there would hardly be any doubt that, if the opportunities and privileges now granted are judiciously made use of and the representatives expel any fears which the Durbar may entertain regarding their wise and cautious handling of administrative affairs, His Highness would not be slow in giving the people an effective share in the administration. Meantime as the Dewan said in his closing speech at the Assembly it remains for the people to work out the new dispensation of His Highness the Maharaja and make it a complete and unqualified success, for, on that depend the further instalments of reforms.

The bicameral nature of the constitution becomes a settled fact with the giving of a definite place to the Representative Assembly in the constitution–a welcome feature in the reforms. The reduction of its members to 200, though loudly protested against by the members is perhaps justifiable in the circumstances, considering the increased powers granted to it which would necessitate its meeting oftener than now and the devolution of some of its present functions to the District Boards. The extention of the franchise and broadening of the electorate is a decided step onward, viewed from all points, for, it is the foundation on which any true democratic edifice could be reared. As for the other privileges granted to the Assembly namely that no new tax would be levied without consulting it, the right to move resolutions on matters of public administration and on State budget and its being consulted on all important legislative measures–they all mean that it is primarily a consultative body and not a directing one. The Assembly is by far the more popular, and the complete divorce between the popular House and legislation sounds rather strange. It would be more in keeping with the institution if the powers of legislature are extended to the Assembly also, providing at the same time for any emergency regulation to be passed by the smaller body, the Legislative Council.

The Legislative Council stands to gain more than the Assembly. We do not see any necessity for increasing its strength for more than 40 when there is another large body side by side. The power of voting on major heads of the State budget will be a good medium of making the voice of the public heard in the counsels of the Government and will be a proper check on indiscretious and unprofitable expenditure. This power has come none too soon. It is hoped that the power reserved by Government to restore original provisions if found necessary will not be used too frequently. The institution of Standing Committees composed of elected members of both Houses to be consulted on all questions of general policy is also a happy feature in the scheme that would remove the present gulf between the Government and public opinion, but much depends on their being consulted regularly. The appointment of non-officials to the Council is left to His Highness' discretion and pleasure. We think that the reforms would have struck the popular imagination better if provision for this privilege was made in the scheme itself.

The reforms are all right so far as they go. The other questions as to the constitution of the Assembly and the Legislative Council, their inter-relation–the franchise rules are yet to be worked out by the Reforms Committee. Much depends on the rules of franchise. We have had experience, as also those in the neighbouring Provinces, how general electorates which do not take the inequitable social order of things into consideration work to the great disadvantage of the less advanced sections of people. On this we will have more to say later.

On the constitution of this mixed Reforms Committee itself we have to say a word. It has caused the greatest disappointment. It is mostly one sided. If the Government had any knowledge of the people who were going to be the vast majority of voters they surely would not have given nearly 50% of the membership to one community presenting 3·4% of the people and the other 50% to be generously allotted among the 96·6% of the people! The charm of the Reforms has been clouded by this strange constitution of the Committee. We do not desire that those who are on it must be removed, but we do say that there is room for more representatives of the people to be included in the Committee. Unless this is done, we fear the hopes raised by the generous grant of the reforms are bound to meet with disappointment and long will be the time before the injury will be repaired.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿಯ ಅಕ್ಟೋಬರ್ ತಾ|| ೧೭ನೆಯ ಭಾನುವಾರ.

ಪ್ರಜಾಪ್ರತಿನಿಧಿಸಭೆ.

ಕಳೆದ ಮಂಗಳವಾರ ಸಾಯಂಕಾಲಕ್ಕೆ ಈ ಸಭೆಯ ಕಾರ್ಯಗಳೆಲ್ಲಾ ಮುಗಿದುವು. ಒಟ್ಟು ಸಭೆನಡೆದ 6 ದಿನಗಳಲ್ಲಿ ಆರಿಕೆಗಿಡಲ್ಪಟ್ಟಿದ್ದ ಸಾಮಾನ್ಯವಿಷಯಗಳ ಮತ್ತು ಸ್ಥಳೀಯ ವಿಷಯಗಳ ಚರ್ಚೆಯೆಲ್ಲಾ ಮುಗಿದು ಕೆಲವು ಉಪ (ಸಪ್ಲಿಮೆಂಟರಿ) ವಿಷಯಗಳು ಮಾತ್ರ ಉಳಿದುಹೋದುವು. ಇವುಗಳಿಗೆ ಸರ್ಕಾರದವರ್ಗಣೆಯನ್ನು ಹಿಂದಣಿಂದ ತಾವೇ ಪ್ರಕಟಿಸುವುದಾಗಿ ದಿವಾನರು ಅಪ್ಪಣೆ ಕೊಡಿಸಿದರು. ಚರ್ಚೆಗಿಡಲ್ಪಟ್ಟಿದ್ದ ...

ಇದರ ಮೇಲೆ ಚರ್ಚೆನಡೆದಾಗ್ಗೆ ಮ|| ಗ... ಸಿಂಗರಾಯರು, ಸಿ. ಕೃಷ್ಣಮೂರ್ತಿಯವರು, ... ನವರು, ಎಸ್. ಬಾಲಕೃಷ್ಣರಾಯರು, ... ಗಳು, ಹೊಸಕೊಪ್ಪದ ಕೃಷ್ಣರಾಯರು, ... ಯ್ಯರು ಮೊದಲಾದನೇಕರು ಆಕ್ಷೇಪಣೆ ಮಾ... ವಾದವೇನೆಂದರೆ—ರೋಗಕ್ಕಿಂತಲೂ ... ಹೆಚ್ಚಾಯಿತೆಂಬಂತೆ ಈ ನೂತನ ಶಾಸನಸ್ವರೂ... ಪ್ರೊ. 124ಎ. 153ಎ. ಪ್ರಕರಣಗಳಿಂದಲೇ ಕಾ... ತ್ತಿರುವಾಗ ಈ ಹೊಸಕೋಡು ಅನವಶ್ಯಕ. ... ನಕ್ಕಿಂತಲೂ ಇದು ಕಠಿನವಾಗಿದೆ. ಜಡ್ಜರು ... ಲಾದವರೆಲ್ಲಾ ಸರ್ಕಾರದ ಉದ್ಯೋಗಿಗಳೇ. ... ನ್ನೂ ವಿಮರ್ಶಿಸಕೂಡದೆಂದು ಈ ಶಾಸನದಿಂ...

ಸಬ್ ಇನ್ಸ್ಪೆಕ್ಟರು ಕೂಡ ಕಾರ್ಯಭಾಗ ನಡೆಯಿಸಬಹುದೆಂಬುದು, ಶಿಕ್ಷಾನಂತರವೇ ಕ್ಷಮಾಪಣೆಗೆ ಅವಕಾಶಕೊಟ್ಟಿರುವುದು–ಇತ್ಯಾದಿ ಕ್ರೂರ ನಿಬಂಧನೆಗಳು ಮಾತ್ರ ಇರಬಾರದು ಎಂಬುದೇ ಈ ವಿಷಯದಲ್ಲಿ ನಮ್ಮಭಿಪ್ರಾಯವಾಗಿರುತ್ತದೆ.

ನೂತನ ರಾಜಕೀಯಸುಧಾರಣೆಗಳು:—

ಈಗಣ ರಾಜ್ಯಭಾರಕ್ರಮದಲ್ಲಿ ಪ್ರಜೆಗಳ ಅಭಿಪ್ರಾಯಕ್ಕೆ ಹೆಚ್ಚು ಬಲವನ್ನು ಕೊಟ್ಟು, ಅದನ್ನಂಗಪಡಿಸಿಕೊಳ್ಳಬೇಕೆಂಬುದು ಶ್ರೀಮನ್ಮಹಾರಾಜರ ವಿಚಕ್ಷಣವಾದ ಮತ್ತು ದಯಾಪೂರಿತವಾದ ಅಭಿಪ್ರಾಯವಾಗಿರುವುದರಿಂದಲೂ, ಪ್ರಜೆಗಳ ಇಷ್ಟವು ಕೂಡ ಅದೇ ಆಗಿರುವುದರಿಂದಲೂ, ಅವುಗಳ ಸಾಫಲ್ಯವನ್ನುಂಟುಮಾಡಿಕೊಡತಕ್ಕ ರಾಜಕೀಯ ಸುಧಾರಣ ಕ್ರಮವನ್ನು ಈಸಲದ ಅಧಿವೇಶನದಲ್ಲಿ ತಮ್ಮ ಮಂತ್ರಿವರ್ಯರ ಮುಖತಃ ಶ್ರೀಮನ್ಮಹಾರಾಜರು ಅಪ್ಪಣೆಮಾಡಿಸಿರುತ್ತಾರೆ. ಅದರ ವಿವರಣವನ್ನು ಇದೇ ಸಂಚಿಕೆಯ ಬೇರೆಕಡೆಯು...

... ವಿಾಷನರ್ ಮ|| ಕೆ. ಶ್ರೀನಿವಾಸಯ್ಯಂಗಾರರು, ಫೈನಾನ್ಷಿಯಲ್ ಸೆಕ್ರೆಟರಿ ರಾಜಕಾರ್ಯಪ್ರಸಕ್ತ ಮ|| ಎಂ. ಎನ್. ಕೃಷ್ಣರಾವ್‌ರವರು, ಮದದ್ರವ್ಯಶಾಖೆಯ, ಮುಖ್ಯಾಧಿಕಾರಿಗಳಾದ ಮಿ|| ಕೆ. ಚಾಂಡಿಯವರು, ಚೀಫ್‌ಸೆಕ್ರೆಟರಿಯವರಾದ ಮಿ|| ಕೆ. ಮೆಥರ್ಾರವರು ಇವರೆಲ್ಲಾ ಉದ್ಯೋಗಿಕ ಸಭಾಸದರಾಗಿಯೂ, ಮಿ|| ತ್ಯಾಗರಾಜಯ್ಯರು ಸೆಕ್ರೆಟರಿಯಾಗಿಯೂ ಮಾಡಲ್ಪಟ್ಟಿದ್ದಾರೆ. ಅನುದ್ಯೋಗಿಕ ಸಭಾಸದರಲ್ಲಿ ದಿ|| ಬ|| ರಾಜಸಭಾಭೂಷಣ ಕೆ.ಪಿ. ಪುಟ್ಟಣ್ಣಶೆಟ್ಟಿ ಸಿ.ಐ.ಇ. ಯವರೂ, ಮ|| ವೆಂಕಟೇಶಯ್ಯನವರೂ, ಮಿ|| ಅಬ್ಬಾಸ್ ಖಾನರೂ, ಮ|| ಬಿ. ಎ. ರಾಮಸ್ವಾಮಿಶೆಟ್ಟರೂ, ಮ|| ಎಂ. ಸುಬ್ಬಯ್ಯನವರೂ, ಮ|| ಸಿ. ಶ್ರೀನಿವಾಸರಾಯರೂ, ಆರಿಸಿಕೊಳ್ಳಲ್ಪಟ್ಟಿದ್ದಾರೆ.

ಶ್ರೀಮನ್ಮಹಾರಾಜರು ಅನುಗ್ರಹಿಸಿರುವ ನೂತನಾಧಿಕಾರದಿಂದ ಪ್ರಜಾಪ್ರತಿನಿಧಿ ಸಭೆಯು ದೇಶಹಿತಸಾಧನೆಗೆ ಸಂಪೂ... ಶಾಭಿಮಾನಿಗಳಾದ ಅನುಭವಸ್ಥರೂ ಪತ್ರಕರ್ತರೂ ಆವಶ್ಯಕವಾದ ಸೂಚನೆಗಳನ್ನು ಈ ಸಭೆಯವರ ಗಮನಕ್ಕೆ ತರುವುದು ಕೂಡ ಅವಶ್ಯಕವಾಗಿರುತ್ತದೆ.

REFORMS IN MYSORE.

The announcement of the constitutional reforms by the Dewan at the Mysore Representative Assembly will be hailed with universal joy by all the people in the State. It is a proof positive–if proof is needed–of the solicitude which our beloved Sovereign, His Highness the Maharaja of Mysore has towards his subjects and his desire to respond to their rising aspirations and to enlist more and more their co-operation in the administration of the State. For this beneficent and liberal act of His Highness, which will be the most memorable event in the history of Mysore, all Mysoreans have to tender their most respectful and loyal gratitude to His Highness the Maharaja. We also heartily congratulate Mr. A. R. Banerji, Dewan of Mysore, for being able to announce the Reforms in this Session. Those who have studied the subject of Mysore Constitution know that the implanting of an out and out democratic system of Government as exists in other countries on the existing one in Mysore is not free from difficulties, and the Government must have bestowed a great deal of thought and labour in evolving the scheme. We cannot on this occasion, fail to remember the name of Sir M. Kantaraj Urs, without being open for a serious charge of want of gratitude, for, it was he who unmistakenbly indicated when he was Dewan that the goal of Mysore Government was the increasing association of the people in the administration of the country and immediately set about preparing a suitable scheme. It cannot be gainsaid that the granting of the new privileges to the people was much accelerated by his genuine endeavours.

For all purposes the lines of constitutional advance indicated in the announcement are not open for modification as they have evidently been "decided upon." But we may be permitted to observe that the impression is that the reforms originally under contemplation have to some extent been whittled down in the present scheme which discloses a certain amount of diffidence in the capacity of the people. We have always stood for sure and steady progress and have never expressed any sympathy with those who cry for radical changes regardless of the local conditions and limitations. But we expected that some amount of responsibility to the Legislature would be introduced into the Government and that the whole Executive would not remain altogether an independent and fixed body unanswerable to the Legislature. In the scheme before us, ample scope is provided for full expression of public opinion on matters of Public Administration and for influencing the policy of Government, though the actual control over administration which is what mostly counts for in any system of responsible government is absent. The elements of a democratic constitution are present and there would hardly be any doubt that, if the opportunities and privileges now granted are judiciously made use of and the representatives expel any fears which the Durbar may entertain regarding their wise and cautious handling of administrative affairs, His Highness would not be slow in giving the people an effective share in the administration. Meantime as the Dewan said in his closing speech at the Assembly it remains for the people to work out the new dispensation of His Highness the Maharaja and make it a complete and unqualified success, for, on that depend the further instalments of reforms.

The bicameral nature of the constitution becomes a settled fact with the giving of a definite place to the Representative Assembly in the constitution–a welcome feature in the reforms. The reduction of its members to 200, though loudly protested against by the members is perhaps justifiable in the circumstances, considering the increased powers granted to it which would necessitate its meeting oftener than now and the devolution of some of its present functions to the District Boards. The extention of the franchise and broadening of the electorate is a decided step onward, viewed from all points, for, it is the foundation on which any true democratic edifice could be reared. As for the other privileges granted to the Assembly namely that no new tax would be levied without consulting it, the right to move resolutions on matters of public administration and on State budget and its being consulted on all important legislative measures–they all mean that it is primarily a consultative body and not a directing one. The Assembly is by far the more popular, and the complete divorce between the popular House and legislation sounds rather strange. It would be more in keeping with the institution if the powers of legislature are extended to the Assembly also, providing at the same time for any emergency regulation to be passed by the smaller body, the Legislative Council.

The Legislative Council stands to gain more than the Assembly. We do not see any necessity for increasing its strength for more than 40 when there is another large body side by side. The power of voting on major heads of the State budget will be a good medium of making the voice of the public heard in the counsels of the Government and will be a proper check on indiscretious and unprofitable expenditure. This power has come none too soon. It is hoped that the power reserved by Government to restore original provisions if found necessary will not be used too frequently. The institution of Standing Committees composed of elected members of both Houses to be consulted on all questions of general policy is also a happy feature in the scheme that would remove the present gulf between the Government and public opinion, but much depends on their being consulted regularly. The appointment of non-officials to the Council is left to His Highness' discretion and pleasure. We think that the reforms would have struck the popular imagination better if provision for this privilege was made in the scheme itself.

The reforms are all right so far as they go. The other questions as to the constitution of the Assembly and the Legislative Council, their inter-relation–the franchise rules are yet to be worked out by the Reforms Committee. Much depends on the rules of franchise. We have had experience, as also those in the neighbouring Provinces, how general electorates which do not take the inequitable social order of things into consideration work to the great disadvantage of the less advanced sections of people. On this we will have more to say later.

On the constitution of this mixed Reforms Committee itself we have to say a word. It has caused the greatest disappointment. It is mostly one sided. If the Government had any knowledge of the people who were going to be the vast majority of voters they surely would not have given nearly 50% of the membership to one community presenting 3·4% of the people and the other 50% to be generously allotted among the 96·6% of the people! The charm of the Reforms has been clouded by this strange constitution of the Committee. We do not desire that those who are on it must be removed, but we do say that there is room for more representatives of the people to be included in the Committee. Unless this is done, we fear the hopes raised by the generous grant of the reforms are bound to meet with disappointment and long will be the time before the injury will be repaired.

ಕರ್ನಲ್ ದೇಶರಾಜ ಅರಸಿನವರ ಮೃತಿ.

ಇವರು ಸ್ವಲ್ಪ ಕಾಲದಿಂದ ಮಾತ್ರ ಅಸ್ವಸ್ಥರಾಗಿದ್ದು ಕಳೆದ 8ನೆ ತಾರೀಖು ಭಾನುವಾರ ರಾತ್ರಿ 8½ ಗಂಟೆಗೆ ರಾಜಧಾನಿಯಲ್ಲಿರುವ ತಮ್ಮ ಭವನದಲ್ಲಿ ವಿಧಿವಶರಾದರೆಂದು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ. ಈ ಶತಮಾನದಲ್ಲಿ ಮೈಸೂರು ರಾಜಬಂಧುವರ್ಗದೊಳಗೆ ಕ್ಷತ್ರಿಯ ಕುಲೋಚಿತವಾದ ಸೇನಾನಿ ವಿದ್ಯೆಯಲ್ಲಿ ಪ್ರವೀಣರಾಗಿ, ಮೈಸೂರು ಸೈನ್ಯಕ್ಕೆ ಮುಖ್ಯ ಸೇನಾಧಿಪತಿಗಳಾಗಿದ್ದು, ಸೇನಾಸಮೇತರಾಗಿ ಸಮುದ್ರವನ್ನು ದಾಟಿ ಬರ್ಮಾ ಯುದ್ಧದಲ್ಲಿ ಸಾಮ್ರಾಜ್ಯಪ್ರಭುತ್ವಕ್ಕೆ ಸಹಾಯಕವಾಗಿ ಕೆಲಸಮಾಡಿ ಮೈಸೂರು ಸೈನ್ಯಕ್ಕೆ ಕೀರ್ತಿಯನ್ನು ತಂದರು. ಕಳೆದ ಯೂರೋಪ್ಯ ಮಹಾಯುದ್ಧದಲ್ಲೂ ಅಶ್ವಸೈನ್ಯದೊಡನೆ ಈಜಿಪ್ಟ್ ಮತ್ತು ಫ್ರಾನ್ಸ್ ರಣರಂಗಕ್ಕೆ ಹೋಗಿ ಯುದ್ಧಮಾಡಿ ಕೀರ್ತಿಪ್ರತಿಷ್ಠೆಗಳನ್ನು ಸಂಪಾದಿಸಿದರು. ಸಾಮ್ರಾಜ್ಯಪ್ರಭುತ್ವದಿಂದ ಇವರಿಗೆ ಕರ್ನಲ್, ಸಿ. ಐ. ಇ., ಎಂ. ವಿ. ಓ. ಎಂಬ ಬಿರುದುಗಳು ಅನುಗ್ರಹಿಸಲ್ಪಟ್ಟಿದ್ದುವು. ಶೌರ್ಯೋದಾರ್ಯಧೈರ್ಯಗಳಲ್ಲಿ ವಿಖ್ಯಾತರಾಗಿದ್ದಂತೆಯೇ ಅಂಗಲಕ್ಷಣದಲ್ಲೂ ಠೀವಿಯಲ್ಲೂ ಅರಸು ಮಂಡಲಿಯಲ್ಲಿ ಭೂಷಣಪ್ರಾಯರಾಗಿದ್ದರು. ನಮ್ಮ ಶ್ರೀಮನ್ಮಹಾರಾಜರ ಸ್ವಂತ ಅಕ್ಕಯ್ಯನವರಾದ ರಾಜಕುಮಾರಿ ಕೃಷ್ಣಾಜಮ್ಮಣ್ಣಿಯವರನ್ನು ಇವರು ವಿವಾಹಗೊಂಡಿದ್ದರು. ಇವರು 1862ನೆ ವರ್ಷದಲ್ಲಿ ಜನಿಸಿದವರಾದುದರಿಂದ ಅಂತ್ಯಕಾಲಕ್ಕೆ 60 ವರ್ಷ ತುಂಬಿದ್ದಿತು. ಕಳೆದ ನವರಾತ್ರಿಯುತ್ಸವದ ಪ್ರಥಮದಿನ ದರ್ಬಾರಿಗೆ ಇವರು ದಯಮಾಡಿಸಿದ್ದರು. ಆಗಲೇ ಶರೀರದ ಅಸ್ವಸ್ಥತೆಯು ವ್ಯಕ್ತವಾಯಿತು. ಚಿಕ್ಕಂದಿನಲ್ಲೇ ಮಾತೃವಿಯೋಗವನ್ನು ಹೊಂದಿ, ಈಗ ಪಿತೃವಿಯೋಗವನ್ನೂ ಹೊಂದಿದ ಮ॥ ರಾಜಕುಮಾರ ದೇಶರಾಜ ಅರಸಿನವರಿಗೂ, ಶ್ರೀಮನ್ಮಹಾರಾಜರೇ ಮೊದಲಾದ ಬಂಧುವರ್ಗಕ್ಕೂ ದುಃಖಶಾಂತಿಯನ್ನು ಜಗದೀಶ್ವರನು ಉಂಟುಮಾಡಲೆಂದು ಕೋರಿ ಈ ಮೂಲಕ ನಮ್ಮ ಸಾನುತಾಪವನ್ನು ನಿವೇದಿಸುತ್ತೇವೆ. ಮರುದಿನ ಸೋಮವಾರ ಬೆಳಗ್ಗೆ ರಾಜಬಂಧುವರ್ಗದ ರುದ್ರಭೂಮಿಯಾದ ಮಧುವನದಲ್ಲಿ ಉತ್ತರಕ್ರಿಯೆಯು ನಡೆಯಿತು. ಎಲ್ಲಾ ಅರಸುಮಂಡಲಿಯೂ, ದಿವಾನರು ಕೌನ್ಸಿಲರು ನ್ಯಾಯಾಧಿಕಾರಿಗಳು ಮೊದಲಾದ ಉದ್ಯೋಗಿಗಳೂ, ರಾಜಧಾನಿಯ ಅನೇಕ ದೊಡ್ಡಮನುಷ್ಯರೂ ಜತೆಯಲ್ಲಿ ಹೋಗಿದ್ದರು. ಉಚಿತ ರಾಜಮರ್ಯಾದೆಗಳೊಡನೆ ಶವವು ಪಲ್ಲಕ್ಕಿಯಲ್ಲಿಡಲ್ಪಟ್ಟು ರುದ್ರಭೂಮಿಗೆ ಸಾಗಿಸಲ್ಪಟ್ಟು ದಹನಕ್ರಿಯೆಯು ನಡೆಯಿತು. ಮೃತರ ಗೌರವಾರ್ಥವಾಗಿ ಆದಿನದ ಪ್ರಜಾಪ್ರತಿನಿಧಿಸಭೆಯ ಕಾರ್ಯಗಳು ನಿಲ್ಲಿಸಲ್ಪಟ್ಟು ಸಾನುತಾಪವನ್ನು ತೋರಿಸಲಾಯಿತು.

ಯುದ್ಧಭಯವು ತೊಲಗುವಂತಿದೆ.

ಮಿತ್ರಮಂಡಲಿಯ ಸೇನಾನಿಗಳೂ ಅಂಗೋರಾ ಪ್ರತಿನಿಧಿಯೂ ಮುದೇನಿಯಾಪಟ್ಟಣದಲ್ಲಿ ಕೂಡಿ ತಾತ್ಕಾಲಿಕ ಸಂಧಿಕಾರ್ಯವನ್ನು ಮುಗಿಸಿದರೆಂಬ ಸಂತೋಷಕರ ವಾರ್ತೆಯು ಬಂದಿದೆ. ತಟಸ್ಥಪ್ರದೇಶವನ್ನು ಗೊತ್ತುಮಾಡುವ ವಿಷಯದಲ್ಲಿ ಮಾತ್ರ ಚರ್ಚೆ ನಡೆಯುತ್ತಿದೆ. ಈ ತಾತ್ಕಾಲಿಕ ಸಂಧಿನಿರ್ಣಯದ ಪ್ರಕಾರವೇನೆಂದರೆ—ಗ್ರೀಕ್ ಸೈನ್ಯಗಳೂ ಗ್ರೀಕು ಪ್ರಜೆಗಳೂ ಕೂಡಲೆ ಥ್ರೇಸನ್ನು ಬಿಟ್ಟು ಹೋಗಬೇಕು. ಬಳಿಕ 1 ತಿಂಗಳೊಳಗೆ ಅದನ್ನು ತುರ್ಕಿ ಸೈನ್ಯವು ಆಕ್ರಮಿಸಿ ಶಾಂತಿರಕ್ಷಣೆಯನ್ನು ಮಾಡಿಕೊಂಡಿರಬೇಕು. ಶಾಶ್ವತ ಸಂಧಿಯು ಮುಂದಣತಿಂಗಳಲ್ಲಿ ನಡೆಯಬೇಕು. ಅದು ಜರುಗಿದ ಕೂಡಲೇ ತುರುಕರು ಡಾರ್ಡನಲ್ಸ್ ಜಲಸಂಧಿಯನ್ನು ದಾಟಿ ಥ್ರೇಸಿಗೆ ಹೋಗಬೇಕು. ಆಗ ಥ್ರೇಸು ಸಂಪೂರ್ಣವಾಗಿ ತುರ್ಕಿ ರಾಜ್ಯಕ್ಕೆ ಅಧೀನವಾಗುವುದು. ಇದೇ ತಾತ್ಕಾಲಿಕ ಸಂಧಿನಿರ್ಣಯವು. ಇದು ತುರುಕರ ಅಭಿಪ್ರಾಯಕ್ಕೆ ಅನುಕೂಲವಾಗಿಯೇ ಪರಿಣಮಿಸಿದಂತಾಯಿತು. ಆದರಿಂದ ಪ್ರಪಂಚದ ಮೇಲಣ ತುರುಕರೆಲ್ಲಾ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದಾರೆ. ಶಾಶ್ವತ ಸಂಧಿಯು ಕೂಡ ಹೀಗೆಯೇ ಮುಗಿದರೆ ಸದ್ಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ಯುದ್ಧದ ಭೀತಿಯು ತೊಲಗಿಹೋಗುವುದು.

ಪ್ರಜಾಪ್ರತಿನಿಧಿ ಸಭೆಗೆ ಕೊಡಲಿಕ್ಕಿರುವ ನೂತನ ಸಂಸ್ಕಾರಣಗಳ ವಿವರಣೆ.

ಮಹಾಶಯರೇ,

ಈ ಅಧಿವೇಶನದ ನಮ್ಮ ಉಪಕ್ರಮ ಭಾಷಣದಲ್ಲಿ ಸಂಸ್ಥಾನದ ರಾಜ್ಯಾಡಳಿತದಲ್ಲಿ ಪ್ರಜೆಗಳು ಈಗಿರುವುದಕ್ಕಿಂತಲೂ ಹೆಚ್ಚಾಗಿ ಭಾಗಿಗಳಾಗುವಂತೆ ಅವಕಾಶ ಕಲ್ಪಿಸುವ ವಿಚಾರವನ್ನು ಪ್ರಸ್ತಾಪಿಸಿ ಸದರಿ ವಿಷಯವನ್ನು ಈ ಅಧಿವೇಶನವು ಪೂರೈಸುವುದರೊಳಗಾಗಿ ಪ್ರಕಟಿಸಲು ಸಾಧ್ಯವಾದೀತೆಂತ ಸೂಚಿಸಿದ್ದೆವಷ್ಟೆ. ಆ ವಿಷಯಕವಾದ ಮುಖ್ಯಾಂಶಗಳನ್ನು ಪ್ರಕಟಪಡಿಸಬೇಕೆಂತ ಶ್ರೀಮನ್ಮಹಾರಾಜರವರ ಆಜ್ಞೆಯಾಗಿರುವ ಅಂಶವನ್ನು ತಮಗೆ ಶ್ರುತಪಡಿಸುವ ಭಾಗದಲ್ಲಿ ನಾವು ತುಂಬಾ ಸಂತೋಷಿಸುತ್ತೇವೆ. ಆದರೆ ಹಾಗೆ ಪ್ರಕಟಪಡಿಸುವುದಕ್ಕೆ ಮುಂಚೆ ಮೈಸೂರು ಸಂಸ್ಥಾನದಲ್ಲಿ ರಾಜ್ಯಭಾರನಿರ್ವಾಹಕ್ಕಾಗಿ ಪ್ರಕೃತದಲ್ಲಿ ರೂಢಿಯಲ್ಲಿರುವ ಸಭೆಗಳ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಬೇಕಾಗಿದೆ.

ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯು ಸರ್ಕಾರಿ ಹುಕುಂ ಮೂಲಕ 1881ರಲ್ಲಿ ಸ್ಥಾಪಿತವಾಯಿತು. ಶ್ರೀಮನ್ಮಹಾರಾಜಾ ಸಾಹೇಬರವರು 1903ರಲ್ಲಿ ಅಪ್ಪಣೆ ಕೊಡಿಸಿದಂತೆ ಈ ಸಭೆಯ ಉದ್ದೇಶವೇನಾಗಿತ್ತೆಂದರೆ—"ಪ್ರಜಾಕ್ಷೇಮಕ್ಕಾಗಿ ಸರ್ಕಾರದವರು ಯಾವ ಆಶಯವುಳ್ಳವರಾಗಿದ್ದಾರೆಂಬುದನ್ನೂ, ಅದಕ್ಕಾಗಿ ಯಾವ ಕಾರ್ಯಕಲಾಪಗಳನ್ನು ಕೈಗೊಳ್ಳುವವರಾಗಿದ್ದಾರೆಂಬುದನ್ನೂ ಪ್ರಜೆಗಳಿಗೆ ಚೆನ್ನಾಗಿ ತಿಳಿಯಪಡಿಸಿ ಪ್ರಜೆಗಳು ಸರ್ಕಾರದಲ್ಲಿ ಸೀದಾ ತಮ್ಮ ಕುಂದುಕೊರತೆಗಳನ್ನು ಅರಿಕೆಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡುವುದರ ಮೂಲಕ ಅವರುಗಳ ಮನಸ್ಸಿನಲ್ಲಿ ಸದರಿ ಆಶಯಗಳ ಅಥವಾ ಕಾರ್ಯಕಲಾಪಗಳ ವಿಚಾರವಾಗಿ ತಪ್ಪು ತಿಳವಳಿಕೆ ಏನಾದರೂ ಇದ್ದರೆ ಅದನ್ನು ಹೋಗಲಾಡಿಸುವುದೂ, ಪ್ರಜಾಕ್ಷೇಮಕ್ಕೂ ಸರ್ಕಾರದವರ ಉದ್ದೇಶಕ್ಕೂ ಭೇದಭಾವವಿಲ್ಲದೆ ಏಕಪ್ರಕಾರವಾಗಿರುವುದೆಂಬುದನ್ನು ಅವರುಗಳಿಗೆ ಗ್ರಾಹ್ಯವಾಗುವಂತೆ ಮಾಡುವುದೂ" ಈ ಸಭೆಯ ಉದ್ದೇಶವಾಗಿತ್ತು. ರಾಜ್ಯಪರಿಪಾಲನೆಯಲ್ಲಿ ಪ್ರಜೆಗಳ ಸೌಮನಸ್ಯವನ್ನೂ ಸಹಾಯವನ್ನೂ ಹೆಚ್ಚುಹೆಚ್ಚಾಗಿ ಪಡೆದುಕೊಳ್ಳುತ್ತಾ ಬರಬೇಕೆಂಬ ಕೃಪಾವಿಶಿಷ್ಟವಾದ ಅಭಿಲಾಷೆಯು ಶ್ರೀಮನ್ಮಹಾರಾಜರವರಲ್ಲಿ ಆವಿರ್ಭವಿಸಿರುವ ಪ್ರಯುಕ್ತ ಈ ಸಭೆಗೆ ಮೇಲೆ ಸೂಚಿಸಿರುವುದಕ್ಕಿಂತ ಹೆಚ್ಚಾದ ಅಧಿಕಾರಗಳು ಕ್ರಮಕ್ರಮವಾಗಿ ಕೊಡಲ್ಪಟ್ಟುವು. ಪ್ರಾರಂಭದಲ್ಲಿ ಮೆಂಬರುಗಳನ್ನು ಡೆಪ್ಯುಟಿ ಕಮಿಷನರುಗಳೇ ನೇಮಕ ಮಾಡುತ್ತಿದ್ದರು. 1891ನೆಯ ಇಸವಿಯಲ್ಲಿ, ಎಂದರೆ, ಸರಿಯಾಗಿ ಹತ್ತು ವರ್ಷಗಳ ನಂತರ, ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸುವ ಅಧಿಕಾರವನ್ನು ಪ್ರಜೆಗಳಿಗೆ ವಹಿಸಲಾಯಿತು. ಪ್ರತಿನಿಧಿಗಳನ್ನು ಚುನಾಯಿಸುವವರಿಗೂ, ಪ್ರತಿನಿಧಿಗಳಾಗಿ ಚುನಾಯಿಸಲ್ಪಡಲು ನಿಲ್ಲುವವರಿಗೂ ಇರಬೇಕಾದ ಯೋಗ್ಯತಾಂಶಗಳನ್ನು ವಿಧಿಸಿದುದಲ್ಲದೆ ಕ್ರಮಕ್ರಮವಾಗಿ ಈ ಸಭೆಯ ಕಾರ್ಯಕ್ರಮವನ್ನೂ, ಅಧಿಕಾರವನ್ನೂ ಹೆಚ್ಚಿಸುತ್ತಾ ಬರಲಾಯಿತು. ಈಗ ಈ ಸಭೆಗೆ ಇರುವ ಅಧಿಕಾರಗಳು ಯಾವುವೆಂದರೆ:—

(1) ಪ್ರಜೆಗಳ ಕುಂದುಕೊರತೆಗಳನ್ನು ಅರಿಕೆ ಮಾಡಿಕೊಳ್ಳುವ ಮತ್ತು ಸರ್ಕಾರದವರು ಅಪೇಕ್ಷಿಸುವ ವಿಷಯಗಳಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸುವ ಅಧಿಕಾರ;

(2) ಸಂಸ್ಥಾನದ ಬಜೆಟ್ಟನ್ನು ಚರ್ಚಿಸುವ ಅಧಿಕಾರ;

(3) ಪ್ರಶ್ನೆಗಳನ್ನು ಹಾಕುವ ಅಧಿಕಾರ.

ನ್ಯಾಯವಿಧಾಯಕ ಸಭೆಯು 1907 ರಲ್ಲಿ ಸ್ಥಾಪಿತವಾಯಿತು. ಮೊದಲು ಈ ಸಭೆಗೆ ಪ್ರಜಾಪಕ್ಷದ ಮೆಂಬರುಗಳನ್ನು ಸರ್ಕಾರದವರು ತಾವೇ ಸೀದಾ ನೇಮಿಸಿಕೊಳ್ಳುತ್ತಿದ್ದರು. ಈ ಪೈಕಿ ಇಬ್ಬರನ್ನು ಈ ಸಭೆಯಿಂದ ಚುನಾವಣೆ ಮಾಡಿದಮೇಲೆ ನೇಮಕ ಮಾಡಿಕೊಳ್ಳಬಹುದೆಂತ 1908ರಲ್ಲಿ ಶ್ರೀಮನ್ಮಹಾರಾಜರವರು ಅಪ್ಪಣೆ ಮಾಡಿದರು. ಈ ಸಂಖ್ಯೆಯನ್ನು 1913 ರಲ್ಲಿ ನಾಲ್ಕಕ್ಕೆ ಹೆಚ್ಚಿಸಲಾಯಿತು. ಇದರ ಜೊತೆಗೆ ಡಿಸ್ಟ್ರಿಕ್ಟಿನ ಪ್ರಾತಿನಿಧ್ಯಸ್ಥಾನಗಳಿಂದ ಚುನಾಯಿಸಲ್ಪಟ್ಟ ಬೇರೆ ನಾಲ್ವರು ಮೆಂಬರುಗಳನ್ನು ನೇಮಿಸಿಕೊಳ್ಳಲು ಏರ್ಪಾಡಾಯಿತು. ಪ್ರಜಾಪಕ್ಷದ ಮೆಂಬರುಗಳ, ಮುಖ್ಯವಾಗಿ ಪ್ರಜೆಗಳಿಂದ ಚುನಾಯಿಸಲ್ಪಟ್ಟವರ, ಸಂಖ್ಯೆಯನ್ನು ಹೆಚ್ಚಿಸುವ ಬದಲಾವಣೆಯನ್ನು ಕಾಲಕ್ರಮದಲ್ಲಿ ಮಾಡುತ್ತಾ ಬಂದುದಾಯಿತು. ಸದ್ಯಕ್ಕೆ ಈ ಸಭೆಯಲ್ಲಿ ದಿವಾನರವರೂ, ಕೌನ್ಸಿಲರುಗಳೂ ಅಲ್ಲದೆ 30 ಜನ ಮೆಂಬರುಗಳಿರುತ್ತಾರೆ. ಇವರ ಪೈಕಿ 12 ಜನರು ಸರ್ಕಾರೀ ಅಧಿಕಾರಿಗಳಾಗಿಯೂ, ಉಳಿದ 18 ಜನರು ಖಾಸಗಿ ದೊಡ್ಡಮನುಷ್ಯರಾಗಿಯೂ ಇರುತ್ತಾರೆ. ಈಪೈಕಿ 13 ಜನರು ಪ್ರತಿನಿಧಿ ಸಭೆಯಿಂದಲೂ, ಇತರ ಕೆಲವು ಪ್ರಾತಿನಿಧ್ಯಸ್ಥಾನಗಳಿಂದಲೂ ಚುನಾಯಿಸಲ್ಪಟ್ಟಮೇಲೆ ನೇಮಕವಾದವರಾಗಿರುತ್ತಾರೆ.

ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸಿದ್ದರ ಉದ್ದೇಶವೇನೆಂದರೆ, ಕಾನೂನುಗಳನ್ನೂ, ರೆಗ್ಯುಲೇಷನುಗಳನ್ನೂ ರಚಿಸುವ ವಿಚಾರದಲ್ಲಿ ಸರ್ಕಾರದವರಿಗೆ ಸಹಾಯಕರಾಗಿರಲು ತಕ್ಕಲೋಕಾನುಭವವನ್ನು ಪಡೆದು ಸ್ಥಳೀಯ ವಿದ್ಯಮಾನಗಳನ್ನು ಅರಿತವರಾಗಿ ತಕ್ಕಯೋಗ್ಯತೆಯನ್ನು ಪಡೆದಿರುವ ಹಲವು ಮಂದಿ ಸರ್ಕಾರೀ ಉದ್ಯೋಗಸ್ಥರನ್ನೂ, ಖಾಸಗಿ ದೊಡ್ಡಮನುಷ್ಯರನ್ನೂ ಸೇರಿಸಿಕೊಳ್ಳುವುದೇ ಉದ್ದೇಶವಾಗಿತ್ತು. ಈ ಸಭೆಯ ಕರ್ತವ್ಯಗಳು (1) ಕಾನೂನುಗಳನ್ನು ಮಾಡುವುದಕ್ಕೂ, (2) ಬಜೆಟ್ಟನ್ನು ಚರ್ಚಿಸುವುದಕ್ಕೂ, (3) ಪ್ರಶ್ನೆಗಳನ್ನು ಕೇಳುವುದಕ್ಕೂ, (4) ನಿರ್ಣಯಗಳನ್ನು ಸೂಚಿಸುವುದಕ್ಕೂ ವ್ಯಾಪಿಸುತ್ತವೆ. ಕಾನೂನುಗಳನ್ನು ಮಾಡುವ ವಿಚಾರದಲ್ಲಿ, ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ 3ನೆಯ ಪ್ರಕರಣದಲ್ಲಿ ನಮೂದಿಸಿರುವ ಕೆಲವು ಮುಖ್ಯ ವಿಷಯಗಳು ಈ ಸಭೆಯ ಅಧಿಕಾರವ್ಯಾಪ್ತಿಗೆ ಒಳಪಟ್ಟವುಗಳಲ್ಲವೆಂದು ವಿಧಿಸಲಾಗಿದೆ. ಪೂರ್ವಭಾವಿಯಾಗಿ ದಿವಾನರವರ ಬರಹಮೂಲಕವಾದ ಮಂಜೂರಾತಿಯನ್ನು ಪಡೆದುಕೊಂಡಲ್ಲದೆ ಯಾವ ಕಾನೂನನ್ನಾಗಲಿ ಸಭೆಯವರ ಪರ್ಯಾಲೋಚನೆಗೆ ತರಲು ಆಗಲಾರದು. ಬಜೆಟ್ಟನ್ನು ಚರ್ಚಿಸುವ ಅಧಿಕಾರವನ್ನು 1917 ನೆಯ ಇಸವಿಯಲ್ಲಿ ಈ ಸಭೆಗೆ ಕೊಡಲಾಯಿತು. ಆದರೆ ಬಜೆಟ್ಟನ್ನು ಬದಲಾಯಿಸುವುದಕ್ಕಾಗಲಿ, ಅದಕ್ಕೆ ಹೊಸದಾದ ಬಾಬುಗಳನ್ನು ಸೇರಿಸುವುದಕ್ಕಾಗಲಿ, ಅದರ ವಿಚಾರವಾಗಿ ನಿರ್ಣಯಗಳನ್ನು ಮಾಡಿ ಕಳುಹಿಸುವುದಕ್ಕಾಗಲಿ ಈ ಸಭೆಗೆ ಅಧಿಕಾರವಿರುವುದಿಲ್ಲ. ಪ್ರಶ್ನೆಗಳನ್ನು ಕೇಳುವ ಅಧಿಕಾರವನ್ನೂ ಅದೇವರ್ಷದಲ್ಲಿಯೇ ಕೊಡಲಾಯಿತು. ಪ್ರಶ್ನೆಗಳ ಸಂಖ್ಯೆಯನ್ನು 20ಕ್ಕೆ ಪರಿಮಿತಿಗೊಳಿಸಿದೆ. ನಿರ್ಣಯಗಳನ್ನು ಮಾಡಿ ಕಳುಹಿಸುವ ಅಧಿಕಾರವನ್ನು 1919ನೆಯ ಇಸವಿಯಲ್ಲಿ ಕೊಡಲಾಯಿತು. ಸದರೀ ನಿರ್ಣಯಗಳಲ್ಲಿ ಸರ್ಕಾರದವರು ಇಂತಹ ರೀತಿಯಲ್ಲಿ ಕಾರ್ಯ ನಡಿಸಬಹುದೆಂದು ಸಿಫಾರಸ್ ಮಾತ್ರ ಮಾಡಬಹುದಾಗಿದೆ. ಯಾವುದೊಂದು ಅಧಿವೇಶನದಲ್ಲಿಯಾಗಲಿ ಸಲಹೆ ಮಾಡಬಹುದಾದ ನಿರ್ಣಯಗಳ ಸಂಖ್ಯೆಯು 12ಕ್ಕೆ ಮೀರಕೂಡದಾಗಿದೆ. ಇವುಗಳನ್ನೆಲ್ಲಾ ನೋಡಿದರೆ ಈ ಸಭೆಯು ಪರಿಮಿತವಾದ ಅಧಿಕಾರಗಳನ್ನುಳ್ಳ ಕೇವಲ ಆಲೋಚನಾ ಸಭೆ ಮಾತ್ರವೇ ಆಗಿರುವುದೆಂದು ವಿಶದವಾಗುತ್ತದೆ.

ಸರ್ಕಾರಿ ಆಡಳಿತದ ಕಾರ್ಯ ನಿರ್ವಾಹಕ್ಕೋಸ್ಕರ ಪ್ರಜಾಪಕ್ಷದ ದೊಡ್ಡ ಮನುಷ್ಯರನ್ನು ಈಗಿರುವುದಕ್ಕಿಂತ ಹೆಚ್ಚುಹೆಚ್ಚಾಗಿ ಸರ್ಕಾರದವರೊಡನೆ ಸೇರಿಸಿಕೊಳ್ಳುವ ಏರ್ಪಾಡು ಮಾಡಲು ತಕ್ಕ ಕಾಲವು ಈಗ ಸನ್ನಿಹಿತವಾಗಿರುವುದೆಂದು ಶ್ರೀಮನ್ಮಹಾರಾಜರವರು ಭಾವಿಸುತ್ತಾರೆ. ಈ ತೀರ್ಮಾನಕ್ಕನುಸಾರವಾಗಿ ಮಹಾಸ್ವಾಮಿಯವರು ಪ್ರಜಾಪ್ರತಿನಿಧಿಸಭೆಗೂ ನ್ಯಾಯವಿಧಾಯಕ ಸಭೆಗೂ ಈಗಿರುವುದಕ್ಕಿಂತ ಹೆಚ್ಚು ಅಧಿಕಾರಗಳನ್ನು ದಯಪಾಲಿಸಿ ಅವುಗಳ ಪುನರ್ವ್ಯವಸ್ಥೆಯನ್ನು ಮಂಜೂರ್ಮಾಡಿರುವುದಲ್ಲದೆ ಈಗ ಉದ್ದೇಶಿಸಿರುವ ಸುಧಾರಣೆಗಳ ಮುಖ್ಯಾಂಶಗಳನ್ನು ತಮಗೆ ಶ್ರುತಪಡಿಸಬೇಕೆಂತ ಆಜ್ಞಾಪಿಸಿರುತ್ತಾರೆ. ಈ ಸಭೆಗಳ ಕಾರ್ಯನಿರ್ವಾಹಕ್ಕೆ ಸಂಬಂಧಪಟ್ಟ ವಿವರಗಳನ್ನು ಚೆನ್ನಾಗಿ ಪರಿಶೀಲಿಸಿ ನೋಡಿ ಸಿದ್ಧಾಂತ ಮಾಡಿದನಂತರ ಈ ಸುಧಾರಣೆಗಳನ್ನು ಕ್ಷಿಪ್ರದಲ್ಲಿಯೇ ಶ್ರೀಮನ್ ಮಹಾರಾಜರವರ ಮುದ್ರಾಂಕಿತವನ್ನುಳ್ಳ ರಾಜಶಾಸನದ ಮೂಲಕ ಪ್ರಕಟಪಡಿಸಲಾಗುತ್ತದೆ.

ಪ್ರಜಾಪ್ರತಿನಿಧಿಸಭೆ.

(1) ರಾಜ್ಯಭಾರ ನಿರ್ವಹಣ ಕಾರ್ಯದಲ್ಲಿ ಪ್ರಜಾಪ್ರತಿನಿಧಿಸಭೆಗೆ ಒಂದು ಗೊತ್ತಾದ ಸ್ಥಾನವನ್ನು ಕೊಡಲಾಗುವುದು.

(2) ಮೆಂಬರುಗಳ ಚುನಾವಣೆಯಲ್ಲಿ ಸಮ್ಮತಿಕೊಡುವ ಬಗ್ಗೆ ವಿಧಾಯಕವಾದ ಯೋಗ್ಯತೆಯ ಪರಿಮಿತಿಯನ್ನು ತಗ್ಗಿಸಿ ಓಟ್ ಕೊಡುವವರ ಸಂಖ್ಯೆಯನ್ನು ಬಹಳಮಟ್ಟಿಗೆ ಹೆಚ್ಚುವಂತೆ ಮಾಡಲಾಗುವುದಲ್ಲದೆ ಓಟ್ ಕೊಡುವ ವಿಚಾರದಲ್ಲಿ ಸ್ತ್ರೀಯರಿಗಿದ್ದ ಅನರ್ಹತೆಯನ್ನು ತೆಗೆದುಹಾಕಿ ಸದರೀ ಅಧಿಕಾರವನ್ನು ಅವರಿಗೆ ಕೊಡಲಾಗುವುದು.

(3) ಪೂರ್ವಭಾವಿಯಾಗಿಯೇ ಈ ಸಭೆಯ ಆಲೋಚನೆಯನ್ನು ತೆಗೆದುಕೊಂಡಲ್ಲದೆ ಯಾವ ಹೊಸ ತೆರಿಗೆಯನ್ನೂ ವಿಧಿಸುವುದಿಲ್ಲ.

(4) ರಾಜ್ಯಾಡಳಿತದ ವಿಷಯಗಳ ಮೇಲೂ, ಸಂಸ್ಥಾನದ ಪ್ರತಿ ವರ್ಷದ ಬಜೆಟ್ಟಿನ ಮೇಲೂ ನಿರ್ಣಯಗಳನ್ನು ಸೂಚಿಸುವ ಅಧಿಕಾರವನ್ನು ಈ ಸಭೆಗೆ ಕೊಡಲಾಗುವುದು.

(5) ಕಾನೂನಿಗೆ ಸಂಬಂಧಪಡುವ ಎಲ್ಲ ಮುಖ್ಯ ವಿಷಯಗಳಲ್ಲಿಯೂ ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುತ್ತದೆ. ಆಯಾ ವರ್ಷದಲ್ಲಿ ಮಾಡಬೇಕೆಂದಿರುವ ಕಾನೂನುಗಳ ವಿವರವನ್ನು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ಅದರ ಮುಂದಿರಿಸಿ ಮಸೂದಾ ಕಾನೂನುಗಳ ಸಾಮಾನ್ಯ ವಿವರಗಳನ್ನು ಅಲ್ಲಿ ಚರ್ಚಿಸಲಾಗುತ್ತದೆ. ಈ ಸಭೆಯಲ್ಲಿ ಚರ್ಚೆಯಾಗುವುದಕ್ಕೆ ಮುಂಚೆಯೇ ನ್ಯಾಯವಿಧಾಯಕ ಸಭೆಯ ಮುಂದೆ ಯಾವುದಾದರೂ ಕಾನೂನು ತರಲ್ಪಟ್ಟಿದ್ದಲ್ಲಿ ಅಂತಹ ಕಾನೂನಿನ ವಿಚಾರದಲ್ಲಿ ಶ್ರೀಮನ್ಮಹಾರಾಜರವರು ಸಾಮಾನ್ಯವಾಗಿ (ಎಂದರೆ ಜರೂರಿಯಾತ್ ಸಂದರ್ಭಗಳಲ್ಲಿ ವಿನಾ) ತಮ್ಮ ಒಪ್ಪಿಗೆಯನ್ನು ಪ್ರತಿನಿಧಿ ಸಭೆಯ ಆ ಮುಂದಿನ ಅಧಿವೇಶನವು ಪೂರೈಸುವ ವರೆಗೆ ಉಳಿಸಿಕೊಂಡಿರುವರು.

(6) ಈ ಸಭೆಯ ಮೆಂಬರುಗಳ ಒಟ್ಟು ಸಂಖ್ಯೆಯನ್ನು ಸುಮಾರು 200ಕ್ಕೆ ಮಿತಪಡಿಸಿ ತಕ್ಕಷ್ಟು ಪ್ರಾತಿನಿಧ್ಯವು ಲಭಿಸದೆ ಹೋಗಬಹುದಾದ ಪಂಗಡಗಳಿಂದಲೂ, ವಿಶೇಷ ಪ್ರಾತಿನಿಧ್ಯಕ್ಕೆ ಅರ್ಹವಾದ ಸ್ಥಾನಗಳಿಂದಲೂ ಅವಶ್ಯವಿದ್ದಲ್ಲಿ ಸರ್ಕಾರದವರೇ ಮೆಂಬರುಗಳನ್ನು ನೇಮಿಸಿಕೊಳ್ಳಲು ಏರ್ಪಾಡು ಮಾಡಲಾಗುತ್ತದೆ. ದಿವಾನರವರು ಈಗಿನಂತೆಯೇ ಮುಂದೆಯೂ ಈ ಸಭೆಯ ಪ್ರೆಸಿಡೆಂಟರಾಗಿರುವರಲ್ಲದೆ ಕೌನ್ಸಿಲರುಗಳು ವೈಸ್‌ಪ್ರೆಸಿಡೆಂಟರಾಗಿರುವರು.

(7) ಈ ಸಭೆಯ ರಚನೆ, ಪ್ರಾತಿನಿಧ್ಯಸ್ಥಾನಗಳು ಇವುಗಳನ್ನು ಕುರಿತ ವಿಚಾರವನ್ನೂ, ಚುನಾವಣೆಯಾಗಿ ಬರುವ ಪ್ರತಿನಿಧಿಗಳನ್ನೆಲ್ಲಾ ಸೀದಾ ಪ್ರಜೆಗಳೇ ಚುನಾಯಿಸತಕ್ಕದ್ದೇ, ಅಥವಾ ಈಗಿರುವಂತೆ ಕೆಲವರನ್ನು ಮಾತ್ರ ಸೀದಾ ಚುನಾಯಿಸಿ ಉಳಿದವರನ್ನು ಬೇರೊಂದು ಸಂಸ್ಥೆಗೆ ಚುನಾವಣೆಯಾಗಿರುವವರಿಂದ ಚುನಾಯಿಸತಕ್ಕದ್ದೇ ಎಂಬ ವಿಚಾರವನ್ನೂ, ಈ ಸಭೆಯು ಎಷ್ಟುಕಾಲ ಮತ್ತು ಎಷ್ಟುಸಾರಿ ನಡೆಯಬೇಕೆಂಬ ವಿಚಾರವನ್ನೂ, ಈ ಸಭೆಯ ನಡೆವಳಿಕೆಯಲ್ಲಿ ಅನುಸರಿಸಬೇಕಾದ ಕಾರ್ಯಕ್ರಮವನ್ನು ಕುರಿತ ವಿವರಗಳನ್ನೂ ನಿರ್ಧರಿಸಿ ಸರ್ಕಾರದವರ ಪರ್ಯಾಲೋಚನೆಯ ಬಗ್ಗೆ ಕಳುಹಿಸಿಕೊಡುವುದಕ್ಕಾಗಿ ಸರ್ಕಾರೀ ಉದ್ಯೋಗಸ್ಥರನ್ನೂ ಖಾಸಗಿ ದೊಡ್ಡಮನುಷ್ಯರನ್ನೂ ಒಳಗೊಂಡ ಒಂದು ಕಮಿಟಿಯನ್ನು ಕೂಡಲೇ ನೇಮಿಸಲಾಗುವುದು.

(8) ಸಾಮಾನ್ಯವಾಗಿ ಸ್ಥಳೀಯ ವಿಷಯಗಳನ್ನು ಡಿಸ್ಟ್ರಿಕ್ಟು ಬೋರ್ಡುಗಳಿಗೆ ಹೆಚ್ಚು ಅಧಿಕಾರ ಕೊಟ್ಟು ಅಲ್ಲಿ ಚರ್ಚಿಸತಕ್ಕದ್ದೇ ಹೊರತು ಪ್ರತಿನಿಧಿ ಸಭೆಗೆ ಚರ್ಚೆಗೆ ತರತಕ್ಕದ್ದಲ್ಲ.

ನ್ಯಾಯವಿಧಾಯಕ ಸಭೆ.

(1) ಈ ಸಭೆಯ ಮೆಂಬರುಗಳ ಸಂಖ್ಯೆಯನ್ನು 40ಕ್ಕೆ ಕಮ್ಮಿಯಿಲ್ಲದಂತೆಯೂ, 50ಕ್ಕೆ ಹೆಚ್ಚದಂತೆಯೂ ಇರತಕ್ಕದ್ದೆಂತ ಗೊತ್ತುಮಾಡಲಾಗುವುದು. ಈ ಸಭೆಗೆ ಪ್ರತಿನಿಧಿ ಸಭೆಯಿಂದ ಚುನಾಯಿಸಲ್ಪಡುವ ಮೆಂಬರುಗಳ ಸಂಖ್ಯೆಯನ್ನು ಬಹುಮಟ್ಟಿಗೆ ಹೆಚ್ಚಿಸಲಾಗುವುದು. ಕೈಗಾರಿಕೆ ಮತ್ತು ವ್ಯಾಪಾರ, ಪ್ಲಾಂಟರುಗಳ ಕಸಬು, ವಿದ್ಯಾಭ್ಯಾಸ ಈ ಮುಂತಾದ ವಿಶೇಷಾಂಶಗಳ ಪ್ರಾತಿನಿಧ್ಯವನ್ನೂ, ತಕ್ಕಷ್ಟುಮಟ್ಟಿಗೆ ಪ್ರಾತಿನಿಧ್ಯವನ್ನು ಪಡೆಯದೆ ಇರುವಂತಹವರ ಪ್ರಾತಿನಿಧ್ಯವನ್ನೂ ಕಾಪಾಡುವ ಬಗ್ಗೆ ತಕ್ಕ ಏರ್ಪಾಡು ಮಾಡಲಾಗುವುದು. ಈ ಸಭೆಯ ರಚನೆಯ ವಿವರಗಳನ್ನು ಮೇಲೆ ಸೂಚಿಸಿದ ಕಮಿಟಿಯವರು ನಿರ್ಧರಿಸಬೇಕು.

(2) ಈ ಸಭೆಯ ಪ್ರತಿಯೊಂದು ಅಧಿವೇಶನದಲ್ಲಿಯೂ ತರಲ್ಪಡಬಹುದಾದ ಪ್ರಶ್ನಾಂಶಗಳ ಮತ್ತು ನಿರ್ಣಯಗಳ ಸಂಖ್ಯೆಯನ್ನು ಬಹುಮಟ್ಟಿಗೆ ಹೆಚ್ಚಿಸಲಾಗುವುದು.

(3) ಅರಮನೆಗೂ, ಸೈನ್ಯಕ್ಕೂ, ಸರ್ಕಾರೀ ನೌಕರರ ಪೆನ್ಷನ್‌ಗಳಿಗೂ ಸಂಬಂಧಪಟ್ಟ ಮತ್ತು ಈ ಸಂಸ್ಥಾನಕ್ಕೂ ಬ್ರಿಟಿಷ್ ಸರ್ಕಾರಕ್ಕೂ ನಡೆದಿರುವ ಕರಾರಿಗೆ ಸಂಬಂಧಪಟ್ಟ ಬಾಬುಗಳ ಹೊರತು ಬಜೆಟ್ಟಿನ ಎಲ್ಲಾ ಮೇಜರ್ ಬಾಬುಗಳ ವಿಷಯದಲ್ಲಿಯೂ ಈ ಸಭೆಯವರು ಸಮ್ಮತಿಕೊಡುವ ಅಧಿಕಾರವನ್ನು ಕೊಡಲಾಗುವುದು. ಬಜೆಟ್ಟಿನಲ್ಲಿ ಸೇರಿಸಿರುವ ಯಾವ ಬಾಬನ್ನಾಗಲೀ ಈ ಸಭೆಯವರು ಒಪ್ಪದೆ ಇದ್ದ ಅಥವಾ ಅದನ್ನು ಕಡಮೆಮಾಡಿದ ಸಂದರ್ಭದಲ್ಲಿ, ಇಲಾಖೆಯ ಕೆಲಸ ನಡಿಸುವುದಕ್ಕೆ ಅದು ಅವಶ್ಯಕವೆಂತ ಸರ್ಕಾರದವರು ಅಭಿಪ್ರಾಯಪಟ್ಟರೆ ಅದನ್ನು ಮೊದಲಿದ್ದಂತೆ ಇರಿಸಲು ಸರ್ಕಾರದವರಿಗೆ ಅಧಿಕಾರವಿರತಕ್ಕದ್ದು.

ಸರ್ವಸಾಮಾನ್ಯ ವಿಚಾರಗಳು.

(1) ನ್ಯಾಯವಿಧಾಯಕ ಸಭೆಯವರೂ, ಪ್ರತಿನಿಧಿ ಸಭೆಯವರೂ ಚರ್ಚೆಗೆ ತರಕೂಡದಾಗಿರುವ ವಿಷಯಗಳ ಈಗಿನ ಪಟ್ಟಿಯನ್ನು ಕಡಮೆಮಾಡಿ ಇನ್ನು ಮುಂದೆ ಈ ಸಭೆಗಳವರು ಅರಮನೆಗೆ ಸಂಬಂಧಪಟ್ಟ ವಿಚಾರ, ಶ್ರೀಮನ್ಮಹಾರಾಜರವರಿಗೂ ಸಾರ್ವಭೌಮ ಸರ್ಕಾರಕ್ಕೂ ಅಥವಾ ಇತರ ಸಂಸ್ಥಾನಗಳಿಗೂ ಇರುವ ಸಂಬಂಧವನ್ನು ಕುರಿತ ವಿಚಾರ, ಶ್ರೀಮನ್ಮಹಾರಾಜರವರು ಸಾರ್ವಭೌಮ ಸರ್ಕಾರದೊಂದಿಗೆ ಈಗ ಮಾಡಿಕೊಂಡಿರುವ ಅಥವಾ ಇನ್ನು ಮುಂದೆ ಮಾಡಿಕೊಳ್ಳಬಹುದಾದ ಕರಾರುಗಳು, ಪದ್ಧತಿಗಳು ಮತ್ತು ಒಪ್ಪಂದಗಳು ಕುರಿತ ವಿಚಾರ—ಇವುಗಳ ಹೊರತು ಸಂಸ್ಥಾನದ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಸಕಲ ವಿಚಾರಗಳನ್ನೂ ಚರ್ಚಿಸುವ ಅಧಿಕಾರವನ್ನು ಕೊಡಲಾಗುವುದು.

(2) ಕಾನೂನು ಮಾಡುವ ವಿಚಾರದಲ್ಲಿ ಪ್ರತಿನಿಧಿ ಸಭೆಗೂ, ನ್ಯಾಯವಿಧಾಯಕ ಸಭೆಗೂ ಇರುವ ಅಧಿಕಾರಗಳು ಜರೂರಿಯಾತ್ ರೆಗ್ಯುಲೇಷನ್‌ಗಳ ವಿಚಾರವಾಗಿ ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನಲ್ಲಿರುವ ನಿಯಮಗಳಿಗೆ ಒಳಪಟ್ಟಿರುವುವು.

(3) ಪ್ರತಿನಿಧಿ ಸಭೆಯವರೂ, ನ್ಯಾಯವಿಧಾಯಕ ಸಭೆಯವರೂ ಮಾಡುವ ನಿರ್ಣಯಗಳು ಸರ್ಕಾರಕ್ಕೆ ಕಳುಹಿಸಲ್ಪಟ್ಟ ಸಿಫಾರಸುಗಳೋಪಾದಿಯಲ್ಲಿ ಭಾವಿಸಲ್ಪಡುವುವು.

(4) ಪ್ರಜಾಪಕ್ಷದ ಪ್ರತಿನಿಧಿಗಳು ದಿನಚರಿಯ ರಾಜ್ಯಾಡಳಿತಗಳ ವಿಷಯದಲ್ಲಿ ಸಲಹೆಕೊಡುವ ಅವಕಾಶಗಳನ್ನು ಹೆಚ್ಚುಮಾಡುವುದಕ್ಕಾಗಿ ಇಂಡಿಯಾ ಸರ್ಕಾರದ ನ್ಯಾಯವಿಧಾಯಕ ಸಭೆಯವರು ಈಚೆಗೆ ಹೊಸದಾಗಿ ಏರ್ಪಡಿಸಿರುವ ಸ್ಟಾಂಡಿಂಗ್ ಕಮಿಟಿಯ ಮಾದರಿಯಲ್ಲಿ ನ್ಯಾಯವಿಧಾಯಕ ಸಭೆಯ ಮತ್ತು ಪ್ರತಿನಿಧಿಸಭೆಯ ಮೆಂಬರುಗಳನ್ನೊಳಗೊಂಡ ಒಂದು ಅಥವಾ ಹೆಚ್ಚು ಸ್ಟಾಂಡಿಂಗ್ ಕಮಿಟಿಗಳನ್ನು ಸಲಹೆಕೊಡುವ ಬಗ್ಗೆ ನಿಯಮಿಸಲಾಗುವುದು. ಪ್ರತಿನಿಧಿ ಸಭೆಯವರೂ, ನ್ಯಾಯ ವಿಧಾಯಕ ಸಭೆಯವರೂ ತಮ್ಮ ತಮ್ಮ ಸಭೆಯಲ್ಲಿ ಚುನಾಯಿಸುವ ಮೆಂಬರುಗಳ ಪೈಕಿ ಬೇಕಾದವರನ್ನು ಮೇಲ್ಕಂಡ ಸ್ಟಾಂಡಿಂಗ್ ಕಮಿಟಿಗೆ ಆರಿಸಿಕೊಳ್ಳಲಾಗುವುದು. ಈ ಕಮಿಟಿಯ ಮೀಟಿಂಗುಗಳನ್ನು ದಿವಾನರವರು ನಿರ್ಧರಿಸಬಹುದಾದಷ್ಟು ಸಾರಿ ಮತ್ತು ಅವರು ನಿರ್ಧರಿಸಬಹುದಾದ ಕಾಲಗಳಲ್ಲಿ ಒಬ್ಬ ಕೌನ್ಸಿಲ್ ಮೆಂಬರವರ ಅಧ್ಯಕ್ಷತೆಯಲ್ಲಿ ನಡೆಯಿಸಲಾಗುವುದು. ಆಯಾ ಇಲಾಖೆಯ ಚಾರ್ಜಿನಲ್ಲಿರುವ ಕೌನ್ಸಿಲ್ ಮೆಂಬರವರು ಸಂಸ್ಥಾನದ ಆಡಳಿತಕ್ಕೆ ಸಂಬಂಧಪಡುವ ಮುಖ್ಯವಿಷಯಗಳಲ್ಲಿ ಮೇಲ್ಕಂಡ ಕಮಿಟಿಯವರ ಸಲಹೆಯನ್ನು ಅಪೇಕ್ಷಿಸಿದ್ದೇ ಆದರೆ ಸದರೀ ವಿಷಯಗಳನ್ನು ಆ ಕಮಿಟಿಯವರ ಮುಂದೆ ಇರಿಸಲಾಗುವುದು. ಸರ್ಕಾರಿ ಉದ್ಯೋಗಸ್ಥರೂ, ಖಾಸಗಿ ದೊಡ್ಡಮನುಷ್ಯರೂ ಇರುವ ಈಗಿನ ಬಜೆಟ್ ಫೈನಾನ್ಸ್ ಕಮಿಟಿಯನ್ನು ವಜಾ ಮಾಡಲಾಗುವುದು.

ಮಹಾಶಯರೇ—ಶ್ರೀಮನ್ಮಹಾರಾಜರವರು ತಮಗೆ ತಿಳಿಯಪಡಿಸಬೇಕೆಂದು ಅಪ್ಪಣೆಮಾಡಿರುವ ರಾಜ್ಯಭಾರದ ಸುಧಾರಣೆಗಳ ಸಾಮಾನ್ಯ ವಿವರಗಳನ್ನು ಮೇಲೆ ಸೂಚಿಸಿರುತ್ತೇವೆ. ಮುಂದಿನ ವರ್ಷದ ಬಜೆಟ್ಟನ್ನು ಪರ್ಯಾಲೋಚಿಸಲು ಅನುಕೂಲಿಸುವಂತೆ ಹೊಸ ಪ್ರತಿನಿಧಿ ಸಭೆಯನ್ನೂ, ಹೊಸ ನ್ಯಾಯವಿಧಾಯಕ ಸಭೆಯನ್ನೂ ಏರ್ಪಡಿಸಲು ಸಾಧ್ಯವಾಗುವಂತೆ ವಿವರಗಳನ್ನೆಲ್ಲಾ ಪರ್ಯಾಲೋಚಿಸಿ ಮುಂದಿನ ಡಿಸೆಂಬರ್ ಗುರ್ರೇತಾರೀಖಿನೊಳಗಾಗಿ ರಿಪೋರ್ಟನ್ನು ಕಳುಹಿಸಿ ಕೊಡುವ ಬಗ್ಗೆ ಸರ್ಕಾರಿ ಅಧಿಕಾರಸ್ಥರ ಮತ್ತು ಖಾಸಗಿ ದೊಡ್ಡಮನುಷ್ಯರ ಕಮಿಟಿಯನ್ನು ಕೂಡಲೆ ನಿಯಮಿಸಲಾಗುವುದು.

ಇನ್ನು ರಾಜ್ಯಭಾರ ನಿರ್ವಹಣಕ್ಕೆ ಸಂಬಂಧಪಟ್ಟ ಮುಖ್ಯಾಧಿಕಾರ ಸ್ಥಾನವನ್ನು ಕುರಿತು ಪ್ರಸ್ತಾಪಿಸುವಲ್ಲಿ ಶ್ರೀಮನ್ ಮಹಾರಾಜರವರ ಮಂತ್ರಾಲೋಚನಾ ಸಭೆಗೆ ಪ್ರಜಾಪಕ್ಷದವರನ್ನು ಹೊಸದಾಗಿ ಸೇರಿಸಿಕೊಳ್ಳಬೇಕೆಂತ ಈ ಸಭೆಯಲ್ಲಿಯೂ, ಇತರ ಕಡೆಗಳಲ್ಲಿಯೂ ಅರಿಕೆಗಳು ಬಂದಿರುತ್ತವೆ. ಈ ವಿಚಾರವಾಗಿ ನಾವು ತಮಗೆ ತಿಳಿಸಬೇಕಾಗಿರುವುದೇನೆಂದರೆ—ಸಂಸ್ಥಾನದ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಸಭೆಗಳಿಗೆ ಈಗಿರುವುದಕ್ಕಿಂತಲೂ ಹೆಚ್ಚಾದ ಅಧಿಕಾರಗಳನ್ನು ಕೊಟ್ಟಿರುವುದಾಗಿ ನಾವು ಈಗ ಪ್ರಕಟಿಸಿರುತ್ತೇವೆಯಷ್ಟೆ; ಶ್ರೀಮನ್ ಮಹಾರಾಜರವರಿಗೆ ಇಷ್ಟಬಂದು ಸಂದರ್ಭಗಳು ಅನುಕೂಲಿಸಿದಲ್ಲಿ, ಮಂತ್ರಾಲೋಚನಾ ಸಭೆಗೆ ಪ್ರತಿನಿಧಿ ಸಭೆಯಿಂದಲಾಗಲಿ ನ್ಯಾಯವಿಧಾಯಕ ಸಭೆಯಿಂದಲಾಗಲಿ ಒಬ್ಬರನ್ನು ನೇಮಕಮಾಡಿಕೊಳ್ಳುವುದಕ್ಕೆ ಸದರಿ ಪ್ರಕಟಣೆಯಿಂದ ಯಾವ ಅಭ್ಯಂತರವೂ ಇರುವುದಿಲ್ಲವೆಂಬ ಸಂಗತಿಯನ್ನು ತಮಗೆ ತಿಳಿಸಬೇಕೆಂತ ಶ್ರೀಮನ್ ಮಹಾರಾಜರವರು ನಮಗೆ ಆಜ್ಞಾಪಿಸಿರುತ್ತಾರೆ. ಪರಂತು, ಆ ರೀತಿ ನೇಮಕ ಮಾಡಿಕೊಳ್ಳುವ ವಿಷಯದಲ್ಲಿ ಸರ್ವ ಸ್ವಾತಂತ್ರ್ಯವೂ ಮಹಾಸ್ವಾಮಿಯವರ ನಿರ್ಬಂಧರಹಿತಹಿತವಾದ ವಿವೇಚನೆಗೆ ಸರ್ವದಾ ಒಳಪಟ್ಟಿರತಕ್ಕದ್ದಾಗಿರುತ್ತದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

(ದಸರಾ ಅಧಿವೇಶನ)

2ನೆಯ ಅಕ್ಟೋಬರ್ 1922

ಒಂದನೆಯ ಭಾಗ.

(ಕಳೆದವಾರದ ಶೇಷ.)

ಸಂಸ್ಥಾನದಲ್ಲಿ ಆಹಾರ ಪದಾರ್ಥಗಳ ಉತ್ಪತ್ತಿ.

ಮೈಸೂರು ದೇಶದ ಪ್ರಜಾಕೋಟಿಯಲ್ಲಿ ಬಹುಭಾಗಕ್ಕೆ ವ್ಯವಸಾಯವೇ ಮುಖ್ಯವಾದ ಕಸಬಾಗಿದೆ; ಆದಕಾರಣ ಸಾಮಾನ್ಯವಾಗಿ ಜಿರಾಯಿತಿದಾರರೆಲ್ಲರ ದ್ರವ್ಯೋಪಪತ್ತಿ ಸ್ಥಿತಿಯು ತೃಪ್ತಿಕರವಾಗಿಲ್ಲವೆಂಬುದನ್ನೂ, ಈ ಸಂಸ್ಥಾನದಲ್ಲಿ ಉತ್ಪನ್ನವಾಗುವ ಆಹಾರ ಪದಾರ್ಥಗಳು ಸಾಲವೆಂಬುವುದನ್ನೂ, ಈ ಸಭೆಗೆ ತಿಳಿಯಪಡಿಸುವ ಉದ್ದೇಶದಿಂದ ಶ್ರಮಪಟ್ಟು ಕೆಲವು ಸಂಗತಿಗಳನ್ನು ಸಂಗ್ರಹಿಸಿದ್ದೇವೆ. ಈಚೆಗೆ ನಾವು ಸಂಚಾರ ಮಾಡಿದ್ದರಲ್ಲಿ ಸಾಗುವಳಿಗೆ ಲಾಯಖಾದ ಬಹು ವಿಸ್ತಾರವಾದ ಜಮೀನುಗಳು ಬಂಜರಾಗಿ ಬಿದ್ದಿದ್ದುದನ್ನು ಅಥವಾ ಹಿಡುವಳಿಯಿಲ್ಲದೆ ಇದ್ದುದನ್ನು ನೋಡಿ ಈ ವಿಷಯವು ವಿಚಾರಣೆ ಮಾಡತಕ್ಕ ವಿಷಯವೆಂದು ನಮ್ಮ ಮನಸ್ಸಿಗೆ ಬಹು ಚೆನ್ನಾಗಿ ಹೊಳೆಯಿತು. ಸಂಪದಭಿವೃದ್ಧಿ ಸಮಾಜದ 1913ನೆಯ ಫೆಬ್ರವರಿ ಮಾಹೆಯಲ್ಲಿ ಸಾದರಾದ ಒಂದು ಬುಲೆಟಿನ್ನಲ್ಲಿ ಮೈಸೂರು ದೇಶದಲ್ಲಿ ಸಾಗುವಳಿಯಲ್ಲಿರುವ ವಿಸ್ತೀರ್ಣವು ಹೆಚ್ಚದೆ ವ್ಯವಸಾಯವು ಒಂದೇ ಸಮವಾಗಿ ಸ್ಥಾಯಿಯಾಗಿರುವುದೆಂತಲೂ, ಮೈಸೂರು ದೇಶದಲ್ಲಿ ಜನರಿಗೆ ಸಾಮಾನ್ಯವಾಗಿ ಬೇಕಾಗುವಷ್ಟು ಆಹಾರಪದಾರ್ಥಗಳನ್ನು ಅಲ್ಲಿ ಬೆಳೆಯುತ್ತಿಲ್ಲವೆಂತಲೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಆಗ ಡೈರೆಕ್ಟರಾಗಿದ್ದ ಸರ್ ಆಲ್ಫ್ರೆಡ್ ಚಾಟರ್ಟನ್‌ರವರು ಹೇಳಿದ್ದಾರೆ. ಸಂಸ್ಥಾನದಲ್ಲಿ ಆಹಾರ ಧಾನ್ಯಗಳನ್ನು ಸಾಗುವಳಿ ಮಾಡುವ, ಅದರಲ್ಲೂ ಮುಖ್ಯವಾಗಿ ಬತ್ತ ಮತ್ತು ರಾಗಿಯ ಬೆಳೆಯನ್ನಿಡುವ ವಿಸ್ತೀರ್ಣವನ್ನು ಹೆಚ್ಚಿಸುವ ಬಗ್ಗೆ ವಿಶೇಷ ಅವಕಾಶವಿದೆಯೆಂಬ ಅಭಿಪ್ರಾಯವು ಈಚೆಗೆ ಪ್ರಕಟವಾದ ರಿಪೋರ್ಟುಗಳಿಂದಲೂ ಪ್ರಕಟನೆಗಳಿಂದಲೂ ಸಹ ಸ್ಥಿರಪಡುತ್ತದೆ. 1920-21ಕ್ಕೆ ಅಖೈರಾದ 10 ವರ್ಷಗಳಲ್ಲಿ ಹಿಡುವಳಿಯಲ್ಲಿದ್ದ ಮತ್ತು ಸಾಗುವಳಿಯಾದ ವಿಸ್ತೀರ್ಣಕ್ಕೆ ಸಂಬಂಧಪಟ್ಟ ಲೆಕ್ಕಗಳನ್ನು ಪರಿಶೀಲಿಸಲಾಗಿ, ಹಿಡುವಳಿಯಲ್ಲಿರುವ ಜಮೀನಿನ ವಿಸ್ತೀರ್ಣವು 1911-12 ರಲ್ಲಿ 75,45,521 ಎಕರೆಗಳಿಂದ 1920-21ರಲ್ಲಿ 78,58,729 ಎಕರೆಗಳಿಗೆ ಹೆಚ್ಚಿದ್ದಾಗ್ಯೂ, ಎಂದರೆ 3,00000 ಎಕರೆಗಳಿಗೆ ಸ್ವಲ್ಪ ಹೆಚ್ಚಿದ್ದಾಗ್ಯೂ, ಫಸಲು ತೆಗೆದ ನಿವ್ವಳ ಪ್ರದೇಶವು ಮಾತ್ರ 1911-12ರಲ್ಲಿ 60,47,455 ಎಕರೆಗಳಿಂದ 1920-21ರಲ್ಲಿ 5954930 ಎಕರೆಗಳಿಗೆ ಇಳಿದುಹೋಯಿತೆಂದೂ ಬಂಜರು ಬಿದ್ದ ಜಮೀನು 1,49,866 ಎಕರೆಗಳಿಂದ 1,90,799 ಎಕರೆಗಳಿಗೆ ಹೆಚ್ಚಿತೆಂದೂ ಕಂಡುಬರುತ್ತದೆ. 1921-22ನೆಯ ವರ್ಷದಲ್ಲಿ ಒಟ್ಟು 79,01,583 ಎಕರೆಗಳ ವಿಸ್ತೀರ್ಣವು ಹಿಡುವಳಿಯಲ್ಲಿದ್ದಿತು; ಮತ್ತು 60,94,165 ಎಕರೆಗಳಲ್ಲಿ ಬೆಳೆಯಾಯಿತು. ಆ ಪೈಕಿ 43,41,190 ಎಕರೆಗಳಲ್ಲಿ ಆಹಾರೋಪಯೋಗ್ಯವಾದ ಫಸಲುಗಳ ಬೆಳೆ ಇಡಲಾಯಿತು. ಪ್ರಕೃತದಲ್ಲಿ ಸಾಗುವಳಿಗೆ ಸಿದ್ಧವಾಗಿರುವ ಹಿಡುವಳಿಯಲ್ಲಿ ಇಲ್ಲದ ಆಕಾರಕಂಡ ಜಮೀನು 7,43,490 ಎಕರೆಗಳ ವಿಸ್ತೀರ್ಣವುಳ್ಳದ್ದಾಗಿರುತ್ತದೆ. ಇದರ ಜೊತೆಗೆ ಅಮೃತಮಹಲು ಕಾವಲುಗಳಿಂದ 1,20,000 ಎಕರೆಗಳನ್ನೂ, ಕೇಂದಿವನಗಳ ಪೈಕಿ 4,00,000 ಎಕರೆಗಳನ್ನೂ ರೆವಿನ್ಯೂ ಇಲಾಖೆಗೆ ಬಿಟ್ಟುಕೊಟ್ಟಿರುತ್ತದೆ. ಸ್ಥೂಲವಾಗಿ ಲೆಕ್ಕಮಾಡಿದ್ದರ ಮೇಲೆ ಸಂಸ್ಥಾನಕ್ಕೆಲ್ಲಾ ಬೇಕಾದ ಆಹಾರ ಪದಾರ್ಥಗಳ ಪರಿಮಾಣವು ಈ ಕೆಳಗೆ ಕಾಣಿಸಿರುವಂತೆ ಇರುವುದಾಗಿ ನಮಗೆ ತಿಳಿಯಬರುತ್ತದೆ.

	ಪಲ್ಲಾಗಳು
ಅಕ್ಕಿ	21,92,000
ರಾಗಿ	76,85,000
ಜೋಳ	13,15,000

ಎಂದರೆ, ಒಟ್ಟು 1,11,92,000 ಪಲ್ಲಾಗಳು ಬೇಕಾಗಿರುವುವು. ಪರಂತು ಕಾಲಸ್ಥಿತಿ ಮತ್ತು ಬೆಳೆಗಳ ರಿಪೋರ್ಟಿನಲ್ಲಿ ಕಾಣಿಸಿರುವ ಲೆಕ್ಕಗಳ ಮೇರೆಗೆ ಕಳೆದ ಮೂರು ವರುಷಗಳಲ್ಲಿ ಈ ಧಾನ್ಯಗಳ ಸರಾಸರಿ ಒಟ್ಟು ಉತ್ಪತ್ತಿಯು ಮೇಲೆ ಕಂಡ ಮೂರು ಬಾಬುಗಳೂ ಸೇರಿ 81,47,968 ಪಲ್ಲಾಗಳು ಮಾತ್ರವೇ ಆಗಿರುತ್ತದೆ. ಇದರಲ್ಲಿ ಒಂದು ವರ್ಷದಿಂದ ಮತ್ತೊಂದು ವರುಷಕ್ಕೆ ಕಾಲಸ್ಥಿತಿಯ ವ್ಯತ್ಯಾಸದಿಂದ ಬಹಳವಾಗಿ ಹೆಚ್ಚು ಕಡಿಮೆಗಳು ಉಂಟಾಗುತ್ತಿದೆ. ಆದರೆ ಕೇವಲ ಸುಭಿಕ್ಷವಾದ ವರುಷದಲ್ಲಿ ಉತ್ಪತ್ತಿಯಾಗುವ ಧಾನ್ಯವೂ ಕೂಡ ಈ ಸಂಸ್ಥಾನಕ್ಕೆ ಬೇಕಾಗುವಷ್ಟಕ್ಕಿಂತ ಲಕ್ಷಾಂತರ ಪಲ್ಲಾಗಳಷ್ಟು ಕಡಿಮೆ ಬೀಳುತ್ತದೆ. ಕೇವಲ ವ್ಯವಸಾಯವನ್ನೇ ನಂಬಿಕೊಂಡಿರುವ ಮೈಸೂರಿನಂಥಾ ಸೀಮೆಗೆ ಇಂಥಾ ಸ್ಥಿತಿಯು ತೃಪ್ತಿಕರವಾದದ್ದಲ್ಲ. ಈಚೆಗೆ ಕೆಲವು ವರುಷಗಳಿಂದಲೂ ವ್ಯವಸಾಯಾಭಿವೃದ್ಧಿಗೆ ಪ್ರೋತ್ಸಾಹ ಕೊಡುವ ಬಗ್ಗೆ ಎಷ್ಟು ಪ್ರಯತ್ನ ನಡೆಸಿದರೂ ಇಲ್ಲಿಗೆ ಬೇಕಾದಷ್ಟು ಆಹಾರ ಧಾನ್ಯಗಳು ನಮ ಸಂಸ್ಥಾನದಲ್ಲಿ ಉತ್ಪತ್ತಿಯಾಗುತ್ತಿಲ್ಲವೆಂಬುದೂ ಕಾಲಸ್ಥಿತಿಯು ಸಮವಾಗಿರುವ ವರುಷಗಳಲ್ಲಿಯೂ ಸಹ ಹೊರಗಿನಿಂದ ಸರಕು ಬರುವುದನ್ನು ಇಲ್ಲಿನವರು ನಂಬಿಕೊಂಡಿರಬೇಕಾಗಿದೆ ಯೆಂಬುದೂ ವ್ಯಕ್ತವಾಗುತ್ತದೆ. ಆದಕಾರಣ ಸಂಸ್ಥಾನದ ಆಹಾರ ಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸುವ ವಿಷಯದಲ್ಲಿ ವಿಶೇಷ ಮುತುವರ್ಜಿಯಿಂದ ಎಲ್ಲ ವಿಧ ಪ್ರಯತ್ನಗಳನ್ನೂ ಬಹಳ ಜರೂರಾಗಿ ಮಾಡಬೇಕಾಗಿರುತ್ತದೆ. ಅಂಥಾ ಪ್ರಯತ್ನಗಳ ಪೈಕಿ ಹೆಚ್ಚಾಗಿ ಜಮೀನನ್ನು ಆಬಾದಿಗೆ ತರಬೇಕೆಂಬುದು ನೋಡಿದ ಕೂಡಲೆ ತೋರ್ಪಡತಕ್ಕ ಒಂದು ಏರ್ಪಾಟಾಗಿದೆ. ಈ ಉದ್ದೇಶವನ್ನೇ ಮುಖ್ಯವಾಗಿ ಮನಸಿನಲ್ಲಿಟ್ಟುಕೊಂಡು ಸರ್ಕಾರದವರು ಅಮೃತಮಹಲ್ ಮತ್ತು ಎಕ್ಸೈಜು ಇಲಾಖೆಯವರು ಬಿಟ್ಟುಕೊಟ್ಟಿರುವ ಕಾವಲುಗಳು ಮತ್ತು ಕೇಂದಿ ವನಗಳು ದೇಖೀಲು ಸಿದ್ಧವಾಗಿರುವ ಹಿಡುವಳಿಯಲ್ಲಿಲ್ಲದ ಭಾರೀ ವಿಸ್ತೀರ್ಣದ ಜಮೀನುಗಳನ್ನು ವಿಲೆ ಮಾಡುವುದರಲ್ಲಿ ಡೆಪ್ಯುಟಿ ಕಮಿಷನರುಗಳಿಗೂ ರೆವಿನ್ಯೂ ಕಮಿಷನರಿಗೂ ಸಹಾಯ ಮಾಡುವುದಕ್ಕಾಗಿ ಒಬ್ಬ ಸ್ಪೆಷಲ್ ಆಫೀಸರನ್ನು ಈಚೆಗೆ ನೌಕರರು ಮಾಡಿರುತ್ತಾರೆ. ವ್ಯವಸಾಯವನ್ನು ಹೆಚ್ಚಿಸುವುದಕ್ಕೆ ಬಹು ಭಾರೀ ಏರ್ಪಾಟನ್ನು ಮಾಡಬೇಕಾದರೆ ಸಂಸ್ಥಾನದ ಜಿರಾಯತಿ ಕಸಬಿನ ಪ್ರಜೆಗಳ ದ್ರವ್ಯೋಪಪತ್ತಿಯು ಮತ್ತು ಜಾನುವಾರುಗಳ ಸ್ಥಿತಿಯು ಸಾಕಾಗಿರುತ್ತದಯೇ ಎಂಬುದನ್ನು ನಿರ್ಧರಿಸುವುದಕ್ಕೆ ಅವುಗಳ ಪ್ರಕೃತ ನಿಜಸ್ಥಿತಿಯನ್ನು ತಿಳಿಯಬೇಕೆಂಬ ಆಲೋಚನೆಯಿಂದ ಸಾಂಪತ್ತಿಕ ಪೈಮಾಯಿಷಿಯನ್ನು ಮಾಡಬೇಕಾದದ್ದು ಅವಶ್ಯಕವೆಂದು ನಮಗೆ ತೋರುತ್ತದೆ. ಸಂಸ್ಥಾನದ ಮೈದಾನ ಪ್ರಾಂತ್ಯಗಳಲ್ಲಿ ಈಚೆಗೆ ನಾವು ಸಂಚಾರ ಮಾಡಿದಾಗ ವಿಚಾರಿಸಿ ನೋಡಿದ್ದರಲ್ಲಿ ಸ್ವಂತಕ್ಕೆ ಭೂಸ್ಥಿತಿಯಿಲ್ಲದೇ ಬಹಳ ವರ್ಷಗಳಿಂದ ಜಮೀನನ್ನು ಕೇಳುತಲಿದ್ದರೂ ಅದನ್ನು ಪಡೆಯಲಾರದೇ ಇರುವ ಜನರು ಬಹುಮಂದಿ ಇರುವಂತೆ ತೋರಿಬಂದುದಲ್ಲದೇ ರೆವಿನ್ಯೂ ಇಲಾಖೆಯವರು ಜಮೀನುಗಳನ್ನು ಸಾಗುವಳಿಗೆ ಕೊಡುವ ಪದ್ಧತಿಯಲ್ಲಿ ಬದಲಾವಣೆಯು ಅವಶ್ಯಕವೆಂತಲೂ ತಿಳಿಯಬಂದಿತು. ದರಖಾಸ್ತುಗಳ ವಿಲೇವಾರಿಯಲ್ಲಿ ಸಾಮಾನ್ಯವಾಗಿ ಬಹಳ ನಾವಕಾಶವಾಗುತ್ತಿರುವುದು. ಗೋಮಾಳ ಅಥವಾ ಅಮೃತಮಹಲು ಕಾವಲು ಯಾ ಕೇಂದಿವನ ಇವುಗಳಲ್ಲಿ ಆಬಾದಿಗೆ ತರಲು ಶಕ್ತರಾದ ಜನರ ಕಡೆಯಿಂದ ಜಮೀನಿಗಾಗಿ ಒಂದು ದರಖಾಸ್ತು ಬಂದದ್ದಾದರೇ ಅನೇಕ ವರುಷಗಳ ವರಿಗೆ ಪತ್ರಿಕಾ ಪ್ರಸಂಗ ನಡೆದ ತರುವಾಯ ಖಾಯಿಷ್ ಮಾಡಲ್ಪಟ್ಟ ಜಮೀನು ಹರಾಜಿಗೆ ಇಡತಕ್ಕದ್ದೆಂಬ ಹುಕುಮಿನಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಆದುದರಿಂದ ಅನಾವಶ್ಯಕವಾದ ನಿರ್ಬಂಧವು ಇಲ್ಲದಂತೆ ನ್ಯಾಯವಾಗಿ ಕೇಳುವವರಿಗೆಲ್ಲರಿಗೂ ಕೊಡುವುದಕ್ಕಾಗಿ ಹೆಚ್ಚಿನ ಜಮೀನಿಗೆ ಎಷ್ಟುಮಟ್ಟಿಗೆ ಸ್ಥಳದಲ್ಲಿ ಗೊತ್ತಾದ ಗಿರಾಕಿ ಇರುತ್ತದೆಂಬುದನ್ನು ವಿಚಾರಿಸಿ ತಿಳಿದುಕೊಳ್ಳಬೇಕಾದುದು ಅವಶ್ಯಕವಾಗಿರುತ್ತದೆ. ಮತ್ತು ಸರ್ಕಾರದವರು ಅದನ್ನು ಅಷ್ಟು ಮಾತ್ರಕ್ಕೆ ಬಿಡದೇ ಬಂಡವಾಳ ಸಾಲದಿರುವವರಿಗೆ ತಕ್ಕ ರೀತಿಯಲ್ಲಿ ಪ್ರೋತ್ಸಾಹಕೊಟ್ಟು ಮೊದಲು ಕೆಲವು ವರುಷಗಳವರೆಗೆ ರೆವಿನ್ಯೂ ಮಾಫು ಮಾಡುವುದು ಅಥವಾ ಕಂದಾಯದಲ್ಲಿ ರಿಯಾಯಿತಿ ದರಗಳನ್ನು ಕೊಡುವುದು ಈ ಮೊದಲಾದ ರೀತಿಗಳಿಂದ ಆಹಾರಧಾನ್ಯಗಳನ್ನು ಬೆಳೆಯಿಡುವ ಬಗ್ಗೆ ಜಮೀನುಗಳನ್ನು ತೆಗೆದುಕೊಳ್ಳುವಂತೆ ಮಾಡಬೇಕಾದದ್ದೂ ಸಹ ಅವಶ್ಯಕವಾಗಿರುತ್ತದೆ.

ಅನೇಕ ವರುಷಗಳ ಹಿಂದೆಯೇ ಜಾರಿಯಲ್ಲಿ ತರಲ್ಪಟ್ಟ ಭಾರೀ ಭೂಸ್ಥಿತಿಗಳ ಏರ್ಪಾಟೂ ಸಹ ಸಾಕಾದಷ್ಟು ಮಟ್ಟಿಗೆ ಅಭಿವೃದ್ಧಿಗೆ ಬಂದಿರುವಂತೆ ಕಾಣುವುದಿಲ್ಲ. ಏತಕ್ಕೆಂದರೆ ಆ ಬಗ್ಗೆ ಬಂದ ಒಟ್ಟು 377 ಅರ್ಜಿಗಳ ಪೈಕಿ 267 ಅರ್ಜಿಗಳು ನಿರಾಕರಿಸಲ್ಪಟ್ಟು 85 ಬಾಕಿಯಲ್ಲಿ ನಿಂತಿವೆ.

ಇದಲ್ಲದೇ, ಆರಂಬಗಾರರು ಯುಕ್ತವಾದ ಕಾಲದೊಳಗೆ ತಮ್ಮ ಜಮೀನುಗಳಲ್ಲಿ ವ್ಯವಸಾಯವನ್ನು ಅವರ ಶಕ್ತ್ಯಾನುಸಾರವಾಗಿ ಅಭಿವೃದ್ಧಿಗೊಳಿಸಲು ಅರ್ಹವಾದ ಸಣ್ಣ ಹಿಡುವಳಿಗಳನ್ನು ನೆಲೆಸುವ ವಿಚಾರದಲ್ಲಿ—ಸಂಸ್ಥಾನದ ಪ್ರಜಾಸಂಖ್ಯೆಯ ಪೈಕಿ ⅛ ರಷ್ಟು ಮಂದಿ ಇರುವ ಹೊಲೆಯರು ಮತ್ತು ಮಾದಿಗರಲ್ಲಿ ಬಹುಜನ ಜಮೀನಿಗಾಗಿ ದರಖಾಸ್ತು ಮಾಡಿ ಅವು ಅದ್ಯಾಪಿ ಫೈಸಲಾಗದಿರುವಂತೆ ತಿಳಿಯಬರುತ್ತದೆ. ಅನುಕೂಲವಾದ ಕಡೆಗಳಲ್ಲಿ ಈ ಜನರನ್ನು ನೆಲಸಿ ಅವರ ಮೂಲಕ ವ್ಯವಸಾಯವನ್ನು ವಿಸ್ತರಿಸುವ ಏರ್ಪಾಡೊಂದನ್ನು ಕೂಡಿದಷ್ಟು ತ್ವರೆಯಲ್ಲಿ ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದು. ನಿಮ್ಮ ವರ್ಗದವರಿಗೆ ಮುಫತ್ತಾಗಿ ಜಮೀನುಗಳನ್ನು ಕೊಡಬೇಕೆಂಬ ಅಂಶವನ್ನು ಸರ್ಕಾರದವರು ಈಗಾಗಲೇ ಪರ್ಯಾಲೋಚನೆಗೆ ತೆಗೆದುಕೊಂಡು ಇರುತ್ತಾರೆ. ಡಿಸ್ಟ್ರಿಕ್ಟುಗಳಲ್ಲಿಯೂ ತಾಲ್ಲೂಕುಗಳಲ್ಲಿಯೂ ಈ ಪಂಗಡಗಳ ಜನರು ಎಷ್ಟೆಷ್ಟು ಮಂದಿ ಇರುತ್ತಾರೆಂಬುದನ್ನು ತಿಳಿದು ಅದಕ್ಕೆ ತಕ್ಕಂತೆ ಜಮೀನುಗಳನ್ನು ಹಂಚುವುದೂ ಅವರ ಹಣಕಾಸಿನ ಸ್ಥಿತಿಯನ್ನು ಮೇಲ್ಪಡಿಸುವ ಬಗ್ಗೆ ಅವರಲ್ಲಿ ಮಿತವ್ಯಯವನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಪರಸ್ಪರಸಹಾಯ ಸಂಘಗಳನ್ನೂ ಧಾನ್ಯದ ಬ್ಯಾಂಕುಗಳನ್ನೂ ಏರ್ಪಡಿಸುವುದಕ್ಕೆ ಪ್ರೋತ್ಸಾಹವನ್ನು ಕೊಡುವುದೂ ಅವಶ್ಯಕವಾಗಿದೆ.

ಈ ವಿಚಾರವನ್ನು ಬೇರೆ ದೃಷ್ಟಿಯಿಂದ ನೋಡುವುದರಲ್ಲಿ, ವ್ಯವಸಾಯದ ಲೆಕ್ಕಪತ್ರಗಳಿಂದ ಸಂಸ್ಥಾನದಲ್ಲೆಲ್ಲಾ ಒಟ್ಟು 10,63,532 ಹಿಡುವಳಿಗಳಿರುವಂತೆಯೂ, ಆ ವಾರೀಫತ್ತು 78,48,229 ಎಕರೆಗಳು ಇದ್ದಂತೆಯೂ ತಿಳಿಯಬರುತ್ತದೆ. ಏಕೇನ ಹಿಡುವಳಿ ಒಂದಕ್ಕೆ 7 ಎಕರೆಗೆ ಸ್ವಲ್ಪ ಹೆಚ್ಚಿನ ವಿಸ್ತೀರ್ಣವಿರುವಂತೆಯೂ, ಪ್ರತಿಯೊಬ್ಬ ರೈತನು ಸರಾಸರಿ 10 ರೂಪಾಯಿಗಳಿಗೆ ಸ್ವಲ್ಪ ಕಡಮೆ ಕಂದಾಯ ಕೊಡುತ್ತಿರುವಂತೆಯೂ ತಿಳಿಯಬರುತ್ತದೆ. ಈ ಲೆಕ್ಕಗಳಿಂದ ಈಗಿರುವ ಭೂಸ್ಥಿತಿವಂತರಿಗೆ ತಮ್ಮ ಹಿಡುವಳಿಗಳನ್ನು ಹೆಚ್ಚಾಗಿ ಜಮೀನನ್ನು ತೆಗೆದುಕೊಂಡು ವಿಸ್ತರಿಸುವುದಕ್ಕೆ ಬೇಕಾದಷ್ಟು ಅವಕಾಶವಿರುವಂತೆಯೂ, ಆ ಮೂಲಕ ವ್ಯವಸಾಯವನ್ನು ಹೆಚ್ಚಿಸುವ ಮತ್ತು ಆಹಾರಧಾನ್ಯಗಳ ಸಾಗುವಳಿಯನ್ನು ವಿಸ್ತರಿಸುವ ವಿಚಾರವನ್ನು ಸ್ವಲ್ಪ ಮಟ್ಟಿಗೆ ವ್ಯವಸ್ಥೆ ಮಾಡಿದಂತಾಗುವುದೆಂದೂ ನಮಗೆ ತೋರುತ್ತದೆ.

1918-19ನೆಯ ವರ್ಷದಲ್ಲಿ ಆಹಾರ ಧಾನ್ಯಗಳ ಸರಬರಾಯಿಯ ವಿಷಯದಲ್ಲಿ ಸಂಸ್ಥಾನಕ್ಕೆ ಒಂದು ದೊಡ್ಡ ಕಷ್ಟವು ಪ್ರಾಪ್ತವಾಗಲು, ಆಗ್ಗೆ ದಿವಾನ್‌ರಾಗಿದ್ದ ಸರ್ ಎಂ. ಕಾಂತರಾಜ ಅರಸರವರು ಆ ವರ್ಷ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಈ ಕೆಳಗೆ ಕಂಡಂತೆ ಅಪ್ಪಣೆ ಕೊಡಿಸಿರುತ್ತಾರೆ.—"ಸಾಧಾರಣ ವರ್ಷಗಳಲ್ಲಿ ಸಾಕಾದಷ್ಟು ಆಹಾರ ಧಾನ್ಯಗಳನ್ನು ಬೆಳೆಯುವುದೂ, ಮಳೆ ಬಾರದಿದ್ದಾಗ ಪ್ರತಿಸಲವೂ ಬ್ರಿಟಿಷ್ ಇಂಡಿಯಾದಲ್ಲಿರುವ ನಮ್ಮ ನೆರೆಹೊರೆ ಜನರ ಸಹಾಯವನ್ನು ಅಪೇಕ್ಷಿಸದಂತೆ ನಮ್ಮ ದೇಶದಲ್ಲಿಯೇ ತಕ್ಕಷ್ಟು ಆಹಾರ ಧಾನ್ಯಗಳನ್ನು ಯಾವಾಗಲೂ ದಾಸ್ತಾನು ಇಟ್ಟುಕೊಳ್ಳುವುದೂ, ನಮ್ಮ ಮೇಲೆ ಬಿದ್ದ ಭಾರವಾಗಿದೆ." ಈ ರೀತಿ ಅವರು ಕೊಟ್ಟಿರುವ ಎಚ್ಚರಿಕೆಯನ್ನು ಮೈಸೂರು ದೇಶದ ಪ್ರಜೆಗಳು ಸದಾ ನೆನಪಿನಲ್ಲಿಟ್ಟುಕೊಂಡಿರಬೇಕಲ್ಲದೆ, ಸರ್ಕಾರದವರೂ ಸಹ ತಮ್ಮ ಸ್ವಾಧೀನದಲ್ಲಿರುವ ಸಾಧನಸಂಪತ್ತಿಗಳ ಮೂಲಕ ತಕ್ಕ ಏರ್ಪಾಡುಗಳನ್ನು ಮಾಡಿ ಇಂಥ ತೊಂದರೆಗಳನ್ನು ಪರಿಹರಿಸಿಕೊಳ್ಳಲು ಜನಗಳಿಗೆ ಸಹಾಯ ಮಾಡುವುದು ಅವಶ್ಯಕವಾಗಿದೆ.

ವಿದ್ಯಾಭ್ಯಾಸದ ಹಣಕಾಸಿನಸ್ಥಿತಿ.

ವಿದ್ಯಾಭ್ಯಾಸದ ಮೆಮೊರ್ಯಾಂಡವನ್ನು ಜಾರಿಯಲ್ಲಿ ತರುವ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳ ಸಂಪೂರ್ಣವಾದ ವಿವರಣವು ನ್ಯಾಯವಿಧಾಯಕ ಸಭೆಯ ಕಳೆದ ಅಧಿವೇಶನದಲ್ಲಿ ಅದರ ಮುಂದಿಡಲಾಗಿದೆ. ವಿದ್ಯಾಭ್ಯಾಸದ ಇಲಾಖೆಯವರು ಬಹಳ ಮಟ್ಟಿಗೆ ಪೂರ್ವಭಾವಿಯಾಗಿ ಮಾಡಬೇಕಾದ ಕೆಲಸಗಳನ್ನು ನಡೆಸಿದ್ದರೂ, ಮುಖ್ಯವಾಗಿ ಹಣಕಾಸಿನ ಅಡಚಣೆಯುಂಟಾಗಿರುವುದರಿಂದ ಅಭಿವೃದ್ಧಿಯು ತಡವಾಗಿದೆ. ಬಂಡವಾಳದ ಕಾಂಗಾರಿಗಳ ಮತ್ತು ಕೈಗಾರಿಕೆಗಳ ಹುಟ್ಟುವಳಿಯೂ ಸೇರಿ ಸಂಸ್ಥಾನದ ಒಟ್ಟು ಹುಟ್ಟುವಳಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಈಗಾಗಲೇ ಶೇಕಡಾ 14ರಷ್ಟು ಖರ್ಚಾಗುತ್ತಿದೆ. ಮಾಮೂಲು ಹುಟ್ಟುವಳಿಗೆ ಇದು ಶೇಕಡ 17ರಷ್ಟಾಗಿದೆ.

ಈ ಸಭೆಯ ಕಳೆದ ವರ್ಧಂತಿ ಅಧಿವೇಶನದಲ್ಲಿ ನಾವು ಮಾಡಿದ ಉಪಸಂಹಾರ ಭಾಷಣದಲ್ಲಿ 1917ನೆ ಇಸವಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹವಾಲ್ತೆ ಮಾಡಿದ ಲೋಕಲ್ ಫಂಡು ಜನರಲ್ ಮತ್ತು ಮೊಹತರ್ಫಗಳನ್ನು ವಾಪಸು ತೆಗೆದುಕೊಳ್ಳುವುದನ್ನು ನಿರೋಧಿಸಿ ಅವರು ತಂದ ಅಂಕೆಗೆ ಅನುಸಾರವಾಗಿ ವಿದ್ಯಾಭ್ಯಾಸದ ಹಣಕಾಸಿನ ಸ್ಥಿತಿಯನ್ನು ಮತ್ತೊಂದಾವರ್ತಿ ಆಮೂಲಾಗ್ರವಾಗಿ ಸರ್ಕಾರದವರು ಪರಿಶೀಲಿಸುವರೆಂದು ಸೂಚಿಸಿರುತ್ತೇವೆ. ಈಗ ಪ್ರತಿಯೊಂದು ಡಿಸ್ಟ್ರಿಕ್ಟ್ ಬೋರ್ಡಿನ ಹಣಕಾಸಿನ ಸ್ಥಿತಿಯನ್ನು ತಪಶೀಲ್ವಾರಾಗಿ ಪರಿಶೀಲಿಸಿದ್ದರ ಮೇಲೆ ಅವರ ಅಂಕೆಗಳಿಗೆ ಗಮನವನ್ನು ಕೊಡಬೇಕಾದ್ದು ಯುಕ್ತವೆಂದು ಸರ್ಕಾರದವರು ಭಾವಿಸಿದಾರೆ ಎಂಬಂಶವನ್ನು ನಾವು ತಿಳಿಸಬಲ್ಲೆವು. ಡಿಸ್ಟ್ರಿಕ್ಟ್ ಬೋರ್ಡಿನವರ ವಶದಲ್ಲಿ ಇಟ್ಟಿರುವ ಹೆಚ್ಚು ಮೊಬಲಗಿನ ಸಹಾಯದಿಂದ ಅವರು ಅನೇಕ ಬಾಬುಗಳಲ್ಲಿ ಖರ್ಚನ್ನು ಹೆಚ್ಚು ಮಾಡಿದ್ದಾರೆ. ರಸ್ತೆಗಳ ದುರಸ್ತಿ ಬಗ್ಗೆ ಹೆಚ್ಚಾದ ಮೈಲೇಜ್ ಗ್ರಾಂಟುಗಳೂ, ವೈದ್ಯ ಸಹಾಯದ ಬಗ್ಗೆ ಹೆಚ್ಚು ಖರ್ಚೂ, ಹೆಚ್ಚು ಸಿಬ್ಬಂದಿಗಳೂ, ಪಶುವೈದ್ಯಕ್ಕೆ ಕಂಟ್ರಿಬ್ಯೂಷನ್ ಮೊಬಲಗು ವಗೈರೆಗಳೂ ಅವುಗಳಲ್ಲಿ ಮುಖ್ಯವಾಗಿವೆ. ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಲೋಕಲ್‌ಫಂಡು ಜನರಲ್ ಮತ್ತು ಮೊಹತರ್ಫಬಾಬುಗಳ ಕೆಳಗೆ ಹವಾಲ್ತೆ ಮಾಡಿದ್ದ ಎಲ್ಲಾ ಮೊಬಲಗನ್ನೂ ವಾಪ್ಸು ತೆಗೆದುಕೊಳ್ಳುವುದು ಸಾಧ್ಯವಲ್ಲವೆಂಬುದು ಈಗ ವ್ಯಕ್ತವಾಗಿದೆ. ಹೀಗಿದ್ದರೂ ವಿದ್ಯಾಭ್ಯಾಸದ ಮೆಮೊರಾಂಡಮಿನ ಮೇಲಿನ ಹುಕುಂಗಳಲ್ಲಿ ವ್ಯವಸ್ಥೆಯಾದ ಸುಧಾರಣೆಗಳನ್ನು ಜಾರಿಯಲ್ಲಿ ತರುವ ವಿಚಾರದಲ್ಲಿ ಸಾಮಾನ್ಯ ಸ್ಥಿತಿಯನ್ನು ನೋಡಿದರೆ ಕನಿಷ್ಠ ಪಕ್ಷ ಮುಂದಣ ಕೆಲವು ವರುಷಗಳಲ್ಲಾದರೂ ಹೆಚ್ಚು ಮೊಬಲಗ

ಕರ್ನಲ್ ದೇಶರಾಜ ಅರಸಿನವರ ಮೃತಿ.

ಇವರು ಸ್ವಲ್ಪ ಕಾಲದಿಂದ ಮಾತ್ರ ಅಸ್ವಸ್ಥರಾಗಿದ್ದು ಕಳೆದ 8ನೆ ತಾರೀಖು ಭಾನುವಾರ ರಾತ್ರಿ 8½ ಗಂಟೆಗೆ ರಾಜಧಾನಿಯಲ್ಲಿರುವ ತಮ್ಮ ಭವನದಲ್ಲಿ ವಿಧಿವಶರಾದರೆಂದು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ. ಈ ಶತಮಾನದಲ್ಲಿ ಮೈಸೂರು ರಾಜಬಂಧುವರ್ಗದೊಳಗೆ ಕ್ಷತ್ರಿಯ ಕುಲೋಚಿತವಾದ ಸೇನಾನಿ ವಿದ್ಯೆಯಲ್ಲಿ ಪ್ರವೀಣರಾಗಿ, ಮೈಸೂರು ಸೈನ್ಯಕ್ಕೆ ಮುಖ್ಯ ಸೇನಾಧಿಪತಿಗಳಾಗಿದ್ದು, ಸೇನಾಸಮೇತರಾಗಿ ಸಮುದ್ರವನ್ನು ದಾಟಿ ಬರ್ಮಾ ಯುದ್ಧದಲ್ಲಿ ಸಾಮ್ರಾಜ್ಯಪ್ರಭುತ್ವಕ್ಕೆ ಸಹಾಯಕವಾಗಿ ಕೆಲಸಮಾಡಿ ಮೈಸೂರು ಸೈನ್ಯಕ್ಕೆ ಕೀರ್ತಿಯನ್ನು ತಂದರು. ಕಳೆದ ಯೂರೋಪ್ಯ ಮಹಾಯುದ್ಧದಲ್ಲೂ ಅಶ್ವಸೈನ್ಯದೊಡನೆ ಈಜಿಪ್ಟ್ ಮತ್ತು ಫ್ರಾನ್ಸ್ ರಣರಂಗಕ್ಕೆ ಹೋಗಿ ಯುದ್ಧಮಾಡಿ ಕೀರ್ತಿಪ್ರತಿಷ್ಠೆಗಳನ್ನು ಸಂಪಾದಿಸಿದರು. ಸಾಮ್ರಾಜ್ಯ ಪ್ರಭುತ್ವದಿಂದ ಇವರಿಗೆ ಕರ್ನಲ್, ಸಿ. ಐ. ಇ., ಎಂ. ವಿ. ಓ. ಎಂಬ ಬಿರುದುಗಳು ಅನುಗ್ರಹಿಸಲ್ಪಟ್ಟಿದ್ದುವು. ಶೌರ್ಯೌದಾರ್ಯಧೈರ್ಯಗಳಲ್ಲಿ ವಿಖ್ಯಾತರಾಗಿದ್ದಂತೆಯೇ ಅಂಗಲಕ್ಷಣದಲ್ಲೂ ಶೀಲದಲ್ಲೂ ಅರಸು ಮಂಡಲಿಯಲ್ಲಿ ಭೂಷಣಪ್ರಾಯರಾಗಿದ್ದರು. ನಮ್ಮ ಶ್ರೀಮನ್ಮಹಾರಾಜರ ಸ್ವಂತ ಅಕ್ಕಯ್ಯನವರಾದ ರಾಜಕುಮಾರಿ ಕೃಷ್ಣಾಜಮ್ಮಣ್ಣಿಯವರನ್ನು ಇವರು ವಿವಾಹಗೊಂಡಿದ್ದರು. ಇವರು 1862ನೆ ವರ್ಷದಲ್ಲಿ ಜನಿಸಿದವರಾದುದರಿಂದ ಅಂತ್ಯಕಾಲಕ್ಕೆ 60 ವರ್ಷ ತುಂಬಿದ್ದಿತು. ಕಳೆದ ನವರಾತ್ರಿಯುತ್ಸವದ ಪ್ರಥಮದಿನ ದರ್ಬಾರಿಗೆ ಇವರು ದಯಮಾಡಿಸಿದ್ದರು. ಆಗಲೇ ಶರೀರದ ಅಸ್ವಸ್ಥತೆಯು ವ್ಯಕ್ತವಾಯಿತು. ಚಿಕ್ಕಂದಿನಲ್ಲೇ ಮಾತೃವಿಯೋಗವನ್ನು ಹೊಂದಿ, ಈಗ ಪಿತೃವಿಯೋಗವನ್ನೂ ಹೊಂದಿದ ಮ|| ರಾಜಕುಮಾರ ದೇಶರಾಜ ಅರಸಿನವರಿಗೂ, ಶ್ರೀಮನ್ಮಹಾರಾಜರೇ ಮೊದಲಾದ ಬಂಧುವರ್ಗಕ್ಕೂ ದುಃಖಶಾಂತಿಯನ್ನು ಜಗದೀಶ್ವರನು ಉಂಟುಮಾಡಲೆಂದು ಕೋರಿ ಈ ಮೂಲಕ ನಮ್ಮ ಸಾನುತಾಪವನ್ನು ನಿವೇದಿಸುತ್ತೇವೆ. ಮರುದಿನ ಸೋಮವಾರ ಬೆಳಗ್ಗೆ ರಾಜಬಂಧುವರ್ಗದ ರುದ್ರಭೂಮಿಯಾದ ಮಧುವನದಲ್ಲಿ ಉತ್ತರಕ್ರಿಯೆಯು ನಡೆಯಿತು. ಎಲ್ಲಾ ಅರಸುಮಂಡಲಿಯೂ, ದಿವಾನರು ಕೌನ್ಸಿಲರು ರಾಜಾಧಿಕಾರಿಗಳು ಮೊದಲಾದ ಉದ್ಯೋಗಿಗಳೂ, ರಾಜಧಾನಿಯ ಅನೇಕ ದೊಡ್ಡಮನುಷ್ಯರೂ ಜತೆಯಲ್ಲಿ ಹೋಗಿದ್ದರು. ಉಚಿತ ರಾಜಮರ್ಯಾದೆಗಳೊಡನೆ ಶವವು ಪಲ್ಲಕ್ಕಿಯಲ್ಲಿಡಲ್ಪಟ್ಟು ರುದ್ರಭೂಮಿಗೆ ಸಾಗಿಸಲ್ಪಟ್ಟು ದಹನಕ್ರಿಯೆಯು ನಡೆಯಿತು. ಮೃತರ ಗೌರವಾರ್ಥವಾಗಿ ಅದಿನದ ಪ್ರಜಾಪ್ರತಿನಿಧಿಸಭೆಯ ಕಾರ್ಯಗಳು ನಿಲ್ಲಿಸಲ್ಪಟ್ಟು ಸಾನುತಾಪವನ್ನು ತೋರಿಸಲಾಯಿತು.

ಯುದ್ಧಭಯವು ತೊಲಗುವಂತಿದೆ.

ಮಿತ್ರಮಂಡಲಿಯ ಸೇನಾನಿಗಳೂ ಅಂಗೋರಾ ಪ್ರತಿನಿಧಿಯೂ ಮುದೇನಿಯಾದಲ್ಲಿ ಇದ್ದಲ್ಲಿ ಕೂಡಿ ತಾತ್ಕಾಲಿಕ ಸಂಧಿಕಾರ್ಯವನ್ನು ಮುಗಿಸಿದರೆಂಬ ಸಂತೋಷಕರ ವಾರ್ತೆಯು ಬಂದಿದೆ. ತಟಸ್ಥಪ್ರದೇಶವನ್ನು ಗೊತ್ತುಮಾಡುವ ವಿಷಯದಲ್ಲಿ ಮಾತ್ರ ಚರ್ಚೆ ನಡೆಯುತ್ತಿದೆ. ಈ ತಾತ್ಕಾಲಿಕ ಸಂಧಿನಿರ್ಣಯದ ಪ್ರಕಾರವೇನೆಂದರೆ—ಗ್ರೀಕ್ ಸೈನ್ಯಗಳೂ ಗ್ರೀಕು ಪ್ರಜೆಗಳೂ ಕೂಡ ಥ್ರೇಸನ್ನು ಬಿಟ್ಟು ಹೋಗಬೇಕು. ಬಳಿಕ 1 ತಿಂಗಳೊಳಗೆ ಅದನ್ನು ತುರ್ಕಿ ಸೈನ್ಯವು ಆಕ್ರಮಿಸಿ ಶಾಂತಿರಕ್ಷಣೆಯನ್ನು ಮಾಡಿಕೊಂಡಿರಬೇಕು. ಶಾಶ್ವತ ಸಂಧಿಯು ಮುಂದಣತಿಂಗಳಲ್ಲಿ ನಡೆಯಬೇಕು. ಅದು ಜರುಗಿದ ಕೂಡಲೇ ತುರುಕರು ಡಾರ್ಡನಲ್ಸ್ ಜಲಸಂಧಿಯನ್ನು ದಾಟಿ ಥ್ರೇಸಿಗೆ ಹೋಗಬೇಕು. ಆಗ ಥ್ರೇಸು ಸಂಪೂರ್ಣವಾಗಿ ತುರ್ಕಿ ರಾಜ್ಯಕ್ಕೆ ಅಧೀನವಾಗುವುದು. ಇದೇ ತಾತ್ಕಾಲಿಕ ಸಂಧಿನಿರ್ಣಯವು. ಇದು ತುರುಕರ ಅಭಿಪ್ರಾಯಕ್ಕೆ ಅನುಕೂಲವಾಗಿಯೇ ಪರಿಣಮಿಸಿದಂತಾಯಿತು. ಆದರಿಂದ ಪ್ರಪಂಚದ ಮೇಲಣ ತುರುಕರೆಲ್ಲಾ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದಾರೆ. ಶಾಶ್ವತ ಸಂಧಿಯು ಕೂಡ ಹೀಗೆಯೇ ಮುಗಿದರೆ ಸದ್ಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ಯುದ್ಧದ ಭೀತಿಯು ತೊಲಗಿಹೋಗುವುದು.

ಪ್ರಜಾಪ್ರತಿನಿಧಿ ಸಭೆಗೆ ಕೊಡಲಿಕ್ಕಿರುವ ನೂತನ ಸಂಸ್ಕರಣಗಳ ವಿವರಣೆ.

ಮಹಾಶಯರೇ,

ಈ ಅಧಿವೇಶನದ ನಮ್ಮ ಉಪಕ್ರಮ ಭಾಷಣದಲ್ಲಿ ಸಂಸ್ಥಾನದ ರಾಜ್ಯಾಡಳಿತದಲ್ಲಿ ಪ್ರಜೆಗಳು ಈಗಿರುವುದಕ್ಕಿಂತಲೂ ಹೆಚ್ಚಾಗಿ ಭಾಗಿಗಳಾಗುವಂತೆ ಅವಕಾಶ ಕಲ್ಪಿಸುವ ವಿಚಾರವನ್ನು ಪ್ರಸ್ತಾಪಿಸಿ ಸದರಿ ವಿಷಯವನ್ನು ಈ ಅಧಿವೇಶನವು ಪೂರೈಸುವುದರೊಳಗಾಗಿ ಪ್ರಕಟಿಸಲು ಸಾಧ್ಯವಾದೀತೆಂತ ಸೂಚಿಸಿದ್ದೆವಷ್ಟೆ. ಆ ವಿಷಯಕವಾದ ಮುಖ್ಯಾಂಶಗಳನ್ನು ಪ್ರಕಟಪಡಿಸಬೇಕೆಂತ ಶ್ರೀಮನ್ಮಹಾರಾಜರವರ ಆಜ್ಞೆಯಾಗಿರುವ ಅಂಶವನ್ನು ತಮಗೆ ಶ್ರುತಪಡಿಸುವ ಭಾಗದಲ್ಲಿ ನಾವು ತುಂಬಾ ಸಂತೋಷಿಸುತ್ತೇವೆ. ಆದರೆ ಹಾಗೆ ಪ್ರಕಟಪಡಿಸುವುದಕ್ಕೆ ಮುಂಚೆ ಮೈಸೂರು ಸಂಸ್ಥಾನದಲ್ಲಿ ರಾಜ್ಯಭಾರನಿರ್ವಾಹಕ್ಕಾಗಿ ಪ್ರಕೃತದಲ್ಲಿ ರೂಢಿಯಲ್ಲಿರುವ ಸಭೆಗಳ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಬೇಕಾಗಿದೆ.

ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯು ಸರ್ಕಾರಿ ಹುಕುಂ ಮೂಲಕ 1881ರಲ್ಲಿ ಸ್ಥಾಪಿತವಾಯಿತು. ಶ್ರೀಮನ್ಮಹಾರಾಜಾ ಸಾಹೇಬರವರು 1903ರಲ್ಲಿ ಅಪ್ಪಣೆ ಕೊಡಿಸಿದಂತೆ ಈ ಸಭೆಯ ಉದ್ದೇಶವೇನಾಗಿತ್ತೆಂದರೆ—"ಪ್ರಜಾಕ್ಷೇಮಕ್ಕಾಗಿ ಸರ್ಕಾರದವರು ಯಾವ ಆಶಯವುಳ್ಳವರಾಗಿದ್ದಾರೆಂಬುದನ್ನೂ, ಅದಕ್ಕಾಗಿ ಯಾವ ಕಾರ್ಯಕಲಾಪಗಳನ್ನು ಕೈಗೊಳ್ಳುವವರಾಗಿದ್ದಾರೆಂಬುದನ್ನೂ ಪ್ರಜೆಗಳಿಗೆ ಚೆನ್ನಾಗಿ ತಿಳಿಯಪಡಿಸಿ ಪ್ರಜೆಗಳು ಸರ್ಕಾರದಲ್ಲಿ ನೇರಾ ತಮ್ಮ ಕುಂದುಕೊರತೆಗಳನ್ನು ಅರಿಕೆಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡುವುದರ ಮೂಲಕ ಅವರುಗಳ ಮನಸ್ಸಿನಲ್ಲಿ ಸದರಿ ಆಶಯಗಳ ಅಥವಾ ಕಾರ್ಯಕಲಾಪಗಳ ವಿಚಾರವಾಗಿ ತಪ್ಪು ತಿಳವಳಿಕೆ ಏನಾದರೂ ಇದ್ದರೆ ಅದನ್ನು ಹೋಗಲಾಡಿಸುವುದೂ, ಪ್ರಜಾಕ್ಷೇಮಕ್ಕೂ ಸರ್ಕಾರದವರ ಉದ್ದೇಶಕ್ಕೂ ಭೇದಭಾವವಿಲ್ಲದೆ ಏಕಪ್ರಕಾರವಾಗಿರುವುದೆಂಬುದನ್ನು ಅವರುಗಳಿಗೆ ಗ್ರಾಹ್ಯವಾಗುವಂತೆ ಮಾಡುವುದೂ" ಈ ಸಭೆಯ ಉದ್ದೇಶವಾಗಿತ್ತು. ರಾಜ್ಯಪರಿಪಾಲನೆಯಲ್ಲಿ ಪ್ರಜೆಗಳ ಸೌಮನಸ್ಯವನ್ನೂ ಸಹಾಯವನ್ನೂ ಹೆಚ್ಚುಹೆಚ್ಚಾಗಿ ಪಡೆದುಕೊಳ್ಳುತ್ತಾ ಬರಬೇಕೆಂಬ ಕೃಪಾವಿಶಿಷ್ಟವಾದ ಅಭಿಲಾಷೆಯು ಶ್ರೀಮನ್ಮಹಾರಾಜರವರಲ್ಲಿ ಆವಿರ್ಭವಿಸಿರುವ ಪ್ರಯುಕ್ತ ಈ ಸಭೆಗೆ ಮೇಲೆ ಸೂಚಿಸಿರುವುದಕ್ಕಿಂತ ಹೆಚ್ಚಾದ ಅಧಿಕಾರಗಳು ಕ್ರಮಕ್ರಮವಾಗಿ ಕೊಡಲ್ಪಟ್ಟುವು. ಪ್ರಾರಂಭದಲ್ಲಿ ಮೆಂಬರುಗಳನ್ನು ಡೆಪ್ಯುಟಿ ಕಮೀಷನರುಗಳೇ ನೇಮಕ ಮಾಡುತ್ತಿದ್ದರು. 1891ನೆಯ ಇಸವಿಯಲ್ಲಿ, ಎಂದರೆ, ಸರಿಯಾಗಿ ಹತ್ತು ವರ್ಷಗಳ ನಂತರ, ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸುವ ಅಧಿಕಾರವನ್ನು ಪ್ರಜೆಗಳಿಗೆ ವಹಿಸಲಾಯಿತು. ಪ್ರತಿನಿಧಿಗಳನ್ನು ಚುನಾಯಿಸುವವರಿಗೂ, ಪ್ರತಿನಿಧಿಗಳಾಗಿ ಚುನಾಯಿಸಲ್ಪಡಲು ನಿಲ್ಲುವವರಿಗೂ ಇರಬೇಕಾದ ಯೋಗ್ಯತಾಂಶಗಳನ್ನು ವಿಧಿಸಿದುದಲ್ಲದೆ ಕ್ರಮಕ್ರಮವಾಗಿ ಈ ಸಭೆಯ ಕಾರ್ಯಕ್ರಮವನ್ನೂ, ಅಧಿಕಾರವನ್ನೂ ಹೆಚ್ಚಿಸುತ್ತಾ ಬರಲಾಯಿತು. ಈಗ ಈ ಸಭೆಗೆ ಇರುವ ಅಧಿಕಾರಗಳು ಯಾವುವೆಂದರೆ:—

(1) ಪ್ರಜೆಗಳ ಕುಂದುಕೊರತೆಗಳನ್ನು ಅರಿಕೆ ಮಾಡಿಕೊಳ್ಳುವ ಮತ್ತು ಸರ್ಕಾರದವರು ಅಪೇಕ್ಷಿಸುವ ವಿಷಯಗಳಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸುವ ಅಧಿಕಾರ;

(2) ಸಂಸ್ಥಾನದ ಬಜೆಟ್ಟನ್ನು ಚರ್ಚಿಸುವ ಅಧಿಕಾರ;

(3) ಪ್ರಶ್ನೆಗಳನ್ನು ಹಾಕುವ ಅಧಿಕಾರ.

ನ್ಯಾಯವಿಧಾಯಕ ಸಭೆಯು 1907 ರಲ್ಲಿ ಸ್ಥಾಪಿತವಾಯಿತು. ಮೊದಲು ಈ ಸಭೆಗೆ ಪ್ರಜಾಪಕ್ಷದ ಮೆಂಬರುಗಳನ್ನು ಸರ್ಕಾರದವರು ತಾವೇ ನೇರಾ ನೇಮಿಸಿಕೊಳ್ಳುತ್ತಿದ್ದರು. ಈ ಪೈಕಿ ಇಬ್ಬರನ್ನು ಈ ಸಭೆಯಿಂದ ಚುನಾವಣೆ ಮಾಡಿದಮೇಲೆ ನೇಮಕ ಮಾಡಿಕೊಳ್ಳಬಹುದೆಂತ 1908ರಲ್ಲಿ ಶ್ರೀಮನ್ಮಹಾರಾಜರವರು ಅಪ್ಪಣೆ ಮಾಡಿದರು. ಈ ಸಂಖ್ಯೆಯನ್ನು 1913 ರಲ್ಲಿ ನಾಲ್ಕಕ್ಕೆ ಹೆಚ್ಚಿಸಲಾಯಿತು. ಇದರ ಜೊತೆಗೆ ಡಿಸ್ಟ್ರಿಕ್ಟಿನ ಪ್ರಾತಿನಿಧ್ಯಸ್ಥಾನಗಳಿಂದ ಚುನಾಯಿಸಲ್ಪಟ್ಟ ಬೇರೆ ನಾಲ್ವರು ಮೆಂಬರುಗಳನ್ನು ನೇಮಿಸಿಕೊಳ್ಳಲು ಏರ್ಪಾಡಾಯಿತು. ಪ್ರಜಾಪಕ್ಷದ ಮೆಂಬರುಗಳ, ಮುಖ್ಯವಾಗಿ ಪ್ರಜೆಗಳಿಂದ ಚುನಾಯಿಸಲ್ಪಟ್ಟವರ, ಸಂಖ್ಯೆಯನ್ನು ಹೆಚ್ಚಿಸುವ ಬದಲಾವಣೆಯನ್ನು ಕಾಲಕ್ರಮದಲ್ಲಿ ಮಾಡುತ್ತಾ ಬಂದುದಾಯಿತು. ಸದ್ಯಕ್ಕೆ ಈ ಸಭೆಯಲ್ಲಿ ದಿವಾನರವರೂ, ಕೌನ್ಸಿಲರುಗಳೂ ಅಲ್ಲದೆ 30 ಜನ ಮೆಂಬರುಗಳಿರುತ್ತಾರೆ. ಇವರ ಪೈಕಿ 12 ಜನರು ಸರ್ಕಾರೀ ಅಧಿಕಾರಿಗಳಾಗಿಯೂ, ಉಳಿದ 18 ಜನರು ಖಾಸಗಿ ದೊಡ್ಡಮನುಷ್ಯರಾಗಿಯೂ ಇರುತ್ತಾರೆ. ಈಪೈಕಿ 13 ಜನರು ಪ್ರತಿನಿಧಿ ಸಭೆಯಿಂದಲೂ, ಇತರ ಕೆಲವು ಪ್ರಾತಿನಿಧ್ಯಸ್ಥಾನಗಳಿಂದಲೂ ಚುನಾಯಿಸಲ್ಪಟ್ಟಮೇಲೆ ನೇಮಕವಾದವರಾಗಿರುತ್ತಾರೆ.

ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸಿದ್ದರ ಉದ್ದೇಶವೇನೆಂದರೆ, ಕಾನೂನುಗಳನ್ನೂ, ರೆಗ್ಯುಲೇಷನುಗಳನ್ನೂ ರಚಿಸುವ ವಿಚಾರದಲ್ಲಿ ಸರ್ಕಾರದವರಿಗೆ ಸಹಾಯಕರಾಗಿರಲು ತಕ್ಕಲೋಕಾನುಭವವನ್ನು ಪಡೆದು ಸ್ಥಳೀಯ ವಿದ್ಯಮಾನಗಳನ್ನು ಅರಿತವರಾಗಿ ತಕ್ಕಯೋಗ್ಯತೆಯನ್ನು ಪಡೆದಿರುವ ಹಲವು ಮಂದಿ ಸರ್ಕಾರೀ ಉದ್ಯೋಗಸ್ಥರನ್ನೂ, ಖಾಸಗಿ ದೊಡ್ಡಮನುಷ್ಯರನ್ನೂ ಸೇರಿಸಿಕೊಳ್ಳುವುದೇ ಉದ್ದೇಶವಾಗಿತ್ತು. ಈ ಸಭೆಯ ಕರ್ತವ್ಯಗಳು (1) ಕಾನೂನುಗಳನ್ನು ಮಾಡುವುದಕ್ಕೂ, (2) ಬಜೆಟ್ಟನ್ನು ಚರ್ಚಿಸುವುದಕ್ಕೂ, (3) ಪ್ರಶ್ನೆಗಳನ್ನು ಕೇಳುವುದಕ್ಕೂ, (4) ನಿರ್ಣಯಗಳನ್ನು ಸೂಚಿಸುವುದಕ್ಕೂ ವ್ಯಾಪಿಸುತ್ತವೆ. ಕಾನೂನುಗಳನ್ನು ಮಾಡುವ ವಿಚಾರದಲ್ಲಿ, ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ 3ನೆಯ ಪ್ರಕರಣದಲ್ಲಿ ನಮೂದಿಸಿರುವ ಕೆಲವು ಮುಖ್ಯ ವಿಷಯಗಳು ಈ ಸಭೆಯ ಅಧಿಕಾರವ್ಯಾಪ್ತಿಗೆ ಒಳಪಟ್ಟವುಗಳಲ್ಲವೆಂದು ವಿಧಿಸಲಾಗಿದೆ. ಪೂರ್ವಭಾವಿಯಾಗಿ ದಿವಾನರವರ ಬರಹಮೂಲಕವಾದ ಮಂಜೂರಾತಿಯನ್ನು ಪಡೆದುಕೊಂಡಲ್ಲದೆ ಯಾವ ಕಾನೂನನ್ನಾಗಲಿ ಸಭೆಯವರ ಪರ್ಯಾಲೋಚನೆಗೆ ತರಲು ಆಗಲಾರದು. ಬಜೆಟ್ಟನ್ನು ಚರ್ಚಿಸುವ ಅಧಿಕಾರವನ್ನು 1917 ನೆಯ ಇಸವಿಯಲ್ಲಿ ಈ ಸಭೆಗೆ ಕೊಡಲಾಯಿತು. ಆದರೆ ಬಜೆಟ್ಟನ್ನು ಬದಲಾಯಿಸುವುದಕ್ಕಾಗಲಿ, ಅದಕ್ಕೆ ಹೊಸದಾದ ಬಾಬುಗಳನ್ನು ಸೇರಿಸುವುದಕ್ಕಾಗಲಿ, ಅದರ ವಿಚಾರವಾಗಿ ನಿರ್ಣಯಗಳನ್ನು ಮಾಡಿ ಕಳುಹಿಸುವುದಕ್ಕಾಗಲಿ ಈ ಸಭೆಗೆ ಅಧಿಕಾರವಿರುವುದಿಲ್ಲ. ಪ್ರಶ್ನೆಗಳನ್ನು ಕೇಳುವ ಅಧಿಕಾರವನ್ನೂ ಅದೇವರ್ಷದಲ್ಲಿಯೇ ಕೊಡಲಾಯಿತು. ಪ್ರಶ್ನೆಗಳ ಸಂಖ್ಯೆಯನ್ನು 20ಕ್ಕೆ ಪರಿಮಿತಿಗೊಳಿಸಿದೆ. ನಿರ್ಣಯಗಳನ್ನು ಮಾಡಿ ಕಳುಹಿಸುವ ಅಧಿಕಾರವನ್ನು 1919ನೆಯ ಇಸವಿಯಲ್ಲಿ ಕೊಡಲಾಯಿತು. ಸದರೀ ನಿರ್ಣಯಗಳಲ್ಲಿ ಸರ್ಕಾರದವರು ಇಂತಹ ರೀತಿಯಲ್ಲಿ ಕಾರ್ಯ ನಡಿಸಬಹುದೆಂದು ಸಿಫಾರಸ್ ಮಾತ್ರ ಮಾಡಬಹುದಾಗಿದೆ. ಯಾವುದೊಂದು ಅಧಿವೇಶನದಲ್ಲಿಯಾಗಲಿ ಸಲಹೆ ಮಾಡಬಹುದಾದ ನಿರ್ಣಯಗಳ ಸಂಖ್ಯೆಯು 12ಕ್ಕೆ ಮೀರಕೂಡದಾಗಿದೆ. ಇವುಗಳನ್ನೆಲ್ಲಾ ನೋಡಿದರೆ ಈ ಸಭೆಯು ಪರಿಮಿತವಾದ ಅಧಿಕಾರಗಳನ್ನುಳ್ಳ ಕೇವಲ ಆಲೋಚನಾ ಸಭೆ ಮಾತ್ರವೇ ಆಗಿರುವುದೆಂದು ವಿಶದವಾಗುತ್ತದೆ.

ಸರ್ಕಾರಿ ಆಡಳಿತದ ಕಾರ್ಯ ನಿರ್ವಾಹಕ್ಕೋಸ್ಕರ ಪ್ರಜಾಪಕ್ಷದ ದೊಡ್ಡ ಮನುಷ್ಯರನ್ನು ಈಗಿರುವುದಕ್ಕಿಂತ ಹೆಚ್ಚುಹೆಚ್ಚಾಗಿ ಸರ್ಕಾರದವರೊಡನೆ ಸೇರಿಸಿಕೊಳ್ಳುವ ಏರ್ಪಾಡು ಮಾಡಲು ತಕ್ಕ ಕಾಲವು ಈಗ ಸನ್ನಿಹಿತವಾಗಿರುವುದೆಂದು ಶ್ರೀಮನ್ಮಹಾರಾಜರವರು ಭಾವಿಸುತ್ತಾರೆ. ಈ ತೀರ್ಮಾನಕ್ಕನುಸಾರವಾಗಿ ಮಹಾಸ್ವಾಮಿಯವರು ಪ್ರಜಾಪ್ರತಿನಿಧಿಸಭೆಗೂ ನ್ಯಾಯವಿಧಾಯಕ ಸಭೆಗೂ ಈಗಿರುವುದಕ್ಕಿಂತ ಹೆಚ್ಚು ಅಧಿಕಾರಗಳನ್ನು ದಯಪಾಲಿಸಿ ಅವುಗಳ ಪುನರ್ವ್ಯವಸ್ಥೆಯನ್ನು ಮಂಜೂರ್ಮಾಡಿರುವುದಲ್ಲದೆ ಈಗ ಉದ್ದೇಶಿಸಿರುವ ಸುಧಾರಣೆಗಳ ಮುಖ್ಯಾಂಶಗಳನ್ನು ತಮಗೆ ಶ್ರುತಪಡಿಸಬೇಕೆಂತ ಆಜ್ಞಾಪಿಸಿರುತ್ತಾರೆ. ಈ ಸಭೆಗಳ ಕಾರ್ಯನಿರ್ವಾಹಕ್ಕೆ ಸಂಬಂಧಪಟ್ಟ ವಿವರಗಳನ್ನು ಚೆನ್ನಾಗಿ ಪರಿಶೀಲಿಸಿ ನೋಡಿ ಸಿದ್ಧಾಂತ ಮಾಡಿದನಂತರ ಈ ಸುಧಾರಣೆಗಳನ್ನು ಕ್ಷಿಪ್ರದಲ್ಲಿಯೇ ಶ್ರೀಮನ್ ಮಹಾರಾಜರವರ ಮುದ್ರಾಂಕಿತವನ್ನುಳ್ಳ ರಾಜಶಾಸನದ ಮೂಲಕ ಪ್ರಕಟಪಡಿಸಲಾಗುತ್ತದೆ.

ಪ್ರಜಾಪ್ರತಿನಿಧಿಸಭೆ.

(1) ರಾಜ್ಯಭಾರ ನಿರ್ವಹಣ ಕಾರ್ಯದಲ್ಲಿ ಪ್ರಜಾಪ್ರತಿನಿಧಿಸಭೆಗೆ ಒಂದು ಗೊತ್ತಾದ ಸ್ಥಾನವನ್ನು ಕೊಡಲಾಗುವುದು.

(2) ಮೆಂಬರುಗಳ ಚುನಾವಣೆಯಲ್ಲಿ ಸಮ್ಮತಿಕೊಡುವ ಬಗ್ಗೆ ವಿಧಾಯಕವಾದ ಯೋಗ್ಯತೆಯ ಪರಿಮಿತಿಯನ್ನು ತಗ್ಗಿಸಿ ಓಟ್ ಕೊಡುವವರ ಸಂಖ್ಯೆಯನ್ನು ಬಹಳಮಟ್ಟಿಗೆ ಹೆಚ್ಚುವಂತೆ ಮಾಡಲಾಗುವುದಲ್ಲದೆ ಓಟ್ ಕೊಡುವ ವಿಚಾರದಲ್ಲಿ ಸ್ತ್ರೀಯರಿಗಿದ್ದ ಅನರ್ಹತೆಯನ್ನು ತೆಗೆದುಹಾಕಿ ಸದರೀ ಅಧಿಕಾರವನ್ನು ಅವರಿಗೆ ಕೊಡಲಾಗುವುದು.

(3) ಪೂರ್ವಭಾವಿಯಾಗಿಯೇ ಈ ಸಭೆಯ ಆಲೋಚನೆಯನ್ನು ತೆಗೆದುಕೊಂಡಲ್ಲದೆ ಯಾವ ಹೊಸ ತೆರಿಗೆಯನ್ನೂ ವಿಧಿಸುವುದಿಲ್ಲ.

(4) ರಾಜ್ಯಾಡಳಿತದ ವಿಷಯಗಳ ಮೇಲೂ, ಸಂಸ್ಥಾನದ ಪ್ರತಿ ವರ್ಷದ ಬಜೆಟ್ಟಿನ ಮೇಲೂ ನಿರ್ಣಯಗಳನ್ನು ಸೂಚಿಸುವ ಅಧಿಕಾರವನ್ನು ಈ ಸಭೆಗೆ ಕೊಡಲಾಗುವುದು.

(5) ಕಾನೂನಿಗೆ ಸಂಬಂಧಪಡುವ ಎಲ್ಲ ಮುಖ್ಯ ವಿಷಯಗಳಲ್ಲಿಯೂ ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುತ್ತದೆ. ಆಯಾ ವರ್ಷದಲ್ಲಿ ಮಾಡಬೇಕೆಂದಿರುವ ಕಾನೂನುಗಳ ವಿವರವನ್ನು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ಅದರ ಮುಂದಿರಿಸಿ ಮಸೂದಾ ಕಾನೂನುಗಳ ಸಾಮಾನ್ಯ ವಿವರಗಳನ್ನು ಅಲ್ಲಿ ಚರ್ಚಿಸಲಾಗುತ್ತದೆ. ಈ ಸಭೆಯಲ್ಲಿ ಚರ್ಚೆಯಾಗುವುದಕ್ಕೆ ಮುಂಚೆಯೇ ನ್ಯಾಯವಿಧಾಯಕ ಸಭೆಯ ಮುಂದೆ ಯಾವುದಾದರೂ ಕಾನೂನು ತರಲ್ಪಟ್ಟಿದ್ದಲ್ಲಿ ಅಂತಹ ಕಾನೂನಿನ ವಿಚಾರದಲ್ಲಿ ಶ್ರೀಮನ್ಮಹಾರಾಜರವರು ಸಾಮಾನ್ಯವಾಗಿ (ಎಂದರೆ ಜರೂರಿಯಾತ್ ಸಂದರ್ಭಗಳಲ್ಲಿ ವಿನಾ) ತಮ್ಮ ಒಪ್ಪಿಗೆಯನ್ನು ಪ್ರತಿನಿಧಿ ಸಭೆಯ ಆ ಮುಂದಿನ ಅಧಿವೇಶನವು ಪೂರೈಸುವ ವರೆಗೆ ಉಳಿಸಿಕೊಂಡಿರುವರು.

(6) ಈ ಸಭೆಯ ಮೆಂಬರುಗಳ ಒಟ್ಟು ಸಂಖ್ಯೆಯನ್ನು ಸುಮಾರು 200ಕ್ಕೆ ಮಿತಪಡಿಸಿ ತಕ್ಕಷ್ಟು ಪ್ರಾತಿನಿಧ್ಯವು ಲಭಿಸದೆ ಹೋಗಬಹುದಾದ ಪಂಗಡಗಳಿಂದಲೂ, ವಿಶೇಷ ಪ್ರಾತಿನಿಧ್ಯಕ್ಕೆ ಅರ್ಹವಾದ ಸ್ಥಾನಗಳಿಂದಲೂ ಅವಶ್ಯವಿದ್ದಲ್ಲಿ ಸರ್ಕಾರದವರೇ ಮೆಂಬರುಗಳನ್ನು ನೇಮಿಸಿಕೊಳ್ಳಲು ಏರ್ಪಾಡು ಮಾಡಲಾಗುತ್ತದೆ. ದಿವಾನರವರು ಈಗಿನಂತೆಯೇ ಮುಂದೆಯೂ ಈ ಸಭೆಯ ಪ್ರೆಸಿಡೆಂಟರಾಗಿರುವರಲ್ಲದೆ ಕೌನ್ಸಿಲರುಗಳು ವೈಸ್‌ಪ್ರೆಸಿಡೆಂಟರಾಗಿರುವರು.

(7) ಈ ಸಭೆಯ ರಚನೆ, ಪ್ರಾತಿನಿಧ್ಯಸ್ಥಾನಗಳು ಇವುಗಳನ್ನು ಕುರಿತ ವಿಚಾರವನ್ನೂ, ಚುನಾವಣೆಯಾಗಿ ಬರುವ ಪ್ರತಿನಿಧಿಗಳನ್ನೆಲ್ಲಾ ನೇರಾ ಪ್ರಜೆಗಳೇ ಚುನಾಯಿಸತಕ್ಕದ್ದೇ, ಅಥವಾ ಈಗಿರುವಂತೆ ಕೆಲವರನ್ನು ಮಾತ್ರ ನೇರಾ ಚುನಾಯಿಸಿ ಉಳಿದವರನ್ನು ಬೇರೊಂದು ಸಂಸ್ಥೆಗೆ ಚುನಾವಣೆಯಾಗಿರುವವರಿಂದ ಚುನಾಯಿಸತಕ್ಕದ್ದೇ ಎಂಬ ವಿಚಾರವನ್ನೂ, ಈ ಸಭೆಯು ಎಷ್ಟುಕಾಲ ಮತ್ತು ಎಷ್ಟುಸಾರಿ ನಡೆಯಬೇಕೆಂಬ ವಿಚಾರವನ್ನೂ, ಈ ಸಭೆಯ ನಡೆವಳಿಕೆಯಲ್ಲಿ ಅನುಸರಿಸಬೇಕಾದ ಕಾರ್ಯಕ್ರಮವನ್ನು ಕುರಿತ ವಿವರಗಳನ್ನೂ ನಿರ್ಧರಿಸಿ ಸರ್ಕಾರದವರ ಪರ್ಯಾಲೋಚನೆಯ ಬಗ್ಗೆ ಕಳುಹಿಸಿಕೊಡುವುದಕ್ಕಾಗಿ ಸರ್ಕಾರೀ ಉದ್ಯೋಗಸ್ಥರನ್ನೂ ಖಾಸಗಿ ದೊಡ್ಡಮನುಷ್ಯರನ್ನೂ ಒಳಗೊಂಡ ಒಂದು ಕಮಿಟಿಯನ್ನು ಕೂಡಲೇ ನೇಮಿಸಲಾಗುವುದು.

(8) ಸಾಮಾನ್ಯವಾಗಿ ಸ್ಥಳೀಯ ವಿಷಯಗಳನ್ನು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹೆಚ್ಚು ಅಧಿಕಾರ ಕೊಟ್ಟು ಅಲ್ಲಿ ಚರ್ಚಿಸತಕ್ಕದ್ದೇ ಹೊರತು ಪ್ರತಿನಿಧಿ ಸಭೆಗೆ ಚರ್ಚೆಗೆ ತರತಕ್ಕದ್ದಲ್ಲ.

ನ್ಯಾಯವಿಧಾಯಕ ಸಭೆ.

(1) ಈ ಸಭೆಯ ಮೆಂಬರುಗಳ ಸಂಖ್ಯೆಯನ್ನು 40ಕ್ಕೆ ಕಮ್ಮಿಯಿಲ್ಲದಂತೆಯೂ, 50ಕ್ಕೆ ಹೆಚ್ಚದಂತೆಯೂ ಇರತಕ್ಕದ್ದೆಂತ ಗೊತ್ತುಮಾಡಲಾಗುವುದು. ಈ ಸಭೆಗೆ ಪ್ರತಿನಿಧಿ ಸಭೆಯಿಂದ ಚುನಾಯಿಸಲ್ಪಡುವ ಮೆಂಬರುಗಳ ಸಂಖ್ಯೆಯನ್ನು ಬಹುಮಟ್ಟಿಗೆ ಹೆಚ್ಚಿಸಲಾಗುವುದು. ಕೈಗಾರಿಕೆ ಮತ್ತು ವ್ಯಾಪಾರ, ಪ್ಲಾಂಟರುಗಳ ಕಸಬು, ವಿದ್ಯಾಭ್ಯಾಸ ಈ ಮುಂತಾದ ವಿಶೇಷಾಂಶಗಳ ಪ್ರಾತಿನಿಧ್ಯವನ್ನೂ, ತಕ್ಕಷ್ಟುಮಟ್ಟಿಗೆ ಪ್ರಾತಿನಿಧ್ಯವನ್ನು ಪಡೆಯದೆ ಇರುವಂತಹವರ ಪ್ರಾತಿನಿಧ್ಯವನ್ನೂ ಕಾಪಾಡುವ ಬಗ್ಗೆ ತಕ್ಕ ಏರ್ಪಾಡು ಮಾಡಲಾಗುವುದು. ಈ ಸಭೆಯ ರಚನೆಯ ವಿವರಗಳನ್ನು ಮೇಲೆ ಸೂಚಿಸಿದ ಕಮಿಟಿಯವರು ನಿರ್ಧರಿಸಬೇಕು.

(2) ಈ ಸಭೆಯ ಪ್ರತಿಯೊಂದು ಅಧಿವೇಶನದಲ್ಲಿಯೂ ತರಲ್ಪಡಬಹುದಾದ ಪ್ರಶ್ನಾಂಶಗಳ ಮತ್ತು ನಿರ್ಣಯಗಳ ಸಂಖ್ಯೆಯನ್ನು ಬಹುಮಟ್ಟಿಗೆ ಹೆಚ್ಚಿಸಲಾಗುವುದು.

(3) ಅರಮನೆಗೂ, ಸೈನ್ಯಕ್ಕೂ, ಸರ್ಕಾರೀ ನೌಕರರ ಪೆನ್ಷನ್‌ಗಳಿಗೂ ಸಂಬಂಧಪಟ್ಟ ಮತ್ತು ಈ ಸಂಸ್ಥಾನಕ್ಕೂ ಬ್ರಿಟಿಷ್ ಸರ್ಕಾರಕ್ಕೂ ನಡೆದಿರುವ ಕರಾರಿಗೆ ಸಂಬಂಧಪಟ್ಟ ಬಾಬುಗಳ ಹೊರತು ಬಜೆಟ್ಟಿನ ಎಲ್ಲಾ ಮೇಜರ್ ಬಾಬುಗಳ ವಿಷಯದಲ್ಲಿಯೂ ಈ ಸಭೆಯವರು ಸಮ್ಮತಿಕೊಡುವ ಅಧಿಕಾರವನ್ನು ಕೊಡಲಾಗುವುದು. ಬಜೆಟ್ಟಿನಲ್ಲಿ ಸೇರಸಿರುವ ಯಾವ ಬಾಬನ್ನಾಗಲೀ ಈ ಸಭೆಯವರು ಒಪ್ಪದೆ ಇದ್ದ ಅಥವಾ ಅದನ್ನು ಕಡಮೆಮಾಡಿದ ಸಂದರ್ಭದಲ್ಲಿ, ಇಲಾಖೆಯ ಕೆಲಸ ನಡಿಸುವುದಕ್ಕೆ ಅದು ಅವಶ್ಯಕವೆಂತ ಸರ್ಕಾರದವರು ಅಭಿಪ್ರಾಯಪಟ್ಟರೆ ಅದನ್ನು ಮೊದಲಿದ್ದಂತೆ ಇರಿಸಲು ಸರ್ಕಾರದವರಿಗೆ ಅಧಿಕಾರವಿರತಕ್ಕದ್ದು.

ಸರ್ವಸಾಮಾನ್ಯ ವಿಚಾರಗಳು.

(1) ನ್ಯಾಯವಿಧಾಯಕ ಸಭೆಯವರೂ, ಪ್ರತಿನಿಧಿ ಸಭೆಯವರೂ ಚರ್ಚೆಗೆ ತರಕೂಡದಾಗಿರುವ ವಿಷಯಗಳ ಈಗಿನ ಪಟ್ಟಿಯನ್ನು ಕಡಮೆಮಾಡಿ ಇನ್ನು ಮುಂದೆ ಈ ಸಭೆಗಳವರು ಅರಮನೆಗೆ ಸಂಬಂಧಪಟ್ಟ ವಿಚಾರ, ಶ್ರೀಮನ್ಮಹಾರಾಜರವರಿಗೂ ಸಾರ್ವಭೌಮ ಸರ್ಕಾರಕ್ಕೂ ಅಥವಾ ಇತರ ಸಂಸ್ಥಾನಗಳಿಗೂ ಇರುವ ಸಂಬಂಧವನ್ನು ಕುರಿತ ವಿಚಾರ, ಶ್ರೀಮನ್ಮಹಾರಾಜರವರು ಸಾರ್ವಭೌಮ ಸರ್ಕಾರದೊಂದಿಗೆ ಈಗ ಮಾಡಿಕೊಂಡಿರುವ ಅಥವಾ ಇನ್ನು ಮುಂದೆ ಮಾಡಿಕೊಳ್ಳಬಹುದಾದ ಕರಾರುಗಳು, ಪದ್ಧತಿಗಳು ಮತ್ತು ಒಪ್ಪಂದಗಳು ಕುರಿತ ವಿಚಾರ—ಇವುಗಳ ಹೊರತು ಸಂಸ್ಥಾನದ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಸಕಲ ವಿಚಾರಗಳನ್ನೂ ಚರ್ಚಿಸುವ ಅಧಿಕಾರವನ್ನು ಕೊಡಲಾಗುವುದು.

(2) ಕಾನೂನು ಮಾಡುವ ವಿಚಾರದಲ್ಲಿ ಪ್ರತಿನಿಧಿ ಸಭೆಗೂ, ನ್ಯಾಯವಿಧಾಯಕ ಸಭೆಗೂ ಇರುವ ಅಧಿಕಾರಗಳು ಜರೂರಿಯಾತ್ ರೆಗ್ಯುಲೇಷನ್‌ಗಳ ವಿಚಾರವಾಗಿ ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನಲ್ಲಿರುವ ನಿಯಮಗಳಿಗೆ ಒಳಪಟ್ಟಿರುವುವು.

(3) ಪ್ರತಿನಿಧಿ ಸಭೆಯವರೂ, ನ್ಯಾಯವಿಧಾಯಕ ಸಭೆಯವರೂ ಮಾಡುವ ನಿರ್ಣಯಗಳು ಸರ್ಕಾರಕ್ಕೆ ಕಳುಹಿಸಲ್ಪಟ್ಟ ಸಿಫಾರಸುಗಳೋಪಾದಿಯಲ್ಲಿ ಭಾವಿಸಲ್ಪಡುವುವು.

(4) ಪ್ರಜಾಪಕ್ಷದ ಪ್ರತಿನಿಧಿಗಳು ದಿನಚರಿಯ ರಾಜ್ಯಾಡಳಿತಗಳ ವಿಷಯದಲ್ಲಿ ಸಲಹೆಕೊಡುವ ಅವಕಾಶಗಳನ್ನು ಹೆಚ್ಚುಮಾಡುವುದಕ್ಕಾಗಿ ಇಂಡಿಯಾ ಸರ್ಕಾರದ ನ್ಯಾಯವಿಧಾಯಕ ಸಭೆಯವರು ಈಚೆಗೆ ಹೊಸದಾಗಿ ಏರ್ಪಡಿಸಿರುವ ಸ್ಟ್ಯಾಂಡಿಂಗ್ ಕಮಿಟಿಯ ಮಾದರಿಯಲ್ಲಿ ನ್ಯಾಯವಿಧಾಯಕ ಸಭೆಯ ಮತ್ತು ಪ್ರತಿನಿಧಿಸಭೆಯ ಮೆಂಬರುಗಳನ್ನೊಳಗೊಂಡ ಒಂದು ಅಥವಾ ಹೆಚ್ಚು ಸ್ಟ್ಯಾಂಡಿಂಗ್ ಕಮಿಟಿಗಳನ್ನು ಸಲಹೆ ಕೊಡುವ ಬಗ್ಗೆ ನಿಯಮಿಸಲಾಗುವುದು. ಪ್ರತಿನಿಧಿ ಸಭೆಯವರೂ, ನ್ಯಾಯ ವಿಧಾಯಕ ಸಭೆಯವರೂ ತಮ್ಮತಮ್ಮ ಸಭೆಯಲ್ಲಿ ಚುನಾಯಿಸುವ ಮೆಂಬರುಗಳ ಪೈಕಿ ಬೇಕಾದವರನ್ನು ಮೇಲ್ಕಂಡ ಸ್ಟ್ಯಾಂಡಿಂಗ್ ಕಮಿಟಿಗೆ ಆರಿಸಿಕೊಳ್ಳಲಾಗುವುದು. ಈ ಕಮಿಟಿಯ ಮೀಟಿಂಗುಗಳನ್ನು ದಿವಾನರವರು ನಿರ್ಧರಿಸಬಹುದಾದಷ್ಟು ಸಾರಿ ಮತ್ತು ಅವರು ನಿರ್ಧರಿಸಬಹುದಾದ ಕಾಲಗಳಲ್ಲಿ ಒಬ್ಬ ಕೌನ್ಸಿಲ್ ಮೆಂಬರವರ ಅಧ್ಯಕ್ಷತೆಯಲ್ಲಿ ನಡೆಯಿಸಲಾಗುವುದು. ಆಯಾ ಇಲಾಖೆಯ ಚಾರ್ಜಿನಲ್ಲಿರುವ ಕೌನ್ಸಿಲ್ ಮೆಂಬರವರು ಸಂಸ್ಥಾನದ ಆಡಳಿತಕ್ಕೆ ಸಂಬಂಧಪಡುವ ಮುಖ್ಯವಿಷಯಗಳಲ್ಲಿ ಮೇಲ್ಕಂಡ ಕಮಿಟಿಯವರ ಸಲಹೆಯನ್ನು ಅಪೇಕ್ಷಿಸಿದ್ದೇ ಆದರೆ ಸದರೀ ವಿಷಯಗಳನ್ನು ಆ ಕಮಿಟಿಯವರ ಮುಂದೆ ಇರಿಸಲಾಗುವುದು. ಸರ್ಕಾರಿ ಉದ್ಯೋಗಸ್ಥರೂ, ಖಾಸಗಿ ದೊಡ್ಡಮನುಷ್ಯರೂ ಇರುವ ಈಗಿನ ಬಜೆಟ್ ಫೈನಾನ್ಸ್ ಕಮಿಟಿಯನ್ನು ವಜಾ ಮಾಡಲಾಗುವುದು.

ಮಹಾಶಯರೇ—ಶ್ರೀಮನ್ಮಹಾರಾಜರವರು ತಮಗೆ ತಿಳಿಯಪಡಿಸಬೇಕೆಂದು ಅಪ್ಪಣೆಮಾಡಿರುವ ರಾಜ್ಯಭಾರದ ಸುಧಾರಣೆಗಳ ಸಾಮಾನ್ಯ ವಿವರಗಳನ್ನು ಮೇಲೆ ಸೂಚಿಸಿರುತ್ತೇವೆ. ಮುಂದಿನ ವರ್ಷದ ಬಜೆಟ್ಟನ್ನು ಪರ್ಯಾಲೋಚಿಸಲು ಅನುಕೂಲಿಸುವಂತೆ ಹೊಸ ಪ್ರತಿನಿಧಿ ಸಭೆಯನ್ನೂ, ಹೊಸ ನ್ಯಾಯವಿಧಾಯಕ ಸಭೆಯನ್ನೂ ಏರ್ಪಡಿಸಲು ಸಾಧ್ಯವಾಗುವಂತೆ ವಿವರಗಳನ್ನೆಲ್ಲಾ ಪರ್ಯಾಲೋಚಿಸಿ ಮುಂದಿನ ಡಿಸೆಂಬರ್ ಗುರ್ರೇತಾರೀಖಿನೊಳಗಾಗಿ ರಿಪೋರ್ಟನ್ನು ಕಳುಹಿಸಿ ಕೊಡುವ ಬಗ್ಗೆ ಸರ್ಕಾರಿ ಅಧಿಕಾರಸ್ಥರ ಮತ್ತು ಖಾಸಗಿ ದೊಡ್ಡಮನುಷ್ಯರ ಕಮಿಟಿಯನ್ನು ಕೂಡಲೆ ನಿಯಮಿಸಲಾಗುವುದು.

ಇನ್ನು ರಾಜ್ಯಭಾರ ನಿರ್ವಹಣಕ್ಕೆ ಸಂಬಂಧಪಟ್ಟ ಮುಖ್ಯಾಧಿಕಾರ ಸ್ಥಾನವನ್ನು ಕುರಿತು ಪ್ರಸ್ತಾಪಿಸುವಲ್ಲಿ ಶ್ರೀಮನ್ ಮಹಾರಾಜರವರ ಮಂತ್ರಾಲೋಚನಾ ಸಭೆಗೆ ಪ್ರಜಾಪಕ್ಷದವರನ್ನು ಹೊಸದಾಗಿ ಸೇರಿಸಿಕೊಳ್ಳಬೇಕೆಂತ ಈ ಸಭೆಯಲ್ಲಿಯೂ, ಇತರ ಕಡೆಗಳಲ್ಲಿಯೂ ಅರಿಕೆಗಳು ಬಂದಿರುತ್ತವೆ. ಈ ವಿಚಾರವಾಗಿ ನಾವು ತಮಗೆ ತಿಳಿಸಬೇಕಾಗಿರುವುದೇನೆಂದರೆ—ಸಂಸ್ಥಾನದ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಸಭೆಗಳಿಗೆ ಈಗಿರುವುದಕ್ಕಿಂತಲೂ ಹೆಚ್ಚಾದ ಅಧಿಕಾರಗಳನ್ನು ಕೊಟ್ಟಿರುವುದಾಗಿ ನಾವು ಈಗ ಪ್ರಕಟಿಸಿರುತ್ತೇವೆಯಷ್ಟೆ; ಶ್ರೀಮನ್ ಮಹಾರಾಜರವರಿಗೆ ಇಷ್ಟಬಂದು ಸಂದರ್ಭಗಳು ಅನುಕೂಲಿಸಿದಲ್ಲಿ, ಮಂತ್ರಾಲೋಚನಾ ಸಭೆಗೆ ಪ್ರತಿನಿಧಿ ಸಭೆಯಿಂದಲಾಗಲಿ ನ್ಯಾಯವಿಧಾಯಕ ಸಭೆಯಿಂದಲಾಗಲಿ ಒಬ್ಬರನ್ನು ನೇಮಕಮಾಡಿಕೊಳ್ಳುವುದಕ್ಕೆ ಸದರಿ ಪ್ರಕಟಣೆಯಿಂದ ಯಾವ ಅಭ್ಯಂತರವೂ ಇರುವುದಿಲ್ಲವೆಂಬ ಸಂಗತಿಯನ್ನು ತಮಗೆ ತಿಳಿಸಬೇಕೆಂತ ಶ್ರೀಮನ್ ಮಹಾರಾಜರವರು ನಮಗೆ ಆಜ್ಞಾಪಿಸಿರುತ್ತಾರೆ. ಪರಂತು, ಆ ರೀತಿ ನೇಮಕ ಮಾಡಿಕೊಳ್ಳುವ ವಿಷಯದಲ್ಲಿ ಸರ್ವ ಸ್ವಾತಂತ್ರ್ಯವೂ ಮಹಾಸ್ವಾಮಿಯವರ ನಿರ್ಬಂಧರಹಿತಹಿತವಾದ ವಿವೇಚನೆಗೆ ಸರ್ವದಾ ಒಳಪಟ್ಟಿರತಕ್ಕದ್ದಾಗಿರುತ್ತದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ಸಾಹೇಬರವರು ಮಾಡಿದ ಭಾಷಣ.

(ದಸರಾ ಅಧಿವೇಶನ)

2ನೆಯ ಅಕ್ಟೋಬರ್ 1922

ಒಂದನೆಯ ಭಾಗ.

(ಕಳೆದವಾರದ ಶೇಷ.)

ಸಂಸ್ಥಾನದಲ್ಲಿ ಆಹಾರ ಪದಾರ್ಥಗಳ ಉತ್ಪತ್ತಿ.

ಮೈಸೂರು ದೇಶದ ಪ್ರಜಾಕೋಟಿಯಲ್ಲಿ ಬಹುಭಾಗಕ್ಕೆ ವ್ಯವಸಾಯವೇ ಮುಖ್ಯವಾದ ಕಸಬಾಗಿದೆ; ಆದಕಾರಣ ಸಾಮಾನ್ಯವಾಗಿ ಜಿರಾಯತಿದಾರರೆಲ್ಲರ ದ್ರವ್ಯೋಪಪತ್ತಿ ಸ್ಥಿತಿಯು ತೃಪ್ತಿಕರವಾಗಿಲ್ಲವೆಂಬುದನ್ನೂ, ಈ ಸಂಸ್ಥಾನದಲ್ಲಿ ಉತ್ಪನ್ನವಾಗುವ ಆಹಾರ ಪದಾರ್ಥಗಳು ಸಾಲವೆಂಬುವುದನ್ನೂ, ಈ ಸಭೆಗೆ ತಿಳಿಯಪಡಿಸುವ ಉದ್ದೇಶದಿಂದ ಶ್ರಮಪಟ್ಟು ಕೆಲವು ಸಂಗತಿಗಳನ್ನು ಸಂಗ್ರಹಿಸಿದ್ದೇವೆ. ಈಚೆಗೆ ನಾವು ಸಂಚಾರ ಮಾಡಿದ್ದರಲ್ಲಿ ಸಾಗುವಳಿಗೆ ಲಾಯಖಾದ ಬಹು ವಿಸ್ತಾರವಾದ ಜಮೀನುಗಳು ಬಂಜರಾಗಿ ಬಿದ್ದಿದ್ದುದನ್ನು ಅಥವಾ ಹಿಡುವಳಿಯಲ್ಲದೆ ಇದ್ದುದನ್ನು ನೋಡಿ ಈ ವಿಷಯವು ವಿಚಾರಣೆ ಮಾಡತಕ್ಕ ವಿಷಯವೆಂದು ನಮ್ಮ ಮನಸ್ಸಿಗೆ ಬಹು ಚೆನ್ನಾಗಿ ಹೊಳೆಯಿತು. ಸಂಪದಭಿವೃದ್ಧಿ ಸಮಾಜದ 1913ನೆಯ ಫೆಬ್ರವರಿ ಮಾಹೆಯಲ್ಲಿ ಸಾದರಾದ ಒಂದು ಬುಲೆಟಿನ್‌ನಲ್ಲಿ ಮೈಸೂರು ದೇಶದಲ್ಲಿ ಸಾಗುವಳಿಯಲ್ಲಿರುವ ವಿಸ್ತೀರ್ಣವು ಹೆಚ್ಚದೆ ವ್ಯವಸಾಯವು ಒಂದೇ ಸಮವಾಗಿ ಸ್ಥಾಯಿಯಾಗಿರುವುದೆಂತಲೂ, ಮೈಸೂರು ದೇಶದಲ್ಲಿ ಜನರಿಗೆ ಸಾಮಾನ್ಯವಾಗಿ ಬೇಕಾಗುವಷ್ಟು ಆಹಾರಪದಾರ್ಥಗಳನ್ನು ಅಲ್ಲಿ ಬೆಳೆಯುತ್ತಿಲ್ಲವೆಂತಲೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಆಗ್ಗೆ ಡೈರೆಕ್ಟರಾಗಿದ್ದ ಸರ್ ಆಲ್ಫ್ರೆಡ್ ಚಾಟರ್ಟನ್‌ರವರು ಹೇಳಿದ್ದಾರೆ. ಸಂಸ್ಥಾನದಲ್ಲಿ ಆಹಾರ ಧಾನ್ಯಗಳನ್ನು ಸಾಗುವಳಿ ಮಾಡುವ, ಅದರಲ್ಲಿ ಮುಖ್ಯವಾಗಿ ಬತ್ತ ಮತ್ತು ರಾಗಿಯು ಬೆಳೆಯನ್ನಿಡುವ ವಿಸ್ತೀರ್ಣವನ್ನು ಹೆಚ್ಚಿಸುವ ಬಗ್ಗೆ ವಿಶೇಷ ಅವಕಾಶವಿದೆಯೆಂಬ ಅಭಿಪ್ರಾಯವು ಈಚೆಗೆ ಪ್ರಕಟವಾದ ರಿಪೋರ್ಟುಗಳಿಂದಲೂ ಪ್ರಕಟನೆಗಳಿಂದಲೂ ಸಹ ಸ್ಥಿರಪಡುತ್ತದೆ. 1920-21ಕ್ಕೆ ಅಪ್ಪೆರಾದ 10 ವರ್ಷಗಳಲ್ಲಿ ಹಿಡುವಳಿಯಲ್ಲಿದ್ದ ಮತ್ತು ಸಾಗುವಳಿಯಾದ ವಿಸ್ತೀರ್ಣಕ್ಕೆ ಸಂಬಂಧಪಟ್ಟ ಲೆಕ್ಕಗಳನ್ನು ಪರಿಶೀಲಿಸಲಾಗಿ, ಹಿಡುವಳಿಯಲ್ಲಿರುವ ಜಮೀನಿನ ವಿಸ್ತೀರ್ಣವು 1911-12 ರಲ್ಲಿ 75,45,521 ಎಕರೆಗಳಿಂದ 1920-21ರಲ್ಲಿ 78,58,729 ಎಕರೆಗಳಿಗೆ ಹೆಚ್ಚಿದ್ದಾಗ್ಯೂ, ಎಂದರೆ 3,00000 ಎಕರೆಗಳಿಗೆ ಸ್ವಲ್ಪ ಹೆಚ್ಚಿದ್ದಾಗ್ಯೂ, ಫಸಲು ತೆಗೆದ ನಿವ್ವಳ ಪ್ರದೇಶವು ಮಾತ್ರ 1911-12ರಲ್ಲಿ 60,47,455 ಎಕರೆಗಳಿಂದ 1920-21ರಲ್ಲಿ 5954930 ಎಕರೆಗಳಿಗೆ ಇಳಿದುಹೋಯಿತೆಂದೂ ಬಂಜರು ಬಿದ್ದ ಜಮೀನು 1,49,866 ಎಕರೆಗಳಿಂದ 1,90,799 ಎಕರೆಗಳಿಗೆ ಹೆಚ್ಚಿತೆಂದೂ ಕಂಡುಬರುತ್ತದೆ. 1921-22ನೆಯ ವರ್ಷದಲ್ಲಿ ಒಟ್ಟು 79,01,583 ಎಕರೆಗಳ ವಿಸ್ತೀರ್ಣವು ಹಿಡುವಳಿಯಲ್ಲಿದ್ದಿತು; ಮತ್ತು 60,94,165 ಎಕರೆಗಳಲ್ಲಿ ಬೆಳೆಯಾಯಿತು. ಆ ಪೈಕಿ 43,41,190 ಎಕರೆಗಳಲ್ಲಿ ಆಹಾರೋಪಯೋಗ್ಯವಾದ ಫಸಲುಗಳ ಬೆಳೆ ಇಡಲಾಯಿತು. ಪ್ರಕೃತದಲ್ಲಿ ಸಾಗುವಳಿಗೆ ಸಿದ್ಧವಾಗಿರುವ ಹಿಡುವಳಿಯಲ್ಲಿ ಇಲ್ಲದ ಆಕಾರಕಂಡ ಜಮೀನು 7,43,490 ಎಕರೆಗಳ ವಿಸ್ತೀರ್ಣವುಳ್ಳದ್ದಾಗಿರುತ್ತದೆ. ಇದರ ಜೊತೆಗೆ ಅಮೃತಮಹಲು ಕಾವಲುಗಳಿಂದ 1,20,000 ಎಕರೆಗಳನ್ನೂ, ಶೇಂದಿವನಗಳ ಪೈಕಿ 4,00,000 ಎಕರೆಗಳನ್ನೂ ರೆವಿನ್ಯೂ ಇಲಾಖೆಗೆ ಬಿಟ್ಟುಕೊಟ್ಟಿರುತ್ತದೆ. ಸ್ಥೂಲವಾಗಿ ಲೆಕ್ಕಮಾಡಿದ್ದರ ಮೇಲೆ ಸಂಸ್ಥಾನಕ್ಕೆಲ್ಲಾ ಬೇಕಾದ ಆಹಾರ ಪದಾರ್ಥಗಳ ಪರಿಮಾಣವು ಈ ಕೆಳಗೆ ಕಾಣಿಸಿರುವಂತೆ ಇರುವುದಾಗಿ ನಮಗೆ ತಿಳಿಯಬರುತ್ತದೆ.

	ಪಲ್ಲಾಗಳು
ಅಕ್ಕಿ	21,92,000
ರಾಗಿ	76,85,000
ಜೋಳ	13,15,000

ಎಂದರೆ, ಒಟ್ಟು 1,11,92,000 ಪಲ್ಲಾಗಳು ಬೇಕಾಗಿರುವುವು. ಪರಂತು ಕಾಲಸ್ಥಿತಿ ಮತ್ತು ಬೆಳೆಗಳ ರಿಪೋರ್ಟಿನಲ್ಲಿ ಕಾಣಿಸಿರುವ ಲೆಕ್ಕಗಳ ಮೇರೆಗೆ ಕಳೆದ ಮೂರು ವರುಷಗಳಲ್ಲಿ ಈ ಧಾನ್ಯಗಳ ಸರಾಸರಿ ಒಟ್ಟು ಉತ್ಪತ್ತಿಯು ಮೇಲೆ ಕಂಡ ಮೂರು ಬಾಬುಗಳೂ ಸೇರಿ 81,47,968 ಪಲ್ಲಾಗಳು ಮಾತ್ರವೇ ಆಗಿರುತ್ತದೆ. ಇದರಲ್ಲಿ ಒಂದು ವರ್ಷದಿಂದ ಮತ್ತೊಂದು ವರುಷಕ್ಕೆ ಕಾಲಸ್ಥಿತಿಯ ವ್ಯತ್ಯಾಸದಿಂದ ಬಹಳವಾಗಿ ಹೆಚ್ಚು ಕಡಿಮೆಗಳು ಉಂಟಾಗುತ್ತದೆ. ಆದರೆ ಕೇವಲ ಸುಭಿಕ್ಷವಾದ ವರುಷದಲ್ಲಿ ಉತ್ಪತ್ತಿಯಾಗುವ ಧಾನ್ಯವೂ ಕೂಡ ಈ ಸಂಸ್ಥಾನಕ್ಕೆ ಬೇಕಾಗುವಷ್ಟಕ್ಕಿಂತ ಲಕ್ಷಾಂತರ ಪಲ್ಲಾಗಳಷ್ಟು ಕಡಿಮೆ ಬೀಳುತ್ತದೆ. ಕೇವಲ ವ್ಯವಸಾಯವನ್ನೇ ನಂಬಿಕೊಂಡಿರುವ ಮೈಸೂರಿನಂಥಾ ಸೀಮೆಗೆ ಇಂಥಾ ಸ್ಥಿತಿಯು ತೃಪ್ತಿಕರವಾದದ್ದಲ್ಲ. ಈಚೆಗೆ ಕೆಲವು ವರುಷಗಳಿಂದಲೂ ವ್ಯವಸಾಯಾಭಿವೃದ್ಧಿಗೆ ಪ್ರೋತ್ಸಾಹ ಕೊಡುವ ಬಗ್ಗೆ ಎಷ್ಟು ಪ್ರಯತ್ನ ನಡೆಸಿದರೂ ಇಲ್ಲಿಗೆ ಬೇಕಾದಷ್ಟು ಆಹಾರ ಧಾನ್ಯಗಳು ನಮ್ಮ ಸಂಸ್ಥಾನದಲ್ಲಿ ಉತ್ಪತ್ತಿಯಾಗುತ್ತಿಲ್ಲವೆಂಬುದೂ ಕಾಲಸ್ಥಿತಿಯು ಸಮವಾಗಿರುವ ವರುಷಗಳಲ್ಲಿಯೂ ಸಹ ಹೊರಗಿನಿಂದ ಸರಕು ಬರುವುದನ್ನು ಇಲ್ಲಿನವರು ನಂಬಿಕೊಂಡಿರಬೇಕಾಗಿದೆ ಯೆಂಬುದೂ ವ್ಯಕ್ತವಾಗುತ್ತದೆ. ಆದಕಾರಣ ಸಂಸ್ಥಾನದ ಆಹಾರ ಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸುವ ವಿಷಯದಲ್ಲಿ ವಿಶೇಷ ಮುತುವರ್ಜಿಯಿಂದ ಎಲ್ಲ ವಿಧ ಪ್ರಯತ್ನಗಳನ್ನೂ ಬಹಳ ಜರೂರಾಗಿ ಮಾಡಬೇಕಾಗಿರುತ್ತದೆ. ಅಂಥಾ ಪ್ರಯತ್ನಗಳ ಪೈಕಿ ಹೆಚ್ಚಾಗಿ ಜಮೀನನ್ನು ಆಬಾದಿಗೆ ತರಬೇಕೆಂಬುದು ನೋಡಿದ ಕೂಡಲೆ ತೋರತಕ್ಕ ಒಂದು ಏರ್ಪಾಟಾಗಿದೆ. ಈ ಉದ್ದೇಶವನ್ನೇ ಮುಖ್ಯವಾಗಿ ಮನಸಿನಲ್ಲಿಟ್ಟುಕೊಂಡು ಸರ್ಕಾರದವರು ಅಮೃತಮಹಲ್ ಮತ್ತು ಎಕ್ಸೈಜು ಇಲಾಖೆಯವರು ಬಿಟ್ಟುಕೊಟ್ಟಿರುವ ಕಾವಲುಗಳು ಮತ್ತು ಶೇಂದಿ ವನಗಳು ದೇಖೀಲು ಸಿದ್ಧವಾಗಿರುವ ಹಿಡುವಳಿಯಲ್ಲಿಲ್ಲದ ಭಾರೀ ವಿಸ್ತೀರ್ಣದ ಜಮೀನುಗಳನ್ನು ವಿಲೆ ಮಾಡುವುದರಲ್ಲಿ ಡೆಪ್ಯುಟಿ ಕಮಿಷನರುಗಳಿಗೂ ರೆವಿನ್ಯೂ ಕಮಿಷನರಿಗೂ ಸಹಾಯ ಮಾಡುವುದಕ್ಕಾಗಿ ಒಬ್ಬ ಸ್ಪೆಷಲ್ ಆಫೀಸರನ್ನು ಈಚೆಗೆ ನೌಕರರು ಮಾಡಿರುತ್ತಾರೆ. ವ್ಯವಸಾಯವನ್ನು ಹೆಚ್ಚಿಸುವುದಕ್ಕೆ ಬಹು ಭಾರೀ ಏರ್ಪಾಟನ್ನು ಮಾಡಬೇಕಾದರೆ ಸಂಸ್ಥಾನದ ಜಿರಾಯತಿ ಕಸಬಿನ ಪ್ರಜೆಗಳ ದ್ರವ್ಯೋಪಪತ್ತಿಯು ಮತ್ತು ಜಾನ್ವಾರುಗಳ ಸ್ಥಿತಿಯು ಸಾಕಾಗಿರುತ್ತದೆಯೇ ಎಂಬುದನ್ನು ನಿರ್ಧರಿಸುವುದಕ್ಕೆ ಅವುಗಳ ಪ್ರಕೃತ ನಿಜಸ್ಥಿತಿಯನ್ನು ತಿಳಿಯಬೇಕೆಂಬ ಆಲೋಚನೆಯಿಂದ ಸಾಂಪತ್ತಿಕ ಪೈಮಾಯಿಷಿಯನ್ನು ಮಾಡಬೇಕಾದದ್ದು ಅವಶ್ಯಕವೆಂದು ನಮಗೆ ತೋರುತ್ತದೆ. ಸಂಸ್ಥಾನದ ಮೈದಾನ ಪ್ರಾಂತ್ಯಗಳಲ್ಲಿ ಈಚೆಗೆ ನಾವು ಸಂಚಾರ ಮಾಡಿದಾಗ ವಿಚಾರಿಸಿ ನೋಡಿದ್ದರಲ್ಲಿ ಸ್ವಂತಕ್ಕೆ ಭೂಸ್ಥಿತಿಯಿಲ್ಲದೇ ಬಹಳ ವರ್ಷಗಳಿಂದ ಜಮೀನನ್ನು ಕೇಳುತಲಿದ್ದರೂ ಅದನ್ನು ಪಡೆಯಲಾರದೇ ಇರುವ ಜನರು ಬಹುಮಂದಿ ಇರುವಂತೆ ತೋರಿಬಂದುದಲ್ಲದೇ ರೆವಿನ್ಯೂ ಇಲಾಖೆಯವರು ಜಮೀನುಗಳನ್ನು ಸಾಗುವಳಿಗೆ ಕೊಡುವ ಪದ್ಧತಿಯಲ್ಲಿ ಬದಲಾವಣೆಯು ಅವಶ್ಯಕವೆಂತಲೂ ತಿಳಿಯ ಬಂದಿತು. ದರಖಾಸ್ತುಗಳ ವಿಲೇವಾರಿಯಲ್ಲಿ ಸಾಮಾನ್ಯವಾಗಿ ಬಹಳ ನಾವಕಾಶವಾಗುತ್ತಿರುವುದು. ಗೋಮಾಳ ಅಥವಾ ಅಮೃತಮಹಲು ಕಾವಲು ಯಾ ಶೇಂದಿವನ ಇವುಗಳಲ್ಲಿ ಆಬಾದಿಗೆ ತರಲು ಶಕ್ತರಾದ ಜನರ ಕಡೆಯಿಂದ ಜಮೀನಿಗಾಗಿ ಒಂದು ದರಖಾಸ್ತು ಬಂದದ್ದಾದರೇ ಅನೇಕ ವರುಷಗಳ ವರಿಗೆ ಪತ್ರಿಕಾ ಪ್ರಸಂಗ ನಡೆದ ತರುವಾಯ ಖಾಯಿಷ್ ಮಾಡಲ್ಪಟ್ಟ ಜಮೀನು ಹರಾಜಿಗೆ ಇಡತಕ್ಕದ್ದೆಂಬ ಹುಕುಮಿನಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಆದುದರಿಂದ ಅನಾವಶ್ಯಕವಾದ ನಿರ್ಬಂಧವು ಇಲ್ಲದಂತೆ ನ್ಯಾಯವಾಗಿ ಕೇಳುವವರಿಗೆಲ್ಲರಿಗೂ ಕೊಡುವುದಕ್ಕಾಗಿ ಹೆಚ್ಚಿನ ಜಮೀನಿಗೆ ಎಷ್ಟುಮಟ್ಟಿಗೆ ಸ್ಥಳದಲ್ಲಿ ಗೊತ್ತಾದ ಗಿರಾಕಿ ಇರುತ್ತದೆಂಬುದನ್ನು ವಿಚಾರಿಸಿ ತಿಳಿದುಕೊಳ್ಳಬೇಕಾದುದು ಅವಶ್ಯಕವಾಗಿರುತ್ತದೆ. ಮತ್ತು ಸರ್ಕಾರದವರು ಅದನ್ನು ಅಷ್ಟು ಮಾತ್ರಕ್ಕೆ ಬಿಡದೇ ಬಂಡವಾಳ ಸಾಲದಿರುವವರಿಗೆ ತಕ್ಕ ರೀತಿಯಲ್ಲಿ ಪ್ರೋತ್ಸಾಹಕೊಟ್ಟು ಮೊದಲು ಕೆಲವು ವರುಷಗಳವರೆಗೆ ರೆವಿನ್ಯೂ ಮಾಫ್ ಮಾಡುವುದು ಅಥವಾ ಕಂದಾಯದಲ್ಲಿ ರಿಯಾಯಿತಿ ದರಗಳನ್ನು ಕೊಡುವುದು ಈ ಮೊದಲಾದ ರೀತಿಗಳಿಂದ ಆಹಾರಧಾನ್ಯಗಳನ್ನು ಬೆಳೆಯಿಡುವ ಬಗ್ಗೆ ಜಮೀನುಗಳನ್ನು ತೆಗೆದುಕೊಳ್ಳುವಂತೆ ಮಾಡಬೇಕಾದದ್ದೂ ಸಹ ಅವಶ್ಯಕವಾಗಿರುತ್ತದೆ.

ಅನೇಕ ವರುಷಗಳ ಹಿಂದೆಯೇ ಜಾರಿಯಲ್ಲಿ ತರಲ್ಪಟ್ಟ ಭಾರೀ ಭೂಸ್ಥಿತಿಗಳ ಏರ್ಪಾಟೂ ಸಹ ಸಾಕಾದಷ್ಟು ಮಟ್ಟಿಗೆ ಅಭಿವೃದ್ಧಿಗೆ ಬಂದಿರುವಂತೆ ಕಾಣುವುದಿಲ್ಲ. ಏತಕ್ಕೆಂದರೆ ಆ ಬಗ್ಗೆ ಬಂದ ಒಟ್ಟು 377 ಅರ್ಜಿಗಳ ಪೈಕಿ 267 ಅರ್ಜಿಗಳು ನಿರಾಕರಿಸಲ್ಪಟ್ಟು 85 ಬಾಕಿಯಲ್ಲಿ ನಿಂತಿವೆ.

ಇದಲ್ಲದೇ, ಆರಂಬಗಾರರು ಯುಕ್ತವಾದ ಕಾಲದೊಳಗೆ ತಮ್ಮ ಜಮೀನುಗಳಲ್ಲಿ ವ್ಯವಸಾಯವನ್ನು ಅವರ ಶಕ್ತ್ಯನುಸಾರವಾಗಿ ಅಭಿವೃದ್ಧಿಗೊಳಿಸಲು ಅರ್ಹವಾದ ಸಣ್ಣ ಹಿಡುವಳಿಗಳನ್ನು ನೆಲೆಸುವ ವಿಚಾರದಲ್ಲಿ—ಸಂಸ್ಥಾನದ ಪ್ರಜಾಸಂಖ್ಯೆಯ ಪೈಕಿ ⅙ ರಷ್ಟು ಮಂದಿ ಇರುವ ಹೊಲೆಯರು ಮತ್ತು ಮಾದಿಗರಲ್ಲಿ ಬಹುಜನ ಜಮೀನಿಗಾಗಿ ದರಖಾಸ್ತು ಮಾಡಿ ಅವು ಅದ್ಯಾಪಿ ಫೈಸಲಾಗದಿರುವಂತೆ ತಿಳಿಯಬರುತ್ತದೆ. ಅನುಕೂಲವಾದ ಕಡೆಗಳಲ್ಲಿ ಈ ಜನರನ್ನು ನೆಲಸಿ ಅವರ ಮೂಲಕ ವ್ಯವಸಾಯವನ್ನು ವಿಸ್ತರಿಸುವ ಏರ್ಪಾಡೊಂದನ್ನು ಕೂಡಿದಷ್ಟು ತ್ವರೆಯಲ್ಲಿ ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದು. ನಿಮ್ಮ ವರ್ಗದವರಿಗೆ ಮುಫತ್ತಾಗಿ ಜಮೀನುಗಳನ್ನು ಕೊಡಬೇಕೆಂಬ ಅಂಶವನ್ನು ಸರ್ಕಾರದವರು ಈಗಾಗಲೇ ಪರ್ಯಾಲೋಚನೆಗೆ ತೆಗೆದುಕೊಂಡು ಇರುತ್ತಾರೆ. ಡಿಸ್ಟ್ರಿಕ್ಟುಗಳಲ್ಲಿಯೂ ತಾಲ್ಲೂಕುಗಳಲ್ಲಿಯೂ ಈ ಪಂಗಡಗಳ ಜನರು ಎಷ್ಟೆಷ್ಟು ಮಂದಿ ಇರುತ್ತಾರೆಂಬುದನ್ನು ತಿಳಿದು ಅದಕ್ಕೆ ತಕ್ಕಂತೆ ಜಮೀನುಗಳನ್ನು ಹಂಚುವುದೂ ಅವರ ಹಣಕಾಸಿನ ಸ್ಥಿತಿಯನ್ನು ಮೇಲ್ಪಡಿಸುವ ಬಗ್ಗೆ ಅವರಲ್ಲಿ ಮಿತವ್ಯಯವನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಪರಸ್ಪರಸಹಾಯ ಸಂಘಗಳನ್ನೂ ಧಾನ್ಯದ ಬ್ಯಾಂಕುಗಳನ್ನೂ ಏರ್ಪಡಿಸುವುದಕ್ಕೆ ಪ್ರೋತ್ಸಾಹವನ್ನು ಕೊಡುವುದೂ ಅವಶ್ಯಕವಾಗಿದೆ.

ಈ ವಿಚಾರವನ್ನು ಬೇರೆ ದೃಷ್ಟಿಯಿಂದ ನೋಡುವುದರಲ್ಲಿ, ವ್ಯವಸಾಯದ ಲೆಕ್ಕಪತ್ರಗಳಿಂದ ಸಂಸ್ಥಾನದಲ್ಲೆಲ್ಲ ಒಟ್ಟು 10,63,532 ಹಿಡುವಳಿಗಳಿರುವಂತೆಯೂ, ಆ ಮಾರೀಫತ್ತು 78,48,229 ಎಕರೆಗಳು ಇದ್ದಂತೆಯೂ ತಿಳಿಯಬರುತ್ತದೆ. ಏಕೇನ ಹಿಡುವಳಿ ಒಂದಕ್ಕೆ 7 ಎಕರೆಗೆ ಸ್ವಲ್ಪ ಹೆಚ್ಚಿನ ವಿಸ್ತೀರ್ಣವಿರುವಂತೆಯೂ, ಪ್ರತಿಯೊಬ್ಬ ರೈತನು ಸರಾಸರಿ 10 ರೂಪಾಯಿಗಳಿಗೆ ಸ್ವಲ್ಪ ಕಡಮೆ ಕಂದಾಯ ಕೊಡುತ್ತಿರುವಂತೆಯೂ ತಿಳಿಯಬರುತ್ತದೆ. ಈ ಲೆಕ್ಕಗಳಿಂದ ಈಗಿರುವ ಭೂಸ್ಥಿತಿವಂತರಿಗೆ ತಮ್ಮ ಹಿಡುವಳಿಗಳನ್ನು ಹೆಚ್ಚಾಗಿ ಜಮೀನನ್ನು ತೆಗೆದುಕೊಂಡು ವಿಸ್ತರಿಸುವುದಕ್ಕೆ ಬೇಕಾದಷ್ಟು ಅವಕಾಶವಿರುವಂತೆಯೂ, ಆ ಮೂಲಕ ವ್ಯವಸಾಯವನ್ನು ಹೆಚ್ಚಿಸುವ ಮತ್ತು ಆಹಾರಧಾನ್ಯಗಳ ಸಾಗುವಳಿಯನ್ನು ವಿಸ್ತರಿಸುವ ವಿಚಾರವನ್ನು ಸ್ವಲ್ಪ ಮಟ್ಟಿಗೆ ವ್ಯವಸ್ಥೆ ಮಾಡಿದಂತಾಗುವುದೆಂದೂ ನಮಗೆ ತೋರುತ್ತದೆ.

1918-19ನೆಯ ವರ್ಷದಲ್ಲಿ ಆಹಾರ ಧಾನ್ಯಗಳ ಸರಬರಾಯಿಯ ವಿಷಯದಲ್ಲಿ ಸಂಸ್ಥಾನಕ್ಕೆ ಒಂದು ದೊಡ್ಡ ಕಷ್ಟವು ಪ್ರಾಪ್ತವಾಗಲು, ಆಗ್ಗೆ ದಿವಾನರಾಗಿದ್ದ ಸರ್ ಎಂ. ಕಾಂತರಾಜ ಅರಸರವರು ಆ ವರ್ಷ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಈ ಕೆಳಗೆ ಕಂಡಂತೆ ಅಪ್ಪಣೆ ಕೊಡಿಸಿರುತ್ತಾರೆ.—"ಸಾಧಾರಣ ವರ್ಷಗಳಲ್ಲಿ ಸಾಕಾದಷ್ಟು ಆಹಾರ ಧಾನ್ಯಗಳನ್ನು ಬೆಳೆಯುವುದೂ, ಮಳೆ ಬಾರದಿದ್ದಾಗ ಪ್ರತಿಸಲವೂ ಬ್ರಿಟಿಷ್ ಇಂಡಿಯಾದಲ್ಲಿರುವ ನಮ್ಮ ನೆರೆಹೊರೆ ಜನರ ಸಹಾಯವನ್ನು ಅಪೇಕ್ಷಿಸದಂತೆ ನಮ್ಮ ದೇಶದಲ್ಲಿಯೇ ತಕ್ಕಷ್ಟು ಆಹಾರ ಧಾನ್ಯಗಳನ್ನು ಯಾವಾಗಲೂ ದಾಸ್ತಾನು ಇಟ್ಟುಕೊಳ್ಳುವುದೂ, ನಮ್ಮ ಮೇಲೆ ಬಿದ್ದ ಭಾರವಾಗಿದೆ." ಈ ರೀತಿ ಅವರು ಕೊಟ್ಟಿರುವ ಎಚ್ಚರಿಕೆಯನ್ನು ಮೈಸೂರು ದೇಶದ ಪ್ರಜೆಗಳು ಸದಾ ನೆನಪಿನಲ್ಲಿಟ್ಟುಕೊಂಡಿರಬೇಕಲ್ಲದೆ, ಸರ್ಕಾರದವರೂ ಸಹ ತಮ್ಮ ಸ್ವಾಧೀನದಲ್ಲಿರುವ ಸಾಧನಸಂಪತ್ತಿಗಳ ಮೂಲಕ ತಕ್ಕ ಏರ್ಪಾಡುಗಳನ್ನು ಮಾಡಿ ಇಂಥ ತೊಂದರೆಗಳನ್ನು ಪರಿಹರಿಸಿಕೊಳ್ಳಲು ಜನಗಳಿಗೆ ಸಹಾಯ ಮಾಡುವುದು ಅವಶ್ಯಕವಾಗಿದೆ.

ವಿದ್ಯಾಭ್ಯಾಸದ ಹಣಕಾಸಿನಸ್ಥಿತಿ.

ವಿದ್ಯಾಭ್ಯಾಸದ ಮೆಮೊರ್ಯಾಂಡಮನ್ನು ಜಾರಿಯಲ್ಲಿ ತರುವ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳ ಸಂಪೂರ್ಣವಾದ ವಿವರಣವು ನ್ಯಾಯವಿಧಾಯಕ ಸಭೆಯ ಕಳೆದ ಅಧಿವೇಶನದಲ್ಲಿ ಅದರ ಮುಂದಿಡಲಾಗಿದೆ. ವಿದ್ಯಾಭ್ಯಾಸದ ಇಲಾಖೆಯವರು ಬಹಳ ಮಟ್ಟಿಗೆ ಪೂರ್ವಭಾವಿಯಾಗಿ ಮಾಡಬೇಕಾದ ಕೆಲಸಗಳನ್ನು ನಡೆಸಿದ್ದರೂ, ಮುಖ್ಯವಾಗಿ ಹಣಕಾಸಿನ ಅಡಚಣೆಯುಂಟಾಗಿರುವುದರಿಂದ ಅಭಿವೃದ್ಧಿಯು ತಡವಾಗಿದೆ. ಬಂಡವಾಳದ ಕಾಂಗಾರಿಗಳ ಮತ್ತು ಕೈಗಾರಿಕೆಗಳ ಹುಟ್ಟುವಳಿಯೂ ಸೇರಿ ಸಂಸ್ಥಾನದ ಒಟ್ಟು ಹುಟ್ಟುವಳಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಈಗಾಗಲೇ ಶೇಕಡಾ 14ರಷ್ಟು ಖರ್ಚಾಗುತ್ತಿದೆ. ಮಾಮೂಲು ಹುಟ್ಟುವಳಿಗೆ ಇದು ಶೇಕಡ 17ರಷ್ಟಾಗಿದೆ.

ಈ ಸಭೆಯ ಕಳೆದ ವರ್ಧಂತಿ ಅಧಿವೇಶನದಲ್ಲಿ ನಾವು ಮಾಡಿದ ಉಪಸಂಹಾರ ಭಾಷಣದಲ್ಲಿ 1917ನೆ ಇಸವಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹವಾಲೆ ಮಾಡಿದ ಲೋಕಲ್ ಫಂಡು ಜನರಲ್ ಮತ್ತು ಮೊಹತರ್ಫಗಳನ್ನು ವಾಪಸು ತೆಗೆದುಕೊಳ್ಳುವುದನ್ನು ನಿರೋಧಿಸಿ ಅವರು ತಂದ ಅಂಕೆಗೆ ಅನುಸಾರವಾಗಿ ವಿದ್ಯಾಭ್ಯಾಸದ ಹಣಕಾಸಿನ ಸ್ಥಿತಿಯನ್ನು ಮತ್ತೊಂದಾವರ್ತಿ ಆಮೂಲಾಗ್ರವಾಗಿ ಸರ್ಕಾರದವರು ಪರಿಶೀಲಿಸುವರೆಂದು ಸೂಚಿಸಿರುತ್ತೇವೆ. ಈಗ ಪ್ರತಿಯೊಂದು ಡಿಸ್ಟ್ರಿಕ್ಟ್ ಬೋರ್ಡಿನ ಹಣಕಾಸಿನ ಸ್ಥಿತಿಯನ್ನು ತಪಶೀಲ್ವಾರಾಗಿ ಪರಿಶೀಲಿಸಿದ್ದರ ಮೇಲೆ ಅವರ ಅಂಕೆಗಳಿಗೆ ಗಮನವನ್ನು ಕೊಡಬೇಕಾದ್ದು ಯುಕ್ತವೆಂದು ಸರ್ಕಾರದವರು ಭಾವಿಸಿಹಾರೆ ಎಂಬಂಶವನ್ನು ನಾವು ತಿಳಿಸಬಲ್ಲೆವು. ಡಿಸ್ಟ್ರಿಕ್ಟ್ ಬೋರ್ಡಿನವರ ವಶದಲ್ಲಿ ಇಟ್ಟಿರುವ ಹೆಚ್ಚು ಮೊಬಲಗಿನ ಸಹಾಯದಿಂದ ಅವರು ಅನೇಕ ಬಾಬುಗಳಲ್ಲಿ ಖರ್ಚನ್ನು ಹೆಚ್ಚು ಮಾಡಿದ್ದಾರೆ. ರಸ್ತೆಗಳ ದುರಸ್ತಿ ಬಗ್ಗೆ ಹೆಚ್ಚಾದ ಮೈಲೇಜ್ ಗ್ರಾಂಟುಗಳೂ, ವೈದ್ಯ ಸಹಾಯದ ಬಗ್ಗೆ ಹೆಚ್ಚು ಖರ್ಚೂ, ಹೆಚ್ಚು ಸಿಬ್ಬಂದಿಗಳೂ, ಪಶುವೈದ್ಯಕ್ಕೆ ಕಂಟ್ರಿಬ್ಯೂಷನ್ ಮೊಬಲಗು ವಗೈರೆಗಳೂ ಅವುಗಳಲ್ಲಿ ಮುಖ್ಯವಾಗಿವೆ. ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಲೋಕಲ್‌ಫಂಡು ಜನರಲ್ ಮತ್ತು ಮೊಹತರ್ಫಬಾಬುಗಳ ಕೆಳಗೆ ಹವಾಲೆ ಮಾಡಿದ್ದ ಎಲ್ಲಾ ಮೊಬಲಗನ್ನೂ ವಾಪ್ಸು ತೆಗೆದುಕೊಳ್ಳುವುದು ಸಾಧ್ಯವಲ್ಲವೆಂಬುದು ಈಗ ವ್ಯಕ್ತವಾಗಿದೆ. ಹೀಗಿದ್ದರೂ ವಿದ್ಯಾಭ್ಯಾಸದ ಮೆಮೊರಾಂಡಮಿನ ಮೇಲಿನ ಹುಕುಂಗಳಲ್ಲಿ ವ್ಯವಸ್ಥೆಯಾದ ಸುಧಾರಣೆಗಳನ್ನು ಜಾರಿಯಲ್ಲಿ ತರುವ ವಿಚಾರದಲ್ಲಿ ಸಾಮಾನ್ಯ ಸ್ಥಿತಿಯನ್ನು ನೋಡಿದರೆ ಕನಿಷ್ಠಪಕ್ಷ ಮುಂದಣ ಕೆಲವು ವರುಷಗಳಲ್ಲಾದರೂ ಹೆಚ್ಚು ಮೊಬಲಗ

ನ್ನು ಒದಗಿಸಬೇಕಾದ್ದು ಸರ್ಕಾರದವರಿಗೆ ಅತ್ಯವಶ್ಯಕ ವಾಗಿದೆ. ಮೆಮೊರಾಂಡಮಿನ ಪರವಾದ ಹುಕುಮುಗಳನ್ನು ಸಾದರ್ ಮಾಡಿ ಒಂದು ವರುಷಕ್ಕಿಂತಲೂ ಹೆಚ್ಚಾಯಿತು. ಮತ್ತು ಅವಶ್ಯವಾದ ಉಪಕ್ರಮ ಕಾರ್ಯಗಳು ಬಹುಮಟ್ಟಿಗೆ ಜರುಗಿದ್ದರೂ ಅತ್ಯಂತ ಜರೂರಾದ ಪರಿಷ್ಕರಣಗಳನ್ನು, ಎಂದರೆ ಪ್ರೈಮರಿ ಮತ್ತು ಮಿಡಲ್ ಸ್ಕೂಲ್ ವಿದ್ಯಾಭ್ಯಾಸವನ್ನು ಹೊಸ ಮಾದರಿಯಲ್ಲಿ ಏರ್ಪಡಿಸುವುದು, ಮಿಡಲ್ ಸ್ಕೂಲುಗಳ ಬೇರೆಬೇರೆ ತರಗತಿಗಳನ್ನು ಒಂದೇ ತರಹೆಗೆ ತರುವುದು, ವಿವಿಧ ಕಸಬುಗಳ ಶಿಕ್ಷಣವನ್ನು ಜಾರಿಯಲ್ಲಿ ತರುವುದು, ಎಲ್ಲಾ ದರ್ಜೆಯ ಉಪಾಧ್ಯಾಯರುಗಳ ಸಂಬಳಗಳನ್ನು ಮೇಲ್ಪಡಿಸುವುದು, ಇನ್ಸ್‌ಪೆಕ್ಟರುಗಳ ಸಂಖ್ಯೆಯನ್ನು ಹೆಚ್ಚಿಸುವುದು, ಹೆಚ್ಚು ಸಂಖ್ಯೆಯ ಗ್ರಾಮಾಂತರ ಎಯಿಡೆಡ್ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಮಾರ್ಪಡಿಸುವುದು, ಈ ಪರಿಷ್ಕರಣಗಳನ್ನು, ಜಾರಿಯಲ್ಲಿ ತರುವ ಬಗ್ಗೆ ಯಾವ ಅಭಿವೃದ್ಧಿಯೂ ಆಗಿಲ್ಲ.

ಅನೇಕ ಸರ್ಕಾರಿ ಸ್ಕೂಲುಗಳಲ್ಲಿ, ಅದರಲ್ಲಿಯೂ ಮುಖ್ಯವಾಗಿ ಪ್ರೈಮರಿ ಮತ್ತು ಆಂಗ್ಲೊ ವರ್ನಾಕ್ಯುಲರ್ ಸ್ಕೂಲುಗಳಲ್ಲಿ, ಈಗಿರುವ ಸ್ಥಳವಸತಿಯು ಸಂಪೂರ್ಣವಾಗ ಸಾಲದು. ಕೆಲವು ಹೈಸ್ಕೂಲುಗಳಲ್ಲಿಯೂ ಸಹ ವಿದ್ಯಾರ್ಥಿಗಳಿಗೆ ಕೇವಲ ಸ್ಥಳ ಸಾಲದೆಂತ ಕಂಡುಬರುತ್ತದೆ; ವಿದ್ಯಾಭ್ಯಾಸದ ಎಲ್ಲಾ ದರ್ಜೆಗಳಲ್ಲಿಯೂ ಹೆಚ್ಚಿಗೆ ಸ್ಥಳವಸತಿಯನ್ನು ಸಾಧ್ಯವಾದಷ್ಟು ತ್ವರ್ಯವಾಗಿ ಕಲ್ಪಿಸಬೇಕಾಗಿದೆ.

ವಿಧಾಯಕವಾದ ಸದರಿ ಕಾರ್ಯಕ್ರಮದಲ್ಲಿ, ಸ್ಥಳೀಯ ಸಂಪತ್ತಿಗಳಾದ ಜನರಲ್ ಲೋಕಲ್ ಫಂಡು ಮೊಹತರ್ಫಾಗಳನ್ನು ಮಾತ್ರವೇ ಅಲ್ಲದೆ ವಿದ್ಯಾಭ್ಯಾಸದ ಸೆಸ್ಸನ್ನೂ ಸಹ ಉಪಯೋಗಿಸಿಕೊಳ್ಳಲು ಏರ್ಪಾಡಾಗಿತ್ತು. ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡುಗಳವರ ಅವಶ್ಯಕತೆಗಳನ್ನು ನೋಡಿ ಮೊದಲನೆಯ ಬಾಬನ್ನು ತೆಗೆದುಕೊಳ್ಳಲಾಗಲಿಲ್ಲ. ಎರಡನೆಯ ಬಾಬಿನಲ್ಲಿ ಕೋರಿದ್ದಂತೆ ವಸೂಲಿಯಾಗಲಿಲ್ಲ. ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಹುಟ್ಟುವಳಿಯ ಕೆಲವು ಬಾಬುಗಳ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಸೆಸ್ಸನ್ನು ವಸೂಲ್‌ಮಾಡುತ್ತಾರೆಂದೂ, ಸಿಟಿಮುನಿಸಿಪಾಲಿಟಿಗಳಲ್ಲಿ ರೂಪಾಯಿ ಒಂದಕ್ಕೆ ಎರಡು ಆಣೆಯಂತೆಯೂ ಇತರ ಮುನಿಸಿಪಾಲಿಟಿಗಳಲ್ಲಿ ರೂಪಾಯಿ ಒಂದಕ್ಕೆ ಒಂದಾಣೆಯಂತೆಯೂ ವಸೂಲ್‌ಮಾಡಲಾಗುವುದೆಂದೂ ಭಾವಿಸಲಾಗಿತ್ತು. ತಹಲ್‌ವರೆಗೆ ಎರಡು ಡಿಸ್ಟ್ರಿಕ್ಟ್ ಬೋರ್ಡುಗಳು ಮಾತ್ರ, ಎಂದರೆ ಬೆಂಗಳೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳು, ಸೆಸ್ಸನ್ನು ವಸೂಲ್ ಮಾಡಿವೆ. ಅದೂ ಸಹ ರೂಪಾಯಿ ಒಂದಕ್ಕೆ ಅರ್ಧಾಣೆಯಂತೆ ಮಾತ್ರ ವಸೂಲ್ಮಾಡಿವೆ. ಅಲ್ಲದೆ, ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ ಮಾಡುವುದಕ್ಕೆ ಮುನಿಸಿಪಾಲಿಟಿಗಳಿಗೆ ಅಧಿಕಾರವಿರುವಂತೆ ಮ್ಯುನಿಸಿಪಲ್ ರೆಗ್ಯುಲೇಷನನ್ನು ತಿದ್ದುಪಡಿ ಮಾಡಲು ಏರ್ಪಟ್ಟ ಸಲಹೆಗಳು ಈಗ ನ್ಯಾಯವಿಧಾಯಕ ಸಭೆಯ ಮುಂದೆ ವಿಚಾರವಾಗುತ್ತಿದ್ದರೂ ಸಂಸ್ಥಾನದ ಒಟ್ಟು 102 ಮ್ಯುನಿಸಿಪಾಲಿಟಿಗಳ ಪೈಕಿ 42 ಮ್ಯುನಿಸಿಪಾಲಿಟಿಗಳಿಗೆ ಅವರವರ ಸರಹದ್ದಿನಲ್ಲಿ ವಿದ್ಯಾಭ್ಯಾಸದ ಖರ್ಚಿನ ಬಗ್ಗೆ ಸೆಸ್ಸನ್ನು ವಸೂಲ್ ಮಾಡುವುದು ಇಷ್ಟವಿಲ್ಲವೆಂದು ಅವರು ತಿಳಿಸಿರುವುದಾಗಿ ಕಂಡುಬರುತ್ತದೆ. ಈ ಸೆಸ್ಸನ್ನು ವಸೂಲ್ ಮಾಡುವುದಕ್ಕೆ ಸ್ಥಳೀಯ ಸಭೆಗಳವರಿಗೆ ಇಷ್ಟವಿಲ್ಲದಿರುವುದಕ್ಕೆ ಪ್ರಾಯಶಃ ತಪ್ಪು ತಿಳುವಳಿಕೆಯೇ ಕಾರಣವಾಗಿರಬಹುದು. ಯಾವಪ್ರಾಂತ್ಯದಲ್ಲಿ ಸೆಸ್ಸು ವಸೂಲಾಗುತ್ತದೆಯೋ ಅಲ್ಲೀ ಅದನ್ನು ಅದಕ್ಕೆ ಸಂಬಂಧಪಟ್ಟ ಸ್ಥಳೀಯ ಸಭೆಯವರ ಸಮ್ಮತಿಯ ಮೇಲೆ ಉಪಯೋಗಿಸುವುದಾಗಿ ಮೊದಲು ಸ್ಪಷ್ಟಪಡಿಸಲಿಲ್ಲ. ಈತಪ್ಪು ತಿಳುವಳಿಕೆಯನ್ನು ಈಗ ಸರ್ಕಾರಿ ಹುಕುಂ ಮೂಲಕ ನಿವಾರಣೆ ಮಾಡಲಾಗಿದೆ. ಮತ್ತು ಬೆಂಗಳೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್‌ಬೋರ್ಡಿನವರು ಮಾಡಿದಂತೆ ಸಂಸ್ಥಾನದ ಇತರ ಕಡೆಯಲ್ಲಿಯೂ ಮಾಡುತ್ತಾರೆಂದು ಕೋರಲಾಗಿದೆ. ಬೆಂಗಳೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಈ ಸೆಸ್ಸಿನಿಂದ ಬರುವ ವಸೂಲಾತಿಗಳ ವಿಷಯದಲ್ಲಿ ಆಯಾ ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾಭ್ಯಾಸದ ಮೇಲ್ಪಾಡುಗಳನ್ನು ಅಂದರೆ 102 ಗ್ರಾಮಾಂತರ ಎಯಿಡೆಡ್ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಮಾಡುವುದನ್ನೂ, 13 ಹೊಸ ಸ್ಕೂಲುಗಳನ್ನು ಸ್ಥಾಪಿಸುವುದನ್ನೂ, 14 ಗ್ರಾಮಾಂತರ ಎ. ವಿ. ಮತ್ತು ವರ್ನಾಕ್ಯುಲರ್ ಮಿಡಲ್ ಸ್ಕೂಲುಗಳನ್ನು ಹೊಸ ಎ. ವಿ. ಮಾದರಿಯ ಮಿಡಲ್ ಸ್ಕೂಲುಗಳನ್ನಾಗಿ ಮಾರ್ಪಡಿಸುವುದನ್ನೂ ಮತ್ತು ಈ ಸ್ಕೂಲುಗಳ ಸಿಬ್ಬಂದಿಯನ್ನೂ ಉಪಕರಣಗಳನ್ನೂ ಮೇಲ್ಪಡಿಸುವುದನ್ನೂ ಜಾರಿಯಲ್ಲಿ ತರುವ ಬಗ್ಗೆ ಸದರಿ ಮೊಬಲಗನ್ನು ಉಪಯೋಗಪಡಿಸುವಂತೆ ಸರ್ಕಾರದವರು ಹುಕುಂ ಮಾಡಿರುತ್ತಾರೆ. ಮತ್ತೆ ಕೆಲವು ಸ್ಕೂಲುಗಳನ್ನು ಬದಲಾಯಿಸುವುದಕ್ಕೂ ಸ್ಕೂಲು ಕಟ್ಟಡಗಳನ್ನು ಒದಗಿಸುವುದಕ್ಕೂ ಸಾಧ್ಯವಾಗುವಂತೆ ಈ ಎರಡು ಡಿಸ್ಟ್ರಿಕ್ಟುಗಳಿಂದಲೂ ವಿದ್ಯಾಭ್ಯಾಸದ ಸೆಸ್ಸಿನಿಂದ ಬರುವ ವರಮಾನದ ಜತೆಗೆ ಮತ್ತಷ್ಟು ಹಣವನ್ನು ಕೊಡತಕ್ಕದ್ದೆಂದು ಸರ್ಕಾರದವರು ಉದ್ದೇಶಿಸುತ್ತಾರೆ. ಜನಗಳು ತಾವಾಗಿಯೇ ಹೆಚ್ಚು ಹಣವನ್ನು ಒದಗಿಸುವ ಡಿಸ್ಟ್ರಿಕ್ಟುಗಳಲ್ಲಿ ನಿರ್ಧರವಾಗಿರುವ ಕಾರ್ಯಕ್ರಮಗಳನ್ನು ಅನುಸರಿಸಿ ವಿದ್ಯಾಭ್ಯಾಸದ ಮೇಲ್ಪಾಡುಗಳು ಜಾರಿಗೆ ತರಲ್ಪಡುವಷ್ಟು ವೇಗವಾಗಿ ಸೆಸ್ಸನ್ನು ಕೊಡದಿರುವ ಡಿಸ್ಟ್ರಿಕ್ಟುಗಳಲ್ಲಿ ಅವು ಜಾರಿಗೆ ಬರದಿರುವುದು ನ್ಯಾಯವಾಗಿದ್ದರೂ, ಸೆಸ್ಸನ್ನು ವಸೂಲ್ಮಾಡದಿರುವ ಡಿಸ್ಟ್ರಿಕ್ಟುಗಳ ವಿಷಯವನ್ನೂ ಸಹ ಸರ್ಕಾರದವರು ಕೇವಲ ತಾತ್ಸಾರಮಾಡಬೇಕೆಂದಿರುವುದಿಲ್ಲ. ಸಾರ್ವತ್ರಿಕವಾಗಿ ಸಂಸ್ಥಾನಕ್ಕೆಲ್ಲಾ ಅನ್ವಯಿಸುವಂಥ ಮೇಲ್ಪಾಡುಗಳಿಗಾಗಿಯೇ ಚಾಲ್ತಿ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣಕ್ಕೆ ಮೇಲ್ಪಟ್ಟು ಒಂದು ಲಕ್ಷ ರೂಪಾಯಿಯ ಖರ್ಚಿಗೆ ಸರಿಹೋಗುವಂತೆ ಸಲಹೆಗಳನ್ನು ಕಳುಹಿಸುವ ಹಾಗೆ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರನ್ನು ಈಗ ಕೋರಲಾಗಿದೆ. ಈ ಪರಿಷ್ಕರಣಗಳು ವಿದ್ಯಾಭ್ಯಾಸದ ಸೆಸ್ಸನ್ನು ಕೊಡದಿರುವ ಆರು ಡಿಸ್ಟ್ರಿಕ್ಟುಗಳಿಗೂ ಬೆಂಗಳೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಗೂ ಸಮವಾಗಿ ವ್ಯಾಪಿಸುವುವು.

ಅಲ್ಲದೆ, ಸರ್ಕಾರದವರ ಹುಕುಮುಗಳಿಗೆ ಅನುಸಾರವಾಗಿ ಮತ್ತೆ ಬೇರೆ ಏರ್ಪಾಡುಗಳನ್ನು 1923 ನೆಯ ಜುಲೈ 1ನೆಯ ತಾರೀಖಿನ ಲಾಗಾಯಿತು ವೇಗವಾಗಿ ಜಾರಿಗೆ ತರತಕ್ಕ ಬಗ್ಗೆ ಕರಾರುವಾಕ್ಕಾ ಅಂದಾಜುಗಳೊಂದಿಗೆ ಒಂದು ಗೊತ್ತಾದ ಕಾರ್ಯಕ್ರಮವನ್ನು ಕೂಡಲೇ ರಚಿಸಲಾಗುವುದು. ಮತ್ತು ಈ ಬಗ್ಗೆ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಆಗಲೇ ಹುಕುಮುಗಳು ಸಾದರಾಗಿರುವುವು. ಈ ಸರ್ಕಾರಿ ವರ್ಷದ ಅಖೈರಿನೊಳಗಾಗಿ ಇತರ ಡಿಸ್ಟ್ರಿಕ್ಟುಗಳೂ ಸಹ ಬೆಂಗಳೂರು ಮತ್ತು ಚಿತ್ರದುರ್ಗದ ಡಿಸ್ಟ್ರಿಕ್ಟುಗಳಂತೆಯೇ ನಡೆದು ವಿದ್ಯಾಭ್ಯಾಸದ ಪರಿಷ್ಕರಣಗಳ ವಿಷಯದಲ್ಲಿ ಸರ್ಕಾರದವರು ಗೊತ್ತುಮಾಡಿಕೊಂಡಿರುವ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಜಾರಿಗೆ ತರುವುದನ್ನು ಸಾಧ್ಯವಾಗುವಂತೆ ಮಾಡುವರೆಂದು ಆಸಕ್ತಿಯಿಂದ ನಿರೀಕ್ಷಿಸುತ್ತೇವೆ. ಅದಕ್ಕೆ ಪ್ರತಿಯಾಗಿ ಯಾವಯಾವ ಏರ್ಪಾಡುಗಳನ್ನು ಜಾರಿಗೆ ತರುವುದು ಜರೂರಾಗಿದೆಯೋ ಅವುಗಳನ್ನೆಲ್ಲಾ ಜಾರಿಗೆ ತರುವುದಕ್ಕೆ ಅವಶ್ಯಕವಾದಷ್ಟು ಹಣಕ್ಕೆ ಸರಿಹೋಗುವಂತೆ ಸರ್ಕಾರದವರು ಹಿಂದೆಗೆಯದೆ ಮುಂದಣ ವರ್ಷದ ಗ್ರಾಂಟುಗಳನ್ನು ಹೆಚ್ಚಿಸುವರೆಂದು ಸರ್ಕಾರದವರ ಪರವಾಗಿ ಭರವಸೆ ಕೊಡುತ್ತೇವೆ.

ಮೈಸೂರು ಯೂನಿವರ್ಸಿಟಿಯನ್ನು ಮತ್ತಷ್ಟು ಅಭಿವೃದ್ಧಿ ಮಾಡಬೇಕೆಂಬ ವಿಷಯವನ್ನೂ ಸಹ ಸರ್ಕಾರದವರು ಆಸಕ್ತಿಯಿಂದ ಪರ್ಯಾಲೋಚಿಸುತ್ತಿದ್ದಾರೆ. ಈ ವಿಷಯದಲ್ಲಿ ಅತ್ಯಂತ ಅವಶ್ಯಕವಾದ ಮೂರು ಅಂಶಗಳು ಯಾವುವೆಂದರೆ :—

(1) ಸುಧಾರಣೆಯನ್ನೂ ಪುನರ್ವ್ಯವಸ್ಥೆಯನ್ನೂ ಜಾರಿಗೆ ತರುವುದರಲ್ಲಿ ಇಂಡಿಯಾದೇಶದ ಇತರ ಯೂನಿವರ್ಸಿಟಿಗಳವರು ಅದರಲ್ಲೂ ಮದರಾಸು ಯೂನಿವರ್ಸಿಟಿಯವರು ಹೇಗೆ ಪ್ರವರ್ತಿಸುವರೆಂಬುದನ್ನು ನಿರೀಕ್ಷಿಸಿ ತಿಳಿಯುವುದರ ಅವಶ್ಯಕತೆ.

(2) ಎಂಟ್ರೆನ್ಸ್ ಮತ್ತು ಮೊದಲನೆಯ ವರುಷದ ಪಾಠಕ್ರಮಗಳ ವಿಚಾರದಲ್ಲಿ ಕಸಬುದಾರಿ ತರಬಿಯತ್ತನ್ನು ಅಭಿವೃದ್ಧಿಪಡಿಸಬೇಕಾದ ಅವಶ್ಯಕತೆ.

(3) ಹಾಲಿ ಇರುವ ಏರ್ಪಾಡನ್ನು ವಿಚಕ್ಷಣೆಯಿಂದ ನಡೆಸಿಕೊಂಡು ಬರುವುದಕ್ಕಾಗಿ ಅವಶ್ಯಕವಾದಷ್ಟರ ಮಟ್ಟಿಗೆ ಸ್ಟೇಟು ಗ್ರಾಂಟನ್ನು ಗೊತ್ತು ಮಾಡುವುದು.

ಚಾಲ್ತಿ ವರುಷದ ಗ್ರಾಂಟು ಮೊಬಲಗು ಕಡಿಮೆಯಾಗಿರುವುದರಿಂದ ಯೂನಿವರ್ಸಿಟಿಯ ಸೆಕರಿನಲ್ಲಿ ಜಮಾಕಟ್ಟಿರುವ ಉಳಿಕೆ ಸಿಲ್ಕುಗಳನ್ನು 1923ನೆಯ ಜೂನ್ ಆಖೈರಿಗೆ ಉಪಯೋಗಿಸಿಕೊಳ್ಳಲಾಗುವುದು. ಮುಂದಿನ ವರ್ಷದಿಂದ ಹೆಚ್ಚು ಹಣವನ್ನೊದಗಿಸುವುದು ಅತ್ಯಾವಶ್ಯಕವಾಗಿದೆ. ಏಕೆಂದರೆ, ಮುಖ್ಯವಾಗಿ ನಮ್ಮ ವಿದ್ಯಾರ್ಥಿಗಳಿಗೆ ಇತರ ವಿಶ್ವವಿದ್ಯಾಲಯಗಳಲ್ಲಿ ಅವಕಾಶ ತಪ್ಪುವುದರಿಂದಲೂ, ಪ್ರತಿಯೊಂದು ಪ್ರಾಂತದವರೂ ತಮ್ಮ ಸ್ವಂತ ವಿಶ್ವವಿದ್ಯಾಲಯಗಳನ್ನು ಏರ್ಪಡಿಸುತ್ತಿರುವುದರಿಂದಲೂ ನಮ್ಮ ವಿಶ್ವವಿದ್ಯಾಲಯವನ್ನು ಪ್ರದೇಶ ವಿಸ್ತರಣ ಅಧಿಕಾರವನ್ನು ಸುಕರಿಸಿ ಮತ್ತಷ್ಟು ಅಭಿವೃದ್ಧಿಗೆ ತರಬೇಕಾಗಿದೆ. ನಮ್ಮ ಸಂಸ್ಥಾನದ ಸ್ವಾಭಾವಿಕವಾದ ಮತ್ತು ವಿದ್ಯಾ ಸಂಬಂಧವಾದ ಸಾಧನಗಳನ್ನು ಉಪಯೋಗಿಸುವ ಬಗ್ಗೆ ಕ್ರಮವಾಗಿ ತರಬಿಯತ್ತು ಪಡೆದ ದಕ್ಷರಾದ ಜನರನ್ನು ಒದಗಿಸಬೇಕಾಗಿರುತ್ತದೆ ಮತ್ತು ವಿಶ್ವ ವಿದ್ಯಾಲಯದಲ್ಲಿ ಅಂತಹ ತರಬಿಯತ್ತಿಗೆ ಸರ್ಕಾರದವರು ಅವಕಾಶವನ್ನುಂಟುಮಾಡಬೇಕು. ಈ ವಿಷಯಗಳಿಗೆಲ್ಲಾ ಸಾವಧಾನಪೂರ್ವಕವಾದ ಗಮನಕೊಡಲಾಗುವುದು.

ರೈಲ್ವೆಯ ಹಣಕಾಸಿನ ಸ್ಥಿತಿ.

ರೈಲ್ವೆಯ ಆಯವ್ಯಯ ಕ್ರಮದ ವಿಷಯದಲ್ಲಿ, ಜಾರಿಯಲ್ಲಿ ಕೆಲವು ವರ್ಷಗಳವರೆಗೆ ಇದ್ದ ಹೊರತು ಪ್ರತಿಫಲವನ್ನು ಕೊಡಲು ಸಾಧ್ಯವಾಗಲಾರದ ಹೊಸ ಲೈನುಗಳಿಗಾಗಿ ಸರ್ಕಾರದವರು ಯಾವುದಾದರೂ ಹೆಚ್ಚು ಖರ್ಚನ್ನು ಮಂಜೂರ್ಮಾಡುವುದಕ್ಕೆ ಮೊದಲು, ಜಾರಿಯಲ್ಲಿರುವ ಲೈನುಗಳ ರಕ್ಷಣೆಯ ಕಾರ್ಯಗಳ ಬಾಕಿಗಳ ಬಗ್ಗೂ ಸಾಮಾನುಗಳು ಸಾಗುವುದು ಮತ್ತು ಪ್ರಯಾಣಿಕರು ಸಂಚರಿಸುವುದು ಹೆಚ್ಚುತ್ತಿರುವುದಕ್ಕೆ ತಕ್ಕಂತೆ ಸಲಕರಣಗಳ ಬಗ್ಗೂ ಮೊದಲು ಹಣ ಒದಗಿಸಬೇಕಾಗಿದೆ ಎಂದು ಏಜಂಟರೂ ರೈಲ್ವೆಯ ಸೆಕ್ರೆಟರಿಯವರೂ ಒತ್ತಿ ಹೇಳಿರುತ್ತಾರೆ. ಮೇಲ್ಕಂಡ ಬಾಬುಗಳಿಗಾಗಿ ಮುಂದಣ ಐದು ವರ್ಷಗಳ ಕಾಲದಲ್ಲಿ ಅವಶ್ಯಕವಾಗುವ ಕಾರ್ಯಗಳಿಗೆ ಒಟ್ಟು 96 ಲಕ್ಷ ರೂಪಾಯಿ ಬೇಕಾಗುವುದೆಂದು ರೈಲ್ವೆ ಇಲಾಖೆಯವರು ಅಂದಾಜು ಮಾಡಿದ್ದಾರೆ. ಮುಂದಣ ಮೂರು ವರ್ಷಗಳ ಕಾಲದಲ್ಲಿ ಬೆಂಗಳೂರು--ಮೈಸೂರು ಸೆಕ್ಷನ್ನಿನಲ್ಲಿ ನವೀಕರಣಗಳಿಗಾಗಿಯೂ, ಹೊಸ ಇಂಜನ್ನುಗಳು ಮತ್ತು ಗಾಡಿಗಳನ್ನು ಒದಗಿಸುವುದಕ್ಕಾಗಿಯೂ ಬಂಡವಾಳದ ಖರ್ಚಾಗಬೇಕಾಗುವುದು. ಬೀರೂರು--ಶಿವಮೊಗ್ಗ ಮತ್ತು ಮೈಸೂರು-- ನಂಜನಗೂಡು ಸೆಕ್ಷನ್ನುಗಳಿಗೂ ಸಹ ನವೀಕರಣವು ಅವಶ್ಯಕವಾಗುವುದು. ಐದು ವರ್ಷಗಳಿಗೆ ಅಂದಾಜಾಗಿರುವ 96 ಲಕ್ಷ ರೂಪಾಯಿಯಲ್ಲಿ ವರ್ಷಕ್ಕೆ ಸುಮಾರು 20 ಲಕ್ಷ ರೂಪಾಯಿಯ ಬಂಡವಾಳದ ಖರ್ಚು ಸೇರಿದೆ. ಮುಂದೆ ಸದ್ಯದಲ್ಲಿಯೇ ಯಾವುದಾದರೂ ಹೊಸ ರೈಲ್ವೆ ಏರ್ಪಾಟುಗಳನ್ನು ಸರ್ಕಾರದವರು ಕೈಗೊಳುವುದು ಕೇವಲ ಅಸಾಧ್ಯವೆಂಬುದನ್ನು ತೋರಿಸುವುದಕ್ಕಾಗಿ ನಮ್ಮ ರೈಲ್ವೆ ಆಡಳಿತಕ್ಕೆ ಮುಖ್ಯವಾದ ಈ ಅವಶ್ಯಕತೆಗಳನ್ನು ಸೂಚಿಸಿದ್ದೇವೆ.

ಯುದ್ಧಕಾಲದಲ್ಲಿ ರೈಲ್ವೆ ಸಾಮಗ್ರಿಗಳನ್ನು ತರಿಸುವುದರಲ್ಲಿದ್ದ ಕಷ್ಟ, ಕೃಷ್ಣರಾಜಸಾಗರಕ್ಕೂ ಮತ್ತು ಕಬ್ಬಿಣದ ಕಾರ್ಖಾನೆಗೂ ಜರೂರಾಗಿ ಹಣ ಒದಗಿಸಬೇಕಾದ್ದು, ಇವೇ ಮೊದಲಾದ ಅನೇಕ ಕಾರಣಗಳಿಂದ ನಮ್ಮ ರೈಲ್ವೆರೂಪವಾದ ಆಸ್ತಿಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಕಳೆದ ಕೆಲವು ವರುಷಗಳಲ್ಲಿ ಸಾಕಾದಷ್ಟು ಮೊಬಲಗನ್ನು ಒದಗಿಸಲಾಗಲಿಲ್ಲ. ಬಾಯಂ ರಸ್ತೆಯನ್ನು ಹೊಸದಾಗಿ ಹಾಕುವುದು, ಈ ಲೈನುಗಳಿಗೆ ಮತ್ತಷ್ಟು ಇಂಜನ್ನುಗಳನ್ನೂ ಗಾಡಿ ವಗೈರೆಗಳನ್ನು ತರಿಸುವುದು, ಈ ಬಗ್ಗೆ ಬಹಳ ಹೆಚ್ಚಾಗಿ ಬಂಡವಾಳದ ಗ್ರಾಂಟುಗಳನ್ನು ಒದಗಿಸುವ ಕಷ್ಟವು ಈಗ ಸರ್ಕಾರದವರಿಗೆ ಪ್ರಾಪ್ತವಾಗಿದೆ. ಆದ್ದರಿಂದ ಹಣ ಕಾಸಿನ ದುಸ್ಥಿಯಿಂದ ಕಾಂಗಾರಿಗಳನ್ನು ನಿಲ್ಲಿಸಿದ್ದ ಹೊಸ ಲೈನುಗಳೆಲ್ಲವನ್ನೂ ಸಂಸ್ಥಾನದ ಹಣ ಕಾಸಿನ ಸ್ಥಿತಿಯನ್ನು ಬಹುಮಟ್ಟಿಗೆ ಅವ್ಯವಸ್ಥೆಗೆ ತರದಂತೆಯೂ, ಹೊಸ ಸಾಲವನ್ನು ಮಾಡಬೇಕಾದ ಅವಶ್ಯಕತೆ ಯಾವದೂ ಇಲ್ಲದಂತೆಯೂ ಕಾಂಗಾರಿಗಳನ್ನು ಪುನಃ ನಡಿಸುವುದಕ್ಕೆ ಏರ್ಪಾಡುಗಳನ್ನು ಕಲ್ಪಿಸಬೇಕಾದದ್ದು ಅವಶ್ಯವಾಗಿದೆ. ಆ ಲೈನುಗಳನ್ನು ಹಾಕಿ ಮುಗಿಸುವ ಬಗ್ಗೆ ಬೇಕಾದ ಮೊಬಲಗನ್ನು ಡಿಸ್ಟ್ರಿಕ್ಟುಗಳಲ್ಲಿ ಜಮಾಯಿಸುವುದು ಸಾಧ್ಯವೇ ಎಂಬಂಶವನ್ನು ತಿಳಿಯುವುದಕ್ಕೋಸ್ಕರ ಕೆಲವು ಡಿಸ್ಟ್ರಿಕ್ಟು ಬೋರ್ಡುಗಳಿಗೆ ಸರ್ಕಾರದವರು ಸಲಹೆಗಳನ್ನು ಕೊಟ್ಟಿದಾರೆ. ಹಾಗೆ ಮಾಡುವುದರಿಂದ ಅವರೂ ಸರ್ಕಾರದವರ ಜೊತೆಗೆ ಅಂತಹ ರೈಲ್ವೆಗಳ ಮಾಲೀಕರಾಗಬಹುದು. ಈ ವಿಷಯವನ್ನು ಜನರು ತಕ್ಕಂತೆ ಪರ್ಯಾಲೋಚಿಸುವರೆಂದು ನಾವು ಕೋರುತ್ತೇವೆ. (ಸಶೇಷ.)

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಳ್ಳ

12 ರಾಯಲ್ ಪೌಂಟೇನ್ ಪೆನ್.

ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರೆಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನು ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ಮೊದಲಾದ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಆಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
35 ಬಳ್ಳಾರಿ.

೧೯೨೩ನೆಯ ಇಸವಿ ಅಕ್ಟೋಬರ್ ತಾ|| ೧೫ ರಿಂದ ೧೯೨೩ನೆಯ ಅಕ್ಟೋಬರ್ ತಾ|| ೨೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ನೆಯ ದುಂದುಭಿನಾಮ ಸಂವತ್ಸರದ ಆಶ್ವಯುಜ ಬಹುಳ ನವಮಿಯಿಂದ ಕಾರ್ತಿಕಶುದ್ಧ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ತುಲಾ
15	ಭಾನು	ನವ	5-38	ಪುಷ್ಯ	8-33	29
16	ಸೋಮ	ದ-ಉ	1-11 55-20	ಆಶ್ಲೇ	5-54	30
17	ಮಂಗಳ	ದ್ವಾದ	50-49	ಮಘಾ	2-36	1
18	ಬುಧ	ತ್ರಯೋ	14-47	ಉತ್ತ	50-44	2
19	[1] ಗುರು	ಚತು	38-36	ಹಸ್ತ	5-23	3
20	[2] ಶುಕ್ರ	ಅಮಾ	32-29	ಚಿತ್ತ	46-6	4
21	[3] ಶನಿ	ಪಾಡ್ಯ	27-0	ಸ್ವಾತಿ	42-27	5

(1) ನರಕಚತುರ್ದಶಿ. (2) ಸರ್ವತ್ರಾಮಾವಾಸ್ಯ, ಕೇದಾರೇಶ್ವರ ವ್ರತಂ, ಬಲೀಂದ್ರಪೂಜಾ. (3) ಕಾಮಧೇನುಪೂಜಾ, ಚಂದ್ರದೀಪದಾನಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರಿಂಟಿಂಗ್ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ರಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೩ ನೆಯ ಇಸವಿ ಅಕ್ಟೋಬರ್ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೪೩

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್‌ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್‌ಸ್ಥಲಾಷ್ಟಾವರಣ, ಶತಿ ಜಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಫ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಿನಿಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಶೃಂಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಷೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.
„ ನಂ. 2 ರೂ. 7—8—0.

31 ವಿಳಾಸ—ಎಸ್. ನಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



13

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ, ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.
ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂತೆ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0
„ „ ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವ್ರತಪಂಚಕ	೦— ೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

10 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋಪ್ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಫ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,
13 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ನೋಟೀಸು.

ಚಿತ್ರದುರ್ಗದ ತಾಲ್ಲೂಕು ತುರವನೂರು ಹೋಬಳಿ ಕೊನುಬೀವು ಗ್ರಾಮದ ವೇಷನಾಯ್ಕರ ಹಜ್ಜಲ ಓಬಯ್ಯನ ಹೆಂಡತಿ ರಾಯಕ್ಕನು ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವುದೇನಂದರೆ:—ನನ್ನ ಗಂಡ ಫವತಿಯಾಗಿ ಸುಮಾರು 10-12 ವರುಷಗಳಾಗಿದೆ. ನನಗೆ 3 ಜನ ಗಂಡು ಮಕ್ಕಳಿರುವರು. ನನ್ನ ಮೈದುನನು ಫವತಿ ಯಾದ್ದರಿಂದ ಸದರಿ ಮೈದುನನ ಹೆಂಡತಿ ಸೂರಕ್ಕನಿಗೆ ನನ್ನ ಮಕ್ಕಳ ಪೈಕಿ ಮೂರನೆಯವನಾದ ಗಾದರಯ್ಯ ಎಂಬುವವನನ್ನು ದತ್ತು ಕೊಟ್ಟಿರುತ್ತೇನೆ. ಉಳಿದ ಇಬ್ಬರು ಮಕ್ಕಳಲ್ಲಿ ಹಿರಿಯವನಾದ 18 ವರುಷ ವಯಸ್ಸುಳ್ಳ ಆಲಿಕಯ್ಯನೆಂಬುವನು ಕೆಟ್ಟ ಜನಗಳ ಸಹವಾಸಕ್ಕೆ ಬಿದ್ದು ಜೂಜು ವಗೈರೆ ದುರ್ವ್ಯಾಪಾರಗಳಲ್ಲಿ ಆಸುರಕ್ತನಾಗಿ ಮನೆಗೆ ಬಾರದೆ ಮನೆಯಲ್ಲಿ ಕೆಲಸ ಮಾಡದೆ, ಸಾಲ ವಗೈರೆ ಮಾಡುತ್ತಾನೆಂತ ಕೇಳುತ್ತೇನೆ. ಸಾಲ ಕೊಡತಕ್ಕವರು ಇವನಿಂದ ಚರ ಸ್ಥಿರ ಆಸ್ತಿಗಳನ್ನು ಆಧಾರಮಾಡಿಸಿಕೊಂಡರೆ ಅದು ಖಂಡಿತವಾಗಿ ಊರ್ಜಿತವಾಗುವುದಿಲ್ಲ. ಅಂಥ ಸಾಲಗಳಿಗೆ ನಾನಾಗಲಿ ನನ್ನ ಮೈನರ್ ಮಗನಾಗಲಿ ನಮ್ಮ ಆಸ್ತಿಗಳಾಗಲಿ ಜವಾಬ್ದಾರರಲ್ಲವೆಂತ ಸಾಲ ಕೊಡತಕ್ಕವರಿಗೆ ಈ ಮೂಲಕ ಎಚ್ಚರಿಸಲಾಗಿದೆ.

ತಾ|| 18-9-22. () ರಾಯಕ್ಕನ ಬೆಳೆ ಗುರುತಿನ ರುಜು.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಅಕ್ಟೋಬರ್ ತಾ|| ೨೨ನೆಯ ಭಾನುವಾರ.

ಮಿಲ್ಲರ್ ಸಂಘದ ವರದಿಯ ಮೇಲಣ ಸರ್ಕಾರಿ ಅಪ್ಪಣೆಯ ಪರಿಣಾಮ.

ನಮ್ಮ ದಿವಾನರು ಪ್ರತಿನಿಧಿ ಸಭೆಯಲ್ಲಿ ಮೊನ್ನೆ ತಾನೇ ಮಾಡಿದ ಭಾಷಣದಲ್ಲಿ ಸರ್ಕಾರದ ಮುಖ್ಯವಾದ ಆಡಳಿತವನ್ನು ತಿಳಿಸುವಾಗ್ಗೆ ಇದರ ಪ್ರಸ್ತಾಪವನ್ನೇ ಮೊದಲು ಎತ್ತಿಕೊಂಡಿದ್ದಾರೆ. ಇದರಿಂದ ಪ್ರಜಾಸಾಮಾನ್ಯದ ಸಕುತೂಹಲ ನಿರೀಕ್ಷಣೆಗೆ ಈ ವಿಷಯವು ವಿಶೇಷ ಪಾತ್ರವಾಗಿದೆಯೆಂಬ ಸಂಗತಿಯನ್ನು ದಿವಾನರು ಅರಿತುಕೊಂಡಿರುತ್ತಾರೆಂದು ಸ್ಪಷ್ಟವಾಗುತ್ತದೆ. ಸಂತೋಷವೇ ಸರಿ. ಆದರೆ ಅದರಲ್ಲಿ ಕಂಡುಬಂದಿರುವ ವಿಷಯವಿವರಣವು ಹಿಂದುಳಿದ ಪ್ರಜೆಗಳ ಕುತೂಹಲವನ್ನೆಲ್ಲಾ ಮಣ್ಣುಪಾಲು ಮಾಡಲು ಸಾಧಕವಾಗಿರುತ್ತದೆ. ಮಿಲ್ಲರ್ ಸಂಘದ ವರದಿಯ ಮೇಲೆ ಮಾಡಲ್ಪಟ್ಟ ಸರ್ಕಾರಿ ಅಪ್ಪಣೆಯನ್ನನುಸರಿಸಿ ಇದೇ ವರ್ಷದ ಆರಂಭದಿಂದ ಒಂದು ಸೆಂಟರಲ್ ರಿಕ್ರೂಟ್‌ಮೆಂಟ್‌ಬೋರ್ಡು ಏರ್ಪಡಿಸಲ್ಪಟ್ಟಿದೆ. ಹೊಸದಾಗಿ ಸರ್ಕಾರಿ ಉದ್ಯೋಗಕ್ಕೆ ಸೇರಲಪೇಕ್ಷಿಸಿದ ಜನರ 1021 ಅರ್ಜಿಗಳು ಈ ಬೋರ್ಡಿಗೆ ಬಂದಿದ್ದುವು. ಅವನ್ನೆಲ್ಲಾ ವಿಚಾರಮಾಡಿ ಆಯಾ ಶಾಖೆಗಳಿಗೆ ಉಮೇದುವಾರರ ಪಟ್ಟಿಯನ್ನು ಹಂಚಿ ಬೋರ್ಡಿನವರು ಕಳುಹಿಸಿಕೊಟ್ಟರು. ಆದರೆ ಅಷ್ಟುಮಂದಿಗೂ ದೊರೆಯುವಷ್ಟು ಉದ್ಯೋಗಸ್ಥಾನಗಳು ಸರ್ಕಾರದಲ್ಲಿರಲಿಲ್ಲ. 1922ನೆ ವರ್ಷಾರಂಭದಿಂದ ಜೂನ್ ತಿಂಗಳ ಕಡೆಯವರೆಗೆ 533 ಸ್ಥಾನಗಳು ಮಾತ್ರ ತೆರವಾಗಿದ್ದುವು. ಆದರೆ ಉಮೇದುವಾರರಿಗೆ ಆಯಾ ಶಾಖಾಧಿಕಾರಿಗಳು ಉದ್ಯೋಗಸ್ಥಾನಗಳನ್ನು ವಿನಿಯೋಗಿಸುವುದರಲ್ಲಿ ಉಳಿದಿದ್ದಷ್ಟು ಸ್ಥಾನಗಳನ್ನೆಲ್ಲಾ ಸಂಪೂರ್ಣವಾಗಿಯಾದರೂ ವಿನಿಯೋಗಿಸದೆ 452ನ್ನು ಮಾತ್ರ ಭರತಿಮಾಡಿ ಇನ್ನು 101 ಸ್ಥಾನಗಳನ್ನು ಮಿಗಿಸಿಬಿಟ್ಟರು. ಇದರೊಳಗೂ ಯಾವಯಾವ ಪಂಗಡದವರಿಗೆ ಎಷ್ಟೆಷ್ಟು ಸ್ಥಾನಗಳು ದೊರೆದಿರುತ್ತವೆಂಬುದನ್ನು ನೋಡಿದರೆ ಮತ್ತೂ ವಿಚಿತ್ರವಾಗಿದೆ. ಕೊಡಲ್ಪಟ್ಟ 452 ಸ್ಥಾನಗಳಲ್ಲಿ ಅರ್ಧಭಾಗಕ್ಕಿಂತ ಹೆಚ್ಚಾಗಿಯೇ ಎಂದರೆ 270 ಸ್ಥಾನಗಳು ಇದುವರೆಗೆ ಸರ್ಕಾರದ ಉದ್ಯೋಗದಲ್ಲಿ ಯಥೇಚ್ಛವಾಗಿ ತುಂಬಿರುವ ತ್ರಿಮತಸ್ಥ ಬ್ರಾಹ್ಮಣ ವರ್ಗದವರಿಗೇ ಕೊಡಲ್ಪಟ್ಟಿವೆ. ಇನ್ನುಳಿದ 182 ಸ್ಥಾನಗಳಲ್ಲಿ ಎಲ್ಲಾ ಹಿಂದೂಜನವರ್ಗಗಳವರಿಗೆ 120 ಸ್ಥಾನಗಳೂ, ಮಹಮ್ಮದೀಯರಿಗೆ 29 ಸ್ಥಾನಗಳೂ, ದೇಶೀಯ ಕ್ರೈಸ್ತರಿಗೆ 29 ಸ್ಥಾನಗಳೂ, ಇನ್ನುಳಿದ ನಾನಾ ಜಾತಿಯವರಿಗೆ 4 ಸ್ಥಾನಗಳೂ ಕೊಡಲ್ಪಟ್ಟಿರುತ್ತವೆಂದು ಗೊತ್ತಾಗುತ್ತದೆ. ತಿಬಟೂರಿನ ಮ|| ಡಿ. ಎಸ್. ಮಲ್ಲಪ್ಪನವರೂ ಮ|| ಚಿಕ್ಕತಿಮ್ಮೇಗೌಡರೂ ಸಹ ಈ ಸಂಬಂಧವಾಗಿ ಹಾಕಿದ್ದ ಪ್ರಶ್ನಾಂಶಗಳಿಗೆ ಸರ್ಕಾರದವರಿಂದ ಕೊಡಲ್ಪಟ್ಟಿರುವ ಉತ್ತರದಿಂದ ಇನ್ನಷ್ಟು ವಿವರಣಗಳನ್ನು ತಿಳಿಯಬಹುದಾಗಿದೆ. ಏನೆಂದರೆ—1921ನೆ ವರ್ಷದ ಮೇ ತಿಂಗಳಿಂದ ಡಿಸೆಂಬರ್ ಕೊನೆವರೆಗೆ ಗೆಜೆಟೆಡ್ ಆಫೀಸರುಗಳ ಸ್ಥಾನದಲ್ಲಿ 5 ಬ್ರಾಹ್ಮಣರಿಗೂ ಒಂದು ಮಾತ್ರ ಇತರ ಪಂಗಡದವರಿಗೂ, 15 ರೂ. ಗೆ ಮೇಲ್ಪಟ್ಟ ವೇತನದ ಕೆಳದರ್ಜೆಯ ಉದ್ಯೋಗಸ್ಥಾನಗಳಲ್ಲಿ 620 ತ್ರಿಮತಬ್ರಾಹ್ಮಣ ವರ್ಗಗಳವರಿಗೂ 635 ಸ್ಥಾನಗಳು ಇತರರಿಗೂ ಕೊಡಲ್ಪಟ್ಟಿರುವುವೆಂದು ವ್ಯಕ್ತವಾಗುತ್ತದೆ. ಎಂದರೆ 1921ನೆ ವರ್ಷದ ಮೇ ತಾ|| 16 ರಿಂದ ಆ ವರ್ಷದ ಕಡೆಯವರೆಗೆ 1255 ಸ್ಥಾನಗಳೂ 1922ನೆ ವರ್ಷದ ಆರಂಭದಿಂದ ಜೂನ್ ಕೊನೆಯವರೆಗೆ 452 ಸ್ಥಾನಗಳೂ ವಿನಿಯೋಗಿಸಲ್ಪಟ್ಟುವೆಂದೂ, ಇವುಗಳಲ್ಲಿ ತ್ರಿಮತಬ್ರಾಹ್ಮಣರ ಪಾಲಿಗೆ 895 ಸ್ಥಾನಗಳೂ, ಉಳಿದ ಎಲ್ಲ ವರ್ಗಗಳ ಪ್ರಜೆಗಳ ಪಾಲಿಗೂ 818 ಸ್ಥಾನಗಳೂ ಕೊಡಲ್ಪಟ್ಟಿರುವುವೆಂದು ಸಿದ್ಧವಾಯಿತು.

ಇದೇನನ್ಯಾಯ ? ಬಹುದಿನಗಳಿಂದ ಹಿಂದುಳಿದ ಪ್ರಜೆಗಳು ಮಾಡುತ್ತಿದ್ದ ಪ್ರಾರ್ಥನೆಯ ಮೇಲಣ ಕನಿಕರದಿಂದಲೂ, ವಸ್ತುಪರಿಸ್ಥಿತಿಯ ಅವಲೋಕನದಿಂದ ಉಂಟಾದ ಮನೋನಿಶ್ಚಯದಿಂದಲೂ ಶ್ರೀಮನ್ಮಹಾರಾಜರೂ ಅವರ ಪ್ರಭುತ್ವದವರೂ ಸಹ ಸರ್ಕಾರದ ಉದ್ಯೋಗಸ್ಥಾನಗಳು ಎಲ್ಲತರದ ಪ್ರಜಾವರ್ಗಗಳವರೂ ಇರುವಂತೆ ಮಾಡುವುದು ಆವಶ್ಯಕವೆಂಬ ಕಾರಣದಿಂದ ಮಿಲ್ಲರ್ ಸಂಘವನ್ನೇರ್ಪಡಿಸಿ ವರದಿಯನ್ನು ತರಿಸಿಕೊಂಡು ಇನ್ನು 7 ವರ್ಷಗಳೊಳಗೆ ಒಟ್ಟು ಸರ್ಕಾರಿ ಉದ್ಯೋಗ ಸ್ಥಾನನಗಳಲ್ಲಿ ಅರ್ಧಭಾಗವು ಹಿಂದುಳಿದ ಜನವರ್ಗಗಳವರಿಗೆ ಸೇರಿರುವಂತೆ ಆಗಬೇಕೆಂದು ತಿಳಿಯಿಸಿ ಹಾಗೆ ಆಗುವುದಕ್ಕೆ ಯಾವಯಾವ ಪ್ರೋತ್ಸಾಹಗಳೂ ಏರ್ಪಾಟುಗಳೂ ಆವಶ್ಯಕವೋ ಸರ್ಕಾರದ ಮುಖ್ಯೋದ್ಯೋಗಿಗಳು ಈ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೋ ಅದನ್ನೆಲ್ಲಾ ಕಾಣಿಸಿ ಅಪ್ಪಣೆಕೊಟ್ಟರು. ಆದರೆ ಪರ್ಯವಸಾನವು ಹೇಗಾಗಿದೆಯೆಂಬುದು ಮೇಲಣ ವಿವರಣದಿಂದ ತಾನೇ ಸಿದ್ಧವಾಗಿರುತ್ತದೆ. ಮಿಲ್ಲರ್ ಸಂಘದ ವರದಿಯ ಮೇಲಣ ರಾಜಾಜ್ಞೆಯಾದಮೇಲೆ ಹೊಸದಾಗಿ ಉದ್ಯೋಗಗಳನ್ನು ಕೊಡಬೇಕಾಗಿದ್ದರೆ ಇದುವರೆಗೆ ಸರ್ಕಾರಿ ಉದ್ಯೋಗಸ್ಥಾನಗಳಲ್ಲಿ ಹೆಚ್ಚಾಗಿ ತುಂಬಿರುವ ಮುಂಬರಿದ ಮತ್ತು ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯಲ್ಲೆಲ್ಲಾ 2 ಲಕ್ಷ ಮಾತ್ರವಾಗಿರುವ ಜನವರ್ಗದವರಿಗೆ (ಇತರ ಹಿಂದುಳಿದ ವರ್ಗಗಳ ಉಮೇದುವಾರರುಗಳು ಇಲ್ಲದಿದ್ದ ಸಂದರ್ಭದಲ್ಲಿ) ಕೆಲಕೆಲವನ್ನು ಮಾತ್ರ ಕೊಟ್ಟಿದ್ದರೆ ತಪ್ಪಾಗುತ್ತಿರಲಿಲ್ಲ. ಅದನ್ನು ಬಿಟ್ಟು ಈಗಲೂ ಮುಂಬರಿದ ಜನವರ್ಗಗಳವರಿಗೇ ತೆರವಾದ ಸ್ಥಾನಗಳಲ್ಲಿ ಅರ್ಧಭಾಗಕ್ಕಿಂತ ಹೆಚ್ಚಾಗಿಯೇ ಕೊಡುತ್ತ ಹೋದರೆ ಪ್ರಭುತ್ವದವರ ನಿರೀಕ್ಷಣೆಯೂ ಹಿಂದುಳಿದವರ ಮನೋರಥವೂ ಫಲಿಸುವುದು ಹೇಗೆ? "ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟ ನಾನಾ ಇಲಾಖೆಗಳಲ್ಲಿ ಈಚೆಗೆ ಖರ್ಚನ್ನು ಖೋತಾ ಮಾಡಿರುವ ಪ್ರಯುಕ್ತ ಹೊಸ ನೋಕರರಾತಿಗಳನ್ನು ಮಾಡುವುದಕ್ಕೆ ಅವಕಾಶವು ತುಂಬಾ ಕಡಿಮೆಯಾಗಿತ್ತು. ಆದ್ದರಿಂದ ಬೋರ್ಡಿಗೆ ಅರ್ಜಿ ಬರೆದುಕೊಂಡವರಲ್ಲಿ ಅನೇಕರನ್ನು ಸರ್ಕಾರಿ ನೌಕರಿಗೆ ಸೇರಿಸಿಕೊಳ್ಳುವುದರಲ್ಲಿ ತುಂಬಾ ನಿಧಾನವಾದಬಗ್ಗೆ ವಿಷಾದಿಸಬೇಕಾಗಿದೆ" ಎಂದು ದಿವಾನರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿರುತ್ತಾರೆ. ತೆರವಾದ ಸ್ಥಾನಗಳು ಕಡಿಮೆಯಾದುದಕ್ಕಾಗಿಯೂ, ಉದ್ಯೋಗ ವಿನಿಯೋಗಕಾರ್ಯವು ಸಾವಕಾಶವಾದುದಕ್ಕಾಗಿಯೂ ಪ್ರಜೆಗಳಾರೂ ಅಷ್ಟೇನೂ ವಿಷಾದಪಡುವುದಿಲ್ಲ. ಏಕೆಂದರೆ—ಅದರಲ್ಲಿ ಅನ್ಯಾಯವೇನೂ ಇಲ್ಲ. ಮುಖ್ಯವಾದ ಅನ್ಯಾಯವು ಎಲ್ಲಿ ಹೇಗೆ ನಡೆದಿದೆಯೋ ಅದಕ್ಕಾಗಿ ದಿವಾನರವರು ವಿಷಾದವನ್ನು ವ್ಯಕ್ತಪಡಿಸುವುದು ಆವಶ್ಯಕವಾಗಿದ್ದಿತು. ಅದನ್ನು ಮಾಡದೆ ಹೋಗಿರುವುದರಿಂದ ಈ ಅನ್ಯಾಯದ ಪರಿಮಾರ್ಜನೆಗೆ ದಿವಾನರ ಉದ್ದೇಶವೇನೆಂಬುದು ಹೊರಪಡದೆ ಹೋಗಿರುತ್ತದೆ. ಆದರೆ ಮಿ|| ಮಹಮ್ಮದ್ ಅಬ್ಬಾಸ್‌ಖಾನರು ಈ ಅನ್ಯಾಯದ ಸಂಬಂಧವಾಗಿ ಒಂದು ಸಪ್ಲಿಮೆಂಟರಿ ಸಬ್ಜೆಕ್ಟನ್ನು ಕೊಟ್ಟಿದ್ದರು. ಹೇಗೆಂದರೆ—"ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲೆ ಸರ್ಕಾರದವರು ಮಾಡಿರುವ ಹುಕುಮುಗಳಿಗೆ ವಿರೋಧವಾಗಿ ನೋಕರೂರಾಗಿರುವ ಆಫೀಸರುಗಳ ವಿಷಯವಾಗಿ ಒಂದು ತನಿಖೆಯನ್ನು ನಡೆಸಿ ಅವರುಗಳನ್ನು ನೌಕರಿಯಿಂದ ತೆಗೆದುಹಾಕಬೇಕು" ಎಂಬುದೇ ಅದರ ಅಭಿಪ್ರಾಯವಾಗಿದ್ದಿತು. ಈ ವಿಷಯದ ವಿಮರ್ಶೆಯು ಸಭೆಯಲ್ಲಿ ನಡೆದಿದ್ದರೆ ಸರ್ಕಾರದ ಅಭಿಪ್ರಾಯವೇನೆಂಬುದೂ ಒಳಗೆ ನಡೆದಿರುವ ವಿದ್ಯಮಾನಗಳೇನೆಂಬುದೂ ಸ್ಪಷ್ಟವಾಗುತ್ತಿದ್ದುವು. ಆದರೆ ಕಾಲಾತೀತವಾದ ಕಾರಣದಿಂದ ಉಪವಿಷಯಗಳ ಚರ್ಚೆಯೆಲ್ಲಾ ನಿಂತುಹೋದ ಕಾರಣ, ಇದೂ ನಿಂತುಹೋಯಿತು. ಇವಕ್ಕೆಲ್ಲಾ ಪ್ರತ್ಯೇಕವಾಗಿ ಸರ್ಕಾರದ ಉತ್ತರಗಳನ್ನು ಕೊಡುವೆವೆಂದು ದಿವಾನರು ಸಭೆಯಲ್ಲೇ ಅಪ್ಪಣೆ ಕೊಡಿಸಿರುತ್ತಾರಾದುದರಿಂದ ಅದು ಬಂದಾಗಲಾದರೂ ಸರ್ಕಾರದ ಅಭಿಪ್ರಾಯದ ದಿಗ್ದರ್ಶನವು ಸ್ವಲ್ಪಮಟ್ಟಿಗೆ ಆಗಬಹುದು.

ಹಿಂದೆ ಮಿಲ್ಲರ್‌ಸಂಘದ ವರದಿಯೂ ಅದರ ಮೇಲಣ ಅಪ್ಪಣೆಯೂ ಪ್ರಕಟವಾದ ಬಳಿಕ ಅದರ ಪ್ರತಿಕಕ್ಷಿಗಳು ಇನ್ನುಮೇಲೆ ಬ್ರಾಹ್ಮಣರಿಗೆ ಸರ್ಕಾರದ ಉದ್ಯೋಗಗಳೇ ಸಿಕ್ಕುವುದಿಲ್ಲವೆಂದು ಕುಟ್ಟಿಕೊಳ್ಳುವುದಕ್ಕಾರಂಭಿಸಿದರು. ಅದರ ಮೇಲೆ ಅಂಥ ಸಂಭವವೇನೂ ಉಂಟಾಗಲು ಅವಕಾಶವಿಲ್ಲವೆಂದೂ ಅರ್ಹತೆಪಡೆದ ಉಮೇದುವಾರರ ಸಂಖ್ಯೆಯು ಹಿಂದುಳಿದ ವರ್ಗಗಳವರಲ್ಲಿ ದೊರೆಯದಿದ್ದ ಸಂದರ್ಭದಲ್ಲೆಲ್ಲಾ ಇವರಿಗೇ ಉದ್ಯೋಗಗಳು ದೊರೆಯುವುವೆಂದೂ, ಇವರಿಗೆ ನಿಶ್ಶೇಷವಾಗಿ ಕೊಡಲೇಕೂಡದೆಂದು ಈ ಅಪ್ಪಣೆಯಲ್ಲೇನೂ ನಿಷೇಧವಿಲ್ಲವೆಂದೂ ಪ್ರಭುತ್ವದವರು ಹೇಳಿ ಸಮಾಧಾನಪಡಿಸುತ್ತಿದ್ದರು. ಆಗ ನಾವು ಏನು ಹೇಳಿದೆವೆಂದರೆ—"ಹಣ್ಣುಕಾಯಿಗಳು ನಿವೇದನಮಾತ್ರಕ್ಕೆ ದೇವರಿಗೆ ಆಗಿ, ಗಂಟೆಯನ್ನು ಬಲವಾಗಿ ಬಾರಿಸುವ ಪೂಜಾರಿಗೇ ಆ ಫಲವೆಲ್ಲಾ ದಕ್ಕಿಹೋಗುವಂತೆ, ಈ ಅಪ್ಪಣೆಯ ಫಲಿತಾಂಶವು ಕೂಡ ಆಗಿಹೋಗುವುದು" ಎಂದು ಭವಿಷ್ಯತ್ತನ್ನು ನುಡಿದಿದ್ದೆವು. ಅದು ಅಕ್ಷರಶಃ ಈಗ ಯಥಾರ್ಥವಾಗಲಿಲ್ಲವೆ? ಸರ್ ಶೇಷಾದ್ರಿಅಯ್ಯರ ಕಾಲದಿಂದಲೂ ಈ ತತ್ವವು (ಎಲ್ಲ ಜನವರ್ಗಗಳ ಪ್ರಾತಿನಿಧ್ಯವೂ ಸರ್ಕಾರದುದ್ಯೋಗಗಳಲ್ಲಿರಬೇಕೆಂಬುದು) ಸಂಕಲ್ಪಿಸಲ್ಪಟ್ಟು ಅಪ್ಪಣೆಯಾಗುತ್ತ ಬಂದಿದ್ದರೂ ಅದು ಕಾಗದದ ಲಿಪಿಯಲ್ಲಿ ಮಾತ್ರ ಪರ್ಯವಸಾನಗೊಳ್ಳುತ್ತ ಬಂದಿದ್ದುದರ ಮೇಲೆ ಬಲವಾದ ಕಾರ್ಯಪ್ರತಿಷ್ಠಾಪನೆಯ ಮೂಲಕ ಆ ತತ್ವವನ್ನು ಸಾಂಗಗೊಳಿಸಲು ಸರ್ ವಿಶ್ವೇಶ್ವರಯ್ಯನವರ ಕಾಲದಲ್ಲಿ ಈ ಮಿಲ್ಲರ್‌ಸಂಘದ ಏರ್ಪಾಟಾಯಿತು. ಆದರೆ ತಾನೇ ಏನು? ಬೆಟ್ಟವನ್ನಗೆದು ಇಲಿಯನ್ನು ಹಿಡಿದುಕೊಟ್ಟಂತಾಯಿತು. ನೀಡುವ ಪರಿಚಾರಕನ ಕೃಪಣತೆಕ್ಕಿಂತ ಮನೆ ಯಜಮಾನನ ಅತಿಥಿಸತ್ಕಾರೌದಾರ್ಯ ಪ್ರೀತಿಗಳು ಫಲಪ್ರದವಾಗುವುವೆ?

ಈಗಣ ಪರಿಣಾಮವನ್ನು ಅವಲೋಕಿಸಿದುದರಿಂದ ಹಿಂದುಳಿದ ಪ್ರಜಾವರ್ಗಗಳವರಿಗೆ ಉಂಟಾದ ನಷ್ಟದ ಮೂಲಕವಾದ ಮನಸ್ಸಂಕಟವು ಹಾಗಿರಲಿ, ಶ್ರೀಮನ್ಮಹಾರಾಜರು ಉದ್ದೇಶಪಟ್ಟು ಮಾಡಿದ ಏರ್ಪಾಟನ್ನೂ ಆಜ್ಞೆಯನ್ನೂ ಸಹ ಒತ್ತರಿಸಿಬಿಟ್ಟು ಸ್ವಜಾತ್ಯಭಿಮಾನದಿಂದ ಕೆಲಸ ಮಾಡುತ್ತಲಿರುವ ಅಧಿಕಾರಿಗಳ ನಿರಂಕುಶತ್ವದ ಬಲುಮೆಯನ್ನು ಇದರಿಂದ ಕಂಡು ದುಸ್ಸಹವಾದ ಮನೋವೇದನೆಯನ್ನು ಇವರು ಅನುಭವಿಸುತ್ತಿದ್ದಾರೆ.

ಮಿಲ್ಲರ್‌ಸಂಘದ ವರದಿಯ ಮೇಲಣ ಅಪ್ಪಣೆಯೋ ಮೊದಲೇ ದುರ್ಬಲವಾಗಿದೆ. "ನ್ಯಾಯನಿರ್ವಾಹ ಶಾಖೆಯಲ್ಲಿ ಬ್ರಾಹ್ಮಣಾಧಿಕಾರಿಗಳ ಸಂಖ್ಯೆಯೇ ಹೆಚ್ಚಾಗಿರುವುದರಿಂದ ಇನ್ನು 5 ವರ್ಷಗಳ ವರೆಗೂ ಆ ಶಾಖೆಯಲ್ಲಿ ತೆರವಾದ ಯಾವ ಸ್ಥಾನವನ್ನೂ ಬ್ರಾಹ್ಮಣ ಉಮೇದುವಾರರಿಗೆ ಕೊಡದೆ ಇತರರಿಗೇ ಕೊಡಬೇಕು. ಪ್ರಾತಿನಿಧ್ಯಸಂಖ್ಯಾಪರಿಪೂರಣಕ್ಕಾಗಿ ಬ್ರಾಹ್ಮಣೋದ್ಯೋಗಿಯ ಸೀನಿಯಾರಿಟಿಯನ್ನು ಕೂಡ ಲಕ್ಷಿಸದೆ ಒಂದುಸ್ಥಾನಕ್ಕೆ ಬ್ರಾಹ್ಮಣ ಬ್ರಾಹ್ಮಣೇತರರೀರ್ವರ ಉಮೇದುವಾರಿಯೂ ಇದ್ದರೆ ಪ್ರಮೋಷನನ್ನೋ ನೂತನ ನಿಯಮವನ್ನೋ ಬ್ರಾಹ್ಮಣೇತರರಿಗೇ ಕೊಡಬೇಕು" ಇತ್ಯಾದಿಯಾಗಿ ಮದ್ರಾಸು ಸರ್ಕಾರದವರು ಮಾಡಿರುವಂಥ ದೃಢನಿಬಂಧನೆಗಳೇನಾದರೂ (ಒಣನಿಸ್ತುರಕ್ಕಾಗಿ ಅವತರಿಸಿದಂತಿರುವ) ಈ ಬಡ ಮಿಲ್ಲರ್‌ಸಂಘದ ವರದಿಯ ಮೇಲಣಪ್ಪಣೆಯಲ್ಲುಂಟೆ? ಅದೂ ಇಲ್ಲ. ಹೀಗಿರುವಾಗ ಅಲ್ಪಸ್ವಲ್ಪವಾಗಿ ಒದಗಿಸಿಕೊಟ್ಟಿರುವ ಸೌಕರ್ಯಗಳೂ ಕೂಡ ಹಿಂದುಳಿದ ಉಮೇದುವಾರರ ಪಾಲಿಗೆ ದೊರೆಯದಂತೆ ಚಾಕಚಕ್ಯವನ್ನು ನಡೆಯಿಸುವ ಅಧಿಕಾರಿಗಳ ಉಚ್ಛೃಂಖಲತ್ವವು ಎಂದಿಗೂ ಕ್ಷಮಾರ್ಹವಲ್ಲ.

ಪ್ರಜಾರಂಜಕತೆಯನ್ನೂ ಪ್ರಭುಭಕ್ತಿಯನ್ನೂ ದೇಶದೇಳ್ಗೆಯನ್ನೂ ಉದ್ದೇಶವಾಗಿಟ್ಟುಕೊಂಡು ಕೆಲಸ ಮಾಡುತ್ತಿರುವೆವೆನ್ನುವ ನಮ್ಮ ಮೇಧಾವಿ ದಿವಾನರವರು ಈಗ ನಡೆದಿರುವ ಅನ್ಯಾಯ ಪರಿಣಾಮಕ್ಕೆ ಯಾರು ಯಾರು ಕಾರಣರಾಗಿದ್ದಾರೋ, ಅವರಿಂದ ಬರುವ ಸಮಾಧಾನಗಳೇನೋ, ಅವು ನಿಜವಾದುವುಗಳೋ, ಎಂಬುದನ್ನೆಲ್ಲಾ ಸಕ್ರಮವಾಗಿ ವಿಚಾರಮಾಡಿ, ದುರಭಿಮಾನಸಂಕುಚಿತದೃಷ್ಟಿನಿರಂಕುಶತ್ವಗಳಿಂದ ಯಾರು ಈ ಪರಿಣಾಮಕ್ಕೆ ಹೇತುಭೂತರಾಗಿದ್ದರೆಂದು ತೋರಿಬರುವುದೋ ಅಂಥ ಒಬ್ಬೊಬ್ಬರಿಗೆ ಮರೆಯಬಾರದಂಥ ದಂಡನೆಯನ್ನು ಮಾಡಿದರೆ ಮುಂದಾದರೂ ಇಂಥ ದುಃಖಕರ ಪರಿಣಾಮವು ಸಂಭವಿಸಲು ಅವಕಾಶ ತಪ್ಪಿಹೋದೀತು; ಶ್ರೀಮನ್ಮಹಾರಾಜರ ಆಜ್ಞೆಯ ಗೌರವದರ್ಪಗಳೂ ಉಳಿದುಕೊಳ್ಳಲವಕಾಶವಾದೀತು.

ವೀರಶೈವ ಮಹಾಸಭೆ.

ಬರುವ ಡಿಸೆಂಬರ್ ತಿಂಗಳಲ್ಲಿ ಇದನ್ನು ರಾಜಧಾನಿಯಲ್ಲಿ ನೆರವೇರಿಸಬೇಕೆಂದು ಗೊತ್ತಾಗಿದ್ದಿತಷ್ಟೆ. ಕಾಲವು ಕಡಿಮೆ ಸಮೀಪವಾಗಿರುವುದರಿಂದ ಹಣದ ವಸೂಲಿ ಮೊದಲಾದುವುಗಳಿಗೆ ತೊಂದರೆಯೆಂದು ಕೆಲರು ಅಭಿಪ್ರಾಯಪಡುತ್ತಿದ್ದರು. ಇದರ ಮೇಲೆ ಧಾರವಾಡಜಿಲ್ಲಾ ಹಾಂಸಭಾವಿಯವರು ಈ ಸಲದ ಸಭೆಯನ್ನು ತಮ್ಮಲ್ಲಿ ನೆರವೇರಿಸಲು ಉದ್ದೇಶಪಟ್ಟು ಚಿರಸ್ಥಾಯಿ ಫಂಡಿನ ಬಡ್ಡಿಗಾಗಿ ಅದರ ಅಧ್ಯಕ್ಷರಿಗೆ ಬರೆದುಕೊಂಡಿದ್ದರು, ಮತ್ತು ಈಸಲಕ್ಕೆ ತಮಗೆ ಬಿಟ್ಟುಕೊಡಬೇಕೆಂದು ಇಲ್ಲಿಯ ಸಂಘದ ಸೆಕ್ರಟರಿಯವರಿಗೂ ಬರೆದುಕೊಂಡಿದ್ದರು. ಸ್ಥಿತಿಗತಿಯನ್ನು ಪರ್ಯಾಲೋಚಿಸಿ, ಮುಂದಣ ವರ್ಷದಲ್ಲಿ ಮುಂದಾಗಿಯೇ ಕಾರ್ಯಕ್ಕಾರಂಭಿಸಿ, ಮಹಾಸಭೆಯನ್ನು ಆ ಡಿಸೆಂಬರಿನಲ್ಲಿ ರಾಜಧಾನಿಯೊಳಗೆ ನಡೆಯಿಸುವುದನ್ನು ನಿರ್ಧರಿಸಿ ಈಸಲದ ಅವಕಾಶವನ್ನು ಹಾಂಸಭಾವಿಯವರಿಗೇ ವಹಿಸಿಕೊಟ್ಟರು.

ಹಾಂಸಭಾವಿಯು ಜಿಲ್ಲಾಸ್ಥಲವೂ ಅಲ್ಲ ತಾಲ್ಲೂಕು ಪ್ರದೇಶವೂ ಅಲ್ಲ. ಆದರೂ ಸ್ಥಲ ಪ್ರಾಮುಖ್ಯಕ್ಕಿಂತ ಅಲ್ಲಿಯ ವೀರಶೈವ ಮಹನೀಯರಲ್ಲಿ ಸಮಾಜಾಭಿಮಾನ ಪ್ರಾಮುಖ್ಯವು ಹೆಚ್ಚಾಗಿರುವುದೆಂದು ಇದರಿಂದ ವ್ಯಕ್ತವಾಗಿರುತ್ತದೆ. ಇದು ಅಭಿನಂದ್ಯವೇ ಸರಿ. ಲೋಹಮಾರ್ಗಕ್ಕೆ ಆ ಗ್ರಾಮವು 10-12 ಮೈಲಿಗಳ ದೂರದಲ್ಲಿರುವುದೆಂದು ತಿಳಿಯುತ್ತೇವೆ. ಅಲ್ಲಿಯ ಸಾಂಗಪರಿಸ್ಥಿತಿಯ ಜ್ಞಾನವು ನಮಗೆ ವಿಶೇಷವಾಗಿಲ್ಲದಿರುವುದರಿಂದ ಅಲ್ಲಿಯವರ ಮೂಲಕ ತಿಳಿದು ಬರುವವರೆಗೂ ಯಾವುದನ್ನೂ ಹೆಚ್ಚಿಗೆ ಬರೆಯಲಾರೆವು.

ಅರ್ಥಸಾಧಕ ಪತ್ರಿಕೆಯ ಪ್ರಕಟನೆಯನ್ನು ಮ|| ಎಂ. ಗೋಪಾಲಯ್ಯಂಗಾರರು ಬಿಟ್ಟುದರಿಂದ ಈ ಅಕ್ಟೋಬರ್ ತಾ|| 15 ರಿಂದ 3 ವರ್ಷಗಳವರೆಗೆ ಕರ್ಣಾಟಕ ಮತ್ತು ಇಂಡಿಯನ್ ರಿವ್ಯೂ ಆಫ್ ರಿವ್ಯೂಸ್ ಪತ್ರಿಕೆಗಳ ಸಂಪಾದಕರಾದ ಮ|| ಡಿ. ವಿ. ಗುಂಡಪ್ಪನವರಿಗೆ ಸರ್ಕಾರದವರು ವಹಿಸಿಕೊಟ್ಟಿರುವರಲ್ಲದೆ ಇದರ ವೆಚ್ಚಕ್ಕಾಗಿ ಮೊದಲನೆಯ ವರ್ಷದಲ್ಲಿ 3500 ರೂ. ಗಳನ್ನೂ ಆನಂತರ ಪ್ರತಿವರ್ಷದಲ್ಲಿ 3000 ಗಳನ್ನೂ ಕೊಡುವುದಾಗಿಯೂ, ಜನರ ನೈತಿಕ ಮತ್ತು ಆರ್ಥಿಕಾಭಿವೃದ್ಧಿ ವಿಚಾರಕ್ಕೆ ಸಂಬಂಧಪಟ್ಟ ಶಾಖಾಧಿಕಾರಿ ಸಂಪದಭಿವೃದ್ಧಿ ಸಮಾಜದ ಸೆಂಟ್ರಲ್‌ಬೋರ್ಡುಗಳ ಸಗಳೂ ಈ ಪತ್ರಿಕೆಯ ಪ್ರಕಟನೆಯ ವಿಚಾರದಲ್ಲಿ ಸಹಾಯ ಮಾಡಬೇಕಾಗಿಯೂ ಅಪ್ಪಣೆ ಮಾಡಿರುತ್ತಾರೆ.

ಸ್ವದೇಶದ ವೃತ್ತಾಂತಗಳು.

ತುಮಕೂರು ತಾ|| ಅಮಲ್ದಾರ್ ಮ|| ಬಿ. ಲಿಂಗಯ್ಯನವರಿಗೆ ಎರಡನೆ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರವು ಕೊಡಲ್ಪಟ್ಟಿದೆ.

ಬೆಂಗಳೂರು ಪೊಲೀಸು ಟ್ರೇನಿಂಗ್ ಸ್ಕೂಲಿನ ಹೆಡ್ಮಾಸ್ಟರಾಗಿದ್ದ ಮ|| ಜಿ. ಶಾಂತವೀರಪ್ಪ, ಬಿ.ಎ., ಯವರು ಹಾಸನ ಡಿಸ್ಟ್ರಿಕ್ಟ್ ಆಕ್ಟಿಂಗ್ ಪೊಲೀಸು ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವರು.

ಮಂಜರಾಬಾದು ತಾ|| ಬೆಳಗೋಡು ಹೋಬಳಿ ಬಾಳ್ಳುಪೇಟೆಯ ಗ್ರಾಮಾಭಿವೃದ್ಧಿ ಸಂಘದವರು ಈ ಪೇಟೆಯ ಸಮೀಪದಲ್ಲಿ ಪ್ರತಿ ಶುಕ್ರವಾರವೂ ಸಂತೆ ನಡೆಯಲು ಸರ್ಕಾರದಪ್ಪಣೆಯನ್ನು ಪಡೆದು ಇದರ ಆರಂಭೋತ್ಸವವನ್ನು ಈ ತಾ|| 27 ರಲ್ಲಿ ನಡೆಸುವವರಾಗಿರುವರು.

ಮೈಸೂರು ರೈಲ್ವೆಯುತ್ಪತ್ತಿಯು ಕಳೆದ ಸೆಪ್ಟಂಬರ್ ತಾ|| 30ಕ್ಕೆ ಕಡೆಯಾದ ಒಂದುವಾರದಲ್ಲಿ 1,24,718 ರೂಪಾಯಿ ಅಂದರೆ ಅದರ ಹಿಂದಣವಾರಕ್ಕಿಂತ 63,388ರೂ. ಹೆಚ್ಚಾಗಿ ಆಗಿರುವುದು. ಇದಕ್ಕೆ ಮಹಾನವಮಿಯ ಉತ್ಸವಕ್ಕಾಗಿ ಪ್ರಯಾಣಿಕರ ಸಂಖ್ಯೆಯು ಹೆಚ್ಚಾಗಿದ್ದುದೇ ಕಾರಣವಾಗಿದೆ.

ತಾಲ್ಲೂಕು ಶೇಕದಾರರಾಗಿಯಾಗಲಿ ಅಥವಾ ಗುಮಾಸ್ತರಾಗಿಯಾಗಲಿ ಇರದಿದ್ದಾಗ್ಯೂ ರೆವಿನ್ಯೂ ಶಾಖೆಯಲ್ಲಿ 3 ವರ್ಷಕ್ಕೆ ಕಡಿಮೆಯಿಲ್ಲದೆ ಕೆಲಸಮಾಡಿರುವ ಗ್ರಾಜುಯೇಟುಗಳು ತಾಲ್ಲೂಕು ಶಿರಸ್ತೆದಾರರಾಗಿ ನಿಯಮಿಸಲ್ಪಡಬಹುದೆಂದು ರೆವಿನ್ಯೂ ಕಮೀಷನರ ಸೂಚನೆಯಂತೆ ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಆಫೀಸ್ ಹೆಡ್‌ಅಕೌಂಟೆಂಟರಾದ ಮ|| ಎ. ಎಲ್. ಪುಟ್ಟಯ್ಯನವರು ಮ|| ಪಿ. ಕೆ. ದೊರೆಸಾಮಯ್ಯಂಗಾರರು ರಜದಮೇಲಿರುವುದರಿಂದ ಕುಂಸಿ ಸಬ್ ತಾ|| ಆಕ್ಟಿಂಗ್ ಡಿ|| ಅಮಲ್ದಾರರಾಗಿಯೂ ರೆ|| ಕಮೀಷನರಾಫೀಸ್ ಕ್ಲಾರ್ಕ್ ಮ|| ವೈ. ಶ್ರೀಕಂಠಯ್ಯ, ಬಿ. ಎ., ಯವರು ರಜದಮೇಲಿರುವ ಮ|| ಎಚ್. ಸಿ. ಸುಬ್ಬರಾಯರು ಬರುವವರೆಗೆ ತೀರ್ಥಹಳ್ಳಿ ತಾ|| ಆಕ್ಟಿಂಗ್ ಅಮಲ್ದಾರರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ದೀಪಾವಳಿ ಹಬ್ಬದುದ್ದೇಶದಿಂದ ಮೊನ್ನೆದಿನ ರಾತ್ರಿ ಅರಮನೆ ಕೋಟೆಬಾಗಿಲುಗಳು, ಟೌನ್‌ಹಾಲು, ದೊಡ್ಡಗಡಿಯಾರ ಇವುಗಳ ಮೇಲಿರುವ ಸಾವಿರಾರು ವೈದ್ಯುತ ದೀಪಗಳು ಹೊತ್ತಿಸಲ್ಪಟ್ಟಿದ್ದುವು. ಮಾರ್ವಾಡಿ ಮತ್ತು ಮುಲ್ತಾನಿ ಸೇಟುಗಳು ಧನಲಕ್ಷ್ಮಿ ಪೂಜೆಗಾಗಿ ತಂತಮ್ಮ ಅಂಗಡಿಗಳನ್ನು ಚಿತ್ರಪಟಗಳಿಂದಲೂ, ದೀಪಾವಳಿಗಳಿಂದಲೂ, ಮನೋಹರವಾಗಿ ಅಲಂಕರಿಸಿ ದೊಡ್ಡಮನುಷ್ಯರನ್ನೂ, ವರ್ತಕರುಗಳನ್ನೂ ಬರಮಾಡಿಕೊಂಡು ಗಂಧಪುಷ್ಪ ಫಲ ತಾಂಬೂಲಾದಿಗಳಿಂದ ಸತ್ಕರಿಸಿದರು.

ಚೀಫ್‌ಜಡ್ಜ್ ಮ|| ಚಂದ್ರಶೇಖರಯ್ಯರ್‌ರವರು ನವರಾತ್ರಿ ಮಹೋತ್ಸವಕ್ಕಾಗಿ ರಾಜಧಾನಿಗೆ ಬಂದಿದ್ದ ವೇಳೆಯಲ್ಲಿ ಮೈಸೂರು, ನಂಜನಗೂಡು ಮತ್ತು ಶ್ರೀರಂಗಪಟ್ಟಣಗಳಲ್ಲಿರುವ ಸಿವಿಲ್ ಕೋರ್ಟುಗಳನ್ನು ಪರೀಕ್ಷಿಸಿ, ಹೊಸದಾಗಿ ಮೊಖದ್ದಮೆಗಳನ್ನು ಅಡ್ಜರ್ನ್ ಮಾಡುವ ವಿಚಾರದಲ್ಲೂ ಜಾಗ್ರತೆ ಇತ್ಯರ್ಥಮಾಡುವ ವಿಚಾರದಲ್ಲೂ ಸಮನ್ ಜಾರಿಯಾಗುವುದರಲ್ಲೂ ಚೀಫ್ ಕೋರ್ಟಿನಿಂದ ಹೊಸದಾಗಿ ಕೊಡಲ್ಪಟ್ಟಿರುವ ಸೂಚನೆಗಳನ್ನನುಸರಿಸಿ ತ್ವರಿತಗೊಳಿಸಬೇಕೆಂದು ತಿಳಿಯಪಡಿಸಿದರು.

ರಾಜಧಾನಿಯಲ್ಲಿ ನೆನ್ನೆಯದಿನ ರಾತ್ರಿ ಒಂದುಹದ ಮಳೆಯಾಯಿತು. ಕಳೆದ ಮಹಾನವಮಿಯ ಮಹೋತ್ಸವಕ್ಕಾಗಿ ಮೇಲುಕೋಟೆಯಿಂದ ಬಂದು ರಮಾವಿಲಾಸ ಅಗ್ರಹಾರದಲ್ಲಿ ಇಳಿದುಕೊಂಡಿದ್ದ ಇಬ್ಬರು ಶ್ರೀವೈಷ್ಣವರು ಪ್ಲೇಗಿನಿಂದ ಸತ್ತರು, ಅಲ್ಲದೆ ಸ್ಟಾಫ್‌ಕ್ವಾರ್ಟರಿನಲ್ಲಿಳಿದುಕೊಂಡಿದ್ದವರಲ್ಲಿ ಇಬ್ಬರು ಆಳುಗಳು ಅದೇ ರೋಗದಿಂದ ಸತ್ತರಂತೆ. ಕೆಲ ಬೀದಿಗಳಲ್ಲಿ ಒಂದೇ ಮನೆಯಲ್ಲಿ ಅಥವಾ ನೆರೆಹೊರೆಯಲ್ಲಿ 1-2 ಮರಣಗಳಾಗುತ್ತಿರುವುದರಿಂದ ಪ್ಲೇಗು ರೋಗವೇನಾದರೂ ಪ್ರಾಪ್ತವಾಗಿರಬಹುದೆಂದು ಜನರು ಭೀತರಾಗಿರುತ್ತಾರೆ.

ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರುಗಳಾದ ಮೆಸರ್ಸ್. ಸಿರಾಜುದ್ದೀನ್ ಮಹಮ್ಮದ್‌ರವರು ಬೆಂಗಳೂರುಸಿಟಿಯಿಂದ ರಾಜಧಾನಿಗೂ, ಅಬ್ದುಲ್‌ಘನಿಯವರು ರಾಜಧಾನಿಯಿಂದ ಚಿನ್ನದಗಣಿಗೂ, ಸಿ. ಎವರಾರ್ಡ್‌ರವರು ಚಿನ್ನದ ಗಣಿಯಿಂದ ದಾವಣಗೆರೆಗೂ ವರ್ಗಾಯಿಸಲ್ಪಟ್ಟು ಮಹಮ್ಮದ್ ಹುಸೇನ್‌ರವರು ಬೆಂಗಳೂರು ಸಿಟಿಯ ಆಕ್ಟಿಂಗ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಮ|| ಆರ್. ಎಸ್. ನಟರಾಜಯ್ಯರ್‌ರವರು ದಾವಣಗೆರೆಗೆ ವರ್ಗ ಮಾಡಲ್ಪಟ್ಟಿದ್ದುದು ತಪ್ಪಿಸಲ್ಪಟ್ಟು ಚನ್ನಪಟ್ಟಣದಲ್ಲೇ ನಿಲ್ಲಿಸಲ್ಪಟ್ಟಿರುವರು.

ಮೈಸೂರು ಮ್ಯುನಿಸಿಪಾಲಿಟಿಯ ಚೀಫ್ ಆಫೀಸರಾದ ಮಿ|| ಮಹಮದ್‌ಫೀರ್‌ರವರು ತುಮಕೂರಿಗೆ ಎಕ್ಸೈಸ್ ಅಸಿಸ್ಟೆಂಟ್ ಕಮೀಷನರಾಗಿ ವರ್ಗಾಯಿಸಲ್ಪಟ್ಟು ಶಿವಮೊಗ್ಗೆಯಲ್ಲಿ ಅಸಿಸ್ಟೆಂಟ್ ಕಮೀಷನರಾಗಿದ್ದ ಮ|| ಹಯಗ್ರೀವರಾಯರು ಮೈಸೂರಿಗೆ ಚೀಫ್ ಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರು ನಾಳೆಯ ದಿನ ಉದ್ಯೋಗದ ಮೇಲೆ ಬರುವರೆಂದೂ, ಮಿ|| ಮಹಮದ್‌ಪೀರ್‌ರವರು ತುಮಕೂರಿಗೆ ಹೋಗುವುದಕ್ಕೆ ಮೊದಲು ಕೆಲಕಾಲ ರಜವನ್ನು ಪಡೆದುಕೊಳ್ಳುವವರಾಗಿರುವರೆಂದೂ ಕೇಳುತ್ತೇವೆ. ರಾಜಧಾನಿಯ ಮ್ಯುನಿಸಿಪಲ್ ಆಡಳಿತವು ಇನ್ನುಮೇಲಾದರೂ ಚಟವಟಿಕೆಯಿಂದಲೂ ಸಮರ್ಪಕತೆಯಿಂದಲೂ ನಡಿಯುವುದೆಂದು ನಿರೀಕ್ಷಿಸುತ್ತೇವೆ.

ಬೆಂಗಳೂರಿನಲ್ಲಿ ಕಳೆದ ತಿಂಗಳು 20 ನೇ ತಾ|| ನಲ್ಲಿ ಮೌಸಡೀನ್ ಎಂಬ ಒಬ್ಬ ಪಂಜಾಬಿಯು ಮ|| ಸೆಟ್ಲೂರ್ ನರಸಿಂಹಯ್ಯಂಗಾರರ ಬಳಿಗೆ ಭಿಕ್ಷೆಬೇಡಲು ಹೋದನು. ಅವರು ತಮ್ಮಲ್ಲಿದ್ದ 9 ಆಣೆಯನ್ನು ಅವನಿಗೆ ಕೊಟ್ಟರು. ಅವನು ಅಂಗೈಯನ್ನು ಉಜ್ಜಿದನು. ಅದರಲ್ಲಿ ಹಾಲು ಬಂದಿತು. ಅವರನ್ನು ಸ್ಪರ್ಶಮಾಡಿದ ಕೂಡಲೇ ಅವರ ಸಂಪತ್ತು ಸಾವಿರದಷ್ಟು ಹೆಚ್ಚುವಂತೆ ಮಾಡುತ್ತೇನೆಂದು ಹೇಳಿ, ಅವರ ಕೈಯ್ಯಲ್ಲಿದ್ದ ವಜ್ರದ ಉಂಗುರವನ್ನು ತೆಗೆದುಕೊಂಡು, ಅದನ್ನು ನುಂಗುವಂತೆ ಅಭಿನಯಿಸಿದನು. ಆದರೆ ಮ|| ಅಯ್ಯಂಗಾರರವರು ಅದನ್ನು ಅವನಿಂದ ತೆಗೆದುಕೊಂಡರು. ಈತನು ತನ್ನ ವಿದ್ಯೆಗಳಿಂದ ಅನೇಕರನ್ನು ಮರಳು ಮಾಡಿ, ಅವರಿಂದ ಅನೇಕ ಪದಾರ್ಥಗಳನ್ನು ಕಸುಕೊಂಡಿರುವುದಕ್ಕಾಗಿ ಅವನನ್ನು ದಸ್ತಗಿರಿ ಮಾಡಲು ಪ್ರಯತ್ನವು ನಡೆಯುತ್ತಲಿರುವುದಾಗಿ ತಿಳಿಯಬರುತ್ತದೆ.

ಕರ್ನಲ್ ದೇಶರಾಜ ಅರಸ್, ಎಂ.ವಿ.ಒ., ಸಿ.ಐ.ಇ., ಯವರು ಸ್ವರ್ಗಸ್ಥರಾದುದರಿಂದ ರಾಜಧಾನಿಯ ನಿವಾಸಿಗಳು ತಮಗುಂಟಾದ ದುಃಖಪ್ರದರ್ಶನಕ್ಕಾಗಿ ಕಳೆದ ತಾ|| 17ನೆಯ ಮಂಗಳವಾರ ಅಂಗಡಿಗಳನ್ನು ಮುಚ್ಚಿದ್ದರಲ್ಲದೆ ಸಾಯಂಕಾಲ ಟೌನ್‌ಹಾಲಿನಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟರಾದ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸಿ. ಶ್ರೀಕಂಠೇಶ್ವರ ಅಯ್ಯರ್, ಬಿ.ಎ., ಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು, ಅಧ್ಯಕ್ಷರು ಮೃತರ ಗುಣಕಥನವನ್ನು ಮಾಡಿ ಕರ್ನಲ್‌ರವರ ಏಕಮಾತ್ರ ಪುತ್ರರಾದ ರಾಜಕುಮಾರ ದೇಶರಾಜ ಅರಸಿನವರು ತಂದೆಯಂತೆ ಧೈರ್ಯಶೌರ್ಯಾದಿ ಸದ್ಗುಣಗಳಿಂದ ಶೋಭಿತರಾಗಿ ದೀರ್ಘಾಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಹೊಂದಲೆಂದು ಪರಮೇಶ್ವರನನ್ನು ಪ್ರಾರ್ಥಿಸಿದ ನಂತರ ಪಿತೃವಿಯೋಗವನ್ನು ಹೊಂದಿದ ರಾಜಕುಮಾರರಿಗೂ, ಶ್ರೀಮನ್ಮಹಾರಾಜರವರೇ ಮೊದಲಾದ ಬಂಧುವರ್ಗಕ್ಕೂ ದುಃಖಶಾಂತಿಯನ್ನು ಕೋರಿ ತಮ್ಮ ಸಾನುತಾಪವನ್ನು ನಿವೇದಿಸುತ್ತೇವೆಂಬ ನಿರ್ಧಾರಗಳನ್ನು ಅಧ್ಯಕ್ಷರು ಓದುವಾಗ್ಗೆ ಸಭಿಕರೆಲ್ಲರೂ ಎದ್ದುನಿಂತು ಮೌನದಿಂದ ಕೇಳಿ ತೆರಳಿದರು. ಕರ್ನಲ್ ದೇಶರಾಜ ಅರಸಿನವರ ವಿಯೋಗದುಃಖಕ್ಕೆ ಗುರಿಯಾದ ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬದವರಿಗೂ ರಾಜಧಾನಿಯ ನಿವಾಸಿಗಳು ಟೌನ್‌ಹಾಲಿನಲ್ಲಿ ಸಭೆ ಸೇರಿ ಸಾನುತಾಪವನ್ನು ತಿಳಿಸಿರುವುದಕ್ಕಾಗಿ ತಮ್ಮ ಮೆಚ್ಚುಗೆಯನ್ನು ನಿವಾಸಿಗಳಿಗೆ ತಿಳಿಸಬೇಕೆಂದು ಆಜ್ಞಪ್ತನಾಗಿರುವುದಾಗಿ ಪ್ರೈವೆಟ್ ಸೆಕ್ರೆಟರಿಯವರಾದ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರು ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರಿಗೆ ಬರೆದಿರುತ್ತಾರೆ.

A CONDOLENCE MEETING.

A public meeting of the Citizens of Mysore was held at the Town Hall, Mysore, on Tuesday last at 5-30 p.m., to express their deep sorrow at the demise of the great and popular sportsman and warrior Col. J. Desaraj Urs, M.V.O., C.I.E., under the Chairmanship of Rajasabbabhusbana Dewan Babadur C. Sreekantesvara Iyer, B.A., President of the City Municipal Council. Government officers, Lawyers, Municipal Councillors and merchants were present. The Chairman made the following speech which Mr. M. S. Krishnarao, Advocate translated into Kannada.—

Ladies and Gentlemen,

The melancholy event that brings us all the Citizens of Mysore-together to-night, is the deeply lamented death of Sirdar J. Desaraj Urs ten days ago, which is still so fresh and which we are yet mourning.

We are now met here, to do honor to the memory of one who has carved for himself a unique nitch in the hearts not only of the people of our State but even in those of thousands outside.

They abroad may have known the Colonel, as a distinguished soldier who fought under the British flag in Burma, in Egypt, and elsewhere acquiring fame, esteem and admiration, and winning the membership of the Royal Victorian Order and the Companionship of the most Exalted Order of the Indian Empire. Others may have known him as a lover of the Turf and a winner of the Viceroy's Cup &c., or as a genial host and a warm and sincere friend.

But we in Mysore, have had the additional privilege of knowing him as a child and as a man; as a parent and a citizen, and a member of the Royal household; and that so intimately, that we cannot wipe out of our memory our associations with him, in his joys and in his sorrows during the sixty years that he lived with us. I remember how even as a boy he took the keenest interests in manly sports. The boldness and the dash he displayed and the daring horsemanship he diligated in, indicated which way his bent and his future lay.

He joined the Mysore Military service early in life. But being soon dissatisfied with the extremely limited scope there then was for his ambitions and for his talent in the State, he joined the British Service where, as he hoped, opportunities came to him which revealed to the World his worth and enabled him to attain, gradually the rank of Colonel. He gained a name which raised not only his individual self but brought regard for the entire Mysore State. He showed, that in this State there was talent, which when suitable opportunities presented themselves, would raise equal to any occasion.

That he came of an ancient and well known Family, that he was connected by blood with Our beloved Royal House, that he was an affectionate husband, and a loving father, that he had severe afflictions which he bore with fortitude, are all matters too well known to need recounting here.

But there are other virtues which adorned his life, which endeared him to us equally. He never meddled in matters that did not concern him; but in his own sphere, he had an individuality and a sterling independance, the like of which we hardly meet with.

And the world knows too little of the unostentations charity that he so freely and unstingly dispensed. Perhaps, he was slightly short tempered at times; but, that only indicated a blessing in disguise.

To us, the people of Mysore, it was a matter of the greatest pride, that the historic family of great warriors, which was knitted so closely to Our Royal House, gave to us the so valiant as a Soldier, so keen as a sportsman, so perfect as a gentleman, so genial as a friend, so loving as a husband and a father, so patriatic as a citizen, and so magnanimous so generous as a man. And we were never tired of looking on, and thinking of his charming, noble and majestic figure as he rode as a Colonel.

By his death, Ladies and Gentlemen, we have sustained a loss, which, need I add, is irreparable. Now that he has parted this life, our hearts turn to the only representative he has left behind him.

May our united prayers go forth to the Almighty that he may be pleased to shower his choicest blessings on Rajkumar C. Desaraj Urs, that he may live long and happy, and that his future career may be as brilliant and as glorious as his father's.

The following resolutions were then put from the chair, and were passed in silence the audience baving stood up when they were read. All the shops in the City were closed as a mark of respect to the deceased Colonel.

ನೋಟೀಸು.

ಚಿತ್ರದುರ್ಗದ ತಾಲ್ಲೂಕು ತುರುವನೂರು ಹೋಬಳಿ ... [illegible]

ತಾ|| 18-9-22.

ಮೈಸೂರು ಸ್ಟಾರ್.

೧೯೨೨ನೆಯ ಇಸವಿಯ ಅಕ್ಟೋಬರ್ ತಾ|| ೨೨ನೆಯ ಭಾನುವಾರ.

ಮಿಲ್ಲರ್ ಸಂಘದ ವರದಿಯ ಮೇಲಣ ಸರ್ಕಾರಿ ಅಪ್ಪಣೆಯ ಪರಿಣಾಮ.

ನಮ್ಮ ದಿವಾನರು ಪ್ರತಿನಿಧಿ ಸಭೆಯಲ್ಲಿ ... [illegible]

ಇದೇನನ್ಯಾಯ? ... [illegible]

ಈ ಪರಿಣಾಮವನ್ನು ಅವಲೋಕಿಸಿದುದರಿಂದ ... [illegible]

ವೀರಶೈವ ಮಹಾಸಭೆ.

ಬರುವ ಡಿಸೆಂಬರ್ ತಿಂಗಳಲ್ಲಿ ಇದನ್ನು ರಾಜಧಾನಿಯಲ್ಲಿ ನೆರವೇರಿಸಬೇಕೆಂದು ... [illegible]

ಅರ್ಥಸಾಧಕ ಪತ್ರಿಕೆಯ ಪ್ರಕಟನೆಯನ್ನು ... [illegible]

ಸ್ವದೇಶದ ವೃತ್ತಾಂತಗಳು.

ತುಮಕೂರು ತಾ|| ಅಮಲ್ದಾರ್ ಮ|| ಬಿ. ಲಿಂಗಯ್ಯನವರಿಗೆ ಎರಡನೆ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರವು ಕೊಡಲ್ಪಟ್ಟಿದೆ.

ಬೆಂಗಳೂರು ಪೋಲೀಸು ಟ್ರೇನಿಂಗ್ ಸ್ಕೂಲಿನ ... [illegible]

A CONDOLENCE MEETING.

A public meeting of the Citizens of Mysore was held at the Town Hall, Mysore, on Tuesday last at 5-30 p.m., to express their deep sorrow at the demise of the great and popular sportsman and warrior Col. J. Desaraj Urs, M.V.O., C.I.E., under the Chairmanship of Rajasabbabbushana Dewan Babadur C. Sreekantesvara Iyer, B.A., President of the City Municipal Council. Government officers, Lawyers, Municipal Councillors and merchants were present. The Chairman made the following speech which Mr. M. S. Krishnarao, Advocate translated into Kannada.—

Ladies and Gentlemen,

The melancholy event that brings us all the Citizens of Mysore-together to-night, is the deeply lamented death of Sirdar J. Desaraj Urs ten days ago, which is still so fresh and which we are yet mourning.

We are now met here, to do honor to the memory of one who has carved for himself a unique nitch in the hearts not only of the people of our State but even in those of thousands outside.

They abroad may have known the Colonel, as a distinguished soldier who fought under the British flag in Burma, in Egypt, and elsewhere acquiring fame, esteem and admiration, and winning the membership of the Royal Victorian Order and the Companionship of the most Exalted Order of the Indian Empire. Others may have known him as a lover of the Turf and a winner of the Viceroy's Cup &c., or as a genial host and a warm and sincere friend.

But we in Mysore, have had the additional privilege of knowing him as a child and as a man; as a parent and a citizen, and a member of the Royal household; and that so intimately, that we cannot wipe out of our memory our associations with him, in his joys and in his sorrows during the sixty years that he lived with us. I remember how even as a boy he took the keenest interests in manly sports. The boldness and the dash he displayed and the daring horsemanship he diligated in, indicated which way his bent and his future lay.

He joined the Mysore Military service early in life. But being soon dissatisfied with the extremely limited scope there then was for his ambitions and for his talent in the State, he joined the British Service where, as he hoped, opportunities came to him which revealed to the World his worth and enabled him to attain, gradually the rank of Colonel. He gained a name which raised not only his individual self but brought regard for the entire Mysore State. He showed, that in this State there was talent, which when suitable opportunities presented themselves, would raise equal to any occasion.

That he came of an ancient and well known Family, that he was connected by blood with Our beloved Royal House, that he was an affectionate husband, and a loving father, that he had severe afflictions which he bore with fortitude, are all matters too well known to need recounting here.

But there are other virtues which adorned his life, which endeared him to us equally. He never meddled in matters that did not concern him; but in his own sphere, he had an individuality and a sterling independance, the like of which we hardly meet with.

And the world knows too little of the unostentations charity that he so freely and unstingly dispensed. Perhaps, he was slightly short tempered at times; but, that only indicated a blessing in disguise.

To us, the people of Mysore, it was a matter of the greatest pride, that the historic family of great warriors, which was knitted so closely to Our Royal House, gave to us the so valiant as a Soldier, so keen as a sportsman, so perfect as a gentleman, so genial as a friend, so loving as a husband and a father, so patriatic as a citizen, and so magnanimous so generous as a man. And we were never tired of looking on, and thinking of his charming, noble and majestic figure as he rode as a Colonel.

By his death, Ladies and Gentlemen, we have sustained a loss, which, need I add, is irreparable. Now that he has parted this life, our hearts turn to the only representative he has left behind him.

May our united prayers go forth to the Almighty that he may be pleased to shower his choicest blessings on Rajkumar C. Desaraj Urs, that he may live long and happy, and that his future career may be as brilliant and as glorious as his father's.

The following resolutions were then put from the chair, and were passed in silence the audience having stood up when they were read. All the shops in the City were closed as a mark of respect to the deceased Colonel.

RESOLUTIONS.

Resolved–

(i) The Citizens of Mysore assembled in this Public Hall, do express their deepest regret at the death of Colonel J. Desaraj Urs, M.V.O., C.I.E., the late Chief Commandant Mysore State Troops, and convey their heart felt condolence to his beloved son, Rajkumar C. Desaraj Urs.

(ii) The Citizens of Mysore assembled in the Town Hall to-day, in recording their deepest regret at the death of Colonel J. Desaraj Urs, M.V.O., C.I.E., the late Chief Commandant of the Mysore State Troops, humbly beg leave to tender their most loyal and respectful condolence to their beloved Sovereign, His Highness the Maharaja, and the other bereaved members of the Royal Family.

HIS HIGHNESS' APPRECIATION.

D.O. No. 298. THE PALACE, MYSORE, 18th October 1922.

My dear Sir,

I am directed to acknowledge the receipt of your letter of the 17th instant, submitting a copy of the resolutions passed by the Citizens of Mysore at a special meeting yesterday, expressing their sympathy in the loss which His Highness and the Members of his Family have sustained by the death of Colonel Desaraj Urs.

His Highness directs me to request you to convey to the Citizens of Mysore his appreciation of their sympathy in his bereavement.

Yours sincerely,
Sd. MIRZA M. ISMAIL.

Rajasabhabhushana Dewan Bahadur
C. SRIKANTESVARA AIYAR, B.A., B.L.,
Mysore.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

೧೦ನೆ ಶ್ರೀಮದ್ವೀರಶೈವ ಮಹಾಸಭೆಯು ರಾಜಧಾನಿಯಾದ ಮೈಸೂರು ಮಹಾನಗರದಲ್ಲಿ ಮುಂದಿನ ಡಿಶಂಬರ್ ತಿಂಗಳಲ್ಲಿ ನಡೆಯುತ್ತೆಂಬ ಶುಭಸಮಾಚಾರವನ್ನು ಕೇಳಿ ಬೀರೂರಿನ ೯ನೆ ಮಹಾಸಭೆಯ ಮ್ಯಾನೇಜಿಂಗ್ ಕಮಿಟಿಯ ಸೆಕ್ರೆಟರಿಯವರು ಮತ್ತು ವೀರಶೈವ ಪಂಚಾಚಾರ ಬಡಗನಾಡು ಹೇಮಾರೆಡ್ಡಿ ಸಂಘದ ಸೆಕ್ರೆಟರಿಯವರು ಆದ ಮ|| ರಾ|| ಗಿರಿಯಾಪುರದ ಕೆ. ನಂಜಪ್ಪಗೌಡರವರು ತಮ್ಮ ಸಂಘದ ಪರವಾಗಿ ಮಹಾಸಭೆಯ ಖರ್ಚಿಗೆ 50 ರೂ. ಚಂದಾಕೊಡುವುದಾಗಿ ನನ್ನ ಸಮಕ್ಷಮ ವಾಗ್ದಾನಮಾಡಿರುತ್ತಾರೆ. ಪ್ರಯುಕ್ತ ಸದರಿ ಮೊಬಲಗು ಮಹಾಸಭೆಯ ವ್ಯವಸ್ಥಾಪಕ ಮಂಡಲಿ ಪ್ರಕಟಣೆಯಂತೆ ಕಳುಹಿಸಲಾಗುತ್ತೆ.

ಸಿ. ಚನ್ನಬಸಪ್ಪ.

ತುಮಕೂರು.

ಶ್ರೀ ಪರಮೇಶ್ವರನ ಕೃಪೆಯಿಂದ ಮಹಾನವಮಿ ಲಾಗಾಯ್ತು ಈ ಊರಿನಲ್ಲೂ ಈ ಡಿಸ್ಟ್ರಿಕ್ಟಿನ ಹಲವು ಪ್ರದೇಶಗಳಲ್ಲೂ ಆಗಾಗ್ಗೆ ಮಳೆಯಾಗುತ್ತಲಿರುವದರಿಂದ ದನಕರುಗಳಿಗೂ ಜನಗಳಿಗೂ ನಿಂತಿದ್ದ ಬೆಳೆಗೂ ಅನುಕೂಲವಾಗಿದೆ. ಸಿರಾ ಮತ್ತು ಮಧುಗಿರಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕುಡಿಯುವುದಕ್ಕೂ ಸಹಾ ನೀರು ದೊರಿಯದೆ ಜನಗಳೂ ದನಗಳೂ ಬಹಳ ಕಷ್ಟಪಡುತ್ತಿದ್ದಾರೆ. ಈ ಊರಿನಲ್ಲಿ ಕಳ್ಳತನ ಮಾಡುತ್ತಿದ್ದವರ ಪೈಕಿ 1-2 ಜನಗಳು ಸಿಕ್ಕಿರುತ್ತಾರೆ. ಮುಖ್ಯಕಳ್ಳನನ್ನು ಒಬ್ಬ ಪೊಲೀಸ್ ಕಾನ್ಸ್ಟೇಬಲ್ ಹಿಡಿದು ಇನ್ಸ್‌ಪೆಕ್ಟರ ರೂಬರೂಬು ಹಾಜರ್ಮಾಡಿದಾಗ್ಯೂ ಕೂಡ ಯಾರ ಅಶ್ರದ್ಧೆಯಿಂದಲೋ ಆಸಾಮಿ ಪರಾರಿಯಾದಂತೆ ವರ್ತಮಾನ. ಮುಖ್ಯಾಧಿಕಾರಿಗಳು ಇಂಥ ಅಕ್ರಮಗಳನ್ನು ಸರಿಪಡಿಸಿ ಪೊಲೀಸ್ ಸಿಬ್ಬಂದಿಯನ್ನು ತಹಬಂದಿಗೆ ತಂದು ರಾತ್ರಿಕಾಲದ ಉಸ್ತುವಾರಿ ಸರಿಯಾಗಿ ನಡಿಯುವಂತೆ ನಿಗಾ ಇಡಿಸಿ ಪ್ರಜೆಗಳನ್ನು ಕಾಪಾಡಬೇಕಾಗಿದೆ. ತಿಪಟೂರಿನಲ್ಲಿ ದೇವತಾ ಉತ್ಸವದ ವಿಚಾರದಲ್ಲಿ ಮನಸ್ತಾಪ ಹೆಚ್ಚುತ್ತಿದೆ. ಇದನ್ನು ಪ್ರಭುಗಳೂ ಪ್ರಜಾಪ್ರಮುಖರೂ ಜಾಗ್ರತೆ ಸಮಾಧಾನಪಡಿಸಬೇಕಾದದ್ದು ಅತ್ಯವಶ್ಯಕ.

ಪುರವಾಸಿ.

ಶಿರಾಳಕೊಪ್ಪ.

ಈ ಊರಿಗೆ ದಾವಣಗೆರೆ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಇದೇ ಆಶ್ವೀಜ ಶುದ್ಧ ೧ಳರಲ್ಲಿ ದಯಮಾಡಿಸಿದರು. ಇಲ್ಲಿಯ ವೀರಶೈವರು ಬಹಳ ವಿಜೃಂಭಣೆಯಿಂದ ಶ್ರೀಯವರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಶೃಂಗರಿಸಲ್ಪಟ್ಟ ಊರಿನಲ್ಲೆಲ್ಲಾ ಉತ್ಸವವನ್ನು ನಡೆಸಿದರು. ಪೊಲೀಸ್ ಸಿಬ್ಬಂದಿ ಮತ್ತು ಇಲ್ಲಿಯ ಡಾಕ್ಟರ್ ವಗೈರೆ ಸರ್ಕಾರಿ ಅಧಿಕಾರಿಗಳಿಂದಲೂ ಮ್ಯುನಿಸಿಪಲ್ ಮೆಂಬರುಗಳಿಂದಲೂ ಎಡಬಲದ ಅನೇಕ ಪ್ರೇಕ್ಷಕರುಗಳಿಂದಲೂ ಶೋಭಿಸುತ್ತಿತ್ತು. ಆ ದಿವಸ ರಾತ್ರಿ ಸ್ವಾಮಿಗಳವರ ಸಮ್ಮುಖದಲ್ಲಿ ಇಲ್ಲಿಯ ಸ್ಕೂಲ್ಮಾಸ್ಟರ್ ಕೆ. ಚನ್ನಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ವ್ಯಾಪಾರ, ಕೈಗಾರಿಕೆ, ಐಕಮತ್ಯ ಅಸಹಕಾರಿತೆಯಿಂಟಾಗುವ ತೊಂದರೆ ಈ ವಿಷಯಗಳ ಮೇಲೆ ಇಲ್ಲಿಯ ಕೆಲವು ತರುಣರ ಭಾಷಣಗಳಾದವು. ಮಾರನೇದಿನ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಸಭೆ ಸೇರಿ ಈ ಊರಿನ ವೀರಶೈವರಲ್ಲಿ ಇದುವರೆಗೆ ನಡೆದ ಅನೇಕ ಕಲಹಗಳು ಇನ್ನುಮುಂದೆ ನಡೆಯಬಾರದೆಂದೂ ಎಲ್ಲರೂ ಐಕಮತ್ಯದಿಂದಿರಬೇಕೆಂದೂ ತೀರ್ಮಾನವಾಗಿ ಈ ಊರಿನಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಬೇಕೆಂದು ತೀರ್ಮಾನವಾಗಿ ಸದರಿ ಸ್ವಾಮಿಗಳವರು ವಿದ್ಯಾರ್ಥಿನಿಲಯಕ್ಕೆ ಪ್ರತಿವರ್ಷವೂ 51 ರೂಪಾಯಿ ಕೊಡುತ್ತೇವೆಂದು ಅಪ್ಪಣೆಕೊಡಿಸಿದರು.

ಪ್ರತ್ಯಕ್ಷದರ್ಶಿ.

ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿ ವರ್ತಮಾನಗಳು.

ಈ ಊರಿನಲ್ಲಿ ಬಿಸಲಿನತಾಪವು ಬಹಳ ಜೋರಾಗಿದೆ. ಸುಮಾರು 20 ದಿನಗಳ ಲಾಗಾಯ್ತು ಮಳೆಯಿಲ್ಲದೆ ಪ್ರಜೆಗಳೆಲ್ಲರೂ ಬಹಳ ಹಾಹಾಕಾರಪಡುತ್ತಿದ್ದರು. 2-3 ದಿನಗಳ ಲಾಗಾಯ್ತು ಸುತ್ತುಮುತ್ತಲೂ ಮಳೆ ಹೊಯ್ಯುತ್ತಲಿದೆ. ಹೋದ ಶುಕ್ರವಾರ ರಾತ್ರಿ ಸುಮಾರು 2 ಹದ ಮಳೆಬಂದದ್ದರಿಂದ ಪ್ರಜೆಗಳೆಲ್ಲರೂ ಹಸನ್ಮುಖಿಗಳಾಗಿರುತ್ತಾರೆ. ಪಂಚಮರ ಕೇರಿಯಲ್ಲಿ ಗಲಾಟೆಯಿರುವುದರಿಂದ ಆಟಿ ಷೆಡ್ಡುಗಳಲ್ಲಿ ವಾಸಮಾಡುತ್ತಾರೆ. ಇಲ್ಲಿನ ಮ್ಯುನಿಸಿಪಾಲಿಟಿಯವರು ಸ್ಯಾನಿಟರಿ ರೂಲ್ಸು ಅನುಸಾರವಾಗಿ ಅವರ ಕೇರಿಯನ್ನು ಪಾಕ್‌ಮಾಡಿಸಿ ಬರುವುದಕ್ಕೆ ಅವಕಾಶಕೊಡುವರೆಂದು ನಂಬಿರುತ್ತೇವೆ. ಈ ಊರಿನಲ್ಲಿ ಇಂಗ್ಲಿಷ್ ಆಸ್ಪತ್ರೆಯು ಸ್ಥಾಪಿತವಾಗಿ ಸುಮಾರು ಒಂದು ವರ್ಷವಾಗಿರಬಹುದು. ಮೊದಲಿದ್ದ ಅನುಭವಸ್ತರೂ ಸಾರ್ವಿಸ್‌ದಾರರೂ ಆಗಿದ್ದ ಡಾಕ್ಟರವರು ರಜಾದಮೇಲೆ ಹೋದವರು 3 ತಿಂಗಳಾದಾಗ್ಯೂ ಕೆಲಸದಮೇಲೆ ಬರಲಿಲ್ಲವಾದ್ದರಿಂದ ಮೆಡಿಕಲ್ ಡಿಪಾರ್ಟ್‌ಮೆಂಟಿನವರು ನೂತನವಾಗಿರುವ ಈ ಆಸ್ಪತ್ರೆಗೆ ಅನುಭವಸ್ಥರು ಸಾರ್ವಿಸ್ ಆದವರನ್ನು ಇನ್ನೂ ಕೆಲವುಕಾಲ ಇಲ್ಲಿಗೆ ಕೊಟ್ಟರೆ ಇಲ್ಲಿಯ ಜನರ ಅನುಮಾನವನ್ನು ನಿವೃತ್ತಿಮಾಡಿದಂತಾಗುತ್ತದೆ. ಈ ವಿಷಯಗಳನ್ನು ದೀರ್ಘಾಲೋಚನೆಯಿಂದ ಈ ಗ್ರಾಮದ ಕಷ್ಟವನ್ನು ಪರಿಹಾರಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ಪ್ರಜಾಸೇವಕ.

೨ ನೆಯ ಶ್ರೀಮದ್ವೀರಶೈವ ತರುಣರ ವಾರ್ಷಿಕೋತ್ಸವ, ಹುನಗುಂದ.

ಪ್ರಿಯ ವೀರಶೈವ ಬಾಂಧವರೇ ಹಾಗೂ ಭಗಿನಿಯರೇ, ಇದೇ ಅಕ್ಟೋಬರ್ ತಿಂಗಳ ತಾರೀಖು 28-29 ನೇ ದಿವಸಗಳಲ್ಲಿ ದ್ವಿತೀಯ ವಾರ್ಷಿಕೋತ್ಸವವನ್ನು ಜರಗಿಸುವ ಕುರಿತು ಗೊತ್ತುಮಾಡಲ್ಪಟ್ಟಿದೆ. ಆದ್ದರಿಂದ ತಾವೆಲ್ಲರೂ ತಪ್ಪದೆ ದಯಮಾಡಿಸಿ ತರುಣರಿಗೆ ವಿಶೇಷ ಉತ್ಸಾಹಕೊಡುವಿರೆಂದು ಆಶಿಸುತ್ತೇವೆ. ಉತ್ಸವಕಾಲದಲ್ಲಿ ಚರ್ಚಿಸತಕ್ಕ ವಿಷಯಗಳ ವಿವರ (1) ಪ್ರಾಥಮಿಕ ಶಿಕ್ಷಣದ ಸ್ವರೂಪವೂ ಅದರ ಅವಶ್ಯಕತೆಯೂ ಅದನ್ನು ಬೆಳಿಸುವ ಸಾಧನಗಳು. (2) ಧರ್ಮಾರ್ಥ ಬೋರ್ಡಿಂಗುಗಳ ಅವಶ್ಯಕತೆ. (3) ಒಕ್ಕಲತನ. (4) ವ್ಯಾಪಾರ. (5) ಒಕ್ಕಟ್ಟು. (6) ವೀರಶೈವ ಧರ್ಮದ ಮೂಲತತ್ವಗಳು. ಮೇಲ್ಕಾಣಿಸಿದ ವಿಷಯಗಳ ಮೇಲೆ ಭಾಷಣಮಾಡತಕ್ಕವರು ನಿಬಂಧಗಳನ್ನು ಬರೆದು ಐದು ದಿವಸ ಮುಂಚಿತವಾಗಿಯೇ ಜನರಲ್ ಸೆಕ್ರೆಟರಿಯವರ ಕಡೆಗೆ ಕಳುಹಿಸಬೇಕು. ಉತ್ಸವಕ್ಕೆ ಬರತಕ್ಕ ಪ್ರತಿನಿಧಿಗಳು ತಂಬಿಗೆ ಹಾಸಿಗೆ ಮುಂತಾದ ಅವಶ್ಯಕ ಸಾಮಾನುಗಳನ್ನು ತರತಕ್ಕದ್ದು. ಸೂಚನೆ—ಹುನಗುಂದ ನಗರವು ಬಾಗಲಕೋಟೆ ಸ್ಟೇಷನ್ನಿಂದ 28 ಮೈಲು ಅಂತರದ ಮೇಲೆ ಅದೆ. ಬಾಗಲಕೋಟೆಯಿಂದ ಹುನಗುಂದದ ವರೆಗೆ ಮೋಟರ್, ಟಾಂಗಾ, ಗಾಡಿ ಮುಂತಾದ ವಾಹನಗಳು ಸುಲಭ ದರದಿಂದ ಸಿಗುತ್ತವೆ. ಊರಲ್ಲಿ ರೋಗಾದಿಗಳೇನೂ ಇಲ್ಲ; ಹವೆಯು ಚೆನ್ನಾಗಿದೆ. ಶ್ರೀ ಬಸವೇಶ್ವರರು ಐಕ್ಯವಾದ ಕೂಡಲ ಸಂಗಮೇಶ್ವರ ಸುಪ್ರಸಿದ್ಧ ಕ್ಷೇತ್ರಸ್ಥಾನವು ಇಲ್ಲಿಂದ 9 ಮೈಲು ಇರುವದರಿಂದ ಉತ್ಸವ ಕಾರ್ಯವನ್ನು ತೀರಿಸಿಕೊಂಡು ಸದರೀ ಕ್ಷೇತ್ರದ ದರ್ಶನತಕ್ಕೊಳ್ಳಲು ಬಹಳ ಅನುಕೂಲವಿದೆ.

ತಮ್ಮ ಸಮಾಜ ಸೇವಕರಾದ,
ಗುರುಬಸಯ್ಯ ಮಠದ ಜನರಲ್ ಸೆಕ್ರೆಟರಿ,
ಬಸೆಟ್ಟೆಪ್ಪ ಬಳೂಟಗಿ.

ಸಕಲ ವೀರಶೈವ ಬಾಂಧವರಿಗೆ ಅರಿಕೆ.

ಜಗತ್ತಿನಲ್ಲಿ ಪ್ರತಿಯೊಂದು ಸಮಾಜವಾಗಲಿ ಧರ್ಮವಾಗಲಿ ಉನ್ನತಸ್ಥಿತಿಗೆ ಬರಬೇಕಾದರೆ ದೇಶಮಧ್ಯದಲ್ಲಿ ಅಲ್ಲಲ್ಲಿಗೆ ವಿದ್ಯಾಭಿವೃದ್ಧಿಯ ಹಾಗೂ ಸುಧಾರಣಾ ಸಂಸ್ಥೆಗಳನ್ನು ಸ್ಥಾಪಿಸುವ ಪದ್ಧತಿಯುಂಟು. ಈ ಕಾಲದಲ್ಲಿ ವೀರಶೈವ ಸಮಾಜವು ವಿದ್ಯೆಯಲ್ಲಿಯೂ ಸುಧಾರಣೆಯಲ್ಲಿಯೂ ಹಿಂದುಳಿದಿರುವದರಿಂದ ಈ ಬಗ್ಗೆ ಮುಖ್ಯವಾದ ಹಾಗೂ ಶಾಶ್ವತವಾದ ಪ್ರಯತ್ನಮಾಡತಕ್ಕದ್ದು ಪ್ರತಿಯೊಬ್ಬ ಲಿಂಗಾಂಗಿಯ ಆದ್ಯಕರ್ತವ್ಯವಾಗಿದೆ. ಆದರೆ ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳ ಮಧ್ಯೆ ತುಂಗಭದ್ರಾ ನದೀತೀರದಲ್ಲಿ (ಗದಗ ತಾಲ್ಲೂಕು ಮುಂಡರಗಿಪೇಟಾ ಪೈಕಿ) ಇರುವ ಶಿಂಗಟಾಲೂರು ಶ್ರೀ ವೀರಭದ್ರಸ್ವಾಮಿ ದೇವಸ್ಥಾನವು ಇಂಥಾ ಸುಧಾರಣಾ ಸಂಸ್ಥೆಯನ್ನು ಸ್ಥಾಪಿಸಲು ಬಹು ಯೋಗ್ಯಸ್ಥಳವಾಗಿರುವದು. ಇಲ್ಲಿಗೆ ಸದಾಕಾಲದಲ್ಲಿಯೂ ಯಾತ್ರೀಕ ಜನರ ಆಗಮನವು ವಿಶೇಷವಾಗಿದ್ದು ಪ್ರತಿವರ್ಷ ಚೈತ್ರ ಶು|| ೫ ಮಿತಿಗೆ ರಥೋತ್ಸವಾದಿಗಳು ಜರುಗುವದು ಪ್ರಸಿದ್ಧವದೆ. ಮತ್ತು ಈ ಸ್ಥಾನವು ನದಿಯ ನಿರ್ಮಲೋದಕದ ಪ್ರವಾಹದಿಂದಲೂ ತಿಂತ್ರಿಣೀ, ಚೂತ, ಬಿಲ್ವಾದಿ ವೃಕ್ಷಗಳ ಸಮೂಹದಿಂದಲೂ ಅತ್ಯಂತ ರಮಣೀಯವಾಗಿರುವದು. ಹಾಗೂ (ಒಂದುಕಡೆಗೆ ವಿಶಾಲವಾದ ಬಯಲುಪ್ರದೇಶವೂ ಉಂಟು) ಹವೆಯಾದರೂ ಸರ್ವೋತ್ತಮವಾಗಿದೆ. ಆದುದರಿಂದ ಇಂಥಾ ಪುಣ್ಯಕ್ಷೇತ್ರದಲ್ಲಿ ಸರ್ವರಿಗೂ ಪೂಜ್ಯವಾದ ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾಂಕಿತದಿಂದ ಒಂದು "ಗುರುಕುಲ" ವನ್ನು ಸ್ಥಾಪಿಸಿ ಯೋಗ್ಯವ್ಯವಸ್ಥೆಯಿಂದ ನಡೆಸುವದು ಪರಮಭೂಷಣವಾಗುವದಲ್ಲದೆ ಲೌಕಿಕ ವೈದಿಕ ವಿದ್ಯಾಭಿವೃದ್ಧಿಯಾಗಿ ಅನೇಕ ವಿಧದಿಂದ ಸುಧಾರಣೆಗಳುಂಟಾಗಲು ಸಂದೇಹವಿಲ್ಲ.

ಕಳೆದ ಸಂವತ್ಸರದ ಚಾತ್ರಿ ಕಾಲದಲ್ಲಿ ಕೂಡಿದ ಜನರಲ್ ಕಮಿಟಿಯೊಳಗೆ ಇದೇ ವಿಷಯವಾಗಿ ಕೆಲವು ಪ್ರಮುಖಜನರು ಸೂಚನೆ ತರಲು ಸರ್ವಾನುಮತದಿಂದ ಪಾಸಾಗಿ ಶ್ರೀ ಜೆ. ಉಜ್ಜಯಿನೀ ಶಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಸನ್ನಿಧಿಗೂ ಮತ್ತು ಶ್ರೀ||ಜ|| ಹಿಮವತ್ಕೇದಾರದ ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಗೂ ಬಿನ್ನಹ ಪತ್ರಿಕೆದ್ವಾರಾ ಅರಿಕೆಮಾಡಿಕೊಳ್ಳಲಾಗಿ ಉಭಯ ಶ್ರೀಗಳವರು ಇಂಥ ಸಮಾಜೋದ್ಧಾರ ಕಾರ್ಯಕ್ಕೆ ನಾವು ಅಗತ್ಯವಾಗಿ ಸಹಾಯಮಾಡುತ್ತೇವೆಂತಲೂ ಮತ್ತು ಅಲ್ಲಿಗೆ ಸ್ವತಃ ದಯಮಾಡಿಸಿ ನಿಮ್ಮ ಕೋರಿಕೆಗಳನ್ನು ನೆರವೇರಿಸಿಕೊಡುತ್ತೇವೆಂತಲೂ ಆಶೀರ್ವಾದ ಪತ್ರಿಕೆಗಳನ್ನು ದಯಪಾಲಿಸಿರುತ್ತಾರೆ. ಆದರೆ ಈ ಮಹತ್ಕಾರ್ಯವು ಇಷ್ಟರಲ್ಲಿಯೇ ಪ್ರಾರಂಭವಾಗತಕ್ಕದಿದ್ದು ಇದಕ್ಕೆ ಸಮಿಪದಲ್ಲಿರುವ (ಹಂಮಿಗಿ ಶಿಂಗಟಾಲೂರು ನವುಲಿ) ಈ ಮೂರು ಗ್ರಾಮದ ಪಂಚಜನರು ಸಹ ಪ್ರಯತ್ನಮಾಡಲು ಸಿದ್ಧರಾಗಿರುವರು. ಆದುದರಿಂದ ಸಕಲ ವೀರಶೈವ ಬಾಂಧವರು ಶ್ರೀಮತ್ಪಂಚಾಚಾರ್ಯರ ವಿಷಯದಲ್ಲಿ ಸ್ಥಿರಬುದ್ಧಿಯುಳ್ಳವರಾಗಿ ಈ ಗುರುಕುಲ ಸ್ಥಾಪನಾ ಕಾರ್ಯಕ್ಕೆ ತಮ್ಮ ತಮ್ಮ ಯೋಗ್ಯತಾ ಪ್ರಕಾರಾ ಸಹಾಯಗಳನ್ನೊದಗಿಸಿಕೊಟ್ಟು ಗುರುವರ್ಗೋನ್ನತಿಯನ್ನೂ ಸಮಾಜೋನ್ನತಿಯನ್ನೂ ಮಾಡಿದ ಪುಣ್ಯರಾಶಿಗೆ ಭಾಗಿಗಳಾಗಬೇಕೆಂದು ನನ್ನ ಸವಿನಯ ಸೂಚನೆ.

ವಿರೂಪಾಕ್ಷಾರ್ಯ, ಪುರಾಣೀಕಮಠ, ಹಿರೇಹಡಗಲಿ.

ಪುನಃ ಮುಂಬಯಿ ವೀರಶೈವಾಶ್ರಮ.

(ಲೇಖಕ—ಗುಡಗುಂಟಿ ವ್ಹಿ. ಎಸ್.)

ಕೆಲವು ದಿವಸಗಳ ಹಿಂದೆ ನಾವು ಮುಂಬಯಿಯ ವೀರಶೈವಾಶ್ರಮದ ಸಂಬಂಧವಾಗಿ ವೃತ್ತಪತ್ರಿಕೆಗಳಲ್ಲಿ ಒಂದು ಲೇಖ ಪ್ರಕಟಿಸಿದ್ದರ ಕುರಿತು ಅದರ ಅಭಿನಂದನ ಪರ ಲೇಖಗಳು ಹಲವು ಸದ್ಗೃಹಸ್ಥರಿಂದ ಮೈಸೂರ ಸ್ಟಾರ್ ಮೊದಲಾದ ಪತ್ರಗಳಲ್ಲಿ ಪ್ರಕಟವಾಗಿರುವವಲ್ಲದೆ ಅದೇ ವಿಷಯವಾಗಿ ರಾ|| ಗಂಗಾಧರಪ್ಪಾ ಸಾಬೋಜಿಯವರ ಒಂದು ವಿಸ್ತೃತವಾದ ಲೇಖವು ಲೋಕಪ್ರಿಯ ಕರ್ನಾಟಕ ಟಾಯಿಮ್ಸದ ಸೆಪ್ಟಂಬರ 22ನೇ ತಾರೀಖಿನ ಪತ್ರದಲ್ಲಿ ಪ್ರಸಿದ್ಧವಾಗಿದ್ದು ವಾಚಕವೃಂದಕ್ಕೆ ಹೃದಯಂಗಮವಾದ ಮಾತು. ಭರತಖಂಡದ ಮುಖವೆಂದು ಮೆರೆಯುವ ಮುಂಬಯಿಯಂಥ ಜವಾಬದಾರಿಯುಳ್ಳ ಪಟ್ಟಣದಲ್ಲಿ ಆಶ್ರಮವನ್ನು ಏರ್ಪಡಿಸಿ ಅದನ್ನು ಹಾನಿಯಿಲ್ಲದೆ ಸಾಗಿಸಿಕೊಂಡು ಹೋಗುವಂಥ ಒಬ್ಬ ಸ್ವಾರ್ಥತ್ಯಾಗಿ ಚಾಲಕನು ಅತ್ಯವಶಕನಾಗಿರುವನೆಂದು ರಾ|| ಗಂಗಾಧರಪ್ಪಾ ಸಾಬೋಜಿಯವರು ಅನ್ನುವದಕ್ಕೆ ನಾವು ಶತಶಃ ಒಪ್ಪಿಕೊಳ್ಳುವೆವು. ಸಮಾಜದ ಹಿತದಗೋಸುಗ ತನ್ನ ಸುಖವನ್ನು ಕಾಲುಕೆಳಗೆ ಮೆಟ್ಟುವಂಥ ಪ್ರಾಣಿಯು ನಿರಭಾರಿ ವರ್ಗದಲ್ಲಿಯಲ್ಲದೆ ಬೇರೆ ಮತ್ಯಾವಲ್ಲಿ ದೊರೆಯಲು ದುಸ್ತರವೆಂದು ನಂಬಿ ಆಶ್ರಮವನ್ನು ಪುನಃ ರಚಿಸುವ ಬಗ್ಗೆ ನಾವು ಶ್ರೀಮನ್ನಿರಂಜನ ಬಿಳ್ಳೂರ ಶ್ರೀಗಳ ಸನ್ನಿಧಿಗೆ ಅರಿಕೆಮಾಡಿಕೊಂಡೆವು. ಆದರೆ ಯಾವ ಕಾರಣದಿಂದಲೋ ಏನೋ ಅವರು ಮೌನವೃತ್ತಿಯನ್ನು ವಹಿಸಿದ್ದನ್ನು ಕಂಡು ನಮ್ಮ ಹೃದಯವು ಅನೇಕ ವಿಧವಾಗಿ ಬಾಧಿಸುತ್ತದೆ. ಪ್ರಚಲಿತ ಕಾಲಕ್ಕೆ ನಿರಾಭಾರಿವರ್ಗದ ಮಕುಟಮಣಿಗಳೆಂದು ಎಣಿಸುವ ಶ್ರೀಮನ್ನಿರಂಜನ ಚಿತ್ರಕಲ್‌ದುರ್ಗದ ಜಗದ್ಗುರುಗಳು ಮತ್ತು ಶ್ರೀಮನ್ನಿರಂಜನ ಬಿಳ್ಳೂರ ಮಹಂತರು ಆಶ್ರಮದ ಕಟ್ಟಡವನ್ನು ಅಭಿನಯಿಸಲು ತಾವು ಜನಗಳಿಗೆ ಕೈಯೊಡ್ಡುತ್ತೇವೆಂದು ಅಪ್ಪಣೆ ಕೊಡಿಸಿ ಹಾಗೆ ಮಾಡದೆ ಉಭಯತರು ತಮ್ಮ ಮುಖ್ಯ ಆಯುಷ್ಯವನ್ನು ಮಠ ರಚಿಸುವಲ್ಲಿ ಮಾರ್ಗಮಾಡಿದರೆಂದು ರಾ|| ಗಂಗಾಧರಪ್ಪಾ ಸಾಬೋಜಿಯವರು ತಮ್ಮ ಲೇಖನದಲ್ಲಿ ಪ್ರಚುರಗೊಳಿಸಿದ್ದನ್ನು ನೋಡಿ ಯಾವನುತಾನೇ ಆಶ್ಚರ್ಯಚಕಿತನಾಗದಿರನು? ಇಂಥ ಕೃತಿಗಳನ್ನು ಈಗ ನಿರಾಭಾರಿ ವರ್ಗದವರು ಮಾಡುತ್ತಿರುವದರಿಂದಲೇ ಅವರು ಸ್ವಾರ್ಥಪರಾಯಣರಾಗಿರುವರೆಂದು ರಾ|| ಗಂಗಾಧರಪ್ಪಾ ಸಾಬೋಜಿಯಂಥವರಿಗೆ ವೃತ್ತಪತ್ರಗಳಲ್ಲಿ ನಿರ್ಭಯದಿಂದ ಪ್ರಸಿದ್ಧಿಸಲು ಬಿಸಿಬಿಸಿ ಉದಾಹರಣೆಯವಾಗಿರುವದು. ವೀರಶೈವರಿಗೆ ಧರ್ಮವೇ ಪಂಚಪ್ರಾಣವು, ಅದರ ವಿನಹಾ ಅವರಿಗೆ ಮೋಕ್ಷದ ಮಾರ್ಗವು ಬೇರೊಂದಿಲ್ಲವೆಂದು ಜಗಿಜಗಿದು ಉಪದೇಶಿಸುವ ನಿರಾಭಾರಿ ವರ್ಗದವರು ವೀರಶೈವ ಸಮಾಜದ ಇಂತಿಪ್ಪ ಕಡುತರ ಕಠಿಣ ಪ್ರಸಂಗದಲ್ಲಿ ಆಶ್ರಮದಂಥ ಪರಮಮಹತ್ವದ ಕಾರ್ಯವನ್ನು ಕೈಕೊಳ್ಳದೆ ತಟಸ್ಥರಾಗಿ ಸುಮ್ಮನೆ ಕುಳಿತುಬಿಡುವದೆಂದರೆ ಅವರು ತಮ್ಮ ಬಿರುದಿಗೆ ತಾವೇ ಕಲಂಕವನ್ನು ತಂದುಕೊಳ್ಳುವವರಲ್ಲದೆ ಮತ್ತೇನು? ಆದುದರಿಂದ ಅವರು ಇನ್ನುಮುಂದಾದರೂ ಸಮಾಜದ ಹಿತಾಹಿತಗಳ ಕಡೆಗೆ ಸ್ವಲ್ಪ ಲಕ್ಷಕೊಡಬೇಕೆಂಬದಾಗಿ ನಮ್ಮ ಸವಿನಯ ಕೋರಿಕೆ.

ರಾ|| ಗಂಗಾಧರಪ್ಪ ಸಾಬೋಜಿಯವರು ಮುಂಬಯಿ ವೀರಶೈವಾಶ್ರಮದಂಥ ಕೆಲಸಗಳಿಗೆ ಸುಶಿಕ್ಷಿತ ವಿದ್ಯಾರ್ಥಿಗಳಿಂದ ಕಿಂಚಿತ್ತಾದರೂ ಬೆಂಬಲವು ದೊರೆಯುವದಿಲ್ಲವೆಂದು ತಮ್ಮ ಲೇಖನದಲ್ಲಿ ಕಾಣಿಸಿರುವರು. ಆದರೆ ಅವರು ಹೀಗೆ ನುಡಿಯುವದರಲ್ಲಿ ಶಿವತ್ವವಿಲ್ಲೆಂದು ನಮಗಂತೂ ಒಡೆದು ಕಾಣಿಸುತ್ತದೆ. ಯಾಕಂದರೆ ಇದೇ ವರುಷ ಬಾಗಲಕೋಟೆಯಲ್ಲಿ ನೆರೆದ ಸಮ್ಮೇಳನದಲ್ಲಿ ಆಶ್ರಮದ ಬಗ್ಗೆ ಒಂದು ಕಮಿಟಿಯು ನಿಯಮಿಸಲ್ಪಟ್ಟು ಅದರಂತೆ ಅದು ತಕ್ಕಮಟ್ಟಿಗೆ ಕೆಲಸವಾದರೂ ಮಾಡುತ್ತಿರುವದೆಂದು ಕಮಿಟಿಯ ಸಭಾಸದರಲ್ಲಿ ಒಬ್ಬರಾದ ಮಿ|| ಹರ್ಡೇಕರರಿಂದ ನಮಗೆ ತಿಳಿದುಬಂದಿದೆ. ಇದಲ್ಲದೆ ವಿದ್ಯಾರ್ಥಿಗಳು ಹಳ್ಳಿಗಳಿಗೆ ಹೋಗಿ 1200 ರೂ. ವರ್ಗಣಿ ಕೂಡಿಸಿ ಮರಣಹೊಂದಿದ ಪ್ರಬೋಧ ಮಾಸಪತ್ರಿಕೆಗೆ ಪುನರಪಿ ಜೀವದಾನಕೊಟ್ಟದ್ದರ ಶ್ರೇಯಸ್ಸು ಅವರ ಪದರಿನಲ್ಲಿಯೇ ಬೀಳುವದು. ರಾ|| ಗಂಗಾಧರಪ್ಪ ಸಾಬೋಜಿಯವರು ವೀರಶೈವ ಸಮಾಜದ ಉದ್ಧಾರಕ್ಕಾಗಿ ತಮ್ಮ ಆತ್ಮಯಜ್ಞವನ್ನು ಮಾಡುತ್ತಿರುವ ಶ್ರೀಮನ್ನಿರಂಜನ ಮೃತ್ಯುಂಜಯ ಶ್ರೀಗಳನ್ನು ಇಲ್ಲವೆ ಬಿಳ್ಳೂರ ಮಹಾತ್ಮರನ್ನು ಅಥವಾ ಶ್ರೀಮನ್ನಿರಂಜನ ಕೊಣ್ಣೂರ ಚರಮೂರ್ತಿಯವರನ್ನು ಮುಂದೆಹಾಕಿಕೊಂಡು ಆಶ್ರಮವನ್ನು ಪುನಹ ರಚಿಸಲು ತಾವಾದರೂ ಅವರ ಪತಾಕೆಯಕೆಳಗೆ ಟೊಂಕಕಟ್ಟಿ ನಿಲ್ಲಲು ಸಿದ್ಧರಾದರೆ ನಾವೆನ್ನುವ ಸಂಗತಿಯು ಅಕ್ಷರಶಃ ನಿಜವಿರುವದೆಂದು ಅವರು ಮನಗಾಣದೆ ಇರಲಾರದೆಂದು ನಮ್ಮ ಕಟ್ಟಾಭಿಪ್ರಾಯವು. ನಾವು ಸೂಚಿಸಿದಂತೆ ರಾ|| ಗಂಗಾಧರಪ್ಪನವರು ವರ್ತಿಸಲು ಸಿದ್ಧರಾದರೆ ಆಶ್ರಮವು ತೀವ್ರವೇ ಜನಿಸದೆ ಇರಲಾರದೆಂದು ನಾವು ಸಾರಿಸಾರಿ ಹೇಳುವೆವು. ಇನ್ನು ಸ್ವಲ್ಪ ಮುಂಬಯಿಯಲ್ಲಿರುವ ನಮ್ಮ ಬಾಂಧವರ ಕಡೆಗೆ ತಿರಗಿ ಲೇಖನವನ್ನು ವಿರಮಗೊಳಿಸುವೆವು.

ಆಶ್ರಮದ ಹಣದ ಬಗ್ಗೆ ಟ್ರಸ್ಟ್‌ಡೀಡ್ ತಯಾರಿಸಲು ರಾ|| ಮಹಾಂತಪ್ಪಾ ಅಣ್ಣಾ ತಪಶೆಟ್ಟಿಯವರೊಬ್ಬ ವ್ಯತಿರಿಕ್ತ ಉಳಿದ ಸಮಸ್ತರು ಅದಕ್ಕೆ ಒಡಂಬಟ್ಟಿರುವರೆಂದು ರಾ|| ಸಾಬೋಜಿಯವರು ತಮ್ಮ ಲೇಖನದಲ್ಲಿ ವಿವರಿಸಿದ್ದನ್ನು ಕಂಡು ನಮಗೆ ಆನಂದವೂ ಅದೇಕಾಲಕ್ಕೆ ಅವರ ಇನ್ನು ದಿಗಿಲವೂ ಉಂಟಾಗುತ್ತದೆ. ರಾ|| ಮಹಾಂತಪ್ಪಾ ಅಣ್ಣಾ ತಪಶೆಟ್ಟಿಯವರು ಟ್ರಸ್ಟ್‌ಡೀಡನ್ನು ಸಿದ್ಧಪಡಿಸಲು ಏಕೆ ಅಷ್ಟೊಂದು ಲಕಲಕ ಹಿಂಜರಿಯಬೇಕೋ ನಮಗೆ ತಿಳಿಯದು. ಕಾರಣ ಅವರು ಅದರಲ್ಲಿ ಯಾವದಂಥ ಭಯಭೂತವಿರುವದೆಂಬದನ್ನು ವೃತ್ತಪತ್ರಗಳ ಮುಖದಿಂದ ಅವಶ್ಯ ತಿಳಿಸಬೇಕಾಗಿ ಸೂಚನೆ. ಇಲ್ಲದೆ ಹೋದರೆ ಅವರು ವ್ಯರ್ಥವಾಗಿ ಜನಗಳ ದೂಷಣೆಗೆ ಈಡಾಗಬೇಕಾಗುವದು. ಟ್ರಸ್ಟ್‌ಡೀಡನ್ನು ತಯಾರಿಸುವದಕ್ಕೆ ರಾ|| ತಪಶೆಟ್ಟಿಯವರು ತಪ್ಪಿಸಿದ ಮಾತ್ರದಿಂದಲೇ ರಾ|| ಸಾಬೋಜಿಯವರು ಆ ಕೆಲಸವನ್ನು ಅಲ್ಲಿಗೆ ಏಕೆ ನಿಲ್ಲಿಸಬೇಕಾಯಿತೆಂಬದನ್ನು ನಮಗೆ ಅರಿಕೆ ಮಾಡಬೇಕು. ಕೊನೆಗೆ ರಾ|| ಗಂಗಾಧರಪ್ಪನವರು ಇಂತಪ್ಪ ಸಣ್ಣಪುಟ್ಟ ಎಡರುಗಳಿಗೆ ಎದೆಗುಂದದೆ ಆಶ್ರಮದಂಥ ಪರಮ ಮಹತ್ವದ ಕಾರ್ಯದ ಕಡೆಗೆ ಅವರು ವಿಶೇಷ ಅಂಟಿಕೊಂಡಿರಬೇಕೆಂಬದಾಗಿ ಸವಿನಯ ಸೂಚನೆ. ಮತ್ತು ಅವರಿಗೆ ಮುಂಬಯಿಯಲ್ಲಿರುವ ಜನಗಳು ಸಹಾಯಮಾಡಿ ಆಶ್ರಮದ ಶ್ರೇಯಸ್ಸಿಗೆ ತಾವಾದರೂ ಪಾಲುಗಾರರಾಗಬೇಕು. ರಾ|| ಸಾಬೋಜಿಯವರು ಸನ್ 1916 ರಿಂದ ಈ ಮಿತಿಯವರೆಗೆ ವಸೂಲ್ಮಾಡದೆ ಇದ್ದ ಆಶ್ರಮದ ವರ್ಗಣಿಯನ್ನು ಇನ್ನುಮುಂದೆ ತೀವ್ರವೇ ತೆಗೆದುಕೊಳ್ಳಬೇಕೆಂದು ವಿಜ್ಞಪ್ತಿ.

ಜೈನ ವಿದ್ಯಾವರ್ಧಕ ಫಂಡು ಸಂಘ.

ಮೈಸೂರು ಜೈನ ವಿದ್ಯಾವರ್ಧಕ ಫಂಡ್ ಸಂಘದ ಚತುರ್ಥ ವಾರ್ಷಿಕಾಧಿವೇಶನವು ಇದೇ ತಿಂಗಳು 1 ನೇ ತಾ|| ಭಾನುವಾರ ಶ್ರೀ ರಾಯಚೂರು ಹರಧರ ಧರಣಪ್ಪ ನಾಗಪ್ಪ ಇವರ ಅಧ್ಯಕ್ಷತೆಯಲ್ಲಿ ಮೈಸೂರು ಶ್ರೀಮನ್ ಮೋತಿಖಾನೆ ಲಕ್ಷ್ಮೀಪತಯ್ಯನವರ ಜೈನ ವಿದ್ಯಾರ್ಥಿ ನಿಲಯದಲ್ಲಿ ನಡಿಸಲ್ಪಟ್ಟಿತು. ಈ ಸಾರಿ ಸಭೆಗೆ ಹಿಂದಿನ ವರ್ಷಗಳಿಗಿಂತಲೂ ಹೆಚ್ಚು ಪರಸ್ಥಳದ ಮಹನೀಯರುಗಳು ದಯಮಾಡಿಸಿದ್ದರು. ಸಭಾಮಂಟಪವೂ ಅದರ ಮುಂಭಾಗವೂ ತಳಿರು ತೋರಣಗಳಿಂದಲೂ ಪುಷ್ಪಮಾಲಿಕೆಗಳಿಂದಲೂ ಅತಿರಮ್ಯವಾಗಿ ಶೃಂಗರಿಸಲ್ಪಟ್ಟಿದ್ದವು. ಪ್ರಾತಃಕಾಲ 9 ಘಂಟೆಗೆ ಶ್ರೀಹರಧರಧರಣಪ್ಪ ನಾಗಪ್ಪ ಇವರನ್ನು ಬಹಳ ಅಂದವಾಗಿ ಶೃಂಗರಿಸಿದ್ದ ಮೋಟಾರಿನ ಮೇಲೆ ಸ್ಥಳಿಕ ದೊಡ್ಡಮನುಷ್ಯರುಗಳೂ ಫಂಡಿನ ಕಾರ್ಯನಿರ್ವಾಹಕರೂ ವಿದ್ಯಾರ್ಥಿಗಳೂ ಸೇರಿ ಉತ್ಸವದೊಡನೆ ಸಭಾಮಂಟಪಕ್ಕೆ ಕರೆದುಕೊಂಡು ಬಂದರು. ಅವರ ಆಗಮನಾನಂತರ ವಿದ್ಯಾರ್ಥಿಗಳಿಂದ ದೇವರ ಸ್ತೋತ್ರವೂ ಶ್ರೀ ಭಾರತ ಮಾತೆಯ ವರ್ಣನೆಯಿಂದ ಕೂಡಿದ ಗೀತವೂ ಹಾಡಲ್ಪಟ್ಟ ಮೇಲೆ ಸಭೆಯು ಪ್ರಾರಂಭವಾಯಿತು.

ಮ|| ಎ. ಶಾಂತರಾಜ ಶಾಸ್ತ್ರಿಗಳು ನ್ಯಾಯತೀರ್ಥ ಇವರು ಸಭಾಧ್ಯಕ್ಷರ ಗುಣಕಥನ ಪದ್ಯಗಳನ್ನು ಓದಿ ಅವರ ಪರಿಚಯವು ಸಭಿಕರಿಗೆ ಉಂಟಾಗುವಂತೆ ಒಂದು ಉಪನ್ಯಾಸವನ್ನು ಮಾಡಿದ ನಂತರ ಶ್ರೀ ಜಿ. ಕೆ. ಪದ್ಮರಾಜಯ್ಯನವರು, ಯಜಮಾನ ಜಿ. ರಾಜಪ್ಪನವರು, ಶ್ರೀ ಧರಣಪ್ಪನವರನ್ನು ಅಧ್ಯಕ್ಷ ಪೀಠವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು. ಸಭಾಸದರ ಕೈಚಪ್ಪಾಳೆಗಳ ಕೋಲಾಹಲದ ನಡುವೆ ಶ್ರೀಯುತರು ಅಧ್ಯಕ್ಷಪೀಠವನ್ನು ಅಲಂಕರಿಸಿದರು. ನಂತರ ಈ ಸಂಘದ ಪ್ರೆಸಿಡೆಂಟರಾದ ಶ್ರೀಮನ್ ಎಂ. ಎಲ್. ವರ್ಧಮಾನಯ್ಯನವರು ಸಮಾಜಾಭಿವೃದ್ಧಿಯ ವಿಷಯದಲ್ಲಿ ಅತಿರಮ್ಯವಾದ ಒಂದು ವ್ಯಾಖ್ಯಾನವನ್ನು ಮಾಡಿದರು. ನಮ್ಮ ಸಮಾಜವು ಹಿಂದೆ ಬೀಳುತ್ತಿರುವುದನ್ನು ಕಂಡೂ ಕಂಡು ಅದರ ಉಚ್ಛ್ರಾಯಸ್ಥಿತಿಗೆ ಪ್ರಯತ್ನ ಪಡದೆ ಮೌನದಿಂದಿರುವ ಮಹನಿಯರುಗಳು ಕಣ್ತೆರೆದು ನೋಡಿ ತಮ್ಮ ಅಸಹನೆ, ಅಸೂಯೆ, ಅಹಂಕಾರ, ಸ್ವಾರ್ಥಪರತೆ, ಈವುಗಳನ್ನು ದೂರಮಾಡಿ ಸಮಾಜ ಸಂತಾಪವನ್ನು ಹೋಗಲಾಡಿಸಲು ಬದ್ಧಕಂಕಣರಾಗಿ ನಿಲ್ಲಬೇಕೆಂಬುವುದೇ ಅವರ ಮುಖ್ಯ ಅಭಿಪ್ರಾಯವಾಗಿತ್ತು. ಇವರ ಉಪನ್ಯಾಸವು ಮುಗಿದನಂತರ ಸಂಘದ ಸೆಕ್ರೆಟರಿಯವರು ಕಳೆದವರ್ಷ ಈ ಸಂಘದವರು ಮಾಡಿರುವ ಕೆಲಸಗಳನ್ನೂ ಜಮಾ ಖರ್ಚುಗಳನ್ನೂ ತಮ್ಮ ರಿಪೋರ್ಟು ಮೂಲಕ ಸಭಿಕರಿಗೆಲ್ಲ ಓದಿ ತಿಳಿಸಿದರು. ತರುವಾಯ ಸಭಾಧ್ಯಕ್ಷರಾದ ಶ್ರೀಧರಣಪ್ಪನವರು ಈ ಸಂಘದವರು ಮಾಡುತ್ತಿರುವ ಕಾರ್ಯಗಳ ವಿಷಯವಾಗಿ ಬಹಳ ಸಂತೋಷಪಟ್ಟು ಸಮಾಜೋನ್ನತಿಗಾಗಿ ಶ್ರೀವರ್ಧಮಾನಯ್ಯನವರು ಮಾಡುತ್ತಿರುವ ಉಪಕಾರಕ್ಕಾಗಿ ಅವರನ್ನು ಮತ್ತು ಇತರ ಸಭಿಕರನ್ನು ವಂದಿಸಿ ನಮ್ಮ ಸಮಾಜವು ಪೂರ್ವಸ್ಥಿತಿಯನ್ನು ಹೊಂದಬೇಕಾದರೆ ವಿದ್ಯಾಪ್ರಚಾರವೇ ಮುಖ್ಯಕಾರಣವಾಗಿರುವುದರಿಂದ ನಾವುಗಳೆಲ್ಲರೂ ನಮ್ಮ ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡಲು ಪ್ರಯತ್ನಪಡಬೇಕೆಂದು ಸಭಿಕರನ್ನು ಪ್ರಾರ್ಥಿಸಿಕೊಂಡರು. ವಯೋವೃದ್ಧರೂ ಜ್ಞಾನವೃದ್ಧರೂ ಸದಾಚಾರಿಗಳೂ ಧರ್ಮಾತ್ಮರೂ ಆದ ಈ ಮಹಾತ್ಮರು ಹೈದರಾಬಾದ್ ಸಂಸ್ಥಾನದಿಂದ ನಮ್ಮಗಳ ಪ್ರಾರ್ಥನೆಯಂತೆ ಇಲ್ಲಿಗೆ ದಯಮಾಡಿಸಿ ಅತ್ಯಂತ ಸಂತೋಷದಿಂದ ಈ ವಿದ್ಯಾವರ್ಧಕನಿಧಿಗೆ ಉದಾರ ಮನಸ್ಸಿನಿಂದ ಸಾವಿರದ ಒಂದು ರೂಪಾಯಿಗಳನ್ನು ಧರ್ಮಸಹಾಯಮಾಡಿ ಪೋಷಕರಾದರು. ಇವರ ಪರೋಪಕಾರಕ್ಕಾಗಿ ಜೈನ ಸಮಾಜದವರೆಲ್ಲರೂ ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಇವರ ಔದಾರ್ಯವನ್ನೂ ಶ್ರೀವರ್ಧಮಾನಯ್ಯನವರೂ ಮಂಡ್ಯದ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್ ಮ|| ನಾಗೇಂದ್ರಯ್ಯನವರೂ ಇಂಜನಿಯರ್ ಮ|| ಟಿ. ಸಿ. ನಾಗಕುಮಾರಯ್ಯನವರೂ ಫಂಡಿಗೆ ಸಹಾಯಮಾಡಬೇಕೆಂದು ಮಾಡಿದ ವ್ಯಾಖ್ಯಾನಗಳನ್ನು ಕೇಳಿ ಅನೇಕ ಮಹನಿಯರು ಧನಸಹಾಯಮಾಡಿದರು. ಇವರ ಪೈಕಿ ಶ್ರೀಮೋತೀಖಾನ ಸೂರಣ್ಣನವರೂ ಶ್ರೀದಾವಣಗೆರೆ ತವನಪ್ಪನವರ ಬ್ರಹ್ಮಪ್ಪನವರೂ ಮೂರು ವರ್ಷಗಳ ಹಿಂದೆಯೇ ಲೈಫ್ ಮೆಂಬರುಗಳಾಗಿ 500 ರೂಪಾಯಿಗಳನ್ನು ಕೊಟ್ಟಿದ್ದು ಈಗ ಪುನಹಾ 500 ರೂಪಾಯಿಗಳನ್ನು ಕೊಟ್ಟು ಪೋಷಕರಾದರೆಂಬ ವಿಷಯವು ಅತ್ಯಂತ ಶ್ಲಾಘನೀಯವಾಗಿದೆ. ಶ್ರೀಮರಳೂರು ಪಾ. ಬ್ರಹ್ಮಪ್ಪನವರು ಲೈಫ್ ಮೆಂಬರಾಗಲು 500 ರೂಪಾಯಿಗಳನ್ನು ಕೊಡುವಂತೆ ವಾಗ್ದಾನಮಾಡಿದರು. ಇನ್ನೂ ಅನೇಕ ಜೈನ ಸಮಾಜದವರೂ ಜೈನೇತರ ಮಹಾಶಯರುಗಳೂ ಉದಾರ ಮನಸ್ಸಿನಿಂದ ಸಹಾಯಮಾಡಲು ವಸೂಲಾದ ಒಟ್ಟು ಮೊಬಲಗು ಸುಮಾರು ನಾಲ್ಕು ಸಾವಿರ ರೂಪಾಯಿಗಳಾದವು.

ನಂತರ ಸಮಾಜೋನ್ನತಿಯ ವಿಷಯವಾಗಿ ಅನೇಕ ವಿಷಯಗಳು ಚರ್ಚಿಸಲ್ಪಟ್ಟವು. ಈ ವರ್ಷದ ವಿದ್ಯಾರ್ಥಿವೇತನಕ್ಕಾಗಿ ಎಂಟು ನೂರು ರೂಪಾಯಿಗಳು ಮಂಜೂರು ಮಾಡಲ್ಪಟ್ಟವು. ಪ್ರಸಕ್ತವರ್ಷದ ಕಾರ್ಯನಿರ್ವಾಹಕರನ್ನು ಚುನಾಯಿಸಿದ ಮೇಲೆ ಸಭಿಕರಿಗೆಲ್ಲಾ ಹಾರ ತುರಾಯಿಗಳು ಹಂಚಲ್ಪಟ್ಟು ಶ್ರೀಮನ್ ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ರಾಜಕುಟುಂಬಕ್ಕೂ ಆಯುರಾರೋಗ್ಯಾದಿಗಳನ್ನು ಭಗವಂತನು ಸದಾ ಕೊಡಲೆಂದು ಪ್ರಾರ್ಥಿಸಿ ಜಯಘೋಷದೊಡನೆಯೂ ಬ್ಯಾಂಡಿನ ಸಲಾಂ ಬಾಜಾದಿಂದಲೂ ಸಭಾ ಕಾರ್ಯವು ಮಧ್ಯಾಹ್ನ ಒಂದು ಘಂಟೆಗೆ ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

(ದಸರಾ ಅಧಿವೇಶನ)

2ನೆಯ ಅಕ್ಟೋಬರ್ 1922

ಒಂದನೆಯ ಭಾಗ.

(ಕಳೆದವಾರದ ಶೇಷ.)

ರೈಲ್ವೆ ಸೆಸ್ಸು:—ಈ ಸಂದರ್ಭದಲ್ಲಿ ರೈಲ್ವೆ ಸೆಸ್ಸಿಗೆ ಸಂಬಂಧಪಟ್ಟ ಕೆಲವು ತಪಶೀಲುಗಳನ್ನು ತಿಳಿಸಿದರೆ ಉಪಯೋಗವಾಗಬಹುದು. ರೈಲ್ವೆ ಸೆಸ್ಸಿನ ರಾಸರಿ ಸಾಲಿಯಾನಾ ವಸೂಲಿಯು ಸುಮಾರು 2¾ ಲಕ್ಷ ರೂಪಾಯಿ ಯಾಗುವುದು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ವಿನ ಯಾವ ಡಿಸ್ಟ್ರಿಕ್ಟಿನಲ್ಲಿಯೂ ರೈಲ್ವೆ ಸೆಸ್ಸಿನ ಹಣದಿಂದ ಯಾವ ಖರ್ಚನ್ನೂ ಮಾಡಿರುವುದಿಲ್ಲ. ರೈಲ್ವೆಗಳನ್ನಿಟ್ಟುಕೊಂಡಿರುವ ಬೋರ್ಡು, ಕೋಲಾರ ಡಿಸ್ಟ್ರಿಕ್ಟ್ ಬೋರ್ಡು ಒಂದು ಮಾತ್ರವೇ ಆಗಿದೆ. ಈ ಬೋರ್ಡಿನಲ್ಲಿ ರೈಲ್ವೆ ಸೆಸ್ಸಿನಿಂದ ವಸೂಲಾಗುವ ಹಣವನ್ನು ಕೋಲಾರಡಿಸ್ಟ್ರಿಕ್ಟ್ ಬೋರ್ಡು ರೈಲ್ವೆಯ ಬಂಡವಾಳದ ಖರ್ಚಿಗೆ ಅದರ ಭಾಗವಾಗಿ ಕೊಡಬೇಕಾದುದಕ್ಕೆ ಉಪಯೋಗಿಸುತ್ತಲಿದೆ. ಇದುವರೆಗೆ ಒಟ್ಟು ವಸೂಲಾಗಿರುವ 11,95,000 ರೂಪಾಯಿ ರೈಲ್ವೆ ಸೆಸ್ಸಿನ ಪೈಕಿ ಒಂದು ಭಾಗವನ್ನು ಸೇವಿಂಗ್ಸ್ ಬ್ಯಾಂಕುಗಳಲ್ಲಿ ಬಡ್ಡಿಗೆ ಹಾಕಿದೆ; ಉಳಿದುದು ಡಿಸ್ಟ್ರಿಕ್ಟ್ ಬೋರ್ಡಿನ ಹೆಸರಿನಲ್ಲಿ ಖಜಾನೆಯ ಶಿಲ್ಕಿನಲ್ಲಿದೆ. ಹಾಸನ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ರೈಲ್ವೆ ಸೆಸ್ಸನ್ನು ವಸೂಲು ಮಾಡುವುದಿಲ್ಲ. ಚಿತ್ರದುರ್ಗ ಡಿಸ್ಟ್ರಿಕ್ಟಿನ ಹೆಸರಿನಲ್ಲಿ 3,08,652 ರೂಪಾಯಿಯೂ, ಕಡೂರಿಗೆ 2,30,000 ರೂಪಾಯಿಯೂ, ತುಂಕೂರಿಗೆ 2,25,869 ರೂಪಾಯಿಯೂ, ಮೈಸೂರಿಗೆ 2,63,617 ರೂಪಾಯಿಯೂ, ಮತ್ತು ಶಿವಮೊಗ್ಗೆಗೆ 1,69,662 ರೂಪಾಯಿಯೂ ಜಮೆ ಆಗಿದೆ.

ರೈಲ್ವೆಸೆಸ್ಸನ್ನು ವಸೂಲು ಮಾಡುತ್ತಿದ್ದಾಗ್ಯೂ, ರೈಲ್ವೆಸೌಕರ್ಯಗಳನ್ನು ಕಲ್ಪಿಸುವುದರ ಮೂಲಕ ಜನಗಳಿಗೆ ಯಾವ ಅನುಕೂಲತೆಯೂ ಉಂಟಾಗಿರುವುದಿಲ್ಲವೆಂದು ಈಚೆಗೆ ನಾವು ಸಂಚಾರ ಹೋಗಿದ್ದ ಕಾಲದಲ್ಲಿ ಜನಗಳು ಅಸಮಾಧಾನವನ್ನು ತೋರ್ಪಡಿಸಿರುತ್ತಾರೆ. ಈ ಫಿರ್ಯಾದು ಸಕಾರಣವಾದದ್ದೆಂತ ನಮಗೆ ತಿಳಿಯುವುದು. ಏಕೆಂದರೆ, ಹಾಸನಡಿಸ್ಟ್ರಿಕ್ಟಿನಲ್ಲಿ ಸ್ಟೇಟ್ ರೈಲ್ವೆಯನ್ನು ಹಾಕಿರುವುದು ಕೆಲವು ವರ್ಷಗಳಿಂದೀಚೆಗೆ ಮಾತ್ರವೇ ಆಗಿದ್ದಾಗ್ಯೂ ಆ ಡಿಸ್ಟ್ರಿಕ್ಟಿನವರು ರೈಲ್ವೆಸೆಸ್ಸನ್ನು ಕೊಡದೆ ಇರುವಾಗ ತುಂಕೂರು ಡಿಸ್ಟ್ರಿಕ್ಟಿನವರು ರೈಲ್ವೆಸೆಸ್ಸನ್ನು ಕೊಡುವುದಕ್ಕೆ ಕಾರಣವಿಲ್ಲ. ಆದ್ದರಿಂದ ಈ ಮೊದಲೇ ವಸೂಲು ಮಾಡಿರುವ ರೈಲ್ವೆಸೆಸ್ಸನ್ನು ಯಾವ ರೀತಿ ಉಪಯೋಗಿಸಬೇಕೆಂಬ ವಿಷಯದಲ್ಲಿಯೂ ಮತ್ತು ಕನಿಷ್ಠ ಪಕ್ಷ ಮುಂದಿನ ಕೆಲವು ವರ್ಷಗಳವರೆಗಾದರೂ ಯಾವ ಕಾಂಗಾರಿಯನ್ನಾಗಲೀ ಏರ್ಪಾಡನ್ನಾಗಲೀ ಮಾಡುವಂತೆ ತಿಳಿಸದಿದ್ದರೆ, ಸದರಿ ಸೆಸ್ಸನ್ನು ವಜಾಮಾಡಬೇಕೇ ಅಥವಾ ಕೆಲವು ಕಾಲದವರೆಗೆ ವಸೂಲುಮಾಡದೆ ನಿಲ್ಲಿಸಬೇಕೇ ಎಂಬುದನ್ನು ತಿಳಿಸುವ ಬಗ್ಗೆ ಡಿಸ್ಟ್ರಿಕ್ಟುಬೋರ್ಡುಗಳೊಡನೆ ಪರ್ಯಾಲೋಚಿಸುವುದು ಅವಶ್ಯಕವೆಂದು ತೋರುತ್ತದೆ. ಈಗ ವಸೂಲು ಮಾಡುತ್ತಿರುವ ರೈಲ್ವೆಸೆಸ್ಸನ್ನು ಸಂಸ್ಥಾನದ ಹುಟ್ಟುವಳಿಗೆ ಜಮೆ ಕಟ್ಟದೆ ರೈಲ್ವೆ ಫೀಡರ್ ಲೈನುಗಳಿಗಾಗಿ ಪ್ರತ್ಯೇಕವಾಗಿ ತೆಗೆದಿಡುತ್ತಲಿದೆ.

ಪೋಸ್ಟ್ ಮತ್ತು ಟೆಲಿಗ್ರಾಫ್ ಸೌಕರ್ಯಗಳು.

ಸಂಸ್ಥಾನದಲ್ಲಿ ಹಾಲಿ ಇರುವ ಪೋಸ್ಟ್ ಮತ್ತು ಟೆಲಿಗ್ರಾಫ್ ಸೌಕರ್ಯಗಳನ್ನು ಉತ್ತಮಸ್ಥಿತಿಗೆ ತರಬೇಕೆಂದು ಈ ಸಭೆಯ ಮೆಂಬರುಗಳೂ ಇತರರೂ ಎಡೆಬಿಡದೆ ಕೇಳಿಕೊಳ್ಳುತ್ತಿದ್ದಾರೆ. ಸರ್ಕಾರದವರು ಈ ವಿಷಯಕ್ಕೆ ವಿಶೇಷವಾದ ಗಮನವನ್ನು ಕೊಡುತ್ತಿದ್ದಾರೆ.

ಮೈಸೂರು ಅಂಚೆಯನ್ನು ಬ್ರಿಟಿಷ್ ಪೋಸ್ಟಲ್ ಏರ್ಪಾಟಿನೊಡನೆ ಸೇರಿಸುವುದಕ್ಕೆ ಮೊದಲು ಸಂಸ್ಥಾನದಲ್ಲಿ 417 ಪೋಸ್ಟಾಫೀಸುಗಳಿದ್ದುವು. ಈಗ 503 ಆಫೀಸುಗಳಿವೆ; ಇವುಗಳ ಪೈಕಿ 64 ಆಫೀಸುಗಳಲ್ಲಿ ಪೋಸ್ಟು ಮತ್ತು ಟೆಲಿಗ್ರಾಫ್ ಬಾಬುಗಳೆರಡೂ ಸೇರಿವೆ. ರಾಜ್ಯಾಡಳಿತದ ಮತ್ತು ಜನರ ಆವಶ್ಯಕತೆಗಳಿಗೆ ಈ ಹೆಚ್ಚುಗೆಯು ಸಾಲದು; ಮತ್ತು ಇದು ಇಂಡಿಯಾದೇಶದ ಇತರ ಭಾಗಗಳಲ್ಲಿ ಆಗಿರುವ ಅಭಿವೃದ್ಧಿಗೆ ಸರಿದೂಗುವುದಿಲ್ಲ. 1919ರಲ್ಲಿ ನಾವು ಸಿಂಲಾ ನಗರಕ್ಕೆ ಡೆಪ್ಯುಟೇಷನ್ ಮೇಲೆ ಹೋಗಿದ್ದಾಗ ಈ ವಿಷಯವನ್ನು ಪರ್ಯಾಲೋಚನೆ ಬಗ್ಗೆ ಇಡಲಾಯಿತು. ಆಗ ಮಾಡಿದ ಅರಿಕೆಗಳ ಫಲರೂಪವಾಗಿಯೂ, ಈಚೆಗೆ ಶ್ರೀಮನ್ಮಹಾರಾಜರವರ ಸರ್ಕಾರದವರಿಗೂ ಬ್ರಿಟಿಷ್ ಪೋಸ್ಟಲ್ ಮತ್ತು ಟೆಲಿಗ್ರಾಫ್ ಅಧಿಕಾರಿಗಳಿಗೂ ಪತ್ರವ್ಯವಹಾರ ನಡೆದುದರ ಫಲರೂಪವಾಗಿಯೂ ಈಗ ಆ ವಿಷಯವು ಒಂದು ತೀರ್ಮಾನಕ್ಕೆ ಬಂದಿದೆ. ಸದರಿ ತೀರ್ಮಾನದ ರೀತ್ಯಾ, ಪೋಸ್ಟಲ್ ಮತ್ತು ಟೆಲಿಗ್ರಾಫ್ ಅಧಿಕಾರಿಗಳು ಸರ್ಕಾರದವರಿಂದ ಚುನಾಯಿಸಲ್ಪಡುವ ಸ್ಥಳಗಳಲ್ಲಿ ಪರೀಕ್ಷಾರ್ಥವಾಗಿ ಹೊಸ ಆಫೀಸುಗಳನ್ನು ಏರ್ಪಡಿಸಲು ಒಪ್ಪಿಕೊಂಡಿದ್ದಾರೆ. ಈ ಪರಿಕ್ಷಾರ್ಥವಾದ ಆಫೀಸುಗಳನ್ನು ಪ್ರಥಮತಃ ಒಂದು ವರ್ಷದವರೆಗೆ ಏರ್ಪಡಿಸಲಾಗುವುದು. ಅವುಗಳನ್ನು ಖಾಯಂ ಮಾಡುವ ಮತ್ತು ಈ ಪರೀಕ್ಷಾರ್ಥವಾದ ಏರ್ಪಾಡನ್ನು ಹೆಚ್ಚಿಸುವ ಅಥವಾ ಅವುಗಳಿಂದ ಪ್ರತಿ ಫಲ ದೊರೆಯದಿರುವ ಕಾರಣದ ಮೇಲೆ ಅವುಗಳನ್ನು ಮುಚ್ಚಿಬಿಡುವ ವಿಷಯವನ್ನು ವರ್ಷದ ಅಖೈರಿನಲ್ಲಿ ಪರ್ಯಾಲೋಚಿಸಲಾಗುವುದು. ಹಿಂದೆಯೇ ಸ್ಥಾಪಿಸಲ್ಪಟ್ಟು ಪ್ರತಿಫಲವನ್ನು ಕೊಡುತ್ತಿರುವ ಹೊಸ ಆಫೀಸುಗಳ ವಿಷಯದಲ್ಲಿ, ಸಿಬ್ಬಂದಿ ಖರ್ಚಿನ ಪೈಕಿ ಶೇಕಡ 50 ರಷ್ಟು ಅಥವಾ ಅದಕ್ಕೆ ಹೆಚ್ಚಾಗಿ ಅವುಗಳ ವರಮಾನದಿಂದ ಒದಗುವ ಸಂದರ್ಭದಲ್ಲಿ, ಅವುಗಳ ಪೈಕಿ ಸರ್ಕಾರದವರು ಇಷ್ಟಪಡುವಂತಹವುಗಳನ್ನು ಖಾಯಮ್ಮಾಗಿ ನಡೆದುಕೊಂಡು ಬರುವಂತೆ ಮಾಡಲು ಪೋಸ್ಟಲ್ ಅಧಿಕಾರಿಗಳು ಒಪ್ಪಿಕೊಂಡಿದಾರೆ. ಟೆಲಿಗ್ರಾಫಿನ ಸೌಕರ್ಯಗಳ ವಿಷಯದಲ್ಲಿ, ಸರ್ಕಾರದವರಿಗೂ ಟೆಲಿಗ್ರಾಫ್ ಡೈರೆಕ್ಟರ್ ಜನರಲ್‌ರವರಿಗೂ ಪತ್ರವ್ಯವಹಾರ ನಡೆದು ಪರಸ್ಪರ ಒಪ್ಪಂದವಾದ ರೀತ್ಯಾ, ಸದರಿ ಆಫೀಸರರು, ಯಾವ ಭರವಸೆಯನ್ನೂ ಬಯಸದೆ, ಈ ಕೆಳಗೆ ಕಂಡ ಸ್ಥಳಗಳಲ್ಲಿ ಟೆಲಿಗ್ರಾಫ್ ಆಫೀಸುಗಳನ್ನು ಅವುಗಳ ಪ್ರಾಮುಖ್ಯತೆಯ ಕ್ರಮದಲ್ಲಿ ಕೂಡಲೇ ಸ್ಥಾಪಿಸಲು ಕೈಗೊಂಡಿದ್ದಾರೆ:—

ಹೊಳೆನರಸೀಪುರ	ಜಗಲೂರು
ಕಡೂರು	ಚಿಕ್ಕನಾಯಕನಹಳ್ಳಿ
ಮಳವಳ್ಳಿ	ಚನ್ನಗಿರಿ
ಬೇಲೂರು	ಚಳ್ಳಕೆರೆ

ಟಿ. ನರಸೀಪುರ

ಅಲ್ಲದೆ, ಭರವಸೆ ಕೊಟ್ಟಿರುವ ಕ್ರಮವನ್ನುಸರಿಸಿ, ನೆಲಮಂಗಲ, ಚೆನ್ನರಾಯಪಟ್ಟಣ, ಹೊಳೆನರಸೀಪುರ, ಆಯನೂರು, ಸಿಕಾರಿಪುರ, ಶಿರಾಳಕೊಪ್ಪ ಮತ್ತು ಸೊರಬದಲ್ಲಿರುವ ಪೋಸ್ಟಾಫೀಸುಗಳಿಗೂ ಬೆಂಗಳೂರಿಗೂ ಸಂಬಂಧವನ್ನು ಕಲ್ಪಿಸುವುದಕ್ಕಾಗಿ ಸಂಸ್ಥಾನದಲ್ಲಿ ಅವರಿಸಿರುವ ಹೊಸ ಲೈನುಗಳನ್ನು ಹಾಕಲು ಡೈರೆಕ್ಟರ್ ಜನರಲ್‌ರವರು ಒಪ್ಪಿಕೊಂಡಿದ್ದಾರೆ. ರಾಜ್ಯಾಡಳಿತದ ಕಾರ್ಯಗಳಿಗಾಗಿ ಎಲ್ಲ ತಾಲ್ಲೂಕು ಕಸಬೆಗಳಿಗೂ ಟೆಲಿಗ್ರಾಫ್ ಸಂಬಂಧವನ್ನು ಕಲ್ಪಿಸಬೇಕೆಂಬ ವಿಷಯದಲ್ಲಿ ಸರ್ಕಾರದವರು ಆಸಕ್ತರಾಗಿದ್ದಾರೆ.

ಕುಡಿಯುವ ನೀರಿನ ಏರ್ಪಾಡುಗಳು.

ಹದಿನೆಂಟು ಟವನುಗಳಿಗೆ ಕುಡಿಯುವ ನೀರನ್ನು ಸರಬರಾಯಿ ಮಾಡುವ ಏರ್ಪಾಡಿನ ಬಗ್ಗೆ, ಒಟ್ಟು 18,76,287 ರೂಪಾಯಿಯ ಖರ್ಚಿನಲ್ಲಿ ಪ್ರಾಜೆಕ್ಟುಗಳು ತಯಾರಾಗಿವೆ. ನಾಲ್ಕು ಮುಖ್ಯವಾದ ಏರ್ಪಾಡುಗಳು, ಅಂದರೆ ಭದ್ರಾವತಿ (ಹೊಸ ಊರು), ಚಿಂತಾಮಣಿ, ಮೊಳಕಾಲ್ಮೂರು ಮತ್ತು ಚಿಕ್ಕಮಗಳೂರು, ಇವುಗಳಿಗೆ ನೀರು ಸರಬರಾಯಿ ಮಾಡುವ ಏರ್ಪಾಡುಗಳ ಕಾಮಗಾರಿಗಳು ಕಾರ್ಯತಃ ನಡೆಯುತ್ತಿದ್ದುವು. ಇವುಗಳಿಗೆ ಒಟ್ಟು 4,61,314 ರೂಪಾಯಿ ಬೇಕಾಗುವುದೆಂದು ಅಂದಾಜಾಗಿದೆ. ಮತ್ತು ಜೂನ್ 30ನೆಯ ತಾರೀಖಿನ ಅಖೈರ್ ವರೆಗೆ ಸುಮಾರು 2½ ಲಕ್ಷ ರೂಪಾಯಿ ಖರ್ಚಾಯಿತು. ಕಳೆದ ಐದು ವರ್ಷಗಳಲ್ಲಿ ನೀರಿನ ಸರಬರಾಯಿಯ ಬಗ್ಗೆ ಒಟ್ಟು 3,58,932 ರೂಪಾಯಿಯ ಗ್ರಾಂಟನ್ನು ಕೊಡಲಾಯಿತು; ಆ ಪೈಕಿ 2,51,964 ರೂಪಾಯಿ ಖರ್ಚಾಗಿರುತ್ತದೆ. ಈಚೆಗೆ ನಾವು ಮಾಡಿದ ಸಂಚಾರದಲ್ಲಿ ಕೋಲಾರ ಮತ್ತು ಚಿತ್ರದುರ್ಗ ಟವನುಗಳಿಗೆ ಹಾಲಿ ನೀರು ಸರಬರಾಯಿ, ಮಾಡುತ್ತಿರುವ ಏರ್ಪಾಡುಗಳನ್ನು ಮೇಲ್ಪಡಿಸುವುದು ಅವಶ್ಯಕವೆಂಬ ಸಂಗತಿಯು ಚೆನ್ನಾಗಿ ನಮ್ಮ ಗಮನಕ್ಕೆ ತರಲ್ಪಟ್ಟಿತು. ದಿನೇದಿನೇ ಅಭಿವೃದ್ಧಿಗೆ ಬರುತ್ತಿರುವ ತುಮಕೂರು ಟವನಿಗೂ ಸಹ ನೀರು ಸರಬರಾಯಿ ಮಾಡುವ ನವೀನತರಹೆಯ ಏರ್ಪಾಡೊಂದನ್ನು ಜಾರಿಗೆ ತರುವುದು ಅತ್ಯವಶ್ಯಕವೆಂಬುದನ್ನು ಕುರಿತು ಬಹು ಚೆನ್ನಾಗಿ ನಮ್ಮ ಗಮನಕ್ಕೆ ತರಲಾಯಿತು. ಈ ವಿಷಯಗಳನ್ನು ಶೀಘ್ರದಲ್ಲಿಯೇ ಸರ್ಕಾರದವರು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದಿರುವರು; ಅಲ್ಲದೆ ಸಂಬಂಧಪಟ್ಟ ಮ್ಯುನಿಸಿಪಾಲಿಟಿಗಳಿಗೆ ತಮ್ಮ ಭಾಗದ ಕಂಟ್ರಿಬ್ಯೂಷನನ್ನು ಕೊಡುವ ಅಭಿಲಾಷೆಯಿರುವುದರಿಂದ, ಈ ಜರೂರಾದ ಪರಿಷ್ಕರಣಗಳನ್ನು ಉಪಕ್ರಮಿಸುವುದು ಸಾಧ್ಯವಾಗುವಂತೆ ಸರ್ಕಾರದ ಹಣದಿಂದ ಗ್ರಾಂಟುಗಳನ್ನು ಕೊಡುವ ಬಗ್ಗೆ ಅವಶ್ಯಕವಾದ ಪ್ರಯತ್ನಗಳನ್ನು ನಡಿಸಲಾಗುವುದು. ಬೆಂಗಳೂರು ಮತ್ತು ಮೈಸೂರು ಸಿಟಿಗಳ ನೀರು ಸರಬರಾಯಿಯ ಏರ್ಪಾಡುಗಳು ತಮ್ಮ ಖರ್ಚುಗಳನ್ನು ಸ್ವಂತವಾಗಿ ಹುಟ್ಟಿಸಿಕೊಳ್ಳುವ ಸ್ಥಿತಿಯಲ್ಲಿ ಸ್ವಲ್ಪಮಟ್ಟಿಗೂ ಇಲ್ಲದಿರುವುದರಿಂದ ಆಯಾ ಏರ್ಪಾಡುಗಳನ್ನು ನಡೆಸಿಕೊಂಡು ಬರುವುದಕ್ಕೆ ತಗಲುವ ಲಾಗೋಡನ್ನು ಇನ್ನು ಮುಂದೆ ಸಂಬಂಧಪಟ್ಟ ಮ್ಯುನಿಸಿಪಾಲಿಟಿಗಳೇ ವಹಿಸತಕ್ಕದ್ದೆಂದು ಪ್ರಸಕ್ತ ವರ್ಷದಲ್ಲಿ ಹುಕುಮುಗಳು ಸಾದರಾದವು. ಬೆಂಗಳೂರಿನ ವಿಚಾರದಲ್ಲಿ ಈ ಏರ್ಪಾಡಿನ ವಿಷಯದಲ್ಲಿ ಮುಂದೆ ನಡೆಯಬೇಕಾದ ಎಲ್ಲಾ ಮೇಲ್ಪಾಡುಗಳ ಮೂಲಧನದ ಖರ್ಚನ್ನೂ ಮ್ಯುನಿಸಿಪಲ್ ಕೌನ್ಸಿಲಿನ ಫಂಡುಗಳಿಂದಲೇ ಕೊಡತಕ್ಕದ್ದೆಂದೂ ಹುಕುಂ ಮಾಡಿರುತ್ತದೆ.

ಖರ್ಚನ್ನು ಕಡಿಮೆಮಾಡುವುದು.

ವರ್ಧಂತ್ಯುತ್ಸವದ ಅಧಿವೇಶನದಲ್ಲಿ ಈ ಸಭೆಗೆ ನನ್ನ ಭಾಷಣವನ್ನು ಒಪ್ಪಿಸಿದ ಕಾಲದಿಂದೀಚೆಗೆ, ಸ್ಪೆಷಲ್ ಫೈನಾನ್ಸ್ ಕಮಿಟಿಯವರು ತಮ್ಮ ಪರಿಶೀಲನೆಗಳನ್ನು ಪೂರೈಸಿ ಅಖೈರ್ ರಿಪೋರ್ಟನ್ನು ಒಪ್ಪಿಸಿದರು. ಇದನ್ನು ಆಗಲೇ ಎಲ್ಲರಿಗೂ ಕಳುಹಿಸಿರುತ್ತೇವೆ. ಸರ್ಕಾರದವರ ಈಗಣ ಹಣಕಾಸಿನ ಸ್ಥಿತಿಯ ವಿಷಯವಾಗಿ ಅವರು ಕೊಟ್ಟಿರುವ ಅತಿ ವಿಶದವಾದ ವಿವರಣೆಯನ್ನೂ ಸೂಚಿಸಿರುವ ನಿವಾರಣೋಪಾಯಗಳನ್ನೂ ತಾವು ಸ್ವಾರಸ್ಯದಿಂದ ಓದಿರಬಹುದೆಂದು ದೃಢವಾಗಿದೇವೆ. ಖರ್ಚನ್ನು ಕಡಿಮೆಮಾಡುವ ಭಾಗದಲ್ಲಿ ಕಮಿಟಿಯವರ ನಾನಾ ಶಿಫಾರಸುಗಳಲ್ಲಿ ಕಂಡಿರುವ ಪ್ರತಿಯೊಂದು ಸಲಹೆಯ ಮೇಲೂ ಸರ್ಕಾರದವರು ಮಾಡಿರುವ ಹುಕುಮುಗಳು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ, ಈ ಭಾಷಣದಲ್ಲಿ ಸದರಿ ವಿಷಯವನ್ನು ಕುರಿತು ಹೆಚ್ಚಾಗಿ ಹೇಳುವುದಿಲ್ಲ. 1920-21ನೆಯ ಸಾಲಿನಲ್ಲಿ ವಾಸ್ತವವಾಗಿ ತಗುಲುತ್ತಿದ್ದ ಖರ್ಚನ್ನು ಆಧಾರವಾಗಿ ಇಟ್ಟುಕೊಂಡು ಲೆಕ್ಕಾಚಾರ ಮಾಡಿದಲ್ಲಿ ಈಗಾಗಲೇ ನಾನಾ ಬಾಬುಗಳಲ್ಲಿ ತಗ್ಗಿಸಿರುವ ಅಥವಾ ತಗ್ಗಿಸತಕ್ಕದ್ದೆಂದು ಆಜ್ಞಾಪಿಸಿರುವ ಖರ್ಚು ಸುಮಾರು 50 ಲಕ್ಷ ರೂಪಾಯಿಯಾಗುವುದು. ಈ ಅಂಕೆಗಳನ್ನು ಹೇಗೆ ನಿರ್ಧರಿಸಿದೆ, ಸರ್ವಿಸ್ ಇಲಾಖೆಗಳ ಸಂಬಳಗಳೂ ಇತರ ಖರ್ಚುಗಳೂ 1917-18 ಮತ್ತು 1920-21ನೆಯ ವರ್ಷಗಳ ಅಖೈರಿನಲ್ಲಿ ಹೇಗಿದ್ದವು ಮತ್ತು 1922-23ನೆಯ ಸಾಲಿನ ಬಜೆಟ್ಟಿನಲ್ಲಿ ಅವುಗಳಿಗಾಗಿ ಎಷ್ಟು ಹಣವನ್ನು ಒದಗಿಸಿದೆ, ಎಂಬೀ ಅಂಕಗಳನ್ನೆಲ್ಲಾ ಕೆಳಗೆ ಕಂಡ ತಃಖ್ತೆಯಲ್ಲಿ ಕಾಣಿಸಿದೆ:—

ಖರ್ಚುಬಾಬುಗಳನ್ನು ಖೋತಾಮಾಡಿದ ತಃಖ್ತೆ.

ಬಾಬಿನ ಸಂಖ್ಯೆ	ವಿಷಯಗಳು	ಕಮಿಟಿಯವರು ಸೂಚನೆ ಮಾಡಿದ ಮಿಗಿತಗಳು	1921-22ನೆಯ ಬಡ್ಜೆಟ್ಟನಲ್ಲಿ ಜಾರಿಯಲ್ಲಿ ತಂದದ್ದು	1922-23ನೆಯ ಬಡ್ಜೆಟ್ಟನಲ್ಲಿ ಜಾರಿಯಲ್ಲಿ ತಂದದ್ದು	ಹುಕುಂ ಆಗಿ ಇನ್ನೂ ಜಾರಿಯಲ್ಲಿ ಬಾರದ್ದು	ಜುಮ್ಲಾ*
1	ಅದಾಲತ	70,000	13,000	52,200	....	65,000
2	ಶ್ರೀಮನ್ಮಹಾರಾಜರವರ ಸಿಬ್ಬಂದಿ ಮತ್ತು ಅರಮನೆ	45,000	....	....	....	....
3	ಡೆಪ್ಯುಟಿ ಕಮಿಷನರುಗಳ ದರ್ಜೆಯ ಮತ್ತು ದರ್ಜೆಗೆ ಮೇಲಿರುವ ಆಫೀಸರುಗಳ ಸಂಬಳಗಳ ಮಾರ್ಪಾಡು	71,000	....	23,400	27,000	50,400
6	ಸಂಪದಭ್ಯುದಯ ಸಮಾಜ	71,000	15,000	16,000	....	31,000
7	ಸಾರ್ವಜನಿಕ ಪರಿಷ್ಕರಣಗಳ ಬಗ್ಗೆ ಗ್ರ್ಯಾಂಟುಗಳು	3,83,000	66,000	—14,000	....	52,000
8	ಸ್ಯಾನಿಟರಿ ಕಮಿಷನರ ಮತ್ತು ಹೆಲ್ತ್ ಆಫೀಸರ ಹುದ್ದೆಯ ವಜಾವಣೆ	44,000	6,400	....	18,000	24,400
9	ಗ್ರಾಮಗಳ ಸೇವಿಂಗ್ಸ್ ಬ್ಯಾಂಕುಗಳು ಮತ್ತು ಕಲೆಕ್ಟಿಂಗ್ ಸೇವಿಂಗ್ಸ್ ಬ್ಯಾಂಕುಗಳು	7,000	....	....	5,500	5,500
11	ಮೆಡಿಕಲ್ ಇಲಾಖೆ (ಲೋಕಲ್ ಫಂಡು ಡಿಸ್ಪೆನ್ಸರಿಗಳು)	90,000	....	....	....	....
12	ಸೈಂಟಿಫಿಕ್ ಮತ್ತು ವಿವಿಧ ಬಾಬುಗಳು	24,000	....	12,100	6,400	18,500
13	ಮಿನಿಜಗಳ ಮೋಲ್ವಿಚಾರಣೆ	12,000	....	....	12,000	12,000
16	ಜಮೀನ್ದಾ ಕಂದಾಯ	32,000	3,100	12,000	29,700	44,800
17	ಫಾರೆಸ್ಟು ಇಲಾಖೆ	90,000	....	28,000	27,100	55,200
18	ಅಬ್ಕಾರಿ ಇಲಾಖೆ	32,000	....	....	19,600	19,600
19	ಲೇಖನಸಾಮಗ್ರಿ ಮತ್ತು ಅಚ್ಚುಕೆಲಸ	50,000	—1,57,000	1,31,000	....	—26,000
20	ಪೊಲೀಸು ಇಲಾಖೆ	1,22,000	—22,000	43,000	20,500	—44,500
21	ಕೈಗಾರಿಕೆಗಳು ಮತ್ತು ವಾಣಿಜ್ಯ	87,000	—7,000	73,000	....	66,000
22	ಪಬ್ಲಿಕ್ ವರ್ಕ್ಸ್ ಇಲಾಖೆ	10,00,000	—3,26,000	6,52,000	....	+3,26,000
23	ಮೆಡಿಕಲ್ ಇಲಾಖೆ	36,000	....	360	2,500	2,860
24	ಬಂದಿಖಾನೆಗಳು	10,000	....	....	4,000	4,000
26	ವಿದ್ಯಾಭ್ಯಾಸ	5,85,000	97,000	2,41,000	15,250	3,53,250
27	ಪರಸ್ಪರ ಸಹಾಯ ಸಂಘಗಳು	22,000	....	....	8,400	8,400
28	ಭೂಗರ್ಭಶಾಸ್ತ್ರ	25,000	....	....	33,800	33,800
29	ಅಮೃತಮಹಲ್ ಇಲಾಖೆ	22,000	....	....	10,000	10,000
30-31	ಸಿವಿಲ್ ಸೆಕ್ರಿಟೇರಿಯಟ್ ಮತ್ತು ಮುಜರಾಯಿ	73,000	3,800	25,700	24,000	53,500
32	ಕುಣಿಗಲ್ ಸ್ಟಡ್‌ಫಾರಂ	74,000	—22,300	31,900	....	9,600
33	ಮಿಲಿಟರಿ	1,62,000	50,700	19,500	....	70,200
34	ಸಂಚಾರಭತ್ಯ	1,00,000	....	78,000	22,000	1,00,000
35	ಡ್ಯೂಟಿ ಮತ್ತು ಇತರ ಭತ್ಯಗಳು	1,00,000	....	....	52,000	52,000
36	ಇಲಾಖಾ ಮೊಕ್ತೇಸರರನ್ನು ಒಟ್ಟುಗೂಡಿಸುವುದು	17,000	....	....	....	....
37	ಬಾರ್ ಕಾಲಾಳುಗಳನ್ನು ಕಮ್ಮಿ ಮಾಡುವುದು	1,00,000	....	....	....	....
38	ಜವಾನಿ ಸಿಬ್ಬಂದಿಯಲ್ಲಿ ಕಮ್ಮಿ ಮಾಡುವುದು	1,25,000	....	....	1,00,000	1,00,000
39	ಜ್ಯುಡಿಷಿಯಲ್ ಇಲಾಖೆ	5,000	....	....	....	....
40	ಕಂಟ್ರೋಲರ ಆಫೀಸು	15,000	....	....	10,100	10,100
41	ವ್ಯವಸಾಯ ರೇಷ್ಮೆವ್ಯವಸಾಯ ಮತ್ತು ಉಪವನಗಳ ಇಲಾಖೆಗಳು	25,000	....	....	10,750	10,750
	ಒಟ್ಟು ಜುಮ್ಲಾ	37,26,000	+2,55,300 —5,34,300	+13,96,260 —57,000	4,58,600	+15,89,360 —70,500

ಒಟ್ಟು ಕೂಡಿದ್ದು	21,10,160	1922-23ನೆಯ	2,55,300	5,34,300	
ಒಟ್ಟು ಕಳೆದದ್ದು	5,91,300	ಬಡ್ಜೆಟ್ಟನಲ್ಲಿ	13,96,260	57,000	= 10,60,260†
ಉಳಿದದ್ದು ಅಂದರೆ ತಹಲ್‌ವರೆಗೆ ಕಮಿಟಿಯವರ ಸಲಹೆಮೇಲೆ ಸರ್ಕಾರದವರು ಹುಕುಂ ಮಾಡಿದ ಒಟ್ಟು ಮಿಗಿತಗಳು	15,18,860	ನಮೂದಾದ ಮಿಗಿತಗಳು	16,51,560	5,91,300	

ಒಟ್ಟು ಸರ್ವಿಸ್ ಖರ್ಚು. — ಖರ್ಚುಬಾಬು ಖೋತಾ ಆದದ್ದು.

1920-21ನೆಯ ಸಾಲಿನ ಲೆಕ್ಕಾಚಾರ	322·36 ಲಕ್ಷ	(ಎ) 29·33 ಲಕ್ಷ
1921-22ನೆಯ ಸಾಲಿಗೆ ರಿವೈಜು ಆದದ್ದು	293·03 ಲಕ್ಷ	(ಬಿ) 16·31 ಲಕ್ಷ
1922-23ನೆಯ ಸಾಲಿನ ಬಡ್ಜೆಟ್ಟು	276·72 ಲಕ್ಷ	(ಸಿ) 4·58 ಲಕ್ಷ (ಮತ್ತಷ್ಟು ಖೋತಾ ಆಗಬೇಕೆಂದು ಈಚೆಗೆ ಹುಕುಂ ಆದುದರ ಒಟ್ಟು)
		ಜುಮ್ಲಾ 50·22 ಲಕ್ಷ

* ಈ ಕಲಮಿನ ಅಡಿ ಇರುವ ಸಂಖ್ಯೆಗಳಿಗೂ ಕಮಿಟಿಯವರ ಸಲಹೆಗಳ ಮೇಲೆ ಸರ್ಕಾರಿ ಹುಕುಮುಗಳಲ್ಲಿ ನಮೂದಾಗಿರುವ ಸಂಖ್ಯೆಗಳಿಗೂ ಕೆಲವು ಸಂದರ್ಭಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ; ಏಕೆಂದರೆ ತ್ವರೆಯಲ್ಲಿ ಜಾರಿಯಲ್ಲಿ ತರಬಹುದಾದ ಖರ್ಚು ಖೋತಾಗಳು ಮಾತ್ರ ಇಲ್ಲಿ ವಿಚಾರಕ್ಕೆ ತೆಗೆದುಕೊಂಡಿರುತ್ತದೆ.

† ಕಮಿಟಿಯವರು ತಮ್ಮ ಸಲಹೆಗಳನ್ನು ಕೊಡುವುದರಲ್ಲಿ ಸರ್ವಿಸು ಖರ್ಚಿನ ದರ್ಜೆಯನ್ನು 285·50 ಲಕ್ಷವೆಂದು ಭಾವಿಸಿದಾರೆ. (10ನೆ ಮತ್ತು 71ನೆ [ಇಂಗ್ಲಿಷ್] ಪುಟ ನೋಡಿ) 1921-22ನೆ ಬಡ್ಜೆಟ್ಟನಲ್ಲಿ ಸರ್ವಿಸು ಚಾರ್ಜುಗಳಿಗೆ ಗೊತ್ತುಮಾಡಿರುವ ಮೊಬಲಗಿನಿಂದಲೂ (280·80 ಲಕ್ಷ) ರಿವೈಜ್ ಆದ ಅಂದಾಜಿನಂತೆ ಸದರಿ ವರುಷದಲ್ಲಿನ ವಾಸ್ತವವಾದ ಖರ್ಚಿನಿಂದಲೂ (293·03) ವ್ಯತ್ಯಾಸವಾಗುತ್ತದೆ. ಕಮಿಟಿಯವರ ಸಲಹೆಯ ಮೇಲೆ ಖರ್ಚು ಖೋತಾ ಮಾಡಿದ್ದಕ್ಕಾಗಿ ‡ ಕಾಣಿಸಿರುವ ಒಟ್ಟು ಮೊಬಲಗು 1922-23ನೆ ಬಡ್ಜೆಟ್ಟಿನ ಸರ್ವಿಸು ಚಾರ್ಜಿನಲ್ಲಿ ನಿವ್ವಳ ಕಮ್ಮಿ ಮಾಡಿದ್ದನ್ನು ಅವುಗಳ ಕೆಳಗೆ ಹೆಚ್ಚು ಖರ್ಚಿಗೆ ಅವಕಾಶವನಾಡಿರುವುದರಿಂದ ಕಮಿಟಿಯವರು ಅವಲಂಬಿಸಿರುವ ದರ್ಜೆಯೊಡನೆ ಹೋಲಿಸಿದಲ್ಲಿ ವ್ಯತ್ಯಾಸವಾಗುತ್ತದೆ.

ಬಿಟ್ಟನೆ.—1920-21ನೆಯ ಸಾಲಿನಲ್ಲಿ ಸರ್ವಿಸು ಹೆಡ್ಡುಗಳ ಕೆಳಗೆ ತಗಲಿದ ವಾಸ್ತವವಾದ ಖರ್ಚಿಗಿಂತಲೂ ಚಾಲತಿ ಸಾಲಿಗಾಗಿ ಬಡ್ಜೆಟ್ಟನಲ್ಲಿ ಗೊತ್ತುಮಾಡಿರುವ ಒಟ್ಟು ಸರ್ವಿಸು ಖರ್ಚು 45·64 ಲಕ್ಷ ರೂಪಾಯಿ ಕಮ್ಮಿಯಾಗುತ್ತದೆ. ಬಡ್ಜೆಟ್ಟನ್ನು ನಿರ್ಧರಿಸಿದ ಈಚೆಗೆ ಮತ್ತಷ್ಟು ಖರ್ಚು ಖೋತಾ ಬಗ್ಗೆ ಹುಕುಂ ಮಾಡಿ 1920-21ನೆ ಖರ್ಚಿನೊಡನೆ ಹೋಲಿಸಿದಲ್ಲಿ ಈಗ ಖರ್ಚು ಖೋತಾಮಾಡಿದ್ದು ಒಟ್ಟನಲ್ಲಿ 50·22 ಲಕ್ಷ ರೂಪಾಯಿ ಆಗುತ್ತದೆ.

ಜನರ ಜೀವನಕ್ಕೆ ತಗಲುವ ಖರ್ಚು ಎಲ್ಲಾ ಭಾಗದಲ್ಲೂ ಏರುವುದಕ್ಕೆ ಯುದ್ಧದಿಂದಲೂ ಅದರ ಪರಿಣಾಮದಿಂದಲೂ ಬಹುಮಟ್ಟಿಗೆ ವ್ಯವಸ್ಥೆ ತಪ್ಪಿದ ಹಣಕಾಸಿನ ಸ್ಥಿತಿಗಳೇ ಕಾರಣವಾಗಿವೆ ಎಂಬಂಶವನ್ನು ನೆನಪಿನಲ್ಲಿಟ್ಟಿರಬೇಕು. ಇದರಿಂದ 1918-19ನೆ ಸಾಲಿನ ಪ್ರಾರಂಭದಲ್ಲಿ ಕೆಳಗಣ ದರ್ಜೆಯ ಸಿಬ್ಬಂದಿಗಳಿಗೆ ಸಹಾಯ ಮಾಡಬೇಕಾದ ಆವಶ್ಯಕತೆ ಉಂಟಾಯಿತು. ಮೊದಲು ಈ ಸಹಾಯವು, ಹಂಗಾಮಿಯಾದ ಹೆಚ್ಚು ಧಾರಣೆವಾಸಿ ಭತ್ಯದ ರೂಪವಾಗಿದ್ದು ಆ ವರುಷವಿದ್ದ 7 ಲಕ್ಷದಿಂದ 1920-21ನೇ ಸಾಲಿನಲ್ಲಿ 25 ಲಕ್ಷಕ್ಕೆ ಏರಿತು. ಈಚೆಗೆ ಇದನ್ನು ಕಮ್ಮಿ ಮಾಡಿ ಸಂಬಳದಲ್ಲೇ ಭತ್ಯವನ್ನು ಅಡಗಿಸಿ ಖಾಯಂ ಏರ್ಪಾಡನ್ನಾಗಿ ನಡೆಸಿಕೊಂಡು ಬರಬೇಕಾಯಿತು. ಹೆಚ್ಚು ಧಾರಣೆವಾಸಿ ಭತ್ಯಕ್ಕೆ ಬದಲಾಗಿ ಏರ್ಪಟ್ಟ ಹೆಚ್ಚು ಸಂಬಳದ ದರದಿಂದ ಸಾಲಿಯಾನ ಸುಮಾರು 20ಲಕ್ಷ ರೂಪಾಯಿನ ಆವರ್ತಖರ್ಚಿಗೆ ಅವಕಾಶವಾಗಿದೆ.

1920-21ನೆ ವರ್ಷದ ವಾಸ್ತವವಾದ ದರ್ಜೆಗೆ ಅನುಸಾರವಾಗಿ ಸಂಸ್ಥಾನದ ಒಟ್ಟು ಸರ್ವಿಸು ಖರ್ಚು ಹೆಚ್ಚು ಧಾರಣೆವಾಸಿ ಭತ್ಯದ 25 ಲಕ್ಷ ರೂಪಾಯಿಗಳನ್ನೊಳಕೊಂಡು 322·36 ಲಕ್ಷ ರೂಪಾಯಿ ಆಗುತ್ತದೆ. ಚಾಲತಿ ಸಾಲಿಗೆ ಬಡ್ಜೆಟ್ಟನಲ್ಲಿ ಗೊತ್ತುಮಾಡಿರುವ ಒಟ್ಟು ಸರ್ವಿಸ್ ಖರ್ಚು ಹೆಚ್ಚಾಗಿ ಕೊಟ್ಟ ಸಂಬಳದ 20 ಲಕ್ಷ ರೂಪಾಯಿಯನ್ನೊಳಕೊಂಡು 1920-21ನೆ ಸಾಲಿನ ವಾಸ್ತವವಾದ ಖರ್ಚಿಗಿಂತ 45·64 ಲಕ್ಷ ಕಮ್ಮಿಯಾಗುತ್ತದೆ. ಬಡ್ಜೆಟ್ಟನ್ನು ಗೊತ್ತುಮಾಡಿದ ಈಚೆಗೆ ಮತ್ತಷ್ಟು ಖರ್ಚು ಖೋತಾ ಬಗ್ಗೆ ಹುಕುಂ ಆಗಿರುವುದರಿಂದ 1921-22ನೆ ಖರ್ಚಿನೊಡನೆ ಹೋಲಿಸಿದಲ್ಲಿ ಖರ್ಚು ಖೋತಾ ಆದ ಮೊಬಲಗಿನ ಒಟ್ಟನಲ್ಲಿ 50·22 ಲಕ್ಷ ರೂಪಾಯಿ ಆಗುತ್ತದೆ. ಇದರಿಂದ 1920-21ನೆ ಸಾಲಿನ ದರ್ಜೆಯಲ್ಲಿ ಕಂಡಂತೆ ಸಂಸ್ಥಾನದ ಒಟ್ಟು ಸರ್ವಿಸ್ ಖರ್ಚಿನಲ್ಲಿ ಆರನೆಯ ಒಂದು ಭಾಗವು ಕಮ್ಮಿ ಬಿದ್ದದ್ದಾಗಿ ಕಾಣಬರುತ್ತದೆ.

ಈ ವಿಷಯವನ್ನು ಮುಕ್ತಾಯ ಮಾಡುವುದಕ್ಕೆ ಮೊದಲು ಈ ರೀತಿ ಖರ್ಚು ಖೋತಾ ಮಾಡಿದ್ದರಿಂದ ಉತ್ಪನ್ನವಾದ ಕೆಲವು ಮುಖ್ಯವಾದ ಅಂಶಗಳನ್ನು ನಿಮ್ಮ ಗಮನಕ್ಕೆ ತರಲು ಅಪೇಕ್ಷಿಸುತ್ತೇವೆ. ಈಚೆಗೆ ನಾವು ಮಾಡಿರುವಂತೆ ಅಡಳಿತದ ಯಂತ್ರವನ್ನು ಆಗಾಗ್ಗೆ ತಿರುವಿಹಾಕುವುದರಿಂದ ನಿಷ್ಪ್ರಯೋಜಕವಾದ ಭಾಗಗಳನ್ನು ತೆಗೆದುಹಾಕುವುದರಲ್ಲಿ ನಿಜವಾಗಿಯೂ ಸಹಾಯವೇನೋ ಆಗುತ್ತದೆ. ಈ ಉದ್ದೇಶದಿಂದ ಖರ್ಚು ಖೋತಾ ಮಾಡುವುದರಲ್ಲಿ ಮಾತ್ರ ಆಡಳಿತಕ್ಕೆ ಕಂಡಂತೆ ಫಾಯಿದೆಯಾಗುವುದು. ಈ ಮಹತ್ತರವಾದ (ಡೆಫಿಸಿಟ್) ನ್ಯೂನತೆಯನ್ನು ಕಮ್ಮಿ ಮಾಡುವುದರಲ್ಲಿ ನಾವು ಮತ್ತಷ್ಟು ಮುಂದೆ ಹೋಗಬೇಕಾದ ಜರೂರಾತಿ ಇರುವುದೆಂದು ನಾವು ಭಾವಿಸಿದ್ದೇವೆ ಮತ್ತು ಹೆಚ್ಚುಕಮ್ಮಿಯಾಗಿ ಎಲ್ಲಾ ಇಲಾಖೆಗಳಲ್ಲೂ ಮೇಲಣ ಮತ್ತು ಕೆಳಗಣ ಸಿಬ್ಬಂದಿಗಳನ್ನು ನಿತ್ಯಗಟ್ಟಲೆ ಕೆಲಸವನ್ನು ಮಾಡುವುದಕ್ಕೆ ಮಾತ್ರ ಬೇಕಾದ ಅತ್ಯಲ್ಪ ಸಂಖ್ಯೆಗೆ ಇಳಿಸಿರುತ್ತೇವೆ. ಇದರಿಂದ ಅನೇಕ ಉಪಯುಕ್ತವಾದ ಕಾರ್ಯಗಳನ್ನು ಬಹುಮಟ್ಟಿಗೆ ಕಮ್ಮಿ ಮಾಡಲಾಯಿತು. ಕೆಲವು ಇಲಾಖೆಗಳನ್ನು ಒಟ್ಟುಗೂಡಿಸುವುದೇ ಮೊದಲಾದ ಏರ್ಪಾಡುಗಳಿಂದ ರಚನೆಯಲ್ಲಿಯೂ ಸಹ ಬದಲಾಯಿಸಿರುತ್ತದೆ. ಎಗ್ಜಿಕ್ಯೂಟಿವ್ ಮತ್ತು ಗುಮಾಸ್ತೆ ದರ್ಜೆಯಲ್ಲಿ ಮೇಲಣ ನೌಕರಿಯಲ್ಲಿಯೂ ಇದ್ದ ಬಹು ಮಂದಿ ಜನರಿಗೆ ಸ್ಥಳವಿಲ್ಲವಾಗಿದೆ. ಪಿಂಚನ್ನಿಗೆ ವಯಸ್ಸಾಗದ ಖಾಯಂ ನೌಕರರನ್ನು ರಿಟೈರ್ ಮಾಡಿಸಬೇಕಾಗಿದೆ. ಅನೇಕ ವರುಷಗಳ ಕಾಲ ಹಂಗಾಮಿಯಾಗಿ ನೌಕರಿಯಲ್ಲಿರುವವರಿಗೆ ಪ್ರತಿಫಲ ಕಮ್ಮಿಯಾಗಿರುವುದಲ್ಲದೆ ಅವರ ದರ್ಜೆಯೂ ಹೋಗಿಬಿಟ್ಟಿದೆ ಮತ್ತು ಕೆಲವು ಟೆಕ್ನಿಕಲ್ ಇಲಾಖೆಗಳಲ್ಲಿ ಕ್ರಮೇಣ ಖಾಯಂ ಮಾಡುವ ಬಗ್ಗೆ ಅಜಮಾಯಿಷಿ ತರೀಕ್ ನೇಮಕ ಮಾಡಲ್ಪಟ್ಟ ತರುಣರೊಡನೆ ಬಹುಮಂದಿ ಹಂಗಾಮಿ ನೌಕರರು ಮತ್ತು ಬೇರೆ ಬೇರೆ ಜಾತಿಯ ಕೆಲಸಕ್ಕಾಗಿ ಶಿಕ್ಷಣವನ್ನು ಹೊಂದಿದವರು ಸಹ ತಮ್ಮ ಸ್ಥಳಗಳನ್ನೂ ವಾಗ್ದಾನ ಮಾಡಿದ್ದ ನೌಕರಿಗಳನ್ನೂ ಕಳೆದುಕೊಳ್ಳಬೇಕಾಗಿದೆ. ಇಂಜನಿಯರಿಗೂ ಮತ್ತು ಇತರ ಟೆಕ್ನಿಕಲ್ ಎಂದರೆ ಸಾಂಕೇತಿಕ ಇಲಾಖೆಗಳಲ್ಲಿ ಹೊಸಬರನ್ನು ಸೇರಿಸಿಕೊಳ್ಳುವುದನ್ನು ಮಿತಪಡಿಸಬೇಕಾಗಿದೆ; ಮತ್ತು ಆ ವಿಷಯದಲ್ಲಿ ಕೊಟ್ಟಿದ್ದ ಭರವಸೆಯನ್ನು ಕೊಂಚ ಕಾಲದವರೆಗೆ ತಪ್ಪಿಸಬೇಕಾಗಿದೆ. ರಾಜಾಡಳಿತದ ನಾನಾ ಇಲಾಖೆಗಳಲ್ಲಿ ಸರ್ಕಾರಿ ನೌಕರಿಯೆಂಬುದು ನಮ್ಮ ತರುಣರು ಬಹುಮಂದಿಗೆ ಅವರ ಜೀವನೋಪಾಯವನ್ನು ಸಂಪಾದಿಸುವುದಕ್ಕೆ ಮತ್ತು ಅಭಿವೃದ್ಧಿಗೆ ಬರುವುದಕ್ಕೆ ಅವಕಾಶವನ್ನು ಕೊಡುವುದಾಗಿರುತ್ತದೆ. ಆದರೆ ಎಲ್ಲಾ ಕಡೆಯಲ್ಲೂ ಸಿಬ್ಬಂದಿಯನ್ನು ಕಡಿಮೆಮಾಡುವುದರಿಂದಲೂ ಕೆಲವು ಕಡೆ ಕೆಲಸಕಾರ್ಯಗಳನ್ನು ನಿಲ್ಲಿಸಿರುವುದರಿಂದಲೂ ಈ ವಿಧವಾದ ಅವಕಾಶಗಳೆಲ್ಲ ಸ್ವಲ್ಪ ಕಾಲದ ವರೆಗೆ ತಪ್ಪಿಹೋಗಿ ನಮ್ಮ ಯೂನಿವರ್ಸಿಟಿಯ ಗ್ರ್ಯಾಡ್ಯುಯೇಟ್ ತರುಣರಿಗೆ ತಕ್ರಾರಿ ಇಂಜನಿಯರಿಂಗು, ವ್ಯಾಪಾರ ಮತ್ತು ಭೂಶೋಧನೆ ಮೊದಲಾದವುಗಳಲ್ಲಿರುವರಿಗೆ ತಮ್ಮ ದೇಶದ ಸೇವೆ ಮಾಡುವದಕ್ಕೆ ಅವಕಾಶವನ್ನು ಅದು ತಪ್ಪಿಸಿರುತ್ತದೆ. ನಮ್ಮ ಮನಸ್ಸಿಗೆ ಇದು ಈಗಿನ ಹಣಕಾಸಿನ ಸ್ಥಿತಿಯಿಂದ ಹುಟ್ಟಿದ ಕೇವಲ ವ್ಯಥಾಕಾರಿಯಾದ ಮತ್ತು ಅತೃಪ್ತಿಕರವಾದ ಸನ್ನಿವೇಶವೆಂದು ತೋರುತ್ತದೆ.

ಮೇಲೆ ನಮೂದಿಸಿದ ವ್ಯಕ್ತಿಗಳು ಸರ್ಕಾರಿ ನೌಕರಿಗೆ ಸೇರುವುದಕ್ಕೆ ತೊಂದರೆ ಒಂದುಕಡೆಯಿರಲಿಕ್ಕಾಗಿ, ಅನೇಕ ಉಪಯುಕ್ತಗಳಾದ ಕೆಲಸಗಳಿಗಾಗಿಯೂ ಅಭಿವೃದ್ಧಿ ಕಾರ್ಯಗಳಿಗಾಗಿಯೂ ಹಂಚಿಕೊಟ್ಟಿದ್ದ ಮೊತ್ತಗಳನ್ನು ಕಡಿಮೆ ಮಾಡಿರುವುದರಿಂದ ಜನರ ಕ್ಷೇಮವು ಸಾಕ್ಷಾತ್ತಾಗಿ ವಿಕಾರವನ್ನು ಹೊಂದಿರುವುದು. ವರಮಾನಕ್ಕಿಂತಲೂ ಬಹಳವಾಗಿ ಹೆಚ್ಚಿರುವ ಖರ್ಚನ್ನು ತಗ್ಗಿಸುವ ಉದ್ದೇಶದಿಂದ ಮಲೆನಾಡು ಅಭಿವೃದ್ಧಿಗಾಗಿ ಗ್ರಾಮಾಭಿವೃದ್ಧಿ ಕಾರ್ಯಗಳು ಗ್ರಾಮಾಂತರ ಮತ್ತು ನಗರಗಳ ಶೀನೀರು ಸರಬರಾಯಿ, ಚಿಲ್ಲರೆ ಜನೋಪಯೋಗದ ಅಭಿವೃದ್ಧಿ ಕಾರ್ಯಗಳು ಮತ್ತು ವೈದ್ಯ ಸಹಾಯ, ಇವುಗಳನ್ನು ವಿಸ್ತಾರವಾಗಿ ಕೊಡುವುದಕ್ಕೂ ರಸ್ತೆಗಳ ಮತ್ತು ನೀರಾವರೀ ಕಾಂಗಾರಿಗಳ ಬಾಬುಗಳಲ್ಲೂ ಸಿವಿಲ್ ಕಟ್ಟಡಗಳ ಬಾಬಿನಲ್ಲೂ ಹೆಚ್ಚಿನ ಅಸಲ್ ಕಾಂಗಾರಿಗಳಿಗಾಗಿ ಹಂಚಿಕೆ ಹಣವನ್ನು ನಿರ್ದಾಕ್ಷಿಣ್ಯವಾಗಿ ಖೋತಾ ಮಾಡಬೇಕಾಯಿತು. ಇದು ಅತ್ಯಂತ ವಿಷಾದಕರವಾದ ಸ್ಥಿತಿಯೆಂಬುದೇನೋ ನಿಜ. ಅದನ್ನು ಬಹುಕಾಲ ಹಾಗೆ ಬಿಡುವುದಕ್ಕಾಗುವುದಿಲ್ಲ. ಆದಕಾರಣ ಪ್ರಜೆಗಳ ಜ್ಞಾನಾಭಿವೃದ್ಧಿ ಭಾಗ್ಯಾಭಿವೃದ್ಧಿಗೆ ಸಾಕ್ಷಾತ್ತಾಗಿ ಸಂಬಂಧಪಟ್ಟ ಇಲಾಖೆಗಳಿಗೆ ಬೇಕಾದಷ್ಟು ಹಣ ಒದಗಿಸಿಕೊಡುವುದು ಮತ್ತು ಸರ್ಕಾರದ ನೌಕರಿಯನ್ನು ಮರಳಿ ಕಾರ್ಯದಕ್ಷವಾದುದನ್ನಾಗಿ ಮತ್ತು ಸಂತುಷ್ಟಿಯುಕ್ತವಾದುದನ್ನಾಗಿ ಮಾಡುವುದು, ಈ ಉದ್ದೇಶಗಳಿಂದ ಕೂಡಿದಷ್ಟು ತ್ವರೆಯಲ್ಲಿ ನಮ್ಮ ಹುಟ್ಟುವಳಿ ಮಾರ್ಗಗಳನ್ನು ಹೆಚ್ಚಿಸುವುದು ಶ್ರೀಮನ್ಮಹಾರಾಜಾ ಸರ್ಕಾರದವರ ಪ್ರಯತ್ನವಾಗಿರುವುದು.

ಸರ್ಕಾರದವರ ಮೇಲೆ ದಾವೆ.

ಮೈಸೂರು ಸೀಮೆಯಲ್ಲಿ ಜಾರಿಯಲ್ಲಿರುವ ಸಿವಿಲ್ ಪ್ರೊಸಿಡ್ಯೂರು ಕೋಡಿನಲ್ಲಿ ಅಧಿಕಾರ ಪ್ರಯುಕ್ತ ನಡೆಸಲ್ಪಡುವ ಕೃತ್ಯಗಳಿಗಾಗಿ ಅಂಥ ಅಧಿಕಾರಿಗಳಮೇಲೆ ದಾವೆತರುವ ಹಕ್ಕನ್ನು ಕೊಟ್ಟಿದ್ದರೂ ಸರ್ಕಾರದವರ ಮೇಲೆ ದಾವೆತರುವ ಹಕ್ಕನ್ನು ಕೊಟ್ಟಿರುವುದಿಲ್ಲ. ಅಂಥಾ ಸಂದರ್ಭದಲ್ಲಿ ಸರ್ಕಾರದವರೇ ಸಾಮಾನ್ಯವಾಗಿ ಅಂಥಾ ಸಂದರ್ಭಗಳಲ್ಲಿ ಪ್ರತಿವಾದಿ ಸ್ಥಾನದಲ್ಲಿ ನಿಂತು ಅವರ ಮೇಲೆ ಡಿಕ್ರಿಯಾದುದಾದರೆ ಮೊಬಲಗನ್ನು ಕೊಟ್ಟುಬಿಡುತ್ತಾರೆ. ಆದರೆ ಈ ಪದ್ಧತಿಯನ್ನು ಜಾರಿಯಲ್ಲಿ ತರುವಾಗ ಹುದ್ದೇದಾರರ ಬದಲಾವಣೆ ಮೊದಲಾದ ಸಂದರ್ಭಗಳಿಂದ ಅನೇಕ ಅಡಚಣೆಗಳು ಬಂದೊದಗುತ್ತವೆ. ಲ್ಯಾಂಡ್‌ರೆವಿನ್ಯೂ ಕೋಡು, ಲಿಮಿಟೇಷನ್ ರೆಗ್ಯುಲೇಷನು ಮೊದಲಾದ ಹಲವು ರೆಗ್ಯುಲೇಷನುಗಳಲ್ಲಿ ಕೆಲವು ಸಂದರ್ಭಗಳಲ್ಲಿ ದಾವೆ ಹಕ್ಕು ನಿರ್ದೇಶಿಸಲ್ಪಟ್ಟಿರುತ್ತದೆ. ಆದರೆ ಅದು ಕಾರ್ಯಕಾರಿಯಾಗಿಲ್ಲದಿರುವುದಕ್ಕೆ ಅನುಸರಿಸಬೇಕಾದ ಸರಿಯಾದ ಕ್ರಮವೊಂದು ಗೊತ್ತಾಗದಿರುವುದೇ ಕಾರಣವಾಗಿರುತ್ತದೆ. ಭೂಸಂಪಾದನೆಯ ರೆಗ್ಯುಲೇಷನ್ನಿನಂತಹ ಇನ್ನೂ ಕೆಲವು ಬಾಬುಗಳಲ್ಲಿ ಈ ಹಕ್ಕನ್ನೂ ಚಲಾಯಿಸಬಹುದಾಗಿರುತ್ತದೆ. ಆದರೆ ಒಡಂಬಡಿಕೆಯನ್ನು ಅನುಸರಿಸಿ ಸರ್ಕಾರದವರು ಮಾಡಬಹುದಾದ ಎಲ್ಲಾ ಕೆಲಸಗಳ ವಿಷಯದಲ್ಲೂ ವ್ಯಾಪಾರಸಂಬಂಧವಾದ ಕೆಲಸಗಳ ಬಗ್ಗೆ ಒಪ್ಪಂದ ಮಾಡುವದರ ವಿಷಯದಲ್ಲೂ ವ್ಯಾಪಾರದ ಕೆಲಸಮಾಡುವುದರಲ್ಲೂ ಹಾಲಿ ಇರುವ ಪರಿಹಾರಗಳು ಸಾಕಾಗಿರುವುದಿಲ್ಲ. ಇತರ ಕೆಲವು ದೇಶಿಯ ಸಂಸ್ಥಾನಗಳಲ್ಲೂ ಬ್ರಿಟಿಷ್ ಇಂಡಿಯಾದಲ್ಲೂ ಜಾರಿಯಲ್ಲಿರುವ ನಿಬಂಧನೆಯ ತರಹೆಯಲ್ಲಿ ಸರ್ಕಾರದವರ ಮೇಲೆ ದಾವೆ ತರುವುದಕ್ಕೆ ಏರ್ಪಾಟು ಮಾಡಿ ಒಂದು ಕಾನೂನನ್ನು ವಿಧಿಸಬೇಕಾದದ್ದು ಅವಶ್ಯಕವಾಗಿರುವುದೆಂದು ಆಗಿಂದಾಗ್ಗೆ ಅಂಕೆಗಳು ಬಂದಿರುತ್ತವೆ. ನ್ಯಾಯ ವಿಧಾಯಕ ಸಭೆಯ ಮುಂದೆ ಒಂದು ಮಸೂದಾ ಕಾನೂನನ್ನು ಕ್ಷಿಪ್ರದಲ್ಲಿಯೇ ಇರಿಸಲಾಗುವುದೆಂದು ಕಳೆದ ವರ್ಷತ್ಯುತ್ಸವದ ಅಧಿವೇಶನದ 37 ನೆಯ ವಿಷಯಕ್ಕೆ ಸರ್ಕಾರದವರು ಕೊಟ್ಟ ಉತ್ತರದಲ್ಲಿತ್ತು. ಸರ್ಕಾರದವರು ಈಗ ಈ ವಿಷಯದಲ್ಲಿ ಕಾರ್ಯಭಾಗ ನಡೆಸಬೇಕೆಂದು ನಿಶ್ಚಯಿಸಿರುತ್ತಾರೆ. ಮತ್ತು ಯಾವ ಯಾವ ತರಹೆಯ ಸಂದರ್ಭಗಳಲ್ಲಿ ಆ ಹಕ್ಕನ್ನು ಕೊಡಲು ಸರ್ಕಾರದವರು ಸಿದ್ಧರಾಗಿರುತ್ತಾರೆಂಬುದನ್ನು ಸ್ಪಷ್ಟವಾಗಿಯೂ ನಿಷ್ಕೃಷ್ಟವಾಗಿಯೂ ನಿರ್ದೇಶಿಸಬೇಕೆಂದು ಉದ್ದೇಶಿಸಿದೆ ಆಬಗ್ಗೆ ಒಂದು ಮಸೂದಾ ಕಾನೂನನ್ನು ತಯಾರು ಮಾಡಿದೆ. ಅದರ ವಿಷಯದಲ್ಲಿ ಈ ಸಭೆಯವರಿಗಿರುವ ಒಟ್ಟಿನ ಅಭಿಪ್ರಾಯವನ್ನು ತಿಳಿಯುವ ಬಗ್ಗೆ ಅದು ಈ ಅಧಿವೇಶನದಲ್ಲಿ ತಮ್ಮಗಳಿಗೆ ಒಪ್ಪಿಸಲ್ಪಡುವುದು.

1908ನೆಯ ವರುಷದ ಮೈಸೂರು ವರ್ತಮಾನ ಪತ್ರಿಕೆಗಳ ರೆಗ್ಯುಲೇಷನ್.

ಈ ವರ್ಷದಲ್ಲಿ ಮೂರು ವೃತ್ತಾಂತ ಪತ್ರಿಕೆಗಳ ನಡೆತೆಯ ವಿಷಯದಲ್ಲಿ ಸರ್ಕಾರದವರು ವಿಚಾರಣೆ ಹುಕುಂ ಮಾಡಿ ನಡೆಸುವಂತೆ ರೆಗ್ಯುಲೇಷನಿನಸಾರವಾಗಿ ಅವರ ಮೇಲೆ ಏತಕ್ಕೆ ಕ್ರಮ ನಡೆಸಕೂಡದೆಂಬುದಕ್ಕೆ ಕಾರಣ ತೋರಿಸಬೇಕೆಂದು ಅವುಗಳ ಸಂಪಾದಕರಿಗೆ ನೋಟೀಸು ಕೊಟ್ಟರು. ಅವುಗಳ ಪೈಕಿ ಎರಡು ಪತ್ರಿಕೆಗಳ ವಿಷಯದಲ್ಲಿ ಮಾಜೀ ಚೀಫ್ ಜಡ್ಜಿಯವರಾದ ಸರ್ ವೆಸ್ಲಿ ಮಿಲ್ಲರ್‌ರವರ ರಿಪೋರ್ಟನ್ನು ಮನಸ್ಕರಿಸಿ ಈಗ ಹುಕುಂ ಸಾದರು ಮಾಡಿರುತ್ತಾರೆ.

ಮೈಸೂರು ವರ್ತಮಾನಪತ್ರಿಕೆಗಳ ರೆಗ್ಯುಲೇಷನನ್ನು ರದ್ದು ಮಾಡಬೇಕು ಅಥವಾ ಬದಲಾಯಿಸಬೇಕು ಎಂದು 1916ನೆಯ ಇಸವಿ ಲಾಗಾಯ್ತು ಈ ಸಭೆಯಲ್ಲಿ ಒತ್ತಿ ಪ್ರಾರ್ಥಿಸುತ್ತಲಿದಾರೆ. 1916ರಲ್ಲಿ ಈ ವಿಷಯವನ್ನು ಪುನಃ ಪರ್ಯಾಲೋಚಿಸುವುದಕ್ಕೆ ಇನ್ನೂ ಕಾಲವು ಪ್ರಾಪ್ತವಾಗಿಲ್ಲವೆಂದು ಸರ್ಕಾರದವರು ತಿಳಿಸಿ ಪ್ರಾಮಾಣೀಕನಾದ ಯಾವ ಎಡಿಟರಿಗೂ (ಸಂಪಾದಕ) ಯಾವದೊಂದು ಭಯಕ್ಕೂ ಕಾರಣವಿಲ್ಲವೆಂದು ಸಭೆಯವರಿಗೆ ಭರವಸೆಕೊಟ್ಟರು. 1917 ರಲ್ಲಿ ಸಂಸ್ಥಾನದಲ್ಲಿ ಹೆಚ್ಚಾಗಿ ವರ್ತಮಾನ ಪತ್ರಗಳು ಪ್ರಚುರವಾಗುವುದಕ್ಕಾಗಿ ಸರ್ಕಾರದವರಿಗೆ ಪ್ರೋತ್ಸಾಹವನ್ನು ಕೊಡುವ ಇಷ್ಟವಿದ್ದರೂ, ಯುದ್ಧವು ಮುಕ್ತಾಯವಾದ ಹೊರತು ಸದರಿ ರೆಗ್ಯುಲೇಷನನ್ನು ರದ್ದು ಮಾಡುವ ಅಂಶವನ್ನು ಪರ್ಯಾಲೋಚಿಸಲಾಗಲಾರದೆಂದು ಹೇಳಿದರು ಆದರೂ ಸರ್ಕಾರದವರು ರೆಗ್ಯುಲೇಷನಿನ ಪೀನಲ್ (ದಂಡನೆಯನ್ನು ವಿಧಿಸುವ) ನಿಯಮಗಳನ್ನು ಚೀಫ್‌ಕೋರ್ಟಿನ ಜಡ್ಜರೊಬ್ಬರು ಮೊದಲೇ ಜುಡಿಷಲ್ ತರಹೆಯ ವಿಚಾರಣೆಯನ್ನು ನಡಿಸಿದ ಹೊರತು ವಿಧಿಸಕೂಡದೆಂದು ಹುಕುಂ ಮಾಡಿದರು.

ಹೀಗಾದರೂ ಈ ವಿಷಯವು ಪದೇಪದೇ ಚರ್ಚೆಗೆ ಬರುತ್ತಲಿದೆ 1919 ರಲ್ಲಿ ರದ್ದು ಮಾಡುವ ವಿಷಯವನ್ನು ಪರ್ಯಾಲೋಚಿಸುವುದಾಗಿ ಸರ್ಕಾರದವರು ವಾಗ್ದಾನ ಮಾಡಿದರು. 1920 ರಲ್ಲಿ - ಈ ರೆಗ್ಯುಲೇಷನಿನ ಕಾಠಿಣ್ಯವನ್ನು "ಕಡಿಮೆಮಾಡುವ ಉದ್ದೇಶದಿಂದ ಅದರಲ್ಲಿ ಯಾವುದಾದರೂ ತಿದ್ದುಪಾಟುಗಳು ಅವಶ್ಯಕವಾಗಿದ್ದರೆ ಅಂಥಾ ತಿದ್ದುಪಾಟುಗಳನ್ನು ಮಾಡುವ ವಿಷಯವನ್ನು ಸರ್ಕಾರದವರು ಪರಿಶೀಲಿಸುವರು" ಎಂದು ಅವರು ಹೇಳಿದರು.

1921 ನೆ ದಸರಾ ಅಧಿವೇಶನದಲ್ಲಿ ಈ ಸಭೆಯವರಿಗೆ ದಿವಾನರವರು ಭಾಷಣಮಾಡಿದಾಗ ತಾವಾಗಿಯೇ ಈ ವಿಷಯವನ್ನು ಕುರಿತು "ಈ ರೆಗ್ಯುಲೇಷನಿನಲ್ಲಿ ವಿಧಿಸಿರುವ ಶಿಕ್ಷೆಗಳು ತಕ್ಸೀರಿನ ಸ್ವಭಾವಕ್ಕೆ ತಕ್ಕಂತೆ ಏರ್ಪಟ್ಟಿಲ್ಲವಾಗಿರುವುದರಿಂದಲೂ ಮತ್ತು ಬಹಳ ಕಠಿಣವಾಗಿರುವುದರಿಂದಲೂ ಧಾರಾಳವಾಗಿ ಸ್ವತಂತ್ರಾಭಿಪ್ರಾಯವನ್ನು ಸೂಚಿಸುವ ವರ್ತಮಾನಪತ್ರಿಕೆಗಳ ಏಳಿಗೆಗೆ ಅದು (ರೆಗ್ಯುಲೇಷನು) ಒಂದು ದೊಡ್ಡ ಅಡಚಣೆಯಾಗಿ ಪರಿಣಮಿಸಿದೆ ಎಂದು ನಂಬುವುದಕ್ಕೆ ಕಾರಣವಿದೆ. ಈ ಕಾನೂನನ್ನು ರದ್ದು ಮಾಡುವ ಅಥವಾ ತಿದ್ದುಪಡಿಮಾಡುವ ವಿಷಯವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ." ಎಂದು ತಿಳಿಸಿದರು. ಚರ್ಚೆ ನಡೆಸುವಾಗ ಸಭೆಯವರ ಅಭಿಪ್ರಾಯವು ತಿದ್ದುಪಡಿ ಮಾಡಬೇಕೆ ಹೊರತು ರದ್ದುಮಾಡಬೇಕೆಂದು ಇರಲಿಲ್ಲ. ದಿವಾನರು ಮೆಂಬರುಗಳ ಅಭಿಪ್ರಾಯದ ಸಾಮಾನ್ಯ ಭಾವನೆಯನ್ನು ಈ ರೀತಿಯಾಗಿ ತಮ್ಮ ಉಪಸಂಹಾರ ಭಾಷಣದಲ್ಲಿ ಸಂಕ್ಷೇಪವಾಗಿ ತಿಳಿಸಿದಾರೆ. "ಕಾನೂನಿನಿಂದ ರೆಗ್ಯುಲೇಷನಿನ ಕಠಿಣವಾದ ನಿಯಮಗಳನ್ನು ತೆಗೆದುಬಿಟ್ಟರೂ ವರ್ತಮಾನ ಪತ್ರಿಕೆಗಳ ವಿಷಯದಲ್ಲಿ ಸರ್ಕಾರದವರಿಗೆ ಸ್ವಲ್ಪಮಟ್ಟಿಗೆ ಹತೋಟಿ ಆವಶ್ಯಕವಾಗಿರಬೇಕೆಂಬುದು ಸಭೆಯವರ ಒಟ್ಟಿನ ಅಭಿಪ್ರಾಯವೆಂದು ನಾವು ತಿಳಿಯುತ್ತೇವೆ. .... ಈ ಸಭೆಯವರ ಸಲಹೆಗಳಿಗೆ ಸರಿಯಾದ ಗಮನ ಕೊಡಲಾಗುವುದು."

ಹಾಲಿ ಇರುವ ವರ್ತಮಾನ ಪತ್ರಿಕೆಗಳ ಕಾನೂನನ್ನು ವಜಾಮಾಡುವುದಕ್ಕಾಗಿಯೂ, ಈ ದೇಶದ ಜನಸಮುದಾಯದ ಅಭಿಪ್ರಾಯಕ್ಕೂ ಹೆಚ್ಚಾಗಿ ಹೊಂದಿಕೆಯಾಗಿರುವಂತೆ ಒಂದು ಹೊಸದಾದ ಮಸೂದಾ ಕಾನೂನನ್ನು ವಿಧಿಸುವುದಕ್ಕಾಗಿಯೂ ಕ್ರಮ ಜರಗಿಸುವಂತೆ ಉದ್ದೇಶಿಸಿರುವುದನ್ನು ಈಗತಿಳಿಯಪಡಿಸಲು ಹರ್ಷಪೂರ್ವಕರಾಗಿದ್ದೇವೆ. ಅಲ್ಲದೆ ಈ ತಿದ್ದುಪಡಿಯಾದ ಮಸೂದಾ ಕಾನೂನಿನ ವಿಷಯದಲ್ಲಿ ತಾವುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಬಗ್ಗೆ ಅದನ್ನು ಈ ಅಧಿವೇಶನದಲ್ಲಿ ತಮ್ಮಗಳ ಮುಂದಿಡಲಾಗುವುದು.

ಅದರ ಮುಖ್ಯ ಆಶಯವು ಏನಿರುವುದೆಂದರೆ:—(1) ಒಂದು ವೃತ್ತಾಂತ ಪತ್ರಿಕೆಯ ಸಂಪಾದನೆ, ಮುದ್ರಣ ಮತ್ತು ಪ್ರಕಟನಕ್ಕೆ ಸರ್ಕಾರದವರ ಅನುಮತಿಯನ್ನು ವಜಾಮಾಡುವುದು; (2) ಅಪರಾಧವೆಂದು ಭಾವಿಸಲ್ಪಡುವ ವಿಷಯಗಳ ಸ್ವರೂಪವನ್ನು ನಿಷ್ಕೃಷ್ಟವಾಗಿ ನಮೂದಿಸುವುದು; (3) ಜುಡಿಷಿಯಲ್ ವಿಚಾರಣೆ ಇಲ್ಲದೇ ಯಾವ ವೃತ್ತಾಂತ ಪತ್ರಿಕೆಯ ಮೇಲೂ ಯಾವ ಕ್ರಮವನ್ನೂ ನಡೆಸದಿರುವುದು; ಮತ್ತು (4) ಆ ರೀತಿ ವಿಚಾರಣಾಪೂರ್ವಕ ಕೊಡಲಾಗುವ ಹುಕುಮಿನ ಮೇಲೆ ಚೀಫ್ ಕೋರ್ಟಿಗೆ ಅಪೀಲಿಗೆ ಅವಕಾಶ ಕೊಡುವುದು.

ದಿವಾನರವರ ಸಂಚಾರದಲ್ಲಿ ಉಂಟಾದ ಅಭಿಪ್ರಾಯಗಳು.

ಮೈದಾನ ಡಿಸ್ಟ್ರಿಕ್ಟುಗಳಾದ ಕೋಲಾರ, ತುಮಕೂರು ಮತ್ತು ಚಿತ್ರದುರ್ಗದಲ್ಲಿ ಈಚೆಗೆ ನಾವು ಬಹುದೂರ ಸಂಚಾರ ಮಾಡಿದೆವು. ಮತ್ತು ಕಳೆದ ವರ್ಷದಲ್ಲಿ ಹಲವು ಇಲಾಖೆಗಳು ನಡೆಸಿರುವ ಕೆಲಸವನ್ನು ಪರಿಶೀಲಿಸುವಾಗ ಅಜಮಾಯಿಷಿಯಲ್ಲಿ ಉಂಟಾದ ಅನುಭವಗಳಲ್ಲಿ ಕೆಲವನ್ನು ನಿರ್ದೇಶಿಸಿದ್ದೇವೆ. ಕಳೆದ ಜೂನ್ ತಿಂಗಳಲ್ಲಿ, ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಬಡ್ಜೆಟ್ಟಿನ ಮೇಲಣ ಚರ್ಚೆಯನ್ನು ಮುಕ್ತಾಯ ಮಾಡುವಾಗ ರಾಜ್ಯಾಡಳಿತದ ಮುಂದಣ ಕೆಲಸದ ವಿಷಯದಲ್ಲಿ ಅತ್ಯಂತ ಜರೂರಾದುವುಗಳೆಂದು ಹನ್ನೆರಡು ಮುಖ್ಯ ವಿಷಯಗಳನ್ನು ವಿವರಿಸಿದ್ದೇವೆ. ಈ ವಿಷಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕಾರ್ಯಕಾರಿಯಾಗಿಯೂ, ತ್ವರೆಯಾಗಿಯೂ ತಕ್ಕರೀತಿಯಲ್ಲಿ ಬಗೆಹರಿಸಲನುಕೂಲಿಸುವಂತೆ ಮಾಡಿಕೊಳ್ಳುವುದಕ್ಕಾಗಿ ವಿವಿಧ ಇಲಾಖೆಗಳಲ್ಲಿನ ಕೆಲಸದ ಈಗಣ ಸ್ಥಿತಿಯನ್ನು ಸ್ವತಃ ತಿಳಿದುಕೊಳ್ಳಬೇಕೆಂಬುದು ನಾವು ಸಂಚಾರ ಮಾಡಿದುದರ ಉದ್ದೇಶಗಳಲ್ಲೊಂದಾಗಿತ್ತು. ಆದರೆ ನ್ಯಾಯವಿಧಾಯಕ ಸಭೆಯ ಮುಂದೆ ನಾವು ಹಿಂದೆಯೇ ಇಟ್ಟಿರುವ ಪಟ್ಟಿಯಲ್ಲಿನ 5ನೆಯ ನಂಬರಿನ ಬಾಬಿಗೆ ಎಂದರೆ ಡಿಸ್ಟ್ರಿಕ್ಟ್ ಆಡಳಿತದ ಮೇಲ್ಪಾಟಿಗೆ, ಸಂಬಂಧಪಟ್ಟ ಅತ್ಯುಪಯುಕ್ತವಾದ ಸಂಗತಿಯನ್ನು ಸಂಗ್ರಹಿಸಲು ಈ ಸಂಚಾರದಿಂದ ಸಹಾಯವಾಯಿತೆಂದು ತಮಗೆ ತಿಳಿಸಬಹುದಾಗಿದೆ. ಸಾಮಾನ್ಯವಾಗಿ ಈ ಕೆಲಸಕ್ಕೆ ಸಂಬಂಧಪಟ್ಟ ಪದ್ಧತಿಗಳನ್ನೂ, ನಡೆವಳಿಕೆಯ ಕ್ರಮವನ್ನೂ ತಿದ್ದುಪಡಿ ಮಾಡಬೇಕೆಂದು ಈಗ ಸಲಹೆಗಳನ್ನು ವ್ಯವಸ್ಥೆಮಾಡುತ್ತಿದ್ದೇವೆ. ಡಿಸ್ಟ್ರಿಕ್ಟುಗಳ ನಿತ್ಯಗಟ್ಟಲೆಯ ಆಡಳಿತದ ಕಾರ್ಯದಲ್ಲಿ ಮೇಲ್ಪಾಟಿಗೆ ಹೆಚ್ಚು ದಅವಕಾಶವಿದೆಯೆಂಬುದು ನಮ್ಮ ಸಂಚಾರದಿಂದುಂಟಾದ ಸಾಮಾನ್ಯ ಅನುಭವವಾಗಿದೆ. ಇದಲ್ಲದೆ, ಜನರಿಗೆ ಸ್ಥಳೀಯ ಆಫೀಸರುಗಳೇ ಸುಲಭವಾಗಿ ಪರಿಹಾರಮಾಡಬಹುದಾದ ಕುಂದು ಕೊರತೆಗಳು ಹಾಲಿ ಅನೇಕವಾಗಿವೆ. ಜನಗಳಿಂದ ಬಂದ ಅಂಕೆಗಳು ಮುಖ್ಯವಾಗಿ ಕೆರೆಗಳು, ಕುಡಿಯುವ ನೀರಿನ ಬಾವಿಗಳು, ಸ್ಕೂಲು ಕಟ್ಟಡಗಳು, ದರಖಾಸ್ತುಗಳ ಮೇಲೆ ಜಮೀನುಗಳನ್ನು ವಿಲೇವಾರಿಮಾಡುವುದು, ಜಂಗಲುಗಳ ಸಂಬಂಧದಲ್ಲಿನ ಕಷ್ಟದುಃಖಗಳು, ವಗೈರೆ ಬಾಬುಗಳಿಗೆ ಸಂಬಂಧಪಟ್ಟವುಗಳಾಗಿದ್ದವು. ಸರ್ಕಾರದವರ ಸಹಾನುಭೂತಿಗೆ ತಕ್ಕ ಅಭಿಮುಖ್ಯವನ್ನು ತೋರುವುದರಲ್ಲಿ ಜನರು ಬಹುಮಟ್ಟಿಗೆ ಸಿದ್ಧರಾಗಿರುವುದೇ ಅಲ್ಲದೆ, ದಿನೇದಿನೇ ಅಭಿವೃದ್ಧಿಯಾಗಿ ಹರಡಬೇಕೆಂದು ಆತುರದಿಂದ ನಿರೀಕ್ಷಿಸಲ್ಪಡುತ್ತಿರುವ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಎಲ್ಲಾ ಏರ್ಪಾಡುಗಳಲ್ಲೂ ಮತ್ತು ರಸ್ತೆಗಳು, ಬಾವಿಗಳು, ಕೆರೆಗಳು, ಸ್ಕೂಲು ಕಟ್ಟಡಗಳು, ಇವೇ ಮೊದಲಾಗಿ ಜನೋಪಯುಕ್ತವಾದ ಮೇಲ್ಪಾಡುಗಳಿಗೆ ಸಂಬಂಧಪಟ್ಟ ಎಲ್ಲಾ ಕಾಂಗಾರಿಗಳಲ್ಲೂ ಜನರು ಪ್ರತಿಯೊಂದು ರೀತಿಯಲ್ಲಿಯೂ ಸಹಕಾರಿಗಳಾಗಲು ಇಷ್ಟಪೂರ್ವಕರಾಗಿದಾರೆ. ರೈತಾಪಿ ಜನರಲ್ಲಿ ಬಡಬಗ್ಗರ ಹಣಕಾಸಿನ ಸ್ಥಿತಿಯು ತೃಪ್ತಿಕರವಾಗಿಲ್ಲ. ಅವರ ಸ್ಥಿತಿಗತಿಗಳನ್ನು ಕುರಿತು ತಪಶೀಲುವಾರಾಗಿ ಪರಿಶೀಲಿಸಬೇಕಾದದ್ದು ಅವಶ್ಯಕವೆಂದು ಈಗ ನಾವು ದೃಢವಾಗಿ ನಂಬಿರುತ್ತೇವೆ.

ಈ ಎಲ್ಲಾ ವಿಷಯಗಳಿಗೂ ಸರ್ಕಾರದವರು ಅತ್ಯಧಿಕ ಗಮನವನ್ನು ಸದಾ ಕೊಡುತ್ತಲಿರುವರೆಂದು ತಮಗೆ ತಿಳಿಸಲಪೇಕ್ಷಿಸುತ್ತೇವೆ.

ಉಪಸಂಹಾರ.

ಈಗಿನ ಸಂದರ್ಭದಲ್ಲಿ ದ್ರವ್ಯಾಭಾವದ ದೆಸೆಯಿಂದ ಮೈಸೂರು ಸರ್ಕಾರಕ್ಕೆ ಸರ್ವತೋಮುಖವಾಗಿ ಕಷ್ಟ ಪರಂಪರೆಗಳು ಪ್ರಾಪ್ತವಾಗಿರುವ ಪ್ರಯುಕ್ತ ಸಮಸ್ತರ ಸಹಾನುಭೂತಿಗೂ, ಕನಿಕರಕ್ಕೂ ಪಾತ್ರವಾಗಿರುವುದು. ದಿನೇ ದಿನೇ ಅಭಿವೃದ್ಧಿಹೊಂದುತ್ತಿರುವ ರಾಜ್ಯಾಡಳಿತಕ್ಕೆ ಹೆಚ್ಚು ಹೆಚ್ಚಾಗಿ ಹಣವು ಬೇಕಾದುದೊಂದು ಕಡೆ; ಆಯವ್ಯಯಗಳನ್ನು ಸಮತೂಕ ಮಾಡುವುದಕ್ಕಾಗಿ ಎಲ್ಲ ಬಾಬುಗಳಲ್ಲಿಯೂ ಖರ್ಚು ಕಡಿಮೆ ಮಾಡದಿದ್ದರೆ ವಿಧಿಯಿಲ್ಲದಿರುವುದು ಮತ್ತೊಂದು ಕಡೆ; ಈ ಉಭಯ ಸಂಕಟಗಳಿಗೆ ಸಿಕ್ಕಿ ನರಳುವುದು ಕೇವಲ ಪರಿತಾಪಕರವಾಗಿರುವುದು. ಈ ಹಿಂದೆ ಉಪಕ್ರಮಿಸಲ್ಪಟ್ಟು, ಈಗ ತ್ಯಾಜ್ಯಮಾಡಲು ಆಗಲಾರದ ಭಾರಿ ಕಾಮಗಾರಿಗಳನ್ನೂ ಏರ್ಪಾಡುಗಳನ್ನೂ ಮುಂದೆಯೂ ನಡೆಯಿಸುತ್ತಾ ಬಾರದಿದ್ದರೆ ವಿಧಿಯಿಲ್ಲದಿರುವ ಪ್ರಯುಕ್ತ ಪ್ರಜೆಗಳ ಜ್ಞಾನಾಭಿವೃದ್ಧಿಗೂ, ಭಾಗ್ಯಾಭಿವೃದ್ಧಿಗೂ ಸಾಧಕಗಳಾದ ಇಲಾಖೆಗಳಲ್ಲಿ ಹೆಚ್ಚು ಅಭಿವೃದ್ಧಿಯ ಕಾರ್ಯಗಳನ್ನು ನಡೆಯಿಸುವುದಕ್ಕೆ ಸಾಧ್ಯವೇ ಇಲ್ಲದಂತೆ ಆಗಿದೆ. ಇಂತಹ ವಿಷಮ ಸಮಯದಲ್ಲಿ ಸಾಮಾನ್ಯ ಆದಾಯ ವ್ಯಯಗಳು ಸರಿಹೋಗುವಂತೆ ಮಾಡಿ ಆದಾಯ ಬರುವ ಕಾಮಗಾರಿಗಳ ಜಮಾಖರ್ಚನ್ನು ಇತರ ಬಾಬಿಗೆ ಸಂಬಂಧಪಟ್ಟ ಜಮಾ ಖರ್ಚಿನಿಂದ ಪ್ರತ್ಯೇಕಿಸಿಟ್ಟು ಅದನ್ನು ನಮ್ಮ ಆಸ್ತಿಗಳನ್ನು ಹೆಚ್ಚಿಸಿ ಸದರೀ ಕಾಮಗಾರಿಗಳಿಂದ ಹೆಚ್ಚು ಆದಾಯವು ಬರುವಹಾಗೆ ಮಾಡಬೇಕೆಂಬುದೇ ನಮ್ಮ ಮುಖ್ಯವಾದ ಆಶಯವಾಗಿರುವುದು. ಇಷ್ಟು ಮಾತ್ರವೇ ಅಲ್ಲದೆ ಕ್ಷಾಮನಿವಾರಣಾ ನಿಮಿ, ನೀರಾವರಿ ಬಂಡವಾಳ, ಕೈಗಾರಿಕೆಗಳ ಅಭಿವೃದ್ಧಿ ಇವುಗಳಿಗೆ ಸಂಬಂಧಪಟ್ಟ ಬಾಬುಗಳಿಗೆ ಹಣವನ್ನು ಶೇಖರಿಸಬೇಕಾದುದು ಅನಿವಾರ್ಯವಾಗಿದೆ. ಇವೆಲ್ಲದರಿಂದಲೂ ಸ್ವಲ್ಪಮಟ್ಟಿನ ಕಾರ್ಯ ವಿಪರ್ಯಾಸವೂ, ಕಾರ್ಯದಕ್ಷತಾ ಲೋಪವೂ, ಅತೃಪ್ತಿ ಅಸಮಾಧಾನಗಳೂ ಪ್ರಾಪ್ತವಾಗುವುದು ಸಹಜವೇ ಸರಿ. ಈ ಮೇಲ್ಕಂಡ ಸಮಸ್ತ ಅನನುಕೂಲ ಪರಂಪರೆಗಳೂ ಆದಷ್ಟು ಮಟ್ಟಿಗೆ ಅತಲ್ಪಕಾಲ ಪರ್ಯಂತವಾತ್ರ ಸಂಘಟಿಸುವಂತೆ ನೋಡಿಕೊಳ್ಳಬೇಕೆಂಬುದೇ ನಮ್ಮ ಆಶಯವಾಗಿರುವುದು.

ಮಹಾಶಯರೇ, ನಮ್ಮ ಭಾಷಣದಲ್ಲಿ ನಾನಾ ವಿಷಯಗಳನ್ನು ಕುರಿತು ದೀರ್ಘವಾಗಿ ಪ್ರಸ್ತಾಪ ಮಾಡಿ ತಮಗೆ ಬಹುಮಟ್ಟಿಗೆ ಬೇಸರವನ್ನುಂಟುಮಾಡಿರಬಹುದು. ಇಷ್ಟು ದೀರ್ಘವಾದ ಭಾಷಣವನ್ನು ಮಾಡಬೇಕಾಗಿ ಬಂದುದಕ್ಕೆ ಕಾರಣವೇನೆಂದರೆ—ಈಗಿನ ಸಂದರ್ಭದಲ್ಲಿ ರಾಜ್ಯಭಾರಕ್ಕೆ ಸಂಬಂಧಪಟ್ಟಿರುವ ಅಂಶಗಳು ಕಷ್ಟಪ್ರದಗಳಾಗಿರುವುದರಿಂದ ನಮ್ಮ ಸ್ಥಿತಿಗತಿಗಳು ಯಾವರೀತಿ ಇರುವುವೆಂಬುದನ್ನು ಕರಾರ್ಸ್ವಾಕ ತಿಳಿದುಕೊಳ್ಳಬೇಕಾದುದು ಆವಶ್ಯಕವಾಗಿರುವುದರಿಂದ ಈಗ ನಮ್ಮ ವ್ಯವಧಾನಕ್ಕೆ ಒಳಗಾಗಿರುವ ಮುಖ್ಯ ವಿಷಯಗಳನ್ನೆಲ್ಲಾ ವಿವರಿಸದಿದ್ದರೆ ವಿಧಿ ಇಲ್ಲದಿರುವುದೇ ಮುಖ್ಯಕಾರಣವಾಗಿರುವುದು.

ನಾವು ಈ ಭಾಷಣವನ್ನು ಪರಿಸಮಾಪ್ತಿಗೊಳಿಸುವುದಕ್ಕೆ ಮುಂಚೆ ಈ ಸಂಸ್ಥಾನದ ರಾಜ್ಯಭಾರ ಕ್ರಮದಲ್ಲಿ ಪ್ರಜೆಗಳಿಗೆ ಈಗ ಇರುವುದಕ್ಕಿಂತ ಹೆಚ್ಚು ಅಧಿಕಾರವನ್ನು ಕೊಡುವುದಕ್ಕೆ ಸಂಬಂಧಪಟ್ಟ ಮುಖ್ಯ ವಿಷಯವನ್ನು ಕುರಿತು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಬೇಕೆಂದು ತಾವುಗಳು ನಿರೀಕ್ಷಿಸಬಹುದು. ಆದರೆ ಕೆಲವು ಅನಿವಾರ್ಯಗಳ ದೆಸೆಯಿಂದ ಆ ರೀತಿ ಈ ದಿವಸ ಪ್ರಸ್ತಾಪಿಸಲು ಸಾಧ್ಯವಾಗದೇ ಹೋದುದಕ್ಕಾಗಿ ವಿಷಾದಿಸುತ್ತೇವೆ. ಇನ್ನು ಎರಡು ಮೂರು ದಿವಸಗಳೊಳಗಾಗಿ ಈ ವಿಷಯವನ್ನು ಪ್ರಕಟಪಡಿಸಲು ಸಾಧ್ಯವಾದೀತೆಂತಲೂ, ಹಾಗೆ ಪ್ರಕಟಪಡಿಸುವ ವಿಷಯವು ತಮಗೆಲ್ಲರಿಗೂ ಸಂಪೂರ್ಣ ತೃಪ್ತಿಯನ್ನುಂಟುಮಾಡುವುದೆಂತಲೂ ನಾವು ನಿರೀಕ್ಷಿಸುತ್ತೇವೆ.

ಇಂತಹ ವಿಷಮಕಾಲದಲ್ಲಿ ಸರ್ಕಾರದವರು ಕಾರ್ಯನಿರ್ವಾಹ ಮಾಡಬೇಕಾದರೆ ಧೈರ್ಯವೂ, ತಾಳ್ಮೆಯೂ, ಸಹನೆಯೂ ಅವಶ್ಯವಾಗಿರುತ್ತವೆ. ಯಾವ ಪ್ರಜಾನುಮೋದನೆಯು ರಾಜಕಾರ್ಯ ನಿರ್ವಾಹದಲ್ಲಿ ನಿರತರಾದ ಮಂತ್ರಿವರ್ಗಕ್ಕೆ ಅತ್ಯಾವಶ್ಯಕವೋ ಅಂತಹ ಸರ್ವ ಪ್ರಜಾನುಮೋದನೆಯು ನಮಗೆ ಲಭ್ಯವಾಗುವುದೆಂತಲೂ, ಪ್ರಜೆಗಳು ತಮ್ಮ ಅಭಿಪ್ರಾಯಗಳನ್ನು ಪೂರ್ವಕಾಲಕ್ಕಿಂತಲೂ ನಿಷ್ಕೃಷ್ಟವಾಗಿಯೂ, ನಿರ್ಭೀತರಾಗಿಯೂ ಸೂಚಿಸುವವರಾದರೆಂತಲೂ ಸಂಪೂರ್ಣ ಭರವಸೆಯುಳ್ಳವರಾಗಿರುತ್ತೇವೆ. ಶ್ರೀಮನ್ಮಹಾರಾಜರವರ ವಿವೇಚನಾಪೂರಿತವೂ, ಕೃಪಾವಿಶಿಷ್ಟವೂ ಆದ ರಾಜ್ಯಪರಿಪಾಲನೆಯಲ್ಲಿ ಮೈಸೂರು ಸಂಸ್ಥಾನವು ಆಧುನಿಕರಾಜ್ಯಭಾರ ಕ್ರಮದಲ್ಲಿ ಸುಪ್ರಖ್ಯಾತಿಯನ್ನು ಹೊಂದಿರುತ್ತದೆ. ಮಹಾಸ್ವಾಮಿಯವರ ಪ್ರಜೆಗಳು ಅವರಿಗಿರುವ ಸ್ವಾತಂತ್ರ್ಯಗಳನ್ನು ಸದುಪಯೋಗಪಡಿಸಿಕೊಂಡು ಸರ್ಕಾರದವರೊಡನೆ ಏಕೀಭವಿಸಿ ಕೆಲಸಮಾಡುತ್ತಾ ಸಂಸ್ಥಾನದ ಕ್ಷೇಮಾಭ್ಯುದಯಗಳಿಗೆ ಸಂಬಂಧಪಟ್ಟ ಸಮಸ್ತ ವಿಷಯಗಳಲ್ಲಿಯೂ ಸಹಾಯಕರಾಗಿ ಇತೋಪ್ಯತಿಶಯವಾದ ಪುರೋವೃದ್ಧಿಯು ಸಿದ್ಧಿಸುವಂತೆ ಸರ್ವಪ್ರಯತ್ನಗಳನ್ನೂ ಮಾಡುವುದು ಶ್ರೀಮನ್ಮಹಾರಾಜರವರ ಪ್ರಜೆಗಳ ಮೇಲೆ ಬಿದ್ದ ಭಾರವಾಗಿರುತ್ತದೆ.

ಎ. ಆರ್. ಬಾನರ್ಜಿ,
ಮೈಸೂರು ಸಂಸ್ಥಾನದ ದಿವಾನರವರು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಳ್ಳ

13 ರಾಯಲ್ ಪೌಂಟೇನ್.



ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿದಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಮ ಕೊಡುವೆವು.



ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265,ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇವರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚಿ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
36 ಬಳ್ಳಾರಿ.

೧೯೨೨ನೆಯ ಇಸವಿ ಅಕ್ಟೋಬರ್ ತಾ|| ೨೨ ರಿಂದ ೧೯೨೨ನೆಯ ಅಕ್ಟೋಬರ್ ತಾ|| ೨೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ನೆಯ ದುಂದುಭಿನಾಮ ಸಂವತ್ಸರದ ಕಾರ್ತಿಕ ಶುದ್ಧ ಬಿದಿಗೆಯಿಂದ ಕಾರ್ತಿಕ ಶುದ್ಧ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾಮಾಸ
22	ಭಾನು	ಬಿದಿ	21-51	ವಿಶಾ	39-19	6
23	[1]ಸೋಮ	ತದಿ	17-26	ಅನೂ	36-49	7
24	ಮಂಗಳ	ಚೌತಿ	13-50	ಜ್ಯೇಷ್ಠ	15-13	8
25	ಬುಧ	ಪಂಚ	11-22	ಮೂಲ	34-49	9
26	ಗುರು	ಷಷ್ಠಿ	9-56	ಪೂಷಾ	35-27	10
27	ಶುಕ್ರ	ಸಪ್ತ	9-46	ಉಷಾ	37-23	11
28	ಶನಿ	ಅಷ್ಟ	10-58	ಶ್ರವ	40-30	12

(1) ಕಾರ್ತಿಕಸೋಮವಾರ.

ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಅಕ್ಟೋಬರ್ ತಾರೀಖು ೨೨ ನೆಯ ಭಾನುವಾರ. ೭

ಖರ್ಚುಬಾಬುಗಳನ್ನು ಖೋತಾಮಾಡಿದ ತಃಖ್ತೆ.

ಕ್ರಮ ಸಂಖ್ಯೆ	ವಿಷಯಗಳು	ಕಮಿಟಿಯವರು ಸೂಚನೆ ಮಾಡಿದ ಮಿಗಿತಗಳು	1921-22ನೆಯ ಬಡ್ಜೆಟ್ಟಿನಲ್ಲಿ ಜಾರಿಯಲ್ಲಿ ತಂದದ್ದು	1922-23ನೆಯ ಬಡ್ಜೆಟ್ಟಿನಲ್ಲಿ ಜಾರಿಯಲ್ಲಿ ತಂದದ್ದು	ಹುಕುಂ ಆಗಿ ಇನ್ನೂ ಜಾರಿಯಲ್ಲಿ ಬಾರದ್ದು	ಜುಮ್ಲಾ*
1	ಅದಾಲತ	70,000	13,000	52,200	....	65,000
2	ಶ್ರೀಮನ್ಮಹಾರಾಜರವರ ಸಿಬ್ಬಂದಿ ಮತ್ತು ಅರಮನೆ	45,000	....	....	....	....
3	ಡೆಪ್ಯುಟಿ ಕಮಿಷನರುಗಳ ದರ್ಜೆಯ ಮತ್ತು ದರ್ಜೆಗೆ ಮೇಲಿರುವ ಆಫೀಸರುಗಳ ಸಂಬಳಗಳ ಮಾರ್ಪಾಡು	71,000	....	23,400	27,000	50,400
6	ಸಂಪದಭ್ಯುದಯ ಸಮಾಜ	71,000	15,000	16,000	....	31,000
7	ಸಾರ್ವಜನಿಕ ಪರಿಷ್ಕರಣಗಳ ಬಗ್ಗೆ ಗ್ರ್ಯಾಂಟುಗಳು	3,83,000	66,000	—14,000	....	52,000
8	ಸ್ಯಾನಿಟರಿ ಕಮಿಷನರ ಮತ್ತು ಹೆಲ್ತ್ ಆಫೀಸರ ಹುದ್ದೆಯ ವಜಾವಣೆ	44,000	6,400	....	18,000	24,400
9	ಗ್ರಾಮಗಳ ಸೇವಿಂಗ್ಸ್ ಬ್ಯಾಂಕುಗಳು ಮತ್ತು ಕಲೆಕ್ಟಿಂಗ್ ಸೇವಿಂಗ್ಸ್ ಬ್ಯಾಂಕುಗಳು	7,000	....	....	5,500	5,500
11	ಮೆಡಿಕಲ್ ಇಲಾಖೆ (ಲೋಕಲ್ ಫಂಡು ಡಿಸ್‌ಪೆನ್ಸರಿಗಳು)	90,000	....	....	....	....
12	ಸ್ಟೆಟಿಸ್ಟಿಕ್ ಮತ್ತು ವಿವಿಧ ಬಾಬುಗಳು	24,000	....	12,100	6,400	18,500
13	ಮಿನಿಜಗಳ ಮೇಲ್ವಿಚಾರಣೆ	12,000	....	....	12,000	12,000
16	ಜಮೀನ್ ಕಂದಾಯ	32,000	3,100	12,000	29,700	44,800
17	ಫಾರೆಸ್ಟು ಇಲಾಖೆ	90,000	....	28,000	27,100	55,200
18	ಅಬ್ಕಾರಿ ಇಲಾಖೆ	32,000	....	....	19,600	19,600
19	ಲೇಖನಸಾಮಗ್ರಿ ಮತ್ತು ಅಚ್ಚುಕೆಲಸ	50,000	—1,57,000	1,31,000	....	—26,000
20	ಪೋಲೀಸು ಇಲಾಖೆ	1,22,000	—22,000	43,000	20,500	—44,500
21	ಕೈಗಾರಿಕೆಗಳು ಮತ್ತು ವಾಣಿಜ್ಯ	87,000	—7,000	73,000	....	66,000
22	ಪಬ್ಲಿಕ್ ವರ್ಕ್ಸ್ ಇಲಾಖೆ	10,00,000	—3,26,000	6,52,000	....	+3,26,000
23	ಮೆಡಿಕಲ್ ಇಲಾಖೆ	36,000	....	360	2,500	2,860
24	ಬಂದಿಖಾನೆಗಳು	10,000	....	....	4,000	4,000
26	ವಿದ್ಯಾಭ್ಯಾಸ	5,85,000	97,000	2,41,000	15,250	3,53,250
27	ಪರಸ್ಪರ ಸಹಾಯ ಸಂಘಗಳು	22,000	....	....	8,400	8,400
28	ಭೂಗರ್ಭಶಾಸ್ತ್ರ	25,000	....	....	33,800	33,800
29	ಅಮೃತಮಹಲ್ ಇಲಾಖೆ	22,000	....	....	10,000	10,000
30-31	ಸಿವಿಲ್ ಸೆಕ್ರೆಟೇರಿಯಟ್ ಮತ್ತು ಮುಜರಾಯಿ	73,000	3,800	25,700	24,000	53,500
32	ಕುಣಿಗಲ್ ಸ್ಟಡ್‌ಫಾರಂ	74,000	—22,300	31,900	....	9,600
33	ಮಿಲಿಟರಿ	1,62,000	50,700	19,500	....	70,200
34	ಸಂಚಾರಭತ್ಯ	1,00,000	....	78,000	22,000	1,00,000
35	ಡ್ಯೂಟಿ ಮತ್ತು ಇತರ ಭತ್ಯಗಳು	1,00,000	....	....	52,000	52,000
36	ಇಲಾಖಾ ಮೊಕ್ತೇಸರರನ್ನು ಒಟ್ಟುಗೂಡಿಸುವುದು	17,000	....	....	....	....
37	ಬಾರ್ ಕಾಲಾಳುಗಳನ್ನು ಕಮ್ಮಿ ಮಾಡುವುದು	1,00,000	....	....	....	....
38	ಜವಾನಿ ಸಿಬ್ಬಂದಿಯಲ್ಲಿ ಕಮ್ಮಿ ಮಾಡುವುದು	1,25,000	....	....	1,00,000	1,00,000
39	ಜ್ಯುಡಿಷಿಯಲ್ ಇಲಾಖೆ	5,000	....	....	....	....
40	ಕಂಟ್ರೋಲರ ಆಫೀಸು	15,000	....	....	10,100	10,100
41	ವ್ಯವಸಾಯ ರೇಷ್ಮೆವ್ಯವಸಾಯ ಮತ್ತು ಉಪವನಗಳ ಇಲಾಖೆಗಳು	25,000	....	....	10,750	10,750
	ಒಟ್ಟು ಜುಮ್ಲಾ	37,26,000	+2,55,300	+13,96,260	4,58,600	+15,89,360
			—5,34,300	—57,000		—70,500

ಒಟ್ಟು ಕೂಡಿದ್ದು	21,10,160	1922-23ನೆಯ ಬಡ್ಜೆಟ್ಟಿನಲ್ಲಿ ನಮೂದಾದ ಮಿಗಿತಗಳು	2,55,300	5,34,300	= 10,60,260†
ಒಟ್ಟು ಕಳೆದದ್ದು	5,91,300		13,96,260	57,000	
ಉಳಿದದ್ದು ಅಂದರೆ ತಹಲ್‌ವರೆಗೆ ಕಮಿಟಿಯವರ ಸಲಹೆಮೇಲೆ ಸರ್ಕಾರದವರು ಹುಕುಂ ಮಾಡಿದ ಒಟ್ಟು ಮಿಗಿತಗಳು	15,18,860		16,51,560	5,91,300	

ಒಟ್ಟು ಸರ್ವಿಸ್ ಖರ್ಚು.		ಖರ್ಚುಬಾಬು ಖೋತಾ ಆದದ್ದು.
1920-21ನೆಯ ಸಾಲಿನ ಲೆಕ್ಕಾಚಾರ	322·36 ಲಕ್ಷ	(ಎ) 29·33 ಲಕ್ಷ
1921-22ನೆಯ ಸಾಲಿಗೆ ರಿವೈಜು ಆದದ್ದು	293·03 ಲಕ್ಷ	(ಬಿ) 16·31 ಲಕ್ಷ
1922-23ನೆಯ ಸಾಲಿನ ಬಡ್ಜೆಟ್ಟು	276·72 ಲಕ್ಷ	(ಸಿ) 4·58 ಲಕ್ಷ (ಮತ್ತಷ್ಟು ಖೋತಾ ಆಗಬೇಕೆಂದು ಈಚೆಗೆ ಹುಕುಂ ಆದುದರ ಒಟ್ಟು)
		ಜುಮ್ಲಾ 50·22 ಲಕ್ಷ

* ಈ ಕಲಮಿನ ಅಡಿ ಇರುವ ಸಂಖ್ಯೆಗಳಿಗೂ ಕಮಿಟಿಯವರ ಸಲಹೆಗಳ ಮೇಲೆ ಸರ್ಕಾರಿ ಹುಕುಮುಗಳಲ್ಲಿ ನಮೂದಾಗಿರುವ ಸಂಖ್ಯೆಗಳಿಗೂ ಕೆಲವು ಸಂದರ್ಭಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ; ಏಕೆಂದರೆ ತ್ವರೆಯಲ್ಲಿ ಜಾರಿಯಲ್ಲಿ ತರಬಹುದಾದ ಖರ್ಚು ಖೋತಾಗಳು ಮಾತ್ರ ಇಲ್ಲಿ ವಿಚಾರಕ್ಕೆ ತೆಗೆದುಕೊಂಡಿರುತ್ತದೆ.

† ಕಮಿಟಿಯವರು ತಮ್ಮ ಸಲಹೆಗಳನ್ನು ಕೊಡುವುದರಲ್ಲಿ ಸರ್ವಿಸು ಖರ್ಚಿನ ದರ್ಜೆಯನ್ನು 285·50 ಲಕ್ಷವೆಂದು ಭಾವಿಸಿದಾರೆ. (10ನೆ ಮತ್ತು 71ನೆ [illegible]) 1921-22ನೆ ಬಡ್ಜೆಟ್ಟಿನಲ್ಲಿ ಸರ್ವಿಸು [illegible] (280·80 ಲಕ್ಷ) [illegible] (293·03) [illegible] 1922-23ನೆ ಬಡ್ಜೆಟ್ಟಿನ ಸರ್ವಿಸು [illegible]

[illegible] 1920-21ನೆಯ ಸಾಲಿನಲ್ಲಿ ಸರ್ವಿಸು [illegible] 45·64 ಲಕ್ಷ [illegible] 1920-21ನೆ [illegible] 50·22 ಲಕ್ಷ [illegible]

[illegible] 1918-19ನೆ ಸಾಲಿನ [illegible] 1920-21ನೆ [illegible] 7 ಲಕ್ಷದಿಂದ [illegible] 1920-21ನೆ [illegible] 25 ಲಕ್ಷಕ್ಕೆ [illegible] 20 ಲಕ್ಷ [illegible]

1920-21ನೆ ವರ್ಷದ [illegible] 322·36 ಲಕ್ಷ [illegible] 20 ಲಕ್ಷ [illegible] 1920-21ನೆ ಸಾಲಿನ [illegible] 45·64 [illegible] 1921-22ನೆ [illegible] 50·22 ಲಕ್ಷ [illegible]

ರಿಂದ ಅನೇಕ ಉಪಯುಕ್ತವಾದ ಕಾರ್ಯಗಳನ್ನು ಬಹು ಮಟ್ಟಿಗೆ ಕಮ್ಮಿ ಮಾಡಲಾಯಿತು. ಕೆಲವು ಇಲಾಖೆಗಳನ್ನು ಒಟ್ಟುಗೂಡಿಸುವುದೇ ಮೊದಲಾದ ಏರ್ಪಾಡುಗಳಿಂದ ರಚನೆಯಲ್ಲಿಯೂ ಸಹ ಬದಲಾಯಿಸಿರುತ್ತದೆ. ಎಗ್ಜಿಕ್ಯೂಟಿವ್ ಮತ್ತು ಗುಮಾಸ್ತೆ ದರ್ಜೆಯಲ್ಲಿ ಮೇಲಣ ನೌಕರಿಯಲ್ಲಿಯೂ ಇದ್ದ ಬಹು ಮಂದಿ ಜನರಿಗೆ ಸ್ಥಳವಿಲ್ಲವಾಗಿದೆ. ಪಿಂಚನ್ನಿಗೆ ವಯಸ್ಸಾಗದ ಖಾಯಂ ನೌಕರರನ್ನು ರಿಟೈರ್ ಮಾಡಿಸಬೇಕಾಗಿದೆ. ಅನೇಕ ವರುಷಗಳ ಕಾಲ ಹಂಗಾಮಿಯಾಗಿ ನೌಕರಿಯಲ್ಲಿರುವವರಿಗೆ ಪ್ರತಿಫಲ ಕಮ್ಮಿಯಾಗಿರುವುದಲ್ಲದೆ ಅವರ ದರ್ಜೆಯೂ ಹೋಗಿಬಿಟ್ಟಿದೆ ಮತ್ತು ಕೆಲವು ಟೆಕ್ನಿಕಲ್ ಇಲಾಖೆಗಳಲ್ಲಿ ಕ್ರಮೇಣ ಖಾಯಂ ಮಾಡುವ ಬಗ್ಗೆ ಅಜಮಾಯಿಷಿ ತರೀಕ್ ನೇಮಕ ಮಾಡಲ್ಪಟ್ಟ ತರುಣರೊಡನೆ ಬಹುಮಂದಿ ಹಂಗಾಮಿ ನೌಕರರು ಮತ್ತು ಬೇರೆ ಬೇರೆ ಜಾತಿಯ ಕೆಲಸಕ್ಕಾಗಿ ಶಿಕ್ಷಣವನ್ನು ಹೊಂದಿದವರು ಸಹ ತಮ್ಮ ಸ್ಥಳಗಳನ್ನೂ ವಾಗ್ದಾನ ಮಾಡಿದ್ದ ನೌಕರಿಗಳನ್ನೂ ಕಳೆದುಕೊಳ್ಳಬೇಕಾಗಿದೆ. ಇಂಜನಿಯರಿಗೂ ಮತ್ತು ಇತರ ಟೆಕ್ನಿಕಲ್ ಎಂದರೆ ಸಾಂಕೇತಿಕ ಇಲಾಖೆಗಳಲ್ಲಿ ಹೊಸಬರನ್ನು ಸೇರಿಸಿಕೊಳ್ಳುವುದನ್ನು ಮಿತಪಡಿಸಬೇಕಾಗಿದೆ; ಮತ್ತು ಆ ವಿಷಯದಲ್ಲಿ ಕೊಟ್ಟಿದ್ದ ಭರವಸೆಯನ್ನು ಕೊಂಚ ಕಾಲದವರೆಗೆ ತಪ್ಪಿಸಬೇಕಾಗಿದೆ. ರಾಜ್ಯಾಡಳಿತದ ನಾನಾ ಇಲಾಖೆಗಳಲ್ಲಿ ಸರ್ಕಾರಿ ನೌಕರಿಯೆಂಬುದು ನಮ್ಮ ತರುಣರು ಬಹುಮಂದಿಗೆ ಅವರ ಜೀವನೋಪಾಯವನ್ನು ಸಂಪಾದಿಸುವುದಕ್ಕೆ ಮತ್ತು ಅಭಿವೃದ್ಧಿಗೆ ಬರುವುದಕ್ಕೆ ಅವಕಾಶವನ್ನು ಕೊಡುವುದಾಗಿರುತ್ತದೆ. ಆದರೆ ಎಲ್ಲಾ ಕಡೆಯಲ್ಲೂ ಸಿಬ್ಬಂದಿಯನ್ನು ಕಡಿಮೆಮಾಡುವುದರಿಂದಲೂ ಕೆಲವು ಕಡೆ ಕೆಲಸಕಾರ್ಯಗಳನ್ನು ನಿಲ್ಲಿಸಿರುವುದರಿಂದಲೂ ಈ ವಿಧವಾದ ಅವಕಾಶಗಳೆಲ್ಲ ಸ್ವಲ್ಪ ಕಾಲದ ವರೆಗೆ ತಪ್ಪಿಹೋಗಿ ನಮ್ಮ ಯೂನಿವರ್ಸಿಟಿಯ ಗ್ರಾಡ್ಯುಯೇಟ್ ತರುಣರಿಗೆ ತಕ್ಷಾಪಿ ಇಂಜನಿಯರಿಂಗು, ವ್ಯಾಪಾರ ಮತ್ತು ಭೂಶೋಧನೆ ಮೊದಲಾದವುಗಳಲ್ಲಿರುವರಿಗೆ ತಮ್ಮ ದೇಶದ ಸೇವೆ ಮಾಡುವದಕ್ಕೆ ಅವಕಾಶವನ್ನು ಅದು ತಪ್ಪಿಸಿರುತ್ತದೆ. ನಮ್ಮ ಮನಸ್ಸಿಗೆ ಇದು ಈಗಿನ ಹಣಕಾಸಿನ ಸ್ಥಿತಿಯಿಂದ ಹುಟ್ಟಿದ ಕೇವಲ ವ್ಯಥಾಕಾರಿಯಾದ ಮತ್ತು ಅತೃಪ್ತಿಕರವಾದ ಸನ್ನಿವೇಶವೆಂದು ತೋರುತ್ತದೆ.

ಮೇಲೆ ನಮೂದಿಸಿದ ವ್ಯಕ್ತಿಗಳು ಸರ್ಕಾರಿ ನೌಕರಿಗೆ ಸೇರುವುದಕ್ಕೆ ತೊಂದರೆ ಒಂದುಕಡೆಯಿರಲಿಕ್ಕಾಗಿ, ಅನೇಕ ಉಪಯುಕ್ತಗಳಾದ ಕೆಲಸಗಳಿಗಾಗಿಯೂ ಅಭಿವೃದ್ಧಿ ಕಾರ್ಯಗಳಿಗಾಗಿಯೂ ಹಂಚಿಕೊಟ್ಟಿದ್ದ ಮೊತ್ತಗಳನ್ನು ಕಡಿಮೆ ಮಾಡಿರುವುದರಿಂದ ಜನರ ಕ್ಷೇಮವು ಸಾಕ್ಷಾತ್ತಾಗಿ ವಿಕಾರವನ್ನು ಹೊಂದಿರುವುದು. ವರಮಾನಕ್ಕಿಂತಲೂ ಬಹಳವಾಗಿ ಹೆಚ್ಚಿರುವ ಖರ್ಚನ್ನು ತಗ್ಗಿಸುವ ಉದ್ದೇಶದಿಂದ ಮಲೆನಾಡು ಅಭಿವೃದ್ಧಿಗಾಗಿ ಗ್ರಾಮಾಭಿವೃದ್ಧಿ ಕಾರ್ಯಗಳು ಗ್ರಾಮಾಂತರ ಮತ್ತು ನಗರಗಳ ಶೀನೀರು ಸರಬರಾಯಿ, ಚಿಲ್ಲರೆ ಜನೋಪಯೋಗದ ಅಭಿವೃದ್ಧಿ ಕಾರ್ಯಗಳು ಮತ್ತು ವೈದ್ಯ ಸಹಾಯ, ಇವುಗಳನ್ನು ವಿಸ್ತಾರವಾಗಿ ಕೊಡುವುದಕ್ಕೂ ರಸ್ತೆಗಳ ಮತ್ತು ನೀರಾವರೀ ಕಾಂಗಾರಿಗಳ ಬಾಬುಗಳಲ್ಲೂ ಸಿವಿಲ್ ಕಟ್ಟಡಗಳ ಬಾಬಿನಲ್ಲೂ ಹೆಚ್ಚಿನ ಅಸಲ್ ಕಾಂಗಾರಿಗಳಿಗಾಗಿ ಹಂಚಿಕೆ ಹಣವನ್ನು ನಿರ್ದಾಕ್ಷಿಣ್ಯವಾಗಿ ಖೋತಾ ಮಾಡಬೇಕಾಯಿತು. ಇದು ಅತ್ಯಂತ ವಿಷಾದಕರವಾದ ಸ್ಥಿತಿಯೆಂಬುದೇನೋ ನಿಜ. ಅದನ್ನು ಬಹುಕಾಲ ಹಾಗೆ ಬಿಡುವುದಕ್ಕಾಗುವುದಿಲ್ಲ. ಆದಕಾರಣ ಪ್ರಜೆಗಳ ಜ್ಞಾನಾಭಿವೃದ್ಧಿ ಭಾಗ್ಯಾಭಿವೃದ್ಧಿಗೆ ಸಾಕ್ಷಾತ್ತಾಗಿ ಸಂಬಂಧಪಟ್ಟ ಇಲಾಖೆಗಳಿಗೆ ಬೇಕಾದಷ್ಟು ಹಣ ಒದಗಿಸಿಕೊಡುವುದು ಮತ್ತು ಸರ್ಕಾರದ ನೌಕರಿಯನ್ನು ಮರಳಿ ಕಾರ್ಯದಕ್ಷವಾದುದನ್ನಾಗಿ ಮತ್ತು ಸಂತುಷ್ಟಿಯುಕ್ತವಾದುದನ್ನಾಗಿ ಮಾಡುವುದು, ಈ ಉದ್ದೇಶಗಳಿಂದ ಕೂಡಿದಷ್ಟು ತ್ವರೆಯಲ್ಲಿ ನಮ್ಮ ಹುಟ್ಟುವಳಿ ಮಾರ್ಗಗಳನ್ನು ಹೆಚ್ಚಿಸುವುದು ಶ್ರೀಮನ್ ಮಹಾರಾಜಾ ಸರ್ಕಾರದವರ ಪ್ರಯತ್ನವಾಗಿರುವುದು.

ಸರ್ಕಾರದವರ ಮೇಲೆ ದಾವೆ.

ಮೈಸೂರು ಸೀಮೆಯಲ್ಲಿ ಜಾರಿಯಲ್ಲಿರುವ ಸಿವಿಲ್ ಪ್ರೊಸಿಡ್ಯೂರು ಕೋಡಿನಲ್ಲಿ ಅಧಿಕಾರ ಪ್ರಯುಕ್ತ ನಡೆಸಲ್ಪಡುವ ಕೃತ್ಯಗಳಿಗಾಗಿ ಅಂಥ ಅಧಿಕಾರಿಗಳಮೇಲೆ ದಾವೇತರುವ ಹಕ್ಕನ್ನು ಕೊಟ್ಟಿದ್ದರೂ ಸರ್ಕಾರದವರ ಮೇಲೆ ದಾವೇತರುವ ಹಕ್ಕನ್ನು ಕೊಟ್ಟಿರುವುದಿಲ್ಲ. ಅಂಥಾ ಸಂದರ್ಭದಲ್ಲಿ ಸರ್ಕಾರದವರೇ ಸಾಮಾನ್ಯವಾಗಿ ಅಂಥಾ ಸಂದರ್ಭಗಳಲ್ಲಿ ಪ್ರತಿವಾದಿ ಸ್ಥಾನದಲ್ಲಿ ನಿಂತು ಅವರ ಮೇಲೆ ಡಿಕ್ರಿಯಾದುದಾದರೆ ಮೊಬಲಗನ್ನು ಕೊಟ್ಟುಬಿಡುತ್ತಾರೆ. ಆದರೆ ಈ ಪದ್ಧತಿಯನ್ನು ಜಾರಿಯಲ್ಲಿ ತರುವಾಗ ಹುದ್ದೇದಾರರ ಬದಲಾವಣೆ ಮೊದಲಾದ ಸಂದರ್ಭಗಳಿಂದ ಅನೇಕ ಅಡಚಣೆಗಳು ಬಂದೊದಗುತ್ತವೆ. ಲ್ಯಾಂಡ್‌ರೆವಿನ್ಯೂ ಕೋಡು, ಲಿಮಿಟೇಷನ್ ರೆಗ್ಯುಲೇಷನು ಮೊದಲಾದ ಹಲವು ರೆಗ್ಯುಲೇಷನುಗಳಲ್ಲಿ ಕೆಲವು ಸಂದರ್ಭಗಳಲ್ಲಿ ದಾವೆ ಹಕ್ಕು ನಿರ್ದೇಶಿಸಲ್ಪಟ್ಟಿರುತ್ತದೆ. ಆದರೆ ಅದು ಕಾರ್ಯಕಾರಿಯಾಗಿಲ್ಲದಿರುವುದಕ್ಕೆ ಅನುಸರಿಸಬೇಕಾದ ಸರಿಯಾದ ಕ್ರಮವೊಂದು ಗೊತ್ತಾಗದಿರುವುದೇ ಕಾರಣವಾಗಿರುತ್ತದೆ. ಭೂಸಂಪಾದನೆಯ ರೆಗ್ಯುಲೇಷನ್ನಿನಂತಹ ಇನ್ನೂ ಕೆಲವು ಬಾಬುಗಳಲ್ಲಿ ಈ ಹಕ್ಕನ್ನೂ ಚಲಾಯಿಸಬಹುದಾಗಿರುತ್ತದೆ. ಆದರೆ ಒಡಂಬಡಿಕೆಯನ್ನು ಅನುಸರಿಸಿ ಸರ್ಕಾರದವರು ಮಾಡಬಹುದಾದ ಎಲ್ಲಾ ಕೆಲಸಗಳ ವಿಷಯದಲ್ಲೂ ವ್ಯಾಪಾರಸಂಬಂಧವಾದ ಕೆಲಸಗಳ ಬಗ್ಗೆ ಒಪ್ಪಂದ ಮಾಡುವದರ ವಿಷಯದಲ್ಲೂ ವ್ಯಾಪಾರದ ಕೆಲಸಮಾಡುವುದರಲ್ಲೂ ಹಾಲಿ ಇರುವ ಪರಿಹಾರಗಳು ಸಾಕಾಗಿರುವುದಿಲ್ಲ. ಇತರ ಕೆಲವು ದೇಶಿಯ ಸಂಸ್ಥಾನಗಳಲ್ಲೂ ಬ್ರಿಟಿಷ್ ಇಂಡಿಯಾದಲ್ಲೂ ಜಾರಿಯಲ್ಲಿರುವ ನಿಬಂಧನೆಯ ತರಹೆಯಲ್ಲಿ ಸರ್ಕಾರದವರ ಮೇಲೆ ದಾವೆ ತರುವುದಕ್ಕೆ ಏರ್ಪಾಟು ಮಾಡಿ ಒಂದು ಕಾನೂನನ್ನು ವಿಧಿಸಬೇಕಾದದ್ದು ಅವಶ್ಯಕವಾಗಿರುವುದೆಂದು ಆಗಿಂದಾಗ್ಗೆ ಅರಿಕೆಗಳು ಬಂದಿರುತ್ತವೆ. ನ್ಯಾಯ ವಿಧಾಯಕ ಸಭೆಯ ಮುಂದೆ ಒಂದು ಮಸೂದಾ ಕಾನೂನನ್ನು ಕ್ಷಿಪ್ರದಲ್ಲಿಯೇ ಇರಿಸಲಾಗುವುದೆಂದು ಕಳೆದ ಮರ್ಧಂತ್ಯುತ್ಸವದ ಅಧಿವೇಶನದ 37 ನೆಯ ವಿಷಯಕ್ಕೆ ಸರ್ಕಾರದವರು ಕೊಟ್ಟ ಉತ್ತರದಲ್ಲಿತ್ತು. ಸರ್ಕಾರದವರು ಈಗ ಈ ವಿಷಯದಲ್ಲಿ ಕಾರ್ಯಭಾಗ ನಡೆಸಬೇಕೆಂದು ನಿಶ್ಚಯಿಸಿರುತ್ತಾರೆ. ಮತ್ತು ಯಾವ ಯಾವ ತರಹೆಯ ಸಂದರ್ಭಗಳಲ್ಲಿ ಆ ಹಕ್ಕನ್ನು ಕೊಡಲು ಸರ್ಕಾರದವರು ಸಿದ್ಧರಾಗಿರುತ್ತಾರೆಂಬುದನ್ನು ಸ್ಪಷ್ಟವಾಗಿಯೂ ನಿಷ್ಕೃಷ್ಟವಾಗಿಯೂ ನಿರ್ದೇಶಿಸಬೇಕೆಂದು ಉದ್ದೇಶಿಸಿದೆ ಆಬಗ್ಗೆ ಒಂದು ಮಸೂದಾ ಕಾನೂನನ್ನು ತಯಾರು ಮಾಡಿದೆ. ಅದರ ವಿಷಯದಲ್ಲಿ ಈ ಸಭೆಯವರಿಗಿರುವ ಒಟ್ಟಿನ ಅಭಿಪ್ರಾಯವನ್ನು ತಿಳಿಯುವ ಬಗ್ಗೆ ಅದು ಈ ಅಧಿವೇಶನದಲ್ಲಿ ತಮ್ಮಗಳಿಗೆ ಒಪ್ಪಿಸಲ್ಪಡುವುದು.

1908ನೆಯ ವರುಷದ ಮೈಸೂರು ವರ್ತಮಾನ ಪತ್ರಿಕೆಗಳ ರೆಗ್ಯುಲೇಷನ್.

ಈ ವರ್ಷದಲ್ಲಿ ಮೂರು ವೃತ್ತಾಂತ ಪತ್ರಿಕೆಗಳ ನಡೆತೆಯ ವಿಷಯದಲ್ಲಿ ಸರ್ಕಾರದವರು ವಿಚಾರಣೆ ಹುಕುಂ ಮಾಡಿ ನಡೆಸುವಂತೆ ರೆಗ್ಯುಲೇಷನಿನಸಾರವಾಗಿ ಅವರ ಮೇಲೆ ಏತಕ್ಕೆ ಕ್ರಮ ನಡೆಸಕೂಡದೆಂಬುದಕ್ಕೆ ಕಾರಣ ತೋರಿಸಬೇಕೆಂದು ಅವುಗಳ ಸಂಪಾದಕರಿಗೆ ನೋಟೀಸು ಕೊಟ್ಟರು. ಅವುಗಳ ಪೈಕಿ ಎರಡು ಪತ್ರಿಕೆಗಳ ವಿಷಯದಲ್ಲಿ ಮಾಜೀ ಚೀಫ್ ಜಡ್ಜಿಯವರಾದ ಸರ್ ವೆಸ್ಲಿ ಮಿಲ್ಲರ್‌ರವರ ರಿಪೋರ್ಟನ್ನು ಮನಸ್ಕರಿಸಿ ಈಗ ಹುಕುಂ ಸಾದರು ಮಾಡಿರುತ್ತಾರೆ.

ಮೈಸೂರು ವರ್ತಮಾನಪತ್ರಿಕೆಗಳ ರೆಗ್ಯುಲೇಷನನ್ನು ರದ್ದು ಮಾಡಬೇಕು ಅಥವಾ ಬದಲಾಯಿಸಬೇಕು ಎಂದು 1916ನೆಯ ಇಸವಿ ಲಾಗಾಯ್ತು ಈ ಸಭೆಯಲ್ಲಿ ಒತ್ತಿ ಪ್ರಾರ್ಥಿಸುತ್ತಲಿದಾರೆ. 1916ರಲ್ಲಿ ಈ ವಿಷಯವನ್ನು ಪುನಃ ಪರ್ಯಾಲೋಚಿಸುವುದಕ್ಕೆ ಇನ್ನೂ ಕಾಲವು ಪ್ರಾಪ್ತವಾಗಲಿಲ್ಲವೆಂದು ಸರ್ಕಾರದವರು ತಿಳಿಸಿ ಪ್ರಾಮಾಣೀಕನಾದ ಯಾವ ಎಡಿಟರಿಗೂ (ಸಂಪಾದಕ) ಯಾವದೊಂದು ಭಯಕ್ಕೂ ಕಾರಣವಿಲ್ಲವೆಂದು ಸಭೆಯವರಿಗೆ ಭರವಸೆಕೊಟ್ಟರು. 1917 ರಲ್ಲಿ ಸಂಸ್ಥಾನದಲ್ಲಿ ಹೆಚ್ಚಾಗಿ ವರ್ತಮಾನ ಪತ್ರಗಳು ಪ್ರಚುರವಾಗುವುದಕ್ಕಾಗಿ ಸರ್ಕಾರದವರಿಗೆ ಪ್ರೋತ್ಸಾಹವನ್ನು ಕೊಡುವ ಇಷ್ಟವಿದ್ದರೂ, ಯುದ್ಧವು ಮುಕ್ತಾಯವಾದ ಹೊರತು ಸದರಿ ರೆಗ್ಯುಲೇಷನನ್ನು ರದ್ದು ಮಾಡುವ ಅಂಶವನ್ನು ಪರ್ಯಾಲೋಚಿಸಲಾಗಲಾರದೆಂದು ಹೇಳಿದರು. ಆದರೂ ಸರ್ಕಾರದವರು ರೆಗ್ಯುಲೇಷನಿನ ಪೀನಲ್ (ದಂಡನೆಯನ್ನು ವಿಧಿಸುವ) ನಿಯಮಗಳನ್ನು ಚೀಫ್‌ಕೋರ್ಟಿನ ಜಡ್ಜರೊಬ್ಬರು ಮೊದಲೇ ಜುಡಿಷಲ್ ತರಹೆಯ ವಿಚಾರಣೆಯನ್ನು ನಡಿಸಿದ ಹೊರತು ವಿಧಿಸಕೂಡದೆಂದು ಹುಕುಂ ಮಾಡಿದರು.

ಹೀಗಾದರೂ ಈ ವಿಷಯವು ಪದೇಪದೇ ಚರ್ಚೆಗೆ ಬರುತ್ತಲಿದೆ 1919 ರಲ್ಲಿ ರದ್ದುಮಾಡುವ ವಿಷಯವನ್ನು ಪರ್ಯಾಲೋಚಿಸುವುದಾಗಿ ಸರ್ಕಾರದವರು ವಾಗ್ದಾನ ಮಾಡಿದರು. 1920 ರಲ್ಲಿ - ಈ ರೆಗ್ಯುಲೇಷನಿನ ಕಾಠಿಣ್ಯವನ್ನು "ಕಡಿಮೆಮಾಡುವ ಉದ್ದೇಶದಿಂದ ಅದರಲ್ಲಿ ಯಾವುದಾದರೂ ತಿದ್ದುಪಾಟುಗಳು ಅವಶ್ಯಕವಾಗಿದ್ದರೆ ಅಂಥಾ ತಿದ್ದುಪಾಟುಗಳನ್ನು ಮಾಡುವ ವಿಷಯವನ್ನು ಸರ್ಕಾರದವರು ಪರಿಶೀಲಿಸುವರು" ಎಂದು ಅವರು ಹೇಳಿದರು.

1921 ನೆ ದಸರಾ ಅಧಿವೇಶನದಲ್ಲಿ ಈ ಸಭೆಯವರಿಗೆ ದಿವಾನ್‌ರವರು ಭಾಷಣಮಾಡಿದಾಗ ತಾವಾಗಿಯೇ ಈ ವಿಷಯವನ್ನು ಕುರಿತು "ಈ ರೆಗ್ಯುಲೇಷನಿನಲ್ಲಿ ವಿಧಿಸಿರುವ ಶಿಕ್ಷೆಗಳು ತಕ್ಸೀರಿನ ಸ್ವಭಾವಕ್ಕೆ ತಕ್ಕಂತೆ ಏರ್ಪಟ್ಟಿಲ್ಲವಾಗಿರುವುದರಿಂದಲೂ ಮತ್ತು ಬಹಳ ಕಠಿಣವಾಗಿರುವುದರಿಂದಲೂ ಧಾರಾಳವಾಗಿ ಸ್ವತಂತ್ರಾಭಿಪ್ರಾಯವನ್ನು ಸೂಚಿಸುವ ವರ್ತಮಾನಪತ್ರಿಕೆಗಳ ಏಳಿಗೆಗೆ ಅದು (ರೆಗ್ಯುಲೇಷನು) ಒಂದು ದೊಡ್ಡ ಅಡಚಣೆಯಾಗಿ ಪರಿಣಮಿಸಿದೆ ಎಂದು ನಂಬುವುದಕ್ಕೆ ಕಾರಣವಿದೆ. ಈ ಕಾನೂನನ್ನು ರದ್ದುಮಾಡುವ ಅಥವಾ ತಿದ್ದುಪಡಿಮಾಡುವ ವಿಷಯವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ." ಎಂದು ತಿಳಿಸಿದರು. ಚರ್ಚೆ ನಡೆಸುವಾಗ ಸಭೆಯವರ ಅಭಿಪ್ರಾಯವು ತಿದ್ದುಪಡಿ ಮಾಡಬೇಕೆ ಹೊರತು ರದ್ದುಮಾಡಬೇಕೆಂದು ಇರಲಿಲ್ಲ. ದಿವಾನ್‌ರವರು ಮೆಂಬರುಗಳ ಅಭಿಪ್ರಾಯದ ಸಾಮಾನ್ಯ ಭಾವನೆಯನ್ನು ಈ ರೀತಿಯಾಗಿ ತಮ್ಮ ಉಪಸಂಹಾರ ಭಾಷಣದಲ್ಲಿ ಸಂಕ್ಷೇಪವಾಗಿ ತಿಳಿಸಿದಾರೆ. "ಕಾನೂನಿನಿಂದ ರೆಗ್ಯುಲೇಷನಿನ ಕಠಿಣವಾದ ನಿಯಮಗಳನ್ನು ತೆಗೆದುಬಿಟ್ಟರೂ ವರ್ತಮಾನ ಪತ್ರಿಕೆಗಳ ವಿಷಯದಲ್ಲಿ ಸರ್ಕಾರದವರಿಗೆ ಸ್ವಲ್ಪಮಟ್ಟಿಗೆ ಹತೋಟಿ ಅವಶ್ಯಕವಾಗಿರಬೇಕೆಂಬುದು ಸಭೆಯವರ ಒಟ್ಟಿನ ಅಭಿಪ್ರಾಯವೆಂದು ನಾವು ತಿಳಿಯುತ್ತೇವೆ. .... ಈ ಸಭೆಯವರ ಸಲಹೆಗಳಿಗೆ ಸರಿಯಾದ ಗಮನ ಕೊಡಲಾಗುವುದು."

ಹಾಲಿ ಇರುವ ವರ್ತಮಾನ ಪತ್ರಿಕೆಗಳ ಕಾನೂನನ್ನು ವಜಾಮಾಡುವುದಕ್ಕಾಗಿಯೂ, ಈ ದೇಶದ ಜನಸಮುದಾಯದ ಅಭಿಪ್ರಾಯಕ್ಕೂ ಹೆಚ್ಚಾಗಿ ಹೊಂದಿಕೆಯಾಗಿರುವಂತೆ ಒಂದು ಹೊಸದಾದ ಮಸೂದಾ ಕಾನೂನನ್ನು ವಿಧಿಸುವುದಕ್ಕಾಗಿಯೂ ಕ್ರಮ ಜರಗಿಸುವಂತೆ ಉದ್ದೇಶಿಸಿರುವುದನ್ನು ಈಗತಿಳಿಯಪಡಿಸಲು ಹರ್ಷವುಳ್ಳವರಾಗಿದ್ದೇವೆ. ಅಲ್ಲದೆ ಈ ತಿದ್ದುಪಡಿಯಾದ ಮಸೂದಾ ಕಾನೂನಿನ ವಿಷಯದಲ್ಲಿ ತಾವುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಬಗ್ಗೆ ಅದನ್ನು ಈ ಅಧಿವೇಶನದಲ್ಲಿ ತಮ್ಮಗಳ ಮುಂದಿಡಲಾಗುವುದು.

ಅದರ ಮುಖ್ಯ ಆಶಯವು ಏನಿರುವುದೆಂದರೆ:—(1) ಒಂದು ವೃತ್ತಾಂತ ಪತ್ರಿಕೆಯ ಸಂಪಾದನೆ, ಮುದ್ರಣ ಮತ್ತು ಪ್ರಕಟನಕ್ಕೆ ಸರ್ಕಾರದವರ ಅನುಮತಿಯನ್ನು ವಜಾಮಾಡುವುದು; (2) ಅಪರಾಧವೆಂದು ಭಾವಿಸಲ್ಪಡುವ ವಿಷಯಗಳ ಸ್ವರೂಪವನ್ನು ನಿಷ್ಕೃಷ್ಟವಾಗಿ ನಮೂದಿಸುವುದು; (3) ಜುಡಿಷಿಯಲ್ ವಿಚಾರಣೆ ಇಲ್ಲದೇ ಯಾವ ವೃತ್ತಾಂತ ಪತ್ರಿಕೆಯ ಮೇಲೂ ಯಾವ ಕ್ರಮವನ್ನೂ ನಡೆಸದಿರುವುದು; ಮತ್ತು (4) ಆ ರೀತಿ ವಿಚಾರಣಾಪೂರ್ವಕ ಕೊಡಲಾಗುವ ಹುಕುಮಿನ ಮೇಲೆ ಚೀಫ್ ಕೋರ್ಟಿಗೆ ಅಪೀಲಿಗೆ ಅವಕಾಶ ಕೊಡುವುದು.

ದಿವಾನ್‌ರವರ ಸಂಚಾರದಲ್ಲಿ ಉಂಟಾದ ಅಭಿಪ್ರಾಯಗಳು.

ಮೈದಾನ ಡಿಸ್ಟ್ರಿಕ್ಟುಗಳಾದ ಕೋಲಾರ, ತುಮಕೂರು ಮತ್ತು ಚಿತ್ರದುರ್ಗದಲ್ಲಿ ಈಚೆಗೆ ನಾವು ಬಹುದೂರ ಸಂಚಾರ ಮಾಡಿದೆವು. ಮತ್ತು ಕಳೆದ ವರ್ಷದಲ್ಲಿ ಹಲವು ಇಲಾಖೆಗಳು ನಡೆಸಿರುವ ಕೆಲಸವನ್ನು ಪರಿಶೀಲಿಸುವಾಗ ಅಜಮಾಯಿಷಿಯಲ್ಲಿ ಉಂಟಾದ ಅನುಭವಗಳಲ್ಲಿ ಕೆಲವನ್ನು ನಿರ್ದೇಶಿಸಿದ್ದೇವೆ. ಕಳೆದ ಜೂನ್ ತಿಂಗಳಲ್ಲಿ, ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಬಡ್ಜೆಟ್ಟಿನ ಮೇಲಣ ಚರ್ಚೆಯನ್ನು ಮುಕ್ತಾಯ ಮಾಡುವಾಗ ರಾಜ್ಯಾಡಳಿತದ ಮುಂದಣ ಕೆಲಸದ ವಿಷಯದಲ್ಲಿ ಅತ್ಯಂತ ಜರೂರಾದುವುಗಳೆಂದು ಹನ್ನೆರಡು ಮುಖ್ಯ ವಿಷಯಗಳನ್ನು ವಿವರಿಸಿದ್ದೇವೆ. ಈ ವಿಷಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕಾರ್ಯಕಾರಿಯಾಗಿಯೂ, ತ್ವರೆಯಾಗಿಯೂ ತಕ್ಕರೀತಿಯಲ್ಲಿ ಬಗೆಹರಿಸಲನುಕೂಲಿಸುವಂತೆ ಮಾಡಿಕೊಳ್ಳುವುದಕ್ಕಾಗಿ ವಿವಿಧ ಇಲಾಖೆಗಳಲ್ಲಿನ ಕೆಲಸದ ಈಗಣ ಸ್ಥಿತಿಯನ್ನು ಸ್ವತಃ ತಿಳಿದುಕೊಳ್ಳಬೇಕೆಂಬುದು ನಾವು ಸಂಚಾರ ಮಾಡಿದುದರ ಉದ್ದೇಶಗಳಲ್ಲೊಂದಾಗಿತ್ತು. ಆದರೆ ನ್ಯಾಯವಿಧಾಯಕ ಸಭೆಯ ಮುಂದೆ ನಾವು ಹಿಂದೆಯೇ ಇಟ್ಟಿರುವ ಪಟ್ಟಿಯಲ್ಲಿನ 5ನೆಯ ನಂಬರಿನ ಬಾಬಿಗೆ ಎಂದರೆ ಡಿಸ್ಟ್ರಿಕ್ಟ್ ಆಡಳಿತದ ಮೇಲ್ಪಾಟಿಗೆ, ಸಂಬಂಧಪಟ್ಟ ಅತ್ಯುಪಯುಕ್ತವಾದ ಸಂಗತಿಯನ್ನು ಸಂಗ್ರಹಿಸಲು ಈ ಸಂಚಾರದಿಂದ ಸಹಾಯವಾಯಿತೆಂದು ತಮಗೆ ತಿಳಿಸಬಹುದಾಗಿದೆ. ಸಾಮಾನ್ಯವಾಗಿ ಈ ಕೆಲಸಕ್ಕೆ ಸಂಬಂಧಪಟ್ಟ ಪದ್ಧತಿಗಳನ್ನೂ, ನಡವಳಿಕೆಯ ಕ್ರಮವನ್ನೂ ತಿದ್ದುಪಡಿ ಮಾಡಬೇಕೆಂದು ಈಗ ಸಲಹೆಗಳನ್ನು ವ್ಯವಸ್ಥೆ ಮಾಡುತ್ತಿದ್ದೇವೆ. ಡಿಸ್ಟ್ರಿಕ್ಟುಗಳ ನಿತ್ಯಗಟ್ಟಲೆಯ ಆಡಳಿತದ ಕಾರ್ಯದಲ್ಲಿ ಮೇಲ್ಪಾಟಿಗೆ ಹೆಚ್ಚಿನ ದಅವಕಾಶವಿದೆಯೆಂಬುದು ನಮ್ಮ ಸಂಚಾರದಿಂದುಂಟಾದ ಸಾಮಾನ್ಯ ಅನುಭವವಾಗಿದೆ. ಇದಲ್ಲದೆ, ಜನರಿಗೆ ಸ್ಥಳೀಯ ಆಫೀಸರುಗಳೇ ಸುಲಭವಾಗಿ ಪರಿಹಾರಮಾಡಬಹುದಾದ ಕುಂದು ಕೊರತೆಗಳು ಹಾಲಿ ಅನೇಕವಾಗಿವೆ. ಜನಗಳಿಂದ ಬಂದ ಅರಿಕೆಗಳು ಮುಖ್ಯವಾಗಿ ಕೆರೆಗಳು, ಕುಡಿಯುವ ನೀರಿನ ಬಾವಿಗಳು, ಸ್ಕೂಲು ಕಟ್ಟಡಗಳು, ದರಖಾಸ್ತುಗಳ ಮೇಲೆ ಜಮೀನ್‌ಗಳನ್ನು ವಿಲೇವಾರಿಮಾಡುವುದು, ಜಂಗಲುಗಳ ಸಂಬಂಧದಲ್ಲಿನ ಕಷ್ಟದುಃಖಗಳು, ವಗೈರೆ ಬಾಬುಗಳಿಗೆ ಸಂಬಂಧಪಟ್ಟವುಗಳಾಗಿದ್ದವು. ಸರ್ಕಾರದವರ ಸಹಾನುಭೂತಿಗೆ ತಕ್ಕ ಅಭಿಮುಖ್ಯವನ್ನು ತೋರುವುದರಲ್ಲಿ ಜನರು ಬಹುಮಟ್ಟಿಗೆ ಸಿದ್ಧರಾಗಿರುವುದೇ ಅಲ್ಲದೆ, ದಿನೇದಿನೇ ಅಭಿವೃದ್ಧಿಯಾಗಿ ಹರಡಬೇಕೆಂದು ಆತುರದಿಂದ ನಿರೀಕ್ಷಿಸಲ್ಪಡುತ್ತಿರುವ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಎಲ್ಲಾ ಏರ್ಪಾಡುಗಳಲ್ಲೂ ಮತ್ತು ರಸ್ತೆಗಳು, ಬಾವಿಗಳು, ಕೆರೆಗಳು, ಸ್ಕೂಲು ಕಟ್ಟಡಗಳು, ಇವೇ ಮೊದಲಾಗಿ ಜನೋಪಯುಕ್ತವಾದ ಮೇಲ್ಪಾಡುಗಳಿಗೆ ಸಂಬಂಧಪಟ್ಟ ಎಲ್ಲಾ ಕಾಂಗಾರಿಗಳಲ್ಲೂ ಜನರು ಪ್ರತಿಯೊಂದು ರೀತಿಯಲ್ಲಿಯೂ ಸಹಕಾರಿಗಳಾಗಲು ಇಷ್ಟವುಳ್ಳವರಾಗಿದಾರೆ. ರೈತಾಪಿ ಜನರಲ್ಲಿ ಬಡಬಗ್ಗರ ಹಣಕಾಸಿನ ಸ್ಥಿತಿಯು ತೃಪ್ತಿಕರವಾಗಿಲ್ಲ. ಅವರ ಸ್ಥಿತಿಗತಿಗಳನ್ನು ಕುರಿತು ತಪಶೀಲುವಾರಾಗಿ ಪರಿಶೀಲಿಸಬೇಕಾದದ್ದು ಅವಶ್ಯಕವೆಂದು ಈಗ ನಾವು ದೃಢವಾಗಿ ನಂಬಿರುತ್ತೇವೆ.

ಈ ಎಲ್ಲಾ ವಿಷಯಗಳಿಗೂ ಸರ್ಕಾರದವರು ಅತ್ಯಧಿಕ ಗಮನವನ್ನು ಸದಾ ಕೊಡುತ್ತಲಿರುವರೆಂದು ತಮಗೆ ತಿಳಿಸಲಪೇಕ್ಷಿಸುತ್ತೇವೆ.

ಉಪಸಂಹಾರ.

ಈಗಿನ ಸಂದರ್ಭದಲ್ಲಿ ದ್ರವ್ಯಾಭಾವದ ದೆಸೆಯಿಂದ ಮೈಸೂರು ಸರ್ಕಾರಕ್ಕೆ ಸರ್ವತೋಮುಖವಾಗಿ ಕಷ್ಟ ಪರಂಪರೆಗಳು ಪ್ರಾಪ್ತವಾಗಿರುವ ಪ್ರಯುಕ್ತ ಸಮುಸ್ತರ ಸಹಾನುಭೂತಿಗೂ, ಕನಿಕರಕ್ಕೂ ಪಾತ್ರವಾಗಿರುವುದು. ದಿನೇ ದಿನೇ ಅಭಿವೃದ್ಧಿಹೊಂದುತ್ತಿರುವ ರಾಜ್ಯಾಡಳಿತಕ್ಕೆ ಹೆಚ್ಚು ಹೆಚ್ಚಾಗಿ ಹಣವು ಬೇಕಾದುದೊಂದು ಕಡೆ; ಆಯವ್ಯಯಗಳನ್ನು ಸಮತೂಕ ಮಾಡುವುದಕ್ಕಾಗಿ ಎಲ್ಲ ಬಾಬುಗಳಲ್ಲಿಯೂ ಖರ್ಚು ಕಡಿಮೆ ಮಾಡದಿದ್ದರೆ ವಿಧಿಯಿಲ್ಲದಿರುವುದು ಮತ್ತೊಂದು ಕಡೆ; ಈ ಉಭಯ ಸಂಕಟಗಳಿಗೆ ಸಿಕ್ಕಿ ನರಳುವುದು ಕೇವಲ ಪರಿತಾಪಕರವಾಗಿರುವುದು. ಈ ಹಿಂದೆ ಉಪಕ್ರಮಿಸಲ್ಪಟ್ಟು, ಈಗ ತ್ಯಾಜ್ಯಮಾಡಲು ಆಗಲಾರದ ಭಾರಿ ಕಾಮಗಾರಿಗಳನ್ನೂ ಏರ್ಪಾಡುಗಳನ್ನೂ ಮುಂದೆಯೂ ನಡೆಯಿಸುತ್ತಾ, ಬಾರದಿದ್ದರೆ ವಿಧಿಯಿಲ್ಲದಿರುವ ಪ್ರಯುಕ್ತ ಪ್ರಜೆಗಳ ಜ್ಞಾನಾಭಿವೃದ್ಧಿಗೂ, ಭಾಗ್ಯಾಭಿವೃದ್ಧಿಗೂ ಸಾಧಕಗಳಾದ ಇಲಾಖೆಗಳಲ್ಲಿ ಹೆಚ್ಚು ಅಭಿವೃದ್ಧಿಯ ಕಾರ್ಯಗಳನ್ನು ನಡೆಯಿಸುವುದಕ್ಕೆ ಸಾಧ್ಯವೇ ಇಲ್ಲದಂತೆ ಆಗಿದೆ. ಇಂತಹ ವಿಷಮ ಸಮಯದಲ್ಲಿ ಸಾಮಾನ್ಯ ಆದಾಯ ವ್ಯಯಗಳು ಸರಿಹೋಗುವಂತೆ ಮಾಡಿ ಆದಾಯ ಬರುವ ಕಾಮಗಾರಿಗಳ ಜಮಾಖರ್ಚನ್ನು ಇತರ ಬಾಬಿಗೆ ಸಂಬಂಧಪಟ್ಟ ಜಮಾ ಖರ್ಚಿನಿಂದ ಪ್ರತ್ಯೇಕಿಸಿಟ್ಟು, ಅದನ್ನು ನಮ್ಮ ಆಸ್ತಿಗಳನ್ನು ಹೆಚ್ಚಿಸಿ ಸದರೀ ಕಾಮಗಾರಿಗಳಿಂದ ಹೆಚ್ಚು ಆದಾಯವು ಬರುವಹಾಗೆ ಮಾಡಬೇಕೆಂಬುದೇ ನಮ್ಮ ಮುಖ್ಯವಾದ ಆಶಯವಾಗಿರುವುದು. ಇಷ್ಟು ಮಾತ್ರವೇ ಅಲ್ಲದೆ ಗ್ರಾಮನಿವಾರಣಾ ವಿಮೆ, ನೀರಾವರಿ ಬಂಡವಾಳ, ಕೈಗಾರಿಕೆಗಳ ಅಭಿವೃದ್ಧಿ ಇವುಗಳಿಗೆ ಸಂಬಂಧಪಟ್ಟ ಬಾಬುಗಳಿಗೆ ಹಣವನ್ನು ಶೇಖರಿಸಬೇಕಾದುದು ಅನಿವಾರ್ಯವಾಗಿದೆ. ಇವೆಲ್ಲದರಿಂದಲೂ ಸ್ವಲ್ಪಮಟ್ಟಿನ ಕಾರ್ಯ ವಿಪರ್ಯಾಸವೂ, ಕಾರ್ಯದಕ್ಷತಾ ಲೋಪವೂ, ಅತೃಪ್ತಿ ಅಸಮಾಧಾನಗಳೂ ಪ್ರಾಪ್ತವಾಗುವುದು ಸಹಜವೇ ಸರಿ. ಈ ಮೇಲ್ಕಂಡ ಸಮಸ್ತ ಅನನುಕೂಲ ಪರಂಪರೆಗಳೂ ಆದಷ್ಟು ಮಟ್ಟಿಗೆ ಅತ ಅಲ್ಪಕಾಲ ಪರ್ಯಂತವಾತ್ರ ಸಂಘಟಿಸುವಂತೆ ನೋಡಿಕೊಳ್ಳಬೇಕೆಂಬುದೇ ನಮ್ಮ ಆಶಯವಾಗಿರುವುದು.

ಮಹಾಶಯರೇ, ನಮ್ಮ ಭಾಷಣದಲ್ಲಿ ನಾನಾ ವಿಷಯಗಳನ್ನು ಕುರಿತು ದೀರ್ಘವಾಗಿ ಪ್ರಸ್ತಾಪ ಮಾಡಿ ತಮಗೆ ಬಹುಮಟ್ಟಿಗೆ ಬೇಸರವನ್ನುಂಟುಮಾಡಿರಬಹುದು. ಇಷ್ಟು ದೀರ್ಘವಾದ ಭಾಷಣವನ್ನು ಮಾಡಬೇಕಾಗಿ ಬಂದುದಕ್ಕೆ ಕಾರಣವೇನೆಂದರೆ—ಈಗಿನ ಸಂದರ್ಭದಲ್ಲಿ ರಾಜ್ಯಭಾರಕ್ಕೆ ಸಂಬಂಧಪಟ್ಟಿರುವ ಅಂಶಗಳು ಕಷ್ಟಪ್ರದಗಳಾಗಿರುವುದರಿಂದ ನಮ್ಮ ಸ್ಥಿತಿಗತಿಗಳು ಯಾವರೀತಿ ಇರುವುವೆಂಬುದನ್ನು ಕರಾರ್ಯಾಕ ತಿಳಿದುಕೊಳ್ಳಬೇಕಾದುದು ಅವಶ್ಯಕವಾಗಿರುವುದರಿಂದ ಈಗ ನಮ್ಮ ವ್ಯವಧಾನಕ್ಕೆ ಒಳಗಾಗಿರುವ ಮುಖ್ಯ ವಿಷಯಗಳನ್ನೆಲ್ಲಾ ವಿವರಿಸದಿದ್ದರೆ ವಿಧಿ ಇಲ್ಲದಿರುವುದೇ ಮುಖ್ಯಕಾರಣವಾಗಿರುವುದು.

ನಾವು ಈ ಭಾಷಣವನ್ನು ಪರಿಸಮಾಪ್ತಿಗೊಳಿಸುವುದಕ್ಕೆ ಮುಂಚೆ ಈ ಸಂಸ್ಥಾನದ ರಾಜ್ಯಭಾರ ಕ್ರಮದಲ್ಲಿ ಪ್ರಜೆಗಳಿಗೆ ಈಗ ಇರುವುದಕ್ಕಿಂತ ಹೆಚ್ಚು ಅಧಿಕಾರವನ್ನು ಕೊಡುವುದಕ್ಕೆ ಸಂಬಂಧಪಟ್ಟ ಮುಖ್ಯ ವಿಷಯವನ್ನು ಕುರಿತು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಬೇಕೆಂದು ತಾವುಗಳು ನಿರೀಕ್ಷಿಸಬಹುದು. ಆದರೆ ಕೆಲವು ಅನಿವಾರ್ಯಗಳ ದೆಸೆಯಿಂದ ಆ ರೀತಿ ಈ ದಿವಸ ಪ್ರಸ್ತಾಪಿಸಲು ಸಾಧ್ಯವಾಗದೇ ಹೋದುದಕ್ಕಾಗಿ ವಿಷಾದಿಸುತ್ತೇವೆ. ಇನ್ನು ಎರಡು ಮೂರು ದಿವಸಗಳೊಳಗಾಗಿ ಈ ವಿಷಯವನ್ನು ಪ್ರಕಟಪಡಿಸಲು ಸಾಧ್ಯವಾದೀತೆಂತಲೂ, ಹಾಗೆ ಪ್ರಕಟಪಡಿಸುವ ವಿಷಯವು ತಮಗೆಲ್ಲರಿಗೂ ಸಂಪೂರ್ಣ ತೃಪ್ತಿಯನ್ನುಂಟುಮಾಡುವುದೆಂತಲೂ ನಾವು ನಿರೀಕ್ಷಿಸುತ್ತೇವೆ.

ಇಂತಹ ವಿಷಮಕಾಲದಲ್ಲಿ ಸರ್ಕಾರದವರು ಕಾರ್ಯನಿರ್ವಾಹ ಮಾಡಬೇಕಾದರೆ ಧೈರ್ಯವೂ, ತಾಳ್ಮೆಯೂ, ಸಹನೆಯೂ ಆವಶ್ಯವಾಗಿರುತ್ತವೆ. ಯಾವ ಪ್ರಜಾನುಮೋದನೆಯು ರಾಜಕಾರ್ಯ ನಿರ್ವಾಹದಲ್ಲಿ ನಿರತರಾದ ಮಂತ್ರಿವರ್ಗಕ್ಕೆ ಅತ್ಯಾವಶ್ಯಕವೋ ಅಂತಹ ಸರ್ವ ಪ್ರಜಾನುಮೋದನೆಯು ನಮಗೆ ಲಭ್ಯವಾಗುವುದೆಂತಲೂ, ಪ್ರಜೆಗಳು ತಮ್ಮ ಅಭಿಪ್ರಾಯಗಳನ್ನು ಪೂರ್ವಕಾಲಕ್ಕಿಂತಲೂ ನಿಷ್ಕೃಷ್ಟವಾಗಿಯೂ, ನಿರ್ಭೀತರಾಗಿಯೂ ಸೂಚಿಸುವವರಾದರೆಂತಲೂ ಸಂಪೂರ್ಣ ಭರವಸೆಯುಳ್ಳವರಾಗಿರುತ್ತೇವೆ. ಶ್ರೀಮನ್ಮಹಾರಾಜರವರ ವಿವೇಚನಾಪೂರಿತವೂ, ಕೃಪಾವಿಶಿಷ್ಟವೂ ಆದ ರಾಜ್ಯಪರಿಪಾಲನೆಯಲ್ಲಿ ಮೈಸೂರು ಸಂಸ್ಥಾನವು ಆಧುನಿಕರಾಜ್ಯಭಾರ ಕ್ರಮದಲ್ಲಿ ಸುಪ್ರಖ್ಯಾತಿಯನ್ನು ಹೊಂದಿರುತ್ತದೆ. ಮಹಾಸ್ವಾಮಿಯವರ ಪ್ರಜೆಗಳು ಅವರಿಗಿರುವ ಸ್ವಾತಂತ್ರ್ಯಗಳನ್ನು ಸದುಪಯೋಗಪಡಿಸಿಕೊಂಡು ಸರ್ಕಾರದವರೊಡನೆ ಏಕೀಭವಿಸಿ ಕೆಲಸಮಾಡುತ್ತಾ ಸಂಸ್ಥಾನದ ಕ್ಷೇಮಾಭ್ಯುದಯಗಳಿಗೆ ಸಂಬಂಧಪಟ್ಟ ಸಮಸ್ತ ವಿಷಯಗಳಲ್ಲಿಯೂ ಸಹಾಯಕರಾಗ ಇತೋಪ್ಯತಿಶಯವಾದ ಪುರೋವೃದ್ಧಿಯು ಸಿದ್ಧಿಸುವಂತೆ ಸರ್ವ ಪ್ರಯತ್ನಗಳನ್ನೂ ಮಾಡುವುದು ಶ್ರೀಮನ್ಮಹಾರಾಜರವರ ಪ್ರಜೆಗಳ ಮೇಲೆ ಬಿದ್ದ ಭಾರವಾಗಿರುತ್ತದೆ.

ಎ. ಆರ್. ಬಾನರ್ಜಿ,
ಮೈಸೂರು ಸಂಸ್ಥಾನದ ದಿವಾನ್‌ರವರು.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಸ್ ಭಂಗಾರದ ಮುಳ್ಳುಳ್ಳ

13 ರಾಯಲ್ ಪೌಂಟೇನ್‌ಪೆನ್.

ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ [illegible]ನೆಟ್‌ನಿಂದ ತಯಾರಿಸಿದ್ದು ಇದಕ್ಕೆ [illegible]ದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿದಗೂ ಬರೆಯುವದು. 1ಕ್ಕೆ 1-10-0.



ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಅಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇವರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಳನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿನಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿನಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ [illegible]

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
36 ಬಳ್ಳಾರಿ.

೧೯೨೨ನೆಯ ಇಸವಿ ಅಕ್ಟೋಬರ್ ತಾ॥ ೨೨ ರಿಂದ ೧೯೨೨ನೆಯ ಅಕ್ಟೋಬರ್ ತಾ॥ ೨೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ನೆಯ ದುಂದುಭಿನಾಮ ಸಂವತ್ಸರದ ಕಾರ್ತಿಕ ಶುದ್ಧ ಬಿದಿಗೆಯಿಂದ ಕಾರ್ತಿಕ ಶುದ್ಧ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
22	ಭಾನು	ಬಿದಿ	21-51	ವಿಶಾ	39-19	6
23	[1] ಸೋಮ	ತದಿ	17-26	ಅನೂ	36-49	7
24	ಮಂಗಳ	ಚೌತಿ	13-50	ಜ್ಯೇಷ್ಠ	15-13	8
25	ಬುಧ	ಪಂಚ	11-22	ಮೂಲ	34-49	9
26	ಗುರು	ಷಷ್ಠಿ	9-56	ಪೂಷಾ	35-27	10
27	ಶುಕ್ರ	ಸಪ್ತ	9-46	ಉಷಾ	37-23	11
28	ಶನಿ	ಅಷ್ಟ	10-58	ಶ್ರವ	40-30	12

(1) ಕಾರ್ತಿಕಸೋಮವಾರ.

MYSORE CITY MUNICIPALITY.

NOTICE DATED 20TH SEPTEMBER 1922.

The Government having in their Proceedings No. L. 1864/ Ml. 69-22-12 dated 23rd August 1922 sanctioned the levy of tax on dogs and the enhancement of the rates of taxes on vehicles and animals in the City, it is hereby notified for the information of the inhabitants of this City Municipality. that the tax on dogs and these enhanced rates will come into effect to from the 1st day of January 1923.

The schedule of taxes amended as per aforesaid Government Order is appended below :—

Sl. No.	Name of tax.	Class of property liable.	Amount for which or rate at which classes liable.	Exemptions.	Time at which taxes payable.
3.	Tax on vehicles and animals.	All vehicles & animals kept for use within Municipal limits.	VEHICLES AND TAX HALF YEARLY. 1. Four-wheeled carriage on springs drawn by two or more horses 5 0 0 2. Four-wheeled carriage on springs drawn by one horse or pair of horses, below 13 hands or bulls or bullocks. ... 3 0 0 3. Two-wheeled carriage on springs drawn by one or more horses, mules buils or bullocks ... 2 8 0 4. Bicycle or Tricycle ... 1 8 0 5. Motor Car ... 15 0 0 6. Motor Cycle ... 7 8 0 7. Double bullock cart ... 1 8 0 8. Single bullock cart ... 1 0 0 9. Every hand cart without springs including wheel barrows, with either one two or three wheels and pushed by the hand ... 0 8 0 ANIMALS AND TAX HALF YEARLY. 1. Horse over 13 hands ... 3 0 0 2. Horse of or under 13 hands or mule 1 8 0 3. Elephant ... 12 0 0 4. Camel ... 6 0 0 5. Bull or Bullock ... 0 8 0 6. Male buffalo ... 0 8 0 7. Ass ... 0 2 0 8. Dog ... 0 8 0	(a) Vehicles and animals belonging to His Highness the Maharaja. (b) Vehicles and animals the property of Government unless Government consent to the levy of the tax. (c) Vehicles and animals belonging to the Municipality. (d) Animals exempt from the tax under Section 25 of the Indian Volunteers Act. 1869. (e) Juvenile vehicles such as perambulators, etc. (f) Vehicles kept by carriage builders or dealers and animals kept by dealers therein solely for sale. (g) Conveyance in transit or staying within Municipal limits not longer than 30 days in any half-year. (h) Vehicles and animals belonging to members of the City Police and officers of the City Municipality employed on out-door duties and cycles belonging to the out-door subordinates of the City Improvement Trust Board and Sub-Assistant Surgeons in charge of L. F. Dispensaries in the City. Provided that not more than one vehicle and animal shall be exempt ed without the special permission of the Municipal Council.	In two equal instalments in advance in July & January every year.

The Government having in their Proceedings No. L. 1865/ Ml. 69-22-11 dated 23rd August 1922 sanctioned the enhancement of the rate of tax on vacant lands in this City from 2 annas per 80 Square Yards to 4 annas per 100 Square Yards, it is hereby notified for the information of the inhabitants of the City Municipality that the enhanced rate will come into effect from the 1st day of January 1923.

The schedule of tax amended as per aforesaid Government Order is appended below :—

Sl. No.	Name of tax.	Class of property liable.	Amount for which or rate at which classes liable.	Exemptions.	Time at which taxes payable.
2	Tax on vacant lands.	Vacant land.	Four annas for every 100 square yards.	Same as above excepting Exemption (d)	In two equal instalments in advance in July and January every year.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸು.

ಹಾಲಿ ಮೈಸೂರು ಸಿಟಿಯಲ್ಲಿ ವಾಹನಗಳು ಮತ್ತು ಹೊರೆಹೊರೆವ ಪ್ರಾಣಿಗಳ ಮೇಲೆ ವಸೂಲಾಗುತ್ತಾ ಇರುವ ಮ್ಯುನಿಸಿಪಲ್ ತೆರಿಗೆಯನ್ನು ಹೆಚ್ಚು ಮಾಡುವುದನ್ನೂ ಮತ್ತು ನಾಯಿಗಳಿಗೆ ತೆರಿಗೆಯನ್ನು ದಾಖಲ್ಮಾಡುವುದನ್ನೂ ಗೌರ್ನಮೆಂಟಿನವರು 23-8-1922 ನೇ ಮರ್ರ್ಯಂ L. 1864/Ml. 69-22-12 ನೇ ನಂಬರ್ ಪ್ರೊಸೀಡಿಂಗ್ಸನ್ನು ಸ್ಯಾಂಕ್ಷನ್ ಮಾಡಿರುತ್ತಾರಾದ್ದರಿಂದ ಇದರಂತೆ 1923 ನೇ ಜನವರಿ ಗುರ್ರೇ ಲಾಗಾಯಿತು ಜಾರಿಗೆ ತರಲ್ಪಡುತ್ತೆಂದು ಇದರಿಂದ ಸಕಲರಿಗೂ ತಿಳಿಯಪಡಿಸಿರುತ್ತೆ.

ಮೇಲ್ಕಂಡ ಗೌರ್ನಮೆಂಟ್ ಆರ್ಡರಿನಂತೆ ತಿದ್ದುಪಡಿಯಾದ ತೆರಿಗೆಗಳ ತಃಖ್ತೆಯನ್ನು ಇದರಲ್ಲಿ ನಮೂದಿಸಿರುತ್ತೆ.

ಜಂಜರು ನಂಬರು	ತೆರಿಗೆ ಬಾಬು	ತೆರಿಗೆ ವಿಧಿಸಲ್ಪಡುವ ಸ್ವತ್ತು	ತೆರಿಗೆ ವಿಧಿಸಲ್ಪಡುವ ದರಗಳು	ವಿನಾಯತಿಗಳು	ಯಾವಾಗ ಪಾವತಿ ಆಗತಕ್ಕದ್ದು
2	ವಾಹನ ಮತ್ತು ಪ್ರಾಣಿಗಳ ತೆರಿಗೆ.	ಮ್ಯುನಿಸಿಪಲ್ ಸರಹದ್ದಿನೊಳಗೆ ಇಟ್ಟುಕೊಂಡಿರುವ ಎಲ್ಲಾ ವಾಹನಗಳೂ ಪ್ರಾಣಿಗಳೂ.	ವಾಹನಗಳಿಗೆ ಪ್ರತಿ ಆರುತಿಂಗಳಿಗೂ ತೆರಿಗೆ. (1) ಎರಡು ಅಥವಾ ಹೆಚ್ಚು ಕುದುರೆಗಳಿಂದ ಎಳೆಯಲ್ಪಡುವ ನಾಲ್ಕುಚಕ್ರದ ಸ್ಪ್ರಿಂಗ್ ಗಾಡಿ 5-0-0 (2) 13 ಹಿಡಿಗೆ ಕಮ್ಮಿಯಾದ ಒಂದು ಅಥವಾ ಒಂದುಜೊತೆ ಕುದುರೆಗಳಿಂದ ಅಥವಾ ಎತ್ತುಗಳಿಂದ ಎಳೆಯಲ್ಪಡುವ 4ಚಕ್ರದ ಸ್ಪ್ರಿಂಗ್‌ಗಾಡಿ 3-0-0 (3) ಒಂದು ಅಥವಾ ಹೆಚ್ಚು ಕುದುರೆಗಳಿಂದ ಹೋರುವ ಕತ್ತೆ ಅಥವಾ ಎತ್ತುಗಳಿಂದ ಎಳೆಯಲ್ಪಡುವ 2 ಚಕ್ರದ ಸ್ಪ್ರಿಂಗ್‌ಗಾಡಿ 2-8-0 (4) ಬೈಸಿಕಲ್ ಅಥವಾ ಟ್ರೈಸಿಕಲ್ 1-8-0 (5) ಮೋಟಾರ್‌ಕಾರ್ 15-0-0 (6) ಮೋಟಾರ್ ಸೈಕಲ್ 7-8-0 (7) ಜೋಡೆತ್ತಿನ ಗಾಡಿ 1-8-0 (8) ಒಂಟೆತ್ತಿನ ಗಾಡಿ 1-0-0 (9) ಕೈಯಿಂದ ತಳ್ಳಲ್ಪಡುವ ಸ್ಪ್ರಿಂಗ್ ಇಲ್ಲದ ಕೈಗಾಡಿ 0-8-0 ಪ್ರಾಣಿಗಳಿಗೆ ಪ್ರತಿ ಆರುತಿಂಗಳಿಗೂ ತೆರಿಗೆ. (1) 13 ಹಿಡಿಗೆ ಮೇಲ್ಪಟ್ಟ ಕುದುರೆ 3-0-0 (2) 13 ಹಿಡಿ ಅಥವಾ ಕೆಳಪಟ್ಟ ಕುದುರೆ ಅಥವಾ ಹೇಸರಕತ್ತೆ 1-8-0 (3) ಆನೆ 12-0-0 (4) ಒಂಟೆ 6-0-0 (5) ಎತ್ತು ಅಥವಾ ಹೋರಿ 0-8-0 (6) ಕೋಣ 0-8-0 (7) ಕತ್ತೆ 0-2-0 (8) ನಾಯಿ 0-8-0	(1) ಶ್ರೀಮನ್ ಮಹಾರಾಜರವರಿಗೆ ಸೇರಿದ ವಾಹನಗಳು ಮತ್ತು ಪ್ರಾಣಿಗಳು. (2) ಗೌರ್ನಮೆಂಟಿಗೆ ಸೇರಿದ್ದು ತೆರಿಗೆ ಹಾಕಲು ಅವರು ಒಪ್ಪದೆಹೋಗುವಂಥಾ ವಾಹನಗಳು ಮತ್ತು ಪ್ರಾಣಿಗಳು. (3) ಮ್ಯುನಿಸಿಪಾಲಿಟಿಗೆ ಸೇರಿದ ವಾಹನಗಳು ಮತ್ತು ಪ್ರಾಣಿಗಳು. (4) 1869ನೇ ಇಸವಿ ಇಂಡಿಯನ್ ವಾಲಂಟಿಯರ್ ಆಕ್ಟಿನ 25ನೇ ಸೆಕ್ಷನ್ನಿನಲ್ಲಿ ವಿನಾಯತಿ ಮಾಡಲ್ಪಟ್ಟಿರುವ ಪ್ರಾಣಿಗಳು. (5) ಮಕ್ಕಳನ್ನು ಕೂರಿಸಿ ತಿರುಗಿಸುವ ಗಾಡಿ ಮುಂತಾದುವು. (6) ಗಾಡಿಕಾರ್ಖಾನೆಯವರು ಮಾರಿ ಬಿಕರಿಗೆ ಇಟ್ಟಿರುವ ವಾಹನಗಳು ಮತ್ತು ವ್ಯಾಪಾರಗಾರರು ಮಾರಿಕೆಗಾಗಿ ಇಟ್ಟಿರುವ ಪ್ರಾಣಿಗಳು. (7) ಸಂಚಾರದಲ್ಲಿರುವ ವಾಹನಗಳು ಅಥವಾ ಯಾವ ಛಮಾಹಿಯಲ್ಲೂ 30 ದಿನಗಳಿಗಿಂತ ಹೆಚ್ಚುಕಾಲ ಮ್ಯುನಿಸಿಪಲ್ ಸರಹದ್ದಿನೊಳಗೆ ನಿಲ್ಲದಂಥಾ ವಾಹನಗಳು. (8) ಸಿಟಿ ಪೊಲೀಸ್ ಮೆಂಬರುಗಳ ಮತ್ತು ಹೊರಗೆ ಕೆಲಸ ಮಾಡಬೇಕಾದ ಸಿಟಿ ಮ್ಯುನಿಸಿಪಲ್ ಆಫೀಸರುಗಳ ವಾಹನಗಳೂ, ಪ್ರಾಣಿಗಳೂ ಇವರುಗಳು ಮ್ಯುನಿಸಿಪಲ್ ಕೌನ್ಸಿಲ್ಲಿನಿಂದ ಸ್ಪೆಷಲ್ ಅಪ್ಪಣೆ ಪಡೆದು ತೆರಿಗೆ ಇಲ್ಲದೆ ಒಂದು ವಾಹನವನ್ನೂ ಒಂದು ಪ್ರಾಣಿಯನ್ನೂ ಇಟ್ಟುಕೊಳ್ಳತಕ್ಕದ್ದು. ಮತ್ತು ಹೊರಗೆ ಕೆಲಸಮಾಡತಕ್ಕ ಸಿಟಿಇಂಪ್ರೂವ್‌ಮೆಂಟ್ ಟ್ರಸ್ಟುಬೋರ್ಡು ತಾಬೇದಾರರೂ ಲೋಕಲ್‌ಫಂಡು ಡಿಸ್‌ಪೆನ್ಸರಿ ಛಾರ್ಜಿನಲ್ಲಿರತಕ್ಕ ಸಬ್‌ಅಸಿಸ್ಟೆಂಟ್ ಸರ್ಜನ್‌ರೂ ಸಹ ಒಂದು ಸೈಕಲನ್ನು ಇಟ್ಟುಕೊಳ್ಳತಕ್ಕದ್ದು. (1) ಗೌರ್ನಮೆಂಟಿನ ಅಥವಾ ಮ್ಯುನಿಸಿಪಾಲಿಟಿಯ ಸ್ವಂತವಾದ ಅಥವಾ ಉಪಯೋಗದಲ್ಲಿರುವ ಅಥವಾ ಲೈಸೆನ್ಸು ಆಗಿರುವ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ರಿಜಿಸ್ಟರು ಮಾಡಲ್ಪಟ್ಟಿರುವ ವಾಹನಗಳೂ, ಚಕಡಾ ಗಾಡಿಗಳೂ, ಮತ್ತು ಪ್ರಾಣಿಗಳು. (2) ಸೈನ್ಯಗಳನ್ನು ಸಾಗಿಸುವುದಕ್ಕಾಗಲೀ ಗೌರ್ನಮೆಂಟಿನ ಇಲ್ಲವೆ ಶ್ರೀಮನ್ ಮಹಾರಾಜರವರ ಎಲ್ಲಾ ವಿಧವಾದ ಸಾಮಾನುಗಳನ್ನು ಸಾಗಿಸುವುದಕ್ಕಾಗಲೀ ಉಪಯೋಗಿಸುವ ವಾಹನಗಳೂ ಮತ್ತು ಪ್ರಾಣಿಗಳು. (3) ಸೈನ್ಯದ ಅಥವಾ ಪೊಲೀಸ್‌ಹುದ್ದೇದಾರರು ಡ್ಯೂಟಿಯ ಮೇಲಿರುವಾಗ ಉಪಯೋಗಿಸುವಂಥ ಅಥವಾ ಹಿಡಿದ ಸೊತ್ತನ್ನಾಗಲಿ ಆಸಾಮಿಯನ್ನಾಗಲಿ ಸಾಗಿಸುವಂಥಾ ವಾಹನಗಳೂ ಮತ್ತು ಪ್ರಾಣಿಗಳೂ.	ಪ್ರತಿವರ್ಷವೂ ಎರಡು ಬಿಸ್ತುಗಳಲ್ಲಿ ಅಂದರೆ ಜುಲೈ ಮತ್ತು ಜನವರಿಯಲ್ಲಿ.

ಹಾಲಿ ಮೈಸೂರು ಸಿಟಿಯಲ್ಲಿ ಖಾಲೀನಿವೇಶನಗಳಿಗೆ 80 ಚದರಗಜಕ್ಕೆ 2 ಆಣೆ ಪ್ರಕಾರ ವಸೂಲಾಗುತ್ತಾ ಇರುವ ಮ್ಯುನಿಸಿಪಲ್ ತೆರಿಗೆಯನ್ನು ಮುಂದೆ 100 ಚದರ ಗಜಕ್ಕೆ 4 ಆಣೆ ಪ್ರಕಾರ ವಸೂಲ್ಮಾಡಬಹುದೆಂದು ಗೌರ್ನಮೆಂಟಿನವರು 23-8-1922 ನೇ ಮರ್ರ್ಯಂ L. 1865/Ml. 67-22-11 ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಸ್ಯಾಂಕ್ಷನ್ ಮಾಡಿರುತ್ತಾರಾಗಿ ಈ ಹೆಚ್ಚು ದರವು 1923 ನೇ ಜನವರಿ ಗುರ್ರೇ ಲಾಗಾಯಿತು ಜಾರಿಗೆ ತರಲ್ಪಡುತ್ತೆಂದು ಇದರಿಂದ ಸಕಲರಿಗೂ ತಿಳಿಯಪಡಿಸಿರುತ್ತೆ.

ಮೇಲ್ಕಂಡ ಗೌರ್ನಮೆಂಟ್ ಆರ್ಡರ್ ಮೇರಿಗೆ ತಿದ್ದುಪಡಿಯಾದ ಕಂದಾಯದ ತಃಖ್ತೆ ಇದರಡಿ ನಮೂದಿಸಿರುತ್ತೆ.

ಜಂಜರು ನಂಬರು	ತೆರಿಗೆ ಬಾಬು	ತೆರಿಗೆ ವಿಧಿಸಲ್ಪಡುವ ಸ್ವತ್ತು	ತೆರಿಗೆ ವಿಧಿಸಲ್ಪಡುವ ದರಗಳು	ವಿನಾಯತಿಗಳು	ಯಾವಾಗ ಪಾವತಿ ಆಗತಕ್ಕದ್ದು
1	ಖಾಲೀನಿವೇಶನದ ತೆರಿಗೆ.	ಖಾಲೀನಿವೇಶನ.	ಪ್ರತಿ 100 ಚದರಗಜಗಳಿಗೆ ನಾಲ್ಕಾಣೆ.		ಪ್ರತಿವರ್ಷವೂ ಜುಲೈ ಮತ್ತು ಜನವರಿ ತಿಂಗಳುಗಳಲ್ಲಿ ಎರಡು ಬಿಸ್ತುಗಳಲ್ಲಿ ಮುಂಗಡವಾಗಿ.

ಕಾ. ಶ್ರೀಕಂಠೇಶ್ವರ ಅಯ್ಯರ್, ಪ್ರೆಸಿಡೆಂಟ್.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಙ್ಕಜ ನಕ್ಷತ್ರ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ...-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಅಕ್ಟೋಬರ್ ತಾರೀಖು ೨೯ ನೆಯ ಭಾನುವಾರ. (ಸಂಚಿಕೆ ೪೪

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತಿಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಚ್ಛಾದನ, ಕಥಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ ೩ ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಿನೆಮೋಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಶೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡ ಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.
,, ನಂ. 2 ರೂ. 7—8—0.

32 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



14

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.
ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್ ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0
,, ,, ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವೃಷಪಂಚಕ	೦—೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋಧಿಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

41 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋಪ್ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಫ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,
14 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಮೈಸೂರು ಸ್ಟಾರ್.

ಸಂಸ್ಕೃತವಿದ್ಯಾಭ್ಯಾಸ

[illegible]

ಆಂಗ್ಲ ಮಂತ್ರಿಮಂಡಲದ ಬದಲಾವಣೆ.

[illegible]

[illegible]

PUBLIC SERVICE IN MYSORE.

As a result of the incessant cry by other classes against the monopoly of public services by members of a single community, which forms an insignificant portion of the whole population of the State, the Government of His Highness the Maharaja were pleased to pass an order on the 16th May 1921. The joy of the people knew no bounds when the orders were passed, and they even thought that the millennium which they had vainly sought for many years had come at last. Their hopes were confirmed by the appointment of the Central Recruitment Board immediately after. In the course of the order appointing the Board, Government said that "the Board will have no power of direct appointment, but will act only as a vigilance committee." That is, the Board was like a watchdog which could bark but could never bite, and it clearly indicated that the Government reserved for themselves the power of rectifying things which might not be in accordance with the spirit of their order.

In the address to the Dasara Session of the Representative Assembly this year the Dewan said that, "the returns so far received show that 533 vacancies occured during the year and that 452 of them were filled up. Of the 452 persons appointed, 270 were Brahmins, 120 non-Brahmin Hindus, 29 Mahomedans, 29 Indian Christians and 4 of other communities." The Recruitment Board had registered 1021 applications and issued a list to all departments concerned. The above figures, incomplete as they are, clearly show that Brahmins carried away more than 61 out of every hundred appointments made during the period. Still more surprising is it to know that out of 6 Gazetted officers appointed during the period, only one happens to be a non-Brahmin. The officers who were responsible in making these appointments have totally ignored the existence of the Government Order, if not, defied it. This attitude of theirs must be severely condemned, and all those appointments which have been made in contravention of the instructions contained in the Government Order must be cancelled at once, if the Government wants to vindicate justice and establish its sincerity. The Government cannot but do this, because in para 6 of their Order they say that, "it will be a standing instruction to every officer authorised to make appointments to the public service, and to any special agency constituted in pursuance of this Order, to give preference to a candidate of a backward community in making an initial appointment so long as the former possesses the prescribed minimum qualification even though he may be less qualified than other candidates." Can any one doubt that the violation of the above instructions are directly opposed to the declared policy of Government?

We are glad that the Dewan has become aware of this action of the subordinate officers, but we are constrained at the same time to note that he has lightly passed over the matter by merely expressing personal regret at the disappointment caused to the members of the backward communities. In his reply to the addresses presented to him by the Vokkaligar Saugha and the Lingayet Education Fund Association, laying special stress on the representation of their members in public service, he has alluded to "the extraordinary conditions which have retarded the consummation of the policy laid down by Government in regard to the representation of members of backward communities in the Government Service." The unusual circumstances referred to above are the financial stringency and the measures of retrenchment consequent thereof which have naturally resulted in a number of employees being thrown out of service. How this could have come in the way of the non-Brahmins getting the new appointments that were made we cannot understand. On the other hand the existence of the above extraordinary conditions emphatically go to prove that the appointments which are admittedly fewer must go to the non-Brahmins as long as there are duly qualified candidates available amongst them. The assurance that has been given by the Dewan "to review the position and issue definite instructions to see that the policy of His Highness' Government is closely followed and that no departure therefrom is permitted, refers only to future appointments and does not at all indicate the nature of the action that he is going to take against the officers who have violated the Order of Government, nor refer to the cancellation of the appointments made in difiance of the Government Orders. The chief defect in the administration of this reform lies in having a Brahmin as Secretary to the Recruitment Board. It is a wonder how it has not struck the Government that justice to the backward classes in such circumstances is impossible. It is really like giving in one hand and taking away in the other. Two things are necessary. The mischief already done must be undone, and the future must be safeguarded. The subject under reference forming the third item of the twelve important subjects ennumerated by the Dewan in his concluding speech in the budget session of the Mysore Legislative Council in June last, calls for most urgent action, which, we hope, will not fall short of what we have indicated above. We cannot better conclude this article than by quoting what the present Viceroy said at a farewell dinner given to him before his departure to India. He said, "the thing needed is a courageous policy of redress of grievances, and not halting or cautious efforts to remedy them gradually."

COMMUNAL REPRESENTATION.

The Government Order containing the terms of reference to the Reforms Committee is issued in the *Mysore Gazette* of the 26th October and we find that they are fairly wide and comprehensive. The first great step towards democratising the constitution is taken, the significance of which to the future of the people of the State cannot be exaggerated. The destiny of Mysore is being shaped, and it is for this reason that we suggested that more of people's representatives ought to have been on the Committee. It is by no means too late to remedy this defect in the constitution of the Committee.

The Committee has to consider and report on various points referred to it and the most important of them from the people's point of view is the question of electorates. Hitherto, the chances of the people making themselves felt in the administration of the country were very limited. For a long time in the Legislative Council and the Representative Assembly the Backward classes formed a minority. It was only in 1918 elections that as a result of the special efforts they put forth—they were able to gain a majority in both the Houses.

With the introduction of the reforms and the increased powers to the Council and the Assembly, however, there is bound to be a very keen contest for seats, in which case the members of backward classes would have far less chances of succeeding as they have to contend against a naturally organised and influential opposition. The Government draw special attention in the above order to the representation of minorities and special interests, which no doubt should be provided for. But what about the majorities who may have to be in minority under the new dispensation unless special provision is also going to be made for them? Those who are opposed to communal representation may say that the backward classes have already a majority in the Assembly. But what kind of a majority is it which has just about 60% of the seats to represent 96% of the people, while those who represent about 4% of the people own more than 40% of the seats? The reforms are intended for the benefit of the people of the State and there could be little doubt that it would be in the interests of the State to ensure as many of the representatives of the masses as possible on the Councils. This was the object with which the privilege of communal representation was conceeded to the non-Brahmins in Madras, after thrashing out the whole subject thoroughly, and all parties without exception saw the reasonableness of it. Comparing Madras with Mysore the non-Brahmins of Madras are far ahead in culture, wealth and influence. The justification for communal representation therefore is much greater in Mysore than in Madras. There will doubtless be plenty of talk about 'nation' and 'country' and the time-honoured shibboleths will be trotted out against communal representation, as though 96 and odd percent of the people do not make practically the nation or the country. It behoves on all the members of the Committee to secure communal representation for backward classes in the interests of the State and for the establishment of a true democracy. We hope the representatives of the backward classes in particular on the Committee will strive their utmost for communal representation, for, on that depends entirely the utility of all these reforms.

VANI VILAS HOSPITAL, MYSORE.

Of late we are hearing numerous complaints about the treatment of patients in the Vani Vilas Hospital, Mysore. There was a time when the Hospital had gained a very good reputation under the present Lady Superintendent herself. But it is to be much regretted that things have become worse since and both in the matter of attendance and treatment there is a considerable slackness and indifference exhibited by those responsible in the Hospital. It is needless at present to go into further details. We fully trust that the Lady Superintendent will pay greater attention to the needs, requirements and the complaints of the patients, and especially to maternity cases. We hope also that the Senior Surgeon will see, that matters are set right and the efficiency of this useful institution is maintained.

ಸ್ವದೇಶದ ವೃತ್ತಾಂತಗಳು.

ಗುಡಿಬಂಡೆ ಸಬ್ ತಾಲ್ಲೂಕನ್ನು ತೆಗೆದುಹಾಕುವುದಿಲ್ಲವೆಂದು ಸರ್ಕಾರದಪ್ಪಣೆಯಾಗಿದೆ

ಚನ್ನಪಟ್ಟಣದಲ್ಲಿ ಒಕ್ಕಲಿಗರ ವಿದ್ಯಾರ್ಥಿನಿಲಯದ ವಾರ್ಷಿಕ ಸಂಮೇಳನವು ಮಿ|| ಕೆ. ಚಾಂಡಿಯವರ ಅಧ್ಯಕ್ಷತೆಯಿಂದ ನೆರವೇರಿತು.

ರಾಜಧಾನಿಯಲ್ಲಿ ಈ ವಾರದಲ್ಲಿ ಮಳೆಯಿಲ್ಲದಿದ್ದರೂ ಮೋಡವಾಡುತ್ತ ವಾಯುಗುಣವು ಶೀತವಾಗಿದೆ. ಅಲ್ಲಲ್ಲಿ ಪ್ಲೇಗಿನ ಮರಣಗಳು ಒಂದೆರಡಾಗುವ ಸುದ್ದಿಯಿದೆ.

ಬೆಂಗಳೂರಿನಲ್ಲಿ ಜನರ ಉಳುಕನ್ನು ತೆಗೆಯುವುದು ಮುರಿದ ಮೂಳೆಯನ್ನು ಸರಿಪಡಿಸುವುದೇ ಮೊದಲಾದ ಕೆಲಸಗಳನ್ನು ಬಹಳವಾಗಿ ಮಾಡುತ್ತ ಹೆಸರಾಗಿದ್ದ ಕಾಯಂಗಡಿ ಪಾಪಣ್ಣನವರು ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಕಳೆದ ಭಾನುವಾರ ರಾತ್ರಿ ಮೈಸೂರು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಬಿದ್ದ ಚಿತ್ತೆಮಳೆಯು ದೇಶದ ಸುಭಿಕ್ಷಕ್ಕೆ ಬಹಳ ಸಾಧಕವಾಯಿತು. ಪೈರುಗಳು ಬಹಳ ಸೊಂಪಾಗಿವೆ. ಹಲವುಕಡೆ ಕೆರೆ ಕಟ್ಟೆಗಳೆಲ್ಲಾ ತುಂಬಿದುವು. ಸಂಸ್ಥಾನದ ಇತರ ಭಾಗಗಳಲ್ಲೂ ಈಗ ಮಳೆಯು ನಡೆಯುತ್ತಿದೆಯೆಂದು ಕೇಳುತ್ತೇವೆ.

ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರಾದ ಮಿ|| ಡಿ. ಕೆ. ಡಾರಾಪಾರವರಿಗೆ ಉದ್ಯೋಗದವಧಿಯು ಬರುವ ನವೆಂಬರ್ ತಾ|| 10ಕ್ಕೆ ಮುಗಿಯುವ ಕಾರಣ ಅವರಿಗೆ ಉದ್ಯೋಗ ವಿಶ್ರಾಂತಿಯು ಕೊಡಲ್ಪಡುವುದೆಂದೂ, ಮಿ|| ವಿ. ಆರ್. ತ್ಯಾಗರಾಜಯ್ಯರು ಆ ಸ್ಥಲಕ್ಕೆ ನಿಯಮಿಸಲ್ಪಡುವರೆಂದೂ ಕೇಳುತ್ತೇವೆ.

ನಮ್ಮ ಮೈಸೂರು ಸಂಸ್ಥಾನದಲ್ಲಿ ಸರ್ಕಾರಿ ಸಂಸ್ಕೃತ ಕಾಲೇಜುಗಳಿಗೆ ಉತ್ತಮ ಹಿಂದುಗಳನ್ನು ಕೂಡ ಸೇರಿಸಲು ತಾಪತ್ರಯಪಡುತ್ತಿರುವಾಗ ಅಲಿಘರಿನಲ್ಲಿರುವ ಮಹಮ್ಮದೀಯ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಭಾಷೆಯನ್ನು ಅಭ್ಯಾಸಮಾಡಿಸಲು ಒಂದು ಪ್ರತ್ಯೇಕ ಶಾಖೆಯನ್ನೇ ಸ್ಥಾಪಿಸಲು ಈಗ ತಾನೇ ನಿರ್ಧರಿಸಿದ್ದಾರೆ.

ಮ|| ಬಾನರ್ಜಿಯವರು ದಿವಾನಗಿರಿಗೆ ರಾಜೀನಾಮೆ ಕೊಡುವರೆಂದೂ ಜಸ್ಟಿಸ್ ಚಂದ್ರಶೇಖರಯ್ಯರವರು ದಿವಾನರಾಗುವರೆಂದೂ, ಈಗಣ ಕೌನ್ಸಿಲರುಗಳಿಬ್ಬರೂ ನಿವೃತ್ತರಾಗಿ ಮಿ|| ಚಾಂಡಿ, ಮಿ|| ಮಿರ್ಜಾ ಇಸ್ಮಾಯಿಲ್‌ರವರು ಕೌನ್ಸಿಲರುಗಳಾಗುವರೆಂದೂ ಮೊದಲಾಗಿ ಮದ್ರಾಸ್ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಯು ನಿರಾಧಾರವಾದುದು. ಆದರೆ ಗ್ರಾಮಾಂತರಗಳಲ್ಲೆಲ್ಲಾ ಈ ಸುದ್ದಿಯು ಹರಡಿಹೋಗಿದೆ.

ತಿಬಟೂರಿನಲ್ಲಿ ಹಿಂದೂಮಹಮ್ಮದೀಯ ವ್ಯಾಜ್ಯದಿಂದ ನಿಂತುಹೋಗಿದ್ದ ಹಿಂದೂದೇವತಾ ಉತ್ಸವವು ಡಿಸ್ಟ್ರಿಕ್ಟ್ ಅಧಿಕಾರಿಗಳೇ ಮೊದಲಾದವರ ಪ್ರತ್ಯಕ್ಷ ರಕ್ಷಣೆಯಮೇಲೆ ಸುಲಲಿತವಾಗಿ ಸಾಂಗವಾಯಿತೆಂದು ಕೇಳುತ್ತೇವೆ. ಆದರೆ ಪ್ರಮುಖವಾದ ಈ ಎರಡು ಜನಾಂಗಗಳ ಅಂತರಂಗದಲ್ಲಿರುವ ವೈಮನಸ್ಯದ ಶಾಂತಿಯು ಮಾತ್ರ ಆದಂತೆ ಕಾಣುವುದಿಲ್ಲ. ಅಲ್ಪವಿಷಯಗಳಿಗಾಗಿ ಜನಜನಾಂಗಗಳೇ ಹೋರಾಡುವುದು ದೇಶಕ್ಕೇ ಅನರ್ಥಕಾರಿಯು. ರಾಜಧಾನಿಯಲ್ಲಿ ಮಹಮ್ಮದೀಯರ ಮಸೀದಿಗಳ ಮುಂದೆ ಹಿಂದುಗಳು ವಾದ್ಯವನ್ನು ನಿಲ್ಲಿಸಿಬಿಟ್ಟೂ, ಹಿಂದೂ ದೇವಾಲಯಗಳ ಮುಂದೆ ಮಹಮ್ಮದೀಯರು ವಾದ್ಯವನ್ನು ನಿಲ್ಲಿಸಿಬಿಟ್ಟೂ ಹೋಗುವ ಪದ್ಧತಿಯು ಬಹುಕಾಲದಿಂದ ನಡೆದುಕೊಂಡು ಬರುತ್ತಿದೆ. ಹೀಗೆ ಪರಸ್ಪರ ಮರ್ಯಾದೆಯ ಏರ್ಪಾಟನ್ನು ಉಭಯರೂ ಎಲ್ಲಾ ಸ್ಥಲಗಳಲ್ಲೂ ಇಟ್ಟುಕೊಂಡು ನಡೆದರೆ ಈ ಉತ್ಸವ ಮೂಲಕವಾದ ವೈಮನಸ್ಯಗಳಿಗೆ ಅವಕಾಶವೇ ತಪ್ಪಿಹೋಗುವುದು.

ಹುಚ್ಚುನಾಯಿಯಿಂದ ಕಡಿಸಿಕೊಂಡವರು ಕುನ್ನೂರು, ಕಾಸೋಲಿ ಎಂಬ ದೂರಸ್ಥಳಗಳಲ್ಲಿರುವ ವೈದ್ಯಾಲಯಗಳಿಗೆ ಹೋಗಬೇಕಾಗಿದ್ದಿತಷ್ಟೆ. ಈಗ ಬೊಂಬಾಯಿ ಸರ್ಕಾರದವರು ಬೊಂಬಾಯಿಪರೇಲ್, ಪುನಾ, ಕರಾಚಿ, ಅಹಮ್ಮದ್‌ನಗರ, ಅಹಮ್ಮದಾಬಾದ್, ಬೆಳಗಾಂವಿ-ಈ ಪಟ್ಟಣಗಳಲ್ಲಿರುವ ಸರ್ಕಾರಿ ವೈದ್ಯಾಲಯಗಳಲ್ಲೇ ಮೇಲೆಕಂಡ ವಿಷಚಿಕಿತ್ಸೆಯು ನಡೆಯುವಂತೆ ಏರ್ಪಡಿಸಿದ್ದಾರೆ. 500 ರೂ. ಗೆ ಮೇಲ್ಪಟ್ಟ ಸಂಬಳವುಳ್ಳವರು ಪ್ರತಿಫಲವನ್ನು ಕೊಟ್ಟು ಚಿಕಿತ್ಸೆ ಮಾಡಿಸಿಕೊಳ್ಳಬೇಕಾಗುವುದು. ಬಡಬಗ್ಗರಿಗೆ ಉಚಿತ. ಇಂಥ ಏರ್ಪಾಟನ್ನು ನಮ್ಮ ಮೈಸೂರು ಪ್ರಭುತ್ವದವರೂ ಇಟ್ಟು, ಬೆಂಗಳೂರು ಮೈಸೂರು ಪಟ್ಟಣಗಳ ಮುಖ್ಯ ವೈದ್ಯಾಲಯಗಳಲ್ಲಿ ವಿಷಚಿಕಿತ್ಸೆಗೂ ಏರ್ಪಡಿಸಿದರೆ ಪ್ರಜೆಗಳಿಗೆ ಬಹಳ ಉಪಕಾರವಾಗುವುದು. ಕುನೂರು ಮೊದಲಾದ ವೈದ್ಯಾಲಯಗಳಿಗೆ ಚಿಕಿತ್ಸೆಗಾಗಿ ಕಳುಹಿಸಲ್ಪಡುವ ಬಡಬಗ್ಗರಿಗೆ ಕೊಡುತ್ತಿದ್ದ ರೈಲ್ವೆಬಾಡಿಗೆ ಮೊದಲಾದ ವೆಚ್ಚವನ್ನು ಕೂಡ ಉಳಿಯಿಸಿಕೊಳ್ಳಬಹುದು.

ಇಸ್ತಿಹಾರ್.

ಮುನಸೀಫ್ ಕೋರ್ಟ್ ತಾಲ್ಲೂಕ್ ಗಂಗಾವತಿ ಜಿಲ್ಲಾ ರಾಯಚೂರು ಇಲಾಖಾ ನಿಜಾಮು.

ಪ್ರಕಟನ ನಂಬರ ೧ ಸನ್ ಫಸಲಿ ೧೩೩೧.

ಮಿ|| ಕಾಶಿನಾಥರಾವ ಬಿ.ಎ., ಎಲ್‌ಎಲ್.ಬಿ., ಮುನಸೀಫರು.

ವಾದಿ.	ಪ್ರತಿವಾದಿ.
ಮುದಕಪ್ಪಾ ತಂದಿ ಬಸಿಟ್ಟಪ್ಪ ಕನಕಗಿರಿ ತಾಲ್ಲೂಕ ಗಂಗಾವತಿ.	ಗಿರೆಪ್ಪಾ ವಗೈರೆ ೫ ಜನ.

ದಾವೆ—ನಗದುರೂಪಾಯಿ ಕೊಡ್ಲಿ೦.

ಮಿನಾಂ ಹಂಪಪ್ಪಾ ಅಜ್ಞಾನ ಸಂರಕ್ಷಣಕರ್ತ ಬಾಸಾತಾಯಿ ಗಂಡ ಶರಭಾಚಾರಿ ಜಾತಿ ಪಾಂಚಾಳ ವಯಸ್ಸು ೩೦ ಮನೆಕೆಲಸ ಸಾ|| ದೇವಸಮುದ್ರ ತಾಲ್ಲೂಕ ಮೊಳಕಾಲ್ಮುರು ಡಿಸ್ಟ್ರಿಕ್ಟ್ ಚಿತ್ರದುರ್ಗ ಇಲಾಖಾ ಮೈಸೂರ.

ಸದರಿ ಪ್ರಕರಣದಲ್ಲಿ ವಾದಿಯು ಹಂಪಪ್ಪಾ ಅಜ್ಞಾನ ನಿನ್ನ ಸಂರಕ್ಷಣೆಯ ಮೇಲೆ ಈ ಕೋರ್ಟಿನಲ್ಲಿ ದಾವೆ ದಾಖಲ್‌ಮಾಡುವುದಕ್ಕೆ ಅಪ್ಪಣೆಯಾಗಬೇಕೆಂದು ಕೋರಿರುತಾರೆ. ಕಾರಣ ನಿನಗೆ ಸಂರಕ್ಷಣೆಕರ್ತದ ವಿಷಯವೇನಾದರೂ ಆಕ್ಷೇಪ ಇದ್ದರೆ ಹಾಜರಾಗಿ ಜಬಾಬುಕೊಡುವ ಬಗ್ಗೆ ಎಷ್ಟುಸಾರೆ ನನುನ್ನು ಕಳುಹಿಸಿದಾಗ್ಯೂ ಸಮಜ ಬಜಾವಣೆ ಆಗಲಿಲ್ಲ. ಕಾರಣ ಈದ್ವಾರ ತಿಳಿಯಪಡಿಸುವುದೇನೆಂದರೆ—ತಾರೀಖು ೧೮ ಸನ್ ೧೩೩೨ ಫಸಲಿ ಸರಿಯಾದ ತಾರೀಖು ೨೨ ನವಂಬರ್ ಸನ್ ೧೯೨೨ ನೆ ಇಸವಿ ಬುಧವಾರ ದಿವಸ ಈ ಕೋರ್ಟಿನಲ್ಲಿ ಹಾಜರಾಗಿ ಜಬಾಬುಕೊಡಬೇಕು. ಇಲ್ಲವೆ ರೀತಿಪ್ರಕಾರ ಪರವಾಯಿ ಮಾಡಲಾದೀತು. ಪಕ್ತ.

ಮಿರ್ಜಾ ಅಬ್ಬಾಸ್‌ಹುಸೇನ್,
(ಹಿಂದುಸ್ತಾನಿಯಲ್ಲಿದೆ)
ಶಿರಸ್ತೆದಾರ್.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಔದಾರ್ಯ.

ಗುಬ್ಬಿ ಶ್ರೀಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕಸಂಘದ ಪ್ರೊಪ್ರೈಟರಾದ ಮ|| ವೀರಣ್ಣನವರು ಈ ಗುಬ್ಬಿ ಟವನ್ನಿನಲ್ಲಿ ಹಾಕಿರುವ ತಮ್ಮ ಧನಲಕ್ಷ್ಮೀ ಥಿಯೇಟರಿನಲ್ಲಿ ಈಗ್ಗೆ ಸುಮಾರು ಒಂದು ತಿಂಗಳಾಗಾಯಿತು ಅನೇಕ ನಾಟಕಗಳನ್ನು ಅಭಿನಯಿಸುತ್ತಾ ಬಂದು ಇದೇ ಮಾಹೆ ತಾ|| 16 ನೆ ಸೋಮವಾರ ರಾತ್ರಿ ತಾವು ಅಭಿನಯಿಸಿದ ನಾಟಕದ ಉತ್ಪತ್ತಿಯಾದ 500 ರೂಪಾಯಿಗಳನ್ನು ಗುಬ್ಬಿ ಶ್ರೀಚನ್ನಬಸವೇಶ್ವರ ಸ್ವಾಮಿಯವರ ಜಾತ್ರೆ ಕಾಲದಲ್ಲಿ ನಡೆಯತಕ್ಕ ಜನರ ದಾಸೋಹಕ್ಕೆ ಬೇಕಾಗಿರುವ ಪಾತ್ರೆ ಸಾಮಾನುಗಳನ್ನು ತಯಾರುಮಾಡಿಸಿ ಅವುಗಳ ಮೇಲೆ ತಮ್ಮ ವಿಳಾಸವನ್ನು ಹಾಕಿಸಿ ಧರ್ಮಕಾರ್ಯದಲ್ಲಿ ಉಪಯೋಗಿಸಬೇಕೆಂದು ಹೇಳಿ ಬಹಳ ಉದಾರಮನಸ್ಸಿನಿಂದ ಧರ್ಮದರ್ಶಿಗಳಾದ ಪ್ಯಾಟೆಶೆಟ್ಟರು ಕಪ್ಪಣ್ಣನವರು ಯಜಮಾನ್ ಹುಚ್ಚೀರಪ್ಪನವರು ಇವರ ವಶಕ್ಕೆ ಕೊಟ್ಟಿರುತ್ತಾರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ.

ಗುಬ್ಬಿಯನಿವಾಸಿ.

ಬೋಧಕ ಸೇವಾಸಂಘ.

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಈ ಸಂಘದ ಪ್ರಥಮ ವಾರ್ಷಿಕೋತ್ಸವವು ನಾರ್ಮಲ್‌ಸ್ಕೂಲ್ ಹಾಲಿನಲ್ಲಿ 20 ನೆಯ ತಾ|| ಶುಕ್ರವಾರ ಸಾಯಂಕಾಲ 4 ಗಂಟೆಗೆ ಜರಗಿತು. ಇನ್‌ಸ್ಪೆಕ್ಟರ್ ಜನರಲ್ (ವಿದ್ಯಾಭ್ಯಾಸದ ಇಲಾಖಾ) ರವರಾದ ಮ|| ರಾ|| ಸಿ. ಯಸ್. ಬಾಲಸುಂದರಮಯ್ಯರ್ ಬಿ. ಎ. ಯವರು ಅಗ್ರಾಸನವನ್ನಲಂಕರಿಸಿದ್ದರು. ಸಭೆಯಲ್ಲಿ ಜರುಗಿದ ಕಾರ್ಯಗಳಲ್ಲಿ ಪ್ರಾಕ್ಟಿಸಿಂಗ್ ಸ್ಕೂಲಿನ ಮಕ್ಕಳು ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಅಭಿನಯಿಸಿದ ಸಲ್ಲಾಪವು ಸರ್ವ ಶ್ಲಾಘ್ಯವಾಗಿದ್ದಿತು. ಸಂಸ್ಥಾನದಲ್ಲೆಲ್ಲಾ ಇದರ ಉಪಸಂಘಗಳುಂಟಾಗಿ ಬೋಧಕರು ಏಕಮತದಿಂದ ತಮ್ಮ ಕಾರ್ಯಗಳಿಗನುಕೂಲವನ್ನು ಸಂಪಾದಿಸಿಕೊಳ್ಳಬೇಕೆಂದು ಇಂಗ್ಲೀಷಿನಲ್ಲಿ ವಿವರಿಸಿದ ಮ|| ರಾ|| ಎಂ. ಎನ್. ಪ್ರಣತಾರ್ತಿಹರನ್ ಎಂ. ಎ., ಎಲ್. ಟಿ. ಯವರ ಭಾಷಣವನ್ನು ಅಗ್ರಾಸನಾಧಿಪತಿಗಳು ಅನುವಾದಿಸಿ ಸಭೆಯ ಕಾರ್ಯದರ್ಶಿಗಳನ್ನಭಿವಂದಿಸಿ ಸಂಘಾಧ್ಯಕ್ಷರಾದ ಮ|| ರಾ|| ಶ್ರೀ|| ಡಿ. ವೆಂಕಟರಾಮಯ್ಯ ಬಿ. ಎ., ಎಲ್. ಟಿ. ಯವರಿಂದ ಅಭಿವಂದಿಸಲ್ಪಟ್ಟ ಮೇಲೆ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯು ನಡೆದು 7 ಗಂಟೆಗೆ ಸಭೆಯು ಬರಖಾಸ್ತಾಯಿತು. ಸಂಘದ ಪೋಷಕರಾದ ಮ|| ರಾ|| ಎಸ್. ಜಿ. ಶಾಸ್ತ್ರಿ ಬಿ. ಎ., ಎಂ. ಎಸ್‌ಸಿ ಯವರೂ ಮ|| ರಾ|| ಎಂ. ವೆಂಕಟಸುಬ್ಬಯ್ಯ ಬಿ. ಎ. ಮ|| ರಾ|| ಗಳಾದ ಎಚ್. ಎನ್. ವೆಂಕಟರಮಣಯ್ಯ ಬಿ. ಎ., ಮ|| ರಾ|| ಕೆ. ಟಿ. ಸುದರ್ಶನೈಯಂಗಾರ್ ಬಿ. ಎ, ಚನ್ನಪಟ್ಟದ ಹೈಸ್ಕೂಲ್ ಅಸಿಸ್ಟೆಂಟ್ ಮ|| ರಾ|| ಎಲ್. ನಾರಾಯಣರಾವ್ ಬಿ. ಎ, ಎ. ವಿ. ಸ್ಕೂಲ್ ಹೆಡ್‌ಮಾಸ್ಟರು ಮ|| ರಾ|| ಎಲ್. ಶೇಷಗಿರಿರಾವ್ ಮೊದಲಾದ 15 ಮಂದಿ ಗ್ರ್ಯಾಜುಯೇಟುಗಳೂ ಸಿಟಿ ಪ್ರೈಮರಿ ಮತ್ತು ಎ. ವಿ. ಸ್ಕೂಲುಗಳ 70 ಮಂದಿ ಉಪಾಧ್ಯಾಯರೂ ವಾಣೀವಿಲಾಸ ಇನ್‌ಸ್ಟಿಟ್ಯೂಟಿನ ಲೇಡಿ ಸೂಪರಿಂಟೆಂಡೆಂಟರಾದ ಶ್ರೀಮತಿ ಶ್ರೀರಂಗಮ್ಮ ಬಿ. ಎ. ಯವರೂ ಶ್ರೀಮತಿ ನಂಜಮ್ಮ ಬಿ. ಎ. ಯವರೇ ಮೊದಲಾದ 40 ಮಂದಿ ಉಪಾಧ್ಯಾಯಿನಿಯರೂ ಮ|| ರಾ|| ಕೆ. ರಾಮಸ್ವಾಮೈಯಂಗಾರ್ ಎಂ. ಎ. ಯವರೇ ಮೊದಲಾದ ಅನೇಕ ದೊಡ್ಡ ಮನುಷ್ಯರೂ ಮ|| ರಾ|| ಶ್ರೀನಿವಾಸೈಯಂಗಾರ್ ಪಂಡಿತ ಅಳಸಿಂಗ್ರಾಚಾರ್ ಪಂಡಿತ ನಂಜುಂಡಶಾಸ್ತ್ರಿಗಳೇ ಮೊದಲಾದ ಅನೇಕ ವಿದ್ವಾಂಸರೂ ಹಾಜರಿದ್ದರು. ಶ್ರೀಮತಿ ಪಂಡಿತ ವೆಂಕಟಲಕ್ಷ್ಮಮ್ಮನವರಿಂದ ಒಂದು ಪಾಠವು ನಡೆಸಲ್ಪಟ್ಟಿತು.

ಸಭಿಕ.

ಶಿಡ್ಲಘಟ್ಟದ ವರ್ತಮಾನ.

ಒಂದುವಾರದಿಂದೀಚೆಗೆ ಮಳೆ ಅನುಕೂಲವಾಗಿ ಬಿದ್ದಿರುವುದರಿಂದ ಪೈರುಗಳು ಸೊಂಪಾಗಿವೆ. ಊರಿನಲ್ಲಿ ಪ್ಲೇಗ್ ಗಲಾಟೆ ಶಾಂತವಾಗಿ ಈಚೆಗೆ ಮರಣಗಳೂ ಹೊಸ ಖಾಯಿಲೆಗಳೂ ಇಲ್ಲದೆ ಇರುವುದರಿಂದ ಊರ ಹೊರಗಿದ್ದ ಜನರು ಮನೆಗಳನ್ನು ಶುದ್ಧಿಮಾಡಿಸಿ ಊರಿನೊಳಕ್ಕೆ ಬಂದು ಸೇರುತ್ತಿದ್ದಾರೆ. ಪ್ಲೇಗ್ ಖಾಯಿಲೆಯ ನಿರೋಧಕ ವಿಚಾರದಲ್ಲಿ ಮ್ಯುನಿಸಿಪಾಲಿಟಿಯವರು ಬಹಳಮಟ್ಟಿಗೆ ಮುತುವರ್ಜಿ ವಹಿಸಿ ಕೆಲಸ ಮಾಡಿದ್ದರಿಂದ ಇಷ್ಟು ಜಾಗ್ರತೆ ಊರಿಗೆ ಕ್ಷೇಮವಾದಂತಾಯಿತು. ಅನೇಕರು ಪ್ಲೇಗ್ ಖಾಯಿಲೆಯವರನ್ನು ಬಾಡಿಗೆ ಮೋಟಾರುಗಳ ಮುಖಾಂತ್ರ ಬೆಂಗಳೂರು ಪ್ಲೇಗ್ ಕ್ಯಾಂಪಿಗೆ ಕರೆದುಕೊಂಡು ಹೋಗಿ ಗುಣಮಾಡಿಕೊಂಡು ಬಂದರು. ಹಣ ಖರ್ಚು ಮಾಡಲು ಸಾಮರ್ಥ್ಯವಿಲ್ಲದ ಜನರು ಸ್ಥಳದ ಡಾಕ್ಟರಿಂದ ಇಲಾಜು ಮಾಡಿಸಿಕೊಂಡರೂ ಅನುಕೂಲವಾದ ಔಷಧಿಗಳ ಸಪ್ಲೈ ಇಲ್ಲದ ಸಬಬು ಪ್ರಯೋಜನವಿಲ್ಲವಾಯಿತೆಂದು ದುಃಖಪಡುವಂತಾಯಿತು. ಉತ್ತಮವಾದ ಔಷಧಿಗಳನ್ನ ತರಿಸಬೇಕಾಗುತ್ತೆಂದು ಅರಿಯದ ಮತ್ತು ಖಾಯಿಲೆ ಸಬಬು ಭಯಭ್ರಾಂತರಾಗಿರುವ ಜನಗಳಿಂದ ಕೆಲವರು ಹಣ ವಸೂಲ್ಮಾಡಿಕೊಂಡು ಮೋಸ ಮಾಡಿರುತ್ತಾರೆಂದು ಜನರು ನಾನಾ ತರವಾಗಿ ಆಡಿಕೊಳ್ಳುತ್ತಾರೆ. ಕಷ್ಟಕಾಲದಲ್ಲಿ ಸಹಾಯ ಮಾಡುತ್ತಿರುವೆವೆಂಬ ಹೆಸರಿಟ್ಟುಕೊಂಡು ಈ ರೀತಿ ಆಚರಿಸಿರುವವರಿಗೆ ಪ್ರಜಾ ಮುಖಂಡರು ತಕ್ಕ ಪ್ರತೀಕಾರವನ್ನು ಮಾಡಿಸಿಯಾರೆಂದು ನಂಬುತ್ತೇನೆ. ತಮ್ಮ ಗುಟ್ಟು ರಟ್ಟಾಗುವದೆಂಬ ಭಯದಿಂದ ಕೆಲವು ಮಂದಿ ಸೇರಿ ಮ್ಯುನಿಸಿಪಾಲಿಟಿ ಕಾರ್ಯಗಳು ತೃಪ್ತಿಕರವಾಗಿಲ್ಲವೆಂದು ಹೆದರಿಸುವ ಮಾರುದ್ದದ ಲೇಖನವನ್ನು 5-10-22 ನೆ ತಾರೀಖಿನ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕೆ ಜವಾಬಾಗಿ 19-10-22 ರ ವೃತ್ತಾಂತ ಪತ್ರಿಕೆಯಲ್ಲೇ ಬಾತ್ಮಿ ಪ್ರಕಟವಾಗಿರುವದನ್ನು ಓದಿನೋಡಿದೆನು. ಸ್ಥಳವಿದ್ಯಮಾನಗಳನ್ನು ವಿಚಾರಿಸಲಾಗಿ ಮ್ಯುನಿಸಿಪಲ್ ಕೌನ್ಸಿಲ್ಲಿನಲ್ಲಿ ಭಿನ್ನಾಭಿಪ್ರಾಯವಿರುವಂತೆಯೂ ಇದರಿಂದ ತಮ್ಮ ಗೌರವಕ್ಕೇ ಹಾನಿಯಾದರೂ ಚಿಂತೆಯಿಲ್ಲವೆಂಬ ಭಾವನೆಗಳಿಂದ ಮನ್ನಾನೆ ಬಾತ್ಮಿಗಳು ಹೊರಡುತ್ತಿರುವವೆಂದೂ ತಿಳಿಯ ಬಂದಿರುತ್ತೆ. ಪ್ಲೇಗ್ ಖಾಯಿಲೆಯಿಂದ ಕಷ್ಟಪಡುತ್ತಿರುವವರಲ್ಲೂ ನಿಷ್ಕರುಣದಿಂದ ರುಸುಮು ವಸೂಲ್ಮಾಡಿರುವ ಕ್ರೂರಿಗಳಿಗೆ ಸಹಾಯ ಮಾಡುವದೂ ಅಂಥಾವರನ್ನು ಉತ್ತಮರಾದ ನೌಕರರೆಂದು ಹೊಗಳಿ ಪ್ರೋತ್ಸಾಹಿಸುವದೂ ಪ್ರಜಾಹಿತ್ಯೈಷಿಗಳಾದವರಿಗೆ ಧರ್ಮವಲ್ಲವೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಮನಃಪೂರ್ವಕವಾಗಿ ದೇಶ ಸೇವೆ ಮಾಡುತ್ತಾ ಪ್ರಜಾರಂಜನೆಯನ್ನು ಪಡೆದಿರುವ ಕೆಲವು ಮ್ಯುನಿಸಿಪಲ್ ಕೌನ್ಸಿಲರುಗಳ ಸಹಾಯದಿಂದ ಈ ಟೌನ್ ಮೊದಲಿದ್ದ ಸ್ಥಿತಿಗಿಂತಲೂ ಸ್ಯಾನಿಟೇಷನ್ ವಗೈರೆ ಬಾಬಿನಲ್ಲಿ ಉತ್ತಮ ಸ್ಥಿತಿಯಲ್ಲಿರುವದೆಂಬ ಅಂಶವನ್ನು ಸ್ಯಾನಿಟರೀ ಕಮಿಷನರ್ ಸಾಹೇಬರೇ ಮುಂತಾದವರ ಇನ್‌ಸ್ಪೆಕ್ಷನ್ ಕಾಲದಲ್ಲಿ ಉಪನ್ಯಾಸ ಪೂರ್ವಕವಾಗಿ ಅಪ್ಪಣೆ ಕೊಡಿಸಿರುವದು ಸರ್ವರಿಗೂ ವೇದ್ಯವೇ ಇರುತ್ತೆ. ಸರ್ಕಾರದವರು ಮ್ಯುನಿಸಿಪಲ್ ಪ್ರೆಸಿಡೆಂಟರ ಮುಖೇನ ಸ್ಥಳ ವಿದ್ಯಮಾನಗಳನ್ನು ವಿಚಾರಮಾಡಿ ಸುಳ್ಳು ಬರವಣಿಗೆಗಳಿಗೆ ಅವಕಾಶವಿಲ್ಲದಂತೆ ಎಚ್ಚರಿಸಬೇಕಾಗಿ ಬೇಡುತ್ತೇನೆ.

ನಿಷ್ಪಕ್ಷಪಾತಿ.

ತುಮಕೂರು.

ಇದುವರೆಗೂ ಸಾಕಾದಷ್ಟು ಮಳೆಯಿಲ್ಲದೆ ಬೆಳೆಯೆಲ್ಲಾ ಒಣಗುವ ಸಂಭವವಿದ್ದುದರಿಂದ ಜನಗಳು ಗಾಬರಿಯಾಗಿದ್ದಾರೆ. ಈಗಾಗಲೇ ನೀರಿನ ಕಷ್ಟ ಬಹಳಜಾಸ್ತಿಯಾಗಿದೆ. ಮುಂದೆ ಶ್ರೀ ಪರಶಿವನು ದಯೆಗೈದು ಕಾಪಾಡಬೇಕು. ಈಚೆಗೆ ಸ್ವಲ್ಪ ಮಳೆಯಾಗಿದೆ. ದಿನಸಿಗಳ ಬೆಲೆಯಂತೂ ಮಿತಿಮೀರಿ ಹೋಗುತ್ತಲಿದೆ. ಬಡವರ ಗೋಳಾಟವನ್ನು ಬರಿಯಲು ಸಾಧ್ಯವಿಲ್ಲ. ಸಾಲದ್ದಕ್ಕೆ ಊರಿನಲ್ಲಿ ಕಳ್ಳತನ ಜಾಸ್ತಿಯಾಗಿದೆ. ಸಂದುಗೊಂದುಗಳಲ್ಲಿ ಹಗಲಿನಲ್ಲೇ ಮನೆನುಗ್ಗಿದರೂ ಕೇಳುವವರೇ ಯಿಲ್ಲದಂತಾಗಿದೆ. ಪೋಲೀಸಿನವರ ಚಟುವಟಿಕೆ ಸಾಲದು, ಇದುವರೆಗೂ ಒಂದಾದರೂ ಪತ್ತೆಯಾದಹಾಗೆ ಕಾಣುವದಿಲ್ಲ, ರಾತ್ರಿವೇಳೆ ಗಸ್ತುಮಾಡುವ ಸಿಬ್ಬಂದಿಸಾಲದು, ಗಸ್ತುಮಾಡಲು ಆಗಾಗ್ಗೆ ಸೂಪರಿಂಟೆಂಡೆಂಟರೇ ಮೊದಲಾದವರು ಅಕಸ್ಮಾತ್ ಬರಬೇಕಾದದ್ದು ಅತ್ಯವಶ್ಯಕವಾಗಿದೆ. ಇವರು ಕೂಡಲೇ ಕರ್ತವ್ಯತತ್ಪರರಾಗಿ ಕಳ್ಳರನ್ನು ಪತ್ತೆಮಾಡಿ ಶಿಕ್ಷೆ ಮಾಡಿಸದಿದ್ದರೆ ಈ ಕ್ಷಾಮಕಾಲದಲ್ಲಿ ಪ್ರಜೆಗಳ ಮಾನಪ್ರಾಣಗಳು ನಿರ್ವಾಹವಾಗುವದು ಬಹುಕಷ್ಟ. ಇದನ್ನು ಡೆಪ್ಯುಟಿಕಮಿಷನರ್ ಸಾಹೇಬರವರೂ ಮತ್ತು ಪೊ|| ಇ|| ಜ|| ಸಾಹೇಬರು ಸಹ ಕೂಡಲೇ ಗಮನಕ್ಕೆ ತಂದುಕೊಂಡು ತಕ್ಕಷ್ಟು ನಿಧಾನದಿಂದ ಸಿಬ್ಬಂದಿಯನ್ನು ಕ್ರಮಪಡಿಸಿ ಪ್ರಜೆಗಳನ್ನು ಕಾಪಾಡಬೇಕಾಗಿದೆ. ಇನ್‌ಕಂಟ್ಯಾಕ್ಸಿನ ಉಪಟಲವು ವರ್ತಕರನ್ನು ಬಹಳ ಹಿಂಸೆಗೂ ಕಿರುಕುಳಕ್ಕೂ ಗುರಿಮಾಡಿದೆ. ಇದನ್ನು ಸರ್ಕಾರದವರು ಕ್ರಮಪಡಿಸುವದು ಅತ್ಯವಶ್ಯಕ. ಇಲ್ಲಿನ ಇಬ್ಬರು ಮುನ್‌ಸೀಫರೂ ಬಹಳ ಚಟುವಟಿಕೆಯಿಂದ ಕೆಲಸಮಾಡುತ್ತಾ ಪ್ರಜೆಗಳಲ್ಲಿ ಸಹಾನುಭೂತಿಯುಳ್ಳವರಾಗಿರುವದು ತುಂಬಾ ಶ್ಲಾಘನೀಯವಾಗಿದೆ. ಆದರೆ ನೌಕರರಿಂದ ಕಕ್ಷಿಗಾರರಿಗೆ ಬಹಳ ಕಿರುಕುಳವುಂಟಾಗಿದೆ. ಕಾರ್ಯಕ್ರಮಗಳೆಲ್ಲಾ ಬಹಳ ಅವ್ಯವಸ್ಥೆಯಾಗಿವೆ. ತಿಂಗಳುಗಟ್ಟಲೆಯಾದರೂ ಕಾಪಿಗಳು ತಯಾರಾಗುವದಿಲ್ಲ; ಫೈನಲ್ ಡಿಕ್ರಿಗಳಾಗುವದಿಲ್ಲ; ವಾರಂಟುಗಳಂತೂ ಜಾರಿಯಾಗುವದೇಇಲ್ಲ. ಪೂರ್ವ ಪುಣ್ಯದಿಂದ ಲಕ್ಷ್ಮೀಪ್ರಸನ್ನವಾದಂರತೂ ಕಾರ್ಯನಿಲ್ಲುವದೇಯಿಲ್ಲ. ಆದರೆ ಅದು ಸಹ ಮಿತಿಮೀರಿ ಹೋಗಿದೆ. ಇದು ಎಲ್ಲರಿಗೂ ತಿಳಿದ ಬಹಿರಂಗವಾದ ಗುಟ್ಟಾದಾಗ್ಯೂ ಎಲ್ಲರೂ ಸುಮ್ಮನಿರುವದು ಆಶ್ಚರ್ಯವಾಗಿದೆ. ಕೋರ್ಟಿಗೆ ಬರುವ ಡಿಕ್ರಿ ಹಣಗಳನ್ನು ತೆಗೆದುಕೊಳ್ಳಬೇಕಾದರೂ ಪರಮ ಕಷ್ಟ. ಪ್ರೋಸೆಸ್ ಇಲಾಖೆಯ ಮೇಲೆ ಮೊದಲು ದರ್ಪಹೆಚ್ಚಾಗಬೇಕು. 3-4 ಜನ ನೌಕರರಂತೂ ಕೂಡಲೇ ವರ್ಗವಾದರೆ ತಹಬಂದಿಗೆಬರುತ್ತೆ. ನಮ್ಮ ಹೊಸಮುನ್‌ಸೀಫರು ಈ ಅವ್ಯವಸ್ಥೆಯನ್ನು ಜಾಗ್ರತೆ ಸರಿಪಡಿಸಿ ಪ್ರಜೆಗಳ ಪ್ರೀತಿಗೆ ಪಾತ್ರರಾಗಬೇಕಾಗಿದೆ. ಕೋರ್ಟುಗಳ ಬಳಿ ಕಕ್ಷಿಗಾರರು ಕುಳ್ಳಿರುವದಕ್ಕೆ ಸರಿಯಾದ ಕಟ್ಟಡವಿಲ್ಲದೆ ಗಾಳಿ ಮಳೆ ಬಿಸಲಿನ ಉಪಟಲಕ್ಕೂ ನೌಕರರ ಸ್ವಭಾವದಿಂದ ತೆಗೂ ಸಿಲ್ಕಿ ಬಹಳ ಸಂಕಟಪಡುತ್ತಾರೆ. ದಿವಾನ್‌ಸಾಹೇಬರು ತಮ್ಮ ಸಂಚಾರಕಾಲದಲ್ಲಿ ಅಪ್ಪಣೆಕೊಡಿಸಿದಂತೆ ಒಂದು ಕಟ್ಟಡವನ್ನು ನಮ್ಮ ಹೊಸಮುನ್‌ಸೀಫರು ಜಾಗ್ರತೆಮಾಡಿಸಿ ಕೊಡುವರೆಂದು ಪ್ರಜೆಗಳು ನಂಬುತ್ತಾರೆ. ಮುನ್‌ಸಿಪಲ್ ಪ್ರೆಸಿಡೆಂಟರ ಆಡಳಿತದಲ್ಲಿ ಸಿಬ್ಬಂದಿ ಖರ್ಚು ಒಂದು ಪಂಗಡದವರಿಗೆ ಅಲೋಯನ್ಸ್‌ಗಳು ಜಾಸ್ತಿಯಾಗಿದೆಯೇ ವಿನಾ ಪ್ರಜೆಗಳ ಆರೋಗ್ಯಕ್ಕೆ ಆವಶ್ಯಕವಾದ ಕಾರ್ಯಗಳು ತೃಪ್ತಿಕರವಾಗಿಲ್ಲ. ಈ ಪ್ರೆಸಿಡೆಂಟರ ಕಾಲದಲ್ಲಿ ತೆರಿಗೆಗಳು ಪ್ರಜೆಗಳಿಗೆ ಕಷ್ಟಜಾಸ್ತಿಯಾಗಿ ನಿರಂಕುಶಾಧಿಕಾರಕ್ಕೆ ಅವಕಾಶವಾಗಿರುತ್ತದೆ ಎಂದು ಪ್ರಜೆಗಳು ಬಹಳ ಅಸಮಾಧಾನವಾಗಿದ್ದಾರೆ. ಈ ಪ್ರೆಸಿಡೆಂಟರು ಜನಗಳಲ್ಲಿ ಅನುರಾಗವನ್ನು ವಿಶೇಷವಾಗಿ ಕಳೆದುಕೊಂಡಿರುತ್ತಾರೆ. ಕೌನ್ಸಿಲರುಗಳಲ್ಲಿ ಕಕ್ಷಿಗಳು ಹೆಚ್ಚುತ್ತಿವೆ. ಇದನ್ನು ಘನಸರ್ಕಾರದವರು ಗಮನಿಸಿ ಪ್ರೆಸಿಡೆಂಟರಿಗೆ ಬುದ್ಧಿವಾದವನ್ನು ಹೇಳಿ ಕೂಡಲೇ ಎಲ್ಲಾ ಬಾಬುಗಳನ್ನೂ ಕ್ರಮಪಡಿಸುವದು ಅತ್ಯವಶ್ಯಕ. ಈ ಊರಿನ ಕ್ರಾನಿಕಲ್ ಪತ್ರಿಕೆಯು ನಿನ್ನೆ ಹುಟ್ಟಿ ಈ ದಿನ ಕಣ್ಣುಬಿಡುತ್ತಲಿದೆ. ಇನ್ನೂ ಇದು ಹುಟ್ಟಿ ಹನ್ನೊಂದು ತಿಂಗಳಾಗಿರಬಹುದು, ಆದರೂ ಇದು ಸರ್ವಜ್ಞಮೂರ್ತಿ ಎಂದು ಭಾವಿಸಿಕೊಂಡು ಪ್ರಜಾವರ್ಗವನ್ನೆಲ್ಲಾ ಆಕ್ಷೇಪಿಸುತ್ತಾ ಪಟಾಟೋಪವನ್ನು ಮಾಡುತ್ತಲಿದೆ. ಸೂರ್ಯನ ರಶ್ಮಿಯ ಪ್ರಭಾವದಿಂದ ಇದಕ್ಕೆ ಕಣ್ಣು ಕಾಣಿಸದೆ ಇರಬಹುದು. ಅಥವಾ ಪಕ್ಷಾಂಧತೆ ಎಂಬ ಬಾಲಗ್ರಹದ ದೋಷವು ತಗಲಿರಬಹುದು. ಶ್ರೀ ಜಗದ್ಗುರು ಜಯದೇವ ವೀರಶೈವ ಹಾಸ್ಟಲಿನ ಸಂಬಂಧವಾಗಿ ಇದು ಆಗಾಗ್ಗೆ ಬಹಳ ಅಭಿಮಾನಿಯಂತೆ ಅಸಹ್ಯಕರವಾದ ಮೃಷಾವರ್ತಮಾನಗಳನ್ನು ಬರೆಯುತ್ತಾ ಹಿತಚಿಂತಕನಂತೆ ನಟನೆಮಾಡುತ್ತಲಿದೆ. ಈ ವರ್ಗದ ಪರಹಿತ ಚಿಂತನೆಯು ಯಾರಿಗೆ ತಾನೇ ತಿಳಿಯದು? ಈ ಹಾಸ್ಟಲು ಸಮಾಜಕ್ಕೂ ಇದಕ್ಕೂ ಯಾವ ಸಂಬಂಧವೂ ಇರುವದಿಲ್ಲ. ಯಾವವಿಷಯವನ್ನು ಪ್ರಕಟಿಸಬೇಕಾದರೂ ನಿಜಸ್ಥಿತಿಯನ್ನು ಕರ್ತೃಗಳಿಂದ ತಿಳಿದುಕೊಂಡು ನಂತರ ಪ್ರಕಟಿಸುವುದು ಪತ್ರಿಕಾಕರ್ತರ ಮುಖ್ಯ ಧರ್ಮ. ಅದರಿಂದ ಪ್ರಜೆಗಳ ಅನುರಾಗವೂ ಹೆಚ್ಚಾಗಬಹುದು, ಇಲ್ಲದಿದ್ದರೆ ಶೈಶವಾವಸ್ಥೆಯಲ್ಲಿ ಅದೃಶ್ಯವಾಗಬಹುದಾದ ಪರಿಸ್ಥಿತಿ ಯುಂಟಾಗಬಹುದು. ಈ ಹಿತೋಕ್ತಿಯನ್ನು ಈ ಪತ್ರಿಕೆಯು ಚೆನ್ನಾಗಿ ಗಮನಿಸಿ ಧರ್ಮಮಾರ್ಗದಿಂದ ಚಿರಜೀವಿಯಾಗಿರಲಿ. ಪತ್ರವಿಸ್ತಾರಕ್ಕೆ ಕ್ಷಮೆಯಿರಲಿ.

ಪುರನಿವಾಸಿ.

ಚನ್ನಗಿರಿ ಟವನ್ ರೀಡಿಂಗ್ ರೂಮಿನ ಪ್ರವೇಶೋತ್ಸವ.

ಸೆಪ್ಟಂಬರ್ 28 ನೆ ತಾ|| ಬೃಹಸ್ಪತಿವಾರ ಶ್ರೀ ಸರಸ್ವತೀ ಪೂಜೆಯ ದಿವಸ ಶಿವಮೊಗ್ಗ ಡಿ|| ಚನ್ನಗಿರಿಯಲ್ಲಿ ಹೊಸದಾದ ರೀಡಿಂಗ್ ರೂಮಿನ ಪ್ರವೇಶೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಪ್ರಾತಃಕಾಲ ಸುಮಾರು 10 ಘಂಟೆಗೆ ರೀಡಿಂಗ್‌ರೂಂ ಕಟ್ಟಡದಲ್ಲಿ ಶ್ರೀ ಸರಸ್ವತೀ ಆವಾಹನೆ ಮಾಡಲ್ಪಟ್ಟು ಪೂಜಾದಿ ಉತ್ಸವಗಳು ನಡೆದವು. ಮಧ್ಯಾಹ್ನ ಸುಮಾರು 3 ಘಂಟೆಗೆ ಶಿವಮೊಗ್ಗದಿಂದ ಬಂದಿದ್ದ ಹೆಲ್ತಾಫೀಸರ್ ಮ|| ಮಾಂಕರ್ ಸಾಹೇಬರೂ, ತಾಲ್ಲೂಕಿನ ಸರ್ಕಾರಿ ನೌಕರರೂ, ಚನ್ನಗಿರಿ ಪುರನಿವಾಸಿಗಳೂ, ರೀಡಿಂಗ್ ರೂಮು ಕಟ್ಟಡದಲ್ಲಿ ಒಟ್ಟು ಸೇರಿ ಪರಮಾತ್ಮನ ಪ್ರಾರ್ಥನೆಯನ್ನು ಮಾಡಿದರು. ಅನಂತರ ಎಲ್ಲರಿಗೂ ಫಲಾಹಾರದ ವಸ್ತುಗಳು ಹಂಚಲ್ಪಟ್ಟ ಮೇಲೆ ಪುನಃ ಕಟ್ಟಡದೊಳಗೆ ಸಭೆಯು ನೆರೆಯಿತು. ಕಟ್ಟಡವು ತಳಿರುಚಪ್ಪರಗಳಿಂದಲೂ, ತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟದ್ದಲ್ಲದೆ ಒಳಗಡೆ ಹಸುರು ಎಲೆಗಳಿಂದಲೂ, ವಿವಿಧ ಪುಷ್ಪಗಳಿಂದಲೂ, ಕಟ್ಟಡವು ಆಬಾಲವೃದ್ಧರಿಂದ ತುಂಬಿ ಮನೋರಂಜಕವಾಗಿ ಕಂಗೊಳಿಸುತಿತ್ತು. ಕುಳುಕಾಡುತ್ತಾ ಇನ್ನೂ ಸ್ಥಳ ಸಂಕೋಚದಿಂದ ಉಳಿದ ಕೆಲವರು ಹೊರಗಡೆ ಪಡಸಾಲೆಗಳಲ್ಲಿ ನಿಂತಿದ್ದರು. ಸ್ವಲ್ಪ ಸಂಗೀತವಾದ ಮೇಲೆ ಅಧ್ಯಕ್ಷರಾದ ಚನ್ನಗಿರಿ ತಾಲ್ಲೂಕ್ ಅಮಲ್ದಾರ್ ಮ|| ರಾ|| ಬಿ. ಸುಬ್ರಹ್ಮಣ್ಯಶಾಸ್ತ್ರಿ ಬಿ. ಎ; ಬಿ. ಎಲ್. ರವರು ಆ ದಿನ ಎಲ್ಲರೂ ಸೇರಿರತಕ್ಕ ಉದ್ದೇಶವನ್ನು ತಿಳಿಸಿ ಎಲ್ಲರ ಅಭಿಪ್ರಾಯದಂತೆ ವಾಚಕಶಾಲೆಯನ್ನು ಸ್ಥಾಪನಗೊಳಿಸಿದರು. ಅನಂತರ ಚನ್ನಗಿರಿ ತಾಲ್ಲೂಕ್ ಪರಸ್ಪರ ಸಹಾಯ ಸಂಘಗಳ ಇನ್‌ಸ್ಪೆಕ್ಟರ್ ಮ|| ವಿ. ಯನ್. ರಾಜಾರಾವ್ ಬಿ. ಎ. ಇವರು ಕರ್ನಾಟಕ ಭಾಷೆಯ ಪೂರ್ವದ ಸ್ಥಿತಿಗೂ, ಈಗಿನಸ್ಥಿತಿಗೂ ಇರುವ ವ್ಯತ್ಯಾಸವನ್ನೂ ಕರ್ನಾಟಕ ಭಾಷೆಯಲ್ಲಿರುವ ಅಮೌಲ್ಯವಾದ ಭಂಡಾರದ ವಿಷಯವಾಗಿ ಕೆಲವು ಸಂಗತಿಗಳನ್ನೂ ತಿಳಿಸಿ ಭಾಷೆಯು ಪ್ರತಿಯೊಬ್ಬ ಮನುಷ್ಯನಿಗೂ ಅವಶ್ಯಕವೆಂದೂ, ಅದರ ಅಭಿವೃದ್ಧಿಗಾಗಿ ಪ್ರತಿಯೊಬ್ಬನೂ ಕಷ್ಟಪಟ್ಟು ಕೆಲಸ ಮಾಡಬೇಕೆಂದೂ ಹೇಳಿದರು. ಅಲ್ಲದೆ ನಮ್ಮನ್ನಾಳುವ ಶ್ರೀಮನ್ಮಹಾರಾಜರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಭಾಷಾಭಿವೃದ್ಧಿಗೋಸ್ಕರ ಪೂರ್ವದ ಭೋಜರಾಜಾದಿರಾಜರ್ಷಿಗಳಂತೆ ಪಾಂಡಿತ್ಯ ಪುರಸ್ಕರಣೆ ಮಾಡುತ್ತಲೂ, ಇತರ ಸಹಾಯಗಳನ್ನು ಒದಗಿಸಿಕೊಡುತ್ತಲೂ, ಇರುವುದರಿಂದ ನಮ್ಮ ಕರ್ನಾಟಕ ಭಾಷೆಯು ಲೀನವಾಗದಂತೆ ಅಭಿವೃದ್ಧಿಗೆ ಬರುತ್ತಿರಲೆಂದು ಹೇಳಿದರು. ನಮ್ಮ ಕರ್ನಾಟಕ ಭಾಷೆಯನ್ನು ಈಗ ಜೀರ್ಣೋದ್ಧಾರ ಮಾಡಲು ಬೇಕಾದ ಸಲಹೆಗಳನ್ನೆಲ್ಲಾ ಸ್ಪಷ್ಟವಾಗಿ ಸೂಚಿಸಿದುದಲ್ಲದೆ, ಇದಕ್ಕೆ ಧನವಂತರು ಮುಂದಾಳಾಗಿ ಬಂದು ತಮ್ಮ ದ್ರವ್ಯವನ್ನು ಸದ್ವಿನಿಯೋಗಪಡಿಸುತ್ತಾ ಬಂದರೆ ಭಾಷಾಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲವೆಂದೂ, ಅಮೇರಿಕಾದೇಶದಲ್ಲಿನ ಕೋಟ್ಯಾಧೀಶ್ವರರ ಐಶ್ವರ್ಯವನ್ನು ತಿಳಿಸಿ ಆಂಡ್ರ್ಯೂಕಾರ್ನೆಗಿಯವರು ತಮ್ಮ ದ್ರವ್ಯದಲ್ಲಿ ವಿದ್ಯಾಭ್ಯಾಸಕ್ಕೂ ಪುಸ್ತಕಭಂಡಾರ ವಾಚಕಶಾಲೆಗಳಿಗೂ, ಇತರ ಧರ್ಮ ಕಾರ್ಯಗಳಿಗೂ ಕೋಟ್ಯಾಂತರ ರೂಪಾಯಿಗಳನ್ನು ದಾನ ಮಾಡಿರುತ್ತಾರೆಂತಲೂ, ಇದೇ ರೀತಿ ನಮ್ಮ ದೇಶದ ಐಶ್ವರ್ಯವಂತರೂ ತಮ್ಮ ಹಣವನ್ನು ಸದ್ವಿನಿಯೋಗಪಡಿಸಬೇಕೆಂತಲೂ ತಿಳಿಸಿದರು. ಮೂಕ ಪ್ರಾಣಿಗಳಿಗೆ ಸಹ ಭಾಷಾಭಿಮಾನವಿರುವಲ್ಲಿ ಸೃಷ್ಟಿಯಲ್ಲಿ ಅತಿ ಶ್ರೇಷ್ಠನಾದ ಮನುಷ್ಯನು ತನ್ನ ಭಾಷಾಭಿವೃದ್ಧಿಗೆ ತಕ್ಕ ಪ್ರಯತ್ನ ಮಾಡದೆ ಇರಕೂಡದೆಂದೂ, ಮಧ್ಯ ಅನೇಕ ವಿಘ್ನಗಳು ಬಂದೊದಗಿದರೂ, ಅಲಕ್ಷ್ಯಮಾಡದೆ ಕಾರ್ಯ ಕೈಗೂಡುವವರೆಗೂ, ಕಷ್ಟಪಟ್ಟು ಕರ್ನಾಟಕ ಮಾತೃಸೇವೆಯನ್ನು ಮಾಡಬೇಕೆಂದೂ ತಿಳಿಸಿದರು. ಅನಂತರ ನಮ್ಮ ತಾಲ್ಲೂಕಿಗೆ ಹೊಸದಾಗಿ ಬಂದಿರುವ ಪೋಲೀಸ್ ಇನ್‌ಸ್ಪೆಕ್ಟರ್ ಮ|| ಟಿ. ಎಸ್. ನಾಗೇಶರಾಯರು ದೇಶೋದ್ಧಾರಕ್ಕೆ ಭಾಷೋದ್ಧಾರವು ಅತ್ಯವಶ್ಯಕವೆಂದೂ, ಇದಕ್ಕಾಗಿ ವಾಚಕಶಾಲೆಗಳು ಬಹಳ ಸಹಾಯಕಾರಿಗಳಾಗಿರುವುವೆಂತಲೂ ತಿಳಿಸಿ ವಾಚಕಶಾಲೆಯಿಂದ ಉಂಟಾಗುವ ಪ್ರಯೋಜನಗಳನ್ನು ವಿಸ್ತರಿಸಿ ಪರಸ್ಪರ ದ್ವೇಷವನ್ನು ಬಿಟ್ಟು ಅನ್ಯೋನ್ಯ ಕ್ಷೇಮಚಿಂತನೆ ಮಾಡುತ್ತಾ ಕಾರ್ಯಗಳನ್ನು ಮಾಡಿದಲ್ಲಿ ದೇಶಕ್ಕೆ ಬಹಳ ಉಪಕಾರ ಮಾಡಬಹುದೆಂತ ಹೇಳಿದರು. "ಆರಂಭಶೂರತ್ವ" ವನ್ನು ಮಾತ್ರ ತೋರಿಸದೆ ಶಾಶ್ವತವಾಗಿ ವಾಚಕಶಾಲೆಯನ್ನು ನಡೆಯಿಸಿಕೊಂಡು ಬರಬೇಕೆಂದು ಇದಕ್ಕೆ ಬೇಕಾದ ಅನುಭವಸಿದ್ಧವಾದ ಸಾಧನಗಳನ್ನು ತಿಳಿಸಿದರು. ಕರ್ನಾಟಕ ಭಾಷಾಭಿವೃದ್ಧಿಗೋಸುಗ ವಾಚಕ ಶಾಲೆಯಲ್ಲಿ ಪುಸ್ತಕ ಭಂಡಾರವೊಂದು ಏರ್ಪಡಿಸಲ್ಪಟ್ಟು ನೆರೆದಿದ್ದ ಜನರು ಇದಕ್ಕೆ ಬಹಳ ಉದಾರ ಹೃದಯರಾಗಿ ಚಂದಾ ಕೊಡಲೊಪ್ಪಿದರು. ಬೆಂಚ್ ಮ್ಯಾಜಿಸ್ಟ್ರೇಟರೂ ಮತ್ತು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರೂ ಆದ, ಮ|| ಟಿ. ನಂಜುಂಡಯ್ಯನವರು ಒಂದು ಬೀರು ಮಾಡಿಸಿ ವಾಚಕಶಾಲೆಗೆ ಉಚಿತವಾಗಿ ಕೊಡಲು ವಾಗ್ದಾನ ಮಾಡಿದರು. ಆ ಮೇಲೆ ಅಧ್ಯಕ್ಷರು ಬಹಳ ಸ್ವಾರಸ್ಯವಾಗಿ ಭಾಷಣವನ್ನು ಮಾಡಿ ಸೆಕ್ರೆಟರಿಗಳಾದ ಸಬ್‌ರಿಜಿಸ್ಟ್ರಾರ್ ಮ|| ಬಿ. ಬಾಲಕೃಷ್ಣರಾಯರು, ಪೋಸ್ಟ್ ಮಾಸ್ಟರ್ ಕೆ. ನಾಗೇಶರಾಯರು ಈಗ ತೋರಿಸುತ್ತಿರುವ ಉತ್ಸಾಹವನ್ನು ನೋಡಿದರೆ ನಮ್ಮ ವಾಚಕಶಾಲೆಯು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದರು. ಸರ್ವಜನಾಹ್ಲಾದಕರವಾಗಿ ಸಂಗೀತವಾದ ಮೇಲೆ ಶ್ರೀ ಸರಸ್ವತೀದೇವಿಗೆ ಮಂಗಳಾರತಿಯನ್ನು ಸಮರ್ಪಿಸಿದರು. ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಚಕ್ರವರ್ತಿಗಳಿಗೂ ನಮ್ಮನ್ನಾಳುವ ಶ್ರೀಮನ್ಮಹಾರಾಜರಿಗೂ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥನೆಗಳು ಸಮರ್ಪಿಸಲ್ಪಟ್ಟು ಸಭೆಯು ಚದರಿತು.

ವಿದ್ಯಾಭಿಮಾನಿ.

ಹಾಂಸಭಾವಿ ವಿದ್ಯಾವರ್ಧಕ ಸಂಘ.

ಈ ದಿವಸ ಹಾಂಸಭಾವಿಯ ಯಾವತ್ತೂ ಭಕ್ತಮಂಡಲಿಯವರು ಇಲ್ಲಿ ಸ್ಥಾಪಿತವಾಗಿರುವ ಮೃತ್ಯುಂಜಯ ಎ. ವಿ. ಸ್ಕೂಲಿಗೆ ಬರತಕ್ಕ ಬಡವಿದ್ಯಾರ್ಥಿಗಳಿಗೆ ಅನ್ನಾಲಯ (ಬೋರ್ಡಿಂಗು) ವನ್ನು ಸ್ಥಾಪನ ಮಾಡಿರುವದು ಸರ್ವಶ್ರುತವಿರುವದಷ್ಟೆ. ಈ ಬೋರ್ಡಿಂಗು ಸದ್ಯಕ್ಕೆ ವಿರಕ್ತಮಠದಲ್ಲಿ ನಡೆಯುತ್ತಲಿದ್ದು ಸ್ಥಳವು ಸಂಕೋಚವಿದ್ದ ಮೂಲಕ ಒಂದುನೂರು ವಿದ್ಯಾರ್ಥಿಗಳ ಭೋಜನದ ವ್ಯವಸ್ಥೆಗೂ ಉಗ್ರಾಣ ಸೂಪಶಾಲೆ ವಗೈರೆ ಕೊಟ್ಟಡಿಗಳಿಗೂ ಅನುಕೂಲವಾದ ಕಟ್ಟಡವನ್ನು ಸ್ಥಾಪಿಸಲೋಸುಗ ನಿಶ್ಚಯಿಸಿ ಇದೇ ದಿವಸ ಮಧ್ಯಾಹ್ನ ಮೂರು ಘಂಟೆಗೆ ರಾ|| ರಾ|| ಹಂಜಿ ರುದ್ರಪ್ಪನವರ ಹಸ್ತದಿಂದ ಶಂಕುಸ್ಥಾಪನೆಯು ಸರ್ವಾನುಮತದಿಂದ ನಡೆಯಲ್ಪಟ್ಟು ನಂತರ ಶ್ರೀ ಅಥಣಿ ಶಿವಯೋಗಿಗಳ ಭಾವಚಿತ್ರದೊಡನೆ ಶ್ರೀ ಮೃತ್ಯುಂಜಯಸ್ವಾಮಿಗಳ ತಿರ್ಯಗಾಂದೋಳನೋತ್ಸವದೊಡನೆ (ಅಡ್ಡಪಲ್ಲಕ್ಕಿ ಪಂಚಕಲಶ) ಸಂದರ್ಶನವನ್ನು ಸ್ಥಳ ಪರಸ್ಥಳದ ಭಕ್ತಮಂಡಲಿ ಮತ್ತು ಯಾವತ್ತು ವಿದ್ಯಾರ್ಥಿ ವೃಂದವೂ ಮಾಸ್ತರು ಜನಗಳು ಸಹ ತೆಗೆದುಕೊಂಡ ನಂತರ ಅಜಮಾಸು ಎರಡುಸಾವಿರ ಜನಗಳ ಮೇಲ್ಪಟ್ಟು ಭಕ್ತಸಮೂಹವು ಸೇರಿ ಪುರವೀಧಿಗಳಲ್ಲಿ ಶಿವಭಜನ ಜಯಘೋಷ ಶುಭವಾದ್ಯದೊಡನೆ ಅತಿ ವಿಜೃಂಭಣೆಯಿಂದ ನಡೆದು ಶ್ರೀ ಬಸವೇಶ್ವರ ದೇವಾಲಯದಲ್ಲಿ ಸಿಂಹಾಸನಾರೋಹಣವಾಗಿ ರಾಜೇಶ್ರೀ ಹೊಳೆಬಸಪ್ಪನ್ಯಾಸನಿಗೆ ಸಿದ್ಧಾಪುರ ಇವರು ಸರ್ವಾನುಮತದಿಂದ ಅಧ್ಯಕ್ಷಸ್ಥಾನವನ್ನು ವಹಿಸಿದನಂತರ ಧರ್ಮ ವಿದ್ಯಸಮಾಜ ಸುಧಾರಣೆ ವಗೈರೆ ವಿಷಯಗಳ ಮೇಲೆ—ರುದ್ರಗೌಡ ಭೋಗಾವಿ ಪಾಟೀಲ ಬಿ. ಏ. ಜಿ. ಮತ್ತು ವೇ-ಚನ್ನಬಸವಾರ್ಯ ಹರಿಹರ ರಾ. ಸಣ್ಣಬಸಪ್ಪನವರು ಗೊಗಲಶೆಟ್ರು ಮಾಸೂರು ರಾ. ರಾಮಪ್ಪನವರು ಬಿಟಗೇರೂರ ಬ್ಯಾಡಗಿ ಮತ್ತು ಕೆಲವು ವಿದ್ಯಾರ್ಥಿಗಳ ಭಾಷಣವಾದನಂತರ ಈ ದಿವಸ ಶಂಕುಸ್ಥಾಪನೆಯನ್ನು ಮಾಡಿದ ಇಮಾರತಿಗೆ ಅಥಣಿ ಶ್ರೀ ಮುರಘೇಂದ್ರ ಶಿವಯೋಗೀಶ್ವರ ಬೋರ್ಡಿಂಗ ಎಂಬದಾಗಿ ಸರ್ವಾನುಮತದಿಂದ ಅಭಿಧಾನವನಿಟ್ಟು ಜಯಘೋಷವಾದೊಡನೆ ಈ ಕೆಳಗೆ ನಮೂದಾದ ಮೊರೆಗೆ ವರ್ಗಣಿಯು ವಸೂಲಾಯಿತು. ಅಜಮಾಸ ರೂ (500) ಜಮಾ ಆದವು. ಮತ್ತು ಯಾವತ್ತೂ ವ್ಯಾಪಾರಸ್ಥರು ತಮ್ಮತಮ್ಮ ಸರಕುಗಳ ಮೇಲೆ ಮಣ ಒಂದಕ್ಕೆ ಅರ್ಧ ಆಣೆಯಂತೆಯೂ ರೈತಜನಗಳು ಇಲ್ಲಿಯ ಮುಖ್ಯ ಬೆಳೆಯಾದಂಥ ಮೆಣಸಿನಕಾಯಿ ಮಾರಾಟದಲ್ಲಿ ಒಂದು ರೂಪಾಯಿಗೆ 3 ಪೈಯಂತೆಯೂ ಇಲ್ಲಿನ ವಿದ್ಯಾವರ್ಧಕ ಸಾಯಮು ಫಂಡಿಗೆ ವರ್ಷಾಶನ ಕೊಡಲು ವಾಗ್ದಾನ ಮಾಡಿದ ರಕಮು ವರ್ಷ ಒಂದಕ್ಕೆ ಒಂದು ಸಾವಿರ ರೂಪಾಯಿಗಳ ಮೇಲ್ಪಟ್ಟು ಆಗಬಹುದು. ಈ ವಿಷಯವನ್ನು ತಿಳಿಸಲು ಅತ್ಯಾನಂದವಾಗುತ್ತದೆ.

ಮೊದಲಿದ್ದ ಮಠವನ್ನೇ ಬೋರ್ಡಿಂಗಿನ ಕಟ್ಟಡವನ್ನಾಗಿ ಮಾಡಲು ಸರ್ವಾನುಮತವಾದುದರಿಂದ ಯಾವತ್ತೂ ಭಕ್ತಮಂಡಲಿಯವರಿಗೆ ಅತ್ಯಾನಂದವಾಯಿತು. ನಂತರ ವೀರಶೈವ ವೃತ್ತಪತ್ರಿಕೆಗಳ ಪ್ರೋತ್ಸಾಹದ ಬಗ್ಗೆ ಮೈಸೂರು ಸ್ಟಾರ್ ಮತ್ತು ಕರ್ನಾಟಕ ಟಾಯಿಮ್ಸ್ ಪತ್ರಿಕೆಗಳಿಗೆ ಎರಡೆರಡು ರೂಪಾಯಿಗಳಂತೆ ರವಾನಿಸಲು ನಿಶ್ಚಯಿಸಿತು. ನಂತರ ರಾ|| ಸಣ್ಣಬಸಪ್ಪ ಮೊಗಲಶೆಟ್ರ ಇವರು ಪ್ರಾಚೀನಕಾಲದಿಂದಲೂ ಒಂದೇ ಒಂದು ವರ್ಗದವರು ಸ್ವಾರ್ಥ ಪರಾಯಣತೆಯಿಂದ ಗೋಮುಖವ್ಯಾಘ್ರದ ನಟನೆಯಿಂದ ನಮ್ಮ ದೇಶದ ಏಳಿಗೆಗೆ ತಿಲಾಂಜಲಿಯನ್ನು ಬಿಟ್ಟ ವ ಬಿಡುತ್ತಿರುವ ರಾಷ್ಟ್ರೋನ್ನತಿಯ ಸೋಗಿನ ಬಹದ್ದೂರರ ನೌಕರಿಯ ಗುತ್ತಿಗೆಯನ್ನು ಬಿಡುಗಡೆಪಡಿಸಿ ಸಮದೃಷ್ಟಿಯಿಂದ ನೋಡುವ ನಮ್ಮ ರಾಜರ ಬಗ್ಗೆ ಸರ್ವರೂ ರಾಜನಿಷ್ಠೆಯಿಂದ ನಡೆಯಬೇಕೆಂಬ ಠರಾವನ್ನು ತರಲಾಗಿ ರಾ|| ರಾಮಪ್ಪ ಬಿಟಗೇರೂರ ಇವರು ಅನುಮೋದನ ಕೊಟ್ಟನಂತರ ಸರ್ವಾನುಮತದಿಂದ ಪಾಸಾಯಿತು.

ಮೈಸೂರ ಗೌರ್ನಮೆಂಟ್ ಸಂಸ್ಕೃತ ಕಾಲೇಜುಗಳಿಗೆ ತ್ರಿವರ್ಣಬ್ರಾಹ್ಮಣರ ಹೊರತು ಇತರರನ್ನು ಸೇರಿಸಬಾರದೆಂಬ ವಿಷಯದಲ್ಲಿ ಇದು ಸದರ ಗೌರ್ನಮೆಂಟಿನ ಖ್ಯಾತಿಗೆ ಅನ್ಯಾಯವಿರುತ್ತದೆಂತಲೂ, ಅನೂಚಾನವಾಗಿ ವೇದ ವೇದಾಂಗಕ್ಕೂ ಕೂಡಾ ಬಾಧ್ಯಸ್ಥರಾದ, ವೀರಶೈವರೇ ಮೊದಲಾದ ಇತರ ವರ್ಣದವರನ್ನು ಸೇರಿಸಲು ಮೈಸೂರ ಗೌರ್ನಮೆಂಟಿಗೆ ಪ್ರಾರ್ಥಿಸಿ ಕೊಳ್ಳಬೇಕೆಂದೂ ಮಿ|| ರುದ್ರಗೌಡ ಭೋಗಾವಿ, ಬಿ. ಏ. ಜಿ. ಠರಾವು ತಂದದ್ದನ್ನು ರಾ|| ಸಣಬಸಪ್ಪ ಮೊಗಲಿಶೆಟ್ರ ಇವರು ಈ ಕಾಲೇಜುಗಳಿಗೆ ಸಲ್ಲುವ ಹಣವು ಸಾರ್ವಜನಿಕ ಹಣವಿದ್ದು ಬರೇ ತ್ರಿವರ್ಣದವರಿಗೆ ಸಂಸ್ಕೃತದ ಅಭ್ಯಾಸಕ್ಕೆ ಸಲ್ಲುವದು ಉಳಿದವರ ಮನುಷ್ಯತ್ವದ ಗೌರವಕ್ಕೆ ಹಾನಿಯನ್ನೂ ತರುವಂಥಾದ್ದೂ ಸುಧಾರಿಸದ ರಾಜನೀತಿಗಳೊಳಗೆ ಎಣಿಸಲ್ಪಡುವಂಥಾದ್ದೂ ಇರುವದೆಂದು ಅತಿ ವಿಷಾದದಿಂದ ಮೇಲ್ಗಂಡ ಠರಾವನ್ನು ಪುಷ್ಟೀಕರಿಸಲಾಗಿ ಸರ್ವಾನುಮತದಿಂದ ಮೈಸೂರ ಗೌರ್ನಮೆಂಟಿಗೆ ಈ ವಿಷಯವನ್ನು ಶ್ರುತಪಡಿಸಿಕೊಳ್ಳಲು ನಿಶ್ಚಯಿಸಿತು. ನಂತರ ಸಮಾಜಸೇವೆಯೇ ಕರ್ತವ್ಯವೆಂದು ಹಗಲಿರುಳು ಅವಿಶ್ರಾಂತಶ್ರಮವನ್ನು ವಹಿಸಿ ಸಮಾಜವನ್ನುದ್ಧರಿಸಲು ಅವತರಿಸಿ ಶ್ರೀ ಶಿವಯೋಗಿಗಳ ಕೃಪಾಪಾತ್ರರಾದ ಶ್ರೀ ಮೃತ್ಯುಂಜಯ ಸ್ವಾಮಿಗಳ ಕೃಪಾಪೂರಿತ ಆಶೀರ್ವಾದವನ್ನು ಪಡೆಯಲು ತಮ್ಮ ಶಕ್ತ್ಯನುಸಾರ ಭಕ್ತಿಪೂರ್ವಕವಾಗಿ ಪದ್ಧತಿಯಂತೆ ವಿಜಯದಶಮಿ ದೆಸೆಯಿಂದ ಒಪ್ಪಿಸಲ್ಪಟ್ಟ ಕಾಣಿಕೆಯ ರೂಪಾಯಿಗಳನ್ನು ಶ್ರೀಗಳವರು ಆತ್ಮಾನಂದ ದೊಡನೆ ಈ ಬೋರ್ಡಿಂಗ್ ಕಟ್ಟಡಕ್ಕೆ ಆಶೀರ್ವಾದ ದಯಪಾಲಿಸಿ ಸದ್ಬೋಧೆಯಿಂದ ಆಶೀರ್ವಾದವನ್ನು ಸಮಸ್ತರಿಗೂ ಕೊಟ್ಟನಂತರ ನಮ್ಮನ್ನಾಳುವ ಪಂಚಮ ಜಾರ್ಜರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ ತಮಗಿದ್ದ ರಾಜಭಕ್ತಿಯನ್ನು ವ್ಯಕ್ತಗೊಳಿಸಿ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಸರ್ಕಾರಿ ಸಂಸ್ಕೃತ ಕಾಲೇಜು.

ಮೈಸೂರು ಮತ್ತು ಬೆಂಗಳೂರುಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಸರ್ಕಾರಿ ಸಂಸ್ಕೃತ ಪಾಠಶಾಲೆಗಳಿಗೆ ನಮ್ಮನ್ನೂ ಸೇರಿಸಿಕೊಳ್ಳಬೇಕೆಂದು ಸರ್ಕಾರದವರಿಗೆ ನಾವು ಕೇಳಿಕೊಂಡರೆ, ಬ್ರಾಹ್ಮಣರಾದ ನೀವು ಕಣ್ಣು ಕೆಂಪಗೆ ಮಾಡಿಕೊಂಡು ಕಾಲುಕೆದರಿ ಜಗಳಕ್ಕೆ ಬರುತ್ತೀರಲ್ಲ? ನಾವೇನಾದರೂ ನಿಮ್ಮ ಮನೆಗೆ ಬಂದು "ಹಾರುವಯ್ಯನವರೇ ದಯಮಾಡಿ ಸ್ವಲ್ಪ ಭಿಕ್ಷಾ ನೀಡಿರಿ" ಎಂದು ಕೇಳಿದ್ದರೆ "ಜಂಗಮಯ್ಯನವರೇ ನಮ್ಮ ಕೈ ತೆರಪಿಲ್ಲ, ಮುಂದಕ್ಕೆ ದಯಮಾಡಿರಿ" ಎಂದು ಹೇಳಿದರೆಒಪ್ಪಬಹುದಾಗಿತ್ತು. ಹಾಗೇನಾದರೂ ನಿಮ್ಮ ಬೊಗಸಿಯಲ್ಲಿ ನಾವು ನೀರು ಕುಡಿಯುತ್ತೇವೆಂದು ಕೇಳುತ್ತೇವೆಯೇ? ಸರ್ಕಾರಿ ಸಂಸ್ಕೃತ ಪಾಠಶಾಲೆಗಳಿಗೆ ಖರ್ಚಾಗುವ ಹಣವು ಬ್ರಾಹ್ಮಣರು ಮಾತ್ರ ದುಡಿದುಕೊಡಲ್ಪಟ್ಟದ್ದಲ್ಲ; ಅದು ಸರ್ವ ಪ್ರಜೆಗಳ ಕಷ್ಟಾರ್ಜಿತದ್ರವ್ಯವಾಗಿರುತ್ತದೆ. ಪ್ರಯುಕ್ತ ಅಲ್ಲಿ ಕೇವಲ ತ್ರಿಮತ ಬ್ರಾಹ್ಮಣರಿಗೆ ಮಾತ್ರ ಅವಕಾಶಕೊಟ್ಟಿರುವುದು ಬಹು ಜನರ ಅಸಮಾಧಾನಕ್ಕೆ ಕಾರಣವಾಗಿರುತ್ತದೆ. ಆದುದರಿಂದ ಹಿಂದೂ, ಉತ್ತಮವರ್ಣದವರ ಪ್ರವೇಶಕ್ಕಾದರೂ ದಯಮಾಡಿ ಆಸ್ಪದಕೊಡಲೇಬೇಕೆಂದು ನಾವು ಸರ್ಕಾರದವರಿಗೆ ಪ್ರಾರ್ಥಿಸಿಕೊಂಡರೆ, ಬ್ರಾಹ್ಮಣರಾದ ನೀವು ಸಂಸ್ಕೃತ (ವೇದ ಮೊದಲಾದವುಗಳನ್ನ) ಕಲಿಯಲಿಕ್ಕೆ ನಿಮ್ಮ ಹೊರತು ಅನ್ಯರಿಗೆ ಖಂಡಿತವಾಗಿ ಶಾಸ್ತ್ರಗಳಲ್ಲಿ ಅವಕಾಶವಿಲ್ಲವೆಂದು ನಿಮ್ಮ ಕಡತಗಳನ್ನು ಬಯಲಿಗೆ ತಂದು ತೋರಿಸುತ್ತಿರುವಿರಿ. ಬ್ರಾಹ್ಮಣ ಬಂಧುಗಳೆ! ನೀವು ವಿದ್ಯಾಕಲಿಯಬೇಕು, ನಾವು ದಡ್ಡರಾಗಿರಬೇಕೆ? ನೀವು ಕುದುರೆಯ ಮೇಲೆ ಕುಳಿತು ನೌಕರಿಮಾಡಬೇಕು, ನಾವು ಡವಾಲಿಹಾಕಿಕೊಂಡು ಜವಾನರಾಗಿರಬೇಕೆ? ನಿಮ್ಮನ್ನು ನಾವು ಸ್ವಾಮಿ ರಾಯರೇ, ಇತ್ಯಾದಿ ಗೌರವದಿಂದ ಕರೆಯಬೇಕು; ನೀವು ನಮ್ಮನ್ನು ಎಲೋ, ಏನೋ, ಯೋ ಇತ್ಯಾದಿ ತಿರಸ್ಕಾರದಿಂದ ಕರೆಯಬೇಕೆ? ನಾವು ಹಣ ಸಂಪಾದಿಸತಕ್ಕವರಾಗಿರಬೇಕು. ನೀವು ಅದನ್ನ ಜೇಬಿಗೆ ಹಾಕಿಕೊಂಡು ಲೋಲುಪ್ತಿಮಾಡತಕ್ಕವರಾಗಿರಬೇಕೆ? ನಾವು ಮಡ್ಡ ಒಕ್ಕಲಿಗರಾಗಬೇಕು. ನೀವು ಜಾಣ ವಕೀಲರಾಗಿರಬೇಕೆ? ಇತ್ಯಾದಿಯಾಗಿ ಮಾತ್ರ ನಿಮ್ಮ ಶಾಸ್ತ್ರಗಳಲ್ಲಿ ಹೇಳಿರಬಹುದಲ್ಲವೇ? ಇದರಂತೆ ಬ್ರಾಹ್ಮಣನಾದವನಿಗೆ ಅನ್ನ ವಿಕ್ರಯಮಾಡುವುದು, ಅಂದರೆ ಹೊಟೇಲ್ ಇಟ್ಟುಕೊಂಡು ಅನ್ಯಜಾತಿಯವರು ಕಚ್ಚಿ ಕುಡಿದ ಚಹಾ ಕಾಫಿ ಮೊದಲಾದವುಗಳನ್ನ ಮುಟ್ಟಿ ತೊಳೆಯುವುದು ಇತ್ಯಾದಿ, ಮತ್ತು ಮದ್ಯ ವಿಕ್ರಯಮಾಡುವುದು, ಅಂದರೆ ಶೇಂದಿ, ಶರಾಬ್ ಕಂಟ್ರ್ಯಾಕ್ಟರಾಗಿರುವುದು, ವ ಬಕ್ರಿದಾರರಾಗಿರುವುದು ಮತ್ತು ಡಾಕ್ಟರಾಗಿರುವುದು ಅಂದರೆ ಪ್ರಸಂಗವಶಾತ್ ಹೆಣಗಳನ್ನು ಕೊಯ್ಯುವುದು, ಇತ್ಯಾದಿಗಳೆಲ್ಲ ಜನ್ಮಸಿದ್ಧ ಹಕ್ಕುಗಳಿರುತ್ತವೆಯೆಂದು ಸಹ ನಿಮ್ಮ ಪುರಾಣಗಳಲ್ಲಿ ಹೇಳಿರಬಹುದಲ್ಲವೇ? ಮತ್ತು ಹೆಂಗಸರಾದವರು ಕಣ್ಣಿಗೆ ಕನ್ನಡಕ ಹಾಕಿಕೊಂಡು ಕೈಗೆ ರಿಸ್ಟ್‌ವಾಚ್ ಕಟ್ಟಿಕೊಂಡು ಕೈಯೊಳಗೆ ಕೊಡೆ ಹಿಡಿದುಕೊಂಡು, ಕಾಲೊಳಗೆ ಬೂಟ್ ಮೆಟ್ಟಿಕೊಂಡು ನಾಟಕ ಸಿನೀಮಾ ಉತ್ಸವಾದಿಗಳಿಗೆ ಹೋಗಬಹುದೆಂತಲೂ, ಇವರು ಮೆಂಬರುಗಳು ಕೂಡ ಆಗಿ ಬಹು ಜನ ಗಂಡಸರ ಜತೆಯಲ್ಲಿ ಸೇರಿ ಸಾರ್ವಜನಿಕ ಸೇವೆ ದೇಶಸೇವೆ ಮಾಡಬಹುದೆಂತಲೂ ಸಹ ನಿಮ್ಮ ಜಾತಿ ವೃತ್ತಿಧರ್ಮಶಾಸ್ತ್ರಗಳಲ್ಲಿ ಖಂಡಿತವಾಗಿಯೂ ಹೇಳಿರಬಹುದಲ್ಲವೇ? ನಿಮ್ಮ ಹಳೇಕಡತಗಳನ್ನಷ್ಟು ಬೆಳಕಿಗೆ ತಂದು ನೋಡಿ ಹೇಳಿರಿ. ಬಂಧುಗಳೇ, ಕೆಲವು ಕಾರಣಗಳಿಂದ ಒಂದಾನೊಂದು ಕಾಲದಲ್ಲಿ ವಿದ್ಯೆಯು ಬರೇ ನಿಮ್ಮೊಬ್ಬರ ಕೈಯೊಳಗೆ ಮಾತ್ರ ಉಳಿದಿದ್ದಾಗ ಆ ಕಾಲದ ಸ್ವಾರ್ಥಸಾಧಕರಾದ ಕೆಲ ಬ್ರಾಹ್ಮಣ ಗ್ರಂಥಕಾರರು ತಮ್ಮ ಮತದ ಕೀರ್ತಿಪ್ರತಿಷ್ಠೆಗಳೂ, ಸುಖಶಾಂತಿಗಳೂ, ವಿದ್ಯೆಯೂ ಸಹ ಮುಂದಾದರೂ ಅನ್ಯರ ವಶವಾಗಬಾರದೆಂದು ಎಂಥೆಂಥಾ ಯುಕ್ತಿಗಳನ್ನ ಯೋಚಿಸಿ ಶಾಸ್ತ್ರಗಳಲ್ಲಿ ಸೇರಿಸುತ್ತಾ ಬಂದಿರುತ್ತಾರೆ! ಸ್ವಲ್ಪ ಕೇಳಿರಿ.

ಶ್ರವಣೇ ತ್ರಪುಜತುಭ್ಯಾಂ ಶ್ರೋತ್ರಪೂರಣಂ |
ಉಚ್ಚಾರಣೇಜಿಹ್ವಾಛೇದೋ, ಧಾರಣೇಹೃದಯವಿಧಾರಣಂ ||

ಅಂದರೆ ಬ್ರಾಹ್ಮಣೇತರನು ವೇದವನ್ನು ಕೇಳಿದ್ದೇ ಆದರೆ ಸೀಸವನ್ನಾಗಲಿ, ಅರಗನ್ನಾಗಲಿ ಕಾಯಿಸಿ ಅವನ ಕಿವಿಯಲ್ಲಿ ಹೊಯ್ಯಬೇಕಂತೆ, ಜ್ಞಾಪಕವಿಟ್ಟುಕೊಂಡರೆ ಹೃದಯಭೇದಮಾಡಬೇಕಂತೆ, ಮಂತ್ರಗಳನ್ನು ಉಚ್ಚಾರಮಾಡಿದರೆ ನಾಲಗೆಯನ್ನು ಕೊಯ್ಯಬೇಕಂತೆ! ನೋಡಿದಿರೋ ಇದು ಎಂಥ ಹಂಚಿಕೆ! ಎಂಥ ವಂಚಕತನ!! ಎಂಥ ಮಹಾಪರಾಧ!!! ಈ ಮೊಗಲಾಯಿ ಅಮಲನ್ನ ಈ ಕಾಲದಲ್ಲಿ ನಡಿಸಬೇಕೆಂದು ಯಾರಾದರೂ ಬಡಬಡಿಸುವುದಾದರೆ, ಅಂಥವರಿಗೆ ಮಹಾ ಮೂರ್ಖರೆಂಬ ಉಪನಾಮವು ಸಾಲದುದಕ್ಕೆ ಹುಚ್ಚಾಸ್ಪತ್ರೆಯೂ ಪ್ರಾಪ್ತವಾಗಲಿಕ್ಕೆ ಎಷ್ಟು ಮಾತ್ರವೂ ಸಾವಕಾಶವಾಗಲಾರದು. ಹೀಗೆಯೇ ರಾಮಾಯಣದಲ್ಲಿ ಶೂದ್ರರು ತಪಸ್ಸು ಮಾಡುವುದು ಮಹಾಪರಾಧವೆಂಬ ಕಾರಣದಿಂದ ರಾಮನು ಶೂದ್ರನಾದ ತಪಸ್ವಿಯೊಬ್ಬನನ್ನು ಸಂಹರಿಸಿದನೆಂದು ಬರೆದಿಧೆ, ನೋಡಿದಿರೋ ರಾಮನು ಮಹಾ ಜ್ಞಾನಿಯಾದ ದೊರೆ. ಇಂಥವನು ಇಂಥ ಮಹಾಮೂರ್ಖತನವನ್ನ ಎಂದಿಗಾದರೂ ಮಾಡಿರಬಹುದೆ? ಇದು ರಾಮಾಯಣ ಗ್ರಂಥದಲ್ಲಿ ಹೇಳಿದೆಯೆಂದು ಈಗಿನ ಯಾರಾದರೂ ಪ್ರಭುಗಳು ನಿರುಪದ್ರವಿಗಳಾದ ಬ್ರಾಹ್ಮಣೇತರ ತಪಸ್ವಿಗಳನ್ನ ಕೊಲ್ಲಲಿಕ್ಕೆ ಬಂದೀತೆ? ಮಹಾಶಯರೇ ಸ್ವಲ್ಪ

With the introduction of the reforms and the increased powers to the Council and the Assembly, however, there is bound to be a very keen contest for seats, in which case the members of backward classes would have far less chances of succeeding as they have to contend against a naturally organised and influential opposition. The Government draw special attention in the above order to the representation of minorities and special interests, which no doubt should be provided for. But what about the majorities who may have to be in minority under the new dispensation unless special provision is also going to be made for them? Those who are opposed to communal representation may say that the backward classes have already a majority in the Assembly. But what kind of a majority is it which has just about 60% of the seats to represent 96% of the people, while those who represent about 4% of the people own more than 40% of the seats? The reforms are intended for the benefit of the people of the State and there could be little doubt that it would be in the interests of the State to ensure as many of the representatives of the masses as possible on the Councils. This was the object with which the privilege of communal representation was conceeded to the non-Brahmins in Madras, after thrashing out the whole subject thoroughly, and all parties without exception saw the reasonableness of it. Comparing Madras with Mysore the non-Brahmins of Madras are far ahead in culture, wealth and influence. The justification for communal representation therefore is much greater in Mysore than in Madras. There will doubtless be plenty of talk about 'nation' and 'country' and the time-honoured shibboleths will be trotted out against communal representation, as though 96 and odd percent of the people do not make practically the nation or the country. It behoves on all the members of the Committee to secure communal representation for backward classes in the interests of the State and for the establishment of a true democracy. We hope the representatives of the backward classes in particular on the Committee will strive their utmost for communal representation, for, on that depends entirely the utility of all these reforms.

VANI VILAS HOSPITAL, MYSORE.

Of late we are hearing numerous complaints about the treatment of patients in the Vani Vilas Hospital, Mysore. There was a time when the Hospital had gained a very good reputation under the present Lady Superintendent herself. But it is to be much regretted that things have become worse since and both in the matter of attendance and treatment there is a considerable slackness and indifference exhibited by those responsible in the Hospital. It is needless at present to go into further details. We fully trust that the Lady Superintendent will pay greater attention to the needs, requirements and the complaints of the patients, and especially to maternity cases. We hope also that the Senior Surgeon will see, that matters are set right and the efficiency of this useful institution is maintained.

ಸ್ವದೇಶದ ವೃತ್ತಾಂತಗಳು.

ಗುಡಿಬಂಡೆ ಸಬ್ ತಾಲ್ಲೂಕನ್ನು ತೆಗೆದುಹಾಕುವುದಿಲ್ಲವೆಂದು ಸರ್ಕಾರದಪ್ಪಣೆಯಾಗಿದೆ

ಚನ್ನಪಟ್ಟಣದಲ್ಲಿ ಒಕ್ಕಲಿಗರ ವಿದ್ಯಾರ್ಥಿನಿಲಯದ ವಾರ್ಷಿಕ ಸಂಮೇಳನವು ಮಿ|| ಕೆ. ಚಾಂಡಿಯವರ ಅಧ್ಯಕ್ಷತೆಯಿಂದ ನೇರವೇರಿತು.

ರಾಜಧಾನಿಯಲ್ಲಿ ಈ ವಾರದಲ್ಲಿ ಮಳೆಯಿಲ್ಲದಿದ್ದರೂ ಮೋಡವಾಡುತ್ತ ವಾಯುಗುಣವು ಶೀತವಾಗಿದೆ. ಅಲ್ಲಲ್ಲಿ ಪ್ಲೇಗಿನ ಮರಣಗಳು ಒಂದೆರಡಾಗುವ ಸುದ್ದಿಯಿದೆ.

ಬೆಂಗಳೂರಿನಲ್ಲಿ ಜನರ ಉಳುಕನ್ನು ತೆಗೆಯುವುದು ಮುರಿದ ಮೂಳೆಯನ್ನು ಸರಿಪಡಿಸುವುದೇ ಮೊದಲಾದ ಕೆಲಸಗಳನ್ನು ಬಹಳವಾಗಿ ಮಾಡುತ್ತ ಹೆಸರಾಗಿದ್ದ ಕಾಯಂಗಡಿ ಪಾಪಣ್ಣನವರು ವಿಧಿವಶರಾದರೆಂದು ತಿಳಿಯಸಲು ವಿಷಾದಿಸುತ್ತೇವೆ.

ಕಳೆದ ಭಾನುವಾರ ರಾತ್ರಿ ಮೈಸೂರು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಬಿದ್ದ ಚಿತ್ತೆಮಳೆಯು ದೇಶದ ಸುಭಿಕ್ಷಕ್ಕೆ ಬಹಳ ಸಾಧಕವಾಯಿತು. ಪೈರುಗಳು ಬಹಳ ಸೊಂಪಾಗಿವೆ. ಹಲವುಕಡೆ ಕೆರೆ ಕಟ್ಟೆಗಳೆಲ್ಲಾ ತುಂಬಿದುವು. ಸಂಸ್ಥಾನದ ಇತರ ಭಾಗಗಳಲ್ಲೂ ಈಗ ಮಳೆಯು ನಡೆಯುತ್ತಿದೆಯೆಂದು ಕೇಳುತ್ತೇವೆ.

ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರಾದ ಮಿ|| ವಿ. ಕೆ. ದಾರಾಪಾರವರಿಗೆ ಉದ್ಯೋಗದವಧಿಯು ಬರುವ ನವೆಂಬರ್ ತಾ|| 10ಕ್ಕೆ ಮುಗಿಯುವ ಕಾರಣ ಅವರಿಗೆ ಉದ್ಯೋಗ ವಿಶ್ರಾಂತಿಯು ಕೊಡಲ್ಪಡುವುದೆಂದೂ, ಮಿ|| ವಿ. ಆರ್. ತ್ಯಾಗರಾಜಯ್ಯರು ಆ ಸ್ಥಲಕ್ಕೆ ನಿಯಮಿಸಲ್ಪಡುವರೆಂದೂ ಕೇಳುತ್ತೇವೆ.

ನಮ್ಮ ಮೈಸೂರು ಸಂಸ್ಥಾನದಲ್ಲಿ ಸರ್ಕಾರಿ ಸಂಸ್ಕೃತ ಕಾಲೇಜುಗಳಿಗೆ ಉತ್ತಮ ಹಿಂದುಗಳನ್ನು ಕೂಡ ಸೇರಿಸಲು ತಾಪತ್ರಯಪಡುತ್ತಿರುವಾಗ ಅಲಿಘರಿನಲ್ಲಿರುವ ಮಹಮ್ಮದೀಯ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಭಾಷೆಯನ್ನು ಅಭ್ಯಾಸಮಾಡಿಸಲು ಒಂದು ಪ್ರತ್ಯೇಕ ಶಾಖೆಯನ್ನೇ ಸ್ಥಾಪಿಸಲು ಈಗ ತಾನೇ ನಿರ್ಧರಿಸಿದ್ದಾರೆ.

ಮ|| ಬಾನರ್ಜಿಯವರು ದಿವಾನಗಿರಿಗೆ ರಾಜೀನಾಮೆ ಕೊಡುವರೆಂದೂ ಜಸ್ಟಿಸ್ ಚಂದ್ರಶೇಖರಯ್ಯರವರು ದಿವಾನರಾಗುವರೆಂದೂ, ಈಗಣ ಕೌನ್ಸಿಲರುಗಳಿಬ್ಬರೂ ನಿವೃತ್ತರಾಗಿ, ಮಿ|| ಚಾಂಡಿ, ಮಿ|| ಮಿರ್ಜಾ ಇಸ್ಮಾಯಿಲ್‌ರವರು ಕೌನ್ಸಿಲರುಗಳಾಗುವರೆಂದೂ ಮೊದಲಾಗಿ ಮದ್ರಾಸ್ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಯು ನಿರಾಧಾರವಾದುದು. ಆದರೆ ಗ್ರಾಮಾಂತರಗಳಲ್ಲೆಲ್ಲಾ ಈ ಸುದ್ದಿಯು ಹರಡಿಹೋಗಿದೆ.

ತಿಪಟೂರಿನಲ್ಲಿ ಹಿಂದೂಮಹಮ್ಮದೀಯ ವ್ಯಾಜ್ಯದಿಂದ ನಿಂತುಹೋಗಿದ್ದ ಹಿಂದೂದೇವತಾ ಉತ್ಸವವು ಡಿಸ್ಟ್ರಿಕ್ಟ್ ಅಧಿಕಾರಿಗಳೇ ಮೊದಲಾದವರ ಪ್ರತ್ಯಕ್ಷ ರಕ್ಷಣೆಯಮೇಲೆ ಸುಲಲಿತವಾಗಿ ಸಾಂಗವಾಯಿತೆಂದು ಕೇಳುತ್ತೇವೆ. ಆದರೆ ಪ್ರಮುಖವಾದ ಈ ಎರಡು ಜನಾಂಗಗಳ ಅಂತರಂಗದಲ್ಲಿರುವ ವೈಮನಸ್ಯದ ಶಾಂತಿಯು ಮಾತ್ರ ಆದಂತೆ ಕಾಣುವುದಿಲ್ಲ. ಅಲ್ಪವಿಷಯಗಳಿಗಾಗಿ ಜನಜನಾಂಗಗಳೇ ಹೋರಾಡುವುದು ದೇಶಕ್ಕೇ ಅನರ್ಥಕಾರಿಯು. ರಾಜಧಾನಿಯಲ್ಲಿ ಮಹಮ್ಮದೀಯರ ಮಸ್ಜಿದ್ದಿಗಳ ಮುಂದೆ ಹಿಂದುಗಳು ವಾದ್ಯವನ್ನು ನಿಲ್ಲಿಸಿಬಿಟ್ಟೂ, ಹಿಂದೂ ದೇವಾಲಯಗಳ ಮುಂದೆ ಮಹಮ್ಮದೀಯರು ವಾದ್ಯವನ್ನು ನಿಲ್ಲಿಸಿಬಿಟ್ಟೂ ಹೋಗುವ ಪದ್ಧತಿಯು ಬಹುಕಾಲದಿಂದ ನಡೆದುಕೊಂಡು ಬರುತ್ತಿದೆ. ಹೀಗೆ ಪರಸ್ಪರ ಮರ್ಯಾದೆಯ ಏರ್ಪಾಟನ್ನು ಉಭಯರೂ ಎಲ್ಲಾ ಸ್ಥಲಗಳಲ್ಲೂ ಇಟ್ಟುಕೊಂಡು ನಡೆದರೆ ಈ ಉತ್ಸವ ಮೂಲಕವಾದ ವೈಮನಸ್ಯಗಳಿಗೆ ಅವಕಾಶವೇ ತಪ್ಪಿಹೋಗುವುದು.

ಹುಚ್ಚುನಾಯಿಯಿಂದ ಕಡಿಸಿಕೊಂಡವರು ಕುನ್ನೂರು, ಕಾಸೋಲಿ ಎಂಬ ದೂರಸ್ಥಳಗಳಲ್ಲಿರುವ ವೈದ್ಯಾಲಯಗಳಿಗೆ ಹೋಗಬೇಕಾಗಿದ್ದಿತಷ್ಟೆ. ಈಗ ಬೊಂಬಾಯಿ ಸರ್ಕಾರದವರು ಬೊಂಬಾಯಿಪರೇಲ್, ಪುನಾ, ಕರಾಚಿ, ಅಹಮ್ಮದ್‌ನಗರ, ಅಹಮ್ಮದಾಬಾದ್, ಬೆಳಗಾಂವಿ-ಈ ಪಟ್ಟಣಗಳಲ್ಲಿರುವ ಸರ್ಕಾರಿ ವೈದ್ಯಾಲಯಗಳಲ್ಲೇ ಮೇಲೆಕಂಡ ವಿಷಚಿಕಿತ್ಸೆಯು ನಡೆಯುವಂತೆ ಏರ್ಪಡಿಸಿದ್ದಾರೆ. 500 ರೂ. ಗೆ ಮೇಲ್ಪಟ್ಟ ಸಂಬಳವುಳ್ಳವರು ಪ್ರತಿಫಲವನ್ನು ಕೊಟ್ಟು ಚಿಕಿತ್ಸೆ ಮಾಡಿಸಿಕೊಳ್ಳಬೇಕಾಗುವುದು. ಬಡಬಗ್ಗರಿಗೆ ಉಚಿತ. ಇಂಥ ಏರ್ಪಾಟನ್ನು ನಮ್ಮ ಮೈಸೂರು ಪ್ರಭುತ್ವದವರೂ ಇಟ್ಟು, ಬೆಂಗಳೂರು ಮೈಸೂರು ಪಟ್ಟಣಗಳ ಮುಖ್ಯ ವೈದ್ಯಾಲಯಗಳಲ್ಲಿ ವಿಷಚಿಕಿತ್ಸೆಗೂ ಏರ್ಪಡಿಸಿದರೆ ಪ್ರಜೆಗಳಿಗೆ ಬಹಳ ಉಪಕಾರವಾಗುವುದು. ಕುನೂರು ಮೊದಲಾದ ವೈದ್ಯಾಲಯಗಳಿಗೆ ಚಿಕಿತ್ಸೆಗಾಗಿ ಕಳುಹಿಸಲ್ಪಡುವ ಬಡಬಗ್ಗರಿಗೆ ಕೊಡುತ್ತಿದ್ದ ರೈಲ್ವೆಬಾಡಿಗೆ ಮೊದಲಾದ ವೆಚ್ಚವನ್ನು ಕೂಡ ಉಳಿಯಿಸಿಕೊಳ್ಳಬಹುದು.

ಇಸ್ತಿಹಾರ್.

ಮುನಸೀಫ್ ಕೋರ್ಟ್ ತಾಲ್ಲೂಕ್ ಗಂಗಾವತಿ ಜಿಲ್ಲಾ
ರಾಯಿಚೂರು ಇಲಾಖಾ ನಿಜಾಮ.

ಪ್ರಕಟನ ನಂಬರ ೧ ಸರ್ ಫಸಲಿ ೧೩೩೧.

ಮಿ|| ಕಾಶಿನಾಥರಾವ ಬಿ.ಎ., ಎಲ್‌ಎಲ್.ಬಿ., ಮುನಸೀಫರು.

ವಾದಿ.	ಪ್ರತಿವಾದಿ.
ಮುದಕಪ್ಪಾ ತಂದಿ ಬಸೆಟ್ಟಪ್ಪ	ಗಿರೆಪ್ಪಾ ವಗೈರೆ
ಕನಕಗಿರಿ ತಾಲ್ಲೂಕ ಗಂಗಾವತಿ.	೫ ಜನ.

ದಾವೆ.—ನಗದುರೂಪಾಯು ಕೊಡ್ಲಿ೦.

ಬಿನಾಂ ಹಂಪವ್ವಾ ಅಜ್ಞಾನ ಸಂರಕ್ಷಣಕರ್ತ ಮಾತಾಶ್ರಾಯಿ ಗೌರಮ್ಮ ಗಂಡ ಶರಭಾಚಾರಿ ಜಾತಿ ಪಾಂಚಾಳ ವಯಸ್ಸು ೩೦ ಮನೆಕೆಲಸ ಸಾ|| ದೇವಸಮುದ್ರ ತಾಲ್ಲೂಕ ಮೊಳಕಾಲ್ಮುರು ಡಿಸ್ಟ್ರಿಕ್ಟ್ ಚಿತ್ರದುರ್ಗ ಇಲಾಖಾ ಮೈಸೂರ.

ಸದರಿ ಪ್ರಕರಣದಲ್ಲಿ ವಾದಿಯು ಹಂಪವ್ವಾ ಅಜ್ಞಾನ ನಿನ್ನ ಸಂರಕ್ಷಣೆಯ ಮೇಲೆ ಈ ಕೋರ್ಟನಲ್ಲಿ ದಾವೆ ದಾಖಲ್‌ಮಾಡುವುದಕ್ಕೆ ಅಪ್ಪಣೆಯನಾಗಬೇಕೆಂದು ಕೋರಿರುತ್ತಾರೆ. ಕಾರಣ ನಿನಗೆ ಸಂರಕ್ಷಣೆಕರ್ತದ ವಿಷಯವೇನಾದರೂ ಆಕ್ಷೇಪ ಇದ್ದರೆ ಹಾಜರಾಗಿ ಜಬಾಬುಕೊಡುವ ಬಗ್ಗೆ ಎಷ್ಟುಸಾರೆ ನಿನ್ನನ್ನು ಕಳುಹಿಸಿದಾಗ್ಯೂ ಸಮನ್ ಬಜಾವಣೆ ಆಗಲಿಲ್ಲ. ಕಾರಣ ಈದ್ವಾರ ತಿಳಿಯಪಡಿಸುವುದೇನೆಂದರೆ—ತಾರೀಖು ೧೮ ಸರ್ ೧೩೩೨ ಫಸಲಿ ಸರಿಯಾದ ತಾರೀಖು ೨೨ ನವಂಬರ್ ಸರ್ ೧೯೨೨ ನೆ ಇಸವಿ ಬುಧವಾರ ದಿವಸ ಈ ಕೋರ್ಟನಲ್ಲಿ ಹಾಜರಾಗಿ ಜಬಾಬುಕೊಡಬೇಕು. ಇಲ್ಲವೆ ರೀತಿಪ್ರಕಾರ ಪರವಾಯಿ ಮಾಡಲಾಡೀತು. ಫಕ್ತ.

ಮಿರ್ಜಾ ಅಬ್ಬಾಸ್‌ಹುಸೇನ್,
(ಹಿಂದುಸ್ಥಾನಿಯಲ್ಲಿದೆ)
ಶಿರಸ್ತೆದಾರ್.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಔದಾರ್ಯ.

ಗುಬ್ಬಿ ಶ್ರೀಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕಸಂಘದ ಪ್ರೊಪ್ರೈಟರಾದ ಮ|| ವೀರಣ್ಣನವರು ಈ ಗುಬ್ಬಿ ಟವನ್ನಿನಲ್ಲಿ ಹಾಕಿರುವ ತಮ್ಮ ಧನಲಕ್ಷ್ಮೀ ಥಿಯೇಟರಿನಲ್ಲಿ ಈಗ್ಗೆ ಸುಮಾರು ಒಂದು ತಿಂಗಳಾಗಾಯಿತು ಅನೇಕ ನಾಟಕಗಳನ್ನು ಅಭಿನಯಿಸುತ್ತಾ ಬಂದು ಇದೇ ಮಾಹೆ ತಾ|| 16 ನೆ ಸೋಮವಾರ ರಾತ್ರಿ ತಾವು ಅಭಿನಯಿಸಿದ ನಾಟಕದ ಉತ್ಪತ್ತಿಯಾದ 500 ರೂಪಾಯಿಗಳನ್ನು ಗುಬ್ಬಿ ಶ್ರೀಚನ್ನಬಸವೇಶ್ವರ ಸ್ವಾಮಿಯವರ ಜಾತ್ರೆ ಕಾಲದಲ್ಲಿ ನಡೆಯತಕ್ಕ ಜನರ ದಾಸೋಹಕ್ಕೆ ಬೇಕಾಗಿರುವ ಪಾತ್ರೆ ಸಾಮಾನುಗಳನ್ನು ತಯಾರುಮಾಡಿಸಿ ಅವುಗಳ ಮೇಲೆ ತಮ್ಮ ವಿಳಾಸವನ್ನು ಹಾಕಿಸಿ ಧರ್ಮಕಾರ್ಯದಲ್ಲಿ ಉಪಯೋಗಿಸಬೇಕೆಂದು ಹೇಳಿ ಬಹಳ ಉದಾರಮನಸ್ಸಿನಿಂದ ಧರ್ಮದರ್ಶಿಗಳಾದ ಪ್ಯಾಟಿಶೆಟ್ಟರು ಕಪ್ಪಣ್ಣನವರು ಯಜಮಾನ್ ಹುಚ್ಚೀರಪ್ಪನವರು ಇವರ ವಶಕ್ಕೆ ಕೊಟ್ಟಿರುತ್ತಾರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಗುಬ್ಬಿಯನಿವಾಸಿ.

ಬೋಧಕ ಸೇವಾಸಂಘ.

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಈ ಸಂಘದ ಪ್ರಥಮ ವಾರ್ಷಿಕೋತ್ಸವವು ನಾರ್ಮಲ್‌ಸ್ಕೂಲ್ ಹಾಲಿನಲ್ಲಿ 20 ನೆಯ ತಾ|| ಶುಕ್ರವಾರ ಸಾಯಂಕಾಲ 4 ಗಂಟೆಗೆ ಜರಗಿತು. ಇನ್ಸ್‌ಪೆಕ್ಟರ್ ಜನರಲ್ (ವಿದ್ಯಾಭ್ಯಾಸದ ಇಲಾಖಾ) ರವರಾದ ಮ|| ರಾ|| ಸಿ. ಯಸ್. ಬಾಲಸುಂದರಮಯ್ಯರ್ ಬಿ. ಎ. ಯವರು ಅಗ್ರಾಸನವನ್ನಲಂಕರಿಸಿದ್ದರು. ಸಭೆಯಲ್ಲಿ ಜರುಗಿದ ಕಾರ್ಯಗಳಲ್ಲಿ ಪ್ರಾಕ್ಟಿಸಿಂಗ್ ಸ್ಕೂಲಿನ ಮಕ್ಕಳು ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಅಭಿನಯಿಸಿದ ಸಲ್ಲಾಪವು ಸರ್ವ ಶ್ಲಾಘ್ಯವಾಗಿದ್ದಿತು. ಸಂಸ್ಥಾನದಲ್ಲೆಲ್ಲಾ ಇದರ ಉಪಸಂಘಗಳುಂಟಾಗಿ ಬೋಧಕರು ಏಕಮತದಿಂದ ತಮ್ಮ ಕಾರ್ಯಗಳಿಗನುಕೂಲವನ್ನು ಸಂಪಾದಿಸಿಕೊಳ್ಳಬೇಕೆಂದು ಇಂಗ್ಲೀಷಿನಲ್ಲಿ ವಿವರಿಸಿದ ಮ|| ರಾ|| ಎಂ. ಎನ್. ಪ್ರಣತಾರ್ತಿಹರನ್ ಎಂ. ಎ., ಎಲ್. ಟಿ. ಯವರ ಭಾಷಣವನ್ನು ಅಗ್ರಾಸನಾಧಿಪತಿಗಳು ಅನುವಾದಿಸಿ ಸಭೆಯ ಕಾರ್ಯದರ್ಶಿಗಳನ್ನಭಿವಂದಿಸಿ ಸಂಘಾಧ್ಯಕ್ಷರಾದ ಮ|| ರಾ|| ಶ್ರೀ|| ಡಿ. ವೆಂಕಟರಾಮಯ್ಯ ಬಿ. ಎ., ಎಲ್. ಟಿ. ಯವರಿಂದ ಅಭಿನಂದಿಸಲ್ಪಟ್ಟ ಮೇಲೆ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯು ನಡೆದು 7 ಗಂಟೆಗೆ ಸಭೆಯು ಬರಖಾಸ್ತಾಯಿತು. ಸಂಘದ ಪೋಷಕರಾದ ಮ|| ರಾ|| ಎಸ್. ಜಿ. ಶಾಸ್ತ್ರಿ ಬಿ. ಎ., ಎಂ. ಎಸ್‌ಸಿ ಯವರೂ ಮ|| ರಾ|| ಎಂ. ವೆಂಕಟಸುಬ್ಬಯ್ಯ ಬಿ. ಎ. ಮ|| ರಾ|| ಗಳಾದ ಎಚ್. ಎನ್. ವೆಂಕಟರಮಣಯ್ಯ ಬಿ. ಎ., ಮ|| ರಾ|| ಕೆ. ಟಿ. ಸುದರ್ಶನೈಯಂಗಾರ್ ಬಿ. ಎ, ಚನ್ನಪಟ್ಟದ ಹೈಸ್ಕೂಲ್ ಅಸಿಸ್ಟೆಂಟ್ ಮ|| ರಾ|| ಎಲ್. ನಾರಾಯಣರಾವ್ ಬಿ. ಎ, ಎ. ವಿ. ಸ್ಕೂಲ್ ಹೆಡ್‌ಮಾಸ್ಟರು ಮ|| ರಾ|| ಎಲ್. ಶೇಷಗಿರಿರಾವ್ ಮೊದಲಾದ 15 ಮಂದಿ ಗ್ರಾಜುಯೇಟುಗಳೂ ಸಿಟಿ ಪ್ರೈಮರಿ ಮತ್ತು ಎ. ವಿ. ಸ್ಕೂಲುಗಳ 70 ಮಂದಿ ಉಪಾಧ್ಯಾಯರೂ ವಾಣೀವಿಲಾಸ ಇನ್‌ಸ್ಟಿಟ್ಯೂಟಿನ ಲೇಡಿ ಸೂಪರಿಂಟೆಂಡೆಂಟರಾದ ಶ್ರೀಮತಿ ಶ್ರೀರಂಗಮ್ಮ ಬಿ. ಎ. ಯವರೂ ಶ್ರೀಮತಿ ನಂಜಮ್ಮ ಬಿ. ಎ. ಯವರೇ ಮೊದಲಾದ 40 ಮಂದಿ ಉಪಾಧ್ಯಾಯಿನಿಯರೂ ಮ|| ರಾ|| ಕೆ. ರಾಮಸ್ವಾಮೈಯಂಗಾರ್ ಎಂ. ಎ. ಯವರೇ ಮೊದಲಾದ ಅನೇಕ ದೊಡ್ಡಮನುಷ್ಯರೂ ಮ|| ರಾ|| ಶ್ರೀನಿವಾಸೈಯಂಗಾರ್ ಪಂಡಿತ ಅಳಸಿಂಗ್ರಾಚಾರ್ ಪಂಡಿತ ನಂಜುಂಡಶಾಸ್ತ್ರಿಗಳೇ ಮೊದಲಾದ ಅನೇಕ ವಿದ್ವಾಂಸರೂ ಹಾಜರಿದ್ದರು. ಶ್ರೀಮತಿ ಪಂಡಿತ ವೆಂಕಟಲಕ್ಷ್ಮಮ್ಮನವರಿಂದ ಒಂದು ಪಾಠವು ನಡೆಸಲ್ಪಟ್ಟಿತು. ಸಭಿಕ.

ಶಿಡ್ಲಘಟ್ಟದ ವರ್ತಮಾನ.

ಒಂದುವಾರದಿಂದೀಚೆಗೆ ಮಳೆ ಅನುಕೂಲವಾಗಿ ಬಿದ್ದಿರುವುದರಿಂದ ಪೈರುಗಳು ಸೊಂಪಾಗಿವೆ. ಊರಿನಲ್ಲಿ ಪ್ಲೇಗ್ ಗಲಾಟೆ ಶಾಂತವಾಗಿ ಈಚೆಗೆ ಮರಣಗಳೂ ಹೊಸ ಖಾಯಿಲೆಗಳೂ ಇಲ್ಲದೆ ಇರುವುದರಿಂದ ಊರ ಹೊರಗಿದ್ದ ಜನರು ಮನೆಗಳನ್ನು ಶುದ್ಧಿಮಾಡಿಸಿ ಊರಿನೊಳಕ್ಕೆ ಬಂದು ಸೇರುತ್ತಿದ್ದಾರೆ. ಪ್ಲೇಗ್ ಖಾಯಿಲೆಯ ನಿರೋಧಕ ವಿಚಾರದಲ್ಲಿ ಮ್ಯುನಿಸಿಪಾಲಿಟಿಯವರು ಬಹಳಮಟ್ಟಿಗೆ ಮುತುವರ್ಜಿ ವಹಿಸಿ ಕೆಲಸ ಮಾಡಿದ್ದರಿಂದ ಇಷ್ಟು ಜಾಗ್ರತೆ ಊರಿಗೆ ಕ್ಷೇಮವಾದಂತಾಯಿತು. ಅನೇಕರು ಪ್ಲೇಗ್ ಖಾಯಿಲೆಯವರನ್ನು ಬಾಡಿಗೆ ಮೋಟಾರುಗಳ ಮುಖಾಂತ್ರ ಬೆಂಗಳೂರು ಪ್ಲೇಗ್ ಕ್ಯಾಂಪಿಗೆ ಕರೆದುಕೊಂಡು ಹೋಗಿ ಗುಣಮಾಡಿಕೊಂಡು ಬಂದರು. ಹಣ ಖರ್ಚು ಮಾಡಲು ಸಾಮರ್ಥ್ಯವಿಲ್ಲದ ಜನರು ಸ್ಥಳದ ಡಾಕ್ಟರಿಂದ ಇಲಾಜು ಮಾಡಿಸಿಕೊಂಡರೂ ಅನುಕೂಲವಾದ ಔಷಧಗಳ ಸಪ್ಲೈ ಇಲ್ಲದ ಸಬಬು ಪ್ರಯೋಜನವಿಲ್ಲವಾಯಿತೆಂದು ದುಃಖಪಡುವಂತಾಯಿತು. ಉತ್ತಮವಾದ ಔಷಧಗಳನ್ನ ತರಿಸಬೇಕಾಗುತ್ತೆಂದು ಅರಿಯದ ಮತ್ತು ಖಾಯಿಲೆ ಸಬಬು ಭಯಭ್ರಾಂತರಾಗಿರುವ ಜನಗಳಿಂದ ಕೆಲವರು ಹಣ ವಸೂಲ್ಮಾಡಿಕೊಂಡು ಮೋಸ ಮಾಡಿರುತ್ತಾರೆಂದು ಜನರು ನಾನಾ ತರವಾಗಿ ಆಡಿಕೊಳ್ಳುತ್ತಾರೆ. ಕಷ್ಟಕಾಲದಲ್ಲಿ ಸಹಾಯ ಮಾಡುತ್ತಿರುವವೆಂಬ ಹೆಸರಿಟ್ಟುಕೊಂಡು ಈ ರೀತಿ ಆಚರಿಸಿರುವವರಿಗೆ ಪ್ರಜಾ ಮುಖಂಡರು ತಕ್ಕ ಪ್ರತೀಕಾರವನ್ನು ಮಾಡಿಸಿಯಾರೆಂದು ನಂಬುತ್ತೇನೆ. ತಮ್ಮ ಗುಟ್ಟು ರಟ್ಟಾಗುವದೆಂಬ ಭಯದಿಂದ ಕೆಲವು ಮಂದಿ ಸೇರಿ ಮ್ಯುನಿಸಿಪಾಲಿಟಿ ಕಾರ್ಯಗಳು ತೃಪ್ತಿಕರವಾಗಿಲ್ಲವೆಂದು ಹೆಸರಿಸುದ ಮಾರುದ್ದದ ಲೇಖನವನ್ನು 5-10-22 ನೆ ತಾರೀಖಿನ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕೆ ಜವಾಬಾಗಿ 19-10-22 ರ ವೃತ್ತಾಂತ ಪತ್ರಿಕೆಯಲ್ಲೇ ಬಾತ್ಮಿ ಪ್ರಕಟವಾಗಿರುವದನ್ನು ಓದಿನೋಡಿದೆನು. ಸ್ಥಳವಿದ್ಯಮಾನಗಳನ್ನು ವಿಚಾರಿಸಲಾಗಿ ಮ್ಯುನಿಸಿಪಲ್ ಕೌನ್ಸಿಲ್ಲಿನಲ್ಲಿ ಭಿನ್ನಾಭಿಪ್ರಾಯವಿರುವಂತೆಯೂ ಇದರಿಂದ ತಮ್ಮ ಗೌರವಕ್ಕೇ ಹಾನಿಯಾದರೂ ಚಿಂತೆಯಿಲ್ಲವೆಂಬ ಭಾವನೆಗಳಿಂದ ಮನ್ಮಾನೆ ಬಾತ್ಮಿಗಳು ಹೊರಡುತ್ತಿರುವವೆಂದೂ ತಿಳಿಯ ಬಂದಿರುತ್ತೆ. ಪ್ಲೇಗ್ ಖಾಯಿಲೆಯಿಂದ ಕಷ್ಟಪಡುತ್ತಿರುವವರಲ್ಲೂ ನಿಷ್ಕರುಣದಿಂದ ರುಸುಮು ವಸೂಲ್ಮಾಡಿರುವ ಕ್ರೂರಿಗಳಿಗೆ ಸಹಾಯ ಮಾಡುವದೂ ಅಂಥಾವರನ್ನು ಉತ್ತಮರಾದ ನೌಕರರೆಂದು ಹೊಗಳಿ ಪ್ರೋತ್ಸಾಹಿಸುವದೂ ಪ್ರಜಾಹಿತ್ಯೈಷಿಗಳಾದವರಿಗೆ ಧರ್ಮವಲ್ಲವೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಮನಃಪೂರ್ವಕವಾಗಿ ದೇಶ ಸೇವೆ ಮಾಡುತ್ತಾ ಪ್ರಜಾರಂಜನೆಯನ್ನು ಪಡೆದಿರುವ ಕೆಲವು ಮ್ಯುನಿಸಿಪಲ್ ಕೌನ್ಸಿಲರುಗಳ ಸಹಾಯದಿಂದ ಈ ಟವನ್ ಮೊದಲಿದ್ದ ಸ್ಥಿತಿಗಿಂತಲೂ ಸ್ಯಾನಿಟೇಷನ್ ವಗೈರೆ ಬಾಬಿನಲ್ಲಿ ಉತ್ತಮ ಸ್ಥಿತಿಯಲ್ಲಿರುವದೆಂಬ ಅಂಶವನ್ನು ಸ್ಯಾನಿಟರೀ ಕಮಿಷನರ್ ಸಾಹೇಬರೇ ಮುಂತಾದವರ ಇನ್ಸ್‌ಪೆಕ್ಷನ್ ಕಾಲದಲ್ಲಿ ಉಪನ್ಯಾಸ ಪೂರ್ವಕವಾಗಿ ಅಪ್ಪಣೆ ಕೊಡಿಸಿರುವದು ಸರ್ವರಿಗೂ ವೇದ್ಯವೇ ಇರುತ್ತೆ. ಸರ್ಕಾರದವರು ಮ್ಯುನಿಸಿಪಲ್ ಪ್ರೆಸಿಡೆಂಟರ ಮುಖೇನ ಸ್ಥಳ ವಿದ್ಯಮಾನಗಳನ್ನು ವಿಚಾರಮಾಡಿ ಸುಳ್ಳು ಬರವಣಿಗೆಗಳಿಗೆ ಅಸ್ಪದವಿಲ್ಲದಂತೆ ಎಚ್ಚರಿಸಬೇಕಾಗಿ ಬೇಡುತ್ತೇನೆ.

ನಿಷ್ಪಕ್ಷಪಾತಿ.

ತುಮಕೂರು.

ಇದುವರೆಗೂ ಸಾಕಾದಷ್ಟು ಮಳೆಯಿಲ್ಲದೆ ಬೆಳೆಯೆಲ್ಲಾ ಒಣಗುವ ಸಂಭವವಿದ್ದುದರಿಂದ ಜನಗಳು ಗಾಬರಿಯಾಗಿದ್ದಾರೆ. ಈಗಾಗಲೇ ನೀರಿನ ಕಷ್ಟ ಬಹಳಜಾಸ್ತಿಯಾಗಿದೆ. ಮುಂದೆ ಶ್ರೀ ಪರಶಿವನು ದಯೆಗೈದು ಕಾಪಾಡಬೇಕು. ಈಚೆಗೆ ಸ್ವಲ್ಪ ಮಳೆಯಾಗಿದೆ. ದಿನಸಿಗಳ ಬೆಲೆಯಂತೂ ಮಿತಿಮೀರಿಹೋಗುತ್ತಲಿದೆ. ಬಡವರ ಗೋಳಾಟವನ್ನು ಬರೆಯಲು ಸಾಧ್ಯವಿಲ್ಲ. ಸಾಲದ್ದಕ್ಕೆ ಊರಿನಲ್ಲಿ ಕಳ್ಳತನ ಜಾಸ್ತಿಯಾಗಿದೆ. ಸಂದುಗೊಂದುಗಳಲ್ಲಿ ಹಗಲಿನಲ್ಲೇ ಮನೆನುಗ್ಗಿದರೂ ಕೇಳುವವರೇ ಯಿಲ್ಲದಂತಾಗಿದೆ. ಪೋಲೀಸಿನವರ ಚಟುವಟಿಕೆ ಸಾಲದು, ಇದುವರೆಗೂ ಒಂದಾದರೂ ಪತ್ತೆಯಾದಹಾಗೆ ಕಾಣುವದಿಲ್ಲ, ರಾತ್ರಿವೇಳೆ ಗಸ್ತುಮಾಡುವ ಸಿಬ್ಬಂದಿಸಾಲದು, ಗಸ್ತುಮಾಡಲು ಆಗಾಗ್ಗೆ ಸೂಪರಿಂಟೆಂಡೆಂಟರೇ ಮೊದಲಾದವರು ಅಕಸ್ಮಾತ್ ಬರಬೇಕಾದದ್ದು ಅತ್ಯವಶ್ಯಕವಾಗಿದೆ. ಇವರು ಕೂಡಲೇ ಕರ್ತವ್ಯತತ್ಪರರಾಗಿ ಕಳ್ಳರನ್ನು ಪತ್ತೆಮಾಡಿ ಶಿಕ್ಷೆಮಾಡಿಸದಿದ್ದರೆ ಈ ಕ್ಷಾಮಕಾಲದಲ್ಲಿ ಪ್ರಜೆಗಳ ಮಾನಪ್ರಾಣಗಳು ನಿರ್ವಾಹವಾಗುವದು ಬಹುಕಷ್ಟ. ಇದನ್ನು ಡೆಪ್ಯುಟಿಕಮಿಷನರ್ ಸಾಹೇಬರವರೂ ಮತ್ತು ಪೊ|| ಇ|| ಜ|| ಸಾಹೇಬರು ಸಹ ಕೂಡಲೇ ಗಮನಕ್ಕೆ ತಂದುಕೊಂಡು ತಕ್ಕಷ್ಟು ನಿಧಾನದಿಂದ ಸಿಬ್ಬಂದಿಯನ್ನು ಕ್ರಮಪಡಿಸಿ ಪ್ರಜೆಗಳನ್ನು ಕಾಪಾಡಬೇಕಾಗಿದೆ. ಇನ್‌ಕಂಟ್ಯಾಕ್ಸಿನ ಉಪಟಲವು ವರ್ತಕರನ್ನು ಬಹಳ ಹಿಂಸೆಗೂ ಕಿರುಕುಳಕ್ಕೂ ಗುರಿಮಾಡಿದೆ. ಇದನ್ನು ಸರ್ಕಾರದವರು ಕ್ರಮಪಡಿಸುವದು ಅತ್ಯವಶ್ಯಕ. ಇಲ್ಲಿನ ಇಬ್ಬರು ಮುನ್‌ಸೀಫರೂ ಬಹಳ ಚಟುವಟಿಕೆಯಿಂದ ಕೆಲಸಮಾಡುತ್ತಾ ಪ್ರಜೆಗಳಲ್ಲಿ ಸಹಾನುಭೂತಿಯುಳ್ಳವರಾಗಿರುವದು ತುಂಬಾ ಶ್ಲಾಘನೀಯವಾಗಿದೆ. ಆದರೆ ನೌಕರರಿಂದ ಕಕ್ಷಿಗಾರರಿಗೆ ಬಹಳ ಕಿರುಕುಳವುಂಟಾಗಿದೆ. ಕಾರ್ಯಕ್ರಮಗಳೆಲ್ಲಾ ಬಹಳ ಅವ್ಯವಸ್ಥೆಯಾಗಿವೆ. ತಿಂಗಳುಗಟ್ಟಲೆಯಾದರೂ ಕಾಪಿಗಳು ತಯಾರಾಗುವದಿಲ್ಲ; ಫೈನಲ್ ಡಿಕ್ರಿಗಳಾಗುವದಿಲ್ಲ; ವಾರಂಟುಗಳಂತೂ ಜಾರಿಯಾಗುವದೇಇಲ್ಲ. ಪೂರ್ವ ಪುಣ್ಯದಿಂದ ಲಕ್ಷ್ಮೀಪ್ರಸನ್ನವಾದಂಥವರೂ ಕಾರ್ಯನಿಲ್ಲುವದೇಯಿಲ್ಲ. ಆದರೆ ಅದು ಸಹ ಮಿತಿಮೀರಿಹೋಗಿದೆ. ಇದು ಎಲ್ಲರಿಗೂ ತಿಳಿದ ಬಹಿರಂಗವಾದ ಗುಟ್ಟಾದಾಗ್ಯೂ ಎಲ್ಲರೂ ಸುಮ್ಮನಿರುವದು ಆಶ್ಚರ್ಯವಾಗಿದೆ. ಕೋರ್ಟಿಗೆ ಬರುವ ಡಿಕ್ರಿಹಣಗಳನ್ನು ತೆಗೆದುಕೊಳ್ಳಬೇಕಾದರೂ ಪರಮ ಕಷ್ಟ. ಪ್ರೋಸೆಸ್ ಇಲಾಖೆಯ ಮೇಲೆ ಮೊದಲು ದರ್ಪಹೆಚ್ಚಾಗಬೇಕು. 3-4 ಜನ ನೌಕರರಂತೂ ಕೂಡಲೇ ವರ್ಗವಾದರೆ ತಹಬಂದಿಗೆಬರುತ್ತೆ. ನಮ್ಮ ಹೊಸಮುನ್‌ಸೀಫರು ಈ ಅವ್ಯವಸ್ಥೆಯನ್ನು ಜಾಗ್ರತೆ ಸರಿಪಡಿಸಿ ಪ್ರಜೆಗಳ ಪ್ರೀತಿಗೆ ಪಾತ್ರರಾಗಬೇಕಾಗಿದೆ. ಕೋರ್ಟುಗಳ ಬಳಿ ಕಕ್ಷಿಗಾರರು ಕುಳ್ಳಿರುವದಕ್ಕೆ ಸರಿಯಾದ ಕಟ್ಟಡವಿಲ್ಲದೆ ಗಾಳಿ ಮಳೆ ಬಿಸಲಿನ ಉಪಟಲಕ್ಕೂ ನೌಕರರ ಸ್ವಭಾವದಿಂದ ತೆಗೂ ಸಿಲ್ಕಿ ಬಹಳ ಸಂಕಟಪಡುತ್ತಾರೆ. ದಿವಾನ್‌ಸಾಹೇಬರು ತಮ್ಮ ಸಂಚಾರಕಾಲದಲ್ಲಿ ಅಪ್ಪಣೆಕೊಡಿಸಿದಂತೆ ಒಂದು ಕಟ್ಟಡವನ್ನು ನಮ್ಮ ಹೊಸಮುನ್‌ಸೀಫರು ಜಾಗ್ರತೆಮಾಡಿಸಿ ಕೊಡುವರೆಂದು ಪ್ರಜೆಗಳು ನಂಬುತ್ತಾರೆ. ಮುನ್‌ಸಿಪಲ್ ಪ್ರೆಸಿಡೆಂಟರ ಆಡಳಿತದಲ್ಲಿ ಸಿಬ್ಬಂದಿ ಖರ್ಚು ಒಂದು ಪಂಗಡದವರಿಗೆ ಅಲೋಯನ್ಸ್‌ಗಳು ಜಾಸ್ತಿಯಾಗಿದೆಯೇ ವಿನಾ ಪ್ರಜೆಗಳ ಆರೋಗ್ಯಕ್ಕೆ ಅವಶ್ಯಕವಾದ ಕಾರ್ಯಗಳು ತೃಪ್ತಿಕರವಾಗಿಲ್ಲ. ಈ ಪ್ರೆಸಿಡೆಂಟರ ಕಾಲದಲ್ಲಿ ತೆರುಗೆಗಳು ಪ್ರಜೆಗಳಿಗೆ ಅಪ್ಪಜಾಸ್ತಿಯಾಗಿ ನಿರಂಕುಶಾಧಿಕಾರಕ್ಕೆ ಅವಕಾಶವಾಗಿರುತ್ತದೆ ಎಂದು ಪ್ರಜೆಗಳು ಬಹಳ ಅಸಮಾಧಾನವಾಗಿದ್ದಾರೆ. ಈ ಪ್ರೆಸಿಡೆಂಟರು ಜನಗಳಲ್ಲಿ ಅನುರಾಗವನ್ನು ವಿಶೇಷವಾಗಿ ಕಳೆದುಕೊಂಡಿರುತ್ತಾರೆ. ಕೌನ್ಸಿಲರುಗಳಲ್ಲಿ ಕಕ್ಷಿಗಳು ಹೆಚ್ಚುತ್ತಿವೆ. ಇದನ್ನು ಘನಸರ್ಕಾರದವರು ಗಮನಿಸಿ ಪ್ರೆಸಿಡೆಂಟರಿಗೆ ಬುದ್ಧಿವಾದವನ್ನು ಹೇಳಿ ಕೂಡಲೇ ಎಲ್ಲಾ ಬಾಬುಗಳನ್ನೂ ಕ್ರಮಪಡಿಸುವದು ಅತ್ಯವಶ್ಯಕ. ಈ ಊರಿನ ಕ್ರಾನಿಕಲ್ ಪತ್ರಿಕೆಯು ನಿನ್ನೆ ಹುಟ್ಟಿ ಈ ದಿನ ಕಣ್ಣುಬಿಡುತ್ತಲಿದೆ. ಇನ್ನೂ ಇದು ಹುಟ್ಟಿ ಹನ್ನೊಂದು ತಿಂಗಳಾಗಿರಬಹುದು, ಆದರೂ ಇದು ಸರ್ವಜ್ಞಮೂರ್ತಿ ಎಂದು ಭಾವಿಸಿಕೊಂಡು ಪ್ರಜಾವರ್ಗವನ್ನೆಲ್ಲಾ ಆಕ್ಷೇಪಿಸುತ್ತಾ ಪಟಾಟೋಪವನ್ನು ಮಾಡುತ್ತಲಿದೆ. ಸೂರ್ಯನ ರಶ್ಮಿಯ ಪ್ರಭಾವದಿಂದ ಇದಕ್ಕೆ ಕಣ್ಣು ಕಾಣಿಸದೆ ಇರಬಹುದು. ಅಥವಾ ಪಕ್ಷಾಂಧತೆ ಎಂಬ ಬಾಲಗ್ರಹದ ದೋಷವು ತಗಲಿರಬಹುದು. ಶ್ರೀ ಜಗದ್ಗುರು ಜಯದೇವ ವೀರಶೈವ ಹಾಸ್ಟಲಿನ ಸಂಬಂಧವಾಗಿ ಇದು ಆಗಾಗ್ಗೆ ಬಹಳ ಅಭಿಮಾನಿಯಂತೆ ಅಸಹ್ಯಕರವಾದ ವೃತ್ತಾವರ್ತಮಾನಗಳನ್ನು ಬರೆಯುತ್ತಾ ಹಿತಚಿಂತಕನಂತೆ ನಟನೆಮಾಡುತ್ತಲಿದೆ. ಈ ವರ್ಗದ ಪರಹಿತ ಚಿಂತನೆಯು ಯಾರಿಗೆ ತಾನೇ ತಿಳಿಯದು? ಈ ಹಾಸ್ಟಲು ಸಮಾಜಕ್ಕೂ ಇದಕ್ಕೂ ಯಾವ ಸಂಬಂಧವೂ ಇರುವದಿಲ್ಲ. ಯಾವವಿಷಯವನ್ನು ಪ್ರಕಟಿಸಬೇಕಾದರೂ ನಿಜಸ್ಥಿತಿಯನ್ನು ಕರ್ತೃಗಳಿಂದ ತಿಳಿದುಕೊಂಡು ನಂತರ ಪ್ರಕಟಿಸುವುದು ಪತ್ರಿಕಾಕರ್ತರ ಮುಖ್ಯ ಧರ್ಮ. ಅದರಿಂದ ಪ್ರಜೆಗಳ ಅನುರಾಗವೂ ಹೆಚ್ಚಾಗಬಹುದು, ಇಲ್ಲದಿದ್ದರೆ ಶೈಶವಾವಸ್ಥೆಯಲ್ಲಿ ಅದೃಶ್ಯವಾಗಬಹುದಾದ ಪರಿಸ್ಥಿತಿ ಯುಂಟಾಗಬಹುದು. ಈ ಹಿತೋಕ್ತಿಯನ್ನು ಈ ಪತ್ರಿಕೆಯು ಚೆನ್ನಾಗಿ ಗಮನಿಸಿ ಧರ್ಮಮಾರ್ಗದಿಂದ ಚಿರಜೀವಿಯಾಗಿರಲಿ. ಪತ್ರವಿಸ್ತಾರಕ್ಕೆ ಕ್ಷಮೆಯಿರಲಿ.

ಪುರನಿವಾಸಿ.

ಚನ್ನಗಿರಿ ಟವನ್ ರೀಡಿಂಗ್ ರೂಮಿನ ಪ್ರವೇಶೋತ್ಸವ.

ಸೆಪ್ಟಂಬರ್ 28 ನೆ ತಾ|| ಬೃಹಸ್ಪತಿವಾರ ಶ್ರೀ ಸರಸ್ವತೀ ಪೂಜೆಯ ದಿವಸ ಶಿವಮೊಗ್ಗ ಡಿ|| ಚನ್ನಗಿರಿಯಲ್ಲಿ ಹೊಸದಾದ ರೀಡಿಂಗ್ ರೂಮಿನ ಪ್ರವೇಶೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಪ್ರಾತಃಕಾಲ ಸುಮಾರು 10 ಘಂಟೆಗೆ ರೀಡಿಂಗ್‌ರೂಂ ಕಟ್ಟಡದಲ್ಲಿ ಶ್ರೀ ಸರಸ್ವತೀ ಆವಾಹನೆ ಮಾಡಲ್ಪಟ್ಟು ಪೂಜಾದಿ ಉತ್ಸವಗಳು ನಡೆದವು. ಮಧ್ಯಾಹ್ನ ಸುಮಾರು 3 ಘಂಟೆಗೆ ಶಿವಮೊಗ್ಗದಿಂದ ಬಂದಿದ್ದ ಹೆಲ್ತಾಫೀಸರ್ ಮ|| ಮಾಂಕರ್ ಸಾಹೇಬರೂ, ತಾಲ್ಲೂಕಿನ ಸರ್ಕಾರಿ ನೌಕರರೂ, ಚನ್ನಗಿರಿ ಪುರನಿವಾಸಿಗಳೂ, ರೀಡಿಂಗ್ ರೂಮು ಕಟ್ಟಡದಲ್ಲಿ ಒಟ್ಟು ಸೇರಿ ಪರಮಾತ್ಮನ ಪ್ರಾರ್ಥನೆಯನ್ನು ಮಾಡಿದರು. ಅನಂತರ ಎಲ್ಲರಿಗೂ ಫಲಾಹಾರದ ವಸ್ತುಗಳು ಹಂಚಲ್ಪಟ್ಟ ಮೇಲೆ ಪುನಃ ಕಟ್ಟಡದೊಳಗೆ ಸಭೆಯು ನೆರೆಯಿತು. ಕಟ್ಟಡವು ತಳಿರುಚಪ್ಪರಗಳಿಂದಲೂ, ತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದಲ್ಲದೆ ಒಳಗಡೆ ಹಸುರು ಎಲೆಗಳಿಂದಲೂ, ವಿವಿಧ ಪುಷ್ಪಗಳಿಂದಲೂ, ಕಟ್ಟಡವು ಆಬಾಲವೃದ್ಧರಿಂದ ತುಂಬಿ ಮನೋರಂಜಕವಾಗಿ ಕಂಗೊಳಿಸುತ್ತಿತ್ತು. ತುರುಕಾದುತ್ತಾ ಇನ್ನೂ ಸ್ಥಳ ಸಂಕೋಚದಿಂದ ಉಳಿದ ಕೆಲವರು ಹೊರಗಡೆ ಪಡಸಾಲೆಗಳಲ್ಲಿ ನಿಂತಿದ್ದರು. ಸ್ವಲ್ಪ ಸಂಗೀತವಾದ ಮೇಲೆ ಅಧ್ಯಕ್ಷರಾದ ಚನ್ನಗಿರಿ ತಾಲ್ಲೂಕ್ ಅಮಲ್ದಾರ್ ಮ|| ರಾ|| ಬಿ. ಸುಬ್ರಹ್ಮಣ್ಯಶಾಸ್ತ್ರಿ ಬಿ. ಎ; ಬಿ. ಎಲ್. ರವರು ಆ ದಿನ ಎಲ್ಲರೂ ಸೇರಿರತಕ್ಕ ಉದ್ದೇಶವನ್ನು ತಿಳಿಸಿ ಎಲ್ಲರ ಅಭಿಪ್ರಾಯದಂತೆ ವಾಚಕಶಾಲೆಯನ್ನು ಸ್ಥಾಪನಗೊಳಿಸಿದರು. ಅನಂತರ ಚನ್ನಗಿರಿ ತಾಲ್ಲೂಕ್ ಪರಸ್ಪರ ಸಹಾಯ ಸಂಘಗಳ ಇನ್ಸ್‌ಪೆಕ್ಟರ್ ಮ|| ವಿ. ಯನ್. ರಾಜಾರಾವ್ ಬಿ. ಎ. ಇವರು ಕರ್ನಾಟಕ ಭಾಷೆಯ ಪೂರ್ವದ ಸ್ಥಿತಿಗೂ, ಈಗಿನಸ್ಥಿತಿಗೂ ಇರುವ ವ್ಯತ್ಯಾಸವನ್ನೂ ಕರ್ನಾಟಕ ಭಾಷೆಯಲ್ಲಿರುವ ಅಮೌಲ್ಯವಾದ ಭಂಡಾರದ ವಿಷಯವಾಗಿ ಕೆಲವು ಸಂಗತಿಗಳನ್ನೂ ತಿಳಿಸಿ ಭಾಷೆಯು ಪ್ರತಿಯೊಬ್ಬ ಮನುಷ್ಯನಿಗೂ ಅವಶ್ಯಕವೆಂದೂ, ಅದರ ಅಭಿವೃದ್ಧಿಗಾಗಿ ಪ್ರತಿಯೊಬ್ಬನೂ ಕಷ್ಟಪಟ್ಟು ಕೆಲಸ ಮಾಡಬೇಕೆಂದೂ ಹೇಳಿದರು. ಅಲ್ಲದೆ ನಮ್ಮನ್ನಾಳುವ ಶ್ರೀಮನ್ಮಹಾರಾಜರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಭಾಷಾಭಿವೃದ್ಧಿಗೋಸ್ಕರ ಪೂರ್ವದ ಭೋಜರಾಜಾದಿರಾಜರ್ಷಿಗಳಂತೆ ಪಾಂಡಿತ್ಯ ಪುರಸ್ಕರಣೆ ಮಾಡುತ್ತಲೂ, ಇತರ ಸಹಾಯಗಳನ್ನು ಒದಗಿಸಿಕೊಡುತ್ತಲೂ, ಇರುವುದರಿಂದ ನಮ್ಮ ಕರ್ನಾಟಕ ಭಾಷೆಯು ಲೀನವಾಗದಂತೆ ಅಭಿವೃದ್ಧಿಗೆ ಬರುತ್ತಿರಲೆಂದು ಹೇಳಿದರು. ನಮ್ಮ ಕರ್ನಾಟಕ ಭಾಷೆಯನ್ನು ಈಗ ಜೀರ್ಣೋದ್ಧಾರ ಮಾಡಲು ಬೇಕಾದ ಸಲಹೆಗಳನ್ನೆಲ್ಲಾ ಸ್ಪಷ್ಟವಾಗಿ ಸೂಚಿಸಿದುದಲ್ಲದೆ, ಇದಕ್ಕೆ ಧನವಂತರು ಮುಂದಾಳಾಗಿ ಬಂದು ತಮ್ಮ ದ್ರವ್ಯವನ್ನು ಸದ್ವಿನಿಯೋಗಪಡಿಸುತ್ತಾ ಬಂದರೆ ಭಾಷಾಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲವೆಂದೂ, ಅಮೇರಿಕಾದೇಶದಲ್ಲಿನ ಕೋಟ್ಯಾಧೀಶ್ವರರ ಐಶ್ವರ್ಯವನ್ನು ತಿಳಿಸಿ ಆಂಡ್ರ್ಯೂಕಾರ್ನಿಗಿಯವರು ತಮ್ಮ ದ್ರವ್ಯದಲ್ಲಿ ವಿದ್ಯಾಭ್ಯಾಸಕ್ಕೂ ಪುಸ್ತಕಭಂಡಾರ ವಾಚಕಶಾಲೆಗಳಿಗೂ, ಇತರ ಧರ್ಮ ಕಾರ್ಯಗಳಿಗೂ ಕೋಟ್ಯಾಂತರ ರೂಪಾಯಿಗಳನ್ನು ದಾನ ಮಾಡಿರುತ್ತಾರೆಂತಲೂ, ಇದೇ ರೀತಿ ನಮ್ಮ ದೇಶದ ಐಶ್ವರ್ಯವಂತರೂ ತಮ್ಮ ಹಣವನ್ನು ಸದ್ವಿನಿಯೋಗಪಡಿಸಬೇಕೆಂತಲೂ ತಿಳಿಸಿದರು. ಮೂಕ ಪ್ರಾಣಿಗಳಿಗೆ ಸಹ ಭಾಷಾಭಿಮಾನವಿರುವಲ್ಲಿ ಸೃಷ್ಟಿಯಲ್ಲಿ ಅತಿ ಶ್ರೇಷ್ಠವಾದ ಮನುಷ್ಯನು ತನ್ನ ಭಾಷಾಭಿವೃದ್ಧಿಗೆ ತಕ್ಕ ಪ್ರಯತ್ನ ಮಾಡದೆ ಇರಕೂಡದೆಂದೂ, ಮಧ್ಯೆ ಅನೇಕ ವಿಘ್ನಗಳು ಬಂದೊದಗಿದರೂ, ಅಲಕ್ಷ್ಯಮಾಡದೆ ಕಾರ್ಯ ಕೈಗೂಡುವವರೆಗೂ, ಕಷ್ಟಪಟ್ಟು ಕರ್ನಾಟಕ ಮಾತೃಸೇವೆಯನ್ನು ಮಾಡಬೇಕೆಂದೂ ತಿಳಿಸಿದರು. ಅನಂತರ ನಮ್ಮ ತಾಲ್ಲೂಕಿಗೆ ಹೊಸದಾಗಿ ಬಂದಿರುವ ಪೋಲಿಸ್ ಇನ್ಸ್‌ಪೆಕ್ಟರ್ ಮ|| ಟಿ. ಎಸ್. ನಾಗೇಶರಾಯರು ದೇಶೋದ್ಧಾರಕ್ಕೆ ಭಾಷೋದ್ಧಾರವು ಅತ್ಯವಶ್ಯಕವೆಂದೂ, ಇದಕ್ಕಾಗಿ ವಾಚಕಶಾಲೆಗಳು ಬಹಳ ಸಹಾಯಕಾರಿಗಳಾಗಿರುವುವೆಂತಲೂ ತಿಳಿಸಿ ವಾಚಕಶಾಲೆಯಿಂದ ಉಂಟಾಗುವ ಪ್ರಯೋಜನಗಳನ್ನು ವಿಸ್ತರಿಸಿ ಪರಸ್ಪರ ದ್ವೇಷವನ್ನು ಬಿಟ್ಟು ಅನ್ಯೋನ್ಯ ಕ್ಷೇಮಚಿಂತನೆ ಮಾಡುತ್ತಾ ಕಾರ್ಯಗಳನ್ನು ಮಾಡಿದಲ್ಲಿ ದೇಶಕ್ಕೆ ಬಹಳ ಉಪಕಾರ ಮಾಡಬಹುದೆಂತ ಹೇಳಿದರು, "ಆರಂಭಶೂರತ್ವ" ವನ್ನು ಮಾತ್ರ ತೋರಿಸದೆ ಶಾಶ್ವತವಾಗಿ ವಾಚಕಶಾಲೆಯನ್ನು ನಡೆಯಿಸಿಕೊಂಡು ಬರಬೇಕೆಂದು ಇದಕ್ಕೆ ಬೇಕಾದ ಅನುಭವಸಿದ್ಧವಾದ ಸಾಧನಗಳನ್ನು ತಿಳಿಸಿದರು. ಕರ್ನಾಟಕ ಭಾಷಾಭಿವೃದ್ಧಿಗೋಸುಗ ವಾಚಕ ಶಾಲೆಯಲ್ಲಿ ಪುಸ್ತಕ ಭಂಡಾರವೊಂದು ಏರ್ಪಡಿಸಲ್ಪಟ್ಟು ನೆರೆದಿದ್ದ ಜನರು ಇದಕ್ಕೆ ಬಹಳ ಉದಾರ ಹೃದಯರಾಗಿ ಚಂದಾ ಕೊಡಲೊಪ್ಪಿದರು. ಬೆಂಚ್ ಮ್ಯಾಜಿಸ್ಟ್ರೇಟರೂ ಮತ್ತು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರೂ ಆದ, ಮ|| ಚ. ನಂಜುಂಡಯ್ಯನವರು ಒಂದು ಬೀರು ಮಾಡಿಸಿ ವಾಚಕಶಾಲೆಗೆ ಉಚಿತವಾಗಿ ಕೊಡಲು ವಾಗ್ದಾನ ಮಾಡಿದರು. ಆ ಮೇಲೆ ಅಧ್ಯಕ್ಷರು ಬಹಳ ಸ್ವಾರಸ್ಯವಾಗಿ ಭಾಷಣವನ್ನು ಮಾಡಿ ಸೆಕ್ರಟರಿಗಳಾದ ಸಬ್‌ರಿಜಿಸ್ಟ್ರಾರ್ ಮ|| ಬಿ. ಬಾಲಕೃಷ್ಣರಾಯರು, ಪೋಸ್ಟ್ ಮಾಸ್ಟರ್ ಕೆ. ನಾಗೇಶರಾಯರು ಈಗ ತೋರಿಸುತ್ತಿರುವ ಉತ್ಸಾಹವನ್ನು ನೋಡಿದರೆ ನಮ್ಮ ವಾಚಕಶಾಲೆಯು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದರು. ಸರ್ವಜನಾಹ್ಲಾದಕರವಾಗಿ ಸಂಗೀತವಾದ ಮೇಲೆ ಶ್ರೀ ಸರಸ್ವತೀದೇವಿಗೆ ಮಂಗಳಾರತಿಯನ್ನು ಸಮರ್ಪಿಸಿದರು. ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಚಕ್ರವರ್ತಿಗಳಿಗೂ ನಮ್ಮನ್ನಾಳುವ ಶ್ರೀಮನ್ಮಹಾರಾಜರಿಗೂ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥನೆಗಳು ಸಮರ್ಪಿಸಲ್ಪಟ್ಟು ಸಭೆಯು ಚದರಿತು.

ವಿದ್ಯಾಭಿಮಾನಿ.

ಹಾಂಸಭಾವಿ ವಿದ್ಯಾವರ್ಧಕ ಸಂಘ.

ಈ ದಿವಸ ಹಾಂಸಭಾವಿಯ ಯಾವತ್ತೂ ಭಕ್ತಮಂಡಳಿಯವರು ಇಲ್ಲಿ ಸ್ಥಾಪಿತವಾಗಿರುವ ಮೃತ್ಯುಂಜಯ ಎ. ವಿ. ಸ್ಕೂಲಿಗೆ ಬರತಕ್ಕ ಬಡವಿದ್ಯಾರ್ಥಿಗಳಿಗೆ ಅನ್ನಾಲಯ (ಬೋರ್ಡಿಂಗು) ವನ್ನು ಸ್ಥಾಪನ ಮಾಡಿರುವದು ಸರ್ವಶ್ರುತವಿರುವದಷ್ಟೆ. ಈ ಬೋರ್ಡಿಂಗು ಸಧ್ಯಕ್ಕೆ ವಿರಕ್ತಮಠದಲ್ಲಿ ನಡೆಯುತ್ತಲಿದ್ದು ಸ್ಥಳವು ಸಂಕೋಚವಿದ್ದ ಮೂಲಕ ಒಂದುನೂರು ವಿದ್ಯಾರ್ಥಿಗಳ ಭೋಜನದ ವ್ಯವಸ್ಥೆಗೂ ಉಗ್ರಾಣ ಸೂಪಶಾಲೆ ವಗೈರೆ ಕೋಟ್ಟಡಿಗಳಿಗೂ ಅನುಕೂಲವಾದ ಕಟ್ಟಡವನ್ನು ಸ್ಥಾಪಿಸಲೋಸುಗ ನಿಶ್ಚಯಿಸಿ ಇದೇ ದಿವಸ ಮಧ್ಯಾಹ್ನ ಮೂರು ಘಂಟೆಗೆ ರಾ|| ರಾ|| ಹಂಜಿ ರುದ್ರಪ್ಪನವರ ಹಸ್ತದಿಂದ ಶಂಕುಸ್ಥಾಪನೆಯು ಸರ್ವಾನುಮತದಿಂದ ನಡೆಯಲ್ಪಟ್ಟು ನಂತರ ಶ್ರೀ ಅಥಣಿ ಶಿವಯೋಗಿಗಳ ಭಾವಚಿತ್ರದೊಡನೆ ಶ್ರೀ ಮೃತ್ಯುಂಜಯಸ್ವಾಮಿಗಳ ತಿಯಗಾಂದೋಳಸೋತ್ಸವದೊಡನೆ (ಅಡ್ಡಪಲ್ಲಕ್ಕಿ ಪಂಚಕಲಶ) ಸಂದರ್ಶನವನ್ನು ಸ್ಥಳ ಪರಸ್ಥಳದ ಭಕ್ತಮಂಡಳಿ ಮತ್ತು ಯಾವತ್ತೂ ವಿದ್ಯಾರ್ಥಿ ವೃಂದವೂ ಮಾಸ್ತರು ಜನಗಳು ಸಹ ತೆಗೆದುಕೊಂಡ ನಂತರ ಅಜಮಾಸು ಎರಡುಸಾವಿರ ಜನಗಳ ಮೇಲ್ಪಟ್ಟು ಭಕ್ತಸಮೂಹವು ಸೇರಿ ಪುರವೀಧಿಗಳಲ್ಲಿ ಶಿವಭಜನ ಜಯಘೋಷ ಶುಭವಾದ್ಯದೊಡನೆ ಅತಿ ವಿಜೃಂಭಣೆಯಿಂದ ನಡೆದು ಶ್ರೀ ಬಸವೇಶ್ವರ ದೇವಾಲಯದಲ್ಲಿ ಸಿಂಹಾಸನಾರೋಹಣವಾಗಿ ರಾಜೇಶ್ರೀ ಹೊಳಿಬಸಪ್ಪನ್ಯಾಸಗೆ ಸಿದ್ಧಾಪುರ ಇವರು ಸರ್ವಾನುಮತದಿಂದ ಅಧ್ಯಕ್ಷಸ್ಥಾನವನ್ನು ವಹಿಸಿದನಂತರ ಧರ್ಮ ವಿದ್ಯೆಸಮಾಜ ಸುಧಾರಣೆ ವಗೈರೆ ವಿಷಯಗಳ ಮೇಲೆ—ರುದ್ರಗೌಡ ಭೋಗಾವಿ ಪಾಟೀಲ ಬಿ. ವಿ. ಜಿ. ಮತ್ತು ವೇ-ಚನ್ನಬಸವಾರ್ಯ ಹರಿಹರ ರಾ. ಸಣ್ಣಬಸಪ್ಪನವರು ಗೊಗಲಶೆಟ್ರು ಮಾಸೂರು ರಾ. ರಾಮಪ್ಪನವರು ಬೆಟಗೇರೂರ ಬ್ಯಾಡಗಿ ಮತ್ತು ಕೆಲವು ವಿದ್ಯಾರ್ಥಿಗಳ ಭಾಷಣವಾದನಂತರ ಈ ದಿವಸ ಶಂಕುಸ್ಥಾಪನೆಯನ್ನು ಮಾಡಿದ ಇಮಾರತಿಗೆ ಅಥಣಿ ಶ್ರೀ ಮುರಘೇಂದ್ರ ಶಿವಯೋಗೀಶ್ವರ ಬೋರ್ಡಿಂಗ ಎಂಬದಾಗಿ ಸರ್ವಾನುಮತದಿಂದ ಅಭಿಧಾನವನಿಟ್ಟು ಜಯಘೋಷವಾದೊಡನೆ ಈ ಕೆಳಗೆ ನಮೂದಾದ ಮೇರಿಗೆ ವರ್ಗಣಿಯು ವಸೂಲಾಯಿತು. ಅಜಮಾಸ ರೂ (500) ಜಮಾ ಆದವು. ಮತ್ತು ಯಾವತ್ತೂ ವ್ಯಾಪಾರಸ್ಥರು ತಮ್ಮತಮ್ಮ ಸರಕುಗಳ ಮೇಲೆ ಮಣ ಒಂದಕ್ಕೆ ಅರ್ಧ ಆಣೆಯಂತೆಯೂ ರೈತಜನಗಳು ಇಲ್ಲಿಯ ಮುಖ್ಯ ಬೆಳೆಯಾದಂಥ ಮೆಣಸಿನಕಾಯಿ ಮಾರಾಟದಲ್ಲಿ ಒಂದು ರೂಪಾಯಿಗೆ 3 ಪೈಯಂತೆಯೂ ಇಲ್ಲಿನ ವಿದ್ಯಾವರ್ಧಕ ಸಾಯಮು ಫಂಡಿಗೆ ವರ್ಷಾಶನ ಕೊಡಲು ವಾಗ್ದಾನ ಮಾಡಿದ ರಕಮು ವರ್ಷ ಒಂದಕ್ಕೆ ಒಂದು ಸಾವಿರ ರೂಪಾಯಿಗಳ ಮೇಲ್ಪಟ್ಟು ಆಗಬಹುದು. ಈ ವಿಷಯವನ್ನು ತಿಳಿಸಲು ಅತ್ಯಾನಂದವಾಗುತ್ತದೆ.

ಮೊದಲಿದ್ದ ಮಠವನ್ನೇ ಬೋರ್ಡಿಂಗಿನ ಕಟ್ಟಡವನ್ನಾಗಿ ಮಾಡಲು ಸರ್ವಾನುಮತವಾದುದರಿಂದ ಯಾವತ್ತೂ ಭಕ್ತಮಂಡಳಿಯವರಿಗೆ ಅತ್ಯಾನಂದವಾಯಿತು. ನಂತರ ವೀರಶೈವ ವೃತ್ತಪತ್ರಿಕೆಗಳ ಪ್ರೋತ್ಸಾಹದ ಬಗ್ಗೆ ಮೈಸೂರು ಸ್ಟಾರ್ ಮತ್ತು ಕರ್ನಾಟಕ ಟಾಯಿಮ್ಸ್ ಪತ್ರಿಕೆಗಳಿಗೆ ಎರಡೆರಡು ರೂಪಾಯಿಗಳಂತೆ ರವಾನಿಸಲು ನಿಶ್ಚಯಿಸಿತು. ನಂತರ ರಾ|| ಸಣ್ಣಬಸಪ್ಪ ಮೊಗಲಶೆಟ್ರು ಇವರು ಪ್ರಾಚೀನಕಾಲದಿಂದಲೂ ಒಂದೇ ಒಂದು ವರ್ಗದವರು ಸ್ವಾರ್ಥ ಪರಾಯಣತೆಯಿಂದ ಗೋಮುಖವ್ಯಾಘ್ರದ ನಟನೆಯಿಂದ ನಮ್ಮ ದೇಶದ ಏಳಿಗೆಗೆ ತಿಲಾಂಜಲಿಯನ್ನು ಬಿಟ್ಟವ ಬಿಡುತ್ತಿರುವ ರಾಷ್ಟ್ರೋನ್ನತಿಯ ಸೋಗಿನ ಬಹದ್ದೂರರ ನೌಕರಿಯ ಗುತ್ತಿಗೆಯನ್ನು ಬಿಡುಗಡೆಪಡಿಸಿ ಸಮದೃಷ್ಟಿಯಿಂದ ನೋಡುವ ನಮ್ಮ ರಾಜರ ಬಗ್ಗೆ ಸರ್ವರೂ ರಾಜನಿಷ್ಠೆಯಿಂದ ನಡೆಯಬೇಕೆಂಬ ಠರಾವನ್ನು ತರಲಾಗಿ ರಾ|| ರಾಮಪ್ಪ ಬೆಟಗೇರೂರ ಇವರು ಅನುಮೋದನ ಕೊಟ್ಟನಂತರ ಸರ್ವಾನು ಮತದಿಂದ ಪಾಸಾಯಿತು.

ಮೈಸೂರ ಗೌರ್ನಮೆಂಟ್ ಸಂಸ್ಕೃತ ಕಾಲೇಜುಗಳಿಗೆ ತ್ರಿವರ್ಗಬ್ರಾಹ್ಮಣರ ಹೊರತು ಇತರರನ್ನು ಸೇರಿಸಬಾರದೆಂಬ ವಿಷಯದಲ್ಲಿ ಇದು ಸದರ ಗೌರ್ನಮೆಂಟಿನ ಖ್ಯಾತಿಗೆ ಅನ್ಯಾಯವಿರುತ್ತದೆಂತಲೂ, ಅನೂಚಾನವಾಗಿ ವೇದ ವೇದಾಂಗಕ್ಕೂ ಕೂಡಾ ಬಾಧ್ಯಸ್ಥರಾದ, ವೀರಶೈವರೇ ಮೊದಲಾದ ಇತರ ವರ್ಗದವರನ್ನು ಸೇರಿಸಲು ಮೈಸೂರ ಗೌರ್ನಮೆಂಟಿಗೆ ಪ್ರಾರ್ಥಿಸಿ ಕೊಳ್ಳಬೇಕೆಂದೂ ಮಿ|| ರುದ್ರಗೌಡ ಭೋಗಾವಿ, ಬಿ. ವಿ. ಜಿ. ಠರಾವು ತಂದದ್ದನ್ನು ರಾ|| ಸಣಬಸಪ್ಪ ಮೊಗಲಿಶೆಟ್ರು ಇವರು ಈ ಕಾಲೇಜುಗಳಿಗೆ ಸಲ್ಲುವ ಹಣವು ಸಾರ್ವಜನಿಕ ಹಣವಿದ್ದು ಬರೇ ತ್ರಿವರ್ಗದವರಿಗೆ ಸಂಸ್ಕೃತದ ಅಭ್ಯಾಸಕ್ಕೆ ಸಲ್ಲುವದು ಉಳಿದವರ ಮನುಷ್ಯತ್ವದ ಗೌರವಕ್ಕೆ ಹಾನಿಯನ್ನೂ ತರುವಂಥಾದ್ದೂ ಸುಧಾರಿಸದ ರಾಜನೀತಿಗಳೊಳಗೆ ಎಣಿಸಲ್ಪಡುವಂಥಾದ್ದೂ ಇರುವದೆಂದು ಅತಿ ವಿಷಾದದಿಂದ ಮೇಲ್ಕಂಡ ಠರಾವನ್ನು ಪುಷ್ಟೀಕರಿಸಲಾಗಿ ಸರ್ವಾನುಮತದಿಂದ ಮೈಸೂರ ಗೌರ್ನಮೆಂಟಿಗೆ ಈ ವಿಷಯವನ್ನು ಶ್ರುತಪಡಿಸಿಕೊಳ್ಳಲು ನಿಶ್ಚಯಿಸಿತು. ನಂತರ ಸಮಾಜಸೇವೆಯೇ ಕರ್ತವ್ಯವೆಂದು ಹಗಲಿರುಳು ಅವಿಶ್ರಾಂತಶ್ರಮವನ್ನು ವಹಿಸಿ ಸಮಾಜವನ್ನುದ್ಧರಿಸಲು ಅವತರಿಸಿ ಶ್ರೀ ಶಿವಯೋಗಿಗಳ ಕೃಪಾಪಾತ್ರರಾದ ಶ್ರೀ ಮೃತ್ಯುಂಜಯ ಸ್ವಾಮಿಗಳ ಕೃಪಾಪೂರಿತ ಆಶೀರ್ವಾದವನ್ನು ಪಡೆಯಲು ತಮ್ಮ ಶಕ್ತ್ಯನುಸಾರ ಭಕ್ತಿಪೂರ್ವಕವಾಗಿ ಪದ್ಧತಿಯಂತೆ ವಿಜಯದಶಮಿ ದೆಸೆಯಿಂದ ಒಪ್ಪಿಸಲ್ಪಟ್ಟ ಕಾಣಿಕೆಯ ರೂಪಾಯಿಗಳನ್ನು ಶ್ರೀಗಳವರು ಅತ್ಯಾನಂದ ದೊಡನೆ ಈ ಬೋರ್ಡಿಂಗ್ ಕಟ್ಟಡಕ್ಕೆ ಆಶೀರ್ವಾದ ದಯಪಾಲಿಸಿ ಸಪ್ರೇಮಿಯಿಂದ ಆಶೀರ್ವಾದವನ್ನು ಸಮಸ್ತರಿಗೂ ಕೊಟ್ಟನಂತರ ನಮ್ಮನ್ನಾಳುವ ಪಂಚಮ ಜಾರ್ಜರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ ತಮಗಿದ್ದ ರಾಜಭಕ್ತಿಯನ್ನು ವ್ಯಕ್ತಗೊಳಿಸಿ ಸಭೆಯು ವಿಸರ್ಜಿಸಲ್ಪಟ್ಟಿತು. ಓರ್ವ ಪ್ರತ್ಯಕ್ಷದರ್ಶಿ.

ಸರ್ಕಾರಿ ಸಂಸ್ಕೃತ ಕಾಲೇಜು.

ಮೈಸೂರು ಮತ್ತು ಬೆಂಗಳೂರುಗಳಲ್ಲಿ ಸ್ಥಾಪಿಸಲ್‌ಪಟ್ಟಿರುವ ಸರ್ಕಾರಿ ಸಂಸ್ಕೃತ ಪಾಠಶಾಲೆಗಳಿಗೆ ನಮ್ಮನ್ನೂ ಸೇರಿಸಿಕೊಳ್ಳಬೇಕೆಂದು ಸರ್ಕಾರದವರಿಗೆ ನಾವು ಕೇಳಿಕೊಂಡರೆ, ಬ್ರಾಹ್ಮಣರಾದ ನೀವು ಕಣ್ಣು ಕೆಂಪಗೆ ಮಾಡಿಕೊಂಡು ಕಾಲುಕೆದರಿ ಜಗಳಕ್ಕೆ ಬರುತ್ತೀರಲ್ಲ? ನಾವೇನಾದರೂ ನಿಮ್ಮ ಮನೆಗೆ ಬಂದು "ಹಾರುವಯ್ಯನವರೇ ದಯಮಾಡಿ ಸ್ವಲ್ಪ ಭಿಕ್ಷಾ ನೀಡಿರಿ" ಎಂದು ಕೇಳಿದ್ದರೆ "ಜಂಗಮಯ್ಯನವರೇ ನಮ್ಮ ಕೈ ತೆರಸಿಲ್ಲ, ಮುಂದಕ್ಕೆ ದಯಮಾಡಿರಿ" ಎಂದು ಹೇಳಿದರೆ ಒಪ್ಪಬಹುದಾಗಿತ್ತು. ಹಾಗೇನಾದರೂ ನಿಮ್ಮ ಬೊಗಸೆಯಲ್ಲಿ ನಾವು ನೀರು ಕುಡಿಯುತ್ತೇವೆಂದು ಕೇಳುತ್ತೇವೆಯೇ? ಸರ್ಕಾರಿ ಸಂಸ್ಕೃತ ಪಾಠಶಾಲೆಗಳಿಗೆ ಖರ್ಚಾಗುವ ಹಣವು ಬ್ರಾಹ್ಮಣರು ಮಾತ್ರ ದುಡಿದುಕೊಡಲ್ಪಟ್ಟದ್ದಲ್ಲ; ಅದು ಸರ್ವಪ್ರಜೆಗಳ ಕಷ್ಟಾರ್ಜಿತದ್ರವ್ಯವಾಗಿರುತ್ತದೆ. ಪ್ರಯುಕ್ತ ಅಲ್ಲಿ ಕೇವಲ ತ್ರಿಮತ ಬ್ರಾಹ್ಮಣರಿಗೆ ಮಾತ್ರ ಅವಕಾಶಕೊಟ್ಟಿರುವುದು ಬಹು ಜನರ ಅಸಮಾಧಾನಕ್ಕೆ ಕಾರಣವಾಗಿರುತ್ತದೆ. ಆದುದರಿಂದ ಹಿಂದೂ, ಉತ್ತಮವರ್ಣದವರ ಪ್ರವೇಶಕ್ಕಾದರೂ ದಯಮಾಡಿ ಅಸ್ಪದಕೊಡಲೇ ಬೇಕೆಂದು ನಾವು ಸರ್ಕಾರದವರಿಗೆ ಪ್ರಾರ್ಥಿಸಿಕೊಂಡರೆ, ಬ್ರಾಹ್ಮಣರಾದ ನೀವು ಸಂಸ್ಕೃತ (ವೇದ ಮೊದಲಾದವುಗಳನ್ನ) ಕಲಿಯಲಿಕ್ಕೆ ನಮ್ಮ ಹೊರತು ಅನ್ಯರಿಗೆ ಖಂಡಿತವಾಗಿ ಶಾಸ್ತ್ರಗಳಲ್ಲಿ ಅವಕಾಶವಿಲ್ಲವೆಂದು ನಿಮ್ಮ ಕಡತಗಳನ್ನು ಬಯಲಿಗೆ ತಂದು ತೋರಿಸುತ್ತಿರುವಿರಿ. ಬ್ರಾಹ್ಮಣ ಬಂಧುಗಳೇ! ನೀವು ವಿದ್ಯಾಕಲಿಯಬೇಕು, ನಾವು ದಡ್ಡರಾಗಿರಬೇಕೆ? ನೀವು ಕುದುರೆಯ ಮೇಲೆ ಕುಳಿತು ನೌಕರಿಮಾಡಬೇಕು, ನಾವು ಡವಾಲಿಹಾಕಿಕೊಂಡು ಜವಾನರಾಗಿರಬೇಕೆ? ನಿಮ್ಮನ್ನು ನಾವು ಸ್ವಾಮಿಾ ರಾಯರೇ, ಇತ್ಯಾದಿ ಗೌರವದಿಂದ ಕರೆಯಬೇಕು; ನೀವು ನಮ್ಮನ್ನು ಎಲೋ, ಏನೋ, ಯೇ ಇತ್ಯಾದಿ ತಿರಸ್ಕಾರದಿಂದ ಕರೆಯಬೇಕೆ? ನಾವು ಹಣ ಸಂಪಾದಿಸತಕ್ಕವರಾಗಿರಬೇಕು. ನೀವು ಅದನ್ನ ಜೇಬಿಗೆ ಹಾಕಿಕೊಂಡು ಲೋಲುಪ್ತಿಮಾಡತಕ್ಕವರಾಗಿರಬೇಕೆ? ನಾವು ಮಡ್ಡ ಒಕ್ಕಲಿಗರಾಗಬೇಕು. ನೀವು ಜಾಣ ವಕೀಲರಾಗಿರಬೇಕೆ? ಇತ್ಯಾದಿಯಾಗಿ ಮಾತ್ರ ನಿಮ್ಮ ಶಾಸ್ತ್ರಗಳಲ್ಲಿ ಹೇಳಿರಬಹುದಲ್ಲವೇ? ಇದರಂತೆ ಬ್ರಾಹ್ಮಣನಾದವನಿಗೆ ಅನ್ನ ವಿಕ್ರಯಮಾಡುವುದು, ಅಂದರೆ ಹೊಟೇಲ್ ಇಟ್ಟುಕೊಂಡು ಅನ್ಯಜಾತಿಯವರು ಕಚ್ಚಿ ಕುಡಿದ ಚಹಾ ಕಫ್ ಮೊದಲಾದವುಗಳನ್ನ ಮುಟ್ಟಿ ತೊಳೆಯುವುದು ಇತ್ಯಾದಿ, ಮತ್ತು ಮದ್ಯ ವಿಕ್ರಯಮಾಡುವುದು, ಅಂದರೆ ಶೇಂದಿ, ಶರಾಬ್ ಕಂಟ್ರ್ಯಾಕ್ಟರಾಗಿರುವುದು, ವ ಬಕ್ರಿದಾರರಾಗಿರುವುದು ಮತ್ತು ಡಾಕ್ಟರಾಗಿರುವುದು ಅಂದರೆ ಪ್ರಸಂಗವಶಾತ್ ಹೆಣಗಳನ್ನು ಕೊಯ್ಯುವುದು, ಇತ್ಯಾದಿಗಳೆಲ್ಲ ಜನ್ಮಸಿದ್ಧ ಹಕ್ಕುಗಳಿರುತ್ತವೆಯೆಂದು ಸಹ ನಿಮ್ಮ ಪುರಾಣಗಳಲ್ಲಿ ಹೇಳಿರಬಹುದಲ್ಲವೇ? ಮತ್ತು ಹೆಂಗಸರಾದವರು ಕಣ್ಣಿಗೆ ಕನ್ನಡಕ ಹಾಕಿಕೊಂಡು ಕೈಗೆ ರಿಸ್ಟ್‌ವಾಚ್ ಕಟ್ಟಿಕೊಂಡು ಕೈಯೊಳಗೆ ಕೊಡೆ ಹಿಡಿದುಕೊಂಡು, ಕಾಲೊಳಗೆ ಬೂಟ್ ಮೆಟ್ಟಿಕೊಂಡು ನಾಟಕ ಸಿನೀಮಾ ಉತ್ಸವಾದಿಗಳಿಗೆ ಹೋಗಬಹುದೆಂತಲೂ, ಇವರು ಮೆಂಬರುಗಳು ಕೂಡ ಆಗಿ ಬಹು ಜನ ಗಂಡಸರ ಜತೆಯಲ್ಲಿ ಸೇರಿ ಸಾರ್ವಜನಿಕ ಸೇವೆ ದೇಶಸೇವೆ ಮಾಡಬಹುದೆಂತಲೂ ಸಹ ನಿಮ್ಮ ಪಾತಿವ್ರತ್ಯಧರ್ಮಶಾಸ್ತ್ರಗಳಲ್ಲಿ ಖಂಡಿತವಾಗಿಯೂ ಹೇಳಿರಬಹುದಲ್ಲವೇ? ನಿಮ್ಮ ಹಳೇಕಡತಗಳನ್ನಷ್ಟು ಬೆಳಕಿಗೆ ತಂದು ನೋಡಿ ಹೇಳಿರಿ. ಬಂಧುಗಳೇ, ಕೆಲವು ಕಾರಣಗಳಿಂದ ಒಂದಾನೊಂದು ಕಾಲದಲ್ಲಿ ವಿದ್ಯೆಯು ಬರೇ ನಿಮ್ಮೊಬ್ಬರ ಕೈಯ್ಯೊಳಗೆ ಮಾತ್ರ ಉಳಿದಿದ್ದಾಗ ಆ ಕಾಲದ ಸ್ವಾರ್ಥಸಾಧಕರಾದ ಕೆಲ ಬ್ರಾಹ್ಮಣ ಗ್ರಂಥಕಾರರು ತಮ್ಮ ಮತದ ಕೀರ್ತಿಪ್ರತಿಷ್ಠೆಗಳೂ, ಸುಖಶಾಂತಿಗಳೂ, ವಿದ್ಯೆಯೂ ಸಹ ಮುಂದಾದರೂ ಅನ್ಯರ ವಶವಾಗಬಾರದೆಂದು ಎಂಥೆಂಥಾ ಯುಕ್ತಿಗಳನ್ನ ಯೋಚಿಸಿ ಶಾಸ್ತ್ರಗಳಲ್ಲಿ ಸೇರಿಸುತ್ತಾ ಬಂದಿರುತ್ತಾರೆ! ಸ್ವಲ್ಪ ಕೇಳಿರಿ.

ಶ್ರವಣೇ ತ್ರಪುಜತುಭ್ಯಾಂ ಶ್ರೋತ್ರಪೂರಣಂ |
ಉಚ್ಚಾರಣೇಜಿಹ್ವಾಛೇದೋ, ಧಾರಣೇಹೃದಯವಿಧಾರಣಂ ||

ಅಂದರೆ ಬ್ರಾಹ್ಮಣೇತರನು ವೇದವನ್ನು ಕೇಳಿದ್ದೇ ಆದರೆ ಸೀಸವನ್ನಾಗಲಿ, ಅರಗನ್ನಾಗಲಿ ಕಾಯಿಸಿ ಅವನ ಕಿವಿಯಲ್ಲಿ ಹೊಯ್ಯಬೇಕಂತೆ, ಜ್ಞಾಪಕವಿಟ್ಟುಕೊಂಡರೆ ಹೃದಯಭೇದಮಾಡಬೇಕಂತೆ, ಮಂತ್ರಗಳನ್ನು ಉಚ್ಚಾರವಾಡಿದರೆ ನಾಲಿಗೆಯನ್ನು ಕೊಯ್ಯಬೇಕಂತೆ! ನೋಡಿದಿರೋ ಇದು ಎಂಥ ಹಂಚಿಕೆ! ಎಂಥ ವಂಚಕತನ!! ಎಂಥ ಮಹಾಪರಾಧ!!! ಈ ಮೊಗಲಾಯಿ ಅಮಲನ್ನ ಈ ಕಾಲದಲ್ಲಿ ನಡಿಸಬೇಕೆಂದು ಯಾರಾದರೂ ಬಡಬಡಿಸುವುದಾದರೆ, ಅಂಥವರಿಗೆ ಮಹಾ ಮೂರ್ಖರೆಂಬ ಉಪನಾಮವು ಸಾಲದುದಕ್ಕೆ ಹುಚ್ಚಾಸ್ಪತ್ರೆಯೂ ಪ್ರಾಪ್ತವಾಗಲಿಕ್ಕೆ ಎಷ್ಟು ಮಾತ್ರವೂ ಸಾವಕಾಶವಾಗಲಾರದು. ಹೀಗೆಯೇ ರಾಮಾಯಣದಲ್ಲಿ ಶೂದ್ರರು ತಪಸ್ಸು ಮಾಡುವುದು ಮಹಾಪರಾಧನೆಂಬ ಕಾರಣದಿಂದ ರಾಮನು ಶೂದ್ರನಾದ ತಪಸ್ವಿಯೊಬ್ಬನನ್ನು ಸಂಹರಿಸಿದನೆಂದು ಬರೆದಿದೆ, ನೋಡಿದಿರೋ ರಾಮನು ಮಹಾ ಜ್ಞಾನಿಯಾದ ದೊರೆ. ಇಂಥವನು ಇಂಥ ಮಹಾಮೂರ್ಖತನವನ್ನ ಎಂದಿಗಾದರೂ ಮಾಡಿರಬಹುದೆ? ಇದು ರಾಮಾಯಣ ಗ್ರಂಥದಲ್ಲಿ ಹೇಳಿದೆಯೆಂದು ಈಗಿನ ಯಾರಾದರೂ ಪ್ರಭುಗಳು ನಿರುಪದ್ರವಿಗಳಾದ ಬ್ರಾಹ್ಮಣೇತರ ತಪಸ್ವಿಗಳನ್ನ ಕೊಲ್ಲಲಿಕ್ಕೆ ಬಂದೀತೆ? ಮಹಾಶಯರೇ ಸ್ವಲ್ಪ

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಳನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗ್ಯೆರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ, ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
37 ಬಳ್ಳಾರಿ.

ಜುಮ್ಲಾ 4119-5-4 ರೂ. ಸಶೇಷ.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಟ್ ಭಂಗಾರದ ಮುಳ್ಳುಳ್ಳ

14 ### ರೋಯಲ್ ಫೌಂಟೇನ್ ಪೆನ್.



ಎಂಬ ಈ ಪೇನಾವನ್ನು ಅಮೇರಿಕಾ ದೇಶದಲ್ಲಿ ಮೇಲಾದ ವಾಲ್ಕನೆಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿದಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1.8.0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

೧೯೨೨ನೆಯ ಇಸವಿ ಅಕ್ಟೋಬರ್ ತಾ|| ೨೯ ರಿಂದ ೧೯೨೨ನೆಯ ನವಂಬರ್ ತಾ|| ೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮ ಸಂವತ್ಸರದ ಕಾರ್ತಿಕ ಶುದ್ಧ ನವಮಿಯಿಂದ ಕಾರ್ತಿಕ ಶುದ್ಧ ಪೌರ್ಣಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
29	ಭಾನು	ನವ	13-18	ಧನಿ	44-47	13
30	[1] ಸೋಮ	ದಶ	16-48	ಶತ	50-7	14
31	[2] ಮಂಗಳ	ಏಕಾ	21-21	ಪೂಭಾ	56-15	15
1	[3] ಬುಧ	ದ್ವಾ	26-27	ಉಭಾ	60	16
2	ಗುರು	ತ್ರಯೋ	31-26	ಉಭಾ	3-3	17
3	ಶುಕ್ರ	ಚತು	37-4	ರೇವ	9-28	18
4	[4] ಶನಿ	ಪೌರ್ಣ	41-38	ಅಶ್ವಿ	15-34	19

(1) ಕಾರ್ತಿಕಸೋಮವಾರ, ಮೇಲುಕೋಟೆಯಲ್ಲಿ ರಾಜಮುಡಿ ಉತ್ಸವ. (2) ಸರ್ವತ್ರೈಕಾದಶಿ. (3) ಪ್ರದೋಷ, ಉತ್ಥಾನದ್ವಾದಶಿ, ಪುಷ್ಪಬೃಂದಾವನೋತ್ಸವ, ಉಡುಪಿಯಲ್ಲಿ ಲಕ್ಷದೀಪೋತ್ಸವ. (4) ಧರ್ಮಸ್ಥಳದಲ್ಲಿ ದೀಪೋತ್ಸವ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರಾ. ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಸಾರಾ ಪರಮಧಿಗತರಾಜಮಂಡಲಚಿಕ್ರಿಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ನವಂಬರ್ ತಾರೀಖು ೫ ನೆಯ ಭಾನುವಾರ (ಸಂಚಿಕೆ ೪೫

REGISTERED NO. M. 124.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.
(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ–ಶಿವನ ಪಂಚವಿಂಶತಿ ಲೀಲೆಗಳು–ಅನೇಕ ಶಿವಶರಣರ ಚರಿತ್ರೆಗಳು–ಷಟ್ಸ್ಥಲಾಷ್ಟಾವರಣ, ಕಲಿಬಹುಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಿನೆಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಶೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.
" ನಂ. 2 ರೂ. 7—8—0.

33 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 512, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನಿ ಬೆಳ್ಳಿಯ ರಿಸ್ಟ್ ವಾಚ್.

15



ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.
ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0
" " ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವೃತಪಂಚಕ	೦— ೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯೆಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಪಸ್ತ್ರೀಯರಿಗೂ ಕಲೀತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಶಸ್ತ್ಯೋಚಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

42 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ರಾನ್ಸ್ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಪ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,
15 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ನವಂಬರ್ ತಾ|| ೫ನೆಯ ಭಾನುವಾರ.

ನೂತನ ರಾಜಕೀಯ ಸುಧಾರಣೆ.

ರಾಜ್ಯಭಾರದಲ್ಲಿ ಪ್ರಜಾಮತಕ್ಕೆ ಬಲವನ್ನು ಹೆಚ್ಚಿಸುವ ಮೂಲಕ ಸಾಂಕುಶಪ್ರಭುತ್ವವನ್ನು ನ್ಯಥಮೂಲಗೊಳಿಸುವ ಉದ್ದೇಶದಿಂದ, ನಮ್ಮ ಶ್ರೀಮನ್ಮಹಾರಾಜರವರು ತಾವು ರಾಜ್ಯಸೂತ್ರವನ್ನು ಪರಿಗ್ರಹಿಸಿದ ಈಚೆಗೆ ಆಯಾ ಕಾಲದಲ್ಲಿ ಎಷ್ಟೋ ರಾಜಕೀಯ ಸ್ವಾತಂತ್ರ್ಯಗಳನ್ನು ಪ್ರಜಾಪ್ರತಿನಿಧಿ ಸಭೆಗೂ ನಿಯಮನಿರ್ಮಾಣ ಸಭೆಗೂ ಅನುಗ್ರಹಿಸುತ್ತ ಬಂದಿರುತ್ತಾರೆ. ಈಗ ಇವೆರಡು ಸಭೆಗಳಿಗೂ ಮತ್ತಷ್ಟು ಅಧಿಕಾರವನ್ನು ಹೆಚ್ಚಿಸಿಕೊಡುವುದಕ್ಕೆ ಸಂಬಂಧಪಟ್ಟ ಸಂದೇಶವನ್ನು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ತಮ್ಮ ಮಂತ್ರಿವರ್ಯರ ಮುಖೇನ ಪ್ರಕಟಪಡಿಸಿರುವರಷ್ಟೆ. ಅದನ್ನು ನಾವು ಹಿಂದೆಯೇ ಪ್ರಕಟಿಸಿರುತ್ತೇವೆ. ಈ ನೂತನ ಸಂಸ್ಕರಣಗಳ ಪ್ರಕಾರ ಏರ್ಪಡುವ ಸಭೆಗಳ ಕಾರ್ಯವಿಧಾನ ಲಕ್ಷಣ ಮೊದಲಾದುವುಗಳನ್ನು ನಿರ್ಧರಿಸಿ ವರದಿಮಾಡುವುದಕ್ಕಾಗಿ ಡಾ|| ವ್ರಜೇಂದ್ರನಾಥ ಸೀಲ್‌ರವರ ಅಧ್ಯಕ್ಷತೆಯಿಂದ ಒಂದು ಸಂಘವು ಏರ್ಪಟ್ಟಿರುವ ಸಂಗತಿಯು ಕೂಡ ನಮ್ಮ ಪತ್ರಿಕಾವಾಚಕರಿಗೆ ಗೊತ್ತೇ ಇದೆ. ಈ ಸಂಘದವರು ನಿರ್ಧರಿಸಬೇಕಾದ ವಿಷಯಗಳು ಏನೇನೆಂಬುದನ್ನೂ, ತತ್ಸಂಬಂಧವಾದ ವರದಿಯನ್ನೂ ಬರುವ ಡಿಸೆಂಬರ್ ತಾ|| 1 ರೊಳಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂಬುದನ್ನೂ ಕುರಿತ ಅಪ್ಪಣೆಯು ಕಳೆದತಿಂಗಳು ತಾ|| 26 ರ ಸರ್ಕಾರಿ ಗೆಜೆಟ್ಟಿನಲ್ಲಿ ಮುದ್ರಿಸಲ್ಪಟ್ಟಿರುವುದು.

ನಿಯುಕ್ತವಾಗಿರುವ ಈ ಸಂಘಕ್ಕೆ ಆರಿಸಿಕೊಳ್ಳಲ್ಪಟ್ಟಿರುವ ಸಭಿಕರುಗಳೆಲ್ಲಾ ಉದ್ದಿಷ್ಟವಿಷಯದಲ್ಲಿ ಅನುಭವಪರಿಪಾಕದಿಂದ ಸಿದ್ಧವಾದ ಅಭಿಪ್ರಾಯವನ್ನು ಸೂಚಿಸುವುದರಲ್ಲಿ ಸಂಪೂರ್ಣವಾದ ಅರ್ಹತೆಯುಳ್ಳವರೆಂಬುದರಲ್ಲಿ ಅಭ್ಯಂತರವಿಲ್ಲ. ಆದುಕಾರಣ ಶ್ರೀಮನ್ಮಹಾರಾಜರವರ ಉದ್ದೇಶವನ್ನು ಸರ್ವಪ್ರಕಾರದಿಂದಲೂ ಸಾರ್ಥಕಪಡಿಸಲು ಸಾಧಕವಾದಂಥ ವಿಧಾನಗಳುಳ್ಳವನ್ನಾಗಿ ೨ ಸಭೆಗಳನ್ನೂ ಮಾಡಲು ತಕ್ಕ ಸೂಚನೆಗಳು ಕೊಡಲ್ಪಡದೆ ಇರಲಾರವೆಂದು ನಂಬುತ್ತೇವೆ. ಆದರೂ ಆ ವರದಿಯು ಪ್ರಜಾಭಿಪ್ರಾಯಕ್ಕೋಸುಗವಾಗಿ ಪ್ರಕಟಗೊಂಡು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತವಾದ ಬಳಿಕವೇ ಸ್ಥಿತಿಸ್ಥಾಪನೆಗೊಳ್ಳುವಂತಾಗುವುದು ಅತ್ಯವಶ್ಯಕವು.

ಈಗಣ ಏರ್ಪಾಟಿನಲ್ಲಿ ಪ್ರಜಾಪ್ರತಿನಿಧಿಸಭೆಯ ಸಭಿಕರ ಸಂಖ್ಯೆಯನ್ನು 200 ಕ್ಕೆ ಇಳುಹಿಸಬೇಕೆಂಬುದು ಗೌರ್ನಮೆಂಟಿನ ಉದ್ದೇಶವಾಗಿದೆ. ಆದರೆ ನಿಯಮನಿರ್ಮಾಣಸಭಾ ಸಭಿಕರ ಸಂಖ್ಯೆಯನ್ನು 40 ರಿಂದ 50ಕ್ಕೆ ಹೆಚ್ಚಿಸಲು ಉದ್ದೇಶಿಸಿರುತ್ತಾರೆ. ಪ್ರತಿನಿಧಿಸಭಾಸದರ ಸಂಖ್ಯೆಯು ತಗ್ಗಿದರೂ ಅವರನ್ನು ಆರಿಸುವ ಓಟರುಗಳ ಸಂಖ್ಯೆಯು ಹೆಚ್ಚುವ ಸ್ಥಿತಿಯುಂಟಾಗುತ್ತದೆ. ಓಟರುಗಳ ಆಸ್ತಿ ಮೊದಲಾದ ಯೋಗ್ಯತೆಯ ಪರಿಮಿತಿಯನ್ನು ಮೊದಲಿಗಿಂತ ಈಗ ಕಡಿಮೆಮಾಡುವ ಸಂದರ್ಭದಲ್ಲಿ ಓಟರುಗಳ ಸಂಖ್ಯೆಯು ವಿಶೇಷವಾಗಿ ಹೆಚ್ಚುವುದೆಂಬುದಕ್ಕೆ ಸಂದೇಹವಿಲ್ಲ. ಹೀಗೆ ಅವರ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಪ್ರಜಾಸಮ್ಮತಿಯ ಬಾಹುಳ್ಯವನ್ನು ಪಡೆಯಲು ಅವಕಾಶವು ಹೆಚ್ಚುವುದು. ಅದು ಸಾರ್ಥಕವಾಗಬೇಕಾದರೆ ಬರಿಯ ಲೋಕಲ್‌ಬೋರ್ಡುಗಳಿಂದಲೇ ಪ್ರತಿನಿಧಿಗಳನ್ನು ಆರಿಸುವುದಕ್ಕಿಂತಲೂ ಅರ್ಹತೆಯುಳ್ಳ ಓಟರುಗಳಿಂದ ನೇರವಾಗಿ ಆರಿಸಲ್ಪಡುವ ಪದ್ಧತಿ ಇದ್ದೇತೀರಬೇಕು. ಮತ್ತು ಪ್ರತಿಯೊಂದು ತಾಲ್ಲೂಕಿನ ಎಲೆಕ್ಷನ್ನು ಕೂಡ ಸರ್ಕಾರಿ ಪೋಲಿಂಗ್ ಆಫೀಸರ ಜತೆಗೆ ಅನೌದ್ಯೋಗಿಗಳಾದ 5 ಮಂದಿ ದೊಡ್ಡಮನುಷ್ಯರುಗಳುಳ್ಳ ಪಂಚಾಯಿತರ ಇದಿರಿಗೆ ಎಲೆಕ್ಷನ್ ನಡೆಯುವಂತೆ ಆಗಬೇಕು.

ಮತ್ತು ಎಲೆಕ್ಷನ್ನಿನಲ್ಲಿ ಸಾಂಘಿಕಪ್ರಾತಿನಿಧ್ಯ ಸೂತ್ರಕ್ಕೆ ವಿಶೇಷ ಗಮನವನ್ನು ಕೊಡಬೇಕು. ಭರತಖಂಡದಲ್ಲಿ ಮತ ಜಾತಿಗಳ ಪ್ರಾಮುಖ್ಯವು ಎಂದಿಗೂ ಅಳಿಸಿಹೋಗತಕ್ಕುದಲ್ಲ. ಬಾಯಲ್ಲಿ ಎಷ್ಟು ನಿಸ್ಪೃಹತೆಯನ್ನು ಸೂಚಿಸತಕ್ಕವರೂ ಕೂಡ ಕಾರ್ಯಬಿದ್ದಾಗ ಜಾತಿ ಮತ ಪಕ್ಷಪಾತವನ್ನು ಬಿಡುವಹಾಗಿಲ್ಲ. ಉಳಿದ ವಿಷಯಗಳಲ್ಲೆಲ್ಲಾ ಮತ ಜಾತಿವಿವಕ್ಷತೆ ಇದ್ದರೆ ಇರಲಿ, ರಾಜಕೀಯ ವಿಷಯದಲ್ಲಿ ಮಾತ್ರ ಬೇಡವೆನ್ನುವುದು ಅಷ್ಟು ನಿಷ್ಕಪಟವಾದ ಅಭಿಪ್ರಾಯವಲ್ಲ. ಆದುಕಾರಣ ಅದು ಸಾಧ್ಯವೂ ಅಲ್ಲ. ನೂರಾರುವರ್ಷಗಳ ಅನುಭವದಿಂದ ವಿದೇಶೀಯರಾದ ಆಂಗ್ಲಪ್ರಭುತ್ವದವರು ಕೂಡ ರಾಜ್ಯಾಂಗದಲ್ಲಿ ಏಕಜಾತಿಯ ಪ್ರಾಬಲ್ಯದಿಂದ ಎಷ್ಟೊಂದು ಅನರ್ಥವಾಗುವುದೆಂಬುದನ್ನು ಅರಿತುಕೊಂಡು, ಈಗಣ ನೂತನ ರಾಜಕೀಯ ಸಂಸ್ಕರಣಗಳ ಪ್ರಕಾರ ಸಿದ್ಧವಾಗಿರುವ ಶಾಸನಸಭೆ ಮೊದಲಾದುವುಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಅವಕಾಶವನ್ನು ಕಲ್ಪಿಸಿರುವಾಗ, ಸ್ವದೇಶದ ಸ್ಥಿತಿಗತಿಗಳನ್ನೆಲ್ಲಾ ಚಿರಕಾಲದಿಂದ ಅನುಭವಗೊಂಡಿರುವ ನಮ್ಮ ಸ್ವದೇಶೀಯ ಪ್ರಭುತ್ವದಲ್ಲಿ ಅಂಥ ಪ್ರತ್ಯೇಕಪ್ರಾತಿನಿಧ್ಯ ತತ್ತ್ವವನ್ನು ಉಪೇಕ್ಷಿಸುವುದೆಂದರೆ ಅವಿಜ್ಞತೆಯೇ ಆಗುವುದು.

ಈಮೊದಲೇ ಲೋಕಲ್ ಬೋರ್ಡು ಮೊದಲಾದುವುಗಳಲ್ಲಿ ಹಿಂದುಳಿದ ಜನವರ್ಗಗಳ ಅಂಗವನ್ನು ಸಮಗ್ರಗೊಳಿಸುವುದಕ್ಕಾಗಿ ಅಂಗೀಕರಿಸಿರುವ ನಾಮಿನೇಷನ್ನೇರ್ಪಾಟನ್ನು ನೋಡುವಲ್ಲಿ ಶ್ರೀಮನ್ಮಹಾರಾಜರ ಪ್ರಭುತ್ವದವರು ಈ ತತ್ವಕ್ಕೆ ವಿಮುಖರಲ್ಲವೆಂಬ ಸಂಗತಿಯು ಸಿದ್ಧವಾಗಿಯೇ ಇದೆ. ಆ ತತ್ತ್ವವು ಈಗಣ ನೂತನ ಸುಧಾರಣೆಯ ಪ್ರಕಾರ ಏರ್ಪಡುವ ಸಭೆಯಲ್ಲೂ ಮುಖ್ಯವಾಗಿ ಸಿದ್ಧವಾಗಬೇಕು. ನೆರೆಯ ಮದ್ರಾಸ್ ಸರ್ಕಾರದವರು ಕೂಡ ಶಾಸನ ಸಭೆಯ ಸ್ಥಾನಗಳಲ್ಲಿ ಇಂತಿಷ್ಟನ್ನು ಹಿಂದುಳಿದವರಿಗಾಗಿಯೇ ಎಂದು ಮೀಸಲುಗೊಳಿಸಿರುತ್ತಾರೆ. ಈ ನಮ್ಮ ಸಭೆಯಲ್ಲೂ ಹಾಗೆಯೇ ಆಗಬೇಕು. ಸಭಾಸದರ ಒಟ್ಟು ಸಂಖ್ಯೆಯಲ್ಲಿ ಅರ್ಧಭಾಗಕ್ಕೆ ಕಡಿಮೆಯಿಲ್ಲದೆ ಹಿಂದುಳಿದ ಉಮೇದುವಾರರಿಗೆಂದು ಪ್ರತ್ಯೇಕಪಡಿಸಿ, ಉಳಿದರ್ಧ ಭಾಗವನ್ನು ಸರ್ವರ ಪೋಟಾಪೋಟಿಗೂ ಬಿಡಬಹುದು.

ಮತ್ತು ಅಂಗೀಕೃತ ಸಂಘಗಳ ಪ್ರಾತಿನಿಧ್ಯವನ್ನು ಈಗಿರುವಂತೆ ನಡೆಯಿಸಿಕೊಡುವುದೇ ವಿಹಿತವಾಗಿ ತೋರುತ್ತದೆ. ಆದರೆ ಅಂಥ ಸಂಘಗಳು ವರ್ಷಕಾಲವೂ ತಂತಮ್ಮ ಸಮಾಜಗಳ ವಿದ್ಯಾಭಿವೃದ್ಧಿ ಭಾಗ್ಯಾಭಿವೃದ್ಧಿಗಳಿಗೆ ಕೆಲಸಮಾಡುತ್ತ ಅದಕ್ಕೆ ಅವಶ್ಯವಾದ ಧನನಿಧಿಯನ್ನೂ ಬಹು ಪ್ರಜಾಸಂಮತಿಯನ್ನೂ ಪಡೆದು ಕನಿಷ್ಠಪಕ್ಷ ೨ ಅಥವಾ 3 ವರ್ಷಗಳ ವರೆಗಾದರೂ ಕರ್ತವ್ಯವನ್ನು ಸಮರ್ಪಕವಾಗಿ ನೆರವೇರಿಸುತ್ತ ಬಂದಿರುವ ಅರ್ಹತೆಯನ್ನು ತೋರಿಸಿಕೊಡುತ್ತಿದ್ದರೇ ಅಂಥ ಸಂಘಗಳಿಗೆ ಪ್ರಾತಿನಿಧ್ಯವನ್ನು ಅವಶ್ಯಕವಾಗಿ ಕೊಡಬಹುದು. ಹೀಗೆ ಮಾಡುವುದರಿಂದ ಆಯಾ ಸಮಾಜಗಳ ಪುರೋವೃದ್ಧಿಗಾಗಿ ಪ್ರಭುತ್ವದವರೂ ಒಂದು ವಿಧದಲ್ಲಿ ಪರೋಕ್ಷವಾದ ಪ್ರೋತ್ಸಾಹವನ್ನು ಕಲ್ಪಿಸಿಟ್ಟಂತೆ ಆಗುವುದು. ಅಷ್ಟೇ ಹೊರತು ಬರಿಯ ನಾಮಮಾತ್ರದ ಸಂಘಗಳಿಗೆ ಪ್ರಾತಿನಿಧ್ಯವನ್ನು ಕೊಡುವುದು ಅಷ್ಟೇನೂ ಪ್ರಯೋಜಕವಲ್ಲ.

ಓಟರುಗಳ ಆಸ್ತಿ ಮೊದಲಾದ ಯೋಗ್ಯತೆಯ ಪರಿಮಾಣವನ್ನು ತಗ್ಗಿಸಿದ ಬಳಿಕ ಪ್ರತಿನಿಧಿಗಳಾಗಲು ನಿಲ್ಲುವ ಉಮೇದುವಾರರ ಯೋಗ್ಯತಾಪರಿಮಿತಿಯನ್ನು ತಗ್ಗಿಸುವುದು ಕೂಡ ಯುಕ್ತವೇ ಆಗಿರುತ್ತದೆ.

COMMUNAL REPRESENTATION.

II.

Last time we referred to communal representation in the public bodies as the only just method of securing the proper representation of all classes and communities in the State and of avoiding the danger of any one community getting into predominance. We also stated that the latter contingency was very probable under the new dispensation. It is this all-important aspect of the question that we would earnestly press upon the attention of the Reforms Committee which is busy with its labours in Bangalore. Whatever the prepossessed notions of the members might be it will not take long for them to understand the reasonableness and the equity of the principle of communal representation if they are open to conviction. We do not deny that to the community which has now infinitely more than its due share of representation, and which is likely to have more under the reforms this equitable proposal may not be welcome. It is only human to do so. But the community may be sure that in any scheme of communal representation evolved it will have quite a good representation much exceeding its share. Besides, it is only a certain fixed number of the total seats that may be reserved for securing the representation of the different communities, as in Madras. The rest, which will be a substantial proportion, may be thrown out for general election. There could be no possibility of any community suffering under such a scheme, and no reason for any one to complain. There may be some even of the backward classes, who belong to some old school of thought or no school at all, who might think that we should not seek for communal representation as it would introduce a communal colouring to the whole affair. Well, we can only tell them, if there are such, that communal differences would be no new introduction of any body to-day but they have been there for ages and we only want them to recognise their existence and to introduce proper safeguards to see that these differences do not work to the detriment of certain communities. If we rightly understand, the reforms are meant for giving the people of the State a greater share in its administration. The body politic is composed of various interests and communities–which are more or less synonymous with interests–and if the scheme of reforms is not going to make ample and proper provision to ensure the adequate representation of the big interests and communities along with special interests and minorities we may well express our doubt about the reforms being of much benefit to the people as a whole. Without this necessary provision, the Assembly would be a packed body of lawyers, shanbhogs and absentee landlords, and the Legislative Council mostly of lawyers, who would all be speaking in the name of the masses, calling themselves the chosen representatives of the people. How they have represented the causes of the people is too well known to need mention here. Further this is no new principle in Mysore. It has been recognised in the important field of Public Service through the Miller Committee Report. When communal representation is necessary and desirable in Public Service is it not all the more so in the State Councils?

There may be persons who would represent or rather misrepresent that communal representation is aimed at against one community. Nothing could be farther from the truth. Its only motive as already stated is to see that as far as possible all communities are represented if not proportionate to their strength at least adequately. We are emphasising this because we feel that it is a legitimate and righteous claim of the masses, it would promote the best interests of the State and it aims at securing a genuine democracy and not a showy one. We understand that, with the reservation of the ultimate sovereignty of His Highness the Maharaja to which we entirely subscribe and which must ever continue undiminished, the object of introducing these reforms is to establish a democratic Government more or less on the principle of western democratic institutions. The most correct definition of democracy is contained in the statement of Abraham Lincoln–"Government of the people, by the people, for the people." Will the Reforms Committee bear this grand political maxim in mind and model the electorates accordingly? Could they do it better than adopting the principle of communal representation in our country?

ತುರ್ಕಿ ಸಮಸ್ಯೆ.

ತುರ್ಕಿಗೆ ಸಂಬಂಧಪಟ್ಟ ಶಾಶ್ವತ ಸಂಧಿಪರಿಷ್ಕಾರಕ ಸಭೆಯು ಇದೇ ತಿಂಗಳು ತಾ|| 13 ರಲ್ಲಿ ಲಾಸೇನಿಯಾಪಟ್ಟಣದಲ್ಲಿ ಕೂಡತಕ್ಕುದೆಂದು ನಿರ್ಧರವಾಗಿದೆ. ಈ ಸಭೆಗೆ ರಾಷ್ಟ್ರಾಧಿಪತಿಗಳಲ್ಲಿ ಕೆಲರನ್ನು ಕರೆದೂ ಕೆಲರನ್ನು ಕರೆಯದೆಯೂ ಇರುವರೆಂದು ಗೊತ್ತಾಗುತ್ತದೆ. ಮುಖ್ಯವಾಗಿ ರಷ್ಯಾ ಸೋವಿಯಟ್ ಪ್ರಭುತ್ವಕ್ಕೆ ಆಹ್ವಾನವಿಲ್ಲವಂತೆ. ಇದನ್ನು ಕೇಳಿ ಲೆನಿನ್‌ರವರು ಹಾಗಾದರೆ ಯೂರೋಪಿನಲ್ಲಿ ಶಾಂತಿಸ್ಥಾಪನೆ ಮಾಡಲು ಅವಕಾಶವಾಗಲಾರದು ಎಂದು ಗುಡುಗುಡಿಸಿರುತ್ತಾರೆ. ಈ ಸಭೆಗೆ ಅಮೇರಿಕಾವಿಗೆ ಆಹ್ವಾನವನ್ನು ಮಿತ್ರಮಂಡಲಿಯವರು ಕೊಟ್ಟಿರುವರು. ಆದರೆ ತಾವು ತುರ್ಕಿಯ ಮೇಲೆ ಯುದ್ಧಮಾಡಿದವರಲ್ಲವಾದಕಾರಣ ತಮ್ಮ ಪ್ರತಿನಿಧಿಯು ಪ್ರೇಕ್ಷಕರಾಗಿ ಮಾತ್ರ ಬರುವರೆಂತಲೂ ಇನ್ನಾವ ಕಾರ್ಯಸಂಬಂಧವನ್ನೂ ಇಟ್ಟುಕೊಳ್ಳುವುದಿಲ್ಲವೆಂತಲೂ ಅವರು ತಿಳಿಯಿಸಿರುವರು. ಆದುಕಾರಣ ಈ ಸಭಾಫಲವು ಹೇಗೆ ಎಷ್ಟುಮಟ್ಟಿಗೆ ಆಗುವುದೆಂದು ಹೇಳಲಾಗುವುದಿಲ್ಲ. ಈ ಮಧ್ಯೆ ಡೇಲಿ ಎಕ್ಸ್‌ಪ್ರೆಸ್ ಪತ್ರಿಕೆಗೆ ಹೋಗಿರುವ ತಂತ್ರೀವಾರ್ತೆಯನ್ನು ನೋಡುವಲ್ಲಿ ಸಿರಿಯಾದೊಳಗಣ ಬಹುಭಾಗಕ್ಕೆ ತಮ್ಮ ಮಾಂಡೇಟನ್ನು ಫ್ರೆಂಚರು ಪರಿತ್ಯಜಿಸಿ ಅಲ್ಲಿಗೆ ಸ್ವತಂತ್ರಪರಿಪಾಲನೆಗೆ ಅವಕಾಶವನ್ನು ಕೊಡುವವರಾಗಿದ್ದಾರೆಂದು ಗೊತ್ತಾಗುತ್ತದೆ. ಅಲೆಪ್ಪೋವನ್ನು ಫ್ರೆಂಚರು ತುರ್ಕಿಗೆ ಕೊಟ್ಟುಬಿಡುವರಂತೆ. ಹೀಗೆ ಮಾಡಿ ಫ್ರೆಂಚರು ಸಿರಿಯಾ ಮಾಂಡೇಟನ್ನು ತೊಲಗಿಸಿ ಮಹಮ್ಮದೀಯರ ಸ್ವಾತಂತ್ರ್ಯವನ್ನು ಕಾಪಾಡಿದರೆ ಆಂಗ್ಲರು ಕೂಡ ಪಾಲಸ್ತೀನ್ ಮೆಸಪೊಟೇಮಿಯಾವುಗಳಲ್ಲಿರುವ ತಮ್ಮ ಮಾಂಡೇಟನ್ನೂ ಬಿಟ್ಟುಕೊಡಲೇಬೇಕಾಗುವುದು. ಈಗಾಗಲೇ ಮೆಸಪೊಟೇಮಿಯಾ ಪಾಲಸ್ತೀನ್ ಮಾಂಡೇಟಿನ ವಿಷಯದಲ್ಲಿ ಸ್ಥಳಿಕರಿಗೆ ಅಲ್ಲದೆ ಆಂಗ್ಲ ಮಹಾಜನರನೇಕರಿಗೂ ಅಸಮಾಧಾನವುಂಟಾಗಿರುವುದು. ಮಹಮ್ಮದೀಯರ ಪವಿತ್ರಸ್ಥಲಗಳಿರುವ ಪ್ರದೇಶವನ್ನು ಅವರ ಸಂಪೂರ್ಣಸ್ವಾತಂತ್ರ್ಯಕ್ಕೆ ವಹಿಸಿಕೊಡುವುದೇ ಸಂತೃಪ್ತಿಕರವು. ಹಾಗೆ ಮಾಡುವುದರಿಂದ ಮಹಮ್ಮದೀಯ ಪ್ರಪಂಚಕ್ಕೆಲ್ಲಾ ಮನಶ್ಶಾಂತಿಯುಂಟಾಗುವುದರಲ್ಲಿ ಸಂಶಯವಿಲ್ಲ. ಅಂತು ನಾಳೆ ಕೂಡಲಿಕ್ಕಿರುವ ಸಭೆಯಲ್ಲಿ ತುರ್ಕಿಗೆ ಸಂಬಂಧಪಟ್ಟ ಸಕಲವಿಷಯವೂ ಚರ್ಚಿತವಾಗಿ ಮುಗಿದುಹೋದರೆ ಅನುಕೂಲ. ಕೆಲವು ಪರಿಷ್ಕಾರಗೊಂಡು ಕೆಲವು ಉಳಿದುಹೋದರೆ ಮತ್ತೆ ವಿಷಮಾವಸ್ಥೆಯು ಯಾವಾಗಲಾದರೂ ಮೂಡಿಯೇ ಮೂಡುವುದು. ಈ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸಿಕೊಡಲು ಸುಲ್ತಾನ್ ಪ್ರಭುತ್ವಕ್ಕೆ ಪ್ರತ್ಯೇಕವಾಗಿಯೂ ಅಂಗೋರಾ ಪ್ರಭುತ್ವಕ್ಕೆ ಪ್ರತ್ಯೇಕವಾಗಿಯೂ ಆಹ್ವಾನಗಳನ್ನು ಕಳುಹಿಸಿದ್ದರಂತೆ. ಇದರಿಂದ ಅವರವರಲ್ಲಿ ಮನಸ್ತಾಪಬೆಳೆಯಲು ಅವಕಾಶವು ಹೆಚ್ಚುತ್ತಿದ್ದಿತು. ಆದರೆ ಈ ಮಧ್ಯೆ ಸುಲ್ತಾನರು ಅಂಗೋರಾಜಾತೀಯ ಸಭೆಯನ್ನು ಒಪ್ಪಿಕೊಂಡರೆಂತಲೂ ದ್ವಂದ್ವಪರಿಪಾಲನಕ್ಕೆ ಇಲ್ಲಿಗೇ ಉತ್ತರಕ್ರಿಯೆಯಾಗುವಂತಿದೆಯೆಂತಲೂ ಸುದ್ದಿಯಿದೆ. ಹೀಗೆ ತುರುಕರು ಏಕಮುಖರಾದರೇ ಅವರ ಕೆಲಸವು ಗಟ್ಟಿಯಾದೀತು. ಅಂತೂ ಸ್ವಲ್ಪಕಾಲದೊಳಗೇ ಉಸಾನಿಯಾ ಸಭೆಯ ಪರ್ಯವಸಾನವು ಗೊತ್ತಾಗುವಂತಿರುವುದು. ಅತ್ತ ಪೂರ್ವಗ್ರೇಸನ್ನೆಲ್ಲಾ ಗ್ರೀಕ್ ಸೈನಿಕರು ತಾ|| ೨೯ಕ್ಕೆ ತೆರವುಮಾಡಿದರು. ಮರುದಿನದಿಂದ ತುರ್ಕಿ ಸೈನ್ಯವು ವಶಪಡಿಸಿಕೊಂಡಿತು.

ಸ್ವದೇಶದ ವೃತ್ತಾಂತಗಳು.

ಮೈಸೂರು ಸಿಟಿ ಮ್ಯು|| ಚೀಫ್‌ಆಫೀಸರಾಗಿದ್ದ ಮಿ|| ಮಹಮ್ಮದ್‌ಪೀರ್‌ರವರು ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಎಕ್ಸೈಜ್ ಆಫೀಸರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಅವರ ಸ್ಥಾನಕ್ಕೆ ಮ|| ಎ. ಹಯಗ್ರೀವರಾಯರು ಬಂದು ಉದ್ಯೋಗವನ್ನು ವಹಿಸಿಕೊಂಡಿರುತ್ತಾರೆ.

ಸೀಮೆಯಿಂದ ಬಂದ ತಮ್ಮ ಪತ್ನಿಯನ್ನು ಇದಿರ್ಗೊಂಡು ಕರತರುವ ಉದ್ದೇಶದಿಂದ ಮ|| ಎ. ಆರ್. ಬಾನರ್ಜಿಯವರು ೧೦ ದಿನಗಳ ರಜಾ ಪಡೆದು ಕೊಲಂಬೋವಿಗೆ ಪ್ರಯಾಣ ಮಾಡಿರುತ್ತಾರೆ. ಅವರ ರಜಾಕಾಲದಲ್ಲಿ ೧ನೆ ಕೌನ್ಸಿಲರು ದಿವಾನಗಿರಿಯನ್ನು ಆಕ್ಟಿಂಗಾಗಿ ನೋಡುತ್ತಿದ್ದಾರೆ.

ಮೈಸೂರು ಸಿಟಿ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಅಬ್ದುಲ್ ಗನ್ನಿಯವರಿಗೆ ಕೋಲಾರಕ್ಕೆ ವರ್ಗವಾಗಿ, ಬೆಂಗಳೂರಿನಲ್ಲಿರುವ ಮಿ|| ಸಿರಾಜುದ್ದೀನ್ ಮಹಮ್ಮದ್‌ಯವರು ರಾಜಧಾನಿಯ ಪೋಲೀಸ್ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಮಿ|| ಸಿ. ಎಡರ್ಡ್‌ರವರು ದಾವಣಗೆರೆಗೂ, ಮಿ|| ಮಹಮ್ಮದ್ ಹುಸೇನ್‌ರವರು ಬೆಂಗಳೂರು ಸಿಟಿ ಪೋ|| ಸೂಪರಿಂಟೆಂಡೆಂಟರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಫೀಸ್ ಹೆಡ್ ಅಕೌಂಟೆಂಟರಾದ ಮ|| ಎ. ಎಲ್. ಪುಟ್ಟಯ್ಯನವರು ಕುಂಸಿ ಡೆಪ್ಯುಟಿ ಅಮಲ್ದಾರರಾಗಿಯೂ, ರೆವಿನ್ಯೂ ಕಮಿಷನರಾಫೀಸ್ ಕ್ಲರ್ಕ್ ಮ|| ವೈ. ಶ್ರೀಕಂಠಯ್ಯನವರು ತೀರ್ಥಹಳ್ಳಿ ತಾ|| ಅಮಲ್ದಾರರಾಗಿಯೂ ಮಿ|| ಹೈದರಲ್ಲಿಖಾನರು ಚಿಕ್ಕಬಳ್ಳಾಪುರಕ್ಕೆ, ಮಿ|| ವಿ. ಎಸ್. ರಾಜಗೋಪಾಲಾಚಾರ್ಯರು ಬೆಂಗಳೂರಿಗೆ, ಮ|| ಜಿ. ಆರ್. ಪದ್ಮನಾಭರಾಯರು ಕೋಲಾರಕ್ಕೆ ಅಮಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಮಹಮ್ಮದ್‌ಖಾಸಿಂ ಎಂಬ ಒಬ್ಬ ಖಿದೀಂ ಅಪರಾಧಿಗೆ ಬೆಂಗಳೂರು ದಂಡಿನ ಮ್ಯಾಜಿಸ್ಟ್ರೇಟರು ಒಂದು ಕಳವಿನ ಕೇಸಿನ ವಿಚಾರಣೆಮಾಡಿ ೨ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲು, ಅಪರಾಧಿಯು ಕಾಂಕುಳಲ್ಲಿ ಬಚ್ಚಿಟ್ಟುಕೊಂಡಿದ್ದ ಜೋಡನ್ನು ತೆಗೆದು ಸಿಟ್ಟಿನಿಂದ ಮ್ಯಾಜಿಸ್ಟ್ರೇಟರ ಭುಜಕ್ಕೆ ಬಡಿಯುವಂತೆ ಇಟ್ಟನು. ಆದರಮೇಲೆ ಪೋಲೀಸರು ಅವನನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಪಡಿಸಲು, ಆ ತಪ್ಪಿತಕ್ಕಾಗಿ ಮತ್ತೆ 1 ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು.

ಸಂಸ್ಥಾನದಲ್ಲಿ ಅಲ್ಲಲ್ಲಿ ಸೇರುವ ಚಿಕ್ಕದೊಡ್ಡ ಜಾತ್ರೆಗಳ ಕಾಲದಲ್ಲಿ ಜನಗಳ ಮತ್ತು ದನಕರುಗಳ ಆರೋಗ್ಯರಕ್ಷಣಾರ್ಥವಾದ ಏರ್ಪಾಟನ್ನು ಮಾಡಿಸುವುದಕ್ಕಾಗಿ ಸರ್ಕಾರದವರು ಸ್ಯಾ|| ಕಮಿಷನರು, ಸೀನಿಯರ್ ಸರ್ಜನರು, ಡಿಸ್ಟ್ರಿಕ್ಟ್ ಬೋರ್ಡು ಪ್ರಸಿಡೆಂಟರುಗಳು ಇವರುಗಳ ಅಭಿಪ್ರಾಯವನ್ನೆಲ್ಲಾ ತರಿಸಿಕೊಂಡು, ಎಲ್ಲಾ ಸಂತೆಗಳಲ್ಲೂ ಸಂಬಂಧಪಟ್ಟ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಸ್ಥಳಿಕಾಧಿಕಾರಿಗಳೂ ಕಟ್ಟುನಿಟ್ಟಾಗಿ ವ್ಯವಹರಣೆಗೆ ತರಬೇಕಾದ ಕೆಲ ನಿಬಂಧನೆಗಳನ್ನು ಕಾಣಿಸಿ ಒಂದು ಅಪ್ಪಣೆ ಮಾಡಿರುತ್ತಾರೆ. ಶುದ್ಧವಾದ ಪಾನೀಯಜಲದ ಏರ್ಪಾಟು, ದನಕರುಗಳ ಚಿಕಿತ್ಸೆಯ ಏರ್ಪಾಟು ಆರೋಗ್ಯಕರವಾದಂತ ವಸತಿಕಲ್ಪನೆ ಇತ್ಯಾದಿಗಳೆಲ್ಲಾ ಆ ವಿವರಣದಲ್ಲಿ ತಿಳಿಯಿಸಲ್ಪಟ್ಟಿವೆ.

ಸಂಸ್ಥಾನದ ಡಿಸ್ಟ್ರಿಕ್ಟ್‌ಬೋರ್ಡುಗಳಲ್ಲಾವುದಕ್ಕೂ ಸರ್ಕಾರದ ಉದ್ಯೋಗಿಗಳಲ್ಲದ ದೊಡ್ಡಮನುಷ್ಯರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳುವ ಏರ್ಪಾಟು ಇದುವರೆಗೂ ವ್ಯವಹಾರದಲ್ಲಿರಲಿಲ್ಲ. ಈಗ ಬೆಂಗಳೂರು ಡಿಸ್ಟ್ರಿಕ್ಟ್‌ಬೋರ್ಡಿಗೆ ಇಂಥ ಅಧಿಕಾರವನ್ನು ಮೊಟ್ಟಮೊದಲು ಅನುಗ್ರಹಿಸಿದರು. ಅದರ ಮೇಲೆ ಬೋರ್ಡುಮೆಂಬರುಗಳಲ್ಲಿ ಮ|| ಎಂ. ಸುಬ್ಬಯ್ಯ, ಬಿ. ಎ. ಯವರು, ಮಿ|| ಉಸ್ಮಾನ್ ಖಾನ್ ಸಾಬರು, ಮ|| ಕರಣಿಕ ಕೃಷ್ಣಮೂರ್ತಿರಾಯರು ಈ ಮೂವರೂ ಉಮೇದುವಾರರಾಗಿ ನಿಂತಿರಲು ಹೆಚ್ಚು ಓಟುಗಳನ್ನು ಪಡೆದ ಮ|| ಎಂ. ಸುಬ್ಬಯ್ಯನವರು ಪ್ರಸಿಡೆಂಟರಾಗಿ ಆರಿಸಲ್ಪಟ್ಟಿದ್ದಾರೆ. ಈ ಮೂವರಿಗೂ ಕ್ರಮವಾಗಿ 22-16-6 ಈ ರೀತಿಯಾಗಿ ಓಟುಗಳು ದೊರೆದುವು.

ಶ್ರೀ

ಶ್ರೀಮನ್ ಮೈಸೂರು ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ಯವರು ೧ನೇ ಸ್ಕೌಟ ವರ್ಧಂತಿ ಮಹೋತ್ಸವದಲ್ಲಿ ಸ್ಕೌಟ ಬಾಲಕರ ರೆವ್ಯೂ ಆದನಂತರ ಅಪ್ಪಣೆ ಕೊಡಿಸಿದ ಸುಭಾಷಣವು.

ಸ್ಕೌಟುಗಳಿರಾ,

ಮೈಸೂರು ಸಂಸ್ಥಾನದ ಸ್ಕೌಟುಗಳನ್ನು ನೋಡುವ ಮತ್ತು ಅವರಿಗೂ ಅವರ ನಾಯಕರಿಗೂ ಕೆಲವು ಮಾತುಗಳನ್ನು ಹೇಳುವ ಶುಭಸಮಯವನ್ನು ಈ ಧ್ವಜಪ್ರದಾನ ಮಹೋತ್ಸವವು ನನಗೆ ಒದಗಿಸಿರುತ್ತದೆ.

ಬೆಂಗಳೂರಿನ ಪ್ರಹ್ಲಾದ ಸ್ಕೌಟು ಟ್ರೂಪಿನವರು ಈ ಬಹುಮಾನವನ್ನು ಸಂಪಾದಿಸಿಕೊಳ್ಳುವ ಶ್ಲಾಘ್ಯಯೋಗ್ಯತೆಯನ್ನು ಪಡೆದುದಕ್ಕಾಗಿ ಮೊಟ್ಟಮೊದಲು ಅವರನ್ನು ಅಭಿನಂದಿಸುತ್ತೇನೆ. ಮೈಸೂರು ಸಂಸ್ಥಾನದ ಸ್ಕೌಟು ಹುಡುಗರಲ್ಲಿ ಪ್ರಥಮಸ್ಥಾನವನ್ನು ಪಡೆಯುವುದು ಸುಲಭಕಾರ್ಯವಲ್ಲ. ಬೆಂಗಳೂರು ಮೈಸೂರು ಪಟ್ಟಣಗಳಲ್ಲಿಯೂ ಇತರ ಸ್ಕೌಟು ಟ್ರೂಪುಗಳಿರುವುದನ್ನು ನಾನು ಬಲ್ಲೆ. ಪ್ರಥಮಸ್ಥಾನ ಗೌರವಕ್ಕೆ ಅರ್ಹರಾದ ಅನೇಕರಲ್ಲಿ ಪ್ರಥಮಸ್ಥಾನವನ್ನು ಪಡೆಯುವುದು ಮತ್ತಷ್ಟು ಶ್ಲಾಘ್ಯವಾಗಿರುತ್ತದೆ. ಇದು ಸ್ತೋತ್ರಾರ್ಹವಾದ ನಾಯಕತ್ವಕ್ಕೆ ನಿದರ್ಶನವಾಗಿರುವುದು ಹುಡುಗರ ದೇಹದಾರ್ಢ್ಯ ಬುದ್ಧಿಶಕ್ತಿಗಳಿಗಲ್ಲದೆ ಹುಡುಗರ ಸುಸ್ವಭಾವಶೀಲಗಳಿಗೂ ನಿದರ್ಶನವಾಗಿರುವುದು.

ಮೈಸೂರು ಸಂಸ್ಥಾನದಲ್ಲಿ ಸ್ಕೌಟು ಕ್ರಮಾಚರಣೆಯು ಶೀಘ್ರವಾಗಿ ಬೆಳೆದುಬಂದಿರುವುದು ಈಗಿನಕಾಲದ ವಿದ್ಯಮಾನಗಳಲ್ಲಿ ಶುಭಸೂಚಕವಾದದ್ದೂ ಅತ್ಯಂತ ಪ್ರೋತ್ಸಾಹಕರವಾದದ್ದೂ ಆಗಿದೆ. ಮೈಸೂರು ಸಂಸ್ಥಾನದ ಬಾಲಕರಲ್ಲಿರುವ ಸತ್ವವು ಎಂಥ ಉತ್ತಮವಾದುದೆಂಬುದನ್ನು ಈ ಪದ್ಧತಿಯು ಆಗಲೇ ತೋರಿಸಿರುತ್ತದೆ. ಸ್ಥೈರ್ಯವನ್ನೂ ಉತ್ಸಾಹವನ್ನೂ ಬಾಲಕರು ತೋರಿಸಿರುವರು; ಅವರಲ್ಲಿರುವ ಉತ್ತಮ ಗುಣಗಳನ್ನು ಸ್ಕೌಟು ಶಿಕ್ಷಣವು ಪ್ರಕಾಶಕ್ಕೆ ತಂದಿರುವುದು. ಆದರೆ ಉತ್ತಮ ಸ್ಕೌಟುಗಳಾಗತಕ್ಕ ಅನೇಕ ಹುಡುಗರು ಇನ್ನೂ ಈ ಗುಂಪಿಗೆ ಸೇರಿಲ್ಲ. ತಾನು ಅತ್ಯುತ್ತಮ ಸ್ಥಿತಿಗೆ ಬರಬೇಕಾದರೆ ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ಕೌಟಾಗಬೇಕು; ಇತರ ಬಾಲಕರನ್ನು ಸ್ಕೌಟು ಗುಂಪಿಗೆ ಸೇರಿಸುವುದು ತಮ್ಮ ಮುಖ್ಯ ಕರ್ತವ್ಯವೆಂಬುದು ಎಲ್ಲ ಸ್ಕೌಟುಗಳು ತಿಳಿದ ವಿಷಯವೇ ಆಗಿದೆ; ಹೀಗೆ ಸೇರಿಸುವುದರಲ್ಲಿ ಚಟುವಟಿಕೆಯುಳ್ಳ ಮತ್ತು ಬಹುಜನಪ್ರಿಯರಾದ ಹುಡುಗರನ್ನಲ್ಲದೆ, ನಾಚಿಕೆಯೂ, ಹಿಂದೆ ಅಡಗಿಕೊಳ್ಳುವ ಸ್ವಭಾವವೂ ಉಳ್ಳ ಹುಡುಗರನ್ನು—ಅದರಲ್ಲಿಯೂ ದೇಹದಾರ್ಢ್ಯವಿಲ್ಲದಿರುವವರನ್ನು–ಸೇರಿಸಬೇಕು; ಏಕೆಂದರೆ ಸ್ಕೌಟು ಟ್ರೂಪುಗಳಲ್ಲಿ ದೊರೆಯುವ ಸ್ನೇಹಪರತೆಗೂ ಒಳ್ಳೆಯ ಶಿಕ್ಷಣಕ್ಕೂ ಇಂತಹ ಬಾಲಕರೆ ಸತ್ಪಾತ್ರರು.

ಈ ಕ್ರಮಾಚರಣೆಯ ಬಾಲ್ಯದೆಶೆಯಲ್ಲಿ ಸ್ಕೌಟುಗಳಿಗೆ ಶಿಕ್ಷಣ ಕೊಟ್ಟು ಮುಂದುವರಿಸಿದ ಎಲ್ಲ ಜನರಿಗೂ ಹಿಂದಿನ ಮತ್ತು ಈಗಿನ ಸ್ಕೌಟುಕಮಿಷನರುಗಳಿಗೂ ಮತ್ತು ಅವರ ಕೈಕೆಳಗೆ ಕೆಲಸ ಮಾಡಿರುವ ಇತರರಿಗೂ, ಅತ್ಯಧಿಕವಾದ ಕೃತಜ್ಞತೆಯು ಸಲ್ಲಬೇಕಾಗಿದೆ. ಸಾಮಾನ್ಯವಾಗಿ, ಅವಿಶ್ರಾಂತಶ್ರಮಸಹಿಷ್ಣುಗಳಾಗಿ ಇರತಕ್ಕ ಅಲ್ಪಸ್ವಲ್ಪ ಅವಕಾಶವನ್ನು ತಮ್ಮ ಶಿಕ್ಷಣಕ್ಕೂ ತಮ್ಮ ಟ್ರೂಪುಗಳ ಶಿಕ್ಷಣಕ್ಕೂ ಸಂತೋಷಪೂರ್ವಕವಾಗಿಯೇ ವಿನಿಯೋಗಿಸಿರುವ ಸ್ಕೌಟುಉಪಾಧ್ಯಾಯರನ್ನು ಎಷ್ಟು ಸ್ತೋತ್ರಮಾಡಿದರೂ ಹೆಚ್ಚಲ್ಲ.

ಯಾವದೊಂದು ಬುದ್ಧಿವಾದವನ್ನೂ ನಿಮಗೆ ಹೇಳಲು ನಾನು ಇಷ್ಟಪಡುವುದಿಲ್ಲ; ಏಕೆಂದರೆ ನಿಮಗೆ ಅದರ ಆವಶ್ಯಕತೆಯೇನೂ ಇಲ್ಲ. ಪ್ರಪಂಚದಲ್ಲೆಲ್ಲ ಅತ್ಯುತ್ತಮ ಬುದ್ಧಿವಾದವು ನೀವು ಗಟ್ಟಿಮಾಡಿಯೇ ಇರುವ ಸ್ಕೌಟು ನಿಯಮದಲ್ಲಿದೆ. ಆ ನಿಯಮವು ಬಹಳ ಸುಲಭವಾದದ್ದು; ಆದರೂ ನೀವು ಬೆಳೆಯುತ್ತ ಹೋದಹಾಗೆಲ್ಲ ಅದರಲ್ಲಿ ಹೊಸದಾದ ಮತ್ತು ಹೆಚ್ಚಿನ ಅರ್ಥವನ್ನು ಯಾವಾಗಲೂ ಕಾಣುವಿರಿ. ವಸ್ತುತಃ ಸ್ಕೌಟು ನಿಯಮಕ್ಕೆ ಜೀವನಸ್ಥಿತಿಯೇ ಉತ್ತಮವಾದ ವ್ಯಾಖ್ಯಾನ. ನಾವು ಮಾಡುವುದರಲ್ಲೆಲ್ಲ ಆ ಸ್ಕೌಟು ನಿಯಮವನ್ನು ಅನುಸರಿಸಲು ಶ್ರಮವಹಿಸಿದರೆ, ಈ ಪ್ರಯತ್ನದ ಮೂಲಕ ಸ್ಕೌಟು ನಿಯಮವು ಎಷ್ಟು ಅರ್ಥಪರಿಪೂರ್ಣವಾದದ್ದು, ಎಷ್ಟು ಆನಂದದಾಯಕವಾದದ್ದು ಎಂಬುದನ್ನು ಕಂಡು ಹಿಡಿಯುವೆವು. ಆ ನಿಯಮದಲ್ಲಿ ಎರಡು ಸಾಮಾನ್ಯಸಂಗತಿಗಳು ಮುಖ್ಯವಾಗಿ ನೆನಪಿನಲ್ಲಿರಲು ಯೋಗ್ಯವಾಗಿ ಕಂಡುಬರುತ್ತವೆ. ಮೊದಲನೆಯದು—ಆ ನಿಯಮದಲ್ಲಿ ಕೆಲಸ ಮಾಡುವುದರ ವಿಚಾರವೇ ಹೆಚ್ಚು, ಮಾತನಾಡುವುದರ ವಿಚಾರ ತೀರಕಡಿಮೆ. ಆ ನಿಯಮವು ಎಂಥ ಶ್ಲಾಘ್ಯವಾದುದು ಎಂಬುದನ್ನು ಈ ಸಂಗತಿಯೇ ತೋರಿಸುತ್ತದೆ. ಮಾತನಾಡುವ ಬದಲು ಕೆಲಸ ಮಾಡುವಾತನೇ ಸ್ಕೌಟು. ಬಾಲಕನು ಸ್ಕೌಟಾಗುವಾಗ ಮಾತ್ರ ಪ್ರತಿಜ್ಞೆಯನ್ನು ಮಾಡಬೇಕು, ಆ ಮೇಲೆ ಅವನು ಇನ್ನಾವ ಪ್ರತಿಜ್ಞೆಯನ್ನೂ ಮಾಡುವುದಿಲ್ಲ. ತನ್ನ ಎಲ್ಲ ಶಕ್ತಿಯನ್ನೂ ಸೇವಾಕಾರ್ಯದಲ್ಲಿಯೇ ವಿನಿಯೋಗಿಸುವನು. ಮಾತನಾಡುವುದನ್ನೇನೋ ನಾವು ಅಲ್ಲಗಳೆಯಬಾರದು; ಏಕೆಂದರೆ ವಿವೇಕಭಾಷಣದಿಂದ ಯಥಾರ್ಥವಾದ ಸೇವೆ ಮಾಡುವ ಅನೇಕರಿರುತ್ತಾರೆ; ಆದರೆ ಸರ್ವಸಾಮಾನ್ಯ ಮನುಷ್ಯನಿಗೆ ಆದಷ್ಟು ಸ್ವಲ್ಪ ಮಾತಾಡುವುದೂ ಆದಷ್ಟು ಹೆಚ್ಚು ಕೆಲಸ ಮಾಡುವುದೂ ಎಂದಿಗೂ ಕೆಟ್ಟ ಆಚರಣೆಯಲ್ಲ. ಸಹಾಯವನ್ನೂ ಸಂತೋಷವನ್ನೂ ಉಂಟುಮಾಡುವ ಮಾತುಗಳನ್ನಾಡುವುದು ಸ್ಕೌಟಿನ ಕರ್ತವ್ಯ. ಆದರೆ ಸ್ಕೌಟುನಿಯಮವು ಅವಿಶ್ರಾಂತೋದ್ಯೋಗವನ್ನೇ ಒತ್ತಿ ಹೇಳುತ್ತದೆ.

ಎರಡನೆಯ ಸಂಗತಿಯು (ಇದು ಮೊದಲಿನದಕ್ಕೆ ಸಂಬಂಧಿಸಿಯೇ ಇದೆ) ಏನೆಂದರೆ—ಈ ಸ್ಕೌಟು ನಿಯಮವು, ಯಾವುದನ್ನು ಮಾಡಬಾರದು ಎಂಬುದನ್ನು ಶ್ರಮವಹಿಸಿ ಹೇಳುವ ಬದಲು, ಯಾವುದನ್ನು ಮಾಡಬೇಕು ಎಂಬುದನ್ನೇ ಹೇಳುತ್ತಿರುತ್ತದೆ. 'ನಿಮ್ಮ ಶಿಕ್ಷಣ ಕ್ರಮದ ಮೂಲಭಾವವು ನಿಷೇಧಾರ್ಥಕವಾಗಿರುವುದಕ್ಕಿಂತ ವಿಧ್ಯರ್ಥಕವಾಗಿರಲಿ, ಎಂದರೆ—ಕೆಟ್ಟದ್ದನ್ನು ಮಾಡಬಾರದು ಎಂದು ಬಾಲಕರಿಗೆ ನಿಷೇಧಿಸುವ ಬದಲು ಒಳ್ಳೆಯದನ್ನು ಮಾಡತಕ್ಕದ್ದು ಎಂದು ವಿಧಿಸುವಂತಿರಲಿ' ಎಂಬುದಾಗಿ ಒಬ್ಬ ಇಂಗ್ಲೀಷು ಸ್ಕೌಟು ಕಮಿಷನರು ಸ್ಕೌಟು ಉಪಾಧ್ಯಾಯರುಗಳಿಗೆ ಹೇಳಿದಾಗ ಈ ನಿಯಮದ ತತ್ವವನ್ನೇ ಪ್ರತಿಪಾದಿಸುತ್ತಿದ್ದನು. ಒಳ್ಳೆಯದನ್ನೇ ಮಾಡುವಂತೆ ಶಿಕ್ಷಿತನಾದ ಉತ್ತೇಜಿತನಾದ ಹುಡುಗನು ಹುಡುಗನೇ ಏಕೆ, ದೊಡ್ಡವನೂ ಸ್ವಭಾವತಃ ಕೆಟ್ಟದರ ಕಡೆಗೆ ಹೋಗನು. ಸ್ಕೌಟುನಿಯಮವು ಅಪೇಕ್ಷಿಸುವಂಥ ಪರೋಪಕಾರನಿರತನಾದ ಸ್ಕೌಟು ಬಾಲಕನು ಕೇಡನ್ನು ತನಗೂ ಉಂಟುಮಾಡಿಕೊಳ್ಳುವುದಿಲ್ಲ, ಇತರರಿಗೂ ಉಂಟುಮಾಡುವುದಿಲ್ಲ. ನೆರೆಹೊರೆಯವರಿಗೂ ದೇಶಕ್ಕೂ ನಿಜವಾದ ಉಪಕಾರವನ್ನು ಮಾಡದವನು ಅಹಿಂಸಾಮೂರ್ತಿಯಾದ ಸಾಧುವಾದರೂ ಅವನ ಜೀವನವು ಒಳ್ಳೆಯ ಜೀವನವಲ್ಲ—ಎಂಬುದೇ ಸ್ಕೌಟು ನಿಯಮವಾಗಿರುತ್ತದೆ.

ಈ ಸಭೆಯಲ್ಲಿರುವ ಯಾವ ಸ್ಕೌಟು ಹುಡುಗನೇ ಆಗಲಿ, ಮೊದಲನೆಯ ದರ್ಜೆಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವವರೆಗೂ, ಚಿಕಿತ್ಸೆವಿದ್ಯೆಯ ಬಿರುದನ್ನು ಪಡೆಯುವವರೆಗೂ ತೃಪ್ತಿ ಹೊಂದುವುದಿಲ್ಲವೆಂದು ನಾನು ತಿಳಿಯುತ್ತೇನೆ. ಆ ಯೋಗ್ಯತಾಪತ್ರಗಳಿಂದ ಆ ಸ್ಕೌಟು ಹುಡುಗನು ಸರ್ವತೋಮುಖಗುಣಪೂರ್ಣನಾದ ಪ್ರಜೆಯೆಂದೂ ನಿಜವಾಗಿಯೂ ಪ್ರಯೋಜನಕಾರಿಯೆಂದೂ ಸೂಚಿತವಾಗುವುದು. ಸ್ಕೌಟು ಹುಡುಗನು ಇಷ್ಟು ಮುಂದುವರಿದಾಗ ತನ್ನ ವಿದ್ಯಾಭ್ಯಾಸಕ್ಕೆ ನಿಜವಾಗಿಯೂ ಆಗತಾನೆ ಮೊದಲುಮಾಡಿರುವನೆಂಬುದು ಒಂದು ರೀತಿಯಲ್ಲಿ ಸ್ವಾರಸ್ಯವಾದ ವಿಷಯ. ದೋಷಯುಕ್ತವೆಂದು ನಿಂದಿತವಾದ ಪರೀಕ್ಷಾ ಪದ್ಧತಿಯನ್ನು ಸ್ಕೌಟು ಶಿಕ್ಷಣ ಕ್ರಮವೂ ಅನುಸರಿಸಿದೆ; ಆದರೆ ಈ ಒಂದು ಸಂದರ್ಭದಲ್ಲಂತೂ ಗೊಣಗಾಡಲೇನೂ ಕಾರಣವಿಲ್ಲ. ಸ್ಕೌಟು ಹುಡುಗನು ತೇರ್ಗಡೆ ಹೊಂದಬಹುದಾದ ಪರೀಕ್ಷೆಗಳ ಪಟ್ಟಿಯನ್ನು ನೀವೆಲ್ಲರೂ ನೋಡಿರುವುದರಲ್ಲಿ ಸಂದೇಹವಿಲ್ಲ. ಅವುಗಳೆಲ್ಲವೂ ಕಾರ್ಯರೂಪಗಳಲ್ಲೇ ಇರುವುವು. ಹೆಚ್ಚು ಕಡಿಮೆ ಪ್ರತಿಯೊಂದು ಕೈಗೆಲಸದಲ್ಲಿಯೂ ಪರೀಕ್ಷೆ ಕೊಟ್ಟು ಸ್ಕೌಟು ಹುಡುಗನು ಬಿರುದುಗಳನ್ನು ಪಡೆಯಬಹುದೆಂದು ನನ್ನ ಗಮನಕ್ಕೆ ಬಂದಿದೆ; ಇವುಗಳಲ್ಲಿ "ಪ್ರಾಣಿಗಳ ಮಿತ್ರ" ಎಂಬ ಬಿರುದಿಗಾದರೂ, ನಮ್ಮ ಸಣ್ಣ ವಯಸ್ಸಿನ ಉತ್ಸಾಹಶಾಲಿಗಳ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಥಮಸ್ಥಾನವಿರಬೇಕೆಂದು ನನಗೆ ತೋರುತ್ತದೆ. ಈ ವಿದ್ಯೆಗಳೆಂದರೆ, ಪ್ರತಿಯೊಂದೂ ಜ್ಞಾನಲಾಭ; ಮತ್ತು ಹೊಸಪರಿಯ ಯೋಗ್ಯತೆ ಮತ್ತು ಶಕ್ತಿ. ಈ ಸಂಸ್ಥಾನದಲ್ಲಿ ಸ್ಕೌಟು ಶಿಕ್ಷಣ ಕ್ರಮವು ಇನ್ನೂ ಶೈಶವಾವಸ್ಥೆಯಲ್ಲಿದೆ; ಆದುದರಿಂದ ಈ ಪರೀಕ್ಷಾಭಿಪ್ರಾಯವು ಸಂಪೂರ್ಣಾಚರಣೆಗೆ ಬರಲು ಕೆಲವುಕಾಲವಾಗಬಹುದು; ಆದರೆ ಅಷ್ಟರೊಳಗಾಗಿ ಈ ಪರೀಕ್ಷೆಗಳಲ್ಲಿ ಪ್ರತಿಯೊಂದರವಿಚಾರವಾಗಿಯೂ ಬೇಕಾದ ಶಿಕ್ಷಣಗಳನ್ನು ಕೊಡುವ "ಬಾಯ್ ಸ್ಕೌಟ್ ಟೆಸ್ಟ್" ಎಂಬ ಅಧಿಕಾರಿಕ ಪುಸ್ತಕವು ಎಲ್ಲಾ ದೊಡ್ಡ ಸ್ಕೌಟು ಹುಡುಗರ ಕೈಗಳಲ್ಲಿರುವುದು ಆವಶ್ಯಕ.

ಇನ್ನು ನಾನು ಮಾಡಬೇಕಾಗಿ ಉಳಿದಿರುವುದು ಒಂದೇ-ಸ್ವಂತ ಅಭಿವೃದ್ಧಿಯನ್ನು ಪಡೆಯಬೇಕೆಂದಿರುವ ಮತ್ತು ಸೋದರ ಪ್ರಜೆಗಳ ಶ್ರೇಯಸ್ಸನ್ನು ಬೆಳಸಬೇಕೆಂದಿರುವ ನಿಮ್ಮ ಸ್ತುತ್ಯವಾದ ಅಭಿಲಾಷೆಯಲ್ಲಿ ನಿಮಗೆ ಅವಿಚ್ಛಿನ್ನವಾದ ಜಯಲಾಭವುಂಟಾಗಲೆಂದು ಹಾರೈಸುವೆನು.

ಮೈಸೂರು ಸ್ಟಾರ್.

೧೯೨೨ ನೇಯ ಇಸವಿಯ ನವಂಬರ್ ತಾ|| ೫ನೇಯ ಭಾನುವಾರ.

ನೂತನ ರಾಜಕೀಯ ಸುಧಾರಣೆ.

ರಾಜ್ಯಭಾರದಲ್ಲಿ ಪ್ರಜಾಮತಕ್ಕೆ ಬಲವನ್ನು ಹೆಚ್ಚಿಸುವ ಮೂಲಕ ಸಾಂಕುಶಪ್ರಭುತ್ವವನ್ನು ದೃಢಮೂಲಗೊಳಿಸುವ ಉದ್ದೇಶದಿಂದ, ನಮ್ಮ ಶ್ರೀಮನ್ಮಹಾರಾಜರವರು ತಾವು ರಾಜ್ಯಸೂತ್ರವನ್ನು ಪರಿಗ್ರಹಿಸಿದ ಈಚೆಗೆ ಆಯಾ ಕಾಲದಲ್ಲಿ ಎಷ್ಟೋ ರಾಜಕೀಯ ಸ್ವಾತಂತ್ರ್ಯಗಳನ್ನು ಪ್ರಜಾಪ್ರತಿನಿಧಿ ಸಭೆಗೂ ನಿಯಮನಿರ್ಮಾಣ ಸಭೆಗೂ ಅನುಗ್ರಹಿಸುತ್ತ ಬಂದಿರುತ್ತಾರೆ. ಈಗ ಇವೆರಡು ಸಭೆಗಳಿಗೂ ಮತ್ತಷ್ಟು ಅಧಿಕಾರವನ್ನು ಹೆಚ್ಚಿಸಿಕೊಡುವುದಕ್ಕೆ ಸಂಬಂಧಪಟ್ಟ ಸಂದೇಶವನ್ನು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ತಮ್ಮ ಮಂತ್ರಿವರ್ಯರ ಮುಖೇನ ಪ್ರಕಟಪಡಿಸಿರುವರಷ್ಟೆ. ಅದನ್ನು ನಾವು ಹಿಂದೆಯೇ ಪ್ರಕಟಿಸಿರುತ್ತೇವೆ. ಈ ನೂತನ ಸಂಸ್ಕರಣಗಳ ಪ್ರಕಾರ ಏರ್ಪಡುವ ಸಭೆಗಳ ಕಾರ್ಯವಿಧಾನ ಲಕ್ಷಣ ಮೊದಲಾದುವುಗಳನ್ನು ನಿರ್ಧರಿಸಿ ವರದಿಮಾಡುವುದಕ್ಕಾಗಿ ಡಾ|| ಬ್ರಜೇಂದ್ರನಾಥ ಸೀಲ್‌ರವರ ಅಧ್ಯಕ್ಷತೆಯಿಂದ ಒಂದು ಸಂಘವು ಏರ್ಪಟ್ಟಿರುವ ಸಂಗತಿಯು ಕೂಡ ನಮ್ಮ ಪತ್ರಿಕಾವಾಚಕರಿಗೆ ಗೊತ್ತೇ ಇದೆ. ಈ ಸಂಘದವರು ನಿರ್ಧರಿಸಬೇಕಾದ ವಿಷಯಗಳು ಏನೇನೆಂಬುದನ್ನೂ, ತತ್ಸಂಬಂಧವಾದ ವರದಿಯನ್ನೂ ಬರುವ ಡಿಸೆಂಬರ್ ತಾ|| 1 ರೊಳಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂಬುದನ್ನೂ ಕುರಿತ ಅಪ್ಪಣೆಯು ಕಳೆದತಿಂಗಳು ತಾ|| 26 ರ ಸರ್ಕಾರಿ ಗೆಜೆಟ್ಟಿನಲ್ಲಿ ಮುದ್ರಿಸಲ್ಪಟ್ಟಿರುವುದು.

ನಿಯುಕ್ತವಾಗಿರುವ ಈ ಸಂಘಕ್ಕೆ ಆರಿಸಿಕೊಳ್ಳಲ್ಪಟ್ಟಿರುವ ಸಭಿಕರುಗಳೆಲ್ಲಾ ಉದ್ದಿಷ್ಟವಿಷಯದಲ್ಲಿ ಅನುಭವಪರಿಪಾಕದಿಂದ ಸಿದ್ಧವಾದ ಅಭಿಪ್ರಾಯವನ್ನು ಸೂಚಿಸುವುದರಲ್ಲಿ ಸಂಪೂರ್ಣವಾದ ಅರ್ಹತೆಯುಳ್ಳವರೆಂಬುದರಲ್ಲಿ ಅಭ್ಯಂತರವಿಲ್ಲ. ಅದುಕಾರಣ ಶ್ರೀಮನ್ಮಹಾರಾಜರವರ ಉದ್ದೇಶವನ್ನು ಸರ್ವಪ್ರಕಾರದಿಂದಲೂ ಸಾರ್ಥಕಪಡಿಸಲು ಸಾಧಕವಾದಂಥ ವಿಧಾನಗಳುಳ್ಳವನ್ನಾಗಿ ೨ ಸಭೆಗಳನ್ನೂ ಮಾಡಲು ತಕ್ಕ ಸೂಚನೆಗಳು ಕೊಡಲ್ಪಡದೆ ಇರಲಾರರೆಂದು ನಂಬುತ್ತೇವೆ. ಆದರೂ ಆ ವರದಿಯು ಪ್ರಜಾಭಿಪ್ರಾಯಕ್ಕೋಸುಗವಾಗಿ ಪ್ರಕಟಗೊಂಡು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತವಾದ ಬಳಿಕವೇ ಸ್ಥಿತಿಸ್ಥಾಪನೆಗೊಳ್ಳುವಂತಾಗುವುದು ಅತ್ಯವಶ್ಯಕವು.

ಈಗಣ ಏರ್ಪಾಟಿನಲ್ಲಿ ಪ್ರಜಾಪ್ರತಿನಿಧಿಸಭೆಯ ಸಭಿಕರ ಸಂಖ್ಯೆಯನ್ನು 200 ಕ್ಕೆ ಇಳುಹಿಸಬೇಕೆಂಬುದು ಗೌರ್ನಮೆಂಟಿನ ಉದ್ದೇಶವಾಗಿದೆ. ಆದರೆ ನಿಯಮನಿರ್ಮಾಣಸಭಾ ಸಭಿಕರ ಸಂಖ್ಯೆಯನ್ನು 40 ರಿಂದ 50ಕ್ಕೆ ಹೆಚ್ಚಿಸಲು ಉದ್ದೇಶಿಸಿರುತ್ತಾರೆ. ಪ್ರತಿನಿಧಿಸಭಾಸದರ ಸಂಖ್ಯೆಯು ತಗ್ಗಿದರೂ ಅವರನ್ನು ಆರಿಸುವ ಓಟರುಗಳ ಸಂಖ್ಯೆಯು ಹೆಚ್ಚುವ ಸ್ಥಿತಿಯುಂಟಾಗುತ್ತದೆ. ಓಟರುಗಳ ಆಸ್ತಿ ಮೊದಲಾದ ಯೋಗ್ಯತೆಯ ಪರಿಮಿತಿಯನ್ನು ಮೊದಲಿಗಿಂತ ಈಗ ಕಡಿಮೆಮಾಡುವ ಸಂದರ್ಭದಲ್ಲಿ ಓಟರುಗಳ ಸಂಖ್ಯೆಯು ವಿಶೇಷವಾಗಿ ಹೆಚ್ಚುವುದೆಂಬುದಕ್ಕೆ ಸಂದೇಹವಿಲ್ಲ. ಹೀಗೆ ಅವರ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಪ್ರಜಾಸಮ್ಮತಿಯ ಬಾಹುಳ್ಯವನ್ನು ಪಡೆಯಲು ಅವಕಾಶವು ಹೆಚ್ಚುವುದು. ಅದು ಸಾರ್ಥಕವಾಗಬೇಕಾದರೆ ಬರಿಯ ಲೋಕಲ್‌ಬೋರ್ಡುಗಳಿಂದಲೇ ಪ್ರತಿನಿಧಿಗಳನ್ನು ಆರಿಸುವುದಕ್ಕಿಂತಲೂ ಅರ್ಹತೆಯುಳ್ಳ ಓಟರುಗಳಿಂದ ನೇರವಾಗಿ ಆರಿಸಲ್ಪಡುವ ಪದ್ಧತಿ ಇದ್ದೇತೀರಬೇಕು. ಮತ್ತು ಪ್ರತಿಯೊಂದು ತಾಲ್ಲೂಕಿನ ಎಲೆಕ್ಷನ್ನು ಕೂಡ ಸರ್ಕಾರಿ ಪೋಲಿಂಗ್ ಆಫೀಸರ ಜತೆಗೆ ಅನೌದ್ಯೋಗಿಗಳಾದ 5 ಮಂದಿ ದೊಡ್ಡಮನುಷ್ಯರುಗಳುಳ್ಳ ಪಂಚಾಯಿತರ ಇದಿರಿಗೆ ಎಲೆಕ್ಷನ್ ನಡೆಯುವಂತೆ ಆಗಬೇಕು.

ಮತ್ತು ಎಲೆಕ್ಷನ್ನಿನಲ್ಲಿ ಸಾಂಘಿಕಪ್ರಾತಿನಿಧ್ಯ ಸೂತ್ರಕ್ಕೆ ವಿಶೇಷ ಗಮನವನ್ನು ಕೊಡಬೇಕು. ಭರತಖಂಡದಲ್ಲಿ ಮತಜಾತಿಗಳ ಪ್ರಾಮುಖ್ಯವು ಎಂದಿಗೂ ಅಳಿಸಿಹೋಗತಕ್ಕುದಲ್ಲ. ಬಾಯಲ್ಲಿ ಎಷ್ಟು ನಿಸ್ಪೃಹತೆಯನ್ನು ಸುರಿಸತಕ್ಕವರೂ ಕೂಡ ಕಾರ್ಯಬಿದ್ದಾಗ ಜಾತಿ ಮತ ಪಕ್ಷಪಾತವನ್ನು ಬಿಡುವಹಾಗಿಲ್ಲ. ಉಳಿದ ವಿಷಯಗಳಲ್ಲೆಲ್ಲಾ ಮತ ಜಾತಿವಿವಕ್ಷತೆ ಇದ್ದರೆ ಇರಲಿ, ರಾಜಕೀಯ ವಿಷಯದಲ್ಲಿ ಮಾತ್ರ ಬೇಡವೆನ್ನುವುದು ಅಷ್ಟು ನಿಷ್ಕಪಟವಾದ ಅಭಿಪ್ರಾಯವಲ್ಲ. ಅದುಕಾರಣ ಅದು ಸಾಧ್ಯವೂ ಅಲ್ಲ. ನೂರಾರುವರ್ಷಗಳ ಅನುಭವದಿಂದ ವಿದೇಶೀಯರಾದ ಆಂಗ್ಲಪ್ರಭುತ್ವದವರು ಕೂಡ ರಾಜ್ಯಾಂಗದಲ್ಲಿ ಏಕಜಾತಿಯ ಪ್ರಾಬಲ್ಯದಿಂದ ಎಷ್ಟೊಂದು ಅನರ್ಥವಾಗುವುದೆಂಬುದನ್ನು ಅರಿತುಕೊಂಡು, ಈಗಣ ನೂತನ ರಾಜಕೀಯ ಸಂಸ್ಕರಣಗಳ ಪ್ರಕಾರ ಸಿದ್ಧವಾಗಿರುವ ಶಾಸನಸಭೆ ಮೊದಲಾದುವುಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಅವಕಾಶವನ್ನು ಕಲ್ಪಿಸಿರುವಾಗ, ಸ್ವದೇಶದ ಸ್ಥಿತಿಗತಿಗಳನ್ನೆಲ್ಲಾ ಚಿರಕಾಲದಿಂದ ಅನುಭವಗೊಂಡಿರುವ ನಮ್ಮ ಸ್ವದೇಶೀಯ ಪ್ರಭುತ್ವದಲ್ಲಿ ಅಂಥ ಪ್ರತ್ಯೇಕಪ್ರಾತಿನಿಧ್ಯ ತತ್ತ್ವವನ್ನು ಉಪೇಕ್ಷಿಸುವುದೆಂದರೆ ಅವಿಜ್ಞತೆಯೇ ಆಗುವುದು.

ಈಮೊದಲೇ ಲೋಕಲ್ ಬೋರ್ಡು ಮೊದಲಾದುವುಗಳಲ್ಲಿ ಹಿಂದುಳಿದ ಜನವರ್ಗಗಳ ಅಂಗವನ್ನು ಸಮಗ್ರಗೊಳಿಸುವುದಕ್ಕಾಗಿ ಅಂಗೀಕರಿಸಿರುವ ನಾಮಿನೇಷನ್ನೇರ್ಪಾಟನ್ನು ನೋಡುವಲ್ಲಿ ಶ್ರೀಮನ್ಮಹಾರಾಜರ ಪ್ರಭುತ್ವದವರು ಈ ತತ್ವಕ್ಕೆ ವಿಮುಖರಲ್ಲವೆಂಬ ಸಂಗತಿಯು ಸಿದ್ಧವಾಗಿಯೇ ಇದೆ. ಆ ತತ್ತ್ವವು ಈಗಣ ನೂತನ ಸುಧಾರಣೆಯ ಪ್ರಕಾರ ಏರ್ಪಡುವ ಸಭೆಯಲ್ಲೂ ಮುಖ್ಯವಾಗಿ ಸಿದ್ಧವಾಗಬೇಕು. ನೆರೆಯ ಮದ್ರಾಸ್ ಸರ್ಕಾರದವರು ಕೂಡ ಶಾಸನ ಸಭೆಯ ಸ್ಥಾನಗಳಲ್ಲಿ ಇಂತಿಷ್ಟನ್ನು ಹಿಂದುಳಿದವರಿಗಾಗಿಯೇ ಎಂದು ಮೀಸಲುಗೊಳಿಸಿರುತ್ತಾರೆ. ಈ ನಮ್ಮ ಸಭೆಯಲ್ಲೂ ಹಾಗೆಯೇ ಆಗಬೇಕು. ಸಭಾಸದರ ಒಟ್ಟು ಸಂಖ್ಯೆಯಲ್ಲಿ ಅರ್ಧಭಾಗಕ್ಕೆ ಕಡಿಮೆಯಿಲ್ಲದೆ ಹಿಂದುಳಿದ ಉಮೇದುವಾರರಿಗೆಂದು ಪ್ರತ್ಯೇಕಪಡಿಸಿ, ಉಳಿದರ್ಧ ಭಾಗವನ್ನು ಸರ್ವರ ಪೋಟಾಪೋಟಿಗೂ ಬಿಡಬಹುದು.

ಮತ್ತು ಅಂಗೀಕೃತ ಸಂಘಗಳ ಪ್ರಾತಿನಿಧ್ಯವನ್ನು ಈಗಿರುವಂತೆ ನಡೆಯಿಸಿಕೊಡುವುದೇ ವಿಹಿತವಾಗಿ ತೋರುತ್ತದೆ. ಆದರೆ ಅಂಥ ಸಂಘಗಳು ವರ್ಷಕಾಲವೂ ತಂತಮ್ಮ ಸಮಾಜಗಳ ವಿದ್ಯಾಭಿವೃದ್ಧಿ ಭಾಗ್ಯಾಭಿವೃದ್ಧಿಗಳಿಗೆ ಕೆಲಸಮಾಡುತ್ತ ಅದಕ್ಕೆ ಅವಶ್ಯವಾದ ಧನನಿಧಿಯನ್ನೂ ಬಹು ಪ್ರಜಾಸಂಮತಿಯನ್ನೂ ಪಡೆದು ಕನಿಷ್ಠಪಕ್ಷ ೨ ಅಥವಾ 3 ವರ್ಷಗಳವರೆಗಾದರೂ ಕರ್ತವ್ಯವನ್ನು ಸಮರ್ಪಕವಾಗಿ ನೆರವೇರಿಸುತ್ತ ಬಂದಿರುವ ಅರ್ಹತೆಯನ್ನು ತೋರಿಸಿಕೊಡುತ್ತಿದ್ದರೆ ಅಂಥ ಸಂಘಗಳಿಗೆ ಪ್ರಾತಿನಿಧ್ಯವನ್ನು ಅವಶ್ಯಕವಾಗಿ ಕೊಡಬಹುದು. ಹೀಗೆ ಮಾಡುವುದರಿಂದ ಆಯಾ ಸಮಾಜಗಳ ಪುರೋಭಿವೃದ್ಧಿಗಾಗಿ ಪ್ರಭುತ್ವದವರೂ ಒಂದು ವಿಧದಲ್ಲಿ ಪರೋಕ್ಷವಾದ ಪ್ರೋತ್ಸಾಹವನ್ನು ಕಲ್ಪಿಸಿಟ್ಟಂತೆ ಆಗುವುದು. ಅಷ್ಟೇ ಹೊರತು ಬರಿಯ ನಾಮಮಾತ್ರದ ಸಂಘಗಳಿಗೆ ಪ್ರಾತಿನಿಧ್ಯವನ್ನು ಕೊಡುವುದು ಅಷ್ಟೇನೂ ಪ್ರಯೋಜಕವಲ್ಲ.

ಓಟರುಗಳ ಆಸ್ತಿ ಮೊದಲಾದ ಯೋಗ್ಯತೆಯ ಪರಿಮಾಣವನ್ನು ತಗ್ಗಿಸಿದ ಬಳಿಕ ಪ್ರತಿನಿಧಿಗಳಾಗಲು ನಿಲ್ಲುವ ಉಮೇದುವಾರರ ಯೋಗ್ಯತಾಪರಿಮಿತಿಯನ್ನು ತಗ್ಗಿಸುವುದು ಕೂಡ ಯುಕ್ತವೇ ಆಗಿರುತ್ತದೆ.

COMMUNAL REPRESENTATION.

II.

Last time we referred to communal representation in the public bodies as the only just method of securing the proper representation of all classes and communities in the State and of avoiding the danger of any one community getting into predominance. We also stated that the latter contingency was very probable under the new dispensation. It is this all-important aspect of the question that we would earnestly press upon the attention of the Reforms Committee which is busy with its labours in Bangalore. Whatever the prepossessed notions of the members might be it will not take long for them to understand the reasonableness and the equity of the principle of communal representation if they are open to conviction. We do not deny that to the community which has now infinitely more than its due share of representation, and which is likely to have more under the reforms this equitable proposal may not be welcome. It is only human to do so. But the community may be sure that in any scheme of communal representation evolved it will have quite a good representation much exceeding its share. Besides, it is only a certain fixed number of the total seats that may be reserved for securing the representation of the different communities, as in Madras. The rest, which will be a substantial proportion, may be thrown out for general election. There could be no possibility of any community suffering under such a scheme, and no reason for any one to complain. There may be some even of the backward classes, who belong to some old school of thought or no school at all, who might think that we should not seek for communal representation as it would introduce a communal colouring to the whole affair. Well, we can only tell them, if there are such, that communal differences would be no new introduction of any body to-day but they have been there for ages and we only want them to recognise their existence and to introduce proper safeguards to see that these differences do not work to the detriment of certain communities. If we rightly understand, the reforms are meant for giving the people of the State a greater share in its administration. The body politic is composed of various interests and communities-which are more or less synonymous with interests-and if the scheme of reforms is not going to make ample and proper provision to ensure the adequate representation of the big interests and communities along with special interests and minorities we may well express our doubt about the reforms being of much benefit to the people as a whole. Without this necessary provision, the Assembly would be a packed body of lawyers, shanbhogs and absentee landlords, and the Legislative Council mostly of lawyers, who would all be speaking in the name of the masses, calling themselves the chosen representatives of the people. How they have represented the causes of the people is too well known to need mention here. Further this is no new principle in Mysore. It has been recognised in the important field of Public Service through the Miller Committee Report. When communal representation is necessary and desirable in Public Service is it not all the more so in the State Councils?

There may be persons who would represent or rather misrepresent that communal representation is aimed at against one community. Nothing could be farther from the truth. Its only motive as already stated is to see that as far as possible all communities are represented if not proportionate to their strength at least adequately. We are emphasising this because we feel that it is a legitimate and righteous claim of the masses, it would promote the best interests of the State and it aims at securing a genuine democracy and not a showy one. We understand that, with the reservation of the ultimate sovereignty of His Highness the Maharaja to which we entirely subscribe and which must ever continue undiminished, the object of introducing these reforms is to establish a democratic Government more or less on the principle of western democratic institutions. The most correct definition of democracy is contained in the statement of Abraham Lincoln-"Government of the people, by the people, for the people." Will the Reforms Committee bear this grand political maxim in mind and model the electorates accordingly? Could they do it better than adopting the principle of communal representation in our country?

ತುರ್ಕಿ ಸಮಸ್ಯೆ.

ತುರ್ಕಿಗೆ ಸಂಬಂಧಪಟ್ಟ ಶಾಶ್ವತ ಸಂಧಿಪರಿಷ್ಕಾರಕ ಸಭೆಯು ಇದೇ ತಿಂಗಳು ತಾ|| 13 ರಲ್ಲಿ ಲಾಸೇನಿಯಾಪಟ್ಟಣದಲ್ಲಿ ಕೂಡತಕ್ಕುದೆಂದು ನಿರ್ಧರವಾಗಿದೆ. ಈ ಸಭೆಗೆ ರಾಷ್ಟ್ರಾಧಿಪತಿಗಳಲ್ಲಿ ಕೆಲರನ್ನು ಕರೆದೂ ಕೆಲರನ್ನು ಕರೆಯದೆಯೂ ಇರುವರೆಂದು ಗೊತ್ತಾಗುತ್ತದೆ. ಮುಖ್ಯವಾಗಿ ರಷ್ಯಾ ಸೋವಿಯಟ್ ಪ್ರಭುತ್ವಕ್ಕೆ ಆಹ್ವಾನವಿಲ್ಲವಂತೆ. ಇದನ್ನು ಕೇಳಿ ಲೆನಿನ್‌ರವರು ಹಾಗಾದರೆ ಯೂರೋಪಿನಲ್ಲಿ ಶಾಂತಿಸ್ಥಾಪನೆ ಮಾಡಲು ಅವಕಾಶವಾಗಲಾರದು ಎಂದು ಗುಡುಗುಡಿಸಿರುತ್ತಾರೆ. ಈ ಸಭೆಗೆ ಅಮೇರಿಕಾವಿಗೆ ಆಹ್ವಾನವನ್ನು ಮಿತ್ರಮಂಡಲಿಯವರು ಕೊಟ್ಟಿರುವರು. ಆದರೆ ತಾವು ತುರ್ಕಿಯ ಮೇಲೆ ಯುದ್ಧಮಾಡಿದವರಲ್ಲವಾದಕಾರಣ ತಮ್ಮ ಪ್ರತಿನಿಧಿಯು ಪ್ರೇಕ್ಷಕರಾಗಿ ಮಾತ್ರ ಬರುವರೆಂತಲೂ ಇನ್ನಾವ ಕಾರ್ಯಸಂಬಂಧವನ್ನೂ ಇಟ್ಟುಕೊಳ್ಳುವುದಿಲ್ಲವೆಂತಲೂ ಅವರು ತಿಳಿಯಿಸಿರುವರು. ಅದುಕಾರಣ ಈ ಸಭಾಫಲವು ಹೇಗೆ ಎಷ್ಟುಮಟ್ಟಿಗೆ ಆಗುವುದೆಂದು ಹೇಳಲಾಗುವುದಿಲ್ಲ. ಈ ಮಧ್ಯೆ ಡೇಲಿ ಎಕ್ಸ್‌ಪ್ರೆಸ್ ಪತ್ರಿಕೆಗೆ ಹೋಗಿರುವ ತಂತ್ರೀವಾರ್ತೆಯನ್ನು ನೋಡುವಲ್ಲಿ ಸಿರಿಯಾದೊಳಗಣ ಬಹುಭಾಗಕ್ಕೆ ತಮ್ಮ ಮಾಂಡೇಟನ್ನು ಫ್ರೆಂಚರು ಪರಿತ್ಯಜಿಸಿ ಅಲ್ಲಿಗೆ ಸ್ವತಂತ್ರಪರಿಪಾಲನೆಗೆ ಅವಕಾಶವನ್ನು ಕೊಡುವವರಾಗಿದ್ದಾರೆಂದು ಗೊತ್ತಾಗುತ್ತದೆ. ಅಲೆಪ್ಪೋವನ್ನು ಫ್ರೆಂಚರು ತುರ್ಕಿಗೆ ಕೊಟ್ಟುಬಿಡುವರಂತೆ. ಹೀಗೆ ಮಾಡಿ ಫ್ರೆಂಚರು ಸಿರಿಯಾ ಮಾಂಡೇಟನ್ನು ತೊಲಗಿಸಿ ಮಹಮ್ಮದೀಯರ ಸ್ವಾತಂತ್ರ್ಯವನ್ನು ಕಾಪಾಡಿದರೆ ಆಂಗ್ಲರು ಕೂಡ ಪಾಲಸ್ತೀನ್ ಮೆಸಪೊಟೇಮಿಯಾವುಗಳಲ್ಲಿರುವ ತಮ್ಮ ಮಾಂಡೇಟನ್ನೂ ಬಿಟ್ಟುಕೊಡಲೇಬೇಕಾಗುವುದು. ಈಗಾಗಲೇ ಮೆಸಪೊಟೇಮಿಯಾ ಪಾಲಸ್ತೀನ್ ಮಾಂಡೇಟಿನ ವಿಷಯದಲ್ಲಿ ಸ್ಥಳಿಕರಿಗೇ ಅಲ್ಲದೆ ಆಂಗ್ಲ ಮಹಾಜನರನೇಕರಿಗೂ ಅಸಮಾಧಾನವುಂಟಾಗಿರುವುದು. ಮಹಮ್ಮದೀಯರ ಪವಿತ್ರಸ್ಥಲಗಳಿರುವ ಪ್ರದೇಶವನ್ನು ಅವರ ಸಂಪೂರ್ಣಸ್ವಾತಂತ್ರ್ಯಕ್ಕೆ ವಹಿಸಿಕೊಡುವುದೇ ಸಂತೃಪ್ತಿಕರವು. ಹಾಗೆ ಮಾಡುವುದರಿಂದ ಮಹಮ್ಮದೀಯ ಪ್ರಪಂಚಕ್ಕೆಲ್ಲಾ ಮನಶ್ಶಾಂತಿಯುಂಟಾಗುವುದರಲ್ಲಿ ಸಂಶಯವಿಲ್ಲ. ಅಂತು ನಾಳೆ ಕೂಡಲಿಕ್ಕಿರುವ ಸಭೆಯಲ್ಲಿ ತುರ್ಕಿಗೆ ಸಂಬಂಧಪಟ್ಟ ಸಕಲವಿಷಯವೂ ಚರ್ಚಿತವಾಗಿ ಮುಗಿದುಹೋದರೆ ಅನುಕೂಲ. ಕೆಲವು ಪರಿಷ್ಕಾರಗೊಂಡು ಕೆಲವು ಉಳಿದುಹೋದರೆ ಮತ್ತೆ ವಿಷಮಾವಸ್ಥೆಯು ಯಾವಾಗಲಾದರೂ ಮೂಡಿಯೇ ಮೂಡುವುದು. ಈ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸಿಕೊಡಲು ಸುಲ್ತಾನ್ ಪ್ರಭುತ್ವಕ್ಕೆ ಪ್ರತ್ಯೇಕವಾಗಿಯೂ ಅಂಗೋರಾ ಪ್ರಭುತ್ವಕ್ಕೆ ಪ್ರತ್ಯೇಕವಾಗಿಯೂ ಆಹ್ವಾನಗಳನ್ನು ಕಳುಹಿಸಿದ್ದರಂತೆ. ಇದರಿಂದ ಅವರವರಲ್ಲಿ ಮನಸ್ತಾಪಬಳೆಯಲು ಅವಕಾಶವು ಹೆಚ್ಚುತ್ತಿದ್ದಿತು. ಆದರೆ ಈ ಮಧ್ಯೆ ಸುಲ್ತಾನರು ಅಂಗೋರಾಜಾತೀಯ ಸಭೆಯನ್ನು ಒಪ್ಪಿಕೊಂಡರೆಂತಲೂ ದ್ವಂದ್ವಪರಿಪಾಲನಕ್ಕೆ ಇಲ್ಲಿಗೇ ಉತ್ತರಕ್ರಿಯೆಯಾಗುವಂತಿದೆಯೆಂತಲೂ ಸುದ್ದಿಯಿದೆ. ಹೀಗೆ ತುರುಕರು ಏಕಮುಖರಾದರೇ ಅವರ ಕೆಲಸವು ಗಟ್ಟಿಯಾದೀತು. ಅಂತೂ ಸ್ವಲ್ಪಕಾಲದೊಳಗೇ ಲುಸಾನಿಯಾ ಸಭೆಯ ಪರ್ಯವಸಾನವು ಗೊತ್ತಾಗುವಂತಿರುವುದು. ಅತ್ತ ಪೂರ್ವಗ್ರೀಸನ್ನೆಲ್ಲಾ ಗ್ರೀಕ್ ಸೈನಿಕರು ತಾ|| 29ಕ್ಕೆ ತೆರವುಮಾಡಿದರು. ಮರುದಿನದಿಂದ ತುರ್ಕಿ ಸೈನ್ಯವು ವಶಪಡಿಸಿಕೊಂಡಿತು.

ಸ್ವದೇಶದ ವೃತ್ತಾಂತಗಳು.

ಮೈಸೂರು ಸಿಟಿ ಮ್ಯು|| ಚೀಫ್‌ಆಫೀಸರಾಗಿದ್ದ ಮಿ|| ಮಹಮ್ಮದ್‌ಪೀರ್‌ರವರು ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಎಕ್ಸೈಜ್ ಆಫೀಸರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಅವರ ಸ್ಥಾನಕ್ಕೆ ಮ|| ಎ. ಹಯಗ್ರೀವರಾಯರು ಬಂದು ಉದ್ಯೋಗವನ್ನು ವಹಿಸಿಕೊಂಡಿರುತ್ತಾರೆ.

ಸೀಮೆಯಿಂದ ಬಂದ ತಮ್ಮ ಪತ್ನಿಯನ್ನು ಇದಿರ್ಗೊಂಡು ಕರತರುವ ಉದ್ದೇಶದಿಂದ ಮ|| ಎ. ಆರ್. ಬಾನರ್ಜಿಯವರು ೧೦ ದಿನಗಳ ರಜಾ ಪಡೆದು ಕೊಲಂಬೋವಿಗೆ ಪ್ರಯಾಣ ಮಾಡಿರುತ್ತಾರೆ. ಅವರ ರಜಾಕಾಲದಲ್ಲಿ ೧ನೆ ಕೌನ್ಸಿಲರು ದಿವಾನಗಿರಿಯನ್ನು ಆಕ್ಟಿಂಗಾಗಿ ನೋಡುತ್ತಿದ್ದಾರೆ.

ಮೈಸೂರು ಸಿಟಿ ಪೊಲೀಸ್ ಸೂಪರಿಂಟೆಂಡೆಂಟರಾದ ಮಿ|| ಅಬ್ದುಲ್ ಗನ್ನಿಯವರಿಗೆ ಕೋಲಾರಕ್ಕೆ ವರ್ಗವಾಗಿ, ಬೆಂಗಳೂರಿನಲ್ಲಿರುವ ಮಿ|| ಸಿರಾಜುದ್ದೀನ್ ಮಹಮ್ಮದ್‌ಯವರು ರಾಜಧಾನಿಯ ಪೊಲೀಸ್ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಮಿ|| ಸಿ. ಎವರಾರ್ಡ್‌ರವರು ದಾವಣಗೆರೆಗೂ, ಮಿ|| ಮಹಮ್ಮದ್ ಹುಸೇನ್‌ರವರು ಬೆಂಗಳೂರು ಸಿಟಿ ಪೊ|| ಸೂಪರಿಂಟೆಂಡೆಂಟರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಫೀಸ್ ಹೆಡ್ ಅಕೌಂಟೆಂಟರಾದ ಮ|| ಎ. ಎಲ್. ಪುಟ್ಟಯ್ಯನವರು ಕುಂಸಿ ಡೆಪ್ಯುಟಿ ಅಮಲ್ದಾರರಾಗಿಯೂ, ರೆವಿನ್ಯೂ ಕಮಿಷನರಾಫೀಸ್ ಕ್ಲರ್ಕ್ ಮ|| ವೈ. ಶ್ರೀಕಂಠಯ್ಯನವರು ತೀರ್ಥಹಳ್ಳಿ ತಾ|| ಅಮಲ್ದಾರರಾಗಿಯೂ ಮಿ|| ಹೈದರಲ್ಲಿಖಾನರು ಚಿಕ್ಕಬಳ್ಳಾಪುರಕ್ಕೆ, ಮಿ|| ವಿ. ಎಸ್. ರಾಜಗೋಪಾಲಾಚಾರ್ಯರು ಬೆಂಗಳೂರಿಗೆ, ಮ|| ಜಿ. ಆರ್. ಪದ್ಮನಾಭರಾಯರು ಕೋಲಾರಕ್ಕೆ ಅಮಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಮಹಮ್ಮದ್‌ಖಾಸಿಂ ಎಂಬ ಒಬ್ಬ ಖದೀಂ ಅಪರಾಧಿಗೆ ಬೆಂಗಳೂರು ದಂಡಿನ ಮ್ಯಾಜಿಸ್ಟ್ರೇಟರು ಒಂದು ಕಳವಿನ ಕೇಸಿನ ವಿಚಾರಣೆಮಾಡಿ ೨ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲು, ಅಪರಾಧಿಯು ಕೌಂಕುಳಲ್ಲಿ ಬಚ್ಚಿಟ್ಟುಕೊಂಡಿದ್ದ ಬ್ಲೇಡನ್ನು ತೆಗೆದು ಸಿಟ್ಟಿನಿಂದ ಮ್ಯಾಜಿಸ್ಟ್ರೇಟರ ಭುಜಕ್ಕೆ ಬಡಿಯುವಂತೆ ಇಟ್ಟನು. ಅದರಮೇಲೆ ಪೊಲೀಸರು ಅವನನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಪಡಿಸಲು, ಆ ತಪ್ಪಿತಕ್ಕಾಗಿ ಮತ್ತೆ 1 ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು.

ಸಂಸ್ಥಾನದಲ್ಲಿ ಅಲ್ಲಲ್ಲಿ ಸೇರುವ ಚಿಕ್ಕದೊಡ್ಡ ಜಾತ್ರೆಗಳ ಕಾಲದಲ್ಲಿ ಜನಗಳ ಮತ್ತು ದನಕರುಗಳ ಆರೋಗ್ಯರಕ್ಷಣಾರ್ಥವಾದ ಏರ್ಪಾಟನ್ನು ಮಾಡಿಸುವುದಕ್ಕಾಗಿ ಸರ್ಕಾರದವರು ಸ್ಯಾ|| ಕಮಿಷನರು, ಸೀನಿಯರ್ ಸರ್ಜನರು, ಡಿಸ್ಟ್ರಿಕ್ಟ್ ಬೋರ್ಡು ಪ್ರಸಿಡೆಂಟರುಗಳು ಇವರುಗಳ ಅಭಿಪ್ರಾಯವನ್ನೆಲ್ಲಾ ತರಿಸಿಕೊಂಡು, ಎಲ್ಲಾ ಸಂತೆಗಳಲ್ಲೂ ಸಂಬಂಧಪಟ್ಟ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಸ್ಥಳಿಕಾಧಿಕಾರಿಗಳೂ ಕಟ್ಟುನಿಟ್ಟಾಗಿ ವ್ಯವಹರಣೆಗೆ ತರಬೇಕಾದ ಕೆಲ ನಿಬಂಧನೆಗಳನ್ನು ಕಾಣಿಸಿ ಒಂದು ಅಪ್ಪಣೆ ಮಾಡಿರುತ್ತಾರೆ. ಶುದ್ಧವಾದ ಪಾನೀಯಜಲದ ಏರ್ಪಾಟು, ದನಕರುಗಳ ಚಿಕಿತ್ಸೆಯ ಏರ್ಪಾಟು ಆರೋಗ್ಯಕರವಾದಂತ ವಸತಿಕಲ್ಪನೆ ಇತ್ಯಾದಿಗಳೆಲ್ಲಾ ಆ ವಿವರಣದಲ್ಲಿ ತಿಳಿಯಿಸಲ್ಪಟ್ಟಿವೆ.

ಸಂಸ್ಥಾನದ ಡಿಸ್ಟ್ರಿಕ್ಟ್‌ಬೋರ್ಡುಗಳಲ್ಲಾವುದಕ್ಕೂ ಸರ್ಕಾರದ ಉದ್ಯೋಗಿಗಳಲ್ಲದ ದೊಡ್ಡಮನುಷ್ಯರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳುವ ಏರ್ಪಾಟು ಇದುವರೆಗೂ ವ್ಯವಹಾರದಲ್ಲಿರಲಿಲ್ಲ. ಈಗ ಬೆಂಗಳೂರು ಡಿಸ್ಟ್ರಿಕ್ಟ್‌ಬೋರ್ಡಿಗೆ ಇಂಥ ಅಧಿಕಾರವನ್ನು ಮೊಟ್ಟಮೊದಲು ಅನುಗ್ರಹಿಸಿದರು. ಆದರಮೇಲೆ ಬೋರ್ಡುಮೆಂಬರುಗಳಲ್ಲಿ ಮ|| ಎಂ. ಸುಬ್ಬಯ್ಯ, ಬಿ. ಎ. ಯವರು, ಮಿ|| ಉಸ್ಮಾನ್ ಖಾನ್ ಸಾಬರು, ಮ|| ಕರಣಿಕ ಕೃಷ್ಣಮೂರ್ತಿರಾಯರು ಈ ಮೂವರೂ ಉಮೇದುವಾರರಾಗಿ ನಿಂತಿರಲು ಹೆಚ್ಚು ಓಟುಗಳನ್ನು ಪಡೆದ ಮ|| ಎಂ. ಸುಬ್ಬಯ್ಯನವರು ಪ್ರಸಿಡೆಂಟರಾಗಿ ಆರಿಸಲ್ಪಟ್ಟಿದ್ದಾರೆ. ಈ ಮೂವರಿಗೂ ಕ್ರಮವಾಗಿ 22-16-6 ಈ ರೀತಿಯಾಗಿ ಓಟುಗಳು ದೊರೆದುವು.

ಶ್ರೀ

ಶ್ರೀಮನ್ ಮೈಸೂರು ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ಯವರು ೮ನೇ ಸ್ಕೌಟು ವರ್ಧಂತಿ ಮಹೋತ್ಸವದಲ್ಲಿ ಸ್ಕೌಟು ಬಾಲಕರ ರೆವ್ಯೂ ಆದನಂತರ ಅಪ್ಪಣೆ ಕೊಡಿಸಿದ ಸುಭಾಷಣವು.

ಸ್ಕೌಟುಗಳಿರಾ,

ಮೈಸೂರು ಸಂಸ್ಥಾನದ ಸ್ಕೌಟುಗಳನ್ನು ನೋಡುವ ಮತ್ತು ಅವರಿಗೂ ಅವರ ನಾಯಕರಿಗೂ ಕೆಲವು ಮಾತುಗಳನ್ನು ಹೇಳುವ ಶುಭಸಮಯವನ್ನು ಈ ಧ್ವಜಪ್ರದಾನ ಮಹೋತ್ಸವವು ನನಗೆ ಒದಗಿಸಿರುತ್ತದೆ.

ಬೆಂಗಳೂರಿನ ಪ್ರಹ್ಲಾದ ಸ್ಕೌಟು ಟ್ರೂಪಿನವರು ಈ ಬಹುಮಾನವನ್ನು ಸಂಪಾದಿಸಿಕೊಳ್ಳುವ ಶ್ಲಾಘ್ಯಯೋಗ್ಯತೆಯನ್ನು ಪಡೆದುದಕ್ಕಾಗಿ ಮೊಟ್ಟಮೊದಲು ಅವರನ್ನು ಅಭಿನಂದಿಸುತ್ತೇನೆ. ಮೈಸೂರು ಸಂಸ್ಥಾನದ ಸ್ಕೌಟು ಹುಡುಗರಲ್ಲಿ ಪ್ರಥಮಸ್ಥಾನವನ್ನು ಪಡೆಯುವುದು ಸುಲಭಕಾರ್ಯವಲ್ಲ. ಬೆಂಗಳೂರು ಮೈಸೂರು ಪಟ್ಟಣಗಳಲ್ಲಿಯೂ ಇತರ ಸ್ಕೌಟು ಟ್ರೂಪುಗಳಿರುವುದನ್ನು ನಾನು ಬಲ್ಲೆ. ಪ್ರಥಮಸ್ಥಾನ ಗೌರವಕ್ಕೆ ಅರ್ಹರಾದ ಅನೇಕರಲ್ಲಿ ಪ್ರಥಮಸ್ಥಾನವನ್ನು ಪಡೆಯುವುದು ಮತ್ತಷ್ಟು ಶ್ಲಾಘ್ಯವಾಗಿರುತ್ತದೆ. ಇದು ಸ್ತೋತ್ರಾರ್ಹವಾದ ನಾಯಕತ್ವಕ್ಕೆ ನಿದರ್ಶನವಾಗಿರುವುದು ಹುಡುಗರ ದೇಹದಾರ್ಢ್ಯ ಬುದ್ಧಿಶಕ್ತಿಗಳಿಗಲ್ಲದೆ ಹುಡುಗರ ಸುಸ್ವಭಾವಶೀಲಗಳಿಗೂ ನಿದರ್ಶನವಾಗಿರುವುದು.

ಮೈಸೂರು ಸಂಸ್ಥಾನದಲ್ಲಿ ಸ್ಕೌಟು ಕ್ರಮಾಚರಣೆಯು ಶೀಘ್ರವಾಗಿ ಬೆಳೆದುಬಂದಿರುವುದು ಈಗಿನಕಾಲದ ವಿದ್ಯಮಾನಗಳಲ್ಲಿ ಶುಭಸೂಚಕವಾದದ್ದೂ ಅತ್ಯಂತ ಪ್ರೋತ್ಸಾಹಕರವಾದದ್ದೂ ಆಗಿದೆ. ಮೈಸೂರು ಸಂಸ್ಥಾನದ ಬಾಲಕರಲ್ಲಿರುವ ಸತ್ವವು ಎಂಥ ಉತ್ತಮವಾದುದೆಂಬುದನ್ನು ಈ ಪದ್ಧತಿಯು ಆಗಲೇ ತೋರಿಸಿರುತ್ತದೆ. ಸ್ಥೈರ್ಯವನ್ನೂ ಉತ್ಸಾಹವನ್ನೂ ಬಾಲಕರು ತೋರಿಸಿರುವರು; ಅವರಲ್ಲಿರುವ ಉತ್ತಮ ಗುಣಗಳನ್ನು ಸ್ಕೌಟು ಶಿಕ್ಷಣವು ಪ್ರಕಾಶಕ್ಕೆ ತಂದಿರುವುದು. ಆದರೆ ಉತ್ತಮ ಸ್ಕೌಟುಗಳಾಗತಕ್ಕ ಅನೇಕ ಹುಡುಗರು ಇನ್ನೂ ಈ ಗುಂಪಿಗೆ ಸೇರಿಲ್ಲ. ತಾನು ಅತ್ಯುತ್ತಮ ಸ್ಥಿತಿಗೆ ಬರಬೇಕಾದರೆ ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ಕೌಟಾಗಬೇಕು; ಇತರ ಬಾಲಕರನ್ನು ಸ್ಕೌಟು ಗುಂಪಿಗೆ ಸೇರಿಸುವುದು ತಮ್ಮ ಮುಖ್ಯ ಕರ್ತವ್ಯವೆಂಬುದು ಎಲ್ಲ ಸ್ಕೌಟುಗಳು ತಿಳಿದ ವಿಷಯವೇ ಆಗಿದೆ; ಹೀಗೆ ಸೇರಿಸುವುದರಲ್ಲಿ ಚಟುವಟಿಕೆಯುಳ್ಳ ಮತ್ತು ಬಹುಜನಪ್ರಿಯರಾದ ಹುಡುಗರನ್ನಲ್ಲದೆ, ನಾಚಿಕೆಯೂ, ಹಿಂದೆ ಅಡಗಿಕೊಳ್ಳುವ ಸ್ವಭಾವವೂ ಉಳ್ಳ ಹುಡುಗರನ್ನು— ಆದರಲ್ಲಿಯೂ ದೇಹದಾರ್ಢ್ಯವಿಲ್ಲದಿರುವವರನ್ನು—ಸೇರಿಸಬೇಕು; ಏಕೆಂದರೆ ಸ್ಕೌಟು ಟ್ರೂಪುಗಳಲ್ಲಿ ದೊರೆಯುವ ಸ್ನೇಹಪರತೆಗೂ ಒಳ್ಳೆಯ ಶಿಕ್ಷಣಕ್ಕೂ ಇಂತಹ ಬಾಲಕರೆ ಸತ್ಪಾತ್ರರು.

ಈ ಕ್ರಮಾಚರಣೆಯ ಬಾಲ್ಯದೆಶೆಯಲ್ಲಿ ಸ್ಕೌಟುಗಳಿಗೆ ಶಿಕ್ಷಣ ಕೊಟ್ಟು ಮುಂದುವರಿಸಿದ ಎಲ್ಲ ಜನರಿಗೂ ಹಿಂದಿನ ಮತ್ತು ಈಗಿನ ಸ್ಕೌಟುಕಮಿಷನರುಗಳಿಗೂ ಮತ್ತು ಅವರ ಕೈಕೆಳಗೆ ಕೆಲಸ ಮಾಡಿರುವ ಇತರರಿಗೂ, ಅತ್ಯಧಿಕವಾದ ಕೃತಜ್ಞತೆಯು ಸಲ್ಲಬೇಕಾಗಿದೆ. ಸಾಮಾನ್ಯವಾಗಿ, ಅವಿಶ್ರಾಂತ ಶ್ರಮಸಹಿಷ್ಣುಗಳಾಗಿ ಇರತಕ್ಕ ಅಲ್ಪಸ್ವಲ್ಪ ಅವಕಾಶವನ್ನು ತಮ್ಮ ಶಿಕ್ಷಣಕ್ಕೂ ತಮ್ಮ ಟ್ರೂಪುಗಳ ಶಿಕ್ಷಣಕ್ಕೂ ಸಂತೋಷಪೂರ್ವಕವಾಗಿಯೇ ವಿನಿಯೋಗಿಸಿರುವ ಸ್ಕೌಟುಉಪಾಧ್ಯಾಯರನ್ನು ಎಷ್ಟು ಸ್ತೋತ್ರಮಾಡಿದರೂ ಹೆಚ್ಚಲ್ಲ.

ಯಾವದೊಂದು ಬುದ್ಧಿವಾದವನ್ನೂ ನಿಮಗೆ ಹೇಳಲು ನಾನು ಇಷ್ಟಪಡುವುದಿಲ್ಲ; ಏಕೆಂದರೆ ನಿಮಗೆ ಅದರ ಆವಶ್ಯಕತೆಯೇನೂ ಇಲ್ಲ. ಪ್ರಪಂಚದಲ್ಲೆಲ್ಲ ಅತ್ಯುತ್ತಮ ಬುದ್ಧಿವಾದವು ನೀವು ಗಟ್ಟಿಮಾಡಿಯೇ ಇರುವ ಸ್ಕೌಟು ನಿಯಮದಲ್ಲಿದೆ. ಆ ನಿಯಮವು ಬಹಳ ಸುಲಭವಾದದ್ದು; ಆದರೂ ನೀವು ಬೆಳೆಯುತ್ತ ಹೋದಹಾಗೆಲ್ಲ ಅದರಲ್ಲಿ ಹೊಸದಾದ ಮತ್ತು ಹೆಚ್ಚಿನ ಅರ್ಥವನ್ನು ಯಾವಾಗಲೂ ಕಾಣುವಿರಿ. ವಸ್ತುತಃ ಸ್ಕೌಟು ನಿಯಮಕ್ಕೆ ಜೀವನಸ್ಥಿತಿಯೇ ಉತ್ತಮವಾದ ವ್ಯಾಖ್ಯಾನ. ನಾವು ಮಾಡುವುದರಲ್ಲೆಲ್ಲ ಆ ಸ್ಕೌಟು ನಿಯಮವನ್ನು ಅನುಸರಿಸಲು ಶ್ರಮವಹಿಸಿದರೆ, ಈ ಪ್ರಯತ್ನದ ಮೂಲಕ ಸ್ಕೌಟು ನಿಯಮವು ಎಷ್ಟು ಅರ್ಥಪರಿಪೂರ್ಣವಾದದ್ದು, ಎಷ್ಟು ಆನಂದದಾಯಕವಾದದ್ದು ಎಂಬುದನ್ನು ಕಂಡು ಹಿಡಿಯುವೆವು. ಆ ನಿಯಮದಲ್ಲಿ ಎರಡು ಸಾಮಾನ್ಯಸಂಗತಿಗಳು ಮುಖ್ಯವಾಗಿ ನೆನಪಿನಲ್ಲಿರಲು ಯೋಗ್ಯವಾಗಿ ಕಂಡುಬರುತ್ತವೆ. ಮೊದಲನೆಯದು—ಆ ನಿಯಮದಲ್ಲಿ ಕೆಲಸ ಮಾಡುವುದರ ವಿಚಾರವೇ ಹೆಚ್ಚು, ಮಾತನಾಡುವುದರ ವಿಚಾರ ತೀರಕಡಿಮೆ. ಆ ನಿಯಮವು ಎಂಥ ಶ್ಲಾಘ್ಯವಾದುದು ಎಂಬುದನ್ನು ಈ ಸಂಗತಿಯೇ ತೋರಿಸುತ್ತದೆ. ಮಾತನಾಡುವ ಬದಲು ಕೆಲಸ ಮಾಡುವಾತನೇ ಸ್ಕೌಟು. ಬಾಲಕನು ಸ್ಕೌಟಾಗುವಾಗ ಮಾತ್ರ ಪ್ರತಿಜ್ಞೆಯನ್ನು ಮಾಡಬೇಕು, ಆ ಮೇಲೆ ಅವನು ಇನ್ನಾವ ಪ್ರತಿಜ್ಞೆಯನ್ನೂ ಮಾಡುವುದಿಲ್ಲ. ತನ್ನ ಎಲ್ಲ ಶಕ್ತಿಯನ್ನೂ ಸೇವಾಕಾರ್ಯದಲ್ಲಿಯೇ ವಿನಿಯೋಗಿಸುವನು. ಮಾತನಾಡುವುದನ್ನೇನೋ ನಾವು ಅಲ್ಲಗಳೆಯಬಾರದು; ಏಕೆಂದರೆ ವಿವೇಕಭಾಷಣದಿಂದ ಯಥಾರ್ಥವಾದ ಸೇವೆ ಮಾಡುವ ಅನೇಕರಿರುತ್ತಾರೆ; ಆದರೆ ಸರ್ವಸಾಮಾನ್ಯ ಮನುಷ್ಯನಿಗೆ ಆದಷ್ಟು ಸ್ವಲ್ಪ ಮಾತಾಡುವುದೂ ಆದಷ್ಟು ಹೆಚ್ಚು ಕೆಲಸ ಮಾಡುವುದೂ ಎಂದಿಗೂ ಕೆಟ್ಟ ಆಚರಣೆಯಲ್ಲ. ಸಹಾಯವನ್ನೂ ಸಂತೋಷವನ್ನೂ ಉಂಟುಮಾಡುವ ಮಾತುಗಳನ್ನಾಡುವುದು ಸ್ಕೌಟಿನ ಕರ್ತವ್ಯ. ಆದರೆ ಸ್ಕೌಟುನಿಯಮವು ಅವಿಶ್ರಾಂತೋದ್ಯೋಗವನ್ನೇ ಒತ್ತಿ ಹೇಳುತ್ತದೆ.

ಎರಡನೆಯ ಸಂಗತಿಯು (ಇದು ಮೊದಲಿನದಕ್ಕೆ ಸಂಬಂಧಿಸಿಯೇ ಇದೆ) ಏನೆಂದರೆ—ಈ ಸ್ಕೌಟು ನಿಯಮವು, ಯಾವುದನ್ನು ಮಾಡಬಾರದು ಎಂಬುದನ್ನು ಶ್ರಮವಹಿಸಿ ಹೇಳುವ ಬದಲು, ಯಾವುದನ್ನು ಮಾಡಬೇಕು ಎಂಬುದನ್ನೇ ಹೇಳುತ್ತಿರುತ್ತದೆ. 'ನಿಮ್ಮ ಶಿಕ್ಷಣ ಕ್ರಮದ ಮೂಲಭಾವವು ನಿಷೇಧಾರ್ಥಕವಾಗಿರುವುದಕ್ಕಿಂತ ವಿಧ್ಯರ್ಥಕವಾಗಿರಲಿ, ಎಂದರೆ—ಕೆಟ್ಟದ್ದನ್ನು ಮಾಡಬಾರದು ಎಂದು ಬಾಲಕರಿಗೆ ನಿಷೇಧಿಸುವ ಬದಲು ಒಳ್ಳೆಯದನ್ನು ಮಾಡತಕ್ಕದ್ದು ಎಂದು ವಿಧಿಸುವಂತಿರಲಿ' ಎಂಬುದಾಗಿ ಒಬ್ಬ ಇಂಗ್ಲೀಷು ಸ್ಕೌಟು ಕಮಿಷನರು ಸ್ಕೌಟು ಉಪಾಧ್ಯಾಯರುಗಳಿಗೆ ಹೇಳಿದಾಗ ಈ ನಿಯಮದ ತತ್ವವನ್ನೇ ಪ್ರತಿಪಾದಿಸುತ್ತಿದ್ದನು. ಒಳ್ಳೆಯದನ್ನೇ ಮಾಡುವಂತೆ ಶಿಕ್ಷಿತನಾದ ಉತ್ತೇಜಿತನಾದ ಹುಡುಗನು ಹುಡುಗನೇಕೆ, ದೊಡ್ಡವನೂ ಸ್ವಭಾವತಃ ಕೆಟ್ಟದರ ಕಡೆಗೆ ಹೋಗನು. ಸ್ಕೌಟುನಿಯಮವು ಅಪೇಕ್ಷಿಸುವಂಥ ಪರೋಪಕಾರನಿರತನಾದ ಸ್ಕೌಟು ಬಾಲಕನು ಕೇಡನ್ನು ತನಗೂ ಉಂಟುಮಾಡಿಕೊಳ್ಳುವುದಿಲ್ಲ, ಇತರರಿಗೂ ಉಂಟುಮಾಡುವುದಿಲ್ಲ. ನೆರೆಹೊರೆಯವರಿಗೂ ದೇಶಕ್ಕೂ ನಿಜವಾದ ಉಪಕಾರವನ್ನು ಮಾಡದವನು ಅಹಿಂಸಾಮೂರ್ತಿಯಾದ ಸಾಧುವಾದರೂ ಅವನ ಜೀವನವು ಒಳ್ಳೆಯ ಜೀವನವಲ್ಲ—ಎಂಬುದೇ ಸ್ಕೌಟು ನಿಯಮವಾಗಿರುತ್ತದೆ.

ಈ ಸಭೆಯಲ್ಲಿರುವ ಯಾವ ಸ್ಕೌಟು ಹುಡುಗನೇ ಆಗಲಿ, ಮೊದಲನೆಯ ದರ್ಜೆಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವವರೆಗೂ, ಚಿಕಿತ್ಸವಿದ್ಯೆಯ ಬಿರುದನ್ನು ಪಡೆಯುವವರೆಗೂ ತೃಪ್ತಿ ಹೊಂದುವುದಿಲ್ಲವೆಂದು ನಾನು ತಿಳಿಯುತ್ತೇನೆ. ಆ ಯೋಗ್ಯತಾಪತ್ರಗಳಿಂದ ಆ ಸ್ಕೌಟು ಹುಡುಗನು ಸರ್ವತೋಮುಖ ಗುಣಪೂರ್ಣನಾದ ಪ್ರಜೆಯೆಂದೂ ನಿಜವಾಗಿಯೂ ಪ್ರಯೋಜನಕಾರಿಯೆಂದೂ ಸೂಚಿತವಾಗುವುದು. ಸ್ಕೌಟು ಹುಡುಗನು ಇಷ್ಟು ಮುಂದುವರಿದಾಗ ತನ್ನ ವಿದ್ಯಾಭ್ಯಾಸಕ್ಕೆ ನಿಜವಾಗಿಯೂ ಆಗತಾನೆ ಮೊದಲುಮಾಡಿರುವನೆಂಬುದು ಒಂದು ರೀತಿಯಲ್ಲಿ ಸ್ವಾರಸ್ಯವಾದ ವಿಷಯ. ದೋಷಯುಕ್ತವೆಂದು ನಿಂದಿತವಾದ ಪರೀಕ್ಷಾ ಪದ್ಧತಿಯನ್ನು ಸ್ಕೌಟು ಶಿಕ್ಷಣ ಕ್ರಮವೂ ಅನುಸರಿಸಿದೆ; ಆದರೆ ಈ ಒಂದು ಸಂದರ್ಭದಲ್ಲಂತೂ ಗೊಣಗಾಡಲೇನೂ ಕಾರಣವಿಲ್ಲ. ಸ್ಕೌಟು ಹುಡುಗನು ತೇರ್ಗಡೆ ಹೊಂದಬಹುದಾದ ಪರೀಕ್ಷೆಗಳ ಪಟ್ಟಿಯನ್ನು ನೀವೆಲ್ಲರೂ ನೋಡಿರುವುದರಲ್ಲಿ ಸಂದೇಹವಿಲ್ಲ. ಅವುಗಳೆಲ್ಲವೂ ಕಾರ್ಯರೂಪಗಳಲ್ಲೇ ಇರುವುವು. ಹೆಚ್ಚುಕಡಿಮೆ ಪ್ರತಿಯೊಂದು ಕೈಗೆಲಸದಲ್ಲಿಯೂ ಪರೀಕ್ಷೆ ಕೊಟ್ಟು ಸ್ಕೌಟು ಹುಡುಗನು ಬಿರುದುಗಳನ್ನು ಪಡೆಯಬಹುದೆಂದು ನನ್ನ ಗಮನಕ್ಕೆ ಬಂದಿದೆ; ಇವುಗಳಲ್ಲಿ "ಪ್ರಾಣಿಗಳ ಮಿತ್ರ" ಎಂಬ ಬಿರುದಿಗಾದರೂ, ನಮ್ಮ ಸಣ್ಣ ವಯಸ್ಸಿನ ಉತ್ಸಾಹಶಾಲಿಗಳ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಥಮಸ್ಥಾನವಿರಬೇಕೆಂದು ನನಗೆ ತೋರುತ್ತದೆ. ಈ ವಿದ್ಯೆಗಳೆಂದರೆ, ಪ್ರತಿಯೊಂದೂ ಜ್ಞಾನಲಾಭ; ಮತ್ತು ಹೊಸಪರಿಯ ಯೋಗ್ಯತೆ ಮತ್ತು ಶಕ್ತಿ. ಈ ಸಂಸ್ಥಾನದಲ್ಲಿ ಸ್ಕೌಟು ಶಿಕ್ಷಣ ಕ್ರಮವು ಇನ್ನೂ ಶೈಶವಾವಸ್ಥೆಯಲ್ಲಿದೆ; ಆದುದರಿಂದ ಈ ಪರೀಕ್ಷಾಭಿಪ್ರಾಯವು ಸಂಪೂರ್ಣಾಚರಣೆಗೆ ಬರಲು ಕೆಲವುಕಾಲವಾಗಬಹುದು; ಆದರೆ ಅಷ್ಟರೊಳಗಾಗಿ ಈ ಪರೀಕ್ಷೆಗಳಲ್ಲಿ ಪ್ರತಿಯೊಂದರವಿಚಾರವಾಗಿಯೂ ಬೇಕಾದ ಶಿಕ್ಷಣಗಳನ್ನು ಕೊಡುವ "ಬಾಯ್ ಸ್ಕೌಟ್ ಟೆಸ್ಟ್" ಎಂಬ ಅಧಿಕಾರಿಕ ಪುಸ್ತಕವು ಎಲ್ಲಾ ದೊಡ್ಡ ಸ್ಕೌಟು ಹುಡುಗರ ಕೈಗಳಲ್ಲಿರುವುದು ಆವಶ್ಯಕ.

ಇನ್ನು ನಾನು ಮಾಡಬೇಕಾಗಿ ಉಳಿದಿರುವುದು ಒಂದೇ-ಸ್ವಂತ ಅಭಿವೃದ್ಧಿಯನ್ನು ಪಡೆಯಬೇಕೆಂದಿರುವ ಮತ್ತು ಸೋದರ ಪ್ರಜೆಗಳ ಶ್ರೇಯಸ್ಸನ್ನು ಬೆಳಸಬೇಕೆಂದಿರುವ ನಿಮ್ಮ ಸ್ತುತ್ಯವಾದ ಅಭಿಲಾಷೆಯಲ್ಲಿ ನಿಮಗೆ ಅವಿಚ್ಛಿನ್ನವಾದ ಜಯಲಾಭವುಂಟಾಗಲೆಂದು ಹಾರೈಸುವೆನು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸಾರ್ವತ್ರಿಕ ವಿಷಯಗಳು.

(ಆರ್ಥಿಕವಿಷಯ).

ಅರಿಕೆ—ಸಣ್ಣ ನೌಕರರ ಸಂಬಳಗಳನ್ನು ಬ್ರಿಟಿಷ್ ಇಂಡ್ಯಾದಲ್ಲಿರುವ ಪ್ರಮಾಣಕ್ಕೆ ಸರಿಯಾಗಿ ಹೆಚ್ಚಿಸಿಕೊಡಬೇಕು.

ಉತ್ತರ—ಈಗಣ ದುಡ್ಡಿನ ಕೊರತೆಯಲ್ಲಿ ಇಂಥ ವಿಷಯವನ್ನು ಆಲೋಚಿಸಲಾಗುವುದಿಲ್ಲ.

ಅ—ಸ್ಥಲಾಂತರಕ್ಕೆ ವರ್ಗಮಾಡಲ್ಪಟ್ಟ ನೌಕರರಿಗೆ ರಜಾಕ್ಕೆ ಹಕ್ಕಿಲ್ಲದ ಸಂದರ್ಭದಲ್ಲಿ ಅವರು ಗೊತ್ತಾದ ಸ್ಥಲಕ್ಕೆ ಹೋಗಿ ಸೇರುವ ಮಧ್ಯದ ಕಾಲಕ್ಕೆ ಸಂಬಳವನ್ನು ತಪ್ಪದೆ ಕೊಡಿಸಬೇಕು.

ಉ—ಇಂಥ ಕೇಸುಗಳು ವರ್ಷದಲ್ಲಿ ಒಂದೆರಡೂ ಬರಲಾರವು. ಇಂಥ ವಿಷಯವನ್ನು ಜನರಲ್ ಸಬ್ಜೆಕ್ಟಾಗಿ ಈ ಸಭೆಗೆ ತರಕೂಡದು.

ಅ—ಕಡಿಮೆ ದರ್ಜೆಯಲ್ಲಿರುವ ಸಂಚಾರಮಾಡುವ ಉದ್ಯೋಗಿಗಳಿಗೆಲ್ಲಾ ಗೊತ್ತಾದ ಪ್ರಯಾಣಬತ್ಯವನ್ನು ಏರ್ಪಡಿಸಬೇಕು.

ಉ—ಪರ್ಯಾಲೋಚನೆಯಲ್ಲಿದೆ.

ಅ—ಸರ್ಕಾರದ ಸಾಲದ ಪತ್ರಗಳನ್ನು ಹೊಂದಿರುವವರು ಬಡ್ಡಿಯನ್ನು ತೆಗೆದುಕೊಳ್ಳುವುದಕ್ಕೂ, ಅದೇ ಬಡ್ಡಿ ಹಣವನ್ನು ಕಂದಾಯಕ್ಕಾಗಿ ಜಮೆ ಕಟ್ಟಿಕೊಳ್ಳುವಂತೆ ಟ್ರೆಜರಿ ಆಫೀಸರುಗಳಲ್ಲಿ ಕೇಳಿಕೊಳ್ಳಲಿಕ್ಕೂ ಅನುಕೂಲಿಸುವಂತೆ ಚಕ್ಕು ಬುಕ್ಕುಗಳನ್ನು ಕೊಡುವುದಾಗಿ ವಾಗ್ದಾನವಾಗಿದ್ದಿತು. ಅದರಂತೆ ನಡೆಯಿಸಿಕೊಡಬೇಕು.

ಉ—ರಸೀದಿ ಬುಕ್ಕನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದ್ದೇವೆಯೇ ಹೊರತು ಚಕ್ಕು ಬುಕ್ಕನ್ನು ಕೊಡುತ್ತೇವೆಂದು ಹೇಳಿಲ್ಲ.

ಅ—ಮೈಸೂರು ಸರ್ಕಾರಿ ಸಾಲದ ಮತ್ತು ರೈಲ್ವೆ ಡಿಬೆಂಚರಿನ ಬಾಂಡುಗಳನ್ನು ಪಡೆದಿದ್ದವರು ಮೃತರಾದರೆ ಅವರ ವಾರಸ್‌ದಾರರಿಗೆ ಉತ್ತರಾಧಿಕಾರದ ಸರ್ಟಿಫಿಕೇಟನ್ನು ಕೊಡಲು ರೆವಿನ್ಯೂ ಅಧಿಕಾರಿಗಳಿಗೆ ಅಧಿಕಾರಕೊಡಬೇಕು.

ಉ—5000 ರೂ. ನೊಳಗಣ ಬಾಂಡುಗಳಿಗೆ ಹಾಗೆ ಮಾಡಲು ನಿರ್ಣಯಿಸಿದೆ. ಮಿತಿಯಿಲ್ಲದಂತೆ ಹಾಗೆ ಮಾಡಲು ಸಾಧ್ಯವಲ್ಲ.

ಅ—ಖಾಸಗಿ ಕಂಪೆನಿಗಳಂತೆ ಪಬ್ಲಿಕ್ ಶಾಖೆಯಲ್ಲಿ ಸಂಸ್ಥಾನದ ಜೀವವಿಮೆ ಪಾಲಿಸಿಗಳ ಮೇಲೆ ಸಾಲಕೊಡಲು ಏರ್ಪಡಿಸಬೇಕು.

ಉ—ರೂಲ್ಸಿನಲ್ಲಿ ಅದಕ್ಕೆ ಅವಕಾಶವಿದೆ. ಸದ್ಯಃ ಸ್ವಲ್ಪ ಕಾಲ ಹಾಗೆ ಮಾಡಲು ಸಾಧ್ಯವಲ್ಲವೆಂದು ನಿರ್ಣಯಿಸಿದೆ.

ಅ—ಮೈಸೂರು ಬೆಂಗಳೂರು ಪಟ್ಟಣಗಳ ಪುರೋಭಿವೃದ್ಧಿ ಕಾರ್ಯಗಳಿಗೆ ಧನಸಹಾಯಮಾಡುತ್ತಿರುವಂತೆ ಉಳಿದ ಡಿಸ್ಟ್ರಿಕ್ಟ್ ಮುಖ್ಯಪಟ್ಟಣಗಳಿಗೂ ಕೊಡಿಸಬೇಕು.

ಉ—ಆ ಬಗೆಗೆ ಈ ವರ್ಷ 25 ಸಾವಿರ ರೂ. ಗಳನ್ನು ಕೊಡಲು ಏರ್ಪಡಿಸಿದೆ.

ಅ—ರೀಫಂಡ್ ಆಗಲು ಅಪ್ಪಣೆಯಾದ ಹಣವನ್ನು ಸಂಬಂಧಪಟ್ಟ ಜನರಿಗೆ ಕೊಡಲು ಕಾಲಕ್ಲ್ಪ್ತಿಯನ್ನು ಏರ್ಪಡಿಸಬೇಕು.

ಉ—ಪರ್ಯಾಲೋಚನೆಯಲ್ಲಿದೆ.

ಅ—ಧರ್ಮಕಾರ್ಯಗಳಿಗಾಗಿ ಡಿಪಾಜಿಟ್ ಮಾಡಿದ ಹಣಕ್ಕೆ ಸೇಕಡಾ 6 ರಂತೆಯಾದರೂ ಬಡ್ಡಿಕೊಡಲು ಏರ್ಪಡಿಸಬೇಕು.

ಉ—ಮಾಡುತ್ತೇವೆ.

(ರೆವಿನ್ಯೂ)

(ಬೇಲೂರು ತಾಲ್ಲೂಕನ್ನು ಹಾಸನ ಡಿಸ್ಟ್ರಿಕ್ಟಿನಿಂದ ತಪ್ಪಿಸಿ, ಕಡೂರು ಡಿಸ್ಟ್ರಿಕ್ಟಿಗೆ ಸೇರಿಸಬೇಕು. ಡಿಸ್ಟ್ರಿಕ್ಟುಗಳ ಸಂಖ್ಯೆಯನ್ನು ಕಡಿಮೆಮಾಡಬೇಕು. ಎಂಬ ಎರಡು ವಿಷಯಗಳಮೇಲೂ ಸಭಿಕರುಗಳಲ್ಲಿ ಭಿನ್ನಾಭಿಪ್ರಾಯಗಳು ಹೊರಪಟ್ಟುದರಿಂದ ಇದ್ದಂತೆಯೇ ಇರಬೇಕಾಗಿ ತೀರ್ಮಾನವಾಯಿತು.)

ಅ—ಸಬ್ ತಾಲ್ಲೂಕು ನೌಕರರ ಸಂಬಳವನ್ನು ಬೇಗನೆ ಹೆಚ್ಚಿಸಿಕೊಡಬೇಕು.

ಉ—ವಿಚಾರದಲ್ಲಿದೆ.

ಅ—ಪ್ರತಿ ತಾಲ್ಲೂಕಿಗೂ ಹೆಚ್ಚು ಸೇಕದಾರರನ್ನು ತಪ್ಪಿಸಿ, ವ್ಯವಸಾಯ ಶಾಸ್ತ್ರಾಭಿಜ್ಞರಾಗಿರುವ ಒಬ್ಬೊಬ್ಬ ಸೇಕನಾರರನ್ನೇ ನಿಯಮಿಸಬೇಕು.

ಉ—ಪರ್ಯಾಲೋಚನೆಯಲ್ಲಿದೆ.

ಅ—ಸೇಕದಾರರ ಕುದುರೆ ಬತ್ಯ 10 ರೂ. ಇರುವುದನ್ನು 20ಕ್ಕೆ ಹೆಚ್ಚಿಸಬೇಕು.

ಉ—ನೋಡುತ್ತೇವೆ.

ಅ—ಪಟೇಲ್ ಶಾನುಭೋಗರಿಗೆ ಪೋಟಗಿ ಪದ್ಧತಿಯನ್ನು ತಪ್ಪಿಸಿ, ತಿಂಗಳುಗಟ್ಟಲೆ ಸಂಬಳವನ್ನೇರ್ಪಡಿಸಿ ಪರ್ಕ್ರಾಯಿಸುವ ಕ್ರಮವನ್ನು ಏರ್ಪಡಿಸಬೇಕು.

ಉ—ರೆವಿನ್ಯೂ ರೂಲ್ಸ್ ಪ್ರಕಾರ ಅವರುಗಳಿಗೆ ಸಂಬಳ ಕೊಡಲು ಅವಕಾಶವಿಲ್ಲ. ಸಿಸ್ಟಂ ಬದಲಾಯಿಸದಿದ್ದರೆ ಅದು ಸಾಧ್ಯವಲ್ಲ.

ಅ—ಕಾರ್ಯದಕ್ಷರೆಂದು ತೋರುವ 50 ಮಂದಿ ಪಟೇಲರಂತೆ ಪ್ರತಿ ವರ್ಷವೂ ಆರಿಸಿಕೊಂಡು ಅವರ ಪೋಟಗಿಯನ್ನು ಸೇಕಡಾ 50 ರಷ್ಟು ಹೆಚ್ಚಿಸಬೇಕು.

ಉ—ಅಂಥ ಪಟೇಲರನ್ನು ಚುನಾಯಿಸತಕ್ಕವರಾರು? (ಡಿಸ್ಟ್ರಿಕ್ಟ್ ತಾ|| ಅಧಿಕಾರಿಗಳು) ಹೀಗೆ ಮಾಡುತ್ತ ಹೋದರೆ ಬಡ್ಜೆಟ್ ಎಸ್ಟಿಮೇಟು ಬಹಳ ಹೆಚ್ಚಾಗಿ ಹೋಗುವುದು. ಈ ವರ್ಷದ ಬಡ್ಜೆಟ್ಟಿನಲ್ಲಿ ಶಾನುಭಾಗ ಪಟೇಲರ ಪೋಟಗಿಗೆ 1 ಲಕ್ಷವನ್ನು ಹೆಚ್ಚಿಸಿ ಒಟ್ಟು 9 ಲಕ್ಷ ಮಾಡಿದೆ. ಇನ್ನು ಕೆಲಕಾಲ ಕಳೆದಮೇಲೆ ಇನ್ನಷ್ಟನ್ನು ಹೆಚ್ಚಿಸಲು ಯೋಚಿಸಬಹುದು. ಅಲ್ಲದೆ ಸಣ್ಣ ಫಿರ್ಕಾಗಳನ್ನು ತಪ್ಪಿಸಿ 4-5 ಫಿರ್ಕಾಗಳನ್ನು ಒಟ್ಟುಗೂಡಿಸಿ ಶಾನುಬೋಗರಿಗೆ ಪೋಟಗಿ ಕೊಟ್ಟರೆ ಅವರ ಜೀವನಕ್ಕೆ ಅನುಕೂಲವಾಗಬಹುದೇ ಹೊರತು ಸೇಕಡಾ 25-50 ರಷ್ಟನ್ನು ಹೆಚ್ಚಿಸಿದರೂ ಅವರ ಜೀವನಕ್ಕೆ ಅದರಿಂದ ಅಷ್ಟೇನೂ ಅನುಕೂಲವಾಗಲಾರದು. 8 ಆಣೆಯಷ್ಟು ಹೆಚ್ಚಿದರೆ ಏನಾದೀತು? ಮತ್ತು ಇದು ದೊಡ್ಡ ವಿಷಯವಾದುದರಿಂದ ಸರ್ಕಾರದವರು ಪರ್ಯಾಲೋಚಿಸುತ್ತಲೇ ಇದ್ದಾರೆ.

ಅ—ಇನಾಂ ಗ್ರಾಮಗಳಲ್ಲಿ ಗ್ರಾಮೋದ್ಯೋಗಿಗಳು ಸರಿಯಾಗಿ ಕೆಲಸಮಾಡದೆ ಹೋದರೆ ಅವರಿಗೆ ಕೊಡಲ್ಪಟ್ಟಿರುವ ಇನಾಂ ಭೂಮಿಯನ್ನು ದಂಡರೂಪವಾಗಿ ವಹಿಸಿಕೊಳ್ಳಲು ಜೋಡಿದಾರರಿಗೆ ಅಧಿಕಾರಕೊಡಬೇಕು.

ಉ—ಇನಾಂದಾರರ ಕಮಿಟಿ ರಿಪೋರ್ಟಿನ ವಿಚಾರಕಾಲದಲ್ಲಿ ಇದೂ ಪರ್ಯಾಲೋಚಿಸಲ್ಪಡುವುದು.

ಅ—4-5 ವರ್ಷ ಮಳೆಯಿಲ್ಲದೆ ಕೆರೆ ತುಂಬದೆ ಫಸಲಾಗದೆ ಇರುವ ಭೂಮಿಗೂ, ಹೊಳೆಗಳ ನಾಲಾ ಕೆಳಗಿರುವ ಭೂಮಿಗೂ ಒಂದೇ ತೆರದ ಕಂದಾಯವು ಹಾಕಲ್ಪಟಿದೆ. ಆದಕಾರಣ ಮದರಾಸಿನ ಕಂದಾಯ ಮಾಫಿ ಪದ್ಧತಿಯನ್ನು ನಮ್ಮಲ್ಲಿಯೂ ಜಾರಿಗೆ ತರಬೇಕು.

ಉ—ನಮ್ಮ ಕಂದಾಯದ ಪದ್ಧತಿಯು ಬೊಂಬಾಯಿ ಪದ್ಧತಿಯನ್ನನುಸರಿಸಿದೆ. ಈ ವಿಷಯದಲ್ಲಿ ಸರ್ಕಾರದಪ್ಪಣೆಯು ಹಿಂದೆಯೇ ಆಗಿದೆ. ನಮ್ಮ ಭೂಗಂದಾಯದ ಪದ್ಧತಿಯನ್ನೆಲ್ಲಾ ಬೊಂಬಾಯಿ ವಿಧಿಯಂತೆ ವ್ಯವಹಾರಕ್ಕೆ ತರುವುದೇ ಅನುಕೂಲವೆಂದು ಹಿಂದೆ ಇದೇ ಸಭೆಯಲ್ಲಿ ಕೇಳಿಕೊಂಡುದರ ಮೇಲೆ ಹಾಗೆ ಮಾಡಲಾಗಿದೆ. ಇದನ್ನು 3 ವರ್ಷಕಾಲ ಪರೀಕ್ಷೆ ಮಾಡಿ ತದನಂತರ ಪದ್ಧತಿಯನ್ನು ಬದಲಾವಣೆಮಾಡಬೇಕೇ ಬೇಡವೇ ಎಂಬುದನ್ನು ವಿಚಾರಮಾಡಬಹುದು.

ಅ—ಮಳೆಯಾಗದೆ ಕೆರೆ ತುಂಬದೆ ತರೀ ಫಸಲಾಗದೆ ಇದ್ದಾಗ ಅಂಥ ಭೂಮಿಗೆ ಖುಷ್ಕಿ ಕಂದಾಯವನ್ನು ತೆಗೆದುಕೊಳ್ಳುವಂತೆ ಅಪ್ಪಣೆಕೊಡಿ.

ಉ—ಸ್ಪೆಷಲ್ ಕೇಸಿದ್ದರೆ ಅರ್ಜಿಕೊಡಿ. ನವಂಬರ್ ಕೊನೆಯೊಳಗೆ ಅರ್ಜಿಕೊಟ್ಟರೆ ಜಮಾಬಂದಿ ಆಫೀಸರು ವಿಚಾರ ಮಾಡಿ ವರದಿಮಾಡುತ್ತಾರೆ. ರೂಲ್ಸಿಗನುಸರಿಸಿ ಸರ್ಕಾರದವರು ನಡೆಯಿಸಿಕೊಡುತ್ತಾರೆ.

ಅ—ಕೆರೆ ತುಂಬಿದ್ದ ಅಥವಾ ತುಂಬದೆ ಹೋಗಿರುವ ವರದಿಯನ್ನು ಸರ್ಕಾರದವರೇ ತರಿಸಿಕೊಳ್ಳುವಂತೆ ಮಾಡಬೇಕು.

ಉ—ನಾವೂ ಮಾಡುತ್ತೇವೆ. ಆದರೆ ಪ್ರಜೆಗಳೇ ತಿಳಿಯಿಸಿಕೊಂಡರೆ ಅವರಿಗೇ ಅನುಕೂಲ. ಈ ವರ್ಷದ ಮಳೆಯ ಪರ್ಯವಸಾನವನ್ನು ನೋಡಿಕೊಂಡು ಈ ಸಾಲಿಗೆ ಏನುಮಾಡಬೇಕೋ ಮಾಡುತ್ತೇವೆ.

ಅ—ಜಮಾನುಗಳಿರುವ ತಾಲ್ಲೂಕು ಖಜಾನೆಗೇ ಕಂದಾಯವನ್ನು ಕಳಿಸಬೇಕೆಂಬ ನಿರ್ಬಂಧವನ್ನು ತಪ್ಪಿಸಿ, ಪೂರ್ವದಲ್ಲಿದ್ದಂತೆ ಯಾವ ತಾಲ್ಲೂಕು ಖಜಾನೆಯಲ್ಲಾದರೂ ಕಂದಾಯದ ಹಣವನ್ನು ತೆಗೆದುಕೊಂಡು ಸಂಬಂಧಪಟ್ಟ ತಾಲ್ಲೂಕಿಗೆ ಆ ಸಂಗತಿಯನ್ನು ತಿಳಿಯಿಸುವಂತೆ ಅಪ್ಪಣೆಯಾಗಬೇಕು.

ಉ—ಪರ್ಯಾಲೋಚನೆಮಾಡುತ್ತೇವೆ.

ಅ—ರೆವಿನ್ಯೂ ಹೊರತು ಇತರ ಇಲಾಖಾ ಆಫೀಸರುಗಳು ತಂತಮ್ಮ ಇಲಾಖೆಯ ಮೂಲಕವಾದ ಹುಟ್ಟುವಳಿಯನ್ನು ಅವರವರೇ ವಸೂಲ್ಮಾಡುವಂತೆ ಅಪ್ಪಣೆಯಾಗಬೇಕು.

ಉ—ಸರ್ಕಾರಕ್ಕೆ ಅದರ ಜಬಾಬ್ದಾರಿಯಿದೆ. ಅವರು ನೋಡಿಕೊಳ್ಳುತ್ತಾರೆ. ಸಶೇಷ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ರೇಷ್ಮೆ ಕೈಗಾರಿಕೆ ಮತ್ತು ವ್ಯವಸಾಯಾಭಿವೃದ್ಧಿ ಮಂಡಲಿ ಶಿಡ್ಲಘಟ್ಟ.

ಶಿಡ್ಲಘಟ್ಟದ ಪ್ರಜಾಮಿತ್ರಮಂಡಲಿಯ ಮೆಂಬರುಗಳು 29-10-22ನೆ ಭಾನುವಾರ ಸಾಯಂಕಾಲ ಈ ಸಂಘದ ಪ್ರೆಸಿಡೆಂಟರಾದ ಮ|| ಎಸ್. ಹಂಪಯ್ಯನವರ ಅಧ್ಯಕ್ಷತೆಯಲ್ಲಿ ಜನರಲ್ ಮೀಟಿಂಗು ನಡಿಸಿ, ತಮ್ಮ ಸಮಾಜದ ಮೆಂಬರುಗಳೆಲ್ಲರೂ, ವ್ಯವಸಾಯ ಮತ್ತು ರೇಷ್ಮೆಕೈಗಾರಿಕೆ ಕಸಬುದಾರರೇ ಆಗಿರುವುದರಿಂದ ಈ ಕಾರ್ಯಗಳ ಅಭಿವೃದ್ಧಿ ವಿಚಾರದ ಸೌಕರ್ಯಕ್ಕಾಗಿ, ಈ ಆಗಾಮಿಯಿಂದ ಸಂಘದ ಹೆಸರು (ಶಿಡ್ಲಘಟ್ಟದ ರೇಷ್ಮೆಕೈಗಾರಿಕೆ ವ್ಯವಸಾಯಾಭಿವೃದ್ಧಿಮಂಡಲಿ) ಎಂಬದಾಗಿ ಕರೆಯಲ್ಪಡಬೇಕೆಂತಲೂ, ಪ್ರತಿತಿಂಗಳ ಕಡೆಯ ಭಾನುವಾರದಲ್ಲೂ ಮೀಟಿಂಗು ನಡೆಯತಕ್ಕದ್ದೆಂತಲೂ ತೀರ್ಮಾನ ಮಾಡಿಕೊಂಡಿರುತ್ತಾರೆ. ಪ್ರೆಸಿಡೆಂಟ್.

ದೇವನಹಳ್ಳಿ ತಾ|| ವಡಿಗೇನಹಳ್ಳಿ.

ಒಂದುವಾರದಿಂದೀಚೆಗೆ ಸುಮಾರು ಮೂರು ನಾಲ್ಕು ಐದು ಹದ ಮಳೆಬಿದ್ದು ಹೊಲಗಳು ಚೆನ್ನಾಗಿರುತ್ತವೆ. ರೈತರೆಲ್ಲರೂ ಹಣಮ್ಮಬಿಗ ಳಾಗಿರುತ್ತಾರೆ. ಕೆರೆಗೆ ನಾಲ್ಕು ಐದು ತಿಂಗಳ ನೀರು ಬಂದಿರುತ್ತದೆ.

ಸುತ್ತುಮುತ್ತಲೂ ಗ್ರಾಮಗಳಲ್ಲಿ ಗಲಾಟೆ ಸಾಧಾರಣವಾಗಿದೆ. ಈ ಊರಿನಲ್ಲಿ ಆರೇಳು ವರ್ಷಗಳಿಂದ ಧರ್ಮಪರಸ್ಪರಸಹಾಯ ಸಂಘದ ಸೊಸೈಟಿ ಒಂದು ಏರ್ಪಾಟಾಗಿ ನಡೆಯುತ್ತಲಿದೆ. ಯಾವುದೋ ಒಂದು ನ್ಯೂನತೆಯಿಂದ ಶ್ರೀ ಜಯಚಾಮರಾಜೇಂದ್ರ ಪರಸ್ಪರ ಸಹಾಯಸಂಘದ ಸೊಸೈಟಿಯೆಂಬ ಹೆಸರಿನಿಂದ ಎರಡನೇದು ಸ್ಥಾಪಿತವಾಗಿ ಒಂದು ವರ್ಷದಿಂದೀಚೆಗೆ ಪ್ರಾರಂಭವಾಗಿರುತ್ತದೆ. ಇದಕ್ಕೆ ಮೇಲ್ಕಂಡ ಒಂದನೇ ಸೊಸೈಟಿಗೆ ಸಂಬಂಧಪಟ್ಟವರು ಇದನ್ನು ರಿಜಿಸ್ಟರ್ ಮಾಡದಿರುವುದಕ್ಕೆ ಬೇಕಾದ ತೊಂದರೆಗಳನ್ನು ಸರ್ಕಾರದಲ್ಲಿ ನಡೆಸಿರುವರೆಂದು ಕೇಳುತ್ತೇವೆ. ಘನವುಳ್ಳ ಸರ್ಕಾರದವರು ಈ ಸೊಸೈಟಿ ಮೇಲೆ ಗಮನವಿಟ್ಟು ವ್ಯವಸಾಯ, ಕೈಗಾರಿಕೆ ಮೊದಲಾದುವುಗಳಿಗೆ ಉಂಟಾಗಿರುವ ಕಷ್ಟಗಳನ್ನು ನೀಗಿಸಿ ಜಾಗ್ರತೆ ರಿಜಿಸ್ಟರ್ ಮಾಡಿಸಬೇಕೆಂದು ಹಾರೈಸುತ್ತೇವೆ. 3800 ಪ್ರಜಾಸಂಖ್ಯೆಯಿಂದ ಕೂಡಿದ ಈ ಗ್ರಾಮದಲ್ಲಿ ಇಬ್ಬರು ಸ್ಟಾಂಪುವೆಂಡರುಗಳು ಇದ್ದಾರೆ. ಅವರಲ್ಲಿ ಒಬ್ಬರು ವ್ಯಾಪಾರಸ್ಥರು. ಅವರು ಯಾವಾಗಲೂ ವ್ಯಾಪಾರಕ್ಕಾಗಿ ಸರ್ಕೀಟು ಮಾಡುತ್ತಿರುತ್ತಾರೆ. ವಾರಕ್ಕೆ ಮೂರುದಿನಗಳು ಊರಿನಲ್ಲಿದ್ದರೆ ಹೆಚ್ಚು. ಮತ್ತೊಬ್ಬರು ಪೋಸ್ಟ್‌ಮಾಸ್ಟರು ಎಂಬದಾಗಿ ಹೆಸರು, ಅವರಿಗೆ ಆಕ್ಟಿಂಗ್‌ವೆಂಡರು ಸ್ಕೂಲ್ಮಾಸ್ಟರು. ಅವರಿಗೆ ಪೌರೋಹಿತ್ಯದ ಗಲಾಟೆ, ಸ್ಕೂಲುಕೆಲಸ, ಹಳ್ಳಿಗಳ ಸರ್ಕೀಟು. ಒಂದು ಛಾಪಾಕಾಗದ ಬೇಕಾಗಿದ್ದರೆ ಎರಡುಮೂರು ದಿನಗಳು ಕಾಯಬೇಕಾಗುತ್ತದೆ. ಆದ್ದರಿಂದ ವೆಂಡರುಗಳು ಮುಂದೆ ಇಂಥ ತೊಂದರೆಗೆ ಆಸ್ಪದವಿಲ್ಲದಂತೆ ನೋಡಿಕೊಳ್ಳುತ್ತಾರೆಂದು ನಂಬುತ್ತೇವೆ. ಈ ಊರಿನಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಇಂಗ್ಲಿಷ್ ಆಸ್ಪತ್ರೆಗೆ ಅನುಭವಸ್ಥರಾದ ಡಾಕ್ಟರವರು ಎಂದಿಗೆ ಬರುತ್ತಾರೋ ಎಂಬದಾಗಿ ಜನಗಳು ಹಾರೈಸುತ್ತಲಿದ್ದಾರೆ. ಈ ಊರಿನಲ್ಲಿ ಆಗುವ ಶುಕ್ರವಾರದ ಸಂತೆಯಲ್ಲಿ ಪಟೇಲರು ಮೊದಲಾದವರು ತರ್ಕಾರಿ, ವೀಳ್ಯದೆಲೆ, ಇತರ ಪದಾರ್ಥಗಳ ಸುಂಕ ಎತ್ತುವುದು ತಪ್ಪಲಿಲ್ಲ. ಜನಗಳಿಗೆ ತೊಂದರೆಪಡಿಸಿ ಸುಂಕ ಎತ್ತುವುದನ್ನು ಮ್ಯುನಿಸಿಪಾಲಿಟಿಯವರು ನಿಗಾಮಾಡಿ ತಪ್ಪಿಸುವರೆಂದು ನಂಬುತ್ತೇವೆ. ಪ್ರತ್ಯಕ್ಷದರ್ಶಿ.

ಸಾಂಶಿ; ತಾಲ್ಲೂಕು ಕುಂದಗೋಳ, ಜಿಲ್ಲಾ ಧಾರವಾಡ.

ತಾ|| 25-10-22ನೆ ದಿವಸ ಸಾಯಂಕಾಲ 6 ಗಂಟೆಗೆ ಶ್ರೀಮನ್ಮಹಾನಿರಂಜನ ಮೃತ್ಯುಂಜಯ ಸ್ವಾಮಿಗಳವರು ದಾವಣಗೇರಿ ಇವರ ಕೃಪಾಛತ್ರದ ಕೆಳಗೆ ಶ್ರೀ ವಿರಕ್ತಮಠದಲ್ಲಿ ಮ|| ಶಿವಲಿಂಗಪ್ಪ ಅಣ್ಣ ಕುಂಬಿ ಇವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಾಮಾಜಿಕ ಸಭೆಯು ಜರುಗಿಸಲ್ಪಟ್ಟಿತು. ಈ ಸಭೆಯಲ್ಲಿ ಮ|| ಚೆನ್ನಪ್ಪಗೌಡಾ ಪಾಟೀಲ ಸ್ಕೂಲ್‌ಮಾಸ್ತರ ಚಿಕ್ಕಮಲ್ಲೂರ, ಮ|| ಶಂಕರಗೌಡಾ ಪಾಟೀಲ ಸ್ಕೂಲ್‌ಮಾಸ್ತರ ಸಾಂಶಿ, ಮ|| ಸೋಮನಗೌಡ ಪಾಟೀಲ ಮುಡಶಿಬಣ, ಮ|| ಪಂಚಪ್ಪ ಕೋರಿ ಇವರುಗಳ ವ್ಯಾಖ್ಯಾನಗಳು ಸಾಮಾಜಿಕ ವಿಷಯಗಳ ಮೇಲೆ ಚೆನ್ನಾಗಿ ಆದವು. ನಂತರ ಸದರಿ ಶ್ರೀಗಳವರ ಅಮೃತತುಲ್ಯವಾದ ಉಪದೇಶವನ್ನು ಎಲ್ಲರೂ ಆನಂದದಿಂದ ಕೇಳಿ ಧನ್ಯರಾದರು. ತರುವಾಯ ಅಧ್ಯಕ್ಷರ ಸಮಾರೋಪಣ ಭಾಷಣವಾದನಂತರ ಸದರಿ ಶ್ರೀಗಳವರ ಅಪ್ಪಣೆಮೇರೆಗೆ ವೀರಶೈವ ತರುಣಸಂಘ ಮತ್ತು ಇದಕ್ಕೆ ಸಂಬಂಧಿಸಿ ವೀರಶೈವ ಬಸವೇಶ್ವರ ಲೈಬ್ರೆರಿ ಸ್ಥಾಪನ ಮಾಡಲ್ಪಟ್ಟಿತು. ಸದರೀ ಸಂಘಕ್ಕೂ ಮತ್ತು ಲೈಬ್ರೆರಿಗೂ ಇಲ್ಲಿಯ ಸದ್ಗೃಹಸ್ಥರು ಮ|| ಬಸವನಗೌಡ ದೇವನಗೌಡ ಪಾಟೀಲ ಕುಲಕರ್ಣಿ ಹನುಮಂತಗೌಡರು ಮುಡಶಿಬಣ, ಚೆನವೀರಗೌಡರು ಹಿರೇಬಣ, ಶಂಕರಗೌಡರು ಹಿರೇಬಣ, ಸಂಗಯ್ಯ ಕಂಬಿ ಅಡಿವೆಪ್ಪಗೌಡರು ಪಾಟೀಲ ಮೊದಲಾದ ಜನರು ಒಳ್ಳೆ ಸಹಾಯಮಾಡಿದರು. ನಂತರ ಶ್ರೀಗಳವರ ಹೆಸರಿನಿಂದ ಜಯಘೋಷ ಮಾಡಿಸಿ ಸಭೆಯು ಮಂಗಲವಾಯಿತು.

ಅಡಿವೆಪ್ಪಗೌಡ ಚೆನವೀರಗೌಡ ಪಾಟೀಲ.

ಅಡ್ಡಪಲ್ಲಕ್ಕಿಮಹೋತ್ಸವ, ಬಳ್ಳಾರಿ.

ಈ ಪಟ್ಟಣಕ್ಕೆ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳ ಸ್ವಾರಿಯು ತಾ|| 26-10-22 ನೆ ಗುರುವಾರ ಉದಯ 8 ಗಂಟೆಗೆ ದಯಮಾಡಿಸಲು ಪಟ್ಟಣದ ಬಹಿರ್ದ್ವಾರದಲ್ಲಿ ಸಮಸ್ತ ಭಕ್ತಮಾಹೇಶ್ವರರೂ ಕಾದುಕೊಂಡಿದ್ದು ಮಹಾಸ್ವಾರಿಯು ದಯಮಾಡಿಸುತ್ತಲೇ ಸುಸ್ವಾಗತವನ್ನಿತ್ತರು. ತರುವಾಯ ಪಂಚಕಲಶಯುಕ್ತವಾದ ಅಡ್ಡಪಲ್ಲಕ್ಕಿಯುತ್ಸವವು ಸಮಸ್ತ ಬಿರುದಾವಳಿಗಳಿಂದ ಹೊರಟು ಪಟ್ಟಣದ ಮುಖ್ಯಬೀದಿಗಳಲ್ಲಿ ಹಾಯಿದು 12 ಗಂಟೆಗೆ ಬಿಡಾರಕ್ಕೆ "ಸೂಗಮ್ಮನ ಚೌಕಿಗೆ" ಬಂದು ತಲ್ಪಿತು. ಉತ್ಸವಕಾಲಕ್ಕೆ ಡಿ|| ಕಲೆಕ್ಟರ್ ದೊರೆಗಳು, ಪೋಲೀಸು ಸೂಪರಿಂಟೆಂಡೆಂಟ್ ಸಾಹೇಬರು, ಸಬ್‌ಮ್ಯಾಜಿಸ್ಟ್ರೇಟರು, ಸರ್ಕಲ್ ಇನ್ಸ್‌ಪೆಕ್ಟರು, ಸಬ್‌ಇನ್ಸ್‌ಪೆಕ್ಟರು ಮೊದಲಾದ ಸರಕಾರಿ ಅಧಿಕಾರಸ್ಥರು ಹಾಜರಿದ್ದು ರಿಜರ್ವ್ ಹಾಗು ಟೌನ್ ಪೋಲೀಸರಿಂದ ಯೋಗ್ಯಬಂದೋಬಸ್ತು ಇಟ್ಟಿದ್ದರು. ಪರಸ್ಥಲದಿಂದ ಬಂದ ಜನಸ್ತೋಮದಿಂದಲೂ ಸ್ಥಲದವರ ಯೋಗ್ಯವ್ಯವಸ್ಥೆಯಿಂದಲೂ ಉತ್ಸವವು ಅತ್ಯಂತ ಪ್ರೇಕ್ಷಣೀಯವಾಗಿತ್ತು. ಪ್ರತ್ಯಕ್ಷದರ್ಶಿ.

ಮೈಸೂರ ಸಂಪದಭ್ಯುದಯ ಸಂಘದವರೂ ವೀರಶೈವರೂ.

ಈ ಸುಧಾರಣೆಯ ನವನಾಗರಿಕತೆಯ ಕಾಲದಲ್ಲಿ ತ್ರಿಮತಬ್ರಾಹ್ಮಣ ಬಾಂಧವರು—ಅನ್ಯಜನಗಳಿಗೆ ವೇದಾಧಿಕಾರವಿಲ್ಲ; ವೇದ ವೇದಾಂಗಗಳನ್ನು ತಾವೇ ಅಧ್ಯಯನಾಧ್ಯಾಪನವನ್ನು ಮಾಡಬೇಕು. ಅನ್ಯರು ಅವನ್ನು ಓದಕೂಡದು, ಕೇಳಕೂಡದೆಂದು ಹೇಳುವದು ಬಹು ಅಸಮಂಜಸವಾಗಿಯೂ ನಿಷ್ಫಲವಾದದ್ದಾಗಿಯೂ ಇರುವದು. ಯಾಕಂದರೆ ಆರ್ಯಸಮಾಜದವರು ವೇದ ವೇದಾಂಗಗಳನ್ನು ಪರಿಶೀಲಿಸಿ ತಮ್ಮ ಮತಾನುಸಾರವಾಗಿ ಅರ್ಥವನ್ನು ಬರೆದುಕೊಂಡು ಅತಿ ನಿಕೃಷ್ಟರಾದ ಜನಗಳಿಗೂ ಬೋಧಿಸುತ್ತಲಿರುವರು. ಮತ್ತು ಭಾರತೀಯರ ದೃಷ್ಟಿಯಿಂದ ಮ್ಲೇಚ್ಛರೆಂದು ಎಣಿಸಲ್ಪಡುವ ಪಾಶ್ಚಾತ್ಯರು, ವೇದ ವೇದಾಂಗಗಳನ್ನೂ ಉತ್ಕೃಷ್ಟಗಳಾದ ಅನೇಕ ವೈದಿಕ ಗ್ರಂಥಗಳನ್ನೂ ಆಮೂಲವಾಗಿ ಪರಿಶೀಲಿಸಿ ತಮ್ಮತಮ್ಮ ಭಾಷೆಯಲ್ಲಿ ಪರಿವರ್ತನ ಮಾಡಿಕೊಂಡಿರುವರು. ಅಪೇಯಪಾನ ಅಭಕ್ಷ್ಯಭಕ್ಷಣವನ್ನು ಮಾಡುತ್ತಲಿರುವ ವಿದೇಶಿಯರ ಮುಖದಲ್ಲಿ ವೇದ ವೇದಾಂಗಗಳು ಹೊರಳಾಡುತ್ತಿದ್ದರೂ ಅವುಗಳ ಪಾವಿತ್ರ್ಯವು ನಷ್ಟವಾಗಿಲ್ಲ; ಭಾರತೀಯರಲ್ಲಿ ಉತ್ತಮ ವರ್ಗವೆಂದು ಗಣಿಸಲ್ಪಡುವ ಶಿವಸಂಸ್ಕಾರ ಶಿವನಾಮೋಚ್ಚಾರಣೆಯಿಂದ ಪರಿಶುದ್ಧರಾದವರ ಮುಖದಿಂದುಚ್ಚರಿಸಲ್ಪಟ್ಟರೆ ಮಾತ್ರ ಅವುಗಳ ಪಾವಿತ್ರ್ಯಕ್ಕೆ ಹಾನಿಯುಂಟಾಗುವುದೆಂಬ ಬ್ರಾಹ್ಮಣ ಬಾದಶಹರ ವಿಚಾರವು ಎಷ್ಟುಮಾತ್ರ ಯುಕ್ತವಾಗಿದೆ ಎಂಬುದನ್ನು ವಾಚಕರಿಗೆ ಬೇರೆ ಹೇಳಬೇಕಾದುದಿಲ್ಲ. ಇನ್ನು ಪಾಶ್ಚಾತ್ಯರು ಆ ಗ್ರಂಥಗಳಲ್ಲಿರುವ ಅಮೂಲ್ಯ ರತ್ನಗಳನ್ನು ಜಗತ್ತೆಲ್ಲವೂ ನೋಡಿ ಆನಂದ ಪಡಲೆಂದು ಹೊರಚೆಲ್ಲುತ್ತಿರುವಾಗ ಪ್ರಾವೃಷಿಕ ಮಂಡೂಕ (ಮಳೆಗಾಲದ ಕಪ್ಪೆ) ಗಳಂತೆ ಉಚ್ಚಾರಣೆಯ ಜೋಳ್ಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಅದನ್ನೂ ಅನ್ಯರು ಮಾಡಬಾರದೆಂದು ಉಳ್ಳಟ್ಟರು ಯತ್ನಿಸುವದೆಂದರೆ ಗ್ರಾಮವನ್ನು ಲೂಟಿಮಾಡಿದ ನಂತರ ಗ್ರಾಮದ್ವಾರವನ್ನು ಜೋಡಿಸಿ ಬಂದುಮಾಡಿದಂತಾಗುವದು. ಎಂದಿನಿಂದ ವೇದ ವೇದಾಂಗಗಳು ಮುದ್ರಿತಗಳಾಗಿ ವಿದೇಶೀಯರ ಹಸ್ತಗತಗಳಾದವೋ ಅಂದೇ ಅವುಗಳ ಪವಿತ್ರತೆಯು ನಷ್ಟವಾಯಿತು. ಜಗತ್ತಿನ ಸ್ಥಿತಿಯು ಹೀಗಿರುವಲ್ಲಿ ಮೈಸೂರ ಸಂಪದಭ್ಯುದಯ ವರ್ಗದವರು ತಮ್ಮ ತ್ರಿಮತದವರ ಹೊರತು ಇತರರಿಗೆ ವೇದಾಧಿಕಾರವಿಲ್ಲವೆನ್ನುವ ವಿಷಯದಲ್ಲಿ ಪತ್ರಿಕೆಯು ಸ್ವಾಧೀನವಿರುವದರಿಂದ ಉದ್ದುದ್ದವಾದ ಲೇಖನಗಳನ್ನು ಮುದ್ರಿಸುತ್ತಿರುವರು. ಈ ವಿಷಯವನ್ನು ಚರ್ಚಿಸಲೇ ಬಾರದೆಂದು ನಮ್ಮ ಆಕ್ಷೇಪವಲ್ಲ. ತಾ|| 22-9-22 ನೇ ಸಾಧ್ವಿಯಲ್ಲಿ ಒಬ್ಬ ಲೇಖಕರು ತಮ್ಮ ಲೇಖನವನ್ನುದ್ದ ಮಾಡಬೇಕೆಂಬಾವೇಶದಿಂದಲೋ ಏನೋ ವೀರಶೈವರಿಗೆ ವೇದಾಧಿಕಾರವಿಲ್ಲ; ಲಿಂಗಧಾರಣವು ವೇದೋಕ್ತವಾದುದಲ್ಲ; ವೀರಶೈವ ಮತವು ವೈದಿಕಮತವಲ್ಲ, ಇತ್ಯಾದಿ ಕೆಲವು ಆಕ್ಷೇಪಗಳನ್ನು ಕುರಿತು ಬರೆದ ವಿಷಯವನ್ನು ವಿಚಾರಿಸಬೇಕಾಗಿದೆ. ಸಾಂಪ್ರತಿಕ ಕಾಲಗತಿಯನ್ನು ನೋಡಿದರೆ ವೇದಾಧಿಕಾರವನ್ನು ಕೇಳುವವರೇ ಇಲ್ಲ. ಅನ್ಯರಿಗೆ ಅಧಿಕಾರವಿಲ್ಲೆಂದು ಹೇಳಿಕೊಳ್ಳುವ ಭಟ್ಟರ ಅಧಿಕಾರವೇ ಕ್ಷೀಣವಾಗುತ್ತ ವಿದೇಶೀಯರನ್ನು ಸೇರುತ್ತಲಿದೆ. ಆದರೂ ಆಸ್ತಿಕ ಶಿಖಾಮಣಿಗಳಾದ ಎಷ್ಟೋಜನ ನಮ್ಮ (ವೀರಶೈವ) ಬಾಂಧವರ ಹೃದಯದಲ್ಲಿ ಈ ಲೇಖಕರ ಆಡಂಬರದ ಬೊಬ್ಬಾಟಕ್ಕೆ ಎಷ್ಟೋ ಸಂದೇಹ ಉತ್ಪನ್ನವಾಗಿರಬಹುದು. ಅದನ್ನು ದೂರೀಕರಿಸುವ ದಕ್ಷಾವಶ್ಯಕವು. ಈ ಲೇಖಕರ ಆಕ್ಷೇಪಗಳನ್ನು ಒಂದೊಂದಾಗಿ ತೆಗೆದುಕೊಂಡು ಅವಕ್ಕುತ್ತರವನ್ನು ಕೊಡುತ್ತೇವೆ. ಲಿಂಗಧಾರಣ ಮಾಡಿಕೊಳ್ಳುವ ಬಗ್ಗೆ ವೀರಶೈವರಿಗೆ ವೇದಾಧಿಕಾರವಿರುವ ಬಗ್ಗೆ ವೇದೋಪನಿಷದಾಗಮಾದಿಗಳಲ್ಲಿ ಅನೇಕ ಪ್ರಮಾಣಗಳುಂಟು. ಎಲ್ಲವನ್ನೂ ವಾರ್ತಾಪತ್ರಿಕೆಗಳಲ್ಲಿ ದಾಹರಿಸುವದು ಅಸಾಧ್ಯವಾದುದರಿಂದ ಕೆಲವನ್ನು ಮಾತ್ರ ವಾದರಿಗಾಗಿ ತೋರಿಸುತ್ತೇವೆ.

ಋಗ್ವೇದದಲ್ಲಿ ಹೇಳಲ್ಪಟ್ಟ "ಪವಿತ್ರಂತೆ ವಿತತಂ ಬ್ರಹ್ಮಣಸ್ಪತೆ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ ಅತಪ್ತತನೂರ್ನತದಾಮೋ ಅಶ್ನುತೆ ಶ್ರಿತಾಸ ಇದ್ವಹಂತಸ್ತತ್ಸಮಾಶತ" ಈ ಮಂತ್ರದಿಂದ ಲಿಂಗಧಾರಣವು ವಿಹಿತವಾಗುತ್ತದೆ. ಈ ಮಂತ್ರದಲ್ಲಿರುವ ಬ್ರಹ್ಮಶಬ್ದಕ್ಕೆ ಲಿಂಗವೆಂದರ್ಥವು. ಬ್ರಹ್ಮಶಬ್ದಕ್ಕೆ ಲಿಂಗವೆಂದು ಹೇಳುವದು ಹೇಗೆಂದರೆ—"ಬ್ರಹ್ಮಣಸ್ಪತಿರೀಶೋಯಂ ಬ್ರಹ್ಮ ತಲ್ಲಿಂಗಮುಚ್ಯತೆ" ಎಂಬ ಸ್ಕಾಂದ ಪುರಾಣ ವಾಕ್ಯದಿಂದಲೂ "ಅಲಿಂಗಮೇಕಮವ್ಯಕ್ತಂ ಲಿಂಗಂಬ್ರಹ್ಮೇತಿ ನಿಶ್ಚಿತಂ | ಸ್ವಯಂಜ್ಯೋತಿಃ ಪರಂ ತತ್ವಂ ಪರವ್ಯೋಮ್ನಿವ್ಯವಸ್ಥಿತಂ ||" ಎಂಬ ಈಶ್ವರಗೀತಾವಾಕ್ಯದಿಂದಲೂ "ಜ್ಯೋತೀರೂಪೆ ಪರೋಕ್ಷೆ ಲಿಂಗಾಖ್ಯೆ ಬ್ರಹ್ಮರೂಪೆ............ಲಿಂಗಂತದ್ಬ್ರಹ್ಮಸಂಜ್ಞಿತಂ" ಇತ್ಯಾದಿ ಶಂಕರಾಚಾರ್ಯಕೃತಾಪರಾಧಸ್ತೋತ್ರ ಬಲದಿಂದಲೂ "ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ............ಲಿಂಗಂ ಬ್ರಹ್ಮಸನಾತನಂ" "ತಲ್ಲಿಂಗಂ ಬ್ರಹ್ಮಶಾಶ್ವತಂ" ಇತ್ಯಾದಿ ಸಿದ್ಧಾಂತ ಶಿಖಾಮಣಿಯ ಆಧಾರದಿಂದಲೂ ಇನ್ನೂ ಅನೇಕ ಗ್ರಂಥಗಳಲ್ಲಿ ಈ ವಿಧವಾದ ಪ್ರಯೋಗಗಳಿರುವದರಿಂದಲೂ ಬ್ರಹ್ಮಶಬ್ದಕ್ಕೆ ಲಿಂಗವೆಂದರ್ಥ ಮಾಡುವದರಲ್ಲಿ ಯಾವ ಸಂದೇಹವೂ ಇಲ್ಲ. ಮಂತ್ರಾರ್ಥವು ಹೇಗೆಂದರೆ—ಹೇ ಬ್ರಹ್ಮಣಸ್ಪತೆ, ಬ್ರಹ್ಮಣಃ—ಲಿಂಗರೂಪವಾದ ಬ್ರಹ್ಮಕ್ಕೆ, ಪತೆ—ಅಧಿಷ್ಠಾತೃವಾಗಿರತಕ್ಕಾತನೆ, (ಲಿಂಗರೂಪವಾದ ಶರೀರದಲ್ಲಿ ಶರೀರಿಭಾವದಿಂದ ಸ್ಥಿತನಾದ ಪರಶಿವನೆ.) (ಅತ್ರ ತವಿತ್ಯಧ್ಯಾಹಾರಃ; ಪವಿತ್ರ ಪದ ವಿತತಪದಯೋ ರ್ವಿಶೇಷಣ ವಿಶೇಷ್ಯಭಾವಾಸಂಭವೇನ ವಿಶೇಷಣ ದ್ವಯಾನ್ವಯಾನುಪಪತ್ತಾ ವಿಶೇಷ ವಾಚಕ ತತ್ಪದಾಧ್ಯಾಹಾರಸ್ಯೈವ ಯುಕ್ತತ್ವಾತ್) ತೆ—ನಿನ್ನ, ತತ್—ಆ ಬ್ರಹ್ಮಪದವಾಚ್ಯವಾದ ಲಿಂಗರೂಪಶರೀರವು, ಪವಿತ್ರಂ—ಶುಚ್ಯಶುಚಿ ಕಾಲಗಳಲ್ಲಿಯೂ ಧರಿಸಲಿಕ್ಕೆ ಯೋಗ್ಯವಾದುದು. ವಿತತಂ—ಇಷ್ಟಪ್ರಾಣ ಭಾವ ಭೇದದಿಂದಾಗಲೀ ಭಕ್ತ ಶರೀರಾದಿ ಭೇದದಿಂದಾಗಲೀ ಅನೇಕ ಪ್ರಕಾರವಾದುದು, ಪ್ರಭುಃ-ನಿಗ್ರಹಾನುಗ್ರಹ ಸಾಮರ್ಥ್ಯವುಳ್ಳವನಾದ ನೀನು, ವಿಶ್ವತಃ-ಸಮಸ್ತಗಳಾದ, (ಆದ್ಯಾದಿಭ್ಯಸ್ತೇತ್ಯನೇನ ಸಾರ್ವವಿಭಕ್ತಿಕಸ್ತಸಿಲ್) ಗಾತ್ರಾಣಿ-ಸ್ಥೂಲ ಸೂಕ್ಷ್ಮ ಕಾರಣರೂಪ ಭಕ್ತ ಶರೀರಗಳನ್ನು, ಪರ್ಯೇಷಿ-ವ್ಯಾಪಿಸಿಕೊಂಡಿರುವೆ, ಲಿಂಗರೂಪ ಶರೀರದ್ವಾರಾ ಧರಿಸಲ್ಪಟ್ಟಾತನಾಗಿ ಭಕ್ತರ ಶರೀರಗಳಲ್ಲಿ ವ್ಯಾಪಿಸಿಕೊಂಡಿರುತ್ತೀಯೆ ಎಂದಭಿಪ್ರಾಯವು. ಅತಪ್ತತನುಃ—ವೇಧಾದೀಕ್ಷೆ ಮಂತ್ರದೀಕ್ಷೆ ಕ್ರಿಯಾದೀಕ್ಷೆಗಳಿಂದ ದಹಿಸಲ್ಪಟ್ಟ ಪಾಪಪಂಜರವುಳ್ಳ ಶರೀರವಿಲ್ಲದಾತನೂ, (ದೀಕ್ಷಾತ್ರಯರಹಿತನೂ) ಆಮಃ-ಅಪರಿಪಕ್ವಾಂತಃ ಕರಣನೂ ಆದ ಪುರುಷನು, ತತ್-ಆ ಪರಶಿವಸ್ವರೂಪವಾದ ಲಿಂಗವನ್ನು, ನಾಶ್ನುತೆ—ಹೊಂದಲಾರನು. ಹಾಗಾದರೆ ಆ ಲಿಂಗವನ್ನು ಯಾರು ಹೊಂದಲು ಯೋಗ್ಯರೆಂದರೆ—ಹೇಳುವನು.

"ಶ್ರಿತಾಸ ಇದ್ವಹಂತಸ್ತತ್ಸಮಾಶತ" ಶ್ರಿತಾಸಃ—ಶಿವಧರ್ಮಾಶ್ರಿತರಾದ, ಇದ್ವಹಂತಃ ಆ ಲಿಂಗವನ್ನು ಧಾರಣಮಾಡತಕ್ಕವರೇ, ತತ್ಸಮಾಶತ—ಆ ಲಿಂಗವನ್ನು ಹೊಂದಲು ಯೋಗ್ಯರು. ಶಿವಸಂಸ್ಕಾರವುಳ್ಳಾತನೂ ಗುರುಕಾರುಣ್ಯಪಾತ್ರನೂ ಆದ ಪುರುಷನೇ ಆ ಲಿಂಗವನ್ನು ಹೊಂದಲು ಯೋಗ್ಯನೆಂದಭಿಪ್ರಾಯವು. ಈ ಮಂತ್ರಕ್ಕೆ ಈ ವಿಧವಾಗಿ ಅರ್ಥಮಾಡುವುದರಲ್ಲಿ "ಬ್ರಹ್ಮಣಸ್ಪತಿರೀಶೋಯಂ ಬ್ರಹ್ಮತಲ್ಲಿಂಗ ಮುಚ್ಯತೆ | ಪವಿತ್ರಂ ತದ್ವಿಖ್ಯಾತಂ ತತ್ಪ್ರಭುರ್ವಿಶ್ವತಸ್ಸ್ವಯಂ || ತತ್ಸಂಪರ್ಕಾತ್ಪವಿತ್ರತ್ವಂ ಗಾತ್ರಾಣಿಕುರುತೆಸ್ವಯಂ | ಅತಪ್ತತನುರಜ್ಞೋವೈ ಆಮ ಸ್ಸಂಸ್ಕಾರವರ್ಜಿತಃ || ದೀಕ್ಷಯಾರಹಿತಸ್ಸಾಕ್ಷಾನ್ನಾಪ್ನುಯಾ ಲ್ಲಿಂಗಮುತ್ತಮಂ | ಶಿವಧರ್ಮಾಶ್ರಿತಾತ್ಮಾಂತಾ ಶ್ಶಿವಾರ್ಚನಪರಾಯಣಾಃ | ಯೇವಹಂತಸ್ಸದಾಲಿಂಗಂ ತೆಯಾಂತಿ ಪರಮಂ ಪದಂ | ಅನ್ಯಥಾನಹಿವಾಂಪ್ರಾಪ್ತುಂ ಶಕ್ಯಂದೇವಿಕಥಾಶ್ರುತಿಃ ||" ಎಂಬ ಸ್ಕಾಂದ ಪುರಾಣವಚನವೂ "ಶಸ್ತಂಪವಿತ್ರಂ ಪರಮಂ ಗಹನಂ ದೇಹಸಂಸ್ಥಿತಂ | ಜನ್ಮಮೃತ್ಯುಜರಾತೀತಂ ತತ್ಪವಿತ್ರಂ ಪ್ರಚಕ್ಷತೆ || ಪತನಾತ್ತ್ರಾಯತೆ ಯಸ್ಮಾದತೀವ ನರಕಾರ್ಣವಾತ್ | ಯತ್ಪವಿತ್ರಂ ಪವಿತ್ರಾಖ್ಯಂ ತಲ್ಲಿಂಗಂಜ್ಯೋತಿ ರೈಶ್ವರಂ || ತತ್ಸಂಪರ್ಕಾತ್ಪವಿತ್ರತ್ವಂ ಗಾತ್ರಾಣ್ಯೇವ ಚರಿಷ್ಯತಿ | ತದೇತತ್ಪರಮಂ ಜ್ಯೋತಿರ್ಲಿಂಗಂ ದೇವಿ ಮದಾತ್ಮಕಂ || ಶಿವಾನಂದಪರಂಧಾಮ ದುಷ್ಪ್ರಾಪ್ಯಮಕೃತಾತ್ಮಭಿಃ | ಯೇಸಂಶ್ರಿತಾಸ್ಸದಾ ಲಿಂಗಂ ಯೇವಹಂತಸ್ಸದಾಪರಾತ್ || ತೇಪ್ರಾಪ್ನುವಂತಿ ಸರ್ವೇಪಿ ಮಾಮೇವಾತ್ರ ನಸಂಶಯಃ ||" ಎಂಬ, ಕಾಶೀಖಂಡವಚನವೂ ಸಾಕ್ಷ್ಯಗಳಾಗಿರುವವು.

ಋಗ್ವೇದದ "ತವ ಶ್ರಿಯೆ ಮರುತೋಮರ್ಜ್ಜಯಂತ ರುದ್ರಯತ್ತೆ ಜನಿಮ ಚಾರು ಚಿತ್ರಂ ಪದಂ ಯದ್ವಿಷ್ಣೋರುಪಮಂನ್ಯಧಾಯಿ" ಎಂಬ ಋಕ್ಕಿನಿಂದಲೂ, ವಿಷ್ಣು ಮೊದಲಾದ ಸಮಸ್ತ ದೇವತೆಗಳೂ ಲಿಂಗಧಾರಣವನ್ನು ಮಾಡಿಕೊಂಡು ಪೂಜಿಸಿದರೆಂದು ಸಿದ್ಧವಾಗುತ್ತದೆ. ಇದರರ್ಥವು-ರುದಂ ದ್ರಾವಯತೀತಿ ರುದ್ರಃ, ತತ್ಸಂಬುದ್ಧೌ, ಭೋರುದ್ರ-ದುಃಖ ವಿನಾಶಕನಾದ ಶಂಕರನೇ, ಮರುತಃ-ಬ್ರಹ್ಮಾದಿ ದೇವತೆಗಳು, ಶ್ರಿಯೆ-ಸಂಪತ್ತಿಗೋಸ್ಕರವಾಗಿ, ವಿಷ್ಣೋಃ-ವಿಷ್ಣುವಿನ, ಯತ್ಪದಂ-ತತ್ ಆ ವೈಕುಂಠಾದಿ ಸ್ಥಾನವನ್ನು, ಉಪಮಂನ್ಯಧಾಯಿ-ಉಪಮಾನವನ್ನಾಗಿಟ್ಟುಕೊಂಡು, ಚಾರು-ಸುಂದರವಾದ; ಚಿತ್ರಂ-ಭಕ್ತರ ಸಕಲೇಷ್ಟದಾಯಕವಾದ, ತೆ-ನಿನ್ನ; ಯಜ್ಜನಿಮ-ಸಕಲಜನರುತ್ಪತ್ತಿಗೆ ಕಾರಣವಾದ ಯಾವ ಜನಿಮಾಖ್ಯಲಿಂಗವುಂಟೋ, ತತ್-ಆ ಲಿಂಗವನ್ನು, ಅಮರ್ಜಯಂತ-ಧಾರಣವನ್ನು ಮಾಡಿಕೊಂಡು ಪೂಜಿಸಿದರು. ವಿಷ್ಣುವು ಶಿವಲಿಂಗಧಾರಣವನ್ನು ಮಾಡಿಕೊಂಡು ಆ ಲಿಂಗಪೂಜಾ ಮಹತ್ವದಿಂದಲೇ ವೈಕುಂಠಾದಿ ಪದವಿಯನ್ನು ಪಡೆದನೆಂಬುದನ್ನು ಉಪಮಾನವನ್ನಾಗಿಟ್ಟುಕೊಂಡು ಬ್ರಹ್ಮಾದಿ ಸಕಲ ದೇವತೆಗಳೂ ತಮ್ಮ ತಮ್ಮ ಪದವಿಗಾಗಿಯೂ ಅನೇಕ ಸಂಪತ್ತಿಗಾಗಿಯೂ ಶಿವಲಿಂಗ ಧಾರಣವನ್ನು ಮಾಡಿಕೊಂಡು ಪೂಜಿಸಿದರೆಂದು ತಾತ್ಪರ್ಯವು. ಇದೇ ಅರ್ಥವೇ ಪರಾಶರ ಪುರಾಣದಲ್ಲಿ ಹೇಳಲ್ಪಟ್ಟಿದೆ.

ರೌದ್ರಂಲಿಂಗಂ ಮಹಾವಿಷ್ಣುರ್ಜನಿಮಾಖ್ಯಂ ಶಿಲಾಮಯಂ | ಚಾರುಚಿತ್ರಂಸಮಭ್ಯರ್ಚ್ಯ ಲಬ್ಧವಾನ್ಪರಮಂಪದಂ || ಬ್ರಹ್ಮಾ ಸರ್ವಜಗತ್ಕರ್ತಾ ಯಸ್ಯ ಲಿಂಗಾರ್ಚನೇನತು | ಭಾರತೀಂ ಪ್ರಾಪ್ತವಾನಾಶು ಸ ಪೂಜ್ಯಸ್ಸರ್ವಜೇತಸ್ಸಿ | ಯಸ್ಯಲಿಂಗಂ ಸಮಭ್ಯರ್ಚ್ಯ ಮರುತಸ್ಸಕಲಾ ಅಪಿ | ಲಬ್ಧವಂತಶ್ರಿಯಂಪೂರ್ಣಾ ಮಿತ್ಯೇಷಾ ಶಾಶ್ವತೀಶ್ರುತಿಃ || ಎಂಬ ವಚನವೂ ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟ

ಬ್ರಹ್ಮವಿಷ್ಣ್ವಾದಯೋ ದೇವಾಸ್ಸರ್ವೇಬ್ರಹ್ಮರ್ಷಯಸ್ತಥಾ | ಶಿವಲಿಂಗೇಜ್ಯಯಾಸಮ್ಯಕ್ ಸ್ವಸ್ವರೂಪಮವಾಪ್ನುಯುಃ || ಎಂಬ ವಚನವೂ ಪದ್ಮಪುರಾಣದಲ್ಲಿ ಹೇಳಲ್ಪಟ್ಟ

ಬ್ರಹ್ಮಣಸ್ಸೃಷ್ಟಿಕರ್ತೃತ್ವಂ ವಿಷ್ಣೋರ್ದಾನವಮರ್ದನಂ | ಸ್ವರ್ಗಾಧಿಪತ್ಯಮಿಂದ್ರಸ್ಯ ಶಿವಪೂಜಾವಿಧೇಃಫಲಂ || ಎಂಬ ವಚನವೂ ಇದೇ ರೀತಿಯಾಗಿ ಇನ್ನೂ ಸಹಸ್ರಾರು ವಚನಗಳೂ ಸಮರ್ಥಿಸುತ್ತಿರುವವು. ಯಜುರ್ವೇದದ ಶತರುದ್ರೀಯದಲ್ಲಿ ಹೇಳಲ್ಪಟ್ಟ

"ಯಾತೇರುದ್ರ ಶಿವಾತನೂರಘೋರಾಪಾಪಕಾಶಿನೀ" ಎಂಬ ವಾಕ್ಯದಿಂದಲೂ ಲಿಂಗಧಾರಣವು ವಿಹಿತವಾಗಿದೆ. ಇದರರ್ಥವು-ಭೋರುದ್ರ-ಎಲೈ ಪರಶಿವನೇ, ತೆ-ನಿನ್ನ, ಶಿವಾ-ಮಂಗಲಸ್ವರೂಪವಾದ, ಯಾತನೂಃ-ಲಿಂಗರೂಪವಾದ ಯಾವ ಶರೀರವುಂಟೋ

"ಲಿಂಗಂತು ಶಿವಯೋರ್ದೇಹಃ" ಎಂಬ ಆಗಮವಾಕ್ಯದಿಂದ ತನೂಶಬ್ದಕ್ಕೆ ಲಿಂಗವೆಂದರ್ಥವು. ಸಾ-ಆ ಲಿಂಗರೂಪ ಶರೀರವು, ಅಘೋರಾ-ಶಾಂತವಾದುದು, ಅಪಾಪಕಾಶಿನೀ-ಅಪಾಪ-ಪಾಪರಹಿತರಾದ ಭಕ್ತರಲ್ಲಿ, ಕಾಶಿನೀ-ಇಷ್ಟಲಿಂಗ ರೂಪದಿಂದ ಪ್ರಕಾಶಿಸುತ್ತಿರುವುದು. ಲಿಂಗರೂಪಶರೀರಾವಚ್ಛಿನ್ನನಾದ ಪರಶಿವನು ಶಮದಮಾದಿ ಸಂಪನ್ನರಾದ ಭಕ್ತರ ಶರೀರದಲ್ಲಿ ಧರಿಸಲ್ಪಡತಕ್ಕಾತನೆಂದಭಿಪ್ರಾಯವು.

ಶ್ವೇತಾಶ್ವತರೋಪನಿಷತ್ತಿನಲ್ಲಿರುವ "ಓಂನಮೋಬ್ರಹ್ಮಣೆ ಧಾರಣಂಮೆ ಅಸ್ತ್ವನಿರಾಕರಣಂ ಧಾರಯಿತಾಭೂಯಾಸಂ ಕರ್ಣಯೋಶ್ರುತಂ ಮಾಚ್ಯೋಢ್ವಂ ಮಮಾಮುಷ್ಯ ಓಂ" ಎಂಬ ಮಂತ್ರದಿಂದಲೂ ಲಿಂಗಧಾರಣವು ವಿಹಿತವಾಗುತ್ತದೆ. (ಅತ್ರ ಧಾರಣಂಮೇ ಅಸ್ತ್ವಿತಿ ಸಾಮಾನ್ಯತೋ ಧಾರಣಂವಿಧಾಯ, ಧಾರಣಕ್ರಿಯಾಯಾ ಸ್ಸಕರ್ಮಕತ್ವೇನ ಕಿಂ ಧಾರ್ಯಮಿತಿ ಕರ್ಮವಿಶೇಷಾಪೇಕ್ಷಾಯಾಂ ಮಮಾಮುಷ್ಯ ಓಂ ಇತಿ ಓಂ ಕಾರವಾಚ್ಯ ಶಿವಲಿಂಗಸ್ಯ ವಿಧಾನಾತ್, ತಸ್ಯೈವ ಧಾರಣೆ ಕರ್ಮತ್ವೇನಾನ್ವಯಃ) ಮಂತ್ರಾರ್ಥವು-ಪೂರ್ವೋಕ್ತ ಪ್ರಮಾಣಗಳಿಂದ ಬ್ರಹ್ಮಶಬ್ದಕ್ಕೆ ಲಿಂಗವೆಂದರ್ಥವು. "ನಮೋಬ್ರಹ್ಮಣೆ ಲಿಂಗಮೂರ್ತಯೇನಮಃ" ಎಂದು ವೇದಪುರುಷನಿಂದ ನಮಸ್ಕಾರಪೂರ್ವಕವಾಗಿ ಧಾರಣವು ಅಪೇಕ್ಷಿಸಲ್ಪಟ್ಟಿದೆ. ಧಾರಣವನ್ನೇ ಕರ್ಮವೆಂದೂ ವಿಶೇಷಿಸುತ್ತಾನೆ, ಅನಿರಾಕರಣಂ ನಿರಂತರ ಸ್ವೀಕರಿಸತಕ್ಕದ್ದು, ಕರ್ಣಯೋಶ್ರುತಂ-ವೇದೋಪನಿಷದಾಗಮಾದಿ ಪ್ರತಿಪಾದಿತವಾದುದರಿಂದ ಗುರುದಿಂದುಪದೇಶಿಸಲ್ಪಟ್ಟ. "ಓಂ-ಓಂಕಾರಪದವಾಚ್ಯವಾದ ಯಾವ ಶಿವಸ್ವರೂಪಲಿಂಗವುಂಟೋ ತತ್-ಅದನ್ನು ಧಾರಯಿತಾಭೂಯಾಸಂ-ಧರಿಸತಕ್ಕವನಾಗುವೆನು. ಅಮುಷ್ಯ ಮಮ (ಸಂಬಂಧಸಾಮಾನ್ಯೇ ಷಷ್ಠೀ) ನನ್ನ ಶರೀರದಿಂದ, ಮಾಚ್ಯೋಢ್ವಂ-ಯಾವಾಗಲೂ ಅಗಲತಕ್ಕಾತನಾಗಬೇಡ, (ಚ್ಯುಙ್ ಚ್ಯವನೆ ಇತಿ-ಧಾತೋರ್ಲುಙ್ ಮಧ್ಯಮಪುರುಷೈಕವಚನಸಾನೆ ವ್ಯತ್ಯಯೋ ಬಹುಲಮಿತಿ ಬಹುವಚನಂ) ಲಿಂಗಪುರಾಣದಲ್ಲಿ ವಿಷ್ಣುವಿನಿಂದ ಮಾಡಲ್ಪಟ್ಟ ಶಿವಸ್ತೋತ್ರದಲ್ಲಿ "ಸರ್ವಜ್ಞಾಯ ನಮಸ್ತುಭ್ಯಮೋಂಕಾರಾಯ ನಮೋನಮಃ | ಇತ್ಯಾದಿ ಅನೇಕ ಪ್ರಯೋಗಗಳಿರುವುದರಿಂದ ಓಂಕಾರವು ಪರಶಿವವಾಚಕವಾಗಿರುವುದು. "ಲಿಂಗರೂಪಿಣಂನಾಂ ಚಿಂತಯಂತಿಯೋಗಿನಸ್ಸದಾ" ಎಂಬ ಭಸ್ಮಜಾಬಾಲೋಪನಿಷದ್ವಚನದಿಂದಲೂ "ಲಿಂಗರೂಪೀಮಹೇಶ್ವರಃ" ಇತ್ಯಾದಿ ವಚನಗಳಿಂದಲೂ, ಶಿವನೇ ಲಿಂಗಸ್ವರೂಪನೆಂದು ಸಿದ್ಧವಾಗುತ್ತದೆ. "ಓಂಕಾರಂಲಿಂಗಮಾಖ್ಯಾತಂ" ಎಂಬಾಗಮವಚನದಿಂದ ಓಂಕಾರಕ್ಕೆ ಲಿಂಗವೆಂದರ್ಥವು ನಿರ್ವಿವಾದವಾಗಿರುವುದು. ಈ ಮಂತ್ರದರ್ಥವನ್ನು ಇದೇ ರೀತಿಯಾಗಿ ಬ್ರಹ್ಮಾಂಡಪುರಾಣವೂ ಸಮರ್ಥಿಸುತ್ತಿರುವುದು. "ನಮೋಸ್ತು ಬ್ರಹ್ಮಣೆ ತುಭ್ಯಮನಾಚಾರ್ಯಾಯ ಮಹಾತ್ಮನೆ | ತನ್ನಿರಾಕರಣಂವಿಶ್ವಂ ಜನ್ಮತ್ರಾಣಸ್ತ್ವನ್ಮೈವಹಿ... "ಅನಿರಾಕರಣಂ ಬ್ರಹ್ಮ ಕಾರ್ಯಮಪ್ಯಾತ್ರಿ ರಂಜನಂ | ಅನಿರಾಕರಣಂ ಮರ್ಯಸ್ತು ಧಾರಣಂ ದೇಹಿತೋಪಿತಮ್ || ವೇದತಾತ್ಪುರಾಣೇಷು ಪ್ರಸಿದ್ಧಂ ಕರ್ಣಯೋಶ್ರುತಂ | ಅಹಂ ಧಾರಯಿತಾದೇವಂಭೂಯಾಸಂ ಸರ್ವಕಾರಣಂ | ಬ್ರಹ್ಮವಿಷ್ಣ್ವಾದಯೋ ದೇವಾಃ ಪ್ರಸಿದ್ಧಾಶ್ಚ ತಥಾಶ್ರುತಾಃ || ತನಿರಾಕರಣಾನ್ನೇವ ಮೃತ್ಯುಸಾಗರಕಶ್ಚನ | ಮೋನಿರಾಕರಣಾತ್ಸ್ವೇತ ಸುಧಾರ್ಯಾರ್ಣ್ಣಕರಾಚನ | ನಾಹಂಧಾರಯಿತಾದೇವಾನ್ ಭೂಯಾಸಂಸಂಜ್ಞಕಸ್ಸುರಾನ್ | ನಶಕ್ಯಂತಂತರತಾರ್ಯಾಂತಂ ತೋ ಮೃತ್ಯುಸಾಗರೆ || ಊರ್ಧ್ವರ್ಗರಾಮೇದವೇದಲಿಂಗರಂಮುಷ್ಯಸರ್ವಾಶ್ರಯ | ಇತ್ಯಾದಿ.

ವೇದಾಂತಸಾರೋಪನಿಷತ್ತಿನಲ್ಲಿ "ಆತ್ಮಾಶ್ರಮಿಣಸ್ಸಚ್ಛಾದಮ್ಮೃತೀ ಭೂತ್ವಾಮೋಕ್ಷೇಭಗಂತಿ ಇತ್ಯುಪಕ್ರಮ್ಯ "ನಕರ್ಮಣಾನಪ್ರಜಯಾಧನೇನ..." ಶಿವಸಂಪೂಜಾ ಮೃತತ್ವಮಾನಶುಃ ಇತಿ ಪ್ರತಿಪಾದ್ಯ, ಅತಃ ಪರಂ "ಪರೇಣನಾಕಂ ನಿಹಿತಂ ಗುಹಾಯಾಂ ವಿಭ್ರಾಜತೇಯದ್ಯತಯೋ ವಿಶಂತಿ | ಆತ್ಮಾಶ್ರಮಿಸ್ಥಾ ಪರಿಮುಚ್ಯಂತಿಸರ್ವೇ | ಲಿಂಗಾಂಗಿನೋಭಾವಿನೋ ಕ್ಷಮಾರ್ಗೇಕನಿಷ್ಠಾಃ | ತೆ ಬ್ರಹ್ಮಲೋಕೇಷು ಪರಾಂತಕಾಲೇ ಶಿವಪ್ರಸಾದಾತ್ಪರಿಮುಚ್ಯಂತಿ ಸರ್ವೇ........"ಶಿವೇಮಾಗ್ನಿಸ್ತದ್ವಾಯುಶ್ಚತ್ಸೂರ್ಯಸ್ತ ಚ್ಚಂದ್ರಮಾಃ ತದೇವಶುಕ್ರಸ್ತದ್ವೇಚ್ಛಬ್ರಹ್ಮಸ್ತಿಮುಖಾಮಾಪಃ ಪ್ರಾಪ್ಯೋ ಪಾಸ್ಯಶಿವಂಶಾಂಬಂ ಬ್ರಹ್ಮಸ್ವಹೃದಯಾಂಬುಜೆ ಲಿಂಗಾಂಗಸಾಮರಸ್ಯಜ್ಞಶರೀರೇಲಿಂಗಧಾರಣಾತ್, ನಿಯಮೇನೈವಪ್ನತ್ವಾತ್ಮುಕ್ತಾಸ್ಸಂಸಾರಸಾಗರಾತ್ || ಎಂದಿರುವುದರಿಂದ ಸಂತಾನ ಧನ ಮೊದಲಾದುವುಗಳಿಂದ ಮೋಕ್ಷಪ್ರಾಪ್ತಿಯಾಗಲಾರದು; ಮತ್ತೇನೆಂದರೆ-ಕೇವಲ ಶಿವಲಿಂಗ ಪೂಜೆಯಿಂದಲೇ ಪ್ರಾಪ್ತವಾಗುವ ಕಾರಣ ಮೋಕ್ಷಮಾರ್ಗದಲ್ಲಿಯೇ ಆಸಕ್ತರಾದ ಆತ್ಮಾಶ್ರಮಿಪದ ವಾಚ್ಯರಾದ ವೀರಶೈವರು ಸ್ಥೂಲಸೂಕ್ಷ್ಮಾದಿ ಶರೀರಗಳಲ್ಲಿ ಇಷ್ಟಪ್ರಾಣಾದಿಲಿಂಗಗಳನ್ನು ಧಾರಣಮಾಡಿಕೊಂಡು ಲಿಂಗಾಂಗ ಸಾಮರಸ್ಯಜ್ಞಾನಿಗಳಾಗಿ ಮುಕ್ತರಾಗುವರು. ವಿಷ್ಣುಬ್ರಹ್ಮೇಂದ್ರಾದಿ ದೇವತೆಗಳು ವಿಧ್ಯುಕ್ತವಾಗ ಇಷ್ಟಲಿಂಗ ಧಾರಣವನ್ನು ಮಾಡಿಕೊಂಡು ತದುಪಾಸನೆಯನ್ನು ಮಾಡುತ್ತ ಲಿಂಗಾಂಗಸಾಮರಸ್ಯ ಜ್ಞಾನದಿಂದ ಮುಕ್ತರಾದರೆಂಬಭಿಪ್ರಾಯವು. ವೇದಾಂತಸಾರ ಕೈತ್ತರೀಯಾದ್ಯನೇಕೋಪನಿಷತ್ತುಗಳಲ್ಲಿ ಲಿಂಗಧಾರಣವು ಪುನಃ ಪುನಃ ಕಂಠರವದಿಂದಲೇ ವರ್ಣಿಸಲ್ಪಟ್ಟಿರುವುದರಿಂದ ವೈದಿಕತ್ವವು ಸಾರ್ವಜನೀನವಾಗಿದೆ.

ಶ್ವೇತಾಶ್ವೇತರೋಪನಿಷತ್ತಿನಲ್ಲಿ ಬ್ರಹ್ಮವಿದ್ಯೆಯನ್ನಧಿಕರಿಸಿ ಉಪಸಂಹಾರದಲ್ಲಿ "ಬ್ರಹ್ಮವಿಚ್ಛ್ವೇತಾಶ್ವತರೋಥವಿದ್ವಾನತ್ಯಾಶ್ರಮಿಭ್ಯಃ ಪರಮಂ ಪವಿತ್ರಂ ಪ್ರೋವಾಚ ಸಮ್ಯಗೃಷಿಸಂಘಜುಷ್ಟಂ || ವೇದಾಂತೆಪರಮಂಗುಹ್ಯಂ ಪುರಾಕಲ್ಪೆಪ್ರಚೋದಿತಂ | ನಾಪ್ರಶಾಂತಾಯ ನಾಪುತ್ರಾಯಾ ಶಿಷ್ಯಾಯ ವೈಪುನಃ || ಯಸ್ಯದೇವೇಪರಾಭಕ್ತಿ ರ್ಯಥಾದೇವೆತಥಾಗುರೌ | ತಸ್ಯೈತೆಕಥಿತಾಹ್ಯರ್ಥಾ ಪ್ರಕಾಶ್ಯಂತೆ ಮಹಾತ್ಮನಃ" ಇತ್ಯಾದಿ ವಾಕ್ಯಗಳಿಂದಲೂ, "ವ್ರತಮೇತಚ್ಛಾಂಭವಂ ತತ್ಸಮಾಚರೇನ್ಮುಮುಕ್ಷುರ್ನಪುನರ್ಭವಾಯ" ಎಂಬ ಕಾಲಾಗ್ನಿರುದ್ರೋಪನಿಷದ್ವಾಕ್ಯದಿಂದಲೂ, "ತೇಷಾಮೇವೈತಾಂ ಬ್ರಹ್ಮವಿದ್ಯಾಂವದೇತ" ಎಂಬ ಮುಂಡಕೋಪನಿಷದ್ವಾಕ್ಯದಿಂದಲೂ, ಸೂತಸಂಹಿತೆಯಲ್ಲಿ ಹೇಳಲ್ಪಟ್ಟ "ಅತ್ಯಾಶ್ರಮಾತಪೋಮೂಲಂ ತದ್ವಿಪ್ರಹ್ಮೋಪನಿಷತ್ಪರಂ | ಯಜ್ಞದಾನಾದಿಭಿಃ ಪುಣ್ಯೈರ್ಯೋಗಸಿದ್ಧಿರ್ಭವಿಷ್ಯತಿ || ಯೋಗಾತ್ಸಂಜಾಯತೆ ಜ್ಞಾನಂ ಜ್ಞಾನಾನ್ಮುಕ್ತಿರ್ನಕರ್ಮಣಾ | ಅತ್ಯಾಶ್ರಮಿಭ್ಯಸ್ತ್ವಾಂಕೇಭ್ಯೋವಕ್ತವ್ಯಂ ಬ್ರಹ್ಮವೇದನಂ | ನಾಪ್ರಶಾಂತಾಯದಾತವ್ಯಂ ನಾಪುತ್ರಾಯಕದಾಚನ ||" ಎಂಬ ವಚನದಿಂದಲೂ "ಬಹುನಾತ್ರಕಿಮುಕ್ತೇನ ಯಸ್ಯಭಕ್ತಿಶ್ಶಿವಾರ್ಚನೆ | ಸಏವಾಧಿಕಾರೀಸ್ಯಾನ್ನಾನ್ಯಚಿತ್ತಃ ಕಥಂಚನ ||" ಎಂಬ ಶಿವಗೀತಾವಾಕ್ಯದಿಂದಲೂ "ಜಪೇತ್ಪಂಚಾಕ್ಷರೀಮಂತ್ರಂ ಶುದ್ಧೋಽಭೂದ್ವೇದಪಾರಗಃ" ಇತ್ಯಾದಿ ವೀರಾಗಮ ವಾಕ್ಯದಿಂದಲೂ ಶಿವಭಕ್ತಿಪರಾಯಣರೂ ಭೂತಿರುದ್ರಾಕ್ಷಿ ಲಿಂಗಧಾರಿಗಳೂ ಅತ್ಯಾಶ್ರಮಿಪದವಾಚ್ಯರೂ ಆದ ವೀರಶೈವರಿಗೆ ಬ್ರಹ್ಮವಿದ್ಯಾಧಿಕಾರವು ಕರತಲಾಮಲಕದಂತೆ ಸಿದ್ಧವಾಗಿರುತ್ತದೆ. ಸಶೇಷ.

ರತ್ನತ್ರಯ.

ಅರ್ಥಿನಾಂ ಸುರಭೂರುಹಶ್ಚ ವಿದುಷಾಂ ಶ್ರೀ ಭೋಜರಾಜಸ್ಸದಾ |
ಸತ್ಕಾವ್ಯ ಪರರಾಜ ನೀತಿ ನಿಪುಣಸ್ಸದ್ಧರ್ಮಸಂಸ್ಥಾಪಕಃ |
ಶ್ರೀಚಾಮುಂಡ ನೃಪ ಯಶೋಭಿರಾಮ ರಸವಾನ್ ಶ್ರೀ ಚಾಮರಾಜಾತ್ಮಜೋ |
ಜೀಯಾಚ್ಛ್ರೀ ಮಹಿಶೂರ ಪತ್ತನಪತಿಃ ಶ್ರೀ ಕೃಷ್ಣರಾಜಸ್ಸದಾ ||೧||

ಗೇಯಃ ಸಚ್ಚರಿತಂ ನವಕುಲೀನಂ ಶೋಭಿತೋಶಿಲಕ್ಷ್ಮೀ ಕದಾ |
ಭೂಯಸ್ಸದ್ವಿಭಿತಂ ನಿಶಾಮನಸಿತಂ ಶ್ರೀ ಕಾರ್ತವೀರ್ಯಾರ್ಜುನಃ ||
ಇತ್ಥಂ ಸಿಂಧುಗಭೀರ ಸದ್ಗುಣಗಣಂ ಭೋ ಕೃಷ್ಣರಾಜೇಂದ್ರತೇ |
ಕೀರ್ತಿಸ್ತುಂ ಪ್ರಭುವೂ ನರೇಷು ಲಿಖಿತಂ ವಕ್ತುಂ ನಶಕ್ಯೋಮ್ಯಹಂ ||೨||

ಭೋ ಭೋ ನೃಪಾಲಭುವನ ಪ್ರಥಿತಾಂಚ ಕೀರ್ತಿಂ |
ಶ್ರುತ್ವಾಗತೋಽದ ನಿಕಟೇ ತವ ಕೃಷ್ಣರಾಜ |
ವಿದ್ವಜ್ಜನಾವಲಿ ಸರೋರುಹ ಚಿತ್ರಭಾನೋ |
ವಿದ್ಯಾರ್ಜನೇಷು ವಿಬುಧೇಷು ದಯಾಂಕುರುಷ್ವ ||೩||

ವೇ|| ಪಂ|| ಶ್ರೀಶೈಲನಾಥಶಾಸ್ತ್ರಿ ಗುರುಬಸವಶಾಸ್ತ್ರಿ ಉದಾಸ್ತಿ ಹಿರೇಮಠ, ಮೊಕ್ಕಾಂ ದೇಶನೂರು (ಜಲ್ಲಾ ಬೆಳಗಾಂವ).

"ನಡೆಯುವವರು ಎಡಹುವುದುಂಟು"

ಲೇಖಕರು ಲೇಖನಗಳನ್ನು ಬರೆಯುವಾಗ್ಗೆ ಎಷ್ಟೋ ತಪ್ಪುಗಳುಂಟಾಗುವವು. ಲೇಖನಧುರಂಧರರಿಂದ್ದಾಗ್ಗೂ ವಾಕ್ಸರಣಿಯವೇಗದಲ್ಲಿ ತಪ್ಪುಗಳುಂಟಾಗುತ್ತವೆ. ಆದುದರಿಂದ ಲೇಖ ಬರೆಯುವವರು ಬರೆದ ಕೂಡಲೇ ಪ್ರಸಿದ್ಧಿಮಾಡಲಿಕ್ಕೆ ಕಳಿಸದೆ ಒಂದೆರಡಾವೃತ್ತಿ ನೋಡಿಕೊಂಡು, ಇದ್ದ ತಪ್ಪುಗಳನ್ನು ಸುಧಾರಿಸಿ ಬರೆದು ಕಳುಹಿಸಿದರೆ ಜನಾಪವಾದಕ್ಕೆ ಈಡಾಗಲಾರರು, ಮತ್ತು ಲೇಖನಗಳಾದರೂ ಸರ್ವರಿಗೂ ಮಾನ್ಯವಾಗುವವು. ಬೆಳಗಾಂವ ಪ್ರಬೋಧ ಸಂಪುಟ 3 ಸಂಚಿಕೆ 3 ಜುಲೈ 1922 ರಲ್ಲಿ ಶ್ರೀಕರಭಾಷ್ಯದ ಕನ್ನಡ ಭಾಷಾಂತರದ ಉಪೋದ್ಘಾತವನ್ನು ಬರೆಯುವಾಗ್ಗೆ ಸ್ವಾಮಿ ವಿರೂಪಾಕ್ಷಒಡೆಯರ್ ಸಂಸ್ಕೃತ ಕಾಲೇಜ್ ಇಂದೂರ ಇವರು, "ನಾನು ಗುರುವು ನೀನು ಗುರುವು" ಎಂಬ ಅಯೋಗ್ಯಕೋಲಾಹಲದಲ್ಲಿಯೇ ಕಾಲವನ್ನು ಕಳೆದು ನಿರಕ್ಷರಕುಕ್ಷಿಗಳಿದ್ದರೂ ಅವರು ಪೂರ್ವದಾಚಾರ್ಯಪೀಠಕ್ಕೆ ಅಧಿಪತಿಗಳಾಗಿರುವೆವೆಂಬುವ ಮೂಢಭಾವನೆಯಿಂದ ಕತ್ತಲೆಯಲ್ಲಿ ಕಾಲವನ್ನು ಕಳೆದಂತೆ ಮಾಡಿಬಿಟ್ಟಿರುವರೆಂದು ಪೀಠಾಚಾರ್ಯರನ್ನು ತುಚ್ಛೀಕರಿಸಿರುವುದಲ್ಲದೆ, ಎಲಿ ಕಡೆಗೆ ನಿರಾಭಾರಿಗಳೆಂದು ಹೆಸರನ್ನಿಟ್ಟುಕೊಂಡು ಮನೆಮನೆ ತಿರುಗುವ ಕೆಲವು ಸ್ವಾರ್ಥಿಗಳಾದ ನಿರಾಭಾರಿಗಳು ವಿರಕ್ತರು ಎಂದು ಹೆಸರಿಟ್ಟುಕೊಂಡು ಇನ್ನು ಮತಮತಪ್ರವರ್ತಕಾಚಾರ್ಯರ ಅಧೀನರಾಗಿಯೂ, ಅವರ ಬಂಧನೆಗೆ ಒಳಪಟ್ಟವರಾಗಿಯೂ ನಡೆಯ ಬೇಕಾಗುತ್ತದೆಂಬ ಸೋಗಿನಿಂದ ಎಲ್ಲರಿಗಿಂತ ಮೊದಲೇ ನಾವು ಶ್ರೇಷ್ಠರೆಂತ ಅಜ್ಞಜನರೆದುರಿಗೆ ಬಡಬಡಿಸಿ ಮತ್ತು ಧರ್ಮದಲ್ಲಿ ಯದ್ವಾತದ್ವಾ ವಿಚಾರ ನಡಸಿ ಇಂಥ ಅಪ್ರತಿಮ ಗ್ರಂಥಗಳನ್ನು ಮೂಲೆಗೆ ಹಾಕುತ್ತಾ ಮುಸುಕು ಹಾಕಿಕೊಳ್ಳುವದೇ ಪರಮಧರ್ಮ ಪರಮಪಕ್ಷರ್ಯವೆಂತ ಬೋಧಿಸಿ, ಜ್ಞಾನವನ್ನು ಅಜ್ಞಾನದಿಂದ ಆಚ್ಛಾದಿಸಿಬಿಟ್ಟಿರುವರು" ಎಂದು ವಗ್ಗೆರೆ ನಿರಾಭಾರಿಗಳನ್ನೂ ಮನಸ್ವಿ ಹಳಿದು ಬರೆದಿದ್ದಾರೆ. ಅನಾದಿಕಾಲದಿಂದಲೂ ಪರಶಿವನಾಜ್ಞೆಯಂತೆ ಜಗದುದ್ಧಾರಕ್ಕಾಗಿ ಅವತರಿಸಿದ ಪ್ರಭುಪರಂಪರೆಯ ನಿರಂಜನ ಮೂರ್ತಿಗಳನ್ನೂ ಪರಶಿವನ ಪಂಚ ಮುಖೋದ್ಭೂತರಾದ ಪಂಚಾಚಾರ್ಯರನ್ನೂ ಮನಸ್ವಿ ಹಳಿದು ನಿಂದಿಸಿ ಬರೆದಿರುವರು. ಕೇವಲ ಆಚಾರ್ಯ ವಂಶೀಯರಾಗಿದ್ದು ಸಂಸ್ಕೃತ ವಿದ್ಯಾವಿಶಾರದರೆನಿಸಿ ಕಾಲೇಜ್ ಪ್ರೊಫೇಸರಾಗಿದ್ದು ಪುಷ್ಪವು (ಹೂವು) ಬಳ್ಳಿಯು ಕುಲಗೇಡಿ, ಬುದ್ಧಿಗೇಡಿ, ಆಕಾರಗೇಡಿಯೆಂದು ಬಳ್ಳಿಯನ್ನು ತಿರಸ್ಕರಿಸಿದಂತೆ ತಾವು ಹುಟ್ಟಿದ ವಂಶದ ಮೂಲಪುರುಷರಾದ ಆಚಾರ್ಯಪರಂಪರೆಯವರನ್ನೇ ನಿಂದಿಸುತ್ತಿರುವರು. ಇಂಥ ಪಿತೃದ್ರೋಹ ಮಾಡಿದವರು ಗುರುದ್ರೋಹ ಮಾಡಲಿಕ್ಕೆ ಅಂಜುವರೇ? ನಿರಂಜನಪ್ರಭು ಪರಂಪರೆಯವರನ್ನು ಹಳಿದಿರುತ್ತಾರೆ. ಕನ್ನಡದಲ್ಲಿ "ತಂದೆಯನ್ನಣಕಿಸಿದವನು ಮುಂದಿಯನ್ನು ಬಿಟ್ಟಾನೇ" ಎಂಬ ಗಾದೆಯುಂಟು. ಅದರಂತೆ ಇವರು ಶ್ರೀಕರಭಾಷ್ಯದ ಉಪೋದ್ಘಾತ ಬರೆಯುವುದರಲ್ಲಿ ಶ್ರೀಕರಾಚಾರ್ಯರು ನಿರಾಭಾರಿಯತೀಂದ್ರರೆಂದು ಬಿರುದು ಬರಕೊಳ್ಳುತ್ತಿದ್ದ ರೇವಣಾರಾಧ್ಯರನ್ನು ವರ್ಣಿಸಿದ್ದಾರೆಂದು ಬರೆದಿರುತ್ತಾರೆ. ರೇವಣಾರಾಧ್ಯರೂ ಮರುಳಾರಾಧ್ಯರೂ ಏಕೋರಾಮಾರಾಧ್ಯರೂ, ಈ ತ್ರಿವಿಧ ಪೀಠಸ್ಥರೂ ಒಂದೊಂದು ಕಾಲದಲ್ಲಿ ತಮ್ಮ ಪೀಠಾಧಿಕಾರಕ್ಕೆ ಬೇರೆಯವರನ್ನು ನೇಮಿಸಿ ಚೆನ್ನಬಸವ ಯತೀಶರೆಂಬ ಮಹಾಮಹಿಮರಿಂದ ಷಟ್ಸ್ಥಲ ಜ್ಞಾನೋಪದೇಶ ಪಡೆದು ನಿರಾಭಾರಿ ಯತಿತ್ವವನ್ನು ಹೊಂದಿ ತನ್ನಾಮದಿಂದ ಜಗತ್ಪ್ರಸಿದ್ಧರೆನಿಸಿರುವ ಕಾರಣ, ಅಂತಹ ನಿರಂಜನ ಮೂರ್ತಿಗಳನ್ನು ಶ್ರೀಕರ ಭಾಷ್ಯಕಾರರಾದ ನಿರಾಭಾರಿ ಯತೀಂದ್ರರೆಂಬ ಬಿರುದುಳ್ಳ ಶ್ರೀಪತಿ ಪಂಡಿತಾಚಾರ್ಯರೆಂಬ ಯತಿಗಳು ವಂದಿಸಿರುವದತಿಶಯವಲ್ಲ. ಈ ಶ್ರೀಪತಿಪಂಡಿತಾಚಾರ್ಯರೆಂಬ ಯತಿಗಳು ಏಕೋರಾಮ ವಂಶಜಾತರೆಂದು ತಿಳಿದಾಗ್ಯೂ ಯತಿಗಳಾಗಿ ಅನೇಕ ಆಚಾರ್ಯರು ಬರೆದ ಭಾಷ್ಯಗಳಿದ್ದರೂ ಅವುಗಳಲ್ಲಿ ಶ್ರೇಷ್ಠವಾದ ಜಗತ್ಪ್ರಸಿದ್ಧವಾಗಿರುವ ಶ್ರೀಕರಭಾಷ್ಯವನ್ನು ಬರೆದು ಇರುತ್ತಾರೆಂಬುದು ಲೋಕಪ್ರಸಿದ್ಧವಾಗಿದೆ. ಇಂಥ ಮಹದುಪಕಾರವನ್ನು ಮಾಡಿದ ನಿರಾಭಾರಿ ಯತೀಂದ್ರರನ್ನೂ ಅವರ ಸಾಂಪ್ರದಾಯಕರನ್ನೂ ಮನಸ್ವಿಯಾಗಿ ಹಳಿಯುತ್ತಿರುವ ಕೆಲವರು ಇದನ್ನರಿಯದೆ ನಿರಾಭಾರಿಗಳು ಯಾವ ಭಾಷ್ಯವನ್ನು ಬರೆದಿದ್ದಾರೆಂದು ಕೇಳುತ್ತಿರುವರು. ಇಂಥವರೆಲ್ಲರ ಭ್ರಾಂತಿ ನಿವಾರಣೆಗಾಗಿ ಒಡೆಯರವರು ಬರೆದ ಲೇಖವು ನಿಂದ್ಯಾಂಶದಲ್ಲಿ ಸ್ವಲ್ಪವಾಗಿದ್ದರೂ ಸ್ತುತ್ಯಂಶದಲ್ಲಿ ಬಹಳವಾಗಿದೆ.

ಓರ್ವಧರ್ಮಹಿತೈಷಿ.

ಕರ್ನಾಟಕಮಾತೆಯ ವೈಭವ.

ಒಂದಾನೊಂದು ಕಾಲಕ್ಕೆ ಸಮಸ್ತ ಗುಣಗಳಿಂದ ಅತುಲವೈಭವವನ್ನು ಪಡೆದ ನಮ್ಮ ಶ್ರೇಷ್ಠ ಕರ್ನಾಟಕಮಾತೆಯು ಈಗ ಮಹಾರಾಷ್ಟ್ರ, ಗುಜರಾಥ, ಬಂಗಾಲ ಮತ್ತು ಆಂಧ್ರಭಾಷಾಪುತ್ರರ ಉತ್ಕ್ರಾಂತಿಯನ್ನೂ

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸಾರ್ವತ್ರಿಕ ವಿಷಯಗಳು.

(ಆರ್ಥಿಕವಿಷಯ).

ಅರಿಕೆ—ಸಣ್ಣ ನೌಕರರ ಸಂಬಳಗಳನ್ನು ಬ್ರಿಟಿಷ್ ಇಂಡ್ಯಾದಲ್ಲಿರುವ ಪ್ರಮಾಣಕ್ಕೆ ಸರಿಯಾಗಿ ಹೆಚ್ಚಿಸಿಕೊಡಬೇಕು.

ಉತ್ತರ—ಈಗಣ ದುಡ್ಡಿನ ಕೊರತೆಯಲ್ಲಿ ಇಂಥ ವಿಷಯವನ್ನು ಆಲೋಚಿಸಲಾಗುವುದಿಲ್ಲ.

ಅ—ಸ್ಥಲಾಂತರಕ್ಕೆ ವರ್ಗಮಾಡಲ್ಪಟ್ಟ ನೌಕರರಿಗೆ ರಜಾಕ್ಕೆ ಹಕ್ಕಿಲ್ಲದ ಸಂದರ್ಭದಲ್ಲಿ ಅವರು ಗೊತ್ತಾದ ಸ್ಥಲಕ್ಕೆ ಹೋಗಿ ಸೇರುವ ಮಧ್ಯದ ಕಾಲಕ್ಕೆ ಸಂಬಳವನ್ನು ತಪ್ಪದೆ ಕೊಡಿಸಬೇಕು.

ಉ—ಇಂಥ ಕೇಸುಗಳು ವರ್ಷದಲ್ಲಿ ಒಂದೆರಡೂ ಬರಲಾರವು. ಇಂಥ ವಿಷಯವನ್ನು ಜನರಲ್ ಸಬ್ಜೆಕ್ಟಾಗಿ ಈ ಸಭೆಗೆ ತರಕೂಡದು.

ಅ—ಕಡಿಮೆ ದರ್ಜೆಯಲ್ಲಿರುವ ಸಂಚಾರಮಾಡುವ ಉದ್ಯೋಗಿಗಳಿಗೆಲ್ಲಾ ಗೊತ್ತಾದ ಪ್ರಯಾಣಭತ್ಯವನ್ನು ಏರ್ಪಡಿಸಬೇಕು.

ಉ—ಪರ್ಯಾಲೋಚನೆಯಲ್ಲಿದೆ.

ಅ—ಸರ್ಕಾರದ ಸಾಲದ ಪತ್ರಗಳನ್ನು ಹೊಂದಿರುವವರು ಬಡ್ಡಿಯನ್ನು ತೆಗೆದುಕೊಳ್ಳುವುದಕ್ಕೂ, ಅದೇ ಬಡ್ಡಿ ಹಣವನ್ನು ಕಂದಾಯಕ್ಕಾಗಿ ಜಮೆ ಕಟ್ಟಿಕೊಳ್ಳುವಂತೆ ಟ್ರೆಜರಿ ಆಫೀಸರುಗಳಲ್ಲಿ ಕೇಳಿಕೊಳ್ಳಲಿಕ್ಕೂ ಅನುಕೂಲಿಸುವಂತೆ ಚೆಕ್ಕು ಬುಕ್ಕುಗಳನ್ನು ಕೊಡುವುದಾಗಿ ವಾಗ್ದಾನವಾಗಿದ್ದಿತು. ಅದರಂತೆ ನಡೆಯಿಸಿಕೊಡಬೇಕು.

ಉ—ರಶೀದಿ ಬುಕ್ಕನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದ್ದೇವೆಯೇ ಹೊರತು ಚೆಕ್ಕು ಬುಕ್ಕನ್ನು ಕೊಡುತ್ತೇವೆಂದು ಹೇಳಿಲ್ಲ.

ಅ—ಮೈಸೂರು ಸರ್ಕಾರ ಸಾಲದ ಮತ್ತು ರೈಲ್ವೆ ಡಿಬೆಂಚರಿನ ಬಾಂಡುಗಳನ್ನು ಪಡೆದಿದ್ದವರು ಮೃತರಾದರೆ ಅವರ ವಾರಸ್‌ದಾರರಿಗೆ ಉತ್ತರಾಧಿಕಾರದ ಸರ್ಟಿಫಿಕೇಟನ್ನು ಕೊಡಲು ರೆವಿನ್ಯೂ ಅಧಿಕಾರಿಗಳಿಗೆ ಅಧಿಕಾರಕೊಡಬೇಕು.

ಉ—5000 ರೂ. ಒಳಗಣ ಬಾಂಡುಗಳಿಗೆ ಹಾಗೆ ಮಾಡಲು ನಿರ್ಣಯಿಸಿದೆ. ಮಿತಿಯಿಲ್ಲದಂತೆ ಹಾಗೆ ಮಾಡಲು ಸಾಧ್ಯವಲ್ಲ.

ಅ—ಖಾಸಗಿ ಕಂಪೆನಿಗಳಂತೆ ಪಬ್ಲಿಕ್ ರಾಶಿಯಲ್ಲಿ ಸಂಸ್ಥಾನದ ಜೀವವಿಮೆ ಪಾಲಿಸಿಗಳ ಮೇಲೆ ಸಾಲಕೊಡಲು ಏರ್ಪಡಿಸಬೇಕು.

ಉ—ರೂಲ್ಸಿನಲ್ಲಿ ಅದಕ್ಕೆ ಅವಕಾಶವಿದೆ. ಸದ್ಯಃ ಸ್ವಲ್ಪ ಕಾಲ ಹಾಗೆ ಮಾಡಲು ಸಾಧ್ಯವಲ್ಲವೆಂದು ನಿರ್ಣಯಿಸಿದೆ.

ಅ—ಮೈಸೂರು ಬೆಂಗಳೂರು ಪಟ್ಟಣಗಳ ಪುರೋಭಿವೃದ್ಧಿ ಕಾರ್ಯಗಳಿಗೆ ಧನಸಹಾಯಮಾಡುತ್ತಿರುವಂತೆ ಉಳಿದ ಡಿಸ್ಟ್ರಿಕ್ಟ್ ಮುಖ್ಯಪಟ್ಟಣಗಳಿಗೂ ಕೊಡಿಸಬೇಕು.

ಉ—ಆ ಬಗೆಗೆ ಈ ವರ್ಷ ೨೫ ಸಾವಿರ ರೂ. ಗಳನ್ನು ಕೊಡಲು ಏರ್ಪಡಿಸಿದೆ.

ಅ—ರಿಫಂಡ್ ಆಗಲು ಅಪ್ಪಣೆಯಾದ ಹಣವನ್ನು ಸಂಬಂಧಪಟ್ಟ ಜನರಿಗೆ ಕೊಡಲು ಕಾಲಕ್ಲುಪ್ತಿಯನ್ನು ಏರ್ಪಡಿಸಬೇಕು.

ಉ—ಪರ್ಯಾಲೋಚನೆಯಲ್ಲಿದೆ.

ಅ—ಧರ್ಮಕಾರ್ಯಗಳಿಗಾಗಿ ಡಿಪಾಜಿಟ್ ಮಾಡಿದ ಹಣಕ್ಕೆ ಸೇಕಡಾ 6 ರಂತೆಯಾದರೂ ಬಡ್ಡಿಕೊಡಲು ಏರ್ಪಡಿಸಬೇಕು.

ಉ—ಮಾಡುತ್ತೇವೆ.

(ರೆವಿನ್ಯೂ)

(ಬೇಲೂರು ತಾಲ್ಲೂಕನ್ನು ಹಾಸನ ಡಿಸ್ಟ್ರಿಕ್ಟಿನಿಂದ ತಪ್ಪಿಸಿ, ಕಡೂರು ಡಿಸ್ಟ್ರಿಕ್ಟಿಗೆ ಸೇರಿಸಬೇಕು. ಡಿಸ್ಟ್ರಿಕ್ಟುಗಳ ಸಂಖ್ಯೆಯನ್ನು ಕಡಿಮೆಮಾಡಬೇಕು. ಎಂಬ ಎರಡು ವಿಷಯಗಳಮೇಲೂ ಸಭಿಕರುಗಳಲ್ಲಿ ಭಿನ್ನಾಭಿಪ್ರಾಯಗಳು ಹೊರಪಟ್ಟುದರಿಂದ ಇದ್ದಂತೆಯೇ ಇರಬೇಕಾಗಿ ತೀರ್ಮಾನವಾಯಿತು.)

ಅ—ಸಬ್ ತಾಲ್ಲೂಕು ನೌಕರರ ಸಂಬಳವನ್ನು ಬೇಗನೆ ಹೆಚ್ಚಿಸಿಕೊಡಬೇಕು.

ಉ—ವಿಚಾರದಲ್ಲಿದೆ.

ಅ—ಪ್ರತಿ ತಾಲ್ಲೂಕಿಗೂ ಹೆಚ್ಚು ಸೇಕದಾರರನ್ನು ತಪ್ಪಿಸಿ, ವ್ಯವಸಾಯ ಶಾಸ್ತ್ರಾಭಿಜ್ಞರಾಗಿರುವ ಒಬ್ಬೊಬ್ಬ ಸೇಕದಾರರನ್ನೇ ನಿಯಮಿಸಬೇಕು.

ಉ—ಪರ್ಯಾಲೋಚನೆಯಲ್ಲಿದೆ.

ಅ—ಸೇಕದಾರರ ಕುದುರೆ ಬತ್ಯ 10 ರೂ. ಇರುವುದನ್ನು 20ಕ್ಕೆ ಹೆಚ್ಚಿಸಬೇಕು.

ಉ—ನೋಡುತ್ತೇವೆ.

ಅ—ಪಟೇಲ್ ಶಾನುಬೋಗರಿಗೆ ಪೋಟಗಿ ಪದ್ಧತಿಯನ್ನು ತಪ್ಪಿಸಿ, ತಿಂಗಳುಗಟ್ಟಲೆ ಸಂಬಳವನ್ನೇರ್ಪಡಿಸಿ ಪರ್ಯಾಯಿಸುವ ಕ್ರಮವನ್ನು ಏರ್ಪಡಿಸಬೇಕು.

ಉ—ರೆವಿನ್ಯೂ ರೂಲ್ಸ್ ಪ್ರಕಾರ ಅವರುಗಳಿಗೆ ಸಂಬಳ ಕೊಡಲು ಅವಕಾಶವಿಲ್ಲ. ಸಿಸ್ಟಂ ಬದಲಾಯಿಸದಿದ್ದರೆ ಅದು ಸಾಧ್ಯವಲ್ಲ.

ಅ—ಕಾರ್ಯದಕ್ಷರೆಂದು ತೋರುವ 50 ಮಂದಿ ಪಟೇಲರಂತೆ ಪ್ರತಿ ವರ್ಷವೂ ಆರಿಸಿಕೊಂಡು ಅವರ ಪೋಟಗಿಯನ್ನು ಸೇಕಡಾ 50 ರಷ್ಟು ಹೆಚ್ಚಿಸಬೇಕು.

ಉ—ಅಂಥ ಪಟೇಲರನ್ನು ಚುನಾಯಿಸತಕ್ಕವರಾರು? (ಡಿಸ್ಟ್ರಿಕ್ಟ್ ತಾ|| ಅಧಿಕಾರಿಗಳು) ಹೀಗೆ ಮಾಡುತ್ತ ಹೋದರೆ ಬಜೆಟ್ ಎಸ್ಟಿಮೇಟು ಬಹಳ ಹೆಚ್ಚಾಗಿ ಹೋಗುವುದು. ಈ ವರ್ಷದ ಬಜೆಟ್ಟಿನಲ್ಲಿ ಶಾನುಬಾಗ ಪಟೇಲರ ಪೋಟಗಿಗೆ 1 ಲಕ್ಷವನ್ನು ಹೆಚ್ಚಿಸಿ ಒಟ್ಟು 9 ಲಕ್ಷ ಮಾಡಿದೆ. ಇನ್ನು ಕೆಲಕಾಲ ಕಳೆದಮೇಲೆ ಇನ್ನಷ್ಟನ್ನು ಹೆಚ್ಚಿಸಲು ಯೋಚಿಸಬಹುದು. ಅಲ್ಲದೆ ಸಣ್ಣ ಫಿರ್ಕಾಗಳನ್ನು ತಪ್ಪಿಸಿ 4–5 ಫಿರ್ಕಾಗಳನ್ನು ಒಟ್ಟುಗೂಡಿಸಿ ಶಾನುಬೋಗರಿಗೆ ಪೋಟಗಿ ಕೊಟ್ಟರೆ ಅವರ ಜೀವನಕ್ಕೆ ಅನುಕೂಲವಾಗಬಹುದೇ ಹೊರತು ಸೇಕಡಾ 25–50 ರಷ್ಟನ್ನು ಹೆಚ್ಚಿಸಿದರೂ ಅವರ ಜೀವನಕ್ಕೆ ಅದರಿಂದ ಅಷ್ಟೇನೂ ಅನುಕೂಲವಾಗಲಾರದು. 8 ಆಣೆಯಷ್ಟು ಹೆಚ್ಚಿದರೆ ಏನಾದೀತು? ಮತ್ತು ಇದು ದೊಡ್ಡ ವಿಷಯವಾದುದರಿಂದ ಸರ್ಕಾರದವರು ಪರ್ಯಾಲೋಚಿಸುತ್ತಲೇ ಇದ್ದಾರೆ.

ಅ—ಇನಾಂ ಗ್ರಾಮಗಳಲ್ಲಿ ಗ್ರಾಮೋದ್ಯೋಗಿಗಳು ಸರಿಯಾಗಿ ಕೆಲಸಮಾಡದೆ ಹೋದರೆ ಅವರಿಗೆ ಕೊಡಲ್ಪಟ್ಟಿರುವ ಇನಾಂ ಭೂಮಿಯನ್ನು ದಂಡರೂಪವಾಗಿ ವಹಿಸಿಕೊಳ್ಳಲು ಜೋಡಿದಾರರಿಗೆ ಅಧಿಕಾರಕೊಡಬೇಕು.

ಉ—ಇನಾಂದಾರರ ಕಮಿಟಿ ರಿಪೋರ್ಟಿನ ವಿಚಾರ ಕಾಲದಲ್ಲಿ ಇದೂ ಪರ್ಯಾಲೋಚಿಸಲ್ಪಡುವುದು.

ಅ—4–5 ವರ್ಷ ಮಳೆಯಿಲ್ಲದೆ ಕೆರೆ ತುಂಬದೆ ಫಸಲಾಗದೆ ಇರುವ ಭೂಮಿಗೂ, ಹೊಳೆಗಳ ನಾಲಾ ಕೆಳಗಿರುವ ಭೂಮಿಗೂ ಒಂದೇ ತೆರದ ಕಂದಾಯವು ಹಾಕಲ್ಪಟಿದೆ. ಆದಕಾರಣ ಮದರಾಸಿನ ಕಂದಾಯ ಮಾಫಿ ಪದ್ಧತಿಯನ್ನು ನಮ್ಮಲ್ಲಿಯೂ ಜಾರಿಗೆ ತರಬೇಕು.

ಉ—ನಮ್ಮ ಕಂದಾಯದ ಪದ್ಧತಿಯು ಬೊಂಬಾಯಿ ಪದ್ಧತಿಯನ್ನನುಸರಿಸಿದೆ. ಈ ವಿಷಯದಲ್ಲಿ ಸರ್ಕಾರದಪ್ಪಣೆಯು ಹಿಂದೆಯೇ ಆಗಿದೆ. ನಮ್ಮ ಭೂಗಂದಾಯದ ಪದ್ಧತಿಯನ್ನೆಲ್ಲಾ ಬೊಂಬಾಯಿ ವಿಧಿಯಂತೆ ವ್ಯವಹಾರಕ್ಕೆ ತರುವುದೇ ಅನುಕೂಲವೆಂದು ಹಿಂದೆ ಇದೇ ಸಭೆಯಲ್ಲಿ ಕೇಳಿಕೊಂಡುದರ ಮೇಲೆ ಹಾಗೆ ಮಾಡಲಾಗಿದೆ. ಇದನ್ನು 3 ವರ್ಷಕಾಲ ಪರೀಕ್ಷೆ ಮಾಡಿ ತದನಂತರ ಪದ್ಧತಿಯನ್ನು ಬದಲಾವಣೆಮಾಡಬೇಕೇ ಬೇಡವೇ ಎಂಬುದನ್ನು ವಿಚಾರಮಾಡಬಹುದು.

ಅ—ಮಳೆಯಾಗದೆ ಕೆರೆ ತುಂಬದೆ ತಲೀ ಫಸಲಾಗದೆ ಇದ್ದಾಗ ಅಂಥ ಭೂಮಿಗೆ ಕುಷ್ಕಿ ಕಂದಾಯವನ್ನು ತೆಗೆದುಕೊಳ್ಳುವಂತೆ ಅಪ್ಪಣೆಕೊಡಿ.

ಉ—ಸ್ಪೆಷಲ್ ಕೇಸಿದ್ದರೆ ಅರ್ಜಿಕೊಡಿ. ನವಂಬರ್ ಕೊನೆಯೊಳಗೆ ಅರ್ಜಿಕೊಟ್ಟರೆ ಜಮಾಬಂದಿ ಆಫೀಸರು ವಿಚಾರಮಾಡಿ ವರದಿಮಾಡುತ್ತಾರೆ. ರೂಲ್ಸಿಗನುಸರಿಸಿ ಸರ್ಕಾರದವರು ನಡೆಯಿಸಿಕೊಡುತ್ತಾರೆ.

ಅ—ಕೆರೆ ತುಂಬಿದ್ದ ಅಥವಾ ತುಂಬದೆ ಹೋಗಿರುವ ವರದಿಯನ್ನು ಸರ್ಕಾರದವರೇ ತರಿಸಿಕೊಳ್ಳುವಂತೆ ಮಾಡಬೇಕು.

ಉ—ನಾವೂ ಮಾಡುತ್ತೇವೆ. ಆದರೆ ಪ್ರಜೆಗಳೇ ತಿಳಿಯಿಸಿಕೊಂಡರೆ ಅವರಿಗೇ ಅನುಕೂಲ. ಈ ವರ್ಷದ ಮಳೆಯ ಪರ್ಯವಸಾನವನ್ನು ನೋಡಿಕೊಂಡು ಈ ಸಾಲಿಗೆ ಏನುಮಾಡಬೇಕೋ ಮಾಡುತ್ತೇವೆ.

ಅ—ಜಮೀನುಗಳಿರುವ ತಾಲ್ಲೂಕು ಖಜಾನೆಗೇ ಕಂದಾಯವನ್ನು ಕಳಿಸಬೇಕೆಂಬ ನಿರ್ಬಂಧವನ್ನು ತಪ್ಪಿಸಿ, ಪೂರ್ವದಲ್ಲಿದ್ದಂತೆ ಯಾವ ತಾಲ್ಲೂಕು ಖಜಾನೆಯಲ್ಲಾದರೂ ಕಂದಾಯದ ಹಣವನ್ನು ತೆಗೆದುಕೊಂಡು ಸಂಬಂಧಪಟ್ಟ ತಾಲ್ಲೂಕಿಗೆ ಆ ಸಂಗತಿಯನ್ನು ತಿಳಿಯಿಸುವಂತೆ ಅಪ್ಪಣೆಯಾಗಬೇಕು.

ಉ—ಪರ್ಯಾಲೋಚನೆಮಾಡುತ್ತೇವೆ.

ಅ—ರೆವಿನ್ಯೂ ಹೊರತು ಇತರ ಇಲಾಖಾ ಆಫೀಸರು ತಂತಮ್ಮ ಇಲಾಖೆಯ ಮೂಲಕವಾದ ಹುಟ್ಟುವಳಿಯನ್ನು ಅವರವರೇ ವಸೂಲ್ಮಾಡುವಂತೆ ಅಪ್ಪಣೆಯಾಗಬೇಕು.

ಉ—ಸರ್ಕಾರಕ್ಕೆ ಅದರ ಜವಾಬ್ದಾರಿಯಿದೆ. ಅವರು ನೋಡಿಕೊಳ್ಳುತ್ತಾರೆ. ಸಶೇಷ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ರೇಷ್ಮೆಕೈಗಾರಿಕೆ ಮತ್ತು ವ್ಯವಸಾಯಾಭಿವೃದ್ಧಿಮಂಡಲಿ ಶಿಡ್ಲಘಟ್ಟ.

ಶಿಡ್ಲಘಟ್ಟದ ಪ್ರಜಾಮಿತ್ರಮಂಡಲಿಯ ಮೆಂಬರುಗಳು 29-10-22ನೆ ಭಾನುವಾರ ಸಾಯಂಕಾಲ ಈ ಸಂಘದ ಪ್ರೆಸಿಡೆಂಟರಾದ ಮ|| ಎಸ್. ಹಂಪಯ್ಯನವರ ಅಧ್ಯಕ್ಷತೆಯಲ್ಲಿ ಜನರಲ್ ಮೀಟಿಂಗು ನಡಿಸಿ, ತಮ್ಮ ಸಮಾಜದ ಮೆಂಬರುಗಳೆಲ್ಲರೂ, ವ್ಯವಸಾಯ ಮತ್ತು ರೇಷ್ಮೆಕೈಗಾರಿಕೆ ಕಸಬುದಾರರೇ ಆಗಿರುವುದರಿಂದ ಈ ಕಾರ್ಯಗಳ ಅಭಿವೃದ್ಧಿ ವಿಚಾರದ ಸೌಕರ್ಯಕ್ಕಾಗಿ, ಈ ಲಾಗಾಯಿತು ಸಂಘದ ಹೆಸರು (ಶಿಡ್ಲಘಟ್ಟದ ರೇಷ್ಮೆ ಕೈಗಾರಿಕೆ ವ್ಯವಸಾಯಾಭಿವೃದ್ಧಿಮಂಡಲಿ) ಎಂಬದಾಗಿ ಕರೆಯಲ್ಪಡಬೇಕೆಂತಲೂ, ಪ್ರತಿತಿಂಗಳ ಕಡೆಯ ಭಾನುವಾರದಲ್ಲಿ ಮೀಟಿಂಗು ನಡೆಯತಕ್ಕದ್ದೆಂತಲೂ ತೀರ್ಮಾನ ಮಾಡಿಕೊಂಡಿರುತ್ತಾರೆ. ಪ್ರೆಸಿಡೆಂಟ್.

ದೇವನಹಳ್ಳಿ ತಾ|| ವಡಿಗೇನಹಳ್ಳಿ.

ಒಂದುವಾರದಿಂದೀಚೆಗೆ ಸುಮಾರು ಮೂರು ನಾಲ್ಕು ಐದು ಹದ ಮಳೆಬಿದ್ದು ಹೊಲಗಳು ಚೆನ್ನಾಗಿರುತ್ತವೆ. ರೈತರೆಲ್ಲರೂ ಹಸನ್ಮುಖಿಗಳಾಗಿರುತ್ತಾರೆ. ಕೆರೆಗೆ ನಾಲ್ಕು ಐದು ತಿಂಗಳ ನೀರು ಬಂದಿರುತ್ತವೆ. ಸುತ್ತುಮುತ್ತಲೂ ಗ್ರಾಮಗಳಲ್ಲಿ ಗಲಾಟೆ ಸಾಧಾರಣವಾಗಿದೆ. ಈ ಊರಿನಲ್ಲಿ ಆರೇಳು ವರ್ಷಗಳಿಂದ ಧರ್ಮಪರಸ್ಪರಸಹಾಯ ಸಂಘದ ಸೊಸೈಟಿ ಒಂದು ಏರ್ಪಾಟಾಗಿ ನಡೆಯುತ್ತಲಿದೆ. ಯಾವುದೋ ಒಂದು ನ್ಯೂನತೆಯಿಂದ ಶ್ರೀ ಜಯಚಾಮರಾಜೇಂದ್ರ ಪರಸ್ಪರ ಸಹಾಯಸಂಘದ ಸೊಸೈಟಿಯೆಂಬ ಹೆಸರಿನಿಂದ ಎರಡನೇದು ಸ್ಥಾಪಿತವಾಗಿ ಒಂದು ವರ್ಷದಿಂದೀಚೆಗೆ ಪ್ರಾರಂಭವಾಗಿರುತ್ತದೆ. ಇದಕ್ಕೆ ಮೇಲ್ಕಂಡ ಒಂದನೇ ಸೊಸೈಟಿಗೆ ಸಂಬಂಧಪಟ್ಟವರು ಇದನ್ನು ರಿಜಿಸ್ಟರ್ ಮಾಡದಿರುವುದಕ್ಕೆ ಬೇಕಾದ ತೊಂದರೆಗಳನ್ನು ಸರ್ಕಾರದಲ್ಲಿ ನಡೆಸಿರುವರೆಂದು ಕೇಳುತ್ತೇವೆ. ಘನವುಳ್ಳ ಸರ್ಕಾರದವರು ಈ ಸೊಸೈಟಿ ಮೇಲೆ ಗಮನವಿಟ್ಟು ವ್ಯವಸಾಯ, ಕೈಗಾರಿಕೆ ಮೊದಲಾದುವುಗಳಿಗೆ ಉಂಟಾಗಿರುವ ಕಷ್ಟಗಳನ್ನು ನೀಗಿಸಿ ಜಾಗ್ರತೆ ರಿಜಿಸ್ಟರ್ ಮಾಡಿಸಬೇಕೆಂದು ಹಾರೈಸುತ್ತೇವೆ. 3800 ಪ್ರಜಾಸಂಖ್ಯೆಯಿಂದ ಕೂಡಿದ ಈ ಗ್ರಾಮದಲ್ಲಿ ಇಬ್ಬರು ಸ್ಟಾಂಪುವೆಂಡರುಗಳು ಇದ್ದಾರೆ. ಅವರಲ್ಲಿ ಒಬ್ಬರು ವ್ಯಾಪಾರಸ್ಥರು. ಅವರು ಯಾವಾಗಲೂ ವ್ಯಾಪಾರಕ್ಕಾಗಿ ಸರ್ಕೀಟು ಮಾಡುತ್ತಿರುತ್ತಾರೆ. ವಾರಕ್ಕೆ ಮೂರುದಿನಗಳು ಊರಿನಲ್ಲಿದ್ದರೆ ಹೆಚ್ಚು. ಮತ್ತೊಬ್ಬರು ಪೋಸ್ಟ್ ಮಾಸ್ಟರು ಎಂಬದಾಗಿ ಹೆಸರು, ಅವರಿಗೆ ಆಕ್ಟಿಂಗ್‌ವೆಂಡರು ಸ್ಕೂಲ್ಮಾಸ್ಟರು. ಅವರಿಗೆ ಪೌರೋಹಿತ್ಯದ ಗಲಾಟೆ, ಸ್ಕೂಲುಕೆಲಸ, ಹಳ್ಳಿಗಳ ಸರ್ಕೀಟು. ಒಂದು ಛಾಪಾಕಾಗದ ಬೇಕಾಗಿದ್ದರೆ ಎರಡುನೂರು ದಿನಗಳು ಕಾಯಬೇಕಾಗುತ್ತದೆ. ಆದ್ದರಿಂದ ವೆಂಡರುಗಳು ಮುಂದೆ ಇಂಥ ತೊಂದರೆಗೆ ಆಸ್ಪದವಿಲ್ಲದಂತೆ ನೋಡಿಕೊಳ್ಳುತ್ತಾರೆಂದು ನಂಬುತ್ತೇವೆ. ಈ ಊರಿನಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಇಂಗ್ಲಿಷ್ ಆಸ್ಪತ್ರೆಗೆ ಅನುಭವಸ್ಥರಾದ ಡಾಕ್ಟರವರು ಎಂದಿಗೆ ಬರುತ್ತಾರೋ ಎಂಬದಾಗಿ ಜನಗಳು ಹಾರೈಸುತ್ತಲಿದ್ದಾರೆ. ಈ ಊರಿನಲ್ಲಿ ಆಗುವ ಶುಕ್ರವಾರದ ಸಂತೆಯಲ್ಲಿ ಪಟೇಲರು ಮೊದಲಾದವರು ತರ್ಕಾರಿ, ವೀಳ್ಯದೆಲೆ, ಇತರ ಪದಾರ್ಥಗಳ ಪಸಿಕೆ ಎತ್ತುವುದು ತಪ್ಪಲಿಲ್ಲ. ಜನಗಳಿಗೆ ತೊಂದರೆಪಡಿಸಿ ಪಸಿಕೆ ಎತ್ತುವುದನ್ನು ಮ್ಯುನಿಸಿಪಾಲಿಟಿಯವರು ವಿಗಾ ಮಾಡಿ ತಪ್ಪಿಸುವರೆಂದು ನಂಬುತ್ತೇವೆ. ಪ್ರತ್ಯಕ್ಷದರ್ಶಿ.

ಸಾಂಶಿ; ತಾಲ್ಲೂಕು ಕುಂದಗೋಳ, ಜಿಲ್ಲಾ ಧಾರವಾಡ.

ತಾ|| 25-10-22ನೆ ದಿವಸ ಸಾಯಂಕಾಲ 6 ಗಂಟೆಗೆ ಶ್ರೀಮನ್ಮಹಾನಿರಂಜನ ಮೃತ್ಯುಂಜಯ ಸ್ವಾಮಿಗಳವರು ದಾವಣಗೇರಿ ಇವರ ಕೃಪಾಛತ್ರದ ಕೆಳಗೆ ಶ್ರೀ ವಿರಕ್ತಮಠದಲ್ಲಿ ಮ|| ಶಿವಲಿಂಗಪ್ಪ ಅಣ್ಣ ಕುಂಬಿ ಇವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಾಮಾಜಿಕ ಸಭೆಯು ಜರುಗಿಸಲ್ಪಟ್ಟಿತು. ಈ ಸಭೆಯಲ್ಲಿ ಮ|| ಚೆನ್ನಪ್ಪಗೌಡಾ ಪಾಟೀಲ ಸ್ಕೂಲ್‌ಮಾಸ್ತರ ಚಿಕ್ಕಮಲ್ಲೂರ, ಮ|| ಶಂಕರಗೌಡಾ ಪಾಟೀಲ ಸ್ಕೂಲ್‌ಮಾಸ್ತರ ಸಾಂಶಿ, ಮ|| ಸೋಮನಗೌಡ ಪಾಟೀಲ ಮುಡಶಿಬಣ, ಮ|| ಪಂಚಪ್ಪ ಕೋರಿ ಇವರುಗಳ ವ್ಯಾಖ್ಯಾನಗಳು ಸಾಮಾಜಿಕ ವಿಷಯಗಳ ಮೇಲೆ ಚೆನ್ನಾಗಿ ಆದವು. ನಂತರ ಸದರಿ ಶ್ರೀಗಳವರ ಅತ್ಯುತ್ತಮವಾದ ಉಪದೇಶವನ್ನು ಎಲ್ಲರೂ ಆನಂದದಿಂದ ಕೇಳಿ ಧನ್ಯರಾದರು. ತರುವಾಯ ಅಧ್ಯಕ್ಷರ ಸಮಾರೋಪಣ ಭಾಷಣವಾದನಂತರ ಸದರಿ ಶ್ರೀಗಳವರ ಅಪ್ಪಣೆಮೇರೆಗೆ ವೀರಶೈವ ತರುಣಸಂಘ ಮತ್ತು ಇದಕ್ಕೆ ಸಂಬಂಧಿಸಿ ವೀರಶೈವ ಬಸವೇಶ್ವರ ಲೈಬ್ರೆರಿ ಸ್ಥಾಪನ ಮಾಡಲ್ಪಟ್ಟಿತು. ಸದರೀ ಸಂಘಕ್ಕೂ ಮತ್ತು ಲೈಬ್ರೆರಿಗೂ ಇಲ್ಲಿಯ ಸದ್ಗೃಹಸ್ಥರು ಮ|| ಬಸವನಗೌಡ ದೇವನಗೌಡ ಪಾಟೀಲ ಕುಲಕರ್ಣಿ ಹನುಮಂತಗೌಡರು ಮುಡಶಿಬಣ, ಚೆನವೀರಗೌಡರು ಹಿರೇಬಣ, ಶಂಕರಗೌಡರು ಹಿರೇಬಣ, ಸಂಗಯ್ಯ ಕಂಬಿ ಅಡಿವೆಪ್ಪಗೌಡರು ಪಾಟೀಲ ಮೊದಲಾದ ಜನರು ಒಳ್ಳೆ ಸಹಾಯಮಾಡಿದರು. ನಂತರ ಶ್ರೀಗಳವರ ಹೆಸರಿನಿಂದ ಜಯಘೋಷ ಮಾಡಿಸಿ ಸಭೆಯು ಮಂಗಲವಾಯಿತು.

ಅಡಿವೆಪ್ಪಗೌಡ ಚೆನವೀರಗೌಡ ಪಾಟೀಲ.

ಅಡ್ಡಪಲ್ಲಕ್ಕಿಮಹೋತ್ಸವ, ಬಳ್ಳಾರಿ.

ಈ ಪಟ್ಟಣಕ್ಕೆ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳ ಸ್ವಾರಿಯು ತಾ|| 26-10-22 ನೆ ಗುರುವಾರ ಉದಯ 8 ಗಂಟೆಗೆ ದಯಮಾಡಿಸಲು ಪಟ್ಟಣದ ಬಹಿರ್ದ್ವಾರದಲ್ಲಿ ಸಮಸ್ತ ಭಕ್ತಮಾಹೇಶ್ವರರೂ ಕಾದುಕೊಂಡಿದ್ದು ಮಹಾಸ್ವಾರಿಯು ದಯಮಾಡಿಸುತ್ತಲೇ ಸುಸ್ವಾಗತವನ್ನಿತ್ತರು. ತರುವಾಯ ಪಂಚಕಲಶಯುಕ್ತವಾದ ಅಡ್ಡಪಲ್ಲಕ್ಕಿಯುತ್ಸವವು ಸಮಸ್ತ ಬಿರುದಾವಳಿಗಳಿಂದ ಹೊರಟು ಪಟ್ಟಣದ ಮುಖ್ಯಬೀದಿಗಳಲ್ಲಿ ಹಾಯಿದು 12 ಗಂಟೆಗೆ ಬಿಡಾರಕ್ಕೆ "ಸೂಗಮ್ಮನ ಚೌಕಿಗೆ" ಬಂದು ತಲ್ಪಿತು. ಉತ್ಸವಕಾಲಕ್ಕೆ ಡಿ|| ಕಲೆಕ್ಟರ್ ದೊರೆಗಳು, ಪೋಲೀಸು ಸೂಪರಿಂಟೆಂಡೆಂಟ್ ಸಾಹೇಬರು, ಸಬ್‌ಮ್ಯಾಜಿಸ್ಟ್ರೇಟರು, ಸರ್ಕಲ್ ಇನ್ಸ್ಪೆಕ್ಟರು, ಸಬ್‌ಇನ್ಸ್ಪೆಕ್ಟರು ಮೊದಲಾದ ಸರಕಾರಿ ಅಧಿಕಾರಸ್ಥರು ಹಾಜರಿದ್ದು ರಿಜರ್ವ್ ಹಾಗು ಟೌನ್ ಪೋಲೀಸರಿಂದ ಯೋಗ್ಯಬಂದೋಬಸ್ತು ಇಟ್ಟಿದ್ದರು. ಪರಸ್ಥಳದಿಂದ ಬಂದ ಜನಸ್ತೋಮದಿಂದಲೂ ಸ್ಥಳದವರ ಯೋಗ್ಯವ್ಯವಸ್ಥೆಯಿಂದಲೂ ಉತ್ಸವವು ಅತ್ಯಂತ ಪ್ರೇಕ್ಷಣೀಯವಾಗಿತ್ತು. ಪ್ರತ್ಯಕ್ಷದರ್ಶಿ.

ಮೈಸೂರ ಸಂಪದಭ್ಯುದಯ ಸಂಘದವರೂ ವೀರಶೈವರೂ.

ಈ ಸುಧಾರಣೆಯ ನವನಾಗರಿಕತೆಯ ಕಾಲದಲ್ಲಿ ತ್ರಿಮತಬ್ರಾಹ್ಮಣ ಬಾಂಧವರು—ಅನ್ಯಜನಗಳಿಗೆ ವೇದಾಧಿಕಾರವಿಲ್ಲ; ವೇದ ವೇದಾಂಗಗಳನ್ನು ತಾವೇ ಅಧ್ಯಯನಾಧ್ಯಾಪನವನ್ನು ಮಾಡಬೇಕು. ಅನ್ಯರು ಅನನ್ನು ಓದಕೂಡದು, ಕೇಳಕೂಡದೆಂದು ಹೇಳುವದು ಬಹು ಅಸಮಂಜಸವಾಗಿಯೂ ನಿಷ್ಫಲವಾದದ್ದಾಗಿಯೂ ಇರುವದು. ಯಾಕಂದರೆ ಆರ್ಯಸಮಾಜದವರು ವೇದ ವೇದಾಂಗಗಳನ್ನು ಪರಿಶೀಲಿಸಿ ತಮ್ಮ ಮತಾನುಸಾರವಾಗಿ ಅರ್ಥವನ್ನು ಬರೆದುಕೊಂಡು ಅತಿ ನಿಕೃಷ್ಟರಾದ ಜನಗಳಿಗೂ ಬೋಧಿಸುತ್ತಲಿರುವರು. ಮತ್ತು ಭಾರತೀಯರ ದೃಷ್ಟಿಯಿಂದ ಮ್ಲೇಚ್ಛರೆಂದು ಎಣಿಸಲ್ಪಡುವ ಪಾಶ್ಚಾತ್ಯರು, ವೇದ ವೇದಾಂಗಗಳನ್ನೂ ಉತ್ಕೃಷ್ಟಗಳಾದ ಅನೇಕ ವೈದಿಕ ಗ್ರಂಥಗಳನ್ನೂ ಆಮೂಲವಾಗಿ ಪರಿಶೀಲಿಸಿ ತಮ್ಮತಮ್ಮ ಭಾಷೆಯಲ್ಲಿ ಪರಿವರ್ತನ ಮಾಡಿಕೊಂಡಿರುವರು. ಅಪೇಯಪಾನ ಅಭಕ್ಷ್ಯ ಭಕ್ಷಣವನ್ನು ಮಾಡುತ್ತಲಿರುವ ವಿದೇಶಿಯರ ಮುಖದಲ್ಲಿ ವೇದ ವೇದಾಂಗಗಳು ಹೊರಳಾಡುತ್ತಿದ್ದರೂ ಅವುಗಳ ಪಾವಿತ್ರ್ಯವು ನಷ್ಟವಾಗಿಲ್ಲ; ಭಾರತೀಯರಲ್ಲಿ ಉತ್ತಮ ವರ್ಗವೆಂದು ಗಣಿಸಲ್ಪಡುವ ಶಿವಸಂಸ್ಕಾರ ಶಿವನಾಮೋಚ್ಚಾರಣೆಯಿಂದ ಪರಿಶುದ್ಧರಾದವರ ಮುಖದಿಂದುಚ್ಚರಿಸಲ್ಪಟ್ಟರೆ ಮಾತ್ರ ಅವುಗಳ ಪಾವಿತ್ರ್ಯಕ್ಕೆ ಹಾನಿಯುಂಟಾಗುವುದೆಂಬ ಬ್ರಾಹ್ಮಣ ಬಾಂಧವರ ವಿಚಾರವು ಎಷ್ಟುಮಾತ್ಸರ್ಯಯುಕ್ತವಾಗಿದೆ ಎಂಬುದನ್ನು ವಾಚಕರಿಗೆ ಬೇರೆ ಹೇಳಬೇಕಾದುದಿಲ್ಲ. ಇನ್ನು ಪಾಶ್ಚಾತ್ಯರು ಆ ಗ್ರಂಥಗಳಲ್ಲಿರುವ ಅಮೂಲ್ಯ ರತ್ನಗಳನ್ನು ಜಗತ್ತೆಲ್ಲವೂ ನೋಡಿ ಆನಂದಪಡಲೆಂದು ಹೊರಚೆಲ್ಲುತ್ತಿರುವಾಗ ಪ್ರಾವೃಷಿಕ ಮಂಡೂಕ (ಮಳೆಗಾಲದ ಕಪ್ಪೆ) ಗಳಂತೆ ಉಚ್ಚಾರಣೆಯ ಜೊಳ್ಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಅದನ್ನೂ ಅನ್ಯರು ಮಾಡಬಾರದೆಂದು ಈಳ್ಬಟ್ಟರು ಯತ್ನಿಸುವದೆಂದರೆ ಗ್ರಾಮವನ್ನು ಲೂಟಿಮಾಡಿದ ನಂತರ ಗ್ರಾಮದ್ವಾರವನ್ನು ಜೋಡಿಸಿದಂತೆ ಬಂದುಮಾಡಿದಂತಾಗುವದು. ಎಂದಿನಿಂದ ವೇದ ವೇದಾಂಗಗಳು ಮುದ್ರಿತಗಳಾಗಿ ವಿದೇಶೀಯರ ಹಸ್ತಗತಗಳಾದವೋ ಅಂದೇ ಅವುಗಳ ಪವಿತ್ರತೆಯು ನಷ್ಟವಾಯಿತು. ಜಗತ್ತಿನ ಸ್ಥಿತಿಯು ಹೀಗಿರುವಲ್ಲಿ ಮೈಸೂರ ಸಂಪದಭ್ಯುದಯ ವರ್ಗದವರು ತಮ್ಮ ತ್ರಿಮತದವರ ಹೊರತು ಇತರರಿಗೆ ವೇದಾಧಿಕಾರವಿಲ್ಲವೆನ್ನುವ ವಿಷಯದಲ್ಲಿ ಪತ್ರಿಕೆಯು ಸ್ವಾಧೀನವಿರುವದರಿಂದ ಉದ್ಧತವಾದ ಲೇಖನಗಳನ್ನು ಮುದ್ರಿಸುತ್ತಿರುವರು. ಈ ವಿಷಯವನ್ನು ಚರ್ಚಿಸಲೇ ಬಾರದೆಂದು ನಮ್ಮ ಆಕ್ಷೇಪವಲ್ಲ. ತಾ|| 22-9-22 ನೇ ಸಾಧ್ವಿಯಲ್ಲಿ ಒಬ್ಬ ಲೇಖಕರು ತಮ್ಮ ಲೇಖನವನ್ನುದ್ದ ಮಾಡಬೇಕೆಂಬಾವೇಶದಿಂದಲೋ ಏನೋ ವೀರಶೈವರಿಗೆ ವೇದಾಧಿಕಾರವಿಲ್ಲ; ಲಿಂಗಧಾರಣವು ವೇದೋಕ್ತವಾದುದಲ್ಲ; ವೀರಶೈವ ಮತವು ವೈದಿಕಮತವಲ್ಲ, ಇತ್ಯಾದಿ ಕೆಲವು ಆಕ್ಷೇಪಗಳನ್ನು ಕುರಿತು ಬರೆದ ವಿಷಯವನ್ನು ವಿಚಾರಿಸಬೇಕಾಗಿದೆ. ಸಾಂಪ್ರತಿಕ ಕಾಲಗತಿಯನ್ನು ನೋಡಿದರೆ ವೇದಾಧಿಕಾರವನ್ನು ಕೇಳುವವರೇ ಇಲ್ಲ. ಅನ್ಯರಿಗೆ ಅಧಿಕಾರವಿಲ್ಲೆಂದು ಹೇಳಿಕೊಳ್ಳುವ ಭಟ್ಟರ ಅಧಿಕಾರವೇ ಕ್ಷೀಣವಾಗುತ್ತ ವಿದೇಶೀಯರನ್ನು ಸೇರುತ್ತಲಿದೆ. ಆದರೂ ಆಸ್ತಿಕ ಶಿಖಾಮಣಿಗಳಾದ ಎಷ್ಟೋಜನ ನಮ್ಮ (ವೀರಶೈವ) ಬಾಂಧವರ ಹೃದಯದಲ್ಲಿ ಈ ಲೇಖಕರ ಆಡಂಬರದ ಬೊಬ್ಬಾಟಕ್ಕೆ ಎಷ್ಟೋ ಸಂದೇಹ ಉತ್ಪನ್ನವಾಗಿರಬಹುದು. ಅದನ್ನು ದೂರೀಕರಿಸುವದಕ್ಕಾವಶ್ಯಕವು. ಈ ಲೇಖಕರ ಆಕ್ಷೇಪಗಳನ್ನು ಒಂದೊಂದಾಗಿ ತೆಗೆದುಕೊಂಡು ಅವಕ್ಕುತ್ತರವನ್ನು ಕೊಡುತ್ತೇವೆ. ಲಿಂಗಧಾರಣ ಮಾಡಿಕೊಳ್ಳುವ ಬಗ್ಗೆ ವೀರಶೈವರಿಗೆ ವೇದಾಧಿಕಾರವಿರುವ ಬಗ್ಗೆ ವೇದೋಪನಿಷದಾಗಮಾದಿಗಳಲ್ಲಿ ಅನೇಕ ಪ್ರಮಾಣಗಳುಂಟು. ಎಲ್ಲವನ್ನೂ ವಾರ್ತಾಪತ್ರಿಕೆಗಳಲ್ಲುದಾಹರಿಸುವದು ಅಸಾಧ್ಯವಾದುದರಿಂದ ಕೆಲವನ್ನು ಮಾತ್ರ ನಮೂದಿಗಾಗಿ ತೋರಿಸುತ್ತೇವೆ.

ಋಗ್ವೇದದಲ್ಲಿ ಹೇಳಲ್ಪಟ್ಟ "ಪವಿತ್ರಂತೆ ವಿತತಂ ಬ್ರಹ್ಮಣಸ್ಪತೆ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ ಅತಪ್ತತನೂರ್ನತದಾಮೋ ಅಶ್ನುತೆ ಶ್ರಿತಾಸ ಇದ್ವಹಂತಸ್ತತ್ಸಮಾಶತ" ಈ ಮಂತ್ರದಿಂದ ಲಿಂಗಧಾರಣವು ವಿಹಿತವಾಗುತ್ತದೆ. ಈ ಮಂತ್ರದಲ್ಲಿರುವ ಬ್ರಹ್ಮಶಬ್ದಕ್ಕೆ ಲಿಂಗವೆಂದರ್ಥವು. ಬ್ರಹ್ಮಶಬ್ದಕ್ಕೆ ಲಿಂಗವೆಂದು ಹೇಳುವದು ಹೇಗಂದರೆ—"ಬ್ರಹ್ಮಣಸ್ಪತಿರೀಶೋಯಂ ಬ್ರಹ್ಮ ತಲ್ಲಿಂಗಮುಚ್ಯತೆ" ಎಂಬ ಸ್ಕಾಂದ ಪುರಾಣ ವಾಕ್ಯದಿಂದಲೂ "ಅಲಿಂಗಮೇಕಮವ್ಯಕ್ತಂ ಲಿಂಗಂಬ್ರಹ್ಮೇತಿ ನಿಶ್ಚಿತಂ। ಸ್ವಯಂಜ್ಯೋತಿಃ ಪರಂ ತತ್ವಂ ಪರೆವ್ಯೋಮ್ನಿವ್ಯವಸ್ಥಿತಂ ॥" ಎಂಬ ಈಶ್ವರಗೀತಾವಾಕ್ಯದಿಂದಲೂ "ಜ್ಯೋತೀರೂಪೆ ಪರೋಕ್ಷೆ ಲಿಂಗಾಖ್ಯೆ ಬ್ರಹ್ಮರೂಪೆ............ಲಿಂಗಂತದ್ಬ್ರಹ್ಮಸಂಜ್ಞಿತಂ" ಇತ್ಯಾದಿ ಶಂಕರಾಚಾರ್ಯಕೃತಾಪರಾಧಸ್ತೋತ್ರ ಬಲದಿಂದಲೂ "ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣ ಸ್ಪತಿರೀಶ್ವರಃ............ಲಿಂಗಂ ಬ್ರಹ್ಮಸನಾತನಂ" "ತಲ್ಲಿಂಗಂ ಬ್ರಹ್ಮಶಾಶ್ವತಂ" ಇತ್ಯಾದಿ ಸಿದ್ಧಾಂತ ಶಿಖಾಮಣಿಯ ಆಧಾರದಿಂದಲೂ ಇನ್ನೂ ಅನೇಕ ಗ್ರಂಥಗಳಲ್ಲಿ ಈ ವಿಧವಾದ ಪ್ರಯೋಗಗಳಿರುವದರಿಂದಲೂ ಬ್ರಹ್ಮಶಬ್ದಕ್ಕೆ ಲಿಂಗವೆಂದರ್ಥ ಮಾಡುವದರಲ್ಲಿ ಯಾವ ಸಂದೇಹವೂ ಇಲ್ಲ. ಮಂತ್ರಾರ್ಥವು ಹೇಗೆಂದರೆ—ಹೇ ಬ್ರಹ್ಮಣಸ್ಪತೆ, ಬ್ರಹ್ಮಣಃ—ಲಿಂಗರೂಪವಾದ ಬ್ರಹ್ಮಕ್ಕೆ, ಪತೆ—ಅಧಿಷ್ಠಾತೃವಾಗಿರತಕ್ಕಾತನೆ, (ಲಿಂಗರೂಪವಾದ ಶರೀರದಲ್ಲಿ ಶರೀರಿಭಾವದಿಂದ ಸ್ಥಿತನಾದ ಪರಶಿವನೆ,) (ಅತ್ರ ಪವಿತ್ರಥ್ಯಾಹಾರಃ; ಪವಿತ್ರ ಪದ ವಿತತಪದಯೋ ರ್ವಿಶೇಷಣ ವಿಶೇಷ್ಯಭಾವಾಸಂಭವೇನ ವಿಶೇಷಣ ದ್ವಯಾನ್ವಯಾನುಪಪತ್ತಾ ವಿಶೇಷ್ಯ ವಾಚಕ ತತ್ಪದಾಧ್ಯಾಹಾರಸ್ಯೈವ ಯುಕ್ತತ್ವಾತ್) ತೆ—ನಿನ್ನ, ತತ್—ಆ ಬ್ರಹ್ಮಪದವಾಚ್ಯವಾದ ಲಿಂಗರೂಪಶರೀರವು, ಪವಿತ್ರಂ—ಶುಚ್ಯಶುಚಿ ಕಾಲಗಳಲ್ಲಿಯೂ ಧರಿಸಲಿಕ್ಕೆ ಯೋಗ್ಯವಾದುದು. ವಿತತಂ—ಇಷ್ಟಪ್ರಾಣ ಭಾವ ಭೇದದಿಂದಾಗಲೀ ಭಕ್ತ ಶರೀರಾದಿ ಭೇದದಿಂದಾಗಲೀ ಅನೇಕ ಪ್ರಕಾರವಾದುದು, ಪ್ರಭುಃ-ನಿಗ್ರಹಾನುಗ್ರಹ ಸಾಮರ್ಥ್ಯವುಳ್ಳವನಾದ ನೀನು, ವಿಶ್ವತಃ-ಸಮಸ್ತಗಳಾದ, (ಆದ್ಯಾದಿಭ್ಯಸ್ತೋತ್ಸಿನೇನ ಸಾರ್ವವಿಭಕ್ತಿಕಸ್ತಸಿಲ್) ಗಾತ್ರಾಣಿ-ಸ್ಥೂಲ ಸೂಕ್ಷ್ಮ ಕಾರಣರೂಪ ಭಕ್ತ ಶರೀರಗಳನ್ನು, ಪರ್ಯೇಷಿ-ವ್ಯಾಪಿಸಿಕೊಂಡಿರುವೆ, ಲಿಂಗರೂಪ ಶರೀರದ್ವಾರಾ ಧರಿಸಲ್ಪಟ್ಟಾತನಾಗಿ ಭಕ್ತರ ಶರೀರಗಳಲ್ಲಿ ವ್ಯಾಪಿಸಿಕೊಂಡಿರುತ್ತೀಯೆ ಎಂದಭಿಪ್ರಾಯವು. ಅತಪ್ತತನುಃ—ವೇಧಾದೀಕ್ಷೆ ಮಂತ್ರದೀಕ್ಷೆ ಕ್ರಿಯಾದೀಕ್ಷೆಗಳಿಂದ ದಹಿಸಲ್ಪಟ್ಟ ಪಾಪಪಂಜರವುಳ್ಳ ಶರೀರವಿಲ್ಲದಾತನೂ, (ದೀಕ್ಷಾತ್ರಯರಹಿತನೂ) ಆಮಃ-ಅಪರಿಪಕ್ವಾಂತಃಕರಣನೂ ಆದ ಪುರುಷನು, ತತ್-ಆ ಪರಶಿವಸ್ವರೂಪವಾದ ಲಿಂಗವನ್ನು, ನಾಶ್ನುತೆ—ಹೊಂದಲಾರನು. ಹಾಗಾದರೆ ಆ ಲಿಂಗವನ್ನು ಯಾರು ಹೊಂದಲು ಯೋಗ್ಯರೆಂದರೆ—ಹೇಳುವನು.

"ಶ್ರಿತಾಸ ಇದ್ವಹಂತಸ್ತತ್ಸಮಾಶತ" ಶ್ರಿತಾಸಃ—ಶಿವಧರ್ಮಾಶ್ರಿತರಾದ, ಇದ್ವಹಂತಃ ಆ ಲಿಂಗವನ್ನು ಧಾರಣಮಾಡತಕ್ಕವರೇ, ತತ್ಸಮಾಶತ—ಆ ಲಿಂಗವನ್ನು ಹೊಂದಲು ಯೋಗ್ಯರು. ಶಿವಸಂಸ್ಕಾರವುಳ್ಳಾತನೂ ಗುರುಕಾರುಣ್ಯಪಾತ್ರನೂ ಆದ ಪುರುಷನೇ ಆ ಲಿಂಗವನ್ನು ಹೊಂದಲು ಯೋಗ್ಯನೆಂದಭಿಪ್ರಾಯವು. ಈ ಮಂತ್ರಕ್ಕೆ ಈ ವಿಧವಾಗಿ ಅರ್ಥವಾದುವುದರಲ್ಲಿ "ಬ್ರಹ್ಮಣಸ್ಪತಿರೀಶೋಯಂ ಬ್ರಹ್ಮತಲ್ಲಿಂಗ ಮುಚ್ಯತೆ। ಪವಿತ್ರಂ ತಸ್ಯ ವಿಖ್ಯಾತಂ ತತ್ಸಧುರ್ವಿಶ್ವತಸ್ಸ್ಯಯಂ॥ ತತ್ಸಂಪರ್ಕಾತ್ಪವಿತ್ರಸ್ಯಂ ಗಾತ್ರಾಣಿಕುರುತೆಸ್ವಯಂ। ಅತಪ್ತ ತನುರಜ್ಞೋನೈ ಆಮ ಸ್ಸಂಸ್ಕಾರವರ್ಜಿತಃ॥ ದೀಕ್ಷಯಾರಹಿತಸ್ಸಾಕ್ಷಾನ್ನಾಪ್ನುಯಾ ಲ್ಲಿಂಗಮುತ್ತಮಂ। ಶಿವಧರ್ಮಾಶ್ರಿತಾಸ್ಸ್ವಾಂತಾ ಶ್ರಿವಾರ್ಚನಪರಾಯಣಾಃ। ಯೇವಹಂತಸ್ಸದಾಲಿಂಗಂ ತೆಯಾಂತಿ ಪರಮಂ ಪದಂ। ಅನ್ಯಥಾನಹಿನಾಂಪ್ರಾಪ್ತುಂ ಶಕ್ಯಂದೇವಿಕಥಾ ಶ್ರುತಿಃ॥" ಎಂಬ ಸ್ಕಾಂದ ಪುರಾಣವಚನವೂ "ಶಸ್ತ್ರಂವಿಪಾಪ್ಮಂ ಪರಮಂ ಗಹನಂ ದೇಹಸಂಸ್ಥಿತಂ। ಜನ್ಮಮೃತ್ಯುಜರಾತೀತಂ ತತ್ಪವಿತ್ರಂ ಪ್ರಚಕ್ಷತೆ॥ ಪತನಾತ್ತ್ರಾಯತೆ ಯಸ್ಮಾದಜೀವ ನರಕಾರ್ಣವಾತ್। ಯತ್ಪವಿತ್ರಂ ಪವಿತ್ರಾಖ್ಯಂ ತಲ್ಲಿಂಗಂಜ್ಯೋತಿ ರೈಶ್ವರಂ॥ ತತ್ಸಂಪರ್ಕಾತ್ಪವಿತ್ರಂ ಗಾತ್ರಾಣ್ಯೇವ ಕರಿಷ್ಯತಿ। ತದೇತತ್ಪರಮಂ ಜ್ಯೋತಿರ್ಲಿಂಗಂ ದೇವಿ ಮದಾತ್ಮಕಂ॥ ಶಿವಾನಂದಪರಂಧಾಮ ಮುಸ್ವಾಪ್ಯಮುಕ್ತಾತ್ಮಭಿಃ। ಯೇಸಂಶ್ರಿತಾಸ್ಸದಾ ಲಿಂಗಂ ಯೇವಹಂತಸ್ಸದಾಪರಾತ್॥ ತೇಪ್ರಾಪ್ನುವಂತಿ ಸರ್ವೇಪಿ ಮಾಮೇವಾತ್ರ ನಸಂಶಯಃ॥" ಎಂಬ. ಕಾಶೀಖಂಡದ ವಚನವೂ ಸಾಕ್ಷ್ಯಗಳಾಗಿರುವವು.

ಋಗ್ವೇದದ "ತವ ಶ್ರೀಯೆ ಮರುತೋಮರ್ಜಯಂತ ರುದ್ರಯತ್ತೆ ಜನಿಮ ಚಾರು ಚಿತ್ರಂ ಪದಂ ಯದ್ವಿಷ್ಣೋರುಪಮಂನ್ಯಧಾಯಿ" ಎಂಬ ಋಕ್ಕಿನಿಂದಲೂ, ವಿಷ್ಣು ಮೊದಲಾದ ಸಮಸ್ತ ದೇವತೆಗಳೂ ಲಿಂಗಧಾರಣವನ್ನು ಮಾಡಿಕೊಂಡು ಪೂಜಿಸಿದರೆಂದು ಸಿದ್ಧವಾಗುತ್ತದೆ. ಇದರರ್ಥವು-ರುದಂ ದ್ರಾವಯತೀತಿ ರುದ್ರಃ, ತತ್ಸಂಬುದ್ಧೌ, ಭೋರುದ್ರ-ಸರ್ವದುಃಖ ವಿನಾಶಕನಾದ ಶಂಕರನೇ, ಮರುತಃ-ಬ್ರಹ್ಮಾದಿ ದೇವತೆಗಳು, ಶ್ರಿಯೆ-ಸಂಪತ್ತಿಗೋಸ್ಕರವಾಗಿ, ವಿಷ್ಣೋಃ-ವಿಷ್ಣುವಿನ, ಯತ್ಪದಂ-ತತ್ ಆ ವೈಕುಂಠಾದಿ ಸ್ಥಾನವನ್ನು, ಉಪಮಂನ್ಯಧಾಯಿ-ಉಪಮಾನವನ್ನಾಗಿಟ್ಟುಕೊಂಡು, ಚಾರು-ಸುಂದರವಾದ; ಚಿತ್ರಂ-ಭಕ್ತರ ಸಕಲೇಷ್ಟದಾಯಕವಾದ, ತೆ-ನಿನ್ನ. ಯತ್ ಜನಿಮ-ಸಕಲಜನರುತ್ಪತ್ತಿಗೆ ಕಾರಣವಾದ ಯಾವ ಜನಿಮಾಖ್ಯಲಿಂಗವುಂಟೋ, ತತ್-ಆ ಲಿಂಗವನ್ನು, ಅಮರ್ಜಯಂತ-ಧಾರಣವನ್ನು ಮಾಡಿಕೊಂಡು ಪೂಜಿಸಿದರು. ವಿಷ್ಣುವು ಶಿವಲಿಂಗಧಾರಣವನ್ನು ಮಾಡಿಕೊಂಡು ಆ ಲಿಂಗಪೂಜಾ ಮಹತ್ವದಿಂದಲೇ ವೈಕುಂಠಾದಿ ಪದವಿಯನ್ನು ಪಡೆದನೆಂಬುದನ್ನು ಉಪಮಾನವನ್ನಾಗಿಟ್ಟುಕೊಂಡು ಬ್ರಹ್ಮಾದಿ ಸಕಲ ದೇವತೆಗಳೂ ತಮ್ಮ ತಮ್ಮ ಪದವಿಗಾಗಿಯೂ ಅನೇಕ ಸಂಪತ್ತಿಗಾಗಿಯೂ ಶಿವಲಿಂಗ ಧಾರಣವನ್ನು ಮಾಡಿಕೊಂಡು ಪೂಜಿಸಿದರೆಂದು ತಾತ್ಪರ್ಯವು. ಇದೇ ಅರ್ಥವೇ ಪರಾಶರ ಪುರಾಣದಲ್ಲಿ ಹೇಳಲ್ಪಟ್ಟಿದೆ.

ರೌದ್ರಂಲಿಂಗಂ ಮಹಾವಿಷ್ಣು ರ್ಜನಿಮಾಖ್ಯಂ ಶಿಲಾಮಯಂ। ಚಾರು ಚಿತ್ರಂಸಮಭ್ಯರ್ಚ್ಯ ಲಬ್ಧವಾನ್ಪರಮಂಪದಂ॥ ಬ್ರಹ್ಮಾ ಸರ್ವಜಗತ್ಕರ್ತಾ ಯಸ್ಯ ಲಿಂಗಾರ್ಚನೇನತು। ಭಾರತೀಂ ಪ್ರಾಪ್ತವಾನಾಶು ಸ ಪೂಜ್ಯಸ್ಸರ್ವದೇಹಿನಾಂ। ಯಸ್ಯಲಿಂಗಂ ಸಮಭ್ಯರ್ಚ್ಯ ಮರುತಸ್ಸಕಲಾ ಅಪಿ। ಲಬ್ಧವಂತಃಶ್ರಿಯಂಪೂರ್ಣಾ ಮಿತ್ಯೇಷಾ ಶಾಶ್ವತೀಶ್ರುತಿಃ॥ ಎಂಬ ವಚನವೂ ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟ

ಬ್ರಹ್ಮವಿಷ್ಣ್ವಾದಯೋ ದೇವಾಸ್ಸರ್ವೇಬ್ರಹ್ಮರ್ಷಯಸ್ತಥಾ। ಶಿವಲಿಂಗೇಜ್ಯಯಾಸಮ್ಯಕ್ ಸ್ವಸ್ವರೂಪಮವಾಪ್ನುಯುಃ॥ ಎಂಬ ವಚನವೂ ಪದ್ಮಪುರಾಣದಲ್ಲಿ ಹೇಳಲ್ಪಟ್ಟ

ಬ್ರಹ್ಮಣಸ್ಸೃಷ್ಟಿಕರ್ತೃತ್ವಂ ವಿಷ್ಣೋರ್ದಾನವಮರ್ದನಂ। ಸ್ವರ್ಗಾಧಿಪತ್ಯಮಿಂದ್ರಸ್ಯ ಶಿವಪೂಜಾವಿಧೇಃಫಲಂ॥ ಎಂಬ ವಚನವೂ ಇದೇ ರೀತಿಯಾಗಿ ಇನ್ನೂ ಸಹಸ್ರಾರುವಚನಗಳೂ ಸಮರ್ಥಿಸುತ್ತಿರುವವು. ಯಜುರ್ವೇದದ ಶತರುದ್ರೀಯದಲ್ಲಿ ಹೇಳಲ್ಪಟ್ಟ

"ಯಾತೇರುದ್ರ ಶಿವಾತನೂರಘೋರಾಽಪಾಪಕಾಶಿನೀ" ಎಂಬ ವಾಕ್ಯದಿಂದಲೂ ಲಿಂಗಧಾರಣವು ವಿಹಿತವಾಗಿದೆ. ಇದರರ್ಥವು-ಭೋರುದ್ರ-ಎಲೈ ಪರಶಿವನೇ, ತೆ-ನಿನ್ನ, ಶಿವಾ-ಮಂಗಲಸ್ವರೂಪವಾದ, ಯಾತನೂಃ-ಲಿಂಗರೂಪವಾದ ಯಾವ ಶರೀರವುಂಟೋ

"ಲಿಂಗಂತುಶಿವಯೋರ್ದೇಹಃ" ಎಂಬ ಆಗಮಪ್ರಮಾಣದಿಂದ ತನೂಶಬ್ದಕ್ಕೆ ಲಿಂಗವೆಂದರ್ಥವು. ಸಾ-ಆ ಲಿಂಗರೂಪ ಶರೀರವು, ಅಘೋರಾ-ಶಾಂತವಾದುದು, ಅಪಾಪಕಾಶಿನೀ-ಅಪಾಪ-ಪಾಪರಹಿತರಾದ ಭಕ್ತರಲ್ಲಿ, ಕಾಶಿನೀ-ಇಷ್ಟಲಿಂಗ ರೂಪದಿಂದ ಪ್ರಕಾಶಿಸುತ್ತಿರುವುದು. ಲಿಂಗರೂಪಶರೀರಾವಚ್ಛಿನ್ನನಾದ ಪರಶಿವನು ಶಮದಮಾದಿ ಸಂಪನ್ನರಾದ ಭಕ್ತರ ಶರೀರದಲ್ಲಿ ಧರಿಸಲ್ಪಡತಕ್ಕಾತನೆಂದಭಿಪ್ರಾಯವು.

ತೈತ್ತಿರೀಯೋಪನಿಷತ್ತಿನಲ್ಲಿರುವ "ಓಂನಮೋಬ್ರಹ್ಮಣೆ ಧಾರಣಂಮೆ ಅಸ್ತ್ವನಿರಾಕರಣಂ ಧಾರಯಿತಾಭೂಯಾಸಂ ಕರ್ಣಯೋಶ್ಶ್ರುತಂ ಮಾಚ್ಯೋಢ್ವಂ ಮಮಾಮುಷ್ಯ ಓಂ" ಎಂಬ ಮಂತ್ರದಿಂದಲೂ ಲಿಂಗಧಾರಣವು ವಿಹಿತವಾಗುತ್ತದೆ. (ಅತ್ರ ಧಾರಣಂಮೇ ಅಸ್ತ್ವಿತಿ ಸಾಮಾನ್ಯತೋ ಧಾರಣಂವಿಧಾಯ, ಧಾರಣಕ್ರಿಯಾಯಾ ಸ್ಸಕರ್ಮಕತ್ವೇನ ಕಿಂ ಧಾರ್ಯಮಿತಿ ಕರ್ಮವಿಶೇಷಸ್ಯಾಪೇಕ್ಷಾಯಾಂ ಮಮಾಮುಷ್ಯ ಓಂ ಇತಿ ಓಂ ಕಾರವಾಚ್ಯ ಶಿವಲಿಂಗಸ್ಯ ವಿಧಾನಾತ್, ತಸ್ಯೈವ ಧಾರಣೆ ಕರ್ಮತ್ವೇನಾನ್ವಯಃ) ಮಂತ್ರಾರ್ಥವು-ಪೂರ್ವೋಕ್ತಪ್ರಮಾಣಗಳಿಂದ ಬ್ರಹ್ಮಶಬ್ದಕ್ಕೆ ಲಿಂಗವೆಂದರ್ಥವು. "ನಮೋಬ್ರಹ್ಮಣೆ ಲಿಂಗಮೂರ್ತಯೇನಮಃ" ಎಂದು ವೇದಪುರುಷನಿಂದ ನಮಸ್ಕಾರಪೂರ್ವಕವಾಗಿ ಧಾರಣವು ಅಪೇಕ್ಷಿಸಲ್ಪಟ್ಟಿದೆ. ಧಾರಣವನ್ನೇ ಕರ್ಮದೊಡನೆ ವಿಶೇಷಿಸುತ್ತಾನೆ, ಅನಿರಾಕರಣಂ ನಿರಂತರ ಸ್ಥಿತಿರಹಿತಕ್ಕೆದ್ದಾದ, ಕರ್ಣಯೋಶ್ಶ್ರುತಂ-ವೇದೋಪನಿಷದಾಗಮಾದಿ ಪ್ರತಿಪಾದಿತವಾದುದರಿಂದ ಗುರುವಿನಿಂದುಪದೇಶಿಸಲ್ಪಟ್ಟ, "ಓಂ-ಓಂಕಾರಪದವಾಚ್ಯವಾದ ಯಾವ ಶಿವಸ್ವರೂಪಲಿಂಗವುಂಟೋ" ತತ್-ಅದನ್ನು ಧಾರಯಿತಾಭೂಯಾಸಂ-ಧರಿಸತಕ್ಕವನಾಗುವೆನು. ಅಮುಷ್ಯ ಮಮ (ಸಂಬಂಧಸಾಮಾನ್ಯೆ ಷಷ್ಠೀ) ನನ್ನ ಶರೀರದಿಂದ, ಮಾಚ್ಯೋಢ್ವಂ-ಯಾವಾಗಲೂ ಅಗಲತಕ್ಕಾತನಾಗಬೇಡ, ("ಚ್ಯುಙ್ ಚ್ಯವನೆ ಇತಿ-ಧಾತೋರ್ಲುಙಿ ಮಧ್ಯಮಪುರುಷೈಕವಚನಸ್ಥಾನೆ ವ್ಯತ್ಯಯೋ ಬಹುಲಮಿತಿ ಬಹುವಚನಂ) ಲಿಂಗವು ರಾಣದಲ್ಲಿ ವಿಷ್ಣುವಿನಿಂದ ಮಾಡಲ್ಪಟ್ಟ ಶಿವಸ್ತೋತ್ರದಲ್ಲಿ "ಸರ್ವಜ್ಞಾಯ ನಮಸ್ತುಭ್ಯಮೋಂಕಾರಾಯ ನಮೋನಮಃ" ಇತ್ಯಾದಿ ಅನೇಕ ಪ್ರಯೋಗಗಳಿರುವುದರಿಂದ ಓಂಕಾರವು ಪರಶಿವವಾಚಕವಾಗಿರುವುದು. "ಲಿಂಗರೂಪಿಣಂಮಾಂ ಚಿಂತಯಂತಿಯೋಗಿನಸ್ಸಿದ್ಧಾಃ" ಎಂಬ ಭಸ್ಮಜಾಬಾಲೋಪನಿಷದ್ವಚನದಿಂದಲೂ "ಲಿಂಗರೂಪೀಮಹೇಶ್ವರಃ" ಇತ್ಯಾದಿ ವಚನಗಳಿಂದಲೂ, ಶಿವನೇ ಲಿಂಗಸ್ವರೂಪನೆಂದು ಸಿದ್ಧವಾಗುತ್ತದೆ. "ಓಂಕಾರಂಲಿಂಗಮಾಖ್ಯಾತಂ" ಎಂಬಾಗಮವಚನದಿಂದ ಓಂಕಾರಕ್ಕೆ ಲಿಂಗವೆಂದರ್ಥವು ನಿರ್ಬಾಧವಾಗಿರುವುದು. ಈ ಮಂತ್ರದರ್ಥವನ್ನು ಇದೇ ರೀತಿಯಾಗಿ ಬ್ರಹ್ಮಾಂಡಪುರಾಣವೂ ಸಮರ್ಥಿಸುತ್ತಿರುವುದು. "ನಮೋಸ್ತು ಬ್ರಹ್ಮಣೆ ತುಭ್ಯಮಾಚಾರ್ಯಾಯ ಮಹಾತ್ಮನೆ। ತನ್ನಿರಾಕರಣಂವಿಪ್ರಂ ಜನ್ಮತ್ವಾನ್ಮೃತ್ಯುಸ್ಸೈವಹಿ॥ "ಅನಿರಾಕರಣಂ ಬ್ರಹ್ಮಕಾರ್ಯಮತ್ಯಾಶ್ಚಿರಂತನಂ। ಅನಿರಾಕರಣಂಮೇಽಸ್ತು ಧಾರಣಂ ದೇಶಿಕೋತ್ತಮ॥ ವೇದಶಾಸ್ತ್ರಪುರಾಣೇಷು ಪ್ರಸಿದ್ಧಂಕರ್ಣಯೋಶ್ಶ್ರುತಂ। ಅಹಂ ಧಾರಯಿತಾದೇವಂಭೂಯಾಸಂ ಸರ್ವಕಾರಣಂ॥ ಬ್ರಹ್ಮವಿಷ್ಣ್ವಾದಯೋ ದೇವಾಃ ಪ್ರಸಿದ್ಧಾಶ್ಚತಥಾಶ್ರುತಾಃ॥ ತೆನಿರಾಕರಣಾತ್ಸರ್ವೇ ಮೃತ್ಯುನಾಸರ್ವಶತ್ರುಣಾ। ಮೆನಿರಾಕರಣಾಚ್ಯುತೇತಿ ನಿಧಾರ್ಯೇಣಕದಾಚನ॥ ನಾಹಂಧಾರಯಿತಾದೇವಾನ್ ಭೂಯಾಸಂಮಜ್ಜಕಸ್ತುರಾನ್। ನಶಕ್ನುವಂತಿಮಾಂಕರ್ತುಂಮಜ್ಜಂತಂ ಮೃತ್ಯುಸಾಗರೆ॥ ಊರ್ಧ್ವಂಮಮೇದಮೇಂಲಿಂಗಂಮಾಂಚಾಮುಷ್ಯಮಾಶ್ರಯ। ಇತ್ಯಾದಿ.

ವೇದಾಂತಸಾರೋಪನಿಷತ್ತಿನಲ್ಲಿ "ಅತ್ಯಾಶ್ರಮಿಣಸ್ಸಾಕ್ಷಾದಮೃತೀಭೂತ್ವಾನೋಕ್ತೀಭವಂತಿ" ಇತ್ಯುಪಕ್ರಮ್ಯ "ನಕರ್ಮಣಾನಪ್ರಜಯಾಧನೇನ...." ಶಿವಂಸಂಪೂಜ್ಯಾಮೃತತ್ವಮಾಪ್ನುಯು ಇತಿ" ಪ್ರತಿಪಾದ್ಯ, ಅತಃ ಪರಂ "ಪರೇಣಶುದ್ಧೇನಹೃದಬ್ಜಮಧ್ಯೇ ಲಿಂಗಂಧೃತ್ವಾ ಜ್ಯೋತಿಷಿಸಂವಿಶಂತಿ। ಅತ್ಯಾಶ್ರಮಸ್ಥಾಃಪರಿಮುಚ್ಯಂತಿಸರ್ವೇ॥ ಲಿಂಗಾಂಗಶೋಭಾವೋಕ್ಷಮಾರ್ಗೈಕನಿಷ್ಠಾಃ। ತೆ ಬ್ರಹ್ಮಲೋಕೇಷು ಪರಾಂತಕಾಲೇ ಶಿವಪ್ರಸಾದಾತ್ಪರಿಮುಚ್ಯಂತಿ ಸರ್ವೇ........"ತದೇವಾಗ್ನಿಸ್ತದ್ವಾಯುಸ್ತತ್ಸೂರ್ಯಸ್ತಚ್ಚಂದ್ರಮಾಃ ತದೇವಶುಕ್ರಸ್ಸರ್ವೇಚಬ್ರಹಸ್ಪತಿಮುಖಾಮರಾಃ ಪ್ರಾಪ್ಯೋಪಾಸ್ಯಶಿವಂಸಾಂಬಂ ಬ್ರಹ್ಮಸ್ವಹೃದಯಾಂಬುಜೆ ಲಿಂಗಾಂಗಸಾಮರಸ್ಯಾಚ್ಚ ಶರೀರೆಲಿಂಗಧಾರಣಾತ್, ನಿಯಮೇನೈವಧೃತ್ವಾತೆಮುಕ್ತಾಸ್ಸಂಸಾರಸಾಗರಾತ್॥ ಎಂದರೆ-ಕರ್ಮ ಸಂತಾನ ಧನ ಮೊದಲಾದುವುಗಳಿಂದ ಮೋಕ್ಷ ಪ್ರಾಪ್ತಿಯಾಗಲಾರದು; ಮತ್ತೇನೆಂದರೆ-ಕೇವಲ ಶಿವಲಿಂಗ ಪೂಜೆಯಿಂದಲೇ ಪ್ರಾಪ್ತವಾಗುವ ಕಾರಣ ಮೋಕ್ಷಮಾರ್ಗದಲ್ಲಿಯೇ ಆಸಕ್ತರಾದ ಅತ್ಯಾಶ್ರಮಿಪದ ವಾಚ್ಯರಾದ ವೀರಶೈವರು ಸ್ಥೂಲಸೂಕ್ಷ್ಮಾದಿ ಶರೀರಗಳಲ್ಲಿ ಇಷ್ಟಪ್ರಾಣಾದಿಲಿಂಗಗಳನ್ನು ಧಾರಣಮಾಡಿಕೊಂಡು ಲಿಂಗಾಂಗ ಸಾಮರಸ್ಯಜ್ಞಾನಿಗಳಾಗಿ ಮುಕ್ತರಾಗುವರು. ವಿಷ್ಣುಬ್ರಹ್ಮೇಂದ್ರಾದಿ ದೇವತೆಗಳು ವಿಧ್ಯುಕ್ತವಾಗ ಇಷ್ಟಲಿಂಗ ಧಾರಣವನ್ನು ಮಾಡಿಕೊಂಡು ತದುಪಾಸನೆಯನ್ನು ಮಾಡುತ್ತ ಲಿಂಗಾಂಗಸಾಮರಸ್ಯ ಜ್ಞಾನದಿಂದ ಮುಕ್ತರಾದರೆಂಬಭಿಪ್ರಾಯವು. ವೇದಾಂತಸಾರ ತೈತ್ತಿರೀಯಾದ್ಯನೇಕೋಪನಿಷತ್ತುಗಳಲ್ಲಿ ಲಿಂಗಧಾರಣವು ಪುನಃ ಪುನಃ ಕಂಠರವದಿಂದಲೇ ವರ್ಣಿಸಲ್ಪಟ್ಟಿರುವುದರಿಂದ ವೈದಿಕತ್ವವು ಸಾರ್ವಜನೀನವಾಗಿದೆ.

ಶ್ವೇತಾಶ್ವೇತರೋಪನಿಷತ್ತಿನಲ್ಲಿ ಬ್ರಹ್ಮವಿದ್ಯೆಯನ್ನಧಿಕರಿಸಿ ಉಪಸಂಹಾರದಲ್ಲಿ "ಬ್ರಹ್ಮವಿದ್ಯಾಂ ಶ್ವೇತಾಶ್ವತರೋಽಥವಿದ್ವಾನತ್ಯಾಶ್ರಮಿಭ್ಯಃ ಪರಮಂ ಪವಿತ್ರಂ ಪ್ರೋವಾಚ ಸಮ್ಯಗೃಷಿಸಂಘಜುಷ್ಟಂ॥ ವೇದಾಂತೆಪರಮಂಗುಹ್ಯಂ ಪುರಾಕಲ್ಪೆಪ್ರಚೋದಿತಂ। ನಾಪ್ರಶಾಂತಾಯ ನಾಪುತ್ರಾಯಾ ಶಿಷ್ಯಾಯ ವೈಪುನಃ॥ ಯಸ್ಯದೇವೆಪರಾಭಕ್ತಿ ರ್ಯಥಾದೇವೆತಥಾಗುರೌ। ತಸ್ಯೈತೆಕಥಿತಾಹ್ಯರ್ಥಾ ಪ್ರಕಾಶ್ಯಂತೆ ಮಹಾತ್ಮನಃ" ಇತ್ಯಾದಿ ವಾಕ್ಯಗಳಿಂದಲೂ, "ವ್ರತಮೇತಚ್ಛಾಂಭವಂ ತತ್ಸಮಾಚರೇನ್ಮುಮುಕ್ಷುರ್ನಪುನರ್ಭವಾಯ" ಎಂಬ ಕಾಲಾಗ್ನಿರುದ್ರೋಪನಿಷದ್ವಾಕ್ಯದಿಂದಲೂ, "ತೇಷಾಮೇವೈತಾಂ ಬ್ರಹ್ಮವಿದ್ಯಾಂವದೇತ" ಎಂಬ ಮುಂಡಕೋಪನಿಷದ್ವಾಕ್ಯದಿಂದಲೂ, ಸೂತಸಂಹಿತೆಯಲ್ಲಿ ಹೇಳಲ್ಪಟ್ಟ "ಅತ್ಯವಿದ್ಯಾತಪೋಮೂಲಂ ತದ್ಬ್ರಹ್ಮೋಪನಿಷತ್ಪರಂ। ಯಜ್ಞದಾನಾದಿಭಿಃ ಪುಣ್ಯೈರ್ಯೋಗಸಿದ್ಧಿರ್ಭವಿಷ್ಯತಿ॥ ಯೋಗಾತ್ಸಂಜಾಯತೆ ಜ್ಞಾನಂ ಜ್ಞಾನಾನ್ಮುಕ್ತಿರ್ನಕರ್ಮಣಾ। ಅತ್ಯಾಶ್ರಮಿಭ್ಯಶ್ಶಾಂತೇಭ್ಯೋವಕ್ತವ್ಯಂ ಬ್ರಹ್ಮವೇದನಂ। ನಾಪ್ರಶಾಂತಾಯದಾತವ್ಯಂ ನಾಪುತ್ರಾಯಕದಾಚನ॥" ಎಂಬ ವಚನದಿಂದಲೂ "ಬಹುನಾತ್ರಕಿಮುಕ್ತೇನ ಯಸ್ಯಭಕ್ತಿಶ್ಶಿವಾರ್ಚನೆ। ಸಏವಾಧಿಕಾರೀಸ್ಯಾನ್ನಾನ್ಯಚಿತ್ತಃ ಕಥಂಚನ॥" ಎಂಬ ಶಿವಗೀತಾವಾಕ್ಯದಿಂದಲೂ "ಜಪೇತ್ಪಂಚಾಕ್ಷರೀಮಂತ್ರಂ ಶುದ್ಧೋಭೂದ್ವೇದಪಾರಗಃ" ಇತ್ಯಾದಿ ವೀರಾಗಮ ವಾಕ್ಯದಿಂದಲೂ ಶಿವಭಕ್ತಿಪರಾಯಣರೂ ಭೂತಿರುದ್ರಾಕ್ಷಿ ಲಿಂಗಧಾರಿಗಳೂ ಅತ್ಯಾಶ್ರಮಿಪದವಾಚ್ಯರೂ ಆದ ವೀರಶೈವರಿಗೆ ಬ್ರಹ್ಮವಿದ್ಯಾಧಿಕಾರವು ಕರತಲಾಮಲಕದಂತೆ ಸಿದ್ಧವಾಗಿರುತ್ತದೆ. ಸಶೇಷ.

ರತ್ನತ್ರಯ.

ಅರ್ಥಿನಾಂ ಸುರಭೂರುಹಸ್ಯ ವಿದುಷಾಂ ಶ್ರೀ ಭೋಜರಾಜಸ್ಸದಾ।
ಸತ್ಕ್ಷಾತ್ರ ವರರಾಜ ನೀತಿ ನಿಪುಣಸ್ಸದ್ಧರ್ಮಸಂಸ್ಥಾಪಕಃ॥
ಶ್ರೀಮಾನ್ ಏನ ಯಶೋಧನಸ್ಸು ರಸಮಶ್ರೀ ಚಾಮರಾಜಾತ್ಮಜೋ।
ಜೀಯಾಚ್ಛ್ರೀ ಮಹಿಶೂರ ಪತ್ತನಪತಿಶ್ಶ್ರೀ ಕೃಷ್ಣರಾಜಸ್ಸದಾ ॥೧॥

ಗೇಯಂ ಸಚ್ಚರಿತಂ ನವಕ್ತುಮತುಲಂ ಶೇಷೋಽಪಿಶಕ್ತಃ ಕದಾ।
ಭೂಯಸ್ತಲ್ಲಿಖಿತುಂ ನಿಕಾಮಮನಿಶಂ ಶ್ರೀ ಕಾರ್ತವೀರ್ಯಾರ್ಜುನಃ॥
ಇತ್ಥಂ ಸಿಂಧುಗಭೀರ ಸದ್ಗುಣಗಣಾಂ ಭೋ ಕೃಷ್ಣರಾಜೇಂದ್ರತೇ।
ಕಃಸ್ತೋತುಂ ಪ್ರಭವೋ ನರೇಷು ಲಿಖಿತುಂ ವಕ್ತುಂ ನಶಕ್ಯೋಽಮ್ಯಹಂ ॥೨॥

ಭೋ ಭೋ ನೃಪಾಲಭುವನ ಪ್ರಥಿತಾಂಚ ಕೀರ್ತಿಂ।
ಕೃತ್ವಾಽಗತೋಽದ್ಯ ನಿಕಟೇ ತವ ಕೃಷ್ಣರಾಜ॥
ವಿದ್ವನ್ಮನಾವಲಿ ಸರೋರುಹ ಚಿತ್ರಭಾನೋ।
ವಿದ್ಯಾರ್ಜನೇಷು ವಿಬುಧೇಷು ದಯಾಂಕುರುಷ್ವ ॥೩॥

ವೇ|| ಪಂ|| ಶ್ರೀಶೈಲನಾಥಶಾಸ್ತ್ರಿ ಗುರುಬಸವಶಾಸ್ತ್ರಿ ಉದಾಸ್ತಿ ಹಿರೇಮಠ, ಮೊಕ್ಕಾಂ ದೇಶನೂರು (ಜಿಲ್ಲಾ ಬೆಳಗಾಂವ).

"ನಡೆಯುವವರು ಎಡಹುವುದುಂಟು"

ಲೇಖಕರು ಲೇಖನಗಳನ್ನು ಬರೆಯುವಾಗ್ಗೆ ಎಷ್ಟೋ ತಪ್ಪುಗಳುಂಟಾಗುವವು. ಲೇಖನಧುರಂಧರರಿದ್ದಾಗ್ಗೂ ವಾಕ್ಸರಣಿಯವೇಗದಲ್ಲಿ ತಪ್ಪುಗಳುಂಟಾಗುತ್ತವೆ. ಆದುದರಿಂದ ಲೇಖ ಬರೆಯುವವರು ಬರೆದ ಕೂಡಲೇ ಪ್ರಸಿದ್ಧಿಮಾಡಲಿಕ್ಕೆ ಕಳಿಸದೆ ಒಂದೆರಡಾವೃತ್ತಿ ನೋಡಿಕೊಂಡು, ಇದ್ದ ತಪ್ಪುಗಳನ್ನು ಸುಧಾರಿಸಿ ಬರೆದು ಕಳುಹಿಸಿದರೆ ಜನಾಪವಾದಕ್ಕೆ ಈಡಾಗಲಾರರು, ಮತ್ತು ಲೇಖನಗಳಾದರೂ ಸರ್ವರಿಗೂ ಮಾನ್ಯವಾಗುವವು. ಬೆಳಗಾಂವ ಪ್ರಬೋಧ ಸಂಪುಟ 3 ಸಂಚಿಕೆ 3 ಜುಲೈ 1922 ರಲ್ಲಿ ಶ್ರೀಕರಭಾಷ್ಯದ ಕನ್ನಡ ಭಾಷಾಂತರದ ಉಪೋದ್ಘಾತವನ್ನು ಬರೆಯುವಾಗ್ಗೆ, ಸ್ವಾಮಿ ವಿರೂಪಾಕ್ಷ ಒಡೆಯರ್ ಸಂಸ್ಕೃತ ಕಾಲೇಜ್ ಇಂದೂರ ಇವರು, "ನಾನು ಗುರುವು ನೀನು ಗುರುವು" ಎಂಬ ಆಯೋಗ್ಯಕೋಲಾಹಲದಲ್ಲಿಯೇ ಕಾಲವನ್ನು ಕಳೆದು ನಿರಕ್ಷರಕುಕ್ಷಿಗಳಿದ್ದರೂ ಅವರು ಪೂರ್ವದಾಚಾರ್ಯಪೀಠಕ್ಕೆ ಅಧಿಪತಿಗಳಾಗಿರುವೆವೆಂಬುವ ಮೂಢಭಾವನೆಯಿಂದ ಕತ್ತಲೆಯಲ್ಲಿ ಕಾಲವನ್ನು ಕಳೆದಂತೆ ಮಾಡಿಬಿಟ್ಟಿರುವರೆಂದು ಪೀಠಾಚಾರ್ಯರನ್ನು ತುಚ್ಛೀಕರಿಸಿರುವುದಲ್ಲದೆ, ಬಲಿ ಕಡೆಗೆ ನಿರಾಭಾರಿಗಳೆಂದು ಹೆಸರನ್ನಿಟ್ಟುಕೊಂಡು ಮನೆಮನೆ ತಿರುಗುವ ಕೆಲವು ಸ್ವಾರ್ಥಿಗಳಾದ ನಿರಾಭಾರಿಗಳು ವಿರಕ್ತರು ಎಂದು ಹೆಸರಿಟ್ಟುಕೊಂಡು ಇನ್ನು ಮತಮತಪ್ರವರ್ತಕಾಚಾರ್ಯರ ಅಧೀನರಾಗಿಯೂ, ಅವರ ಬಂಧನೆಗೆ ಒಳಪಟ್ಟವರಾಗಿಯೂ ನಡೆಯ ಬೇಕಾಗುತ್ತದೆಂಬ ರೋಗಿನಿಂದ ಎಲ್ಲರಿಗಿಂತ ಮೊದಲೇ ನಾವು ಶ್ರೇಷ್ಠರೆಂತ ಅಜ್ಞಜನರೆದುರಿಗೆ ಬಡಬಡಿಸಿ ಮತ್ತು ಧರ್ಮದಲ್ಲಿ ಯದ್ವಾತದ್ವಾ ವಿಚಾರ ನಡಸಿ ಇಂಥ ಅಪ್ರತಿಮ ಗ್ರಂಥಗಳನ್ನು ಮೂಲೆಗೆ ಹಾಕುತ್ತಾ ಮುಸುಕು ಹಾಕಿಕೊಳ್ಳುವದೇ ಪರಮಧರ್ಮ ಪರಮತಪಶ್ಚರ್ಯವೆಂತ ಬೋಧಿಸಿ, ಜ್ಞಾನವನ್ನು ಅಜ್ಞಾನದಿಂದ ಆಚ್ಛಾದಿಸಿಬಿಟ್ಟಿರುವರು" ಎಂದು ವಸ್ಮೈರೆ ನಿರಾಭಾರಿಗಳನ್ನೂ ಮನಸ್ವಿ ಹಳಿದು ಬರೆದಿದ್ದಾರೆ. ಅನಾದಿಕಾಲದಿಂದಲೂ ಪರಶಿವನಾಜ್ಞೆಯಂತೆ ಜಗದುದ್ಧಾರಕ್ಕಾಗಿ ಅವತರಿಸಿದ ಪ್ರಭುಪರಂಪರೆಯ ನಿರಂಜನ ಮೂರ್ತಿಗಳನ್ನೂ ಪರಶಿವನ ಪಂಚಮುಖೋದ್ಭೂತರಾದ ಪಂಚಾಚಾರ್ಯರನ್ನೂ ಮನಸ್ವಿ ಹಳಿದು ನಿಂದಿಸಿ ಬರೆದಿರುವರು. ಕೇವಲ ಆಚಾರ್ಯ ವಂಶೀಯರಾಗಿದ್ದು ಸಂಸ್ಕೃತ ವಿದ್ಯಾವಿಶಾರದರೆನಿಸಿ ಕಾಲೇಜ್ ಪ್ರೊಫೇಸರಾಗಿದ್ದು ಪುಷ್ಪವು (ಹೂವು) ಬಳ್ಳಿಯು ಕುಲಗೇಡಿ, ಬುದ್ಧಿಗೇಡಿ, ಆಕಾರಗೇಡಿಯೆಂದು ಬಳ್ಳಿಯನ್ನು ತಿರಸ್ಕರಿಸಿದಂತೆ ತಾವು ಹುಟ್ಟಿದ ವಂಶದ ಮೂಲಪುರುಷರಾದ ಆಚಾರ್ಯಪರಂಪರೆಯವರನ್ನೇ ನಿಂದಿಸುತ್ತಿರುವರು. ಇಂಥ ಪಿತೃದ್ರೋಹ ಮಾಡಿದವರು ಗುರುದ್ರೋಹ ಮಾಡಲಿಕ್ಕೆ ಅಂಜುವರೇ? ನಿರಂಜನಪ್ರಭು ಪರಂಪರೆಯವರನ್ನು ಹಳಿದಿರುತ್ತಾರೆ. ಕನ್ನಡದಲ್ಲಿ "ತಂದೆಯನ್ನಣಕಿಸಿದವನು ಮುಂದಿಯನ್ನು ಬಿಟ್ಟಾನೇ" ಎಂಬ ಗಾದೆಯುಂಟು. ಅದರಂತೆ ಇವರು ಶ್ರೀಕರಭಾಷ್ಯದ ಉಪೋದ್ಘಾತ ಬರೆಯುವುದರಲ್ಲಿ ಶ್ರೀಕರಾಚಾರ್ಯರು ನಿರಾಭಾರಿಯತೀಂದ್ರರೆಂದು ಬಿರುದು ಬರಕೊಳ್ಳುತ್ತಿದ್ದು ರೇವಣಾರಾಧ್ಯರನ್ನು ವರ್ಣಿಸಿದ್ದಾರೆಂದು ಬರೆದಿರುತ್ತಾರೆ. ರೇವಣಾರಾಧ್ಯರೂ ಮರುಳಾರಾಧ್ಯರೂ ಏಕೋರಾಮಾರಾಧ್ಯರೂ, ಈ ತ್ರಿವಿಧ ಪೀಠಸ್ಥರೂ ಒಂದೊಂದು ಕಾಲದಲ್ಲಿ ತಮ್ಮ ಪೀಠಾಧಿಕಾರಕ್ಕೆ ಬೇರೆಯವರನ್ನು ನೇಮಿಸಿ ಚೆನ್ನಬಸವ ಯತೀಶರೆಂಬ ಮಹಾಮಹಿಮರಿಂದ ಷಟ್‌ಸ್ಥಲ ಜ್ಞಾನೋಪದೇಶ ಪಡೆದು ನಿರಾಭಾರಿ ಯತಿತ್ವವನ್ನು ಹೊಂದಿ ತನ್ನಾಮದಿಂದ ಜಗತ್ಪ್ರಸಿದ್ಧರೆನಿಸಿರುವ ಕಾರಣ, ಅಂತಹ ನಿರಂಜನ ಮೂರ್ತಿಗಳನ್ನು ಶ್ರೀಕರ ಭಾಷ್ಯಕಾರರಾದ ನಿರಾಭಾರಿ ಯತೀಂದ್ರರೆಂಬ ಬಿರುದುಳ್ಳ ಶ್ರೀಪತಿ ಪಂಡಿತಾಚಾರ್ಯರೆಂಬ ಯತಿಗಳು ವಂದಿಸಿರುವದತಿಶಯವಲ್ಲ. ಈ ಶ್ರೀಪತಿಪಂಡಿತಾಚಾರ್ಯರೆಂಬ ಯತಿಗಳು ಏಕೋರಾಮ ವಂಶಜಾತರೆಂದು ತಿಳಿದಾಗ್ಯೂ ಯತಿಗಳಾಗಿ ಅನೇಕ ಆಚಾರ್ಯರು ಬರೆದ ಭಾಷ್ಯಗಳಿದ್ದರೂ ಅವುಗಳಲ್ಲಿ ಶ್ರೇಷ್ಠವಾದ ಜಗತ್ಪ್ರಸಿದ್ಧವಾಗಿರುವ ಶ್ರೀಕರಭಾಷ್ಯವನ್ನು ಬರೆದು ಇರುತ್ತಾರೆಂಬುದು ಲೋಕಪ್ರಸಿದ್ಧವಾಗಿದೆ. ಇಂಥ ಮಹದುಪಕಾರವನ್ನು ಮಾಡಿದ ನಿರಾಭಾರಿ ಯತೀಂದ್ರರನ್ನೂ ಅವರ ಸಾಂಪ್ರದಾಯಕರನ್ನೂ ಮನಸ್ವಿಯಾಗಿ ಹಳಿಯುತ್ತಿರುವ ಕೆಲವರು ಇದನ್ನರಿಯದೆ ನಿರಾಭಾರಿಗಳು ಯಾವ ಭಾಷ್ಯವನ್ನು ಬರೆದಿದ್ದಾರೆಂದು ಕೇಳುತ್ತಿರುವರು. ಇಂಥವರೆಲ್ಲರ ಭ್ರಾಂತಿ ನಿವಾರಣೆಗಾಗಿ ಒಡೆಯರವರು ಬರೆದ ಲೇಖವು ನಿಂದ್ಯಾಂಶದಲ್ಲಿ ಸ್ವಲ್ಪವಾಗಿದ್ದರೂ ಸ್ತುತ್ಯಂಶದಲ್ಲಿ ಬಹಳವಾಗಿದೆ.

ವೀರಧರ್ಮಹಿತೈಷಿ.

ಕರ್ನಾಟಕಮಾತೆಯ ವೈಭವ.

ಒಂದಾನೊಂದು ಕಾಲಕ್ಕೆ ಸಮಸ್ತ ಗುಣಗಳಿಂದ ಅತುಲವೈಭವವನ್ನು ಪಡೆದ ನಮ್ಮ ಶ್ರೇಷ್ಠ ಕರ್ನಾಟಕಮಾತೆಯು ಈಗ ಮಹಾರಾಷ್ಟ್ರ, ಗುಜರಾಥ, ಬಂಗಾಲ ಮತ್ತು ಆಂಧ್ರಭಾಷಾಪುತ್ರರ ಉತ್ಕ್ರಾಂತಿಯನ್ನೂ

ತನ್ನ ಮುದ್ದುಮಕ್ಕಳ ಉದಾಸೀನತೆಯನ್ನೂ ಕಂಡು ಬಕಬಕ ಬಾಯಿ ಬಿಡುತ್ತಿರುವುದನ್ನು ನೋಡಿ ತಳಮಳಗೊಂಡು, ಅದರ ಉದ್ಧಾರಾರ್ಥವಾಗಿ ಹಲವು ಪುಣ್ಯಾತ್ಮರು ಹಲವು ಬಗೆಗಳಿಂದ ಪ್ರಯತ್ನಪಡುತ್ತಿರುವರಷ್ಟೆ. ಹೀಗೆ ಸಾಹಸಪಡುವ ನಮ್ಮ ಕರ್ನಾಟಕ ಮಾತೃಸೇವಕರಲ್ಲಿ ರಾವ್ ಸಾಹೇಬ ಫಕೀರಪ್ಪಾ ಗುರುಬಸಪ್ಪಾ ಹಳಕಟ್ಟಿ ಬಿ.ಎ. ಎಲ್ ಎಲ್.ಬಿ., ಎಂ. ಎಲ್. ಸಿ., ಬೆಳಗಾವ ಇವರೊಬ್ಬರು ಅಗ್ರಣಿಗಳಾಗಿರುವರೆಂಬುದು ಸರ್ವರಿಗೂ ವಿದಿತವಾದ ಮಾತು. ಇಂತಪ್ಪ ವಿದ್ವನ್ಮಣಿಗಳು ಕನ್ನಡ ವೀರಶೈವ ವಚನಕಾರರ ಅಗಣಿತ ಗ್ರಂಥಗಳನ್ನು ಪರಿಶೀಲಿಸಿ ಆರಿಸಿದ ವಚನಗಳನ್ನು ಸಂಗ್ರಹಿಸಿಡುವ ಕೆಲಸವನ್ನು ಬಹು ಶ್ರಮದಿಂದ ಪೂರ್ತಿಗೊಳಿಸಿದ್ದಾರೆ. ಈ ವಚನಸಾರಶಾಸ್ತ್ರದಲ್ಲಿ ವೀರಶೈವಧರ್ಮ ಮತ್ತು ನೀತಿತತ್ವಗಳು ಈ ವಿಷಯಗಳನ್ನು ವಿಂಗಡಿಸಿ ಕ್ರಮವಾಗಿ ಸೇರ್ಪಡೆಮಾಡಲ್ಪಟ್ಟಿವೆ. ಹನ್ನೊಂದನೇ ಶತಮಾನದ ಅತ್ಯಂತ ಸುಧಾರಕಾಗ್ರಣಿಗಳಾದ ಶ್ರೀ ಬಸವಾದಿ ಪ್ರಮಥರ ಜಗನ್ಮಾನ್ಯವಾದ ತತ್ವಗಳೂ ಕನ್ನಡಭಾಷಾ ಪ್ರೌಢಿಮೆಯೂ ಅಖಿಲರೂ ಮನನ ಮಾಡುವ ಹಾಗೆ ಇರುತ್ತವೆ. ವಾಗ್ಭೂಷಣದ ಎಡಿಟರು ಜೂನ್ 1921ನೆ ತಮ್ಮ ಸಂಚಿಕೆಯಲ್ಲಿ ಈ ಗ್ರಂಥದ ಶ್ರೇಷ್ಠತ್ವದ ಬಗ್ಗೆ ಬಹು ಸಮಾಧಾನಕರವಾಗಿ ಅಭಿಪ್ರಾಯ ಪಟ್ಟಿರುವರು. ಈ ಗ್ರಂಥದ ಬೆಲೆಯನ್ನು ನಾವು ನಮ್ಮ ವಾಚಕರಿಗೆ ಇನ್ನಷ್ಟು ಸ್ಪಷ್ಟವಾಗಿ ಅರುಹಬೇಕಾದರೆ ಶ್ರೀಮನ್ನಿರಂಜನ ಹಾನಗಲ್ ಕುಮಾರಸ್ವಾಮಿಗಳೂ ಶ್ರೀಪ್ರ. ರಾ ನಡೆಯುವರಂಥ ಅಗಾಧಬುದ್ಧಿ ಸಾಮರ್ಥ್ಯವುಳ್ಳವರೂ ಈ ಗ್ರಂಥವನ್ನು ನೋಡಲು ರಾ. ಹಳಕಟ್ಟಿಯವರ ಮನೆಗೆ ಮೇಲಿಂದ ಮೇಲೆ ಬರುತ್ತಿರುವುದೇ ನಾವೆನ್ನುವ ಸಂಗತಿಯನ್ನು ಬಲಪಡಿಸುತ್ತದೆ. ಕಿಂಬಹುನಾ....ವೀರಶೈವ ಧರ್ಮದ ತತ್ವಗಳು ಅನ್ಯಧರ್ಮವನ್ನು ಹೇಯಿಸದೆ ಬೋಧಿಸುವುದರಿಂದ ಸಮಸ್ತಜಾತಿಯ ಜಿಜ್ಞಾಸುಜನರಿಗೆ ಈ ಗ್ರಂಥವು ಒಂದು ತರದ ಪಠ್ಯಾನ್ನವಾಗಿದೆಯೆಂದರೂ ಅತಿಶಯೋಕ್ತಿಯಾಗಲಾರದು. ಕನ್ನಡಿಗರ ಸುದೈವದಿಂದ ಈಗ ಈ ಗ್ರಂಥವು ಮುದ್ರಣವಾಗುತ್ತಿದೆ. ಆದುದರಿಂದ ಸಕಲರೂ ಆ ಗ್ರಂಥಗಳನ್ನು ಬೇಗನೆ ತೆಗೆದುಕೊಂಡು ರಾ. ಹಳಕಟ್ಟಿಯವರನ್ನು ಸ್ಫೂರ್ತಿಗೊಳಿಸಿ ಅವರಿಂದ ಕನ್ನಡ ಮಾತೆಯ ಸೇವೆಯು ಇದಕ್ಕಿಂತಲೂ ಅಧಿಕವಾಗಿ ಘಟಿಸುವಂತೆ ಮಾಡಬೇಕೆಂದು ನಾವು ನಮ್ಮ ಕನ್ನಡ ಬಾಂಧವರಿಗೆ ವಿನಯಪೂರ್ವಕ ಪ್ರಾರ್ಥಿಸುತ್ತೇವೆ. ತಮ್ಮ ಪ್ರಿಯ

ಹನುಮಂತ ಬಾಳಕೃಷ್ಣ ಕೊಣ್ಣೂರ ಬಿ. ಎ.
ವೀರಬಸಪ್ಪಾ ಶ್ರೇಷ್ಠಿ ಬಿ. ಎ.
ಗುಂಡಪ್ಪಾ ಸಿದ್ಧರಾಮಪ್ಪಾ ಶಾಬಾದಿ.

ಮುಂಬಯಿ.

ಶ್ರೀ ಶಿವಯೋಗ ಮಂದಿರದಲ್ಲಿ ಯೋಗವೇದಾಂತಾದಿ ಶಾಸ್ತ್ರಗಳಲ್ಲಿ ನಿಪುಣತೆಯನ್ನು ಪಡೆದ ಶ್ರೀಮನ್ನಿರಂಜನ ಇಲಕಲ್ಲ ಮಹಾಂತ ಶಿವಯೋಗಿಗಳು ಈ ಪಟ್ಟಣದಲ್ಲಿ ರೇವಪ್ಪಾ ನಂದೆಪ್ಪಾ ಹತ್ತರಕಿ ಇವರ ಮನೆಯಲ್ಲಿ ಒಂದು ಸಭೆಗೂಡಿಸಿ ಇದೇತಿಂಗಳು ತಾರೀಖು 22-23ನೆ ದಿವಸ "ವೀರಶೈವ ಧರ್ಮ" ಈ ವಿಷಯದ ಮೇಲೆ ಸರಸವಾದ ವ್ಯಾಖ್ಯಾನ ಕೊಟ್ಟರು. ಸಭೆಗೆ ಇಲ್ಲಿಯ ವೀರಶೈವ ಪ್ರಮುಖರೆಲ್ಲರೂ ಆಗಮಿಸಿ ಈ ಮಹನೀಯರ ಅಪೂರ್ವವಾದ ವ್ಯಾಖ್ಯಾನವನ್ನು ಕೇಳಿ ಇಂಥ ವ್ಯಾಖ್ಯಾನವನ್ನು ನಮ್ಮ ಜನ್ಮದಲ್ಲಿ ಎಂದೂ ಕೇಳಿಲ್ಲವೆಂದು ಅತಿಶಯಾನಂದಪಟ್ಟರು. ಈ ಪಟ್ಟಣಕ್ಕೆ ಎಷ್ಟೋ ಜನ ಸ್ವಾಮಿಗಳು ದಯಮಾಡಿಸಿದ್ದರೂ ಈ ಪ್ರಕಾರ ಸಮಾಜೋದ್ಧಾರದ ಕಳಕಳಿಯಿಂದ ಧರ್ಮಬೋಧೆಯನ್ನು ಯಾರೂ ಮಾಡಿದ್ದಿಲ್ಲ. ಧರ್ಮದ ತತ್ವಗಳು ಎಷ್ಟು ಗಹನಗಳಿದ್ದರೂ ಅವುಗಳನ್ನು ಸುಲಲಿತವಾಗಿ ಬೋಧೆಮಾಡುವ ಜಾಣತನವು ಸದರಿ ಶ್ರೀಗಳವರಲ್ಲಿ ನೆಲೆಗೊಂಡಿದೆ. ಈ ಮಹನೀಯರು ತಮ್ಮ ಆಯುಷ್ಯವಿರುವರೆಗೆ ಇದರಂತೆ ಬೋಧೆ ಮುಂತಾದವುಗಳಿಂದ ಸಮಾಜೋದ್ಧಾರ ಮಾಡಬೇಕೆಂತಲೂ ಶಿವಯೋಗಮಂದಿರದಲ್ಲಿ ಇಂಥ ಸ್ವಾರ್ಥತ್ಯಾಗಿಗಳಾದ ಸ್ವಾಮಿಗಳು ಬಹಳ ಜನರು ತಯಾರಾಗಿ ಸಮಾಜೋದ್ಧಾರಕ್ಕಾಗಿ ಬರಲೆಂತಲೂ ಆಶಾಮಾಡುತ್ತೇವೆ.

ನಿಜರೇವಪ್ಪಾ ಹತ್ತರಕಿ.

ಶೋಚನೀಯ ಮೃತ್ಯು.

ಶ್ರೀಯುತ ಮಲ್ಲಿಕಾರ್ಜುನಪ್ಪ ಅಣ್ಣ ಚಿನಿವಾರ ಇವರು ಮುದ್ದೆಬಿಹಾಳದಲ್ಲಿ ಅಶ್ವೀಜಬಹುಳ ೭ ಶುಕ್ರವಾರ 11 ಗಂಟೆಯಲ್ಲಿ ಜಡದೇಹವನ್ನು ತ್ಯಜಿಸಿ ಶಿವಸಾರೂಪ್ಯವನ್ನು ಹೊಂದಿದರು. ಅವಸಾನಕಾಲಕ್ಕೆ ಇವರು ಐವತ್ತು ವರ್ಷ ವಯಸ್ಸಿನವರಿದ್ದರು. ಚಿನಿವಾರರೆಂಬ ಇವರ ಮನೆತನವು ಸರಾಸರಿ ನೂರಾರು ವರ್ಷಗಳಿಂದಲೂ ಪ್ರಸಿದ್ಧಿಯಲ್ಲಿರುತ್ತದೆ. ಮಲ್ಲಿಕಾರ್ಜುನಪ್ಪನವರು ಬಾಲ್ಯದಲ್ಲಿ ಅಂಥ ಶಿಕ್ಷಣವನ್ನು ಪಡೆಯದವರಾದರೂ ಈ ನವನಾಗರಿಕ ಕಾಲದಲ್ಲಿ ಎಲ್ಲಾ ತರದ ಸಾರ್ವಜನಿಕ ಕಾರ್ಯಗಳೂ ಇವರನ್ನು ಅಂಟಿದೆ ಇವರಿಂದ ಪೂರ್ಣತೆಯನ್ನು ಹೊಂದದೆ ಇರುತ್ತಿರಲಿಲ್ಲ. ಇವರ ಪೂರ್ವದವರು ಗ್ರಾಮಪಂಚಾಯಿತಿಗಳನ್ನು ನ್ಯಾಯದಿಂದಲೂ ದಕ್ಷತೆಯಿಂದಲೂ ಮಾಡುತ್ತ ಬಂದಂತೆ ಇವರಾದರೂ ಗ್ರಾಮಪಂಚಾಯಿತಿಯನ್ನು ಮಾಡುತ್ತಿದ್ದರು ಅಂತೆ ಇವರು ಕೂತು ನ್ಯಾಯಮಾಡುವ ಸ್ಥಳಕ್ಕೆ "ಚಿನಿವಾರನ್ಯಾಯಕಟ್ಟಿ" ಎಂದು ಹೆಸರಿರುವುದು. ಇವರು ಆಗರ್ಭಶ್ರೀಮಂತರಾದರೂ ಅತಿ ಸಾದಾ ಮತ್ತು ಸ್ವಚ್ಛವಾದ ಉಡುಪಿನವರಿದ್ದು ಧರ್ಮನಿಷ್ಠರಿದ್ದರು. ಒಬ್ಬರ ಮನಸ್ಸನ್ನು ನೋಯಿಸುವುದನ್ನು ಇವರು ಸ್ವಪ್ನದಲ್ಲೂ ಕಾಣರು. ವಿಜಾಪೂರ ಜಿಲ್ಲೆಯಲ್ಲಿ ಇವರು ತಮ್ಮ ತಾತಂದಿರಾದ ರುದ್ರಪ್ಪನವರಂತೆ ಪ್ರಖ್ಯಾತಿಯನ್ನು ಹೊಂದಿದ್ದರು. ಯಶೋವಂತರೂ ಪರೋಪಕಾರನಿರತರೂ ದಾನಶೂರರೂ ಆದ ಇವರು ಅಕಾಲದಲ್ಲಿಯೇ ವೀರಶೈವ ಸಮಾಜವನ್ನು ಕೈಬಿಟ್ಟುಹೋದುದರಿಂದ ಕೇವಲ ಮುದ್ದೆಬಿಹಾಳ ತಾಲ್ಲೂಕಿನ ವೀರಶೈವರಿಗೇ ದೊಡ್ಡ ಹಾನಿಯಾಯಿತೆಂಬಂತಿಲ್ಲ; ಆ ತಾಲ್ಲೂಕಿನ ಸರ್ವಜನರಿಗೂ ದೊಡ್ಡ ಹಾನಿಯಾಯಿತು. ಜಗನ್ನಿಯಂತೃವಿನ ಇಚ್ಛೆಗೆ ಉಪಾಯವಿಲ್ಲ. ಕೀರ್ತಿಶೇಷರಾದ ಅಣ್ಣನವರ ಆತ್ಮನಿಗೆ ಜಗದೀಶ್ವರನು ಶಾಂತಿಯನ್ನೀಯಲಿ.

ಸ್ಥಳವಾಸಿ.

ಶ್ರೀ ಬೆಟ್ಟದಪುರದ ನಿರಂಜನ ಚರಮೂರ್ತಿಗಳು.

(ಕಳೆದವಾರದ ಶೇಷ.)

ಹುಣಸೂರು ತಾ॥ ಹರಳಹಳ್ಳಿಗ್ರಾಮದ ವೀರಶೈವರುಗಳು ತಾ॥ 20-8-1922 ರಲ್ಲಿ ಅರ್ಪಿಸಿದ್ದು.

ಮ॥ ರಾ॥ ಗಳಾದ ಪಟೇಲ್ ಬಸೆಟ್ಟರು 600 ರೂ. ಕೆಳಗಿನಮನೆ ತಮ್ಮಣ್ಣಸೆಟ್ಟರು 400ರೂ. ರಾ॥ ಶಿವಲಿಂಗಪ್ಪನವರು 300 ರೂ. ಸೆಟ್ಟರ ಮುದ್ದಣ್ಣನವರು 200 ರೂ. ಚ॥ ವೀರಭದ್ರಯ್ಯನವರು 200 ರೂ. ವೇ॥ ಚನ್ನಮಲ್ಲಾರಾಧ್ಯರು 50 ರೂ. ಗಂಪಿನ ಬಸವಣ್ಣಾರಾಧ್ಯರು 50 ರೂ. ನಿ॥ ಬಸೆಟ್ಟರು 50 ರೂ. ಸೆಟ್ಟರ ಚನ್ನಣ್ಣನವರು 50 ರೂ. ಗು॥ ಅಪ್ಪುಸೆಟ್ಟರು 25 ರೂ. ಯ॥ ಮುದ್ದಣ್ಣನವರು 25 ರೂ. ಮೇಲಿನಮನೆ ಚನ್ನವೀರಸೆಟ್ಟರು 25 ರೂ. ವೇ॥ ಯ॥ ಪುಟ್ಟಸ್ವಾಮಿಗಳು 25 ರೂ. ಚನ್ನವೀರಯ್ಯನವರ ಅಪ್ಪುಸೆಟ್ಟರು 25 ರೂ. ಕೆ. ಮಲ್ಲಯ್ಯನವರು 20 ರೂ. ನಂಜುಂಡಸ್ವಾಮಿಗಳು 16-10-8 ರೂ. ನಿ॥ ಎಲೆಕೆರೆಸೆಟ್ಟರು 16-10-8 ರೂ. ಮೇಲಿನಹಟ್ಟಿ ಬಸವಣ್ಣಾರಾಧ್ಯರು 16-10-8 ರೂ. ಕಿತ್ತೂರು ವೀರಣ್ಣಸೆಟ್ಟರು 16-10-8 ರೂ. ಮಾ॥ ಅ॥ ಬಸಮ್ಮನವರು 16-10-8 ರೂ. ಜುಮ್ಲಾ 2,128-5-4 ರೂ.

ಹುಣಸೂರು ತಾ॥ ಪಿರ್ಯಾಪಟ್ಟಣದಲ್ಲಿರುವ ವೀರಶೈವ ಜನಗಳು ತಾ॥ 1-10-22 ರಲ್ಲಿ ಅರ್ಪಿಸಿದ್ದು.

ಮ॥ ಗಳಾದ ಸೊಡ್ಡಾಲಯ್ಯನವರು 525 ರೂ. ಪಿ॥ ಮಲ್ಲಣ್ಣ ಪುಟ್ಟಸ್ವಾಮಯ್ಯನವರು 500 ರೂ. ಬೆಂಗಳೂರು ಗುಬ್ಬಣ್ಣನವರು 500 ರೂ. ಗುಬ್ಬಣ್ಣನವರ ಸಂಗಪ್ಪನವರು 500 ರೂ. ವೀರಭದ್ರಪ್ಪ ಚನ್ನಪ್ಪನವರು 500 ರೂ. ಮಾ॥ ಮಂಠಸೆಟ್ಟರ ಕುಟುಂಬ ಮಲ್ಲಮ್ಮನವರು 400 ಕಂಡಿ ತಮ್ಮಯ್ಯನವರು 300 ರೂ. ವೀರರಾಜಪೇಟೆ ಶಾಂತಯ್ಯನವರು 200 ರೂ. ಹೆ॥ ನಾಗಪ್ಪನವರು 200 ರೂ. ಬೆ॥ ತಾ॥ ಪುಟ್ಟಣ್ಣನವರು 200 ರೂ. ಗುರುಬಸೆಟ್ಟರ ನಾಗಣ್ಣನವರು 100 ರೂ. ಬೆ॥ ಪುಟ್ಟಣ್ಣನವರು 100 ರೂ. ಗುರುಬಸೆಟ್ಟರ ಗುಬ್ಬಣ್ಣನವರು 75 ರೂ. ಕೋಟೆ ವೀರಪ್ಪನವರು 50 ರೂ. ನಂಬಿಬಸವಣ್ಣನವರ ಬಸವಣ್ಣನವರು 50 ರೂ. ಯಜಮಾನ್ ಪುಟ್ಟಣ್ಣನವರು 50 ರೂ. ಬೆಂ॥ ಗುಬ್ಬಣ್ಣ ಉರುಫ ಪುಟ್ಟಸ್ವಾಮಯ್ಯನವರು 50 ರೂ. ಮು॥ ಪುಟ್ಟಣ್ಣ ಮಲ್ಲಯ್ಯನವರು 50 ರೂ. ಯಜಮಾನ್ ಗುರುಮಲ್ಲಣ್ಣನವರು 50 ರೂ. ದೊಡ್ಡಹಟ್ಟಿ ಸುಬ್ರಾಯಪ್ಪನವರು 50 ರೂ. ಮಂಠಸೆಟ್ಟರ ಮಗ ಸುಬ್ರಾಯಸೆಟ್ಟರು 50 ರೂ. ಮಾ॥ ಅಂ॥ ಕುಟುಂಬ ಮಲ್ಲಮ್ಮನವರು 50 ರೂ. ಕೋಟೆ ವೀರಣ್ಣನವರ ಮಕ್ಕಳು ಮುದ್ದಪ್ಪನವರು 50 ರೂ. ಮು॥ ಮಾದಪ್ಪನವರು 50ರೂ. ಬ॥ ಪುಟ್ಟಣ್ಣಯ್ಯನವರು 25 ರೂ. ಬೆ॥ ವಾ॥ ಶಂಭುಲಿಂಗಪ್ಪನವರು 25 ರೂ. ಹು॥ ಚನ್ನಯ್ಯನವರು 25 ರೂ. ಬೆ॥ ಕರೀಸೆಟ್ಟರು 25 ರೂ. ಉಪಾಧ್ಯರ ರಾ॥ ಚೌಡಯ್ಯನವರು 25 ರೂ. ಹು॥ ವೀ॥ ನಾಗಪ್ಪನವರು 25 ರೂ. ಕೋ॥ ಚ॥ ವೀರಯ್ಯನವರು 25 ರೂ. ಬಳೆ ಚಿಕ್ಕಬಸಪ್ಪನವರು 25 ರೂ. ಮಾ॥ ಚ॥ ತಾಯಿ ಮಲ್ಲಮ್ಮನವರು 25 ರೂ. ಕೋಟೆ ಬಸೆಟ್ಟರು 20 ರೂ. ಮುಳ್ಳೂರು ಪುಟ್ಟಣ್ಣ ಶಾಂತಪ್ಪನವರು 40 ರೂ. ಒಡ್ಡಗಲ್ ಕರಿಯಣ್ಣನವರು 15 ರೂ. ಒಡ್ಡಗಲ್ ಸುಬ್ಬಣ್ಣನವರು 10 ರೂ. ಹೊಸಮನೆ ಗುರುಬಸೆಟ್ಟರು 10 ರೂ. ಯ॥ ಲಿಂ॥ ಸುಬ್ಬಣ್ಣನವರು 10 ರೂ. ಚಿಕ್ಕರೆ ಮಲ್ಲಯ್ಯನವರು 10 ರೂ. ಕೋ॥ ವೀ॥ ರುದ್ರಪ್ಪನವರು 10 ರೂ. ಬೊ॥ ಮರಿಯಪ್ಪನವರು 10 ರೂ. ಕೋಟೆಯ್ಯನವರು 10 ರೂ. ಕೋ॥ ಮಲ್ಲಪ್ಪನವರು 10 ರೂ. ಗು॥ ದಾಳಿಬಸೆಟ್ಟರು ಬಿಳುಗುಲಿ ವೀರಣ್ಣನವರು 10 ರೂ. ಬಳೆ ನಂಜಪ್ಪನವರು 10 ರೂ. ಹಳ್ಳಿ ಚಂದ್ರಪ್ಪನವರು 10 ರೂ. ಚಿ॥ ರಾ॥ ಮಗ ಚನ್ನಯ್ಯನವರು 6 ರೂ. ಚಿ॥ ರಾ॥ ಮಗ ರಾಮಣ್ಣನವರು 5 ರೂ. ಯ॥ ಮಲ್ಲಣ್ಣನವರು 5 ರೂ. ನೆಕ್ಕದ ಶಿವಯ್ಯನವರು 2 ರೂ. ಮಾ॥ ತಾಯಮ್ಮನವರು 5 ರೂ. ಜುಮ್ಲಾ 5,003 ರೂ.

ಹುಣಸೂರು ತಾ॥ ಬೆಟ್ಟದಪುರದ ವೀರಶೈವ ಜನಗಳು ತಾ॥ 4-10-22 ರಲ್ಲಿ ಅರ್ಪಿಸಿದ್ದು.

ಮ॥ ಗಳಾದ ಯ॥ ಸಣ್ಣಪ್ಪಾಜಿಯವರು 100 ರೂ. ಸೆಟ್ಟರ ಚನ್ನಬಸೆಟ್ಟರು 75 ರೂ. ಸೆಟ್ಟರ ಪುಟ್ಟಪ್ಪನವರು 50 ರೂ. ಸೆಟ್ಟರ ತಮ್ಮಯ್ಯನವರು 50 ರೂ. ಭೋಗಸೆಟ್ಟರ ರಾಚಪ್ಪನವರು 25 ರೂ. ಭೋಗಸೆಟ್ಟರ ಮ॥ ಭೋಗಪ್ಪನವರು 25 ರೂ. ಅಪ್ಪುಸೆಟ್ಟರ ಪುಟ್ಟಪ್ಪನವರು 16-10-8 ರೂ. ಅಂಗಡಿ ಗುರುಲಿಂಗಪ್ಪನವರು 16-10-8 ರೂ. ಸೆಟ್ಟರ ದೊಡ್ಡಣ್ಣನವರು 15 ರೂ. ದೊಡ್ಡಮಾದಣ್ಣನವರು 15 ರೂ. ದೊ॥ ಮುದ್ದಪ್ಪನವರು 10 ರೂ. ಮುದ್ದಣ್ಣನವರ ಮುದ್ದಪ್ಪನವರು 10 ರೂ. ಅಂಗಡಿ ಮುದ್ದಣ್ಣನವರು 2-8-0 ರೂ. ಜುಮ್ಲಾ 410-12-0 ರೂ.

ಹುಣಸೂರು ತಾ॥ ಕಿತ್ತೂರುಗ್ರಾಮದ ವೀರಶೈವರುಗಳು ತಾ॥ 5-10-22 ರಲ್ಲಿ ಅರ್ಪಿಸಿದ್ದು.

ಮ॥ ಗಳಾದ ಪುಟ್ಟಬಸೆಟ್ಟರು 100 ರೂ. ನಂಜಪ್ಪಸೆಟ್ಟರು 100 ರೂ. ಸಿದ್ಧಲಿಂಗಸೆಟ್ಟರು 50 ರೂ. ಅಪ್ಪಾಜಿಸೆಟ್ಟರು 25 ರೂ. ಚಿಕ್ಕ ಎಡಿಯೂರಸೆಟ್ಟರು 25 ರೂ. ಮಾ॥ ಕ॥ ಸಿದ್ಧಲಿಂಗಮ್ಮನವರು 25 ರೂ. ಮಳವಾಡಿ ಗುರುಸಿದ್ದಪ್ಪನವರು 13 ರೂ. ತೋಟದಸೆಟ್ಟರು 16-10-8 ರೂ. ಅಪ್ಪುಸೆಟ್ಟರು 18 ರೂ. ದೊಡ್ಡಯಡಿಯೂರಸೆಟ್ಟರು 10 ರೂ. ಮಾ॥ ಚ॥ ಸಿದ್ಧಲಿಂಗಮ್ಮನವರು 10 ರೂ. ಮಾ॥ ಚಿಕ್ಕಯ್ಯನವರು 10 ರೂ. ಬಸೆಟ್ಟರ ವೀರಣ್ಣಸೆಟ್ಟರು 25 ರೂ. ಜುಮ್ಲಾ 427-10-8 ರೂ.

ಹುಣಸೂರು ತಾ॥ ಮರದೂರುಗ್ರಾಮದ ವೀರಶೈವ ಜನಗಳು ತಾ॥ 10-10-22 ರಲ್ಲಿ ಅರ್ಪಿಸಿದ್ದು.

ಮ॥ ಗಳಾದ ಕಪನಿಬಸೆಟ್ಟರು 200 ರೂ. ಚನ್ನಸೆಟ್ಟರು 100 ರೂ. ಚ॥ ತಮ್ಮ ಪುಟ್ಟಸೆಟ್ಟರು 50 ರೂ. ಮೊಗುತ್ತಸೆಟ್ಟರು 50 ರೂ. ಪುಟ್ಟಸೆಟ್ಟರು 40 ರೂ. ಅಪ್ಪುಸೆಟ್ಟರು 30 ರೂ. ಚ॥ ತಮ್ಮ ಸಣ್ಣಪ್ಪಸೆಟ್ಟರು 25 ರೂ. ಮಾ॥ ಅರ॥ ಹೆಂಡತಿ ಚನ್ನಮ್ಮನವರು 10 ರೂ. ಕ॥ ವೀರಪ್ಪನವರ ರುದ್ರಸೆಟ್ಟರು 8 ರೂ. ವೀರಪ್ಪನವರು 7-10-8. ಕಾ॥ ರಾ॥ ಬಸೆಟ್ಟರು 6-10-8. ಮಾ॥ ಹೆಂಡತಿ ಪಾರ್ವತಮ್ಮನವರು 2 ರೂ. ಮಾ॥ ಪುಟ್ಟಮ್ಮನವರು 1 ರೂ. ಮಂಠಸೆಟ್ರ ತೋಟಮ್ಮನವರು 2ರೂ. ಜುಮ್ಲಾ ರೂ. 352-5-4.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಳ್ಳ

15 ರಾಯಲ್ ಫೌಂಟೇನ್ ಪೆನ್.



ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರೆಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸಾಟಿಯಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಿಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
38 ಬಳ್ಳಾರಿ.

೧೯೨೨ ನೆಯ ಇಸವಿ ನವಂಬರ್ ತಾ॥ ೫ ರಿಂದ ೧೯೨೨ ನೆಯ ನವಂಬರ್ ತಾ॥ ೧೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮ ಸಂವತ್ಸರದ ಕಾರ್ತಿಕ ಬಹುಳ ಪಾಡ್ಯಮಿಯಿಂದ ಕಾರ್ತಿಕಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
5	ಭಾನು	ಪಾಡ್ಯ	45-26	ಭರ	20-50	20
6	[1] ಸೋಮ	ಬಿದಿ	48-5	ಕೃತ್ತಿ	25-8	21
7	ಮಂಗಳ	ತದಿ	49-16	ರೋಹಿ	28-13	22
8	ಬುಧ	ಚೌತಿ	49-9	ಮೃಗ	30-30	23
9	ಗುರು	ಪಂಚ	47-44	ಆರ್ದ್ರಾ	30-36	24
10	ಶುಕ್ರ	ಷಷ್ಠಿ	44-5	ಪುನ	30-0	25
11	[1] ಶನಿ	ಸಪ್ತ	41-34	ಪುಷ್ಯ	28-22	26

(1) ಕಾರ್ತಿಕಸೋಮವಾರಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿಶ್ವಿತಾ | ಘನಪಥಕೃತಾವತಾರಾ ಪಶ್ಯಜ್ಜನಮೃತ್ತ ಮೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಿಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ‖

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫ | ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ನವಂಬರ್ ತಾರೀಖು ೧೨ ನೆಯ ಭಾನುವಾರ | ಸಂಚಿಕೆ ೪೬

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಶ್ರೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ॥ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಿನಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಶೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡ ಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.
,, ನಂ. 2 ರೂ. 7—8—0.

34 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 512, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

16

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.
ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0
,, ,, ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವೃಷಪಂಚಕ	೦— ೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯೆಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಪಾಸ್ತ್ರೀಯರಿಗೂ ಕಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

43 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫಾಸ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಪ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,
16 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರ ಮೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧ್ವುಗ್ರಾಲವಾಲಂವಲಂ ‖
ಶೀವಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪ | ಮೈಸೂರ್ ಸ್ಟಾರ್ ಸೆ ೧೯೨೨ ನೆಯ ಇಸವಿ ನವಂಬರ್ ತಾರೀಖು ೧೨ ನೆಯ ಭಾನುವಾರ | ಸಂಚಿಕೆ ೪೬

REGISTERED NO. M. 124.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

[illegible]

ಸಿನಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಷೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡ ಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.

„ ನಂ. 2 ರೂ. 7—8—0.

34 ವಿಳಾಸ—ಎಸ್. ಪಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

16

[illegible]

ಜಂಪ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

[illegible]

ವಿಳಾಸ—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

[illegible]

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಲಾಸ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

[illegible]

ಈ ತಿಂಗಳ ಕೋವೆರಗೋ ಅರ್ಧಕ್ರಯ.

[illegible]

16 ವಿಳಾಸ—ರತ್ನಂ ಅಂಡ್ ಬ್ರದರ್ಸ್,
ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

[illegible]

[illegible]

ಮುಂಬಯಿ.

[illegible]

ಶೋಚನೀಯ ಮೃತ್ಯು.

[illegible]

ಶ್ರೀ ಬೆಟ್ಟದಪುರದ ನಿರಂಜನ ಜಂಗಮರು.

[illegible]

ರಾಯಲ್ ಫೌಂಟನ್‌ಪೆನ್.

[illegible]

[illegible]

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

[illegible]

ಪ್ರತ್ಯಕ್ಷಫಲ ಪಂಚಸಿದ್ಧಿ.

[illegible]

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
38 ಬಳ್ಳಾರಿ.

೧೯೨೨ ನೆಯ ಇಸವಿ ನವಂಬರ್ ತಾ|| ೫ ರಿಂದ ೧೯೨೨ ನೆಯ ನವಂಬರ್ ತಾ|| ೧೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮ ಸಂವತ್ಸರದ ಕಾರ್ತಿಕ ಬಹುಳ ಪಾಡ್ಯಮಿಯಿಂದ ಕಾರ್ತಿಕಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
5	ಭಾನು	ಪಾಡ್ಯ	45-26	ಭರ	20-50	20
6	(1) ಸೋಮ	ಬಿದಿ	48-5	ಕೃತ್ತಿ	25-8	21
7	ಮಂಗಳ	ತದಿ	49-16	ರೋಹಿ	28-13	22
8	ಬುಧ	ಚೌತಿ	49-9	ಮೃಗ	30-30	23
9	ಗುರು	ಪಂಚ	47-44	ಆರ್ದ್ರಾ	30-36	24
10	ಶುಕ್ರ	ಷಷ್ಠಿ	44-5	ಪುನ	30-0	25
11	(1) ಶನಿ	ಸಪ್ತ	41-34	ಪುಷ್ಯ	28-22	26

(1) ಕಾರ್ತಿಕಸೋಮವಾರಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಬಂಗಲೆ ಬಿಕರಿ ಇಸ್ತಿಹಾರು

(1) ಈ ಕೆಳಗೆ ವಿವರಿಸಿರುವ ಬಂಗಲೆ ಮತ್ತು ಅದಕ್ಕೆ ಸೇರಿದ ಜಾಗ ಸಹ ಬಿಕರಿಗೆ ಸಿದ್ಧವಾಗಿದೆ. ಇಷ್ಟವುಳ್ಳವರು 1922ನೇ ನವಂಬರು 30ನೇ ತಾರೀಕಿನ ವಳಗಾಗಿ ತಾವು ಎಷ್ಟು ಮೊಬಲಿಗೆ ಖರೀದಿಗೆ ಸದರಿ ಬಂಗಲೆ ಮತ್ತು ಜಾಗವನ್ನು ತೆಗೆದುಕೊಳ್ಳಲು ಕಬೂಲು ಇರುತ್ತಾರೋ ಆಷ್ಟು ಮೊಬಲಗನ್ನು ನಮೂದಿಸಿ ಸೀಲ್ಡ್ ಟೆಂಡರುಗಳನ್ನು ಅಂದರೆ ಕಾಗದವನ್ನು ಲಿಫಾಫೆಯಲ್ಲಿ ಇಟ್ಟು ಮೊಹರ್ ಮಾಡಿ ಈ ಕೆಳಗೆ ಸೈನು ಮಾಡಿರುವವರ ವಿಳಾಸಕ್ಕೆ ಕಳುಹಿಸತಕ್ಕದ್ದು.

(2) ಸದರಿ ಬಂಗಲೆ ಮತ್ತು ಜಾಗಾದಲ್ಲಿ ಹಾಲಿ ಮೈಸೂರು ಕ್ಲಬ್ (ಯೂರೋಪಿಯನ್ ಕ್ಲಬ್) ಮಾಹೇಯಾನಾ 50 ರೂಪಾಯಿ ಬಾಡಿಗೆಯೂ, ಸಿಂಗರ್ ಸೂಯಿಂಗ್ ಮೆಷಿನ್ ಕಂಪನಿಯವರು ಮಾಹೇಯಾನಾ 50 ರೂಪಾಯಿ ಬಾಡಿಗೆಯೂ ಮತ್ತು ಅಬ್ಬಾ ಅಬ್ದುಲ್ ಸೂಕೂರ್ ಸೇಟ್ ಅಂಡ್ ಸನ್ಸ್ ರವರು ಮಾಹೇಯಾನಾ 60 ರೂಪಾಯಿಗಳ ಬಾಡಿಗೆಯೂ ಈ ಮೇರೆ ಒಟ್ಟು ಮಾಹೇಯಾನಾ 160 ರೂಪಾಯಿಗಳ ಬಾಡಿಗೆಗೆ ಪ್ರತ್ಯೇಕ ಪ್ರತ್ಯೇಕವಾಗಿ ಬಾಡಿಗೆದಾರರಾಗಿರುತ್ತಾರೆ. ಇವರುಗಳ ಬಾಡಿಗೆ ವಾಯಿದೇ 1924ನೇ ಇಸವಿ ಡಿಶಂಬರು 31 ನೇ ತಾರೀಖಿಗೆ ಮುಗಿಯತಕ್ಕದ್ದಾಗಿದೆ.

(3) ಸದರಿ ಬಂಗಲೆ ಮತ್ತು ಜಾಗಾ ಮೈಸೂರು ಮೆಸಾನಿಕ್ ಲಾಡ್ಜಿಗೆ ಸೇರಿದ್ದು. ಇದನ್ನ ವಿಕ್ರಯಿಸಲು 1922ನೇ ಇಸವಿ ಶೆಪಟೆಂಬರು 2ನೇ ತಾರೀಖಿನಲ್ಲಿ ರೆಗ್ಯುಲರ್ ಮೀಟಿಂಗಿನಲ್ಲಿ ರೆಜಲ್ಯೂಷನ್ (ನಿಶ್ಚಯ) ಆಗಿ 1922ನೇ ಇಸವಿ ಅಕ್ಟೋಬರು 7 ನೇ ತಾರೀಖಿನ ರೆಗ್ಯುಲರ್ ಮೀಟಿಂಗಿನಲ್ಲಿ ಖಾಯಂ ಮಾಡಲ್ಪಟ್ಟಿರುತ್ತೆ.

(4) ಈ ಇಸ್ತಿಹಾರ್ ಪ್ರಕಾರ ಬರಬಹುದಾದ ಎಲ್ಲಕ್ಕಿಂತ ಜಾಸ್ತಿ ಬೆಲೆಯುಳ್ಳ ದರಖಾಸ್ತನ್ನೇ ಆಗಲಿ ಅಥವಾ ಮತ್ಯಾವ ದರಖಾಸ್ತನ್ನೇ ಆಗಲಿ ಮೈಸೂರು ಮೆಸಾನಿಕ್ ಲಾಡ್ಜಿನವರು ಒಪ್ಪಿಕೊಳ್ಳಲು ಬದ್ಧರಲ್ಲ.

(5) ಸದರಿ ಬಂಗಲೆ ಮತ್ತು ಜಾಗವನ್ನ ಇಷ್ಟವುಳ್ಳವರು ನೋಡಬಹುದು ಅಪೇಕ್ಷಿತವಾದ ಸಂಗತಿಗಳನ್ನ ಈ ಕೆಳಗೆ ರುಜು ಮಾಡಿರುವವರಿಂದ ತಿಳಿದುಕೊಳ್ಳಬಹುದು.

(6) ಸದರಿ ಟೆಂಡರುಗಳು 1922ನೇ ಇಸವಿ ಡಿಶೆಂಬರ್ 2ನೇ ತಾರೀಖಿನಲ್ಲಿ ನಡೆಯುವ ರೆಗ್ಯುಲರ್ ಮೀಟಿಂಗಿನಲ್ಲಿ ಇತ್ಯರ್ಥ ಮಾಡಲ್ಪಡುತ್ತವೆ.

ಕ್ರಯಸ್ವತ್ತಿನ ವಿವರ.

ಮೈಸೂರು ಸಿಟಿಯಲ್ಲಿ ಕರ್ಜನ್ ಪಾರ್ಕಿನಲ್ಲಿ ಸ್ಟ್ಯಾಚ್ಯುಸ್ಕ್ವೇರಿನಲ್ಲಿ ಇರುವ ಮುನಿಸಿಪಲ್ ನಂಬರು 412, $\frac{412}{1}$ ಮತ್ತು $\frac{412}{2}$ ವುಳ್ಳ ಮಹಡಿಯುಳ್ಳ ಬಂಗಲೆ ಮತ್ತು ಅದಕ್ಕೆ ಪೂರ್ವಕಡೆ ಇರುವ ಖಾಲಿ ಜಾಗ.

ರಾವ್‌ಬಹದೂರ್ ಯಮ್. ಸಿ. ರಂಗೈಂಗಾರ್
ಸೆಕ್ರಟರಿ
ಮೈಸೂರು ಮೆಸಾನಿಕ್ ಲಾಡ್ಜ್,

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ನವಂಬರ್ ತಾ|| ೧೨ನೆಯ ಭಾನುವಾರ.

ಆಶೀರ್ವಾದದ ಹಕ್ಕುದಾರಿಕೆ.

ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ 77ನೆ ಸಾರ್ವತ್ರಿಕ ವಿಷಯ (ಸಂಸ್ಕೃತ ವಿದ್ಯಾಭ್ಯಾಸ)ದ ಚರ್ಚೆ ಬಂದಾಗ್ಗೆ ಮ|| ಗೋಪಾಲಸ್ವಾಮಯ್ಯರು ಭಾಷಣ ಮಾಡಿದುದರಲ್ಲಿ—"ಮಹಾರಾಜರ ತಲೆಮೇಲೆ ಮಂತ್ರಾಕ್ಷತೆ ಹಾಕಿ ಆಶೀರ್ವಾದ ಮಾಡುವ ಅಧಿಕಾರವು ಬ್ರಾಹ್ಮಣರಿಗೆ ಇರುವವರೆಗೂ, ಬ್ರಾಹ್ಮಣರಿಗೋಸ್ಕರವೆಂದು ಪ್ರತ್ಯೇಕವಾಗಿರುವ ಅವರ ಸ್ಕೂಲುಗಳಿಗೆ ಇತರರನ್ನು ಸೇರಿಸದೆ ಆ ಸ್ಕೂಲುಗಳ ಖರ್ಚಿಗೆ ಹಣವನ್ನು ಸರ್ಕಾರದ ಬೊಕ್ಕಸದಿಂದ ಕೊಡುವುದು ಯುಕ್ತವಾಗಿದೆ" ಎಂದು ವಾದಿಸಿದರು. ಈ ನೂತನಸಿದ್ಧಾಂತವನ್ನು ಈ ವಿಷಯದಲ್ಲಿ ಇದುವರೆಗೆ ಯಾರೂ ಆಡಿರಲಿಲ್ಲ. ತ್ರಿಮತ ಬ್ರಾಹ್ಮಣರಿಂದ ಶ್ರೀಮನ್ಮಹಾರಾಜರಿಗೆ ಆಶೀರ್ವಾದ ಮಾಡಿಸುವುದರ ಪ್ರತಿಫಲಕ್ಕಾಗಿ ಪ್ರಜೆಗಳೆಲ್ಲಾ ಕಂದಾಯದ ರೂಪದಿಂದ ಸರ್ಕಾರಕ್ಕೆ ತೆತ್ತ ಹಣದಲ್ಲಿ ಒಂದಷ್ಟು ಭಾಗವನ್ನು ಇವರ ಪಾಠಶಾಲೆಗಳಿಗೆ ಕೊಡಬೇಕೆಂದು ಇವರ ಸಿದ್ಧಾಂತದ ತಾತ್ಪರ್ಯವಾಯಿತು. ಇಂಥ ದುರ್ಭ್ರಮೆಯೇ ಈಗಣಕಾಲದ ಎಷ್ಟೋ ದುರ್ವಾದಗಳಿಗೆ ಕಾರಣವಾಗುತ್ತಿರುವುದನ್ನು ನೋಡಿ ವಿಷಾದಿಸಬೇಕಾಗುತ್ತದೆ. ಸಕಲ ಪ್ರಾಣಿಗಳಿಗೂ ಜಗತ್ಪಿತೃಗಳೇ ತಾಯ್ತಂದೆಗಳು, ಎಲ್ಲರೂ ಸಹೋದರರು, ಎಲ್ಲರಲ್ಲೂ ಇರುವ ಪರಮಾತ್ಮಾಂಶವು ಒಂದೇ, ಎಲ್ಲರೂ ಸಹೋದರ ಭಾವದಿಂದ ವರ್ತಿಸತಕ್ಕದ್ದೇ ಮನುಷ್ಯತ್ವದ ಮುಖ್ಯಲಕ್ಷಣ ಎಂಬುದನ್ನು ಬಲುಮಟ್ಟಿಗೆ ತಿಳಿದುಕೊಂಡಿರುವವರಂತೆ ಪಂಚಮರ ಉದ್ಧಾರ ಮೊದಲಾದ ಕಾರ್ಯಗಳಲ್ಲಿ ಎಷ್ಟೋ ಮುಂಬರಿಯುತ್ತಿರುವ ಮ|| ಗೋಪಾಲಸ್ವಾಮಯ್ಯರಂಥ ನವನಾಗರಕರು ಕೂಡ ಈ ದುರ್ಭ್ರಮೆಗೆ ಒಳಗಾಗಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಆಶೀರ್ವಾದವೆಂಬುದು ಪ್ರತಿಫಲಾಪೇಕ್ಷೆಯಿಂದ ಮಾಡಲ್ಪಡತಕ್ಕದ್ದಲ್ಲ. ಅದು ಹಕ್ಕುದಾರಿಕೆಯೂ ಅಲ್ಲ. ನನ್ನ ಆಶೀರ್ವಾದಕ್ಕೆ ಇಂಥ ಮುಯ್ಯಿ ಆಗಬೇಕೆಂದು ತಿಳಿದು ಯಾವನಾದರೂ ಅದನ್ನು ಮಾಡುವವನಾಗಿದ್ದರೆ ಆ ಆಶೀರ್ವಾದದ ಬೆಲೆಯು ಕವಡೆಯಷ್ಟೂ ಇರುವುದಿಲ್ಲ. ಆಗತಾನೇ ಅರಳಿದ ಜಾತೀಕುಸುಮದಿಂದ ಹೊರಡುವ ಪರಿಮಳದಂತೆಯೂ, ಹಸುಗೂಸುಗಳ ಮುದ್ದುಮೊಗದಿಂದ ನಿರ್ವ್ಯಾಜನಾಗಿ ಹೊರಡುವ ನಗೆಯಂತೆಯೂ, ಶರತ್ಕಾಲದ ಚಂದ್ರಬಿಂಬದಿಂದ ತಾನೇತಾನಾಗಿ ಹೊರಡುವ ಬೆಳ್ದಿಂಗಳ ತಂಪಿನಂತೆಯೂ, ನಿರ್ಮಲ-ನಿಷ್ಕಪಟ-ನಿಷ್ಕಾಮಭಾವದಿಂದ ಯಾವೊಬ್ಬ ಪ್ರಾಣಿಮಾತ್ರದಿಂದ ತಾನೇ ತಾನಾಗಿ ಸ್ಫುರಣೆಗೊಂಡು ಉಕ್ಕಿಬರುವ ಆಶೀರ್ವಚನಗಳಿಗಿರುವಷ್ಟು ಮಹತ್ತ್ವವು ಪ್ರತಿಫಲಾಪೇಕ್ಷೆ, ಡಂಭಾಚಾರ, ಅಹಂಕಾರ, ಕೌಟಿಲ್ಯ ಮೊದಲಾದ ದೋಷಗಳಿಂದ ಕಲುಷಿತವಾದ ಮಾನಸಿಕ ಶಕ್ತಿಯಿಂದ ಪ್ರೇರಿತವಾಗಿ ಬರುವ ಆಶೀರ್ವಾದಕ್ಕೆ ಎಂದೆಂದಿಗೂ ಇರುವುದಿಲ್ಲ. "ಅತ್ಮಾಸ್ಯ ಜಂತೋರ್ನಿಹಿತೋಗುಹಾಯಾಂ" ಎಂಬ ಉಪನಿಷದ್ವಾಕ್ಯದಂತೆಯೂ "ಈಶ್ವರಸ್ಸರ್ವಭೂತಾನಾಂಹೃದ್ದೇಶೇSರ್ಜುನ ತಿಷ್ಠತಿ" ಎಂಬ ಗೀತಾವಚನದಂತೆಯೂ ಪರಮಾತ್ಮನು ಸಕಲ ಪ್ರಾಣಿಗಳ ಹೃದಯಾಂತರ್ವರ್ತಿಯಾಗಿರುವನು. "ನನ್ನ ಪ್ರಭುವು ಸಕಲ ಸನ್ಮಂಗಳನ್ನೂ ಪಡೆದು ಸುಖವಾಗಿರಲಿ" ಎಂಬ ನಿಷ್ಕಪಟವಾದ ಹಾರೈಕೆಗೊಂಡ-ನಿರ್ಮಲಮಾನಸಿಕ ಶಕ್ತಿಯಿಂದ ಪ್ರೇರಿತವಾದ-ಆಶೀರ್ವಾದವನ್ನು ಯಾವೊಬ್ಬ ಬಾಲನೇ ಆಗಲೀ ವೃದ್ಧನೇ ಆಗಲೀ ಯಾವ ಜಾತಿಯವನೇ ಆಗಲೀ ಮಾಡಿದರೂ ಪರಮತರವಾದ ಆತ್ಮಿಕಚೈತನ್ಯವುಳ್ಳ ಅಂಥ ಅಮೌಲ್ಯವಾದ ಆಶೀರ್ವಾದಕ್ಕೆ ಪಾತ್ರರಾಗತಕ್ಕವರೇ ಧನ್ಯರು. ಅದೇ ಅಪೇಕ್ಷಣೀಯವಾದುದು. ಅಂಥವನ ಆಶೀರ್ವಾದಕ್ಕೇ ನಿಗ್ರಹಾನುಗ್ರಹಸಾಮರ್ಥ್ಯವು ಸ್ವತಸ್ಸಿದ್ಧವಾಗಿರುವುದು. ಹಾಗಲ್ಲದೆ ಮ|| ಅಯ್ಯರವರ ನಿರೀಕ್ಷಣೆಯಂತೆ ಯಾವುದೋ ಒಂದು ಪ್ರತಿಫಲದ ಅಪೇಕ್ಷೆಗಾಗಿ ಮಾಡಲ್ಪಡುವ ಆಶೀರ್ವಾದವು ನಿಜವಾದ ಆಶೀರ್ವಾದವೇ ಅಲ್ಲವೆಂಬುದು ಸಿದ್ಧವು. ಇದನ್ನರಿಯದೆ ಇರತಕ್ಕ ಮಹಾಶಯರು ಈಗಣ ಕಾಲದಲ್ಲಿ ಇಲ್ಲವೆಂಬುದೇನೂ ಇಲ್ಲ. ಆದರೆ ಅದನ್ನರಿತಿರುವವರಿಗಿಂತಲೂ ಅರಿಯದೆ ಹಕ್ಕುದಾರಿಕೆಯ ಆಶೀರ್ವಾದದ ಭ್ರಮೆಯನ್ನು ಹಚ್ಚಿಕೊಂಡಿರುವವರೇ ಹೆಚ್ಚಾಗಿರುವುದು ಕಾಲವೈಚಿತ್ರ್ಯದ ಪ್ರಭಾವವಾಗಿದೆ.

ನಮಸ್ಕರಿಸಿಕೊಳ್ಳುವುದೂ ಅದಕ್ಕೆ ಏನೋ ಒಂದು ಸ್ವಸ್ತಿಯನ್ನು ಹಾಡಿಬಿಡುವುದೂ ಬಹು ಸುಲಭವೆಂದು ಅಜ್ಞಲೋಕವು ತಿಳಿದುಕೊಂಡಿದೆ. ನಮ್ಮ ಪೂರ್ವಿಕಮಹಾನುಭಾವರು ಹಾಗೆ ತಿಳಿದುಕೊಂಡಿರಲಿಲ್ಲ. ಅವರು ತ್ರಿಕಾಲಜ್ಞಾನಿಗಳಾಗಿದ್ದರು. ನಿಗ್ರಹಾನುಗ್ರಹ ಸಾಮರ್ಥ್ಯವುಳ್ಳವರಾಗಿದ್ದರು. ಅವರಲ್ಲಿ ತಾನೆಂಬ ಹಮ್ಮೇ ಇರಲಿಲ್ಲ. ಅವರ ಆಶೀರ್ವಾದವು ಈಗಣ ಪಂಚಾಗಳ ಮುಂದಣ ರಬಿಯ ಪೊಟ್ಟಣದಂತೆ ಹಾರಿ ಬೀದಿಗಳಲ್ಲಿ ಚೆಲ್ಲಾಡುವಷ್ಟು ಸುಲಭವಾಗಿರಲಿಲ್ಲ. ಅವರ ದರ್ಶನಾಶೀರ್ವಾದಗಳು ಎಂಥ ಸಾರ್ವಭೌಮರಿಗೂ ದುರ್ಲಭವಾಗಿರುತ್ತಿದ್ದುವು. ಆ ವಿಷಯದಲ್ಲಿ ಒಂದೇ ಒಂದು ಉದಾಹರಣೆಯನ್ನು ಈಗ ಕೊಡುವುದು ಅಪ್ರಸಂಗವಾಗಲಿಕ್ಕಿಲ್ಲವೆಂದು ನೆನಸಿ ಹೇಳುತ್ತೇವೆ:—

12ನೆ ಶತಮಾನದಲ್ಲಿ ಬಸವೇಶನ ಕಾಲದೊಳಗೆ ಬೆಲ್ದೇವಿ ವೇಮನಾರಾಧ್ಯರೆಂಬ ಜಂಗಮೋತ್ತಮರೊಬ್ಬರಿದ್ದರು. ಅವರು ಒಂದಾನೊಂದುದಿನ ಶಿವಾರ್ಚನೆಗಾಗಿ ಹೂವನ್ನೆತ್ತಿಕೊಂಡು ಬರುತ್ತಿರುವಾಗ್ಗೆ ನೆರೆಯೂರಿನ ರಾಜನೊಬ್ಬನು ಆಗತಾನೇ ಪಾಣಿಗ್ರಹಣ ಮಾಡಿದ ತನ್ನ ಪತ್ನಿಯನ್ನೊಡಗೊಂಡು ಅಂದಳವನ್ನೇರಿ ಚತುರಂಗ ಬಲದೊಡನೆ ಉತ್ಸವಗೊಂಡು ತನ್ನೂರಿಗೆ ಹೋಗುತ್ತಿದ್ದು, ಈ ಗುರುವರ್ಯರ ತೇಜೋವೈಭವವನ್ನು ಕಂಡು, ಇಳಿದುಬಂದು ನಮಸ್ಕರಿಸಿದನು. ಅದಕ್ಕೆ ಅವರು ಅಂಗೀಕಾರವನ್ನು ತೋರಿಸದೆ ಒಂದು ಕಡೆಗೆ ಚಿಗಿದು ಹೊರಟುಹೋದರು. ಇದನ್ನು ಕಂಡು ತನ್ನ ಹೆಂಡತಿಯು ಎಲ್ಲಿ ನಗುವಳೋ ಎಂಬ ನಾಚುಗೆಯೂ ನನ್ನಂಥ ಪ್ರಭುವು ಅಡ್ಡಬಿದ್ದರೂ ಈ ಬಡ ಜಂಗಮನು ಲಕ್ಷಿಸಲಿಲ್ಲವಲ್ಲಾ ಎಂಬ ಆಗ್ರಹವೂ ದೊರೆಗೆ ಉಂಟಾದುವು. ಆದರೂ ಸೈರಿಸಿಕೊಂಡು ಮತ್ತೊಂದುಸಲ ಅವರ ಬಳಿಗೆ ಹೋಗಿ ಅಡ್ಡಬಿದ್ದನು. ಆಗಲೂ ಅವರು ಆಶೀರ್ವದಿಸಲಿಲ್ಲ. "ನಾನು ತಮ್ಮನ್ನು ತಪಸ್ವಿಗಳೂ ಪೂಜ್ಯರೂ ಎಂದು ಭಾವಿಸಿ ನಮಸ್ಕರಿಸಿದರೆ ಆಶೀರ್ವದಿಸದೆ ಹೋಗಬಹುದೆ? ನೀವಲ್ಲದಿದ್ದರೆ ನಮಗೆ ಆಶೀರ್ವದಿಸುವ ಪೂಜ್ಯರು ಇನ್ನಾರೂ ಇಲ್ಲವೆ? ಹಣೆಯಲ್ಲಿ ಬರೆದುದನ್ನು ಅಳಿಸುವುದಕ್ಕೂ ಹೆಚ್ಚಿಸುವುದಕ್ಕೂ ನಿಮ್ಮ ಆಶೀರ್ವಾದಕ್ಕೆ ಶಕ್ತಿಯುಂಟೆ? ನಿಮ್ಮ ವೇಷವನ್ನು ನೋಡಿ ನಾನು ಮೋಸಹೋದೆ" ಎಂದು ಮೊದಲಾದ ಮಾತುಗಳಿಂದ ರಾಜನು ಹಂಗಿಸಿದನು. ಆಗ ವೇಮನಾರ್ಯರು-ಅಯ್ಯಾ ಪ್ರಭುವೆ, ನಾಳೆಗೆ ನಿನಗೆ ಮೃತ್ಯುವು ಸಿದ್ಧವಾಗಿರುವುದು. ಅದುಕಾರಣ, "ದೀರ್ಘಾಯುಷ್ಯಮಸ್ತು" ಎಂಬ ವಚನವನ್ನು ಶಿವನು ಈ ಬಾಯಿಂದ ಕಡೆಯಿಸಲಿಲ್ಲ. ಅದಕ್ಕಾಗಿ ಆಗ್ರಹಪಡಬೇಡ, ಎಂದು ಹೇಳಿ ಹೊರಟರು. ದೊರೆಯು ಮತ್ತಷ್ಟು ರೋಷೋಜ್ವಲಿತನಾಗಿ, "ವಿಧಿಯ ಬರೆಹವನ್ನು ವಿಾರಲು ಯಾರಿಂದಲೂ ಸಾಧ್ಯವಲ್ಲ, ನಾಳೆ ನಾನು ಸತ್ತರೆ ನಿಮ್ಮ ಮಾತು ನಿಜ, ನೀವು ಪೂಜ್ಯರೆಂಬುದೂ ನಿಜ, ನೋಡೋಣ" ಎಂದುಕೊಂಡು ಅಂದಳವನ್ನೇರಿ ಹೊರಟುಹೋದನು. ಆ ದಿನ ರಾತ್ರಿಯೇ ಪತ್ನಿಯೊಡನೆ ತೂಗುಮಂಚದ ಮೇಲೆ ರಾಜನು ಮಲಗಿರುವಾಗ್ಗೆ ಸರಪಳಿಯ ಮಾರ್ಗದಿಂದ ಒಂದು ಮಹಾವಿಷಸರ್ಪವು ಇಳಿದುಬಂದು ದೊರೆಯ ಕೈಯ ಹೆಬ್ಬೆರಳನ್ನು ಕಚ್ಚಿ ಹೊರಳಿತು. ಆ ವಿಷವೇಗದಿಂದ ಬೆಳಗಾಗುವುದರೊಳಗೆ ದೊರೆಯು ಮೃತನಾದನು. ಆಪ್ತಬಾಂಧವಾದಿಗಳೆಲ್ಲಾ ನೆರೆದು ನಾನಾಗಾರುಡ ಮಂತ್ರಜ್ಞರನ್ನೂ ವಿಷಚಿಕಿತ್ಸಕರನ್ನೂ ಕರೆಯಿಸಿ ಎಷ್ಟೆಷ್ಟೋ ಚಿಕಿತ್ಸೆಮಾಡಿಸಿದರು; ಫಲವಾಗಲಿಲ್ಲ. ಆಗ ಹೆಂಡತಿಯು ಹಿಂದಣ ದಿನದಲ್ಲಿ ವೇಮನಾರ್ಯಗುರುವು ನುಡಿದಿದ್ದ ಮಾತನ್ನು ಹೇಳಿಕೊಂಡು ರೋದಿಸಿದಳು. ಅವರಿಂದಲೇ ಈ ಮೃತ್ಯುವಿಮೋಚನೆಯಾಗಬೇಕೆಂದು ಮಂತ್ರಿ ಮಂಡಲದವರೂ ಬಾಂಧವರೂ ನಿಶ್ಚಯಿಸಿ, ಶವವನ್ನು ವೇಮನಾರ್ಯರ ಮಠದ ಅಂಗಳಕ್ಕೆ ಸಾಗಿಸಿ ಹಾಕಿ, ಗೋಳಿಟ್ಟು ಮರೆಬಿದ್ದರು. ನಿಗ್ರಹಾನುಗ್ರಹಾಸಮರ್ಥನಾದ ಶಿವನೇ ಇದನ್ನು ಪರಿಹರಿಸಬೇಕಲ್ಲದೆ ಇತರರಿಂದ ಸಾಧ್ಯವಲ್ಲವೆಂದು ವೇಮನಾರ್ಯರು ಹೇಳಿ, ಶಿವನಾಮಸ್ಮರಣೆಯನ್ನು ಮಾಡಿ, ಪ್ರತ್ಯಕ್ಷ ಶಿವಸ್ವರೂಪರಾದ ಜಂಗಮ ಮೂರ್ತಿಗಳನ್ನು ಪೂಜಿಸಿ, ಅವರ ಕರುಣಾಪ್ರಸಾದವನ್ನು ಪಡೆದು, ಶವಕ್ಕೆ ಸ್ನಾನಮಾಡಿಸಿ, ಜಂಗಮ ಪಾದತೀರ್ಥವನ್ನು ಅದರಮೇಲೆ ಸಂಪ್ರೋಕ್ಷಿಸಿ, ಪ್ರಸಾದ ಭಸಿತವನ್ನು ಪಾದೋದಕದಿಂದ ಮಿಶ್ರಮಾಡಿ ದೇಹಕ್ಕೆಲ್ಲಾ ಲೇಪಿಸಿ, ಸರ್ವಜಂಗಮ ಸಮೂಹದೊಡನೆ ಶಿವಮಂತ್ರೋಚ್ಚಾರವನ್ನು ಮಾಡುತ್ತ, ಅವಶಿಷ್ಟಪ್ರಸಾದಭಸಿತವನ್ನು ಶವದ ಬಾಯಿಗೆ ಹಾಕಿ "ಭಕ್ತನೇ ಏಳು" ಎಂದು ಹರಸಿದ ಕೂಡಲೇ ದೊರೆಯು ಕಣ್ಣುಬಿಟ್ಟು ಮೈಮುರಿದೆದ್ದು ವೇಮನಾರ್ಯಗುರುವಿಗೂ ಉಳಿದಿದ್ದ ಜಂಗಮವೃಂದಕ್ಕೂ ನಮಸ್ಕರಿಸಿದನು. ಸರ್ವರೂ ವೇಮನಾರ್ಯನ ಮಹತ್ವವನ್ನು ಕೊಂಡಾಡಿ, ಅವರ ಶಿಷ್ಯಕೋಟಿಗೆ ಸೇರಿದರು.

ಈ ಇತಿಹಾಸವನ್ನು ಕೇಳುವಲ್ಲಿ ನಮಸ್ಕಾರಪಾತ್ರತೆಯೂ ಆಶೀರ್ವಾದ ವಿನಿಯೋಗದ ಮಹತ್ವವೂ ಎಂತಹದೆಂಬುದು ಗೊತ್ತಾಗದೆ ಹೋಗದು. ವೇಮನಾರ್ಯರಂಥ ಮಹಿಮರು ತಮ್ಮ ಆಶೀರ್ವಾದವನ್ನು ಹಕ್ಕುದಾರಿಕೆಯೆಂದು ಭಾವಿಸಿದ್ದರೆ? ಅವರ ಆಶೀರ್ವಾದವು ಪ್ರತಿಫಲಾಪೇಕ್ಷೆಯುಳ್ಳದಾಗಿದ್ದಿತೆ? ಎಂದಿಗೂ ಇಲ್ಲ. "ಕರ್ತಾಭೋಕ್ತಾಸ್ವಯಂಶಿವಃ" ಎಂಬ ಭಾವವೊಂದೇ ಅವರಲ್ಲಿ ಮನೆಮಾಡಿಕೊಂಡಿದ್ದಿತು. ಅದುಕಾರಣವೇ ಅಂಥವರು ಭೂತಲರಕ್ಷಣಾರ್ಥವಾಗಿ ಅವತರಿಸಿದ ದೈವವಾಗಿದ್ದರು. ಆಶೀರ್ವಾದದ ಈ ನಿಜತತ್ತ್ವವನ್ನು ಮಭಾವಿಸದೆ ಮ|| ಅಯ್ಯರು ಆಡಿದ ಮಾತು ವಿವೇಕಿಗಳ ಪರಿಹಾಸಕ್ಕೆ ಪಾತ್ರವಲ್ಲದೆ ಮತ್ತೆಬೇರೆಯಲ್ಲ.

ನಮ್ಮ ಪೂರ್ವಿಕರು ಶಾಪಾನುಗ್ರಹ ಸಾಮರ್ಥ್ಯವುಳ್ಳವರಾಗಿದ್ದರು. ಅವರ ವಂಶೀಯರು ನಾವಾದುದರಿಂದ ನಮಗೇ ಆಶೀರ್ವಾದದ ಹಕ್ಕಿರುವುದೆಂದು ಒಂದುವೇಳೆ ಅಯ್ಯರ್ರವರು ಭಾವಿಸಿ ವಾದಿಸಬಹುದು. ವೀರಶೈವರಲ್ಲಿ ಅಂಥ ಪೂರ್ವಾಚಾರ್ಯರಿಗೇನೂ ಕಡಿಮೆಯಿರಲಿಲ್ಲ. ಅಘಟನಘಟನಸಾಮರ್ಥ್ಯವುಳ್ಳ ಅಂಥ ಅಗಣಿತ ಮಹಾಶರಣರ ಚರಿತ್ರಗಳಿಂದಲೇ ವೀರಶೈವರ ಅರ್ಥಗ್ರಂಥಗಳೆಲ್ಲವೂ ನಿಬಿಡವಾಗಿ, ಓದಿದ ಕೇಳಿದ ಭಕ್ತರನ್ನೆಲ್ಲಾ ಕೃತಾರ್ಥರನ್ನಾಗಿ ಮಾಡುತ್ತಿರುವುವು. ಈಗಲೂ ಅಂಥ ತಪೋಧನರು ವೀರಶೈವಮಂಡಲಿಯಲ್ಲಿ ವಿರಳರಾಗಿಯಾದರೂ ಇದ್ದೇಇರುವರು. ಮಹತ್ವಕ್ಕೂ ಭಕ್ತಿ ಜ್ಞಾನ ವೈರಾಗ್ಯ ಸಂಪತ್ತಿಗೂ ವೀರಶೈವ ಸಮಾಜವು ಅನಾದಿಯಿಂದಲೂ ವಿಖ್ಯಾತಿಗೊಂಡುದೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಯೇ ಇಲ್ಲ. ಅಂಥ ಪೂರ್ವಾಚಾರ್ಯ ವಂಶೀಯರಾದ ವೀರಶೈವ ಗುರುವರ್ಗದವರಿಗೂ ಶ್ರೀಮನ್ಮಹಾರಾಜರಿಗೆ ಆಶೀರ್ವದಿಸುವ ಹಕ್ಕು ನಡೆದೇ ಬಂದಿದೆಯೆಂಬುದನ್ನು ಆಡಿ ತೋರಿಸಬೇಕಾದುದೇನು? ಮೈಸೂರು ರಾಜವಂಶೀಯರಲ್ಲಿ ಚಿರಕಾಲಾರಭ್ಯ ಅನೇಕರು ಲಿಂಗಧಾರಿಗಳೇ; ಲಿಂಗಧಾರಿ ಜಂಗಮರ ಶಿಷ್ಯರೇ. ನಿನ್ನೆ ಮೊನ್ನೆಯವರೆಗೂ ಲಿಂಗಧಾರಿಗಳಾದ ಅರಸುಗಳನ್ನು ರಾಜಧಾನಿಯಲ್ಲೂ ಕೂಡ ಕಾಣಬಹುದಾಗಿದ್ದಿತು. ಕಾಲವೈಪರೀತ್ಯದಿಂದ ಎಷ್ಟೋ ಬದಲಾವಣೆಗಳುಂಟಾಗಿದ್ದರೂ ಗ್ರಾಮಾಂತರಗಳಲ್ಲಿರುವ ಅರಸುಮಂಡಲಿಯವರನೇಕರು ಈಗಲೂ ತಮ್ಮ ಪೂರ್ವಸಂಪ್ರದಾಯಾಚಾರವನ್ನು ಬಿಟ್ಟಿರುವುದಿಲ್ಲ. ಕಾರಣಾಂತರಗಳಿಂದ ಅನ್ಯಶಿಷ್ಯತ್ವಕ್ಕೆ ಒಳಪಟ್ಟ ಅರಸುವರ್ಗದವರಲ್ಲಿಯೂ ತಮ್ಮ ಪೂರ್ವಲಿಂಗಧಾರಿ ಸಂಬಂಧದ ವಾಸನೆಯೂ, ಸಾನುಭೂತಿಯೂ ಚಿತ್ತಾರ್ದ್ರತೆಯೂ ಅಂತರಂಗದಲ್ಲಿ ಅಳಿದಿರುವುದಿಲ್ಲ. ಹೀಗಿರುವುದರಿಂದ ಹಕ್ಕುದಾರಿಕೆಯ ಮೇಲಣ ಆಶೀರ್ವಾದದ ಪ್ರತಿಫಲವಾಗಿ ಸಂಸ್ಕೃತ ಶಾಲಾಭ್ಯಾಸಾಧಿಕಾರವು ತ್ರಿಮತ ಬ್ರಾಹ್ಮಣರಿಗೆ ಮಾತ್ರವೇ ಇರುವುದೆಂದು ಸಾಧಿಸಲು ಅವಕಾಶವೆಲ್ಲಿರುವುದು? ಆ ಅಧಿಕಾರವು ವೀರಶೈವರಿಗೂ ಇದ್ದೇ ಇರುವುದೆಂಬುದನ್ನು ಮರೆಯಬಾರದು.

ಶಾಸನೋಲ್ಲಂಘನ ಸಂಘದ ವರದಿ.

ರಾಜಕೀಯ ಶಾಸನವನ್ನುಲ್ಲಂಘಿಸಿ ಅಥವಾ ಬೇರೆತೆರದ ಸಾಧನವನ್ನುಪಯೋಗಿಸಿ ಸಹಾಯನಿರಾಕರಣವನ್ನು ಸಾಗಿಸುವ ವಿಷಯದಲ್ಲಿ ದೇಶದ ಅಭಿಪ್ರಾಯವು ಹೇಗಿರುವುದೆಂಬುದನ್ನು ತಿಳಿದು ವರದಿಮಾಡಲಿಕ್ಕಾಗಿ ಯಾವದ್ಭಾರತೀಯ ರಾಷ್ಟ್ರೀಯ ಮಹಾಸಭಾ ಸ್ಥಾಯಿಸಂಘದವರು ಒಂದು ಸಂಘವನ್ನೇರ್ಪಡಿಸಿದ್ದರು. ಈ ಸಂಘಕ್ಕೆ ಹಕೀಂ ಅಜ್ಮಲ್ ಖಾನರು ಅಧ್ಯಕ್ಷರಾಗಿಯೂ, ಪಂಡಿತ ಮೋತೀಲಾಲ್ ನೆಹ್ರೂ, ಡಾಕ್ಟರ್ ಅನ್ಸಾರಿ, ವಿ. ಜೆ. ಪಟೇಲ್, ಎಸ್. ಕಸ್ತೂರಿರಂಗಯ್ಯಂಗಾರ್, ಸಿ. ರಾಜಗೋಪಾಲಾಚಾರ್ಲು—ಇವರುಗಳು ಸಭಿಕರಾಗಿಯೂ ಗೊತ್ತುಮಾಡಲ್ಪಟ್ಟಿದ್ದರು. ಜುಲೈ ತಿಂಗಳಿಂದಲೇ ಈ ಸಂಘದವರು ಎಲ್ಲ ಪ್ರಾಂತಗಳ ಪ್ರಮುಖ ಸ್ಥಲಗಳಿಗೂ ಹೋಗಿ, ಅಲ್ಲಲ್ಲಿಯ ರಾಜಕೀಯಾಭಿಜ್ಞರುಗಳ ವಾಙ್ಮೂಲಗಳನ್ನು ಪ್ರತ್ಯಕ್ಷವಾಗಿಯೂ ಕೆಲವರ ಅಭಿಪ್ರಾಯಗಳನ್ನು ಲಿಖಿತ ಮೂಲಕವಾಗಿಯೂ ಪಡೆದು, ಕಡೆಗೆ ಕಳೆದ ತಾ|| 6 ರಲ್ಲಿ ಈ ಸಂಘದವರು ತಮ್ಮ ವರದಿಯನ್ನು ಪ್ರಕಟಿಸಿರುವರು.

ವರದಿಯನ್ನು ನೋಡುವಲ್ಲಿ ಈ ಸಂಘವು ಏರ್ಪಡದಿದ್ದರೆ ಎಷ್ಟು ಫಲವಾಗುತ್ತಿದ್ದಿತೋ ಈಗಲೂ ಅಷ್ಟೇ ಫಲವು ಸಿದ್ಧಿಸಿತೆಂದು ಹೇಳಬೇಕಾಗುವುದು. ಸರ್ವತ್ರ ಸಾರ್ವಜನಿಕ ಶಾಸನೋಲ್ಲಂಘನವನ್ನು ಮಾಡುವ ಸ್ಥಿತಿಯಲ್ಲಿ ದೇಶವು ಇನ್ನೂ ಇಲ್ಲವೆಂಬುದೇ ಸಂಘದವರ ತೀರ್ಮಾನವಾಗಿದೆ. ಇದೇನೂ ಹೊಸದಲ್ಲ. ಬರ್ಡೋಲಿಯ ಹೊರತು ಇನ್ನೆಲ್ಲೂ ಸಾರ್ವಜನಿಕ ಶಾಸನೋಲ್ಲಂಘನವು ಸಾಧ್ಯವಲ್ಲವೆಂಬ ಸಂಗತಿಯು ಮ|| ಗಾಂಧಿಯವರು ನಿರ್ಬಂಧಿತರಾಗುವುದಕ್ಕೆ ಮುಂಚೆಯೇ ಹಲವು ಸಭೆಗಳಲ್ಲಿ ನಿರ್ಣೀತವಾಗಿ, ವ್ಯಕ್ತಿಮಾತ್ರದವರೂ ಸ್ವತಂತ್ರಿಸಬೇಕಿದ್ದರೆ ಆಯಾ ಪ್ರಾಂತಿಕಸಂಘಗಳವರ ಅನುಮತಿಯ ಮೇರೆ ಶಾಸನೋಲ್ಲಂಘನವನ್ನು ಮಾಡಿಕೊಳ್ಳಬಹುದೆಂದು ನಿರ್ಧರವಾಗಿದ್ದಿತು. ಅದನ್ನೇ ಈ ಸಂಘದವರು ಪುನರಾವೃತ್ತಿಯಿಂದ ಹೇಳಿರುತ್ತಾರಲ್ಲದೆ ಮತ್ತೇನೂ ಇಲ್ಲ. ಕಾಂಗ್ರೆಸ್ಸು ನಿರ್ಧರಿಸಿ ಆಜ್ಞಾಪಿಸಿರುವ ನಿರ್ಮಾಣಕ್ರಿಯೆಯನ್ನು ಸಾಧಿಸುವುದರಲ್ಲಿ ಅಭ್ಯಂತರವುಂಟುಮಾಡಲ್ಪಟ್ಟರೆ ಅಂಥ ಅಕ್ರಮವಾದ ರಾಜ್ಯಶಾಸನವನ್ನು ಕೂಡ ಲಕ್ಷಿಸದೆ ಅತಿಕ್ರಮಿಸುವುದು ಶಾಸನೋಲ್ಲಂಘನವಾಗುವುದಿಲ್ಲವೆಂದು ಸಂಘದವರು ಅಭಿಪ್ರಾಯಪಟ್ಟಿರುತ್ತಾರೆ.

ಆದರೆ ದೇವರಿಗಿಂತ ಗರುಡಗಂಬವು ದೊಡ್ಡದು ಎಂಬ ಗಾಥೆಯಂತೆ ಈ ವರದಿಯಲ್ಲಿ ಉದ್ದಿಷ್ಟವಾಗಿದ್ದ ವಿಷಯದ ತೀರ್ಮಾನವು ಸ್ವಲ್ಪದರಲ್ಲೇ ಮುಗಿದಿದ್ದರೂ, ಅಪ್ರಕೃತವಾಗಿದ್ದ ಶಾಸನಸಭಾಪ್ರವೇಶವು ನಿರಾಕರಣವಾದಿಗಳಿಗೆ ಕೂಡದೋ ಆಗಬಹುದೋ ಎಂಬ ವಿಷಯದ ನಿರ್ಣಯಕ್ಕೆ ವಿಶೇಷ ಸ್ಥಲವು ಕೊಡಲ್ಪಟ್ಟಿರುತ್ತದೆ. ಈ ವಿಷಯದಲ್ಲಿ ಶಾಸನಸಭೆಗಳಿಗೆ ಸಭಿಕರಾಗಿ ಸೇರಿ ಕೆಲವು ರೀತಿಯಿಂದ ನಿರೋಧಕ್ರಿಯೆಗಳನ್ನಾಚರಿಸಿ ಅದರ ಮೂಲಕ ತಮ್ಮ ಸಹಾಯನಿರಾಕರಣ ತತ್ತ್ವವನ್ನು ಸಾಗಿಸಿ, ಸಂಸ್ಕರಣವನ್ನು ನಿಷ್ಫಲಗೊಳಿಸಬಹುದೆಂಬುದಾಗಿ, ಹಕೀಂ ಅಜ್ಮಲ್ ಖಾನ್, ಪಂಡಿತ ಮೋತೀಲಾಲ್ ನೆಹ್ರೂ, ವಿ. ಜೆ. ಪಟೇಲ್ ಈ ಮೂವರೂ ಅಭಿಪ್ರಾಯಕೊಟ್ಟಿರುವರು. ನಿರಾಕರಣ ವಾದಿಗಳಿಗೆ ಶಾಸನಸಭಾ ಪ್ರವೇಶವೇ ಸುತರಾಂ ಕೂಡದೆಂಬ ವಿಷಯಕ್ಕೆ ಡಾಕ್ಟರ್ ಅನ್ಸಾರಿ, ಕಸ್ತೂರಿರಂಗಯ್ಯಂಗಾರ್, ಸಿ. ರಾಜಗೋಪಾಲಾಚಾರ್ಲುಯವರು—ಈ ಮೂವರೂ ಅನುಮೋದನೆಕೊಟ್ಟಿರುವರು. ಹೀಗಾಗಿ ಈ ವಿಷಯದಲ್ಲಿ ಸಂಘವು ಇತ್ತಂಡವಾಯಿತು. ಪಾಟ್ನಾನಗರದಲ್ಲಿ ಕಳೆದ ಆಗಸ್ಟ್ ತಾ|| 16 ರಲ್ಲಿ ಸಭೆಗೂಡಿದ್ದಾಗ ಶಾಸನಸಭಾ ಪ್ರವೇಶ ವಿಷಯದಲ್ಲಿ ಈ ಸಂಘ ಸಭಿಕರೊಳಗೆ ಒಬ್ಬರ ಹೊರತು ಇತರರಾರೂ ಸಂಮತಿಯುಳ್ಳವರಾಗಿರಲಿಲ್ಲವಂತೆ. ಆದರೆ ಅಕ್ಟೋಬರ್ ತಿಂಗಳಲ್ಲಿ ದಿಲ್ಲಿಯಲ್ಲಿ ಈ ಸಂಘದವರು ಸಭೆಗೂಡಿಸಿದಾಗ್ಗೆ ಮಾತ್ರ ಅಜ್ಮಲ್ ಖಾನರೂ ನೆಹ್ರೂರವರೂ ಕೂಡ ಇದೇ ಅಭಿಪ್ರಾಯಕ್ಕೆ ಒಲಿದಂತೆ ಕಂಡುಬಂದರು. ಹೀಗೆ ನಿರಾಕರಣವಾದಿಗಳೊಳಗೆ ಶಾಸನಸಭಾ ಪ್ರವೇಶವು ಅವಶ್ಯಕವೆಂಬುದಾಗಿ ಹೋರಾಡತಕ್ಕವರು ಈ ಸಂಘದ ಮೂವರೇ ಅಲ್ಲ, ಮರಾಟಾದೇಶದಲ್ಲೂ ಮದ್ರಾಸುಪ್ರಾಂತದಲ್ಲೂ ಉಳಿದ ಕಡೆಯಲ್ಲೂ ಹಲವರು ಕಾಣಿಸಿಕೊಂಡಿರುತ್ತಾರೆ. ಪಾರ್ಲಿಮೆಂಟಿನಲ್ಲಿ ಮಿ|| ಲಾಯಿಡ್ ಜಾರ್ಜರು ಭಾರತಶಾಸನ ಸಭೆಗಳನ್ನು ನಿರಾಕರಣವಾದಿಗಳು ಆಕ್ರಮಿಸಿಕೊಂಡು ತೊಡಕನ್ನೊಡ್ಡುವರೆಂಬ ಭವಿಷ್ಯದ್ಭಯವನ್ನು ತೋರ್ಪಡಿಸಿದ ಬಳಿಕ ಈ ದೇಶದಲ್ಲಿ ಈ ತೆರದ ಅಭಿಪ್ರಾಯವು ಬಳೆಯುವುದಕ್ಕೆ ಅವಕಾಶವಾಗಿರಬೇಕೆಂದು ತೋರುತ್ತದೆ. ಆದರೆ ಮ|| ಗಾಂಧಿ ಲಜಪತರಾಯಿ ಮೊದಲಾದನೇಕರು ಎಂದೆಂದಿಗೂ ಶಾಸನಸಭಾ ಪ್ರವೇಶವು ಕೂಡದೆಂದೂ, ಅದರಿಂದ ಸರ್ಕಾರಕ್ಕೆ ಯಾವ ಬಿಕ್ಕಟ್ಟನ್ನು ಉಂಟುಮಾಡಲೂ ಸಾಧ್ಯವಲ್ಲವೆಂದೂ, ಸಭೆಗೆ ಪ್ರವೇಶಿಸಿದ ನಿರಾಕರಣವಾದಿಗಳೂ ಕೂಡ ಮಿತವಾದಿಗಳಾಗಿಯೇ ಪರಿಣಮಿಸಬೇಕಾಗುವುದೆಂದೂ ಖಂಡಿತವಾಗಿ ಹೇಳಿಬಿಟ್ಟಿರುತ್ತಾರೆ. ಈಗ ಈ ಸಂಘದವರ ಮುಂದೆ ವಾಙ್ಮೂಲಕೊಟ್ಟವರಲ್ಲೂ ಶಾಸನಸಭಾಪ್ರವೇಶವು ಕೂಡಲೇಕೂಡದೆಂದು 302 ಮಂದಿಗಳು ಸಾಕ್ಷ್ಯಕೊಟ್ಟರೆಂದೂ, ಉಳಿದ 163 ಮಂದಿಗಳಲ್ಲಿ 15 ಮಂದಿ ಮಾತ್ರವೇ ತೊಡಕನ್ನೊಡ್ಡುವುದಕ್ಕೆ ಮಾತ್ರ ನಿರಾಕರಣವಾದಿಗಳು ಶಾಸನಸಭೆಗಳನ್ನು ಪ್ರವೇಶಮಾಡಬಹುದೆಂತಲೂ ಉಳಿದವರು-ಶಾಸನಸಭೆಗೆ ಮೆಂಬರಾಗಿ ಸೇರಬೇಕು, ಸಭೆಗಳಿಗೆ ಮಾತ್ರ ಹೋಗಬಾರದೆಂದೂ, ಸಭೆಯಲ್ಲಿ ದೇಶಹಿತ ವಿಷಯವು ತೀರ್ಮಾನಕ್ಕೆ ಬಂದರೆ ಅನುಮತಿಕೊಟ್ಟು ಉಳಿದ ವಿಷಯಕ್ಕೆ ಪ್ರತಿಷ್ಟಂಭನವನ್ನು ಮಾಡಬೇಕೆಂದೂ, ಸಭಾಸ್ಥಾನಗಳನ್ನೆಲ್ಲಾ ನಿರಾಕರಣವಾದಿಗಳೇ ಆಕ್ರಮಿಸಿ ಕಡೆಗೆ ಸಭೆಯು ನೆರವೇರಲಿಕ್ಕೆ ನಿರ್ಣೀತವಾದಷ್ಟು ಜನರೂ ಕೂಡ ಸೇರದೆ ಸಭೆಯನ್ನು ವ್ಯರ್ಥಗೊಳಿಸಬಹುದೆಂದೂ ಮೊದಲಾಗಿ ಚಿತ್ರವಿಚಿತ್ರವಾದ ಅಭಿಪ್ರಾಯಗಳಿಂದ ಸಾಕ್ಷ್ಯಗಳನ್ನು ಕೊಟ್ಟಿದ್ದಾರೆ. ಅಂತೂ ಹೀಗೆ ಅಭಿಪ್ರಾಯಪಟ್ಟಿರುವವರು ಕೂಡ ಅರ್ಧಭಾಗಕ್ಕಿಂತಲೂ ಕಡಿಮೆಯಾಗಿಯೇ ಇರುವರೆಂದು ವರದಿಯಿಂದ ವ್ಯಕ್ತವಾಗಿರುವುದನ್ನು ನೋಡಿದರೂ ಕೂಡ ಶಾಸನಸಭಾ ಪ್ರವೇಶಕ್ಕೆ ಒಪ್ಪದಿರುವವರೇ ಅವರಲ್ಲಿ ಹೆಚ್ಚಾಗಿರುವರೆಂದು ಕಾಣುತ್ತದೆ.

ಸಂಘದವರು ತಮ್ಮ ವರದಿಯಲ್ಲಿ ಇನ್ನು ಕೆಲ ವಿಷಯಗಳನ್ನು ಕುರಿತು ಕೂಡ ಅಭಿಪ್ರಾಯಕೊಟ್ಟಿರುತ್ತಾರೆ. ಸರ್ಕಾರಿ ಶಾಲೆಗಳ ಬಹಿಷ್ಕಾರ, ಕೋರ್ಟು ಕಚೇರಿಗಳ ಬಹಿಷ್ಕಾರ ಈ ಪ್ರಯತ್ನಗಳು ಧನ ಸಾಹಾಯ್ಯಾಭಾವದ ಮೂಲಕ ಅಪಜಯಗೊಂಡುವೆಂಬುದನ್ನು ಒಪ್ಪಿಕೊಂಡರೂ, ಅವುಗಳ ಬಹಿಷ್ಕರಣ ವಿಷಯದಲ್ಲಿ ಕಾಂಗ್ರೆಸ್ಸು ಮಾಡಿರುವ ಆಜ್ಞೆಯನ್ನು ಮಾತ್ರ ಸಾಗಿಸಲೇಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. ಈ ವರದಿಯ ಮೇಲೆ ಸ್ಥಾಯಿಸಂಘದವರೂ ರಾಷ್ಟ್ರೀಯಮಹಾಸಭೆಯವರೂ ಹೇಗೆ ಅಭಿಪ್ರಾಯಪಡುವರೋ ಅದನ್ನು ಮುಂದೆ ತಿಳಿಯಬೇಕು. ಅಂತು ನಿರಾಕರಣವಾದಿಗಳಲ್ಲೂ ಏಕಮುಖವಿಲ್ಲದ ಶೈಥಿಲ್ಯವು ಹೆಚ್ಚುತ್ತಿದೆಯೆಂಬ ಸಂಗತಿಯು ಮಾತ್ರ ಈ ವರದಿಯಿಂದ ಚೆನ್ನಾಗಿ ಸಿದ್ಧವಾಯಿತು.

ವೀರಶೈವ ಮಹಾಸಭೆ.

ಧಾರವಾಡ ಜಿಲ್ಲಾ ಹಂಸಭಾವಿಯಲ್ಲಿ ಮಹಾಸಭೆಯನ್ನು ನೆರೆಯಿಸುವ ಸಂಗತಿಯೇನೆಂಬುದನ್ನು ಕುರಿತು ಅಲ್ಲಿಂದ ಬಂದಿರುವ ಪತ್ರವನ್ನು ಈ ಸಂಚಿಕೆಯ ಬೇರೆಕಡೆಯಲ್ಲಿ ಮುದ್ರಿಸಿರುತ್ತೇವೆ. ಅದನ್ನು ನೋಡುವಲ್ಲಿ ಈ ವರ್ಷ ಯಾವೆಡೆಯಲ್ಲೂ ಮಹಾಸಭೆಯು ಕೂಡುವ ಹಾಗಿಲ್ಲವೆಂದು ಸಿದ್ಧವಾಯಿತು. ಈ ಡಿಶಂಬರಿನಲ್ಲೇ ಮಹಾಸಭೆಯನ್ನು ನೆರೆಯಿಸುವ ಸಿದ್ಧತೆಯನ್ನು ಹಂಸಭಾವಿಯ ವೀರಶೈವ ಮಹಾಜನರು ಮಾಡಿಕೊಂಡಿರಬಹುದೆಂಬ ನಂಬುಗೆಯಿಂದಲೇ ರಾಜಧಾನಿಯ ಮಹಾಜನರು ಅವರ ಇಷ್ಟದ ಪ್ರಕಾರ ಸಭಾಕಾರ್ಯವನ್ನು ನೆರೆಯಿಸಲು ಅವರಿಗೆ ವಹಿಸಿಕೊಟ್ಟರು. ಈ ವರ್ಷ ನಡೆಯಿಸಲು ಅವರಿಗೆ ಸಾಧ್ಯವಲ್ಲವೆಂಬುದನ್ನು ಅವರು ಮೊದಲೇ ನಿಶ್ಚಯಿಸಿದ್ದರೆ, ಚಿರಸ್ಥಾಯಿಫಂಡ್ ಅಧ್ಯಕ್ಷರವರಿಗೂ ಮೈಸೂರಿನವರಿಗೂ ಪತ್ರವನ್ನು ಅವಸರದಲ್ಲಿ ಬರೆಯಬೇಕಾದ ಅವಶ್ಯಕತೆಯಿರಲಿಲ್ಲ. ಇದು ಮೊದಲೇ ತಿಳಿದಿದ್ದರೆ ರಾಜಧಾನಿಯವರೇ ತೀವ್ರಪ್ರಯತ್ನದಿಂದ ಹೇಗಾದರೂ ಈ ಡಿಶಂಬರಿನಲ್ಲೇ ಸಭೆಯನ್ನು ನೆರೆಯಿಸಲು ಸಿದ್ಧರಾಗೇ ಆಗುತ್ತಿದ್ದರು. ಈಗ ಅದಕ್ಕೂ ಕಾಲ ಮಿಂಚಿತು. ಮುಂದಣವರ್ಷದ ಡಿಶಂಬರ್ ತಿಂಗಳಲ್ಲಿ ರಾಜಧಾನಿಯಲ್ಲಿ ಮಹಾಸಭೆಯನ್ನು ಕೂಡಿಸಬೇಕೆಂಬ ಇಲ್ಲಿಯವರ ಮನೋನಿಶ್ಚಯಕ್ಕೆ ವಿಕಲ್ಪವು ಬರಬಾರದು. ಹಂಸಭಾವಿಯವರು ಮುಂದಣ ಮೇ ತಿಂಗಳಲ್ಲಿ ಕೂಡಿಸುವುದೋ ಅಥವಾ ಆ ಸ್ಥಲದಲ್ಲೇ ತಪ್ಪಿ ಬೇರೆಕಡೆಯವರು ನಡೆಯಿಸುವುದೋ ಎಂಬ ಸಂಗತಿಯು ಕೂಡ ಇನ್ನೂ ದೃಢಪಟ್ಟಿಲ್ಲ. ಹೀಗಿರುವಾಗ, ಮೇ ತಿಂಗಳಲ್ಲಿ ಕೂಡಿಸಿದರೆ ಡಿಶಂಬರ್ ತಿಂಗಳಲ್ಲೂ ಮತ್ತೊಂದುಸಲ ಸಭೆ ಕೂಡಿಸುವುದು ಅನವಶ್ಯಕ. ಅಲ್ಲದೆ ಮೇ ತಿಂಗಳು ಲಗ್ನಗಳ ಕಾಲವಾದುದರಿಂದ ಮಹಾಸಭೆಗೆ ಬರಲು ಬಹುಜನಕ್ಕೆ ಅನನುಕೂಲವಾಗುತ್ತದೆ; ಅಲ್ಲದೆ ಎಲ್ಲ ಪ್ರಾಂತದವರಿಗೂ ಕೋರ್ಟು ಕಚೇರಿಗಳ ರಜಾ ಕಾಲವು ಆಗಲೇ ಒದಗುವುದೂ ಸಂದೇಹ. ಈ ಕಾರಣದಿಂದಲೇ ಹಿಂದಣ 9 ಸಭೆಗಳಲ್ಲಿ ಯಾವೊಂದು ಸಭೆಯೂ ಕೂಡ ಡಿಶಂಬರಿನ ಹೊರತು ಬೇರೆ ತಿಂಗಳಲ್ಲಿ ನೆರೆದಿಲ್ಲ. ಅದುಕಾರಣ, ಹಂಸಭಾವಿಯವರೇ ಆಗಲೀ ಮತ್ತಾರೇ ಆಗಲೀ ಈಗ ಮಿಂಚಿಹೋದುದಕ್ಕೆ ಚಿಂತಿಸದೆ ಮುಂದಣವರ್ಷದ ಡಿಶಂಬರಿನಲ್ಲಿ ರಾಜಧಾನಿಯಂಥ ಮುಖ್ಯಸ್ಥಲದಲ್ಲಿ ಮಹಾಸಭೆ ಕೂಡಲು ಅವಕಾಶವನ್ನು ಕೊಡುವುದೇ ಯುಕ್ತವಾಗಿರುತ್ತದೆ. ಈ ವಿಷಯವಾಗಿ ರಾಜಧಾನಿಯ ವೀರಶೈವ ಮಹಾಜನರಾದರೂ ಸಭಾಮೂಲಕ ನಿರ್ಧರಿಸಿ ತಮ್ಮ ಸಂಕಲ್ಪವನ್ನು ಹಂಸಭಾವಿ ಮೊದಲಾದ ಕಡೆಯ ಅಭಿಮಾನಿಗಳಿಗೆ ಶ್ರುತಪಡಿಸುವುದು ಕೂಡ ಅವಶ್ಯಕವಾಗಿರುತ್ತದೆ.

WATER SUPPLY SCHEMES.

In his opening address delivered at the Dasara Session of the Mysore Representative Assembly this year, the Dewan referred to his recent tour in the Kolar, Tumkur and Chitaldrug districts and to the demand made in all the three places for proper up-to-date water supply schemes, and expressed the intention of the Government to take those questions on hand at an early date. If the Dewan goes out on tour to other districts he will find that the cry for proper drinking water facilities is fairly general among all the important municipal bodies. The Dewan also stated that projects for water supply schemes for 18 towns were prepared and four important schemes were already in execution. It would be interesting to know how long the projects have been ready and awaiting execution. The grievance for proper water supply facilities has been a long and general one in urban as well as in rural areas and we are thankful to the Dewan for having taken up this question in earnest.

Looking back upon the activity of the Department concerned in this important matter some conspicuous defects are noticeable. It is not that they did not make any endeavour at all to satisfy the needs of various demands in this direction. Sir K. Seshadri Iyer had turned his eyes to this question also and having a separate Sanitary Engineering department worked out some schemes. Water Supply was given to the towns of Nanjangud, Closepet, Chickmagalur, Kolar and Hunsur and a few other places. There was a good outlay of capital. But unfortunately these schemes did not last long, due partly to defective construction and mainly to lack of proper supervision. Even in the case of Bangalore and Mysore the old sand filters had to be replaced by new mechanical filters. Construction and maintenance of filters if we rightly understand is a highly specialised form of Engineering and the failure of the above schemes is to be ascribed to entrusting this work to ordinary civil engineers of P. W. D. instead of to experts. In British India, they more or less passed through the same stage and having gained experience have very rightly specialised the department and made it independent. The second main cause for the failure of those schemes is the handing over of the works to the respective municipalities for maintenance without any effective control over the same. It could have been evident to the Government that these works of a specialised nature could not be left to the hands of the municipalities without seriously handicapping them for want of expert advice and without the danger of the plants being misused and becoming unfit after a time. This is what exactly happened in all the above cases, and now the Government have to shell out further contributions in order redo the same thing. There is absolutely no reason why the Government should contribute twice over to the same municipality for the same work, and deprive thereby other municipalities who have had no water supply at any time from getting their share of State aid. It is better if the Government bear in mind this supreme fact for otherwise the fate of those new works under construction or to be constructed will be the same. The Dewan has stated in the above address that the maintenance charges of the water supply schemes of Bangalore and Mysore have to be met hereafter from the Municipal Councils themselves which is quite in consonance with the spirit of Local Self-Government, and this policy we believe will also be adopted in the case of the schemes to other minor municipalities.

The responsibility of the Government does not rest in the mere giving of good water supply scheme but also in seeing that the plants are preserved to their full life. Construction no doubt is very important and necessarily involves special knowledge and care and since no stereotyped model will suit all conditions, particular schemes have to be devised for different places. The essential thing, however, is a well-defined system whereby the various water supply installations would be under the supervision of one directing head, who should be a full time specialist. That is the only way open if efficiency and economy are to be maintained in this branch. Past history shows how the water supply schemes have suffered for being under the P. W. D. Sanitary Engineering is as much a special branch of Engineering as either Electrical or Mechanical, and its irresponsible grouping with civil engineering only results in endless troubles to municipalities and enormous waste of public funds. The Dewan's anxiety to meet the needs of the people in the matter of water supply augurs well for their future and we welcome his line of policy as indicated in his address. We only hope that he will lead it on to its logical conclusion and make Sanitary Engineering a special department with full responsibilities to investigate, construct and supervise all water supply schemes in the State.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸಾರ್ವತ್ರಿಕ ವಿಷಯಗಳು.

(ಹಿಂದಣಶೇಷ. ರೆವಿನ್ಯೂ)

ಅ—ಚಿಕ್ಕ ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ರೈತರು ಕೊಡಬೇಕಾಗಿರುವ ಕಂಟ್ರಿಬ್ಯೂಷನ್ ಹಣವನ್ನು $\frac{1}{3}$ ಭಾಗದಿಂದ $\frac{1}{4}$ ಭಾಗಕ್ಕೆ ತಗ್ಗಿಸಲು ಸರ್ಕಾರದವರು ಕೊಟ್ಟಿರುವ ಅಪ್ಪಣೆಯನ್ನು ಬಳಕೆಗೆ ತರಬೇಕು. ಮತ್ತು ಚಿಕ್ಕದು ದೊಡ್ಡದು ಎಂಬ ಭೇದವನ್ನು ತಪ್ಪಿಸಿ ಎಲ್ಲ ಕೆರೆಗಳನ್ನೂ ಒಂದೇ ತೆರದ ನಿಬಂಧನೆಗೆ ಒಳಪಟ್ಟಿರುವಂತೆ ಮಾಡಬೇಕು.

ಉ—ಇದಕ್ಕೆ ತಕ್ಕ ರೂಲ್ಸನ್ನು ಮಾಡುತ್ತಿದ್ದೇವೆ.

ಅ—ಕೆರೆಗಳ ಜೀರ್ಣೋದ್ಧಾರದ ಕೆಲಸವನ್ನು ರೈತರಿಂದ ಕಂಟ್ರಿಬ್ಯೂಷನ್ ಪೂರ್ತಾ ವಸೂಲಾಗಲಿಲ್ಲವೆಂಬ ಕಾರಣದಿಂದ ನಿಲ್ಲಿಸದೆ ಸಾಗಿಸಿಬಿಟ್ಟು, ಬಳಿಕ ರೈತರಿಂದ ಬರಬೇಕಾದ ಕಂಟ್ರಿಬ್ಯೂಷನ್ ಹಣವನ್ನು ಕಂದಾಯದ ವಸೂಲಿಯಂತೆ ಬರಮಾಡಿಕೊಳ್ಳಬೇಕು.

ಉ—ನಿರ್ಬಂಧದ ಅಪ್ಪಣೆಯನ್ನು ಕೊಟ್ಟ ಬಳಿಕ ವಸೂಲಾಗಬೇಕಾದ ಕಾಲಪರಿಮಿತಿಯನ್ನೂ ಗೊತ್ತುಮಾಡುತ್ತೇವೆ.

ಅ—ಜೋಡಿಗ್ರಾಮಗಳಲ್ಲಿರುವ ಚಿಕ್ಕಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಸರ್ಕಾರದವರು ಕಂಟ್ರಿಬ್ಯೂಷನ್ ಹಣದಲ್ಲಿ ತಮ್ಮ ಪಾಲನ್ನು ಕೊಟ್ಟು ಸರ್ಕಾರಿ ಪಕ್ಷದಿಂದಲೇ ಅಂದಾಜು ತಯಾರ್ಮಾಡಿಸಬೇಕು.

ಉ—ಇನಾಂ ಕಮಿಷನರ್ ರಿಪೋರ್ಟು ವಿಚಾರಮಾಡು ವಾಗ್ಗೆ ಇದನ್ನೂ ಪರ್ಯಾಲೋಚಿಸುತ್ತೇವೆ.

ಆ—ದೊಡ್ಡ ಕೆರೆಗಳ ಮಟ್ಟಿ ಕಾಮಗಾರಿಯು ಸರಿಯಾಗಿ ನಡೆಯುವ ಬಗೆಗೆ ಆಯಾ ಕೆರೆಗಳ ಮಿಾನು ಹಿಡಿಯುವ ಮತ್ತು ದನ ಮೇಯಿಸುವ ಹಕ್ಕನ್ನು ಹರಾಜುಮಾಡಿ ಆ ಹುಟ್ಟುವಳಿಯಿಂದ ಸಾಲಾಬಾದ್ ಕಾಮಗಾರಿ ಮಾಡಿಸಬೇಕು. ಅದು ಸಾಲದೆಹೋದರೆ ಸರ್ಕಾರದಿಂದ ಹಾಕಿ ಮಾಡಿಸಬೇಕು.

ಉ—ಗುರ್ತುಮಾಡಿಕೊಂಡಿದ್ದೇವೆ.

ಆ—ಸಾಗುವಳಿಯ ಭೂಮಿಗಳಲ್ಲಿ ಮನೆಗಳನ್ನು ಕಟ್ಟಕೂಡದೆಂಬ ನಿರ್ಬಂಧವಿಧಿಯನ್ನು ತಪ್ಪಿಸಬೇಕು.

ಉ—ನೋಡುತ್ತೇವೆ.

ಆ—ಹಿಡುವಳಿಯ ಭೂಮಿಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಲೈಸೆನ್ಸ್ ಕೊಡುವ ಅಧಿಕಾರವನ್ನು ಅಮಲ್ದಾರರಿಗೆ ಕೊಡಬೇಕು.

ಉ—ಯೋಚಿಸುತ್ತೇವೆ.

ಆ—ಸರ್ಕಾರಿ ಹರಾಜಿನಿಂದ ವಶವಾದ ಅಥವಾ ಸಿವಿಲ್ ಡೀಡ್ ಮೂಲಕ ಅಧೀನವಾದ ಇನಾಮತಿಗಳಿಗೆಲ್ಲಾ ಅನುಭವದಾರರ ಹೆಸರಿಗೆ ಟೈಟಲ್‌ಡೀಡ್ ಮಾಡಿಸಬೇಕು.

ಉ—ಪರ್ಯಾಲೋಚಿಸುತ್ತೇವೆ.

ಆ—ದೇವಾದಾಯ ಬ್ರಹ್ಮಾದಾಯದ ಜಮೀನುಗಳನ್ನು ಸರಿಯಾಗಿ ಗುರ್ತಿಸುವುದಕ್ಕಾಗಿ ಪ್ರತ್ಯೇಕಿಸಿ ಬೇರೆ ಬೇರೆ ಸರ್ವೆನಂಬರುಗಳನ್ನಾಗಿ ಮಾಡಬೇಕು.

ಉ—ಸರ್ಕಾರದ ನೋಟೀಸಿಗೆ ತಂದರೆ ವಿಚಾರಮಾಡಿ ಪ್ರತ್ಯೇಕಿಸಿ ಕೊಡುತ್ತೇವೆ. ಮತ್ತು ಈ ವಿಷಯವಾಗಿ ಜನರಲ್ ಆರ್ಡರನ್ನೂ ಕೊಡುತ್ತೇವೆ.

ಆ—ವರ್ಷವರ್ಷ ಹಂಗಾಮಿ ನೀರು ಸರದಿಯನ್ನು ಗೊತ್ತುಮಾಡುವ ಪದ್ಧತಿಯನ್ನು ತಪ್ಪಿಸಿ ಕಾಲಪರಿಮಿತಿಯನ್ನು ೫ ವರ್ಷಗಳಿಗೆ ಏರಿಸಬೇಕು. ಉ—ಸಾಧ್ಯವಲ್ಲ.

ಆ—ವ್ಯವಸಾಯ ಶಾಖೆಗಾಗಿ ಎಷ್ಟೋ ಖರ್ಚು ಮಾಡಲ್ಪಡುತ್ತಿದೆ. ಆದರಿಂದ ಅಷ್ಟು ಫಲವಾಗುತ್ತಾ ಇಲ್ಲ. ಬೇಸಗೆ ಕಾಲದಲ್ಲಿ ನಾಲೆಗಳಲ್ಲಿ ನೀರು ಹಾಯಿಸಿ ಕೊಡಲಿಕ್ಕೆ ಎಕರೆ 1 ಕ್ಕೆ 1 ರೂ.ನಂತೆ ತೆಗೆದುಕೊಳ್ಳುತ್ತಿರುವುದನ್ನು ತಪ್ಪಿಸಿ ಉಚಿತವಾಗಿ ಕೊಡುವ ಏರ್ಪಾಟು ಮಾಡಿದರೆ ಬೇಸಾಯಗಾರರಿಗೆ ಬಹಳ ಉಪಕಾರಮಾಡಿದ ಹಾಗಾಗುತ್ತದೆ. ಮಾರ್ಚಿ ಏಪ್ರಿಲ್ ತಿಂಗಳಲ್ಲಿ 1 ವಾರ ನೀರು ಕೊಟ್ಟರೆ ಸಾಕು.

ಉ—ಆಲೋಚಿಸಿ ಕೊಡಿಸುತ್ತೇವೆ.

ಆ—ದೊಡ್ಡ ಭೂಸ್ವತ್ತಿಗಳಿಗಾಗಿ ಬರುವ ದರಖಾಸ್ತುಗಳ ವಿಲೇವಾರಿ ಮಾಡುವಾಗ್ಗೆ ಮೊದಲನೆ ದರಖಾಸ್ತುದಾರನಿಗೇ ಪ್ರಾಶಸ್ತ್ಯ ಕೊಡಬೇಕು. ಅಂಥ ಭೂಮಿಗಳನ್ನು ಹರಾಜು ಮಾಡಲು ಅಪ್ಪಣೆಕೊಡಬಾರದು, ಮತ್ತು ಇತರ ವಿಧವಾಗಿಯೂ ವಿಲೆಮಾಡಬಾರದು. ಬಳಿಕ ಅದೇ ಭೂಮಿಯನ್ನು ಹಿಡುವಳಿದಾರರು ಪೋಡುಮಾಡಿಸಿ ಕೊಡಬೇಕೆಂದು ಕೇಳಿಕೊಂಡರೂ ಹಾಗೆ ಮಾಡಕೂಡದು.

ಉ—ಈ ವಿಷಯವು ಪರ್ಯಾಲೋಚನೆಯಲ್ಲಿದೆ.

ಆ—ಕೆರೆ ಅಂಗಳಗಳಿಗೆ ಸೇರಿದ ಖರಾಬ್ ಮತ್ತು ಗೋಮಾಳದ ಭೂಮಿಗಳನ್ನು ಸಾಗುವಳಿಗೆ ಕೊಟ್ಟರೆ ಕೆರೆಯಲ್ಲಿ ಹೂಳು ತುಂಬಿಹೋಗುವುದಾದ ಕಾರಣ ಸಾಗುವಳಿಗೆ ಕೊಡಬಾರದು.

ಉ—ಜನರಲ್ ರೂಲು ಮಾಡಲಾಗುವುದಿಲ್ಲ. ಸ್ಪೆಷಲ್ ಕೇಸುಗಳಿದ್ದು ತಿಳಿಸಿದರೆ ವಿಚಾರಮಾಡುತ್ತೇವೆ.

ಆ—4½ ಲಕ್ಷ ಎಕರೆಯಷ್ಟು ವಿಸ್ತೀರ್ಣವಾದ ಭೂಮಿಗಳನ್ನು ಅಮೃತಮಹಲ್ ಇಲಾಖೆಗೆ ಕೊಡೋಣವಾಗಿದೆ. ಇಷ್ಟನ್ನು ಉಪಯೋಗಿಸಿಕೊಳ್ಳಲಿಕ್ಕೆ 1 ಸಾವಿರ ರಾಸುಗಳು ಮಾತ್ರ ಇರುತ್ತವೆ. ಈ ಶಾಖೆಯಿಂದ ವರ್ಷಕ್ಕೆ 7000 ರೂ.ಗಳಷ್ಟು ಕನಿಷ್ಠ ವರಮಾನವಾಗುತ್ತಿದೆ. ಆದರೆ ಆಗುತ್ತಿರುವ ವ್ಯಯವು ಮಾತ್ರ ಅಧಿಕವಾಗಿದೆ. ಅಲ್ಲದೆ ಬ್ರಿಟಿಷ್ ಸರ್ವೀಸಿಗೆ ಈ ಶಾಖೆಯಿಂದ ಎತ್ತುಗಳನ್ನು ಒದಗಿಸುವುದೂ ತಪ್ಪಿಹೋಗಿದೆ. ಆದುಕಾರಣ ಈ ಶಾಖೆಯ ವಶದಲ್ಲಿರುವ ಬಹುಭಾಗ ಭೂಮಿಯನ್ನು ಹರಾಜುಹಾಕಿಸಿ ಸಾಗುವಳಿಗೆ ಕೊಟ್ಟರೆ ಬಹುಶಃ 1 ಕೋಟಿ ರೂ.ಗಳ ವರಮಾನ ಬರುವುದಲ್ಲದೆ ವರ್ಷ 1 ಕ್ಕೆ ಅವುಗಳ ಸಾಗುವಳಿಯಿಂದ ಸರ್ಕಾರಕ್ಕೆ 10 ಲಕ್ಷ ರೂ. ಗಳು ಕಂದಾಯದ ರೂಪದಿಂದಲೂ ಆದಾಯವಾಗುತ್ತದೆ.

ಉ—ಸರ್ಕಾರದವರು ಅಜಮಾಯಿಷಿ ಮಾಡಿಸುತ್ತಿದ್ದಾರೆ. ಮತ್ತು ಈಗಾಗಲೇ ಅಮೃತಮಹಲ್ ಶಾಖೆಯಿಂದ ಕೆಲವು ಭೂಮಿಗಳನ್ನು ರೆವಿನ್ಯೂ ಶಾಖೆಗೆ ವಹಿಸಿಕೊಟ್ಟಿದ್ದಾರೆ. ಸಾಗುವಳಿಗೆ ಅನುಕೂಲಿಸತಕ್ಕ ಉಳಿದ ಅಮೃತಮಹಲ್ ಶಾಖಾ ಭೂಮಿಗಳನ್ನೂ ಗೊತ್ತುಮಾಡಿ ವರದಿಮಾಡಲಿಕ್ಕಾಗಿ ಒಂದು ಕಮಿಟಿಯನ್ನು ಕೂಡ ಏರ್ಪಡಿಸಿದೆ.

(ಮೆಂಬರು-ಕಮಿಟಿಯವರು ಆಯಾ ಸ್ಥಳದ ಪ್ರೈವೇಟ್ ಜನರನ್ನು ಸೇರಿಸಿಕೊಂಡು ವಿಚಾರಮಾಡುವಂತೆ ಆಗಬೇಕು. ಸರ್ಕಾರ-ನಾವು ನಿಮ್ಮ ಪರವಾಗಿ ಸರಿಯಾಗಿ ಕೆಲಸಮಾಡುತ್ತೇವೆಂಬಲ್ಲಿ ನೀವು ಧೈರ್ಯವಾಗಿರಬಹುದು.)

ಆ—ಪ್ರತಿ ಜಮೀನಿಗೂ ಗೊಬ್ಬರಗೋಡು ಸಾಗಿಸೋಗಲೂ ಸ್ವತಂತ್ರವಾದ ದಾರಿಗಳಿರುವಂತೆ ಪ್ರತಿ ಹಿಡುವಳಿಯಲ್ಲಿಯೂ ತರಿಜಮೀನಾದರೆ 3 ಎಕರೆಗೆ ಕಡಿಮೆಯಿಲ್ಲದಂತೆಯೂ ಖುಷ್ಕಿಯಾದರೆ 5 ಎಕರೆಗಿಂತ ಕಡಿಮೆಯಿಲ್ಲದಂತೆಯೂ ಜಮೀನುಗಳನ್ನು ಪ್ರತ್ಯೇಕಿಸಿ ಆಯಾ ಹಿಡುವಳಿಯ ಸುತ್ತಲೂ ಬೇಲಿಹಾಕಿಸಿ ಈ ರೀತಿಯಲ್ಲಿ "ಕನ್ಸಾಲಿಡೇಷನ್ ಆಫ್ ಅಗ್ರಿಕಲ್ಚರಲ್ ಹೋಲ್ಡಿಂಗ್ ಆಕ್ಟನ್ನು" ನಮ್ಮ ಸಂಸ್ಥಾನದಲ್ಲಿ ಬಳಕೆಗೆ ತರಬೇಕು.

ಉ—ಇಂಡ್ಯಾದೇಶದಲ್ಲಿ ಹೀಗೆಮಾಡುವುದು ಸಾಧ್ಯವಲ್ಲ.

ಆ—ಆಯಾ ಭೂಮಿಗಳ ಹಕ್ಕುಗಳನ್ನು ರಿಕಾರ್ಡ್ ಮಾಡಿಡುವ ಪದ್ಧತಿಯನ್ನು ವ್ಯವಹಾರಕ್ಕೆ ತರಬೇಕು.

ಉ—ಇದಕ್ಕಾಗಿ ಪ್ರತ್ಯೇಕ ಡಿಪಾರ್ಟ್‌ಮೆಂಟನ್ನೇ ಏರ್ಪಡಿಸಬೇಕಾಗುತ್ತದೆ. ಈಗ ಸಾಧ್ಯವಲ್ಲ.

ಆ—ತಂತಮ್ಮ ಅನುಭವದಲ್ಲಿರುವ ಭೂಮಿಗಳ ಕಂದಾಯವನ್ನು ಕೊಡುವ ಚಿಕ್ಕಿದಾರರ ಹಕ್ಕನ್ನು ಅಂಗೀಕರಿಸಬೇಕು. ಎಂದರೆ-ಚಿಕ್ಕಿದಾರರಿಗೂ ಕಂದಾಯದ ಬಾಕಿಗಾಗಿ ನೋಟೀಸ್ ಕೊಡಿಸುವಂತೆ ಮಾಡಿಸಬೇಕು.

ಉ—5 ವರ್ಷಕ್ಕೊಂದುಸಲ 1 ರೂ. ನಂತೆ ಕೊಟ್ಟು ಸ್ಪೆಷಲ್ ರಿಜಿಸ್ಟರಿಗೆ ದಾಖಲ್ ಮಾಡಿಸಿಕೊಳ್ಳಿ. ಅದು ಹೊರತು ಬೇರೆ ಏನನ್ನು ಮಾಡಲೂ ಸಾಧ್ಯವಲ್ಲ.

ಆ—ಒಂದೊಂದು ಖಾತೆಗಳಲ್ಲಿ ಅನೇಕರ ಭಾಗಗಳಿಗೆ ಸೇರಿದ ಭೂಮಿಗಳಿರುತ್ತವೆ. ಅಂಥ ಪ್ರತಿ ಭಾಗಕ್ಕೂ ಇಷ್ಟಿಷ್ಟೇ ಕಂದಾಯ ಕೊಡಬೇಕೆಂಬುದನ್ನು ಖಾತೆಯಲ್ಲಿ ಕಾಣಿಸಿರುವುದಿಲ್ಲ. ಇದರಿಂದ ರೈತರಿಗೆ ಬಹಳವಿಧದ ಕಷ್ಟನಷ್ಟಗಳುಂಟಾಗುತ್ತವೆ. ಆದುಕಾರಣ ಪ್ರತಿಯೊಬ್ಬರಿಗೂ ಯಾವ ಹಿಸ್ಸೆ ಇದೆ, ಅವರು ಎಷ್ಟೆಷ್ಟು ಕಂದಾಯವನ್ನು ಕೊಡಬೇಕು ಎಂಬುದನ್ನು ರಿಜಿಸ್ಟರಿನಲ್ಲಿ ಕಾಣಿಸುವಂತೆ ಮಾಡಬೇಕು.

ಉ—ಚಿಕ್ಕಖಾತೆಗಳ ಪೈಕಿ ಕೆಲವನ್ನು ಅಜಮಾಯಿಷಿ ಮಾಡಿ ಏನು ಮಾಡಬೇಕೆಂಬುದನ್ನು ನಿರ್ಧರಿಸುತ್ತೇವೆ.

ಆ—ಕಾಫೀಜಮೀನುಗಳಲ್ಲಿ ಏಲಕ್ಕಿ ಬೆಳೆಯಲು ಇರುವ ನಿರ್ಬಂಧವನ್ನು ತಪ್ಪಿಸಬೇಕು.

ಉ—ಪುನರಾಲೋಚನೆಗೆ ಇಟ್ಟುಕೊಳ್ಳುತ್ತೇವೆ.

ಆ—ಪ್ರತಿಗ್ರಾಮದ ಚರಿತ್ರೆ ಎಂದರೆ-ವಿಸ್ತೀರ್ಣ, ಪ್ರಜಾಸಂಖ್ಯೆ, ಅವರ ಉದ್ಯೋಗ, ಹಿಡುವಳಿದಾರರು, ಜಂಟಿಹಿಡುವಳಿದಾರರು-ಮೊದಲಾದ ವಿವರಣವುಳ್ಳ ಅಚ್ಚುಹಾಕಿದ ಪುಸ್ತಕವನ್ನು ಪ್ರತಿಗ್ರಾಮಕ್ಕೂ ಕೊಡುವಂತೆ ಮಾಡಿಸಬೇಕು. ಈ ಏರ್ಪಾಟು ಮದ್ರಾಸಾಧಿಪತ್ಯದಲ್ಲಿದೆ.

ಉ—ಗ್ರಾಮಚರಿತ್ರೆಯನ್ನು ತಿಳಿಯಲು ಈ ಮೊದಲೇ ಏರ್ಪಡಿಸಿದ್ದೇವೆ.

ಆ—ಸುಪಾರಿಸೆಸ್ಸಿನಿಂದ ಜನಗಳಿಗೆ ಅನವಶ್ಯಕವಾದ ತೊಂದರೆಯಾಗಿದೆ. ಕೊಳೆರೋಗದ ನಿವಾರಣೆಗಾಗಿಯೆಂದು ಏರ್ಪಡಿಸಿದ ಈ ಕಂದಾಯದಿಂದ ಇದುವರೆಗೆ ಸರ್ಕಾರಕ್ಕೆ 2 ಲಕ್ಷಕ್ಕೆ ಕಡಿಮೆಯಿಲ್ಲದೆ ವಸೂಲಾಗಿದೆ. ಇದುವರೆಗೆ ಖರ್ಚಾಗಿ ಉಳಿದಿರುವ ಹಣದ ಬಡ್ಡಿಯಿಂದಲೂ ಮತ್ತು ರೋಗನಿವಾರಣೆಗಾಗಿ ಸರ್ಕಾರಿ ಸಹಾಯವನ್ನಪೇಕ್ಷಿಸುವವರಿಂದ ಬರುವ ಹಣದಿಂದಲೂ ಅದನ್ನು ಸಾಗಿಸಿ ಪ್ರತ್ಯೇಕವಾದ ಈ ಸೆಸ್ಸನ್ನು ತೆಗೆದುಬಿಡಬೇಕು. ಈಗಲಾದರೂ ಸೆಸ್ಸನ್ನೂ ತೆಗೆದುಕೊಳ್ಳುತ್ತಾರೆ. ಮಿಷನರಿ ಖರ್ಚು ಮೊದಲಾದುದನ್ನೂ ಪ್ರತ್ಯೇಕವಾಗಿ ತೆಗೆದುಕೊಳುತ್ತಾರೆ.

ಉ—ವಿಚಾರಮಾಡಿ ಅಪ್ಪಣೆಮಾಡುತ್ತೇವೆ. (ಈ ಸೆಸ್ಸನ್ನು ತಪ್ಪಿಸಿಬಿಡುವುದಾಗಿ ದಿವಾನರು ತಮ್ಮ ಸಭಾಸಮಾಪ್ತಿ ಭಾಷಣದಲ್ಲಿ ಅಪ್ಪಣೆಕೊಡಿಸಿದರು.) (ಸಶೇಷ.)

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ತಿಪಟೂರಿನ ಶ್ರೀ ಬಸವೇಶ್ವರದೇವರುತ್ಸವದ ಸಂಬಂಧವಾದ ಲೇಖನವು ದ್ವೇಷಾಸೂಯೆಯನ್ನು ಹೆಚ್ಚಿಸತಕ್ಕದಾಗಿರುವುದರಿಂದ ಪ್ರಕಟಿಸಲ್ಪಡಲಾಗುವುದಿಲ್ಲವು. ಮತ್ತೂ ಇದೇ ಸಂಬಂಧವಾದ ಇಂಗ್ಲೀಷ್ ಭಾಷೆಯ ಲೇಖನವು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದರಿಂದ ಈ ಪತ್ರಿಕೆಯಲ್ಲಿ ಈಗ ಪ್ರಕಟಿಸುವುದರ ಪ್ರಯೋಜನವು ಕಂಡುಬರಲಿಲ್ಲವು.—ಪ. ಪ್ರ.

ಗಿರಿಯವರ ಡಬಡ್ಡಾಳಿಕೆ ಪುರಾಣ.

ಸ್ವಾಮಿ!

ಮ॥ ಇ. ಪುರುಷೋತ್ತಮಾನಂದಗಿರಿಯವರು ಗೌರ್ನಮೆಂಟ್ ಚೀಫ್ ಸೆಕ್ರಟರಿಯವರಿಗೆ ವಿಜ್ಞಾಪನರೂಪವಾಗಿ ಒಂದು ದೊಡ್ಡ ಲೇಖನವನ್ನು ಬರೆದುಕೊಂಡಿರುತ್ತಾರೆ. ಅದನ್ನು ಇದೇ ತಿಂಗಳು ತಾ॥ 3ರ ಸಾಧ್ವೀ ಪತ್ರಿಕೆಯಲ್ಲಿ ಪ್ರಕಟಿಸಿಕೊಂಡಿದ್ದಾರೆ. "ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ 77 ನೆ ವಿಷಯವು (ಸಂಸ್ಕೃತಕಾಲೇಜುಗಳ ವಿದ್ಯಾಭ್ಯಾಸದ ವಿಷಯ) ಚರ್ಚೆಗೆ ಬಂದಾಗ ತಕ್ಕಷ್ಟು ಕಾಲವಿಲ್ಲದ್ದರಿಂದ ನಾನು ಸ್ವಲ್ಪ ವಿಷಯಗಳನ್ನು ಅಂಕೆಮಾಡಿಕೊಂಡೆ. ಈಗ ನಾನು ಹೇಳುವ ಅಂಶಗಳನ್ನೂ ಆ ನನ್ನ ಹೇಳಿಕೆಯೊಡನೆ ಸೇರಿಸಿ ರಿಪೋರ್ಟಿನಲ್ಲಿ ಮುದ್ರಿಸಬೇಕು" ಎಂದು ಚೀಫ್ ಸೆಕ್ರಟರಿಯವರಿಗೆ ಬಿನ್ನೈಸಿಕೊಂಡಿದ್ದಾರೆ. ಈ ಲೇಖನವು ಸಾಧ್ವೀ ಪತ್ರಿಕೆಯ 6 ಕಾಲಂಗಳನ್ನು ಪೂರಾ ಹಿಡಿದುಕೊಂಡಿದೆ. ಆದರೂ ಯುಕ್ತಿಯುಕ್ತವಾದಗಳೇನಾದರೂ ಅದರಲ್ಲಿದೆಯೋ ಎಂದು ಆದ್ಯಂತವಾಗಿ 2-3 ವೇಳೆ ಓದಿನೋಡಿದರೂ ಸಾರವಾದಂಶವು ಲೇಶವೂ ಇಲ್ಲ. ಸಭೆಯಲ್ಲಿ ಈ ಸಬ್ಜೆಕ್ಟನ್ನು ಕುರಿತು ಗಿರಿಯವರು ಮಾತನಾಡಿದ ವಿವರಣವನ್ನು ತಾವೇ ಸ್ಟಾರ್ ಪತ್ರಿಕೆಯಲ್ಲಿ ಹಿಂದೆ ಪ್ರಕಟಿಸಿರುತ್ತೀರಿ. ಪಂಜಾಬು ಕಾಶ್ಮೀರ ಮೊದಲಾದವುಗಳ ಸುದ್ದಿಯನ್ನು ಇದೇ ಗಿರಿಯವರು ಎತ್ತಿಕೊಂಡು ಮಾತನ್ನಾರಂಭಿಸಿದ ಕೂಡಲೇ "ನನಗೆ ಹೋಲ್ ಇಂಡ್ಯಾದ ಹಿಸ್ಟ್ರಿ ಬೇಕಿಲ್ಲ. ಪಾಯಿಂಟಿನ ಮೇಲೆ ನಿಮ್ಮಭಿಪ್ರಾಯವನ್ನು ಮಾತ್ರ ಹೇಳಬೇಕು." ಎಂದು ದಿವಾನರು ಹೇಳಿ ಯಾವ ಅಪ್ರಯೋಜಕವಾಗಾಡಂಬರಕ್ಕೆ ದಿಗ್ಬಂಧವಮಾಡಿದ್ದರೋ ಅದೇ ಹರಟೆಯನ್ನೇ ಗಿರಿಯವರು ಈ ಲೇಖನದಲ್ಲಿ ಹನುಮಂತನ ಬಾಲದಂತೆ ಮತ್ತಷ್ಟು ಬೆಳಸಿಬಿಟ್ಟಿದ್ದಾರೆ. ಒಂದಾವೃತ್ತಿ ರಿಜಕ್ಟಾದ ಸಂಗತಿಯನ್ನೇ ಚೀಫ್ ಸೆಕ್ರಟರಿಯವರು ರಿಪೋರ್ಟಿಗೆ ಮತ್ತೆ ಸೇರಿಸಿಕೊಳ್ಳಬೇಕಾಗಿದ್ದರೆ ಸೆಕ್ರಟರಿಯವರನ್ನು ಗಿರಿ ಮಹಾಪುರಾಣದ ಭಕ್ತರೆಂದು ಇವರು ತಿಳಿದುಕೊಂಡಿದ್ದಾರೋ ಏನೋ ಗೊತ್ತಾಗಲಿಲ್ಲ. ಈ ಪುರಾಣದಲ್ಲಿ ಗಿರಿಯವರು ಚತುಸ್ಸೀಮಾಂತ ಭಾರತವೃಥ್ವೀವಲಯವನ್ನು ತಾವು ಸುತ್ತಿರುವುದು, ತಮ್ಮ ಸರ್ವಜ್ಞಂಮನ್ಯತೆ, ತಮಗೆ ದಿಕ್ಕುಪಾರು ಇಲ್ಲದಿರುವಷ್ಟು ಆಸ್ತಿಗಳೂ ಅಧಿಕಾರಗಳೂ ಇರುವುದು-ಇತ್ಯಾದಿ ತಮ್ಮ ಉದ್ಧಟತನದ ಡಬಡ್ಡಾಳಿಕೆಯನ್ನು ಕೊಚ್ಚಿಕೊಳ್ಳುವ ಕಥೆಯೇ ಹೊರತು ಮತ್ತೇನೂ ಇಲ್ಲ. ಈ ಪುರಾಣಪತ್ರಿಕೆಯನ್ನು ವರ್ತಮಾನ ಪತ್ರಿಕೆಗಳಿಗೂ ಕಳಿಸಿಕೊಟ್ಟಿದ್ದಾರಂತೆ. ಇನ್ನೇನನ್ನೂ ಬರೆದು ತುಂಬಿಸಲಾರದ ಎಡಿಟರುಗಳು ಇದಕ್ಕೆ ತಮ್ಮ ಪತ್ರಿಕೆಯಲ್ಲಿ ಸ್ಥಳಕೊಟ್ಟು ತಮ್ಮ ವಾಚಕರನ್ನು ಬೇಜಾರುಪಡಿಸಬಲ್ಲರೇ ಹೊರತು ಮತ್ತಾರೂ ಪ್ರಕಟಿಸುವಂತೆ ತೋರಲಿಲ್ಲ. ಆದರೆ ಸಾಧ್ವೀ ಪತ್ರಿಕೆಯವರು ಮಾತ್ರ ಇದಕ್ಕೆ ಸ್ಥಳಕೊಟ್ಟದ್ದು ಭಲಾಜಟ್ಟಿ ಎಂದು ಮಣ್ಣುಮುಕ್ಕಿಸಿದನೆಂಬ ಗಾಥೆಯ ಉದ್ದೇಶಕ್ಕೆ ಅನುಗುಣವಾಗಿದೆ.

ಇವರು ಹೋಗಿ ನೋಡಿದ ಕಡೆಗಳಲ್ಲಿರುವ ಸಂಸ್ಕೃತ ಪಾಠಶಾಲೆಗಳಲ್ಲಿ ಬ್ರಾಹ್ಮಣರೇ ವೇದವನ್ನು ಓದುತ್ತಿರುವುದಾಗಿ ಕಂಡರೇ ಹೊರತು ಇತರರು ಓದುತ್ತಿರುವುದನ್ನು ಕಾಣಲಿಲ್ಲವಂತೆ. ಅಲ್ಲೆಲ್ಲೂ ಆ ಪದ್ಧತಿಯಿಲ್ಲವಂತೆ. ಆದರೆ ಆ ಪಾಠಶಾಲೆಗಳೆಲ್ಲಾ ಸರ್ಕಾರದವೇ? ಅಥವಾ ಪ್ರೈವೇಟೆ? ಎಂಬುದನ್ನು ಮಾತ್ರ ಹೇಳಿಲ್ಲ. ಒಂದು ವೇಳೆ ಅಲ್ಲೆಲ್ಲಾ ವೀರಶೈವರು ಇಲ್ಲದೆ ಇರಬಹುದು. ಇತರರು ಆ ಶಾಲೆಗಳಿಗೆ ಹೋಗಿ ವೇದಾಭ್ಯಾಸವನ್ನು ಮಾಡಬೇಕೆಂಬ ಉದ್ದೇಶವನ್ನು ಪಡದೆ ಇರಬಹುದು, ಇತಃಪರ! ಅಲ್ಲಿನ ಜನರಲ್ಲೂ ವೇದಜಿಜ್ಞಾಸೆಚ್ಛೆಯು ಮುಂದೆ ಹುಟ್ಟಬಹುದು. ಅದಮಾತ್ರಕ್ಕೇ ಅವುಗಳ ಈಗಿನ ಉದಾಹರಣೆಯನ್ನು ನಮ್ಮ ದೇಶದ ಸರ್ಕಾರಿ ಸಂಸ್ಕೃತ ಕಾಲೇಜುಗಳಿಗೆ ಕೊಡಲು ಕಾರಣವೇನು? ಆ ಕಾರಣದಿಂದಲೇ ಅಲ್ಲವೆ ದಿವಾನರು ಹೋಲ್ ಇಂಡ್ಯಾ ಹಿಸ್ಟ್ರಿಯು ನಮಗೆ ಬೇಕಿಲ್ಲವೆಂದು ಹೇಳಿದ್ದು? ಏತೇನ ಇವರು ಹೇಳಿಕೊಂಡಿರುವ ಆಯಾ ಸ್ಥಳಗಳ ವಿದ್ಯಮಾನವನ್ನೆಲ್ಲಾ ನಿಜ ಅಥವಾ ಸುಳ್ಳೆಂಬುದನ್ನು ಸಿದ್ಧಾಂತಪಡಿಸುವ ಭಾರವನ್ನು ಇತರರು ಹೊರುವುದು ಕೂಡ ಅಪ್ರಯೋಜಕವೇ. ಹಿಮಾಲಯದ ಕಾಂಚನ ಗಂಗಾಶಿಖರದಲ್ಲಿ ರಕ್ಕೆಯಿಂದ ಹಾರಾಡುವ ಕಾಡಾನೆಗಳಿರುವುವೆಂದು ಒಬ್ಬ ಚಮತ್ಕಾರಿಕನು ಹೇಳಿಬಿಟ್ಟರೆ ಅದರ ಸಾಧು ಅಸಾಧುತ್ವವನ್ನು ನಿರ್ಣಯಿಸಲು ಪ್ರಯತ್ನಪಡುವ ಬುದ್ಧಿವಂತಿಕೆಯಂತೆಯೇ ಇದೂ ಆಗುವುದು. ತಾವು ನೋಡಿಬಂದಿರುವ ಸಂಸ್ಕೃತ ಶಾಲೆಗಳಲ್ಲೆಲ್ಲೂ ಇತರರು ವೇದಾಭ್ಯಾಸ ಮಾಡುತ್ತಲಿಲ್ಲವಾದುದರಿಂದ ಇತರರು ಅದಕ್ಕೆ ಅನರ್ಹರು ಎಂಬ ಸಿದ್ಧಾಂತವನ್ನು ಇವರು ಮಾಡುವುದು ನಿಜವಾದರೆ, ಈ ಗಿರಿಯವರು ಈ ದೇಶದ ಯಾವ ಬ್ರಾಹ್ಮಣರ ಬಳಕೆಯಲ್ಲೂ ಇಲ್ಲ; ಇನ್ನಾರ ಮನೆಯ ಭೋಜನವನ್ನೂ ಮಾಡುವುದಿಲ್ಲ. ಇವರ ಮನೆಯಲ್ಲೂ ಯಾವ ಬ್ರಾಹ್ಮಣರೂ ಅನ್ನಾಹಾರ ಸ್ವೀಕರಿಸುವುದಿಲ್ಲವಾದಕಾರಣದಿಂದ, ಇವರು ಬ್ರಾಹ್ಮಣರಲ್ಲ ಯಾವ ಜಾತಿಗೆ ಸೇರಿದವರೋ ಎಂದು ಇತರರು ಸಿದ್ಧಾಂತಪಡಿಸುವುದಾದರೆ ಅದೇತಕ್ಕೆ ನಿಜವಾಗಕೂಡದು? ಅದಕ್ಕಿವರು ಒಪ್ಪುವರೊ? ಕೊನೆಯಲ್ಲಿ ಇವರು ಆಡಿರುವ ಒಂದೆರಡು ಅಂಶಗಳಿಗೆ ಮಾತ್ರ ಉತ್ತರಕೊಡುವುದು ಅವಶ್ಯಕವಾಗಿದೆ. ಅವೇನೆಂದರೆ—ಮೈಸೂರು ದೇಶದ 60 ಲಕ್ಷ ಪ್ರಜೆಗಳಲ್ಲಿ ಹಿಂದುಗಳಿಗೆಲ್ಲಾ ಹವ್ಯಕವ್ಯ ಮಾಡಿಸುವ ಅಧಿಕಾರವು ಬ್ರಾಹ್ಮಣರಿಗೆ ಮಾತ್ರ ಇದೆಯಂತೆ. ಆಗಮಗಳಿಗಾಗಿ ಅವರಿಗೆ ವೇದಾಭ್ಯಾಸವು ಅವಶ್ಯಕವಂತೆ. ಅವರಿಗೆ ಅದನ್ನು ಕಲಿಸುವ ಖರ್ಚನ್ನು ಪ್ರಜೆಗಳು ಕಂದಾಯದ ರೂಪವಾಗಿ ಸರ್ಕಾರಕ್ಕೆ ಕೊಟ್ಟು ಮಾಡಿಸಬೇಕಂತೆ! ಇದೊಂದು ಇವರ ಸಿದ್ಧಾಂತ. ವೀರಶೈವರಲ್ಲಿ "ಮದ್ಯಪಾನೀ ಮಾಂಸಭಕ್ಷೀ ಚಾನ್ಯದೈವಸ್ಯಪೂಜಕಃ। ಅಲಿಂಗೀಚದುರಾಚಾರೀ ಪಂಕ್ತೌ ಭವಿಸ್ಸ್ಮೃತಾಃ॥" ಎಂಬ ಸಿದ್ಧಾಂತವಿರುವಕಾರಣ, ಲಿಂಗಧಾರಣವಿಲ್ಲದ ಭವಿಗಳು ಅವರ ಹವ್ಯಕವ್ಯಗಳನ್ನು ಮಾಡಿಸುವುದಕ್ಕೆ ಎಂದಿಗೂ ಅರ್ಹರಲ್ಲ. ಅಲ್ಲದೆ ಲಿಂಗಧಾರಣ, ಶಿವದೀಕ್ಷಾಸಂಸ್ಕಾರ ಮೊದಲಾದ ವೀರಶೈವರ ಕರ್ಮಗಳನ್ನು ಮಾಡಿಸಲು ಲಿಂಗಧಾರಿಗಳಾಗಿರುವ ಗುರುವರ್ಗದವರು ಅರ್ಹತೆಯನ್ನು ಪಡೆದು ಅದರಂತೆ ಮಾಡಿಸಿಕೊಂಡು ಬರುತ್ತಿರುವರೇ ಹೊರತು ಇತರರಲ್ಲ. ಶಿವಾಗಮೋಕ್ತವಾಗಿರುವ ಈ ಧರ್ಮಕರ್ಮಗಳ ವಿಧಿವಿಧಾನಗಳು ಇತರರಿಗೆ ಗೊತ್ತೂ ಇಲ್ಲ ಅವರು ಮಾಡಿಸಲೂ ಆರರು. ಅವರಿಂದ ಮಾಡಿಸಿಕೊಳ್ಳುವುದೂ ಇಲ್ಲ. ಆದಕಾರಣ, ವೀರಶೈವರ ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ನಡೆಯಿಸುವ ಅವರ ಪುರೋಹಿತರಿಗೆ ವೇದವೇದಾಂಗಾದಿ ಅಭ್ಯಾಸವು ನಡೆಯಬೇಕಾದದ್ದು ಪರಮಾವಶ್ಯಕವಾಗಿ ಬಂದೇಬರುತ್ತದೆ. "ಲಿಂಗಾಯತರು ವೇದವನ್ನು ಬರೆದ ವ್ಯಾಸರ ತೋಳನ್ನು ಕತ್ತರಿಸಿ ನಂದೀಧ್ವಜಕ್ಕೆ ಈಗಲೂ ಕಟ್ಟಿ ಮೆರವಣಿಗೆ ಮಾಡುತ್ತ ಇರುವುದರಿಂದ ಇವರಿಗೆ ಪುನಃ ವೇದ ಓದುವ ಆಶೆ ಏತಕ್ಕೆ?" ಎಂದು ಗಿರಿಯವರು ಆಕ್ಷೇಪಿಸಿ ತಮ್ಮ ಲೇಖನವನ್ನು ಮುಗಿಸಿಬಿಟ್ಟಿದ್ದಾರೆ.

ತಾವು ಕಾಶಿಯ ಮಠಸ್ಥರೆಂತಲೂ ಅಲ್ಲಿನ ಆಸ್ತಿವಂತರೆಂತಲೂ ಮತ ಮತಾಂತರ ಪ್ರಕ್ರಿಯಾದಿಗಳನ್ನೆಲ್ಲಾ ತಿಳಿದುಕೊಂಡಿರುವೆವೆಂತಲೂ ವಿಜೃಂಭಿಸುತ್ತಿರುವ ಇವರಿಗೆ ಕಾಶೀಖಂಡೋಕ್ತವಾದ ವ್ಯಾಸಭುಜಸ್ತಂಭನ ವಿಷಯವೇ ತಿಳಿಯದು. ವ್ಯಾಸಭುಜಸ್ತಂಭನವು ಯಾವಾಗ ಏತಕ್ಕೆ ಆಯಿತು? ಎಂಬಿತ್ಯಾದಿ ಸಂಗತಿಗಳನ್ನು ಸ್ಕಾಂದಪುರಾಣದ 95 ನೆ ಅಧ್ಯಾಯದ 40 ನೆ ಶ್ಲೋಕದಿಂದಾಚೆಗೆ ಓದಿಸಿ ಕೇಳಿ ತಿಳಿದುಕೊಳ್ಳಲಿ. ವ್ಯಾಸರು ಸರ್ವಜ್ಞರಾಗಿದ್ದರೂ ಮೋಹದಿಂದ ಒಂದುಸಲ "ನದೇವಃಕೇಶವಾತ್ಪರಃ" ಎಂದು ಹೇಳಿದುದನ್ನು ಅವರ ಶಿಷ್ಯರೇ ಕೇಳಿ ಆಶ್ಚರ್ಯಪಟ್ಟು, ಹೀಗೆ ಹೇಳುವುದು ಸರಿಯಲ್ಲವೆಂದು ಎಚ್ಚರಿಸಿದರೂ ಕೇಳದಿದ್ದಕಾರಣ, ಹಾಗಾದರೆ ನೀವು ಕಾಶಿಯಲ್ಲಿ ವಿಶ್ವೇಶ್ವರನ ಮುಂದೆ ಭುಜವನ್ನೆತ್ತಿ ಹೀಗೆಹೇಳಿ ಸ್ಥಾಪಿಸಿದರೆ ಸರಿಯೆಂದು ಅವರುಗಳು ಹೇಳಲು, ಹಾಗೇ ಆಗಲೆಂದು ಒಪ್ಪಿ ವ್ಯಾಸರು ಕಾಶಿಗೆ ಹೋಗಿ "ಇಹಮೇಕಂಪರಿಜ್ಞಾತಂ ಸೇವ್ಯಸ್ಸರ್ವೇಶ್ವರೋಹರಿಃ" "ನಾರಾಯಣಃಪರಬ್ರಹ್ಮ" ಎಂಬುದೇ ಮೊದಲಾದ ಶ್ಲೋಕಗಳಿಂದ ಹರಿಯೇ ಸರ್ವದೇವೋತ್ತಮನೆಂದು ಭುಜವನ್ನೆತ್ತಿ ಹೇಳುತ್ತಿರಲು, ಅಷ್ಟರಲ್ಲಿ ಶೈಲಾದಿ (ನಂದೀಶನು) ಕಣ್ಣನ್ನು ಬಿಟ್ಟು ದುರುದುರನೆ ನೋಡಿದ ಕೂಡಲೇ ವ್ಯಾಸರತೋಳು ಚಲನೆಗೆ ಅವಕಾಶವಿಲ್ಲದ ಮರದ ಕೊರಡಿನಂತೆ ಸೆಟೆದುಹೋಯಿತು. ಉತ್ತರಕ್ಷಣದಲ್ಲೇ ಭಯದಿಂದ ವ್ಯಾಸರ ವಾಕ್ಸ್ತಂಭವೂ ಆಗಿಹೋಯಿತು. ಆಗ ಹರಿಯು ಗುಟ್ಟಾಗಿ ವ್ಯಾಸರಬಳಿಗೆ ಬಂದು, "ನೀನು ಹರಿಯೇ ಸರ್ವೋತ್ತಮನೆಂದು ಕೂಗಿ ಮಹಾಪರಾಧಮಾಡಿದೆ. ನಿನ್ನ ತಪ್ಪಿನಿಂದ ನನಗೂ ಕೂಡ ಈಗ ಭಯವಾಗುತ್ತದೆ. ವಿಶ್ವೇಶ್ವರನೊಬ್ಬನು ಜಗತ್ಪತಿಯೇ ಹೊರತು ಇನ್ನಾರೂ ಇಲ್ಲ. ಆತನ ಅನುಗ್ರಹದಿಂದಲೇ ನಾನು ಚಕ್ರವನ್ನು ಪಡೆದು ಲಕ್ಷ್ಮೀಪತಿಯೂ ಆಗಿರುವೆನು. ಆತನೇ ನನಗೆ ತ್ರಿಲೋಕರಕ್ಷಣ ಸಾಮರ್ಥ್ಯವನ್ನು ಕೊಟ್ಟಿರುತನು. ನನಗೆ ನೀನು ಶುಭವನ್ನು ಕೋರುವವನಾಗಿದ್ದರೆ ಈಗ ಪರಶಿವನನ್ನು ಸರ್ವದೇವೋತ್ತಮನೆಂದು ಸ್ತೋತ್ರಮಾಡು" ಎಂದು ಬೋಧಿಸಿದ ಕೂಡಲೇ ವ್ಯಾಸರು ಬೆರಗಾಗಿ, ಆಗ "ಏಕೋರುದ್ರೋನದ್ವಿತೀಯೋ ಯತಸ್ತದ್ಬ್ರಹ್ಮೈವೇಕಂ ನೇಹನಾನಾಸ್ತಿ ಕಿಂಚಿತ್ । ಯದ್ಯಪ್ಯನ್ಯಃ ಕೋಪಿವಾಕುತ್ರಚಿದ್ವಾ ವ್ಯಾಚಷ್ಟಾಂತದಸ್ಯ ಶಕ್ತಿರ್ಮದಗ್ರೇ" ಎಂಬುದೇ ಮೊದಲಾದ ವ್ಯಾಸಾಷ್ಟಕ ಶ್ಲೋಕಗಳಿಂದ ಸ್ತೋತ್ರಮಾಡಲು, ನಂದೀಶ್ವರನು ಸಂತುಷ್ಟನಾಗಿ, ಪ್ರಸನ್ನಕಟಾಕ್ಷವನ್ನು ಪ್ರಸರಿಸಲು, ಭುಜಸ್ತಂಭನವು ಹೋಗಿ ಮೊದಲಿನಂತೆ ವ್ಯಾಸರು ಆದರು. ಆಗ ಪ್ರತ್ಯಕ್ಷನಾದ ಪರಶಿವನಿಗೆ ವ್ಯಾಸರು ದೀರ್ಘದಂಡನಮಸ್ಕಾರವನ್ನು ಮಾಡಿ ಅಪರಾಧ ಕ್ಷಮೆಯನ್ನು ಕೇಳಿಕೊಂಡರು. ತದಾದಿಯಾಗಿ ವ್ಯಾಸರು ಭಸ್ಮರುದ್ರಾಕ್ಷಾದಿ ಶಿವಚಿಹ್ನಧಾರಿಗಳಾಗಿ ಲಿಂಗಾರ್ಚನಪರರಾಗಿ ವ್ಯಾಸೇಶ್ವರನೆಂಬ ಲಿಂಗವನ್ನು ಸ್ಥಾಪಿಸಿ, ಶಿವಭಕ್ತಿಪರಾಯಣರಾದರು. ಹೀಗೆ ತಾವು ಸರ್ವಜ್ಞರಾಗಿದ್ದರೂ ವ್ಯಾಸರು ಒಂದುವೇಳೆ ಮಾಯಾಮೋಹದಿಂದ ಶಿವಾಪರಾಧವನ್ನೆಸಗಿದುದಕ್ಕಾಗಿ ತಮಗಾದ ವಿಪತ್ತನ್ನು ಜಗತ್ತಿಗೆ ಅರುಹಿ ಶಿವಾಪರಾಧವು ಕೂಡದೆಂಬುದನ್ನು ನಿದರ್ಶನಪಡಿಸಲಿಕ್ಕೆ ಈ ತಮ್ಮ ಚರಿತ್ರೆಯನ್ನು ತಾವು ರಚಿಸಿರುವ ಶೈವಪುರಾಣಗಳಲ್ಲೇ ಸ್ಪಷ್ಟವಾಗಿ ಹೇಳಿಕೊಂಡಿರುತ್ತಾರೆ. ಆ ಚರಿತ್ರೆಯ ಗುರ್ತಿಗಾಗಿ ನಂದೀಶ್ವರನು ತನ್ನ ಧ್ವಜದಲ್ಲಿ ಆ ಭುಜವನ್ನು ಧರಿಸಲು ಅಂಗೀಕರಿಸಿ ಆ ಸಂಪ್ರದಾಯವು ಈಗಲೂ ನಡೆದುಬಂದಿದೆ. ಇದರಿಂದ ವ್ಯಾಸರಿಗೆ ಅಪಮಾನವೆಂದು ತಿಳಿದಿದ್ದರೆ ಈ ಸ್ವಚರಿತ್ರೆಯನ್ನು ಅವರು ತಮ್ಮ ಪುರಾಣಗಳಲ್ಲಿ ಬರೆದುಕೊಳ್ಳುತ್ತಲೇ ಇರಲಿಲ್ಲ. ಲೋಕಶಿಕ್ಷಾರಕ್ಷಾರ್ಥವಾಗಿ ಆ ಚರಿತ್ರೆಯನ್ನು ಬರೆದುಕೊಂಡ ಸದುದ್ದೇಶದಂತೆಯೇ ಅವರ ಭುಜಧಾರಣೆಯ ಉದ್ದೇಶವಾದರೂ ನಿರ್ದುಷ್ಟವಾದದ್ದಾಗಿಯೇ ಇದೆ. ವ್ಯಾಸರ ಸಹಸ್ರಾರು ವಚನಗಳನ್ನು ವೀರಶೈವ ಮತಗ್ರಂಥಕರ್ತರು ಪ್ರಾಚೀನಕಾಲದಿಂದಲೂ ತಮ್ಮ ಗ್ರಂಥಗಳಲ್ಲಿ ಉದಹರಿಸಿಕೊಳ್ಳುತ್ತಲೇ ಬಂದಿದ್ದಾರೆ. ಎಷ್ಟೋ ಗ್ರಂಥಕಾರರು ಗ್ರಂಥಾದಿಯಲ್ಲಿ ವ್ಯಾಸಸ್ತೋತ್ರವನ್ನು ಮಾಡಿರುತ್ತಾರೆ. ಮತ್ತು ವೀರಶೈವಮತಪರವಾಗಿ ವ್ಯಾಸಸೂತ್ರಗಳಿಗೆ ವೀರಶೈವ ಪೂರ್ವಾಚಾರ್ಯರು ಭಾಷ್ಯಗಳನ್ನು ಕೂಡ ಬರೆದಿರುತ್ತಾರೆ. ಹೀಗಿರುವಾಗ ವೀರಶೈವರನ್ನು ವ್ಯಾಸರಿಗೆ ವಿರೋಧಿಗಳೆಂದು ಗಳಹುವುದು ಅವಿಚಾರರಮಣೀಯವಲ್ಲವೆ?

ಅಂತು ಇನ್ನು ಮೇಲಾದರೂ ನಮ್ಮ ಗಿರಿಯವರು ತಿಳಿಯದ ವಿಷಯಗಳಿಗೆ ನುಗ್ಗಿ ಬಾಯ್ಬಿಚ್ಚಿ ಪರಿಹಾಸ ಪಾತ್ರರಾಗದೆಯೂ, ಆತ್ಮಭೂಷಣ ಪರನಿಂದೆಗಳಲ್ಲಿ ವಿಮುಖರಾಗಿಯೂ, ತಮ್ಮ ಹಿರಿಯರು ಸಂಪಾದಿಸಿದ ಕೀರ್ತಿಗೆ ಕಳಂಕವನ್ನು ತಂದುಕೊಳ್ಳದೆಯೂ ಇರಲೆಂದು ಕೋರುತ್ತೇನೆ.

ಕಕುದ್ಗಿರಿ.

ಕನ್ನಡ ಭಾಷಾಮಾತೆಯು ಈ ನವಯುಗದಲ್ಲಿ ಮುಂದೆ ಬರುವ ಬಗೆ ಹೇಗೆ.

ಏಶಿಯಾ ಖಂಡವು ಅನೇಕ ಧರ್ಮಗಳ ನಾನಾಜನಾಂಗಗಳ-ಹಲವು ಬಗೆಯ ಭಾಷೆಗಳ-ಅನೇಕ ಕೈಗಾರಿಕೆಗಳ ತವರುಮನೆಯಾಗಿರುವುದೆಂದೂ ಮತ್ತು ಅಲ್ಲಿಂದಲೇ ಉಳಿದ ರಾಷ್ಟ್ರಗಳಿಗೆ ಆಯಾ ಧರ್ಮಗಳೂ, ಜನಾಂಗಗಳೂ, ಭಾಷೆಗಳೂ, ಕೈಗಾರಿಕೆಗಳೂ ಹಬ್ಬಿ-ಹರಡಿ ಒಳ್ಳೇ ಘನತೆಗೇರಿರುವುವೆಂದೂ ಚರಿತ್ರವು ಸಾರುತ್ತಿರುವುದು. ಈ ಏಶಿಯಾಖಂಡದಲ್ಲಿಯ ನಮ್ಮ ಹಿಂದುಸ್ಥಾನವು ಮೇಲೆ ವಿವರಿಸಿದ ಸಂಗತಿಗಳನ್ನೊಳಕೊಂಡ ಪ್ರತಿಖಂಡವೆಂದರೂ ಬಹುಶಃ ತಪ್ಪಾಗಲಿಕ್ಕಿಲ್ಲ. ಇದಕ್ಕೆ ಭರತಖಂಡವೆಂದೂ, ಸುವರ್ಣಭೂಮಿಯೆಂದೂ ಇತಿಹಾಸಕಾರರು ಬರೆದಿರುವರು. ಆದರೆ, ಈಗ ವಿದ್ಯದ ಅಭಾವದಿಂದಲೋ, ಪಾರತಂತ್ರ ಪಂಕದಲ್ಲಿ ಬಿದ್ದು ಒದ್ದಾಡುತ್ತಿರುವದರಿಂದಲೋ ಅಥವಾ ದೈವವಿಂದಲೋ ಬಹಳ ಹೀನಾವಸ್ಥೆಗೆ ಬಂದಿರುವದು. ಹೀಗಾಗಲಿಕ್ಕೆ ಮುಖ್ಯ ವಿದ್ಯೆಯ ಅಭಾವವೇ ಮೂಲಕಾರಣೀಭೂತವೆಂದರೆ, ಅತಿಶಯೋಕ್ತಿಯಾಗಲಿಕ್ಕಿಲ್ಲ. ಇನ್ನು ಒಂದು ಕುಟುಂಬವಾಗಲೀ, ಸಮಾಜವಾಗಲೀ, ಅಥವಾ ರಾಷ್ಟ್ರವಾಗಲೀ, ಸುಧಾರಣೆಯ ಶಿಖರವನ್ನೇರಬೇಕಾದರೆ, ಅದರಲ್ಲಿಯೂ ಈಗಿನ ಸುಧಾರಣೆಯ ಸುಗ್ಗಿಯಲ್ಲಂತೂ ವಿದ್ಯೆಯೇ ಪ್ರಾಮುಖ್ಯವಾಗಿರುವದು. ಈ ನಮ್ಮ ಹಿಂದುಸ್ಥಾನಕ್ಕೆ ಅಂಟಿಕೊಂಡ ಅಜ್ಞಾನವೆಂಬ ಅಂಧಕಾರವು ವಿದ್ಯೆ ಎಂಬ ಸೂರ್ಯನಿಂದಲ್ಲದೆ ಇತರ ವಸ್ತುವಿನಿಂದ ಅಡಗಲಾರದು. ಇದಕ್ಕೆ ಉದಾ:-ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸ್, ಇಟಲಿ, ಜರ್ಮನೀ, ಜಪಾನ್ ಮೊದಲಾದ ರಾಷ್ಟ್ರಗಳನ್ನಷ್ಟು ನೆನಪಿಗೆ ತಂದರೆ ಅವು ಯಾತರಿಂದ ಜಗತೀತಲದಲ್ಲಿ ಮುಂದೆ ಬಂದಿರುವವೆಂಬುದು ಸಹಜ ಒಡೆದು ಕಾಣುವದು. ಇತ್ತಲಾಗಿ ಮಾತ್ರ ಜನರ ಮನಸ್ಸಿನಲ್ಲಿ ವಿದ್ಯೆಯ ಮಹತ್ವವು ತಿಳಿದು ಅದರ ಅಭಿರುಚಿಯು ಹೆಚ್ಚು ಹೆಚ್ಚು ಬೆಂಬಸುತ್ತಾ ನಡೆದಿರುವದು. ಮತ್ತು ಸದ್ಯದ ಪರಿಸ್ಥಿತಿಗನುಸರಿಸಿ ಹೊರಡತಕ್ಕಷ್ಟು ದೈನಿಕಪತ್ರ ವಾರಪತ್ರ ಮಾಸಿಕ ತ್ರೈಮಾಸಿಕ ಸಾಮಾಜಿಕ ವಗೈರೆ ಪತ್ರಗಳು ಹೊರಟಿಲ್ಲವಾದರೂ ಹೊರಟವುಗಳಲ್ಲಿಯೇ ಕೆಲವು ಪತ್ರಗಳು ತಮ್ಮ ಆದ್ಯ ಕರ್ತವ್ಯವನ್ನು ಮರೆತು ಏನಾದರೊಂದು ಸೊಟ್ಟನೆವವನ್ನು ಮುಂದೆಮಾಡಿ ಮಂತ್ರ-ನಾಟಕರಂತೆ ದುಡ್ಡನ್ನು ನುಂಗಿ ನೀರುಕುಡಿದಂತೆ ಮಾಡಿರುವವು. ಅವವುಗಳ ಚಾಲಕರು ಈ ಮಾಸಿಕವು ಅಥವಾ ತ್ರೈಮಾಸಿಕವು ವೃತ್ತಪತ್ರವು ಇಂಥಾದ್ದು ಅಂಥಾದ್ದು ಹಾಗೆ ಹೊರಡುವದು ಹೀಗೆ ಹೊರಡುವದು ಅಂಥ ಚಿತ್ರಗಳನ್ನು ಮುದ್ರಿಸುವೆವು, ಇಂಥ ಸಚಿತ್ರಗಳನ್ನು ಮುದ್ರಿಸುವೆವು, ಅಂಥವರ ಲೇಖ ಪ್ರಕಟವಾಗುವವು, ಇಂಥವರ ಲೇಖ ಪ್ರಕಟವಾಗುವವು ವಗೈರೆ ವಿಶೇಷಣಗಳನ್ನು ಜೋಡಿಸಿಕೊಂಡು ಬರೇ ವಾಗಾಡಂಬರವನ್ನೇ ಮಾಡಿಕೊಂಡರಲ್ಲದೆ, ನೀವು ನಮ್ಮ ಆಪ್ತರು ಮಿತ್ರರು, ಶಿಷ್ಯರು, ಊರವರು, ಮಠಸ್ಥರು ಮತ್ತು ಚಂದಾ ಆದರೂ ತೀರಾ ಕಡಿಮೆ. ಸ್ವಲ್ಪ ವಿಷಯ—ಇತ್ಯಾದಿ ಮನಕರಗುವ ಮೃದುಮಧುರವಾದ ಭಾಷಣಗಳಿಂದ ಜನರ ಕೈಯೊಳಗಿನ ದ್ರವ್ಯವನ್ನು "ಒಲವು ಒಯ್ಯಾರದಿಂದಲೂ, ಹಾವ ಭಾವದಿಂದಲೂ, ಸವಿನಾತುಗಳಿಂದಲೂ, ಆಗ ಭರ್ಜರಿ ಶ್ರೀಮಂತರು ಮೊದಲಾದ ಜನರಿಂದ ಉಚ್ಚಿಕೊಳ್ಳುವ ಗಣಿಕಾಸ್ತ್ರೀಯಂತೆ ಉಚ್ಚಿಕೊಂಡು ಕೂತಿರುವರು. ಇದರಿಂದ ಕಂಡುಬರುವದೇನಂದರೆ ಇವರು ಭಾಷಾಮಾತೆಯ ಉದ್ಧಾರಕರಾಗಿರದೆ ಸ್ವಾರ್ಥಾಭಿಲಾಷೆಯಿಂದ ಭಾಷಾಮಾತೆಯನ್ನು ಘಾತಿಸುವ ಸುಧಾರಕರೆಂದು ಧ್ವನಿತವಾಗುವದು. (೧) ಇನ್ನು ಸದ್ಯಕ್ಕೆ ಕರ್ನಾಟಕದಲ್ಲಿ ಪ್ರಸಿದ್ಧಿಯನ್ನು ಪಡೆದ "ವಾಗ್ಭೂಷಣ"ಕ್ಕೆ ಅನೇಕ ಜನರು ವರ್ಗಣಿದಾರರಿರುವರಲ್ಲದೆ ಫಕ್ತ ಕಾಲೇಜಿನ ೪೦೦ ಕ್ಕಿಂತ ಹೆಚ್ಚಿಗೆ ವಿದ್ಯಾರ್ಥಿಗಳು ಸಹ ವರ್ಗಣೀದಾರರಿರುವರು. ಹೀಗಿದ್ದು ಅದು ಯಾವ ಸಂಕಟದಲ್ಲಿ ಬಿದ್ದು ನರಳುತ್ತಿರುವದೋ ದೇವರಿಗೇ ಗೊತ್ತು. (೨) ಹೋದ ವರುಷದಿಂದ "ಬಾಲಮಿತ್ರ" ವೆಂಬ ಸಣ್ಣ ಮಾಸಿಕವು ಧಾರವಾಡ ಟ್ರೇನಿಂಗ್ ಕಾಲೇಜಿನ ಪ್ರಾಕ್ಟೀಸಿಂಗ್ ಸ್ಕೂಲ ಮಾಜೀ ಹೆಡ್ಮಾಸ್ತರರಾದ ಮಿ॥ ತಟ್ಟೀಯವರಿಂದ ಹೊರಡುತ್ತಿತ್ತು. ಅದಕ್ಕೆ ಸಹಾ ಎಷ್ಟೋ ಶಿಕ್ಷಕ ಶಿಕ್ಷಕೀಯರೂ ಅಲ್ಲದೆ ಟ್ರೇನಿಂಗ್ ಕಾಲೇಜಿನ ವಿದ್ಯಾರ್ಥಿಗಳೇ ೫೦೦ ಕ್ಕಿಂತ ಹೆಚ್ಚು ವರ್ಗಣೀದಾರರಿರುವರು. ಇಷ್ಟೆಲ್ಲ ಸೌಕರ್ಯಗಳಿದ್ದರೂ ಬಾಲಮಿತ್ರನು ಧಾರವಾಡದಿಂದ ದೇವಿಹೊಸೂರಿಗೆ ಸ್ಥಳಾಂತರಮಾಡಿದಾಗಲೇ ತನ್ನ ಹಿತಚಿಂತಕರ ಬೇಟಿಯನ್ನು ತೆಗೆದುಕೊಳ್ಳದಾದನು. ಇದರಿಂದ ಅವನ ಹಿತಚಿಂತಕರು ಬಾಲಮಿತ್ರನು ಏನಾದನೋ ಏನೋ ಎಂದು ಕೊರಗುತ್ತಿರುವರು. ಕಾರಣ ಅವನ ಪಾಲಕರಾದ ಮಿ॥ ತಟ್ಟೀಮಾಸ್ತರರು ಅವನು ಹೊರಡದಿರುವದಕ್ಕೆ ಸಕಾರಣವನ್ನು ತಿಳಿಸಿ ಜನರೊಳಗಿನ ಅಸಂತೋಷವನ್ನು ನಿವಾರಣೆ ಮಾಡಬೇಕು. (೩) ಸ್ತ್ರೀಶಿಕ್ಷಣದ ಸುಧಾರಣೆಗೋಸ್ಕರ ಧಾರವಾಡದಲ್ಲಿ ಹೆಣ್ಣುಮಕ್ಕಳ ಕಾಲೇಜು ಸ್ಥಾಪನೆಯಾದದ್ದು ಸರ್ವಜನರಿಗೂ ವಿದಿತವಾಗಿರುವದು. ಈ ಸಂಸ್ಥೆಯ ಮುಖ್ಯಾಧಿಕಾರಿಗಳಿಂದ "ಶಿಕ್ಷಕೀ" ಎಂಬ ತ್ರೈಮಾಸಿಕವು ಹೊರಡುತ್ತಿರುವುದು. ಇದಕ್ಕೂ ಸಹ ಪ್ರತಿಯೊಂದು ಕನ್ನಡ ಶಾಲೆಯ ಶಿಕ್ಷಕ ಹಾಗೂ ಶಿಕ್ಷಕಿಯರಲ್ಲದೆ ಎಷ್ಟೋ ಸಾಧ್ವೀ ಶಿರೋಮಣಿಗಳು ಸಹಾ ಹಿತಚಿಂತಕರಾಗಿರುವಲ್ಲಿ ಸದರೀ ಮಾಸಿಕವು ತನ್ನ ಉದ್ದೇಶವನ್ನೂ ತಾನು ಕೈಕೊಂಡ ಕೆಲಸವನ್ನೂ ಮರೆತುಬಿಟ್ಟಿರುವದು. ಮತ್ತು ಅದು ಪ್ರಜ್ಞೆ ಆದಾಗೊಮ್ಮೆ ಬರುತ್ತಿರುವುದರಿಂದ ಅದು ತ್ರೈಮಾಸಿಕವಾಗಿರದೆ ದಶಮಾಸಿಕವೋ ಶತಮಾಸಿಕವೋ ಅನ್ನುವದು ಕೂಡ ತಿಳಿಯದಾಗಿದೆ. (೪) ಮತ್ತು ಧರ್ಮಸುಧಾರಣೆಗೋಸ್ಕರ ಧಾರವಾಡದಲ್ಲಿ "ಧರ್ಮತರಂಗಿಣೀ" ಎಂಬ ಮಾಸಿಕವು ಹೊರಡುತ್ತಿರುವುದು. ಅದಕ್ಕಾದರೂ ಅಖಂಡ ಚಂದಾದಾರರಿರುವರಲ್ಲದೆ ಎಷ್ಟೋ ವ್ಯಾಪಾರೀ ಜನರಿಂದಲೂ, ಶ್ರೀಮಂತರಿಂದಲೂ, ವಿದ್ವಜ್ಜನರಿಂದಲೂ ಅನೇಕ ಪ್ರಕಾರವಾಗಿ ಪ್ರೋತ್ಸಾಹ ದೊರಕುತ್ತಿರುವುದು. ಇಷ್ಟೆಲ್ಲಾ ಸೌಲಭ್ಯಗಳಿದ್ದರೂ ಇತ್ತೀಚೆಗೆ ಅದರ ಸುಳಿವೇ ಇಲ್ಲ. [illegible]

[illegible] ಓರ್ವ ನಿಷ್ಪಕ್ಷಪಾತಿ.

ಶ್ರೀಮದ್ವೀರಶೈವ ಮಹಾಸಭೆ.

[illegible]

ಸೆಕ್ರಟರಿ,
ವೀರಶೈವ ವಿದ್ಯಾವರ್ಧಕ ಸಂಘ, ಹುಬ್ಬಳ್ಳಿ.

ಶ್ರೀಮದ್ವೀರಶೈವ ಮಹಾಸಭೆ.

[illegible]

[illegible] ಗುಣವಂತ ಯಾವ ವಿಧವಾದ ಪ್ರಯತ್ನವನ್ನೂ ಮಾಡಲಿಲ್ಲ. ಇಷ್ಟೇ ಅಲ್ಲ, ಮಹಾಸಭೆಯ ಆಯಾ ಅಧಿವೇಶನಗಳ ಅಧ್ಯಕ್ಷರುಗಳು ಆ ಸಂಗತಿಗಳ ವಿಷಯವಾಗಿ ಮೌನವ್ರತವನ್ನು ತಾಳಿದವರಾಗಿದ್ದರು. ಮಹಾಸಭೆಯಂಥ ಸಂಸ್ಥೆಗಳು ಮಾಡತಕ್ಕ ಕಾರ್ಯವು ಈ ಪರಿಯಾಗಬಹುದೆ? ಸಶೇಷ.

ಮೈಸೂರ ಸಂಪದಭ್ಯುದಯ ಸಂಘದವರೂ ವೀರಶೈವರೂ.

(ಕಳೆದವಾರದ ಶೇಷ.)

ವೀರಶೈವರಿಗೆ ವೇದಾಧಿಕಾರವಿದ್ದರೆ ವೇದೋಕ್ತಗಳಾದ ಯಜ್ಞಾದಿಗಳನ್ನು ಯಾಕೆ ಮಾಡುವದಿಲ್ಲವೆಂದು ಆ ಲೇಖಕರು ಕೇಳಿರುವರು. ಇಲ್ಲಿ ಯಜ್ಞವೆಂದರೇನೆಂಬುದನ್ನು ಸ್ವಲ್ಪ ವಿಚಾರಿಸೋಣ. "ಯಜದೇವಪೂಜಾಸಂಗತಿಕರಣದಾನೇಷು" ಎಂಬ ಧಾತುವಿಗೆ "ಯಜ ಯಾಚ ಯತ ಯಚ್ಛ ಪ್ರಚ್ಛ ರಕ್ಷೋನಙ್" (3-3-90) ಎಂಬ ಸೂತ್ರದಿಂದ ನಙ್ ಪ್ರತ್ಯಯವನ್ನು ಮಾಡಿಕೊಳ್ಳಲು ಯಜ್ಞವೆಂತಲೂ, ಭಾವೇ (3-3-18) ಎಂಬ ಸೂತ್ರದಿಂದ ಘಞ್ ಪ್ರತ್ಯಯವನ್ನು ಮಾಡಿಕೊಳ್ಳಲು ಯಾಗವೆಂತಲೂ ಸಿದ್ಧವಾಗುತ್ತದೆ. ಆಸ್ತಿಕ ಬುದ್ಧಿಯಿಂದ ತಮ್ಮತಮ್ಮಿಷ್ಟದೇವತೆಯನ್ನಾರಾಧಿಸುವಿಕೆ ಎಂದು ಇವುಗಳ ಅರ್ಥವಾಗುತ್ತದೆ. ವೀರಶೈವರಾದರೂ ತಮ್ಮಿಷ್ಟದೇವತೆಯಾದ ಪರಶಿವಲಿಂಗವನ್ನು ಅಹರ್ನಿಶಯಲ್ಲಿ ಪೂಜಿಸುತ್ತಲೇ ಇದ್ದ ಬಳಿಕ ಸಾಮಾನ್ಯವಾಗಿ ಯಜ್ಞಮಾಡುವದಿಲ್ಲವೆಂಬಾಕ್ಷೇಪವು ಹೇಗೆ ಸಮಂಜಸವಾಗುವುದು? ತಪಃಕರ್ಮಜಪೋಧ್ಯಾನಂ ಜ್ಞಾನಂಚೇತ್ಯನುಪೂರ್ವಶಃ। ಪಂಚಯಜ್ಞಾಃ ಪ್ರಕೀರ್ತ್ಯಂತೇ ಶಿವಧರ್ಮಾನುಸೇವಿನಾಂ॥ ಎಂಬ ಶಿವಾಗಮ ವಚನಪ್ರಕಾರ ವೀರಶೈವರು ಪಂಚಯಜ್ಞವನ್ನಾಚರಿಸುತ್ತಲೇ ಇರುವರು. ಶಿವಪೂಜಾರೂಪಯಾಗವೊಂದನ್ನು ಮಾಡಿದರೇನಾಯಿತು? ವೇದೋಕ್ತ ಸಕಲ ಕರ್ಮಗಳನ್ನೂ ಯಾಕೆ ಮಾಡುವುದಿಲ್ಲವೆಂದು ಕೇಳುವಿರೋ? ಭಟ್ಟಶಿಖಾಮಣಿಗಳೇ! ವೇದೋಕ್ತ ಸಕಲ ಕರ್ಮಗಳನ್ನಾಚರಿಸುವವರು ನಿಮ್ಮ ಶ್ರಿಮಠಸ್ಥರಲ್ಲಿ ಯಾರಿರುವರು? ಪೌಂಡರೀಕಾಶ್ವಮೇಧಾದಿ ಯಾಗಗಳನ್ನು ಯಾರು ಮಾಡುತ್ತಿರುವರು? ಯಾವ ಪ್ರಾಂತದ ಯಾವ ಬ್ರಾಹ್ಮಣನು ವೇದೋಕ್ತ ಸಕಲ ಕರ್ಮಗಳನ್ನೂ ಮಾಡುತ್ತಿರುವನು? ಹೇಳಲು ಈ ಲೇಖಕರಿಗೆ ಸಾಮರ್ಥ್ಯವುಂಟೋ? ಯಾಜ್ಞವಲ್ಕ್ಯಾದಿಸ್ಮೃತಿಗಳಾಧಾರದಿಂದ ಅಶ್ವಮೇಧಾದಿ ಯಾಗಗಳನ್ನು ತ್ಯಜಿಸಿರುವೆವೆಂದು ಹೇಳುವಿರೋ? ಹಾಗಾದರೆ ಕಾಮಿಕಾದಿ ಶಿವಾಗಮಗಳಾಧಾರದಿಂದ ವೀರಶೈವರು ಪ್ರಾಣಿ

ಹಿಂಸಕಗಳಾದ ಕೆಲವು ಕರ್ಮಗಳನ್ನು ಮಾತ್ರ ಬಿಟ್ಟರೆ ಯಾವ ಕ್ಷತಿಯು? ಏತಾವತಾ ಅವೈದಿಕತ್ವವು ಹೇಗೆ ಸಂಭವಿಸುವುದು?

ಸರ್ವಾನುಷ್ಠೇಯಗಳಾದ ಜ್ಯೋತಿಷ್ಟೋಮದರ್ಶಪೌರ್ಣಮಾಸಾದಿ ಯಾಗಗಳನ್ನು ಯಾಕೆ ಮಾಡುವದಿಲ್ಲೆಂದು ಆಕ್ಷೇಪಿಸುವದಾದರೂ ಅವಿಚಾರರಮಣೀಯವಾಗಿದೆ. ಯಾಕಂದರೆ “ದರ್ಶಪೌರ್ಣಮಾಸಾಭ್ಯಾಂ ಸ್ವರ್ಗಕಾಮೋಯಜೇತ; ಅಗ್ನಿಹೋತ್ರಂ ಜುಹುಯಾತ್ಸ್ವರ್ಗಕಾಮಃ; ಉದ್ಭಿದಾಯಜೇತ ಪಶುಕಾಮಃ; ರಾಜಸೂಯೇನ ಸ್ವಾರಾಜ್ಯಕಾಮೋಯಜೇತ” ಇತ್ಯಾದಿ ವಿಧಿವಾಕ್ಯಗಳಿಂದ ಆಯಾ ಫಲಾಪೇಕ್ಷೆಯುಳ್ಳವರಿಗೆ ಆಯಾ ಯಾಗ ಮಾಡಲು ವಿಧಾನವಿರುವುದಲ್ಲದೆ, ಪುತ್ರಕಾಮಿಯಾದವನು ದರ್ಶಪೌರ್ಣಮಾಸ ರಾಜಸೂಯಾದಿ ಯಾಗಗಳನ್ನು ಮಾಡದಿದ್ದರೆ, ಪಶುಕಾಮನೆಯುಳ್ಳವನು ರಾಜಸೂಯ ಜ್ಯೋತಿಷ್ಟೋಮಾದಿ ಯಾಗಗಳನ್ನು ಮಾಡದಿದ್ದರೆ, ಸ್ವರ್ಗಕಾಮಿಯು ಅನ್ಯಯಾಗಗಳನ್ನು ಮಾಡದಿದ್ದರೆ, ನಿಷ್ಕಾಮಿಯಾದವನು ಯಾವ ಯಾಗವನ್ನೂ ಮಾಡದಿದ್ದರೆ, ಪ್ರತ್ಯವಾಯವು ಪ್ರಾಪ್ತವಾಗುತ್ತದೆಂತಲೂ, ಅವೈದಿಕತ್ವವು ಪ್ರಾಪ್ತವಾಗುತ್ತದೆಂತಲೂ ಎಲ್ಲಿಯೂ ವಿಧಿಯಿಲ್ಲ. ನಿಷ್ಕಾಮಿಯಾದವನು ಯಾಗಾದಿಗಳನ್ನು ಮಾಡಬೇಕೆಂಬ ಪಕ್ಷದಲ್ಲಿ ವಿಶ್ವಜಿದಧಿಕರಣ “ವಿಶ್ವಜಿತಾಯಜೇತ ಇತ್ಯತ್ರಫಲಸ್ಯಾಶ್ರವಣಾತ್ ಫಲಮಂತರೇಣ ವಿಧಿಶ್ರುತೇರನುಪಪತ್ತೇರವಶ್ಯಂ ಫಲೇ ಕಲ್ಪಯಿತವ್ಯೇ ಸರ್ವಾಭಿಲಷಿತತ್ವೇನ ಸ್ವರ್ಗಃಫಲಂಕಲ್ಪ್ಯತೇ” ಎಂಬ ಮೀಮಾಂಸಕೋದ್ಘೋಷವು ನಿರರ್ಥಕವಾದದ್ದಾಗುವುದಲ್ಲವೆ? ಆದಕಾರಣ ಆಯಾ ಫಲಾಪೇಕ್ಷೆಯುಳ್ಳವನೇ ಆಯಾ ಯಾಗಾದಿಗಳನ್ನು ಮಾಡಬೇಕೆಂದು ನಿರ್ಧರಿಸಬೇಕಾಗುತ್ತದೆ. ಸಕಲ ಕರ್ಮಗಳನ್ನು ನಿಷ್ಕಾಮಬುದ್ಧಿಯಿಂದಲೇ ಅನುಷ್ಠಿಸುತ್ತಿರುವ ವೀರಶೈವರು ಆಯಾ ಫಲಪ್ರದಗಳಾದ ಜ್ಯೋತಿಷ್ಟೋಮಾದಿ ಯಾಗಗಳನ್ನು ಯಾಕೆ ಮಾಡುವರು? “ತೇತಂಭುಕ್ತ್ವಾಸ್ವರ್ಗಲೋಕಂ ವಿಶಾಲಂ ಕ್ಷೀಣೇಪುಣ್ಯೇಮರ್ತ್ಯಲೋಕಂವಿಶಂತಿ” ಎಂಬ ವಚನದಂತೆ ಪುಣ್ಯಕ್ಷಯವಾದ ಬಳಿಕ ಅಳಿದುಹೋಗುವ ಪಾರಲೌಕಿಕವಾದ ಸ್ವರ್ಗಸುಖವನ್ನು ಯಾಕೆ ಅಪೇಕ್ಷಿಸುವರು? ವೀರಶೈವಧರ್ಮವೇ ಈ ಲೇಖಕರಾದ ಭಟ್ಟರಿಗೆ ವಿದಿತವಿಲ್ಲವೆಂದು ತೋರುತ್ತದೆ. ಇತ್ತಕಡೆಗೆ ಸ್ವಲ್ಪಲಕ್ಷ್ಯವನ್ನು ಕೊಡಿರಿ. “ವೀಪಬ್ದೇನೋಚ್ಯತೇವಿದ್ಯಾ ಶಿವಜೀವೈಕ್ಯಬೋಧಿನಿ । ತಸ್ಯಾಂರಮಂತೆಯೇಶೈವಾ ವೀರಶೈವಾಃಪ್ರಕೀರ್ತಿತಾಃ ॥ ವಿಕಲ್ಪೋ ರಾವಿಕಲ್ಪಾರ್ಥೋ ರಹಿತಾರ್ಥಕಃ । ವಿಕಲ್ಪರಹಿತಂಶೈವಂ ವೀರಶೈವಂಪ್ರಚಕ್ಷತೆ” ಕ್ಷಣಿಕಭೋಗಗಳನ್ನು ಅಪೇಕ್ಷಿಸದೆ ಕೇವಲ ಲಿಂಗಾಂಗಸಾಮರಸ್ಯ ಬೋಧಕವಾದ ವಿದ್ಯೆಯಲ್ಲಿ ವಿನೋದಪಡುತ್ತ ಸಂಕಲ್ಪವಿಕಲ್ಪರಹಿತರಾಗಿ ಶಿವಸಾಯುಜ್ಯವನ್ನು ಹೊಂದುವವರಿಗೆ ವೀರಶೈವರೆನ್ನುವರು. “ಏಕೇನ ಜನ್ಮನಾಮುಕ್ತಿ ರ್ವೀರಾಣಾಂತುಮಹೇಶ್ವರಿ” ಇತ್ಯಾದಿ ಪ್ರಮಾಣಗಳಿಂದ ಶಾಶ್ವತವಾದ ಮೋಕ್ಷವು ಇವರ ಗುರಿಯಾಗಿರುವಾಗ್ಗೆ ನಶ್ವರವಾದ ಸ್ವರ್ಗವನ್ನು ಎಂದೂ ಅಪೇಕ್ಷಿಸಲಾರರು. ತತ್ಸಾಧಕಗಳಾದ ಕರ್ಮಗಳನ್ನೂ ಮಾಡರು. “ತುಷ್ಯತುದುರ್ಜನಃ” ಎಂಬ ನ್ಯಾಯದಿಂದ ಜ್ಯೋತಿಷ್ಟೋಮಾದಿ ಯಾಗಗಳನ್ನು ಮಾಡಿದರೇ ವೈದಿಕತ್ವವೆಂಬ ಪಕ್ಷವನ್ನು ಸ್ವೀಕರಿಸಿ ಈ ಲೇಖಕರಾಕ್ಷೇಪವನ್ನು ವಿಚಾರಿಸೋಣ:—ಭಟ್ಟರೇ ವಿಕಲಾಂಗರಿಗೆ (ಕುಂಟ ಕುರುಡ ಮೊದಲಾದವರಿಗೆ) ಯಾವ ಯಾಗವನ್ನು ಮಾಡಲೂ ಅಧಿಕಾರವಿಲ್ಲದಿರುವುದರಿಂದ ಇವರಿಗೆ ವೈದಿಕತ್ವವುಂಟೋ? ಇಲ್ಲವೋ? ಯಾಗಗಳನ್ನು ಮಾಡದಿದ್ದರೂ ವೇದೋಪನಿಷದುಕ್ತವಾದ ಕೆಲವು ಕರ್ಮಗಳನ್ನು ಮಾಡುತ್ತಿರುವುದರಿಂದ ಉಂಟೆಂದು ಹೇಳುವಿರೋ? ಹಾಗಾದರೆ ವೇದೋಪನಿಷದುಕ್ತವಾದ ಭೂತಿ ರುದ್ರಾಕ್ಷ, ಲಿಂಗಧಾರಣ, ಪ್ರಣವ ಪಂಚಾಕ್ಷರ, ಷಡಕ್ಷರ, ಪಂಚಬ್ರಹ್ಮಾದಿ ಮಂತ್ರಗಳ ಜಪ ಮೊದಲಾದ ಕರ್ಮಗಳನ್ನು ಮಾಡುತ್ತಿರುವ ವೀರಶೈವರಿಗೆ ಹೇಗೆ ಅವೈದಿಕತ್ವವನ್ನು ಹೇಳುವಿರಿ? ಅಂಗಹೀನರಿಗೆ ವೈದಿಕತ್ವವಿಲ್ಲೆಂದು ಹೇಳುವಿರೋ? ನಿಮ್ಮ ಮತದಂತೆ ಅವೈದಿಕನಿಗೆ ಬ್ರಾಹ್ಮಣ್ಯವಿಲ್ಲವಾದುದರಿಂದ ಅಬ್ರಾಹ್ಮಣನಾದವನಿಂದ ಹುಟ್ಟಿದ ಪುತ್ರಪೌತ್ರಾದಿಗಳಲ್ಲಿ ಬ್ರಾಹ್ಮಣ್ಯವು ಹೇಗೆ ಸಂಭವಿಸುವುದು? ಕಂಪಿಸ್ಮೃತ್ಯಾದಿಗಳಲ್ಲಿ ಹೇಳಿದಪ್ರಕಾರ ಅನುಲೋಮಸಾಂಕರ್ಯದಲ್ಲಿ ಮಾತೃನಿಷ್ಠ ಜಾತಿಯೂ, ವಿಲೋಮಸಾಂಕರ್ಯದಲ್ಲಿ ಪಿತೃನಿಷ್ಠ ಜಾತಿಯೂ ಪುತ್ರರಲ್ಲಾರೋಪವಾಗುವ ಕಾರಣ, ಪುತ್ರನಲ್ಲಿ “ಅಯಂಬ್ರಾಹ್ಮಣಃ” ಎಂದು ವ್ಯವಹಾರವುಂಟಾಗಬೇಕಾದರೆ ಪಿತೃನಿಷ್ಠ ಬ್ರಾಹ್ಮಣ್ಯವೇ ಕಾರಣವಾಗಿರುವುದಲ್ಲವೆ? ಕರ್ಮಕಾಂಡಿಗಳಾದ ನಿಮಗೆ ಪಾಪವಶದಿಂದ ಅಂಗಹೀನರಾಗಲು ಯಜ್ಞಗಳನ್ನು ಮಾಡುವ ಅಧಿಕಾರವಿಲ್ಲದಿದ್ದರೂ ಕೆಲವು ಕರ್ಮಗಳನ್ನು ಮಾಡುವುದರಿಂದ ಹೇಗೆ ವೈದಿಕತ್ವವುಂಟೋ ಹಾಗೆಯೇ ಜ್ಞಾನಕಾಂಡಿಗಳಾದ ವೀರಶೈವರಿಗೂ ಕೆಲವು ಕರ್ಮಗಳನ್ನು ಮಾಡುವುದರಿಂದ ವೈದಿಕತ್ವವಿದ್ದೇಯಿರುತ್ತದೆ. ಷೋಡಶಕರ್ಮಗಳನ್ನು ವೀರಶೈವರೂ ಮಾಡುತ್ತಿರುವರು. ಆದರೆ ಅನ್ಯದೇವತೋಪಾಸನೆಯನ್ನು ಮಾಡದೆ ಕೇವಲ ಶಿವೋಪಾಸನೆಯಿಂದಲೇ ಸರ್ವಕರ್ಮಗಳನ್ನೂ ನೆರವೇರಿಸುವರು. ಸಕಲ ಕಾರ್ಯಗಳೂ ವೈದಿಕಮಂತ್ರಗಳಿಂದ ನಡೆಯುವವು. ಎಂಟನೆಯ ವರ್ಷದಲ್ಲಿ ದೀಕ್ಷೆ ಎಂಬ ಸಂಸ್ಕಾರವನ್ನು ಮಾಡಿಕೊಳ್ಳುವರು. ಉಪನಯನ-ದೀಕ್ಷೆ-ಎಂದು ನಾಮದಲ್ಲಿ ಮಾತ್ರ ಭೇದವಿರುವುದಲ್ಲದೆ ಸಂಸ್ಕಾರದಲ್ಲಿ ಭಿನ್ನತೆಯಿಲ್ಲ. ದೀಕ್ಷೆಯಿಂದಲೇ ವೀರಶೈವರಿಗೆ ದ್ವಿಜತ್ವ ಪ್ರಾಪ್ತಿಯಾಗುತ್ತದೆ. ಉಪನಯನವನ್ನು ಮಾಡಿಕೊಂಡು ಪ್ರಾಣಿಹಿಂಸಕಗಳಾದ ಯಜ್ಞಾದಿಗಳನ್ನು ಮಾಡುವದು ಹೇಯವೆಂದು ಭಾವಿಸಿ ಶ್ರೀ ಬಸವೇಶ್ವರನು ಅದನ್ನು ತಿರಸ್ಕರಿಸಿದನಲ್ಲದೆ ಸಂಸ್ಕಾರಕ್ಕೆ ತಿರಸ್ಕಾರವನ್ನು ಮಾಡಿಲ್ಲ. ಹಾಗಿದ್ದರೆ ಶಿವದೀಕ್ಷೆಯನ್ನು ಆವನು ಎಂದೂ ಮಾಡಿಕೊಳ್ಳುತ್ತಿರಲಿಲ್ಲ. ವೀರಶೈವರು ಅಪೇಯಪಾನ ಅಭಕ್ಷ್ಯಭಕ್ಷಣವನ್ನು ಮಾಡದವರೂ ಪರಿಶುದ್ಧಾತ್ಮರೂ ಆಗಿರುವರು. ಆದರೆ ವೈಶ್ಯರಿಗೆ ಸಾಂಕರ್ಯ ಮಾತ್ರ ಇವರಲ್ಲುಂಟೆಂದು ಆ ಲೇಖಕರಾಕ್ಷೇಪಿಸಿರುವುದಾದರೂ ಅವಿಚಾರ ರಮಣೀಯವಾಗಿದೆ. ಭಟ್ಟರೇ! ನೀವು ಆಚರಿಸುವ ಪೌಂಡರೀಕವೆಂಬ ಯಾಗದಲ್ಲಿ ರಜಸ್ವಲೆಯಾದರೆ ಸೂತಕವನ್ನು ಮಾನಿಸುವಿರೋ? ನೈಮಿತ್ತಿಕಕರ್ಮವಾದ ಪೌಂಡರೀಕದಲ್ಲಿ ಕಂಕಣಬದ್ಧರಾದ ನಿಮಗೆ ಹೇಗೆ ರಜಸ್ವಲಾದಿ ಸೂತಕವಿಲ್ಲವೋ ಹಾಗೆಯೇ ನಿತ್ಯಕರ್ಮವಾದ ಶಿವಾರ್ಚನೆಯಲ್ಲಿ ಕಂಕಣಬದ್ಧರಾದ ವೀರಶೈವರಿಗಾದರೂ ಶಿವಾರ್ಚನ ವಿಷಯದಲ್ಲಿ ಇಲ್ಲವು “ಶೈವಂದೇವಾರ್ಚನಂಯಸ್ಯ ಯಸ್ಯಚಾಗ್ನಿಪರಿಗ್ರಹಃ । ವಾನಪ್ರಸ್ಥಯತೀನಾಂಚ ಶರೀರೇನಾಸ್ತಿ ಸೂತಕಂ” ಎಂಬ ಪರಾಶರಸ್ಮೃತಿಯ ವಾಕ್ಯದಿಂದಲೂ “ಲಿಂಗಾರ್ಚನರತಾನಾರೀ ಸೂತಕೀವಾರಜಸ್ವಲಾ । ರವಿರಗ್ನಿರ್ಯಥಾವಾಯುಃ ಕೋಟಿಕೋಟಿಗುಣಶುಚಿಃ ॥ ಜಾತಕೇಸೂತಕೇವಾಪಿ ನತ್ಯಾಜ್ಯಂಶಿವಪೂಜನಂ” ಇತ್ಯಾದಿ ಸಿದ್ಧಾಂತಶಿಖಾಮಣಿ ವಾಕ್ಯಗಳಿಂದಲೂ ಯಾವಜ್ಜೀವವ್ರತವಾದ ಶಿವಾರ್ಚನಕ್ಕೆ ಲೋಪವನ್ನುಂಟುಮಾಡಿಕೊಳ್ಳದಿರುವುದಕ್ಕಾಗಿ ಸೂತಕವು ತ್ಯಾಜ್ಯವೆಂದು ಸಾಧಿಸಲ್ಪಟ್ಟಿರುವುದು. ಆದುಕಾರಣ ಸೂತಕವನ್ನು ಮಾನಿಸದಿದ್ದರೆ ಯಾವ ಕ್ಷತಿಯು? ಈ ಆಚರಣೆಯು ಪ್ರಮಾಣಸಿದ್ಧವಾದುದಾದರೂ ಪ್ರತ್ಯಕ್ಷ ಲೋಕವಿರುದ್ಧವಾಗಿರುವುದರಿಂದ ರಜಸ್ವಲಾ ಕಾಲದಲ್ಲಿ ಹೇಗೆ ಶಿವಲಿಂಗಧಾರಣೆಯನ್ನೂ ಪೂಜೆಯನ್ನೂ ಮಾಡುವರೆಂದು ಕೇಳುವಿರೋ? ನೀವು ಆಚರಿಸುವ ಜ್ಯೋತಿಷ್ಟೋಮಾತಿರಾತ್ರ ಗವಾಮಯನಾದಿ ಯಾಗಗಳಲ್ಲಿ ಪಶುಹನನ ಮಾಂಸಭಕ್ಷಣ ಬ್ರಹ್ಮಚಾರಿಕೃತದಿವಾದಾಸೀಸಂಗನು (ಹಗಲು ದಾಸಿಯೊಡನೆ ಬ್ರಹ್ಮಚಾರಿಯ ಸಂಯೋಗ) ಇತ್ಯಾದಿಗಳು ಲೋಕವಿರುದ್ಧವಾದವುಗಳಲ್ಲವೇ? ಸಹಸ್ರಾರು ಪ್ರತ್ಯಕ್ಷ ಲೋಕವಿರುದ್ಧವಾದ ಕಾರ್ಯಗಳನ್ನು ನೀವು ಮಾಡುತ್ತಿದ್ದರೂ ಅವನ್ನು ಹಿಂದಕ್ಕಿಟ್ಟು ಅನ್ಯರ ಶುದ್ಧಾಚರಣೆಯನ್ನು ದೋಷಗಳನ್ನಾಗಿ ಮುಂದೆತರುವ ನಿಮ್ಮ ಧಾರ್ಷ್ಟ್ಯವು ಏಕೆ ಹೋಗಲೊಲ್ಲದೋ? ವೀರಶೈವ ಸಿದ್ಧಾಂತತನ್ನರಿಯದ ತಿಳಿಗೇಡಿಯಾದ ಯಾವುದೋ ಒಂದು ವ್ಯಕ್ತಿಯು ಮಾತ್ಸರ್ಯದಿಂದ ಬರೆದ ವಿಶ್ವಗುಣಾದರ್ಶ ಚಂಪುವಿನೊಂದು ಶ್ಲೋಕವನ್ನೇ ದೊಡ್ಡ ಪ್ರಮಾಣವನ್ನಾಗಿಟ್ಟುಕೊಂಡು ವೀರಶೈವರು ಗುರುವಿನ ಪಾದೋದಕವನ್ನು ಲಿಂಗದಮೇಲೆ ಎರೆಯುವರೆಂದು ಆ ಲೇಖಕರು ತಾಂಡವವನ್ನು ಮಾಡಿರುವರು. ಈ ವಿಷಯವು ಅತಿಗೋಪ್ಯವಾದುದು; ಆದರೂ ಈ ಲೇಖಕರ ಸಂದೇಹಪಿಶಾಚವನ್ನು ಓಡಿಸುವುದಕ್ಕಾಗಿ ಅದನ್ನು ಉಲ್ಲೇಖಿಸಬೇಕಾಗಿದೆ. ವೃದ್ಧಾಚಾರ ಪರಂಪರೆಯಿಂದ ಅಡಿಕೆಯನ್ನು ವಿಘ್ನೇಶ್ವರನೆಂತಲೂ ಅರಿಶಿನವನ್ನು ಗೌರಿಯೆಂತಲೂ ತೃಣಕಾಷ್ಠಾದಿನಿರ್ಮಿತವಾದ ಪ್ರತಿಮೆಗಳನ್ನು ವಿಷ್ಣುಬ್ರಹ್ಮಾದಿ ದೇವತೆಗಳೆಂತಲೂ ಪೂಜಿಸಿ ನಮಸ್ಕರಿಸುವ ರೂಢಿಯುಂಟು. ಎಷ್ಟೋ ಜನಗಳು ಮಹಾಮಹಿಮರಾದವರ ಫೋಟೋ ಮೊದಲಾದವುಗಳನ್ನು ಪೂಜಿಸುತ್ತಿರುವರು. ಆದರೆ ಆಯಾ ವಸ್ತುಗಳನ್ನು ಆಯಾ ದೇವತಾಭಾವನೆಯಿಂದಲೇ ಪೂಜಿಸುವರಲ್ಲದೆ ನಿಕೃಷ್ಟವಾದವುಗಳೆಂದು ಭಾವಿಸಿ ಪೂಜಿಸುವುದಿಲ್ಲ. ಮಾನವ ಕಾರ್ಯಗಳೆಲ್ಲವೂ ಭಾವನಾಮೂಲಕವಾದವುಗಳು. ಸತಿಯನ್ನೂ ಪುತ್ರಿಯನ್ನೂ ಕೂಡ ಆಲಿಂಗಿಸುವರು. ಆಲಿಂಗನಕ್ರಿಯೆಯು ಒಂದಾದರೂ ಭಾವನಾಭೇದದಿಂದ ಭಿನ್ನವಾದದ್ದಾಗಿಯೂ ನಿರ್ದೋಷವಾದದ್ದಾಗಿಯೂ ಇರುವುದು. ಇದೇ ಕ್ರಿಯೆಯು ವಿಪರೀತ ಭಾವನೆಯುಳ್ಳದ್ದಾದರೆ ಪಾಪಹೇತುವಾಗುವುದು. ಇದೇ ಪ್ರಕಾರವಾಗಿ ವೀರಶೈವರಾದರೂ ಗುರುಜಂಗಮರನ್ನು ಕರಚರಣಾದ್ಯವಯವಗಳ ಸಾಧರ್ಮ್ಯದಿಂದ ಸಮಾನರನ್ನಾಗಿ ಭಾವಿಸದೆ “ಗುರುರ್ಬ್ರಹ್ಮಾ ಗುರುರ್ವಿಷ್ಣು ರ್ಗುರುರ್ದೇವೋಮಹೇಶ್ವರಃ । ಗುರುಸ್ಸಾಕ್ಷಾತ್ಪರಂಬ್ರಹ್ಮ ತಸ್ಮೈಶ್ರೀಗುರವೇನಮಃ ॥ ಯೋಗುರುಸ್ಸಶಿವಃಪ್ರೋಕ್ತೋ ಯಶ್ಶಿವಸ್ಸಗುರುಸ್ಮೃತಃ । ವಿಕಲ್ಪಂಯಸ್ತುಕುರ್ವೀತ ರೌರವಂನರಕಂವ್ರಜೇತ್” “ನಗುರೋಃಪರಮಂತತ್ವಂ” “ಗುರೋರಪ್ಯರ್ಚನೇನಾಪಿ ಸಾಕ್ಷಾದಭ್ಯರ್ಚಿತಶ್ಶಿವಃ । ತಯೋರ್ನಾಸ್ತಿ ಭಿದಾಕಿಂಚಿ ದೇಕತ್ವಾತ್ತತ್ತ್ವರೂಪತಃ” “ಏಕಏವಶಿವಸ್ಸಾಕ್ಷಾತ್ ತ್ರಿವರ್ಣಾನುಗ್ರಹಕ್ಷಮಃಪ್ರಭುಃ । ಗುರುಜಂಗಮಲಿಂಗಾತ್ಮಾ ವರ್ತತೆಭುಕ್ತಿಮುಕ್ತಿದಃ ॥ ಏಕಮೂರ್ತಿಸ್ತ್ರಯೋಭಾಗಾಃ ಗುರುರ್ಲಿಂಗಂಚಜಂಗಮಃ । ಜಂಗಮಶ್ಚಗುರುರ್ಲಿಂಗಂ ತ್ರಿವಿಧಂಲಿಂಗಮುಚ್ಯತೆ ॥” ಇತ್ಯಾದಿ ಪ್ರಮಾಣಗಳಿಂದ ಗುರುಜಂಗಮರು ಲಿಂಗಸಮಾನರೆಂತಲೂ ಸಮಯಾನುಸಾರ ಲಿಂಗಕ್ಕಿಂತಲೂ ಅಧಿಕರಾದವರೆಂತಲೂ ಭಾವಿಸಿ ಅವರುಗಳನ್ನು ಪೂಜಿಸುವರಲ್ಲದೆ ಮನುಷ್ಯ ಭಾವನೆಯಿಂದ ಪೂಜಿಸುವುದಿಲ್ಲ. ಗುರುವು ಲಿಂಗಸಮಾನನಾದರೆ ಆತನ ಚರಣವು ಹೇಗೆ ಲಿಂಗಕ್ಕೆ ಸಮಾನವಾಗುವದು? ಎಂದಾಶಂಕಿಸುವುದಾದರೂ ಅಭದ್ರವಾಗಿದೆ. “ಸರ್ವಲಿಂಗಸ್ಸಾ ಪಯತಿ ಪಾಣಿಮಂತ್ರಂಪವಿತ್ರಂ” ಎಂಬ ಶ್ರುತಿಯಲ್ಲಿ ಲಿಂಗಕ್ಕೆ ಪವಿತ್ರಶಬ್ದವು ಹೇಗೆ ವಿಶೇಷವಾಗಿರುವುದೋ ಹಾಗೆಯೇ “ಚರಣಂಪವಿತ್ರಂವಿತತಂಪುರಾಣಂ ಯೇನಪೂತಸ್ತರತಿದುಷ್ಕೃತಾನಿ ತೇನಪವಿತ್ರೇಣಶುದ್ಧೇನ ಪೂತಾಅತಿಪಾಪ್ಮಾನಮರಾತಿಂತರೇಮ” ಎಂಬ ಶ್ರುತಿಯಲ್ಲಿ ಗುರುಚರಣಕ್ಕೂ ಪವಿತ್ರಶಬ್ದವು ವಿಶೇಷಣವಾಗಿರುವುದರಿಂದ ಪವಿತ್ರವಿಷಯದಲ್ಲಿ ಗುರುಪಾದಲಿಂಗಗಳಿಗೆ ಸಾಮ್ಯವುಂಟು. ಇದಲ್ಲದೆ “ಅಂಗುಷ್ಠೇಭಾವಯೇದ್ರುದ್ರಂ ತರ್ಜನ್ಯಾಂಶಂಕರಂಸ್ಮರೇತ್ । ಮಧ್ಯಮಾಯಾಂಮಹಾದೇವ ಮನಾಮಿಕ್ಯಾಂತ್ರಿಯಂಬಕಂ । ಕನಿಷ್ಠಿಕಾಯಾಮೀಶಾನಂ ಪಾದೋಪರಿಕಪರ್ದಿನಂ । ಪಾದಾಧಃಪಂಚವದನಂ ಗುಲ್ಫಯೋರುಗ್ರಭರ್ಗಕೌ । ಸರ್ವಲಿಂಗಮಯಂಧ್ಯಾತ್ವಾ ಪಾದಂಜಂಗಮಲಿಂಗಿನಃ” ಇತ್ಯಾದಿ ಪ್ರಮಾಣಗಳಿಂದ ಗುರುಜಂಗಮ ಪಾದವನ್ನು ಲಿಂಗಮಯವಾದದ್ದನ್ನಾಗಿ ಭಾವಿಸಿ ಪೂಜಿಸುವರಲ್ಲದೆ ನಿಕೃಷ್ಟಾವಯವವೆಂಬ ಭಾವನೆಯಿಂದ ಪೂಜಿಸುವುದಿಲ್ಲ. ಈ ವಿಷಯವು ಅಶೇಷ ವೀರಶೈವರಿಗೆ ವಿಶೇಷವಾಗಿ ವಿದಿತವಿರುವುದರಿಂದ ಹೆಚ್ಚು ಬರೆಯುವ ಅವಶ್ಯಕವಿಲ್ಲ. ಅಲ್ಲದೆ ವೀರಶೈವರು ಮಾಡುವ ಈ ವಿಧಾನವನ್ನೇ ಈ ನಮ್ಮ ಭಟ್ಟರಜಾತಿಯವರೂ ಪರ್ಯಾಯವಾಗಿ ಮಾಡಿಯೇ ಮಾಡುತ್ತಿರುವರು. ಹೇಗೆಂದರೆ—ಇವರು ತಮ್ಮ ಗುರುಗಳ ಪಾದಾರ್ಚನೆಯನ್ನು ಮಾಡಿದಾಗ ಅವರ ಪಾದತೀರ್ಥವನ್ನು ತಮ್ಮ ಶಿರಸ್ಸಿನಮೇಲೆ ಪ್ರೋಕ್ಷಿಸಿಕೊಳ್ಳುವರಷ್ಟೆ. ಶಿರಸ್ಸಿನಲ್ಲಿರುವ ಸಹಸ್ರಾರಕಮಲವೇ ಬ್ರಹ್ಮಸ್ಥಾನವು. ಅದರಮೇಲೆ ಸಂಪ್ರೋಕ್ಷಿಸಿಕೊಳ್ಳುವುದರಿಂದ ಪರಮಾತ್ಮನ ಮೇಲೆ ಪ್ರೋಕ್ಷಿಸಿಕೊಳ್ಳುವುದೇ ಅದರ ಭಾವವಾಗಿರುತ್ತದೆ. ಆ ಸಹಸ್ರಾರ ಕಮಲದಲ್ಲಿರುವ ಪರಮಾತ್ಮಕಲೆಯನ್ನೇ ದೀಕ್ಷಾಕಾಲದಲ್ಲಿ ಗುರುವು ಭಾವಮನೋದೃಷ್ಟಿಗಳಿಂದ ಆಕರ್ಷಿಸಿ ತಂದು ಇಷ್ಟಲಿಂಗದಲ್ಲಿ ಆವಾಹಿಸಿಕೊಟ್ಟಿರುವನು. ಅಂಥ ಇಷ್ಟಲಿಂಗದ ಮೇಲೆ ಗುರುಚರಣ ತೀರ್ಥವನ್ನು ಎರೆಯುವರು. ಅಂದಬಳಿಕ ಉಭಯರೂ ಮಾಡುತ್ತಿರುವ ಕಾರ್ಯದ ತತ್ತ್ವವು ಒಂದೇಹೊರತು ಭಿನ್ನವಲ್ಲ. ಅವಿಚಾರಿಗಳಿಗೆ ಇದು ವಿಕಾರವಾಗಿ ತೋರಿದರೆ ಅದು ಅವರ ದೋಷವೇ ಹೊರತು ತತ್ತ್ವದ ದೋಷವಲ್ಲ.

ಈಪ್ರಕಾರವಾಗಿ ವೀರಶೈವಸಿದ್ಧಾಂತವಿರುವಾಗ್ಗೆ ಆಯಾ ಮತಸಿದ್ಧಾಂತವನ್ನರಿಯದೆ ಬರೆಯುವ ಲೇಖಕರ ಲೇಖನಕ್ಕೆ ವಿವೇಕಿಗಳಾರೂ ಗಮನಕೊಡತಕ್ಕದ್ದಲ್ಲ. ಆದುಕಾರಣ ಮತಸಂಪ್ರದಾಯ ವಿಷಯದಲ್ಲಿ ಆಯಾ ಮತಸಿದ್ಧಾಂತವನ್ನು ಬಲ್ಲವರಿಂದ ಸತ್ಯಾಸತ್ಯತೆಯನ್ನು ವಿಚಾರಿಸಿ ತಿಳಿದು ತೀರ್ಮಾನಿಸುವಲ್ಲಿ “ಸತ್ಯಮೇವೋದ್ಧರಾಮ್ಯಹಂ” ಎಂಬ ಬಿರುದನ್ನುಳ್ಳ ಶ್ರೀಮನ್ಮಹಾರಾಜರವರು ಶಕ್ತರೇ ಆಗಿದ್ದಾರೆ.

ಧರ್ಮಾಭಿಮಾನಿ.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಳ್ಳ

16 ರಾಯಲ್ ಫೌಂಟನ್ ಪೆನ್.

ಎಂಬ ಈ ಪೆನ್ನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿದಗೂ ಬರೆಯುವದು. 1ಕ್ಕೆ 1-10-0.

ಈ ಪೆನ್ನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರೆವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿಒಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿಒಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ:ರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,

ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

39 ಬಳ್ಳಾರಿ.

೧೯೨೨ ನೆಯ ಇಸವಿ ನವಂಬರ್ ತಾ॥ ೧೨ ರಿಂದ ೧೯೨೨ ನೆಯ ನವಂಬರ್ ತಾ॥ ೧೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮ ಸಂವತ್ಸರದ ಕಾರ್ತಿಕ ಬಹುಳ ಅಷ್ಟಮಿಯಿಂದ ಕಾರ್ತಿಕಬಹುಳ ಅಮಾವಾಸ್ಯೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ವೃಶ್ಚಿ
12	ಭಾನು	ಅಷ್ಟ	31-6	ಆಶ್ಲೆ	5-48	27
13	[1] ಸೋಮ	ನವ	32-0	ಮಘಾ	21-32	28
14	[2] ಮಂಗಳ	ದಶ	26-23	ಪುಬ್ಬ	18-44	29
15	[3] ಬುಧ	ಏಕಾ	20-27	ಉತ್ತ	14-39	30
16	[4] ಗುರು	ದ್ವಾದ	14-7	ಹಸ್ತ	10-25	1
17	ಶುಕ್ರ	ತ್ರಯೋ	8-35	ಚಿತ್ತ	6-18	2
18	ಶನಿ	ಚ-ಉ	3-5 45-39	ಸ್ವಾತಿ	2-3	3

(1) ಕಾರ್ತಿಕ ಸೋಮವಾರಂ. (2) ಶ್ರೀರಂಗಪಟ್ಟಣದಲ್ಲಿ ಅಷ್ಟತೀರ್ಥೋತ್ಸವ. (3) ಸರ್ವತ್ರೈಕಾದಶಿ. (4) ಪ್ರದೋಷಃ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಞ ನಪ್ಯತ್ತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫, ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ನವಂಬರ್ ತಾರೀಖು ೧೯ ನೆಯ ಭಾನುವಾರ ಸಂಚಿಕೆ ೪೭

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೫-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿ ಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಸ್ಥಾವರಣ, ಆತಿಥಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ॥ ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,

ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಿನೆಮೋಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಟ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಷೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡ ಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.

„ ನಂ. 2 ರೂ. 7—8—0.

35 ವಿಳಾಸ—ಎಸ್. ಪಾಲ್ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 542, ಪಾರ್ಕ್‌ಟೌನ್, ಮದರಾಸು.

---

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



17

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.

ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0

„ „ ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,

ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦—೮—೦
ವ್ರತಪಂಚಕ	೦—೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ — ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯೆಂಜಾ ಪ್ಲೇಗುಜ್ವರ

ಮಕ್ಕಳ — ಮಂಚ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.

25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

14 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ತ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು

ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧ ಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಪ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,

17 ನಂ. 3, ಇರುಳಪ್ಪನ ಬೀದಿ, ಮದ್ರಾಸ್

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ನವಂಬರ್ ತಾ|| ೧೯ನೆಯ ಭಾನುವಾರ.

ವಿದ್ಯಾಭ್ಯಾಸದ ಕಂದಾಯ

ನಮ್ಮ ಪ್ರಭುತ್ವದವರು ಸಂಸ್ಥಾನದ ಸಕಲ ಪ್ರಜೆಗಳ ವಿದ್ಯಾಭಿವೃದ್ಧಿಗಾಗಿಯೂ ವಹಿಸಿರುವ ಕುತೂಹಲವು ಸಾಮಾನ್ಯವಾಗಿಲ್ಲ. ವಿದ್ಯಾಭ್ಯಾಸ ಶಾಖೆಗಾಗಿ ಮಾಡಲ್ಪಡುವ ವೆಚ್ಚವು ಕಳೆದ 5-6 ವರ್ಷಗಳ ಕಾಲದೊಳಗೆ 1 ಕ್ಕೆ 1½ ಯಾಯಿತು. 1916-17ನೆ ವರ್ಷದಲ್ಲಿ ಈ ಶಾಖೆಗಾಗಿ 30 ಲಕ್ಷದೊಳಗೆ ವ್ಯಯವಾಗುತ್ತಿದ್ದಿತು. 1920-21ನೆ ವರ್ಷದಲ್ಲಿ 45 ಲಕ್ಷ ರೂ. ಗಳು ವ್ಯಯಮಾಡಲ್ಪಟ್ಟುವು. ಈಗ ಸಂಸ್ಥಾನಕ್ಕೆ ಹಣದ ಬಿಕ್ಕಟ್ಟಿನ ಪ್ರಸಂಗವು ವಿಶೇಷವಾಗಿ ಎಲ್ಲ ಶಾಖೆಗಳಲ್ಲೂ ವೆಚ್ಚವನ್ನು ಮಿತಪಡಿಸುತ್ತಿರುವ ಕಾರಣದಿಂದ, ಈ ಶಾಖೆಯ ವ್ಯಯವೂ ಸ್ವಲ್ಪ ಸಂಕೋಚಗೊಳಿಸಲ್ಪಟ್ಟಿದೆ. ಆದರೂ ಸಂಸ್ಥಾನದ ನಿಷ್ಕೃಷ್ಟವಾದ ಆದಾಯದಲ್ಲಿ 1/7 ಭಾಗವು ಈ ಶಾಖೆಗಾಗಿ ಈಗಲೂ ವ್ಯಯಮಾಡಲ್ಪಡುತ್ತಿದೆ. ಆದರೂ ಈ ಶಾಖೆಯಲ್ಲಿ ನಡೆಯಬೇಕಾಗಿರುವ ಅಭಿವೃದ್ಧಿಕಾರ್ಯಗಳು ಅನಂತವಾಗಿರುವುವು. ವಿದ್ಯಾಭ್ಯಾಸದ ಮೆಮೊರಾಂಡಮ್ಮಿನ ಮೇಲೆ ಪ್ರಭುತ್ವದವರು ಮಾಡಿರುವ ಅಪ್ಪಣೆಯಂತೆ ಕಾರ್ಯಗಳು ಜರುಗಬೇಕಾದರೆ ಕೋಟಿಗಟ್ಟಲೆ ಹಣವು ವೆಚ್ಚವಾಗಬೇಕು. ಗ್ರಾಮಾಂತರಗಳಲ್ಲಿ ನಾಮಮಾತ್ರಕ್ಕಿದ್ದ ಏಡೆಡ್ ಪಾಠಶಾಲೆಗಳನ್ನೆಲ್ಲಾ ಕೇವಲ ಸರ್ಕಾರಿ ಶಾಲೆಗಳನ್ನಾಗಿ ಮಾರ್ಪಡಿಸುವುದು ಅತ್ಯವಶ್ಯಕವಾಗಿದೆ. ಉತ್ತಮರಾದ ಉಪಾಧ್ಯಾಯರನ್ನು ಎಲ್ಲ ಶಾಲೆಗಳಿಗೂ ಒದಗಿಸಿ, ಅವುಗಳ ಮೇಲ್ವಿಚಾರಣೆಯ ದಕ್ಷತೆಯನ್ನು ಹೆಚ್ಚಿಸಬೇಕಾಗಿದೆ. ಬಾಲ ಮಧ್ಯಮತರಗತಿಯ ಶಾಲೆಗಳ ತರಗತಿಗಳಲ್ಲಿ ನೂತನರೀತಿಯ ಅಭ್ಯಾಸಕ್ರಮವನ್ನು ರೂಢಿಸಬೇಕಲ್ಲದೆ, ಕಸಬುದಾರಿಯ ಶಿಕ್ಷಣವನ್ನು ಸರ್ವತ್ರ ಹೆಚ್ಚಿಸಬೇಕಾಗಿದೆ. ಹಲವುಕಡೆ ಶಾಲಾಭವನಗಳು ಇಲ್ಲದೆಯೂ ಎಷ್ಟೋಕಡೆ ಇದ್ದರೂ ಸ್ಥಲವಸತಿಯು ಸಾಲದೆಯೂ, ಕೆಲ ಶಾಲೆಗಳಿಗೆ ತಕ್ಕ ಶಿಕ್ಷಣೋಪಕರಣಗಳು ಸಾಂಗವಾಗಿಲ್ಲದೆಯೂ ಹೀಗೆ ನಾನಾವಿಧಗಳಾದ ನ್ಯೂನತೆಗಳಿವೆ. ಇವನ್ನೆಲ್ಲಾ ಪರಿಹರಿಸಬೇಕಾಗಿದೆ. ಮುಖ್ಯವಾಗಿ ಗ್ರಾಮಾಂತರದ ಜನರ ಮಕ್ಕಳ ವಿದ್ಯಾಭಿವೃದ್ಧಿಗೆ ವಿಶೇಷ ಪ್ರಯತ್ನಗಳು ಜರುಗಬೇಕಾಗಿವೆ. ಮೆಮೊರಾಂಡಮಿನ ಅಪ್ಪಣೆಯಂತೆ ಕಾರ್ಯಭಾಗವು ಜರುಗುವುದಾದರೆ ಮೇಲೆಕಂಡ ಲೋಪಗಳೆಲ್ಲಾ ಪರಿಹಾರವಾಗಿ ಕೆಲಕಾಲದೊಳಗೆ ಸಂಸ್ಥಾನದ ಪ್ರಜೆಗಳಲ್ಲಿ ವಿದ್ಯಾವಂತರ ಸಂಖ್ಯೆಯು 100 ಕ್ಕೆ 50 ರ ಮಟ್ಟಿಗೆ ಆಗುವುದು ಕೂಡ ಸಾಧ್ಯವಾಗುತ್ತದೆ. ಆದರೆ ಮೆಮೊರಾಂಡಮ್ಮಿನ ಮೇಲಣ ಅಪ್ಪಣೆಯು ಕೊಡಲ್ಪಟ್ಟು 1 ವರ್ಷದ ಮೇಲೆ ಆಗಿದ್ದರೂ, ಅದರಂತೆ ನಡೆದಿರುವ ಕಾರ್ಯಕ್ರಮಗಳು ಅತ್ಯಲ್ಪವೆಂದೇ ಹೇಳಬೇಕು. ಇದಕ್ಕೆ ದ್ರವ್ಯಾಭಾವವೇ ಕಾರಣ.

ಮುಖ್ಯವಾಗಿ ಪ್ರಜಾಸಂಖ್ಯೆಯಲ್ಲಿ ಬಹುಭಾಗವು ಗ್ರಾಮಾಂತರಗಳಲ್ಲೇ ಇರುವುದು. ಆ ಗ್ರಾಮಾಂತರಗಳ ಜನರಿಗೆ ವಿದ್ಯಾಭ್ಯಾಸದ ಅನುಕೂಲ್ಯವು ಬಹಳ ಕಡಿಮೆಯಾಗಿದೆ. ಆದರಿಂದ ಆ ಜನರಲ್ಲಿ ವಿದ್ಯಾಭಿವೃದ್ಧಿಯು ಬಹಳ ಕುಂಠಿತವಾಗಿದೆ. ಈ ಲೋಪವು ಪರಿಹಾರಗೊಂಡ ಹೊರತು ದೇಶದ ಏಳ್ಗೆಯು ಸಾಧ್ಯವಲ್ಲ. ಸರ್ಕಾರದವರು ಪ್ರಜೆಗಳ ಏಳ್ಗೆಗಾಗಿ ಮಾಡುವ ಯಾವ ಪ್ರಯತ್ನಗಳೂ ಗ್ರಾಮಾಂತರಗಳಲ್ಲಿ ಫಲೋನ್ಮುಖವಾಗದಿರುವುದಕ್ಕೆ ಅವರ ವಿದ್ಯಾಭಾವವೇ ಕಾರಣವಾಗಿದೆ. ವರ್ಷಕ್ಕೆ ಲಕ್ಷಗಟ್ಟಲೆ ರೂ. ಗಳು ವ್ಯವಸಾಯ ಶಾಖೆಗಾಗಿ ವ್ಯಯಮಾಡಲ್ಪಡುತ್ತಿದ್ದರೂ ಬೇಸಾಯಗಾರರಿಗೆ ಅದರಿಂದ ಆಗಬೇಕಾದಷ್ಟು ಲಾಭವು ಆಗುತ್ತಲಿಲ್ಲವೆಂಬ ದೂರು ಹುಟ್ಟಿರುವುದಕ್ಕಾದರೂ ಗ್ರಾಮಾಂತರದ ಜನರಲ್ಲಿ ವಿದ್ಯಾವಾಸನೆಯಿಲ್ಲದಿರುವುದೇ ಮುಖ್ಯ ಕಾರಣವು. ನಿವಾರಣೀಯಗಳಾದ ರೋಗಗಳನ್ನು ಪರಿಹರಿಸಿಕೊಂಡು ಬಾಳುವಷ್ಟು ವಿವೇಕವು ಹುಟ್ಟದಿರುವುದಕ್ಕೂ, ಭಾಗ್ಯಾಭಿವೃದ್ಧಿ ಕಾರ್ಯಗಳ ಕಡೆಗೆ ಅವರ ಮನಃಪ್ರವೃತ್ತಿಯನ್ನುಂಟುಮಾಡಲಿಕ್ಕೆ ಸರ್ಕಾರದವರು ನಾನಾವಿಧದಿಂದ ಮಾಡುತ್ತಿರುವ ಪ್ರಯತ್ನಗಳು ಫಲಿಸದಿರುವುದಕ್ಕೂ ಅವರಲ್ಲಿರುವ ಅವಿದ್ಯಾಪ್ರಭಾವವೇ ಮುಖ್ಯಕಾರಣವು. ಅನ್ಯಾಯವಾದ ದಂಡ ಲಂಚ ಮೊದಲಾದುವುಗಳಿಗೂ ವಿನಾಶಕರವಾದ ದುರ್ವ್ಯಸನಗಳಿಗೂ ಸಿಕ್ಕಿ ಅವರು ಕ್ಷಯಿಸಿಹೋಗುತ್ತಿರುವುದಕ್ಕೂ ಅವರಲ್ಲಿ ವಿದ್ಯಾಸಂಪತ್ತಿಯಿಲ್ಲದಿರುವುದೇ ಮುಖ್ಯಹೇತುವು. ಆದುದರಿಂದ ದೇಶದ ಏಳ್ಗೆಯನ್ನು ಕೋರುವ ಪ್ರಭುತ್ವದವರೇ ಆಗಲಿ ದೇಶಾಭಿಮಾನಿಗಳಾದ ಪ್ರಜೆಗಳೇ ಆಗಲಿ ಮೊಟ್ಟಮೊದಲು ಗಮನಿಸಬೇಕಾದ ವಿಷಯವೆಂದರೆ ಗ್ರಾಮಾಂತರದವರನ್ನು ಅಕ್ಷರಸ್ಥರನ್ನಾಗಿ ಮಾಡಿಸುವುದೇ ಆಗಿರುತ್ತದೆ. ಗ್ರಾಮಾಂತರಗಳಲ್ಲಿರುವ ಪ್ರತಿಯೊಬ್ಬ ಹುಡುಗನೂ ಹುಡುಗಿಯೂ ಸಹ ಓದುವುದು, ಬರೆಯುವುದು, ಲೆಕ್ಕ ಮಾಡುವುದು ಅನುಕೂಲವಾದೊಂದು ಕಸಬನ್ನು ಕಲಿಯುವುದು-ಇಷ್ಟಕ್ಕಾದರೂ ಸೌಕರ್ಯವುಳ್ಳವನಾಗುವಂತೆ ಮಾಡಲ್ಪಡಬೇಕು. ಅಷ್ಟನ್ನು ತಂತಮ್ಮ ಗ್ರಾಮಗಳಲ್ಲೇ ಸಂಪಾದಿಸಿಕೊಂಡ ಬಳಿಕ ಮುಂದಣ ವಿದ್ಯಾಭ್ಯಾಸ ಮಾಡಲು ಶಕ್ತಿಯೂ ಅಭಿರುಚಿಯೂ ಇದ್ದವರು ತಾಲ್ಲೂಕು ಡಿಸ್ಟ್ರಿಕ್ಟ್ ಪಟ್ಟಣಗಳಿಗೆ ಹೋಗಿ ಅಲ್ಲಿಯ ದೊಡ್ಡ ಪಾಠಶಾಲೆಗಳಲ್ಲಿ ಸೇರಿ ಓದಿಕೊಳ್ಳಬಹುದು. ಪ್ರಜೆಗಳಿಗೆ ವಿದ್ಯಾಭ್ಯಾಸ ಸೌಕರ್ಯವನ್ನೆಲ್ಲಾ ಏರ್ಪಡಿಸಲು ತಮಗೆ ಬದ್ಧಾದರವಿದೆಯೆಂಬುದನ್ನು ಪ್ರಭುತ್ವದವರು ಮೆಮೊರಾಂಡಮ್ಮಿನ ಮೇಲಣ ಅಪ್ಪಣೆಯಿಂದಲೇ ವ್ಯಕ್ತಪಡಿಸಿದ್ದಾರೆ. ಪ್ರಜಾರಕ್ಷಣಭಾರವನ್ನು ಹೊತ್ತಿರುವ ಅವರಿಗೆ ಪ್ರಜೆಗಳನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡುವುದು ಮುಖ್ಯ ಕರ್ತವ್ಯವಾಗಿದ್ದರೂ, ವಿದ್ಯಾಭ್ಯಾಸದಂತೆಯೇ ರಕ್ಷಣಾಂಗವಾದ ಇತರ ಎಷ್ಟೋ ಕಾರ್ಯಭಾರಗಳನ್ನು ಹೊತ್ತಿರುವ ಅವರಿಗೆ ಈ ವಿದ್ಯಾಶಾಖೆಗಾಗಿ ತಗಲುವ ವ್ಯಯಭಾರವನ್ನೆಲ್ಲಾ ಸರ್ಕಾರದ ಬೊಕ್ಕಸದಿಂದಲೇ ನಿರ್ವಹಿಸುವುದು ಸಾಧ್ಯವಾಗಿಲ್ಲ. ಮತ್ತು ಪ್ರಜೆಗಳ ವಿದ್ಯಾಭಿವೃದ್ಧಿ ಭಾಗ್ಯಾಭಿವೃದ್ಧಿ ಪ್ರಯತ್ನಗಳು ಪ್ರಭುತ್ವದವರಿಗೆ ಎಷ್ಟು ಗಮನೀಯವೋ ಪ್ರಜೆಗಳಿಗೂ ಕೂಡ ಅಷ್ಟು ಮತ್ತು ಅದಕ್ಕಿಂತಲೂ ಹೆಚ್ಚಾಗಿ ಅವಶ್ಯಕಗಳೇ ಆಗಿರುವುವು. ಆದುಕಾರಣ ಪ್ರಭುತ್ವದವರೇ ಈ ಭಾರವನ್ನೆಲ್ಲಾ ವಹಿಸಲಿ ಎಂದು ಪ್ರಜೆಗಳು ತಟಸ್ಥರಾಗಿ ಕುಳಿತುಕೊಂಡರೆ ನಾಳೆಗೆ ಆಗಬೇಕಾದ ಕೆಲಸವು ನಲವತ್ತು ವರ್ಷಗಳಾದರೂ ಆಗುವುದೋ ಇಲ್ಲವೋ! ಹಾಗಾಗುವುದರಿಂದ ದೇಶಕ್ಕೇ ಅನರ್ಥವಾಗುವುದು. ಯಾವ ನಾಗರಿಕ ದೇಶದಲ್ಲೂ ವಿದ್ಯಾಭ್ಯಾಸ ಕಾರ್ಯಭಾರವನ್ನು ಪ್ರಜೆಗಳು ಪ್ರಭುತ್ವದವರ ಮೇಲೆಯೇ ಹೊರಿಸಿ ತಾವು ತಟಸ್ಥರಾಗಿರುವುದಿಲ್ಲ. ಎಷ್ಟೋ ಧನಿಕರೂ ಧರ್ಮಾತ್ಮರೂ ಅಪಾರವಾದ ಧನರಾಶಿಯನ್ನು ವಿದ್ಯಾಪ್ರಸಾರ ಕಾರ್ಯಗಳಿಗೆ ಸಹಾಯಮಾಡುತ್ತಿರುವರು. ನಮ್ಮ ಸಂಸ್ಥಾನದಲ್ಲೂ ಎಷ್ಟೋ ಪುಣ್ಯಾತ್ಮರು ಈ ಕಾರ್ಯಕ್ಕೆ ಯಥೋಚಿತ ಸಾಹಾಯ್ಯವನ್ನು ಮಾಡುತ್ತ ಬಂದಿರುವುದು ಪ್ರಶಂಸನೀಯವಾಗದೆ ಇಲ್ಲ. ಆದರೆ ಎಲ್ಲೋ ಒಬ್ಬೊಬ್ಬರು ಕೊಡುವ ಅಂಥ ದಾನಗಳಿಂದ ಸಾರ್ವತ್ರಿಕ ವಿದ್ಯಾ ಪ್ರಸಾರದಂಥ ಮಹಾಕಾರ್ಯಕ್ಕೆ ಆಗಬೇಕಾದಷ್ಟು ದ್ರವ್ಯಾನುಕೂಲ್ಯವು ಆಗುವುದಿಲ್ಲ. ಆಕಾರಣದಿಂದಲೇ ಅವಶ್ಯಕರ್ತವ್ಯವಾದ ಈ ಕಾರ್ಯಕ್ಕೆ ಹೇರಳವಾದ ದ್ರವ್ಯವನ್ನು ಒದಗಿಸಬೇಕಾದರೆ ಒಂದು ಹೊಸದಾದ ಆದಾಯಭಾಗವನ್ನು ನಿರ್ಮಿಸುವುದೇ ಉಚಿತವೆಂದು ಪ್ರಭುತ್ವದವರು ಪರ್ಯಾಲೋಚಿಸಿ, ವಿದ್ಯಾಭ್ಯಾಸದ ಕಂದಾಯವೆಂಬುದೊಂದನ್ನು ವಿಧಿಸುವ ಯೋಚನೆಯನ್ನು ಮಾಡಿದರು. ಹುಟ್ಟುವಳಿಯ ಕೆಲ ಭಾಗಗಳ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತೆ ಡಿಸ್ಟ್ರಿಕ್ಟ್ ಬೋರ್ಡುಗಳವರೂ, ಸಾಧಾರಣ ಮ್ಯುನಿಸಿಪಾಲಿಟಿಗಳೂ, ರೂ.ಗೆ ೨ ಆಣೆಯಂತೆ ಸಿಟಿ ಮ್ಯುನಿಸಿಪಾಲಿಟಿಗಳೂ ಎತ್ತಬಹುದೆಂದು ಪ್ರಭುತ್ವದವರು ಉದ್ದೇಶಪಟ್ಟರು. ಈ ಉದ್ದೇಶವು ಪ್ರಜಾಪ್ರತಿನಿಧಿಸಭೆಯಲ್ಲಿ ತಿಳಿಯಿಸಲ್ಪಟ್ಟಾಗ ಕೆಲವರು ಪ್ರತಿಭಟಿಸಿದರೂ, ಪ್ರಜೆಗಳ ಮಕ್ಕಳಿಗೆ ಅತ್ಯವಶ್ಯಕವಾದ ವಿದ್ಯಾಭ್ಯಾಸಕ್ಕಾಗಿಯೇ ಇದು ಸಂಕಲ್ಪಿಸಲ್ಪಟ್ಟುದಾಗಿದ್ದ ಕಾರಣ, ಇದಕ್ಕಾಗಿ ಒಂದಿಷ್ಟು ಕಂದಾಯವನ್ನು ಹೆಚ್ಚಿಗೆಕೊಡುವುದು ಭಾರವಲ್ಲವೆಂದೂ, ಅವಶ್ಯಕವಾಗಿ ವಿಧಿಸಬಹುದೆಂದೂ ಬಹುಮಂದಿ ಪ್ರತಿನಿಧಿಗಳು ಬಿನ್ನಯಿಸಿಕೊಂಡರು. ಆದರಮೇಲೆ ಸರ್ಕಾರದವರು ಕಟ್ಟಪ್ಪಣೆ ಮಾಡಿ ಬಿಟ್ಟಿದ್ದರೆ ಇಷ್ಟರೊಳಗೇ ಇದು ವ್ಯವಹಾರಕ್ಕೆ ಬಂದು ಲಕ್ಷಾಂತರ ರೂ. ಗಳು ಈ ಭಾಗದಿಂದ ಕೂಡಿ ವಿದ್ಯಾಪ್ರಸಾರ ಪ್ರಯತ್ನಕ್ಕೆ ಎಷ್ಟೋ ಬೆಂಬಲವಾಗುತ್ತಿದ್ದಿತು. ಆದರೆ ಪ್ರಭುತ್ವದವರು ಈ ಕಂದಾಯವನ್ನು ಎತ್ತುವ ಬಿಡುವ ಅಧಿಕಾರವನ್ನು ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಇತರ ಸ್ಥಳಿಕ ಸಂಘಗಳಿಗೂ ವಹಿಸಿಕೊಟ್ಟರು. ಆಗಲೇ ಇದು ತೂಕಡಿಸಲಿಕ್ಕೆ ಆರಂಭಿಸಿತು. ಇದರ ಭವಿಷ್ಯತ್ಫಲವನ್ನು ನಾವು ಆಗಲೇ ಹೇಳಿದ್ದೆವು. ಕಡೆಗೂ ಅದು ಹಾಗೆಯೇ ಆಯಿತು. ಸಂಸ್ಥಾನದ 8 ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಬೆಂಗಳೂರು ಚಿತ್ರದುರ್ಗ ಇವೆರಡು ಬೋರ್ಡುಗಳು ಮಾತ್ರ ರೂ. 1ಕ್ಕೆ 6 ಕಾಸಿನಂತೆ ಎತ್ತಲು ನಿಶ್ಚಯಿಸಿ ಆಗಲೇ ಎತ್ತಿಯೂ ಇಟ್ಟಿವೆ. ಸಂಸ್ಥಾನದ ಒಟ್ಟು ಮ್ಯುನಿಸಿಪಾಲಿಟಿಗಳಲ್ಲಿ 12 ಮ್ಯುನಿಸಿಪಾಲಿಟಿಗಳು ಮಾತ್ರ ವಿದ್ಯಾಭ್ಯಾಸದ ಕಂದಾಯವನ್ನು ವಿಧಿಸಲು ತಮಗೆ ಇಷ್ಟವಿಲ್ಲವೆಂದು ತಿಳಿಯಿಸಿರುವುದಾಗಿ ಗೊತ್ತಾಗುತ್ತದೆ. ಸ್ಥಳಿಕ ಪ್ರಜೆಗಳ ಸೌಕರ್ಯಕ್ಕಾಗಿಯೇ ಕೆಲಸಮಾಡುವ ಸಂಘಗಳೇ ಇಂಥ ಮುಖ್ಯ ವಿಷಯದಲ್ಲಿ ಸ್ವಲ್ಪ ಧೀರತನವನ್ನು ತಾಳಿ ಮುಂಬರಿಯದೆ ಹೋಗಿರುವುದನ್ನು ನೋಡಿದರೆ ಆಶ್ಚರ್ಯವೂ ವಿಷಾದವೂ ಉಂಟಾಗುತ್ತದೆ. ಈ ಹೊಸಕಂದಾಯವು ಯಾವಪ್ರಾಂತದಲ್ಲಿ ಎತ್ತಲ್ಪಡುವುದೋ ಆ ಪ್ರಾಂತಕ್ಕೆ ಸಂಬಂಧಪಟ್ಟ ಸ್ಥಳೀಯ ಸಂಘಗಳ ಅನುಮತಿಯಮೇರೆಗೆ ಅಲ್ಲಿಯ ಪ್ರಜೆಗಳ ವಿದ್ಯಾಭ್ಯಾಸಸೌಕರ್ಯಕ್ಕಾಗಿಯೇ ಆ ಹಣವನ್ನು ವಿನಿಯೋಗಿಸಲು ಅವಕಾಶ ಕಲ್ಪಿಸಿರುವ ವಿಷಯವನ್ನು ಈಚೆಗೆ ಪ್ರಭುತ್ವದವರು ಸ್ಪಷ್ಟವಾಗಿ ತಿಳಿಯಪಡಿಸಿದ್ದಾರೆ. ಇದರಿಂದ "ರೈಲ್ವೆಸೆಸ್ಸು" ಮೊದಲಾದವುಗಳಂತೆ ಎಲ್ಲಿಯೋ ಎತ್ತಿದ ಹಣವು ಎಲ್ಲಿಗೋ ವಿನಿಯೋಗವಾಗುತ್ತದೆಂದು ಯೋಚಿಸಲೂ ಅವಕಾಶವಿರುವುದಿಲ್ಲ. ಇದರಮೇಲೆ ಆಯಾ ಡಿಸ್ಟ್ರಿಕ್ಟ್ ಬೋರ್ಡುಗಳವರು ಈ ಕಂದಾಯದ ರೂಪದಿಂದ ಕೂಡಿಸಿದ ಹಣದ ಜತೆಗೆ ಪ್ರಭುತ್ವದವರು ಕೂಡ ಮತ್ತಷ್ಟು ಹಣವನ್ನು ಕೊಟ್ಟು ಆಯಾ ಪ್ರಾಂತದ ವಿದ್ಯಾಭ್ಯಾಸದ ಮೇಲ್ಪಾಡುಗಳು ವ್ಯವಹಾರಕ್ಕೆ ಬರುವಂತೆ ಮಾಡಲು ಸಹಾಯಗೊಳಿಸತಕ್ಕವರಾಗಿದ್ದಾರೆ. ಈಗಾಗಲೇ ಈ ಕಂದಾಯವನ್ನೆತ್ತಿರುವ ಬೆಂಗಳೂರು ಚಿತ್ರದುರ್ಗ ಡಿಸ್ಟ್ರಿಕ್ಟ್‌ಗಳು ಅದಕ್ಕೆ ತಕ್ಕ ಫಲವನ್ನು ಅನುಭವಿಸಲು ಆಗಲೇ ಪಾತ್ರವಾಗಿರುತ್ತವೆ. ಹೇಗೆಂದರೆ-ಅವೆರಡು ಡಿಸ್ಟ್ರಿಕ್ಟ್‌ಗಳಲ್ಲೂ 102 ಗ್ರಾಮಾಂತರದ ಏಡೆಡ್‌ಶಾಲೆಗಳನ್ನು ಸರ್ಕಾರಿ ಶಾಲೆಗಳನ್ನಾಗಿ ಮಾಡುವುದಕ್ಕೂ, 13 ಸ್ಥಲಗಳಲ್ಲಿ ಹೊಸ ಪಾಠಶಾಲೆಗಳನ್ನು ಸ್ಥಾಪಿಸಲಿಕ್ಕೂ, ಗ್ರಾಮಾಂತರಗಳ 14 ಎ. ವಿ. ಮತ್ತು ದೇಶಭಾಷಾ ಶಾಲೆಗಳನ್ನು ಹೊಸಮಾದರಿಯ ಎ. ವಿ. ಮಾಧ್ಯಮಿಕಶಾಲೆಗಳನ್ನಾಗಿ ಮಾಡುವುದಕ್ಕೂ, ಇವೆಲ್ಲಾ ಶಾಲೆಗಳ ಉಪಾಧ್ಯಾಯರನ್ನೂ ಉಪಕರಣಗಳನ್ನೂ ಮೇಲ್ಪಡಿಸುವುದಕ್ಕೂ, ಇನ್ನು ಕೆಲ ಶಾಲೆಗಳ ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡಿಸಲಿಕ್ಕೂ, ಕೆಲವಕ್ಕೆ ನೂತನ ಭವನಗಳನ್ನು ಕಟ್ಟಿಸಿಕೊಡಲಿಕ್ಕೂ ಸಹ ಆ ಎರಡು ಡಿಸ್ಟ್ರಿಕ್ಟ್ ಬೋರ್ಡುಗಳು ವಿದ್ಯಾಭ್ಯಾಸದ ಕಂದಾಯದ ರೂಪದಿಂದ ಎತ್ತಿರುವ ಹಣದಜತೆಗೆ ಪ್ರಭುತ್ವದವರೂ ಕೆಲವು ಹಣವನ್ನು ಕೊಟ್ಟು ಏರ್ಪಡಿಸಲು ಅಪ್ಪಣೆಮಾಡಿರುತ್ತಾರೆ. ಉಳಿದ 6 ಡಿಸ್ಟ್ರಿಕ್ಟ್‌ಗಳು ಈ ಭಾಗದಲ್ಲಿ ಮುಂಬರಿಯದೆ ಹೋಗಿರುವುದರಿಂದ, ಇವೆರಡು ಡಿಸ್ಟ್ರಿಕ್ಟ್‌ಗಳಲ್ಲಿ ನೂತನ ವಿದ್ಯಾಪ್ರಸಾರ ಪ್ರಯತ್ನವು ಆಗಲೇ ಆರಂಭಗೊಂಡು ತೀವ್ರವಾಗಿ ನಡೆಯಲವಕಾಶವನ್ನು ಪಡೆದುಕೊಂಡಂತೆ ಅವುಗಳು ಪಡೆದುಕೊಳ್ಳಲು ಅವಕಾಶವಾಗಲಿಲ್ಲ. ಇದನ್ನು ಉಳಿದ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಎಲ್ಲ ಮ್ಯುನಿಸಿಪಾಲಿಟಿಗಳವರೂ ಸಾವಧಾನದಿಂದ ಪರ್ಯಾಲೋಚಿಸಿ, ತಂತಮ್ಮ ಪ್ರಾಂತಗಳಲ್ಲೂ ವಿದ್ಯಾಪ್ರಸಾರಯತ್ನವು ತೀವ್ರವಾಗಿ ನಡೆಯುವಂತೆ ಮಾಡುವುದಕ್ಕೆ ಸಾಧಕವಾದ ವಿದ್ಯಾಭ್ಯಾಸದ ಕಂದಾಯವನ್ನು ಎತ್ತಲು ತೀರ್ಮಾನಿಸಿದರೆ, ಆಯಾ ಪ್ರಾಂತದ ಪ್ರಜೆಗಳಿಗೆ ನಿಜವಾಗಿಯೂ ಅವರು ವಿದ್ಯಾಪ್ರಸಾರದ ವಿಷಯದಲ್ಲಿ ಎಷ್ಟೋ ಉಪಕರಿಸಿದಂತಾಗುವುದು. ರೈತರ ಹಣವು ಎಷ್ಟೋ ಸಂದರ್ಭಗಳಲ್ಲಿ ಅನ್ಯಾಯವಾಗಿ ಅವರ ಕೈಬಿಟ್ಟು ಹೋಗುತ್ತಿರುವುದು. ಕಣಗಳಿಗೆ ಬಂದ ದಾಸಯ್ಯ ಜೋಗಯ್ಯ ಮೊದಲಾದವರಿಗೆಲ್ಲಾ ಎಷ್ಟೋ ದಾನಧರ್ಮ ಮಾಡುವರು. ಅಂಥವರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಈ ಪ್ರಯತ್ನಕ್ಕೋಸ್ಕರವಾಗಿ ಅಲ್ಪವಾದ ಒಂದಿಷ್ಟು ಕಂದಾಯವನ್ನು ಕೊಡಲಿಕ್ಕೆ ಹಿಂಜರಿಯಲಾರರು. ಆದುಕಾರಣ ಉಳಿದ 6 ಡಿಸ್ಟ್ರಿಕ್ಟ್ ಬೋರ್ಡುಗಳವರೂ ಕೂಡ ನಡೆಯುವ ವರ್ಷದ ಕೊನೆಯೊಳಗಾಗಿ ಈ ಹೊಸಕಂದಾಯದ ಏರ್ಪಾಟಿಗೆ ಅನುಮತಿಯನ್ನು ಕೊಟ್ಟು ವಿದ್ಯಾಪ್ರಸಾರ ಕಾರ್ಯಕ್ಕೆ ಸಹಾಯಗೊಳಿಸದಿರಲಾರರೆಂದು ಪ್ರಭುತ್ವದವರು ಇಟ್ಟುಕೊಂಡಿರುವ ನಿರೀಕ್ಷಣೆಯನ್ನು ಸಫಲಗೊಳಿಸದೆ ಇರಲಾರರೆಂದು ನಂಬುತ್ತೇವೆ.

THE TIPTUR DISPUTE.

Those who have been watching with much interest and keenness the progress of Hindu-Muslim unity in India cannot but feel greatly agitated over the strained relations between the Hindus and Muslims of Tiptur. True enough it is an isolated instance of the occasional ruptures between the two communities and does not warrant the drawing of any general adverse conclusions about their *entente* which is being demonstrated everywhere and growing stronger day by day. But it cannot be gain said that it does effect to some extent at least the good understanding between the two communities. The matter in our State merits a more than ordinary consideration at the hands of all interested in the future good relationship of both the communities. Smooth and peaceful progress has been our chief pride in the State for a long time. But the dispute as we find in Tiptur is surely not calculated to maintain that harmony and mutual good-feeling which are essential to the good of the State. Where religious sentiments are affected the disaffection spreads at a tremendous speed regardless of the reason or justice underlying such sentiments, and all know how the stories gain in colour and shade as they pass from mouth to mouth. It is not our object here to say who is right or who is wrong. We refrain to do so on principle, for we are convinced that it would not serve any useful purpose. The matter so far as we could gather does not merely stand on the legal right obligation of the one or the other. The human element which is not always coextensive with the legal comes into play, and the remedy for the situation must be sought elsewhere than the four corners of law. The Tiptur dispute is preeminently a matter for amicable settlement by intervention of the leaders of both communities. It is a pity that in the very first instance no attempt was made for coming into an understanding through friendly negotiations. **The Government could have first taken a step in this direction. It may not be wrong to presume that a more tactful handling of the situation would have probably averted the serious situation since arisen.**

We are still sanguine that the dispute could be settled by the intervention of the leaders of both parties, and the initiative for this if not forthcoming from the Tipturians, must be taken by Government. Whatever cause there might be for complaints on both the sides, we cannot conceive that they are so devoid of the spirit of human fellowship as to court a continual strife, and so opposed to friendly accommodation and adjustments. Nor can we think that human ingenuity cannot suggest some way out of the difficulty which would be welcome to both parties. The thing to be remembered primarily by all those who are concerned in the matter is the genuine eagerness of His Highness the Maharaja to see that the two communities should live together in perfect amity and goodwill and that no real and genuine grievance of muslims should go unredressed. His Highness' generous instinct to help forward the cause of Muslims has been in evidence at every time their matter came up and our Muslim brothren, we believe cannot find a more striking demonstration of it than the new Mosque built at the foot of the Chamundi Hill for the use of the Mohammadan section of His Highness' troops. On all such occasions of difference the parties should bring to play a spirit of tolerance, cool temper, and a generous policy of give and take, and of not insisting needlessly on minor and insignificent details. The spirit of the modern age must also be realised and people have to think more of the common ends and ideas which both communities should pursue alike for the good of the country than any differences. The future edifice of Indian nation could only be built up on the Hindu-Muslim unity and it should be the genuine endeavour of all interested in seeing that no opportunity arises which would in any way retard the happy consummation. It is from this aspect that the isolated disputes between the two communities have to be judged. It is not merely enough if the attention of the authorities and the public should turn to the establishment of the friendly relation between the two communities in Tiptur but they should also see that it is laid on an enduring basis so that the peaceful progress of the State is not hampered or marred by the recurrance of such an unhappy episode.

ಸ್ವದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರು ಬೆಂಗಳೂರಿಂದ ರಾಜಧಾನಿಗೆ ದಯಮಾಡಿಸಿರುತ್ತಾರೆ.

ಶ್ರೀಮನ್ಮಹಾರಾಜರವರು ತಮ್ಮ ಏಡಿಕಾಂಗರು ಮತ್ತೆ ಕೆಲರೊಡನೆ ಮೃಗಯಾವಿಹಾರಕ್ಕಾಗಿ ಬಂಡಿಪುರಕ್ಕೆ ಮೊನ್ನೆಯದಿನ ಚಿತ್ತೈಸಿದರು.

ಶ್ರೀಮತಿ ಶ್ರೀರಂಗಮ್ಮ ಬಿ. ಎ., ಯವರು ಬಾಲಿಕಾಪಾಠಶಾಲೆಗಳ ಇನ್ಸ್‌ಪೆಕ್ಟ್ರೆಸ್ಸಾಗಿ ನಿಯಮಿತರಾದರು. ಆ ಉದ್ಯೋಗದಲ್ಲಿದ್ದ ಮಿಸ್ ಪಾರ್ಕರವರು ಉದ್ಯೋಗನಿವೃತ್ತರಾದರು.

ಮೈಸೂರು ತಾ|| ಪೋಲೀಸ್ ಇನ್ಸ್‌ಪೆಕ್ಟರ್ ಮ|| ಸಿದ್ಧರಾಜ ಅರಸಿನವರು ತಿಪಟೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ನಿಸ್ಪೃಹರೂ, ಜನಾನುರಾಗಿಗಳೂ ಕಾರ್ಯದಕ್ಷರೂ ಆದ ಮ|| ಅರಸಿನವರ ವರ್ಗದಿಂದ ಇಲ್ಲಿಯ ಬಹುಜನರಿಗೆ ಖೇದವುಂಟಾಗಿದೆ.

ತುಮಕೂರಿನ ಮ|| ಅಡ್ವೋಕೇಟ್ ರಂಗಯ್ಯಂಗಾರರು ಮೈಸೂರು ಕ್ರಾನಿಕಲ್ ಎಂಬ ವಾರಪತ್ರಿಕೆಯನ್ನು ಆಂಗ್ಲಭಾಷೆಯಲ್ಲಿ ಪ್ರಕಟಿಸುತ್ತಿರುವರಷ್ಟೆ. ಈ ತಿಂಗಳಿಂದ ಕನ್ನಡದಲ್ಲೂ ಒಂದು ವಾರಪತ್ರಿಕೆಯನ್ನು ಹೊರಡಿಸಲು ಉಜ್ಜುಗಿಸಿರುವರು. ಅಯ್ಯಂಗಾರರಿಗೆ ಈ ನೂತನಪ್ರಯತ್ನವು ಜಯವನ್ನುಂಟುಮಾಡಲಿ.

ಚಿಕ್ಕಮಗಳೂರಿನಿಂದ ಮ|| ಅಪ್ರಮೇಯಯ್ಯಂಗಾರರು ಆತ್ಮಾಹ್ಲಾದಿನಿಯೆಂಬ ವಾರಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಅದರಲ್ಲಿ ಬರುತ್ತಿದ್ದ ಉತ್ತಮವಿಷಯಗಳು ಆಗಾಗ ಓದಿ ಬಿಸುಡತಕ್ಕ ಸಾಮಾನ್ಯವಾರ್ತಾಪತ್ರಿಕಾ ವಿಷಯಗಳಂತಿರದೆ ಸಂಗ್ರಹಿಸಿಡಲ್ಪಡತಕ್ಕವಾಗಿದ್ದುದರಿಂದ, ಈ ತಿಂಗಳಿಂದ ಅದನ್ನು ಮಾಸಪತ್ರಿಕೆಯ ರೂಪವಾಗಿ ಪ್ರಕಟಿಸುತ್ತಿದ್ದಾರೆ. ಇದು ಸ್ತುತ್ಯವಾದ ಏರ್ಪಾಟೇ ಸರಿ.

ರಾಜಧಾನಿಯ ಚಾಮುಂಡೇಶ್ವರೀ ಕರ್ನಾಟಕ ನಾಟಕಸಭಾ ಲಿಮಿಟೆಡ್‌ರವರು ಲಕ್ಷ್ಮೀಥಿಯೇಟರಿನಲ್ಲಿ ನಿನ್ನೆಯ ದಿನ ಮಹಾಭಾರತ (ಆದಿಭಾಗ) ವನ್ನು ಅಭಿನಯಿಸಿದರಲ್ಲದೆ ಈ ದಿವಸ ಸಾಯಂಕಾಲ ಮನ್ಮಥವಿಜಯವನ್ನು ಅಭಿನಯಿಸಿ ಕೂಡಲೇ ಮದರಾಸಿಗೆ ಪ್ರಯಾಣಮಾಡುವವರಾಗಿರುವರು. ಈ ಸಭೆಯವರಿಗೆ ಪರಸ್ಥಳ ಪ್ರವಾಸವು ಸುಖಕರವಾಗಿದ್ದು ಧನಾರ್ಜನೆಯೂ ಕೀರ್ತಿಪ್ರತಿಷ್ಠೆಗಳೂ ಲಭ್ಯವಾಗಲೆಂದು ಹಾರೈಸುತ್ತೇವೆ.

ಶ್ರೀಮನ್ಮಹಾರಾಜರು ನೂತನವಾಗಿ ಅನುಗ್ರಹಿಸಲಿಕ್ಕಿರುವ ರಾಜಕೀಯ ಸುಧಾರಣೆಗಳ ವಿಷಯದಲ್ಲಿ ಅಭಿಪ್ರಾಯ ಕೊಡುವುದಕ್ಕಾಗಿ ಹೊಸಕೊಪ್ಪದಲ್ಲಿ ಮ|| ಎಚ್. ಕೃಷ್ಣರಾಯರು ಒಂದು ಸಭೆಯನ್ನು ಕಾಫಿಪ್ಲಾಂಟರ್ ಮ|| ಸಿ. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ|| 11-12 ರಲ್ಲಿ ಏರ್ಪಡಿಸಿದ್ದರು. ಪರಸ್ಥಲಗಳಿಂದಲೂ ಅನೇಕರು ಬರಮಾಡಲ್ಪಟ್ಟಿದ್ದರು. ಸಭೆಯಲ್ಲಿ ಚರ್ಚೆನಡೆದು ಮಾಡಲ್ಪಟ್ಟ ತೀರ್ಮಾನಗಳು ಪ್ರಕಟವಾಗಿರುತ್ತವೆ. ಆ ನಿರ್ಧಾರಗಳು ಕೆಲವು ಸರ್ವಪ್ರಜಾಸಮ್ಮತವಲ್ಲದೆ ಏಕಪಕ್ಷೀಯವಾದ ಅಭಿಪ್ರಾಯದಿಂದ ಪರಿಪುಷ್ಟವಾಗಿವೆಯೆಂದು ಹೇಳಬೇಕಾಗಿದೆ. ಅದನ್ನು ಕುರಿತು ಮುಂದೆ ನಾವು ವಿಮರ್ಶಿಸುವೆವು.

ರಾಜಧಾನಿಯಲ್ಲಿ ಮ|| ಎಂ. ಎಲ್. ನಾಗಣ್ಣನವರು ಮೈಸೂರು ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರೇಜ್ ಕಂಪೆನಿಯೆಂಬುದೊಂದನ್ನು ಹಿಂದೆ ಏರ್ಪಡಿಸಿದ್ದರು. ಅದರ ವಿಷಯದಲ್ಲಿ ಆಕ್ಷೇಪಗಳು ಮೈಸೂರು ನ್ಯಾಯವಿಧಾಯಕ ಸಭೆಯವರೆಗೂ ಹತ್ತಿದ್ದುವು. ಆ ಕಂಪೆನಿಯವರು ಒಂದು ಬ್ಯಾಲೆನ್ಸ್‌ಷೀಟಿನಲ್ಲಿ ಸ್ವಲ್ಪ ಲೆಕ್ಕದ ತಪ್ಪನ್ನು ಮಾಡಿದ್ದರೆಂಬ ಕಾರಣದಿಂದ ಮೈಸೂರು ಸರ್ಕಾರವು ನಾಗಣ್ಣನವರು, ಎಂ. ಎಸ್. ಚನ್ನಬಸವಪ್ಪನವರೇ ಮೊದಲಾದ 5 ಮಂದಿ ಡೈರೆಕ್ಟರುಗಳ ಮೇಲೆ ಕ್ರಿಮಿನಲ್ ವ್ಯಾಜ್ಯವನ್ನು ಹೂಡಿದ್ದರು. ಅಪರಾಧಿಗಳಿಗೆ ಅರ್ಥದಂಡ ಕಾರಾಗೃಹವಾಸಶಿಕ್ಷೆಗಳೆರಡೂ ವಿಧಿಸಲ್ಪಟ್ಟುವು. 1ನೆ ಅಪ್ಪೀಲ್ ಕೋರ್ಟಿನಲ್ಲೂ ಆ ಶಿಕ್ಷೆಯೇ ಸ್ಥಿರವಾಗಿದ್ದಿತು. ೨ನೆ ಅಪ್ಪೀಲು ಚೀಫ್‌ಕೋರ್ಟಿನಲ್ಲಿ ಮಾಡಲ್ಪಟ್ಟಿತು. ಕಳೆದ ತಾ|| 15 ರಲ್ಲಿ ಚೀಫ್‌ಕೋರ್ಟಿನವರು ಕೊಟ್ಟ ತೀರ್ಮಾನದಲ್ಲಿ ಅಪರಾಧವು ಹೊರುವುದಿಲ್ಲವೆಂದು ಹೇಳಿ ಎಲ್ಲರನ್ನೂ ನಿರ್ದೋಷಿಗಳೆಂದು ನಿರ್ಧರಿಸಿ ಕೇಸನ್ನು ತಳ್ಳಿಪಡಿ ಮಾಡಿದರೆಂದು ತಿಳಿಯಿಸಲು ಸಂತೋಷಿಸುತ್ತೇವೆ. ಇದರಿಂದ ಸರ್ಕಾರಕ್ಕೂ ಇದಿರುಪಕ್ಷದವರಿಗೂ ಸಹಸ್ರಾರು ರೂ. ಗಳ ನಷ್ಟವೂ ಶ್ರಮವೂ ವಿಶೇಷವಾಗಿ ಆದುದೊಂದೇ ಅಲ್ಲದೆ ಮತ್ತೇನೂ ಫಲವಾಗಲಿಲ್ಲ. ಮ|| ನಾಗಣ್ಣನವರೇ ಮೊದಲಾದವರಿಗೆ ಮಾನದ ಮೇಲೆ ಬಂದಿದ್ದ ವಿಪತ್ತು ಧನದಮೇಲೆ ಕೊಚ್ಚಿಹೋದಂತಾಯಿತು. ಉತ್ತಮನ್ಯಾಯಸ್ಥಾನವು ನ್ಯಾಯಕ್ಕೆ ಜಯವನ್ನುಂಟುಮಾಡಿಕೊಟ್ಟ ಸಂತೋಷಕ್ಕಾಗಿ ಮ|| ನಾಗಣ್ಣನವರೇ ಮೊದಲಾದವರು ಬಂಡಿಯಮೇಲೆ ಬೀದಿಗಳಲ್ಲಿ ಸಕ್ಕರೆಯನ್ನು ಹಂಚಿದರು. ಆ ಸಕ್ಕರೆಯ ಸವಿಗಿಂತಲೂ ಈ ಶುಭವಾರ್ತೆಯು ಅವರ ಮಿತ್ರಕೋಟಿಗೆ ಹೆಚ್ಚು ಸಿಹಿಯಾಗಿದ್ದಿತು. ಶುಕ್ರವಾರ ಅವರ ಮನೆಯಲ್ಲಿ ಗಣಾರಾಧನೆ ಭಾರತದ ಓದುಗಾರಿಗೆ ಸಂಗೀತಶ್ರವಣ ಮೊದಲಾದ ಸಮಾರಂಭಗಳು ಜರುಗಿದುವು.

ತುರ್ಕಿ.

ಮೂಲೆಗೆ ಮುಟ್ಟಾಗಿ ಕುಳಿತಿದ್ದ ತುರ್ಕಿಯ ಸ್ವಾತಂತ್ರ್ಯವನ್ನು ಪುನರುದ್ಧಾರಮಾಡಿ, ಪೂರ್ವದ ತನ್ನ ಗೌರವದಿಂದ ತುರ್ಕಿ ಸಾಮ್ರಾಜ್ಯವು ಬಾಳುವಂತೆ ಮಾಡಬೇಕೆಂಬ ಅಭಿನಿವೇಶವು ಕೇಮಲ್ ಪಾಷಾರವರಿಗೂ ಅವರ ಜಾತೀಯ ಸಭೆ (ಪಾರ್ಲಿಮೆಂಟ್) ಗೂ ಸಂಪೂರ್ಣವಾಗಿದೆ. ಇದುವರೆಗೆ ಅವರು ನಡೆಯಿಸಿದ ಕಾರ್ಯವಿಧಾನಗಳಿಂದ ಅವರ ಉದ್ದೇಶವು ಎಷ್ಟೋ ಮಟ್ಟಿಗೆ ಕೊನೆಗಾಣುತ್ತ ಬಂದಿರುತ್ತದೆ. ಕೇಮಲ್ ಪಾಷಾರವರು ಕೇವಲ ಸೈನಿಕ ಶೌರ್ಯದಲ್ಲಿಯೇ ಅಲ್ಲದೆ ರಾಜಕೀಯ ತಂತ್ರದಲ್ಲೂ ಅರಿತೇರಿರುತ್ತಾರೆಂಬುದು ಅವರ ಇದುವರೆಗಣ ವರ್ತನವನ್ನು ಕಂಡವರಿಗೆಲ್ಲಾ ತಿಳಿದುಹೋಗಿದೆ. ಈ ಕಾರಣಗಳಿಂದ ಮಹಮ್ಮದೀಯ ಸಮಾಜಕ್ಕೇ ಅಲ್ಲದೆ ತುರ್ಕಿಯ ಹಿತವನ್ನು ಕೋರುವ ಇತರ ಜನಾಂಗಗಳಿಗೂ ಕೂಡ ಅವರು ಅಭಿನಂದನೀಯರಾಗಿರುತ್ತಾರೆ. ಈಗ ಅವರ ಅಂಗೋರಾ ಪ್ರಭುತ್ವದವರು ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅಲ್ಲಿಯ ಸುಂಕ ಸಾರಿಗೆ ಮೊದಲಾದವುಗಳನ್ನೆತ್ತುವ ಅಧಿಕಾರವನ್ನೆಲ್ಲಾ ಒಂದೊಂದನ್ನಾಗಿ ವಶಪಡಿಸಿಕೊಂಡಿದ್ದಾರೆ ರಫೀದ್‌ಪಾಷಾ ಎಂಬವರನ್ನು ಅಲ್ಲಿಯ ಗೌರ್ನರನ್ನಾಗಿ ನಿಯಮಿಸಿದ್ದಾರೆ. ಸುಲ್ತಾನರು ತುರ್ಕಿ ರಾಜ್ಯಾಧಿಕಾರಿಗಳಾಗಿರುವುದು ಅಂಗೋರಾ ಪ್ರಭುತ್ವದವರಿಗೆ ಇಷ್ಟವಿಲ್ಲ. "ರಾಜದ್ವಯಂ ರಾಷ್ಟ್ರನಿಪಾತಹೇತುಃ" ಎಂಬಂತೆ ಒಂದು ದೇಶಕ್ಕೆ ಇಬ್ಬರು ಪ್ರಭುತ್ವಮಾಡುವುದಾದರೆ ಅವರವರಲ್ಲಿ ಬಡಿದಾಟಬಂದು ಮೂರನೆಯವರಿಗೆ ಲಾಭವಾಗುವುದು ಸಿದ್ಧ. ಆದುಕಾರಣ ಈಗಣ ಸುಲ್ತಾನರಿಗೆ ರಾಜ್ಯಪದವಿಯನ್ನು ಬಿಟ್ಟುಬಿಡಲು ಅಂಗೋರಾಪ್ರಭುತ್ವದವರು ಸೂಚನೆ ಕೊಟ್ಟಿರುತ್ತಾರೆ. ಈಗಣ ಸುಲ್ತಾನರಲ್ಲಿ ಬರೀ ರಾಜ್ಯಾಧಿಕಾರ ಮಾತ್ರವೇ ಇಲ್ಲ; ಮಹಮ್ಮದೀಯ ಮತ ಜಗದ್ಗುರುತ್ವವು ಕೂಡ ಇದೆ. ಉತ್ತರತ್ರ ಜಗದ್ಗುರು ಪದವಿಗೆ ಈಗಣ ಸುಲ್ತಾನರ ವಂಶದಲ್ಲೇ ಒಬ್ಬರನ್ನಾರಿಸಿ ನಿಯಮಿಸಿ, ರಾಜ್ಯಾಧಿಕಾರವನ್ನೆಲ್ಲಾ ಅಂಗೋರಾ ಜಾತೀಯ ಪ್ರಭುತ್ವದವರೇ ವಹಿಸಿನಿರ್ವಹಿಸುವಂತಾಗಬೇಕೆಂಬುದೇ ಕೇಮಲ್ ಪಾಷಾರವರ ಮತ್ತು ಅವರ ಅನುಯಾಯಿಗಳಾದ ಸಕಲ ಮಹಮ್ಮದೀಯರ ಅಭಿಪ್ರಾಯವಾಗಿರುತ್ತದೆ. ಅವರ ಕೈಯಲ್ಲಿರುವ ದೊಡ್ಡ ಅಧಿಕಾರವನ್ನು ಸುಮ್ಮನೆ ಬಿಟ್ಟುಕೊಡುವುದಕ್ಕೆ ಸುಲ್ತಾನರಿಗೆ ಮನಸ್ಸುಬರದು. ರಫೀದ್ ಪಾಷಾರವರೊಡನೆ ಸುಲ್ತಾನರು ಪ್ರತ್ಯಕ್ಷವಾಗಿ ಮಾತನಾಡಿದಾಗ್ಗೆ ಅಂಗೋರಾದವರ ನಿರ್ಧಾರವನ್ನು ಕೇಳಿ ಕ್ರುದ್ಧರಾಗಿ, ನನ್ನ ಅಧಿಕಾರ ಪರಿತ್ಯಾಗವು ಮಹಮ್ಮದೀಯ ಪ್ರಪಂಚವೂ ನಾನೂ ಸೇರಿ ನಡೆಯಬೇಕಾದುದೇ ಹೊರತು ಏಕಾಏಕಿ ಆಗತಕ್ಕುದಲ್ಲವೆಂದು ಹೇಳಲು, "ಹಾಗಾದರೆ ಉರುಲು ಹಾಕಿಸಿಕೊಳ್ಳುವ ಸ್ಥಿತಿಗೂ ಬರಬೇಕಾಗುವುದು" ಎಂಬ ಉತ್ತರವನ್ನು ಗುಂಡುಹೊಡೆದಂತೆ ರಫೀದ್‌ಪಾಷಾರವರು ಕೊಟ್ಟುಬಂದರು. ಈಗ ಸುಲ್ತಾನರು ಆತ್ಮರಕ್ಷಣೆಗಾಗಿ ಆಂಗ್ಲ ಪ್ರಭುತ್ವದವರಿಗೆ ಮೊರೆಯಿಟ್ಟುಕೊಂಡಿರುವರೆಂದೂ ಅರಮನೆಯ ಕಾವಲಿಗೆ ಅವರು ೨ ಸೈನ್ಯಗಳನ್ನು ಕಳುಹಿಸಿಕೊಟ್ಟಿರುವರೆಂದೂ ವಾರ್ತೆ ಬಂದಿದೆ. ಆದರೂ ಈಗ ಕಾನ್‌ಸ್ಟಾಂಟಿನೋಪಲ್ಲೆಲ್ಲಾ ಅಂಗೋರಾಪ್ರಭುತ್ವದ ನಿರರ್ಗಳವಾದ ಅಧಿಕಾರದಲ್ಲಿದೆ. ಪೂರ್ವದ ಸುಲ್ತಾನ್ ಮಂತ್ರಿಮಂಡಲದವರಿಗೆಲ್ಲಾ ಇವರು ನೋಟೀಸನ್ನು ಕೊಟ್ಟು ನೀವು ನಿಮ್ಮ ಪದವಿಗಳಿಗೆ ರಾಜೀನಾಮೆ ಕೊಡದಿದ್ದರೆ ರಾಜದ್ರೋಹಿಗಳೆಂದು ಗಣಿಸಲ್ಪಡುವಿರಿ ಎಂದು ತಿಳಿಯಿಸಿದ್ದಾರೆ. ಅವರಲ್ಲಿ ಅನೇಕರು ರಾಜೀನಾಮೆ ಕೊಟ್ಟಂತೆ ವರ್ತಮಾನ ಬಂದಿದೆ. ಅಂತು ಸುಲ್ತಾನರ ಮತ್ತು ಕೇಮಲ್‌ಪಾಷಾರವರ ವಿವಾದಗಳು ತುರ್ಕಿಯ ಆಂತರಂಗಿಕ ವಿಷಯಗಳು. ಈ ಒಡಕನ್ನು ಅವರೇ (ತುರುಷ್ಕ ಪ್ರಪಂಚವೇ) ಸರಿಮಾಡಿಕೊಳ್ಳಬೇಕು. ಈ ಒಡಕನ್ನು ಪಯೋಗಿಸಿಕೊಂಡು ತಮ್ಮ ಬೇಳೆಯನ್ನು ಬೆಯ್ಯಿಸಿಕೊಳ್ಳಬೇಕೆಂದು ಯೂರೋಪ್ ಖಂಡದ ಕೆಲವರು ಹಾರೈಸುತ್ತಿರಬಹುದು. ಆದರೆ ಈ ಒಳ ಆಡಳಿತಕ್ಕೆ ನಾವು ಪ್ರವೇಶಿಸುವುದಿಲ್ಲವೆಂದು ಪ್ರೆಂಚರು ಕೊಟ್ಟ ಉತ್ತರವು ಅಂಥ ಹೊಂಚುಗಾರರಿಗೆಲ್ಲಾ ದಿಗ್ಬಂಧಮಾಡಿದಂತಾಗಿದೆ. ಎಚ್. ಎಚ್. ಆಗಾಖಾನರು ಭರತಖಂಡದ ತಮ್ಮ ಮಹಮ್ಮದೀಯ ಸಹೋದರರಿಗೆ ಕಳುಹಿಸಿಕೊಟ್ಟಿರುವ ತಂತ್ರೀವಾರ್ತೆಯಲ್ಲಿ "ನೀವೇನೂ ತೊಂದರೆಪಡಬೇಕಾದುದಿಲ್ಲ." ಎಂದು ಧೈರ್ಯ ಹೇಳಿರುತ್ತಾರೆ. ಕಲೀಫರು ಯಾವಾಗಲೂ ಆರಿಸಲ್ಪಡುತ್ತಿದ್ದುದೇ ಪದ್ಧತಿಯೆಂದೂ, ವಂಶಪಾರಂಪರ್ಯವಾದ ಹಕ್ಕು ಇದರಲ್ಲೇನೂ ಇಲ್ಲವೆಂದೂ, 30 ವರ್ಷಗಳೊಳಗೆ ಮೂವರು ಸುಲ್ತಾನ್ ಕಲೀಫರು ಪದಭ್ರಷ್ಟರಾದರೆಂದೂ ಸಹ ಆಗಾಖಾನರು ತಿಳಿಯಿಸಿರುತ್ತಾರೆ. ಇದನ್ನೆಲ್ಲಾ ನೋಡುವಲ್ಲಿ ಮುಸಲ್ಮಾನ್ ಪ್ರಪಂಚವೇ ಈ ಒಡಕನ್ನು ಇಷ್ಟರಲ್ಲೇ ಬಗೆಹರಿಸಿಕೊಳ್ಳುವುದೆಂದೂ ಹೊಸ ಕಲೀಫರು ಏರ್ಪಟ್ಟು ತುರ್ಕಿಯು ಜಾತೀಯ ಪ್ರಭುತ್ವದ ಆಳಿಕೆಗೆ ಒಳಪಡುವುದು ಸಿದ್ಧವೆಂದೂ ತೋರುತ್ತದೆ. ಯೂರೋಪಿನ ಕೈ ಬೊಂಬೆಯಾಗಿ ಸುಲ್ತಾನರು ಇರುವುದು ಈಗಣ ಸ್ವಾಭಿಮಾನಿ ತುರುಷ್ಕ ಪ್ರಜೆಗಳಿಗಾರಿಗೂ ಒಪ್ಪಿಗೆಯಾಗಿಲ್ಲವಾದ ಕಾರಣ ಕೇಮಲ್‌ಪಾಷಾರವರ ಅಭಿಪ್ರಾಯಕ್ಕೆ ಜಯಬರುವುದು ಸಿದ್ಧವೆಂದು ತೋರುತ್ತದೆ.

ಆ ವಿಷಯವು ಹಾಗಿರುವಾಗ, ಇತ್ತ ಕೇಮಲ್‌ಪಾಷಾ ಸೈನ್ಯವು ಜಯೋನ್ಮತ್ತತೆಯಿಂದ ಮುದೇನಿಯಾದ ತಾತ್ಕಾಲಿಕ ಸಂಧಿ ನಿಬಂಧನೆಗಳಿಗೆ ವಿರುದ್ಧವಾಗಿ ತಟಸ್ಥ ಪ್ರದೇಶಗಳಿಗೆ ನುಗ್ಗುತ್ತಿರುವುದೆಂದೂ, ಇಂಗ್ಲೀಷ್ ಸೈನಿಕರ ಮೇಲೂ ಕ್ರೈಸ್ತ ಪ್ರಜೆಗಳ ಮೇಲೂ ಬಲಾತ್ಕಾರ ಹಿಂಸೆಗಳನ್ನು ಮಾಡುತ್ತಿರುವುವೆಂದೂ, ಕಾನ್‌ಸ್ಟಾಂಟಿನೋಪಲನ್ನು ಆಂಗ್ಲ ಸೈನ್ಯವು ತೆರವು ಮಾಡಿ ಹೊರಟುಹೋಗಬೇಕೆಂದು ಅಂಗೋರಾ ಪ್ರಭುತ್ವದವರು ಮಿತ್ರಮಂಡಲೀ ಹೈಕಮಿಷನರಿಗೆ ತಿಳಿಯಿಸಿರುವುದಾಗಿಯೂ ತರತರವಾದ ವಾರ್ತೆಗಳು ಬಂದಿರುತ್ತಿವೆ. ವಿಷಯವನ್ನು ಕೊನೆಮುಟ್ಟಿಸದೆ ಹೆಚ್ಚುಕಾಲ ತಾಳಿಕೊಂಡು ತುರ್ಕಿಸೈನಿಕರನ್ನೂ ಪ್ರಜೆಗಳನ್ನೂ ಸಮಾಧಾನಪಡಿಸಿಕೊಂಡಿರುವುದು ಅಸಾಧ್ಯವೆಂದು ತುರ್ಕಿ ಸೇನಾಪತಿಗಳು ಹೇಳುತ್ತಿದ್ದಾರೆ. ಶಾಶ್ವತಸಂಧಿಕಾರ್ಯವು ಬೇಗನೆ ಜರುಗಿಹೋಗಬೇಕೆಂದು ಅವರು ಕುತೂಹಲಪಡುತ್ತಿದ್ದಾರೆ. ನಿನ್ನೆ ತಾ|| 13 ರಲ್ಲಿ ಲಾಸೇನಿಯಾ ಪಟ್ಟಣದಲ್ಲಿ ಸಂಧಿಸಭೆಯು ಜರುಗಿಹೋಗುವುದೆಂದು ಅಂಗೋರಾ ಪ್ರತಿನಿಧಿಗಳು ಅಲ್ಲಿಗೆ ಹೋಗಿ ಕಾದಿದ್ದರು. ಫ್ರಾನ್ಸಿನವರಿಗೂ ಕೂಡ ಆ ಸಭೆಯು ಬೇಗನೆ ಮುಗಿದು ಸಂಧಿಯು ಜರುಗಿಹೋಗಬೇಕೆಂಬ ಕುತೂಹಲವಿದೆ. ಆದರೆ ಆಂಗ್ಲೇಯರೇ ಕುತೂಹಲವನ್ನು ತೋರಿಸದೆ ಇದ್ದಾರೆ. ಮಿತ್ರಮಂಡಲಿಯವರೇ ಒಂದುಕಡೆ ಕೂಡಿ ಸಂಧಿ ವಿಧಾನವನ್ನು ಚರ್ಚಿಸಿ ನಿರ್ಧರಿಸಿಕೊಂಡ ಬಳಿಕವೇ ಲಾಸೇನಿಯಾ ಸಭೆಯು ಕೂಡಬೇಕೆಂದು ಅವರು ಹೇಳುತ್ತಿದ್ದಾರೆ. ಇಷ್ಟರಲ್ಲೇ ಅವರವರ ಸಭೆಯು ಪ್ಯಾರಿಸ್ಸಿನಲ್ಲೋ ಮತ್ತಾವ ಕಡೆಯಲ್ಲೋ ಕೂಡುವುದಾಗಿದೆ. ಅಂತು ಎಲ್ಲವೂ ಇನ್ನೂ ಸಂದಿಗ್ಧಸ್ಥಿತಿಯಲ್ಲೇ ಇದೆ. ಹೇಗೆ ಪರ್ಯವಸನ್ನವಾಗುವುದೋ ನೋಡಬೇಕು.

ಮೈಸೂರು ಸ್ಟಾರ್.

೧೯೩೩ ನೆಯ ಇಸವಿಯ ನವಂಬರ್ ತಾ|| ೧೯ನೆಯ ಭಾನುವಾರ.

ವಿದ್ಯಾಭ್ಯಾಸದ ಕಂದಾಯ

ನಮ್ಮ ಪ್ರಭುತ್ವದವರು ಸಂಸ್ಥಾನದ ಸಕಲ ಪ್ರಜೆಗಳ ವಿದ್ಯಾಭಿವೃದ್ಧಿಗಾಗಿಯೂ ವಹಿಸಿರುವ ಕುತೂಹಲವು ಸಾಮಾನ್ಯವಾಗಿಲ್ಲ. ವಿದ್ಯಾಭ್ಯಾಸ ಶಾಖೆಗಾಗಿ ಮಾಡಲ್ಪಡುವ ವೆಚ್ಚ [illegible]

ಪ್ರಭುತ್ವದವರು ಮೆಮೊರಾಂಡಮ್ಮಿನ ಮೇಲಣ ಅಪ್ಪಣೆಯಿಂದಲೇ ವ್ಯಕ್ತಪಡಿಸಿದ್ದಾರೆ. ಪ್ರಜಾರಕ್ಷಣಭಾರವನ್ನು ಹೊತ್ತಿರುವ ಅವರಿಗೆ ಪ್ರಜೆಗಳನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡುವುದು ಮುಖ್ಯ ಕರ್ತವ್ಯವಾಗಿದ್ದರೂ, ವಿದ್ಯಾಭ್ಯಾಸದಂತೆಯೇ ರಕ್ಷಣಾಂಗವಾದ ಇತರ ಎಷ್ಟೋ ಕಾರ್ಯಭಾರಗಳನ್ನು ಹೊತ್ತಿರುವ ಅವರಿಗೆ ಈ ವಿದ್ಯಾಶಾಖೆಗಾಗಿ ತಗಲುವ ವ್ಯಯಭಾರವನ್ನೆಲ್ಲಾ ಸರ್ಕಾರದ ಬೊಕ್ಕಸದಿಂದಲೇ ನಿರ್ವಹಿಸುವುದು ಸಾಧ್ಯವಾಗಿಲ್ಲ. ಮತ್ತು ಪ್ರಜೆಗಳ ವಿದ್ಯಾಭಿವೃದ್ಧಿ ಭಾಗ್ಯಾಭಿವೃದ್ಧಿ ಪ್ರಯತ್ನಗಳು ಪ್ರಭುತ್ವದವರಿಗೆ ಎಷ್ಟು ಗನು [illegible]

ಇವೆಲ್ಲಾ ಶಾಲೆಗಳ ಉಪಾಧ್ಯಾಯರನ್ನೂ ಉಪಕರಣಗಳನ್ನೂ ಮೇಲ್ಪಡಿಸುವುದಕ್ಕೂ, ಇನ್ನು ಕೆಲ ಶಾಲೆಗಳ ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡಿಸಲಿಕ್ಕೂ, ಕೆಲವಕ್ಕೆ ನೂತನ ಭವನಗಳನ್ನು ಕಟ್ಟಿಸಿಕೊಡಲಿಕ್ಕೂ ಸಹ ಆ ಎರಡು ಡಿಸ್ಟ್ರಿಕ್ಟ ಬೋರ್ಡುಗಳು ವಿದ್ಯಾಭ್ಯಾಸದ ಕಂದಾಯದ ರೂಪದಿಂದ ಎತ್ತಿರುವ ಹಣದಜತೆಗೆ ಪ್ರಭುತ್ವದವರೂ ಕೆಲವು ಹಣವನ್ನು ಕೊಟ್ಟು ಏರ್ಪಡಿಸಲು ಅಪ್ಪಣೆಮಾಡಿರುತ್ತಾರೆ. ಉಳಿದ 6 ಡಿಸ್ಟ್ರಿಕ್ಟುಗಳು ಈ ಭಾಗದಲ್ಲಿ ಮುಂಬರಿಯದೆ ಹೋಗಿರುವುದರಿಂದ, ಇನೆರಡು ಡಿಸ್ಟ್ರಿಕ್ಟುಗಳಲ್ಲಿ ನೂತನ ವಿದ್ಯಾಪ್ರಸಾರ ಪ್ರಯತ್ನವು ಆಗಲೇ ಆರಂಭಗೊಂಡು ತೀವ್ರವಾಗಿ ನಡೆ [illegible]

ನಂಬುತ್ತೇವೆ.

THE TIPTUR DISPUTE.

Those who have been watching with much interest and keenness the progress of Hindu-Muslim unity in India cannot but feel greatly agitated over the strained relations between the Hindus and Muslims of Tiptur. True enough it is an isolated instance of the occasional ruptures between the two communities and does not warrant the drawing of any general adverse conclusions about their *entente* which is being demonstrated everywhere and growing stronger day by day. But it cannot be gain said that it does effect to some extent at least the good understanding between the two communities. The matter in our State merits a more than ordinary consideration at the hands of all interested in the future good relationship of both the communities. Smooth and peaceful progress has been our chief pride in the State for a long time. But the dispute as we find in Tiptur is surely not calculated to maintain that harmony and mutual good-feeling which are essential to the good of the State. Where religious sentiments are affected the disaffection spreads at a tremendous speed regardless of the reason or justice underlying such sentiments, and all know how the stories gain in colour and shade as they pass from mouth to mouth. It is not our object here to say who is right or who is wrong. We refrain to do so on principle, for we are convinced that it would not serve any useful purpose. The matter so far as we could gather does not merely stand on the legal right obligation of the one or the other. The human element which is not always coextensive with the legal comes into play, and the remedy for the situation must be sought elsewhere than the four corners of law. The Tiptur dispute is preeminently a matter for amicable settlement by intervention of the leaders of both communities. It is a pity that in the very first instance no attempt was made for coming into an understanding through friendly negotiations. The Government could have first taken a step in this direction. It may not be wrong to presume that a more tactful handling of the situation would have probably averted the serious situation since arisen.

We are still sanguine that the dispute could be settled by the intervention of the leaders of both parties, and the initiative for this if not forthcoming from the Tipturians, must be taken by Government. Whatever cause there might be for complaints on both the sides, we cannot conceive that they are so devoid of the spirit of human fellowship as to court a continual strife, and so opposed to friendly accommodation and adjustments. Nor can we think that human ingenuity cannot suggest some way out of the difficulty which would be welcome to both parties. The thing to be remembered primarily by all those who are concerned in the matter is the genuine eagerness of His Highness the Maharaja to see that the two communities should live together in perfect amity and goodwill and that no real and genuine grievance of muslims should go unredressed. His Highness' generous instinct to help forward the cause of Muslims has been in evidence at every time their matter came up and our Muslim brothren, we believe cannot find a more striking demonstration of it than the new Mosque built at the foot of the Chamundi Hill for the use of the Mohammadan section of His Highness' troops. On all such occasions of difference the parties should bring to play a spirit of tolerance, cool temper, and a generous policy of give and take, and of not insisting needlessly on minor and insignificent details. The spirit of the modern age must also be realised and people have to think more of the common ends and ideas which both communities should pursue alike for the good of the country than any differences. The future edifice of Indian nation could only be built up on the Hindu-Muslim unity and it should be the genuine endeavour of all interested in seeing that no opportunity arises which would in any way retard the happy consummation. It is from this aspect that the isolated disputes between the two communities have to be judged. It is not merely enough if the attention of the authorities and the public should turn to the establishment of the friendly relation between the two communities in Tiptur but they should also see that it is laid on an enduring basis so that the peaceful progress of the State is not hampered or marred by the recurrance of such an unhappy episode.

ಸ್ವದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರು ಬೆಂಗಳೂರಿಂದ ರಾಜಧಾನಿಗೆ ದಯಮಾಡಿಸಿರುತ್ತಾರೆ.

ಶ್ರೀಮನ್ಮಹಾರಾಜರವರು ತಮ್ಮ ಏಡಿಕಾಂಗರು ಮತ್ತೆ ಕೆಲರೊಡನೆ ಮೃಗಯಾವಿಹಾರಕ್ಕಾಗಿ ಬಂಡಿಪುರಕ್ಕೆ ಮೊನ್ನೆಯದಿನ ಚಿತ್ತೈಸಿದರು.

ಶ್ರೀಮತಿ ಶ್ರೀರಂಗಮ್ಮ ಬಿ. ಎ., ಯವರು ಬಾಲಿಕಾಪಾಠಶಾಲೆಗಳ ಇನ್ಸ್ಪೆಕ್ಟ್ರೆಸ್ಸಾಗಿ ನಿಯಮಿತರಾದರು. ಆ ಉದ್ಯೋಗದಲ್ಲಿದ್ದ ಮಿಸ್ ಪಾರ್ಕರವರು ಉದ್ಯೋಗನಿವೃತ್ತರಾದರು.

ಮೈಸೂರು ತಾ|| ಪೋಲೀಸ್ ಇನ್ಸ್ಪೆಕ್ಟರ್ ಮ|| ಸಿದ್ಧರಾಜ ಅರಸಿನವರು ತಿಪಟೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ನಿಸ್ಪೃಹರೂ, ಜನಾನುರಾಗಿಗಳೂ ಕಾರ್ಯದಕ್ಷರೂ ಆದ ಮ|| ಅರಸಿನವರ ವರ್ಗದಿಂದ ಇಲ್ಲಿಯ ಬಹುಜನರಿಗೆ ಖೇದವುಂಟಾಗಿದೆ.

ತುಮಕೂರಿನ ಮ|| ಅಡ್ವೋಕೇಟ್ ರಂಗಯ್ಯಂಗಾರರು ಮೈಸೂರು ಕ್ರಾನಿಕಲ್ ಎಂಬ ವಾರಪತ್ರಿಕೆಯನ್ನು ಆಂಗ್ಲಭಾಷೆಯಲ್ಲಿ ಪ್ರಕಟಿಸುತ್ತಿರುವರಷ್ಟೆ. ಈ ತಿಂಗಳಿಂದ ಕನ್ನಡದಲ್ಲೂ ಒಂದು ವಾರಪತ್ರಿಕೆಯನ್ನು ಹೊರಡಿಸಲು ಉಜ್ಜುಗಿಸಿರುವರು. ಅಯ್ಯಂಗಾರರಿಗೆ ಈ ನೂತನಪ್ರಯತ್ನವು ಜಯವನ್ನುಂಟುಮಾಡಲಿ.

ಚಿಕ್ಕಮಗಳೂರಿನಿಂದ ಮ|| ಅಪ್ರಮೇಯಯ್ಯಂಗಾರರು ಆತ್ಮಾಹ್ಲಾದಿನಿಯೆಂಬ ವಾರಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಅದರಲ್ಲಿ ಬರುತ್ತಿದ್ದ ಉತ್ತಮವಿಷಯಗಳು ಆಗಾಗ ಓದಿ ಬಿಸುಡತಕ್ಕ ಸಾಮಾನ್ಯವಾರ್ತಾಪತ್ರಿಕಾ ವಿಷಯಗಳಂತಿರದೆ ಸಂಗ್ರಹಿಸಿಡಲ್ಪಡತಕ್ಕವಾಗಿದ್ದುದರಿಂದ, ಈ ತಿಂಗಳಿಂದ ಅದ

[illegible]

ತುಣುಕು.

[illegible]

ಬಂಗಲೆ ಬಿಕರಿ ಇಸ್ತಿಹಾರು.

(1) ಈ ಕೆಳಗೆ ವಿವರಿಸಿರುವ ಬಂಗಲೆ ಮತ್ತು ಅದಕ್ಕೆ ಸೇರಿದ ಜಾಗ ಸಹ ಬಿಕರಿಗೆ ಸಿದ್ಧವಾಗಿದೆ. ಇಷ್ಟಪಟ್ಟವರು 1922ನೇ ನವಂಬರು 30ನೇ ತಾರೀಖಿನ ವಳಗಾಗಿ ತಾವು ಎಷ್ಟು ಮೊಬಲಿಗೆ ಖರೀದಿಗೆ ಸದರಿ ಬಂಗಲೆ ಮತ್ತು ಜಾಗವನ್ನು ತೆಗೆದುಕೊಳ್ಳಲು ಕಬೂಲು ಇರುತ್ತಾರೋ ಅಷ್ಟು ಮೊಬಲಗನ್ನು ನಮೂದಿಸಿ ಸೀಲ್ಡ್ ಟೆಂಡರುಗಳನ್ನು ಅಂದರೆ ಕಾಗದವನ್ನು ಲಿಫಾಫೆಯಲ್ಲಿ ಇಟ್ಟು ಮೊಹರ್ಮಾಡಿ ಈ ಕೆಳಗೆ ಸೈನು ಮಾಡಿರುವವರ ವಿಳಾಸಕ್ಕೆ ಕಳುಹಿಸತಕ್ಕದ್ದು.

(2) ಸದರಿ ಬಂಗಲೆ ಮತ್ತು ಜಾಗದಲ್ಲಿ ಹಾಲಿ ಮೈಸೂರು ಕ್ಲಬ್ (ಯೂರೋಪಿಯನ್ ಕ್ಲಬ್) ಮಾಹೇಯಾನಾ 50 ರೂಪಾಯಿ ಬಾಡಿಗೆಯೂ, ಸಿಂಗರ್ ಸೂಯಿಂಗ್ ಮೆಷಿನ್ ಕಂಪನಿಯವರು ಮಾಹೇಯಾನಾ 50 ರೂಪಾಯಿ ಬಾಡಿಗೆಯೂ ಮತ್ತು ಅಬ್ಬಾ ಅಬ್ದುಲ್ ಸುಕೂರ್ ಸೇಟ್ ಅಂಡ್ ಸನ್ಸ್ ರವರು ಮಾಹೇಯಾನಾ 60 ರೂಪಾಯಿಗಳ ಬಾಡಿಗೆಯೂ ಈ ಮೇರೆ ಒಟ್ಟು ಮಾಹೇಯಾನಾ 160 ರೂಪಾಯಿಗಳ ಬಾಡಿಗೆಗೆ ಪ್ರತ್ಯೇಕ ಪ್ರತ್ಯೇಕವಾಗಿ ಬಾಡಿಗೆದಾರರಾಗಿರುತ್ತಾರೆ. ಇವರುಗಳ ಬಾಡಿಗೆ ವಾಯಿದೇ 1924ನೇ ಇಸವಿ ಡಿಸೆಂಬರು 31 ನೇ ತಾರೀಖಿಗೆ ಮುಗಿಯತಕ್ಕದ್ದಾಗಿದೆ.

(3) ಸದರಿ ಬಂಗಲೆ ಮತ್ತು ಜಾಗಾ ಮೈಸೂರು ಮೆಸಾನಿಕ್ ಲಾಡ್ಜಿಗೆ ಸೇರಿದ್ದು. ಇದನ್ನು ವಿಕ್ರಯಿಸಲು 1922ನೇ ಇಸವಿ ಸೆಪ್ಟೆಂಬರು 2ನೇ ತಾರೀಖಿನಲ್ಲಿ ರೆಗ್ಯುಲರ್ ಮೀಟಿಂಗಿನಲ್ಲಿ ರೆಜಲ್ಯೂಷನ್ (ನಿಶ್ಚಯ) ಆಗಿ 1922ನೇ ಇಸವಿ ಅಕ್ಟೋಬರು 7 ನೇ ತಾರೀಖಿನ ರೆಗ್ಯುಲರ್ ಮೀಟಿಂಗಿನಲ್ಲಿ ಖಾಯಂಮಾಡಲ್ಪಟ್ಟಿರುತ್ತೆ.

(4) ಈ ಇಸ್ತಿಹಾರ್ ಪ್ರಕಾರ ಬರಬಹುದಾದ ಎಲ್ಲಕ್ಕಿಂತ ಜಾಸ್ತಿ ಬೆಲೆಯುಳ್ಳ ದರಖಾಸ್ತನ್ನೇ ಆಗಲಿ ಅಥವಾ ಮತ್ಯಾವ ದರಖಾಸ್ತನ್ನೇ ಆಗಲಿ ಮೈಸೂರು ಮೆಸಾನಿಕ್ ಲಾಡ್ಜಿನವರು ಒಪ್ಪಿಕೊಳ್ಳಲು ಬದ್ಧರಲ್ಲ.

(5) ಸದರಿ ಬಂಗಲೆ ಮತ್ತು ಜಾಗವನ್ನು ಇಷ್ಟಪಟ್ಟವರು ನೋಡಲೂಬಹುದು ಅಪೇಕ್ಷಿತವಾದ ಸಂಗತಿಗಳನ್ನು ಈ ಕೆಳಗೆ ರುಜು ಮಾಡಿರುವವರಿಂದ ತಿಳಿದುಕೊಳ್ಳಲೂಬಹುದು.

(6) ಸದರಿ ಟೆಂಡರುಗಳು 1922ನೇ ಇಸವಿ ಡಿಸೆಂಬರ್ 2ನೇ ತಾರೀಖಿನಲ್ಲಿ ನಡೆಯುವ ರೆಗ್ಯುಲರ್ ಮೀಟಿಂಗಿನಲ್ಲಿ ಇತ್ಯರ್ಥಮಾಡಲ್ಪಡುತ್ತವೆ.

ಕ್ರಯಸ್ವತ್ತಿನ ವಿವರ.

ಮೈಸೂರು ಸಿಟಿಯಲ್ಲಿ ಕರ್ಜನ್ ಪಾರ್ಕಿನಲ್ಲಿ ಸ್ಟ್ಯಾಚ್ಯುಸ್ಕ್ವೇರಿನಲ್ಲಿ ಇರುವ ಮುನಿಸಿಪಲ್ ನಂಬರು 412, 412/1 ಮತ್ತು 412/2 ಳ್ಳ ಮಹಡಿಯುಳ್ಳ ಬಂಗಲೆ ಮತ್ತು ಅದಕ್ಕೆ ಪೂರ್ವಕಡೆ ಇರುವ ಖಾಲಿ ಜಾಗ.

ರಾವ್‌ಬಹುದೂರ್ ಯಮ್. ಸಿ. ರಂಗೈಂಗಾರ್
ಸೆಕ್ರೆಟರಿ
ಮೈಸೂರು ಮೆಸಾನಿಕ್ ಲಾಡ್ಜ್.

(2)

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತಗಳಾದ ಸಾರ್ವತ್ರಿಕ ವಿಷಯಗಳು.

(ಹಿಂದಣಕೇಷ. ರೆವಿನ್ಯೂಸರ್ವೆ ಮತ್ತು ಸೆಟಲ್ಮೆಂಟ್)

ಅ—ನೀರಿನ ಆಸರೆಯಿಲ್ಲದಿರುವ ಭೂಮಿಗಳ ಮೇಲೆ ಇರಿಗೇಷನ್ ಸೆಸ್ ಎತ್ತುವುದನ್ನು ತಪ್ಪಿಸಬೇಕು. ಅಲ್ಲದೆ ತರಿ ಮತ್ತು ಬಾಗಾಯಿತು ಭೂಮಿಗಳ ಕಂದಾಯದಲ್ಲಿ ಈ ಸೆಸ್ಸು ಮೊದಲೇ ಸೇರಿರುವುದರಿಂದ ಪ್ರತ್ಯೇಕವಾಗಿ ಈ ಸೆಸ್ಸನ್ನು ಎತ್ತಕೂಡದು. ಮತ್ತು ಮಲೆನಾಡಿನಲ್ಲಿರುವ ಒಟ್ಟು ಭೂಮಿಗಳಲ್ಲಿ $\frac{1}{16}$ ಭಾಗವೂ ಸಹ ಕೆರೆಗಳ ಅಥವಾ ನಾಲೆಗಳ ಆಸರೆಯಲ್ಲಿರುವುದಿಲ್ಲ. ಆದರೂ ಅಲ್ಲಿಯೂ ಇರಿಗೇಷನ್ ಸೆಸ್ಸನ್ನು ಎತ್ತುತ್ತಾರೆ. ಕೆರೆಗಳಿಂದ ನೀರುಹಾಯುವ ಭೂಮಿಗಳಿಗೆ ಮಾತ್ರ ಈ ಸೆಸ್ಸನ್ನು ವಿಧಿಸುವಂತೆ ಮಾಡಬೇಕು. ಅಂಥ ಕೆರೆಗಳ ಜೀರ್ಣೋದ್ಧಾರಕ್ಕೆ ರೈತರಿಂದ ಕಂಟ್ರಿಬ್ಯೂಷನ್ ಎತ್ತಕೂಡದು.

ಉ—ಈಗ ಇರುವುದೇ ನ್ಯಾಯವಾಗಿದೆ.

ಅ—ಪಂಚಮಜಾತಿಯ ವ್ಯವಸಾಯಗಾರರಿಗೆ ಬೇಸಾಯದ ಉಪಕರಣಗಳಿಗಾಗಿಯೂ ಮನೆಕಟ್ಟಿಸಿಕೊಳ್ಳಲಿಕ್ಕೂ ತಕಾವಿ ಸಾಲಗಳನ್ನು 1ನೆ ವರ್ಷಕ್ಕೆ ಮಾತ್ರ ಬಡ್ಡಿಯಿಲ್ಲದಂತೆ ಮಾಡಿ ೫ ವರ್ಷಗಳೊಳಗೆ ಸಾಲ ತೀರಿಸುವ ಏರ್ಪಾಟಿನಿಂದ ಕೊಡಿಸಬೇಕು.

ಉ—ಪರ್ಯಾಲೋಚನೆ ಮಾಡುತ್ತೇವೆ.

ಅ—ರೆವಿನ್ಯೂಬಾಬಿನ ರೀಫಂಡುಗಳಲ್ಲಿ 25 ರೂ. ನೊಳಗಣ ಪರಿಮಿತಿಯ ಬಾಬನ್ನು ಮಂಜೂರ್ಮಾಡಲಿಕ್ಕಾದರೂ ಅಮಲ್ದಾರರಿಗೆ ಅಧಿಕಾರ ಕೊಡಬೇಕು. ಅಥವಾ ಪೂರ್ವದಲ್ಲಿದ್ದಂಥ ಡಿಪಾಜಿಟ್ ಪದ್ಧತಿಯನ್ನೇ ಮರಳಿ ಬಳಕೆಗೆ ತರಬೇಕು.

ಉ—ಅಪ್ಪಣೆಮಾಡುತ್ತೇವೆ.

ಅ—ಗ್ರಾಮಾಭಿವೃದ್ಧಿ ಕಾಮಗಾರಿಗೆ ಬರದಿದ್ದ ರೈತರ ವಿಷಯದಲ್ಲಿ ಒಂದು ಗೊತ್ತಾದ ದಂಡನೆಯನ್ನು ವಿಧಿಸಲು ಅಪ್ಪಣೆಯಾಗಬೇಕು.

ಉ—ಹಿಂದೆ ವಿಸ್ತೋಸಲ ಈ ವಿಷಯವು ಚರ್ಚೆಗೆ ಬಂದು ಬಹುಜನರ ಅನನುಮತಿಯ ಮೇಲೆ ಕೂಡದೆಂದು ಸಿದ್ಧವಾಗಿದೆ. ಹಾಗೆ ಮಾಡುವುದು ಕಷ್ಟ.

ಅ—ಗ್ರಾಮಗಳಲ್ಲಿ ಸರ್ಕಾರಿ ಕಟ್ಟಡಗಳ ಮತ್ತು ನಿವೇಶನಗಳ ಅಳತೆಯನ್ನು ಮಾಡಿಸಿ ಆಯಾ ಗ್ರಾಮದ ಖಾನೇಷುಮಾರಿ ಲೆಕ್ಕಗಳಲ್ಲಿ ಸೇರಿಸಬೇಕು.

ಉ—ಸರ್ಕಾರಿ ಲೆಕ್ಕದ ಖಾನೇಷುಮಾರಿಯಲ್ಲಿ ಇದಕ್ಕೆ ಅವಕಾಶಮಾಡಿಯೇ ಇದೆ.

ಅ—ಬೇಸಾಯಕ್ಕೆ ಮಳೆ ಕಡಿಮೆ, ನೀರಿನ ಸೌಕರ್ಯ ಕಡಿಮೆ, ಜೀವನದ ವೆಚ್ಚಗಳು ಹೆಚ್ಚು. ಇದರಿಂದ ಪ್ರಜೆಗಳ ಉತ್ಪತ್ತಿ ಕಡಿಮೆಯಾಗಿರುವ ಕಾರಣ, ರೀಸರ್ವೆ ಸೆಟಲ್ಮೆಂಟಿನಲ್ಲಿ ಮೊದಲಿನ ದರಗಳನ್ನೇ ಇಟ್ಟುಕೊಳ್ಳಬೇಕು, ಅಥವಾ ಕಂದಾಯದ ದರವನ್ನು ಅರ್ಧದಷ್ಟನ್ನಾದರೂ ಕಡಿಮೆಮಾಡಬೇಕು.

ಉ—ಆಲೋಚಿಸುತ್ತೇವೆ.

ಅ—ಗ್ರಾಮನಕಾಸೆಯಲ್ಲಿ ಮುಖ್ಯನಾಲೆಯ ಜತೆಗೆ ಪ್ರತಿ ನಂಬರಿಗೂ ಇರುವ ನೀರುನಾಲೆಯನ್ನು ತೋರಿಸುವ ಟ್ಯಾಂಕ್‌ವಾರ್ ಪಟ್ಟಿಯನ್ನು ತಯಾರ್ಮಾಡಿಸಿ ತಾ॥ ಕಚೇರಿಯಲ್ಲಿರಿಸಬೇಕು.

ಉ—ಉತ್ತಮವಾದ ಸಲಹೆ, ಗುರ್ತುಮಾಡಿಕೊಂಡಿದೆ.

(ರೆವಿನ್ಯೂ—ಫಾರೆಸ್ಟ್)

ಅ—ಡಿಸ್ಟ್ರಿಕ್ಟ್ ಫಾರೆಸ್ಟ್ ಸಂಬಂಧವಾದ ಆಡಳಿತವನ್ನು ಪೂರ್ವದಂತೆ ಡಿ॥ ಕಮೀಷನರುಗಳಿಗೆ ವಹಿಸಿಕೊಡಬೇಕು.

ಉ—ವಿಚಾರಣೆಯಲ್ಲಿದೆ, ರೂಲ್ಸು ಮಾಡುತ್ತೇವೆ. ಅದನ್ನು ನೋಡಿದ ಬಳಿಕ ಅನನುಕೂಲವೇನಾದರೂ ಇದ್ದರೆ ತಿಳಿಯಿಸಿ.

ಅ—ಬೇಸಾಯಕ್ಕೆ ತಕ್ಕಮರವು ಡಿಸ್ಟ್ರಿಕ್ಟ್ ಕಾಡುಗಳಲ್ಲಿ ಸಿಕ್ಕುವುದಿಲ್ಲ; ಮನ್ನಾ ಕಾಡುಗಳಿಂದ ಅಂಥ ಮರವನ್ನು ರೈತರು ತೆಗೆದುಕೊಳ್ಳಲು ಅನುಕೂಲಮಾಡಿಕೊಡಬೇಕು.

ಉ—ಡಿಸ್ಟ್ರಿಕ್ಟ್ ಕಾಡುಗಳಲ್ಲಿ ಬೇಸಾಯದ ಮುಟ್ಟುಗಳಿಗೆ ತಕ್ಕ ಮರವು ಸಿಕ್ಕದಿದ್ದರೆ ಸ್ಟೇಟ್‌ಫಾರೆಸ್ಟಿನಿಂದ ತರಿಸಿಕೊಡುತ್ತೇವೆ. ಸ್ಪೆಷಲ್ ಕೇಸುಗಳಲ್ಲಿ ತಿಳಿಯಿಸಿದರೆ ಹಾಗೆ ಮಾಡಿಕೊಡುತ್ತೇವೆ. ಜನರಲ್ಲಾಗಿ ಅಪ್ಪಣೆ ಕೊಡಲಾಗುವುದಿಲ್ಲ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಕೆಲವುಕಡೆ ಹಾಗೆ ಮಾಡಲು ಅಪ್ಪಣೆ ಕೊಟ್ಟಿದೆ.

ಅ—ಬಾಗಾಯಿತು ವ್ಯವಸಾಯಮಾಡಲು ತೊಂದರೆಯಾಗದಂತೆ ಮಲೆನಾಡಿನಲ್ಲಿ ಮನ್ನಾಜಂಗಲುಗಳ ಸರಹದ್ದುಗಳನ್ನು ವಾಸದಮನೆಗಳಿಗೆ ದೂರವಾಗಿರುವಂತೆ ಏರ್ಪಡಿಸಬೇಕು.

ಉ—ಕೆಲವುಕಡೆ ಹಾಗೆ ಬದಲಾಯಿಸಿದೆ. ನಿಮಗೆ ಬೇಕಾದ ಸ್ಥಲವಾವುದೋ ಅದನ್ನು ಕಾಣಿಸಿ ಬರೆದುಕೊಂಡರೆ ಡಿ॥ ಕಮೀಷನರು ಮಾಡಿಸಿಕೊಡುತ್ತಾರೆ.

ಅ—ಫಾರೆಸ್ಟ್ ಶಾಖೆಯವರು ಮರಗಳನ್ನು ವಿಶೇಷವಾಗಿ ಸಾಗಿಸುವುದರಿಂದ ಮಾರ್ಗಗಳು ಬಲುಮಟ್ಟಿಗೆ ಕೆಟ್ಟುಹೋಗುತ್ತಿವೆ. ಅವುಗಳ ರಿಪೇರಿಯ ವೆಚ್ಚದಲ್ಲಿ ಅರ್ಧಭಾಗವನ್ನು ಫಾರೆಸ್ಟ್ ಶಾಖೆಯಿಂದ ತೆಗೆದುಕೊಳ್ಳುವಂತೆ ಮಾಡಬೇಕು.

ಉ—ವಿಚಾರಣೆಯಲ್ಲಿದೆ.

ಅ—ರೈತರು ತಾವು ಕೊಡುವ ಕಂದಾಯದ ಪರಿಮಿತಿಗೆ ತಕ್ಕಂತೆ ಅವರ ಗೃಹಕೃತ್ಯಕ್ಕೆ ಬೇಕಾದ ಕಟ್ಟಿಗೆಯನ್ನು ಡಿಸ್ಟ್ರಿಕ್ಟ್ ಜಂಗಲುಗಳಾಗಿದ್ದ ಮನ್ನಾಜಂಗಲುಗಳಿಂದ ಉಚಿತವಾಗಿ ತೆಗೆದುಕೊಳ್ಳುವಂತೆ ಅಪ್ಪಣೆಯಾಗಬೇಕು. ಡಿಸ್ಟ್ರಿಕ್ಟ್ ಜಂಗಲುಗಳಲ್ಲಿ ಹುಲ್ಲನ್ನು ಬೆಳೆಯಿಸಲು ಇಟ್ಟುಕೊಂಡಿರುವುದರಿಂದ ಅಲ್ಲಿ ಕಟ್ಟಿಗೆಯು ಸಿಕ್ಕುವುದಿಲ್ಲ.

ಉ—ಈ ವಿಷಯದಲ್ಲಿ ಹೊಸದಾಗಿ ರೂಲ್ಸು ಮಾಡುವವರಾಗಿದ್ದೇವೆ. ಅದರಿಂದ ಅನುಕೂಲವಾಗಬಹುದು. ನೋಡಿದ ನಂತರ ಅನುಕೂಲವಿಲ್ಲದಿದ್ದರೆ ತಿಳಿಯಿಸಿ.

ಅ—ಸರ್ಕಾರಿ ಮತ್ತು ಹಿಡುವಳಿ ಕಾಡುಗಳಲ್ಲಿ ಒಣಗಿಹೋದ ಬಗನಿ ಮರಗಳನ್ನು ರೈತರು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲು ಉಚಿತವಾಗಿ ಕೊಡುವಂತೆ ಮಾಡಿಕೊಡಬೇಕು. ಫಾರೆಸ್ಟ್ ಇಲಾಖೆಯವರು ಸೊರಬ ಸಾಗರದ ತಾಲ್ಲೂಕುಗಳಲ್ಲಿ ಸತ್ತುಹೋದ ಮರಕ್ಕೆ 1 ರೂ. ನಂತೆ ತೆಗೆದುಕೊಳ್ಳುತ್ತಿದ್ದಾರೆ.

ಉ—ಹಿಡುವಳಿ ಕಾಡಿಗೆ ಸರ್ಕಾರದ ನಿರ್ಬಂಧವೇನೂ ಇಲ್ಲ. ಸರ್ಕಾರದ ಕಾಡಿನ ವಿಷಯವನ್ನು ವಿಚಾರಮಾಡುತ್ತೇವೆ.

ಅ—ಗ್ರಾಮದ ಅಮರಾಯಿಯನ್ನು ಹರಾಜು ಮಾಡಿಸದೆ ಗ್ರಾಮಸ್ಥರಿಗೇ 5 ವರ್ಷಗಳ ಫಸಲಿನ ಅಂದಾಜಿನಮೇಲೆ ಮಾರುತ್ತಿದ್ದ ಪೂರ್ವದ ಪದ್ಧತಿಯಂತೆ ಜಾರಿಗೆ ತರಬೇಕು.

ಉ—ಯೋಚಿಸಿ ಏರ್ಪಾಟು ಮಾಡಿಕೊಡುತ್ತೇವೆ.

ಅ—ಹೊಂಗೆ ಎಲೆಗಳನ್ನೂ ಬೀಜಗಳನ್ನೂ ಹರಾಜು ಮಾಡುವ ಪದ್ಧತಿಯನ್ನು ತಪ್ಪಿಸಿ ತರೀ ಜಮೀನುಗಳ ಹಿಡುವಳಿದಾರರಿಗೆ ಸೇಕಡಾ 1ಕ್ಕೆ 1 ರೂ. 12 ಆಣೆಯಂತೆ ಗೊತ್ತು ಮಾಡಿ ಗುತ್ತಿಗೆಗೆ ಕೊಡಿಸಬೇಕು.

ಉ—ಈ ಬಾಬನ್ನು ರೆವಿನ್ಯೂ ಇಲಾಖೆಗೆ ಸೇರಿಸಬೇಕೆಂದು ಅಪ್ಪಣೆಯಾಗಿದೆ. ಅವರು ಅನುಕೂಲ ಮಾಡಿಕೊಡುತ್ತಾರೆ.

ಅ—ಮನ್ನಾಜಂಗಲುಗಳಲ್ಲಿ ದನಕರುಗಳನ್ನು ಮೇಯಿಸುವ ಅವಧಿಯು 6 ತಿಂಗಳವರೆಗೆ ಮಾತ್ರ ಇರುವ ಪದ್ಧತಿಯನ್ನು ತಪ್ಪಿಸಿ, ಬ್ರಿಟಿಷ್ ಇಂಡ್ಯಾದಲ್ಲಿರುವಂತೆ 1 ವರ್ಷಕ್ಕೆ ಅವಧಿಯನ್ನು ಹೆಚ್ಚಿಸಿಕೊಡಬೇಕು.

ಉ—ವಿಚಾರಣೆಯಲ್ಲಿದೆ, ಹೊಸಅಪ್ಪಣೆ ಮಾಡುತ್ತೇವೆ.

ಅ—ಮನ್ನಾಜಂಗಲುಗಳಲ್ಲಿ ದನಗಳನ್ನು ಮೇಯಿಸಲು ವಿಧಿಸಿರುವ ರುಸುಮು ಭಾರಿಯಾಗಿದೆ. ಉಚಿತವಾಗಿ ರೈತರು ಮೆಯ್ಸಿಕೊಳ್ಳಲು ಅವಕಾಶ ಕೊಡಬೇಕು, ಇಲ್ಲವೆ ರಾಸಿಗೆ 1 ಆಣೆಯಂತೆ ರುಸುಮನ್ನು ತೆಗೆದುಕೊಳ್ಳಬಹುದು.

ಉ—ರೂಲ್ಸು ಆಗುವುದೆಂದು ಹಿಂದೆಯೇ ಉತ್ತರ ಕೊಟ್ಟಿದೆ.

ಅ—ಇದ್ದಿಲನ್ನು ಮಾಡಲಿಕ್ಕಾಗಿ ಜಂಗಲಿನಿಂದ ತೆಗೆದುಕೊಂಡುಹೋಗುವ ಒಣಗಿದ ಬೊಂಬುಗಳಿಗೆ ಪೂರ್ವದಲ್ಲಿ ರುಸುಂ ಇರಲಿಲ್ಲ. ಈಗ ಅಂಥ ಬೊಂಬುಗಳಿಗೆ ಗಾಡಿಯೊಂದಕ್ಕೆ 2¼ ರೂ. ರುಸುಂ ತೆಗೆದುಕೊಳ್ಳುತ್ತಿರುವುದು ದುಬಾರಿಯಾಗಿರುವ ಕಾರಣ ಆ ಕಸಬೇ ಕ್ಷೀಣಿಸಿಹೋಗುತ್ತಿದೆ. ಆ ರುಸುಮನ್ನು ತೆಗೆದುಹಾಕಲು ಅಪ್ಪಣೆಯಾಗಬೇಕು.

ಉ—ಒಣಗಿದ ಬಿದಿರಿಗೆ ಬೇಕಾದರೆ ಮಾಫಿಲೈಸೆನ್ಸ್ ಕೊಡಿಸುತ್ತೇವೆ.

ಅ—ಕಾಡಿನಿಂದ ಬಿದಿರುಸೀಬು, ಸೌದೆ, ಬೇಸಾಯದ ಮುಟ್ಟಿನಮರ-ಇವುಗಳನ್ನು ರೈತರು ಸಾಗಿಸಿಕೊಳ್ಳಲು ಫಾರೆಸ್ಟ್ ಇಲಾಖೆಯವರಿಂದ ಅಪ್ಪಣೆಚೀಟಿ ಪಡೆಯುವುದು ಪ್ರಯಾಸವಾಗಿರುವ ಕಾರಣ, ಗ್ರಾಮದ ಪಟೇಲರಾಗಲಿ ಸೇಕದಾರರಾಗಲಿ ಅವುಗಳ ಮಾಫಿಲೈಸೆನ್ಸ್ ಕೊಡುವಂತೆ ಏರ್ಪಡಿಸಿಕೊಡಬೇಕು.

ಉ—ಮನ್ನಾಜಂಗಲ್ ಲೈಸೆನ್ಸನ್ನು ಫಾರೆಸ್ಟ್ ಇಲಾಖೆಯವರ ಹೊರತು ಇನ್ನಾರೂ ಕೊಡಲಾಗುವುದಿಲ್ಲ. ಮನ್ನಾ ಜಂಗಲುಗಳ ಸೀಬನ್ನು ಉಚಿತವಾಗಿ ತೆಗೆದುಕೊಳ್ಳಬಹುದಾಗಿ ಕೊಟ್ಟಿರುವ ಅಪ್ಪಣೆಯನ್ನು ತಪ್ಪಿಸಿಲ್ಲ.

ಅ—ಮಲೆನಾಡು ರೈತರು ಮನೆಕಟ್ಟಿಸಿಕೊಳ್ಳಲು ಜಂಗಲುಗಳಿಂದ ಮರಗಳನ್ನು ತೆಗೆದುಕೊಳ್ಳುವುದೇ ಮೊದಲಾದ ರಿಯಾಯತಿಗಳನ್ನು ಹೊಂದಿರುತ್ತಾರೆ. ಅಂಥ ರಿಯಾಯತಿಗಳನ್ನು ಮಲೆನಾಡು ಡಿಸ್ಟ್ರಿಕ್ಟುಗಳಿಗೆ ಸೇರಿದ ಟವನ್ನುಗಳಲ್ಲಿರುವ ಖಾತೆದಾರರಿಗೂ ಅನ್ವಯಿಸುವಂತೆ ಮಾಡಬೇಕು.

ಉ—ಗುರ್ತುಮಾಡಿಕೊಂಡಿದ್ದೇವೆ.

(ರೆವಿನ್ಯೂ—ಎಕ್ಸೈಜು.)

ಅ—ಕುಡಿಕತನವನ್ನು ಕಡಿಮೆಮಾಡುವುದಕ್ಕೆ ಅದನ್ನು ನಿಷೇಧಿಸುವ ಅಧಿಕಾರವನ್ನು ಸ್ಥಳಿಕರ ಇಚ್ಛಾನುಸಾರ ನಡೆಯಿಸಿಕೊಡುವುದೇ ಮೊದಲಾದ ಏರ್ಪಾಟನ್ನು ಮಾಡಿಕೊಡಬೇಕು.

ಉ—ನೀವು ಹೇಳಿದ ವಿಷಯವನ್ನೆಲ್ಲಾ ಗುರ್ತುಮಾಡಿಕೊಂಡಿದ್ದೇವೆ, ವಿಚಾರಮಾಡುತ್ತೇವೆ.

ಅ—ಕಂಟ್ರಾಕ್ಟ್‌ದಾರನು ಸೇಂದಿಮರಗಳಿಗೆ ದರಖಾಸ್ತು ಕೊಡುವಾಗ್ಗೆ ಅತನಿಂದ ಪೂರ್ತಾ ಮೊಬಲಗನ್ನು ವಸೂಲ್ಮಾಡಿಕೊಳ್ಳಬೇಕು. ಇಲ್ಲದೆಹೋದರೆ ತೆರುಗೆಯ 2ನೆ ಕಂತಿಗೆ ಖಾತೆದಾರನನ್ನು ಹೊಣೆಮಾಡಲಾಗದು. ಮತ್ತು ಸೇಂದಿಮರದ ತೆರುಗೆಯನ್ನು ಹೆಚ್ಚಿಸಿರುವುದರಿಂದ ಖಾತೆದಾರನಿಗೆ ಸಲ್ಲುತ್ತಿರುವ 4 ಆಣೆಯ ಪ್ರತಿಫಲವನ್ನು ಇನ್ನಷ್ಟು ಹೆಚ್ಚಿಸಿಕೊಡಬೇಕು.

ಉ—ಆಗಲಿ; ಯೋಚನೆಮಾಡಿ ಉತ್ತರಕೊಡುತ್ತೇವೆ.

(ರೆವಿನ್ಯೂ—ವರಮಾನದ ತೆರುಗೆ.)

ಅ—ಖಾಸಗಿಜನರಮೇಲೆ ರೂಪಾಯಿಗೆ 3 ಕಾಸಿನಂತೆ ಬಿದ್ದಿರುವ ವರಮಾನದ ತೆರುಗೆಯು ಜಾಯಿಂಟ್‌ಸ್ಟಾಕ್ ಕಂಪೆನಿಯವರ ಮೇಲೆ ಮಾತ್ರ ರೂಪಾಯಿಗೆ 1 ಆಣೆಯಂತೆ ಹಾಕಲ್ಪಟ್ಟಿದೆ. ಇದು ಹೆಚ್ಚು; ತಗ್ಗಿಸಿಕೊಡಬೇಕು.

ಉ—ಇಂಡ್ಯಾ ಗೌರ್ನಮೆಂಟ್ ಇನ್‌ಕಂಟ್ಯಾಕ್ಸ್ ಆಕ್ಟನ್ನು ನೋಡಿಕೊಂಡು ಅದರಂತೆ ನಮ್ಮಲ್ಲೂ ಏರ್ಪಡಿಸಿದೆ. ಬದಲಾವಣೆ ಮಾಡಲಾಗುವುದಿಲ್ಲ. ಆದರೂ ಅಮೆಂಡ್‌ಮೆಂಟ್ ಮಾಡುವ ಆಲೋಚನೆಯಿಂದ ನಮ್ಮ ಲೆ॥ ಕೌನ್ಸಿಲಿನಲ್ಲಿ ಒಂದು ಸೆಲೆಕ್ಟ್ ಕಮಿಟಿಯನ್ನೇರ್ಪಡಿಸಿದೆ. ಅವರ ರಿಪೋರ್ಟು ಬರಲಿ.

ಅ—ಇನ್‌ಕಂಟ್ಯಾಕ್ಸ್ ಕಲೆಕ್ಟರ ಹುಕುಮ್ಮಿನ ಮೇಲೆ ತರುವ ಅಪೀಲ್ ವಾಯಿದೆಯನ್ನು 3 ತಿಂಗಳಿಗೆ ಹೆಚ್ಚಿಸಿಕೊಡಬೇಕು.

ಉ—ಈಗಿರುವ ರೂಲ್ಸನ್ನು ಬದಲಾಯಿಸಲು ಆಗುವುದಿಲ್ಲ.

ಅ—ಮ್ಯುನ್ಸಿಪಾಲಿಟಿಗಳಲ್ಲಿ ಕಸಬುದಾರಿ ತೆರುಗೆ, ವರಮಾನದ ತೆರುಗೆ—ಹೀಗೆ ಎರಡೂ ಬಿದ್ದಿವೆ. ಕಸಬುದಾರಿ ತೆರುಗೆ ಕೊಡುವವರನ್ನು ವರಮಾನದ ತೆರುಗೆಯಿಂದ ಬಿಡುಗಡೆ ಮಾಡಿಸಿಕೊಡಬೇಕು.

ಉ—ಕಸಬುದಾರಿ ತೆರುಗೆಯು ಮ್ಯುನ್ಸಿಪಾಲಿಟಿಗೆ ಸೇರಿದುದು, ವರಮಾನದ ತೆರುಗೆ ಸರ್ಕಾರಕ್ಕೆ ಸೇರಿದುದು. ಆದರೂ ಸೆಲೆಕ್ಟ್ ಕಮಿಟಿಯವರ ವರದಿಯು ಬಂದಕೂಡಲೇ ಅಪ್ಪಣೆ ಕೊಡುತ್ತೇವೆ.

ಅ—ಸರ್ಕಾರದ ಉದ್ಯೋಗಿಗಳೇ ಪ್ರಜೆಗಳ ಜಮಾಖರ್ಚನ್ನು ನೋಡಿ ತೆರುಗೆ ವಿಧಿಸುವುದನ್ನು ತಪ್ಪಿಸಿ, ಒಂದು ಕಮಿಟಿಯವರ ಮೂಲಕ ಪರಿಶೋಧನೆ ಮಾಡಿಸಿ ತೆರುಗೆ ವಿಧಿಸುವಂತೆ ಮಾಡಬೇಕು.

ಉ—ಹೊಸ ಅಮೆಂಡ್‌ಮೆಂಟಿನಲ್ಲಿ ಈ ನ್ಯೂನಾತಿರೇಕಗಳೆಲ್ಲಾ ಪರಿಹಾರವಾಗಲು ಅವಕಾಶವಿರುತ್ತದೆ. ನಿಮ್ಮ ಹೇಳಿಕೆಗಳನ್ನೆಲ್ಲಾ ಸೆಲೆಕ್ಟ್ ಕಮಿಟಿಯವರಿಗೆ ಕಳುಹಿಸಬಹುದು.

(ರೆವಿನ್ಯೂ—ರಿಜಿಸ್ಟ್ರೇಷನ್.)

ಅ—ಸಬ್‌ರಿಜಿಸ್ಟ್ರಾರರುಗಳ ಉದ್ಯೋಗಗಳನ್ನೇ ತೆಗೆದುಬಿಟ್ಟು, ಆ ಕೆಲಸವನ್ನು ಕಮಿಟಿಗಳ ಮೂಲಕ ನಡೆಯಿಸಿದರೆ ಸರ್ಕಾರಕ್ಕೂ ಪ್ರಜೆಗಳಿಗೂ ಹಿತವಾಗುತ್ತದೆ.

ಉ—ಪ್ರತಿ ಸ್ಥಲದಲ್ಲೂ ಪ್ರತಿದಿನವೂ ಉಚಿತವಾಗಿ ಈ ಕೆಲಸವನ್ನು ಮಾಡುವ ಮೆಂಬರುಗಳು ಸಿಕ್ಕುತ್ತಾರೆಯೆ? ಆದರೂ ವಿಷಯವನ್ನು ಗುರ್ತುಮಾಡಿಕೊಂಡಿದ್ದೇವೆ.

ಅ—ರಿಜಿಸ್ಟರಿಗಾಗಿ ಬರುವ ದಸ್ತಾವೇಜುಗಳನ್ನು ಮಧ್ಯಾಹ್ನ 11½ ಯಿಂದ 5 ಗಂಟೆಯವರೆಗೂ ಅಂಗೀಕರಿಸುವಂತೆ ಅಪ್ಪಣೆಯಾಗಬೇಕು.

ಉ—ವಿಚಾರಮಾಡುತ್ತೇವೆ.

ಅ—ಹೊಸದಾಗಿ ಹೆಚ್ಚಿಸಿರುವ ರಿಜಿಸ್ಟ್ರೇಷನ್ ರುಸುಮುಗಳು ಕಷ್ಟಕರವಾಗಿವೆ. ಅದನ್ನು ತಪ್ಪಿಸಿಕೊಡಬೇಕು. ಅವಶ್ಯಕವಾಗಿ ತೋರಿದರೆ ಕೆಲವು ಸಬ್‌ರಿಜಿಸ್ಟ್ರಾರ್ ಆಫೀಸುಗಳನ್ನು ಕೋತಾಹಾಕಬಹುದು.

ಉ—ಈಗ ವಿಧಿಸಿರುವ ದರವನ್ನು ಬದಲಾಯಿಸಲಾಗುವುದಿಲ್ಲ.

ಅ—ಡ್ಯೂಟಿ ಪೆನಲ್ಟಿ ವಿಧಿಸುವ ಅಧಿಕಾರವನ್ನು ಸಬ್‌ರಿಜಿಸ್ಟ್ರಾರರುಗಳಿಗೆ ವಹಿಸಿಕೊಡಬೇಕು.

ಉ—ಆಗುವುದಿಲ್ಲ.

ಅ—ರಿಜಿಸ್ಟ್ರೇಷನ್ ಅಪೀಲುಗಳನ್ನು ವಿಚಾರಮಾಡುವ ಅಧಿಕಾರವನ್ನು ಡಿವಿಜನ್ ಛಾರ್ಜಿನಲ್ಲಿರುವ ಅ॥ ಕಮೀಷನರುಗಳಿಗೆ ವಹಿಸಿಕೊಡಬೇಕು. ಅದಕ್ಕೆ ತಕ್ಕಂತೆ ಕಾನೂನ್ ಸುಧಾರಣೆ ಮಾಡಿಸಿಕೊಡಬೇಕು.

ಉ—ಪರ್ಯಾಲೋಚನೆಗೆ ಇಟ್ಟುಕೊಂಡಿದೆ.

ಅ—ಮದ್ರಾಸಾಧಿಪತ್ಯದಲ್ಲಿರುವಂತೆ, ವಿಧಾಯಕವಾಗುವ ಫೀಜನ್ನು ಕೊಟ್ಟರೆ ಪೂರ್ವಾದಿಸಾಲಗಳ ಬಗ್ಗೆ ಸರ್ಟಿಫಿಕೇಟನ್ನು ರಿಜಿಸ್ಟ್ರೇಷನ್ ಆಫೀಸರುಗಳು ಕೊಡುವಂತೆ ಅಪ್ಪಣೆಯಾಗಬೇಕು.

ಉ—ಅಪ್ಪಣೆ ಮಾಡುತ್ತೇವೆ.

(ರೆವಿನ್ಯೂ—ಮುಜರಾಯಿ)

ಅ—ಮೇಜರ್ ಮು.ಜರಾಯಿ ದೇವಸ್ಥಾನಗಳ ಮೇಲ್ವಿಚಾರಣೆಗಾಗಿ ಏರ್ಪಟ್ಟಿರುವ ಕಮಿಟಿಯವರಿಗೆ ದೇವಾಲಯದ ವರಮಾನವನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಟ್ಟುಮಾಡುವುದು, ಅವಶ್ಯಕಬಿದ್ದ ಸಂದರ್ಭದಲ್ಲಿ ಡಿ॥ ಕಮೀಷನರ ಮಂಜೂರಾತಿ ನಿರೀಕ್ಷಣೆ ಮೇಲೆ 50 ರೂ. ವರೆಗೆ ವೆಚ್ಚವನ್ನು ಮಾಡಲು ಅಪ್ಪಣೆ ಕೊಡುವುದು. ನೌಕರ್ಮಾನರಿಗೆ 4 ಆಣೆ ವರೆಗೆ ದಂಡವಿಧಿಸುವುದು, ಅವರಿಗೆ ರಜಾಕೊಡುವುದು, ಬದಲಿಯನ್ನೇರ್ಪಡಿಸುವುದು ಇತ್ಯಾದಿ ಕೆಲ ಅಧಿಕಾರಗಳನ್ನು ಕೊಡಿಸಬೇಕು.

ಉ—ಮುಜರಾಯಿಶಾಖೆಯ ಆಡಳಿತವನ್ನು ರೆವಿನ್ಯೂ ಕಮೀಷನರಿಗೆ ವಹಿಸಿಕೊಟ್ಟಿದೆ. ಅವರು ಎಲ್ಲವನ್ನೂ ವಿಚಾರಮಾಡಿ ಅನುಕೂಲಪಡಿಸಿಕೊಡುತ್ತಾರೆ.

ಅ—ಮುಜರಾಯಿ ಕಾಮಗಾರಿಗಳಿಗೆ 500 ರೂ. ಗಳವರೆಗೆ ಖರ್ಚಿಗೆ ಸ್ಯಾಂಕ್ಷನ್ ಮಾಡುವ ಅಧಿಕಾರವನ್ನು ಡಿ॥ ಕಮೀಷನರುಗಳಿಗೆ ಕೊಡಿಸಬೇಕು.

ಉ—250ರೂ. ಗಳವರೆಗೆ ಅಧಿಕಾರಕೊಡುವ ಆರ್ಡರು 1 ತಿಂಗಳೊಳಗೆ ಹುಟ್ಟಿದೆ. ಇದು ಸಾಲದೆಂದು ತೋರಿದರೆ 500 ಕ್ಕೂ ಅಧಿಕಾರಕೊಡುತ್ತೇವೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸ. ಪ್ರ.

ವೀರಶೈವ ತರುಣಸಂಘ, ಕಮತಗಿ.

ತಾ॥ 20-10-22ನೆ ದಿವಸ ಇಲ್ಲಿಯ ವೀರಶೈವತರುಣರ ಆಮಂತ್ರಣದ ಮೇರೆಗೆ ದಾವಣಗೆರೆಯ ಶ್ರೀಯುತ ಮಂಜಪ್ಪನವರು ಹರ್ಡೇಕರ ಇವರು ಹುನಗುಂದ ವೀ. ತ. ಸಮ್ಮೇಲನದ ಕಾರ್ಯಕ್ರಮವನ್ನು ತೀರಿಸಿಕೊಂಡು ಇಲ್ಲಿಗೆ ದಯಮಾಡಿಸಿದ್ದರು. ಶ್ರೀ ಹರ್ಡೇಕರರವರ ಅಧ್ಯಕ್ಷತೆಯ ಕೆಳಗೆ ಶ್ರೀಯವರ ಮಠದಲ್ಲಿ ಎಲ್ಲಜಾತಿ ಜನರ ಪ್ರಚಂಡವಾದ ಜಾಹೀರ ಸಭೆಯು ನೆರವೇರಲ್ಪಟ್ಟಿತು. ಎಲ್ಲಿ ನೋಡಿದಲ್ಲಿ ತರುಣರ ಉತ್ಸಾಹವೂ ಯಜಮಾನರ ಸಹಾನುಭೂತಿಯೂ, ವ್ಯಕ್ತವಾಗುತ್ತಿದ್ದವು. ಅಧ್ಯಕ್ಷರು "ಚಟ" ಹಾಗು "ಸಂಘಗಳ ಅವಶ್ಯಕತೆ" ಈ ವಿಷಯಗಳ ಮೇಲೆ ಒಳ್ಳೆಪರಿಣಾಮಕರವಾಗಿ ಸುಶ್ರಾವ್ಯವಾದ ಭಾಷಣವನ್ನು ಮಾಡಿದರು. ಅಧ್ಯಕ್ಷರು ಚಹಾ, ಚುಟ್ಟಾ, ಇವುಗಳ ಸೇವನದಿಂದ ಸಮಾಜಗಳಿಗುಂಟಾಗುವ ಹಾನಿಯನ್ನು ಒಳ್ಳೆ ವಿಶದವಾಗಿ ವ್ಯಕ್ತಪಡಿಸಿ ಅವುಗಳಲ್ಲಿ ತಿರಸ್ಕಾರವುಂಟಾಗುವಂತೆ ಮಾಡಿದರು. ಆಗಲೇ ಕೆಲವು ತರುಣರು, ಚಹಾ ಚುಟ್ಟಾಗಳಿಗೆ ಬಹಿಷ್ಕಾರಹಾಕಿ ವೀರಪ್ರತಿಜ್ಞೆಯನ್ನು ಮಾಡಿದರು. ಮರುದಿವಸ "ತರುಣಸಂಘ" ಸ್ಥಾಪನೆಯ ಕಾರ್ಯಕ್ರಮ ತೀರಿದಮೇಲೆ ಶ್ರೀ ಚನ್ನಮಲ್ಲಪ್ಪಅಣ್ಣಾ ಶೆಟ್ಟರ, ಶ್ರೀ ಪುಟ್ಟಪ್ಪಅಣ್ಣಾ ನಾಗಠಾಣ, ಇವರುಗಳು ಅಧ್ಯಕ್ಷರೂ ಉಪಾಧ್ಯಕ್ಷರೂ ಆಗಿ ಆರಿಸಲ್ಪಟ್ಟಮೇಲೆ ಹಾರತುರಾಯಿಗಳಿಂದ ಅಧ್ಯಕ್ಷರ ಆಭಾರಮನ್ನಿಸಿ ಜಯಜಯಕಾರದೊಡನೆ ಸಭೆಯು ಪೂರ್ತಿಗೊಂಡಿತೆಂದು ತಿಳಿಸಲು ಆನಂದವಾಗುವದು.

ವೀರಶೈವ ತರುಣಸಂಘ ಸೆಕ್ರೆಟರಿಗಳು,

ಶಿರಾಳಕೊಪ್ಪ.

ಈ ಪ್ರಾಂತದಲ್ಲಿ ಈಗ ಒಂದು ತಿಂಗಳಿಂದ ಮಳೆಯಿಲ್ಲದೆ ಪೈರುಗಳೆಲ್ಲಾ ಬಹಳಮಟ್ಟಿಗೆ ಕೆಟ್ಟುಹೋದವು. ಕೆಲವು ಕಡೆಗಳಲ್ಲಿ ಬಿತ್ತಿದ ಬೀಜವೂ ಸಹ ಬರುವಂತೆ ಇಲ್ಲ. ಪ್ಲೇಗ್‌ರೋಗದ ಹಾವಳಿಯು ಬಹಳಮಟ್ಟಿಗೆ ಕಡಮೆಯಾಗಿದೆ. ಊರಿನಲ್ಲಿ ರಾತ್ರಿ ದೀಪಗಳಿಲ್ಲದ್ದರಿಂದ ಹುಲಿ ಚಿರತೆ ಮೊದಲಾದ ದುಷ್ಟಮೃಗಗಳು ಊರೊಳಗೆ ಬಂದು ದನಕರುಗಳನ್ನು ಕೊಲ್ಲುತ್ತಲಿವೆ. ಇವುಗಳ ಪ್ರತಿಬಂಧಕ್ಕೆ ಯಾರೂ ಗಮನಕೊಡದಿರುವುದು ವಿಷಾದವಾಗಿದೆ. ಇಲ್ಲಿಗೆ ಆಶ್ವಯುಜ ಮಾಸದಲ್ಲಿ ದಾವಣಗೆರೆ ಶ್ರೀ ಮೃತ್ಯುಂಜಯಸ್ವಾಮಿಗಳು ದಯಮಾಡಿಸಿದಾಗ ಸದರಿ ಶ್ರೀಗಳವರ ಉಪದೇಶದ ಪ್ರಕಾರ ಇಲ್ಲಿಯ ವೀರಶೈವರು ಒಂದು ಭಜನಾಸಂಘವನ್ನೂ ಮತ್ತು ಒಂದು ಹಿತೋಪದೇಶಕ ಸಂಘವನ್ನೂ ಏರ್ಪಡಿಸಿಕೊಂಡು ಅದನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ. ಬಾಲಕರುಗಳು ಸ್ಕೂಲ್ಮಾಸ್ಟರ್ ಓಂಕಾರಯ್ಯನವರೊಡನೆ ಪ್ರತಿದಿವಸವೂ ದೇವಸ್ಥಾನದಲ್ಲಿ ದೇವರಪ್ರಾರ್ಥನೆ ಮಾಡುತ್ತಾರೆ. ಸದರಿ ಮೇಲ್ಕಂಡ ಸಂಘಗಳಿಗೆ ಇಲ್ಲಿಯ ರಾ॥ ರಾ॥ ಶ್ರೀ ಕರ್ನೆಲ್ಲಿ ಶಂಕರಪ್ಪನವರು ಬಹಳ ಮುತುವರ್ಜಿಯಿಂದ ಕೆಲಸಮಾಡುತ್ತಾರೆ. ಇವರಂತೆ ಇಷ್ಟು ಶ್ರದ್ಧೆಯಿಂದ ಸಂಘದ ಪ್ರತಿಯೊಬ್ಬ ಮೆಂಬರೂ ಐಕಮತ್ಯದಿಂದ ಪರಸ್ಪರ ಭೇದಭಾವಗಳಿಗೆ ಒಳಗಾಗದೆ ಸದ್ಬುದ್ಧಿಯಿಂದ ಕೆಲಸಮಾಡಿ ನಮ್ಮ ಸಂಘಕ್ಕೆ ಯಾವ ತೊಂದರೆಯೂ ಬಾರದಂತೆ ಕೆಲಸಮಾಡಬೇಕಾಗಿ ಇಲ್ಲಿಯವರು ಅಪೇಕ್ಷಿಸುತ್ತಾರೆ.

ಸ್ಥಳಿಕ.

ಶ್ರೀ ಬಸವರಾಜ ಲೈಬ್ರೆರಿ, ನೈಜಾಂ ಇಲಾಖಾ ಯಾದ್ಗಿರಿ.

ಆಲೋಚನಾ ಕಮಿಟಿಯು ವ್ಯವಸ್ಥೆಯಂತೆ ಇದೇ ಕಾರ್ತಿಕ ಶು॥ ೧೦ ಸೋಮವಾರ ಸಭೆಯನ್ನೇರ್ಪಡಿಸಿ ನಂತರ ಸಂ॥ ವಿ॥ ಅನಂಪಲ್ಲಿ ವೇ॥ ಶಾಂತಮೂರ್ತ್ಯಪ್ಪನವರ ಶಿವಕೀರ್ತನವಾದ ನಂತರ ವಾಚನಾಲಯಗಳಿಂದಾಗುವ ಪ್ರಯೋಜನವನ್ನು ಕುರಿತು ವೇ॥ ಬಸವಣ್ಣಪ್ಪ ಶಾಸ್ತ್ರಿಯವರೂ, ಶಿವಪ್ಪ ಶಾಸ್ತ್ರಿ ಯಸ್ಸಿಗಿ ಇವರೂ ಶ್ರೋತೃಗಳಿಗೆ ತತ್ಕಾಲಕ್ಕೆ ಬೋಧವಾಗುವಂತೆ ಸರಳವಾಗಿ ಭಾಷಣಮಾಡಲು, ಆಗ ಸಭಿಕರೆಲ್ಲರೂ ಸಂತೋಷೋದ್ಗಾರದೊಡನೆ ವರ್ಗಣಿ ಕೊಡಕೊಪ್ಪಿ ಸರ್ವರ ಅನುಮೋದನದ ಮೇರೆಗೆ ಆಗಿಂದಾಗ ಲಿಂಗೇರಿ ಕೋಣಪ್ಪನವರ ಬಂಗಲೆಯಲ್ಲಿ, ಶ್ರೀ ನೈಜಾಂ ಬಸವರಾಜ ಲೈಬ್ರೆರಿಯು ಸ್ಥಾಪಿಸಲ್ಪಟ್ಟು ಪ್ರೆಸಿಡೆಂಟ್ ಮುಂತಾದವರನ್ನು ಚುನಾಯಿಸಲಾಯಿತು. ಮ॥ ರಾ॥ ಲಿಂಗೇರಿ ಕೋಣಪ್ಪನವರನ್ನು ಪ್ರೆಸಿಡೆಂಟರನ್ನಾಗಿಯೂ ಫಕೀರಪ್ಪ ಶೃಂಗೇರಿ ಯವರನ್ನು ವೈಸ್‌ಪ್ರೆಸಿಡೆಂಟರನ್ನಾಗಿಯೂ, ಎನ್. ರುದ್ರಪ್ಪ ವಕೀಲರನ್ನು ಸೆಕ್ರೆಟರಿಗಳನ್ನಾಗಿಯೂ, ಬೀಡ್ನೂರು ಗುರುನಾಥರಡ್ಡಿ ವಕೀಲರನ್ನು ಅಂಡರ್ ಸೆಕ್ರೆಟರಿಗಳನ್ನಾಗಿಯೂ, ರೊಟ್ಟಿಡಿಗಿ ಶರಣಪ್ಪನವರನ್ನು ಖಜಾಂಚಿಯನ್ನಾಗಿಯೂ, ಮ॥ ಶ್ರೀಮಂತ ಗುತ್ತೇದಾರ್ ಮಾನಸಗಲ್ಲ ಕರ್ಯಪ್ಪಗೌಡರನ್ನು ಮೇನೇಜಿಂಗ್ ಕಮಿಟಿ ಮೆಂಬರನ್ನಾಗಿಯೂ, ಆದ್ವಾನಿ ನಾರಣಪ್ಪನವರನ್ನು ವೈಸ್‌ಮೆಂಬರನ್ನಾಗಿಯೂ ಚುನಾಯಿಸಿದ ನಂತರ ಸರ್ವರಿಗೂ ಗಂಧಪುಷ್ಪ ಮೊದಲಾದವುಗಳನ್ನು ಸಮರ್ಪಿಸಿ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಸತ್ಕಾಲಕ್ಷೇಪ, ನೆಲಮಂಗಲ.

ತಾ॥ 21-10-922 ನೆ ಶನಿವಾರ ಬ್ರಂ॥ ಶ್ರೀ॥ ವೇ॥ ಶಿವಕಥಾಪಂಡಿತ ಶಿವಯ್ಯಶಾಸ್ತ್ರಿಗಳವರು ಶ್ರೀ ರುದ್ರೇಶ್ವರಸ್ವಾಮಿ ಸಂಘದವರ ವಿಜ್ಞಾಪನೆ ಪ್ರಕಾರ ನೆಲಮಂಗಲಕ್ಕೆ ದಯಮಾಡಿಸಿದ್ದರು. ಪ್ರೋಗ್ರಾಮನ್ನು ಆಹ್ವಾನಪತ್ರಿಕೆಗಳ ಮೂಲಕ ಅನೇಕ ಗ್ರಾಮಗಳಿಗೆ ಕಳಿಸಿದ್ದರು. ಸಾವಿರಾರು ಮಂದಿ ಪ್ರೇಕ್ಷಕರು ನೆರೆದಿದ್ದರು. ಸ್ಥಳದ ಮಠಪತಿಗಳು ವೈದಿಕರು ಇನ್ನೂ ಇತರ ದೊಡ್ಡಮನುಷ್ಯರು ಸಹ ದಯಮಾಡಿಸಿದ್ದರು. ಪೇಟೆ ಮಧ್ಯಭಾಗದಲ್ಲಿ ಹಾಕಿದ್ದ ಅಂದವಾದ ಚಪ್ಪರದಲ್ಲಿ ಈದಿನ ರಾತ್ರಿ ಜಗನ್ಮಿತ್ರವಿಲಾಸ, ಭಾನುವಾರ ಮಧ್ಯಾಹ್ನ ಪ್ರಕೃತಸ್ಥಿತಿಯಲ್ಲಿ ನಾವು ಹೇಗೆ ನಡೆದುಕೊಳ್ಳೋಣವದರಿಂದ ಸುಖಿಗಳಾಗಬಹುದೆಂಬ ವಿಚಾರದಲ್ಲಿ ಉಪನ್ಯಾಸಗಳೂ, ಸೋಮವಾರ ಬೆಳಗ್ಗೆ ಪುರವೀಧಿಗಳಲ್ಲೆಲ್ಲಾ ಭಕ್ತಮಾಹೇಶ್ವರರೊಡನೆ ಭಜನೆಯೂ, ರಾತ್ರಿ ಗಿರಿಜಾಕಲ್ಯಾಣವೆಂಬ ಕಥಾಕಾಲಕ್ಷೇಪವೂ, ಮಂಗಳವಾರ ರಾತ್ರಿ ಶಬರಶಂಕರವಿಲಾಸ ಕಾಲಕ್ಷೇಪವೂ, ಈರೀತಿಯಾಗಿ ವೇ॥ ಶಾಸ್ತ್ರಿಗಳವರಿಂದ ಗಂಭೀರವಾಗಿಯೂ, ರಸಭರಿತವಾಗಿಯೂ ನೆರವೇರಿಸಲ್ಪಟ್ಟಿತು. ವೇ॥ ಚಿಕ್ಕಣ್ಣಶಾಸ್ತ್ರಿಗಳು ಸಭಾಪರವಾಗಿ ಉಪನ್ಯಾಸಕರಾದ ಶಾಸ್ತ್ರಿಗಳವರನ್ನು ವಂದನೆಮಾಡಿದರು. ನೆರೆದಿದ್ದ ಎಲ್ಲಾ ವರ್ಣದವರೂ ಬಹಳ ಸಂತೋಷಪಟ್ಟು ತೆರಳಿದರು. ಬುಧವಾರ ಪ್ರಾತಃಕಾಲ ಹತ್ತುಗಂಟೆಗೆ ಮಹಾಗಣಾರಾಧನೆಯು ಎಲ್ಲಾ ಭಕ್ತಮಾಹೇಶ್ವರರಿಗೂ ನಡೆಸಲ್ಪಟ್ಟಿತು. ವೇ॥ ಶಾಸ್ತ್ರಿಗಳವರು ಭೋಜನವನ್ನು ತೀರಿಸಿಕೊಂಡು ವಾದ್ಯಸಮೇತ ಮರ್ಯಾದೆಯೊಡಗೂಡಿ 5½ ಗಂಟೆ ರೈಲಿನಲ್ಲಿ ಬೆಂಗಳೂರಿಗೆ ಪ್ರಯಾಣವನ್ನು ಬೆಳಸಿದರು.

ಪ್ರತ್ಯಕ್ಷದರ್ಶಿ.

ಭೋಗಾವಿ.

ತಾ॥ 22-9-1922ನೆ ಬುಧವಾರ ಸಾಯಂಕಾಲ 7 ಗಂಟೆಗೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ "ಶ್ರೀ ಮೃತ್ಯುಂಜಯ ಪ್ರಾಸಾದಿಕ ಕೆಂಬಾವಿ ಭೋಗಣ್ಣನವರ ಹಿತೋಪದೇಶಕ ಸಂಘದ" ನೇತೃತ್ವದ ಕೆಳಗೆ ನಡೆದಿರುವ "ಭೋಗಣ್ಣನವರ ಮುನ್ಸಿಫಂಡಿನ ದನಾರ್ಥಕ ಪ್ರಾಥಮಿಕ ಶಾಲೆಯ" ವ್ಯವಸ್ಥಾಪಕ ಮಂಡಲದವರು ದಾವಣಗೆರೆಯಿಂದ "ಶ್ರೀ ಮೃತ್ಯುಂಜಯಸ್ವಾಮಿ" ಗಳೊಡನೆ ಈ ನಮ್ಮ ಕೋಡ ತಾಲ್ಲೂಕಿನ ಸಂಚಾರಕ್ಕಾಗಿ ಆಗಮಿಸಿದ 21 ಜನ ವಿದ್ಯಾರ್ಥಿಗಳಿಗೆ ಬಹು ಆದರದಿಂದ ಸತ್ಕಾರಮಾಡಿದರು. ಅದೇ ದಿವಸ ರಾತ್ರಿ 8 ಗಂಟೆಗೆ ಶ್ರೀಯುತ ಆರ್. ಎಸ್. ಪಾಟೀಲ ಬಿ. ಎ. ಜಿ. ಇವರ ಅಧ್ಯಕ್ಷತೆಯ ಕೆಳಗೆ ಆ ಗ್ರಾಮದ ಮತ್ತು ಅಜುಬಾಜು ಗ್ರಾಮಗಳ ಯಾವತ್ತು ಜನರ ಜಂಗೀ ಸಭೆಯು ಜರಗಿ ವಿದ್ಯೆ, ಸಮಾಜಸೇವೆ, ಸತ್ಪುರುಷರು, ಸ್ತ್ರೀ ಶಿಕ್ಷಣ ಮುಂತಾದ ವಿಷಯಗಳ ಮೇಲೆ ಅನೇಕರ ಭಾಷಣಗಳಾದದ್ದಲ್ಲದೆ ಶ್ರೀ ಶಿವಯೋಗೀಶ್ವರ ಲೈಬ್ರೆರಿ ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು. ಇದರ ಉತ್ತೇಜನಾರ್ಥವಾಗಿ ದಾವಣಗೆರೆ ವಿದ್ಯಾರ್ಥಿಗಳು 13 ರೂಪಾಯಿಗಳನ್ನೂ, ಪುಟ್ಟಯ್ಯನವರು ಸಾಲಿ ಇವರು 3-12-0 ಯನ್ನೂ ವೀರಯ್ಯನವರು ಮುನ್ಸಿಫಂಡ್ ಸ್ಕೂಲ ಮಾಸ್ತರ ಇವರು ರೂ. 3-14-0 ಯನ್ನೂ ಮತ್ತು ಗಂಗನಗೌಡ ಗಂಗನಗೌಡರ ಇವರು ರೂ. 2-8-0 ಯನ್ನೂ ವೀರಬಸಪ್ಪಗೌಡರ ಇವರು ರೂ. 2-8-0 ಯನ್ನೂ ಕೊಟ್ಟರು. ಇದಲ್ಲದೆ ಈ ಸಂಸ್ಥೆಯ ಶಾಶ್ವತನಿಧಿಗೆ ಶ್ರೀಗಳವರು 25 ರೂಪಾಯಿಗಳನ್ನು ದಯಪಾಲಿಸಿದರು. ಮತ್ತು ಚನ್ನಬಸವನಗೌಡ ಪೋಲೀಸ್ ಪಾಟೀಲ ಅಬಲೂರ ಇವರು ಕೂಡ ರೂ. 3 ಕೊಟ್ಟರು. ನಂತರ ಶ್ರೀಗಳವರಿಂದ ಸದ್ಯದ ಪರಿಸ್ಥಿತಿಯಲ್ಲಿ ಪ್ರತಿ ಒಬ್ಬ ವೀರಶೈವನೂ ಮಾಡಬೇಕಾದ ಕೆಲಸ ಈ ವಿಷಯದ ಮೇಲೆ ಯಾವತ್ತೂ ಭಕ್ತಮಂಡಲಿಯ ಮನದಲ್ಲಿ ಬಿಂಬಿಸುವಂತೆ ಉಪದೇಶವಾಗಿ ಮಂಗಲದೊಡನೆ ಸಭಾವಿಸರ್ಜನೆಯಾಯಿತು.

ಗಂಗನಗೌಡ.

ದೇವನಹಳ್ಳಿ, ತಾಲ್ಲೂಕು ಮಡಿಗೇನಹಳ್ಳಿ ವರ್ತಮಾನಗಳು.

ಈಪ್ರಾಂತ ಮಳೆಬಿದ್ದು ಬೆಳೆಗಳು ಚೆನ್ನಾಗಿರುತ್ತವೆ. ಕೆರೆ ಕುಂಟೆಗಳು ಅರ್ಧಾಂಕಿತವಾಗಿವೆ. ಸುತ್ತುಮುತ್ತಲೂ ಗ್ರಾಮಗಳಲ್ಲಿ ಪ್ಲೇಗು ಇನ್‌ಫ್ಲುಯೆಂಜಾ ಹರಡಿಕೊಂಡು ಅನೇಕರು ಷೆಡ್ಡುಗಳಲ್ಲಿ ವಾಸಮಾಡುತ್ತಾ ಚಳಿ ಮಳೆಗಳಿಗೆ ಸಿಕ್ಕಿ ವ್ಯಥೆಪಡುತ್ತಲಿದ್ದಾರೆ. ಈ ಗ್ರಾಮದಲ್ಲಿ ಈದಿನದವರೆಗೂ ರೋಗೋಪದ್ರವಗಳೇನೂ ಇಲ್ಲದೆ ಕ್ಷೇಮದಿಂದಿರುವುದಕ್ಕಾಗಿ ಸಂತೋಷಪಡಬೇಕಾಗಿದೆ. ಈ ಊರಿನಲ್ಲಿ 10-12 ವರ್ಷಗಳ ಹಿಂದೆ ಕೆಲವು ಯೌವನಸ್ಥರು ಸೇರಿ ಒಂದು ಸಂಘವನ್ನು ಮಾಡಿಕೊಂಡು ಸ್ವಂತವೆಚ್ಚದಿಂದ ಫಂಡುಮಾಡಿ, ಒಂದು ರೀಡಿಂಗ್ ರೂಮನ್ನು ಸ್ಥಾಪನೆಮಾಡುವ ಉದ್ದಿಶ್ಯ ನಾಲ್ಕು ಅಂಗಡಿಗಳ ಜಾಗವನ್ನು ತೆಗೆದುಕೊಂಡು 8-9 ವರ್ಷಗಳ ಹಿಂದೆಯೇ ಸುಮಾರು 800-1000 ರೂಪಾಯಿಗಳ ವರೆಗೆ ಖರ್ಚುಮಾಡಿ ತಳಹದಿ ಭದ್ರಪಡಿಸಿದರು. ಈಗ್ಗೆ ಸುಮಾರು 3 ವರ್ಷಗಳ ಹಿಂದೆ ಬೇರೆ ಕೆಲವು ಪ್ರಾಯದ ಹುಡುಗರು ಪಿ. ಎಂ. ಎಂಗ್‌ಮೆನ್ಸ್ ಅಸೋಸಿಯೇಷನ್ ಎಂಬದಾಗಿ ಏರ್ಪಾಟುಮಾಡಿಕೊಂಡು ಧರ್ಮಕಾರ್ಯಕ್ಕಾಗಿ ಗ್ರಾಮದಲ್ಲಿ ಇತರ ಜನಗಳಿಂದ ಎಷ್ಟೋ ಎದರುಗಳು ಬಂದಾಗ್ಯೂ ಹಿಂಜರಿಯದೆ ಕಾರ್ಯಗಳನ್ನು ನಡೆಸುತ್ತಾ ಬರುವುದನ್ನು ನೋಡಿ ರೀಡಿಂಗ್ ರೂಮ್ ಸಂಘದವರೂ ಈ ಸಂಘಕ್ಕೆ ಐಕ್ಯವನ್ನು ಹೊಂದಿ ರೀಡಿಂಗ್ ರೂಮಿನ ವಿಶಿಷ್ಟ ಹಕ್ಕನ್ನೂ ಒಪ್ಪಿಸಿದ್ದಲ್ಲದೆ ಡಿಟೋ ಸಂಘದ ಮೆಂಬರುಗಳಾಗಿರುವರು. ಇವರು ಈಚೆಗೆ ಒಂದು ವರ್ಷದ ಲಾಗಾಯಿತು ಕಟ್ಟಡವನ್ನು ಪ್ರಾರಂಭಿಸಿ ಕಿಟಿಕಿ ಬಾಗಿಲುಗಳೊಂದಿಗೆ ಇನ್ನೂ ಕೆಲವು ದ್ರವ್ಯವನ್ನು ಖರ್ಚುಮಾಡಿ ನಾಲ್ಕು ಗೋಡೆಗಳನ್ನು ಪೂರ್ತಿ ಕಟ್ಟಿಸಿ ದೇವೇಂದ್ರನಿಗೆ ಆಹುತಿಕೊಟ್ಟು ಹಾಗೆ ಒಂದು ಪಾರ್ಶ್ವದ ಗೋಡೆಯ ಅರ್ಧಭಾಗವು ಬಿದ್ದಿರುವುದನ್ನು ನಾವು ನೋಡುತ್ತಾ ಇರುವುದು ನಮ್ಮಗಳಿಗೆ ನೀರಿನಲ್ಲಿ ಹೋಮಮಾಡಿದ ಹಾಗೆ ಕಳಕಳಿಯನ್ನೂ ವ್ಯಥೆಯನ್ನೂ ಉಂಟುಮಾಡಿದೆ, ಇಂಥ ಅಜಾತುರ್ಯಕಾರ್ಯಗಳನ್ನು ನಡೆಸಿ ಸಾವಿರಗಟ್ಟಲೆ ರೂಪಾಯಿ ಖರ್ಚುಮಾಡಿರುವ ಈ ಕಟ್ಟಡವನ್ನು ಅರ್ಧಾಂಕಿತವಾಗಿಬಿಟ್ಟು ನಷ್ಟಪಡಿಸಲು ಕಾರಣವನ್ನು ಪೇಪರು ಮೂಲಕ ಗೋಚರಪಡಿಸಿ ನಮ್ಮಗಳ ಮನೋವ್ಯಥೆಯನ್ನು ಹೋಗಲಾಡಿಸಬೇಕೆಂದು ಪ್ರಾರ್ಥಿಸುತ್ತೇವೆ.

ಸಂಘದ ಮೆಂಬರು.

ಬಾಗಲಕೋಟೆ ವೀರಶೈವ ತರುಣಸಂಘ, ಜಾಹೀರಸಭಾ.

ಮ॥ ಮಂಚಪ್ಪ ಹರ್ಡೇಕರ ಇವರು, ಪೂರ್ವದಲ್ಲಿ ಶಿಕ್ಷಣದಲ್ಲಿ ಧಾರ್ಮಿಕ ನೈತಿಕ ವಿಷಯವನ್ನು ಕಲಿಸುತ್ತಿದ್ದರು. ಈಗ ಈ ವಿಷಯಗಳು ಇಲ್ಲದ್ದರಿಂದ ಹುಡುಗರಲ್ಲಿ ಗುರುಹಿರಿಯರ ಮೇಲಿನ ಭಕ್ತಿಯಿಲ್ಲದಂತೆ ಆಗಿದೆಯೆಂತಲೂ ಸರಕಾರಿ ಶಾಲೆಗಳಿಲ್ಲದಂಥ ಹಳ್ಳಿಗಳಲ್ಲಿ ಮೊದಲಿನ ಪದ್ಧತಿಯ ಮೇರೆಗೆ ಸಾಲೆಗಳನ್ನು ಸ್ಥಾಪಿಸಬೇಕೆಂದೂ, ಪ್ರಾಚೀನ ಸರಕಾರದವರು ವಿದ್ಯಾಖಾತೆಗೆ ಹಣ ಖರ್ಚುಮಾಡದೆ ಕಲಿತುಬಂದವರಿಗೆ ಬಹುಮಾನ ಕೊಡುತ್ತಿದ್ದರೆಂದೂ, ವೀರಶೈವರಿಂದಲೇ ವಿದ್ಯೆಯು ಎಲ್ಲರಿಗೆ ಸಿಗುತ್ತಿದ್ದಿತೆಂದೂ ಮೊದಲಾಗಿ ಶಿಕ್ಷಣವಿಷಯಕ್ಕೆ ಭಾಷಣಮಾಡಿದರು. ಆಮೇಲೆ ಸಮಾಜಸುಧಾರಣೆ ತಂಬಾಕ ಚಹಾ ಚಟಗಳನ್ನು ಬಿಡಬೇಕೆಂದೂ, ಅವುಗಳಿಂದಾಗುವ ದುಷ್ಪರಿಣಾಮವನ್ನು ಜನರ ಮನಸ್ಸಿನ ಮೇಲೆ ಬಿಂಬಿಸುವಂತೆ ಉಪದೇಶ ಮಾಡಿದರು. ನಂತರ ಅಧ್ಯಕ್ಷರಾದ ಮಿ॥ ಮುರಗಯ್ಯಸ್ವಾಮಿ ಜಂಗಿನ ಇವರು ಈಗಿನ ಶಿಕ್ಷಣದ ಖಾತೆಯನ್ನು ನಮ್ಮಕಡೆಗೆ ಸರ್ಕಾರದವರು ಕೊಟ್ಟಿರುವದರಿಂದ ಮೊದಲಿನ ಪದ್ಧತಿಗೂ ಈಗಿನ ಪದ್ಧತಿಗೂ ವಿಚಾರಮಾಡಿ ಉತ್ತಮವಾಗಿದ್ದವುಗಳನ್ನು ಎರಡುಭಾಗದಲ್ಲಿಯೂ ತೆಗೆದುಕೊಳ್ಳಬೇಕೆಂತಲೂ, ಮೊದಲಿನ ಸರಕಾರದವರು ವಿದ್ಯಾಖಾತೆಗೆ ಏನೂ ಹಣ ಖರ್ಚುಮಾಡುತ್ತಿದ್ದಿಲ್ಲೆಂದೂ ಈಗಿನ ಬ್ರಿಟಿಷ್ ಸರಕಾರದವರು ವಿದ್ಯಾಖಾತೆಗೆ ಕೆಲವುಹಣ ಖರ್ಚುಮಾಡುತ್ತಾರೆಂದೂ, ಸರಕಾರದಲ್ಲಿ ನಮ್ಮ ಜನರೇ ಅಧಿಕಾರಿಗಳಾಗಿರುವುದರಿಂದ ತಮಗೆ ಬೇಕಾದ ಧರ್ಮನೀತಿ ಪಾಠಗಳನ್ನು ಹಾಕಿಕೊಂಡರೆ ಸರಕಾರದವರು ಬೇಡೆನ್ನರೆಂದೂ, ಈಗ ವಿದ್ಯಾಖಾತೆಯು ಜನರ ಕಡೆಯದ್ದು ಬೇಕಾದ ಸವಲತ್ತು ಮಾಡಿಸಿಕೊಳ್ಳಬಹುದೆಂತಲೂ ಈ ಪ್ರಕಾರ ಉಪಸಂಹಾರ ಭಾಷಣಮಾಡಿದರು. ಸಮಾಜಸುಧಾರಣೆಗೆ ಚಹಾ ಕಾಫಿ ಇವುಗಳಿಂದಾಗುವ ದುಷ್ಪರಿಣಾಮಗಳನ್ನು ತಿಳಿಸಿ ಸಭಾವಿಸರ್ಜನೆ ಮಾಡಿದರು.

ನಾಗಪ್ಪ ರಾಚಪ್ಪ ಬ್ಯಾಳಿ.

ಶಿಂಗಟಾಲೂರ ಶ್ರೀ ವೀರಭದ್ರದೇವಸ್ಥಾನದ ವೃತ್ತಾಂತ.

ಈ ದೇವಸ್ಥಾನವು ಧಾರವಾಡ ಜಿಲ್ಲಾ ಗದಗತಾಲ್ಲೂಕ ಪೈಕಿ ಶಿಂಗಟಾಲೂರು ಹಮ್ಮಿಗಿ ಈ ಎರಡುಗ್ರಾಮಗಳ ಮಧ್ಯದಲ್ಲಿ ತುಂಗಭದ್ರಾ ನದೀತೀರದೊಳು ಅತ್ಯಂತ ಮನೋಹರವಾದ ಸ್ಥಾನದಲ್ಲಿದ್ದು ಇಲ್ಲಿಯ ಹವೆಯಾದರೂ ಸರ್ವೋತ್ಕೃಷ್ಟವಾದದ್ದಿರುತ್ತದೆ. ಈ ದೇವಸ್ಥಾನದ ಯಾವತ್ತು ಕಾರ್ಯಕ್ರಮಗಳು ಶಿಂಗಟಾಲೂರು ಹಮ್ಮಿಗಿ ಹಾಗು ನವಲಿ ಈ ಮೂರು ಗ್ರಾಮಗಳ ಪಂಚಜನರ ಅನುಮತಿಯಮೇರೆಗೆ ಪ್ರಾಚೀನಕಾಲದಿಂದಲೂ ನಡೆಯುತ್ತಾ ಬಂದಿರುತ್ತವೆ. ಈ ಸ್ಥಾನವು ಯೋಗಿಗಳ ವಾಸಕ್ಕೆ ಬಹು ಪ್ರಶಸ್ತವಾಗಿರುವುದರಿಂದ ವೀರಶೈವಮತಕ್ಕೆ ಪೂಜ್ಯರಾದ ಗುರುವರ್ಗದವರಿಗೆ ಧಾರ್ಮಿಕ ಶಿಕ್ಷಣವನ್ನು ಕೊಡತಕ್ಕಂಥ ಗುರುಕುಲವನ್ನು ಸ್ಥಾಪಿಸಬೇಕೆಂಬುವ ಅತ್ಯುದಾತ್ತ ವಿಚಾರದಿಂದ ಸದರಿ ಪಂಚಜನರು "ಶ್ರೀ ಜಗದ್ಗುರು" ಉಜ್ಜಯಿನಿ ಹಾಗೂ ಕೇದಾರಮಹಾಸ್ವಾಮಿಗಳವರ ಸನ್ನಿಧಿಗೆ ಅರಿಕೆಮಾಡಿಕೊಳ್ಳಲಾಗಿ ಉಭಯ ಜಗದ್ಗುರುಗಳೂ ಸ್ವತಃ ದಯಮಾಡಿಸಿ ಈ ಮಹತ್ಕಾರ್ಯವನ್ನು ಕೊನೆಗಾಣಿಸುತ್ತೇವೆಂದು ಆಶೀರ್ವಾದಪತ್ರಿಕೆಯನ್ನು ದಯಪಾಲಿಸಿರುತ್ತಾರೆ. ಆಪ್ರಕಾರಕ್ಕೆ ಕಮಿಟಿಯವರು ಉತ್ಸುಕತೆಯಿಂದ ಈ ಕಾರ್ಯವನ್ನು ಕೊನೆಗಾಣಿಸುವ ಕುರಿತು ಇದೇ ಸಂವತ್ಸರದಲ್ಲಿಯೇ ಉಭಯ ಜಗದ್ಗುರುಗಳನ್ನೂ ಬರಮಾಡಿಕೊಳ್ಳುವ ಕುತೂಹಲದಿಂದಲೂ ಹಾಗೂ ದೇವಸ್ಥಾನವು ಕಮಿಟಿಯವರ ಆಡಳಿತೆಯೊಳಗೆ ಇದ್ದಲಾಗಾಯಿತು ಇದುವರೆಗೂ ನಡೆದುಬಂದಿರುವ ಆದಾಯ ವೆಚ್ಚದ ಅಂದಾಜು ಪತ್ರಿಕೆಯನ್ನು ಹೊರಡಿಸುವುದಕ್ಕೂ ಹೊಸದಾಗಿ ಪಂಚಜನರನ್ನು ಚುನಾಯಿಸುವುದಕ್ಕೂ ಮತ್ತು ದೇವಸ್ಥಾನದ ಹೆಚ್ಚಿನ ಸುಧಾರಣೆಯ ಬಗ್ಗೆ ಆಲೋಚಿಸುವದಕ್ಕೂ ಇದೇ ಕಾರ್ತಿಕ ಬ॥ ೧೦ ಮಿತಿಗೆ ಜನರಲ್ ಕಮಿಟಿಯನ್ನು ಕೂಡಿಸುವುದಕ್ಕಾಗಿ ಸರ್ವಸಮ್ಮತಿಯ ಮೇರೆಗೆ ನನಗೆ ಅಧಿಕಾರಕೊಟ್ಟಿರುವರು. ಈಪ್ರಕಾರ ಸಮಾಜಸೇವೆಯನ್ನು ಮಾಡಲು ಆತ್ಮಾನಂದಪೂರ್ವಕ ಒಪ್ಪಿ ಕಾರ್ಯಾರಂಭ ಮಾಡುವಷ್ಟರಲ್ಲಿಯೇ ಈ ಸರಹದ್ದಿನ ಗ್ರಾಮಗಳಲ್ಲಿ ಈವರ್ಷ ಮಳೆಬೆಳೆಗಳಿಲ್ಲದೆ ಭಯಂಕರದುಷ್ಕಾಳದ ಚಿನ್ಹವು ತಲೆದೋರಹತ್ತಿದ್ದರಿಂದ ತಟಸ್ಥವಾಗಬೇಕಾಯಿತು. ಇನ್ನು ಮುಂದೆ ಇದೇ ಬಗ್ಗೆ ಆಲೋಚನೆಯ ಕಮಿಟಿಯನ್ನು ಪ್ರತಿವರ್ಷ ಪದ್ಧತಿ ಪ್ರಕಾರ ಜರುಗುವ ರಥೋತ್ಸವಕಾಲಕ್ಕೆ ಕೂಡಿಸಬೇಕೆಂತಲೂ ಮುಂದಿನ ವರ್ಷದ ಮಳೆಬೆಳೆಯ ಸುಚಿನ್ಹವನ್ನು ನೋಡಿ ಶ್ರೀ ಜಗದ್ಗುರುಗಳನ್ನು ಬರಮಾಡಿಕೊಳ್ಳಬೇಕೆಂತಲೂ ನಿಶ್ಚಯಿಸಿರುತ್ತದೆ. ಸತ್ಕಾರ್ಯಕ್ಕೆ ಎಡರುಗಳು ಬಹಳವೆಂಬುವ ಆರ್ಯೋಕ್ತಿಯು ಸಟೆಯಾಗಲಾರದು. ಮುಂದಾದರೂ ಈ ಮಹತ್ಕಾರ್ಯವು ಶ್ರೀ ಭಗವದನುಗ್ರಹದಿಂದ ಕ್ಷಿಪ್ರದಲ್ಲಿಯೇ ನೆರವೇರಲೆಂದು ಹಾರೈಸುತ್ತೇನೆ.

ಗುರುಭಕ್ತಲೇಶಂ.

ವೀರಶೈವ ಮಹಾರಾಷ್ಟ್ರ ಮಹಾಸಭಾ.

1922ನೆ ಇಸವಿ ನವಂಬರ್ ತಾ॥ 28-29-30 ಈ ಮೂರುದಿವಸಗಳವರೆಗೆ ಮಧ್ಯಪ್ರಾಂತ ವ ವರ್‍ಹಾಡ ಸೀಮೆಗಳ ವೀರಶೈವ ಮಹಾರಾಷ್ಟ್ರದ ಮೊದಲನೆ ಮಹಾಸಭೆಯು ಯವತಮಾಳ, ಚವುಡಯ್ಯದಾನಪುರ ಪಟ್ಟಣದಲ್ಲಿ ದಕ್ಷಿಣಕಾಶಿ ಸಿಂಹಾಸನಾಧೀಶ ಚವುಡಯ್ಯದಾನಪುರಸಂಸ್ಥಾನದ ಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರ ಇವರ ಅಧ್ಯಕ್ಷತೆಯಲ್ಲಿವಿಜೃಂಭಣೆಯಿಂದ ನೆರವೇರಿತೆಂದು ತಿಳಿಸಲು ಸಂತೋಷವಾಗುತ್ತದೆ. ಈ ಯವತಮಾಳ ಪಟ್ಟಣವು ನಾಗಪುರ ಇಲಾಖಾ ಪೈಕಿ ಒಂದು ಜಿಲ್ಲಾ ಸ್ಥಳವಿದ್ದು ಇಲ್ಲಿ ವೀರಶೈವರ ವಸತಿಯು ಬಹಳ ಸ್ವಲ್ಪವಿದ್ದಾಗ್ಯೂ ಇಲ್ಲಿ ವೀರಶೈವ ದೊಡ್ಡ ಜಹಗೀರದಾರರಾದ ಪಾರವ ಸಂಸ್ಥಾನದ ರಾಜಘರಾಣೇದವರ ವಾಸಸ್ಥಾನವಾಗಿರುವುದರಿಂದ ಆ ಪೈಕಿ ಮ॥ ಮಹದೇವರಾವ ಜಹಗೀರದಾರ ಈ ಮಹಾನುಭಾವರೇ ಸ್ವಾಗತಕಮಿಟಿಯ ಅಧ್ಯಕ್ಷಸ್ಥಾನ ವಹಿಸಿದ್ದುದರಿಂದಲೂ, ಸರ್ವರಾಜಘರಾಣೇದವರೂ ಈ ಸಭೆಯ ಬಗ್ಗೆ ಮನಃಪೂರ್ವಕ ಪ್ರಯತ್ನಪಟ್ಟುದರಿಂದಲೂ ಈ ಸಭೆಯ ವ ವಸ್ಥೆಯಲ್ಲಿ ಯಾವ ಕೊರತೆಗೂ ಆಸ್ಪದವಿಲ್ಲದೆ ಈ ಸಭೆಯು ರಾಜಮರ್ಯಾದೆಯಿಂದೊಪ್ಪುತ್ತಿದ್ದಿತು. ಈ ಸಭೆಗೆ ನಾಗಪುರ ವರ್‍ಹಾಡ ನಿಜಾಮಸಂಸ್ಥಾನ ಅನುರಾವತಿ ಮುಂಬೈಪ್ರಾಂತ ಮೊದಲಾದ ಕಡೆಯಿಂದ ಬಹುಶಃ 500 ಜನರವರೆಗೆ ಪ್ರತಿನಿಧಿಗಳು ಬಂದಿದ್ದರು. ಈ ಸಭೆಯಲ್ಲಿ ವೀರಶೈವರ ಉನ್ನತಿ ಬಗ್ಗೆ ಈ ಪ್ರಾಂತಗಳಿಗೆ ಅನುಸರಿಸಿ ಅನೇಕ ಠರಾವುಗಳು ಪಾಸಾಗಿದ್ದು, ಆ ಪೈಕಿ ಮೈಸೂರು ಮಹಾರಾಜರ ಸಂಸ್ಕೃತ ಕಾಲೇಜಿನಲ್ಲಿ ಶ್ರೀಮತ ಬ್ರಾಹ್ಮಣೇತರರಿಗೆ ಪ್ರವೇಶವಿಲ್ಲದ್ದಕ್ಕೆ ಅಲ್ಲಿ ಈಗ ನಡೆದಿರುವ ಕೋಲಾಹಲದ ವಿಷಯ

[illegible]

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಳ್ಳ

17 ರಾಯಲ್ ಪೋರ್ಟೆಬಲ್ ಪೆನ್.

ಎಂಬ ಈ ಪೇನಾವನ್ನು ಅಮೇರಿಕಾ ದೇಶದಲ್ಲಿ ಮೇಲಾದ ವಾಲ್ಕನೆಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿದಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ, ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊಲತು ಇದಕ್ಕೆ ಸರಿಸಮಾನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು! ಬೇಗನೆ ತರಿಸಿಕೊಳ್ಳಿರಿ!!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಥಾ ರೋಗಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೨-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಸಾಧನ ಪ್ರಾಸ್ಯಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇಷ್ಟು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
10 ಬಳ್ಳಾರಿ.

೧೯೨೨ ನೆಯ ಇಸವಿ ನವಂಬರ್ ತಾ|| ೧೯ ರಿಂದ ೧೯೨೨ ನೆಯ ನವಂಬರ್ ತಾ|| ೨೫ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ದುಂದುಭಿನಾಮ ಸಂವತ್ಸರದ ಮಾರ್ಗಶಿರ ಶುದ್ಧ ಪಾಡ್ಯಮಿಯಿಂದ ಮಾರ್ಗಶಿರ ಶುದ್ಧ ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
19	ಭಾನು	ಪಾಡ್ಯ	53-15	ಅನೂ	56-5	4
20	ಸೋಮ	ಬಿದಿ	49-49	ಜ್ಯೇಷ್ಠ	54-19	5
21	ಮಂಗಳ	ತದಿ	47-22	ಮೂಲ	53-31	6
22	ಬುಧ	ಚೌತಿ	46-1	ಪೂಷಾ	53-56	7
23	[1] ಗುರು	ಪಂಚ	46-2	ಉಷಾ	55-24	8
24	[2] ಶುಕ್ರ	ಷಷ್ಠಿ	47-11	ಶ್ರವ	58-20	9
25	ಶನಿ	ಸಪ್ತ	49-48	ಧನಿ	60	10

(1) ನಾಗರಪಂಚಮಿ. (2) ಸುಬ್ರಹ್ಮಣ್ಯಸ್ವಾಮಿರಥ. ಚಂಪಾಷಷ್ಠಿ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲ್ಯಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕ್ರತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂಮಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ನವಂಬರ್ ತಾರೀಖು ೧೯ ನೆಯ ಭಾನುವಾರ (ಸಂಚಿಕೆ ೪೮

REGISTERED NO. M. 124.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮಹಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾನಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕತಿ ಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☛ ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರ್ಣಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಸಿನೆಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು. ಇದರಲ್ಲಿರುವ ಫಿಲಂಸ್ (ಚಿತ್ರಪಠ) ಗಳನ್ನು ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು. ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ, ಪರಿಷೆ ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು. ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1 ಕ್ಕೆ ರೂ. 2—0—0.

ಬುಗುಡಿ ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಹಸನಾದ ದಾರದಿಂದ ತಯಾರಿಸಿದೆ. ಬಣ್ಣ ಹೋಗದು. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ಅಂಚೂ ಇರುವದು. 17 ಮೊಳ ಉದ್ದ, ದೊಡ್ಡಪನ್ನ, ಉಡುವದಕ್ಕೆ ನಯವಾಗಿಯೂ, ನೋಟಕ್ಕೆ ಲಕ್ಷಣವಾಗಿಯೂ ಇವೆ. ಶ್ರೀಮಂತರಿಗೂ, ಗರೀಬರಿಗೂ ಸಹ ಲಾಯಖಾದದ್ದು.

ಕ್ರಯ ನಂ. 1 ರೂ. 6—8—0.
„ ನಂ. 2 ರೂ. 7—8—0.

36 ವಿಳಾಸ—ಎಸ್. ಲಾಲ್ ಅಂಡ್ ಕೊ,
ಪೋಸ್ಟ್‌ಬಾಕ್ಸ್ ನಂ. 512, ಪಾರ್ಕ್‌ಟೌನ್, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



18

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.
ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೇಡರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್ ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0
„ „ ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

(ವಿ. ಪಿ. ಪೋಸ್ಟೇಜು ಸೇರಿ.)

ಸಟೀಕ ವೀರಶೈವ ವಿವಾಹವಿಧಿಃ	೦—೧೩—೦
ಚಾರುಶೀಲೆಚರಿತ್ರೆ	೦—೧೦—೦
ಹರಿದಾಸಿ	೦— ೮—೦
ವೃಷಪಂಚಕ	೦— ೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯೆಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

45 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋಪ್ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಪ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು [illegible] ಸ್ವಲ್ಪವೇ ಇರುವುದರಿಂದ ಜಾಗ್ರತೆಯಾಗಿ [illegible]. ಕ್ರಯ 30 ಫೋಟೋ ಫಿಲಿಂಗಳು ಸೇರಿ [illegible] 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,
18 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ವೀರಶೈವ

ಶ್ರೀ ವಪೂಜಾವಿಧಿಃ

ಮ್ಯಾನೇಜರ್,

ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರ್.

೧೯೨೦ ನೆಯ ಇಸವಿಯ ನವಂಬರ್ ತಾ|| ೨೭ ನೆಯ ಭಾನುವಾರ.

ನೂತನ ರಾಜಕೀಯ ಸುಧಾರಣೆಗಳ ಮೇಲೆ ಪ್ರಜಾಭಿಪ್ರಾಯ.

COMMUNAL REPRESENTATION.

III.

We have been forwarded with a copy of a scheme of proposals presented to the Reforms Committee by Mr. Abbas Khan, a member thereon, which aims at securing adequate representation of different communities in the Representative Assembly and on the Legislative Council. We have made our point clear on this important question, and we think that any one who understands anything of the local conditions must welcome the scheme as the only equitable means of guaranteeing the proper representation of the various important interests in the State and of avoiding the danger of any one community getting a monopoly of the Houses to the detriment of the other communities. The scheme as it stands recommends that for the Representative Assembly the Districts are to be treated as plural constituencies, in which each district should send 1 Brahmin, 2 Musulmans, 3 Lingayets, 4 Vokkaligars and 2 from other communities which would mean 96 for the 8 districts. The unreserved seats are 76 for 68 taluks and 8 sub-taluks, 8 for the District Boards, 4 for the two City Municipalities and 6 for the other District Head Quarter Town Municipalities. The minorities are also provided for 4 for Christians, 4 for Panchamas and 1 for Europeans and Anglo-Indians. The special interests namely the Chamber of Commerce, University, Kolar Gold Fields, and Planting are to have each a representative. About 9 important associations are provided with representation and four seats are to be in reserve Thus making a total of 216. As for the Legislative Council, the Representative Assembly is to send 1 Brahmin, 2 Musulmans, 3 Lingayets and 4 Vokkaligars and 2 of other communities. The district elections will remain as hitherto and 4 special interests named above will have similar representation on the Council. And the Nominated members shall consist of 15 officials and 4 non-officials and there will be a provision for two more which is now treated as reserve making in all a total of 45.

The proceedings of the Reforms Committee are a mystery to the public and nobody knows how the work is progressing. We do not know how this scheme has been received by the Committee. Something has been said at the time of the announcement of the reforms that modifications suitable to local conditions would be introduced into the scheme of reforms in Mysore. But the composition of the Reforms Committe confirmed to an extent the suspicions of the people that local conditions would stand little chance of being reckoned with in the confabulation of a scheme by the Committee. We fear that the poor masses of our Country will be made victims to theories which are as little applicable to the conditions here as an English morning dress to a Mysore ryot. Who knows, in the craze for theories the Committee may even throw overboard the representation of the various communal associations, stating that those communities could have representation through other means. There is no need to mention here that it is these organisations that have created, organised and developed what little public opinion there is in Mysore State, and they also study the grievances and formulate the needs of the people. When such is the case if, depending on foreign theories for local application, the Committee cut off the representation of these associations they will only be killing public opinion in the State and thwarting the rising aspirations of the backward communities. In fact, these associations count it as one of their privileges to send a member to the Assembly to voice their respective needs and the Committee, if ever they take such a step, as we suspect they would, would be striking a blow at the activities of the associations. Further, may we ask, whether there were not good and sufficient reasons for giving them representation in the past, and how far those reasons do not stand good today? We would have had no reason to labour hard on these self-evident questions if the people's representatives were in sufficient strength on the Committee. We hope that those members of the Committee in whose hands the care of these important interests is left will do their best not to give away the cause of the masses, and try to evolve a scheme such as the one presented by Mr. Abbas Khan under which all would be represented and none would suffer.

FANCY SCHEMES AGAIN.

We are surprised to note that the City Improvement Trust Board, Mysore has sent up a proposal to the Mysore City Municipal Council to raise a loan of rupees 6 lakhs to push forward five *remunerative* works, namely (1) to complete the Devaraj Market building (2) to improve Mandi Market (3) to widen the road connecting Sayaji Rao road and Doddapete and to build shops on both sides so as to make it a *commercial street* (4) to improve Pendargeri and (5) to construct a new Tharagpet in continuation of Santhepet. It is astounding that these wiseacres of the Improvement Trust should seriously think of constructing a Commercial Street (an idea borrowed from the Commercial Street of Bangalore, C & M Station) and New Tharagpet (an idea borrowed from New Tharagpet, Bangalore City) at a huge cost with no chances of any decent return, for, the languishing trade and decrease of rental value are both notorious facts at present here as in Bangalore. In Mysore ever since the Sayaji Rao Road became a business centre the rents in Doddapetta fell down considerably which shows that trade in Mysore is after all very poor and any further extension in this direction would be ruinous. Even in ordinary circumstances buildings are not so remunerative and in these exceptional times when the Trust people are so fond of decorations and when their cost is bound to be very high the rents they fetch would be insignificant. It is against all sound principle that any Trust or Municipality should build streets of shops on their own account. That is a matter for the merchants. It looks as though the craze for ornamentation of the city is not yet gone. If the Trust people have nothing better to do to justify their existence it is better they wind it up. We raise our emphatic protest against the raising of any loan and landing the not-very-prosperous Municipality of Mysore into untold difficulties. We hope the Municipal Councillors will never permit such a short-sighted and fatal step.

H. H. THE YUVARAJA.

We learn that His Highness the Yuvaraja underwent a successful operation on Friday. Dr. M. D. Usman performed it with the assistance of Dr. T. Armugam Moodaliar. We are very glad to hear that His Highness the Yuvaraja is progressing well and we earnestly hope that he will be erelong restored to his usual health.

ತುರ್ಕಿ.

ಹೊಸಪಾರ್ಲಿಮೆಂಟು.

ಸ್ವದೇಶದ ವೃತ್ತಾಂತಗಳು.

ಪ್ರಸಿದ್ಧ ಪತ್ರಿಕೆ

ಹಾಸನಟೌನ್ ಮುಸಾಫರ್‌ಖಾನಾ ಹಿಂಭಾಗದ ಹೊಲಗಳು ಮತ್ತು ಸಂತೆಮಾಳದಲ್ಲಿ ಸಹಾ ಮಾಮೂಲ್‌ಮೇರೆ ಸನ್ 1923 ನೇ ಇಸವಿ ಜನವರಿ ಮಾಹೆ ತಾರೀಖು 3-4 ಮತ್ತು 5 ನೇ ಬುಧವಾರ, ಗುರುವಾರ ಮತ್ತು ಶುಕ್ರವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತಲಿಬ ಭಾಗ ಈಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ಬಾಕಿ ವಿಷಯಗಳಿಗೆ ತಪ್ಸೀಲಾಗಿ ಮೈಸೂರು ಗೆಜೆಟ್ 10-11-1922 ರ ಮರ್ದ್ಮಂ II A ಭಾಗದ 420-421 ನೇ ಪುಟಗಳಲ್ಲಿ ಛಾಯಿಸಾಗಿರುವ ನೋಟಿಫಿಕೇಷನ್ ನೋಡತಕ್ಕದ್ದು.

MAHAMUD RAZA
Vice-President,
Town Municipality.

ಬಂಗಲೆ ಬಿಕರಿ ಇಸ್ತಿಹಾರು.

(1) ಈ ಕೆಳಗೆ ವಿವರಿಸಿರುವ ಬಂಗಲೆ ಮತ್ತು ಅದಕ್ಕೆ ಸೇರಿದ ಜಾಗ ಸಹ ಬಿಕರಿಗೆ ಸಿದ್ಧವಾಗಿದೆ. ಇಷ್ಟವುಳ್ಳವರು 1922ನೇ ನವಂಬರು 30ನೇ ತಾರೀಖಿನ ವಳಗಾಗಿ ತಾವು ಎಷ್ಟು ಮೊಬಲಿಗೆ ಖರೀದಿಗೆ ಸದರಿ ಬಂಗಲೆ ಮತ್ತು ಜಾಗವನ್ನು ತೆಗೆದುಕೊಳ್ಳಲು ಕಬೂಲು ಇರುತ್ತಾರೋ ಅಷ್ಟು ಮೊಬಲಗನ್ನು ನಮೂದಿಸಿ ಸೀಲ್ಡ್ ಟೆಂಡರುಗಳನ್ನು ಅಂದರೆ ಕಾಗದವನ್ನು ಲಿಫಾಫೆಯಲ್ಲಿ ಇಟ್ಟು ಮೊಹರ್ಮಾಡಿ ಈ ಕೆಳಗೆ ಸೈನು ಮಾಡಿರುವವರ ವಿಳಾಸಕ್ಕೆ ಕಳುಹಿಸತಕ್ಕದ್ದು.

(2) ಸದರಿ ಬಂಗಲೆ ಮತ್ತು ಜಾಗಾದಲ್ಲಿ ಹಾಲಿ ಮೈಸೂರು ಕ್ಲಬ್ (ಯೂರೋಪಿಯನ್ ಕ್ಲಬ್) ಮಾಹೇಯಾನಾ 50 ರೂಪಾಯಿ ಬಾಡಿಗೆಯೂ, ಸಿಂಗರ್ ಸೂಯಿಂಗ್ ಮೆಷಿನ್ ಕಂಪನಿಯವರು ಮಾಹೇಯಾನಾ 50 ರೂಪಾಯಿ ಬಾಡಿಗೆಯೂ ಮತ್ತು ಅಬ್ದುಲ್ ಶುಕೂರ್ ಸೇಟ್ ಅಂಡ್‌ಸನ್ಸ್ ರವರು ಮಾಹೇಯಾನಾ 60 ರೂಪಾಯಿಗಳ ಬಾಡಿಗೆಯೂ ಈ ಮೇರೆ ಒಟ್ಟು ಮಾಹೇಯಾನಾ 160 ರೂಪಾಯಿಗಳ ಬಾಡಿಗೆಗೆ ಪ್ರತ್ಯೇಕ ಪ್ರತ್ಯೇಕವಾಗಿ ಬಾಡಿಗೆದಾರರಾಗಿರುತ್ತಾರೆ. ಇವರುಗಳ ಬಾಡಿಗೆ ವಾಯಿದೇ 1924ನೇ ಇಸವಿ ಡಿಸಂಬರು 31 ನೇ ತಾರೀಖಿಗೆ ಮುಗಿಯತಕ್ಕದ್ದಾಗಿದೆ.

(3) ಸದರಿ ಬಂಗಲೆ ಮತ್ತು ಜಾಗಾ ಮೈಸೂರು ಮೆಸಾನಿಕ್ ಲಾಡ್ಜಿಗೆ ಸೇರಿದ್ದು, ಇದನ್ನು ವಿಕ್ರಯಿಸಲು 1922ನೇ ಇಸವಿ ಸೆಪಟಂಬರು 2ನೇ ತಾರೀಖಿನಲ್ಲಿ ರೆಗ್ಯುಲರ್ ಮೀಟಿಂಗಿನಲ್ಲಿ ರೆಜಲ್ಯೂಷನ್ (ನಿಷ್ಕರ್ಷೆ) ಆಗಿ 1922ನೇ ಇಸವಿ ಅಕ್ಟೋಬರು 7 ನೇ ತಾರೀಖಿನ ರೆಗ್ಯುಲರ್ ಮೀಟಿಂಗಿನಲ್ಲಿ ಖಾಯಂಮಾಡಲ್ಪಟ್ಟಿರುತ್ತೆ.

(4) ಈ ಇಸ್ತಿಹಾರ್ ಪ್ರಕಾರ ಬರಬಹುದಾದ ಎಲ್ಲಕ್ಕಿಂತ ಜಾಸ್ತಿ ಬೆಲೆಯುಳ್ಳ ದರಖಾಸ್ತನ್ನೇ ಆಗಲಿ ಅಥವಾ ಮತ್ತಾವ ದರಖಾಸ್ತನ್ನೇ ಆಗಲಿ ಮೈಸೂರು ಮೆಸಾನಿಕ್ ಲಾಡ್ಜಿನವರು ಒಪ್ಪಿಕೊಳ್ಳಲು ಬದ್ಧರಲ್ಲ.

(5) ಸದರಿ ಬಂಗಲೆ ಮತ್ತು ಜಾಗವನ್ನು ಇಷ್ಟವುಳ್ಳವರು ನೋಡಲೂಬಹುದು ಅಪೇಕ್ಷಿತವಾದ ಸಂಗತಿಗಳನ್ನು ಈ ಕೆಳಗೆ ರುಜು ಮಾಡಿರುವವರಿಂದ ತಿಳಿದುಕೊಳ್ಳಲೂಬಹುದು.

(6) ಸದರಿ ಟೆಂಡರುಗಳು 1922ನೇ ಇಸವಿ ಡಿಸೆಂಬರ್ 2ನೇ ತಾರೀಖಿನಲ್ಲಿ ನಡೆಯುವ ರೆಗ್ಯುಲರ್ ಮೀಟಿಂಗಿನಲ್ಲಿ ಇತ್ಯರ್ಥಮಾಡಲ್ಪಡುತ್ತವೆ.

ಕ್ರಯಸ್ವತ್ತಿನ ವಿವರ.

ಮೈಸೂರು ಸಿಟಿಯಲ್ಲಿ ಕರ್ಜನ್ ಪಾರ್ಕಿನಲ್ಲಿ ಸ್ಟ್ಯಾಚ್ಯುಸ್ಕ್ವೇರಿನಲ್ಲಿ ಇರುವ ಮುನಿಸಿಪಲ್ ನಂಬರು 412, $\frac{412}{1}$ ಮತ್ತು $\frac{412}{2}$ ವುಳ್ಳ ಮಹಡಿಯುಳ್ಳ ಬಂಗಲೆ ಮತ್ತು ಅದಕ್ಕೆ ಪೂರ್ವಕಡೆ ಇರುವ ಖಾಲಿ ಜಾಗ.

ರಾವ್‌ಬಹುದೂರ್ ಯಮ್. ಸಿ. ರಂಗೈಂಗಾರ್
ಸೆಕ್ರಟರಿ
(3) ಮೈಸೂರು ಮೆಸಾನಿಕ್ ಲಾಡ್ಜ್,

ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚಿತಗಳಾದ ಸಾರ್ವತ್ರಿಕ ವಿಷಯಗಳು.

(ಕಾನೂನು.)

ಅರಿಕೆ—ಅಸಲಿಗಿಂತಲೂ ಹೆಚ್ಚಾದ ಬಡ್ಡಿಯನ್ನು ವಸೂಲ್ಮಾಡಿಕೊಳ್ಳಲಿಕ್ಕೆ ಮೈಸೂರು ಕಾನೂನಿನ ಪ್ರಕಾರ ಅವಕಾಶವಿಲ್ಲ. ಬ್ರಿಟಿಷ್‌ಇಂಡ್ಯಾ ಕಾನೂನನ್ನು ಅನುಸರಿಸಿ ನಮ್ಮಲ್ಲಿ ಕಾನೂನನ್ನು ತಿದ್ದುಪಡಿ ಮಾಡಬೇಕು.

ಉತ್ತರ—ಮದ್ರಾಸಿನ ಹೊರತು ಕಲ್ಕತ್ತಾ ಬೊಂಬಾಯಿ ಮೊದಲಾದ ಕಡೆಗಳಲ್ಲೆಲ್ಲಾ ಹೀಗೆಯೇ ಇದೆ. ಅದನ್ನನುಸರಿಸಿ ನಾವೂ ಮಾಡಿದ್ದೇವೆ. ಅಸಲಿಗೆ ಸಮನಾಗುವಷ್ಟು ಬಡ್ಡಿ ಬೆಳೆಯುವವರೆಗೆ ದಾವಾ ಮಾಡದೆ ಏತಕ್ಕೆ ಸಾವಕಾಶ ಮಾಡಬೇಕು? ಕಾನೂನು ತಿದ್ದುಪಡಿ ಮಾಡಲಾಗುವುದಿಲ್ಲ.

ಅ—ಜೂಜಾಡುವುದನ್ನು ತಡೆಯುವ ಆಕ್ಟನ್ನು ನಮ್ಮಲ್ಲಿ ಜಾರಿಗೆ ತರಬೇಕು.

ಉ—ಪೊಲೀಸ್ ಆಕ್ಟೇ ಸಾಕಾಗಿದೆ. ಹೊಸ ಆಕ್ಟು ಅವಶ್ಯಕವಿಲ್ಲ.

ಅ—ದನಕರುಗಳ ವಧೆಯನ್ನು ತಪ್ಪಿಸಲು ಒಂದು ಕಾನೂನನ್ನು ಮಾಡಬೇಕು.

ಉ—ಅಸಾಧ್ಯ.

ಅ—ಬಾಲ್ಯವಿವಾಹನಿರೋಧದ ಕಾನೂನಿನಲ್ಲಿ ಬಾಲಕರ ವಯಃಪರಿಮಿತಿಯನ್ನು 14 ರಿಂದ 16 ಕ್ಕೂ ಬಾಲಿಕೆಯರ ವಯಃಪರಿಮಿತಿಯನ್ನು 8 ರಿಂದ 10 ಕ್ಕೂ ಹೆಚ್ಚಿಸಬೇಕು.

ಉ—ಜನರೇ ಮಾಡಿಕೊಳ್ಳುತ್ತ ಬರುತ್ತಾರೆ.

ಜುಡಿಷಿಯಲ್.

ಅ—ಪ್ಲೀಡರ್ ಪರೀಕ್ಷೆಯನ್ನು 2ನೆ ಸಲ (ಈ ವರ್ಷಕ್ಕೆ ಮಾತ್ರ) ಈ ಡಿಸೆಂಬರ್ ತಿಂಗಳಲ್ಲಿ ಆಗುವುದನ್ನು ತಪ್ಪಿಸಿ ಮುಂದಕ್ಕೆ ಹಾಕಬೇಕು.

ಉ—ಮುಂದಣ ಜುಲೈ ತಾ|| 1ಕ್ಕೆ ಪರೀಕ್ಷೆ ಆಗುವ ಹಾಗೆ ಮಾಡುತ್ತೇವೆ.

ಅ—ಚೀಫ್‌ಕೋರ್ಟು ಸರ್ಟಿಫಿಕೇಟ್ ಪಡೆದ ಪ್ಲೀಡರುಗಳು ಯಾವುದಾದರೂ ಗೊತ್ತಾದ ಡಿಸ್ಟ್ರಿಕ್ಟಿನ ಕೋರ್ಟುಗಳಿಗೆ ಮಾತ್ರವೇ ಅಲ್ಲದೆ ಅವರಿಗೆ ಹಕ್ಕಿರುವ ಸಂಸ್ಥಾನದ ಎಲ್ಲ ಕೋರ್ಟುಗಳಿಗೂ ಹೋಗಲು ಅವಕಾಶ ಮಾಡಿಕೊಡಬೇಕು.

ಉ—ಆಗುವುದಿಲ್ಲ. ಅಡ್ವೋಕೇಟರಿಗೂ, ಪ್ಲೀಡರಿಗೂ ತಾರತಮ್ಯ ಬೇಡವೆ?

ಅ—ಕೋರ್ಟುಗಳಲ್ಲಿ ಕೆಲಸವು ಬೇಗಬೇಗನೆ ನಡೆಯುವುದಿಲ್ಲ. ಚೀಫ್‌ಕೋರ್ಟಿನಲ್ಲೂ ಕೂಡ ಅಪ್ಪೀಲು ಮೊಕದ್ದಮಾ ಇತ್ಯರ್ಥಕ್ಕೆ 542 ದಿನಗಳು ಹಿಡಿಯಬಹುದೆ? ಕೋರ್ಟುಫೀಜು ಸ್ಟ್ಯಾಂಪಿನಿಂದ ಬರುವ ವರಮಾನವನ್ನಾದರೂ ಇದಕ್ಕೆ ಉಪಯೋಗಿಸಿಕೊಂಡು ಕೋರ್ಟುಗಳ ಸಂಖ್ಯೆಯನ್ನು ಹೆಚ್ಚಿಸಿ, ವ್ಯಾಜ್ಯಗಳು ಬೇಗಬೇಗನೆ ಇತ್ಯರ್ಥವಾಗುವಂತೆ ಮಾಡಬೇಕು.

ಉ—ಗುರ್ತುಮಾಡಿಕೊಂಡಿದೆ.

ಅ—ಜುಡಿಷಿಯಲ್ ಮತ್ತು ಎಗ್ಜಿಕ್ಯುಟೀವ್ ಅಧಿಕಾರಗಳನ್ನು ಪ್ರತ್ಯೇಕಿಸುವ ಏರ್ಪಾಟನ್ನು ಉಳಿದಿರುವ ಇನ್ನು 4 ಡಿಸ್ಟ್ರಿಕ್ಟುಗಳಿಗೂ ಬಳಕೆಗೆ ತರಬೇಕು.

ಉ—ದಿನಕ್ರಮೇಣ ಮಾಡುತ್ತ ಬರುತ್ತೇವೆ.

ಅ—ಸಿವಿಲ್ ದಾವೆಗಳು ದಾಖಲಾದ ಕೂಡಲೇ 6 ತಿಂಗಳಲ್ಲಿ ವಿಚಾರಣೆಗೆ ಆರಂಭಿಸಿ, 1 ವರ್ಷದೊಳಗೆ ವ್ಯವಸ್ಥೆಯಾಗುವಂತೆ ಮಾಡಿಸಬೇಕು.

ಉ—ಕಾಲಕ್ಲಪ್ತಿಮಾಡಲಾಗುವುದಿಲ್ಲ. ಜಾಗ್ರತೆ ಮಾಡುವಂತೆ ಎಲ್ಲಾ ಕೋರ್ಟುಗಳಿಗೂ ಅಪ್ಪಣೆ ಕೊಟ್ಟಿದೆ.

ಅ—ದಾವಾ ದಾಖಲಾದಾರಭ್ಯ ಡಿಕ್ರಿಯಾಗುವ ತಾರೀಖಿನವರೆಗೆ ಪತ್ರದಲ್ಲಿ ಗೊತ್ತಾಗಿರುವ ದರದಂತೆಯೂ, ತದನಂತರಕ್ಕೆ ಡಿಕ್ರಿಯಲ್ಲಿ ಕಂಡ ಒಟ್ಟು ಮೊಬಲಗಿನ ಮೇಲೆ ಸೇಕಡಾ 6 ರೂ. ನಂತೆಯೂ ಬಡ್ಡಿಯನ್ನು ಕೊಡಿಸುವ ಹಾಗೆ ಅಪ್ಪಣೆ ಮಾಡಬೇಕು.

ಉ—ನ್ಯಾಯವಾದ ಬಡ್ಡಿಯನ್ನು ಕೊಡಿಸಲು ಕೋರ್ಟಿನವರಿಗೆ ಅಧಿಕಾರವಿರಬೇಕು.

ಅ—ಡಿಕ್ರಿಮೊಬಲಗಿಗಾಗಿ ಪ್ರತಿವಾದಿಗಳಿಂದ ಕೋರ್ಟಿಗೆ ಕೇವಣಿಮಾಡಲ್ಪಟ್ಟ ಹಣವನ್ನು, ವಾದಿಗಳು ಅವಶ್ಯವಾದ ಆಧಾರಪತ್ರವನ್ನು ಹಾಜರ್ಮಾಡಿದಾಗ್ಯೂ 1-2 ವರ್ಷಕ್ಕೆ ಮೇಲ್ಪಟ್ಟ ಕಾಲದವರೆಗೂ ವಾದಿಗಳಿಗೆ ಪಾವತಿಮಾಡುವುದಿಲ್ಲ. ಆದುಕಾರಣ ಒಂದು ಕಾಲಪರಿಮಿತಿಯೊಳಗೆ ವ್ಯವಸ್ಥೆಯಾಗುವಂತೆ ಅಪ್ಪಣೆ ಮಾಡಬೇಕು.

ಉ—ಪರೀಕ್ಷೆ ಮಾಡುತ್ತೇವೆ.

ಅ—100 ರೂ. ಗಳಿಗೆ ಮೇಲ್ಪಟ್ಟ ವಿಷಯದ ಮೊಕದ್ದಮೆಗಳಲ್ಲೆಲ್ಲಾ ರಿಕಾರ್ಡನ್ನು ಮುದ್ರಿಸಬೇಕೆನ್ನುವ ಈಗಣ ನಿರ್ಬಂಧವನ್ನು ತೆಗೆದುಹಾಕಬೇಕು.

ಉ—ಪ್ರಿಂಟ್ ಮಾಡಿಸುವುದರಿಂದ ಕಕ್ಷಿಗಾರರಿಗೂ ಅನುಕೂಲ, ಕೋರ್ಟಿನವರಿಗೂ ಅನುಕೂಲ. ಆದುಕಾರಣ ಈಗಣ ಪದ್ಧತಿಯನ್ನು ಬದಲಾಯಿಸಲಾಗುವುದಿಲ್ಲ.

ಅ—ಸಿವಿಲ್ ವ್ಯಾಜ್ಯಗಳಲ್ಲಿ ಕೋರ್ಟಿಗೆ ಹಾಜರ್ಮಾಡಿಸಿಕೊಂಡ ದಸ್ತಾವೇಜುಗಳನ್ನು ಕೋರ್ಟಿನವರೇ ಇಟ್ಟುಕೊಳ್ಳುವುದರಿಂದ ಹಾಜರ್ಮಾಡಿದ ಮನುಷ್ಯರಿಗೆ ನಾನಾತರದ ಕಷ್ಟಗಳುಂಟಾಗುತ್ತವೆ. ಅವುಗಳಿಗೆ ಕೋರ್ಟಿನವರು ರಸೀದಿಯನ್ನು ಕೊಡುವುದಿಲ್ಲ. ಬೇಕಿದ್ದರೆ ನಕಲುಗಳನ್ನು ತೆಗೆಯಿಸಿ ಇಟ್ಟುಕೊಂಡು ದಸ್ತಾವೇಜನ್ನು ಕೂಡಲೇ ವಾಪಸ್ ಮಾಡುವಂತೆಯೂ, ಬೇಕಿದ್ದರೆ ವಿಚಾರಣೆ ಕಾಲದಲ್ಲಿ ದಸ್ತಾವೇಜನ್ನು ಹಾಜರ್ಮಾಡಿಸಿಕೊಳ್ಳುವಂತೆಯೂ ಮಾಡಿಸಿಕೊಡಬೇಕು.

ಉ—ಚೀಫ್‌ಕೋರ್ಟಿನವರು ಪರ್ಯಾಲೋಚನೆ ಮಾಡುತ್ತಾರೆ.

ಅ—ಮುನ್‌ಸೀಫ್ ಕೋರ್ಟುಗಳಲ್ಲಿ ದಾವಾಹಿಡಿಯುವ ಮೊಬಲಗಿನ ಪರಿಮಿತಿಯನ್ನು 5000 ರೂ ಗಳಿಗೆ ಹೆಚ್ಚಿಸಬೇಕು.

ಉ—ಸಾಧ್ಯವಲ್ಲ; ಈಗಲೇ ಕೋರ್ಟುಗಳಿಗೆ ಕೆಲಸ ಹೆಚ್ಚಾಗಿದೆ.

ಅ—ತಾಲ್ಲೂಕು ಆಫೀಸಿನ ಸಿಬ್ಬಂದಿಯೊಳಗೆ ಒಬ್ಬ ಜವಾನನನ್ನು ಸ್ಥಿರವಾಗಿ ಬೆಂಚ್‌ಕೋರ್ಟುಗಳಿಗೆ ಕೊಡಿಸಬೇಕು.

ಉ—ವಿಚಾರಣೆಯಲ್ಲಿದೆ.

ಅ—ಬೆಂಚ್‌ಮ್ಯಾಜಿಸ್ಟ್ರೇಟರು ತೀರ್ಮಾನಿಸಿದ ಕಟ್ಟುಗಳನ್ನೆಲ್ಲಾ ಆಯಾ ತಾಲ್ಲೂಕು ರಿಕಾರ್ಡುಗಳೊಡನೆ ಇರಿಸಿರುವಂತೆ ಮಾಡಬೇಕು.

ಉ—ಪರ್ಯಾಲೋಚನೆಯಲ್ಲಿದೆ.

ಅ—ಚೀಫ್‌ಕೋರ್ಟಿನಲ್ಲಿ ಅಚ್ಚುಹಾಕಿಸುವ ಭಾಷಾಂತರ ಮಾಡಿಸುವ ಬಗೆಗೆ ತೆಗೆದುಕೊಳ್ಳುವ ಖರ್ಚುಗಳನ್ನೂ ಕಾಪಿಗಳ ಬಗೆಗೆ ತೆಗೆದುಕೊಳ್ಳುವ ಖರ್ಚುಗಳನ್ನೂ ಕಡಿಮೆಮಾಡಿಸಬೇಕು.

ಉ—ಪರ್ಯಾಲೋಚಿಸುತ್ತೇವೆ.

ಅ—ಈಗ ಬಳಕೆಯಲ್ಲಿರುವ ನಿಕಲ್‌ನಾಣ್ಯಗಳಲ್ಲಿ ಬಹಳ ಖೋಟಾನಾಣ್ಯಗಳು ಬೆರೆದುಹೋಗಿವೆ. ಖೋಟಾನಾಣ್ಯಗಳು ವಶದಲ್ಲಿರುವುವೆಂಬ ಕಾರಣದಮೇಲೆ ಪೊಲೀಸಿನವರು ಗೌರವಸ್ಥರನ್ನೂ ತೊಂದರೆಪಡಿಸುತ್ತಾರೆ. ಆದುಕಾರಣ ಗೌರವಸ್ಥರಲ್ಲಿ ಒಂದುವೇಳೆ ಖೋಟಾನಾಣ್ಯಗಳಿದ್ದರೆ ತೊಂದರೆಪಡಿಸದೆ ಆ ನಾಣ್ಯಗಳನ್ನು ಮಾತ್ರ ಕತ್ತರಿಸಿಬಿಡುವಂತೆ ಅಪ್ಪಣೆಯಾಗಬೇಕು.

ಉ—ಲಾವನ್ನೇ ಬದಲಾಯಿಸಬೇಕಾಗುತ್ತದೆ. ಆದರೂ ಗುರ್ತುಮಾಡಿಕೊಂಡಿದೆ. ವಿಚಾರಮಾಡುತ್ತೇವೆ.

ಅ—ಒಂದೇ ಸೊತ್ತನ್ನು ಮೋಸದಿಂದ ಒಂದುಸಾರಿಗಿಂತ ಹೆಚ್ಚಾಗಿ ಆಧಾರ ಭೋಗ್ಯ ಮೊದಲಾದುವುಗಳನ್ನು ಮಾಡತಕ್ಕವರನ್ನು ದಂಡನೆಗೆ ಗುರಿಪಡಿಸುವಂತೆ ಮಾಡಬೇಕು.

ಉ—ಉಪಯೋಗಕರವಾದ ಸಲಹೆಯಲ್ಲ.

(ಪೊಲೀಸು)

ಅ—ಪೊಲೀಸರು ತಮ್ಮ ಕರ್ತವ್ಯವನ್ನು ಆಸಕ್ತಿಯಿಂದ ನಡೆಯಿಸುವಂತೆ ಮಾಡಲು ಕೆಲ ಏರ್ಪಾಟನ್ನು ಮಾಡಬೇಕು. ಸಣ್ಣನೌಕರರನ್ನು ಇನ್‌ಸ್ಪೆಕ್ಟರ್‌ಗಿರಿಗೆ ತರಕೂಡದು. ಬಿ. ಎ. ಆಗಿರತಕ್ಕವರಿಗೆ ಆ ಪದವಿ ಕೊಟ್ಟು ಹೆಚ್ಚು ಸಂಬಳ ಮಾಡಬೇಕು. ಅವರಿಗೆ ಅಮಲ್ದಾರಿಗೂ ಸೂಪರಿಂಟೆಂಡೆಂಟ್ ಪದವಿಗೂ ಏರಲು ಅನುಕೂಲಮಾಡಿಕೊಡಬೇಕು. ಅಪರಾಧವನ್ನು ಪತ್ತೆಮಾಡುವಾಗ್ಗೆ ವಿಶೇಷ ಕೌಶಲ್ಯವನ್ನು ತೋರಿಸಿದವರಿಗೆ ರಿಕಾರ್ಡುಮಾಡುವುದರಿಂದಲೇ ಮರ್ಯಾದೆತೋರಿಸಿಬಿಡದೆ, ಕೂಡಲೇ ಅವರಿಗೆ ಬಡ್ತಿಗಳನ್ನು ಕೊಡಬೇಕು.

ಉ—ಇದು ಮುಖ್ಯವಾದ ವಿಷಯ; ವಿಚಾರ ಮಾಡುತ್ತಿದ್ದೇವೆ.

ಅ—ಪ್ರತಿಯೊಂದು ಪೊಲೀಸ್ ಠಾಣವೂ ವಿಚಾರಣೆಯ ಮುಖ್ಯಸ್ಥಲವಾಗಿರುವಂತೆಯೂ, ಅವು ಸಬ್‌ಇನ್‌ಸ್ಪೆಕ್ಟರ ಛಾರ್ಜಿನಲ್ಲಿರುವಂತೆಯೂ ಮಾಡಬೇಕು. ಮತ್ತು ಇನ್‌ವೆಸ್ಟಿಗೇಟಿಂಗ್ ಆಫೀಸರು ಬೇಗನೆ ಅಲ್ಲಿಗೆ ಬರುವಂತೆ ಆಗಬೇಕು.

ಉ—ಇದಕ್ಕೆ ಹೆಚ್ಚು ಖರ್ಚು ಹಿಡಿಯುತ್ತದೆ. ಅಸಾಧ್ಯ. ಆದರೂ ಪರ್ಯಾಲೋಚನೆ ಮಾಡುತ್ತೇವೆ.

ಅ—ಬ್ರಿಟಿಷ್ ಪೊಲೀಸಿನವರು ಮೈಸೂರು ಸೀಮೆಯಲ್ಲಿ ಅಪರಾಧಿಗಳನ್ನು ದಸ್ತಗಿರಿಮಾಡಿ ತೆಗೆದುಕೊಂಡುಹೋಗುವಂತೆಯೇ ನಮ್ಮ ಪೊಲೀಸರು ಬ್ರಿಟಿಷ್ ಇಂಡ್ಯಾದಲ್ಲಿ ಅಪರಾಧಿಗಳನ್ನು ದಸ್ತಗಿರಿಮಾಡಿ ತರುವಂತೆ ಅಧಿಕಾರವನ್ನು ಕೊಡಿಸಬೇಕು.

ಉ—ಇಂಡ್ಯಾ ಗೌರ್ನಮೆಂಟಿನೊಡನೆ ಕರಸ್ಪಾಂಡೆನ್ಸು ನಡೆಯುತ್ತಿದೆ. ಸಾಧ್ಯವಾದರೆ ನಾವೇ ಮಾಡುತ್ತೇವೆ.

ಅ—ಪೊಲೀಸಿನವರು ಅಪರಾಧಿಗಳ ಮತ್ತು ಸಾಕ್ಷಿಗಳ ಕೈಫಿಯತ್ತನ್ನು ಸರ್ಕಾರದವರು ನೊಕರರ್ಮಾಡಬಹುದಾದ ಪಂಚಾಯಿತರ ಸಮಕ್ಷದಲ್ಲಿ ಪ್ರಥಮತಃ ತೆಗೆದುಕೊಳ್ಳುವಂತೆ ಮಾಡಬೇಕು.

ಉ—ಪಂಚಾಯಿತರನ್ನು ಏರ್ಪಾಟುಮಾಡುವ ಪದ್ಧತಿಯಿಂದ ಸಾವಕಾಶಕ್ಕೆ ಕಾರಣವಾಗುತ್ತದೆ.

ಅ—ಬಂದೂಕು ಲೈಸೆನ್ಸುಗಳಿಗಾಗಿ ಕೊಡುವ ಅರ್ಜಿ ನಮೂನೆಗಳನ್ನು, ಎಕ್ಸೈಜು ಕರಾರು ಕಾಗದಗಳನ್ನು ಮುದ್ರಿಸಿ ಮಾರುತ್ತಿರುವಂತೆ ಇದನ್ನೂ ಮಾಡಿಸಬೇಕು.

ಉ—ಗುರ್ತುಮಾಡಿಕೊಂಡಿದೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಶ್ರೀ ಮದ್ವೀರಶೈವ ಮಹಾಸಭೆ

12 ನೇ ತಾರೀಖಿನ ಸಂಚಿಕೆಯಿಂದ ಮುಂದೆಸಾಗಿದುದು.

ಅಲ್ಪಪ್ರಮಾಣದಲ್ಲಿ ಸಮೂಹ ಪ್ರತಿನಿಧಿಯಾದ ಕುಟುಂಬ ಮೊದಲುಗೊಂಡು ಜನಾಂಗ ರಾಷ್ಟ್ರಗಳವರೆಗೂ ಒಗ್ಗಟ್ಟು ಅಭಿವೃದ್ಧಿಗೆ ಅವಶ್ಯವೆಂಬುದನ್ನು ಯಾರು ಅರಿಯರು? ಆದರೇನು? ಅಂತಃಕಲಹವೂ ಪರಸ್ಪರ ಅವಹೇಳನವೂ ನಮ್ಮ ಸಮಾಜವನ್ನು ದಿನದಿನಕ್ಕೆ ಕ್ಷೀಣಿಸುತ್ತಿವೆಯೆಂಬುದು ಯಾರಿಗೆ ಗೊತ್ತಿಲ್ಲ? ವೀರಶೈವತ್ವವು ಮೂಲತಃ ಕೇವಲ ಪಾರಮಾರ್ಥ ಸ್ವರೂಪವಾದುದೆಂದೂ ಲೋಕ ಸಂಗ್ರಹಾರ್ಥವಾಗಿ ಲೌಕಿಕ ಸ್ವರೂಪವನ್ನು ಹೊಂದಿದೆ ಯೆಂದೂ ಹಿಂದೆ ಹೇಳಿದೆಯಷ್ಟೆ. ಈ ವೀರಶೈವತ್ವದ ಜೀವಸರ್ವಸ್ವವನ್ನುಳ್ಳ ಹೃದಯದಂತಿರುವವರು ಧರ್ಮಗುರುಗಳಾಗಿದ್ದಾರೆ. ವೃದ್ಧಿಯು ಆ ಧರ್ಮಗುರುಗಳನ್ನು ಬಿಟ್ಟು ಆಗುವಂತಿಲ್ಲ. ನಮ್ಮ ವ್ಯಾಪಾರ, ಒಕ್ಕಲತನ ಇವೇ ಮೊದಲಾದ ಉದ್ಯೋಗಗಳು ಧರ್ಮಕ್ಕಾಗಿವೆಯೇ ಹೊರತು ಧರ್ಮವು ಇವಕ್ಕಾಗಿಲ್ಲ. ಹಾಗಿರುವುದರಿಂದ ಧರ್ಮ ಗುರುಗಳಲ್ಲಿ ಅಂತಃಕಲಹವೂ, ಅವಹೇಳನವೂ ಆರಂಭವಾಗಿ ನಮ್ಮ ಧರ್ಮಸ್ವರೂಪವು ದಿನ ದಿನಕ್ಕೆ ಮಾಜಿಹೋಗುತ್ತಿರುವಲ್ಲಿ ವೀರಶೈವತ್ವವು ಕ್ರಮೇಣ ಕಡಿಮೆಯಾಗುತ್ತಿದೆ ಯೆಂಬುದರಲ್ಲಿ ಸಂಶಯವಿಲ್ಲ. ಈಗ್ಗೆ ಹತ್ತು ವರ್ಷಗಳ ಕೆಳಗೆ ಎಷ್ಟು ಪ್ರಮಾಣದಿಂದ ವೀರಶೈವರಾಗಿದ್ದೆವೋ ಅದಕ್ಕಿಂತಲೂ ಕಡಿಮೆಯಾಗಿ ಈಗ ವೀರಶೈವರಾಗಿದ್ದೇವೆ. ನಾವು ವ್ಯಾಪಾರವನ್ನು ಮಾಡುತ್ತಿದ್ದೇವೆ, ಒಕ್ಕಲತನಮಾಡುತ್ತಿದ್ದೇವೆ, ವಿದ್ಯಾಭ್ಯಾಸಮಾಡುತ್ತಿದ್ದೇವೆ ಸರ್ಕಾರಿ ಉದ್ಯೋಗಗಳಲ್ಲಿಯೂ ಸಾರ್ವತ್ರಿಕಕಾರ್ಯಗಳಲ್ಲಿಯೂ ಕೈಹಾಕಿ ಕೆಲಸ ಮಾಡುತ್ತಿದ್ದೇವೆ. ಇವುಗಳೆಲ್ಲವನ್ನೂ ವಂಶಪರಂಪರೆಯ ಬಾಧ್ಯತೆಯಿಂದ ಹೊಂದಿರುವ ಆ ವೀರಶೈವವೆಂಬ ಜ್ಯೋತಿಯ ಬೆಳಕಿನಿಂದ ಮಾಡಲುಳ್ಳವರಾಗಿದ್ದೇವೆಯೇ ಹೊರತು ನಾವು ದುಡಿದು ಸಂಪಾದಿಸಿದ ಮೂಲ ಬಂಡವಾಳದಿಂದ ಮುಂದುವರಿದಿದ್ದೇವೆಂದು ಎದೆತಟ್ಟಿಕೊಂಡು ಹೇಳುವವರಾರಿದ್ದಾರೆ? ಈ ಜ್ಯೋತಿಯು ಇನ್ನೂ ಅಷ್ಟಿಷ್ಟು ಪ್ರಕಾಶಿಸುತ್ತಿರುವುದರಿಂದಲೇ ವೀರಶೈವ ಸಮಾಜವೆಂಬುದು ಭರತಖಂಡದಲ್ಲಿರುವ ಅಸಂಖ್ಯಾಕ ಜನವರ್ಗಗಳಲ್ಲಿ ಒಂದಾಗಿ ಉಳಿದಿದೆ. ಈ ಜ್ಯೋತಿಯು ಚೆನ್ನಾಗಿ ಪ್ರಕಾಶಿಸಿ ಸಾರ್ವತ್ರಿಕವಾಗಿ ಜನೋದ್ಧಾರ ಮಾಡುವಂತಾಗಬೇಕಾದರೆ ಧರ್ಮಗುರುಗಳ ವಿಷಯದಲ್ಲಿ ಮಹಾಸಭೆಯು ತನ್ನ ವೀರಶೈವ ವಿಶೇಷಣವನ್ನುಳಿಸಿಕೊಳ್ಳಬೇಕಾದರೆ ಕೈಹಾಕಿ ಸಂಪಾದಿಸಲೇ ಬೇಕು. ಇಡೀಕರ್ನಾಟಕದಲ್ಲಿ ಮೂರು ಮನೆಯ ಹಳ್ಳಿಯಲ್ಲಿಯೂ ಕೂಡ ವಿರಕ್ತಮಠವಾಗಲೀ ಪಟ್ಟದ ಮಠವಾಗಲೀ ಇಲ್ಲದೆ ಇಲ್ಲ. ಈ ಮಠಗಳಿಗೆ ಇದ್ದ ಇನಾಂ ಭೂಮಿಗಳು ತಿನ್ನುವವರ ಪಾಲಾಗಿರುವುವು. ಆ ಮಠಗಳ ಅಧ್ಯಕ್ಷರಾದ ಗುರುಗಳು ತಮ್ಮ ಸ್ವರೂಪವನ್ನು ಕೆಡಿಸಿಕೊಂಡು ತನ್ಮೂಲಕ ತಮ್ಮ ಶಿಷ್ಯವರ್ಗವೆಲ್ಲ ಕೆಟ್ಟು ಹೋಗಲು ಅವಕಾಶ ಮಾಡಿರುವರು. ಪೂರ್ವದಲ್ಲಿ ಈ ಮಠಗಳಲ್ಲಿ ಸನ್ಯಾಸಿಗಳೂ ವಿವೇಕಿಗಳೂ ಆದ ಮೂರ್ತಿಗಳಿದ್ದು ಶಿಷ್ಯರನ್ನು ಆಚಾರ ವಿಚಾರಗಳಲ್ಲಿಯೂ ನಡೆ ನುಡಿಗಳಲ್ಲಿಯೂ ತಿದ್ದಿ ಉದ್ಧಾರ

ಮಾಡುತ್ತಿದ್ದರು. ಲೌಕಿಕ ವೈದಿಕ ವಿದ್ಯೆಯು ಈ ಮಠಗಳಲ್ಲಿಯೇ ಮನುಷ್ಯನು ಮಾಡಿಕೊಳ್ಳಲು ಸಾಧ್ಯವಾದ ಅತ್ಯುತ್ತಮ ವಾತಾವರಣದಲ್ಲಿ ದೊರೆಯುತ್ತಿತ್ತು. ಇಂಗ್ಲೆಂಡು ಜರ್ಮನಿ ಮೊದಲಾದ ಪಶ್ಚಿಮದೇಶಗಳಲ್ಲಿನ ಮೊನ್ಯಾಸ್ಟರಿಗಳೆಂಬ ಸಂಸ್ಥೆಗಳು ಶಿಕ್ಷಣವಿಷಯದಲ್ಲಿ ಮಾಡುತ್ತಿದ್ದ ಕೆಲಸವನ್ನು ಈ ಮಠಗಳು ಮಾಡುತ್ತಿದ್ದವು. ಈಗಿನಂತೆ ವಿದ್ಯೆಗಾಗಿ ಧನಸಿಧಿಗಳೂ ಸಭೆಗಳೂ ಪ್ರತ್ಯೇಕವಾಗಿ ಅವಶ್ಯ ವಿರಲಿಲ್ಲ. ಪ್ರೌಢವಿದ್ಯಾಶಾಲೆಗಳೂ ಅದಕ್ಕಾಗಿ ತಕ್ಕ ಸಿಬ್ಬಂದಿಯೂ ಅವಶ್ಯವಾಗಿರಲಿಲ್ಲ. ಪ್ರತಿಯೊಂದು ಸ್ಥಳವೂ ಈ ರೀತಿ ವೃದ್ಧಿಹೊಂದಲು ಮಠಗಳು ಸಹಾಯಕಾರಿಗಳಾಗಿದ್ದವು. ಕಾಲಕ್ಕನುಸರಿಸಿ ತಕ್ಕ ಹೆಚ್ಚು ಕಡಿಮೆ ಮಾಡಿಕೊಂಡು ಜನವೃದ್ಧಿಯ ಮಾಡುವುದನ್ನು ಬಿಟ್ಟು ಅನೈಕ್ಯಮತ್ಸರ ದುರಾಚಾರ ದುರ್ವೃತ್ತಿ ಮೊದಲಾದವುಗಳಿಗೆ ಸಹಕಾರಿಗಳಾಗಿ ಪರಿಣಮಿಸಿರುವುದನ್ನು ನೋಡಿ ಯಾರು ಸಹಿಸಬಹುದು?

ಕರ್ನಾಟಕವಲ್ಲದೆ ಕೇರಳ, ಆಂಧ್ರ, ಮಹಾರಾಷ್ಟ್ರ ಇವೇ ಮೊದಲಾದ ಪ್ರಾಂತಗಳಲ್ಲಿ ವಿಶೇಷ ಇನಾಂಗ್ರಾಮ ಭೂಮಿಗಳನ್ನುಳ್ಳ ಮಠಗಳು ಅನೇಕ ವಿರುವುವು. ಇವುಗಳಿಗೆ ಮಠಾಧಿಪತಿಗಳಿಲ್ಲದೆ ಅಲ್ಲಿಯ ಆಸ್ತಿಗಳನ್ನು ಬೇಕಾದವರು ವಿನಿಯೋಗಿಸಿಕೊಂಡಿರುವರು. ವಿರಕ್ತ ಪಟ್ಟದ ಕಲಹದಿಂದಲೂ ಈ ಸ್ಥಿತಿಗೆ ಬರುವಂತಾಯಿತು. ಪಂಚಪೀಠಗಳಲ್ಲಿ ಕೇದಾರ ಮತ್ತು ಶ್ರೀಶೈಲ ಪೀಠಗಳು ಅನ್ಯರಪಾಲಾಗಿ ನಾಶಕ್ಕೆ ಎಡೆಯಾಗಿರುವುವು. ಗದಗ ಮತ್ತು ಹುಬ್ಬಳ್ಳಿ ಈ ಎರಡು ಸ್ಥಳಗಳಲ್ಲಿ ಮುಖ್ಯ ವಿರಕ್ತಪೀಠಾಧೀಶರಿದ್ದೂ ಸುತ್ತು ಮುತ್ತಣ ಗ್ರಾಮಗಳಲ್ಲಿ ಅನೇಕ ವೀರಶೈವರು ಕ್ರಿಶ್ಚಿಯನ್ ಧರ್ಮಾವಲಂಬಿಗಳಾದರು ಧರ್ಮಕಳಕಳಿಯುಳ್ಳ ಮತ್ತು ಕರ್ತವ್ಯಜ್ಞಾನವನ್ನುಳ್ಳ ಮುಖ್ಯ ಗುರುಗಳಿದ್ದೂ ಹೀಗಾದುದೇಕೆ? ಮೇಲೆ ಕಂಡ ಸ್ಥಳಗಳಲ್ಲಿ ವೀರಶೈವರ ವಿಶೇಷ ಜನಸಂಖ್ಯೆಯಿರುವುದು. ಮತ್ತು ಅನೇಕರು ನಾಗರಿಕತೆಯ ಮುಖ್ಯ ಲಕ್ಷಣವಾದ ಇಂಗ್ಲೀಷು ವಿದ್ಯಾಭ್ಯಾಸವನ್ನುಳ್ಳವರಾಗಿರುವರು. ಈ ವಿದ್ಯೆಯ ಪ್ರಭಾವವು ವೀರಶೈವ ಧರ್ಮ ಸುಧಾರಣೆಗೆ ಹೆಚ್ಚು ಸಹಕಾರಿಯಾಗದೆ ಪಾಶ್ಚಾತ್ಯರ ನಡೆನುಡಿಗಳ ಅನುಕರಣೆಗೆ ಅವಕಾಶವಿರುವುದನ್ನು ನೋಡಿದರೆ ಆ ವಿದ್ಯೆಯಿಂದ ಅಪೇಕ್ಷಣೀಯವಾದ ಫಲವಾಗಲಿಲ್ಲವೆಂದು ಹೇಳಬಹುದಲ್ಲವೆ? ಈ ಲೋಪವನ್ನು ಸಂಪಾದಿಸಲು ಮಹಾಸಭೆಯು ಯತ್ನಿಸದಿದ್ದುದು ಎಷ್ಟು ಶೋಚನೀಯವು! ದಕ್ಷಿಣ ಹಿಂದೂಸ್ಥಾನದಲ್ಲಿ ಮುಖ್ಯ ವ್ಯಾಪಾರಸ್ಥಳಗಳೆಂದರೆ ಬೊಂಬಾಯಿ ಮದ್ರಾಸು ಮತ್ತು ಬೆಂಗಳೂರು. ಅಲ್ಲದೆ ಈ ಸ್ಥಳಗಳು ನಾನಾತರದ ವಿದ್ಯಾಸ್ಥಾನಗಳಾಗಿವೆ. ಇಲ್ಲಿ ನಮ್ಮ ವಿದ್ಯಾರ್ಥಿಗಳೂ ವ್ಯಾಪಾರಿಗಳೂ ಎಡೆಬಿಡದೆ ಇರುತ್ತಿರುವರು. ಇಂಥ ಸ್ಥಳಗಳಲ್ಲಿ ನಮ್ಮ ಆಚಾರಪದ್ಧತಿಗಳಿಗನುಸರಿಸಿ ಊಟವಸತಿಗಳಿಗೆ ತಕ್ಕ ಏರ್ಪಾಡುಗಳು ಅವಶ್ಯವಾಗಿರಬೇಕು. ಒಬ್ಬಿಬ್ಬರ ಮಾತಾದರೆ ಹೇಗಾದರೂ ಇರಲಿ; ವೀರಶೈವ ಸಮಾಜದ ಅಭಿವೃದ್ಧಿಗೆ ಹಿತಕರವಾದ ಪರಿಣಾಮಕ್ಕೆ ಮಾತ್ರ ಪ್ರತ್ಯೇಕವಾದ ಏರ್ಪಾಡುಗಳಿರುವುದು ಅವಶ್ಯಕವು. ನಾನಾ ಸಮೂಹದವರು ತಮ್ಮ ಕುರುಹನ್ನು ಕಾಪಾಡಿಕೊಳ್ಳಲು ನಾನಾ ಬಗೆಯಿಂದ ಪ್ರತ್ಯೇಕವಾದ ಏರ್ಪಾಟುಗಳನ್ನು ಮಾಡಿಕೊಳ್ಳುತ್ತಾರೆ. ಹಾಗಲ್ಲದಿದ್ದರೆ ಒಂದು ಸಮೂಹವು ಇನ್ನೊಂದು ಸಮೂಹದೊಡನೆ ಬೆರೆತು ತಮ್ಮ ಸ್ವಭಾವ ಮತ್ತು ಮನೋವೃತ್ತಿ ಇವುಗಳಿಗೆ ಅನುಗುಣವಾದ ತಮ್ಮ ಕುರುಹುಗಳನ್ನು ಮಾಜಿಕೊಂಡು ಪಶುಪಕ್ಷ್ಯಾದಿಗಳಂತೆ ಜೀವನವನ್ನು ನಡೆಸುವಂತಾಗುವುವು. ಅಂದರೆ ಒಂದು ಸಮೂಹವನ್ನು ಇನ್ನೊಂದರಿಂದ ಪ್ರತ್ಯೇಕಿಸಿ ನಿರ್ದೇಶ ಮಾಡಿಕೊಳ್ಳುವ ಲಕ್ಷಣಗಳ ಬೆಳವಣಿಗೆಗೆ ಅವಕಾಶವಿಲ್ಲದಂತಾಗುವುದು. ಅಲ್ಲದೆ ಜನವರ್ಗವೆಲ್ಲವೂ ಒಂದೇ ರೂಪಕ್ಕಿಳಿದು ಏಕತ್ವದಲ್ಲಿ ಬಹುತ್ವ, ಬಹುತ್ವದಲ್ಲಿ ಏಕತ್ವ ಎಂಬ ಸೃಷ್ಟಿನಿಯಮಕ್ಕೆ ವಿರೋಧಾಚರಣೆಯು ಆರಂಭವಾಗಿ ಅಭಿವೃದ್ಧಿಯು ಕುಂಠಿತವಾಗುತ್ತದೆ. ಪ್ರಪಂಚದಲ್ಲೆಲ್ಲ ಇದಕ್ಕೆ ಬೇಕಾದಷ್ಟು ನಿದರ್ಶನಗಳು ಸಿಕ್ಕುವುವು. ಈ ಲಕ್ಷಣವನ್ನು ಕಾಪಾಡಿಕೊಳ್ಳುವ ವಿಧಾನಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಮುಖ್ಯೋದ್ದೇಶದ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಆಂಗ್ಲೇಯರು ಭರತಖಂಡಕ್ಕೆ ಬಂದು ಮೂರು ಶತಮಾನಗಳಾದರೂ ದೇಶೀಯರೊಡನೆ ಸೇರಿ ತಮ್ಮ ದಿನಚರಿಯ ಕಾರ್ಯಗಳನ್ನು ತಮ್ಮಷ್ಟಕ್ಕೆ ತಾವೇ ಪ್ರತ್ಯೇಕವಾಗಿ ಮಾಡಿಕೊಳ್ಳುತ್ತಿರುವರು. ಅವರಿಗೆ ಪ್ರತ್ಯೇಕ ಶಾಲೆಗಳು, ಪ್ರತ್ಯೇಕ ನಿವಾಸಸ್ಥಾನಗಳು, ಉಗಿಬಂಡಿಯಲ್ಲಿ ಪ್ರತ್ಯೇಕಸ್ಥಾನಗಳು ಇರುವುವು. ತಮ್ಮ ಹೆಣ್ಣುಗಳನ್ನು ಸ್ವಧರ್ಮದವರಾದ ದೇಶೀಯ ಕ್ರೈಸ್ತರಿಗೆ ಕೊಡರು. ಪ್ರಾಚೀನಕಾಲದಲ್ಲಿ ಹೆಸರುವಾಸಿಯಾದ ಗ್ರೀಕ್, ರೋಮನ್, ಪರ್ಷಿಯನ್ ಇವರೇ ಮೊದಲಾದ ಜನಾಂಗಗಳು ತಮ್ಮ ಕುರುಹುಗಳನ್ನು ಹೀಗೆಯೇ ಕಾಪಾಡಿಕೊಂಡಿರುವರು. ಇದನ್ನರಿತು ಇಂದ್ರಿಯ ಸಂತೃಪ್ತಿಯನ್ನು ಮೀರಿದ ಅಭಿವೃದ್ಧಿಯನ್ನು ಕೋರುವವರೆಲ್ಲರೂ ತಕ್ಕ ಏರ್ಪಾಡುಗಳನ್ನು ಮಾಡುವುದು ತಮ್ಮ ಮುಂದಣ ಪೀಳಿಗೆಯು ನಿರೀಕ್ಷಿಸುವ ಕರ್ತವ್ಯಗಳಲ್ಲಿ ಅತಿ ಮುಖ್ಯವಾದುದಾಗಿರುವುದು. ಈ ವಿಧವಾದ ಪ್ರತ್ಯೇಕ ಏರ್ಪಾಡುಗಳು ದೇಶದಲ್ಲಿರುವ ನಾನಾ ಜನವರ್ಗಗಳವರ ಒಗ್ಗಟ್ಟಿಗೂ ಅಭಿವೃದ್ಧಿಗೂ ಬಾಧಕವಾಗುತ್ತದೆಂದು ವಾದಿಸುವ ದೇಶಾಭಿಮಾನಿಗಳಿರುವುದೇನೋ ನಿಜ. ಅಂಥವರು ತಮ್ಮ ಗೃಹಕೃತ್ಯದ ಅನುಭವವನ್ನು ನೆನಪಿಗೆ ತೆಗೆದುಕೊಂಡು ದೀರ್ಘಾಲೋಚನೆ ಮಾಡುವಂತಾದರೆ ಮಿಶ್ರಭೋಜನ ಮಾಡುತ್ತಿರುವ ಅಣ್ಣತಮ್ಮಂದಿರನೇಕರು ಬದ್ಧದ್ವೇಷಿಗಳಾಗಿರುವುದೂ, ಸಹಪಂಕ್ತಿಯಲ್ಲಿ ಸಹಭೋಜನಮಾಡುವ ತಂದೆ ಮಕ್ಕಳು ಅಜೀವಶತ್ರುಗಳಾಗಿರುವುದೂ, ಕಂಡುಬರುವುದು. ಆಂಗ್ಲೇಯರು ಮತ್ತು ಜರ್ಮನರು ಮಿಶ್ರಭೋಜನ ಮಾಡುವುದನ್ನು ಎಲ್ಲರೂ ಬಲ್ಲರು. ಆದರೂ ಅವರಿಬ್ಬರಿಗೂ ಇರುವ ವೈರತ್ವವು ಜಗತ್ತಿನಲ್ಲಿ ಇನ್ನಾರಿಬ್ಬರಿಗೂ ಇಲ್ಲ. ತಮ್ಮ ವೈಲಕ್ಷಣ್ಯ (Individuality) ವನ್ನು ನಾನಾಜನರು ನಾನಾ ಬಗೆಯಾಗಿ ಕಾಪಾಡಿಕೊಳ್ಳುತ್ತಿರುವರೆಂದು ಹಿಂದೆ ಹೇಳಿದೆಯಷ್ಟೆ. ಆರೋಗ್ಯದೃಷ್ಟಿಯಿಂದಲೂ ಧರ್ಮಜಾಗ್ರತೆಯ ದೃಷ್ಟಿಯಿಂದಲೂ ಉಪಯೋಗಕರವಾದ ಸ್ನಾನ, ಜಪತಪ, ನಿತ್ಯನಿಯಮಜ್ಞಾನ, ಸತ್ಯಮಾರ್ಗಾಚರಣೆ, ದೇವತಾಭಜನೆ ಇವೇ ಮೊದಲಾದ ಕಾರ್ಯಗಳಿಗೆ ಅವರವರ ಮನೋವೃತ್ತಿ ಮತ್ತು ಸ್ವಭಾವ ಇವುಗಳಿಗನುಗುಣವಾಗುವಂತೆ ಪ್ರತ್ಯೇಕವಾದ ಏರ್ಪಾಡುಗಳನ್ನು ಭಾರತೀಯರು ಜನಸಾಮಾನ್ಯದಲ್ಲಿ ಅವರ ವೈಲಕ್ಷಣ್ಯದ ಅರಿವನ್ನು ಎಡೆಬಿಡದೆ ಉಂಟುಮಾಡಿಕೊಡುವುದಕ್ಕೆ ಅನಾದಿಯಿಂದಲೂ ಯತ್ನಿಸುತ್ತ ಬಂದಿರುವರು. ಭಾರತೀಯರು ಈಗ ನವನಾಗರಿಕತೆಯಲ್ಲಿ ಹಿಂದುಳಿದುದಕ್ಕೆ ಊಟಉಪಚಾರದ ವಿಷಯದಲ್ಲಿ ಪ್ರತ್ಯೇಕವಾದ ಏರ್ಪಾಡುಗಳು ಕಾರಣವಲ್ಲವೆಂದು ದೇಶಭಕ್ತರಾದ ಮಹಾತ್ಮಾಗಾಂಧಿ ಮದನಮೋಹನಮಾಳವ್ಯ ಇವರೇ ಮೊದಲಾದವರು ಹೇಳುತ್ತಿರುವುದು ದೇಶೋದ್ಧಾರಕ್ಕೆ ಯತ್ನಿಸುವ ಕಾರ್ಯದಲ್ಲಿ ಕಂಡುಬರುತ್ತದೆ. ಎಲ್ಲ ಜನವರ್ಗದವರೂ ಕೂಡಿ ಊಟಮಾಡಿದರೆ ಒಗ್ಗಟ್ಟು ಬರುತ್ತದೆಯೆಂದು ಅವರು ಹೇಳದೆ ಅದನ್ನು ಖಂಡಿಸಿ ಸಾಂಪತ್ತಿಕ ಮತ್ತು ರಾಜಕೀಯ ವಿಧಾನಗಳಿಂದ ಜನೋದ್ಧಾರ ಮಾಡಲು ಯತ್ನಿಸಿ ಅದರಲ್ಲಿ ತಕ್ಕಮಟ್ಟಿಗೆ ಜಯಶೀಲರಾಗಿದ್ದಾರೆ. (ಸಶೇಷ.)

"ಕಳ್ಳವೇಷದ ವೀರಶೈವ."

ಸ್ವಾಮಿ!

ಪರವಂಚನೆಯೆಂಬ ಪಂಕದಲ್ಲಿ ಹುಟ್ಟಿ ಮುಳುಗಿ ತೇಲಿ ಬೆಳೆದಿರುವ ಧೂರ್ತರಧಾರ್ಷ್ಟ್ಯಕ್ಕೆ ಎಣೆಯಿಲ್ಲ. ಕುಲ ಛಲಗಳಿಲ್ಲದೆ ಒಂದು ಜಾತಿಗೆ ಹುಟ್ಟಿ ಒಂದು ಜಾತಿಯ ಹೆಸರು ಹೇಳಿಕೊಳ್ಳುವ ವಿಚಿತ್ರ ಚರಿತ್ರರು ಮಾಡುವ ಸಾಹಸವು ಅದ್ಭುತವಾದದ್ದು. ಭೂರಿದಕ್ಷಿಣೆಯ ಆಸೆಗಾಗಿ ಮುಪ್ರೆಯನ್ನೋ ನಾಮವನ್ನೋ ಗಂಧವನ್ನೋ ಹಚ್ಚಿ ಜನಿವಾರವನ್ನು ಸಿಕ್ಕಿಸಿಕೊಂಡು ಜಾತಿಯನ್ನು ಮರೆಮಾಜಿ ಗುಂಪಿಗೆ ನುಗ್ಗಿ ದಕ್ಷಿಣೆಗೆ ಕೈಯೊಡ್ಡುವ ಅಧಮರಂತೆ ಪರರಲ್ಲಿ ಭೇದವನ್ನು ಹುಟ್ಟಿಸಿ ಸ್ವಾರ್ಥಸಾಧನೆಯನ್ನು ಮಾಡಿಕೊಳ್ಳಬೇಕೆಂದು ಕಪಟನಾಟಕವನ್ನಾಡುವ ಅಧಮರು ಯಾವ ಕೆಲಸವನ್ನು ಮಾಡುವುದಕ್ಕೆ ತಾನೇ ಹಿಂಜರಿಯುವರು?

ನೆನ್ನೆ ತಾ|| ೨೨ ನೆ ಸಂಪದಭ್ಯುದಯ ಪತ್ರಿಕೆಯಲ್ಲಿ ವೀರಶೈವ ಎಂಬ ಹೆಸರಿನಿಂದ ಒಂದು ಲೇಖನವು ಕರಸ್ಪಾಂಡೆನ್ಸು ರೂಪವಾಗಿ ಪ್ರಕಟಿಸಲ್ಪಟ್ಟಿರುವದು. ಮ|| ಪುರುಷೋತ್ತಮಾನಂದಗಿರಿಯವರು ವೀರಶೈವರ ಮೇಲೆ ಆಕ್ಷೇಪಿಸಿ ಹಿಂದೆ ಸಾಧ್ವೀಪತ್ರಿಕೆಯಲ್ಲಿ ಪ್ರಕಟಪಡಿಸಿದ್ದ ಕರಸ್ಪಾಂಡೆನ್ಸಿಗೆ ಸ್ಟಾರ್‌ಪತ್ರಿಕೆಯಲ್ಲಿ ಕಕುದ್ಗಿರಿಯೆಂಬ ಅಂಕಿತದವರು ಕೊಟ್ಟಿದ್ದ ಪ್ರತ್ಯುತ್ತರಕ್ಕೆ ಖಂಡನೆಯ ರೂಪವಾಗಿ ಈ ಲೇಖನವು ಪ್ರಕಟಿಸಲ್ಪಟ್ಟಿರುವದು. ಬಾವಾಜಿಯವರ ಲೇಖನವು ಯುಕ್ತಿಯುಕ್ತವಾಗಿದೆಯೆಂದೂ ಸ್ಟಾರ್‌ಪತ್ರಿಕಾಕರ್ತರು ಕೇವಲ ಯುಕ್ತಿವಿಹೀನವಾದ ಉತ್ತರವನ್ನು ಬರೆದು ಧರ್ಮಿಷ್ಠರಾದ ಲಿಂಗಾಯತ ಸಂಗಡಕ್ಕೆ ಅವಮಾನಮಾಡಿರುವರೆಂದೂ ಈ ಲೇಖನಕಾರರು ಬರೆದಿರುತ್ತಾರೆ. ಬಾವಾಜಿಯವರ ಲೇಖನಕ್ಕೆ ಬರೆಯಲ್ಪಟ್ಟಿರುವ ಉತ್ತರವನ್ನು ಕರಸ್ಪಾಂಡೆನ್ಸಾಗಿ ಸ್ಟಾರ್‌ಪತ್ರಿಕೆಗೆ ಕಳಿಸಿದವನು ನಾನು. ಅದನ್ನು ಸ್ಟಾರ್‌ಪತ್ರಿಕಾಕರ್ತರೇ ಬರೆದರೆಂದು ಈ ಲೇಖನದಲ್ಲಿ ಬರೆದಿರುವದನ್ನು ನೋಡಿದರೆ, ಸಂಪದಭ್ಯುದಯ ಪತ್ರಿಕಾಕರ್ತರೇ ಈ ಲೇಖನವನ್ನು ಸ್ಟಾರ್‌ಪತ್ರಿಕೆಯ ಮೇಲಣ ಅಸೂಯೆಯಿಂದ ವೀರಶೈವ ಜನಾಂಗಕ್ಕೆ ಸ್ಟಾರಿನ ಮೇಲೆ ದುರಭಿಪ್ರಾಯ ಹುಟ್ಟಲಿ ಎಂಬ ದುರುದ್ದೇಶದಿಂದ ಈ ರೀತಿಯಾದ ಲೇಖನವನ್ನು ಬರೆದಿದ್ದಾರೆಂದು ಯೋಚಿಸುವುದು ಕೂಡ ತಪ್ಪಾಗಬಾರದಾಯಿತು. ಸಂಪದಭ್ಯುದಯ ಕರ್ತರ ಪತ್ರಿಕಾಸಾಮ್ರಾಜ್ಯ ನಿರ್ವಾಹಕ್ರಮದಲ್ಲಿ ಕರಸ್ಪಾಂಡೆನ್ಸಿಗೂ ಲೀಡರೇಟಿಗೂ ಭೇದವೇ ಇಲ್ಲವಾಗಿರಬೇಕು.

ಅದು ಹಾಗಿರಲಿ, ಬಾವಾಜಿಯವರ ಲೇಖನದಲ್ಲಿ ವೀರಶೈವರು ಅವೈದಿಕರು, ಅವರಿಗೆ ವೇದಾಧಿಕಾರವಿಲ್ಲ, ಅವರು ವೇದವ್ಯಾಸರಿಗೆ ಶತ್ರುಗಳು, ಇತ್ಯಾದಿಯಾಗಿ ಬರೆದಿದ್ದ ಲೇಖನವು ಈ ವೀರಶೈವ ವೇಷದ ಕರಸ್ಪಾಂಡೆಂಟಿಗೆ ಯುಕ್ತಿಯುಕ್ತವಾಗಿ ತೋರಿತಂತೆ! ವೀರಶೈವರು ವೇದಾಭ್ಯಾಸಮಾಡಲು ಹಕ್ಕುಳ್ಳವರು, ಅವರು ವೇದವ್ಯಾಸರಿಗೆ ಶತ್ರುಗಳಲ್ಲ, ಅವರ ಪೂರ್ವಾಚಾರ್ಯರು ವೇದವ್ಯಾಸರನ್ನು ಸ್ತುತಿಸಿದ್ದಾರೆ, ಅವರು ವ್ಯಾಸರ ಬ್ರಹ್ಮಸೂತ್ರಕ್ಕೆ ಭಾಷ್ಯಗಳನ್ನು ರಚಿಸಿದ್ದಾರೆ, ಅವರು ವ್ಯಾಸರ ತೋಳನ್ನು ಕತ್ತರಿಸಿದ್ದು ಸುಳ್ಳು, ಆ ವಿಷಯವೇನೆಂಬುವದನ್ನು ವ್ಯಾಸರೇ ತಮ್ಮ ಸ್ಕಾಂದ ಪುರಾಣದಲ್ಲಿ ಬರೆದುಕೊಂಡಿದ್ದಾರೆ, ಎಂಬುದನ್ನು ಪ್ರಮಾಣ ವಚನಗಳ ಸಮೇತ ಉದಹರಿಸಿ ಬಾವಾಜಿಯವರ ದುರ್ವಾದವನ್ನು ಖಂಡಿಸಿರುವ ಲೇಖನವು ಮಾತ್ರ ಲಿಂಗಾಯತ ಸಂಗಡಕ್ಕೆ ಅಪಮಾನಕರವಾದದ್ದಂತೆ! ಲಿಂಗಧಾರಿ ಮಠದಲ್ಲಿ ಹುಟ್ಟಿದ ಯಾವೊಬ್ಬ ಅಧಮನ ಬಾಯಿಂದಲಾದರೂ ಇಂಥ ಮಾತು ಬರುವುದುಂಟೆ? ವೀರಶೈವರ ಏಳ್ಗೆಯನ್ನು ಸದಾ ದ್ವೇಷಿಸುತ್ತಿರುವ ಸಂಪದಭ್ಯುದಯದ ಅಭಿಮಾನ ದೇವತೆ ಯಾವುದೋ ಈ ಕಪಟ ಲೇಖನವನ್ನು ಬರೆದು ತನ್ನ ಹೊಟ್ಟೆಯುರಿಯನ್ನು ಇದೊಂದು ರೀತಿಯಲ್ಲಿ ತೀರಿಸಿಕೊಂಡಿರಬೇಕು. ಎಚ್ಚತ್ತಿರುವ ವೀರಶೈವರು ಇಂಥ ಮಾಯಾಜಾಲಕ್ಕೆ ಈಗಣ ಕಾಲದಲ್ಲೂ ಸಿಕ್ಕುವದುಂಟೆ? ಹೇಡಿಯಾದ ಈ ಕರಸ್ಪಾಂಡೆಂಟು ನನ್ನ ಪ್ರತ್ಯುತ್ತರಲೇಖನದ ಅಸಾಧುತ್ವವನ್ನು ಯಾವರೂಪದಲ್ಲಾದರೂ ಯತ್ಕಿಂಚಿತ್ತಾದರೂ ತೋರಿಸಿರುವನೆ? ಆ ಶಕ್ತಿಯು ಈತನಿಗುಂಟೆ? ಇಂಥ ಕಪಟ ನಾಟಕಧುರಂಧರರ ಇಂದ್ರಜಾಲಕ್ಕೆ ಯುಕ್ತಾಯುಕ್ತ ವಿಮರ್ಶನ ಧುರೀಣರಾದ ಸಜ್ಜನರ ಧಿಕ್ಕಾರವೇ ಬಹುಮಾನವಲ್ಲದೆ ಮತ್ತೇನೂ ಫಲವಿಲ್ಲ.

ಕಕುದ್ಗಿರಿ.

ದಾವಣಗೆರೆಯ ಮ್ಯುನಿಸಿಪಾಲಿಟಿ.

ಈ ಮ್ಯುನಿಸಿಪಾಲಿಟಿಯು ಮೈಸೂರು ದೇಶದಲ್ಲಿ ಮೈಸೂರು ಬೆಂಗಳೂರು ಬಿಟ್ಟರೆ ಇದೇ 3ನೇದೆಂದು ಹೇಳಬಹುದು. ಇದರ ಉತ್ಪತ್ತಿ ಸುಮಾರು 70-80 ಸಾವಿರ ರೂಪಾಯಿ ಇರಬಹುದೆಂದು ತೋರುತ್ತೆ. ಇಂಥಾ ಮ್ಯುನಿಸಿಪಾಲಿಟಿಯ ಹಣವು ದುರ್ವ್ಯಯವಾಗದಂತೆ ನಡೆಸಿಕೊಂಡು ಹೋಗುವುದು ಟೌನ್ ಜನಗಳ ಕರ್ತವ್ಯವಾಗಿದೆ. ಈ ವಿಷಯದಲ್ಲಿ ಅಲಕ್ಷ್ಯಮಾಡಿದರೆ ತಾವು ಕಂದಾಯದ ರೂಪವಾಗಿ ಕೊಟ್ಟ ಹಣವು ತಮ್ಮ ಸೌಕರ್ಯದ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುವದಕ್ಕೆ ಬದಲಾಗಿ ಅನಾವ್ಯಯಕ್ಕೆ ಕೊಟ್ಟಂತಾಗುತ್ತದೆಂದು ತಿಳಿಯುವದಲ್ಲದೆ ಇದಕ್ಕೋಸ್ಕರ ತಮ್ಮ ಪರವಾಗಿ ನೇಮಿಸಿಕೊಡುವ ಮ್ಯುನಿಸಿಪಲ್ ಕೌನ್ಸಿಲರುಗಳನ್ನು ಚುನಾಯಿಸಿಕೊಳ್ಳುವುದರಲ್ಲಿ ಸರಿಯಾದ ನಿಗಾ ಇಟ್ಟುಕೊಂಡು ಓಟ್ಸುಕೊಡುವುದು ಎಷ್ಟು ಮಹತ್ವದ್ದಿರುತ್ತದೆಂದು ತಿಳಿದುಕೊಳ್ಳತಕ್ಕದ್ದಾಗಿರುತ್ತದೆ. ನೇಮಿಸಿಕೊಟ್ಟ ಮೆಂಬರುಗಳು ತಾವು ಮೆಂಬರುಗಳಾಗುವುದು ಮ್ಯುನಿಸಿಪಾಲಿಟಿಯಲ್ಲಿ ತಮ್ಮ ಸ್ವಂತಕಾರ್ಯಗಳನ್ನು ಮಾಡಿಕೊಳ್ಳುವದಕ್ಕಲ್ಲವೆಂತಲೂ, ದೊಡ್ಡಸ್ತಿಕೆಗೋಸ್ಕರ ಕುರ್ಚಿಯ ಮೇಲೆ ಕುಳಿತುಕೊಂಡು ಬರುವುದಕ್ಕಲ್ಲವೆಂತಲೂ 3 ಮೀಟಿಂಗುಗಳಿಗೆ ಹೋಗದೆಬಿಟ್ಟರೆ ವಜಾಮಾಡುತ್ತಾರೆಂದು ತಿಳಿದು ಒಂದು ಮೀಟಿಂಗಿಗೆ ಹಾಜರಾಗುವದಕ್ಕಲ್ಲವೆಂತಲೂ, ಮೀಟಿಂಗಿನಲ್ಲಿ ಚರ್ಚಿಸತಕ್ಕ ವಿಷಯಗಳಲ್ಲಿ ತನಗೇಕೆ ನಿಷ್ಠುರ? ಮೊದಲು ಯಾರು ಏನು ಹೇಳುತ್ತಾರೋ ಅದರಂತೆ ನನ್ನ ಅಭಿಪ್ರಾಯವೆಂದು ಹೇಳಿದರೆ ಸರಿ ಎಂದು ಮಧ್ಯದಲ್ಲಿ ಕುಳಿತುಕೊಂಡು ಬರುವದಕ್ಕಲ್ಲವೆಂತಲೂ, ಮ್ಯುನಿಸಿಪಲ್ ಅಧಿಕಾರಿಗಳು ಪ್ರಜೆಗಳ ಕೆಲಸಗಳನ್ನು ಮಾಡಿಕೊಡುವುದರಲ್ಲಿ ಲಂಚಕ್ಕೋಸ್ಕರ ಕೊಡತಕ್ಕ ತೊಂದರೆಗಳನ್ನು ಅಥವಾ ಮ್ಯುನಿಸಿಪಲ್ ಹಣವನ್ನು ಮೋಸದಿಂದ ತಿಂದುಹಾಕುವದನ್ನು ನೋಡಿ ನನಗೇಕೆ ಅಧಿಕಾರಿಗಳಲ್ಲಿ ನಿಷ್ಠುರವೆಂದು ಅವರ ದಾಕ್ಷಿಣ್ಯಕ್ಕೆ ಬಿದ್ದು ಸುಮ್ಮನಿರುವದಕ್ಕಲ್ಲವೆಂತಲೂ ತಿಳಿದುಕೊಂಡು, ತಾನು ಮಾಡಬೇಕಾದ ಕರ್ತವ್ಯವನ್ನು ಮಾಡಿ ತನಗೂ ತನ್ನ ಟೌನ್ ಜನಗಳಿಗೂ ಹಿತವನ್ನು ಮಾಡಿಕೊಳ್ಳಬೇಕಾದದ್ದು ಪ್ರತಿಯೊಂದು ಮ್ಯುನಿಸಿಪಾಲಿಟಿಯ ಕೌನ್ಸಿಲರುಗಳು ತಿಳಿದುಕೊಂಡಿರಬೇಕಾದುದು ಧರ್ಮ. ಈ ಟೌನಿಗೆ ಹೊಸದಾಗಿ ಬಂದಿರುವ ಸಬ್‌ಡಿವಿಜನ್ ಸಾಹೇಬರೂ ಮ್ಯುನಿಸಿಪಲ್ ಪ್ರಸಿಡೆಂಟರೂ ಆದ ಮ|| ಚನ್ನರಾಜ ಅರಸಿನವರೂ, ಸ್ಯಾನಿಟರಿ ಇನ್‌ಸ್ಪೆಕ್ಟರ್ ಬಸವಾರಾಧ್ಯರೂ ಮ್ಯುನಿಸಿಪಲ್ ಲೆಕ್ಕ ತನಿಖೆಮಾಡಲಾಗಿ ಝಾಡಮಾಲಿ ಗುರಮ್ಮನೆಂಬವಳು ಮತ್ತು ಅವಳ ಮಗಳು ಮ್ಯುನಿಸಿಪಾಲಿಟಿಯಲ್ಲಿ ಕೆಲಸಮಾಡುತ್ತಿರಲಾಗಿ ಈ ಪೈಕಿ ಗುರಮ್ಮನನ್ನು ಆಸ್ಪತ್ರಿಗೆ ಕೆಲಸಮಾಡಲು ಕೊಟ್ಟಿರಲಾಗಿ ಮೆಡಿಕಲ್ ಆಫೀಸರು ಇವಳು ತುಂಬಾ ಗರ್ಭಿಣಿಯಿರುವದರಿಂದ ಕೆಲಸಮಾಡಲಿಕ್ಕೆ ನಾಲಾಯಕೆಂದು ವಾಪಸು ಕಳುಹಿಸಲು, ಇವಳ ಮಗಳನ್ನು ಆಸ್ಪತ್ರಿಗೆ ಕಳುಹಿಸಿಕೊಟ್ಟರೆಂತಲೂ, ಗುರಮ್ಮನು ಹೆತ್ತು ಮನೆಯಲ್ಲಿಯೇ 3 ತಿಂಗಳವರೆಗೂ ಇರುವಲ್ಲಿ ಇವಳಿಗೆ ಸಂಬಳ ಕೊಟ್ಟು ಅವರ ಹೆಬ್ಬೆಟ್ಟಿನ ಗುರುತುಮಾಡಿಸಿಕೊಂಡು ಮೂರುತಿಂಗಳ ಸಂಬಳವನ್ನು ತಿಂದುಹಾಕಿರುವದು ಕಂಡುಹಿಡಿಯಲ್ಪಟ್ಟು ಇವರೊಳಗೆ ಸೇರಿದ ಮೇಸ್ತ್ರಿಗೆ ದಂಡ ಹಾಕಿರುವರೆಂದೂ ಇನ್ನೂ ಅದಕ್ಕೆ ಸಂಬಂಧಪಟ್ಟವರ ತನಿಖೆ ಆಗತಕ್ಕದ್ದಿರುವದೆಂತಲೂ ಬಾತ್ಮಿ ಬಂದಿದೆ. ಅಲ್ಲದೆ ಈ ಮ್ಯುನಿಸಿಪಾಲಿಟಿಗೆ ಎಂಟು ಕಸತುಂಬುವ ಗಾಡಿಗಳು ಇರುತ್ತವೆ. ಈ ಗಾಡಿಗಳನ್ನು ಕಂಟ್ರಾಕ್ಟುದಾರರು ಇಟ್ಟಿರುತ್ತಾರೆ. ಅವರು ಒಂದು ಗಾಡಿ, ಒಂದುಜೊತೆ ಎತ್ತು, ಗಾಡಿಹೊಡೆಯುವ ಮನುಷ್ಯನನ್ನು ಕೊಡುವದೆಂತಲೂ, ಇದಕ್ಕೆ ತಿಂಗಳಿಗೆ 30 ರೂಪಾಯಿನಂತೆ ಮ್ಯುನಿಸಿಪಾಲಿಟಿಯಿಂದ ಕೊಡಬೇಕೆಂತಲೂ ಕರಾರು ಇರಲಾಗಿ, ಒಂದು ದಿವಸ ಮ|| ಪ್ರಸಿಡೆಂಟ್ ಚನ್ನರಾಜ ಅರಸಿನವರು ಗಾಡಿ ಹೊಡೆಯುವನನ್ನು ನೀನು ಯಾರೆಂದು ಕೇಳಿದರೆಂದೂ, ಅದಕ್ಕವನು ಮುನಸಿಪಲ್ ಕಸಗುಡಿಸತಕ್ಕ ಆಳೆಂದು ಹೇಳಲು, ಸಾಹೇಬರು ಕಂಟ್ರಾಕ್ಟುದಾರನು ಆಳನ್ನು ಇಡಬೇಕಾದದ್ದು; ಮುನಸಿಪಲ್ ಆಳನ್ನು ಯಾತಕ್ಕೆ ಕೊಟ್ಟಿದ್ದೀರೆಂದು ಮುನಸಿಪಲ್ ಹೆಡ್‌ಕ್ಲಾರ್ಕ್ ವೆಂಕೋಬರಾಯರನ್ನು ಕೇಳಲು ಕೊಡಬೇಡವೆಂತ ದಫೇದಾರನಿಗೆ ಹೇಳಿದ್ದೆನೆಂದು ಹೇಳಲು, ದಫೇದಾರನನ್ನು ಕರಸಿ ಕೇಳಲು, ಅವನು ನನಗೆ ವೆಂಕೋಬರಾಯರು ಹೇಳೇ ಇಲ್ಲವೆಂದು ಹೇಳಿದನೆಂತಲೂ, ಪೇಮೆಂಟ್ ಬುಕ್ಕಿನಲ್ಲಿ ಕಂಟ್ರಾಕ್ಟುದಾರನು ಗಾಡಿಹೊಡೆಯುವ ಆಳು ಇಡದೆ ಇದ್ದಾಗ್ಯೂ, ಅವನಿಗೆ ಗಾಡಿ 1ಕ್ಕೆ 30 ರೂಪಾಯಿನಂತೆ ಹಣಕೊಟ್ಟು ರುಜುಮಾಡಿಸಿಕೊಂಡಿರುವುದಲ್ಲದೆ ಗಾಡಿ ಹೊಡೆದ ಮ್ಯುನಿಸಿಪಲ್ ಕಸಗುಡಿಸುವ ಆಳಿಗೆ ಕ್ರಮವಾಗಿ ಸಂಬಳ ಪಾವತಿಯಾಗಿರುವುದೆಂತಲೂ, ಗಾಡಿ 1ಕ್ಕೆ 10 ರೂ. ಆಳಿನ ಸಂಬಳದಂತೆ 8 ಗಾಡಿಗೆ ಆಗುವ 80 ರೂಪಾಯಿಗಳು ಕಂಟ್ರಾಕ್ಟುದಾರನಿಗೆ ಸಂದವೋ ಯಾರಿಗೆ ಸಂದವೋ ತಿಳಿಯದು. ಸಾಹೇಬರು ಕೂಡಲೇ ಆಳುಗಳನ್ನು ಬಿಡಿಸಿದರೆಂತಲೂ, ಒಂದುದಿವಸ ಸ್ಯಾ|| ಇ|| ಬಸವಾರಾಧ್ಯರು ಸಾಹೇಬರವರ ಮತ್ತು ಇಂಜನಿಯರ ರೂಬರೂಬು ಕಸಗುಡಿಸುವ ಆಳುಗಳನ್ನು ಲಿಸ್ಟು ಪ್ರಕಾರ ಕರೆಯಲು ಬಂದು ನಿಂತರೆಂತಲೂ, ಮ್ಯುನಿಸಿಪಲ್ ಆಫೀಸಿನಲ್ಲಿ ನೀರುಹಾಕಲು ಇಬ್ಬರನ್ನು ಇಟ್ಟುಕೊಂಡಿರಲಾಗಿ ವಾಟರ್‌ಮೆನ್ ಎಂದು ಕರೆಯಲು ಕಸಗುಡಿಸುವವರಲ್ಲಿಯೇ ಇಬ್ಬರು ಬಂದು ಹಾಜರಾದರೆಂತಲೂ, ಸಂಬಳ ಮಾತ್ರ ವಾಟರ್‌ಮೆನ್‌ಗಳಿಗಾಗಿ ಬೇರೆ ಹೆಸರಿನವರಿಗೆ ಪಾವತಿಮಾಡಿದಂತೆ ದಾಖಲೆ ಇರುವದೆಂತಲೂ ವರ್ತಮಾನ ಕೇಳುತ್ತೇನೆ. ಸಾಹೇಬರವರ ರೂಬರೂಬು ವಾಟರ್‌ಮೆನ್‌ಗಳನ್ನು ಕರೆಯಲು ಕಸಗುಡಿಸುವವರೇ ಬರಲು ಕಾರಣವೇನು? ಸಂಬಳ ಹೊಂದಿದ ಬೇರೆ ಹೆಸರಿನವರು ಬಾರದೆ ಇರಲು ಕಾರಣವೇನು? ಇದನ್ನು ನೋಡಿದರೆ ಕಸಗುಡಿಸುವವರನ್ನೇ ನೀರುಹಾಕಲು ಇಟ್ಟುಕೊಂಡಿರಬಹುದು, ಸಂಬಳ ಮಾತ್ರ ಬೇರೆಯವರ ಹೆಸರಿಗೆ ಕೊಟ್ಟಂತೆ ಬರೆದು ಹಣ ಜೇಬಿಗೆ ಹಾಕಿಕೊಂಡಿರಬಹುದೋ ಹೇಗೋ! ಇದನ್ನೆಲ್ಲಾ ಸಾಹೇಬರು ತನಿಖೆಮಾಡದೆ ಇರಲಾರರೆಂದು ತಿಳಿಯುತ್ತೇನೆ. ಸ್ಯಾ|| ಇ|| ಬಸವಾರಾಧ್ಯರು ದೊಡ್ಡಿಯನ್ನು ತನಿಖೆಮಾಡಲು ಹೋದರೆಂತಲೂ, ದೊಡ್ಡಿಯಲ್ಲಿದ್ದ ರಾಸುಗಳು ಎಷ್ಟಿದ್ದವೋ ಅಷ್ಟು ಬುಕ್ಕಿನಲ್ಲಿ ಎಂಟರ್ ಮಾಡದೆ ಕಡಮೆಮಾಡಿರುವುದನ್ನೂ ದಿನಂಪ್ರತಿಯೂ ರಾಸುಗಳನ್ನು ಟೋಟಲ್‌ಮಾಡದೆ ಎಂಟುದಿವಸಕ್ಕೆ ಒಂದುಸಾರಿ ಟೋಟಲ್ ಮಾಡಿರುವಂತೆಯೂ, ಬಿಡಿಸಿಕೊಂಡುಹೋದ ರಾಸುಗಳಿಗೆ ಒಂದುವರೆ ತಿಂಗಳಿಂದ ರಸೀದಿಗಳನ್ನೇ ಕೊಟ್ಟಿರುವದಿಲ್ಲವೆಂತಲೂ ತಿಳಿಯಬಂದು ಈ ವಿಷಯದಲ್ಲಿ ರಿಪೋರ್ಟುಮಾಡಿರುವರೆಂತಲೂ ವರ್ತಮಾನ ಕೇಳುತ್ತೇನೆ. ಈ ರೀತಿಯಾಗಿ ಮ್ಯುನಿಸಿಪಾಲಿಟಿಯಲ್ಲಿ ನಡೆದಿರುವದೆಲ್ಲಾ ನಿಜವಿದ್ದರೆ ಈ ಮುಂಚೆ ಇದ್ದ ಪ್ರಸಿಡೆಂಟ್ ಮ|| ಚಕ್ರಪಾಣಿಯ್ಯಂಗಾರರವರ ಮತ್ತು ಸ್ಯಾನಿಟರಿ ಇನ್‌ಸ್ಪೆಕ್ಟರ್ ಸೂರ್ಯನಾರಾಯಣರಾಯರ ಹಾಲಿ ಇರುವ ಮುನಷಿ ವೆಂಕೋಬರಾಯರ ಕಾಲದಲ್ಲಿ ದುಡ್ಡು ಕೊಟ್ಟವರು ಲೈಸನ್ಸಿಲ್ಲದೆ ಕಟ್ಟಡ ಮಾಡಿಕೊಳ್ಳಬಹುದೆಂತಲೂ, ಮ್ಯುನಿಸಿಪಲ್ ಚರಂಡಿಗಳ ಮೇಲೆ ಕಲ್ಲನ್ನು ಹಾಕಿ ಕಟ್ಟಿಕೊಳ್ಳಬಹುದೆಂತಲೂ, ಲೈಸನ್ಸಿಗೆ ಅರ್ಜಿಕೊಟ್ಟದ್ದರೂ ಕೊಟ್ಟ ಮರುದಿವಸವೇ ಕಟ್ಟಬಹುದೆಂತಲೂ, ದುಡ್ಡು ಕೊಡದೆ ಲೈಸನ್ಸಿಗೆ ದರಖಾಸ್ತು ಬರೆದುಕೊಂಡು ತಿಂಗಳಾಗುತ್ತ ಬಂದರೂ ಲೈಸನ್ಸು ಕೊಡದೆ ತಿಂಗಳ ಮೇಲಾದರೂ ಕಟ್ಟದಂತೆ ನೋಟೀಸು ಮಾಡುತ್ತಾರಲ್ಲದೆ ಕೆಲಸಕ್ಕೆ ಬಾರದ ಸಬಬುಗಳನ್ನು ಹೇಳುವುದೂ, ಇಲ್ಲದ ರೂಲ್ಸು ತಂದು ಒಡ್ಡುವರೆಂತಲೂ, ಮ್ಯುನಿಸಿಪಾಲಿಟಿಗೆ ಅಕ್ವೈರ್ ಮಾಡಿಕೊಂಡು ಗವರ್ನಮೆಂಟ್ ಕಟ್ಟಡಗಳನ್ನು ಕಟ್ಟಿ ಉಳಿದ ಜಾಗ ಸರಕಾರದ ಕಟ್ಟಡದ ಕಾಂಪೌಂಡಿಗೆ ಸೇರಿದ್ದಾಗ್ಯೂ, ಮೂವತ್ತು ವರುಷದಿಂದಲೂ ಕಂದಾಯವಿಲ್ಲದೆ ಖಾತೆ ಇಲ್ಲದೆ ಇದ್ದಾಗ್ಯೂ ಅಕ್ಕಸಾಲೆ ಈಶ್ವರಪ್ಪನಿಂದ ಪ್ರತಿಫಲ ಹೊಂದಿ, ಅವನಿಂದ ನನ್ನ ಜಾಗವೆಂದು ಕಟ್ಟಡಮಾಡಿಕೊಳ್ಳಲು ಲೈಸನ್ಸಿಗೆ ಅರ್ಜಿಹಾಕಿಸಿಕೊಂಡು 30 ವರ್ಷದ ಕಂದಾಯ ತೆಗದುಕೊಂಡು ಕಟ್ಟಲು ಲೈಸನ್ಸು ದೊರೆಯುವಂತೆ ಮಾಡುತ್ತಿದ್ದಾರೆಂತಲೂ, ಈಶ್ವರಪ್ಪನು ಆಗಲೇ ಜಾಗದಲ್ಲಿ ಕಲ್ಲುಗಳನ್ನು ಹೇರಿಸಿರುವನೆಂತಲೂ ಈ ವಿಷಯದಲ್ಲಿ ಮ|| ಪ್ಲೀಡರ್ ನರಸಿಂಹಮೂರ್ತಿರಾಯರು (ಮ್ಯುನಿಸಿಪಲ್ ಕೌನ್ಸಿಲರು) ಲೈಸನ್ಸು ಕೊಡಕೂಡದೆಂದು ಚರ್ಚೆಮಾಡಿದ್ದರ ಮೇಲೆ ಹಾಗೆಯೇ ನಿಂತಿರುವದೆಂತಲೂ, ಬಳ್ಳಾರಿ ಚನ್ನವೀರಪ್ಪನು ಗೌರ್ನಮೆಂಟ್ ಹರಾಜಿನಲ್ಲಿ ತನ್ನ ತಮ್ಮ ಮಹಾದೇವಪ್ಪನು ಹಣ ಕಟ್ಟಿ ಆ|| ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಸರಟಿಫಿಕೇಟ್ಸ್ ಪಡೆದ ಜಾಗದಲ್ಲಿ ಕಟ್ಟಿಕೊಳ್ಳಲು ಲೈಸನ್ಸಿಗೆ ಬರೆದುಕೊಂಡಿದ್ದುದಕ್ಕೆ ಏನೂ ಪ್ರತಿಫಲಕೊಡದೆ ಹೋದದ್ದರಿಂದ ಈತನಿಗೆ ನಿನ್ನ ಜಾಗ ಇಲ್ಲ; ಇದ್ದರೂ ಅದರಲ್ಲಿನ ತಗ್ಗನ್ನು ಮುಚ್ಚಿಸಿ ಮ್ಯುನಿಸಿಪಾಲಿಟಿಗೆ ಸೇರಿಸಿಕೊಂಡು ಇರುತ್ತೇನೆಂದು ಸದರಿಯವನ ಜಾಗ ಹರಾಜುಮಾಡಿ ಹಣವನ್ನು ಮ್ಯುನಿಸಿಪಾಲಿಟಿಗೆ ಸೇರಿಸಿಕೊಂಡಿರುವರೆಂದು ಜನಗಳು ಮಾತನಾಡುತ್ತಿದ್ದ ವರ್ತಮಾನವು ನಿಜವೆಂದು ನಂಬಲು ಸಂದೇಹವೇನಿರುವದು? ಇಲ್ಲಿಗೆ ಬಂದಿರುವ ಮ|| ಸಬ್‌ಡಿವಿಜನ್ ಸಾಹೇಬರವರಾದ ಚನ್ನರಾಜ ಅರಸಿನವರು ಮತ್ತು ಸ್ಯಾ|| ಇ|| ಬಸವಾರಾಧ್ಯರು ಮ್ಯುನಿಸಿಪಾಲಿಟಿಯ ಹುಳುಕನ್ನು ಕಂಡುಹಿಡಿದರಲ್ಲಾ ಎಂದು ಮ್ಯುನಿಸಿಪಲ್ ಮುನಷಿ ವೆಂಕೋಬರಾಯರು ಅವರಿಗೆ ಅನುರಾಗಿಗಳಾಗಿರುವ ಕೆಲವು ಮೆಂಬರುಗಳನ್ನು ಪ್ರೋತ್ಸಾಹಿಸಿ ಸಾಹೇಬರವರಲ್ಲಿಯೂ ಇನ್‌ಸ್ಪೆಕ್ಟರವರಲ್ಲಿಯೂ ವೈಮನಸ್ಸುಂಟಾಗುವಂತೆ ಸಾಹೇಬರು ರೂಲ್ಸಿಗೆ ವಿರೋಧವಾಗಿ ನಡೆದಿರುತ್ತಾರೆ; ಇದನ್ನು ಕೌನ್ಸಿಲ್‌ನಲ್ಲಿ ಚರ್ಚಿಸಿರಿ ಎಂದು ರೂಲ್ಸು ಹೇಳಿಕೊಡುತ್ತಿರುವರೆಂದು ವರ್ತಮಾನವಿರುವದಲ್ಲದೆ ಜಾಗ್ರತೆ ಸಾಹೇಬರನ್ನೂ ಇನ್‌ಸ್ಪೆಕ್ಟರವರನ್ನೂ ಇಲ್ಲಿಂದ ಹೋಗುವಂತೆ ಮಾಡಲು ಆಲೋಚನೆ ನಡೆಸಿರುತ್ತಾರೆಂತಲೂ ವರ್ತಮಾನ ಕೇಳುತ್ತೇನೆ. ಈಗ ಬಂದಿರುವ ಮ|| ರಾ|| ಚನ್ನರಾಜ ಅರಸಿನವರನ್ನು ಮತ್ತು ಸ್ಯಾ|| ಇ|| ಬಸವಾರಾಧ್ಯರನ್ನು ಇಲ್ಲಿಗೆ ಖಾಯಂ ಮಾಡಿದಲ್ಲಿ ಮ್ಯುನಿಸಿಪಾಲಿಟಿಯ ಅಕ್ರಮಗಳೆಲ್ಲಾ ತೊಲಗಿ ಹಣವು ದುರ್ವ್ಯಯವಾಗದೆ ಇರುವದಕ್ಕೂ ಪ್ರಜೆಗಳ ಕಾರ್ಯಗಳು ಸುಲಲಿತವಾಗಿ ನಡೆದುಕೊಂಡು ಹೋಗುವದಕ್ಕೂ ಕಾರಣವಾಗುವದರಿಂದ ಮೇಲಧಿಕಾರಿಗಳು ಈ ವಿಷಯವನ್ನು ಚಿತ್ತಕ್ಕೆ ತಂದುಕೊಂಡು ಇವರುಗಳನ್ನು ಇಲ್ಲಿಗೆ ಖಾಯಂ ಮಾಡುವರೆಂದು ನಂಬುತ್ತೇನೆ. ಇಲ್ಲಿನ ಕೆಲವು ಮ್ಯುನಿಸಿಪಲ್ ಕೌನ್ಸಿಲರುಗಳು ಮತ್ತು ವೈಸ್ ಪ್ರೆಸಿಡೆಂಟರವರು ಸಹ ವೆಂಕೋಬರಾಯರ ಮಾತಿಗೆ ಕಿವಿಗೊಡದೆ ಇರಲೆಂದು ಪಾರ್ಥಿಸುತ್ತೇನೆ. ಇಲ್ಲಿಗೆ ಬಂದಿರುವ ಮ|| ರಾ|| ಅಮಲ್ದಾರ್ ಮಲ್ಲರಾಜಅರಸಿನವರು ಪ್ರಜೆಗಳ ಅಹವಾಲುಗಳನ್ನು ವಿಚಾರಿಸಿ ಜಾಗ್ರತೆ ಅವರ ಕೆಲಸಗಳನ್ನು ನೆರವೇರಿಸಿಕೊಡುವದಲ್ಲದೆ ಗ್ರಾಮಾಂತರದ ಜನಗಳಿಗೆ ಒಳ್ಳೇ ವರ್ತನದಿಂದ ನಡೆದುಕೊಳ್ಳುವಂತೆ ಹಿತಬೋಧನನ್ನು ಮಾಡುತ್ತಿರುವದನ್ನು ನೋಡಿ ಇಂಥಾ ದಣಿಗಳು ಸಿಕ್ಕಿರುವದು ನಮ್ಮ ಪುಣ್ಯವೆಂದು ಪ್ರಜೆಗಳು ಹೊಗಳುತ್ತಿರುವರು ಇದಲ್ಲವೆ ಪ್ರಜೆಗಳ ಪಾಲನೆಯು?

ಒಬ್ಬ ಯಥಾರ್ಥವಾದಿ.

ಕಲ್ಯಾಣ.

ನಿಜಾಮ್ ಇಲಾಖಾ ಗುಲ್ಬರ್ಗಾ ಜಿಲ್ಲಾ ಜಹಾಗೀರ ಕಲ್ಯಾಣದಲ್ಲಿರುವ ಕಟ್ಟಿ ಮಠದಲ್ಲಿ ಪದ್ಧತಿಯಂತೆ ಜ್ಞಾನವರ್ಧಕ ಸಂಘದವರು ಕಾರ್ತಿಕ ಬಹುಳ ಬಿದಿಗೆ ಸೋಮವಾರ ದಿವಸ ಒಂದು ಸಭೆಯನ್ನು ಏರ್ಪಡಿಸಿದ್ದರು ಆ ಸಭೆಯಲ್ಲಿ ವೇ॥ ಶಿವಲಿಂಗಯ್ಯಸ್ವಾಮಿ ಖಿಲೂತಿ ಮಠ ಇವರು ಲಿಂಗಪೂಜಾ ವಿಷಯದಲ್ಲಿ ಜ್ಞಾನಬೋಧಕವಾದ ಉಪನ್ಯಾಸವನ್ನು ಸರಸವಾಗಿ ಹೇಳಿ ಎಲ್ಲರ ಮನಸ್ಸನ್ನೂ ಸಂತೋಷಗೊಳಿಸಿದರು. ಮತ್ತು ವೇ॥ ಗುರುಬಸವಯ್ಯ ಕನಡೆಯವರು "ಗುರುಮಹಿಮೆ" ಎಂಬ ವಿಷಯದಲ್ಲಿ ಸರಸವಾಗಿ ಮಾತನಾಡಿದರು. ಬಸವತೀರ್ಥ ಸ್ವಾಮಿ ಮಠಪತಿಯವರು ಸಮಾಜಸುಧಾರಣೆಯ ವಿಷಯಕ್ಕೆ ಮತ್ತು ಶರಣಯ್ಯ ವಸ್ತ್ರದ ಇವರು ಆಚಾರ ವಿಷಯದಲ್ಲಿ ಮಾತನಾಡಿದರು. ಅನಂತರ ಸರ್ವ ಮಹನೀಯರಿಗೂ ಪುಷ್ಪಹಾರವನ್ನು ಸಮರ್ಪಿಸಿ, ಮಂಗಲಾಚರಣೆಯನ್ನು ತೀರಿಸಿ ಆ ಮೇಲೆ ತಮ್ಮತಮ್ಮೊಳಗೆ ಮಾತಾಡುವಾಗ್ಗೆ ಈ ನಮ್ಮ ಮಠದೇವರ ಗುಡ್ಡದಲ್ಲಿ ಒಂಭತ್ತು ವರ್ಷದಿಂದಲೂ ನಡೆದುಬಂದ ಬಸವಪುರಾಣದ ಸಮಾಪ್ತಿಯನ್ನು ಪೂರೈಸಿ ಗಣಾರಾಧನೆಯನ್ನು ಇದೇ ದುಂದುಭಿನಾಮಸಂವತ್ಸರ ಮಾರ್ಗಶೀರ್ಷ ವದ್ಯ ಪ್ರತಿಪದದಲ್ಲಿ ಮಹಾಪಾದಪೂಜೆ ಇದೇ ವದ್ಯ ಬಿದಿಗೆ ದಿವಸ ಗಣಾರಾಧನೆಯನ್ನೂ ಶ್ರೀಗುರು ಮುಧೋಳ ಮಹಾಸ್ವಾಮಿಗಳವರ ಆಜ್ಞಾನುಸಾರವಾಗಿ ನಡೆಯಿಸಲು ನಮ್ಮ ಭಕ್ತಮಂಡಳಿಯವರು ಒಪ್ಪಿ ಮಾಡತಕ್ಕ ಕರ್ತವ್ಯವನ್ನು ಈಗಿಂದೀಗಲೇ ಮಾಡಲುದ್ಯುಕ್ತರಾಗಿರುತಾರೆ. ಆದರೆ ಈ ತಿಂಗಳಲ್ಲಿಯೇ ನೇಮಿಸಿದ್ದಕ್ಕೆ ಅನೇಕ ಕಾರ್ಯಗಳಲ್ಲಿ ಲಂಪಟಿ ವಿರುವದರಿಂದಲೂ ಮತ್ತು ಈ ಸುಗ್ಗಿ ಕಾಲದಲ್ಲಿ ಮನುಷ್ಯರು ದೊರೆಯದೆ ಇರುವದೂ ಮತ್ತು ಈ ನಾಲ್ಕು ದಿವಸದಿಂದಲೂ ಮಳೆಯು ಬರುತ್ತಿರುವದರಿಂದಲೂ ಈ ಊರ ಪುಢಾರಿಗಳು ಅನೇಕ ಕಷ್ಟವನ್ನು ವಹಿಸಿ ಕೆಲಸವನ್ನು ಮಾಡುತ್ತಲಿದ್ದಾರೆ. ಇಂಥಾ ದೊಡ್ಡ ಕಾರ್ಯವು ನಿರ್ವಿಘ್ನತೆಯಿಂದ ಮುಗಿದು, ಈ ನಮ್ಮ ಕಲ್ಯಾಣ ಮತ್ತು ನಮ್ಮ ಪ್ರಾಂತಿಕ ವೀರಶೈವ ಮಹನೀಯರಿಗೆ ಶ್ರೀ ಗುರುಮೂರ್ತಿಯು ಕೀರ್ತಿಯನ್ನು ಇತ್ತು ಮನ್ನಿಸಲೆಂದು ಕೊಂಡಾಡಿ ಸರ್ವರೂ ತೆರಳಿದರು. ಓರ್ವ ಪುರವಾಸಿ.

ಜಿಲ್ಲಾ ರಾಯಿಚೂರು ತಾಲ್ಲೂಕು ಮಾಸ್ಕಿ ಕಲ್ಲೂರು ಸಂಸ್ಥಾನ ಮಠದ ಪರ್ವತ ದೇಶಿಕ ಸ್ವಾಮಿಗಳು ಶಿವಸಾಯುಜ್ಯವನ್ನೈದಿದ ವಾರ್ಷಿಕಸಮಾರಂಭವು.

ದುಂದುಭಿ ಸಂವತ್ಸರದ ಆಶ್ವಯುಜ ಬ॥ 15 ಸಾಯಂಕಾಲ 8 ಗಂಟೆಗೆ ವೀರಶೈವ ಕ್ಷೇತ್ರಾದಿ ಮುಗುಟ ಸಂಪತ್ತಿಗೆ ಸ್ಥಾನವೆನಿಸಿದ ಭಗವಾನ್ ಪರ್ವತಸ್ವಾಮಿಗಳ ಶಿವೈಕ್ಯರಾದುದನ್ನು ಲೋಕವು ಬಲ್ಲುದಷ್ಟೆ? ಆ ಆ ಮಠದ ಆಚಾರ್ಯರ ದೇಹಗಳು ಸಹ ಪೂಜ್ಯವೂ ಪುನೀತವೂ ಮೆರೆವಣಿಗೆ ಮುಂತಾದ ಸತ್ಕಾರ್ಯಗಳಿಗೆ ಅತೀವ ಶ್ರೇಷ್ಠವೂ ಎನ್ನುವ ಬಗ್ಗೆ ಸರ್ವಮತದವರ ಸಮಾಧಿಗಳೇ ಸಾಕ್ಷಿಗಳಾಗಿದ್ದಾವೆ. ಹೀಗಿದ್ದರೂ ನಮ್ಮ ಬ್ರಾಹ್ಮಣ ಬಂಧುಗಳು ಅಸ್ವಾದಾದಿಗಳು ಶಿವ ಎಂದು ಕರಿಯುವದಕ್ಕೆ ಶವವೆಂದು ಕಲ್ಪಿಸಿ, ಮೆರೆವಣಿಗೆಯು ಆಗಕೂಡದೆಂದು ನಿರೋಧಿಸಿದರು. ಆಗ ಮ॥ ಮಾನಸ್ವಿ ಅಬಕಾರಿ ಮುನ್ಸೆಜರ್ ವೀರನಗೌಡರು ಮ॥ ಸಾಹುಕಾರ ಸಬ್ಬಣ್ಣ ಸಾಹೇಬರೂ ಮೊಹದೀನ್ ಮಾಸ್ಟರರೂ ವಿತಂದು ಅತಿನೂತನವಾಗಿ ತಯಾರಿಸಲ್ಪಟ್ಟ ವಿಮಾನದಲ್ಲಿ ಸ್ವಾಮಿಗಳ ವಿಗ್ರಹವನ್ನಿರಿಸಿ ಛತ್ರ ಚಾಮರ ಧ್ವಜ ಪತಾಕ ಭಜನೆಕೂಟ ವಾದ್ಯವೈಭವದೊಂದಿಗೆ ಮೆರೆವಣಿಗೆಯನ್ನು ಸಾಗಿಸಿಕೊಂಡು ಬರುತ್ತಿರಲು ತತ್ಪುರಸ್ಥ ಕೆಲವರು ಮಾತ್ರ (ಗವ್) ಧಾತುವಿನ ಸಿದ್ಧಿಯನ್ನಧ್ಯಯನ ಮಾಡುತ್ತಿದ್ದರು. ಅಂತಪ್ಪ ಮೆರೆವಣಿಗೆಯನ್ನು ನಿರ್ಭಯ ನಿರಾತಂಕಗಳಿಂದ ಮಠಕ್ಕೆ ತಂದು ಹಚ್ಚಿ ವಿಧಿವಿಧಾನಗಳಿಂದ ಸಮಾಧಿಕರ್ಮವನ್ನು ಪೂರೈಸಿ ಗಣಾರಾಧನೆಯು ಜರಗಿಸಲ್ಪಟ್ಟಿತು. ಸ್ವಾಮಿಗಳು ಶಿವಸಾಯುಜ್ಯವನ್ನೈದಿದ ದಿನವೇ ಶುಭದಿನವೆಂತಲೂ, ಪುಣ್ಯೋತ್ತೇಜಕವೆಂತಲೂ ಅರ್ವಾಚೀನರು ಅಂಗೀಕಾರಪಟ್ಟಿದ್ದಾರೆ, ತನ್ಮೂಲಕ ನೃಪಶಾಲಿವಾಹನಶಕ 1844 ನೆಯ ವಿಶದ್ದುಂದುಭಿವತ್ಸರಾಶ್ವೀನ ಕೃ॥ 15 ಅಮಾವಾಸೆಯಲ್ಲಿ ಗದ್ದಿಗೆಯು ರಂಭಾಸ್ತಂಭಗಳಿಂದಲೂ, ತಳಿರು ತೋರಣಗಳಿಂದಲೂ, ಪುಷ್ಪಗುಚ್ಛಗಳಿಂದಲೂ ಮಲ್ಲಿಗೆಯ ಮಾಲಿಕೆಗಳಿಂದಲೂ, ಅಲಂಕರಿಸಲ್ಪಟ್ಟಿತ್ತು. ನೂತನವಾಗಿ ರಚಿಸಲ್ಪಟ್ಟಿದ್ದ ದಿವ್ಯಸಿಂಹಾಸನದಲ್ಲಿ ಸ್ವಾಮಿಗಳ ಭಾವಚಿತ್ರಪಟವನ್ನು ಇಟ್ಟು ಅಷ್ಟವಿಧಾರ್ಚನದಿಂದ ಅರ್ಚಿಸಿದರು. ಆ ಸಭೆಗೆ ಬ್ರಂ॥ ಶ್ರೀ॥ ವೇ॥ ಲಿಂಗಯ್ಯಪ್ಪನವರೂ ಮ॥ ರಾ॥ ಶ್ರೀ॥ ಚೌದ್ರಿ ಚನ್ನಪ್ಪನವರು ಮೊದಲಾದ ಎಲ್ಲ ಕೋಮುಗಳ ಸಭ್ಯಗೃಹಸ್ಥರೂ ಆಗಮಿಸಿದ್ದರು. ತತ್ಸಮಯ ಸಭೆಯು ತುಂಬಿ ಕಿಕ್ಕಿರಿಯುತ್ತಿತ್ತು. ಕೈ॥ ಶ್ರೀ॥ ಗಳವರ ಶಾಸನದ ಪ್ರಕಾರ 5-6 ವರ್ಷದಿಂದ ತಪ್ಪದೆ ನಡೆಸಿಕೊಂಡು ಬಂದಿರುವ ಭಜನೆಯ ಕೂಟದವರು ಆದಿಯಲ್ಲಿ ಭಜನೆಯನ್ನು ಮಾಡಿದರು. ತದನಂತರ ಸೂಗೂರುಶಾಸ್ತ್ರಿಗಳು ತ್ರಿಕರಣಶುದ್ಧಿ ಮೋಕ್ಷದಸಿದ್ಧಿ ಎನ್ನುವ ಬಗ್ಗೆ ಶಿವಕಥಾಶ್ರವಣವನ್ನು ಮಾಡಿಸಿದರು. ಆ ಬಳಿಕ ವಿದ್ಯಾವರ್ಧಕ ಸಂಘದ ಸೆಕ್ರೆಟರಿ ಮೊಹದೀನ್ ಮಾಸ್ಟರರು ಸ್ವಾಮಿಗಳು ಹೋದರೂ ಇದ್ದಂತೆ ಎನ್ನುವದರ ಮೇಲೂ ಬ್ರಂ॥ ಶ್ರೀ॥ ವೇ॥ ಚೋಳಯ್ಯಶಾಸ್ತ್ರಿಗಳು ವಿಷಯವಾಸನಾ ನಿರಸನದ ಮೇಲೂ ಸರಸವಾಣಿಯಿಂದ ಸೊಗಸಾಗಿ ಉಪನ್ಯಾಸವಮಾಡಿದರು. ಉಪಸಂಹಾರವು ಕೀರ್ತನಕಾರರಿಂದಲೇ ಗೈಯ್ಯಲ್ಪಟ್ಟಿತು. ಕಾರ್ತಿಕ ಶು॥ ದಲ್ಲಿ ಜಂಗಮಾರಾಧನೆಗೈದು ಛತ್ರ ಚಾಮರಾದಿ ಬಿರುದಾವಳಿ ಸಹಿತ ಬೀದಿಬೀದಿಗಳಲ್ಲಿ ಸ್ವಾಮಿಗಳ ಭಾವಚಿತ್ರಪಟವನ್ನು ಮೆರಸಿ ಸಮಾಧಿಯ ಮೇಲಿರಿಸಿ ಜಯಘೋಷಮಾಡಿ ಆಶೀರ್ವಾದ ತೆಗೆದುಕೊಂಡು ತಮ್ಮತಮ್ಮ ಕಾರ್ಯದತ್ತ ಗಮಿಸಿದರು. ಕಳೆದ ಆಶ್ವಯುಜ ಶುದ್ಧದಲ್ಲಿ ಜಿಲ್ಲಾ ಕಲೆಕ್ಟರ್ ಸಾಹೇಬರನ್ನು ಗೌರವಪುರಸ್ಸರವಾಗಿ ಗದ್ದಿಗೆಯ ಹತ್ತಿರ ಕರೆತಂದು ಸ್ವಾಮಿಗಳ ಸುಗುಣರಾಶಿಗಳನ್ನು ತಿಳುಹಿಸಿ ಶಿಥಿಲವಾದ ಕೋಟೆಯನ್ನೂ ಹಾಗೂ ಗದ್ದಿಗೆಯನ್ನೂ ಅತಿನೂತನವಾಗಿ ನಿರ್ಮಿಸುವುದಕ್ಕೆ ಹುಕುಂ ಕೊಡಬೇಕೆಂದು ಗ್ರಾಮಾಧಿಕಾರಿಗಳಾದಿಯಾದ ಪುರಪ್ರಮುಖರು ಅರಿಕೆ ಮಾಡಿಕೊಂಡರು. ಆಗ ಪ್ರಜಾಪ್ರೇಮ ಪಾಲನವೇ ಸ್ವಾರ್ಥವೆಂದೆಣಿಸುತ್ತಿರುವ ಜಿಲ್ಲಾ ಕಲೆಕ್ಟರ್‌ಸಾಹೇಬರು ಗದ್ದಿಗೆಯನ್ನೂ ಕೋಟೆಯ ಕಟ್ಟಡವನ್ನೂ ಕಟ್ಟುವದಕ್ಕೆ (ಹುಕುಂ) ಪಾಲಿಸಿದರು. ಹುಕುಂ ತಂದುಕೊಟ್ಟ ಸಾಹಸವೆಲ್ಲವೂ ವಿದ್ಯಾವರ್ಧಕ ಸಂಘದ ಸೆಕ್ರೆಟರಿಯವರನ್ನೇ ಅವಲಂಬಿಸಿತ್ತು. ಗದ್ದಿಗೆ ಕಟ್ಟಡದ ಧನವ್ಯಯದ ಬಗ್ಗೆ ನಮ್ಮ ಮ॥ ಕ್ಯಾದಿಗ್ಗೇರಿ ಭೀಮಣ್ಣಗೌಡರು ಸರ್ವರ ಸಮಕ್ಷಮ ಇದಕ್ಕಾಗುವ ಖರ್ಚೆಲ್ಲವನ್ನೂ ನಾನೇ ಕೊಡುತ್ತೇನೆಂದು ವಾಗ್ದಾನಮಾಡಿದರು. ಇವೆಲ್ಲ ಕೇಳಿದ ಸರ್ವರ ಜಿಹ್ವೆಯಲ್ಲಿ (ದಾತುಃಪರೀಕ್ಷಾ ದುರ್ಭಿಕ್ಷಕಾಲೆ) ಎಂಬ ವಾಕ್ಯವು ನಟಿಸುತ್ತಿತ್ತು. ಓರ್ವ ಪ್ರತ್ಯಕ್ಷದರ್ಶಿ.

ಮಂಚಿಕೊಪ್ಪ.

ಅಕ್ಟೋಬರ್ ತಾ॥ 10ನೆ ಮಂಗಳವಾರ ದಾವಣಗೆರೆ ಶ್ರೀ ಪ್ರಣವಸ್ವರೂಪಿಗಳಾದ ಮೃತ್ಯುಂಜಯ ಮಹಾಸ್ವಾಮಿಗಳವರು ಈ ಗ್ರಾಮಕ್ಕೆ ದಯಮಾಡಿಸಿದ್ದರು. ಅದೇ ದಿವಸ ಸಾಯಂಕಾಲ ಇಲ್ಲಿಯ ವೀರಶೈವರೆಲ್ಲರೂ ಶ್ರೀ ಮಠದಲ್ಲಿ ಸಭೆ ಸೇರಿ ಶ್ರೀಗಳವರ ಅಪ್ಪಣೆ ಪ್ರಕಾರ ವೀರಶೈವ ಸದ್ವರ್ತನ ಸಂಘವೊಂದನ್ನು ಸ್ಥಾಪಿಸಿ ಎಲ್ಲ ವೀರಶೈವರೂ ಪ್ರತಿಸೋಮ-

ವಾರ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಸೇರಿ ಭಜನೆ ಮೊದಲಾದ ಸದ್ವಿಷಯಗಳನ್ನು ನಡೆಸಬೇಕಾಗಿ ತೀರ್ಮಾನಿಸಿದ್ದಲ್ಲದೆ ಒಂದು ವಾಚನಾಲಯವನ್ನೂ ಸ್ಥಾಪಿಸಬೇಕೆಂದು ಠರಾವಾಯಿತು. ಇದಕ್ಕೆ ಇಲ್ಲಿಯ ಪಟೇಲ್ ವೀರಬಸಪ್ಪನವರು ಒಂದು ಸ್ಟಾರ್ ಪತ್ರಿಕೆಯನ್ನು ತರಿಸಿಕೊಡುವುದಾಗಿ ಒಪ್ಪಿರುತಾರೆ. ಮಾರನೇ ದಿವಸ ಶ್ರೀಗಳವರು ಸರ್ವ ಭಕ್ತಮಂಡಳಿಗೂ ಆಶೀರ್ವಾದವಿತ್ತು ಮುಂದಕ್ಕೆ ಬಿಜಯಂಗೈಸಿದರು. ಪ್ರತ್ಯಕ್ಷದರ್ಶಿ.

ಸಾಧುಸದ್ಧರ್ಮ ವೀರಶೈವ 3 ನೆ ಮಹಾಸಭೆಯು.

ತಾ॥ 10-11-22 ರಲ್ಲಿ ಚನ್ನಗಿರಿ ತಾಲ್ಲೂಕು ಕಕ್ಕೂರು ಗ್ರಾಮದಲ್ಲಿ ಸಾಧುಸದ್ಧರ್ಮ ವೀರಶೈವ 3ನೆ ಮಹಾಸಭೆಯು ನೆರವಿತ್ತು. ಶ್ರೀ ಸಿರಗಿರಿ ಸಂಸ್ಥಾನದ ಪಟ್ಟಾಧ್ಯಕ್ಷ ಶ್ರೀಗುರು ಶಾಂತರಾಜ ದೇಶಿಕೇಂದ್ರ ಮಹಾಸ್ವಾಮಿಗಳು ಅಗ್ರಪೀಠವನ್ನಲಂಕರಿಸಿದ್ದರು. ತುಮಕೂರು ತಾ॥ ಅಮಲ್ದಾರ್ ಮ॥ ಬಿ. ಲಿಂಗಯ್ಯನವರು ಪ್ರೆಸಿಡೆಂಟರಾಗಿ, ಶ್ರೀ ಕಲ್ಯಾಣದರಸು ಬಿಜ್ಜಳರಾಯನ ಮಂತ್ರಿಯಾದ ಬಸವರಸನ ಚರಿತ್ರೆಯನ್ನೂ ಆತನ ಬೋಧೆಯನ್ನೂ ವಿಸ್ತಾರವಾಗಿ ತಿಳಿಸಿ ವೀರಶೈವರಲ್ಲಿ ಇರಬೇಕಾದ ಭಕ್ತಿ, ಶಾಂತಿ, ಸನ್ಮಾರ್ಗಪ್ರವರ್ತನೆ ವೀರಶೈವರೆಲ್ಲರಲ್ಲಿಯೂ ಸಮಾನಭಾವಕ್ರಿಯಾ ಮತ್ತು ಹಿಂದುಳಿದವರ ಮೇಲೆ ಪ್ರೀತಿಯು ನಡೆನುಡಿಯ ಏಕೀಭಾವ ಮುಂತಾದ ವಿಚಾರದಲ್ಲಿ ಸರ್ವರಿಗೂ ಚೆನ್ನಾಗಿ ತಿಳಿಯುವಂತೆ ಉಪನ್ಯಾಸ ಮಾಡಿದರು. ಮ॥ ಯಂ. ಸಿ. ಗೌಡರು ಸಾಧುಮಂಡಲಿಯವರ ಕುಂದುಕೊರತೆಗಳನ್ನು ಹೇಗೆ ಹೋಗಲಾಡಿಸಿಕೊಳ್ಳಬೇಕೆಂಬುದನ್ನು ತಪ್ಪಿಲ್ಲಾಗಿ ತಿಳುಹಿಸಿದರು. ಮಿಸ್ಟರ್. ಚನ್ನಪ್ಪನವರು ಸಾಧುಮಂಡಲಿಯವರಲ್ಲಿ ಒಂದು ಸಂಘವನ್ನು ಏರ್ಪಡಿಸಿಕೊಂಡು ತನ್ಮೂಲಕ ಸಮಾಜ ಸುಧಾರಣೆಮಾಡಬೇಕೆಂದು ಉಪನ್ಯಾಸಮಾಡಿದರು. ಅಲ್ಲಿ ನೆರೆದಿದ್ದ ಮಂಡಲಿಯವರ ಅಭಿಪ್ರಾಯದಂತೆ ಒಂದು ಸಂಘ ಏರ್ಪಟ್ಟಿತು. ಆ ಸಂಘಕ್ಕೆ ಮೂಲಪೀಠಸ್ಥರಾದ ಶ್ರೀ ಶಿರಗಿರಿ ಸಂಸ್ಥಾನದ ಪಟ್ಟಾಧ್ಯಕ್ಷರು ಪೋಷಕರಾಗಿರಲು ಒಪ್ಪಿ, ಸಂಘದ ಫಂಡಿಗಾಗಿ ಒಂದುಸಾವಿರ ರೂ. ಗಳನ್ನು ಕೊಡುವುದಾಗಿ ವಾಗ್ದಾನಮಾಡಿದರು. ಸಂಘಕ್ಕೆ ಒಂದುನೂರ ನಾಲ್ವತ್ತೇಳು ಜನಗಳು ಮೆಂಬರಾಗಲು ಒಪ್ಪಿ ಆರುಸಾವಿರದ ನಾಲ್ಕುನೂರ ನಾಲ್ವತ್ತು ರೂಪಾಯಿಗಳು ಚಂದಾ ಹಾಕಿದರು. ಸದ್ಧರ್ಮ ಮತದಲ್ಲಿಯೂ ಮತ್ತು ಮತಾಚಾರದಲ್ಲಿಯೂ ಶ್ರದ್ಧಾ, ಭಕ್ತಿ, ಸನ್ಮಾರ್ಗಪ್ರವರ್ತನೆ, ಸ್ವಸಹಾಯ ಪರಸ್ಪರ ಮೈತ್ರಿ ಮಿತವ್ಯಯ ಮತತತ್ವ ವಿಚಾರ ಮತ್ತು ಪ್ರಚಾರ ವಿದ್ಯಾಭಿವೃದ್ಧಿ ಇವೇ ಮುಂತಾದ ಸಮಾಜಸುಧಾರಣೆಯನ್ನು ಮಾಡಿಕೊಳ್ಳಲು ಸಂಘದವರು ಉದ್ದೇಶಿಸಿರುತಾರೆ. ಈ ಸಂಘದ ಕಾರ್ಯಗಳು ನಿರ್ವಿಘ್ನವಾಗಿ ನಡೆದು ಈ ಜನಾಂಗದವರಿಗೆ ಮೇಲುಂಟಾಗಲೆಂದು ಕೋರುತ್ತೇವೆ.

ಈ ಸಭೆಗೆ ದಯಮಾಡಿಸಿ ಪ್ರೋತ್ಸಾಹವನ್ನು ಕೊಟ್ಟ ಚನ್ನಗಿರಿ ತಾ॥ ಅಮಲ್ದಾರ್ ಮ॥ ಬಿ. ಸುಬ್ರಹ್ಮಣ್ಯಶಾಸ್ತ್ರಿಗಳವರಿಗೆ ಈ ಸಂಘದವರು ವಂದನೆಯನ್ನು ಅರ್ಪಿಸಿರುತ್ತಾರೆ. ಶಿದ್ರಾಮಪ್ಪ, ಕಾಳ್ಯಾ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತಿಸುಖಿಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 1

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಹಸ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿಗೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಟ್ ಭಂಗಾರದ ಮುಳ್ಳುಳ್ಳ

18 ರಾಯಲ್ ಫೌಂಟೇನ್‌ಪೆನ್.

ಎಂಬ ಈ ಪೆನ್ನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿದಗೂ ಬರೆಯುವದು. 1ಕ್ಕೆ 1-10-0.

ಈ ಪೆನ್ನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಳು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ದಂಪತ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿಮಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿ ಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿ ಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿಮಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚೆನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
41 ಬಳ್ಳಾರಿ.

೧೯೨೨ ನೆಯ ಇಸವಿ ನವಂಬರ್ ತಾ॥ ೨೬ ರಿಂದ ೧೯೨೨ ನೆಯ ಡಿಶಂಬರ್ ತಾ॥ ೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮ ಸಂವತ್ಸರದ ಮಾರ್ಗಶಿರ ಶುದ್ಧ ಅಷ್ಟಮಿಯಿಂದ ಮಾರ್ಗಶಿರ ಶುದ್ಧ ತ್ರಯೋದಶಿವರಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ಮಾಸ
26	ಭಾನು	ಅಷ್ಟ	53-33	ಧನಿ	3-1	11
27	ಸೋಮ	ನವ	58-13	ಶತ	8-10	12
28	ಮಂಗಳ	ದಶ	60	ಪುಭಾ	14-5	13
29	ಬುಧ	ದಶ	3-50	ಉಭಾ	20-37	14
30	[1]ಗುರು	ಏಕಾ	9-18	ರೇವ	27-8	15
1	[2]ಶುಕ್ರ	ದ್ವಾದ	14-31	ಅಶ್ವಿ	33-20	16
2	ಶನಿ	ತ್ರಯೋ	19-3	ಭರ	38-54	17

(1) ಸರ್ವತ್ರೈಕಾದಶಿ, ಮಾರ್ಗಶಿರ ಲಕ್ಷ್ಮೀವ್ರತಂ. (2) ಪ್ರದೋಷ, ಕೈಶಿಕದ್ವಾದಶಿ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತೇಲಿಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೫) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಡಿಶಂಬರ್ ತಾರೀಖು ೩ ನೆಯ ಭಾನುವಾರ (ಸಂಚಿಕೆ ೪೯

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ.. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ—ಶಿವನ ಪಂಚವಿಂಶತಿ ಲೀಲೆಗಳು—ಅನೇಕ ಶಿವಶರಣರ ಚರಿತ್ರೆಗಳು—ಷಟ್ಸ್ಥಲ, ಅಷ್ಟಾವರಣ, ಕಶಿಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೫-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೫-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೫-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ॥ ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿವೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 0—12—0.

ಈದೇ ಒಳ್ಳೇ ಸಮಯ ! ಈಗಲೇ ತರಿಸಿಕೊಳ್ಳಿ !
ಚಿನ್ನದಂತಾ ಈ ಸಮಯವನ್ನು ಕಳಕೊಳ್ಳಬೇಡಿ. ಮಾರಾಟಕ್ಕೆ ಉಳಿದಿರುವ ಸರಕು ಬಹಳ ಸ್ವಲ್ಪ. ಬೆಲೆ 4 ರೂಪಾಯಿ ಮಾತ್ರ.

37 ಜರ್ಮನ್ ವಿದ್ಯುತ್ ಬೀಸಣಿಗೆ.

ಪರಮಾಶ್ಚರ್ಯಕರವಾದ ಯಂತ್ರಗಳು.

ಇದು ಪ್ರತಿಮನೆಯಲ್ಲೂ ಇರಬೇಕಾದದ್ದು. ಈ ವಿಚಿತ್ರವಾದ ಯಂತ್ರವು ತಾನಾಗಿಯೇ ಬೀಸುತ್ತಾ ತಂಪನ್ನು ಸುರಿಸುವುದು. ಬೇಗ ತರಿಸಿಕೊಳ್ಳಿ.

ನಮ್ಮ ಕ್ಯಾಟಲಾಗನ್ನು ಬೇಡುವವರಿಗೆ ಉಚಿತವಾಗಿ ಕಳುಹಿಸುತ್ತೇವೆ.
ವಿಳಾಸ—ಯಸ್. ಆರ್. ಕ್ರಿಷ್ಣ ಅಂಡ್ ಕೊ,
1 ತಂಬುನಾಯಕನಬೀದಿ, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

19

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.
ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0
„ „ ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆನ್ಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

46 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ರಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.



ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಚರೇಟ್ ರೋಸ್, ಪೆರಲ್ ವೈಟ್, ಫ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ ೫೦ ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,
19 ನಂ. 3, ಇರುಳಪ್ಪನ ಬೀದಿ, ಮದ್ರಾಸ

ವೀರಶೈವ

ಶಿವಪೂಜಾವಿಧಿಃ

ಎಂಬ ಪುಸ್ತಕವು ವೈದಿಕಮಂತ್ರಪುರಸ್ಸರವಾದ ಸಕಲೋಪಚಾರಗಳಿಂದಲೂ ನಮಕ-ಚಮಕ-ಪುರುಷಸೂಕ್ತ-ಶಿವಸಹಸ್ರನಾಮ—ಗಣಸಹಸ್ರನಾಮ—ಬಸವಸಹಸ್ರನಾಮ-ಶಿವಕವಚ-ಮಾರ್ಕಂಡೇಯಸ್ತೋತ್ರ-ಲಿಂಗಾಷ್ಟಕ-ನಮಸ್ಕೃತಿಪ್ರಶಂಸಾ-ಶಿವಾಷ್ಟಕ-ಬಿಲ್ವಾಷ್ಟೋತ್ತರಗಳಿಂದ ಕೂಡಿ ವೀರಶೈವರಿಗತ್ಯುಪಯುಕ್ತವಾಗಿ ಕ್ರೌನ್ ಅಷ್ಟಪತ್ರದಾಕೃತಿಯಲ್ಲಿ ಸ್ವಚ್ಛವಾದ ಕಾಗದದ ಮೇಲೆ ಸುಂದರವಾದ ಅಕ್ಷರಗಳಿಂದ ಅಂದವಾಗಿ ಮುದ್ರಣಮಾಡಲ್ಪಟ್ಟು ಕಿತ್ತಾನಾರು ಬೈಂಡಿನಿಂದ ಮಾರಾಟಕ್ಕೆ ಸಿದ್ಧವಾಗಿದೆ. ಇದರ ಬೆಲೆ ೧೨ ಆಣೆ. ವಿ.ಪಿ ಮೂಲಕ ಪೋಸ್ಟೇಜು ಸೇರಿ ೧ ರೂಪಾಯಿ ೨ ಆಣೆ.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಡಿಸೆಂಬರ್ ತಾ|| ೩ನೆಯ ಭಾನುವಾರ.

ಭಾರತೀಯ ವೈದ್ಯೋದ್ಧಾರ.

ಒಂದಾನೊಂದು ಕಾಲದಲ್ಲಿ ವಿದೇಶೀಯರಿಗೆಲ್ಲಾ ವಿಸ್ಮಯವನ್ನೆಸಗಿ ಚಿತ್ತಾಕರ್ಷಣೆಯನ್ನು ಮಾಡಿ ಪ್ರಖ್ಯಾತಿಗೊಂಡಿದ್ದ ಭಾರತೀಯಾಯುರ್ವೇದವು ಭರತಖಂಡವು ವಿದೇಶೀಯಾಧಿಪತ್ಯಕ್ಕೆ ಒಳಪಟ್ಟನಂತರ ತನ್ನ ವ್ಯಾಪಕತೆಯನ್ನು ಕಳೆದುಕೊಂಡು ತೇಜೋಹೀನವಾಗಿರುವ ಸಂಗತಿಯು ಗೊತ್ತೇ ಇದೆ. ಆದರೆ ಇತ್ತೀಚೆಗೆ ಭಾರತೀಯ ದೇಶಾಭಿಮಾನಿಗಳ ಮನಸ್ಸಿನಲ್ಲಿ ಇದರ ಪುನರುದ್ಧಾರ ಜ್ಞಾನವು ಸ್ವಲ್ಪಸ್ವಲ್ಪವಾಗಿ ತಲೆಯೆತ್ತುತ್ತಿರುವುದು ದೇಶದ ಭಾಗ್ಯೋದಯ ಚಿಹ್ನವಾಗಿದೆ. ಆಯುರ್ವೇದವೈದ್ಯೋದ್ಧಾರ ಪ್ರಯತ್ನದಲ್ಲಿ ಭರತಖಂಡದ ಎಲ್ಲ ಪ್ರಾಂತಗಳಿಗಿಂತಲೂ ಬಂಗಾಳವು ಮುಂದಾಗಿದೆ. ಅಲ್ಲಿ ಪಾಶ್ಚಾತ್ಯ ಪೌರ್ವಾತ್ಯ ವೈದುಷ್ಯಸಂಪನ್ನರಾದನೇಕರು ಆಯುರ್ವೇದವನ್ನು ಸಾಂಗವಾಗಿ ಅಧ್ಯಯನಮಾಡಿ ಕವಿರಾಜರೆಂಬ ಪ್ರಶಸ್ತಿಗಳನ್ನು ಪಡೆದು ಜಾಯಿಂಟ್‌ಸ್ಟಾಕ್ ಕಂಪೆನಿಗಳ ಮೂಲಕವೂ, ಸ್ವತಂತ್ರ ಪ್ರತಿಷ್ಠಾಪನೆಗಳಿಂದಲೂ, ಮೂಲಿಕಾ ಪರಿಶೋಧನ, ಔಷಧ ನಿರ್ಮಾಣ, ವೈದ್ಯಗ್ರಂಥ ಪ್ರಸರಣ, ವೈದ್ಯಶಾಸ್ತ್ರಬೋಧನ, ಚಿಕಿತ್ಸಾಕ್ರಮಸಾಧನ, ಔಷಧ ವ್ಯಾಪಾರ-ಮೊದಲಾದ ರೂಪಗಳಿಂದೆಲ್ಲಾ ಆಯುರ್ವೇದೋದ್ಧಾರಕ್ಕೆ ವಿಪುಲಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅದಕ್ಕೆ ಹಿಂದಾಗಿ ಮಹಾರಾಷ್ಟ್ರ ಆಂಧ್ರ ದ್ರವಿಡಾದಿ ರಾಷ್ಟ್ರಗಳೂ ಅಷ್ಟಿಷ್ಟು ಪ್ರಯತ್ನಗಳನ್ನು ಮಾಡುತ್ತಿವೆ. ಮದ್ರಾಸಿನಲ್ಲಿ ಡಾಕ್ಟರ್ ಅಚಂಟ ಲಕ್ಷ್ಮೀಪತಿ ಬಿ.ಎ., ಎಂ.ಬಿ.ಸಿ.ಎಂ., ಯವರ ಪ್ರಯತ್ನ ವಿಶೇಷದಿಂದ ಮೊನ್ನೆ ವರ್ಷದಲ್ಲಿ ಆಂಧ್ರಾಯುರ್ವೇದೌಷಧಾಲಯವು ಜಾಯಿಂಟ್ ಸ್ಟಾಕ್ ಕಂಪೆನಿಯ ಪದ್ಧತಿಯ ಮೇರೆಗೆ ಸ್ಥಾಪಿಸಲ್ಪಟ್ಟಿದೆ. ಅವರು ಯಂತ್ರಗಳ ಮೂಲಕವಾಗಿ ಪ್ರಶಸ್ತವಾದ ಔಷಧಗಳನ್ನು ನಿರ್ಮಿಸಿ ಮಾರಾಟಮಾಡುತ್ತಿದ್ದಾರೆ. ಸಾಮಾನ್ಯ ಪ್ರಜೆಗಳೇ ಅಲ್ಲದೆ ಅನೇಕ ಜಿಲ್ಲಾ ತಾಲ್ಲೂಕು ಬೋರ್ಡುಗಳವರೆಲ್ಲಾ ಅಲ್ಲಿಯ ಔಷಧಗಳನ್ನು ತರಿಸಿಕೊಂಡು ಪ್ರೋತ್ಸಾಹಿಸುತ್ತಿದ್ದಾರೆ. ಈ ಸಂಘದವರು ಮೂಲಿಕೆಗಳನ್ನು ಸ್ವತಃ ಬೆಳೆಯಿಸುವುದಲ್ಲದೆ ಗೋದಾವರಿ, ಕೃಷ್ಣಾ, ಮಲಬಾರು ಮೊದಲಾದ ಜಿಲ್ಲೆಗಳ ಕಾಡುಗಳಿಂದ ತಮಗೆ ಬೇಕಾದ ಅನೇಕ ಮೂಲಿಕೆಗಳನ್ನು ತರಿಸುವುದಕ್ಕೆ ಏರ್ಪಡಿಸಿಕೊಂಡಿದ್ದಾರೆ. ಔಷಧಗಳ ಮಾರಾಟದಿಂದಲೇ ಈ ಸಂಘಕ್ಕೆ ಕಳೆದ ವರ್ಷ ೨೦ ಸಾವಿರ ರೂ.ಗಳ ಮೇಲೆಯೇ ವರಮಾನವಾಗಿದೆ. ವೆಚ್ಚವನ್ನೆಲ್ಲಾ ಕಳೆದು ಭಾಗಸ್ಥರಿಗೆ ಮೊದಲನೆ ವರ್ಷದಲ್ಲೇ ಸೇಕಡಾ ೩ ರೂ.ನಂತೆ ಲಾಭವನ್ನು ಹಂಚಿದ್ದಾರೆ. ಚರಕಸಂಹಿತೆ ಮೊದಲಾದ ಸಂಸ್ಕೃತ ವೈದ್ಯಗ್ರಂಥಗಳನ್ನು ಆಂಧ್ರ ಟೀಕೆಯೊಡನೆ ಪ್ರಕಟಿಸಲು ಏರ್ಪಡಿಸಿದ್ದಾರೆ. ಇದೇ ಅಲ್ಲದೆ ಗತಿಸಿದ ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲುಯವರ ಅಸಾಧಾರಣ ಪ್ರಯತ್ನಗಳಿಂದ ಸ್ಥಾಪಿಸಲ್ಪಟ್ಟಿರುವ ಆಯುರ್ವೇದ ಮಹಾಪಾಠಶಾಲೆಯು ಚೆನ್ನಾಗಿ ಅಲ್ಲಿ ಸಾಗುತ್ತಿದೆ. ಕಳೆದ ವರ್ಷ ರಾಜಮಹೇಂದ್ರದಲ್ಲಿ ಅಖಿಲ ಭಾರತೀಯಾಯುರ್ವೇದ ವೈದ್ಯ ಸಮ್ಮೇಳನವನ್ನೂ ವಸ್ತುಪ್ರದರ್ಶನವನ್ನೂ ಕೂಡ ಆಂಧ್ರದೇಶೀಯರು ನೆರವೇರಿಸಿದರು.

ಶಾಸನ ಸಭೆಗಳಲ್ಲೂ ಪತ್ರಿಕಾಮೂಲಕವಾಗಿಯೂ ದೇಶಾಭಿಮಾನಿಗಳು ಮಾಡುತ್ತ ಬಂದ ಒತ್ತರದ ಮೇಲೆ ಆಂಗ್ಲ ಪ್ರಭುತ್ವದವರು ಆಯುರ್ವೇದೋದ್ಧಾರದ ಪ್ರಯತ್ನವೆಂದು ಆಳುವವರ ಬಾಯಿಗೆ ಜೇನನ್ನೊರಸಿದಂತೆ ಅಲ್ಪಸ್ವಲ್ಪ ಆರಂಭ ಕಾರ್ಯಗಳನ್ನು ನಡೆಯಿಸುತ್ತಿರುವರು. ಗೊಂಡಾಲ ಸಂಸ್ಥಾನದ ಶ್ರೀ ಭಗವತ್ ಸಿಹ್ಮಜಿ ಬಹದ್ದೂರ್ ಜಿ.ಸಿ.ಐ.ಇ., ಎಂ.ಡಿ., ಎಲ್‌ಎಲ್.ಡಿ., ಡಿ.ಸಿ.ಎಲ್., ಎಫ್.ಆರ್.ಸಿ.ಎಸ್., ಬಿ.ಯು., ಠಾಕೂರ್ ಸಾಹೇಬ್‌ರವರು ಆಯುರ್ವೇದೋದ್ಧಾರಕ್ಕಾಗಿ ಉತ್ಸಾಹಗೊಂಡಿರುವ ಭಾರತೀಯ ಪ್ರಭುಗಳಲ್ಲಿ ಒಬ್ಬರಾಗಿರುತ್ತಾರೆ. ಇವರು ತಮ್ಮ ಸಂಸ್ಥಾನದಲ್ಲಿ ಆಯುರ್ವೇದ ವೈದ್ಯಶಾಸ್ತ್ರೋತ್ತೇಜನಾರ್ಥವಾಗಿ ಏರ್ಪಡಿಸಿರುವ ಒಂದು ಬಹುಮಾನದ ಫಂಡಿಗೆ ಸುಲಭವಾಗಿ 1 ಲಕ್ಷ ರೂ.ಗಳನ್ನು ಕೂಡಿಸಲು ಅನುಕೂಲಿಸುವಂತೆ ಲಾಟರಿ ಮಾಡಲು ಅಪ್ಪಣೆಕೊಟ್ಟಿರುವರು. ಈ ಲಾಟರಿಯು ೨ ಲಕ್ಷ ರೂಪಾಯಿಗಳದು. ಪ್ರತಿ ಟಿಕೇಟೂ ಒಂದೊಂದು ರೂಪಾಯಿ ಬೆಲೆಗೆ ಮಾರಲ್ಪಡುವುದು. ೨ ಸಾವಿರ ಟಿಕೇಟುಗಳು ಮಾರಾಟಗೊಂಡು ೨ ಲಕ್ಷ ರೂ.ಗಳು ಕೂಡಿದರೆ ಅದರಲ್ಲಿ ಅರ್ಧಭಾಗವು (1 ಲಕ್ಷ ರೂಪಾಯಿಗಳು) 20 ಸಹಸ್ರ ಮೊದಲುಗೊಂಡು ೨ ರೂ.ಗಳ ವರೆಗಣ 20 ಸಹಸ್ರ ಬಹುಮಾನಗಳಾಗಿ ಹಂಚಲ್ಪಡುವುವು. ಇದೇ ಡಿಶಂಬರ್ ತಾ|| 24 ರಲ್ಲಿ ಲಾಟರಿ ಚೀಟಿಗಳನ್ನು ಕಲಸಿ ಎತ್ತುವರು. ಅಷ್ಟರೊಳಗೆ ೨ ಲಕ್ಷ ರೂ.ನ ಟಿಕೇಟುಗಳೂ ಮಾರಾಟವಾಗದಿದ್ದರೆ, ಮಾರಾಟವಾಗಿ ಬಂದಿದ್ದಷ್ಟು ಹಣದಲ್ಲಿ ಅರ್ಧಭಾಗವು ಬಹುಮಾನಕ್ಕೂ, ಅರ್ಧಭಾಗವು ಫಂಡಿಗೂ ಹಂಚಲ್ಪಡುವುದು. ಫಂಡಿನ ಸಾಹಾಯ್ಯದಿಂದ ಆಯುರ್ವೇದೋದ್ಧಾರಕ್ಕಾಗಿ ಮಾಡಲ್ಪಡುವ ಕಾರ್ಯಗಳೇನೆಂದರೆ—ಬಡವರಿಗೆ ಔಷಧಗಳನ್ನು ಉಚಿತವಾಗಿ ಕೊಡುವುದು, ಆಯುರ್ವೇದ ಪಾಠಶಾಲೆಯನ್ನೇರ್ಪಡಿಸುವುದು, ಲೋಹ ಮೂಲಿಕಾದಿಗಳ ಪರಿಶೋಧನೆ, ಶಾಶ್ವತವಾದ ಆಯುರ್ವೇದ ವಸ್ತುಪ್ರದರ್ಶನವನ್ನೇರ್ಪಡಿಸುವುದು, ಆಯುರ್ವೇದ ಗ್ರಂಥಗಳನ್ನು ಪ್ರಕಟಿಸುವುದು, ಗೋರಕ್ಷಣೆ—ಈ ರೂಪವಾದ ಕಾರ್ಯಗಳಿಗೆ ಸರ್ಕಾರಕ್ಕೆ ಭಾರವಾಗದಂತೆಯೂ ಚಂದಾರೂಪವಾಗಿ ಪ್ರಜೆಗಳನ್ನು ಪೀಡಿಸಿ ಹಣವನ್ನು ಕೂಡಿಸುವ ಕಷ್ಟವಿಲ್ಲದಂತೆಯೂ, ಧನಸಾಹಾಯ್ಯವಾಗುವ ರೀತಿಯಲ್ಲಿ ಗೊಂಡಾಲ್ ಸಂಸ್ಥಾನಾಧೀಶರು ಲಾಟರಿಗೆ ಅಪ್ಪಣೆಕೊಟ್ಟುದು ಒಂದು ಉಚಿತವಾದ ಔದಾರ್ಯವೇ ಆಗಿರುತ್ತದೆ.

ಇಷ್ಟೆಲ್ಲಾ ಆಯುರ್ವೇದೋದ್ಧಾರ ಪ್ರಯತ್ನಗಳು ನಮ್ಮ ನೆರೆಯ ನಾಡುಗಳಲ್ಲಿ ನಡೆಯುತ್ತಿರುವಾಗ ನಮ್ಮ ದೇಶದಲ್ಲಿ ಜರುಗುವುದೇನು? ನಮ್ಮ ಪ್ರಭುಗಳಿಗೇನೋ ಆಯುರ್ವೇದೋದ್ಧಾರದಲ್ಲಿ ನಿರತಿಶಯವಾದ ಅಭಿಮಾನವಿದೆ. ಎಷ್ಟೋ ಮಂದಿ ಪ್ರಜೆಗಳೂ ಆದರಲ್ಲಿನ ತಮ್ಮ ಅಭಿಮಾನವನ್ನು ವಾಙ್ಮಾತ್ರದಲ್ಲಿ ತೋರಿಸುತ್ತಿದ್ದಾರೆ. ಬ್ರಿಟಿಷ್ ಇಂಡ್ಯಾದ ಪ್ರಜೆಗಳಂತೆ ಸ್ವಪ್ರಯತ್ನದಿಂದ ತಮ್ಮಭಿಮಾನವನ್ನು ಕ್ರಿಯಾರೂಪಕ್ಕೆ ತರಲು ಯತ್ನಿಸತಕ್ಕವರಿಲ್ಲ. ಯಾವಾಗಲೂ ತಾಯಿಯ ತೊಡೆಯ ಮೇಲೆಯೇ ಇರುವ ಎಳೆಮಕ್ಕಳು ಮಾತುಮಾತಿಗೂ ತಾಯಿಯ ಸ್ತನ್ಯಪಾನಕ್ಕಾಗಿ ರೋದಿಸುವಂತೆ ಪ್ರತಿಯೊಂದು ಸೌಕರ್ಯ ಕಲ್ಪನೆಗೂ ಪ್ರಭುತ್ವದವರಲ್ಲಿ ಮೊರೆಯಿಟ್ಟುಕೊಳ್ಳುವುದರಲ್ಲಿ ಇವರು ಗಟ್ಟಿಗರು. ಈ ಪರಿಸ್ಥಿತಿಯನ್ನು ತಿಳಿದುಕೊಂಡು ಪ್ರಭುತ್ವದವರೇ ಆಯುರ್ವೇದ ವೈದ್ಯೋದ್ಧಾರಕ್ಕೆಂದು ಒಂದು ಕಾಲೇಜನ್ನೂ ವೈದ್ಯಾಲಯವೊಂದನ್ನೂ ರಾಜಧಾನಿಯಲ್ಲಿ ಏರ್ಪಡಿಸಿ ಎಷ್ಟೋ ಕಾಲವಾಯಿತು. ಆದರೇನು? ಈ ಪ್ರತಿಷ್ಠಾಪನೆಗಳು ತಕ್ಕಷ್ಟು ಫಲವನ್ನು ಕೊಡುವ ಮಾರ್ಗದಲ್ಲಿಲ್ಲ. ಹೊರಗಣವರಿಗೆ "ದೂರತಃಪರ್ವತೋರಮ್ಯಃ" ಎನ್ನುವಂತೆ ಈ ಕಾಲೇಜಿನ ಸ್ಥಿತಿಯಿದೆಯೇ ಹೊರತು ಒಳಗೆ ಹುರುಳಿಲ್ಲ. ಕಾಲೇಜಿಗೂ ವೈದ್ಯಾಲಯಕ್ಕೂ ಉಚಿತಸ್ಥಲವೇ ಇಲ್ಲದೆ ಮಾರಕಟ್ಟಿನ ಮೂಲೆಯಲ್ಲಿರುವುವು. ಅವುಗಳಿಗೆ ಈಗತಾನೇ ಒಂದು ಉತ್ತಮಸ್ಥಲವನ್ನು ಕೊಡುವ ಏರ್ಪಾಟಾಗಿದೆಯೆಂದು ಕೇಳುತ್ತೇವೆ. ಅಲ್ಲದೆ ಅಲ್ಲಿ ಅಭ್ಯಾಸಮಾಡುವ ಸ್ವದೇಶೀಯ ವಿದ್ಯಾರ್ಥಿಗಳೇ ಕಡಿಮೆ. ಅವರಿಗೆ ಉತ್ಸಾಹಕರವಾದ ವಿದ್ಯಾರ್ಥಿವೇತನಗಳಾಗಲೀ ಪರೀಕ್ಷೆಯಲ್ಲುತ್ತೀರ್ಣರಾದನಂತರ ಉದ್ಯೋಗವು ದೊರೆಯುವುದೆಂಬ ಬರವಸೆಯೇ ಆಗಲೀ ಇರುವುದಿಲ್ಲ; ಶಕ್ತರಾದ ಬೋಧಕರೂ ಇಲ್ಲ. ವೈದ್ಯಾಲಯದಲ್ಲಿ ಉತ್ತಮೌಷಧಗಳನ್ನು ನಿರ್ಮಿಸಲಿಕ್ಕೆ ತಕ್ಕಷ್ಟು ಧನಸಾಹಾಯ್ಯವೂ ಕೊಡಲ್ಪಡುತ್ತಲ್ಲಿಲ್ಲ. ಹೀಗಾಗಿ ಅವೆರಡೂ ನಾಮಮಾತ್ರಕ್ಕಿವೆ. ಈ ಲೋಪಗಳನ್ನೆಲ್ಲಾ ನಿವಾರಿಸದಿದ್ದರೆ ಇವುಗಳಿಂದ ಯಾವ ಲಾಭವೂ ಆಗುವುದಿಲ್ಲ.

ಪಾಶ್ಚಾತ್ಯವೈದ್ಯವು ಹಿಂದೂ ಯುನಾನಿ ವೈದ್ಯಗಳಿಗಿಂತಲೂ ಬಹು ಧನವ್ಯಯಸಾಧ್ಯವೆಂಬುದು ಗೊತ್ತೇ ಇದೆ. ತತ್ರಾಪಿ ಯುದ್ಧಕಾಲದಿಂದೀಚೆಗೆ ಪಾಶ್ಚಾತ್ಯೌಷಧಗಳ ಬೆಲೆಯು ವಿಪರೀತವಾಗಿ ಹೆಚ್ಚಿದೆ. ಜಂತು ನಿವಾರಕವಾದ ಔಷಧಕ್ಕೆ ಈಗ ಪೌನಿಗೆ 700-800 ರೂ. ಬೆಲೆಯಾಗಿದೆಯಂತೆ. ನಮ್ಮಲ್ಲಿ 1 ಕಾಸು ವೆಚ್ಚದ ಬೀಜಗಳಿಂದಲೂ ಗಿಡಮೂಲಿಕೆಗಳಿಂದಲೂ ಆ ಔಷಧವನ್ನು ನಿರ್ಮಿಸಿಕೊಳ್ಳಬಲ್ಲರು. ಆದರೂ ಪಾಶ್ಚಾತ್ಯ ಪ್ರಭುಗಳೂ ಪಾಶ್ಚಾತ್ಯವೈದ್ಯರೂ ತಮ್ಮ ವೈದ್ಯಕ್ಕೆ ತೋರಿಸುವಷ್ಟು ಗೌರವವನ್ನೂ ಅಭಿಮಾನವನ್ನೂ ಈ ನಮ್ಮ ವೈದ್ಯಕ್ಕೆ ತೋರಿಸುವುದಿಲ್ಲ. ಇದಕ್ಕೆ ಅವರ ಸ್ವಾಭಿಮಾನ ಆಯುರ್ವೇದ ಮಹತ್ವಾನಭಿಜ್ಞತೆಗಳೇ ಕಾರಣ. ಪಾಶ್ಚಾತ್ಯರು ಒಂದು ವೇಳೆ ಹಾಗೆ ಮಾಡುವುದು ಯುಕ್ತವೆಂದೇ ಭಾವಿಸೋಣ. ಪಾಶ್ಚಾತ್ಯ ವೈದ್ಯವನ್ನು ಕಲಿತುಬಂದ ಮಾತ್ರಕ್ಕೇ ಸ್ವದೇಶ ವೈದ್ಯವನ್ನು ಧಿಕ್ಕರಿಸಿ ಅಲ್ಲಗಳೆಯುವ ನಮ್ಮ ಸ್ವದೇಶೀಯ ವೈದ್ಯಶಿಖಾಮಣಿಗಳ ಪ್ರವರ್ತನವನ್ನೇನೆಂದು ಹೇಳೋಣ? ಅನ್ಯದೇಶೀಯರಿಗಿರುವಂಥ ಸ್ವಾಭಿಮಾನವು ಇವರಿಗೇಕಿಲ್ಲ? ಶಾರೀರಕ ಶಾಸ್ತ್ರಾದಿಗಳನ್ನೂ ಶಸ್ತ್ರಚಿಕಿತ್ಸಾಕ್ರಮವನ್ನೂ ಚೆನ್ನಾಗಿ ಅಭ್ಯಾಸಮಾಡಿಬಂದ ನಮ್ಮ ಯುವಕರುಗಳು ಆರು ತಿಂಗಳೋ ವರ್ಷಕಾಲವೋ ಆಯುರ್ವೇದ ಮರ್ಮಗಳನ್ನಷ್ಟು ತಿಳಿದುಕೊಂಡು ಎರಡು ವೈದ್ಯಕ್ರಮಗಳನ್ನೂ ಅನುಷ್ಠಾನದಲ್ಲಿಟ್ಟುಕೊಂಡರೆ ಎಷ್ಟೋ ಪ್ರಯೋಜನವಾಗುವುದು. ಆ ವಿಷಯವು ಹಾಗಿರಲಿ.

ಮುಖ್ಯವಾಗಿ ನಮ್ಮ ದೇಶದಲ್ಲಿ ಆಯುರ್ವೇದ ಕಾಲೇಜಿನಿಂದ ಪ್ರಯೋಜನವಾಗಬೇಕಾಗಿದ್ದರೆ ಸ್ವತಂತ್ರವಾದ ಭವನವೊಂದನ್ನು ನಿರ್ಮಿಸಿಕೊಟ್ಟು ಪ್ರಯೋಗಸಹಿತವಾಗಿ ಅಭ್ಯಾಸ ನಡೆಯಲಿಕ್ಕೆ ಅನುಕೂಲವಾಗುವಂತೆ ಮಾಡಬೇಕು. ಮೂಲಿಕಾದಿಗಳನ್ನು ಅದರ ಆವರಣದಲ್ಲೋ ಬೇರೆಕಡೆಯಲ್ಲೋ ಬೆಳೆದುಕೊಳ್ಳಲು ಸ್ಥಲವಾಗಬೇಕು. ಪೂರ್ವಪಶ್ಚಿಮ ವೈದ್ಯಗಳೆರಡರಲ್ಲೂ ಸಮರ್ಥರಾದ ಬಂಗಾಳದ ಕವಿರಾಜರಂಥವರು ಬೋಧಕರಾಗಬೇಕು. ಹಿಂದೆ ನಮ್ಮಲ್ಲಿ ಫೈನಾನ್ಷಿಯಲ್ ಸೆಕ್ರಟರಿಯವರಾಗಿದ್ದ ಜಿ. ಎಸ್. ಚಕ್ರವರ್ತಿಯವರು ಸರ್ಕಾರಕ್ಕೆ ಸೂಚನೆಕೊಟ್ಟಿದ್ದಂತೆ ಈ ಪಾಠಶಾಲೆಯಲ್ಲಿ ಓದಿ ಉತ್ತೀರ್ಣರಾದವರನ್ನು ಹೋಬಳಿಗಳಲ್ಲಿ ವೈದ್ಯರನ್ನಾಗಿಯೂ ಸಂಚಾರವೈದ್ಯರನ್ನಾಗಿಯೂ ನಿಯಮಿಸುವ ಏರ್ಪಾಟಾಗಬೇಕು. ಕೊಡಲ್ಪಡುವ ವಿದ್ಯಾರ್ಥಿವೇತನಗಳ ಸಂಖ್ಯೆಯು ಕಡಿಮೆಯಾದರೂ ಮೊತ್ತವು ಹೆಚ್ಚಾಗಿರಬೇಕು. ಇಷ್ಟನ್ನಾದರೂ ಮಾಡದಿದ್ದರೆ ನಿರರ್ಥಕವಾದ ಈಗಣ ಪ್ರತಿಷ್ಠಾಪನೆಯನ್ನು ನಿಲ್ಲಿಸಿಬಿಡುವುದೇ ಮೇಲು.

ಪ್ರಭುತ್ವದವರ ಕೈಯನ್ನು ಕಾಯದೆ ಪ್ರಜೆಗಳೇ ಜಾಯಿಂಟ್ ಸ್ಟಾಕ್ ಕಂಪೆನಿಯ ಮೂಲಕ ಆಯುರ್ವೇದೋದ್ಧಾರ ಸಂಘವನ್ನೇರ್ಪಡಿಸಿಕೊಂಡು ಮದ್ರಾಸಿನವರಂತೆ ಔಷಧನಿರ್ಮಾಣ, ಮಾರಾಟ, ಗ್ರಂಥಪ್ರಸಾರ ಮೊದಲಾದುವುಗಳನ್ನು ಮಾಡಿದರೂ ತಮಗೆ ಎಷ್ಟೋ ಲಾಭವಾಗುವುದು; ಆಯುರ್ವೇದ ಪ್ರಸಾರಕ್ಕೆ ಎಷ್ಟೋ ಪ್ರೋತ್ಸಾಹವಾಗುವುದು. ಶಾಸ್ತ್ರಾಭ್ಯಾಸಾದಿಗಳೊಂದೂ ಇಲ್ಲದ ಎಷ್ಟೋಜನ ಮೋಸಗಾರರು ಡಾಕ್ಟರು ಪಂಡಿತರು ಎಂದು ಹೆಸರಿಟ್ಟುಕೊಂಡು ವಾರ್ತಾಪತ್ರಿಕೆಗಳಲ್ಲಿ ಔಷಧಗಳನ್ನು ಪ್ರಕಟಿಸಿಕೊಂಡು ಪ್ರಜೆಗಳಿಗೆ ಅಹಿತವನ್ನೇ ಮಾಡುತ್ತಿದ್ದರೂ ತಾವುಮಾತ್ರ ಧನಸಂಪಾದನೆ ಮಾಡಿಕೊಳ್ಳುತ್ತಿರುವರು. ಪರಿಶುದ್ಧವಾದ ನಂಬುಗೆಯೊದಗುವ ಔಷಧಗಳನ್ನು ಶಕ್ತರಾದ ವೈದ್ಯಶಿಖಾಮಣಿಗಳ ಸಾಹಾಯ್ಯದಿಂದ ನಿರ್ಮಿಸಿ ಸುಲಭವಾದ ಬೆಲೆಗೆ ಸಂಘದವರು ಮಾರಾಟ ಮಾಡುತ್ತಾ ಬಂದರೆ ಸ್ವಲ್ಪಕಾಲದೊಳಗೇ ಎಷ್ಟೋ ಲಾಭವನ್ನು ಪಡೆಯಬಹುದಲ್ಲದೆ ಪ್ರಜೆಗಳು ಮೋಸಕ್ಕೊಳಗಾಗದೆ ನಿಜವಾದ ಔಷಧದ ಸಾಹಾಯ್ಯವನ್ನು ಪಡೆದುಕೊಳ್ಳುವಂತೆ ಮಾಡುವುದರ ಮೂಲಕ ಉಪಕರಿಸಿದಂತೆಯೂ ಆಗುವುದು. ನಮ್ಮ ಶ್ರೀಮನ್ಮಹಾರಾಜರೂ ಅವರ ಪ್ರಜಾಕೋಟಿಯ ಅಭಿಮಾನಶಾಲಿಗಳೂ ಈ ಅವಶ್ಯಕವಾದ ವಿಷಯಕ್ಕೆ ಗಮನಕೊಡುವರೆಂದು ನಂಬುತ್ತೇವೆ.

THE SENATE MEETING.

A number of interesting propositions were discussed at the last Senate Meeting held in Mysore. Two of them which were brought by Mr. M. Venkatakrishnayya were for the establishment of Faculties of Law and of Agriculture. As regards the Law Faculty the proposal which was adopted unanimously refers to the appointment of a Committee to go into the question thoroughly and to make a recommendation to the Senate as to how far the Law College would be self-supporting-a condition which we may be rest assured the Committee would not find it in the least difficult to get over. We fear that the patriotism of the Senators to their University determined this decision more than either their interest in the State or their insight into the needs of the people. The only strong ground urged in favour of it was by Mr. Venkatakrishnayya when he said it was necessary to create openings for the Mysore graduates. Apart from this, it is doubtful if the proposition has anything else to commend it. In the first place, it is far from probable that the institution can be made self-supporting. It would require a fairly good initial expenditure. The examples of Bombay, Madras and Travancore are altogether misleading. The number of students in Bombay or Madras is usually over 600, and since the Travancore Law College is affiliated to the Madras University and it provides the additional advantage of giving terms to failed F.L. students for B.L. course, large numbers of students flock to that college. Here in this small University where the outturn of all graduates, Science, Arts, Engineering and Commerce put together do not count much over a hundred, the number that would join Law would indeed be very small compared to the other Colleges, while the number of professors cannot be less if any efficient instruction is to be guaranteed. When they talk of Law College being made self-supporting they evidently wish to adopt the Bombay method, where they indent upon the services of practising lawyers. We do not want to say at present what efficiency we could maintain in Mysore if we follow their example. Apart from these things, the Senators should have thought of the advantages of study-particularly of law-in Bombay or in Madras. A man who has had his education in Bombay or Madras and has partaken of the intellectual life there does stand in a more advantageous position than one who has had all his education in Mysore only and has not gone out—with due respect of course to local talent. If a Law College is to be established here the one chance of students going out of this rather cramped and conservative atmosphere will be removed, and it would considerably deter the progress of the State. We do not see any reason why because we have a University we must have all the Faculties. The English Universities form a good example. Not every one of them has a Law Faculty. On the other land, there is one central institution, or group of institutions, in London–the four Inns–which train up the youth of Great Britain for the Bar. Any extra expenditure involved in going to Madras or Bombay would only be well-spent and it would be more than amply made up in their later life. The University, we believe has its own part to play in the development of the State. It would be better if it turns its attention to branches of knowledge which would show a way to production and not to consumption, for, after all lawyers do not bring in any wealth into the country, nor is there such dire need of greater numbers of them. We should not forget also that the more we try to become independent of other outside educational institutions, and the more we try to circumscribe the sources of knowledge to what is obtainable within the State—for in effect the present tendency will be so—the more we depart from the true ideal of a University.

As for a College of Agriculture, the proposition in favour of which they were able to get through by a narrow majority of 12 against 11, we can only say that those who supported did not know what they were doing. As Dr. Coleman very rightly observed the need of the State was not so much a College but vernacular agricultural schools in large numbers so that the real agricultural classes might be trained in improved methods. Besides, the sponsors of the proposition probably are not aware of the cost of such an institution. If any of them had visited either Coimbatore, Poona or Pusa they would have known it. If there is such a need for trained hands in agriculture would it not be cheaper to send some young men to any of these colleges, and cannot a better training be secured in them than in any that we might establish within our limited means here. This is exactly what we stated with regard to the retention of the costly Engineering College, where though the output of graduates is large, the training has necessarily to be less efficient than in Madras or Poona, with the additional burden of incurring heavy expenditure and of not being able to provide places for the passed candidates. Fortunately for us there is the Government which should sanction these proposals and we may safely and confidently leave it to them to decide the need for these additional Faculties.

ಅತಿಪ್ರಸಂಗ.

ಬೆಂಗಳೂರಿನ ಮ|| ಆರ್. ಗೋಪಾಲಸ್ವಾಮಯ್ಯರು ಪರಛಿದ್ರಾನ್ವೇಷಣದಲ್ಲಿ ಸಂಪೂರ್ಣ ತತ್ಪರರು. ತಮ್ಮ ಸಮಾಜದಲ್ಲಿರುವ ಪರಸ್ಸಹಸ್ರ ಲೋಪಗಳನ್ನು ಸರಿಪಡಿಸುವ ಪ್ರಯತ್ನಕ್ಕೆ ಲೇಶಸಾಹಸವೂ ಇವರಿಂದಾಗದಿದ್ದರೂ ಪರಸಮಾಜಗಳ ಪ್ರಯತ್ನ ವಿಶೇಷದಲ್ಲಿ ಛಿದ್ರಾನ್ವೇಷಣಮಾಡಿ ಲೋಪಾರೋಪಣೆಗೊಳಿಸುವಲ್ಲಿ ಇವರ ಸಾಹಸವೇನೂ ಕಡಮೆಯಾಗಿಲ್ಲ. ಹಿಂದೆ ಒಕ್ಕಲಿಗರ ಸಂಘದವರ ಫಂಡಿನ ವಿಷಯದಲ್ಲಿ ಏನೇನೋ ಆಕ್ಷೇಪಕರವಾದ ಲೇಖನವನ್ನು ಸಂಪದಭ್ಯುದಯ ಪತ್ರಿಕೆಗೆ ಬರೆದು, ಫಂಡಿನ ಲೆಕ್ಕಪಕ್ಕಗಳ ವಿಷಯದಲ್ಲಿ ಒಕ್ಕಲಿಗ ಜನವರ್ಗದವರೆಲ್ಲಾ ಸಂಶಯಗೊಳ್ಳುವಂತೆ ಮಾಡಲು ಸಾಹಸಪಟ್ಟರು. ಈಗ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸ್ಥಿತಿಗತಿಯ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಹಾಕಿ ಕಳೆದ ತಾ|| ೨೦ನೆ ಸಂಪದಭ್ಯುದಯ ಸಂಚಿಕೆಗೆ ಒಂದು ಲೇಖನವನ್ನು ಬರೆದಿದ್ದಾರೆ. ಇವರು ದುರುದ್ದೇಶವಿಲ್ಲದೆ ಸದುದ್ದೇಶದಿಂದ ಈ ಪ್ರಶ್ನೆಗಳನ್ನು ಹಾಕಿದವರಾಗಿದ್ದಲ್ಲಿ ತಮ್ಮ ಊರಿನಲ್ಲೇ ಇರುವ ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಪ್ರೆಸಿಡೆಂಟರ ಬಳಿಗೆ ಹೋಗಿ ಕೇಳಬೇಕಾಗಿದ್ದ ವಿಷಯಗಳನ್ನೆಲ್ಲಾ ಸುಲಭವಾಗಿ ತಿಳಿದುಕೊಳ್ಳಬಹುದಾಗಿದ್ದಿತು. ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಯಾವಯಾವ ಸರ್ಕಾರಿಯ ಮತ್ತು ಪ್ರಜಾಸ್ವಾತಂತ್ರ್ಯದ ಪ್ರತಿಷ್ಠಾಪನೆಗಳಲ್ಲಿ ಯಾಜಮಾನ್ಯವನ್ನಿಟ್ಟುಕೊಂಡಿದ್ದಾರೋ ಅವುಗಳೆಲ್ಲದರ ನೇರ್ಪಿನ ಮತ್ತು ನಿಸ್ಪೃಹವಾದ ಕಾರ್ಯಕ್ರಮದ ಪರಿಸ್ಥಿತಿಯ ಸಂಬಂಧದಲ್ಲಿ ದುರಭಿಪ್ರಾಯಪಟ್ಟವರು ಯಾರೂ ಇಲ್ಲ. ವೀರಶೈವ ಸಮಾಜದಲ್ಲಂತೂ ಅವರು ದೇವದೂತರಂತೆ ಗಣಿಸಲ್ಪಟ್ಟಿರುತ್ತಾರೆ. ಹೀಗಿರುವಾಗ ಮ|| ಅಯ್ಯರು ಯೇನಕೇನ ಪ್ರಕಾರೇಣ ಪ್ರಸಿದ್ಧರಾಗುವುದಕ್ಕೆ ಪತ್ರಿಕೆಗಳಲ್ಲಿ ತಮಗೆ ಸಂಬಂಧವಿಲ್ಲದ ವಿಷಯಗಳಿಗೆಲ್ಲಾ ಪ್ರವೇಶಿಸಿ ಅತಿಪ್ರಸಂಗಮಾಡುವುದು ಪರಿಹಾಸಾಸ್ಪದವಲ್ಲದೆ ಮತ್ತೇನೂ ಇಲ್ಲ.

ಪರೋಪದೇಶಪಾಂಡಿತ್ಯ.

ತುಮಕೂರಿನ ಮ|| ಅಡ್ವೋಕೇಟ್ ಕೆ. ರಂಗಯ್ಯಂಗಾರರು ಕನ್ನಡದಲ್ಲೂ ಮೈಸೂರು ಕ್ರಾನಿಕಲ್ ಎಂಬ ವಾರಪತ್ರಿಕೆಯನ್ನು ಪ್ರಕಟಿಸಲು ಕಳೆದ ತಿಂಗಳಿಂದ ಆರಂಭಿಸಿದ್ದಾರೆ. ಇದರ ವಿಷಯವನ್ನು ಕುರಿತು ಮೈಸೂರು ಸಂಪದಭ್ಯುದಯ ಪತ್ರಿಕಾಕರ್ತರು ತಮ್ಮ ಅಭಿಪ್ರಾಯವನ್ನು ನವಂಬರ್ ತಾ|| ೩೦ನೆ ಸಂಚಿಕೆಯಲ್ಲಿ ಬರೆಯುವಾಗ್ಗೆ "ಭೇದಭಾವಗಳಿಗೋಸ್ಕರವೂ ಜಾತಿದ್ವೇಷ, ಮತದ್ವೇಷ, ಕೋಮಿನ ದ್ವೇಷಗಳನ್ನು ಹುಟ್ಟಿಸಿ ಜನಗಳು ಪರಸ್ಪರದ್ವೇಷದಿಂದ ಅನರ್ಥಕ್ಕೆ ಗುರಿಯಾಗುವಂತೆ ಮಾಡುವುದಕ್ಕೋಸ್ಕರವೂ ಸಾಧಕವಾದ ಪತ್ರಿಕೆಗಳನ್ನು ನಡೆಸುವುದು ಮಹಾಪಾತಕ" ಎಂದು ಹೇಳಿರುತ್ತಾರೆ. ಈ ನಿಸ್ಪೃಹವಾದ ಮಾತಿಗೆ ನಾವು ಸಂತೋಷಪಡುತ್ತೇವೆ. ಆದರೆ ಯಾರ ಲೇಖನಿಯಿಂದ ಈ ಮಾತುಗಳು ಬರೆಯಲ್ಪಟ್ಟಿರುವುವೋ ಅವರು ತಮ್ಮ ಕಾರ್ಯದಲ್ಲಿ ಇದು ಎಷ್ಟುಮಟ್ಟಿಗೆ ಅನುಷ್ಠಾನದಲ್ಲಿರುವುದೆಂಬುದನ್ನು ಪರ್ಯಾಲೋಚಿಸದೆ ಇರುವುದು ವಿಚಿತ್ರವೆಂದು ಆ ಬರೆವಣಿಗೆಯನ್ನು ನೋಡಿದವರನೇಕರು ನಗುತ್ತಾರೆ. ಇದರಲ್ಲಿ ವಿಚಿತ್ರವೇನೂ ನಮಗೆ ತೋರುವುದಿಲ್ಲ. ಏಕೆಂದರೆ ತಮ್ಮ ಬೆನ್ನು ತಮಗೆ ಕಾಣದಂತೆ ದೇವರೇ ಮಾಡಿಟ್ಟಿದ್ದಾನೆ.

ಇದೇ ಲೇಖನದಲ್ಲಿ ಅವರು ಮತ್ತೊಂದು ಅದ್ಭುತವಾದ ವಾಕ್ಯವನ್ನು ಬರೆದಿರುತ್ತಾರೆ. ಅದೇನೆಂದರೆ—ನಮ್ಮ ಶ್ರೀಮನ್ಮಹಾರಾಜರು ಸತ್ವವಂತರಾದ ಪತ್ರಿಕಾಕರ್ತರ ಸಹಕಾರಕ್ಕೆ ಪಾತ್ರರಲ್ಲ" ಎಂದು ಹೇಳಿರುತ್ತಾರೆ. ಇಂಥ ಬರೆವಣಿಗೆಯನ್ನು ನಮ್ಮ ಧರ್ಮಪ್ರಭುಗಳ ವಿಷಯದಲ್ಲಿ ಬರೆಯುವಾಗ್ಗೆ ಇವರ ಬುದ್ಧಿಯೇನಾಗಿದ್ದಿತೆಂಬುದು ತಿಳಿಯಲಿಲ್ಲ. ತಾವು ನಿರಂಕುಶ ಲೇಖನಗಳನ್ನು ಬರೆದು ಶ್ರೀಮನ್ಮಹಾರಾಜರ ಪ್ರಭುತ್ವದವರಿಂದ 3 ವೇಳೆ ಎಚ್ಚರಿಕೆ ಕೊಡಿಸಿಕೊಂಡ ಕಾರಣದಿಂದ ಹುಟ್ಟಿದ ಆಗ್ರಹದ ಮೂಲಕ ಹೀಗೆ ಬರೆದರೋ ಪ್ರಭುಗಳಿಂದ ಆಗುತ್ತಿದ್ದ ಸಾಹಾಯ್ಯವನ್ನು ತಮ್ಮ ಚರ್ಯೆಯಿಂದ ತಪ್ಪಿಸಿಕೊಂಡ ಮನಃಕಾಲುಷ್ಯದಿಂದ ಹೀಗೆ ಬರೆದರೋ ಗೊತ್ತಾಗಲಿಲ್ಲ. ಅರುಳು ಮರುಳುತನದ ವಯಸ್ಸಿನಲ್ಲಿ ಪತ್ರಿಕಾ ಕಾರ್ಯನಿರ್ವಾಹಮಾಡಲಿಕ್ಕೆ ಅವಕಾಶಪಡೆದಿರುವವರಿಂದ ಇಂಥ ಪ್ರಮಾದಗಳು ಸಂಭವಿಸುವುದು ಅರಿದಲ್ಲ.

ಸ್ವದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರ ದೇಹಸ್ಥಿತಿಯು ಬಹಳ ಮಟ್ಟಿಗೆ ಗುಣವಾಗಿದೆಯೆಂದು ಕೇಳಿ ಸಂತೋಷಿಸುತ್ತೇವೆ.

ಮಿ|| ಸಿ. ಎಂ. ರಾಮರಾಯರು ಚೆನ್ನಪಟ್ಟಣದ ಮ್ಯುನಿಸಿಪಾಲಿಟಿಯ ವೈಸ್‌ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮದ್ರಾಸ್ ಗೌರ್ನರ್ ದಂಪತಿಗಳು ಕ್ರಿಸ್ತಮಸ್ ರಜಾಕಾಲವನ್ನು ಕಾರಾಪುರದಲ್ಲಿ ಕಳೆಯುವುದಾಗಿ ಈ ತಾ|| 24 ಕ್ಕೆ ರಾಜಧಾನಿಗೆ ಬರುವವರಾಗಿರುವರು.

ಇದುವರೆಗೆ ರಾಜಧಾನಿಯಿಂದ ಮಡಕೇರಿಗೆ ಮಧ್ಯಾಹ್ನ 12½ ಗಂಟೆಗೆ ಹೊರಡುತ್ತಿದ್ದ ಅಂಚೆಯ ಮೋಟಾರುಬಂಡಿಯು ನಿನ್ನೆಯಿಂದ ಬೆಳಗಿನ 6-20 ಗಂಟೆಗೇ ಹೊರಡುತ್ತಲಿದೆ.

ಸರ್‌ದಾರ್ ಎಂ. ಕಾಂತರಾಜ ಅರಸಿನವರು ಕಳೆದ ತಾ|| ೨೯ ರಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡಿದರು, ಮತ್ತು ಅಲ್ಲಿಂದ ಕಲಕತ್ತಾಕ್ಕೆ ಹೋಗಿ ಬರುವುದಾಗಿ ತಿಳಿಯ ಬರುತ್ತದೆ.

ವಿದ್ಯಾಭ್ಯಾಸದ ಕಂದಾಯವನ್ನು ರೆವಿನ್ಯು ಕಂದಾಯದ ಮೇಲೆ ರೂಪಾಯಿಗೆ 6 ಕಾಸಿನಂತೆ ವಿಧಿಸಿ ಎತ್ತಿದ ಹಣವನ್ನು ಆ ಡಿಸ್ಟ್ರಿಕ್ಟಿನ ವಿದ್ಯಾಭಿವೃದ್ಧಿಗಾಗಿಯೇ ವಿನಿಯೋಗಿಸಲು ಹಾಸನ ಡಿಸ್ಟ್ರಿಕ್ಟಿಗೆ ಸರ್ಕಾರಿ ಅಪ್ಪಣೆಯಾಗಿದೆ.

ರಾಜಧಾನಿಯ ವೆಸ್ಲಿಯನ್ ಮಿಷನ್ ಆಸ್ಪತ್ರೆಯ ಬಳಿಯ ಪೋಸ್ಟ್ ಆಫೀಸಿನಲ್ಲಿ ಮಾಸ್ಟರಾಗಿದ್ದಾತನು ಕೆಲ ಹಣವನ್ನು ದುರುಪಯೋಗಪಡಿಸಿಕೊಂಡನೆಂಬುದೇ ಮೊದಲಾದ ತಪ್ಪುಗಳಿಂದ ಇಲಾಖೆಯವರು ಆತನನ್ನು ಪೊಲೀಸರ ವಶಕ್ಕೆ ಒಪ್ಪಿಸಿರುವರು.

ಮೈಸೂರು ಕ್ರಾನಿಕಲ್ ಎಂಬ ಕನ್ನಡದ ವಾರಪತ್ರಿಕೆಯ ಪ್ರಥಮ ಸಂಚಿಕೆಯನ್ನು ನಾವು ವಿಶ್ವಾಸದಿಂದ ಸ್ವೀಕರಿಸಿದೆವು. ಇದರ ಭಾಷಾಶೈಲಿ ಮುದ್ರಣ ವಿಷಯಪ್ರತಿಪಾದನ ರೀತಿಗಳೆಲ್ಲಾ ಬೊಂಬಾಯಿ ಕರ್ನಾಟಕದ ವೃತ್ತಪತ್ರಗಳ ರೀತಿಯನ್ನು ಅನುಸರಿಸಿದೆ.

ಮೈಸೂರಿನ ಶ್ರೀ ಚಾಮುಂಡೇಶ್ವರೀ ಕರ್ನಾಟಕ ನಾಟಕ ಸಂಘದವರು ಮದ್ರಾಸಿನಲ್ಲಿ ತಮ್ಮ ಪ್ರಯೋಗಗಳನ್ನು ಅಭಿನಯಿಸುತ್ತಿರುವರು. ಅಲ್ಲಿಯ ಜನರಿಗೆ ಬಹಳ ಚಿತ್ತಾಕರ್ಷಕವಾಗಿರುವುದೆಂದೂ ದಿನ 1 ಕ್ಕೆ ಟಿಕೇಟು ಮಾರಾಟದಿಂದ ಸಾವಿರ ರೂ.ಗಳ ಮೇಲೆಯೇ ಹುಟ್ಟುವಳಿಯಾಗುತ್ತಿರುವುದೆಂದೂ ಕೇಳುತ್ತೇವೆ.

ಮೈಸೂರು ತಾ|| ಬುಗುತಗಹಳ್ಳಿಯಲ್ಲಿ ಹೊಲದೊಳಗಿದ್ದ ಒಬ್ಬ ರೈತನನ್ನು ರಾತ್ರಿಹೊತ್ತು ಕೊಂದುಹಾಕಿದರೆಂಬ ಕಾರಣದಿಂದ ಮಾದಯ್ಯ, ತೋಟದಯ್ಯ, ಬಸವಯ್ಯ ಎಂಬ ಮೂವರು ಸೆಷನ್ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಆದರೆ ಅಪರಾಧಿಗಳ ಮೇಲೆ ತಪ್ಪಿನ ರುಜುವಾತು ಸರಿಯಾಗಿಲ್ಲವೆಂದು ಹೇಳಿ ಪಬ್ಲಿಕ್ ಪ್ರಾಸಿಕ್ಯೂಟರು ತಾವೇ ಕೇಸನ್ನು ಹಿಂದೆಗೆದುಕೊಂಡುದರಿಂದ ಆ ಮೂವರೂ ಬಿಡಲ್ಪಟ್ಟರು.

ಪೂರ್ವಸಮುದ್ರತೀರದಲ್ಲಿ 15-20 ದಿನಗಳಿಂದ ಆಗಾಗ್ಗೆ ಬಿರುಗಾಳಿ ಮಿಂಚುಗುಡುಗುಗಳಿಂದ ಕೂಡಿದ ಮಳೆಗಳಾಗಿ ಸಮುದ್ರವು ಉಕ್ಕಿ ಊರುಕೇರಿಗಳ ಮೇಲೆ ನೀರು ಹಾಯ್ದು ಪೈರುಪಚ್ಚೆಗಳಿಗೂ ಮರಗಳಿಗೂ ಬಹಳ ನಷ್ಟವಾಗಿರುವುದಾಗಿ ವರ್ತಮಾನ ಬರುತ್ತಿದೆ. ಅದರ ಸೆಲೆಯಿಂದ ನಮ್ಮ ಪ್ರಾಂತದಲ್ಲೂ ಕಳೆದವಾರದಿಂದ ಮೋಡವಾಡುತ್ತ ಮಳೆಯು ಬೀಳುತ್ತಿದೆ. ಇದರಿಂದ ವ್ಯವಸಾಯಕ್ಕೆ ನಷ್ಟವೇ ಹೊರತು ಲಾಭವಿಲ್ಲ.

ಮಂಡ್ಯದಲ್ಲಿ ಆದಿದ್ರಾವಿಡಾಭಿವೃದ್ಧಿ ಸಂಘದ ಶಾಖಾಸಂಘವೊಂದು ಕಳೆದ ತಿಂಗಳು ತಾ|| ೧೯ ರಿಂದ ಆರಂಭಿಸಲ್ಪಟ್ಟಿತು. ಬೆಂಗಳೂರಿನಿಂದ ಮ|| ಸಿ. ಮುರಿಗೇಶಂ ಪಿಳ್ಳೆಯವರು ಬಂದಿದ್ದು ಸಭಾಧ್ಯಕ್ಷತೆಯನ್ನು ವಹಿಸಿ, ಸುತ್ತುಮುತ್ತಣಿಂದ ಬಂದಿದ್ದ ತಮ್ಮ ಜಾತಿಯ ಜನರಿಗೆಲ್ಲಾ ತಮ್ಮ ವರ್ಗದ ಅಭಿವೃದ್ಧಿ ವಿಷಯವಾಗಿ ಬುದ್ಧಿ ಹೇಳಿ ಪ್ರೋತ್ಸಾಹಿಸಿದರು. ಉದ್ದೇಶಕ್ಕೆ ಅನುಗುಣವಾದ ಕೆಲ ನಿರ್ಧಾರಗಳು ಮಾಡಲ್ಪಟ್ಟುವು.

ಬೆಂಗಳೂರು ಪಟ್ಟಣದಲ್ಲಿ ಬಾಲವಿದ್ಯಾಭ್ಯಾಸಕ್ಕಾಗಿ ಮುಟ್ಟುವ ವೆಚ್ಚದಲ್ಲಿ ½ ಭಾಗವನ್ನು ಎಂದರೆ 1 ಲಕ್ಷ ರೂ.ಗಳಿಗೆ ಮೀರದಷ್ಟನ್ನು ಮುಂದಣ ಸರ್ಕಾರಿ ವರ್ಷದಾರಭ್ಯ 5 ವರ್ಷಗಳವರೆಗೂ ಪ್ರತಿ ಸಂವತ್ಸರದಲ್ಲೂ ಅಲ್ಲಿಯ ಮ್ಯುನ್ಸಿಪಾಲಿಟಿಯಿಂದ ಕೊಡುವಂತೆ ತೀರ್ಮಾನಿಸಿದ್ದಾರೆ. ಮುಂದಣ ಜುಲೈ ತಿಂಗಳಾರಭ್ಯ ಅಲ್ಲಿಯ ಪ್ರಾಥಮಿಕ ವಿದ್ಯಾಶಾಲೆಗಳ ಮೇಲ್ವಿಚಾರಣೆಯೆಲ್ಲಾ ಮ್ಯು|| ಕೌನ್ಸಿಲಿನ ಕ್ಕೆ ಸೇರಬೇಕೆಂದೂ ನಿರ್ಣಯಿಸಿದ್ದಾರೆ.

ಕಳೆದ ತಿಂಗಳಲ್ಲಿ ನಡೆದ ವಿಶ್ವವಿದ್ಯಾಲಯದ ಸೆನೇಟ್ ಮೀಟಿಂಗಿನಲ್ಲಿ ವ್ಯವಸಾಯದ ಕಾಲೇಜನ್ನು ಏರ್ಪಡಿಸಬೇಕೆಂಬ ವಿಷಯವು ಚರ್ಚಿತವಾಗಿ ಒಂದೇ ಒಂದು ಓಟಿನ ಹೆಚ್ಚಿಗೆಯಿಂದ ಒಪ್ಪಿತವಾಗಿದೆ. ಆದರೆ ಈ ಭಾಗಕ್ಕೆ ಹಣವನ್ನು ವೆಚ್ಚಮಾಡಿ ಸರ್ಕಾರಿ ಉದ್ಯೋಗಕ್ಕೇ ಬಾಯ್ದೆರೆದುಕೊಳ್ಳುವ ವಿದ್ಯಾವಂತರ ಸಂಖ್ಯೆಯನ್ನು ಹೆಚ್ಚಿಸುವುದು ಅವಶ್ಯಕವೋ ಗ್ರಾಮಾಂತರದ ಜನರ ಮಕ್ಕಳಲ್ಲಿ ವ್ಯವಸಾಯ ಶಿಕ್ಷಣವನ್ನು ಸಮಗ್ರವಾಗಿ ಕೊಡುವುದಕ್ಕೆ ಧನವ್ಯಯಮಾಡುವುದು ಉತ್ತಮವೋ ಎಂಬುದನ್ನು ಪ್ರಭುತ್ವದವರು ಪರ್ಯಾಲೋಚಿಸಬೇಕು.

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ ಸಿ. ಐ., ಯವರು ರಾಜಧಾನಿಯ ಗೌರವಸ್ಥ ಸ್ತ್ರೀಯರ ವಿಹಾರಾರ್ಥವಾಗಿ "ವಾಣೀವಿಲಾಸ ಲೇಡೀಸ್ ಕ್ಲಬ್" ಎಂಬ ಅಭಿದಾನದಿಂದ ಒಂದು ಸ್ತ್ರೀಸಂಘವನ್ನು ಕಳೆದ ತಾ|| ೨೯ರಲ್ಲಿ ರಾಜಕುಮಾರ ದೇಶರಾಜ ಅರಸಿನವರ ಪ್ರಾಸಾದದಲ್ಲಿ ಆರಂಭಿಸಿದರು, ಮತ್ತು ಅದರ ಪೋಷಕರಾಗಿ ತಾವಿರಲೊಪ್ಪಿರುವರು. ಯುವರಾಣಿಯವರು ಅಧ್ಯಕ್ಷರಾಗಿರುವರು. ಈ ಆರಂಭೋತ್ಸವಕ್ಕೆ ನೂರಾರು ಜನ ಅರಸು ಐರೋಪ್ಯ ಹಿಂದೂ ಮಹಮ್ಮದೀಯ ಸ್ತ್ರೀಯರು ಬರಮಾಡಲ್ಪಟ್ಟಿದ್ದರು. ಇವರಲ್ಲಿ 60 ಮಂದಿಯವರೆಗೆ ಮೆಂಬರರಾಗಿರಲೊಪ್ಪಿದರು.

ರಂಭಾಪುರೀ ವೀರಸಿಂಹಾಸನ ಮಹಾಕರ್ತೃತ್ವವನ್ನು ನಡಿಸಲು ಆಲೋಚಕ ಸಭೆಯೊಂದನ್ನು ಕಳೆದ ಬುಧವಾರ ಅರಸೀಕೆರೆಯಲ್ಲಿ ಮ|| ಮರುಳಸಿದ್ದಪ್ಪನವರೇ ಮೊದಲಾದ ಅಲ್ಲಿಯ ವೀರಶೈವ ಮಹಾಜನರು ಏರ್ಪಡಿಸಿದ್ದರು. ಈ ಸಭೆಯಲ್ಲಿ ಉತ್ತರಾಧಿಕಾರಿತ್ವಕ್ಕೆ ಅರ್ಹರನ್ನು ಆರಿಸುವ ಕೆಲಸವು ನಡೆದಿತೋ ಆ ಸಂಬಂಧವಾದ ಕಾರ್ಯಕ್ರಮದ ಪೂರ್ವಾಲೋಚನೆಯು ನಡೆದಿತೋ ಸ್ಪಷ್ಟವಾಗಲಿಲ್ಲ. ಉತ್ತರಾಧಿಕಾರಿ ನಿರ್ಣಯಕ್ಕೆ ಸಾರ್ವಜನಿಕವಾದ ಪ್ರಸಿದ್ಧಿಪತ್ರಿಕೆಯ ಮೂಲಕ ಸಮಾಜದವರನ್ನೆಲ್ಲಾ ಆಹ್ವಾನಮಾಡಿ, ಉಮೇದುವಾರರ ಹೆಸರುಗಳನ್ನು ಮುಂದಾಗಿ ಪ್ರಕಟಿಸಿ ಆರಿಸುವುದಾದರೆ ನಿರಾಕ್ಷೇಪವು.

ಕಳೆದ ಭಾನುವಾರ ರಾಜಧಾನಿಯ ದೊಡ್ಡಪೇಟೆ ಹಳೆ ಬಾಡಿಗಾರ್ಡ್ ಲಾಯದಲ್ಲಿ ಒಂದು ಅದ್ಭುತವಾದ ಕುಸ್ತಿ ನಡೆದಿತು. ಕೊಪ್ಪಲ ಬಸವಯ್ಯನ ಮೇಲೆ ಹಿಂದೆ ಕುಸ್ತಿಮಾಡಿ ಬಿದ್ದುಹೋಗಿದ್ದ ಫಸಲು ಎಂಬ ಪೈಲ್ವಾನನು ಹಟದಮೇಲೆ ಮತ್ತೊಂದುಸಲ ತನ್ನನ್ನು ಸೋಲಿಸಿದರೆ ಭಂಗಾರದ ತೋಡವನ್ನು ಸ್ವತಃ ಬಹುಮಾನ ಮಾಡುವುದಾಗಿ ಪಂತಕಟ್ಟಿದ್ದನು. 4 ಸಹಸ್ರ ರೂ. ಗಳ ಕಂಟ್ರಾಕ್ಟಿನಿಂದ ಈ ಕುಸ್ತಿಯು ನಡೆದಿತು. ಹತ್ತಾರು ಸಾಹಸ್ರ ಪ್ರಜೆಗಳು ನೋಡಲಿಕ್ಕೆ ಲಾಯದ ಒಳಗೂ ಹೊರಗೂ ನೆರೆದಿದ್ದರು. ಹೈದರಾಬಾದ್ ಬೆಂಗಳೂರು ಮೊದಲಾದ ದೂರದೂರುಗಳಿಂದಲೂ ಸುತ್ತುಮುತ್ತಣ ತಾಲ್ಲೂಕು ಗ್ರಾಮಗಳಿಂದಲೂ ಅನೇಕರು ಬಂದು ನೆರೆದಿದ್ದರು. ಪ್ರಿನ್ಸ್ ಗೋಪಾಲರಾಜ ಅರಸಿನವರ ಮೇಲ್ವಿಚಾರಣೆಯಿಂದ ಇದು ನಡೆಯಿತು. ಬಹು ಚಮತ್ಕಾರದಿಂದ ಸ್ವಲ್ಪ ಕಾಲದೊಳಗೇ ಬಸವಯ್ಯನು ಫಜಲು ಪೈಲ್ವಾನನನ್ನು ಕೆಡಹಿ ಬೆನ್ನುಮಾಡಿ ಸೋಲಿಸಿಬಿಟ್ಟನು. ಪೈಲ್ವಾನನ ತೋಡಾವೂ ಒಟ್ಟು ಕಂಟ್ರಾಕ್ಟು ಹಣದಲ್ಲಿ ¾ ಭಾಗವೂ ಬಸವಯ್ಯನಿಗೆ ಸಂದವು. ಯಾವ ವಿದ್ಯೆಯಾದರೆತಾನೇ ಏನು? ಬಸವಯ್ಯನು ಮಲ್ಲವಿದ್ಯೆಯಿಂದ ತಾನು ಹುಟ್ಟಿದ ಊರಿಗೂ ದೇಶಕ್ಕೂ ಕೀರ್ತಿಯನ್ನು ತಂದು ಧನ್ಯನಾದನು. ಊರಿನಲ್ಲೆಲ್ಲಾ ಆ ದಿವಸ ಆತನನ್ನು ಬ್ಯಾಂಡ್ ವಾದ್ಯದೊಡನೆ ಉತ್ಸವಮಾಡಿದರು.

NOTE—We learn that the scheme we referred to under "Communal Representation" in our last issue was not actually presented to the Reforms Committee by Mr. Abbas Khan. We regret the mistake.

ನಾಟಾಹರಾಜು ಇಸ್ತಿಹಾರು.

ಇದೇ ಡಿಶಂಬರು 9ನೇ ತಾರೀಖಿನಲ್ಲಿ ಭದ್ರಾವತಿ ಡಿಪೋದಲ್ಲೂ ಮತ್ತು ಡಿಶಂಬರು 12ನೇ ತಾರೀಖಿನಲ್ಲಿ ನರಸಿಂಹರಾಜಪುರದ ಡಿಪೋದಲ್ಲೂ ಸಾಗವಾನಿ, ಹೊನ್ನೆ, ಮತ್ತಿ, ನಂದಿ, ಎತ್ತೀಗ ವಗ್ಯೆರೆ ತರಹಾವರಿ ನಾಟಾಗಳು ಹರಾಜು ಹಾಕಲ್ಪಡುವುವು. ಇಷ್ಟವುಳ್ಳವರು ನಾಟಾಗಳನ್ನು ಛಡಸವಾಲಿನಿಂದ ಕೊಂಡುಕೊಳ್ಳಬಹುದು.

K. Revanna,
ಡಿಸ್ಟ್ರಿಕ್ಟ್‌ಫಾರೆಸ್ಟ್ ಆಫೀಸರ್, ಭದ್ರಾವತಿ ಡಿವಿಜನ್.

ಪ್ರಸಿದ್ಧ ಪತ್ರಿಕೆ

ಹಾಸನಟವನ್ ಮುಸಾಫರ್‌ಖಾನಾ ಹಿಂಭಾಗದ ಹೊಲಗಳು ಮತ್ತು ಸಂತೆಮಾಳದಲ್ಲಿ ಸಹಾ ಮಾಮೂಲ್‌ಮೇರೆ ಸನ್ 1923 ನೇ ಇಸವಿ ಜನವರಿ ಮಾಹೆ ತಾರೀಖು 3-4 ಮತ್ತು 5 ನೇ ಬುಧವಾರ, ಗುರುವಾರ ಮತ್ತು ಶುಕ್ರವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತೆಂಬ ಭಾಗ ಈಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ಬಾಕಿ ವಿಷಯಗಳಿಗೆ ತಪ್ಸೀಲಾಗಿ ಮೈಸೂರು ಗೆಜೆಟ್ 10-11-1922 ರ ಮರ್ಸಂ II A ಭಾಗದ 420-421 ನೇ ಪುಟಗಳಲ್ಲಿ ಛಾಯಿಸಾಗಿರುವ ನೋಟಿಫಿಕೇಷನ್ ನೋಡತಕ್ಕದ್ದು.

MAHAMUD RAZA
2 Vice-President,
Town Municipality.

ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚಿತಗಳಾದ ಸಾರ್ವತ್ರಿಕ ವಿಷಯಗಳು.

(ಜನಾರೋಗ್ಯ)

ಅ—ಮೈಸೂರು ಆಯುರ್ವೇದೀಯ ಕಾಲೇಜಿನಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗೆ ಕಾರ್ಯತಃ ಚಿಕಿತ್ಸೆ ಮಾಡುವ ಅಭ್ಯಾಸಕ್ಕೆ ಅವಕಾಶವಾಗುವಂತೆ ಕಾಲೇಜನ್ನು ಅಭಿವೃದ್ಧಿಪಡಿಸಬೇಕು. ಮತ್ತು ಅದಕ್ಕೂ ಆಸ್ಪತ್ರೆಗೂ ಉತ್ತಮವಾದ ಕಟ್ಟಡವನ್ನೊದಗಿಸಬೇಕು. ಯುನಾನಿಭಾಗವನ್ನೂ ಏರ್ಪಡಿಸಬೇಕು. ಆಯುರ್ವೇದೀಯ ಮತ್ತು ಯುನಾನಿ ಔಷಧಗಳ ಪರಿಶೋಧನೆ ನಡಿಸಿ ಗೌರವಕ್ಕೆ ತರಲು ತಕ್ಕ ಪ್ರೋತ್ಸಾಹ ಕೊಡಬೇಕು.

ಉ—ರೆವಿನ್ಯೂ ಕಮಿಷನರು ಈ ವಿಷಯದಲ್ಲಿ ರಿಪೋರ್ಟುಮಾಡಿರುತ್ತಾರೆ. ವಿಚಾರಣೆಯಲ್ಲಿದೆ. ಗುರ್ತುಮಾಡಿಕೊಂಡಿದೆ.

ಅ—ಲೋ॥ ಫಂಡ್ ಆಸ್ಪತ್ರೆ ಛಾರ್ಜಿನಲ್ಲಿರುವ ಸಬ್ ಅ॥ ಸರ್ಜನರುಗಳು ರೋಗಿಗಳ ಮನೆಗೆ ಹೋಗಿ ಚಿಕಿತ್ಸೆಮಾಡುವ ಸಂದರ್ಭದಲ್ಲಿ ರೋಗಿಗಳು ಬಡವರೆಂಬ ವಿಷಯಕ್ಕೆ ಲೋ॥ ಬೋ॥ ಪ್ರಸಿಡೆಂಟರಿಂದ ಅಥವಾ ವೈಸ್‌ಪ್ರಸಿಡೆಂಟರಿಂದ ಸರ್ಟಿಫಿಕೇಟ್ ತಂದರೆ ಅಂಥ ಕಡೆಗೆ ಮುಫತ್ತಾಗಿ ಹೋಗಿ ಚಿಕಿತ್ಸೆಮಾಡುವಂತೆ ಅಪ್ಪಣೆಯಾಗಬೇಕು.

ಉ—ರೂಲ್ಸು ಮಾಡಲಾಗುವುದಿಲ್ಲ.

ಅ—ಸಂಸ್ಥಾನದ ಹಳ್ಳಿಗಳಲ್ಲೆಲ್ಲಾ ನಿರ್ಬಂಧದಿಂದ ಸಿಡುಬು ಹಾಕಿಸುವ ಕ್ರಮವನ್ನು ವ್ಯವಹಾರಕ್ಕೆ ತರಿಸಬೇಕು.

ಉ—ಇದು ಸರ್ಕಾರದ ಉದ್ದೇಶವೇ ಆಗಿದೆ. ಮಾಡಿಸುತ್ತಲೇ ಇದ್ದೇವೆ.

(ಕಾರಾಗೃಹ)

ಅ—ಕಾರಾಗೃಹಗಳಲ್ಲಿ ಬಂದಿಗಳಿಗೆ ಉಂಟುಮಾಡಿರುವ ಅನುಕೂಲತೆ ಸಾಲದು. ತಕ್ಕ ಸಲಹೆಕೊಡಲು ಒಂದು ಕಮಿಟಿಯನ್ನೇರ್ಪಡಿಸಬೇಕು.

ಉ—ತಕ್ಕಷ್ಟು ಅನುಕೂಲ್ಯಗಳನ್ನು ಮಾಡಿಕೊಟ್ಟೇ ಇದ್ದೇವೆ. ಅಲ್ಲಿಗೆ ಹೋದವರು ಚೆನ್ನಾಗಿ ಆರೋಗ್ಯವನ್ನು ಹೊಂದಿಯೇ [illegible]

ಅ—ಅಪ[illegible]ಳನ್ನು ಪೊಲೀಸಿನವರ ವಶದಲ್ಲಿಡಿಸುವುದಕ್ಕೆ ಪ್ರತಿಯಾಗಿ ಮೆಜಿಸ್ಟ್ರೇರಿಯಲ್ ಯಾ ಡಿಸ್ಟ್ರಿಕ್ಟ್ ಲಾಕಪ್ಪುಗಳಲ್ಲಿ ಇಟ್ಟಿರುವಂತೆ ಮಾಡಿಸಲು ಕಾನೂನು ತಿದ್ದುಪಡಿಯಾಗಬೇಕು.

ಉ—ವಿಚಾರಮಾಡುತ್ತೇವೆ.

(ಭಾಗ್ಯಾಭಿವೃದ್ಧಿ)

ಅ—ಕ್ಷಾಮಬಂದರೆ ಗ್ರಾಮಾಂತರದವರು 1 ವರ್ಷದವರೆಗಾದರೂ ತಾಳಿಕೊಳ್ಳಲು ಅನುಕೂಲಿಸುವಂತೆ ಧಾನ್ಯಗಳ ದಾಸ್ತಾನುಗಳನ್ನು ಪ್ರತಿಗ್ರಾಮದಲ್ಲಿಯೂ ಮಾಡಿಸುವಂತೆ ಏರ್ಪಡಿಸಬೇಕು.

ಉ—ಗೌರ್‍ನಮೆಂಟಿನವರು ಈ ವಿಷಯದಲ್ಲಿ ಪ್ರವೇಶಿಸುವುದು ಸಾಧ್ಯವಲ್ಲ. ಗ್ರಾಮಾಭಿವೃದ್ಧಿ ಸಂಘದವರು ಮಾಡಬೇಕು.

ಅ—ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಆಯಾ ಸ್ಥಳದ ಅವಶ್ಯಕತೆಗಳಿಗನುಸಾರವಾಗಿ ಭಾರಿ ಕೈಗಾರಿಕೆಗಳನ್ನು ಸ್ಥಾಪಿಸುವ ಬಗೆಗೆ ಶಿಲ್ಪವಾಣಿಜ್ಯಶಾಖೆಯವರು ಸರ್ವಪ್ರಯತ್ನವನ್ನೂ ಮಾಡಬೇಕು. ಈಗಣ ಪದ್ಧತಿಯಿಂದ ಯಾವ ಪ್ರಯೋಜನವೂ ಇಲ್ಲ. ಅಂಥ ಸ್ಥಾಪನೆಗಳಿಗೆ ಮೂಲಧನವು ಒದಗುವುದಕ್ಕಾಗಿ ಸರ್ಕಾರದವರು ಬಡ್ಡಿಯ ಗ್ಯಾರಂಟಿ ಕೊಡಬೇಕು.

ಉ—ಗೌರ್‍ನಮೆಂಟಿನವರು ಬಡ್ಡಿಗೆ ಗ್ಯಾರಂಟಿ ಕೊಡಲಾಗುವುದಿಲ್ಲ. ಈ ವಿಷಯವು ಕೈಗಾರಿಕೆ ಬೋರ್ಡಿನಲ್ಲಿ ಚರ್ಚೆಗೆ ಬರಲಿ.

ಅ—ಮಲೆನಾಡಿನಲ್ಲಿ ಜಮೀನ್ ಅಡುಮಾನದ ಬ್ಯಾಂಕುಗಳನ್ನು ಶೀಘ್ರವಾಗಿ ಸ್ಥಾಪಿಸುವಂತೆ ಅಪ್ಪಣೆಯಾಗಬೇಕು.

ಉ—ಪರಸ್ಪರ ಸಹಾಯಸಂಘಗಳ ವಿಚಾರಣೆ ಕಮಿಟಿಯವರ ರಿಪೋರ್ಟು ಬರಲಿ, ತದನಂತರ ಏನು ಮಾಡಬಹುದೆಂಬುದನ್ನು ವಿಚಾರಮಾಡುತ್ತೇವೆ.

ಅ—ಕೈಗಾರಿಕೆಯ ತಕಾವಿ ಸಾಲಗಳನ್ನು ಕೊಡುವ ಪದ್ಧತಿಯನ್ನು ನಿಲ್ಲಿಸಿಬಿಟ್ಟಿದ್ದಾರೆ. ಕೈಗಾರಿಕೆಯ ಅಭಿವೃದ್ಧಿಗೆ ಇದರಿಂದ ಪ್ರೋತ್ಸಾಹಭಂಗವಾಗಿದೆ. ಮೊದಲಿನಂತೆ ಕೈಗಾರಿಕೆಗೆ ಸಾಲಕೊಡಿಸುವ ಪದ್ಧತಿಯನ್ನು ಜಾರಿಗೆ ತರಬೇಕು.

ಉ—ಆ ಪದ್ಧತಿಯನ್ನು ತಪ್ಪಿಸಿಲ್ಲ. ಆ ಬಗೆಗಾಗಿಯೇ ಬಡ್ಜೆಟ್ಟಿನಲ್ಲಿ 50 ಸಾವಿರವನ್ನು ಏರ್ಪಡಿಸಿದೆ. ಅಪ್ಲಿಕೇಷನ್ನುಗಳನ್ನು ಕೈಗಾರಿಕೆ ಇಲಾಖೆಯ ಡೈರೆಕ್ಟರಿಗೆ ಬರೆದುಕೊಳ್ಳಬಹುದು.

ಅ—ಕೈಗಾರಿಕೆಯ ಮತ್ತು ವ್ಯವಸಾಯದ ಸಾಲಗಳನ್ನು ತೀರಿಸುವುದಕ್ಕೆ ಈಗ ಏರ್ಪಡಿಸಿರುವ ವಾಯಿದೆಯು ಸಾಲದು. ಇನ್ನಷ್ಟು ಹೆಚ್ಚಿಸಿಕೊಡಬೇಕು.

ಉ—ಸಾಧ್ಯವಾದಷ್ಟನ್ನು ಕೊಟ್ಟಿದೆ. ಇನ್ನು ವಾಯಿದೆಯನ್ನು ಹೆಚ್ಚಿಸಲಾಗುವುದಿಲ್ಲ.

ವಿದ್ಯಾಭ್ಯಾಸ.

ಅ—ವಿಶೇಷ ನ್ಯೂನತೆಯಿಂದ ಕೂಡಿರುವ ಈಗಣ ವಿದ್ಯಾಭ್ಯಾಸದ ಪದ್ಧತಿಯನ್ನು ಕ್ರಮಪಡಿಸಿ, ನಮ್ಮ ಜನರಿಗೆ ಪೂರ್ವದ ಮಹತ್ವವು ಪುನಃ ಲಭಿಸುವಂತೆ ಸಾಧಕವಾದ ವಿದ್ಯಾಭ್ಯಾಸ ಪದ್ಧತಿಯನ್ನು ಸೂಚಿಸಲಿಕ್ಕಾಗಿ ಮೈಸೂರು ದೇಶದ ಮತ್ತು ಹೊರಗಣ ಕೆಲವು ದೊಡ್ಡಮನುಷ್ಯರುಗಳುಳ್ಳ ಸಂಘವೊಂದನ್ನು ಏರ್ಪಡಿಸಬೇಕು.

ಉ—ದೊಡ್ಡವಿಷಯ; ಇದನ್ನು ಎಜುಕೇಷನ್ ಕಮಿಟಿಯಮುಂದಿರಿಗೆ ತರಬಹುದು.

ಅ—ಎಲ್ಲತರಗತಿಗಳ ವಿದ್ಯಾಭ್ಯಾಸವನ್ನೂ ಉಚಿತವಾಗಿ (ಫೀಯಿಲ್ಲದೆ) ಮಾಡಿಸಬೇಕು.

ಉ—ಎಲ್ಲತರಗತಿಗಳಲ್ಲೂ ಫ್ರೀ ಮಾಡಲು ಈಗ ಸಾಧ್ಯವಲ್ಲ.

ಅ—ವಿದ್ಯಾಭ್ಯಾಸದ ಸೆಸ್ಸನ್ನು 6 ಡಿಸ್ಟ್ರಿಕ್ಟುಗಳು ಕೊಡುತ್ತಾ ಇಲ್ಲ, ಬೆಂಗಳೂರು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಮಾತ್ರ ಅದನ್ನು ಎತ್ತಲು ಡಿ॥ ಬೋರ್ಡುಗಳವರು ಒಪ್ಪಿದ್ದಾರೆ. ಉಳಿದ ಡಿಸ್ಟ್ರಿಕ್ಟುಗಳು ಈ ಸೆಸ್ಸನ್ನು ಕೊಡದಿರುವುದರಿಂದ ಇಲ್ಲಿಯೂ ತಪ್ಪಿಸಿಬಿಡಬೇಕು, ಅಥವಾ ಸಂಸ್ಥಾನದ ಎಲ್ಲಾ ಕಡೆಯಲ್ಲೂ ವಸೂಲ್ಮಾಡುವಂತೆ ಆಗುವವರೆಗೂ ಇವೆರಡು ಡಿಸ್ಟ್ರಿಕ್ಟುಗಳಲ್ಲಿ ವಸೂಲ್ಮಾಡುವುದನ್ನು ತಡೆದಿರಬೇಕು.

ಉ—ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಇದರ ಅಧಿಕಾರವನ್ನು ವಹಿಸಿಕೊಟ್ಟುಬಿಟ್ಟಿದೆ. ಸೆಸ್ ತಪ್ಪಿಸಬೇಕೆಂಬ ವಿಷಯವನ್ನು ಬೆಂಗಳೂರು ಚಿತ್ರದುರ್ಗ ಡಿಸ್ಟ್ರಿಕ್ಟ್‌ಬೋರ್ಡುಗಳವರು ಪರ್ಯಾಲೋಚಿಸಬೇಕು. ನಾವೂ ಗುರ್ತುಮಾಡಿಕೊಂಡಿದ್ದೇವೆ, ಆಲೋಚಿಸುತ್ತೇವೆ.

ಅ—ವಿದ್ಯಾಭ್ಯಾಸದ ಮೆಮೊರಾಂಡಮ್ಮಿನ ಮೇಲಣ ಸರ್ಕಾರಿ ಅಪ್ಪಣೆಯಲ್ಲಿ ವಿಧಾಯಕವಾಗಿರುವ ಕ್ರಮವನ್ನು ಜಾರಿಗೆ ತರಲು ವಿದ್ಯಾಭ್ಯಾಸದ ಒಟ್ಟು ಗ್ರಾಂಟಿನಿಂದ ತಕ್ಕಷ್ಟು ಹಣವನ್ನು ಪ್ರತಿವರ್ಷವೂ ತೆಗೆದಿಡಬೇಕು. ಮೆಮೊರಾಂಡಂ ಕ್ರಮಗಳು ಬೇಗನೆ ಜಾರಿಗೆ ಬರುವಂತೆ ಮಾಡಿಸಬೇಕು. ಅರ್ಧಭಾಗ ಹಣಕೊಟ್ಟ ಸ್ಥಲಗಳಿಗೆ ಸ್ಕೂಲನ್ನು ಏರ್ಪಡಿಸಿಕೊಡುತ್ತೇವೆಂದು ಇರುವುದು ಸರಿಯಲ್ಲ; ಓದತಕ್ಕ ಹುಡುಗರ ಸಂಖ್ಯೆ ಹೆಚ್ಚಾಗಿರುವುದೇ ಮೊದಲಾದ ಪರಿಸ್ಥಿತಿಯನ್ನು ನೋಡಿ ಸ್ಕೂಲನ್ನು ಏರ್ಪಡಿಸುವಂತೆ ಆಗಬೇಕು.

ಉ—ಮಿ॥ ಮೆಮೊರಾಂಡಮ್ಮಿನ ಮೇಲಣ ಅಪ್ಪಣೆಯನ್ನು 1921ನೆ ವರ್ಷದಲ್ಲಿ ಕೊಟ್ಟಿದೆ. ಹೇಗೆ ನಡೆಯುತ್ತದೋ ನೋಡಿಕೊಂಡು ಅದರಲ್ಲಿ ಬದಲಾವಣೆ ಮಾಡಬೇಕಾದ ಅವಶ್ಯಕತೆ ತೋರಿದರೆ ಮಾಡಲಾಗುವುದು.

ಅ—ಗ್ರಾಂಟ್ ಇನ್ ಏಡ್ ಸ್ಕೂಲುಗಳ ಸ್ಥಾಪನೆಗಾಗಿ ಕಂಟ್ರಿಬ್ಯೂಷನ್ ವಸೂಲ್ಮಾಡುವ ಪದ್ಧತಿಯನ್ನು ತಪ್ಪಿಸಿಬಿಟ್ಟಿದೆ. ಅಂಥ ಸ್ಕೂಲುಗಳನ್ನು ತೆಗೆದುಬಿಟ್ಟ ಕಡೆಗಳಲ್ಲಿ ಸರ್ಕಾರಿ ಸ್ಕೂಲುಗಳನ್ನು ಸ್ಥಾಪಿಸಿಕೊಡಬೇಕು. ಈಗ ೨ ಸಾವಿರ ಗ್ರಾಂಟ್ ಇನ್ ಏಡ್ ಸ್ಕೂಲುಗಳು ವಜಾ ಆಗಿರುವುದರಿಂದ ಅವಕ್ಕೆ ಖರ್ಚಾಗುತ್ತಿದ್ದ ಹಣವು ಉಳಿಯುವ ಕಾರಣ, ಅದನ್ನುಪಯೋಗಿಸಿಕೊಂಡು ಕೆಲಕೆಲವು ಹೊಸ ಸರ್ಕಾರಿ ಸ್ಕೂಲುಗಳನ್ನು ಏರ್ಪಡಿಸುತ್ತ ಹೋಗಬೇಕು.

ಉ—ಮಾಡುತ್ತ ಬರುತ್ತೇವೆ.

ಅ—ಗ್ರಾಮಾಂತರಗಳಲ್ಲಿ ಬಲಾತ್ಕಾರ ಬಾಲವಿದ್ಯಾಭ್ಯಾಸವನ್ನು ಅವಶ್ಯವಾಗಿ ಏರ್ಪಡಿಸಬೇಕು.

ಉ—ಪ್ರಾಥಮಿಕ ವಿದ್ಯಾಭ್ಯಾಸವನ್ನು ಗ್ರಾಮಾಂತರಗಳಲ್ಲಿ ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ಮೊದಲು ಕಟ್ಟಡ ಮೊದಲಾದುವುಗಳನ್ನೆಲ್ಲಾ ಅಣಿಮಾಡಬೇಕು. ಅದಕ್ಕೆ ಹಣವಿಲ್ಲ. ಅದ[illegible]ಕಾರಣ ಸಬಬ್ ಆಗಿ ಹುಕುಂ ಜಾರಿಮಾಡಲಾಗುತ್ತಿಲ್ಲ.

ಅ—ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳನ್ನು ಹಂಚುತ್ತಿರುವ ಈಗಣ ಪದ್ಧತಿಯಿಂದ ಸಣ್ಣಪಂಗಡಗಳಿಗೆ ಸಿಕ್ಕುವುದೇ ಇಲ್ಲ. ಹಿಂದುಳಿದ ಪಂಗಡಗಳನ್ನೆಲ್ಲಾ ಒಂದೇ ಪಂಗಡದಂತೆ ಭಾವಿಸಿ ಯೋಗ್ಯರಾದವರಿಗೆ ಮಾತ್ರವೇ ಆ ವೇತನಗಳನ್ನು ಕೊಡಬೇಕು. ಈ ವಿದ್ಯಾರ್ಥಿವೇತನಗಳನ್ನು ೨ ಲಕ್ಷಕ್ಕೆ ಹೆಚ್ಚಿಸಬೇಕು.

ಉ—ಈ ಸ್ಕಾಲರ್ಷಿಪ್ಪಿನ ವಿನಿಯೋಗ ವಿಷಯದಲ್ಲಿ ಇರುವ ತೊಂದರೆಗಳನ್ನೆಲ್ಲಾ ಕುರಿತು ಎಜುಕೇಷನ್ ಬೋರ್ಡಿಗೆ ತಿಳುಹಿಸುತ್ತೇವೆ. ಅವರ ರಿಪೋರ್ಟು ಬಂದನಂತರ ವಿಚಾರಮಾಡುತ್ತೇವೆ. ಆ ಬೋರ್ಡಿಗೆ ಹೊಸದಾಗಿ ೮-೯ ಮಂದಿ ಮೆಂಬರುಗಳನ್ನು ಸೇರಿಸುತ್ತೇವೆ.

ಅ—ಈಗ ಕೊಡುತ್ತಿರುವ ಯೋಗ್ಯತಾ ವಿದ್ಯಾರ್ಥಿವೇತನಗಳೂ ಮತ್ತು ಹಿಂದುಳಿದ ವಿದ್ಯಾರ್ಥಿ ವೇತನಗಳೂ ಸಲ್ಲತಕ್ಕ ಕಾಲವನ್ನು ಯಾವ ಕಾರಣಕ್ಕೂ ಕಡಿಮೆಮಾಡಕೂಡದು. ಏಕೆಂದರೆ ಅದರಿಂದ ಪ್ರೌಢವಿದ್ಯಾಭ್ಯಾಸಕ್ಕಾಗಿ ಹಳ್ಳಿಗಾಡುಗಳಿಂದ ಪಟ್ಟಣಗಳಿಗೆ ಹೋಗಿ ಹೋಟಲುಗಳಲ್ಲಿ ವಾಸಮಾಡುವ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತದೆ.

ಉ—ಗುರ್ತುಮಾಡಿಕೊಂಡಿದ್ದೇವೆ.

ಅ—ಟ್ರೇನಿಂಗಿಗಾಗಲಿ ರಜಾದಮೇಲಾಗಲಿ ಹೋಗುವ ವಿಲೇಜ್ ಎಲಿಮೆಂಟರಿ ಸ್ಕೂಲುಗಳ ಉಪಾಧ್ಯಾಯರುಗಳಿಗೆ ಬದಲಾಗಿ ಕೆಲಸಮಾಡಲು ಪ್ರತಿ ತಾಲ್ಲೂಕಿಗೂ ಇಬ್ಬಿಬ್ಬರು ತರಬೇತಾದ ಉಪಾಧ್ಯಾಯರನ್ನು ನಿಯಮಿಸಬೇಕು.

ಉ—ಇದು ಡಿಪಾರ್ಟ್‌ಮೆಂಟಿನವರಿಗೆ ಸೇರಿದ ಕೆಲಸ, ಅವರು ಮಾಡಿಕೊಳ್ಳುತ್ತಾರೆ.

ಅ—ಸಬ್ ಅ॥ ಸರ್ಜನರು ಇರುವ ಕಡೆಗಳ ಸ್ಕೂಲುಗಳ ವಿದ್ಯಾರ್ಥಿಗಳ ಆರೋಗ್ಯಪರೀಕ್ಷೆಯನ್ನು ಅವರುಗಳು ಮಾಡುವಂತೆ ಏರ್ಪಡಿಸಬೇಕು. ಯುಕ್ತವಾದ ಅಂಗಸಾಧನೆಗಳಿಂದಲೂ ಇತರೋಪಾಯಗಳಿಂದಲೂ ವಿದ್ಯಾರ್ಥಿಗಳ ದೇಹದಾರ್ಢ್ಯವನ್ನು ಮೇಲ್ಪಡಿಸಬೇಕು.

ಉ—ಇದೆಲ್ಲಾ ದುಡ್ಡಿನ ಅನುಕೂಲ್ಯದ ಮೇಲೆ ಆಧಾರಪಡತಕ್ಕ ವಿಷಯ.

ಅ—ಮೈಸೂರು ಬೆಂಗಳೂರು ಕಾಲೇಜು ಹಾಸ್ಟಲುಗಳಿಗೆ ಒಬ್ಬೊಬ್ಬ ಡಾಕ್ಟರನ್ನು ನಿಯಮಿಸಿಕೊಡಬೇಕು. ಡಾಕ್ಟರೇ ಹಾಸ್ಟಲ್ ಸೂಪರಿಂಟೆಂಡೆಂಟರಾಗಿರುವಂತೆ ಮಾಡಬೇಕು.

ಉ—ಇದು ಅನವಶ್ಯಕ.

ಅ—ಗ್ರಾಮಸ್ಥರಿಂದ ಕಂಟ್ರಿಬ್ಯೂಷನನ್ನು ಆಗಲೇ ವಸೂಲ್ಮಾಡಿರುವ ಸ್ಥಲಗಳಲ್ಲಿ ಎಲಿಮೆಂಟರಿ ಸ್ಕೂಲು ಕಟ್ಟಡಗಳನ್ನು ಶೀಘ್ರವಾಗಿ ಕಟ್ಟಿಸಿಕೊಡಬೇಕು.

ಉ—ಈಸಲ ಇದಕ್ಕಾಗಿಯೇ ೨೫ ಸಾವಿರ ರೂ.ಗಳನ್ನು ವ್ಯಯಮಾಡಲು ಏರ್ಪಡಿಸಿದೆ.

ಅ—ತಾಲ್ಲೂಕು ಕಸಬೆಗಳಲ್ಲಿರುವ ಬಾಲಿಕಾ ಪಾಠಶಾಲೆಗಳನ್ನೆಲ್ಲಾ ಎ. ವಿ. ಸ್ಕೂಲುಗಳನ್ನಾಗಿ ಮಾಡಿಸಬೇಕು.

ಉ—ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್‌ಗಳಲ್ಲಿರುವ ಬಾಲಿಕಾ ಪಾಠಶಾಲೆಗಳೇ ಇನ್ನೂ ಎ.ವಿ. ಸ್ಕೂಲುಗಳಾಗಿಲ್ಲ. ತಾಲ್ಲೂಕುಗಳಲ್ಲಿ ದಿನಕ್ರಮೇಣ ಆಗಬೇಕಾಗುತ್ತದೆ.

ಅ—ಲೋವರ್ ಸೆಕೆಂಡರಿ ಪರೀಕ್ಷೆಗೆ ಸಂಸ್ಕೃತವನ್ನು ೨ನೆಯ ಭಾಷೆಯನ್ನಾಗಿ ಸೇರಿಸಬೇಕು.

ಉ—ಕಷ್ಟ, ಆಗುವುದಿಲ್ಲ.

ಅ—ಸಂಸ್ಥಾನದ ಎಲ್ಲಾ ಸ್ಕೂಲುಗಳಲ್ಲಿಯೂ ಎಸ್. ಎಸ್.ಎಲ್.ಸಿ. ತರಗತಿಗಳೊಳಗೆ ಸೈಯನ್ಸ್ ಪಾಠಗಳನ್ನು ದೇಶಭಾಷೆಯಲ್ಲಿ ಹೇಳಿಕೊಡುವಂತೆ ಮಾಡಿಸಬೇಕು.

ಉ—ಉತ್ತರೋತ್ರ ಆಗತಕ್ಕದ್ದು.

ಅ—ವ್ಯವಸಾಯ ವಿದ್ಯೆಯಲ್ಲಿ ಹಳ್ಳಿಯ ಹುಡುಗರಿಗೆ ಅಭಿಮಾನ ಹೆಚ್ಚುವಂತೆ ಮಾಡುವುದಕ್ಕಾಗಿ ದ್ರವ್ಯಾನುಕೂಲವಾದಂತೆ ತಾಲ್ಲೂಕು ಸ್ಕೂಲುಗಳಲ್ಲಿ ಓದುಬರಹಗಳ ಜತೆಗೆ ವ್ಯವಸಾಯವಿದ್ಯೆಯನ್ನು ಕಲಿಸುವ ಏರ್ಪಾಟನ್ನು ಮಾಡಬೇಕು.

ಉ—ಪ್ರೈಮರಿ ಕ್ಲಾಸುಗಳಿಗೆ ನೇಚರ್ ಸ್ಟಡಿಯೂ, ಮಿಡಲ್ ಸ್ಕೂಲು ತರಗತಿಗಳಿಗೆ ವ್ಯವಸಾಯಾಭ್ಯಾಸವೂ ನಡೆಯಬೇಕೆಂದು ಮೆಮೊರಾಂಡಮ್ಮಿನಲ್ಲಿ ಏರ್ಪಡಿಸಿದೆ. ಅದರಂತೆ ಉತ್ತರೋತ್ರ ಜಾರಿಗೆ ಬರುತ್ತದೆ.

ಅ—ಮೈಸೂರು ಯೂನಿವರ್ಸಿಟಿಯಲ್ಲಿ ಟೆಕ್ನಿಕಲ್ ವಿದ್ಯಾಶಾಖೆಗಳನ್ನು ಏರ್ಪಡಿಸಬೇಕು.

ಉ—ದುಡ್ಡಿನ ಕೊರತೆ.

ಅ—ಇಂಗ್ಲೀಷಿನಲ್ಲಿ 3ನೆ ಫಾರಮ್ಮಿನಲ್ಲಿ ಓದುತ್ತಾ ಇದ್ದ ಹೊರತು ದೇಶಭಾಷೆಯಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಕೂಡದೆಂದು ವಿಧಿಸಿರುವುದಾಗಿ ತಿಳಿಯಬರುತ್ತದೆ. ಬಾಲರೂ ಬಾಲಿಕೆಯರೂ ಸಹ ದೇಶಭಾಷೆಯಲ್ಲಿ ಲೋ॥ ಸೆ॥ ಪರೀಕ್ಷೆಗೆ ಹೋಗಬಹುದೆಂದು ಮಾಡಿದ್ದ ಪೂರ್ವಪದ್ಧತಿಯನ್ನೇ ಉಳಿಯಿಸಿ ಕೊಡಬೇಕು.

ಉ—1925ನೆ ಇಸವಿಯಲ್ಲಿ ಸಂಸ್ಥಾನದ ಎಲ್ಲಾ ಸ್ಕೂಲುಗಳಲ್ಲೂ ಇಂಗ್ಲಿಷ್ ಕನ್ನಡವೆರಡನ್ನೂ ಜತೆಗೆ ಹೇಳಿಕೊಡುವಂತೆ ಮಾಡುತ್ತಾರೆ. ಆಗ್ಗೆ ಭಾಷೆಯ ಹೊರತು ಉಳಿದ ಪತ್ರಿಕೆಗಳಿಗೆಲ್ಲಾ ಕನ್ನಡದಲ್ಲೇ ಉತ್ತರವನ್ನು ಬರೆಯಬಹುದು.

ಅ—ವಿದ್ಯಾಶಾಲೆಗಳಲ್ಲಿ ಮಹಮ್ಮದೀಯರಿಗೆ ಉಂಟುಮಾಡಿಕೊಟ್ಟಿರುವಂಥ ಸೌಕರ್ಯಗಳನ್ನು ಮರಾಟೆಯವರಿಗೂ ರಜಪುತ್ರರಿಗೂ ಉಂಟುಮಾಡಿಕೊಡಬೇಕು.

ಉ—ಗುರ್ತುಮಾಡಿಕೊಂಡಿದ್ದೇವೆ.

ಅ—ಕೀಳುತರಗತಿಯವರು ಮಾಡುತ್ತಿರುವ ಕಸಬುಗಳನ್ನು ತಪಶೀಲಾಗಿ ಪರಿಶೀಲಿಸಿ ಅವನ್ನು ಅಭಿವೃದ್ಧಿಪಡಿಸಲಿಕ್ಕೆ ತಕ್ಕ ಪ್ರಯತ್ನ ಮಾಡಬೇಕು.

ಉ—ಈ ಏರ್ಪಾಟನ್ನು ಎಲ್ಲಾ ಸ್ಕೂಲುಗಳಲ್ಲೂ ಮಾಡುವಂತೆ ಅಪ್ಪಣೆ ಕೊಡಲಾಗಿದೆ.

ಅ—ಜೈನ ಮತ್ತು ತಿಗಳ ವಿದ್ಯಾರ್ಥಿಗಳಿಗಾಗಿ ನಾಲ್ಕೇ ಸ್ಕಾಲರ್ಷಿಪ್ಪುಗಳು ನಿರ್ಧಾರವಾಗಿವೆ, ಪೂರ್ವದಿಂದಲೂ ವಿದ್ಯೆ

ಯಲ್ಲಿ ಪ್ರಸಿದ್ಧರಾಗಿ ಬಂದಿರುವ ಜೈನರು ಈಗ ವಿದ್ಯೆಯಲ್ಲಿ ಬಹಳ ಹಿಂದೆಬಿದ್ದಿರುವ ಕಾರಣ, ಅವರನ್ನು ವಿದ್ಯೆಯಲ್ಲಿ ಪೂರ್ವದ ಸ್ಥಿತಿಗೆ ತರಲು ಪ್ರೋತ್ಸಾಹಿಸಲಿಕ್ಕಾಗಿ ಹೈಸ್ಕೂಲು ತರಗತಿಗಳಲ್ಲಿ ಆ ವಿದ್ಯಾರ್ಥಿಗಳ ವೇತನದ ಸಂಖ್ಯೆಯನ್ನು 10ಕ್ಕೆ ಹೆಚ್ಚಿಸಿಕೊಡಬೇಕು.

ಉ—ನಿಮ್ಮ ಜನಸಂಖ್ಯೆಯ ಸೇಕಡಾ ವಾಮಾಷಾಯಿ ಪ್ರಕಾರ ಸ್ಕಾಲರ್ಷಿಪ್ಪುಗಳು ಬರುತ್ತಿವೆ. ನಿಮಗೆ ಮಾತ್ರವೇ ಹೆಚ್ಚಾಗಿ ಕೊಟ್ಟರೆ ಉಳಿದ ಸಣ್ಣಸಣ್ಣ ಪಂಗಡಗಳಿಗೆಲ್ಲಾ ಹಾಗೆಯೇ ಹೆಚ್ಚಿಸಬೇಕಾಗುತ್ತದೆ. ಆದರೂ ಆಲೋಚಿಸುತ್ತೇವೆ.

ಅ—ಎಲ್ಲಾ ಹಾಸ್ಟಲುಗಳಲ್ಲಿಯೂ ಎಲ್ಲಾ ಕೋಮಿನವರಿಗೂ ಊಟಕ್ಕೂ ವಾಸಕ್ಕೂ ಏರ್ಪಡಿಸಿಕೊಡಬೇಕು.

ಉ—ತಕ್ಕಷ್ಟು ಹುಡುಗರಿದ್ದರೆ ಅಲ್ಲಲ್ಲಾ ಮಾಡಿಕೊಡುತ್ತೇವೆ. ಒಬ್ಬಿಬ್ಬರು ಬಂದರೆ ಮಾಡಿಕೊಡಲು ಆಗುತ್ತದೆಯೆ? 5-6 ಮಂದಿಗಳಾದರೂ ಬರಬೇಕು. ಬೆಂಗಳೂರು ಹಾಸ್ಟಲಿನಲ್ಲಿ ಪ್ರತ್ಯೇಕವಾದ ಏರ್ಪಾಟನ್ನು ವೀರಶೈವರಿಗೆ ಮಾಡಿಕೊಡುತ್ತೇವೆ.

ಅ—ತುಮಕೂರು ಚಿಕ್ಕಮಗಳೂರು ಪಂಚಮ ಬೋರ್ಡಿಂಗುಗಳಲ್ಲಿ ಈಗ ಇರುವ ಸ್ಥಾನಗಳನ್ನು 60 ರಿಂದ 100ಕ್ಕೆ ಹೆಚ್ಚಿಸಿಕೊಡಬೇಕು. ಪಂಚಮರ ಹುಡುಗಿಯರಿಗಾಗಿ ಬೆಂಗಳೂರಿನಲ್ಲಿ ಒಂದು ಬೋರ್ಡಿಂಗನ್ನು ಏರ್ಪಡಿಸಿಕೊಡಬೇಕು. ಮಳವಳ್ಳಿಯಲ್ಲಿ ದೇವಮ್ಮ ಎಂಬ ಪಂಚಮರವಳು ಲೋ॥ಸೆ॥ ಪರೀಕ್ಷೆ ಕೊಟ್ಟು ಮೈಸೂರು ಮಹಾರಾಣಿ ಕಾಲೇಜಿಗೆ ಸೇರಬೇಕೆಂದು ಹೋಗಲು, ಅವಳನ್ನು ಕಾಲೇಜಿಗೆ ಸೇರಿಸುವುದಿಲ್ಲವೆಂದು ಹೇಳಿದರು. ಅಲ್ಲಿರುವ ಪಂಚಮರ ಗಂಡುಹುಡುಗರ ಬೋರ್ಡಿಂಗಿಗೆ ಸೇರಬೇಕೆಂದು ಹೋದಳು ಅಲ್ಲಿಯೂ ಅವಕಾಶವಿಲ್ಲವೆಂದರು. ಆದುದರಿಂದ ಇವರಿಗಾಗಿ ಪ್ರತ್ಯೇಕ ಬೋರ್ಡಿಂಗ್ ಆಗಬೇಕು.

ಉ—ಗುರ್ತುಮಾಡಿಕೊಂಡಿದೆ.

ಅ—ಹೆಚ್ಚಾದ ಸ್ಥಲವಸತಿ, ಮತ್ತು ಹೊಸಹೊಸ ವಿದ್ಯಾಶಾಖೆ, ಹೆಚ್ಚು ಜನ ಪ್ರೊಫೆಸರುಗಳು-ಇವುಗಳನ್ನೇರ್ಪಡಿಸಲಿಕ್ಕಾಗಿ ಯೂನಿವರ್ಸಿಟಿಗೆ ಸಾಲಿಯಾನಾ 6 ಲಕ್ಷಕ್ಕೆ ಕಡಿಮೆಯಿಲ್ಲದಂತೆ ಬಡ್ಜೆಟ್ ಗ್ರಾಂಟನ್ನೇರ್ಪಡಿಸಬೇಕು.

ಮಿ॥ ಅಬ್ಬಾಸ್ ಖಾನರು ಇದಕ್ಕೆ ಪ್ರತಿವಾದವನ್ನು ಮಾಡುವಾಗ್ಗೆ-ಪ್ರೈಮರಿ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಅವಶ್ಯಕವಾದಷ್ಟು ಹಣವನ್ನೆಲ್ಲಾ ಒದಗಿಸಿದ ಮೇಲೆ ಯೂನಿವರ್ಸಿಟಿಗೆ ಕೊಡಬೇಕು. ಮತ್ತು ಅದು ಸರ್ಕಾರಿ ಮೇಲ್ವಿಚಾರಣೆಯಲ್ಲೇ ವೆಚ್ಚವಾಗಬೇಕು ಎಂದರು.

ಉ—ಏನೂ ಇಲ್ಲ. (ಸಶೇಷ.)

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ದಾವಣಗೆರೆ ಸತ್ಯಶೋಧಕ—ನಿಮ್ಮ ಲೇಖನವು ಸಾವಕಾಶವಾಗಿ ಬಂದುದರಿಂದ ಮುಂದಣವಾರ ಪ್ರಕಟಿಸಲ್ಪಡುವುದು.—ಪ. ಪ್ರ.

ಹುನಗುಂದ.

ಈಗ್ಗೆ ಎರಡು ವರ್ಷಗಳಿಂದ ಹುನಗುಂದ ವೀರಶೈವ ತರುಣಸಂಘವು ಸಮಾಜ ಸೇವೆಯನ್ನು ಅವ್ಯಾಹತವಾಗಿ ನಡೆಸಿರುವದಷ್ಟೆ. ಈ ಕಾರ್ಯಕ್ಕಾಗಿ ಸ್ಥಳಪರಸ್ಥಳಗಳ ಜನರು ತಮ್ಮ ಶಕ್ತ್ಯನುಸಾರ ಸಹಾಯಮಾಡಿದ್ದಲ್ಲದೆ ಹಳ್ಳಿಗಳಲ್ಲಿ ಹೋಗಿ ಸಂಘದ ಉಪಯುಕ್ತತೆಯ ಬಗ್ಗೆ ವ್ಯಾಖ್ಯಾನರೂಪವಾಗಿ ತಿಳಿಸಿ ಅವರಿಂದಾದರೂ ಸಹಾಯದೊರಕಿಸಿರುವರು. ಇಂಥವರಲ್ಲಿ ಪ್ರಾಮುಖ್ಯವಾಗಿ ಲೂತಿ ವಿದ್ಯಾರ್ಥಿ ಕರ್ನಾಟಕ ಕಾಲೇಜು ಹನಮಂತಗೌಡ ಪಾಟೀಲ ಸೂಳೇಭಾವಿ, ಮಂಜಪ್ಪ ನಾಡಗೌಡ ಕೆಲೂರ, ಇವರಲ್ಲದೆ ಮಹಮ್ಮದೀಯರಾದ ಖಾದೀರಸಾಹೇಬ ಮುಳವಾಡ ವಿಜಾಪುರ ಇವರೇ ಮೊದಲಾದವರು ಮಾಡಿದ ಅವರ್ಣನೀಯವಾದ ಉಪಕಾರದ ಭಾರವನ್ನು ಸಂಘವೂ, ಅದರ ಚಾಲಕರೂ ಎಂದೂ ಮರೆಯಲಾರರು. ಸಂಘವು ಬೆಳವಣಿಗೆಯನ್ನು ಹೊಂದಿದಂತೆ ಅದರ ಚಾಲಕರು ವಿಧಾಯಕ ಕಾರ್ಯಕ್ರಮವನ್ನು ಗೊತ್ತುಪಡಿಸುವುದೂ, ಜನಗಳಲ್ಲಿ ನವಚೈತನ್ಯವನ್ನುಂಟುಮಾಡುವುದೂ ಒಳ್ಳೇದೆಂದು ಭಾವಿಸಿ ಪ್ರತಿವರ್ಷ ಸಮ್ಮೇಲನವನ್ನು ನೆರೆಯಿಸುವದನ್ನ ಗೊತ್ತುಮಾಡಿಕೊಂಡ ಮೇರೆಗೆ ಹೋದವರ್ಷ ಸಮ್ಮೇಲನವನ್ನು ನೆರೆಯಿಸಿ, ಅದರಲ್ಲಿ ತೀರ್ಮಾನಿಸಿದಂತೆ ಬಡವಿದ್ಯಾರ್ಥಿಗಳಿಗಾಗಿ ಉಚಿತ ಭೋಜನಾಲಯವನ್ನೂ, ಶ್ರೀ ಮಹಾಂತೇಶ ಭಜನಾಸಂಘ, ವಾರದ ಪ್ರಾಥಮಿಕಶಾಲಾ, ಲಿಂಗರಾಜ ಪ್ರಾಥಮಿಕಶಾಲಾ ಮೊದಲಾದ ಉಪಯುಕ್ತ ಸಂಸ್ಥೆಗಳನ್ನೂ ಏರ್ಪಡಿಸಿರುವರು. ಅವು ಈಗ ಬಾಲ್ಯಾವಸ್ಥೆಯಲ್ಲಿದ್ದರೂ ಮುಂದೆ ಪ್ರೌಢಾವಸ್ಥೆಯನ್ನೈದುವದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಎರಡನೇ ವರ್ಷದ ಸಮ್ಮೇಲನವು ಸಮಾಜಸೇವೆಯಲ್ಲಿ ತಮ್ಮ ದೇಹವನ್ನು ಸವಿಸುತ್ತಲಿರುವ ಪ್ರಸಿದ್ಧ ಸಮಾಜಸೇವಕರಾದ ಮಂಜಪ್ಪ ಅಣ್ಣಾ ಹರ್ಡೇಕರ ಇವರ ಅಧ್ಯಕ್ಷತೆಯಲ್ಲಿ ಇದೇ ಅಕ್ಟೋಬರ್ ತಿಂಗಳ 27-28 ನೇ ತಾರೀಖಿಗೆ ಕೂಡಿಸುವದು ನಿಶ್ಚಯವಾದ ಮೇರೆಗೆ ಬಾಗಲಕೋಟಿ, ಗುಳೇದಗುಡ್ಡ, ಕಮತಗಿ, ಅಮೀನಗಡ, ಇಲಕಲ್ಲ, ಮೊದಲಾದ ಊರುಗಳ ಜನರಿಂದ ಉತ್ಸಾಹದಿಂದ ನೆರವೇರಿಸಲ್ಪಟ್ಟಿತು. ಸಮ್ಮೇಲನದ ಸ್ವಾಗತ ಸಂಘಾಧ್ಯಕ್ಷರಾದ ಮಿ॥ ಕಲ್ಯಾಣಪ್ಪಾ ಬ್ಯಾಳಿಯವರು ಬಂದ ಎಲ್ಲಭಾಗದ ಜನರಿಗೆ ಸ್ವಾಗತವಿತ್ತು - ವಿಜಾಪುರ ಜಿಲ್ಲೆಯು ವಿದ್ಯೆಯಲ್ಲಿ ತೀರ ಹಿಂದುಳಿದಿರುವದೆಂದೂ, ಆ ಅವಿದ್ಯೆಯನ್ನು ದೂರಮಾಡುವದಕ್ಕಾಗಿ ಅಲ್ಲಲ್ಲಿ ತರುಣಸಂಘಗಳೇರ್ಪಟ್ಟಂತೆ ಇಲ್ಲಿಯಾದರೂ ತರುಣಸಂಘವು ಸ್ಥಾಪಿತವಾಗಿ ಎರಡು ವರ್ಷಗಳಿಂದ ಮಾಡಿದ ಜನಸೇವೆಯ ಚರಿತ್ರೆಯನ್ನು ಹೇಳಿದರು. ಆಮೇಲೆ ಅಧ್ಯಕ್ಷರಾದ ಹರ್ಡೇಕರರು ತಮ್ಮ ಅಸ್ಖಲಿತವಾದ ವಾಣಿಯಿಂದ ಜನರ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸುವಂತೆ ಹೇಳಿದ್ದೇನಂದರೆ— ವೀರಶೈವ ಸಮಾಜವು ಈಗೀಗ ಜಾಗ್ರತವಾಗ ತೊಡಗಿದ್ದರೂ ಅದರಲ್ಲಿಯ ಜಾಡ್ಯವು ಇನ್ನೂ ನಿಶ್ಶೇಷವಾಗಿ ಹರಿದಿಲ್ಲ. ಈ ಜಾಡ್ಯವನ್ನು ದೂರಮಾಡುವ ಉಪಾಯಗಳಲ್ಲಿ ತರುಣಸಂಘವೊಂದಾಗಿದೆ. ಇಂಥ ತರುಣಸಂಘಗಳು ಇನ್ನೂ ಹೆಚ್ಚಾಗಿ ಪ್ರಸಾರವಾಗಿರದಿದ್ದರೂ ಜನಗಳ ಸಹಾನುಭೂತಿಯು ವಿಶೇಷವಾಗಿರದಿದ್ದರೂ ಇದ್ದಷ್ಟು ಸಂಘಗಳು ಮಾಡಿದ ಪ್ರಗತಿಯು ಅಷ್ಟೇನೂ ಅಸಮಾಧಾನಕಾರಕವಾಗಿಲ್ಲ. ಇಷ್ಟೇ ಅಲ್ಲ ಈ ಸಂಘದ ಪ್ರಗತಿಯ ವಿಷಯವಾಗಿ ಸಂಶಯಗ್ರಸ್ತರಾಗಿದ್ದ ಜನರು ಈಗೀಗ ತರುಣರ ಉತ್ಸಾಹಯುಕ್ತವಾದ ಕಾರ್ಯದ ಪರಿಣಾಮವನ್ನು ಕಂಡು ಆಶೆಯುಳ್ಳವರಾಗಿ ಕುತೂಹಲತೆಯಿಂದ ನೋಡುತ್ತಿರುವರು. ಇದೂ ಕೂಡ ಸಂಘಗಳಿಂದಾದ ಪ್ರಗತಿಯ ಚಿನ್ಹವೆಂದೇ ಭಾವಿಸುವೆನು. ಇನ್ನು ಎಷ್ಟೋ ನಮ್ಮ ಜ್ಞಾನವೃದ್ಧವಯೋವೃದ್ಧರಾದವರು ಕೇವಲ ವಯಸ್ಸಿನಿಂದ ತರುಣರಾದವರೇ ಈ ಸಂಘದಲ್ಲಿ ಸೇರಬಹುದಾಗಿ ತಿಳಿದುಕೊಂಡಂತೆ ತೋರುತದೆ. ಆದರೆ ತರುಣ ಈ ಶಬ್ದವು ಕೇವಲ ವಯಸ್ಸಿನಿಂದ ತರುಣರಾಗಿ ವೃದ್ಧರಂತೆ ನಿರುತ್ಸಾಹಿಗಳಾಗಿದ್ದರೆ ಅವರಿಗೆ ಪ್ರಯೋಗಿಸಲ್ಪಡದೆ ಶರೀರದಿಂದ ವೃದ್ಧಾಪ್ಯವು ಪ್ರಾಪ್ತವಾಗಿದ್ದೂ ತಾರುಣ್ಯದಲ್ಲಿ ಸ್ವಾಭಾವಿಕವಾಗಿರತಕ್ಕ ಉತ್ಸಾಹವು ಅವರಲ್ಲಿ ಕಂಡುಬಂದದ್ದಾದರೆ ಅವರು ಕೂಡ ತರುಣರೆಂದೇ ಈ ಸಂಘದಲ್ಲಿ ಸೇರಿಸಿಕೊಳ್ಳಲ್ಪಡುತ್ತಾರೆ. ಮತ್ತು ಯಾವದೇ ಒಂದುಕಾರ್ಯಕ್ಕೆ ಚಲನೆ ಸಿಗಬಹುದಾದರೆ ಉತ್ಸಾಹವುಳ್ಳ ಅನಭಿಜ್ಞ ತರುಣರಿಂದಾಗಲೀ, ಕ್ರಿಯಾಶೂನ್ಯರಾದ ಅನುಭವಜ್ಞ ವೃದ್ಧರಿಂದಾಗಲೀ ಸಾಧ್ಯವಲ್ಲವೆಂಬುವದು ಪ್ರತಿಯೊಬ್ಬರಿಗೂ ತಿಳಿದೇ ಇದೆ. ಅದೇ ವೃದ್ಧರ ಅನುಭವ, ತರುಣರ ಉತ್ಸಾಹಗಳು ಒಂದಾದರೆ ರತ್ನಗಳಿಗೆ ಕುಂದಣವಿಟ್ಟಂತಾಗಿ ಅಸಾಧ್ಯಕಾರ್ಯಗಳನ್ನು ಕೂಡ ಸಾಧ್ಯಮಾಡಿಕೊಳ್ಳಬಹುದು. ಇನ್ನು ಜ್ಞಾನ ಮತ್ತು ಕ್ರಿಯಾ (ತರುಣ ಮತ್ತು ವೃದ್ಧ) ಗಳು ಕೂಡಿಕೊಂಡು ಮಾಡಬಹುದಾದ ಪ್ರಗತಿಯ ಪೂರ್ವಪೀಠಿಕೆಯೆಂದರೆ ವಿದ್ಯಾಪ್ರಸಾರ. ಈಗ ವಿದ್ಯೆಯು ಅವಶ್ಯವಾಗಬೇಕೆಂಬುದು ಪ್ರತಿಯೊಬ್ಬರಿಗೆ ಗೊತ್ತಾಗಿರುವ ಮೂಲಕ ಅದರ ಮಹತ್ವವನ್ನು ವಿಸ್ತರಿಸುವುದಕ್ಕಿಂತ ಯಾವ ಬಗೆಯಾಗಿ ಅದರ ಪ್ರಸಾರಮಾಡಬೇಕೆಂಬುದನ್ನು ವಿಚಾರಿಸುವ:—ಈಗ ವಿದ್ಯೆಯ ಪ್ರಸಾರಮಾಡಬೇಕೆಂಬದಾಗಿ ಯೋಚಿಸಿ ಸರ್ಕಾರವು ಒತ್ತಾಯದ ಪ್ರಾಥಮಿಕಶಿಕ್ಷಣದ ಯೋಜನೆಯನ್ನು ಸಿದ್ಧಪಡಿಸಿದೆ. ಕೆಲವು ಕಾಲದಲ್ಲಿ ಜಾರಿಯಲ್ಲಿ ಬರಬಹುದು. ನಾವೇಕೆ ಆ ಗೊಂದಲದಲ್ಲಿ ಬೀಳಬೇಕೆಂದು ಕೆಲವರು ಯೋಚಿಸಿದರೂ ನಾನು ಹೇಳತಕ್ಕದ್ದಿಷ್ಟೇ. ಆ ಯೋಜನೆಯಂತೆ ಎಲ್ಲೆಡೆಯಲ್ಲಿ ಪ್ರಸಾರವಾಗಬೇಕಾದರೆ ಹತ್ತು ವರ್ಷಗಳು ಬೇಕು. ಆ ಅವಧಿಯನ್ನು ವ್ಯರ್ಥಮಾಡದೆ ನಮ್ಮ ತರುಣಸಂಘಗಳು ಆ ವಿಷಯವಾಗಿ ಪ್ರಯತ್ನಿಸಿದಲ್ಲಿ ಎಷ್ಟೋ ಲಾಭವಾಗುವದು. ಮತ್ತು ಮುಲ್ಕೀಪರೀಕ್ಷೆ ಪಾಸಾದ ಜನರು ಚಾಕರಿಯಿಲ್ಲದೆ ಸುಮ್ಮನೆ ತಿರುಗುತ್ತಿರುವರು. ಅಂಥವರಿಗೆ ಅನ್ನಕ್ಕೆ ಮಾರ್ಗಮಾಡಿಕೊಟ್ಟಂತಾಗುವುದು. ಇನ್ನು ಮಾಧ್ಯಮಿಕ, ಉಚ್ಚಶಿಕ್ಷಣದ ವಿಷಯವಾಗಿ ಚರ್ಚಿಸಲು ತರುಣಸಂಘದ ಸದ್ಯದ ಕರ್ತವ್ಯವಲ್ಲದ ಮೂಲಕ ಅದನ್ನು ಬದಿಗಿಟ್ಟು ಪ್ರಾಥಮಿಕ ಶಿಕ್ಷಣವು ಯಾವಪ್ರಕಾರವಿರಬೇಕೆಂಬುದನ್ನು ತುಸು ವಿಚಾರಿಸುವ—ಈಗ ವಿದ್ಯಾವಂತರೆಂದು ಹೇಳಿಸಿಕೊಳ್ಳುವವರು ಧರ್ಮಭ್ರಷ್ಟರಾಗಿ ತಿರುಗುತ್ತಿದ್ದಾರೆ. ಈ ವಿದ್ಯೆಯನ್ನೇ ಕೊಡಬಾರದೆಂದು ಕೆಲವರಲ್ಲಿ ವಿಚಾರ ಉದ್ಭವಿಸಿದೆ. ಇದೇನೂ ಸುಳ್ಳೆಂದು ಹೇಳಲಿಕ್ಕೆ ಬಾರದಷ್ಟು ಸತ್ಯವಾಗಿದೆ. ಯಾಕಂದರೆ—ವಿದ್ಯೆಯು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳನ್ನು ದೊರಕಿಸಿಕೊಡುವ ಸಾಧಕವಾಗಿದ್ದರೂ ಅದರ ದಿಶೆಯು ಮಾತ್ರ ತಪ್ಪಿದೆ. ಮತ್ತು ಪ್ರಾಥಮಿಕಶಾಲೆಗಳಲ್ಲಿಯ ಕ್ರಮಿಕ ಪುಸ್ತಕಗಳಲ್ಲಂತೂ ಕಾಗೆ ಗುಬ್ಬಿಗಳ ಕಥೆಗಳ ಹೊರತು ಇನ್ನಾವ ಜ್ಞಾನಬೋಧೆಮಾಡುವಂಥವೂ, ನೀತಿಪರರನ್ನಾಗಿಯೂ, ಧಾರ್ಮಿಕರನ್ನಾಗಿಯೂ ಮಾಡುವಂಥವೂ ಆದ ಪಾಠಗಳನ್ನು ಸೇರ್ಪಡಿಸಿಲ್ಲ. ಪೂರ್ವದಲ್ಲಿದ್ದಂತೆ ಗುರುಶಿಷ್ಯ ಸಂಬಂಧವೂ ಹೆಚ್ಚಾಗಿಲ್ಲ. ಈಮೂಲಕ ಧರ್ಮದಲ್ಲಿ ಅನಾದರಹುಟ್ಟುವದು ಸ್ವಾಭಾವಿಕವು. ನಮ್ಮ ತರುಣಸಂಘಗಳು ಸರ್ಕಾರವು ಕ್ರಮಿಕಪುಸ್ತಕಗಳಲ್ಲಿ ಸುಧಾರಣೆ ಮಾಡುವವರೆಗೆ ಹಾದಿನೋಡದೆ ತಮ್ಮಿಂದ ಸ್ಥಾಪಿಸಲ್ಪಟ್ಟ ಪ್ರಾಥಮಿಕಶಾಲೆಗಳಲ್ಲಿ ಈಗಿನಿಂದಲೇ ನೀತಿ, ದಯಾ, ಧರ್ಮಗಳನ್ನು ಬೋಧಿಸುವ ಸೋಮೇಶ್ವರಶತಕವೇ ಮೊದಲಾದ ಪುಸ್ತಕಗಳನ್ನು ಪಠ್ಯಪುಸ್ತಕವನ್ನಾಗಿ ಏರ್ಪಡಿಸಿದರೆ ಒಳ್ಳೇದಾಗುವದು. ಇನ್ನು ಬಡವಿದ್ಯಾರ್ಥಿಗಳಿಗಾಗಿ ಉಚಿತ ಅನ್ನಾಲಯಗಳನ್ನೂ, ಜನಗಳಲ್ಲಿ ಈಗ ತೋರಿಬರುವ ಉಚ್ಚನೀಚತ್ವಭಾವನೆಗಳನ್ನು ತೆಗೆದುಹಾಕಿ ಒಕ್ಕಟ್ಟು ಬೆಳೆಯಿಸಬೇಕೆಂದೂ ಒಳ್ಳೇ ಕಳಕಳಿಯಾದ ಭಾಷಣಮಾಡಿದ ನಂತರ, ಇಲ್ಲಿಯ ಬ್ರಾಹ್ಮಣ ಮಾಮಲೇದಾರ ಮಿ॥ ಕೌಜಲಗಿಯವರು ಇದೇ ವಿಷಯವನ್ನೇ ವಿಸ್ತರಿಸಿ ಹೇಳಿದನಂತರ ಆದಿನದ ಕಾರ್ಯಕ್ರಮವು ಪೂರ್ತಿಯಾಗಿ ಮರುದಿವಸ ಬಾಗಲಕೋಟಿಯ ಮಿ॥ ಕಿಣಗಿ, ಮೊಕಾಸಿ, ಜಗಜಿನ ಮೊದಲಾದ ಕೆಲವು ವಿದ್ಯಾರ್ಥಿಗಳೂ, ವೀರಭದ್ರಶಾಸ್ತ್ರಿಗಳೂ, ಸಬ್ಬುಖಣ್ಣನವರ ಮಾಸ್ತರ, ಅಡಗಿ ಮಾಸ್ತರ, ಮರವಾಸ್ತರ, ಶೆಟ್ಟರಮಾಸ್ತರ, ಕಂಠಿ, ಇವರೇ ಮೊದಲಾದವರ ವಿದ್ಯಾ, ಧರ್ಮ, ಒಕ್ಕಟ್ಟು, ತರುಣಸಂಘಗಳ ಪ್ರಸಾರ ಇವೇ ಮೊದಲಾದ ವಿಷಯಗಳ ಮೇಲೆ ಸರಸಭಾಷಣವಾದ ನಂತರ ಕೆಳಗಿನ ನಾಲ್ಕು ಠರಾವು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು.

(1) ಅಲ್ಲಲ್ಲಿ ಬಡವಿದ್ಯಾರ್ಥಿಗಳಿಗಾಗಿ ಉಚಿತ ಅನ್ನಾಲಯಗಳನ್ನು ಸ್ಥಾಪಿಸಲು ಈ ಸಮ್ಮೇಲನವು ಮಹಾಸ್ವಾಮಿಗಳಿಗೂ, ಗುರುವರ್ಗಕ್ಕೂ ಬೇಡಿಕೊಳ್ಳುತ್ತದೆ.

(2) ಸಕ್ತಿಯ ಪ್ರಾಥಮಿಕ ಶಿಕ್ಷಣವನ್ನು ಕುರಿತು ಮಿ॥ ಚಿಕ್ಕೋಡಿಯವರು ತಮ್ಮ ಮತಭೇದ ಪತ್ರಿಕೆಯಲ್ಲಿ ಸೂಚಿಸಿದಂತೆ ಹಳ್ಳಿಗಳಲ್ಲಿಂದ ಪ್ರಾರಂಭಿಸಿ ಹತ್ತು ವರ್ಷಗಳಲ್ಲಿ ಸಾರ್ವತ್ರಿಕವಾಡಬೇಕೆಂದು ಈ ಸಮ್ಮೇಲನವು ಸರ್ಕಾರಕ್ಕೆ ಸೂಚಿಸುತ್ತದೆ.

(3) ಮುಂದಿನ ವರ್ಷದೊಳಗಾಗಿ ಇದೇ ತಾಲ್ಲೂಕಿನಲ್ಲಿ ತರುಣಸಂಘದಿಂದ ಮೂರು ಪ್ರಾಥಮಿಕಶಾಲೆಗಳೂ, ಬೇರೆಕಡೆಯಲ್ಲಿ ಮೂರು ತರುಣಸಂಘಗಳೂ ಸ್ಥಾಪಿಸಲ್ಪಡಬೇಕು.

(4) ಹಳ್ಳಿಗಳ ಜನರಿಗೆ ಸುಲಭವಾಗಿ ಧರ್ಮತತ್ವಗಳು ತಿಳಿಯುವಂತೆ ಲಾವಣಿಪದಗಳ ರೂಪವಾಗಿ ಶಿವಶರಣರ ಚರಿತ್ರೆಗಳನ್ನು ಮುಂದಿನ ವರ್ಷದೊಳಗಾಗಿ ಮಿ॥ ಬಸವನಗೌಡಾ ಮೆಣಸಿಗಿ ಇಲಕಲ್ಲ ಇವರ ಕಡೆಯಿಂದ ಬರೆಯಿಸಿ ಪ್ರಸಿದ್ಧಿಪಡಿಸತಕ್ಕದ್ದು.

ತಮ್ಮ,
ಬಿ. ಎ. ಬಳೂಟಗಿ,

ಶ್ರೀಮದ್ವೀರಶೈವ ಮಹಾಸಭೆ.

(ಹಿಂದಣ ಶೇಷ.)

ಮಹಾಸಭೆಯು ಹುಟ್ಟಿ 19 ವರ್ಷಗಳಾದರೂ ಜನಸಾಮಾನ್ಯದ ತಿಳಿವಳಿಕೆಯ ಬಗ್ಗೆ ವೀರಶೈವ ಧರ್ಮ ಮತ್ತು ಸಮಾಜದ ಒಗ್ಗಟ್ಟು ಇವುಗಳ ವಿಚಾರವಾಗಿ ಪುಸ್ತಕರೂಪವಾಗಿಯಾಗಲೀ ಉಪನ್ಯಾಸ ಕೀರ್ತನ ಮೂಲಕವಾಗಿಯಾಗಲೀ ಸಾರ್ವತ್ರಿಕವಾಗಿ ಪ್ರಕಟಪಡಿಸಲು ಯತ್ನಿಸಲಿಲ್ಲ. ಶಂಕರಾಚಾರ್ಯ, ಮಧ್ವಾಚಾರ್ಯ ಇವರೇಮೊದಲಾದ ಬ್ರಾಹ್ಮಣ ವಿಭೂತಿಗಳ ಸಿದ್ಧಾಂತ ಪ್ರತಿಪಾದನೆಯು ಇಂಗ್ಲೀಷು ಮತ್ತು ಸಂಸ್ಕೃತ ಭಾಷೆಗಳ ಮೂಲಕ ದೇಶದಲ್ಲೆಲ್ಲಾ ಹಬ್ಬಿ ಆಯಾ ಮತಾವಲಂಬಿಗಳಿಗೆ ಧರ್ಮ ಜಾಗ್ರತಿಯೂ ಉತ್ಸಾಹವೂ ಪ್ರಾಶಸ್ತ್ಯವೂ ಉಂಟಾಗಿ ಅವರು ವೃದ್ಧಿಹೊಂದಲು ಅವಕಾಶವಾಯಿತು. ಪರಧರ್ಮೀಯರೂ ಅವನ್ನು ತಿಳಿದುಕೊಳ್ಳಲು ಅವಕಾಶವಾಯಿತು. ವೀರಶೈವ ಧರ್ಮ ಪ್ರತಿಪಾದಕಗಳಾದ ಶ್ರೀ ವೀರಶೈವ ಸಿದ್ಧಾಂತ ಶಿಖಾಮಣಿ, ವೀರಶೈವಧರ್ಮಶಿರೋಮಣಿ, ಲಿಂಗಧಾರಣ ಚಂದ್ರಿಕೆ, ಶ್ರೀಕರಭಾಷ್ಯ ಇವೇ ಮೊದಲಾದ ಗ್ರಂಥಗಳನ್ನು ಇಂಗ್ಲೀಷಿನಲ್ಲಿ ಬರೆಯಿಸಿ ಪ್ರಚಾರಮಾಡುವುದಕ್ಕೆ ಯತ್ನಿಸಲಿಲ್ಲ. ಎಷ್ಟೋ ಸಂಸ್ಕೃತ ಕನ್ನಡ ಗ್ರಂಥಗಳು ಓಲೆಗರಿಗಳ ರೂಪದಲ್ಲಿ ಗ್ರಾಮಾಂತರಗಳಲ್ಲಿಯೂ ಪ್ರಸಿದ್ಧ ಸ್ಥಳಗಳಲ್ಲಿಯೂ ಇರುವುದುಂಟು. ಒಬ್ಬಿಬ್ಬ ಅಭಿಮಾನಿಗಳು ಕೆಲವನ್ನು ಶೋಧಿಸಿ ಮುದ್ರಿಸುವುದಕ್ಕೆ ಯತ್ನಿಸುತ್ತಿರುವುದೂ ಉಂಟು. ಆದರೇನು? ಧನಸಾಹಾಯ್ಯ, ಜನಸಾಹಾಯ್ಯಗಳು ಇಲ್ಲದಿದ್ದರೆ ಬರೀ ಅಭಿಮಾನವೇನು ಮಾಡೀತು? ಅಂಥವರು ಆ ಓಲೆಗರಿ ಪುಸ್ತಕಗಳನ್ನು ಪುನಃ ಅವುಗಳಿದ್ದ ಮೂಲೆಗಳಿಗೆ ಹಾಕಿ ನಿರುತ್ಸಾಹಿಗಳಾಗಿ ಕುಳಿತಿರುವರು. ವೀರಶೈವ ಧರ್ಮಗೃಹದಬಾಗಿಲಿಗೆ ಬೀಗದಕೈಯಂತಿರುವುದು ಸಂಸ್ಕೃತ ವಿದ್ಯಾಭ್ಯಾಸವು. ಮೈಸೂರು ಸರ್ಕಾರದವರಿಂದ ಭೋಜನವಸತಿಗಳ ಅನುಕೂಲ್ಯ ಸಹಿತವಾಗಿ ಏರ್ಪಡಿಸಲ್ಪಟ್ಟಿರುವ ಸಂಸ್ಕೃತ ಕಾಲೇಜುಗಳನ್ನು ತ್ರಿಮತ ಬ್ರಾಹ್ಮಣರು ಆಕ್ರಮಿಸಿ ವೀರಶೈವರೇ ಮೊದಲಾದವರಿಗೆ ಅವುಗಳಲ್ಲಿ ಅವಕಾಶವನ್ನು ಕೊಡದಿರುವರು. ಆ ಅನುಕೂಲ್ಯವನ್ನು ಪಡೆದುಕೊಳ್ಳುವದಕ್ಕಾಗಿ ಸುಮಾರು 30 ವರ್ಷಗಳಿಂದಲೂ ಕೆಲಅಭಿಮಾನಿಗಳು ಯತ್ನಿಸುತ್ತಿರುವರು. ಈ ಸಂಬಂಧದಲ್ಲಿ ಸಾರ್ವತ್ರಿಕವಾಗಿ ಮಹಾಸಭೆಯಿಂದ ಯಾವ ಘನತರ ಪ್ರಯತ್ನವೂ ಮಾಡಲ್ಪಡಲಿಲ್ಲವೆಂಬುದನ್ನು ದುಃಖದಿಂದ ಹೇಳಬೇಕಾಗುತ್ತದೆ. ಇಷ್ಟೇ ಅಲ್ಲ; ಟಿ. ಆನಂದರಾಯರು ದಿವಾನರಾಗಿದ್ದಾಗ್ಗೆ ಸಂಸ್ಕೃತ ಕಾಲೇಜುಗಳಿಗೆ ವೀರಶೈವರನ್ನು ಸೇರಿಸಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಕೇಳಿದಾಗ್ಗೆ ಜನರು ನೀರು ತರುವ ಬಾವಿಗೆ ಪಂಚಮರನ್ನು ಬಿಡುತ್ತಾರೆಯೇ? ಎಂಬರ್ಥವುಳ್ಳ ಉತ್ತರ ದೊರೆಯಿತು. ಈ ಪ್ರಶ್ನೋತ್ತರಗಳು ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿ॥ ಬ॥ ಪುಟ್ಟಣ್ಣಶೆಟ್ಟರೇ ಮೊದಲುಗೊಂಡು ಅನೇಕ ವೀರಶೈವ ಧರ್ಮಕಳಕಳಿಯುಳ್ಳ ಮಹನೀಯರಿದ್ದರೂ ಈ ಸಂಗತಿಯನ್ನು ಮೈಸೂರು ಸ್ಟಾರ್ ಪತ್ರಿಕೆಯ ಮೂಲಕ ಓದಿ ತಿಳಿದುಕೊಳ್ಳುವುದಕ್ಕೆ ಮಹಾಸಭೆಯ ಸೆಕ್ರೆಟರಿಗಳಾದ ಮ॥ ರಾ॥ ಮೆಣಸಿನಕಾಯಿಶಾಂತವೀರಪ್ಪನವರೂ ಮ॥ ರಾ॥ ಅರಟಾಳ ರುದ್ರಗೌಡರೂ ಇನ್ನೂ ಅನೇಕ ಮಹಾಸಭಾ ಚಾಲಕರೂ ಇದ್ದರೂ, ಧರ್ಮಜ್ವಾಲೆಯು ಉರಿಯುತ್ತಿದ್ದ ಮಹನೀಯರು ಭಾರಿ ಸರ್ಕಾರಿ ಅಧಿಕಾರಿಗಳಾಗಿದ್ದರೂ, ರಾಜೀನಾಮೆ ಕೊಟ್ಟು ಪ್ರತಿಭಟಿಸಿ ಬಲವಾದ ಆಂದೋಳನವನ್ನೆಬ್ಬಿಸಲಿಲ್ಲ. ಹಿಂದೆ ವಂಗ ವಿಭಜನ ಕಾಲದಲ್ಲಿ ಲಾರ್ಡ್ ಕರ್ಜನ್ ದೊರೆಯು ಭಾರತೀಯರು ಸುಳ್ಳು ಹೇಳುವವರು (Indians are a nation of liars) ಎಂದು ಹೇಳಿದುದಕ್ಕೆ ದೇಶದಲ್ಲೆಲ್ಲಾ ನಿಷೇಧ ಸಭೆಗಳೂ ಆಂದೋಳನವೂ ಆರಂಭವಾದುವು. ಪ್ರಧಾನ ಮಂತ್ರಿಯಾಗಿದ್ದ ಲಾಯಿಡ್‌ಜಾರ್ಜರು ಭರತಖಂಡದ ವಿಷಯದಲ್ಲಿ ಕೆಲವು ದಿವಸಗಳಹಿಂದೆ ಮಾಡಿದ ಆಕ್ಷೇಪಣೆಗಳನ್ನು ಕೇಳಿ ದೇಶದಲ್ಲೆಲ್ಲಾ ಚಳವಳಹುಟ್ಟಿ ಸಾಮ್ರಾಜ್ಯಶಾಸನಸಭೆಯಲ್ಲಿಯೂ ಖಂಡನೆಯ ಠರಾವು ತೀರ್ಮಾನವಾದುದನ್ನು ಎಲ್ಲರೂ ಬಲ್ಲರಷ್ಟೆ? ಇದರಂತೆಯೇ ವೀರಶೈವರ ಮೇಲಣ ದುರಪವಾದಗಳನ್ನು ಖಂಡಿಸಲು ಯಾವ ವಿಧವಾದ ಯತ್ನಗಳು ನಡೆದುವು? ಆ ದಿವಾನರ ಉತ್ತರಕ್ಕೆ ತಪ್ಪು ಅರ್ಥ ಮಾಡಿಕೊಂಡಿರುವರೆಂಬ ತೊಪ್ಪೆ ಸಾರಿಸುವ ಸಮಾಧಾನದ ಮಾತಿನಿಂದಲೇ ಸಮಾಜಪ್ರಮುಖರು ತೃಪ್ತರಾಗಿ ಕುಳಿತರು. ಆಗಣ ಸಂದರ್ಭದಿಂದ ಉಂಟಾದ ನಷ್ಟವನ್ನು ಸರಿಪಡಿಸಲೋ ಎಂಗವೋ ಎಂಬಂತೆ ಈಗ ದಿ॥ ಬ॥ ಪುಟ್ಟಣ್ಣಶೆಟ್ಟರು ಸಂಸ್ಕೃತ ಕಾಲೇಜುಗಳಿಗೆ ವೀರಶೈವರನ್ನು ಸೇರಿಸಲೋಸುಗ ಮುಂದಾಳಾಗಿ ನಿಂತು ಹೋರಾಡುತ್ತಿರುವುದು ಅಭಿನಂದನೀಯವೇ ಸರಿ.

ಸಂಸ್ಕೃತ ವಿದ್ಯಾಭ್ಯಾಸದ ಪ್ರಶ್ನೆಯು ಮೈಸೂರು ವೀರಶೈವರಿಗೇ ಸಂಬಂಧಪಟ್ಟುದಲ್ಲ. ಪಂಜಾಬಿನ ಕೊಲೆಯು ಇಡೀ ಹಿಂದೂಸ್ಥಾನಕ್ಕೇ ಸಂಬಂಧಪಟ್ಟಂತೆ ಈ ಪ್ರಶ್ನೆಯು ಇಡೀ ವೀರಶೈವಸಮಾಜಕ್ಕೇ ಸಂಬಂಧಪಟ್ಟುದು. ಈ ಪ್ರಶ್ನೆಯನ್ನು ಬಗೆಹರಿಸಲು ಸಾರ್ವತ್ರಿಕ ಸಂಸ್ಥೆಯಾದ ಮಹಾಸಭೆಯು ಯತ್ನಿಸಬೇಕಾದುದು ಅದರ ಮುಖ್ಯ ಕರ್ತವ್ಯವಾಗಿರುವುದು. ಇದನ್ನು ತಿಳಿದೋ ತಿಳಿಯದೆಯೋ ಮಹಾಸಭೆಯ ಚಾಲಕರು ಸುಮ್ಮನೆ ಕುಳಿತಿರುವರು. ಸರ್ಕಾರಿ ಅಧಿಕಾರಗೌರವಪ್ರಾಪ್ತಿ ವಿಷಯದಲ್ಲಿ ಸ್ವಲ್ಪ ಜಾಗ್ರತರಾಗಿರುವುದು ಇದ್ದುದರಲ್ಲಿ ಸ್ವಲ್ಪ ಉತ್ತಮವೆಂದೇ ಹೇಳಬೇಕು. ಅತ್ಯವಶ್ಯಕವಾಗಿ ಮೈಸೂರಿನಲ್ಲಿ ನಡೆಯಬೇಕಾಗಿದ್ದ ಮಹಾಸಭೆಯನ್ನು ಬಿಡಿಸಿ ತಮ್ಮಲ್ಲಿ ಇದೇ ಡಿಸಂಬರಿನಲ್ಲೋ ಅಲ್ಲದೆ ಮುಂದೆ ಮೇ ತಿಂಗಳಲ್ಲೋ ಮಾಡಬೇಕೋ? ಎಂಬ ಪ್ರಶ್ನೆಯ ವಿಚಾರವಾಗಿ ದೀರ್ಘಾಲೋಚನೆ ಮಾಡುತ್ತ ಹಂಸಭಾವಿಯ ವೀರಶೈವ ಮಹಾಜನರು ಕುಳಿತಿರುವರು. ಮಹಾಸಭಾ ಚಾಲಕರು ಈ ಸಂಬಂಧವಾಗಿ ನಡೆಯುವ ಪತ್ರವ್ಯವಹಾರವನ್ನೂ ಚರ್ಚೆಗಳನ್ನೂ ಓದಿ ಕೇಳುತ್ತ ವಿಶ್ರಾಂತಿತೆಗೆದುಕೊಳ್ಳುತ್ತಿರಬಹುದು. ಇಂಥ ನವಚೇತನ ಕಾಲದಲ್ಲಿ ಮಹಾಸಭೆಯ ವಾರ್ಷಿಕಾಧಿವೇಶನಗಳಲ್ಲದೆ ಎಷ್ಟೋ ವಿಶೇಷ ಅಧಿವೇಶನಗಳೂ ನಡೆಯಬೇಕಾಗಿತ್ತು. ಕೊನೆಗೆ ವರ್ಷಕ್ಕೊಮ್ಮೆಯೂ ಇಲ್ಲ! ಎರಡು ವರ್ಷಕ್ಕೊಮ್ಮೆಯೂ ಇಲ್ಲ! ಇದರ ಕಾರಣವನ್ನು ವೀರಶೈವ ಸಮಾಜದ ದುರ್ದೈವದ ಹೊರತು ಇನ್ನಾರು ಹೇಳಬೇಕು?

ವೀರಶೈವ ವಿದ್ಯಾರ್ಥಿ ನಿಕೇತನವು

ನಮ್ಮ ಮೈಸೂರು ರಾಜಧಾನಿಯಲ್ಲಿ ಇಂಗ್ಲೀಷ್ ಮತ್ತು ಸಂಸ್ಕೃತ ವಿದ್ಯಾಭ್ಯಾಸ ಮಾಡುವುದಕ್ಕೆ ಬಂದ ಪರಸ್ಥಳದ ವೀರಶೈವ ವಿದ್ಯಾರ್ಥಿಗಳ ವಾಸಕ್ಕೆ ಯೋಗ್ಯವಾದ ಸ್ಥಾನವೂ, ಭೋಜನಾದಿಗಳಿಗೆ ಅನುಕೂಲ್ಯವೂ, ಇಲ್ಲದೆ ಅತಂತ್ರವಾಗಿ ಶ್ರಮಪಡುತ್ತಿದ್ದು ನಿರ್ವಾಹವಿಲ್ಲದೆ ಹೋಟಲಿನಲ್ಲಿ ಭೋಜನವನ್ನು ಮಾಡಿಕೊಂಡು ಸಿಕ್ಕಿದ ಕಡೆಯಲ್ಲಿ ವಾಸವನ್ನು ಮಾಡುತ್ತ ವಿದ್ಯಾವ್ಯಾಸಂಗವನ್ನು ಮಾಡುತ್ತಿದ್ದುದ್ದು ಸರಿಯಷ್ಟೆ. ಇದಕ್ಕೆ ಮುಂಚೆ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ರಾಜಧಾನಿಯಲ್ಲಿ ವೀರಶೈವಾಶ್ರಮವು ಸ್ಥಾಪಿಸಲ್ಪಟ್ಟು ಕೆಲವು ವರ್ಷಗಳು ನಡೆಯುತ್ತಿದ್ದು ಕಾರಣಾಂತರದಿಂದ ನಿಂತುಹೋಯಿತು. ಆ ಆಶ್ರಮವಿರುವವರೆಗೂ ನಮ್ಮ ವೀರಶೈವ ವಿದ್ಯಾರ್ಥಿಗಳಿಗೆ ಸ್ವಗೃಹದಲ್ಲಿ ವಾಸಮಾಡಿದಂತೆ ಸೌಕರ್ಯವಿತ್ತು. ಆಶ್ರಮವು ನಿಂತುಹೋದಂದಿನಿಂದ ವಿದ್ಯಾರ್ಥಿಗಳು ಚದರಿ ಹೋಗಿ ತುಂಬಾ ಶ್ರಮಪಡುತ್ತಿದ್ದರು. ಇಷ್ಟರಲ್ಲಿ ವಿದ್ಯಾರ್ಥಿಗಳ ಭಾಗ್ಯೋದಯವೇ ಮೂರ್ತಿಯಂ ಧರಿಸಿ ಅವತರಿಸಿದಂತೆ ಶ್ರೀ ಕಾಶೀಕ್ಷೇತ್ರದಲ್ಲಿ ಶಾಸ್ತ್ರಾಧ್ಯಯನ ಮಾಡುತ್ತಿದ್ದ ಲಕ್ಷ್ಮೇಶ್ವರದ ಬಾಳೆಹಳ್ಳಿ ಮಠಾಧ್ಯಕ್ಷ ಶ್ರೀ ಪಟ್ಟದಸ್ವಾಮಿಗಳು ನಮ್ಮ ರಾಜಧಾನಿಗೆ -ಕಾಕತಾಲೀಯನ್ಯಾಯದಂತೆ- ಅಕಸ್ಮಾತ್ ದಯೆಮಾಡಿಸಿದರು. ಈ ಮಹನೀಯರು -ವಿದ್ಯಾನೇವಿಜಾನಾತಿವಿದ್ವಜ್ಜನಪರಿಶ್ರಮಂ- ಎಂಬಂತೆ ವಿದ್ವಾಂಸರಾದುದರಿಂದ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳ ಕಷ್ಟತರವಾದ ಸ್ಥಿತಿಯನ್ನು ನೋಡಿ ಭಿಕ್ಷಾಟನೆಯನ್ನಾದರೂ ಮಾಡಿ ವಿದ್ಯಾರ್ಥಿಗಳಿಗೆ ತಕ್ಕಷ್ಟು ಅನುಕೂಲ್ಯವನ್ನು ಕಲ್ಪಿಸಿಕೊಡಬೇಕೆಂಬ ದೃಢಸಂಕಲ್ಪವಂ ಮಾಡಿ ವಿದ್ಯಾರ್ಥಿಗಳ ಪ್ರಾರ್ಥನೆಯಂ ಕೇಳಿದೊಡನೆಯೇ ಒಂದು ದೊಡ್ಡ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು ಇದಕ್ಕೆ (ವಿದ್ಯಾರ್ಥಿನಿಕೇತನ) ವೆಂದು ನಾಮಕರಣವಂ ಮಾಡಿ ವಿದ್ಯಾರ್ಥಿಗಳ ಭೋಜನಾಭ್ಯಂಜನಾದ್ಯುಪಚಾರಗಳಿಗಾಗಿ ಇಬ್ಬರು ಪರಿಚಾರಕರನ್ನು ನೇಮಿಸಿ ವಿದ್ಯಾರ್ಥಿಗಳಿಗೆ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿಸುತ್ತ ಯೋಗಕ್ಷೇಮವನ್ನು ತಾವೇ ನೋಡಿಕೊಳ್ಳುತ್ತಿದ್ದಾರೆ. ಇಲ್ಲಿ ಇಂಗ್ಲೀಷ್ ಓದುವ ವಿದ್ಯಾರ್ಥಿಗಳಿಗೆ ತಿಂಗಳೊಂದಕ್ಕೆ 10 ರೂಪಾಯಿಗಳಂತೆಯೂ ಇಂಗ್ಲೀಷಿನ ಜೊತೆಯಲ್ಲಿ ಸಂಸ್ಕೃತವನ್ನು ಅಭ್ಯಾಸಮಾಡುವವರಿಗೆ 8ರೂಪಾಯಿಗಳಂತೆಯೂ ರಾಜಧಾನಿಯಲ್ಲಿರುವ ವೀರಶೈವ ಮಹಾಜನಗಳಿಂದ

ಸ್ಥಾಪಿಸಲ್ಪಟ್ಟಿರುವ ಶ್ರೀ ಶಂಕರವಿಲಾಸ ಪಾಠಶಾಲೆಯಲ್ಲಿ ಸಂಸ್ಕೃತಭಾಷೆಯನ್ನೂ ವೈದಿಕಸಂಸ್ಕಾರ ವಿಧಿಗಳನ್ನೂ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 5 ರೂಪಾಯಿಗಳಂತೆಯೂ ವಿದ್ಯಾರ್ಥಿಗಳು ಭೋಜನಾದಿಗಳಿಗಾಗಿ ಕೊಡಬೇಕೆಂದೂ, ಕೇವಲ ಅನಾಥರಾಗಿ ಬಂದುಬಂದವರಿಗೆ ಧರ್ಮಾರ್ಥವಾಗಿ ಭೋಜನ ಮಾಡಿಸುವಂತೆಯೂ ಏರ್ಪಡಿಸಲ್ಪಟ್ಟಿದೆ. ಇದೇ ಸುಸಮಯದಲ್ಲಿ ವೀರಶೈವ ವಿದ್ಯಾರ್ಥಿಗಳ ಅನುಕೂಲ್ಯಕ್ಕಾಗಿ 40 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಸಂಕಲ್ಪ ಮಾಡಿದ್ದ ಮ॥ ವಿದ್ಯಾಭಿಮಾನಿಗಳಾಗಿಯೂ ಉದಾರರಾಗಿಯೂ ಇರುವ ಕಬ್ಬಳ್ಳಿ ಚನ್ನಬಸಪ್ಪನವರು ನಮ್ಮ ಸುದೈವದಿಂದ ಮೊನ್ನೆ ರಾಜಧಾನಿಗೆ ಬಂದಿದ್ದಾಗ ವಿದ್ಯಾರ್ಥಿಗಳೆಲ್ಲರೂ ಸೇರಿ ಬ್ರಂ॥ ಶ್ರೀ॥ ಪಟ್ಟದಸ್ವಾಮಿಗಳ ಅಪ್ಪಣೆಯಂ ಪಡೆದು ಮ॥ ರಾ॥ ಯವರನ್ನು ವಿದ್ಯಾರ್ಥಿನಿಕೇತನಕ್ಕೆ ಬರಮಾಡಿಕೊಂಡರು. ಆಗ ವಿದ್ಯಾರ್ಥಿಗಳ ಪ್ರಾರ್ಥನಾನುಸಾರ ಕಟ್ಟಡಕ್ಕಾಗಿ ಕೊಡುವ ಬಾಡಿಗೆಯನ್ನು ತಾವೇ ಕೊಡುತ್ತ ಬರುವೆವೆಂದು ಆ ವಿತರಣಶೀಲಮಹನೀಯರು ವಾಗ್ದಾನಮಾಡಿದರು. ಪ್ರಕೃತ ಈ ವಿದ್ಯಾರ್ಥಿನಿಕೇತನದಲ್ಲಿ 30 ಮಂದಿ ವಿದ್ಯಾರ್ಥಿಗಳು ಇದ್ದಾರೆ. ಇನ್ನು ಅನೇಕರು ಸೇರುವುದರಲ್ಲಿದ್ದಾರೆ. ಈ ವಿದ್ಯಾರ್ಥಿನಿಕೇತನವು ತಪ್ಪದಂತೆ ನಡೆಯಿಸುವುದಕ್ಕಾಗಿ ದೃಢಸಂಕಲ್ಪಗೊಂಡ ಶ್ರೀ ಸ್ವಾಮಿಗಳಿಗೂ ಮತ್ತು ಸಹಾಯಕರಾದ ಮ॥ ರಾ॥ ಕಬ್ಬಳ್ಳಿ ಚನ್ನಬಸಪ್ಪನವರಿಗೂ ವಿದ್ಯಾರ್ಥಿಗಳ ಪರವಾಗಿ ನಾನು ಆನಂದ ವಂದನೆಗಳಂ ಸಮರ್ಪಿಸುತ್ತೇನೆ.

ನಿಕೇತನವಾಸಿ.

ನೆಲಮಂಗಲದ ತಾಲ್ಲೂಕು ತ್ಯಾಮಗೊಂಡ್ಲು ಆರ್ಯವೈಶ್ಯ ಸಂಘದ ವಾರ್ಷಿಕ ಮಹೋತ್ಸವ.

ಕಳೆದ ನವಂಬರ್ ತಾ॥ 19ನೆ ಭಾನುವಾರ ಆರ್ಯವೈಶ್ಯ ಸಂಘದ ಮಹಾಸಭೆಯು ವೈಶ್ಯರ ಪೇಟೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರೀ ಅಮ್ಮನವರ ದೇವಸ್ಥಾನದ ಮಹಡಿಯ ಮೇಲೆ ಬೆಂಗಳೂರಿಂದ ದಯಮಾಡಿಸಿದ್ದ ಮ॥ ರಾ॥ ಪಿ. ಸುಬ್ರಾಯಶೆಟ್ಟರವರ ಅಧ್ಯಕ್ಷತೆಯಲ್ಲಿ ನಡೆಯಿಸಲ್ಪಟ್ಟಿತು. ಈ ಸಭೆಗಾಗಿ ಬೆಂಗಳೂರಿಂದ ಮ॥ ರಾ॥ ಗಳಾದ ಅಡ್ವೋಕೇಟ್ ಕೆ. ಸುಬ್ರಾಯಶೆಟ್ಟಿ ಬಿ. ಎ., ಎಲ್‌ಎಲ್. ಬಿ. ರವರು, ಸಾಹುಕಾರ್ ಗೋವಿಂದಶೆಟ್ಟರು, ಪಿ. ಸಂಪಂಗಿ ರಾಮಯ್ಯನವರು, ಎ. ನಂಜುಂಡಶೆಟ್ಟರು, ಕಂಟೋನ್ಮೆಂಟಿನಿಂದ ಅಡ್ವೋಕೇಟ್ ಮಿ॥ ಟಿ॥ ಶ್ರೀನಿವಾಸಲುಶೆಟ್ಟಿ, ಬಿ. ಎ., ಬಿ. ಎಲ್. ರವರು, ಶ್ರೀಕಂಠಶೆಟ್ಟರು ಗೌರೀಬಿದನೂರಿಂದ ಮುನಿಯಪ್ಪ ಶೆಟ್ಟರು ಬಂದಿದ್ದರು. ಈ ಸಂಘದ ಅಧಿಕಾರಿಗಳೂ ಮೆಂಬರುಗಳೂ ಸುಮಾರು ಐವತ್ತು ಮಂದಿಯವರೆಗೂ ಸೇರಿದ್ದರು. ದೇವತಾಪ್ರಾರ್ಥನೆಯಾದನಂತರ ಮ॥ ರಾ॥ ನರಸಯ್ಯಶೆಟ್ಟರು ಸಂಘದ ವಾರ್ಷಿಕರಿಪೋರ್ಟನ್ನು ಓದಿದರು. ಮ॥ ಗಳಾದ ರಾಮಲಕ್ಷ್ಮಣ ಶೆಟ್ಟರು ಪಿ. ವೆಂಕಟನಾರಾಯಣಶೆಟ್ಟರು ಸಂಘಾಭಿವೃದ್ಧಿ ವಿಚಾರವಾಗಿ ಭಾಷಣಮಾಡಿದರು. ಅಡ್ವೋಕೇಟ್ ಸುಬ್ರಾಯಶೆಟ್ಟರ ಭಾಷಣವು ಚಿತ್ತಾಕರ್ಷಕ ವಾಗಿತ್ತು. ವೈಶ್ಯರಲ್ಲಿ ಕುಲಾಭಿಮಾನವೂ ಏಕಮತವೂ ಬಹಳ ಮುಖ್ಯವಾಗಿರಬೇಕೆಂದು ಸ್ವಾರಸ್ಯವಾಗಿ ಮಾತನಾಡಿದರು. ಮುಂದಿನ ವರ್ಷದ ಅಧಿಕಾರಿಗಳ ಚುನಾವಣೆ ಯಾದಮೇಲೆ, ಸಂಘದ ಆಡಳಿತಗಳು ಶಿಸ್ತು ಮಾಡಲ್ಪಟ್ಟವು. ಸಭೆಯ ಅಧ್ಯಕ್ಷ ಪದವಿಯನ್ನಲಂಕರಿಸಿದ್ದ ಪಾಪಿ. ಸುಬ್ಬರಾಮಶೆಟ್ಟರವರು ಮಾಡಿದ ಭಾಷಣವು ಸ್ವಾರಸ್ಯವಾಗಿತ್ತು. ವಿದ್ಯೆಯ ಮಹತ್ವವನ್ನು ನಿರೂಪಣೆಮಾಡಿ ಶ್ರೀಮನ್ಮಹಾರಾಜರವರ ಆಳ್ವಿಕೆಯಲ್ಲಿ ವಿದ್ಯಾಭ್ಯಾಸದ ಕಡೆಗೆ ಎಲ್ಲರೂ ಗಮನಕೊಡುವುದು ಅತ್ಯಗತ್ಯವೆಂಬ ವಿಷಯವನ್ನು ಎಲ್ಲರ ಮನಸ್ಸಿಗೂ ನಾಟುವಂತೆ ಹೇಳಿದರು. ಆರ್ಯವೈಶ್ಯ ಮಹಾಸಭೆಯು ವಿಷಯವನ್ನೆತ್ತಿಕೊಂಡು ಬೆಂಗಳೂರಿನ ಮಾತೃಸಂಘಕ್ಕೆ ತಕ್ಕ ಪ್ರೋತ್ಸಾಹಕೊಟ್ಟು ದೇಶದ ಎಲ್ಲಾ ಕಡೆಗಳಲ್ಲಿಯೂ ಶಾಖಾ ಸಂಘಗಳು ಏರ್ಪಟ್ಟರೆ ನಮ್ಮ ಜನರು ದೇವರಸೇವೆ, ಕುಲಸೇವೆ, ರಾಜಸೇವೆ, ದೇಶಸೇವೆ ಮಾಡಲು ಅರ್ಹರಾಗುವರೆಂದು ಹೇಳಿ ತಮ್ಮ ಭಾಷಣ ಮುಗಿಸಿದರು. ನಂತರ ಶ್ರೀ ಕನ್ಯಕಾಪರಮೇಶ್ವರೀ ಅಮ್ಮನವರಿಗೆ ಮಹಾಮಂಗಳಾರತಿಯು ನಡೆದು, ಗಂಧ ಪುಷ್ಪ ಫಲ ತಾಂಬೂಲಾದಿಗಳನ್ನು ಸರ್ವರಿಗೂ ಹಂಚಿ, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಮುಗಿಯಿತು.

ಓರ್ವ ಪ್ರೇಕ್ಷಕ,

ಹಿರೀಸಾವೆ ವೃತ್ತಾಂತ.

ಹಿರೀಸಾವೆ ಎಂಬ ಗ್ರಾಮವು ಸುಮಾರು 2500 ಜನ ಪ್ರಜಾಸಮೂಹವುಳ್ಳದ್ದಾಗಿಯೂ ಚನ್ನರಾಯಪಟ್ಟಣ ಮತ್ತು ನಾಗಮಂಗಲದ ಕೊನೆ ಸರಹದ್ದಾಗಿಯೂ, ರೋಡುಪಕ್ಕದ ಗ್ರಾಮವಾಗಿಯೂ ಇದೆ. ಊರಿನಲ್ಲಿ ಗ್ರಾಮಪಾಕೀಜು ಇಲ್ಲದೆ ಪ್ರತಿವರ್ಷವೂ ಸಾಂಕ್ರಾಮಿಕ ರೋಗದಿಂದ ಜನಗಳು ಮೃತ್ಯುವಿಗೆ ತುತ್ತಾಗುತ್ತಾರೆ. ಮೈಸೂರು ಸರ್ಕಾರಕ್ಕೆ ಸುಮಾರು 8 ವರ್ಷದಿಂದ ಆಸ್ಪತ್ರೆಯನ್ನು ಕೊಡಬೇಕೆಂದು ಪ್ರಜೆಗಳು ಪದೇಪದೇ ಬೇಡುತ್ತಿರುತ್ತಾರೆ. ಇದು ಸರ್ಕಾರದವರ ಚಿತ್ತಕ್ಕೆ ಬಾರದಿರುವುದು ನಮ್ಮ ದುರದೃಷ್ಟವೇ ಸರಿ. ಹೋದವರ್ಷ ಪ್ಲೇಗುಗಲಾಟೆಯಿಂದ 80 ಜನರು ಸತ್ತರು. ಈವರ್ಷ ಪ್ಲೇಗುಗಲಾಟೆ ಆರಂಭವಾಗಿ 2 ತಿಂಗಳಾಯ್ತು. ಅಂದಿನಿಂದ ಅಮಲ್ದಾರರಿಗೂ, ಹೆಲ್ತಾಫೀಸರಿಗೂ, ಡೆಪ್ಯುಟಿಕಮಿಷನರ್ ಸಾಹೇಬರಿಗೂ ನಮ್ಮ ಕಷ್ಟಗಳನ್ನು ಬಿನ್ನಯಿಸಿದಾಗ್ಯೂ ಗಮನಕ್ಕೆ ತಾರಲಿಲ್ಲ. ಇದು ನಮ್ಮ ದುರದೃಷ್ಟ. ಗ್ರಾಮದಲ್ಲಿ ಪ್ರಜೆಗಳಾದರೋ ತಮ್ಮ ಮೌಢ್ಯತನದಿಂದಲೋ ತಮ್ಮ ದುರಾದೃಷ್ಟದಿಂದಲೋ ಗ್ರಾಮವನ್ನು ಬಿಡದೆ ಮೃತ್ಯುವಿಗೆ ತುತ್ತಾಗುತ್ತಿದ್ದಾರೆ. ಈವರೆಗೆ ಸುಮಾರು 55 ಜನರು ಸತ್ತರು. ಅಲಾಗಾಯ್ತು ರಿಪೋರ್ಟುಗಳು ಸರ್ಕಾರಕ್ಕೆ ಹೋಗುತ್ತಲೇ ಇರುತ್ತವೆ. ಈಗ್ಗೆ 1½ ತಿಂಗಳ ಹಿಂದೆ ಸ್ಯಾನಿಟರಿ ಇನ್ಸ್‌ಪೆಕ್ಟರು ಬಂದು ಪರಾಂಬರಿಸಿ ಈ ದಿನವೇ ಡಾಕ್ಟರನ್ನು ಕಳುಹಿಸುತ್ತೇವೆಂದು ಹೇಳಿಹೋದವರು ಇದುವರೆಗೂ ಬರಲಿಲ್ಲ. ಇದು ಕೂಡ ನಮ್ಮ ದುರದೃಷ್ಟವೇ ಸರಿ. ಸ್ಥಳದ ನೌಕರರು ಗ್ರಾಮದಲ್ಲಿ ಹಾಜರಿಲ್ಲದೆ ಹೋಗಿ ಪ್ರಜೆಗಳ ಅಹವಾಲನ್ನು ಕೇಳುವವರಿಲ್ಲ. ಈ ವಿಷಯವನ್ನು ನಮ್ಮ ಸರ್ಕಾರದವರು ಚಿತ್ತಕ್ಕೆತಂದುಕೊಂಡು ನಮ್ಮನ್ನು ಕಾಪಾಡುತ್ತಾರೆಂದು ಕೋರುತ್ತೇವೆ.

ಓರ್ವ ಗ್ರಾಮಾಭಿಮಾನಿ.

ಶ್ರೀ ಕಲ್ಯಾಣಪಟ್ಟಣದಲ್ಲಿ ನಡೆಯುವ ಶ್ರೀ ಬಸವೇಶ್ವರ ಪುರಾಣದ ಮಹಾಮಂಗಲ ಗಣಾರಾಧನೆಯು.

ಈ ಪುರಾಣವು ಈಗ್ಗೆ 10 ವರ್ಷಗಳ ಮುಂಚೆ ಬಾಗಲಕೋಟೆ ಶೆಂಗಿನಮಠದ ರೇವಣಸಿದ್ಧಸ್ವಾಮಿಗಳ ಶಿಷ್ಯ ಬಸವಲಿಂಗಸ್ವಾಮಿಗಳವರಿಂದ ಆರಂಭಿಸಲ್ಪಟ್ಟು ಮಂಗಲಗಣಾರಾಧನೆಯಾಗದೆ ಇದುವರೆಗೂ ವಿಘ್ನಪರಂಪರೆಗೆ ಗೀಡಾಗಿತ್ತು. ಏತದ್ವಿಷಯವನ್ನು ಸತ್ಪುರುಷರೂ ಮಹಾಶಿವಯೋಗಿಗಳೂ ಆದ ಮುಧೋಳಮಠಾಧೀಶ ಚರಮೂರ್ತಿ ಶ್ರೀ ಶಿವಲಿಂಗಮಹಾಸ್ವಾಮಿಗಳು ತಿಳಿದು ಕಲ್ಯಾಣದಲ್ಲಿ ಪುರಾಣ ಪ್ರಾರಂಭಿಸಿ ಮಂಗಲಗಣಾರಾಧನೆ ಮಾಡದೆ ಇರುವದು ಇಡೀನೈಜಾಂ ಪ್ರಾಂತಕ್ಕೇ ಕಲಂಕವೆಂದರಿತು ಕೆಲ ಮುಖ್ಯ ಜನರ ಹಾಗೂ ಪುರಾಣಪ್ರಾರಂಭಿಸಿದ ಶ್ರೀಗಳ ಅನುಮತಿಯನ್ನು ತೆಗೆದುಕೊಂಡು ಕಾರ್ಯಾರಂಭಮಾಡಿ ಇದೇ ಮಾರ್ಗಶಿರ ವದ್ಯ 1 ಮಂಗಳವಾರ ಮಹಾಪಾದಪೂಜೆ, ದ್ವಿತೀಯಾ ಬುಧವಾರ ಮಹಾ ಗಣಾರಾಧನೆ, ತೃತಿಯಾ ಗುರುವಾರ ಶ್ರೀ ಪುರಾಣದ ಮೆರೆವಣಿಗೆಯ ಮಹೋತ್ಸವ ಈ ಪ್ರಕಾರ ನಡೆಯಿಸಲು ನೇಮಿಸಿರುತ್ತಾರೆ. ಹಾಗೂ ಈ ಆರಾಧನೆಗೆ ವಿಶೇಷ ವೀರಶೈವರು ಆಗಮಿಸುವದರಿಂದ ಪ್ರಾಂತಿಕ ಸಭೆಯನ್ನೂ ಮಾಡಲು ಯೋಚಿಸಿರುವರು. ಪ್ರಯುಕ್ತ ಕಲ್ಯಾಣಪುರವನ್ನು ನೋಡಲಪೇಕ್ಷೆಯುಳ್ಳ ಎಲ್ಲಾ ವೀರಶೈವರೂ ಈ ಸಮಯವನ್ನು ಹೋಗಗೊಡದೆ ಅತ್ಯಗತ್ಯವಾಗಿ ಆಗಮಿಸಿ ಪುರಾಣ ಮಹೋತ್ಸವಕ್ಕೆ ಶೋಭೆಯನ್ನುಂಟುಮಾಡಬೇಕಾಗಿ ಕೋರಿಕೆ. ಈ ಸ್ಥಳಕ್ಕೆ ಬರುವವರು ಗುಲ್ಬರ್ಗಾ ಸ್ಟೇಶನ್ನಿನಲ್ಲಿಳಿದು ಮೋಟಾರಿನ ಮೇಲೆ ಬರಬೇಕಾಗುವದು. ಕಲ್ಯಾಣಕ್ಕೆ ಬರುವವರಿಗಾಗಿ ಮೋಟಾರುಗಳ ಫೀಸು ಕಡಿಮೆಮಾಡಿಸಲಾಗಿರುತ್ತದೆ.

ಶ್ರೀ ಕಲ್ಯಾಣಪಟ್ಟಣದ ಭಕ್ತರು.

ಮುಂಬೈ ಕರ್ನಾಟಕದಲ್ಲಿ ಎಲ್ ಎಲ್. ಬಿ. ಪರೀಕ್ಷೆಯಲ್ಲಿ ಪಾಸಾದವರು.

ಇದೇ ಸೆಪ್ಟಂಬರ್ ರಿಜಲ್ಟ್‌ನಲ್ಲಿ ಬಿ. ಎ. ಎಲ್‌ಎಲ್. ಬಿ. ಪರೀಕ್ಷೆಯಲ್ಲಿ ನಮ್ಮ ವೀರಶೈವ ಬಂಧುಗಳ ಪೈಕಿ ಮಿ॥ ಆಲೂರು ಬಾಗಲಕೋಟೆ, ಮಿ॥ ಆಲೂರ ಶಹಾಪೂರ ಮಿ॥ ಮಠ ಅಮರಾವತಿ ಮಿ॥ ಚಿರಾಟಿ ಈ ಪ್ರಕಾರ ನಾಲ್ಕುಮಂದಿ ಪಾಸಾಗಿರುತ್ತಾರೆ. ಇದಲ್ಲದೆ ಹೈಕೋರ್ಟ್ ಪ್ಲೀಡರ ಪರೀಕ್ಷೆಯಲ್ಲಿ ಮಿ॥ ಚೌದಂಡರು ಪಾಸಾಗಿ ಸನ್ನದು ಪಡೆದು ಬಾಗಲಕೋಟೆಯಲ್ಲಿ ಕೆಲಸ ಆರಂಭಮಾಡಿರುತ್ತಾರೆ. ಸದರಿಯವರು ತಮ್ಮ ಕರ್ತವ್ಯ ಮುಗಿಸಿದರು. ನಾವು ಇನ್ನುಮೇಲೆ ಸ್ವಜಾತಿ ಅಭಿಮಾನವಿಟ್ಟು ಅವರುಗಳಿಗೆ ಸಹಾಯ ಮಾಡುವ ಕೆಲಸವು ಉಳಿದಿರುತ್ತದೆ. ಮತಬಾಂಧವರು ಹಿಂದುಮುಂದೆ ನೋಡದೆ ಸಹಾಯ ಮಾಡುತ್ತೀರೆಂದು ನಂಬಿದ್ದೇನೆ. ಮುಂದೆ 1923ನೆ ಮಾರ್ಚಿ ಪರೀಕ್ಷೆಯಲ್ಲಿ ಫಸ್ಟ್ ಮತ್ತು ಸೆಕೆಂಡ್ ಬಿ. ಎ., ಎಲ್‌ಎಲ್. ಬಿ. ಗೆ 28–30 ಜನರು ಕೂಡ್ರತಕ್ಕವರಿದ್ದಾರೆ. ಇವರಿಗೆ ಮಹಾದೇವನು ಯಶಸ್ಸು ಕೊಡಲೆಂದು ಬೇಡಿಕೊಳ್ಳುತ್ತೇನೆ.

ಲಿಂಗಪ್ಪಾ ನೀಲಧರ ಸಕ್ರೋಜಿ ಬಾಗಲಕೋಟೆ.

ಹಾಲ್ಕುರಿಕೆ ಮಠದ ಸ್ವಾಮಿಗಳವರ ಉತ್ಸವವು.

ತಿಪಟೂರು ತಾಲ್ಲೂಕು ಸರ್ವಮಾನ್ಯ ಹಾಲ್ಕುರಿಕೆ ಗ್ರಾಮದಲ್ಲಿ ತಾ॥ 17-11-22ನೆ ಶುಕ್ರವಾರದ ದಿವಸ ಗೌರ್ನಮೆಂಟ್ ಆರ್ಡರ್ ಪ್ರಕಾರ ಭಾಜಾ ಭಜಂತ್ರಿ ಮತ್ತು ಬಿರುದಾವಳಿಗಳ ಸಮೇತ ನಡಿಸಲ್ಪಟ್ಟಿತು. ಪೋಲೀಸ್ ಸೂಪರಿಂಟೆಂಡೆಂಟ್‌ಸಾಹೇಬರವರ ಸ್ವಾರಿ ದಯಮಾಡಿಸಿ ಉತ್ಸವವನ್ನು ನೆರವೇರಿಸಿ ದಯಮಾಡಿಸಿದರು. ಸ್ವಾಮಿಗಳ ಉತ್ಸವವು ಮಠಕ್ಕೆ ದಯಮಾಡಿಸಿದ ಮೇಲೆ ನೋಡುವುದಕ್ಕೆ ಬಂದಿದ್ದ ಜನಗಳಿಗೆಲ್ಲ ಮಠದಲ್ಲಿ ಭೋಜನವು ಆದನಂತರ ಭಕ್ತ ಮಾಹೇಶ್ವರರಿಗೆಲ್ಲ ಆಶೀರ್ವಾದವನ್ನು ದಯಪಾಲಿಸಿದರು.

ಪ್ರತ್ಯಕ್ಷದರ್ಶಿ,

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ, ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 2

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿಗೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ, ಉತ್ತರಕನಡಾ.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಟ್ ಭಂಗಾರದ ಮುಳ್ಳುಳ್ಳ

19 ರಾಯಲ್ ಫೌಂಟನ್ ಪೆನ್.

ಎಂಬ ಈ ಪೆನ್ನಾವನ್ನು ಅಮೇರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರೆಗೂ ಬರೆಯುವದು. 1ಕ್ಕೆ 1-10-0.

ಈ ಪೆನ್ನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮಾನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ

ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ದಂಪತ್ಯದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಭೋಗಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಮಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,

ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,

42 ಬಳ್ಳಾರಿ.

೧೯೨೨ ನೆಯ ಇಸವಿ ಡಿಶಂಬರ್ ತಾ॥ ೩ ರಿಂದ ೧೯೨೨ ನೆಯ ಡಿಶಂಬರ್ ತಾ॥ ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮ ಸಂವತ್ಸರದ ಮಾರ್ಗಶಿರ ಶುದ್ಧ ಚತುರ್ದಶಿಯಿಂದ ಮಾರ್ಗಶಿರ ಬಹುಳ ಪಂಚಮಿವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
3	[1] ಭಾನು	ಚತು	22-45	ಕೃತ್ತಿ	43-33	18
4	ಸೋಮ	ಪೌರ್ಣ	25-7	ರೋಹಿ	47-0	19
5	ಮಂಗಳ	ಪಾಡ	26-21	ಮೃಗ	49-8	20
6	ಬುಧ	ಬಿದಿ	25-15	ಆದ್ರಾ	50-1	21
7	[2] ಗುರು	ತದಿ	24-51	ಪುನ	49-39	22
8	ಶುಕ್ರ	ಚೌತಿ	22-17	ಪುಷ್ಯ	48-16	23
9	ಶನಿ	ಪಂಚ	18-42	ಆಶ್ಲೇ	45-51	24

(1) ಶಿವದೀಪ. (2) ಸಂಕಷ್ಟಚತುರ್ಥಿ, ಮಾರ್ಗಶಿರಲಕ್ಷ್ಮೀವ್ರತಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಞನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತೀಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

REGISTERED NO. M. 124.

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ ೧೯೨೨ ನೆಯ ಇಸವಿ ಡಿಸೆಂಬರ್ ತಾರೀಖು ೧೦ ನೆಯ ಭಾನುವಾರ (ಸಂಚಿಕೆ ೫೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ–ಶಿವನ ಪಂಚವಿಂಶತಿಲೀಲೆಗಳು–ಅನೇಕ ಶಿವಶರಣರ ಚರಿತ್ರೆಗಳು–ಷಟ್‌ಸ್ಥಲಾಷ್ಟಾವರಣ, ಶಕ್ತಿ ಋಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ ೩ ನೆ ಮುದ್ರಣವು ಪೂರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಆ॥ ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿಗಳು,

ಗ್ರಂಥಪ್ರಸಾರಕಮಂಡಲಿ ಮೈಸೂರು.

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 0—12—0.

ಈವೇ ಒಳ್ಳೇ ಸಮಯ ! ಈಗಲೇ ತರಿಸಿಕೊಳ್ಳಿ !

ಚಿನ್ನದಂತಾ ಈ ಸಮಯವನ್ನು ಕಳಕೊಳ್ಳಬೇಡಿ. ಮಾರಾಟಕ್ಕೆ ಉಳಿದಿರುವ ಸರಕು ಬಹಳ ಸ್ವಲ್ಪ. ಬೆಲೆ 4 ರೂಪಾಯಿ ಮಾತ್ರ.

38 ಜರ್ಮನ್ ವಿದ್ಯುತ್ ಬೀಸಣಿಗೆ.

ಪರಮಾಶ್ಚರ್ಯಕರವಾದ ಯಂತ್ರಗಳು.

ಇದು ಪ್ರತಿಮನೆಯಲ್ಲೂ ಇರಬೇಕಾದದ್ದು. ಈ ವಿಚಿತ್ರವಾದ ಯಂತ್ರವು ತಾನಾಗಿಯೇ ಬೀಸುತ್ತಾ ತಂಪನ್ನು ಸುರಿಸುವುದು. ಬೇಗ ತರಿಸಿಕೊಳ್ಳಿ.

ನಮ್ಮ ಕ್ಯಾಟಲಾಗನ್ನು ಬೇಡುವವರಿಗೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ—ಯಸ್. ಆರ್. ಕ್ರಿಷ್ಣ ಅಂಡ್‌ಕೊ,

1 ತಂಬುನಾಯಕನಬೀದಿ, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



20

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.

ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್ ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾತು ವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0

„ „ ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,

ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೩—೦
ಚಾರುಶೀಲೆಚರಿತ್ರೆ	೦— ೫—೮	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಶೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ: ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯೆಂಜಾ ಪ್ಲೇಗುಜ್ವರ

ಮಕ್ಕಳ: ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.

25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

17 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಟದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ತಿರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು. ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.



ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜರೇಟ್ ರೋಸ್, ಪೆರಲ್ ವೈಟ್, ಫ್ರೀಡ್ರೊ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,

20 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಸುಮಾರು 60—70 ಸಾವಿರ ರೂಪಾಯಿಗಳ ನಗಗಳು ಹರಾಜು ಹಾಕಲ್ಪಡುತ್ತವೆ.

ಜವಾಹಿರಿ ವಗೈರೆ ನಗಗಳ ಹರಾಜಿನ ಇಸ್ತಿಹಾರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನ O S 26/16-17 ನೇ ನಂಬರಿನಲ್ಲಿ ಆರ್ಡರಾಗಿರುವ ಪ್ರೇರೆ ಲೇಟ್ ಅರಮನೆ ಪದ್ಮರಾಜಪಂಡಿತರ ಮಕ್ಕಳು 1ನೇ ಜಿನಚಂದ್ರಪಂಡಿತರು 2ನೇ ವರ್ಧಮಾನಪಂಡಿತರು ನೆಕ್ಸ್ಟ್ ಫ್ರೆಂಡ್ ಕಮಲಮ್ಮ ಇವರುಗಳಿಗೆ ಸಂಬಂಧಪಟ್ಟ ನಗಗಳನ್ನು ಸುಪರ್ದಿಗೆ ತೆಗೆದುಕೊಂಡು ವಿಕ್ರಯ ಮಾಡಬೇಕೆಂದು ಅದಕ್ಕಾಗಿ ಈ ಕೆಳಗೆ ರುಜು ಮಾಡಿರುವವರನ್ನು ಕಮಿಷನರುಗಳನ್ನಾಗಿ ನೇಮಕಮಾಡಿರುವ ಪ್ರಕಾರ ಸದರೀ ಕಮಿಷನರುಗಳು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—ಡಿಶಂಬರು ಮಾಹೆ 16 ನೇ ಶನಿವಾರ ಮತ್ತು 17 ನೇ ಭಾನುವಾರ ಪ್ರಾತಃಕಾಲ 8 ಘಂಟೆಗೆ ಸರಿಯಾಗಿ ಕಮಿಷನರುಗಳ ಪೈಕಿ ದೊಡ್ಡಪೇಟೆಯಲ್ಲಿರುವ ಮೋತಿಖಾನೆ ಲಕ್ಷ್ಮೀಪತಯ್ಯನವರ ಮಕ್ಕಳು ವರ್ಧಮಾನಯ್ಯನವರ ಸ್ವಂತಮನೆಯಲ್ಲಿ ಈ ಕೆಳಗೆ ಕಂಡ ನಗಗಳು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತವೆ. ಇಷ್ಟವುಳ್ಳವರು ಆ ಕಾಲಕ್ಕೆ ಸರಿಯಾಗಿ ಛಡಸವಾಲ್ ಮೂಲಕ ಪಡೆಯಬಹುದು. ಜಾಸ್ತಿ ಸವಾಲ್ ಮಾಡಿದವರು ತಮ್ಮ ಸವಾಲ್ ಮೊಬಲಗಿಗೆ ಶೇಕಡಾ 25 ರ ಪ್ರಕಾರ ಹರಾಜು ಖೈದಾದ ಕೂಡಲೇ ಡಿಪಾಜಿಟ್ಟು ಕೊಟ್ಟು ಹರಾಜು ಖೈದಾದ 3 ದಿವಸಗಳ ಒಳಗಾಗಿ ಬಾಕಿ ಮೊಬಲಗನ್ನು ಕೊಟ್ಟು ಮಾಲನ್ನು ಪಡೆಯಬಹದು, ಅಥವಾ ಪೂರಾ ಮೊಬಲಗನ್ನು ಹರಾಜು ಖೈದಾದ ಕೂಡಲೇ ಪಾವತಿಮಾಡಿ ಪಡೆಯಬಹುದು. ಒಂದೇ ನಗಕ್ಕೆ ಇಬ್ಬರು ಏಕಕಾಲದಲ್ಲಿ ಸವಾಲು ಮಾಡಿದರೆ ಜಾಸ್ತಿ ಸವಾಲು ಮಾಡಿದವರಿಗೆ ಮಾಲು ಬಿಡಲ್ಪಡುತ್ತದೆ. ಮೇಲ್ಕಂಡಂತೆ ಪೂರ್ತಾ ಮೊಬಲಗನ್ನು ಮಾಯಿದೆಯಲ್ಲಿ ಪಾವತಿಮಾಡದೆ ಹೋದಲ್ಲಿ ನಗಗಳನ್ನು ದುಸರಾ ಹರಾಜು ಮಾಡಿ ಅದರಲ್ಲಿ ಉಂಟಾದ ನಷ್ಟವನ್ನು ಮೊದಲು ಬೀಟು ಮಾಡಿದವರಿಂದ ವಸೂಲು ಮಾಡುತ್ತೆ. ಡಿಪಾಜಿಟ್ಟುದಾರರು ಪೂರ್ತಾ ಮೊಬಲಗನ್ನು ಮಾಯಿದೆಯಲ್ಲಿ ಪಾವತಿ ಮಾಡದೆ ದುಸರಾ ಹರಾಜಿಗೆ ಅವಕಾಶ ಕೊಟ್ಟಲ್ಲಿ ಡಿಪಾಜಿಟ್ಟು ಮೊಬಲಗನ್ನು ಕಳೆದುಕೊಳ್ಳುತ್ತಾರೆ. ದುಸರಾ ಹರಾಜಿನಲ್ಲಿ ಜಾಸ್ತಿ ಉತ್ಪತ್ತಿಯಾದಲ್ಲಿ ಮೊದಲಿನ ಬೀಟುದಾರರಿಗೆ ಸೇರತಕ್ಕದ್ದಲ್ಲ.

ಹರಾಜು ಮಾಡತಕ್ಕ ನಗಗಳು.

ಭಾರೀ ವಜ್ರದ ಕಮಲುಗಳು, ಪಚ್ಚೆಗಳು ಹಾಕಿರತಕ್ಕ ಮುತ್ತಿನ ಮಕರಕಂಠೀ, ಜವಾಹಿರಿ ಪದಕಗಳು, ಕೀಮತಿಕವಾದ ಭಾರೀ ಹಸ್ತಕಡಕಗಳು, ಉಂಗುರಗಳು, ಒಳ್ಳೆ ಮುತ್ತುಗಳು, ಕೆಂಪು ಪಚ್ಚೆ ವಜ್ರದಿಂದ ಕಟ್ಟಿರತಕ್ಕ ಅಮೂಲ್ಯವಾದ ನಗಗಳು, ಕೆಂಪುಗಳು ಕಟ್ಟಿನ ವಜ್ರಗಳು, ಭಂಗಾರದ ಚಂದ್ರಹಾರ, ಥಳಕಿನಹಾರ, ಪಾಟ, ತೋಡಾಗಳು, ಮತ್ತು ಝುಡಭಂಗಾರ ವಗೈರ ನಗಗಳು ಮತ್ತು ಬೆಳ್ಳಿ ನಗಗಳು, ನಾನಾತರಹ ನಗಗಳು ಹರಾಜು ಹಾಕಲ್ಪಡುತ್ತವೆ. ಹರಾಜು ಕಾಲದಲ್ಲಿ ನಗಗಳನ್ನು ನೋಡಬೇಕಾದರೂ ತಪ್ಸೀಲು ತಿಳಿದುಕೊಳ್ಳಬೇಕಾದರೂ ಈ ಕೆಳಗೆ ರುಜು ಹಾಕಿರುವ ಕಮಿಷನರುಗಳಿಂದ ತಿಳಿದುಕೊಳ್ಳಬಹುದು.

ಕಮಿಷನರುಗಳು:—

1 **ಎ. ಕೃಷ್ಣರಾವ್,** B.A.B.L.
ಅಡ್ವೋಕೇಟ್.

2 **ಬಿ. ನರಸಿಂಹಯ್ಯಂಗಾರ್,** B.A.B.L.
ಅಡ್ವೋಕೇಟ್.

3 **ದೊರಸಾಮಯ್ಯಂಗಾರ್,**
ಆನರೆರಿ ಬೆಂಚ್‌ಮ್ಯಾಜಿಸ್ಟ್ರೇಟ್, ಚಾಮರಾಜನಗರ.

4 **ಎಂ. ಎಲ್. ವರ್ಧಮಾನಯ್ಯ,**
ಮರ್ಚೆಂಟ್, ಮೈಸೂರು.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಡಿಸೆಂಬರ್ ತಾ|| ೧೦ನೆಯ ಭಾನುವಾರ.

ಶ್ರೀ ರಂಭಾಪುರೀ ಸಂಸ್ಥಾನದ ಉತ್ತರಾಧಿಕಾರ.

ವೀರಶೈವ ಮುಖ್ಯಾಚಾರ್ಯ ಪೀಠಗಳೊಳಗೆ ರಂಭಾಪುರೀ ಬಾಳೆಹಳ್ಳಿಯ ಜಗದ್ಗುರುಪೀಠವು ಒಂದಾಗಿರುತ್ತದೆ. ಇದು ಆಸೇತು ಹಿಮಾಚಲಾಂತ ದೇಶದಲ್ಲಿರುವ ವೀರಶೈವರ ಧಾರ್ಮಿಕ ಸಾಮ್ರಾಜ್ಯರಕ್ಷಣೆಯ ಸಂಸ್ಥಾನವಾಗಿ ಪುರಾತನ ಪ್ರಸಿದ್ಧವಾಗಿದೆ. ಇದರ ಅಧಿಕಾರವು ವೀರಶೈವ ಮಂಡಲದ ಮೇಲೆಲ್ಲಾ ಎಷ್ಟುಮಟ್ಟಿಗೆ ಹೊತ್ತಿರುವುದೋ ಅದರ ರಕ್ಷಣೆಯ ಭಾರವು ಅದರ ಶಿಷ್ಯಮಂಡಲದ ಮೇಲೆಲ್ಲಾ ಅಷ್ಟುಮಟ್ಟಿಗೇ ಹೊತ್ತಿರುತ್ತದೆ. ಹಿಂದೆ ಇದರ ಚರಪಟ್ಟಾಧಿಕಾರಿಗಳಾಗಿದ್ದು ಶಿವೈಕ್ಯರಾದ ಶ್ರೀ ಪಂಚಾಕ್ಷರಿ ರಾಜದೇಶಿಕೇಂದ್ರ ಮಹಾಸ್ವಾಮಿಗಳು ತಾವೇ ತಮ್ಮ ಉತ್ತರಾಧಿಕಾರಿಗಳನ್ನು ಗೊತ್ತುಮಾಡದೆ ಹೋದುದರಿಂದ ಆ ಸ್ಥಲಕ್ಕೆ ಯೋಗ್ಯರಾದವರನ್ನು ಆರಿಸುವ ದೊಡ್ಡ ಭಾರವು ಸಮಾಜದವರಮೇಲೆ ಈಗ ಬಿದ್ದಿರುತ್ತದೆ. ಆದರೆ ಸಂಧಿ ದೊರೆತಾಗ ತ್ರಿಕರಣಪೂರ್ವಕವಾಗಿ ಗುರುಪೀಠಸೇವೆಯನ್ನು ಮಾಡಬೇಕೆಂಬ ಬುದ್ಧಿಯೂ ಯೋಗವೂ ಸರ್ವರಿಗೂ ಹುಟ್ಟುವುದಿಲ್ಲ. ಅದಕ್ಕೂ ಸುಕೃತ ವಿಶೇಷವಿರಬೇಕು. ನರಸಿಂಹರಾಜಪುರದ ಮ|| ಇಂ. ಶಾಂತಪ್ಪಶೆಟ್ಟರೂ ಬೀರೂರಿನ ಸಕ್ರಿ ಮುನಿಶಿವನವರೂ ಪೂರ್ವಾರಭ್ಯ ಈ ಪೀಠದ ಅಭಿಮಾನಿಗಳಲ್ಲಿ ಮುಂದಾದವರು. ಈಗಲೂ ಅವರುಗಳೇ ಮುಂದಾಗಿ ನಿಂತಿರುವುದೂ, ಅರಸೀಕೆರೆ ಮೊದಲಾದ ಆ ಪ್ರಾಂತದ ಸಮಾಜಬಾಂಧವರು ಅದಕ್ಕೆ ಸಹಾಯಕರಾಗಿರುವುದೂ ಸಹ ಕೇವಲ ಸಂತೋಷಪ್ರದವಾಗಿದೆ. ಈ ಸಂಬಂಧವಾಗಿ ಮೊನ್ನೆ ವಾರದಲ್ಲಿ ಅರಸೀಕೆರೆಯೊಳಗೆ ಕೂಡಿದ್ದ ಸಭೆಯಲ್ಲಿ ನಡೆದಿರುವ ವಿದ್ಯಮಾನಗಳನ್ನು ಕುರಿತು ಅಲ್ಲಿಂದ ಬರೆದುಬಂದಿರುವ ಲೇಖನವನ್ನು ಈ ಪತ್ರದ ಬೇರೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ. ಅದನ್ನೋದಿ ನೋಡುವಲ್ಲಿ ಸಭಾಚಾಲಕರೊಳಗೆ ಪೀಠದ ಅಭಿಮಾನವೂ ಕಾರ್ಯಾಸಕ್ತಿಯೂ ದಕ್ಷತೆಯೂ ಎಷ್ಟುಮಟ್ಟಿಗಿದೆಯೆಂಬುದು ಗೊತ್ತಾಗುತ್ತದೆ. ಇಂಥ ಸಮಯದಲ್ಲಿ ಮುಂದಾಗಿ ನಿಂತು ಕಾರ್ಯಪ್ರವೃತ್ತರಾದವರಿಗೆ ಸಮಾಜಬಾಂಧವರೆಲ್ಲಾ ಕೃತಜ್ಞತೆಯನ್ನು ತೋರಿಸುವುದಲ್ಲದೆ, ತಮ್ಮ ತನುಮನೋಧನಗಳಿಂದ ಪ್ರತಿಯೊಬ್ಬ ವೀರಶೈವನೂ ಯಥಾಶಕ್ತಿ ಸಹಾಯಭೂತರಾಗುವುದು ಅವಶ್ಯಕವಾಗಿರುತ್ತದೆ.

ಅರಸೀಕೆರೆಯ ಸಭೆಯಲ್ಲಿ ನಿರ್ಧರವಾಗಿರುವ ಕಾರ್ಯಕ್ರಮಗಳಲ್ಲಿ ಒಂದೆರಡರ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಈ ಸಮಯದಲ್ಲಿ ಸೂಚಿಸುವುದು ಅವಶ್ಯಕವೆಂದು ತಿಳಿಯುತ್ತೇವೆ. ಸದ್ಯಕ್ಕೆ ಈ ಪೀಠಕ್ಕೆ ಒಬ್ಬರೇ ಒಬ್ಬ ಪಟ್ಟಾಧಿಕಾರಿಗಳನ್ನು ನಿಯಮಿಸುವುದಕ್ಕೆ ಮಾಡಿರುವ ನಿಶ್ಚಯವು ಸರ್ವೋತ್ತಮವಾಗಿರುತ್ತದೆ. ಸ್ಥಿರ ಚರ ಪಟ್ಟಗಳೆಂಬ ಅಧಿಕಾರದ್ವಯವನ್ನು ಹೊಂದಿದ ಮಠಗಳಲ್ಲಿ ಅಂತರ್ಬಹಿಃಕಲಹವಿಲ್ಲದೆ ಕಾರ್ಯನಿರ್ವಾಹಗೊಂಡಿರುವ ಸ್ಥಲಗಳು ಬಹಳ ವಿರಳವಾಗಿರುತ್ತವೆ. ಅಲ್ಲದೆ ಇದೇ ಪೀಠದ ಹಿಂದಣ ಕೆಲಕಾಲದಿಂದ ನಡೆದುಬಂದಿರುವ ಸ್ಥಿತಿಗತಿಯನ್ನು ನೋಡಿದರೂ ಒಬ್ಬರೇ ಅಧಿಕಾರಿಗಳಿರುವುದು ವಿಹಿತವೆಂದು ಸಿದ್ಧವಾಗುತ್ತದೆ. ಗತಿಸಿದ ಶ್ರೀ ಪಂಚಾಕ್ಷರೀ ರಾಜದೇಶಿಕೇಂದ್ರ ಸ್ವಾಮಿಗಳವರಿಗೆ ಅಧಿಕಾರವಾದ ಕಾಲದಲ್ಲೇ ಶ್ರೀ ಮಲ್ಲಿನಾಥಶಾಸ್ತ್ರಿಗಳೆಂಬ ವಿದ್ವದ್ವರ್ಯರಿಗೆ ಇದೇ ಪೀಠದ ಸ್ಥಿರಪಟ್ಟಾಧಿಕಾರವು ನೆರವೇರಿಸಲ್ಪಟ್ಟಿತು. ಅವರು ಪೀಠದ ಗೌರವ ಪ್ರತಿಷ್ಠೆಗಳನ್ನು ಬಲುಮಟ್ಟಿಗೆ ಹೆಚ್ಚಿಸಿ ಸಮಾಜಧರ್ಮರಕ್ಷಣೆಯನ್ನು ಮಾಡುವಲ್ಲಿ ಬಹಳ ಉತ್ಸಾಹವಂತರೂ ಸಾಮರ್ಥ್ಯವಂತರೂ ಆಗಿದ್ದರು. ಆದರೇನು? ಸಮಾಜದ ದುರದೃಷ್ಟದಿಂದ ಸ್ವಲ್ಪ ಕಾಲದೊಳಗೇ ಅವರು ಶಿವೈಕ್ಯರಾದರು. ಚರಪಟ್ಟಾಧಿಕಾರಿಗಳು ೨ ಪಟ್ಟಗಳ ಕಾಲದ ಮೇಲೆಯೇ ಅಧಿಕಾರಿಗಳಾಗಿದ್ದರೂ ಸಮಾಜಕ್ಕೇ ಆಗಲೀ ಪೀಠಕ್ಕೇ ಆಗಲೀ ಶಾಶ್ವತ ಫಲಪ್ರದವಾದ ಕಾರ್ಯಗಳೇನನ್ನೂ ಮಾಡಲಿಲ್ಲವೆಂಬುದನ್ನು ವಿಷಾದದಿಂದ ಹೇಳಬೇಕಾಗುತ್ತದೆ. ಬೀರೂರಿನಲ್ಲಿ ಮಹಾಸಭೆಯು ನಡೆದಾಗ್ಗೆ ಈ ಶ್ರೀಗಳವರೂ ದಯಮಾಡಿಸಿದ್ದರು. ನಾವು ಪ್ರತ್ಯಕ್ಷವಾಗಿ ಸಂದರ್ಶನವನ್ನು ತೆಗೆದುಕೊಂಡು ಸಂಭಾಷಿಸುವಾಗ್ಗೇ ಅವರ ದೇಹಾರೋಗ್ಯವು ಇಳಿತರವಾಗಿದ್ದಿತೆಂಬುದು ಗೋಚರವಾದುದಲ್ಲದೆ ಅವರ ಮುಖವಚನದಿಂದಲೂ ಗೊತ್ತಾಯಿತು. ಪೀಠವನ್ನು ಪೂರ್ವಸ್ಥಿತಿಗೆ ತಂದಿಡಲು ಸರ್ವಪ್ರಕಾರದ ಸಾಮರ್ಥ್ಯವನ್ನೂ ಪಡೆದ ಪಟುಗಳಾರನ್ನಾದರೂ ಈಗಲೇ ತಾವು ಗೊತ್ತುಪಡಿಸುವುದು ಅವಶ್ಯಕವೆಂದು ನಾವು ಬಿನ್ನೈಸಿಕೊಳ್ಳಲು, ಅದೇ ಪ್ರಯತ್ನದಲ್ಲೇ ತಾವು ಇದ್ದೇವೆಂದೂ ನಿಮ್ಮಂಥವರನ್ನೆಲ್ಲಾ ಕರೆಯಿಸಿಕೊಂಡು ಪರ್ಯಾಲೋಚಿಸಿ ಸಿದ್ಧಪಡಿಸುತ್ತೇವೆಂದೂ ಅಪ್ಪಣೆಕೊಡಿಸಿದ್ದರು. ಆದರೆ ಅವರ ಅಂತ್ಯಕಾಲದವರೆಗೂ ಅದು ನೆರವೇರಲಿಲ್ಲ. ಅವರ ಸಂಬಂಧವೇನೋ ಪೀಠಕ್ಕೆ ಕಳೆದುಹೋದರೂ ಸಮಾಜಕ್ಕೆ ಎಂದಿಗೂ ತಪ್ಪತಕ್ಕುದಲ್ಲವಷ್ಟೆ. ಆದುದರಿಂದ ಅವರು ಮಾಡಬೇಕಾಗಿದ್ದ ಕಾರ್ಯವನ್ನು ಸಮಾಜಬಾಂಧವರೆಲ್ಲರೂ ವಹಿಸಿ ಈಗ ನೆರವೇರಿಸಬೇಕು.

ಬರುಬರುತ್ತಾ ಕಾಲಸ್ಥಿತಿಯು ಸೂಕ್ಷ್ಮವಾಗುತ್ತಿದೆ. ಮುಗ್ಧಭಕ್ತಿಯು ಕಡಿಮೆಯಾಗಿ ಪ್ರೌಢಭಕ್ತಿಯು ತಲೆಯೆತ್ತುತ್ತಿದೆ. ಒಂದು ವಿಧದಲ್ಲಿ ಇದನ್ನು ಸಮಾಜಕ್ಕೆ ಹಿತಕರವೆಂದೇ ಹೇಳಬಹುದು. ಯಾವವಿಧದ ಉತ್ಕೃಷ್ಟ ಯೋಗ್ಯತೆಯಿಲ್ಲದಿದ್ದರೂ ನಮ್ಮ ಗುರುಗಳೆಂಬ ಅಭಿಮಾನವೊಂದರಿಂದಲೇ ಕಾಣಿಕೆ ಕಪ್ಪಗಳನ್ನಿತ್ತು ಮರ್ಯಾದಿಸುವ ಜನರು ಕಡಿಮೆಯಾಗುವುದು ಉತ್ತಮವೇ ಸರಿ. ಹೀಗಾಗುವುದರಿಂದ ಧರ್ಮರಕ್ಷಣಾಧಿಕಾರಿಗಳಲ್ಲಿ ಕರ್ತವ್ಯಜ್ಞಾನವೂ ಕರ್ತವ್ಯತತ್ಪರತೆಯೂ ಹೆಚ್ಚಲು ಅವಕಾಶವಾಗಿ ಅದರಿಂದ ಸಮಾಜಕ್ಕೆ ಲಾಭವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸೈಂಸೊಳಗೆ ಜೀವ ಕಳೆಗಳಂತೆ ಪೂಜ್ಯವರ್ಗದವರಲ್ಲಿ ಕಲಹೋತ್ಪಾದನೆ ಮಾಡತಕ್ಕುದೇ ಮುಖ್ಯಕರ್ತವ್ಯವೆಂದು ತಿಳಿದು, ಸಮಾಜಕ್ಕೆ ಇದರಿಂದ ಎಷ್ಟು ಅನರ್ಥವಾಗುವುದೆಂಬುದನ್ನು ಪರ್ಯಾಲೋಚಿಸದೆ ಇರುವ ಜಾಣರು ಬೇರೆ ಮೂಡಿರುತ್ತಾರೆ. ಆದುಕಾರಣ ಇಂಥ ಸಮಯದೊಳಗೆ ಮುಖ್ಯಾಚಾರ್ಯಪೀಠಗಳಿಗೆ ಅಧಿಕಾರಿಗಳನ್ನು ನಿಯಮಿಸುವ ಕೆಲಸವು ಸಾಮಾನ್ಯತರವಾಗಿರುವುದಿಲ್ಲ. ದೂರವಿಚಾರವಿಲ್ಲದೆ ಕಾರ್ಯವನ್ನು ನೆರವೇರಿಸಿ, ಉತ್ತರತ್ರ ಅದರಿಂದ ಸಮಾಜಕ್ಕೆ ಘಾತವುಂಟಾದರೆ, ಆ ದುಷ್ಫಲಕ್ಕೆ ಅದರ ಮೂಲಚಾಲಕರೆಲ್ಲರೂ ಭಾಗಿಗಳಾಗಬೇಕಾಗುತ್ತದೆ. ಈಗಲಾದರೊ ಅರಸೀಕೆರೆಯಲ್ಲಿ ನಡೆದ ಕಾರ್ಯಾಲೋಚನ ಸಭೆಯಲ್ಲಿ ಮಾಡಿರುವ ನಿರ್ಧಾರಗಳೊಳಗೆ ಅಧಿಕಾರಕ್ಕೆ ತಕ್ಕವರನ್ನು ಆರಿಸಿತರಲು ನಾಲ್ಕುಮಂದಿ ದೊಡ್ಡಮನುಷ್ಯರುಗೊತ್ತಾಗಿರುವುದಾಗಿ ತಿಳಿಯಬರುತ್ತದೆ. ಈ ಮಾರ್ಗವು ಯುಕ್ತವಾದುದೆಂದು ನಮಗೆ ತೋರುವುದಿಲ್ಲ. ಶಾಖಾಮಠಗಳಿಗೆ ಉತ್ತರಾಧಿಕಾರಿಗಳನ್ನು ನಿಯಮಿಸಬೇಕಾದಾಗ್ಗೇ ಬಹಿರಂಗಪ್ರಕಟನೆಗಳ ಮೂಲಕ ಯೋಗ್ಯವಟುಗಳನ್ನಪೇಕ್ಷಿಸಿ ಬರಮಾಡಿಕೊಂಡು ಕಾರ್ಯವನ್ನು ನೆರವೇರಿಸುವ ಉತ್ತಮ ಪದ್ಧತಿಯು ಈಗ ಅಲ್ಲಲ್ಲಿ ಬಳಕೆಗೆ ಬಂದಿರುತ್ತದೆ. ಇಂಥ ಮುಖ್ಯಪೀಠಗಳಿಗೆ ಅಂಥ ನಿರಾಕ್ಷೇಪ ಮಾರ್ಗವನ್ನು ಅನುಸರಿಸದೆ ಹೋಗುವುದು ಸರಿಯಲ್ಲ. ಹಿಂದೆ ಶ್ರೀ ಮಲ್ಲಿನಾಥಶಾಸ್ತ್ರಿಗಳು ಕಾಶಿಯಲ್ಲಿ ಶಬ್ದಶಾಸ್ತ್ರವನ್ನಭ್ಯಸಿಸಿ, ಪೂರ್ಣಪಾಂಡಿತ್ಯವನ್ನು ಪಡೆದು, ದೇಶಸಂಚಾರವನ್ನು ಮಾಡಿಕೊಂಡು ರಾಜಧಾನಿಗೂ ದಯಮಾಡಿಸಿ ಇಲ್ಲಿ ಕೈ|| ವೀರಸಂಗಪ್ಪನವರಿಂದ ಏರ್ಪಡಿಸಲ್ಪಟ್ಟಿದ್ದ ಸ್ವಮತ ಪರಮತದ ವಿದ್ವನ್ಮಂಡಲಿಯ ಸಭೆಯಲ್ಲಿ ವಾಕ್ಯಾರ್ಥವನ್ನು ನಡೆಯಿಸಿ, "......ಪ್ರಚಲಿತ ವ್ಯಾಕರಣಶಾಸ್ತ್ರಪರೀಕ್ಷಾಯಾಂ ಪರಮಾಂ ಯೋಗ್ಯತಾ ಮಧಿಗತವಂತ ಇತಿ ನಿಶ್ಚಿನುಮಃ" ಎಂಬ ಪ್ರಶಸ್ತಿಪತ್ರವನ್ನು ಇಲ್ಲಿಯ ಪರಮತ ವಿದ್ವದಗ್ರಗಣ್ಯರಿಂದ ಪಡೆದರು. ಅಲ್ಲದೆ ಅವರ ವಿದ್ವತ್ತಿಗಿಂತಲೂ ಅವರಲ್ಲಿ ಶಮದಮಾದಿ ಸಂಪತ್ತೂ ಸಮಾಜಾಭಿಮಾನವೂ ವಿಶೇಷವಾಗಿದ್ದು ಸರ್ವರ ಚಿತ್ತಾಕರ್ಷಣವನ್ನೂ ಮಾಡುತ್ತಿದ್ದುವು. ಅಂಥವರನ್ನು ಇದೇ ಪೀಠದ ಸ್ಥಿರಪಟ್ಟಾಧಿಕಾರಕ್ಕೆ ನಿಯಮಿಸುವಾಗಲೂ ಕೂಡ ಸೇರಿದ್ದ ಮಹಾಸಭೆಯಲ್ಲಿ ವಿಪರೀತ ಚರ್ಚೆಗಳು ಹುಟ್ಟಿ, ಕಡೆಗೆ ಪರಮ ಪ್ರಯಾಸದಿಂದ ಕೊನೆಗಂಡರೂ ಇಂದು ನೆರವೇರಬೇಕಾಗಿದ್ದ ಕಾರ್ಯವು ಮರುದಿನ ನೆರವೇರಬೇಕಾಯಿತು. ಇದು ಕಾಲುಶತಮಾನದ ಹಿಂದಣ ಮಾತು. ಈಗಣ ಸಮಾಜಸ್ಥಿತಿಯು ಅದಕ್ಕಿಂತಲೂ ಸೂಕ್ಷ್ಮವಾಗಿದೆ. ಕಳೆದುಕೊಂಡಿರುವ ಪೂರ್ವೌನ್ನತ್ಯವನ್ನು ಪೀಠಕ್ಕೆ ಸಂಪಾದಿಸಿಕೊಳ್ಳಬೇಕೆಂಬ ನಿರಂತರ ಕುತೂಹಲವೂ, ಅದಕ್ಕೆ ತಕ್ಕ ಶಕ್ತಿಯೂ ವಿದ್ವತ್ತೂ, ಸದಾಚಾರ ಕುಲಶೀಲಾದಿ ಸಂಪತ್ತೂ, ಇವೆಲ್ಲಕ್ಕಿಂತಲೂ ಮಿಗಿಲಾಗಿ ಸಮಾಜದಲ್ಲಿ ಏಕಮತ್ಯವನ್ನು ವೃದ್ಧಿಗೊಳಿಸಿ ಅದಕ್ಕೆ ಸರ್ವತೋಮುಖವಾದ ಏಳ್ಗೆಯನ್ನುಂಟುಮಾಡಬೇಕೆಂಬ ದೃಢತರ ಮನೋಭಾವವೂ, ಶಮದಮಾದಿ ಗುಣಾತಿಶಯವೂ ಇರತಕ್ಕವರು ಅಧಿಕಾರಕ್ಕೆ ಬರಬೇಕು. ೩-೪ ಜನರು ಸೇರಿ ಇಂಥವರನ್ನು ಪರೀಕ್ಷಿಸಿ ಗೊತ್ತುಮಾಡುವುದೆಂದರೆ ಸಾಲದು. ಹಾಗೆ ಪರೀಕ್ಷೆ ಮಾಡತಕ್ಕವರಲ್ಲಿಯೂ ತಕ್ಕ ಸಾಮರ್ಥ್ಯವಿರಬೇಕಾಗುತ್ತದೆ. ಆದುಕಾರಣ ಇಂಥ ದೊಡ್ಡ ಭಾರವನ್ನು ನಾಲ್ಕಾರು ಜನರ ತಲೆಯಮೇಲೆ ಹೇರಿ ನಿಷ್ಠುರಕ್ಕೂ ಕಷ್ಟಕ್ಕೂ ಅವರನ್ನು ಗುರಿಮಾಡಿ ಬಿಡುವುದಕ್ಕಿಂತಲೂ, ದೇಶಮಧ್ಯದಲ್ಲಿರುವ ವೀರಶೈವ ವೃತ್ತಪತ್ರಿಕೆಗಳಲ್ಲಿ ಇಂಥಿಂಥ ಯೋಗ್ಯತೆಯುಳ್ಳವರು ಈ ಪೀಠಾಧಿಕಾರಕ್ಕೆ ಬೇಕೆಂದೂ, ಉಮೇದುವಾರರುಗಳು ಇಂಥವರಲ್ಲಿಗೆ ಬರೆದುಕೊಳ್ಳಬೇಕೆಂದೂ ಪ್ರಕಟಪಡಿಸಿ, ಪಟ್ಟಾಭಿಷೇಕ ಸಮಯಕ್ಕೆ ಅಂಥವರನ್ನೆಲ್ಲಾ ಬರಮಾಡಿಕೊಂಡು, ಪರೀಕ್ಷೆ ಮಾಡಲು ಯೋಗ್ಯತಾಸಂಪನ್ನರಾದ ಕೆಲವು ದೊಡ್ಡಮನುಷ್ಯರುಳ್ಳ ಸಂಘದಮೂಲಕ ಆ ಉಮೇದುವಾರರಲ್ಲಿ ಉತ್ತಮ ತರಗತಿಯವರಾದವರನ್ನು ನಿರ್ಧರಗೊಳಿಸಿಕೊಂಡು, ಅವರುಗಳಲ್ಲಿ ಪ್ರತಿಯೊಬ್ಬರ ಯೋಗ್ಯತಾಂಶವನ್ನೂ ಆ ಕಾಲಕ್ಕೆ ಸೇರಿರುವ ಮಹಾಜನ ಸಮೂಹಕ್ಕೆ ಶ್ರುತಪಡಿಸಿ, ಅವರುಗಳ ಓಟುಗಳನ್ನು ತೆಗೆದುಕೊಳ್ಳಲು ಏರ್ಪಡಿಸಿ, ಹೆಚ್ಚು ಓಟುಗಳು ಯಾರಿಗೆ ದೊರೆಯುವುವೋ ಅಂಥವರನ್ನು ಅಧಿಕಾರಕ್ಕೆ ಗೊತ್ತುಪಡಿಸಿ ಕಾರ್ಯವನ್ನು ಸಾಂಗಗೊಳಿಸುವುದು ಸರ್ವಸಂಮತವಾದ ಮಾರ್ಗವೆನಿಸುತ್ತದೆ. ಈ ನಮ್ಮ ಸೂಚನೆಯು ಸೂಕ್ತವಾಗಿ ಕಂಡರೆ ಈ ಕಾರ್ಯವ್ಯವಸ್ಥಾಪಕ ಮಹಾಶಯರು ಅಂಗೀಕರಿಸಬಹುದು. ಈರೀತಿ ಮಾಡುವುದಕ್ಕೆ ಸ್ವಲ್ಪ ಕಾಲವ್ಯವಧಿಯು ಹೆಚ್ಚಾದರೂ ಬಾಧಕವಿಲ್ಲ. ಫಾಲ್ಗುಣದಲ್ಲೋ ಅಥವಾ ಮುಂದಣ ವಸಂತ ಋತುವಿನಲ್ಲೋ ಪಟ್ಟಾಭಿಷೇಕ ಕಾರ್ಯವನ್ನು ನೆರವೇರಿಸಿದರೂ ಬಾಧಕವಿಲ್ಲ.

CARPING—NO CRITICISM.

With the steady progress of our State on democratic lines and with the introduction of new reforms into our constitution one would have hoped that journalism and public criticism in Mysore would rise above irresponsible cavil and petty

jealousies and assume a healthier and constructive complexion. But we are afraid that such an expectation is doomed to disappointment. The local paper *Sampadabhyudaya* of the 29th November 1922 contains a long letter by one Mr. R. Gopalswamy Iyer about all and sundry matters and particularly directed against the working of the Lingayet Education Fund Association under the very unsuitable heading "Is it Right?" To answer the various aimless questions put therein would be a waste of time, for it is no business of any communal association to give every detail of its working to the public in general, nor would the public in general be anxious to know all about it unless they have, as perhaps the writer of this letter, no other better business to do for themselves. If the scribe did want to know about the working of the Lingayet Association nothing was easier for him than to have approached its President who is none other than Rajasabhabhushana Dewan Bahadur K. P. Puttanna Chetty C.I.E., and got what he wanted instead of rushing into print, betraying not merely ignorance which is execusable but want of good taste. The reports of the Association are published annually, and they speak for themselves. We believe this same gentleman had on previous occasions busied himself with other associations like the central Mohammadan Association and the Vokkaligara Sanga, and found perhaps it was not worth the game and now directs his beneficent activities towards the Lingayet Association. The writer wants to show that the Mysore Prajamitra Mandali or the Central Mohammadan Association or the Lingayet Education Fund Association have done nothing in the matter of bringing about a good feeling between Hindus and Musulmans in Tiptur. We have had our full say in the matter already. The Government had the whole direction of the affair themselves and it is only if the move comes from them that there is any chance of the attempt being a success. He questions our statement that what little public opinion there is in the Mysore State is due to the various communal associations. We would only ask where else they could find any public opinion worth the name in Mysore. He may be under the delusion that meetings and conferences under the big titles of "People's Convention," and "People's Conference" held by small cotteries who are as far removed from the people as the two poles constitute public opinion though there has been already ample proof of their worthlessness. There is no use in meddlers carping on the earnest efforts of selfless people devoted to country's good. If men such as the writer of this letter have no better business to do there is sufficient opportunity for them to cleanse their own community. We would have on no account bestowed any attention on this letter but for the mischief such writings would create and the chances afforded for irresponsible criticism to develop.

MYSORE CITY MUNICIPAL COUNCIL MEETING.

At the last meeting of Mysore City Municipal Council held on 2nd December 1922 there was a very strong and unanimous protest against the raising of a loan of Rs. 6 lakhs for so-called productive schemes referred to in our last issue. Mr. C. Srikanteswara Iyer in his capacity as Chairman of the Trust Board in referring the resolution of the same about the raising of the loan for five productive works to the President of the City Municipal Council had invited a reference to the Resolution No. II dated 6th March 1920 of the Council stating that the latter resolution had sanctioned the raising of a loan for the said works. Mr. Purushotham Anandagiri Bavaji pointed out that that resolution of 6th March 1920 referred only to one of the 5 works now placed before the House, namely, the completion of the Devaraja Market and not to the other four works. As regards the Commercial Street which was taken up first Messrs. Basavaradya, Bavaji, Virupakshiah and Rev. Edwards explained the undesirability of such a scheme which was supported by the rest of the members. The President himself said that the Trust Board itself was doubtful of the scheme and the matter might be dropped. The only scheme that was approved of was the completion of the market.

Notwithstanding the strong opposition manifested at the last meeting, we learn that the President has again brought this very subject of opening a commercial street along with other works for the next meeting to be held on 16th December 1922. We have not found any thing approaching this unmeaning pertinacity, which takes no need of either public good or public opinion. It would be most amusing, if there was not the tragic element also in it to see that ornamentation should be carried on at the risk of public funds. We have given ample reasons for discountenancing such an attempt and we hope that the City Fathers will kindly look more to the substantial development than to the showy appearance of the city.

ಗ್ರೀಕ್ ದೇಶದ ಕ್ರೂರ ಪ್ರಭುತ್ವ.

ಬರುಬರುತ್ತ ಯೂರೋಪು ಖಂಡದಲ್ಲಿ ತಾಮಸೋದ್ರೇಕವು ಎಷ್ಟು ಪ್ರಬಲವಾಗುತಿದೆಯೆಂಬುದಕ್ಕೆ ಅನೇಕೋದಾಹರಣೆಗಳು ದೊರೆಯುತ್ತವೆ. ಅಂಥ ದೃಷ್ಟಾಂತಗಳೊಳಗೆಲ್ಲಾ ಈಗ ಗ್ರೀಕಿನಲ್ಲಿ ನಡೆದಿರುವ ಅಮಾನುಷವಾದ ಕ್ರೂರಕೃತ್ಯವು ಅಗ್ರಗಣ್ಯವಾಗಿರುತ್ತದೆ. ಆ ದೇಶದಲ್ಲಿ ಈಗ ನೂತನವಾಗಿ ಏರ್ಪಟ್ಟಿರುವ ಪ್ರಭುತ್ವದವರು ತಮ್ಮ ಹಿಂದಣ ಪ್ರಭುತ್ವದಲ್ಲಿದ್ದ ೫ ಮಂದಿ ಮಂತ್ರಿಗಳನ್ನೂ ಒಬ್ಬ ಸೇನಾಪತಿಯನ್ನೂ ಗಲ್ಲಿಗೇರಿಸಿ ಕೊಂದುಬಿಟ್ಟರು. ಹೀಗೆ ಕೊಲ್ಲಲ್ಪಟ್ಟವರಲ್ಲಿ ಹಿಂದಣ ಮುಖ್ಯಮಂತ್ರಿಯವರಾಗಿದ್ದ ಗೌನರಿಸ್‌ರವರು ಒಬ್ಬರಾಗಿರುತ್ತಾರೆ. ಇವರು ಸನ್ನಿಪಾತ ಜ್ವರದಿಂದ ಪೀಡಿತರಾಗಿ ಮಲಗಿದ್ದರೂ ಹಿಡಿತರಿಸಿ ಕೊಲ್ಲಿಸಿಬಿಟ್ಟರು. ಇನ್ನಿಬ್ಬರು ಸೇನಾಪತಿಗಳಿಗೆ ಯಾವಜ್ಜೀವ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿ ಅವರ ಆಸ್ತಿಗಳನ್ನೆಲ್ಲಾ ಮುಟ್ಟುಗೋಲು ಹಾಕಿಕೊಂಡರು. ಇಂಥ ಭೀಕರ ಶಿಕ್ಷೆಯನ್ನು ವಿಧಿಸುವುದಕ್ಕೆ ಕಾರಣವೇನೆಂದರೆ-ಇವರುಗಳು ಕಾನ್‌ಸ್ಟಾಂಟೈನ್ ರಾಜನನ್ನು ಮರಳಿ ಪ್ರಭುತ್ವಕ್ಕೆ ತಂದರೆ ದೇಶಕ್ಕೆ ಅಪಾಯವಾಗುವುದೆಂದು ತಿಳಿದಿದ್ದರೂ ಅವರಿಗೆ ಸಹಾಯಮಾಡಿ ಸಿಂಹಾಸನಕ್ಕೆ ತಂದು ಸ್ವಾರ್ಥವನ್ನು ಸಾಧಿಸಿಕೊಂಡರು. ಪ್ರಜಾಭಿಪ್ರಾಯವನ್ನು ತಿರಸ್ಕರಿಸಿದರು. ಕಡೆಗೆ ಏಷ್ಯಾಮೈನರಿನಲ್ಲಿ ಪರಾಜಯವನ್ನು ಪಡೆದು, ಹಿಂದೆ ಗೆದ್ದಿದ್ದ ರಾಜ್ಯವನ್ನೆಲ್ಲಾ ಕಳೆದುಕೊಳ್ಳುವಂತೆ ಮಾಡಿದರು. ಇದೇ ಅವರ ಮೇಲೆ ಹೊರಿಸಿದ ತಪ್ಪು. ಹಿಂದಣ ಪ್ರಭುತ್ವದವರು ವಿಜಯವನ್ನು ಪಡೆದಿದ್ದಾಗ ಅವರು ಎಂಥ ನಿರಂಕುಶ ಪರಿಪಾಲನವನ್ನು ಸಾಗಿಸುತ್ತಿದ್ದರೂ ಪ್ರಜೆಗಳಿಗೆ ಅಸಂತೃಪ್ತಿಯಿರಲಿಲ್ಲ. ಯಾವಾಗ ಲಾಭವು ಕಳೆದುಹೋಗಿ ನಷ್ಟವು ಗೋಚರಿಸಿತೋ ಆಗ ಪ್ರಭುತ್ವದ ಮೇಲೆ ಪ್ರಜೆಗಳಿಗೆ ಆಗ್ರಹ ಹುಟ್ಟಿ ವಿಪ್ಲವಕ್ಕೆ ಆರಂಭಿಸಿದರು. ಕಾನ್‌ಸ್ಟಾಂಟೈನ್ ರಾಜರು ಯಥಾಪ್ರಕಾರ ಸಿಂಹಾಸನವನ್ನು ಪರಿತ್ಯಜಿಸಿ ಹೋದರು. ಮರಳಿ ವೆನಿಜುಲಾಸ್‌ರವರ ಮಂತ್ರಿತ್ವ ಪ್ರವೇಶವಾಯಿತು. ಈಗ ಇವರು ತಮ್ಮ ಅಪಜಯಪ್ರಾಪ್ತಿ ಮೂಲಕವಾದ ಆಗ್ರಹಕ್ಕೆ ಬಲಿಯಾಗಿ ಹಿಂದಣ ಪ್ರಭುತ್ವದ ಮೇಲಣ ತಮ್ಮ ಹೊಟ್ಟೆಕಿಚ್ಚನ್ನು ಈ ರೂಪದಲ್ಲಿ ತೀರಿಸಿಕೊಳ್ಳುತ್ತಿದ್ದಾರೆ. ಇದನ್ನು ಕಂಡು ಕೇಳಿ ಪ್ರಪಂಚವೆಲ್ಲ ಅಸಹ್ಯಪಟ್ಟುಕೊಂಡಿದೆ. ನಾಗರಕತನದಲ್ಲಿ ತಾವೇ ಅಗ್ರೇಸರರೆಂದು ಡಂಭಕೊಚ್ಚಿಕೊಳ್ಳುವ ಪಾಶ್ಚಾತ್ಯ ದೇಶಕ್ಕೆ ತಲೆಬಗ್ಗಿಸಿಕೊಳ್ಳುವಂತೆ ಇದು ಮಾಡಿರುತ್ತದೆ. ಮುಂದಣ ಪ್ರಭುತ್ವದವರು ಹಿಂದಣ ಪ್ರಭುತ್ವದ ಪ್ರಮುಖರಮೇಲೆ ಯಾವುದಾದರೊಂದು ನೆಪದಿಂದ ಹೀಗೆ ಮರಣದಂಡನೆಯನ್ನು ವಿಧಿಸುತ್ತ ಬಂದರೆ ಮಂತ್ರಿಪದವಿಯಂಥ ಮುಖ್ಯೋದ್ಯೋಗಗಳಿಗೆ ಯಾರು ತಾನೇ ಮುಂದೆ ದೊರೆಯುವರು? ಈ ಅನಾಗರಕರಾಕ್ಷಸಾಚರಣೆಯನ್ನು ಸೈರಿಸಲಾರದೆ ಆಂಗ್ಲ ಪ್ರಭುತ್ವವು ಗ್ರೀಕ್ ಸಂಬಂಧವನ್ನು ಕಳೆದುಬಿಟ್ಟಿತು. ಎಂದರೆ ಗ್ರೀಕಿನಲ್ಲಿದ್ದ ತಮ್ಮ ರಾಯಭಾರಿಯನ್ನು ಹಿಂದಕ್ಕೆ ಕರೆಯಿಸಿಕೊಂಡುಬಿಟ್ಟರು. ಇಟಲಿಯವರೂ ಇದೇ ಮಾರ್ಗವನ್ನು ಹಿಡಿದರು. ಹಿಂದಣ ಪ್ರಭುವಾದ ಕಾನ್‌ಸ್ಟಾಂಟೈನರನ್ನು ಕೂಡ ಈಗಣ ಗ್ರೀಕ್ ಪ್ರಭುತ್ವದವರು ಹಿಡಿದು ಸೆರೆಯಲ್ಲಿಟ್ಟಿರುವರೆಂದು ಸುದ್ದಿ ಬಂದಿದೆ. ಅವರ ಗತಿಯೇನಾಗುವುದೋ ತಿಳಿಯಲಿಲ್ಲ.

ಅತ್ತ ಐರ್ಲಂಡಿನಲ್ಲಿ ತಾತ್ಕಾಲಿಕ ಪ್ರಜಾಪ್ರಭುತ್ವದವರಿಗೂ ವಿಪ್ಲವಕಾರರಿಗೂ ಕೆಲವುಕಾಲದಿಂದ ಪರಸ್ಪರ ಯುದ್ಧಗಳು ನಡೆಯುತ್ತಿರುವುದೂ ಉಭಯಪಕ್ಷದಲ್ಲೂ ಹಲವರು ಕೊಲೆಗೀಡಾದುದೂ ಗೊತ್ತೇಇದೆಯಷ್ಟೆ. ಈಗ ಸಿನ್‌ಫೆನಿಯರ್ ಪಕ್ಷದ ಪ್ರಮುಖರನ್ನು ಒಬ್ಬೊಬ್ಬರನ್ನಾಗಿ ಹಿಡಿದು ಬೇರೆ ಬೇರೆ ಅಪರಾಧಾರೋಪಣೆಗಳಿಂದ ಗಲ್ಲಿಗೇರಿಸುವ ಕೃತ್ಯವು ನಡೆಯುತ್ತಿದೆ. ಈ ಸಿನ್‌ಫೆನಿಯರ್ ಪಕ್ಷದ ಪ್ರಮುಖನಾಯಕರಾದ ಡಿ. ವೆಲರಾರವರಿಗೆ ಬಲಭುಜದಂತಿದ್ದ ಚೈಲ್ಡರ್ಸ್‌ರವರನ್ನೂ ಇನ್ನೂ ಮೂವರು ಪ್ರಮುಖರನ್ನೂ ಇದೇ ತೆರದಿಂದ ಪರಲೋಕಕ್ಕೆ ಕಳುಹಿಸಿದುದಾಯಿತು. ಮುಂದೆ ತನಗೇನು ಪ್ರಾಣಾಪಾಯ ಬರುವುದೋ ಎಂದು ಡಿ. ವೆಲರಾರವರು ತಲೆತಪ್ಪಿಸಿಕೊಂಡು ಎಲ್ಲೋ ಅವಿತು ಅಮೇರಿಕಾಕ್ಕೆ ಓಡಿಹೋಗುವುದರಲ್ಲಿರುವರಂತೆ. ಇದರ ಮುಯ್ಯನ್ನು ಪ್ರತಿಪಕ್ಷದವರು ತೀರಿಸಿಕೊಳ್ಳದೆ ಬಿಡಲಾರರು. ಹೀಗೆಲ್ಲಾ ಪಾಶ್ಚಾತ್ಯರಾಷ್ಟ್ರಗಳಲ್ಲಿ ತಾಮಸಭಾವವು ವೃದ್ಧಿಯಾಗುತ್ತಿರುವುದು ಉತ್ಪಾತಲಕ್ಷಣವಾಗಿದೆಯೇ ಹೊರತು ಶುಭಸೂಚಕವಾಗಿಲ್ಲ.

ತುರ್ಕಿ.

ಲಾಸೇನಿಯಾ ಸಭೆಯಲ್ಲಿ ಆಲೋಚನಾ ಕಾರ್ಯಗಳು ಸಾವಧಾನವಾಗಿ ನಡೆಯುತ್ತಿವೆ. ಇತರ ವಿಷಯಗಳ ಚರ್ಚೆಯ ಸಮಯಕ್ಕೆ ಕರೆಯದೆ ಜಲಸಂಧಿ ವಿಷಯಕವಾದ ಚರ್ಚಾಸಮಯಕ್ಕೆ ಮಾತ್ರ ಸಭೆಯವರು ರಷ್ಯಾಪ್ರಭುತ್ವದವರಿಗೆ ಆಹ್ವಾನ ಕೊಟ್ಟು ಸಂಧಿಸಭೆಗೆ ಬರಮಾಡಿಕೊಂಡರು. ಆ ಪ್ರಭುತ್ವದ ಪ್ರತಿನಿಧಿಯಾಗಿ ಬಂದಿರುವ ರಾಕೋವಿಸ್ಕಿಯವರು ಕಪ್ಪುಸಮುದ್ರಕ್ಕೂ ಮೆಡಿಟರೇನಿಯನ್ ಸಮುದ್ರಕ್ಕೂ ಮಧ್ಯದಲ್ಲಿ ಎಲ್ಲರ ವ್ಯಾಪಾರಿ ಹಡಗುಗಳೂ ಸಂಚರಿಸಬಹುದೆಂದೂ, ಯುದ್ಧದ ಹಡಗುಗಳು ಮಾತ್ರ ಕಪ್ಪುಸಮುದ್ರಕ್ಕೆ ಬರಲಾಗದೆಂದೂ, ಜಲಸಂಧಿಗಳು ಅವುಗಳ ಸಮೀಪದ ರಾಜ್ಯದ ವಶದಲ್ಲಿರುವುದೇ ವಿಹಿತವೆಂದೂ, ಆಂಗ್ಲನೌಕಾದಳದ ವಶದಲ್ಲಿರುವುದು ಯುಕ್ತವಲ್ಲವೆಂದೂ, ಜಲಸಂಧಿಗಳನ್ನು ತುರ್ಕಿಯವರ ಪರಿಪಾಲನೆಗೆ ಒಪ್ಪಿಸಿಬಿಟ್ಟರೇನೆಯೇ ಅವುಗಳ ಪರಿಪಾಲನವು ಚೆನ್ನಾಗಿ ನಡೆಯುವುದೆಂದೂ ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಆಂಗ್ಲ ಪ್ರತಿನಿಧಿಗಳು ಒಪ್ಪುವವರಾಗಿಲ್ಲ. ಅಲ್ಲದೆ ಸಂಧಿಸಮಾವೇಶದ ಎಲ್ಲ ವಿಷಯದ ಚರ್ಚೆಯಲ್ಲೂ ರಷ್ಯಾಸಂಬಂಧವಿರಬೇಕೆಂದು ಅವರು ವಾದಿಸುತ್ತಿದ್ದಾರೆ. ಇದಕ್ಕೆ ಇಟಲಿಯವರೂ ಒಪ್ಪುತ್ತಾರೆ. ರಷ್ಯಾವು ಅಂತರಂಗ ಬಹಿರಂಗಗಳಲ್ಲೆಲ್ಲಾ ತುರ್ಕಿಗೆ ಬೆಂಬಲವನ್ನು ಸುವ್ಯಕ್ತಪಡಿಸಿಕೊಳ್ಳುತ್ತಿದೆ. ರಷ್ಯಾ ರಾಯಭಾರಿ ಬಂದೀಚೆಗೆ ಅಂಗೋರಾ ಪ್ರತಿನಿಧಿಯ ಮಾತಿನಲ್ಲೂ ಚರ್ಚೆಯಲ್ಲೂ ದಿಟ್ಟತನವು ಹೆಚ್ಚಾಗಿದೆ. ತುರ್ಕಿ ದೇಶದಲ್ಲಿ ಅಪರಾಧ ವಿಚಾರಣ ವಿಷಯವಾಗಿ ವಿದೇಶೀಯರಿಗೆ ಪ್ರತ್ಯೇಕ ಹಕ್ಕು (ನಮ್ಮ ಭರತಖಂಡದಲ್ಲಿರುವಂತೆ) ಇರುತ್ತದೆ. ಪರರಿಗೆ ಇಂಥ ಹಕ್ಕಿರುವುದು ತುರ್ಕಿಯ ಸ್ವಾತಂತ್ರ್ಯಕ್ಕೆ ಭಂಗಕರವೆಂದೂ, ಆ ಪದ್ಧತಿಯನ್ನು ತಪ್ಪಿಸಬೇಕೆಂದೂ ತುರ್ಕಿಯವರು ಪಟ್ಟುಹಿಡಿದಿದ್ದಾರೆ. ತುರ್ಕಿಯವರ ಇಷ್ಟದಂತೆ ತಮ್ಮ ಪ್ರತ್ಯೇಕವಿಚಾರಣಾಧಿಕಾರವನ್ನು ಬಿಟ್ಟುಕೊಡುವುದಕ್ಕೆ ರಷ್ಯಾ ಪ್ರತಿನಿಧಿಯು ಅಂಗೀಕರಿಸಿದುದಲ್ಲದೆ ಇತರ ಪ್ರಭುತ್ವದವರೂ ಹಾಗೆಯೇ ಮಾಡಬೇಕೆಂದು ಕೋರಿರುತ್ತಾರೆ. ಆಂಗ್ಲ ಪ್ರತಿನಿಧಿಯಾದ ಲಾರ್ಡ್ ಕರ್ಜನ್‌ರವರು ಮಾತ್ರ ಈ ವಿಷಯದಲ್ಲಿ ಇತರ ಮಿತ್ರಮಂಡಲೀ ಪ್ರಭುತ್ವಗಳ ಅಭಿಪ್ರಾಯನನ್ನೆಲ್ಲಾ ತಿಳಿದು ಉತ್ತರಕೊಡಬೇಕೆಂದು ಹೇಳಿದ್ದಾರೆ. ಅಲ್ಲದೆ ಪಾಲಸ್ಟೈನಿನಲ್ಲಿರುವ ಇಂಗ್ಲೀಷರ ಮಾಂಡೇಟನ್ನು ತಪ್ಪಿಸಿ ಅರಬ್ಬಿಯನರಿಗೆ ಒಪ್ಪಿಸಿಬಿಡಬೇಕೆಂದೂ, ಮುಸ್ಲೀಂ ಮತಾಭಿಮಾನವು ವ್ಯಾಪನೆಗೊಂಡರೆ ಇತರರಿಗೆ ಬಹಳ ಉಪದ್ರವವುಂಟಾಗುವುದೆಂದು ಯೋಚಿಸುವುದು ಸರಿಯಲ್ಲವೆಂದೂ, ರಷ್ಯಾಕ್ಕೆ ತುರ್ಕಿಯು ಕೊಡಬೇಕಾಗಿದ್ದ ಸಾಲವನ್ನೆಲ್ಲಾ ತಾವು ಬಿಟ್ಟುಬಿಡುತ್ತೇವೆಂದೂ, ಹಾಗೆಯೇ ಇತರ ಪ್ರಭುತ್ವದವರೂ ತುರ್ಕಿ ವಿಷಯದಲ್ಲಿ ಪ್ರವರ್ತಿಸಬೇಕೆಂದೂ ಸಹ ರಷ್ಯಾ ಪ್ರತಿನಿಧಿಯು ತುರ್ಕಿಗೆ ಸಂಪೂರ್ಣ ಸಹಾಯಕವಾಗಿ ಅಭಿಪ್ರಾಯಪಟ್ಟಿದ್ದಾರೆ. ಜಲಸಂಧಿ ವಿಷಯದ ಹೊರತು ಇತರ ವಿಷಯಗಳಲ್ಲಿ ರಷ್ಯನರು ಅಂಗವಾಗಿರಕೂಡದೆಂದು ಮಿತ್ರಮಂಡಲಿಯವರು ಅಭಿಪ್ರಾಯಕೊಟ್ಟರು. ಹಾಗಾದರೆ ನಮ್ಮ ಅಪ್ರತ್ಯಕ್ಷದಲ್ಲಿ ನಡೆದ ಸಂಧಿನಿಬಂಧನೆಗಳಿಗೆ ರಷ್ಯಾವು ಬದ್ಧವಾಗುವುದಿಲ್ಲವೆಂದೂ, ಅದರಿಂದ ಮುಂದೆ ವಿಪರೀತ ಪರಿಸ್ಥಿತಿಗಳು ಪ್ರಾಪ್ತವಾದರೆ ಅದಕ್ಕೆ ತಾವು ಉತ್ತರವಾದಿಗಳಲ್ಲವೆಂದೂ ರಷ್ಯಾಪ್ರತಿನಿಧಿ ಚಿಚಿರಿನ್‌ರವರು ಉತ್ತರಕೊಟ್ಟಿದ್ದಾರೆ. ರಷ್ಯನರು ಪಟ್ಟ ಅಭಿಪ್ರಾಯಗಳನ್ನೇ ಅಂಗೋರಾ ಪ್ರತಿನಿಧಿ ಇಸ್ಮಿದ್ ಪಾಷಾರವರು ಬಲಪಡಿಸಿ ಮಾತನಾಡಿದರು. ಅದರ ಮೇಲೆ ಲಾರ್ಡ್ ಕರ್ಜನರು—ರಷ್ಯನರ ಅಭಿಪ್ರಾಯವೇ ತುರ್ಕಿಯ ಅಭಿಪ್ರಾಯವೊ? ಎಂದು ಪ್ರಶ್ನೆಮಾಡಲಾಗಿ, ಇಸ್ಮಿದ್ ಪಾಷಾರವರು ಮುಸಿನಗೆ ನಗುತ್ತ ಹಾಗೇ ಸರಿಯೆಂದೂ ಅದಕ್ಕಿಂತ ಹೊಸದಾಗಿ ತಾವೇನೂ ಹೇಳತಕ್ಕುದಿಲ್ಲವೆಂದೂ ಉತ್ತರಕೊಟ್ಟರು. ಜಲಸಂಧಿ ವಿಷಯವು ಮುಖ್ಯ ವಿಷಮಸ್ಥಾನವಾಗಿದೆ. ಇದು ಶಾಂತಿಗೆ ಸಾಧಕವಾಗುವುದೋ ಯುದ್ಧಕ್ಕೆ ದಾರಿಮಾಡುವುದೋ ತಿಳಿಯಲಿಲ್ಲ. ತುರ್ಕಿಯವರ ಋಣದ ವಿಷಯ, ಯುದ್ಧ ನಷ್ಟಪರಿಹಾರದ ಪ್ರಶ್ನೆ ಇತ್ಯಾದಿ ವಿಷಯಗಳ ವಿಚಾರಣೆಗಾಗಿ ಏರ್ಪಟ್ಟಿರುವ ಸಂಘಗಳು ಚರ್ಚೆ ನಡೆಯಿಸುತ್ತಿವೆ.

ಸುಮಾರು 60—70 ಸಾವಿರ ರೂಪಾಯಿಗಳ ನಗಗಳು ಹರಾಜು ಹಾಕಲ್ಪಡುತ್ತವೆ.

ಜವಾಹಿರಿ ವಗೈರೆ ನಗಗಳ ಹರಾಜಿನ ಇಸ್ತಿಹಾರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್ O S $\frac{26}{16\cdot17}$ ನೇ ನಂಬರಿನಲ್ಲಿ ಆರ್ಡರಾಗಿರುವ ಮೇರೆ ಲೇಟ್ ಅರಮನೆ ಪದ್ಮರಾಜಪಂಡಿತರ ಮಕ್ಕಳು 1ನೇ ಜಿನಚಂದ್ರಪಂಡಿತರು 2ನೇ ವರ್ಧಮಾನಪಂಡಿತರು ನೆಕ್ಸ್ಟ್ ಫ್ರೆಂಡ್ ಕಮಲಮ್ಮ ಇವರುಗಳಿಗೆ ಸಂಬಂಧಪಟ್ಟ ನಗಗಳನ್ನು ಸುಪರ್ದಿಗೆ ತೆಗೆದುಕೊಂಡು ವಿಕ್ರಯ ಮಾಡಬೇಕೆಂದು ಅದಕ್ಕಾಗಿ ಈ ಕೆಳಗೆ ರುಜು ಮಾಡಿರುವವರನ್ನು ಕಮಿಷನರುಗಳನ್ನಾಗಿ ನೇಮಕಮಾಡಿರುವ ಪ್ರಕಾರ ಸದರೀ ಕಮಿಷನರುಗಳು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—ಡಿಸೆಂಬರು ಮಾಹೆ 16 ನೇ ಶನಿವಾರ ಮತ್ತು 17 ನೇ ಭಾನುವಾರ ಪ್ರಾತಃಕಾಲ 8 ಘಂಟೆಗೆ ಸರಿಯಾಗಿ ಕಮಿಷನರುಗಳ ಪೈಕಿ ದೊಡ್ಡಪೇಟೆಯಲ್ಲಿರುವ ಮೋತೀಖಾನೆ ಲಕ್ಷ್ಮೀಪತಯ್ಯನವರ ಮಕ್ಕಳು ವರ್ಧಮಾನಯ್ಯನವರ ಸ್ವಂತಮನೆಯಲ್ಲಿ ಈ ಕೆಳಗೆ ಕಂಡ ನಗಗಳು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತವೆ. ಇಷ್ಟವುಳ್ಳವರು ಆ ಕಾಲಕ್ಕೆ ಸರಿಯಾಗಿ ಭಿಡಸವಾಲ್ ಮೂಲಕ ಪಡೆಯಬಹುದು. ಜಾಸ್ತಿ ಸವಾಲ್ ಮಾಡಿದವರು ತಮ್ಮ ಸವಾಲ್ ಮೊಬಲಗಿಗೆ ಶೇಕಡಾ 25 ರ ಪ್ರಕಾರ ಹರಾಜು ಖೈದಾದ ಕೂಡಲೇ ಡಿಪಾಜಿಟ್ಟು ಕೊಟ್ಟು ಹರಾಜು ಖೈದಾದ 3 ದಿವಸಗಳ ಒಳಗಾಗಿ ಬಾಕಿ ಮೊಬಲಗನ್ನು ಕೊಟ್ಟು ಮಾಲನ್ನು ಪಡೆಯಬಹುದು, ಅಥವಾ ಪೂರಾ ಮೊಬಲಗನ್ನು ಹರಾಜು ಖೈದಾದ ಕೂಡಲೇ ಪಾವತಿಮಾಡಿ ಪಡೆಯಬಹುದು. ಒಂದೇ ನಗಕ್ಕೆ ಇಬ್ಬರು ಏಕಕಾಲದಲ್ಲಿ ಸವಾಲು ಮಾಡಿದರೆ ಜಾಸ್ತಿ ಸವಾಲು ಮಾಡಿದವರಿಗೆ ಮಾಲು ಬಿಡಲ್ಪಡುತ್ತದೆ. ಮೇಲ್ಕಂಡಂತೆ ಪೂರ್ತಾ ಮೊಬಲಗನ್ನು ವಾಯಿದೆಯಲ್ಲಿ ಪಾವತಿಮಾಡದೆ ಹೋದಲ್ಲಿ ನಗಗಳನ್ನು ದುಸರಾ ಹರಾಜು ಮಾಡಿ ಅದರಲ್ಲಿ ಉಂಟಾದ ನಷ್ಟವನ್ನು ಮೊದಲು ಬೀಟು ಮಾಡಿದವರಿಂದ ವಸೂಲು ಮಾಡುತ್ತೆ. ಡಿಪಾಜಿಟ್ಟುದಾರರು ಪೂರ್ತಾ ಮೊಬಲಗನ್ನು ವಾಯಿದೆಯಲ್ಲಿ ಪಾವತಿ ಮಾಡದೆ ದುಸರಾ ಹರಾಜಿಗೆ ಅವಕಾಶ ಕೊಟ್ಟಲ್ಲಿ ಡಿಪಾಜಿಟ್ಟು ಮೊಬಲಗನ್ನು ಕಳೆದುಕೊಳ್ಳುತ್ತಾರೆ. ದುಸರಾ ಹರಾಜಿನಲ್ಲಿ ಜಾಸ್ತಿ ಉತ್ಪತ್ತಿಯಾದಲ್ಲಿ ಮೊದಲಿನ ಬೀಟುದಾರರಿಗೆ ಸೇರತಕ್ಕದ್ದಲ್ಲ.

ಹರಾಜು ಮಾಡತಕ್ಕ ನಗಗಳು.

ಭಾರೀ ವಜ್ರದ ಕಮಲುಗಳು, ಪಚ್ಚೆಗಳು ಹಾಕಿರತಕ್ಕ ಮುತ್ತಿನ ಮಕರಕಂಠೀ, ಜವಾಹಿರಿ ಪದಕಗಳು, ಶೀಮೆಕಮಲದ ಭಾರೀ ಪತ್ತಕಡಕಗಳು, ಉಂಗರಗಳು, ಒಳ್ಳೆ ಮುತ್ತುಗಳು, ಕೆಂಪು ಪಚ್ಚೆ ವಜ್ರದಿಂದ ಕಟ್ಟಿರತಕ್ಕ ಅಮೂಲ್ಯವಾದ ನಗಗಳು, ಕೆಂಪುಗಳು ಕಟ್ಟಿದ ವಜ್ರಗಳು, ಛಂದ್ರದ ಚಂದ್ರಹಾರ, ಥಳಿಕಿನಹಾರ, ಭುಜ ಕೀರ್ತಿಗಳು, ಮತ್ತು ರುಜುಡಭಂಗಾರ ವಗೈರೆ ನಗಗಳು ಮತ್ತು ಬೆಳ್ಳಿ ನಗಗಳು, ನಾನಾತರಹ ನಗಗಳು ಹರಾಜು ಹಾಕಲ್ಪಡುತ್ತವೆ. ಹರಾಜು ಕಾಲದಲ್ಲಿ ನಗಗಳನ್ನು ನೋಡಬೇಕಾದರೂ ತಪ್ಸೀಲು ತಿಳಿದುಕೊಳ್ಳಬೇಕಾದರೂ ಈ ಕೆಳಗೆ ರುಜು ಹಾಕಿರುವ ಕಮಿಷನರುಗಳಿಂದ ತಿಳಿದುಕೊಳ್ಳಬಹುದು.

ಕಮಿಷನರುಗಳು:—

1 **ಎ. ಕೃಷ್ಣರಾವ್,** B.A.B.L.
ಅಡ್ವೋಕೇಟ್.

2 **ಬಿ. ನರಸಿಂಹಯ್ಯಂಗಾರ್,** B.A.B.L.
ಅಡ್ವೋಕೇಟ್.

3 **ದೊರಸಾಮಯ್ಯಂಗಾರ್,**
ಆನರೆರಿ ಬೆಂಚ್ ಮ್ಯಾಜಿಸ್ಟ್ರೇಟ್, ಚಾಮರಾಜನಗರ.

4 **ಎಂ. ಎಲ್. ವರ್ಧಮಾನಯ್ಯ,**
ಮರ್ಚೆಂಟ್, ಮೈಸೂರು.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಡಿಸೆಂಬರ್ ತಾ|| ೧೦ನೆಯ ಭಾನುವಾರ.

ಶ್ರೀ ರಂಭಾಪುರೀ ಸಂಸ್ಥಾನದ ಉತ್ತರಾಧಿಕಾರ.

ವೀರಶೈವ ಮುಖ್ಯಾಚಾರ್ಯ ಪೀಠಗಳೊಳಗೆ ರಂಭಾಪುರೀ ಬಾಳೆಹಳ್ಳಿಯ ಜಗದ್ಗುರುಪೀಠವು ಒಂದಾಗಿರುತ್ತದೆ. ಇದು ಸೇತು ಹಿಮಾಚಲಾಂತ ದೇಶದಲ್ಲಿರುವ ವೀರಶೈವರ ಧಾರ್ಮಿಕ ಸಾಮ್ರಾಜ್ಯರಕ್ಷಣೆಯ ಸಂಸ್ಥಾನವಾಗಿ ಪುರಾತನ ಪ್ರಸಿದ್ಧವಾಗಿದೆ. ಇದರ ಅಧಿಕಾರವು ವೀರಶೈವ ಮಂಡಲದ ಮೇಲೆ ಎಷ್ಟುಮಟ್ಟಿಗೆ ಹೊತ್ತಿರುವುದೋ ಅದರ ರಕ್ಷಣೆಯ ಭಾರವು ಅದರ ಶಿಷ್ಯಮಂಡಲದ ಮೇಲೆಲ್ಲಾ ಅಷ್ಟುಮಟ್ಟಿಗೇ ಹೊತ್ತಿರುತ್ತದೆ. ಹಿಂದೆ ಇದರ ಚರಪಟ್ಟಾಧಿಕಾರಿಗಳಾಗಿದ್ದು ಶಿವೈಕ್ಯರಾದ ಶ್ರೀ ಪಂಚಾಕ್ಷರಿ ರಾಜದೇಶಿಕೇಂದ್ರ ಮಹಾಸ್ವಾಮಿಗಳು ತಾವೇ ತಮ್ಮ ಉತ್ತರಾಧಿಕಾರಿಗಳನ್ನು ಗೊತ್ತುಮಾಡದೆ ಹೋದುದರಿಂದ ಆ ಸ್ಥಲಕ್ಕೆ ಯೋಗ್ಯರಾದವರನ್ನು ಆರಿಸುವ ದೊಡ್ಡ ಭಾರವು ಸಮಾಜದವರಮೇಲೆ ಈಗ ಬಿದ್ದಿರುತ್ತದೆ. ಆದರೆ ಸಂಧಿ ದೊರೆತಾಗ ತ್ರಿಕರಣಪೂರ್ವಕವಾಗಿ ಗುರುಪೀಠಸೇವೆಯನ್ನು ಮಾಡಬೇಕೆಂಬ ಬುದ್ಧಿಯೂ ಯೋಗವೂ ಸರ್ವರಿಗೂ ಹುಟ್ಟುವುದಿಲ್ಲ. ಅದಕ್ಕೂ ಸುಕೃತ ವಿಶೇಷವಿರಬೇಕು. ನರಸಿಂಹರಾಜಪುರದ ಮ|| ಇಂ. ಕಾಂತಪ್ಪಶೆಟ್ಟರೂ ಬೀರೂರಿನ ಪತ್ರಿ ಮನೆತನದವರೂ ಪೂರ್ವಾರಭ್ಯ ಈ ಪೀಠದ ಅಭಿಮಾನಿಗಳಲ್ಲಿ ಮುಂದಾದವರು. ಈಗಲೂ ಅವರುಗಳೇ ಮುಂದಾಗಿ ನಿಂತಿರುವುದೂ, ಅರಸೀಕೆರೆ ಮೊದಲಾದ ಆ ಪ್ರಾಂತದ ಸಮಾಜಬಾಂಧವರು ಅದಕ್ಕೆ ಸಹಾಯಕರಾಗಿರುವುದೂ ಬಹ ಕೇವಲ ಸಂತೋಷಪ್ರದವಾಗಿದೆ. ಈ ಸಂಬಂಧವಾಗಿ ಮೊನ್ನೆ ವಾರದಲ್ಲಿ ಅರಸೀಕೆರೆಯೊಳಗೆ ಕೂಡಿದ್ದ ಸಭೆಯಲ್ಲಿ ನಡೆದಿರುವ ವಿದ್ಯಮಾನಗಳನ್ನು ಕುರಿತು ಅಲ್ಲಿಂದ ಬರೆದುಬಂದಿರುವ ಲೇಖನವನ್ನು ಈ ಪತ್ರದ ಬೇರೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ. ಅದನ್ನೋದಿ ನೋಡುವಲ್ಲಿ ಸಭಾಚಾಲಕರೊಳಗೆ ಪೀಠದ ಅಭಿಮಾನವೂ ಕಾರ್ಯಾಸಕ್ತಿಯೂ ದಕ್ಷತೆಯೂ ಎಷ್ಟುಮಟ್ಟಿಗಿದೆಯೆಂಬುದು ಗೊತ್ತಾಗುತ್ತದೆ. ಇಂಥ ಸಮಯದಲ್ಲಿ ಮುಂದಾಗಿ ನಿಂತು ಕಾರ್ಯಪ್ರವೃತ್ತರಾದವರಿಗೆ ಸಮಾಜಬಾಂಧವರೆಲ್ಲಾ ಕೃತಜ್ಞತೆಯನ್ನು ತೋರಿಸುವುದಲ್ಲದೆ, ತಮ್ಮ ತನುಮನೋಧನಗಳಿಂದ ಪ್ರತಿಯೊಬ್ಬ ವೀರಶೈವನೂ ಯಥಾಶಕ್ತಿ ಸಹಾಯಭೂತರಾಗುವುದು ಆವಶ್ಯಕವಾಗಿರುತ್ತದೆ.

ಅರಸೀಕೆರೆಯ ಸಭೆಯಲ್ಲಿ ನಿರ್ಧರವಾಗಿರುವ ಕಾರ್ಯಕ್ರಮಗಳಲ್ಲಿ ಒಂದೆರಡರ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಈ ಸಮಯದಲ್ಲಿ ಸೂಚಿಸುವುದು ಆವಶ್ಯಕವೆಂದು ತಿಳಿಯುತ್ತೇವೆ. ಸದ್ಯಕ್ಕೆ ಈ ಪೀಠಕ್ಕೆ ಒಬ್ಬರೇ ಒಬ್ಬ ಪಟ್ಟಾಧಿಕಾರಿಗಳನ್ನು ನಿಯಮಿಸುವುದಕ್ಕೆ ಮಾಡಿರುವ ನಿಶ್ಚಯವು ಸರ್ವೋತ್ತಮವಾಗಿರುತ್ತದೆ. ಸ್ಥಿರ ಚರ ಪಟ್ಟಗಳೆಂಬ ಅಧಿಕಾರದ್ವಯವನ್ನು ಹೊಂದಿದ ಮಠಗಳಲ್ಲಿ ಅಂತರ್ಬಹಿಃಕಲಹವಿಲ್ಲದೆ ಕಾರ್ಯನಿರ್ವಾಹಗೊಂಡಿರುವ ಸ್ಥಲಗಳು ಬಹಳ ವಿರಳವಾಗಿರುತ್ತವೆ. ಅಲ್ಲದೆ ಇದೇ ಪೀಠದ ಹಿಂದಣ ಕೆಲಕಾಲದಿಂದ ನಡೆದುಬಂದಿರುವ ಸ್ಥಿತಿಗತಿಯನ್ನು ನೋಡಿದರೂ ಒಬ್ಬರೇ ಅಧಿಕಾರಿಗಳಿರುವುದು ವಿಹಿತವೆಂದು ಸಿದ್ಧವಾಗುತ್ತದೆ. ಗತಿಸಿದ ಶ್ರೀ ಪಂಚಾಕ್ಷರೀ ರಾಜದೇಶಿಕೇಂದ್ರ ಸ್ವಾಮಿಗಳವರಿಗೆ ಅಧಿಕಾರಬಾದ ಕಾಲದಲ್ಲೇ ಶ್ರೀ ಮಲ್ಲಿನಾಥಶಾಸ್ತ್ರಿಗಳೆಂಬ ವಿದ್ವದ್ವರ್ಯರಿಗೆ ಇದೇ ಪೀಠದ ಸ್ಥಿರಪಟ್ಟಾಧಿಕಾರವು ನೆರವೇರಿಸಲ್ಪಟ್ಟಿತು. ಅವರು ಪೀಠದ ಗೌರವ ಪ್ರತಿಷ್ಠೆಗಳನ್ನು ಬಲುಮಟ್ಟಿಗೆ ಹೆಚ್ಚಿಸಿ ಸಮಾಜಧರ್ಮರಕ್ಷಣೆಯನ್ನು ಮಾಡುವಲ್ಲಿ ಬಹಳ ಉತ್ಸಾಹವಂತರೂ ಸಾಮರ್ಥ್ಯವಂತರೂ ಆಗಿದ್ದರು. ಆದರೇನು? ಸಮಾಜದ ದುರದೃಷ್ಟದಿಂದ ಸ್ವಲ್ಪ ಕಾಲದೊಳಗೇ ಅವರು ಶಿವೈಕ್ಯರಾದರು. ಚರಪಟ್ಟಾಧಿಕಾರಿಗಳು ೨ ಪಟ್ಟಗಳ ಕಾಲದ ಮೇಲೆಯೇ ಅಧಿಕಾರಿಗಳಾಗಿದ್ದರೂ ಸಮಾಜಕ್ಕೇ ಆಗಲೀ ಪೀಠಕ್ಕೇ ಆಗಲೀ ಶಾಶ್ವತ ಫಲಪ್ರದವಾದ ಕಾರ್ಯಗಳೇನನ್ನೂ ಮಾಡಲಿಲ್ಲವೆಂಬುದನ್ನು ವಿಷಾದದಿಂದ ಹೇಳಬೇಕಾಗುತ್ತದೆ. ಬೀರೂರಿನಲ್ಲಿ ಮಹಾಸಭೆಯು ನಡೆದಾಗ್ಗೆ ಈ ಶ್ರೀಗಳವರೂ ದಯಮಾಡಿಸಿದ್ದರು. ನಾವು ಪ್ರತ್ಯಕ್ಷವಾಗಿ ಸಂದರ್ಶನವನ್ನು ತೆಗೆದುಕೊಂಡು ಸಂಭಾಷಿಸುವಾಗ್ಗೆ ಅವರ ದೇಹಾರೋಗ್ಯವು ಇಳಿತರವಾಗಿದ್ದಿತೆಂಬುದು ಗೋಚರವಾದುದಲ್ಲದೆ ಅವರ ಮುಖವಚನದಿಂದಲೂ ಗೊತ್ತಾಯಿತು. ಪೀಠವನ್ನು ಪೂರ್ವಸ್ಥಿತಿಕ್ಕೆ ತಂದಿಡಲು ಸರ್ವಪ್ರಕಾರದ ಸಾಮರ್ಥ್ಯವನ್ನೂ ಪಡೆದ ವಟುಗಳಾರನ್ನಾದರೂ ಈಗಲೇ ತಾವು ಗೊತ್ತುಪಡಿಸುವುದು ಆವಶ್ಯಕನೆಂದು ನಾವು ಬಿನ್ನೈಸಿಕೊಳ್ಳಲು, ಅದೇ ಪ್ರಯತ್ನದಲ್ಲೇ ತಾವು ಇದ್ದೇವೆಂದೂ ನಿಮ್ಮಂಥವರನ್ನೆಲ್ಲಾ ಕರೆಯಿಸಿಕೊಂಡು ಪರ್ಯಾಲೋಚಿಸಿ ಸಿದ್ಧಪಡಿಸುತ್ತೇವೆಂದೂ ಅಪ್ಪಣೆಕೊಡಿಸಿದ್ದರು. ಆದರೆ ಅವರ ಅಂತ್ಯಕಾಲದವರೆಗೂ ಅದು ನೆರವೇರಲಿಲ್ಲ. ಅವರ ಸಂಬಂಧವೇನೋ ಪೀಠಕ್ಕೆ ಕಳೆದುಹೋಗಿದರೂ ಸಮಾಜಕ್ಕೆ ಎಂದಿಗೂ ತಪ್ಪತಕ್ಕುದಲ್ಲವಷ್ಟೆ. ಆದುದರಿಂದ ಅವರು ಮಾಡಬೇಕಾಗಿದ್ದ ಕಾರ್ಯವನ್ನು ಸಮಾಜಬಾಂಧವರೆಲ್ಲರೂ ವಹಿಸಿ ಈಗ ನೆರವೇರಿಸಬೇಕು.

ಬರುಬರುತ್ತಾ ಕಾಲಸ್ಥಿತಿಯು ಸೂಕ್ಷ್ಮವಾಗುತ್ತಿದೆ. ಮುಗ್ಧಭಕ್ತಿಯು ಕಡಿಮೆಯಾಗಿ ಪ್ರೌಢಭಕ್ತಿಯು ತಲೆಯೆತ್ತುತ್ತಿದೆ. ಒಂದು ವಿಧದಲ್ಲಿ ಇದನ್ನು ಸಮಾಜಕ್ಕೆ ಹಿತಕರವೆಂದೇ ಹೇಳಬಹುದು. ಯಾವವಿಧದ ಉತ್ಕೃಷ್ಟ ಯೋಗ್ಯತೆಯಿಲ್ಲದಿದ್ದರೂ ನಮ್ಮ ಗುರುಗಳೆಂಬ ಅಭಿಮಾನವೊಂದರಿಂದಲೇ ಕಾಣಿಕೆ ಕಪ್ಪಗಳನ್ನಿತ್ತು ಮರ್ಯಾದಿಸುವ ಜನರು ಕಡಿಮೆಯಾಗುವುದು ಉತ್ತಮವೇ ಸರಿ. ಹೀಗಾಗುವುದರಿಂದ ಧರ್ಮರಕ್ಷಣಾಧಿಕಾರಿಗಳಲ್ಲಿ ಕರ್ತವ್ಯಜ್ಞಾನವೂ ಕರ್ತವ್ಯತತ್ಪರತೆಯೂ ಹೆಚ್ಚಲು ಅವಕಾಶವಾಗಿ ಅದರಿಂದ ಸಮಾಜಕ್ಕೆ ಲಾಭವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಪೈರಿನೊಳಗೆ ಬೆಳೆವ ಕಳೆಗಳಂತೆ ಪೂಜ್ಯವರ್ಗದವರಲ್ಲಿ ಕಲಹೋತ್ಪಾದನೆ ಮಾಡತಕ್ಕುದೇ ಮುಖ್ಯಕರ್ತವ್ಯವೆಂದು ತಿಳಿದು, ಸಮಾಜಕ್ಕೆ ಇದರಿಂದ ಎಷ್ಟು ಅನರ್ಥವಾಗುವುದೆಂಬುದನ್ನು ಪರ್ಯಾಲೋಚಿಸದೆ ಇರುವ ಜಾಣರು ಬೇರೆ ಮೂಡಿರುತ್ತಾರೆ. ಆದುಕಾರಣ ಇಂಥ ಸಮಯದೊಳಗೆ ಮುಖ್ಯಾಚಾರ್ಯಪೀಠಗಳಿಗೆ ಅಧಿಕಾರಿಗಳನ್ನು ನಿಯಮಿಸುವ ಕೆಲಸವು ಸಾಮಾನ್ಯತರವಾಗಿರುವುದಿಲ್ಲ. ದೂರವಿಚಾರವಿಲ್ಲದೆ ಕಾರ್ಯವನ್ನು ನೆರವೇರಿಸಿ, ಉತ್ತರೋತ್ತರ ಅದರಿಂದ ಸಮಾಜಕ್ಕೆ ಘಾತವುಂಟಾದರೆ, ಆ ದುಷ್ಫಲಕ್ಕೆ ಅದರ ಮೂಲಚಾಲಕರೆಲ್ಲರೂ ಭಾಗಿಗಳಾಗಬೇಕಾಗುತ್ತದೆ. ಈಗಳಾದರೋ ಅರಸೀಕೆರೆಯಲ್ಲಿ ನಡೆದ ಕಾರ್ಯಾಲೋಚನ ಸಭೆಯಲ್ಲಿ ಮಾಡಿರುವ ನಿರ್ಧಾರಗಳೊಳಗೆ ಅಧಿಕಾರಕ್ಕೆ ತಕ್ಕವರನ್ನು ಆರಿಸಿತರಲು ನಾಲ್ಕುಮಂದಿ ದೊಡ್ಡ ಮನುಷ್ಯರುಗೊತ್ತಾಗಿರುವುದಾಗಿ ತಿಳಿಯಬರುತ್ತದೆ. ಈ ಮಾರ್ಗವು ಯುಕ್ತವಾದುದೆಂದು ನಮಗೆ ತೋರುವುದಿಲ್ಲ. ಶಾಖಾಮಠಗಳಿಗೆ ಉತ್ತರಾಧಿಕಾರಿಗಳನ್ನು ನಿಯಮಿಸಬೇಕಾದಾಗ್ಗೇ ಬಹಿರಂಗಪ್ರಕಟನೆಗಳ ಮೂಲಕ ಯೋಗ್ಯವಟುಗಳನ್ನಪೇಕ್ಷಿಸಿ ಬರಮಾಡಿಕೊಂಡು ಕಾರ್ಯವನ್ನು ನೆರವೇರಿಸುವ ಉತ್ತಮ ಪದ್ಧತಿಯು ಈಗ ಅಲ್ಲಲ್ಲಿ ಬಳಕೆಗೆ ಬಂದಿರುತ್ತದೆ. ಇಂಥ ಮುಖ್ಯಪೀಠಗಳಿಗೆ ಅಂಥ ನಿರಾಕ್ಷೇಪ ಮಾರ್ಗವನ್ನು ಅನುಸರಿಸದೆ ಹೋಗುವುದು ಸರಿಯಲ್ಲ. ಹಿಂದೆ ಶ್ರೀ ಮಲ್ಲಿನಾಥಶಾಸ್ತ್ರಿಗಳು ಕಾಶಿಯಲ್ಲಿ ಶಬ್ದಶಾಸ್ತ್ರವನ್ನಭ್ಯಸಿಸಿ, ಪೂರ್ಣಪಾಂಡಿತ್ಯವನ್ನು ಪಡೆದು, ದೇಶಸಂಚಾರವನ್ನು ಮಾಡಿಕೊಂಡು ರಾಜಧಾನಿಗೂ ದಯಮಾಡಿಸಿ ಇಲ್ಲಿ ಕೈ|| ವೀರಸಂಗಪ್ಪನವರಿಂದ ಏರ್ಪಡಿಸಲ್ಪಟ್ಟಿದ್ದ ಸ್ವಮತ ಪರಮತದ ವಿದ್ವನ್ಮಂಡಲಿಯ ಸಭೆಯಲ್ಲಿ ವಾಕ್ಯಾರ್ಥವನ್ನು ನಡೆಯಿಸಿ, ''.....ಪ್ರಚಲಿತ ವ್ಯಾಕರಣಶಾಸ್ತ್ರಪರೀಕ್ಷಾಯಾಂ ಪರಮಾಂ ಯೋಗ್ಯತಾ ಮಧಿಗತವಂತಇತಿ ನಿಶ್ಚಿನುಮಃ'' ಎಂಬ ಪ್ರಶಸ್ತಿಪತ್ರವನ್ನು ಇಲ್ಲಿಯ ಪರಮತ ವಿದ್ವದಗ್ರಗಣ್ಯರಿಂದ ಪಡೆದರು. ಅಲ್ಲದೆ ಅವರ ವಿದ್ವತ್ತಿಗಿಂತಲೂ ಅವರಲ್ಲಿ ಶಮದಮಾದಿ ಸಂಪತ್ತೂ ಸಮಾಜಾಭಿಮಾನವೂ ವಿಶೇಷವಾಗಿದ್ದು ಸರ್ವರ ಚಿತ್ತಾಕರ್ಷಣವನ್ನೂ ಮಾಡುತ್ತಿದ್ದುವು. ಅಂಥವರನ್ನು ಇದೇ ಪೀಠದ ಸ್ಥಿರಪಟ್ಟಾಧಿಕಾರಕ್ಕೆ ನಿಯಮಿಸುವಾಗಲೂ ಕೂಡ ಸೇರಿದ್ದ ಮಹಾಸಭೆಯಲ್ಲಿ ವಿಪರೀತ ಚರ್ಚೆಗಳು ಹುಟ್ಟಿ, ಕಡೆಗೆ ಪರಮ ಪ್ರಯಾಸದಿಂದ ಕೊನೆಗಂಡರೂ ಇಂದು ನೆರವೇರಬೇಕಾಗಿದ್ದ ಕಾರ್ಯವು ಮರುದಿನ ನೆರವೇರಬೇಕಾಯಿತು. ಇದು ಕಾಲುಶತಮಾನದ ಹಿಂದಣ ಮಾತು. ಈಗಣ ಸಮಾಜಸ್ಥಿತಿಯು ಅದಕ್ಕಿಂತಲೂ ಸೂಕ್ಷ್ಮವಾಗಿದೆ. ಕಳೆದುಕೊಂಡಿರುವ ಪೂರ್ವೌನ್ನತ್ಯವನ್ನು ಪೀಠಕ್ಕೆ ಸಂಪಾದಿಸಿಕೊಳ್ಳಬೇಕೆಂಬ ನಿರಂತರ ಕುತೂಹಲವೂ, ಅದಕ್ಕೆ ತಕ್ಕ ಶಕ್ತಿಯೂ ವಿದ್ವತ್ತೂ, ಸದಾಚಾರ ಕುಲಶೀಲಾದಿ ಸಂಪತ್ತೂ, ಇವೆಲ್ಲಕ್ಕಿಂತಲೂ ಮಿಗಿಲಾಗಿ ಸಮಾಜದಲ್ಲಿ ಏಕಮತ್ಯವನ್ನು ವೃದ್ಧಿಗೊಳಿಸಿ ಅದಕ್ಕೆ ಸರ್ವತೋಮುಖವಾದ ಏಳ್ಗೆಯನ್ನುಂಟುಮಾಡಬೇಕೆಂಬ ದೃಢತರ ಮನೋಭಾವವೂ, ಶಮದಮಾದಿ ಗುಣಾತಿಶಯವೂ ಇರತಕ್ಕವರು ಅಧಿಕಾರಕ್ಕೆ ಬರಬೇಕು. ೩-೪ ಜನರು ಸೇರಿ ಇಂಥವರನ್ನು ಪರೀಕ್ಷಿಸಿ ಗೊತ್ತುಮಾಡುವುದೆಂದರೆ ಸಾಲದು. ಹಾಗೆ ಪರೀಕ್ಷೆ ಮಾಡತಕ್ಕವರಲ್ಲಿಯೂ ತಕ್ಕ ಸಾಮರ್ಥ್ಯವಿರಬೇಕಾಗುತ್ತದೆ. ಆದುಕಾರಣ ಇಂಥ ದೊಡ್ಡ ಭಾರವನ್ನು ನಾಲ್ಕಾರು ಜನರ ತಲೆಯಮೇಲೆ ಹೇರಿ ನಿಷ್ಠುರಕ್ಕೂ ಕಷ್ಟಕ್ಕೂ ಅವರನ್ನು ಗುರಿಮಾಡಿ ಬಿಡುವುದಕ್ಕಿಂತಲೂ, ದೇಶಮಧ್ಯದಲ್ಲಿರುವ ವೀರಶೈವ ವೃತ್ತಪತ್ರಿಕೆಗಳಲ್ಲಿ ಇಂಥಿಂಥ ಯೋಗ್ಯತೆಯುಳ್ಳವರು ಈ ಪೀಠಾಧಿಕಾರಕ್ಕೆ ಬೇಕೆಂದೂ, ಉಮೇದುವಾರರುಗಳು ಇಂಥವರಲ್ಲಿಗೆ ಬರೆದುಕೊಳ್ಳಬೇಕೆಂದೂ ಪ್ರಕಟಪಡಿಸಿ, ಪಟ್ಟಾಭಿಷೇಕ ಸಮಯಕ್ಕೆ ಅಂಥವರನ್ನೆಲ್ಲಾ ಬರಮಾಡಿಕೊಂಡು, ಪರೀಕ್ಷೆ ಮಾಡಲು ಯೋಗ್ಯತಾಸಂಪನ್ನರಾದ ಕೆಲವು ದೊಡ್ಡಮನುಷ್ಯರುಳ್ಳ ಸಂಘದಮೂಲಕ ಆ ಉಮೇದುವಾರರಲ್ಲಿ ಉತ್ತಮ ತರಗತಿಯವರಾದವರನ್ನು ನಿರ್ಧರಗೊಳಿಸಿಕೊಂಡು, ಅವರುಗಳಲ್ಲಿ ಪ್ರತಿಯೊಬ್ಬರ ಯೋಗ್ಯತಾಂಶವನ್ನೂ ಆ ಕಾಲಕ್ಕೆ ಸೇರಿರುವ ಮಹಾಜನ ಸಮೂಹಕ್ಕೆ ಶ್ರುತಪಡಿಸಿ, ಅವರುಗಳ ಓಟುಗಳನ್ನು ತೆಗೆದುಕೊಳ್ಳಲು ಏರ್ಪಡಿಸಿ, ಹೆಚ್ಚು ಓಟುಗಳು ಯಾರಿಗೆ ದೊರೆಯುವುವೋ ಅಂಥವರನ್ನು ಅಧಿಕಾರಕ್ಕೆ ಗೊತ್ತುಪಡಿಸಿ ಕಾರ್ಯವನ್ನು ಸಾಂಗಗೊಳಿಸುವುದು ಸರ್ವಸಂಮತವಾದ ಮಾರ್ಗವೆನಿಸುತ್ತದೆ. ಈ ನಮ್ಮ ಸೂಚನೆಯು ಸೂಕ್ತವಾಗಿ ಕಂಡರೆ ಈ ಕಾರ್ಯವ್ಯವಸ್ಥಾಪಕ ಮಹಾಶಯರು ಅಂಗೀಕರಿಸಬಹುದು. ಈರೀತಿ ಮಾಡುವುದಕ್ಕೆ ಸ್ವಲ್ಪ ಕಾಲವ್ಯವಧಿಯು ಹೆಚ್ಚಾದರೂ ಬಾಧಕವಿಲ್ಲ. ಫಾಲ್ಗುಣದಲ್ಲೋ ಅಥವಾ ಮುಂದಣ ವಸಂತ ಋತುವಿನಲ್ಲೋ ಪಟ್ಟಾಭಿಷೇಕ ಕಾರ್ಯವನ್ನು ನೆರವೇರಿಸಿದರೂ ಬಾಧಕವಿಲ್ಲ.

CARPING—NO CRITICISM.

With the steady progress of our State on democratic lines and with the introduction of new reforms into our constitution one would have hoped that journalism and public criticism in Mysore would rise above irresponsible cavil and petty

jealousies and assume a healthier and constructive complexion. But we are afraid that such an expectation is doomed to disappointment. The local paper *Sampadabhyudaya* of the 29th November 1922 contains a long letter by one Mr. R. Gopalswamy Iyer about all and sundry matters and particularly directed against the working of the Lingayet Education Fund Association under the very unsuitable heading "Is it Right?" To answer the various aimless questions put therein would be a waste of time, for it is no business of any communal association to give every detail of its working to the public in general, nor would the public in general be anxious to know all about it unless they have, as perhaps the writer of this letter, no other better business to do for themselves. If the scribe did want to know about the working of the Lingayet Association nothing was easier for him than to have approached its President who is none other than Rajasabhabhushana Dewan Bahadur K. P. Puttanna Chetty C.I.E., and got what he wanted instead of rushing into print, betraying not merely ignorance which is execusable but want of good taste. The reports of the Association are published annually, and they speak for themselves. We believe this same gentleman had on previous occasions busied himself with other associations like the central Mohammadan Association and the Vokkaligara Sanga, and found perhaps it was not worth the game and now directs his beneficent activities towards the Lingayet Association. The writer wants to show that the Mysore Prajamitra Mandali or the Central Mohammadan Association or the Lingayet Education Fund Association have done nothing in the matter of bringing about a good feeling between Hindus and Musulmans in Tiptur. We have had our full say in the matter already. The Government had the whole direction of the affair themselves and it is only if the move comes from them that there is any chance of the attempt being a success. He questions our statement that what little public opinion there is in the Mysore State is due to the various communal associations. We would only ask where else they could find any public opinion worth the name in Mysore. He may be under the delusion that meetings and conferences under the big titles of "People's Convention," and "People's Conference" held by small cotteries who are as far removed from the people as the two poles constitute public opinion though there has been already ample proof of their worthlessness. There is no use in meddlers carping on the earnest efforts of selfless people devoted to country's good. If men such as the writer of this letter have no better business to do there is sufficient opportunity for them to cleanse their own community. We would have on no account bestowed any attention on this letter but for the mischief such writings would create and the chances afforded for irresponsible criticism to develop.

MYSORE CITY MUNICIPAL COUNCIL MEETING.

At the last meeting of Mysore City Municipal Council held on 2nd December 1922 there was a very strong and unanimous protest against the raising of a loan of Rs. 6 lakhs for so-called productive schemes referred to in our last issue. Mr. C. Srikanteswara Iyer in his capacity as Chairman of the Trust Board in referring the resolution of the same about the raising of the loan for five productive works to the President of the City Municipal Council had invited a reference to the Resolution No. II dated 6th March 1920 of the Council stating that the latter resolution had sanctioned the raising of a loan for the said works. Mr. Purushotham Anandagiri Bavaji pointed out that that resolution of 6th March 1920 referred only to one of the 5 works now placed before the House, namely, the completion of the Devaraja Market and not to the other four works. As regards the Commercial Street which was taken up first Messrs. Basavaradya, Bavaji, Virupakshiah and Rev. Edwards explained the undesirability of such a scheme which was supported by the rest of the members. The President himself said that the Trust Board itself was doubtful of the scheme and the matter might be dropped. The only scheme that was approved of was the completion of the market.

Notwithstanding the strong opposition manifested at the last meeting, we learn that the President has again brought this very subject of opening a commercial street along with other works for the next meeting to be held on 16th December 1922. We have not found any thing approaching this unmeaning pertinacity, which takes no need of either public good or public opinion. It would be most amusing, if there was not the tragic element also in it to see that ornamentation should be carried on at the risk of public funds. We have given ample reasons for discountenancing such an attempt and we hope that the City Fathers will kindly look more to the substantial development than to the showy appearance of the city.

ಗ್ರೀಕ್ ದೇಶದ ಕ್ರೂರ ಪ್ರಭುತ್ವ.

ಬರುಬರುತ್ತ ಯೂರೋಪು ಖಂಡದಲ್ಲಿ ತಾಮಸೋದ್ರೇಕವು ಎಷ್ಟು ಪ್ರಬಲವಾಗುತಿದೆಯೆಂಬುದಕ್ಕೆ ಅನೇಕೋದಾಹರಣೆಗಳು ದೊರೆಯುತ್ತವೆ. ಅಂಥ ದೃಷ್ಟಾಂತಗಳೊಳಗೆಲ್ಲಾ ಈಗ ಗ್ರೀಕಿನಲ್ಲಿ ನಡೆದಿರುವ ಅಮಾನುಷವಾದ ಕ್ರೂರಕೃತ್ಯವು ಅಗ್ರಗಣ್ಯವಾಗಿರುತ್ತದೆ. ಆ ದೇಶದಲ್ಲಿ ಈಗ ನೂತನವಾಗಿ ಏರ್ಪಟ್ಟಿರುವ ಪ್ರಭುತ್ವದವರು ತಮ್ಮ ಹಿಂದಣ ಪ್ರಭುತ್ವದಲ್ಲಿದ್ದ ೫ ಮಂದಿ ಮಂತ್ರಿಗಳನ್ನೂ ಒಬ್ಬ ಸೇನಾಪತಿಯನ್ನೂ ಗಲ್ಲಿಗೇರಿಸಿ ಕೊಂದುಬಿಟ್ಟರು. ಹೀಗೆ ಕೊಲ್ಲಲ್ಪಟ್ಟವರಲ್ಲಿ ಹಿಂದಣ ಮುಖ್ಯಮಂತ್ರಿಯವರಾಗಿದ್ದ ಗೌನಾರಿಸ್‌ರವರು ಒಬ್ಬರಾಗಿರುತ್ತಾರೆ. ಇವರು ಸನ್ನಿಪಾತ ಜ್ವರದಿಂದ ಪೀಡಿತರಾಗಿ ಮಲಗಿದ್ದರೂ ಹಿಡಿತರಿಸಿ ಕೊಲ್ಲಿಸಿಬಿಟ್ಟರು. ಇನ್ನಿಬ್ಬರು ಸೇನಾಪತಿಗಳಿಗೆ ಯಾವಜ್ಜೀವ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿ ಅವರ ಆಸ್ತಿಗಳನ್ನೆಲ್ಲಾ ಮುಟ್ಟುಗೋಲು ಹಾಕಿಕೊಂಡರು. ಇಂಥ ಭೀಕರ ಶಿಕ್ಷೆಯನ್ನು ವಿಧಿಸುವುದಕ್ಕೆ ಕಾರಣವೇನೆಂದರೆ—ಇವರುಗಳು ಕಾನ್‌ಸ್ಟಾಂಟೈನ್ ರಾಜನನ್ನು ಮರಳಿ ಪ್ರಭುತ್ವಕ್ಕೆ ತಂದರೆ ದೇಶಕ್ಕೆ ಅಪಾಯವಾಗುವುದೆಂದು ತಿಳಿದಿದ್ದರೂ ಅವನಿಗೆ ಸಹಾಯಮಾಡಿ ಸಿಂಹಾಸನಕ್ಕೆ ತಂದು ಸ್ವಾರ್ಥವನ್ನು ಸಾಧಿಸಿಕೊಂಡರು. ಪ್ರಜಾಭಿಪ್ರಾಯವನ್ನು ತಿರಸ್ಕರಿಸಿದರು. ಕಡೆಗೆ ಏಷ್ಯಾಮೈನರಿನಲ್ಲಿ ಪರಾಜಯವನ್ನು ಪಡೆದು, ಹಿಂದೆ ಗೆದ್ದಿದ್ದ ರಾಜ್ಯವನ್ನೆಲ್ಲಾ ಕಳೆದುಕೊಳ್ಳುವಂತೆ ಮಾಡಿದರು. ಇದೇ ಅವರ ಮೇಲೆ ಹೊರಿಸಿದ ತಪ್ಪು. ಹಿಂದಣ ಪ್ರಭುತ್ವದವರು ವಿಜಯವನ್ನು ಪಡೆದಿದ್ದಾಗ ಅವರು ಎಂಥ ನಿರಂಕುಶ ಪರಿಪಾಲನವನ್ನು ಸಾಗಿಸುತ್ತಿದ್ದರೂ ಪ್ರಜೆಗಳಿಗೆ ಅಸಂತೃಪ್ತಿಯಿರಲಿಲ್ಲ. ಯಾವಾಗ ಲಾಭವು ಕಳೆದುಹೋಗಿ ನಷ್ಟವು ಗೋಚರಿಸಿತೋ ಆಗ ಪ್ರಭುತ್ವದ ಮೇಲೆ ಪ್ರಜೆಗಳಿಗೆ ಆಗ್ರಹ ಹುಟ್ಟಿ ವಿಪ್ಲವಕ್ಕೆ ಆರಂಭಿಸಿದರು. ಕಾನ್‌ಸ್ಟಾಂಟೈನ್ ರಾಜರು ಯಥಾಪ್ರಕಾರ ಸಿಂಹಾಸನವನ್ನು ಪರಿತ್ಯಜಿಸಿ ಹೋದರು. ಮರಳಿ ವೆನಿಜುಲಾಸ್‌ರವರ ಮಂತ್ರಿತ್ವ ಪ್ರವೇಶವಾಯಿತು. ಈಗ ಇವರು ತಮ್ಮ ಅಪಜಯಪ್ರಾಪ್ತಿ ಮೂಲಕವಾದ ಆಗ್ರಹಕ್ಕೆ ಬಲಿಯಾಗಿ ಹಿಂದಣ ಪ್ರಭುತ್ವದ ಮೇಲಣ ತಮ್ಮ ಹೊಟ್ಟೆಕಿಚ್ಚನ್ನು ಈ ರೂಪದಲ್ಲಿ ತೀರಿಸಿಕೊಳ್ಳುತ್ತಿದ್ದಾರೆ. ಇದನ್ನು ಕಂಡು ಕೇಳಿ ಪ್ರಪಂಚವೆಲ್ಲ ಅಸಹ್ಯಪಟ್ಟುಕೊಂಡಿದೆ. ನಾಗರಕತನದಲ್ಲಿ ತಾವೇ ಅಗ್ರೇಸರರೆಂದು ಡಂಭಕೊಚ್ಚಿಕೊಳ್ಳುವ ಪಾಶ್ಚಾತ್ಯ ದೇಶಕ್ಕೆ ತಲೆಬಗ್ಗಿಸಿಕೊಳ್ಳುವಂತೆ ಇದು ಮಾಡಿರುತ್ತದೆ. ಮುಂದಣ ಪ್ರಭುತ್ವದವರು ಹಿಂದಣ ಪ್ರಭುತ್ವದ ಪ್ರಮುಖರಮೇಲೆ ಯಾವುದಾದರೊಂದು ನೆಪದಿಂದ ಹೀಗೆ ಮರಣದಂಡನೆಯನ್ನು ವಿಧಿಸುತ್ತ ಬಂದರೆ ಮಂತ್ರಿಪದವಿಯಂಥ ಮುಖ್ಯೋದ್ಯೋಗಗಳಿಗೆ ಯಾರು ತಾನೇ ಮುಂದೆ ದೊರೆಯುವರು? ಈ ಅನಾಗರಕರಾಕ್ಷಸಾಚರಣೆಯನ್ನು ಸೈರಿಸಲಾರದೆ ಆಂಗ್ಲ ಪ್ರಭುತ್ವವು ಗ್ರೀಕ್ ಸಂಬಂಧವನ್ನು ಕಳೆದುಬಿಟ್ಟಿತು. ಎಂದರೆ ಗ್ರೀಕಿನಲ್ಲಿದ್ದ ತಮ್ಮ ರಾಯಭಾರಿಯನ್ನು ಹಿಂದಕ್ಕೆ ಕರೆಯಿಸಿಕೊಂಡುಬಿಟ್ಟರು. ಇಟಲಿಯವರೂ ಇದೇ ಮಾರ್ಗವನ್ನು ಹಿಡಿದರು. ಹಿಂದಣ ಪ್ರಭುವಾದ ಕಾನ್‌ಸ್ಟಾಂಟೈನರನ್ನು ಕೂಡ ಈಗಣ ಗ್ರೀಕ್ ಪ್ರಭುತ್ವದವರು ಹಿಡಿದು ಸೆರೆಯಲ್ಲಿಟ್ಟಿರುವರೆಂದು ಸುದ್ದಿ ಬಂದಿದೆ. ಅವರ ಗತಿಯೇನಾಗುವುದೋ ತಿಳಿಯಲಿಲ್ಲ.

ಅತ್ತ ಐರ್ಲಂಡಿನಲ್ಲಿ ತಾತ್ಕಾಲಿಕ ಪ್ರಜಾಪ್ರಭುತ್ವದವರಿಗೂ ವಿಪ್ಲವಕಾರರಿಗೂ ಕೆಲವುಕಾಲದಿಂದ ಪರಸ್ಪರ ಯುದ್ಧಗಳು ನಡೆಯುತ್ತಿರುವುದೂ ಉಭಯಪಕ್ಷದಲ್ಲೂ ಹಲವರು ಕೊಲೆಗೀಡಾದುದೂ ಗೊತ್ತೇ ಇದೆಯಷ್ಟೆ. ಈಗ ಸಿನ್‌ಫೆನಿಯರ್ ಪಕ್ಷದ ಪ್ರಮುಖರನ್ನು ಒಬ್ಬೊಬ್ಬರನ್ನಾಗಿ ಹಿಡಿದು ಬೇರೆ ಬೇರೆ ಅಪರಾಧಾರೋಪಣೆಗಳಿಂದ ಗಲ್ಲಿಗೇರಿಸುವ ಕೃತ್ಯವು ನಡೆಯುತ್ತಿದೆ. ಈ ಸಿನ್‌ಫೆನಿಯರ್ ಪಕ್ಷದ ಪ್ರಮುಖನಾಯಕರಾದ ಡಿ. ವೆಲರಾರವರಿಗೆ ಬಲಭುಜದಂತಿದ್ದ ಚೈಲ್ಡರ್ಸ್‌ರವರನ್ನೂ ಇನ್ನೂ ಮೂವರು ಪ್ರಮುಖರನ್ನೂ ಇದೇ ತೆರದಿಂದ ಪರಲೋಕಕ್ಕೆ ಕಳುಹಿಸಿದುದಾಯಿತು. ಮುಂದೆ ತನಗೇನು ಪ್ರಾಣಾಪಾಯ ಬರುವುದೋ ಎಂದು ಡಿ. ವೆಲರಾರವರು ತಲೆತಪ್ಪಿಸಿಕೊಂಡು ಎಲ್ಲೋ ಅವಿತು ಅಮೇರಿಕಾಕ್ಕೆ ಓಡಿಹೋಗುವುದರಲ್ಲಿರುವರಂತೆ. ಇದರ ಮುಯ್ಯನ್ನು ಪ್ರತಿಪಕ್ಷದವರು ತೀರಿಸಿಕೊಳ್ಳದೆ ಬಿಡಲಾರರು. ಹೀಗೆಲ್ಲಾ ಪಾಶ್ಚಾತ್ಯರಾಷ್ಟ್ರಗಳಲ್ಲಿ ತಾಮಸಭಾವವು ವೃದ್ಧಿಯಾಗುತ್ತಿರುವುದು ಉತ್ಪಾತಲಕ್ಷಣವಾಗಿದೆಯೇ ಹೊರತು ಶುಭಸೂಚಕವಾಗಿಲ್ಲ.

ತುರ್ಕಿ.

ಲಾಸೇನಿಯಾ ಸಭೆಯಲ್ಲಿ ಆಲೋಚನಾ ಕಾರ್ಯಗಳು ಸಾವಧಾನವಾಗಿ ನಡೆಯುತ್ತಿವೆ. ಇತರ ವಿಷಯಗಳ ಚರ್ಚೆಯ ಸಮಯಕ್ಕೆ ಕರೆಯದೆ ಜಲಸಂಧಿ ವಿಷಯಕವಾದ ಚರ್ಚಾಸಮಯಕ್ಕೆ ಮಾತ್ರ ಸಭೆಯವರು ರಷ್ಯಾಪ್ರಭುತ್ವದವರಿಗೆ ಆಹ್ವಾನ ಕೊಟ್ಟು ಸಂಧಿಸಭೆಗೆ ಬರಮಾಡಿಕೊಂಡರು. ಆ ಪ್ರಭುತ್ವದ ಪ್ರತಿನಿಧಿಯಾಗಿ ಬಂದಿರುವ ರಾಕೋವಿಸ್ಕಿಯವರು ಕಪ್ಪುಸಮುದ್ರಕ್ಕೂ ಮೆಡಿಟರೇನಿಯನ್ ಸಮುದ್ರಕ್ಕೂ ಮಧ್ಯದಲ್ಲಿ ಎಲ್ಲರ ವ್ಯಾಪಾರಿ ಹಡಗುಗಳೂ ಸಂಚರಿಸಬಹುದೆಂದೂ, ಯುದ್ಧದ ಹಡಗುಗಳು ಮಾತ್ರ ಕಪ್ಪುಸಮುದ್ರಕ್ಕೆ ಬರಲಾಗದೆಂದೂ, ಜಲಸಂಧಿಗಳು ಅವುಗಳ ಸಮೀಪದ ರಾಜ್ಯದ ವಶದಲ್ಲಿರುವುದೇ ವಿಹಿತವೆಂದೂ, ಆಂಗ್ಲನೌಕಾದಳದ ವಶದಲ್ಲಿರುವುದು ಯುಕ್ತವಲ್ಲವೆಂದೂ, ಜಲಸಂಧಿಗಳನ್ನು ತುರ್ಕಿಯವರ ಪರಿಪಾಲನೆಗೆ ಒಪ್ಪಿಸಿಬಿಟ್ಟರೇನೆಯೇ ಅವುಗಳ ಪರಿಪಾಲನವು ಚೆನ್ನಾಗಿ ನಡೆಯುವುದೆಂದೂ ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಆಂಗ್ಲಪ್ರತಿನಿಧಿಗಳು ಒಪ್ಪುವವರಾಗಿಲ್ಲ. ಅಲ್ಲದೆ ಸಂಧಿಸಮಾವೇಶದ ಎಲ್ಲ ವಿಷಯದ ಚರ್ಚೆಯಲ್ಲೂ ರಷ್ಯಾಸಂಬಂಧವಿರಬೇಕೆಂದು ಅವರು ವಾದಿಸುತ್ತಿದ್ದಾರೆ. ಇದಕ್ಕೆ ಇಟಲಿಯವರೂ ಒಪ್ಪುತ್ತಾರೆ. ರಷ್ಯಾವು ಅಂತರಂಗ ಬಹಿರಂಗಗಳಲ್ಲೆಲ್ಲಾ ತುರ್ಕಿಗೆ ಬೆಂಬಲವನ್ನು ಸುವ್ಯಕ್ತಪಡಿಸಿಕೊಳ್ಳುತ್ತಿದೆ. ರಷ್ಯಾ ರಾಯಭಾರಿ ಬಂದೀಚೆಗೆ ಅಂಗೋರಾ ಪ್ರತಿನಿಧಿಯ ಮಾತಿನಲ್ಲೂ ಚರ್ಚೆಯಲ್ಲೂ ದಿಟ್ಟತನವು ಹೆಚ್ಚಾಗಿದೆ. ತುರ್ಕಿ ದೇಶದಲ್ಲಿ ಅಪರಾಧ ವಿಚಾರಣ ವಿಷಯವಾಗಿ ವಿದೇಶೀಯರಿಗೆ ಪ್ರತ್ಯೇಕ ಹಕ್ಕು (ನಮ್ಮ ಭರತಖಂಡದಲ್ಲಿರುವಂತೆ) ಇರುತ್ತದೆ. ಪರರಿಗೆ ಇಂಥ ಹಕ್ಕಿರುವುದು ತುರ್ಕಿಯ ಸ್ವಾತಂತ್ರ್ಯಕ್ಕೆ ಭಂಗಕರವೆಂದೂ, ಆ ಪದ್ಧತಿಯನ್ನು ತಪ್ಪಿಸಬೇಕೆಂದೂ ತುರ್ಕಿಯವರು ಪಟ್ಟುಹಿಡಿದಿದ್ದಾರೆ. ತುರ್ಕಿಯವರ ಇಷ್ಟದಂತೆ ತಮ್ಮ ಪ್ರತ್ಯೇಕವಿಚಾರಣಾಧಿಕಾರವನ್ನು ಬಿಟ್ಟುಕೊಡುವುದಕ್ಕೆ ರಷ್ಯಾ ಪ್ರತಿನಿಧಿಯು ಅಂಗೀಕರಿಸಿರುವುದಲ್ಲದೆ ಇತರ ಪ್ರಭುತ್ವದವರೂ ಹಾಗೆಯೇ ಮಾಡಬೇಕೆಂದು ಕೋರಿರುತ್ತಾರೆ. ಆಂಗ್ಲ ಪ್ರತಿನಿಧಿಯಾದ ಲಾರ್ಡ್ ಕರ್ಜನ್‌ರವರು ಮಾತ್ರ ಈ ವಿಷಯದಲ್ಲಿ ಇತರ ಮಿತ್ರಮಂಡಲೀ ಪ್ರಭುತ್ವಗಳ ಅಭಿಪ್ರಾಯವನ್ನೆಲ್ಲಾ ತಿಳಿದು ಉತ್ತರಕೊಡಬೇಕೆಂದು ಹೇಳಿದ್ದಾರೆ. ಅಲ್ಲದೆ ಪಾಲಸ್ತೈನಿನಲ್ಲಿರುವ ಇಂಗ್ಲೀಷರ ಮಾಂಡೇಟನ್ನು ತಪ್ಪಿಸಿ ಅರಬ್ಬಿಯವರಿಗೆ ಒಪ್ಪಿಸಿಬಿಡಬೇಕೆಂದೂ, ಮುಸ್ಲಿಂ ಮತಾಭಿಮಾನವು ವ್ಯಾಪನೆಗೊಂಡರೆ ಇತರರಿಗೆ ಬಹಳ ಉಪದ್ರವವುಂಟಾಗುವುದೆಂದು ಯೋಚಿಸುವುದು ಸರಿಯಲ್ಲವೆಂದೂ, ರಷ್ಯಾಕ್ಕೆ ತುರ್ಕಿಯು ಕೊಡಬೇಕಾಗಿದ್ದ ಸಾಲವನ್ನೆಲ್ಲಾ ತಾವು ಬಿಟ್ಟುಬಿಡುತ್ತೇವೆಂದೂ, ಹಾಗೆಯೇ ಇತರ ಪ್ರಭುತ್ವದವರೂ ತುರ್ಕಿ ವಿಷಯದಲ್ಲಿ ಪ್ರವರ್ತಿಸಬೇಕೆಂದೂ ಸಹ ರಷ್ಯಾ ಪ್ರತಿನಿಧಿಯು ತುರ್ಕಿಗೆ ಸಂಪೂರ್ಣ ಸಹಾಯಕವಾಗಿ ಅಭಿಪ್ರಾಯಪಟ್ಟಿದ್ದಾರೆ. ಜಲಸಂಧಿ ವಿಷಯದ ಹೊರತು ಇತರ ವಿಷಯಗಳಲ್ಲಿ ರಷ್ಯನರು ಅಂಗವಾಗಿರಕೂಡದೆಂದು ಮಿತ್ರಮಂಡಲಿಯವರು ಅಭಿಪ್ರಾಯಕೊಟ್ಟರು. ಹಾಗಾದರೆ ನಮ್ಮ ಅಪ್ರತ್ಯಕ್ಷದಲ್ಲಿ ನಡೆದ ಸಂಧಿನಿಬಂಧನೆಗಳಿಗೆ ರಷ್ಯಾವು ಬದ್ಧವಾಗುವುದಿಲ್ಲವೆಂದೂ, ಆದರಿಂದ ಮುಂದೆ ವಿಪರೀತ ಪರಿಸ್ಥಿತಿಗಳು ಪ್ರಾಪ್ತವಾದರೆ ಅದಕ್ಕೆ ತಾವು ಉತ್ತರವಾದಿಗಳಲ್ಲವೆಂದೂ ರಷ್ಯಾಪ್ರತಿನಿಧಿ ಚಿಚೆರಿನ್‌ರವರು ಉತ್ತರಕೊಟ್ಟಿದ್ದಾರೆ. ರಷ್ಯನರು ಪಟ್ಟ ಅಭಿಪ್ರಾಯಗಳನ್ನೇ ಅಂಗೋರಾ ಪ್ರತಿನಿಧಿ ಇಸ್ಮಿದ್ ಪಾಷಾರವರು ಬಲಪಡಿಸಿ ಮಾತನಾಡಿದರು. ಅದರ ಮೇಲೆ ಲಾರ್ಡ್ ಕರ್ಜನರು—ರಷ್ಯನರ ಅಭಿಪ್ರಾಯವೇ ತುರ್ಕಿಯ ಅಭಿಪ್ರಾಯವೋ? ಎಂದು ಪ್ರಶ್ನೆಮಾಡಲಾಗಿ, ಇಸ್ಮಿದ್ ಪಾಷಾರವರು ಮುಸಿನಗೆ ನಗುತ್ತ ಹಾಗೇ ಸರಿಯೆಂದೂ ಅದಕ್ಕಿಂತ ಹೊಸದಾಗಿ ತಾವೇನೂ ಹೇಳತಕ್ಕುದಿಲ್ಲವೆಂದೂ ಉತ್ತರಕೊಟ್ಟರು. ಜಲಸಂಧಿ ವಿಷಯವು ಮುಖ್ಯ ವಿಷಮಸ್ಥಾನವಾಗಿದೆ. ಇದು ಶಾಂತಿಗೆ ಸಾಧಕವಾಗುವುದೋ ಯುದ್ಧಕ್ಕೆ ದಾರಿಮಾಡುವುದೋ ತಿಳಿಯಲಿಲ್ಲ. ತುರ್ಕಿಯವರ ಋಣದ ವಿಷಯ, ಯುದ್ಧ ನಷ್ಟಪರಿಹಾರದ ಪ್ರಶ್ನೆ ಇತ್ಯಾದಿ ವಿಷಯಗಳ ವಿಚಾರಣೆಗಾಗಿ ಏರ್ಪಟ್ಟಿರುವ ಸಂಘಗಳು ಚರ್ಚೆ ನಡೆಯಿಸುತ್ತಿವೆ.

ಸ್ವದೇಶದ ವೃತ್ತಾಂತಗಳು.

ಬಹುಪ್ರಜಾ ಪ್ರಾರ್ಥನೆಗೆ ಕಿವಿಗೊಟ್ಟು ನಮ್ಮ ಸರ್ಕಾರದವರು ಶ್ರೀರಂಗಪಟ್ಟಣದ ಮುನ್‌ಸೀಫ್ ಕೋರ್ಟನ್ನು ಅಲ್ಲಿಂದ ತೆಗೆದುಹಾಕದಂತೆ ನಿರ್ಧಾರಮಾಡಿದರೆಂದು ಅರಿಯುತ್ತೇವೆ.

ಚಿತ್ರದುರ್ಗದ ಶ್ರೀ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ಬರುವ ತಾ|| 15ನೆ ಶುಕ್ರವಾರ ಬೆಳಗಿನ 8 ಗಂಟೆಗೆ ಶಿವಮೊಗ್ಗೆಗೆ ದಯಮಾಡಿಸುತ್ತಾರೆಂದು ಮಠದ ಏಜೆಂಟರು ತಿಳಿಯಿಸಿದ್ದಾರೆ.

ಮದ್ರಾಸ್ ಗೌರ್ನರವರು ಪತ್ನೀಸಮೇತ ಬರುವ ತಾ|| 21 ರಲ್ಲಿ ರಾಜಧಾನಿಗೆ ದಯಮಾಡಿಸಿ, ಕ್ರಿಸ್ತಮಸ್ ರಜಾಕಾಲದಲ್ಲಿ ಕಾರಾಪುರದ ಕಾಡುಗಳಲ್ಲಿ ಬೇಟೆಮಾಡಿಕೊಂಡು ನಮ್ಮ ಪ್ರಭುತ್ವದವರ ಆತಿಥ್ಯದಿಂದ ಕಾಲಯಾಪನೆ ಮಾಡುವವರಾಗಿದ್ದಾರೆ.

ಬೆಂಗಳೂರು ಪಾಪಯ್ಯಶೆಟ್ಟಿ ಕಂಪೆನಿಯ ಲಕ್ಷ್ಮಣಸ್ವಾಮಿಶೆಟ್ಟಿ ಎಂಬುವವರ ಮೇಲೆ ಬಂದಿದ್ದ ಫೋರ್ಜರಿಕೇಸಿನಲ್ಲಿ ಸದರಿ ಫೋರ್ಜರಿಯು ತನ್ನಿಂದ ಮಾಡಲ್ಪಟ್ಟುದಲ್ಲವೆಂದು ಅಪರಾಧಿ ಪಕ್ಷದಿಂದ ಹೇಳಲ್ಪಟ್ಟಿತು. ಆರ್ಗ್ಯುಮೆಂಟೆಲ್ಲಾ ಮುಗಿದು ಅಪರಾಧಿಯು ತಪ್ಪಿತಸ್ಥನೆಂದು ಅಸೆಸರುಗಳು ಹೇಳಿದುದರ ಮೇಲೆ 8½ ವರ್ಷ ಕಠಿಣಕಾರಾಗೃಹವಾಸದ ಶಿಕ್ಷೆಯು ವಿಧಿಸಲ್ಪಟ್ಟಿತು.

ಬೆಂಗಳೂರಿಗೆ ಬಂದಿರುವ ಗ್ರಾಂಡ್ ಲಯನ್ ಸರ್ಕಸ್ ಮ್ಯಾನೇಜರು, ತಮ್ಮಲ್ಲಿರುವ ಆನೆಯನ್ನು ಮೊಸಳೆಗಳಿಗೆ ಸರಪಳಿಗೆ ಕಟ್ಟಿ ಎಳೆಯಿಸಿ, ಮತ್ತು ಇತರ ಪಶುಮೃಗಗಳನ್ನು ಕಿರಿದಾದ ಬೋನುಗಳಲ್ಲಿ ಕೂಡಿ ಬಾಧೆಪಡಿಸಿದರೆಂಬ ತಪ್ಪಿತಕ್ಕಾಗಿ ಬೆಂಗಳೂರಿನ ಎಸ್. ಪಿ. ಸಿ. ಯವರು ಮ್ಯಾನೇಜರಮೇಲೆ ಕೇಸುಮಾಡಲಾಗಿ 100 ರೂ. ದಂಡವು ಮೇಜಿಸ್ಟ್ರೇಟರಿಂದ ವಿಧಿಸಲ್ಪಟ್ಟಿತು. ಇನ್ನು ಮುಂದೆ ಅಂಥ ಬಾಧೆಪಡಿಸುವುದಿಲ್ಲವೆಂಬುದಕ್ಕೆ ಮ್ಯಾನೇಜರು ಜಾಮೀನುಕೊಡಬೇಕೆಂದು ತೀರ್ಮಾನವು ಹೇಳಲ್ಪಟ್ಟಿರುವುದು.

ರಾಜಧಾನಿಯಲ್ಲಿ ಇದುವರೆಗೆ ಬ್ರಾಹ್ಮಣ ವಿಧವಾಲಯವಾಗಿದ್ದುದನ್ನು ಇನ್ನು ಮೇಲೆ ಹೆಂಗುಸರ ಕೈಗಾರಿಕೆಯ ಶಾಲೆಯನ್ನಾಗಿ ಮಾಡಿ, ಎಲ್ಲಜಾತಿಯ ಹೆಂಗಸರುಗಳೂ ಅಲ್ಲಿ ಸೇರಬಹುದಾಗಿಯೂ, 30 ಮಂದಿಗಳು ಅಲ್ಲಿ ಭೋಜನವಾಸಗಳನ್ನು ಮಾಡಿಕೊಂಡಿರಬಹುದಾಗಿಯೂ, ಅದರ ಮೇಲಧಿಕಾರಕ್ಕೆ ಒಬ್ಬ ಸ್ತ್ರೀಯನ್ನು ನಿಯಮಿಸುವುದಾಗಿಯೂ, ವಿದ್ಯಾ ಶಾಖಾಧ್ಯಕ್ಷರ ಕೈಕೆಳಗೆ ನಿಯಮಿಸಲ್ಪಡುವ ಸ್ತ್ರೀಪುರುಷ ಸಭಿಕರುಳ್ಳ ಒಂದು ಸಂಘದ ಪರಿಪಾಲನೆಗೆ ಇದು ಒಳಪಟ್ಟಿರುವಂತೆಯೂ ನಮ್ಮ ಸರ್ಕಾರದವರು ಏರ್ಪಡಿಸುವವರಾಗಿದ್ದಾರೆ.

ಕಳೆದ ಬುಧವಾರ ನಂಜನಗೂಡಿನ ಬ್ರಾಹ್ಮಣರು ನದೀತೀರದ ಚಾಮುಂಡೇಶ್ವರೀ ದೇವಸ್ಥಾನದಲ್ಲಿ ಛಾತ್ರೀಹವನಕ್ಕೆ ಹೋಗಿದ್ದಾಗ್ಗೆ ಪೋಲೀಸ್ ಜಮಾದಾರರು ಪಕ್ಷಿಗಳನ್ನು ಹೊಡೆಯಲಿಕ್ಕೆ ತುಪಾಕಿಯನ್ನು ಹಾರಿಸುತ್ತಿದ್ದಾಗ ಒಂದು ಕೇಪು ಹಾರದೆಹೋಗಲು, ಅದನ್ನು ಹೊರಕ್ಕೆ ತೆಗೆದು ಕೆದಕುತ್ತಿರುವಾಗ್ಗೆ ಅದು ಥಟ್ಟನೆ ಹಾರಿ ಸುತ್ತಲೂ ನಿಂತಿದ್ದ ಹುಡುಗರೊಳಗೆ ಒಬ್ಬ ಶಿವಭಕ್ತ ಬಾಲಕನ ಕುತ್ತಿಗೆಗೆ ಮದ್ದು ಬಡಿದು ಅರ್ಧ ಅಂಗುಲದಷ್ಟು ತೂತುಬಿದ್ದು ನಂಜನಗೂಡು ವೈದ್ಯಾಲಯದಲ್ಲಿ ಚಿಕಿತ್ಸೆಗೆ ಸಾಧ್ಯವಾಗದಿದ್ದುದರಿಂದ ರಾಜಧಾನಿಯ ಕೃಷ್ಣರಾಜೇಂದ್ರ ವೈದ್ಯಾಲಯಕ್ಕೆ ಸೇರಿಸಲು ಪೊಲೀಸ್ ಸೂಪರಿಂಟೆಂಡೆಂಟರು ಮಾಡಿದ ಏರ್ಪಾಟಿನ ಮೇರೆ ಈಗ ಆ ಬಾಲಕನು ಇಲ್ಲಿ ಚಿಕಿತ್ಸೆಗೊಳ್ಳುತ್ತಿರುವನೆಂದು ಒಬ್ಬ ಬಾತ್ಮಿದಾರರು ತಿಳಿಸಿರುತ್ತಾರೆ.

ಕಳೆದ ತಾ|| 2ರಲ್ಲಿ ನಡೆದ ರಾಜಧಾನಿಯ ಮ್ಯುನ್ಸಿಪಲ್ ಪ್ರತ್ಯೇಕ ಸಮಾವೇಶದಲ್ಲಿ 6 ಲಕ್ಷ ರೂ.ಗಳನ್ನು ಸಾಲಮಾಡಿ ಹೊಸ ಅಂಗಡಿ ಸಾಲನ್ನು ಕಟ್ಟಬೇಕೆಂಬ ವಿಷಯದ ಚರ್ಚೆಯು ಬಂದು ಸಾಲಮಾಡಲಿಕ್ಕೆ ಬಹುಜನ ಸಭಿಕರು ಒಪ್ಪದೆಹೋದುದರಿಂದ ಅದನ್ನು ಬಿಟ್ಟು, ದೇವರಾಜಮೊಹಲ್ಲಾ ಮಾರುಕಟ್ಟೆಯ ಪಶ್ಚಿಮಭಾಗದ ಹೊಲಸು ಮನೆಗಳನ್ನು ಟ್ರಸ್ಟ್‌ಬೋರ್ಡಿನವರು ವಶಪಡಿಸಿಕೊಂಡು ಚೊಕ್ಕಟಮಾಡಿದರೆ ಅಲ್ಲಿ ಹೊಸ ಭಾಗವನ್ನು ಮಾರುಕಟ್ಟೆಗೆ ಸೇರುವಂತೆ ಕಟ್ಟಿಸಲು 1½ ಲಕ್ಷ ರೂ.ಗಳನ್ನು ಸಾಲಮಾಡಬಹುದೆಂಬ ವಿಷಯಕ್ಕೆ 11 ಮಂದಿ ಒಪ್ಪಿಯೂ, 7 ಮಂದಿ ಒಪ್ಪದೆಯೂ ಹೋದುದರಿಂದ ಹೆಚ್ಚು ಜನರ ಅಭಿಪ್ರಾಯವು ಗೆದ್ದಿತು. ಈಗಣ ಸ್ಥಿತಿಯಲ್ಲಿ ಯತ್ಕಿಂಚಿತು ಸಾಲಕ್ಕೂ ನಮ್ಮ ಮ್ಯುನ್ಸಿಪಾಲಿಟಿಯು ಕೈಹಾಕುವುದು ಯುಕ್ತವಾಗಿ ತೋರುವುದಿಲ್ಲ.

ಮೈಸೂರುದೇಶದ ಕಾಂಗ್ರೆಸ್ ಸಂಘಕ್ಕೆ ಮ|| ಸೆಟ್ಲೂರು ಶ್ರೀನಿವಾಸಯ್ಯಂಗಾರರು ಅಧ್ಯಕ್ಷರಾಗಿದ್ದರು. ಈಗ ಅವರು ಸ್ವದೇಶ ಸಂಸ್ಥಾನಗಳಲ್ಲಿ ಕಾಂಗ್ರೆಸ್ ಉದ್ದೇಶಪ್ರಚಾರವನ್ನು ನಿಲ್ಲಿಸಿಬಿಡುವುದುತ್ತಮವೆಂದು ಕಾಂಗ್ರೆಸ್ ಕಾರ್ಯಕಾರಿಸಂಘಕ್ಕೆ ತಮ್ಮ ಅಭಿಪ್ರಾಯವನ್ನು ಬರೆದುಕಳುಹಿಸಿ, ತಮ್ಮ ಅಧ್ಯಕ್ಷತೆಗೆ ರಾಜೀನಾಮೆ ಕೊಟ್ಟರೆಂದೂ, ಅದರಮೇಲೆ ಮೈಸೂರು ಕಾಂಗ್ರೆಸ್ ಸಂಘದವರು ತಾ|| 3ರಲ್ಲಿ ಸಭೆಗೂಡಿ, ಸಂಸ್ಥಾನದಲ್ಲಿ ಕಾಂಗ್ರೆಸ್ ಪ್ರಚಾರವನ್ನು ನಿಲ್ಲಿಸಕೂಡದೆಂದೂ, ಸೆಟ್ಲೂರ್‌ರವರ ಅಭಿಪ್ರಾಯಕ್ಕೆ ತಾವು ಅನುಮೋದಿಸುವುದಿಲ್ಲವೆಂದೂ ತೀರ್ಮಾನಿಸಿದರೆಂದು ಮದ್ರಾಸು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಮ|| ಸೆಟ್ಲೂರ್‌ರವರು ತುಮಕೂರು ಕ್ಲಾಸಿಕಲ್‌ಪತ್ರಿಕಾ ಸಂಪಾದಕರಾದ ಮ|| ರಂಗಯ್ಯಂಗಾರರೊಡನೆಯೂ ಕೊಪ್ಪಳದ ಜಯರಾಮಾಚಾರ್ಯರೊಡನೆಯೂ ಕೂಡಿ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕಾಂಗ್ರೆಸ್ ಪ್ರಚಾರಕ್ಕಾಗಿ ಮೊನ್ನೆವಾರ ಸಂಚರಿಸಿಕೊಂಡುಬಂದರು. ಈಗಾಗಲೇ ವೈರಾಗ್ಯಗೊಂಡುದಕ್ಕೆ ಕಾರಣವೇನೋ ತಿಳಿಯಲಿಲ್ಲ.

ಭರತಖಂಡದ ವೃತ್ತಾಂತಗಳು.

ಮದ್ರಾಸ್ ಮ್ಯುನ್ಸಿಪಲ್ ಸಂಘಕ್ಕೆ 3 ಮಂದಿ ನಾರೀಮಣಿಯರನ್ನು ಕೌನ್ಸಿಲರನ್ನಾಗಿ ಸರ್ಕಾರದವರು ನಾಮಿನೇಟ್ ಮಾಡಿದ್ದಾರೆ.

ಮದ್ರಾಸಿನಲ್ಲಿ ಈ ವರ್ಷ ಬಿದ್ದಿರುವ ಮಳೆಯು ವಿಶೇಷವಾಗಿರುವುದು. ಕಳೆದ ಅಕ್ಟೋಬರ್ ತಾ|| 1ರಿಂದ ಇಲ್ಲಿಯವರೆಗೆ ಅಲ್ಲಿ 51 ಇಂಚು ಮಳೆಯಾಗಿದೆ.

ಬೊಂಬಾಯಿಯ ಓರಿಯಂಟಲ್ ಗೌರ್ನಮೆಂಟ್ ಸೆಕ್ಯುರಿಟಿ ಲೈಫ್ ಇನ್‌ಷೂರೆನ್ಸ್ ಕಂಪೆನಿಯವರಿಗೆ ಕಳೆದ 21 ನೆ ಇಸವಿಯಲ್ಲಿ 98 ಲಕ್ಷ ರೂ. ಗಳ ವರಮಾನವಾಗಿದೆ.

ಬೊಂಬಾಯಿ ಕಾರ್ಪೋರೇಷನ್ನಿನವರು ಒಂದೊಂದು ಚಿಕ್ಕ ಕುಟುಂಬವು ವಾಸಮಾಡುವುದಕ್ಕೆ ಅರ್ಹವಾದ 5 ಸಾವಿರ ಕಟ್ಟಡಗಳನ್ನು ಕಟ್ಟಿಸಿ ಬಡಬಗ್ಗರಿಗೆ ಸುಲಭವಾದ ಬಾಡಿಗೆಗೆ ಕೊಡಲು ಏರ್ಪಡಿಸಿದ್ದಾರೆ.

ಕಳೆದ ವರ್ಷದಲ್ಲಿ ಮದ್ರಾಸು ಆಧಿಪತ್ಯದಲ್ಲಿ ಮದದ್ರವ್ಯ ಶಾಖೆಯ ವರಮಾನವು 20 ಲಕ್ಷದಷ್ಟು ಕಡಿಮೆಯಾಯಿತು. ಇದಕ್ಕೆ ಆ ವರ್ಷದಲ್ಲಿ ಪ್ರಬಲವಾಗಿ ನಡೆದ ಪಿಕೆಟಿಂಗೇ ಕಾರಣವು. ಈ ವರ್ಷದಲ್ಲಿ ಅದರ ಪ್ರಾಬಲ್ಯವು ಕಡಿಮೆಯಾಗಿರುವುದರಿಂದ ಉತ್ಪತ್ತಿಯು ಹೆಚ್ಚಿರುತ್ತದೆ.

ಈ ಮಧ್ಯೆ ಭರತಖಂಡದ ಪಶ್ಚಿಮ ಭಾಗದಲ್ಲಿ ಮಳೆಗಳು ಚೆನ್ನಾಗಿ ಆದುದರಿಂದ ಬೊಂಬಾಯಿ ಪ್ರಾಂತದಲ್ಲೂ, ಸಿಂಧು ಪ್ರಾಂತದಲ್ಲೂ, ಗೋದುಮೆಯ ಬೆಳಸು ಬಹಳ ಚೆನ್ನಾಗಿದೆ. ಖಾಂದೇಶ್ ಪ್ರಾಂತದಲ್ಲಿ ಮಾತ್ರ ಹತ್ತಿ ಬೆಳಸು ಕೆಟ್ಟಿತು. ಸಿಂಧು ದೇಶದಲ್ಲಿ ಹತ್ತಿಯ ಬೆಳಸು ತೃಪ್ತಿಕರವಾಗಿದೆ.

ಬೊಂಬಾಯಿಯ ಮ್ಯುನ್ಸಿಪಲ್ ಸಂಘಕ್ಕೆ ಸಭಿಕರಾಗಿ ಸೇರಲು 3 ಮಂದಿ ನಾರೀಮಣಿಯರು ಉಮೇದುವಾರರಾಗಿ ನಿಂತುಕೊಂಡು, ತಾವು ಮ್ಯುನ್ಸಿಪಾಲಿಟಿಯಲ್ಲಿ ಮುಂದೆ ಇಂಥಿಂಥ ಪ್ರಜಾಹಿತ ಕಾರ್ಯಗಳನ್ನು ಮಾಡುತ್ತೇವೆಂದೂ ತಮಗೆ ಓಟುಗಳನ್ನು ಕೊಡಬೇಕೆಂದೂ ಪ್ರಜೆಗಳಿಗೆ ಪ್ರಾರ್ಥನ ಪತ್ರಿಕೆಗಳನ್ನು ಹಂಚಿಕೊಂಡಿರುತ್ತಾರೆ.

ಮುಂಬೈ ದಕ್ಷಿಣಪ್ರಾಂತದ ಬ್ರಾಹ್ಮಣೇತರ ತೃತೀಯ ಪರಿಷತ್ತು ಸತಾರಾಪಟ್ಟಣದಲ್ಲಿ ಇದೇ ಡಿಸಂಬರ್ ತಾ|| 16-17 ರಲ್ಲಿ ಮದ್ರಾಸಿನ ಮ|| ತನಿಕಾಚಲಂಶೆಟ್ಟಿ ಎಂ.ಎಲ್.ಸಿ. ಯವರ ಅಧ್ಯಕ್ಷತೆಯಲ್ಲಿ ನೆರವೇರುತ್ತದೆ. ಅದೇ ಕಾಲದಲ್ಲಿ ಕೂಡುವ ಸಾಮಾಜಿಕ ಪರಿಷತ್ತಿಗೆ ಕೊಲ್ಲಾಪುರದ ಛತ್ರಪತಿ ರಾಜಾರಾಮ ಮಹಾರಾಜರು ಅಧ್ಯಕ್ಷರಾಗುತ್ತಾರೆ.

ಲಾಲಾಲಜಪತಿರಾಯರ ಮಗಳು ಶ್ರೀಮತಿ ಪಾರ್ವತೀಬಾಯಿಯವರನ್ನು ನಾಗಪೂರಿನಲ್ಲೂ ಮೀರಟ್ಟಿನಲ್ಲೂ ಅವರು ಮಾಡಿದ ಉಪನ್ಯಾಸಗಳು ರಾಜದ್ರೋಹೋದ್ಬೋಧಕವಾಗಿದ್ದುವೆಂಬ ಕಾರಣದಿಂದ ಮೀರಟ್ಟಿಗೆ ಸೆರೆಹಿಡಿದುಕೊಂಡು ಹೋಗಿ ಅಲ್ಲಿಯ ಕಾರಾಗೃಹದಲ್ಲಿಟ್ಟು ವಿಚಾರಣೆಯನ್ನು ನಡೆಯಿಸಿ 2 ವರ್ಷ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ಪಂಡಿತ ಮೋತೀಲಾಲ್ ನೆಹ್ರೂರವರೂ ಅವರ ಕುಟುಂಬದವರನೇಕರೂ ಕಾಂಗ್ರೆಸ್ ಸಭಿಕತ್ವವನ್ನು ಬಿಟ್ಟರು. ಮೋತೀಲಾಲ್ ನೆಹ್ರೂರವರು ಸಂಯುಕ್ತರಾಷ್ಟ್ರದ ಕಾಂಗ್ರೆಸ್ ಸಭಾಧ್ಯಕ್ಷರೂ ಆಗಿದ್ದರು. ಅದರ ಕಾರ್ಯನಿರ್ವಾಹಕ ಸಂಘಕ್ಕೆ ಹೊಸದಾಗಿ ಆರಿಸಲ್ಪಟ್ಟ ಮೆಂಬರುಗಳ ಸಹಾಯವು ತನಗೆ ಸಿಗದೇಹೋದುದರಿಂದ ಈ ಅಧ್ಯಕ್ಷಪದವಿಯನ್ನು ಬಿಟ್ಟೆನೆಂದು ಪ್ರಕಟಿಸಿದ್ದಾರೆ.

ಬಾಗಲಕೋಟೆಯಲ್ಲಿ ಈಗ್ಗೆ 1 ವರ್ಷದಲ್ಲಿ ಅವತರಿಸಿದ ನವಜೀವನವೆಂಬ ದೇಶಭಾಷಾ ವಾರಪತ್ರಿಕೆಯು ಈಗಾಗಲೇ ವಿಗತಜೀವನವಾಯಿತೆಂದು ಕೇಳಿ ವಿಷಾದಿಸುತ್ತೇವೆ. ಎಷ್ಟೋ ಶ್ರದ್ಧೆಯಿಂದಲೂ ಮಿತವ್ಯಯದಿಂದಲೂ ಕಾರ್ಯನಿರ್ವಾಹ ಮಾಡುತ್ತಾ ಬಂದರೂ ಒಂದು ವರ್ಷಕಾಲದೊಳಗಾಗಿ 350 ರೂ.ಗಳ ನಷ್ಟವನ್ನು ಪತ್ರಚಾಲಕರು ವಹಿಸಬೇಕಾಯಿತು. ವರ್ಗಣೆದಾರರ ಪ್ರೋತ್ಸಾಹಾಭಾವವೇ ಈ ಪರ್ಯವಸಾನಕ್ಕೆ ಹೇತುವು.

ಶಾಸನೋಲ್ಲಂಘನ ಸಂಘದವರ ವರದಿಯನ್ನು ಪರ್ಯಾಲೋಚಿಸುವುದಕ್ಕಾಗಿ ಕಾಂಗ್ರೆಸ್ ಕಾರ್ಯಕಾರಿ ಸಂಘವು ಕಳೆದ ತಿಂಗಳು ತಾ|| 20 ರಿಂದ 3 ದಿನಗಳವರೆಗೆ ಕಲ್ಕತ್ತಾದಲ್ಲಿ ನೆರೆದಿದ್ದಿತು. ಸಾರ್ವತ್ರಿಕ ಶಾಸನೋಲ್ಲಂಘನ ವಿಷಯದಲ್ಲಿ ಸಂಘದ ವರದಿಯಲ್ಲಿ ಕಂಡ ಅಭಿಪ್ರಾಯವೇ ಅಂಗೀಕೃತವಾಯಿತು. ಶಾಸನಸಭೆಗಳಿಗೆ ಸಹಾಯನಿರಾಕರಣ ವಾದಿಗಳು ಸೇರಬೇಕೋ ಬೇಡವೋ ಎಂಬ ವಿಷಯದಲ್ಲಿ ಸಭಿಕರಲ್ಲಿ ಭಿನ್ನಾಭಿಪ್ರಾಯವು ಬಲವಾದುದರಿಂದ ಗಯೆಯಲ್ಲಿ ಕೂಡುವ ಕಾಂಗ್ರೆಸ್ಸಿನಲ್ಲೇ ಇದು ನಿರ್ಧರವಾಗಬೇಕೆಂದು ಗೊತ್ತಾಯಿತು.

ತಿರುಚನಾಪಳ್ಳಿಯಲ್ಲಿ ಮ್ಯುನ್ಸಿಪಲ್ ಛೇರ್ಮನ್ನರಾಗಿರುವ ಎಫ್. ಜಿ. ನಟೇಶನ್‌ರವರೂ ಅವರ ಕುಟುಂಬದವರೂ ಕ್ರೈಸ್ತರಾಗಿದ್ದರು. ಈಗ ಅವರುಗಳೂ ಮತ್ತು ಇನ್ನಿಬ್ಬರು ದೊಡ್ಡಮನುಷ್ಯರೂ ಸಹ ಶ್ರೀರಂಗಂ ರೋಡು ಸ್ಟೇಷನ್ನಿನ ಬಳಿಯಣ ಒಂದುಸ್ಥಳಕ್ಕೆ ಹೋಗಿ ವೈದಿಕಯುಕ್ತವಾಗಿ ಪ್ರಾಯಶ್ಚಿತ್ತ ಮಾಡಿಸಿಕೊಂಡು ಬ್ರಹ್ಮೋಪದೇಶಪೂರ್ವಕ ಉಪನಯನವನ್ನು ಹೊಂದಿ ಬ್ರಾಹ್ಮಣ್ಯಕ್ಕೆ ಸೇರಿದರಂತೆ. ಬಹುಮಂದಿ ವೈದಿಕರೂ ಕೂಡ ಬಂದಿದ್ದು ನಟೇಶಯ್ಯರ್‌ರವರ ಮನೆಯಲ್ಲಿ ಅವರೆಲ್ಲಾ ಸಹಪಙ್ಕ್ತಿಭೋಜನವನ್ನು ಮಾಡಿದರಂತೆ.

ಸೇಲಮ್ಮಿನ ಡಾಕ್ಟರ್ ಪಿ. ವರದರಾಜುಲುನಾಯಿಡುಯವರು ವರಮಾನದ ತೆರುಗೆಯನ್ನು ಈ ಸರ್ಕಾರಕ್ಕೆ ತಾವು ಕೊಡುವುದಿಲ್ಲವೆಂದು ನಿರಾಕರಿಸಿದರು. ಅದರ ಮೇಲೆ ಜಿಲ್ಲಾ ಕಲೆಕ್ಟರು ಡಿಶಂಬರ್ ತಾ|| 12ರೊಳಗೆ ನೀವು ಕೊಡಬೇಕಾದ 2478-10-0ನ್ನು ಸಲ್ಲಿಸದೆ ಹೋದರೆ 245 ರೂ. ಪೆನಲ್ಟಿ ಹಾಕಲ್ಪಡುವುದೆಂದು ಇನ್‌ಕಂಟ್ಯಾಕ್ಸ್ ಆಫೀಸರ ಮೂಲಕ ನೋಟೀಸ್ ಕೊಡಿಸಿದರು. ಅದರಮೇಲೆ ನಾಯಿಡುಯವರು "ದೇವದೂತರಾಗಿರುವ ಮಹಾತ್ಮ ಗಾಂಧಿಯವರನ್ನು ಸೆರೆಯಲ್ಲಿಟ್ಟಿರುವವರೆಗೂ ನಿಮ್ಮ ಸರ್ಕಾರಕ್ಕೆ ನಾನು ಯಾವೊಂದು ಕಾಸು ಕಂದಾಯವನ್ನೂ ಕೊಟ್ಟು ಸಹಾಯಮಾಡುವುದಿಲ್ಲ. ನನಗೆ ಗೊಡ್ಡುಬೆದರಿಕೆ ಹಾಕಬೇಡಿ, ನೀವು ಬೇಕಾದುದನ್ನು ಮಾಡಿಕೊಳ್ಳಬಹುದು" ಎಂದು ಕಲೆಕ್ಟರಿಗೆ ಉತ್ತರವನ್ನು ಬರೆದು ಕಳುಹಿಸಿದರು. ಈಗ ಸೊತ್ತು ಜಪ್ತಿಗೆ ಅಪ್ಪಣೆಮಾಡಲ್ಪಟ್ಟಿದೆ.

ಮದ್ರಾಸಿನ ಆಗ್ನೇಯಭಾಗದಲ್ಲೂ ದಕ್ಷಿಣಭಾಗದಲ್ಲೂ ಕಳೆದವಾರ ಬೀಸಿದ ಬಿರುಗಾಳಿಯಿಂದಲೂ ಮಳೆಯಿಂದಲೂ ಮಧುರೆ ತಿರುವಾಂಕೂರು ಪ್ರಾಂತಗಳಲ್ಲಿ ವಿಶೇಷಾನರ್ಥವಾಗಿದೆ. ಮಹಾಪ್ರವಾಹ ಬಂದು ಮಧುರೆಯಲ್ಲಿ ಊರುಕೇರಿಗಳಲ್ಲಿ ಹಲವು ಮನೆಗಳನ್ನು ಹಾಳ್ಮಾಡಿತು. ಪ್ರವಾಹಭರದಿಂದ ಕೊಚ್ಚಿಬಂದ ಮರಗಳ ಬಡಿತದಿಂದ ಮೀನಾಕ್ಷೀ ದೇವಾಲಯದ ರಂಗಮಂಟಪವು ಕೊಚ್ಚಿಹೋಯಿತು. ಹಲವುಕಡೆ ಲೋಹಮಾರ್ಗವು ಕಿತ್ತುಹೋಗಿ ಪ್ರಯಾಣವು ಕಟ್ಟಾಯಿತು. ತಿರುವಾಂಕೂರಿನಲ್ಲೂ ನಾಗರಕೋಯಿಲ್ಲಿನ ಲೋಹಮಾರ್ಗವು ಹಾಳಾಯಿತು. ಹಲವುಕಡೆ ಮನೆಮಠಗಳನ್ನು ಕಳೆದುಕೊಂಡು ಪ್ರಜೆಗಳು ಪರಿತಪಿಸುತ್ತಿದ್ದಾರೆ. ಸಮುದ್ರತೀರದಲ್ಲಿದ್ದ ಎಷ್ಟೋ ದೋಣಿಗಳು ತಲೆಕೆಳಗಾಗಿ ಹೋದುವು. ಬಹು ಜನರು ಬಿದ್ದ ಮರಗಳ ಏಟಿಗೆ ಸಿಕ್ಕಿ ಗಾಯಗೊಂಡು ಚಿಕಿತ್ಸೆಗೊಳ್ಳುತ್ತಿದ್ದಾರೆ. ಪೈರುಗಳು ಹಾಳಾದುವು.

ಗುರುಕಾಬಾಗನ್ನು ಪ್ರವೇಶಿಸಿ ಸ್ವಾಧೀನಪಡಿಸಿಕೊಳ್ಳಲು ಸಿಕ್ ಜನರು ಪ್ರವರ್ತಿಸಿ, 5½ ಸಹಸ್ರ ಜನರವರೆಗೆ ಬಂದಿಗಳಾಗಿ ಮಾಡಲ್ಪಟ್ಟರು. ಕಡೆಗೆ ಆ ತೋಟವನ್ನು ಮಹಾಂತ್ ಸುಂದರ ದಾಸರು ಸರ್ ಗಂಗಾರಾಮರವರಿಗೆ ೧ ಸಹಸ್ರ ರೂ.ಗಳಿಗೆ ಗುತ್ತಿಗೆಗೆ ಕೊಟ್ಟಂತೆಯೂ ಅದರ ಮೇಲೆ ಮಹಾಂತರ ಇಷ್ಟಪ್ರಕಾರ ಪೊಲೀಸರ ಕಾವಲು ತಪ್ಪಿಸಲ್ಪಡಲಾಗಿ ಅಕಾಲಿಗಳು ಗುರುಕಾಬಾಗನ್ನು ಪ್ರವೇಶಿಸಿ ಸ್ವಾಧೀನಪಡಿಸಿಕೊಂಡು ಜಯಶೀಲರಾದಂತೆಯೂ ಪ್ರಕಟವಾಗಿದೆ. ಆದರೆ ಮಹಾಂತರು ತಾವು ಅಂಥ ಗುತ್ತಿಗೆಯನ್ನು ಮನಃಪೂರ್ವಕವಾಗಿ ಬರೆದುಕೊಟ್ಟಿಲ್ಲವೆಂತಲೂ, ತಹಸೀಲ್ದಾರರು ಬಂದು ಕೆಲವು ಕಾಗದಗಳ ಜತೆಗೆ ಸೇರಿಸಿ ಯಾವುದೋ ಒಂದು ಪತ್ರಕ್ಕೆ ರುಜುಮಾಡಿಸಿಕೊಂಡರೆಂತಲೂ ಈಚೆಗೆ ಹೇಳುತ್ತಿದ್ದಾರೆ. ನಿಜಸ್ಥಿತಿಯೇನೋ ಗೊತ್ತಾಗುವುದಿಲ್ಲ. ಆದರೆ ನೌರಂಗಾಬಾದು ಮೊದಲಾದ ಕಡೆಗಳಲ್ಲಿರುವ ಮಹಾಂತರುಗಳೂ ಕೂಡ ಗುರುದ್ವಾರಗಳನ್ನೂ ಅವುಗಳಿಗೆ ಸಂಬಂಧಿಸಿದ ಭೂಮಿಗಳನ್ನೂ ಶಿರೋಮಣಿ ಸಂಘದವರ ಅಧಿಪತ್ಯಕ್ಕೆ ಒಪ್ಪಿಸಿಬಿಡುತ್ತಿದ್ದಾರೆ. ಮತ್ತು ಶಿರೋಮಣಿ ಸಂಘದ ಅಧೀನದಲ್ಲಿರುವುದಕ್ಕೆ ಒಪ್ಪಿದ್ದಾರೆ.

ಪ್ರಸಿದ್ಧ ಪತ್ರಿಕೆ

ಹಾಸನಟವನ್ ಮುಸಾಫರ್‌ಖಾನಾ ಹಿಂಭಾಗದ ಹೊಲಗಳು ಮತ್ತು ಸಂತೆಮಾಳದಲ್ಲಿ ಸಹಾ ಮಾಮೂಲ್‌ಮೇರೆ ಸನ್ 1923 ನೇ ಇಸವಿ ಜನವರಿ ಮಾಹೆ ತಾರೀಖು 3-4 ಮತ್ತು 5 ನೇ ಬುಧವಾರ, ಗುರುವಾರ ಮತ್ತು ಶುಕ್ರವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತೆಂಬ ಭಾಗ ಈಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ಬಾಕಿ ವಿಷಯಗಳಿಗೆ ತಪ್ಸೀಲಾಗಿ ಮೈಸೂರು ಗೆಜೆಟ್ 10-11-1922 ರ ಮರ್ನಂ II A ಭಾಗದ 420-421 ನೇ ಪುಟಗಳಲ್ಲಿ ಛಾಯಿಸಾಗಿರುವ ನೋಟಿಫಿಕೇಷನ್ ನೋಡತಕ್ಕದ್ದು.

3

MAHAMUD RAZA
Vice-President,
Town Municipality.

ವೀರಶೈವ

ಶಿವಪೂಜಾವಿಧಿಃ

ಎಂಬ ಪುಸ್ತಕವು ವೈದಿಕಮಂತ್ರಪುರಸ್ಸರವಾದ ಸಕಲೋಪಚಾರಗಳಿಂದಲೂ ನಮಕ-ಚಮಕ-ಪುರುಷಸೂಕ್ತ-ಶಿವಸಹಸ್ರನಾಮ--ಗಣಸಹಸ್ರನಾಮ--ಬಸವಸಹಸ್ರನಾಮ-ಶಿವಕವಚ-ಮಾರ್ಕಂಡೇಯಸ್ತೋತ್ರ-ಲಿಂಗಾಷ್ಟಕ-ನಮಸ್ಕೃತಿಪ್ರಶಂಸಾ-ಶಿವಾಷ್ಟಕ-ಬಿಲ್ವಾಷ್ಟೋತ್ತರಗಳಿಂದ ಕೂಡಿ ವೀರಶೈವರುಗಳ್ಗುಪಯುಕ್ತವಾಗಿ ಕ್ರೌನ್ ಅಷ್ಟಪತ್ರದಾಕೃತಿಯಲ್ಲಿ ಸ್ವಚ್ಛವಾದ ಕಾಗದದ ಮೇಲೆ ಸುಂದರವಾದ ಅಕ್ಷರಗಳಿಂದ ಅಂದವಾಗಿ ಮುದ್ರಣಮಾಡಲ್ಪಟ್ಟು ಕಿತ್ತಾನಾರು ಬೈಂಡಿನಿಂದ ಮಾರಾಟಕ್ಕೆ ಸಿದ್ಧವಾಗಿದೆ. ಇದರ ಬೆಲೆ ೧೨ ಆಣೆ. ವಿ.ಪಿ ಮೂಲಕ ಪೋಸ್ಟೇಜು ಸೇರಿ ೧ ರೂಪಾಯಿ ೨ ಆಣೆ.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ವಿದೇಶದ ವೃತ್ತಾಂತಗಳು

ಜರ್ಮನಿಯಿಂದ ತುರ್ಕಿಗೆ ಮದ್ದು ಗುಂಡು ಫಿರಂಗಿ ಮೊದಲಾದ ಯುದ್ಧಸಾಮಗ್ರಿಗಳು ವಿಪರೀತವಾಗಿ ಕಳ್ಳದಾರಿಯಿಂದ ಸಾಗಿಸಲ್ಪಡುತ್ತಿವೆಯೆಂದು ಲಂಡನ್ ಟೈಮ್ಸ್ ಪತ್ರಿಕೆಗೆ ಅದರ ಬಾತ್ಮೀದಾರನು ವರ್ತಮಾನ ಕಳುಹಿಸಿದ್ದಾನೆ.

ಐರ್ಲಂಡಿನ ಪ್ರಜಾಪ್ರಭುತ್ವ ಪ್ರತಿಷ್ಠಾಪನವು ಕಳೆದ ಮಂಗಳವಾರ ನಡೆದು, ಆ ದಿವಸ ನಮ್ಮ ಸಾರ್ವಭೌಮರು ಐರಿಷ್ ಬಿಲ್ಲನ್ನು ಅಂಗೀಕರಿಸಿದರು. ಐರ್ಲಂಡ್ ತಾತ್ಕಾಲಿಕ ಪ್ರಭುತ್ವವು ಈ ಐರಿಷ್ ಫ್ರೀಸ್ಟೇಟ್ ಪ್ರಭುತ್ವಕ್ಕೆ ಬಾಧ್ಯತೆಯನ್ನು ವಹಿಸುವುದು. ಐರ್ಲಂಡಿಗೆ ಪ್ರಜಾಪ್ರಭುತ್ವವುಂಟಾಗಬೇಕೆಂದು ಬಲವಾಗಿ ಹೋರಾಡುತ್ತಿದ್ದವರಲ್ಲಿ ಒಬ್ಬರಾದ ಮಿ|| ಹೇಲಿಯವರು ಗೌರ್ನರ್ ಜನರಲ್ಲಾಗಿ ಮಾಡಲ್ಪಡುವರೆಂದು ಸುದ್ದಿಯಿದೆ.

ಈ ಮಧ್ಯೆ ರಷ್ಯನರೂ ಜರ್ಮನರೂ ಸಂಧಿಮಾಡಿಕೊಂಡಿದ್ದಾರೆ. ಈಗ ರಷ್ಯನರು ತಮ್ಮ ಸೈನಿಕರಿಗೆ ಜರ್ಮನ್ ಸೇನಾಪತಿಗಳ ಮೂಲಕ ಶಿಕ್ಷಣವನ್ನು ಕೊಡಿಸುತ್ತಿದ್ದಾರಂತೆ. ಅವರ ದೇಶದ ಮೂಲವಸ್ತುಗಳನ್ನು ಜರ್ಮನಿಗೆ ಯಥೇಚ್ಛವಾಗಿ ಕಳುಹಿಸಿಕೊಟ್ಟು ಭೋಗ್ಯವಸ್ತು ಮೊದಲಾದುವುಗಳನ್ನು ನಿರ್ಮಿಸಿ ಪ್ರಪಂಚದಲ್ಲೆಲ್ಲಾ ಅಗ್ಗವಾಗಿ ಮಾರಿ ತಮ್ಮ ದೇಶದ ವ್ಯಾಪಾರವನ್ನು ಬಲಪಡಿಸಬೇಕೆಂದು ಉದ್ಯುಕ್ತರಾಗಿದ್ದಾರೆ. ಜರ್ಮನಿಯಲ್ಲಿ ಯಥಾಪ್ರಕಾರ ಕ್ರುಪ್ ಯಂತ್ರಾಗಾರದಲ್ಲಿ ಆಯುಧ ನಿರ್ಮಾಣಕಾರ್ಯವು ಉಪಕ್ರಮವಾಗಿದೆಯೆಂದು ಸುದ್ದಿಹುಟ್ಟಿದೆ.

ಲಂಡನ್ನಿನಲ್ಲಿ 14 ಲಕ್ಷ ಜನ ಕೆಲಸಗಾರರು ಕೂಲಿಸಿಕ್ಕದೆ ಪರದಾಡುತ್ತಿದ್ದಾರೆ. ಇವರ ಮುಖಂಡರಿಗೆ ಮುಖ್ಯ ಮಂತ್ರಿ ಬೋನರ್‌ಲಾರವರು ದರ್ಶನಸಂಭಾಷಣಗಳಿಗೆ ಅವಕಾಶಕೊಡದೆ ಹೋದರು. ಅದರ ಮೇಲೆ ಅವರೆಲ್ಲಾ ರೇಗಿ ಹಾವಳಿಮಾಡುವುದಕ್ಕುಪಕ್ರಮಿಸಿದರು. ಪೊಲೀಸು ಸೈನ್ಯಗಳ ಕಾವಲನ್ನು ಪ್ರಭುತ್ವದವರು ಏರ್ಪಡಿಸಿದರು. ಈಚೆಗೆ ಮಂತ್ರಿಯವರು ರೈಲ್ವೆ ಕಂಪೆನಿಯವರೊಡನೆ ಮಾತನಾಡಿ ಕೂಲಿಕಾರರಿಗೆ ಕೆಲಸವನ್ನೊದಗಿಸಿಕೊಡುವುದಕ್ಕಾಗಿ ಹೊಸ ಮಾರ್ಗಗಳನ್ನು ಹಾಕಿಸಲು ಸೂಚಿಸಿದರು. ಅದಕ್ಕೆ ಅವರು ಒಪ್ಪಿಕೊಂಡರು. 50 ಅಥವಾ 60 ಲಕ್ಷ ಪೌನುಗಳ ಸಾಲವನ್ನು ಮಾಡಿ ಹೊಸಹೊಸದಾಗಿ ಹಲವು ಕೆಲಸಗಳಿಗೆ ಉಪಕ್ರಮಿಸಬೇಕೆಂದು ನಿಶ್ಚಯಿಸಿದ್ದಾರೆ.

ಈಜಿಪ್ಟಿನಲ್ಲಿ ಲೋಕಾದ್ಭುತಕರವಾದ ರಾಜರ ಸಮಾಧಿಗಳೂ ಭವನಗಳೂ ಅನೇಕವಾಗಿವೆ. ಅಲ್ಲಿಯ ನೈಲ್‌ನದಿಯ ಪಕ್ಕದಲ್ಲಿ ಪುರಾತನ ಕಾಲದ ಅಲ್ಲಿಯ ಪ್ರಭುಗಳ ಗೋರಿಗಳಿವೆ. ಆ ಸ್ಥಲದಲ್ಲಿ ಕಳೆದ 16 ವರ್ಷಗಳಿಂದಲೂ ಭೂಗರ್ಭವನ್ನು ಪರಿಶೋಧನೆ ಮಾಡುತ್ತ ಬಂದುದರಲ್ಲಿ ಈಗತಾನೇ ಲೋಕಾಶ್ಚರ್ಯಕರಗಳಾದ ಭವನವೂ ಅಮೌಲ್ಯವಸ್ತುಗಳೂ ಹೊರಬಿದ್ದಿರುತ್ತವೆ. ಇದು ಈಗ್ಗೆ 3 ಸಹಸ್ರ ವರ್ಷಗಳಲ್ಲಿ ರಾಜ್ಯಪರಿಪಾಲನೆ ಮಾಡುತ್ತಿದ್ದ ತುಟನ್‌ಖಮನ್ ಎಂಬ ಪ್ರಭುವಿನ ಗೋರಿಯಂತೆ. ಅದು ಅಷ್ಟು ಪುರಾತನ ನಿರ್ಮಿತವಾಗಿದ್ದರೂ ಈಗ ತಾನೇ ನಿರ್ಮಿಸಿದಂತೆ ಅಚ್ಚಳಿಯದೆ ಇರುವುದಂತೆ. ಒಂದರ ಹಿಂದೊಂದರಂತೆ 3 ಹಜಾರುಗಳುಳ್ಳದಾಗಿ ಪ್ರತಿಯೊಂದರಲ್ಲೂ ಸುವರ್ಣ ರತ್ನಖಚಿತವಾದ ಆಸನಗಳೂ, ದಂತದ ಮಂಚಗಳೂ ಭಂಗಾರದ ಮಣಿಮಯ ಪೇಟಿಕೆಗಳೂ, ಸಿಂಹಾಸನಗಳೂ, ಆ ರಾಜನು ಉಪಯೋಗಿಸುತ್ತಿದ್ದ ವಸ್ತ್ರಾಭರಣಾದಿಗಳೂ ಪಾತ್ರೆಗಳಲ್ಲಿ ತುಂಬಿಟ್ಟಿರುವ ಆಹಾರ್ಯವಸ್ತುಗಳೂ, ಇದಿರುಬದುರಿಗೆ ಸುವರ್ಣಪೀಠಗಳ ಮೇಲೆ ಕುಳ್ಳಿರಿಸಲ್ಪಟ್ಟಿರುವ ಭಂಗಾರದ ರಾಜವಿಗ್ರಹಗಳೂ, ಚಿನ್ನದ ಮುಲಾಮುಮಾಡಿದ ಗೋಡೆಗಳೂ ಒಂದಕ್ಕಿಂತ ಒಂದು ಮನೋಹರವಾಗಿ ಥಳಥಳಿಸುತ್ತಿವೆಯಂತೆ. ಇನ್ನೂ ಪರಿಶೋಧನವು ನಡೆಯುತ್ತಿದೆ. ಮುಂದೆ ಇನ್ನೆಂಥ ಅಮೌಲ್ಯವಸ್ತುಗಳು ಗೋಚರಿಸುವುವೋ ನೋಡಬೇಕು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಮೈಸೂರು ಸ್ಟಾರ್ ಪತ್ರಿಕಾ ಎಡಿಟರವರ ಸ|| ಕ್ಕೆ.

ಸ್ವಾಮಿ,

ತಮ್ಮ ತಾರೀಖು 26 ನೆಯ ಪತ್ರಿಕೆಯಲ್ಲಿ - ದಾವಣಗೆರೆ ಮುನಿಸಿಪಾಲಿಟಿ - ಎಂಬ ಹೆಡ್ಡಿಂಗಿನಿಂದ ಪ್ರಕಟವಾದ ಸಂಗತಿಯನ್ನು ಓದಿದೆನು. ಯಥಾರ್ಥವಾದಿ ಎಂಬ ಬಾತ್ಮಿದಾರರು ಮುನಿಸಿಪಾಲಿಟಿಯ ಅಂತಃಸ್ಥಿತಿಯನ್ನು ಅರಿಯದವರಾಗಿಯೂ ಮುನಿಸಿಪಾಲಿಟಿಯಲ್ಲಿ ಅನನುಭವಿಕರ ಮಾತು ಕೇಳಿ ಕೇವಲ ವ್ಯಕ್ತಿದ್ವೇಷದಿಂದ ಸುಳ್ಳುಸಂಗತಿಗಳನ್ನು ಬರೆದಿರುವುದರಿಂದ ದಾವಣಗೆರೆ ಹೊರಗಣ ಸ್ಟೇಟಿನಲ್ಲಿ ದಾವಣಗೆರೆ ಮುನಿಸಿಪಾಲಿಟಿ ಬಗ್ಗೆ ದುರಭಿಪ್ರಾಯ ಹುಟ್ಟಬಹುದಾದ್ದರಿಂದ ಈ ಕೆಳಗೆ ವಿವರಿಸಿರುವ ಮೇಲ್ಕಂಡ ಲೇಖನಕ್ಕೆ ಉತ್ತರವಾಗಿ ಇದನ್ನು ದಯವಿಟ್ಟು ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ.—

(1) ಬಾತ್ಮೀದಾರರು ಕೌನ್ಸಿಲರುಗಳ ಡ್ಯೂಟಿಬಗ್ಗೆ ಬರೆದಿರುತ್ತಾರೆ. ದಾವಣಗೆರೆ ಮುನಿಸಿಪಾಲಿಟಿಯಲ್ಲಿ 14 ಜನರು ನಾನ್ ಅಫಿಷಿಯಲ್ ಮೆಂಬರರು ಇರುತ್ತಾರೆ. ಇವರು ತುಂಬಾ ಗೌರವಸ್ಥರೂ ದೊಡ್ಡ ಮನೆತನದವರೂ ಭಾರಿಯಾಗಿ ವರ್ತಕತನ ಮಾಡುವವರೂ ಮತ್ತು ಮುನಿಸಿಪಾಲಿಟಿಗೆ ಭಾರಿಯಾಗಿ ಕಂದಾಯ ಕೊಡತಕ್ಕವರಾಗಿಯೂ ದಾವಣಗೆರೆ ಮುನಿಸಿಪಲ್ ಆಡಳಿತಕ್ಕಿಂತ ಜಾಸ್ತಿ ಆಡಳಿತವನ್ನು ಸ್ವಂತ ನಡೆಸತಕ್ಕವರಾಗಿಯೂ ಇದ್ದು ಮತ್ತು ಟವನ್ ನಿವಾಸಿಗಳ ಬಹುಸಮ್ಮತಿಯಿಂದ ಚುನಾಯಿಸಲ್ಪಟ್ಟವರಾಗಿರುತ್ತಾರೆ. ಇವರಲ್ಲಿ ಕೆಲವರು ಬೆಂಚ್‌ಕೋರ್ಟ್ ಮೇಜಿಸ್ಟ್ರೇಟರಾಗಿಯೂ, ಡಿಸ್ಟ್ರಿಕ್ಟ ರೆಪ್ರಜೆಂಟೇಟಿವ್ ಅಸೆಂಬ್ಲಿ ಮೆಂಬರುಗಳಾಗಿಯೂ ಈ ಮುನಿಸಿಪಾಲಿಟಿಯಲ್ಲಿ 15-20 ವರ್ಷಗಳಿಂದ ಕೆಲಸಮಾಡುವವರಾಗಿಯೂ, ನಿಸ್ಪೃಹರಾಗಿಯೂ, ಸ್ವಾರ್ಥತ್ಯಾಗಿಗಳಾಗಿಯೂ ತಮ್ಮ ಸ್ವಂತ ಭಾರಿಕೆಲಸಗಳಿದ್ದಾಗ್ಯೂ ಪ್ರಜಾಸೇವೆ ಮಾಡುವುದಕ್ಕೋಸ್ಕರ ತುಂಬಾ ಶ್ರಮಪಡುತ್ತಾ ಸುಮ್ಮನೆ ಮೀಟಿಂಗಿಗೆ ಮಾತ್ರ ಹೋಗದೆ ದಿನವಹಿ ಆಫೀಸಿನಲ್ಲಿಯೂ ಟವನ್ನಿನಲ್ಲಿಯೂ ಜನರ ಅಹವಾಲ್ ಕೇಳುತ್ತಲೂ ತೊಂದರೆಗಳನ್ನು ನಿವಾರಣೆ ಮಾಡುತ್ತಲೂ ಇರುತ್ತಾರೆ. ಇತ್ತೀಚೆಗೆ ಆನರರಿ ವೈಸ್‌ಪ್ರೆಸಿಡೆಂಟ್ ಕೆಲಸವನ್ನು ಮ|| ಟಿ. ಎಂ. ಓಂಕಾರಪ್ಪಯ್ಯ ನವರಿಗೆ ವಹಿಸಿದಮೇಲೆ ಇವರು ತಮ್ಮ ಡ್ಯೂಟಿಯು ಸರ್ವಜನ ಸಮ್ಮತವಾಗುವಂತೆ ತಪ್ಪದೆ ಆಫೀಸಿಗೆ ಹೋಗಿ ಕೆಲಸ ನೋಡಿಕೊಳ್ಳುತ್ತಿರುವರು. ಮ|| ದೊಗ್ಗಳ್ಳಿ ಬಸವಣ್ಣಪ್ಪನವರು ಮ|| ಸಲ್ಲಾಗಟ್ಟ ಗುರುಸಿದ್ಧಪ್ಪನವರು ಯಜಮಾನ್ ಮೋತಿ ದೊಡ್ಡಪ್ಪನವರು ಮ|| ಬಾಗಾನಹಳ್ಳಿ ಚೆನ್ನಬಸಪ್ಪನವರು ಮ|| ಮುದೇಗೌಡರ ಮುರಿಗಪ್ಪನವರು ಮತ್ತು ಎಲ್ಲರಿಗೂ ಯಜಮಾನರಾದ ಮ|| ಟಿ.ಎಂ. ಷಡಕ್ಷರಪ್ಪಯ್ಯನವರು ಸಹ ತಾತ್ತ ತಾವು ನೇಮಿಸಿಕೊಂಡಿರುವ ಕೆಲಸಗಳನ್ನು ಶ್ರದ್ಧೆಯಿಂದ ದಿನವಹಿ ಮಾಡುತ್ತಾರೆ. ಮ|| ಪ್ರೆಸಿಡೆಂಟರು ಮುನಿಸಿಪಾಲಿಟಿಗೆ ಹೊಸಬರಾದ್ದರಿಂದ ಅವರ ವಿಶೇಷ ಸಹಾಯವಿಲ್ಲದೆ ಆನರರಿಯಾಗಿ ತಮ್ಮ ಸ್ವಂತ ಕೆಲಸಕ್ಕೆ ಲಕ್ಷ್ಯ ಕೊಡದೆ ಕೆಲಸ ಜರಗಿಸುತ್ತಾರೆ. ಇವರುಗಳಿಗೆ ಅಫಿಸಿಯಲ್ ಪ್ರೆಸಿಡೆಂಟರನ್ನು ಬಿಟ್ಟು ನಾನ್ ಅಫಿಸಿಯಲ್ ಪ್ರೆಸಿಡೆಂಟ್ ಸಿಸ್ಟಿನಿಂದಲೇ ಕಾರ ನಿರ್ವಹಿಸಲು ಸಮರ್ಥರಾಗಿರುವುದಾಗಿ ಟವನ್ ರೇಟ್‌ಪೇಯರ್‌ಗಳಿಗೂ ಟವನ್ ವಾಸಿಗಳಿಗೂ ನಂಬಿಗೆಯಾಗಿದೆ. ಮೈಸೂರು ಸೀಮೆಯ ಮುನಿಸಿಪಾಲಿಟಿಗಳಲ್ಲಿ ಇಷ್ಟು ಮುತುವರ್ಜಿಯಿಂದ ಕೆಲಸ ಮಾಡುವವರು ವಿರಳವೆಂದೇ ಇಂಥಾ ದೊಡ್ಡ ಮನುಷ್ಯರುಗಳಿಗೆ ಕರ್ತವ್ಯಜ್ಞಾನವನ್ನು ಯಥಾರ್ಥವಾಗಿಯೂ ಬೋಧಿಸುವಂತೆ ನಟಿಸುವುದು ವೃಥಾಪ್ರಲಾಪ ಹೊರತು ಬೇರೆಯಲ್ಲ. (2) ಮುನಿಸಿಪಾಲಿಟಿ ಹಣ ದುರ್ವ್ಯಯವಾಗುತ್ತೆನ್ನುವುದು:-ವೈಸ್‌ಪ್ರೆಸಿಡೆಂಟರು ಕೌನ್ಸಿಲರುಗಳು ಭಾರಿಯಾಗಿ ಮುನಿಸಿಪಾಲಿಟಿಗೆ ಕಂದಾಯಕೊಡತಕ್ಕವರಾಗಿಯೂ ಇವರೇ ಹಣದ ಆಡಳಿತ ನಡೆಯಿಸತಕ್ಕವರಾಗಿಯೂ ಇರುವುದರಿಂದಲೂ ದೊಡ್ಡ ವ್ಯಾಪಾರಿಗಳೂ, ಶ್ರೀಮಂತರೂ ಇರುವುದರಿಂದ ಲಂಚ ರುಷುವತ್ತುಗಳಿಗೆ ಆಶೆ ಪಡಲಾರದವರೂ ಆಗಿರುವುದರಿಂದ ದುರ್ವ್ಯಯಕ್ಕೆ ಅವಕಾಶವಿರುತ್ತದೆನ್ನುವುದು ಮೂರ್ಖತನದ ಮಾತಲ್ಲವೇ? ಪಬ್ಲಿಕ್ ಕಾಮಗಾರಿಗಳ ಬಗ್ಗೆ--ವಾಟರ್ ಸಪ್ಲೈ ಬಗ್ಗೆ--ಅಂಟುಜಾಡ್ಯಗಳ ಬಗ್ಗೆ--ಆಸ್ಪತ್ರೆಯ ಬಗ್ಗೆ ಲೈಟಿಂಗ್ ಗೋಸ್ಕರವೂ ಕನ್ಸರ್‌ವೆನ್ಸಿ ಮೇಲ್‌ತನಿಖೆ ವಗೈರೆ ಪ್ರತಿಯೊಂದು ಬಾಬಿಗೂ ಒಂದೊಂದು ಕಮಿಟಿ ಏರ್ಪಾಟಾಗಿದೆ. ಈ ಕಮಿಟಿಯವರು ಆಯಾ ನಿಯಮಿತ ಕಾಲಗಳಲ್ಲಿ ಶ್ರಮತಪ್ಪದೆ ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ.

(a) ಝಟಕಾಲಿ ಗುರವ್ವನು ನ್ಯಾಯವಾಗಿ ಕೆಲಸಮಾಡಿ ಆ ಬಗ್ಗೆ ಸಂಬಳ ಪಡೆದುದ್ದಾಳೆಂಬುವುದು ವೈಸ್ ಪ್ರೆಸಿಡೆಂಟ್‌ರವರು ಮಾಡಿರುವ ತನಿಖೆಯಲ್ಲಿ ವ್ಯಕ್ತಪಟ್ಟು ಈ ಉಪದ್ವ್ಯಾಪಕತನವು ಹೊಸದಾಗಿ ಬಂದು ಯುಕ್ತಾಯುಕ್ತ ವಿವೇಕವೂ ಜ್ಞಾನವೂ ಇಲ್ಲದೆ ಇರುವ ಸ್ಯಾ|| ಇ|| ಬಸವಾರಾಧ್ಯರವರಿಂದಂತೆ ವ್ಯಕ್ತಪಟ್ಟಿದೆ. (b) ಕಚರಾ ತುಂಬುವ ಗಾಡಿಗಳಿಗೆ ಕಂಟ್ರಾಕ್ಟ್‌ದಾರರಿಂದ ಕರಾರು ಬರೆಯಿಸಿಕೊಂಡವರು ಯಥಾರ್ಥವಾದಿಗಳೋ ಮ್ಯುನಿಸಿಪಾಲಿಟಿ ಕೌನ್ಸಿಲರುಗಳೋ ವಾಚಕರೇ ಊಹಿಸಬೇಕು. ಗಾಡಿ ಕಂಟ್ರಾಕ್ಟ್‌ದಾರನು ತನ್ನ ಪ್ರಾಣದಂತೆ ರಕ್ಷಣೆಮಾಡುವ ಎತ್ತುಗಳನ್ನು ಒಬ್ಬ ಬೇಜವಾಬ್‌ದಾರ್ ಝಟಕಾಲಿ ಕಡೆಗೆ ವಹಿಸುವುದು ಎಷ್ಟರಮಟ್ಟಿಗೆ ನಿಜವಿರಬಹುದು. ಪ್ರೆಸಿಡೆಂಟರೂ ಗಾಡಿಯವನಿಗೆ ಕೇಳಿದ್ದೂ ಸುಳ್ಳು. ಗಾಡಿಗಳಿಗೆ ಸಂಬಂಧವಿಲ್ಲದ ಹೆಡ್‌ಕ್ಲಾರ್ಕ್ ಗಾಡಿಗಳ ವಿಚಾರವಾಗಿ ಹೇಳಿದ್ದೂ ಸುಳ್ಳು. ಇದೆಲ್ಲಾ ಆನರರಿ ವೈಸ್‌ಪ್ರೆಸಿಡೆಂಟರ ಆಡಳಿತೆಯಲ್ಲಿದೆ. (c) ವಾಟರ್‌ಮನ್ ಅವನೇ ಕಸಗುಡಿಸುವವನು ಅವನೇ ಅನ್ನುವಕಾರಣ ಹೊಸದಾಗಿ ಬಂದ ಸ್ಯಾನಿಟರಿ ಇನ್ಸ್‌ಪೆಕ್ಟರ್ ದೊಡ್ಡಸಿಬ್ಬಂದಿಯಲ್ಲಿ ಏಕ್‌ದಮ್ 70-80 ಜನ ಸಿಬ್ಬಂದಿಕಂಡು ಇದು ಯಾಕೆನ್ನುವುದು ತಿಳಿದು ಕೇಳಲು ಶಕ್ತಿಸಾಲದೆ ಭಾಬಂಯಾಗಿ ಮೊಬ್ಬುಹಿಡಿದವರಾದ್ದರಿಂದ ಹೀಗೆ ಆಭಾಸವಾದದ್ದಾಗಿದೆ. ಇತ್ತೀಚೆಗೆ ಸ್ವಲ್ಪವೊಬ್ಬು ಕಡಿಮೆಯಾಗಲು ಹತ್ತಿದಂತೆ ಕಾಣುತ್ತೆ. (d) ದೊಡ್ಡಿಯ ಲೆಕ್ಕ ತಪ್ಪಾಯಿತ್ತು ಎಂದು ಹೇಳುವುದಕ್ಕೆ ಬದಲಾಗಿ ತನಿಖೆಮಾಡಲಿಕ್ಕೆ ಹೋದ ನಮ್ಮ ಘನತೊಂಬದ ಸ್ಯಾನಿಟರಿ ಇನ್ಸ್‌ಪೆಕ್ಟರ್‌ರವರಿಗೆ ಟೋಟಲ್ ಹಾಕಲಿಕ್ಕೆ ಬಾರದೆ ಏಳುಕಡೆ ಟೋಟಲ್ ಹಾಕಿ ಏಳುಕಡೆಯಲ್ಲಿ ತಪ್ಪು ಹಾಕಿರುತ್ತಾರೆ. ಇದು ಇವರ ಜ್ಞಾನಪ್ರಭಾವವೇ ಆಗಿರುತ್ತದೆ. (e) ಲೈಸೆನ್ಸ್ ದರಕಾಸ್ತುಗಳನ್ನು ಇತ್ಯರ್ಥಮಾಡಲು 1914ನೇ ಸಾಲಿನ ಲಾಗಾಯ್ತು ಮ್ಯಾನೇಜಿಂಗ್ ಕಮಿಟಿ ಒಂದು ಏರ್ಪಾಡಾಗಿದೆ. ಈ ಕಮಿಟಿ 15 ದಿನಕ್ಕೊಂದಾವರ್ತಿ ಮೀಟಿಂಗ್ ನಡೆಯಿಸಿ ಪ್ರತಿ ದರಕಾಸ್ತನ್ನು ಆಯಾ ಜಾಗಾ ಅಜಮಾಯಿಷಿ ಮಾಡಿ ಫೈಸಲ್ಮಾಡುವ ರೂಢಿಯಿರುತ್ತೆ. ಹೊಸ ಪ್ರೆಸಿಡೆಂಟರು ಬಹುದಿನಸದ ರೂಢಿಯನ್ನು ಬದಲುಮಾಡಿದ್ದರಿಂದ ಲೈಸೆನ್ಸುಗಳಿಗೆ ಕಾಲವಿಳಂಬವಾಗಿರಬಹುದು. ದರಕಾಸ್ತುದಾರನು ರೆಗ್ಯುಲೇಷನ್ ಪ್ರಕಾರ ಒಂದು ತಿಂಗಳನಂತರ ಕಟ್ಟಿರಬಹುದು. ಇದಕ್ಕೆ ಮ್ಯಾನೇಜಿಂಗ್ ಕಮಿಟಿಯವರು ಜವಾಬ್ದಾರರಲ್ಲ. (f) ಟವನ್ನಿನಲ್ಲಿ ಹಿಂದಿನಕಾಲದಲ್ಲಿ ಎಕ್ಸ್‌ಟೆನ್‌ಷನ್ ಬಸ್ತಿ ಸುಧಾರಣೆಮಾಡಿದಾಗ ಅನೇಕ ಜನರು ಮನೆಮಠಗಳನ್ನು ಕಳೆದುಕೊಂಡಿರುತ್ತಾರೆ. ಬಲವಂತರಿಗೆ ಪ್ರತಿಫಲ ದೊರೆತು ಸಾಧಾರಣಜನರು ಆಕಾಲದಿಂದಲೂ ಪ್ರಲಾಪಿಸುತ್ತಲೇ ಇರುತ್ತಾರೆ. ಅಕ್ಕಸಾಲೆ ಈಶ್ವರಪ್ಪನಿಗಾಗಲಿ ಇತರರಿಗಾಗಲಿ ಅವರಕ್ಲೇಮಿಗೆ ಅವರ ಹಕ್ಕುಳ್ಳ ಜಾಗಾ ಅವರಿಗೆ ದೊರೆತಿರಬಹುದು. ಕೌನ್ಸಿಲರಿಗೂ ಮ್ಯುನಿಸಿಪಾಲಿಟಿಗೂ ಅಕ್ಕಸಾಲೆ ಈಶ್ವರಪ್ಪನು ಮಗನಲ್ಲ. (3) ಸಾರಾಂಶ.—ಮ್ಯುನಿಸಿಪಾಲಿಟಿಯು ಒಂದು ದೊಡ್ಡ ಕುಟುಂಬದಂತೆ ಇರುತ್ತದೆ. ಪ್ರೆಸಿಡೆಂಟರೂ ಕೌನ್ಸಿಲರುಗಳೂ ಏಕಮತ್ಯದಿಂದ ಕೆಲಸಗಳು ನಡೆಯಿಸಿದರೆ ಟವನ್ನಿಗೆ ಬಹಳ ಸುಖವಾಗಿರುತ್ತದೆ. ಈ ಮೊದಲು ಪ್ರೆಸಿಡೆಂಟರು ಬ್ರಾಹ್ಮಣರಾಗಿಯೂ ಕೌನ್ಸಿಲ್‌ಬಾಡಿ ನಾನ್‌ಬ್ರಾಹ್ಮಣರಾಗಿದ್ದರೂ ಅವರವರಲ್ಲಿ ಏಕಮತ್ಯದಿಂದ ಗಲಾಟೆಗೆ ಅವಕಾಶವಿಲ್ಲದಂತೆ ಇತ್ತು. ಹೊಸದಾಗಿ ಪ್ರೆಸಿಡೆಂಟರು ನಾನ್‌ಬ್ರಾಹ್ಮಣರು ಬರುವುದರಿಂದ ಇನ್ನೂ ಸೌಖ್ಯವಾಗುತ್ತದೆಂದು ಕೌನ್ಸಿಲರುಗಳು ಬಹು ಸಂತೋಷಪಟ್ಟಿದ್ದರು. ಈ ಪ್ರೆಸಿಡೆಂಟರು ಬಂದಕೂಡಲೆ ವಿವೇಕವಿಲ್ಲದ ಸ್ಯಾನಿಟರಿ ಇನ್ಸ್‌ಪೆಕ್ಟರೂ ಬೇರೆ ಇಬ್ಬರೂ ದೊಡ್ಡಮನುಷ್ಯರಂತೆ ಗೋಮುಖವ್ಯಾಘ್ರದಂತೆ ಇರುವವರು ಸಹಾ ಪ್ರೆಸಿಡೆಂಟರಿಗೆ ಕೌನ್ಸಿಲ್ ಬಗ್ಗೆ ದುರಭಿಪ್ರಾಯಹುಟ್ಟಿಸಿ ಮನಸ್ಸು ಪ್ರೆಜುಡೀಸ್ ಮಾಡಿದ್ದರಿಂದ ಮೊದಲನೆ ಮುನಿಸಿಪಲ್ ಮೀಟಿಂಗಿನಲ್ಲಿಯೇ ಪ್ರೆಸಿಡೆಂಟರಿಂದ ಕೌನ್ಸಿಲ್ಲರಿಗೆ ಸ್ವಲ್ಪ ಅವಮಾನವಾದದ್ದು ಸಹಿಸಬೇಕಾಯಿತು. ಎರಡನೇ ಮೀಟಿಂಗ್ ಕೌನ್ಸಿಲ್ಲರ ಅಭಿಪ್ರಾಯವಿಲ್ಲದೆ ಅಡ್ಜರ್ನು ಪ್ರೆಸಿಡೆಂಟರೇ ಮಾಡಿದ್ದರಿಂದ ಕೌನ್ಸಿಲ್ಲರು ಬಹಳ ಅಸಮಾಧಾನಪಟ್ಟರು. ಪ್ರೆಸಿಡೆಂಟರು ಹಾಜರು ಇಲ್ಲವಾದರೆ ವೈಸ್‌ಪ್ರೆಸಿಡೆಂಟರು ಮೀಟಿಂಗ್ ನಡೆಯಿಸುತ್ತಿದ್ದರು. ಹಾಗೆ ಮಾಡದೆ ಮೀಟಿಂಗನ್ನೇ ಕ್ಯಾನ್ಸಲ್ಲು ಮಾಡಿದ್ದರಿಂದ ಹೀಗೆ ಪ್ರೆಸಿಡೆಂಟರು ಮಾಡಿದ್ದು ರೂಲಿಗೆ ವಿರೋಧವೆಂದು 3 ದಫ ಮೀಟಿಂಗಿನಲ್ಲಿ ಚರ್ಚೆ ನಡೆದು ಆಖೈರು ಪ್ರೆಸಿಡೆಂಟರು ಹಾಗೆ ಮಾಡಿದ್ದು ಇಲ್ಲೀಗಲ್ ಅಂತಲೂ ಇನ್‌ವ್ಯಾಲ್ಯೂಡ್ ಅಂತಲೂ ರಿಕಾರ್ಡು ಮಾಡಬೇಕಾಯಿತು. ಕೌನ್ಸಿಲರುಗಳು ಪ್ರೆಸಿಡೆಂಟರಿಗಿರತಕ್ಕ 1ನೇ ಕ್ಲಾಸ್ ಮೆಜಿಸ್ಟೀರಿಯಲ್ ಪವರು ರೆವಿನ್ಯೂ ಅಧಿಕಾರ ವಗೈರೆ ಇದ್ದೂ ಎಲ್ಲಾ ಕನ್‌ಸರ್ನ್‌ನಲ್ಲಿ ಇರತಕ್ಕ ಕೌನ್ಸಿಲರುಗಳು ಅವರ ಅಧಿಕಾರಕ್ಕೆ ಭಯಪಡದೆ ಕೇವಲ ಸತ್ಯಕ್ಕಾಗಿ ನ್ಯಾಯಕ್ಕಾಗಿ ಪ್ರತಿಭಟಿಸಿದವರು ಆಫೀಸಿನಲ್ಲಿರುವ ಬಡಕ್ಲಾರ್ಕನ ಮಾತು ಕೇಳುತ್ತಾರೆನ್ನುವುದು ಕೌನ್ಸಿಲರುಗಳಿಗೆ ತುಂಬಾ ಅವಮಾನಕರವು. ಪ್ರೆಸಿಡೆಂಟರು ಅಯೋಗ್ಯಜನರ ಮಾತಿಗೆ ಕಿವಿಗೊಟ್ಟು ಕೌನ್ಸಿಲಿನಲ್ಲಿ ಅವಿಶ್ವಾಸಪೂರ್ವಕರಾದ್ದರಿಂದ ಇತರ ಗುಣ ಅವರಿಗೆ ತಿಳಿಯದೆ ಅವರ ಗುಣ ಇತರರಿಗೆ ತಿಳಿಯದೆ ಮುನಿಸಿಪಾಲಿಟಿಯಲ್ಲಿ ಗಲಾಟೆಗೆ ಅವಕಾಶವಾಯಿತು. ಪ್ರೆಸಿಡೆಂಟರೇ ಆಗಲಿ ಸಾನಿಟರಿ ಇನ್ಸ್‌ಪೆಕ್ಟರೇ ಆಗಲಿ ಜನರ ಹಿತಕಾರದ ಕಡೆ ದುರ್ಲಕ್ಷ್ಯ ಮಾಡಿ ಕೌನ್ಸಿಲ್ಲಿಗೆ ತಿಳಿಯಲು ಇಲ್ಲದ ಕಿತಾಪತಿಗಳು ಮಾಡುತ್ತಲಿದ್ದಾರೆ. -ಗಂಡಹೆಂಡರ ಜಗಳದಲ್ಲಿ ಕೂಸು ಘಾಶಿ ಆಯಿತೆನ್ನುವಂತೆ- ಟವನ್‌ವಾಸಿಗಳ ಗತಿಯಾಗುತ್ತದೆ. ಕೌನ್ಸಿಲ್ಲಿಗೂ ಪ್ರೆಸಿಡೆಂಟರಿಗೂ ತುಂಬಾ ಮನಸ್ತಾಪ ಉಂಟಾಗಿರುವುದರಿಂದ ಬೇರೆ ಪ್ರೆಸಿಡೆಂಟರಾದರೂ ಬರಬೇಕು. ಅಥವಾ ಪ್ರೆಸಿಡೆಂಟ್‌ಶಿಪ್ ನಾನ್ ಅಫಿಸಿಯಲ್ ಆದರೂ ಆಗಬೇಕು. ಹೀಗಾದರೇನೇ ಮುಂದೆ ಕಾರ್ಯನಿರ್ವಾಹವಾಗುತ್ತದೆ.

ಸತ್ಯಶೋಧಕ.

ಶ್ರೀಮಜ್ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಪಟ್ಟಾಧಿಕಾರದ ಆಲೋಚನಾ ಸಮ್ಮೇಲನ.

ಇದೇ ತಿಂಗಳು ತಾ|| 29-11-22 ನೆಯ ಬುಧವಾರ ಹಾಸನ ಡಿಸ್ಟ್ರಿಕ್ಟು ಅರಸೀಕೆರೆಯಲ್ಲಿ ಹಲ್ಯಾರ ಸಾಹುಕಾರ ಮ|| ರಾ|| ಮರುಳಸಿದ್ಧಪ್ಪಶೆಟ್ಟರವರ ನೂತನಗೃಹದ ಮಹಡಿಯಮೇಲೆ ಬೀರೂರಿಂದ ದಯಮಾಡಿಸಿದ ಪತ್ರಿ ಕ್ಯಾವಣಿಗೆಮಠದ ಕೆ. ಚನ್ನವೀರಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಈ ಸಮ್ಮೇಲನಕ್ಕೆ ಮೈಸೂರು, ಬೀರೂರು, ತಿಪಟೂರು, ಶಿವಮೊಗ್ಗ, ಗುಬ್ಬಿ, ಕೊಟ್ಟೂರು, ದೇವೀಹೊಸೂರು, ಚಿಕ್ಕಮಗಳೂರು, ನೇಮತಿ, ನಿಜಾಮಿಲಾಖಾ ಮುಂತಾದ ಕಡೆಯಿಂದ ಶ್ರೀ ಷ|| ಬ್ರ|| ಪಟ್ಟಾಧಿಕಾರಿ ಮಹಾಸ್ವಾಮಿಗಳು, ಶಾಸ್ತ್ರಿಮಂಡಲಿಯವರು, ಅನೇಕ ವೀರಶೈವ ಮಹಾಜನಗಳು ಸೇರಿದ್ದರು. ಈ ಮೊದಲೇ ಮಳಲಿಮಠದ ಶ್ರೀ ನಾಗಾರ್ಜುನಸ್ವಾಮಿಗಳೂ, ನರಸೀಪುರ ರಾಜಪುರದ ಮ|| ರಾ|| ಇಂ|| ಸಿ|| ಶಾಂತಪ್ಪಶೆಟ್ಟರೂ, ಅರಸೀಕೆರೆಗೆ ದಯಮಾಡಿಸಿ ಅಲ್ಲಿಯ ವೀರಶೈವ ಪ್ರಮುಖರನ್ನು ಸೇರಿಸಿ ಶ್ರೀ ಜಗದ್ಗುರು ರಂಭಾಪುರೀ ಪೀಠಕ್ಕೆ ಪಟ್ಟಾಧಿಕಾರವನ್ನು ನೆರವೇರಿಸಲು ತತ್ಸಂಬಂಧವಾದ ಆಲೋಚನ ಸಮ್ಮೇಲನವು ನಡೆಯಲು ಕೇಳಿದ್ದಕ್ಕೆ ಕೆಳಗೆಕಂಡ ಅರಸೀಕೆರೆ ವೀರಶೈವ ಪ್ರಮುಖರಾದ ಮ|| ರಾ|| ಸಾ|| ಹ|| ಮರುಳಸಿದ್ಧಪ್ಪಶೆಟ್ಟರು, ಬಾಗಲಕೋಟೆ ವಿರೂಪಾಕ್ಷಪ್ಪನವರು, ಉರೇಕೊಂಡೆ ನಾಗಪ್ಪನವರು, ಬ|| ಕೆ. ಸಿದ್ಧಪ್ಪನವರು, ಮ|| ರಾ|| ಚನ್ನಬಸವಪ್ಪನವರು, ಕೆಲ್ಲನೆರೆ ಕಲ್ಲಪ್ಪಶೆಟ್ಟರು, ಸಾ|| ಹ|| ಸಿದ್ಧರಾಮಪ್ಪಶೆಟ್ಟರು, ಬ್ಯಾಡಿಗಿ ಚನ್ನವೀರಪ್ಪನವರು, ಬಸವೇಗೌಡರು ಮೊದಲಾದವರು ಸದರಿ ಸ್ವಾಮಿಗಳ ಶೆಟ್ಟರ ಅಭಿಪ್ರಾಯದಂತೆ ಆಲೋಚನ ಸಮ್ಮೇಲನಕ್ಕೆ ದಯಮಾಡಿಸಿದ ವೀರಶೈವ ಮಹಾಜನಗಳಿಗೆ ಸತ್ಕಾರಮಾಡುತ್ತೇವೆಂದು ಒಪ್ಪಿ ತಾ|| 29-11-22 ನೆ ದುಂದುಭಿನಾಮ ಸಂವತ್ಸರದ ಮಾರ್ಗಶಿರ ಶು|| 10 ಬುಧವಾರ ಮಧ್ಯಾಹ್ನ 3 ಘಂಟೆಗೆ ಸಾ|| ಮರುಳಸಿದ್ಧಪ್ಪಶೆಟ್ಟರ ಗೃಹದ ಮಹಡಿಯಮೇಲೆ ನಡೆಯಬೇಕೆಂದು ನಿರ್ಧರಿಸಿ ಮರುದಿನವೇ ಸಮ್ಮೇಲನದ ಆಹ್ವಾನಪತ್ರಿಕೆಗಳನ್ನು ಎಲ್ಲ ಕಡೆಯಲ್ಲಿಯೂ ಕಳುಹಿಸಲು, ಆಕಾಲಕ್ಕೆ ಸರಿಯಾಗಿ ವೀರಶೈವ ಮಹನೀಯರು ದಯಮಾಡಿಸಿದ್ದರು. ಈ ಮಹನೀಯರಿಗೆಲ್ಲಾ ಮ|| ರಾ|| ಸಾ|| ಮರುಳಸಿದ್ಧಪ್ಪಶೆಟ್ಟರು ರುದ್ರಪ್ಪಶೆಟ್ಟರು ತಮ್ಮ ಸ್ವಂತಖರ್ಚಿನಿಂದ ಮೇಲ್ಕಂಡ ಸ್ವಾಗತ ಸಂಘದ ಮೆಂಬರುಗಳ ಸಹಾಯದಿಂದಲೂ ಸ್ತುತ್ಯವಾದ ಏರ್ಪಾಟು ಮಾಡಿಸಿದ್ದರು. ಆ ದಿನವೇ ಇವರ ಮಹಡಿಯಮೇಲೆ 3 ಘಂಟೆಗೆ ಸಭೆಯು ಸೇರಿತು. ಸಭಾಪತಿಯಾಗಿ ಅರಸೀಕೆರೆ ಸ್ಯಾ|| ಇನ್ಸ್‌ಪೆಕ್ಟರಾದ ಮ|| ರಾ|| ಶಂಕರಪ್ಪನವರು ಬೀರೂರು ಸಾ|| ಪ|| ತ್ಯಾ|| ಕೆ. ಚನ್ನವೀರಪ್ಪಯ್ಯನವರನ್ನು ಅಧ್ಯಕ್ಷರಾಗಲು ಪ್ರಾರ್ಥಿಸಿಕೊಂಡದ್ದಕ್ಕೆ ಸದರಿಯವರು ಸಂತೋಷಪೂರ್ವಕ ಒಪ್ಪಿ ಅಧ್ಯಕ್ಷಸ್ಥಾನಕ್ಕೆ ದಯಮಾಡಿಸಿ ಹೇಳಿದ್ದೇನಂದರೆ— ನಾನು ಯಾವಾಗೂ ಇಂಥಾ ಸಭೆಗಳಲ್ಲಿ ಅಧ್ಯಕ್ಷತೆಯನ್ನು ವಹಿಸಿದವನಲ್ಲ. ನನಗೆ ಅನುಭವವೂ ಸಾಲದು. ಇದಲ್ಲದೆ ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಕರ್ತವ್ಯತ್ವಕಾರ್ಯವನ್ನು ಹಿಂದೆ ಇದೇ ಯ|| ಶಾಂತಪ್ಪಶೆಟ್ಟರೊಂದಿಗೆ ನಮ್ಮ ಯಜಮಾನರಾದ ಕೈ|| ತೀರ್ಥರೂಪ ರುದ್ರಪ್ಪಯ್ಯನವರು ನೆರವೇರಿಸಿದ್ದರೆಂದು ಕೇಳಿದ್ದೆನು. ಈಗಲಾದರೂ ಈ ಮಹಾಕಾರ್ಯವನ್ನು ನಮ್ಮ ತೀರ್ಥರೂಪ ವೀರಪ್ಪಯ್ಯನವರು ನೆರವೇರಿಸಬೇಕಾಗಿದ್ದರು. ಅವರು ತಮ್ಮ ದೇಹಾಲಸ್ಯದಿಂದ ಸದ್ಯ ಬೆಂಗಳೂರಲ್ಲಿ ಔಷಧೋಪಚಾರ ಹೊಂದುತ್ತಿರುವನು ತಮ್ಮೆಲ್ಲರಿಗೂ ವೇದ್ಯವಾಗಿದೆ. ಆದಾಗ್ಯೂ, ತಾವೆಲ್ಲರೂ ನಮ್ಮ ತೀರ್ಥರೂಪರವರ ಪ್ರತಿನಿಧಿಯಾಗಿ ನನ್ನನ್ನು ಗೌರವದೊಡನೆ ಕರತಂದು ನನಗೆ ಅಧ್ಯಕ್ಷಸ್ಥಾನವನ್ನು ವಹಿಸಿದ್ದಕ್ಕೆ ತಮ್ಮೆಲ್ಲರ ಆಭಾರವನ್ನು ವಂದನಾಪೂರ್ವಕವಾಗಿ ಅಂಗೀಕರಿಸುತ್ತೇನೆಂದು ಹೇಳಿ ಶ್ರೀ ಜಗದ್ಗುರುಗಳವರನ್ನು ಸ್ಮರಿಸಿ ತಮ್ಮ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಕೂಡಲೇ ಸರ್ವರೂ ಕರತಾಡನ ಮಾಡಿದರು. ಬಳಿಕ ಅಧ್ಯಕ್ಷರ ಪರವಾದ ಭಾಷಣವನ್ನು ಬೀರೂರು ಎಂ. ವಿ. ಮರುಳಸಿದ್ದಯ್ಯನವರು ಓದಿ ಹೇಳಿದರು. ನಂತರ ಮಳಲೀಮಠದ ಶ್ರೀಗಳವರು ಮುಕ್ತರಾದ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ವಿಚಾರವಾಗಿಯೂ, ಮುಂದೆ ಈ ಪೀಠದ ಕರ್ತೃತ್ವವು ಹೇಗೆ ನಡೆಯಬೇಕೆಂಬಾಲೋಚನೆಯನ್ನು ಸಹ ಕುರಿತು ವಿಶದವಾಗಿ ಭಾಷಣಮಾಡಿದರು, ನಂತರ ಯ. ಶಾಂತಪ್ಪಶೆಟ್ಟರವರು ಮಹಾ ಸಂಸ್ಥಾನದ ಖರ್ಚುವೆಚ್ಚಗಳ ವಿಚಾರವಾಗಿಯೂ ಇದೇ ದುಂದುಭಿ ಸಂ|| ಮಾಘ ಶುದ್ಧದಲ್ಲಿ ಈ ಮಹತ್ಕಾರ್ಯವು ನಡೆಯಬೇಕಾಗಿರುವದರಿಂದಲೂ, ಈ ಕಾರ್ಯಕ್ಕೆ ಯಾವತ್ತು ವೀರಶೈವ ಮಹಾಜನಗಳ ಏಕಮತ್ಯವೂ, ಅಭಿಮಾನವೂ, ಮುಖ್ಯವಾದದ್ದೆಂತಲೂ, ಈ ಸಭೆಗೆ ದಯಮಾಡಿಸಿದ ತಾವೆಲ್ಲರೂ ಏಕಮನಸ್ಸಿನಿಂದ ಈ ಗುರುಕಾರ್ಯವನ್ನು ಧನಸಹಾಯದಿಂದಲೂ ಜನಸಹಾಯದಿಂದಲೂ ಜಾಗ್ರತೆಯಾಗಿ ನೆರವೇರಿಸಬೇಕಾಗಿ ತಮ್ಮೆಲ್ಲರನ್ನೂ ಕೋರುತ್ತೇನೆಂದು ಹೇಳಿ ಶ್ರೀ ಜಗದ್ಗುರು ಕಾಶಿ, ಹಿಮವತ್ಕೇದಾರ, ಉಜ್ಜಯಿನೀ, ಶ್ರೀಶೈಲ, ಮಹಾ ಸಂಸ್ಥಾನಗಳಿಂದ ಬಂದ ಆಶೀರ್ವಾದ ಪತ್ರಿಕೆಗಳನ್ನೂ ದೇವೀ ಹೊಸೂರ ಮ|| ರಾ|| ರಾವಬಹಾದ್ದೂರ ಚನ್ನಬಸಪ್ಪಶೆಟ್ಟರಿಂದಲೂ, ಧಾರವಾಡದ ಮ|| ರಾ|| ಮೂಗಪ್ಪನವರಿಂದಲೂ, ಮುನ್‌ಸೀಫ್ ಮ|| ಸುಬ್ಬಣ್ಣನವರು ಚಿಕ್ಕಮಗಳೂರು, ಶೆಟ್ಟರ ಗಂಗಣ್ಣನವರೇ ಮೊದಲಾದ ದೊಡ್ಡಮನುಷ್ಯರುಗಳಿಂದ ಬಂದಿದ್ದ ಪತ್ರಗಳನ್ನು ಓದಿಹೇಳಿದರು. ಮತ್ತು ಬೆಂಗಳೂರಿಂದ ಅಡ್ವೋಕೇಟ್ ಮ|| ಜಿ. ಪರಮಶಿವಯ್ಯ ಬಿ. ಎ., ಎಲ್‌ಎಲ್. ಬಿ., ಯವರಿಂದಲೂ ಡಿ|| ನಿರ್ವಾಣಸ್ವಾಮಿಮಠದ ಮರಿಸಿದ್ಧದೇವರಿಂದಲೂ ಧಾರವಾಡದ ಕಡೆಯಿಂದಲೂ ಬಂದ ತಂತಿಗಳನ್ನು ವೇ|| ಹೊಳಲಕೆರೆ ಚಿಕ್ಕಬಸಪ್ಪಯ್ಯನವರು ಓದಿ ಹೇಳಿದರು. ಚಿಕ್ಕಮಗಳೂರಿನ ಬಿ|| ಚನ್ನಬಸಪ್ಪಶೆಟ್ಟರವರು ಬರೆದು ಕಳಿಸಿದ ಪತ್ರವನ್ನು ಅವರಪತಿಯಿಂದ ಬಂದ ಕೋಟೆ ಮಹಂತಶೆಟ್ಟರು ಓದಿದರು. ಬಳಿಕ ವೇ|| ಶಿವಕಥಾಭೂಷಣ ಜಿ. ನಂಜುಂಡಾರಾಧ್ಯರು ಸತ್ಕಾರ ಸಂಘದ ಮೆಂಬರುಗಳು ಕೇವಲ ಅಭಿಮಾನದಿಂದ ಮಾಡಿದ ಏರ್ಪಾಟನ್ನು ಕುರಿತು ಅವರುಗಳನ್ನು ಶ್ಲಾಘಿಸಿ ಅಧ್ಯಕ್ಷರ ಮತ್ತು ಮ|| ರಾ|| ಮರುಳಸಿದ್ಧಪ್ಪಶೆಟ್ಟರ ಗುಣಕಥನವನ್ನು ಮಾಡಿ, ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಭಗವತ್ಪಾದರ ದಿವ್ಯ ಸನ್ನಿ

ಸ್ವದೇಶದ ವೃತ್ತಾಂತಗಳು.

ಬಹುಪ್ರಜಾ ಪ್ರಾರ್ಥನೆಗೆ ಕಿವಿಗೊಟ್ಟು ನಮ್ಮ ಸರ್ಕಾರದವರು ಶ್ರೀರಂಗಪಟ್ಟಣದ ಮುನ್‌ಸೀಫ್ ಕೋರ್ಟನ್ನು ಅಲ್ಲಿಂದ ತೆಗೆದುಹಾಕದಂತೆ ನಿರ್ಧಾರಮಾಡಿದರೆಂದು ಅರಿಯುತ್ತೇವೆ.

ಚಿತ್ರದುರ್ಗದ ಶ್ರೀ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ಬರುವ ತಾ|| 15ನೆ ಶುಕ್ರವಾರ ಬೆಳಗಿನ 8 ಗಂಟೆಗೆ ಶಿವಮೊಗ್ಗೆಗೆ ದಯಮಾಡಿಸುತ್ತದೆಂದು ಮಠದ ಏಜಂಟರು ತಿಳಿಯಿಸಿದ್ದಾರೆ.

ಮದರಾಸ್ ಗೌರ್ನರವರು ಪತ್ನೀಸಮೇತ ಬರುವ ತಾ|| 24 ರಲ್ಲಿ ರಾಜಧಾನಿಗೆ ದಯಮಾಡಿಸಿ, ಕ್ರಿಸ್ತಮಸ್ ರಜಾಕಾಲದಲ್ಲಿ ಕಾರಾಪುರದ ಕಾಡುಗಳಲ್ಲಿ ಬೇಟೆಮಾಡಿಕೊಂಡು ನಮ್ಮ ಪ್ರಭುತ್ವದವರ ಆತಿಥ್ಯದಿಂದ ಕಾಲಯಾಪನೆ ಮಾಡುವವರಾಗಿದ್ದಾರೆ.

ಬೆಂಗಳೂರು ಪಾಪಯ್ಯಶೆಟ್ಟಿ ಕಂಪೆನಿಯ ಲಕ್ಷ್ಮಣಸ್ವಾಮಿ ಶೆಟ್ಟಿ ಎಂಬುವವರ ಮೇಲೆ ಬಂದಿದ್ದ ಫೋರ್ಜರಿಕೇಸಿನಲ್ಲಿ ಸದರಿ ಫೋರ್ಜರಿಯು ತನ್ನಿಂದ ಮಾಡಲ್ಪಟ್ಟುದಲ್ಲವೆಂದು ಅಪರಾಧಿ ಪಕ್ಷದಿಂದ ಹೇಳಲ್ಪಟ್ಟಿತು. ಆರ್ಗ್ಯುಮೆಂಟೆಲ್ಲಾ ಮುಗಿದು ಅಪರಾಧಿಯು ತಪ್ಪಿತಸ್ತನೆಂದು ಅಸೆಸರುಗಳು ಹೇಳಿದುದರ ಮೇಲೆ 8½ ವರ್ಷ ಕಠಿಣಕಾರಾಗೃಹವಾಸದ ಶಿಕ್ಷೆಯು ವಿಧಿಸಲ್ಪಟ್ಟಿತು.

ಬೆಂಗಳೂರಿಗೆ ಬಂದಿರುವ ಗ್ರಾಂಡ್ ಲಯನ್ ಸರ್ಕಸ್ ಮ್ಯಾನೇಜರು, ತಮ್ಮಲ್ಲಿರುವ ಆನೆಯನ್ನು ಮೊಸೆಗಳುಳ್ಳ ಸರಪಳಿಗೆ ಕಟ್ಟಿ ಎಳೆಯಿಸಿ, ಮತ್ತು ಇತರ ವನ್ಯಮೃಗಗಳನ್ನು ಕಿರಿದಾದ ಬೋನುಗಳಲ್ಲಿ ಕೂಡಿ ಬಾಧೆಪಡಿಸಿದರೆಂಬ ತಪ್ಪಿತಕ್ಕಾಗಿ ಬೆಂಗಳೂರಿನ ಎಸ್. ಪಿ. ಸಿ. ಯವರು ಮ್ಯಾನೇಜರಮೇಲೆ ಕೇಸುಮಾಡಲಾಗಿ 100 ರೂ. ದಂಡವು ಮೇಜಸ್ಟ್ರೇಟರಿಂದ ವಿಧಿಸಲ್ಪಟ್ಟಿತು. ಇನ್ನು ಮುಂದೆ ಅಂಥ ಬಾಧೆಪಡಿಸುವುದಿಲ್ಲವೆಂಬುದಕ್ಕೆ ಮ್ಯಾನೇಜರು ಹೊಣೆಕೊಡಬೇಕೆಂದು ತೀರ್ಮಾನವು ಹೇಳಲ್ಪಟ್ಟಿರುವುದು.

ರಾಜಧಾನಿಯಲ್ಲಿ ಇದುವರೆಗೆ ಬ್ರಾಹ್ಮಣ ವಿಧವಾಲಯವಾಗಿದ್ದುದನ್ನು ಇನ್ನುಮೇಲೆ ಹೆಂಗುಸರ ಕೈಗಾರಿಕೆಯ ಶಾಲೆಯನ್ನಾಗಿ ಮಾಡಿ, ಎಲ್ಲಜಾತಿಯ ಹೆಂಗಸರುಗಳೂ ಅಲ್ಲಿ ಸೇರಬಹುದಾಗಿಯೂ, 30 ಮಂದಿಗಳು ಅಲ್ಲಿ ಭೋಜನವಾಸಗಳನ್ನು ಮಾಡಿಕೊಂಡಿರಬಹುದಾಗಿಯೂ, ಅದರ ಮೇಲಧಿಕಾರಕ್ಕೆ ಒಬ್ಬ ಸ್ತ್ರೀಯನ್ನು ನಿಯಮಿಸುವುದಾಗಿಯೂ, ವಿದ್ಯಾಶಾಖಾಧ್ಯಕ್ಷರ ಕೈಕೆಳಗೆ ನಿಯಮಿಸಲ್ಪಡುವ ಸ್ತ್ರೀಪುರುಷ ಸದಸ್ಯರುಳ್ಳ ಒಂದು ಸಂಘದ ಪರಿಪಾಲನೆಗೆ ಇದು ಒಳಪಟ್ಟಿರುವಂತೆಯೂ ನಮ್ಮ ಸರ್ಕಾರದವರು ಏರ್ಪಡಿಸುವವರಾಗಿದ್ದಾರೆ.

ಕಳೆದ ಬುಧವಾರ ನಂಜನಗೂಡಿನ ಬ್ರಾಹ್ಮಣರು ನದೀತೀರದ ಚಾಮುಂಡೇಶ್ವರೀ ದೇವಸ್ಥಾನದಲ್ಲಿ ಧಾತ್ರೀಹವನಕ್ಕೆ ಹೋಗಿದ್ದಾಗ್ಗೆ ಪೋಲೀಸ್ ಜಮಾದಾರರು ಹಕ್ಕಿಗಳನ್ನು ಹೊಡೆಯಲಿಕ್ಕೆ ತುಪಾಕಿಯನ್ನು ಹಾರಿಸುತ್ತಿದ್ದಾಗ ಒಂದು ಕೇಪು ಹಾರದೆಹೋಗಲು, ಅದನ್ನು ಹೊರಕ್ಕೆ ತೆಗೆದು ಕೆದಕುತ್ತಿರುವಾಗ್ಗೆ ಅದು ತಮ್ಮನೆ ಹಾರಿ ಸುತ್ತಲೂ ನಿಂತಿದ್ದ ಹುಡುಗರೊಳಗೆ ಒಬ್ಬ ಶಿವಭಕ್ತ ಬಾಲಕನ ಕುತ್ತಿಗೆಗೆ ಮದ್ದು ಬಡಿದು ಅರ್ಧ ಅಂಗುಲದಷ್ಟು ತೂತುಬಿದ್ದು ನಂಜನಗೂಡು ವೈದ್ಯಾಲಯದಲ್ಲಿ ಚಿಕಿತ್ಸೆಗೆ ಸಾಧ್ಯವಾಗದಿದ್ದುದರಿಂದ ರಾಜಧಾನಿಯ ಕೃಷ್ಣರಾಜೇಂದ್ರ ವೈದ್ಯಾಲಯಕ್ಕೆ ಸೇರಿಸಲು ಪೋಲೀಸ್ ಸೂಪರಿಂಟೆಂಡೆಂಟರು ಮಾಡಿದ ಏರ್ಪಾಟಿನ ಮೇರೆ ಈಗ ಆ ಬಾಲಕನು ಇಲ್ಲಿ ಚಿಕಿತ್ಸೆಗೊಳ್ಳುತ್ತಿರುವನೆಂದು ಒಬ್ಬ ಬಾತ್ಮಿದಾರರು ತಿಳಿಸಿರುತ್ತಾರೆ.

ಕಳೆದ ತಾ|| 2ರಲ್ಲಿ ನಡೆದ ರಾಜಧಾನಿಯ ಮ್ಯುನ್ಸಿಪಲ್ ಪ್ರತ್ಯೇಕ ಸಮಾವೇಶದಲ್ಲಿ 6 ಲಕ್ಷ ರೂ.ಗಳನ್ನು ಸಾಲಮಾಡಿ ಹೊಸ ಅಂಗಡಿ ಸಾಲನ್ನು ಕಟ್ಟಬೇಕೆಂಬ ವಿಷಯದ ಚರ್ಚೆಯು ಬಂದು ಸಾಲಮಾಡಲಿಕ್ಕೆ ಬಹುಜನ ಸಭಿಕರು ಒಪ್ಪದೆಹೋದುದರಿಂದ ಅದನ್ನು ಬಿಟ್ಟು, ದೇವರಾಜಮೊಹಲ್ಲಾ ಮಾರಕಟ್ಟಿನ ಪಶ್ಚಿಮಭಾಗದ ಹೊಲಸು ಮನೆಗಳನ್ನು ಟ್ರಸ್ಟ್‌ಬೋರ್ಡಿನವರು ವಶಪಡಿಸಿಕೊಂಡು ಚೊಕ್ಕಟಮಾಡಿದರೆ ಅಲ್ಲಿ ಹೊಸ ಭಾಗವನ್ನು ಮಾರಕಟ್ಟಿಗೆ ಸೇರಿದಂತೆ ಕಟ್ಟಿಸಲು 1¼ ಲಕ್ಷ ರೂ.ಗಳನ್ನು ಸಾಲಮಾಡಬಹುದೆಂಬ ವಿಷಯಕ್ಕೆ 11 ಮಂದಿ ಒಪ್ಪಿಯೂ, 7 ಮಂದಿ ಒಪ್ಪದೆಯೂ ಹೋದುದರಿಂದ ಹೆಚ್ಚು ಜನರ ಅಭಿಪ್ರಾಯವು ಗೆದ್ದಿತು. ಈಗಣ ಸ್ಥಿತಿಯಲ್ಲಿ ಯತ್ಕಿಂಚಿತು ಸಾಲಕ್ಕೂ ನಮ್ಮ ಮ್ಯುನ್ಸಿಪಾಲಿಟಿಯು ಕೈಹಾಕುವುದು ಯುಕ್ತವಾಗಿ ತೋರುವುದಿಲ್ಲ.

ಮೈಸೂರುದೇಶದ ಕಾಂಗ್ರೆಸ್ ಸಂಘಕ್ಕೆ ಮ|| ಸೆಟ್ಲೂರು ಶ್ರೀನಿವಾಸಯ್ಯಂಗಾರರು ಅಧ್ಯಕ್ಷರಾಗಿದ್ದರು. ಈಗ ಅವರು ಸ್ವದೇಶ ಸಂಸ್ಥಾನಗಳಲ್ಲಿ ಕಾಂಗ್ರೆಸ್ ಉದ್ದೇಶಪ್ರಚಾರವನ್ನು ನಿಲ್ಲಿಸಿಬಿಡುವುದುತ್ತಮವೆಂದು ಕಾಂಗ್ರೆಸ್ ಕಾರ್ಯಕಾರಿಸಂಘಕ್ಕೆ ತಮ್ಮ ಅಭಿಪ್ರಾಯವನ್ನು ಬರೆದುಕಳುಹಿಸಿ, ತಮ್ಮ ಅಧ್ಯಕ್ಷತೆಗೆ ರಾಜೀನಾಮೆ ಕೊಟ್ಟರೆಂದೂ, ಅದರಮೇಲೆ ಮೈಸೂರು ಕಾಂಗ್ರೆಸ್ ಸಂಘದವರು ತಾ|| 3ರಲ್ಲಿ ಸಭೆಗೂಡಿ, ಸಂಸ್ಥಾನದಲ್ಲಿ ಕಾಂಗ್ರೆಸ್ ಪ್ರಚಾರವನ್ನು ನಿಲ್ಲಿಸಕೂಡದೆಂದೂ, ಸೆಟ್ಲೂರ್‌ರವರ ಅಭಿಪ್ರಾಯಕ್ಕೆ ತಾವು ಅನುಮೋದಿಸುವುದಿಲ್ಲವೆಂದೂ ತೀರ್ಮಾನಿಸಿದರೆಂದು ಮದ್ರಾಸು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಮ|| ಸೆಟ್ಲೂರ್‌ರವರು ತುಮಕೂರು ಕ್ಲಾಸಿಕಲ್‌ಪತ್ರಿಕಾ ಸಂಪಾದಕರಾದ ಮ|| ರಂಗಯ್ಯಂಗಾರರೊಡನೆಯೂ ಕೊಪ್ಪಳದ ಜಯರಾಮಾಚಾರ್ಯರೊಡನೆಯೂ ಕೂಡಿ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕಾಂಗ್ರೆಸ್ ಪ್ರಚಾರಕ್ಕಾಗಿ ಮೊನ್ನೆವಾರ ಸಂಚರಿಸಿಕೊಂಡುಬಂದರು. ಈಗಾಗಲೇ ವೈರಾಗ್ಯಗೊಂಡುದಕ್ಕೆ ಕಾರಣವೇನೋ ತಿಳಿಯಲಿಲ್ಲ.

ಭರತಖಂಡದ ವೃತ್ತಾಂತಗಳು.

ಮದ್ರಾಸ್ ಮ್ಯುನ್ಸಿಪಲ್ ಸಂಘಕ್ಕೆ 3 ಮಂದಿ ನಾರೀಮಣಿಯರನ್ನು ಕೌನ್ಸಿಲರನ್ನಾಗಿ ಸರ್ಕಾರದವರು ನಾಮಿನೇಟ್ ಮಾಡಿದ್ದಾರೆ.

ಮದ್ರಾಸಿನಲ್ಲಿ ಈ ವರ್ಷ ಬಿದ್ದಿರುವ ಮಳೆಯು ವಿಶೇಷವಾಗಿರುವುದು. ಕಳೆದ ಅಕ್ಟೋಬರ್ ತಾ|| 1ರಿಂದ ಇಲ್ಲಿಯವರೆಗೆ ಅಲ್ಲಿ 51 ಇಂಚು ಮಳೆಯಾಗಿದೆ.

ಬೊಂಬಾಯಿಯ ಓರಿಯಂಟಲ್ ಗೌರ್ನಮೆಂಟ್ ಸೆಕ್ಯುರಿಟಿ ಲೈಫ್ ಇನ್ಷೂರೆನ್ಸ್ ಕಂಪೆನಿಯವರಿಗೆ ಕಳೆದ 21 ನೆ ಇಸವಿಯಲ್ಲಿ 98 ಲಕ್ಷ ರೂ. ಗಳ ವರಮಾನವಾಗಿದೆ.

ಬೊಂಬಾಯಿ ಕಾರ್ಪೊರೇಷನ್ನಿನವರು ಒಂದೊಂದು ಚಿಕ್ಕ ಕುಟುಂಬವು ವಾಸಮಾಡುವುದಕ್ಕೆ ಅರ್ಹವಾದ 5 ಸಾವಿರ ಕಟ್ಟಡಗಳನ್ನು ಕಟ್ಟಿಸಿ ಬಡಬಗ್ಗರಿಗೆ ಸುಲಭವಾದ ಬಾಡಿಗೆಗೆ ಕೊಡಲು ಏರ್ಪಡಿಸಿದ್ದಾರೆ.

ಕಳೆದ ವರ್ಷದಲ್ಲಿ ಮದ್ರಾಸು ಆಧಿಪತ್ಯದಲ್ಲಿ ಮದದ್ರವ್ಯ ಶಾಖೆಯ ವರಮಾನವು 20 ಲಕ್ಷದಷ್ಟು ಕಡಿಮೆಯಾಯಿತು. ಇದಕ್ಕೆ ಆ ವರ್ಷದಲ್ಲಿ ಪ್ರಬಲವಾಗಿ ನಡೆದ ಪಿಕೆಟಿಂಗೇ ಕಾರಣವು. ಈ ವರ್ಷದಲ್ಲಿ ಅದರ ಪ್ರಾಬಲ್ಯವು ಕಡಿಮೆಯಾಗಿರುವುದರಿಂದ ಉತ್ಪತ್ತಿಯು ಹೆಚ್ಚಿರುತ್ತದೆ.

ಈ ಮಧ್ಯೆ ಭರತಖಂಡದ ಪಶ್ಚಿಮ ಭಾಗದಲ್ಲಿ ಮಳೆಗಳು ಚೆನ್ನಾಗಿ ಆದುದರಿಂದ ಬೊಂಬಾಯಿ ಪ್ರಾಂತದಲ್ಲೂ, ಸಿಂಧು ಪ್ರಾಂತದಲ್ಲೂ, ಗೋದುಮೆಯ ಬೆಳಸು ಬಹಳ ಚೆನ್ನಾಗಿದೆ. ಖಾಂಡೇಶ್ ಪ್ರಾಂತದಲ್ಲಿ ಮಾತ್ರ ಹತ್ತಿ ಬೆಳಸು ಕೆಟ್ಟಿತು. ಸಿಂಧು ದೇಶದಲ್ಲಿ ಹತ್ತಿಯ ಬೆಳಸು ತೃಪ್ತಿಕರವಾಗಿದೆ.

ಬೊಂಬಾಯಿಯ ಮ್ಯುನ್ಸಿಪಲ್ ಸಂಘಕ್ಕೆ ಸಭಿಕರಾಗಿ ಸೇರಲು 3 ಮಂದಿ ನಾರೀಮಣಿಯರು ಉಮೇದುವಾರರಾಗಿ ನಿಂತುಕೊಂಡು, ತಾವು ಮ್ಯುನ್ಸಿಪಾಲಿಟಿಯಲ್ಲಿ ಮುಂದೆ ಇಂಥಿಂಥ ಪ್ರಜಾಹಿತ ಕಾರ್ಯಗಳನ್ನು ಮಾಡುತ್ತೇವೆಂದೂ ತಮಗೆ ಓಟುಗಳನ್ನು ಕೊಡಬೇಕೆಂದೂ ಪ್ರಜೆಗಳಿಗೆ ಪ್ರಾರ್ಥನ ಪತ್ರಿಕೆಗಳನ್ನು ಹಂಚಿಕೊಂಡಿರುತ್ತಾರೆ.

ಮುಂಬೈ ದಕ್ಷಿಣಪ್ರಾಂತದ ಬ್ರಾಹ್ಮಣೇತರ ತೃತೀಯ ಪರಿಷತ್ತು ಸತಾರಾಪಟ್ಟಣದಲ್ಲಿ ಇದೇ ಡಿಶಂಬರ್ ತಾ|| 16-17 ರಲ್ಲಿ ಮದ್ರಾಸಿನ ಮ|| ತನಿಕಾಚಲಂಶೆಟ್ಟಿ ಎಂ.ಎಲ್.ಸಿ. ಯವರ ಅಧ್ಯಕ್ಷತೆಯಲ್ಲಿ ನೆರವೇರುತ್ತದೆ. ಅದೇ ಕಾಲದಲ್ಲಿ ಕೂಡುವ ಸಾಮಾಜಿಕ ಪರಿಷತ್ತಿಗೆ ಕೊಲ್ಲಾಪುರದ ಛತ್ರಪತಿ ರಾಜಾರಾಮ ಮಹಾರಾಜರು ಅಧ್ಯಕ್ಷರಾಗುತ್ತಾರೆ.

ಲಾಲಾಲಜಪತಿರಾಯರ ಮಗಳು ಶ್ರೀಮತಿ ಪಾರ್ವತೀಬಾಯಿಯವರನ್ನು ನಾಗಪೂರಿನಲ್ಲೂ ಮೀರಟ್ಟಿನಲ್ಲೂ ಅವರು ಮಾಡಿದ ಉಪನ್ಯಾಸಗಳು ರಾಜದ್ರೋಹೋದ್ಬೋಧಕವಾಗಿದ್ದುವೆಂಬ ಕಾರಣದಿಂದ ಮೀರಟ್ಟಿಗೆ ಸೆರೆಹಿಡಿದುಕೊಂಡು ಹೋಗಿ ಅಲ್ಲಿಯ ಕಾರಾಗೃಹದಲ್ಲಿಟ್ಟು ವಿಚಾರಣೆಯನ್ನು ನಡೆಯಿಸಿ 2 ವರ್ಷ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ಪಂಡಿತ ಮೋತೀಲಾಲ್ ನೆಹ್ರೂರವರೂ ಅವರ ಕುಟುಂಬದವರನೇಕರೂ ಕಾಂಗ್ರೆಸ್ ಸಭಿಕತ್ವವನ್ನು ಬಿಟ್ಟರು. ಮೋತೀಲಾಲ್ ನೆಹ್ರೂರವರು ಸಂಯುಕ್ತರಾಷ್ಟ್ರದ ಕಾಂಗ್ರೆಸ್ ಸಭಾಧ್ಯಕ್ಷರೂ ಆಗಿದ್ದರು. ಅದರ ಕಾರ್ಯನಿರ್ವಾಹಕ ಸಂಘಕ್ಕೆ ಹೊಸದಾಗಿ ಆರಿಸಲ್ಪಟ್ಟ ಮೆಂಬರುಗಳ ಸಾಹಚರ್ಯವು ತನಗೆ ಸರಿಬೀಳದೆ ಹೋದುದರಿಂದ ಈ ಅಧ್ಯಕ್ಷಪದವಿಯನ್ನು ಬಿಟ್ಟೆನೆಂದು ಪ್ರಕಟಿಸಿದ್ದಾರೆ.

ಬಾಗಲಕೋಟೆಯಲ್ಲಿ ಈಗ್ಗೆ 1 ವರ್ಷದಲ್ಲಿ ಅವತರಿಸಿದ ನವಜೀವನವೆಂಬ ದೇಶಭಾಷಾ ವಾರಪತ್ರಿಕೆಯು ಈಗಾಗಲೇ ವಿಗತಜೀವನವಾಯಿತೆಂದು ಕೇಳಿ ವಿಷಾದಿಸುತ್ತೇವೆ. ಎಷ್ಟೋ ಶ್ರದ್ಧೆಯಿಂದಲೂ ಮಿತವ್ಯಯದಿಂದಲೂ ಕಾರ್ಯನಿರ್ವಾಹ ಮಾಡುತ್ತಾ ಬಂದರೂ ಒಂದು ವರ್ಷಕಾಲದೊಳಗಾಗಿ 350 ರೂ.ಗಳ ನಷ್ಟವನ್ನು ಪತ್ರಚಾಲಕರು ವಹಿಸಬೇಕಾಯಿತು. ವರ್ಗಣೆದಾರರ ಪ್ರೋತ್ಸಾಹಾಭಾವವೇ ಈ ಪರ್ಯವಸಾನಕ್ಕೆ ಹೇತುವು.

ಶಾಸನೋಲ್ಲಂಘನ ಸಂಘದವರ ವರದಿಯನ್ನು ಪರ್ಯಾಲೋಚಿಸುವುದಕ್ಕಾಗಿ ಕಾಂಗ್ರೆಸ್ ಕಾರ್ಯಕಾರಿ ಸಂಘವು ಕಳೆದ ತಿಂಗಳು ತಾ|| 20 ರಿಂದ 3 ದಿನಗಳವರೆಗೆ ಕಲ್ಕತ್ತಾದಲ್ಲಿ ನೆರೆದಿದ್ದಿತು. ಸಾರ್ವತ್ರಿಕ ಶಾಸನೋಲ್ಲಂಘನ ವಿಷಯದಲ್ಲಿ ಸಂಘದ ವರದಿಯಲ್ಲಿ ಕಂಡ ಅಭಿಪ್ರಾಯವೇ ಅಂಗೀಕೃತವಾಯಿತು. ಶಾಸನಸಭೆಗಳಿಗೆ ಸಹಾಯನಿರಾಕರಣ ವಾದಿಗಳು ಸೇರಬೇಕೇ ಬೇಡವೇ ಎಂಬ ವಿಷಯದಲ್ಲಿ ಸಭಿಕರಲ್ಲಿ ಭಿನ್ನಾಭಿಪ್ರಾಯವು ಬಲವಾದುದರಿಂದ ಗಯೆಯಲ್ಲಿ ಕೂಡುವ ಕಾಂಗ್ರೆಸ್ಸಿನಲ್ಲೇ ಇದು ನಿರ್ಧರವಾಗಬೇಕೆಂದು ಗೊತ್ತಾಯಿತು.

ತಿರುಚನಾಪಳ್ಳಿಯಲ್ಲಿ ಮ್ಯುನ್ಸಿಪಲ್ ಚೇರ್ಮನ್ನರಾಗಿರುವ ಎಫ್. ಜಿ. ನಟೇಶನ್‌ರವರೂ ಅವರ ಕುಟುಂಬದವರೂ ಕ್ರೈಸ್ತರಾಗಿದ್ದರು. ಈಗ ಅವರುಗಳೂ ಮತ್ತು ಇನ್ನಿಬ್ಬರು ದೊಡ್ಡಮನುಷ್ಯರೂ ಸಹ ಶ್ರೀರಂಗಂ ರೋಡು ಸ್ಟೇಷನ್ನಿನ ಬಳಿಯಣ ಒಂದುಸ್ಥಳಕ್ಕೆ ಹೋಗಿ ವೈದಿಕಯುಕ್ತವಾಗಿ ಪ್ರಾಯಶ್ಚಿತ್ತ ಮಾಡಿಸಿಕೊಂಡು ಬ್ರಹ್ಮೋಪದೇಶಪೂರ್ವಕ ಉಪನಯನವನ್ನು ಹೊಂದಿ ಬ್ರಾಹ್ಮಣ್ಯಕ್ಕೆ ಸೇರಿದರಂತೆ. ಬಹುಮಂದಿ ವೈದಿಕರೂ ಕೂಡ ಬಂದಿದ್ದು ನಟೇಶಯ್ಯರ್‌ರವರ ಮನೆಯಲ್ಲಿ ಅವರೆಲ್ಲಾ ಸಹಪಜ್ತಿಭೋಜನವನ್ನು ಮಾಡಿದರಂತೆ.

ಸೇಲಮ್ಮಿನ ಡಾಕ್ಟರ್ ಪಿ. ವರದರಾಜುಲುನಾಯಿಡುಯವರು ವರಮಾನದ ತೆರಿಗೆಯನ್ನು ಈ ಸರ್ಕಾರಕ್ಕೆ ತಾವು ಕೊಡುವುದಿಲ್ಲವೆಂದು ನಿರಾಕರಿಸಿದರು. ಅದರ ಮೇಲೆ ಜಿಲ್ಲಾ ಕಲೆಕ್ಟರು ಡಿಶಂಬರ್ ತಾ|| 12ರೊಳಗೆ ನೀವು ಕೊಡಬೇಕಾದ 2478-10-0ನ್ನು ಸಲ್ಲಿಸದೆ ಹೋದರೆ 245 ರೂ. ಪೆನಲ್ಟಿ ಹಾಕಲ್ಪಡುವುದೆಂದು ಇನ್‌ಕಂಟ್ಯಾಕ್ಸ್ ಆಫೀಸರ ಮೂಲಕ ನೋಟೀಸ್ ಕೊಡಿಸಿದರು. ಅದರಮೇಲೆ ನಾಯಿಡುಯವರು "ದೇವದೂತರಾಗಿರುವ ಮಹಾತ್ಮ ಗಾಂಧಿಯವರನ್ನು ಸೆರೆಯಲ್ಲಿಟ್ಟಿರುವವರೆಗೂ ನಿಮ್ಮ ಸರ್ಕಾರಕ್ಕೆ ನಾನು ಯಾವೊಂದು ಕಾಸು ಕಂದಾಯವನ್ನೂ ಕೊಟ್ಟು ಸಹಾಯಮಾಡುವುದಿಲ್ಲ. ನನಗೆ ಗೊಡ್ಡು ಬೆದರಿಕೆ ಹಾಕಬೇಡಿ, ನೀವು ಬೇಕಾದುದನ್ನು ಮಾಡಿಕೊಳ್ಳಬಹುದು" ಎಂದು ಕಲೆಕ್ಟರಿಗೆ ಉತ್ತರವನ್ನು ಬರೆದು ಕಳುಹಿಸಿದರು. ಈಗ ಸೊತ್ತುಜಪ್ತಿಗೆ ಅಪ್ಪಣೆಮಾಡಲ್ಪಟ್ಟಿದೆ.

ಮದ್ರಾಸಿನ ಆಗ್ನೇಯಭಾಗದಲ್ಲೂ ದಕ್ಷಿಣಭಾಗದಲ್ಲೂ ಕಳೆದವಾರ ಬೀಸಿದ ಬಿರುಗಾಳಿಯಿಂದಲೂ ಮಳೆಯಿಂದಲೂ ಮಧುರೆ ತಿರುವಾಂಕೂರು ಪ್ರಾಂತಗಳಲ್ಲಿ ವಿಶೇಷಾನರ್ಥವಾಗಿದೆ. ಮಹಾಪ್ರವಾಹ ಬಂದು ಮಧುರೆಯಲ್ಲಿ ಊರುಕೇರಿಗಳಲ್ಲಿ ಹಲವು ಮನೆಗಳನ್ನು ಹಾಳ್ಮಾಡಿತು. ಪ್ರವಾಹಭರದಿಂದ ಕೊಚ್ಚಿಬಂದ ಮರಗಳ ಬಡಿತದಿಂದ ಮೀನಾಕ್ಷೀ ದೇವಾಲಯದ ರಂಗಮಂಟಪವು ಕೊಚ್ಚಿಹೋಯಿತು. ಹಲವುಕಡೆ ಲೋಹಮಾರ್ಗವು ಕಿತ್ತುಹೋಗಿ ಪ್ರಯಾಣವು ಕಟ್ಟಾಯಿತು. ತಿರುವಾಂಕೂರಿನಲ್ಲೂ ನಾಗರಕೋಯಿಲ್ಲಿನ ಲೋಹಮಾರ್ಗವು ಹಾಳಾಯಿತು. ಹಲವುಕಡೆ ಮನೆಮಠಗಳನ್ನು ಕಳೆದುಕೊಂಡು ಪ್ರಜೆಗಳು ಪರಿತಪಿಸುತ್ತಿದ್ದಾರೆ. ಸಮುದ್ರತೀರದಲ್ಲಿದ್ದ ಎಷ್ಟೋ ದೋಣಿಗಳು ತಲೆಕೆಳಗಾಗಿ ಹೋದುವು. ಬಹು ಜನರು ಬಿದ್ದ ಮರಗಳ ಎಡೆಗೆ ಸಿಕ್ಕಿ ಗಾಯಗೊಂಡು ಚಿಕಿತ್ಸೆಗೊಳ್ಳುತ್ತಿದ್ದಾರೆ. ಪೈರುಗಳು ಹಾಳಾದುವು.

ಗುರುಕಾಬಾಗನ್ನು ಪ್ರವೇಶಿಸಿ ಸ್ವಾಧೀನಪಡಿಸಿಕೊಳ್ಳಲು ಸಿಕ್ ಜನರು ಪ್ರಯತ್ನಿಸಿ, 5½ ಸಹಸ್ರ ಜನರವರೆಗೆ ಬಂದಿಗಳಾಗಿ ಮಾಡಲ್ಪಟ್ಟರು. ಕಡೆಗೆ ಆ ತೋಟವನ್ನು ಮಹಾಂತ್ ಸುಂದರ ದಾಸರು ಸರ್ ಗಂಗಾರಾಮರವರಿಗೆ ೧ ಸಹಸ್ರ ರೂ.ಗಳಿಗೆ ಗುತ್ತಿಗೆಗೆ ಕೊಟ್ಟಂತೆಯೂ ಅದರ ಮೇಲೆ ಮಹಾಂತರ ಇಷ್ಟಪ್ರಕಾರ ಪೋಲೀಸರ ಕಾವಲು ತಪ್ಪಿಸಲ್ಪಡಲಾಗಿ ಅಕಾಲಿಗಳು ಗುರುಕಾಬಾಗನ್ನು ಪ್ರವೇಶಿಸಿ ಸ್ವಾಧೀನಪಡಿಸಿಕೊಂಡು ಜಯಶೀಲರಾದಂತೆಯೂ ಪ್ರಕಟವಾಗಿದೆ. ಆದರೆ ಮಹಾಂತರು ತಾವು ಅಂಥ ಗುತ್ತಿಗೆಯನ್ನು ಮನಃಪೂರ್ವಕವಾಗಿ ಬರೆದು ಕೊಟ್ಟಿಲ್ಲವೆಂತಲೂ, ತಹಸೀಲ್ದಾರರು ಬಂದು ಕೆಲವು ಕಾಗದಗಳ ಜತೆಗೆ ಸೇರಿಸಿ ಯಾವುದೋ ಒಂದು ಪತ್ರಕ್ಕೆ ರುಜುಮಾಡಿಸಿಕೊಂಡರೆಂತಲೂ ಈಚೆಗೆ ಹೇಳುತ್ತಿದ್ದಾರೆ. ನಿಜಸ್ಥಿತಿಯೇನೋ ಗೊತ್ತಾಗುವುದಿಲ್ಲ. ಆದರೆ ನೌರಂಗಾಬಾದು ಮೊದಲಾದ ಕಡೆಗಳಲ್ಲಿರುವ ಮಹಾಂತರುಗಳೂ ಕೂಡ ಗುರುದ್ವಾರಗಳನ್ನೂ ಅವುಗಳಿಗೆ ಸಂಬಂಧಿಸಿದ ಭೂಮಿಗಳನ್ನೂ ಶಿರೋಮಣಿ ಸಂಘದವರ ಆಧಿಪತ್ಯಕ್ಕೆ ಒಪ್ಪಿಸಿಬಿಡುತ್ತಿದ್ದಾರೆ. ಮತ್ತು ಶಿರೋಮಣಿ ಸಂಘದ ಅಧೀನದಲ್ಲಿರುವುದಕ್ಕೆ ಒಪ್ಪಿದ್ದಾರೆ.

ಪ್ರಸಿದ್ಧ ಪತ್ರಿಕೆ

ಹಾಸನಟೌನ್ ಮುಸಾಫರ್‌ಖಾನಾ ಹಿಂಭಾಗದ ಹೊಲಗಳು ಮತ್ತು ಸಂತೆಮಾಳದಲ್ಲಿ ಸಹಾ ಮಾಮೂಲ್‌ಮೇರೆ ಸನ್ 1923 ನೇ ಇಸವಿ ಜನವರಿ ಮಾಹೆ ತಾರೀಖು 3-4 ಮತ್ತು 5 ನೇ ಬುಧವಾರ, ಗುರುವಾರ ಮತ್ತು ಶುಕ್ರವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತೆಂಬ ಭಾಗ ಈಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ಬಾಕಿ ವಿಷಯಗಳಿಗೆ ತಪ್ಸೀಲಾಗಿ ಮೈಸೂರು ಗೆಜೆಟ್ 10-11-1922 ರ ಮರ್ನ೦ II A ಭಾಗದ 420-421 ನೇ ಪುಟಗಳಲ್ಲಿ ಛಾಯಿಸಾಗಿರುವ ನೋಟಿಫಿಕೇಷನ್ ನೋಡತಕ್ಕದ್ದು.

3

MAHAMUD RAZA
Vice-President,
Town Municipality.

ವೀರಶೈವ
ಶಿವಪೂಜಾವಿಧಿಃ

ಎಂಬ ಪುಸ್ತಕವು ವೈದಿಕಮಂತ್ರಪುರಸ್ಸರವಾದ ಸಕಲೋಪಚಾರಗಳಿಂದಲೂ ನಮಕ-ಚಮಕ-ಪುರುಷಸೂಕ್ತ-ಶಿವಸಹಸ್ರನಾಮ--ಗಣಸಹಸ್ರನಾಮ--ಬಸವಸಹಸ್ರನಾಮ-ಶಿವಕವಚ-ಮಾರ್ಕಂಡೇಯಸ್ತೋತ್ರ-ಲಿಂಗಾಷ್ಟಕ-ನಮಸ್ಕೃತಿಪ್ರಶಂಸಾ-ಶಿವಾಷ್ಟಕ-ಬಿಲ್ವಾಷ್ಟೋತ್ತರಗಳಿಂದ ಕೂಡಿ ವೀರಶೈವರುಗಳುಪಯುಕ್ತವಾಗಿ ಕ್ರೌನ್ ಅಷ್ಟಪತ್ರದಾಕೃತಿಯಲ್ಲಿ ಸ್ವಚ್ಛವಾದ ಕಾಗದದ ಮೇಲೆ ಸುಂದರವಾದ ಅಕ್ಷರಗಳಿಂದ ಅಂದವಾಗಿ ಮುದ್ರಣಮಾಡಲ್ಪಟ್ಟು ಕಿತ್ತಾನಾರು ಬೈಂಡಿನಿಂದ ಮಾರಾಟಕ್ಕೆ ಸಿದ್ಧವಾಗಿದೆ. ಇದರ ಬೆಲೆ ೧೨ ಆಣೆ. ವಿ.ಪಿ ಮೂಲಕ ಪೋಸ್ಟೇಜು ಸೇರಿ ೧ ರೂಪಾಯಿ ೨ ಆಣೆ.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ವಿದೇಶದ ವೃತ್ತಾಂತಗಳು

ಜರ್ಮನಿಯಿಂದ ತುರ್ಕಿಗೆ ಮದ್ದು ಗುಂಡು ಫಿರಂಗಿ ಮೊದಲಾದ ಯುದ್ಧಸಾಮಗ್ರಿಗಳು ವಿಪರೀತವಾಗಿ ಕಳ್ಳದಾರಿಯಿಂದ ಸಾಗಿಸಲ್ಪಡುತ್ತಿವೆಯೆಂದು ಲಂಡನ್ ಟೈಮ್ಸ್ ಪತ್ರಿಕೆಗೆ ಅದರ ಬಾತ್ಮೀದಾರನು ವರ್ತಮಾನ ಕಳುಹಿಸಿದ್ದಾನೆ.

ಐರ್ಲಂಡಿನ ಪ್ರಜಾಪ್ರಭುತ್ವ ಪ್ರತಿಷ್ಠಾಪನವು ಕಳೆದ ಮಂಗಳವಾರ ನಡೆದು, ಆ ದಿವಸ ನಮ್ಮ ಸಾರ್ವಭೌಮರು ಐರಿಷ್ ಬಿಲ್ಲನ್ನು ಅಂಗೀಕರಿಸಿದರು. ಐರ್ಲಂಡ್ ತಾತ್ಕಾಲಿಕ ಪ್ರಭುತ್ವವು ಈ ಐರಿಷ್ ಫ್ರೀಸ್ಟೇಟ್ ಪ್ರಭುತ್ವಕ್ಕೆ ಬಾಧ್ಯತೆಯನ್ನು ವಹಿಸುವುದು. ಐರ್ಲಂಡಿಗೆ ಪ್ರಜಾಪ್ರಭುತ್ವವುಂಟಾಗಬೇಕೆಂದು ಬಲವಾಗಿ ಹೋರಾಡುತ್ತಿದ್ದವರಲ್ಲಿ ಒಬ್ಬರಾದ ಮಿ|| ಹೇಲಿಯವರು ಗೌರ್ನರ್ ಜನರಲ್ಲಾಗಿ ಮಾಡಲ್ಪಡುವರೆಂದು ಸುದ್ದಿಯಿದೆ.

ಈ ಮಧ್ಯೆ ರಷ್ಯನರೂ ಜರ್ಮನರೂ ಸಂಧಿಮಾಡಿಕೊಂಡಿದ್ದಾರೆ. ಈಗ ರಷ್ಯನರು ತಮ್ಮ ಸೈನಿಕರಿಗೆ ಜರ್ಮನ್ ಸೇನಾಪತಿಗಳ ಮೂಲಕ ಶಿಕ್ಷಣವನ್ನು ಕೊಡಿಸುತ್ತಿದ್ದಾರಂತೆ ಅವರ ದೇಶದ ಮೂಲವಸ್ತುಗಳನ್ನು ಜರ್ಮನಿಗೆ ಯಥೇಚ್ಛವಾಗಿ ಕಳುಹಿಸಿಕೊಟ್ಟು ಭೋಗ್ಯವಸ್ತು ಮೊದಲಾದುವುಗಳನ್ನು ನಿರ್ಮಿಸಿ ಪ್ರಪಂಚದಲ್ಲೆಲ್ಲಾ ಅಗ್ಗವಾಗಿ ಮಾರಿ ತಮ್ಮ ದೇಶದ ವ್ಯಾಪಾರವನ್ನು ಬಲಪಡಿಸಬೇಕೆಂದು ಉದ್ಯುಕ್ತರಾಗಿದ್ದಾರೆ. ಜರ್ಮನಿಯಲ್ಲಿ ಯಥಾಪ್ರಕಾರ ಕ್ರುಪ್ ಯಂತ್ರಾಗಾರದಲ್ಲಿ ಆಯುಧ ನಿರ್ಮಾಣಕಾರ್ಯವು ಉಪಕ್ರಮವಾಗಿದೆಯೆಂದು ಸುದ್ದಿಹುಟ್ಟಿದೆ.

ಲಂಡನ್ನಿನಲ್ಲಿ 14 ಲಕ್ಷ ಜನ ಕೆಲಸಗಾರರು ಕೂಲಿಸಿಕ್ಕದೆ ಪರದಾಡುತ್ತಿದ್ದಾರೆ. ಇವರ ಮುಖಂಡರಿಗೆ ಮುಖ್ಯ ಮಂತ್ರಿ ಬೋನರ್‌ಲಾರವರು ದರ್ಶನಸಂಭಾಷಣಗಳಿಗೆ ಅವಕಾಶಕೊಡದೆ ಹೋದರು. ಅದರ ಮೇಲೆ ಅವರೆಲ್ಲಾ ರೇಗಿ ಹಾವಳಿಮಾಡುವುದಕ್ಕುಪಕ್ರಮಿಸಿದರು. ಪೋಲೀಸು ಸೈನ್ಯಗಳ ಕಾವಲನ್ನು ಪ್ರಭುತ್ವದವರು ಏರ್ಪಡಿಸಿದರು. ಈಚೆಗೆ ಮಂತ್ರಿಯವರು ರೈಲ್ವೆ ಕಂಪೆನಿಯವರೊಡನೆ ಮಾತನಾಡಿ ಕೂಲಿಕಾರರಿಗೆ ಕೆಲಸವನ್ನೊದಗಿಸಿಕೊಡುವುದಕ್ಕಾಗಿ ಹೊಸ ಮಾರ್ಗಗಳನ್ನು ಹಾಕಿಸಲು ಸೂಚಿಸಿದರು. ಅದಕ್ಕೆ ಅವರು ಒಪ್ಪಿಕೊಂಡರು. 50 ಅಥವಾ 60 ಲಕ್ಷ ಪೌನುಗಳ ಸಾಲವನ್ನು ಮಾಡಿ ಹೊಸಹೊಸದಾಗಿ ಹಲವು ಕೆಲಸಗಳಿಗೆ ಉಪಕ್ರಮಿಸಬೇಕೆಂದು ನಿಶ್ಚಯಿಸಿದ್ದಾರೆ.

ಈಜಿಪ್ಟಿನಲ್ಲಿ ಲೋಕಾದ್ಭುತಕರವಾದ ರಾಜರ ಸಮಾಧಿಗಳೂ ಭವನಗಳೂ ಅನೇಕವಾಗಿವೆ. ಅಲ್ಲಿಯ ನೈಲ್‌ನದಿಯ ಪಕ್ಕದಲ್ಲಿ ಪುರಾತನ ಕಾಲದ ಅಲ್ಲಿಯ ಪ್ರಭುಗಳ ಗೋರಿಗಳಿವೆ. ಆ ಸ್ಥಲದಲ್ಲಿ ಕಳೆದ 16 ವರ್ಷಗಳಿಂದಲೂ ಭೂಗರ್ಭವನ್ನು ಪರಿಶೋಧನೆ ಮಾಡುತ್ತ ಬಂದುದರಲ್ಲಿ ಈಗತಾನೇ ಲೋಕಾಶ್ಚರ್ಯಕರಗಳಾದ ಭವನವೂ ಅಮೌಲ್ಯವಸ್ತುಗಳೂ ಹೊರಬಿದ್ದಿರುತ್ತವೆ. ಇದು ಈಗ್ಗೆ 3 ಸಹಸ್ರ ವರ್ಷಗಳಲ್ಲಿ ರಾಜ್ಯಪರಿಪಾಲನೆ ಮಾಡುತ್ತಿದ್ದ ತುಟನ್‌ಖುಮನ್ ಎಂಬ ಪ್ರಭುವಿನ ಗೋರಿಯಂತೆ. ಅದು ಅಷ್ಟು ಪುರಾತನ ನಿರ್ಮಿತವಾಗಿದ್ದರೂ ಈಗ ತಾನೇ ನಿರ್ಮಿಸಿದಂತೆ ಅಚ್ಚಳಿಯದೆ ಇರುವುದಂತೆ. ಒಂದರ ಹಿಂದೊಂದರಂತೆ 3 ಹಜಾರುಗಳುಳ್ಳದಾಗಿ ಪ್ರತಿಯೊಂದರಲ್ಲೂ ಸುವರ್ಣ ರತ್ನಖಚಿತವಾದ ಆಸನಗಳೂ, ದಂತದ ಮಂಚಗಳೂ ಭಂಗಾರದ ಮಣಿಮಯ ಪೇಟಿಕೆಗಳೂ, ಸಿಂಹಾಸನಗಳೂ, ಆ ರಾಜನು ಉಪಯೋಗಿಸುತ್ತಿದ್ದ ವಸ್ತ್ರಾಭರಣಾದಿಗಳೂ ಪಾತ್ರೆಗಳಲ್ಲಿ ತುಂಬಿಟ್ಟಿರುವ ಆಹಾರ್ಯವಸ್ತುಗಳೂ, ಇದಿರುಬದಿರಿಗೆ ಸುವರ್ಣಪೀಠಗಳ ಮೇಲೆ ಕುಳ್ಳಿರಿಸಲ್ಪಟ್ಟಿರುವ ಭಂಗಾರದ ರಾಜವಿಗ್ರಹಗಳೂ, ಚಿನ್ನದ ಮುಲಾಮುಮಾಡಿದ ಗೋಡೆಗಳೂ ಒಂದಕ್ಕಿಂತ ಒಂದು ಮನೋಹರವಾಗಿ ಥಳಥಳಿಸುತ್ತಿವೆಯಂತೆ. ಇನ್ನೂ ಪರಿಶೋಧನವು ನಡೆಯುತ್ತಿದೆ. ಮುಂದೆ ಇನ್ನೆಂಥ ಅಮೌಲ್ಯವಸ್ತುಗಳು ಗೋಚರಿಸುವುವೋ ನೋಡಬೇಕು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಮೈಸೂರು ಸ್ಟಾರ್ ಪತ್ರಿಕಾ ಎಡಿಟರವರ ಸ|| ಕ್ಕೆ.

ಸ್ವಾಮಿ,

ತಮ್ಮ ತಾರೀಖು 26 ನೆಯ ಪತ್ರಿಕೆಯಲ್ಲಿ "ದಾವಣಗೆರೆ ಮುನಿಸಿಪಾಲಿಟಿ" ಎಂಬ ಹೆಡ್ಡಿಂಗಿನಿಂದ ಪ್ರಕಟವಾದ ಸಂಗತಿಯನ್ನು ಓದಿದೆನು. ಯಥಾರ್ಥವಾದಿ ಎಂಬ ಬಾತ್ಮಿದಾರರು ಮುನಿಸಿಪಾಲಿಟಿಯ ಆಂತಃಸ್ಥಿತಿಯನ್ನು ಅರಿಯದವರಾಗಿಯೂ ಮುನಿಸಿಪಾಲಿಟಿಯಲ್ಲಿ ಅನನುಭವಿಕರ ಮಾತು ಕೇಳಿ ಕೇವಲ ವ್ಯಕ್ತಿದ್ವೇಷದಿಂದ ಸುಳ್ಳುಸಂಗತಿಗಳನ್ನು ಬರೆದಿರುವುದರಿಂದ ದಾವಣಗೆರೆ ಹೊರಗಣ ಸ್ಟೇಟಿನಲ್ಲಿ ದಾವಣಗೆರೆ ಮುನಿಸಿಪಾಲಿಟಿ ಬಗ್ಗೆ ದುರಭಿಪ್ರಾಯ ಹುಟ್ಟಬಹುದಾದ್ದರಿಂದ ಈ ಕೆಳಗೆ ವಿವರಿಸಿರುವ ಮೇಲ್ಕಂಡ ಲೇಖನಕ್ಕೆ ಉತ್ತರವಾಗಿ ಇದನ್ನು ದಯವಿಟ್ಟು ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ.—

(1) ಬಾತ್ಮೀದಾರರು ಕೌನ್ಸಿಲರುಗಳ ಡ್ಯೂಟಿಬಗ್ಗೆ ಬರೆದಿರುತ್ತಾರೆ. ದಾವಣಗೆರೆ ಮುನಿಸಿಪಾಲಿಟಿಯಲ್ಲಿ 14 ಜನರು ನಾನ್ ಅಫಿಷಿಯಲ್ ಮೆಂಬರರು ಇರುತ್ತಾರೆ. ಇವರು ತುಂಬಾ ಗೌರವಸ್ಥರೂ ದೊಡ್ಡ ಮನೆತನದವರೂ ಭಾರಿಯಾಗಿ ವರ್ತಕತನ ಮಾಡುವವರೂ ಮತ್ತು ಮುನಿಸಿಪಾಲಿಟಿಗೆ ಭಾರಿಯಾಗಿ ಕಂದಾಯ ಕೊಡತಕ್ಕವರಾಗಿಯೂ ದಾವಣಗೆರೆ ಮುನಿಸಿಪಲ್ ಆಡಳಿತಕ್ಕಿಂತ ಜಾಸ್ತಿ ಆಡಳಿತವನ್ನು ಸ್ವಂತ ನಡೆಸತಕ್ಕವರಾಗಿಯೂ ಇದ್ದು ಮತ್ತು ಟವನ್ ನಿವಾಸಿಗಳ ಬಹುಸಮ್ಮತಿಯಿಂದ ಚುನಾಯಿಸಲ್ಪಟ್ಟವರಾಗಿರುತ್ತಾರೆ. ಇವರಲ್ಲಿ ಕೆಲವರು ಬೆಂಚ್‌ಕೋರ್ಟ್ ಮೇಜಿಸ್ಟ್ರೇಟರಾಗಿಯೂ, ಜಿಲ್ಲಾ ರೆಪ್ರಜೆಂಟೇಟಿವ್ ಅಸೆಂಬ್ಲಿ ಮೆಂಬರುಗಳಾಗಿಯೂ ಈ ಮುನಿಸಿಪಾಲಿಟಿಯಲ್ಲಿ 15-20 ವರ್ಷಗಳಿಂದ ಕೆಲಸಮಾಡುತ್ತಿರುವವರಾಗಿಯೂ, ನಿಸ್ಪೃಹರಾಗಿಯೂ, ಸ್ವಾರ್ಥತ್ಯಾಗಿಗಳಾಗಿಯೂ ತಮ್ಮ ಸ್ವಂತ ಭಾರಿಕೆಲಸಗಳಿದ್ದಾಗ್ಯೂ ಪ್ರಜಾಸೇವೆ ಮಾಡುವುದಕ್ಕೋಸ್ಕರ ತುಂಬಾ ಶ್ರಮಪಡುತ್ತಾ ಸುಮ್ಮನೆ ಮೀಟಿಂಗಿಗೆ ಮಾತ್ರ ಹೋಗದೆ ದಿನವಹಿ ಆಫೀಸಿನಲ್ಲಿಯೂ ಟವನ್ನಿನಲ್ಲಿಯೂ ಜನರ ಅಹವಾಲ್ ಕೇಳುತ್ತಲೂ ತೊಂದರೆಗಳನ್ನು ನಿವಾರಣೆ ಮಾಡುತ್ತಲೂ ಇರುತ್ತಾರೆ. ಇತ್ತೀಚೆಗೆ ಆನರರಿ ವೈಸ್‌ಪ್ರೆಸಿಡೆಂಟ್ ಕೆಲಸವನ್ನು ಮ|| ಟಿ. ಎಂ. ಓಂಕಾರಪ್ಪಯ್ಯನವರಿಗೆ ವಹಿಸಿದಮೇಲೆ ಇವರು ತಮ್ಮ ಡ್ಯೂಟಿಯು ಸರ್ವಜನ ಸಮ್ಮತವಾಗುವಂತೆ ತಪ್ಪದೆ ಆಫೀಸಿಗೆ ಹೋಗಿ ಕೆಲಸ ನೋಡಿಕೊಳ್ಳುತ್ತಿರುವರು. ಮ|| ದೊಗ್ಗಳ್ಳಿ ಬಸವಣ್ಣಪ್ಪನವರು ಮ|| ಸಲ್ಲಾಗಟ್ಟೆ ಗುರುಸಿದ್ದಪ್ಪನವರು ಯಜಮಾನ್ ಮೋತಿ ದೊಡ್ಡಪ್ಪನವರು ಮ|| ಮಾಗಾನಹಳ್ಳಿ ಚನ್ನಬಸಪ್ಪನವರು ಮ|| ಮುದೇಗೌಡರ ಮುರಿಗಪ್ಪನವರು ಮತ್ತು ಎಲ್ಲರಿಗೂ ಯಜಮಾನರಾದ ಮ|| ಟಿ.ಎಂ. ಷಡಕ್ಷರಪ್ಪಯ್ಯನವರು ಸಹ ತಾವು ತಾವು ನೇಮಿಸಿಕೊಂಡಿರುವ ಕೆಲಸಗಳನ್ನು ಶ್ರದ್ಧೆಯಿಂದ ದಿನವಹಿ ಮಾಡುತ್ತಾರೆ. ಮ|| ಪ್ರೆಸಿಡೆಂಟರು ಮುನಿಸಿಪಾಲಿಟಿಗೆ ಹೊಸಬರಾದ್ದರಿಂದ ಇವರ ವಿಶೇಷ ಸಹಾಯವಿಲ್ಲದೆ ಆನರರಿಯಾಗಿ ತಮ್ಮ ಸ್ವಂತ ಕೆಲಸಕ್ಕೆ ಲಕ್ಷ ಕೊಡದೆ ಕೆಲಸ ಜರಗಿಸುತ್ತಾರೆ. ಇವರುಗಳಿಗೆ ಅಫಿಷಿಯಲ್ ಪ್ರೆಸಿಡೆಂಟರನ್ನು ಬಿಟ್ಟು ನಾನ್ ಅಫಿಷಿಯಲ್ ಪ್ರೆಸಿಡೆಂಟ್ ಸಿಕ್ಕಿದ್ದರಿಂದಲೇ ಕಾರ ನಿರ್ವಹಿಸಲು ಸಮರ್ಥರಾಗಿರುವುದಾಗಿ ಟವನ್ ರೇಟ್‌ಪೇಯರ್‌ಗಳಿಗೂ ಟವನ್ ವಾಸಿಗಳಿಗೂ ನಂಬಿಗೆಯಾಗಿದೆ. ಮೈಸೂರು ಸೀಮೆಯ ಮುನಿಸಿಪಾಲಿಟಿಗಳಲ್ಲಿ ಇಷ್ಟು ಮುತುವರ್ಜಿಯಿಂದ ಕೆಲಸ ಮಾಡುವವರು ವಿರಳವೆಂದೇ ಇಂಥಾ ದೊಡ್ಡ ಮನುಷ್ಯರುಗಳಿಗೆ ಕರ್ತವ್ಯಜ್ಞಾನವನ್ನು ಯಥಾರ್ಥವಾಗಿಯೂ ಬೋಧಿಸುವಂತೆ ನಟಿಸುವುದು ವ್ಯರ್ಥಪ್ರಲಾಪ ಹೊರತು ಬೇರೆಯಲ್ಲ. (2) ಮುನಿಸಿಪಾಲಿಟಿ ಹಣ ದುರ್ವ್ಯಯವಾಗುತ್ತಿನ್ನುವುದು:-ವೈಸ್‌ಪ್ರೆಸಿಡೆಂಟರು ಕೌನ್ಸಿಲರುಗಳು ಭಾರಿಯಾಗಿ ಮುನಿಸಿಪಾಲಿಟಿಗೆ ಕಂದಾಯಕೊಡತಕ್ಕವರಾಗಿಯೂ ಇವರೇ ಹಣದ ಆಡಳಿತ ನಡೆಯಿಸತಕ್ಕವರಾಗಿಯೂ ಇರುವುದರಿಂದಲೂ ದೊಡ್ಡ ವ್ಯಾಪಾರಿಗಳೂ, ಶ್ರೀಮಂತರೂ ಇರುವುದರಿಂದ ಲಂಚ ರುಷುವತ್ತುಗಳಿಗೆ ಆಶೆ ಪಡಲಾರದವರೂ ಆಗಿರುವುದರಿಂದ ದುರ್ವ್ಯಯಕ್ಕೆ ಅವಕಾಶವಿರುತ್ತದೆನ್ನುವುದು ಮೂರ್ಖತನದ ಮಾತಲ್ಲವೇ? ಪಬ್ಲಿಕ್ ಕಾಮಗಾರಿಗಳ ಬಗ್ಗೆ--ವಾಟರ್ ಸಪ್ಲೈ ಬಗ್ಗೆ--ಅಂಟುಜಾಡ್ಯಗಳ ಬಗ್ಗೆ--ಆಸ್ಪತ್ರೆಯಬಗ್ಗೆ ಲೈಟಿಂಗ್ ಗೋಸ್ಕರವೂ ಕನ್ಸರ್‌ವೆನ್ಸಿ ಮೇಲ್‌ತನಿಖೆ ವಗೈರೆ ಪ್ರತಿಯೊಂದು ಬಾಬಿಗೂ ಒಂದೊಂದು ಕಮಿಟಿ ಏರ್ಪಾಟಾಗಿದೆ. ಈ ಕಮಿಟಿಯವರು ಆಯಾ ನಿಯಮಿತ ಕಾಲಗಳಲ್ಲಿ ಕ್ರಮತಪ್ಪದೆ ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ.

(a) ಝಾಡ್ಮಾಲಿ ಗುರಪ್ಪನು ನ್ಯಾಯವಾಗಿ ಕೆಲಸಮಾಡಿ ಆ ಬಗ್ಗೆ ಸಂಬಳ ಪಡೆದಿದ್ದಾನೆಂಬುವುದು ವೈಸ್ ಪ್ರೆಸಿಡೆಂಟ್‌ರವರು ಮಾಡಿರುವ ತನಿಖೆಯಲ್ಲಿ ವ್ಯಕ್ತಪಟ್ಟು ಈ ಉಪದ್ವ್ಯಾಪಕತನವು ಹೊಸದಾಗಿ ಬಂದು ಯುಕ್ತಾಯುಕ್ತ ವಿವೇಕವೂ ಜ್ಞಾನವೂ ಇಲ್ಲದೆ ಇರುವ ಸ್ಯಾ|| ಇ|| ಬಸವಾರಾಧ್ಯರದೆಂತ ವ್ಯಕ್ತಪಟ್ಟಿದೆ. (b) ಕಚರಾ ತುಂಬುವ ಗಾಡಿಗಳಿಗೆ ಕಂಟ್ರಾಕ್ಟದಾರರಿಂದ ಕರಾರು ಬರೆಯಿಸಿಕೊಂಡವರು ಯಥಾರ್ಥವಾದಿಗಳೋ ಮ್ಯುನಿಸಿಪಾಲಿಟಿ ಕೌನ್ಸಿಲರುಗಳೋ ವಾಚಕರೇ ಊಹಿಸಬೇಕು. ಗಾಡಿ ಕಂಟ್ರಾಕ್ಟದಾರನು ತನ್ನ ಪ್ರಾಣದಂತೆ ರಕ್ಷಣೆಮಾಡುವ ಎತ್ತುಗಳನ್ನು ಒಬ್ಬ ಬೇಜವಾಬ್‌ದಾರ್ ಝಾಡ್ಮಾಲಿ ಕಡೆಗೆ ವಹಿಸುವುದು ಎಷ್ಟರಮಟ್ಟಿಗೆ ನಿಜವಿರಬಹುದು. ಪ್ರೆಸಿಡೆಂಟರೂ ಗಾಡಿಯವನಿಗೆ ಕೇಳಿದ್ದೂ ಸುಳ್ಳು. ಗಾಡಿಗಳಿಗೆ ಸಂಬಂಧವಿಲ್ಲದ ಹೆಡ್‌ಕ್ಲಾರ್ಕ್ ಗಾಡಿಗಳ ವಿಚಾರವಾಗಿ ಹೇಳಿದ್ದೂ ಸುಳ್ಳು. ಇದೆಲ್ಲಾ ಆನರರಿ ವೈಸ್‌ಪ್ರೆಸಿಡೆಂಟರ ಆಡಳಿತೆಯಲ್ಲಿದೆ. (c) ವಾಟರ್‌ಮನ್ ಅವನೇ ಕಸಾಗುಡಿಸುವವನು ಅವನೇ ಅನ್ನುವ ಕಾರಣ ಹೊಸದಾಗಿ ಬಂದ ಸ್ಯಾನಿಟರಿ ಇನ್ಸ್‌ಪೆಕ್ಟರ್ ದೊಡ್ಡಸಿಬ್ಬಂದಿಯಲ್ಲಿ ಏಕ್‌ದಮ್ 70-80 ಜನ ಸಿಬ್ಬಂದಿಕಂಡು ಇವು ಯಾಕೆನ್ನುವುದು ತಿಳಿದು ಕೇಳಲು ಶಕ್ತಿಸಾಲದೆ ಘಾಬರಿಯಾಗಿ ಮೊಬ್ಬುಹಿಡಿದವರಾದ್ದರಿಂದ ಹೀಗೆ ಆಭಾಸವಾದದ್ದಾಗಿದೆ. ಇತ್ತೀಚೆಗೆ ಸ್ವಲ್ಪಮೊಬ್ಬು ಕಡಿಮೆಯಾಗಲು ಹತ್ತಿದಂತೆ ಕಾಣುತ್ತೆ. (d) ದೊಡ್ಡಿಯ ಲೆಕ್ಕ ತಪ್ಪಿತ್ತು ಎಂದು ಹೇಳುವುದಕ್ಕೆ ಬದಲಾಗಿ ತನಿಖೆಮಾಡಲಿಕ್ಕೆ ಹೋದ ನಮ್ಮ ಘನತೊಂದಿದ ಸ್ಯಾನಿಟರಿ ಇನ್ಸ್‌ಪೆಕ್ಟರ್‌ರವರಿಗೆ ಟೋಟಲ್ ಹಾಕಲಿಕ್ಕೆ ಬಾರದೆ ಏಳುಕಡೆ ಟೋಟಲ್ ಹಾಕಿ ಏಳುಕಡೆಯಲ್ಲಿ ತಪ್ಪು ಹಾಕಿರುತ್ತಾರೆ. ಇದು ಇವರ ಜ್ಞಾನಪ್ರಭಾವವೇ ಆಗಿರುತ್ತದೆ. (e) ಲೈಸೆನ್ಸ್ ದರಖಾಸ್ತುಗಳನ್ನು ಇತರ್ಥಮಾಡಲು 1914ನೇ ಸಾಲಿನ ಲಾಗಾಯ್ತು ಮ್ಯಾನೇಜಿಂಗ್ ಕಮಿಟಿ ಒಂದು ಏರ್ಪಾಡಾಗಿದೆ. ಈ ಕಮಿಟಿ 15 ದಿನಕ್ಕೊಂದಾವರ್ತಿ ಮೀಟಿಂಗ್ ನಡೆಯಿಸಿ ಪ್ರತಿ ದರಖಾಸ್ತನ್ನೂ ಆಯಾ ಜಾಗಾ ಅಜಮಾಯಿಷಿ ಮಾಡಿ ಫೈಸಲ್ಮಾಡುವ ರೂಢಿಯಿರುತ್ತೆ. ಹೊಸ ಪ್ರೆಸಿಡೆಂಟರು ಬಹುದಿವಸದ ರೂಢಿಯನ್ನು ಬದಲುಮಾಡಿದ್ದರಿಂದ ಲೈಸೆನ್ಸುಗಳಿಗೆ ಕಾಲವಿಳಂಬವಾಗಿರಬಹುದು. ದರಖಾಸ್ತುದಾರನು ರೆಗ್ಯುಲೇಷನ್ ಪ್ರಕಾರ ಒಂದು ತಿಂಗಳನಂತರ ಕಟ್ಟಿರಬಹುದು. ಇದಕ್ಕೆ ಮ್ಯಾನೇಜಿಂಗ್ ಕಮಿಟಿಯವರು ಜವಾಬ್ದಾರರಲ್ಲ. (f) ಟವನ್ನಿನಲ್ಲಿ ಹಿಂದಿನಕಾಲದಲ್ಲಿ ಎಕ್ಸ್‌ಟೆನ್‌ಷನ್ ರಸ್ತೆ ಸುಧಾರಣೆಮಾಡಿದಾಗ ಅನೇಕ ಜನರು ಮನೆಮಠಗಳನ್ನು ಕಳೆದುಕೊಂಡಿರುತ್ತಾರೆ. ಬಲವಂತರಿಗೆ ಪ್ರತಿಫಲ ದೊರೆತು ಸಾಧಾರಣಜನರು ಅಕಾಲದಿಂದಲೂ ಪ್ರಲಾಪಿಸುತ್ತಲೇ ಇರುತ್ತಾರೆ. ಅಕ್ಕಸಾಲೆ ಈಶ್ವರಪ್ಪನಿಗಾಗಲಿ ಇತರರಿಗಾಗಲಿ ಅವರಕ್ಷೇಮಿಗೆ ಅವರ ಹಕ್ಕುಳ್ಳ ಜಾಗಾ ಅವರಿಗೆ ದೊರೆತಿರಬಹುದು. ಕೌನ್ಸಿಲರಿಗೂ ಮ್ಯುನಿಸಿಪಾಲಿಟಿಗೂ ಅಕ್ಕಸಾಲೆ ಈಶ್ವರಪ್ಪನು ಮಗನಲ್ಲ. (3) ಸಾರಾಂಶ—ಮ್ಯುನಿಸಿಪಾಲಿಟಿಯು ಒಂದು ದೊಡ್ಡ ಕುಟುಂಬದಂತೆ ಇರುತ್ತದೆ. ಪ್ರೆಸಿಡೆಂಟರೂ ಕೌನ್ಸಿಲರುಗಳೂ ಐಕಮತ್ಯದಿಂದ ಕೆಲಸಗಳು ನಡೆಯಿಸಿದರೆ ಟವನ್ನಿಗೆ ಬಹಳ ಸುಖವಾಗಿರುತ್ತದೆ. ಈ ಮೊದಲು ಪ್ರೆಸಿಡೆಂಟರು ಬ್ರಾಹ್ಮಣರಾಗಿಯೂ ಕೌನ್ಸಿಲ್‌ಬಾಡಿ ನಾನ್‌ಬ್ರಾಹ್ಮಣರಾಗಿದ್ದರೂ ಅವರವರಲ್ಲಿ ಐಕಮತ್ಯದಿಂದ ಗಲಾಟೆಗೆ ಅವಕಾಶವಿಲ್ಲದಂತೆ ಇತ್ತು. ಹೊಸದಾಗಿ ಪ್ರೆಸಿಡೆಂಟರು ನಾನ್‌ಬ್ರಾಹ್ಮಣರು ಬರುವುದರಿಂದ ಇನ್ನೂ ಸೌಖ್ಯವಾಗುತ್ತದೆಂದು ಕೌನ್ಸಿಲರುಗಳು ಬಹು ಸಂತೋಷಪಟ್ಟಿದ್ದರು. ಈ ಪ್ರೆಸಿಡೆಂಟರು ಬಂದಕೂಡಲೆ ವಿವೇಕವಿಲ್ಲದ ಸ್ಯಾನಿಟರಿ ಇನ್ಸ್‌ಪೆಕ್ಟರೂ ಬೇರೆ ಇಬ್ಬರೂ ದೊಡ್ಡಮನುಷ್ಯರಂತೆ ಗೋಮುಖವ್ಯಾಘ್ರದಂತೆ ಇರುವವರು ಸಹಾ ಪ್ರೆಸಿಡೆಂಟರಿಗೆ ಕೌನ್ಸಿಲ್ ಬಗ್ಗೆ ದುರಭಿಪ್ರಾಯಹುಟ್ಟಿಸಿ ಮನಸ್ಸು ಪ್ರೆಜಿಡೀಸ್ ಮಾಡಿದ್ದರಿಂದ ಮೊದಲನೆ ಮುನಿಸಿಪಲ್ ಮೀಟಿಂಗಿನಲ್ಲಿಯೇ ಪ್ರೆಸಿಡೆಂಟರಿಂದ ಕೌನ್ಸಿಲ್ಲರಿಗೆ ಸ್ವಲ್ಪ ಅವಮಾನವಾದದ್ದು ಸಹಿಸಬೇಕಾಯಿತು. ಎರಡನೇ ಮೀಟಿಂಗ್ ಕೌನ್ಸಿಲ್ಲರ ಅಭಿಪ್ರಾಯವಿಲ್ಲದೆ ಅಜೆಂಡಾನ್ನು ಪ್ರೆಸಿಡೆಂಟರೇ ಮಾಡಿದ್ದರಿಂದ ಕೌನ್ಸಿಲ್ಲರು ಬಹಳ ಅಸಮಾಧಾನಪಟ್ಟರು. ಪ್ರೆಸಿಡೆಂಟರು ಹಾಜರು ಇಲ್ಲವಾದರೆ ವೈಸ್‌ಪ್ರೆಸಿಡೆಂಟರು ಮೀಟಿಂಗ್ ನಡೆಸುತ್ತಿದ್ದರು. ಹಾಗೆ ಮಾಡದೆ ಮೀಟಿಂಗನ್ನೇ ಕ್ಯಾನ್ಸಲ್ಲು ಮಾಡಿದ್ದರಿಂದ ಹೀಗೆ ಪ್ರೆಸಿಡೆಂಟರು ಮಾಡಿದ್ದು ರೂಲಿಗೆ ವಿರೋಧವೆಂದು 3 ದಫ ಮೀಟಿಂಗಿನಲ್ಲಿ ಚರ್ಚೆ ನಡೆದು ಆಖೈರು ಪ್ರೆಸಿಡೆಂಟರು ಹಾಗೆ ಮಾಡಿದ್ದು ಇಲ್ಲೀಗಲ್ ಅಂತಲೂ ಇನ್‌ವ್ಯಾಲ್ಯೂಡ್ ಅಂತಲೂ ರಿಕಾರ್ಡು ಮಾಡಬೇಕಾಯಿತು. ಕೌನ್ಸಿಲರುಗಳು ಪ್ರೆಸಿಡೆಂಟರಿಗಿರತಕ್ಕ 1ನೇ ಕ್ಲಾಸ್ ಮೆಜಿಸ್ಟೀರಿಯಲ್ ಪವರು ರೆವಿನ್ಯೂ ಅಧಿಕಾರ ವಗೈರೆ ಇದ್ದೂ ಎಲ್ಲಾ ಆನ್‌ಸರ್‌ನಲ್ಲಿ ಇರತಕ್ಕ ಕೌನ್ಸಿಲರುಗಳು ಅವರ ಅಧಿಕಾರಕ್ಕೆ ಭಯಪಡದೆ ಕೇವಲ ಸತ್ಯಕ್ಕಾಗಿ ನ್ಯಾಯಕ್ಕಾಗಿ ಪ್ರತಿಭಟಿಸಿದವರು ಆಫೀಸಿನಲ್ಲಿರುವ ಬಡಕ್ಲಾರ್ಕನ ಮಾತು ಕೇಳುತ್ತಾರೆನ್ನುವುದು ಕೌನ್ಸಿಲರುಗಳಿಗೆ ತುಂಬಾ ಅವಮಾನಕರವು. ಪ್ರೆಸಿಡೆಂಟರು ಅಯೋಗ್ಯಜನರ ಮಾತಿಗೆ ಕಿವಿಗೊಟ್ಟು ಕೌನ್ಸಿಲಿನಲ್ಲಿ ಅವಿಶ್ವಾಸಪೂರ್ಣರಾದ್ದರಿಂದ ಇತರ ಗುಣ ಅವರಿಗೆ ತಿಳಿಯದೆ ಅವರ ಗುಣ ಇತರರಿಗೆ ತಿಳಿಯದೆ ಮುನಿಸಿಪಾಲಿಟಿಯಲ್ಲಿ ಗಲಾಟೆಗೆ ಅವಕಾಶವಾಯಿತು. ಪ್ರೆಸಿಡೆಂಟರೇ ಆಗಲಿ ಸ್ಯಾನಿಟರಿ ಇನ್ಸ್‌ಪೆಕ್ಟರೇ ಆಗಲಿ ಜನರ ಹಿತಕಾರದ ಕಡೆ ದುರ್ಲಕ್ಷ್ಯ ಮಾಡಿ ಕೌನ್ಸಿಲ್ಲಿಗೆ ತಿಳಿಯಲು ಇಲ್ಲದ ಕಿತಾಪತಿಗಳು ಮಾಡುತ್ತಲಿದ್ದಾರೆ. "ಗಂಡಹೆಂಡರ ಜಗಳದಲ್ಲಿ ಕೂಸು ಫಾಸಿ ಆಯಿತೆನ್ನುವಂತೆ" ಟವನ್‌ವಾಸಿಗಳ ಗತಿಯಾಗುತ್ತದೆ. ಕೌನ್ಸಿಲ್ಲಿಗೂ ಪ್ರೆಸಿಡೆಂಟರಿಗೂ ತುಂಬಾ ಮನಸ್ತಾಪ ಉಂಟಾಗಿರುವುದರಿಂದ ಬೇರೆ ಪ್ರೆಸಿಡೆಂಟರಾದರೂ ಬರಬೇಕು. ಅಥವಾ ಪ್ರೆಸಿಡೆಂಟ್‌ಶಿಪ್ ನಾನ್ ಅಫಿಸಿಯಲ್ ಆದರೂ ಆಗಬೇಕು. ಹೀಗಾದರೇನೇ ಮುಂದೆ ಕಾರ್ಯನಿರ್ವಾಹವಾಗುತ್ತದೆ.

ಸತ್ಯಶೋಧಕ.

ಶ್ರೀಮಜ್ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಪಟ್ಟಾಧಿಕಾರದ ಆಲೋಚನಾ ಸಮ್ಮೇಲನ.

ಇದೇ ತಿಂಗಳು ತಾ|| 29-11-22 ನೆಯ ಬುಧವಾರ ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆಯಲ್ಲಿ ಹಲ್ವಾರ ಸಾಹುಕಾರ ಮ|| ರಾ|| ಮುರುಳಸಿದ್ದಪ್ಪಶೆಟ್ಟರವರ ನೂತನಗೃಹದ ಮಹಡಿಯಮೇಲೆ ಬೀರೂರಿಂದ ದಯಮಾಡಿಸಿದ ಪಕ್ಕೆ ಶ್ಯಾನಭೋಗ ಮಠದ ಕೆ. ಚನ್ನವೀರಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಈ ಸಮ್ಮೇಲನಕ್ಕೆ ಮೈಸೂರು, ಬೀರೂರು, ತಿಪಟೂರು, ಶಿವಮೊಗ್ಗ, ಗುಬ್ಬಿ, ಕೊಟ್ಟೂರು, ದೇವೀಹೊಸೂರು, ಚಿಕ್ಕಮಗಳೂರು, ನೇಮತಿ, ನಿಜಾಮಿಲಾಖಾ ಮುಂತಾದ ಕಡೆಯಿಂದ ಶ್ರೀ ಷ|| ಬ್ರ|| ಪಟ್ಟದರಾಧಿಕಾರಿ ಮಹಾಸ್ವಾಮಿಗಳು, ಶಾಸ್ತ್ರಿಮಂಡಲಿಯವರು, ಅನೇಕ ವೀರಶೈವ ಮಹಾಜನಗಳು ಸೇರಿದ್ದರು. ಈ ಮೊದಲೇ ಮಳಲಿಮಠದ ಶ್ರೀ ನಾಗಾರ್ಜುನಸ್ವಾಮಿಗಳೂ, ನರಸಿಂಹರಾಜಪುರದ ಮ|| ರಾ|| ಇಂ|| ಸಿ|| ಶಾಂತಪ್ಪಶೆಟ್ಟರೂ, ಅರಸೀಕೆರೆಗೆ ದಯಮಾಡಿಸಿ ಅಲ್ಲಿಯ ವೀರಶೈವ ಪ್ರಮುಖರನ್ನು ಸೇರಿಸಿ ಶ್ರೀ ಜಗದ್ಗುರು ರಂಭಾಪುರೀ ಪೀಠಕ್ಕೆ ಪಟ್ಟಾಧಿಕಾರವನ್ನು ನೆರವೇರಿಸಲು ತತ್ಸಂಬಂಧವಾದ ಆಲೋಚನ ಸಮ್ಮೇಲನವು ನಡೆಯಲು ಕೇಳಿದ್ದಕ್ಕೆ ಕೆಳಗೆಕಂಡ ಅರಸೀಕೆರೆ ವೀರಶೈವ ಪ್ರಮುಖರಾದ ಮ|| ರಾ|| ಸಾ|| ಹ|| ಮುರುಳಸಿದ್ದಪ್ಪಶೆಟ್ಟರು, ಬಾಗಲಕೋಟೆ ವಿರೂಪಾಕ್ಷಪ್ಪನವರು, ಉರೀಕೊಂಡೆ ನಾಗಪ್ಪನವರು, ಬ|| ಕೆ. ಸಿದ್ದಪ್ಪನವರು, ಮ|| ರಾ|| ಚನ್ನಬಸವಪ್ಪನವರು, ಕೆಲ್ಲನಗೆರೆ ಕಲ್ಲಪ್ಪಶೆಟ್ಟರು, ಸಾ|| ಹ|| ಸಿದ್ಧರಾಮಪ್ಪಶೆಟ್ಟರು, ಬ್ಯಾಡಿಗಿ ಚನ್ನವೀರಪ್ಪನವರು, ಬಸವೇಗೌಡರು ಮೊದಲಾದವರು ಸದರಿ ಸ್ವಾಮಿಗಳ ಶೆಟ್ಟರ ಅಭಿಪ್ರಾಯದಂತೆ ಆಲೋಚನ ಸಮ್ಮೇಲನಕ್ಕೆ ದಯಮಾಡಿಸಿದ ವೀರಶೈವ ಮಹಾಜನಗಳಿಗೆ ಸತ್ಕಾರಮಾಡುತ್ತೇವೆಂದು ಒಪ್ಪಿ ತಾ|| 29-11-22 ನೆ ದುಂದುಭಿನಾಮ ಸಂವತ್ಸರದ ಮಾರ್ಗಶಿರ ಶು|| 10 ಬುಧವಾರ ಮಧ್ಯಾಹ್ನ 3 ಘಂಟೆಗೆ ಸಾ|| ಮುರುಳಸಿದ್ದಪ್ಪಶೆಟ್ಟರ ಗೃಹದ ಮಹಡಿಯಮೇಲೆ ನಡೆಯಬೇಕೆಂದು ನಿರ್ಧರಿಸಿ ಮುದ್ರಿಸಿದ ಸಮ್ಮೇಲನದ ಆಹ್ವಾನಪತ್ರಿಕೆಗಳನ್ನು ಎಲ್ಲ ಕಡೆಯಲ್ಲಿಯೂ ಕಳುಹಿಸಲು, ಆಕಾಲಕ್ಕೆ ಸರಿಯಾಗಿ ವೀರಶೈವ ಮಹನೀಯರು ದಯಮಾಡಿಸಿದ್ದರು. ಈ ಮಹನೀಯರಿಗೆಲ್ಲಾ ಮ|| ರಾ|| ಸಾ|| ಮುರುಳಸಿದ್ದಪ್ಪಶೆಟ್ಟರು ರುದ್ರಪ್ಪಶೆಟ್ಟರು ತಮ್ಮ ಸ್ವಂತಖರ್ಚಿನಿಂದ ಮೇಲ್ಕಂಡ ಸ್ವಾಗತ ಸಂಘದ ಮೆಂಬರುಗಳ ಸಹಾಯದಿಂದಲೂ ಸ್ತುತವಾದ ಏರ್ಪಾಟು ಮಾಡಿಸಿದ್ದರು. ಆ ದಿನವೇ ಇವರ ಮಹಡಿಯಮೇಲೆ 3 ಘಂಟೆಗೆ ಸಭೆಯು ಸೇರಿತು. ಸಭಾಪರವಾಗಿ ಅರಸೀಕೆರೆ ಸ್ಕೂ|| ಇನ್ಸ್‌ಪೆಕ್ಟರಾದ ಮ|| ರಾ|| ಶಂಕರಪ್ಪನವರು ಬೀರೂರು ಸಾ|| ಷ|| ತ್ಯಾ|| ಕೆ. ಚನ್ನವೀರಪ್ಪಯ್ಯನವರನ್ನು ಅಧ್ಯಕ್ಷರಾಗಲು ಪ್ರಾರ್ಥಿಸಿಕೊಂಡದ್ದಕ್ಕೆ ಸದರಿಯವರು ಸಂತೋಷಪೂರ್ವಕ ಒಪ್ಪಿ ಅಧ್ಯಕ್ಷಸ್ಥಾನಕ್ಕೆ ದಯಮಾಡಿಸಿ ಹೇಳಿದ್ದೇನಂದರೆ— ನಾನು ಯಾವಾಗೂ ಇಂಥಾ ಸಭೆಗಳಲ್ಲಿ ಅಧ್ಯಕ್ಷತೆಯನ್ನು ವಹಿಸಿದವನಲ್ಲ. ನನಗೆ ಅನುಭವವೂ ಸಾಲದು. ಇದಲ್ಲದೆ ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಕರ್ತೃತ್ವಕಾರ್ಯವನ್ನು ಹಿಂದೆ ಇದೇ ಯ|| ಶಾಂತಪ್ಪಶೆಟ್ಟರೊಂದಿಗೆ ನಮ್ಮ ಯಜಮಾನರಾದ ಕೈ|| ತೀರ್ಥರೂಪು ರುದ್ರಪ್ಪಯ್ಯನವರು ನೆರವೇರಿಸಿದ್ದರೆಂದು ಕೇಳಿದ್ದೆನು. ಈಗಲಾದರೂ ಈ ಮಹಾಕಾರ್ಯವನ್ನು ನಮ್ಮ ತೀರ್ಥರೂಪು ವೀರಪ್ಪಯ್ಯನವರು ನೆರವೇರಿಸಬೇಕಾಗಿದ್ದರು ಅವರು ತಮ್ಮ ದೇಹಾಲಸ್ಯದಿಂದ ಸದ್ಯ ಬೆಂಗಳೂರಲ್ಲಿ ಔಷಧೋಪಚಾರ ಹೊಂದುತ್ತಿರುವದು ತಮ್ಮೆಲ್ಲರಿಗೂ ವೇದ್ಯವಾಗಿದೆ. ಆದಾಗ್ಯೂ ತಾವೆಲ್ಲರೂ ನಮ್ಮ ತೀರ್ಥರೂಪರವರ ಪ್ರತಿನಿಧಿಯಾಗಿ ನನ್ನನ್ನು ಗೌರವದೊಡನೆ ಕರತಂದು ನನಗೆ ಅಧ್ಯಕ್ಷಸ್ಥಾನವನ್ನು ವಹಿಸಿದ್ದಕ್ಕೆ ತಮ್ಮೆಲ್ಲರ ಆಭಾರವನ್ನು ವಂದನಾಪೂರ್ವಕವಾಗಿ ಅಂಗೀಕರಿಸುತ್ತೇನೆಂದು ಹೇಳಿ ಶ್ರೀ ಜಗದ್ಗುರುಗಳವರನ್ನು ಸ್ಮರಿಸಿ ತಮ್ಮ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಕೂಡಲೇ ಸರ್ವರೂ ಕರತಾಡನ ಮಾಡಿದರು. ಬಳಿಕ ಅಧ್ಯಕ್ಷರಪರವಾದ ಭಾಷಣವನ್ನು ಬೀರೂರು ಎಂ. ವಿ. ಮುರುಳಸಿದ್ಧಯ್ಯನವರು ಓದಿ ಹೇಳಿದರು. ನಂತರ ಮಳಲೀಮಠದ ಶ್ರೀಗಳವರು ಮುಕ್ತರಾದ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ವಿಚಾರವಾಗಿಯೂ, ಮುಂದೆ ಈ ಪೀಠದ ಕರ್ತೃತ್ವವು ಹೇಗೆ ನಡೆಯಬೇಕೆಂಬಾಲೋಚನೆಯನ್ನು ಸಹ ಕುರಿತು ವಿಶದವಾಗಿ ಭಾಷಣಮಾಡಿದರು, ನಂತರ ಯ. ಶಾಂತಪ್ಪಶೆಟ್ಟರವರು ಮಹಾ ಸಂಸ್ಥಾನದ ಖರ್ಚುವೆಚ್ಚಗಳ ವಿಚಾರವಾಗಿಯೂ ಇದೇ ದುಂದುಭಿ ಸಂ|| ಮಾಘ ಶುದ್ಧದಲ್ಲಿ ಈ ಮಹತ್ಕಾರ್ಯವು ನಡೆಯಬೇಕಾಗಿರುವದರಿಂದಲೂ, ಈ ಕಾರ್ಯಕ್ಕೆ ಯಾವತ್ತು ವೀರಶೈವ ಮಹಾಜನಗಳ ಐಕಮತ್ಯವೂ, ಅಭಿಮಾನವೂ, ಮುಖ್ಯವಾದದ್ದೆಂತಲೂ, ಈ ಸಭೆಗೆ ದಯಮಾಡಿಸಿದ ತಾವೆಲ್ಲರೂ ಏಕಮನಸ್ಸಿನಿಂದ ಈ ಗುರುಕಾರ್ಯವನ್ನು ಧನಸಹಾಯದಿಂದಲೂ ಜನಸಹಾಯದಿಂದಲೂ ಜಾಗ್ರತೆಯಾಗಿ ನೆರವೇರಿಸಬೇಕಾಗಿ ತಮ್ಮೆಲ್ಲರನ್ನೂ ಕೋರುತ್ತೇನೆಂದು ಹೇಳಿ ಶ್ರೀ ಜಗದ್ಗುರು ಕಾಶಿ, ಹಿಮವತ್ಕೇದಾರ, ಉಜ್ಜಯಿನೀ, ಶ್ರೀಶೈಲ, ಮಹಾ ಸಂಸ್ಥಾನಗಳಿಂದ ಬಂದ ಆಶೀರ್ವಾದ ಪತ್ರಿಕೆಗಳನ್ನೂ ದೇವೀ ಹೊಸೂರ ಮ|| ರಾ|| ರಾವಬಹಾದ್ದೂರ ಚನ್ನಬಸಪ್ಪಶೆಟ್ಟರಿಂದಲೂ, ಧಾರವಾಡದ ಮ|| ರಾ|| ಮೂಗಪ್ಪನವರಿಂದಲೂ, ಮುನ್‌ಸೀಫ್ ಮ|| ಸುಬ್ಬಣ್ಣನವರು ಚಿಕ್ಕಮಗಳೂರು, ಶೆಟ್ಟರ ಗಂಗಣ್ಣನವರೇ ಮೊದಲಾದ ದೊಡ್ಡಮನುಷ್ಯರುಗಳಿಂದ ಬಂದಿದ್ದ ಪತ್ರಗಳನ್ನು ಓದಿಹೇಳಿದರು. ಮತ್ತು ಬೆಂಗಳೂರಿಂದ ಅಡ್ವೋಕೇಟ್ ಮ|| ಜಿ. ಪರಮಶಿವಯ್ಯ ಬಿ. ಎ., ಎಲ್‌ಎಲ್. ಬಿ., ಯವರಿಂದಲೂ ಡಿ|| ನಿರ್ವಾಣಸ್ವಾಮಿಮಠದ ಮರಿಸಿದ್ಧದೇವರಿಂದಲೂ ಧಾರವಾಡದ ಕಡೆಯಿಂದಲೂ ಬಂದ ತಂತಿಗಳನ್ನು ವೇ|| ಹೊಳಲಕೆರೆ ಚಿಕ್ಕಬಸಪ್ಪಯ್ಯನವರು ಓದಿ ಹೇಳಿದರು. ಚಿಕ್ಕಮಗಳೂರಿನ ಚಿ|| ಚನ್ನಬಸಪ್ಪಶೆಟ್ಟರವರು ಬರೆದು ಕಳಿಸಿದ ಪತ್ರವನ್ನು ಅವರವತಿಯಿಂದ ಬಂದ ಕೋಟೆ ಮಹಂತಶೆಟ್ಟರು ಓದಿದರು. ಬಳಿಕ ವೇ|| ಶಿವಕಥಾಭೂಷಣ ಜಿ. ಸಂಜುಂಡಾರಾಧ್ಯರು ಸತ್ಕಾರ ಸಂಘದ ಮೆಂಬರುಗಳು ಕೇವಲ ಅಭಿಮಾನದಿಂದ ಮಾಡಿದ ಏರ್ಪಾಟನ್ನು ಕುರಿತು ಅವರುಗಳನ್ನು ಶ್ಲಾಘಿಸಿ ಅಧ್ಯಕ್ಷರ ಮತ್ತು ಮ|| ರಾ|| ಮುರುಳಸಿದ್ದಪ್ಪಶೆಟ್ಟರ ಗುಣಕಥನವನ್ನು ಮಾಡಿ, ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಭಗವತ್ಪಾದರ ದಿವ್ಯ ಸನ್ನಿ

ಧಿಯಿಂದ ದಯಮಾಡಿಸಿದ ಪುರಗಿರಿ ಬೃಹನ್ಮಠದ ಸ್ವಾಮಿ ಶ್ರೀ ಪಟ್ಟಾಧ್ಯಕ್ಷ, ಪಂಡಿತ ಚಿದ್ವಿಶಿವಾಚಾರ್ಯರೊಂದಿಗೆ ಬಂದ ಸದರಿ ಸಂಸ್ಥಾನದ ಆಸ್ಥಾನ ಪಂಡಿತ ವೀರಭದ್ರಶಾಸ್ತ್ರಿಗಳು ಕೊಂಗವಾಡ ಇವರು ಮಹಾಸ್ವಾಮಿಯವರ ಮಹತ್ವವನ್ನು ಕುರಿತು ಭಾಷಣಮಾಡತಕ್ಕವರಿದ್ದಾರೆಂದು ಹೇಳಿದರು. ಬಳಿಕ ವೇ॥ ಶಾಸ್ತ್ರಿಗಳು ಅಪ್ಪಣೆಕೊಡಿಸಿದ್ದೇನೆಂದರೆ ಮುಂದೆ ನಡೆಯುವ ಮಹಾಕಾರ್ಯದ ಆಲೋಚನೆಗಳು ಇನ್ನೂ ಅನೇಕವಾಗಿರುವುದರಿಂದ ಶ್ರೀಮದಾಚಾರ್ಯರ ಮಹತ್ವವು ಬಹಳ ಗಹನವಾದದ್ದಾದರೂ ಸದ್ಯಕ್ಕೆ ಹೇಳಬೇಕೆಂಬ ಆರಾಧ್ಯರ ಸೂಚನೆಯಂತೆ ಸಂಕ್ಷೇಪವಾಗಿ ಹೇಳಿ ಮುಗಿಸುತ್ತೇನೆಂದು ಭಾಷಣವು ಮಾಡಿ ವಿರಮಿಸಿದರು. ನಂತರ ಮ॥ ವೇ॥ ಅಜ್ಜಂಪುರದ ಉಮಾಪತಿಶಾಸ್ತ್ರಿಗಳು ನೊಣಬನಕೆರೆ ಶಾಂತವೀರಶಾಸ್ತ್ರಿಗಳು ಈ ಗುರು ಕಾರ್ಯವು ನೆರವೇರಬೇಕಾಗಿರುವುದಕ್ಕೆ ಮುಂದೆ ಸ್ವಲ್ಪ ದಿವಸಗಳೇ ಉಳಿದಿರುವುದರಿಂದ ಯಾವ ಯಾವ ಕೆಲಸಗಳಿಗೆ ಯಾರ್‍ಯಾರು ಹೋಗಬೇಕೆಂಬ ಬಗ್ಗೆ ಈ ಸಭೆಯಲ್ಲಿ ನಿರ್ಧರಿಸಿಕೊಂಡು ರಂಭಾಪುರೀ ಜಗದ್ಗುರು ಮಹಾಪೀಠದ ಪಟ್ಟಾಧಿಕಾರಕ್ಕೆ ಸಕ್ಕುಲ ಪ್ರಸಿದ್ಧರಾದ ವಿದ್ವಾಂಸರೂ ಶ್ರೀ ರೇಣುಕ ಶಾಖಾಸ್ಥರೂ ಯೋಗ್ಯರೂ ಆದ ವಟುಗಳನ್ನು ಚುನಾಯಿಸುವುದು ಉತ್ತಮವೆಂದು ಹೇಳಿದರು. ಅಧ್ಯಕ್ಷರ ಅಪ್ಪಣೆಯಂತೆ ಒಂದು ಕಾರ್ಯನಿರ್ವಾಹಕ ಮಂಡಲಿಯನ್ನು ನೇಮಿಸಿಕೊಂಡು ಈ ಕೆಳಗೆ ಸೂಚಿಸಿದ ಪ್ರಕಾರ ಕಾರ್ಯಗಳನ್ನು ನಡೆಸಲು ನಿರ್ಧಾರಮಾಡಿಕೊಂಡರು. ಶ್ರೀ ಕ್ಷೇತ್ರ ಕಾಶೀಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿಯೂ ಹಾಗು ಇತರ ನಮ್ಮ ಪ್ರಾಂತಗಳಲ್ಲಿಯೂ ಮಹಾಪೀಠದ ಕರ್ತೃತ್ವಕ್ಕೆ ವಿದಾ ಪಂತರೂ ಸದ್ವಂಶೀಯರೂ ಆಚಾರವಂತರೂ ವಿಶತಿ ಪ್ರಾಯಲಂಬಿಗಳೂ ಆದ ಬ್ರಹ್ಮಚಾರಿಗಳನ್ನು ಕರೆತರಲು ಅಧ್ಯಕ್ಷರಾದ ವೇ॥ ಚನ್ನವೀರಪ್ಪಯ್ಯನವರೂ, ಕೋಟ್ರೂರ ಜಾಗಟಗೇರಿ ವೇ॥ ದೊಡ್ಡ ವೀರಪ್ಪಯ್ಯನವರೂ, ಬೀರೂರ ಎಂ. ವಿ. ಮರುಳಸಿದ್ದಯ್ಯನವರೂ, ಮ॥ ರಾ॥ ಉಚ್ಚಂಗಿ ದುರ್ಗದ ಸಿದ್ಧನಗೌಡರೂ ಒಪ್ಪಿದರು. ಈ ನೀರವನ್ನು ಗುರುಮುದ್ರಾಂಕಿತನನ್ನಾಗಿ ಮಾಡಲು ಶ್ರೀ ಕಾಶೀ ಹಿಮವತ್ಕೇದಾರ ಉಜ್ಜಯಿನೀ ಶ್ರೀಶೈಲ ಮಹಾಸಂಸ್ಥಾನದ ಜಗದ್ಗುರು ಭಗವತ್ಪಾದರ ಮಹಾಸ್ವಾಮಿಗಳು ರಂಭಾಪುರೀ ಮಹಾಸಂಸ್ಥಾನಕ್ಕೆ ದಿಯಮಾಡಿಸಲು ಪ್ರಾರ್ಥಿಸಿಕೊಂಡು ಬರುವುದಕ್ಕೆ ಮ॥ ರಾ॥ ರಾಂಪುರ ಶೆಟ್ಟರು, ಬೀರೂರ ಉಬ್ರಾಣಿಮಠದ ಶಿವಲಿಂಗಪ್ಪಯ್ಯನವರು, ಎಸ್. ಪರ್ವತಪ್ಪಯ್ಯನವರು, ಕೊಡೆಹಳ್ಳಿ ನುಲ್ಲಪ್ಪನವರು, ದೊಡ್ಡಮನೆ ಹಾಲಪ್ಪನವರು, ಶೆಟ್ಟರು ಬಸವಪ್ಪನವರು, ಮ॥ ಪುಟ್ಟಯ್ಯನವರು, ಗುಬ್ಬಿ ಯ॥ ರೇವಣ್ಣನವರು, ಕಿತ್ತನಕೆರೆ ಶಿವಲಿಂಗಶೆಟ್ಟರು, ಹಾರನಹಳ್ಳಿ ರಾಮೇಗೌಡರು, ನೀಮುತಿ ಚನ್ನಪ್ಪಶೆಟ್ಟರು, ನೀ. ಮಠದ ನಂಜಯ್ಯನವರು, ಶಿವಮೊಗ್ಗಾ ಕೆ. ಹಾಲಪ್ಪನವರು, ಶಿವನೇಪುರ ದಪ್ಪಗೌಡರು, ಬುಕ್ಕಾಂಬುಧಿ ವೀರಯ್ಯನವರು ಗೊತ್ತು ಮಾಡಲ್ಪಟ್ಟರು. ಅರಸೀಕೆರೆಯಲ್ಲಿ ಸ್ವಾಗತಸಂಘದ ಮೆಂಬರುಗಳು ಮ॥ ಪನ್ನಸಮುದ್ರದ ಬಸವೇಗೌಡರು, ನೊಣಬನಕೆರೆ ವೇ॥ ಶಾಂತವೀರಶಾಸ್ತ್ರಿಗಳು, ಅಲ್ಲೂರ ರಾಮೇಗೌಡರು, ಬ॥ ಕೆ॥ ಕೊಟ್ರಪ್ಪನವರು ವೊದಲಾದ ಮಹನೀಯರು ಒಪ್ಪಿದರು. ಇದಲ್ಲದೆ ಈ ಮಹಾಕಾರ್ಯಕ್ಕೆ ಬೇಕಾಗುವ ಹಣವನ್ನು ವಸೂಲುಮಾಡಲು ಹೊಳೆಹೊನ್ನೂರ ಶ್ರೀಗಳವರನ್ನು ಗಿಳಲಗುಂಡಿ ಚರಮೂರ್ತಿಸ್ವಾಮಿಗಳನ್ನು ವನಹಳ್ಳಿ ಪಟ್ಟದ ಸ್ವಾಮಿಗಳನ್ನು ನಂದೀ ರುದ್ರಮುನಿಯಪ್ಪನವರನ್ನೂ ಹುಡೇದ ಚೆರಂಕಪ್ಪನವರನ್ನೂ ನೇಮಿಸಿದರು. ಇದೇ ದುಂದುಭಿಸಂವತ್ಸರ ಮಾಘಶುದ್ಧದಲ್ಲಿ ಪಟ್ಟಾಭಿಷೇಕವನ್ನು ನೆರವೇರಿಸಬೇಕೆಂದು ನಿರ್ಧರಿಸಿದರು. ಹೊರಗಿಂದ ವಸೂಲಾದ ಹಣವನ್ನು ಯ॥ ಶಾಂತಪ್ಪಶೆಟ್ಟರ ವಶಕ್ಕೆ ಕಳುಹಿಸಬೇಕೆಂತಲೂ ಸದರಿಯವರು ಈ ಬಗ್ಗೆ ಸರಿಯಾದ ಜಮಾ ಖರ್ಚು ಇಡಬೇಕೆಂತಲೂ ಮುಂದೆ ಅಧಿಕಾರವನ್ನು ವಹಿಸುವ ಮಹಾಸ್ವಾಮಿಗಳವರ ಸಮಕ್ಷಮ ಹಾಜರ್ಪಡಿಸಿ ಸನ್ನಿಧಿಗೆ ವಹಿಸಬೇಕೆಂತಲೂ, ಮತ್ತು ಮುಂದೆ ನಡೆಯತಕ್ಕ ಯಾವತ್ತೂ ಕಾರ್ಯಗಳನ್ನು ಕುರಿತು ಪತ್ರವ್ಯವಹಾರವನ್ನು ಬೀರೂರು ಶ್ರಾವಣಿಗೇ ಮಠದ ಸಾ॥ ಕೆ. ಚನ್ನವೀರಪ್ಪಯ್ಯನವರ ಮತ್ತು ಮ॥ ರಾ॥ ನರಸಿಂಹರಾಜಪುರದ ಇಂ॥ ನ॥ ಶಾಂತಪ್ಪಶೆಟ್ಟರವರ ಹೆಸರಿನ ಮೇಲೆ ನಡೆಯಿಸಬೇಕೆಂತಲೂ ನಿರ್ಧರಿಸಿದರು. ಈ ಮಹತ್ಕಾರ್ಯವನ್ನು ಶೀಘ್ರದಲ್ಲಿಯೇ ನಡೆಯಿಸಬೇಕಾಗಿರುವುದರಿಂದ ಭಕ್ತಾದಿಗಳಿಂದ ವಸೂಲಾಗಿ ಬರುವ ಹಣವು ಸಕಾಲಕ್ಕೆ ಒದಗುವುದು ಅಸಾಧ್ಯವಾಗಬಹುದೆಂದು ಯೋಚಿಸಿ, ಈ ಸಭೆಯಲ್ಲಿ ಮುಖ್ಯಸ್ಥರಾದ ಕೆಲವು ದೊಡ್ಡ ಮನುಷ್ಯರು ಸಾಲವಾಗಿ ಹತ್ತು ಸಾವಿರ ರೂಪಾಯಿಗಳನ್ನು ತೆಗೆದು ಪ್ರಕೃತಕಾರ್ಯವನ್ನು ನೆರವೇರಿಸಬೇಕೆಂದು ನಿರ್ಧರಿಸಿದರು. ಈ ಸಮ್ಮೇಳನದಲ್ಲಿ ಸಾಂಗವಾಗಿ ನಡೆದ ಕಾರ್ಯಕ್ರಮವನ್ನು ಶ್ರೀ ಜಗದ್ಗುರು ಕಾಶೀ ಉಜ್ಜಯಿನೀ ಹಿಮವತ್ಕೇದಾರ ಶ್ರೀ ಶೈಲ ಸಂಸ್ಥಾನದ ಮಹಾಸ್ವಾಮಿಗಳವರ ಸನ್ನಿಧಿಗೆ ಬಿನ್ನಹಪತ್ರಿಕೆಗಳನ್ನು ಬಿನ್ನೈಸಿಕೊಂಡು ಸಮಸ್ತ ವೀರಶೈವ ಮಹನೀಯರಿಗೂ ತಿಳಿಯುವಂತೆ ಸ್ಟಾರ್, ಟ್ರಿಬ್ಯೂನ್, ವಿಭಾಕರ ಈ ಮೂರು ಪತ್ರಿಕೆಗಳಲ್ಲಿ ಪ್ರಸಿದ್ಧಿಪಡಿಸಬೇಕಾಗಿ ಪತ್ರಿಕಾ ಸಂಪಾದಕರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನಿಸಿ, ಸರ್ವರೂ ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರ ಪಾದಸ್ಮರಣೆಯನ್ನು ಮಾಡಿ ಅಲ್ಪಾಹಾರ ಗಂಧ ತಾಂಬೂಲಾದಿಗಳನ್ನು ಸ್ವೀಕರಿಸಿದನಂತರ ಸಭೆಯು ವಿಸರ್ಜನಮಾಡಲ್ಪಟ್ಟಿತು.

ಓರ್ವ ಶ್ರೀಗುರುಪಾದ ಸೇವಕ.

ನರಸಿಂಹರಾಜಪುರದಲ್ಲಿ ವೀರಶೈವ ವಿದ್ಯಾರ್ಥಿನಿಲಯದ ಪ್ರವೇಶೋತ್ಸವ ಸಮಾರಂಭವು.

ಇದೇ ಊರಿನಲ್ಲಿ ಪ್ರಸಿದ್ಧರಾದ ಮ॥ ರಾ॥ ಇಂ ॥ ನ ಶಾಂತಪ್ಪಶೆಟ್ಟರವರು ಕಟಿಸಿದ ಕಾರ್ತಿಕ ಶು॥ ೧೩ ಗುರುವಾರ ಪ್ರಾತಃಕಾಲ ೭॥ ಘಂಟೆಗೆ ಮೇಲ್ಕಂಡ ನಿಲಯದ ಪ್ರವೇಶೋತ್ಸವವನ್ನು ಕಡೂರು ಡಿ॥ ಕ॥ ಡೆಪ್ಯುಟಿಕಮಿಷನರ್‌ರವರಾದ ಮ॥ ರಾ॥ ಯಂ. ಜಿ ಕೃಷ್ಣಸ್ವಾಮಿರಾಯರವರಿಂದ ನೆರವೇರಿಸಿದರು. ಅವಿನ ಟ್ರಾವಲರ್ಸ್‌ಬಂಗಲೆಯಿಂದ ಮಂಗಳವಾದ್ಯದೊಡನೆ ಇತರ ಅಧಿಕಾರಿಗಳೊಂದಿಗೆ ಅವರನ್ನು ಕರೆತಂದರು. ಡೈ॥ ಕ॥ ಸಾಹೇಬರವರು ತಳಿರುತೋರಣ ರಂಭಾಸ್ತಂಭಗಳಿಂದಲಂಕೃತವಾದ ಆ ನಿಲಯದ ಮುಂಭಾಗದ ಜಗತಿಯಮೇಲೆ ದಯಮಾಡಿದ ಕೂಡಲೇ ದೊಡ್ಡ ಗುಣಿಮಠದ ಶ್ರೀ ಗುರುಲಿಂಗಸ್ವಾಮಿಗಳಿಂದ ವೇದಮಂತ್ರ ಪಠನಪೂರ್ವಕ ಫಲಮಂತ್ರಾಕ್ಷತೆಯು ಕೊಡಲ್ಪಟ್ಟಿತು. ಬಳಿಕ ಶೆಟ್ಟರವರು ವಿಜ್ಞಾಪನಾ ಪತ್ರಿಕೆಯನ್ನು ಓದಿ ಹೇಳಿ ಸಮರ್ಪಿಸಿದ ನಂತರ ಸಾಹೇಬರವರು ... ಶೆಟ್ಟರು ವಿಜ್ಞಾಪನಾ ಪತ್ರಿಕೆಯಲ್ಲಿ ಸೂಚಿಸಿದ ಪ್ರಕಾರ ಅವರ ತಂದೆ ನಿಧ್ಯಾಸಪ್ಪಶೆಟ್ಟರ ಅಪ್ಪಣೆಯಿಂದಲೂ ತಮ್ಮಿಂದಾದ ವೀರಶೈವನವರ ಅಪೇಕ್ಷೆಯಂತೆಯೂ ವೀರಶೈವ ಅನಾಥವಿದ್ಯಾರ್ಥಿಗಳಿಗೋಸ್ಕರ ಕಟ್ಟಿಸಿರುವ ಈ ನಿಲಯದ ಕಾರ್ಯಕ್ಕೆ ತುಂಬಾ ಸಂತೋಷಪೂರ್ವಕರಾಗಿದ್ದೇನಲ್ಲದೆ ಹಾಲಿ ತಮ್ಮ ಮನೆಯಲ್ಲಿ ಕೆಲಕಾಲದಿಂದ ವಿದ್ಯಾಭ್ಯಾಸ ಮಾಡುತ್ತಿರುವ ೩-೬ ಜನರಿಗೂ ಇನ್ನು ಬರತಕ್ಕವರಿಗೂ ನನ್ನ ಕೈಲಾದ ಮಟ್ಟಿಗೆ ಅನ್ನ ವಸ್ತ್ರಾದಿ ಅನುಕೂಲಗಳನ್ನು ಕಲ್ಪಿಸಿಕೊಡುವುದಾಗಿ ಒಪ್ಪಿರುವ ಸಂಗತಿಯನ್ನು ನಿಮ್ಮೆಲ್ಲರಿಗೂ ತಿಳಿಸಲು ಅತ್ಯಂತ ಹರ್ಷನಾಗಿರುತ್ತೇನೆ. ಈ ದೊಡ್ಡ ಮನುಷ್ಯರು ಮಾಡುತ್ತಿರುವ ಕಾರ್ಯಗಳಿಗೆ ತಾವೆಲ್ಲರೂ ಸಹಾನುಭೂತಿಯನ್ನು ತೋರಿಸುತ್ತಾ ಬಂದರೆ ಗ್ರಾಮಾಭಿವೃದ್ಧಿಯು ಹೆಚ್ಚಿ ಪರಸ್ಪರ ವಿಶ್ವಾಸ ಕ್ಕೂ ಕಾರಣವಾಗುತ್ತೆಂದು ಹೇಳಲು, ಸರ್ವರೂ ಕರತಾಡನವಮೂಲಕ ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಅನಂತರ ತಮ್ಮ ಅಮೃತಹಸ್ತದಿಂದ ಬಾಗಿಲ ಬೀಗವನ್ನು ತೆಗೆದು ಒಳಗೆ ಪ್ರವೇಶಿಸಿ ಈ ಮುಂಚೆ ಏರ್ಪಡಿಸಿದ್ದ ಮಹಡಿ ಮೇಲಿನ ಸಭಾಂಗಣದಲ್ಲಿ ಗೌರವಸ್ಥಾನವನ್ನು ಅಲಂಕರಿಸಿದರು. ಸ್ಥಳೀಕ ಸರ್ಕಾರಿ ಅಧಿಕಾರಿಗಳಾದ ಮುನಸೀಫರು ಅಮಲ್ದಾರರು ಲಾಯರುಗಳು ಭದ್ರಾವತಿ ಡಿವಿಜನ್ ಫಾರೆಸ್ಟ್ ಆಫೀಸರು ಈ ಗ್ರಾಮದ ದೊಡ್ಡಮನುಷ್ಯರು ಸ್ಕೂಲು ಬಾಲಬಾಲಿಕೆಯರು ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸಿದರು. ಆ ಕಾಲದಲ್ಲಿ ಹುಣಸಗಟ್ಟದ ಮಠದ ವೇ॥ ಶಿವಕಥಾ ಭೂಷಣ ಜಿ. ನಂಜುಂಡಾರಾಧ್ಯರವರು ಸರ್ವಜನಾಹ್ಲಾದಕವಾಗುವಂತೆ ಗಾನಮಾಡಿದರು. ನಂತರ ಗರ್ಲ್ಸ್‌ಸ್ಕೂಲ್ ಬಾಲಿಕೆಯರಿಂದ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನಾರೂಪವಾದ ಪದ್ಯಗಳು ಹಾಡಿಸಲ್ಪಟ್ಟುವು. ಪುನಃ ನಂಜುಂಡಾರಾಧ್ಯರವರು ಡೆ॥ ಕಮಿಷನರ್ ಸಾಹೇಬರವರ ಗುಣಕಥನವನ್ನು ಮಾಡಿ ಮ॥ ರಾ॥ ಶೆಟ್ಟರವರು ಮಾಡಿದ ಧರ್ಮಕಾರ್ಯವನ್ನು ವರ್ಣಿಸಿ ಇದರಂತೆ ಪ್ರತಿಯೊಂದು ತಾಲ್ಲೂಕು ಗ್ರಾಮಗಳಲ್ಲಿ ಬಾಲಕರ ಪ್ರಾಥಮಿಕ ಶಿಕ್ಷಣಕ್ಕೆ ಅವಕಾಶವಾಗುವಂತೆ ವಿದ್ಯಾನಿಲಯದ ಫಂಡುಗಳನ್ನು ಮಾಡುತ್ತಾ ಹೋಗುವುದರಿಂದ ವಿದ್ಯಾಭಿವೃದ್ಧಿಗೆ ಹೆಚ್ಚು ಅವಕಾಶವನ್ನು ಕೊಟ್ಟಂತಾಗುತ್ತದೆಂದು ಹೇಳಿ ಧರ್ಮಕರ್ತೃಗಳ ಶ್ರೇಯಸ್ಸನ್ನು ಕೋರಿ ತಮ್ಮ ಭಾಷಣವನ್ನು ವಿರಮಿಸಿದರು. ಅನಂತರ ಗ್ರಾಮದ ವೇ॥ ಭವಾನೀಶಾಸ್ತ್ರಿಗಳವರು ಮ॥ ರಾ॥ ಶೆಟ್ಟರವರು ಮಾಡಿರುವ ಕಾರ್ಯಗಳು ಇಷ್ಟೇ ಅಲ್ಲ; ಈ ಹಿಂದೆ ಈ ಊರಲ್ಲಿ ಒಂದು ರೀಡಿಂಗ್‌ರೂಮು, ಪ್ರವಾಸಜನಗಳ ವಸತಿಗೆ ರೂಮುಗಳು ಭಾವಿ ಸಹ ತೆಗೆಯಿಸಿ ಇದರ ಪ್ರವೇಶೋತ್ಸವವನ್ನು ಶ್ರೀಮನ್ಮಹಾರಾಜರವರಿಂದ ನೆರವೇರಿಸಿದ ಕಾಲದಲ್ಲಿ ಈ ಗ್ರಾಮಕ್ಕೆ ಎಡೆಹಳ್ಳಿಯೆಂದು ಇದ್ದ ಹೆಸರುತಪ್ಪಿ ನಮ್ಮಗಳ ಕೋರಿಕೆಯಂತೆ ನರಸಿಂಹರಾಜಪುರವೆಂಬದಾಗಿ ನಾಮಕರಣವುಂಟಾಗಲು ಅವಕಾಶವಾಯಿತು. ಇದಲ್ಲದೆ ಬೀರೂರಲ್ಲಿ ಈಶ್ವರದೇವಸ್ಥಾನವನ್ನು ಮಾಡಿಸಿರುವುದಲ್ಲದೆ ಒಂದು ಧರ್ಮಛತ್ರವನ್ನು ಮಾಡಿಸಿ ಹಿಂದೆ ದಿವಾನರಾಗಿದ್ದ ಶ್ರೀಮಾನ್ ಸರ್ ಕಾಂತರಾಜ ಅರಸಿನವರಿಂದ ಪ್ರವೇಶೋತ್ಸವವನ್ನು ನೆರವೇರಿಸಿದರು. ಈಗ ನಮ್ಮ ಗ್ರಾಮದಲ್ಲಿ ಈ ಕಟ್ಟಡವನ್ನು ಮಾಡಿಸಿ ವೀರಶೈವ ವಿದ್ಯಾರ್ಥಿಭವನವೆಂದು ತಮ್ಮಿಂದ ನಾಮಕರಣಮಾಡಿಸಿದ್ದು ನಮ್ಮೆಲ್ಲರಿಗೂ ಭೂಷಣವಾಗಿರುತ್ತೆಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಬಳಿಕ ಡೆ॥ ಕ॥ ಸಾಹೇಬರವರು ಶೆಟ್ಟರವರು ಮಾಡಿದ ಧರ್ಮಕಾರ್ಯಗಳ ಪ್ರಶಂಸೆಯನ್ನು ಕೇಳಿ ಸಂತೋಷಪಟ್ಟು ಸದರಿಯವರಿಗೆ ಜಗದೀಶ್ವರನು ಆಯುರಾರೋಗ್ಯವನ್ನು ಇಹೋಪ್ಯುತ್ತರಯವಾದ ಧರ್ಮಬುದ್ಧಿಯನ್ನೂ ಉಂಟುಮಾಡಲೆಂದು ಕೋರಿದರು. ಆಗ್ಗೆ ಶೆಟ್ಟರು ಈ ಕಾರ್ಯಗಳೆಲ್ಲವನ್ನೂ ನಾನು ಮಾಡಲು ಸಮರ್ಥನಲ್ಲದವನಾದಾಗ್ಯೂ ದೇವರ ಅನುಗ್ರಹದಿಂದಲೂ ಹಿರಿಯರ ಆಶೀರ್ವಾದದಿಂದಲೂ ತಮ್ಮೆಲ್ಲರ ಅಭಿಮಾನದಿಂದಲೂ ನಡೆಯಿಸಿದ್ದಾಗಿರುತ್ತೆಂದು ಹೇಳಲು, ಸರ್ವರೂ ಕರತಾಡನದ ಮೂಲಕ ತಮ್ಮ ಸಂತೋಷವನ್ನು ಸೂಚಿಸಿದರು. ನಂತರ ಗಂಧ ಪುಷ್ಪ ಫಲಾಹಾರ ತಾಂಬೂಲಾದಿಗಳಿಂದ ಸಭಿಕರನ್ನು ಸತ್ಕರಿಸಲು ಸಭೆಯು ವಿಸರ್ಜನೆಯಾಯ್ತು.

ಓರ್ವ ಉತ್ಸವಭಾಗಿ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ವೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 3

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ವೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ್ ಭಂಗಾರದ ಮುಳ್ಳುಳ್ಳ

20 **ರಾಯಲಿ ಫೌಂಟೇನ್ ಪೆನ್.**

ಎಂಬ ಈ ಪೇನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿನಗೂ ಬರೆಯುವದು. 1ಕ್ಕೆ 1-10-0.

ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಳು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—
ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ದಂಪತ್ಯದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೊಡರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮುಸಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿನಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವಕೆಗೆದುಕೊಂಡು ತಿಳಿಸಿರುವರು. ಮತ್ತು ಭಾನಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾಕಡಿಮೆಮಾಡಿ ಇರುವೆವು. ೨-೮-೦ ಟಪಾಲುಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
43 ಬಳ್ಳಾರಿ.

೧೯೨೨ ನೆಯ ಇಸವಿ ಡಿಶಂಬರ್ ತಾ॥ ೧೦ ರಿಂದ ೧೯೨೨ ನೆಯ ಡಿಶಂಬರ್ ತಾ॥ ೧೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ದುಂದುಭಿನಾಮ ಸಂವತ್ಸರದ ಮಾರ್ಗಶಿರ ಬಹುಳ ಷಷ್ಠಿಯಿಂದ ಮಾರ್ಗಶಿರ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ಧನು
10	ಭಾನು	ಷಷ್ಠಿ	14-18	ಮಘಾ	42-36	25
11	ಸೋಮ	ಸಪ್ತ	9-11	ಪುಬ್ಬ	38-55	26
12	ಮಂಗಳ	ಅ-ಉ	3-37 54-23	ಉತ್ತ	34-51	27
13	ಬುಧ	ದಶ	51-23	ಹಸ್ತ	30-37	28
14	[1]ಗುರು	ಏಕಾ	46-5	ಚಿತ್ತ	26-27	29
15	[2]ಶುಕ್ರ	ದ್ವಾದ	40-30	ಸ್ವಾತಿ	22-31	1
16	[3]ಶನಿ	ತ್ರಯೋ	35-30	ವಿಶಾ	19-5	2

(1) ಸರ್ವತ್ರೈಕಾದಶಿ, ಮಾರ್ಗಶಿರಲಕ್ಷ್ಮೀವ್ರತಂ. (2) ಧನುಸ್ಸಂಕ್ರಮಣಂ. (3) ಪ್ರದೋಷಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಚಿಹ್ನಸಾ । ಘನಪಥಕೃಶಾವತಾರಾ ಪಶ್ಯಜ್ಞನಕೃತ್ತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫) ಮೈಸೂರ್ ಸ್ಟಾರ್ ರ್ಸ ೧೯೨೨ ನೆಯ ಇಸವಿ ಡಿಸೆಂಬರ್ ತಾರೀಖು ೧೦ ನೆಯ ಭಾನುವಾರ (ಸಂಚಿಕೆ ೫೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ವೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣವೂ ಇರುವಂತೆ ಸ್ಫುಟಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ವವೂ ಶಿವಮಹಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾ ಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲವ್ಯಾಖ್ಯಾನ, ಕತಿಣಹಸುಗೆ, ಪಂಚೀಕರಣ, ಕಾಲಜ್ಞಾನ, ವೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) ೪ ಆಣೆ; ಸಟೀಕಶತಕಸೂತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಸ್ತುತಿಮುಕ್ತಾವಳೀ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಸಟೀಕ ವೀರಶೈವ ದೀಕ್ಷಾವಿಧಿಯ 3 ನೆ ಮುದ್ರಣವು ಪುರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ॥ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿಗಳು,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 0—12—0.

ಈದೇ ಒಳ್ಳೇ ಸಮಯ ! ಈಗಲೇ ತರಿಸಿಕೊಳ್ಳಿ !
ಚಿನ್ನದಂತಾ ಈ ಸಮಯವನ್ನು ಕಳಕೊಳ್ಳಬೇಡಿ. ಮಾರಾಟಕ್ಕೆ ಉಳಿದಿರುವ ಸರಕು ಬಹಳ ಸ್ವಲ್ಪ. ಬೆಲೆ 4 ರೂಪಾಯಿ ಮಾತ್ರ.

39 **ಜರ್ಮನ್ ವಿದ್ಯುತ್ ಬೀಸಣಿಗೆ.**

ಪರಮಾಶ್ಚರ್ಯಕರವಾದ ಯಂತ್ರಗಳು.

ಇದು ಪ್ರತಿಮನೆಯಲ್ಲೂ ಇರಬೇಕಾದದ್ದು. ಈ ವಿಚಿತ್ರವಾದ ಯಂತ್ರವು ತಾನಾಗಿಯೇ ಬೀಸುತ್ತಾ ತಂಪನ್ನು ಸುರಿಸುವುದು. ಬೇಗ ತರಿಸಿಕೊಳ್ಳಿ.

ನಮ್ಮ ಕ್ಯಾಟಲಾಗನ್ನು ಬೇಡುವವರಿಗೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ—ಯಸ್. ಆರ್. ಕ್ರಿಷ್ಣ ಅಂಡ್ ಕೊ,
1 ತಂಬುನಾಯಕನಬೀದಿ, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



21

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಘಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ 6—8—0.
ಕೈಯಲ್ಲಿ ಕಟ್ಟುವ ಸರಪಣಿ ಸಹಿತ 7—0—0.

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಈ ನಮ್ಮ ಜಂಟಲ್‌ಮೆನ್ ಲೀವರ್ ವಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಯೂ, ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವುದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟಕ್ಕೆ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂತೆ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳ ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು.

ಕ್ರಯ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಸರಪಣಿ ಸಹಿತ 6-0-0
" " ಸರಪಣಿಯಿಲ್ಲದೆ 5-0-0

ವಿಳಾಸ:—ಮ್ಯಾನೇಜರ್, ಸ್ಟಾರ್ ಹೌಸ್,
ಪೋಸ್ಟ್‌ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೩—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦

ವಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ: ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯೆಂಜಾ ಪ್ಲೇಗುಜ್ವರ

ಮಕ್ಕಳ: ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕಲಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ವೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ.

48 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಪ್ರಪಂಚದಲ್ಲಿರುವವರಿಗೆಲ್ಲಾ ಸಂಗೀತ ವಿಷಯ ಸ್ಪಷ್ಟವಾಗಿ ತಿಳಿದ ವಿಷಯವೇ. ಈ ಜಲತರಂಗ ಅನ್ನುವ ಸಂಗೀತವಾದ್ಯವನ್ನು ಈ ಪಠದಲ್ಲಿ ತೋರಿಸಿರುವ ಪ್ರಕಾರ ಎರಡು ಸಣ್ಣ ಕಡ್ಡಿಗಳಿಂದ ಬಾರಿಸಿದರೆ ಹತ್ರ ನಿಂತು ಕೇಳುವವರಿಗೆ ಕಿವಿಗಳಿಗೆ ಬಹಳ ಇಂಪಾದ ಆನಂದವನ್ನು ಉಂಟುಮಾಡುವದು ಇದಲ್ಲದೆ ಹನ್ನೆರಡು ವಿಧವಾದ ಶಬ್ದಗಳಿಂದ ಸೇರಿದ ಸಂಗೀತವನ್ನುಂಟುಮಾಡುವದು.

ಇದನ್ನು ಸ್ತ್ರೀಯರು, ಪುರುಷರು ಮಕ್ಕಳು ಸಹ ಅತಿ ಸುಲಭವಾಗಿ ಈ ವಾದ್ಯವನ್ನು ಬಾರಿಸಬಹುದು. ಜಲತರಂಗ ಸಂಗೀತವಾದ್ಯವೆಂದು ಬಾರಿಸುವದನ್ನು ಅನೇಕರು ನೋಡಿಯೂ ಕೇಳಿಯೂ ಇರಬಹುದು. ಇಷ್ಟು ಸುಲಭಕ್ರಯಕ್ಕೆ ನೀವು ಎಂದಿಗೂ ಕೊಂಡುಕೊಂಡಿರಲಾರಿರಿ. ಒಂದನ್ನು ತರಿಸಿನೋಡಿರಿ. ಇದರ ಕ್ರಯ ರೂ. 1-0-0.

ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಮೊದಲಿನ ಕ್ರಯ ರೂಪಾಯಿ 2-0-0. ಈಗಿನ ಕ್ರಯ ರೂ. 1-0-0.

ಪಾಕೆಟ್ ಸಿನಾಸ್‌ಕೋಪ್ ಯಂತ್ರ.

ಈ ಸಿನಾಸ್‌ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರವು ಅಮೇರಿಕನ್ ಬಯಾಸ್ಕೋಪ್ ನಾಟಕಶಾಲೆಯಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ಏಜರೇಟ್ ರೋಸ್, ಪೆರಲ್ ವೈಟ್, ಪ್ರಿಡ್ಡೋ, ಜೇಮ್ಸ್‌ಸನ್, ಚಾರ್ಲಿ, ಚಾಪ್ಲಿನ್ ಮುಂತಾದವರ ನಿಜರೂಪವಾದ ಫೋಟೋಗ್ರಾಫುಗಳು ಈ ಯಂತ್ರದಲ್ಲಿ ಬಯಾಸ್ಕೋಪಿನಲ್ಲಿ ಕಾಣುವ ಹಾಗೆಯೇ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ 30 ಫೋಟೋ ಫಿಲಿಂಗಳು ಸೇರಿ ಯಂತ್ರ ಒಂದಕ್ಕೆ 1—0—0.

ವಿಳಾಸ—ರತ್ನಂ ಅಂಡ್ ಬ್ರದರ್ಸ್,
21 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಮೈಸೂರು ಸ್ಟಾರ್.

೧೯೨೩ ನೇಯ ಇಸವಿಯ ಡಿಸೆಂಬರ್ ತಾ|| ೧೭ನೆಯ ಭಾನುವಾರ.

ರಾಜಧಾನಿಯ ಆರೋಗ್ಯರಕ್ಷಣೆ.

[illegible]

ಲಾಟೀನಿಯಾ ಸಭೆ.

[illegible]

MYSORE REFORMS.

Immediately after the mixed committee was appointed, we protested against the personal of that committee, as half of its members belong to one community. The misgivings that we entertained at the time are being confirmed now. Mr. C. Srinivasa Rao one of the members of the committee has written to the Mysore Patriot of the 5th inst., that Associations like the Lingayet and the Central Mahomaden Associations have been deprived of their privilege of sending members to the Representative Assembly, but bodies representing commercial, planting, mining and educational interests and Inamdars have been allowed to have special representation. One of the reasons for this reactionary measure is said to be that the representatives used to be elected by a "coteri" of persons, who did not represent the different communities which the Associations represented. But we want to know the special claims of the other bodies, which the Committee have thought fit to recommend for the Franchise. Have we to take it that the Assembly hitherto did not and in future is not going to, consist of merchants, Planters, Inamdars and Jamindars, to whom this special privilege has been extended? As a matter of fact, the majority of members hitherto used to belong mostly to these classes. It is not that the Assembly was devoid of members belonging to Mahommaden, Lingayet and other backward communities. But these members were so many disorganised units and were hardly doing what was expected of them. Even when questions immediately concerning their respective communities came up they hardly expressed themselves. It is only after the Associations came to be represented that they got the proper lead and realised their rights, and the Assembly became representative in the real sense. The late Mr. Basavayya first entered the Assembly as the Representative of the Mysore Lingayet Education Fund Association, and so did Messrs. M. Subbiah and Mahomed Abbaskhan, as representatives of the Vokkaligara Sangha and the Central Mohamedan Association. It is needless to narrate here what they have done and achieved specially for their respective communities and generally for the masses in Mysore.

Formerly discussions in the Assembly were being taken up by not more than half a dozen self-constituted leaders, who posed themselves to represent any and every interest. The member who sent up the subject for discussion was no where. The long established tradition of the House was that the members who had brought up a particular subject were to stand in a body behind the back of one of these self-constituted leaders, who were known more to misrepresent than to represent the actual grievances of the people and give their support by their silent admiration. All this was put an end to by the representatives returned by the various Associations. The standard of discussion was considerably improved, and every member was made to realise that there was nothing like representing his grievance himself. Mr. C. Srinivasa Rao, we dare say, will himself bear witness to all these.

Every year during the Dassara Session of the Assembly, the Associations used to present addresses in which they ventilated their grievances, thereby forcing the Dewan to make some definite statement specifically answering the important questions referred to in the addresses. This was decidedly an improvement far in advance of the hackneyed reply, "noted for consideration."

The right of being represented in the Assembly came to be deemed as a valuable privilege by the people, and the communities like the Kurubers and the Adi-Dravidas, who were hitherto inarticulate organised themselves with a view to enjoy the privilege. It is hardly a couple of years since these organisations have been given the privilege and if they were to be deprived of it now, it is needless to say that it would considerably mar the progress of those communities.

It is beyond our comprehension how Mr. K. P. Puttanna Chetty, the President of the Mysore Lingayet Education Fund Association, Mr. M. Subbiah, the General Secretary of the Vokkaligara Sangha, and Mr. Mahomed Abbaskhan, the Secretary of the Central Mahommedan Association, gave their consent for such a proposal. Perhaps, they might have thought it a delicacy to oppose it being themselves connected with the associations concerned. If it is so, we wish to impress upon them that this is a subject of far-reaching consequence to the communities to which they belong, and that they should not by any such fine notions of delicacy give up the claims and the cause of the communities who look up to them to safeguard their interests in the Committee. The Reforms Committee may attempt to justify the disenfranchisement of these communal associations on the ground that they do not exist in other similra assemblies. But the Mysore Representative Assembly is itself a unique institution the like of which is to be found nowhere. The object should be more to suit the franchise to local conditions with the aim of securing the best representation of all interests, than to set about with theories of doubtful value to us here. There could be no justification in snatching this privilege once granted to the Associations and it almost savours of a definite desire to kill public opinion and thwart the growing desire of the various backward communities to play their part in the public life of the State. We fully hope that before the Reforms Committee close their labours they will have reconsidered this question and recommend the continuance of the privilege to the communal associations along with the other associations representing special interests.

PINJRAPOLE IN MYSORE.

A PUBLIC MEETING.

On Friday the 15th instant there was a crowded meeting at the Town Hall, Mysore convened by Mrs. Bowring to consider the establishment of a Pinjrapole in Mysore. The *elite* of Mysore including Messrs. Mirza, M. Ismail, Dr. Seal, P. F. Bowring, Dr. McGann, Simpon Superintendent of Veterinary Department, N. S. Subba Rao, A. R. Wadia, I. C. Rollo, Mahomed Sait, Vardamaniah, Amble Anniah Pandit, H. Nanjundaraj Urs, Dove Wilson, Azizkhan, Banumiah, M. N. Balaraj Urs, B. Ramanna, Dr. Mascarenhas, B. T. Kesavatengar, G. Satyaji Rao, S. Krishna Rao, Motumal Sait, Sawaidoss Sait, P. A. Bavaji, R. P. Mallappa, Ranajodha Singh, Sirajjudin, Krishna Rao and others were present. Mr. Bowring, our popular Deputy Commissioner, took the chair.

The Chairman read out the letters of sympathy received from His Highness the Maharaja who has graciously promised to contribute a donation of Rs. 500 and a monthly subscription of Rs. 50, and from H. H. the Yuvaraja, the British Resident, Sir M. Kantaraj Urs, who is at Calcutta, the Bishop of Mysore, Mr. A. R. Banerji, Dewan of Mysore, and Sri Swami of Parakal Mutt. Mrs. Bowring gave a very interesting speech which was listened to with rapt attention in which she detailed the scope, the nature of and the need for the institution and appealed to the public for support. Then Messrs. Amble Anniah Pandit, Mahomed Sait, Vardamaniah H. C. Dasappa, I. C. Rollo, Dr. Seal and Mr. Sreenivasan, the Veterinary Officer spoke on the subject. A list was sent round the audience, which was well subscribed. Mr. Wadia proposed a vote of thanks to the Chair and Mrs. Bowring, and the meeting terminated with three cheers to H. H. the Maharaja, H. H. the Yuvaraja and the Chairman.

It was a very successful and enthusiastic meeting and the public are to be thankful to Mrs. Bowring who has striven hard to bring it about. It rests with the citizens of Mysore now to put the Pinjrapole on an enduring basis and push forward the great humanitarian task.

ಸ್ವದೇಶದ ವೃತ್ತಾಂತಗಳು.

[illegible]

ಭರತಖಂಡದ ವೃತ್ತಾಂತಗಳು.

[illegible]

ನ್ಯಾಸಗಳನ್ನು ಮಾಡುತ್ತಿದ್ದರು. ಕಳೆದ 6 ನೆ ತಾರೀಖಿನಲ್ಲಿ ಇವರನ್ನು ಮಾಂಘೀರ್ ಪಟ್ಟಣದಲ್ಲಿ 108 ನೆ ಸೆಕ್ಷನ್ ತಪ್ಪಿತ ಮಾಡಿದರೆಂದು ಪೋಲೀಸರು ಹಿಡಿದು ವಿಚಾರಣೆಗೆ ಗುರುಪಡಿಸಿದ್ದಾರೆ. ಅಲ್ಲಿಯ ಕಾರಾಗೃಹದಲ್ಲಿ ಇವರ ವಿಚಾರಣೆಯು ನಡೆಯುತ್ತಿದೆ.

ಮದ್ಯದಂಗಡಿಯ ಬಳಿಯಲ್ಲಿ ನಿಂತು ಮದ್ಯಪಾನನಿರೋಧಕ ಬೋಧೆಯನ್ನು ಮಾಡುತ್ತಿದ್ದ 13 ಮಂದಿ ಕಾಂಗ್ರೆಸ್ ವಾಲಂಟಿಯರುಗಳಿಗೆ ಸಿರಾಗಂಜ್ ಡೆಪ್ಯುಟಿ ಮೇಜಿಸ್ಟ್ರೇಟರು 6 ತಿಂಗಳ ಕಠಿನ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದ್ದರು. ಸೆಷನ್ ಕೋರ್ಟಿನಲ್ಲಿ ಅಪೀಲಾಗಲು, ಆ ಬೋಧಕರನ್ನು ಅರೆಸ್ಟುಮಾಡಿದುದೂ ಶಿಕ್ಷಿಸಿದುದೂ ತಪ್ಪೆಂದು ಅವರು ತೀರ್ಮಾನಮಾಡಿದರು.

ಸಾರ್ವಭೌಮರಿಂದ ಅನುಗ್ರಹಿಸಲ್ಪಟ್ಟ ಬಿರುದಾಂಕನಗಳನ್ನು ಆವರವರಿಗೆ ಅರ್ಪಿಸುವ ದರ್ಬಾರನ್ನು ಮದ್ರಾಸ್ ಕಲೆಕ್ಟರು ಕಳೆದ ಶುಕ್ರವಾರ ಮದ್ರಾಸು ಪಚ್ಚಪ್ಪ ಕಲಾಶಾಲಾ ಭವನದಲ್ಲಿ ನೆರವೇರಿಸಿದರು. ಬಿರುದಾಂಕನಗಳನ್ನು ಪಡೆದವರೊಳಗೆ ಆದಿದ್ರಾವಿಡ ಪ್ರತಿನಿಧಿಯಾಗಿ ಶಾಸನಸಭೆಯಲ್ಲಿರುವ ಎಂ. ಸಿ. ರಾಜಾರವರು ರಾವ್‌ಬಹದ್ದೂರ್ ಪ್ರಶಸ್ತಿಯನ್ನು ಪಡೆದವರಾಗಿದ್ದಾರೆ.

ಹಕೀಂ ಅಜ್ಮಲ್ ಖಾನ್, ಪಂಡಿತ ಮೋತೀಲಾಲ್ ನೆಹ್ರೂ, ಸಿ. ಆರ್. ದಾಸ್—ಈ ಮೂವರೂ ಬರುವ ತಾ|| 18 ರಲ್ಲಿ ಯರೋಡಾ ಕಾರಾಗೃಹಕ್ಕೆ ಹೋಗಿ, ಅಲ್ಲಿರುವ ಮ|| ಗಾಂಧಿಯವರನ್ನು ಕಂಡು ಸಂಭಾಷಿಸಿ ಬರಲಿಕ್ಕೆ ಪ್ರಭುತ್ವದವರು ಅನುಮತಿಕೊಟ್ಟಿದ್ದರು. ಆದರೆ ಆ ಅಪ್ಪಣೆಯು ರದ್ದುಮಾಡಲ್ಪಟ್ಟಿತೆಂದು ಕಾರಾಗೃಹದ ಸೂಪರಿಂಟೆಂಡೆಂಟರು ತಂತಿಯ ಮೂಲಕ ತಿಳಿಯಿಸಿರುವರು.

ಸೀಮೆಯಲ್ಲಿ ನಡೆಯುವ ಸಾಮ್ರಾಜ್ಯ ವಸ್ತುಪ್ರದರ್ಶನದಲ್ಲಿ ಭರತಖಂಡದ ಸಾಮಗ್ರಿಗಳನ್ನು ಶೇಖರಿಸಿಡುವ ಭಾಗದ ಕಟ್ಟಡದ ನಿರ್ಮಾಣಕ್ಕಾಗಿ 17 ಲಕ್ಷ ರೂ. ಗಳನ್ನು ಭಾರತ ಪ್ರಭುತ್ವದವರು ಕೊಡುವುದಕ್ಕೆ ಅರ್ಥಿಕ ಸಂಘದವರು ತೀರ್ಮಾನಿಸಿದ್ದಾರೆ. ಸರ್ಕಾರವು ಹಣದ ಮುಗ್ಗಟ್ಟಿನಲ್ಲಿ ನರಳಾಡುತ್ತಿರುವಾಗ ಇಂಥ ದುಂದುವೆಚ್ಚಗಳು ಅನವಶ್ಯಕವಾಗಿ ಪ್ರಾಪ್ತವಾಗುತ್ತಿರುವುದನ್ನು ಕಂಡು ದೇಶೀಯರನೇಕರು ವಿಷಾದಪಡುತ್ತಿದ್ದಾರೆ.

ಜರ್ಮನಿಯ ಸುಪ್ರಸಿದ್ಧ ಸಂಸ್ಕೃತ ಪಂಡಿತರಾದ ಡಾಕ್ಟರ್ ವಿಂಟರ್ನಿಟ್ಸ್‌ರವರು ಡಾಕ್ಟರ್ ರವೀಂದ್ರನಾಥ ಠಾಕೂರ್‌ರವರ ಆಹ್ವಾನವನ್ನೊಪ್ಪಿ ಈ ದೇಶಕ್ಕೆ ಬಂದು ಈಗ ಕಲ್ಕತ್ತಾ ಪಟ್ಟಣದಲ್ಲಿದ್ದಾರೆ. ಕೆಲದಿನಗಳೊಳಗೆ ಇವರು ಬೋಲ್ಪುರದ ಶಾಂತಿನಿಕೇತನಕ್ಕೆ ಹೋಗಿ ಅಲ್ಲಿ ವರ್ಷಕಾಲ ವಿಶ್ವಭಾರತೀ ವಿದ್ಯಾರ್ಥಿಗಳಿಗೆ ಉಪನ್ಯಾಸಗಳನ್ನು ಕೊಡುವರು. ಮತ್ತು ಈ ದೇಶದಲ್ಲಿ ಅವರು ಇರುವಷ್ಟು ಕಾಲವೂ ಸಂಸ್ಕೃತ ಪ್ರಾಕೃತ ಲಿಖಿತ ಗ್ರಂಥಗಳನ್ನು ಶೇಖರಿಸುವರು.

ನಿಮ್ನಜಾತಿಯ ಹುಡುಗರಿಗೆ ಸ್ಕೂಲ್ ಫೈನಲ್ ಪರೀಕ್ಷೆಗೆ ರುಸುಮನ್ನು ತೆಗೆದುಕೊಳ್ಳದಂತೆ ಮಾಡಿ ಪ್ರೋತ್ಸಾಹಗೊಳಿಸಬೇಕೆಂದು ಕಳೆದ ಜನವರಿ ತಿಂಗಳ ಶಾಸನ ಸಭೆಯಲ್ಲಿ ಎಂ. ಸಿ. ರಾಜಾರವರು ಒಂದು ತೀರ್ಮಾನವನ್ನು ತಂದಿರಲು, ಅದಕ್ಕೆ ಸರ್ಕಾರದವರು ಒಪ್ಪಿಕೊಂಡಿದ್ದರು. ಅದಕ್ಕನುಗುಣವಾಗಿ ಆ ಅಧಿಪತ್ಯದಲ್ಲಿರುವ ಹೊಲೆಯ ಮಾದಿಗ ಮೊದಲಾದ ನಿಮ್ನಜಾತಿಯ ಹುಡುಗರಿಗೆಲ್ಲಾ ಆ ಸೌಕರ್ಯವನ್ನು ಒದಗಿಸಿದ ಅಪ್ಪಣೆಯನ್ನು ಈಗತಾನೇ ಮಾಡಿದ್ದಾರೆ. ಆ ಜಾತಿಗಳ ಬಡ ವಿದ್ಯಾರ್ಥಿ ಹೆಡ್ಮಾಸ್ಟರಿಂದ ಸರ್ಟಿಫಿಕೇಟನ್ನು ಪಡೆದು ಪರೀಕ್ಷಕಸಂಘಕ್ಕೆ ಕಳುಹಿಸಿಕೊಟ್ಟರೆ ಸಾಕು.

ಮಂಗಳೂರಿನಲ್ಲಿ ಎಂ. ಎಸ್. ಪ್ರಭು ಎಂಬುವರು ವರ್ಣಾಂತರ ಭೋಜನವನ್ನು ಮಾಡಿದರೆಂಬ ಕಾರಣದಿಂದ ಕಾಶೀಮಠದ ಸುಕೃತೀಂದ್ರಸ್ವಾಮಿಗಳು ಬಹಿಷ್ಕಾರ ಹಾಕಿದರು. ಮಾನನಷ್ಟವಾಯಿತೆಂದು ಸ್ವಾಮಿಗಳ ಮೇಲೆ ಎಂ. ಎಸ್. ಪ್ರಭುಗಳು ದಕ್ಷಿಣಕನ್ನಡದ ಸೆಷನ್ ಜಡ್ಜರಲ್ಲಿ ವ್ಯಾಜ್ಯಹೂಡಲು ಅವರು ಸ್ವಾಮಿಗಳಿಗೆ 51 ರೂ. ಅರ್ಥದಂಡವನ್ನು ವಿಧಿಸಿದರು. ಅವರು ಮದ್ರಾಸ್ ಹೈಕೋರ್ಟಿನಲ್ಲಿ ಅಪ್ಪೀಲು ಮಾಡಲಾಗಿ, ಬಹಿಷ್ಕಾರ ಕೊಡಲು ಅಧಿಕಾರವಿರುವ ಸ್ವಾಮಿಗಳು ಮಾಡಿದ ತೀರ್ಮಾನವನ್ನು ರದ್ದುಪಡಿಸಲಿಕ್ಕೆ ಕೋರ್ಟಿನವರಿಗೆ ಅಧಿಕಾರವಿಲ್ಲವೆಂದು ಹೇಳಿ ಅವರಿಗೆ ವಿಧಿಸಲ್ಪಟ್ಟಿದ್ದ ಅರ್ಥದಂಡವನ್ನು ತೊಲಗಿಸಿ ತೀರ್ಮಾನಕೊಟ್ಟರು.

ಕಲಕತ್ತಾ ವಿಶ್ವವಿದ್ಯಾಲಯಕ್ಕೆ ಬಂಗಾಳಾ ಪ್ರಭುತ್ವದವರು ವರ್ಷ 1ಕ್ಕೆ 3½ ಲಕ್ಷ ರೂ. ಗಳ ಸಹಾಯದ್ರವ್ಯವನ್ನು ಕೊಡುತ್ತಿದ್ದರು. ಆದರೆ ಈಗ ಕೆಲವು ಅಗೌರವಕರಗಳಾದ ನಿಬಂಧನೆಗಳನ್ನು ವಿದ್ಯಾಪೀಠದ ಮೇಲೆ ಹೇರುವುದಕ್ಕೆ ಪ್ರಭುತ್ವದವರು ಪ್ರಯತ್ನಿಸಿದುದರಿಂದ, ಇಂಥ ನಿರ್ಬಂಧಕ್ಕೆ ಸಿಕ್ಕಿ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಕ್ಕಿಂತ ಆ ಸಹಾಯದ್ರವ್ಯವನ್ನು ನಿರಾಕರಿಸಿಬಿಟ್ಟು, ಪ್ರಜೆಗಳಿಂದ ಭಿಕ್ಷೆಯನ್ನೆತ್ತಿಕೊಂಡಾದರೂ ವಿದ್ಯಾಪೀಠವನ್ನು ಸಾಗಿಸಿಕೊಂಡು ಹೋಗುವುದು ಮೇಲೆಂದು ವೈಸ್‌ಛಾನ್ಸಲರಾದ ಸರ್ ಅಶುತೋಷಚೌಧುರಿ, ಸರ್ ಪ್ರಫುಲ್ಲಚಂದ್ರರಾಯಿ ಪ್ರಭೃತಿಗಳು ನಿರ್ಧರಿಸಿ ಒಂದು ಫಂಡನ್ನು ಪ್ರಾರಂಭಿಸಿ ಪ್ರಕಟಪಡಿಸಿರುವರು. ಆ ಕೂಡಲೇ ಅಲ್ಲಿಯ ವಕೀಲರಲ್ಲಿ 100 ಮಂದಿಗಳು 18 ಸಾವಿರ ರೂ. ಗಳನ್ನು ಫಂಡಿಗೆ ಕೊಟ್ಟರು.

ತಿರುಚೂರಿಗೆ ಸಮೀಪದಲ್ಲಿರುವ ಕೊರತಿಕ್ಕರ ಎಂಬ ಗ್ರಾಮದಲ್ಲಿ ನಂಬೂದ್ರಿ ಬ್ರಾಹ್ಮಣರು ವಿಶೇಷವಾಗಿದ್ದಾರೆ. ಒಬ್ಬನ ಮನೆಯ ಶೂದ್ರಸೇವಕನು ಪೇಟೆಯಿಂದ ಕೊಂಡ ಸಾಮಾನುಗಳನ್ನು ತಲೆಯಮೇಲೆ ಹೊತ್ತುಬರುವಾಗ ಗೋಣಿ ಚೀಲವು ಭಾರವಾಗಿದ್ದುದರಿಂದ ಒಂದು ಬ್ರಾಹ್ಮಣನ ಮನೆಯ ಜಗತಿಯಮೇಲೆ ಇಳುಹಲಿಕ್ಕೆ ಪ್ರಯತ್ನಿಸಿ, ಬೇಡಿಕೊಳ್ಳಲಾಗಿ, ಮನೆಯೊಳಗೆ ಗಂಡಸು ಯಾರೂ ಇಲ್ಲದಿದ್ದುದರಿಂದ ಯಜಮಾನಿತಿಯೇ ಬಂದು ಕೈಕೊಟ್ಟು ಮೂಟೆಯನ್ನು ಇಳುಹಿಕೊಟ್ಟಳು. ಯಜಮಾನನು ಮನೆಗೆ ಬಂದಮೇಲೆ ಈ ಸಂಗತಿಯನ್ನು ಹೇಗೋ ತಿಳಿದು ಮಹಾಪಾಪವನ್ನು ನಡೆಯಿಸಿದಳೆಂದು ಪತ್ನಿಯನ್ನು ನಿಂದಿಸಿ ಮನೆಯಿಂದ ಹೊರಡಿಸಿಬಿಟ್ಟನು. ಆಕೆಯು ಆಗ್ರಹಗೊಂಡು ಒಬ್ಬ ಮಹಮ್ಮದೀಯನಿಂದ ಆದರಿಸಲ್ಪಟ್ಟು ಅವನನ್ನೇ ನಿಕಾಮಾಡಿಕೊಂಡು ಮಹಮ್ಮದೀಯ ಮತಕ್ಕೇ ಸೇರಿಹೋದಳು.

ಗಯೆಯಲ್ಲಿ ಸ್ವರಾಜ್ಯಪುರವೆಂಬ ಹೆಸರಿನ ಮಹಾ ಸಭಾಮಂಟಪದಲ್ಲಿ ಕಾಂಗ್ರೆಸ್ಸು ಈ ತಿಂಗಳು ತಾ|| 26ರಿಂದ ಆರಂಭಗೊಂಡು ನಾಲ್ಕು ದಿನಗಳ ಕಾಲ ನಡೆಯುವುದು. ತಾ|| 25 ರಲ್ಲಿ ಅಖಿಲ ಭಾರತ ಖಿಲಾಫತ್ ಮಹಾಸಭೆಯು ನಡೆಯುವುದು. ಎಷ್ಟು ಮಂದಿ ಪ್ರತಿನಿಧಿಗಳಾದರೂ ಸಭೆಗೆ ಬರಬಹುದು. ರೈತರಿಗಾಗಿ 1000 ಟಿಕೆಟ್ಟುಗಳು ಕಡಿಮೆ ಬೆಲೆಗೆ ಮಾರಲ್ಪಡುವುವು. ಸಾಧುಗಳಿಗಾಗಿ 100 ಸ್ಥಾನಗಳು ಉಚಿತವಾಗಿ ಏರ್ಪಡಿಸಲ್ಪಟ್ಟಿರುವುವು. ಸಭಿಕರೆಲ್ಲರೂ ಬರಿಯ ಕಾಲಲ್ಲಿ ನೆಲದ ಮೇಲಣ ಆಸ್ತರಣದ ಮೇಲೆ ಕುಳಿತುಕೊಳ್ಳಬೇಕು. ಜೋಡುಗಳನ್ನು ಮೆಟ್ಟಿ ಹೋದವರು ಅವುಗಳನ್ನು ಬಾಗಿಲಲ್ಲೇ ಕಳೆದುಬಿಟ್ಟು ಅಲ್ಲೇ ಮಾರಲಿಕ್ಕಿಟ್ಟಿರುವ 4 ಆಣೆ ಬೆಲೆಯ ಚೀಲಗಳಲ್ಲಿ ಆ ಜೋಡುಗಳನ್ನು ಹಾಕಿ ತಮ್ಮ ಹತ್ತಿರದಲ್ಲಿಟ್ಟುಕೊಳ್ಳಬೇಕೆಂದು ವಿಧಿಸಿದ್ದಾರೆ. ಈಸಲದ ಸಭೆಯಲ್ಲಿ ಪಕ್ಷದ್ವಯದ ಚರ್ಚೆಯಿಂದ ಗದ್ದಲವುಂಟಾಗಬಹುದೆಂಬ ಚಿಹ್ನೆಯು ತೋರುತ್ತಿರುವುದರಿಂದ 120 ಮಂದಿ ರಿಜರ್ವ್ ಪೋಲೀಸ್ ಕಾವಲನ್ನು ಸರ್ಕಾರದವರು ಏರ್ಪಡಿಸುವವರಾಗಿದ್ದಾರೆ.

ವಿದೇಶದ ವೃತ್ತಾಂತಗಳು

ಕೈಜರ್‌ರವರು ತಮ್ಮ ದ್ವಿತೀಯ ವಿವಾಹಕ್ಕೆ ಮುಂಚೆ ತಮಗೆ ಯೌವನವುಂಟಾಗುವುದಕ್ಕೆ ತಕ್ಕ ಚಿಕಿತ್ಸೆಯನ್ನು ಹೊಂದಿದರಂತೆ.

ಕಾನ್‌ಸ್ಟಾಂಟಿನೋಪಲ್ಲಿನಿಂದ ಪೂರ್ವಾಚಾರ ಪರಾಯಣರಾದ 110000 ಗ್ರೀಕರೂ, 15000 ಅರ್ಮೀನಿಯನ್ನರೂ 12000 ರಷ್ಯನ್ನರೂ, 7000 ಯೂಧರೂ, 6000 ತುರುಕರೂ, 20000 ಇತರ ಜಾತಿಗಳವರೂ ಹೊರಟುಹೋದರೆಂದು ಲೆಕ್ಕ ಹಾಕಲ್ಪಟ್ಟಿದೆ.

ರಾಜಹುಣ್ಣನ್ನು ಗುಣಪಡಿಸುವ ವೈದ್ಯರಿಗೆ 1 ಲಕ್ಷ ಡಾಲರನ್ನು ಬಹುಮಾನ ಮಾಡುತ್ತೇವೆಂದು ಲಾರ್ಡ್ ಅಥಲ್‌ಸ್ಟೋರವರು ಪ್ರಕಟಿಸಲಾಗಿ 41 ದೇಶಗಳಿಂದ ನಾವು ನಾವು ತಾವು ವಾಸಿಮಾಡಬಲ್ಲೆವೆಂದು 2715 ಮಂದಿಗಳು ಪ್ರತ್ಯುತ್ತರವನ್ನು ಕಳುಹಿಸಿರುವರು.

ನಷ್ಟಪರಿಹಾರವನ್ನು ಮಿತ್ರಮಂಡಲಿಗೆ ಸಮರ್ಪಿಸುವ ವಿಷಯದಲ್ಲಿ ಜರ್ಮನಿಯವರು ಇನ್ನು 2 ವರ್ಷಗಳನಂತರ 5 ವರ್ಷಗಳೊಳಗೆ ತೀರಿಸುವ ಕೆಲ ವಿಧಾನಗಳನ್ನು ತಿಳಿಯಪಡಿಸಿದ್ದರು. ಇದನ್ನು ಕುರಿತು ಪರ್ಯಾಲೋಚಿಸುವುದಕ್ಕಾಗಿ ಲಂಡನ್ ಪಟ್ಟಣದಲ್ಲಿ ಕಳೆದ ವಾರ ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಬೆಲ್ಜಿಯಂ, ಮಂತ್ರಿಗಳೆಲ್ಲಾ ಕೂಡಿ ಚರ್ಚಿಸಿದರು. ಚರ್ಚೆಯಲ್ಲಿ ಇಂಗ್ಲೀಷ್ ಮಂತ್ರಿ ಅಭಿಪ್ರಾಯವು ಫ್ರೆಂಚ್ ಮಂತ್ರಿಗೆ ಸರಿಬೀಳಲಿಲ್ಲ. ಜರ್ಮನರ ಉತ್ತರವು ಅಂಗೀಕೃತವಾಗಲಿಲ್ಲ. ಭಿನ್ನಾಭಿಪ್ರಾಯದಿಂದ ಸಭೆಯು ಮುಗಿದುಹೋದ ಕಾರಣ ಮರಳಿ ಇದೇ ವಿಷಯವನ್ನು ಪ್ಯಾರಿಸ್ಸಿನಲ್ಲಿ ಮುಂದಣ ಜನವರಿ ತಿಂಗಳಲ್ಲಿ ಸಭೆಗೂಡಿ ಚರ್ಚಿಸಿ ತೀರ್ಮಾನಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

"ಬಸವ ನಿರುಕ್ತಿ"

"ಬಸವ" ಎಂಬ ಶಬ್ದವು ವೃಷಭ ಎಂಬ ಸಂಸ್ಕೃತಶಬ್ದದ ತದ್ಭವರೂಪವೆಂದು ಅನೇಕರು ಭಾವಿಸುತ್ತಿರುವರು. ಪಾಲ್ಕುರಿಕೆ ಸೋಮನಾರಾಧ್ಯರೇ ಮೊದಲಾದ ಪೂರ್ವಾಚಾರ್ಯರುಗಳು ಇದನ್ನು ಸಂಸ್ಕೃತಶಬ್ದವೆಂದೂ ಬಸವೇಶ ಗುಣಗಣನಿರೂಪಕವಾದ ಸಾರ್ಥಕನಾಮವೆಂದೂ ಹಲವುತೆರದ ವ್ಯಾಖ್ಯಾನಮೂಲಕ ತಮ್ಮ ಗ್ರಂಥಗಳಲ್ಲಿ ಸ್ಥಾಪಿಸಿರುವರು. ಇದು ವೀರಶೈವ ಮಂಡಲಿಗೂ ಇತರರಿಗೂ ತಿಳಿದಿರಬೇಕಾದ ವಿಷಯವಾಗಿದೆ. ಈಗ ಶ್ರೀ ಚಿತ್ರದುರ್ಗದ ಜಗದ್ಗುರು ಮಹಾಸಂಸ್ಥಾನದ ಆಸ್ಥಾನ ವಿದ್ವಾಂಸರೊಬ್ಬರು ಇದೇ ಸಂಬಂಧವಾಗಿ ಬರೆದು ಕಳುಹಿಸಿರುವ ನಿರುಕ್ತಿಯನ್ನು ಇದರಡಿಯಲ್ಲಿ ಪ್ರಕಟಿಸಿರುತ್ತೇವೆ. ಪ. ಪ್ರ.

ತತ್ವಜ್ಞಃ ಸ್ಥಿರಯಮೋ ಯೋಗೀ ತೇಜಸ್ವೀ ಸ್ವಂತರಧ್ವರಃ |
ಅರಿಷಡ್ವರ್ಗಶೂನ್ಯಶ್ಚ ಬೋಧೋ ಬಸವನಾಮತಃ ||೧||

(1) ತಥಾಹಿ, ಬಂ-ಅಮಲಂ, ಸಂ-ಜ್ಞಾನಂ, ಯಸ್ಮಿನ್ ಬಸಃ. ಸಚಾಸೌ ವಃ—ಸಂಯಮಶ್ಚ = ಬಸವಃ (ಜ್ಞಾನೇ ಅಮಲತ್ವಂತು ಯಥಾರ್ಥ್ಯಂ) ತಥಾಚ-"ಬಸ" ಇತ್ಯಸ್ಯ ತತ್ವಜ್ಞೋಽರ್ಥಃ, "ವ" ಇತ್ಯಸ್ಯ ಸಂಯಮೋಽರ್ಥಃ, ತಸ್ಮಾದ್ಬಸವಪದಸ್ಯ ತತ್ವಜ್ಞಸಂಯಮಬೋಧಕತ್ವಮಸ್ತೀತಿ ಮಂತವ್ಯಂ.

(2) ಕಿಂಚ:—ಬಂ-ಅಮಲಂ, ಸಂ-ಧ್ಯಾನಂ, ಯಸ್ಮಿನ್ = ಬಸಃ (ಧ್ಯಾನಂನಾಮ ಸ್ಮರಣವಿಶೇಷಃ, ಅಸ್ಮಿನ್ ಅಮಲತ್ವಂತು ಧ್ಯೇಯವಸ್ತ್ವತಿರಿಕ್ತವಸ್ತುವಿಷಯಕತ್ವಂ; ಧ್ಯೇಯಮಾತ್ರ ವಿಷಯಕತ್ವಮಿತಿ ಯಾವತ್ ತಚ್ಚ ಯೋಗಿನಾಂ ಧ್ಯಾನೇ ಸಂಭವತಿ. ಅನ್ಯೇಷಾಂ ಧ್ಯಾನಸ್ತು ಬಾಹ್ಯನಾನಾವಿಷಯಕತ್ವಾದಶುದ್ಧಂ) "ಯೋಗಶ್ಚಿತ್ತವೃತ್ತಿನಿರೋಧಃ" ಇತಿ ಯೋಗಸೂತ್ರಸ್ಯ ಸತ್ವಾತ್, "ಬಸ" ಇತ್ಯಸ್ಯ ಯೋಗೀತ್ಯರ್ಥೋ ಜಾತಃ ಬಸಶ್ಚ ಯೋಗೀಚಾಸೌ ವಃ ಸಂಯಮಶ್ಚ-ಬಸವಃ. ಯೋಗೀನಿಗ್ರಹವಾನಿತಿಯಾವತ್.

(3) ಅಥಚ ಬಾ-ಅಮಲಾ, ಸಾ-ದೇಹಕಾಂತಿ ರ್ಯಸ್ಯ ಸಃ ಬಸಃ ಸಚಾಸೌ ವಃ-ಸಾತ್ವಿಕಶ್ಚ = ಬಸವಃ. ಏವಂ ಸಮಾಸೇ ಕೃತೇ ಬಸವ ಇತ್ಯಸ್ಯ ತೇಜಸ್ವೀ ಸಾತ್ವಿಕೋಽರ್ಥಃ.

(4) ಅಪಿಚ-ಬಃ-ವಿಭೂತಿಕಾರಃ, ಸವಃ-ಅಧ್ವರಃ, ಯಸ್ಯಸಃ = ಬಸವಃ. ಏವಂ ಸಮಾಸೇ ಕೃತೇ, ಬಸವಶಬ್ದಸ್ಯ ಅಣಿಮಾದ್ಯಷ್ಟೈಶ್ವರ್ಯಕಾರೋ ಯೋ ಯಜ್ಞಸ್ತದ್ವಾನಿತ್ಯರ್ಥೋ ಜಾಯತೇ (ತಥಾಚ ಸ್ವರ್ಗಾದಿಕ್ಷಣಿಕಾಲ್ಪ ಫಲದಾಯಕ ಪಶುಹಿಂಸಾರೂಪ ಯಜ್ಞಶೂನ್ಯಃ, ಮಹಾಫಲದಾಯಕಾಂತರ್ಯಾಗವಾನಿತಿ ಜ್ಞಾಯತೇ).

(5) ಅಥಾಪಿ, ಬಸ್ಯ-ಮದಸ್ಯ, ಸಂ-ನಿವಾರಣಂ "ಬಸಂ" ಬಸವಃ-ಸಾತ್ವಿಕಃ = ಬಸವಃ. (ತಾಮಸಗುಣಜನ್ಯ ಮದನಿವಾರಣೇ ಸತ್ವಗುಣಪ್ರಧಾನಃ ಅರಿಷಡ್ವರ್ಗಶೂನ್ಯ) ಇತಿಯಾವತ್.

ಅತ್ರ ಕೋಶಃ:—ನಾನಾರ್ಥರತ್ನಮಾಲಾಯಾಂ-"ಬಃ ಕುಂಭೇ ವರುಣೇ ಬಿಂದೌ ವಿಕಲ್ಪೇಚ ಗುರೌ ಮದೇ | ವಿಭೂತಿಕಾರೇ ಕಲಶೇ ಪಕ್ಷೇ ಗರ್ಭೇಚ ಪರ್ವಣಿ || ಸಃ ಪುಂಸ್ಯುಮಾಸುತೇ ವಾಯೌ ದೇಹಕಾಂತೌ ತು ಸಾ ಸ್ತ್ರಿಯಾಂ | "ಸಂ ಕ್ಲೀಬೇ ಸ್ಯಂದನಪಥೇ ಜ್ಞಾನೇ ಧ್ಯಾನೇ ನಿವಾರಣೇ || ಬಾಸ್ತ್ರಿಯಾಂ ಕಾಹಳೇ ವಲ್ಲೀ ಶೃಂಖಲಾ ಸ್ವಮಲೇ ತ್ರಿಷು" | ವಃ ಪುಮಾನ್ ಸಾತ್ವಿಕೇ ವಾಯೌ ಸಂಯಮೇ ವರುಣೇ ಸ್ವರೇ "ಯಜ್ಞಸ್ಸೋಽಧ್ವರೋಯಾಗಃ" ಇತ್ಯಮರಃ.

ಏವಮೇವ ಬಸವಪದಸ್ಯ ಮಹತ್ವಾತಿಶಯದ್ಯೋತಕ ನಾನಾರ್ಥಪ್ರತಿಪಾದಕತ್ವಮಸ್ತೀವ. ಕಿಂಚ ಯಥಾಕ್ರಮ ಮನಿನಾಮಾಂ ವರ್ಣಾನಾಂ ಬಿಂದುನಾದಕಲಾವಾಚಕತ್ವಾತ್, ಪ್ರಣವಘಟಕತ್ವೇನಚ, ಉಚ್ಚಾರಣೇನ ಮಹಾಫಲದಾಯಕತ್ವಂ. ಅತಏವ ಸರ್ವಜ್ಞೇನ ಭಗವತಾ ಬಿಜ್ಜಳಕಾಲೀನ ಸಚಿವಾಯ ತತ್ವಜ್ಞ ಸಂಯಮಿನಃ, ತೇಜಸ್ವಿನೇ, ಯೋಗಿನೇ, ಅರಿಷಡ್ವರ್ಗಶೂನ್ಯಾಯ, ಆರಾಧ್ಯಶೈವ ಬ್ರಾಹ್ಮಣಕುಲೋತ್ಪನ್ನಸ್ಯಾಪಿ ಪರಿತ್ಯಕ್ತ ಶ್ರಾದ್ಧಾದಿಕರ್ಮಣೇ, ವೀರಶೈವ ಮಹಾವ್ರತಶೀಲತ್ವಾತ್ ಅಂತರಧ್ವರಃ, ಕಿಂಬಹುನಾ ದ್ವಿತೀಯಶಂಭುರಿತಿ ಪ್ರಖ್ಯಾತಿಮಾಂಶ್ಚ ಭವಿಷ್ಯತೀತಿ ಮತ್ವಾ, ಪ್ರಣವಘಟಕ ತ್ರಿವರ್ಣಘಟಿತಂ ಉಕ್ತಮಹತ್ವಪ್ರದರ್ಶನಾರ್ಥಂ ಬಸವೇತಿ ಯನ್ನಾಮ ನಿಹಿತಂ ತದ್ವಿಹಿತಮೇವ. ಯಥಾ ಏತತ್ಕಾಲಿಕನೃಪೈಃ ಪುರುಷವಿಶೇಷಾಯ ಗುಣಾತಿಶಯಂ ದೃಷ್ಟ್ವಾ "ರಾಜಸಭಾಭೂಷಣ" "ಧರ್ಮಪ್ರವರ್ತಕ" "ಕವಿರತ್ನ" ಇತ್ಯಾದಿ ಪ್ರಾಶಸ್ತ್ಯಬೋಧಕಮಭಿಧಾನಂ ದೀಯತೇ, ತದ್ವದೇತಿ ಸದಾ ಸುಧೀಭಿರಿದ ಮಾದರಣೀಯಂ.

ಶ್ಲೋ || ಯೇನೇದಂ ನಿಹಿತಂ ನಾಮ ಬಸವೇತ್ಯಕ್ಷರತ್ರಯಂ |
ತತ್ವಜ್ಞಾದ್ಯರ್ಥಸಂಬೋಧಂ ಜೀಯಾತ್ಸ ಸರ್ವಜ್ಞ ಶಂಕರಃ ||

ಇದರ ತಾತ್ಪರ್ಯ :—

ಬಸವ ಶಬ್ದಕ್ಕೆ ಈ ಕೆಳಗೆ ತೋರಿಸಲ್ಪಟ್ಟಿರುವ 5 ವಿಧವಾದ ವ್ಯಾಖ್ಯಾನದಿಂದ ಆ ಬಸವೇಶನು ತತ್ವಜ್ಞಾನಸಂಪನ್ನನೂ, ಶರೀರೇಂದ್ರಿಯಾದಿ ವೈರಾಗ್ಯಸಂಪನ್ನನೂ ಸತ್ಯ ಅಹಿಂಸೆ ಅಸ್ತೇಯ ಮೊದಲಾದುವುಗಳಿಂದ ಕೂಡಿದ ಮಹಾಶಿವಯೋಗೀಶನೂ, ಕೇವಲ ಶೈವತೇಜಸ್ಸಂಪನ್ನನೂ, ಅಣಿಮಾದ್ಯಷ್ಟೈಶ್ವರ್ಯ ಪ್ರದಾಯಕವಾದ ಅಂತರ್ಲಿಂಗಾನುಸಂಧಾನರೂಪ ಮಹಾಯಜ್ಞಸಂಪನ್ನನೂ, ಕಾಮಾದ್ಯರಿಷಡ್ವರ್ಗರಹಿತನೂ ಎಂಬರ್ಥವು ಸಿದ್ಧವಾಗುತ್ತದೆ. ಆದುಕಾರಣ ಅಂತಪ್ಪ "ಬಸವ" ಎಂಬ ನಾಮದ ಧ್ಯಾನ ಪಠನಶ್ರವಣಾದಿಗಳನ್ನು ಮಾಡುವವರಿಗೆ ತತ್ವಜ್ಞಾನಾದಿ ಮಹಾಫಲಗಳು ಸಿದ್ಧಿಸುವುವೆಂದು ಅರಿಯಬೇಕು.

ವ್ಯಾಖ್ಯಾನದ ಒಂದನೆ ರೀತಿ ಹೇಗೆಂದರೆ—ಬಸವ ಎಂಬಲ್ಲಿನ ಬಕಾರಕ್ಕೆ ನಿರ್ಮಲವೆಂದರ್ಥ, ಸಕಾರಕ್ಕೆ ಜ್ಞಾನವೆಂದರ್ಥ, ವಕಾರಕ್ಕೆ ಶರೀರೇಂದ್ರಿಯಾದಿ ವೈರಾಗ್ಯದಿಂದ ಗೃಹೀತವಾದ ಅಹಿಂಸಾದಿಗಳೆಂದರ್ಥ. ಏತೇನ ಯಾವಾತನು ನಿರ್ಮಲವಾದ ಜ್ಞಾನದಿಂದ ಕೂಡಿದವನೂ, ಸತ್ಯ ಅಹಿಂಸೆ ಅಸ್ತೇಯ ಮೊದಲಾದ ಸಾತ್ವಿಕಗುಣಗಳಿಂದ ಸಂಪನ್ನನೂ ಆಗಿರುವನೋ ಆತನು ಬಸವನೆಂದಭಿಪ್ರಾಯವು.

2ನೆ ರೀತಿ—ಬ-ನಿರ್ಮಲವಾದ, ಸ-ಧ್ಯಾನ (ನಿರ್ಮಲವಾದ ಈಶ್ವರಚಿಂತನೆ) ಉಳ್ಳವನೂ, (ಇಲ್ಲಿ ಈಶ್ವರಚಿಂತನೆಗೆ ನಿರ್ಮಲತ್ವ ವಿಶೇಷಣವೇತಕ್ಕೆಂದರೆ—ಧ್ಯಾನಿಸಲ್ಪಡತಕ್ಕ ವಸ್ತುವಿನ ಹೊರತು ಅನ್ಯತ್ರ ಚಲಿಸದೆ ಇರತಕ್ಕ ಚಿಂತನೆ ಯಾವುದುಂಟೋ ಅದೇ ನಿರ್ಮಲಧ್ಯಾನವೆನ್ನಿಸಿಕೊಳ್ಳತಕ್ಕದು. ಅಂಥ ಚಿಂತನೆಯು ಯೋಗಿಗಳಿಗೆ ಮಾತ್ರ ಸಾಧ್ಯವು. ಇತರರು ಮಾಡತಕ್ಕ ಧ್ಯಾನವಾದರೊ ನಾನಾವಿಷಯಗಳಲ್ಲಿ ಚಲಿಸಾಡುತ್ತಿರುವುದರಿಂದ ಅದು ಮಲಿನವಾದ ಧ್ಯಾನವು) ಏತೇನ ಬಸ ಎಂಬ ಪದಕ್ಕೆ ನಿರ್ಮಲಧ್ಯಾನಸಂಪನ್ನನೆಂದರ್ಥವಾಯಿತು. ವ ಎಂಬ ಪದಕ್ಕೆ ಸಂಯಮವೆಂದರ್ಥವು ಸಿದ್ಧವಾಗಿರುವುದು. ಆದುಕಾರಣ "ಬಸವ" ಎಂದರೆ ನಿರ್ಮಲಧ್ಯಾನಸಂಪನ್ನನೂ ಶರೀರೇಂದ್ರಿಯಾದಿ ವೈರಾಗ್ಯಸಂಪನ್ನನೂ ಆದ ಯೋಗೀಶನೆಂದಭಿಪ್ರಾಯವು.

3ನೆ ರೀತಿ—ಬಾ-ನಿರ್ಮಲವಾದ, ಸಾ-ದೇಹಕಾಂತಿಯುಳ್ಳವನೂ, ವ-ಸಾತ್ವಿಕಗುಣಸಂಪನ್ನನೂ ಎಂಬ ಸಮಾಸದಿಂದ ಬಸವ ಪದಕ್ಕೆ ಮಹಾಶೈವತೇಜಸ್ಸಂಪನ್ನನೂ ಸಾತ್ವಿಕಗುಣಸಂಪನ್ನನೂ ಎಂಬರ್ಥವು ಸಿದ್ಧವಾಗಿರುವುದು.

4ನೆ ರೀತಿ—ಬ-ಅಣಿಮಾದ್ಯಷ್ಟೈಶ್ವರ್ಯಪ್ರದವಾದ, ಸವ-ಯಾಗವುಳ್ಳವನು (ಎಂದರೆ-ಕ್ಷಣಿಕಸ್ವರ್ಗಾದಿ ಅಲ್ಪಫಲಪ್ರದಗಳಾದ ಪಶುಹಿಂಸಾರೂಪ ಯಜ್ಞವನ್ನಾಚರಿಸದೆ ಶಾಶ್ವತಮುಕ್ತಿಪ್ರದವಾದ ಅಂತರ್ಲಿಂಗಾನುಸಂಧಾನರೂಪ ಮಹಾಯಾಗಸಂಪನ್ನನೆಂದರ್ಥವು.

5ನೆ ರೀತಿ—ಬ-ಅಹಂಕಾರದ, ಸ-ನಿವಾರಣೆಯಲ್ಲಿ ಸಮರ್ಥವಾದ, ವ-ಸಾತ್ವಿಕಗುಣಪ್ರಧಾನನಾದವನು. (ಎಂದರೆ ತಾಮಸಗುಣದಿಂದ ಹುಟ್ಟುವ ದುರಹಂಕಾರವನ್ನು ನಿರ್ಮೂಲವಾಡುವುದರಲ್ಲಿ ಸಮರ್ಥವಾದ ಸತ್ವಗುಣಾತಿಶಯವುಳ್ಳವನು, ಕಾಮಾದ್ಯರಿಷಡ್ವರ್ಗ ಶೂನ್ಯನೆಂದಭಿಪ್ರಾಯವು.

ಮೇಲಿಕಂಡ ರೀತಿಯಲ್ಲಿ ಬಕಾರಾದಿಗಳಿಗೆ ಅರ್ಥವನ್ನು ಮಾಡುವುದಕ್ಕೆ ಸಾಧಕವಾದ ನಾನಾರ್ಥರತ್ನಮಾಲಾದಿ ಕೋಶಪ್ರಮಾಣವು "ಬಃ ಕುಂಭೇವರುಣೇ" ಎಂಬುದಾದಿಯಾಗಿ "ಯಜ್ಞಸ್ಸೋಽಧ್ವರೋಯಾಗಃ" ಎನ್ನುವವರೆಗಣ ಶ್ಲೋಕಗಳಿಂದ ನಿರೂಪಿತವಾಗಿದೆ.

ಹೀಗೆಯೇ ಬಸವಪದವು ಮಹತ್ವಾಧಿಕ್ಯವನ್ನು ಪ್ರತಿಪಾದಿಸುವ ನಾನಾವಿಧಾರ್ಥಗಳುಳ್ಳದಾಗಿದೆ. ಅಲ್ಲದೆ ಬ-ಸ-ವ ಎಂಬ ಈ ಮೂರಕ್ಷರಗಳೂ ಬಿಂದು, ನಾದ, ಕಲಾವಾಚಕಗಳಾಗಿಯೂ, ಪ್ರಣವಸಂಘಟಕವಾಗಿಯೂ ಇರುವಕಾರಣ, ಈ ಬಸವ ನಾಮೋಚ್ಚಾರಣವು ಮಹಾಫಲಸಿದ್ಧಿಯನ್ನುಂಟುಮಾಡತಕ್ಕದಾಗಿರುವುದು. ಆದುದರಿಂದಲೇ ಸರ್ವಜ್ಞನಾದ ಶ್ರೀ ಪರಮೇಶ್ವರನು ಈತನು ಆರಾಧ್ಯಬ್ರಾಹ್ಮಣ ಕುಲೋತ್ಪನ್ನನಾಗಿದ್ದರೂ ಮುಂದೆ ಮಹಾತತ್ವಜ್ಞಾನಸಂಪನ್ನತ್ವ ತೇಜಸ್ವಿತ್ವ ಯೋಗಿತ್ವ ಅರಿಷಡ್ವರ್ಗಶೂನ್ಯತ್ವಾದಿ ಮಹಾಗುಣಸಂಪನ್ನನೂ, ಮಹಾವೀರಶೈವ ವ್ರತಸಂಪನ್ನನಾದುದರಿಂದ ಶ್ರಾದ್ಧಾದಿಕರ್ಮಜಡತಾದೂರನೂ, ಅಂತರ್ಯಾಗಸಂಪನ್ನನೂ, ದ್ವಿತೀಯಶಂಭುವೆಂಬ ಪ್ರಖ್ಯಾತಿಯನ್ನು ತಾಳಿದವನೂ ಆಗುವನೆಂದು ತಿಳಿದು ಆತನ ಮಹತ್ವವನ್ನು ಪ್ರತಿಪಾದಿಸತಕ್ಕದಾದ ಸಾರ್ಥಕವಾದ "ಬಸವ" ಎಂಬ ಪ್ರಶಸ್ತನಾಮವನ್ನು ಈತನಿಗೆ ಇಟ್ಟದ್ದು ಯುಕ್ತವೇ ಆಗಿರುವುದು. ಈಗಲೂ ಕೂಡ ಪ್ರಪಂಚದಲ್ಲಿ ರಾಜಾಧಿರಾಜರುಗಳು ಮಹಾಪುರುಷರುಗಳಿಗೆ "ರಾಜಸಭಾಭೂಷಣ, ಧರ್ಮಪ್ರವರ್ತಕ, ಕವಿರತ್ನ" ಮೊದಲಾದ ಬಿರುದುಗಳನ್ನು ಕೊಡುವುದು ಪ್ರಸಿದ್ಧವಾಗಿಯೇ ಇದೆ. ಪರಶಿವನೂ ಕೂಡ ಬಿಜ್ಜಳನ ಮಂತ್ರಿಯಾಗಿದ್ದ ಕಲ್ಯಾಣದ ಬಸವೇಶನಿಗೆ ಆ ಹೆಸರನ್ನು ಇಟ್ಟುದು ಅನ್ವರ್ಥವೆಂದು ಅಭಿಜ್ಞರು ತಿಳಿಯಬೇಕು.

ಇಂಥ ಉತ್ಕೃಷ್ಟಾರ್ಥ ಬೋಧಕವಾದ "ಬಸವ" ಎಂಬ ಮೂರಕ್ಷರದ ಹೆಸರನ್ನು ಯಾವಾತನು ಇಟ್ಟನೋ ಅಂಥ ಸರ್ವಜ್ಞ ಪರಮೇಶ್ವರನು ಜಯಶೀಲನಾಗಲಿ.

ಸಾಧುವೀರಶೈವ ಮಂಡಲಿಗೆ ವಿನಂತಿ.

ತಾ|| 26-11-22 ನೆ ಸ್ಟಾರ್ ಪತ್ರಿಕೆಯಲ್ಲಿ "ಶಿದ್ರಾಮಪ್ಪ ತಾಳ್ಯ" ಎಂಬುವರು ಸಾಧುಸದ್ಧರ್ಮ ವೀರಶೈವ ಮೂರನೆ ಮಹಾಸಭೆಯೆಂಬ ಅಗ್ರಲೇಖನವನ್ನು ಬರೆದು ಅದರಲ್ಲಿ ಉದಾಹರಿಸಿದ್ದ ಲೇಖನದ ಸಾರಾಂಶವನ್ನು ವಾಚಕಮಹಾಶಯರು ಗ್ರಹಿಸಿಕೊಂಡಿರಬಹುದು. ತಾ|| 10-11-22 ರಲ್ಲಿ ಚನ್ನಗಿರಿ ತಾಲ್ಲೂಕು ಕಕ್ಕರ್ಗೊರಲ್ಲಿ ಈ ಸಭೆಯನ್ನು ಸೇರಿಸಿದ್ದಾಗಿಯೂ ಇದಕ್ಕೆ ತುಮಕೂರು ತಾಲ್ಲೂಕು ಅಮಲ್ದಾರ್ ಮ|| ಬಿ. ಲಿಂಗಯ್ಯನವರು ಅಧ್ಯಕ್ಷರಾಗಿದ್ದರೆಂತಲೂ ಪನ್ನೆರೆ ಪ್ರಚಾರಪಡಿಸಿದೆ. ಇದರಲ್ಲಿ ಸಾಧುವೀರಶೈವರಿಗೆ ಎಂಥಾ ಅನರ್ಥವಾದ ಸಂಭವವಿದೆಯೆಂಬುದನ್ನು ಪ್ರತಿಯೊಬ್ಬ ಸಾಧುವೀರಶೈವನೂ ಊಹಿಸಿಕೊಂಡಿದ್ದಾಗ್ಯೂ, ನಾನು ಇಲ್ಲಿ ಸ್ವಲ್ಪ ಉದಾಹರಿಸುತ್ತೇನೆ. ಈ ನವನಾಗರಿಕ ಕಾಲದಲ್ಲಿ ಪ್ರತಿಯೊಂದು ಮತೀಯರೂ ಏಕಮತ್ಯವನ್ನು ಹೆಚ್ಚಿಸಿ ಸಮಾಜೋನ್ನತಿಗೆ ಅವಕಾಶವನ್ನುಂಟುಮಾಡಿಕೊಳ್ಳಬೇಕೆಂದು ಪ್ರಯತ್ನಪಡುತ್ತಿರುವಾಗ ವೀರಶೈವ ಸಮಾಜದಲ್ಲಿ ಸಾಧುಸದ್ಧರ್ಮ ವೀರಶೈವರೆಂಬ ಒಂದು ಹೊಸಪಂಗಡವನ್ನು ಕಲ್ಪಿಸಿಕೊಂಡು, ಇದಕ್ಕೆ ಬಹುಸೂಕ್ಷ್ಮವಾದ ಆಲೋಚನೆಯನ್ನರಿಯದೆ ಇರುವ ನಮ್ಮ ಪಂಗಡದಲ್ಲಿ ಕೆಲವರನ್ನು ಗುಂಪುಕೂಡಿಸಿಕೊಂಡು ಈ ಗುಂಪಿನವರ ವಿದ್ಯಾಭಿವೃದ್ಧಿಗೆ ಒಂದು ಧನರಾಶಿಯನ್ನು ಶೇಖರಮಾಡಿ ಈ ಮೂಲಕ ಪ್ರಖ್ಯಾತರೆನಿಸಿಕೊಳ್ಳಬೇಕೆಂಬ ಹುಚ್ಚುಹತ್ತಿರುವದು ನೋಡಿದರೆ ನಮ್ಮ ಅಮಲ್ದಾರ್ ಮ|| ಬಿ. ಲಿಂಗಯ್ಯನವರು ವಿದ್ಯಾವಿಶಾರದರಾಗಿ ಕಾಲಮಾನವನ್ನು ಬಲ್ಲವರಾಗಿ ಇಂಥ ಅಲ್ಪಸಂಕಲ್ಪಕ್ಕೆ ಪ್ರಯತ್ನಪಟ್ಟದ್ದು ಸಖೇದಾಶ್ಚರ್ಯವನ್ನುಂಟುಮಾಡುತ್ತೆ. ನಮ್ಮ ವೀರಶೈವ ಸಮಾಜದಲ್ಲಿ ಮೈಸೂರು ವೀರಶೈವ ವಿದ್ಯಾವರ್ಧಕ ಫಂಡ್, ಧಾರವಾಡ ವೀರಶೈವ ವಿದ್ಯಾವರ್ಧಕ ಫಂಡು, ಶಿರಸಂಗಿ ದೇಸಾಯರ ಫಂಡ್ ಇವೇ ಮೊದಲಾಗಿರತಕ್ಕ ಧನರಾಶಿಗಳೂ, ಬೆಂಗಳೂರು ರಾವಬಹದ್ದೂರ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಸತ್ರ, ಬೆಂಗಳೂರು ಶ್ರೀ ಜಯದೇವ ಹಾಸ್ಟಲ್, ಚಿತ್ರದುರ್ಗ ಶ್ರೀ ಜಗದ್ಗುರು ಬೋರ್ಡಿಂಗ್, ಧಾರವಾಡ ಶ್ರೀ ಮುರುಘರಾಜೇಂದ್ರ ಫ್ರೀ ಬೋರ್ಡಿಂಗ್ ಇವೇ ಮೊದಲಾಗಿರತಕ್ಕ ಸಮಾಜೋತ್ಕರ್ಷಪ್ರದವಾದ ಅನೇಕ ಸಹಾಯಸಂಪತ್ತಿನ ವಿದ್ಯಾಫಂಡುಗಳೂ, ವಿದ್ಯಾರ್ಥಿನಿಲಯಗಳೂ ಇದ್ದಾಗ್ಯೂ ಇವುಗಳಲ್ಲಿ ನಮ್ಮ ಪಂಗಡಕ್ಕೆ ಇದ್ದ ಭಾಗಪಾತ್ರತೆಯನ್ನು ಕಳೆದುಕೊಂಡು ಗಂಗಾನದಿಯ ದರ್ಶನಸ್ಪರ್ಶನಾದಿಗಳಿಂದ ನಮ್ಮ ದಾರಿದ್ರ್ಯವೂ ಪಾಪವೂ ವಿಮೋಚನೆಯಾಗುವದನ್ನು ಸಹಿಸಲಾರದೆ ಗಂಗಾನದಿಯ ಪಕ್ಕದಲ್ಲಿಯೇ ಇದ್ದುಕೊಂಡೂ ಕೊಳಚೆಯಾದ ನೀರೇ ನಮಗೆ ಪವಿತ್ರವೆಂಬ ಮರುಳರ ಪಾಡು ನಮಗಾಗುತ್ತೆಂಬುದನ್ನು ಯಾಕೆ ಊಹಿಸದೆ ಹೋದರೋ ಎಂದು ವಿಷಾದಿಸಬೇಕಾಗಿದೆ. ಬಹುಭಾಗದ ವೀರಶೈವ ಸಮಾಜದ ಮಹನೀಯರೆಲ್ಲಾ ಬೇಕಾದಷ್ಟು ಧನರಾಶಿಯನ್ನು ಶೇಖರಿಸಿ ತನ್ಮೂಲಕ ನಮ್ಮ ಸಮಾಜಬಾಂಧವರೆಲ್ಲಾ ವಿದ್ಯಾವಂತರಾಗಿ ಸುಖಿಗಳಾಗಲೆಂದು ಹಾರೈಸಬಾರದೆ ? ನಮ್ಮ ಮೈಸೂರು ಸೀಮೆಯಲ್ಲಿ ವೀರಶೈವ ಸಮಾಜದಲ್ಲಿ ಸುಮಾರು 7 ಲಕ್ಷ ಪ್ರಜೆಗಳಿರಬಹುದು. ಇದರಲ್ಲಿ ಸಾಧುವೀರಶೈವರೆಂಬುವರಿದ್ದರೆ 25-30 ಸಾವಿರ ಪ್ರಜೆಗಳಿರಬಹುದು. ಅದರಲ್ಲಿಯೂ ಅತಲ್ಪಜನರೇ ಸೇರಿ (ಇದರಲ್ಲಿ ಅನೇಕರು ತಮ್ಮ ಗೃಹಕೃತ್ಯವನ್ನು ನಿರ್ವಹಿಸಿಕೊಳ್ಳುವುದಕ್ಕೂ ಅಸಮರ್ಥರು) ಇಷ್ಟರೊಳಗೆ ಒಂದು ಸಂಘವನ್ನು ಮಾಡಿ ಈ ಸಂಘದಿಂದ ಒಂದು ಧನರಾಶಿಯನ್ನು ಮಾಡಿಕೊಂಡರೆ ಇದು ಎಷ್ಟರಮಟ್ಟಿಗೆ ಫಲಕಾರಿಯಾದೀತು ? ಇದೇಪ್ರಕಾರ ಬೊಂಬಾಯಿ ಇಲಾಖೆಯಲ್ಲಿ ನಮ್ಮ ವೀರಶೈವ ಸಮಾಜದಲ್ಲಿಯೇ ಕೆಲವರು ಬಹು ಪ್ರತಾಪಶಾಲಿಗಳಾಗಿ ಮೊದಮೊದಲು ಕೇವಲ ಉತ್ಸಾಹದಿಂದ ವೀರಶೈವಸಮಾಜದಿಂದ ಬೇರ್ಪಟ್ಟು ಒಂದು ಸಂಘವನ್ನು ಮಾಡಿಕೊಂಡು ಹೋರಾಡುತ್ತಾ ಬಂದು, ಅದರ ಅನರ್ಥದ ಜ್ಞಾನವಾದ ಬಳಿಕ ಈಗ ವೀರಶೈವ ಸಮೂಹದಲ್ಲಿ ಸೇರಬೇಕೆಂದರೆ ಲಜ್ಜೆಯೂ, ತಾವು ಮುಂದುವರಿಯುವುದಕ್ಕೆ ಅವಹೇಳನವೂ ಬಂದು, ಉಭಯ ಭ್ರಷ್ಟತ್ವವನ್ನು ಅನುಭವಿಸುತ್ತಿರುವದನ್ನು ಎಲ್ಲರೂ ಬಲ್ಲರು. ನಮ್ಮ ಸಾಧುವೀರಶೈವರೆಂಬುದನ್ನು ವಿಂಗಡಿಸಿ ಒಂದು ಸಂಘವನ್ನು ಮಾಡುತ್ತೇವೆಂಬುದಾದರೂ ಇದರಂತೆಯೇ ಪರಿಣಮಿಸಬಹುದು. ಇದರಿಂದ ನಮ್ಮ ಸಾಧುವೀರಶೈವರಿಗೆ ಒಂದು ಕಳಂಕವನ್ನು ತಂದಂತಾಗುತ್ತೆಂಬುದನ್ನು ಯೋಚಿಸಿದ್ದರೆ ಇಷ್ಟಕ್ಕೆ ಅವಕಾಶವಾಗುತ್ತಿರಲಿಲ್ಲ. ನಮ್ಮ ವೀರಶೈವ ಸಮಾಜಕ್ಕೆ ಆ ಸೇತುಹಿಮಾಚಲಪರ್ಯಂತ ನೋಡಲಿ, ಶಾಸ್ತ್ರರೀತ್ಯಾ ನೋಡಲಿ ಬಹುಕಾಲದಿಂದಲೂ ನಡೆದುಬಂದಿರುವ ಮಾಮೂಲುಪದ್ಧತಿಯ ಅನುಭವವನ್ನು ತೆಗೆದುಕೊಳ್ಳಲಿ, ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಸಿಂಹಾಸನದವರೂ, ಪಂಚಾಚಾರ್ಯ ಜಗದ್ಗುರು ಪೀಠದವರೇ ಗುರುಗಳಾಗಿರುವದನ್ನು ಆಬಾಲವೃದ್ಧರೂ ಹೇಳಬಲ್ಲರು. ಹೀಗಿರುತ್ತಿದ್ದು ಶ್ರೀ ಸಿರಿಗೆರೆ ಸಂಸ್ಥಾನದ ಪಟ್ಟಾಧ್ಯಕ್ಷ ಶ್ರೀ ಗುರುಶಾಂತದೇಶಿಕೇಂದ್ರರೆಂದು ಅಪ್ರಾಸಂಗಿಕ ಪ್ರಲಾಪಗಳನ್ನು ತೋರಿಸಿ ಏನೂ ಅರಿಯದವರ ಮನಸ್ಸಿನಲ್ಲಿ ಅಶಾಸ್ತ್ರೀಯ ವಿಷಯಗಳು ಉತ್ಪನ್ನಮಾಡುವದರಿಂದ ಸಂಶಯಕ್ಕಾಸ್ಪದವಾಗುವದರಿಂದ ಮಠದಲ್ಲಿನ ಶ್ರದ್ಧೆಯೂ, ಗುರುಭಕ್ತಿಯೂ ದೂರವಾಗಿ ಹುಲಿಯಬಣ್ಣಕ್ಕೆ ನರಿಯು ಮೈಸುಟ್ಟುಕೊಂಡಿತೆಂಬ ಗಾಥೆಗೆ ಗುರಿಯಾಗುವ ಸಂದರ್ಭವು ಬರುವದು. ಹೀಗೆ ವೃದ್ಧಾಚಾರದಲ್ಲಿ ಇಲ್ಲದ ಸಲ್ಲದ ನೂತನವಾಗಿ ಸ್ವಾಮಿಗಳೆಂತ ಕಲ್ಪಿಸಿಕೊಳ್ಳುವದು, ನೂತನವಾಗಿ ಸಂಸ್ಥಾನವೆಂತ ಮಾಡಿಕೊಳ್ಳುವದು ಮುಂತಾಗಿ ನಡಿಸಿದಲ್ಲಿ ವೀರಶೈವ ಸಮಾಜದಲ್ಲಿ ನಾವು ಉತ್ಪನ್ನವಾಗಲಿಲ್ಲವೆಂತ ವೀರಶೈವಕ್ಕೇ ನಾವು ಭಿನ್ನಮತದವರಾದಂತೆಯೂ, ಅರ್ಥವನ್ನು ಸ್ಪಷ್ಟಪಡಿಸಿದಂತಾಯಿತು. ವಿನಾಯಕನನ್ನು ಮಾಡಹೋದರೆ ಕಪಿನಾಯಕವಾಗುತ್ತದ್ದರೆ ಇದು ಎಂಥಾ ಲಾಂಛನಾಸ್ಪದವಾಗುತ್ತೆ ? ಇದನ್ನು ನಮ್ಮ ಸಾಧುವೀರಶೈವ ಬಾಂಧವರೇ ಊಹಿಸಲಿ. ಮತ್ತು ಸದರಿ ಲೇಖನದಲ್ಲಿ ತಮ್ಮದು ಸಾಧುಸದ್ಧರ್ಮಮತವೆಂದು ಹೇಳಿಕೊಂಡಿದ್ದಾರೆ. ಇದು ಯಾರುಕೊಟ್ಟ ಹೆಸರು ? ಯಾವ ಪುರಾಣಾಗಮಗಳಲ್ಲಿ ಹೇಳಿದೆ ? ನಾವು ವೀರಶೈವರೆಂದು ಹೇಳಿಸಿಕೊಳ್ಳುವದರಲ್ಲಿ ಇರುವ ಗೌರವವೂ ಲಾಭವೂ ಈ ನೂತನ ನಾಮಕಲ್ಪನೆಯ ಮೂಲಕ ಒಡಕನ್ನು ಹುಟ್ಟಿಸಿಕೊಂಡು ಓರೆಯಾಗುವದರಿಂದ ಲಭಿಸುವದೆ ? ನಾವು ಮಾತ್ರ ಸದ್ಧರ್ಮದವರೆಂದು ಹೇಳಿಕೊಂಡರೆ ಉಳಿದ ವೀರಶೈವರೆಲ್ಲಾ ದುರ್ಧರ್ಮದವರೇ ಎನ್ನುವದನ್ನು ಈ ನಮ್ಮ ಜನರು ದೂರದೃಷ್ಟಿಯಿಂದ ಪರ್ಯಾಲೋಚಿಸಬೇಕು. ಇದು ಹಾಗಿರಲಿ. ನಾವು ಹೊಸಹೊಸದಾಗಿ ಸಾಧುಸದ್ಧರ್ಮ ವೀರಶೈವ ಗುರುಗಳೆಂತ ಮಾಡಿಕೊಂಡನಂತರ ಅನಾದಿಯಿಂದಲೂ ವೀರಶೈವರಿಂದ ಆಚರಿಸಿಕೊಂಡು ಬಂದಿರುವ ದೇವಸ್ಥಾನ, ಮಠ ಮುಂತಾದವೂ ನೂತನವಾಗಿಯೇ ಆಗಬೇಕಾಯಿತು. ಹೀಗಲ್ಲದೆ ನಮ್ಮ ವೀರಶೈವ ಮತೋತ್ಪತ್ತಿಯಾದಂದಿನಿಂದಲೂ ಯಾವ ಪ್ರಕಾರದ ಆಚರಣೆಯಿರುತ್ತೋ ಆ ಪ್ರಕಾರ ಈಗಲೂ ಮುಂದೆಯೂ ಆಚರಿಸುತ್ತಾ ಹೋದಲ್ಲಿ ನಮ್ಮ ಸಮಾಜಕ್ಕೆ ಹೆಚ್ಚಾದ ಗೌರವವೂ ಪ್ರಕಾಶವೂ ಲಭಿಸುವುದು. ಯಾರು ಯಾವುದನ್ನು ಮಾಡಬೇಕೋ ಅದರಂತೆ ಮಾಡಿದರೆ ಶೋಭಾಯಮಾನವಾಗಿ ಕಾಣುತ್ತೆ. ಪೂರ್ವಪದ್ಧತಿಯಂತೆ ಪ್ರಕೃತ ಆಚರಿಸುತ್ತಿರುವ ಅನೇಕ ಸಾಧುವೀರಶೈವ ಪ್ರಮುಖಮಹಾಶಯರು ಅನ್ಯಥಾ ಆಚರಿಸಲಿಕ್ಕೆ ಯಾಕೆ ಒಪ್ಪದೆ ಇರಬಹುದು ? ಕುಹಕವಾಗಿ ಆಚರಿಸಿ ಸಮಾಜದ ಏಳ್ಗೆಗೆ ಭಂಗತರಬಾರದೆಂತಲೂ, ಸನಾತನ ಪದ್ಧತಿಯನ್ನು ತಪ್ಪಿ ನಡೆಯಬಾರದೆಂತಲೂ ಆಲೋಚಿಸಿರುವವರ ಮೇಲ್ಪಂಗ್ತಿಯನ್ನು ಅನುಸರಿಸುವುದು ಯೋಗ್ಯವೆಂಬುದನ್ನು ತಿಳಿದುಕೊಳ್ಳಬೇಕು. ಅರ್ವಾಚೀನರಿಂದಲೂ ಇಂಥಾ ಸನ್ಮಾರ್ಗಪ್ರವರ್ತನೆಯಿಂದ ನಡೆಯುತ್ತಿದ್ದ ಅಧ್ಯಕ್ಷಮಹಾಶಯರಾದ ಬಿ. ಲಿಂಗಯ್ಯನವರು ಹೀಗೆ ಅಶಾಸ್ತ್ರೀಯಮಾರ್ಗಾವಲಂಬಿಗಳಿಗೆ ಸರಿಯಾದ ತಿಳುವಳಿಕೆ ಕೊಟ್ಟು ಶಿಷ್ಟಾಚಾರಸಂಪ್ರದಾಯ ಮಾರ್ಗವನ್ನವಲಂಬಿಸುವಂತೆ ಬೋಧಿಸುವುದನ್ನು ಬಿಟ್ಟು ತಾವೂ ಅವರಂತೆಯೇ ಆಚರಿಸಿ ಅವರಿಗೆ ಪ್ರೋತ್ಸಾಹಿಸಿರುವುದು ತಾವೇ ಕಳಂಕವನ್ನು ಹಚ್ಚಿಕೊಳ್ಳುವ ಸಂಧಿಯನ್ನು ಮಾಡಿಕೊಂಡಂತಾಯಿತು. ಅಲ್ಲದೆ ಇದೇ ಸಂಬಂಧದಲ್ಲಿ ಎಂ. ಸಿ. ಗೌಡರು ಸಾಧುವೀರಶೈವರ ಕುಂದುಕೊರತೆಗಳನ್ನು ಹೋಗಲಾಡಿಸುವ ಕಾಲಜ್ಞಾನವನ್ನು ತಿಳಿದು ಭಾಷಣಮಾಡಲು ಪ್ರಯತ್ನಶೀಲರಾದದ್ದು ಸಾರ್ಥಕವಾಯಿತು! ಯಾಕಂದರೆ ಇವರು ನನಗೆ ಮಾತನಾಡಲಿಕ್ಕೆ ಬರುತ್ತೆಂಬ ವಾಕ್ಚಾತುರ್ಯವನ್ನು ವ್ಯಕ್ತಗೊಳಿಸುವದಕ್ಕಾಗಿ "ಯೇನಕೇನಾಪ್ಯುಪಾಯೇನಪ್ರಸಿದ್ಧಪುರುಷೋಭವ" ಎಂಬ ಆರ್ಯೋಕ್ತಿಯು ಇವರ ಸ್ಮೃತಿಪಥಕ್ಕೆ ಬಂದೊಡನೆಯೇ ಏನೋ ತಮಗೆ ತೋಚಿದ ದೂರದೃಷ್ಟಿಯಿಲ್ಲದ ಒಂದೆರಡು ವಿಷಯಗಳನ್ನು ಹೀಗೆ ಮಾತಾಡಿದ್ದು ಸಮಯಸಾಧಕರ ಚಮತ್ಕಾರವೇ ಸರಿ. ಇದರಿಂದ ನಮ್ಮ ಸಾಧುವೀರಶೈವರ ಕುಂದುಕೊರತೆಗಳನ್ನು ಎಷ್ಟರಮಟ್ಟಿಗೆ ಹೋಗಲಾಡಿಸಿ ಘನತೆಯನ್ನು ತಂದರು ? ಚನ್ನಪ್ಪರೆಂಬುವರೂ ಸಹ ತಮ್ಮ ಭಾಷಣದಲ್ಲಿ ಸಾಧುವೀರಶೈವ ಸಂಘವನ್ನು ತಾ|| 10-11-22 ರಲ್ಲಿ ಸ್ಥಾಪಿಸಿ ನಮ್ಮ ಸಾಧುವೀರಶೈವ ಬಾಂಧವರಿಗೆಲ್ಲಾ ಮಹತ್ತರವಾದ ಉಪಕಾರ ಮಾಡಿ ನಮ್ಮನ್ನು ಉದ್ಧಾರಮಾಡಿಯೇಬಿಟ್ಟರು. ಹೀಗೆ ಊಹಾಪೋಹಗಳನ್ನು ಅರಿಯದೆ ನಾವು ಸಂಘವನ್ನು ಮಾಡಿದರೆ ಅದು ಎಷ್ಟರಮಟ್ಟಿಗೆ ಲಾಭವಾದೀತು ಅದರಿಂದ ಪರಿಣಾಮವೇನಾದೀತೆಂದು ವಿಚಾರಶೂನ್ಯರಾಗಿ ಸಭೆಯನ್ನು ಮಾಡುವದಂದರೇನು ? ಇದರಿಂದ ಸಾರ್ಥಕವೇನೆಂಬುದರ ಆಲೋಚನೆ ಇಲ್ಲದೆ ದುಡುಕುವುದರಿಂದ ಎಂಥಾ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತೆಂಬುವದನ್ನು ಅಧ್ಯಕ್ಷರೂ ಸಭಾಚಾಲಕರೂ ತಿಳಿದುಕೊಂಡಿದ್ದರೆ ಇಷ್ಟಾಗಲಿಕ್ಕೆ ಕಾರಣವಾಗುತ್ತಿರಲಿಲ್ಲ. ತಾವು ಮಾಡಿದ್ದು ತಮಗೆ ಚೆನ್ನಾಗಿ ಕಾಣುತ್ತಿದ್ದರೂ ಅನ್ಯರು ಅಸಹ್ಯಪಟ್ಟುಕೊಳ್ಳುವಂತಿರಬಾರದು. ಸಾಧುವೀರಶೈವ ಬಾಂಧವರಾದ ಕಕ್ಕರ್ಗೊರು ನಿವಾಸಿಗಳು ಬಹುಕಾಲದಿಂದಲೂ ಅನಾದಿಸಂಸಿದ್ಧವಾದ ವೃದ್ಧಾಚಾರವನ್ನು ಅನುಸರಿಸುತ್ತಿದ್ದು ಈ ನೂತನಯತ್ನದಿಂದ ಅನರ್ಥಸಂಘಟನೆ ಸಂಭವವನ್ನು ತಿಳಿದಿದ್ದರೆ ಅಲ್ಲಿ ಸಭೆಯಾಗಲಿಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಬಿ. ಲಿಂಗಯ್ಯನವರು ಅಧ್ಯಕ್ಷರಾಗುತ್ತಾರಾಗಿಯೂ ವೀರಶೈವ ಸಮಾಜದಲ್ಲಿ ಐಕ್ಯಭಾವನೆಯನ್ನು ಹೆಚ್ಚಿಸುತ್ತಾರೆಂತಲೂ ನಂಬಿ ಇವರ ಮರುಳುಮಾತಿಗೆ ಕಿವಿಗೊಟ್ಟು ಈ ಸಭಾಕಾರ್ಯಕ್ಕೆ ಕೆಲರು ಮಾತ್ರ ಆಸ್ಪದ ಕೊಟ್ಟಿರುವದಾಗಿ ತಿಳಿಯುತ್ತೆ. ಸಾಧುವೀರಶೈವ ಬಾಂಧವರೇ ! ನಾನು ಉದಾಹರಿಸಿರುವ ಮೇಲ್ಕಂಡ ಅಂಶಗಳನ್ನೆಲ್ಲಾ ಆಮೂಲಾಗ್ರವಾಗಿ ಪರಿಶೀಲಿಸಿ ನಮ್ಮ ಪಿತೃಪಿತಾಮಹರಂತೆ ಶಿಷ್ಟಾಚಾರಸಂಪನ್ನರಾಗಿ ವೀರಶೈವ ಸಮಾಜದಲ್ಲಿ ಕೇವಲ ಏಕಮತಭಾವನೆಯಿಂದ ನಡೆದುಕೊಳ್ಳುವದು ನಮಗೆ ಭೂಷಣವೆ ? ಗಂಗಾತೀರದಲ್ಲಿ ಒರತೆಯನ್ನು ತೋಡಿಕೊಂಡು ಕೊಳಚೆಯಾದ ನೀರನ್ನೇ ನಾವು ಉಪಯೋಗಿಸುತ್ತೇವೆನ್ನುವದು ಭೂಷಣವೆ ? ಯೋಚಿಸುವವರಾಗಲಿ.

ಹೆಚ್. ಎನ್. ನಾಗಪ್ಪ, ಪಟೇಲ್.

ಪುರುಷೋತ್ತಮಗಿರಿಯವರ ದೇಶಪರ್ಯಟನ ಪರ್ಯಾಲೋಚನ.

ಪುರುಷೋತ್ತಮಗಿರಿ ಎಂಬ ನಾಮಧಾರಿಗಳಾದ ಸಾಧುಗಳು ನಾನು ಸಕಲ ದೇಶವನ್ನೂ ಸಂಚರಿಸಿ ಸರ್ವತ್ರ ನಡೆದಿರುವ ನಡೆಯುತ್ತಿರುವ ವಿಷಯಗಳನ್ನೆಲ್ಲ ತಿಳಿದಿರುವೆನೆಂಬ ಪೌರುಷೇಯವೃತ್ತಿಯನ್ನು ತೋರಿಸುವ ಆರ್ಭಟದಲ್ಲಿ ಸ್ವೈರವೃತ್ತಿಯಿಂದ ಆಯಾ ಸ್ಥಲದ ವಿಷಯಗಳನ್ನೆಲ್ಲ ತಿಳಿದಿರುವಂತೆ ಸಾಧ್ವೀಪತ್ರದಲ್ಲಿ ಪ್ರಕಟಿಸಿರುವರು. ಇವರು ಸಂಚಾರವಂ ಎಷ್ಟರಮಟ್ಟಿಗೆ ಮಾಡಿರುವರೆಂಬುದನ್ನು ಸ್ವಲ್ಪಪರಾಮರಿಸುವ:—ಕಾಶಿ ಪ್ರಯಾಗ ಮುಂತಾದ ಸ್ಥಾನಗಳಲ್ಲಿ ವೇದವೇದಾಂಗಗಳನ್ನು ಬ್ರಾಹ್ಮಣರ ಹೊರತು ವೀರಶೈವರು ಅಧ್ಯಯನ ಮಾಡುವುದಿಲ್ಲವು. ಇವರಿಗೆ ಹೇಳುವುದೂ ಇಲ್ಲವೆಂದು ತಮ್ಮ ಮುಸಲಾಗ್ರಬುದ್ಧಿಯ ವೈಶದ್ಯೋದಾರ ವಿಸ್ತಾರಭಾವವನ್ನು ಹೊರಪಡಿಸಿರುವರು. "ಇದಲ್ಲದೆ - ಶ್ರೀ ಕಾಶೀಕ್ಷೇತ್ರದಲ್ಲಿ ಪ್ರತಿಷ್ಠಿಸಲ್ಪಟ್ಟ ಸನ್ಯಾಸಿ ಪಾಠಶಾಲೆ ಮತ್ತು ಬ್ರಹ್ಮವಿದ್ಯಾ ಪಾಠಶಾಲೆ ಇವುಗಳಲ್ಲಿ ನಾನೂ ಒಬ್ಬ ಅಧಿಕಾರಿಯಾಗಿರುವೆನು. ಆ ಪಾಠಶಾಲೆಗಳಲ್ಲಿ ಲಿಂಗಾಯತರಿಗೆ ಶಾಸ್ತ್ರಾಭ್ಯಾಸವಂ ಮಾತ್ರ ಮಾಡಿಸಲಿಕ್ಕೆ ಅವಕಾಶವನ್ನು ನಾನೇ ಕೊಡಿಸಿರುವೆನು" ಎಂದು ವೀರಶೈವರಲ್ಲಿ ದಯಾರಸವನ್ನು ತೋರಿಸಿರುವಂತೆ ಅಭಿನಯಿಸಿರುವರು. ಇವರು ಅಲ್ಲಲ್ಲಿ ತಿಳಿದಿರುವ ವಿಷಯ ವಿಚಾರದ ಸ್ವಾರಸ್ಯವಂ ನೋಡಿರಿ. ಓ ಗಿರಿರಾಯರೇ, ನೀವೇ ವೀರಶೈವರಿಗೆ ಅಭ್ಯಾಸಮಾಡಿಸಲು ಹುಕುಂ ದಯಪಾಲಿಸಿದಿರಲ್ಲವೆ ? ಸಹವಾ ! ನಿಮ್ಮ ಔದಾರ್ಯವಂ ಏನೆಂದು ವರ್ಣಿಸೋಣ, ಆಗಲಿ, ಈಕಡೆಗೆ ದೃಷ್ಟಿಯಂ ಸ್ವಲ್ಪ ಇಡಿ. ಅನಾದಿಕಾಲದಿಂದಲೂ ಅದೇ ಕಾಶೀಕ್ಷೇತ್ರದಲ್ಲಿ ನಡೆದುಬರುತ್ತಿರುವ ಅಖಿಲ ವಿಷಯಗಳೆಲ್ಲವೂ ನಿಮ್ಮ ದೃಷ್ಟಿಗೆ ಹೇಗೆ ಬೀಳುವವು? ಕಾಶೀಕ್ಷೇತ್ರವು ಅತಿ ವಿಸ್ತಾರವಾದುದು ! ನಿಮ್ಮ ಮನೋಭಾವವು ಅತ್ಯಂತ ಹ್ರಸ್ವವಾದುದು. ಹೀಗಿರುವಾಗ ಶ್ರೀ ಕಾಶಿಯ ಯಾವದ್ವಿಷಯವೂ ನಿಮಗೆ ಗೋಚರವಾಗದಿರುವುದು ಅಷ್ಟೇನೂ ಆಶ್ಚರ್ಯವಲ್ಲವು. ಅದೇ ಕ್ಷೇತ್ರದಲ್ಲಿ ವೇದಾಗಮಸಮ್ಮತವಾದ ಪರಮ ಪವಿತ್ರವಾದ ವೀರಶೈವ ಮತವನ್ನು ಸೂತ್ರಭಾಷ್ಯ ಉಪನಿಷದ್ಭಾಷ್ಯ, ಗೀತಾಭಾಷ್ಯ ರೂಪವಾದ ಪ್ರಸ್ಥಾನತ್ರಯ ಮೂಲಕ ಸ್ಥಾಪನೆಯಂಗೈದ ಶ್ರೀ ಪಂಚಾಚಾರ್ಯರಲ್ಲಿ ಒಬ್ಬರಾದ ಜಗದ್ಗುರು ವಿಶ್ವಾರಾಧ್ಯ ಮಹಾಸ್ವಾಮಿಗಳ ಸಂಸ್ಥಾನವು (ಜಂಗಮವಾಡಿ ಮಠವು) ಅನಾದಿಕಾಲದಿಂದ ಗುರುತ್ವವಂ ಪ್ರಕಟಿಸುತ್ತಿರುವ ಪರಮವೈಭವದಿಂ ಕಂಗೊಳಿಸುತ್ತಿರುವ, ಪುಣ್ಯಾಶ್ರಮವು ದೃಗ್ಗೋಚರವಾಗಲಿಲ್ಲವೆ ? ಅಥವಾ ಕರ್ಣಪ್ರದೇಶವನ್ನಾದರೂ ಅಲಂಕರಿಸಲಿಲ್ಲವೆ ? ಪಾಪ ! ದಿವ್ಯವಾದ ಶಂಖವು ಶುಭ್ರಗುಣವುಳ್ಳದ್ದಾದರೂ ನೇತ್ರರೋಗವುಳ್ಳವನಿಗೆ ಪೀತವರ್ಣವಾಗಿ ಕಾಣಿಸುತ್ತಿರುವುದು ಸ್ವಭಾವವಾಗಿರುವುದು. ನಮ್ಮ ಪುರುಷೋತ್ತಮಗಿರಿಯವರು ಮನೋವೈಶದ್ಯವಂ ಪಡೆದಿದ್ದರೆ ಬಾಲಕರಾದರೂ ಕೂಡ ಶ್ರೀ ಮಠವನ್ನು ತೋರಿಸುತ್ತಿದ್ದರು. ಸುಳ್ಳು ನಿದ್ರೆಮಾಡುವವರನ್ನು ಎಚ್ಚರಿಸುವುದಕ್ಕೆ ಆದೀತೆ ? ಇದರಿಂದ ಪುರುಷೋತ್ತಮರ ಸಂಚಾರವು ಸ್ಪಷ್ಟವಾಗುವುದು. ಮತ್ತು (ಮಹತಾಂದರ್ಶನಂಪುಣ್ಯಂ) ಎಂಬುಕ್ತಿಯಂ ಸ್ಮರಿಸುತ್ತ ಕಾಶೀಸ್ಥವಾದ ಮಠವು ಅಲ್ಲಿರುವ ಶ್ರೀ ಯತಿಗಳ ದರ್ಶನವೂ ಅವರೊಡನೆ ಸಂಭಾಷಣೆಯೂ ಪುಣ್ಯಶೀಲರಿಗೆ ಮಾತ್ರ ಲಭಿಸುವದಷ್ಟೆ? ಆ ಗುರುಕುಲದಲ್ಲಿ ವೇದ, ವೇದಾಂತ, ವ್ಯಾಕರಣ, ನ್ಯಾಯ, ಮೀಮಾಂಸಾದಿ ಶಾಸ್ತ್ರಗಳ ಪಠನ, ಪಾಠ, ವ್ಯವಹಾರಗಳು ನಡೆದು ಬರುತ್ತಿರುವದು. ಜಗತ್ಪ್ರಸಿದ್ಧವಾಗಿದೆ. ಸದ್ಯಃ ಆ ಮಠದಲ್ಲಿ ಪಂಡಿತ "ಉಮೇಶಸ್ಮೃತಿತೀರ್ಥ" ಪಂಡಿತ ವಿಶ್ವೇಶ್ವರ ಭಟ್ಟಾಚಾರ್ಯ ಮೊದಲಾದವರು ಆಯಾ ವೇದಶಾಸ್ತ್ರಗಳಿಗೆ ಅಧ್ಯಾಪಕರಾಗಿ ಅಧ್ಯಾಪನಮಾಡಿಸುತ್ತಿರುವುದನ್ನಾದರೂ ಸಾಕ್ಷಾತ್ ನೋಡುವುದಕ್ಕೆ ಮನಸ್ಸಿಲ್ಲದಿದ್ದರೂ ಕರ್ಣಾಕರ್ಣಿಕೆಯಿಂದ ಕೇಳಿಯಾದರೂ ಇದ್ದರೆ ಇಷ್ಟು ಪಟಾಟೋಪವನ್ನು ಮಾಡುತ್ತಿರಲಿಲ್ಲವು. ಹಾಗು, ಈ ಮಠವು ಸನಾತನವಲ್ಲವು. ಶ್ರೀ ಬಸವೇಶ್ವರನಿಂದ ಪ್ರತಿಷ್ಠಿಸಲ್ಪಟ್ಟಿತೆಂಬ ವ್ಯಾಧಿಯು ದಿನೇ ದಿನೇ ಹೆಚ್ಚುತ್ತಿರುವುದು. ಗಿರಿರಾಜರೆ, ವೀರಶೈವಮಠದ ಸನಾತನತ್ವದ್ಯೋತಕವಾದ ಶಾಸ್ತ್ರಸಹಸ್ರವು ಒತ್ತಟ್ಟಿಗಿರಲಿ ; ಶಾಸ್ತ್ರಪರಿಚಯವುಳ್ಳವರೇನಾದರೂ ಆಕ್ಷೇಪಿಸಿದಲ್ಲಿ ಆಗ ಆ ಶಾಸ್ತ್ರವನ್ನು ಬಿಚ್ಚೋಣ, ಲೌಕಿಕ ದೃಷ್ಟಿಯಿಂದ ಒಂದೆರಡು ದೃಷ್ಟಾಂತವನ್ನು ಕೊಡುತ್ತೇನೆ. ಕಾಶೀ ಮಹಾರಾಜರಾದ ಜಯನಂದನರೇಶರು ವಿಕ್ರಮಸಂವತ್ಸರ 631ರಲ್ಲಿ ಜ್ಞಾನಸಿಂಹಾಸನದಲ್ಲಿ ವಿರಾಜಿಸುತ್ತಿದ್ದ ಭಗವತ್ಪಾದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರಿಗೆ ಭೂದಾನವನ್ನಿತ್ತ ಭೂರ್ಜಪತ್ರಶಾಸನವಿರುವದು. ಅಲ್ಲದೆ ನೇಪಾಳದ ತ್ರಿಭುವನ ಮಲ್ಲಾದಿರಾಜರು ಅದೇ ವರ್ಷದಲ್ಲಿ ಮಠಸ್ಥಾಪನೆಯಂ ಮಾಡಿಸಿ, ಉಪದೇಶವಂ ಪೊಂದಿ, ಜಹಗೀರುಗಳನ್ನು ಹಾಕಿಕೊಟ್ಟ ಶಿಲಾಶಾಸನವನ್ನಿತ್ತು ಜಗನ್ನಿಯಾಮಕನಾದ ಶ್ರೀ ವಿಶ್ವನಾಥನ ಮಂದಿರದ ಮೇಲೆ ಕ್ರೂರದೃಷ್ಟಿಯಿಟ್ಟ ಮುಸಲ್ಮಾನ್ ಬಾದಶಹರು ಆ ಗುರುಕುಲಕ್ಕೆ ವಿಧೇಯರಾಗಿ, ಏಳು ಜನ ಬಾದಶಹರು ವರಮಾನಗಳನ್ನು ಕೊಟ್ಟಿರುವರು. ಇದಕ್ಕಿಂತಲೂ ಪ್ರಾಚೀನಗಳಾದ ಅನೇಕ ಮಹಾರಾಜರು ಶಾಸನಗಳನ್ನು ಕೊಟ್ಟಿರುವರು. ಇದೆಲ್ಲವನ್ನೂ ಮಠಕ್ಕೆ ಹೋಗಿ ಪರಿಶೀಲಿಸಿದ್ದರೆ ಬಸವೇಶ್ವರನಿಂದೀಚೆಗೆ ಉಂಟಾದ ಮಠವೆಂಬ ಭ್ರಮವು ತೊಲಗಿ ಸನಾತನತ್ವರೂಪವಾದ ದಿವ್ಯಜ್ಞಾನವು ಉಂಟಾಗುತ್ತಿತ್ತು. ಇದರಂತೆ ಹಿಮಾಲಯದಲ್ಲಿರುವ ಗುರುಪೀಠವು ಪ್ರಾಚೀನಕಾಲದಿಂದಿರುವುದೆಂದು ಅಲ್ಲಿರುವ ಶಾಸನಗಳಿಂದ ವ್ಯಕ್ತವಾಗುವುದು. ಅದಂತಿರಲಿ, ಕಾಶಿಯಲ್ಲಿ ಇವರು ಎರಡೇ ಪಾಠಶಾಲೆಗಳನ್ನು ಪರಿಚಯಮಾಡಿಕೊಂಡಿರುವಂತೆ ಇವರ ಲೇಖನದಿಂದ ವ್ಯಕ್ತವಾಗುವುದು. ಪಿಪೀಲಿಕೆಯನ್ನು ಸಕ್ಕರೆಮೂಟೆಗೆ ಬಿಟ್ಟರೆ ಎಷ್ಟು ಸಕ್ಕರೆ ತಿಂದೀತು ? ಮಹಾಶಯರೇ, ಶ್ರೀ ಕಾಶೀಕ್ಷೇತ್ರದಲ್ಲಿ ಪ್ರಸಿದ್ಧಗಳಾದ ಹಿಂದು ಯೂನಿವರ್ಸಿಟಿ, ಕ್ವೀನ್ಸ್ ಕಾಲೇಜುಗಳಲ್ಲಿ ವೀರಶೈವ ವಿದ್ಯಾರ್ಥಿಗಳನೇಕರು ವೇದವೇದಾಂಗ ಶಾಸ್ತ್ರಗಳ ಮಧ್ಯಮ, ಆಚಾರ್ಯ ಮೊದಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿಯೂ ಆಗುತ್ತಲೂ ಸ್ಕಾಲರ್ಷಿಪ್ ಹೊಂದುತ್ತಲೂ ಇರುವರು. ಮತ್ತು ಟೀಕ್‌ಮಾಣಿ ಎಂಬ ಕಾಲೇಜಿನಲ್ಲಿ ವೇದ ವ್ಯಾಕರಣ ಭಾಷ್ಯವನ್ನು ಓದಿಯೂ ಓದುತ್ತಲೂ ಸ್ಕಾಲರ್ಷಿಪನ್ನು ಪಡೆಯುತ್ತ ಬಹುಮಾನಕ್ಕೆ ಪಾತ್ರರಾಗುತ್ತಿರುವರು. ವಿಶುದ್ಧಾನಂದ ಕಾಲೇಜ್, ಶ್ರೀ ರಾಜಾಲ್‌ದಾಸ್ ಸ್ಮಾರಕಪಾಠಶಾಲೆ ಇವುಗಳಲ್ಲಿ ನ್ಯಾಯರತ್ನ ಮೊದಲಾದ ಬಿರುದುಗಳನ್ನು ಪಡೆದೂ ಪಡೆಯುತ್ತಲೂ ಇರುವರು. ಈ ಕೂಪಮಂಡೂಕಪ್ರಾಯರಾದ ಪುರುಷೋತ್ತಮಗಿರಿಯವರಿಗೆ ಇದೆಲ್ಲವೂ ಹ್ಯಾಗೆ ತಿಳಿಯಬೇಕು ? ಇದಲ್ಲದೆ ಕಲ್ಕತ್ತಾ ಗೌರ್ನಮೆಂಟ್ ಕಾಲೇಜಿನಲ್ಲಿಯೂ, ಢಾಕ್ಕಾದಿ ಸ್ಥಲಗಳಲ್ಲಿಯೂ ವೇದಶಾಸ್ತ್ರಗಳನ್ನೋದಿ ವೇದತೀರ್ಥ, ನ್ಯಾಯತೀರ್ಥ, ವ್ಯಾಕರಣತೀರ್ಥ, ಸಾಹಿತ್ಯತೀರ್ಥ ಪದವಿಗಳನ್ನು ಧರಿಸಿ, ಅಲ್ಲಲ್ಲಿಯೇ ರಾಜಪೋಷಿತವಾದ ಕಾಲೇಜುಗಳಲ್ಲಿ ಅಧ್ಯಾಪಕರಾಗಿರುವದು ಈ ಅಸೂಯಾಂಧರಿಗೆ ಹೇಗೆ ತಿಳಿಯಬೇಕು ? ಪುರುಷೋತ್ತಮಗಿರಿಯವರೆ, ಇನ್ನಾದರೂ ಅಲ್ಲಲ್ಲಿರುವ ಸಮಾಚಾರಗಳನ್ನು ಚೆನ್ನಾಗಿ ತಿಳಿದು ಈ ಮಠದ ಯಾಥಾರ್ಥ್ಯವನ್ನು ತಿಳಿದವರಿಂದ ತಿಳಿದುಕೊಂಡು ತಮ್ಮ ನಾಮದ ಮಧ್ಯದಲ್ಲಿರುವ ಉತ್ತಮ ಶಬ್ದಕ್ಕೆ ಸಾರ್ಥಕವಮಾಡಿರಿ. ದುಡುಕಬೇಡಿ (ಸಹಸಾನವಿಧೀತ ನಕ್ರಿಯಾಂ) ಎಂಬುಕ್ತಿಯನ್ನು ಪದೇಪದೆ ಸ್ಮರಿಸುತ್ತಿರಬೇಕೆಂಬುದೇ ನನ್ನ ಕೋರಿಕೆಯಾಗಿದೆ. ಲೋಕದಲ್ಲಿ ತಾವಾದರೂ ಆಗಲಿ, ನಾನಾದರೂ ಆಗಲಿ, ಮಹಾತ್ಮರಾದರೂ ಆಗಲಿ, ಯಾವ ವಿಷಯವನ್ನೂ ಚೆನ್ನಾಗಿ ಯೋಚಿಸದೆ ಪರಪ್ರೇರಣ ಮಂತ್ರದಿಂದ ಅಸತ್ಕಾರ್ಯವನ್ನೆಂದಿಗೂ ಪ್ರಸಿದ್ಧಿಗೊಳಿಸಬಾರದು. ಇಲ್ಲದ್ದನ್ನು ಸಾಧಿಸಲೂ ಪ್ರಯತ್ನಿಸಬಾರದು. ಇದ್ದುದನ್ನು ಎಂದಿಗೂ ಬಿಡಬಾರದು. ಸತ್ಯಕ್ಕೆ ಸಾವಿಲ್ಲ ಎಂಬ ಗಾದೆಯನ್ನು ನೆನಪಿನಲ್ಲಿಡಬೇಕು. ಗಾದೆಯು ವೇದಕ್ಕೆ ಸಮಾನವು. ಇನ್ನುಮುಂದಾದರೂ ದುರಭಿಮಾನವೆಂಬ ಪಿಶಾಚಿಗೆ ಅವಕಾಶಕೊಡದೆ ತಮ್ಮ ನಾಮವನ್ನು ಸಾರ್ಥಕಮಾಡಿಕೊಳ್ಳುವದರಲ್ಲಿ ಉದ್ಯುಕ್ತರಾಗಿರಬೇಕೆಂದು ಪುರುಷೋತ್ತಮಗಿರಿಯವರಿಗೆ ವಿನಯದಿಂದ ಸೂಚಿಸಿರುತ್ತೇನೆ.

ಕಾಶೀಕ್ಷೇತ್ರವಾಸಿ, ಓರ್ವವೀರಶೈವ ವಿದ್ಯಾರ್ಥಿ.

ಶ್ರೀ ಕಲ್ಯಾಣಮಹಾಕ್ಷೇತ್ರದಲ್ಲಿ ನಡೆದ ಶ್ರೀ ಬಸವೇಶ್ವರ ಪುರಾಣಸಮಾರಂಭ ಪರಿಸಮಾಪ್ತಿಮಹೋತ್ಸವ.

ಪರಶಿವಾಂಶೀಭೂತರಾಗಿಯೂ, ಪರಮ ಪಾವನಮೂರ್ತಿಯಾಗಿಯೂ ಅವತರಿಸಿ ವೀರಶೈವ ಮತೋದ್ಧಾರ ಮಾಡಿದ ಶ್ರೀ ಬಸವೇಶ್ವರದೇವರ ವಾಸಸ್ಥಾನವಾಗಿದ್ದ ನೈಜಾಂ ಇಲಾಖಾ ಗುಲ್ಬರ್ಗ ಜಿಲ್ಲಾ ಶ್ರೀ ಕಲ್ಯಾಣ ಮಹಾಕ್ಷೇತ್ರದ ಮರಿದೇವರ ಗುಡ್ಡದಲ್ಲಿ ಬಾಗಲಕೋಟೆ ಟೀಕಿನಮಠದ ಶ್ರೀಮನ್ನಿರಂಜನ ರೇವಣಸಿದ್ಧಸ್ವಾಮಿಗಳವರ ಕರಕಂಜಸಂಜಾತರಾದ ಶ್ರೀ ಬಸವಲಿಂಗಮರಿದೇವರೂ ಮತ್ತು ರಂಭಾಪುರೀ ಸಂಸ್ಥಾನಕ್ಕೆ ಸಂಬಂಧಪಟ್ಟ ಮುಧೋಳಚರಮೂರ್ತಿ ಶ್ರೀ ಶಿವಲಿಂಗಸ್ವಾಮಿಗಳವರೂ ಈ ಉಭಯರ ಪ್ರಯತ್ನ ಮೂಲಕ ಶ್ರೀ ಕಲ್ಯಾಣ ಮಹಾಕ್ಷೇತ್ರದ ಅಜುಬಾಜು ಗುರುವರ್ಗ, ಭಕ್ತಮಾಹೇಶ್ವರರ ಉದಾರಾಶ್ರಯದಿಂದ ಈಗ್ಗೆ ಹತ್ತು ವರ್ಷದಿಂದಲೂ ನಡೆಸಲ್ಪಟ್ಟ ಶ್ರೀ ಬಸವೇಶ್ವರಪುರಾಣಶ್ರವಣವು ಇದೇ ದುಂದುಭಿನಾಮ ಸಂವತ್ಸರದ ಮಾರ್ಗಶೀರ್ಷ ಬ|| ಪ್ರತಿಪದ ಮಂಗಳವಾರ ಸಮಾಪ್ತಿಯಾಗಿ ದ್ವಿತೀಯಾ ಬುಧವಾರ ಮಹಾಗಣಾರಾಧನೆಯು ಅತ್ಯಂತ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಈ ಮಹೋತ್ಸವಕ್ಕೆ ನೈಜಾಂ ಇಲಾಖಾ, ಮದ್ರಾಸ್, ಮತ್ತು ಮುಂಬೈ ಪ್ರಾಂತಗಳಿಂದ ಲಕ್ಷಾಂತರ ಭಕ್ತಮಾಹೇಶ್ವರಾದಿ ಮಹಾಜನರು ಸೇರಿದ್ದರು. ಪರಿಸಮಾಪ್ತಿ ಪೂರ್ವೇ 5 ದಿವಸಗಳಿಂದಲೂ ಎಲ್ಲಿನೋಡಿದರೂ ಶಿವಭಜನಾ ಕೀರ್ತನಾದಿಗಳೂ, ಗಣಾರಾಧನೆಗಳೂ ದಿವಾರಾತ್ರಿಯೂ ನಿರರ್ಗಳವಾಗಿ ನಡೆಯುತ್ತಾ ಶ್ರೀ ಬಸವೇಶ್ವರಾದಿ ಪ್ರಮಥರ ಕಾಲವನ್ನು ಜ್ಞಾಪಕಕ್ಕೆ ತಂದುಕೊಡುತ್ತಾ ಇದ್ದಿತು. ಈ ಮಹೋತ್ಸವಕ್ಕೆ ಆಗಮಿಸಿದ್ದ ಮಹಾಜನರ ಕೋರಿಕೆಯ ಪ್ರಕಾರ ತಾ|| 6-12-22ನೇ ಗುರುವಾರ ಪ್ರಾತಃಕಾಲಕ್ಕೆ ಶ್ರೀ ಪ್ರಭುದೇವರ ಮಠದಲ್ಲಿ ಶ್ರೀಮದ್ವೀರಶೈವ ಧಾರ್ಮಿಕಮಹಾಸಭೆಯು ನಡೆಸಲ್ಪಟ್ಟಿತು. ಆ ಸಭೆಯಲ್ಲಿ ವಿದ್ವಜ್ಜನರಿಂದ ಧಾರ್ಮಿಕ ವಿಷಯವಾಗಿಯೂ ಮತ್ತು ಈ ಕಾಲದಲ್ಲಿ ನಮ್ಮ ಸಮಾಜದನೆಮ್ಮದಿಗೆ ಭಂಗವನ್ನುಂಟುಮಾಡಿರುವ ಗುರುಸ್ಥಲ, ಪಟ್ಟಸ್ಥಲಗಳೆಂಬ ಮಹಾ ಚಳವಳಿಯ ವಿಷಯವಾಗಿಯೂ ಭಾಷಣಗಳು ನಡೆದು, ಸದರಿ ಚಳವಳಿಗೆ ಕಾವ್ಯತೀರ್ಥ-ಕಾಶೀನಾಥ ಶಾಸ್ತ್ರಿಗಳೇ ಮೊದಲಾದವರಿಗೆ ಆಶ್ರಯದಾತರಾದ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶರವರ ಮತ್ತು ಶ್ರೀಮತ್ಕಾಶೀ ಸಿಂಹಾಸನಾಧೀಶರವರ ಅಭಿಪ್ರಾಯವನ್ನು ಕೇಳಬೇಕೆಂದು ಸಭೆಯಲ್ಲಿ ಠರಾವ್‌ಗೊಳಿಸಿ ಸಭೆಗೆ ಆಗಮಿಸಿದ್ದ ಶ್ರೀಮಂತ ಮಿ|| ಬಾಪುರಾವ್ ನಿರ್ವಾಣದೇಶಮುಖ್, ಹೈಕೋ

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ದಂಥ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

...ಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ...

೧೯೨೦ ನೆಯ ಇಸವಿ ಡಿಸೆಂಬರ್ ತಾ|| ೧೭ ರಿಂದ ೧೯೨೦ ನೆಯ ಡಿಸೆಂಬರ್ ತಾ|| ೨೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೨ ನೆಯ ದುಂದುಭಿನಾಮ ಸಂವತ್ಸರದ ಮಾರ್ಗಶಿರ ಬಹುಳ ಚತುರ್ದಶಿಯಿಂದ ಪುಷ್ಯ ಶುದ್ಧ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ಮಾಸ
17	ಭಾನು	ಚತು	31-18	ಅನೂ	16-15	3
18	1 ಸೋಮ	ಅಮಾ	27-55	ಜ್ಯೇ	14-17	4
19	2 ಮಂಗಳ	ಪಾಡ್ಯ	25-36	ಮೂಲ	13-17	5
20	ಬುಧ	ಬಿದಿ	24-21	ಪೂಷಾ	13-24	6
21	3 ಗುರು	ತದಿ	24-32	ಉಷಾ	14-42	7
22	4 ಶುಕ್ರ	ಚೌತಿ	25-56	ಶ್ರವ	17-16	8
23	ಶನಿ	ಪಂಚ	28-39	ಧನಿ	21-4	9

(1) ಸರ್ವತ್ರಾಮಾವಾಸ್ಯ, ಎಳ್ಳಮಾವಾಸ್ಯ, ಅಮಾಸೋಮವ್ರತಂ. (2) ತೀರ್ಥಹಳ್ಳಿಯಲ್ಲಿ ರಾಮೇಶ್ವರಸ್ವಾಮಿರಥಃ. (3) ಮಾರ್ಗಶಿರಲಕ್ಷ್ಮೀವ್ರತಂ. (4) ದೂರ್ವಾಗಣಪತಿ ವ್ರತಂ.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಭುನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿಕ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತವಾಲಾಕುಲಂ | ಪ್ರೇಮಂಚಿತ್ರೀಯಂಕದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫ ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಡಿಸೆಂಬರ್ ತಾರೀಖು ೨೬ ನೆಯ ಭಾನುವಾರ ಸಂಚಿಕೆ ೫೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು.

ಕ್ರಯ 1ಕ್ಕೆ 0—12—0.

ಈದೇ ಒಳ್ಳೇ ಸಮಯ ! ಈಗಲೇ ತರಿಸಿಕೊಳ್ಳಿ !
ಚಿನ್ನದಂತಾ ಈ ಸಮಯವನ್ನು ಕಳಕೊಳ್ಳಬೇಡಿ. ಮಾರಾಟಕ್ಕೆ ಉಳಿದಿರುವ ಸರಕು ಬಹಳ ಸ್ವಲ್ಪ. ಬೆಲೆ 4 ರೂಪಾಯಿ ಮಾತ್ರ.

ಜರ್ಮನ್ ವಿದ್ಯುತ್ ಬೀಸಣಿಗೆ.

ಪರಮಾಶ್ಚರ್ಯಕರವಾದ ಯಂತ್ರಗಳು.



ಇದು ಪ್ರತಿಮನೆಯಲ್ಲೂ ಇರಬೇಕಾದದ್ದು. ಈ ವಿಚಿತ್ರವಾದ ಯಂತ್ರವು ತಾನಾಗಿಯೇ ಬೀಸುತ್ತಾ ತಂಪನ್ನು ಸುರಿಸುವುದು. ಬೇಗ ತರಿಸಿಕೊಳ್ಳಿ.

ನಮ್ಮ ಕ್ಯಾಟಲಾಗನ್ನು ಬೇಡುವವರಿಗೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ—ಯಸ್. ಆರ್. ಕೃಷ್ಣ ಅಂಡ್ ಕೊ,

1 ತಂಬುನಾಯಕನಬೀದಿ, ಮದರಾಸು.

3 ವರುಷಗಳ ಗ್ಯಾರಂಟಿ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.



ಜಂಪ್ಸ್ ಅಂತೆ ಲೇಡೀಸ್ ಪಾಕೆಟ್ ವಾಚ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲ್ಯುಯೆಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕಲಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0



ಈ ತಿಂಗಳ ಕೊನೆವರೆಗೂ ಅರ್ಧಕ್ರಯ.

ವಿಳಾಸ—ರತ್ನಂ ಅಂಡ್ ಬ್ರದರ್ಸ್,

ನಂ. 3, ತಿರುಳಪ್ಪನ ಬೀದಿ, ಮದ್ರಾಸ್.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಡಿಸೆಂಬರ್ ತಾ|| ೨೪ನೆಯ ಭಾನುವಾರ.

ರಾಜತಂತ್ರ ಕೌಟಿಲ್ಯ.

ಯಾವೊಂದು ಪ್ರಭುತ್ವದ ರಾಜತಂತ್ರದಲ್ಲೂ ಕುಟಿಲತ್ವವಿಲ್ಲದೆ ಇರುವುದು ಅಪೂರ್ವ. ಆದರೆ ಅಂಥ ಕೌಟಿಲ್ಯವು ಕೇವಲ ವಿರಳವಾಗಿ ಧರ್ಮಮಾರ್ಗೈಕದೃಷ್ಟಿಯೂ ರುಜುಮಾರ್ಗಗಮನವೂ ಯಾವ ಪ್ರಭುತ್ವದಲ್ಲಿ ವಿಶೇಷವಾಗಿರುವುವೋ ಅದೇ ಸತ್ಪ್ರಭುತ್ವವೆನಿಸಿಕೊಳ್ಳುತ್ತದೆ. ಭಾರತ ರಾಮಾಯಣ ಭಾಗವತಾದಿ ಪೂರ್ವೇತಿಹಾಸಗಳನ್ನವಲೋಕಿಸಿದರೂ ... [illegible]

[illegible]

A DEAD LETTER.

When people are talking big about the Reforms, the loaves and fishes of office are being silently swallowed up by the very community whose inroad into the Public Service it was the avowed object of Government to regulate. The people who hailed the Miller Committee Report with joy and hope are being lulled into a comfortable sleep under the clever camouflage of our old friends, who have undertaken to champion the cause of the people through holding people's conferences all over the State, and who exhibit a contempt outwardly to Government appointments. While all the vacant posts whether high or low are being filled in with Brahmins by those in whose hands the power of conferment lies without let or hindrance, ignoring the standing orders of Government. They have had a foretaste of the weakness of Government who have not had the courage to cancel all appointments made in contravention of their own orders, and cheque the increasing proportion of Brahmins getting into service. And now what is happening is a deliberate defiance of Government orders and a studied shutting out of non-Brahmin applicants. Formerly, when this policy of a just distribution of offices was not enunciated so clearly some non-Brahmins had chances to get into Public Service through recommendation or otherwise, but now with sectional spirit more pronounced than ever before, and without fear of chastisement for disobedience from above the non-Brahmin candidates get nothing but rebuffs wherever they knock. The Recruitment Board could do nothing beyond recommending merely. It has no power to enforce its rules and recommendations. We do not know whether the six monthly returns are being received. At any rate the *Mysore Gazette* is silent about them. Latterly, we believe even the little wakefulness displayed by the Recruitment Board during the earlier stages is absent, and having realised its own impotence must have discreetly gone to sleep. We need hardly ennumerate the manifold ways in which the Miller Committee Report is being converted into a dead letter. The first, as already stated is the filling up of the vacancies with any but the non-Brahmins. The practice of securing extensions to superannuated officials year after year is another common device. This of course does not apply to non-Brahmin officials who if they have completed either their 30 years of service or are of 55 years of age are despatched home with little or no ceremony. If there is any vacancy and any non-Brahmin were to apply the reply is ready 'no vacancy' and the poor candidiate has only to bite his fingers when he sees that some subsequent privileged applicant gets into the place.

It is too late in the day to say that the purity, the efficiency and the impartiality of services depend mainly on an equitable distribution of offices between the various communities in the State and any concentration of them in one community—no matter which it is—has the very reverse effect. It would not have been so bad if the Government had not declared its policy at all. But having declared it beboves of the Government to courageously carry the policy through. Timidity is no virtue with individuals. It is worse with Governments.

SANSKRIT EDUCATION.

The reconstitution of the Managing Committee of the Sri Chamarajendra Sanskrit College, Bangalore as announced by the Government in the *Mysore Gazette* of December 21, 1922 is only the driving of the thin edge to perpetuate the old-time monopoly, even after all the hue and cry raised against it since the presentation of the now famous report on the improvement of Sanskrit Education in the State. The Government goes beyond even the bigoted report which speaks of allowing the non-Brahmin students to study in the Bangalore Sanskrit College though with many irritating and unreasonable reservations, and thus the Government out-herods Herod. There is not a single non-Brahmin member on this newly formed Managing Committee. We do not know whether the reason for this is to be found in the fact that if a non-Brahmin is introduced into the Committee the other members would raise serious objections to sit beside him. We cannot too strongly protest against such a course, which leads the State backward and not only arrest the progress of the State but raise a good deal of discontent, hardly conducive to the good of the State. There are not many instances where such a lamentable lack of imagination and sense of justice is betrayed and let us ardently hope that before things get worse justice may be done.

ಕ್ಷಯರೋಗ.

[illegible]

[illegible]

ಅತಿಮೂತ್ರವ್ಯಾಧಿ.

[illegible]

ಸ್ವದೇಶದ ವೃತ್ತಾಂತಗಳು.

[illegible]

ಭರತಖಂಡದ ವೃತ್ತಾಂತಗಳು.

[illegible]

ಕೆಲವು ಸಾಮಗ್ರಿಗಳನ್ನು ಅಲ್ಲಿಂದಲೇ ತರಿಸಿಕೊಳ್ಳಲಿಕ್ಕೆ ಅಪ್ಪಣೆಮಾಡಿದ್ದಾರಂತೆ. ಇದೇ ಸಾಮಗ್ರಿಗಳನ್ನು ಇತರ ದೇಶಗಳಿಂದ ತರಿಸಿಕೊಂಡಿದ್ದರೆ ಎಷ್ಟೋ ಕಡಿಮೆ ಬೆಲೆಗೆ ದೊರೆಯುತ್ತಿದ್ದುವು. ಪ್ರಭುತ್ವದವರು ತಮ್ಮ ದೇಶದ ವರ್ತಕರಮೇಲೆ ತೋರಿಸುವ ಅಭಿಮಾನದಿಂದ ಭರತಖಂಡವು ನಷ್ಟವನ್ನು ವಹಿಸಿಕೊಳ್ಳಬೇಕಾಗುತ್ತಿದೆ.

ಯವತಮಾಳದಲ್ಲಿ ಕೂಡಿದ್ದ ತಿಲಕ್ ಸ್ವರಾಜ್ಯಸಂಘ ಸಮಾವೇಶದಲ್ಲಿ ಮಿ॥ ಬ್ಯಾಪ್ಟಿಸ್ಟಾರವರು ಅಧ್ಯಕ್ಷರಾಗಿದ್ದರು. ಅವರು ತಮ್ಮ ಭಾಷಣದಲ್ಲಿ ಶಾಸನೋಲ್ಲಂಘನವೂ ಕಂದಾಯವನ್ನು ಕೊಡದೆ ನಿರಾಕರಿಸುವುದೂ ಕೂಡ ನಿಷ್ಪ್ರಯೋಜಕಗಳಾದ ಏರ್ಪಾಟೆಂತಲೂ, ಗಾಂಧಿಮಹಾತ್ಮನು ಸಾಧುಶ್ರೇಷ್ಠನೇ ಹೊರತು ರಾಜಕೀಯವೇತ್ತನಲ್ಲವೆಂತಲೂ, ಸ್ವರ್ಗದಲ್ಲಿ ಸ್ವರಾಜ್ಯವನ್ನು ಕೊಡಿಸುವುದಕ್ಕೆ ಆತನು ಅರ್ಹನೇ ಹೊರತು ಇಹಲೋಕಸ್ವರಾಜ್ಯವನ್ನು ಕೊಡಿಸುವುದಕ್ಕೆ ಅನರ್ಹನೆಂತಲೂ ಹೇಳಿರುವರು. ಹೀಗೆ ಭರತಖಂಡದಲ್ಲಿ ಅಸಹಾಯವಾದಿಗಳೊಳಗೆ ಶಾಸನಸಭಾ ಪ್ರವೇಶಾಪ್ರವೇಶಗಳ ಸಾಧನೆಯನ್ನು ಕುರಿತು ಇತ್ತಂಡಗಳಾಗಿ ಪರಸ್ಪರ ದೂಷಣೆಮಾಡುತ್ತಿರುವುದು ಮೂರನೆಯವರಿಗೆ ಲಾಭಕಾರಿಯಾಗಿದೆ.

ಮುಂದಿನ ಶಾಸನಸಭಾ ಸಭಿಕರ ಚುನಾವಣೆಯ ಕಾಲದಲ್ಲಿ ಆ ಸಭೆಗೆ ಅಭ್ಯರ್ಥಿಗಳಾಗಿ ನಿಲ್ಲುವುದಕ್ಕೆ ಅವಕಾಶವಾಗುವಂತೆ ಈಗ ಕಾರಾಗೃಹದಲ್ಲಿಡಲ್ಪಟ್ಟಿರುವ ಅಸಹಾಯವಾದಿ ಪ್ರಮುಖರನ್ನು ಕೆಲರನ್ನು ಬಿಡಿಸಲು ಅವರಿಂದ ಕ್ಷಮಾಪಣೆಯನ್ನು ತೆಗೆದುಕೊಂಡೋ ಅಥವಾ ಮತ್ತಾವ ವಿಧದಿಂದಲೋ ಸಹಾಯಮಾಡುವಂತೆ ಸ್ಟೇಟ್ ಸೆಕ್ರೆಟರಿಯವರೊಡನೆಯೂ ವೈಸ್ರಾಯರೊಡನೆಯೂ ಪರ್ಯಾಲೋಚಿಸಬೇಕು ಎಂಬುದಾಗಿ ಕಾಮನ್ಸ್ ಸಭೆಯಲ್ಲಿ ಕರ್ನಲ್ ವೆಡ್ಜ್‌ವುಡ್‌ರವರು ಸೂಚನೆ ಮಾಡಲಾಗಿ, ಅಜ್ಮೀರಲ್ಲಿಂಫಿನ ವಿಚಾರಣಸಂಘದ ಸಭಿಕರಲ್ಲಿ ಕೆಲವರು ಶಾಸನಸಭೆಗಳನ್ನು ಪ್ರವೇಶಿಸಬೇಕೆಂಬುದಾಗಿಯೂ, ಕಾರಾಗೃಹಪ್ರವಿಷ್ಟರಾದವರು ಶಾಸನಸಭೆಗಳ ಉಮೇದುವಾರರಾಗಕೂಡದೆಂಬ ನಿಬಂಧನೆಯು ವ್ಯವಹಾರದಲ್ಲಿರುವವರೆಗೂ ಶಾಸನಸಭಾ ಬಹಿಷ್ಕಾರವನ್ನು ತೆಗೆದುಹಾಕುವುದು ಆತ್ಮಗೌರವಪ್ರದವಲ್ಲವೆಂಬುದಾಗಿ ಇನ್ನು ಕೆಲಸಭಿಕರೂ ಅಭಿಪ್ರಾಯಪಟ್ಟಿರುತ್ತಾರೆ. ಹೀಗಿರುವಾಗ ಈ ವಿಷಯವನ್ನು ಕುರಿತು ಇಂಡ್ಯಾ ಮಂತ್ರಿಯವರಿಗಾಗಲೀ ವೈಸ್ರಾಯರಿಗಾಗಲೀ ಸಲಹೆ ಕೊಡಲಿಕ್ಕೆ ನನಗೆ ಇಷ್ಟವಿಲ್ಲವೆಂದು ಉಪಮಂತ್ರಿ ಲಾರ್ಡ್ ವಿಂಟರ್ಟನ್‌ರವರು ಉತ್ತರ ಕೊಟ್ಟರು.

ಭರತಖಂಡದ ಸರ್ಕಾರದವರು ಮಾಡಿದ ಅಪ್ಪಣೆಯ ಮೇರೆಗೆ ಮಾಪಿಳ್ಳಾ ರೈಲ್ವೆಹತ್ಯೆಯ ಸಂಬಂಧದ ಕೇಸು ಮತ್ತೆ ವಿಚಾರಣೆಗೆ ಬಂದು ಸಾರ್ಜೆಂಟ್ ಆಂಡ್ರೂಸನ ಮತ್ತು ೩ ಮಂದಿ ರಿಜರ್ವ್ ಪೋಲೀಸರ ವಿಚಾರಣೆಯು ಕೊಯಮುತ್ತೂರು ಜಿಲ್ಲಾ ಜಡ್ಜಿಯವರ ಮುಂದೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಪ್ರಾಸಿಕ್ಯೂಷನ್ ಸಾಕ್ಷಿಯಾಗಿ ಕರೆಯಲ್ಪಟ್ಟಿದ್ದ ಸಾಕ್ಷಿಗಳೊಳಗೆ ಆ ದಿನ ವಾಗನ್ನಿನೊಳಗೆ ತುಂಬಲ್ಪಟ್ಟಿದ್ದ 100 ಮಂದಿಗಳಲ್ಲಿ ಸತ್ತುಹೋದ 70 ಮಂದಿಗಳ ಹೊರತು ಉಳಿದವರಲ್ಲಿ ಒಬ್ಬೊಬ್ಬರು ಈಗ ಕೊಟ್ಟಿರುವ ವಾಙ್ಮೂಲವು ಕೇಳಿದವರ ಎದೆಯನ್ನೆಲ್ಲಾ ಬಿರಿಯಿಸುವಂತಿರುತ್ತದೆ. ಇವರಲ್ಲಿ ಮಮ್ಮದ್‌ಕುಟ್ಟಿಯೆಂಬಾತನು ಕೊಟ್ಟಿರುವ ವಾಙ್ಮೂಲದಲ್ಲಿ-'ವಾಗನ್ನಿನೊಳಗೆ ಕೂಡಲ್ಪಟ್ಟಿದ್ದ ನಮಗೆ ಬಾಯಾರಿಕೆಯೂ ಸೆಕೆಯೂ ಹೆಚ್ಚಾಗಿ ಎಷ್ಟು ಕೂಗಿಕೊಂಡರೂ ಪ್ರತಿ ನಿಲ್ದಾಣದಲ್ಲಿಯೂ ಪೋಲೀಸರು "ಇಲ್ಲಿ ನೀರು ಸಿಕ್ಕುವುದಿಲ್ಲ, ಬಾಗಿಲನ್ನು ತೆರೆಯುವುದಿಲ್ಲ, ತಂಟೆ ಮಾಡಿದರೆ ಸುಟ್ಟುಬಿಡುತ್ತೇವೆ" ಎಂದು ಗದ್ದರಿಸುತ್ತ ಬಂದರು. ಬಾಗಿಲನ್ನು ತೆರೆದು ಸ್ವಲ್ಪ ನೀರನ್ನು ಕೊಟ್ಟುಬಿಟ್ಟು ಬಳಿಕ ಕೊಂದುಬಿಟ್ಟರೂ ಸರಿ ಎಂದು ನಾವು ಒಪ್ಪಿಕೊಂಡೆವು. ಆದರೂ ಕೊಡಲಿಲ್ಲ. ಬಂಡಿಯು ಮುಂದಕ್ಕೆ ಕದಲಲಾಗಿ, ನಾವು ಬಾಯಾರಿಕೆಯನ್ನು ತಡೆಯಲಾರದೆ ಬಿಡಿಸಿಕೊಳ್ಳಲು "ಉಚ್ಚೆಯನ್ನು ಕೈಗೆ ಹುಯ್ದುಕೊಂಡು ಕುಡಿಯಿರಿ" ಎಂದು ಪೋಲೀಸರು ಹೊರಗಿನಿಂದಲೇ ಉತ್ತರಕೊಟ್ಟರು. ಅದರಮೇಲೆ ನಮ್ಮಲ್ಲಿ ಕೆಲವರು ಹಾಗೆಯೇ 3-4 ಸಲ ಮಾಡಿದರು. ಇನ್ನು ಕೆಲವರು ತಾವು ಧರಿಸಿದ್ದ ಬಟ್ಟೆಗಳನ್ನು ಹಿಂಡಿಕೊಂಡು ತೊಟ್ಟಿಕ್ಕಿದ ಬೆವರಿನ ಹನಿಗಳನ್ನೇ ಕುಡಿದರು" ಎಂಬುದಾಗಿ ಸಾಕ್ಷ್ಯ ಕೊಟ್ಟಿರುತ್ತಾನೆ.

ಒಬ್ಬ ಹೆಂಗಸು ಅಹಮ್ಮದಾಬಾದಿಗೆ ಕಳೆದ ಆಶ್ವಯುಜ ಮಾಸದಲ್ಲಿ ಬಂದಿದ್ದಳು. ಪ್ರತಿದಿನವೂ ಸಾವಿರಾರು ಜನರು ಆಕೆಯನ್ನು ನೋಡಲು ಹೋಗುತ್ತಿದ್ದರು. ೭ ವರ್ಷಗಳ ಕೆಳಗೆ ಆಕೆಗೆ ಹುಚ್ಚು ಹಿಡಿಯಿತು. ಆಗಿನಿಂದಲೂ ಆಕೆಯು ಯಾವ ಆಹಾರವನ್ನೂ ತಿನ್ನುವುದಿಲ್ಲ; ದಿನಕ್ಕೆ 3-4 ಔನ್ಸು ನೀರನ್ನು ಮಾತ್ರ ಕುಡಿಯುವಳು. ಜಲಮಲ ವಿಸರ್ಜನವೇ ಇಲ್ಲ. ಮಾಸಿಕರಜೋದರ್ಶನವೂ ಕೂಡ ಇಲ್ಲ. ಈಗ ಅವಳ ಹುಚ್ಚು ಪೂರ್ಣವಾಗಿ ತೊಲಗಿಹೋಗಿದೆ. ನೋಡುವುದಕ್ಕೆ ಆಕೆಯಲ್ಲಿ ಯಾವ ವಿಕೃತಲಕ್ಷಣವೂ ಇಲ್ಲ. ಗೃಹಕೃತ್ಯವನ್ನು ಸರಿಯಾಗಿ ಮಾಡಿಕೊಂಡು ಹೋಗುತ್ತಿದ್ದಾಳೆ. ಚಿಕ್ಕಂದಿನಲ್ಲೇ ಅವಳ ಗಂಡನು ಮೃತನಾದನು. ಪುರುಷಸಂಪರ್ಕವು ಜನ್ಮದಲ್ಲೇ ಇಲ್ಲ. ಶುದ್ಧಬ್ರಹ್ಮಚಾರಿಣಿಯು. ಈಗ ಅವಳ ವಯಸ್ಸು 35. ಡಾಕ್ಟರ್ ಭಗತ್ ಎಲ್. ಎಮ್. ಎಸ್. ರವರು ಆಕೆಯನ್ನು ಪರೀಕ್ಷಿಸಿದರು. ಅವಳ ಹೃದಯ ಚಲನವು ನಿಮಿಷಕ್ಕೆ 72 ಸಲದಂತೆ ಆಗುವುದು. ಹಸ್ತನಾಡಿಯು ಎಲ್ಲರಿಗೂ ಇರುವಂತೆಯೇ ಇರುವುದು. "ಇನ್ನೊಬ್ಬಸ್ತ್ರೀಯು 10 ವರ್ಷಗಳಕಾಲ ಅನ್ನವನ್ನು ತಿನ್ನದೆ ಬದುಕಿದ್ದುದನ್ನು ನಾನು ನೋಡಿರುವೆನು. ಅವಳಿಗೆ ಗಂಡನಿರುವನು. ಆ 10 ವರ್ಷಗಳ ಕಾಲದಲ್ಲಿ ಅವಳಿಗೆ ೩ ಮಕ್ಕಳು ಹುಟ್ಟಿದರು. ಮೊದಲನೆಸಲ ಅವಳು ಚೆತ್ತಾಗ ಸ್ಮೃತಿತಪ್ಪಿಹೋಗಲು ಆಕಾಶದಿಂದ ಯಾವುದೋ ಒಂದು ಅದ್ಭುತವಾದ ಪದಾರ್ಥವು ಆಕೆಯ ಕೈಗೆ ಬಂದಂತೆಯೂ ಅದನ್ನು ಅವಳು ತಿಂದಂತೆಯೂ ಆಕೆಗೆ ಗೋಚರಿಸಿತು. ಆಗಿನಿಂದ ಆಹಾರದ ಮೇಲಣ ಆಸೆಯು ತನಗೆ ತೊಲಗಿಹೋಯಿತೆಂದು ಆಕೆಯು ನನ್ನೊಡನೆ ಹೇಳಿದಳು" ಎಂದು ಗುಜರಾತ್ ದೇಶದ ವಿದ್ವಾಂಸರಾದ ಆರ್. ಬಿ. ಹರಗೋವಿಂದರವರು ಲಾಹೋರ್ ಟ್ರಿಬ್ಯೂನ್ ಪತ್ರಿಕೆಗೆ ಬರೆದಿರುವರು.

ವಿದೇಶದ ವೃತ್ತಾಂತಗಳು

ಜಪಾನಿಗೆ ಸೇರಿದ ಕೆಯುಷ್ಯೂ ದ್ವೀಪದಲ್ಲಿ ಒಂದು ದೊಡ್ಡ ಭೂಕಂಪವು ಜರುಗಿ ೨೩ ಮಂದಿ ಸತ್ತರು. ಅನೇಕರಿಗೆ ಗಾಯಗಳಾದುವು.

ತುರ್ಕಿಯನ್ನೂ ಐರಿಷ್ ಫ್ರೀಸ್ಟೇಟನ್ನೂ ಜಾತೀಯ ಸಮಿತಿಯಲ್ಲಿ ಸೇರಿಸಿಕೊಳ್ಳಲಿಕ್ಕೆ ಲಾಸೇನಿಯಾ ಸಭೆಯಲ್ಲಿ ನಿಶ್ಚಿತವಾಗಿದೆ. ಇದಕ್ಕಾಗಿ ಒಂದು ಪ್ರತ್ಯೇಕಸಮಾವೇಶವು ಜನವರಿ ತಿಂಗಳಲ್ಲಿ ಜರಗುತ್ತದೆ.

ಯೂರೋಪ್ಯಖಂಡದಲ್ಲಿ ಅರಾಜಕತನವು ದಿನೇ ದಿನೇ ಹೆಚ್ಚುತ್ತಿದೆ. ಐರ್ಲಂಡಿನ ಗ್ರೀಕಿನ ಘೋರಹತ್ಯಗಳು ಒಂದು ಕಡೆ ನಡೆದಿರುವಾಗ ಪೋಲಂಡಿನಲ್ಲಿ ಅಧ್ಯಕ್ಷರಾಗಿದ್ದ ನರುಟೋವಿಚ್ ಎಂಬಾತನನ್ನು ಒಬ್ಬಾನೊಬ್ಬ ಚಿತ್ರಗಾರನು ತುಪಾಕಿಯಿಂದ ಹೊಡೆದು ಕೊಂದನು.

ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಒಂದು ಗ್ರೀಕರ ದೇವಾಲಯವಿದೆ. ಅದನ್ನು ತೆಗೆಯಿಸಿಬಿಡಬೇಕೆಂದೂ ಅಥವಾ ಸ್ವತಂತ್ರ ಪ್ರತಿಷ್ಠಾಪನೆಯಾಗಿಯಾದರೂ ಇರುವಂತೆ ಮಾಡಬೇಕೆಂದೂ ತುರ್ಕಿಯವರು ಹೇಳುತ್ತಿದ್ದಾರೆ. ಇದಕ್ಕೆ ಮಿತ್ರಮಂಡಲಿಯವರೂ ಅನೇಕರನ್ನರೂ ಒಪ್ಪಿಲ್ಲ.

ಜರ್ಮನಿಯಿಂದ ನಷ್ಟಪರಿಹಾರವನ್ನು ಬಲಾತ್ಕಾರದಿಂದಲಾದರೂ ವಸೂಲ್ಮಾಡಿಕೊಳ್ಳಬೇಕೆಂದು ಫ್ರೆಂಚರು ಕುತೂಹಲಪಡುತ್ತಿದ್ದಾರೆ. ಇಂಥ ಬಲಾತ್ಕಾರದಿಂದ ಕಾರ್ಯವು ಸಫಲವಾಗುವುದಕ್ಕೆ ಪ್ರತಿಯಾಗಿ ರಷ್ಯಾದ ಅವಸ್ಥೆಯೇ ಜರ್ಮನಿಗೂ ಬಂದು ಬೋಲ್ಶೆವಿಜಂ ಹಾವಳಿಯು ಪ್ರಪಂಚಕ್ಕೆಲ್ಲಾ ಹಬ್ಬುವುದೆಂಬ ಯೋಚನೆಯು ಅವರಿಗಿಲ್ಲ. ಇಂಗ್ಲೆಂಡಿನವರೂ ಅಮೇರಿಕನ್ನರೂ ಸಹ ಫ್ರೆಂಚರ ದುಡುಕುತನದ ಅನರ್ಥವನ್ನು ಯೋಚಿಸಿಕೊಂಡಿದ್ದಾರೆ. ಫ್ರೆಂಚರ ಅಭಿಪ್ರಾಯಕ್ಕೆ ಇಂಗ್ಲೀಷರು ಒಪ್ಪುವುದಿಲ್ಲ. ಜರ್ಮನಿಗೆ ವಿಶೇಷವಾಗಿ ಸಾಲವನ್ನಾದರೂ ಕೊಟ್ಟು, ನಷ್ಟಪರಿಹಾರವನ್ನು ಅವರು ಸಲ್ಲಿಸಿಬಿಡುವಂತೆ ಮಾಡಿ, ಪ್ರಪಂಚಶಾಂತಿಯುಂಟಾಗುವಂತೆ ಮಾಡಬೇಕೆಂದು ಅಮೇರಿಕನ್ನರು ಯೋಚಿಸುತ್ತಿದ್ದಾರೆ.

ಕಳೆದ ತಾ॥ 12 ರಲ್ಲಿ ಐರಿಷ್ ಫ್ರೀಸ್ಟೇಟ್ ಪಾರ್ಲಿಮೆಂಟಿನ ಸಂಯುಕ್ತ ಸಮಾವೇಶವು ಜರುಗಿತು. ದೇಶದ ೨ ಪಕ್ಷಗಳವರೂ ಏಕೀಭವಿಸಿ ಸಂಧಿನಿಯಮಗಳನ್ನು ಉತ್ಸಾಹದಿಂದಲೂ ವಿಶ್ವಾಸದಿಂದಲೂ ನೆರವೇರಿಸಬೇಕೆಂದೂ, ಅದರಿಂದ ಐರ್ಲೆಂಡಿಗೆ ಶಾಂತಿ ಸುಖ ಸಂಪತ್ತುಗಳು ಲಭಿಸುವಂತೆ ಜಗದೀಶ್ವರನು ಅನುಗ್ರಹಿಸಲೆಂದೂ ಸಾರ್ವಭೌಮರು ಒಂದು ಸಂದೇಶವನ್ನು ಸಭೆಗೆ ಕಳುಹಿಸಿಕೊಟ್ಟಿದ್ದರು. ಗೌರ್ನರ್ ಜನರಲ್ಲರು ದೇಶದ ಪರಿಸ್ಥಿತಿಯನ್ನು ಕುರಿತು ಭಾಷಣಮಾಡುವಾಗ್ಗೆ-ಅಲ್ಪಸಂಖ್ಯಾಕರಾದ ಜನರು ದೇಶದ ಅಧಿಕ ಸಂಖ್ಯಾಕ ಜನರನ್ನು ಬಗ್ಗುಬಡಿಯಬೇಕೆಂದು ಅರಾಜಕತನವನ್ನು ನಡೆಯಿಸುತ್ತಿದ್ದಾರೆಂದೂ, ಅವರ ಘೋರಕೃತ್ಯಗಳನ್ನು ಅಣಗಿಸುವುದು ಮಂತ್ರಿಗಳ ಮೊದಲನೆ ಕರ್ತವ್ಯವೆಂದೂ ಹೇಳಿದರು. ಕೂಲಿಕಾರ ಪಕ್ಷದ ಜನರಿಗೆ ಗೌರ್ನರ್ ಜನರಲ್ ಪದವಿಯಲ್ಲಿ ಮಿ॥ ಹೇಲಿಯವರು ಇರುವುದು ಇಷ್ಟವಾಗಿಲ್ಲವಾದಕಾರಣ ಆ ಸಭಿಕರಾರೂ ಸಭೆಗೆ ಬಂದಿರಲಿಲ್ಲ.

ಕಳೆದವಾರ ಕಾಮನ್ಸ್ ಸಭೆಯಲ್ಲಿ ನಡೆದ ಚರ್ಚೆಯನ್ನು ಕೇಳಿದರೆ ತಮ್ಮ ಅಧಿಕಾರಾರಂಭದಲ್ಲೇ ಬೋನರ್ಲಾರವರು ತಮ್ಮ ಅಸಾಮರ್ಥ್ಯವನ್ನು ಹೊರಗೆಡಹಿಕೊಂಡರೆಂಬುದು ವ್ಯಕ್ತವಾಗುತ್ತದೆ. ಕಾಮನ್ಸ್ ಸಭೆಯನ್ನು ಕೆಲವು ವಾರಗಳ ತನಕ ನಿಲ್ಲಿಸಿಬಿಡಬೇಕೆಂದು ಸಭೆಯಲ್ಲಿ ಹೇಳಲ್ಪಡಲು, ಕೂಲಿಕಾರ ಪಕ್ಷದ ಸಭಿಕರು ಬಹಳ ಗದ್ದಲವನ್ನು ಮಾಡಿದರು. ಹೊಟ್ಟೆಗಿಲ್ಲದೆ ತಾಪತ್ರಯಪಡುತ್ತಿರುವ ಜನರ ಕಷ್ಟನಿಷ್ಠುರಗಳನ್ನು ವಿಚಾರಿಸಿ ಪರಿಹಾರೋಪಾಯವನ್ನು ಕಲ್ಪಿಸದೆ ಸಭೆಯನ್ನು ಈ ಮಧ್ಯೆ ಮುಚ್ಚಿಬಿಡುವುದು ಬಹಳ ನಾಚಿಕೆಗೇಡುತನವೆಂದು ಒಬ್ಬರೂ, ಮುಖ್ಯಮಂತ್ರಿ ಬೋನರ್ಲಾರವರು ಶುದ್ಧ ಅಪ್ರಯೋಜಕರೆಂದೂ, ಅವರು ಕೂಡಲೆ ರಾಜೀನಾಮೆ ಕೊಡಬೇಕೆಂದೂ ಮತ್ತೊಬ್ಬ ಸಭಿಕರೂ, ಪ್ರಭುತ್ವದವರು ಕೂಲೀಜನರ ವಿಷಯದಲ್ಲಿ ಹೀಗೆ ಉಪೇಕ್ಷೆ ಮಾಡುತ್ತಾ ಬಂದರೆ ಅವರು ಒಳಗೂ ಹೊರಗೂ ಸರ್ಕಾರಕ್ಕೆ ಪ್ರತಿಭಟಿಸಲು ಸಿದ್ಧರಾಗುವರೆಂದು ಮತ್ತೊಬ್ಬರೂ, ತೀವ್ರವಾಗಿ ಖಂಡಿಸಿ ಸಭಾಧ್ಯಕ್ಷರನ್ನೂ ಮಂತ್ರಿಮಂಡಲದವರನ್ನೂ ಸಹ ನಿರ್ಲಕ್ಷಿಸಿ ಮಾತನಾಡಿದರು. ಆದರೂ ಕಡೆಗೆ ಓಟುಗಳನ್ನು ತೆಗೆಯಲಾಗಿ ಸಭೆಯನ್ನು ಸದ್ಯಃ ನಿಲ್ಲಿಸಬೇಕೆಂಬ ಪಕ್ಷಕ್ಕೆ ಹೆಚ್ಚು ಓಟುಗಳು ಬಂದುದರಿಂದ ಸಭೆಯು ನಿಲ್ಲಿಸಲ್ಪಟ್ಟಿತು.

ದಕ್ಷಿಣ ಅಮೇರಿಕಾದೇಶದ ಚಿಲ್ಲಿ ಪ್ರಾಂತದಲ್ಲಿ ದಕ್ಷಿಣ ಪೆಸಿಫಿಕ್ ಸಾಗರದ ತಳದಲ್ಲಿ ಮಹಾಪ್ರಚಂಡವಾದ ಭೂಕಂಪವುಂಟಾಗಿ ಪ್ರಪಂಚವೆಲ್ಲಾ ದಡದಡಿಸಿಹೋಗಿದೆ. ಈ ಭೂಕಂಪನವು ಅಲ್ಲಿ ಆಗುವುದೆಂಬುದರ ಪ್ರಮಾದವನ್ನು ಸೂಚಿಸಲಿಕ್ಕೆ ಲಂಡನ್ನಿನಲ್ಲಿರುವ ಯಂತ್ರಾಲಯದಲ್ಲಿ ಗಂಟೆಯು ವಿಪರೀತವಾಗಿ ಬಾಜಿಸಿತು. ಅರ್ಧರಾತ್ರಿಯಲ್ಲಿ ಈ ಭೂಕಂಪನವು ಸಂಭವಿಸಿತು. ತಕ್ಷಣವೇ ಕೊಕಿಂಬೊ ಮೊದಲಾದ ಸಮೀಪ ಪಟ್ಟಣಗಳಲ್ಲಿ ಜನರೆಲ್ಲಾ ದಿಗಿಲುಬಿದ್ದೆದ್ದು ಬೆಟ್ಟಗಳ ಕಡೆಗೆ ಓಡಿದರು. ಅದಾದ ಸ್ವಲ್ಪಹೊತ್ತಿಗೆ ಸಮುದ್ರದಲ್ಲಿ ನೀರು ಒಳಗಡೆಗೆ ಥಟ್ಟನೆ ಸೇದಿಹೋಗಿ ಕೂಡಲೇ ಮಹಾಸ್ತಂಭಾಕಾರವಾಗಿ ನಿಂತು, ಕೊಕಿಂಬೊ, ಲಾಸೆರ ಎಂಬ ಪಟ್ಟಣಗಳ ಮೇಲೆ ಅಪ್ಪಳಿಸಿ ಬಿದ್ದಿತು. ಆ ಬಳಿಕ ೭ ನಿಮಿಷಗಳಾದ ಮೇಲೆ ಮತ್ತೊಂದು ಸಮುದ್ರದ ದೊಡ್ಡ ತೆರೆಯು 180 ಅಡಿಗಳ ಎತ್ತರಕ್ಕೆ ಎದ್ದು ದೇಶದಮೇಲೆ ಅಪ್ಪಳಿಸಿ ಕವಿದಿತು. ಈ ಬಡಿತದಿಂದ ಕೊಕಿಂಬೊ ಪಟ್ಟಣದಲ್ಲಿ ಕಾಲುಭಾಗವೂ, ಸಮುದ್ರದ ಹಾರ್ಬರೂ ರೈಲ್ವೆಸ್ಟೇಷನ್ನೂ ಹಾಳಾದುವು. 40 ಟನ್ ಭಾರಗಳುಳ್ಳ ಹಡಗುಗಳುಕೂಡ ತೆರೆಗಳಿಂದ ಮೇಲಕ್ಕೆ ಹಾರಿ ಪಟ್ಟಣದ ಮಧ್ಯಭಾಗಕ್ಕೆ ಒಗೆಯಲ್ಪಟ್ಟಿರುವುವು. ಇದರಿಂದ ಸಾವಿರಾರು ಮಂದಿ ನೀರಿನಲ್ಲಿ ಮುಳುಗಿಹೋದರು. ಬಹುಜನರು ಗಾಯಗೊಂಡರು. 35000 ಜನರು ಮನೆಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿರುವರು. ಇಂಥ ಭೂಕಂಪನವು ಪದೇಪದೇ ಆ ಪ್ರಾಂತದಲ್ಲಿ ಆಗುತ್ತಿರುವುದರಿಂದ ಪೆಸಿಫಿಕ್ ಮಹಾಸಾಗರದಲ್ಲಿ ಇನ್ನೊಂದು ನೂತನಖಂಡವೋ ಇಲ್ಲವೆ ಮಹಾದ್ವೀಪವೋ ಉದಯಿಸುವುದೆಂದು ಭೂಗೋಳಶಾಸ್ತ್ರಜ್ಞರು ಹೇಳುತ್ತಿರುವ ಮಾತು ದೃಷ್ಟಾಂತವಾಗುವಹಾಗೆ ತೋರುತ್ತದೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ತಾಳೀಕೋಟೆ

ಕೆಳಗೆ ಸಹಿ ಮಾಡುವವರು ಈ ನೋಟಿಸಿನಿಂದ ತಿಳಿಸುವದೇನೆಂದರೆ.— ನಮ್ಮೂರ ನ್ಯೂ ಇಂಗ್ಲೀಷ ಸ್ಕೂಲಿಗೆ ಒಬ್ಬ ಮಾಸ್ತರರು (ಲಿಂಗಾಯತ) ಮೆಟ್ರಿಕ್, ಅಥವಾ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಬೇಕಾಗಿರುತ್ತಾರೆ. ಸದರಿಯವರ ಪಗಾರ (ಸಂಬಳ) ಮೊದಲಾದ ವಿಷಯದಲ್ಲಿ ನಮ್ಮ ಕಡೆಗೆ ಪತ್ರದ್ವಾರದಿಂದ ಅಥವಾ ಸಮಕ್ಷಮ ಬಂದು ಭೇಟಿಯಾಗಿ ತಿಳಿದುಕೊಳ್ಳಬೇಕು. ಪತ್ರವ್ಯವಹಾರ ಮಾಡುವವರು ತಾ॥ 31-12-22 ನೇ ಇಸವಿ ಒಳಗಾಗಿ ಮಾಡಬೇಕು.

V. B. Sheelavant,
V.W. Committee Secretary, Talikot.

ಎಂಗ್ ಮೆನ್ಸ್ ಅಸೋಸಿಯೇಷನ್ ಮಡಿಗೇನಹಳ್ಳಿ.

ಈ ಸಂಘವು ಸುಮಾರು ಒಂದು ವರ್ಷದಿಂದ ತುಂಬಾ ಹೀನಸ್ಥಿತಿಗೆ ಬಂದದ್ದರಿಂದ ಕೆಲವು ಜನ ಮೆಂಬರುಗಳು ಸೇರಿ ಈ ಸಂಘವನ್ನು ಅಭಿವೃದ್ಧಿಗೆ ತಂದು ಇದರ ಸದುದ್ದೇಶಗಳನ್ನು ನೆರವೇರಿಸಬೇಕೆಂಬ ಕುತೂಹಲದಿಂದ ಈ ಸಂಘದ ಹೆಸರನ್ನು ಕಳೆದ ತಿಂಗಳು ನವಂಬರ್ 30 ರಲ್ಲಿ ಸರ್ಕಾರದಲ್ಲಿ ರಿಜಿಸ್ಟರ್ ಮಾಡಿಸಿರುತ್ತಾರೆ. ಈ ಸಂಘವು 50 ಜನ ಮೆಂಬರುಗಳಿಂದ ಕೂಡಿದೆ. ಮತ್ತು ಈ ಸಂಘದ ಸದುದ್ದೇಶಗಳನ್ನು ಕ್ರಮವಾಗಿ ನಡೆಯಿಸಲು ಗ್ರಾಮದ ಪ್ರಜೆಗಳೆಲ್ಲರೂ, ಸಂಘದವರಿಗೆ ಉತ್ತೇಜನ ಕೊಟ್ಟು ಈ ಸಂಘವನ್ನು ಅಭಿವೃದ್ಧಿಗೆ ತರುತ್ತಾರೆಂದು ನಂಬಿರುತ್ತೇನೆ.

ಸಂಘದ ಹಿತೈಷಿ.

ಚಿತ್ರದುರ್ಗ ತಾಲ್ಲೂಕು ತುರುವನೂರು.

ಈ ಗ್ರಾಮವು 600 ಮನೆ, ಮತ್ತು 3000 ಪ್ರಜೆಗಳುಳ್ಳದ್ದಾಗಿದೆ. ಸಕಾಲದಲ್ಲಿ ಮಳೆ ಆಗದೆ ಇದ್ದುದರಿಂದ ನವಣೆ ಫಸಲು ಕೆಟ್ಟರೂ ಈಚೆಗೆ ಆದ 1-2 ಹದ ಮಳೆಗಳಿಂದ ಹತ್ತಿ, ಜೋಳ, ಕಡಲೆ ಬೆಳೆಗಳು ಚನ್ನಾಗಿವೆ. ರೈತರು ಹರ್ಷಚಿತ್ತರಾಗಿದ್ದಾರೆ. ಈ ಗ್ರಾಮದ ವಿ. ಇ. ಬಾಯ್ಸ್ ಸ್ಕೂಲ್ ಎ. ವಿ. ಸ್ಕೂಲ್ ಆಗುವುದರಲ್ಲಿದೆ ಎಂದು ಕೇಳುತ್ತೇನೆ. ಈ ಗ್ರಾಮಕ್ಕೆ 7-8 ವರ್ತಮಾನ ಪತ್ರಿಕೆಗಳು ಬರುತ್ತಾ ಇವೆ. ಮ॥ ರಾ॥ ಪೋಲೀಸ್ ದಫೆದಾರ್ ರಾಮರಾಯರವರು ತುಂಬಾ ಮುತುವರ್ಜಿಯಿಂದ ಕೆಲಸಮಾಡುತ್ತಾರೆ. ಗ್ರಾಮಚಾವಡಿಯು ಮ॥ ರಾ॥ ವಿಲೇಜ್ ಪಂಚಾಯ್ತಿ ಚೇರ್ ಮ್ಯಾನ್‌ರವರ ನಿಗೆಯಿಂದ ಚೆನ್ನಾಗಿದೆ. ಜೀರ್ಣವಾಗಿದ್ದ ಆಕ್ಕರದೇವಸ್ಥಾನವು ಮ॥ರಾ॥ ಪಟೇಲ್ ಹೇಮಣ್ಣನವರಿಂದ ಹೊಸದಾಗಿ ಶಿಲಾಮಯವಾಗಿ ಕಟ್ಟಲ್ಪಡುತ್ತಿದೆ. 4 ತಿಂಗಳ ಕೆಳಗೆ ಸ್ಥಾಪಿಸಲ್ಪಟ್ಟ ನೇಟೀವ್ ವೈದ್ಯಶಾಲೆಯು ಪಂಡಿತ ಮ॥ ರಾ॥ ಹೆಚ್. ನರಸಿಂಹಪ್ಪನವರ, ಸಮಯ, ಶ್ರದ್ಧೆ, ಶಾಲೆ, ಉಪಚಾರ, ಇವುಗಳಿಂದ ದಿನೇದಿನೇ ಅಭಿವೃದ್ಧಿ ಹೊಂದುತ್ತಿದೆ. ತಿಂಗಳು 1 ಕ್ಕೆ ಸುಮಾರು 300 ಕ್ಕಿಂತಲೂ ಮೇಲ್ಪಟ್ಟು ರೋಗಿಗಳು ಬರುತ್ತಿರುವುದಾಗಿ ತಿಳಿಯುತ್ತೇನೆ. ಇಂಥಾ ದೊಡ್ಡ ಗ್ರಾಮಕ್ಕೆ ಸಂತೆ ಇಲ್ಲದಿರುವುದು ಕೊರತೆ. ಇದನ್ನು ವಿಲೇಜ್ ಪಂಚಾಯ್ತಿ ಚೇರ್‌ಮನರು ಮತ್ತು ಮೆಂಬರುಗಳೂ ಸಹ ಆಗಲು ತಕ್ಕ ಏರ್ಪಾಟ್ ಮಾಡುವರೆಂದು ನಂಬುತ್ತೇನೆ.

ಗ್ರಾಮವಾಸಿ.

ವೀರಶೈವ ತರುಣಸಂಘ ಸ್ಥಾಪನೆ.

ತಾ॥ 7-12-1922ನೆ ದಿವಸ ಇಂಡಿ ತಾಲ್ಲೂಕು ಪೈಕಿ ಅಥರಗಾ ಗ್ರಾಮದಲ್ಲಿ "ವೀರಶೈವ ತರುಣಸಂಘ" ಎಂಬ ಸಂಘವನ್ನು ಸ್ಥಾಪಿಸುವ ಸಲುವಾಗಿ ಒಳ್ಳೇ ಉತ್ಸಾಹಪೂರ್ವಕವಾಗಿ ಒಂದು ಸಭೆಯು ನೆರೆಸಲ್ಪಟ್ಟಿತು. ಅದರಲ್ಲಿ ಸಿದ್ದಪ್ಪ ಬಸಪ್ಪ ಕಡಪಟ್ಟಿ ಮಾಸ್ತರ ಹುನಗುಂದ ಇವರು ಒಳ್ಳೇ ಉತ್ಸಾಹ ಪೂರ್ವಕವಾಗಿಯೂ, ಕಳಕಳಿಯಿಂದಲೂ ಈ ತರದ ಸಂಘದ ಅವಶ್ಯಕತೆಯನ್ನೂ, ಅದರ ಉದ್ದೇಶಗಳನ್ನೂ, ಸ್ಪಷ್ಟವಾಗಿ ತಮ್ಮ ಅಸ್ಖಲಿತವಾದ ವಾಣಿಯಿಂದ ಪಾಮರರಿಗೂ ಕೂಡ ಒಪ್ಪಿಗೆಯಾಗುವಂತೆ ಹೇಳಿದ್ದರಿಂದ ಎಲ್ಲ ಜನರೂ ಈ ಸಂಘವನ್ನು ಸ್ಥಾಪಿಸಬೇಕೆಂದು ಒಂದೇ ಮನಸ್ಸಿನಿಂದ ತಮ್ಮ ಪೂರ್ಣ ಸಮ್ಮತಿಯನ್ನು ವ್ಯಕ್ತಗೊಳಿಸಿದರು. ಎಷ್ಟೋ ಉದಾರರಾದ ಶ್ರೀಮಂತರು ಆ ಸಭೆಯಲ್ಲಿಯೇ ದೇಣಿಗರೂಪವಾಗಿ ಸಂಘಕ್ಕೆ ಸಹಾಯಮಾಡಿದರೆಂದು ನನಗೆ ತಿಳಿಸಲಿಕ್ಕೆ ಆನಂದವಾಗುತ್ತದೆ. ಅವರು ಯಾರೆಂದರೆ—ಶ್ರೀಮಂತರುಗಳಾದ ಬಾಬುರಾವ ಪಾಟೀಲ ಶಿರಶ್ಯಾಡ ರೂ. 5 ಮಲಕಣಗೌಡಾ ಪಾಟೀಲ ಅಥರಗಾ ರೂ. 2 ಶಹಾಜಿರಾವ್ ಪಾಟೀಲ ಅವರಾದಿ ರೂ. 2 ಬಸಲಿಂಗಪ್ಪಾ ಹೆಬ್ಬಾರ ಅಥರಗಾ ರೂ. 2 ದುಂಡಪ್ಪಾ ಗಂಗನಹಳ್ಳಿ ರೂ. 2 ಸಿದ್ಧಪ್ಪಾ ಬಸಪ್ಪಾ ಕಡಪಟ್ಟಿ ಹುನಗುಂದ ರೂ. 1 ಉಮ್ಮಯ್ಯಾ ಶಿವಯ್ಯಾ ಮಠಪತಿ ರೂ. 1 ಇದಲ್ಲದೆ ಊರೊಳಗಿನ ಎಲ್ಲ ಜನರೂ ಶುಭಾಶುಭ ಕಾರ್ಯಗಳಲ್ಲಿಯೂ, ರಾಶಿಯ ಕಾಲದಲ್ಲಿಯೂ, ಈ ಸಂಘಕ್ಕೆ ಸಹಾಯಮಾಡುತ್ತೇವೆಂದು ಹೇಳಿದ್ದಾರೆ, ಮತ್ತು ವರ್ತಕರು ತಮ್ಮ ಅಂಗಡಿಗಳಲ್ಲಿ ಈ ಸಂಘದ ಹೆಸರಿನಿಂದ ಧರ್ಮದಾವ ಖಾತೆಯನ್ನಿಡುತ್ತೇವೆಂದು ಹೇಳಿದ್ದಾರೆ. ಈ ಕಾರ್ಯವು ಸುತ್ತ್ಯವಿದ್ದು ಇದರಿಂದ ಜನಾಂಗದ ಸುಧಾರಣೆಗೆ ಬಲವಾದ ಸಾಹಾಯ್ಯವಾಗುವದು ಆದಕಾರಣ ಪ್ರತಿ ಗ್ರಾಮಗಳಲ್ಲಿ ಈ ತರದ ಸಂಘಗಳಾಗಬೇಕೆಂದೂ ಈ ಪವಿತ್ರಕಾರ್ಯಮಾಡಲಿಕ್ಕೆ ಜಗದೀಶನು ನನ್ನ ದೇಶಬಾಂಧವರಿಗೆ ಸದ್ಬುದ್ಧಿಯನ್ನೀಯಲೆಂದೂ ಕೋರಿ ಈ ಲೇಖನವನ್ನು ಮುಗಿಸುವೆನು.

ಓರ್ವ ಪ್ರೇಕ್ಷಕ.

ಮೆಡಲುಗಳ ಬಹುಮಾನ.

ನಮ್ಮ ದೇಶದಲ್ಲಿ ಚೌಡಿ, ಚಾಮುಂಡಿ, ಮಾರಿ, ದುರ್ಗಿ ಇತ್ಯಾದಿ ಹೆಸರಿನ ದೇವತೆಗಳ ಶಾಂತ್ಯರ್ಥವೆಂಬ ನೆವದಿಂದ ನಿತ್ಯವೂ ಲೆಕ್ಕವಿಲ್ಲದಷ್ಟು ನಿರುಪದ್ರವಿಪಶುಗಳ ಜೀವಹಿಂಸೆಯು ನಡೆಯುತ್ತಲಿರುವುದು ಸರಿಯಷ್ಟೆ.—ಈ ವಿಷಯದಮೇಲೆ ಕೆಳಗೆ ವಿವರಿಸಿರುವ ಪ್ರಕಾರ ಅಥವಾ ಲೇಖಕನ ಇಷ್ಟಕ್ಕೆ ತೋರುವ ಪ್ರಕಾರ ಶುದ್ಧವಾದ ಕನ್ನಡ ಭಾಷೆಯಲ್ಲಿ ಜನರ ಮನಸ್ಸಿನ ಮೇಲೆ ಒಳ್ಳೇಪರಿಣಾಮವಾಗುವಂಥ ಲೇಖನವನ್ನು ಕೆಳಗಿನ ವಿಳಾಸದಾರರ ಕಡೆಗೆ ಬರೆದು ಕಳುಹಿಸತಕ್ಕದ್ದು. ಅಂಥ ಎಲ್ಲಾ ಲೇಖನಗಳಲ್ಲಿ ಅತ್ಯುತ್ತಮಗಳೆಂದು ನಿರ್ಧರವಾಗುವ ಎರಡು ಲೇಖನಗಳಿಗೆ ಕಪ್ಪನಹಳ್ಳಿ ಶಿವಯೋಗಾಶ್ರಮದ ವಾರ್ಷಿಕ ಸಮಾರಂಭದ ಕಾಲಕ್ಕೆ ನಡೆಯುವ ಧಾರ್ಮಿಕ ಪರಿಷತ್ತಿನ ಅಧ್ಯಕ್ಷರ ಕಡೆಯಿಂದ ಕ್ರಮವಾಗಿ ಬಂಗಾರದ ಮತ್ತು ಬೆಳ್ಳಿಯ ಎರಡು ಪದಕಗಳನ್ನು ಬಹುಮಾನವಾಗಿ ಕೊಡತಕ್ಕದ್ದೆಂದು ನಿರ್ಧರಿಸಲ್ಪಟ್ಟಿರುವುದು. ಪ್ರಯುಕ್ತ ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ಆದ ಲೇಖಕರು ದಯವಿಟ್ಟು ತಮ್ಮ ಲೇಖನಗಳನ್ನು ಆದಷ್ಟು ಶೀಘ್ರ ಕಳುಹಿಸಿಕೊಡಬೇಕಾಗಿ ಆಶಿಸುತ್ತೇನೆ.

(ಲೇಖನವು ಒಳಗೊಂಡಿರಬೇಕಾದ ಅಂಶಗಳು).

1. (ಎ) ದೇವತೆಗಳಿಗೆ ಪಶುಬಲಿ ಕೊಡಲ್ಪಡುವ ಈ ಪದ್ಧತಿಯು ಅನಾದಿಸಂಸಿದ್ಧವಾದದ್ದೋ ಹೇಗೆ? (ಬಿ) ಮತ್ತು ಈ ಪದ್ಧತಿಯು ಸಾಧುವಾದದ್ದೋ; ಅಸಾಧುವಾದದ್ದೋ?

2. ಈ ಪದ್ಧತಿಯು ಪ್ರಚಾರದಲ್ಲಿ ಬರಲಿಕ್ಕೆ ಕಾರಣವೇನು? ಮತ್ತು ಪ್ರಚಾರದಲ್ಲಿ ಬಂದು ಸುಮಾರು ಎಷ್ಟು ಕಾಲವಾಗಿರಬಹುದು?

3. ಈ ಪಶುಬಲಿ ಕೊಡುವ ಪದ್ಧತಿಯಿಂದ ಸಮಾಜಕ್ಕಾಗುವ ಅರ್ಥಹಾನಿ, ಆರೋಗ್ಯಹಾನಿ, ನೈತಿಕಹಾನಿ ಇತ್ಯಾದಿಗಳ ಯಥಾರ್ಥ ವರ್ಣನೆ.

4. ಮಾರಿ ಮತ್ತು ದುರ್ಗಿ ಇತ್ಯಾದಿ ದೇವತೆಗಳ ಹಬ್ಬಗಳ ಯಥಾರ್ಥ ವರ್ಣನೆ.

5. ಈ ಪದ್ಧತಿಯ ನಿವಾರಣೋಪಾಯ, ಇತ್ಯಾದಿಗಳು.

ಶ್ರೀಕಂಠಗೌಡ, ಲ್ಯಾಂಡ್ ಹೋಲ್ಡರ್
ತುತ್ತೂರು. ಸೊರಬ ತಾಲ್ಲೂಕು.

ಶ್ರೀಮದ್ವೀರಶೈವ ಸ್ಟೂಡೆಂಟ್ಸ್ ಹೋಂ, ಚಿಕ್ಕಮಗಳೂರು.

ದೇಶಾಭಿಮಾನಿಗಳಲ್ಲಿ ನನ್ನ ವಿನಂತಿ ಏನಂದರೆ.—ಮೇಲ್ಕಂಡ ಹೋಮಿನಲ್ಲಿ ಕೈಲಾಸವಾಸಿಗಳಾದ ಶ್ರೀ ಜಾಬಾಲಪುರೀ ಮಠದ ಶ್ರೀ ಗುರುಚಂದ್ರಶೇಖರ ಮಹಾಸ್ವಾಮಿಗಳವರ ಹೆಸರಿನಲ್ಲಿ ಸ್ಥಾಪಿತವಾಗಿರುವ ರೀಡಿಂಗ್ ರೂಂ ಮತ್ತು ಪುಸ್ತಕ ಭಂಡಾರ ಇವುಗಳಿಗೆ ವೀರಶೈವರೇ ಮೊದಲಾದ ಎಲ್ಲಾ ಮಹನೀಯರುಗಳೂ ಅವರವರ ಶಕ್ತ್ಯನುಸಾರವಾಗಿ ದ್ರವ್ಯಸಹಾಯ ಮಾಡುತ್ತಿರುವುದು ಶ್ರೀಗಳವರ ಸದ್ಧರ್ಮಕ್ಕೆ ಪ್ರೋದ್ಬಲವಾಗಿದೆ. ಸದರಿ ಹೋಮಿನ ಕಾರ್ಯಭಾರಿಗಳಾದ ಮಿ॥ ವೈ॥ ಭದ್ರಪ್ಪನವರು ಕಾರ್ಯಾಭಿವೃದ್ಧಿ ವಿಷಯದಲ್ಲಿ ಪೂರ್ಣಕುತೂಹಲ ವುಳ್ಳವರಾಗಿರುತ್ತಾರೆ. ಪುಸ್ತಕ ಭಂಡಾರ ರೀಡಿಂಗ್‌ರೂಮುಗಳಿಗೆ ಅತ್ಯಾವಶ್ಯಕವಾದ ಧನರಾಶಿಯನ್ನು ದೇಶಾಭಿಮಾನಿಗಳ ಸಹಾಯದಿಂದ ಚಂದಾರೂಪವಾಗಿ ಆರ್ಜಿಸಲು ನೇಮಕವಾಗಿರುವ ಮೆಂಬರುಗಳೂ ಕೂಡ ಧರ್ಮಾಭಿಮಾನಿಗಳಿಂದ ಶೇಖರಿಸಲ್ಪಟ್ಟ ಚಂದಾಮೊಬಲಗನ್ನು ಆದಷ್ಟು ಜಾಗ್ರತೆಯಾಗಿ ಕಳುಹಿಸಿಕೊಡುತ್ತಾ ಬಂದರೆ ರೀಡಿಂಗ್‌ರೂಂ, ಪುಸ್ತಕ ಭಂಡಾರಗಳಿಗೆ ಅವಶ್ಯಕವಾದ ಸೌಕರ್ಯಗಳನ್ನು ಒದಗಿಸಿಕೊಳ್ಳುವುದಕ್ಕೆ ಹೆಚ್ಚು ಅವಕಾಶವನ್ನು ಕೊಟ್ಟಂತಾಗುತ್ತದೆ. ಈ ಹೋಮಿಗೆ ಸಂಬಂಧಪಟ್ಟ ಮೆಂಬರುಗಳ ಪೈಕಿ ಒಬ್ಬರಾದ ಮನದೇವನಹಳ್ಳಿ ಸ್ಕೂಲ್ ಮಾಸ್ಟರ್ ಎ. ಚನ್ನಪ್ಪನವರು ಕಡೂರು ತಾಲ್ಲೂಕು ಪಂಚನಹಳ್ಳಿಗೆ ಹೋಗಿ ಸದರಿ ಗ್ರಾಮದ ಧನಿಕರಾಗಿಯೂ, ತಾಲ್ಲೂಕು ಬೋರ್ಡ್ ಎಲೆಕ್ಟೆಡ್ ಮೆಂಬರಾಗಿಯೂ ಇರುವ ಮ॥ ರಾ॥ ಸಿ. ಮರುಳೇಗೌಡರೆಂಬುವರನ್ನು ಮೇಲ್ಕಂಡ ರೀಡಿಂಗ್‌ರೂಂ ಪುಸ್ತಕಭಂಡಾರಗಳಿಗೆ ದ್ರವ್ಯಸಹಾಯ ಮಾಡಬೇಕಾಗಿ ಕೇಳಿಕೊಂಡದ್ದಕ್ಕೆ ಹೀಗೆ ಎಲ್ಲಾ ಕಾರ್ಯಗಳಿಗೂ ಚಂದಾಕೊಡುತ್ತಹೋದರೆ ನಮ್ಮಗಳ ಪರಿಣಾಮವೇನು ಎಂಬುದಾಗಿ ಅಪ್ಪಣೆ ಕೊಡಿಸಿ ಅವರ ಹಸ್ತಗತವಾಗಿದ್ದ ಚಂದಾಪುಸ್ತಕವನ್ನು ವಾಪಸ್ಸು ಮಾಡಿದ ವಿಷಯವು ಹೋಮಿನ ತರುಣಸಮ್ಮೇಳನಕ್ಕೆಲ್ಲಾ ಅಪಾರವಾದ ವ್ಯಸನವನ್ನುಂಟುಮಾಡಿದೆ. ಆದ್ದರಿಂದ ಧರ್ಮಾಭಿಮಾನಿಗಳಾದ ಸಿ. ಮರುಳೇಗೌಡರವರು ಮುಂದಾದರೂ ಇಂಥಾ ಅಪ್ಪಣೆಗಳಿಗೆ ಅವಕಾಶ ಕೊಡದಂತೆ ತಮ್ಮ ಮಿತ್ರಮಂಡಲಿಗೂ ಸಹ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಸಾಧ್ಯವಾದಮಟ್ಟಿಗೆ ಧನಸಹಾಯ ಮಾಡಿ ಶ್ರೀಗಳವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ, ಸಿ. ಮರುಳೇಗೌಡರವರಲ್ಲಿ ನನ್ನ ಪ್ರಾರ್ಥನೆ.

ಹೋಮಿನ ಒಬ್ಬ ತರುಣ.

ವೀರಶೈವ ಧರ್ಮಾಭಿಮಾನಿಗಳಿಗೊಂದು ವಿನಂತಿಯು.

ಧರ್ಮಬಾಂಧವರೇ! ಸದ್ಯದ ಪರಿಸ್ಥಿತಿಯ ಮೇಲಿಂದ ವಿಚಾರಮಾಡಿ ನೋಡಿದರೆ ನಮ್ಮ ವೀರಶೈವ ಸಮಾಜದಲ್ಲಿ ಗುರುವರ್ಗ—ವಿರಕ್ತವರ್ಗಗಳ ವೈಮನಸ್ಸಿನ ವಿಷಯಕವಾಗಿಯೂ, ಮೈಸೂರು ಸಂಸ್ಥಾನದ ಸಂಸ್ಕೃತ ಕಾಲೇಜುಗಳಲ್ಲಿ ವೀರಶೈವರನ್ನೂ ಸೇರಿಸಿಕೊಳ್ಳುವ ವಿಷಯಕವಾಗಿಯೂ, ಎರಡು ಪ್ರಶ್ನೆಗಳು ಉಪಸ್ಥಿತಗಳಾಗಿರುವುವಷ್ಟೆ? ಇವೆರಡು ಪ್ರಶ್ನೆಗಳನ್ನು ಚನ್ನಾಗಿ ವಿಚಾರಮಾಡಿ ವ್ಯವಸ್ಥೆಗೊಳಿಸುವ ಸಾಮರ್ಥ್ಯವು ನಮ್ಮ ಸಮಾಜದ ಮುಂದಾಳುಗಳಲ್ಲಿ ಇದ್ದರೂ ಅವರು ಈ ವಿಷಯದಲ್ಲಿ ಮೌನಭಾವವನ್ನು ತಾಳಿರುವದು ನಮ್ಮ ಸಮಾಜದ ದುರ್ದೈವವೇ ಸರಿ. ಮೊದಲನೇ ಪ್ರಶ್ನೆಯ ವಿಷಯಕವಾಗಿ ವಿಚಾರಮಾಡಿ ವ್ಯವಸ್ಥೆಗೊಳಿಸುವ ಸಾಮರ್ಥ್ಯವು ಒಬ್ಬೊಬ್ಬ ಗುರುವರ್ಗಾಧಿಕಾರಿಗಳಲ್ಲಿ ಇಲ್ಲವೆಂದು ನಿಸ್ಸಂಶಯವಾಗಿ ಹೇಳಬೇಕಾಗಿದೆ. ಯಾಕೆಂದರೆ ಉಭಯಪಕ್ಷಗಳ ಒಬ್ಬೊಬ್ಬ ಅಧಿಕಾರಿಗಳಿಂದ ವ್ಯವಸ್ಥೆಗೊಳಿಸಲ್ಪಟ್ಟ ವಿಷಯವು ಸರ್ವಸಾಮಾನ್ಯವಾಗಲಾರದು. ಮತ್ತು ಅದರಂತೆ ಒಪ್ಪಿಕೊಳ್ಳುವ ವಿಷಯದಲ್ಲಿ ಇನ್ನುಳಿದವರು ತಮ್ಮ ಸಮ್ಮತಿಯನ್ನಾದರೂ ಕೊಡಲಾರರು. ಆದ್ದರಿಂದ ಮೊದಲನೇ ಪ್ರಶ್ನದ ವಿಷಯವನ್ನು ಗುರುವರ್ಗದ ಮುಖ್ಯಸ್ಥರಾದ ಪಂಚಪೀಠಾಧೀಶರುಗಳೂ, ಮತ್ತು ವಿರಕ್ತವರ್ಗದ ಮುಖ್ಯಸ್ಥರಾದ ಚಿತ್ರದುರ್ಗ ಗದಗ ಮೊದಲಾದ ಪೀಠಾಧಿಕಾರಿಗಳೂ ಇನ್ನುಳಿದ ಸಮಾಜದ ಮುಖಂಡರೂ ಕೂಡಿ ನಿಷ್ಪಕ್ಷಪಾತದಿಂದ ವ್ಯವಸ್ಥೆಗೊಳಿಸಿದರೆ ಆ ನಿರ್ಣಯವು ಸರ್ವಮಾನ್ಯವಾಗಿ ಸಮಸ್ತವರ್ಗದವರೂ ಅದರಂತೆ ಒಪ್ಪಿಕೊಳ್ಳಬಹುದು. ಇಲ್ಲದಿದ್ದರೆ ಚಿಕ್ಕಪುಟ್ಟ ಸಭೆಗಳಿಂದ ಈ ಪ್ರಶ್ನದ ನಿರ್ಣಯವು ಎಂದೂ ಆಗಲಾರದು. ಆದ್ದರಿಂದ ನಮ್ಮ ಸಮಾಜ ಹಿತೈಷಿಗಳು ಈ ವಿಚಾರದ ಕಡೆಗೆ ಲಕ್ಷ್ಯ ಕೊಟ್ಟು ಅದರಂತೆ ವ್ಯವಸ್ಥೆಗೊಳಿಸುವರೆಂದು ಪೂರ್ಣ ವಿಶ್ವಾಸವುಂಟು.

ಇನ್ನು ಎರಡನೇ ಪ್ರಶ್ನದ ವಿಷಯಕ್ಕೆ ವಿಚಾರಮಾಡಿದರೆ—ಸ್ವಲ್ಪದರಲ್ಲಿಯೇ ಅದರ ನಿರ್ಣಯವಾಗಿ ನಮ್ಮ ಕಾರ್ಯವು ಕೈಗೂಡುವುದು. ಅರ್ಥಾತ್ ಈಗ ನಡೆದಿರುವ ಮೈಸೂರ ಸಂಸ್ಥಾನದ ಸಂಸ್ಕೃತ ಕಾಲೇಜುಗಳ ವ್ಯವಸ್ಥೆಯಾಗುವದು. ಸಮಸ್ತ ವೀರಶೈವರೂ ತಮ್ಮತಮ್ಮ ಗ್ರಾಮಗಳಲ್ಲಿ ಸಭೆಗಳನ್ನು ಮಾಡಿಸಿ ಆ ಸಭೆಗಳ ಮೂಲಕ ಶ್ರೀಮನ್ಮಹಾರಾಜರವರಿಗೆ "ತಮ್ಮ ಸಂಸ್ಕೃತ ಕಾಲೇಜುಗಳಲ್ಲಿ ವೀರಶೈವರನ್ನೂ ಸೇರಿಸಿಕೊಳ್ಳುವ ಅಪ್ಪಣೆಯಾಗಬೇಕು. ಇದರಿಂದ ನಮ್ಮ ರಾಜಭಕ್ತಿ ವಿಶ್ವಾಸಗಳು ಮತ್ತಷ್ಟು ವೃದ್ಧಿಯಾಗಲಿಕ್ಕೆ ಅವಕಾಶಕೊಡಬೇಕು. ಎಂಬ ಅಭಿಪ್ರಾಯದ ಅರಿಕೆಗಳನ್ನು ಮಾಡಿಕೊಳ್ಳಬೇಕು. ಈ ವಿಷಯವನ್ನು ಸಾಧಿಸಬೇಕಾದರೆ ಸರ್ವರೂ ಒಕ್ಕಟ್ಟಿನಿಂದಲೂ ಉತ್ಸಾಹದಿಂದಲೂ ಪ್ರಯತ್ನಪೂರ್ವಕವಾಗಿ ಕಾರ್ಯಪ್ರವೃತ್ತರಾಗಬೇಕು. ಈ ವಿಷಯದಲ್ಲಿ ಪರಮತದವರು ನಮ್ಮ ಒಗ್ಗಟ್ಟನ್ನು ಮುರಿಯುವ ಬಗ್ಗೆ ಪ್ರಯತ್ನ ಮಾಡಬಹುದು. ನಮಗೆ ಉತ್ಸಾಹವಾಗದಂಥ ಲೇಖನಗಳನ್ನು ಪ್ರಕಟಿಸಿ ಉಪದೇಶಿಸಬಹುದು. ಆದರೆ ಅವರ ಪ್ರಯತ್ನವನ್ನು ಲಕ್ಷ್ಯಕ್ಕೆ ತಾರದೆ ಅವರ ಲೇಖಕ್ಕೆ ಕಿವಿಗೊಡದೆ ಏಕಮುಖವಾಗಿ ಆಂದೋಲನವನ್ನು ನಡೆಯಿಸಬೇಕು.

ಪರಮತದವರು ನಮ್ಮ ಕಾರ್ಯಕ್ಕೆ ವಿಘ್ನತರಬೇಕೆಂದು ವರ್ತಮಾನ ಪತ್ರಗಳಲ್ಲಿ "ಓರ್ವ ವೀರಶೈವ" "ಓರ್ವ ಧರ್ಮಾಭಿಮಾನಿ" ಗಳೆಂಬ ಗುಪ್ತ ನಾಮಗಳನ್ನು ಧರಿಸಿಕೊಂಡು ಆಗಸರ ಕತ್ತೆಯು ಹುಲಿಯ ಚರ್ಮವನ್ನು ಹೊದ್ದುಕೊಂಡು ತೋಟಿಗನಿಗೆ ವಂಚಿಸಿದಂತೆ ನಮ್ಮ ಮತದವರ ವೇಷ(ನಾಮ)ದಿಂದ ಅನೇಕ ಲೇಖಗಳನ್ನು ಬರೆಯುತ್ತಿದ್ದಾರೆ. ಆ ಲೇಖಗಳ ಕಡೆಗೆ ನಮ್ಮ ಧರ್ಮಾಭಿಮಾನಿಗಳು ತಿಲಮಾತ್ರವೂ ಲಕ್ಷ್ಯ ಗೊಡಬಾರದು. ಅವರ ಲೇಖನಗಳು ಬ್ರಾಹ್ಮಣರ ಪತ್ರಿಕೆಗಳಲ್ಲಷ್ಟೇ ಪ್ರಸಿದ್ಧವಾಗದೆ ವಿಭಾಕರ ಮೊದಲಾದ ವೀರಶೈವರ ಪತ್ರಿಕೆಗಳಲ್ಲಿಯೂ ಕೂಡ ಪ್ರಸಿದ್ಧವಾಗುತ್ತಿರುವುವು. ಅವರ ಅಭಿಪ್ರಾಯವೇನೆಂದರೆ—ಬ್ರಾಹ್ಮಣ ಪತ್ರಿಕೆಗಳಲ್ಲಿ ಆ ಲೇಖಗಳನ್ನು ಬರೆದರೆ ಪಕ್ಷಪಾತ ಲೇಖಗಳೆಂದು ತಿಳಿದು ದೂಷಿಸಿ ಮನ್ನಿಸಲಾರರೆಂತಲೂ ಅವರ ಪತ್ರದಲ್ಲಿಯೇ ಅವರ ಹೆಸರಿನಿಂದ ಲೇಖಗಳನ್ನು ಕೊಟ್ಟರೆ ಅವರಿಗೆ ವಿಶ್ವಾಸವಾಗಿ ಆ ನಮ್ಮ ಕಾರ್ಯವು ಕೈಗೂಡುವುದೆಂತಲೂ ತಿಳಿದು ಅದರಂತೆ ನಮ್ಮ ವರ್ತಮಾನ ಪತ್ರಗಳಲ್ಲಿಯೂ ಕೂಡ ಕೊಡಲಿಕ್ಕೆ ಪ್ರಾರಂಭಿಸಿರುವರು. ಇವರ ಸಮಾಚಾರವನ್ನು ನಮ್ಮ ಸ್ಟಾರ್ ಪತ್ರಿಕಾ ಸಂಪಾದಕರು ಮೇಲಿಂದಮೇಲೆ ತೆಗೆದುಕೊಳ್ಳುತ್ತಿದ್ದರೂ ಯಾವುದಾದರೊಂದು ಕುಯುಕ್ತಿಯನ್ನು ಇವರು ನಡೆಸಿಯೇ ಇರುವರು. ಇದೇ ಡಿಸೆಂಬರ್ ತಿಂಗಳ 1ನೇ ತಾರೀಖಿನ ವಿಭಾಕರ ಪತ್ರದಲ್ಲಿ "ತಮ್ಮ ಓರ್ವ ವೀರಶೈವ" ನೆಂಬ ಗುಪ್ತ ನಾಮಧಾರಿಯು ಬರೆದಿರುವ ಲೇಖವನ್ನು ನೋಡಿದರೆ ಅವರ ಕುಯುಕ್ತಿಯು ಒಡೆದು ಕಾಣುತ್ತಿರುವುದು. ಆ ಲೇಖಕನು ಕೈಕೊಂಡ ದುಷ್ಕೃತಿಯು ಮಧುರ ಶಬ್ದಗಳಿಂದ ತಿಳಿಯದಿದ್ದರೂ ಒಂದೆರಡು ಸಾರಿ ವಿಚಾರಮಾಡಿ ನೋಡಿದರೆ ಅವನು ಮಾಡಯತ್ನಿಸಿರುವ ವೀರಶೈವಮತದ ಅಂತಶ್ಛೇದವನ್ನೂ—ಪ್ರಮುಖರ ಉತ್ಸಾಹಭಂಗವನ್ನೂ ವರ್ಣಿಸುವುದು ಅವನಂಥ ಮಧುರ ಶಬ್ದಗಳಿಂದೇನೂ ಆಗದು. ಇವನು ನಿಜವಾದ ವೀರಶೈವನೆಂದು ನಂಬಿದರೂ ಇವನ ಕೃತಿಯನ್ನು ನೋಡಿದರೆ ಇವನು ವೀರಶೈವನಾಗದೆ ವೀರವೈಷ್ಣವನಿರಬಹುದೆಂತಲೂ ಅಥವಾ ವೀರವೈಷ್ಣವನಿಗೆ ಹುಟ್ಟಿದವನಿರಬಹುದೆಂತಲೂ ತರ್ಕಿಸಲು ಆಸ್ಪದವಿರುವದು. ಇವನು ನಿಜವಾದ ವೀರಶೈವನಾಗಿದ್ದರೆ ಹೀಗೆಂದಿಗೂ ಬರೆಯುತ್ತಿರಲಿಲ್ಲ. ಈಗ ಸಂಸ್ಕೃತ ಕಾಲೇಜುಗಳ ವಿಷಯಕವಾಗಿ ತನುಮನಧನಗಳಿಂದಲೂ ಪ್ರಯತ್ನಮಾಡುತ್ತಿರುವ ಮಾನನೀಯರಾದ ಕೆ. ಪಿ. ಪುಟ್ಟಣ್ಣಶೆಟ್ಟರಂಥ ಮುಂದಾಳುಗಳ ಪವಿತ್ರ ಕರ್ತವ್ಯವನ್ನೂ ಕೂಡ ಲಕ್ಷ್ಯಕ್ಕೆ ತಾರದೆ ಒಂದು ತರದಿಂದ ಅಂಥವರಿಗೂ ಅನುತ್ಸಾಹವನ್ನು ಹುಟ್ಟಿಸಲು ತನ್ನ ಕುಯುಕ್ತಿಯನ್ನು ನಡೆಸಿರುವದು ಯಾರಿಗೆ ತಾನೇ ಸಹಿಸಲಾದೀತು? ಅವನು ಬರೆಯುವುದೇನೆಂದರೆ "ನಮ್ಮ ಸಮಾಜದವರು ಈ ಸಂಸ್ಕೃತ ಕಾಲೇಜುಗಳ ಕೋಲಾಹಲನನ್ನು ಮೊದಲು ಎಬ್ಬಿಸಬಾರದಿತ್ತೆಂತಲೂ, ಎಬ್ಬಿಸಿದರೂ ಅದನ್ನು ಸಮಾಪ್ತಿಗೆ ಒಯ್ಯುವ ಪ್ರಯತ್ನವು ಯಾರಿಂದಲೂ ಮಾಡಲ್ಪಟ್ಟಿಲ್ಲವೆಂತಲೂ, ಪೂರ್ವದಲ್ಲಿ ಇದೇ ಪ್ರಕಾರ ಕೋಲಾಹಲವನ್ನು ಎಬ್ಬಿಸಿ ಕಾಲೇಜುಗಳಲ್ಲಿ ಸೇರಲು ವೀರಶೈವರು ಪ್ರಯತ್ನಮಾಡಿದ ಕಾಲಕ್ಕೆ ಶ್ರೀಮತ ಬ್ರಾಹ್ಮಣ ಪಂಡಿತರು ತಮ್ಮ ಅಧ್ಯಾಪಕತ್ವವನ್ನು ಬಿಟ್ಟು ಹೋಗಲಾಗಿ ಪುನಃ ವೀರಶೈವರು ನಾಯಿಯಬಾಲದಂತೆ ಹಾಗೇ ಉಳಿಯಬೇಕಾಯಿತೆಂತಲೂ, ಈಗಿನ ಕಾಲದಲ್ಲಿ ನಮ್ಮ ವೀರಶೈವ ಸಮಾಜದಲ್ಲಿರತಕ್ಕ ತೀರ್ಥ—ಭೂಷಣ—ವಿಶಾರದ ಮೊದಲಾದ ಪದವೀಧರರಾದ ಕೆಲವು ಪಂಡಿತರು ನಿಜವಾದ ಪಂಡಿತರಾಗದೆ, ಸಮಾಜದಲ್ಲಿ ತಮ್ಮ ಪ್ರತಿಷ್ಠೆಗೋಸ್ಕರ ಈ ಪದವಿಗಳನ್ನು ಉಪಯೋಗ ಮಾಡುತ್ತಿರುವರೆಂತಲೂ, ನಿಜವಾದ ಪಂಡಿತರಾಗಿದ್ದರೆ ಹೀಗೆ ಎಂದಿಗೂ ಮೂಲೆಗೆ ಕೂಡುತ್ತಿದ್ದಿಲ್ಲವೆಂತಲೂ, ನಮ್ಮ ಸಮಾಜಮುಖಂಡರು ಇಂಥ ಕಾರ್ಯಗಳನ್ನು ಮಾಡಬೇಕಾದರೆ ಪೂರ್ವಸಿದ್ಧತೆಗಳನ್ನು ಮಾಡಿಕೊಂಡು ಕೈಹಾಕಬೇಕೆಂತಲೂ" ಇವೇ ಮೊದಲಾದ ಕೆಲವು ಕುಯುಕ್ತಿ ಗರ್ಭಿತಗಳಾದ ವಾಕ್ಯಗಳನ್ನು ಬರೆದು ಈಗ ನಾವು ನಡೆಸಿರುವ ಸಂಸ್ಕೃತ ಕಾಲೇಜುಗಳ ವಿಷಯಕವಾದ ಚಳವಳಿಗೆ ನಿಷ್ಫಲವನ್ನು ತೋರಿಸಿರುವನಲ್ಲದೆ, ಅನುತ್ಸಾಹವನ್ನುಂಟುಮಾಡಿರುವನು. ನಮ್ಮ ಸಮಾಜದಲ್ಲಿ ಸಂಸ್ಕೃತಾಭಿಮಾನಿಗಳು ತಕ್ಕಮಟ್ಟಿಗಿದ್ದರೂ ಅವರಲ್ಲಿಯೇ ಈ ತರದ ಅನುತ್ಸಾಹ ಬೀಜವನ್ನು ಬಿತ್ತಿದ ಮೇಲೆ ಮುಂದೆ ನಮ್ಮ ಕಾರ್ಯವು ಹೇಗೆ ಕೈಗೂಡುವದೆಂಬ ಭಾವನೆಯು ಕೂಡ ಈ ಲೇಖಕನ ಪಾಷಾಣ ಹೃದಯವನ್ನು ಭೇದಿಸಿಲ್ಲವೆಂದು ನಿಃಸಂಶಯವಾಗಿ ಹೇಳಬಹುದು. ವಿಚಾರಮಾಡಿ ನೋಡಿದರೆ, ಈ ಚಳವಳಿಯ ಬಗ್ಗೆ ಶ್ರೀಮಾನನೀಯರಾದ ಕೆ. ಪಿ. ಪುಟ್ಟಣ್ಣಶೆಟ್ಟರೇ ಮೊದಲಾದ ಪ್ರಮುಖರು ಪ್ರಯತ್ನಮಾಡುತ್ತಿದ್ದು, ಸರಕಾರ ಕೌನ್ಸಿಲ್ಲುಗಳಲ್ಲಿಯೂ ಕೂಡ ಈ ವಿಷಯಕವಾಗಿ ಚರ್ಚೆಯು ನಡೆಯಿತು. ಮೊನ್ನೆ ದಿವಾನರವರ ಸಮಕ್ಷಮವಾಗಿಯೂ ಈ ವಿಷಯದಲ್ಲಿ ಘೋರವಾದ ವಾದವಿವಾದವಾಗಿ ಇನ್ನೂವರೆಗೂ ಆ ವಿಷಯವು ಚರ್ಚಿಸಲ್ಪಡುತ್ತಿರುವದು. ಅಂದಮೇಲೆ ಈ ವಿಷಯಕ್ಕೆ ನಮ್ಮ ಸಮಾಜದವರಿಂದ ಯಾವ ಪ್ರಯತ್ನವೂ ಮಾಡಲ್ಪಟ್ಟಿಲ್ಲವೆಂದು ಬರೆಯುವ ಈ ಮೂರ್ಖ ಶಿರೋಮಣಿಗೆ ಏನೆಂದು ಕರೆಯಬೇಕು? ವಾಚಕರೇ ಊಹಿಸಲಿ. ಅಸ್ತು. ಇವನ ಮುಂದಿನ ವಾಕ್ಯಗಳ ವಿಷಯಗರ್ಭಿತವಾದ ಅಭಿಪ್ರಾಯವಾದರೂ ಎಷ್ಟರ ಮಟ್ಟಿಗೆ ಸತ್ಯವಾಗಿರಬಹುದೆಂದು ಸ್ವಲ್ಪ ವಿಚಾರಿಸೋಣ. ವಾಚಕರೇ ಇವನ ಮುಂದಿನ ಅಭಿಪ್ರಾಯವೆಂದರೆ—ನಮ್ಮ ಸಮಾಜದಲ್ಲಿ ಸಂಸ್ಕೃತ ಕಾಲೇಜದ ಅಧ್ಯಾಪಕತ್ವವನ್ನು ನಿರ್ವಹಿಸಿಕೊಂಡು ಹೋಗಲು ಸಮರ್ಥರಾದ ಪಂಡಿತರು ಒಬ್ಬರೂ ಇಲ್ಲವೆಂತಲೂ, ಈಗ ನಮ್ಮ ಸಮಾಜದಲ್ಲಿರತಕ್ಕ ತೀರ್ಥ—ಭೂಷಣ—ವಿಶಾರದಾದಿ ಪದವೀಪ್ರತಿಷ್ಠಿತರು ನಿಜವಾದ ಪಂಡಿತರಲ್ಲವೆಂತಲೂ, ಅಭಿಪ್ರಾಯಪಟ್ಟಿರುವನಷ್ಟೇ? ನೋಡಿರಿ, ಈ ಅಭಿಪ್ರಾಯವು ನಮ್ಮ ಸಮಾಜಕ್ಕೆ ಎಷ್ಟು ಹಾನಿಕಾರಕವಾಗಿರುವದು! ಈ ತರದ ಅಭಿಪ್ರಾಯಗಳನ್ನೇ ಪರಮತೀಯರು ಮುಖ್ಯವಾಗಿಟ್ಟುಕೊಂಡು ನಮ್ಮ ಕಾರ್ಯಗಳಿಗೆ ವಿಘ್ನಗಳನ್ನು ತರುತ್ತಿರುವರು. ಲೇಖಗಳನ್ನು ಬರೆಯತಕ್ಕವನಲ್ಲಿ ಆ ಲೇಖದ ವಿಷಯಕವಾದ ಜವಾಬ್ದಾರಿಯನ್ನು ಸಂಪೂರ್ಣ ತನ್ನ ಮೇಲೆ ಹೊತ್ತುಕೊಂಡೇ ಬರೆಯಬೇಕಲ್ಲದೆ ಮನಸ್ಸಿಗೆ ಬಂದಂತೆ ಲೇಖನಗಳನ್ನು ಪ್ರಸಿದ್ಧಿಸುತ್ತಹೋದರೆ ಅದರಿಂದ ಸಮಾಜಕ್ಕೆ ಹಾನಿಯಾಗುವದಲ್ಲದೆ ಲೇಖಕನು ಸಮಾಜದ ಅಂತಃಶತ್ರುವೆಂದು ಅಪಕೀರ್ತಿಯನ್ನು ಹೊಂದಬೇಕಾಗುವದು. ಈ ಲೇಖಕನ ಕೃತಿಯನ್ನು ಸ್ವಲ್ಪ ಮನಸ್ಸಿನ ಮೇಲೆ ತಂದರೆ ಇವನು ಮಹಾಮೂರ್ಖನಿರಬಹುದೆಂದು ತಿಳಿಯುವದು. ಇವನಿಗೆ ನಮ್ಮ ಸಮಾಜದಲ್ಲಿರತಕ್ಕ ಅತ್ಯಂತ ಪ್ರಭಾವಶಾಲಿಗಳೂ, ತಮ್ಮತಮ್ಮ ಶಾಸ್ತ್ರಗಳಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿದವರೂ ಆದ ಪಂಡಿತರ ಪರಿಚಯವೇ ಇಲ್ಲವೆಂದ ಮೇಲೆ ಇವನ ಲೇಖಕತ್ವಕ್ಕೆ ಒಂದು ತರದ ಕಳಂಕವೇ ಉಂಟಾಗಿದೆ. ಹೀಗಿದ್ದು ಇವನ ಲೇಖಕ್ಕೆ ನಮ್ಮ ವಿಭಾಕರ ಸಂಪಾದಕರಂಥ ಮುತ್ಸದ್ದಿಗಳು ಆಶ್ರಯವನ್ನು ಕೊಟ್ಟದ್ದು ಬಹಳ ಅನ್ಯಾಯವೆಂದು ಹೇಳದೆ ಇರಲಾರೆವು. ನಮ್ಮ ಮತದಲ್ಲಿ ಕಾಲೇಜಿನ ಅಧ್ಯಾಪಕತ್ವವನ್ನು ನಿರ್ವಹಿಸಿಕೊಂಡು ಹೋಗುವ ಪಂಡಿತರೇ ಇಲ್ಲವೆಂದ ಮೇಲೆ ಇದಕ್ಕಿಂತಲೂ ಅಧಿಕವಾದ ಲಜ್ಜೆ ಯಾವದು ಇರುವದು? ಅವನ ಅಭಿಪ್ರಾಯದಂತೆ ಸದ್ಯದ ಪರಿಸ್ಥಿತಿಯಿದ್ದರಷ್ಟೇ ನಮಗೆ ಲಜ್ಜೆಯ ಹೆದರಿಕೆಯು? ನಮ್ಮ ಸಮಾಜದಲ್ಲಿ ಇಂಥ ಬೇಕಾದಷ್ಟು ಕಾಲೇಜುಗಳನ್ನು ನಡೆಯಿಸಿಕೊಂಡು ಹೋಗುವ ಸಾಮರ್ಥ್ಯವುಳ್ಳ ಪಂಡಿತರು ಅನೇಕರಿರುವರು. ಇವರಿಗೆ ಈಗ ತಕ್ಕ ಆಶ್ರಯವು ಇಲ್ಲದ್ದರಿಂದ ಇವರ ಪ್ರಭಾವವು ಸಂಕುಚಿತವಾಗಿರುವದು. ಪರಮತೀಯ ಪಂಡಿತರು ಈಗ ಸದ್ಯಃ ತಮ್ಮ ಕೆಲಸಕ್ಕೆ ಶರಣುಹೊಡೆದರೂ ಅದನ್ನು ನಿರ್ವಹಿಸಿಕೊಂಡು ಹೋಗುವ ಪಂಡಿತರು ಸಿದ್ಧರಾಗಿರುವರು. ವೇದಗಳಲ್ಲಿ ಇಂದೂರ ಕಾಲೇಜದ ಅಧ್ಯಾಪಕರಾದ ವೇದತೀರ್ಥ ವಿರೂಪಾಕ್ಷ ಒಡೆಯರವರೂ, ಬಾಣಪುರ ಪಂ॥ ವಿರೂಪಾಕ್ಷ ಶಾಸ್ತ್ರಿಗಳವರೂ, ವ್ಯಾಕರಣ ಶಾಸ್ತ್ರದಲ್ಲಿ ಪ್ರವೀಣರಾದ ವ್ಯಾಕರಣತೀರ್ಥ ವಿದ್ಯಾನಿಧಿ ಪಂ॥ ಅಬ್ಬಿಗೇರಿ ಸದಾಶಿವ ಶಾಸ್ತ್ರಿಗಳೂ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸ, ವೇದಾಂತಗಳೆಂಬ ಷಟ್‌ಶಾಸ್ತ್ರಗಳಲ್ಲಿ ತೇರ್ಗಡೆಯನ್ನು ಹೊಂದಿದ ಮತ್ತು ಅದ್ವೈತ ಶಿವಾದ್ವೈತ ದ್ವೈತ ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಸಾದ್ಯಂತವಾಗಿ ಮನನ ಮಾಡಿ ಅಸಾಧಾರಣ ಅನುಭವವನ್ನು ಹೊಂದಿದ ನ್ಯಾಯಭೂಷಣ, ವೇದಾಂತ ವಿಶಾರದ ಪಂ॥ ಹೂಲಿ ಬೃಹನ್ಮಠದ ನೀಲಕಂಠ ಶಿವಾಚಾರ್ಯರೂ, ನ್ಯಾಯ ವೈಶೇಷಿಕ ಶಾಸ್ತ್ರದಲ್ಲಿ ಪ್ರಸಿದ್ಧರಾದ ತರ್ಕತೀರ್ಥ ತರ್ಕ ವಾಗೀಶ ಪಂ॥ ವಾಮದೇವಶಾಸ್ತ್ರಿಗಳೂ, ಮೀಮಾಂಸಾ ಶಾಸ್ತ್ರದಲ್ಲಿ ವಿಖ್ಯಾತರಾದ ಪಂ॥ ಸೂಡಿ ಶ್ರೀಕಂಠಶಾಸ್ತ್ರಿಗಳೂ, ವೇದಾಂತ ನ್ಯಾಯ ಶಾಸ್ತ್ರಗಳಲ್ಲಿ ವಿಖ್ಯಾತರಾದ ನ್ಯಾಯತೀರ್ಥ ವೇದಾಂತ ತೀರ್ಥ ಪಂ॥ ಹೊಳಲು ಜಗದೀಶಶಾಸ್ತ್ರಿಗಳೂ, ಸಾಹಿತ್ಯದಲ್ಲಿ ಅಸಾಧಾರಣ ಪಂಡಿತರಾದ ನಾಲ್ವಾರ ಜಗದೀಶಶಾಸ್ತ್ರಿಗಳೂ, ಕಂದಗಲ್ಲ ಪರ್ವತಶಾಸ್ತ್ರಿಗಳೂ, ಮೈಸೂರ ಗೌರೀಶಂಕರಶಾಸ್ತ್ರಿಗಳೂ, ಇನ್ನುಳಿದ ಎಷ್ಟೋ ಪಂಡಿತರೂ ಅಧ್ಯಾಪಕತ್ವವನ್ನು ನಿರ್ವಹಿಸಿಕೊಂಡು ಹೋಗಲು ಸಿದ್ಧರಿರುವರು. ಆದರೆ ಮಾಡುವದೇನು? ಇವರಿಗೆ ಯೋಗ್ಯವಾದ ಆಶ್ರಯವು ಇಲ್ಲದ್ದರಿಂದ ಮೂಲೆಗೆ ಕುಳಿತುಕೊಳ್ಳುವ ಹೊತ್ತು ಬಂದಿರುವದು. ಅಂದಮೇಲೆ ನಮ್ಮ ಸಮಾಜದಲ್ಲಿ ಪಂಡಿತರೇ ಇಲ್ಲವೆಂದು ಹೇಳುವ ಈ ಮೂರ್ಖಲೇಖಕನ ನಾಲಗೆಯಾದರೂ ಹೇಗೆ ಚಲಿಸುವದೋ ಅವನಿಗೇ ಗೊತ್ತು. ಸಾರಾಂಶವೇನಂದರೆ:—ನಾವು ಹಿಡಿದ ಕಾರ್ಯದಲ್ಲಿ ಎಷ್ಟು ವಿಘ್ನಗಳು ಬಂದರೂ, ಯಾರು ಏನು ನಿಂದಿಸಿದರೂ ಅದನ್ನು ಮನಸ್ಸಿನ ಮೇಲೆ ತಂದುಕೊಳ್ಳದೆ ಅನುತ್ಸಾಹವನ್ನು ಹೊಂದದೆ ಯಶಸ್ಸು ಸಂಪಾದಿಸುವದೇ ಪುರುಷನ ಮುಖ್ಯ ಲಕ್ಷಣವಾಗಿರುವದರಿಂದ ಈಗ ನಡೆದಿರುವ ನಮ್ಮ ಸಂಸ್ಕೃತ ಕಾಲೇಜುಗಳ ಚಳವಳಿಯನ್ನು ಮೊದಲಿಂದ ಒಳ್ಳೇ ಉತ್ಸಾಹದಿಂದಲೂ ದಕ್ಷತೆಯಿಂದಲೂ ಪ್ರಯತ್ನ ಪೂರ್ವಕವಾಗಿ ಸಿದ್ಧಿಗೊಯ್ಯುವಂತೆ ಕಾರ್ಯವನ್ನು ಮಾಡಬೇಕು. ಮೇಲೆ ನಾನು ಸೂಚಿಸಿದಂತೆ ಪ್ರತಿಯೊಂದು ಗ್ರಾಮಗಳಲ್ಲಿ ಸಭೆಗಳನ್ನು ಕೂಡಿಸಿ ಈ ತರದ ಲೇಖಕರ ಕೃತಿಯನ್ನು ನಿಷೇಧ ಮಾಡುವದಲ್ಲದೆ, ನಮ್ಮ ಜನರನ್ನೂ ಕಾಲೇಜುಗಳಲ್ಲಿ ಸೇರಿಸುವಂತೆ ಶ್ರೀಮನ್ಮಹಾರಾಜರವರಿಗೆ ಅರಿಕೆಮಾಡಿಕೊಳ್ಳಬೇಕು. ಈ ವಿಷಯದಲ್ಲಿ ಪ್ರತಿಯೊಬ್ಬ ವೀರಶೈವನೂ ತಪ್ಪದೆ ಆಚರಿಸುವನೆಂದು ನನ್ನ ಪೂರ್ಣ ನಂಬಿಗೆಯುಂಟು.

ಬಿ. ಯಮ್. ಬಸವರಾಜಶಾಸ್ತ್ರೀ, ಕಾಶೀಕ್ಷೇತ್ರವಾಸಿ.

ದಾವಣಗೆರೆ ಮ್ಯುನಿಸಿಪಾಲಿಟಿ.

ಮ॥ ರಾ॥ ಎಡಿಟರವರೆ, ಇದೇ ಮಾಹೆ ತಾ॥ 10ನೆ ಸ್ಟಾರ್ ಪತ್ರಿಕೆಯನ್ನು ಓದಿದೆನು. ಮ॥ ರಾ॥ ಸತ್ಯಶೋಧಕರು ಬರೆದಿರುವ ಲೇಖನವನ್ನು ನೋಡಿದರೆ ಮುನಸಿ ವೆಂಕೋಬರಾಯರಾಗಲಿ, ಮುನಸಿಪಾಲಿಟಿಯಿಂದ ತನ್ನ ಹೆಚ್ಚು ಸ್ವಾರ್ಥವನ್ನು ಪಡೆದುಕೊಂಡವನಾಗಲಿ ಅಥವಾ ಇನ್ನುಮುಂದೆ ಪಡೆದುಕೊಳ್ಳುವದರಲ್ಲಿರುವವನಾಗಲಿ ಬರೆದಿರಬಹುದೆಂದು ಕಂಡುಬರುತ್ತದೆ. ಯಾರಾದರೂ ಇರುದ್ದುಕೊಳ್ಳಲಿ. ಈ ಸತ್ಯಶೋಧಕರು ಹೊರಗಿನವರಿಗೆ ದಾವಣಗೆರೆ ಮ್ಯುನಿಸಿಪಾಲಿಟಿಯಲ್ಲಿ ದುರಭಿಪ್ರಾಯ ಹುಟ್ಟಬಹುದೆಂದು ಬರೆದಿರುತ್ತೇನೆಂದು ಪ್ರಕಟಿಸಿರುತ್ತಾರೆ. ಹುಟ್ಟಿದಸುಳಿ ಬೋಳಿಸಿ ತೋರಿಸಿದರೆ ಮರೆಮಾಜುವುದೆ? ಈ ಶೋಧಕರು ಮ್ಯುನಿಸಿಪಲ್ ಮೆಂಬರುಗಳನ್ನು ಹೆಚ್ಚಾಗಿ ಹೊಗಳಿರುತ್ತಾರೆ. ಈತನು ಮೊದಲು ಇದ್ದ ಕಡೆಯಲ್ಲೆಲ್ಲಾ ಅಲ್ಲಿನವರನ್ನು ಹೊಗಳಿ ಅವರ ಪ್ರೀತಿವಿಶ್ವಾಸವು ತನ್ನಲ್ಲುಂಟಾಗುವಂತೆ ಮಾಡಿಕೊಂಡು ತನ್ನ ಇಂದ್ರಜಾಲ ಮಹೇಂದ್ರಜಾಲಗಳನ್ನು ತೋರಿಸಿ ಅಲ್ಲಿನವರಿಗೆ ಸಾಕಾದನಂತರ ಅವರಿಂದ ಟೈಟಲ್‌ಗಳನ್ನು ಪಡೆದುಕೊಂಡು ದಾವಣಗೆರೆಗೆ ಬಂದು ಇಲ್ಲಿಯೂ ಹೊಗಳಲಿಕ್ಕೆ ಪ್ರಾರಂಭಿಸಿರುವದನ್ನು ನೋಡಿದರೆ ಕೌನ್ಸಿಲರುಗಳಲ್ಲಿ ಮ॥ ರಾ॥ ದೊಗ್ಗಳ್ಳಿ ಬಸವಣ್ಣಪ್ಪನವರು, ಮಾಗಾನಹಳ್ಳಿ ಚನ್ನಬಸಪ್ಪನವರು, ಮ॥ ರಾ॥ ವೈ॥ ಪ್ರ॥ ಓಂಕಾರಪ್ಪನವರು ಸ್ತೋತ್ರಪ್ರಿಯರಾದ್ದರಿಂದ ಇವರ ವಿನಾ ಇತರರ್‍ಯಾರೂ ಈತನ ಬಲೆಗೆ ಬೀಳುವವರಾಗಿಲ್ಲವೆಂದು ತೋರುತ್ತೆ. ಸತ್ಯಶೋಧಕರೆ! ನಿಮ್ಮ ಹೊಗಳುವಿಕೆಯಿಂದಲೇ ಕೌನ್ಸಿಲರುಗಳಿಗೆ ದೊಡ್ಡಮನೆತನವೂ, ಐಶ್ವರ್ಯವೂ, ಪದವಿಯೂ ಉಂಟಾಗಿರುವುದಿಲ್ಲ. ಅವರುಗಳಿಗೆ ಮೊದಲಿಂದಲೂ ಬಂದವುಗಳಾಗಿರುತ್ತವೆ. ದಾವಣಗೆರೆ ಟೌನ್ ನಿವಾಸಿಗಳೂ, ಹೊರಗಿನವರೂ ಸಹ ಇವರುಗಳನ್ನು ಬಲ್ಲವರಾಗಿರುತ್ತಾರೆ. ಹೀಗೆ ಹೊಗಳುವದರಿಂದ ಮ್ಯುನಿಸಿಪಾಲಿಟಿಯಲ್ಲಿ ನಡೆದಿರುವ ಅನ್ಯಾಯಗಳು ಮರೆಮಾಜಲಾರವು. ಸತ್ಯಶೋಧಕರು ಮ॥ ರಾ॥ ವೈಸ್‌ಪ್ರೆಸಿಡೆಂಟರವರನ್ನು ಕಾರ ದಕ್ಷರೆಂದೂ ಪ್ರೆಸಿಡೆಂಟ್ ಸಿಪ್ಪಿನಿಂದಲೇ ಕಾರ್ಯ ನಿರ್ವಹಿಸಲು ಸಮರ್ಥರಾಗಿರುವರೆಂದೂ ಟೌನ್ ರೇಟಪೇಯರುಗಳಿಗೂ, ನಿವಾಸಿಗಳಿಗೂ ನಂಬಿಕೆಯಾಗಿರುವದಾಗಿ ಬರೆದುಕೊಂಡಿರುತ್ತಾರೆ. ಮ॥ ರಾ॥ ವೈಸ್ ಪ್ರೆಸಿಡೆಂಟರವರು ಎಷ್ಟರಮಟ್ಟಿಗೆ ಕಾರ್ಯದಕ್ಷರೆಂಬುವುದನ್ನು ಕೌನ್ಸಿಲರುಗಳೆಲ್ಲರೂ ದಾವಣಗೆರೆ ನಿವಾಸಿಗಳೂ ಬಲ್ಲವರೇ ಇರುತ್ತಾರೆ. ಆದರೆ ನಮ್ಮ ಮಹಾನುಭಾವರಾದ ಸತ್ಯಶೋಧಕರಿಗೂ, ಹೊರಗಿನವರಿಗೂ ಚೆನ್ನಾಗಿ ತಿಳಿಯದೆ ಇರಬಹುದಾದ್ದರಿಂದ ನಾನು ಸ್ವಲ್ಪಮಟ್ಟಿಗೆ ತಿಳುಹಿಸಬೇಕಾದ್ದು ಉಚಿತವೆಂದು ತೋರುತ್ತದೆ. ಸತ್ಯ ಶೋಧಕರೆ! ನಿಮ್ಮ ವೈ॥ ಪ್ರೆ॥ ಮ॥ ರಾ॥ ಓಂಕಾರಪ್ಪನವರು ತಮಗೆ ಪ್ರತಿನಿಧಿಯಾಗಿರುವ ಮುನಿಷಿ ವೆಂಕೋಬರಾಯರು ಪ್ರತಿ

ಹೊಸ ಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷು ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ದಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟಿಯಾಗಿ ...

ನಮ್ಮ ವಿಳಾಸ—ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
45 ಬಳ್ಳಾರಿ.

೧೯೨೨ ನೆಯ ಇಸವಿ ಡಿಶಂಬರ್ ತಾ|| ೨೪ ರಿಂದ ೧೯೨೨ ನೆಯ ಡಿಶಂಬರ್ ತಾ|| ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮ ಸಂವತ್ಸರದ ಪುಷ್ಯ ಶುದ್ಧ ಷಷ್ಠಿಯಿಂದ ಪುಷ್ಯ ಶುದ್ಧ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾ
24	[1] ಭಾನು	ಷಷ್ಠಿ	32-28	ಶತ	26-0	10
25	ಸೋಮ	ಸಪ್ತ	37-11	ಪೂಭಾ	31-45	11
26	ಮಂಗಳ	ಅಷ್ಟ	42-32	ಉಭಾ	38-9	12
27	ಬುಧ	ನವ	48-6	ರೇವ	44-49	13
28	ಗುರು	ದಶ	53-27	ಅಶ್ವಿ	51-13	14
29	[2] ಶುಕ್ರ	ಏಕಾ	58-6	ಭರ	57-6	15
30	ಶನಿ	ದ್ವಾದ	60	ಕೃತ್ತಿ	60	16

(1) ತುಳಷಷ್ಠಿ. (2) ಸ್ಮಾರ್ತೈಕಾದಶಿ, ತ್ರೈಲೋಕ್ಯಗೌರೀವ್ರತಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿಶ್ಯಾ | ಘನಪಥಕೃತಾವತಾರಾ ಪಶ್ಚ್ಚಜ ನಕ್ಷತ್ರ ಮೋಪರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೫ | ಮೈಸೂರ್ ಸ್ಟಾರ್ ಸರ್ ೧೯೨೦ ನೆಯ ಇಸವಿ ಡಿಶಂಬರ್ ತಾರೀಖು ೩೧ ನೆಯ ಭಾನುವಾರ | ಸಂಚಿಕೆ ೫೩

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಲಿಂಗದ ಕಾಯಿಗಳು.

41

ಜರ್ಮನ್ ವಿದ್ಯುತ್ ಬೇಸಣಿಗೆ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

23

ಜಂಟ್ಸ್ ಅಂಡ್ ಲೇಡೀಸ್ ಪಾಕೆಟ್ ವಾಚ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯೆಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕಲಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸನಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ. ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೋಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವ ಗುಣವಾಗಿ ಪುಷ್ಟಿ, ಮತ್ತು ಶುದ್ಧರಕ್ತಗಳನ್ನುಂಟುಮಾಡು ...

50 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜರ್ಮನ್ ಫ್ಯಾನ್ಸಿ ಜಲತರಂಗ ಅನ್ನುವ ಸಂಗೀತಪೆಟ್ಟಿಗೆ

ಈ ತಿಂಗಳ ಕೊನೇವರೆಗೂ ಅರ್ಧಕ್ರಯ.

ಫ್ಲಾಟ್ ಸಿನಾಸ್ ಕೋಪ್ ಯಂತ್ರ.

ವಿಳಾಸ—ರತ್ನಂ ಅಂಡ್ ಬ್ರದರ್ಸ್,
23 ನಂ. 3, ಇರುಳಪ್ಪನ ಬೀದಿ, ಮದ್ರಾಸ್.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿಯ ಡಿಶಂಬರ್ ತಾ|| ೩೧ನೆಯ ಭಾನುವಾರ.

37 ನೆ ರಾಷ್ಟ್ರೀಯ ಮಹಾಸಭೆ.

ಭರತಖಂಡದಲ್ಲಿ ಡಿಶಂಬರ್ ಕೊನೆಯ ವಾರವು ಸಭೆಗಳ ಸುಗ್ಗಿಕಾಲವು. ಈ ಸುಗ್ಗಿಯ ಪ್ರದರ್ಶನಯೋಗವು ಈ ವರ್ಷ ಮಹರ್ಷಿಯ ಬುದ್ಧನ ನಿರ್ವಾಣಸ್ಥಾನವಾದ ಗಯಾಕ್ಷೇತ್ರಕ್ಕೆ ಒದಗಿತು. ರಾಷ್ಟ್ರೀಯ ಸಭೆಯು ದೇಶದಲ್ಲಿ ಉದಯಗೊಂಡಾರಭ್ಯ ಹತ್ತಾರು ವರ್ಷಗಳವರೆಗೂ ಅದರ ಜತೆಯಲ್ಲೇ ಸಂಘಸುಧಾರಕ ಸಭೆ ಔದ್ಯೋಗಿಕಸಭೆ ಎಂಬ ಒಂದೆರಡು ಸಭೆಗಳು ಮಾತ್ರ ಜರುಗುತ್ತಿದ್ದುವು. ಈಗಲಾದರೊ ನಾನಾ ಉದ್ದೇಶವುಳ್ಳ ಅನೇಕ ಸಭೆಗಳು ರಾಷ್ಟ್ರೀಯಸಭೆಯು ನಡೆದ ಸ್ಥಲದಲ್ಲೇ ನಡೆಯುವಂತಾಗಿದೆ. ದೇಶದ ನಾನಾವಿಧದ ಏಳ್ಗೆಗಾಗಿ ಪ್ರಜೆಗಳ ಮನಸ್ಸು ಹೆಚ್ಚು ಹೆಚ್ಚು ಕುತೂಹಲಗೊಳ್ಳುತ್ತಾ ಬರುತ್ತಿದೆಯೆಂಬುದಕ್ಕೆ ಇಂಥ ಸಭೆಗಳ ಆಧಿಕ್ಯವು ನಿದರ್ಶನವಾಗಿದೆ. ಇಂಥ ಮಹಾಕಾರ್ಯಕ್ಕಾಗಿ ತನುಶ್ರಮ ಅರ್ಥವ್ಯಯ ಮೊದಲಾದುವುಗಳನ್ನೆಲ್ಲಾ ಸೈರಿಸಿಕೊಂಡು ದೂರದೂರ ದೇಶಗಳಿಂದ ಹೋಗಿ ತೀರ್ಥಕ್ಷೇತ್ರಯಾತ್ರಾ ತಪಸ್ಸುಗಳಿಗಿಂತಲೂ ದೇಶಸೇವಾರೂಪತಪಸ್ಸು ಮಿಗಿಲಾದುದೆಂದು ತ್ರಿಕರಣಪೂರ್ವಕವಾಗಿ ಹೋಗಿ ಸಭೆಯಲ್ಲಿ ಅಂಗವಾಗುವ ಮಹನೀಯರು ಧನ್ಯರು.

ಕಳೆದವಾರ ಗಯಾಪಟ್ಟಣದಲ್ಲಿ ಜರುಗಿದ ಅನೇಕ ಸಭೆಗಳ ಕಾರ್ಯಜಾಲವಿವರಣವು ದೇಶಾಭಿಮಾನಿಗಳಿಗೆಲ್ಲಾ ಅತ್ಯಂತ ಪ್ರೋತ್ಸಾಹಕವಾಗಿರುತ್ತದೆ. ವಾರಪತ್ರಿಕೆಯಾದ ಸ್ಟಾರಿನಲ್ಲಿ ಅವುಗಳ ಸಂಕ್ಷಿಪ್ತ ವಿವರಣೆಯನ್ನು ತಿಳಿಯಪಡಿಸಿ ನಮ್ಮ ವಾಚಕವರ್ಗವನ್ನು ತೃಪ್ತಿಪಡಿಸುವುದಕ್ಕೂ ಸಾಧ್ಯವಾಗಿಲ್ಲ. ಮುಖ್ಯವಾಗಿ ರಾಷ್ಟ್ರೀಯಮಹಾಸಭಾವಿಷಯವನ್ನು ಮಾತ್ರ ಈ ಸಂಚಿಕೆಯಲ್ಲಿ ಪ್ರಸ್ತಾಪಿಸಿ, ಸ್ಥಲದೊರೆದಂತೆ ಮುಂದಣ ಪತ್ರಿಕೆಗಳಲ್ಲಿ ಇತರ ಸಭೆಗಳ ಮುಖ್ಯ ವಿಷಯಗಳನ್ನು ಪ್ರಕಟಿಸುವವರಾಗಿದ್ದೇವೆ.

ಈ ಮಹಾಸಭೆಯು ೨೬ನೆ ತಾರೀಖಿನ ದಿನ ಆರಂಭಿಸಲ್ಪಟ್ಟರೂ ವಿಷಯ ನಿರ್ಧಾರಕಸಭೆಯು ತಾ|| ೨೨ ರಿಂದಲೇ ಆರಂಭಗೊಂಡು ೬ ದಿನಗಳ ಕಾಲ ನಡೆದಿತು. ಶಾಸನಸಭೆಗೆ ನಿರಾಕರಣವಾದಿಗಳು ಪ್ರವೇಶಿಸಬೇಕೆ ಬೇಡವೇ ಎಂಬುದು ಚರ್ಚೆಯ ಅತಿಮುಖ್ಯ ವಿಷಯವಾಗಿದ್ದುದರಿಂದ ಆ ವಿಷಯದಲ್ಲೂ ಅಸಹಾಯೋದ್ಯಮ ವಿಧಾನವನ್ನು ವ್ಯತ್ಯಾಸಗೊಳಿಸಬೇಕೇ ಬೇಡವೆ ಎಂಬ ವಿಷಯದಲ್ಲೂ ಭಿನ್ನಾಭಿಪ್ರಾಯಗೊಂಡ ೨ ಪಕ್ಷದವರ ವಾಗ್ವಾದಗಳೇ ಬಹು ಕಾಲವನ್ನು ಹಿಡಿದುವು. ಉಭಯಪಕ್ಷದವರ ಏಕೀಕರಣ ಪ್ರಯತ್ನಕ್ಕೂ ಬಹಳ ಸಾಹಸವಾಯಿತು. ಕೊನೆಗೆ ಯಾವುದೂ ಕೊನೆಮುಟ್ಟಲಿಲ್ಲ. ಮಹಾಸಭೆಯಲ್ಲೇ ಕೊನೆಮುಟ್ಟಬೇಕಾಯಿತು.

ಫಲ್ಗುನೀನದಿಯ ದಡದಮೇಲಣ ಮಾವಿನ ತೋಪಿನಲ್ಲಿ ನಿರ್ಮಿಸಲ್ಪಟ್ಟಿರುವ ಖದ್ದರ್‌ಮಯವಾದ ಸ್ವರಾಜ್ಯಪುರಿಯ ಮುಂದಣ ವಿಸ್ತಾರವಾದ ಮಂಟಪದಲ್ಲಿ ಮಹಾಸಭೆಯು ತಾ|| ೨೬ನೆ ಮಧ್ಯಾಹ್ನ ೨ ಗಂಟೆಗೆ ಆರಂಭವಾಯಿತು. ಆ ದಿನ 4000 ಮಂದಿ ಪ್ರತಿನಿಧಿಗಳು ಬಂದಿದ್ದರೆಂದು ಎಣಿಸಲ್ಪಟ್ಟಿದೆ. ಸಭಾಶಾಲೆಯೆಲ್ಲವೂ ಪ್ರತಿನಿಧಿಗಳಿಂದಲೂ ಪ್ರೇಕ್ಷಕರಿಂದಲೂ ತುಂಬಿಹೋಗಿದ್ದಿತು. ದೇಶಸೇವೆಗಾಗಿ ಕಾರಾಗೃಹವಾಸವನ್ನನುಭವಿಸಿ ಬಂದ ಮಹಾಜನರೇ ಬಂದು ಸಾವಿರದವರೆಗೆ ಸಭೆಗೆ ಬಂದಿದ್ದರು. ಅನೇಕ ಮಂದಿ ಸ್ತ್ರೀಯರೂ ಕಾಡುಜನಗಳೂ, ರೈತರೂ, ಸಾಧುಗಳೂ ಸಹ ನೆರೆದಿದ್ದರು. ಆಹ್ವಾನಮಾಡಲ್ಪಟ್ಟಿದ್ದ ಮಿತವಾದಿ ಪ್ರಮುಖರಾರೂ ಸಭೆಗೆ ಬಂದಿರಲಿಲ್ಲ. ಕುರ್ಚಿ ಮೇಜುಗಳೊಂದೂ ಸಭೆಯಲ್ಲಿರಲಿಲ್ಲ. ಸರ್ವರೂ ಚಾಪೆಗಳ ಮೇಲೆಯೇ ಕುಳಿತಿದ್ದರು. ಮ|| ಗಾಂಧಿಯವರೇ ಮೊದಲಾದ ಮುಖ್ಯ ದೇಶಸೇವಕರ ಭಾವಚಿತ್ರಗಳಿಂದಲೂ ದೇಶಸೇವೆಗೆ ಜನರನ್ನು ಪ್ರೋತ್ಸಾಹಿಸುವ ವಾಕ್ಯಗಳನ್ನು ಬರೆದ ಪಟಗಳಿಂದಲೂ ಮಂಟಪವು ಅಲಂಕೃತವಾಗಿದ್ದಿತು.

ದೇಶೀಯ ಗೀತವು ಮೊಟ್ಟಮೊದಲು ಹಾಡಲ್ಪಟ್ಟನಂತರ ಸನ್ಮಾನ ಸಂಘಾಧ್ಯಕ್ಷರಾದ ಬಾಬು ವ್ರಜಕಿಶೋರ ಪ್ರಸಾದರವರು ತಮ್ಮ ಸ್ವಾಗತೋಪನ್ಯಾಸವನ್ನು ಹಿಂದೀಭಾಷೆಯಲ್ಲಿ ½ ಗಂಟೆಯ ಕಾಲ ಓದಿ ಮುಗಿಸಿದರು. ಇದಾದನಂತರ ಇಂಥವರನ್ನು ಸಭಾಧ್ಯಕ್ಷರನ್ನಾಗಿ ಆರಿಸಬೇಕೆಂಬ ತೀರ್ಮಾನವನ್ನು ಒಬ್ಬರು ಸೂಚಿಸುವುದೂ ಇತರರು ಅನುಮೋದಿಸಿ ಸ್ವೀಕರಿಸುವುದೂ ಪದ್ಧತಿಯಾಗಿದ್ದುದನ್ನು ಈಸಲ ಅನುಸರಿಸಲಿಲ್ಲ. ಸ್ವಾಗತಸಂಘಾಧ್ಯಕ್ಷರೇ ತಮ್ಮ ಭಾಷಣದ ಅಂತ್ಯದಲ್ಲಿ ಇನ್ನುಮುಂದೆ ಮ|| ಸಿ. ಆರ್. ದಾಸರವರು ತಮ್ಮ ಅಧ್ಯಕ್ಷೋಪನ್ಯಾಸವನ್ನು ಓದುವರು ಎಂದು ಹೇಳಿ ಕುಳಿತರು. ಕೂಡಲೇ ಅಧ್ಯಕ್ಷರು ಸಭಿಕರ ಜಯಧ್ವನಿಯಾಗುತ್ತಿರುವಲ್ಲಿ ಉಪನ್ಯಾಸವೇದಿಕೆಯ ಮೇಲೆ ನಿಂತು 25 ಫುಲ್‌ಸ್ಕೇಪು ಪುಟಗಳಲ್ಲಿ ಮುದ್ರಿತವಾಗಿದ್ದ ತಮ್ಮ ದೀರ್ಘೋಪನ್ಯಾಸವನ್ನು 2½ ಗಂಟೆಗಳ ಕಾಲ ಸ್ಫುಟವಾಗಿ ಓದಿ ಮುಗಿಸಿದರು.

ಇವೆರಡು ಭಾಷಣಗಳಲ್ಲೂ ಅನೇಕ ಮುಖ್ಯಾಂಶಗಳಲ್ಲಿ ಏಕಮುಖತ್ವವು ವ್ಯಕ್ತವಾಗಿದ್ದರೂ ಮುಖ್ಯವಾದ ಶಾಸನಸಭಾ ಪ್ರವೇಶ ವಿಷಯದಲ್ಲಿ ಪರಸ್ಪರ ವಿರುದ್ಧವಾದ ದ್ವಿಮುಖತ್ವವು ಗೋಚರಿಸಿರುವುದು. ದಾಸರವರು ಶಾಸನಸಭಾ ಪ್ರವೇಶವನ್ನು ಅವಲಂಬಿಸಬೇಕೆನ್ನುವವರೂ, ಸಹಾಯನಿರಾಕರಣೋದ್ಯಮ ವಿಧಾನವನ್ನು ಮಾರ್ಪುಗೊಳಿಸಬೇಕೆನ್ನುವ ಪಕ್ಷದವರೂ ಆಗಿದ್ದಾರೆ. ಸ್ವಾಗತಸಂಘಾಧ್ಯಕ್ಷರಾದರೊ ವಿಧಾನವನ್ನು ಮಾರ್ಪುಗೊಳಿಸಲಾಗದೆಂದೂ, ಶಾಸನಸಭಾ ಪ್ರವೇಶವು ಈಗಣ ನಿರಾಕರಣದ ಉತ್ತಮವಿಧಾನಕ್ಕೆ ಅಭ್ಯಂತರವನ್ನುಂಟುಮಾಡುವುದಾದುದರಿಂದ ಅದು ಕೂಡದೆಂದೂ ವಾದಿಸತಕ್ಕವರು. ಆದುದರಿಂದ ಇವರಿಬ್ಬರೂ ತಂತಮ್ಮ ಅಭಿಪ್ರಾಯಗಳ ಸಾಧುತ್ವವನ್ನು ಸಿದ್ಧಾಂತಪಡಿಸಲಿಕ್ಕಾಗಿ ಹೇಳಿರುವ ವಾಕ್ಯಗಳು ಉಭಯರ ದ್ವಿಮುಖತ್ವವನ್ನು ವ್ಯಕ್ತಪಡಿಸಿರುತ್ತವೆ. "ಗ್ರಾಮಪಂಚಾಯತಿಗಳನ್ನು ಬಲಪಡಿಸಿ ತನ್ಮೂಲಕ ಜಿಲ್ಲಾ ರಾಷ್ಟ್ರೀಯಸಂಘಗಳನ್ನು ವೃದ್ಧಿಪಡಿಸಿ, ಕಾಂಗ್ರೆಸ್ಸಿನವರು ಪ್ರಭುತ್ವದ ಸಕಲವಿಧ ಪ್ರತಿಷ್ಠಾಪನೆಗಳಿಗೂ ಪ್ರತಿಯಾಗಿ ಬೇರೆ ಪ್ರತಿಷ್ಠಾಪನೆಗಳನ್ನು ಏರ್ಪಡಿಸಿ ಪ್ರಜೆಗಳಿಗೆಲ್ಲಾ ಅವುಗಳ ಮೇಲೆ ಅಭಿಮಾನವನ್ನು ಹುಟ್ಟಿಸಿ ಪ್ರಭುತ್ವದವರ ಕೋರ್ಟು ಕಚೇರಿ ಪಾಠಶಾಲೆ ಮುಂತಾದ ಪ್ರತಿಷ್ಠಾಪನೆಗಳನ್ನು ಬಹಿಷ್ಕರಿಸುವಂತೆ ಮಾಡಿ, ಕಡೆಗೆ ಕಾಂಗ್ರೆಸ್ಸಿನವರೇ ಪ್ರಭುತ್ವವನ್ನು ಸಾಗಿಸುವಂತೆ ಮಾಡಬೇಕು. ಹಾಗಾದರೇನೆಯೇ ಸ್ವರಾಜ್ಯವು ಸಿದ್ಧಿಸುವುದು. ಹಾಗಲ್ಲದೆ ತೊಂದರೆಪಟ್ಟು ಅಂಗಡಿಗಳಮುಂದೆ ನಿಂತು ವಿಕ್ರಯನಿರೋಧವನ್ನು ಮಾಡುವುದು, ಶಾಸನವನ್ನುಲ್ಲಂಘಿಸುವುದು—ಇವೇ ಮೊದಲಾದ ಪದ್ಧತಿಗಳನ್ನವಲಂಬಿಸಿ ಪ್ರಭುತ್ವದವರ ಮೇಲೆ ಇಂದೇ ಪ್ರತಿಭಟನ ಮಾಡುವುದರಿಂದ ಲಾಭವಿಲ್ಲ" ಎಂದು ಸ್ವಾಗತಸಂಘಾಧ್ಯಕ್ಷರು ಹೇಳಿರುವ ಅಭಿಪ್ರಾಯವು ಸಭಾಧ್ಯಕ್ಷರ ಭಾಷಣದಲ್ಲೂ ಪ್ರತಿಫಲಿಸಿರುತ್ತದೆ. "ದೌರ್ಜನ್ಯದಿಂದ ಕೂಡಿದ ಪಶುಬಲಪ್ರಯೋಗದಿಂದ ವಿಪ್ಲವವನ್ನುಂಟುಮಾಡಿ ಸ್ವರಾಜ್ಯವನ್ನು ಪಡೆಯಬೇಕೆಂದು ಕುತೂಹಲಗೊಂಡಿರುವವರು ನಮ್ಮಲ್ಲಿ ಅನೇಕರಿದ್ದರೂ ಆ ಮಾರ್ಗವು ಸರಿಯಾದುದಲ್ಲ. ಅಂಥ ವಿಪ್ಲವದಿಂದ ಸ್ವರಾಜ್ಯಸುಖವು ಎಂದಿಗೂ ಲಭಿಸುವುದಿಲ್ಲ. ದೌರ್ಜನ್ಯವಿರಹಿತ ಸಾತ್ವಿಕ ಸಹಾಯನಿರಾಕರಣ ಪದ್ಧತಿಯೇ ಸ್ವರಾಜ್ಯಕ್ಕೆ ಉತ್ತಮೋತ್ತಮ ಸಾಧನವು" ಎಂಬುದಾಗಿ ಮ|| ದಾಸರವರು ಹೇಳಿದ ಬುದ್ಧಿವಾದವೂ, ದೌರ್ಜನ್ಯಸಾಧನ ಮೂಲಕ ವಿಪ್ಲವವನ್ನೆಬ್ಬಿಸಿದುದರಿಂದ ಫ್ರಾನ್ಸ್, ರಷ್ಯಾ, ಇಟಲಿ ದೇಶಗಳಿಗುಂಟಾದ ಚಾರಿತ್ರಕೋದಾಹರಣೆಗಳನ್ನು ವಿಸ್ತಾರವಾಗಿ ನಿರೂಪಿಸಿದಭಾಗವೂ ಪ್ರಶಂಸನೀಯವಾಗಿರುವುವು. ನ್ಯಾಯವನ್ನೂ ಪ್ರಭುತ್ವಶಾಸನವನ್ನೂ ರಕ್ಷಿಸುತ್ತೇವೆಂಬ ವ್ಯಾಜದಿಂದ ಅಧಿಕಾರಿಗಳು ಅನ್ಯಾಯವನ್ನು ನ್ಯಾಯವನ್ನಾಗಿಯೂ ನ್ಯಾಯವನ್ನು ಅನ್ಯಾಯವಾಗಿಯೂ ಪರಿವರ್ತಿಸಿ ಮಾಡುತ್ತಿರುವ ಕೃತಿಗಳ ಸ್ವರೂಪವನ್ನು ವಿಶದಪಡಿಸುವ ಭಾಗದಲ್ಲಿ ಅಧ್ಯಕ್ಷರು ಮಾಡಿರುವ ದೀರ್ಘವಿಮರ್ಶೆಯು ಅವರ ನ್ಯಾಯಶಾಸ್ತ್ರಪರಿಣತ ಪಾಂಡಿತ್ಯಕ್ಕೆ ಅನುಗುಣವಾಗಿರುವುದು. ಸ್ವರಾಜ್ಯಲಕ್ಷಣವನ್ನು ಕುರಿತು ಇವರು ಆಡಿರುವ ಮಾತೇನೆಂದರೆ— "ಅದರ ಸ್ವರೂಪವು ಇಂತಹದೆಂದು ನಿರ್ದೇಶಿಸಿ ನಿರೂಪಿಸಲಾಗುವುದಿಲ್ಲ. ಜಾತೀಯಭಾವವು ಪ್ರಜಾಮಂಡಲದಲ್ಲಿ ವಿಕಾಸಗೊಂಡು ರೂಪವನ್ನು ಧರಿಸುವುದೇ ಸ್ವರಾಜ್ಯವು. ಸ್ವರಾಜ್ಯಶಬ್ದದಲ್ಲಿರುವ "ಸ್ವ" ಎಂಬುದರ ಭಾವದ ಉತ್ಕೃಷ್ಟತ್ವವನ್ನು ಗ್ರಹಿಸಿಕೊಂಡರೆ ಸ್ವರಾಜ್ಯಸ್ವರೂಪವನ್ನು ತಿಳಿದುಕೊಳ್ಳಲು ಅವಕಾಶವಾಗುವುದು" ಎಂದು ಆಡಿರುವ ಮಾತುಗಳು ಬಹು ಸ್ವಾರಸ್ಯವುಳ್ಳುದಾಗಿಯೂ ಗಂಭೀರವಾಗಿಯೂ ಇದೆಯೆಂಬುದಕ್ಕೆ ಸಂಶಯವಿಲ್ಲ.

ಅಸಹಾಯೋದ್ಯಮಕ್ಕೆ ಇದುವರೆಗೆ ಉಂಟಾಗಿರುವ ಜಯಪ್ರಾಪ್ತಿ, ಮುಂದೆಯೂ ಅದನ್ನು ದೌರ್ಜನ್ಯರಹಿತವಾಗಿ ಸಾಧಿಸಬೇಕಾದ ಆವಶ್ಯಕತೆ, ಹಿಂದೂ ಮಹಮ್ಮದೀಯರ ಮತ್ತು ಇತರ ನಾನಾ ಜನವರ್ಗಗಳ ಏಕಮತ್ಯಾವಶ್ಯಕತೆ, ಪರಿಪಾಲನ ವಿಧಾನ, ರಾಷ್ಟ್ರೀಯ ಪರಿಸ್ಥಿತಿ, ಕಸಬುದಾರರನ್ನೂ ಬೇಸಾಯಗಾರರನ್ನೂ ಕೂಡಿಸಿ ಸಂಘವನ್ನೇರ್ಪಡಿಸುವುದರ ಪ್ರಯೋಜನ, ಪಾಠಶಾಲಾ ಬಹಿಷ್ಕರಣ, ಖದ್ದರ್‌ಪ್ರಚಾರ, ಇತ್ಯಾದಿ ವಿಷಯಗಳಲ್ಲೆಲ್ಲಾ ವಿಮರ್ಶಾಪೂರ್ವಕವಾಗಿ ಅಧ್ಯಕ್ಷರು ಮಾಡಿರುವ ನಿರೂಪಣವು ಯುಕ್ತಿಯುಕ್ತವಾಗಿರುತ್ತದೆ. ಶಾಸನಸಭಾಪ್ರವೇಶದ ಫಲವನ್ನು ನಿರೂಪಿಸುವುದಕ್ಕಾಗಿ ತಮ್ಮ ಭಾಷಣದಲ್ಲಿ ಹೆಚ್ಚು ಸ್ಥಲವನ್ನು ಇವರು ಉಪಯೋಗಿಸಿಕೊಂಡಿದ್ದರೂ ಸಭಿಕರಲ್ಲಿ ಅದಕ್ಕೆ ವಿಮುಖತೆ ಹೊಂದಿ ಪ್ರತಿಭಟಿಸತಕ್ಕವರೇ ವಿಶೇಷವಾಗಿ ತೋರಿದ ಕಾರಣ, "ಶಾಸನಸಭೆಗಳಿಗೆ ಪ್ರವೇಶಿಸುವುದು ಮಹಮ್ಮದೀಯ ಮತಧರ್ಮಕ್ಕೆ ವಿರುದ್ಧವಾದುದೆಂದು ಭಾರತ ಖಿಲಾಫತ್ ಮಹಾಸಭೆಯವರು ತೀರ್ಮಾನಮಾಡಿದರೆ ಕಾಂಗ್ರೆಸ್ ಮಹಾಸಭೆಯವರು ಶಾಸನಸಭೆಗಳಿಗೆ ಪ್ರವೇಶಿಸಬೇಕು ಎಂಬ ತೀರ್ಮಾನವನ್ನು ತ್ಯಜಿಸಿಬಿಡಬೇಕು. ಏತಕ್ಕೆಂದರೆ ನಮ್ಮ ದೇಶದಲ್ಲಿ ಹಿಂದುಗಳೂ ಮಹಮ್ಮದೀಯರೂ ಕೂಡಿ ಕೆಲಸಮಾಡದಿದ್ದರೆ ಸ್ವರಾಜ್ಯವು ಸಿದ್ಧಿಸುವುದಿಲ್ಲ" ಎಂಬುದಾಗಿ ನೂತನಪಙ್ಕ್ತಿಗಳನ್ನು ತಮ್ಮ ಭಾಷಣಕ್ಕೆ ಸೇರಿಸಿಕೊಂಡು ದಾಸರವರು ಓದಬೇಕಾಯಿತು. ಅಲ್ಲದೆ ತಾ|| 27ರಲ್ಲಿ ಕೂಡಿದ್ದ ಅಖಿಲಭಾರತ ಖಿಲಾಫತ್‌ಸಭೆಯ ಅಧ್ಯಕ್ಷರೂ ಕೂಡ ತಮ್ಮ ಭಾಷಣದಲ್ಲಿ ಶಾಸನಸಭೆಗಳಿಗೆ ಅಸಹಾಯವಾದಿಗಳು ಉಮೇದುವಾರರಾಗಿ ನಿಲ್ಲುವುದು ನಿಷ್ಫಲವೆಂದು ಅಭಿಪ್ರಾಯಕೊಟ್ಟಿದ್ದಾರೆ. ಮತ್ತು ಮುಸ್ಲೀಂಲೀಗಿನ ಸ್ಥಾನದಲ್ಲ ಈವರ್ಷ "ಜಮಯತುಲ್ಲೇಮಾ" ಎಂಬ ಹೆಸರಿನಿಂದ ಹೊಸದಾಗಿ ಆರಂಭಗೊಂಡ ಸಭೆಯಲ್ಲಿ ಶಾಸನಸಭಾಪ್ರವೇಶ ವಿಷಯವಾಗಿ ತೀವ್ರಚರ್ಚೆಗಳು ನಡೆದು, ಕಡೆಗೆ ಶಾಸನಸಭೆಗಳಿಗೆ ಉಮೇದುವಾರರಾಗಿ ನಿಲ್ಲುವುದು ಮಹಮ್ಮದೀಯ ಮತಧರ್ಮಕ್ಕೆ ವಿರುದ್ಧವಾದುದರಿಂದ ಮಹಮ್ಮದೀಯರಾರೂ ಉಮೇದುವಾರರಾಗಿ ನಿಲ್ಲಕೂಡದು ಎಂಬುದಾಗಿ ತೀರ್ಮಾನಿಸಿದರು. ಖಿಲಾಪತ್ ಸಭೆಯವರ ತೀರ್ಮಾನವೂ ಹೀಗೆಯೇ ಆದರೆ ರಾಷ್ಟ್ರೀಯ ಮಹಾಸಭೆಯಲ್ಲೂ ದಾಸರ ಪಕ್ಷದ ವಾದಕ್ಕೆ ಅಪಜಯವಾಗಿ ಪ್ರತಿಕೂಲಪಕ್ಷಕ್ಕೇ ವಿಜಯವಾಗುವುದು ಸಿದ್ಧವು.

THE MYSORE LEGISLATIVE COUNCIL.

Much of the business that was transacted at the meeting of the Mysore Legislative Council, which met on the 18th instant, was with regard to the introduction, consideration and passing of as many as 11 Bills. The Bill to amend the Income-tax Regulation included a new fiscal measure, the supertax, which contemplates a levy of one anna in the rupee on income, which is in excess of fifty thousand rupees. After much discussion the motion for the Bill to be read in council was passed, and the same was referred to a Select Committee.

That part of the business, which related to interpellations was most disappointing, there being only 8 questions put by 5 members. This is partly due, we think, to the unsatisfactory way in which the questions are dealt with by Government. Many of the questions, which relate to current events remain unanswered on the ground, either of the Government being unaware of the facts or of the information called for not being furnished in time by the departments concerned. Members wishing to put questions are required to send them up at least twelve clear days before the date fixed for the meeting of the Council, and we can confidently say that this is quite enough to call for any information, which is not readily available at the Secretariat, to be got from the office or officer immediately in touch with the subject. The dilatoriness with which many questions are being answered is sure to defeat the very object of putting them. Most of the questions are put with a view to give wide publicity to certain matters of public interest and with the hope that such publicity would be quite sufficient to set matters right immediately. The members, who put such questions will have already known the facts, but they want them to receive proper publicity in order to attract the attention of Government and the public. Answers that are not given at the time, when they are asked, but at a subsequent meeting of the Council or at any other time will not generally be published in papers and the public will not know them. We can dare say that some questions put at the meetings previous to this, still remain unanswered.

As an illustration of what we have said above, we can take the following questions put by Mr. G. Paramasiviah. He asked, "Will the Government be pleased to state the period during which one Basavaradhya acted as Tank Inspector at Channapatna in the year 1921-22, by whom he was appointed, whether it is a fact that his pay has not yet been disbursed, if so, why?" He further asked, the number of free studentships and half free studentships available in the Central College, Bangalore and Maharaja's College, Mysore and the number of students of different communities who have been awarded the same in the current year. But both the questions remained unanswered on the ground that the information had not been received as yet. It would not take more than a couple of days for either the Deputy Commissioner, Bangalore District or the Principals of the two Colleges at Bangalore and Mysore to supply the information asked for. We do not know whether the delay is due to the slackness of the Government in calling for the information or of the departments in forwarding it. The idea gets abroad that if the answers are inconvenient to the Government they will be shy to see their full publicity, and one of the methods is to delay the placing of the information before the House so that it may when given be relegated to some corner and left unnoticed and unpublished. We hope that the Government will not give room for such conjectures and will be expeditious in answering the questions in time.

ಮಲಬಾರು ರೈಲ್ವೆ ಮಾಪಿಳ್ಳೆ ಯಜ್ಞದ ಪುನರ್ವಿಚಾರಣೆಯ ಫಲಿತಾಂಶ.

100 ಮಂದಿ ಮಾಪಿಳ್ಳಾ ಬಂದಿಗಳನ್ನು ಉಸಿರಾಡಲವಕಾಶವಿಲ್ಲದ 1 ಸಾಮಾನು ಬಂಡಿಯಲ್ಲಿ ತುಂಬಿ ಕುಡಿಯಲು ನೀರನ್ನು ಕೊಡದೆ 70 ಮಂದಿಯನ್ನು ಕೊಂದ ವಿಷಯವು ಸರ್ವವಿದಿತವಾಗಿದೆಯಷ್ಟೆ. ಈ ಘೋರಪರ್ಯವಸಾನಕ್ಕೆ ಯಾರು ಕಾರಣಭೂತರೆಂಬುದನ್ನು ವಿಚಾರಿಸಲಿಕ್ಕೆ ನ್ಯಾಪ್‌ಸಾಹೇಬರ ಅಧ್ಯಕ್ಷತೆಯಿಂದ ಮದ್ರಾಸು ಸರ್ಕಾರದವರು ಮೊದಲು ಒಂದು ಸಂಘವನ್ನೇರ್ಪಡಿಸಿದ್ದರು. ಅವರು ವಿಚಾರಣೆಯನ್ನು ನಡೆಯಿಸಿ ಮಲಬಾರು ಕಮಿಷನರು, ಸೈನ್ಯಾಧಿಕಾರಿಗಳು, ರೈಲ್ವೆ ಅಧಿಕಾರಿಗಳು ಮೊದಲಾದ ಮುಖ್ಯಸ್ಥರಾರಮೇಲೂ ಇದರ ಬಾಧ್ಯತೆಯು ಹೊರುವುದಿಲ್ಲವೆಂದು ಹೇಳಿ ಇತಿಶ್ರೀ ಮಾಡಿಬಿಟ್ಟಿದ್ದರು. ಬಳಿಕ ಭಾರತಪ್ರಭುತ್ವದವರು ಕಟ್ಟನ್ನು ತರಿಸಿಕೊಂಡು ನೋಡಿ ಉಳಿದವರನ್ನೆಲ್ಲಾ ಬಿಟ್ಟು ಸಾರ್ಜಂಟ್ ಆಂಡ್ರೂಸರ ಮೇಲೂ ಇನ್ನು ಕೆಲವರಮೇಲೂ ಇದರ ಬಾಧ್ಯತೆಯಿರುವುದೆಂದು ಹೇಳಿ ಅವರುಗಳನ್ನು ಪ್ರಾಸಿಕ್ಯೂಟ್ ಮಾಡಬೇಕೆಂದು ಅಪ್ಪಣೆ ಕಳುಹಿಸಿದರು. ಆದರಮೇಲೆ ಕೊಯಮುತ್ತೂರು ಜಿಲ್ಲಾ ಮೇಜಿಸ್ಟ್ರೇಟ್ ಮಿ|| ಬ್ರೈಯಿಡ್‌ಉಡ್‌ರವರು ವಿಚಾರಣೆ ನಡೆಯಿಸಿದರು. ಆಂಡ್ರೂಸ್ ಮೊದಲಾದವರೆಲ್ಲಾ ನಿರ್ದೋಷಿಗಳೇ ಎಂದು ಅವರೂಕೂಡ ಕಳೆದವಾರ ತೀರ್ಮಾನವನ್ನು ಕೊಟ್ಟುಬಿಟ್ಟರು. ನ್ಯಾಪ್‌ಸಂಘದವರ ತೀರ್ಮಾನವೇ ಸ್ಥಿತಿಸ್ಥಾಪಿತವಾಯಿತು. ಇಂಗ್ಲೆಂಡಿನಲ್ಲಿ ಉಚ್ಚನ್ಯಾಯಾಧಿಪತಿಗಳಾಗಿದ್ದು ನ್ಯಾಯಶಾಸ್ತ್ರಪಾರಂಗತರೆಂದು ಪ್ರಖ್ಯಾತಿಪಡೆದು, ಭರತಖಂಡದಲ್ಲಿ ನ್ಯಾಯವನ್ನೂ ರಾಜಶಾಸನವನ್ನೂ ರಕ್ಷಿಸಲು ಬದ್ಧಕಂಕಣರಾಗಿ ಬಂದು ನಿಂತಿರುವ ವೈಸ್‌ರಾಯಿ ಲಾರ್ಡ್ ರೀಡಿಂಗ್‌ರವರ ನಿರ್ಣಯಕ್ಕೂ ಇದರಿಂದ ಮಂಗಳಾರತಿಯಾದಂತಾಯಿತು. ಬಲಾತ್ಕಾರದಿಂದ ಉಂಟಾದ 70 ಮಂದಿಗಳ ಘೋರ ಮರಣಕ್ಕೆ ಯಾರೂ ಬಾಧ್ಯರಲ್ಲವೆಂದು ಹೇಳಿರುವ ಇಂಥ ತೀರ್ಪು ಭಾರತೀಯರ ಮನಸ್ಸಿಗೆ ಕಾಳ್ಕಿಚ್ಚನ್ನು ಸುರಿದಷ್ಟು ವೇದನೆಯನ್ನುಂಟುಮಾಡದೆ ಇದ್ದೀತೆ? ಇಂಥ ನ್ಯಾಯಗಳು ಆಂಗ್ಲಸದ್ಧರ್ಮಪ್ರಭಾವಕ್ಕೆ ಕಳಂಕವನ್ನುಂಟುಮಾಡತಕ್ಕುವಲ್ಲವೆ? ಮಾಯಾಮಯವಾದ ಇಹಲೋಕದಲ್ಲಿ ಇಂಥ ಘೋರಹತ್ಯೆಯ ಬಾಧ್ಯತೆಯನ್ನು ಅಪರಾಧಿಗಳು ತಪ್ಪಿಸಿಕೊಂಡರೂ ಪರಲೋಕದ ತೀರ್ಮಾನದಲ್ಲೂ ಅವರು ತಮ್ಮ ಬಾಧ್ಯತೆಯನ್ನು ತಪ್ಪಿಸಿಕೊಳ್ಳುವುದು ಸಾಧ್ಯವೆ? ಇದೇ ವಿಧವಾದ ಬಲವನ್ಮರಣವು ಕ್ರೈಸ್ತಪ್ರಜೆಗಳಿಗೆ ತುರ್ಕಿದೇಶದಲ್ಲಿ ನಡೆದಿದ್ದರೆ ಆಗ ಅಲ್ಲಿಯ ವಿದ್ಯಮಾನವು ಹೇಗಿರುತ್ತಿದ್ದಿರಬಹುದು? ಎಂಬುದನ್ನು ನಿಷ್ಪಕ್ಷಪಾತಿಗಳಾದ ಆಂಗ್ಲಮಹಾಜನರು ಪರಿಭಾವಿಸಬೇಕು. ಇಂಥ ಪರಿಸ್ಥಿತಿಗಳಿಂದ ಆಂಗ್ಲಸಾಮ್ರಾಜ್ಯದ ವಿಷಯದಲ್ಲಿ ಅದರ ಆಶ್ರಿತಪ್ರಜೆಗಳಿಗೆ ಮನಃಕ್ಷೋಭೆಯು ಮತ್ತಷ್ಟು ಹೆಚ್ಚಲು ಅವಕಾಶವಾಗುತ್ತದೆ. ಸಾರ್ವಭೌಮ ಪ್ರತಿನಿಧಿಗಳು ಮುಂದೇನು ಮಾಡುವರೋ ನೋಡಬೇಕು. ಭಾರತೀಯರ ಪ್ರಾಣವೆಂದರೆ ಇಷ್ಟೊಂದು ಅಗ್ಗವಾಗಿರುವುದು ಅತ್ಯಂತ ವಿಷಾದಸ್ಥಾನವು.

ಲಾಸೇನು ಸಂಧಿಸಭೆ.

ಈ ಸಭೆಯ ಸಂಬಂಧವಾಗಿ ಪ್ರತಿದಿನವೂ ಬರುತ್ತಿರುವ ತಂತ್ರೀವಾರ್ತೆಗಳು ಬಿರುಗಾಳಿಯ ಹೊಡೆತದಿಂದ ಎದ್ದ ಸಮುದ್ರದ ಅಲೆಗಳು ಒಂದು ಕ್ಷಣದಲ್ಲಿ ಮಹಾಪರ್ವತದಂತೆ ಎದ್ದು ಉತ್ತರಕ್ಷಣದಲ್ಲಿ ಶಮನವಾಗಿ ಹೋಗುವಂತೆ ಸಂಧಿ ಸಮಸ್ಯೆಯು ವಿರಸವಾಗಿ ಎಲ್ಲಿ ಯುದ್ಧಕ್ಕೆಡೆಗುಡುವುದೋ ಎಂಬ ಭೀತಿಯನ್ನು ಒಂದು ದಿವಸವೂ, ಎಲ್ಲವೂ ಶಾಂತಿಯಲ್ಲೇ ಪರ್ಯವಸನ್ನವಾಗುವುದೆಂಬ ನಿರೀಕ್ಷಣೆಯನ್ನು ಮತ್ತೊಂದು ದಿವಸವೂ ಉಂಟುಮಾಡುತ್ತಿದ್ದುವು. ಕಡೆಗೆ ಎಲ್ಲವೂ ಮೈತ್ರಿಯಿಂದಲೂ ಶಾಂತಿಯಿಂದಲೂ ಕೊನೆಗಂಡುಹೋಗುವಂತಾಯಿತೆಂಬುದನ್ನು ಈಗೀಗ ತಿಳಿಯಲು ಸಂತೋಷವಾಗುತ್ತದೆ. ಮುಖ್ಯವಾದ ಜಲಸಂಧಿ ವಿಷಯದ ಸಮಸ್ಯೆಯ ಚರ್ಚೆಯು ಉಭಯಪಕ್ಷದವರಿಗೂ ಅಂಗೀಕಾರಾರ್ಹವಾಗಿ ಪೂರಯಿಸಿದುದೇ ವಿಶೇಷವು. ಅಂಗೋರಾ ಪ್ರತಿನಿಧಿಯಾದ ಇಸ್ಮಿದ್ ಪಾಷಾರವರು ಶಾಂತಮನಸ್ಸಿನಿಂದಲೂ ಸರಳತನದಿಂದಲೂ ಸಭೆಯಲ್ಲಿ ತುರ್ಕಿಯ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಯಿಸಿದುದಕ್ಕಾಗಿ ಲಾರ್ಡ್ ಕರ್ಜನರು ತುಂಬಾ ಮೆಚ್ಚಿಕೊಂಡು ಅವರನ್ನು ಅಭಿನಂದಿಸಿದರು. ಯುದ್ಧಾಭಿನಿವೇಶವು ತಮಗೆ ಲೇಶವೂ ಇಲ್ಲವೆಂದೂ, ಪ್ರಪಂಚಶಾಂತಿಯೂ ತುರ್ಕಿಯ ಆತ್ಮಗೌರವರಕ್ಷಣೆಯೂ ತಮಗೆ ಪ್ರಧಾನವೆಂದೂ ಇಸ್ಮಿದ್‌ರವರು ಸ್ಪಷ್ಟವಾಗಿ ಹೇಳಿದರು. ಅಂಥ ತಮ್ಮ ಉದ್ದೇಶಕ್ಕೆ ಭಂಗತರುವ ನಿಬಂಧನೆಗಳಿಗೆ ಒಪ್ಪಲವಕಾಶವಿಲ್ಲವೆಂಬುದನ್ನೂ ಖಂಡಿತವಾಗಿ ನುಡಿದು ತಮ್ಮ ದಿಟ್ಟತನವನ್ನೂ ತೋರಿಸಿ ಧೀರೋದಾತ್ತತ್ವವನ್ನು ಪ್ರಕಟಿಸಿದರು. ತುರ್ಕಿಯು ಯುದ್ಧದಲ್ಲಿ ತೊಡಗಿರುವಾಗ ಮಾತ್ರ ಜಲಸಂಧಿಗಳಲ್ಲಿ ವರ್ತಕನೌಕೆಗಳು ಪ್ರಯಾಣಮಾಡಿಕೊಂಡು ಹೋಗಕೂಡದೆಂತಲೂ, ಉಳಿದಸಮಯಗಳಲ್ಲಿ ಧಾರಾಳವಾಗಿ ಸಂಚರಿಸಬಹುದೆಂತಲೂ, ತುರ್ಕಿಯು ಯುದ್ಧದಲ್ಲಿ ನಿಂತಿರುವಾಗಲೂ ಶತ್ರುಪಕ್ಷಕ್ಕೆ ಸಹಾಯಮಾಡದ ನಿಬಂಧನೆಯ ಮೇಲೆ ತಟಸ್ಥ ದೇಶೀಯರ ಹಡಗುಗಳು ಜಲಸಂಧಿಯಲ್ಲಿ ತಿರುಗಾಡಬಹುದೆಂತಲೂ, ತುರ್ಕಿಯು ತಟಸ್ಥವಾಗಿರುವಾಗ ಯುದ್ಧದ ಹಡಗುಗಳು ಕೆಲವನ್ನು ಜಲಸಂಧಿಗಳಿಗೆ ತುರುಕರು ಒದಗೊಡಿಸುವೆಂತಲೂ, ಆದರೆ ಅವು ಅಲ್ಲೇ ನಿಲ್ಲಕೂಡದೆಂತಲೂ, ಎರಡು ಪಕ್ಷಗಳವರು ಕಾದಾಡುತ್ತಿರುವಾಗ ಒಂದು ಪಕ್ಷದವರ ಹಡಗುಗಳು ಜಲಸಂಧಿಯನ್ನು ಬಿಟ್ಟುಹೋದಲ್ಲದೆ ಮತ್ತೊಂದುಪಕ್ಷದ ಹಡಗುಗಳು ಜಲಸಂಧಿಗೆ ಪ್ರವೇಶಿಸಲಾಗದೆಂತಲೂ, ತುರ್ಕಿಯು ಯುದ್ಧದಲ್ಲಿ ತೊಡಗಿರುವಾಗ ತಟಸ್ಥ ದೇಶೀಯರ ಹಡಗುಗಳನ್ನು ಮಾತ್ರ ಜಲಸಂಧಿಗೆ ಬಿಟ್ಟುಕೊಡುವರೆಂತಲೂ, ಕಾನ್‌ಸ್ಟಾಂಟಿನೋಪಲ್ ರಕ್ಷಣೆಗಾಗಿ ಗಲ್ಲಿಪೋಲಿ ದ್ವೀಪಕಲ್ಪದಲ್ಲಿ ಕೆಲಸೈನ್ಯಗಳನ್ನು ಇಟ್ಟುಕೊಳ್ಳಲು ತುರ್ಕಿಗೆ ಅವಕಾಶವಿರಬೇಕೆಂತಲೂ ಮೊದಲಾದ ತಮ್ಮ ಇಷ್ಟಗಳನ್ನು ಇಸ್ಮಿದ್ ಪಾಷಾರವರು ಸೂಚಿಸಿದರು. ಸ್ವಲ್ಪ ಹೆಚ್ಚು ಕಡಿಮೆಯಾಗಿ ಮಿತ್ರಮಂಡಲಿಯವರು ಸಂಪರಿಸಿ ಈ ಸಂಬಂಧವಾಗಿ ಹೇಳಿದ ಏರ್ಪಾಟುಗಳಿಗೆ ಇಸ್ಮಿದ್ ಪಾಷಾರವರು ಒಪ್ಪಿಕೊಂಡರು. ಅದನ್ನು ಕಂಡು ರಷ್ಯ ಪ್ರತಿನಿಧಿಗಳು ಉಸ್ಸೆಂದು ಮೌನಮುದ್ರೆ ವಹಿಸಿ ಕುಳಿತರು. ಇತರ ಪ್ರತಿನಿಧಿಗಳೆಲ್ಲಾ ತೃಪ್ತಿಪಟ್ಟರು. ತುರ್ಕಿಯಲ್ಲಿರುವ ಸ್ವಲ್ಪ ಸಂಖ್ಯಾಕರಾದ ಇತರ ಜಾತಿ ಪ್ರಜೆಗಳ ನ್ಯಾಯವಿಚಾರಣೆಯ ಸಂಬಂಧದ ಅಧಿಕಾರನಿರ್ಣಯವು ಇನ್ನೂ ಪರಿಷ್ಕಾರವಾಗಿಲ್ಲ. ಆ ಅಧಿಕಾರವು ತಮಗೇ ಇರಬೇಕೆಂದು ತುರ್ಕಿ ಪ್ರತಿನಿಧಿಗಳು ಬಿಗಿಪಟ್ಟು ಹಿಡಿದಿದ್ದಾರೆ. ಹಿಂದಣಂತೆ ತುರ್ಕಿ ಪ್ರಭುತ್ವವು ಮುಂದೆ ನಡೆಯದೆ ನಾಗರಕಪ್ರಭುತ್ವನೀತಿಗನುಸರಿಸಿ ನಡೆಯಲು ತುರ್ಕಿ ಜಾತೀಯಪ್ರಭುತ್ವವು ಸಿದ್ಧವಾಗಿರುವುದರಿಂದ ಸಂಶಯಪಡದೆ ಇತರಜಾತಿ ಜನರ ವಿಚಾರಣಾಧಿಕಾರವೂ ನಿರಾತಂಕವಾಗಿ ತುರ್ಕಿಗೇ ಇರಬೇಕೆಂದು ಇವರು ಕೋರುತ್ತಿದ್ದಾರೆ. ಆ ವಿಷಯದಲ್ಲಿ ಮಿತ್ರಮಂಡಲಿಯವರ ಸಂಶಯವು ಇನ್ನೂ ತೊಲಗಿಲ್ಲ. ಆದರೆ ಇಷ್ಟರಲ್ಲೇ ಅದೂ ಅನುಕೂಲವಾಗಿ ಪರ್ಯವಸಾನಗೊಳ್ಳದೆ ಹೋಗುವುದಿಲ್ಲವೆಂದು ತೋರುತ್ತಿದೆ.

ದಿವಾನರ ಸ್ವದೇಶಸಂಚಾರ.

ದಿವಾನರು 1923ನೆಯ ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಶಿವಮೊಗ್ಗ ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಸಂಚರಿಸಿಕೊಂಡು ಬರುವ ಕಾಲಕ್ರಮವು.—

ಜನವರಿ ತಾ|| 12ರಲ್ಲಿ ಬೆಂಗಳೂರಿನಿಂದ ಪೂನಾ ಮೇಲುಬಂಡಿಯಲ್ಲಿ ಭದ್ರಾವತಿಗೆ ಪ್ರಯಾಣಮಾಡುವರು.

ತಾ|| 13ರಿಂದ 15ವರೆಗೆ-ಭದ್ರಾವತಿಯಲ್ಲಿರುವರು.

ತಾ|| 16ರಲ್ಲಿ ಭದ್ರಾವತಿಯಿಂದ ಹೊರಟು ಶಿವಮೊಗ್ಗ—ಶಿಕಾರಿಪುರ ಮಾರ್ಗವಾಗಿ ಸೊರಬಕ್ಕೆ ಪ್ರಯಾಣಮಾಡುವರು.

ತಾ|| 17ರಲ್ಲಿ ಸೊರಬದಲ್ಲಿ ನಿಲ್ಲುವರು.

ತಾ|| 18ರಲ್ಲಿ ಸೊರಬದಿಂದ ಸಾಗರದ ಮೇಲೆ ತಾಳಗುಪ್ಪೆಗೆ ಹೊರಡುವರು.

ತಾ|| 19ರಲ್ಲಿ ತಾಳಗುಪ್ಪೆಯಿಂದ ಅರಳಗೋಡು ಮಾರ್ಗವಾಗಿ ಭಟ್ಕಳಿಗೆ ಹೋಗಿ ಅಲ್ಲಿಂದ ಕಲ್ಲೂರು ಘಾಟಿನ ಮಾರ್ಗವಾಗಿ ಕಲ್ಲೂರುಕಟ್ಟೆಗೆ ಬರುವರು.

ತಾ|| 20ರಲ್ಲಿ ಕಲ್ಲೂರು ಕಟ್ಟೆಯಿಂದ ತೀರ್ಥಹಳ್ಳಿಗೆ ಬರುವರು.

ತಾ|| 21ರಲ್ಲಿ ತೀರ್ಥಹಳ್ಳಿಯಿಂದ ಆಗುಂಬೆಗೆ ಪ್ರಯಾಣಮಾಡುವರು.

ತಾ|| 22ರಲ್ಲಿ ಆಗುಂಬೆಯಲ್ಲಿ ನಿಲ್ಲುವರು.

ತಾ|| 23ರಲ್ಲಿ ಆಗುಂಬೆಯಿಂದ ಕೊಪ್ಪಕ್ಕೆ ಹೊರಡುವರು.

ತಾ|| 24ರಲ್ಲಿ ಕೊಪ್ಪದಲ್ಲಿರುವರು.

ತಾ|| 25ರಲ್ಲಿ ಕೊಪ್ಪವನ್ನು ಬಿಟ್ಟು ಬಾಳೆಹೊನ್ನೂರಿನ ಮಾರ್ಗವಾಗಿ ಚಿಕ್ಕಮಗಳೂರನ್ನು ಸೇರುವರು.

ತಾ|| 26ರಿಂದ 28ವರೆಗೆ ಚಿಕ್ಕಮಗಳೂರಲ್ಲಿ ನಿಲ್ಲುವರು.

ತಾ|| 29ರಲ್ಲಿ ಚಿಕ್ಕಮಗಳೂರಿಂದ ಹೊರಟು ಮೂಡಗೆರೆ ಮಾರ್ಗವಾಗಿ ಕಳಸವನ್ನು ಸೇರುವರು.

ತಾ|| 30ರಲ್ಲಿ ಕಳಸದಿಂದ ಕುದರೆ ಮುಖಕ್ಕೆ ಹೊರಡುವರು.

ತಾ|| 31 ರಲ್ಲಿ ಕುದುರೆ ಮುಖದಲ್ಲಿರುವರು.

ಫೆಬ್ರವರಿ ತಾ|| 1ರಲ್ಲಿ ಕುದುರೆಮುಖವನ್ನು ಬಿಟ್ಟು ಕಳಸಕ್ಕೆ ಹಿಂದಿರುಗಿಬರುವರು.

ತಾ|| 2ರಲ್ಲಿ ಕಳಸದಿಂದ ಮೂಡಗೆರೆ ಮಾರ್ಗವಾಗಿ ಮಂಜ್ರಾಬಾದಿಗೆ ಹೋಗುವರು.

ತಾ|| 3ರಲ್ಲಿ ಮಂಜ್ರಾಬಾದಿನಲ್ಲಿ ನಿಲ್ಲುವರು.

ತಾ|| 4ರಲ್ಲಿ ಮಂಜ್ರಾಬಾದಿನಿಂದ ಹಾಸನಕ್ಕೆ ಪ್ರಯಾಣಮಾಡುವರು.

ತಾ|| 5 ಮತ್ತು 6 ರಲ್ಲಿ ಹಾಸನದಲ್ಲಿ ನಿಲ್ಲುವರು.

ತಾ|| 7ರಲ್ಲಿ ಬೆಂಗಳೂರಿಗೆ ಹಿಂದಿರುಗಿಬರುವರು.

ಸ್ವದೇಶದ ವೃತ್ತಾಂತಗಳು.

ತಿರುಮಕೂಡಲುನರಸೀಪುರದಲ್ಲಿ ಪ್ಲೇಗು ರೋಗವು ಉಲ್ಬಣವಾಗಿ ಅನೇಕ ಜನರು ಊರನ್ನು ಬಿಟ್ಟಿದ್ದಾರೆ.

ನಾಳೆ ಮಂಗಳವಾರ ಅಂಧಕಾಸುರಸಂಹಾರವೂ ಬುಧವಾರ ಬೆಳಗ್ಗೆ ಆರ್ದ್ರಾಮಹೋತ್ಸವವೂ ನಂಜನಗೂಡಿನಲ್ಲಿ ಜರುಗುತ್ತವೆ.

ತಿಪಟೂರಿನ ಹಿಂದೂ ಮಹಮ್ಮದೀಯರ ವೈಮನಸ್ಯಶಾಂತಿಯನ್ನು ಕುರಿತು ಶ್ರೀಮನ್ಮಹಾರಾಜರಲ್ಲಿ ಪ್ರತ್ಯಕ್ಷವಾಗಿ ಬಿನ್ನಯಿಸಿಕೊಳ್ಳಲಿಕ್ಕೆ ಅಲ್ಲಿಯ ಕೆಲ ಮಂದಿ ಹಿಂದೂ ಮಹಮ್ಮದೀಯ ದೊಡ್ಡ ಮನುಷ್ಯರುಗಳು ರಾಜಧಾನಿಗೆ ಬಂದಿದ್ದಾರೆ.

ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಬಸವಜಯಂತಿಯನ್ನು ಆಚರಿಸುವ ವೀರಶೈವರಿಗೆ ಆ ದಿವಸ ರಜಾ ಕೊಡಬೇಕೆಂದು ತುಮಕೂರಿನ ಮ|| ಗುರುಚನ್ನಬಸವಯ್ಯನವರು ಅರಿಕೆಮಾಡಿಕೊಳ್ಳಲು "ಆಕ್ಷೇಪಣೆಯೇನೂ ಇಲ್ಲ; ಆಗಬಹುದು" ಎಂದು ದಿವಾನರು ಉತ್ತರ ಕೊಟ್ಟಿದ್ದಾರೆ.

ಮದ್ರಾಸ್ ಗೌರ್ನರ್‌ರವರು ಪತ್ನೀಸಮೇತರಾಗಿ ಕಳೆದ ಭಾನುವಾರ ರಾಜಧಾನಿಗೆ ದಯಮಾಡಿಸಿ, ಅದೇ ದಿನವೇ ಬೇಟೆಗಾಗಿ ಕಾರಾಪುರದ ಕ್ಯಾಂಪಿಗೆ ತೆರಳಿದರು. ಶ್ರೀಮನ್ಮಹಾರಾಜರೂ ಅಲ್ಲಿಗೆ ದಯಮಾಡಿಸಿದ್ದರು. ಗೌರ್ನರು ದಂಪತಿಗಳು ಉದಕಮಂಡಲಕ್ಕೆ ಪ್ರಯಾಣಮಾಡಿದರು.

ಫರ್ಲೋ ರಜವನ್ನು ಪಡೆದವರಿಗೆ ಅರ್ಧಭಾಗ ಸಂಬಳವನ್ನು ಕೊಡುತ್ತಿದ್ದ ಇದುವರೆಗಿನ ಪದ್ಧತಿಯನ್ನು ತಪ್ಪಿಸಿ ಮುಂಬ ಜನವರಿಯಿಂದ ಪೂರಾ ಸಂಬಳವನ್ನು ಫರ್ಲೋರಜಾಕಾಲದಲ್ಲಿ ಕೊಡುವಂತೆ ಸರ್ಕಾರದವರು ಏರ್ಪಡಿಸಿದ್ದಾರೆ. ರಿಟ್ರೆಂಚ್‌ಮೆಂಟ್‌ಕಾಲದಲ್ಲಿ ಇದೊಂದು ವಿಲಕ್ಷಣವಾದ ಅಪ್ಪಣೆಯೇ ಸರಿ.

ತಿ|| ನರಸೀಪುರ, ನಂಜನಗೂಡು, ಶ್ರೀರಂಗಪಟ್ಟಣ, ನಾಗಮಂಗಲ ಈ ತಾಲ್ಲೂಕುಗಳಲ್ಲೂ ಕೋಲಾರ ಡಿಸ್ಟ್ರಿಕ್ಟಿನ ಎಲ್ಲ ತಾಲ್ಲೂಕುಗಳಲ್ಲೂ ಇರುವ ಕೆಲವು ರಿಜರ್ವ್ ಈಚಲುವನಗಳನ್ನು ಸಾಗುವಳಿಗೆ ಕೊಡಲು ರೆವಿನ್ಯೂ ಇಲಾಖೆಗೆ ವಹಿಸುವಂತೆ ಎಕ್ಸೈಜ್‌ಕಮಿಷನರು ಮಾಡಿದ ಸಲಹೆಯನ್ನು ಸರ್ಕಾರದವರು ಒಪ್ಪಿ ಅಪ್ಪಣೆಮಾಡಿದ್ದಾರೆ.

1 ತಿಂಗಳಿಂದಲೂ ಮೈಸೂರು ಶ್ರೀ ಚಾಮುಂಡೇಶ್ವರೀ ಕರ್ಣಾಟಕ ನಾಟಕ ಸಂಘದವರು ಮದ್ರಾಸುಪಟ್ಟಣದಲ್ಲಿ ತಮ್ಮ ಪ್ರಯೋಗಗಳನ್ನು ಪ್ರದರ್ಶಿಸಿ ಪಟ್ಟಣಿಗರಮನಸ್ಸನ್ನು ಅತ್ಯಂತವಾಗಿ ಸಂತೋಷಪಡಿಸಿರುವರು. ಈಗ ಮೈಸೂರಿನ ಶಾರದಾ ನಾಟಕಸಂಘದವರೂ ಸಹ ಅಲ್ಲಿಗೆ ಹೋಗಿ ಕ್ರಿಸ್ತಮಸ್ ಹಬ್ಬದಾರಭ್ಯ ತಮ್ಮ ಪ್ರಯೋಗಗಳನ್ನು ನಡೆಯಿಸುತ್ತಿರುವರು.

ಪ್ರೊಫೆಸರ್ ಮನೋಹರ ಬರ್ವೆಯೆಂಬ 10 ವರ್ಷದ ಸಂಗೀತವಿದ್ಯಾ ವಿಶಾರದನಾದ ಮಹಾರಾಷ್ಟ್ರದೇಶದ ಬಾಲಕನು ರಾಜಧಾನಿಗೆ ಬಂದು ಇಲ್ಲಿಯ ಟೌನ್‌ಹಾಲಿನಲ್ಲಿ ಇದುವರೆಗೆ 2-3 ಕಚೇರಿಗಳನ್ನು ನಡೆಯಿಸಿ, ಹತ್ತಾರುವಿಧದ ವಾದ್ಯಗಳನ್ನು ನುಡಿಯಿಸುವುದರಲ್ಲಿಯೂ ಹಾಡುಗಾರಿಕೆಯಲ್ಲೂ ತನಗಿರುವ ಅಸಾಧಾರಣ ಪಾಂಡಿತ್ಯವನ್ನು ಪ್ರದರ್ಶಿಸಿ ಪುರನಿವಾಸಿಗಳ ಮನಸ್ಸನ್ನೆಲ್ಲಾ ಸೂರೆಮಾಡಿದ್ದಾನೆ. ಈ ದಿನ ಸಾಯಂಕಾಲವೂ ಒಂದು ಕಚೇರಿ ನಡೆಯುವುದಾಗಿದೆ.

ರಾಜಧಾನಿಯ ಈದಗಾದಲ್ಲಿರುವ ಕ್ರೈಸ್ತಜಾತಿಯ 18 ವರ್ಷ ವಯಸ್ಸಿನ ಒಬ್ಬ ಹೆಂಗುಸು ಈ ತಾ|| 29ರ ಮಧ್ಯಾಹ್ನ ನೇತುಹಾಕಿಕೊಂಡು ಮೃತಪಟ್ಟಳು. ಮತ್ತು ದೇವರಾಜ ಮಾರ್ಕೆಟ್ಟಿನಲ್ಲಿ ವ್ಯಾಪಾರಮಾಡಿಕೊಂಡಿದ್ದ ಭದ್ರಿಯೆಂಬುವನು ರೋಗವೇನೂಯಿಲ್ಲದೆ ದೃಢಕಾಯನಾಗಿದ್ದು ಕಳೆದವಾರ ಆಕಸ್ಮಿಕವಾಗಿ ಮೃತಪಟ್ಟನು. ಇವನು ಮದ್ಯಪಾನ ವಿಶೇಷದಿಂದ ಸತ್ತಂತೆ ಪೋಲೀಸರು ರಿಕಾರ್ಡು ಮಾಡಿರುವುದಾಗಿಯೂ, ಯಾರೋ ಮುಲ್ಲಾ ನಸೀಟರ ಪ್ರೇರಣೆಯಿಂದ ಕೊಲ್ಲಲ್ಪಟ್ಟನೆಂದು ಜನರು ಆಡಿಕೊಳ್ಳುತ್ತಿರುವುದಾಗಿಯೂ ಕೇಳುತ್ತೇವೆ.

ಬೆಂಗಳೂರಿನ ಸಾಹುಕಾರ್ ಮೋತಿಖಾನೆ ಪದ್ಮನಾಭಯ್ಯನವರು ಕೆಲ ಕಾಲದಿಂದಲೂ ಅಸ್ವಸ್ಥರಾಗಿದ್ದು ಅಲ್ಲಿಯ ಚಿಕಿತ್ಸೆಯಿಂದ ಗುಣಹೊಂದಲಿಲ್ಲವಾಗಿ ಮೈಸೂರಿನಲ್ಲಿರುವ ತಮ್ಮ ಅಣ್ಣಂದಿರಾದ ಸಾಹುಕಾರ್ ಮ|| ಮೋತಿಖಾನೆ ಅನಂತರಾಜಯ್ಯ ನವರ ಮನೆಗೆ ಬಂದಿದ್ದು ಇಲ್ಲಿಯೂ ಗುಣವನ್ನು ಹೊಂದದೆ ಕಳೆದ ತಾ|| 27ರ ರಾತ್ರಿ ವಿಧಿವಶರಾದರೆಂದು ತಿಳಿಯಲು ವಿಷಾದಿಸುತ್ತೇವೆ. ಇವರು ರಾಜಧಾನಿಯಲ್ಲಿ ಪ್ರಸಿದ್ಧ ಶ್ರೀಮಂತರಾಗಿದ್ದ ಮೋತಿಖಾನೆ ತಿಮ್ಮಪ್ಪನವರ ಕನಿಷ್ಠಪುತ್ರರು, ಮತ್ತು ಬೆಂಗಳೂರಿನಲ್ಲಿ ಕೆಲವರ್ಷಗಳಿಂದಲೂ ವ್ಯಾಪಾರಾದಿಗಳನ್ನು ಮಾಡಿಕೊಂಡಿದ್ದುದಲ್ಲದೆ, ತಮ್ಮ ಜೈನ ವಿದ್ಯಾರ್ಥಿಗಳ ಅಶನವಸನಕ್ಕೆ ಬೆಂಗಳೂರಿನಲ್ಲಿ ಬಹಳ ತೊಂದರೆಯಾಗಿದ್ದುದರ ಮೇಲೆ 25000 ರೂಪಾಯಿಗಳನ್ನು ವ್ಯಯಮಾಡಿ ಒಂದು ವಿದ್ಯಾರ್ಥಿನಿಲಯವನ್ನು ಧರ್ಮಾರ್ಥವಾಗಿ ಕಟ್ಟಿಸಿ ಮೈಸೂರು ಜೈನ ವಿದ್ಯಾವರ್ಧಕ ಸಂಘದವರ ಮೇಲ್ವಿಚಾರಣೆಗೆ ವಹಿಸಿಕೊಟ್ಟು, ತಮ್ಮ ಜನರ ವಿದ್ಯಾಭಿವೃದ್ಧಿಗೆ ಮಹೋಪಕಾರವನ್ನು ಮಾಡಿ ಮತದವರ ವಂದನೆಗೂ ಆಚಂದ್ರಾರ್ಕವಾದ ಕೀರ್ತಿಗೂ ಭಾಜನರಾದರು. ಮೃತರ ಆತ್ಮಕ್ಕೆ ವಿಶ್ರಾಂತಿಯೂ, ಇವರ ವಿಯೋಗ ದುಃಖಕ್ಕೆ ಪಾತ್ರರಾದ ಕುಟುಂಬಕ್ಕೆ ಮನಶ್ಶಾಂತಿಯೂ ಉಂಟಾಗಲೆಂದು ಕೋರುತ್ತೇವೆ.

ಭರತಖಂಡದ ವೃತ್ತಾಂತಗಳು.

ಸರ್ ವಿಲಿಯಂ ಮಾರಿಸ್‌ರವರು ಸಂಯುಕ್ತ ರಾಷ್ಟ್ರಗಳ ಗೌರ್ನರ್ ಪದವಿಯನ್ನು ಸ್ವೀಕರಿಸಿದರು.

ಎಚ್. ಎಚ್. ಆಗಾಖಾನರು ತಾ|| 22ರಲ್ಲಿ ಕಲ್ಕತ್ತೆಗೆ ಹೋದರು; ಅಲ್ಲಿ ವೈಸ್‌ರಾಯರ ಆತಿಥ್ಯದಲ್ಲಿರುವರು.

ಲಾರ್ಡ್ ಸಿಂಹರವರು ಪತ್ನೀಸಮೇತರಾಗಿ ಕಳೆದ ತಾ|| 23ರಲ್ಲಿ ಬೊಂಬಾಯಿ ರೇವೆಗೆ ಬಂದಿಳಿದು ಕಲ್ಕತ್ತೆಗೆ ಪ್ರಯಾಣಮಾಡಿದರು.

ಕುಚ್‌ಬಿಹಾರ್ ಮಹಾರಾಜರು ಲಂಡನ್ ಪಟ್ಟಣದಲ್ಲಿ ಮೃತರಾದರು. ಬರೋಡಾ ಮಹಾರಾಜ ಪುತ್ರಿಯವರು ಇವರನ್ನು ವರಿಸಿ ಪಾಣಿಗ್ರಹಣ ಮಾಡಿಕೊಂಡಿದ್ದರು.

ಗಯೆಯಲ್ಲಿ ಅಕಾಲಿಗಳು, ಸಿಕ್ಕರು, ಆರ್ಯಸಮಾಜದವರು ಮೊದಲಾದವರ ಅನೇಕ ಸಭೆಗಳು ಜರುಗಿವೆ. ಅಕಾಲಿಗಳು ಪ್ರತ್ಯೇಕವಾಗಿ ಧರ್ಮಸತ್ರವನ್ನೇರ್ಪಡಿಸಿ ಅಲ್ಲಿಗೆ ಬಂದ ಎಲ್ಲಜಾತಿಯ ಜನರಿಗೂ ಉಚಿತವಾಗಿ ಭೋಜನಕ್ಕೆ ಅನುಕೂಲಮಾಡಿಕೊಟ್ಟಿದ್ದರು.

ಲಾಹೋರ್ ವಿಶ್ವವಿದ್ಯಾಲಯದ ಸಾಂವತ್ಸರಿಕ ಪಟ್ಟಪ್ರದಾನೋತ್ಸವ ಮಹಾಸಭೆಯು ಪಂಜಾಬು ಗೌರ್ನರ ಅಧ್ಯಕ್ಷತೆಯಿಂದ ನಡೆದಿತು. ಬಿ. ಎ. ಪಟ್ಟವನ್ನು ಪಡೆದವರಲ್ಲಿ ನಾಲ್ಕು ಮಂದಿ ಯುವತಿಯರಿದ್ದರು. ಒಬ್ಬ ಮಹಮ್ಮದೀಯ ಯುವತಿಯು ಎಂ. ಎ. ಪಟ್ಟವನ್ನು ಪಡೆದಳು.

ಗಯಾ ಕಾಂಗ್ರೆಸ್ ಸಂಬಂಧದಲ್ಲಿ ಖದ್ದರ್ ಪ್ರದರ್ಶನವೊಂದು ತಾ|| 24 ರಲ್ಲಿ ಜರುಗಿತು. ಎಲ್ಲ ಪ್ರಾಂತಗಳಿಂದಲೂ ವಿವಿಧಜಾತಿಯ ಖದ್ದರುಗಳೂ ರಾಟೆಗಳೂ ಮಗ್ಗಗಳೂ ಕಳುಹಿಸಲ್ಪಟ್ಟಿದ್ದುವು. ಮ|| ಗಾಂಧಿಯವರ ಪತ್ನಿ ಶ್ರೀಮತಿ ಕಸ್ತೂರಿಬಾಯಿಯವರು ಅದರ ಪ್ರಾರಂಭೋತ್ಸವವನ್ನು ಜರುಗಿಸಿದರು.

ಮ|| ಗಾಂಧಿಯವರನ್ನು ಹಿಡಿದು ಸೆರೆಹಾಕಿ ಕಳೆದ 18ನೆ ತಾರೀಖಿಗೆ ವರ್ಷವಾಯಿತು. ಆದಿನ ದೇಶದಲ್ಲಿ ಹಲವುಕಡೆ ನಿರ್ಬಂಧ ದಿನೋತ್ಸವವನ್ನು ಸಭೆಯಕೂಟ ಉಪನ್ಯಾಸಾಚರಣೆ ಮೊದಲಾದ ನಾನಾರೂಪದಿಂದ ನೆರವೇರಿಸಿದರು. ರಾಜಮಹೇಂದ್ರದ ಕಾಂಗ್ರೆಸ್ ಭಕ್ತರು ಖದ್ದರ್‌ಬಟ್ಟೆಯನ್ನು ಗಜಕ್ಕೆ 4-5 ಆಣೆಯಂತೆ ಬಡಬಗ್ಗರಿಗೆ ಮಾರಲು ಆ ದಿವಸ ಏರ್ಪಡಿಸಿದ್ದರು.

ಬ್ರಾಹ್ಮಣೇತರರ 6ನೆ ವಾರ್ಷಿಕಮಹಾಸಭೆಯು ಮದ್ರಾಸಿನ ವಿಕ್ಟೋರಿಯಾ ಹಾಲಿನಲ್ಲಿ ಕಳೆದ ತಾ|| 26-27 ರಲ್ಲಿ ನಡೆದಿತು. ಮದ್ರಾಸು ಅಧಿಪತ್ಯದಿಂದಲೇ ಅಲ್ಲದೆ ಬೊಂಬಾಯಿ

ಅಧಿಪತ್ಯದ ಸತಾರಾ, ಬೆಳಗಾಂ, ಧಾರ್ವಾಡದ ಜಿಲ್ಲೆಗಳಿಂದಲೂ ಅನೇಕ ಪ್ರತಿನಿಧಿಗಳು ಬಂದಿದ್ದರು. ಖಾನ್ ಬಹದ್ದೂರ್ ಮಹಮ್ಮದ್ ಉಸ್ಮಾನ್ ಸಾಹೇಬರು ಆಹ್ವಾನಸಂಘಾಧ್ಯಕ್ಷರಾಗಿದ್ದರು. ಕೊಲ್ಹಾಪುರದ ಪ್ರೊ|| ಲಟ್ಟೆಯವರು ಸಭಾಧ್ಯಕ್ಷರಾಗಿದ್ದರು.

ಗಯಾ ಕಾಂಗ್ರೆಸ್ಸಿಗೆ ಎಲ್ಲ ಪ್ರಾಂತಗಳಿಂದಲೂ ಆರಿಸಲ್ಪಟ್ಟಿರುವ ಪ್ರತಿನಿಧಿಗಳು 5529 ಮಂದಿಗಳೆಂದೂ, ಅವರಲ್ಲಿ 500 ಮಂದಿಗಳು ಸ್ತ್ರೀಯರೆಂದೂ ಪ್ರಕಟವಾಗಿದೆ. ಬಂಗಾಳಾದಿಂದಲೇ 986 ಮಂದಿಗಳು ಆರಿಸಲ್ಪಟ್ಟಿದ್ದಾರೆ. ಬಂಗಾಳಾದ ಚಿತ್ತಗಂಗಾಪ್ರಾಂತದ ಕಾಡುಗಳಿಂದ 460 ಮಂದಿ ಅನಾದಿಗಳೆಂಬ ಕಾಡುಜನರು ಬಂದಿರುವರಂತೆ. ಬೊಂಬಾಯಿ ಅಧಿಪತ್ಯದಿಂದ 28 ಮಂದಿ ಮಾತ್ರವೇ ಆರಿಸಲ್ಪಟ್ಟಿದ್ದಾರೆ. ಸಭಾಮಂಟಪವು 20000 ಮಂದಿಗಳನ್ನು ಹಿಡಿಯುವಷ್ಟು ವಿಶಾಲವಾಗಿ ಫಲ್ಗುಣೀ ನದೀತೀರದಲ್ಲಿ ಹಾಕಲ್ಪಟ್ಟಿದೆ.

ಮಾಂಘೀರಿನಲ್ಲಿ ದ್ವಾರಕಾಪೀಠದ ಶಂಕರಾಚಾರ್ಯರ ವಿಚಾರಣೆಯೆಲ್ಲಾ ಮುಗಿದು ಅವರಿಗೆ 1 ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯು ಕ್ರಿ. ಪ್ರೊ. ಕೋಡು 108ನೆ ಸೆಕ್ಷನ್ ಅಪರಾಧಕ್ಕಾಗಿ ವಿಧಿಸಲ್ಪಟ್ಟಿತು. ಸ್ವಾಮಿಸ್ವರೂಪಾನಂದ ಎಂಬ ತಮ್ಮ ಮುಖ್ಯ ಶಿಷ್ಯರಿಗೆ ತಮ್ಮ ಪೀಠದ ಅಧಿಕಾರವನ್ನು ವಹಿಸಿ ಅವರು ಕಾರಾಗೃಹಕ್ಕೆ ಹೋಗುವಾಗ್ಗೆ "ಕರ್ತವ್ಯವನ್ನು ನಾನು ನೆರವೇರಿಸಿದೆನು. ದೇಶೀಯರೆಲ್ಲರೂ ಹೀಗೆಯೇ ತಮ್ಮ ಕರ್ತವ್ಯವನ್ನು ನೆರವೇರಿಸಬೇಕು" ಎಂದು ತಮ್ಮನ್ನು ಪುಷ್ಪಮಾಲಾದಿಗಳಿಂದಲಂಕರಿಸಿ ಗೌರವಿಸಿದ ಪ್ರಜೆಗಳಿಗೆ ಉಪದೇಶಿಸಿದರು.

ಗಯೆಯ ಮಹಾಸಭೆಗಾಗಿ ಮದ್ರಾಸು ಅಧಿಪತ್ಯದಿಂದ ಕೆಲಮಂದಿ ಸ್ವಯಂಸೇವಕರು ಕಾಲ್ನಡಗೆಯಿಂದಲೇ ಹೋದರು. ಮಧ್ಯದಲ್ಲಿ ಕೆಲರು ಅಸ್ವಸ್ಥತೆಯಿಂದಲೂ ಅಧೈರ್ಯದಿಂದಲೂ ನಿಂತುಹೋದರು. ಇಬ್ಬಿಬ್ಬರು ಹೊಗೆಬಂಡಿಯನ್ನೇರಿ ಸ್ಥಲವನ್ನು ಸೇರಿದರು. ಕಾಂಗ್ರೆಸ್ ಪ್ರಚಾರಕನಾದ ಲಕ್ಷ್ಮೀ ಪೆರುಮಾಳ್‌ಪಿಳ್ಳೆಯೆಂಬಾತನು ತೀಂಕಾಶಿಯಿಂದ ಪಾದರಕ್ಷೆಯೂ ಇಲ್ಲದೆ ಕಾಲ್ನಡಗೆಯಿಂದಲೇ ನವಂಬರ್ ತಿಂಗಳಾರಂಭದಲ್ಲಿ ಹೊರಟು ಗಯಾಕ್ಷೇತ್ರಕ್ಕೆ ಡಿಸೆಂಬರ್ ತಾ|| 17 ರಲ್ಲಿ ಸೇರಿದನು. ಇಲ್ಲಿಗಲ್ಲಿಗೆ ಇರುವ 1200 ಮೈಲಿಗಳ ದೂರದ ಪ್ರಯಾಣವನ್ನು ಆತನು 40-45 ದಿನಗಳಲ್ಲಿ ಮುಗಿಸಿದಂತಾಯಿತು.

ಸೂರತ್ ಪಟ್ಟಣದಲ್ಲಿರುವ 27 ಸಾವಿರ ಮಂದಿ ಕಂದಾಯಕೊಡುವ ಪ್ರಜೆಗಳಲ್ಲಿ 23 ಸಾವಿರ ಮಂದಿಗಳು ಮ್ಯುನ್ಸಿಪಲ್ ಕಂದಾಯವನ್ನು ಕೊಟ್ಟಿಲ್ಲ. "7 ದಿನಗಳೊಳಗೆ ನೀವು ಕಂದಾಯವನ್ನು ಕೊಡದಿದ್ದರೆ ಕೊಳಾಯಿಗಳ ನೀರನ್ನು ನಿಲ್ಲಿಸಿಬಿಡುತ್ತೇವೆ. 15 ದಿನಗಳೊಳಗೆ ಸಲ್ಲಿಸದಿದ್ದರೆ, ನಿಮ್ಮ ಸೊತ್ತುಗಳನ್ನು ಜಫ್ತುಮಾಡುತ್ತೇವೆ." ಎಂದು ಮ್ಯುನ್ಸಿಪಲ್ ಅಧಿಕಾರಿಗಳು ಪ್ರಜೆಗಳಿಗೆ ನೋಟೀಸ್ ಕೊಟ್ಟರು. ಪ್ರಜಾಪ್ರಮುಖರು ಮನೆಮನೆಗೂಹೋಗಿ ಮ್ಯುನ್ಸಿಪಲ್ ಬೆದರಿಕೆಗೆ ಬಗ್ಗಿ ಹೋಗಬೇಡಿರೆಂದು ಬೋಧಿಸುತ್ತಿದ್ದಾರೆ. ಈಗ ಅನೇಕ ಕೊಳಾಯಿಗಳಲ್ಲಿ ನೀರನ್ನು ಮ್ಯುನ್ಸಿಪಾಲಿಟಿಯವರು ನಿಲ್ಲಿಸಿಬಿಟ್ಟಿದ್ದಾರೆ.

ಸೊಗಸಾದ ಉಡುಪುಗಳನ್ನು ಧರಿಸಿದ ಒಬ್ಬ ಚದುರನಾದ ಹಿಂದುವು ಮದ್ರಾಸಿನಲ್ಲಿ ಒಂದು ಮೋಟಾರನ್ನು 3 ಗಂಟೆಗಳ ಕಾಲಕ್ಕೆ ಬಾಡಿಗೆಗೆ ತೆಗೆದುಕೊಂಡು ಟಾಕ್ಸಿ ಕಂಪೆನಿಗೆ ಹೋಗಿ, ಅಲ್ಲಿಂದಲೇ ಟೆಲಿಫೋನಿನ ಮೂಲಕ ಜವಳಿವ್ಯಾಪಾರಿಗಳಾದ ಪರಮಾನಂದದಾಸ್ ಜೋಟಾದಾಸ್ ಕಂಪೆನಿಯವರಿಗೆ "4 ಬನಾರಸ್ ಸೀರೆಗಳು ನನಗೆ ಬೇಕಾಗಿವೆ. ಕಳುಹಿಸಿಕೊಟ್ಟರೆ ನೋಡಿ ಬೇಕಾದುದನ್ನು ಕೊಳ್ಳುತ್ತೇನೆ" ಎಂದು ತಿಳಿಯಿಸಿದನು. ಬಳಿಕ ಸ್ವಲ್ಪಹೊತ್ತಿನ ಮೇಲೆ ಮೋಟಾರಿನ ಮೇಲೆ ರಿಪ್ಪನ್ ಭವನಕ್ಕೆ ಹೋಗಿ, ಸಾರಥಿಯಕೈಗೆ 1 ಚೀಟಿಯನ್ನು ಬರೆದು ಪರಮಾನಂದದಾಸ್ ಕಂಪೆನಿಗೆ ಕೊಟ್ಟು ಕೆಲವು ಸೀರೆಗಳನ್ನು ತೆಗೆಯಿಸಿಕೊಂಡು ಬರುವಂತೆ ಹೇಳಿ ಕಳುಹಿಸಿದನು. ಆತನು ಹೋಗಿ ಕಂಪೆನಿಗೆ ಚೀಟಿಯನ್ನು ಕೊಟ್ಟನು. ಕಂಪೆನಿಯವರು ಉತ್ತಮವಾದ ಬನಾರಸ್ ಸೀರೆಗಳನ್ನು ತಮ್ಮ ಇಬ್ಬರು ಗುಮಾಸ್ತರಹಸ್ತ ಕೊಟ್ಟು ಮೋಟಾರ್ ಸಾರಥಿಯ ಜತೆಯಲ್ಲಿ ಕಳುಹಿಸಿಕೊಟ್ಟರು. ಅವರು ಮೂವರೂ ಮೋಟಾರಿನಲ್ಲಿ ಕುಳಿತು ರಿಪ್ಪನ್ ಭವನಕ್ಕೆ ಬಂದರು. ಒಳಗಿದ್ದ ಮೋಸಗಾರ ಹಿಂದುವು ಅವುಗಳಲ್ಲಿ 2000 ರೂ. ಬೆಲೆಯ 4 ಸೀರೆಗಳನ್ನು ತೆಗೆದುಕೊಂಡು, ರಂಗೂನಿನಿಂದ ಬಂದಿರುವ ತನ್ನ ಯಜಮಾನ್ ಯೂರೋಪಿಯನ್ ದೊಡ್ಡಮನುಷ್ಯನಿಗೆ ತೋರಿಸಿ ತರುತ್ತೇನೆಂದು ಹೇಳಿ ಒಳಕ್ಕೆ ಹೋದವನು ಭವನದ ಮೂಡಲ ಬಾಗಿಲಿಂದ ನಡೆದುಬಿಟ್ಟನು. ಮೋಟಾರ್ ಸಾರಥಿಯೂ ಕಂಪೆನಿ ಗುಮಾಸ್ತರೂ 10 ನಿಮಿಷದವರೆಗೆ ಕಾದಿದ್ದು ಸಾಕಾಗಿ ಒಳಗೆ ಹೋಗಿ ನೋಡಲು ಆಸಾಮಿಯೇ ಪರಾರಿಯಾಗಿದ್ದನು!

ಭರತಖಂಡದ ವೈದ್ಯಶಾಖೆಗಾಗಿ 30 ಮಂದಿ ಯೂರೋಪ್ಯ ವೈದ್ಯರನ್ನು ಹೊಸದಾಗಿ ನಿಯಮಿಸಿಕೊಳ್ಳುವ ಏರ್ಪಾಟನ್ನು ಸ್ಟೇಟ್ ಸೆಕ್ರೆಟರಿಯವರು ಮಾಡಿರುತ್ತಾರೆ. ಅವರ ಸಂಬಳಸಾರಿಗೆ ಪೆನ್ಷನ್ನು ಮೊದಲಾದುವುಗಳ ವೆಚ್ಚವು ಬಹಳವಾಗುತ್ತದೆ. ಬರುಬರುತ್ತ ದೇಶೀಯ ಜನರಿಗೇ ಉದ್ಯೋಗಸ್ಥಾನಗಳನ್ನು ಕೊಡುವ ದಾರಿಯನ್ನು ಬಿಟ್ಟು, ಸ್ವದೇಶದಲ್ಲಿ ಸಮರ್ಥರಾದ ಡಾಕ್ಟರುಗಳು ಎಷ್ಟೋ ಮಂದಿಗಳಿರುವಾಗ ಅವರುಗಳಿಗೆ ಉನ್ನತೋದ್ಯೋಗಗಳನ್ನು ಅಲ್ಪವ್ಯಯದಿಂದ ಕೊಟ್ಟು ಪ್ರೋತ್ಸಾಹಿಸುವುದನ್ನು ಬಿಟ್ಟು, ಹೀಗೆ ಪರದೇಶೀಯರ ಗುಂಪನ್ನು ಈಗಲೂ ಭರತಖಂಡಕ್ಕೆ ಇಳುಹಿಸುವ ಪ್ರಯತ್ನವನ್ನು ಕಂಡು ದೇಶೀಯರಲ್ಲಿ ಅಸಮಾಧಾನವುಂಟಾಗಿದೆ.

ಕಳೆದವಾರ ಮದ್ರಾಸಿನ ಗೋಖಲೆಭವನದಲ್ಲಿ ಮ|| ಸಿ. ರಾಮಲಿಂಗರಡ್ಡಿಯವರ ಅಧ್ಯಕ್ಷತೆಯಿಂದ ಒಂದು ಮಹಾಸಭೆಯು ದಕ್ಷಿಣಇಂಡ್ಯಾವೈದ್ಯಸಂಘದವರ ಪ್ರಯತ್ನದ ಮೂಲಕ ಜರುಗಿತು. ಅಧ್ಯಕ್ಷರ ಮತ್ತು ದಿ|| ಬ|| ಕೇಶವಪಿಳ್ಳೆ ಮೊದಲಾದವರ ಸಮಯೋಚಿತ ಭಾಷಣಗಳಾದ ಬಳಿಕ ಸ್ಟೇಟ್ ಸೆಕ್ರೆಟರಿಯವರ ಈ ನೂತನ ಪ್ರಯತ್ನದಲ್ಲಿ ಮದ್ರಾಸ್ ಮಹಾಜನರ ಅಸಂಮತಿಯನ್ನು ವ್ಯಕ್ತಪಡಿಸುವ ಮತ್ತು ಅದನ್ನು ಅವರು ರದ್ದುಪಡಿಸಿಕೊಳ್ಳುವಂತೆ ಮಾಡುವುದಕ್ಕೆ ಎಂಥ ಚರ್ಯೆಯನ್ನು ದೇಶೀಯರು ಅವಲಂಬಿಸಬೇಕೋ ಅದನ್ನು ಅನುಸರಿಸಬೇಕೆಂಬುವ ವಿಷಯಕವಾದ ನಿರ್ಧಾರವು ಮಾಡಲ್ಪಟ್ಟಿತು. ಸಭಾಧ್ಯಕ್ಷರು ಉಪನ್ಯಾಸಮಾಡುವಾಗ್ಗೆ—ಮೈಸೂರು ಸಂಸ್ಥಾನದ ವೈದ್ಯಶಾಖೆಯು ಭರತಖಂಡದ ಇತರ ಸ್ಥಲಗಳ ವೈದ್ಯಶಾಖೆಗಳಿಗೆಲ್ಲಾ ಅಗ್ರಸ್ಥಾನವನ್ನು ವಹಿಸಿದೆಯೆಂದೂ ಡಾ|| ಆರ್ಮುಗಂಮೊದಲಿಯಾರರು ಸೀನಿಯರ್ ಸರ್ಜನರಾದ ಬಳಿಕ ಇನ್ನಾವ ಯೂರೋಪ್ಯರೂ ಆ ಪದವಿಗೆ ತರಲ್ಪಡದೆ ದೇಶೀಯರೇ ನಿಯಮಿಸಲ್ಪಡುತ್ತಿರುವರೆಂದೂ ಉದಾಹರಣೆಯಾಗಿ ಹೇಳಿದರು.

ವಿದೇಶದ ವೃತ್ತಾಂತಗಳು

ಸಂಧಿ ಪರಿಷ್ಕಾರವಾದ ಕೂಡಲೇ ತುರ್ಕಿಯಲ್ಲಿ ತಮ್ಮ ರಾಯಭಾರಿಯನ್ನಾಗಿ ಸರ್ ಚಾರ್ಲ್ಸ್ ಟೌನ್‌ಷೆಂಡ್‌ರವರನ್ನು ಆಂಗ್ಲರು ನಿಯಮಿಸುವವರಾಗಿದ್ದಾರಂತೆ.

ಆಸ್ಟ್ರೇಲಿಯಾದಲ್ಲಿ ಕಾಲಕಾಲಕ್ಕೆ ಉತ್ತಮವಾದ ಮಳೆ ಬಿದ್ದುದರಿಂದ ಅಲ್ಲಿಯ ಹತ್ತಿಯ ಬೆಳಸು ಬಹಳ ಸಮೃದ್ಧವಾಗಿದೆ. ಹಿಂದೆ ಯಾವವರ್ಷವೂ ಇಂಥ ಬೆಳಸು ಬಂದಿರಲಿಲ್ಲವಂತೆ.

ಫ್ರಾನ್ಸಿನಲ್ಲಿ 70 ವರ್ಷದ ಮುದಿಕನೊಬ್ಬನು ಒಂದು ಗೂಳಿಯೊಡನೆ ಕುಸ್ತಿಮಾಡಲು ಪಂಥ ಕಟ್ಟಿದನು. ಆದರೆ ಗೂಳಿಯು ಆತನನ್ನು ಒಂದೇ ಏಟಿಗೆ ನುಗ್ಗಿ ಕೊಂಬಿನಿಂದ ಹೊಟ್ಟೆಯನ್ನು ಸೀಳಿ ಕೊಂದುಬಿಟ್ಟಿತು.

ಜರ್ಮನಿಗೆ ಅಮೇರಿಕನ್ ಬ್ಯಾಂಕಿನವರು ಸಾಲವನ್ನು ಕೊಡುವರೆಂಬ ಸುದ್ದಿಯಿದ್ದಿತು. ಆದರೆ ಮಿತ್ರಮಂಡಲಿಯ ಮತ್ತು ಜರ್ಮನಿಯ ನಷ್ಟಪರಿಹಾರ ಸಮಸ್ಯೆಯು ಇತ್ಯರ್ಥವಾದಲ್ಲದೆ ನಾವು ಸಾಲ ಕೊಡುವುದಿಲ್ಲವೆಂದು ತಿಳಿಯಿಸಿರುವರು.

ಬ್ರಿಟಿಷ್ ಅಮೇರಿಕನ್ ಟುಬಾಕೊ ಕಂಪೆನಿಯವರಿಗೆ ಕಳೆದವರ್ಷ 4400000 ಪೌನುಗಳ ಲಾಭವು ಬಂದಿದೆ. ಸೇಕಡಾ 25 ರಂತೆ ಭಾಗಸ್ಥರಿಗೆ ಲಾಭವನ್ನು ಹಂಚಿದ್ದಾರೆ. ಹೊಗೆಸುತ್ತಿನ ವ್ಯಾಪಕತೆಯು ಪ್ರಪಂಚದಲ್ಲಿ ಎಷ್ಟು ವೃದ್ಧಿಯಾಗುತ್ತಿದೆಯೆಂಬುದಕ್ಕೆ ಇದು ನಿದರ್ಶನವು.

ಜರ್ಮನಿಯಮೇಲೆ ನಷ್ಟಪರಿಹಾರಕ್ಕಾಗಿ ರೂರ್ ಪ್ರಾಂತದ ಆಕ್ರಮಣ ಮಾಡಬೇಕೆಂದು ಮಾಡಿಕೊಂಡಿದ್ದ ಅಭಿಪ್ರಾಯವನ್ನು ಫ್ರಾನ್ಸಿನವರು ಬಿಟ್ಟು, ಇನ್ನೆರಡು ವರ್ಷಗಳ ಅವಧಿಯನ್ನು ಕೊಡಲು ನಿಶ್ಚಯಿಸಿರುವರೆಂದೂ, ಆದರೆ ಅದಕ್ಕೆ ಕೆಲವು ಹೊಣೆಗಳನ್ನು ಜರ್ಮನರು ಕೊಡಬೇಕಾಗಿರುವುದೆಂದೂ ಸುದ್ದಿ ಬಂದಿದೆ.

ರಷ್ಯಾದೇಶದಲ್ಲಿ ಈ ಶೀತಕಾಲದೊಳಗೆ ಕ್ಷಾಮಬಾಧೆಯು ಹೆಚ್ಚುವಂತಿದೆ. ಅಲ್ಲಿ ಬೆಳೆದ ಧಾನ್ಯವು ದೇಶಕ್ಕೆ ಸಾಲದು. 10 ಲಕ್ಷ ಟನ್ನುಗಳಷ್ಟು ದವಸವು ಹೊರಗಣಿಂದ ಬರಬೇಕಾಗಿದೆ. 80 ಲಕ್ಷ ಮಂದಿಗಳಿಗೆ ಅನ್ನಾಹಾರವನ್ನು ಒದಗಿಸಬೇಕಾಗಿದೆ. 42½ ಲಕ್ಷ ಮಂದಿಗಿಂತ ಹೆಚ್ಚಾದ ಜನರನ್ನು ನಾವು ಪೋಷಿಸಲಾರೆವೆಂದು ಅಲ್ಲಿ ಸ್ಥಾಪಿತವಾಗಿರುವ ಕ್ಷಾಮಪೀಡಿತ ಸಹಾಯಕ ಸಂಘದವರು ಹೇಳುತ್ತಿದ್ದಾರೆ.

ಲಾಸೇನು ಸಂಧಿಸಭೆಯು ಕ್ರಿಸ್ತಮಸ್ ಹಬ್ಬದ ಕಾಲದಲ್ಲಿಯೂ ನಿಲ್ಲಿಸಲ್ಪಡಲಿಲ್ಲ. ಜಲಸಂಧಿ ಸಂಬಂಧದಲ್ಲಿ ಮಿತ್ರಮಂಡಲಿಯ ಮತ್ತು ತುರ್ಕಿಯವರ ಅಭಿಪ್ರಾಯವು ಏಕೀಭವಿಸಿದಂತೆ ತೋರುತ್ತದೆ. ಜಲಸಂಧಿಯು ಅಂತರ್ಜಾತೀಯ ನಿಬಂಧನೆಗಳ ಮೇರೆಗೆ ಇದ್ದರೆ ಭದ್ರವಾಗಿರಲಾರದೆಂದೂ ನೂತನ ಸಂಧಿನಿಬಂಧನೆಯ ಪ್ರಕಾರ ಇರುವುದಾದರೆ ನಿರ್ಭಯವೆಂದೂ ಅಮೇರಿಕನ್ ಪ್ರತಿನಿಧಿಯು ಅಭಿಪ್ರಾಯಪಟ್ಟುದು ಮಿತ್ರಮಂಡಲಿಗೆ ದಿಗ್ಭ್ರಮೆಯನ್ನುಂಟುಮಾಡಿತು.

ಪ್ರಕಟನೆ

ಮೋಟಾರುಬುಸ್ಸುಗಳ ಹರಾಜು.

ನಮ್ಮ ಕಂಪೆನಿಗೆ ಸಂಬಂಧಪಟ್ಟ 20 ಸೀಟರ್ 25 ಮಾಡಲ್ ಗಾರ್ಡ್ನರ್ ಬುಸ್ಸು ಎರಡು; 14 ಸೀಟರ್ ಫೋರ್ಡು ಬುಸ್ಸು ಒಂದು ಇವಕ್ಕೆ ಸಂಬಂಧಪಟ್ಟ ಹಾಜರಿರುವ ಸಾಮಾನುಗಳ ಸಹಿತ 1923 ನೇ ಜನವರಿ 8 ನೇ ಸೋಮವಾರ ಮಧ್ಯಾಹ್ನ 2 ಗಂಟೆಗೆ ಕೊಳ್ಳೇಗಾಲದ ಕಂಪೆನಿ ಮುಂಭಾಗದಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ. ಮೇಲ್ಕಂಡ ಬುಸ್ಸುಗಳು 8 ತಿಂಗಳು ಸರ್ವೀಸು ಮಾಡಿರುತ್ತವೆ. ಬುಸ್ಸುಗಳನ್ನು ನೋಡಲಪೇಕ್ಷಿಸುವವರು ಶಿವನಸಮುದ್ರದಲ್ಲೂ, ಕೊಳ್ಳೇಗಾಲದಲ್ಲೂ ನೋಡಬಹುದು. ಹರಾಜು ನಿಬಂಧನೆಗಳನ್ನು ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು.

ಕಮರ್ಷಿಯಲ್ ಮೋಟಾರು ಕಂಪೆನಿ,

ಕೊಳ್ಳೇಗಾಲ.

ನೋಟೀಸು.

ಹಾಸನತಾಲ್ಲೂಕು ಗ್ರಾಮದಹೋಬಳಿ ಹಂಚಿಹಳ್ಳಿ ಗ್ರಾಮದಲ್ಲಿರುವ ಅಕ್ಕಸಾಲಿಗ ಈರಣ್ಣನವರ ಈರಾಚಾರಿಯು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ನನ್ನ ಬಲತಾಯಿ ಮಗ ಬಸವಾಚಾರಿಯೆಂಬುವನು ಪವುತಿಪಟ್ಟು ನಾಲ್ಕು ವರ್ಷವಾಯಿತು. ಇವನಿಗೆ ಐದು ವರ್ಷದ ಒಂದು ಗಂಡುಹುಡುಗ ಇರುತ್ತಾನೆ. ಈ ಹುಡುಗನ ಪೋಷಣೆಯನ್ನು ಇವನ ತಾಯಿಯಾದ ಈರಮ್ಮನು ನೆಟ್ಟಗೆಮಾಡದೆ ಮನೆಹೋಯಿಚ್ಚೆ ತಿರುಗುತ್ತಾ ಇರುತ್ತಾಳೆ. ಈ ಹುಡುಗನ ಮತ್ತು ತಾಯಿಯ ಜೀವನಕ್ಕೆ ಸಾಕಾದಷ್ಟು ದವಸ ಬರುತ್ತಿದ್ದಾಗ್ಯೂ ಋಣಬಾಧೆಯಿಲ್ಲದಿದ್ದಾಗ್ಯೂ ತಾಯಿಯಾದ ಈರಮ್ಮನು ಮತ್ತು ಇವಳತ್ತೆ ಪಾರ್ವತಮ್ಮ ಸಹ ಪುಂಡುಜನಗಳ ದುರ್ಬೋಧನೆಗಳಿಗೆ ಒಳಪಟ್ಟು ನಮ್ಮ ಪಿತರಾರ್ಜಿತವಾದ ಹಂಚಿಹಳ್ಳಿ ಮತ್ತು ಬಂಟರಹಳ್ಳಿ ಗ್ರಾಮಗಳಲ್ಲಿ ಇರತಕ್ಕ ಜಮೀನುಗಳನ್ನು ಮುಂದೆ ಹುಡುಗನ ಜೀವನಕ್ಕಿಲ್ಲದಂತೆಯೂ ಮತ್ತು ಮುಂದೆ ನನ್ನಹಕ್ಕಿಗೆ ಕುಂದಕ ಉಂಟುಮಾಡಬೇಕೆಂಬ ದುರಾಲೋಚನೆಯಿಂದಲೂ ಆಧಾರವೋ ಭೋಗ್ಯವೋ ಅಥವ ಕ್ರಯವೋ ಮಾಡಬೇಕೆಂದು ಪ್ರಯತ್ನಪಟ್ಟಿರುತ್ತಾರೆ. ಹಾಗೇನಾದರು ಜನಗಳು ಮೇಲ್ಕಂಡ ಹೆಂಗಸರಿಂದ ಪಿತ್ರಾರ್ಜಿತ ಸ್ವತ್ತುಗಳನ್ನು ಬರಸಿಕೊಂಡಲ್ಲಿ ಅಂಥ ಪರಬಾರಿಯು ಎಂದಿಗೂ ಊರ್ಜಿತವಾಗುವದಿಲ್ಲವೆಂಬದಾಗಿ ಇದರಿಂದ ಪ್ರಸಿದ್ಧಪಡಿಸಿದೇನೆ.

ಹಂಚಿಹಳ್ಳಿಗ್ರಾಮದ ಈರಾಚಾರಿ ರುಜು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ದೇವನಹಳ್ಳಿ, ತಾ|| ವಡಿಗೇನಹಳ್ಳಿ.

ಈ ಊರಿನಲ್ಲಿ ಸ್ಥಾಪಿತವಾಗಿರುವ ಪ್ರಜಾಮಿತ್ರಮಂಡಲಿ ಯಾ ಎಂಗ್ ಮೆನ್ಸ್ ಅಸೋಸಿಯೇಷನ್ ಸಂಘದ ಸೆಕ್ರೆಟರಿಯವರಾದ ಮ|| ಎನ್. ರುದ್ರಯ್ಯನವರ ಪತ್ನಿಯವರು ತಾ|| 25-12-22 ನೇ ಸೋಮವಾರ ಪರಲೋಕವನ್ನೈದಿದಕ್ಕಾಗಿ ನಾವುಗಳು ತುಂಬಾ ವಿಷಾದಪಡುತ್ತೇವೆ. ಅವರ ಆತ್ಮಕ್ಕೆ ಶಾಂತಿಯನ್ನು ಉಂಟುಮಾಡಬೇಕೆಂದು ಸಂಘದವರಾದ ನಾವುಗಳೆಲ್ಲರೂ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ. ಸಂಘದ ಮೆಂಬರುಗಳು.

ತಿಪಟೂರು.

ವರ್ತಕರಲ್ಲಿ ಮುಖ್ಯಸ್ಥರಾದ ಮ|| ಡಿ. ಎಸ್. ಮಲ್ಲಪ್ಪನವರು ಗಯಾ ಕಾಂಗ್ರೆಸ್ಸಿಗೂ ಮ|| ರಾ|| ಗಳಾದ ಎಸ್. ಲಿಂಗಪ್ಪನವರೂ, ಪಿ. ಎಸ್. ಅಡವಪ್ಪನವರೂ ಜಿ. ಕೆ. ಮಲ್ಲಪ್ಪನವರೂ ಕಳೆದ ತಾ|| 24 ರಲ್ಲಿ ಮೋಟಾರಿನಲ್ಲಿ ಹಳೆಬೀಡು ಗೇರುಸೊಪ್ಪಾ ಫಾಲ್ಸ್ ಮತ್ತು ಜೋಗ್ ಇವುಗಳ ವಿದ್ಯಮಾನಗಳನ್ನು ನೋಡಿಕೊಂಡು ಬರಲು ಪ್ರಯಾಣಬೆಳಸಿರುತ್ತಾರೆ. ಕಳೆದ ತಾ|| 25 ರಲ್ಲಿ ಮ್ಯುನಿಸಿಪಲ್ ಮೀಟಿಂಗಿಗೆ ಮೆಂಬರುಗಳು ಹೋಗದೆ ಸ್ಟ್ರೈಕ್ ಮಾಡಿರುತ್ತಾರೆ. ಕಾರಣವೇನೆಂಬುದು ಗೊತ್ತಾಗಲಿಲ್ಲ. ಈರೀತಿ ಮ್ಯುನಿಸಿಪಲ್ ಮೀಟಿಂಗಿಗೆ ಮೆಂಬರುಗಳು ಹೋಗದೆ ನಿಂತ ವಿಷಯವನ್ನು ವಾಚಕರಿಗೆ ಮುಂದೆ ತಿಳಿಸುತ್ತೇನೆ. ಸ್ಥಳವಾಸಿ.

ಪ್ರಕಟನೆ.

ಕಡೂರು ಡಿ|| ತಾ|| ಸಕ್ಕರಾಯಪಟ್ಟಣದ ಶ್ರೀಗುರು ಹಾಲುಸ್ವಾಮಿಗಳವರ ಮಠದ (ಉತ್ತರಾಧಿಕಾರ) ಪಟ್ಟಾಭಿಷೇಕದ ಆಲೋಚನಾ ಸಮ್ಮೇಲನ ತಾ|| 1-1-1923 ನೆ ಸೋಮವಾರ ದಿವಿ 3 ಗಂಟೆಗೆ ಸಕ್ಕರಾಯಪಟ್ಟಣದ ಮೂಲಸ್ಥಾನವಾದ ಮಠದ ನೂತನ ಕಟ್ಟಡವಾಗುವದಕ್ಕಿರುವ ಶ್ರೀಗದ್ದುಗೆ ಮುಂಭಾಗದ ಸ್ಥಳದಮೇಲೆ ರಚಿಸಿರುವ (ಚಪ್ಪರ) ದಲ್ಲಿಯೇ ಸೇರಲು ಸ್ಥಳದ ಮಹಾಜನ ಶಿಷ್ಯಮಂಡಲಿಯವರು ಏರ್ಪಡಿಸಿರುವ ಕಾರಣ ಈ ಮಠಕ್ಕೆ ಸೇರಿದ ಎಲ್ಲಾ ಶಿಷ್ಯಮಂಡಲಿಯವರು ದಯವಿಟ್ಟು ಇದೇ ಆಮಂತ್ರಣಪತ್ರಿಕೆಯಾಗಿ ಭಾವಿಸಿ ದಯಮಾಡಿಸುವದರ ಮೂಲಕ ಈಬಗ್ಗೆ ತಮ್ಮ ಯೋಗ್ಯಸಲಹೆಗಳೊಂದಿಗೆ ಕಾರ್ಯಭಾಗ ಮುಂದುವರಿಸಬೇಕಾಗಿಯೂ (ಶ್ರೀ ದಾರುಕಶಾಖಾದ) ಸದ್ವಂಶೀಯ ವಿದ್ಯಾವಿಚಾರಾದಿ ಗುರುಸ್ವಾಧಿಕಾರ ನಿರ್ವಹಣೆಗಳಿಗೆ ಅರ್ಹತೆಯುಳ್ಳ ಮಹೇಶ್ವರವರ್ಗದ ಪ್ರಾಪ್ತವಯಸ್ಸಿನ ಬ್ರಹ್ಮಚರ್ಯಾಶ್ರಮಿಗಳವರೂ ಶಿಷ್ಯಮಂಡಲಿಯವರಲ್ಲಿ ಇದ್ದರೆ ತತ್ಕಾಲಕ್ಕೆ ಕರದುಕೊಂಡು ಬರಬೇಕಾಗಿ ಪ್ರಾರ್ಥನೆಯು. ಸೇರತಕ್ಕವರ ಉಪಚಾರಗಳಿಗೆ ಸರ್ವವ್ಯವಸ್ಥೆ ಇಟ್ಟಿದೆ.

ಸಕ್ಕರಾಯಪಟ್ಟಣದ ಮಠಸ್ಥರು ವಗೈರೆ ಭಕ್ತಾದಿಗಳು
ಮತ್ತು ಎಂ. ಬಸವಾರಾಧ್ಯ ಮತಿಘಟ್ಟಾ,
ಪಿ. ಆರ್. ರುದ್ರಾರಾಧ್ಯ ಕೊರಟಗೆರೆ ವಗೈರೆ ಶಿಷ್ಯಮಂಡಲಿಯವರು.

ಪುರಾಣಪ್ರಾರಂಭ.

ಸಂಸ್ಥಾನ ವಂಟಮೂರಿ ಗ್ರಾಮದ ಸಾನಿಧ್ಯದಲ್ಲಿ ಶ್ರೀಮನ್ನಿರಂಜನ ನಿರಾಭಾರಿ ವೀರಶೈವ ಪರಂಜ್ಯೋತಿ ಸ್ವರೂಪಿಗಳಾದ ಕಲಬುರ್ಗಿ ಗುರುಬಸವರಾಜದೇವರು ಬೃಹನ್ಮಠ ಇವರ ಶಿಷ್ಯಪರಂಪರ ಜಡಿಸ್ವಾಮಿ ಮಹಾರಾಜ ಇವರ ವಾಸ್ತವ್ಯವಿದ್ದು ಅಲ್ಲಿ ಪ್ರಾಚೀನ ಶ್ರೀಸಿದ್ಧೇಶ್ವರ ದೇವಸ್ಥಾನವಿರುವದರಿಂದಲೂ, ಘಟಪ್ರಭಾನದಿಯು ಉತ್ತರವಾಹಿನಿಯಾಗಿ ಹರಿಯುವದರಿಂದಲೂ, ತಪೋಭೂಮಿಗೆ ಯೋಗ್ಯವಾದ ಆಶ್ರಮದಲ್ಲಿ ಆಮ್ರ, ಬಿಲ್ವ, ವಟವೃಕ್ಷಾದಿಗಳು ಅತಿಶಯವಿರುವದರಿಂದಲೂ, ಆ ಸ್ಥಾನವು ಮನೋಹರವಾಗಿರುವದು. ಅಲ್ಲಿ ಶ್ರೀಗುರುಗಳವರ ಆಜ್ಞಾಪ್ರಕಾರ ಬರುವ ಮಾಘ ಶುದ್ಧ ಪ್ರತಿಪದೆ ಗುರುವಾರ ಶ್ರವಣ ಶುಭನಕ್ಷತ್ರ ದುಂದುಭಿನಾಮ ಸಂವತ್ಸರ ಶಕೆ 1844 ದಿವಸ ಶ್ರೀ ಬಸವೇಶ್ವರ ಮಹಾಪುರಾಣ ಪ್ರಾರಂಭಮಾಡುವದು ಗೊತ್ತುಪಡಿಸಿರುತ್ತದೆ. ಈ ಪುರಾಣಶ್ರವಣ, ಪೂಜನ, ಭಜನ ಮುಂತಾದ ಶಿವೋತ್ಸವ ಸಮಾರಂಭಕ್ಕೆ ಸಮಸ್ತ ಭಕ್ತಮಾಹೇಶ್ವರರು ತಮ್ಮ ಪರಿವಾರದೊಡನೆ ಬಂದು ಉತ್ಸವ ಸಾಂಗಗೊಳಿಸಿ ಶ್ರೀಗುರುಗಳ ದರ್ಶನ ಪ್ರಸಾದಾಶೀರ್ವಾದ ಗ್ರಹಿಸಬೇಕೆಂದೂ, ಈ ಯೋಗದ ಅಮೌಲ್ಯಸಂಧಿಯನ್ನು ಕಳೆದುಕೊಳ್ಳದೆ ಪುಣ್ಯಸಂಚಯ ಮಾಡಿಕೊಳ್ಳಿರೆಂದು ನಮ್ಮಪ್ರಾರ್ಥನೆಯದೆ. ಈ ಸಮಾರಂಭದಲ್ಲಿ ಶಿವದೀಕ್ಷೆ, ಅಯ್ಯಾಚಾರ, ಲಗ್ನ ಲಿಂಗಧಾರಣ ಮಾಡಿಕೊಳ್ಳತಕ್ಕ ಜನರೂ ಬರಬೇಕು.

ಸೂಚನೆ:—1. ರೇಲ್ವೆಯಿಂದ ಬರುವರು ಬೆಳಗಾಂವ ಜಿಲ್ಲಾ ಪಾಚ್ಛಾಪೂರ ಸ್ಟೇಶನ್ನಕ್ಕೆ ಇಳಿಯಬೇಕು. ಅಲ್ಲಿಂದ ವಂಟಮೂರಿಯು ಏಳು ಮೈಲು ಇದ್ದು ಗಾಡಿ ಮುಂತಾದವುಗಳು ಸಿಗುವವು.

2. ಬರುವವರು ತಮ್ಮ ಸಂಗಡ ಜರೂರಿಪೂರ್ತ ಹಾಸಿಕೆಹೊದಿಕೆ, ತಂಬಿಗೆ ಥಾಲಿ ಮುಂತಾದವುಗಳನ್ನು ತಂದರೆ ವಿಶೇಷ ಸುಲಭವಾಗುವದು.

ಸಮಸ್ತ ಭಕ್ತಮಂಡಳಿ,
ಸಿದ್ಧಾಶ್ರಮ ವಂಟಮೂರಿ ಸಂಸ್ಥಾನ.

ಹೆಗ್ಗಡದೇವನಕೋಟೆ ತಾಲ್ಲೂಕು ನಿಸನಬೆಳತೂರು.

ಈ ವರ್ಷ ನಮ್ಮ ತಾಲ್ಲೂಕಿನಲ್ಲಿ ಮಳೆ ಬೆಳೆ ತಕ್ಕಮಟ್ಟಿಗೆ ಆಗಿದೆ. ಈ ನಿಸನಬೆಳತೂರು ಗ್ರಾಮದಲ್ಲಿ ಬಸವೇಶ್ವರಸ್ವಾಮಿ ದೇವಸ್ಥಾನವೂ ಸ್ಕೂಲ್ ಮನೆಯೂ ಶಿಥಿಲವಾಗಿವೆ. ಲೇಟ್ ಗುರುಕಾರ್ ಬಸವಪ್ಪನವರ ಕಾಲದಲ್ಲಿ ಬಸವೇಶ್ವರಸ್ವಾಮಿ ಜಾತ್ರೆ ವಗೈರೆ ಗ್ರಾಮದ ಕೆಲಸಗಳು ಸಲೀಸಾಗಿ ನಡೆಯುತ್ತಾ ಗ್ರಾಮವು ಬಹಳ ಅಭಿವೃದ್ಧಿಸ್ಥಿತಿಯಲ್ಲಿತ್ತು. ಆದರೆ ಈಗ ಗ್ರಾಮಮುಖ್ಯರಾದ ಗುರುಕಾರ್ ದೇವಣ್ಣನವರು, ಪಟೇಲ್ ನಾಗೇಗೌಡರು, ಲಿಂಗೇಗೌಡರು, ದಾಸಶೆಟ್ಟರು ಪಿ. ಸುಬ್ಬೇಗೌಡರು, ಪುರದ ಮಾದಪ್ಪನವರು, ದೇವಸ್ಥಾನದ ವಿಷಯದಲ್ಲೂ ಸ್ಕೂಲ್ ಕಟ್ಟಡದ ವಿಷಯದಲ್ಲೂ ಗಮನಕ್ಕೆ ತಂದುಕೊಳ್ಳದೆ ಇರತಕ್ಕದ್ದು ಬಹಳ ವಿಷಾದಕರವಾಗಿದೆ. ಇಲ್ಲಿನ ಎ. ವಿ. ಸ್ಕೂಲ್ ನೈಟ್ ಸ್ಕೂಲ್ ಸಹ ಮಾಸ್ಟರ ಮುತವರ್ಜಿಯಿಂದ ಅಭಿವೃದ್ಧಿಸ್ಥಿತಿಯಲ್ಲಿವೆ. ಸ್ಥಳಿಕ.

ಸಮಾಜ ಸುಧಾರಣೆ.

ಶ್ರೀ ಜಗದ್ಗುರು ಹಿಮವತ್ಕೇದಾರದ ಮಹಾ ಶ್ರೀಗಳವರ ಅಪ್ಪಣೆ ಪ್ರಕಾರ ಶಿವಕೀರ್ತನಾಮುಖದಿಂದ ಸಮಾಜ ಸುಧಾರಣೆಮಾಡಲು ಹೊರಟ ಮ|| ರಾ|| ಸಂಗಳಿ ಲಕ್ಷ್ಮಣಶಾಸ್ತ್ರಿಗಳವರು ಕೊಟ್ಟೂರು, ಹರಪನಹಳ್ಳಿ, ಹುವ್ವಿನಹಡಗಲಿ ಮೊದಲಾದ ಗ್ರಾಮಗಳಲ್ಲಿ ಕೀರ್ತನೆಗಳನ್ನು ಮಾಡುತ್ತಾ ಹಿರೇಹಡಗಲಿಗೆ ಆಗಮಿಸಿದ್ದರು. ಇಲ್ಲಿಯ ಪ್ರಮುಖರಾದ ಮ|| ರಾ|| ಪಾಟೀಲ ಶಿವರುದ್ರಗೌಡರು, ಪಟ್ಟೇದ ಚನ್ನಬಸಪ್ಪನವರು, ಶಬ್ದಾಮಣಿ ಕೊಟ್ರಯ್ಯನವರು, ಕರ್ಜಗಿ ಶಿವಪ್ಪಣ್ಣಾ, ರಾಣಿಬೆನ್ನೂರು ಗುರುಪಾದಯ್ಯನವರು, ಪುರಾಣಿಕಮಠದ ವಿರೂಪಾಕ್ಷಾರ್ಯ ಮುಂತಾದ ಮಂಡಳಿ ಸೇರಿ ಶ್ರೀ ರೇಣುಕಾ ಅನಸೂಯಾದಿ ಚರಿತ್ರಗಳನ್ನು ಹೇಳಿಸಿದರು. ಶಾಸ್ತ್ರಿಯವರು ಸಂಗೀತ ಸಾಹಿತ್ಯಗಳಿಂದಲೂ ಅನೇಕ ಲೌಕಿಕ ಉದಾಹರಣೆಗಳಿಂದಲೂ ಸಕಲ ಸ್ತ್ರೀ ಪುರುಷರಿಗೆ ಜ್ಞಾನಹುಟ್ಟುವಂತೆ ಪತಿವ್ರತಾಧರ್ಮ ಏಕಪತ್ನೀವ್ರತ ಮುಂತಾದ ವಿಷಯಗಳನ್ನು ಬಹು ಸರಸವಾಗಿ ಬೋಧಿಸಿದರು. ಮತ್ತು ಆಧುನಿಕ ಕೆಲವು ಸ್ತ್ರೀಯರಲ್ಲಿ ಇರತಕ್ಕ ಪದ್ಧತಿಗಳನ್ನೂ ದುರ್ನಡತೆಗಳನ್ನೂ ಒಡೆದು ತೋರಿಸಿಕೊಟ್ಟು ಹೇಯಗೊಳಿಸಿ ಮುಂದೆ ನಡೆಯತಕ್ಕ ಸನ್ಮಾರ್ಗ, ಪತಿಭಕ್ತಿ, ಪತಿಶುಶ್ರೂಷೆ ಸದಾಚರಣೆಗಳನ್ನು ಚೆನ್ನಾಗಿ ತಿಳಿಸಿದರು. ದೇಶದಲ್ಲಿ ಇಂಥಾ ಸುಧಾರಣಾವಾಗ್ಮಿಗಳು (ಇನ್ನು ಇದ ಕೀರ್ತನಕಾರರು ಸಹ) ಎಲ್ಲಾ ಕಡೆಗೂ ಸಂಚರಿಸಿ ಸದ್ಬೋಧಗಳನ್ನು ಮಾಡುವುದರಿಂದ ಅಶಿಕ್ಷಿತ ಸ್ತ್ರೀ ಪುರುಷವರ್ಗವು ಅಲ್ಪಾವಧಿಯಲ್ಲಿಯೇ ಸುಧಾರಣೆಗೊಳ್ಳಲು ಸಂದೇಹವಿಲ್ಲ. "ಸಮಾಜ ಸುಧಾರಣೆ" ಒಂದೇ ವಿಧವಾಗಿರದೆ ನಾನಾ ವಿಧದಿಂದ ಆಗತಕ್ಕದ್ದಿದೆ. ಆದುದರಿಂದ ದೇಶಬಾಂಧವರು ಶಾಸ್ತ್ರಿಗಳವರಿಗೆ ಉತ್ತೇಜನಕೊಟ್ಟು ಶಿವಕೀರ್ತನೆಗಳನ್ನು ಮಾಡಿಸಿ ಇದೊಂದು ವಿಧವಾಗಿ ಸಮಾಜಸುಧಾರಣೆಯಾಗುವಂತೆ ಪ್ರಯತ್ನ ಪಡತಕ್ಕದ್ದು ಅತ್ಯಂತ ಭೂಷಣವಲ್ಲವೆ? ಸಮಾಜಾಭಿಮಾನಿ.

ಶಿರಾಳಕೊಪ್ಪ.

ಇಲ್ಲಿಗೆ ಮುನಿಸಿಪಾಲಿಟಿಯಾಗಿ ಐದುವರ್ಷಗಳಾಗುತ್ತಾ ಬಂದಾಗ್ಯೂ ಊರು ಅಭಿವೃದ್ಧಿ ಹೊಂದುವದಕ್ಕೆ ಬದಲಾಗಿ ಕ್ಷೀಣದಶೆಯನ್ನು ಹೊಂದುತ್ತಾ ಇದೆ. ವ್ಯಾಪಾರವು ಬಹಳ ಕಡಿಮೆಯಾಗಿದೆ. ಇಲ್ಲಿಯ ಮ್ಯುನಿಸಿಪಾಲಿಟಿಯವರು ಹೊಸದಾಗಿ ಸರಕುಗಳ ಮೇಲೆ ಹಾಕಿದ ಸುಂಕದಿಂದ ಬಹಳ ಮಟ್ಟಿಗೆ ವ್ಯಾಪಾರ ಕಡಿಮೆಯಾಗಿದೆ. ಮ್ಯುನಿಸಿಪಾಲಿಟಿ ಮೆಂಬರುಗಳು ಪ್ರಜೆಗಳು ತಮ್ಮನ್ನು ಏಕೆ ಚುನಾಯಿಸಿದರೆಂಬುದನ್ನು ಸಹ ಸರಿಯಾಗಿ ತಿಳಿದವರಾಗಿಲ್ಲ. ಪ್ರತಿನಿತ್ಯವೂ ಊರಿನ ಬೀದಿಗಳಲ್ಲಿ ಕಸಗುಡಿಸುವುದಿಲ್ಲವಾದ್ದರಿಂದ ಊರೆಲ್ಲಾ ಬಹಳ ಗಲೀಜಾಗಿ ಮಳೆಗಾಲದಲ್ಲಿ ಮುಖ್ಯಮುಖ್ಯ ರಸ್ತೆಗಳಲ್ಲಿ ಜನರು ಓಡಾಡುವುದು ಗಾಡಿ ತಿರುಗಾಡುವುದು ಬಹಳ ಕಷ್ಟವಾಗಿದೆ. ಇಷ್ಟುದಿವಸ ಕಳೆದಾಗ್ಯೂ ಮ್ಯುನ್ಸಿಪಲ್ ಆಫೀಸು ಎಲ್ಲಿದೆ ಎಂಬುದು ಸಹ ಬಹಳ ಜನರಿಗೆ ತಿಳಿದಿಲ್ಲ. ಅದನ್ನು ಪ್ರತಿದಿನ ತೆಗೆಯುವುದಿಲ್ಲ. ಯಾರಾದರೂ ಮ್ಯುನ್ಸಿಪಲ್ ಆಫೀಸಿಗೆ ತಮ್ಮ ಅರ್ಜಿಗಳನ್ನು ಕೊಡಲಿಕ್ಕೆ ಬರುವಂತಿಲ್ಲ. ಈಗ ಏಳೆಂಟು ವರ್ಷದ ಮನೆಕಂದಾಯದ ಬಾಕಿ ಬಹಳ ನಿಂತಾಗ್ಯೂ ಸರಿಯಾಗಿ ವಸೂಲಾಗುತ್ತಾ ಇಲ್ಲ. ಈ ಊರು ಸಣ್ಣದಾಗಿದ್ದಾಗ್ಯೂ ಮ್ಯುನ್ಸಿಪಾಲಿಟಿ ಸಿಬ್ಬಂದಿ ಮಾತ್ರ ಜಾಸ್ತಿಯಾಗಿ ಕ್ರಮವಾಗಿ ಸದರಿಯವರಿಗೆ ಸರಿಯಾಗಿ ಕೆಲಸಮಾಡದೆ ಇದ್ದಾಗ್ಯೂ ಸಂಬಳವು ಮಾತ್ರ ಅಡಚಣೆಯಿಲ್ಲದಂತೆ ಸಲ್ಲುತ್ತದೆ. ಇಲ್ಲಿಯ ಸ್ವೀಪರುಗಳಿಗೆ ಮುತ್ಸದ್ದಿಯವರ ಮನೆ ಕಟ್ಟಿಗೆ ಹೊಡೆಯುವುದು, ಗದ್ದೆಕೆಲಸ ಮಾಡುವುದು, ಅವರು ಹೇಳಿದಂತೆ ಮನೆಕೆಲಸಮಾಡುವುದು ಮುಖ್ಯವಾದ ಕೆಲಸವಾಗಿದೆ. ಇಲ್ಲಿಯ ಮೆಂಬರುಗಳಿಗೆ ತಮಗೆ ಕ್ಲಾರ್ಕ್ ಮತ್ತು ಮುತ್ಸದ್ದಿಗಳ ಮೇಲೆ ತಮ್ಮ ಅಧಿಕಾರವು ಏನೂ ಇಲ್ಲವೆಂದು ತಿಳಿದುಕೊಂಡಿದ್ದಾರೆಂತ ಊಹಿಸಬಹುದು, ಮತ್ತು ಹಾಗೆಯೇ ಇದೆ. ಸುಂಕದ ವಸೂಲಿಕ್ರಮ ಚೆನ್ನಾಗಿಲ್ಲದೆ ಎಷ್ಟೋ ದುಡ್ಡು ಅನಾವ್ಯಯವಾಗುತ್ತಲಿದೆ. ಇದಕ್ಕೆ ಮ್ಯುನ್ಸಿಪಾಲಿಟಿಯವರು ಉದಾಸೀನರಾಗಿರುವುದೇ ಕಾರಣವಾಗಿದೆ. ಜನರು ತಮ್ಮ ಓಟುಗಳನ್ನು ಕೊಟ್ಟು ನಮ್ಮನ್ನು ಚುನಾಯಿಸುವುದು ಏತಕ್ಕೆ ಎಂಬುದು ಸಹ ಇವರು ಯೋಚನೆಮಾಡುವಂತಿಲ್ಲ. ಇವರನ್ನು ಚುನಾಯಿಸಿರುವುದು ತಮ್ಮಗಳ ಹಿತಕ್ಕೋಸ್ಕರವಲ್ಲದೆ ಸುಮ್ಮನೆ ಚೆನ್ನಾಗಿ ಡ್ರೆಸ್ಸು ಮಾಡಿಕೊಂಡು ಕುರ್ಚಿಯಮೇಲೆ ಕೂಡುವುದಕ್ಕೂ ಅಧಿಕಾರಿಗಳು ಏನು ಹೇಳಿದಾಗ್ಗೂ ಪ್ರಜೆಗಳ ಹಿತಚಿಂತನೆ ಮಾಡದೆ ತಲೆಹಾಕುವುದಕ್ಕೂ ಅಲ್ಲ. ಯಾವಾಗಲೂ ಇವರು ಪ್ರಜಾಸೇವೆ ಮಾಡುವುದು ಧರ್ಮವಾಗಿದೆ. ಅದನ್ನು ಯೋಚನೆಮಾಡದೆ ಉದಾಸೀನರಾಗಿದ್ದರೆ ನೀವು ಪ್ರಜಾಪಾಲಕರೆನ್ನಿಸಿಕೊಳ್ಳುವುದಿಲ್ಲ. ಇದೂ ಅಲ್ಲದೆ ಇಲ್ಲಿ ಅನೇಕ ತೊಂದರೆಗಳಿವೆ. ಅವುಗಳನ್ನೆಲ್ಲಾ ಜಾಗ್ರತೆಯಾಗಿ ಸರಿಪಡಿಸಬೇಕಾಗಿ ಇಲ್ಲಿಯವರು ಬೇಡುತ್ತಾರೆ.

ಪುರವಾಸಿ.

ಬಸವೇಶ್ವರನ ಜನನಕಾಲ.

ಶ್ರೀ ಬಸವೇಶ್ವರನ ಜಯಂತಿಯನ್ನು ಎಲ್ಲರೂ ವೈಶಾಖ ಶುದ್ಧದಲ್ಲಿ ಆಚರಿಸುವುದು ಪ್ರಸಿದ್ಧವಿರುತ್ತದಷ್ಟೆ. ಆದರೆ ಈ ವಿಷಯದಲ್ಲಿ ಅನೇಕ ಭಿನ್ನಾಭಿಪ್ರಾಯಗಳಿರುವುವು. ಅದು ಹೇಗೆಂದರೆ—ಕ್ರಿಸ್ತ 9ನೆ ಶತಕದ ಕಂಚಿಪೀಠದ 38ನೆ ಆಚಾರ್ಯನಾದ ಶಂಕರಾಚಾರ್ಯನಿಂದ ಬೇರೆಯಾದ, ಕ್ರಿಸ್ತಪೂರ್ವ 10ನೇ ಶತಮಾನದ ವೇದಾಂತಸೂತ್ರಕರ್ತನಾದ ಬಾದರಾಯಣನೆಂಬ ವ್ಯಾಸನಿಂದ ಬೇರೆಯಾದ, ಕ್ರಿಸ್ತಪೂರ್ವ 32ನೆ ಶತಮಾನದ ಮಹಾಭಾರತಕರ್ತನಾದ ಕೃಷ್ಣದ್ವೈಪಾಯನನೆಂಬ ವೇದವ್ಯಾಸನೇ 18 ಪುರಾಣಗಳನ್ನು ರಚಿಸಿದನೆಂಬುದು ಸಂದೇಹವಾಗಿರುವಲ್ಲಿ, ಶ್ರೀಬಸವೇಶ್ವರನಿಗಿಂತಲೂ ಅಧುನಿಕನಾದ ರಾಮನಾಥನೆಂಬ ವ್ಯಾಸನು ಸಂಸ್ಕೃತದಲ್ಲಿ ಬಸವಪುರಾಣವನ್ನು ರಚಿಸಿದನೆಂದು ಹೇಳುವುದಕ್ಕೆ ಆಸ್ಪದವಿದ್ದರೂ, ಆ ರೀತಿ ಇರದೆ ಆ ಗ್ರಂಥದ 42ನೆ ಅಧ್ಯಾಯದ ಮೇಲಿಂದ ಕೃಷ್ಣಾಗೋದಾವರೀ ಮಧ್ಯಸ್ಥ ಹೇಲಾಪುರ ಗ್ರಾಮದಲ್ಲಿ ತಂದು ಕೂರಿಸಿದ ನರಸಿಂಹ ಅಂದು ರಚಿಸಲ್ಪಟ್ಟಿತೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದೂ ಅಲ್ಲದೆ ವೃಷಭೇಶ್ವರನು ಜ್ಯೇಷ್ಠ ಶು|| 15 ರಲ್ಲಿ ಭೂಲೋಕಕ್ಕೆ ಬಂದನೆಂಬುದು ಈಗಲೂ ಮಳೆ ಬೆಳೆಯ ಸುಭಿಕ್ಷ ಸೂಚನೆಯ ಕಾರಹುಣ್ಣಿವೆಯೇ ಆಗಿ ಪ್ರಸಿದ್ಧವಾಗಿರುವುದು. ಅವನೇ ಅಕ್ಷೀಜದಲ್ಲಿ ಅವತರಿಸಿದನೆಂಬುದು ಸಹಜವಾಗಿ ಸಿದ್ಧವಾಗುತ್ತದೆ. ಹೇಗಿದ್ದರೂ ಕಾಲ್ಪನಿಕವ್ಯಾಸನು ವೈಶಾಖ ಶುದ್ಧ ರೋಹಿಣಿಯಲ್ಲಿ ಶ್ರೀ ಬಸವೇಶ್ವರನು ಹುಟ್ಟಿದನೆಂದು ಬರೆದಿರುವನು. ಇದನ್ನು ಭಿನ್ನಿಸಿ ಆಧುನಿಕ ಬೆಂಗಳೂರು ಮಹಂತಯ್ಯನು ಮಾಘ ಬ|| 14 ಸೋಮವಾರವೆಂದು ಬರೆದಿರುವನು. ಆದರೆ ಸಂಸ್ಕೃತ ಗ್ರಂಥಾಧಾರದಿಂದ ಬಸವಜಯಂತ್ಯುತ್ಸವವು ವೈಶಾಖದಲ್ಲಿ ಎಲ್ಲರೂ ಆಚರಿಸುತ್ತಾರೆ. ಆದರೆ ಸಿಂಗಿರಾಜನು ಬಸವೇಶ್ವರನ ಸಮಕಾಲೀನನಾದರೂ ಆಶ್ವೀಜಶುದ್ಧ 14 ಆರ್ದ್ರೆಯೆಂದು ತಪ್ಪಾಗಿ ಬರೆದಿರುವನು. ಏಕೆಂದರೆ ಆ ಮಾಸಗಳ ಆ ಆ ಹುಣ್ಣಿವೆಗಳ ದಿನಗಳಲ್ಲಿ ಆ ಮಾಸಿಕನಾಮನಕ್ಷತ್ರಗಳು ಜ್ಯೋತಿಶ್ಶಾಸ್ತ್ರರೀತ್ಯಾ ಪ್ರಸಿದ್ಧವಿರುವುದರಿಂದ ಈ ಶುದ್ಧ 14 ನೆ ದಿನ ರೇವತೀ ನಕ್ಷತ್ರವಿರಬೇಕಾಗುವದು. ಆದುದರಿಂದ ಮೇಗಣ ಮೂರು ತಿಥಿಗಳೂ ಅಸಿದ್ಧವಾಗಿ ಆರ್ದ್ರನಾಮ ಸ್ಪಷ್ಟೀಕರಣದಿಂದ ಬ|| 14 ಯೆಂಬುದು ಸಯುಕ್ತಿಕವಾಗುತ್ತದೆ. ಆದಕಾರಣ ಗುಣಜ್ಞರು ವಿಪಾತಕಲ್ಪನೆಗೀಡಾಗದೆ ಸೂಕ್ಷ್ಮವಾಗಿ ಗ್ರಹಿಸಿ ಪಂಡಿತರೂ ಚರಿತ್ರಶೋಧಕರೂ ಎಲ್ಲಾ ಅಂಶಗಳನ್ನು ಸಮನ್ವಯಿಸಿ ಜಯಂತಿಯನ್ನು ಮಾರ್ಗದಿ ಕೀರ್ತಿಭಾಜನರಾಗುತ್ತಾರೆಂದು ಸಂಪೂರ್ಣನಂಬಿರುವೆನು.

ಇದನ್ನು ಯಾರಾದರೂ ಭಿನ್ನಿಸುವುದಿದ್ದರೆ ಒಂದೆರಡು ವಾರಗಳಲ್ಲಿ ಪತ್ರಮುಖದಿಂದಾಗಲಿ, ಸ್ಟಾರ್ ಪತ್ರಿಕಾ ಮೂಲಕವಾಗಲಿ, ಅಥವಾ ವಿಭಾಕರ ಪತ್ರವಲ್ಲಾಗಲಿ, ಪ್ರಸಿದ್ಧಪಡಿಸಿದಲ್ಲಿ ನನ್ನ ಬಸವೇಶ್ವರ ಚರಿತ್ರವು ತುಂಬಾ ಹಣಿಯಾಗುವುದು. ಉತ್ತರವನ್ನು ಎದುರು ನೋಡುವ,

ಸಿಂದಗಿಸಿದ್ದಪ್ಪ, ಬಳ್ಳಾರಿ.

ಪುರಾಣಶ್ರವಣ ಪರಿಸಮಾಪ್ತಿ.

ನಿಜಾಂ ಇಲಾಖಾ ಯಾದಗಿರಿ ತಾಲ್ಲೂಕು ವೈಕಿ ಚನ್ನಾಕಾರದ ಮಾಲಿ ಪಾಟೀಲ ಮ|| ರಾ|| ಸಿದ್ಧರಾಮಪ್ಪನವರ ಗೃಹದಲ್ಲಿ ಗತ ಮಾರ್ಗಶಿರ ಶು|| 5 ಆರಭ್ಯ ಶ್ರೀ ಶರಣಬಸವೇಶ್ವರಪುರಾಣ ಜರುಗಿ ಆಲಂಪಲ್ಲಿ ಮಠದ ವೇ|| ಶಾಂತಮೂರ್ತಯ್ಯನವರು ಮಂಜುಳವಾದ ಸಂಗೀತಸ್ವರದೊಡನೆ ಓದುತ್ತಿದ್ದು ಮುಸಿಗಿ ಗ್ರಾ|| ಮ|| ವೇ|| ಬಸವಶಾಸ್ತ್ರಿಗಳು ಸರಳವಾಣಿಯಿಂದ ಅರ್ಥಪ್ರವಚನ ಮಾಡುತ್ತಿದ್ದ ಕಾರಣ ಪ್ರತಿದಿನದಲ್ಲಿ ಶ್ರೋತೃಗಳ ಸಂಖ್ಯೆಯು ಹೆಚ್ಚಾಗುತ್ತಾ ನಡೆಯಿತು. ಯಳ್ಳೇರಿ ವಾರಣಾಶಿಯ ಹಿರೇಮಠದ ಚರಮೂರ್ತಿಗಳಾದ ಶ್ರೀ ಕೊಟ್ಟೂರಸ್ವಾಮಿಗಳವರ ಪಾದಪೂಜಾ ಗಣಾರ್ಚನೆ ಮುಂತಾದ ಸಮಾರಂಭಗಳು ನಿರಂತರ ಚೆನ್ನಾಗಿ ಜರುಗಿದವೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಏತತ್ಪುರಾಣದ ಪರಿಸಮಾಪ್ತಿಗಾಗಿ ನೇಮಿಸಲ್ಪಟ್ಟಂತೆ ಮಂಗಳಾರಾಧನೆಯು ಆದೇ ಕೃ|| 12 ಶುಕ್ರವಾರ ಜರಗಿತು. ನೀರಡಗುಂಭದ ಪಶ್ಚಿಮಾದ್ರಿ ಮಠಾಧೀಶರಾದ ಶ್ರೀ ಸಿದ್ಧಲಿಂಗಸ್ವಾಮಿಗಳೂ, ಗುರುಮಠಕಲ್ ಕೊಡ್ಡಿ ವಿರಕ್ತಮಠದ ಶ್ರೀಗಳೂ ದಯಮಾಡಿಸಿದ್ದರು. ಒಂದು ಸಾವಿರದವರೆಗೂ ಮಾಹೇಶ್ವರರು, ಅನಂತ ಪ್ರಮುಖ ಭಕ್ತರು, ವಿದ್ಯಾವಂತರು, ಹಾಯಕೋರ್ಟ್ ವಕೀಲ ಮಿ|| ಎನ್. ರುದ್ರಪ್ಪನವರು, ಮಿ|| ರಾಚನಗೌಡರವರು ವಕೀಲರು ಮುಂತಾದವರು ಆಗಮಿಸಿದ್ದರು. ಸಕಾಲಕ್ಕೆ ಗಣಸಂತರ್ಪಣೆ ನಡೆದು ಒಂದು ರೂಪಾಯಿನಂತೆ ಮಾಹೇಶ್ವರರಿಗೆ ಭೂರಿದಕ್ಷಿಣೆಯು ಕೊಡಲ್ಪಟ್ಟಿತು. ಕೃ|| 13 ಶನಿವಾರ ಉದಯಕ್ಕೆ ತಳಿರುತೋರಣಗಳಿಂದ ಅಲಂಕೃತವಾದ ಗ್ರಾಮವೀಧಿಯಲ್ಲಿ ನಾನಾವಾದ್ಯ, ಹರಭಜನೆ ಮುಂತಾದವುಗಳೊಡನೆ ಪುರಾಣವು ಮೆರೆದು ಬಂದು ಮಂಗಳವು ಮಾಡಲ್ಪಟ್ಟಿತು. ಸಕಲ ಭಕ್ತಾದಿಗಳಿಗೂ ಶ್ರೀಗಳವರಿಂದ ಫಲಾಶೀರ್ವಾದವು ಕೊಡಲ್ಪಟ್ಟಿತು. ಈ ದಿವಸ ಸಾಯಂಕಾಲದಲ್ಲಿ ಸದರಿ ಪುರಾಣಿಕರ ಗಜಗೌರೀವ್ರತವೆಂಬ ಕೀರ್ತನವು ತೃಪ್ತಿವಾಗಿ ಜರುಗಿತು. ಅನೇಕ ಆಧುನಿಕ ನಾಗರಿಕತೆಯ ಸುಧಾರಣೆಯನ್ನು ಹೊಂದಿ ಜಗತ್ತಿನ ಜನವೆಲ್ಲಾ ಉನ್ನತಿಗೆ ಬರುತ್ತಿರುವಾಗ ವೀರಶೈವರು ಹಿಂದಾಳಗಳಾಗಿರುವದನ್ನೂ, ಮತ್ತು ಅನ್ಯರಿಂದಾದ ಪರಮತೀಯರು ನಿಂದಾಕರವಾದ ಬರವಣಿಗೆಯಿಂದ ನಾಸ್ತಿ ಮುಂತಾದ ಪತ್ರಿಕೆಗಳಲ್ಲಿ ವೀರಶೈವರ ಮೂಲತತ್ವವನ್ನು ಕಾಣದೆ ತಿರಸ್ಕರಿಸಿ ಖಂಡನ ಮಾಡಲಾರಂಭಿಸುತ್ತಿದ್ದಾಗ್ಯೂ, ಸ್ಟಾರ್ ಪತ್ರಿಕೆಯು ಅತ್ಯಂತ ಸಹಾಯಕಗಳಿಂದಲೂ, ಸದಾಚಾರಗಳಿಂದಲೂ ಆಗಾಗ್ಗೆ ಎಚ್ಚರಪಡಿಸಿ ಖಂಡಿಸುವದನ್ನು ಮಾಡಿ ಮೈಸೂರು ಸರ್ಕಾರದಲ್ಲಿ ಎಲ್ಲಾ ಪ್ರಜೆಗಳೂ ಸಂಯಮ ಸೌಲಭ್ಯಗಳನ್ನು ಹೊಂದಿ ಆನಂದಿಸಬೇಕಾದ ಸಂಗತಿಗಳನ್ನು ತಿಳಿಸುವ ಆದರ ಸಾಹಸವನ್ನು ವರ್ಣಿಸಿ ಅನಂತ ವ್ಯಾಖ್ಯಾನಗಳು ಜರುಗಿದವು. ಅನೇಕ ಮೈಸೂರು ಸ್ಟಾರ್ ಪತ್ರಿಕೆಗಾಗಿ 5 ರೂ. ಹಾಗು ಶ್ರೀ ಶಾಂತವೀರ ವಿದ್ಯಾವರ್ಧಕ ಫಂಡ್ ಸ್ವಿಚಾಮಾಗಿ 5 ರೂ. ಹಾಲಿ ತೆಗೆಯಿಟ್ಟು ಕುಸುಮಹಾರ ತಾಂಬೂಲಾದಿಗಳನ್ನು ಅರ್ಪಿಸಿ ಸಭಾಕಾರ್ಯವು ಪೂರೈಸಲ್ಪಟ್ಟಿತು. ಈ ಕಾರ್ಯಕ್ಕೆ ಆದ್ಯಂತ ಚಾಲಕರಾಗಿದ್ದ ಮ|| ರಾ|| ಲಿಂಗೇರಿ ಕೋಣಪ್ಪನವರಿಗೂ ಯಾದಗಿರಿ ಸತ್ಕಾರ್ಯಧುರಂಧರರೆನಿಸಿದ ಮ|| ರಾ|| ಮಾಲಿ ಪಾಟೀಲ ಸಿದ್ಧರಾಮಪ್ಪ ಚನ್ನಾಕಾರಗಳವರಿಗೂ ಜಗದೀಶನು ಕೃಪೆಯನ್ನು ಮಾಡಲೆಂದು ಬಯಸುವ

ಪ್ರತ್ಯಕ್ಷದರ್ಶಿ.

ರಂಭಾಪುರೀ ಜಗದ್ಗುರುಪೀಠಕ್ಕೆ ಅರ್ಹತೆಯುಳ್ಳ ವಟುಗಳು.

ಶ್ರೀ ರಂಭಾಪುರೀ ಪೀಠವು ನಮ್ಮ ವೀರಶೈವ ಜಗದ್ಗುರು ಸಿಂಹಾಸನಗಳಲ್ಲಿ ಒಂದು ಮುಖ್ಯವಾದ್ದಾಗಿದೆ. ಈ ಪೀಠಕ್ಕೆ ಉತ್ತರಾಧಿಕಾರಿಗಳನ್ನು ಒದಗಿಸುವ ಸಂದರ್ಭವು ಈಗ ಮುಂದೆ ನಿಂತಿದೆ. ಆದರೆ ಈ ಪೀಠದ ಜಗದ್ಗುರುತ್ವವನ್ನು ವಹಿಸುವ ವಟುಗಳು ನಾನಾಭಾಷೆಗಳನ್ನು ತಿಳಿದವರಾಗಿಯೂ, ಶಾಂತರಾಗಿಯೂ, ಮತವಿದ್ಯಾಪರಿಣತರಾಗಿಯೂ, ವಾಗ್ಮಿಗಳಾಗಿಯೂ, ಬ್ರಹ್ಮಜ್ಞಾನವೈರಾಗ್ಯರಾಗಿಯೂ, ಕೇವಲ ವೈರಾಗ್ಯದಲ್ಲಿ ಧುರಂಧರರಾಗಿಯೂ, ಒಳ್ಳೆ ವಂಶಜರಾಗಿಯೂ, ಸಮಾಜಾಭಿಮಾನವುಳ್ಳವರಾಗಿಯೂ, ತತ್ಸೂತ್ರಾನುವರ್ತಿಗಳಾಗಿಯೂ ಇರತಕ್ಕದ್ದಲ್ಲದೆ, ನಮ್ಮ ವೀರಶೈವ ಮತವು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ದೇಶಗಳಲ್ಲೆಲ್ಲಾ ಹರಡಿಕೊಂಡಿರುವ ಕಾರಣ ಜಗದ್ಗುರುಗಳಾದವರೇ ಈ ದೇಶಗಳಲ್ಲೆಲ್ಲಾ ಸಂಚರಿಸತಕ್ಕ ಸಾಮರ್ಥ್ಯವುಳ್ಳವರಾಗಿಯೂ ಇರಬೇಕು. ಮಹಾರಾಷ್ಟ್ರ ಭಾಷೆಯು ಆ ದೇಶದ ಮಾತೃಭಾಷೆಯಾಗಿರುತ್ತದೆ, ಆ ದೇಶಭಾಷೆಯನ್ನು ಇವರಿಗೆ ಬರದಿದ್ದರೆ ಅಲ್ಲಿಯ ಭಕ್ತಾದಿಗಳೊಂದಿಗೆ ಮಾತಾಡುವುದೇನು? ಇವರಿಗೆ ಜ್ಞಾನವನ್ನು ಬೋಧಿಸುವುದೇನು? ಕಪ್ಪಕಾಣಿಕೆಗಳನ್ನು ವಸೂಲ್ಮಾಡುವುದು ಹೇಗೆ? ಇದೇ ರೀತಿಯಾಗಿ ಆಂಧ್ರ, ಕರ್ನಾಟಕ ದೇಶಗಳಲ್ಲೆಲ್ಲಾ ಸಂಚರಿಸಬೇಕಾಗಿದೆ. ಮತ್ತು ಈ ನಮಯುಗದಲ್ಲಿ ಎಲ್ಲೆಲ್ಲಿ ನೋಡಿದರೂ ರಾಜಭಾಷೆಯಾದ ಇಂಗ್ಲೀಷ್ ಭಾಷೆಯು ಹರಡಿಕೊಂಡಿರುತ್ತದೆ. ದೊಡ್ಡ ದೊಡ್ಡ ಆಫೀಸರುಗಳು ಕೂಡ ಇಂಗ್ಲೀಷಿನವರೇ ಇರುತ್ತಾರೆ. ಪೀಠಾಧಿಪರಿಗೆ ಇಂಗ್ಲೀಷುಭಾಷೆ ಬಂದಿದ್ದರೆ ಎಷ್ಟೋ ಮೇಲು. ಮತ್ತು ನಮ್ಮ ಮತವಿಷಯಗಳನ್ನು ರಾಜಭಾಷೆಯಲ್ಲಿ ಇತರರಿಗೆ ಚೆನ್ನಾಗಿಬೋಧಿಸಿ ನಮ್ಮ ಮತತತ್ವದ ಶ್ರೇಷ್ಠತ್ವವನ್ನು ಪ್ರಸಿದ್ಧಿಗೊಳಿಸುವಂತೆ ಮಾಡಬಹುದು. ಆದುದರಿಂದ ರಾಜಕೀಯಭಾಷೆಯಾದ ಇಂಗ್ಲೀಷು, ಧಾರ್ಮಿಕಭಾಷೆಯಾದ ಸಂಸ್ಕೃತ, ದೇಶಭಾಷೆಗಳಾದ ಆಂಧ್ರ, ಮಹಾರಾಷ್ಟ್ರ, ಹಿಂದುಸ್ಥಾನಿ, ಕರ್ನಾಟಕ ಈ ಆರುಭಾಷೆಗಳಲ್ಲಿ ಚೆನ್ನಾಗಿ ಅನುಭವವುಳ್ಳ ವಟುಗಳನ್ನು ಆರಿಸತಕ್ಕದ್ದು ನಮ್ಮ ವೀರಶೈವ ಮತಾಭಿವೃದ್ಧಿಗೆ ಬಹಳ ಉತ್ತಮವಾದ ದಾರಿಯಾಗಿರುತ್ತದೆ. ಬರೀ ಒಂದುಭಾಷೆಯಾದ ಸಂಸ್ಕೃತವನ್ನು ಕಲಿತ ವಟುಗಳನ್ನು ಚುನಾಯಿಸುವುದು ಅಷ್ಟು ಪುರೋಭಿವೃದ್ಧಿಗೆ ಕಾರಣವಾಗಲಾರದೆಂಬುದು ನಿಸ್ಸಂದೇಹವಾಗಿ ತೋರುತ್ತದೆ. ಯಾಕೆಂದರೆ ಇವರಿಗೆ ದೇಶಭಾಷೆಗಳು ಇಲ್ಲದೆಯಿರೋಣದರಿಂದಲೂ, ಲೋಕಾನುಭವ ಸಾಲದೆ ಇರೋಣದರಿಂದಲೂ, ನಾನಾದೇಶಗಳನ್ನು ಸಂಚಾರಮಾಡಿ ಭಕ್ತಾದಿಗಳಿಗೆ ಹಿತೋಪದೇಶಗಳನ್ನು ಬೋಧಿಸಿ ಮತೋದ್ಧಾರಮಾಡುವ ಚೈತನ್ಯವು ಸಾಲದು. ಆದುದರಿಂದ ಈ ಮೇಲ್ಕಂಡ ಆರುಭಾಷೆಗಳನ್ನು ತಿಳಿದವರಾಗಿಯೂ, ಭಕ್ತಾದಿಗಳಿಗೆ ಉಪದೇಶಿಸುವುದಕ್ಕೆ ವಾಕ್ಚತುರತೆಯುಳ್ಳ ವಾಗ್ಮಿಗಳನ್ನೇ ಚುನಾಯಿಸುವುದು ಯೋಗ್ಯವಿದೆ. ಮತ್ತು ಜಗದ್ಗುರು ಪದವಿಗೆ ಕೇವಲ ಬ್ರಹ್ಮಜ್ಞಾನವುಳ್ಳ ವೈರಾಗ್ಯಶಾಲಿಗಳನ್ನೇ ಆರಿಸತಕ್ಕದ್ದೇ ವಿನಾ ಈ ವಿದ್ವತ್ತಿದ್ದ ಮಾತ್ರಕ್ಕೇ ಆ ಪದವಿಗೆ ಅರ್ಹತೆಯುಳ್ಳವರಾಗಲಾರರು. ಯಾಕೆಂದರೆ:—ಸರ್ಪದಲ್ಲಿ ಮಾಣಿಕ್ಯವಿದ್ದ ಮಾತ್ರಕ್ಕೇ ಅದು ಸಾಧುವಾದ ಪ್ರಾಣಿಯಾದೀತೇ? ಆದಕಾರಣ ಮುಖ್ಯ ಗುಣಗಳನ್ನು ಪರಿಶೋಧಿಸಿ ಸನ್ನಡತೆಯುಳ್ಳ ವಟುಗಳನ್ನು ಚುನಾಯಿಸುವುದಾದರೆ ನಮ್ಮ ಮತವು ಬಾಲಚಂದ್ರನಂತೆ ದಿನದಿನಕ್ಕೆ ವೃದ್ಧಿಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ನನ್ನ ಈ ಬಿನ್ನಹವನ್ನು ಮಹಾ ಜಗದ್ಗುರುಗಳವರೂ, ಈ ಪೀಠಕ್ಕೆ ಮುಖ್ಯ ಅಭಿಮಾನಶಾಲಿಗಳಾದ ಮಹಾನುಭಾವರೂ ಉಳಿದ ಮತಾಭಿಮಾನಿಗಳೂ ಆಲೋಚಿಸಿ ನನ್ನ ವಿಜ್ಞಾಪನೆಯನ್ನು ಅಂಗೀಕರಿಸಲಿ ಇಂತಹ ವಟುಗಳನ್ನೇ ಚುನಾಯಿಸುವಂತೆ ಸರ್ವಾಂತರ್ಯಾಮಿಯಾದ ಜಗದೀಶ್ವರನು ಅಂತಹ ಮನಸ್ಸನ್ನು ಕೊಡಲೆಂಬುದಾಗಿ ಪ್ರಾರ್ಥಿಸುತ್ತೇನೆ.

ಪಂಡಿತ ಯಂ. ಜಗದೀಶಶಾಸ್ತ್ರಿ, ವೇದಾಂತವಿಶಾರದ,
ಕಾವ್ಯತೀರ್ಥ, ಹರಪುರಿ.

ಉಪದೇಶದ ಸೋಗು.

ವಾಚಕಮಹಾಶಯರೇ! ಪ್ರಬೋಧಮಾಸಿಕ ಪುಸ್ತಕದ ಜುಲೈ ಸಂಚಿಕೆಯಲ್ಲಿ—ವಿರೂಪಾಕ್ಷನಡೆಯರೆಂಬುವರು (ಅಂಬಿಗರ ಗುರುಗಳು) ಶ್ರೀಕರಭಾಷ್ಯದ ಕನ್ನಡ ಭಾಷಾಂತರವನ್ನು ಬರೆಯಲಿಕ್ಕೆ ಪ್ರಾರಂಭ ಮಾಡಿರುವರು. ಅವರ ಈ ಪ್ರಯತ್ನವು ಸ್ತುತ್ಯವಿದ್ದಾಗ್ಯೂ, ಅದರಲ್ಲಿ ಅವರು ಮಾಡಿರುವ ಅಧಿಕಪ್ರಸಂಗತನವನ್ನು ನೋಡಿದರೆ ಅವರ ಹೃದಯದ ಅಂತರಂಗವು ಸರ್ವರಿಗೂ ತಿಳಿಯದೇ ಇರದು. ಅವರು ಹೇಳುವದೇನೆಂದರೆ ಇತ್ತೀಚೆಗೆ ವೀರಶೈವಧರ್ಮದವರಾದರೂ ಬ್ರಹ್ಮವಿದ್ಯೆಗೆ ಲಕ್ಷ್ಯಕೊಡದೆ ನಾನು ಗುರುವು ನೀನು ಗುರುವು ಎಂಬೊ ಅಯೋಗ್ಯ ಕೋಲಾಹಲದಲ್ಲಿಯೇ ಕಾಲವನ್ನು ಕಳೆದು ನಿರಕ್ಷರಕುಕ್ಷಿಗಳಿದ್ದರೂ ಅವರು ಪೂರ್ವಾಚಾರ್ಯರ ಪೀಠಕ್ಕೆ ಅಧಿಪತಿಗಳಾಗಿರುವರೆಂಬ ಮೂಢ ಭಾವನೆಯಿಂದ ಕತ್ತಲೆಯಲ್ಲಿ ಕಾಲವನ್ನು ಕಳೆದಂತೆ ಮಾಡಿಬಿಟ್ಟಿರುವರು" ಎಂದು ಬರೆದಿರುವರು. ಇವರ ಈ ಬರಹವನ್ನು ನೋಡಿದರೆ ತಾವೊಬ್ಬರೇ ಬ್ರಹ್ಮವಿದ್ಯೆಯಲ್ಲಿ ನಿಪುಣರೆಂದು ತಿಳಿದುಕೊಂಡಂತೆ ಕಾಣುತ್ತದೆ. ಇರಲಿ; ಇವರಿಗೆ ಮಾತ್ರ ಗುರುಗಳೆಂಬುವ ಅಭಿಮಾನವಿಲ್ಲವೊ? ಹಾಗೆ ಇಲ್ಲದಿದ್ದರೆ ಕೆಲಸಕ್ಕೆ ಬಾರದ (ಗೇಣುದ್ದ ಅಡ್ಡಹೆಸರು) ದಕ್ಷಿಣ ಕಾಶೀ ಸಿಂಹಾಸನಾಧೀಶ್ವರರೆಂತಲೂ ಇತ್ತೀಚೆಗೆ ಕೆಲವು ನೋಟೀಸುಗಳಲ್ಲಿ ಜಗದ್ಗುರುಗಳೆಂತಲೂ ಪಟೇಲರ ಬಿಲ್ಲಿಗೆ ಸಮ್ಮತಿಯನ್ನು ಕೊಡುವ ಗಡಬಿಡಿಯಲ್ಲಿ ನನಗೆ ಲಕ್ಷಜನ ಲಿಂಗಾಯತರು ಶಿಷ್ಯರಿರುತ್ತಾರೆಂತಲೂ ಬರೆಯುವ ಕಾರಣವೇನು? ನಿರರ್ಥಕವಾದ ಜಗಳದಲ್ಲಿ ಸ್ವಲ್ಪ ಭಾಗವನ್ನಾದರೂ ಕೆಗೆದುಕೊಂಡಿಲ್ಲವೆಂದು ಆತ್ಮಸಾಕ್ಷಿಯಾಗಿ ಹೇಳುವರೇನು? ಸಾಗರ ಮೊದಲಾದ ಮಲೆನಾಡ ಪ್ರಾಂತದಲ್ಲಿ ಇವರು ಮಾಡಿದ ಭಾಷಣವು ನೆನಪಿರುವದೋ? ತಮ್ಮ ಒಬ್ಬ ಶಿಷ್ಯರಿಗೆ ಇಂದೂರಿಂದ ಪತ್ರ ಬರೆಯುವ ಕಾಲಕ್ಕೆ ಅನಧಿಕಾರಿಗಳಾದ ಗುರುಗಳನ್ನು ನಾಶಮಾಡಲಿಕ್ಕೇಬೇಕೆಂದು ಬರೆದಿಲ್ಲವೊ? (ಈ ಪತ್ರವು ಸದ್ಯಕ್ಕೆ ನಮ್ಮ ಹತ್ತಿರ ಇರುವದು) ನಿರಕ್ಷರಕುಕ್ಷಿಗಳಿದ್ದರೂ ಪೂರ್ವಾಚಾರ್ಯರ ಪೀಠಕ್ಕೆ ಗುರುಗಳಾಗಿರುವರೆಂಬ ಮೂಢ ಭಾವನೆಯಿಂದ ಕತ್ತಲೆಯಲ್ಲಿ ಕಾಲವನ್ನು ಕಳೆದಂತೆ ಮಾಡಿಬಿಟ್ಟಿರುವರೆಂದು ಬರೆದಿರುವ ಇವರ ಎದೆಗಾರಿಕೆಯನ್ನು ನೋಡಿದರೆ ಪೀಠಾಚಾರ್ಯರವರೇಲೂ ಚೆನ್ನಾಗಿ ಗದೆಯನ್ನು ಎತ್ತಿರುವರು. ಪೀಠಾಚಾರ್ಯರಲ್ಲಿ ಕೆಲವರು ಇವರಗಿಂತಲೂ ವಿದ್ಯಾವಂತರಿರುವರೆಂಬುದು ಇವರ ದೋಷೈಕದೃಷ್ಟಿಗೆ ಹೇಗೆ ಕಾಣಬೇಕು? ನಮ್ಮ ತಂದೆ ತಾಯಿಗಳು ಇವರ ಅಭಿಪ್ರಾಯದಂತೆ ನಿರಕ್ಷರಕುಕ್ಷಿಗಳಾಗಿ (ವಿದ್ಯಾಹೀನರಾಗಿ) ನಾವು ಮಾತ್ರ ವಿದ್ಯಾವಂತರಾದರೆ ತಂದೆತಾಯಿಗಳೇ ಅಲ್ಲವೆಂದು ಹೇಳಬಹುದೋ? ಇವರ ಈ ಪ್ರಕಾರದ ವರ್ತನವನ್ನು ನೋಡಿದರೆ ಶ್ರೀ ಜಗದ್ಗುರು ಪಂಚಪೀಠದವರನ್ನೇ ಮಾನಿಸುವುದಿಲ್ಲವೆಂದು ಕಾಣುತ್ತದೆ. ಆದುದರಿಂದಲೇ ಕೆಲವು ದಿನಗಳಕೆಳಗೆ ವೇ|| ಪಂ|| ಗುರುಮೂರ್ತಶಾಸ್ತ್ರಿ—ಕಾವ್ಯತೀರ್ಥ ಕಜ್ಜರಿ ಇವರು ಭೇಟಿಯಾದಾಗ ನಾವು (ವೇದತೀರ್ಥ ಧರ್ಮಭೂಷಣ—ಇತ್ಯಾದಿ ಪದವೀ ಪ್ರತಿಷ್ಠಿತರಾದ ಇಂದೂರು ಸಂಸ್ಕೃತ ಕಾಲೇಜದ ಪ್ರೊಫೇಸರರು) ಪಂಚಾಚಾರ್ಯರನ್ನು ಮಾನಿಸುವುದಿಲ್ಲವೆಂದು ವಾದಿಸಿದರಂತೆ! ಶಾಸ್ತ್ರಿಗಳು ಕೆಲವು ಪ್ರಮಾಣಗಳನ್ನು ತೋರಿಸಿದಮೇಲೆ ಸುಮ್ಮನಾದರಂತೆ. ವಾಚಕರೆ, ಇವರ ಅಗಾಧವಾದ ಪಾಂಡಿತ್ಯವನ್ನು ನೋಡಿರಿ. ಹೀಗೆ ಪೀಠಾಚಾರ್ಯರನ್ನು ನಿಂದಿಸಿ ಮುಂದೆ ವಿರಕ್ತರನ್ನು ನಿಂದಿಸುವಾಗ ಕೃಶಾನುವಿನ ಅವತಾರವನ್ನೇ ತಾಳಿರುವರು. (ಕೃಶಾನು ಅಂದರೆ ವಿಶ್ವಗುಣಾದರ್ಶವೆಂಬುವ ಚಂಪೂ ಗ್ರಂಥದಲ್ಲಿ ಲಿಂಗಾಯತರನ್ನು ಯಥೇಚ್ಛವಾಗಿ ನಿಂದೆ ಮಾಡಿರುವ ಓರ್ವ ಗಂಧರ್ವನು) ಇವರು ವಿರಕ್ತರೂ ನಿರಾಭಾರಿಗಳೂ ಎಂದು ಹೆಸರನ್ನಿಟ್ಟುಕೊಂಡ ಕೂಡಲೇ ಭಾಷ್ಯವು ಮೂಲೆಗೆ ಬಿತ್ತಂತೆ. ಇವಕ್ಕೆ ಅನ್ನ ಬೇಕಲ್ಲವೆ (ಪ್ರಪ್ತಕಾಡನಾದ್ದಂತಥಂಗಃ ಎಂದು) ಬೆನ್ನಿನಮೇಲೆ ಹೊಡೆದರೆ ಬಾಯೊಳಗಿನ ಹಲ್ಲು ಬಿದ್ದಂತೆ ಇವರೇ ಈ ಭಾಷ್ಯವನ್ನು ಮೂಲೆಗೆ ಹಾಕಿರುವರೆಂಬುದಕ್ಕೆ ಪ್ರಮಾಣಗಳೇನಾದರೂ ಉಂಟೋ? ಸಮಾಜಕ್ಕೆ ಹಿತಕರವಾದ ಯಾವುದಾದರೊಂದು ಕಾರ್ಯವನ್ನಾದರೂ ಇವರಿಲ್ಲದೆ ಆಗಿರುವುದೆಂದು ಧೈರ್ಯದಿಂದ ಹೇಳುವರೇನು? (ಪ್ರತಿಯೊಂದು ಇವರ ವಾಕ್ಯವನ್ನೂ ಖಂಡನೆ ಮಾಡಲಿಕ್ಕೆ ಈ ಚಿಕ್ಕ ಲೇಖದಲ್ಲಿ ಸಾಧ್ಯವಿಲ್ಲ. ಇಂಥ ಅಸಮಂಜಸವಾದ ಟೀಕೆಯನ್ನು ನೋಡಿದರೆ ಇವರ ಮುದ ವಾತ್ಸಲ್ಯವು ಎಷ್ಟಿರುವದೆಂಬುದು ಗೊತ್ತಾಗದೆ ಇರದು. ಅಹೋರಾತ್ರಿ ಮುಸುಕನ್ನು ಹಾಕಿಕೊಂಡು ಜ್ಞಾನವನ್ನು ಅಜ್ಞಾನದಿಂದ ಆಚ್ಛಾದಿಸಿರುವಂತೆ—ಆಹಹ ಇವರ ದಿವ್ಯ ಜ್ಞಾನವನ್ನು ನೋಡಿರಿ! ಇವರು ಜ್ಞಾನವಂತರಾಗಿದ್ದರೆ ಜಂಗಮರನ್ನು ಹೀಗೆ ಎಂದಿಗೂ ನಿಂದಿಸುತ್ತಿದ್ದಿಲ್ಲ; ಸಮಾಜಕ್ಕೆ ಹಿತಕರಗಳಾದ ಕಾರ್ಯಗಳನ್ನು ತಾವೂ ಮಾಡಲಿಕ್ಕಿಲ್ಲ; ಮಾಡುವವರಿಗೂ ಮಾಡಗೊಡಲಿಕ್ಕಿಲ್ಲ (ಸಮಾಜಕ್ಕೆ ಈ ಮಠಾಧೀಶರ ಉಪಕಾರವೆಂದರೆ ದೂರದೇಶದಲ್ಲಿರುವ ಸಂಸ್ಕೃತ ಪಾಠಶಾಲೆಗೆ ಪಗಾರ ತೆಗೆದುಕೊಂಡು ಅಧ್ಯಾಪಕರಾಗಿ ಉದರಂಭರಣವನ್ನು ಮಾಡಿಕೊಳ್ಳುವದೊಂದೇ.) ಒಂದು ಸಣ್ಣ ಮಠದ ವಿರಕ್ತರೂ ಕೂಡ (ದೊಡ್ಡ ಮಠದವರಂತೂ ದೂರವೇ ಉಳಿದರು) ಧಾರವಾಡದಂಥ ದೊಡ್ಡ ಶಹರದಲ್ಲಿ ಪ್ರತಿಶತ 100 ಮಂದಿ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಅನ್ನೋದಕಗಳನ್ನು ಕೊಡುತ್ತಿರುವರು. ಪೀಠಾದರೋ ಅತ್ಮಪೌರುಷದ ಆಡಂಬರದ ಹೊರ್ತು ಸಮಾಜಕ್ಕೆ ಏನೇನು

ಉಪಕಾರಗಳನ್ನು ಮಾಡಿರುವಿರಿ ? ಊರವರೆಲ್ಲರದೂ ಒಂದಾದರೆ ಉಳಿಕವನದು ಒಂದು" ಎಂಬುವಂತೆ ಪ್ರತಿಯೊಂದು ಕಾರ್ಯದಲ್ಲಿಯೂ ತ್ರಿಶಂಕುಮಹಾರಾಜನ (ಹರಿಶ್ಚಂದ್ರನ ತಂದೆ) ಮಾರ್ಗವನ್ನೇ ಅವಲಂಬನೆ ಮಾಡುವರು. ಮೊದಲು ಮನಬಲ್ಲಂತೆ ಟೀಕೆಯನ್ನು ಮಾಡಿ ಆಮೇಲೆ ನಿರ್ಬರಿಗೂ ಬುದ್ಧಿಯನ್ನು ಹೇಳಿರುವರು. ಅನ್ಯರಿಗೆ ಬುದ್ಧಿಯನ್ನು ಹೇಳ ಬೇಕಾದರೆ ಮೊದಲು ನಮ್ಮ ಗುಣಗಳನ್ನು ಸುಧಾರಿಸಿಕೊಳ್ಳಬೇಕಲ್ಲವೆ ? ವಿದ್ಯಾವಂತರಾದವರು ಸಮಾಜದಹಿತಕ್ಕೆ ಬೇಕಾಗುವ ಕಾರ್ಯಗಳನ್ನು ಮಾಡ ಬೇಕಲ್ಲದೆ ಸಮಾಜದ ಮೂಲಪುರುಷರನ್ನು ಸಾಧಿಸುವ ಅಡ್ಡಹಾದಿಯನ್ನು ಹಿಡಿಯಬಾರದು. ಯೋಗ್ಯವಾದ ವಿಷಯದ ಮೇಲೆ ಟೀಕೆಯನ್ನು ಮಾಡ ಲಿಕ್ಕೆ ಪ್ರತಿಯೊಬ್ಬರಿಗೂ ಅಧಿಕಾರವಿರುತ್ತದೆ. ಆದರೆ ದ್ವೇಷಾಸೂಯೆಗಳ ನ್ನು ತೂಡಿಸಿ ಅನ್ಯರನ್ನು ನಿಂದಿಸಿ ನಾವುಮಾತ್ರ ದೊಡ್ಡವರಾಗಬೇಕೆಂದರೆ ಇಹಲೋಕ ಪರಲೋಕಗಳೆರಡರಲ್ಲಿಯೂ ಅಪಯಶಸ್ಸೇ ಸಿಗುವದು. ನಮ್ಮ ಈ ಲೇಖದ ಮುಖ್ಯಾಭಿಪ್ರಾಯವೇನಂದರೆ— ಇವರ ಅಂತರಂಗವು ಸರ್ವ ವೀರಶೈವರಿಗೂ ತಿಳಿಯಬೇಕೆಂಬುದೊಂದೇ. ನಮ್ಮ ಸಮಾಜದಲ್ಲಿ ವಿದ್ಯಾವಂ ತರಿಲ್ಲವೆಂದು ಮುಖಂಡರು ನೀರಿಗಿಂತಲೂ ಹೆಚ್ಚಾಗಿ ದ್ರವ್ಯವನ್ನು ಖರ್ಚು ಮಾಡಿ ಕಲಿಸಿದರೆ ಮೂಲಪುರುಷರನ್ನೇ ನಿಂದಿಸುವಂಥ ವಿದ್ಯಾವಂತರಾಗು ವದು ಸಮಾಜದ ದುರ್ದೈವವಲ್ಲದೆ ಮತ್ತೇನು ?

ಚಂದ್ರಶೇಖರಶಾಸ್ತ್ರಿ, ಹಿರೇಮಠ, ಹೊಳಲು.

ವೀರಶೈವ ಸಮಾಜದ ನಿಜವಾದ ದ್ರೋಹಚಿಂತಕರಾರು ?

ಯಾವ ರಾಷ್ಟ್ರವಾಗಲೀ, ದೇಶವಾಗಲೀ, ಸಮಾಜವಾಗಲೀ, ಉನ್ನತಿ ಅಥವಾ ಅವನತಿಯನ್ನು ಹೊಂದುವುದು ಆಯಾ ರಾಷ್ಟ್ರದ ದೇಶದ ಸಮಾಜದ ಜನರ ಮೇಲೆ ಅವಲಂಬಿಸಿರುತ್ತದೆ. ಸಮಾಜದ ಪ್ರತಿಯೊಂದು ವ್ಯಕ್ತಿಯೂ ಸ್ವಕರ್ತವ್ಯದಕ್ಷನಾದರೆ ಸಮಾಜದ ಉನ್ನತಿಯಾಗುತ್ತದೆ. ಇದಕ್ಕೆ ವಿರುದ್ಧವಾಗಿ ಅಂದರೆ ಸಮಾಜವು ಅಧೋಗತಿಗೆ ಹೋಗಬೇಕಾದರೆ ವ್ಯಕ್ತಿಯು ಕರ್ತವ್ಯಹೀನನಾಗಬೇಕಾಗುವುದು. ಸದ್ಯಕ್ಕೆ ನಮ್ಮ ಸಮಾಜವು ಅವನತಿಗೆ ತವರು ಮನೆಯಾಗಿರುತ್ತದೆಂಬುದು ಸ್ಪಷ್ಟವಾಗಿ ಹೇಳುವ ಹೊತ್ತು ಬಂದಿರುವುದರಿಂದ ಸಮಾಜದೊಳಗಿನ ಪ್ರತಿಯೊಬ್ಬನೂ ಕರ್ತವ್ಯಭ್ರಷ್ಟನಾಗಿರುವನೆಂತಲೇ ತಿಳಿಯಬೇಕಾಗುವುದು. ಆದರೆ ಇದಕ್ಕೆ ವಿಪರೀತವಾಗಿ ಸ್ವಕರ್ತವ್ಯದಕ್ಷತೆಯು ನಮ್ಮಲ್ಲಿದ್ದರೆ ನಮ್ಮ ಸಮಾಜಕ್ಕೆ ಅವನತಿಯೆಂಬ ಅವಶಬ್ದದ ಗಾಳಿ ಕೂಡ ಬೀಸುತ್ತಿದ್ದಿಲ್ಲ. ಇದನ್ನೇ ಸದ್ಯದಲ್ಲಿ ವಿಚಾರಮಾಡುವುದು ಎಲ್ಲರಿಗೂ ಅತ್ಯವಶ್ಯವಾಗಿರುವುದು.

ನಮ್ಮಲ್ಲಿ ಧರ್ಮವು ಸಂಪೂರ್ಣ ಲುಪ್ತವಾಗಿರುತ್ತದೆ. ಕಾರಣ ಧರ್ಮವು ಲೋಪವಾದ ಬಳಿಕ ಅದರ ನಿರ್ಬಂಧವಿಲ್ಲದುದರಿಂದ ನಾವು ವಿವೇಕಭ್ರಷ್ಟರಾಗಿ ದುರ್ಮಾರ್ಗಕ್ಕೆ ಒಳಗಾಗಿ ನಮ್ಮ ಶರೀರಸಂಪತ್ತನ್ನೂ ಕಳಕೊಂಡಿರುತ್ತೇವೆ. ನಮ್ಮಲ್ಲಿ ಧಾರ್ಮಿಕ ಶಾರೀರಕ ಸಂಪತ್ತುಗಳನ್ನೇ ಕಾಪಾಡಿಕೊಳ್ಳುವಷ್ಟು ಶಕ್ತಿಯಿರದಿದ್ದಲ್ಲಿ ಇನ್ನುಳಿದ ಸಂಪತ್ತುಗಳು ನಮ್ಮಲ್ಲಿ ಸ್ಥಿರವಾಗಿ ನೆಲಗೊಳ್ಳುವ ಬಗೆ ಹೇಗೆ ? ನಮ್ಮ ಧರ್ಮಸಂಸ್ಥಾಪನಾಚಾರ್ಯರಾದ ಪಂಚಾಚಾರ್ಯರೂ, ಅವರ ವಂಶಜರೆಂದು ಹೊಗಳಿಸಿಕೊಳ್ಳುವ ಪಟ್ಟಚರಾಧಿಕಾರಿಗಳೂ, ಸ್ವಾರ್ಥಪರಾಯಣರಾಗಿ ಕರ್ತವ್ಯ ಪರಾಙ್ಮುಖರಾಗಿರುವುದೇ ಇದಕ್ಕೆ ಮೂಲಕಾರಣವೆಂದು ವಿಷಾದದಿಂದ ಹೇಳಬೇಕಾಗುವುದು. ನಮ್ಮ ಪೂರ್ವಜರು ಧರ್ಮಪರಿಪಾಲನದ, ದೇವತೋಪಾಸನೆಯ, ರಾಜಸೇವೆಯ ಪ್ರಭಾವದಿಂದ ಹೇರಳವಾಗಿ ವತನಗಳನ್ನು ಸಂಪಾದಿಸಿರುವರು. ಸದ್ಯಕ್ಕೆ ಆ ವತನಗಳೇ ನಮ್ಮ ಉನ್ನತಿಗೆ ಮುಳುವಾಗಿ ಕುಳಿತಿವೆ. ಯಾಕೆಂದರೆ-ಈಗಿನ ನಮ್ಮ ಜಗದ್ಗುರುಗಳ ಮತ್ತು ಪಟ್ಟಚರಾಧಿಕಾರಿಗಳ ಪರಿಸ್ಥಿತಿಯ ಕಡೆಗೆ ವಿಚಾರದೃಷ್ಟಿಯಿಂದ ನೋಡಲಾಗಿ ಅವರು ತಮ್ಮ ಪೂರ್ವಜರು ದೊರಕಿಸಿದ ವತನಗಳ ಮೇಲೆಯೇ ಸಂಪೂರ್ಣ ಅವಲಂಬಿಸಿ, ಐಷ್ ಆರಾಮುಗಳಿಗೆ ಮನಸೋತು, ಕರ್ತವ್ಯವಿಮೂಢರಾಗಿ ಕುಳಿತಿರುತ್ತಾರೆ. ಹಿರಿಯರು ಗಳಿಸಿದ್ದನ್ನೇ ಬಾಯಿ ಚಪ್ಪರಿಸುತ್ತ ಭಕ್ಷಿಸಹತ್ತಿದ್ದಾರೆ. ಅದು ತಂಗಳೆಂಬುದು ಅವರಿಗೆ ತಿಳಿದ ಹಾಗೆ ಕಾಣಿಸಲಿಲ್ಲ. ಅವರು ತಮ್ಮ ಅತ್ಯಂತ ಮಹತ್ವದ ಆಯುಷ್ಯವನ್ನು ಬರೆ ಐಷ್ ಆರಾಮುಗಳಲ್ಲಿಯೇ ಕಳೆಯುವರೇ ಹೊರತು, ತಮ್ಮ ಅವತಾರಕಾಲದಲ್ಲಿ ಯಾರದೂ ಋಣವನ್ನು ತೀರಿಸಿ ಹೋಗುವದಿಲ್ಲ. ತಮ್ಮ ಹಿರಿಯರು ದೊಡ್ಡ ವ್ಯಕ್ತಿಗಳನ್ನು ಹೇಗೆ ಸಂಪಾದಿಸಿದರು, ಯಾಕೆ ಸಂಪಾದಿಸಿದರು, ಅದರ ಕೀರ್ತಿಯನ್ನು ಕಾಯಬೇಕಾದರೆ ಮತ್ತು ತಮ್ಮ ಹೆಸರು ಅಜರಾಮರವಾಗಿ ಉಳಿಯಬೇಕಾದರೆ ತಾವು ಹೇಗೆ ವರ್ತಿಸಬೇಕು ಎಂಬುದೇ ಅವರಿಗೆ ತಿಳಿಯದಾಗಿದೆ. ಸದ್ಯಕ್ಕಂತೂ ಇವರು ಪ್ರಾಪಂಚಿಕರ ಹಾಗೆ ವರ್ತಿಸಹತ್ತಿದ್ದಾರೆ, ತಮ್ಮ ಶಿಷ್ಯವರ್ಗದಲ್ಲಿ ಸಂಚರಿಸಿ, ಮೃಷ್ಟಾನ್ನ ಭೋಜನಮಾಡಿ ಒತ್ತಾಯದಿಂದ ಅವರಿಂದ ಹೇರಳವಾಗಿ ಕಾಣಿಕೆಗಳನ್ನು ಪಡೆಯುತ್ತಾರೆ. ಪಡೆದರೂ ಪಡೆಯಲಿ; ಅದನ್ನು ಸದ್ವಿನಿಯೋಗಮಾಡಬೇಕೆನ್ನುತ್ತಾರೆನ್ನಬೇಕೋ ? ಧರ್ಮಪ್ರಸಾರ ಧರ್ಮೋಪದೇಶದಂಥ ಅತಿ ಮಹತ್ವದ ಕೆಲಸವನ್ನು ಕಾಲಕೆಳಗೆ ಹಾಕಿ, ತಮ್ಮ ಅಣ್ಣನ ತಮ್ಮನ ಹೆಂಡರು, ಅವರ ಮಕ್ಕಳು ಮತ್ತು ಅಕ್ಕ ತಂಗಿಯರು, ಅವರ ಮಕ್ಕಳು ಮುಂತಾದ ಆಪ್ತೇಷ್ಟರೇ ತಮ್ಮ ಜನ್ಮಸಿದ್ಧವಂಶಜರೆಂದು ಪ್ರಾಪಂಚಿಕ ಮೋಹಪಾಶದಲ್ಲಿ ಸಿಲುಕಿ, ಬಂದ ಹಣದಿಂದ ಇವರನ್ನು ಪರಿಪಾಲನಮಾಡುವದೇ ತಮ್ಮ ಶ್ರೇಷ್ಠ ಕರ್ತವ್ಯವೆಂದು ಭಾವಿಸಿದ್ದಾರೆ. ನೋಡಿದಿರಾ ಇವರ ವಿಚಾರದೃಷ್ಟಿಗೂ ಮತ್ತು ಇವರ ಪೂರ್ವಜರ ವಿಚಾರದೃಷ್ಟಿಗೂ ಭೂಮ್ಯಾಕಾಶದಷ್ಟು ಮಹದಂತರವಿರುವುದನ್ನು ? ಯಾರ ಪೂರ್ವಜರು ಇಡೀ ಸಮಾಜವನ್ನೇ ತಮ್ಮ ಕುಟುಂಬವಾಗಿ ಭಾವಿಸಿದ್ದರೋ, ಮತ್ತು ಯಾರು ಈ ಭವಸಾಗರದಲ್ಲಿ ಬಿದ್ದು ಹೊರಳಾಡುತ್ತಿದ್ದ ತಮ್ಮ ಶಿಷ್ಯವರ್ಗಕ್ಕೆ ಧರ್ಮಬೋಧ ಮಾಡಿ ಸನ್ಮಾರ್ಗಕ್ಕೆ ಹಚ್ಚಿ ಮೋಕ್ಷಪದವಿಯ ದಾರಿಗೆ ಹಚ್ಚುತ್ತಿದ್ದರೋ ಅಂಥವರ ವಂಶಜರೆಂದು ಎದೆತಟ್ಟಿ ಹೇಳುವ ಇವರಿಗೆ ನಾಚಿಕೆಯಿಲ್ಲವೆ ? ಹೀಗೆ ನಮ್ಮ ಮಠಾಚಾರ್ಯರ ಮತ್ತು ಗುರುವರ್ಗವು ಆಲಸ್ಯಪ್ರಿಯವಾಗಿ ಸುಮ್ಮನೆ ನಾಹೆಚ್ಚು ನೀಹೆಚ್ಚು ಎಂಬ ವ್ಯರ್ಥ ಜಗಳಗಳಲ್ಲಿ ವ್ಯರ್ಥಕಾಲಹರಣಮಾಡಿ ಸಮಾಜಕ್ಕೂ ಮತ್ತು ಸ್ವದೇಶಕ್ಕೂ ಯಾವ ಬಗೆಯ ಉಪಕಾರವನ್ನು ಮಾಡಲಾರದಷ್ಟು ಅಶಕ್ತವಾಗಿದೆ. ನಮ್ಮ ಅವನತಿಗೆ ಇನ್ನೊಂದು ಕಾರಣವಾವುದೆಂದರೆ-ಮಠಸ್ಥಾಪನಾಚಾರ್ಯರ ಮತ್ತು ಗುರುವರ್ಗದವರ ಸಚ್ಛಿಷ್ಯರೆಂದು ಹೇಳಿಸಿಕೊಳ್ಳುವ ಅನೇಕ ಕಾಯಕಗಳಿಗೊಳಪಟ್ಟ ಮಾಹೇಶ್ವರ ವರ್ಗವೆಂದು ಹೇಳಬಹುದು. ಇವರು ತಮ್ಮ ಪೂರ್ವಜರು ಹೇಗೆ ಧರ್ಮೋಪದೇಶಕರಾಗಿ ಧರ್ಮಜಾಗ್ರತೆಗೊಳಿಸುತ್ತಿದ್ದರೆಂಬುದನ್ನು ಮರೆತು ಧರ್ಮಲಂಡರಾಗಿ ದುರುಳಭಿಕ್ಷುಕರ ವೇಷದಿಂದ ಪರಿವರ್ತಿಸಹತ್ತಿದ್ದಾರೆ. ಈ ವರ್ಗದಿಂದ ನಮ್ಮ ಸಮಾಜವು ದಿನೇ ದಿನೇ ಕಂಗಾಲಸ್ಥಿತಿಗೆ ಹೆಚ್ಚು ಗನುಸಿಸುತ್ತದೆಂಬುದು ಸುವಿಚಾರಿಯಾದ ಪ್ರತಿಯೊಬ್ಬನ ಹೃದಯಕ್ಕೆ ಬಾಣದಂತೆ ನೋವನ್ನುಂಟುಮಾಡುತ್ತದೆ. ಇವರು ಭಿಕ್ಷಾವೃತ್ತಿಯೇ ತಮ್ಮ ಪ್ರತಿನಿತ್ಯದ ವ್ಯವಹಾರವೆಂದು ಆಚರಿಸಹತ್ತಿದ್ದಾರೆ ಇವರಲ್ಲಿ ಅನೇಕರು ಮರೆಮೋಸಗಳಿಂದ ಇಲ್ಲದೆ ಯೋಸಕೇನ ಪ್ರಕಾರದಿಂದ ಜನರನ್ನು ವಂಚಿಸಿ, ಜುಲುಮೆಮಾಡಿ ಭಿಕ್ಷಾರೂಪದಿಂದ ದ್ರವ್ಯಸಂಚಯಮಾಡುತ್ತಾರೆ. ಈ ತರದ ದೋಷಮಯಭಿಕ್ಷೆಯಿಂದ ತಾವು ಪಾಪಪಂಕದಲ್ಲಿ ಬೀಳುವೆವೆಂದು ಅವರಿಗೆ ತಿಳಿದ ಹಾಗೆ ಕಾಣುವುದಿಲ್ಲ. ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರಿಸಿ ನೋಡಲಾಗಿ, ಕಾಯಕಮಾಡುವ ಬಹುಜನರಲ್ಲಿ ಎಲ್ಲ ತರದ ದುಶ್ಚಟಗಳಂತೂ ಮನೆ ಮಾಡಿಕೊಂಡಿರುವುದನ್ನು ನಾವು ನೋಡಬಹುದು. ಭಿಕ್ಷೆಬೇಡಿ ತಂದ ಹಣದಿಂದ ಸುಗ್ರಾಸಭೋಜನ ಮಾಡಿ, ಇಸ್ಪೇಟು ಗಂಜೀಫ ಮೊದಲಾದ ಕೆಟ್ಟ ಆಟಗಳಲ್ಲಿಯೂ, ತಂಬಾಕು ಗಾಂಜ ಅಫೀಮು ಮೊದಲಾದ ನೀಚ ಪದಾರ್ಥಗಳ ಸೇವನೆಯಲ್ಲಿಯೂ, ಸುಳ್ಳು ಸಾಕ್ಷಿ, ಖೂನು, ಪರಸ್ತ್ರೀಗಮನದಂಥ ದುಷ್ಕರ್ಮಗಳಲ್ಲಿಯೂ ತಮ್ಮ ಇಡೀ ಆಯುಷ್ಯವನ್ನೇ ಸವೆಸುವರು. ಇಂಥ ಅಪಾತ್ರಜನರಿಗೆ ಭಿಕ್ಷೆ ಹಾಕುವುದರಿಂದ ಇವರಲ್ಲಿ ನಿರುದ್ಯೋಗ, ಮೈಗಳ್ಳತನ, ಪರನಿಂದೆ, ಪರಪೀಡೆ, ಮೊದಲಾದ ದುರ್ಗುಣಗಳು ಬೆಳೆಯುತ್ತವೆ. ಇಂಥ ಜನರಿಗೆ ಭಿಕ್ಷೆಹಾಕುವುದರಿಂದ ಸಮಾಜದ ನೈತಿಕ ಬಂಧನವು ಸಡಿಲಾಗಿ ಸಮಾಜವು ಅಧೋಗತಿಯ ಮಾರ್ಗಕ್ರಮಣಮಾಡುತ್ತ ಅದರ ತಳವನ್ನು ಮುಟ್ಟಲಿಕ್ಕೆ ಸಮೀಪಿಸಿರುತ್ತದೆ. ಹಾಯ್ ಹಾಯ್ !! ಸಮಾಜವನ್ನು ಈ ದಾರಿಗೆ ಹಚ್ಚುವ ನಾವು ಎಂಥ ಸಮಾಜದ್ರೋಹಿಗಳು ! ಈ ರೀತಿ ತಿಳಿದೂ ಅಪಾತ್ರರಿಗೆ ಭಿಕ್ಷೆಹಾಕುವ ನಾವು ಎಂಥ ತಿಳಿಗೇಡಿಗಳು !! ಇವರ ಪೂರ್ವಜರು ಯಾವ ದೃಷ್ಟಿಯಿಂದ ಭಿಕ್ಷೆಬೇಡುತ್ತಿದ್ದರೆಂಬುದನ್ನು ಇವರು ಸ್ವಲ್ಪ ವಿಚಾರಮಾಡಿ ನೋಡಲಿ. ದೇಶದಲ್ಲಿ ಸಂಚರಿಸಿ ತಮ್ಮ ಮತಾನುಯಾಯಿಗಳಲ್ಲಿ ಯಾರು ಧರ್ಮದ ಕಟ್ಟಳೆಗಳಿಂದ ಅಲಿಪ್ತರಾಗಿ ನಡೆಯುತ್ತಿದ್ದರೋ ಅಂಥವರಿಗೆ ಧರ್ಮಬೋಧ ಮಾಡಿ ಧರ್ಮೋಪದೇಶಕರಾಗಿ, ಬಂದ ಭಿಕ್ಷಾನ್ನದಿಂದ ತಮ್ಮ ಚರಿತಾರ್ಥವನ್ನು ಸಾಗಿಸುವ ಪವಿತ್ರಕಾರ್ಯವನ್ನಂಗೀಕರಿಸಿದ್ದರು. ತಾವು ಭಿಕ್ಷಾಗ್ರಹಣಮಾಡಿ ಅದಕ್ಕೆ ಪ್ರತಿಫಲವಾಗಿ ಭಿಕ್ಷೆನೀಡುವವರಿಗೆ ತಮ್ಮ ಪುಣ್ಯಾಂಶವನ್ನು ಕೊಡುತ್ತಿದ್ದರು. ಸಮಾಜದ ಭಿಕ್ಷಾರೂಪಿ ಅನ್ನದಿಂದ ಹುಟ್ಟುವ ರಕ್ತವನ್ನು ಸಮಾಜಕ್ಕೇ ವ್ಯಯಮಾಡುವಷ್ಟು ಪವಿತ್ರ ಕರ್ತೃತ್ವಶಕ್ತಿಯು ಅವರಲ್ಲಿತ್ತು. ಭಿಕ್ಷಾನ್ನದಿಂದ ಪುಷ್ಟರಾದ ಅಧುನಿಕ ನಮ್ಮ ಸಮಾಜದ ಭಿಕ್ಷುಕರೇ ನೀವು ಯಾವ ದೃಷ್ಟಿಯಿಂದ ಭಿಕ್ಷೆ ಬೇಡುತ್ತೀರೆಂಬುದನ್ನು ಜ್ಞಾಪಕಕ್ಕೆ ತಂದುಕೊಳ್ಳಿರಿ. ನಿಮ್ಮ ಪೂರ್ವಜರಂತೆ ಕರ್ತೃತ್ವಶಕ್ತಿಯ ಪವಿತ್ರತೆಯು ನಿಮ್ಮಲ್ಲಿದ್ದರೆ ನೀವು ನಿಶ್ಚಿಂತೆಯಿಂದ ಭಿಕ್ಷಾನ್ನವನ್ನುಣ್ಣಬಹುದು, ಹಾಗಿಲ್ಲದ ಪಕ್ಷದಲ್ಲಿ ಭಿಕ್ಷೆಯನ್ನು ಮುಟ್ಟುವ ಅಧಿಕಾರವು ಕೂಡ ನಿಮಗಿರುವುದಿಲ್ಲ. ಅನಧಿಕಾರದಿಂದ ಭಿಕ್ಷೆ ಬೇಡಿದರೆ ಧರ್ಮದ್ರೋಹ ಸಮಾಜದ್ರೋಹವಲ್ಲದೆ ದೇಶದ್ರೋಹವನ್ನು ನಿಮ್ಮ ಪದರಿನಲ್ಲಿ ಬೀಳುವುದು. ಆದಕಾರಣ ನಮ್ಮ ಮಠಸ್ಥಾಪನಾಚಾರ್ಯರಾದ ಪಂಚಾಚಾರ್ಯರೂ ಮತ್ತು ಗುರುವರ್ಗದವರೂ ಸ್ವಕರ್ತವ್ಯಪರಾಯಣರಾಗಿ ತಮ್ಮ ಕರ್ತೃತ್ವಶಕ್ತಿಯಿಂದ ತಮ್ಮ ಪೂರ್ವಜರಂತೆ ಧರ್ಮಪ್ರಸಾರದಂಥ ಪವಿತ್ರಕಾರ್ಯದಲ್ಲಿ ತೊಡಗಿದರೆ, ಮತ್ತು ನಾನಾ ಕಾಯಕಗಳಿಗೊಳಪಟ್ಟ ಮಾಹೇಶ್ವರ ವರ್ಗವು ಗುರುವರ್ಗದವರಿಂದ ಉಪದೇಶಹೊಂದಿ ಧರ್ಮೋಪದೇಶದ ಕಡೆಗೆ ತಮ್ಮ ಲಕ್ಷ್ಯವನ್ನು ಗಮನಿಸಿದರೆ ನಮ್ಮ ಸಮಾಜವು ಕ್ಷಿಪ್ರದಲ್ಲಿಯೇ ಮೊದಲಿನಂತೆ ಈ ಆರ್ಯಾವರ್ತದಲ್ಲಿ ಆತ್ಮಪ್ರಭೆಯಿಂದ ಬೆಳಗುವುದಲ್ಲದೆ ತಮ್ಮ ಪೂರ್ವವಂಶಜರ ಮರ್ಯಾದೆಯನ್ನು ಕಾಯ್ದಂತೆಯೂ ಆಗುವದು.

ಮಹಾಗುಂಡಯ್ಯ, ರುದ್ರಯ್ಯ ಸಾಲಿ, ಉರ್ಫ್ ಜಂಗಿನ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಕ್ಕ **ಮನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 6

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟು ಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿಗೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಮುತ್ತುಗಳಂತೆ ಮುದ್ದಾಗಿ ಬರೆಯುವ ಕ್ಯಾರೆಕ್ಟ ಭಂಗಾರದ ಮುಳ್ಳುಳ್ಳ

23 **ರಾಯಲಿ ಪೌಂಟೇನ್ ಪೆನ್.**

ಎಂಬ ಈ ಪೆನ್ನಾವನ್ನು ಅಮೆರಿಕಾ ದೇಶದಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಒಂದು ವಾರದ ವರಿದಗೂ ಬರೆಯುವದು. 1ಕ್ಕೆ 1-10-0.

ಈ ಪೆನ್ನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಒಂದು ರೋಸ್ ಸೆಂಟ್ ಬಾಟಲ್ ಇನಾಂ ಕೊಡುವೆವು.

ಘಮಘಮಿಸುವ ಸುಗಂಧದ್ರವ್ಯಗಳಿಗೆಲ್ಲಾ ಚಕ್ರವರ್ತಿಯಾದದ್ದು.

ಲಿಲ್ಲಿ ಆಫ್ ದಿವ್ಯಾಲಿ.

ಎಂಬ ಸುಗಂಧದ್ರವ್ಯವೇ ಹೊರತು ಇದಕ್ಕೆ ಸರಿಸಮನಾದದ್ದು ಬೇರೊಂದಿಲ್ಲ. ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಹಾಕಿದರೆ ಸಾಕು 8 ದಿನಗಳವರಿವಿಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು.

ಕ್ರಯ ಶೀಸೆ 1ಕ್ಕೆ 1-8-0

ವಿಳಾಸ:—

ಧೈರ್ಯಲಕ್ಷ್ಮೀ ಅಂಡ್ ಕೊ
ಪೋಸ್ಟ್‌ಬಾಕ್ಸ್ ನಂ. 265, ಮದರಾಸ್.

ಹೊಸಗ್ರಂಥಗಳು ! ಬೇಗನೆ ತರಿಸಿಕೊಳ್ಳಿರಿ !!

ಕೋಕಶಾಸ್ತ್ರವು.

ರಸಿಕ ವಾಚಕಮಹಾಶಯರೇ, ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಆದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೆ ಶೋಧಿಸಿಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ ಸ್ತ್ರೀಯರ, ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ದಂಪತ್ಯದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೊಡರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦. ಟಪಾಲುಹಾಸಲು ೦-೪-೦.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರಕಡೆಯಿಂದ ಅನುಭವತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬಂದಿರುವರು.

೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ ಪ್ರಯೋಗದಿಂದಲೂ ಯಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳ ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದಮಾಡುವಕ್ರಮವನ್ನು ಚನ್ನಾಗಿಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವಸ್ಥಳವು ಅವರ ವಿಳಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತ ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಅದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥಾಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆತೀರಾ ಕಡಿಮೆಮಾಡಿ ಇರುವೆವು. ೨-೮-೦ ಟಪಾಲಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಗ್ರಂಥಗಳು, ಶಿವಪುರಾಣಗಳು, ಜೋತಿಷ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ, ವೀರಶೈವಮತ ಗ್ರಂಥಗಳು ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ—ಎಸ್. ಕೆ ಕೃಷ್ಣಸ್ವಾಮಿಶೆಟ್ಟಿ,
ಅಂಡ್ ಸನ್ಸ್, ಕರ್ನಾಟಕ ಬುಕ್‌ಡಿಪೋ ಪ್ರೆಸ್,
46 ಬಳ್ಳಾರಿ.

೧೯೨೨ ನೆಯ ಇಸವಿ ಡಿಶಂಬರ್ ತಾ॥ ೩೧ ರಿಂದ ೧೯೨೩ ನೆಯ ಜನವರಿ ತಾ॥ ೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೪ ನೆಯ ದುಂದುಭಿನಾಮ ಸಂವತ್ಸರದ ಪುಷ್ಯ ಶುದ್ಧ ದ್ವಾದಶಿಯಿಂದ ಪುಷ್ಯ ಬಹುಳ ಚೌತಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುಮಾಸ
31	ಭಾನು	ದ್ವಾದ	1-21	ಕೃತ್ತಿ	1-32	17
1	ಸೋಮ	ತ್ರಯೋ	3-41	ರೋಹಿ	5-11	18
2	[1] ಮಂಗಳ	ಚತು	4-45	ಮೃಗ	7-34	19
3	[2] ಬುಧ	ಪೌರ್ಣ	4-32	ಆರ್ದ್ರಾ	8-43	20
4	[3] ಗುರು	ಪಾಡ್ಯ	3-3	ಪುನ	8-4	21
5	ಶುಕ್ರ	ಬಿ-ಉ	0-26 57-4	ಪುಷ್ಯ	7-30	22
6	[4] ಶನಿ	ಚೌತಿ	52-55	ಆಶ್ಲೇ	5-24	23

(1) ಬನಶಂಕರೀವ್ರತಂ, ಮೂಗೂರು ಭಂಡಿಉತ್ಸವಃ, ಅಂಧಕಾಸುರಸಂಹಾರಃ. (2) ಆರಿದ್ರೋತ್ಸವಃ. (3) ಮೂಗೂರುರಥಃ, ಕೋಟಾರೋತ್ಸವಾರಂಭಃ. (4) ಸಂಕಷ್ಟಚತುರ್ಥೀ.

ಮೈಸೂರು : ವೈ. ವಿರೂಪಾಕ್ಷಯ್ಯ ನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

CONTINUED IN NEXT ROLL

END

END